ಕರ್ನಾಟಕ ಸರ್ಕಾರ

ಪ್ರಾಕೃತ-ಕನ್ನಡ ಬೃಹತ್ ನಿಘಂಟು

ಕನ್ನಡಕ್ಕೆ ಅಳವಡಿಸಿದವರು:
ಡಾ. ಆರ್. ಲಕ್ಷ್ಮೀನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು ೫೬೦೦೫೬

ಬಿ.ಎಂ. ಶ್ರೀ ಪ್ರತಿಷ್ಠಾನದ
ಗ್ರಂಥಾಲಯಕ್ಕೆ

ಆರ್. ಲಕ್ಷ್ಮೀನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೩೯೪

ವಿಚಾರ ಸಾಹಿತ್ಯ ಮಾಲೆ - ೧೯೨

ಪ್ರಾಕೃತ-ಕನ್ನಡ ಬೃಹತ್ ನಿಘಂಟು

ಪ್ರಾಕೃತ-ಕನ್ನಡ ಬೃಹತ್ ನಿಘಂಟು

(ಶ್ರೀ ಹರಗೋವಿಂದದಾಸ್ ತ್ರಿಕಮ್ ಚಂದ್ ಸೇಠ್ ಅವರ 'ಪಾಇಅ-ಸದ್ದ-ಮಹಣ್ಣವೋ' ಪ್ರಾಕೃತ- ಹಿಂದೀ ಕೋಶ'ದ ಕನ್ನಡ ರೂಪ)

ಕನ್ನಡಕ್ಕೆ ಅಳವಡಿಸಿದವರು

ಡಾ. ಆರ್. ಲಕ್ಷ್ಮೀನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ ಅಂಚೆ, ಮಲ್ಲತ್ತಹಳ್ಳಿ

ಬೆಂಗಳೂರು - ೫೬೦ ೦೫೬

PRAKRUTHA-KANNADA BRUHATH NIGANTU - Kannada adaptation of Paia Sadda Mahannavo a Prakrit-Hindi Dictionary by Sri Haragovindadas Trikam Chand Seth - Adapted by Dr. R. Lakshminarayana & Published by Ishwar K. Mirji, Registrar, Kuvempu Bhasha Bharathi Pradhikara, Kalagrama, Jnana Bharathi, Behind Bangalore University Campus, Mallattahalli, Bangalore-560 056. Revised Second Edidtion : 2021. Pages: xxxiv+1160=1194. Price: Rs.800/-

ಮೊದಲ ಮುದ್ರಣ : ೨೦೧೯
ಪರಿಷ್ಕೃತ ಎರಡನೆ ಮುದ್ರಣ : ೨೦೨೧
ಪುಟಗಳು : xxxiv+೧೧೬೦
ಬೆಲೆ : ರೂ.೮೦೦/-
ಪ್ರತಿಗಳು : ೫೦೦

ಪ್ರಕಾಶಕರು :
ಶ್ರೀ ಈಶ್ವರ್ ಕು. ಮಿರ್ಜಿ
ರಿಜಿಸ್ಟ್ರಾರ್
ಮತ್ತು
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಯು.ಟಿ. ಸುರೇಶ್**

ISBN No. : 978-93-8759-285-8

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಲಿಮಿಟೆಡ್,
ನಂ.೨/೪, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ,
ಬೆಂಗಳೂರು - ೫೬೦೦೧೦, ದೂ : ೦೮೦-೨೩೧೩೨೧೯೦

Title : Prakrutha Kannada Bruhath Nigantu
Translator Name : Dr. R. Lakshminarayana
Published By : Ishwar K. Mirji, Registrar
Kuvempu Bhashabharathi Pradhikara
Publisher's Address: Kuvempu Bhashabharathi Pradhikara
Kalagrama Mallathahalli Bengaluru-560056
Printer's Details : Abhimani Publications Ltd. Bengaluru
Edition Details : 2nd Edition
ISBN : 978-93-8759-285-8
Copyright @ : Kuvempu Bhashabharathi Pradhikara

ಅಧ್ಯಕ್ಷರ ಮುನ್ನುಡಿ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಕರ್ನಾಟಕ ಸರಕಾರವು ಕನ್ನಡ ಮತ್ತು ಇತರ ಭಾಷೆಗಳೊಡನೆ ತಿಳಿವಿನ ನಂಟನ್ನು ಬೆಳೆಸುವ ಗುರಿಯಿಂದ ರೂಪಿಸಿದೆ. ಬೇರೆ ಭಾಷೆಗಳ ತಿಳಿವನ್ನು ಕನ್ನಡಕ್ಕೆ ದೊರಕಿಸಲು ಅನುವಾಗುವಂತೆ ಸಿದ್ಧ ಕೃತಿಗಳ ಅನುವಾದ ಮತ್ತು ಪ್ರಕಟಣೆಯ ಕೆಲಸದಲ್ಲಿ ಪ್ರಾಧಿಕಾರವು ತೊಡಗಿಕೊಂಡಿದೆ. ಅಲ್ಲದೆ ಕನ್ನಡದ ತಿಳಿವು ಇತರ ನುಡಿಗಳಿಗೂ ಸಿಗುವಂತಾಗಲು ಬೇಕಾದ ಯೋಜನೆಗಳನ್ನು ಹಮ್ಮಿಕೊಂಡಿದೆ. ಈವರೆಗೆ ಸುಮಾರು ಮುನ್ನೂರ ತೊಂಬತ್ತು ಪುಸ್ತಕಗಳನ್ನು ಕನ್ನಡಿಗರ ಓದಿನ ಲೋಕಕ್ಕೆ ಪ್ರಾಧಿಕಾರವು ಸೇರಿಸಿದೆ. ಅಲ್ಲದೆ ಸರಕಾರವು ಬೇರೆ ಯೋಜನೆಗಳ ಮೂಲಕ ಪ್ರಾಧಿಕಾರಕ್ಕೆ ಕನ್ನಡ ಜಗತ್ತನ್ನು ವಿಸ್ತರಿಸುವ ಹೊಣೆಯನ್ನೂ ನೀಡಿದೆ. ಅದಕ್ಕೆ ಬೇಕಾದ ಅನುದಾನವನ್ನೂ ಒದಗಿಸಿದೆ. ಕನ್ನಡ ನಾಡಿನ ಪ್ರಾಜ್ಞರ ನೆರವಿನಿಂದ ಈವರೆಗೆ ಪ್ರಾಧಿಕಾರವು ತನಗೆ ವಹಿಸಲಾದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ.

ನಮ್ಮ ಕಾಲದ ಅಗತ್ಯಕ್ಕೆ ಬೇಕಾದ ಜ್ಞಾನ–ವಿಜ್ಞಾನಗಳನ್ನು ಭಾರತೀಯ ಮತ್ತು ಜಾಗತಿಕ ಮಟ್ಟದಲ್ಲಿನ ಲೇಖನ ಮತ್ತು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಇದರ ಜೊತೆಗೆ ಕನ್ನಡದ ಉತ್ತಮ ಜ್ಞಾನ ವಿಜ್ಞಾನಗಳ ಕೃತಿಗಳನ್ನು ಭಾರತೀಯ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಿಸುವ ಕೆಲಸವೂ ಮುಂದುವರಿಸಲಾಗುತ್ತಿದೆ.

ಪ್ರಾಕೃತವು ಭಾರತದ ಅತ್ಯಂತ ಪ್ರಾಚೀನ ಭಾಷೆ. ಇದು ಅಂದಿನ ಜನರ ಮಾತೃಭಾಷೆಯಾಗಿತ್ತು. ಪ್ರಾಕೃತದಿಂದ ಸಂಸ್ಕೃತ ಹುಟ್ಟಿತು ಎಂದು ಕೆಲವರು ವಾದಿಸಿದರೆ ಮತ್ತೆ ಕೆಲವರು ಸಂಸ್ಕೃತದಿಂದ ಪ್ರಾಕೃತ ಹುಟ್ಟಿತು ಎಂದು ಹೇಳುವವರಿದ್ದಾರೆ. ಶ್ರೀ ಹರಗೋವಿಂದದಾಸ್ ತ್ರಿಕಮ್ ಚಂದ್ ಸೇಠ್ ಅವರು 'ಪಾಇಅ–ಸದ್ದ–ಮಹಣ್ಣವೊ' ಎಂಬ ಪ್ರಾಕೃತ–ಹಿಂದಿ ಕೋಶವನ್ನು ಸಿದ್ಧಪಡಿಸಿ ಪ್ರಕಟಿಸಿದ್ದರು. ಈ ಕೋಶವು ಭಾರತೀಯ ಭಾಷಾವಿದ್ವಾಂಸರಿಗೆ ಬಹಳಷ್ಟು ಉಪಯುಕ್ತವಾಗಿತ್ತು.

ಕನ್ನಡವೂ ಸಹ ಪ್ರಾಕೃತದಿಂದ ಸಾಕಷ್ಟು ಪದಗಳನ್ನು ಸ್ವೀಕರಿಸಿದೆ. ಕನ್ನಡದ ತದ್ಭವಗಳೆಂದು ಕರೆಯುವ ಪದಗಳು ಪ್ರಾಕೃತದ ಮೂಲದವು. ಇಂತಹ ಪದಗಳ ಸ್ವರೂಪ ಯಾವ ರೀತಿಯಲ್ಲಿತ್ತು ಎಂಬುದನ್ನು ಅರಿಯಲು ಈ ನಿಘಂಟು ಸಹಕಾರಿಯಾಗುತ್ತದೆ. ಹಳಗನ್ನಡದ ಕೆಲವು ಕವಿಗಳು ಪ್ರಾಕೃತದೊಡನೆ ಅನುಸಂಧಾನ ನಡೆಸಿದ್ದಾರೆ. ಜೈನ ಕಾವ್ಯಪುರಾಣಗಳನ್ನು ಅರ್ಥಮಾಡಿಕೊಳ್ಳಲು ಪ್ರಾಕೃತದ ತಿಳುವಳಿಕೆಯ ಅಗತ್ಯ ಸಾಕಷ್ಟಿದೆ. ಪ್ರಸ್ತುತ ಈ ಕೋಶವು ಈ ದಿಕ್ಕಿನಲ್ಲಿ ಬಹಳಷ್ಟು ಸಹಕಾರಿಯಾಗುತ್ತದೆ. ಭಾಷಾ ವಿಜ್ಞಾನಿಗಳಿಗೆ, ಸಂಶೋಧಕರಿಗೆ, ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಈ ನಿಘಂಟನ್ನು ವಿದ್ವಾಂಸರಾದ ಡಾ.ಆರ್. ಲಕ್ಷ್ಮೀನಾರಾಯಣ ಅವರು ಅಪಾರ ತಾಳ್ಮೆ ಮತ್ತು ಪರಿಶ್ರಮದಿಂದ ಕನ್ನಡಕ್ಕೆ ಅಳವಡಿಸಿದ್ದಾರೆ. ಅವರಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ ಈ ಕೃತಿಯನ್ನು ಸಿದ್ಧಪಡಿಸಲು ಆಸಕ್ತಿ ವಹಿಸಿದ ಪ್ರಾಧಿಕಾರದ ಸದಸ್ಯರಿಗೆ, ಪ್ರಾಧಿಕಾರದ ಕೆಲಸ ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಈಶ್ವರ್ ಕು. ಮಿರ್ಜಿ ಅವರಿಗೆ, ಶ್ರೀ ಎಚ್. ದಂಡಪ್ಪನವರಿಗೆ, ಶ್ರೀ ಜೆ.ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಇತರ ಸಿಬ್ಬಂದಿ ವರ್ಗದವರಿಗೂ, ಅಂದವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ರಾಜಾಪ್ರಿಂಟರ್ಸ್, ಬೆಂಗಳೂರು ಅವರಿಗೂ ನಮ್ಮ ವಂದನೆಗಳು.

ಡಾ. ಕೆ. ಮರುಳಸಿದ್ದಪ್ಪ
ಅಧ್ಯಕ್ಷರು

ಪರಿಷ್ಕೃತ ಮುದ್ರಣ: ಅಧ್ಯಕ್ಷರ ಮಾತು

'ಜ್ಞಾನ ಮತ್ತು ಸಾಹಿತ್ಯದ ನಿರಂತರ ಕೊಡುಕೊಳ್ಳುವಿಕೆಯ ಮೂಲಕ ಕನ್ನಡ ಸಂಸ್ಕೃತಿಯ ಸಂವರ್ಧನೆ' ಎಂಬುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಧ್ಯೇಯವಾಕ್ಯವಾಗಿದೆ. ಈ ಕೊಡುಕೊಳ್ಳುವಿಕೆಯು ವ್ಯಕ್ತಿ, ಸಂಸ್ಥೆ, ಭಾಷೆ ಇವೆಲ್ಲ ಘಟಕಗಳ ನಡುವೆ ಪರಸ್ಪರ ನಡೆಯಬೇಕಾಗುತ್ತದೆ. ಜಗತ್ತಿನಲ್ಲಿ ಜ್ಞಾನದ ವಿನಿಮಯ ನಡೆಯಬೇಕಾದರೆ ನಿಘಂಟುಗಳು ಅನಿವಾರ್ಯ. ಭಾಷೆ– ಬಾಷೆಗಳ ನಡುವಿನ ಬಹುಮುಖ್ಯ ಕೊಂಡಿಗಳಾಗಿ ನಿಘಂಟುಗಳು ಕೆಲಸ ಮಾಡುತ್ತವೆ. ಅದರಲ್ಲೂ ಇಂದು ನಮ್ಮ ನಡುವೆ ಹೆಚ್ಚು ಬಳಕೆಯಲ್ಲಿ ಇಲ್ಲದ ಭಾಷೆಗಳನ್ನು ತಿಳಿದುಕೊಂಡಿರುವ ತಜ್ಞರ ಸಂಖೆಯೂ ಕಡಿಮೆಯೇ ಆಗಿರುವಾಗ ಅಂಥ ಭಾಷೆಗಳ ಪದಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಿಘಂಟುಗಳನ್ನೇ ಆಶ್ರಯಿಸಬೇಕಾಗುತ್ತದೆ. ಹೀಗಾಗಿ ಪ್ರಾಚೀನ ಭಾಷೆಗಳಿಗೆ ಸಂಬಂಧಿಸಿ ಎಷ್ಟು ನಿಘಂಟುಗಳು ಬಂದರೂ ಕಡಿಮೆಯೇ.

ಪ್ರಾಕೃತ ಭಾರತದ ಪ್ರಾಚೀನ ಭಾಷೆಯಾಗಿದೆ. ಪ್ರಾಚೀನ ಭಾರತದ ಸಾಹಿತ್ಯ, ತತ್ತ್ವಶಾಸ್ತ್ರ, ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಾಕೃತದ ಅರಿವು ತುಂಬ ಸಹಾಯಕಾರಿ. ಹಳೆಗನ್ನಡ ಸಾಹಿತ್ಯಕ್ಕೂ ಪ್ರಾಕೃತಕ್ಕೂ ಇರುವ ಸಂಬಂಧದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಕನ್ನಡ ಸಂಶೋಧಕರಿಗೆ, ಭಾಷಾವಿಜ್ಞಾನಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು 2019ರಲ್ಲಿ ಪ್ರಾಕೃತ–ಕನ್ನಡ ಬೃಹತ್ ನಿಘಂಟನ್ನು ಪ್ರಕಟಿಸಿತು. ನಿಘಂಟು ರಚನೆ ಮಾಡಬೇಕಾದರೆ ಅಸಾಮಾನ್ಯ ತಾಳ್ಮೆ ಹಾಗೂ ವಿದ್ವತ್ತು ಅಗತ್ಯ. ಹೆಸರಾಂತ ಅನುವಾದಕರೂ ಭಾಷಾತಜ್ಞರೂ ಆಗಿರುವ ಡಾ. ಆರ್. ಲಕ್ಷ್ಮೀನಾರಾಯಣ ಅವರು ಅಪಾರ ಶ್ರದ್ಧೆ ಮತ್ತು ಶ್ರಮದಿಂದ ಕನ್ನಡಕ್ಕೆ ಅಳವಡಿಸಿಕೊಟ್ಟ ಈ ನಿಘಂಟಿನ ಪ್ರತಿಗಳು ಬಹುಬೇಗನೆ ಖಾಲಿಯಾದವು. ಮರುಮುದ್ರಣಕ್ಕಾಗಿ ಮತ್ತೊಮ್ಮೆ ಆಮೂಲಾಗ್ರವಾಗಿ ನಿಘಂಟನ್ನು ತಿದ್ದಿ ಸಿದ್ಧಪಡಿಸಿಕೊಟ್ಟ ಡಾ. ಲಕ್ಷ್ಮೀನಾರಾಯಣ ಅವರಿಗೆ ಪ್ರಾಧಿಕಾರವು ಕೃತಜ್ಞವಾಗಿದೆ.

ಈ ಕೃತಿಯನ್ನು ಮರುಮುದ್ರಿಸಿ ಪ್ರಕಟಿಸಲು ತುಂಬು ಮನಸ್ಸಿನಿಂದ ಸಹಕರಿಸಿದ ಪ್ರಾಧಿಕಾರದ ಸದಸ್ಯರಿಗೆ, ಪ್ರಾಧಿಕಾರದ ಕೆಲಸಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡಿರುವ ರಿಜಿಸ್ಟ್ರಾರ್ ಶ್ರೀ ಈಶ್ವರ್ ಕು. ಮಿರ್ಜಿ ಅವರಿಗೆ, ಪ್ರಾಧಿಕಾರದ ಸಿಬ್ಬಂದಿ ವರ್ಗದವರಿಗೆ, ಅಂದವಾಗಿ ಮುದ್ರಿಸಿರುವ ಮುದ್ರಣಾಲಯದ ಮಾಲಿಕರಿಗೆ ಹಾಗೂ ಅಲ್ಲಿಯ ಎಲ್ಲಾ ಸಿಬ್ಬಂದಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಡಾ. ಅಜಕ್ಕಳ ಗಿರೀಶ ಭಟ್
ಅಧ್ಯಕ್ಷರು

ಅನುವಾದಕರ ಅರಿಕೆ

ಸತತವಾಗಿ ಮೂರು ವರ್ಷಗಳ ಕಾಲ ಅತ್ಯಂತ ಪರಿಶ್ರಮಪೂರ್ವಕವಾಗಿ ನಾನೇ ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಸಿದ್ಧಪಡಿಸಿದ ಈ ಪ್ರಾಕೃತ-ಕನ್ನಡ ನಿಘಂಟನ್ನು ರೂಪಿಸುವಲ್ಲಿ ನನಗೆ ಹಲವು ಬಗೆಯಲ್ಲಿ ನೆರವಾದವರನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಆದ್ಯ ಕರ್ತವ್ಯವಷ್ಟೇ ಅಲ್ಲ ಅತ್ಯಂತ ಸಂತಸದ ಕಾರ್ಯವೂ ಹೌದು. ಡಾ. ಬಿ. ಆರ್ ಅಂಬೇಡ್ಕರ್ ಅವರು ರಚಿಸಿದ್ದ ಪಾಲಿ-ಇಂಗ್ಲಿಷ್ ನಿಂಘಂಟನ್ನು 'ಪಾಲಿ ಕನ್ನಡ ಪದಕೋಶ' ವಾಗಿ ಕುವೆಂಪು ಭಾಷಾಭಾರತಿ ಪ್ರಾಧಿಕಾರಕ್ಕೆ ನಾನು ಅಳವಡಿಸಿಕೊಟ್ಟದ್ದನ್ನು ನೋಡಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ.ಎಚ್. ಶಶಿಕಲಾ ಅವರು ಹರಗೋವಿಂದದಾಸ್ ತ್ರಿಕಮ್‌ಚಂದ್ ಸೇಠ್ ಅವರ 'ಪಾಇಅ-ಸದ್ದ ಮಹಣ್ಣವೋ' -ಪ್ರಾಕೃತ-ಹಿಂದಿ ಶಬ್ದಕೋಶವನ್ನು ಕನ್ನಡಕ್ಕೆ ಇದೇ ರೀತಿ ಅಳವಡಿಸುವುದು ಅತ್ಯಂತ ಅಗತ್ಯವಾಗಿ ಆಗಬೇಕಾದ ಕಾರ್ಯವೆಂದು ಹೇಳಿ ನಾನು ಈ ಕಾರ್ಯವನ್ನು ಕೈಗೊಳ್ಳಲೇಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯಿಸಿ ನಾನು ಮತ್ತೇನೂ ನೆಪಹೇಳಿ ತಪ್ಪಿಸಿಕೊಳ್ಳದಂತೆ ಮೂಲ ಕೋಶವನ್ನು ನನಗೆ ಕೂಡಲೇ ಒದಗಿಸಿಕೊಟ್ಟರು. ಅವರ ಈ ವಿಶ್ವಾಸ ಪೂರ್ವಕವಾದ ಒತ್ತಾಯದ ಪರಿಣಾಮವಾಗಿ ನಾನು ಈ ಕಾರ್ಯವನ್ನು ಕೈಗೊಂಡೆ. ಅದಕ್ಕಾಗಿ ನಾನು ಅವರಿಗೆ ಅತ್ಯಂತ ಆಭಾರಿಯಾಗಿದ್ದೇನೆ. ಆದರೆ ಈ ಕಾರ್ಯ ಪ್ರಗತಿಯಲ್ಲಿದ್ದಾಗ ಮುಂದೆ ಇದನ್ನು ಪ್ರಕಟಿಸುವವರು ಯಾರು ಎಂಬ ಸಮಸ್ಯೆ ಸುಳಿದಾಗ ಅದನ್ನು ಬಗೆಹರಿಸುವ ಮಾರ್ಗವನ್ನು ಸೂಚಿಸಿದವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ನನ್ನ ಆತ್ಮೀಯ ಮಿತ್ರರೂ ಆದ ಪ್ರೊ. ಎಸ್. ಜಿ. ಸಿದ್ದರಾಮಯ್ಯನವರು. ಕೆಲವೇ ತಿಂಗಳುಗಳ ಹಿಂದೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದ ಡಾ. ಕೆ ಮರುಳಸಿದ್ಧಪ್ಪನವರ ಗಮನಕ್ಕೆ ಇದನ್ನು ತಂದು ಇದರ ಪ್ರಕಟಣೆಯ ಬಗ್ಗೆ ನನಗೆ ಎದುರಾಗಿದ್ದ ಸಮಸ್ಯೆಯನ್ನು ಪರಿಹರಿಸಿದರು. ಕನ್ನಡ ಪ್ರಾಕೃತಗಳಿಗಿರುವ ಆಳವಾದ ಸಂಬಂಧವನ್ನು ಮನಗಂಡಿದ್ದು ಇಂಥ ನಿಘಂಟು ಕನ್ನಡಕ್ಕೆ ಅತ್ಯಂತ ಅಗತ್ಯವಾದ್ದು ಎಂದು ಅರಿತ ಹಿರಿಯರಾದ ಡಾ. ಕೆ. ಎಂ. ಎಸ್ ಅವರು ಕುವೆಂಪು ಭಾಷಾಭಾರತಿ ಪ್ರಾಧಿಕಾರದಿಂದ ಇದನ್ನು ಪ್ರಕಟಿಸುವುದಾಗಿ ಆಶ್ವಾಸನೆ ನೀಡಿ ಕೂಡಲೇ ಆ ದಿಸೆಯಲ್ಲಿ ಕಾರ್ಯ ಪ್ರವೃತ್ತರಾದದ್ದರಿಂದಾಗಿ ನಾನು ಈ ಕೆಲಸವನ್ನು ಮುಂದುವರಿಸಿ ಕೊನೆಮುಟ್ಟಿಸಲು ಸಾಧ್ಯವಾಯಿತು. ಅದಕ್ಕಾಗಿ ನಾನು ಡಾ. ಕೆ.ಎಂ.ಎಸ್. ಅವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಇದರ ಪ್ರಕಟಣೆಗೆ ಒಪ್ಪಿಗೆ ನೀಡಿದ ಭಾಷಾಭಾರತಿಯ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ. ಇನ್ನು ಇದನ್ನು ತಮ್ಮದೇ ಪುಸ್ತಕವೆಂಬಷ್ಟು ತೀವ್ರ ಆಸಕ್ತಿ ತೋರಿ ಇದರ ಕರಡು ತಿದ್ದುವ ಅತ್ಯಂತ ಶ್ರಮಪೂರ್ಣವಾದ ಕಾರ್ಯವನ್ನು ನನ್ನ ಜೊತೆ ಜೊತೆಗೂ ಕೈಗೊಂಡು ನೆರವಾದ ಯುವ ವಿದ್ವಾಂಸರೂ ರೇಣುಕಾಚಾರ್ಯ ಕಾಲೇಜಿನ ಕನ್ನಡ ಅಧ್ಯಾಪಕರೂ ಆದ ಡಾ. ಟಿ. ಮಂಜುನಾಥ್ ಅವರಿಗೆ ಕೃತಜ್ಞತೆ ಹೇಳಲು ನನ್ನಲ್ಲಿ ಶಬ್ದಗಳೇ ಇಲ್ಲ. ಇವರಲ್ಲದೆ ಇದರ ಲೇ ಔಟ್ ಮಾಡಿಸಲು ನೆರವಾದ ಆತ್ಮೀಯ ಮಿತ್ರರಾದ ಶ್ರೀ ಜೆ. ಎನ್ ಶಾಮರಾವ್, ಶ್ರೀಮತಿ ನಿರ್ಮಲ, ಗಣಕ ಪರಿಷತ್ತಿನ ಶ್ರೀ. ಜಿ. ಎನ್. ನರಸಿಂಹಮೂರ್ತಿ, ಹಾಗೂ ನನ್ನ ಉತ್ಸಾಹ ಕುಗ್ಗದಂತೆ ಆಗಾಗ್ಗೆ ಈ ಬಗ್ಗೆ

ವಿಚಾರಿಸುತ್ತಿದ್ದ ಡಾ. ದಂಡಪ್ಪ, ಮತ್ತು ಡಾ. ಸಿ. ಪಿ. ನಾಗರಾಜ್ ಈ ಎಲ್ಲ ಮಿತ್ರರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಇನ್ನು ಪ್ರಾಕೃತ ಭಾಷೆಗೆ ಸಂಬಂಧಿಸಿದಂತೆ ಇಲ್ಲಿನ ಪ್ರಸ್ತಾವನೆಯಲ್ಲಿ ಹೇಳಿರುವ ವಿಚಾರಗಳು ಮೂಲ ನಿಘಂಟಿನ 'ಉಪೋದ್ಘಾತ'ದ ಸಂಗ್ರಹಾನುವಾದವೇ ಆಗಿದೆ. ಅವು ಬಹಳ ಮುಖ್ಯವಾದ ವಿಚಾರಗಳಾದ ಕಾರಣ ಅವನ್ನು ಸಂಗ್ರಹ ರೂಪದಲ್ಲಿ ಇಲ್ಲಿ ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಆರ್. ಲಕ್ಷ್ಮೀನಾರಾಯಣ

ಪ್ರಸ್ತಾವನೆ

ಪ್ರಾಕೃತ ಭಾಷೆಯ ಉಗಮ: ಸ್ಥೂಲ ಪರಿಚಯ

ಪ್ರಾಕೃತವು ಭಾರತದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದು. ಅನುಯೋಗದ್ವಾರ ಸೂತ್ರದ ಪ್ರಕಾರ– "ಸಕ್ಕತಾ ಪಾಗತಾ ಚೇವ ದುಹಾ ಭಣಿಇಓ ಆಹಿಯಾ। ಸರಮಂಡಲಮ್ಮಿ ಗಿಜ್ಜಂತೇ ಪಸತ್ಥಾ ಇಸಿಭಾಸಿತಾ॥" (=ಸಂಸ್ಕೃತ ಮತ್ತು ಪ್ರಾಕೃತ ಇವು ಎರಡು ಬಗೆಯ ಭಾಷೆಗಳೆಂದು ಹೇಳಲಾಗುತ್ತದೆ. ಹಾಡಲಾಗುವ ಸ್ವರ–ಸಮೂಹದಲ್ಲಿ ಋಷಿಭಾಷಿತಾ–ಆರ್ಷಭಾಷೆ ಪ್ರಶಸ್ತ ವಾದುದು).

ಪ್ರಾಕೃತದ ಹುಟ್ಟಿನ ಬಗ್ಗೆ ಎರಡು ಪ್ರಮುಖ ವಾದಗಳಿವೆ. ವೈದಿಕ ಸಂಸ್ಕೃತವೇ ಮೊದಲು ಹುಟ್ಟಿತು. ಪ್ರಾಕೃತ, ಪಾಲಿಗಳು ಅದರ ಅಪಭ್ರಂಶಗಳಾಗಿ ರೂಪು ತಳೆದುವು ಎಂಬುದು ಒಂದು ವಾದವಾದರೆ ಪ್ರಾಕೃತವೇ ಮೂಲಭಾಷೆ; ಅದು ಜನರ ಆಡುನುಡಿಯಾಗಿದ್ದು ಅದರಿಂದಲೇ ಕಾಲಾಂತರದಲ್ಲಿ ಈಗ ನಾವು ಸಂಸ್ಕೃತವೆಂದು ಕರೆಯುವ ಭಾಷೆ ರೂಪುಗೊಂಡಿತು ಎಂಬುದು ಇನ್ನೊಂದು ವಾದ. ಪ್ರಕೃತಿಯಿಂದ ಪ್ರಾಕೃತ ಸಿದ್ಧವಾಗುತ್ತದೆ. ಅದರ ಸಂಸ್ಕೃತ ರೂಪವೇ ಸಂಸ್ಕೃತ ಭಾಷೆ. ಪ್ರಾಕೃತವೆಂದರೆ, ವ್ಯಾಕರಣವೇ ಮೊದಲಾದ ಸಂಸ್ಕಾರಗಳಿಂದ ರಹಿತವಾದ, ಜನರ ಸ್ವಾಭಾವಿಕ ಮಾತಿನ ವ್ಯಾಪಾರ, ಅದರಿಂದ ಉತ್ಪನ್ನವಾದ್ದು ಎಂದು ಅರ್ಥ . 'ಪ್ರಾಕೃತ' ಮತ್ತು 'ಸಂಸ್ಕೃತ ಎಂಬ ಶಬ್ದಗಳು ಅದನ್ನೇ ಸೂಚಿಸುತ್ತಿವೆ. 'ಪ್ರಾಕ್ ಕೃತ', ಅಥವಾ 'ಪುರಾ ಕೃತ' ಎಂದರೆ ಹಿಂದೆ ಅಥವಾ ಮೊದಲು ರೂಪುಗೊಂಡದ್ದು, ಸಂ+ಕೃತ=ಸಮ್ಯಕ್ ಕೃತ (ಸಂಸ್ಕರಿಸಲ್ಪಟ್ಟ) ರೂಪವೇ ಸಂಸ್ಕೃತ ಎಂಬುದು ಇನ್ನೊಂದು ವಾದ. ಸಂಸ್ಕೃತದಿಂದಲೇ ಪ್ರಾಕೃತ ಹುಟ್ಟಿತು ಎಂಬುವವರು ಹೇಳುವುದೆಂದರೆ "ಪ್ರಾಕೃತಗಳಲ್ಲಿ ಕಂಡುಬರುವ ಹಲವು ಪದಗಳು 'ತದ್ಭವ' ಎಂಬ ಪ್ರಕ್ರಿಯೆಯನ್ನು ದಾಟಿ ಬಂದಂಥವು ಎಂಬುದು ಮೇಲುನೋಟಕ್ಕೇ ಗೊತ್ತಾಗುತ್ತದೆ. ಮೂಲದಿಂದ ನಾವು ತದ್ಭವವನ್ನು ಸುಸೂತ್ರವಾಗಿ ಪಡೆಯಬಹುದೇ ವಿನಾ ತದ್ಭವದಿಂದ ಮೂಲವನ್ನಲ್ಲ. ಆದ್ದರಿಂದ ಪ್ರಾಕೃತವು ಸಂಸ್ಕೃತದಿಂದ ಹುಟ್ಟಿ ಬೆಳೆದುದು ಎಂದು ತಿಳಿಯುವುದೇ ಸೂಕ್ತ"[೧]

೧೨ ಅಂಗ ಗ್ರಂಥಗಳಲ್ಲಿ ೧೧ ಮೊದಲು ಮೊದಲು ಆದುವು. ಈ ಅಂಗ ಗ್ರಂಥಗಳ ಭಾಷೆಯನ್ನು ಆರ್ಷ ವಚನದಲ್ಲಿ ಅರ್ಧಮಾಗಧಿ ಎಂದು ಹೇಳಲಾಗಿದೆ. ಇದೇ ಸಕಲ ಭಾಷೆಗಳ ಮೂಲ. ಈ ಅರ್ಧಮಾಗಧಿಯೇ ಪ್ರಾಕೃತ. ಮೊದಲಿಗೆ ಇದು ಒಂದೇ ರೂಪದಲ್ಲಿದ್ದರೂ ದೇಶ–ಕಾಲ ಸಂಸ್ಕಾರಗಳಿಂದ ಭಿನ್ನರೂಪ ಪಡೆದುಕೊಂಡು ಸಂಸ್ಕೃತವೇ ಮೊದಲಾದ ವಿಭಿನ್ನ ರೂಪಗಳಾದುವು. ಅರ್ಥಾತ್ ಅರ್ಧಮಾಗಧಿ ಪ್ರಾಕೃತದಿಂದಲೇ ಸಂಸ್ಕೃತ ಮತ್ತಿನ್ನತರ ಪ್ರಾಕೃತ ಭಾಷೆಗಳು ಹುಟ್ಟಿವೆ. ಪಾಣಿನಿಯ ವ್ಯಾಕರಣ ಸೂತ್ರಗಳಿಂದ ಸಂಸ್ಕಾರಗೊಂಡ ಭಾಷೆ ಸಂಸ್ಕೃತವೆನಿಸಿತು. 'ಪಾಇಅ–ಸದ್ದ–ಮಹಣ್ಣವೋ'ದ ಕರ್ತೃ ಹರಗೋವಿಂದದಾಸ್ ಅವರು ಈ ವಾದದ ಪುರಸ್ಕರ್ತರು. ಅವರ ವಾದದ ಸಾರಾಂಶ ಹೀಗಿದೆ:

ಮಹಾಕವಿ, ಸಿದ್ಧಸೇನ ಮತ್ತು ಆಚಾರ್ಯ ಹೇಮಚಂದ್ರ ಇವರುಗಳು ಜಿನವಾಣಿಯನ್ನು ಅಕೃತ್ರಿಮ ಮತ್ತು ಸಂಸ್ಕೃತವನ್ನು ಕೃತ್ರಿಮ ಎಂದು ಹೇಳುವ ರಹಸ್ಯವಾದರೂ ಇದೇ ಆಗಿದೆ.(ಅಕೃತ್ರಿಮಸ್ವಾದುಪದಾಂ ಜೈನೀ ವಾಚಮುಪಾಮಹೇ). ಜನಸಾಮಾನ್ಯರ ಮಾತೃಭಾಷೆಯಾದ ಪ್ರಾಕೃತವು ಅಕೃತ್ರಿಮ–ಸ್ವಾಭಾವಿಕ. ವ್ಯಾಕರಣ ಸೂತ್ರಗಳಿಂದ ಸಂಸ್ಕೃತಗೊಂಡ ಕಾರಣ ಸಂಸ್ಕೃತ ಕೃತ್ರಿಮ.

ಸಂಸ್ಕೃತ ಮತ್ತು ಪ್ರಾಕೃತಗಳ ಸಂಬಂಧವನ್ನು ವಿವರಿಸಲು ಕಾಳಿದಾಸನ 'ಕುಮಾರಸಂಭವ'ದಲ್ಲಿ ಬರುವ ಗಿರಿಜಾ ಕಲ್ಯಾಣದ ಈ ಸಂದರ್ಭವನ್ನು ಡಾ. ಶ್ರೀ ರಾಮಭಟ್ಟರು ಉಲ್ಲೇಖಿಸಿರುವುದನ್ನು ಇಲ್ಲಿ ನೆನೆಯುವುದು ಸೂಕ್ತ. ನವದಂಪತಿಗಳಾದ ಶಿವ-ಗಿರಿಜೆಯರನ್ನು ಸರಸ್ವತಿ ಹಾರೈಸಿದ ಸಂದರ್ಭ:

ದ್ವಿಧಾ ಪ್ರಯುಕ್ತೇನ ಚ ವಾಙ್ಮಯೇನ
ಸರಸ್ವತೀ ತನ್ಮಿಥುನಂ ನುನಾವ ।
ಸಂಸ್ಕಾರಪೂತೇನ ವರಂ ವರೇಣ್ಯಂ
ವಧೂಂ ಸುಖಗ್ರಾಹ್ಯ ನಿಬಂಧನೇನ ॥

"ಎರಡು ಬಗೆಯ ಭಾಷಾ ಪ್ರಯೋಗದಿಂದ ಸರಸ್ವತಿಯು ಶಿವ-ಗಿರಿಜೆಯರನ್ನು ಹಾರೈಸಿದಳು. ಸಂಸ್ಕರಿಸಿ ಶುದ್ಧಮಾಡಿದ ಮಾತಿನಿಂದ ವರೇಣ್ಯನಾದ ವರನನ್ನೂ ಸುಲಭವಾಗಿ ಅರ್ಥವಾಗುವ ರಚನೆಯುಳ್ಳ ಮಾತಿನಿಂದ ವಧುವನ್ನೂ ಹಾರೈಸಿದಳು"

ಸಂಸ್ಕರಿಸಿದ ಭಾಷೆ ಸಂಸ್ಕೃತವೆಂದೂ ಸುಲಭವಾಗಿ ಅರ್ಥವಾಗುವ ಭಾಷೆ ಪ್ರಾಕೃತ(ಆಡುಭಾಷೆ) ಎಂದೂ ಕಾಳಿದಾಸನ ಪ್ರಸಿದ್ಧ ವ್ಯಾಖ್ಯಾನಕಾರ ಮಲ್ಲಿನಾಥ **ಸ್ಪಷ್ಟವಾಗಿ** ವ್ಯಾಖ್ಯಾನಸಿದ್ದಾನೆ.[೧೨]

ಪ್ರಾಕೃತದ ಅನೇಕ ಶಬ್ದಗಳು ಮತ್ತು ಪ್ರತ್ಯಯಗಳು ಲೌಕಿಕ ಸಂಸ್ಕೃತಕ್ಕಿಂತ ಹೆಚ್ಚಾಗಿ ವೈದಿಕ ಸಂಸ್ಕೃತದ ರೂಪಗಳನ್ನು ಹೋಲುತ್ತವೆ. ವೈದಿಕ ಸಾಹಿತ್ಯದಲ್ಲೂ ಪ್ರಾಕೃತದ ಅನೇಕ ಶಬ್ದ ಮತ್ತು ಪ್ರತ್ಯಯಗಳ ಪ್ರಯೋಗ ಕಂಡು ಬರುತ್ತವೆ. **ವಂಕ (ವಕ್ರ), ವಹೂ(ವಧೂ), ಮೇಹ(ಮೇಘ), ಪುರಾಣ(ಪುರಾತನ), ತಿತಉ(ಚಾಲನೀ), ಖುರ(ಕ್ಷುರ), ಗೋಖುರ(ಗೋಕ್ಷುರ), ಕಚ್ಛ (ಕಕ್ಷ), ಶಿಥಿಲ(ಶ್ಲಥ), ಪಿಯಾಲ(ಪ್ರಿಯಾಲ) ಗಲ್ಲ(ಗಂಡ), ಮರಂದ(ಮಕರಂದ)]** ಮೊದಲಾದ ಶಬ್ದಗಳನ್ನು ಪ್ರಾಕೃತದಿಂದಲೇ ಏನೂ ವ್ಯತ್ಯಾಸಮಾಡದೆ ಋಗ್ವೇದದಲ್ಲಿ ಹಾಗೆಯೇ ತೆಗೆದುಕೊಳ್ಳಲಾಗಿದೆ. ಆದ್ದರಿಂದ ವೈದಿಕ ಸಂಸ್ಕೃತ ಮತ್ತು ಪ್ರಾಕೃತಗಳೆರಡೂ ಬಹುಶಃ ಒಂದು ಪ್ರಾಚೀನ ಪ್ರಾಕೃತ ಭಾಷೆಯಿಂದ ಉತ್ಪನ್ನಗೊಂಡು ಕವಲೊಡೆದಿರಬೇಕೆಂದು ಊಹಿಸಬಹುದು. ಅವೆರಡರಲ್ಲಿ ಜನ್ಯ ಜನಕ ಸಂಬಂಧವಿಲ್ಲ.

ಕ್ರಿ. ಶ. ಪೂರ್ವದ ೩-೪ನೇ ಶತಮಾನಕ್ಕಿಂತ ಹಿಂದಿನಿಂದಲೂ ಅಂದರೆ ಬುದ್ಧ ಮಹಾವೀರರ ಕಾಲಕ್ಕಿಂತ ಹಿಂದಿನಿಂದಲೂ ಭಾರತದ ಆರ್ಯ ಜನರ ಆಡುನುಡಿಯಾಗಿದ್ದ, ಮತ್ತು ಬುದ್ಧ ಮಹಾವೀರರು ತಮ್ಮ ಧರ್ಮಗಳನ್ನು ಉಪದೇಶಿಸಿದ, ಪ್ರಸಾರ ಮಾಡಿದ, ಹಾಗೂ ಭಾರತದ ಈಗಿನ ಸಮಸ್ತ ಆರ್ಯ ಭಾಷೆಗಳು ಯಾವುದರಿಂದ ಜನ್ಮ ತಾಳಿವೆಯೋ ಆ ಎಲ್ಲ ಭಾಷೆಗಳ ಸಾಮಾನ್ಯವಾದ ಹೆಸರೇ ಪ್ರಾಕೃತ. ಕಾರಣ, ಈ ಎಲ್ಲ ಭಾಷೆಗಳೂ ಪ್ರಾಕೃತದ ವಿಭಿನ್ನ ರೂಪಾಂತರಗಳು. ಕಾಲ, ಮತ್ತು ದೇಶದ(=ಪ್ರದೇಶದ) ಭಿನ್ನತೆಯಿಂದಾಗಿ ಇವು ಹುಟ್ಟಿಕೊಂಡಂಥವು. ಇದೇ ಕಾರಣದಿಂದ ಈ ಭಾಷೆಗಳ ಹೆಸರಿನೊಂದಿಗೆ ಪ್ರಾಕೃತ ಎಂಬ ಪದವು ಸೇರಿಕೊಂಡಿತು. ಉದಾಹರಣೆಗೆ ಪ್ರಾಥಮಿಕ ಪ್ರಾಕೃತ, ಅಥವಾ ಆರ್ಷ ಇಲ್ಲವೆ ಅರ್ಧಮಾಗಧಿ ಪ್ರಾಕೃತ, ಪಾಲೀ ಪ್ರಾಕೃತ, ಪೈಶಾಚೀ ಪ್ರಾಕೃತ ಶೌರಸೇನೀ ಪ್ರಾಕೃತ, ಮಹಾರಾಷ್ಟ್ರೀ ಪ್ರಾಕೃತ, ಅಪಭ್ರಂಶ ಪ್ರಾಕೃತ ಇತ್ಯಾದಿ.

ಜನಾಂಗೀಯ ವಾದದ ಪ್ರಕಾರ ಹೊರಗಿನಿಂದ ಆರ್ಯರು ಬರುವುದಕ್ಕೆ ಮುನ್ನವೇ ಭಾರತದ ದಕ್ಷಿಣ ಮತ್ತು ಪೂರ್ವಭಾಗಗಳಲ್ಲಿ ಆರ್ಯೇತರ ಭಾಷೆಗಳು ಇದ್ದುವು. ಉತ್ತರ ಭಾರತದಲ್ಲೂ ಜನರ ಆಡುನುಡಿ ಇತ್ತು. ಬಹುಶಃ ಆರ್ಯರ ಭಾಷೆಯ ಗಾಢ ಸಂಪರ್ಕ ಮತ್ತು ಪ್ರಭಾವಕ್ಕೊಳಗಾದ ಉತ್ತರಭಾರತದ ಜನಭಾಷೆಯೇ ವೈದಿಕ ಸಂಸ್ಕೃತದ ರೂಪವನ್ನು ತಾಳಿ ಅದರಲ್ಲಿ ವೇದಗಳು ರಚಿತವಾಗಿರಬೇಕು. ಇಷ್ಟಾದರೂ ಅದು ಕೂಡ ಜನಸಾಮಾನ್ಯರ ಭಾಷೆಯಾಗಿರದೆ ಋಷಿವರ್ಗದವರ ಭಾಷೆಯಾಗಿದ್ದಿರಬೇಕು. ಜನ ಸಾಮಾನ್ಯರ

ಆಡುನುಡಿಯಾದರೋ ಮುಂಚೆ ಇದ್ದ ನುಡಿಯಾದ ಕಾರಣ ಪ್ರಾಕೃತವೆಂದು ಹೆಸರು ಪಡೆದುಕೊಂಡಿರಬೇಕು. 'ಪ್ರಕೃತಿ' ಶಬ್ದದಿಂದ 'ಪ್ರಾಕೃತ' ಶಬ್ದ ಸಾಧಿತವಾಗುತ್ತದೆಂದು ಹೇಳುವರು. 'ಪ್ರಕೃತಿ' ಎಂದರೆ ಮೂಲ; ಅದರಿಂದಲೇ ಉತ್ತರ ಭಾರತದ ಮೂಲಭಾಷೆ ಪ್ರಾಕೃತವೆನಿಸಿತು ಎನ್ನುತ್ತಾರೆ. ಕ್ರಿ ಪೂ. ೭ನೇಶತಮಾನದ ಕಾಲದವರೆಗೂ ಅದು ಮುಂದುವರಿದು ಕ್ರಿ. ಪೂ ೭ನೇ ಶತಮಾನದ ಪಾಣಿನಿಯು ವೈದಿಕ ಸಂಸ್ಕೃತಕ್ಕೆ ವ್ಯಾಕರಣ ಸೂತ್ರಗಳನ್ನು ರೂಪಿಸಿ ಒಂದು ಮೂರ್ತರೂಪ ಕೊಟ್ಟ ನಂತರದಲ್ಲಿ ಅದು ಸಂಸ್ಕೃತವೆಂದು ಕರೆಯಲಾಗುವ ಈಗಿನ ಸ್ವರೂಪವನ್ನು ಪಡೆದುಕೊಂಡು ಶಿಷ್ಟರ ಭಾಷೆಯಾಗಿ ಮುಂದೆ ಕಾವ್ಯ ನಾಟಕಗಳಲ್ಲಿ ಬಳಕೆಗೆ ಬಂದು ಲೌಕಿಕ ಸಂಸ್ಕೃತವೆನಿಸಿರಬೇಕು. ಸಂಸ್ಕೃತದಲ್ಲಿ ಬಹಳ ಬೇಗನೆ ಸಾಹಿತ್ಯ ನಿರ್ಮಿತಿಯಾಗತೊಡಗಿತು. ಇಷ್ಟಾದರೂ ಅದು ಎಂದೂ ಜನಸಾಮಾನ್ಯರ ಭಾಷೆಯಾಗಿ ಉಳಿದು ಬರಲಿಲ್ಲ. ಸಾಮ್ರಾಟ್ ಅಶೋಕನ ಕಾಲದಿಂದ ಹೆಂಗಸರು ಮಕ್ಕಳನ್ನೊಳಗೊಂಡಂತೆ ಸಾಮಾನ್ಯರೆಲ್ಲರ 'ಪ್ರಾಕೃತ'ದಲ್ಲಿ ಸಾಹಿತ್ಯ ರಚನೆಯಾಗುತ್ತ ಬಂದಿರಬೇಕು. ಪ್ರಾಕೃತದ ಎಲ್ಲ ಪ್ರಭೇದಗಳೂ ಸಂಸ್ಕೃತದಿಂದ ಜನಸಿರದೆ ವೈದಿಕ ಯುಗದಲ್ಲಿ ಆಯಾ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ಜನರ ಆಡುನುಡಿಗಳಿಂದಲೇ ಜನಸಿದವಾಗಿವೆ.[೨]

ಪ್ರಾಕೃತ ಭಾಷೆ ಇಂಡೋ ಆರ್ಯನ್ (ಭಾರತೀಯ ಆರ್ಯಶಾಖೆ) ಕುಟುಂಬಕ್ಕೆ ಸೇರಿದ್ದೆಂಬುದು ಭಾಷಾ ವಿಜ್ಞಾನಿಗಳ ಅಭಿಮತ. ಈ ಪರಿವಾರಕ್ಕೆ ಸೇರಿದ ಭಾಷೆಗಳ ವಿಕಾಸ ಮೂರು ಹಂತಗಳಲ್ಲಿ ನಡೆದಿದೆಯೆಂದು ಗುರುತಿಸಲಾಗಿದೆ. ಅವುಗಳೆಂದರೆ (೧) ಪ್ರಾಚೀನ ಭಾರತೀಯ ಆರ್ಯಭಾಷಾ ಕಾಲ (ಕ್ರಿಸ್ತ ಪೂರ್ವ ೨೦೦೦-ಕ್ರಿ. ಪೂ ೬೦೦). (೨)ಮಧ್ಯಕಾಲೀನ ಆರ್ಯಭಾಷಾ ಕಾಲ(ಕ್ರಿ.ಪೂ.೬೦೦-ಕ್ರಿಶ.೧೦೦೦) ಮತ್ತು (೩)ಆಧುನಿಕ ಆರ್ಯಭಾಷಾ ಕಾಲ(ಕ್ರಿ.ಶ. ೧೦೦೦ ದಿಂದ ಮುಂದಕ್ಕೆ). ಒಟ್ಟಾರೆ ಪ್ರಾಕೃತವು ವೈದಿಕ ಯುಗ, ಮಹಾವೀರ ಯುಗ ಮತ್ತು ಅನಂತರದ ವಿವಿಧ ಕಾಲಘಟ್ಟಗಳಲ್ಲಿ ವಿಕಾಸಗೊಳ್ಳುತ್ತ ಬಂದಿದೆ. ವೈದಿಕ ಯುಗದಲ್ಲಿ ಇದು ಆಡುನುಡಿಯಾಗಿತ್ತು. ಬುದ್ಧ ಮಹಾವೀರರ ಕಾಲದಲ್ಲಿ ಇದು ಜನಭಾಷೆಯಾಗಿದ್ದುದರ ಜೊತೆಗೆ ಧರ್ಮ ಮತ್ತು ಅಧ್ಯಾತ್ಮದ ಭಾಷೆಯಾಗಿತ್ತು. ಅಶೋಕ ಚಕ್ರವರ್ತಿಯ ಕಾಲದಲ್ಲಿ ಆಡಳಿತಭಾಷೆಯ ಹಂತಕ್ಕೇರಿತು. ಹಾಗೆಯೇ ವಿಕಾಸಗೊಳ್ಳುತ್ತ ಸಾಹಿತ್ಯದ ಭಾಷೆಯಾಗಿ ಸಾಹಿತ್ಯ ಕೃತಿಗಳೂ ರಚಿತವಾದವು. ವಿಶಾಲವಾದ ಭೌಗೋಳಿಕ ಪ್ರದೇಶದ ಜನಭಾಷೆಯಾಗಿದ್ದ ಪ್ರಾಕೃತವು ವಿಭಿನ್ನ ಕಾಲಘಟ್ಟಗಳಲ್ಲಿ ಹೊಸ ಹೊಸ ರೂಪಾಂತರಗಳನ್ನು ಹೊಂದುತ್ತಾ ಹೋಗಿ ಅದಕ್ಕೆ ತಕ್ಕಂತೆ ವಿವಿಧ ಹೆಸರುಗಳನ್ನು ಪಡೆಯುತ್ತ ಹೋಯಿತು. ಆ ಎಲ್ಲ ಭಾಷೆಗಳೂ ಪ್ರಾಕೃತದ ವಿಭಿನ್ನ ಪ್ರಭೇದಗಳೇ ಆಗಿದ್ದರಿಂದ ಹೊಸ ಹೆಸರಿನ ಮುಂದೆ ಪ್ರಾಕೃತ ಎಂಬ ಶಬ್ದ ಸೇರಿಕೊಂಡಿತು. ಪ್ರಾಥಮಿಕ ಪ್ರಾಕೃತ, ಆರ್ಷಪ್ರಾಕೃತ, ಅರ್ಧಮಾಗಧಿ ಪ್ರಾಕೃತ, ಪಾಲಿಪ್ರಾಕೃತ, ಅಪಭ್ರಂಶಪ್ರಾಕೃತ, ಶೌರಸೇನೀಪ್ರಾಕೃತ ಇತ್ಯಾದಿ. ಪ್ರಾಕೃತ ಭಾಷೆಯ ವಿಕಾಸದ ಎರಡು ಪ್ರಮುಖ ಅವಸ್ಥೆಗಳೆಂದರೆ (೧) ಪ್ರಥಮ ಹಂತದ ಪ್ರಾಕೃತ (೨) ದ್ವಿತೀಯ ಹಂತದ ಪ್ರಾಕೃತ.

ಪ್ರಾಕೃತ ಭಾಷೆಗಳ ಪ್ರಥಮ ಹಂತ(ಕ್ರಿ. ಪೂ.೨೦೦೦- ಕ್ರಿ. ಪೂ.೬೦೦)

ಕ್ರಿ. ಪೂ ೨೦೦೦ ರಿಂದ ಕ್ರಿ. ಪೂ ೬೦೦ರ ವರೆಗಿನ ಜನಭಾಷೆಯನ್ನು ಪ್ರಥಮ ಹಂತದ ಪ್ರಾಕೃತ ಎಂದು ಕರೆಯಲಾಗುತ್ತದೆ. ಈ ಹಂತದಲ್ಲಿನ ಜನಭಾಷೆಯ ಸಾಹಿತ್ಯ ದೊರೆತಿಲ್ಲ. ವೈದಿಕ ಕಾಲ ಮತ್ತು ಅದರ ಪೂರ್ವದಲ್ಲಿದ್ದ ಸಮಸ್ತ ಆಡುನುಡಿಗಳನ್ನು ಡಾ. ಗ್ರಿಯರ್ಸನ್ ಪ್ರಥಮ ಹಂತದ ಪ್ರಾಕೃತಗಳು ಎಂದು ಹೆಸರಿಸಿದ್ದಾನೆ. ಇದರ ಸ್ವರ ಮತ್ತು ವ್ಯಂಜನಗಳ ಉಚ್ಚಾರಣಾ ರೀತಿ ಹಾಗೂ ವಿಭಕ್ತಿಗಳ ಪ್ರಯೋಗದ ರೀತಿ ವೈದಿಕ ಭಾಷೆಯನ್ನು ಹೋಲುತ್ತಿತ್ತು.

ಪ್ರಾಕೃತ ಭಾಷೆಗಳ ದ್ವಿತೀಯ ಹಂತ(ಕ್ರಿ. ಪೂ. ೬೦೦–ಕ್ರಿ ಶ. ೧೦೦೦)

ವೈದಿಕ ಯುಗದಲ್ಲಿ ಆಡುನುಡಿಯ ರೂಪದಲ್ಲಿದ್ದ ಪ್ರಾಕೃತ ಭಾಷೆಗಳಲ್ಲಿ ಮುಂದಿನ ಕಾಲಘಟ್ಟಗಳಲ್ಲಿ ಅನೇಕ ಪರಿವರ್ತನೆಗಳಾದುವು. ಸ್ವರಗಳಲ್ಲಿ, ಅಂತ್ಯ ವ್ಯಂಜನಗಳಲ್ಲಿ ಸಂಯುಕ್ತ ವ್ಯಂಜನಗಳಲ್ಲಿ ವಿಭಕ್ತಿ ಮತ್ತು ವಚನಗಳ ಬಳಕೆಯಲ್ಲಿ ಲೋಪಗಳು ಅಥವಾ ವ್ಯತ್ಯಾಸಗಳು ಆದವು. ಈ ಪರಿವರ್ತನೆಗಳ ಪರಿಣಾಮವಾಗಿ ದ್ವಿತೀಯ ಹಂತದ ಪ್ರಾಕೃತ ಭಾಷೆಗಳು ಹುಟ್ಟಿದುವು. ಜೈನ ಮತ್ತು ಬೌದ್ಧ ಧರ್ಮಗಳ ಪ್ರಚಾರದ ಕಾಲದಿಂದ ಅರ್ಥಾತ್ ಕ್ರಿ. ಪೂ ೬ನೇ ಶತಮಾನದಿಂದ ಕ್ರಿ. ಶ. ೯–೧೦ನೇ ಶತಮಾನದ ವರೆಗೆ ಇವುಗಳು ಪ್ರಚಲಿತವಾಗಿದ್ದುವು. ಬುದ್ಧ ಮತ್ತು ಮಹಾವೀರರ ಕಾಲದಿಂದಲೂ ಈ ಸಮಸ್ತ ದ್ವಿತೀಯ ಹಂತದ ಪ್ರಾಕೃತ ಭಾಷೆಗಳು ಆಡುನುಡಿಗಳ ರೂಪದಲ್ಲಿ ಜನ ವ್ಯವಹಾರದಲ್ಲಿದ್ದುವು. ಅವರಿಬ್ಬರೂ ಇದೇ ಪ್ರಾಕೃತ ಭಾಷೆಗಳಲ್ಲೊಂದೊಂದರಲ್ಲಿ (ಪಾಲಿ ಮತ್ತು ಅರ್ಧಮಾಗಧಿ) ತಮ್ಮ ಧರ್ಮಗಳನ್ನು ಉಪದೇಶಿಸಿದರು. ಬುದ್ದನು ತನ್ನ ಉಪದೇಶಗಳನ್ನು ಆಡುನುಡಿಯಾದ ಪ್ರಾಕೃತದಲ್ಲೇ ಬರೆದಿಡಲು ಶಿಷ್ಯರುಗಳಿಗೆ ಹೇಳಿದನು. ಹೀಗೆ ಈ ಆಡುನುಡಿಗಳು ಸಾಹಿತ್ಯ ಭಾಷೆಗಳಾಗಿ ಮಾರ್ಪಡಲಾರಂಭವಾದುವು. ಅದರ ಪರಿಣಾಮವಾಗಿಯೇ ಪಶ್ಚಿಮ ಮಗಧ ಮತ್ತು ಶೂರಸೇನ ದೇಶದ ಮಧ್ಯ ದೇಶದಲ್ಲಿದ್ದ ಪ್ರದೇಶಗಳಲ್ಲಿನ ಆಡುನುಡಿಯಾದ ಅರ್ಧಮಾಗಧಿಯಲ್ಲಿ ಜೈನರ ಧರ್ಮಗ್ರಂಥಗಳು ರಚಿತವಾದರೆ ಪೂರ್ವ ಮಗಧ ದೇಶದಲ್ಲಿದ್ದ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದ ಪಾಲಿಯಲ್ಲಿ ಬೌದ್ಧ ಧರ್ಮ ಗ್ರಂಥಗಳು ರಚಿತವಾದವು. ಈ ದಿತೀಯ ಹಂತದ ಪ್ರಾಕೃತ ಭಾಷೆಗಳನ್ನು ಮೂರು ಯುಗಗಳಾಗಿ ವಿಭಾಗಮಾಡಲಾಗಿದೆ. ಅವುಗಳೆಂದರೆ :

ಪ್ರಥಮ ಯುಗ(ಕ್ರಿ. ಪೂ. ೬೦೦– ಕ್ರಿ ಶ ೨೦೦)

ಅ) ಹೀನಯಾನ ಬೌದ್ಧರ ತ್ರಿಪಿಟಕಗಳು, ಮಹಾವಂಶ, ಮತ್ತು ಜಾತಕ ಗ್ರಂಥಗಳೇ ಮೊದಲಾದವುಗಳ ಪಾಲಿಭಾಷೆ

ಆ) ಪೈಶಾಚಿ ಮತ್ತು ಶೂಲಿಕಾ ಪೈಶಾಚಿ

ಇ) ಜೈನ ಅಂಗಗ್ರಂಥಗಳ ಅರ್ಧಮಾಗಧಿ

ಈ) ಅಂಗ ಗ್ರಂಥಗಳ ಭಿನ್ನ ಪ್ರಾಚೀನ ಸೂತ್ರಗಳು ಮತ್ತು 'ಪಉಮ ಚರಿಯ'ವೇ ಮೊದಲಾದ ಪ್ರಾಚೀನ ಗ್ರಂಥಗಳ ಜೈನ ಮಹಾರಾಷ್ಟ್ರಿ.

ಉ) ಅಶೋಕನ ಶಿಲಾಶಾಸನಗಳು ಮತ್ತು ಅನಂತರದ ಕಾಲದ ಶಿಲಾಶಾಸನಗಳ ಭಾಷೆ.

ಊ) ಅಶ್ವಘೋಷನ ನಾಟಕಗಳ ಭಾಷೆ

ಮಧ್ಯಯುಗ(ಕ್ರಿ ಶ: ೨೦೦– ಕ್ರಿ ಶ ೬೦೦)

೧) ಭಾಸ, ಕಾಳಿದಾಸಾದಿಗಳ ನಾಟಕಗಳಲ್ಲಿನ ಶೌರಸೇನಿ, ಮಾಗಧಿ ಮತ್ತು ಮಹಾರಾಷ್ಟ್ರಿ ಭಾಷೆಗಳು

೨) ಸೇತುಬಂಧ, ಗಾಥಾ ಸಪ್ತಶತಿಯೇ ಮೊದಲಾದ ಕಾವ್ಯಗಳ ಮಹಾರಾಷ್ಟ್ರಿ ಭಾಷೆ.

೩) ಪ್ರಾಕೃತ ವ್ಯಾಕರಣಗಳಲ್ಲಿ ಉದಾಹರಣೆ, ಲಕ್ಷಣಗಳಲ್ಲಿ ಕಂಡುಬರುವ ಮಹಾರಾಷ್ಟ್ರಿ ಶೌರಸೇನ, ಮಾಗಧಿ, ಪೈಶಾಚಿ ಮತ್ತು ಚೂಲಿಕಾ ಪೈಶಾಚಿ ಭಾಷೆಗಳು

೪) ದಿಗಂಬರ ಜೈನ ಗ್ರಂಥಗಳ ಶೌರಸೇನಿ ಮತ್ತು ಅನಂತರದ ಕಾಲದ ಶ್ವೇತಾಂಬರ ಗ್ರಂಥಗಳ ಮಹಾರಾಷ್ಟ್ರೀ ಭಾಷೆ.

೫) ಚಂಡನ ವ್ಯಾಕರಣದಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ವಿಕ್ರಮೋರ್ವಶೀಯದಲ್ಲಿ ಪ್ರಯೋಗವಾಗಿರುವ ಅಪಭ್ರಂಶ ಭಾಷೆ

ತೃತೀಯ ಯುಗದ ಅಪಭ್ರಂಶ ಭಾಷೆಗಳು(ಕ್ರಿ. ಶ. ೬೦೦-೧೨೦೦)

ಈಗ ಈ ಪ್ರಾಕೃತ ಭಾಷಾ ಪ್ರಭೇದಗಳ ಸ್ಥೂಲ ಪರಿಚಯ ಮಾಡಿಕೊಳ್ಳಬಹುದು.

ಪ್ರಾಕೃತದ ಪ್ರಭೇದಗಳು

ಪಾಲಿ, ಪೈಶಾಚಿ, ಚೂಲಿಕಾ ಪೈಶಾಚಿ, ಅರ್ಧಮಾಗಧಿ, ಜೈನ ಮಹಾರಾಷ್ಟ್ರಿ, ಶೌ(ಸೌ)ರಸೇನೀ, ಮಾಗಧಿ, ಮಹಾರಾಷ್ಟ್ರಿ ಮತ್ತು ಅಪಭ್ರಂಶ ಇವು ಪ್ರಾಕೃತದ ವಿಭಿನ್ನ ಪ್ರಭೇದಗಳು.

ಪಾಲಿ

ಧರ್ಮ ಗ್ರಂಥಗಳು ರಚಿತವಾಗಿರುವ ಪ್ರಾಕೃತಗಳಲ್ಲಿ ಪಾಲಿ ಹೀನಯಾನ ಬೌದ್ಧರ ಆಗಮ ಗ್ರಂಥಗಳ ಭಾಷೆಯಾದರೆ, ಅರ್ಧಮಾಗಧಿ ಅಥವಾ ಆರ್ಷ ಭಾಷೆ, ಜೈನ ಮಹಾರಾಷ್ಟ್ರೀ, ಜೈನ ಶೌರಸೇನೀ ಮತ್ತು ಅಪಭ್ರಂಶಗಳು ಜೈನರ ಆಗಮ ಗ್ರಂಥಗಳ ಭಾಷೆಯಾಗಿವೆ. ಗೌತಮ ಬುದ್ಧನು ತನ್ನ ಧರ್ಮವನ್ನು ಆಗಿನ ಜನಭಾಷೆಯಾದ ಪಾಲಿಯಲ್ಲೇ ಬೋಧಿಸಿದನೆಂಬುದು ಈಗ ಇತಿಹಾಸ. ಪಾಲಿಯು ಮಗಧದ ಜನರ ಆಡುನುಡಿಯಾಗಿತ್ತು. ಜ್ಞಾನ ಭಾಸ್ಕರನೂ ಏಷ್ಯಾದ ಜ್ಞಾನಜ್ಯೋತಿಯೂ ಆದ ಬುದ್ಧನು ತನ್ನ ಧರ್ಮವನ್ನು ಪಾಲಿಯಲ್ಲಿ ಬೋಧಿಸಿದ್ದರಿಂದ ಆ ಭಾಷೆಯ ಸ್ಥಾನಮಾನಗಳೂ ಶಾಸ್ತ್ರೀಯ ಭಾಷೆಯ ಎತ್ತರಕ್ಕೆ ಏರಿದವು.

ಪಾಲಿ ಶಬ್ದದ ವ್ಯುತ್ಪತ್ತಿಯ ಬಗೆಗೆ ಹಲವು ಅಭಿಪ್ರಾಯಗಳಿವೆ. ಪಂಕ್ತಿ, ಪಾಠ, ಮೊದಲಾದ ಶಬ್ದಗಳಿಂದ ಪಾಲಿ ರೂಪು ಗೊಂಡಿರಬೇಕೆಂಬ ವಾದಗಳು ವಿದ್ವಾಂಸರಿಂದ ಬಂದಿವೆಯಾದರೂ ಅವಕ್ಕೆ ಹೆಚ್ಚು ಸಮರ್ಥನೆ ಸಿಗುವುದಿಲ್ಲ. ಭಿಕ್ಷು ಜಗದೀಶ ಕಾಶ್ಯಪರೆಂಬುವರು 'ಪರಿಯಾಯ' ಶಬ್ದದಿಂದ ಪಾಲಿ ಹುಟ್ಟಿದೆಯೆಂದು ಸಾಧಿಸಿದ್ದಾರೆ. ತ್ರಿಪಿಟಕದ ಮೂಲಗ್ರಂಥಗಳಲ್ಲಿ ಬುದ್ಧ ಉಪದೇಶ ಅಥವಾ ಬುದ್ಧ ವಚನವೆಂಬ ಅರ್ಥದಲ್ಲಿ 'ಧಮ್ಮಪರಿಯಾಯ' ಎಂಬ ಶಬ್ದ ಪ್ರಯೋಗವಾಗಿದೆ. ಪಾಲಿ ಭಾಷೆಯಲ್ಲಿ 'ಪರಿ' 'ಪಟಿ' ಮೊದಲಾದ ಉಪಸರ್ಗಗಳ ಆದಿಯ 'ಪ' ದೀರ್ಘ ರೂಪ ತಳೆದು 'ಪಾರಿ' 'ಪಾಟಿ' ಶಬ್ದಗಳಾಗುತ್ತವೆ. ಅದರ ಫಲವಾಗಿ 'ಪರಿಯಾಯ' 'ಪಲಿಯಾಯ' ಶಬ್ದಗಳ ಆದಿಯಲ್ಲಿನ 'ಪ' 'ಪಾ' ಆಗಿ 'ಪಾಲಿಯಾಯ' ಆಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. 'ದೀಘ ನಿಕಾಯ ಪಾಲಿ' 'ಉದಾನ-ಪಾಲಿ' ಮೊದಲಾದ ಶಬ್ದಗಳ ಅರ್ಥವಾದರೂ ಇವು ಬುದ್ಧೋಪದೇಶಗಳೆಂದೇ. ಈ ಅರ್ಥ ತ್ರಿಪಿಟಕಗಳಿಗೆ ಮಾತ್ರ ಅನ್ವಯಿಸುವಂಥದು. ತ್ರಿಪಿಟಕಗಳು (ಸುತ್ತಪಿಟಕ, ವಿನಯ ಪಿಟಕ, ಅಭಿಧಮ್ಮ ಪಿಟಕ) ಸಿಂಹಳಕ್ಕೆ ಹೋದಾಗ ಅವುಗಳೊಂದಿಗೆ ಪಾಲಿಯೂ ಹೋಯಿತು. 'ಪಾಲಿ' ಎಂದರೆ- ಪಾ- ಪಾಲೇತಿ ರಕ್ಖತಿ ಇತಿ ಪಾಲಿ ಅರ್ಥಾತ್ ಪಾಲನ ಮಾಡುವುದು 'ಪಾಲಿ' ಎಂದೂ ಅರ್ಥೈಸುತ್ತಾರೆ.

ಸಿಂಹಳ, ಬರ್ಮಾ(ಮಾಯನ್ಮಾರ್), ಮತ್ತು ಸಯಾಮ್ ದೇಶಗಳ ಬೌದ್ಧ ಆಗಮಗಳ ಭಾಷೆ ಪಾಲಿಯೇ. ಜೈನ ಆಗಮದ ಭಾಷೆಯಾದ ಅರ್ಧಮಾಗಧಿಗೂ ತ್ರಿಪಿಟಕಗಳ ಭಾಷೆಯಾದ ಪಾಲಿಗೂ ಹತ್ತಿರದ ಸಂಬಂಧವಿದೆ ಎಂದು ಹೇಳಲಾಗಿದೆ. ಪಾಲಿ ಮಧ್ಯ ಇಂಡೋ ಆರ್ಯನ್ ಭಾಷೆ.

ಪೈಶಾಚಿ:

ಗುಣಾಢ್ಯನ ಬೃಹತ್ ಕಥೆ ಪೈಶಾಚಿ ಭಾಷೆಯಲ್ಲಿರುವುದು ಪ್ರಸಿದ್ಧ ಸಂಗತಿ. ಅದರೆ ಅದು ಈಗ ಲುಪ್ತವಾಗಿದೆ. ಪ್ರಾಕೃತ ಪ್ರಕಾಶ, ಆಚಾರ್ಯ ಹೇಮಚಂದ್ರನ 'ಪ್ರಾಕೃತ ವ್ಯಾಕರಣ', 'ಮೋಹರಾಜ-ಪರಾಜಯ' ಎಂಬ ನಾಟಕದಲ್ಲಿ ಪೈಶಾಚಿಯ ಉದಾಹರಣೆಗಳು ದೊರೆಯುತ್ತವೆಂದು ಹೇಳಲಾಗುತ್ತದೆ.

ಉತ್ತರ-ಪಶ್ಚಿಮ ಪಂಜಾಬ್, ಅಥವಾ ಅಫ್ಘಾನಿಸ್ತಾನ ಪ್ರಾಂತದ ಜನರ ಭಾಷೆಯಾಗಿದ್ದ ಪೈಶಾಚಿ ಆ ನಂತರದಲ್ಲಿ ಇತರ ಕಡೆಗಳಿಗೆ ಹಬ್ಬಿರಬೇಕು. ಇದರ ಮೂಲ ಸಂಸ್ಕೃತ ಅಥವಾ ಶೌರಸೇನಿ ಆಗಿರದೆ ವೈದಿಕ ಯುಗದಲ್ಲಿ ಭಾರತದ ಉತ್ತರ-ಪಶ್ಚಿಮ ಇಲ್ಲವೆ ಆಫ್ಘಾನಿಸ್ತಾನದ ಪೂರ್ವದ ಪ್ರಾಂತಗಳಲ್ಲಿ ಬಳಕೆಯಲ್ಲಿದ್ದ ಆಡುನುಡಿಯಾಗಿತ್ತು. ಪೈಶಾಚಿಯಲ್ಲಿ ಅನೇಕ ಪ್ರಭೇದಗಳಿವೆ: ಪಾಂಡ್ಯ, ಕೇಕಯ, ಬಾಹ್ಲೀಕ, ಸಹ್ಯ, ನೇಪಾಲ, ಕುಂತಲ ಮತ್ತು ಗಾಂಧಾರ. ಇದನ್ನು ಭೂತ ಭಾಷೆಯೆಂದೂ ಹೇಳಲಾಗಿದೆ. ಪಿಶಾಚ ದೇಶದ ಜನರು ಇದನ್ನು ಆಡುತ್ತಿದ್ದರು. ಶೌರಸೇನಿಯು ಪೈಶಾಚಿಗೆ ಆಧಾರವೆಂದು ಹೇಳಲಾಗುತ್ತದೆ.

ಚೂಲಿಕಾ ಪೈಶಾಚಿ

ಹೇಮಚಂದ್ರ, ಲಕ್ಷ್ಮೀಧರ ಮುಂತಾದ ವೈಯಾಕರಣರು ಅದನ್ನೊಂದು ಸ್ವತಂತ್ರ ಭಾಷೆಯೆಂದು ಒಪ್ಪದೆ ಪೈಶಾಚಿಯ ಅಂಗವೆಂದೇ ಪರಿಗಣಿಸುತ್ತಾರೆ.

ಅರ್ಧಮಾಗದಿ

ಭಗವಾನ್ ಮಹಾವೀರರು ತಮ್ಮ ಧರ್ಮೋಪದೇಶವನ್ನು ನೀಡುತ್ತಿದ್ದುದು ಅರ್ಧಮಾಗಧಿಯಲ್ಲೇ. ಹೀಗಾಗಿ ಶ್ವೇತಾಂಬರ ಜೈನ ಆಗಮದ ಭಾಷೆ ಅರ್ಧಮಾಗಧಿ. ಜೈನ ಸೂತ್ರಗಳ ಭಾಷೆಯಾದ ಅರ್ಧಮಾಗಧಿಯನ್ನು ಋಷಿ- ಭಾಷೆ ಇಲ್ಲವೆ ಆರ್ಷ ಎಂದು ಕರೆದರು. ಹೇಮಚಂದ್ರ, ದಂಡಿ, ನಮಿಸಾಧು ಇವರೆಲ್ಲರೂ ಪ್ರಾಕೃತವನ್ನು ಪ್ರಾದೇಶಿಕ ಆಡುಭಾಷೆ ಅಥವಾ ಜನಭಾಷೆ ಎಂದೇ ಹೇಳಿಕೊಂಡು ಬಂದಿದ್ದಾರೆ. ಬೌದ್ಧ ಸೂತ್ರಗಳ ಮಾಗಧಿಯು (ಪಾಲಿ) ನಾಟ್ಯಶಾಸ್ತ್ರ ಅಥವಾ ಪ್ರಾಕೃತ ವ್ಯಾಕರಣಗಳಲ್ಲಿ ನಿರ್ದಿಷ್ಟ ಪಡಿಸಿರುವ ಮಾಗಧಿಗಿಂತ ಹೇಗೆ ಭಿನ್ನಭಾಷೆ ಎನಿಸಿದೆಯೋ ಅದೇ ರೀತಿ ಜೈನಸೂತ್ರಗಳ ಅರ್ಧಮಾಗಧಿ ಕೂಡ ಕೆಲವು ಸಮಾನ ಲಕ್ಷಣಗಳ ಹೊರತಾಗಿಯೂ ನಾಟ್ಯಶಾಸ್ತ್ರ ಅಥವಾ ಪ್ರಾಕೃತ ವ್ಯಾಕರಣಗಳ ಅರ್ಧಮಾಗಧಿಗಿಂತ ಭಿನ್ನವಾದ್ದು. ಮಾಗಧಿಗಿಂತ ಹೆಚ್ಚು ಸಮೃದ್ಧ ಎಂಬ ಅರ್ಥದಲ್ಲಿ 'ಆಢ್ಯ ಮಾಗಧಿ' ಅರ್ಧಮಾಗಧಿಯಾಗಿರಬೇಕು ಎಂಬ ಊಹೆ ಇದೆ(ಆಢ್ಯ>ಅಡ್ಢ>>ಅದ್ಧ). ಶ್ರೇಷ್ಠ ಮಾಗಧಿ ಅಥವಾ ಅಡ್ಢಮಾಗಧಿ ಆಯಿತು. ಸಂಸ್ಕೃತದ 'ಅರ್ಧ' ಪದವೂ 'ಅಡ್ಢ' ಎಂದೇ ಆಗುತ್ತದೆ. ಮಾಗಧಿಗಿಂತ ಅರ್ಧಮಾಗಧಿ ಸುಧಾರಿಸಿದ ಭಾಷೆ.

ಜೈನ ಮಹಾರಾಷ್ಟ್ರಿ

ಜೈನ ಸೂತ್ರಗ್ರಂಥಗಳ ಹೊರತಾಗಿ ಶ್ವೇತಾಂಬರ ಜೈನರು ರಚಿಸಿದ ಅನ್ಯ ಗ್ರಂಥಗಳ ಭಾಷೆಯನ್ನು "ಜೈನ ಮಹಾರಾಷ್ಟ್ರೀ" ಎಂದು ಕರೆಯಲಾಗಿದೆ. ಇದರಲ್ಲಿ ಪ್ರಾಕೃತ ವ್ಯಾಕರಣಗಳಲ್ಲಿ ಹೇಳಲಾದ ಮಹಾರಾಷ್ಟ್ರ ಭಾಷೆಯ ಲಕ್ಷಣಗಳು ವಿಶೇಷ ರೂಪದಲ್ಲಿ ಕಂಡುಬರುತ್ತವಾದರೂ ಜೈನ ಅರ್ಧಮಾಗಧಿಯ ಬಹಳಷ್ಟು ಪ್ರಭಾವ ಕಂಡುಬರುತ್ತದೆ. ಪಉಮಚರಿಯ, ಉಪದೇಶಮಾಲಾ, ನಿರ್ಯುಕ್ತಿಗಳು ಇವೆಲ್ಲವೂ ಪ್ರಥಮ ಯುಗದ ಜೈನ ಮಹಾರಾಷ್ಟ್ರಿಯ ಉದಾಹರಣೆಗಳು. ಜೈನ ಮಹಾರಾಷ್ಟ್ರಿಯು ಕ್ರಮಕ್ರಮವಾಗಿ ಪರಿವರ್ತಿತಗೊಂಡು ಮಧ್ಯಯುಗದ ವ್ಯಂಜನ ಲೋಪಗಳು ಹೆಚ್ಚಾಗಿರುವ ಮಹಾರಾಷ್ಟ್ರಿಯಾಗಿ ರೂಪಾಂತರಗೊಂಡಿತು.

ಶೌರ (=ಸೌರ)ಸೇನಿ

ಸಂಸ್ಕೃತ ನಾಟಕಗಳಲ್ಲಿ ಬಳಕೆಯಾಗಿರುವ ಗದ್ಯ ಸಾಮಾನ್ಯವಾಗಿ ಶೌರಸೇನಿಯಲ್ಲಿದೆ. ಶೌರ(ಸೌರ)ಸೇನಿ ಭಾಷಾ ಶೂ(ಸೂ)ರಸೇನ ಅರ್ಥಾತ್ ಮಥುರಾ ಪ್ರದೇಶದಲ್ಲಿ ಹುಟ್ಟಿದ ಭಾಷೆ. ಅಶ್ವಘೋಷನ ನಾಟಕಗಳಲ್ಲಿ ಕಂಡುಬರುವ ಶೌರಸೇನಿ ಭಾಷೆ, ಪಾಲಿ ಮತ್ತು ಅಶೋಕನ ಲಿಪಿಯ ಭಾಷೆಯನ್ನು ಹೋಲುವಂಥದಾಗಿದ್ದು ಹಿಂದಿನ ಕಾಲದ ನಾಟಕಗಳಲ್ಲಿ ಪ್ರಯುಕ್ತವಾದ ಭಾಷೆಗಿಂತ ಪ್ರಾಚೀನವಾಗಿದ್ದು ಶೌರಸೇನಿಯಲ್ಲಿದೆ. ಭಾಸನ ನಾಟಕಗಳ ಮತ್ತು ಮತ್ತು ಜೈನ ಶೌರಸೇನಿಯ ಕಾಲ ಕ್ರಿ. ಶ ಒಂದು ಅಥವಾ ಎರಡನೇ ಶತಮಾನದ ಕಾಲದ್ದು. ಇದರಲ್ಲಿ ಶುದ್ಧ ಶೌರಸೇನಿ ಮತ್ತು ಜೈನ ಶೌರಸೇನಿ ಎಂದು ಎರಡು ಬಗೆ. ದಿಗಂಬರ ಜೈನರ ಆಗಮಗಳ ಭಾಷೆಯೇ ಜೈನ ಶೌರಸೇನಿ ಎನಿಸಿತು. ಅರ್ಧಮಾಗಧಿಯಿಂದ ಹೆಚ್ಚು ಪ್ರಭಾವಿತವಾಗಿರುವ ಭಾಷೆ. ಪ್ರವಚನಸಾರ, ಸಮಯಸಾರ, ಪಂಚಾಸ್ತಿಕಾಯ, ಅಷ್ಟ ಪಾಹುಡ, ಭಗವತೀ ಆರಾಧನಾ ಮೊದಲಾದ ಗ್ರಂಥಗಳು ಜೈನ ಶೌರಸೇನಿಯಲ್ಲಿವೆ.

ಮಾಗಧಿ

ಮಾಗಧಿ ಭಾಷೆಯ ಜನ್ಮ ಸ್ಥಾನ ಮಗಧ ದೇಶ. ಮಗಧ ದೇಶದ ಹೊರಗಡೆಯೂ ಅಶೋಕನ ಶಾಸನಗಳಲ್ಲಿ ಇದರ ನಿದರ್ಶನಗಳು ದೊರಕುವುದರ ಕಾರಣ, ಮಗಧದ ಭಾಷೆ ಆಗ ಆಡಳಿತಭಾಷೆಯಾಗಿದ್ದುದು. ಬಹುಶಃ ಆ ಕಾರಣದಿಂದಲೇ ಎಲ್ಲೆಡೆಯೂ ನಾಟಕಗಳಲ್ಲಿ ರಾಜರ ಅಂತಃಪುರದ ಸ್ತ್ರೀಯರು, ಕಂಚುಕಿ ಮೊದಲಾದವರು ಈ ಭಾಷೆಯನ್ನೇ ಬಳಸಬೇಕೆಂಬ ನಿಯಮವಿದ್ದಿರಬೇಕು. ಪ್ರಾಚೀನ ಭಿಕ್ಷುಗಳು ಮತ್ತು ಕ್ಷಪಣಕರು ಮಗಧದವರೇ ಆಗಿರುತ್ತಿದ್ದ ಕಾರಣ ನಾಟಕಗಳಲ್ಲಿ ಇವರ ಭಾಷೆಯೂ ಮಾಗಧಿಯೇ ಆಗಿರಬೇಕೆಂದು ನಿರ್ದಿಷ್ಟಗೊಳಿಸಿರಬೇಕು. ಮಗಧ ದೇಶದಲ್ಲಿ ಪ್ರಚಲಿತವಾಗಿದ್ದ ವೈದಿಕ ಯುಗದ ಜನರ ಆಡುನುಡಿಯಿಂದ ಮಾಗಧಿ ರೂಪುಗೊಂಡಿದೆ. ಅಶೋಕನ ಶಾಸನಗಳು, ಅಶ್ವಘೋಷನ ನಾಟಕಗಳಲ್ಲಿ ಕಂಡುಬರುವ ಮಾಗಧಿ ಮೊದಲ ಯುಗದ ಮಾಗಧಿ ಭಾಷೆಯ ನಿದರ್ಶನಗಳು. ಭಾಸನ ಮತ್ತು ಅವನ ನಂತರದ ಇನ್ನಿತರೆ ನಾಟಕಗಳಲ್ಲಿ ಹಾಗೂ ಪ್ರಾಕೃತ ವ್ಯಾಕರಣಗಳಲ್ಲಿ ಕಂಡುಬರುವ ಮಾಗಧಿ ಮಧ್ಯ ಯುಗದ ಮಾಗಧಿಯ ಉದಾಹರಣೆಗಳು. ಶಾಕಾರೀ, ಶಾಬರೀ ಮೊದಲಾದ ಉಪಭಾಷೆಗಳು ಮಾಗಧಿಯವೇ ಆಗಿವೆ.

ಮಹಾರಾಷ್ಟ್ರಿ(ಷ್ಟ್ರೀ)

ಸೇತುಬಂಧ, ಗಾಥಾ ಸಪ್ತಶತಿ, ಗಉಡವಹೋ ಮೊದಲಾದ ಪ್ರಾಕೃತ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಭಾಷೆಯನ್ನು ಮಹಾರಾಷ್ಟ್ರಿ ಎಂದು ಕರೆಯಲಾಗುತ್ತದೆ. ಇದು ಎಷ್ಟು ಪ್ರಸಿದ್ಧವೆಂದರೆ ರುದ್ರಟನ ಕಾವ್ಯಾಲಂಕಾರ, ವಾಗ್ಭಟನ ವಾಗ್ಭಟಾಲಂಕಾರ, ಹೇಮಚಂದ್ರನ ಪ್ರಾಕೃತ ವ್ಯಾಕರಣವೇ ಮೊದಲಾದ ಗ್ರಂಥಗಳಲ್ಲಿ ಹಾಗೂ ದಂಡಿ ಮತ್ತು ಅವನ ನಂತರದ ಗ್ರಂಥಕಾರರು ಮಹಾರಾಷ್ಟ್ರಿಯ ಅರ್ಥದಲ್ಲೇ ಪ್ರಾಕೃತ ಶಬ್ದವನ್ನು ಪ್ರಯೋಗಿಸಿದ್ದಾರೆ. ಮಹಾರಾಷ್ಟ್ರಿ ಪ್ರಾಕೃತ ಅಷ್ಟರ ಮಟ್ಟಿಗೆ ಪ್ರವರ್ಧಮಾನಕ್ಕೆ ಬಂದಿತ್ತು. ಮಹಾರಾಷ್ಟ್ರವೇ ಮಹಾರಾಷ್ಟ್ರಿ ಪ್ರಾಕೃತದ ಜನ್ಮಸ್ಥಾನ. ಈಗಿನ ಮರಾಠಿ ಭಾಷೆ ಮಹಾರಾಷ್ಟ್ರಿ ಪ್ರಾಕೃತದಿಂದಲೇ ಜನಸಿದ್ದು. ಅವಂತಿ ಮತ್ತು ಬಾಹ್ಲೀಕಿಗಳು ಮಹಾರಾಷ್ಟ್ರೀ ಪ್ರಾಕೃತದ ಉಪಭಾಷೆಗಳೇ ಆಗಿವೆ. ಮಹಾರಾಷ್ಟ್ರೀ ಪ್ರಾಕೃತ ಸಂಸ್ಕೃತಕ್ಕೆ ಹತ್ತಿರವಾದ ಭಾಷೆ. ಅದು ಉಳಿದ ಪ್ರಾಕೃತ ಪ್ರಭೇದಗಳಿಗೂ ಆಧಾರವಾಗಿದೆ. ಗಾಥಾ ಸಪ್ತಶತಿ ಮಹಾರಾಷ್ಟ್ರೀ ಪ್ರಾಕೃತದಲ್ಲಿದೆ.

ಅಪಭ್ರಂಶ

ಪತಂಜಲಿಯೇ ಮೊದಲಾದ ಸಂಸ್ಕೃತ ವ್ಯಾಕರಣಕಾರರ ಪ್ರಕಾರ ಸಂಸ್ಕೃತಕ್ಕಿಂತ ಬೇರೆಯಾದ ಎಲ್ಲ ಪ್ರಾಕೃತ ಭಾಷೆಗಳೂ ಅಪಭ್ರಂಶ ಭಾಷೆಗಳೇ. ಆದರೆ ಪ್ರಾಕೃತ ವ್ಯಾಕರಣಕಾರರ ಪ್ರಕಾರ ಅಪಭ್ರಂಶ ಭಾಷೆ ಪ್ರಾಕೃತದ ಒಂದು ಒಳ ಪ್ರಭೇದವೇ ಆಗಿದೆ. ಶೌರಸೇನಿ, ಮಾಗಧಿ ಮೊದಲಾದವುಗಳಂತೆ ಅಪಭ್ರಂಶವೂ ಒಂದು ಪ್ರಾಕೃತವೇ. **ವಿಕ್ರಮೋರ್ವಶೀಯ, ಧರ್ಮಾಭ್ಯುದಯ, ಮೊದಲಾದ ನಾಟಕಗಳಲ್ಲಿ, ಹರಿವಂಶ ಪುರಾಣ, ಪಉಮಚರಿಯ, ಮಹಾಪುರಾಣ, ಯಶೋಧರಚರಿತ, ಕಥಾಕೋಶ, ಕುಮಾರಪಾಲಚರಿತ** ಮೊದಲಾದ ಕಾವ್ಯಗಳಲ್ಲಿ ಅಪಭ್ರಂಶದ ನಿದರ್ಶನಗಳು ದೊರೆಯುತ್ತವೆ. ಗ್ರಿಯರ್ಸನ್ ಪ್ರಕಾರ ಬೇರೆ ಬೇರೆ ಪ್ರಾಕೃತ ಭಾಷೆಗಳು ಸಾಹಿತ್ಯ ಮತ್ತು ವ್ಯಾಕರಣದ ನಿಯಂತ್ರಣಕ್ಕೊಳಪಟ್ಟು ಜನಸಾಮಾನ್ಯರಲ್ಲಿ ಪ್ರಚಲಿತವಾಗದ ಕಾರಣ ಯಾವ ನೂತನ ಜನ ಭಾಷೆಗಳು ಉದಿಸಿದವೋ ಅವೇ ಅಪಭ್ರಂಶಗಳು. ಈ ಅಪಭ್ರಂಶ ಭಾಷೆಗಳು ಕ್ರಿ. ಶ. ಐದನೇ ಶತಮಾನಕ್ಕಿಂತ ಬಹಳ ಮುಂಚೆಯೇ ಆಡು ನುಡಿಗಳಾಗಿ ಬಳಕೆಯಾಗುತ್ತಿದ್ದುವು. ಕಾಳಿದಾಸನ ವಿಕ್ರಮೋರ್ವಶೀಯ ಮತ್ತು ಚಂಡನ ಪ್ರಾಕೃತ ವ್ಯಾಕರಣದಲ್ಲಿ ಇದರ ನಿದರ್ಶನಗಳು ದೊರೆಯುತ್ತವೆ. ಈ ಅಪಭ್ರಂಶಗಳು ಬಹುಶಃ ಹತ್ತನೇ ಶತಮಾನದವರೆಗೂ ಸಾಹಿತ್ಯದ ಭಾಷೆಗಳಾಗಿದ್ದುವು. ಆ ನಂತರ ಜನಸಾಮಾನ್ಯರಲ್ಲಿ ಪ್ರಚಲಿತವಾಗದ ಕಾರಣ ನೂತನ ಜನಭಾಷೆಗಳು ಹುಟ್ಟಿಕೊಂಡವು. ಅವೇ ಹಿಂದಿ, ಬಂಗಾಳಿ, ಗುಜರಾತಿ, ಮೊದಲಾದ ಆಧುನಿಕ ಆರ್ಯ ಭಾಷೆಗಳು. ಇವುಗಳು ಹುಟ್ಟಿದ ಕಾಲ ಕ್ರಿ.ಶ. ೯ ಅಥವಾ ೧೦ನೇ ಶತಮಾನ. ಈ ಅಪಭ್ರಂಶ ಭಾಷೆಗಳ ಮೂಲ ಇವುಗಳು ಹುಟ್ಟುವ ಮುನ್ನ ಭಾರತದ ವಿಭಿನ್ನ ಪ್ರಾಂತಗಳಲ್ಲಿ ಪ್ರಚಲಿತವಾಗಿದ್ದ ಪ್ರಾಕೃತ ಭಾಷೆಗಳೇ ಆಗಿವೆ. ಅಪಭ್ರಂಶಗಳಲ್ಲಿ ಅನೇಕ ಪ್ರಭೇದಗಳಿವೆ.

ವಿಭಿನ್ನ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಅಪಭ್ರಂಶ ಭಾಷೆಗಳು ಮತ್ತು ಅವುಗಳಿಂದ ಜನಿಸಿದ ಭಾಷೆಗಳು

ಮಹಾರಾಷ್ಟ್ರಿ– ಅಪಭ್ರಂಶದಿಂದ **ಮರಾಠಿ ಮತ್ತು ಕೊಂಕಣಿ**

ಮಾಗಧಿ–ಅಪಭ್ರಂಶದ ಪೂರ್ವಶಾಖೆಯಿಂದ **ಬಂಗಾಳಿ, ಒಡಿಯಾ(ಒರಿಯಾ),ಮತ್ತು ಅಸ್ಸಾಮಿ**

ಮಾಗಧಿ–ಅಪಭ್ರಂಶದ ಬಿಹಾರಿ ಶಾಖೆಯಿಂದ–**ಮೈಥಿಲಿ, ಮಗಹಿ ಮತ್ತು ಭೋಜಪುರಿಯಾ**

ಅರ್ಧಮಾಗಧಿ–ಅಪಭ್ರಂಶದಿಂದ ಪೂರ್ವೀಯ ಹಿಂದಿ ಭಾಷೆಗಳಾದ **ಅವಧಿ, ಬಘೇಲಿ ಮತ್ತು ಛತ್ತೀಸಗಢಿ.**

ಶೌರಸೇನಿ ಅಪಭ್ರಂಶದಿಂದ –**ಬುಂದೇಲಿ, ಕನೌಜೀ, ಮೇವಾಡಿ, ಜಯಪುರಿ, ಮಾರವಾಡಿ ಮತ್ತು ಗುಜರಾತಿ** ಭಾಷೆಗಳು

ಪಾಲಿಯಿಂದ– **ಸಿಂಹಳಿ ಮತ್ತು ಮಾಲದೀವನ**

ಟಾಕ್ಕೀ ಅಥವಾ ಢಾಕ್ಕೀ ಅಪಭ್ರಂಶದಿಂದ –**ಲಹಂಡಿ ಅಥವಾ ಪಶ್ಚಿಮೀ ಪಂಜಾಬಿ**

ಟಾಕ್ಕೀ ಅಪಭ್ರಂಶದಿಂದ (ಶೌರಸೇನಿ ಪ್ರಭಾವಕ್ಕೊಳಗಾದ)– **ಪೂರ್ವೀಯ ಪಂಜಾಬಿ**

ವ್ರಾವಡ–ಅಪಭ್ರಂಶದಿಂದ – **ಸಿಂಧೀ ಭಾಷೆ**

ಪೈಶಾಚಿ–ಅಪಭ್ರಂಶದಿಂದ **ಕಾಶ್ಮೀರಿ ಭಾಷೆ**

ಪ್ರಾಕೃತದ ಪ್ರಭೇದಗಳಲ್ಲಿ ವರ್ಣಗಳು, ನಾಮ–ವಿಭಕ್ತಿಗಳು, ಆಖ್ಯಾತ, ಕೃದಂತ, ಸಂಧಿ ಮುಂತಾದವುಗಳಲ್ಲಿ ಕೆಲವೊಂದು ವ್ಯತ್ಯಾಸಗಳ ಜೊತೆಗೆ ಅವುಗಳದೇ ಕೆಲವೊಂದು ವಿಶಿಷ್ಟ ಲಕ್ಷಣಗಳೂ ಇವೆ. ವಿಸ್ತಾರದ ಭಯದಿಂದ ಅವುಗಳನ್ನು ನೀಡಲಾಗುತ್ತಿಲ್ಲ.

ಪ್ರಾಕೃತದ ಮೇಲಾದ ಸಂಸ್ಕೃತದ ಪ್ರಭಾವ

ಜೈನರು ಮತ್ತು ಬೌದ್ಧರು ಸಂಸ್ಕೃತವನ್ನು ಬಿಟ್ಟುಕೊಟ್ಟು ಆ ಕಾಲದ ಆಡುನುಡಿಯಲ್ಲಿ ಧರ್ಮೋಪದೇಶ ಮಾಡುವ ಪದ್ಧತಿ ಆರಂಭಿಸಿದ್ದರು. ಇದರ ಪರಿಣಾಮವಾಗಿ ಜೈನ ಸೂತ್ರಗಳ ಅರ್ಧಮಾಗಧಿ ಮತ್ತು ಬೌದ್ಧ ಧರ್ಮಗ್ರಂಥಗಳ ಪಾಲಿ ಎಂಬ ಎರಡು ಹೊಸ ಸಾಹಿತ್ಯ ಭಾಷೆಗಳ ಹುಟ್ಟಿಗೆ ಕಾರಣವಾಯಿತು. ಆದರೆ ಈ ಎರಡು ಸಾಹಿತ್ಯ ಭಾಷೆಗಳು ಮತ್ತು ಇನ್ನುಳಿದ ಬೇರೆಲ್ಲ ಪ್ರಾಕೃತ ಭಾಷೆಗಳು ಸಂಸ್ಕೃತದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಮಾತಿಗೆ ಆಧಾರವೆಂದರೆ ಈ ಸಮಸ್ತ ಪ್ರಾಕೃತ ಭಾಷೆಗಳಲ್ಲಿ ಸಂಸ್ಕೃತದ ಅನೇಕ ಶಬ್ದಗಳು ಏನೊಂದು ಚೂರೂ ವ್ಯತ್ಯಾಸಗೊಳ್ಳದೆ ತಮ್ಮ ಮೂಲ ಸ್ವರೂಪದಲ್ಲೇ ಸ್ವೀಕೃತವಾಗಿರುವುದು. ಇವನ್ನು ತತ್ಸಮಗಳೆಂದು ಕರೆಯಲಾಗುತ್ತದೆ. ಈ ತತ್ಸಮಗಳು ಪ್ರಥಮ ಸ್ತರದ ಪ್ರಾಕೃತ ಭಾಷೆಗಳಿಂದಲೇ ಸಂಸ್ಕೃತದಲ್ಲಿ ಸ್ಥಾನ ಮತ್ತು ರಕ್ಷಣೆ ಪಡೆದುಕೊಂಡಿದ್ದವಾದರೂ ಮುಂದೆ ಈ ಶಬ್ದಗಳೆಲ್ಲವೂ ತಮ್ಮ ಸ್ವಸ್ವರೂಪದಲ್ಲಿಯೇ ಬಳಕೆಯಾಗುತ್ತಿದ್ದುದು ಸಂಸ್ಕೃತದ ಪ್ರಭಾವದ ಕಾರಣದಿಂದಲೇ ಎಂಬುದನ್ನು ಒಪ್ಪಲೇ ಬೇಕು.

ಇದಲ್ಲದೆ ಸಂಸ್ಕೃತದ ಪ್ರಭಾವದಿಂದಾಗಿಯೇ ಬೌದ್ಧರಲ್ಲಿ 'ಗಾಥಾ' ಎಂಬ ಮಿಶ್ರಭಾಷೆಯೊಂದು ಉದಯಿಸಿತು. ಲಲಿತವಿಸ್ತರ, ಮಹಾಯಾನ ಪುಂಡರೀಕ, ಚಂದ್ರಪ್ರದೀಪ ಸೂತ್ರವೇ ಮೊದಲಾದ ಮಹಾಯಾನ ಬೌದ್ಧರ ಮಹಾವೈಕಲ್ಯ ಸೂತ್ರಗಳೆಂಬ ಕೆಲವು ಸೂತ್ರ ಗ್ರಂಥಗಳು ರಚಿತವಾದುವು. ಈ ಗ್ರಂಥಗಳ ಭಾಷೆಯಲ್ಲಿನ ಬಹಳಷ್ಟು ಶಬ್ದಗಳು ಸಂಸ್ಕೃತದವೇ. ಇನ್ನು ಹಲವು ಪ್ರಾಕೃತ ಶಬ್ದಗಳ ಮುಂದೆ ಸಂಸ್ಕೃತದ ಪ್ರತ್ಯಯಗಳನ್ನು ಲಗತ್ತಿಸಿ ಸಂಸ್ಕೃತ ಶಬ್ದಗಳಂತೆಯೇ ಬಳಕೆ ಮಾಡಲಾಗಿದೆ. ಪಾಶ್ಚಾತ್ಯ ವಿದ್ವಾಂಸರು ಇದರಲ್ಲಿ ಬಳಕೆಯಾಗಿರುವ ಭಾಷೆಯನ್ನು 'ಗಾಥಾ' ಎಂದು ಕರೆದಿದ್ದಾರೆ. ಆದರೆ ಹೀಗೆ ಕರೆಯುವುದು ಯುಕ್ತವಲ್ಲ. ಕಾರಣ ಈ ಸಂಸ್ಕೃತ–ಮಿಶ್ರಭಾಷೆ ಪದ್ಯ ಭಾಗಗಳಲ್ಲಿ ಮಾತ್ರವಲ್ಲದೆ ಗದ್ಯಭಾಗಗಳಲ್ಲಿಯೂ ಬಳಕೆಯಾಗಿದೆ. ಹಾಗಾಗಿ ಇದನ್ನು ಸಂಸ್ಕೃತ–ಮಿಶ್ರ ಪ್ರಾಕೃತ ಅಥವಾ ಮಿಶ್ರಭಾಷೆ ಎಂದು ಕರೆಯುವುದೇ ವಿಹಿತ.

ಈ 'ಗಾಥಾ' ಭಾಷಾ ಗ್ರಂಥಗಳ ರಚನಾಕಾಲದ ಹರಹು ಕ್ರಿ.ಪೂ ೨೦೦ರಿಂದ ಕ್ರಿ.ಶ. ಮೂರನೇ ಶತಮಾನದವರೆಗೆ ಚಾಚಿಕೊಂಡಿದೆ. ಹಾಗಾಗಿ 'ಗಾಥಾ' ಭಾಷೆಯು ಪಾಲಿ ಭಾಷೆಯ ಸಮಕಾಲೀನ ಭಾಷೆಯೇ ಹೊರತು ಅದಕ್ಕಿಂತ ಮುಂಚಿನದ್ದಲ್ಲ. ಸಂಸ್ಕೃತದ ಪ್ರಭಾವವನ್ನು ನಿರಂತರವಾಗಿ ಉಳಿಸಿಕೊಂಡು ವಿಭಿನ್ನ ಪ್ರಾಕೃತ ಭಾಷೆಗಳ ಮಿಶ್ರಣದಿಂದ ಆದದ್ದು.

ಸಂಸ್ಕೃತದ ಮೇಲಾದ ಪ್ರಾಕೃತದ ಪ್ರಭಾವ

ಈ ಮೊದಲೇ ತಿಳಿಸಿದಂತೆ ವೈದಿಕ ಕಾಲದಲ್ಲಿ ಮಧ್ಯ ದೇಶದಲ್ಲಿ ಪ್ರಚಲಿತವಾಗಿದ್ದ ಪ್ರಾಕೃತದಿಂದಲೇ ವೈದಿಕ ಸಂಸ್ಕೃತ ಉದಿಸಿತು. ಅಲ್ಲದೆ ಅದು ಸಾಹಿತ್ಯ ಮತ್ತು ವ್ಯಾಕರಣಗಳ ಮೂಲಕ ಪರಿಷ್ಕಾರಗೊಳ್ಳುತ್ತ ಮತ್ತು ನಿಯಂತ್ರಿತಗೊಳ್ಳುತ್ತ ಕೊನೆಯಲ್ಲಿ ಲೌಕಿಕ ಸಂಸ್ಕೃತದಲ್ಲಿ ಪರಿಣತಗೊಂಡಿತು. ಅಷ್ಟು ಮಾತ್ರವಲ್ಲದೆ ಪ್ರಾಕೃತದಲ್ಲಿ ಸೇರಿಹೋಗಿದ್ದ ಸಮಸ್ತ ತತ್ಸಮ ಶಬ್ದಗಳು ಸಂಸ್ಕೃತದಿಂದ ಬಂದವಾಗಿರದೆ ಮೊದಲ ಸ್ತರದ ಪ್ರಾಕೃತದಿಂದಲೇ ಸಂಸ್ಕೃತಕ್ಕೆ ಮತ್ತು ದ್ವಿತೀಯ ಸ್ತರದ ಪ್ರಾಕೃತಕ್ಕೆ ಪಯಣ ಬೆಳೆಸಿ ಬಂದುವು. ಪ್ರಾಕೃತದೊಳಗಿರುವ ತದ್ಭವ ಶಬ್ದಗಳು ಕೂಡ ಸಂಸ್ಕೃತದಿಂದ ಪ್ರಾಕೃತದಲ್ಲಿ ಸ್ವೀಕೃತಗೊಂಡವಾಗಿರದೆ ಪ್ರಥಮ ಸ್ತರದ ಪ್ರಾಕೃತದಿಂದಲೇ ಕ್ರಮಕ್ರಮವಾಗಿ ಪರಿವರ್ತಿತವಾಗಿ ಮುಂದಿನ ಕಾಲಘಟ್ಟದ ಪ್ರಾಕೃತದಲ್ಲಿ ಸೇರ್ಪಡೆಗೊಂಡಿವೆ. ಸಂಸ್ಕೃತ ವ್ಯಾಕರಣದ ನಿಯಂತ್ರಣಕ್ಕೊಳಪಟ್ಟ ಕಾರಣ ಅವು ಸಂಸ್ಕೃತದಲ್ಲಿ ಅಪರಿವರ್ತಿತವಾಗಿ ಅದೇ ಸ್ವರೂಪದಲ್ಲಿಯೇ ಉಳಿದುಬಿಟ್ಟಿವೆ. ಹೀಗೆಯೇ ಪ್ರಾಕೃತದ ಹೆಚ್ಚಿನ ದೇಶೀ ಶಬ್ದಗಳು ಕೂಡ ವೈದಿಕ ಕಾಲದ ಮಧ್ಯದೇಶದಲ್ಲಿನ

ಬೇರೆಬೇರೆ ಆರ್ಯರ ನೆಲೆವೀಡುಗಳಲ್ಲಿನ ಪ್ರಾಕೃತ ಭಾಷೆಗಳಿಂದಲೇ ಅನಂತರದ ಪ್ರಾಕೃತ ಭಾಷೆಗಳೊಳಕ್ಕೆ ಬಂದು ಸೇರಿದವು. ಹಾಗಾಗಿಯೇ ಆ ಶಬ್ದಗಳು ಮಧ್ಯದೇಶದ ಪ್ರಾಕೃತದಿಂದ ಹುಟ್ಟಿದ ವೈದಿಕ ಮತ್ತು ಲೌಕಿಕ ಸಂಸ್ಕೃತಗಳಲ್ಲಿ ಸೇರಲಿಲ್ಲ. ಇದರಿಂದ ಸಹಜವಾಗಿಯೇ ತಿಳಿಯಬಹುದಾದ ಸಂಗತಿಯೆಂದರೆ ಪ್ರಾಕೃತವೇ ಸಂಸ್ಕೃತದ ಮೂಲ.

ಇಲ್ಲಿ ಹೇಳಬಯಸುವ ವಿಚಾರವೆಂದರೆ ಪ್ರಾಕೃತದಿಂದ ವೈದಿಕ ಸಂಸ್ಕೃತ ಮತ್ತು ಲೌಕಿಕ ಸಂಸ್ಕೃತ ಭಾಷೆಗಳು ಮಾತ್ರ ಹುಟ್ಟಲಿಲ್ಲ; ಸಂಸ್ಕೃತವು ಮುಂದೆ ಸಾಹಿತ್ಯ ಭಾಷೆಯಾಗಿ ಪರಿಣತಿಹೊಂದಿದ ಮೇಲೂ ತನ್ನ ಅಂಗಪುಷ್ಟಿಗಾಗಿ ಪ್ರಾಕೃತದ ಅನೇಕ ಶಬ್ದಗಳನ್ನು ತೆಗೆದುಕೊಂಡಿದೆ. ಋಗ್ವೇದ, ಯಜುರ್ವೇದಾದಿಗಳಲ್ಲಿ ಕಂಡುಬರುವ **ವಂಕ(ವಕ್ರ), ವಹೂ(ವಧೂ) ಮೇಹ(ಮೇಘ), ಪುರಾಣ(ಪುರಾತನ), ಉಚ್ಛೇಕ(ಉತ್ಸೇಕ) ಮೊದಲಾದ ಶಬ್ದಗಳು, ಲೌಕಿಕ ಸಂಸ್ಕೃತದಲ್ಲಿ ಕಂಡುಬರುವ ಆವುತ್ತ(ಸೋದರಿಯ ಗಂಡ), ಖುರ(ಕ್ಷುರ), ಗೋಖುರ(ಗೋಕ್ಷುರ), ಗುಗ್ಗುಲು(ಗುಲ್ಗುಲು), ಛುರಿಕಾ(ಕ್ಷುರಿಕಾ), ಅಚ್ಛ(ಋಕ್ಷ), ಮರಂದ(ಮಕರಂದ), ಕಚ್ಛ(ಕಕ್ಷ), ಪಿಯಾಲ(ಪ್ರಿಯಾಲ), ಚಂದಿರ(ಚಂದ್ರ), ಶಿಥಿಲ(ಶ್ಲಥ್), ಕಿಸಲ(ಕಿಸಲಯ), ಜಾರುಜ(ಜರಾಯುಜ) ಮೊದಲಾದ ಶಬ್ದಗಳು ಪ್ರಾಕೃತದಿಂದ ಅಪರಿವರ್ತಿತ ರೂಪದಲ್ಲೇ ಸ್ವೀಕೃತವಾಗಿವೆ. ಜಹಿಷ್ಯಸಿ(ಹಾಸ್ಯಸಿ), ಬ್ರೂಮಿ(ಬ್ರವೀಮಿ), ನಕೃನ್ತನ(ನಕರ್ತನ) ಮೊದಲಾದ ಮೂಲ ಪ್ರಾಕೃತ ಶಬ್ದಗಳನ್ನು ಸಂಸ್ಕರಿಸಿ ಸ್ವೀಕರಿಸಲಾಗಿದೆ.**

ದೇಶ್ಯ ಶಬ್ದಗಳು

ಪ್ರಾಕೃತ ಭಾಷೆಗಳ ಭೌಗೋಳಿಕ ಪ್ರದೇಶಗಳಿಂದಲೇ ದೇಶೀ ಶಬ್ದಗಳು ಜನ್ಮತಾಳಿವೆ. ವೈದಿಕ ಮತ್ತು ಲೌಕಿಕ ಸಂಸ್ಕೃತ ಭಾಷೆಗಳು ಪಂಜಾಬ್ ಮತ್ತು ಮಧ್ಯ ದೇಶಗಳಲ್ಲಿ ಇದ್ದ ವೈದಿಕ ಕಾಲದ ಪ್ರಾಕೃತ ಭಾಷೆಯಿಂದಲೇ ಹುಟ್ಟಿವೆ. ಪಂಜಾಬ್ ಮತ್ತು ಇನ್ನತರೆ ಮಧ್ಯದೇಶದ ಹೊರಗಿನ ಪ್ರದೇಶಗಳಲ್ಲಿ ಆಗ ಆರ್ಯ ಜನಗಳಲ್ಲಿ ಬಳಕೆಯಲ್ಲಿದ್ದ ಪ್ರಾದೇಶಿಕ ಪ್ರಾಕೃತ ಭಾಷೆಗಳಿಂದಲೇ ಈ ದೇಶೀ ಶಬ್ದಗಳನ್ನು ಸ್ವೀಕರಿಸಲಾಗಿದೆ. ಈ ಕಾರಣದಿಂದಲೇ ವೈದಿಕ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಈ ದೇಶೀ ಶಬ್ದಗಳನ್ನು ಹೋಲುವಂಥ ಶಬ್ದಗಳು ಕಂಡುಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ಭಿನ್ನ ಭಿನ್ನ ಪ್ರಾದೇಶಿಕ ಪ್ರಾಕೃತ ಭಾಷೆಗಳು ಅಸ್ತಿತ್ವದಲ್ಲಿದ್ದುವು. **ವ್ಯಾಸಭಾರತ, ನಾಟ್ಯಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ** ಮೊದಲಾದ ಸಂಸ್ಕೃತ ಗ್ರಂಥಗಳು ಮತ್ತು **ಜ್ಞಾತಾ ಧರ್ಮಕಥಾ, ಔಪಪಾತಿಕ ಸೂತ್ರ** ಮೊದಲಾದ ಪ್ರಾಕೃತ ಗ್ರಂಥಗಳಲ್ಲಿ ಇದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಈ ಗ್ರಂಥಗಳಲ್ಲಿ 'ನಾನಾ ಭಾಷಾ', 'ದೇಶಭಾಷಾ', ಅಥವಾ 'ದೇಶೀಭಾಷೆ' ಎಂಬ ಪ್ರಯೋಗಗಳನ್ನು ಪ್ರಾದೇಶಿಕ ಪ್ರಾಕೃತದ ಅರ್ಥದಲ್ಲೇ ಮಾಡಲಾಗಿದೆ. ಈ ಎಲ್ಲ ದೇಶೀ ಅಥವಾ ಪ್ರಾದೇಶಿಕ ಭಾಷೆಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಆರ್ಯಜನರ ಆಡುನುಡಿಗಳೇ ಆಗಿದ್ದುವು. ಪಂಜಾಬಿನ ಮತ್ತು ಮಧ್ಯದೇಶದ ಭಾಷೆಗಳೊಂದಿಗೆ ಈ ಭಾಷೆಗಳು ಹಲವು ಅಂಶಗಳಲ್ಲಿ ಸಾದೃಶ್ಯವನ್ನು ಹೊಂದಿದ್ದರೆ ಇನ್ನು ಕೆಲವು ಅಂಶಗಳಲ್ಲಿ ವ್ಯತ್ಯಾಸವನ್ನು ಹೊಂದಿವೆ. ಯಾವ ಯಾವ ಅಂಶಗಳಲ್ಲಿ ಪಂಜಾಬಿ ಮತ್ತು ಮಧ್ಯ ದೇಶದ ಪ್ರಾಕೃತ ಭಾಷೆಗಳೊಂದಿಗೆ ಈ ಭಾಷೆಗಳು ವ್ಯತ್ಯಾಸಗಳನ್ನು ಹೊಂದಿವೆಯೋ ಅವುಗಳಲ್ಲಿ ಯಾವ ಯಾವ ಧಾತುಗಳು ಮತ್ತು ನಾಮಗಳು ಪ್ರಾಕೃತದಲ್ಲಿ ಸೇರಿಹೋಗಿವೆಯೋ ಅವೇ ಪ್ರಾಕೃತದ ದೇಶೀ ಅಥವಾ ದೇಶ್ಯ ಶಬ್ದಗಳು. ಪ್ರಾಕೃತ ವೈಯಾಕರಣರು ಸಂಸ್ಕೃತದ ನಾಮ ಮತ್ತು ಧಾತುಗಳಿಂದ ಇವನ್ನು ಸಿದ್ಧಿಸಲು ಯತ್ನಿಸಿ ತದ್ಭವಗಳಲ್ಲಿ ಸೇರಿಸಿದ್ದರೂ ಇವನ್ನು ತದ್ಭವಗಳೆಂದು ಹೇಳಲಾಗುವುದಿಲ್ಲ. ಕಾರಣ ಸಂಸ್ಕೃತವನ್ನು ಇವು ಎಷ್ಟು ಮಾತ್ರಕ್ಕೂ ಹೋಲುವುದಿಲ್ಲ. ಇನ್ನು ಕೆಲವು ಪಾಶ್ಚಾತ್ಯ ಭಾಷಾ ವಿಜ್ಞಾನಿಗಳು ಹೇಳುವುದೆಂದರೆ ಈ ದೇಶೀ ಶಬ್ದಗಳು ಮತ್ತು ಧಾತುಗಳು ದ್ರಾವಿಡ,

ಮುಂಡ ಇವೇ ಮೊದಲಾದ ಆರ್ಯೇತರ ಭಾಷೆಗಳಿಂದ ಸ್ವೀಕರಿಸಿದ ಶಬ್ದಗಳಾಗಿವೆ. ಎಲ್ಲ ದೇಶೀ ಶಬ್ದಗಳು ಹಾಗೆ ಆರ್ಯೇತರ ಭಾಷೆಗಳಿಂದಲೇ ಬಂದಿರದೆ ಹೋದರೂ ಬಹಳಷ್ಟು ಶಬ್ದಗಳು ಹಾಗೆ ಬಂದಿರುವ ಸಾಧ್ಯತೆ ಇದೆ. ಡಾ. ಕಾಲ್ಡ್‌ವೆಲ್ ಅವರಂತೂ ದ್ರಾವಿಡ ಭಾಷೆಗಳಿಂದ ಸಂಸ್ಕೃತಕ್ಕೆ ಹೋದ ಶಬ್ದಗಳ ಒಂದು ಸುದೀರ್ಘ ಪಟ್ಟಿಯನ್ನೇ ನೀಡಿದ್ದಾರೆ.

ಪ್ರಾಕೃತ– ಕನ್ನಡಗಳ ಭಾಷಿಕ ಮತ್ತು ಸಾಹಿತ್ಯಿಕ ಸಂಬಂಧ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮತ್ತೆ ಮತ್ತೆ ಪ್ರಸ್ತಾಪವಾಗುವ ಮತ್ತು ವಿಶೇಷವಾಗಿ ಚರ್ಚೆಯಾಗುವ ಸಂಗತಿ ಎಂದರೆ ಸಂಸ್ಕೃತ–ಕನ್ನಡಗಳ ಸಂಬಂಧ. ಸಂಸ್ಕೃತ ಭೂಯಿಷ್ಠವಾದದ್ದು ಮಾರ್ಗ; ಅಚ್ಚಗನ್ನಡದ ದೇಸಿಗೆ ಮನ್ನಣೆ ಕೊಟ್ಟದ್ದು ದೇಸಿ. ಇದಲ್ಲದೆ ಕನ್ನಡ ಕವಿಗಳು ಮತ್ತು ಬರಹಗಾರರು ಹೆಚ್ಚಾಗಿ ಅಳವಡಿಸಿಕೊಂಡು ಬಂದದ್ದು ಇವೆರಡರ ನಡುವಣ ಸುವರ್ಣ ಮಾಧ್ಯಮ ಶೈಲಿಯಾದ ದೇಸಿ–ಮಾರ್ಗಗಳ ಸಮನ್ವಯವನ್ನು. ಹೀಗೆ ಸಂಸ್ಕೃತದೊಂದಿಗೆ ಕನ್ನಡವು ಲಾಗಾಯ್ತಿನಿಂದಲೂ ಮಾಡಿಕೊಂಡು ಬಂದ ಅನುಸಂಧಾನದ ಸ್ವರೂಪವನ್ನು ಕುರಿತಾದ ಚರ್ಚೆಯೇ ಯಾವಾಗಲೂ ಪ್ರಧಾನ ನೆಲೆಯಲ್ಲಿದೆ. ಅದರಲ್ಲಿ ಆಕ್ಷೇಪಿಸುವಂಥದ್ದೇನೂ ಇಲ್ಲ. ವಡ್ಡಾರಾಧನೆಯ ಶೈಲಿಯ ಚರ್ಚೆ ಬಂದಾಗ ಅಲ್ಲಿ ಬಳಕೆಯಾಗಿರುವ ವಿಪುಲವಾದ ಪ್ರಾಕೃತ ಶಬ್ದಗಳ ಬಳಕೆ, ಪ್ರಾಕೃತ ಗಾಹೆಗಳು ಇವುಗಳ ಕುರಿತಾದ ಪ್ರಸ್ತಾಪ ಇರುತ್ತದಾದರೂ ಪ್ರಾಕೃತವನ್ನು ಕುರಿತ ಇದುವರೆಗಿನ ಬಹುಮಟ್ಟಿನ ಚರ್ಚೆ ಇಷ್ಟಕ್ಕೆ ಸೀಮಿತಗೊಳ್ಳುತ್ತಿರುವುದೇ ಹೆಚ್ಚು. ಆದರೆ ಪ್ರಾಕೃತ–ಕನ್ನಡಗಳ ಸಂಬಂಧ ಇದಕ್ಕಿಂತ ಹೆಚ್ಚು ಗಾಢವಾದ್ದು ಮತ್ತು ವ್ಯಾಪಕವಾದದ್ದು. ಈ ಬಗ್ಗೆ ಕೆಲವು ವಿದ್ವಾಂಸರು ಚರ್ಚಿಸಿದ್ದಾರೆ. ಪ್ರಾಕೃತಕ್ಕೂ ಕನ್ನಡಕ್ಕೂ ಇರುವ ಭಾಷಿಕ ಮತ್ತು ಸಾಹಿತ್ಯಿಕ ಸಂಬಂಧಗಳ ಕುರಿತಂತೆ ಈಗಾಗಲೇ ತಿಳಿದುಬಂದಿರುವ ಕೆಲವು ಸಂಗತಿಗಳ ಕುರಿತಾದ ಸೂಚನೆಯನ್ನಷ್ಟೇ ಇಲ್ಲಿ ಮಾಡಿದರೆ ಸಾಕೆನಿಸುತ್ತದೆ.

ಡಾ. ಷ. ಶೆಟ್ಟರ್ ಅವರ **ಪ್ರಾಕೃತ ಜಗದ್ವಲಯ** ಕೃತಿಗೆ ಮುನ್ನುಡಿ ಬರೆದಿರುವ ಖ್ಯಾತ ಕವಿ ಮತ್ತು ಭಾಷಾ ಶಾಸ್ತ್ರಜ್ಞ ಕೆ.ವಿ. ತಿರುಮಲೇಶ್ ಅವರು ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಭಾಷಿಕವಾಗಿ ಕಂಡುಬರುವ ಕೆಲವು ಸಾಮಾನ್ಯತೆಗಳನ್ನು ಕುರಿತು ಮಾಡಿರುವ ಪ್ರಸ್ತಾಪ ಅತ್ಯಂತ ಆಸಕ್ತಿಕರವಾದ್ದು. ಕನ್ನಡ ಮತ್ತು ಪ್ರಾಕೃತಗಳು ಪರಸ್ಪರ ಸಂಪರ್ಕಕ್ಕೆ ಬಂದ ಸಂದರ್ಭದಲ್ಲಿ ಪ್ರಾಕೃತಕ್ಕೆ ಕನ್ನಡ ಮತ್ತು ಕನ್ನಡಕ್ಕೆ ಪ್ರಾಕೃತ ಪರಸ್ಪರವಾಗಿ ವಿಲಕ್ಷಣವೆನಿಸಿರಲಾರದು ಎಂದು ಹೇಳಿ ಅವುಗಳ ನಡುವೆ ಇರುವ ವರ್ಣಮಾಲೆಯ ಸ್ವರಗಳಲ್ಲಿನ ಸಾಮಾನ್ಯತೆಯ(ಸಾಮ್ಯತೆ) ಬಗ್ಗೆ ಹೇಳಿರುವ ಮಾತು ಮುಖ್ಯವಾದ್ದು. ಎರಡರಲ್ಲೂ ಇರುವುದು ಹತ್ತು ಸ್ವರಗಳು. ಸಂಸ್ಕೃತದಲ್ಲಿಲ್ಲದ ಹ್ರಸ್ವ 'ಎ' ಮತ್ತು ಹ್ರಸ್ವ 'ಒ' ಲಿಪಿಗಳು ಕನ್ನಡದಲ್ಲಿವೆ. ಪ್ರಾಕೃತದಲ್ಲಿ ಹ್ರಸ್ವ 'ಎ' ಮತ್ತು ದೀರ್ಘ 'ಎ' ಗಳಿಗೆ ಇರುವ ಲಿಪಿ ಒಂದೇ ಆದರೂ ಸಂಸ್ಕೃತದಲ್ಲಿಲ್ಲದ ಹ್ರಸ್ವ 'ಎ' ಉಚ್ಚಾರ ಕನ್ನಡದಲ್ಲಿರುವಂತೆ ಪ್ರಾಕೃತದಲ್ಲಿರುವುದು. ಅದೇ ರೀತಿ ಹ್ರಸ್ವ 'ಒ' ಮತ್ತು ದೀರ್ಘ 'ಒ'ಗಳನ್ನು ಪ್ರತಿನಿಧಿಸುವ ಲಿಪಿ ಒಂದೇ ಆದರೂ ಸಂಸ್ಕೃತದಲ್ಲಿಲ್ಲದ ಹ್ರಸ್ವ 'ಒ' ಉಚ್ಚಾರ ಕನ್ನಡದಲ್ಲಿರುವಂತೆ ಪ್ರಾಕೃತದಲ್ಲೂ ಇರುವುದು. ಒತ್ತಕ್ಷರವನ್ನೊಳಗೊಂಡ ಪದಗಳ ಹಿಂದೆ ಬರುವ 'ಏ ಮತ್ತು 'ಓ' ಗಳ ಉಚ್ಚಾರಣೆ ಪ್ರಾಕೃತದಲ್ಲಿ ಹ್ರಸ್ವವೇ; ಅರ್ಥಾತ್ 'ಎ' ಮತ್ತು 'ಒ'. ಪ್ರಾಕೃತ ಮತ್ತು ಪ್ರಾಚೀನ ಕನ್ನಡದಲ್ಲಿ ಪದಾದಿಯೂ ಸೇರಿದಂತೆ ಉಚ್ಚಾರಾಂಶದ(ಸಿಲೆಬಲ್) ಆದಿಯಲ್ಲಿ ಸಂಯುಕ್ತಾಕ್ಷರಗಳಿರುವುದಿಲ್ಲ. ಇತರೆಡೆಗಳಲ್ಲಿ ಅವು ದ್ವಿತ್ವಗಳಾಗಿರುತ್ತವೆ. ಆ ಕಾರಣದಿಂದಲೇ ಎರಡೂ ಭಾಷೆಗಳಲ್ಲಿ ಮೂಲದಲ್ಲಿ ಮತ್ತು ತದ್ಭವಗಳಲ್ಲಿ ದ್ವಿತ್ವಗಳು ಹೆಚ್ಚು. ಸಂಸ್ಕೃತದಲ್ಲಿ ಏಕವಚನ, ದ್ವಿವಚನ ಮತ್ತು ಬಹುವಚನ ಎಂದು ಮೂರು ವಚನಗಳಿದ್ದರೆ ಪ್ರಾಕೃತದಲ್ಲಿ ಕನ್ನಡದಲ್ಲಿರುವಂತೆಯೇ

ಇರುವುದು ಏಕವಚನ ಮತ್ತು ಬಹುವಚನ ಎಂದು ಎರಡೇ ವಚನಗಳು. ವ್ಯತ್ಯಾಸಗಳ ಹೊರತಾಗಿಯೂ ಈ ಸಾಮ್ಯತೆಗಳು ಇವೆರಡನ್ನೂ ಹತ್ತಿರ ತರುತ್ತವೆ ಎಂಬ ಅವರ ವಾದ ಅತ್ಯಂತ ಸಮರ್ಪಕವಾದ್ದು.[೩] ಇದರ ಜೊತೆಗೇ –ಅನುಸ್ವಾರದಿಂದ ಕೂಡಿರುವ ಏ ಮತ್ತು ಓ ಗಳು ಹ್ರಸ್ವ ಉಚ್ಚಾರಣೆಯನ್ನು ತಳೆಯುತ್ತವೆ ಎಂಬ ಸಂಗತಿಯನ್ನೂ ಮರೆಯುವಂತಿಲ್ಲ.

ಇದಲ್ಲದೆ ಇಲ್ಲಿ ಹೇಳಬಹುದಾದ ಒಂದು ಮಾತೆಂದರೆ ಕನ್ನಡದಲ್ಲಿರುವಂತೆ ಪ್ರಾಕೃತದಲ್ಲಿಯೂ ತತ್ಸಮ, ತದ್ಭವ ಮತ್ತು ದೇಶ್ಯ ಎಂಬ ಮೂರು ರೀತಿಯ ಶಬ್ದಗಳಿವೆ. ಯಾವ ರೀತಿಯ ವ್ಯತ್ಯಾಸವನ್ನೂ ಮಾಡದೆ ಯಥಾವತ್ತಾಗಿ ಸಂಸ್ಕೃತದಿಂದ ತೆಗೆದುಕೊಂಡ ಶಬ್ದಗಳು ತತ್ಸಮವೆಂದು, ಸಂಸ್ಕೃತದಿಂದ ವರ್ಣಲೋಪ, ವರ್ಣವಿಕಾರ ವರ್ಣಾಗಮ ಮತ್ತು ವರ್ಣಪರಿವರ್ತನೆಗಳ ಮಾರ್ಗವಾಗಿ ಸಿದ್ಧವಾದ ಶಬ್ದಗಳು ತದ್ಭವಗಳೆಂದು, ಪ್ರಕೃತಿ ಪ್ರತ್ಯಯ ಎಂಬ ವಿಭಜನೆಗೊಳಗಾಗದ ದೇಶ್ಯ ಶಬ್ದಗಳು ಎಂದು ಮೂರು ಬಗೆಯಾಗಿವೆ. ಸಂಸ್ಕೃತದಿಂದ ಜನಿಸಿದವು ಎಂಬ ಅರ್ಥದಲ್ಲಿ ಕನ್ನಡದಲ್ಲಿ ತದ್ಭವಗಳೆಂದು ಇಂದು ನಾವು ಗುರುತಿಸುವ ಸಂಸ್ಕೃತದ ಶಬ್ದಗಳೆಲ್ಲವೂ ಪ್ರಾಕೃತದವೇ ಆಗಿವೆ. ಪ್ರಾಕೃತದ ಮಾರ್ಗವಾಗಿಯೇ ಇವು ಕನ್ನಡಕ್ಕೆ ಬಂದಿರಬೇಕು ಅಥವಾ ತದ್ಭವಗಳು ಪ್ರಾಕೃತ ಕನ್ನಡ ಎರಡಕ್ಕೂ ಸಮಾನವಾಗಿವೆ.

ಕನ್ನಡದ ಹಾಗೂ ದ್ರಾವಿಡದ ಅನೇಕ ಶಬ್ದಗಳು ಸಂಸ್ಕೃತಕ್ಕೆ ಹೋಗಿವೆ. ಇವನ್ನು ಕಾಲ್ಡ್ ವೆಲ್ ಅವರು ಬಹಳ: ಹಿಂದೆಯೇ ಗುರುತಿಸಿದ್ದಾರೆ. ಇವುಗಳಲ್ಲಿ ಅನೇಕವು ಪ್ರಾಕೃತಕ್ಕೂ ಪಯಣ ಬೆಳೆಸಿವೆ.

ಪ್ರಾಕೃತ ಜಗದ್ವಲಯ ಪುಸ್ತಕದಲ್ಲಿ ದೇಶೀ ಪದಗಳು ಪ್ರೇರಿಸಿದ ಪ್ರಾಕೃತ ಪದಗಳ ಯಾದಿಯನ್ನು ನೀಡಿರುವುದರ ಜೊತೆಗೆ ಪ್ರಾಕೃತ–ಕನ್ನಡ–ಸಂಸ್ಕೃತ ಪದಗಳ ಅನುಸಂಧಾನವೆಂಬ ಅಧ್ಯಾಯದಲ್ಲಿ ರೂಪಾಂತರಗೊಂಡ ಪ್ರಾಕೃತ–ಕನ್ನಡ–ಸಂಸ್ಕೃತ ಪದಗಳು ಎಂದು ಸುಮಾರು ಆರುನೂರು ಶಬ್ದಗಳ ಪಟ್ಟಿಯನ್ನು ನೀಡಿ ಶೆಟ್ಟರ್ ನಮ್ಮೆಲ್ಲರ ವಿಶೇಷ ಗಮನ ಸೆಳೆದಿದ್ದಾರೆ.[೪] ಇನ್ನು ಕನ್ನಡ ಮತ್ತು ಪ್ರಾಕೃತ ಅಷ್ಟೇ ಅಲ್ಲ; ಕರ್ನಾಟಕ ಮತ್ತು ಪ್ರಾಕೃತಗಳ ಸಂಬಂಧದ ಕುರಿತಾಗಿ ಗಮನಾರ್ಹವಾಗಿ ಬೆಳಕು ಚೆಲ್ಲಿರುವ ಮಾನ್ಯ ಶೆಟ್ಟರ್ ಅವರ ಅಭಿಪ್ರಾಯಗಳು ಕೂಡ ಅಷ್ಟೇ ಮುಖ್ಯವಾದವು. ಅವರ ಪ್ರಕಾರ 'ಕನಾಟಕದ ಮೊತ್ತಮೊದಲ ಬರಹದ ಭಾಷೆ ಪ್ರಾಕೃತ; ಲಿಪಿ ಬ್ರಾಹ್ಮೀ. ಇವೆರಡನ್ನೂ ಈ ಜನಾಂಗಕ್ಕೆ ಪರಿಚಯಿಸಿದವನು ಕ್ರಿ.ಪೂ. ಮೂರನೇ ಶತಮಾನದ ಸಾಮ್ರಾಟ್ ಆಶೋಕ[೫]. (ಪುಟ ೧)ಕದಂಬರ ಮಳವಳ್ಳಿಯ ಮೊದಲ ಶಾಸನ ಪ್ರಾಕೃತದ್ದಾದರೆ ಚಂದ್ರವಳ್ಳಿಯ ಎರಡನೇ ಶಾಸನ ಪ್ರಾಕೃತ ಛಾಯೆಯ ಸಂಸ್ಕೃತದ್ದು. ಅಶೋಕನ ಕಾಲದಲ್ಲಿ ಪ್ರಾರಂಭವಾದ ಪ್ರಾಕೃತ ಬರಹಗಳು ದಕ್ಷಿಣದಲ್ಲಲ್ಲದೆ ಉತ್ತರಕರ್ನಾಟಕದ ಬಹುಭಾಗವನ್ನು ವ್ಯಾಪಿಸಿ ಪ್ರಾಕೃತ ಭಾಷೆಯ ನಕಾಶೆಯನ್ನು ನಿರ್ಮಿಸಿದುವು. ಪ್ರಾಕೃತ ಘಟಕಗಳ ಮುಖ್ಯವಾದ ಪ್ರದೇಶಗಳೆಂದರೆ – ಉತ್ತರ ಕನ್ನಡದ ಬನವಾಸಿ, ಬೆಳಗಾವಿಯ ವಡಗಾವ್,–ಮಾಧವಪುರ, ಧಾರವಾಡದ ವಾಸನ್, ಬಳ್ಳಾರಿಯ ಹಂಪಿ, ಹುರುಸಗಂಧಿ, ಹಿರೇಹಡಗಲಿ, ಕಲಬುರ್ಗಿಯ ಸಣ್ಣತಿ, ಕನಗನ ಹಳ್ಳಿ, ಜೇವರ್ಗಿ, ಬೆಳ್ವಾಡಿಗಿ, ಶಿವಮೊಗ್ಗೆಯ ಮಳವಳ್ಳಿ. ಅಶೋಕನು ಕರ್ನಾಟಕದ ಬ್ರಹ್ಮಗಿರಿ, ಜಟಿಂಗರಾಮೇಶ್ವರ, ಸಿದ್ದಾಪುರ, ಬಳ್ಳಾರಿ ಜಿಲ್ಲೆಯ ನಿಟ್ಟೂರು, ಉದೊಗಳ, ಹಳೆಯ ರಾಯಚೂರು ಜಿಲ್ಲೆಯ ಕೊಪ್ಪಳ, ಮಸ್ಕಿ, ಕಲಬುರ್ಗಿ ಜಿಲ್ಲೆಯ ಸಣ್ಣತಿ– ಈ ಏಳು ಕೇಂದ್ರಗಳಲ್ಲಿ ತನ್ನ ಶಾಸನಗಳನ್ನು ಬರೆಸಿದ್ದನು.[೫]

'ಪ್ರಾಚೀನ ಕರ್ನಾಟಕದ ಭಾಷೆ– ಸಾಹಿತ್ಯ' ಎಂಬ ನೇಗಿನಹಾಳರ ಲೇಖನದಲ್ಲೂ ಈ ಸಂಬಂಧವಾದ ಹಲವು ವಿಚಾರಗಳು ಈ ಮುಂಚೆಯೇ ಪ್ರಸ್ತಾಪಿತವಾಗಿದ್ದುವು.

ಚಾವುಂಡರಾಯ ಮತ್ತು ಶಿವಕೋಟ್ಯಾಚಾರ್ಯರು ಪ್ರಾಕೃತದೊಡನೆ ನಡೆಸಿದ ಅನುಸಂಧಾನದ ಸ್ವರೂಪ ಬಹುಮಟ್ಟಿಗೆ ನಮಗೆಲ್ಲಾ ಪರಿಚಿತವಾದದ್ದೇ. ಅದನ್ನು ವಿಶದವಾಗಿ ತಮ್ಮ ಗ್ರಂಥದಲ್ಲಿ ಡಾ. ಶೆಟ್ಟರ್

ಅವರು ಚರ್ಚಿಸಿದ್ದಾರೆ. ಅದರ ಕೆಲವು ಮುಖ್ಯಾಂಶಗಳಲ್ಲಿ ಒಂದು: ಚಾವುಂಡರಾಯ ಪುರಾಣದಲ್ಲಿ ಪ್ರಾಕೃತ ಶಬ್ದಗಳನ್ನು ಅವು ಇರುವಂತೆಯೇ ಬಳಸಿರುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. **ಧಮ್ಮ, ಸಗ್ಗ, ಸಮಣ, ಸೆಜ್ಜ, ಸಿವಿಗೆ, ಸೂಲ, ಅಂಗ, ಜಾವ, ಜಸ** ಮುಂತಾದವು ಆ ರೀತಿಯವು. ಮೂಲ ಪ್ರಾಕೃತ ಪದಗಳನ್ನು ಕನ್ನಡೀಕರಿಸಿ ಬಳಸಿಕೊಳ್ಳುವ ಬಗೆಗೆ ಡಾ. ಖಡಬಡಿಯವರು ಈ ನಿಟ್ಟಿನಲ್ಲಿ ಹೆಕ್ಕಿಕೊಟ್ಟಿರುವ ನಿದರ್ಶನಗಳನ್ನು ಶೆಟ್ಟರ್ ಉದ್ಧರಿಸಿಕೊಟ್ಟಿದ್ದಾರೆ. **ಲಕ್ಖ, ಚೂರಿಯಾ, ಸೆಟ್ಠಿ, ವಿಣ್ಣಾಣ, ಕೀಲಾ, ತಲಾರ ಎಂಬ ಪ್ರಾಕೃತ ಪದಗಳು ಕ್ರಮವಾಗಿ ಲಕ್ಕೆ, ಸುರಗಿ, ಸೆಟ್ಟಿ, ವಿನ್ನಾಣ, ಕೇಳಿ, ತಳವಾರ** ಎಂಬ ರೂಪ ತಳೆದಿವೆ[1] ತನ್ನ ಆಸಕ್ತಿಕರವಾದ ಕಥೆಗಳಿಂದ ಅದಕ್ಕಿಂತ ಹೆಚ್ಚಾಗಿ ಕಥೆಯನ್ನು ನಿರೂಪಿಸುವ ವಿಧಾನದಿಂದ, ಎಲ್ಲಕ್ಕಿಂತ ಹೆಚ್ಚಾಗಿ ಅಪೂರ್ವ ಗದ್ಯಶೈಲಿಯಿಂದಾಗಿ ವಡ್ಡಾರಾಧನೆಯು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಚಿರಂತನವಾದ ಗದ್ಯಗ್ರಂಥವೆಂಬ ಖ್ಯಾತಿಯನ್ನು ಗಳಿಸಿರುವುದು ಸರಿಯಷ್ಟೆ. ಉಪಸರ್ಗ ಕೇವಲಿಗಳ ಕಥೆಯನ್ನು ಹೇಳುವ ಈ ಗ್ರಂಥ ಪ್ರಾಕೃತವನ್ನು ಕನ್ನಡದೊಂದಿಗೆ ಬೆಸೆಯುವ ರೀತಿ ನಮಗೆಲ್ಲ ಗೊತ್ತಿರುವಂಥದೇ. ಅದನ್ನು ಡಾ. ಶೆಟ್ಟರ್ ನಿದರ್ಶನಗಳೊಂದಿಗೆ ದಾಖಲಿಸಿದ್ದಾರೆ. ಪ್ರಾಕೃತ ಗಾಹೆಗಳನ್ನು ನಿರೂಪಿಸುವುದರ ಜೊತೆಗೆ ಅವುಗಳ ಬಗ್ಗೆ ಕನ್ನಡದಲ್ಲಿ ಟಿಪ್ಪಣಿ ನೀಡುವ ಮೂಲಕ ಪ್ರಾಕೃತದ ಬಗ್ಗೆ ಆಸಕ್ತಿಯನ್ನು ಕೆರಳಿಸುವ ಕೆಲಸ ಮಾಡಿರುವುದು(ಪುಲ೩). ಚಾವುಂಡರಾಯನಗಿಂತ ಹೆಚ್ಚು ಗಾಹೆಗಳನ್ನು ಉದ್ಧರಿಸಿಕೊಟ್ಟಿರುವ ಕಾರಣ ಹೆಚ್ಚು ಪ್ರಾಕೃತ ಪದಗಳು ಕನ್ನಡ ಶಬ್ದ ಭಂಡಾರಕ್ಕೆ ಪ್ರವೇಶಿಸಲು ಸಾಧ್ಯವಾಯಿತು ಎಂಬ ಸಂಗತಿಗೆ ನಿದರ್ಶನವಾಗಿ ನೀಡಿರುವ–**ಪಚ್ಚಕ್ಖಾಣ, ಪಡಿಕಮಣ, ಸವಣ, ಸಂಥಾರ, ದೇಹಾರ, ಗುಡ್ಡ, ಗೊಟ್ಟಿ, ಮಿಗ, ಚರಿಗೆ** ಮೊದಲಾದ ವಿಪುಲ ಸಂಖ್ಯೆಯ ಪದಗಳು. **ಪ್ರಾಕೃತದಿಂದ ಪ್ರಾರಂಭಿಸಿ ಕನ್ನಡದಲ್ಲಿ ವಾಕ್ಯ ಮುಂದುವರಿಸಿರುವುದಕ್ಕೆ:** "ಅಭಾವಿದಂ ಭಾವೇಮಿ ಭಾವಿದಂ ಭಾವೇಮಿ ಎಂದಿಂತು ಸಂಕ್ಷೇಪದಿಂ ಧರ್ಮಮಂ ಪೇಳ್ದು ಸವ್ವಸಾವಜ್ಜ ಜೋಗಂ ಮಿರದೋಮ್ಹಿಯೆಂದು ಬಾಳ್ವನ್ನೆಗಮಾಹಾರ ಶರೀರಕ್ಕೆ ನಿವೃತ್ತಿಗೈದು"[2] ಇದಲ್ಲದೆ ಜೈನ ಪಾರಿಭಾಷಿಕಗಳೆಂದು ಗುರುತಿಸಲಾಗಿರುವ ನೂರಾರು ಪದಗಳು ಚಾವುಂಡರಾಯ ಪುರಾಣ, ವಡ್ಡಾರಾಧನೆ, ಆದಿಪುರಾಣ ಮತ್ತಿತರ ಜೈನ ಪರಾಣಗಳ ಮೂಲಕ ಕನ್ನಡಕ್ಕೆ ಸೇರ್ಪಡೆಯಾದ ಮಹತ್ವದ ಸಂಗತಿ ಕುರಿತು ಕೂಡ ಪ್ರಸ್ತಾಪಿಸಿದ್ದಾರೆ..

ಇನ್ನು ಕನ್ನಡ ಛಂದಸ್ಸಿನ ಮೇಲಾಗಿರುವ ಪ್ರಾಕೃತದ ಪ್ರಭಾವ ಅತ್ಯಂತ ಗಾಢವಾದ್ದು. ಕನ್ನಡ ಕವಿಗಳ ವಿಶೇಷ ಪ್ರೀತಿಯನ್ನು ಗಳಿಸಿಕೊಂಡ ಕಂದಕ್ಕೆ ಪ್ರಾಕೃತದ ಸ್ಕಂಧಕವೇ ಮೂಲ. ಖಂಧಅ>ಖಂಧ>ಕಂದ ಎಂಬ ವ್ಯುತ್ಪತ್ತಿ ಅತ್ಯಂತ ಸಹಜವಾದ್ದು. ಪ್ರಾಕೃತದ ಪ್ರಭೇದವಾದ ಅಪಭ್ರಂಶದಿಂದ ಕನ್ನಡದ ರಗಳೆ ರೂಪುಗೊಂಡಿರಬೇಕೆಂಬ ಕನ್ನಡ ವಿದ್ವಾಂಸರ ಅಭಿಪ್ರಾಯ ನಮ್ಮೆದುರು ಇದ್ದೇ ಇದೆ. ಜೊತೆಗೆ ಕನ್ನಡದ ತೀರ್ಥಂಕರ ಪುರಾಣಗಳ ಮೂಲ ಜಿನಸೇನ ಮತ್ತು ಗುಣಭದ್ರರ ಮಹಾಪುರಾಣವಷ್ಟೇ ಆಗಿರದೆ ಪ್ರಾಕೃತದವೂ ಆಗಿರಬಹುದು ಎಂದು ಊಹಿಸಲು 'ಪಉಮ ಚರಿಯ', 'ಚಉಪನ್ನ ಮಹಾಪುರಿಸಚರಿಯ', 'ತಿಸಟ್ಠಿ ಮಹಾ ಪುರಿಸ ಗುಣಾಲಂಕಾರ', 'ಆದಿಣಾಹಚರಿಯ', 'ಸುಪಾಸಣಾಹ ಚರಿಯ' ಮಂತಾದ ವಿಪುಲ ಸಂಖ್ಯೆಯ ಪ್ರಾಕೃತ ಪುರಾಣಗಳೇ ಸಾಕ್ಷಿ.

ಆರಂಭ ಕಾಲದಿಂದಲೂ ಕನ್ನಡದೊಂದಿಗೆ ಇಷ್ಟೆಲ್ಲ ಕರುಳು–ಬಳ್ಳಿಯ ಸಂಬಂಧವನ್ನು ಹೊಂದಿರುವ ಪ್ರಾಕೃತದ ಶಬ್ದಕೋಶವೊಂದರ ಅಗತ್ಯತೆ ಕನ್ನಡದಲ್ಲಿ ಖಂಡಿತಾ ಇದೆ. ಒಂದು ದ್ವಿಭಾಷಾ ಶಬ್ದ ಕೋಶವನ್ನು ಸಿದ್ಧಪಡಿಸುವ ಕ್ರಮವೆಂದರೆ ಎರಡೂ ಭಾಷೆಗಳಲ್ಲಿ ಪರಿಣತನಾಗಿರುವ ವ್ಯಕ್ತಿ ಅಥವಾ ಅಂಥ ವ್ಯಕ್ತಿಗಳ ಸಮಿತಿಯೊಂದು ಪರಿಶ್ರಮಪೂರ್ವಕವಾಗಿ ಸಿದ್ದಪಡಿಸುವುದು. ಸದ್ಯಕ್ಕೆ ಕನ್ನಡದಲ್ಲಿ ಅಂಥ ಶಬ್ದಕೊಶ ಇನ್ನೂ ಲಭ್ಯವಿಲ್ಲವಾದ ಕಾರಣ ಈಗಾಗಲೇ ಪ್ರಾಕೃತದಲ್ಲಿ ಪ್ರಮಾಣಭೂತವೆಂದು ಪರಿಗಣಿತವಾಗಿರುವ

ಹರಗೋವಿಂದ ದಾಸ ತ್ರಿಕಮ್ಚಂದ ಸೇಠ್ ಅವರ 'ಪಾಇಅ-ಸದ್ದ- ಮಹಣ್ಣವೋ' ಪ್ರಾಕೃತ-ಹಿಂದಿ ದ್ವಿಭಾಷಾ ಶಬ್ದಕೋಶವನ್ನು ಕನ್ನಡಕ್ಕೆ ಅಳವಡಿಸಲು ನಾನು ಕೈಗೊಂಡ ತೀರ್ಮಾನದ ಪರಿಣಾಮವೇ ಪ್ರಸ್ತುತ ನಿಮ್ಮ ಕಣ್ಣ ಮುಂದಿರುವ 'ಪ್ರಾಕೃತ-ಕನ್ನಡ ಬೃಹತ್ ನಿಘಂಟು'. ನಾನೇನೂ ಪ್ರಾಕೃತದಲ್ಲಿ ಪರಿಣತನಲ್ಲ. ಅದರಲ್ಲಿನ ನನ್ನ ಜ್ಞಾನ ಅಷ್ಟರಲ್ಲೇ ಇದೆ. ಆದರೆ ತಕ್ಕ ಮಟ್ಟಿನ ಸಂಸ್ಕೃತ ಜ್ಞಾನ ಮತ್ತು ಹಿಂದಿಯ ಚೆನ್ನಾದ ಜ್ಞಾನವಿರುವ ನಾನು ಪ್ರಾಕೃತದ ಶಬ್ದಗಳಿಗೆ ಹಿಂದಿ ಮತ್ತು ಸಂಸ್ಕೃತದಲ್ಲಿ ಅರ್ಥಗಳನ್ನು ನೀಡಿರುವ ಈ ನಿಘಂಟನ್ನು ಕನ್ನಡಕ್ಕೆ ಅಳವಡಿಸಲು ಆಲೋಚಿಸಿ ಸತತವಾಗಿ ಮೂರು ವರ್ಷಗಳ ಕಾಲ ಅತ್ಯಂತ ಪರಿಶ್ರಮದಿಂದ ನಾನೇ ಕಂಪ್ಯೂಟರ್ ನಲ್ಲಿ ಸಿದ್ಧಪಡಿಸಿದ ಶಬ್ದಕೋಶವಿದು.

ಹರಗೋವಿಂದದಾಸ್ ತ್ರಿಕಮ್‌ಚಂದ ಸೇಠ್ ಅವರ 'ಪಾಇಅ-ಸದ್ದ -ಮಹಣ್ಣವೋ'ದ ಸ್ವರೂಪ

೧೯೨೩ರಲ್ಲಿ ಭಾಗ ಭಾಗವಾಗಿ ಪ್ರಕಟವಾಗತೊಡಗಿ ೧೯೨೮ರಲ್ಲಿ ಪೂರ್ಣ ರೂಪದಲ್ಲಿ ೧೨೮೦+೫೩ ಪುಟಗಳ ಬೃಹತ್ ಸಂಪುಟದ ಆಕಾರದಲ್ಲಿ ಇದು ಪ್ರಕಟವಾಯಿತು. ಇದರ ಪ್ರಕಟಣೆ ಪ್ರಾಕೃತ ಭಾಷೆಗಳ ಅಷ್ಟೇ ಏಕೆ ಭಾರತೀಯ ಭಾಷೆಗಳ ಶಬ್ದಕೋಶಗಳ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲೆನ್ನಬೇಕು. ವಿವಿಧ ಪ್ರಾಕೃತ ಭಾಷೆಗಳ ಸುಮಾರು ೬೦೦೦೦(ಅರುವತ್ತು ಸಾವಿರ) ಮೂಲ ಮತ್ತು ನಿಷ್ಪನ್ನ(ವ್ಯುತ್ಪನ್ನ) ಶಬ್ದಗಳಿಂದ ಸಮೃದ್ಧವಾದ ಈ ಶಬ್ದಕೋಶದಲ್ಲಿ ಪ್ರತಿ ಪ್ರಾಕೃತ ಶಬ್ದಕ್ಕೂ ಪಕ್ಕದಲ್ಲಿ ಅದರ ಸಂಸ್ಕೃತ ರೂಪವನ್ನು ನೀಡಲಾಗಿದೆ. ಜೊತೆಗೆ ಮೂಲ ಶಬ್ದಗಳಿಗೆ ಇತರೆ ಶಬ್ದಗಳು, ಶಬ್ದಖಂಡಗಳು, ಮತ್ತು ಪ್ರತ್ಯಯಗಳು ಸೇರಿ ಆದ ನಿಷ್ಪನ್ನ ಶಬ್ದಗಳು, ಅಲ್ಲದೆ ಪ್ರತಿ ಶಬ್ದದೊಂದಿಗೆ ಇರಲೇಬೇಕಾದ; ಶಬ್ದ ನಾಮಪದವಾಗಿದ್ದರೆ ಅದು ಪುಲ್ಲಿಂಗವೋ ಸ್ತ್ರೀಲಿಂಗವೋ ನಪುಂಸಕಲಿಂಗವೋ ಅಥವಾ ಪುನ್ನಪುಂಸಕಲಿಂಗವೋ, ಸ್ತ್ರೀನಪುಂಸಕಲಿಂಗವೋ ಎಂಬುದರ ನಮೂದು, ಒಂದು ವೇಳೆ ಅದು ವಿಶೇಷಣವಾಗಿದ್ದರೆ ಅದರ ನಮೂದು, ಶಬ್ದ ಧಾತುವಾಗಿದ್ದರೆ ಅದು ಅಕರ್ಮಕವೋ ಸಕರ್ಮಕವೋ ಎಂಬುದರ ನಮೂದು, ಅವ್ಯಯವಾಗಿದ್ದರೆ ಅದರ ನಮೂದು, ಸರ್ವನಾಮವಾಗಿದ್ದರೆ ಅದರ ನಮೂದು ಒಂದು ವೇಳೆ ಅದು ತ್ರಿಲಿಂಗ ಬಹುವಚನವಾಗಿದ್ದರೆ ಅದರ ನಮೂದು, ಇದರ ಜೊತೆಗೆ ಪ್ರಾಕೃತ ಭಾಷೆಯ ಪ್ರಭೇದಗಳ ನಮೂದು ಇವುಗಳನ್ನೆಲ್ಲ ನೀಡಲಾಗಿದೆ. ಇನ್ನು ಈ ಎಲ್ಲ ಶಬ್ದಗಳಿಗೆ ಸಂಸ್ಕೃತ ಮತ್ತು ಹಿಂದೀ ಭಾಷೆಗಳಲ್ಲಿ ಅರ್ಥಗಳನ್ನು ನೀಡಲಾಗಿದೆ. ಇಷ್ಟು ನಮೂದುಗಳು ಸಾಮಾನ್ಯವಾಗಿ ಸಂಸ್ಕೃತ ಮತ್ತಿತರ ಪ್ರಾಕೃತ ಶಬ್ದ ಕೋಶಗಳಲ್ಲಿ ಕಂಡುಬರುತ್ತವೆ. ಆದರೆ ಈ ಮಹಾವಿದ್ವಾಂಸರ ಶಬ್ದಕೋಶದ ಮಹಾನ್ ವಿಶಿಷ್ಟತೆ ಎಂದರೆ ಆ ಶಬ್ದಗಳು ಪ್ರಯೋಗವಾಗಿರುವ ಪ್ರಾಚೀನ ಪ್ರಾಕೃತ, ಸಂಸ್ಕೃತ ಗ್ರಂಥಗಳಿಂದ ಉದ್ಧೃತ ವಾಕ್ಯಗಳನ್ನು ನೀಡಿರುವುದು. ಈ ಉದ್ಧೃತ ಭಾಗ ವಾಕ್ಯದ ತುಣುಕಿನಿಂದ ಹಿಡಿದು ವಿಸ್ತಾರವಾದ ಅವತರಣಿಕೆಗಳವರೆಗೆ ಇರುವುದುಂಟು. ಸಾಮಾನ್ಯವಾಗಿ ಪ್ರತಿಶಬ್ದದ ಅರ್ಥದ ಕಡೆಯಲ್ಲಿ ಅಥವಾ ಪ್ರಯೋಗದ ಅವತರಣಿಕೆಯ ಕಡೆಯಲ್ಲಿ ಕಂಸಗಳಲ್ಲಿ ಆ ಶಬ್ದ ಪ್ರಯೋಗವಾಗಿರುವ ಹಲವು ಗ್ರಂಥಗಳ ಹೆಸರಿನ ಸಂಕೇತಾಕ್ಷರಗಳ ನಮೂದುಗಳನ್ನು ನೀಡಲಾಗಿದೆ. ಇನ್ನು ಈ ಆಧಾರ ಗ್ರಂಥಗಳಾದರೋ ಸುಮಾರು ೨೫೦ ಪ್ರಸಿದ್ಧ ಪ್ರಾಕೃತ, ಸಂಸ್ಕೃತ ಗ್ರಂಥಗಳು. ಅವುಗಳ ಒಂದು ಸುದೀರ್ಘ ಪಟ್ಟಿಯನ್ನೇ ಗ್ರಂಥದ ಉಪೋದ್ಘಾತದ ಭಾಗದಲ್ಲಿ ನೀಡಿದ್ದಾರೆ. ಇವೆಲ್ಲವುಗಳ ಜೊತೆಗೆ ಮೂಲ ಶಬ್ದಗಳಿಂದಾದ ನಿಷ್ಪನ್ನ(ವ್ಯುತ್ಪನ್ನ) ಶಬ್ದಗಳು, ಅವುಗಳಿಂದ ರೂಪುಗೊಂಡ ಸಮಾಸ ಶಬ್ದಗಳನ್ನು ಅರ್ಥ ಪ್ರಯೋಗಗಳ ಸಮೇತ ನೀಡಿದ್ದಾರೆ (ಅವು ಒಂದೊಂದು ಶಬ್ದಕ್ಕೂ ಪುಟಗಟ್ಟಲೆ ಇರುವುದುಂಟು). ಇವುಗಳ ಜೊತೆಗೆ ಸಕರ್ಮಕ ಅಕರ್ಮಕ ಧಾತುಗಳ ಕ್ರಿಯಾರೂಪಗಳು, ಕೃದಂತ ರೂಪಗಳು ಇವುಗಳನ್ನೂ ನೀಡುವ ಮೂಲಕ ಇದನ್ನೊಂದು

ಪರಿಪೂರ್ಣ ಶಬ್ದಕೋಶವಾಗಿಸುವ ಮಹಾನ್ ಸಾಹಸ ಮಾಡಿದ್ದಾರೆ. ಅಲ್ಲದೆ ಇದು ಕೇವಲ ಶಬ್ದಕೋಶವಷ್ಟೇ ಆಗಿರದೆ ಜೈನ ಪುರಾಣಗಳಲ್ಲಿ ಉಲ್ಲೇಖಿತರಾಗುವ ಪ್ರಮುಖ ವ್ಯಕ್ತಿಗಳು, ವಿಷಯಗಳ ನಮೂದುಗಳನ್ನೂ ಒಳಗೊಂಡಿದ್ದು **ಜೈನ ಕಾವ್ಯಗಳು ಮತ್ತು ಪುರಾಣಗಳನ್ನು ಅಧ್ಯಯನಮಾಡಲು ಅಗತ್ಯವಾದ ಜೈನ ಪುರಾಣಕೋಶವೂ ಆಗಿರುವುದು** ಇದರ ಉಪಯುಕ್ತತೆಯನ್ನು ಹೆಚ್ಚಿಸಿದೆ. ಇಷ್ಟೆಲ್ಲವನ್ನೂ ಈ ಮಹಾ ವಿದ್ವಾಂಸರು ಏಕಾಂಗಿಯಾಗಿಯೇ ಸುಮಾರು ನೂರು ವರ್ಷಗಳ ಹಿಂದೆ, ಕಂಪ್ಯೂಟರ್ ಹೆಸರನ್ನೇ ಕೇಳರಿಯದಿದ್ದ ಕಾಲದಲ್ಲಿ ಮುದ್ರಣ ಸೌಕರ್ಯಗಳೂ ಹೆಚ್ಚಾಗಿಲ್ಲದಿದ್ದ ಕಾಲದಲ್ಲಿ ಮಾಡಿದ್ದಾರೆಂಬುದನ್ನು ನೆನೆದಾಗ ಅವರ ಈ ಮಹಾನ್ ಸಾಹಸಕ್ಕೆ ನಿಬ್ಬೆರಗಾಗಿ ತಲೆದೂಗುವುದಷ್ಟೇ ನಮ್ಮ ಪಾಡು. ಪ್ರಯೋಗಗಳ ಉದ್ಧೃತ ಭಾಗಗಳಳನ್ನು ಎಲ್ಲಕ್ಕೂ ನೀಡದಿದ್ದರೂ ಆಯಾ ಶಬ್ದಗಳು ಪ್ರಯೋಗವಾಗಿರುವ ಹಲವಾರು ಗ್ರಂಥಗಳ ಹೆಸರಿನ ನಮೂದುಗಳನ್ನಂತೂ ನೀಡಿಯೇ ಇದ್ದಾರೆ.

'ಪ್ರಾಕೃತ–ಕನ್ನಡ ಬೃಹತ್ ನಿಘಂಟಿನ' ಸ್ವರೂಪ

ಈ ಶಬ್ದ ಕೋಶ ಹರಗೋವಿಂದದಾಸ್ ಅವರ ಶಬ್ದಕೋಶದ ಯಥಾವತ್ತಾದ ಕನ್ನಡ ಅಳವಡಿಕೆಯೇ ಆದರೂ ಇದರಲ್ಲಿ ಕೆಲವೊಂದು ಪರಿಷ್ಕರಣೆಗಳನ್ನು ಮಾಡಿಕೊಳ್ಳಲಾಗಿದೆ. ಇದು ಅಲ್ಲಿರುವ ಎಲ್ಲ ಮೂಲ ಪ್ರಾಕೃತ ಶಬ್ದಗಳ ಮತ್ತು ಅವುಗಳ ಸಂಸ್ಕೃತ ರೂಪಗಳ ಲಿಪ್ಯಂತರವಾಗಿರುವುದರ ಜೊತೆಯಲ್ಲೇ ಅವುಗಳ ಕನ್ನಡ ಅರ್ಥಗಳ ಅಳವಡಿಕೆಯೂ ಆಗಿದೆ. ಅಲ್ಲಿರುವ ಮೂಲ ಪ್ರಾಕೃತ ಶಬ್ದ ಮತ್ತು ಅರ್ಥಗಳಾವುದನ್ನೂ ಬಿಟ್ಟಿಲ್ಲ. ಹಲವು ಸಂದರ್ಭಗಳಲ್ಲಿ ಮೂಲ ಶಬ್ದಗಳಿಗೆ ಕನ್ನಡದಲ್ಲಿ ಒಂದೆರಡು ಸಮಾನಾರ್ಥಕ ಶಬ್ದಗಳನ್ನು ಹೆಚ್ಚಾಗಿಯೇ ನೀಡಲಾಗಿದೆ. ಇನ್ನು ಅವರು ನೀಡಿರುವ ಶಬ್ದ ಪ್ರಯೋಗಗಳ ಅವತರಣಿಕೆಗಳನ್ನು ಮೊದಮೊದಲ ಕೆಲವು ಪುಟಗಳಲ್ಲಿ ನೀಡಿದೆಯಾದರೂ ಗ್ರಂಥದ ಗಾತ್ರದ ದೃಷ್ಟಿಯಿಂದ ಇವು ತೀರ ಹೆಚ್ಚಾಗಬಹುದೆಂಬ ಕಾರಣಕ್ಕಾಗಿ ಅನಂತರದ ಪುಟಗಳಲ್ಲಿ ಕೈಬಿಡಲಾಗಿದೆ. ಇನ್ನು ಆ ಪ್ರಯೋಗಗಳು ಯಾವ ಗ್ರಂಥದವೆಂದು ಸೂಚಿಸುವ ಗ್ರಂಥಗಳ ಸಂಕೇತಾಕ್ಷರಗಳನ್ನು, ಪ್ರಯೋಗ ಪ್ರಾಮಾಣ್ಯದ ದೃಷ್ಟಿಯಿಂದ ಬಹುತೇಕ ಶಬ್ದಗಳಿಗೆ ನೀಡಲಾಗಿದೆಯಾದರೂ ಉದ್ದಕ್ಕೂ ಅದನ್ನು ಉಳಿಸಿಕೊಂಡು ಬರಲು ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯಕಾರಣ ಪ್ರಯೋಗಗಳಿಗೆ ಆಧಾರವಾಗಿ ನೀಡಲಾಗಿರುವ ಬಹಳಷ್ಟು ಗ್ರಂಥಗಳು ಈಗ ಲಭ್ಯವಿಲ್ಲ. ಜೊತೆಗೆ ಅವನ್ನೆಲ್ಲ ಕಂಪ್ಯೂಟರ್‌ನಲ್ಲಿ ಅಳವಡಿಸಲು ತಗಲುವ ಸಮಯ ಮತ್ತು ಶ್ರಮ ಅಪಾರ. ಇನ್ನು ಅವುಗಳ ಪುಟ ಸಂಖ್ಯೆಗಳನ್ನು ನೀಡುವುದಂತೂ ಈ ಹಿನ್ನೆಲೆಯಲ್ಲಿ ಅನಗತ್ಯವೆಂಬ ಕಾರಣಕ್ಕೆ ನೀಡಲಾಗಿಲ್ಲ. ಇನ್ನು ಒಂದು ಪದಕ್ಕೆ ಹಲವು ಅರ್ಥಗಳನ್ನು ನೀಡುವಾಗ ಹರಗೋವಿಂದದಾಸ್ ಅವರು ೧), ೨), ೩) ಎಂದು ಸಂಖ್ಯೆಗಳನ್ನು ನೀಡಿರುವುದನ್ನು ಕೈಬಿಟ್ಟು ಅರ್ಧ ವಿರಾಮ(ಕಾಮ), ಹಾಕಲಾಗಿದೆ. ಮೂಲದಲ್ಲಿ ನೀಡಿರುವ ಅನೇಕ ಧಾತು ಶಬ್ದಗಳ ವರ್ತಮಾನ ಕೃದಂತ ರೂಪಗಳು ಮತ್ತು ಕ್ರಿಯಾಪ್ರತ್ಯಯ ಸೇರಿ ಆಗಿರುವ ಒಂದಾದರೂ ಕ್ರಿಯಾಪದ ರೂಪಗಳನ್ನು ಉಳಿಸಿಕೊಳ್ಳಲಾಗಿದೆ. ಇವುಗಳ ಸ್ವರೂಪ ಹೆಚ್ಚು ಕಡಿಮೆ ಎಲ್ಲ ಶಬ್ದಗಳಿಗೂ ಒಂದೇ ರೀತಿ. ತೃತೀಯ ಪುರುಷ ಅಕಾರಾಂತ ಧಾತುವಿಗೆ ಏಕವಚನದಲ್ಲಿ ವರ್ತಮಾನಕಾಲದಲ್ಲಿ 'ಇ' ಪ್ರತ್ಯಯ ಸೇರಿ ವರ್ತಮಾನ ಕಾಲದ ಕ್ರಿಯಾಪದ ಸಿಧ್ಧವಾಗುತ್ತದೆ. ಉದಾ: ಹಂಸ+ಇ (=ನಗುತ್ತಾನೆ/ತ್ತಾಳೆ). ಅದೇ ರೀತಿ ಯಾಣ. ಸಕ: [ಜ್ಞಾ] (=ತಿಳಿದುಕೊಳ್ಳು.) ಇಲ್ಲಿ 'ಯಾಣ' ಧಾತುವಿಗೆ 'ಇ' ಪ್ರತ್ಯಯ ನೇರವಾಗಿ ಸೇರಿ 'ಯಾಣಇ'(=ತಿಳಿದುಕೊಳ್ಳುತ್ತಾನೆ/ತ್ತಾಳೆ/ತ್ತದೆ)) ಎಂಬ ತೃತೀಯ ಪುರುಷ ಕ್ರಿಯಾರೂಪ(ಪದ) ರೂಪುಗೊಳ್ಳುತ್ತದೆ. ಅದೇ ರೀತಿ 'ರಕ್ಖ' ದಿಂದ 'ರಕ್ಖಇ'(=ರಕ್ಷಿಸುತ್ತಾನೆ/ತ್ತಾಳೆ/ತ್ತದೆ), 'ರಂಭಇ'(=ನಡೆಯುತ್ತಾನೆ/ತ್ತಾಳೆ)), 'ರಯಇ'(ರಚಿಸುತ್ತಾನೆ/ತ್ತಾಳೆ), 'ಲಜ್ಜಇ'(ನಾಚುತ್ತಾನೆ/ತ್ತಾಳೆ), 'ಲಿಹಇ' (ನೆಕ್ಕುತ್ತಾನೆ/ತ್ತಾಳೆ/ತ್ತದೆ)

ಎಂಬ ಕ್ರಿಯಾರೂಪಗಳು ಆಗುತ್ತವೆ. ಹಾಗೆಯೇ ಮೂಲ ನಘಂಟಿನಲ್ಲಿ ನೀಡಿರುವ ವರ್ತಮಾನ ಕೃದಂತ ರೂಪಗಳನ್ನು ಬಹಳಷ್ಟು ಕಡೆಗಳಲ್ಲಿ ಉಳಿಸಿಕೊಳ್ಳಲಾಗಿದೆ. ಇವುಗಳ ರೂಪವೂ ಹೆಚ್ಚುಕಡಿಮೆ ಒಂದೇ ರೀತಿ. ಧಾತುಗಳಿಗೆ '–ಅಂತ' ಮತ್ತು '–ಮಾಣ' ಪ್ರತ್ಯಯಗಳು ಸೇರಿ ವರ್ತಮಾನ ಕೃದಂತ ರೂಪಗಳು ಸಿದ್ಧವಾಗುತ್ತವೆ. ಉದಾಹರಣೆಗೆ 'ರಕ್ಖಂತ'(=ರಕ್ಷಿಸುತ್ತಿರುವ), ರುಅಂತ(=ಅಳುತ್ತಿರುವ), ಲಜ್ಜಂತ(=ನಾಚುತ್ತಿರುವ), 'ಲಿಹಂತ'(=ನೆಕ್ಕುತ್ತಿರುವ), ಲೋಲಂತ, ಲುಂಟಂತ ಹೀಗೆ. ಇನ್ನು ಕೆಲವು ವರ್ತಮಾನ ಕೃದಂತ ರೂಪಗಳು: ಅಇಗಚ್ಛ. ಅಕ: [ಅತಿ+ಗಮ್] ಅಇಗಚ್ಛಮಾಣ,=ಹೋಗುತ್ತಿರುವ, ಅಕ್ಕಂದ. ಅಕ: [ಆ+ಕ್ರಂದ್] ಅಕ್ಕಂದಂತ, ಅಕ್ಕಂದಮಾಣ (=ಅಳುತ್ತಿರುವ), ಆಯರ. ಸಕ: [ಆ+ಚರ್] ಆಯರಮಾಣ(=ಆಚರಿಸುತ್ತಿರುವ) ಇಂಥ ಹಲವನ್ನೂ ಭಾಷೆಯ ಕಲಿಕೆಗೆ ಇವು ಸಹಾಯಕಾರಿ ಎನ್ನುವ ಕಾರಣಕ್ಕೆ ಬಹಳಷ್ಟು ಸಂದರ್ಭಗಳಲ್ಲಿ ಉಳಿಸಿಕೊಳ್ಳಲಾಗಿದೆ. ಇವುಗಳ ರೂಪ ಒಂದೇ ರೀತಿಯಾದ್ದರಿಂದ ಎಲ್ಲ ಶಬ್ದಗಳಿಗೂ ನೀಡಲು ಹೋಗಿಲ್ಲ. ಇವುಗಳನ್ನು ವಿಶೇಷಣಗಳಂತೆ ಬಳಸಲಾಗುತ್ತದೆ. ಅಕ್ಕಂದಂತೋ ಬಾಲ, ಹಂಸಂತೋ ನಾರಿ ಇತ್ಯಾದಿ.

ಪ್ರಾಕೃತದಲ್ಲಿ ಕನ್ನಡದಲ್ಲಿರುವಂತೆಯೇ ಅನುಸ್ವಾರದ(ಬಿಂದು) ಪ್ರಯೋಗವಿದೆ. ಆದರೆ ಸಂಸ್ಕೃತದಲ್ಲಿ ಅನುಸ್ವಾರದ ಬದಲಿಗೆ ಆಯಾ ವರ್ಗದ ಅನುನಾಸಿಕಾಕ್ಷರಗಳನ್ನೇ(ಅಂದರೆ ವರ್ಗ ಪಂಚಮಾಕ್ಷರಗಳನ್ನು) ಬಳಸುವುದು ರೂಢಿ. ಮೂಲ ಶಬ್ದಕೋಶದಲ್ಲಿ ಸಂಸ್ಕೃತ ಶಬ್ದಗಳಿಗೆ ಸಂಬಂಧಿಸಿದಂತೆ ಈ ರೂಢಿಯನ್ನೇ ಅನುಸರಿಸಲಾಗಿದೆ.(ಖಣ್ಡ, ಸ್ಕನ್ದ, ಚಕ್ರಾಙ್ಗ, ಇತ್ಯಾದಿ) ಆದರೆ ಕನ್ನಡದಲ್ಲಿ ಈ ರೂಢಿಯಿಲ್ಲ ಮತ್ತು ಕನ್ನಡಿಗರಿಗೆ ಅವನ್ನು ಓದಿಕೊಳ್ಳುವುದು ಕಷ್ಟವಾಗುತ್ತದೆಂಬ ಕಾರಣಕ್ಕೆ ಇಲ್ಲಿರುವ ಎಲ್ಲ ಸಂಸ್ಕೃತ ಶಬ್ದ ರೂಪಗಳಲ್ಲಿ ವರ್ಗ ಪಂಚಮಾಕ್ಷರಗಳ ಬದಲು ಅನುಸ್ವಾರವನ್ನೇ(ಖಂಡ, ಸ್ಕಂದ, ಚಕ್ರಾಂಗ ಇತ್ಯಾದಿ) ಅಳವಡಿಸಲಾಗಿದೆ. ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಕರ್ಮಣಿ ಪ್ರಯೋಗಗಳೇ ಸಹಜ ಮತ್ತು ವಿಪುಲ. ಹಾಗಾಗಿ ಆ ಕರ್ಮಣಿರೂಪದ ವಿಶೇಷಣಗಳು ಬಂದಾಗ ನಘಂಟಿನಲ್ಲಿರುವ ಶಬ್ದರೂಪಕ್ಕೆ ನಿಷ್ಠವಾಗಿ ಅನುವಾದಿಸಬೇಕೆಂಬ ಕಾರಣಕ್ಕೆ ಕನ್ನಡದಲ್ಲಿ ಕರ್ಮಣಿ ರೂಪದ ಅನುವಾದಗಳನ್ನೇ ನೀಡಲಾಗಿದೆ, ಉದಾಹರಣೆಗೆ ಮಾಡಲ್ಪಟ್ಟ, ತಿನ್ನಲ್ಪಟ್ಟ, ನೋಡಲ್ಪಟ್ಟ ಇತ್ಯಾದಿ. ಕರ್ಮಣಿ ರೂಪಗಳು ಕನ್ನಡದಲ್ಲಿ ಸಹಜವಲ್ಲ. ಅವು ವಿಚಿತ್ರವಾಗಿ ಕೇಳಿಸುವುದರಿಂದ ಅವುಗಳನ್ನು ನಿವಾರಿಸಲು ಇವುಗಳಿಗೆ ಪರ್ಯಾಯವಾಗಿ ಕೆಲವು ಸಲ, ಮಾಡಲಾದ, ನೋಡಲಾದ, ತಿನ್ನಲಾದ ಎಂಬ ರೂಪಗಳನ್ನು ನೀಡಲಾಗಿದೆ.

ನಿಷ್ಪನ್ನ ಶಬ್ದಗಳು: ಮೂಲ ಪ್ರಾಕೃತ ಶಬ್ದಗಳಿಗೆ ಪದಗಳು ಮತ್ತು ಪ್ರತ್ಯಯಗಳು ಸೇರಿ ನಿಷ್ಪನ್ನ ಶಬ್ದಗಳಾಗುತ್ತವಷ್ಟೆ. ಮೂಲ ಕೊಶದಲ್ಲಿರುವಂತೆ ಮೂಲ ಶಬ್ದಗಳಿಗೆ ಸೇರುವ ಪ್ರಾಕೃತ ಶಬ್ದಗಳ ಮತ್ತು ಅವುಗಳ ಸಂಸ್ಕೃತ ರೂಪಗಳನ್ನು ನೀಡಲಾಗಿದೆ. ಹಾಗೆ ನೀಡುವಾಗ ಮೂಲ ಶಬ್ದಗಳೊಂದಿಗೆ ಇವುಗಳು ಸೇರುತ್ತವೆಂಬುದನ್ನು ಸೂಚಿಸಲು ಅವುಗಳೊಂದಿಗೆ ಹೈಫನ್(–) ಗಳನ್ನು ಸೇರಿಸಲಾಗಿದೆ. ಮೂಲ ಕೋಶದಲ್ಲಿ ಹಾಗೆ ಸೇರುವ ಶಬ್ದಗಳ ಮೇಲಿರುವ ಚುಕ್ಕಿ ಗುರುತಿನ ಬದಲಾಗಿ ಹೀಗೆ ಮಾಡಲಾಗಿದೆ. ಉದಾ: **ಅಕ್ಖ.** ಪು: [ಅಕ್ಷ] ಇದರಲ್ಲಿ ಮೂಲ ಪ್ರಾಕೃತ 'ಅಕ್ಖ' ಶಬ್ದದ ಮುಂದೆ –ಪಾಡಯ. ನ: [–ಪಾದಕ] ಎಂದು ಇದ್ದಾಗ 'ಅಕ್ಖ' ಶಬ್ದಕ್ಕೆ '–ಪಾಡಯ' ಸೇರಿ 'ಅಕ್ಖಪಾಡಯ' ಎಂದು ಓದಿಕೊಳ್ಳಬೇಕು. ಹಾಗೆಯೇ 'ಅಕ್ಖ' ದ ಸಂಸ್ಕೃತ ರೂಪವಾದ 'ಅಕ್ಷ' ಶಬ್ದಕ್ಕೆ [–ಪಾದಕ'] ಸೇರಿ 'ಅಕ್ಷಪಾದಕ' ಎಂದು ಓದಿಕೊಳ್ಳಬೇಕು. ಹಾಗೆಯೇ ಅಕ್ಖಮಾಲಾ, ಅಕ್ಷಮಾಲಾ, ಅಕ್ಖವತ್ತ, ಅಕ್ಷಪಾತ್ರ, ಅಕ್ಖವಲಯ, ಅಕ್ಷವಲಯ ಅಕ್ಖವಾಡಗ, ಅಕ್ಷವಾಟಕ, ಅಕ್ಖಸುತ್ತಮಾಲಾ, ಅಕ್ಷಸೂತ್ರಮಾಲಾ ಎಂದೆಲ್ಲ ಓದಿಕೊಳ್ಳಬೇಕು. ಮೂಲ ಶಬ್ದಕ್ಕೆ ಆಕಾರಾಂತ ಶಬ್ದ ಸೇರುವ ಸಂದರ್ಭದಲ್ಲಿ ಮೂಲಶಬ್ದವನ್ನೂ ಅದರೊಂದಿಗೆ ಸೇರುವ ಶಬ್ದವನ್ನೂ ಕೂಡಿಸಿದ ರೂಪವನ್ನೇ ನೀಡಲಾಗಿದೆ.

ಉದಾ: ಗಣ ಶಬ್ದಕ್ಕೆ ಆಜೀವ, ಆವಚ್ಛೇದಯ, ಆವಚ್ಛೇದಕ ಶಬ್ದಗಳು ಸೇರಿದಾಗ ಗಣಾಜೀವ, ಗಣಾವಚ್ಛೇದಯ, ಗಣಾವಚ್ಛೇದಕ ಎಂದೇ ಸೇರಿ ಆದ ರೂಪಗಳನ್ನೇ ನೀಡಲಾಗಿದೆ.

ಈ ಪ್ರಾಕೃತ–ಕನ್ನಡ ನಿಘಂಟಿನಲ್ಲಿ ಮಾಡಿಕೊಂಡಿರುವ ಬಹಳ ಮುಖ್ಯವಾದ ಮಾರ್ಪಾಟೆಂದರೆ ಪ್ರಾಕೃತ ಶಬ್ದಗಳಲ್ಲಿಯ ಒತ್ತಕ್ಷರದ ಹಿಂದಿನ 'ಏತ್ವ' ಮತ್ತು 'ಓತ್ವ' ಗಳಿಂದ ಕೂಡಿದ ಅಕ್ಷರಗಳನ್ನು ಹಾಗೂ ಅನುಸ್ವಾರ ಸಹಿತವಾದ ಏತ್ವ ಮತ್ತು ಓತ್ವಗಳಿಂದ ಕೂಡಿದ ಅಕ್ಷರಗಳನ್ನು ಪ್ರಾಕೃತದಲ್ಲಿ ಅವು ತಳೆಯುವ ಉಚ್ಚಾರಕ್ಕನುಗುಣವಾಗಿ ಹ್ರಸ್ವ 'ಎತ್ವ' ಮತ್ತು 'ಒತ್ವ' ಗಳಾಗಿ ಅಳವಡಿಸಿರುವುದು. ಉದಾಹರಣೆಗೆ ಪ್ರಾಕೃತದಲ್ಲಿ ನಾಗರಿ ಲಿಪಿಯಲ್ಲಿರುವ ಏಕ್ಕ , ಪೇಕ್ಖ, ಪೇಮ್ಮಾ, ಪೇಲ್ಲಣ, ಪೇಂಡಯ, ಎಂಬ ಶಬ್ದಗಳು ಉಚ್ಚಾರಣೆಯಲ್ಲಿ ಎಕ್ಕ, ಪೆಕ್ಖ, ಪೆಮ್ಮಾ, ಪೆಲ್ಲಣ, ಪೆಂಡಯ ಎಂದೇ ಆಗುತ್ತವೆ. ಹಾಗೆಯೇ ಪೋಕ್ಕಣ, ಪೋಕ್ಖರ, ಪೋಟ್ಟ, ಪೋತ್ತ , ಪೋಂಗ ಎಂದು ನಾಗರಿ ಲಿಪಿಯನ್ನನುಸರಿಸಿ ದೀರ್ಘ ಅಕ್ಷರವಾಗಿ ಬರೆದಿದ್ದರೂ ಅವುಗಳ ಉಚ್ಚಾರ ಪೊಕ್ಕಣ, ಪೊಕ್ಖರ, ಪೊಟ್ಟ, ಪೊತ್ತ , ಪೊಂಗ ಎಂದೇ ಆಗುತ್ತವೆ. ಈ ನಿಘಂಟಿನಲ್ಲಿ ವಾಸ್ತವ ಉಚ್ಚಾರಣೆಯಲ್ಲಿ ಶಬ್ದಗಳು ತಳೆಯುವ ರೂಪಗಳನ್ನೇ ಅಳವಡಿಸಿಕೊಳ್ಳಲಾಗಿದೆ. ಕೊನೆಯ ಹಂತದಲ್ಲಿ ಇದು ನನ್ನ ಗಮನಕ್ಕೆ ಬಂದಿತು. ಆಗ ಪ್ರಾಕೃತದಲ್ಲಿ ಅಂಥ ಶಬ್ದಗಳು ತಳೆಯುವ ಉಚ್ಚಾರಣೆಯ ಸ್ವರೂಪಕ್ಕೆ ತಕ್ಕಂತೆ ನಿಘಂಟಿನಲ್ಲಿ ಬದಲಾವಣೆಗಳನ್ನು ಮಾಡಿದೆ. ಹೀಗೆ ಮಾಡಿದ್ದರಿಂದ ಶಬ್ದಗಳು ಮೇಲೆ ಕೆಳಗೆ ಆಗಿವೆ. ಅರ್ಥಾತ್ ಏತ್ವ, ಓತ್ವಗಳನ್ನೊಳಗೊಂಡ ಒತ್ತಕ್ಷರಗಳಿಂದ ಕೂಡಿದ ಶಬ್ದಗಳು ಇರುವಲ್ಲಿ ಹ್ರಸ್ವ ದೀರ್ಘಗಳು ಕೆಲವು ಕಡೆ ಹಿಂದೆ ಮುಂದೆ ಆಗಿವೆ. ಇದರಿಂದ ಶಬ್ದಗಳೆಲ್ಲ ಅಲ್ಲೇ ಇದ್ದರೂ ಅಕಾರಾದಿಗೆ ಅಂಥ ಕಡೆ ಮಾತ್ರ ಕಿಂಚಿತ್ ಬಾಧಕ ಉಂಟಾಗಿದೆ. ಇದನ್ನು ಸರಿಪಡಿಸಲು ಹೆಚ್ಚು ಸಮಯ ತಗಲುವ ಕಾರಣ ಅದನ್ನು ಸದ್ಯಕ್ಕೆ ಕೈಬಿಟ್ಟಿದೆ. ಈ ನಿಘಂಟನ್ನು ಪರಾಮರ್ಶಿಸುವವರು ಈ ಅನಿವಾರ್ಯತೆಯನ್ನು ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ.

ಆರ್. ಲಕ್ಷ್ಮೀನಾರಾಯಣ.

ಟಿಪ್ಪಣಿಗಳು:

೧. ಪ್ರಾಕೃತ ಜಗದ್ವಲಯ: ಡಾ. ಷ. ಶೆಟ್ಟರ್ ಪುಟ: ಮುನ್ನುಡಿ: Xiv

1ಎ. ಸಂಸ್ಕೃತ–ಪ್ರಾಕೃತ ಶಿವದಾಂಪತ್ಯ: ಡಾ. ಶ್ರೀರಾಮಭಟ್ಟ–'ಸಂಪ್ರೀತಿ' ಅಭಿನಂದನ ಗ್ರಂಥ. ಪುಟ.೩೧೨

೨. ಪಾಇಅ–ಸದ್ದ–ಮಹಾಣ್ಣವೋ– ಪ್ರಸ್ತಾವನೆ: ಪುಟ:

೩. ಪ್ರಾಕೃತ ಜಗದ್ವಲಯ: ಡಾ. ಷ. ಶೆಟ್ಟರ್: ಪುಟ:xvi

೪. ಅದೇ " " ಪುಟ:೧೫೭

೫. ಅದೇ " " ಪುಟ:೬

೬. ಅದೇ " " ಪುಟ:೧೫೭

೭. ಅದೇ " " ಪುಟ:೮೬

ಹರಗೋವಿಂದದಾಸ್ ತ್ರಿಕಮ್ ಚಂದ್ ಸೇಠ್(೧೮೮೮-೧೯೪೧)

೧೮೮೮೧ರಲ್ಲಿ ಜನಿಸಿದ ಹರಗೋವಿಂದದಾಸ್ ತ್ರಿಕಮ್‌ಚಂದ್‌ಸೇಠ್ ಅವರು ಪ್ರಾಕೃತ, ಸಂಸ್ಕೃತ ಮತ್ತು ಗುಜರಾತಿ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದವರು. ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಈ ಮೂರೂ ಭಾಷೆಗಳ ಅಧ್ಯಾಪಕರಾಗಿದ್ದವರು. ೧೯೨೪ರಲ್ಲಿ ಅತ್ಯಂತ ಪರಿಶ್ರಮದಿಂದ ಪ್ರಾಕೃತ ಶಬ್ದಕೋಶದ ಮೊದಲಭಾಗವನ್ನು ಸಿದ್ಧಪಡಿಸಿ ಪ್ರಕಟಿಸಿದರು. ಮುಂದೆ ಹಲವು ಭಾಗಳಾಗಿ ಪ್ರಕಟವಾಗಿ ೧೯೨೮ರಲ್ಲಿ ಪೂರ್ಣಪ್ರಮಾಣದ ನಿಘಂಟಾಗಿ ಹೊರಹೊಮ್ಮಿತು. ಪ್ರಕಟವಾದದ್ದೇ ತಡ ಡಾ. ಸುನೀತಿಕುಮಾರ ಚಟರ್ಜಿ, ಗ್ರಿಯರ್ಸನ್. ಅರ್ನೆಸ್ಟ್ ಲ್ಯೂಮನ್, ಮುರಲೀಧರ ಬ್ಯಾನರ್ಜಿ ಮುಂತಾದ ದೇಶ ವಿದೇಶಗಳ ಅನೇಕ ವಿದ್ವಾಂಸರು, ಭಾಷಾ ತಜ್ಞರು ಸೇಠ್‌ಜೀಯವರ ಅಗಾಧ ವಿದ್ವತ್ತು ಮತ್ತು ಅನೇಕ ವರ್ಷಗಳ ನಿರಂತರ ಪರಿಶ್ರಮಗಳ ಫಲವಾದ ೧೨೦೦ ಪುಟಗಳ ನಿಘಂಟನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ೧೯೨೮ರಿಂದ ೧೯೮೬ರ ವರೆಗೆ ಐದು ಭಾಷೆಗಳಲ್ಲಿ ೧೮ ಮುದ್ರಣಗಳನ್ನು ಕಂಡಿತೆಂಬುದೇ ಅದರ ಉಪಯುಕ್ತತೆಗೆ ಸಾಕ್ಷಿಯಾಗಿದೆ. ಜಗತ್ತಿನಾದ್ಯಂತದ ೩೦ ವಿಶ್ವಮಟ್ಟದ ಗ್ರಂಥಭಂಡಾರಗಳು ತಮ್ಮದಾಗಿಸಿಕೊಂಡಿವೆ. ಇದಲ್ಲದೆ ಅವರು 'ಮಹಾವೀರ ಪ್ರಾರ್ಥನಾ ಶತಕ ಭಗವಾನ್ ಕರುಣಾಸಿಂಧೋ', 'ರತ್ನಾಕರಾವತಾರಿಕ' ಮತ್ತು 'ಪಾಲಾ ಸದ್ದ ಮಹಣ್ಣವೋ' ಗ್ರಂಥಗಳನ್ನು ರಚಿಸಿದ್ದಾರೆ.

ಈ ನಿಘಂಟಿನಲ್ಲಿ ಬಳಸಲಾಗಿರುವ ಸಂಕೇತಗಳ ಸೂಚಿ

ಅ–	ಅವ್ಯಯ
ಅಕ–	ಅಕರ್ಮಕ ಧಾತು
(ಅಪ)–	ಅಪಭ್ರಂಶ ಭಾಷೆ
ಅಶೋ–	**ಅಶೋಕನ ಶಿಲಾ ಶಾಸನ**
ಉಭ–	ಸಕರ್ಮಕ ಹಾಗೂ ಅಕರ್ಮಕ ಧಾತು
ಕರ್ಮ–	ಕರ್ಮಣಿ–ವಾಚ್ಯ
ಕ್ರಿ–	ಕ್ರಿಯಾಪದ
ಕ್ರಿ. ವಿ–	ಕ್ರಿಯಾ ವಿಶೇಷಣ
(ಚೂಪೈ)–	ಚೂಲಿಕಾ ಪೈಶಾಚಿ ಭಾಷೆ
ತ್ರಿ–	ತ್ರಿಲಿಂಗ
[ದೇ] –	ದೇಶ್ಯ ಶಬ್ದ
ನ–	ನಪುಂಸಕ ಲಿಂಗ
ಪು–	ಪುಲ್ಲಿಂಗ
ಪುಂನ–	ಪುನ್ನಪುಂಸಕ ಲಿಂಗ (ಪುಲ್ಲಿಂಗ ಹಾಗೂ ನಪುಂಸಕ ಲಿಂಗ)
ಪುಂಸ್ತ್ರೀ–	ಪುಂಸ್ತ್ರೀಲಿಂಗ (ಪುಲ್ಲಿಂಗ ಹಾಗೂ ಸ್ತ್ರೀಲಿಂಗ)
(ಪೈ)–	ಪೈಶಾಚಿ ಭಾಷೆ
ಬ–	ಬಹುವಚನ
(ಮಾ)–	ಮಾಗಧಿ ಭಾಷೆ
ವ. ಕೃ–	ವರ್ತಮಾನ ಕೃದಂತ
ವಿ–	**ವಿಶೇಷಣ**
(ಶೌ)–	ಶೌರಸೇನೀ ಭಾಷೆ
ಸಕ–	ಸಕರ್ಮಕ ಧಾತು
ಸ್ತ್ರೀ–	ಸ್ತ್ರೀಲಿಂಗ
ಸ್ತ್ರೀನ–	ಸ್ತ್ರೀನಪುಂಸಕ ಲಿಂಗ (ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗ)

ಈ ನಿಘಂಟಿನಲ್ಲಿ ಕಂಸಗಳಲ್ಲಿ ಹೆಸರಿಸಲಾಗಿರುವ ಪ್ರಮಾಣ ಗ್ರಂಥಗಳ ಹೆಸರುಗಳು ಮತ್ತು ಅವುಗಳ ಸಂಕೇತಗಳ ಸೂಚಿ

ಸಂಕೇತ:	**ಗ್ರಂಥದ ಹೆಸರು**
ಅಂಗ–	ಅಂಗಚೂಲಿಆ
ಅಂತ–	ಅಂತಗಡದಸಾ
ಅಚ್ಚು–	ಅಚ್ಚುಅಸಸಲಅಂ
ಅಜಿ–	ಅಜಿಅಸಂತಿಥವ
ಅಜ್ಝ–	ಅಧ್ಯಾತ್ಮ ಮತ ಪರೀಕ್ಷಾ
ಅಣು–	ಅಣುಓಗದಾರಸುತ್ತ
ಅನು–	ಅನುತ್ತರೋವವಾಇಅದಸಾ
ಅಭಿ–	ಅಭಿಜ್ಞಾನ ಶಾಕುಂತಲ
ಅವಿ–	ಅವಿಮಾರಕ
ಆಉ–	ಆಉರಪಚ್ಚಕ್ಖಾಣಪಯನ್ನೋ
ಆಕ–	ಆವಶ್ಯಕ ಕಥಾ, ಆವಶ್ಯಕ ಏರ್ಜ್ಞಾಉಂಗನ
ಆಚಾ–	ಆಚಾರಾಂಗ ಸೂತ್ರ
ಆಚಾನಿ–	ಆಚಾರಾಂಗ– ನಿರ್ಯುಕ್ತಿ
ಆಚೂ–	ಆವಶ್ಯಕ ಚೂರ್ಣಿ
ಆತ್ಮ–	ಆತ್ಮಸಂಬೋಧಕುಲಕಂ
ಆತ್ಮಹಿ–	ಆತ್ಮಹಿತೋಪದೇಶ–ಕುಲಕ
ಆನಿ–	ಆವಶ್ಯಕ ನಿರ್ಯುಕ್ತಿ
ಆಪ–	ಆರಾಧನಾ ಪ್ರಕರಣ.
ಆರಾ.	ಆರಾಧನಾಸಾರ
ಆವ–	ಆವಶ್ಯಕ ಸೂತ್ರ

ಆವಮ– ಆವಶ್ಯಕ ಸೂತ್ರ ಮಲಯಗಿರಿ ಟೀಕಾ
ಇಂದಿ– ಇಂದ್ರಿಯ ಪರಾಜಯ ಶತಕ
ಉತ್ತ– ಉತ್ತರಾಧ್ಯಯನ ಸೂತ್ರ
ಉತ್ತನಿ– ಉತ್ತರಾಧ್ಯಯನ ನಿರ್ಯುಕ್ತಿ
ಉತ್ತರ– ಉತ್ತರ ರಾಮಚರಿತ್ರ
ಉಪ– ಉಪದೇಶಪದ
ಉಪ ಟೀ– ಉಪದೇಶಪದ–ಟೀಕಾ
ಉಪಪಂ– ಉಪದೇಶ ಪಂಚಾಶಿಕಾ
ಉರ– ಉಪದೇಶ ರತ್ನಾಕರ
ಉವ– ಉಪದೇಶಮಾಲಾ
ಉವಕು– ಉಪದೇಶ ಕುಲಕ
ಉವರ– ಉಪದೇಶ ರಹಸ್ಯ
ಉವ– ಉವಏಸಮಾಲಾ
ಉಆ– ಉವಾಸಗದಸಾಓ
ಊರು– ಊರುಭಂಗ
ಓಘ– ಓಘನಿರ್ಯುಕ್ತಿ
ಓಘ ಭಾ–ಓಘನಿರ್ಯುಕ್ತಿ– ಭಾಷ್ಯ
ಔಪ– ಔಪಪಾತಿಕ ಸೂತ್ರ
ಕಪ್ಪ– ಕಲ್ಪ ಸೂತ್ರ
ಕಪ್ಪೂ– ಕರ್ಪೂರಮಂಜರಿ
ಕಮ್ಮ–೧ ಕರ್ಮಗ್ರಂಥ(ಮೊದಲನೆಯದು)
ಕಮ್ಮ–೨ ಕರ್ಮಗ್ರಂಥ(ಎರಡನೆಯದು)
ಕಮ್ಮ–೩ ಕರ್ಮಗ್ರಂಥ(ಮೂರನೆಯದು)
ಕಮ್ಮ–೪ ಕರ್ಮಗ್ರಂಥ(ನಾಲ್ಕನೆಯದು)
ಕಮ್ಮ–೫. ಕರ್ಮಗ್ರಂಥ(ಐದನೆಯದು)
ಕಮ್ಮ–೬ ಕರ್ಮಗ್ರಂಥ(ಆರನೆಯದು)
ಕಮ್ಮಪ ಕರ್ಮಪ್ರಕೃತಿ
ಕಮ್ಮಪ ಕರುಣಾ ವಜ್ರಾಯುಧಮ್
ಕರ್ಣ ಕರ್ಣಭಾರ
ಕರ್ಪೂರ ಕರ್ಪೂರ ಚರಿತ
ಕರ್ಮ ಕರ್ಮಕುಲಕ
ಕಸ. (ಬೃಹತ್) ಕಲ್ಪ ಸೂತ್ರ
ಕಾಪ್ರ. ಕಾವ್ಯಪ್ರಕಾಶ
ಕಾಲ. ಕಾಲಕಾಚಾರ್ಯ ಕಥನಕ

ಕಿರಾತ. ಕಿರಾತಾರ್ಜುನೀಯ
ಕುಪ್ರ> ಕುಮಾರಪಾಲ ಪ್ರತಿಬೋಧ
ಕುಮಾ. ಕುಮಾಏರಪಾಲ ಚರಿತ
ಕುಮ್ಮಾ. ಕುಮ್ಮಾಪ[ಉತ್ತ ಚರಿತ
ಕುಲಕ. ಕುಲಕ ಸಂಗ್ರಹ
ಗಉಡ– ಗಉಡವಹೋ
ಗಚ್ಛ. ಗಚ್ಛಾಚಾರ ಪಯನ್ನೋ
ಗಣ. ಗಣಧರ ಸ್ಮರಣ
ಗಣಿ. ಗಣಿವಿಜ್ಜಾಪಯನ್ನೋ
ಗಾ. ಗಾಥಾ ಸಪ್ತಶತಿ
ಗು– ಗುರುಪಾರತಂತ್ರ್ಯ –ಸ್ಮರಣ
ಗುಣ– ಗುಣಾನುರಾಗ ಕುಲಕ
ಚಉ. ಚಉಸರಣಪಯನ್ನೋ
ಚಂಡ. ಪ್ರಾಕೃತ ಲಕ್ಷಣ
ಚಾರು– ಚಾರುದತ್ತ
ಚೇಇಯ–ಚೇಇಯವಂದಣಮಹಾಭಾಸ
ಚೈತ್ಯ– ಚೈತ್ಯಬಂದನ ಭಾಷ್ಯ
ಜಂ. ಜಂಬೂ ದ್ವೀಪ ಪ್ರಜ್ಞಪ್ತಿ
ಜಯ– ಜಯತಿಹುಅಣ– ಸ್ತೋತ್ರ
ಜೀ– ಜೀವವಿಚಾರ
ಜೀವ– ಜೀವಾನುಶಾಸನ ಕುಲಕ
ಜೋ– ಜ್ಯೋತಿಷ್ಕರಂಡಕ
ಟೀ– ಟೀಕಾ
ಠಾ– ಠಾಣಂಗಸುತ್ತ
ಣಂದಿ– ಣಂದಿಸೂತ್ರ
ಣಾಯಾ–ಣಾಯಾಧಮ್ಮ ಕಹಾಸುತ್ತ
ತಂದು– ತಂದುಲವೇಯಾಲಿಯಪಬನ್ನೋ
ತಿ– ತಿಜಯಪಹುತ್ತ
ತಿತ್ಥ– ತಿತ್ಥಗ್ಗಾಲಿಯಪವನ್ನೋ
ತೀ– ತೀರ್ಥಕಲ್ಪ
ತ್ರಿ ತ್ರಿಪುರದಾಹ
ದಂ– ದಂಡಕಪ್ರಕರಣ
ದಂಸ– ದರ್ಶನಶುದ್ಧಿ ಪ್ರಕರಣ
ದಸ– ದಶವೈಕಾಲಿಕ ಸೂತ್ರ

ದಸನಿ– ದಶವೈಕಾಲಿಕ ನಿರ್ಯುಕ್ತಿ
ದೀವ– ದೀವ ಸಾಗರ ಪನ್ನತ್ತಿ
ದೂತ– ದೂತಘಟೋತ್ಕಚ
ದೇ– ದೇಶೀನಾಮಮಾಲಾ
ದ್ರವ್ಯ– ದ್ರವ್ಯಸಂಗ್ರಹ
ಧಣ– ಋಷಭ ಪಂಚಾಶಿಕಾ
ಧಮ್ಮ– ಧರ್ಮರತ್ನಪ್ರಕರಣ ಸಟೀಕ
ಧಮ್ಮೋ– ಧಮ್ಮೋವಏಸಕುಲಕ
ಧರ್ಮ– ಧರ್ಮಸಂಗ್ರಹ
ಧರ್ಮಸಂ–ಧರ್ಮಸಂಗ್ರಹಣೀ
ಧ್ವ– ಧ್ವನ್ಯಾಲೋಕ
ನವ– ನವತತ್ವ ಪ್ರಕರಣ
ನಾಟ– ನಾಟಕೀಯಪ್ರಾಕೃತ ಶಬ್ದ ಸೂಚೀ
ನಿಚೂ– ನಿಶೀಥ ಚೂರ್ಣಿ
ನಿರ– ನಿರಯಾವಲೀ ಸೂತ್ರ
ನಿಸಾ– ನಿಶಾವಿರಾಮಕುಲಕ
ನಿಸೀ– ನಿಶೀಥ ಸೂತ್ರ
ಪಉಮ–ಪಉಮಚರಿಅ
ಪಂಚ– ಪಂಚಸಂಗ್ರಹ
ಪಂಚಾ– ಪಂಚಾಸಕ ಪ್ರಕರಣ
ಪಂಚೂ– ಪಂಚಕಲ್ಪ ಚೂರ್ಣಿ
ಪಂನಿ– ಪಂಚನಿರ್ಗ್ರಂಥೀ ಪ್ರಕರಣ
ಪಂರಾ– ಪಂಚರಾತ್ರ
ಪಣ್ಣ– ಪಣ್ಣವಣಾಸುತ್ತ
ಪಣ್ಹ– ಪ್ರಶ್ನ ವ್ಯಾಕರಣ ಸೂತ್ರ
ಪಭಾ– ಪಂಚಕ್ಖಾಣ ಭಾಷ್ಯ
ಪವ– ಪ್ರವಚನ ಸಾರೋದ್ಧಾರ
ಪಾಅ– ಪಾಇಅಲಚ್ಛೀನಾಮಮಾಲಾ
ಪಾರ್ಥ– ಪಾರ್ಥಪರಾಕ್ರಮ
ಪಿ– ಗ್ರಾಮೆಟಿಕ ದೇರ ಪ್ರಾಕೃತ ಸ್ಪ್ರಾಖನ್
ಪಿಂಗ– ಪ್ರಾಕೃತ ಪಿಂಗಲ
ಪಿಂಡ– ಪಿಂಡನಿರ್ಯುಕ್ತಿ
ಪುಪ್ಫ– ಪುಷ್ಪಮಾಲಾಪ್ರಕರಣ
ಪ್ರತಿ– ಪ್ರತಿಮಾನಾಟಕ
ಪ್ರಬೋ– ಪ್ರಬೋಧ ಚಂದ್ರೋದಯ
ಪ್ರಯೌ– ಪ್ರತಿಜ್ಞಾಯೌಗಂಧರಾಯಣ
ಪ್ರವಿ– ಪ್ರವ್ರಜ್ಯಾ–ವಿಧಾನ ಕುಲಕ
ಪ್ರಾಕೃ– ಪ್ರಾಕೃತ ಸರ್ವಸ್ವ
ಪ್ರಾಮಾ– ಪ್ರಾಕೃತ ಮಾರ್ಗೋಪದೇಶಿಕಾ
ಪ್ರಾರೂ– ಪ್ರಾಕೃತ ಶಬ್ದ ರೂಪಾವಲೀ
ಪ್ರಾಸೂ– ಪ್ರಾಕೃತ ಸೂಕ್ತ ರತ್ನಮಾಲಾ
ಬಾಲ– ಬಾಚರಿತ
ಬೃಹ– ಬೃಹತ್ ಕಲ್ಪಭಾಷ್ಯ
ಭಗ– ಭಗವತೀಸೂತ್ರ
ಭತ್ತ– ಭತ್ತ ಪರಿಣ್ಣಾಪಯನ್ನೋ
ಭವಿ– ಭವಿಸುತ್ತ ಕಹಾ
ಭಾವ– ಭಾವ ಕುಲಕ
ಭಾಸ– ಭಾಷಾ ರಹಸ್ಯ
ಮಂಗಲ–ಮಂಗಲಕುಲಕ
ಮಧ್ಯ– ಮಧ್ಯಮ ವ್ಯಾಯೋಗ
ಮಹಾನಿ–ಮಹಾನಿಶೀಥ ಸೂತ್ರ
ಮಾ– ಮಾಲವಿಕಾಗ್ನಿಮಿತ್ರ
ಮಾಲ– ಮಾಲತೀಮಾಧವ
ಮುಣಿ– ಮುನಿಸುವ್ರತ ಸ್ವಾಮಿಚರಿತ
ಮುದ್ರಾ– ಮುದ್ರಾರಾಕ್ಷಸ
ಮೃಚ್ಛ– ಮೃಚ್ಛಕಟಿಕ
ಯತಿ– ಯತಿಶಿಕ್ಷಾ ಪಂಚಾಶಿಖಾ
ರಂಭಾ– ರಂಭಾಮಂಜರೀ
ರತ್ನ– ರತ್ನ ತ್ರಯ ಕುಲಕ
ರಯಣ– ರಯಣಸೇಹರನಿವಕಹಾ
ರಾಜ– ಅಭಿಧಾನ ರಾಜೇಂದ್ರ
ರಾಯ– ರಾಯಪಸೇಣೀಸುತ್ತ
ಲಘು– ಲಘುಸಂಗ್ರಹಣೀ
ವವ– ವ್ಯವಹಾರ ಸೂತ್ರ, ಸಭಾಷ್ಯ
ವಸು– ವಸುದೇವ ಹಿಂಡೀ
ವಾ– ವಾಗ್‌ಭಟ ಕಾವ್ಯಾನುಶಾಸನ
ವಾಅ– ವಾಗ್ಭಟಾಲಂಕಾರ
ವಿ– ವಿಷಯತ್ಯಾಗೋಪದೇಶಕುಲಕ

ವಿಕ– ವಿಕ್ರಮೋರ್ವಶೀಯ
ವಿಕ್ರ– ವಿಕ್ರಾಂತ ಕೌರವ
ವಿಚಾರ– ವಿಚಾರಸಾರ ಪ್ರಕರಣ
ವಿಪಾ– ವಿಪಾಕ ಶ್ರುತ
ವಿವೇ– ವಿವೇಕಮಂಜರೀ ಪ್ರಕರಣ
ವಿಸೇ ವಿಶೇಷಾವಶ್ಯಕ ಭಾಷ್ಯ
ವೃಷ– ವೃಷಭಾನುಜಾ
ವೇಣೀ– ವೇಣೀ ಸಂಹಾರ
ವೈ– ವೈರಾಗ್ಯಶತಕ
ಶ್ರಾ– ಶ್ರಾದ್ಧ ಪ್ರತಿಕ್ರಮಣ ಸೂತ್ರವೃತ್ತಿ
ಶ್ರು– ಶ್ರುತಾಸ್ವಾದ
ಷಡ್– ಷಡ್ ಭಾಷಾ ಚಂದ್ರಿಕಾ
ಸ– ಸಮರಾಇಚ್ಚಕಹಾ
ಸಂ– ಸಂಬೋಧಸತ್ತರೀ
ಸಂಗ– ಬೃಹತ್ ಸಂಗ್ರಹಣೀ
ಸಂಘ– ಸಂಘಾಚಾರ ಭಾಷ್ಯ
ಸಂಚ– ಶಾಂತಿನಾಥ ಚರಿತ
ಸಂತಿ– ಸಂತಿಕರಸ್ತೋತ್ರ
ಸಂಬೋಧ–ಸಂಬೋಧ ಪ್ರಕರಣ
ಸಣ– ಸನತ್ಕುಮಾರ ಚರಿತ
ಸತ್ತ– ಉಪದೇಶ ಸಪ್ತತಿಕಾ
ಸಮ– ಸಮವಾಯಾಂಗ ಸೂತ್ರ
ಸಮು– ಸಮುದ್ರಮಂಥನ
ಸಾ– ಸಾಮಾನ್ಯಗುಣೋಪದೇಶಕುಲಕ
ಸಾರ್ಧ– ಗಣಧರ ಸಾರ್ಧಶತಕ ಪ್ರಕರಣ
ಸಿಕ್ಕಾ– ಶಿಕ್ಷಾ ಶತಕ
ಸಿರಿ– ಸಿರಿಸಿರಿವಾಲಕಹಾ
ಸುಪಾ– ಸುಪಾಸನಾಹ ಚರಿಅ
ಸುರ– ಸುರಸುಂದರೀ ಚರಿಅ
ಸೂಅ– ಸೂಅಗಡಾಂಗ ಸುತ್ತ
ಸೂಅನಿ– ಸೂತ್ರ ಕೃತಾಂಗ ನಿರ್ಯುಕ್ತಿ
ಸೇ– ಸೇತುಬಂಧ
ಸ್ವಪ್ನ– ಸ್ವಪ್ನವಾಸವದತ್ತ
ಹಮ್ಮೀರ–ಹಮ್ಮೀರ ಮದ ಮರ್ದನ
ಹೇ– ಹೇಮಚಂದ್ರ–ಪ್ರಾಕೃತ ವ್ಯಾಕರಣ
ಹೇಕಾ– ಹೇಮಚಂದ್ರ ಕಾವ್ಯಾನುಶಾಸನ

ಪ್ರಾಕೃತ-ಕನ್ನಡ ಬೃಹತ್ ನಿಘಂಟು

ಅ

ಅ. ಪು: [ಅ], ಪ್ರಾಕೃತ ವರ್ಣಮಾಲೆಯ ಮೊದಲ ಅಕ್ಷರ ವಿಷ್ಣು, ಕೃಷ್ಣ

ಅ. ನೋಡಿ **ಚ** ಅ

ಅ. **'ಇವ'** ಶಬ್ದವನ್ನು ನೋಡುವುದು

-ಅ. ಅ: [ಅ-] ಇಲ್ಲಿ ನಮೂದಿಸಿರುವ ಅರ್ಥಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಯಾವುದಾದರೊಂದನ್ನು ಹೇಳುವ ಅವ್ಯಯ; ನಿಷೇಧ, ಉದಾ: **'ಅದ್ದಂಸಣ'** (ಸುರ), ವಿರೋಧ, ಉದಾ: ಅಧಮ್ಮ, ಅಯೋಗ್ಯತೆ, ಅನಂತತೆ ಉದಾ: 'ಅಯಾಲ' (ಪಉಮ) ಅಲ್ಪತೆ, ಉದಾ: 'ಅಧಣ'(ಗಉಡ) 'ಅಚೇಲ'(ಸಮ), ಅಭಾವ, ಇಲ್ಲದಿರುವಿಕೆ, ಉದಾ: 'ಅಗುಣ'(ಗಉಡ); ಭೇದ, ಭಿನ್ನತೆ 'ಅಮಣುಸ್ಸ,'(ಣಂದಿ), ಸಾದೃಶ್ಯ, ಉದಾ-'ಅಚಕ್ಖುದಂಸಣ'(ಸಮ), ಅಪ್ರಶಸ್ತತೆ. ಉದಾ'ಅಭಾಇ'(ಚಾರು),ಲಘುತನ=ಸಣ್ಣತನ;-ಉದಾ-'ಅತಡ(ವೃಹ)

-ಅ. ಪು: [ಕ] ಸೂರ್ಯ, (ಸೇ), ಅಗ್ನಿ, ನವಿಲು(ಸೇ), ನ: ನೀರು,(ಸೇ) ಶಿಖರ(ಸೇ), ಶಿರ=ತಲೆ(ಸೇ)

-ಅ. ವಿ: [-ಜ] ಉತ್ಪನ್ನ, ಹುಟ್ಟಿದ(ಗಾ)

ಅಅಂಖ. ವಿ: [ದೇ] ಸ್ನೇಹರಹಿತ, ಒಣಗಿದ(ದೇ)

ಅಅರ **'ಅವರ'** ಶಬ್ದವನ್ನು ನೋಡುವುದು(ಪಿ)

ಅಅರ. **'ಆಯರ'** ಶಬ್ದವನ್ನು ನೋಡುವುದು(ಪಿ)

ಅಇ. ಅ: [ಅಯಿ] ಸಂಭಾವನೆ ಮತ್ತು ಆಮಂತ್ರಣದ ಅರ್ಥ ಸೂಚಿಸುವ ಅವ್ಯಯ(ಹೇ)

ಅಇ. ಅ: [ಅತಿ] ಈ ಅವ್ಯಯ ನಾಮ ಮತ್ತು ಧಾತುಗಳ ಪೂರ್ವದಲ್ಲಿ (ಹಿಂದೆ) ಹತ್ತುತ್ತದೆ ಹಾಗೂ ಈ ಕೆಳಗಿನ ಅರ್ಥಗಳಲ್ಲಿ ಯಾವುದಾದ ರೊಂದನ್ನು ಸೂಚಿಸುತ್ತದೆ. ಅತಿಶಯ, ಅತಿರೇಕ-'ಅಇಉಣ್ಹ', 'ಅಇಉತ್ತಿ' **'ಅಇಚಿಂತಂತ'** ಎಂಬಂತೆ(ಶ್ರಾ)(ಗಾ). ಉತ್ಕರ್ಷ, ಮಹತ್ವ, **'ಅಇವೇಗ'**(ಕಪ್ಪ) ಎಂಬಂತೆ. ಪೂಜೆ, ಪ್ರಶಂಸೆ 'ಅಇಜಾಯ'(ತಾ) ಎಂಬಂತೆ, ಅತಿಕ್ರಮಣ, ಉಲ್ಲಂಘನ-'ಅಇಉಕ್ಕಸೋ'(ದಸ) ಮೇಲೆ, ಎತ್ತರವಾದ - **'ಅಇಮಂಚ, 'ಅಇಪಡಾಗ'** (ಔಪ, ಣಾಯ) ನಿಂದೆ-**'ಅಇಪಂಡಿಯ'** ಎಂಬಂತೆ

ಅಇ.ಅ.: [ಅತಿ]ಸಾಮರ್ಥ್ಯವನ್ನು ಸೂಚಿಸುವ ಅವ್ಯಯ

ಅಇ. ಸಕ: [ಆ+ಇ] ಆಗಮಿಸು, ಬಂದು ಬೀಳು-"ಅಇಂತಿ ನಾರಾಯ"(ಸ)

ಅಇಇ. ಸ್ತ್ರೀ: [ಅದಿತಿ] ಪುನರ್ವಸು ನಕ್ಷತ್ರದ ಅಧಿಷ್ಠಾತೃ ದೇವ(ಸುಜ್ಜ)

ಅಇಇ. ಸಕ: [ಅತಿ+ಇ] ಉಲ್ಲಂಘಿಸು, ನಡೆ, ಪ್ರವೇಶಿಸು ವ. ಕೃ-**'ಅಇಂತ'**(ಮೇ, ಕಪ್ಪ)

ಅಇಉಟ್ಟ. ವಿ: [ಅತಿವೃತ್ತ] ಕಳೆದು ಹೋದ, ಪ್ರಾಪ್ತವಾದ

ಅಇಂಚ. ಸಕ: [ಅತಿ+ಅಂಚ್) ಅಭಿಷೇಕಮಾಡು, ಬದಲಾಯಿಸು, ಉಲ್ಲಂಘಿಸು, **ಅ.ಕ:** ದೂರ ಹೋಗು(ಮೇ)

ಅಇಂಚಿಅ ವಿ. [ಅತ್ಯಂಚಿತ] ಅಭಿಷಿಕ್ತನಾದ, ಸ್ಥಾನ ಬದಲಾವಣೆ ಮಾಡಲ್ಪಟ್ಟ (ಸೇ), ಉಲ್ಲಂಘಿಸಲ್ಪಟ್ಟ, ಮೀರಲಾದ (ಸೇ), ದೂರ ಹೋದ (ಸೇ)

ಅಇಂಛ **'ಅಇಂಚ'** ಶಬ್ದವನ್ನು ನೋಡುವುದು, (ಸೇ)

ಅಇಂಛಿಅ **'ಅಇಂಚಿಅ'** ಶಬ್ದವನ್ನು ನೋಡುವುದು(ಸೇ)

ಅಇಂಛಣ. ನ: [ಅತ್ಯಂಚನ] ಉಲ್ಲಂಘನೆ(ಸೇ), ಆಕರ್ಷಣೆ, ಸೆಳೆತ(ಸೇ)

ಅಇಂತ. **'ಅಇಇ=ಅತಿ+ಇ'** ಶಬ್ದವನ್ನು ನೋಡುವುದು

ಅಇಂತ. ವಿ: [ಅನಾಯತ್] ಬರದೆ ಇರುವ, ಹೋಗಬೇಕಾದ್ದನ್ನು ಹೋಗದ, ಉದ್ದವಲ್ಲದ, ತುಂಡಾದ

ಅಇಂದಿಯ. ವಿ: [ಅತೀಂದ್ರಿಯ]ಇಂದ್ರಿಯಗಳಿಂದ ತಿಳಿಯಲಾಗದ(ವಿಸೇ)

ಅಇಂಮುತ್ತ. **'ಅಇಮುತ್ತ'** ಶಬ್ದವನ್ನು ನೋಡುವುದು

ಅಇಕಮ. ಅಕ: [ಅತಿಕ್ರಮ್] ಕಳೆದು ಹೋಗು, ಆಗಿ ಹೋಗು.

ಅಇಕಾಯ. ಪು: [ಅತಿಕಾಯ] ಮಹೋರಗ ಜಾತಿಯ ದೇವತೆಗಳ ಒಬ್ಬ ಇಂದ್ರ(ಠಾ.), ರಾವಣನ ಒಬ್ಬ ಮಗ(ಸೇ) ವಿ: ಭಾರೀ ದೇಹದವನು (ಣಾಯಾ)

ಅಇಕ್ಕಂತ. ವಿ: [ಅತಿಕ್ರಾಂತ] ಅತೀತ, ಕಳೆದು ಹೋದ, "ಅಇಕ್ಕಂತ ಜೋವ್ವಣ"(ಠಾ), ದಾಟಿದ, ತ್ಯಾಗ ಮಾಡಿದವನು "ಸವ್ವ ಸಿಣೇಹಾಇಕ್ಕಂತ" (ಔಪ)

ಅಇಕ್ಕಮ. ಸಕ: [ಅತಿ+ಕ್ರಮ್] ಉಲ್ಲಂಘಿಸು, ವ್ರತ ನಿಯಮವನ್ನು ಭಾಗಶಃ ಮುರಿ, 'ಅಇಕ್ಕಮಇ' (ಭಗ). ವ.ಕೃ-**ಅಇಕ್ಕಮಂತ**, ಅಇಕ್ಕಮಾಣ; (ಸುಪಾ ಭಗ) ಕೃ-**ಅಇಕ್ಕಮಣಿಜ್ಜ**(ಸೂಅ.)

ಅಇಕ್ಕಮ. ಪುಂ: [ಅತಿಕ್ರಮ] ಉಲ್ಲಂಘನೆ, (ಗಾ) ವ್ರತ ಅಥವಾ ನಿಯಮವನ್ನು ಆಂಶಿಕವಾಗಿ ಮುರಿಯುವುದು(ಠಾ)

ಅಇಕ್ಕಮಣ. ನ: [ಅತಿಕ್ರಮಣ] ಮೇಲಿನ ಶಬ್ದವನ್ನು ನೋಡುವುದು(ಸುಪಾ)

ಅಇಕ್ಖ. ವಿ: [ಅತಿಗತ] ಪ್ರಾಪ್ತ, ದೊರಕಿದ

ಅಇಕ್ಖ. ವಿ: [ಅನೀಕ್ಷ್ಯ] ಅದೃಶ್ಯ, ಕಣ್ಣಿಗೆ ಕಾಣದ

ಅಇಗಚ್ಛ}. ಅಕ: [ಅತಿ+ಗಮ್] ಕಳೆ, ಸಕ: ತಲುಪು,

ಅಇಗಮ}. ಪ್ರವೇಶಿಸು, ಉಲ್ಲಂಘಿಸು, ಹೋಗು, ಗಮಿಸು ವ.ಕೃ. 'ಅಇಗಚ್ಛಮಾಣ'(ಣಾಯಾ)

ಅಇಗಮ. ಪು: [ಅತಿಗಮ] ಪ್ರವೇಶ(ವಿಸೇ)

ಅಇಗಮಣ. ನ: [ಅತಿಗಮನ] ಪ್ರವೇಶಮಾರ್ಗ (ಣಾಯಾ) ಉತ್ತರಾಯಣ, ಸೂರ್ಯನು ಉತ್ತರದಿಕ್ಕಿಗೆ ಚಲಿಸುವುದು(ಭಗ)

ಅಇಗಯ. ವಿ: (ದೇ) ಬಂದವನು, ಪ್ರವೇಶಿಸಿದವನು (ದೇ) "ಸಸುರ ಕುಲಮ್ಮಿ ಅಇಗ ಓ ದಿದ್ರಾ ಯ ಸಗಲುರವಂ ತತ್ಯ"(ಉಪ, ಟೀ) ನ: ದಾರಿಯ ಹಿಂಭಾಗ(ದೇ)

ಅಇಗಯ. ವಿ: [ಅತಿಗತ] ಅತಿಕ್ರಾಂತ, ಕಳೆದು ಹೋದ, "ಹಿಂಡ ಸಂತಸ್ಸಅಇಗಯಂ ವರಿಸಮೇಗಂ" (ಮಹಾ; ಸೇ, ವಿಸೇ. ಟೀ)

ಅಇಗಯ. ವಿ: [ಅತಿಗತ] ಪ್ರಾಪ್ತ, ದೊರಕಿದ

ಅಇಚಿರಂ. ಅ: [ಅತಿಚಿರಮ್] ಬಹಳ ಕಾಲದ ವರೆಗೆ(ಗಾ)

ಅಇಚ್ಚ 'ಅಇಇ' = 'ಅತಿ+ಇ' ಶಬ್ದವನ್ನು ನೋಡುವುದು

ಅಇಚ್ಛ. ಸಕ: [ಗಮ್] ಹೋಗು, ಗಮಿಸು(ಹೇ)

ಅಇಚ್ಛ. ಸಕ: [ಅತಿ+ಕ್ರಮ್) ಉಲ್ಲಂಘಿಸು- ಅಇಚ್ಛಇ; (ಅ, ಘ) ವ.ಕೃ ಅಇಚ್ಛಂತ; (ಉತ್ತ)

ಅಇಚ್ಛಾ. ಸ್ತ್ರೀ: [ಅದಿತ್ಸಾ] ಕೊಡಲು ಇಚ್ಛೆ ಯಿಲ್ಲದಿರುವುದು, ನಿರಾಕರಣೆ (=ಪ್ರತ್ಯಾಖ್ಯಾನ ವಿಶೇಷ)

ಅಇಜಾಯ. ವಿ: [ಗತ] ಹೊರಟು ಹೋದ, ತಲುಪಿದ, ಆಗಿ ಹೋದ(ಪಲುಮ,)

ಅಇಜಾಯ. ಪು: [ಅತಿಜಾತ] ತಂದೆಯಿಂದ ಹೆಚ್ಚು ಸಂಪತ್ತನ್ನು ಪಡೆದುಕೊಂಡ ಮಗ(ಠಾ)

ಅಇಟ್ಟ. ವಿ: [ಅದೃಷ್ಟ] ಕಣ್ಣಿಗೆ ಕಾಣಿಸದಿರುವುದು, ನ. ಕರ್ಮ, ದೈವ, ಭಾಗ್ಯ(ಭವಿ) **-ಉವ್ವ,-ಪುವ್ವ** ವಿ: [**-ಪೂರ್ವ**] ಈ ಮುಂಚೆ ಎಂದೂ ನೋಡಿಲ್ಲದ್ದು(ಗಾ)

ಅಇಟ್ಠ. ವಿ: [ಅನಿಷ್ಟ] ಅಪ್ರಿಯವಾದ, ಅಶುಭ, ಕೆಟ್ಟ ದುಷ್ಟ. "ಜೋ ಪುಣು ಖಲು ಖುದ್ದು ಅಇಟ್ಠಸಂಗು, ತೋ ಕಿಮುಬ್ಭತ್ಥಉ ದೇಇ ಅಂಗು"(ಭವಿ)

ಅಇಟ್ಠಾ. ಸಕ: [ಅತಿ+ಸ್ಥಾ] ಉಲ್ಲಂಘಿಸು,

ಅಇಟ್ಠಿಯ. ವಿ: [ಅತಿಷ್ಠಿತ] ಅತಿಕ್ರಾಂತ, ಉಲ್ಲಂಘಿಸಲ್ಪಟ್ಟ, ಮೀರಲ್ಪಟ್ಟ(ಉತ್ತ)

ಅಇಣ. ನ [ದೇ] ಬೆಟ್ಟದ ಬುಡ, ಗಿರಿತಟ, ಘಟ್ಟ(ದೇ)

ಅಇಣ. ನ: [ಅಜಿನ] ಚರ್ಮ(ಪಾಅ)

ಅಇಣಿಯ. ವಿ: [ದೇ. ಅತಿನೀತ] ತರಲ್ಪಟ್ಟ(ದೇ)

ಅಇಣಿಯ}. ವಿ: [ಅತಿನೀತ] ಎಸೆದುಬಿಟ್ಟ(ಸೇ)

ಅಇಣೀಯ}. ದೂರದಿಂದ ತರಲಾದ(ಪ್ರಾಪ)

ಅಇಣೀಯ. ವಿ: [ದೇ .ಅತಿನೀತ] ತರಲ್ಪಟ್ಟ(ಮಹಾ)

ಅಇಣೀಅ. ವಿ: [ಅತಿಗತ] ಹೋದ, ಹೊರಟು ಹೋದ

ಅಇಣು. ವಿ: [ಅತಿನು] ನಾವೆಯನ್ನು ಮೀರಿದ, ಹಡಗನ್ನು ದಾಟಿದ ವಸ್ತು(ಷಡ್)

ಅಇತಹ. ವಿ: [ಅವಿತಥ] ಸತ್ಯ, ನಿಜ, ಸಫಲವಾದ (ಉಪ, ಟೀ)

ಅಇತೇಯಾ. ಸ್ತ್ರೀ: [ಅತಿತೇಜಾ] ಪಕ್ಷದ ಹದಿನಾಲ್ಕನೇ ದಿನ.

ಅಇದಂಪಜ್ಜ. ನ: [ಐದಂಪರ್ಯ] ತಾತ್ಪರ್ಯ, ಭಾವಾರ್ಥ, ರಹಸ್ಯ(ಉಪ)

ಅಇದುಸಮಾ}. ಸ್ತ್ರೀ: [ಅತಿದುಷ್ಷಮಾ] **'ದುಸ್ಸಮದುಸ್ಸಮಾ'**

ಅಇದುಸ್ಸಮಾ}. ಶಬ್ದವನ್ನು ನೋಡುವುದು (ಪಲುಮ,

ಅಇದೂಸಮಾ}. ಉಪಪು)

ಅಇದ್ದಂಪಜ್ಜ. 'ಅಇದಂಪಜ್ಜ' ಶಬ್ದವನ್ನು ನೋಡುವುದು (ಪಂಚಾ)

ಅಇಧಾಡಿಯ. ವಿ: [ಅತಿಧ್ರಾಟಿತ] ತಿರುಗಿಸಲಾದ (ಪಣ್ಣ)

ಅಇನಿಟ್ಟುಹಾವಣ. ವಿ: [ಅತಿವಿಷ್ಟಂಭನ] ತಡೆದು ನಿಲ್ಲಿಸುವ, ಸ್ತಬ್ಧಗೊಳಿಸುವ(ಕುಮಾ)

ಅಇನ್ನ. ವಿ: [**ಅಜೀರ್ಣ**] ಜೀರ್ಣವಾಗದಿರುವುದು, ಹಳತಲ್ಲದ, ಹೊಸತು(ಉವ)

ಅಇನ್ನ. ವಿ: [**ಅದತ್ತ**] ಕೊಡಲ್ಪಡದ, ದಾನವಾಗಿ ನೀಡದ **ಆಇನ್ನಾಯಾಣ.** ನ: [**ಆಇನ್ನಾದಾನ**] ಕಳ್ಳತನ

ಅಇಪಂಡುಕಂಬಲಸಿಲಾ. ಸ್ತ್ರೀ: [**ಅತಿಪಾಂಡು ಕಂಬಲಶಿಲಾ**] ಮೇರು ಪರ್ವತದ ಮೇಲಿರುವ ದಕ್ಷಿಣ ದಿಕ್ಕಿನ ಒಂದು ಶಿಲೆ(ಠಾ)

ಅಇಪಡಾಗ. ಪು: [**ಅತಿಪತಾಕ**] ಮೀನಿನ ಒಂದು ಜಾತಿ(ವಿಪಾ), ಸ್ತ್ರೀ: ಬಾವುಟದ ಮೇಲಿನ ಬಾವುಟ (ಣಾಯಾ)

ಅಇಪರಿಣಾಮ. ವಿ: [**ಅತಿಪರಿಣಾಮ**] ಅವಶ್ಯಕತೆ ಇಲ್ಲದೆ ಇದ್ದರೂ ಅಪವಾದದ ಮಾರ್ಗವನ್ನೇ ಆಶ್ರಯಿಸುವವನು, ಶಾಸ್ತ್ರೋಕ್ತ ಅಪವಾದಗಳ ಮಿತಿ ಉಲ್ಲಂಘಿಸುವವನು "ಜೋ ದವ್ವ ಖೇತ್ತ ಕಾಭಾವಕ್ಯಂ ಜಂ ಜಹಿ ಜಯಾ ಕಾಲೇ। ತಲ್ಲೆ ಸುಸ್ಸುತ್ತಮೀ ಅಇಪರಿನಾಮಂ ವಿಯಾಣಾಹಿ" (ಬೃಹ)

ಅಇಪಾಇಅ. ವಿ: [**ಅತಿಪಾತಿಕ**] ಹಿಂಸೆ ಮಾಡುವವನು, ಹಿಂಸಿಸುವವನು

ಅಇಪಾಸ. ಸಕ: [**ಅತಿ+ದೃಶ್**] ಅತಿಯಾಗಿ ನೋಡು, ಹೆಚ್ಚಾಗಿ ನೋಡು

ಅಇಪಾಸ. ಪು: [**ಅತಿಪಾರ್ಶ್ವ**] ಭಗವಾನ ಅರನಾಥನ ಸಮಕಾಲೀನನಾದ ಐರಾವತ ಕ್ಷೇತ್ರದ ಒಬ್ಬ ತೀರ್ಥಂಕರ ದೇವ(ತಿತ್ಥ)

ಅಇಪ್ಪಗೆ. ಅ: [**ಅತಿಪ್ರಗೆ**] ಮುಂಜಾನೆ(ಸುರ)

ಅಇಪ್ಪಮಾಣ. ವಿ: [**ಅತಿಪ್ರಮಾಣ**] ತೃಪ್ತನಾಗದೆ ಊಟಮಾಡುವವನು, ನ: ಮೂರು ಸಲಕ್ಕಿಂತ ಹೆಚ್ಚು ಊಟ.

ಅಇಪ್ಪಸಂಗ. ಪು: [**ಅತಿಪ್ರಸಂಗ**] ಅತಿಪರಿಚಯ (ಪಚ್ಚಾ), ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಅತಿವ್ಯಾಪ್ತಿ ಎಂಬ ದೋಷ(ಸ, ಉವರ)

ಅಇಪ್ಪಸಂಗಿ. ವಿ; [**ಅತಿಪ್ರಸಂಗಿನ್**] ಅತಿಪ್ರಸಂಗದ ದೋಷ ಇರುವವನು

ಅಇಪ್ಪಹಾಯ. ನ: [**ಅತಿಪ್ರಭಾತ**] ಮುಂಜಾನೆ(ಗಾ)

ಅಇಬಲ. ವಿ: [**ಅತಿಬಲ**] ಬಲಿಷ್ಠ , ಶಕ್ತಿಶಾಲಿ(ಔಪ), ಅತಿಶಯ ಬಲ, ವಿಶೇಷ ಸಾಮರ್ಥ್ಯವುಳ್ಳ, ದೊಡ್ಡ ಸೈನ್ಯ(ಹೇ), ಭಗವಾನ್ ವೃಷಭದೇವನ ಹಿಂದಿನ ನಾಲ್ಕನೇ ಭವದಲ್ಲಿ ತಂದೆ ಅಥವಾ ತಾತನಾಗಿದ್ದ ಒಬ್ಬ ರಾಜ, ಭರತ ಚಕ್ರವರ್ತಿಯ ಮೊಮ್ಮಗ(ಠಾ), ಭರತ ಕ್ಷೇತ್ರದಲ್ಲಿ ಮುಂಬರಲಿರುವ ಇಪ್ಪತ್ತನಾಲ್ಕರಲ್ಲಿ ಭಾವೀ ವಾಸುದೇವ, ರಾವಣನ ಒಬ್ಬ ಯೋಧ(ಪಉಮ)

ಅಇಭದ್ದಾ. ಸ್ತ್ರೀ: [**ಅತಿಭದ್ರಾ**] ಭಗವಾನ್ ಮಹಾವೀರನ ಪ್ರಭಾಸ ಎಂಬ ಹೆಸರಿನ ೧೧ನೇ ಗಣಧರನ ತಾಯಿ(ಆಚೂ)

ಅಇಭೂಇ. ಪು: [**ಅತಿಭೂತಿ**] ಐದನೇ ವಾಸುದೇವನ ಹಿಂದಿನ ಜನ್ಮದಲ್ಲಿ ಗುರುವಾಗಿದ್ದ ಒಬ್ಬ ಜೈನಮುನಿ(ಪಉಮ)

ಅಇಭೂಮಿ. ಸ್ತ್ರೀ: [**ಅತಿಭೂಮಿ**] ಅತಿಶಯ, ಆಧಿಕ್ಯ, ಬಹಳವಾದ ಭೂಮಿ(ಸಂ), ಸಾಧುಗಳಿಗೆ ಪ್ರವೇಶಿಸಲು ಅನುಮತಿಯಿಲ್ಲದ ಗೃಹಸ್ಥರ ಮನೆಯ ಆ ಭಾಗ "ಅಇಭೂಮಿಂನಗಚ್ಛೇಜ್ಜಾ, ಗೋಯರಗ್ಗಗೋಮುಣೀ"(ದಸ)

ಅಇಮಟ್ಟಿಯಾ. ಸ್ತ್ರೀ: [**ಅತಿಮೃತ್ತಿಕಾ**] ಕೆಸರು ಮಣ್ಣು, (ಜೀವ)

ಅಇಮತ್ತ}. ವಿ: [**ಅತಿಮಾತ್ರ**] ಅಧಿಕವಾದ, ಪ್ರಮಾಣದಲ್ಲಿ
ಅಇಮಾಯ}. ಹೆಚ್ಚಾದ(ಉವಠಾ)

ಅಇಮುಂಕ}. ಪು: [**ಅತಿಮುಕ್ತ, –ಕ**] ತನ್ನ ಹೆಸರಿನಿಂದ
ಅಇಮುಂತ}. ಖ್ಯಾತನಾದ ಒಬ್ಬ ಅಂತಕೃದ್ (ಅದೇ
ಅಇಮುಂತಯ}. ಜನ್ಮದಲ್ಲೇ ಮುಕ್ತಿ ಹೊಂದುವವನು)
ಅಇಮುತ್ತ}. ಪೋಲಸ್ ಪುರದ ರಾಜಾ ವಿಜಯನ
ಅಇಮುತ್ತಯ}. ಮಗ; ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಭಗವಾನ್ ಮಹಾವೀರರ ಬಳಿ ದೀಕ್ಷೆ ಪಡೆದಿದ್ದವನು(ಅಂತ) ಕಂಸನ ತಮ್ಮ(ಆವ) ವೃಕ್ಷ ವಿಶೇಷ(ಪಉಮ) ಮಾಧವೀ ಲತೆ(ಪಾಅ; ಸ) ನ: **ಅಂತಗಡದಸಾ** ಎಂಬ ಅಂಗ ಗ್ರಂಥದ ಒಂದು ಮಧ್ಯ ಯಾನ(ಅಂತ)(ಹೇ ಪಿ)

ಅಇಯ. ವಿ: [**ಅತಿಗ**] ಮೀರಲ್ಪಟ್ಟ, ಉಲ್ಲಂಘಿಸಲ್ಪಟ್ಟ, ಮಾಡುವವನು, ದೊರಕಿದ, 'ಠಾಣಾಇಯ"

–ಅಇಯ. ವಿ: [**ದಯಿತ**] ಪ್ರಿಯ, ಪ್ರೀತಿಪಾತ್ರ; ದಯಾಪಾತ್ರ, ದಯೆಗೆ ಅರ್ಹನಾದವನು(ಸೇ)

ಅಇಯಚ್ಛ '**ಅಇಗಚ್ಛ**' ಶಬ್ದವನ್ನು ನೋಡುವುದು

ಅಇಯಣ. ನ: [**ಅತ್ಯದನ**] ಹೆಚ್ಚಾಗಿ ತಿನ್ನುವುದು, ಅತಿಯಾಗಿ ಊಟ ಮಾಡುವುದು(ವವ)

ಅಇಯಯ. ವಿ: [**ಅತಿಗತ**] ಹೋದವನು: (ಸ)
ಅಇಯರ. ಸಕ: [**ಅತಿ+ಚರ್**] ಉಲ್ಲಂಘಿಸು, ವ್ರತವನ್ನು ದೂಷಿತಗೊಳಿಸು ವ.ಕೃ.-**ಅಇಯರಂತ**;(ಸುಪಾ)
ಅಇಯಾ. ಸಕ: [**ಅತಿ+ಯಾ**] ಹೋಗು, ಗತಿಸು(ಉತ್ತ)
ಅಇಯಾ. ಸ್ತ್ರೀ: [**ಅಜಿಕಾ**] ಹೆಣ್ಣು ಕುರಿ(ಉಪ)
–ಅಇಯಾ. ಸ್ತ್ರೀ: [**ದಯಿತಾ**] ಹೆಣ್ಣು, ಹೆಂಡತಿ, ಪ್ರಿಯೆ(ಸೇ)
ಅಇಯಾಣ. ನ: [**ಅತಿಯಾನ**] ಹೋಗುವುದು, ಗತಿಸುವುದು, ರಾಜನೇ ಮೊದಲಾದವರು ನಗರದಲ್ಲಿ ವಿಜೃಂಭಣೆಯಿಂದ ಪ್ರವೇಶಿಸುವುದು
ಅಇಯಾಯ. ವಿ: [**ಅತಿಯಾತ**] ಹೋಗಿರುವವನು, ಗತಿಸಿರುವವನು(ಉತ್ತ)
ಅಇಯಾರ. ಪು [**ಅತಿಚಾರ**] ಉಲ್ಲಂಘಿಸುವುದು, ಅತಿಕ್ರಮಣ(ಭವಿ), ಹಿಡಿದ ವ್ರತ ಅಥವಾ ನಿಯಮದಲ್ಲಿ ದೋಷ ಹೊರಿಸುವುದು(ಶ್ರಾ)
ಅಇರ. ಅ: [**ಅಚಿರ**] ಶೀಘ್ರವಾಗಿ, ಬೇಗನೆ(ಸ್ವಪ್ನ,)
ಅಇರ. ನ: [**ಅಜಿರ**] ಅಂಗಳ, ಚೌಕ. ಮನೆಯ ಮುಂಭಾಗ(ಪಾಅ)
ಅಇರ. ಪು: [**ದೇ**] ಆಯುಕ್ತ, ರಾಜನಿಂದ ನೇಮಕವಾದ ಊರಿನ ಮುಖ್ಯಸ್ಥ(ದೇ)
ಅಇರ ನ: [**ದೇ..ಅತರ**] '**ಅಯರ=ಅತರ**' ಶಬ್ದವನ್ನು ನೋಡುವುದು(ಸುಪಾ)
ಅಇರ. ವಿ: [**ದೇ**] ಮರೆಯಾಗದ, ಅಂತರ್ಧಾನ ಹೊಂದದ, ಮುಚ್ಚಿಡದ
ಅಇರಜುವಇ. ಸ್ತ್ರೀ: [**ದೇ**] ಹೊಸ ಸೊಸೆ, ಮದುಮಗಳು
ಅಇರತ್ತ ಪು: [**ಅತಿರಾತ್ರ**] ಅಧಿಕ ತಿಥಿ, ಜ್ಯೋತಿಷಿಯ ಲೆಕ್ಕದ ಪ್ರಕಾರ ಅಧಿಕವಾದ ದಿನ(ತಾ)
ಅಇರತ್ತ ವಿ: [**ಅತಿರಕ್ತ**] ಗಾಢ ಕೆಂಪುಬಣ್ಣ, ವಿಶೇಷ ಅನುರಾಗವುಳ್ಳ, **–ಕಂಬಲಸಿಲಾ, –ಕಂಬಲ.** ಸ್ತ್ರೀ: [**–ಕಂಬಲಶಿಲಾ, –ಕಂಬಲಾ**] ಮೇರು ಪರ್ವತದ ಪಾಂಡುಕ ವನದಲ್ಲಿರುವ ಒಂದು ಶಿಲೆ. ಅದರ ಮೇಲೆ ಜಿನದೇವತೆಗಳ ಜನ್ಮಾಭಿಷೇಕವನ್ನು ಮಾಡಲಾಗುತ್ತದೆ(ತಾ)
ಅಇರಾ. ಅ: [**ಅಚಿರಾತ್**] ಶೀಘ್ರ, ಬೇಗನೆ(ಸೇ)
ಅಇರಾ}. ಸ್ತ್ರೀ: [**ಅಚಿರಾ**] ಐದನೆಯ ಚಕ್ರವರ್ತಿ ಮತ್ತು
ಅಇರಾಣೀ}. ಹದಿನಾರನೇ ತೀರ್ಥಂಕರನ ತಾಯಿ; (ಸಮ, ಪಉಮ)

ಅಇರಾಣೀ. ಸ್ತ್ರೀ: [**ದೇ**] ಇಂದ್ರಾಣಿ; ಸೌಭಾಗ್ಯಕ್ಕಾಗಿ ಇಂದ್ರಾಣಿ ವ್ರತ ಮಾಡುವ ಮಹಿಳೆ(ದೇ)
ಅಇರಾವಣ. ಪು: [**ಐರಾವಣ**] ಇಂದ್ರನ ಆನೆ(ಪಾಅ)
ಅಇರಾವಯ. ಪು: [**ಐರಾವತ**] ಇಂದ್ರನ ಆನೆ (ಭವಿ)
ಅಇರಾಹಾ. ಪು: [**ಅಚಿರಾಭಾ**] ಮಿಂಚು(=ವಿದ್ಯುತ್) ಚಪಲಾ (ದೇ, ಟೀ)
ಅಇರಿ. ನ: [**ಅತಿರಿ**] ಹಣ ಇಲ್ಲವೆ ಚಿನ್ನವನ್ನು ಅಪಾರವಾಗಿ ಕೂಡಿಹಾಕಿದವನು, ಧನಾಢ್ಯ= ಶ್ರೀಮಂತ(ಷಡ್)
ಅಇರಿಂಪ. ಪು: [**ದೇ**] ಕಥಾಬಂಧ, ಮಾತು–ಕತೆ, ಕಥೆ(ದೇ)
ಅಇರಿತ್ತ. ವಿ: [**ಅತಿರಿಕ್ತ**] ಉಳಿದಿರುವ, ಅವಶಿಷ್ಟ, (ಪಉಮ) ಆಧಿಕ್ಯ, ಹೆಚ್ಚಾದ(ಠಾ) "ಪವದ್ಧಮಾಣಾಇರಿತ್ತಗುಣನಿಲಓ"(ಸಾರ್ಧ)
–ಸಿಜ್ಜಾಸಣಿಯ. ವಿ: [**–ಶಯ್ಯಾಸನಿಕ**] ಉದ್ದವಾದ ಮತ್ತು ಅಗಲವಾದ ಹಾಸಿಗೆ ಮತ್ತು ಪೀಠವನ್ನಿಟ್ಟುಕೊಂಡಿರುವವನು(ಸಾಧು); (ಆಚೂ)
ಅಇರೂವ. ವಿ: [**ಅತಿರೂಪ**] ಸುರೂಪ, ಅತ್ಯಂತ ಸುಂದರ ರೂಪ(ಪಉಮ) ಪ್ರಾಣಿ ಜಾತಿಯ ದೈವ ವಿಶೇಷ(ಪರಾಣಾ)
ಅಇರೇಗ. ಪು [**ಅತಿರೇಕ**] ಆಧಿಕ್ಯ–ಅತಿಶಯ(ಜೀವ) ವ್ಯತ್ಯಾಸ, ಪ್ರಾಧಾನ್ಯ ಅತಿರೇಕದಿಂದ ಕೂಡಿದ
ಅಇರೇಇಯ. ವಿ: [**ಅತಿರೇಕಿತ**] ಆಧಿಕ್ಯ, "ಸಾಇರೇಗಾ ಅಟ್ಠವಾಸಜಾಯಂಯಂ" (ಣಾಯಾ ೧) ಅತಿಶಯ(ಜೀವ)
ಅಇರೇಣ}. ಅ: [**ಅಚಿರೇಣ**] ಶೀಘ್ರವಾಗಿ,
ಅಇರೇಣಂ}. ಜಾಗ್ರತೆಯಾಗಿ(ಗಾ, ಪ ಉಮ; ಉವರ)
ಅಇರೇಯ. '**ಅಇರೇಗ**' ಶಬ್ದವನ್ನು ನೋಡುವುದು; (ಣಾಯಾ)
ಅಇವ. ಅ: [**ಅತೀವ**] ತುಂಬ ಹೆಚ್ಚಾಗಿ, ಬಹಳವಾಗಿ "ರಿತಂ ಅಇವ ಮಹಂತಂ, ಚಿಟ್ರ ಇಮಜ್ಝಮ್ಮಿ ತಸ್ಸ ಭವಣಸ್ಸ"(ಮಹಾ)
ಅಇವಟ್ಟಣ. ನ: [**ಅತಿವರ್ತನ**] ಉಲ್ಲಂಘನೆ, ನಿಯಮಮೀರಿ ನಡೆಯುವುದು(ಆಚಾ)
ಅಇವತ್ತ. ಸಕ : [**ಅತಿ+ವೃತ್**] ಹದ್ದುಮೀರು, ಅತಿಕ್ರಮಣಮಾಡು '**ಅಇವತ್ತಇ**'(ಆಚಾ)

ಅಇವತ್ತಿಯ. ವಿ: [ಅತಿವ್ರತಿಕ] ಉಲ್ಲಂಘಿಸಲ್ಪಟ್ಟದ್ದು, ಪ್ರಧಾನ, ಮುಖ್ಯವಾದ್ದು,ಮೀರುವವನು(ಆಚಾ)

ಅಇವಯು. ಸಕ: [ಅತಿವ್ರಜ್] ಉಲ್ಲಂಘಿಸು, ದಾಟುವುದು, ಎದುರುಗಡೆ ಹೋಗು, ಪ್ರವೇಶಿಸು, 'ಅಇವಯಂತಿ' (ಣಾಹ,) ವ.ಕೃ 'ಅಇವಯಂತಂ'

ಅಇವಯ. ಸಕ: [ಅತಿ+ಪತ್] ಮೀರು, ಸಂಬಂಧ ಸ್ಥಾಪಿಸು, ಪ್ರವೇಶಿಸು, ದುಃಖ,ಅಕ: ಸಾಯು, ಕೆಳಗೆ ಬೀಳು, 'ಅಇವಯುಂತಿ'; ವ. ಕೃ "ಅಇವಯಮಾಣಿಂ ನಿವಾರೇಸಿ"(ಣಾಯಾ) ಅಇವಯುಂತಂ(ಕಪ್ಪ) ಪ್ರಂರೋ 'ಅಇವಾಏಮಾಣ(ಆಚಾ;)

ಅಇವಹ. ಸಕ: [ಅತಿ+ವಹ್] ಹೊರುವುದರಲ್ಲಿ ಸಮರ್ಥನಾಗು

ಅಇವಾಇ. ವಿ [ಅತಿಪಾತಿನ್] ಹಿಂಸಕ(ಸೂಅ) ಮೀರುವವನು, ಅಶಾಶ್ವತ(ವಿಸೇ)

ಅಇವಾಇತ್ತು. ವಿ: [ಅತಿಪಾತಯಿತೃ] ಹೊಡೆಯುವವನು, ಸಾಯಿಸುವವನು(ಠಾ)

ಅಇವಾಇಯ. ವಿ [ಅತಿಪಾತಿಕ] ಮೇಲಿನ ಶಬ್ದ ನೋಡಿ

ಅಇವಾಏತ್ತು. 'ಅಇವಾಇತ್ತು' ಶಬ್ದವನ್ನು ನೋಡುವುದು

ಅಇವಾಏಮಾಣ. 'ಅಇವಯ=[ಅತಿ+ಪತ್]' ಶಬ್ದವನ್ನು ನೋಡುವುದು

ಅಇವಾಯು. ಪು: [ಅತಿ+ಪಾತ] ಹಿಂಸೆಯೇ ಮೊದಲಾದ ದೋಷಗಳು(ಓಘ) ವಿನಾಶ, "ಪಾಣಾಇವಾರಿಣಾಂ"(ಣಾಯಾ) ಮೀರುವಿಕೆ, ತಪ್ಪುವಿಕೆ

ಅಇವಾಯ. ಪು: [ಅತಿವಾತ] ಮೀರುವಿಕೆ, ಬಿರುಗಾಳಿ, ಭಯಂಕರ ಗಾಳಿ(ಉಪ ಟೀ) ೧

ಅಇವಾಹ. ಸಕ: [ಅತಿ+ವಾಹಯ್] ಕಳೆ,ವ್ಯತೀತಮಾಡು

ಅಇವಿರಿಂಯು. ವಿ: [ಅತಿವೀರ್ಯ] ಬಲಿಷ್ಠ, ಮಹಾಪರಾಕ್ರಮಿ, ಇಕ್ಷ್ವಾಕು ವಂಶದ ಒಬ್ಬ ರಾಜ, (ಪಉಮ) ನಂದಾವರ್ತ ನಗರದ ಒಬ್ಬ ರಾಜ(ಪಉಮ)

ಅಇವಿಸಾಲ. ವಿ: [ಅತಿವಿಶಾಲ] ಬಹಳ ದೊಡ್ಡದಾದ, ವಿಸ್ತೀರ್ಣವಾದ, ಸ್ತ್ರೀ: ಯಮಪ್ರಭವೆಂಬ ಪರ್ವತದ ದಕ್ಷಿಣದ ಕಡೆಗಿರುವ ನಗರ(ದೀವ)

ಅಇಸ: [ಅಪ]: [ಈದೃಶ್] ಈ ರೀತಿಯ, ಇಂಥ(ಹೇ)

ಅಇಸಇ: ವಿ: [ಅತಿಶಯಿನ್] ಅತಿಶಯವಾದ, ಶ್ರೇಷ್ಠವಾದ, ವಿಶಿಷ್ಟವಾದ, ಆಶ್ಚರ್ಯವನ್ನುಂಟು ಮಾಡುವ(ಸುಪಾ)

ಅಇಸಇಅ, ವಿ: [ಅತಿಶಯಿತ] ಅಧಿಕವಾದ, ಮೀರಿದ, ಅತಿಶಯವಾದ, ವಿಶಿಷ್ಟ (ಪಾಅ)

ಅಇಸಂಧಣ. 'ಅಇಸಂಧಾಣ' ಶಬ್ದವನ್ನು ನೋಡುವುದು.

ಅಇಸಂಧಾಣ. ವಿ: [ಅತಿಸಂಧಾನ] "ಭಿಯಗಾಣಾಇಸಚಿಧಾಣಂ ಸಾಸಯ" ವುಡ್ಢೀಯ ಜಯಣಾ ಯ"(ಪಂಚಾ)

ಅಇಸಕ್ಕಣಾ. ಸ್ತ್ರೀ: [ಅತಿಷ್ವಷ್ಕಣಾ] ಉತ್ತೇಜನ, ಪ್ರೇರಣೆ, ಪ್ರೋತ್ಸಾಹ(ನಿಸೀ)

ಅಇಸಯ. ಸಕ: [ಅತಿ+ಶೀ] ಸೋಲಿಸುವುದು, ಪರಾಜಿತಗೊಳಿಸುವುದು ವ. ಕೃ- ಪರಬಲಮ್ ಅಇಸಯಂತೋ(ಪಉಮ)

ಅಇಸಯ. ಪು: [ಅತಿಶಯ] ಶ್ರೇಷ್ಠವಾದ, ಉತ್ತಮ (ಕುಮಾ), ಮಹಿಮೆ, ಪ್ರಭಾವ "ವಯಣಾಇಸಟ" (ಮಹಾ)ಅಧಿಕ, ಹೆಚ್ಚಾದ(ಸುರ,) ಚಮತ್ಕಾರ (ಉರ)–ಭರಿಯ. ವಿ [–ಭೃತ] ಪೂರ್ಣ, ಪೂರ್ತಿ ತುಂಬಿದ(ಪಾ ಅ)

ಅಇಸರಿಯ. ನ: [ಐಶ್ವರ್ಯ] ವೈಭವ, ಸಂಪತ್ತು, ಗೌರವ, ಶ್ರೇಷ್ಠತೆ(ಹೇ)

ಅಇಸಾಇ. ವಿ: [ಅತಿಶಾಯಿನ್] ಶ್ರೇಷ್ಠ, ಬೇರೆಯವನನ್ನು ಸೋಲಿಸುವವನು ಸ್ತ್ರೀ: –ಣೀ.

ಅಇಸಾಯಣ. ನ: [ಅತಿಶಾಯನ] ಉತ್ಕೃಷ್ಟತೆ, ಶ್ರೇಷ್ಠತೆ, ಅತಿಶಯ, ಮೇಲ್ಮೆ

ಅಇಸಾರ. ಪು: [ಅತಿಸಾರ] ಆಮಶಂಕೆ ರೋಗ

ಅಇಸೇಸ. ಪು: [ಅತಿಶೇಷ] ಮಹಿಮೆ, ಪ್ರಭಾವ, ಆಧ್ಯಾತ್ಮಿಕ ಸಾಮರ್ಥ್ಯ, ಉಳಿದಿರುವ, ಅತಿಶಯವುಳ್ಳ(ವಿಸೇ)

ಅಇಸೇಸಿ. ವಿ: [ಅತಿಶೇಷಿನ್] ಪ್ರಭಾವಶಾಲಿ, ಮಹಿಮಾನ್ವಿತವಾದ, ಸಮೃದ್ಧವಾದ(ರಾಜ) ಜ್ಞಾನದ ಅತಿಶಯತೆಯಿಂದ ಕೂಡಿದ

ಅಇಸೇಸಿಯ. ವಿ: [ಅತಿಶೇಷಿತ] ಮೇಲಿನ ಶಬ್ದವನ್ನು ನೋಡುವುದು(ಓಘ)

ಅಇಹರ ಪು: [ಅತಿಭರ] ಮಿತಿ, ಅವಧಿ, ಎಲ್ಲೆ, ಸೀಮೆ; "ಸತ್ತೀಯ ಕೋ ಅಇಹರೋ"(ಅಚ್ಚು)

ಅಇಹಾರಾ. ಸ್ತ್ರೀ: [ದೇ], ಮಿಂಚು, ವಿದ್ಯುತ್ತು(ದೇ)

ಅಇಹಿ. ಪು: [**ಅತಿಥಿ**] ಅನಿರೀಕ್ಷಿತವಾಗಿ ಮನೆಗೆ ಬಂದವನು, ಯಾರು ಬರುವ ದಿನ ನಿಶ್ಚಿತವಿಲ್ಲವೋ ಅವನು, ಯಾತ್ರಿ, ಭಿಕ್ಷುಕ, ಸಾಧು (ಆಚಾ) **-ಸಂವಿಭಾಗ ಪು.** [**-ಸಂವಿಭಾಗ**] ಸಾಧುವಿಗೆ ಭೋಜನವೇ ಮೊದಲಾದುವುಗಳನ್ನು ದೋಷರಹಿವಾಗಿ ದಾನ ಮಾಡುವುದು(ಧರ್ಮ)

ಅಈ. ಸಕ: [**ಗಮ್**] ಹೋಗು, ಗಮಿಸು-'**ಅಈಇ**' (**ಕುಮಾ**) **ಅಇಂತಿ** (**ಗಉಡ**)

ಅಈಅ. ಪು: [**ಅತೀತ**] ಭೂತಕಾಲ, ವಿ: ಕಳೆದು ಹೋದ ಕಾಲ, "**ಜೇ ಅ ಅಇಆ ಸಿದ್ಧಾ**"(**ಪಡಿ**) ಅತಿಕ್ರಾಂತ(=ಮೀರಿದ) (ಸೂಅವಿಸೇ), ದೂರವಾದ(ಉತ್ತ)

ಅಈಅ}. **ಅ:** [**ಅತೀವ**], ಬಹಳವಾಗಿ, ಹೆಚ್ಚಾಗಿ,
ಅಈವ}. ಅತ್ಯಂತ, ವಿಶೇಷ(ಭಗ, ಪಣ್ಣ)

ಅಈಸಂತ. ವಿ: [**ಅ+ದೃಶ್ಯಮಾನ**], ಕಣ್ಣಿಗೆ ಕಾಣಿಸದಿರುವುದು(ಸೇ)

ಅಈಸಯ. '**ಅಇಸಯ**' ಶಬ್ದವನ್ನು ನೋಡುವುದು

ಅಈಸಾರ. ಪು: [**ಅತೀಸಾರ**] ಜಠರದ ವ್ಯಾಧಿ, ಭೇದಿ, ಈ ಹೆಸರಿನ ಒಬ್ಬ ರಾಜ(ತಾ)

ಅಉ. '**ಆಉ=ಸ್ತ್ರೀ**' ಶಬ್ದವನ್ನು ನೋಡುವುದು

ಅಉಅ. ನ : [**ಅಯುತ**] ಹತ್ತು ಸಾವಿರ, '**ಅಉಅಂಗ**' ವನ್ನು ೮೪ ಲಕ್ಷದಿಂದ ಗುಣಿಸಿದರೆ ಬರುವ ಸಂಖ್ಯೆ(ತಾ), ಮಿಶ್ರವಲ್ಲದ

ಅಉಅಂಗ. ನ: [**ಅಯುತಾಂಗ**] '**ಅಚ್ಛಣಿಉರ**'ವನ್ನು ೮೪ ಲಕ್ಷದಿಂದ ಗುಣಿಸಿದರೆ ಬರುವ ಸಂಖ್ಯೆ(ತಾ)

ಅಉಂಠ. ವಿ: [**ಅಕುಂಠ**] ನಿಪುಣ, ಕಾರ್ಯದಕ್ಷ, (ಗಉಡ), ತಡೆಯಿಲ್ಲದ, ಅಡ್ಡಿಯಿಲ್ಲದ

ಅಉಚಿತ್ತ. ನ: [**ಔಚಿತ್ಯ**] ಉಚಿತತೆ

ಅಉಜ್ಝ. ವಿ: [**ಅಯೋಧ್ಯ**] ಯಾರನ್ನು ಯುದ್ಧದಲ್ಲಿ ಎದುರಿಸಲು ಸಾಧ್ಯವಿಲ್ಲವೋ ಅವನು, ಯಾರ ಮೇಲೆ ಶತ್ರು ಸೈನ್ಯ ಆಕ್ರಮಣ ಮಾಡಲು ಸಾಧ್ಯವಿಲ್ಲವೋ ಅಂಥ ಕೋಟೆ, ನಗರ ಇತ್ಯಾದಿ (ತಾ)

ಅಉಜ್ಝಾ. ಸ್ತ್ರೀ: [**ಅಯೋಧ್ಯಾ**] ನಗರ ವಿಶೇಷ, ಇಕ್ಷ್ವಾಕು ವಂಶದ ಅರಸರ ರಾಜಧಾನಿ, ವಿನೀತಾ, ಕೋಸಲ, ಸಾಕೇತಪುರ ಮೊದಲಾದ ಹೆಸರುಗಳಿಂದ ಪ್ರಖ್ಯಾತವಾದ ನಗರ(ತಾ) ಈಗಿನ ಅಯೋಧ್ಯೆ

ಅಉಣ. ವಿ: [**ಏಕೋನ**] ಒಂದು ಕಡಿಮೆಯಾದ, ಈ ಶಬ್ದ ಇಪ್ಪತ್ತು, ಮೂವತ್ತು, ನಲವತ್ತು ಇತ್ಯಾದಿ ದಶ ಸಂಖ್ಯೆಗಳ ಹಿಂದೆ ಹತ್ತುತ್ತದೆ. ಅದರರ್ಥ ಆ ಸಂಖ್ಯೆಗಿಂತ ಒಂದು ಕಡಿಮೆ ಎಂದು-**ಟ್ಠಿ. ಸ್ತ್ರೀ:** [**-ಷಷ್ಟಿ**] ಏಕೋನ ಷಷ್ಟಿ,=೫೯, **-ತ್ತರಿ. ಸ್ತ್ರೀ:** [**-ಸಪ್ತತಿ**] ಏಕೋನ ಸಪ್ತತಿ ೬೯, **-ತ್ತೀಸ. ಸ್ತ್ರೀನ:** [**-ತ್ರಿಂಶತ್**] ಏಕೋನ ತ್ರಿಂಶತ್= ೨೯(ಣಾಯಾ, **-ಸಟ್ಟಿ ಸ್ತ್ರೀ:** [**-ಷಷ್ಟಿ**] (ಕಪ್ಪ), ಏಣೂಣ ಶಬ್ದವನ್ನು ನೋಡುವುದು

ಅಉಣಪ್ಪನ್ನ. '**ಅಉಣಾಪನ್ನ**' ಶಬ್ದವನ್ನು ನೋಡುವುದು

ಅಉಣಾಸಟ್ಠಿ. '**ಅಉಣ-ಸಟ್ಠಿ**' ಶಬ್ದವನ್ನು ನೋಡುವುದು

ಅಉಣಹೋಣಿಉತ್ತಿ. ಸ್ತ್ರೀ: [**ಅಪುನರ್ನಿವೃತ್ತಿ**] ಅಂತಿಮ ನಿವೃತ್ತಿ, ಮೋಕ್ಷ, (ಅಚ್ಚು)

ಅಉಣ್ಣ}. **ನ :** [**ಅಪುಣ್ಯ**] ಪಾಪ(ಸುರ) ಅಪವಿತ್ರ,
ಅಉನ್ನ}. ಪುಣ್ಯರಹಿತ, ಪಾಪಿ(ಪಉಮ)

ಅಉಮ. '**ಓಮ** [**ಓಮ್?**]' ಶಬ್ದವನ್ನು ನೋಡುವುದು (ಗುಭಾ)

ಅಉಮರ. ವಿ: [**ಅದ್ಮರ**] ತಿನ್ನುವವನು, ಭಕ್ಷಕ

ಅಉಲ. ವಿ: [**ಅತುಲ**] ಅಸಾಧಾರಣ, ಅದ್ವಿತೀಯ, ಅನುಪಮ (ಉಪ, ಟೀ; ಪಣ್ಣ)

ಅಉಲೀನ. ವಿ: [**ಅಕುಲೀನ**] ಕುಲಹೀನ, ಕುಲೀನನಲ್ಲದ, ಕುಜಾತಿ, ಸಂಕರ(ಗಾ)

ಅಉವ್ವ. ವಿ: [**ಅಪೂರ್ವ**] ಆಶ್ಚರ್ಯಕರವಾದ, ವಿಚಿತ್ರ, ಅದ್ವಿತೀಯವಾದ, ಹಿಂದಿನದಲ್ಲದ(ಗಾ)

ಅಉಸ. ವಿ: [**ದೇ**] ಉಪಾಸಕ, ಪೂಜಾರಿ(ಪ್ರತ್ಯೌ)

ಅಏ. ಅ: [**ಅಯೇ**] ಸಂಬೋಧನ ಸೂಚಕ ಅವ್ಯಯ, ಸಂಭ್ರಮ, ಆಶ್ಚರ್ಯ, ಕೋಪ(ಕಪ್ಪೂ)

ಅಓ. ಅ: [**ಅತಸ್**] ಇಲ್ಲಿಂದ(ಸುಪಾ) ಈ ಕಾರಣದಿಂದ, ಇದರಿಂದ(ಉಪ)

ಅಓ- [**ಅಯಸ್-**] ಕಬ್ಬಿಣ, ಉಕ್ಕು. **-ಘಣ. ಪು:** [**-ಘನ**] ಕಬ್ಬಿಣದ ಬೇಡಿ "ಸೀಸಂಪಿ ಭಿಂದಂತಿ ಅಓಘಣೇಹಿಂ"(ಸೂಅ)**-ಮಯ. ವಿ:** [**-ಮಯ**] ಕಬ್ಬಿಣದಿಂದ ತಯಾರಾದ ವಸ್ತು(ಸೂಅ). **-ಮುಹ. ಪು:** [**-ಮುಖ**] ಈ ಹೆಸರಿನ ದ್ವೀಪ, ಮತ್ತು ಅದರ ನಿವಾಸಿಗಳು(ತಾ) ಕಬ್ಬಿಣದಂಥ ಗಟ್ಟಿಯಾದ ಮುಖವುಳ್ಳ "ಪಕ್ಖೀಹಿಂ ಖಜ್ಜಂತಿ

ಅಓಮುಹೇಹಿಂ" (ಸೂಅ) –ಮುಹೀ ಸ್ತ್ರೀ [–ಮುಖೀ] ಒಂದು ನಗರ (ಉಪ)

ಅಬಗ್ಗ. ವಿ: [**ಅಯೋಗ್ಯ**] ಯೋಗ್ಯನಲ್ಲದ, ಅರ್ಹನಲ್ಲದ, ನಾಲಾಯಕ್

ಅಬಜ್ಝ. '**ಅಉಜ್ಝ**' ಶಬ್ದವನ್ನು ನೋಡುವುದು

ಅಂ. ಅ: [**ದೇ**] ನೆನಪನ್ನು ಸೂಚಿಸುವ, ವ್ಯಕ್ತಪಡಿಸುವ ಅವ್ಯಯ

ಅಂಕ ಪು: [**ಅಂಕ**] ತೊಡೆ, ಮಡಿಲು(ಸ್ವಪ್ನ), ರತ್ನದ ಒಂದು ಜಾತಿ(ಕಪ್ಪ), ಸಂಖ್ಯೆ "ಕಾಸೀ ವಿಕ್ಕಮುವಚ್ಛರವಿಮ್ಮ ೦ಯು ಗೇ ಬಾಣಂಕಸುನ್ನೋಡುವೇ" (ಸುರ), ಅಂಕೆಗಳು, (**ಪಣಣಾ**), ನಾಟಕದ ಒಂದು ಭಾಗ "**ಸ್ಮರಾಣಾ ಮಣುಸ್ಸಬವಣಾ ಡೇಸು ನಿನಿಜ್ಝಇಆ ಅಂಕಾ**", ಚಿಹ್ನೆ, ಗುರುತು(ಚಂದ), ಮನುಷ್ಯನ ಮೂವತ್ತೆರಡು ಪ್ರಶಸ್ತ ಲಕ್ಷಣಗಳಲ್ಲಿ ಒಂದು(ಪಣಹ) ಆಸನ ವಿಶೇಷ, (ಚಂದ ೪) –**ಕಂಡ. ಪುಂ.ನ:** [**–ಕಾಂಡ**] ರತ್ನ ಪ್ರಭೆ ಪೃಥ್ವಿಯ ರತ್ನಗಳ ಒಂದು ಭಾಗ(ಠಾ ೧೦) –**ಅರೇಲ್ಲುಗ, ಕರೇಲ್ಲುಅ. ಪು** [**–ಕರೇಲ್ಲುಕ**] ನೀರಿನಲ್ಲಿ ಬೆಳೆಯುವ ಒಂದು ಜಾತಿಯ ವನಸ್ಪತಿ (ಆಚಾ), –**ಟ್ಟಿಇ. ಸ್ತ್ರೀ:** [**–ಸ್ಥಿತಿ**] ಅಂಕ ರೇಖೆಗಳಲ್ಲಿ ವಿಚಿತ್ರವಾದ ಸ್ಥಾಪನೆ, ೬೪ ಕಲೆಗಳಲ್ಲಿ ಒಂದು ಕಲೆ, (ಕಪ್ಪ) –**ಧರ. ಪು:** [**ಧರ**] ಚಂದ್ರ, (ಜೀವ ೩) –**ಧಾಈ** ಸ್ತ್ರೀ[**ಧಾತ್ರೀ**] ಐದು ವಿಧವಾದ ಸಾಕು ತಾಯಿಯರಲ್ಲಿ ಒಬ್ಬಳು; ಮಗುವನ್ನು ತೊಡೆಯಲ್ಲಿಟ್ಟುಕೊಂಡು ಆಡಿಸುವುದು ಅವಳ ಕೆಲಸ(ಣಾಯಾ), –**ಲಿವಿ. ಸ್ತ್ರೀ:** [**–ಲಿಪಿ**] ಹದಿನೆಂಟು ಬಗೆಯ ಲಿಪಿಗಳಲ್ಲಿ ಒಂದು ಲಿಪಿ. ವರ್ಣಮಾಲಾ ವಿಶೇಷ(ಸಮ ೩೫) ▯**ವಣಿಯ. ಪು:** [**– ವಣಿಕ**] ಅಂಕರತ್ನಗಳ ವ್ಯಾಪಾರಿ (**ಖುಆಯ**) ▯**ವಾಲಿ. –ವಾಲೀ. ಸ್ತ್ರೀ:** [**–ಪಾಲಿ, –ವಾಲೀ**] ಆಲಿಂಗನ(ಕಾಪ್ರ) –**ಹರ, –ಧರ** ಶಬ್ದವನ್ನು ನೋಡುವುದು(ಜೀವ)

ಅಂಕ. [**ದೇ ಅಂಕ**] ನಿಕಟ, ಹತ್ತಿರ, ಸಮೀಪ(ದೇ)

ಅಂಕಕರೇಲುಅ, –ಗ.'**ಅಂಕ–ಕರೇಲ್ಲುಅ**' ಶಬ್ದವನ್ನು ನೋಡುವುದು

ಅಂಕಣ. ನ: [**ಅಂಕನ**] ಗುರುತು ಹಾಕುವುದು, ಮುದ್ರೆ ಹಾಕುವುದು, ಎತ್ತು ಮೊದಲಾದ ಪ್ರಾಣಿಗಳಿಗೆ ಕಾದ ಕಬ್ಬಿಣದ ಸಲಾಕೆಯಿಂದ ಸುಟ್ಟು ಗುರುತು ಮಾಡುವುದು, ಎಣಿಕೆಯಲ್ಲಿ ತರುವುದು "**ಅಂಕಣಂ ಜೋಇಸಸ್ಸ.... ಸೂರ**"(ಕಪ್ಪ)

ಅಂಕದಾಸ. ಪು: [**ಅಂಕದಾಸ**] ಬಾಲಕನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಅವನನ್ನು ಆಡಿಸುವ ಆಳು

ಅಂಕವಾಣಿಯ. '**ಅಂಕ–ವಣಿಯ**' ಶಬ್ದವನ್ನು ನೋಡುವುದು

ಅಂಕಣಾ. ಸ್ತ್ರೀ: [**ಅಂಕನಾ**] ಮೇಲಿನದನ್ನು ನೋಡುವುದು (ಣಾಯಾ)

ಅಂಕಾರ. ಪು: [**ದೇ**] ನೆರವು, ಸಹಾಯ(ದೇ)

ಅಂಕಾವಈ. ಸ್ತ್ರೀ: [**ಅಂಕಾವತೀ**] ಮಹಾ ವಿದೇಹ ಕ್ಷೇತ್ರದ ರಮ್ಯ ಎಂಬ ಹೆಸರಿನ ವಿಜಯದ ರಾಜಧಾನಿ(ಠಾ), ಮೇರು ಪರ್ವತದ ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತಿರುವ ಶೀತೋದಾ ನದಿಯ ದಿಕ್ಕಿನಲ್ಲಿ ಇರುವ ಒಂದು ಪರ್ವತ(ಠಾ)

ಅಂಕಿಅ. ನ: [**ದೇ**] ಆಲಿಂಗನ(ದೇ)

ಅಂಕಿಅ. ವಿ: [**ಅಂಕಿತ**] ಗುರುತು ಮಾಡಲ್ಪಟ್ಟ, ಗುರುತಿನ(ಔಪ)

ಅಂಕಿಇಲ್ಲ. ಪು [**ದೇ**] ನಟ, ನರ್ತಕ, ನರ್ತಿಸುವವನು

ಅಂಕುಡಗ. ಪು: [**ಅಂಕುಟಕ**] ಆನೆಯ ದಂತ, ಮೊಳೆ, ಗೂಟ(ಜಂ)

ಅಂಕುರ. ಪು: [**ಅಂಕುರ**] ಮೊಳಕೆ, ಚಿಗುರು(ಜೀ)

ಅಂಕುರಿಯ. ವಿ: [**ಅಂಕುರಿತ**] ಮೊಳಕೆ ಬಂದಿರುವ, ಚಿಗುರಿರುವ(ಉವಾ)

ಅಂಕುಸ. ಪು: [**ಅಂಕುಶ**] ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಕಬ್ಬಿಣದ ಆಯುಧ "**ಅಂಕುಸೇಣ ಜಹಾ ಣಾಗೋ ಧಮ್ಮೆ ಸಂಪಡಿವಾಇಓ**"(ಉತ್ತ) ಗ್ರಹವಿಶೇಷ(ಠಾ) ಸೀತೆಯ ಒಬ್ಬ ಮಗ ಕುಶ (ಪಉಮ), ನಿಯಂತ್ರಿಸುವ(ಗಉಡ), ಒಂದು ದೇವ ವಿಮಾನ (ರಾಜ), **ಪುಂ.ನ.** ಗುರು ವಂದನದಲ್ಲಿಯ ಒಂದು ದೋಷ(ಪವ), ಅಂಕುಶಾಕಾರದ ಮೊಳೆ, ಗೂಟ

ಅಂಕುಸಯ. ನ: [**ದೇ. ಅಂಕುಶಿತ**] ಅಂಕುಶದ ಆಕಾರ ಹೊಂದಿರುವ ವಸ್ತು(ದೇ)

ಅಂಕುಸಯ. ಪು: [**ಅಂಕುಶಕ**] '**ಅಂಕುಸ**' ಶಬ್ದವನ್ನು ನೋಡುವುದು, ಸಂನ್ಯಾಸಿಯ ಒಂದು ಉಪಕರಣ,

ಅದರಿಂದ ಅವನು ದೇವರಪೂಜೆಯ ಸಲುವಾಗಿ ಮರದ ಚಿಗುರುಗಳನ್ನು ಕತ್ತರಿಸುತ್ತಾನೆ.

ಅಂಕುಸಾ. ಸ್ತ್ರೀ: [**ಅಂಕುಶಾ**] ೧೪ನೇ ತೀರ್ಥಂಕರ ಶ್ರೀ ಅನಂತನಾಥ ಜಿನನ ಶಾಸನ ದೇವಿ

ಅಂಕುಸಿಅ. ವಿ.: [ಅಂಕುಶಿತ] ಅಂಕುಶದ ಹಾಗೆ ಬಾಗಿರುವ

ಅಂಕುಸೀ. ಸ್ತ್ರೀ: [**ಅಂಕುಶೀ**] **'ಅಂಕುಸಾ'** ಶಬ್ದವನ್ನು ನೋಡುವುದು,

ಅಂಕೂರ. **'ಅಂಕುರ'** ಶಬ್ದವನ್ನು ನೋಡುವುದು

ಅಂಕೆಲ್ಲಣ. ನ: [ದೇ] ಕುದುರೆ ಮೊದಲಾದುವನ್ನು ಹೊಡೆಯುವ ಚಾಟಿ, ಬಾರುಕೋಲು

ಅಂಕೆಲ್ಲಿ. ಪು: [ದೇ] **ಅಶೋಕ ವೃಕ್ಷ**

ಅಂಕೊಲ್ಲ, ಪು: [ಅಂಕೋಠ] ಒಂದು ವೃಕ್ಷವಿಶೇಷ

ಅಂಗ. ಪು: [ಅಂಗ] ಈ ಹೆಸರಿನ ಒಂದು ದೇಶ: ಈಗಿನ ಬಿಹಾರ, ರಾಮನ ಒಬ್ಬ ಯೋಧ,. ನ: ಆಚಾರಾಂಗ ಸೂತ್ರವೇ ಮೊದಲಾದ ಹನ್ನೆರಡು ಜೈನ ಆಗಮ ಗ್ರಂಥಗಳು. ಶಿಕ್ಷಾ, ವ್ಯಾಕರಣವೇ ಮೊದಲಾದ ವೇದದ ಆರು ಅಂಗಗಳು. ಕಾರಣ, ಆತ್ಮ, ಪುಂ.ನ. ಶರೀರ, ಶರೀರದ ತಲೆಯೇ ಮೊದಲಾದ ಅವಯವಗಳು, ಸ್ನೇಹದ ಆಹ್ವಾನ, ಸಂಬೋಧನೆ, ವಾಕ್ಯಾಲಂಕಾರದಲ್ಲಿ ಪ್ರಯೋಗವಾಗುವ ಅವ್ಯಯ, **–ಇ. ಪುಂ:** [**–ಜಿತ್**] ಪಾರ್ಶ್ವನಾಥರ ಬಳಿ ದೀಕ್ಷೆ ವಹಿಸಿಕೊಂಡ ಈ ಹೆಸರಿನ ಒಬ್ಬ ಗೃಹಸ್ಥ,**–ಇಸಿ. ಪುಂ:** [**–ರ್ಷಿ**] ಚಂಪಾ ನಗರಿಯ ಒಬ್ಬ ಋಷಿ, **–ಚೂಲಿಯಾ** ಸ್ತ್ರೀ: [**–ಚೂಲಿಕಾ**] ಅಂಗ ಗ್ರಂಥಗಳ ಪರಿಶಿಷ್ಟ, **–ಚ್ಛಹಿಯ.** ವಿ: [**–ಛಿನ್ನಾಂಗ**] ಯಾರ ಅಂಗಗಳನ್ನು ಕತ್ತರಿಸಿದೆಯೋ ಅವನು, **–ಜಾಯ.** ವಿ: [**–ಜಾತ**] ಹುಡುಗ, –ದ ನೋಡಿ ‌ಯ=–ದ, **–ಪವಿಟ್ಠ.** ನ: [**–ಪ್ರವಿಷ್ಟ**] ಹನ್ನೆರಡು ಜೈನ ಅಂಗ ಗ್ರಂಥಗಳಲ್ಲಿ ಯಾವುದಾದರೊಂದು, ಅಂಗ ಗ್ರಂಥಗಳ ಜ್ಞಾನ, **–ಬಾಹಿರ.** ನ: [**–ಬಾಹ್ಯ**]. ಅಂಗ ಗ್ರಂಥಗಳಿಗೆ ಹೊರತಾದ ಜೈನಾಗಮಗಳ ಜ್ಞಾನ, **–ಮಂಗ.** ನ: [**ಅಂಗಾಂಗ**] : ಅಂಗ ಪ್ರತ್ಯಂಗ, ಒಂದೊಂದೂ ಅಂಗಾಂಗ, **ಮಂದಿರ** ನ. [ಮಂದಿರ] ಚಂಪಾ ನಗರದ ಒಂದು ದೇವ ಸ್ಥಾನ, **–ಮದ್ದ, –ಮದ್ದಯ.** ಪು. [**–ಮರ್ದ, ಮರ್ದಕ**] ದೇಹದ ಮರ್ದನ(ಮಸಾಜ್) ಮಾಡುವ ಆಳು, **–ಯ. ಪು:** [**–ದ**] **ವಾಲಿ** ಎಂಬ ಹೆಸರಿನ ವಿದ್ಯಾಧರ ರಾಜನ ಮಗ. **ನ: ತೋಳಿನ** ಆಭರಣ, ವಂಕಿ **–ಯ.** [**–ಜ**] ಶರೀರದಲ್ಲಿ **ಹುಟ್ಟಿದ, ಪು. ಪುತ್ರ, ಯಾ.** [**–ಜಾ**] **=ಪುತ್ರೀ, –ರಕ್ಖ, –ರಕ್ಖಗ** ವಿ. [**–ರಕ್ಷ, –ರಕ್ಷಕ**] ದೇಹದ ರಕ್ಷಣೆ ಮಾಡುವವನು, **–ರಾಗ, –ರಾಯ.** ಪು. ಶರೀರದ ಮೇಲೆ ಚಂದನಾದಿಗಳ ಲೇಪನ, [**–ರಾಯ, ಪು. –ರಾಜ**] ಅಂಗ ದೇಶದ ರಾಜ=ಕರ್ಣ, ರಿಸಿ, ಇಸಿ ಶಬ್ದವನ್ನು ನೋಡುವುದು **–ರುಹ್** ವಿ: [**–ರುಹ್**] **ನೋಡಿ–ಯ=ಜ. –ರುಹಾ** ಸ್ತ್ರೀ. [**–ರುಹಾ**] **ಮಗಳು –ವಿಜ್ಜಾ** ಸ್ತ್ರೀ: [**–ವಿದ್ಯಾ**] ಅಂಗ ಚಲನೆಯಿಂದ ಭವಿಷ್ಯ ಹೇಳುವ ವಿದ್ಯೆ, ಜ್ಯೋತಿಶ್ಶಾಸ್ತ್ರ, ಆ ಹೆಸರಿನ ಒಂದು ಜೈನ ಗ್ರಂಥ, **–ವಿಯಾರ.** ಪು.[**–ವಿಚಾರ**] ಹಿಂದೆ ಹೇಳಿದ ಅರ್ಥವನ್ನು ನೋಡುವುದು. **–ಸಂಭೂಯ** .ವಿ [**–ಸಂಭೂತ**] ಸಂತಾನ.=ಬಾಲಕ, **–ಹಾರಯ.** [**–ಹಾರಕ**] ಶರೀರದ ಅವಯವಗಳನ್ನು ಆಡಿಸುವುದು; ಹಾವಭಾವ, **–ದಾಣ** [**–ದಾನ**] =ಪುರುಷೇಂದ್ರಿಯ, ಪುರುಷ ಚಿಹ್ನ

ಅಂಗ. ವಿ: [ಅಂಗ] ಶರೀರದ ವಿಕಾರ, ಶರೀರ ಸಂಬಂಧವಾದ. ಶಾರೀರಿಕ, ಆದಿತೀರ್ಥಂಕರನ ಒಬ್ಬ ಮಗನ ಹೆಸರು. ನಿರಂತರ ಹನ್ನೆರಡು ದಿನಗಳ ಉಪವಾಸ, –ಜ. **'–ಯ'** ಶಬ್ದವನ್ನು ನೋಡುವುದು

ಅಂಗ. ವಿ: [ಚಂಗ] ಸುಂದರವಾದ, ಮನೋಹರವಾದ, ಸಮರ್ಥನಾದ

ಅಂಗಇಯಾ. ಸ್ತ್ರೀ: [**ಅಂಗದಿಕಾ**] ಒಂದು ನಗರ, ತೀರ್ಥವಿಶೇಷ

ಅಂಗಂಗೀಭಾವ. ಪು: [ಅಂಗಾಂಗೀಭಾವ] ಅಭೇದ ಭಾವ, ಅಂಗಕ್ಕೂ ಪ್ರಧಾನಕ್ಕೂ ಇರುವ ಸಂಬಂಧ (ಸುಪಾ)

ಅಂಗಣ. ನ: [ಅಂಗಣ] ಅಂಗಳ, ಗೋಡೆಗಳಿಂದ ಸುತ್ತುವರಿದ ಪ್ರದೇಶ, ಮೈದಾನ, ಚೌಕ(ಸುರ)

ಅಂಗದಿಅ. **ಅಂಗಇಯಾ** ಶಬ್ದವನ್ನು ನೋಡುವುದು

ಅಂಗವಡ್ಡಣ. ನ: [ದೇ] ಕಾಯಿಲೆ(ದೇ), ರೋಗ

ಅಂಗವಲಿಜ್ಜ. ನ: [ದೇ] ಶರೀರವನ್ನು ತಿರುಗಿಸುವುದು

ಅಂಗಾರ. ಪು: [ಅಂಗಾರ] ಕೆಂಡ, ಇದ್ದಿಲು, ಅರ್ಧ ಸುಟ್ಟಿರುವ ಕೊಳ್ಳಿ, ಜೈನ ಸಾಧುಗಳಿಗೆ ನೀಡುವ ಭಿಕ್ಷೆಯ ಒಂದು ದೋಷ(ಆಚಾ) **–ಮದ್ದಗ ಪು:** [**–ಮರ್ದಕ**] ಒಬ್ಬ ಅಭವ್ಯ ಜೈನ ಆಚಾರ್ಯ (ಉಪ), ಮೈಯನ್ನು ಉಜ್ಜುವುದು, ಉಜ್ಜುವ ಸೇವಕ, **–ವಈ.** ಸ್ತ್ರೀ:[–ವತೀ] ಸುಂಸುಮಾರ ನಗರದ ರಾಜಾ ಧುಂಧುಮಾರನ ಒಬ್ಬ ಮಗಳ ಹೆಸರು (ಧಮ್ಮ)

ಅಂಗಾರಗ}. ಪು: [ಅಂಗಾರಕ] ಮೇಲಿನ ಶಬ್ದವನ್ನು

ಅಂಗಾರಯ}. ನೋಡುವುದು(ಗಾ) ಮಂಗಳ ಗ್ರಹ=ಕುಜ(ಪಗಹ), ಮೊದಲ ಮಹಾ ಗ್ರಹ, ರಾಕ್ಷಸ ವಂಶದ ಒಬ್ಬ ರಾಜ(ಪ ಉಮ)

ಅಂಗಾರಿಯ. ವಿ: [ಅಂಗಾರಿತ] ಇದ್ದಲಿನ ಹಾಗೆ ಉರಿದ, ವಿವರ್ಣ=ಬಣ್ಣ ಕಳೆದುಕೊಂಡ(ನಾಟ,)

ಅಂಗಾಲ '**ಅಂಗಾರ**' ಶಬ್ದವನ್ನು ನೋಡುವುದು.

ಅಂಗಾಲಗ. '**ಅಂಗಾರಗ**' ಶಬ್ದವನ್ನು ನೋಡುವುದು

ಅಂಗಾಲಿಯ. ನ: [ದೇ] ಕಬ್ಬಿನ ತುಂಡು(ದೇ)

ಅಂಗಾಲಿಯ. ಅಂಗಾರಿಯ ಶಬ್ದವನ್ನು ನೋಡುವುದು

ಅಂಗಿ. ಪು: [ಅಂಗಿನ್] ಪ್ರಾಣಿ, ಜೀವ(ಗಣ), ಶರೀರವುಳ್ಳ, ಅಂಗ ಗ್ರಂಥಗಳನ್ನು ತಿಳಿದವನು(ಕಪ್ಪ)

ಅಂಗಿರಸ. ನ: [ಅಂಗಿರಸ] ಒಂದು ಗೋತ್ರ; ಅದು ಗೌತಮ ಗೋತ್ರದ ಒಂದು ಶಾಖೆ(ಠಾ) ಅಂಗಿರಸನೆಂಬ ಒಬ್ಬ ಋಷಿ

ಅಂಗಿರಸ. ವಿ: [ಆಂಗಿರಸ] ಆಂಗಿರಸ ಗೋತ್ರದಲ್ಲಿ ಹುಟ್ಟಿದ, ಅಂಗಿರಸನ ಮಗ, ಪು: ತಪಸ್ವಿ(ಪಉಮ) ಬೃಹಸ್ಪತಿ, ಒಂದು ಸಂವತ್ಸರ

ಅಂಗೀಕಡ}. ವಿ: [ಅಂಗೀಕೃತ] ಸ್ವೀಕೃತ, ತೆಗೆದುಕೊಳ್ಳಲ್ಪಟ್ಟ

ಅಂಗೀಕಯ}. ತೆಗೆದುಕೊಳ್ಳಲ್ಪಟ್ಟ (ಠಾ, ಸುಪಾ)

ಅಂಗೀಕರ}. ಸಕ: [ಅಂಗೀ+ಕೃ] ಸ್ವೀಕರಿಸು,

ಅಂಗೀಕ್ರುಣ}.ಅಂಗೀಕರೇಯಿ(ಮಹಾ) ಅಂಗೀಕರೇಹಿ

ಅಂಗುಅ. ಪು: [ಇಂಗುದ] ಒಂದು ವೃಕ್ಷವಿಶೇಷ, ಇಂಗಳದ ಗಿಡ(ಇಂಗುದಿ), ಇಂಗುದೀ ಫಲ

ಅಂಗುಟ್ಠ. ಪು: [ಅಂಗುಷ್ಠ] ಹೆಬ್ಬೆರಳು,(ಠಾ), **–ಪಸಿಣ ಪು:** [**–ಪ್ರಶ್ನ**]= ಒಂದು ವಿದ್ಯೆ, '**ಪ್ರಶ್ನ– ವ್ಯಾಕರಣ**' ಸೂತ್ರದ ಒಂದು ಲುಪ್ತ ಅಧ್ಯಯನ(ಠಾ)

ಅಂಗುಟ್ಠೀ. ಸ್ತ್ರೀ: [ದೇ] ಮುಖಪರದೆ, ಅವಗುಂಠನ

ಅಂಗುತ್ಥಲ. ನ: [ದೇ] ಉಂಗುರ, ಅಂಗುಳೀಯಕ(ದೇ)

ಅಂಗುಬ್ಭವ. ವಿ: [ಅಂಗೋದ್ಭವ] ಸಂತಾನ, ಬಾಲಕ

ಅಂಗುಮ. ಸಕ. [ಪೂರಯ್] ಪೂರ್ಣಗೊಳಿಸು, ಅಂಗಮುಇ(ಹೆ)

ಅಂಗುಮಿಯ. ವಿ: [ಪೂರಿತ] ಪೂರ್ಣಮಾಡಿದ (ಕುಮಾ)

ಅಂಗುರಿ, ರೀ. ಸ್ತ್ರೀ: [ಅಂಗುಲಿ, ಲೀ] ಹೆಬ್ಬೆರಳು(ಗಾ)

ಅಂಗುಲ. ನ: [ಅಂಗುಲ] ಜವೆಗೋಧಿಯ ಎಂಟು ಮಧ್ಯ ಭಾಗಕ್ಕೆ ಸಮನಾದ ಒಂದು ಅಳತೆ,ಅಳತೆ ವಿಶೇಷ,(ಭಗ) **–ಪೋಹಿತ್ತಿಯ** . ವಿ: [**–ಪೃಥಕ್ತ್ವಿಕ**] ಎರಡರಿಂದ ಒಂಬತ್ತು ಅಂಗುಲದವರೆಗೆ ಅಳತೆ ಉಳ್ಳ(ಜೀವ)

ಅಂಗುಲಿ. ಸ್ತ್ರೀ: [ಅಂಗುಲಿ] ಬೆರಳು(ಕುಮಾ), ಆನೆಯ ಸೊಂಡಿಲಿನ ತುದಿ, **–ಕೋಸ. ಪು:** [**–ಕೋಶ**] ಬೆರಳಿಗೆ ಹಾಕಿಕೊಳ್ಳುವ ಚರ್ಮದ ಮುಚ್ಚಳ., ವೃತ್ತಾಂತ, ಕಥೆ(ರಾಯ), **–ಫೋಡಣ ನ:** [**–ಸ್ಫೋಟನ**]. ಬೆರಳು ಸೀಳುವುದು, ಕತ್ತರಿಸುವುದು (ತಂದು)

ಅಂಗುಲಿಅ}. ನ: [ಅಂಗುಲೀಯಕ] ಉಂಗುರ (ದೇ,

ಅಂಗುಲಿಜ್ಜಕ}. (ಕಪ್ಪ)

ಅಂಗುಲಿಜ್ಜಗ}.

ಅಂಗುಲಿಣೀ. ಸ್ತ್ರೀ: [ದೇ] ಪ್ರಿಯಂಗು, ವೃಕ್ಷ ವಿಶೇಷ, (ದೇ) ಪ್ರೇಂಕಣ ಗಿಡ, ಕರಿ ಸಾಸಿವೆ, ಹಿಪ್ಪಲಿ

ಅಂಗುಲೀ. ಸ್ತ್ರೀ: [ಅಂಗುಲೀ] '**ಅಂಗುಲಿ**' ಶಬ್ದವನ್ನು ನೋಡುವುದು.

ಅಂಗುಲೀಯ}. **ಪುಂ.ನ: [ಅಂಗುಲೀಯಕ]**

ಅಂಗುಲೀಯಗ}. ಉಂಗುರ (ಸುರ, ಪಉಮ)

ಅಂಗುಲೀಯಯ}.

ಅಂಗುಲೆಜ್ಜಕ}.

ಅಂಗುಲೇಯಯ}.

ಅಂಗುವಂಗ}. ನ: [ಅಂಗೋಪಾಂಗ] ಶರೀರದ

ಅಂಗೋವಂಗ}. ಅವಯವಗಳು(ಪಣಾಣ), ಉಗುರೇ ಮೊದಲಾದವು, ಶರೀರದ ಸಣ್ಣ ಸಣ್ಣ ಅವಯವಗಳು, **–ಣಾಮ. ನ:** [**–ನಾಮನ್**] ಶರೀರದ ಅವಯವಗಳ ರಚನೆಗೆ ಕಾರಣೀಭೂತವಾದ ಕರ್ಮವಿಶೇಷ(ಕಮ್ಮ)

ಅಂಗೋಹಲಿ. ಸ್ತ್ರೀ: [ದೇ] ತಲೆಯನ್ನು ಹೊರತುಪಡಿಸಿ ಉಳಿದ ಶರೀರದ ಸ್ನಾನ(ಉಪ)

ಅಂಘೋ. ಅ: [ಅಂಗ] ಭಯವನ್ನು ಸೂಚಿಸುವ ಅವ್ಯಯ(ಪ್ರತಿ)
ಅಂಚ. ಸಕ: [ಕೃಷ್] ಎಳೆ, ನೇಗಿಲು ಹೊಡೆ, ಉಳುವುದು, ಎತ್ತು
ಅಂಚ. ಸಕ: [ಅಂಚ್] ಪೂಜಿಸು. **ಕ್ರಿಯಾ ರೂಪ:** **'ಅಂಚಯೇ'**(ಭವಿ)
ಅಂಚ. ಸಕ: [ಅಂಚ್]ಹೋಗು
ಅಂಚಲ. ಪು: [ಅಂಚಲ] ಸೆರಗು, ಅಂಚು(ಕುಮಾ)
ಅಂಚಿ. ಪು: [ಅಂಚಿ] ಗಮನ, ಗತಿ(ಭಗ), ಸಂಚಾರ, ನಡೆ, ರೀತಿ
ಅಂಚಿ. ಪು: [ಅಂಚಿ]ಆಗಮನ, ಬರುವುದು(ಭಗ)
ಅಂಚಿಯ. ವಿ: [ಅಂಚಿತ] ಯುಕ್ತ=ಕೂಡಿಕೊಂಡ, ಸಹಿತ(ಸುರ) ಪೂಜಿಸಲ್ಪಟ್ಟ(ಸುಪಾ), ಪ್ರಶಂಸಿಸಲ್ಪಟ್ಟ(ಪ್ರಾಸೂ), ಒಂದು ಸಲದ ನೃತ್ಯವಲ್ಲ (ತಾ), ಒಂದುಸಲದ ನಡಿಗೆ(ಭಗ), **-ಯಂಚಿ** ಪು: **[ಅಂಚಿಯಾಂಚಿ]**, ಹೋಗುವುದು ಬರುವುದು, ಮೇಲು-ಕೀಳು ಆಗುವುದು(ತಾ)
ಅಂಚಿಯರಿಭಿಯ. ನ: **[ಅಂಚಿತರಿಭಿತ]** ಒಂದು ಬಗೆಯ ನಾಟ್ಯ.
ಅಂಚಿಯಾ. ಸ್ತ್ರೀ: [ಅಂಚಿಕಾ] ಆಕರ್ಷಣೆ, (ಸ)
ಅಂಛ. ಸಕ: [ಕೃಷ್] ಎಳೆ, **'ಅಂಛತಿವಾಸುದೇವಂ...** (ವಿಸೇ). ಅಕ; ಉದ್ದವಾಗು, **ವ.ಕೃ. 'ಅಂಛಮಾಣ'**(ವಿಸೇ), **ಅಂಛಾವೇಇ(ಣಾಯ)**
ಅಂಛಣ. ನ: **[ಕರ್ಷಣ]** ಎಳೆಯುವಿಕೆ, ಎಳೆತ (ಣಾಹ)
ಅಂಛಿಯ. ವಿ: [ದೇ] ಎಳೆಯಲ್ಪಟ್ಟ, ಆಕರ್ಷಿಸಲ್ಪಟ್ಟ(ದೇ)
ಅಂಜ. ಸಕ: [ಅಂಜ್] ಕಾಡಿಗೆ ಹಚ್ಚಿಕೊಳ್ಳುವುದು, **ಕೃ:** ಆಂಜಿಯವ್ವ (ಸ)
ಅಂಜಣ. ಪು: [ಅಂಜನ] ಒಂದು ಪರ್ವತ ವಿಶೇಷ, ಕೃಷ್ಣ ಪುದ್ಗಲ ವಿಶೇಷ, ಒಬ್ಬ ಲೋಕಪಾಲ ದೇವ (ತಾ), ದಿಗ್ಗಜ ಎಂದು ಹೇಳಲಾಗುವ ಪರ್ವತ ವಿಶೇಷದ ಶಿಖರ(ತಾ), ಒಂದು ವೃಕ್ಷ ವಿಶೇಷ(ಆವ), ನ:ಒಂದು ಜಾತಿಯ ರತ್ನ(ಣಾಯ), ದೇವ ವಿಮಾನ ವಿಶೇಷ (ಸಮ), ಕಣ್ಣಿನ ಕಾಡಿಗೆ(ಪ್ರಾಸೂ), ಕಾಡಿಗೆಗೆ ಕಾರಣವಾದ ಪಾರ್ಥಿವ ದ್ರವ್ಯ(ಜೀ)ಎಣ್ಣೆ ಇತ್ಯಾದಿಯಿಂದ ಶರೀರದ ಮಾಲಿಶ್ ಮಾಡುವುದು(ರಾಜ), ಲೇಪ(ಸ), ರತ್ನಪ್ರಭೆಯಾದ ಭೂಮಿಯ ಖರ-ಕಾಂಡದ ಹತ್ತನೇ ಅಂಶ ವಿಶೇಷ(ತಾ), **-ಕೇಸಿಂಯಾ.** ಸ್ತ್ರೀ: **[-ಕೇಶಿಕಾ]** ವನಸ್ಪತಿ ವಿಶೇಷ(ಪಣ್ಣಾ), **-ಜೋಗ.** ಪು: **[-ಯೋಗ]** ಕಲಾ ವಿಶೇಷ (ಕಪ್ಪ), **-ದೀವ.** ಪು: **[-ದ್ವೀಪ]** ದ್ವೀಪವಿಶೇಷ, (ಇಕ), **-ಪುಲಯ.** ಪು: **[-ಪುಲಕ]** ಒಂದು ಜಾತಿಯ ರತ್ನ(ತಾ), ಪರ್ವತ ವಿಶೇಷದ ಶಿಖರ,**-ಪ್ಪಹಾ.** ಸ್ತ್ರೀ: **[-ಪ್ರಭಾ]** ನಾಲ್ಕನೆಯ ನರಕಭೂಮಿ(ಇಕ) **□ರಿಟ್ಟ.** ಪು: **[-ರಿಷ್ಟ]** ಇಂದ್ರವಿಶೇಷ(ಭಗ), **-ಸಲಾಗಾ.** ಸ್ತ್ರೀ: **[-ಶಲಾಕಾ]** ಜೈನ ಮೂರ್ತಿಯ ಪ್ರತಿಷ್ಠೆ, ಅಂಜನ ಹಾಕುವ ಕಡ್ಡಿ, **-ಸಿದ್ಧ.** ವಿ: **[-ಸಿದ್ಧ]** ಕಣ್ಣಿಗೆ ಅಂಜನ ಹಚ್ಚಿಕೊಂಡು ಅದೃಶ್ಯನಾಗುವ ಶಕ್ತಿಯುಳ್ಳವನು(ನಿಸೀ), ಒಂದು ಪುಷ್ಕರಿಣಿ. **_ತಣಯ.** ಪು: **[-ತನಯ]** ಹನುಮಂತ (ಪಉಮ) **-ಸುಂದರೀ.** ಸ್ತ್ರೀ: **[-ಸುಂದರೀ]** ಒಬ್ಬ ಸಾಧ್ವಿ ಹೆಣ್ಣು, ಹನುಮಂತನ ತಾಯಿ(ಪಉಮ)
ಅಂಜಣ. ಪು: **[ಅಂಜನ]** ಕೃಷ್ಣ ಪುದ್ಗಲ-ವಿಶೇಷ, ದೇವ-ವಿಶೇಷ
ಅಂಜಣಇಸಿಆ. ಸ್ತ್ರೀ(ದೇ): ಕಪ್ಪು ಹೊಂಗೆಮರ
ಅಂಜಣಈ: ಸ್ತ್ರೀ:(ದೇ): ವಸ್ತ್ರ-ವಿಶೇಷ.
ಅಂಜಣಈಸ. ನ:[ದೇ]: 'ಅಂಜಣಇಸಿಆ' ಶಬ್ದವನ್ನು ನೋಡುವುದು.
ಅಂಜಣಾ. ಸ್ತ್ರೀ: [ಅಂಜನಾ] ಹನುಮಂತನ ತಾಯಿ ಹೆಸರಾಂತ ೪ನೇ ನರಕ ಭೂಮಿ, ಒಂದು ಪುಷ್ಕರಿಣಿ, -ತಣಯ. ಪು: [-ತನಯ] ಹನುಮಂತ. -ಸುಂದರೀ. ಹನುಮಂತನ ತಾಯಿ.
ಅಂಜಣಾಭಾ. ಸ್ತ್ರೀ: [ಅಂಜನಾಭಾ] ನಾಲ್ಕನೇ ನರಕ ಭೂಮಿ(ಇಕ)
ಅಂಜಣಿಆ. ಸ್ತ್ರೀ: [ದೇ] **'ಅಂಜಣಇಸಿಆ'** ಶಬ್ದವನ್ನು ನೋಡುವುದು
ಅಂಜಣೀ. ಸ್ತ್ರೀ. [ಅಂಜನೀ] ಕಾಡಿಗೆಗೆ ಆಧಾರವಾದ ಪಾತ್ರೆ(ಸೂಅ)
ಅಂಜಲಿ, ಲೀ. ಪುಂಸ್ತ್ರೀ: [ಅಂಜಲಿ] ಜೋಡಿಸಿದ ಕೈಗಳ ಸಂಪುಟ=ಬೊಗಸೆ(ಹೇ), ಕುಗ್ಗಿಸಿದ ಎರಡೂ ಕೈಗಳನ್ನು ಹಣೆಯ ಮೇಲಿಟ್ಟುಕೊಳ್ಳುವುದು. (ನಿಚೂ), ಕರ ಸಂಪುಟ, ನಮಸ್ಕಾರ ರೂಪದಲ್ಲಿ ವಿನಯ ಸೂಚಿ(ಪ್ರಾಸೂ), **-ಉಡ.** ಪು: [-

ಪುಟ], ಕರ ಸಂಪುಟ(ಮಹಾ) –ಕರಣ. ನ: [–ಕರಣ] ವಿನಯ ವಿಶೇಷ, ಕೈ ಜೋಡಿಸಿ ನಮಸ್ಕರಿಸುವುದು. –ಪಗ್ಗಹ. ಪು. [–ಪ್ರಗ್ರಹ] ನಮನ, ಕೈಜೋಡಿಸುವುದು(ಭಗ), ಸಂಭೋಗ ವಿಶೇಷ(ರಾಜ)

ಅಂಜಸ. ವಿ: [ದೇ] ಋಜು, ನೇರ, ಸರಳ(ದೇ)

ಅಂಜಿಯ. ವಿ: [ಅಂಜಿತ] ಕಾಡಿಗೆ ಹಚ್ಚಿದ, ಕಾಡಿಗೆ ತೊಡೆದುಕೊಂಡ(ಸೆ)

ಅಂಜು. ವಿ: [ಋಜು] ಸರಳ, ನೇರ, ಅಕುಟಿಲ(ಸೂಅ), ಸಂಯಮಿ(ಆಚ), ಸ್ಪಷ್ಟ, ವ್ಯಕ್ತ(ಸೂಅ)

ಅಂಜುಆ. ಸ್ತ್ರೀ: [ಅಂಜುಕಾ] ಅನಂತನಾಥ ತೀರ್ಥಂಕರನ ಮೊದಲ ಶಿಷ್ಯೆ(ಸಮ)

ಅಂಜೂ. ಸ್ತ್ರೀ: [ಅಂಜೂ] ಒಬ್ಬ ಸಾರ್ಥವಾಹನ (=ವರ್ತಕ)ಮಗಳು(ವಿಪಾ), ಒಬ್ಬ ಇಂದ್ರಾಣಿ (ತಾ), 'ಜ್ಞಾತಾಧರ್ಮಕಥಾಸೂತ್ರ'ದ ಒಂದು ಅಧ್ಯಯನ(ಣಾಯಾ)

ಅಂಠಿ. ಪುಂನ: [ಅಸ್ಥಿ] ಮೂಳೆ, ಎಲುಬು(ಚಾರು)

ಅಂಡ}. ನ: [ಅಂಡ, –ಕ] ಮೊಟ್ಟೆ(ಕಪ್ಪ)

ಅಂಡಅ}. ಅಂಡಕೋಶ (ಮಹಾನಿ), 'ಜ್ಞಾತಾಧರ್ಮ

ಅಂಡಗ}. ಕಥಾಸೂತ್ರ'ದ ಮೂರನೇ ಅಧ್ಯಯನ (ಣಾಯಾ), –ಕಡ. ವಿ: [–ಕೃತ] ಮೊಟ್ಟೆಯಿಂದ ಆದದ್ದು, –ಬಂಧ. ಪು: [–ಬಂಧ] ದೇವಸ್ಥಾನದ ಶಿಖರದ ಮೇಲೆ ಇಡುವ ಅಂಡಾಕಾರದ ಗುಂಡು(ಗಉಡ), –ವಾಣಿಯಯ. ಪು: [–ವಾಣಿಜಕ] ಮೊಟ್ಟೆ ವ್ಯಾಪಾರಿ(ವಿಪಾ) ಬ್ರಹ್ಮಾಂಡ, ಬೀಜ

ಅಂಡಗ }. ವಿ: [ಅಂಡಜ] ಮೊಟ್ಟೆಯಿಂದ ಹುಟ್ಟಿದ

ಅಂಡಯ}. ಪ್ರಾಣಿಗಳಾದ, ಪಕ್ಷಿ, ಹಾವು, ಮೀನು ಇತ್ಯಾದಿ(ತಾ), ರೇಷ್ಮೆ ದಾರ, ರೇಷ್ಮೆ ವಸ್ತ್ರ(ಉತ್ತ), ಸೆಣಬಿನ ವಸ್ತ್ರ(ಸುಅ)

ಅಂಡಯ. ಪು: [ದೇ, ಅಂಡಜ] ಮೀನು(ದೇ)

ಅಂಡಾಉಯ. ವಿ: [ಅಂಡಜ] ಮೊಟ್ಟೆಯಿಂದ ಹುಟ್ಟಿದ(ಪಉಮ)

ಅಂತ. ಪು: [ಅಂತ] ಸ್ವರೂಪ, ಸ್ವಭಾವ(ಸೇ), ಪ್ರಾಂತಭಾಗ(ಸೆ), ಗಡಿ, ಎಲ್ಲೆ (ಜೀ) ನಿಕಟ, ಹತ್ತಿರ(ವಿಪಾ), ಭಂಗ, ವಿನಾಶ(ವಿಸೇ), ನಿರ್ಣಯ(ತಾ), ಪ್ರದೇಶ, ಸ್ಥಾನ(ಭಗ), ದ್ವೇಷ(ಆಚಾ), ರೋಗ(ವಿಸೇ),ವಿ: ಇಂದ್ರಿಯಗಳಿಗೆ ವಿರುದ್ಧವಾದ ವಸ್ತು, ಸುಂದರವಲ್ಲದ್ದು, ನೀರಸ ವಸ್ತು(ಣಾಹ), ಮನೋಹರವಾದ(ಸೇ), ನೀಚ, ಕ್ಷುದ್ರ, ತುಚ್ಛ (ಕಪ್ಪ)–ಕರ ವಿ: [–ಕರ] ಅದೇ ಜನ್ಮದಲ್ಲಿ ಮೋಕ್ಷ ಹೊಂದುವವನು(ಸುಅ) –ಕರಣ. ವಿ: [–ಕರಣ] ನಾಶಕ(ಪಣಇ), –ಕಾಲ. ಪು: [–ಕಾಲ] ಕೊನೆಗಾಲ, ಪ್ರಳಯಕಾಲ (ಸೇ), –ಕಿರಿಯಾ. ಸ್ತ್ರೀ: [–ಕ್ರಿಯಾ] ಮುಕ್ತಿ, ಇಹಲೋಕ ತ್ಯಜಿಸುವುದು(ತಾ), –ಕುಲ. ನ: [–ಕುಲ] ಕ್ಷುದ್ರ ಕುಲ(ಕಪ್ಪ), –ಗಡ.ವಿ: [–ಕೃತ] ಅದೇ ಜನ್ಮದಲ್ಲಿ ಮೋಕ್ಷ ಹೊಂದುವವನು(ಉಪ), –ಗಡದಸಾ. ಸ್ತ್ರೀ: [–ಕೃದ್ದಶಾ] ಜೈನ ಅಂಗ ಗ್ರಂಥಗಳಲ್ಲಿ ಎಂಟನೇ ಅಂಗ ಗ್ರಂಥ (ಅಣು), –ಚರ. ವಿ: [–ಚರ] ಭಿಕ್ಷೆಯಲ್ಲಿ ನೀರಸ ಪದಾರ್ಥಗಳನ್ನೇ ಹುಡುಕುವವನು(ಣಾಹ)

ಅಂತ. ವಿ: [ಅಂತ್ಯ] ಅಂತಿಮ, ಕೊನೆಯ(ಣಾಹ), –ಕ್ಖರಿಯಾ. ಸ್ತ್ರೀ: [ಅಂತ್ಯಾಕ್ಷರಿಕಾ] ಬ್ರಾಹ್ಮೀ ಲಿಪಿಯ ಒಂದು ಪ್ರಭೇದ(ಣಾಹ), ಕಲಾವಿಶೇಷ (ಕಪ್ಪ)

ಅಂತ. ನ: [ಅಂತ್ರ] ಕರುಳು(ಸುಪಾ)

ಅಂತ. ಅ: [ಅಂತರ] ಮಧ್ಯದಲ್ಲಿ, (ಹೇ), –ಉರ. ನ: [–ಪುರ] **ಅಂತೇಉರ** ಶಬ್ದವನ್ನು ನೋಡುವುದು (ನಾಟ), –ಕರಣ, –ಕ್ಕರಣ, [–ಕರಣ] ಮನಸ್ಸು, ಹೃದಯ ಉಪ, ಟೀ) (ಅಂತಃಕರಣ. ಕ), –ಗ್ಗಯ. ವಿ: [–ಗತ] ಮಧ್ಯವರ್ತಿ(ಹೇ), –ದ್ಧಾ. ಸ್ತ್ರೀ: –[ಧಾ] ಅದೃಶ್ಯವಾಗುವುದು, ನಾಶ(ಆಚೂ), –ದ್ಧಾಣ. ನ: –[ಧಾನ] ಅದೃಶ್ಯವಾಗುವುದು(ಉಪ) –ದ್ಧಾಣೀ. ಸ್ತ್ರೀ: [–ರ್ಧಾನೀ], ಅದೃಶ್ಯವಾಗುವ ವಿದ್ಯೆ(ಸೂಅ) –ದ್ಧಾಭೂಅ. ವಿ: [–ಧಾಭೂತ] ನಷ್ಟ(ಆಚೂ), –ಪ್ಪಾಅ. ಪು: –[ಪಾತ] ಅಂತರ್ಭಾವ=ಒಳಗೆ ಸೇರಿರುವ(ಹೇ), –ಭಾವ. ಪು: [–ಭಾವ] ಸಮಾವೇಶ(ವಿಸೇ), –ಮುಹುತ್ತ. ನ: [–ಮುಹೂರ್ತ] ನ್ಯೂನ ಮುಹೂರ್ತ(ಜೀ), –ರದ್ಧಾ. ಸ್ತ್ರೀ: [–ಧಾ] ಅಂತರ್ಧಾನವಾಗುವುದು, ನಾಶ(ಶ್ರಾ), –ರದ್ಧಾ. ಸ್ತ್ರೀ: [–ಅದ್ಧಾ] ಮಧ್ಯದ ಕಾಲ(ಆಚಾ), –ರಪ್ಪ. ಪು: [–ಆತ್ಮನ್] ಆತ್ಮ, ಜೀವ(ಹೇ), –ರಹಿಯ, –ರಿಹಿದ(ಶೌ). ವಿ: [–ಹಿತ] ಬಿಟ್ಟಿರುವ, ಅಂತರಾಳದಿಂದ

ಕೂಡಿದ(ಆಚಾ), ಗುಪ್ತ, ಮರೆಯಾಗಿರುವ (ಸಮ, ಉಪ), **ಅಂತಾವೇಇ ಪು:** [-ವೇದಿ] ಗಂಗೆ ಮತ್ತು ಯಮುನೆಗಳ ಮಧ್ಯದ ದೇಶ(ಕುಮಾ), **-ಅಂತ.** ವಿ: [-ಕಾಂತ] ಸುಂದರವಾದ, ಮನೋಹರ(ಸೇ)

ಅಂತಅ. ವಿ: [ಆಯಾತ್] ಬರುತ್ತಿರುವ(ಸೇ)

ಅಂತಅ. ವಿ: [ಅಂತಗ] ಕಾರ್ಯದ ಕೊನೆಯನ್ನು ಮುಟ್ಟಿದವನು, ಪಾರವನ್ನು ತಲುಪಿದವನು, ಪಂಡಿತ(ಸೇ)

ಅಂತಅ. ವಿ: [ಅಂತದ] ಅವಿನಾಶಿ, ಶಾಶ್ವತ, ಎಲ್ಲೆಯಿಲ್ಲದ(ಸೇ)

ಅಂತಅ}. ವಿ: [ಅಂತಕ] ಸುಂದರವಾದ, ಅಂತರ್ಗತ,

ಅಂತಗ}. ಒಳಗೆ ಸೇರಿದ (ಸೂಅ), ಸೀಮೆ, ಗಡಿ ಯಮ, ಮೃತ್ಯು (ಸೂಅ), ಅಂತ್ಯಕಾಣಿಸುವ

ಅಂತಗ. ವಿ: [ಅಂತಗ] ಪಾರಗಾಮಿ, ಕಾರ್ಯದ ಕೊನೆಮುಟ್ಟುವ, ಕಷ್ಟದಿಂದ ಬಿಡಬಹುದಾದ

-ಅಂತಗಯ 'ಅಂತ-ಗ್ಗಯ' ಶಬ್ದವನ್ನು ನೋಡುವುದು

-ಅಂತಣ. ನ: [ಯಂತ್ರಣ] ಬಂಧನ, ನಿಯಂತ್ರಣ (ಪ್ರಯೌ)

ಅಂತದ್ಧಾಣ. ವಿ: [ಅಂತರ್ಧಾನ] ಅದೃಶ್ಯವಾಗುವವನು, ಮರೆಯಾಗುವವನು

ಅಂತಬ್ಭಾವ. 'ಅಂತ-ಭಾವ' ಶಬ್ದವನ್ನು ನೋಡುವುದು

ಅಂತರ. ನ: [ಅಂತರ] ಮಧ್ಯ, ಒಳಗೆ(ಉಪಃಟೀ), ಭೇದ, ವಿಶೇಷ, ವ್ಯತ್ಯಾಸ(ಪ್ರಾಸೂ) ಅವಕಾಶ, ಸಮಯ(ಣಾಐಅ), ವ್ಯವಧಾನ, ಅಂತರಾಳ(ಭಗ) ರಂಧ್ರ(ಪಾಅ), ರಜೋಹರಣ, ಪು: ಪಾತ್ರ, ಆಚಾರ, ಕಲ್ಪ, ದಾರದ ಬಟ್ಟೆ ಧರಿಸುವ ಆಚರಣೆ, ಸೌತ್ರ ಕಲ್ಪ(ಕಪ್ಪ), ಬೇರೆ, ಜಾಗ, ಅವಧಿ, ದೌರ್ಬಲ್ಯ, **-ಕಪ್ಪ.** **ಪು:** [-ಕಲ್ಪ] ಜೈನ ಸಾಧುವಿನ ಒಂದು ಆತ್ಮದ ಪ್ರಶಸ್ತ ಆಚರಣೆ(ಪಂಚೂ), **-ಕಂದ.** **ಪು:** [-ಕಂದ] ಗೆಡ್ಡೆಗೆಣಸಿನ ಒಂದು ಜಾತಿ, ವನಸ್ಪತಿ ವಿಶೇಷ, **-ಕರಣ.** ನ: [-ಕರಣ] ಆತ್ಮದ ಒಂದು ಶುಭ ಅಧ್ಯವಸಾಯ ವಿಶೇಷ(ಪಂಚ), -ಗಿಹ. ನ: -[ಗೃಹ] ಮನೆಯ ಒಳಗಿನ ಭಾಗ, ಎರಡು ಮನೆಗಳ ನಡುವಣ ಜಾಗ(ಪಣಣಾ), (ಬೃಹ), **-ಣಈ: ಸ್ತ್ರೀ:** [-ನದೀ] ಚಿಕ್ಕ ನದಿ(ತಾ)-ದೀವ. **ಪು:** [-ದ್ವೀಪ] ದ್ವೀಪ ವಿಶೇಷ(ಜೀ), ಲವಣ ಸಮುದ್ರ ಮಧ್ಯದ ದ್ವೀಪ(ಪಣಣಾ), **-ಸತ್ತು. ಪು:** [-ಶತ್ರು] ಒಳಗಿನ ಶತ್ರು, ಕಾಮಕ್ರೋಧಾದಿಗಳು(ಸುಪಾ)

ಅಂತರ. **ಸಕ:** [ಅಂತರಯ್] ಅಡ್ಡಿವುಂಟು ಮಾಡುವುದು, ಮಧ್ಯದಲ್ಲಿ ಹಾಕುವುದು, ಅಂತರೇಹಿ(ವಿಕ್ರ)

ಅಂತರ. ವಿ: [ಆಂತರ] ಒಳಗೆ, ಒಳಗಿನ, ಗೂಢವಾಗಿರುವ(ಅಚು), ಮಾನಸಿಕ(ಉವರ)

ಅಂತರಂಗ. ವಿ: [ಅಂತರಂಗ] ಒಳಗಿನ(ವಿಸೇ)

ಅಂತರಂಜೀ. **ಸ್ತ್ರೀ** [ಆಂತರಂಜೀ]ನಗರ ವಿಶೇಷ(ವಿಸೇ)

ಅಂತರಪಲ್ಲೀ. **ಸ್ತ್ರೀ:** [ಅಂತರಪಲ್ಲೀ] ಮೂಲ ಸ್ಥಾನದಿಂದ ಒಂದು ಗಾವುದ ದೂರದಲ್ಲಿರುವ ಹಳ್ಳಿ

ಅಂತರಮುಹುತ್ತ. **'ಅಂತ-ಮುಹುತ್ತ'** ಶಬ್ದವನ್ನು ನೋಡುವುದು

ಅಂತರಾ. **ಅ:** [ಅಂತರಾ] ಮಧ್ಯದಲ್ಲಿ(ಉಪ), ಮುಂಚೆ, ಪೂರ್ವದಲ್ಲಿ(=ಹಿಂದೆ) (ಕಪ್ಪ)

ಅಂತರಾಇಯ. ನ: [ಆಂತರಾಯಿಕ] ದಾನಾದಿಗಳನ್ನು ಮಾಡುವಲ್ಲಿ ವಿಘ್ನವುಂಟುಮಾಡುವ ಕರ್ಮವಿಶೇಷ(ತಾ), ಅಡ್ಡಿ, ತಡೆ (ಪಣಹ)

ಅಂತರಾಈಯ. ನ: [ಅಂತರಾಯೀಯ] ಮೇಲಿನದನ್ನು ನೋಡುವುದು (ಸುಪಾ)

ಅಂತರಾಪಹ. **ಪು:** [ಅಂತರಾಪಥ] ದಾರಿಯ ಮಧ್ಯದ ಭಾಗ

ಅಂತರಾಯ. **ಪು:** [ಅಂತರಾಯ] **'ಅಂತರಾಇಯ'** ಶಬ್ದವನ್ನು ನೋಡುವುದು(ತಾ)

ಅಂತರಾಲ. **ಪು:** [ಅಂತರಾಲ] ಮಧ್ಯದ ಭಾಗ (ಅಭಿ)

ಅಂತರಾವಣ. **ಪುಂನ.** [ಅಂತರಾಪಣ] ಅಂಗಡಿ, ಪೇಟೆ (ಚಾರು)

ಅಂತರಾವಾಸ. **ಪು:** [**ಅಂತರವರ್ಷ, ಅಂತರಾವಾಸ**] ವರ್ಷಾಕಾಲ, ಮಳೆಗಾಲ(ಕಪ್ಪ)

ಅಂತರಿಕ್ಖ. **ಪುಂನ:** [ಅಂತರಿಕ್ಷ] ಅಂತರಾಳ, ಆಕಾಶ (ಭಗ), **-ಜಾಯ.** ವಿ: [**-ಜಾತ**] ಭೂಮಿಯ ಮೇಲಿರುವ ಉಪ್ಪರಿಗೆ ಮನೆ, ಮಂಚವೇ ಮೊದಲಾದ ವಸ್ತುಗಳು(ಆಚಾ), **-ಪಾಸಣಾಹ.** **ಪು:** [**-ಪಾರ್ಶ್ವನಾಥ**] ಖಾನ ದೇಶದಲ್ಲಿ ಅಕೋಲಾ ಹತ್ತಿರದ ಒಂದು ಜೈನ ತೀರ್ಥ ಮತ್ತು ಅಲ್ಲಿಯ ಪಾರ್ಶ್ವನಾಥ ತೀರ್ಥಂಕರರ ಮೂರ್ತಿ(ತೀ)

ಅಂತರಿಕ್ಖ. ವಿ: [ಅಂತರಿಕ್ಷ] ಆಕಾಶಕ್ಕೆ ಸಂಬಂಧಿಸಿದ, ಆಕಾಶದ(ಜೀ), ಗ್ರಹಗಳ ಪರಸ್ಪರ ಯುದ್ಧ ಮತ್ತು ಅವುಗಳ ವ್ಯತ್ಯಾಸದ ಫಲವನ್ನು ಹೇಳುವ ಶಾಸ್ತ್ರ

ಅಂತರಿಜ್ಜ. ನ: [ಅಂತರೀಯ] ಉಡುವ ವಸ್ತ್ರ, ಹಾಸಿಗೆಯ ಕೆಳಭಾಗದ ಬಟ್ಟೆ(ನಿಚೂ)

ಅಂತರಿಜ್ಜ. ನ: [ದೇ] ನೂಲಿನ, ಬೆಳ್ಳಿಯ ಅಥವಾ ಚಿನ್ನದ ಉಡಿದಾರ(ದೇ)

ಅಂತರಿಜ್ಜಿಯಾ. ಸ್ತ್ರೀ: [ಅಂತರೀಯಾ] ಜೈನೀಯ ವೇಶ್ಯಾವಾಟಿಕ ಗಚ್ಛದ ಒಂದು ಶಾಖೆ(ಕಪ್ಪ)

ಅಂತರಿತ}. ವಿ: [ಅಂತರಿತ] ವಸ್ತು ಅಥವಾ ಕಾಲ
ಅಂತರಿಯ}. ಇವುಗಳಿಂದ ವ್ಯವಧಾನ ಹೊಂದಿರುವ (=ವ್ಯವಹಿತ), ಮರೆಯಾಗಿರುವ, ಒಳಗೆ ಸೇರಿರುವ

ಅಂತರಿಯಾ. ಸ್ತ್ರೀ: [ದೇ] ಸಮಾಪ್ತಿ, ಕೊನೆ(ಜಂ)

ಅಂತರಿಯಾ. ಸ್ತ್ರೀ: [ಅಂತರಿಕಾ] ಕಡಿಮೆ ಅಂತರ, ಸ್ವಲ್ಪ ವ್ಯವಧಾನ(ರಾಯ)

ಅಂತರೀಯ. ನ: [ಅಂತರೀಪ] ದ್ವೀಪ

ಅಂತರೇಣ. ಅ: [ಅಂತರೇಣ] ಹೊರತು, ವಿನಾ, ಮಧ್ಯದಲ್ಲಿ(ಉತ್ತ)

ಅಂತಲಿಕ್ಖ. 'ಅಂತರಿಕ್ಖ' ಶಬ್ದವನ್ನು ನೋಡುವುದು (ಣಾಯಾ, ಚಾರು)

–ಅಂತಿ. 'ಪಂತಿ' ಶಬ್ದವನ್ನು ನೋಡುವುದು

ಅಂತಿಮ. ವಿ: [ಅಂತಿಮ] ಕೊನೆಯ, ಶೇಷ, ಅಂತ್ಯ (ತಾ)

ಅಂತಿಯ. ನ: [ಅಂತಿಕ] ಸಮೀಪ, ಹತ್ತಿರದ, (ಉತ್ತ), ಅವಸಾನ, ಕೊನೆ(ಆಚಾ), ಅಂತಿಮ, (ಸೂಅ)

ಅಂತೀಹರಿ. ಸ್ತ್ರೀ: [ದೇ] ದೂತಿ(ದೇ)

ಅಂತೇಆರಿ. ಸ್ತ್ರೀ: [ಅಂತಶ್ಚಾರಿನ್] ಮಧ್ಯದಲ್ಲಿ ಅಥವಾ ನಡುವೆ ಹೋಗುವವನು(ಹೇ)

ಅಂತೇಉರ. ನ: [ಅಂತಃಪುರ] ರಾಜಸ್ತ್ರೀಯರು ವಾಸಿಸುವ ಮನೆ, ಒಳಭಾಗದಲ್ಲಿನ ನಿವಾಸ, ರಾಣಿ(ಮಹಾ)

ಅಂತೇಉರಿಗಾ}. ಸ್ತ್ರೀ: [ಅಂತಃಪುರಿಕೀ, –ರೀ]
ಅಂತೇಉರಿಯಾ}. ಅಂತಃಪುರದಲ್ಲಿ ವಾಸಿಸುವ ಸ್ತ್ರೀ,
ಅಂತೇಉರೀ}. ರಾಣಿ(ಉಪ) ರೋಗಿಯ ಹೆಸರು ಹೇಳಿದ ಮಾತ್ರದಿಂದಲೇ ರೋಗ ರಹಿತನನ್ನಾಗಿ ಮಾಡುವ ಒಂದು ವಿದ್ಯೆ (ವವ)

ಅಂತೆಲ್ಲಿ. ಸ್ತ್ರೀ: [ದೇ] ಮಧ್ಯೆ, ಹೊಟ್ಟೆ, ಅಲೆ(ತರಂಗ)

ಅಂತೇವಾಸಿ. ವಿ: [ಅಂತೇವಾಸಿನ್] ಶಿಷ್ಯ (ಕಪ್ಪ)

ಅಂತೇವುರ. 'ಅಂತೇಉರ' ಶಬ್ದವನ್ನು ನೋಡುವುದು

ಅಂತೋ. ಅ: [ಅಂತರ್] ಮಧ್ಯೆ, ಒಳಗೆ, 'ಗಾಮಂತೋ ಸಂಪತ್ತಾ' (ಉಪ&ಟೀ), **–ಖರಿಯಾ.** ಸ್ತ್ರೀ: [–ಖರಿಕಾ] ನಗರದಲ್ಲಿ ವಾಸಿಸುವ ವೇಶ್ಯೆ (ಭಗ), **–ಗಇಯಾ.** ಸ್ತ್ರೀ: [–ಗತಿಕಾ] ಸ್ವಾಗತಿಸಲು ಮುಂದೆ ಹೋಗುವುದು (ಸುರ), **–ಗಯ.** ವಿ: [–ಗತ] ಮಧ್ಯವರ್ತಿ, ಒಳಗೆ ಸೇರಿರುವ(ಉಪ) **–ಣಿಅಂಸಣೀ.** ಸ್ತ್ರೀ: [–ನಿವಸನೀ] ಜೈನ ಸಾಧ್ವಿಯರು ಧರಿಸುವ ಒಂದು ವಸ್ತ್ರ, (ವೃಹ), **–ದಹಣ.** ನ: [–ದಹನ] ಹೃದಯ –ದಾಹ (ತಂದು), **–ಮಜ್ಝಾವಸಾಣಿಯ.** ಪು: [–ಮಧ್ಯಾವಸಾನಿಕಾ] ಅಭಿನಯದ ಒಂದು ಪ್ರಭೇದ, **–ಮುಹುತ್ತ.** ನ: [–ಮುಹೂರ್ತ] ಕಡಿಮೆ ಮುಹೂರ್ತ, ೪೮ ನಿಮಿಷಕ್ಕಿಂತ ಕಡಿಮೆ ಸಮಯ(ಕಪ್ಪ), **–ವಾಹಿಣೀ.** ಸ್ತ್ರೀ: [–ವಾಹಿನೀ] ಸಣ್ಣ ನದಿ(ತೊರೆ) (ತಾ), **–ವೀಸಂಭ.** ಪು: [–ವಿಶ್ರಂಭ] ಹಾರ್ದಿಕ ವಿಶ್ವಾಸ(ಹೇ). **–ಸಲ್ಲ.** ನ: [–ಶಲ್ಯ] ಒಳಗೆ ಸೇರಿರುವ ಶಸ್ತ್ರ, ಮುಳ್ಳು, ಗಾಯ(ತಾ), ಕಪಟ, ಮಾಯೆ(ಔಪ). **–ಸಾಲಾ.** ಸ್ತ್ರೀ: [–ಶಾಲಾ] ಮನೆ ಒಳ ಭಾಗ,(ಉವಾ), ಮನೆ. **–ಹುತ್ತ.** ವಿ: [–ಮುಖ] ಒಳಗೆ(ಗಾ)

ಅಂತೋಹುತ್ತ. ವಿ: [ದೇ] ಅಧೋಮುಖ, ಮುಖ ಕೆಳಗಾದ(ದೇ)

ಅಂತ್ರಡೀ. (ಅಪ). ಸ್ತ್ರೀ: [ಅಂತ್ರ] ಕರುಳು(ಹೇ)

–ಅಂದ. ಪು: [ಚಂದ್ರ] ಚಂದ್ರ(ಗಾ). **–ರಾಅ.** ಪು: (–ರಾಗ) ಚಂದ್ರಕಾಂತಮಣಿ (ಸೇ)

–ಅಂದರಾ. ಸ್ತ್ರೀ: [ಕಂದರಾ] ಗುಹೆ(ಸೇ), ಹಸಿಶುಂಠಿ, ಮೊಳಕೆ

–ಅಂದಲ. ಪು: [ಕಂದಲ] ವೃಕ್ಷವಿಶೇಷ (ಸೇ), ಬಾಳೆಗಿಡ, ಹೊಸ ಚಿಗುರು

–ಅಂದಾವೇದಿ(ಶೌ). 'ಅಂತಾವೇಇ' ಶಬ್ದವನ್ನು ನೋಡುವುದು (ಹೇ)

ಅಂದು}. ಸ್ತ್ರೀ: [ಅಂದು] ಸರಪಳಿ(ಔಪ) ಕಾಲಂದುಗೆ
ಅಂದುಯಾ}.

ಅಂದೇಉರ(ಶೌ). 'ಅಂತೇಉರ' ಶಬ್ದವನ್ನು ನೋಡುವುದು (ಹೇ)

ಅಂದೋಲ. ಅಕ: [ಅಂದೋಲ್] ತೂಗು (ಜೋಕಾಲಿ), ಕಂಪಿಸು, ಅಲುಗಾಡು, ಡೋಲಾಯಮಾನ (=ಸಂದಿಗ್ಧ)(ಸ). ವ. ಕೃ-**ಅಂದೋಲಂತ,** ಅಂದೋಲಿಂತ, (=ಅಲುಗಾಡುತ್ತಿರುವ), ಅಂದೋಲಮಾಣ ತೂಗಾಡುತ್ತಿರುವ)(=(ಸೇ, ಸುರ)

ಅಂದೋಲ. ಸಕ: [ಅಂದೋಲಯ್] ಅಲುಗಾಡಿಸು, ನಡುಗಿಸು. ವ. ಕೃ: **ಅಂದೋಲಂತ**

ಅಂದೋಲಗ. ಪು: [ಆದೋಲಕ] ಜೋಕಾಲಿ, ಉಯ್ಯಾಲೆ, ತೊಟ್ಟಿಲು, (ರಾಯ) ತೂಗುವವನು

ಅಂದೋಲಣ. ನ: [ಆಂದೋಲನ] ತೂಗುವುದು(ಸುರ), ಉಯ್ಯಾಲೆ, ಮಾರ್ಗವಿಶೇಷ(ಸುಅ)

ಅಂದೋಲಯ 'ಅಂದೋಲಗ' ಶಬ್ದವನ್ನು ನೋಡುವುದು(ಸುರ)

ಅಂದೋಲಿ. ವಿ: [ಆಂದೋಲಿನ್] ತೂಗುವವನು, ಅಲುಗಾಡಿಸುವವನು (ಗಾ)

ಅಂದೋಲಿರ. ವಿ: [ಆಂದೋಲಿತೃ] ತೂಗಾಡಿಸುವವನು (ಸುಪಾ)

ಅಂದೋಲ್ಲಣ 'ಅಂದೋಲಣ' ಶಬ್ದವನ್ನು ನೋಡುವುದು

ಅಂಧ. ವಿ: [ಅಂಧ] ಕುರುಡ(ವಿಪಾ), ಅಜ್ಞಾನ(ಭಗ), **-ಕಂಟಇಜ್ಜ** .ನ: [-ಕಂಟಕೀಯ] ಕುರುಡನು ಮುಳ್ಳಿನ ಮೇಲೆ ನಡೆಯುವ ಹಾಗೆ ವಿಚಾರ ಮಾಡದೆ ನಡೆಯುವುದು(ಆಚಾ). **-ತಮ.** ನ: [-ತಮಸ] =ದಟ್ಟ ಕತ್ತಲೆ(ಸೂಅ). **-ಪುರ.** ನ: [-ಪುರ] ನಗರ ವಿಶೇಷ(ಬೃಹ)

ಅಂಧ. ಪು. ಬ: [ಅಂಧ್ರ] ಈ ಹೆಸರಿನ ಒಂದು ದೇಶ(ಆಂಧ್ರ) (ಪಲುಮ)

ಅಂಧ. ವಿ: [ಆಂಧ್ರ] ಆಂಧ್ರದಲ್ಲಿ ವಾಸಿಸುವವನು

ಅಂಧಂಧು. ಪು: [ದೇ] ಬಾವಿ (ದೇ)

ಅಂಧಕಾರ.'ಅಂಧಯಾರ' ಶಬ್ದವನ್ನು ನೋಡುವುದು

ಅಂಧಗ. ಪು: [ದೇ] ಮರ, ವೃಕ್ಷ(ಭಗ). **-ವಣ್ಹಿ.** ಪು: [-ವಹ್ನಿ] ಸ್ಥೂಲ ಅಗ್ನಿ=ಬೆಂಕಿ(ಭಗ)

ಅಂಧಗ 'ಅಂಧ' ಶಬ್ದವನ್ನು ನೋಡುವುದು(ಭಗ), **-ವಣ್ಹಿ** ಪು: [-ವಹ್ನಿ]ಸೂಕ್ಷ್ಮ ಅಗ್ನಿ (ಭಗ). **-ವಣ್ಹಿ.** ಪು:[-ವೃಷ್ಣಿ] ಸಮುದ್ರ ವಿಜಯಾದಿಯ ತಂದೆ; ಯದುವಂಶದ ರಾಜ(ಂತ)

ಅಂಧಯ}. ಪು: [ಅಂಧಕ] ಕುರುಡ, (ಪಣಹ),

ಅಂಧಯಗ}. ವಾನರ ವಂಶದ ಒಬ್ಬ ರಾಜಕುಮಾರ (ಪಲುಮ)

ಅಂಧಯಾರ. ಪುನ: [ಅಂಧಕಾರ] ಕತ್ತಲೆ. **-ಪಕ್ಖ.** ಪು: [-ಪಕ್ಷ] =ಕೃಷ್ಣಪಕ್ಷ (ಸುಜ್ಜ)

ಅಂಧಯಾರಣ. ನ: [ಅಂಧಕಾರ] ಕತ್ತಲೆ (ಭವಿ)

ಅಂಧಯಾರಿಯ. ವಿ: [ಅಂಧಕಾರಿತ] ಕತ್ತಲೆಯಿಂದ ಕೂಡಿರುವ (ಸೇ)

ಅಂಧರಅ.}. ವಿ: [ಅಂಧ] ಕುರುಡ(ಗಾ)

ಅಂಧಲ}.

ಅಂಧಲರಿಲ್ಲೀ. ಸ್ತ್ರೀ: [ಅಂಧಯಿತ್ರೀ]ಕುರುಡನನ್ನಾಗಿ ಮಾಡುವ ಒಂದು ವಿದ್ಯೆ(ಸುಪಾ)

ಅಂಧಾರ. ಪು: [ಅಂಧಕಾರ] ಕತ್ತಲೆ(ಓಘ)

ಅಂಧಾರ. ಸಕ: [ಅಂಧಕಾರಯ್] ಕತ್ತಲೆಮಾಡು

ಅಂಧಾವ. ಸಕ: [ಅಂಧಯ್] ಕುರುಡು ಮಾಡು, ಅಂಧಾವೇಇ(ವಿಕ)

ಅಂಧಿಅ. ವಿ: [ಅಂಧಿತ] ಕುರುಡು ಮಾಡಲ್ಪಟ್ಟ

ಅಂಧಿಆ. ಸ್ತ್ರೀ: [ಅಂಧಿಕಾ] ದ್ಯೂತ ವಿಶೇಷ(ದೇ)

ಅಂಧಿಆ. ಸ್ತ್ರೀ: [ಅಂಧಿಕಾ] ನಾಲ್ಕು ಇಂದ್ರಿಯಗಳನ್ನು ಹೊಂದಿರುವ ಪ್ರಾಣಿಯ ಒಂದು ಜಾತಿ

ಅಂಧಿಲ್ಲಗ. ವಿ: [ಅಂಧ] ಕುರುಡ, ಹುಟ್ಟು ಕುರುಡ

ಅಂಧೀಕಿದ(ಶೌ). ವಿ: [ಅಂಧೀಕೃತ] ಕುರುಡು ಮಾಡಲ್ಪಟ್ಟವನು(ಸ್ವಪ್ನ)

ಅಂಧು. ಪು: [ಅಂಧು] ಬಾವಿ(ಪ್ರಾಮಾ)

ಅಂಧೆಲ್ಲಗ.'ಅಂಧಿಲ್ಲಗ'. ಶಬ್ದವನ್ನು ನೋಡುವುದು (ಪಿಂಡ)

-ಅಂಪ. ಪು: [ಕಂಪ] ಕಂಪನ

ಅಂಬ. ಪು: [ಅಂಬ] ನರಕದ ಪ್ರಾಣಿಗಳಿಗೆ ದುಃಖವನ್ನುಂಟುಮಾಡುವ ಒಂದು ಜಾತಿಯ ಪರಮ ಅಧಾರ್ಮಿಕ ದೇವ(ಸಮ).

ಅಂಬ. ಪು: [ಆಮ್ರ] ಮಾವಿನ ಮರ, ನ: ಮಾವಿನ ಹಣ್ಣು(ಹೇ) **-ಗಟ್ಠಿಯಾ.** ಸ್ತ್ರೀ: [-ದೇ] ಮಾವಿನ ಬೀಜ, ಗೊರಟೆ, (ನಿಚ). **-ಚೋಯಗ.** ನ: [ದೇ] ಮಾವಿನ ನಾರು(ನಿಚೂ), ಮಾವಿನ ಸಿಪ್ಪೆ(ಆಚಾ). **-ಡಗಲ.** ನ: [ದೇ]. ಮಾವಿನ ಹೋಳು(ನಿಚೂ). **-ಡಾಲಗ.** ನ: [ದೇ] =ಮಾವಿನ ಸಣ್ಣ ಹೋಳು (ಆಚಾ). **-ಪೇಸಿಯಾ.** ಸ್ತ್ರೀ: [-ಪೇಶಿಕಾ] ಮಾವಿನ

ಕೆನ್ನೆ(ನಿಚೂ), **–ಭಿತ್ತ.** ನ: [ದೇ]=ಮಾವಿನ ಹೋಳು. **–ಸಾಲಗ.** ನ: [ದೇ]=ಮಾವಿನ ಸಿಪ್ಪೆ(ನಿಚೂ). **–ಸಾಲವಣ.** ನ: [**–ಶಾಲವನ**] ಮಾವಿನ ತೋಪು

ಅಂಬ. ನ: [ಅಮ್ಲ] ತಕ್ರ, ಮಜ್ಜಿಗೆ (ಜಂ), ಹುಳಿರಸ, ಹುಳಿಯಾದ ವಸ್ತು(ವಿಸೆ), ವಿ: ನಿಷ್ಠುರವಾದ ಮಾತಾಡುವವನು (ಬೃಹ)

ಅಂಬ. ವಿ : [ಆಮ್ಲ] ಹುಳಿಯಾದ ವಸ್ತು, ಮಜ್ಜಿಗೆಯಿಂದ ಸಂಸ್ಕರಿಸಿದ ವಸ್ತು (ಜಂ)

ಅಂಬ. ವಿ: [ತಾಮ್ರ] ಕೆಂಪು, ಕೆಂಪು ಬಣ್ಣದ, ಕೆಂಪಗಿರುವ(ಸೇ)

ಅಂಬಗ. ಅಂಬ=ಆಮ್ರ(ಅಣು) ಶಬ್ದವನ್ನು ನೋಡುವುದು. **–ಟ್ಠಿಯಾ.** ಸ್ತ್ರೀ: [–ಸ್ಥಿ]= ಮಾವಿನ ಹೋಳು(ಅಣು)

ಅಂಬಟ್ಠ. ಪು: [ಅಂಬಷ್ಠ] ದೇಶ ವಿಶೇಷ (ಪ ಉಮ), ಬ್ರಾಹ್ಮಣ ತಂದೆ ಮತ್ತು ವೈಶ್ಯ ತಾಯಿಗೆ ಹುಟ್ಟಿದವನು(ಸೂಅ)

ಅಂಬಡ. ಪು: [ಅಂಬಡ] ಮಹಾ ವಿದೇಹ ಕ್ಷೇತ್ರದಲ್ಲಿ ಹುಟ್ಟಿ ಮೋಕ್ಷಕ್ಕೆ ಹೋಗುವ ಒಬ್ಬ ಪರಿವ್ರಾಜಕ. ಭಗವಾನ್ ಮಹಾವೀರನ ಒಬ್ಬ ಶ್ರಾವಕ; ಮುಂದಿನ ಇಪ್ಪತ್ತನಾಲ್ಕು ಜನರಲ್ಲಿ ೨೨ನೆಯ ತೀರ್ಥಂಕರನಾಗಲಿರುವವನು(ಠಾ)

ಅಂಬಡ. ವಿ: [ದೇ] ಕಠಿಣ (ದೇ)

ಅಂಬಧಾಈ. ಸ್ತ್ರೀ: [ಅಂಬಾಧಾತ್ರೀ] ಭೂಮಿತಾಯಿ

ಅಂಬಮಸೀ. ಸ್ತ್ರೀ: [ದೇ] ಕಠಿಣವಾದ, ಕಣಕ, ರೆವೆ(ದೇ)

ಅಂಬಯ '**ಅಂಬ**' ಶಬ್ದವನ್ನು ನೋಡುವುದು (ಸುಪಾ)

ಅಂಬರ. ನ: [ಅಂಬರ] ಆಕಾಶ (ಪಾಅ, ಭಗ), ವಸ್ತ್ರ (ಪಾಅ). **–ತಿಲಯ.** ಪು: (–ತಿಲಕ)ಪರ್ವತ ವಿಶೇಷ (ಆವ). **–ವತ್ಥ.** ನ: [–ವಸ್ತ್ರ] ಶುಭ್ರವಾದ ಬಟ್ಟೆ(ಕಪ್ಪ) **ಪುಂನ:** ಒಂದು ದೇವ–ವಿಮಾನ

ಅಂಬರಸ. ಪಂನ: [ಅಂಬರಸ] ಆಕಾಶ, ಗಗನ.

ಅಂಬರಿಸ. ಪುಂನ: [ಅಂಬರೀಷ] ಭಟ್ಟಿ=ಆವಿಗೆ, ಬಾಣಲಿ, ತಗ್ಗು(ಭಗ), ಕೋಷ್ಟಕ(ಜೀವ), **ಪು.** ನಾರಕ ಜೀವಗಳಿಗೆ ದುಃಖ ಉಂಟುಮಾಡುವ ಒಂದು ರೀತಿಯ ಪರಮ ಅಧಾರ್ಮಿಕ ದೇವ(ಪವ), ವಿಷ್ಣು, ಶಿವ, ಸೂರ್ಯ ವಂಶದ ಒಬ್ಬ ದೊರೆ, ಒಂದು ನರಕ

ಅಂಬರಿಸಿ. ಪು: [ಅಂಬಋಷಿ] ಮೇಲಿನ ಶಬ್ದದ ಮೂರನೇ ಅರ್ಥ ನೋಡುವುದು(ಸಮ), ಉಜ್ಜಯಿನಿ ನಗರದ ನಿವಾಸಿಯಾದ ಒಬ್ಬ ಬ್ರಾಹ್ಮಣ(ಆವ)

ಅಂಬರೀಸ. '**ಅಂಬರಿಸ**' ಶಬ್ದವನ್ನು ನೋಡುವುದು

ಅಂಬರೀಸಿ'**ಅಂಬರಿಸಿ**' ಶಬ್ದವನ್ನು ನೋಡುವುದು

ಅಂಬಸಮಿಆ}. '**ಅಂಬಮಸೀ**' ಶಬ್ದವನ್ನು ನೋಡುವುದು

ಅಂಬಸಮೀ}.

ಅಂಬಹುಂಡೀ. ಸ್ತ್ರೀ: [ಅಂಬಹುಂಡೀ] ಒಬ್ಬ ದೇವಿ (ಮಹಾನಿ)

ಅಂಬಾ. ಸ್ತ್ರೀ: [ಅಂಬಾ] ತಾಯಿ(ಸ್ವಪ್ನ), ಭಗವಾನ್ ನೇಮಿನಾಥನ ಶಾಸನ ದೇವಿ(ಸಂತಿ) ಒಂದು ವಿಶೇಷ ಬಳ್ಳಿ(=ಅಗುರು ಶುಂಠಿ)(ಪಣನ), ಕಾಶೀರಾಜನ ಮಗಳು ಅಂಬೆ(ಅಂಬಿಕೆಯ ಸೋದರಿ)

ಅಂಬಾಡ. ಸಕ: [ಖರಂಟ್] ಲೇಪನ ಮಾಡು (ನಿಚೂ)

ಅಂಬಾಡ. ಸಕ: [ತಿರಸ್+ಕೃ] ವ್ಯಂಗ್ಯದ ಮಾತಾಡು, ತಿರಸ್ಕರಿಸು(ಮಹಾ)

ಅಂಬಾಡಗ}. ಪು: [ಆಮ್ರಾತಕ] ನೆಲ್ಲಿಕಾಯಿ ಮರ

ಅಂಬಾಡಯ}. (ಪಣಣಾ)(ಪಉಮ), ನೆಲ್ಲಿಕಾಯಿ (ಅನು)

ಅಂಬಾಡಿಯ. ವಿ: [ತಿರಸ್ಕೃತ] ತಿರಸ್ಕರಿಸಲ್ಪಟ್ಟ (ಮಹಾ), ವ್ಯಂಗ್ಯಕ್ಕೆ ತುತ್ತಾದವನು(ಸ)

ಅಂಬಿಆ. ಸ್ತ್ರೀ: [ಅಂಬಿಕಾ] ಭಗವಾನ್ ನೇಮಿನಾಥನ ಶಾಸನ ದೇವಿ(ತೀ), ಐದನೇ ವಾಸುದೇವನ ತಾಯಿ (ಪಉಮ), ತಾಯಿ, ಪಾರ್ವತಿ, ದುರ್ಗೆ, ಧೃತರಾಷ್ಟ್ರನ ತಾಯಿ. **–ಸಮಯ.** ಪು: [**–ಸಮಯ**] ಗಿರಿನಾರ್ ಪರ್ವತದಲ್ಲಿರುವ ಒಂದು ತೀರ್ಥಕ್ಷೇತ್ರ

ಅಂಬಿರ. ನ: [ಆಮ್ರ] ಮಾವಿನ ಹಣ್ಣು(ದೇ), ಮಾವಿನಮರ

ಅಂಬಿಲ. ಪು: [ಆಮ್ಲ] ಹುಳಿ ರಸ(ಸಮ), ವಿ. ಹುಳಿಯಾಗಿರುವ ವಸ್ತು(ಓಘ), ನಾಮ ಕರ್ಮವಿಶೇಷ(ಕಮ್ಮ)

ಅಂಬಿಲಿಯಾ. ಸ್ತ್ರೀ: [ಆಮ್ಲಿಕಾ] ಹುಣಿಸೆ ಮರ(ಉಪ), ಹುಣಿಸೆ ಹಣ್ಣು(ಶ್ರಾ)

ಅಂಬು. ನ: [ಅಂಬು] ನೀರು(ಪಾಅ). **–ಅ, –ಜ.** ನ: [–ಜ] =ಕಮಲ(ಅಚು, ಕುಮಾ). **–ಣಾಹ.** ಪು:

[-ನಾಥ] =ಸಮುದ್ರ(ವವ). -ರುಹ. ನ: [-ರುಹ]=ಕಮಲ(ಪಾಅ). -ವಹ. ಪು: [-ವಹ] ಮೇಘ, ಮೋಡ=ನೀರನ್ನು ಹೊರುವವನು (ಗಡಡ). -ವಾಹ. ಪು: [-ವಾಹ] ಮೇಘ, ಉತ್ತರಾಧಿಕಾರಿ(ಗಲುಡ). ಕೊನ್ನಾರಿ ಗೆಡ್ಡೆ

ಅಂಬುಪಿಸಾಅ. ಪು: [ದೇ] ರಾಹು(ಗಾ)

ಅಂಬುಸು. ಪು: [ದೇ]ಕಾಡು ಪ್ರಾಣಿ ವಿಶೇಷ=ಕ್ರೂರ ಮೃಗ, ಶರಭ(ದೇ)

ಅಂಬೆಟ್ಟಿಆ}. ಸ್ತ್ರೀ: [ದೇ] ಒಂದು ಬಗೆಯ ದ್ಯೂತ,

ಅಂಬೆಟ್ಟೀ}. ಮುಷ್ಟಿ ದ್ಯೂತ(ದೇ)

ಅಂಬೇಸಿ. ಪು: [ದೇ] ಬಾಗಿಲಿನ ಹಲಗೆ, ಬಾಗಿಲಿನ ಒಂದು ಭಾಗ(ದೇ)

ಅಂಬೊಚ್ಚೀ. ಸ್ತ್ರೀ: [ದೇ] ಹೂವು ಪೋಣಿಸುವವಳು(ದೇ)

ಅಂಭ. ಪು: [ಅಂಭಸ್] ನೀರು(ಶ್ರಾ)

ಅಂಭು(ಅಪ). ಪು: [ಅಶ್ಮನ್] ಕಲ್ಲು, ಶಿಲೆ(ಷಡ್)

ಅಂಭೋ. ಪು: [ಅಂಭಸ್] ನೀರು. -ಅ . ನ: [-ಜ] =ಕಮಲ(ದೇ). -ಇಣೀ. ಸ್ತ್ರೀ [-ಜಿನೀ] ಕಮಲಿನಿ(ವ್ಯೈ). -ನಿಹಿ. ಪು: [-ನಿಧಿ] = ಸಮುದ್ರ(ಶ್ರಾ) -ರುಹ. ನ: [-ರುಹ] ಕಮಲ, (ಉಪ, ಟೀ)

ಅಂಭೋಹಿ. ಪು: [ಅಂಬೋಧಿ] ಸಮುದ್ರ

ಅಂಸ. ಪು: [ಅಂಶ] ಭಾಗ, ಅವಯವ, ಚೂರು (ಪಾಅ), ಭೇದ, ವಿರುದ್ಧ ಕಲ್ಪನೆ(ವಿಸೇ), ಪರ್ಯಾಯ, ಧರ್ಮ, ಗುಣ (ವಿಸೇ)

ಅಂಸ. ಪು: [ಅಂಶ] ಈಗ ಇರುವ ಕರ್ಮ, ಸತ್ತೆಯಲ್ಲಿ ಸ್ಥಿತವಾಗಿರುವ ಕರ್ಮ. -ಹರ ವಿ: [-ಧರ] ಭಾಗೀದಾರ, ಪಾಲ್ಗೊಳ್ಳುವವನು, ಭಾಗಿ

ಅಂಸ}. ಪು: [ಅಂಸ] ಹೆಗಲು(ಣಾಯ)

ಅಂಸಲಗ}.

ಅಂಸ ಅಸ=ಅಸ್ ಶಬ್ದವನ್ನು ನೋಡುವುದು

ಅಂಸಿ. ಸ್ತ್ರೀ: [ಅಶ್ರಿ] ಕೋನ ಅಥವಾ ಮೂಲೆ(ಉಪ), ಕತ್ತಿಯ ಅಲಗು=ಧಾರೆ(ಠಾ)

ಅಂಸಿಯಾ. ಸ್ತ್ರೀ: [ಅಂಶಿಕಾ] ಭಾಗ(ವೃಹ)

ಅಂಸಿಯಾ. ಸ್ತ್ರೀ: [ಅರ್ಶಿಕಾ] ಮೂಲವ್ಯಾಧಿ(ಭಗ) ಮೂಗಿನ ಕಾಯಿಲೆ(ನಿಚೂ), ಕುರು

ಅಂಸು. ಪು: [ಅಂಶು] ಕಿರಣ; -ಮಾಲಿ. ಪು:[-ಮಾಲಿನ್] ಸೂರ್ಯ

ಅಂಸು. 'ಅಂಸುಯ=ಅಂಶುಕ' ಶಬ್ದವನ್ನು ನೋಡುವುದು

ಅಂಸು. ಪು: [ಅಂಶು] ಕಿರಣ -ಮಂತ-ವಂತ. ವಿ: [-ಮತ್] ಕಿರಣವುಳ್ಳ, ಪು: ಸೂರ್ಯ

ಅಂಸು}. ನ: [ಅಶ್ರು] ಕಣ್ಣೀರು. -ಮಂತ, -ವಂತ. ವಿ: [-ಮತ್] ಕಣ್ಣೀರುಳ್ಳ

ಅಂಸುಯ}. ನ: [ಅಂಶುಕ] ವಸ್ತ್ರ(ಸೇ), ತೆಳುವಾದ

ಅಂಸು}. ಬಟ್ಟೆ(ಬೃಹ), ಪೋಷಾಕು, ವೇಶ(ಕಪ್ಪ)

ಅಂಸೊತ್ಥ 'ಅಸ್ಸೋತ್ಥ' ಶಬ್ದವನ್ನು ನೋಡುವುದು

ಅಂಹ. ಪುಂನ: [ಅಂಹಸ್] ಮಲ

ಅಂಹಿ. ಪು: [ಅಂಘ್ರಿ] ಪಾದ (ಕಪ್ಪ)

ಅಕಇ. ವಿ: [ಅಕತಿ] ಅಸಂಖ್ಯಾತ, ಅನಂತ (ಠಾ)

ಅಕಂಡ 'ಅಯಂಡ' ಶಬ್ದವನ್ನು ನೋಡುವುದು(ಗಾ)

ಅಕಂಡತಲಿಮ. ವಿ: [ದೇ] ಸ್ನೇಹವಿಲ್ಲದವನು, ಮದುವೆಯಾಗದವನು(ದೇ)

ಅಕಂಪಣ. ವಿ: [ಅಕಂಪನ] ಕಂಪನವಿಲ್ಲದ, ಪು. ರಾವಣನ ಒಬ್ಬ ಮಗ(ಸೇ), ಒಬ್ಬ ಮುನಿ

ಅಕಂಪಿಯ. ವಿ: [ಅಕಂಪಿತ] ಕಂಪನವಿಲ್ಲದ. ಪು. ಭಗವಾನ್ ಮಹಾವೀರನ ಎಂಟನೇ ಗಣಧರ (ಸಮ)

ಅಕಜ್ಜ 'ಅಕಯ'='ಅಕೃತ್ಯ' ಶಬ್ದವನ್ನು ನೋಡುವುದು (ಉವ)

ಅಕಣ್ಣ}. ವಿ: [ಅಕರ್ಣ] ಕಿವಿಯಿಲ್ಲದ, ಪು. ತನ್ನ

ಅಕನ್ನ}. ಹೆಸರಿನಿಂದ ಖ್ಯಾತವಾದ ಒಂದು ಅಂತರ್ದ್ವೀಪ ಮತ್ತು ಅದರಲ್ಲಿ ವಾಸಿಸುವವನು

ಅಕಪ್ಪ. ಪು: [ಅಕಲ್ಪ] ಅಯೋಗ್ಯವಾದ ಆಚರಣೆ, ಶಾಸ್ತ್ರ ವಿರುದ್ಧ ಆಚರಣೆ(ಕಪ್ಪ)

ಅಕಪ್ಪ. ವಿ: [ಅಕಲ್ಪ್ಯ] ಆಚರಿಸಬಾರದ್ದು, ಶಾಸ್ತ್ರ ನಿಷಿದ್ಧವಾದ ಆಹಾರ, ವಸ್ತ್ರ ಇತ್ಯಾದಿ ಅಗ್ರಾಹ್ಯ ವಸ್ತು(ವವ)

ಅಕಪ್ಪಿಯ. ಪು: [ಅಕಲ್ಪಿಕ] ಶಾಸ್ತ್ರದ ಪೂರ್ಣ ಜ್ಞಾನವಿಲ್ಲದ ಜೈನ ಸಾಧು(ವವ)

ಅಕಪ್ಪಿಯ. 'ಅಕಪ್ಪ=ಅಕಲ್ಪ್ಯ' ಶಬ್ದವನ್ನು ನೋಡುವುದು (ದಸ)

ಅಕಮ. ವಿ: [ಅಕ್ರಮ] ಕ್ರಮವಿಲ್ಲದಿರುವುದು, ಕ್ರಿ ವಿ: ಒಟ್ಟಿಗೆ (ಕುಮಾ), ಚಲನವಿಲ್ಲದ

ಅಕಮ್ಮ}. ನ: [ಅಕರ್ಮನ್, -ಕ] ಕೆಲಸವಿಲ್ಲದಿರುವುದು,

ಅಕಮ್ಮಗ}. (ಬೃಹ). ಪು: ಮುಕ್ತ, ಸಿದ್ಧಜೀವ(ಆಚಾ)

ವಿ: ಕೃಷಿಯೇ ಮೊದಲಾದವು, ಕರ್ಮರಹಿತ (ದೇಶ, ಭೂಮಿ ಇತ್ಯಾದಿ) (ಜೀ). **–ಭೂಮಗ, –ಭೂಮಯ.** ವಿ: [**–ಭೂಮಕ**] ಕರ್ಮ ರಹಿತ ಭೂಮಿಯಲ್ಲಿ ಹುಟ್ಟುವ(ಜೀವ). **–ಭೂಮಿ, –ಭೂಮೀ.** ಸ್ತ್ರೀ: [**–ಭೂಮಿ, ಭೂಮೀ**] ಯಾವ ಭೂಮಿಯಲ್ಲಿ ಕಲ್ಪ ವೃಕ್ಷಗಳಿಂದಲೇ ಆವಶ್ಯಕ ವಸ್ತುಗಳು ದೊರೆಯುವ ಕಾರಣ ಕೃಷಿ ಇತ್ಯಾದಿ ಕೆಲಸಗಳನ್ನು ಮಾಡುವ ಅಗತ್ಯವಿಲ್ಲವೋ ಅಂಥ ಭೂಮಿ=ಭೋಗಭೂಮಿ. **–ಭೂಮಿಯ.** ವಿ: [**–ಭೂಮಿಜ**] ಅಕರ್ಮ ಭೂಮಿಯಲ್ಲಿ ಉತ್ಪತ್ತಿಯಾದ(ತಾ)

ಅಕಮ್ಹಾ. ಅ: [**ಅಕಸ್ಮಾತ್**] ಇದ್ದಕ್ಕಿದ್ದಂತೆ, ಒಮ್ಮೆಲೆ, ಕಾರಣವಿಲ್ಲದೆ(ಸುಪಾ)

–ಅಕಯ. ವಿ: [**ಅಕೃತ**] ಮಾಡದಿರುವ(ಕುಮಾ). **–ಮುಹ.** ವಿ: [**–ಮುಖ**] ಓದದ, ಶಿಕ್ಷಿತನಲ್ಲದ. **–ತ್ಥ.** ವಿ: [**–ಅಕೃತಾರ್ಥ**] ಅಸಫಲ (ಬೃಹ).

ಅಕಯ. ವಿ: [**ಅಕೃತ್ಯ**]ಮಾಡಲು ಯೋಗ್ಯವಲ್ಲದ ಅಥವಾ ಅಶಕ್ಯವಾದ ಕೆಲಸ. ನ: ಅನಂತವಾದ ಕೆಲಸ. **–ಕಾರಿ.** ವಿ: [**–ಕಾರಿನ್**] ಅಕೃತ್ಯವನ್ನು ಮಾಡುವವನು (ಪ ಉಮ)

ಅಕಯ್ಯ (ಮಾ). ಮೇಲಿನ ಶಬ್ದವನ್ನು ನೋಡುವುದು (ನಾಟ)

ಅಕರಣ. ನ: [**ಅಕರಣ**] ಮಾಡದಿರುವುದು(ಕಸ), ಮೈಥುನ(ವವ)

ಅಕಾಇಯ. ವಿ: [**ಅಕಾಯಿಕ**] ಶಾರೀರಿಕ ಚಲನೆ ಇಲ್ಲದ, **ಪು.** ಮುಕ್ತಾತ್ಮ (ಭಗ)

ಅಕಾಮ. ಪು. [**ಅಕಾಮ**] ಇಚ್ಛೆಯಿಲ್ಲದಿರುವಿಕೆ, (ಸೂಅ), ವಿ: ಆಸೆಯಿಲ್ಲದಿರುವಿಕೆ(=ನಿಷ್ಕಾಮ) (ಸುಪಾ), **–ಣಿಜ್ಜರಾ.** ಸ್ತ್ರೀ: [–ನಿರ್ಜರಾ]=ಕರ್ಮನಾಶ ಮಾಡಿಕೊಳ್ಳುವ ಇಚ್ಛೆಯಿಲ್ಲದಿರುವುದರಿಂದ ಹಸಿವು ಇತ್ಯಾದಿ ಕಷ್ಟಗಳನ್ನು ಸಹಿಸುವುದು(ತಾ)

ಅಕಾಮಗ}. [ಅಕಾಮಕ] ಮೇಲಿನ ಶಬ್ದವನ್ನು
ಅಕಾಮಯ}. ನೋಡುವುದು, ಬಯಸಬಾರದ್ದು, ಇಚ್ಛಿಸಲುಅರ್ಹವಲ್ಲದ್ದು(ಪಣಹ), ಣಾಯಾ)

ಅಕಾಮಿಯ. ವಿ: [**ಅಕಾಮಿಕ**] ನಿರಾಶೆ(ವಿಪಾ)

ಅಕಾಯ. ವಿ: [**ಅಕಾಯ**] ಶರೀರವಿಲ್ಲದ. **ಪು:** ಮುಕ್ತಾತ್ಮ (ತಾ), ಪರಮಾತ್ಮ, ರಾಹು

ಅಕಾರ. ಪು: [**ಅಕಾರ**] **'ಅ'** ಅಕ್ಷರ, ವರ್ಣಮಾಲೆಯ ಮೊದಲ ಅಕ್ಷರ, ಕೆಲಸವಿಲ್ಲದ

ಅಕಾರಗ. ಪು: [**ಅಕಾರಕ**] ಅರುಚಿ, ಊಟದಲ್ಲಿ ಆಸಕ್ತಿ ಇಲ್ಲದಿರುವ ರೋಗ (ಣಾಯಾ)ವಿ: ಕೆಲಸ ಮಾಡದಿರುವ(ಸೂಅ), (ಸೂಅ). **–ವಾಇ.** ವಿ: [**–ವಾದಿನ್**] ಆತ್ಮವನ್ನು ನಿಷ್ಕ್ರಿಯುವೆಂದು ಒಪ್ಪುವವರು

ಅಕಾಸಿ. ಅ: [**ದೇ**] ನಿಷೇಧ ಸೂಚಕ ಅವ್ಯಯ, ಬೇಡ (ನಿಷೇಧದ ಅರ್ಥದಲ್ಲಿ), "ಅಕಾಸಿ ಲಜ್ಜಾಎ"(ದೇ)

ಅಕಿಂಚಣ. ವಿ: [**ಅಕಿಂಚನ**] ಸಾಧು, ಮುನಿ, ಭಿಕ್ಷು (ಪಣಹ), ಬಡವ, ದರಿದ್ರ(ಪಾಅ)

ಅಕಿಟ್ಠ. ವಿ: (**ಅಕೃಷ್ಟ**) ಉಳುಮೆ ಮಾಡದಿರುವ ಭೂಮಿ (ಪಉಮ)

ಅಕಿಟ್ಠ. ವಿ: [**ಅಕ್ಲಿಷ್ಟ**] ಕ್ಲೇಶವಿಲ್ಲದ, ಕ್ಲೇಶ ಪಡದಿರುವಿಕೆ, ತೊಂದರೆಯಿಲ್ಲದಿರುವಿಕೆ(ಪಉವು). ಬಾಡದಿರುವ, ಸುಲಭವಾದ

ಅಕಿರಿಯ. ವಿ: [**ಅಕ್ರಿಯ**] ಸೋಮಾರಿ, ಕೆಲಸವಿಲ್ಲದ, ಅಶುಭ ವ್ಯಾಪಾರವಿಲ್ಲದ(ತಾ), ಪರಲೋಕ ಸಂಬಂಧಿ ಕ್ರಿಯೆಯನ್ನು ಒಪ್ಪದವನು, ನಾಸ್ತಿಕ (ಣಂದಿ)**ಅಕಿರಿಯಾಯ.** ವಿ: [**ಅಕ್ರಿಯಾತ್ಮನ್**] =ಆತ್ಮವನ್ನು ನಿಷ್ಕ್ರಿಯವೆಂದು ತಿಳಿಯುವವನು, ಸಂಖ್ಯ (ಸೂಅ)

ಅಕಿರಿಯಾ. ಸ್ತ್ರೀ: [**ಅಕ್ರಿಯಾ**] ಕೆಲಸವಿಲ್ಲದಿರುವುದು, (ಭಗ), ದುಷ್ಟ ಕೆಲಸ, ಕೆಟ್ಟ ಕೆಲಸ(ತಾ), ನಾಸ್ತಿಕತೆ, (ತಾ), **–ವಾಇ.** ವಿ.: [**–ವಾದಿನ್**] ಪರಲೋಕ ಸಂಬಂಧಿಯಾದ ಕ್ರಿಯೆಯನ್ನು ಒಪ್ಪದಿರುವವನು, ನಾಸ್ತಿಕ (ತಾ)

ಅಕೀರಿಯ. **'ಅಕಿರಿಯ'** ಶಬ್ದವನ್ನು ನೋಡುವುದು, 'ಜೇ ಕೇಇ ಲೋಗಮ್ಮಿ ಅಕೀರಿಯಾಯ'(ಸೂಅ)

ಅಕುಇಯಾ. ಸ್ತ್ರೀ: [**ಅಕುಚಿಕಾ**] **'ಅಕುಯ'** ಶಬ್ದವನ್ನು ನೋಡುವುದು

ಅಕುಓಭಯು. ವಿ: [**ಅಕುತೋಭಯು**] ಯಾರ ಕಡೆಯಿಂದಲೂ ಭಯವಿಲ್ಲದವನು

ಅಕುಂಠ. ವಿ: [**ಅಕುಂಠ**] ತನ್ನ ಕೆಲಸದಲ್ಲಿ ನಿಪುಣನಾದವನು(ಗಉಡ) ತನ್ನ ಕಾರ್ಯದಲ್ಲಿ ಸಮರ್ಥನಾದವನು, ತಡೆಯಿಲ್ಲದ, ಅಡ್ಡಿಯಿಲ್ಲದ, ಹರಿತವಾದ

ಅಕುಇಯಾ. ಸ್ತ್ರೀ: [ಅಕುಚಿಕಾ] **'ಅಕುಯ'** ಶಬ್ದವನ್ನು ನೋಡುವುದು

ಅಕುಓಭಯ. ವಿ: [**ಅಕುತೋಭಯ**] ಯಾರಿಗೆ ಯಾವ ಕಡೆಯಿಂದಲೂ ಭಯವಿಲ್ಲವೋ ಅವನು, ನಿರ್ಭಯ(ಆಚಾ)

ಅಕುಯ. ವಿ: [**ಅಕುಚ**] ನಿಶ್ಚಲ, ಸ್ಥಿರ (ನಿಚೂ)

ಅಕೊಪ್ಪ. ವಿ: [**ಅಕೋಪ್ಯ**] ರಮ್ಯ, ಸುಂದರ (ಪಣಹ)

ಅಕೊಪ್ಪ. **ಪು:** [ದೇ] ಅಪರಾಧ, ತಪ್ಪು(ಷಡ್)

ಅಕೋಸ **'ಅಕ್ಕೋಸ '=ಆಕ್ರೋಶ'** ಶಬ್ದವನ್ನು ನೋಡುವುದು

ಅಕೋಸಾಯುಂತ. ವಿ: [**ಅಕೋಶಾಯುವಾನ**] ಅರಳುತ್ತಿರುವ(ಔಪ)

ಅಕ್ಕ. **ಪು:** [**ಅರ್ಕ**] ಸೂರ್ಯ(ಸುರ), ಎಕ್ಕದ ಗಿಡ, ಚಿನ್ನ(ರಯಣ), ರಾವಣನ ಒಬ್ಬ ಯೋಧ, (ಪಉಮ), ಇಂದ್ರ, ಸ್ಫಟಿಕ, ತಾಮ್ರಲೋಹ **–ತೂಲ.** **ನ:** ಎಕ್ಕದ ಹತ್ತಿ(ಪಣಹ). **–ತೇಅ.** **ಪು:** [**–ತೇಜಸ್**] ವಿದ್ಯಾಧರ ವಂಶದ ಒಬ್ಬ ರಾಜ,)ಪ ಉಮ). **–ಬೋಂದೀಯಾ.** ಸ್ತ್ರೀ: [**– ಬೋಂದಿಕಾ**] =ಒಂದು ಬಳ್ಳಿ ವಿಶೇಷ(ಪಣಣಾ)

ಅಕ್ಕ. **ಪು:** [ದೇ] ದೂತ, ಸಂದೇಶವನ್ನೊಯ್ಯುವವನು

–ಅಕ್ಕ. **'ಚಕ್ರ'** ಶಬ್ದವನ್ನು ನೋಡುವುದು(ಗಾ)

ಅಕ್ಕಅ. ವಿ: [**ಅಕೃತ**] ಮಾಡದೆ ಇರುವುದು, ಕೆಲಸದ ಅಭಾವ. **–ಪೂರ್ವ.** ವಿ: [**–ಪೂರ್ವ**] ಮುಂಚೆ ಯಾವತ್ತೂ ಮಾಡದಿರುವುದು(ಮೇ)

ಅಕ್ಕಂಡ **'ಅಕಂಡ'** ಶಬ್ದವನ್ನು ನೋಡುವುದು (ಆಉ)

ಅಕ್ಕಂತ. ವಿ: [**ಆಕ್ರಾಂತ**] ಬಲಶಾಲಿಯಿಂದ ಆಕ್ರಮಿಸಲ್ಪಟ್ಟ(ಣಾಯಾ), ಮುತ್ತಿಗೆ ಹಾಕಲ್ಪಟ್ಟ (ಆಚಾ), ಅತಿಕ್ರಮಿಸಲ್ಪಟ್ಟ, ಸೋಲಿಸಲ್ಪಟ್ಟ(ಸೂಅ), ಒಂದು ಜಾತಿಯ ನಿರ್ಜೀವ ವಾಯು(ಠಾ), **ನ:** ಆಕ್ರಮಣ,ಉಲ್ಲಂಘನೆ(ಭಗ), **–ದುಕ್ಖ.** ವಿ: [**–ದುಃಖ**] ದುಃಖದಿಂದ ಹತ್ತಿಕ್ಕಲ್ಪಟ್ಟವನು

ಅಕ್ಕಂತ. ವಿ: [ದೇ] ವೃದ್ಧಿಸಲಾದ, ವಿಸ್ತರಿಸಲಾದ, ಪ್ರೌಢ, ವಿಸ್ತೃತ(ದೇ)

ಅಕ್ಕಂತ. ವಿ: [**ಅಕಾಂತ**] ಇಷ್ಟವಲ್ಲದ, ಬಯಸದ

ಅಕ್ಕಂದ. **ಅಕ:** [**ಆ+ಕ್ರಂದ್**] ಆಕ್ರಂದನ, ಅಳುವುದು, ಚೀರಾಡು(ಪ್ರಾವಾ). **ವ.ಕೃ–ಅಕ್ಕಂದಂತ=** ಅಳುತ್ತಿರುವ (ಸುಪಾ)

ಅಕ್ಕಂದ(ಅಪ). **'ಅಕ್ಕಮ=ಆ+ಕ್ರಮ್'** ಶಬ್ದವನ್ನು ನೋಡುವುದು. **'ಅಕ್ಕಂದಿ'**

ಅಕ್ಕಂದ. **ಪು:** [**ಆಕ್ರಂದ**] ಅಳುವುದು, ರೋದನ, ಚೀರುತ್ತ ಅಳುವುದು, ಪ್ರಲಾಪಿಸುವುದು(ಸುರ)

ಅಕ್ಕಂದ. ವಿ: [ದೇ] ರಕ್ಷಿಸುವವನು, ರಕ್ಷಕ(ದೇ)

ಅಕ್ಕಂದಾವಣಯ. ವಿ: [**ಆಕ್ರಂದಕ**] ಅಳಿಸುವವನು (ಕುಮಾ)

ಆಕ್ಕಂದಿಯ. **ನ:** [**ಆಕ್ರಂದಿತ**] ಅಳು, ರೋದನ (ಸೇ, ಪಉಮ)

ಅಕ್ಕಮ. **ಸಕ:** [**ಆ+ಕ್ರಮ್**] ಆಕ್ರಮಣ ಮಾಡು, ಮುತ್ತು, ಮೇಲೆ ಬೀಳು, ಸೋಲಿಸು. **ವ.ಕೃ–ಅಕ್ಕಮಂತ,** ಆಕ್ರಮಿಸಲ್ಪಡುತ್ತಿರುವ.

ಅಕ್ಕಮ. **ಪು:** [**ಆಕ್ರಮ**] ಮೇಲೆ ಬೀಳುವುದು, ಏರಿ ಹೋಗುವುದು, ಸೋಲಿಸುವುದು(ಆವ)

ಅಕ್ಕಮಣ. **ನ:** [**ಆಕ್ರಮಣ** ಮೇಲಿನ ಶಬ್ದವನ್ನು ನೋಡಿ(ಸೇ). ಪರಾಕ್ರಮ(ವಿಸೇ), ವಿ:ಆಕ್ರಮಣ ಮಾಡುವವನು(ಸೇ)

ಅಕ್ಕಮಿಅ. **'ಅಕ್ಕಂತ=ಆಕ್ರಾಂತ' ಶಬ್ದವನ್ನು ನೋಡುವುದು.** (ಕಾಪ್ರ, ಸುಪಾ)

ಅಕ್ಕಸಾಲಾ. ಸ್ತ್ರೀ: [ದೇ] ಬಲಾತ್ಕಾರ, ಹುಚ್ಚಳಂತಿರುವ ಹೆಣ್ಣು, ನಶೆಯೇರಿದಂತಿರುವವಳು(ದೇ)

ಅಕ್ಕಾ. ಸ್ತ್ರೀ: [ದೇ] ಸೋದರಿ. (ದೇ)

ಅಕ್ಕಾ. ಸ್ತ್ರೀ: [ದೇ] ಕುಂಟಲಗಿತ್ತಿ, ದೂತಿ

ಅಕ್ಕಾಸೀ. ಸ್ತ್ರೀ: [**ಅಕ್ಕಾಸೀ**] ವ್ಯಂತರ ಜಾತಿಯ ಒಬ್ಬ ದೇವಿ(ತೀ)

ಅಕ್ಕಿಜ್ಜ. ವಿ: [**ಅಕ್ರೇಯ**] ಕೊಳ್ಳಲು ಅರ್ಹವಲ್ಲದ್ದು

ಅಕ್ಕಿಟ್ಠ. ವಿ: [**ಅಕ್ಲಿಷ್ಟ**] ಕ್ಲೇಶವಿಲ್ಲದ(ಜೀವ), ಅಡ್ಡಿಯಿಲ್ಲದ, ಕಷ್ಟವಿಲ್ಲದ (ಭಗ)

ಅಕ್ಕಿಟ್ಠ. ವಿ: [**ಅಕೃಷ್ಟ**] ಕೆಟ್ಟದಾಗಿ ಬರೆದಿಲ್ಲದ (ಭಗ)

ಅಕ್ಕಿಯ. ವಿ: [**ಅಕ್ರಿಯ**] ಕೆಲಸವಿಲ್ಲದ, ಕೆಲಸಮಾಡದ (ವಿಸೇ)

ಅಕ್ಕುಟ್ಠ. ವಿ: [ದೇ] ಉಚ್ಚಾಸನದಲ್ಲಿ ಸ್ಥಾಪಿತನಾದ, ಸ್ಥಾಪಿತ (ದೇ)

ಅಕ್ಕುಸ. **ಸಕ:** [**ಗಮ್**] ಹೋಗು: **'ಅಕ್ಕುಸಇ'** (ಹೇ)

ಅಕ್ಕುಹಯ. ವಿ: [**ಅಕುಹಕ**] ಕುಹಕವಿಲ್ಲದ, ನಿಷ್ಕಪಟ

ಅಕ್ಕೂರ. ವಿ: [**ಅಕ್ರೂರ**] ಕ್ರೌರ್ಯವಿಲ್ಲದವನು, ದಯಾಳು (ಪವ)

ಅಕ್ಕೂರ. ಪು: [ಅಕ್ರೂರ] ಶ್ರೀಕೃಷ್ಣನ ಬಂಧು, ಚಿಕ್ಕಪ್ಪ

ಅಕ್ಕಿಜ್ಜ. 'ಅಕ್ಕಿಜ್ಜ.' ಶಬ್ದವನ್ನು ನೋಡುವುದು.

ಅಕ್ಕೆಲ್ಲಯ. ವಿ: [ಏಕಾಕಿನ್] ಏಕಾಂಗಿ ಒಂಟಿ(ನಾಟ)

ಅಕ್ಕೋಡ. ಪು: [ದೇ] ಹೋತ(ದೇ)

ಅಕ್ಕೋಡಣ. ನ: [ಆಕ್ರೋಡನ] ಒಟ್ಟುಗೂಡಿಸುವುದು, ಕ್ರೋಡೀಕರಿಸುವುದು (ವಿಸೇ)

ಅಕ್ಕೋಸ. ನ: [ಅಕ್ರೋಶ] ಯಾವ ಗ್ರಾಮದ ತೀರ ಸಮೀಪದಲ್ಲಿ ಕಾಡು, ಕ್ರೂರ ಪ್ರಾಣಿಗಳು, ಪರ್ವತ ಅಥವಾ ನದಿ ಇವುಗಳ ತೊಂದರೆಗಳು ಇರುತ್ತವೆಯೋ ಆ ಗ್ರಾಮ (ಬೃಹ)

ಅಕ್ಕೋಸ. ಸಕ: [ಆ+ಕ್ರುಶ್] ಬಯ್ಯು, ನಿಂದಿಸು, ವ.ಕೃ- **ಅಕ್ಕೋಸಿಂತ**=ಬಯ್ಯುತ್ತಿರುವ, ನಿಂದಿಸುತ್ತಿರುವ (ಸುರ)

ಅಕ್ಕೋಸ ಪು: [ಆಕ್ರೋಶ] ಆಕ್ಷೇಪಣೆಯ ಮಾತುಗಳು, ಶಾಪ, ನಿಂದಿಸುವುದು(ಸಮ)

ಅಕ್ಕೋಸಗ: ವಿ: [ಆಕ್ರೋಶಕ] ಆಕ್ರೋಶ ಮಾಡುವವನು, ಕೂಗಾಡುವವನು, ನಿಂದಿಸುವವನು, ಬೈಯುವವನು(ಉತ್ತ)

ಅಕ್ಕೋಸಣಾ. ಸ್ತ್ರೀ: [ಆಕ್ರೋಶನಾ] ಶಾಪ, ಬೈಗಳು (ಣಾಯಾ)

ಅಕ್ಕೋಸಿಅ. ವಿ: [ಆಕ್ರೋಶಿತ] ಆಕ್ರೋಶಕ್ಕೆ ಗುರಿಯಾದವನು, ಶಾಪ, ನಿಂದೆ ಬೈಗಳಿಗೆ ತುತ್ತಾದವನು

ಅಕ್ಕೋಹ. ವಿ: [ಅಕ್ರೋಧ] ಅಲ್ಪ ಕ್ರೋಧಿ, ಕ್ರೋಧವಿಲ್ಲದ, ಶಾಂತ(ಉತ್ತ)

ಅಕ್ಖ. ಪು: [ಅಕ್ಷ] ಜೀವ, ಆತ್ಮ(ಶಾ), ರಾವಣನ ಒಬ್ಬ ಮಗ(ಸೇ), ಚಂದನಕ, ಸಮುದ್ರದಲ್ಲಿ ಹುಟ್ಟುವ ಎರಡು ಇಂದ್ರಿಯಗಳ ಒಂದು ಪ್ರಾಣಿ: ಜೈನ ಸಾಧುಗಳು ಅದರ ನಿರ್ಜೀವ ಶರೀರವನ್ನು ಸ್ಥಾಪನಾಚಾರ್ಯರಲ್ಲಿ ಸೇರಿಸುತ್ತಾರೆ(ಶ್ರಾ). ಚಕ್ರದ ಅಚ್ಚು, ಕೀಲು(ಓಘ). ಪಗಡೆ ಆಟದ ದಾಳ(ಧಣ), ತಾರೆಗಿಡ(ಸೇ), ನಾಲ್ಕು ಹಸ್ತ ಅಥವಾ ೯೬ ಅಂಗುಲಗಳ ಒಂದು ಅಳತೆ(ಅಣು) ರುದ್ರಾಕ್ಷ(ಅಣು), ನ: ಇಂದ್ರಿಯ(ವಿಸೇ) ದ್ಯೂತ(ಜೂಜು) (ಸೇ) ಕಣ್ಣು, ಹಾವು. **-ಚಮ್ಮ. ನ:** [-ಚರ್ಮನ್]=ನೀರು ತುಂಬುವ ಚರ್ಮದ ಚೀಲ, **-ಪಾದಯ. ನ:** [-ಪಾದಕ]ಮೊಳೆಯ ಅಥವಾ ಗೂಟದ ಚೂರು, (ಸ), **-ಮಾಲಾ. ಸ್ತ್ರೀ:** (-ಮಾಲಾ)ಜಪಸರ(ಪ ಉಮ). **-ಲಯಾ. ಸ್ತ್ರೀ:** [-ಲತಾ]= ರುದ್ರಾಕ್ಷ ಮಾಲೆ(ದೇ). **-ವತ್ತ. ನ:** [-ಪಾತ್ರ]=ಪ್ರಜೆಯ ಪಾತ್ರೆ. **-ವಲಯ. ನ:** [-ವಲಯ]=ರುದ್ರಾಕ್ಷ ಮಾಲೆ. **-ವಾಅ.ಪು:** [-ಪಾದ]=ನೈಯಾಯಿಕ ಮತದ ಪ್ರವರ್ತಕ ಗೌತಮ ಋಷಿ(ವಿಸೇ) **-ವಾಡಗ. ಪು:** [-ವಾಟಕ] =ಕುಸ್ತಿಯ ಅಖಾಡ(ಜೀವ) ಜೂಜಿನ ಮನೆ, ಯುದ್ಧರಂಗ. ಪಗಡೆಯ ಹಲಗೆ. **-ಸುತ್ತಮಾಲಾ. ಸ್ತ್ರೀ:** [-ಸೂತ್ರಮಾಲಾ] ಜಪಸರ(ಅಣು)

ಅಕ್ಖ. ಪು: 'ಅಕ್ಖಾ= ಆ+ಖ್ಯಾ' ಶಬ್ದವನ್ನು ನೋಡುವುದು. "ಅಕ್ಖಇ"(ಸಣ)

ಅಕ್ಖಇಯ. ವಿ: [ಆಖ್ಯಾತ] ಉಕ್ತ, ಕಥಿತ, ಹೇಳಲಾದ (ಸಣ)

ಅಕ್ಖಉಹಿಣೀ. 'ಅಕ್ಖೋಹಿಣೀ' ಶಬ್ದವನ್ನು ನೋಡುವುದು

ಅಕ್ಖಂಡ. ವಿ: [ಅಖಂಡ] ಸಂಪೂರ್ಣ, ಅಖಂಡಿತ, ನಿರಂತರ, ಅವಿಚ್ಛಿನ್ನ ಸತತ (ಸುಪಾ)

ಅಕ್ಖಂಡಲ. ಪು: [ಆಖಂಡಲ] ಇಂದ್ರ (ಪಾಅ)

ಅಕ್ಖಂಡಿಅ. ವಿ: [ಅಖಂಡಿತ] ಸಂಪರ್ಣ, ಸಂಪೂರ್ಣವಾದ, ತುಂಡಾಗದ, ಒಡೆಯದ(ಸೇ) ಅವಿಚ್ಛಿನ್ನ, ನಿರಂತರ(ಉರ)

ಅಕ್ಖಂತ. 'ಅಕ್ಖಾ= ಆ+ಖ್ಯಾ' ಶಬ್ದವನ್ನು ನೋಡುವುದು.

ಅಕ್ಖಡ. ಸಕ: [ಆ+ಸ್ಕಂದ್] ಆಕ್ರಮಣ ಮಾಡು (ಗಾ)

ಅಕ್ಖಣವೇಲ. ನ: [ದೇ] ಮೈಥುನ, ಸಂಭೋಗ, ಸಂಜೆ, ಕಾಲ(ದೇ)

ಅಕ್ಖಣಿಆ. ಸ್ತ್ರೀ: [ದೇ] ವಿಪರೀತ ಮೈಥುನ(ಪಾಅ)

ಅಕ್ಖಮ. ವಿ: [ಅಕ್ಷಮ] ಅಸಮರ್ಥ(ಸುಪಾ). ಯುಕ್ತವಲ್ಲದ್ದು, ಅನುಚಿತ(ಶಾ)

ಅಕ್ಖಯ. ವಿ: [ಅಕ್ಷತ] ಗಾಯವಿಲ್ಲದ, ವ್ರಣವಾಗದ, (ಸುರ) ಸಂಪೂರ್ಣ, ಒಡೆಯದ (ಸುರ) **ಪು.ಬ:** ಅರಿಶಿಣ ಹಚ್ಚಿದ ಮುಕ್ಕಾಗದ ಅಕ್ಕಿ, ಅಕ್ಷತೆಕಾಳು. **ಅಕ್ಖಯಾರ. ವಿ:** [ಅಕ್ಷತಾಚಾರ] ದೋಷರಹಿತವಾದಆಚರಣೆ ಹೊಂದಿರುವವನು (ವವ)

ಅಕ್ಖಯ. ವಿ: [ಅಕ್ಷಯ] ನಾಶವಿಲ್ಲದ, (ಉವರ), ಶಾಶ್ವತವಾದ(ಸಮ) ಪರಮಾತ್ಮ, ಅಕ್ಷಯ

ಸಂವತ್ಸರ. –ಣಿಹಿತವ. ಪುನಂ: [ನಿಧಿತಪಸ್] ಒಂದು ಬಗೆಯ ತಪಶ್ಚರ್ಯೆ(ಪವ), –ತಇಯಾ. ಸ್ತ್ರೀ: [–ತೃತೀಯಾ] ವೈಶಾಖ ಶುಕ್ಲ ತದಿಗೆ(ಆನಿ)

ಅಕ್ಖರ. ಪುನಂ: [ಅಕ್ಷರ] ಅಕ್ಷರ, ವರ್ಣ(ಸುಪಾ), ಜ್ಞಾನ, ಚೇತನ(ವಿಸೇ), ನಾಶವಿಲ್ಲದ್ದು, ನಿತ್ಯವಾದ(ವಿಸೇ). ಪರಮಾತ್ಮ, ಬ್ರಹ್ಮ, ಪ್ರಕೃತಿ, ಉತ್ತರಾಣಿ ಗಿಡ, –ತ್ಥ. ಪು: [–ರ್ಥ] (ಅಕ್ಷರಾರ್ಥ)= ಶಬ್ದಾರ್ಥ. –ಪುಟ್ಠಿಯಾ. ಸ್ತ್ರೀ: [–ಪುಷ್ಟಿಕಾ]= ಲಿಪಿವಿಶೇಷ(ಸಮ). –ಸಮಾಸ. ಪು:[–ಸಮಾಸ]= ಅಕ್ಷರಗಳ ಸಮೂಹ. ಶ್ರುತ ಜ್ಞಾನದ ಒಂದು ಪ್ರಭೇದ(ಕಮ್ಮ)

ಅಕ್ಖಲ. ಪು: [ದೇ] ಅಖರೋಟದ ಮರ, ನ: ಅಖರೋಟದ ಹಣ್ಣು(ಪಣನಾ)

ಅಕ್ಖಲಿಯ. ವಿ: [ದೇ] ಪ್ರತಿಧ್ವನಿತವಾದ(ದೇ), ಆಕುಲ=ಕ್ಲೇಶದಿಂದ ಕೂಡಿರುವ, ವ್ಯಾಕುಲ(ಸುರ)

ಅಕ್ಖಲಿಯ. ವಿ: [ಅಸ್ಖಲಿತ] ಅಬಾಧಿತ, ನಿರುಪದ್ರವ (ಕುಮಾ). ಮುಗ್ಗರಿಸದ, ಬೀಳದ(ನಾಟ)

ಅಕ್ಖವಾಇಯಾ. ಸ್ತ್ರೀ: [ದೇ] ದಿಕ್ಕು(ದೇ)

ಅಕ್ಖಾ. ಸಕ: [ಆ+ಖ್ಯಾ] ಹೇಳು, ಹೆಸರು ಹೇಳು. ವ.ಕೃ: **ಅಕ್ಖಂತ= ಹೇಳುತ್ತಿರುವವನು**(ಸಣ) ವ. ಕೃ: **ಅಕ್ಖಿಜ್ಜಂತ**

ಆಕ್ಖಾ. ಸ್ತ್ರೀ: [ಆಖ್ಯಾ] ಹೆಸರು(ವಿಸೇ)

ಅಕ್ಖಾಇ. ವಿ: [ಆಖ್ಯಾಯಿನ್] ಹೇಳುವವನು, ಉಪದೇಶಿಸುವವನು, ತಿಳಿಸುವವನು(ಣಾಯಾ)

ಅಕ್ಖಾಇಯ. ನ: [ಆಖ್ಯಾತಿಕ] ಕ್ರಿಯಾ ಪದ, ಕ್ರಿಯಾವಾಚಕ ಶಬ್ದ(ವಿಸೇ)

ಅಕ್ಖಾಇಯ. ವಿ: [ಅಕ್ಷಿತಿಕ] ಸ್ಥಾಯೀ, ನಶ್ವರವಲ್ಲದ, ಶಾಶ್ವತ (ಪಣಹ)

ಅಕ್ಖಾಉ. ವಿ: [ಆಖ್ಯಾತೃ] ಹೇಳುವವನು

ಅಕ್ಖಾಇಯಾ. ಸ್ತ್ರೀ: [ಆಖ್ಯಾಯಿಕಾ] ಕಾದಂಬರಿ, ವಾರ್ತೆ, ಕಥೆ,(ಕಪ್ಪೂ) ನಡೆದ ಕಥೆ, ಚಾರಿತ್ರಿಕ

ಅಕ್ಖಾಗ. ಪು: [ಆಖ್ಯಾಕ] ಮ್ಲೇಚ್ಛರ ಒಂದು ಜಾತಿ, (ಸೂಅ)

ಅಕ್ಖಾಡಗ}.ಪು:[ಅಕ್ಷವಾಟಕ]ಜೂಜಿನ ಅಡ್ಡೆ ಅಖಾಡ

ಅಕ್ಖಾಡಯ}. ವ್ಯಾಯಾಮ ಮಾಡುವ ಸ್ಥಳ(ಉಪ) ಪ್ರೇಕ್ಷಕರು ಕುಳಿತುಕೊಳ್ಳುವ ಆಸನ(ಠಾ)

ಅಕ್ಖಾಣ. ನ: [ಆಖ್ಯಾನ] ಕಥನ, ಹೇಳುವುದು ನಿವೇದನ, (ಕುಮಾ), ವಾರ್ತೆ, ಉಪಕಥೆ(ಪಉಮ), ಕಲ್ಪಿತ ಕಥೆ.

ಅಕ್ಖಾಣಯ. ನ: [ಆಖ್ಯಾನಕ] ಕಥೆ, ವಾರ್ತೆ(ಉಪ) ಕಲ್ಪಿತ ಕಥೆ, ಉಪಕಥೆ

ಅಕ್ಖಾಯ: ವಿ: [ಆಖ್ಯಾತ] ಪ್ರತಿಪಾದಿತ, ಕಥಿತ(ಸುಪಾ). ನ: ಕ್ರಿಯಾ ಪದ(ಪಣಹ)

ಅಕ್ಖಾಯ. ನ: [ಅಖಾತ] ಆನೆಯನ್ನು ಹಿಡಿಯಲು ತೋಡುವ ಹಳ್ಳ, ಖೆಡ್ಡ(ಪಾಅ)

ಅಕ್ಖಾಯಾ. ಸ್ತ್ರೀ: [ಆಖ್ಯಾತಾ] ಒಂದು ಬಗೆಯ ಜೈನದೀಕ್ಷೆ(ಪಂಚೂ)

ಅಕ್ಖಿಅ. ಸ್ತ್ರೀ: [ಅಕ್ಷಿ] ಕಣ್ಣು(ಹೇ, ಸ್ವಪ್ನ)

ಅಕ್ಖಿಅ. ವಿ: [ಆಕ್ಷಿಕ] ಪಗಡೆಯ ದಾಳದಿಂದ ಜೂಜಾಡುವವನು, ಜೂಜುಕೋರ(ದೇ)

ಅಕ್ಖಿಅ. ವಿ: [ಆಖ್ಯಾತ] ಪ್ರತಿಪಾದಿತ, ಕಥಿತ, ಹೇಳಲ್ಪಟ್ಟ(ಶ್ರಾ) ಪ್ರಸಿದ್ಧವಾದ

ಅಕ್ಖಿಂತರ. ನ: [ಅಕ್ಷ್ಯಂತರ] ಕಣ್ಣಿನ ಕುಳಿ(ವಿಪಾ)

ಅಕ್ಖಿಜ್ಜಂತ.'ಅಕ್ಖಾ=ಆ+ಖ್ಯಾ' ಶಬ್ದವನ್ನು ನೋಡುವುದು

ಅಕ್ಖಿತ್ತ. ವಿ: [ಆಕ್ಷಿಪ್ತ] ವ್ಯಾಕುಲಗೊಂಡವನು, ಆಕ್ಷೇಪಕ್ಕೆ ಗುರಿಯಾದವನು, ನಿಂದಿಸಲ್ಪಟ್ಟವನು ದೂಷಣೆಗೊಳಗಾದವನು (ಸುರ), ಸಾಮರ್ಥ್ಯದಿಂದ ತೆಗೆದುಕೊಂಡದ್ದು(ಸೇ) ಎಸೆಯಲ್ಪಟ್ಟ,

ಅಕ್ಖಿತ್ತ. ವಿ: [ಆಕ್ಷಿಪ್ತ] ಎಲ್ಲ ರೀತಿಯಿಂದಲೂ ಯಿಂದಲೂ ಪ್ರೇರಿಸಲ್ಪಟ್ಟ

ಅಕ್ಖಿತ್ತ. ನ: [ಅಕ್ಷೇತ್ರ] ಪ್ರತಿಷ್ಠಿತ ಕ್ಷೇತ್ರದ ಹೊರಗಿನ ಪ್ರದೇಶ (ನಿಚೂ), ಉಪಯೋಗವಿಲ್ಲದ ಭೂಮಿ, ಬೆಳೆಗೆ ಯೋಗ್ಯವಲ್ಲದ ಭೂಮಿ

ಅಕ್ಖಿವ. ಸಕ: [ಆ+ಕ್ಷಿಪ್] ಆಕ್ಷೇಪಿಸು, ಟೀಕಿಸು, ದೋಷಾರೋಪವಮಾಡು, ತಡೆ, ಕಾಲಕಳೆ, ಚಿಂತಿತನನ್ನಾಗಿಸು, ಎಸೆ, ಸ್ವೀಕರಿಸು (ಉವರ) ಕರ್ಮ– "ಅಕ್ಖಿಪ್ಪಇ ಯ ಮೇ ವಾಣೀ"(ಸ)

ಅಕ್ಖಿವ. ಸಕ: [ಆ+ಕ್ಷಿಪ್] ಬೈಯು, ನಿಂದಿಸು, ಆಕ್ರೋಶಗೊಳ್ಳು,

ಅಕ್ಖಿವಣ. ನ: [ಆಕ್ಷೇಪಣ] ದುಃಖ, ಚಿಂತೆ, ಗಾಬರಿ

ಅಕ್ಖೀಣ. ವಿ: [ಅಕ್ಷೀಣ] ನಾಶವಿಲ್ಲದ, ಕ್ಷಯವಿಲ್ಲದ, ಅಖಂಡ, ಅಕ್ಷಯ, ಸಂಪೂರ್ಣ(ಕುಮಾ).

–ಮಹಾಣಸೀ. ಸ್ತ್ರೀ: [–ಮಹಾನಸೀ] ನೂರಾರು ಜನ ಇತರೆಯವರಿಗೆ ತೃಪ್ತಿಯಾಗುವವರೆಗೂ ಬಡಿಸಿದರೂ ಯಾವ ಆತ್ಮಿಕ ಶಕ್ತಿಯಿಂದ ಭಿಕ್ಷಾನ್ನ ತಂದವನು ಊಟಮಾಡುವವರೆಗೂ ಕಿಂಚಿತ್ತೂ ಆ ಭಿಕ್ಷಾನ್ನ ಕಡಿಮೆಯಾಗುವುದಿಲ್ಲವೋ ಆ ಆತ್ಮಿಕ ಶಕ್ತಿ(ಪವ). ೧–ಮಹಾಣಸಿಯ. ವಿ: [–ಮಹಾನಸಿಕ] ಮೇಲೆ ಹೇಳಲಾದ ಅಕ್ಷಯವಾದ ಮಹಾನಸೀ ಶಕ್ತಿ ಪ್ರಾಪ್ತವಾಗಿದೆಯೋ ಅವನು(ಪಣ್ಣ) –ಮಹಾಲಯ. ವಿ: [–ಮಹಾಲಯ]=ಕಿರಿದಾದ ಸ್ಥಳದಲ್ಲೇ ಅನೇಕ ಜನರು ಸಮಾವೇಶಗೊಳ್ಳಲು ಯಾವುದರಿಂದ ಸಾಧ್ಯವೋ ಅಂಥ ಅದ್ಭುತ ಆತ್ಮಶಕ್ತಿಯಿಂದ ಕೂಡಿದ್ದು(ಗಚ್ಛ), ದೊಡ್ಡಮನೆ

ಅಕ್ಖುಅ. ವಿ: [ಅಕ್ಷತ] ಸಂಪೂರ್ಣ, ಅಖಂಡ, ಕೊರತೆಯಿಲ್ಲದ(ಸುಪಾ)

ಅಕ್ಖುಣ್ಣ. ವಿ: [ಅಕ್ಷುಣ್ಣ] ಹರಿಗಡಿಯದ, ಅವಿಚ್ಛಿನ್ನ(ಬೃಹ) ನಿರಂತರ, ಸವೆಯದಿರುವ, ಪಳಗದಿರುವ, ಜಯಿಸಲ್ಪಡದ

ಅಕ್ಖುದ್ದ. ವಿ: [ಅಕ್ಷುದ್ರ] ಗಂಭೀರವಾದ, ತುಚ್ಛವಲ್ಲದ, ದೊಡ್ಡದಾದ(ದವ್ಯ). ದಯಾಳು, ಕರುಣೆಯುಳ್ಳ, (ಪಂಚಾ), ಉದಾರ, ಸೂಕ್ಷ್ಮ ಬುದ್ಧಿಯುಳ್ಳ (ಧರ್ಮ)

ಅಕ್ಖುದ್ದ. ನ: [ಅಕ್ಷೌದ್ರ್ಯ] ಕ್ಷುದ್ರತೆಯಿಲ್ಲದ, ನೀಚವಲ್ಲದ (ಉಪ)

ಅಕ್ಖುಪುರೀ. ಸ್ತ್ರೀ: [ಅಕ್ಷಪುರೀ] ಒಂದು ನಗರ ವಿಶೇಷ(ಣಾಯಾ)

ಅಕ್ಖುಬ್ಭಮಾಣ: ವಿ: [ಅಕ್ಷುಭ್ಯಮಾನ] ಕ್ಷೋಭೆಗೊಳ್ಳದಿರುವ (ಉಪ) ಕದಡದ, ಪ್ರಶಾಂತ

ಅಕ್ಖುಭಿಯ. 'ಅಕ್ಖುಹಿಯ' ಶಬ್ದವನ್ನು ನೋಡುವುದು

ಅಕ್ಖುಹಿಯ. ವಿ: [ಅಕ್ಷುಭಿತ] ಕ್ಷುಬ್ಧಗೊಳ್ಳದ, ಉದ್ವೇಗವಿಲ್ಲದ, ಪ್ರಶಾಂತ(ಸಣ)

ಅಕ್ಖೂಣ. ವಿ: [ಅಕ್ಷೂಣ] ಅನ್ಯೂನ, ಕೊರತೆಯಿಲ್ಲದ ಪರಿಪೂರ್ಣ (ಉಪ)

ಅಕ್ಖೇಅ. 'ಅಕ್ಖಾ=ಆ+ಖ್ಯಾ' ಶಬ್ದವನ್ನು ನೋಡುವುದು

ಅಕ್ಖೇವ. ಪು: [ಅ+ಕ್ಷೇಪ] ಶೀಘ್ರವಾಗಿ, ಬೇಗನೆ(ಸುಪಾ)

ಅಕ್ಖೇವ. ಪು: [ಆಕ್ಷೇಪ] ಆಕರ್ಷಣೆ, ಎಳೆದುಕೊಳ್ಳುವುದು(ಪಣ್ಣ), ಸಾಮರ್ಥ್ಯ, ಅರ್ಥದ ಹೊಂದಿಕೆಗಾಗಿ ಅನುಕ್ತ ಅರ್ಥವನ್ನು ಹೇಳುವುದು(ಉಪ) ಆಶಂಕೆ, ಪೂರ್ವಪಕ್ಷ(ಭಗ,) ಉತ್ಪತ್ತಿ(ಉವರ), ಎಸೆಯುವುದು,

ಅಕ್ಖೇವಗ. ಪು: [ಆಕ್ಷೇಪಕ] ಎಳೆದುಕೊಂಡು ಬರುವವನು, ಆಕರ್ಷಿಸುವವನು, ಸಮರ್ಥಕ ಪದ, ಅರ್ಥಗಳ ಹೊಂದಿಕೆಗಾಗಿ ಅನುಕ್ತ ಅರ್ಥವನ್ನು ಹೇಳುವ ಶಬ್ದ(ಉಪ), ಸಾನ್ನಿಧ್ಯಕಾರಕ(ಉವರ), ನಿಂದಿಸುವ,

ಅಕ್ಖೇವಣೀ. ಸ್ತ್ರೀ: [ಆಕ್ಷೇಪಣೀ] ಶ್ರೋತೃಗಳ ಮನಸ್ಸನ್ನು ಸೆಳೆಯುವ ಕಥೆ(ಔಪ)

ಅಕ್ಖೇವಿ. ವಿ: [ಆಕ್ಷೇಪಿನ್] ಆಕರ್ಷಿಸುವವನು, ಎಳೆದು ತರುವವನು (ಪಣ್ಣ), ನಿಂದಿಸುವವನು, ಎಸೆಯುವವನು, ಬೇಡ

ಅಕ್ಖೋಡ. ಸಕ: [ಕೃಷ್] ಒರೆಯಿಂದ ಕತ್ತಿಯನ್ನು ಹೊರಸೆಳೆ, ಹೊರಹಾಕು. **ಕ್ರಿಯಾರೂಪ:** ಅಕ್ಖೋಡಇ(ಹೇ)

ಅಕ್ಖೋಡ. ಸಕ: [ಆ+ಸ್ಫೋಟಯ್] ಸ್ವಲ್ಪ ಇಲ್ಲವೆ ಒಮ್ಮೆ ಸಿಡಿ, ಅಲುಗಾಡಿಸು, ಹೊಡೆ, ತಟ್ಟು. **ವ.ಕೃ–ಅಕ್ಖೋಡಂತ=ಸಿಡಿಯುತ್ತಿರುವ**(ದಸ)

ಅಕ್ಖೋಡ. ಪು: [ಅಕ್ಷೋಟ] ಅಖರೋಟದ ಮರ, ನ:ಅಖರೋಟದಹಣ್ಣು(ಪಣಹ)ಬೆಟ್ಟಗೋಣಿಮರ, ರಾಜವಂಶೀಯರಿಗೆ ಕೊಡುವ ಚಿನ್ನವೇ ಮೊದಲಾದ ಕಾಣಿಕೆ(ವವ)

ಅಕ್ಖೋಡ. ಪು: [ಆಸ್ಫೋಟ] ತೋಳು ತಟ್ಟುವ ಶಬ್ದ

ಅಕ್ಖೋಡಿಯ. ವಿ: [ಕೃಷ್ಟ] ಹೊರಗೆಳೆಯಲಾದ, ಹೊರತೆಗೆಯಲಾದ(ಖಡ್ಗ) (ಕುಮಾ)

ಅಕ್ಖೋಭ}. ಪು: [ಅಕ್ಷೋಭ] ಕ್ಷೋಭೆಯಿಲ್ಲದ,

ಅಕ್ಖೋಹ}. ಗಾಬರಿಯಿಲ್ಲದ, ಕಳವಳವಿಲ್ಲದ, ಅಚಲ, ಸ್ಥಿರ(ಪಣಹ). ಯದುವಂಶದ ಅಂಧಕವೃಷ್ಣಿ ಮಹಾರಾಜನ ಒಬ್ಬ ಮಗ. ನೇಮಿ ತೀರ್ಥಂಕರನಿಂದ ದೀಕ್ಷೆ ಪಡೆದು ಶತ್ರುಂಜಯದ ಮೇಲೆ ಮೋಕ್ಷಕ್ಕೆ ಹೋಗಿದ್ದವನು(ಂತ). ನ: 'ಅಂತಕೃದ್ದಶಾ'ದ ಒಂದು ಅಧ್ಯಯನ

ಅಕ್ಖೋಹಣಿಜ್ಜ. ವಿ [ಅಕ್ಷೌಭಣೀಯ] ಕ್ಷುಬ್ಧಗೊಳಿಸಲು ಸಾಧ್ಯವಿಲ್ಲದ್ದು, ಕದಡಲಾಗದ್ದು(ಸುಪಾ)

ಅಕ್ಖೋಹಿಣೀ ವಿ: [ಅಕ್ಷೋಹಿಣೀ] ಸೇನೆಯ ಒಂದು ಪರಿಮಾಣ. ೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು, ಮತ್ತು

೧,೦೯,೩೫೦ ಕಾಲಾಳುಗಳುಳ್ಳ ಬಹಳ ದೊಡ್ಡ ಸೈನ್ಯ(ಪಲುಮ)

ಅಖಂಡ. ವಿ: [**ಅಖಂಡ**] ಪರಿಪೂರ್ಣ, ಖಂಡರಹಿತ, ಅವಿಚ್ಛಿನ್ನವಾಗಿ, ಸತತವಾಗಿ(ಔಪ)

ಅಖಂಡಲ. ಪು: [**ಆಖಂಡಲ**] ಇಂದ್ರ(ಪಉಮ)

ಅಖಂಡಿಯ. ವಿ: [**ಅಖಂಡಿತ**] ತುಂಡಾಗದ, ಹರಿಗಡಿಯದ, ಪರಿಪೂರ್ಣ(ಪಂಚಾ)

ಅಖಂಪಣ ವಿ: [ದೇ] ಸ್ವಚ್ಛ, ನಿರ್ಮಲ(ಸುಪಾ)

ಅಖಜ್ಜ. ವಿ: [**ಅಖಾದ್ಯ**] ತಿನ್ನಲು ಯೋಗ್ಯವಲ್ಲದ್ದು (ಣಾಯಾ)

ಅಖತ್ತ. ನ: [**ಅಕ್ಷಾತ್ರ**] ಕ್ಷತ್ರಿಯ ಧರ್ಮಕ್ಕೆ ವಿರುದ್ಧವಾದ, ಅನ್ಯಾಯ, (ಧಮ್ಮ)

ಅಖಮ. '**ಅಕ್ಖಮ**' ಶಬ್ದವನ್ನು ನೋಡುವುದು (ಕುಮಾ)

ಅಖರಯ. ವಿ: [ದೇ] ಒಂದು ವರ್ಗದ ದಾಸ, ಒಂದು ಬಗೆಯ ದಾಸ...

ಅಖಲಿಅ. '**ಅಕ್ಖಲಿಅ**'='**ಅಸ್ಖಲಿತ**' ಶಬ್ದವನ್ನು ನೋಡುವುದು

ಅಖಾದಿಮ. ವಿ: [**ಅಖಾದ್ಯ**] ತಿನ್ನಲು ಯೋಗ್ಯವಲ್ಲದ್ದು, ಅಭಕ್ಷ್ಯ 'ಕುಪಹೇ ಧಾವಂತಿ ಅಖಾದಿಮಂ ಖಾದಂತಿ'(ಕುಮಾ)

ಅಖಾಯ. ವಿ: [**ಅಖಾತ**] ಅಗೆಯದೆ ಇರುವ, **–ತಲ.** ನ: [**–ತಲ**] ಚಿಕ್ಕ ಕೆರೆ(ಪಾಅ)

ಅಖಿಲ. ವಿ: [**ಅಖಿಲ**] ಸರ್ವ, ಸಕಲ, ಪರಿಪೂರ್ಣ (ಕುಮಾ)

ಅಖುಟ್ಟ. ವಿ: [ದೇ] ಅಖಂಡ, ಅಕ್ಷಯ, ಬಹಳ(ಭವಿ)

ಅಖುಟ್ಟಿಅ. ವಿ: [**ಅತುಡಿತ**] ಅಖಂಡ, ಪರಿಪೂರ್ಣ (ಕುಮ)

ಅಖುಡಿಅ. '**ಅಕ್ಖುಡಿಅ**' ಶಬ್ದವನ್ನು ನೋಡುವುದು

ಅಖೇಯಣ್ಣ. ವಿ: [**ಅಖೇದಜ್ಞ**] ಕುಶಲನಲ್ಲದವನು, ನಿಪುಣನಲ್ಲದವನು(ಸೂಅ)

ಅಖೋಹಾ. ಸ್ತ್ರೀ: [**ಅಕ್ಷೋಭಾ**] ವಿದ್ಯಾವಿಶೇಷ, ಉದ್ವೇಗರಹಿತ, ಕಳವಳವಿಲ್ಲದ(ಪಉಮ)

ಅಗ. ಪು: [**ಅಗ**] ಮರ, ಬೆಟ್ಟ, ಪರ್ವತ(ಸೇ)

ಅಗಇ. ಸ್ತ್ರೀ: [**ಅಗತಿ**] ನೀಚ ಗತಿ, ನರಕ ಅಥವಾ ಪಶುಂಯೋನಿಯಲ್ಲಿ ಹುಟ್ಟುವುದು(ಠಾ) ನಿರುಪಾಯ(=ಬೇರೆಗತಿಯಿಲ್ಲದ)(ಅಚು), ನರಕ

ಅಗಂಠಿಮ. ನ: [**ಅಗ್ರಂಥಿಮ**] ಬಾಳೆಹಣ್ಣು, ಹಣ್ಣಿನ ಚೂರು(ನಿಚೂ)

ಅಗಂಡಿಗೇಹ. ವಿ: [ದೇ] ಯೌವನದಿಂದ ಉನ್ಮತ್ತನಾದವನು(ದೇ)

ಅಗಂಡೂಯುಗ. ವಿ: [**ಅಕಂಡೂಯಕ**] ತುರಿಕೆ ಉಂಟುಮಾಡದ (ಸೂಅ)

ಅಗಂಥ. ವಿ: [**ಅಗ್ರಂಥ**] ಹಣವಿಲ್ಲದ, **ಪುಂಸ್ತ್ರೀ:** ನಿರ್ಗ್ರಂಥ: ಜೈನ ಸಾಧು(ಆಚಾ)

ಅಗಂಧಣ. ಪು: [**ಅಗಂಧನ**] ಈ ಹೆಸರಿನ ಸರ್ಪಗಳ ಒಂದು ಜಾತಿ (ದಸ)

ಅಗಡ. ಪು: [ದೇ. **ಅವಟ**] ಬಾವಿ, **–ತಡ** .ತ್ರಿ [**–ತಟ**] ಬಾವಿಯ ದಡ(ವಿಸೇ), **–ದತ್ತ.** [**–ದತ್ತ**] ಈ ಹೆಸರಿನ ಒಬ್ಬ ರಾಜಕುಮಾರ(ಉತ್ತ). ◻**ದದ್ದುರ.** ಪು: [**ದರ್ದುರ**] ಬಾವಿಯಲ್ಲಿರುವ ಕಪ್ಪೆ, ಕೂಪಮಂಡೂಕ, ಅಲ್ಪಜ್ಞ, ಮನೆಬಿಟ್ಟು ಹೊರಗೆ ಹೋಗದವನು

ಅಗಡ. ಪು: [**ಅವಟ**] ಬಾವಿಗಳ ಹತ್ತಿರ ಪ್ರಾಣಿಗಳಿಗೆ ನೀರು ಕುಡಿಯುವ ಸಲುವಾಗಿ ನಿರ್ಮಿಸಿದ ಹಳ್ಳ(ಉಪ)

ಅಗಡ. ವಿ: [**ಅಕೃತ**] ಮಾಡದೆ ಇರುವ(ವವ)

ಅಗಣಿ. ಪು: [**ಅಗ್ನಿ**] ಬೆಂಕಿ. ◻**ಕಾಯ.** ಪು: [**–ಕಾಯ**] =ಬೆಂಕಿಯ ಜೀವ? ದೇಹ **–ಮುಹ.** ಪು: [**–ಮುಖ**] ದೇವ, ದೇವತೆ, ಅಗ್ನಿ ಹೋತ್ರಿಯಾದ ಬ್ರಾಹ್ಮಣ, ಅಡಿಗೆ ಮನೆ, ಗೇರುಮರ, ಕುಂಕುಮ ಕೇಸರಿ

ಅಗಣಿಅ. ವಿ: [**ಅಗಣಿತ**] ಗಣನೆಗೆ ತೆಗೆದುಕೊಳ್ಳದ, ಅಪಮಾನಿತ (ಪಉಮ) ಲೆಕ್ಕಕ್ಕೆ ಸಿಗದಿರುವಷ್ಟು =ಅಸಂಖ್ಯಾತ

ಅಗಣಿಜ್ಜಂತ. ವಿ: [**ಅಗಣ್ಯಮಾನ**] ಗಣನೆಗೆ ಬರದಿರುವ

ಅಗತ್ಥಿ}. ಪು: [**ಅಗಸ್ತಿ, –ಕ**] ಈ ಹೆಸರಿನ ಒಬ್ಬಋಷಿ,

ಅಗತ್ಥಿಯ}. ಒಂದು ವೃಕ್ಷ ವಿಶೇಷ, ಒಂದು ನಕ್ಷತ್ರ, ೮೮ ಮಹಾ ಗ್ರಹಗಳಲ್ಲಿ ೫೪ನೇ ಮಹಾ ಗ್ರಹ(ಠಾ)

ಅಗನ್ನ. ವಿ: [**ಅಗಣ್ಯ**] ಎಣಿಸಲಾಗದ್ದು(ಉಪ), ಅಮುಖ್ಯ

ಅಗನ್ನ. ವಿ: [**ಅಕರ್ಣ್ಯ**] ಕೇಳಲು ಯೋಗ್ಯವಲ್ಲದ(ಸೂಅ)

ಅಗಮ. ನ: [**ಅಗಮ**]ಆಕಾಶ, ಗಗನ(ಭಗ), ಮರ, ಬೆಟ್ಟ, ಚಲಿಸದಿರುವ, ವಿ: ಚಲಿಸದಿರುವ, ಸ್ಥಾವರ,

ಅಗಮಿಯ. ವಿ: [ಅಗಮಿಕ] ಒಂದೇ ರೀತಿಯ ಪಾಠ ಇಲ್ಲದಿರುವ ಶಾಸ್ತ್ರ ಅಥವಾ ಗಾಥೆಯೇ ಮೊದಲಾದ ಪದ್ಯಗಳಿರುವಂಥದು, "ಗಾಹಾಇ ಅಗಮಿಯಂ ಖಲು"(ವಿಸೇ)

ಅಗಮ್ಮ ವಿ: [ಅಗಮ್ಯ] ಹೋಗಲು ಯೋಗ್ಯವಲ್ಲದ, ಸ್ತ್ರೀ: ಭೋಗಿಸಲು ಯೋಗ್ಯಳಲ್ಲದ, ಪರಸ್ತ್ರೀ, ಸೋದರಿ ಇತ್ಯಾದಿ. **–ಗಾಮಿ.** ವಿ: [–ಗಾಮಿನ್] ಪರಸ್ತ್ರೀಯನ್ನು ಭೋಗಿಸುವವನು, ಅನರ್ಹಳಾದ ಸ್ತ್ರೀಯನ್ನು ಭೋಗಿಸುವವನು, ಪರದಾರ ಭೋಗಿ (ಪಣ್ಣ)

ಅಗಯ. ನ:[ಅಗದ] ಔಷಧ(ಸುಪಾ) ರೋಗವಿಲ್ಲದವನು

ಅಗಯ. ಪು: [ದೇ] ದೈತ್ಯ, ದಾನವ(ದೆ)

ಅಗರ. ಪುಂ.ನ: [ಅಗರು] ಅಗರು, ಸುಗಂಧದ್ರವ್ಯ, ಕಾಷ್ಠ ವಿಶೇಷ (ಪಣಹ)

ಅಗರಲ. ವಿ: [ಅಗರಲ] ಸುವಿಭಕ್ತ, ಸ್ಪಷ್ಟ, (ಔಪ)

ಅಗರು. 'ಅಗರ' ಶಬ್ದವನ್ನು ನೋಡುವುದು (ಕುಮಾ)

ಅಗರುಅ. ವಿ: [ಅಗರುಕ] ದೊಡ್ಡದಲ್ಲದ, ಚಿಕ್ಕ. ಲಘು (ಗಉಡ)

ಅಗರುಲಹು. ವಿ: [ಅಗುರುಲಘು] ಭಾರವಾದ್ದೂ ಅಲ್ಲದ ಹಗುರವಾದ್ದೂ ಅಲ್ಲದ, ಆಕಾಶ, ಪರಮಾಣು ಇತ್ಯಾದಿ(ವಿಸೇ) **–ಣಾಮ.** ನ: [–ನಾಮನ್] ಕರ್ಮವಿಶೇಷ: ಇದರಿಂದ ಜೀವಿಗಳ ಶರೀರ ಭಾರಿಯೂ ಆಗದೆ ಹಗುರವೂ ಆಗದೆ ಇರುತ್ತದೆ

ಅಗಲದತ್ತ. ಪು: [ಅಗಡದತ್ತ] ಒಬ್ಬ ರಥಿಕನ ಮಗ (ಮಹಾ)

ಅಗಲುಯ. 'ಅಗರ' ಶಬ್ದವನ್ನು ನೋಡುವುದು (ಔಪ)

ಅಗಹಣ. ಪು: [ದೇ]ಕಾಪಾಲಿಕ, ತಲೆಬುರುಡೆಯಲ್ಲಿಯೇ ಉಣ್ಣುವುದು ನೀರು ಕುಡಿಯುವುದನ್ನು ಮಾಡುವ ಪಂಥದವರು(ದೇ)

ಅಗಹಿಲ್ಲ. ವಿ: [ಅಗ್ರಹಿಲ] ಭೂತಾದಿಗಳ ಆವೇಶ ಹೊಂದದವರು(ಭೂತ ಹಿಡಿಯದವರು), ಹುಚ್ಚರಲ್ಲದ, **–ರಾಯ.** ಪು: [–ರಾಜ] ವಾಸ್ತವದಲ್ಲಿ ಹುಚ್ಚನಲ್ಲದಿದ್ದರೂ ಹುಚ್ಚು ಪ್ರಜೆಗಳ ಆಕ್ರಮಣದಿಂದ ತೋರಿಕೆಯ ಹುಚ್ಚನಾಗಿದ್ದವನು (ತೀ)

ಅಗಾಢ. ವಿ: [ಅಗಾಧ] ಅತ್ಯಂತ ಆಳವಾದ(ಸೂಅ), ಗಂಭೀರ

ಅಗಾಮಿಯ. ವಿ: [ಅಗ್ರಾಮಿಕ] ಗ್ರಾಮ ರಹಿತ,(ಔಪ) ಹಳ್ಳಿಯವನಲ್ಲದ

ಅಗಾರ. ಪು: [ಅಕಾರ] 'ಅ' ಅಕ್ಷರ

ಅಗಾರ. ನ: [ಅಗಾರ] ಮನೆ, ಪು: ಗೃಹಸ್ಥ, **ಸಂಸಾರಿ –ತ್ಥ.** ವಿ: [–ಸ್ಥ] ಗೃಹಸ್ಥ, ಗೃಹೀ. **–ಧಮ್ಮ.** ಪು: [–ಧರ್ಮ] ಶ್ರಾವಕ ಧರ್ಮ

ಅಗಾರಗ. ವಿ: [ಅಕಾರಕ] ಕೆಲಸ ಮಾಡದವ

ಅಗಾರಿ. ವಿ: [ಅಗಾರಿನ್] ಗೃಹಸ್ಥ, ಸಂಸಾರಿ (ಸೂಅ)

ಅಗಾರೀ. ಸ್ತ್ರೀ: [ಅಗಾರಿಣೀ] ಗೃಹಿಣಿ (ವವ)

ಅಗಾಲ. 'ಅಯಾಲ' ಶಬ್ದವನ್ನು ನೋಡುವುದು

ಅಗಾಹ. ವಿ: [ಅಗಾಧ] ಆಳವಾದ, ಗಂಭೀರವಾದ (ಪಾಅ)

ಅಗಿಣಿ. 'ಅಗ್ಗಿ' ಶಬ್ದವನ್ನು ನೋಡುವುದು

ಅಗಿಲಾ. ಸ್ತ್ರೀ: [ಅಗ್ಲಾನಿ] ಖಿನ್ನತೆಯಿಲ್ಲದಿರುವುದು, ಉತ್ಸಾಹ(ಠಾ), ಮನೋದೌರ್ಬಲ್ಯ ವಿಲ್ಲದಿರುವುದು

ಅಗಿಲಾ. ಸ್ತ್ರೀ: [ದೇ] ತಿರಸ್ಕಾರ, ಅವಜ್ಞೆ (ದೇ)

ಅಗೀಯ. ವಿ: [ಅಗೀತ] ಶಾಸ್ತ್ರಗಳ ಸಂಪೂರ್ಣ ಜ್ಞಾನವಿಲ್ಲದವನು (ಜೈನ ಸಾಧು) (ಉಪ)

ಅಗೀಯತ್ಥ. ವಿ: [ಅಗೀತಾರ್ಥ] ಮೇಲಿನ ಶಬ್ದವನ್ನು ನೋಡುವುದು

ಅಗುಜ್ಝಹರ. ವಿ: [ದೇ] ಗುಟ್ಟು ವಾತನ್ನು ಹೊರಗೆಡಹುವವನು (ದೇ)

ಅಗುಣ. 'ಅಉಣ' ಶಬ್ದವನ್ನು ನೋಡುವುದು (ಪಿ)

ಅಗುಣ. ವಿ: [ಅಗುಣ] ಗುಣರಹಿತ, ನಿರ್ಗುಣ, (ಗಉಡ), **ಪು:** ದೋಷ (ದಸ)

ಅಗುಣಾಸೀ. 'ಏಗೂಣಾಸೀ' ಶಬ್ದವನ್ನು ನೋಡುವುದು

ಅಗುಣಿ. ವಿ: [ಅಗುಣಿನ್] ಗುಣವಿಲ್ಲದವನು, ನಿರ್ಗುಣ (ಗ ಉಡ)

ಅಗುರು}. ವಿ: [ಅಗುರು] ದೊಡ್ಡದಲ್ಲದ್ದು, ಚಿಕ್ಕದು,
ಅಗುರುಅ}. ಲಘುವಾದ, ಸುಗಂಧ ದ್ರವ್ಯ, ಕಾಷ್ಠವಿಶೇಷ, ಅಗುರು–ಚಂದನ "ಧೂವೇಣ ಕಿಂಅಗುರುಣೋ ಕಿಮು ಕಂಕಣೇಣ"(ಪಉಮ)

ಅಗುರುಲಹು}. ವಿ: 'ಅಗರುಲಹು' ಶಬ್ದವನ್ನು
ಅಗುರುಲಹುಅ}. ನೋಡುವುದು

ಅಗುಲು. 'ಅಗುರು' ಶಬ್ದವನ್ನು ನೋಡುವುದು

ಅಗ್ಗ. ನ: [ಅಗ್ರವ] ಪ್ರಕರ್ಷ, ಹೆಚ್ಚಳ, ಆಧಿಕ್ಯ

ಅಗ್ಗ. ಪುಂನ: [ದೇ] ಪರಿಹಾಸ, ವರ್ಣನೆ

ಅಗ್ಗ. ವಿ: [ಅಗ್ರ್ಯ]

ಮುಂದಿನ ಭಾಗ, ತುದಿಯ ಭಾಗ, ಮೇಲಿನ ಭಾಗ(ಕುಮಾ) ಮೊದಲ ಭಾಗ (ನಿಚೂ), ಪರಿಮಾಣ(ಆಚೂ) ವಿ: ಪ್ರಧಾನ, ಶ್ರೇಷ (ಸುಪಾ), **–ಕ್ಖಂಧ.** [**–ಸ್ಕಂಧ**]. ಸೈನ್ಯದ ಅಗ್ರ ಭಾಗ(ಸೇ).**–ಗಾಮಿಗ.** ವಿ: [**–ಗಾಮಿಕ**], ಅಗ್ರಗಾಮಿ= ಮುಂದೆ ನಡೆಯುವವನು. **–ಜ.** – **'ಯ' ನೋಡುವುದು**(ದೇ) **–ಜಮ್ಮ.** [**–ಜನ್ಮನ್**] –**'ಯು'** ನೋಡುವುದು(ಉಪ)**–ಜಾಯು.** [**–ಜಾತ**].'ಯು' ನೋಡುವುದು(ಆಚಾ). **–ಜೀಹಾ.** ಸ್ತ್ರೀ: **ಜಿಹ್ವಾ**] ನಾಲಿಗೆಯ ಅಗ್ರಭಾಗ (ತುದಿ), **–ಣಿಯ. –ಣೀ.** [**–ಣೀ**]= ಮುಖಂಡ, ನೇತಾ, ನಾಯಕ(ಕಪ್ಪ)**–ತಾವಸ.** ಪು: [**–ತಾಪಸ**] ಋಷಿಯ ಹೆಸರು, ತಪಸ್ಸು ಮಾಡುವವನು (ಸುಜ್ಜ). **–ದ್ಧ.** ನ: [**ಅಗ್ರಾರ್ಧ**] ಪೂರ್ವಾರ್ಧ (ನಿಚೂ). **–ಪಿಂಡ.** ಪು: [**–ಪಿಂಡ**] ಒಂದು ಬಗೆಯ ಭಿಕ್ಷಾನ್ನ(ಆಚಾ). **–ಪ್ಪಹರಿ.** ವಿ: [**–ಪ್ರಹಾರಿನ್**] ಮೊದಲು ಹೊಡೆಯುವವನು (ಆವ). **–ಬೀಯ.** ವಿ: [**–ಬೀಜ**] ಯಾವುದರಲ್ಲಿ ಮೊದಲೇ ಬೀಜ ಉತ್ಪನ್ನವಾಗಿ ಬಿಡುತ್ತದೋ ಅದು ಅಥವಾ ಬೀಜದ ಉತ್ಪತ್ತಿಯಲ್ಲಿ ಅಗ್ರಭಾಗವೇ ಕಾರಣವಾಗುವ ಮಾವು, ಕೋರಂಟಕವೆ ಮೊದಲಾದ ವನಸ್ಪತಿಗಳು. (ಪಣಣಾ), **–ಮಣಿ.** ಪು: [**–ಮಣಿ**] ಮುಖ್ಯ, ಶ್ರೇಷ್ಠ, ಶಿರೋಮಣಿ(ಉಪ). **–ಮಹಿಸೀ.** ಸ್ತ್ರೀ: [**–ಮಹಿಷೀ**) ಪಟ್ಟದ ರಾಣಿ(ಸುಪಾ). **–ಯ.** ವಿ: [**–ಜ**] ಮೊದಲು ಹುಟ್ಟುವವನು. ಪು: ಬ್ರಾಹ್ಮಣ. ಅಣ್ಣ ಸ್ತ್ರೀ: ಅಕ್ಕ.**–ಲೋಗ.** ಪು: [**–ಲೋಕ**] ಮುಕ್ತಿ ಸ್ಥಾನ, ಸಿದ್ಧಿ ಕ್ಷೇತ್ರ(ಶ್ರಾ) **–ಹತ್ಥ.** ಪು: [**–ಹಸ್ತ**]=ಕೈ ತುದಿ(ಉವಾ). ಕೈನ ಆಧಾರ(ಸೇ) ಬೆರಳು(ಪ್ರಾಪ)

ಅಗ್ಗ. ನ: [ಅಗ್ರ] ಬಹಳ, ವಿಪುಲ. ಉಪಕಾರ. **–ಭಾವ.** ನ: [**–ಭಾವ**] ಧನಿಷ್ಠಾ ನಕ್ಷತ್ರದ ಗೋತ್ರ. **–ಮಾಹಿಸೀ.** **'–ಮಹಿಸೀ'** ಶಬ್ದವನ್ನು ನೋಡುವುದು

ಅಗ್ಗ. ವಿ: [ಅಗ್ರ] ಶ್ರೇಷ್ಠ, ಉತ್ತಮ(ಸೇ), ಪ್ರಧಾನ, ಮುಖ್ಯ(ಉತ್ತ)

ಅಗ್ಗಓ. ಅ: [ಅಗ್ರತಸ್] ಎದುರುಗಡೆ, ಮುಂಭಾಗದಲ್ಲಿ

ಅಗ್ಗಂಥ. ವಿ: [**ಅಗ್ರಂಥ**] ಹಣವಿಲ್ಲದವನು, ಪು: ಜೈನ ಸಾಧು(ಔಪ)

ಅಗ್ಗಕ್ಖಂಧ. ಪು: [ದೇ] ಯುದ್ಧಭೂಮಿಯ ಮುಂಭಾಗ

ಅಗ್ಗಲ. ನ: [**ಅರ್ಗಲ**] ಬಾಗಿಲಿನ ಅಗಳಿ, ಚಿಲಕ(ದಸ) ಒಂದು ಮಹಾ ಗ್ರಹ(ಸುಜ್ಜ) **–ಪಾಸಯ.** ಪು: [**–ಪಾಶಕ**] ಅಗಳಿಯನ್ನು ಹಾಕುವ ಜಾಗ **–ಪಾಸಾಯ.** ಪು: [**–ಪಾಸಾದ**]=ಅಗಳಿ ಹಾಕುವ ಮನೆ(ರಾಯ)

ಅಗ್ಗಲ. ವಿ: [ದೇ] ಅಧಿಕ, ಹೆಚ್ಚು(ಪಿಂಗ)

ಅಗ್ಗಲಾ. ಸ್ತ್ರೀ: [**ಅರ್ಗಲಾ**] ಅಗಳಿ, ವಿಯೋಗದ ದುಃಖ, (ಪಾಅ) ಹ

ಅಗ್ಗವೇಅ. ಪು. [ದೇ] ನದಿಯ ಪ್ರವಾಹ

ಅಗ್ಗಲಿಅ. ವಿ: [**ಅರ್ಗಲಿತ**] ಅಗಳಿಯಿಂದ ಬಾಗಿಲು ಮುಚ್ಚಲ್ಪಟ್ಟವನು(ಸುರ)

ಅಗ್ಗಹ. ಪು: [**ಆಗ್ರಹ**] ಆಗ್ರಹ, ಹಠ, ಕೋಪ, ಆವೇಶ(ಸೂಅ) ಆಸಕ್ತಿ, ದೃಢಸಂಕಲ್ಪ

ಅಗ್ಗಹಣ. ನ: [**ಅಗ್ರಹಣ**] ಅಜ್ಞಾನ(ಸುರ) ಸ್ವೀಕರಿಸದಿರುವುದು(ಸೇ)

ಅಗ್ಗಹಣ. ನ: [**ದೇ, ಅಗ್ರಹಣ**] ಅನಾದರ, ತಿರಸ್ಕಾರ(ದೇ), ಕಡೆಗಣಿಸುವುದು

ಅಗ್ಗಹಣಿಯಾ. ಸ್ತ್ರೀ: [ದೇ] ಸೀಮಂತದ ಸಂಸ್ಕಾರ, ಗರ್ಭಿಣಿ ಸ್ತ್ರೀಗೆ ನಡೆಸುವ ಒಂದು ಮಂಗಳದ ಕಾರ್ಯ(ಸುಪಾ)

ಅಗ್ಗಹ. ವಿ: [**ಆಗ್ರಹಿನ್**] ಆಗ್ರಹ ಮಾಡುವವನು, ಹಠಮಾರಿ (ಸೂಅ)

ಅಗ್ಗಹಿಅ. ವಿ: [ದೇ] ನಿರ್ಮಿತವಾದ, ಸ್ವೀಕರಿಸಲ್ಪಟ್ಟ, ಒಪ್ಪಲಾದ (ಷಡ್)

ಅಗ್ಗಾಣೀ. ವಿ: [**ಅಗ್ರಣೀ**] ಯಜಮಾನ, ಪ್ರಧಾನ, ಶ್ರೇಷ್ಠ, ಮುಖಂಡ, ಬೆಂಕಿ, ವಿಷ್ಣು(ಸುರ)

ಅಗ್ಗಾರಣ. ನ: [**ಉದ್‌ಗಾರಣ**]ವಾಂತಿ, ವಮನ (ಚಾರು)

ಅಗ್ಗಾಹ. ವಿ: [**ಅಗಾಧ**] ಗಂಭೀರ, ಆಳವಾದ (ಗುರು)

ಅಗ್ಗಾಹಾರ. ಪು: [**ಅಗ್ರಾಧಾರ**] ಗ್ರಾಮ ವಿಶೇಷದ ಹೆಸರು(ಸುಪಾ)

ಅಗ್ಗಾಹಾರ. ಪು: [ದೇ. **ಅಗ್ರಾಹಾರ**] ಉಚ್ಚತರದ ವೃತ್ತಿ, ಕಸಬು

ಅಗ್ಗಾಹಾರ. ಪು. [ದೇ] ಉಚ್ಚ ವೃತ್ತಿ

ಅಗ್ಗಿ. ಪು: [ಅಗ್ನಿ] ನರಕಾವಾಸ, ಒಂದು ನರಕ ಸ್ಥಾನ, **–ಮಂತ, –ವಂತ.** ವಿ: [**–ಮತ್**]ಅಗ್ನಿಯನ್ನು ಹೊಂದಿರುವ, **–ಹುತ್ತ. '–ಹೋತ್ತ'** ಶಬ್ದವನ್ನು ನೋಡುವುದು

ಅಗ್ಗಿ. ಪುಂಸ್ತ್ರೀ: [ಅಗ್ನಿ] ಬೆಂಕಿ(ಪ್ರಾಸೂ), ಅಗ್ನಿದೇವ(ಪ್ರಾಸೂ) ಕೃತ್ತಿಕಾ ನಕ್ಷತ್ರದ ಅಧಿಷ್ಠಾತೃ ದೇವ(ತಾ), ಲೋಕಾಂತಿಕ ದೇವ ವಿಶೇಷ (ಆವಮ) ಆಹವನೀಯ, ಗಾರ್ಹಪತ್ಯ ಮತ್ತು ದಕ್ಷಿಣಗಳೆಂಬ ಮೂರು ಅಗ್ನಿಗಳು, ಜಠರಾಗ್ನಿ, **–ಆರಿಆ.** ಸ್ತ್ರೀ. [**–ಕಾರಿಕಾ**] ಅಗ್ನಿ ಕರ್ಮ, ಹೋಮ (ಕಪ್ಪೂ). **–ಉತ್ತ** ಪು: [**–ಪುತ್ರ**] ಐರಾವತ ಕ್ಷೇತ್ರದ ಒಬ್ಬ ತೀರ್ಥಂಕರನ ಹೆಸರು(ಸಮ). **–ಕುಮಾರ.** ಪು: [**–ಕುಮಾರ**] ಭವನಪತಿ ದೇವರುಗಳ ಒಂದು ಒಳ ಜಾತಿ(ಪಣಣಾ) **–ಕೋಣ.** ಪು: [**–ಕೋಣ**] ಪೂರ್ವ ಮತ್ತು ದಕ್ಷಿಣಗಳ ನಡುವಿನ ದಿಕ್ಕು(ಸುಪಾ) **–ಜಸ.** ಪು: [**–ಯಶಸ್**] ದೇವ ವಿಶೇಷ(ದೀವ). **–ಜ್ಜೋಯ.** ಪು: [**–ದ್ಯೋತ**] ಭಗವಾನ್ ಮಹಾವೀರರ ಹಿಂದಿನ ೨೦ನೇ ಬ್ರಾಹ್ಮಣ ಜನ್ಮದ ಹೆಸರು(ಆಚೂ) **–ಟ್ಠ.** ವಿ: [**–ಸ್ಥ**] ಬೆಂಕಿಯಲ್ಲಿ ಇದ್ದ(ಹೇ). **–ಟ್ಠೋಮ.** ಪು: [**–ಷ್ಟೋಮ**] ಅಗ್ನಿ ಷ್ಟೋಮ ಯಾಗ. **–ಥಂಭಣೀ.** ಸ್ತ್ರೀ: [**–ಸ್ತಂಭನೀ**] ಬೆಂಕಿಯ ಶಕ್ತಿಯನ್ನು ತಡೆಯುವ ಒಂದು ವಿದ್ಯೆ(ಪ ಉಮ). **–ದತ್ತ.** ಪು: [**–ದತ್ತ**] ಭಗವಾನ್ ಪಾರ್ಶ್ವನಾಥರ ಸಮಕಾಲೀನ ಐರಾವತ ಕ್ಷೇತ್ರದ ತೀರ್ಥಂಕರ ದೇವ(ತಿತ್ಥ). ಭದ್ರಬಾಹು ಸ್ವಾಮಿಯ ಒಬ್ಬ ಶಿಷ್ಯ(ಕಪ್ಪ). **–ದಾಣ.** ಪು: [**–ದಾನ**] ಏಳನೇ ವಾಸುದೇವನ ತಂದೆಯ ಹೆಸರು(ಪ ಉಮ). **–ದೇವ.** ಪು: [**–ದೇವ**] ದೇವ ವಿಶೇಷ(ದೀವ). **–ಭೂಇ.** ಪು: [**–ಭೂತಿ**] ಭಗವಾನ್ ಮಹಾವೀರನ ಎರಡನೇ ಗಣಧರ(ಕಪ್ಪ). ಭಗವಾನ್ ಮಹಾವೀರನ ಹಿಂದಿನ ಹದಿನೆಂಟನೇ ಬ್ರಾಹ್ಮಣ ಜನ್ಮದ ಹೆಸರು(ಆಚೂ). **–ಮಾಣವ.** ಪು: [**–ಮಾಣವ**]ಅಗ್ನಿ ಕುಮಾರ ದೇವರುಗಳ ಉತ್ತರ ದಿಕ್ಕಿನ ಇಂದ್ರ(ತಾ). **–ಮಾಲಿ.** ಸ್ತ್ರೀ: [**–ಮಾಲೀ**] ಒಬ್ಬ ಇಂದ್ರಾಣಿ(ದೀವ)**–ವೇಸ.** ಪು: [**–ವೇಶ**] ಈ ಹೆಸರಿನ ಒಬ್ಬ ಪ್ರಸಿದ್ಧ ಋಷಿ(ಣಂದಿ), ನ: ಒಂದು ಗೋತ್ರ(ಕಪ್ಪ) **–ವೇಸ.** [**–ವೇಶ್ಮನ್**] ಚತುರ್ದಶಿ ತಿಥಿ(ಜಂ). ದಿನದ ೨೨ನೇ ಮುಹೂರ್ತ(ಚಂದ) **–ವೇಸಾಯಣ.** ಪು: [**–ವೈಶ್ಯಾಯನ**] ಅಗ್ನಿವೇಶ ಋಷಿಯ ಮೊಮ್ಮಗ (ಣಂದಿ). ಅಗ್ನಿವೇಶ ಗೋತ್ರದಲ್ಲಿ ಹುಟ್ಟಿದವನು. (ಕಪ್ಪ)ಗೋಶಾಲಕನ ಒಬ್ಬ ದಿಕ್ಚರ(ಭಗ). ದಿನದ ೨೨ನೇ ಮುಹೂರ್ತ. **–ಸಕ್ಕಾರ.** ಪು: [**–ಸಂಸ್ಕಾರ**] ಶಾಸ್ತ್ರೋಕ್ತವಾಗಿ ಮಾಡುವ ದಹನ ಸಂಸ್ಕಾರ (ಆವಮ). **–ಸಪ್ಪಭಾ.** ಸ್ತ್ರೀ: [**–ಸಪ್ರಭಾ**] ಭಗವಾನ್ ವಾಸುಪೂಜ್ಯರ ದೀಕ್ಷಾ ಸಮಯದ ಪಲ್ಲಕ್ಕಿಯ ಹೆಸರು(ಸಮ). **–ಸಮ್ಮ.** ಪು: [**–ಶರ್ಮನ್**] ಒಬ್ಬ ಪ್ರಸಿದ್ಧ ತಪಸ್ವೀ ಬ್ರಾಹ್ಮಣ(ಆಚಾ). **–ಸಿಹ.** ಪು: [**–ಶಿಖ**] ೭ನೇ ವಾಸುದೇವನ ತಂದೆ(ಸಮ). ಅಗ್ನಿಕುಮಾರ ದೇವರುಗಳ ದಕ್ಷಿಣ ದಿಕ್ಕಿನ ಇಂದ್ರ–ಅಗ್ನಿಯಂತೆ ಶಿಖೆ ಉಳ್ಳವನು, ದೀಪ, **–ಸಿಹ.** ಪು: [**–ಸಿಂಹ**] ಒಬ್ಬ ಜೈನಮುನಿ(ಉಪ). **–ಸಿಹಾಚರಣ.** ಪು: [**–ಶಿಖಾಚರಣ**] ಅಗ್ನಿ ಶಿಖೆಯಲ್ಲಿ ಯಾವುದೇ ಬಾಧೆಯಿಲ್ಲದೆ ಪ್ರವೇಶಿಸುವ ಸಾಮರ್ಥ್ಯ ಹೊಂದಿರುವ ಸಾಧು (ಪವ). **–ಸೀಹ.** ಪು: [**–ಸಿಂಹ**] ೭ನೇ ವಾಸುದೇವನ ತಂದೆಯ ಹೆಸರು(ತಾ). **–ಸೇಣ.** ಪು: [**–ಷೇಣ**] ಐರಾವತ ಕ್ಷೇತ್ರದ ಮೂರನೇ ಮತ್ತು ೨೨ನೇ ತೀರ್ಥಂಕರ(ತಿತ್ಥ). **– ಹೋತ್ತ.** ನ: [**– ಹೋತ್ರ**] ಹೋಮ, ಅಗ್ನಿಕಾರ್ಯ(ವಿಸೇ). ಬ್ರಾಹ್ಮಣ(ಪ ಉಮ). **– ಹೋತ್ತವಾಇ.** ವಿ: [**–ಹೋತ್ರವಾದಿನ್**] ಹೋಮದಿಂದಲೇ ಸ್ವರ್ಗ ಪ್ರಾಪ್ತವಾಗುತ್ತದೆ ಎನ್ನುವುದನ್ನು ಒಪ್ಪುವವನು (ಸೂಅ). **–ಹೋತ್ತಿಯ.** ವಿ: [**–ಹೋತ್ರಿಕ**] ಹೋಮ ಮಾಡುವವನು

ಅಗ್ಗಿಅ. ಪು: [ಅಗ್ನಿಕ] ಜಮದಗ್ನಿ ಎಂಬ ಹೆಸರಿನ ಒಬ್ಬ ತಪಸ್ವಿ (ಆಚೂ) ಏನು ತಿಂದರೂ ಅದನ್ನು ಕೂಡಲೇ ಜೀರ್ಣಮಾಡಿಬಿಡುವ ಭಸ್ಮಕ ರೋಗ

ಅಗ್ಗಿಅ. ಪು: [ದೇ] ಇಂದ್ರಗೋಪವೆಂಬ ಒಂದು ಜಾತಿಯ ಕ್ಷುದ್ರ ಕೀಟ(ದೇ). ವಿ: ಮಂದ

ಅಗ್ಗಿಆಯ. ಪು: [ದೇ] ಇಂದ್ರಗೋಪ, ಕ್ಷುದ್ರ ಕೀಟ ವಿಶೇಷ(ಷಡ್)

ಅಗ್ಗಿಚ್ಚ. ವಿ: [ಆಗ್ನೇಯ] ಅಗ್ನಿ ಸಂಬಂಧಿ, ಲೋಕಾಂತಿಕ ದೇವರ ಒಂದು ಜಾತಿ(ಣಾಯಾ) ಗೌತಮ ಗೋತ್ರದ ಒಂದು ಗೋತ್ರ ವಿಶೇಷ(ತಾ)

ಅಗ್ಗಿಚ್ಚಾಭ. ನ: [ಆಗ್ನೇಯಾಭ] ದೇವ ವಿಮಾನ ವಿಶೇಷ

ಅಗ್ಗಿಜ್ಝ. ವಿ: [ಅಗ್ರಾಹ್ಯ] ಸ್ವೀಕರಿಸಲು ಅರ್ಹವಲ್ಲದ್ದು(ಪ ಉಮ)

ಅಗ್ಗಿಮ. ವಿ: [ಅಗ್ರಿಮ] ಮೊದಲನೆಯ, ಪ್ರಥಮ (ಕಪ್ಪೂ), ಶ್ರೇಷ್ಠ, ಪ್ರಧಾನ, ಮುಖ್ಯ(ಸುಪಾ)

ಅಗ್ಗಿಯಯ. ಪು: [ಆಗ್ನೇಯಕ] ಈ ಹೆಸರಿನ ಒಬ್ಬ ರಾಜಪುತ್ರ(ಉಪ)

ಅಗ್ಗಿಲ. **'ಅಗ್ಗಿಲ್ಲ=ಅಗ್ನಿಲ'** ಶಬ್ದವನ್ನು ನೋಡುವುದು

ಅಗ್ಗಿಲಿಯ. **'ಅಗ್ಗಿಮ'** ಶಬ್ದವನ್ನು ನೋಡುವುದು

ಅಗ್ಗಿಲ್ಲ. ಪು: [ಅಗ್ನಿಲ] ಒಂದು ಮಹಾಗ್ರಹ(ತಾ)

ಅಗ್ಗಿಲ್ಲ. ವಿ: [ಅಗ್ರಿಮ] ಮುಂದೆ ಇರುವವನು, ಮುಖಂಡ

ಅಗ್ಗೀಯ. **'ಅಗೀಯ'** ಶಬ್ದವನ್ನು ನೋಡುವುದು

ಅಗ್ಗೀವಯ. ನ: [ದೇ] ಮನೆಯ ಒಂದು ಭಾಗ

ಅಗ್ಗುಚ್ಛ. ವಿ: [ದೇ] ಪ್ರಸಿದ್ಧವಾದ, ಪರಿಮಿತವಾದ, ನಿಶ್ಚಿತ(ಷಡ್)

ಅಗ್ಗೇ. ಅ: [ಅಗ್ರೇ] ಮುಂದೆ, ಮೊದಲನೆಯ, **-ಉಣ.** ವಿ: [-ತನ] ಮುಂದಿನ, ಮೊದಲನೆಯುದರ. **-ಸರ.** ವಿ: [-ಸರ] ಮುಖಂಡ, ನಾಯಕ(ಶ್ರಾ)

ಅಗ್ಗೇಈ. ಸ್ತ್ರೀ: [ಆಗ್ನೇಯೀ] ಅಗ್ನಿಮೂಲೆ, ದಕ್ಷಿಣ-ಪೂರ್ವ ದಿಕ್ಕು(=ಅಗ್ನಿಮೂಲೆ)(ಧಣ)

ಅಗ್ಗೇಣಿಯ. ನ: [ಅಗ್ರಾಯಣೀಯ] ಎರಡನೇ ಪೂರ್ವ, ಹನ್ನೆರಡನೇ ಜೈನಾಗಮದ ಎರಡನೇ ಮಹಾ ಭಾಗ (ಸಮ)

ಅಗ್ಗೇಯ. ವಿ: [ಆಗ್ನೇಯ] ಅಗ್ನಿಗೆ ಸಂಬಂಧಿಸಿದ್ದು. ಆಗ್ನೇಯ ದಿಕ್ಕು

ಅಗ್ಗೇಣೀ. **'ಅಗ್ಗೇಈ'** ಶಬ್ದವನ್ನು ನೋಡುವುದು (ಆವಮ್)

ಅಗ್ಗೇಣೇಯ. **'ಅಗ್ಗೇಣಿಯ'** ಶಬ್ದವನ್ನು ನೋಡುವುದು

ಅಗ್ಗೇಯ. ವಿ: [ಆಗ್ನೇಯ] ಅಗ್ನಿ ಸಂಬಂಧವಾದ್ದು. ಅಗ್ನಿಯ, (ಪಉಮ), ನ: ಶಾಸ್ತ್ರ ವಿಶೇಷ, ವತ್ಸ ಗೋತ್ರದ ಒಂದು ಶಾಖಾ ಗೋತ್ರ, ಅಗ್ನಿಮೂಲೆ (ಭವಿ)

ಅಗ್ಗೋದಯ. ನ: [ಅಗ್ರೋದಕ] ಸಮುದ್ರದ ಅಲೆಗಳ ಏರಿಳಿತ(ಸಮ)

ಅಗ್ಘ, ಅಕ: [ರಾಜ್] ಶೋಭಿಸು, ಹೊಳೆ,-**'ಅಗ್ಘಇ'**

ಅಗ್ಘ, ಸಕ: [ಆ-ಘ್ರಾ] ಮೂಸಿನೋಡು

ಅಗ್ಘ, ಪು: [ಅರ್ಘ] ಒಂದು ದೇವ-ವಿಮಾನ

ಅಗ್ಘ, ಸಕ: [ಅರ್ಹ್] ಯೋಗ್ಯನೆನಿಸು

ಅಗ್ಘ, ಸಕ [ಅರ್ಘ್] ಬೆಲೆಬಾಳು, ಆದರಿಸು

ಅಗ್ಘ. ಪು: [ಅರ್ಘ] ಒಂದು ದೇವವಿಮಾನ, ಮೀನಿನ ಒಂದು ಜಾತಿ(ಜೀವ) ಪ್ರಜಾ ಸಾಮಗ್ರಿ(ಣಾಯ), ಪೂಜೆಯಲ್ಲಿ ಜಲಾದಿಯನ್ನು ನೀಡುವುದು (ಕುಮಾ), ಬೆಲೆ, ಕ್ರಯ, ಚಾತುರ್ಯ(ನಿಚೂ) **-ವತ್ತ.** ನ: [-ಪಾತ್ರ] **ಪೂಜೆಯ** ಪಾತ್ರೆ

ಅಗ್ಘ. ವಿ: [ಅರ್ಘ್ಯ] ಪೂಜೆಯಲ್ಲಿ ನೀಡಲಾಗುವ ಜಲಾದಿ ದ್ರವ್ಯ, ಬಹಳ ಬೆಲೆಬಾಳುವ(ಪ್ರಾಪ)

ಅಗ್ಘವ. ಸಕ: [ಪೂರ್] ಪೂರ್ಣಗೊಳಿಸು

ಅಗ್ಘವಿಯ. ವಿ: [ಪೂರ್ಣ] ತುಂಬಿರುವ, ಸಂಪೂರ್ಣ, ಪೂರ್ಣಗೊಳಿಸಿದ(ಸುಪಾ)

ಅಗ್ಘವಿಯ. ವಿ: [ಅರ್ಘಿತ] ಪೂಜಿತ, ಸತ್ಕೃತನಾದ, ಸಮ್ಮಾನಿತನಾದವನು(ಸೇ, ಗಉಡ)

ಅಗ್ಘಾ, ಸಕ: [ಆ+ಘ್ರಾ] ಮೂಸಿನೋಡು, ವ. ಕೃ- ಅಗ್ಘಾಂತ, ಅಗ್ಘಾಯಮಾಣ(ಗಾ) **ಕವಕೃ-** ಅಗ್ಘಾಇಜ್ಜಮಾಣ(ಪಣ್ಣ)

ಅಗ್ಘಾಇ. ವಿ: [ಆಘ್ರಾಯಿನ್] ಮೂಸಿನೋಡುವವನು (ಕಾಪ್ರ)

ಅಗ್ಘಾಇಅ. ವಿ: [ಆಘ್ರಾತ] ಮೂಸಿಸಲ್ಪಟ್ಟ(ಗಾ)

ಅಗ್ಘಾಇಜ್ಜಮಾಣ **'ಅಗ್ಘಾ.'** ಶಬ್ದವನ್ನು ನೋಡುವುದು

ಅಗ್ಘಾಇರ. ವಿ [ಆಘ್ರಾತೃ] ಮೂಸಿನೋಡುವವನು, ಸ್ತ್ರೀ: -ರೀ (ಗಾ)

ಅಗ್ಘಾಡ. ಸಕ : [ಪೂರ್] ಪೂರ್ತಿಗೊಳಿಸು, **'ಅಗ್ಘಾಡಇ'** (ಹೇ)

ಅಗ್ಘಾಡ}. ಪು: [ದೇ] ವೃಕ್ಷ ವಿಶೇಷ, ಉತ್ತರಾಣಿ

ಅಗ್ಘಾಡಗ}. ಗಿಡ, ಶಾಜೀರಿಗೆ(ದೇ)

ಅಗ್ಘಾಣ. ವಿ: [ದೇ] ತೃಪ್ತ, ಸಂತುಷ್ಟನಾದವನು(ದೇ)

ಅಗ್ಘಾಯ. ವಿ: [ಆಘ್ರಾತ] ಮೂಸಿ ನೋಡಲ್ಪಟ್ಟ (ಪಾಅ), ಆಹ್ವಾನಿಸಲ್ಪಟ್ಟವನು (ವಿಸೇ)

ಅಗ್ಘಾಯಮಾಣ. **'ಅಗ್ಘ=ಅರ್ಘ'** ಶಬ್ದವನ್ನು ನೋಡುವುದು

ಅಗ್ಘಿಯು. ವಿ: [ರಾಜಿತ] ಶೋಭಿತ, ರಾಜಿತ (ಕುಮಾ)

ಅಗ್ಘಿಯ. ವಿ: [**ಅರ್ಘಿತ**] ಬಹಳ ಬೆಲೆಬಾಳುವ(ನಿಚೂ), ಪೂಜಿತ(ದೇ)

ಅಗ್ಘೋದಯ. ನ: [**ಅರ್ಘೋದಕ**] ಪೂಜೆಗೆ ಬಳಸುವ ನೀರು (ಅಭಿ)

ಅಘ. ನ: [**ಅಘ**] ಪಾಪ, ಕುಕರ್ಮ, ದುಃಖ, ಶೋಚನೀಯ, ಶೋಕಕ್ಕೆ ಕಾರಣವಾದ್ದು

ಅಘೋ '**ಅ ಹೋ**' ಶಬ್ದವನ್ನು ನೋಡುವುದು

ಅಚಕ್ಖು. **ಪುಂನ:** [**ಅಚಕ್ಷುಸ್**] ಕಣ್ಣನ್ನು ಹೊರತುಪಡಿಸಿ ಉಳಿದ ಇಂದ್ರಿಯುಗಳು ಮತ್ತು ಮನಸ್ಸು, ಇವುಗಳಿಂದ ಉಂಟಾಗುವ ಸಾಮಾನ್ಯ ಜ್ಞಾನ(ದಂ) ವಿ: ಕುರುಡ(ಕಮ್ಮ). **–ದಂಸಣ.** **ನ:** [**–ದರ್ಶನ**] ಕಣ್ಣನ್ನು ಹೊರತುಪಡಿಸಿ ಉಳಿದ ಇಂದ್ರಿಯಗಳು ಮತ್ತು ಮನಸ್ಸು, ಇವುಗಳಿಂದ ಉಂಟಾಗುವ ಸಾಮಾನ್ಯ ಜ್ಞಾನ(ಸಮು), **–ದಂಸಣಾವರಣ.** ನ: –[**ದರ್ಶನಾವರಣ**] ಅಚಕ್ಷು ದರ್ಶನವನ್ನು ತಡೆಯುವ ಕರ್ಮ(ತಾ). **–ಫಾಸ.** **ಪು:** [**–ಸ್ಪರ್ಶ**] ಕತ್ತಲೆ (ಣಾಯಾ)

ಅಚಕ್ಖುಸ. ವಿ: [**ಅಚಾಕ್ಷುಷ**] ಕಣ್ಣಿನಿಂದ ನೋಡಲು ಸಾಧ್ಯವಿಲ್ಲದ್ದು (ಪಣಹ)

ಅಚಕ್ಖುಸ್ಸ. ವಿ: [**ಅಚಕ್ಷುಷ್ಯ**] ಯಾವುದನ್ನು ನೋಡಲು ಮನಸ್ಸು ಬಯಸುವುದಿಲ್ಲವೋ ಅದು(ಬೃಹ)

ಅಚರ. ವಿ: [**ಅಚರ**] ಭೂಮಿಯೇ ಮೊದಲಾದ ಸ್ಥಿರ ಪದಾರ್ಥಗಳು, ಸ್ಥಾವರ (ದಂಸ)

ಅಚಲ. ವಿ: [**ಅಚಲ**] ಚಲಿಸದಿರುವುದು, ನಿಶ್ಚಲ, ಸ್ಥಿರ (ಆಚಾ). ಯದುವಂಶದ ರಾಜ ಅಂಧಕ ವೃಷ್ಣಿಯ ಒಬ್ಬ ಮಗನ ಹೆಸರು. ಒಬ್ಬ ಬಲದೇವನ ಹೆಸರು(ಪವ). ಪರ್ವತ(ಗಉಡ), ಅಗಳಿ, ಚಿಲಕ, ಈಶ್ವರ. ರಾಮಚಂದ್ರನ ತಮ್ಮನೊಂದಿಗೆ ಜೈನದೀಕ್ಷೆ ತೆಗೆದುಕೊಂಡ ಒಬ್ಬ ರಾಜ(ಪ ಉಮ). **–ಪುರ.** **ನ:** [**–ಪುರ**] ಬ್ರಹ್ಮ ದ್ವೀಪದ ಹತ್ತಿರದ ಒಂದು ನಗರ. (ಕಪ್ಪ). **–ಪ್ಪ.** **ನ:** [**ಅಚಲಾತ್ಮನ್**] ಹಸ್ತದ ಒಗಟನ್ನು(ರಹಸ್ಯ) ಲಳ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ. **–ಭಾಯ.ಪು:** [**–ಭ್ರಾತೃ**] ಭಗವಾನ್ ಮಹಾವೀರರ ಒಂಬತ್ತನೆಯ ಗಣಧರ(ಕಪ್ಪ)

ಅಚಲ. ನ: [ದೇ] ಮನೆ, ಮನೆಯ ಹಿಂಭಾಗ, ವಿ: ಹೇಳಲಾದ, ನಿಷ್ಠುರ, ನಿರ್ದಯ, ನೀರಸ, ಒಣಗಿದ (ದೇ)

ಅಚಲ. ಪು: [ಅಚಲ]ಆರನೇ ರುದ್ರ–ಪುರುಷ

ಅಚಲಾ. ಸ್ತ್ರೀ: [ಅಚಲಾ] ಭೂಮಿ, ಒಬ್ಬ ಇಂದ್ರಾಣಿ,

ಅಚಿಂತ. ವಿ: [ಅಚಿಂತ] ನಿಶ್ಚಿಂತ, ಚಿಂತೆಯಿಲ್ಲದ

ಅಚಿಂತ. ವಿ: [ಅಚಿಂತ್ಯ] ಯಾವುದನ್ನು ಚಿಂತಿಸಲೂ ಸಾಧ್ಯವಿಲ್ಲವೋ ಅದು, ಅನಿರ್ವಚನೀಯ. ಅದ್ಭುತ

ಅಚಿಂತಣಿಜ್ಜ}. ವಿ: [**ಅಚಿಂತನೀಯ**] ಮೇಲಿನ

ಅಚಿಂತಣೀಅ}. ಶಬ್ದವನ್ನು ನೋಡುವುದು

ಅಚಿಂತಿಯ. ವಿ: [**ಅಚಿಂತಿತ**] ಆಕಸ್ಮಿಕ, ಊಹಿಸಲು ಅಸಾಧ್ಯವಾದ(ಮಹಾ), ಯೋಚಿಸದಿರುವ

ಅಚಿತ್ತ ವಿ: [**ಅಚಿತ್ತ**] ಜೀವರಹಿತ, ಅಚೇತನ(ದಸ), ಬುದ್ಧಿಯಿಲ್ಲದ, ಗಮನಿಸದಿರುವ

ಅಚಿಯಂತ}. ವಿ: [ದೇ] ಅನಿಷ್ಟ, ಪ್ರೀತಿಯಿಲ್ಲದಿರುವಿಕೆ,

ಅಚಿಯತ್ತ}. ದ್ವೇಷ ಅಪ್ರೀತಿ(ಸೂಅ)

ಅಚಿರಜುವಣ. '**ಅಇರಜುವಇ**' ಶಬ್ದವನ್ನುನೋಡುವುದು

ಅಚಿರಾ. '**ಅಇರಾ**' ಶಬ್ದವನ್ನು ನೋಡುವುದು

ಅಚಿರಾಭಾ. ಸ್ತ್ರೀ: [**ಅಚಿರಾಭಾ**] ವಿದ್ಯುತ್ತು, ಮಿಂಚು (ಪಉಮ)

ಅಚಿರೇಣ. '**ಅಇರೇಣ**' ಶಬ್ದವನ್ನು ನೋಡುವುದು

ಅಚೇಯಣ. ವಿ: [**ಅಚೇತನ**] ನಿರ್ಜೀವ, ಚೈತನ್ಯ ರಹಿತ(ಪಣ್ಣ), ಚೇತನವಲ್ಲದ್ದು

ಅಚೇಲ. ನ: [**ಅಚೇಲ**] ಬಟ್ಟೆಗಳು ಇಲ್ಲದಿರುವುದು, ಅಲ್ಪ ಬೆಲೆಯ ಬಟ್ಟೆ, ಕಡಿಮೆ ಬಟ್ಟೆ ಇರುವುದು, ವಿ: ವಸ್ತ್ರರಹಿತ, ನಗ್ನ, ಜೀರ್ಣ ವಸ್ತ್ರ ಧರಿಸಿರುವ ಕುತ್ಸಿತ ವಸ್ತ್ರ ಧರಿಸಿರುವ(ವಿಸೇ). **–ಪರಿಸಹ.** **–ಪರೀಸಹ.** **ಪು:** [**–ಪರಿಷಹ, ಪರೀಷಹ**] ಬಟ್ಟೆಯಿಲ್ಲದೆ ಅಥವಾ ಜೀರ್ಣ, ಇಲ್ಲವೆ ಅಲ್ಪ ಅಥವಾ ಕುತ್ಸಿತ ಬಟ್ಟೆ ಧರಿಸಿದ ಕಾರಣ ಅದನ್ನು ದೀನಭಾವವಿಲ್ಲದೆ ಸಹಿಸುವುದು(ಸಮ)

ಅಚೇಲಗ}. ವಿ: [**ಅಚೇಲಕ**] ಬಟ್ಟೆಯಿಲ್ಲದ, ನಗ್ನ,

ಅಚೇಲಯ}. ಹರಿದ ಬಟ್ಟೆ ತೊಟ್ಟಿರುವವನು, ಕೊಳೆ ಬಟ್ಟೆ ಧರಿಸಿದವನು, ಕಡಿಮೆ ಬಟ್ಟೆ ಧರಿಸಿದವನು, ದೋಷವಿಲ್ಲದ ಬಟ್ಟೆ ಧರಿಸಿದವನು, ನಿಯಮಿತವಲ್ಲದ ರೀತಿಯಲ್ಲಿ ಬಟ್ಟೆ ಧರಿಸುವವನು

ಅಚ್ಚ. ಸಕ: [ಅರ್ಚ್] ಪೂಜಿಸು, ಅರ್ಚಿಸು, ಸತ್ಕರಿಸು, 'ಅಚ್ಚೇಇ' (ಔಪ) ಕವಕೃ–ಅಚ್ಚಿಜ್ಜಂತ

ಅಚ್ಚ. ಪು: [ಅರ್ಚ್ಯ] ಲವದ(ಕಾಲಮಾನ) ಒಂದು ಬಗೆ(ಕಪ್ಪ) ವಿ: ಪೂಜ್ಯ, ಪೂಜನೀಯ

ಅಚ್ಚಂಗ. ನ: [ಅತ್ಯಂಗ] ವಿಲಾಸದ ಪ್ರಮುಖ ಭಾಗ, ಭೋಗದ ಮುಖ್ಯ ಸಾಧನ

ಅಚ್ಚಂತ. ವಿ: [ಅತ್ಯಂತ] ಮಿತಿಮೀರಿದ್ದು, ಅತ್ಯಧಿಕ, ಬಹಳ. **–ಥಾವರ.** ವಿ: [–**ಸ್ಥಾವರ**] ಅನಾದಿ ಕಾಲದಿಂದ ಸ್ಥಾವರ ಜಾತಿಯಲ್ಲಿ ಇರುವ (ಆವಮ) **–ದೂಸಮಾ.** ಸ್ತ್ರೀ: [–**ದುಷ್ಷಮಾ**]. **'ದುಸ್ಸಮದುಸ್ಸಮಾ'** ಶಬ್ದವನ್ನು ನೋಡುವುದು

ಅಚ್ಚಂತಿಅ. ವಿ: [ಆತ್ಯಂತಿಕ] ಅತ್ಯಂತ, ಅಧಿಕ, ಅತಿಶಯ, ಶ್ರೇಷ್ಠ, ಎಂದೆಂದಿಗೂ ನಾಶವಾಗದ

ಅಚ್ಚಗ. ಪು: [ಅರ್ಚಕ] ಪೂಜಾರಿ

ಅಚ್ಚಗಲ. ವಿ: [ಅತ್ಯರ್ಗಲ] ನಿರಂಕುಶ, ಅನಿಯಂತ್ರಿತ, ಸ್ವೇಚ್ಛೆ

ಅಚ್ಚಣ. ನ: [ಅರ್ಚನ] ಪೂಜೆ, ಸನ್ಮಾನ

ಅಚ್ಚಣಾ. ಸ್ತ್ರೀ: [ಅರ್ಚನಾ] ಪೂಜೆ

ಅಚ್ಚಣಿಯಾ. ಸ್ತ್ರೀ: [ಅರ್ಚನಿಕಾ] ಅರ್ಚನೆ, ಪೂಜೆ

ಅಚ್ಚತ್ತ ವಿ: [ಅತ್ಯಕ್ತ] ಬಿಡದೆ ಇರುವ, ಪರಿತ್ಯಾಗ ಮಾಡದಿರುವ(ಉಪ)

ಅಚ್ಚತ್ಥ. ವಿ: [ಅತ್ಯರ್ಥ] ಅತಿಶಯವಾದ, ಬಹಳ, ಗಂಭೀರ ಅರ್ಥವುಳ್ಳ, ಕ್ರಿ.ವಿ–ಹೆಚ್ಚು, ತುಂಬ (ಸುರ)

ಅಚ್ಚಬ್ಭುಯ. ವಿ: [ಅತ್ಯದ್ಭುತ]ಅತ್ಯಂತ ಆಶ್ಚರ್ಯಕರವಾದ

ಅಚ್ಚಯ. ಪು: [ಅತ್ಯಯ] ವಿರೋಧಿ ನಡವಳಿಕೆ, ಅತಿಕ್ರಮ, ಮೀರುವಿಕೆ, ವಿನಾಶ, ಮರಣ

ಅಚ್ಚಯ. ವಿ:[ಅರ್ಚಕ] ಪೂಜೆ ಮಾಡುವವನು, ಪೂಜಾರಿ

ಅಚ್ಚರ}. ನ: [ಆಶ್ಚರ್ಯ] ವಿಸ್ಮಯ, ಆಶ್ಚರ್ಯ,
ಅಚ್ಚರಿಅ}. ಚಮತ್ಕಾರ(ವಿಕ್ರ)
ಅಚ್ಚರೀಅ}.

ಅಚ್ಚಹಮ. ವಿ: [ಅತ್ಯಧಮ] ಅತಿನೀಚ(ಕಪ್ಪೂ)

ಅಚ್ಚಾ. ಸ್ತ್ರೀ: [ಅರ್ಚಾ] ಪೂಜೆ, ಸತ್ಕಾರ (ಗಉಡ)

ಅಚ್ಚಾ. ಸ್ತ್ರೀ: [ಅರ್ಚಾ] ಶರೀರ, ಚಿತ್ತವೃತ್ತಿ, ಐಶ್ವರ್ಯ

ಅಚ್ಚಾಸಣ. ಪು: [ಅತ್ಯಶನ] ಪಕ್ಷದ ಹನ್ನೆರಡನೇ ದಿನ. ದ್ವಾದಶಿ ತಿಥಿ.

ಅಚ್ಚಾಸಣಯಾ. ಸ್ತ್ರೀ: [ಅತ್ಯಾಸನತಾ] ಚೆನ್ನಾಗಿ ಕುಳಿತುಕೊಳ್ಳುವುದು, ಬಹಳ ಹೊತ್ತಿನ ವರೆಗೆ ಇಲ್ಲವೆ ಮತ್ತೆ ಮತ್ತೆ ಕುಳಿತುಕೊಳ್ಳುವುದು.

ಅಚ್ಚಾಸಣಯಾ.ಸ್ತ್ರೀ:[ಅತ್ಯಶನತಾ] ಸರಿಯಾಗಿ ತಿನ್ನುವುದು

ಅಚ್ಚಾಸಣ್ಣ}. ನ: [ಅತ್ಯಾಸನ್ನ] ಅತಿ ಸಮೀಪ, ತೀರ
ಅಚ್ಚಾಸನ್ನ}. ಹತ್ತಿರ (ಭಗ)

ಅಚ್ಚಾಸಾಇಯ}. ವಿ: [ಅತ್ಯಾಶಾತಿತ] ಅಪಮಾನಿತ,
ಅಚ್ಚಾಸಾದಿಯ}. ದಿಕ್ಕೆಡಿಸಲಾದ

ಅಚ್ಚಾಸಾಯ. ಸಕ [ಅತ್ಯಾ+ಶಾತಯ್] ಅಪಮಾನ ಮಾಡು, ದಿಕ್ಕೆಡಿಸು, ವ್ಯಗ್ರಗೊಳಿಸು ವ.ಕೃ– **ಅಚ್ಚಾಸಾಏಮಾಣ**(ಠಾ)

ಅಚ್ಚಾಹಿಅ}. ವಿ: [ಅತ್ಯಾಹಿತ] ಮಹಾ ಭೀತಿ, ಅತಿ
ಅಚ್ಚಾಹಿದ}. ಭಯ(ಆವಮ), ಸುಳ್ಳು, ಪ್ರಾಣ ಹಾನಿಯಾಗುವ ಸಾಧ್ಯತೆ ಇರುವಂಥ ಅಪಾಯದ ಕೆಲಸ(ಅಭಿ)

ಅಚ್ಚಿ ಸ್ತ್ರೀ: [ಅರ್ಚಿಸ್] ಕಾಂತಿ, ತೇಜಸ್ಸು(ಭಗ), ಬೆಂಕಿಯ ಜ್ವಾಲೆ, ಕಿರಣ(ರಾಯ), ದೀಪದ ಕುಡಿ(ಉತ್ತ), ನ: ಲೋಕಾಂತಿಕ ದೇವರ ಒಂದು ವಿಮಾನ (ಸಮ). **–ಮಾಲಿ.** ಪು: [–**ಮಾಲಿನ್**] ಸೂರ್ಯ ವಿ: ಕಿರಣಗಳಿಂದ ಶೋಭಿತವಾದ, ಲೋಕಾಂತಿಕ ದೇವರ ಒಂದು ವಿಮಾನ(ಸಮ). **–ಮಾಲಿ.** ಸ್ತ್ರೀ: [–**ಮಾಲಿ**] ಚಂದ್ರ ಮತ್ತು ಸೂರ್ಯರ ಮೂರನೇ ಪಟ್ಟದ ರಾಣಿಯ ರಾಜಧಾನಿಯ ಹೆಸರು(ಠಾ). ಜ್ಞಾತಾ ಸೂತ್ರದ ದ್ವಿತೀಯ ಶ್ರುತಸ್ಕಂಧದ ಅಧ್ಯಯನದ ಹೆಸರು, ಇಂದ್ರನ ಮೂರನೇ ಪಟ್ಟದ ರಾಣಿಯ ರಾಜಧಾನಿಯ ಹೆಸರು(ಣಾಯಾ). **–ಮಾಲಿಣೀ.** ಸ್ತ್ರೀ: [–**ಮಾಲಿನೀ**] ಚಂದ್ರ ಮತ್ತು ಸೂರ್ಯರ ಒಬ್ಬ ಪಟ್ಟದ ರಾಣಿಯ ಹೆಸರು(ಭಗ)

ಅಚ್ಚಿಅ. ವಿ: [ಅರ್ಚಿತ] ಪೂಜಿಸಲ್ಪಟ್ಟ, ಸತ್ಕರಿಸಲ್ಪಟ್ಟ(ಗಾ), ನ: ವಿಮಾನವಿಶೇಷ

ಅಚ್ಚಿತ್ತ. **'ಅಚಿತ್ತ'** ಶಬ್ದವನ್ನು ನೋಡುವುದು

ಅಚ್ಚೀಕರ. ಸಕ: [ಅರ್ಚೀ+ಕೃ] ಹೊಗಳು, ಸಂತೋಷಪಡಿಸಲು ಮಿತಿಮೀರಿ ಹೊಗಳು, ವ.ಕೃ– **ಅಚ್ಚೀಕರಂತ**

ಅಚ್ಚೀಕರಣ. ನ: [ಅರ್ಚೀಕರಣ] ಮಿಥ್ಯಾ ಪ್ರಶಂಸೆ, ಸುಳ್ಳು ಹೊಗಳಿಕೆ

ಅಚ್ಚುಅ. ಪು: [ಅಚ್ಯುತ] ವಿಷ್ಣು, ಹನ್ನೆರಡನೇ ದೇವಲೋಕ(ಸಮ), ೧೧ನೇ ಮತ್ತು ೧೨ನೇ ದೇವಲೋಕದ ಇಂದ್ರ, ಅಚ್ಯುತ–ದೇವಲೋಕದಲ್ಲಿ ವಾಸಿಸುವ ದೇವ, **–ನಾಹ. ಪು: [–ನಾಥ]** ೧೨ನೇ ದೇವಲೋಕದ ಇಂದ್ರ(ಭವಿ), **–ವಇ. ಪು: [–ಪತಿ]** ಇಂದ್ರ ವಿಶೇಷ, **–ವಡಿಂಸಗ. ನ: [ಅಚ್ಯುತಾವತಂಸಕ.]** ವಿಮಾನ ವಿಶೇಷದ ಹೆಸರು(ಸಮ), **ಪುಂನ:** ಒಂದು ದೇವ–ವಿಮಾನ. **–ಸಗ್ಗ. ಪು: [–ಸ್ವರ್ಗ]** ಹನ್ನೆರಡನೇ ದೇವಲೋಕ (ಭವಿ)

ಅಚ್ಚುಆ. ಸ್ತ್ರೀ: [ಅಚ್ಯುತಾ] ೬ನೇ ಮತ್ತು ೧೬ನೇ ತೀರ್ಥಂಕರರ ಶಾಸನ ದೇವಿ(ಸಚಿತಿ)

ಅಚ್ಚುಇಂದ. ಪು: [ಅಚ್ಯುತೇಂದ್ರ] ೧೧ನೇ ಮತ್ತು ೧೨ನೇ ದೇವಲೋಕದ ಒಡೆಯ, ಇಂದ್ರವಿಶೇಷ(ಪಉಮ)

ಅಚ್ಚುಕ್ಕಡ. ವಿ: [ಅತ್ಯುತ್ಕಟ] ಅತ್ಯಂತ ಉಗ್ರ, ಬಹಳ ಹೆಚ್ಚಾದ(ಆವಮ)

ಅಚ್ಚುಗ್ಗ. ವಿ: [ಅತ್ಯುಗ್ರ] ಮೇಲಿನ ಶಬ್ದವನ್ನು ನೋಡುವುದು

ಅಚ್ಚುಚ್ಚ. ವಿ: [ಅತ್ಯುಚ್ಚ] ಅತ್ಯಂತ ಎತ್ತರ, ಅತ್ಯಂತ ಉನ್ನತ, ಶ್ರೇಷ್ಠ

ಅಚ್ಚುಟ್ಠಿಯ ವಿ : [ಅತ್ಯುತ್ಥಿತ] ಅಕಾರ್ಯ ಮಾಡಲು ಸಿದ್ಧನಾದ(ಸೂಅ) ತುಂಬ ಮೇಲಕ್ಕೆ ಎದ್ದ ಹೆಚ್ಚು ಅಭಿವೃದ್ಧಿ ಹೊಂದಿದ, ಹುಟ್ಟಿದ

ಅಚ್ಚುಣ್ಹ. ವಿ: [ಅತ್ಯುಷ್ಣ] ಹೆಚ್ಚು ಬಿಸಿ, ತುಂಬ ಕಾವು,

ಅಚ್ಚುತ್ತಮ. ವಿ: [ಅತ್ಯುತ್ತಮ] ಅತ್ಯಂತ ಶ್ರೇಷ್ಠ,

ಅಚ್ಚುದಯ. ನ: [ಅತ್ಯುದಕ] ಭಾರೀ ಮಳೆ(ಓಘ) ಹೆಚ್ಚು ನೀರು (ಜೀವ)

ಅಚ್ಚುದಾರ. ವಿ: [ಅತ್ಯುದಾರ] ಅತ್ಯಂತ ಉದಾರ

ಅಚ್ಚುನ್ನಯ. ವಿ: [ಅತ್ಯುನ್ನತ] ಅತ್ಯಂತ ಎತ್ತರವಾದ ಅತಿ, ಶ್ರೇಷ್ಠ

ಅಚ್ಚುಬ್ಭಡ. ವಿ: [ಅತ್ಯುದ್ಭಟ] ಅತ್ಯಂತ ಪ್ರಬಲನಾದ

ಅಚ್ಚುವಯಾರ. ಪು. [ಅತ್ಯುಪಕಾರ] ಭಾರೀ ಉಪಕಾರ

ಅಚ್ಚುವಯಾರ. ಪು: [ಅತ್ಯುಪಚಾರ] ವಿಶೇಷವಾದ ಸೇವೆ, ಶುಶ್ರೂಷೆ(ಗಾ) ಉಪಚಾರ, ಆತಿಥ್ಯ

ಅಚ್ಚುವ್ವಾಯ.ವಿ:[ಅತ್ಯುದ್ವಾತ]ಅತ್ಯಂತ ಆಯಾಸಗೊಂಡ,

ಅಚ್ಚುಸಿಣ. ವಿ: [ಅತ್ಯುಷ್ಣ] ಅತಿಹೆಚ್ಚು ಕಾವು, ಅತಿಹೆಚ್ಚು ಬಿಸಿ(ಆಚಾ)

ಅಚ್ಚೇ. ಅಕ: [ಅತಿ+ಇ] ಕಳೆದು ಹೋಗು, ಆಗಿ ಹೋಗು. **ಸಕ:** ಉಲ್ಲಂಘಿಸು

ಅಚ್ಚೇ. ಸಕ: [ಅತ್ಯಾ+ಇ] ಬಿಡಿಸು, ತ್ಯಜಿಸುವಂತೆ ಮಾಡು

ಅಚ್ಚೇಅರ. ನ: [ಆಶ್ಚರ್ಯ] ಆಶ್ಚರ್ಯ, ವಿಸ್ಮಯ

ಅಚ್ಛ. ಅಕ: [ಆಸ್] ಕುಳಿತುಕೊಳ್ಳು, **ವ.ಕೃ. ಅಚ್ಛಂತ. ಅಚ್ಛಮಾಣ(ಣಾಯಾ)** ಕುಳಿತುಕೊಳ್ಳು. **'ಅಚ್ಛಇ' (ಹೇ), ವ.ಕೃ– ಅಚ್ಛಂತ,** ಅಚ್ಛಮಾಣ(ಣಾಯಾ),

ಅಚ್ಛ. ಸಕ: [ಆ+ಛಿದ್] ಕತ್ತರಿಸು, ಸೀಳು, ಎಳೆ

ಅಚ್ಛ ವಿ: [ಅಚ್ಛ] ಸ್ವಚ್ಛ, ನಿರ್ಮಲ, ಪರಿಶುದ್ಧ **ಪು.** ಸ್ಫಟಿಕ ರತ್ನ, **ಪು. ಬ.** ಆರ್ಯ–ದೇಶ ವಿಶೇಷ

ಅಚ್ಛ. ಪು: [ಅಚ್ಛ] ಮೇರು ಪರ್ವತ, **ನ:** ಮೂರು ಬಾರಿ ಕುದಿಸಿದ ಶುದ್ಧ ಜಲ

ಅಚ್ಛ. ಪು: [ಋಕ್ಷ] ಕರಡಿ

ಅಚ್ಛ. ವಿ: [ಆಚ್ಛ] ಒಳ್ಳೆಯ ದೇಶದಲ್ಲಿ ಹುಟ್ಟಿದ

ಅಚ್ಛ. ನ: [ದೇ] ಅತ್ಯಂತ, ವಿಶೇಷ, ಶೀಘ್ರ, ಬೇಗನೆ

–ಅಚ್ಛ. ವಿ: [–ಅಕ್ಷಿ] ಕಣ್ಣು(ಕುಮಾ)

–ಅಚ್ಛ. ಪು: [ಕಚ್ಛ] ಹೆಚ್ಚು ನೀರಿರುವ ಪ್ರದೇಶ, ಬಳ್ಳಿಗಳ ಸಮೂಹ, ಹುಲ್ಲು

–ಅಚ್ಛ. ಪು: [ವೃಕ್ಷ] ಮರ, ವೃಕ್ಷ(ಸೇ)

ಅಚ್ಛಅ. ಪು: [ಅಕ್ಷಕ] ಹುಲಿಗೆ ಮರ, ತಾರೆಕಾಯಿ ಮರ, ಸ್ವಚ್ಛವಾದ ನೀರು(ಸೆ)

ಅಚ್ಛಅರ. ವಿ: [ಆಶ್ಚರ್ಯ] ಆಶ್ಚರ್ಯ, ವಿಸ್ಮಯ, ಚಮತ್ಕಾರ(ಕುಮಾ)

ಅಚ್ಛಂದ. ವಿ: [ಅಚ್ಛಂದ] ಸ್ವಾತಂತ್ರ್ಯವಿರದ, ಪರಾಧೀನ

ಅಚ್ಛಕ್ಕ. 'ಅತ್ಥಕ್ಕ' ಶಬ್ದವನ್ನು ನೋಡುವುದು (ಗಉಡ)

ಅಚ್ಛಣ. ನ: [ಆಸನ] ಕುಳಿತುಕೊಳ್ಳುವುದು, ಕುಳಿತುಕೊಳ್ಳುವ ಮಣೆ, ಪಲ್ಲಕ್ಕಿ ಇತ್ಯಾದಿ ಸುಖಾಸನ, ಹೊನ್ನೆಮರ, **–ಘರ. ನ: [–ಗೃಹ]** ವಿಶ್ರಾಂತಿ ಸ್ಥಾನ

ಅಚ್ಛಣ. ನ: [ದೇ] ಸೇವೆ, ಶುಶ್ರೂಷೆ(ಬೃಹ), ನೋಡುವುದು, ಅಹಿಂಸೆ, ದಯೆ

ಅಚ್ಛಣೆಉರ. ನ: [ಅಚ್ಛನಿಕುರ] ಅಚ್ಛನಿಕುರಂಗ ಎಂಬ ಸಂಖ್ಯಾವಿಶೇಷವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)

ಅಚ್ಛಣೆಉರಂಗ. ನ: [ಅಚ್ಛನಿಕುರಾಂಗ] ಸಂಖ್ಯಾವಿಶೇಷ, ನಳಿನ ಎಂಬ ಸಂಖ್ಯಾವಿಶೇಷವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)

ಅಚ್ಛಣ್ಣ. ನ: [ಅಚ್ಛನ್ನ] ಮರೆಮಾಡದ, ಪ್ರಕಟ
ಅಚ್ಛಭಲ್ಲ. ಪು: [ಋಕ್ಷಭಲ್ಲ] ಕರಡಿ(ದೇ)
ಅಚ್ಛಭಲ್ಲ. ಪು: [ದೇ] ಯಕ್ಷ, ದೇವ ವಿಶೇಷ
ಅಚ್ಛರಆ. 'ಅಚ್ಛರಾ' ಶಬ್ದವನ್ನು ನೋಡುವುದು
ಅಚ್ಛರಯ: ಪು: [ಆಸ್ತರಕ] ಹಾಸಿಗೆಯ ಮೇಲೆ ಹಾಸುವ ವಸ್ತ್ರ ವಿಶೇಷ (ಣಾಯಾ)
ಅಚ್ಛರಸಾ}. ಸ್ತ್ರೀ: [ಅಪ್ಸರಸ್] ಅಪ್ಸರೆ, ಇಂದ್ರನ ಒಬ್ಬ
ಅಚ್ಛರಾ}. ಪಟ್ಟದ ರಾಣಿ, 'ಜ್ಞಾತಾಧರ್ಮ ಕಥಾ'ದ ಒಂದು ಅಧ್ಯಯನ(ಣಾಯಾ), ದೇವಿ(ಪಉಮ), ರೂಪವತಿ
ಅಚ್ಛರಾ. ಸ್ತ್ರೀ: [ದೇ.ಅಪ್ಸರಾ] ಚಿಟಿಕೆ, ಚಿಟಿಕೆಯ ಶಬ್ದ
ಅಚ್ಛರಾಣಿವಾಯ. ಪು. [ದೇ] ಚಿಟಕಿ. ಚಿಟಕಿ ಹಾಕಲು ಬೇಕಾಗುವಷ್ಟು ಸಮಯ, ಅತ್ಯಲ್ಪ ಸಮಯ
ಅಚ್ಛರಿಅ}. ನ: [ಆಶ್ಚರ್ಯ] ಆಶ್ಚರ್ಯ, ವಿಸ್ಮಯ,
ಅಚ್ಛರಿಜ್ಜ}. ಅದ್ಭುತ, ಚಮತ್ಕಾರ
ಅಚ್ಛರೀಅ}.
ಅಚ್ಛಲ. ನ : [ಅಚ್ಛಲ] ನಿರ್ದೋಷ, ಅಪರಾಧವಿಲ್ಲದಿರುವುದು(ದೇ)
ಅಚ್ಛವಿ. ವಿ: [ಅಚ್ಛವಿ] ಜೈನ ದರ್ಶನದಲ್ಲಿ ಸ್ನಾತಕ ಎಂದು ಹೇಳಲಾಗುವ ವ್ಯಕ್ತಿ. ಜೀವನ್ಮುಕ್ತ ಯೋಗಿ
ಅಚ್ಛವಿಕರ. ಪು: [ಅಕ್ಷಪಿಕರ] ಒಂದು ರೀತಿಯ ಮಾನಸಿಕ ವಿನಯ(ಠಾ)
ಅಚ್ಛಹಲ್ಲ. ಪು: [ಋಕ್ಷಭಲ್ಲ] ಕರಡಿ(ಪಾಅ)
ಅಚ್ಛಾ. ಸ್ತ್ರೀ: [ಅಚ್ಛಾ] ವರುಣ ದೇಶದ ರಾಜಧಾನಿ
–ಅಚ್ಛಾ. ಸ್ತ್ರೀ: [ಕಕ್ಷಾ] ಹೆಮ್ಮೆ, ಅಭಿಮಾನ(ಮೇ)
ಅಚ್ಛಾಇ. ವಿ: [ಆಚ್ಛಾದಿನ್] ಮುಚ್ಚುವಂಥದು, ಆಚ್ಛಾದಕ, ಹೊದಿಕೆ(ಸ)
ಅಚ್ಛಾಯಣ. ನ: [ಆಚ್ಛಾದನ] ಮುಚ್ಚುವುದು, ಹೊದಿಸುವುದು, ಹೊದಿಕೆಯ ಬಟ್ಟೆ(ಆಚಾ) ಬಟ್ಟೆ
ಅಚ್ಛಾಯಣಾ. ಸ್ತ್ರೀ: [ಆಚ್ಛಾದನಾ] ಮುಚ್ಚುವುದು, ಹೊದಿಸುವುದು ವವ)
ಅಚ್ಛಾಯಂತ. ವಿ: [ಅಚ್ಛಾತಾಂತ] ತೀಕ್ಷ್ಣ, ಹರಿತ(ಪಾಅ)
ಅಚ್ಛಿ. ತ್ರಿ: [ಅಕ್ಷಿ] ಕಣ್ಣು. **–ಚಮಢಣ.** ನ: [–ಮಲನ] ಕಣ್ಣು ಉಜ್ಜುವುದು(ಬೃಹ), **–ಣಿಮೀಲಿಯ.** ನ: [–ನಿಮೀಲಿತ] ಕಣ್ಣನ್ನು ಮುಚ್ಚುವುದು, "ಅಚ್ಛಿಣಿಮೀಲಿಯಮೇತ್ತ(ಜೀವ)ನ–**ಪತ್ತ.** ನ: [–ಪತ್ರ] ಕಣ್ಣಿನ ರೆಪ್ಪೆ(ಭಗ) **–ವೇಹಗ.** ಪು: [–ವೇಧಕ] ನಾಲ್ಕು ಇಂದ್ರಿಯಗಳುಳ್ಳ ಒಂದು ಜಂತು, ಕ್ಷುದ್ರ ಜೀವ ವಿಶೇಷ(ಉತ್ತ), **–ರೋಡಯ.** ಪು: [–ರೋಡಕ] ನಾಲ್ಕು ಇಂದ್ರಿಯಗಳ ಒಂದು ಜಂತು, ಕ್ಷುದ್ರ ಕೀಟ–ವಿಶೇಷ(ಉತ್ತ) **–ಲ್ಲ.** ವಿ: [–ಮತ್] ಕಣ್ಣಿರುವ ಪ್ರಾಣಿ, ನಾಲ್ಕು ಇಂದ್ರಿಯಗಳ ಒಂದು ಜಂತು(ಉತ್ತ). **–ಮಲ.** ಪು: [–ಮಲ] ಕಣ್ಣಿನ ಕೊಳೆ, ಪಿಸರು(ನಿಚೂ)
ಅಚ್ಛಿಂದ. ಸಕ: [ಆ+ಭಿದ್] ಕಿಂಚಿತ್ ತೂತು ಮಾಡು, ಒಮ್ಮೆ ರಂಧ್ರ ಮಾಡು, ಬಲಾತ್ಕಾರದಿಂದ ಕಿತ್ತುಕೊಳ್ಳು, ವ. ಕೃ–**ಅಚ್ಛಿಂದಮಾಣ**
ಅಚ್ಛಿಂದ. ಪು: [ಅಕ್ಷೀಂದ್ರ] ಗೋಶಾಲಕನ ಒಬ್ಬ ಶಿಷ್ಯನ ಹೆಸರು (ಭಗ)
ಅಚ್ಛಿಂದಣ. ನ: [ಆಚ್ಛೇದನ] ಒಂದು ಬಾರಿ ಕತ್ತರಿಸುವುದು (ನಿಚೂ), ಕಿತ್ತುಕೊಳ್ಳುವುದು, ಸ್ವಲ್ಪ ರಂಧ್ರ ಮಾಡುವುದು, ಸ್ವಲ್ಪ ಕತ್ತರಿಸುವುದು (ಭಗ)
ಅಚ್ಛಿಕ್ಕ. ವಿ: [ದೇ] ಮುಟ್ಟಿಲ್ಲದೆ ಇರುವ(=ಅಸ್ಪೃಷ್ಟ) (ವವ)
ಅಚ್ಛಿಘರುಲ್ಲ. ವಿ [ದೇ] ಇಷ್ಟವಾಗದ, ವೇಷ, ಪೋಷಾಕು
ಅಚ್ಛಿಜ್ಜ. ವಿ: [ಆಚ್ಛೇದ್ಯ] ಬಲಾತ್ಕಾರದಿಂದ ಬೇರೆಯವರಿಂದ ಕಸಿದುಕೊಂಡ(ಪಿಂಡ) ಜೈನ ಸಾಧುಗಳಿಗೆ ನೀಡುವ ಭಿಕ್ಷೆಯಲ್ಲಿನ ಒಂದು ದೋಷ(ಆಚಾ)
ಅಚ್ಛಿಜ್ಜ. ವಿ: [ಅಚ್ಛೇದ್ಯ] ಮುರಿಯಲು ಸಾಧ್ಯವಿಲ್ಲದ್ದು,
ಅಚ್ಛಿತ್ತಿ. ಸ್ತ್ರೀ: [ಅಚ್ಛಿತ್ತಿ] ನಾಶರಹಿತ, ಶಾಶ್ವತತೆ(ವಿಸೇ), **–ಣಯ.** ಪು: [–ನಯ] ಶಾಶ್ವತವೆಂದು ವಾದಿಸುವುದು, ವಸ್ತು ಶಾಶ್ವತವೆಂದು ಒಪ್ಪುವ ಪಂಥ(ಪವ)
ಅಚ್ಛಿದ್ದ. ವಿ:[ಅಚ್ಛಿದ್ರ]ರಂಧ್ರ ಅಥವಾ ಛಿದ್ರವಿಲ್ಲದ (=ಒಡಕಿಲ್ಲದ) ದಟ್ಟವಾದ, ದೋಷವಿಲ್ಲದ
ಅಚ್ಛಿಣ್ಣ}. ವಿ: [ಆಚ್ಛಿನ್ನ] ಬಲವಂತದಿಂದ ಕಸಿದು
ಅಚ್ಛಿನ್ನ}. ಕೊಂಡದ್ದು, ಕತ್ತರಿಸಿದ್ದು, ಮುರಿದದ್ದು(ಪಾಅ)
ಅಚ್ಛಿಣ್ಣ}. ವಿ: [ಅಚ್ಛಿನ್ನ] ಮುರಿಯದೆ ಇರುವ,
ಅಚ್ಛಿನ್ನ}. ಬೇರ್ಪಡಿಸದಿರುವ, ಅಖಂಡಿತ(ಠಾ) ತಡೆಯಿಲ್ಲದ, ನಿರಂತರ(ಗಉಡ)
ಅಚ್ಛಿಪ್ಪ. ವಿ: [ಅಸ್ಪೃಶ್ಯ] ಮುಟ್ಟಲು(ಸ್ಪರ್ಶಿಸಲು) ಯೋಗ್ಯವಲ್ಲದ(ಸುಪಾ)
ಅಚ್ಛಿಪ್ಪಂತ. ವಿ: [ಅಸ್ಪೃಶತ್] ಮುಟ್ಟದೆ ಇರುವ(ಶ್ರಾ)

ಅಚ್ಛಿಯ. ವಿ: [ಆಸಿತ] ಕುಳಿತುಕೊಂಡಿರುವ(ಪಿ)
ಅಚ್ಛಿವಡಣ. ನ: [ದೇ] ಕಣ್ಣನ್ನು ಮುಚ್ಚಿಕೊಳ್ಳುವುದು(ದೇ)
ಅಚ್ಛಿವಿಅಚ್ಛಿ. ಸ್ತ್ರೀ: [ದೇ] ಪರಸ್ಪರ ಆಕರ್ಷಣೆ, ಅವರವರಲ್ಲಿನ ಒಂದು ಸೆಳೆತ(ದೇ)
ಅಚ್ಛಿಹರಿಲ್ಲ}. **'ಅಚ್ಛಿಘರುಲ್ಲ'** ಶಬ್ದವನ್ನು
ಅಚ್ಛಿಹರುಲ್ಲ}. ನೋಡುವುದು
ಅಚ್ಛೀ. **'ಅಚ್ಛಿ'** ಶಬ್ದವನ್ನು ನೋಡುವುದು
ಅಚ್ಛುಕ್ಕ. ನ: [ದೇ] ಕಣ್ಣಿನ ಬಾವಿಯಂಥದು, ಕಣ್ಣಿನ ಗುಳಿ(ಸುಪಾ)
ಅಚ್ಛುತ್ತಾ. ಸ್ತ್ರೀ: [ಅಚ್ಛುಪ್ತಾ] ವಿದ್ಯೆಯ ಅಧಿಷ್ಠಾತೃವಾದ ಒಬ್ಬ ದೇವಿ, ಭಗವಾನ್ ಮುನಿಸುವ್ರತ ಸ್ವಾಮಿಯ ಶಾಸನ ದೇವಿ (ಸಂತಿ)
ಅಚ್ಛುದ್ಧಸಿರೀ. ಸ್ತ್ರೀ: [ದೇ] ಬಯಸಿದ್ದಕ್ಕಿಂತಲೂ ಹೆಚ್ಚಿನ ಫಲ ದೊರೆಯುವುದು, ಊಹೆಗೆ ಮೀರಿದ ಲಾಭ (ಷಡ್)
ಅಚ್ಛುಲ್ಲೂಢ. ವಿ: [ದೇ] ಹೊರಹಾಕಲ್ಪಟ್ಟ, ಸ್ಥಾನ ಭ್ರಷ್ಟಗೊಳಿಸಲಾದ (ಬೃಹ)
ಅಚ್ಛೆಜ್ಜ. **'ಅಚ್ಛಿಜ್ಜ'** ಶಬ್ದವನ್ನು ನೋಡುವುದು
ಅಚ್ಛೇರ}. ನ: [ಆಶ್ಚರ್ಯ] ವಿಸ್ಮಯ, ಆಶ್ಚರ್ಯ,
ಅಚ್ಛೇರಗ}. ಚಮತ್ಕಾರ (ಹೇ), **ಪುಂನ:**
ಅಚ್ಛೇರಯ}. ಆಶ್ಚರ್ಯಕಾರಕ ಘಟನೆ, **–ಕರ.** ವಿ: [**–ಕರ**] ಆಶ್ಚರ್ಯವನ್ನುಂಟು ಮಾಡುವ,
ಅಚ್ಛೋಡ. **ಸಕ:** [**ಆ+ಛೋಟಯ್**] ನೆಲಕ್ಕೆ ಕೆಡವು, ಸಿಂಪಡಿಸು, **'ಅಚ್ಛೋಡೆಮಿ** (ಸುರ)
ಅಚ್ಛೋಡ. **ಪು:** [**ಆಚ್ಛೋಟ**] ಸಿಂಚನ, ಸಿಂಪಡಿಸುವುದು, ಹೊಡೆಯುವುದು, ಕೆಳಕ್ಕೆ ಬೀಳಿಸುವುದು
ಅಚ್ಛೋಡಣ. ನ: [**ಆಚ್ಛೋಟನ**] ಸಿಂಚನ, ಜಡೆ, ಸಿಂಪಡಿಸುವುದು, ಹೊಡೆಯುವಿಕೆ(ಸುರ), ಬೇಟೆ
ಆಚ್ಛೋಡಾವಿಯ. ವಿ: [ದೇ. **ಅಚ್ಚೋಟಿತ**] ಬಂಧಿತ, ಕಟ್ಟಲ್ಪಟ್ಟ
ಅಚ್ಛೋಡಿಅ. ವಿ: [**ಆಚ್ಛೋಟಿತ**] ಒದ್ದೆಯಾದ, ಸಿಂಪಡಿಸಲ್ಪಟ್ಟ(ಸುರ) ಕೆಡವಲಾದ, ನೆಲಕ್ಕೆ ಉರುಳಿಸಲ್ಪಟ್ಟ, [ದೇ] ಆಕರ್ಷಿಸಲ್ಪಟ್ಟ
ಅಚ್ಛಿಪ್ಪ. ವಿ: [**ಅಸ್ಪೃಶ್ಯ**] ಮುಟ್ಟಲು ಯೋಗ್ಯವಲ್ಲದ
ಅಜ. **'ಅಯ'=ಅಜ'** ಶಬ್ದವನ್ನು ನೋಡುವುದು
ಅಜಗರ, **'ಅಯಗರ'** ಶಬ್ದವನ್ನು ನೋಡುವುದು

ಅಜಡ. **ಪು:** [ದೇ] ಜಾರ, ಉಪಪತಿ(ಷಡ್)
ಅಜಡ. ವಿ: [**ಅಜಡ**] ಪಕ್ವ, ವಿಕಸಿತ(ಗಉಡ), ನಿಪುಣ, ಚತುರ(ಕುಮಾ)
ಅಜಮ. ವಿ: [ದೇ] ಸರಳ, ಋಜು, ಅಳಿಯ(ಪಭಾ)
ಅಜಯ. ವಿ: [**ಅಯುತ**] ಪಾಪ ಕೃತ್ಯದಿಂದ ವಿಮುಖನಾಗದ, ನಿಯಮರಹಿತ(ಕಮ್ಮ) ಕೆಲಸವಿಲ್ಲದ, ಪ್ರಯತ್ನ ಮಾಡದವನು(ಓಘ), ಉಪಯೋಗವಿಲ್ಲದ ನಿರ್ಲಕ್ಷ್ಯದಿಂದಿರುವ, **ಕ್ರಿ. ವಿ: ಅಲಕ್ಷ್ಯದಿಂದಿರುವ**(ದಸ)
ಅಜಯ. **ಪು:** [**ಅಜಯ**] ಷಟ್ಪದ ಛಂದಸ್ಸಿನ ಒಂದು ಪ್ರಭೇದ(ಪಿಂಗ), ಪರಾಜಯ, ಸೋಲು, ಅಗ್ನಿ
ಅಜಯಣಾ. ಸ್ತ್ರೀ: [**ಅಯತನಾ**] ಪ್ರಯೋಜನವಿಲ್ಲದ, ಲಕ್ಷ್ಯ ಕೊಡದ, ಪ್ರಮಾದ ಮಾಡುವಿಕೆ, ಎಚ್ಚರಗೇಡಿತನ (ಗಚ್ಛ)
ಅಜರ. ವಿ: [**ಅಜರ**] ಮುಪ್ಪಿಲ್ಲದಿರುವುದು, ವೃದ್ಧಾಪ್ಯವಿಲ್ಲದಿರುವುದು. **ಪು: ದೇವ.** ದೇವತಾ (ಆವಮ್) ಮುಕ್ತಾತ್ಮ(ಓಘ)
ಅಜರಾಉರ. ವಿ: [ದೇ] ಬಿಸಿಯಾದ(ದೇ)
ಅಜರಾಮರ. ವಿ: [**ಅಜರಾಮರ**] ಮುಪ್ಪು ಮತ್ತು ಸಾವುಗಳಿಲ್ಲದ(ಮಹಾ), ಮುಕ್ತಿ, ಮೋಕ್ಷ, ಸ್ತ್ರೀ: **–ರಾ.** ವಿದ್ಯಾವಿಶೇಷ (ಪಉಮ)
ಅಜಸ್. **ಪು:** [**ಅಯಶಸ್**] ಅಪಕೀರ್ತಿ(ಉಪ). **–ಅಜಸೋಕಿತ್ತಿಣಾಮ್** ನ: [**–ಕೀರ್ತಿನಾಮನ್**] ಅಪಕೀರ್ತಿಗೆ ಕಾರಣವಾದ ಒಂದು ಕರ್ಮ (ಸಮ)
ಅಜಸ್ಸ. ಕ್ರಿವಿ: [**ಅಜಸ್ರ**] ನಿರಂತರ, ಒಂದೇಸಮನೆ, ಸತತವಾದ, ಎಡೆಬಿಡದೆ(ಪಂಚಾ)
ಅಜಾ. **'ಅಯಾ'** ಶಬ್ದವನ್ನು ನೋಡುವುದು(ಕುಮಾ)
ಅಜಾಣ. ವಿ: [**ಅಜ್ಞಾನ**] ಅಜ್ಞಾನಿ, ಮೂರ್ಖ(ರಯಣ), ಅಜ್ಞಾನ
ಅಜಾಣ. ವಿ: [**ಅಜ್ಞಾಯಕ**] ತಿಳಿವಳಿಕೆಯಿಲ್ಲದ, (ಕಾಲ)
ಅಜಾಣಣಾ. ಸ್ತ್ರೀ: [**ಅಜ್ಞಾನ**] ತಿಳಿವಳಿಕೆಯಿಲ್ಲದಿರುವುದು, ಮೂರ್ಖತನ, 'ಅಜಾಣಣಾ ತಜ್ಜತಿ ನಕಯಾತಸ್ಮಿ ಕೇಣವಿ'(ಶ್ರಾ)
ಅಜಾಣುಯ. ವಿ: [**ಅಜ್ಞಾಯಕ**] ಏನೂ ತಿಳಿಯದವನು, ಅಜ್ಞ(ಠಾ), ತಿಳಿವಳಿಕೆಯಿಲ್ಲದವನು

ಅಜಾಯ. ವಿ: [ಅಜಾತ] ಹುಟ್ಟದಿರುವ, ಇಲ್ಲದಿರುವ. **–ಕಪ್ಪ.** ಪು: [–ಕಲ್ಪ] ಶಾಸ್ತ್ರಗಳನ್ನು ಪೂರ್ಣವಾಗಿ ತಿಳಿಯದ ಜೈನ ಸಾಧು. **–ಕಪ್ಪಿಯ.** ಪು: [–ಕಲ್ಪಿಕ] ಅಗೀತಾರ್ಥ ಜೈನ ಸಾಧು(ಗಚ್ಛ)

ಅಜಿಅ. ವಿ: [ಅಜಿತ] ಜಯಿಸಲ್ಪಡದ. ಎರಡನೇ ತೀರ್ಥಂಕರನ ಹೆಸರು, ೯ನೇ ತೀರ್ಥಂಕರನ ಅಧಿಷ್ಠಾತೃ ದೇವ(ಸಂತಿ), ಒಬ್ಬ ಭಾವೀ ಬಲದೇವ, ವಿಷ್ಣು, ಶಿವ, ಬುದ್ಧ. ಭಗವಾನ್ ಮಲ್ಲಿನಾಥನ ಎರಡನೇ ಶ್ರಾವಕ,**–ನಾಹ.** ಪು: [–ನಾಥ] ೯ನೇ ರುದ್ರ ಪುರುಷ. **–ಬಲಾ.** ಸ್ತ್ರೀ: [–ಬಲಾ] ಭಗವಾನ್ ಅಜಿತನಾಥನ ಶಾಸನದೇವಿ, (ಪವ) **–ಸೇಣ.** ಪು: [–ಸೇನ] ಒಬ್ಬ ಪ್ರಸಿದ್ಧ ರಾಜ. ನಾಲ್ಕನೇ ಕುಲಕರ(ಠಾ). ಒಬ್ಬ ಪ್ರಸಿದ್ಧ ಜೈನ ಮುನಿ(ಂತ)

ಅಜಿಅ. ವಿ: [ಅಜೀವ] ಜೀವವಿಲ್ಲದ, ಜೀವವಲ್ಲದ –ಅಚೇತನ ಜಡ(ಕಮ್ಮ)

ಅಜಿಅ. ವಿ: [ಅಜಯ್ಯ] ಗೆಲ್ಲಲು ಸಾಧ್ಯವಿಲ್ಲದವನು (ಸುಪಾ)

ಅಜಿಆ. ಸ್ತ್ರೀ: [ಅಜಿತಾ] ಭಗವಾನ್ ಅಜಿತನಾಥನ ಶಾಸನದೇವಿ, ನಾಲ್ಕನೇ ತೀರ್ಥಂಕರನ ಮುಖ್ಯ ಶಿಷ್ಯೆ (ತಿತ್ಥ)

ಅಜಿಣ. ನ: [ಅಜಿನ] ಜಿಂಕೆಯೇ ಮೊದಲಾದ ಪ್ರಾಣಿಗಳ ಚರ್ಮ(ಉತ್ತ), ರಾಗ–ದ್ವೇಷಾದಿಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳದವನು(ಭಗ) ಭಗವಾನನಿಗೆ ಸಮಾನನಾದ ಸತ್ಯೋಪದೇಶಕ ಜೈನಸಾಧು(ಔಪ)

ಅಜಿಣ್ಣ. 'ಅಯಿನ್ನ=ಅಜೀರ್ಣ' ಶಬ್ದವನ್ನು ನೋಡುವುದು (ಆವ)

ಅಜಿಯಂಧರ. ಪು: [ಅಜಿತಧರ] ೧೧ ಜನ ರುದ್ರರಲ್ಲಿ ಎಂಟನೆಯವನು

ಅಜಿರ. ನ: [ಅಜಿರ] ಅಂಗಳ, ಚೌಕ(ಸಣ)

ಅಜೀರ}. 'ಅಯಿನ್ನ=ಅಜೀರ್ಣ' ಶಬ್ದವನ್ನು
ಅಜೀರಯ}. ನೋಡುವುದು(ವವ)

ಅಜೀರಣ. 'ಅಇನ್ನ=ಅಜೀರ್ಣ' ಶಬ್ದವನ್ನು ನೋಡುವುದು

ಅಜೀವ. ಪು: [ಅಜೀವ] ಜೀವವಲ್ಲದ, ನಿರ್ಜಿವ, ಜಡ ಪದಾರ್ಥ(ನವ). **–ಕಾಯ.** ಪು: [–ಕಾಯ] ಧರ್ಮಾಸ್ತಿಕಾಯವೇ ಮೊದಲಾದ ಅಜೀವ ಪದಾರ್ಥಗಳು(ಭಗ)

ಅಜುಅ. ಪು: [ದೇ] ವೃಕ್ಷ ವಿಶೇಷ, ಸಪ್ತಚ್ಛದ=ಏಳೆಲೆ ಬಾಳೆಗಿಡ(ದೇ)

ಅಜುಅ. ಪು: [ಅಯುತ] ಹತ್ತು ಸಾವಿರ, ಸೇರಿಕೊಂಡಿಲ್ಲದ, ಮಿಶ್ರವಲ್ಲದ

ಅಜುಅಲವಣ್ಣ. ಪು: [ಅಯುಗಲಪರ್ಣ] ಏಳೆಲೆಬಾಳೆ ಗಿಡ(ದೇ)

ಅಜುಅಲವಣ್ಣಾ. ಸ್ತ್ರೀ: [ದೇ] ಹುಣಿಸೆಮರ(ದೆ)

ಅಜುತ್ತ. ವಿ: [ಅಯುಕ್ತ] ಯುಕ್ತವಲ್ಲದ, ಅಯೋಗ್ಯ, ಅನುಚಿತವಾದ(ವಿಸೇ) **–ಕಾರಿ.** ವಿ:[–ಕಾರಿನ್] ಯೋಗ್ಯವಲ್ಲದ ಕೆಲಸವನ್ನು ಮಾಡುವವನು (ಸುಪಾ)

ಅಜುತ್ತೀಯ. ವಿ: [ಅಯುಕ್ತಿಕ] ಯುಕ್ತಿಯಿಲ್ಲದ, ಅನ್ಯಾಯ(ಸುರ), ಅನರ್ಹ

ಅಜುಯ. 'ಅಉಅ' ಶಬ್ದವನ್ನು ನೋಡುವುದು

ಅಜೇಅ. ವಿ: [ಅಜಯ್ಯ] ಜಯಿಸಲು ಅಥವಾ ಗೆಲ್ಲಲು ಸಾಧ್ಯವಿಲ್ಲದವನು(ಮಹಾ)

ಅಜೋಗ. ವಿ: [ಅಯೋಗ್ಯ] ಯೋಗ್ಯನಲ್ಲದ, ಅನರ್ಹ, ಅನುಚಿತ(ನಿಚೂ) ಪು: ಯಾರಲ್ಲಿ ಮನಸ್ಸು, ಮಾತು ಮತ್ತು ಕ್ರಿಯೆಯ ಎಲ್ಲ ವ್ಯಾಪಾರಗಳೂ ಸ್ತಬ್ಧವಾಗಿರುತ್ತವೋ ಅ ಉತ್ಕೃಷ್ಟ ಜೀವಿ.

ಅಜೋಗಿ. ಪು: [ಅಯೋಗಿನ್] ಸರ್ವೋತ್ಕೃಷ್ಟ ಯೋಗವನ್ನು ಪಡೆದುಕೊಂಡ ಯೋಗಿ, ಮುಕ್ತಾತ್ಮ(ಠಾ)

ಅಜ್ಜ. ಸಕ: [ಅರ್ಜ್] ಹುಟ್ಟಿಸು, ಅರ್ಜಿಸು, ಸಂಪಾದಿಸು, ಉಪಾರ್ಜಿಸು ಹೇ)

ಅಜ್ಜ. ವಿ: [ಆರ್ಯ] ವೈಶ್ಯ, ಸ್ವಾಮಿ, ಯಜಮಾನ(ದೇ)

ಅಜ್ಜ. ವಿ: [ಆರ್ಯ] ದೋಷವಿಲ್ಲದ, ಆರ್ಯ ಗೋತ್ರದಲ್ಲಿ ಹುಟ್ಟಿದ, ಶಿಷ್ಟ ಜನರಿಗೆ ಉಚಿತವಾದ, **–ಖಉಡ.** ಪು: [–ಖಪುಟ] ಒಬ್ಬ ಜೈನಾಚಾರ್ಯ. ಉತ್ತಮ, ಶ್ರೇಷ್ಠ(ಠಾ), ಮುನಿ(ಕಪ್ಪ), ಒಳ್ಳೆಯ ಕೆಲಸ ಮಾಡುವವನು, ಪೂಜ್ಯ, ಮಾನ್ಯ(ಬಿಪಾ), ತಾಯಿಯ ತಂದೆ (ಮಾತಾಮಹ), ತಂದೆಯ ತಂದೆ(ಪಿತಾಮಹ), ಒಬ್ಬ ಋಷಿಯ ಹೆಸರು(ಣಂದಿ), ನ: ಗೋತ್ರವಿಶೇಷ (ಆರ್ಯ ಗೋತ್ರದಲ್ಲಿ ಹುಟ್ಟಿದವನು), ಜೈನ ಸಾಧು, ಸಾಧ್ವಿ

ಮತ್ತು ಅವರ ಶಾಖೆಗಳ ಹಿಂದೆ ಈ ಶಬ್ದವನ್ನು ಸೇರಿಸಲಾಗುತ್ತದೆ: ಉದಾ–ಅಜ್ಜವರ, ಅಜ್ಜ ಚಂದಣಾ, ಅಜ್ಜ ಪೋಮಿಲಾ(ಕಪ್ಪ), **–ಉತ್ತ.** ಪು: [**–ಪುತ್ರ**], ಪತಿ, ಯಜಮಾನನ ಮಗ(ನಾಟ) **–ಘೋಸ.** ಪು:[**–ಘೋಷ**] ಭಗವಾನ್ ಪಾರ್ಶ್ವನಾಥರ ಒಬ್ಬ ಗಣಧರ(ತಾ), **–ಮಂಗು.** ಪು: [**–ಮಂಗು**] ಒಬ್ಬ ಪ್ರಾಚೀನ ಜೈನಾಚಾರ್ಯ, **–ಮಿಸ್ಸ.** ವಿ: [**–ಮಿಶ್ರ**] ಪೂಜ್ಯ, ಮಾನ್ಯ. **–ಸಮುದ್ದ.** ಪು: [**–ಸಮುದ್ರ**] ಒಬ್ಬ ಪ್ರಸಿದ್ಧ ಜೈನಾಚಾರ್ಯ

ಅಜ್ಜ. ಪು: [**ಅದ್ಯ**] ಇಂದು, ಈ ದಿನ(ಸುರ). **–ತ್ತ.** ವಿ: [**–ತನ**] ಈಗಿನ ಕಾಲ. ವರ್ತಮಾನ (ರಂಭಾ) **–ತ್ತಾ.** ಸ್ತ್ರೀ: [**–ತಾ**] ಈ ದಿನಗಳಲ್ಲಿ, ಆಧುನಿಕ, **–ಪ್ಪಭಿಇ.** ಅ: –[**–ಪ್ರಭೃತಿ**] ಇಂದಿನಿಂದ ತೊಡಗಿ(ಉವಾ)

ಅಜ್ಜ. ಪು: [**ದೇ**] ಜಿನೇಂದ್ರದೇವ, ಬುದ್ಧ ದೇವ(ದೇವ)

ಅಜ್ಜ. ನ: [**ಆಜ್ಯ**] ತುಪ್ಪ

ಅಜ್ಜ–. **'ರಿ=ಋ'** ಶಬ್ದವನ್ನು ನೋಡುವುದು

ಅಜ್ಜಂ. ಅ: [**ಅದ್ಯ**] ಈ ದಿನ, ಇಂದು, ಈಗ

ಅಜ್ಜಂತ. ವಿ: [**ಆಯತ್**] ಬರಲಿರುವ, ಮುಂಬರುವ. **–ಕಾಲ.** ಪು: [**–ಕಾಲ**] ಬರಲಿರುವ ಕಾಲ= ಭವಿಷ್ಯಕಾಲ(ಪಾಅ)

ಅಜ್ಜಂಹಿಜ್ಜೋ. ಅ: [**ಅದ್ಯಹ್ಯಃ**] ಈ ದಿನಗಳಲ್ಲಿ, ಇತ್ತಿತ್ತಲಾಗಿ(ಉಪ)

ಅಜ್ಜಕಾಲಿಅ. ವಿ: [**ಅದ್ಯಕಾಲಿಕ**] ಈಗಿನ, ಪ್ರಸ್ತುತ, ಈ ಕಾಲದ

ಅಜ್ಜಗ. **'ಅಜ್ಜಯ=ಆರ್ಯಕ'** ಶಬ್ದವನ್ನು ನೋಡುವುದು

ಅಜ್ಜಣ. ಸಕ: [**ಅರ್ಜ್**] ಸಂಪಾದಿಸು

ಅಜ್ಜಣ}. ನ: [**ಅರ್ಜನ್**] ಸಂಪಾದನೆ, ಹುಟ್ಟಿಸುವುದು,

ಅಜ್ಜಣಣ}. ಉತ್ಪತ್ತಿ ಮಾಡುವುದು(ಶ್ರಾ)

ಅಜ್ಜಮ. ಪು: [**ಆರ್ಯಮನ್**] ಸೂರ್ಯ, ದೇವವಿಶೇಷ, ಉತ್ತರ ಫಾಲ್ಗುಣೀ ನಕ್ಷತ್ರದ ಅಧಿಷ್ಠಾತೃ ದೇವ, ಉತ್ತರ ಫಾಲ್ಗುಣೀ ನಕ್ಷತ್ರ (ತಾ)

ಅಜ್ಜಯ. ಪು: [**ಆರ್ಯಕ**] ಮಾತಾಮಹ, (ಪ ಉಮ) ಪಿತಾಮಹ(ಪ (ಭಗ)

ಅಜ್ಜಯ. ವಿ: [**ಅರ್ಜಕ**] ಸಂಪಾದನೆ ಮಾಡುವವನು, ಉತ್ಪತ್ತಿ ಮಾಡುವವನು, (ಸುಪಾ)ವೃಕ್ಷ–ವಿಶೇಷ, (ಪಣ್ಣ)

ಅಜ್ಜಯ. ಪು: [**ದೇ**] **'ಸುರಸ'** ಎಂದು ಕರೆಯಲಾಗುವ ಹುಲ್ಲು ಕಡ್ಡಿ **'ಗುರೇಟಕ'** ಎಂಬ ಹೆಸರಿನ ತೃಣ (ದೇ), ಹುಲ್ಲು (ನಿಚೂ)

ಅಜ್ಜಲ. ಪು: [**ಆರ್ಯಲ**] ಮ್ಲೇಚ್ಛರ ಒಂದು ಜಾತಿ (ಪಣಣಾ)

ಅಜ್ಜವ. ನ: [**ಆರ್ಜವ**] ಋಜುತೆ, ನೇರ, ಸರಳತೆ , ನಿಷ್ಕಪಟತೆ (ನವ)

ಅಜ್ಜವ. (**ಅಪ**). **'ಅಜ್ಜ=ಆರ್ಯ'** ಶಬ್ದವನ್ನು ನೋಡುವುದು **–ಖಂಡ.** ಪು: [**–ಖಂಡ**] ಆರ್ಯದೇಶ(ಭವಿ)

ಅಜ್ಜವಯಾ. ಸ್ತ್ರೀ: [**ಆರ್ಜವ**] ಋಜುತ್ವ

ಅಜ್ಜವಿಯ. ಸ್ತ್ರೀ: [**ಆರ್ಜವ**] ಋಜುತ್ವ, ಸರಳತೆ (ಪಕ್ಷಿ)

ಅಜ್ಜವಿ. ವಿ: [**ಆರ್ಜವಿನ್**] ಸರಳ, ನಿಷ್ಕಪಟ (ಆಚಾ)

ಅಜ್ಜಾ. ಸ್ತ್ರೀ: [**ಆರ್ಯಾ**] ಸಾಧ್ವಿ, (ಗಚ್ಛ), ಪಾರ್ವತಿ(ದೇ), ಆರ್ಯಾಛಂದಸ್ಸು, ಭಗವಾನ್ ಮಲ್ಲಿನಾಥನ ಪ್ರಥಮ ಶಿಷ್ಯೆ(ಸಮ), ಮಾನ್ಯೆ, ಪೂಜ್ಯೆ, ಒಂದು ಕಲೆ(ಔಪ)

ಅಜ್ಜಾ. ಸ್ತ್ರೀ: [**ಆಜ್ಞಾ**] ಆಜ್ಞೆ, ಆದೇಶ(ಹೇ)

ಅಜ್ಜಾಯ. ವಿ: [**ಅಜಾತ**] ಹುಟ್ಟದಿರುವ

ಆಜ್ಜಾವ. ಸಕ: [**ಆ+ಜ್ಞಾಪಯ್**) ಆಜ್ಞೆಮಾಡು, ಆದೇಶಿಸು. ಕೃ–ಅಜ್ಜಾವೇಯವ್ವ(ಸೂಅ)

ಅಜ್ಜಿಅ. ವಿ: [**ಅರ್ಜಿತ**] ಸಂಪಾದಿಸಲಾದ, ಉತ್ಪಾದಿಸಲಾದ(ಶ್ರಾ)

ಅಜ್ಜಿಆ. ಸ್ತ್ರೀ: [**ಆರ್ಯಿಕಾ**] ಮಾನ್ಯಳಾದ, ಪೂಜ್ಯಳಾದ ಸ್ತ್ರೀ, ಸಾಧ್ವಿ, ಸಂನ್ಯಾಸಿನಿ(ಸಮ), ತಾಯಿಯ ತಾಯಿ (ಮಾತಾಮಹಿ) ತಂದೆಯ ತಾಯಿ (ಪಿತಾಮಹಿ)

ಅಜ್ಜಿಡ್ಡೀಯ. ವಿ: [**ದೇ**] ದತ್ತ, ಕೊಡಲ್ಪಟ್ಟ

ಅಜ್ಜಿಣಣ. **'ಅಜ್ಜಣ್ಣ'** ಶಬ್ದವನ್ನು ನೋಡುವುದು

ಅಜ್ಜೀವ. **'ಅಜೀವ'** ಶಬ್ದವನ್ನು ನೋಡುವುದು (ನವ)

ಅಜ್ಜು(ಅಪ). ಅ: [**ಅದ್ಯ**] ಈಗ, ಇಂದು

ಅಜ್ಜುಅ(ಶೌ) **'ಅಜ್ಜ= ಆರ್ಯ'** ಶಬ್ದವನ್ನು ನೋಡುವುದು

ಅಜ್ಜುಆ (**ಶೌ**). **'ಅಜ್ಜಾ=ಆರ್ಯಾ'** ಶಬ್ದವನ್ನು ನೋಡುವುದು

ಅಜ್ಜುಣ. ಪು: [**ಅರ್ಜುನ**] ಪಾಂಡವರಲ್ಲಿ ಮೂರನೆಯವನು(ಣಾಯಾ), ಒಂದು ವೃಕ್ಷ ವಿಶೇಷ(ಶಮೀವೃಕ್ಷ), ಗೋಶಾಲಕನ ಒಬ್ಬ ಶಿಷ್ಯನ

ಹೆಸರು, ಬಿಳುಪಾದ, ಶುಭ್ರ ವರ್ಣದ, ಒಂದು ಬಗೆಯ ಹುಲ್ಲು, ಅರ್ಜುನ ವೃಕ್ಷದ ಹೂವು (ಣಾಯಾ), ಕೆಂಪು ಮತ್ತಿಮರ, ನವಿಲು, ಹಸು

ಅಜ್ಜುಣಗ}. [ಅರ್ಜುನಕ] ಮೇಲಿನ ಶಬ್ದವನ್ನು

ಅಜ್ಜುಣಯ}.ನೋಡುವುದು, ಒಬ್ಬ ತೋಟಿಗನ ಹೆಸರು

ಅಜ್ಜೂ. ಸ್ತ್ರೀ: [ಆರ್ಯಾ] ಅತ್ತೆ(ಹೇ)

ಅಜ್ಜೋಗ 'ಅಜೋಗ=ಅಯೋಗ' ಶಬ್ದವನ್ನು ನೋಡುವುದು

ಅಜ್ಜೋಗಿ 'ಅಜೋಗಿ' ಶಬ್ದವನ್ನು ನೋಡುವುದು

ಅಜ್ಜೋರುಹ. ನ: [ದೇ] ವನಸ್ಪತಿ ವಿಶೇಷ(ಪಣಣಾ)

ಅಜ್ಝಕ್ಕ. ವಿ: [ಅಧ್ಯಕ್ಷ] ಅಧ್ಯಕ್ಷ, ಅಧಿಷ್ಠಾತೃ(ಕಪ್ಪ)

ಅಜ್ಝ. ಪು: [ದೇ] ಇವನು(ದೇ)

ಅಜ್ಝತ್ತ. 'ಅಜ್ಝಪ್ಪ' ಶಬ್ದವನ್ನು ನೋಡುವುದು (ಸೂಅ)

ಅಜ್ಝತ್ತ. ವಿ: [ದೇ] ಬಂದಿರುವ, ಸಂಪಾದಿಸಿದ

ಅಜ್ಝತ್ತ}. ನ: [ಅಧ್ಯಾತ್ಮ] ಆತ್ಮದಲ್ಲಿ, ಆತ್ಮವನ್ನು ಕುರಿತು,

ಅಜ್ಝಪ್ಪ}. ಆತ್ಮದ ವಿಷಯವಾಗಿ(ಉತ್ತ), ಮನಸ್ಸಿನಲ್ಲಿ, ಮನೋವಿಷಯಕ(ಉತ್ತ), ಮನಸ್ಸು, ಶುಭ ಧ್ಯಾನ, ಪು:ಆತ್ಮ, **–ಜೋಗ.** ಪು: [–ಯೋಗ], ಯೋಗ ವಿಶೇಷ, ಮನಸ್ಸಿನ ಏಕಾಗ್ರತೆ(ಸೂಅ). **–ದೋಸ.** ಪು:[–ದೋಷ] ಆಧ್ಯಾತ್ಮಿಕ ದೋಷಗಳಾದ–ಕ್ರೋಧ, ಮಾನ, ಮಾಯೆ ಮತ್ತು ಲೋಭ **–ವತ್ತಿಯ.** ವಿ: [–ಪ್ರತ್ಯಯಿಕ] ಮನಸ್ಸಿನಿಂದಲೇ ಹುಟ್ಟುವ ಶೋಕ, ಚಿಂತೆ ಇತ್ಯಾದಿಗಳು(ಸೂಅ). **–ವಿಸೋಹಿ.** ಸ್ತ್ರೀ:[–ವಿಶುದ್ಧಿ] ಆತ್ಮ ಶುದ್ಧಿ, **–ಸಂವುಡ.** ವಿ: [–ಸಂವೃತ] ಮನಸ್ಸನ್ನು ನಿಗ್ರಹದಲ್ಲಿಟ್ಟುಕೊಳ್ಳುವ(ಆಚಾ). **–ಸುಇ.** ಸ್ತ್ರೀ:[–ಶ್ರುತಿ] ಅಧ್ಯಾತ್ಮ ಶಾಸ್ತ್ರ, ಆತ್ಮ ವಿದ್ಯಾ ಯೋಗಶಾಸ್ತ್ರ (ಪಣಹ) **–ಸುದ್ಧಿ** ಸ್ತ್ರೀ: [–ಶುದ್ಧಿ] ಮನಸ್ಸಿನ ಶುದ್ಧಿ **–ಸೋಹಿ.** ಸ್ತ್ರೀ: [–ಶುದ್ಧಿ] ಮನಸ್ಸಿನ ಶುದ್ಧಿ (ಆಚೂ)

ಅಜ್ಝತ್ಥಿಯ}. ವಿ: [ಆಧ್ಯಾತ್ಮಿಕ] ಆತ್ಮ ವಿಷಯಕ, ಆತ್ಮ

ಅಜ್ಝತ್ಥೀಅ}.ಅಥವಾ ಮನಸ್ಸಿಗೆ ಸಂಬಂಧಿಸಿದ (ವಿಪಾ)

ಅಜ್ಝಪ್ಪಿಅ. ವಿ: [ಆಧ್ಯಾತ್ಮಿಕ] ಆಧ್ಯಾತ್ಮವನ್ನು ತಿಳಿದವನು, ಆಧ್ಯಾತ್ಮಕ್ಕೆ ಸಂಬಂಧಿಸಿದ

ಅಜ್ಝಯ. ವಿ: [ದೇ] ನೆರೆಯವನು(ದೇ)

ಅಜ್ಝಯಣ. ಪುಂನ: [ಅಧ್ಯಯನ] ಶಬ್ದ, ಹೆಸರು, ಓದುವುದು, ಅಭ್ಯಾಸ(ವಿಸೇ), ವಿದ್ಯಾಭ್ಯಾಸ ಗ್ರಂಥದ ಒಂದು ಅಂಶ(ವಿಪಾ)

ಅಜ್ಝಯಣಿ. ವಿ: [ಅಧ್ಯಯನಿನ್] ಓದುವವನು, ಅಭ್ಯಾಸಿ

ಅಜ್ಝಯಾವ. ಸಕ: [ಅಧಿ+ಆಪ್] ಓದಿಸು, ಕಲಿಸು **'ಅಜ್ಝಯಾವಿಂತಿ'**(ವಿಸೇ)

ಅಜ್ಝವಸ. ಸಕ: [ಅಧ್ಯವ+ಸೋ] ವಿಚಾರ ಮಾಡು, ಚಿಂತನಮಾಡು, ನಿಶ್ಚಯಿಸು(ಸುಪಾ)

ಅಜ್ಝವಸಣ.} ನ: [ಅಧ್ಯವಸಾನ] ಚಿಂತನ, ವಿಚಾರ,

ಅಜ್ಝವಸಾಣ}. ನಿಶ್ಚಯ, ಅವಧಾರಣ, ನಿರ್ಧಾರ

ಅಜ್ಝವಸಾಯ. ಪು. [ಅಧ್ಯವಸಾಯ] ವಿಚಾರ, ಅವಧಾರಣ, ಪ್ರಯತ್ನ, ಆತ್ಮ ಪರಿಣಾಮ, ಮಾನಸಿಕ ಸಂಕಲ್ಪ(ಆಚಾ)

ಅಜ್ಝವಸಿಯ. ವಿ: [ಅಧ್ಯವಸಿತ] ನಿಶ್ಚಿತವಾದ

ಅಜ್ಝವಿಯ. ವಿ: [ಅಧ್ಯವಸಿತ] ಯಾವುದರ ಕುರಿತು ಚಿಂತನೆ ಪ್ರಾರಂಭವಾಗಿದೆಯೋ ಅದು(ಔಪ), ಚಿಂತನ, ವಿಚಾರ

ಅಜ್ಝವಸಿಯ. ನ: [ದೇ] ಬೋಳಿಸಿಕೊಂಡ ಮುಖ(ದೇ)

ಅಜ್ಝಸಿಯ. ವಿ: [ದೇ] ನೋಡಿದ, ಆಗಲೇ ನೋಡಿರುವ

ಅಜ್ಝಸ. ಸಕ: [ಆ+ಕ್ರುಶ್] ಸಿಟ್ಟಿಗೇಳು, ಶಪಿಸು(ದೇ)

ಅಜ್ಝಸ}. ವಿ: [ಆಕೃಷ್ಟ] ಯಾರ ಮೇಲೆ ಕೋಪ

ಅಜ್ಝಸಿಯ}. ಮಾಡಿಕೊಳ್ಳಲಾಗಿದೆಯೋ ಅವನು

ಅಜ್ಝಹಿಯ. ವಿ: [ಅಧ್ಯಧಿಕ] ಅತ್ಯಂತ, ಅತಿಶಯವಾದ, ಅತಿಹೆಚ್ಚಿನ(ಮಹಾ)

ಅಜ್ಝಾ. ಸ್ತ್ರೀ: [ದೇ] ಕುಲಟೆ, ಜಾರೆ, ಪ್ರಶಸ್ತಳಾದ ಹೆಣ್ಣು, ಹೊಸದಾಗಿ ಮದುವೆಯಾದವಳು, ವಧು, ಯುವತಿ, ಇವಳು(ದೇ)

ಅಜ್ಝಾ}. ಸಕ: [ಅಧಿ+ಇ] ಅಧ್ಯಯನ ಮಾಡು, ಓದು,

ಅಜ್ಝಾಅ}.

ಅಜ್ಝಾಅ. ಸಕ: [ಅಧ್ಯಾಪಯ್] ಪಾಠಮಾಡು, ಓದಿಸು, ಕಲಿಸು

ಅಜ್ಝಾಇಅವ್ವ. ವಿ: [ಅಧ್ಯೇತವ್ಯ] ಅಧ್ಯಯನ ಮಾಡಲು ಅರ್ಹವಾದ್ದು, ಅವಶ್ಯಕವಾಗಿ ಅಧ್ಯಯನ ಮಾಡಬೇಕಾದ್ದು(ದಸ)

ಅಜ್ಝಾಯ. ಪು: [ಅಧ್ಯಾಯ] ಅಧ್ಯಯನ, ಅಭ್ಯಾಸ, ಗ್ರಂಥದಲ್ಲಿ ಅಂಥಾ ವಿಷಯಗಳನ್ನು ಒಳಗೊಂಡಿರುವ ಭಾಗ=chapter(ವಿಸೇ)

ಅಜ್ಝಾರುಹ. ಪು: [ಅಧ್ಯಾರುಹ] ವೃಕ್ಷ ವಿಶೇಷ, ಮರಗಳ ಮೇಲೆ ಹಬ್ಬುವ ಬಳ್ಳಿ ಅಥವಾ ಕೊಂಬೆ (ಪಣಣಾ)

ಅಜ್ಝಾರೋವ. ಪು: [ಅಧ್ಯಾರೋಪ] ಆರೋಪ, ಉಪಚಾರ, ಭ್ರಾಂತಿ, ಮಿಥ್ಯಾಜ್ಞಾನ, ಒಂದರ ಧರ್ಮಗಳನ್ನು ಮತ್ತೊಂದರಲ್ಲಿ ಕಾಣುವುದು

ಅಜ್ಝಾರೋವಣ. ನ: [ಅಧ್ಯಾರೋಪಣ] ಮೇಲಕ್ಕೆ ಏರಿಸುವುದು, ಹೆಚ್ಚಿಸುವುದು, ಪ್ರಶ್ನಿಸುವುದು, ಕೇಳುವುದು(ವಿಸೇ)

ಅಜ್ಝಾರೋಹ. ಪು: [ಅಧ್ಯಾರೋಹ] **'ಅಜ್ಝಾರುಹ'** ಶಬ್ದವನ್ನು ನೋಡುವುದು(ಸೂಅ)

ಅಜ್ಝಾವ. **'ಅಜ್ಝಾಅ=ಅಧ್ಯಾಪಕ'** ಶಬ್ದವನ್ನು ನೋಡುವುದು

ಅಜ್ಝಾವಗ. **'ಅಜ್ಝಾವಯ'** ಶಬ್ದವನ್ನು ನೋಡುವುದು

ಅಜ್ಝಾವಣ. ಸ್ತ್ರೀ: [ಅಧ್ಯಾಪನಾ] ಓದಿಸುವುದು, ಪಾಠಮಾಡುವುದು, ಕಲಿಸುವುದು(ಕಮ್ಮ)

ಅಜ್ಝಾವಯ. ಪು: [ಅಧ್ಯಾಪಕ] ಕಲಿಸುವವನು, ಶಿಕ್ಷಕ, ಗುರು (ವಸು)

ಅಜ್ಝಾವಸ. ಅಕ: [ಅಧ್ಯಾ+ವಸ್] ಇರು, ವಾಸಮಾಡು. ವ.ಕೃ: **ಅಜ್ಝಾವಸಂತ=** ವಾಸಮಾಡುತ್ತಿರುವ (ಉವಾ)

ಅಜ್ಝಾಸ. ಪು: [ಅಧ್ಯಾಸ] ಮೇಲೆ ಕುಳಿತುಕೊಳ್ಳುವುದು, ನಿವಾಸಸ್ಥಾನ(ಸುಪಾ),

ಅಜ್ಝಾಸಣಾ. ಸ್ತ್ರೀ: [ಅಧ್ಯಾಸನಾ] ಸಹಿಸುವುದು (ರಾಜ)

ಅಜ್ಝಾಸಿಅ. ವಿ: [ಅಧ್ಯಾಸಿತ] ಆಶ್ರಿತ, ಅಧಿಷ್ಠಿತ, ಸ್ಥಾಪಿತ (ನಾಟ) ಆಕ್ರಮಿಸಲ್ಪಟ್ಟ

ಅಜ್ಝಾಹಯ. ವಿ: [ಅಧ್ಯಾಹತ] ಉತ್ತೇಜಿತ, 'ಹತ್ಥಿ ಅಜ್ಝಾಹಓ ವಣಂ ಸಂಭರೇಇ'(ಮಹಾ)

ಅಜ್ಝೀಣ ವಿ: [ಅಕ್ಷೀಣ] ಅಕ್ಷಯ, ಕ್ಷೀಣವಾಗದ, ನ: ಅಧ್ಯಯನ(ವಿಸೆ)

ಅಜ್ಝುವವಜ್ಜ. **'ಅಜ್ಝೋವವಜ್ಜ'**ಶಬ್ದವನ್ನುನೋಡುವುದು

ಅಜ್ಝುವವಣ್ಣ **'ಅಜ್ಝೋವವಣ್ಣ'** ಶಬ್ದವನ್ನು ನೋಡುವುದು

ಅಜ್ಝುವವಾಯ. **'ಅಜ್ಝೋವವಾಯ'** ಶಬ್ದವನ್ನು ನೋಡುವುದು

ಅಜ್ಝುಸಿಅ. ವಿ: [ಅಧ್ಯುಷಿತ] ಆಶ್ರಿತ, ಆಶ್ರಯವನ್ನು ಪಡೆದಿರುವ

ಅಜ್ಝುಸಿರ. ವಿ [ಅಶುಶಿರ] ಛಿದ್ರವಿಲ್ಲದ(ಓಘ)

ಅಜ್ಝೇಉ. ವಿ: [ಅಧ್ಯೇತೃ] ಅಧ್ಯಯನ ಮಾಡುವವನು, ವಿದ್ಯಾರ್ಥಿ(ವಿಸೇ)

ಅಜ್ಝೆಲ್ಲೀ. ಸ್ತ್ರೀ: [ದೇ] ಹಾಲು ಕರೆದ ನಂತರವೂ ಮತ್ತೆ ಹಾಲು ಕರೆಯಲು ಸಾಧ್ಯವಾಗುವ ಹಸು

ಅಜ್ಝೇಸಣಾ. ಸ್ತ್ರೀ: [ಅಧ್ಯೇಷಣಾ] ಅಧಿಕವಾದ ಪ್ರಾರ್ಥನೆ, ವಿಶೇಷವಾಗಿ ಬೇಡಿಕೊಳ್ಳುವುದು (ರಾಜ) ಆಚಾರ್ಯರನ್ನು ಗೌರವದಿಂದ ಬೇಡುವುದು

ಅಜ್ಝೋಯರಗ} ಪು: [ಅಧ್ಯವಪೂರಕ] ಸಾಧುವಿಗಾಗಿ
ಅಜ್ಝೋಯರಯ}. ಹೆಚ್ಚು ಅಡಿಗೆ ಸಿದ್ಧಪಡಿಸುವುದು. ಸಾಧುವಿನ ಸಲುವಾಗಿ ಹೆಚ್ಚಾಗಿ ಮಾಡಿದ ಅಡಿಗೆ

ಅಜ್ಝೋಲ್ಲಿಆ. ಸ್ತ್ರೀ: [ದೇ] ವಕ್ಷಸ್ಥಲದ ಮೇಲೆ ಧರಿಸುವ ಆಭರಣಗಳಲ್ಲಿ ಮಾಡುತ್ತಿದ್ದ ಮುತ್ತುಗಳ ರಚನೆ

ಅಜ್ಝೋವಗಮಿಯ. ವಿ: [ಅಭ್ಯುಪಗಮಿಕ] ಸ್ವಂತ ಇಚ್ಛೆಯಿಂದ ಸ್ವೀಕರಿಸುವುದು, ಒಪ್ಪಿಗೆ, ಅಂಗೀಕಾರ

ಅಜ್ಝೋವವಜ್ಜ. ಅಕ: [ಅಭ್ಯುಪ+ಪದ] ಅತಿಯಾದ ಆಸಕ್ತಿ ತಾಳು, **'ಅಜ್ಝೋವವಜ್ಜಇ**(ಪಿ)

ಅಜ್ಝೋವವಣ್ಣ}. ವಿ: [ಅಭ್ಯುಪಪನ್ನ] ಅತ್ಯಂತ
ಅಜ್ಝೋವವನ್ನ}. ಆಸಕ್ತನಾದ (ವಿಪಾ, ಣಾಯಾ)

ಅಜ್ಝೋವವಾಯ. ಪು: [ಅಭ್ಯುಪಪಾದ] ಅತ್ಯಂತ ಆಸಕ್ತಿ, ತಲ್ಲೀನತೆ(ಪಣ್ಣ)

ಅಟ}. ಸಕ: [ಅಟ್] ಸಂಚರಿಸು, ತಿರುಗಾಡು(ಷಡ್)
ಅಟ್ಟ}.

ಅಟ್ಟ. ಸಕ: [ಕ್ವಥ್] ಕುದಿಸು, ಬೇಯಿಸು(ಹೇ)

ಅಟ್ಟ. ಅಕ: [ಶುಷ್] ಒಣಗಿಸು, ಶೋಷಿಸು **'ಅಟ್ಟಂತಿ'** (ಸೇ), ವ.ಕೃ–**'ಅಟ್ಟಂತ'**=ಒಣಗುತ್ತಿರುವ

ಅಟ್ಟ. ವಿ: [ಆರ್ತ] ದುಃಖಿತ, ಪೀಡಿಸಲ್ಪಟ್ಟ, ನೋಯಿಸಲ್ಪಟ್ಟ ವಿಶೇಷ ಗಮನ–ಇಷ್ಟ ಸಂಯೋಗ, ಅನಿಷ್ಟ ವಿಯೋಗ, ರೋಗ ನಿವೃತ್ತಿ ಮತ್ತು ಭವಿಷ್ಯದ ಬಗ್ಗೆ ಚಿಂತಿಸುವದು (ಠಾ). **–ಣ್ಣ.** ವಿ : [–ಜ್ಞ] ನೊಂದವನ ನೋವನ್ನು ತಿಳಿದವನು(ಷಡ್)

ಅಟ್ಟ ವಿ: [ಋತ] ಗತ, ಕಳೆದುಹೋದ, ಪ್ರಾಪ್ತ(ಣಾಯಾ)

ಅಟ್ಟ. ಪುಂನ: [ಅಟ್ಟ] ಅಂಗಡಿ, ಪೇಟೆ(ಶ್ರಾ), ಅರಮನೆಯ ಮೇಲಿನ ಮನೆ(ಕುಮಾ), ಆಕಾಶ (ಭಗ)

ಅಟ್ಟಟ್ಟ. ವಿ: [ದೇ] ಕೃಶ, ದುರ್ಬಲ, ದೊಡ್ಡವ, ನಿರ್ಲಜ್ಜ, ಸೋಮಾರಿ, ಪು: ಗಿಳಿ, ಶಬ್ದ, ಸದ್ದು, ನ: ಸುಖ; ಸುಳ್ಳು(ದೇ)

ಅಟ್ಟಟ್ಟ ವಿ: [ದೇ] ಗತ, ಹೋದವನು
ಅಟ್ಟಟ್ಟಹಾಸ. ಪು: [ಅಟ್ಟಟ್ಟಹಾಸ] **'ಅಟ್ಟಹಾಸ'** ಶಬ್ದವನ್ನು ನೋಡುವುದು
ಅಟ್ಟಣ. ನ: [ಅಟ್ಟನ] ವ್ಯಾಯಾಮ(ಔಪ), ಈ ಹೆಸರಿನ ಒಬ್ಬ ಪ್ರಸಿದ್ಧ ಜಟ್ಟಿ. **–ಸಾಲಾ.** ಸ್ತ್ರೀ: [**–ಶಾಲಾ**] ವ್ಯಾಯಾಮ ಶಾಲೆ
ಅಟ್ಟಣಾ. ಸ್ತ್ರೀ: [ಆವರ್ತನಾ] ಆವೃತ್ತಿ, ಮಾಡಿದ್ದನ್ನೇ ಮತ್ತೆ ಮಾಡುವುದು, ತಿರುತಿರುಗಿ ಮಾಡುವುದು
ಅಟ್ಟಣ. ನ: [ಅಟನ] ಪರಿಭ್ರಮಣ, ತಿರುಗಾಟ(ಧರ್ಮ)
ಅಟ್ಟಮಟ್ಟ. ವಿ: [ದೇ] ಮರ ಗಿಡಗಳ ಪಾತಿ, ಅಶುಭ ಸಂಕಲ್ಪ ವಿಕಲ್ಪ, ಪಾಪ ಸಂಬಂಧವಾದ ಅವ್ಯವಸ್ಥಿತ ವಿಚಾರಗಳು, ನಿರರ್ಥಕ, ವ್ಯರ್ಥ
ಅಟ್ಟಯ. ಪು: [ಅಟ್ಟಕ] ಅಂಗಡಿ, ಪೇಟೆ(ಶ್ರಾ), ಪಾತ್ರೆಯ ರಂಧ್ರವನ್ನು ಮುಚ್ಚಲು ಬಳಸುವ ಒಂದು ಪದಾರ್ಥ ವಿಶೇಷ(ಬೃಹ)
ಅಟ್ಟಯಕ್ಕಲೀ. ಸ್ತ್ರೀ: [ದೇ] ಸೊಂಟದ ಮೇಲೆ ಕೈಯಿಟ್ಟುಕೊಂಡು ನಿಂತುಕೊಳ್ಳುವುದು(ಪಾಅ)
ಅಟ್ಟಹಾಸ. ಪು: [ಅಟ್ಟಹಾಸ] ಗಟ್ಟಿಯಾಗಿ ನಗುವುದು, ಬಿದ್ದುಬಿದ್ದು ನಗುವುದು
ಅಟ್ಟಾಲಗ}. ಪುಂನ: [ಅಟ್ಟಾಲಕ] ಮನೆಯ
ಅಟ್ಟಾಲಯ}. ಮನೆಯ ಮೇಲಿನ ಕೋಣೆ(ಪ ಉಮ), ಮೇಲ್ಭಾಗ,
ಅಟ್ಟಿ. ಸ್ತ್ರೀ: [ಆರ್ತಿ] ನೋವು, ದುಃಖ(ಆಚಾ)
ಅಟ್ಟಿಯ. ವಿ: [ಆರ್ತಿತ] ಶೋಕ ದುಃಖಗಳಿಂದ ಪೀಡಿತನಾದ(ಔಪ)
ಅಟ್ಟಿಯ. ವಿ: [ಅರ್ದಿತ] ವ್ಯಾಕುಲ, ಚಿಂತಿತ, ವ್ಯಗ್ರ(ಔಪ)
ಅಟ್ಠ. ಪುಂ: [ಅರ್ಥ] ಸಂಯಮ ಪುಂನ: ವಸ್ತು, ಪದಾರ್ಥ(ಉವಾ), ಇಂದ್ರಿಯ ವಿಷಯಗಳು, ಶಬ್ದದ ಅಭಿಧೇಯಾರ್ಥ=ವಾಚ್ಯಾರ್ಥ(ಸೂಅ), ತಾತ್ಪರ್ಯ, ತತ್ವ, ಪ್ರಯೋಜನ, ಇಚ್ಛೆ(ಣಾಯಾ), ಉದ್ದೇಶ, ಹಣ, ಲಾಭ, ಮೋಕ್ಷ(ಉತ್ತ) ಸಂಯಮ. **–ಕರ.** ಪು: [**–ಕರ**] ಮಂತ್ರಿ, ಜ್ಯೋತಿಶ್ಶಾಸ್ತ್ರದ ವಿದ್ವಾಂಸ(ಠಾ), **–ಜಾಯ.** ವಿ: [**–ಜಾತಾರ್ಥ**] ಯಾವುದರ ಆವಶ್ಯಕತೆ ಇದೆಯೋ, ಪ್ರಯೋಜನವಿದೆಯೋ ಅದು, **–ಜಾಯ.** ವಿ: [**–ಯಾಚ**] ಹಣದ ಬಯಕೆ ಉಳ್ಳವನು(ವವ), **–ಸಇಯ.** ವಿ: [**–ಶತಿಕ**] ನೂರು ಅರ್ಥದ ಸಾಧ್ಯತೆ ಇರುವ ಮಾತು ಇತ್ಯಾದಿ. **–ಸೇಣ.** ಪು: [**–ಸೇನ**] **'ಅಟ್ಠಸೇಣ'** ಶಬ್ದವನ್ನು ನೋಡುವುದು
ಅತ್ಥ=ಅರ್ಥ ಶಬ್ದವನ್ನು ನೋಡುವುದು
ಅಟ್ಠ. ತ್ರಿ ಬ: [**ಅಷ್ಟನ್**] ಸಂಖ್ಯಾ ವಿಶೇಷ, ಎಂಟು, **–ಚತ್ತಾಲ.** ವಿ: [**ಚತ್ವಾರಿಂಶ**] ನಲವತ್ತೆಂಟನೆಯ, (ಪ ಉಮ). **–ಚತ್ತಾಲೀಸ.** ವಿ: [**=ಚತ್ವಾರಿಂಶತ್**] ನಲವತ್ತೆಂಟು, **–ಟ್ಠಮಿಯಾ.** ಸ್ತ್ರೀ: [**ಅಷ್ಟಾಷ್ಟಮಿಕಾ**] ಜೈನ ಸಾಧುಗಳ ೬೪ ದಿನಗಳ **ಒಂದು** ವ್ರತ, ಪ್ರತಿಮಾ–ವಿಶೇಷ, **–ತಾಲೀಸ.** ವಿ: [**–ಚತ್ವಾರಿಂಶತ್**] ನಲವತ್ತೆಂಟು. **–ತೀಸ.**ವಿ: [**ಅಷ್ಟಾತ್ರಿಂಶತ್**] ಸಂಖ್ಯಾವಿಶೇಷ, ಮೂವತ್ತೆಂಟು, **–ತೀಸಇಮ.** ವಿ: [**ಅಷ್ಟಾತ್ರಿಂಶ**] ಮೂವತ್ತೆಂಟನೆಯ **–ತ್ತರಿ.** ಸ್ತ್ರೀ: [**–ಸಪ್ತತಿ**] ಎಪ್ಪತ್ತೆಂಟು. **–ತೀಸ.** ತ್ರಿ [**–ತ್ರಿಂಶತ್**] ಮೂವತ್ತೆಂಟು. **–ದಸ.** ತ್ರಿ[**ಅಷ್ಟಾದಶನ್**] ಹದಿನೆಂಟು **–ದಸುತ್ತರಸಯ.** ವಿ: [**ಅಷ್ಟಾ ದಶೋತ್ತರಶತ**] ಒಂದು ನೂರಾ ಹದಿನೆಂಟನೆಯ(ಪ ಉಮ). **–ದಹ.** ವಿ: [**ಅಷ್ಟಾದಶನ್**] ಹದಿನೆಂಟು. **–ಏಏಸಿಯಾ.** ವಿ: [**–ಪ್ರಾದೇಶಿಕ**] ಎಂಟು ಅಂಗಗಳುಳ್ಳ, **–ಪಯ.** ಸ್ತ್ರೀ: [**–ಪದಾ**] ಛಂದಸ್ಸಿನ ಒಂದು ವೃತ್ತ. **–ಪಾಹರಿಅ.** ವಿ: [**–ಪ್ರಾಹಾರಿಕ**] ಎಂಟು ಪ್ರಹರಗಳಿಗೆ ಸಂಬಂಧಿಸಿದ. **–ಭಾಇಯಾ.** ಸ್ತ್ರೀ: [**–ಭಾಗಿಕಾ**] ಚಂಚಲ ವಸ್ತುಗಳನ್ನಳೆಯುವ ೩೨ ಕ್ಷಣಗಳ ಒಂದು ಅಳತೆ(ಅಣು), **–ಮ.** ನ: [**–ಮ**] ನಿರಂತರವಾಗಿ ಮೂರು ದಿನಗಳವರೆಗಿನ ಒಂದು ಉಪವಾಸ(ಣಾಯಾ), **–ಮಂಗಲ.** ಪುಂನ: [**–ಮಂಗಲ**] ಸ್ವಸ್ತಿಕವೇ ಮೊದಲಾದ ಎಂಟು ಮಂಗಳಕರ ವಸ್ತುಗಳು(ರಾಯ)**–ಮಭತ್ತ.** ಪುಂನ: [**–ಮಭಕ್ತ**] ಮೂರು ದಿನಗಳ ಉಪವಾಸದ ಒಂದು ವ್ರತ(ವಿಪಾ), **–ಮಭತ್ತಿಯ.** ವಿ: [**–ಮಭಕ್ತಿಕ**] ಮೂರು ದಿನಗಳ ಉಪವಾಸ ವ್ರತ ಆಚರಿಸುವವರು(ವಿಪಾ), **–ಮೀ.** ಸ್ತ್ರೀ: [**–ಮೀ**] ಅಷ್ಟಮಿ ತಿಥಿ ವಿಶೇಷ. **–ಮುತ್ತಿ.** ಪು: [**–ಮೂರ್ತಿ**] ಶಿವ. **–ಯಾಲ.** ತ್ರಿ: [**–ಚತ್ವಾರಿಂಶತ್**] ನಲವತ್ತೆಂಟು. **–ವನ್ನ.** ತ್ರಿ [**–ಪಂಚಾಶತ್**] ಎಂಬತ್ತೊಂದು. **–ವರಿಸ್**, **–ವಾರಿಸ್.** ವಿ:[**–ವಾರ್ಷಿಕ**] ಎಂಟು ವರ್ಷ ವಯಸ್ಸಿನ. **–ವಿಹ.**

ವಿ: [-ವಿಧ] ಎಂಟು ಪ್ರಕಾರದ. -ವೀಸ. ಸ್ತ್ರೀನ: [ಅಷ್ಟಾವಿಂಶತಿ] ಮೂವತ್ತೆಂಟು. -ಸಟ್ಠಿ. ಸ್ತ್ರೀ: [-ಷಷ್ಟಿ] ಅರುವತ್ತೆಂಟು -ಸಮಇಯ. ವಿ: [-ಸಾಮಯಿಕ] ಅಷ್ಟ ಸಮಯದ ಅವಧಿ ಉಳ್ಳುದು(ಔಪ). -ಸಯ. ನ: [-ಶತ] ಒಂದು ನೂರಾ ಎಂಟು. -ಸಹಸ್ಸ. ನ: [-ಸಹಸ್ರ] ಒಂದು ಸಾವಿರದ ಎಂಟು(ಔಪ), -ಸಾಮಇಯ. 'ಸಮಇಯ' ಶಬ್ದವನ್ನು ನೋಡುವುದು. -ಸಿರ. ವಿ: [-ಶಿರಸ್, -ಸಿರ] ಅಷ್ಟ ಕೋಣದಿಂದ ಕೂಡಿರುವ, -ಸೇಣ. ಪು: [-ಸೇನ] 'ಅಟ್ಟಿಸೇಣ' ಶಬ್ದವನ್ನು ನೋಡುವುದು. -ಹತ್ತರ. ಸ್ತ್ರೀ: [-ಸಪ್ತತಿತಮ] ಎಪ್ಪತ್ತೆಂಟನೆಯ (ಪಉಮ). -ಹತ್ತರಿ. ಸ್ತ್ರೀ: [-ಸಪ್ತತಿ] ಎಪ್ಪತ್ತೆಂಟನೆಯ ಸಂಖ್ಯೆ. -ಹಾ. ಅ: [-ಧಾ] ಎಂಟು ಬಗೆಯ

-ಅಟ್ಠ. ನ: [ಕಾಷ್ಠ] ಕಟ್ಟಿಗೆ, ಚೌಬೀನೆ ಮರ

ಅಟ್ಠಂಗ. ವಿ: [ಅಷ್ಟಾಂಗ] ಎಂಟು ಅಂಗಗಳುಳ್ಳದ್ದು: ಅಷ್ಟಾಂಗ ಯೋಗ ಇತ್ಯಾದಿ-ಣಿಮಿತ್ತ. ನ: [-ನಿಮಿತ್ತ] ಭೂಮಿ, ಸ್ವಪ್ನ, ಶರೀರ, ಸ್ವರ, ಇತ್ಯಾದಿ ಎಂಟು ವಿಷಯಗಳ ಫಲಾಫಲವನ್ನು ಪ್ರತಿಪಾದಿಸಿರುವ ಶಾಸ್ತ್ರ(ಸೂಅ), -ಮಹಾಣಿಮಿತ್ತ. ನ: [-ಮಹಾನಿಮಿತ್ತ] ಅನಂತರ ಹೇಳಿದ ಅರ್ಥವನ್ನು ನೋಡುವುದು(ಕಪ್ಪ)

ಅಟ್ಠಂಸ. ವಿ: [ಅಷ್ಟಾಸ್ರ] ಎಂಟು ಕೋನಗಳು

ಅಟ್ಠದಿಟ್ಠಿ. ಸ್ತ್ರೀ: [ಅಷ್ಟದೃಷ್ಟಿ] ಮಿತ್ರಾ, ತಾರಾ, ಬಲಾ, ದೀಪ್ರಾ, ಸ್ಥಿರಾ, ಕಾಂತಾ, ಪ್ರಭಾ ಮತ್ತು ಪೌರಾ ಎಂಬ ಯೋಗದ ಎಂಟು ದೃಷ್ಟಿಗಳು

ಅಟ್ಠಯ. ನ: [ಅಷ್ಟಕ]ಎಂಟರ ಗುಂಪು

ಅಟ್ಠಾ. ಸ್ತ್ರೀ: [ಅಷ್ಟಾ] ಮುಷ್ಟಿ, ಹಿಡಿ "ಮುಟ್ಠೋ ಭರ ಚೋಜ"(ಪಂಚವ)

ಅಟ್ಠಾ. ಸ್ತ್ರೀ: [ಆಸ್ಥಾ] ಶ್ರದ್ಧೆ, ಅಪೇಕ್ಷೆ, ಅಭಿಲಾಷೆ, ಪ್ರಯತ್ನ, ಉತ್ಸಾಹ

ಅಟ್ಠಾ. ಸ್ತ್ರೀ: [ಅರ್ಥ] ಸಲುವಾಗಿ, ಓಸ್ಕರ -ದಂಡ. ಪು: [-ದಂಡ] ಕಾರ್ಯಕ್ಕಾಗಿ ಮಾಡಿದ ಹಿಂಸೆ

ಅಟ್ಠಾಇಸ. ನ: [ಅಷ್ಟಾವಿಂಶ] ಇಪ್ಪತ್ತೆಂಟನೆಯ (ಪಿಂಗ)

ಅಟ್ಠಾಇಸ}. ಸ್ತ್ರೀನ: [ಅಷ್ಟಾವಿಂಶತಿ] ಇಪ್ಪತ್ತೆಂಟು

ಅಟ್ಠಾಈಸ}. ಸಂಖ್ಯಾವಿಶೇಷ

ಅಟ್ಠಾಣ. ನ: [ಅಸ್ಥಾನ] ಅಯೋಗ್ಯವಾದ ಸ್ಥಾನ, ಕುತ್ಸಿತ ಸ್ಥಾನ, ಸರಿಯಿಲ್ಲದ ಸ್ಥಳ

ಅಟ್ಠಾಣ. ನ: [ಆಸ್ಥಾನ] ಸಭೆ, ಸಭಾಗೃಹ(ಠಾ)

ಅಟ್ಠಾಣವಇ. 'ಅಟ್ಠಾಣಉಇ' ಶಬ್ದವನ್ನು ನೋಡುವುದು.

ಅಟ್ಠಾರಸಗ. ನ: [ಅಷ್ಟಾದಶಕ] ಹದಿನೆಂಟರ ಸಮೂಹ, ಗುಂಪು. ಹದಿನೆಂಟು ಮುದ್ರೆಗಳ ಮೂಲ್ಯ ಹೊಂದಿರುವ

ಅಟ್ಠಾವಯ. ನ: [ಅರ್ಥಪದ] ಗೃಹಸ್ಥ

ಅಟ್ಠಾಣಉಇ. ಸ್ತ್ರೀ: [ಅಷ್ಟಾನವತಿ] ತೊಂಬತ್ತೆಂಟು

ಅಟ್ಠಾಣಉಯ. ವಿ: [ಅಷ್ಟಾನವತ] ತೊಂಬತ್ತೆಂಟನೆಯ

ಅಟ್ಠಾಣವಇ. 'ಅಟ್ಠಾಣಉಇ' ಶಬ್ದವನ್ನು ನೋಡುವುದು

ಅಟ್ಠಾಣಿಯ. ವಿ: [ಅಸ್ಥಾನಿಕ] ಅಪಾತ್ರ, ಅನಾಶ್ರಯ (ಸೂಅ)

ಅಟ್ಠಾಯಮಾಣ. ವ.ಕೃ: [ಅತಿಷ್ಠತ್] ಕುಳಿತುಕೊಳ್ಳದ

ಅಟ್ಠಾರ}. ತ್ರಿ ಬ: [ಅಷ್ಟಾದಶನ್] ಸಂಖ್ಯಾವಿಶೇಷ:

ಅಟ್ಠಾರಸ}. ಹದಿನೆಂಟು -ವಿಹ. ವಿ: [-ವಿಧ] ಹದಿನೆಂಟು ವಿಧದ(ಸಮ)

ಅಟ್ಠಾರಸಮ. ವಿ: [ಅಷ್ಟಾದಶ] ಹದಿನೆಂಟನೆಯ (ಪಉಮ), ನ: ಎಂಟು ದಿನಗಳ ಕಾಲದ ನಿರಂತರ ಉಪವಾಸ(ಣಾಯಾ)

ಅಟ್ಠಾರಸಗ. ನ: [ಅಷ್ಟಾದಶಕ] ಹದಿನೆಂಟರ ಸಮೂಹ. ವಿ: ಹದಿನೆಂಟರ ಬೆಲೆ ಉಳ್ಳ

ಅಟ್ಠಾರಸಿಯ. ವಿ: [ಅಷ್ಟಾದಶಿಕ] ಹದಿನೆಂಟು ವರ್ಷ ವಯಸ್ಸಿನ(ವವ)

ಅಟ್ಠಾರಹ}. 'ಅಟ್ಠಾರ' ಶಬ್ದವನ್ನು ನೋಡುವುದು

ಅಟ್ಠಾರಾಹ}.

ಅಟ್ಠಾವಣ್ಣ}. ಸ್ತ್ರೀನ: [ಅಷ್ಟಾಪಂಚಾಶತ್] ಒಂದು ಸಂಖ್ಯಾವಿಶೇಷ- ಐವತ್ತು ಮತ್ತು ಎಂಟು=೫೮

ಅಟ್ಠಾವನ್ನ. ವಿ: [ಅಷ್ಟಾಪಂಚಾಶ] -ಐವತ್ತೆಂಟನೆಯ

ಅಟ್ಠಾವಯ. ಪು: [ಅಷ್ಟಾಪದ] ತನ್ನ ಹೆಸರಿನಿಂದ ಖ್ಯಾತವಾದ ಕೈಲಾಸ ಪರ್ವತ(ಪಣ್ಣ), ಒಂದು ಬಗೆಯ ಜೂಜು, ಪಗಡೆಯ ಹಾಸು, ಚಿನ್ನ, ಕಪಿ, ಜೇಡರ ಹುಳು, ಕಾಡುಮಲ್ಲಿಗೆ, -ಸೇಲ. ಪು: [-ಶೈಲ] ಮೇರು ಪರ್ವತ, ಭಗವಾನ್ ವೃಷಭ ದೇವರು ನಿರ್ವಾಣ ಹೊಂದಿದ ತನ್ನ ಹೆಸರಿನಿಂದ ಖ್ಯಾತವಾದ ಪರ್ವತ ವಿಶೇಷ(ಧಣ)

ಅಟ್ಠಾವಯ. ನ: [ಅರ್ಥಪದ] ಗೃಹಸ್ಥ, ಅರ್ಥಶಾಸ್ತ್ರ
ಅಟ್ಠಾವೀಸ. ಸ್ತ್ರೀನ: [ಅಷ್ಟಾವಿಂಶತಿ] ಇಪ್ಪತ್ತೆಂಟು
ಅಟ್ಠಾವೀಸಿ. ಸ್ತ್ರೀ: [ಅಷ್ಟಾವಿಂಶತಿ] ಇಪ್ಪತ್ತೆಂಟು, –ವಿಹ. ವಿ: [–ವಿಧ] ಇಪ್ಪತ್ತೆಂಟು ಬಗೆಯ
ಅಟ್ಠಾವೀಸಇಮ. ವಿ: [ಅಷ್ಟಾವಿಂಶ] ಇಪ್ಪತ್ತೆಂಟನೆಯ, ಹದಿಮೂರು ದಿನಗಳ ನಿರಂತರ ಉಪವಾಸ
ಅಟ್ಠಾಸಟ್ಠಿ. ಸ್ತ್ರೀ: [ಅಷ್ಟಾಷಷ್ಟಿ] ಅರುವತ್ತೆಂಟು
ಅಟ್ಠಾಸಿ}. ಸ್ತ್ರೀ: [ಅಷ್ಟಾಶೀತಿ] ಎಂಬತ್ತೆಂಟು
ಅಟ್ಠಾಸೀಇ}.
ಅಟ್ಠಾಸೀಯ. ವಿ: [ಅಷ್ಟಾಶೀತ] ಎಂಬತ್ತೆಂಟನೆಯ
ಅಟ್ಠಾಹ. ನ: [ಅಷ್ಟಾಹ] ಎಂಟುದಿನ(ಣಾಯಾ)
ಅಟ್ಠಾಹಿಯಾ. ಸ್ತ್ರೀ: [ಅಷ್ಟಾಹಿಕಾ] ಎಂಟು ದಿನಗಳ ಒಂದು ಉತ್ಸವ(ಪಂಚಾ), ಉತ್ಸವ
ಅಟ್ಠಿ. ವಿ: [ಅರ್ಥಿನ್] ಯಾಚಕ, ಆಸೆ ಉಳ್ಳವನು, ಅವಶ್ಯಕತೆ ಉಳ್ಳವನು (ಆಚಾ)
ಅಟ್ಠಿ. ಪು: [ಅಸ್ಥಿ] ಮೂಳೆ, ಪೀಚು
ಅಟ್ಠಿ}. ಸ್ತ್ರೀನ: [ಅಸ್ಥಿ, –ಕ] ಮೂಳೆ, ಬೀಜ ಹುಟ್ಟಿಲ್ಲದ
ಅಟ್ಠಿಗ}. ಅಪರಿಪಕ್ವ ಹಣ್ಣು, ಪೀಚು(ಬೃಹ), ಪು: ಕಾಪಾಲಿಕ
ಅಟ್ಠಿಯ}. (ಬ್ರಹ), –ಮಿಂಜಾ. ಸ್ತ್ರೀ: [–ಮಿಜ್ಜಾ] ಮೂಳೆಯ ಒಳಗಿನ ರಸ. **–ಸರಕ್ಖ.** ಪು: [–ಸರಜಸ್ಕ] ಕಾಪಾಲಿಕ–ಸೇಣ. ನ: [–ಷೇಣ] ವತ್ಸಗೋತ್ರದ ಶಾಖೆಯಂಥ ಒಂದು ಗೋತ್ರ, ಈ ಗೋತ್ರದ ಪ್ರವರ್ತಕ ಪುರುಷ ಮತ್ತು ಅವನ ಸಂತಾನ(ಠಾ)
ಅಟ್ಠಿಯ. ವಿ: [ಅರ್ಥಿಕ] ಯಾಚಕ, ಅರ್ಥಿ, ಬಿನ್ನವಿಸುವವನು(ಸೂಅ), ಅರ್ಥದ(ಹಣ) ಕಾರಣ ಮತ್ತು ಹಣ ಸಂಬಂಧಿಯಾದ್ದು, ಮೋಕ್ಷಕ್ಕೆ ಕಾರಣಭೂತವಾದದ್ದು(ಉತ್ತ)
ಅಟ್ಠಿಯ. ವಿ: [ಆರ್ಥಿಕ] ಅರ್ಥದ(ಹಣ) ಕಾರಣ ಮತ್ತು ಹಣ ಸಂಬಂಧಿಯಾದ್ದು, ಮೋಕ್ಷಕ್ಕೆ ಕಾರಣಭೂತವಾದದ್ದು(ಉತ್ತ)
ಅಟ್ಠಿಯ. ವಿ: [ಅರ್ಥಿತ] ಅಭಿಲಾಷೆ ಪಡಲಾದ, ಯಾಚನೆ ಮಾಡಲಾದ(ಉತ್ತ)
ಅಟ್ಠಿಯ. ವಿ: [ಅಸ್ಥಿತ] ಅವ್ಯವಸ್ಥಿತ, ಅನಿಯಮಿತ
ಅಟ್ಠಿಯ. ವಿ: [ಆಸ್ಥಿತ] ಸ್ಥಿತ, ಇರುವ(ಸೇ), ಸ್ಥಿರವಾಗಿರುವ, ನೆಲೆಮಾಡಿಕೊಂಡಿರುವ

ಅಟ್ಠಿಯ. ಪು: [ಅಸ್ಥಿಕ] ವೃಕ್ಷ ವಿಶೇಷ, ಅಸ್ಥಿಕ ವೃಕ್ಷದ ಫಲ, ಮೂಳೆಗೆ ಸಂಬಂಧಿಸಿದ
ಅಟ್ಠಿಲ್ಲಯ. ಪು: [ಅಸ್ಥಿ] ಪೀಚು.
ಅಟ್ಠುತ್ತರ. ವಿ: [ಅಷ್ಟೋತ್ತರ] ಎಂಟಕ್ಕಿಂತ ಹೆಚ್ಚಿನ(ಔಪ), **–ಸಯ.** ನ: [–ಶತ] ಒಂದು ನೂರಾ ಎಂಟು(ಕಾಲ), **–ಸಯ.** ವಿ: [–ಶತತಮ] ಒಂದು ನೂರಾ ಎಂಟನೆಯ (ಪ ಉಮ)
ಅಠ}. **'ಅಟ್ಠ= ಅಷ್ಟನ್'** ಶಬ್ದವನ್ನು ನೋಡುವುದು
ಅಡ}.
ಅಡ. ಸಕ: [ಅಟ್] ತಿರುಗಾಡು, ಸಂಚರಿಸು. **ವ.ಕೃ–** ಅಡಮಾಣ –ಸಂಚರಿಸುತ್ತಿರುವ(ಣಾಯಾ)
ಅಡ. ಪು: [ಅವಟ] ಬಾವಿ(ಪಾಅ), ಬಾವಿಯ ಬಳಿ ಪ್ರಾಣಿಗಳಿಗೆ ನೀರು ಕುಡಿಯಲು ತೋಡುವ ಹಳ್ಳ(ಹೇ), ಐಂದ್ರಜಾಲಿಕ, ಬೇವಿನ ಮರ
–ಅಡ. **'ತಡ=ತಟ'** ಎಂಬ ಶಬ್ದವನ್ನು ನೋಡುವುದು
ಅಡಇ}. ಸ್ತ್ರೀ: [ಅಟವಿ, –ವೀ] ಘೋರ ಕಾನನ,
ಅಡಈ}. ಅರಣ್ಯ(ಸುಪಾ)
ಅಡಡಜ್ಝಿಯ ನ: [ದೇ] ವಿಪರೀತ ಮೈಥುನ(ದೇ)
ಅಡಖಮ್ಮ. ಸಕ: [ದೇ] ಸಂಬಾಳಿಸುವುದು, ರಕ್ಷಿಸುವುದು.
ಅಡಖಮ್ಮಿಅ. ವಿ: [ದೇ] ಸಂಬಾಳಿಸಲ್ಪಟ್ಟ, ರಕ್ಷಿತ
ಅಡಡ. ನ: [ಅಟಟ] 'ಅಟಟಾಂಗ' ವನ್ನು ಎಂಬತ್ತನಾಲ್ಕು ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)
ಅಡಡಂಗ. ನ: [ಅಟಟಂಗ] 'ತುಡಿಯ' ಅಥವಾ ಮಹಾ ತುಡಿಯು'ವನ್ನು ೮೪ ನಾಲ್ಕು ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)
ಅಡಣ. ನ: [ಅಟನ] ತಿರುಗಾಟ, ಸಂಚಾರ(ಠಾ)
ಅಡಣೀ. ಸ್ತ್ರೀ: [ದೇ] ಮಾರ್ಗ, ದಾರಿ (ದೇ)
ಅಡಪಲ್ಲಣ. ನ: [ದೇ] ವಾಹನ ವಿಶೇಷ (ಜೀವ)
ಅಡಯಣಾ}. ಸ್ತ್ರೀ: [ದೇ] ಕುಲಟೆ, ವ್ಯಭಿಚಾರಿಣಿ(ದೆ)
ಅಡಯಾ}.
ಅಡಯಾಲ. ನ: [ದೇ] ಪ್ರಶಂಸೆ, ಹೊಗಳಿಕೆ (ಪಣಣಾ)
ಅಡಯಾಲ}. ಸ್ತ್ರೀನ: [ಅಷ್ಟಚತ್ವಾರಿಂಶತ್]
ಅಡಯಾಲೀಸ}. ನಲವತ್ತೆಂಟು.**–ಸಯ.** ನ: [–ಶತ] ಒಂದು ನೂರಾ ನಲವತ್ತೆಂಟು
ಅಡವಡಣ. ನ: [ದೇ] ಸ್ಖಲನ, ನಿಂತು ನಿಂತು ಚಲಿಸುವುದು(ಸುಪಾ) ಜಾರುವುದು

ಅಡವಿ}. ಸ್ತ್ರೀ: [ಅಟವಿ, ವೀ] ಘೋರ ಕಾನನ, ದಟ್ಟ
ಅಡವೀ}. ಅರಣ್ಯ(ಪಣ್ಣ)
ಅಡಸಟ್ಠಿ. ಸ್ತ್ರೀ: [ಅಷ್ಟಷಷ್ಟಿ] ಅರುವತ್ತೆಂಟು. **-ಮ.** ವಿ: [-ತಮ] ಅರುವತ್ತೆಂಟನೆಯ
ಅಡಾಡ. ಪು: [ದೇ] ಬಲಾತ್ಕಾರ, ಬಲವಂತ(ದೇ)
ಅಡಿಲ್ಲ. ಪು: [ಅಟಿಲ] ಒಂದು ಜಾತಿಯ ಪಕ್ಷಿ(ಪಣಣ)
ಅಡಿಲ್ಲಾ. ಸ್ತ್ರೀ: [ಅಡಿಲ್ಲಾ] ಒಂದು ಛಂದೋ ವಿಶೇಷ (ಪಿಂಗ)
ಅಡೋಲಿಯಾ. ಸ್ತ್ರೀ: [ಅಟೋಲಿಕಾ] ಯುವರಾಜನ ಮಗಳು ಮತ್ತು ಗಾರ್ದಭರಾಜನ ಮಗಳೂ ಆಗಿದ್ದ ಒಬ್ಬ ರಾಜಪುತ್ರಿ, ಹೆಣ್ಣು ಇಲಿ
ಅಡೋವಿಯ. ವಿ: [ಅಟೋಪಿತ] ತುಂಬಿದ(ಪಣಹ)
ಅಡ್ಡ. ವಿ: [ದೇ] ಅಡ್ಡ ಬರುವ, ನಡುವೆ ಅಡ್ಡಿ ಉಂಟುಮಾಡುವಂಥದು(ಉಪ)
ಅಡ್ಡಕ್ಖ. ಸಕ: [ಕ್ಷಿಪ್] ಎಸೆ, (ಎಸೆಯುವುದು), ಬೀಳಿಸು, ಬಿಸಾಡು(ಷಡ್)
ಅಡ್ಡಕ್ಖಿಯ. ವಿ: [ಕ್ಷಿಪ್ತ] ಎಸೆಯಲ್ಪಟ್ಟ(ಕುವಾ), ಬಿಸಾಡಲ್ಪಟ್ಟ, ಕೊಲ್ಲಲ್ಪಟ್ಟ
ಅಡ್ಡಣ. ನ: [ಅಡ್ಡನ] ಚರ್ಮ, ಗುರಾಣಿ, ಚರ್ಮದ ಹಲಗೆ(ವಿಸೇ)
ಅಡ್ಡಿಅ. ವಿ: [ದೇ] ಆರೋಪಿಸಲ್ಪಟ್ಟ
ಅಡ್ಡಿಯಾ. ಸ್ತ್ರೀ [ಅಡ್ಡಿಕಾ] ಜಟ್ಟಿಗಳ ಒಂದು ಕ್ರಿಯಾ ವಿಶೇಷ
ಅಡ್ಢ 'ಅದ್ಧ= ಅರ್ಧ' ಎಂಬ ಶಬ್ದವನ್ನು ನೋಡುವುದು
ಅಡ್ಢ. ವಿ: [ಆಢ್ಯ] ಶ್ರೀಮಂತ, ವೈಭವಶಾಲಿ, ಧನಿಕ, ಸಹಿತ=ಕೂಡಿಕೊಂಡಿರುವ, ತುಂಬಿದ=ಪೂರ್ಣ, ಮಿಶ್ರ(ಮಹಾ)
ಅಡ್ಢಅಕ್ಕಲೀ. ಸ್ತ್ರೀ: [ದೇ] '**ಅಟ್ಟಯಕ್ಕಲೀ**' ಎಂಬ ಶಬ್ದವನ್ನು ನೋಡುವುದು(ದೇ)
ಅಡ್ಢತ್ತ. ವಿ: [ಆರಬ್ಧ] ಪ್ರಾರಂಭವಾಗಿರುವ=ಪ್ರಾರಬ್ಧ(ಸೇ)
ಅಡ್ಢಾಯಿಜ್ಜ}. ವಿ: [ಅರ್ಧತೃತೀಯ] ಎರಡೂವರೆ
ಅಡ್ಢಾಇಯ}.
ಅಡ್ಢಿಯ. ವಿ: [ಕೃಷ್ಟ] ಸೆಳೆಯಲ್ಪಟ್ಟ, ಕರೆಯಲ್ಪಟ್ಟ,
ಅಡ್ಢುಟ್ಠ. ವಿ: [ಅರ್ಧಚತುರ್ಥ] ಮೂರೂವರೆ
ಅಡ್ಢೆಜ್ಜ. ನ: [ಆಢ್ಯತ್ವ] ಶ್ರೀಮಂತಿಕೆ, ಸಮೃದ್ಧಿ
ಅಡ್ಢೆಜ್ಜಾ. ಸ್ತ್ರೀ: [ಆಢ್ಯೇಜ್ಯಾ] ಶ್ರೀಮಂತನು ಮಾಡಿದ ಸತ್ಕಾರ(ಠಾ)

ಅಡ್ಢೋರುಗ. ಪು: [ಅರ್ಧೋರುಕ] ಜೈನ ಸಾಧ್ವಿಯರು ಉಡುವ ಒಂದು ವಸ್ತ್ರ(ಓಘ)
ಅಢ. (ಅಪ) '**ಅಟ್ಠ=ಅಷ್ಟನ್**' ಎಂಬ ಶಬ್ದವನ್ನು ನೋಡುವುದು
ಅಢಾಇಸ(ಅಪ). ಸ್ತ್ರೀನ: [ಅಷ್ಟಾವಿಂಶತಿ] ಇಪ್ಪತ್ತೆಂಟು
ಅಢಾರಸಗ. '**ಅಟ್ಠಾರಸಗ**' ಶಬ್ದವನ್ನು ನೋಡುವುದು.
ಅಢಾರಸಮ. '**ಅಟ್ಠಾರಸಮ**' ಎಂಬ ಶಬ್ದವನ್ನು ನೋಡುವುದು(ಣಾಯಾ)
ಅಣ. ಅ [ಅ-, ಅನ್-] '**ಅ-**' ಅನ್ನು ನೋಡುವುದು.
ಅಣ. ಸಕ: [ಅಣ್] ಶಬ್ದ ಮಾಡು(ವುದು,) ಹೋಗು, ತಿಳಿದುಕೊ(ಳ್ಳುವುದು)ಅರ್ಥ ಮಾಡಿಕೊಳ್ಳು (ವಿಸೇ)
ಅಣ. ಪು. [ಅಣ] ಶಬ್ದ, ಚಲನೆ, ನಡಿಗೆ, ರಾಗ, ದ್ವೇಷ, ಕ್ರೋಧವೇ ಮೊದಲಾದ ಆಂತರಿಕ ಶತ್ರುಗಳು, ಬೈಗಳು, ಸಿಟ್ಟು, ಶಾಪ, ನ: ಪಾಪ, ಕರ್ಮ(ಆಚಾ). ವಿ: ಕುತ್ಸಿತ, ಕೆಟ್ಟ(ವಿಸೇ)
ಅಣ. ಪು: [ಅನ] '**ಅಣಂತಾಣುಬಂಧಿ**' ಎಂಬ ಶಬ್ದವನ್ನು ನೋಡುವುದು
ಅಣ. ಪು: [ಅನಸ್] ಗಾಡಿ, ಶಕಟ(ಧರ್ಮ)
ಅಣ. '**ಅಣ್ಣ=ಅನ್ಯ**' ಎಂಬ ಶಬ್ದವನ್ನು ನೋಡುವುದು
ಅಣ. ನ: [ಋಣ] ಸಾಲ, ಕರ್ಮ. ಋಣದಲ್ಲಿ ಎರಡು ವಿಧ: ಲೌಕಿಕ ಮತ್ತು ಅಲೌಕಿಕ. ಲೌಕಿಕದಲ್ಲಿ ಸಾಲ, ಬಡ್ಡಿ ಇತ್ಯಾದಿ ಅಲೌಕಿಕದಲ್ಲಿ ದೇವಋಣ, ಪಿತೃ ಋಣ ಮತ್ತು ಋಷಿಋಣ ಎಂದು ಮೂರು ಬಗೆ **-ಧಾರಗ.** ವಿ: [-ಧಾರಕ] ಸಾಲಗಾರ, ಋಣಿ, **-ಬಲ,** ವಿ: [-ಬಲ] ಸಾಲ ತೆಗೆದುಕೊಳ್ಳುವವನು (ಪಣಹ). **-ಭಂಜಗ.** ವಿ: [-ಭಂಜಕ] ಮುರಿಯುವವನು, ಅಡ್ಡಿಪಡಿಸುವವನು(ಪಣ್ಣ)
-ಅಣ. '**ಗಣ**' ಎಂಬ ಶಬ್ದವನ್ನು ನೋಡುವುದು (ಸೇ)
-ಅಣ. '**ಜಣ**' ಶಬ್ದವನ್ನು ನೋಡುವುದು "ದಾಸ ಅಣಾಣಂ"(ಅಂಜು)
-ಅಣ. '**ತಣ**' ಎಂಬ ಶಬ್ದವನ್ನು ನೋಡುವುದು
-ಅಣಅರದ '**ಅಣವರಯ**' ಎಂಬ ಶಬ್ದವನ್ನು ನೋಡುವುದು(ನಾಟ)
ಅಣಇವರ. ವಿ: [ಅನತಿವರ] ತನಗಿಂತ ಹೆಚ್ಚಿನವರು ಯಾರೂ ಇಲ್ಲವೋ ಅವನು. ಸರ್ವೋತ್ತಮ "ಅಣಇಾಂ ಮಹಿಲಾಭಿಣಂ ರಮಂತಸ್ಸ"(ಗಾ)

ಅಣಇವುಟ್ಟಿ. ಸ್ತ್ರೀ: [ಅನತಿವೃಷ್ಟಿ] ಮಳೆಯ ಅಭಾವ

ಅಣಈಇ. ವಿ: [ಅನೀತಿ] ಈತಿ ಬಾಧೆಯಿಲ್ಲದ= ಉಪದ್ರವವಿಲ್ಲದ, ದುರಾಚಾರ, ಅಧರ್ಮ, ಅನ್ಯಾಯ(ಔಪ)

ಅಣಂಗ. ಪು: [ಅನಂಗ] ಕಾಮದೇವ. ಮನ್ಮಥ, ವಿಷಯಾಭಿಲಾಷೆ, ಕಾಮೇಚ್ಛೆ(ಶ್ರಾ) ಆನಂದಪುರದ ರಾಜ ಜಿತಾರಿಯ ಮಗ, ನ: ವಿಷಯ ಸುಖದ ಮುಖ್ಯ ಅಂಗಗಳ ಹೊರತಾಗಿ ಸ್ತನ, ಹೊಟ್ಟೆ, ಮುಖವೇ ಮೊದಲಾದ ಅಂಗಗಳು (ತಾ), ಕೃತಕ ಲಿಂಗವೇ ಮೊದಲಾದವು(ತಾ) ೧೨ ಅಂಗ ಗ್ರಂಥಗಳಿಗಿಂತ ಭಿನ್ನವಾದ ಜೈನಶಾಸ್ತ್ರ(ವಿಸೇ) ವಿ: ಶರೀರವಿಲ್ಲದ, ಅಂಗರಹಿತ, ಮನಸ್ಸು, ಆಕಾಶ, **–ಘರಿಣೀ.** ಸ್ತ್ರೀ: [–ಗೃಹಿಣೀ] ರತಿ, ಕಾಮನ ಹೆಂಡತಿ, **–ಪಡಿಸೇವಿಣೀ.** ಸ್ತ್ರೀ: [–ಪ್ರತಿಷೇವಿಣೀ] ಮಿತಿಮೀರಿದ ರೀತಿಯಲ್ಲಿ ಅಥವಾ ಮರ್ಯಾದೆ ರಹಿತ ರೀತಿಯಲ್ಲಿ ವಿಷಯ ಸುಖವನ್ನನುಭವಿಸುವ ಹೆಣ್ಣು(ತಾ), **–ಪವಿಟ್ಟ.** ನ: [–ಪ್ರವಿಷ್ಟ] ಹನ್ನೆರಡು ಅಂಗಗ್ರಂಥಗಳಿಗಿಂತ ಭಿನ್ನವಾದ ಜೈನ ಗ್ರಂಥಗಳು. **–ಬಾಣ.** ಪು:[–ಬಾಣ] ಕಾಮಬಾಣ. **–ಲವಣ.** ಪು: [–ವನ] ರಾಮಚಂದ್ರನ ಒಬ್ಬ ಮಗನಾದ ಲವ(ಪ ಉಮ), **–ಸರ.** ಪು: [–ಶರ] ಕಾಮಬಾಣ(ಗಾ), **ಸೇಣಾ.** ಸ್ತ್ರೀ: [–ಸೇನಾ] ದ್ವಾರಕಾ ನಗರದ ಒಬ್ಬ ವಿಖ್ಯಾತ ಗಣಿಕೆ(ಣಾಯಾ)

ಅಣಂತ. ಪು: [ಅನಂತ] ಈಗ ನಡೆಯುತ್ತಿರುವ ಅವಸರ್ಪಿಣೀ ಕಾಲದ ಹದಿನಾಲ್ಕನೇ ತೀರ್ಥಂಕರ ದೇವ, ಅನಂತನಾಥ ಜಿನ. ವಿಷ್ಣು, ಕೃಷ್ಣ (ಪಉಮ)(ಪಉಮ), ಆದಿಶೇಷ, ಅನಂತ ಜೀವಗಳನ್ನೊಳಗೊಂಡಿರುವ ವನಸ್ಪತಿ, ಕಂದಮೂಲ ಇತ್ಯಾದಿ (=ಗೆಡ್ಡೆಗೆಣಸು) ನ: ಕೇವಲ ಜ್ಞಾನ(ಣಾಯಾ), ಆಕಾಶ ವಿ: ಶಾಶ್ವತ, ನಿಸ್ಸೀಮ, ಅಪರಿಮಿತ, ಬಹಳ, ವಿಶೇಷ, ನಾಶವಿಲ್ಲದ ಶಕ್ತಿ. **–ಕಾಇಯ.** ಪು:[–ಕಾಇಕ] ಕಂದ–ಮೂಲವೇ ಮೊದಲಾದ ಅನಂತ ಜೀವಗಳನ್ನೊಳಗೊಂಡ ವನಸ್ಪತಿ(ಪಣಣಾ) **–ಖುತ್ತೋ.** ಅ [–ಕೃತ್ವಸ್] ಅಸಂಖ್ಯ ಆಕ್ರಮಣ(ಜೀ). **–ಜೀವ.** ಪು: [–ಜೀವ] '–ಕಾಇಯ' ಶಬ್ದವನ್ನು ನೋಡುವುದು. **–ಜೀವಿಯ.** ಪು: [–ಜೀವಿಕ] ಕಾಇಯ' ಶಬ್ದವನ್ನು ನೋಡುವುದು(ಭಗ). **–ಣಾಣ.** ನ: [–ಜ್ಞಾನ] ಕೇವಲ ಜ್ಞಾನ (ದಸ), **–ಣಾಣಿ.** ವಿ: [–ಜ್ಞಾನಿನ್] ಕೇವಲ ಜ್ಞಾನಿ, ಸರ್ವಜ್ಞ(ಸೂಅ). **–ದಂಸಿ.** ವಿ:[–ದರ್ಶಿನ್] ಸರ್ವಜ್ಞ(ಪಉಮ). **–ಪಾಸಿ.** ವಿ:[–ದರ್ಶಿನ್] ಐರಾವತ ಕ್ಷೇತ್ರದ ಇಪ್ಪತ್ತನೇ ಜಿನದೇವ (ತಿತ್ಥ). **–ಮಿಸ್ಸಿಯಾ.** ಸ್ತ್ರೀ: [–ಮಿಶ್ರಿಕಾ] ಸತ್ಯಮಿಶ್ರ ಭಾಷೆಯ ಒಂದು ಪ್ರಭೇದ. ಅನಂತ ಕಾಯಕ್ಕಿಂತ ಭಿನ್ನವಾದ ಒಂದೊಂದೂ ವನಸ್ಪತಿಯೊಂದಿಗೆ ಸೇರಿಕೊಂಡಿರುವ ಅನಂತ ಕಾಯವನ್ನೂ ಅನಂತಕಾಯ ಎಂದು ಹೇಳುವಂತೆ(ಪಣಣಾ) **–ಮೀಸಯ.** ನ: [–ಮಿಶ್ರಕ] **'–ಮಿಸ್ಸಿಯಾ'** ಶಬ್ದವನ್ನು ನೋಡುವುದು(ತಾ), **–ರಹ.** ಪು: [–ರಥ] ಪ್ರಖ್ಯಾತ ರಾಜ ದಶರಥನ ಅಣ್ಣನ ಹೆಸರು(ಪಉಮ). **–ವಿಜಯ.** ಪು: [–ವಿಜಯ] ಭರತ ಕ್ಷೇತ್ರದ ೨೪ನೇ ಹಾಗೂ ಐರಾವತ ಕ್ಷೇತ್ರದ ೨೦ನೇ ಭಾವೀ ತೀರ್ಥಂಕರನ ಹೆಸರು(ಸಮ). **–ವೀರಿಯ.** ವಿ: [–ವೀರ್ಯ] ಅನಂತ ಶಕ್ತಿಯುಳ್ಳ, ಪು: ಕೇವಲ ಜ್ಞಾನಿಯಾದ ಮುನಿಯೊಬ್ಬನ ಹೆಸರು(ಪಉಮ), ಭರತ ಕ್ಷೇತ್ರದ ಭಾವೀ ತೀರ್ಥಂಕರನ ಹೆಸರು; **–ಸಂಸಾರಿಯ.** ವಿ:[–ಸಂಸಾರಿಕ] ಅನಂತ ಕಾಲದವರೆಗೆ ಲೋಕದಲ್ಲಿ ಹುಟ್ಟು ಸಾವುಗಳನ್ನು ಪಡೆಯುವವನು(ಉಪ), **–ಸೇಣ.** ಪು: [–ಸೇನ] ನಾಲ್ಕನೇ ಕುಲಕರ(ಸಮ), ಒಬ್ಬ ಅಂತ್ಯಕಾರಕ ಮುನಿ(ಅಂತ)

ಅಣಂತಇ. ಪು: [ಅನಂತಜಿತ್] ಪ್ರಚಲಿತ ಕಾಲದ ೧೪ನೇ ಜಿನದೇವ (ಪಉಮ)

ಅಣಂತಗ}. **'ಅಣಂತ'** ಶಬ್ದವನ್ನು ನೋಡುವುದು.

ಅಣಂತಯ}. **'ಅಣಂತ'** ಈಗ ನಡೆಯುತ್ತಿರುವ ಅವಸರ್ಪಿಣೀ ಕಾಲದ ಹದಿನಾಲ್ಕನೇ ತೀರ್ಥಂಕರ ದೇವ ಅನಂತನಾಥ ಜಿನ. ವಿಷ್ಣು, ಕೃಷ್ಣ(ಪಉಮ) ವಸ್ತ್ರ ವಿಶೇಷ(ಓಘ) ಐರಾವತ ಕ್ಷೇತ್ರದ ಒಬ್ಬ ಜಿನದೇವ(ಸಮ)

ಅಣಂತರ. ವಿ: [ಅನಂತರ] ಅಂತರವಿಲ್ಲದ,ಬಿಡುವಿಲ್ಲದ, ನಿರಂತರ=ಒಂದೇ ಸಮನೆ(ಣಾಯಾ), ಪು: ವರ್ತಮಾನ ಕಾಲ; ಕ್ರಿವಿ: ಆಮೇಲೆ,ಬಳಿಕ(ವಿಪಾ)

ಅಣಂತರಹಿಯ. ವಿ: [**ಅನಂತರ್ಹಿತ**] ಎಡೆಬಿಡದೆ, ಒಂದೇ ಸಮನೆ, ನಿರಂತರವಾಗಿ, ಸಜೀವ, ಚೇತನ (ನಿಚೂ)

ಅಣಂತಸೋ. ಅ: [**ಅನಂತಶಸ್**] ಅನಂತ ಸಲ, ಅನಂತ ಬಾರಿ

ಅಣಂತಾಣುಬಂಧಿ. ಪು: [**ಅನಂತಾನುಬಂಧಿನ್**] ಅನಂತ ಕಾಲದ ವರೆಗೆ ಆತ್ಮವನ್ನು ಸಂಸಾರ ಚಕ್ರದಲ್ಲಿ ತಿರುಗಿಸುವಂತೆ ಮಾಡುವ ದೋಷ ನಾಲ್ಕರ ಗುಂಪಿನಲ್ಲಿ ಮೊದಲ ನಾಲ್ಕರ ಗುಂಪು: ಅತಿ ಪ್ರಚಂಡ ಕ್ರೋಧ, ಮಾನ, ಮಾಯೆ, ಮತ್ತು ಲೋಭ(ಸಮ)

ಅಣಂಸ. ವಿ: [**ಅನಂಶ**] ಅಖಂಡವಾದ

ಅಣಕ್ಕ. ಪು: [**ದೇ**] ಒಂದು ಮ್ಲೇಚ್ಛ ದೇಶ, ಒಂದು ಮ್ಲೇಚ್ಛ ಜಾತಿ(ಪಣಹ)

ಅಣಕ್ಖ. ಪು: [**ದೇ**] ರೋಷ, ಕ್ರೋಧ(ಸುಪಾ), ಲಜ್ಜೆ, ನಾಚಿಕೆ

ಅಣಕ್ಖರ. ನ: [**ಅನಕ್ಷರ**] ಶ್ರುತ ಜ್ಞಾನದ ಒಂದು ಪ್ರಕಾರ, ಮೌಖಿಕ ಜ್ಞಾನ, ಅಕ್ಷರವಿಲ್ಲದ, ವಿದ್ಯೆಯಿಲ್ಲದ, ಮೂರ್ಖ, ಆಂಗಿಕ ಸಂಜ್ಞೆಗಳಿಂದ ಬೇರೆಯವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು(ಣಂದಿ) ಮಾತಿಲ್ಲದ ಮೂಗ

ಅಣಗಾರ. ವಿ: [**ಅನಗಾರ**] ಮನೆ ಮಠಗಳನ್ನು ತ್ಯಜಿಸಿದವನು, ಸಾಧು,ಯತಿ,ಮನೆಯಿಲ್ಲದವನು, ಭಿಕ್ಷುಕ, **ಪು:** ಭರತ ಕ್ಷೇತ್ರದ ಭಾವಿ ಐದನೇ ತೀರ್ಥಂಕರನ ಪೂರ್ವ ಭವದ ಒಂದು ಹೆಸರು (ಸಮ). **–ಸುಯ.** ನ: [**–ಶ್ರುತ**] ಸೂತ್ರ ಕೃತಾಂಗ, ಸೂತ್ರದ ಒಂದು ಅಧ್ಯಯನ(ಸೂಅ)

ಅಣಗಾರ. ವಿ: [**ಋಣಕಾರ**] ಸಾಲ ಮಾಡುವವನು, ದುಷ್ಟ ಶಿಷ್ಯ, ಅಪಾತ್ರ(ಉಪ)

ಅಣಗಾರ. ವಿ:[**ಅನಾಕಾರ**] ಆಕೃತಿಯಿಲ್ಲದ, ಆಕಾರರಹಿತ

ಅಣಗಾರಿ. ಸ್ತ್ರೀ: [**ಅನಗಾರಿನ್**] ಸಾಧು, ಯತಿ, ಮುನಿ

ಅಣಗಾರಿಯ. ವಿ: [**ಆನಗಾರಿಕ**] ಸಾಧು ಸಂಬಂಧಿ, ಮುನಿಗೆ ಸೇರಿದ, ಋಷಿಯ(ವಿಸೇ)

ಅಣಗಾಲ. ಪು: [**ಅಕಾಲ**] ದುರ್ಭಿಕ್ಷ, ಕ್ಷಾಮ, ಅಕಾಲ

ಅಣಗಿಣ. ವಿ: [**ಅನಗ್ನ**] ಬೆತ್ತಲೆಯಿಲ್ಲದವನು, ಬಟ್ಟೆ ತೊಟ್ಟಿರುವವನು, **ಪು:** ಬಟ್ಟೆಯನ್ನು ನೀಡುವ ಕಲ್ಪ ವೃಕ್ಷದ ಒಂದು ಜಾತಿಯ ಮರ(ತಂದು)

ಅಣಗ್ಘ. '**ಅನಘ**' ಶಬ್ದವನ್ನು ನೋಡುವುದು.

ಅಣಗ್ಘ ವಿ: [**ಋಣಘ್ನ**] ಋಣವನ್ನು ನಾಶ ಮಾಡುವವನು, ಕರ್ಮವನ್ನು ನಾಶ ಮಾಡುವವನು(ದಂಸ)

ಅಣಗ್ಘ}. ವಿ: [**ಅನರ್ಘ್ಯ**] ಅಮೂಲ್ಯ, ಬಹು ಬೆಲೆ

ಅಣಗ್ಘೇಯ}. ಬಾಳುವ, ಮಹಾನ್, ಗುರು, ಎಲ್ಲರಿಗೂ ಪೂಜ್ಯನಾದ, ಉತ್ತಮ, ಶ್ರೇಷ್ಠ(ವಿವೇ)

ಅಣಘ. ವಿ: [**ಅನಘ**] ಶುದ್ಧ, ನಿರ್ಮಲ, ಸ್ವಚ್ಛ (ಪಂಚವ), ಪಾಪರಹಿತ, ದೋಷವಿಲ್ಲದ, ದುಃಖವಿಲ್ಲದ, ವಿಷ್ಣು, ಈಶ್ವರ, ಬಿಳಿ ಸಾಸಿವೆ

ಅಣಚ್ಛ. '**ಕರಿಸ=ಕೃಷ್**' ಶಬ್ದವನ್ನುನೋಡುವುದು

ಅಣಚ್ಛಆರ. ವಿ: [**ದೇ**] ಒಡೆಯದಿರುವ, ಅಖಂಡ(ದೇ) ಅಯೋಗ್ಯ, ನ್ಯಾಯದಿಂದ ಕೂಡಿಲ್ಲದವನು

ಅಣಜ್ಜ. ವಿ: [**ಅನಾರ್ಯ**] ಆರ್ಯನಲ್ಲದವನು, ದುಷ್ಟ, ಸುಸಂಸ್ಕೃತನಲ್ಲದವನು(ಪಣ್ಣ)

ಅಣಜ್ಜ ವಿ: [**ಅನ್ಯಾಯ್ಯ**] ಯೋಗ್ಯವಲ್ಲದ, ನ್ಯಾಯೋಚಿತವಲ್ಲದ

ಅಣಜ್ಜವ. (**ಅಪ**) ಮೇಲಿನ ಶಬ್ದವನ್ನು ನೋಡುವುದು. **–ಖಂಡ.** **ಪು:** [**–ಖಂಡ**] ಅನಾರ್ಯದೇಶ(ಭವಿ)

ಅಣಜ್ಝವಸಾಯ. ಪು: [**ಅನಧ್ಯವಸಾಯ**] ಅವ್ಯಕ್ತ ಜ್ಞಾನ, ಅತಿ ಸಾಮಾನ್ಯ ಜ್ಞಾನ (ವಿಸೇ)

ಅಣಜ್ಝಾಯ. ಪು: [**ಅನಧ್ಯಾಯ**] ಅಧ್ಯಯನ ವಿಲ್ಲದಿರುವುದು, ಅಧ್ಯಯನ ನಿಷಿದ್ಧವಾದ ಕಾಲ(ನಾಟ)

ಅಣಟ್ಟ. ವಿ: [**ಅನಾರ್ತ**] ಪೀಡಿತನಲ್ಲದ, ದುಃಖಿತ ನಲ್ಲದ, ನೋಯದ

ಅಣಟ್ಠ. ಪು: [**ಅನರ್ಥ**] ನಷ್ಟ, ಹಾನಿ, ವಿಪತ್ತು, ತೊಂದರೆ(ಣಾಯಾ) ಪ್ರಯೋಜನವಿಲ್ಲದ್ದು, ವ್ಯರ್ಥ(ಆವ) ಅಸಂಬದ್ಧ, ಮೂರ್ಖತನ, ಅರ್ಥರಹಿತ (ನಿಚೂ)**–ದಂಡ.** **ಪು:** [**–ದಂಡ**] ಕಾರಣವಿಲ್ಲದೆ ಹಿಂಸಿಸುವುದು,

ಅಣಡ. ಪು: [**ದೇ**] ಜಾರ, ಉಪ ಪತಿ(ದೇ)

ಅಣಡ್ಢ. ವಿ: [**ಅನರ್ಧ**] ಅರ್ಧಮಾಡದ, ವಿಭಾಗಿಸದ, ಅಖಂಡ(ತಾ)

ಅಣಣ್ಣ. ವಿ: [**ಅನನ್ಯ**] ಬೇರೆಯಲ್ಲದ, ಬೇರೆಯಾಗಿಲ್ಲದ, ಒಂದೇ ಆಗಿರುವ, ಅದ್ವಿತೀಯ, ಶ್ರೇಷ್ಠ(ಸುಪಾ), ಮೋಕ್ಷಮಾರ್ಗ, ಅಸಾಧಾರಣ. **–ತುಲ್ಲ.** ವಿ: [–

ತುಲ್ಯ] ಅಸಾಧಾರಣ, ಅನುಪಮ. **–ದಂಸಿ.** ವಿ: [**–ದರ್ಶಿನ್**] ವಸ್ತುವನ್ನು ಸತ್ಯ ಅಥವಾ ವಾಸ್ತವ ರೂಪದಲ್ಲಿ ನೋಡುವವನು(ಆಚಾ), **–ಪರಮ.** ವಿ:[**–ಪರಮ**] ಸಂಯಮ, ಇಂದ್ರಿಯ ನಿಗ್ರಹ **–ಮಣ, –ಮಣಸ.** ವಿ:[**–ಮನಸ್ಕ**] ಏಕಾಗ್ರಚಿತ್ತ ಹೊಂದಿರುವವನು, ತಲ್ಲೀನ(ಔಪ). **–ಸಮಾಣ.** ವಿ:[**–ಸಮಾನ**] ಅಸಾಧಾರಣ, ಅದ್ವಿತೀಯ(ಉಪ)

ಅಣತ್ತ. ವಿ: [**ಅನಾತ್ತ**] ಅಸ್ವೀಕೃತ(ತಾ)

ಅಣತ್ತ. ವಿ: [**ಅನಾರ್ತ**] ಪೀಡಿತನಲ್ಲದವನು, ನೋಯಸಲ್ಪಡದವನು

ಅಣತ್ತ. ವಿ: [**ಋಣಾರ್ತ**] ಸಾಲದಿಂದ ಬಾಧಿತನಾದವನು(ತಾ)

ಅಣತ್ತ. ವಿ: [**ಅನಾತ್ರ**] ದುಃಖಕರ, ಸುಖನಾಶಕ (ಭಗ)

ಅಣತ್ತ. ನ: [**ದೇ**] ನಿರ್ಮಾಲ್ಯ, ಪೂಜಾನಂತರ ವಿಗ್ರಹದ ಮೇಲಿಂದ ತೆಗೆದು ಹಾಕಿದ ಹೂವು, ಉಳಿಕೆ, ಉಚ್ಛಿಷ್ಟ

ಅಣತ್ಥ. '**ಅಣಟ್ಠ**' ಎಂಬ ಶಬ್ದವನ್ನು ನೋಡುವುದು.

ಅಣಥಂತ. ವ.ಕೃ: [**ಅತಿಷ್ಠತ್**] ಇಲ್ಲದಿರುವ, ಅಸ್ತವಾಗುತ್ತಿರುವ (ಪಉಮ)

ಅಣನ್ನ. '**ಅಣಣ್ಣ**' ಎಂಬ ಶಬ್ದವನ್ನು ನೋಡುವುದು

ಅಣಪನ್ನಿಯ. '**ಅಣವಣ್ಣಿಯ**' ಎಂಬ ಶಬ್ದವನ್ನು ನೋಡುವುದು(ಭಗ)

ಅಣಪ್ಪ. ವಿ:[**ಅನರ್ಘ್ಯ**]ಅರ್ಪಿಸಲು ಯೋಗ್ಯವಲ್ಲದ(ತಾ)

ಅಣಪ್ಪ. ವಿ: [**ಅನಲ್ಪ**] ಅಲ್ಪವಲ್ಲದ, ಬಹಳವಾದ, ಅಧಿಕ

ಅಣಪ್ಪ. ಪು: [**ಅನಾತ್ಮನ್**] ತನಗಿಂತ ಬೇರೆಯಾದ, ಆತ್ಮದಿಂದ ಬೇರೆಯಾದ(ಪಉಮ) ಭೌತಿಕ ದೇಹ, ಮನಸ್ಸನ್ನು ಹತೋಟಿಯಲ್ಲಿಡದವನು **–ಜ್ಞ.** ವಿ: [**–ಜ್ಞ**] ತಿಳಿವಳಿಕೆಯಿಲ್ಲದ, ಮೂರ್ಖ, ಹುಚ್ಚ, ಭೂತ ಹೊಕ್ಕವನು, ಪರಾಧೀನ(ನಿಚೂ).**–ವಸಗ.** ವಿ:[**–ವಶ**] ಪರರಿಗೆ ವಶವಾದವನು, ಪರಾಧೀನ

ಅಣಪ್ಪ. ಪು: [**ದೇ**] ಖಡ್ಗ, ಕತ್ತಿ(ದೇ)

ಅಣಪ್ಪಿಯ. ವಿ: [**ಅನರ್ಪಿತ**] ಅರ್ಪಿಸದಿರುವ, ನೀಡದಿರುವ, ಸಾಧಾರಣ, ಸಾಮಾನ್ಯ(ತಾ). **–ಣಯ.** ಪು: [**–ನಯ**] ಸಾಮಾನ್ಯವಾಗಿ ಗ್ರಹಿಸಬಹುದಾದ ಪಕ್ಷ(ವಿಸೇ)

ಅಣಬ್ಭಂತರ. ವಿ: [**ಅನಭ್ಯಂತರ**] ಒಳಗಿನ ತತ್ತ್ವ ತಿಳಿಯದವನು, ರಹಸ್ಯ ಅರಿಯದವ(ಅಭಿ)

ಅಣಭಿಗ್ಗಹ. ನ: [**ಅನಭಿಗ್ರಹ**] "ಸರ್ವೇ ದೇವಾಃ ವಂದ್ಯಾಃ" ಇತ್ಯಾದಿ ರೂಪ ಮಿಥ್ಯಾತ್ವದ ಒಂದು ಭೇದ(ಶ್ರಾ)

ಅಣಭಿಗ್ಗಹಿಯ. ವಿ: [**ಅನಭಿಗ್ರಹಿಕ**] ಮೇಲಿನ ಶಬ್ದವನ್ನು ನೋಡುವುದು

ಅಣಭಿಗ್ಗಹಿಯ. ವಿ: [**ಅನಭಿಗೃಹೀತ**] ಅಸ್ವೀಕೃತ (ಉತ್ತ)

ಅಣಭಿಣ್ಣ}. ವಿ: [**ಅನಭಿಜ್ಞ**] ಏನೂ ತಿಳಿಯದವನು,

ಅಣಭಿನ್ನ}. ಅರಿವಿಲ್ಲದವನು(ಸುಪಾ)

ಅಣಭಿಲಪ್ಪ. ವಿ: [**ಅನಭಿಲಾಪ್ಯ**] ಅನಿರ್ವಚನೀಯ, ಮಾತಿನಲ್ಲಿ ಹೇಳಲಾಗದ(ಲಹುಅ)

ಅಣಮಿಸ. ವಿ: [**ಅನಿಮಿಷ**] ತೆರೆದ, ವಿಕಸಿತ(ಸುರ), ಕಣ್ಣಿನ ರೆಪ್ಪೆ ಚಲಿಸದಿರುವ, ಕಣ್ಣು ಮಿಟುಕಿಸದ, ದೇವತೆ, ಮೀನು

ಅಣಯ. ಪು: [**ಅನಯ**] ಅನೀತಿ, ಅನ್ಯಾಯ(ಶ್ರಾ), ನಯವಿಲ್ಲದ, ದುಷ್ಟತನ, ಅಪ್ರಾಮಾಣಿಕತೆ, ದುರ್ದಶೆ, ವಿಪತ್ತು

ಅಣಯಾರ. '**ಅಣಗಾರ**' ಎಂಬ ಶಬ್ದವನ್ನು ನೋಡುವುದು

ಅಣರಣ್ಣ. ಪು: [**ಅನರಣ್ಯ**] ಸಾಕೇತ ಪುರದ ಒಬ್ಬ ರಾಜ, ಮೊದಲಿಗೆ ಋಷಿಯಾಗಿದ್ದವನು

ಅಣರಹ.}. ವಿ: [**ಅನರ್ಹ**] ಅಯೋಗ್ಯ, ಅರ್ಹನಲ್ಲದ

ಅಣರಿಹ}. (ಕುಮಾ)

ಅಣರುಹ}.

ಅಣರಹೂ. ಸ್ತ್ರೀ: [**ದೇ**] ಹೊಸದಾಗಿ ಮದುವೆಯಾದವಳು(ಷಡ್)

ಅಣರಾಮುಂಯ. ಪು: [**ದೇ**] ಅಶಾಂತಿ, ನೆಮ್ಮದಿಯಿಲ್ಲದಿರುವಿಕೆ, ಕೋಪ, ನೋವು ದುಃಖ, ಪ್ರೀತಿಯಿಲ್ಲದಿರುವಿಕೆ

ಅಣರಾಯ. ವಿ: [**ಅರಾಜಕ**] ರಾಜನಿಲ್ಲದಿರುವುದು, ರಾಜನಿಲ್ಲದ ದೇಶ

ಅಣರಾಹ. ಪು: [**ದೇ**] ತಲೆಯ ಮೇಲೆ ಧರಿಸುತ್ತಿದ್ದ ಬಣ್ಣ ಬಣ್ಣದ ಪಟ್ಟಿ

ಅಣರಿಕ್ಕ. ವಿ: [**ದೇ**] ವಿಶ್ರಾಂತಿಯಿಲ್ಲದ, ಪುರಸತ್ತಿಲ್ಲದ (ದೇ), ಹಾಲು, ಮೊಸರು ಇತ್ಯಾದಿ, ಗೋ ಉತ್ಪನ್ನ ಭೋಜ್ಯ (ನಿಚೂ)

ಅಣರಿಹ}. ವಿ: [**ಅನರ್ಹ**] ಅಯೋಗ್ಯ,

ಅಣರುಹ}. ಅರ್ಹನಲ್ಲದವನು

ಅಣಲಂ. ಅ: [ಅನಲಮ್] ಅಸಮರ್ಥ(ಆಚಾ)
ಅಣಲ. ಪು: [ಅನಲ] ಬೆಂಕಿ, ಅಗ್ನಿ(ಕುಮಾ)
ಅಣವ. ವಿ: [ಋಣವತ್] ಸಾಲಗಾರ, ಪು: ಹಗಲಿನ ಇಪ್ಪತ್ತಾರನೇ ಮುಹೂರ್ತ(ಚಂದ)
ಅಣವಕಯ.ವಿ:[ಅನಪಕೃತ]ಅಪಕಾರ ಮಾಡಲ್ಪಡದವನು
ಅಣವಗಲ್ಲ. ವಿ: [ಅನವಗ್ಲಾನ] ಗ್ಲಾನಿರಹಿತ, ಆಯಾಸ, ಬಳಲಿಕೆ, ಮನೋದೌರ್ಬಲ್ಯಗಳಿಲ್ಲದ, ರೋಗವಿಲ್ಲದ
ಅಣವಚ್ಚ. ವಿ: [ಅನಪತ್ಯ] ಮಕ್ಕಳಿಲ್ಲದ, ಸಂತಾನ ರಹಿತ
ಅಣವಜ್ಜ. ನ: [ಅನವದ್ಯ] ಪಾಪವಿಲ್ಲದ, ಕರ್ಮ ರಹಿತ(ಸೂಅ) ದೋಷವಿಲ್ಲದ, ನಿಷ್ಪಾಪ
ಅಣವಜ್ಜ. ವಿ: [ಅಣವರ್ಜ್ಯ] ಮೇಲಿನ ಶಬ್ದವನ್ನು ನೋಡುವುದು
ಅಣವಟ್ಟಪ್ಪ. ವಿ: [ಅನವಸ್ಥಾಪ್ಯ] ಮತ್ತೆ ದೀಕ್ಷೆ ನೀಡಲಾಗದಂಥ ಗುರುತರ ಅಪರಾಧ ಮಾಡಿದವನು(ಬೃಹ), ಘೋರ ಪ್ರಾಯಶ್ಚಿತ್ತದ ಒಂದು ಪ್ರಭೇದ
ಅಣವಟ್ಠಿಯ. ವಿ: [ಅನವಸ್ಥಿತ] ಅವ್ಯವಸ್ಥಿತ, ಅನಿಯಮಿತ(ಪ್ರಾಸೂ), ಚಂಚಲ, ಅಸ್ಥಿರ, ಪಲ್ಯ ವಿಶೇಷ, ಅಳತೆ–ವಿಶೇಷ
ಅಣವಣ್ಣಿಯ. ಪು: [**ಅಣಪನ್ನಿಕ, ಅಣಪರ್ಣಿಕ**] ವಾನವ್ಯಂತರ ದೇವತೆಗಳ ಒಂದು ಜಾತಿ (ಪಣ್ಣ)
ಅಣವತ್ಥ. ವಿ: [ಅನವಸ್ಥ] ಅವ್ಯವಸ್ಥಿತ, ಅನಿಯಮಿತ, ಅಸಮಂಜಸ (ದೇ)
ಅಣವತ್ಥಾ. ಸ್ತ್ರೀ: [ಅನವಸ್ಥಾ] ಅವ್ಯವಸ್ಥೆ, ಚಾಂಚಲ್ಯ, ಅಸ್ಥಿರತೆ(ಉವ), ಒಂದು ತರ್ಕದೋಷ(ವಿಸಂ) ಅತಿಯಾದ ಕಾಮ
ಅಣವದಗ್ಗ. ವಿ: [ದೇ] ಅನಂತ, ಅಪರಿಮಿತ, ಮೇರೆಯಿಲ್ಲದ(ಭಗ), ಅವಿನಾಶಿ
ಅಣವದ್ದ. ವಿ: [ಅನವದ್ಯ] ದೋಷರಹಿತ, ಪಾಪರಹಿತ, ಶುದ್ಧವಾದ
ಅಣವನ್ನಿಯ. 'ಅಣವಣ್ಣಿಯ' ಶಬ್ದವನ್ನು ನೋಡುವುದು
ಅಣವಯಗ್ಗ. 'ಅಣವದಗ್ಗ' ಶಬ್ದವನ್ನು ನೋಡುವುದು
ಅಣವಯಮಾಣ. ವ.ಕೃ: [**ಅನಪವದತ್**] ಅಪವಾದವನ್ನು ಮಾಡದ, ಸತ್ಯವಾದಿ(ವವ)
ಅಣವರಯ. ವಿ: [ಅನವರತ] ಸತತವಾಗಿ, ನಿರಂತರ, ಎಡೆಬಿಡದೆ. ನ: ಯಾವಾಗಲೂ(ಗಾ)

ಅಣವರಾಇಸ.(ಅಪ). ವಿ: [ಅನನ್ಯಾದೃಶ] ಅಸಾಧಾರಣ, ಅದ್ವಿತೀಯ(ಕುಮಾ)
ಅಣವಸರ. ವಿ: [ಅನವಸರ] ಆಕಸ್ಮಿಕ, ಅವಕಾಶ ವಿಲ್ಲದಿರುವಿಕೆ, ಅಕಾಲ, ಅನುಚಿತವಾದ ಸಮಯ
ಅಣವಾಹ. ವಿ: [ಅಬಾಧ] ಅಡ್ಡಿಯಿಲ್ಲದಿರುವಿಕೆ, ತಡೆಯಿಲ್ಲದಿರುವಿಕೆ(ಸುಪಾ) ವಿಘ್ನರಹಿತ
ಅಣವೆಕ್ಖಿಯ ವಿ: [ಅನಪೇಕ್ಷಿತ] ಅಲಕ್ಷಿತ, ಉಪೇಕ್ಷಿತ, ಅಪೇಕ್ಷಿಸಿಲ್ಲದ, ಉದಾಸೀನ ಮಾಡಲಾದ
ಅಣವೆಕ್ಖಿಯ. ವಿ: [ಅನವೇಕ್ಷಿತ] ನೋಡಿರದ, ಅವಿಚಾರಿತ, ವಿವೇಚನೆ ಮಾಡದ. **–ಕಾರಿ.** ವಿ: [–ಕಾರಿನ್] ಸಾಹಸಿಕ, **–ಕಾರಿಯಾ.** ಸ್ತ್ರೀ: [**–ಕಾರಿತಾ**] ಸಾಹಸ ಕ್ರಿಯೆ(ಉಪ)
ಅಣಸಣ. ನ: [ಅನಶನ] ಊಟವಿಲ್ಲದಿರುವುದು, ಉಪವಾಸ
ಅಣಸಿಯ. ವಿ:[ಅನಶಿತ] ಹಸಿದವನು
ಅಣಹ. ವಿ: [ಅನಘ] ಪಾಪ ರಹಿತ, ದೋಷವಿಲ್ಲದ, ಪವಿತ್ರ(ಔಪ)
ಅಣಹ. ವಿ: [ದೇ] ಗಾಯವಾಗದ, ವ್ರಣರಹಿತ(ಸುಪಾ)
ಅಣಹ. ನ: [ಅನಭಸ್] ಭೂಮಿ, ಪೃಥ್ವಿ(ಸೇ)
ಅಣಹಪ್ಪಣಯ.ವಿ: [ದೇ] ನಷ್ಟವಿಲ್ಲದ, ವಿದ್ಯಮಾನ(ದೇ)
ಅಣಹವಣಯ. ವಿ: [ದೇ] ತಿರಸ್ಕೃತ(ಷಡ್)
ಅಣಹಾ. ಸ್ತ್ರೀ: [ಅಧುನಾ] ಈಗ, ಈ ಕಾಲದಲ್ಲಿ
ಅಣಹಾರಯ. ಪು: [ದೇ] ಬರಿದಾದ ಸ್ಥಳ, ಆಕಾಶ, ಮಧ್ಯಭಾಗ ಕೆಳಗೆ ಇರುವ ಜಮೀನು(ದೇ)
ಅಣಹಿಅಅ. ವಿ: [ಅಹೃದಯ] ಹೃದಯವಿಲ್ಲದ, ನಿಷ್ಠುರ, ನಿರ್ದಯ(ಪ್ರಾಪ)
ಅಣಹಿಗಯ. ವಿ: [ಅನಧಿಗತ] ತಿಳಿಯಲ್ಪಡದ, ಪಡೆದುಕೊಳ್ಳದ, ಶಾಸ್ತ್ರಗಳ ಪೂರ್ಣಜ್ಞಾನವಿಲ್ಲದ ಸಾಧು. ಅಗೀತಾರ್ಥ.
ಅಣಹಿಣ್ಣ. 'ಅಣಭಿಣ್ಣ' ಶಬ್ದವನ್ನು ನೋಡುವುದು
ಅಣಹಿಯಾಸ. ವಿ: [ಅನಧ್ಯಾಸ] ಅಸಹಿಷ್ಣು, ಸಹಿಸದಿರುವವನು(ಉವ)
ಅಣಹಿಲ}. ನ: [ಅಣಹಿಲ್ಲ] ಈಗ 'ಪಾಟನ್' ಎಂಬ
ಅಣಹಿಲ್ಲ}. ಹೆಸರಿನಿಂದ ಪ್ರಸಿದ್ಧವಾಗಿರುವ ಗುಜರಾತ ರಾಜ್ಯದ ಪ್ರಾಚೀನ ರಾಜಧಾನಿ; (ಕುಮಾ), **–ವಾಡಯ.** ನ: [–ಪಾಟಕ] 'ಅಣಹಿಲ' ಶಬ್ದವನ್ನು ನೋಡುವುದು

ಅಣಹೀಣ. ವಿ: [ಅನಧೀನ] ಅಧೀನವಲ್ಲದ, ಸ್ವತಂತ್ರವಾದ (ಸಂಗ)

ಅಣಹುಲ್ಲಿಯ. ವಿ: [ದೇ] ಫಲ ದೊರಕಿಲ್ಲದವನು

ಅಣಾಇ. ವಿ: [ಅನಾದಿ] ಆದಿಯಿಲ್ಲದ, ನಿತ್ಯವಾದ, (ಸಮ). **–ಣಿಹಣ., –ನಿಹಣ.** ವಿ: [–ನಿಧನ]. ಆದ್ಯಂತ ವರ್ಜಿತ, ಶಾಶ್ವತ(ಉವ), **–ಮಂತ, –ವಂತ,** ವಿ: [–ಮತ್]. **–ವಂತ.** ವಿ: [–ಮತ್] ಅನಾದಿಕಾಲದಿಂದ ಪ್ರವೃತ್ತವಾಗಿರುವ(ಪ ಉಮ)

ಅಣಾಇಜ್ಜ. ವಿ: [ಅನಾದೇಯ] ಸ್ವೀಕರಿಸಲು ಯೋಗ್ಯವಲ್ಲದ, ನಾಮ–ಕರ್ಮದ ಒಂದು ಪ್ರಭೇದ; ಅದರ ಉದಯದಿಂದ ಜೀವದ ಮಾತು ಯುಕ್ತವಾಗಿದ್ದರೂ ಅಗ್ರಾಹ್ಯವೆಂದು ಭಾವಿಸಲಾಗುತ್ತದೆ.(ಕಮ್ಮ)

ಅಣಾಇಯ. ಪು: [ಅನಾದಿಕ] ಆದಿಯಿಲ್ಲದ, ನಿತ್ಯವಾದ(ಸಮ)

ಅಣಾಇಯ. ವಿ: [ಅಜ್ಞಾತಿಕ] ಸ್ವಜನರಿಲ್ಲದ, ಏಕಾಂಗಿ

ಅಣಾಇಯ. ವಿ: [ಅಣಾತೀತ] ಪಾಪಿ, ಪಾಪಿಷ್ಠ (ಭಗ)

ಅಣಾಇಯ. ಪು: [ಋಣಾತೀತ] ಪ್ರಪಂಚ, ಜಗತ್ತು

ಅಣಾಇಯ. ವಿ: [ಅನಾದೃತ] ಆದರಿಸಲ್ಪಡದವನು

ಅಣಾಇಲ. ವಿ: [ಅನಾವಿಲ] ನಿರ್ಮಲವಾದ, ಕಲುಷಿತವಲ್ಲದ, ಸ್ವಚ್ಛ

ಅಣಾಈಅ. **'ಅಣಾಇಯ'** ಶಬ್ದವನ್ನು ನೋಡುವುದು

ಅಣಾಉ}. ಪು: [ಅನಾಯುಷ್ಕ] ಜಿನದೇವ, ಮುಕ್ತಾತ್ಮ,
ಅಣಾಉಯ.} ಸಿದ್ಧ(ಶಾ)

ಅಣಾಉಲ. ವಿ: [ಅನಾಕುಲ] ಸ್ಥಿರಚಿತ್ತನಾದವನು, ಧೀರ(ಣಾಯಾ) ಒಟ್ಟುಗೂಡಿದ

ಅಣಾಉತ್ತ. ವಿ: [ಅನಾಯುಕ್ತ] ಉಪಯೋಗವಿಲ್ಲದ, ಅಲಕ್ಷ್ಯ, ನಿರ್ಲಕ್ಷ್ಯ ಎಚ್ಚರಗೇಡಿ(ಔಪ)

ಅಣಾಎಜ್ಜ. **'ಅಣಾಇಜ್ಜ'** ಶಬ್ದವನ್ನು ನೋಡುವುದು

ಅಣಾಗಯ. ಪು: [ಅನಾಗತ] ಭವಿಷ್ಯತ್ ಕಾಲ, ಇನ್ನೂ ಬರದಿರುವ, ಮುಂದೆ ಸಂಭವಿಸ ಬಹುದಾದ (ಸೂಅ), **ಅನಾಗಯಾದ್ಧಾ.** ಸ್ತ್ರೀ: [ಅನಾಗತಾದ್ಧಾ] ಭವಿಷ್ಯತ್ ಕಾಲ

ಅಣಾಗಲಿಯ. ವಿ: [ಅನರ್ಗಲಿತ] ತಡೆಯಲ್ಪಡದ, ಅಡಚಣೆಗೆ ಒಳಗಾಗದ (ಉವಾ)

ಅಣಾಗಲಿಯ. ವಿ: [ಅನಾಕಲಿತ]ಗೊತ್ತಿಲ್ಲದ, ಅಲಕ್ಷಿತ (ಣಾಯಾ), ಅಪರಿಚಿತ(ಉವಾ)

ಅಣಾಗಾರ. ವಿ: [ಅನಾಕಾರ] ಆಕಾರವಿಲ್ಲದ, ಆಕೃತಿ ರಹಿತ(ಶಾ), ನಿರ್ವಿಶೇಷ(ಕಮ್ಮ), ನ: ದರ್ಶನ, ಸಾಮಾನ್ಯ ಜ್ಞಾನ (ಸಮ)

ಅಣಾಜೀವ. ವಿ: [ಅನಾಜೀವ] ಜೀವನ ನಿರ್ವಹಣೆಯ ಸಾಧನವಿಲ್ಲದ, ಜೀವನ ನಿರ್ವಹಣೆಯ ಸಾಧನದ ಇಚ್ಛೆಯಿಲ್ಲದವನು, ನಿಸ್ಪೃಹ, ಮುಗ್ಧ(ದಸ)

ಅಣಾಜೀವಿ. ವಿ: [ಅನಾಜೀವಿನ್]ಮೇಲಿನ ಶಬ್ದವನ್ನು ನೋಡುವುದು

ಅಣಾಡ. ಪು: [ದೇ] ಜಾರ, ಉಪ ಪತಿ(ದೇ)

ಅಣಾಢಿಯ. ವಿ: [ಅನಾದೃತ] ಆದರಿಸಲ್ಪಡದವನು, ತಿರಸ್ಕೃತ(ಆವ), ಜಂಬೂ ದ್ವೀಪದ ಅಧಿಷ್ಠಾತೃ ದೇವ(ಶಾ), ಜಂಬೂ ದ್ವೀಪದ ಅಧಿಷ್ಠಾತೃ ದೇವನ ರಾಜಧಾನಿ(ಜೀವ)

ಅಣಾಣುಗಾಮಿಯ. ವಿ: [ಅನಾನುಗಾಮಿಕ] ಯಾರ ಹಿಂದೆಯೂ ಹೋಗದವನು, ಇನ್ನೊಬ್ಬರನ್ನು ಅನುಸರಿಸಿ ಹೋಗದವನು(ಶಾ), ನ: ಅವಧಿಜ್ಞಾನದ ಒಂದು ಪ್ರಭೇದ

ಅಣಾದಿ. **'ಅಣಾಇ'** ಶಬ್ದವನ್ನು ನೋಡುವುದು.

ಅಣಾದಿಯ}. **'ಅಣಾಇಯ'** ಶಬ್ದವನ್ನು ನೋಡುವುದು
ಅಣಾದೀಯ}. (ಪಣಹ)

ಅಣಾದೆಜ್ಜ. **'ಅಣಾಇಜ್ಜ'** ಶಬ್ದವನ್ನು ನೋಡುವುದು

ಅಣಾಬಿಗ್ಗಹ. ನ: [ಅನಾಭಿಗ್ರಹ] ಮಿಥ್ಯಾತ್ವದ ಒಂದು ಪ್ರಭೇದ

ಅಣಾಭೋಗ. ಪು: [ಅನಾಭೋಗ] ಉಪಯೋಗ ವಿಲ್ಲದ್ದು, ಅಲಕ್ಷ್ಯ, ಎಚ್ಚರಗೇಡಿತನ, ನ: ಮಿಥ್ಯಾತ್ವ

ಅಣಾಮಿಯ. ವಿ: [ಅನಾಮಿಕ] ಹೆಸರಿಲ್ಲದ, ಪು: ಅಸಾಧ್ಯ ರೋಗ(ತಂದು), ಸ್ತ್ರೀ: ಉಂಗುರ ಬೆರಳು

ಅಣಾಯ. ವಿ: [ಅಜ್ಞಾತ] ಗೊತ್ತಿಲ್ಲದ, ಅಪರಿಚಿತ

ಅಣಾಯ. ಪು: [ಅನಾಕ] ಮರ್ತ್ಯಲೋಕ, ಮನುಷ್ಯ ಲೋಕ (ಸೇ)

ಅಣಾಯ. ಪು: [ಅನಾತ್ಮನ್] ತನಗಿಂತ ಬೇರೆಯವನು, ಆತ್ಮ ಅಥವಾ ಚೈತನ್ಯವಿಲ್ಲದ(ಸಮ) ಭೌತಿಕ ಅಥವಾ ಶಾರೀರಿಕ

ಅಣಾಯಗ. ವಿ: [ಅನಾಯಕ] ನಾಯಕನಿಲ್ಲದ (ಪಉಮ) ಪರಿಚಿತ

ಅಣಾಯಗ. ವಿ: [ಅಜ್ಞಾತಕ] ತನ್ನವರೆನ್ನುವವರಿಲ್ಲದ, ಒಂಟಿ (ನಿಚೂ)

ಅಣಾಯಗ. ವಿ: [ಅಜ್ಞಾಯಕ] ಅರಿಯದ, ಅಜ್ಞಾತ, ತಿಳುವಳಿಕೆಯಿಲ್ಲದ (ನಿಚೂ)

ಅಣಾಯತಣ}. ನ: [ಅನಾಯತನ] ವೇಶ್ಯೆಯರೇ

ಅಣಾಯಯಣ}. ಮೊದಲಾದ ಕೆಳ ವರ್ಗದರ ಮನೆ, ಸಜ್ಜನರ ಸಂಪರ್ಕವಾಗದ ಸ್ಥಳ(ಪಣ್ಣ), ಪತಿತ ಸಾಧುಗಳ ಸ್ಥಳ. ಪಶು, ನಪುಂಸಕರೇ ಮೊದಲಾದವರ ಸಂಪರ್ಕ ವುಂಟಾಗುವ ಸ್ಥಳ

ಅಣಾಯತ್ತ. ವಿ: [ಅನಾಯತ್ತ] ಪರಾಧೀನನಲ್ಲದ, ಸ್ವತಂತ್ರ (ಪ ಉಮ)

ಅಣಾಯರ. ಪು:[ಅನಾದರ] ಅಗೌರವ, ಅಪಮಾನ

ಅಣಾಯರಣ. ನ: [ಅನಾಚರಣ] ಅನಾಚಾರ, ಕೆಟ್ಟ ನಡತೆ, ಕೆಟ್ಟ ಸಂಪ್ರದಾಯ ಅಥವಾ ಕೆಟ್ಟ ಆಚರಣೆ

ಅಣಾಯರಣಯಾ. ಸ್ತ್ರೀ: [ಅನಾಚರಣ] ಮೇಲಿನ ಶಬ್ದವನ್ನು ನೋಡುವುದು

ಅಣಾಯರಿಯ. 'ಅಣಜ್ಜ=ಅನಾರ್ಯ' ಶಬ್ದವನ್ನು ನೋಡುವುದು(ಪಣ್ಣ)

ಅಣಾಯಾರ. 'ಅಣಾಗಾರ=ಅನಾಕಾರ' ಶಬ್ದವನ್ನು ನೋಡುವುದು

ಅಣಾಯಾರ. ಪು: [ಅನಾಚಾರ] ಶಾಸ್ತ್ರ ನಿಷಿದ್ಧವಾದ ಆಚರಣೆ, ಅಂಗೀಕರಿಸಲಾದ ನಿಯಮಗಳನ್ನು ಬೇಕೆಂದೇ ಉಲ್ಲಂಘಿಸುವುದು, ವ್ರತಭಂಗ(ವವ)

ಅಣಾರಿಯ. 'ಅಣಜ್ಜ=ಅನಾರ್ಯ' ಶಬ್ದವನ್ನು ನೋಡುವುದು(ಪಣಹ)

ಅಣಾರಿಸ್. ವಿ: [ಅನಾರ್ಷ] 'ಋಷಿಪ್ರಣೀತವಲ್ಲದ್ದು'

ಅಣಾರಿಸ್. ವಿ: [ಅನ್ಯಾದೃಶ] ಬೇರೆಯವನಂತೆ ಕಾಣುವ(ನಾಟ) ಅಸಾಧಾರಣವಾದ, ಬೇರೆ ಹೋಲಿಕೆಯಿಲ್ಲದ

ಅಣಾಲತ್ತ. ವಿ: [ಅನಾಲಪಿತ] ಅನುಕ್ತ, ಹೇಳದ, ಕರೆಯಲ್ಪಡದಿರುವ(ಉವಾ)

ಅಣಾಲವಂಯು: [ಅನಾಲಪಕ] ಮೌನ, ಮಾತಾಡದಿರುವುದು (ಪಾಅ)

ಅಣಾವ. ಸಕ: [ಆ+ನಾಯಯ್] ತರಿಸು, ಬೇಡಿಸು

ಅಣಾವರಣ. ವಿ: [ಅನಾವರಣ] ಆವರಣವಿಲ್ಲದ, ಹೊದಿಕೆಯನ್ನು ತೆಗೆಯುವುದು, ನ: ಕೇವಲ ಜ್ಞಾನ

ಅಣಾವಿಅ. ವಿ: [ಆನಾಯಿತ] ತರಿಸಿಕೊಂಡ

ಅಣಾವಿಟ್ಠಿ}. ಸ್ತ್ರೀ: [ಅನಾವೃಷ್ಟಿ] ಮಳೆಯ ಅಭಾವ,

ಅಣಾವುಟ್ಠಿ}. ಮಳೆ ಬೀಳದಿರುವುದು(ಪಉಮ)

ಅಣಾವಿಲ. ವಿ: [ಅನಾವಿಲ] ನಿರ್ಮಲ, ಸ್ವಚ್ಛ, ಕಲುಷರಹಿತ(ಗಉಡ)

ಅಣಾಸಂಸಿ ವಿ:[ಅನಾಶಂಸಿನ್] ಆಸೆಪಡದವನು,ನಿಸ್ಪೃಹ

ಅಣಾಸಣ. 'ಅಣಸಣ' ಶಬ್ದವನ್ನು ನೋಡುವುದು

ಅಣಾಸಯ. ಪು: [ಅನಾಶ, –ಕ] ಅನಶನ, ಊಟವಿಲ್ಲದೆ

ಅಣಾಸವ. ವಿ: [ಅನಾಶ್ರವ] ಅವಿಧೇಯ, ಚಂಡಿಕೋರ, ಅಹಿಂಸೆ, ದಯೆ (ಪಣ್ಣ), ಒಪ್ಪಿಗೆಯಿಲ್ಲದ, ನಾಶ

ಅಣಾಸಿಯ. ವಿ: [ಅನಶಿತ) ಹಸಿದವನು(ಸೂಅ)

ಅಣಾಹ. ವಿ: [ಅನಾಥ] ರಕ್ಷಣೆಯಿಲ್ಲದ(ನಿಚೂ), ಯಜಮಾನನಿಲ್ಲದ, ಬಡವ, ಬಡಪಾಯಿ (ಣಾಯಾ), ಒಬ್ಬ ಜೈನಮುನಿ(ಉತ್ತ)

ಅಣಾಹಾರ. ಪು: [ಅನಾಹಾರ] ಒಂದು ದಿನದ ಉಪವಾಸ

ಅಣಾಹಿ.}. ವಿ: [ಅನಾಧಿ, –ಕ] ಮಾನಸಿಕ

ಅಣಾಹಿಯ.}. ಪೀಡೆಯಿಲ್ಲದವನು (ಸೇ)

ಅಣಾಹಿಟ್ಠಿ. ಪು: [ಅನಾಧೃಷ್ಟಿ] ಮೃತ್ಯುಕಾರಕ ಮುನಿ, ತಿರಸ್ಕರಿಸಲ್ಪಡದವನು(ಂತ)

ಅಣಿಇಣ. 'ಅಣಗಿಣ' ಶಬ್ದವನ್ನು ನೋಡುವುದು.

ಅಣಿಇಯ. ವಿ: [ಅನಿಯುತ] ಅನಿಯಮಿತ, ಅನಿಶ್ಚಿತವಾದ, ಅವ್ಯವಸ್ಥಿತ, ನಿಯಂತ್ರಣವಿಲ್ಲದ, ಪು: ನಶ್ವರವಾದ ಜಗತ್ತು (ಭಗ

ಅಣಿಉಂಚಿಯ. ವಿ: [ಅನಿಕುಂಚಿತ] ವಕ್ರವಾಗಿ ಮಾಡಿಲ್ಲದ, ನೇರ, ಸರಳ (ಗ ಉಡ)

ಅಣಿಉಂತ}. 'ಅಇಮುತ್ತ' ಶಬ್ದವನ್ನು ನೋಡುವುದು

ಅಣಿಉಂತಯ}.

ಅಣಿಉಂತ್ತಯ}.

ಅಣಿಏಯ. ವಿ: [ಅನಿಯುತ] ಅನಿಯಮಿತ, ಅನಿಶ್ಚಿತವಾದ, ಅವ್ಯವಸ್ಥಿತ, ನಿಯಂತ್ರಣವಿಲ್ಲದ, ಪು: ನಶ್ವರವಾದ ಜಗತ್ತು(ಸೂಅ)

ಅಣಿಂದಿಯ. ವಿ: [ಅನಿಂದಿತ] ನಿಂದಿಸಲ್ಪಡದವನು, ಉತ್ತಮನಾದವನು(ಧರ್ಮ), ಪು: ಕಿನ್ನರ ದೇವತೆಗಳ ಒಂದು ಜಾತಿ(ಪಣಣ)

ಅಣಿಂದಿಯ. ವಿ: [ಅನಿಂದ್ರಿಯ] ಇಂದ್ರಿಯ ರಹಿತ, ಪು: ಮುಕ್ತ ಜೀವ, ಕೇವಲ ಜ್ಞಾನಿ, ವಿ: ಇಂದ್ರಿಯಗಳಿಂದ ತಿಳಿಯಲಾಗದ್ದು(ಸುರ)

ಅಣಿಂದಿಯಾ. ಸ್ತ್ರೀ: [ಅನಿಂದಿತಾ] ಊರ್ಧ್ವಲೋಕದಲ್ಲಿ ಇರುವ ಒಬ್ಬ ಒಬ್ಬ ದಿಕ್ ಕುಮಾರಿ ದೇವಿ.

ಅಣಿಕ್ಕ. ವಿ: [ಅನೇಕ] ಒಂದಕ್ಕಿಂತ ಹೆಚ್ಚು. **ಅಣಿಕ್ಕಾವಾಇ.** ವಿ: [-ವಾದಿನ್] ಅಕ್ರಿಯಾವಾದಿ

ಅಣಿಕ್ಕಿಣೀ. ಸ್ತ್ರೀ: [ಅನೀಕಿನೀ] ಸೇನೆ, ೨೧೮೭೦ ಆನೆಗಳು, ೨೧೮೭೦ ರಥ, ೬೫೬೧೦ ಕುದುರೆ ೧೦೯೩೫೦ ಸೈನಿಕರನ್ನೊಳಗೊಂಡ ಸೈನ್ಯ(ಪ ಉಮ)

ಅಣಿಕ್ಖಿತ್ತ ವಿ: [ಅನಿಕ್ಷಿಪ್ತ] ಬಿಡದೆ ಇರುವ, ತ್ಯಜಿಸದಿರುವ, ಅವಿಚ್ಛಿನ್ನ (ಉವಾ)

ಅಣಿಗಣ}. **'ಅಣಗಿಣ'** ಶಬ್ದವನ್ನು ನೋಡುವುದು

ಅಣಿಗಿಣ}. (ಜೀವ)

ಅಣಿಗ್ಗಹ. ವಿ: [ಅನಿಗ್ರಹ] ಸ್ವಚ್ಛಂದ, ಹತೋಟಿಯಿಲ್ಲದಿರುವುದು(ಪಣಹ)

ಅಣಿಚ್ಚ. ವಿ: [ಅನಿತ್ಯ] ನಶ್ವರವಾದ್ದು, ಶಾಶ್ವತವಲ್ಲದ (ನವ). **-ಭಾವಣಾ.** ಸ್ತ್ರೀ: [-ಭಾವನಾ] ಸಾಂಸಾರಿಕ ವಸ್ತುಗಳ ನಶ್ವರತೆಯ ಬಗೆಗಿನ ಚಿಂತನೆ. **ಅಣಿಚ್ಚಾಣು ಪ್ರೇಕ್ಷಾ.** ಸ್ತ್ರೀ: [ಅನಿತ್ಯಾನುಪ್ರೇಕ್ಷಾ] ಹಿಂದೆ ಹೇಳಿದ ಅರ್ಥವನ್ನು ನೋಡುವುದು(ತಾ)

ಅಣಿಟ್ಠ. ವಿ: [ಅನಿಷ್ಟ] ಇಷ್ಟವಾಗದಿರುವುದು, ಅಪ್ರಿಯ, ಅಶುಭ, ವಿಪತ್ತು

ಅಣಿಟ್ಠಿಯ. ವಿ: [ಅನಿಷ್ಠಿತ] ಸಂಪೂರ್ಣವಾಗದಿರುವುದು

ಅಣಿಣ. **'ಅಣಿರಿಣ'** ಶಬ್ದವನ್ನು ನೋಡುವುದು

ಅಣಿದಾ. ಸ್ತ್ರೀ: [ದೇ.ಅನಿದಾ] ಗಮನಿಸದೆ ಮಾಡಿದ ಹಿಂಸೆ, ಮನೋ ವೈಕಲ್ಯ, ಜ್ಞಾನದ ಅಭಾವ.

ಅಣಿಮಾ. ಪುಂಸ್ತ್ರೀ: [**ಅಣಿಮನ್**] ಅಣಿಮಾದಿ ಅಷ್ಟಸಿದ್ಧಿಗಳಲ್ಲಿ ಮೊದಲನೆಯದು. ಅಣುವಿನಷ್ಟು ಕಿರಿದಾಗುವಂಥ ಶಕ್ತಿ(ಪ ಉಮ)

ಅಣಿಮಿಸ. ನ: [ಅನಿಮಿಷ] ಒಂದು ಫಲ ವಿಶೇಷ

ಅಣಿಮಿಸ}. ವಿ: [ಅನಿಮಿಷ, **-ಮೇಷ**] ಕಣ್ಣ

ಅಣಿಮೇಸ}. ರೆಪ್ಪೆಗಳಿಲ್ಲದಿರುವುದು, ದೇವತೆಗಳು, ಮೀನು. **-ನಯಣ.** ಪು:[-ನಯನ]ದೇವ, ದೇವತೆ

ಅಣಿಯ. ನ: [ಅನೀಕ] ಸೈನ್ಯ(ಕಪ್ಪ)

ಅಣಿಯ. ನ: [ಅನೃತ] ಅಸತ್ಯ, ಸುಳ್ಳು(ತಾ)

ಅಣಿಯ. ನ: [ದೇ] ಅಲಗು, ಹರಿತವಾದ ಭಾಗ, ತುದಿ

ಅಣಿಯ. ವಿ: [ಅನಿತ್ಯ] ಅಸ್ಥಿರ, ನಶ್ವರ(ಉವ)

ಅಣಿಯಟ್ಟ. ಪು: [ಅನಿವರ್ತ] ಮೋಕ್ಷ, ಮುಕ್ತಿ(ಆಚಾ) ಒಂದು ಮಹಾ ಗ್ರಹ(ತಾ)

ಅಣಿಯಟ್ಟಿ. ವಿ: [ಅನಿವರ್ತಿನ್] ನಿವೃತ್ತನಾಗದ, ಹಿಂತಿರುಗಿ ಬಾರದ(ಔಪ), ನ: ಶುಕ್ಲ ಧ್ಯಾನದ ಒಂದು ಪ್ರಭೇದ, ಪು: ಒಂದು ಮಹಾ ಗ್ರಹ, ಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಲಿರುವ ತೀರ್ಥಂಕರನ ಹೆಸರು(ಸಮ)

ಅಣಿಯಟ್ಟಿ. ವಿ: [ಅನಿವೃತ್ತಿ] ನಿವೃತ್ತಿಯಿಲ್ಲದ, ಪರಿಭ್ರಮಣ- ಮರುಹುಟ್ಟು ಇಲ್ಲದ, ಒಂಬತ್ತನೇ ಗುರುಸ್ಥಾನಕ, **-ಕರಣ.** ನ: [-ಕರಣ] **ಆತ್ಮದ ವಿಶುದ್ಧ ಪರಿಣಾಮ-ವಿಶೇಷ,** **-ವಾದರ.** ನ: [-ಬಾದರ] ಒಂಬತ್ತನೇ ಗುಣ ಸ್ಥಾನಕ, ಒಂಬತ್ತನೇ ಗುಣ ಸ್ಥಾನಕದಲ್ಲಿ ಪ್ರವೃತ್ತವಾದ ಜೀವ(ಆವ)

ಅಣಿಯಣ. **'ಅಣಗಿಣ' ಶಬ್ದವನ್ನು ನೋಡುವುದು**

ಅಣಿಯಯ. ವಿ: [ಅನಿಯತ] ಅನಿಯಮಿತ, ಅವ್ಯವಸ್ಥಿತ, ವಸ್ತ್ರವನ್ನು ನೀಡುವ ಕಲ್ಪ ವೃಕ್ಷದ ಒಂದು ಜಾತಿ

ಅಣಿಯಾ. ಸ್ತ್ರೀ: [ದೇ] ಧಾರೆ, ಅಲಗು, ಆಯುಧಗಳ ಹರಿತವಾದ ಭಾಗ

ಅಣಿಯಾ **'ಅಣಿದಾ'** ಶಬ್ದವನ್ನು ನೋಡುವುದು

ಅಣಿರಿಕ್ಕ. ವಿ: [ದೇ] ಪರತಂತ್ರ, ಪರಾಧೀನ, ಸ್ವತಂತ್ರನಲ್ಲದ(ಕಾಪ್ರ)

ಅಣಿರಿಣ. ವಿ: [ಅನೃಣ] ಸಾಲವಿಲ್ಲದ, (ಋಣರಹಿತ ಅಭಿ)

ಅಣಿರುದ್ಧ. ವಿ: [ಅನಿರುದ್ಧ] ತಡೆಯಲ್ಪಡದ, ಅಪ್ರತಿಹತ (ಸೂಅ), ಒಬ್ಬ ನಾಶಕಾರಕ ಮುನಿ

ಅಣಿಲ. ಪು: [ಅನಿಲ] ಗಾಳಿ, ವಾಯು, ಆಗಿ ಹೋದ ತೀರ್ಥಂಕರನೊಬ್ಬನ ಹೆಸರು, ರಾಕ್ಷಸ ವಂಶದ ಒಬ್ಬ ರಾಜ(ಪಉಮ)

ಅಣಿಲಾ. ಸ್ತ್ರೀ: [ಅನಿಲಾ] ೨೨ನೇ ತೀರ್ಥಂಕರನ ಒಬ್ಬ ಶಿಷ್ಯೆ(ಪವ)

ಅಣಿಲ್ಲ. ನ: [ದೇ] ಪ್ರಾತಃಕಾಲ, ಬೆಳಿಗ್ಗೆ(ದೇ)

ಅಣಿಸ. ನ: [ಅನಿಶ] ಸದಾ, ಯಾವಾಗಲೂ, ನಿರಂತರ(ಗಾ) ಬಿಡುವಿಲ್ಲದ

ಅಣಿಸಟ್ಠ}. ವಿ: [ಅನಿಸೃಷ್ಟ] ಸಮ್ಮತಿಯಿಲ್ಲದ,

ಅಣಿಸಿಟ್ಠ}. ಒಪ್ಪಿಗೆಯಿಲ್ಲದ, ಸಾಧುವಿನ ಭಿಕ್ಷೆಯ ಒಂದು ಕ್ಲೇಶ, ಅನೇಕ ಮಾಲೀಕರಿದ್ದು ಎಲ್ಲರ ಅನುಮತಿಯಿಂದ ತೆಗೆದುಕೊಂಡಿಲ್ಲದ ಭಿಕ್ಷೆ(ಔಪ), ಅಡವಿಡದ

ಅಣಿಸೀಹ. ವಿ: [ಅನಿಶೀಥ] ಬೆಳಕಿನಲ್ಲಿ ಓದುವ ಅಥವಾ ಓದಿಸಲಾಗುವ ಒಂದು ಶಾಸ್ತ್ರ ವಿಶೇಷ (ಆವಮ್)

ಅಣೆಸ್ಸಕಡ. ವಿ: [ಅನಿಶ್ರೀಕೃತ] ಯಾರದೇ ಒಬ್ಬ ವಿಶೇಷ ವ್ಯಕ್ತಿಯ ಅಧಿಕಾರಕ್ಕೊಳಪಡದ ವಸ್ತು, ಆಸ್ತಿ, ಸರ್ವಸಾಧಾರಣ

ಅಣೆಸ್ಸಾ. ಸ್ತ್ರೀ: [ಅನಿಶ್ರಾ] ಅನಾಸಕ್ತಿ, ಆಸಕ್ತಿಯಿಲ್ಲದಿರುವುದು (ಉವ)

ಅಣೆಸ್ಸಿಯ. ವಿ: [ಅನಿಶ್ರಿತ] ಅನಾಸಕ್ತ, ಆಸಕ್ತಿಯಿಲ್ಲದವನು ಅಡೆತಡೆಯಿಲ್ಲದವನು, ಯಾರದ್ದೇ ನೆರವಿನ ನಿರೀಕ್ಷೆ ಇಟ್ಟುಕೊಳ್ಳದವನು (ಉತ್ತ) **ನ:** ಜ್ಞಾನವಿಶೇಷ, ಅವಗ್ರಹ ಜ್ಞಾನದ ಒಂದು ಪ್ರಭೇದ; ಅದರಲ್ಲಿ ಲಿಂಗ ಅಥವಾ ಪುಸ್ತಕವಿಲ್ಲದೆ ಬರುತ್ತದೆ ಠಾ)

ಅಣೆಹ. ವಿ: [ಅನೀಹ] ಧೀರ, ಸಹಿಷ್ಣು(ಸೂಅ), ಕಪಟವಿಲ್ಲದ, ಸರಳವ್ಯಕ್ತಿ(ಸೂಅ), ನಿಸ್ಪೃಹ

ಅಣೆಹ. ವಿ: [ದೇ] ಸದೃಶ, ಹೋಲುವ, **ನ:** ಮುಖ(ದೇ)

ಅಣೆಹ. ವಿ: [ಅಸ್ನಿಹ] ಸ್ನೇಹವಿಲ್ಲದ

ಅಣೆಹಯ. ವಿ: [ಅನಿಹತ] ಹೊಡೆಯಲ್ಪಡದ, **-ರಿಉ. ಪು:** [-ರಿಪು] ನಾಶಕಾರಕನಾದ ಒಬ್ಬ ಮುನಿ(ಅಂತ)

ಅಣೇಇಸ. ವಿ: [ಅನೀದೃಶ] ಇವನ ಥರ ಇನ್ನಿಲ್ಲ ಎನ್ನುವಂಥವನು; ವಿಲಕ್ಷಣ(ಸ)

ಅಣೇಯ. ನ: [ಅನೀಕ] ಸೈನ್ಯ(ಔಪ)

ಅಣೇಂಯುಸ್. ಪು: [ಅನೀಂಯುಸ್] ಒಬ್ಬ ನಾಶಕಾರಕನಾದ ಮುನಿಯ ಹೆಸರು(ಅಂತ)

ಅಣೇಸ. ವಿ: [ಅನೀಶ] ಅಸಮರ್ಥ(ಅಭಿ)

ಅಣೇಸಕಡ. **'ಅಣೆಸಕ್ಕಡ'** ಶಬ್ದವನ್ನು ನೋಡುವುದು

ಅಣೇಹಾರಿಮ. ವಿ: [ಅನಿರ್ಹಾರಿಮ] ಗುಹೆಗಳಲ್ಲಿ ಆಗುವ ಮರಣ ವಿಶೇಷ (ಭಗ)

ಅಣು. ಅ: [ಅನು] ಈ ಅವ್ಯಯ ನಾಮಪದ ಮತ್ತು ಧಾತುಗಳಿಗೆ ಹತ್ತುತ್ತದೆ ಹಾಗೂ ಈ ಕೆಳಗಿನ ಅರ್ಥಗಳಲ್ಲಿ ಯಾವುದಾದರೊಂದನ್ನು ಸೂಚಿಸುತ್ತದೆ. ಉದಾ: ಹತ್ತಿರ(ಸಮೀಪ) **'ಅಣುಕುಂಡಲ,'** (ಗ ಉಡ), ಸಣ್ಣದು- ಅಥವಾ ಕಿರಿದು; 'ಅಣುಗಾವು'(ಉತ್ತ), ಕ್ರಮ: **'ಅಣುಗುರು'**, ಒಳಗೆ- ಅಣುಜತ್ತ(ಮಹಾ), ಗಮನಿಸುವುದು-'ಅಣುಜಿಣಂ ಅಕಾರೀ ಸಂಗೀಯಂ ಇತ್ಥೀಹಿಂ' (ಕುಮಾ), ಉಚಿತ- ಅಣುಜುತ್ತಿ(ಸೂಅ) ಇದೇ ರೀತಿ ವೀಪ್ಸಾ, ಹಿತಕರ, ಪ್ರತಿನಿಧಿ, ಹಿಂದೆ ಬಹಳ, ಸಹಾಯ ಮಾಡುವುದು -ಈ ಮೊದಲಾದ ಅರ್ಥಗಳನ್ನು ಸೂಚಿಸುತ್ತದೆ.

ಅಣು. ವಿ: [ಅಣು] ಕಡಿಮೆ, ಅಲ್ಪ, ಸಣ್ಣದು, **ಪು:** ಪರಮಾಣು, **-ಮಯ.** ವಿ: [-ಮತ] ಉತ್ತಮ ಕುಲ(ಕಪ್ಪ). **-ವಿರಇ.** ಸ್ತ್ರೀ: [-ವಿರತಿ] **'ದೇಸವಿರಇ'** ಶಬ್ದವನ್ನು ನೋಡುವುದು.

ಅಣು. **ಪು:** [ದೇ] ಧಾನ್ಯವಿಶೇಷ, ಅಕ್ಕಿಯ ಒಂದು ಜಾತಿ.(ದೇ), **-ಅಣು.** ಸ್ತ್ರೀ: [-ತನು] =ಶರೀರ.

ಅಣುಅ. **'ಅಣು=ಅಣು'** ಶಬ್ದವನ್ನು ನೋಡುವುದು

ಅಣುಅ. ವಿ: [ಅಜ್ಞ] ಅಜ್ಞಾನಿ, ಏನೂ ತಿಳಿಯದವನು, ಮೂರ್ಖ.

ಅಣುಅ. **ಪು:** [ದೇ] ಆಕೃತಿ, ಆಕಾರ, **ಪುಂಸ್ತ್ರೀ:** ಧಾನ್ಯ ವಿಶೇಷ

ಅಣುಅ. ವಿ: [ಅನುಗ] ಅನುಸರಿಸುವವನು, ಹಿಂಬಾಲಿಸುವವನು(ವಿಪಾ)

ಅಣುಅ. ವಿ: [ಅನುಜ] ನಂತರ ಹುಟ್ಟಿದವನು, **ಪು:** ತಮ್ಮ, ಸ್ತ್ರೀ: ತಂಗಿ(ಅಭಿ)

ಅಣುಅಂಚ. ಸಕ: [ಅನು+ಕೃಷ್] ಹಿಂದಕ್ಕೆ ಎಳೆ,

ಅಣುಅಂಪ. ಸಕ: [ಅನು+ಕಂಪ್] ಅನುಕಂಪೆ ತೋರಿಸು, ಕರುಣೆ ತೋರು, ದಯೆ ತೋರಿಸು

ಅಣುಅಂಪಾ. ಸ್ತ್ರೀ: [ಅನುಕಂಪಾ]ದಯೆ, ಸಹಾನುಭೂತಿ

ಅಣುಅಂಪಿ. ವಿ: [ಅನುಕಂಪಿನ್] ದಯಾಳು, ಅನುಕಂಪೆ ತೋರುವವನು, ಕರುಣಾಳು(ಅಭಿ)

ಅಣುಅತ್ತಯ. ವಿ: [ಅನುವರ್ತಕ] ಅನುಕೂಲಕರವಾದ ಆಚರಣೆ ಮಾಡುವವನು, ಅನುಸರಿಸುವವನು

ಅಣುಅತ್ತಿ. **'ಅಣುವತ್ತಿ'** ಶಬ್ದವನ್ನು ನೋಡುವುದು

ಅಣುಅರ. ವಿ: [ಅನುಚರ] ಸಹಾಯ ಮಾಡುವವನು, ಸಹಚರ, ಸೇವಕ, ಆಳು(ಪ್ರಾಮಾ)

ಅಣುಅಲ್ಲ. ನ: [ದೇ] ಬೆಳಿಗ್ಗೆ, ಪ್ರಾತಃಕಾಲ(ದೇ)

ಅಣುಅ. ಸ್ತ್ರೀ: [ದೇ] ಕೋಲು, ಲಾಠಿ

ಅಣುಆರ. ಪು: [ಅನುಕಾರ] ಅನುಕರಣೆ, ಅನುಕರಿಸುವುದು(ನಾಟ)

ಅಣುಆರಿ. ವಿ: [ಅನುಕಾರಿನ್] ಅನುಕರಣೆ ಮಾಡುವವನು, ಮಾಡಿದಂತೆ ಮಾಡುವವನು

ಅಣುಆಸ. ಪು: [ಅನುಕಾಸ] ಪ್ರಸಾರ, ವಿಕಾಸ(ಣಾಯಾ)

ಅಣುಇಯ. ಪು: [ದೇ] ಧಾನ್ಯ ವಿಶೇಷ, ಕಡಲೆ

ಅಣುಇಅ. **'ಅಣುದಿಯ'** ಶಬ್ದವನ್ನು ನೋಡುವುದು

ಅಣುಇಣ್ಣ. ವಿ: [ಅನುಕೀರ್ಣ] ವ್ಯಾಪ್ತ, ತುಂಬಿದ, ಕೆಳಗೆ ಬೀಳದ(ಔಪ)
ಅಣುಇಣ್ಣ. ವಿ: [ಅನುದ್ಗೀರ್ಣ] ಹೊರಕ್ಕೆ ಬರದಿರುವ, ಹೊರಗೆ ಹಾಕದಿರುವ (ಔಪ)
ಅಣುಇಣ್ಣ. 'ಅಣುಚಿಣ್ಣ' ಶಬ್ದವನ್ನು ನೋಡುವುದು
ಅಣುಇಣ್ಣ. 'ಅಣುದಿಣ್ಣ' ಶಬ್ದವನ್ನು ನೋಡುವುದು
ಅಣುಊಲ. ವಿ: [ಅನುಕೂಲ] ಸೌಕರ್ಯ, ಉಪಕಾರ, ಇನೆರವು(ಗಾ)
ಅಣುಊಲ. ಸಕ: [ಅನುಕೂಲಯ್] ಅನುಕೂಲ ಉಂಟುಮಾಡು
ಅಣುಓಅ. ಪು: [ಅನುಯೋಗ] ವ್ಯಾಖ್ಯಾನ, ಟೀಕೆ (ಓಘ), ಪ್ರಶ್ನೆ, ಕೇಳಿಕೆ(ಅಭಿ)
ಅಣುಓಇಯ. ವಿ: [ಅನುಯೋಜಿತ] ಪ್ರವರ್ತಿತ, ಪ್ರಾರಂಭಿಸಲ್ಪಟ್ಟ, ಉತ್ಪತ್ತಿ ಮಾಡಲ್ಪಟ್ಟ(ಣಂದಿ)
ಅಣುಓಗ. 'ಅಣುಓಅ' ಶಬ್ದವನ್ನು ನೋಡುವುದು
ಅಣುಓಗ. ಪ: [ಅನುಯೋಗ] ಸಂಬಂಧ
ಅಣುಓಗಿ. ಪು: [ಅನುಯೋಗಿನ್] ಸ್ತೋತ್ರಗಳನ್ನು ವ್ಯಾಖ್ಯಾನಿಸುವವನು(ಪಂಚವ) ಪ್ರಶ್ನೆ ಮಾಡುವ
ಅಣುಓಗಿಅ. ವಿ: [ಅನುಯೋಗಿಕ] ದೀಕ್ಷಿತ, ಮುನಿ–ಶಿಷ್ಯ(ಣಂದಿ)
ಅಣುಓಯಣ. ನ: [ಅನುಯೋಜನ] ಸೇರಿಸುವುದು, ಬಂಧನ, ಪ್ರಶ್ನೆ, ಕೇಳುವುದು(ವಿಸೇ)
ಅಣುಕಂಪ. ಸಕ: [ಅನು+ಕಂಪ್] ದಯೆ ತೋರು, ಸಹಾನುಭೂತಿ ತೋರು, ಒಳ್ಳೆಯದು ಮಾಡು. ವ.ಕೃ–ಅಣುಕಂಪಂತ=ಸಹಾನುಭೂತಿ ತೋರುತ್ತಿರುವ(ನಾಟ), ಕೃ–
ಅಣುಕಂಪ. ವಿ:[ಅಣುಕಂಪ್ಯ]ಅನುಕಂಪೆಗೆ ಯೋಗ್ಯನಾದ
ಅಣುಕಂಪ}. ವಿ: [ಅನುಕಂಪ, –ಕ] ದಯಾಳು,
ಅಣುಕಂಪಯ}. ಕರುಣಿ, ಭಕ್ತ(ಉತ್ತ), ಹಿತಕಾರಿ
ಅಣುಕಂಪಣ. ನ: [ಅನುಕಂಪನ] ದಯೆ, ಕೃಪೆ, ಕರುಣೆ, ಸಹಾನುಭೂತಿ(ವವ), ಭಕ್ತಿ, ಸೇವೆ(ಕಪ್ಪ)
ಅಣುಕಂಪಾ. ಸ್ತ್ರೀ: [ಅನುಕಂಪಾ] ಮೇಲಿನ ಶಬ್ದವನ್ನು ನೋಡುವುದು –ದಾಣ. ನ: [–ದಾನ] ಕರುಣೆಯಿಂದ ಬಡಬಗ್ಗರಿಗೆ ಅನ್ನಾಹಾರಾದಿ ನೀಡುವುದು(ಧರ್ಮ)
ಅಣುಕಂಪಿ. ವಿ: [ಅನುಕಂಪಿನ್] ದಯಾಳು, ಕರುಣಾಳು, ಕೃಪಾಳು(ಮಾಲ) ಭಕ್ತ.
ಅಣುಕಂಪಿಅ. ವಿ: [ಅನುಕಂಪಿತ] ಕರುಣೆ ಅಥವಾ ಅನುಕಂಪೆಗೆ ಪಾತ್ರನಾದವನು(ನಾಟ)
ಅಣುಕಡ್ಢ. ಸಕ: [ಅನು+ಕೃಷ್] ಎಳೆ, ಸೆಳೆ ಅನುಸರಿಸು. ವ.ಕೃ–ಅಣುಕಡ್ಢಮಾಣ=ಸೆಳೆಯುತ್ತಿರುವವನು.
ಅಣುಕಡ್ಢಿ. ಸ್ತ್ರೀ: [ಅನುಕೃಷ್ಟಿ] ಅನುವರ್ತನ, ಅನುಸರಣ
ಅಣುಕಡ್ಢಿಯ ವಿ: [ಅನುಕೃಷ್ಟ] ಅನುಕರಿಸಲ್ಪಟ್ಟವನು, ಅನುಸರಿಸಲ್ಪಟ್ಟವನು(ಸ)
ಅಣುಕಪ್ಪ. ಪು: [ಅನುಕಲ್ಪ] ಮಹಾಪುರುಷರ ಮಾರ್ಗವನ್ನನುಸರಿಸುವುದು, ವಿ: ಹಾಗೆ ಅನುಕರಿಸುವವನು(ಪಂಚಭಾ), ಕ್ಷಣ, ಅಮುಖ್ಯ
ಅಣುಕಮ. ಪು: [ಅನುಕ್ರಮ] ಕ್ರಮ, ಪರಂಪರೆ, ಒಂದಾದ ಮೇಲೊಂದು ಬರುವುದು, **–ಸೋ. ಅ:** [**–ಶಸ್**] ಕ್ರಮವಾಗಿ, ಪರಂಪರೆಯಾಗಿ. (ಜೀ)
ಅಣುಕರ. ಸಕ: [ಅನು+ಕೃ] ಅನುಕರಿಸು, ನಕಲಿಸು(ಸ)
ಅಣುಕರಣ. ನ: [ಅನುಕರಣ] ಅನುಕರಿಸುವಿಕೆ, ಅನುಕರಣ, ನಕಲಿಸುವುದು (ವವ)
ಅಣುಕಹ. ಸಕ: [ಅನು+ಕಥಯ್] ಅನಂತರ ಹೇಳು, ಅನುವಾದಿಸು, ತರುವಾಯ ನಿರೂಪಿಸು
ಅಣುಕಹಣ. ನ: [ಅನುಕಥನ] ಅನಂತರ ಹೇಳುವುದು, ಅನುವಾದ (ಸೂಅ)
ಅಣುಕಾರ. ಪು: [ಅನುಕಾರ] ಅನುಕರಿಸುವುದು, ಅಣಕಿಸುವುದು, ನಕಲಿಸುವುದು
ಅಣುಕಾರಿ. ವಿ: [ಅನುಕಾರಿನ್] ಅನುಕರಣೆ ಮಾಡುವವನು(ಮಹಾ)
ಅಣುಕಿಇ. ಸ್ತ್ರೀ:[ಅನುಕೃತಿ]ಅನುಕರಣೆ,ನಕಲು,ಹೋಲಿಕೆ
ಅನುಕಿಣ್ಣ. ವಿ: [ಅನುಕೀರ್ಣ] ವ್ಯಾಪಿಸಿಕೊಂಡಿರುವ, ತುಂಬಿಕೊಂಡಿರುವ(ಪಉಮ)
ಅಣುಕಿತ್ತಣ. ನ: [ಅನುಕೀರ್ತನ] ವರ್ಣನೆ, ಪ್ರಶಂಸೆ (ಪಉಮ) ಸ್ತುತಿ, ಸ್ತೋತ್ರ
ಅಣುಕಿತ್ತಿ 'ಅಣುಕಿಇ' ಶಬ್ದವನ್ನು ನೋಡುವುದು
ಅಣುಕುಇಅ. ವಿ: [ಅನುಕುಚಿತ] ಹಿಂದೆ ಎಸೆಯಲಾಗಿರುವ, ಎತ್ತರಗೊಳಿಸಲಾಗಿರುವ
ಅಣುಕುಣ. ಸಕ: [ಅನು+ಕೃ] ಅನುಕರಿಸು, ನಕಲಿಸು
ಅಣುಕೂಲ. 'ಅಣುಊಲ' ಶಬ್ದವನ್ನು ನೋಡುವುದು
ಅಣುಕೂಲಣ. ನ: [ಅನುಕೂಲನ] ಅನುಕೂಲ ಮಾಡುವುದು, ಸಹಾಯ ಮಾಡುವುದು, ಸಂತೋಷಪಡಿಸುವುದು(ಸುಪಾ)

ಅಣುಕೂಲಿ. ವಿ: [ಅನುಕೂಲಿನ್] ಅನುಕೂಲ ಮಾಡಿಕೊಡುವವನು
ಅಣುಕ್ಕಂತ. ವಿ: [ಅನ್ವಾಕ್ರಾಂತ] ಆಚರಿಸಲಾದ, ಅನುಷ್ಠಾನಗೊಳಿಸಲಾದ(ಆಚಾ)
ಅಣುಕ್ಕಂತ. ವಿ: [ಅನುಕ್ರಾಂತ] ಆಚರಿಸಲ್ಪಟ್ಟ, ವಿಹಿತವಾದ, ವಿಧಿಸಲ್ಪಟ್ಟ, ಅನುಷ್ಠಾನಗೊಳಿಸಲ್ಪಟ್ಟ
ಅಣುಕ್ಕಮ. ಸಕ: [ಅನು+ಕ್ರಮ್] ಅತಿಕ್ರಮಣ ಮಾಡು, ವ.ಕೃ– ಅಣುಕ್ಕಮಂತ=ಅತಿಕ್ರಮಣ ಮಾಡುತ್ತಿರುವ
ಅಣುಕ್ಕಮ. ಸಕ: [ಅನು+ಕ್ರಮ್] ಕ್ರಮವಾಗಿ ಹೇಳು
ಅಣುಕ್ಕಮ. 'ಅಣುಕಮ' ಶಬ್ದವನ್ನು ನೋಡುವುದು
ಅಣುಕ್ಕಮಣ. ನ: [ಅನುಕ್ರಮಣ] ನಡಿಗೆ, ಗತಿ(ಶೂಅ)
ಅಣುಕ್ಕುಇಅ. ವಿ: [ಅನುಕುಚಿತ] ಸ್ವಲ್ಪ ಮಟ್ಟಿಗೆ ಸಂಕುಚಿತಗೊಂಡ
ಅಣುಕ್ಕೋಸ. ಪು: [ಅನುಕ್ರೋಶ] ದಯೆ, ಕರುಣೆ, ಅನುಕಂಪೆ
ಅಣುಕ್ಕೋಸ. ಪು: [ಅನುತ್ಕರ್ಷ] ಉತ್ಕರ್ಷದ ಅಭಾವ, ಶ್ರೇಷ್ಠತೆಯ ಅಭಾವ, ಅತಿಶಯವಲ್ಲದ(ಭಗ)
ಅಣುಕ್ಖಿತ್ತ. ವಿ: [ಅನುತ್ಕ್ಷಿಪ್ತ] ಎತ್ತರಗೊಳಿಸದ, ಮೇಲಕ್ಕೆ ಮಾಡಲಾಗದ
ಅಣುಗ. ವಿ: [ಅನುಗ] ಅನುಚರ, ಸಹಚರ, ಜೊತೆಗಾರ, ಆಳು, ಸೇವಕ, ಹಿಂಬಾಲಿಸುವ
ಅಣುಗಂತವ್ವ 'ಅಣುಗಮ' ಶಬ್ದವನ್ನು ನೋಡುವುದು
ಅಣುಗಂಪಾ.ಸ್ತ್ರೀ:[ಅನುಕಂಪಾ]ಕರುಣೆ,ದಯೆ,ಸಹಾನುಭೂತಿ
ಅಣುಗಂಪಿಯ. ವಿ: [ಅನುಕಂಪಿತ] ಕರುಣೆ, ದಯೆ ಅಥವಾ ಅನಕಂಪಕ್ಕೆ ಪಾತ್ರನಾದವನು(ಸ)
ಅಣುಗಚ್ಛ. 'ಅಣುಗಮ=ಅನು+ಗಮ' ಶಬ್ದವನ್ನು ನೋಡುವುದು–'ಅಣುಗಚ್ಛಇ' ವ.ಕೃ– ಅಣುಗಚ್ಛಂತ, ಅಣುಗಚ್ಛಮಾಣ=ಅನುಸರಿಸಿ ಅಥವಾ ಹಿಂಬಾಲಿಸಿ ಹೋಗುತ್ತಿರುವ(ನಾಟ)
ಅಣುಗಚ್ಛಣ. 'ಅಣುಗಮಣ' ಶಬ್ದವನ್ನು ನೋಡುವುದು
ಅಣುಗಚ್ಛಿರ. ವಿ: [ಅನುಗಾಮಿನ್] ಅನುಸರಣೆ ಮಾಡುತ್ತಿರುವವನು, ಹಿಂಬಾಲಿಸಿ ಬರುವವನು
ಅಣುಗಜ್ಜ. ಅಕ: [ಅನುಗರ್ಜ್] ಪ್ರತಿಧ್ವನಿ ಮಾಡುವುದು, ವ.ಕೃ– ಅಣುಗಜ್ಜೇಮಾಣ
ಅಣುಗಮ.ಸಕ:[ಅನು+ಗಮ್]ಅನಸರಣೆ ಮಾಡು, ಹಿಂಬಾಲಿಸು, ತಿಳಿದುಕೋ, ವ್ಯಾಖ್ಯಾನಿಸು, ವ.ಕೃ ಅಣುಗಮಂತ, ಅಣುಗಮ್ಮಮಾಣ: ಅನುಸರಿಸಲ್ಪಡುತ್ತಿರುವ
ಅಣುಗಮ. ಪು: [ಅನುಗಮ] ಅನುಸರಿಸುವುದು, ಹಿಂಬಾಲಿಸುವುದು, ಸರಿಯಾಗಿ ತಿಳಿದು ಕೊಳ್ಳುವುದು, ನಿಶ್ಚೈಸುವುದು, ವ್ಯಾಖ್ಯಾನಿಸುವುದು
ಅಣುಗಮಣ. ಮೇಲಿನ ಶಬ್ದವನ್ನು ನೋಡುವುದು
ಅಣುಗಮಿಅ. ವಿ: [ಅನುಗತ] ಅನುಸರಿಸಲ್ಪಟ್ಟ, ಅನುಸರಿಸಿ ಹೋದ, ಹಿಂಬಾಲಿಸುವ
ಅಣುಗಮಿರ. ವಿ: [ಅನುಗಂತೃ] ಅನುಸರಣೆ ಮಾಡುವವನು (ದೇ)
ಅಣುಗಯ. ವಿ: [ಅನುಗತ] ಅನುಸರಿಸಲ್ಪಟ್ಟವನು, ಹಿಂಬಾಲಿಸಲ್ಪಟ್ಟವನು(ಪಣಹ) ಗೊತ್ತಾಗಿರುವ, ಹಿಂದಿನಿಂದ ನಡೆದುಬಂದಿರುವ, ಹೊಂದಿಕೆ ಯಾಗುವ, ವಿಧೇಯ
ಅಣುಗರ. 'ಅಣುಕರ' ಶಬ್ದವನ್ನು ನೋಡುವುದು. 'ಅಣುಗರೇಇ' (ವಿಸೇ)
ಅಣುಗರಣ. 'ಅನುಕರಣ' ಶಬ್ದವನ್ನು ನೋಡುವುದು.
ಅಣುಗವೇಸ. ಸಕ: [ಅನು+ಗವೇಷ್] ಕಂಡುಹಿಡಿ, ಸಂಶೋಧಿಸು, ಹುಡುಕು, 'ಅಣುಗವೇಸಇ' ವ.ಕೃ– ಅಣುಗವೇಸೇಮಾಣ: ಶೋಧನೆ ಮಾಡುತ್ತಿರುವ
ಅಣುಗಹ. 'ಅಣುಗ್ಗಹ=ಅನು+ಗ್ರಹ್' ಶಬ್ದವನ್ನು ನೋಡುವುದು(ನಾಟ)
ಅಣುಗಹಿಅ. 'ಅಣುಗಿಹಿಅ' ಶಬ್ದವನ್ನು ನೋಡುವುದು
ಅಣುಗಾಮ. ಪು: [ಅಣುಗ್ರಾಮ] ಸಣ್ಣ ಹಳ್ಳಿ (ಉತ್ತ) ನಗರದ ಹತ್ತಿರದ ಹಳ್ಳಿ (ಠಾ)
ಅಣುಗಾಮಿ}. ವಿ: [ಅನುಗಾಮಿನ್, ಮಿಕ] ಅನುಸರಿಸಿ
ಅಣುಗಾಮಿಯ}. ಹೋಗುವವನು, ಹಿಂಬಾಲಕ (ಔಪ), ಶುದ್ಧವಾಗಿರಲು ಕಾರಣನಾದವನು, ಅವಧಿ ಜ್ಞಾನದ ಒಂದು ಬಗೆ, ಅನುಚರ(ಸೂಅ)
ಅಣುಗಾರಿ. ವಿ: [ಅನುಕಾರಿನ್] ಅನುಕರಣೆ ಮಾಡುವವನು (ಮಹಾ)
ಅಣುಗಿಇ. ಸ್ತ್ರೀ: [ಅನುಕೃತಿ] ಅನುಕರಣ, ನಕಲು(ಶ್ರಾ) ಹೋಲಿಕೆ
ಅಣುಗಿಣ್ಹ. ಅಣುಗ್ಗಹ=ಅನು+ಗ್ರಹ್ ಶಬ್ದವನ್ನು ನೋಡುವುದು.
ಅಣುಗಿದ್ಧ. ವಿ: [ಅನುಗೃದ್ಧ] ಅತ್ಯಂತ ಆಸಕ್ತನಾದವನು, ಲೋಲುಪ(ಸೂಅ)
ಅಣುಗಿದ್ಧಿ. ಸ್ತ್ರೀ: [ಅನುಗೃದ್ಧಿ] ಅತಿಯಾದ ಆಸಕ್ತಿ, ಲೋಲುಪತೆ(ಉತ್ತ)

ಅನುಗಿಲ. **ಸಕ:** [ಅನು+ಗೃ] ಭಕ್ಷಿಸು, ತಿನ್ನು .ಸಂ. ಕೃ– 'ಅಣುಗಿಲಇತ್ತಾ'(ಣಾಯಾ)
ಅಣುಗಿಹೀಅ. **ವಿ:** [ಅನುಗೃಹೀತ] ಅನುಗ್ರಹಿಸಲ್ಪಟ್ಟವನು, ಕೃಪೆಗೆ ಪಾತ್ರನಾದವನು (ಸ)
ಅಣುಗೀಅ **ವಿ:** [ಅನುಗೀತ] ಹಿಂದೆ ಹೇಳಲಾದ, ಹಿಂದಿನ ಗ್ರಂಥಕರ್ತೃವಿನ ಭಾವಕ್ಕೆ ತಕ್ಕಂತೆ ರಚಿಸಲಾದ ಗ್ರಂಥ, ವ್ಯಾಖ್ಯಾನ ಇತ್ಯಾದಿ(ಉತ್ತ), ಕೀರ್ತಿತ, ವರ್ಣಿತ(ವ್ಯಕ್ತಿ) ನ: ಗಾನ, ಗೀತ
ಅಣುಗುಣ. **ವಿ:** [ಅನುಗುಣ] ಅನುಕೂಲವಾದ, ಉಚಿತ, ಯೋಗ್ಯ, ಸದೃಶ, ಗುಣಕ್ಕೆ ತಕ್ಕ(ಗಲುಡ)
ಅಣುಗುರು. **ವಿ:** [ಅನುಗುರು]ಗುರು ಪರಂಪರೆಗೆ ತಕ್ಕಂತೆ ಯಾವ ವಿಷಯದ ವ್ಯವಹಾರವಾಗುತ್ತದೋ ಅದು
ಅಣುಗೂಲ. **ವಿ:** [ಅನುಕೂಲ] ಉಪಕಾರ, ದಯೆ, ಸಹಾಯ, ಸಹಾಯಕ, ಅನುರೂಪ, ಯೋಗ್ಯ
ಅಣುಗೆಜ್ಝ. **ವಿ:** [ಅನುಗ್ರಾಹ್ಯ] ಅನುಗ್ರಹಕ್ಕೆ ಪಾತ್ರನಾದವನು, ಕೃಪೆಗೆ ಪಾತ್ರನಾದವನು(ಪ್ರಾಪ)
ಅಣುಗೆಣ್ಹ. **ವಿ;** **'ಅಣುಗ್ಗಹ=ಅನು+ಗ್ರಹ್'** ಶಬ್ದವನ್ನು ನೋಡುವುದು.
ಅಣುಗ್ಗಹ. **ಸಕ:** [ಅನು+ಗ್ರಹ್] ಅನುಗ್ರಹಿಸು, ಕೃಪೆಮಾಡು, ಕೃ–ಅಣುಗ್ಗಾಹಿದವ್ವ(ಶೌ)
ಅಣುಗ್ಗಹ. **ಪು:** [ಅನುಗ್ರಹ] ಕೃಪೆ, ದಯೆ, ಕರುಣೆ, ಉಪಕಾರ, ಅನುಗ್ರಹಕ್ಕೆ ಪಾತ್ರನಾದವ(ವವ)
ಅಣುಗ್ಗಹ. **ಪು:** [ಅನವಗ್ರಹ] ಜೈನಸಾಧುಗಳು ವಾಸಿಸಲು ಶಾಸ್ತ್ರ ನಿಷಿದ್ಧ ಸ್ಥಳ(ಬೃಹ)
ಅಣುಗ್ಗಹಿಅ}. **ವಿ:** [ಅನುಗೃಹೀತ] ಅನುಗ್ರಹಕ್ಕೆ
ಅಣುಗ್ಗಹೀಅ}. ಪಾತ್ರನಾದವನು(ಮಹಾ)
ಅಣುಗ್ಗಿಹೀಅ}.
ಅಣುಗ್ಘಾಇಮ. **ನ:**[ಅನುದ್ಘಾತಿಮ] ಮಹಾ ಪ್ರಾಯಶ್ಚಿತ್ತದ ಒಂದು ವಿಧ, ಮಹಾ ಪ್ರಾಯಶ್ಚಿತ್ತಕ್ಕೆ ಪಾತ್ರ
ಅಣುಗ್ಘಾಇಯ. **ವಿ:** [ಅನುದ್ಘಾತಿಕ] ಅನುದ್ಘಾತಿಮ ಎಂಬ ಮಹಾ ಪ್ರಾಯಶ್ಚಿತ್ತಕ್ಕೆ ಪಾತ್ರನಾದವನು, ಅನುದ್ಘಾತಿಮ ಪ್ರಾಯಶ್ಚಿತ್ತದ ವರ್ಣನೆ ಇರುವ ಗ್ರಂಥಾಂಶ ವಿಶೇಷ
ಅಣುಗ್ಘಾಂಯ. **ವಿ:** [ಅನುದ್ಘಾತ] ಉದ್ಘಾತ ಇಲ್ಲದಿರುವುದು =ಕುಲುಕಾಟ, ಅದುರುವಿಕೆ ಇಲ್ಲದಿರುವುದು, ನ: ಅನುದ್ಘಾತಿಕ ಪ್ರಾಯಶ್ಚಿತ್ತದ ವಿಚಾರವಿರುವ 'ನಿಶೀಥ ಸೂತ್ರದ ಭಾಗ(ಆವ)
ಅಣುಗ್ಘಾಯ. **ನ:** [ಅನುದ್ಘಾತ] ದೊಡ್ಡ ಪ್ರಾಯಶ್ಚಿತ್ತ
ಅಣುಗ್ಘಾಯಣ. **ನ:** [ಅಣೋದ್ಘಾತನ] ಕರ್ಮಗಳ ನಾಶ
ಅಣುಗ್ಘಾಸ. **ಸಕ:** [ಅನು+ಗ್ರಾಸಯ್] ತಿನ್ನಿಸುವುದು, ಊಟ ಮಾಡಿಸುವುದು, **ವ.ಕೃ–ಅಣುಗ್ಘಾಸಂತ** (ನಿಚೂ)
ಅಣುಚಯ. **ಪು:** [ಅನುಚಯ] ಹರಡಿಕೊಂಡು ಒಟ್ಟುಗೂಡಿಸುವುದು(ಉಪ)
ಅಣುಚರ. **ಸಕ:** [ಅನು+ಚರ್] ಸೇವೆ ಮಾಡು, ಹಿಂಬಾಲಿಸು, ಅನುಸರಿಸು, ಆಚರಿಸು, **'ಅಣುಚರಇ'** (ಆರಾ), **ವ.ಕೃ–ಅಣುಚರಂತ:** ಅನುಸರಿಸುತ್ತಿರುವ
ಅಣುಚರ. **'ಅಣುಅರ'** ಶಬ್ದವನ್ನು ನೋಡುವುದು.
ಅಣುಚರಗ. **ವಿ:** [ಅನುಚರಕ] ಸೇವೆ ಮಾಡುವವನು
ಅಣುಚರಿಯ. **ವಿ:** [ಅನುಚರಿತ] ಅನುಷ್ಠಾನಗೊಂಡ, ನೆರವೇರಿಸಲಾದ, ಮಾಡಲ್ಪಟ್ಟ(ಕಪ್ಪ)
ಅಣುಚಿ. **ಸಕ:** [ಅನು+ಚ್ಯು] ಮರಣಿಸು, ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹೋಗು– 'ಅಣುಚಿಊಣ'(ಮಹಾ)
ಅಣುಚಿಂತ. **ಸಕ:** [ಅನುಚಿಂತ್] ವಿಚಾರಿಸು, ಪರ್ಯಾಲೋಚಿಸು, ನೆನಪಿಸಿಕೊ, ಯೋಚಿಸು. 'ಅಣುಚಿಂತೆ'(ಸಂಥಾ), ವ.ಕೃ–ಅಣುಚಿಂತೇಮಾಣ
ಅಣುಚಿಂತಣ. **ನ:** [ಅನುಚಿಂತನ] ಚಿಂತನೆ, ಪರ್ಯಾಲೋಚನೆ, ಸ್ಮರಣೆ, ನೆನಪು
ಅಣುಚಿಂತಾ. **ಸ್ತ್ರೀ:** [ಅನುಚಿಂತಾ] ಮೇಲಿನ ಶಬ್ದವನ್ನು ನೋಡುವುದು.
ಅಣುಚಿಟ್ಠ. **ಸಕ:** [ಅನು+ಸ್ಥಾ] ಆಚರಿಸು, ನೆರವೇರಿಸು, ಮಾಡು. 'ಅಣುಚಿಟ್ಠಇ'(ಮಹಾ)
ಅಣುಚಿಣ್ಣ. **ವಿ:** [ಅನುಚೀರ್ಣ] ಅನಷ್ಠಾನಗೊಂಡ, ಆಚರಿಸಲಾದ, ಮಾಡಲಾದ(ಮಹಾ), ದೊರಕಿದ, ಲಭಿಸಿದ, ಪರಿಣಾಮಗೊಂಡ(ಜೀವ)
ಅಣುಚಿಣ್ಣಾವ. **ವಿ:** [ಅನುಚೀರ್ಣವತ್] ಆಚರಣೆ ಮಾಡಿದವನು, ಅನುಷ್ಠಾನ ಮಾಡಿದವನು
ಅಣುಚಿನ್ನ. **'ಅಣುಚಿಣ್ಣ'** ಶಬ್ದವನ್ನು ನೋಡುವುದು.
ಅಣುಚಿಯ. **ವಿ:** [ಅನುಚಿತ] ಉಚಿತವಲ್ಲದ, ಯೋಗ್ಯವಲ್ಲದ(ಬೃ)
ಅಣುಚೀಇ}. **'ಅಣುಚಿಂತ'** ಶಬ್ದವನ್ನು ನೋಡುವುದು.
ಅಣುಚೀತಿ}.

ಅಣುಚ್ಚ. ವಿ: [ಅನುಚ್ಚ] ಎತ್ತರವಲ್ಲದ, ಉಚ್ಚವಲ್ಲದ, **ಅಣುಚ್ಚಾಕುಇಯ.** ವಿ: [ಅನುಚ್ಚಾಕುಚಿಕ] =ಕೆಳಗಿನ ಮತ್ತು ಸ್ಥಿರವಲ್ಲದ ಹಾಸಿಗೆ ಉಳ್ಳ(ಕಪ್ಪ)

ಅಣುಚ್ಛಹಂತ. ವಿ: [ಅನುತ್ಸಹಮಾನ] ಉತ್ಸಾಹವಿಲ್ಲದಿರುವವನು(ಪಉಮ)

ಅಣುಚ್ಛಿತ್ತ ವಿ: [ಅನುತ್‌ಕ್ಷಿಪ್ತ] ಬಿಟ್ಟಿಲ್ಲದ, ಮೇಲಕ್ಕೆ ಹಾರಿಸಲ್ಪಡದ, ಕಿತ್ತುಹಾಕದಿರುವ

ಅಣುಚ್ಛಿತ್ತ. ವಿ: [ಅನುತ್ಥಿತ] ಗರ್ವವಿಲ್ಲದ, ವಿನೀತ, ಸಮೃದ್ಧವಾದ, ಸರ್ವೋಚ್ಚ, ಮೇಲಕ್ಕೇಳದ

ಅಣುಚ್ಛೂಢ. ವಿ: [ಅನುತ್‌ಕ್ಷಿಪ್ತ] ಬಿಟ್ಟಿಲ್ಲದ, ಮೇಲಕ್ಕೆ ಹಾರಿಸಲ್ಪಡದ(ಗಾ)

ಅಣುಜ. ಪು: [ಅನುಜ] ತಮ್ಮ(ಸ)

ಅಣುಜತ್ತ. ನ: [ಅನುಯಾತ್ರ] ಯಾತ್ರೆಯಲ್ಲಿ, ಯಾತ್ರೆಯ ಬಳಿಕ, ಅನುಯಾಯಿ ವರ್ಗ, ಪರಿವಾರ

ಅಣುಜತ್ತಾ. ಸ್ತ್ರೀ: [ಅನುಯಾತ್ರಾ] ನಿರ್ಗಮನ, ಹೊರಡುವುದು

ಅಣುಜಾ. ಸಕ: [ಅನು+ಯಾ] ಅನುಸರಿಸು, ಹಿಂಬಾಲಿಸು–'ಅನ್ನುಜಾಇ'(ವಿಸಂ)

ಅಣುಜಾಇ. ವಿ: [ಅನುಯಾಯಿನ್] ಅನುಯಾಯಿ, ಅನುಸರಿಸುವವನು, ಹಿಂಬಾಲಕ (ಸುಪಾ)

ಅಣುಜಾಇ. ಸ್ತ್ರೀ: [ಅನುಯಾತಿ] ಹಿಂಬಾಲಿಸಿ ಹೋಗುವ, ಅನುಸರಿಸಿ ಹೋಗುವ

ಅಣುಜಾಣ. ನ: [ಅನುಯಾನ] ಹಿಂಬಾಲಿಸಿ ಹೋಗುವುದು, ಮಹೋತ್ಸವ ವಿಶೇಷ, ರಥಯಾತ್ರೆ

ಅಣುಜಾಣ. ಸಕ: [ಅನು+ಜ್ಞಾ] ಅನುಮತಿ ನೀಡು, ಅಪ್ಪಣೆ ಮಾಡು, ಸಮ್ಮತಿಸು, **'ಅಣುಜಾಣಇ'**

ಅಣುಜಾಣಣ.ನ:[ಅನುಜ್ಞಾನ]ಅನುಮತಿ, ಸಮ್ಮತಿ,ಒಪ್ಪಿಗೆ

ಅಣುಜಾಣಾವಣ. ನ: [ಅನುಜ್ಞಾಪನ] ಅನುಮತಿ ನೀಡುವುದು, ಅಪ್ಪಣೆ ನೀಡುವುದು

ಅಣುಜಾಣಿಯ. ವಿ: [ಅನುಜ್ಞಾತ] ಅನುಮತಿಸಲ್ಪಟ್ಟ, ಸಮ್ಮತಿಸಲ್ಪಟ್ಟ(ಸುಪಾ)

ಅಣುಜಾಯ. ವಿ: [ಅನುಜಾತ] ಅನಂತರ ಹುಟ್ಟಿದವನು, ತಮ್ಮ, ಸದೃಶ(ಸುಜ್ಜ)

ಅಣುಜಾಯ. ವಿ: [ಅನುಯಾತ]ಅನುಸರಿಸಿದವ

ಅಣುಜೀವ. ಸಕ: [ಅನು+ಜೀವ್] ಆಶ್ರಯಿಸು.

ಅಣುಜೀವಿ. ವಿ: [ಅನುಜೀವಿನ್] ಆಶ್ರಿತ, ಸೇವಕ, ಆಳು (ಸುಪಾ) –**ತ್ತಣ.** ನ: –[ತ್ವ] ಆಶ್ರಯ, ಉದ್ಯೋಗ

ಅಣುಜುಂಜ. ಸಕ: [ಅನು+ಯುಜ್] ಪ್ರಶ್ನಿಸು

ಅಣುಜುತ್ತಿ. ಸ್ತ್ರೀ: [ಅನುಯುಕ್ತಿ] ಯೋಗ್ಯವಾದ ಯುಕ್ತಿ, ಉಚಿತವಾದ ನ್ಯಾಯ(ಸೂಅ)

ಅಣುಜೆಟ್ಠ. ವಿ: [ಅನುಜ್ಯೇಷ್ಠ] ಜೇಷ್ಠನನ್ನು ಅನುಸರಿಸಿ ಹುಟ್ಟಿದವನು, ಹಿರಿಯನ ನಂತರ ಹುಟ್ಟಿದವನು, ಚಿಕ್ಕವನು(ಪಉಮ)

ಅಣುಜೋಗ. 'ಅಣುಓಅ' ಶಬ್ದವನ್ನು ನೋಡುವುದು

ಅಣುಜ್ಜ. ವಿ: [ಅನೂರ್ಜ] ಉತ್ಸಾಹವಿಲ್ಲದ, ಅನುತ್ಸಾಹಿ, ಹತಾಶ(ಕಪ್ಪ)

ಅಣುಜ್ಜ. ವಿ: [ಅನೋಜಸ್ಕ] ಕಾಂತಿಹೀನ, ಕಳೆಗುಂದಿದ

ಅಣುಜ್ಜ. ವಿ: [ಅನೂದ್ಯ] ಉದ್ದೇಶ, ಗುರಿ, ಅನುವಾದಿತ, ಭಾಷಾಂತರಿಸಿದ

ಅಣುಜ್ಜಾ. ಸ್ತ್ರೀ: [ಅನುಜ್ಞಾ] ಅನುಮತಿ, ಅಪ್ಪಣೆ, ಸಮ್ಮತಿ (ಪಉಮ)

ಅಣುಜ್ಜಾ. **'ಅಣೊಜ್ಜಾ'** ಶಬ್ದವನ್ನು ನೋಡುವುದು

ಅಣುಜ್ಜಿಯ. ವಿ: [ಅನೂರ್ಜಿತ] ನಿರ್ಬಲ, ದುರ್ಬಲ

ಅಣುಜ್ಜುಯ. ವಿ: [ಅನೃಜುಕ] ಸರಳನಲ್ಲದ, ವಕ್ರ, ಕಪಟಿ, ಸುಳ್ಳುಗಾರ(ಗಾ)

ಅಣುಜ್ಝಾ. ಸಕ: [ಅನು+ಧ್ಯಾ] ಧ್ಯಾನಿಸು, ಚಿಂತಿಸು, ಚಿಂತನೆ ಮಾಡು(ಆವಮ)

ಅಣುಜ್ಝಾಣ. ನ: [ಅನುಧ್ಯಾನ] ಚಿಂತನ, ವಿಚಾರ, ಧ್ಯಾನಮಾಡುವುದು(ಆವಮ)

ಅಣುಝಾ. 'ಅಣುಜ್ಝಾ' ಶಬ್ದವನ್ನು ನೋಡುವುದು

ಅಣುಝಿಅಅ. ವಿ: [ದೇ] ಪ್ರಯತ್ನ, ಪ್ರಯತ್ನಶೀಲ, ಎಚ್ಚರದಿಂದಿರುವವನು

ಅಣುಝಿಜ್ಜಿರ. ವಿ: [ಅನುಕ್ಷಯಿನ್] ಕ್ಷೀಣವಾಗುತ್ತಿರುವ

ಅಣುಟ್ಠ. ವಿ: [ಅನುತ್ಥ] ಇದ್ದಲ್ಲೇ ಇರುವ, ಮೇಲಕ್ಕೆ ಏಳದ(ಓಘ)

ಅಣುಟ್ಠಾ. ಸಕ: [ಅನು+ಸ್ಥಾ] ಅನುಷ್ಠಾನಗೊಳಿಸುವುದು, ಶಾಸ್ತ್ರೋಕ್ತವಾಗಿ ಆಚರಿಸುವುದು

ಅಣುಟ್ಠಾಣ. ನ: [ಅನುಷ್ಠಾನ] ಆಚರಣೆ, ಕಾರ್ಯನಿರ್ವಹಣೆ, ಆಚರಿಸುವುದು(ಆಚಾ)

ಅಣುಟ್ಠಾಣ. ನ: [ಅನುತ್ಥಾನ] ಕ್ರಿಯೆಯ ಅಭಾವ

ಅಣುಟ್ಠಾವಣ. ನ: [ಅನುಷ್ಠಾಪನ] ಅನುಷ್ಠಾನ ಗೊಳಿಸುವುದು(ಕಸ)

ಅಣುಟ್ಠಿಯ. ವಿ: [ಅನುಷ್ಠಿತ] ಆಚರಿಸಲ್ಪಟ್ಟ, ಶಾಸ್ತ್ರರೀತಿಯಿಂದ ಮಾಡಲ್ಪಟ್ಟ, ವಿಹಿತ(ಷಡ್)

ಅಣುಟ್ಠಿಯ. ವಿ: [**ಅನುತ್ಥಿತ**] ಕುಳಿತಿರುವ, ಸೋಮಾರಿ, ಹೊಣೆಗೇಡಿ(ಆಚಾ)
ಅಣುಟ್ಠಿಯವ್ವ '**ಅಣುಟ್ಠಾ**' ಶಬ್ದವನ್ನು ನೋಡುವುದು
ಅಣುಟ್ಠುಭ. ನ: [**ಅನುಷ್ಟುಪ್**] ಒಂದು ಪ್ರಸಿದ್ಧವಾದ ಛಂದಸ್ಸು, ಸರಸ್ವತಿ. ಮಾತು
ಅಣುಟ್ಠೇಅ. '**ಅಣುಟ್ಠಾ**' ಶಬ್ದವನ್ನು ನೋಡುವುದು
ಅಣುಣ '**ಅಣುಣೇ**' ಶಬ್ದವನ್ನು ನೋಡುವುದು
ಅಣುಣಂತ. '**ಅಣುಣೇ**' ಶಬ್ದವನ್ನು ನೋಡುವುದು
ಅಣುಣಯ. ಪು: [**ಅನುನಯ**] ವಿನಯ, ಪ್ರಾರ್ಥನೆ, ಸೌಜನ್ಯ, ಮನವೊಲಿಸುವುದು(ಮಹಾ)
ಅಣುಣಾಇ. ವಿ: [**ಅನುನಾದಿನ್**] ಪ್ರತಿಧ್ವನಿ ಮಾಡುವ (ಕಪ್ಪ) ಅನುಸರಿಸಿ ಶಬ್ದವನ್ನುಂಟುಮಾಡುವ
ಅಣುಣಾಯ. ಪು: [**ಅನುನಾದ**] ಪ್ರತಿಧ್ವನಿ, ಅನುರೂಪವಾದ ಶಬ್ದ
ಅಣುಣಾಯ. ವಿ: [**ಅನುಜ್ಞಾತ**] ಅನುಮತಿಸಲ್ಪಟ್ಟ, ಸಮ್ಮತಿಸಲ್ಪಟ್ಟ, ಅನುಮೋದಿತ (ಪಂಚೂ)
ಅಣುಣಾಸ. ಪುಂನ: [**ಅನುನಾಸ**] ಅನುನಾಸಿಕ, ಮೂಗಿನಿಂದ ಉಚ್ಚರಿಸಲ್ಪಡುವ ಅಕ್ಷರ,
ಅಣುಣಾಸಿಅ. ಪು: [**ಅನುನಾಸಿಕ**] ಮೇಲಿನ ಶಬ್ದವನ್ನು ನೋಡುವುದು
ಅಣುಣೇ. ಸಕ: [**ಅನು+ನೀ**] ಅನುನಯಿಸು, ಮನವೊಲಿಸು, ಪ್ರಾರ್ಥಿಸು, ಕೋರು ಸಮಾಧಾನಮಾಡುವುದು, ವ.ಕೃ-ಅಣುಣಂತ (ಉತ್ತ)
ಅಣುಣೇಅ. ವಿ: [**ಅನುನೀತ**] ಅನುನಯಿಸಲ್ಪಟ್ಟವನು (ದೇ)
ಅಣುಣೆಂತ. '**ಅಣುಣೇ**' ಶಬ್ದವನ್ನು ನೋಡುವುದು
ಅಣುಣ್ಣಯ. ವಿ: [**ಅನುನ್ನತ**] ಉನ್ನತವಲ್ಲದ, ಕೆಳಗಿನ, ನಮ್ರ(ದಸ)
ಅಣುಣ್ಣವ. ಸಕ: [**ಅನು+ಜ್ಞಾಪಯ್**] ಅನುಮತಿ ನೀಡುವುದು, ಆಜ್ಞೆ ಮಾಡುವುದು, **ಕರ್ಮ**-ಅಣುಣ್ಣವಿಜ್ಜಇ, ವ. **ಕೃ-ಅಣುಣ್ಣವೇಮಾಣ**-ಆಜ್ಞೆಮಾಡುತ್ತಿರುವ(ಠಾ)
ಅಣುಣ್ಣವಣಯಾ}. ಸ್ತ್ರೀ: [**ಅನುಜ್ಞಾಪನಾ**] ಅಪ್ಪಣೆ,
ಅಣುಣ್ಣವಣಾ}. ಅನುಮತಿ, ಸಮ್ಮತಿ(ಸಮ)
ಅಣುಣ್ಣವಣೀ. ಸ್ತ್ರೀ: [**ಅನುಜ್ಞಾಪನೀ**] ಅನುಮತಿ ಪಡೆಯುವ ವಾಕ್ಯ, ಅನುಮತಿ-ಪ್ರಕಾಶಕರ ಭಾಷೆ

ಅಣುಣ್ಣಾ. ಸ್ತ್ರೀ: [**ಅನುಜ್ಞಾ**] ಅನುಮತಿ, ಅನುಮೋದನೆ, ಒಪ್ಪಿಗೆ ಸಮ್ಮತಿ, ಆಜ್ಞೆ, ಅಪ್ಪಣೆ. -**ಕಪ್ಪ.** ಪು: [-**ಕಲ್ಪ**] ಜೈನ ಸಾಧುಗಳಿಗೆ ವಸ್ತ್ರಾದಿಗಳನ್ನು ಕೊಳ್ಳುವಲ್ಲಿನ ಶಾಸ್ತ್ರವಿಧಾನ, ಓದುವ ವಿಷಯಕ್ಕೆ ಗುರ್ವಾಜ್ಞೆ, ಸೂತ್ರಾರ್ಥದ ಅಧ್ಯಯನ.
ಅಣುಣ್ಣಾಯ. ವಿ: [**ಅನುಜ್ಞಾತ**] ಅನುಮತಿಸಲ್ಪಟ್ಟ, ಅಪ್ಪಣೆ ಮಾಡಲ್ಪಟ್ಟ, ಸಮ್ಮತಿ ನೀಡಲ್ಪಟ್ಟ ವ್ಯಕ್ತಿ(ಠಾ)
ಅಣುಣ್ಹ. ವಿ: [**ಅನುಷ್ಣ**] ತಣ್ಣಗಿರುವ, ಬಿಸಿಯಲ್ಲದ, ನ: ಕನ್ನೈದಿಲೆ, ಸೋಮಾರಿ
ಅಣುತಡ. ಪು: [**ಅನುತಟ**] ಭೇದ, ಪದಾರ್ಥಗಳನ್ನು ಬೇರ್ಪಡಿಸುವ ಒಂದು ರೀತಿ, ಕಾದ ಕಬ್ಬಿಣವನ್ನು ಸುತ್ತಿಗೆಯಿಂದ ಬಡಿದಾಗ ಕಿಡಿಗಳು ಬೇರ್ಪಡುವಂತೆ(ಠಾ)
ಅಣುತಡಿಯಾ ಸ್ತ್ರೀ: [**ಅನುತಟಿಕಾ**] ಮೇಲಿನ ಶಬ್ದವನ್ನು ನೋಡುವುದು(ಭಾಸ)
ಅಣುತಪ್ಪ. ಅಕ: [**ಅನು+ತಪ್**] ಪಶ್ಚಾತ್ತಾಪಪಡು, 'ಅನುತಪ್ಪಇ'(ಸ)
ಅಣುತಪ್ಪಿ. ವಿ: [**ಅನುತಾಪಿನ್**] ಪಶ್ಚಾತ್ತಾಪ ಪಡುವ ವ್ಯಕ್ತಿ, ಮರುಗುವವ(ವವ)
ಅಣುತಾವ. ಸಕ: [**ಅನು+ತಾಪಯ್**] ಕಾಯಿಸು, ಬಿಸಿಮಾಡು, ದುಃಖಕೊಡು
ಅಣುತಾವ. ಪು: [**ಅನುತಾಪ**] ಪಶ್ಚಾತ್ತಾಪ, ಮಾಡಿದ ತಪ್ಪಿಗೆ ಪಡುವ ವ್ಯಥೆ (ಪಾಅ)
ಅಣುತಾವಯ. ವಿ: [**ಅನುತಾಪಕ**] ಪಶ್ಚಾತ್ತಾಪ ಪಡುವವನು
ಅಣುತಾವಿ. '**ಅಣುತಪ್ಪಿ**' ಶಬ್ದವನ್ನು ನೋಡುವುದು
ಅಣುತ್ತ. ವಿ: [**ಅನುಕ್ತ**] ಹೇಳದೆ ಇರುವುದು, ಅಕಥಿತ (ಪಂಚ)
ಅಣುತ್ತಂತ. '**ಅಣುವತ್ತ**' ಶಬ್ದವನ್ನು ನೋಡುವುದು
ಅಣುತ್ತಪ್ಪ. ವಿ: [**ಅನುತ್ತ್ರಪ್ಯ**] ಪರಿಪೂರ್ಣ ಶರೀರ, ಪರಿಪೂರ್ಣ ಶರೀರವನ್ನು ಹೊಂದಿರುವವನು.
ಅಣುತ್ತರ. ವಿ: [**ಅನುತ್ತರ**] ಸರ್ವಶ್ರೇಷ್ಠ, ಸರ್ವೋತ್ತಮ(ಠಾ), ಒಂದು ಸರ್ವೋತ್ತಮವಾದ ದೇವಲೋಕದ ಹೆಸರು. ಉತ್ತರ ಕೊಡದಿರುವುದು, ಉತ್ತರವಿಲ್ಲದಿರುವುದು, -**ಗ್ಗಾ.** ಸ್ತ್ರೀ: [**ಅನುತ್ತರಾಗ್ರ್ಯಾ**] ಮುಕ್ತ ಜೀವರ ನಿವಾಸವಿರುವ ಒಂದು ಭೂಮಿ(ಸೂಅ), -**ಣಾಣಿ.** ವಿ:

[-ಜ್ಞಾನಿನ್] ಕೇವಲ ಜ್ಞಾನಿ. -ವಮಾಣ. ನ: [-ವಿಮಾನ] ಒಂದು ಸರ್ವೋತ್ಕೃಷ್ಟವಾದ ದೇವಲೋಕ(ಭಗ) -ಓವಾಇಂಯ. ವಿ: [-ಓಪಪಾತಿ] ಅನುತ್ತರ ದೇವಲೋಕದಲ್ಲಿ ಹುಟ್ಟಿದ.

ಅಣುತ್ತರೋವವಾಇಯದಸಾ. ಸ್ತ್ರೀ: [ಅನುತ್ತರೋಪಪಾತಿಕದಶಾ] ಹೊಸ ಜೈನ ಅಂಗ ಗ್ರಂಥ (ಅನು)

ಅಣುತ್ಥಾಣ. 'ಅಣುಟ್ಠಾಣ' ಶಬ್ದವನ್ನು ನೋಡುವುದು

ಅಣುತ್ಥಾಹಯ. ವಿ: [ಅನುತ್ಸಾಹ] ಉತ್ಸಾಹವಿಲ್ಲದಿರುವುದು ನಿರಾಶೆ, ಪ್ರಯತ್ನವಿಲ್ಲದಿರುವಿಕೆ(ಕುಮಾ)

ಅಣುದತ್ತ. ಪು: [ಅನುದಾತ್ತ] ಉದಾತ್ತವಲ್ಲದ, ಔದಾರ್ಯವಿಲ್ಲದ, ತಗ್ಗಿದ ಸ್ವರ, ಅನುದಾತ್ತಸ್ವರ

ಅಣುದಯ. ಪು: [ಅನುದಯ] ಉದಯವಾಗದೆ ಇರುವುದು, ಕರ್ಮಫಲದ ಅನುಭವದ ಅಭಾವ

ಅಣುದವಿ. ನ: [ದೇ] ಬೆಳಿಗ್ಗೆ, ಪ್ರಾತಃಕಾಲ(ದೇ)

ಅಣುದಿಅ. ವಿ: [ಅನುದಿತ] ಹುಟ್ಟದಿರುವ, ಉದಯಿಸದಿರುವ, ಹೇಳಲ್ಪಡದ(ಭಗ)

ಅಣುದಿಅಸ. ನ: [ಅನುದಿವಸ] ಪ್ರತಿದಿನ, ದಿನವೂನ

ಅಣುದಿಜ್ಜಂತ. ವಿ: [ಅನುದೀಯಮಾನ] ಉದಯ ಹೊಂದದಿರುವ(ಭಗ)

ಅನುದಿಣ. ನ: [ಅನುದಿನ] ದಿನವೂ, ಪ್ರತಿದಿನ, ಯಾವಾಗಲೂ(ಕುಮಾ)

ಅಣುದಿಣ್ಣ}. ವಿ: [ಅನುದಿತ] ಹುಟ್ಟದಿರುವ,

ಅಣುದಿನ್ನ}. ಉದಯವಾಗದ, ಫಲದಾನದಲ್ಲಿ ತೊಡಗದ(ಕರ್ಮ)

ಅಣುದಿಣ್ಣ}. ವ: [ಅನುದೀರಿತ] ಯಾವುದರ ಉತ್ಪತ್ತಿ

ಅಣುದಿನ್ನ}. ಭವಿಷ್ಯದಲ್ಲಿ ಇಲ್ಲವೋ ಅದು(ಭಗ) ಯಾವುದರ ಉತ್ಪತ್ತಿ ದೂರ ಭವಿಷ್ಯದಲ್ಲಿ ಆಗಲಿದೆಯೋ ಅದು

ಅಣುದಿಯ. ವಿ: [ಅನುದಿತ] ಉದಿತವಾಗದ

ಅಣುದಿಯಹ. ನ: [ಅನುದಿವಸ] ಪ್ರತಿದಿನ, ಸದಾ, ದಿನವೂ(ಸುರ)

ಅಣುದಿವ. ನ: [ದೇ] ಬೆಳಿಗ್ಗೆ, ಪ್ರಾತಃಕಾಲ(ಷಡ್)

ಅಣುದಿಸಾ.} ಸ್ತ್ರೀ: [ಅನುದಿಕ್] ಎರಡು ದಿಕ್ಕುಗಳ

ಅಣುದಿಸೀ}. ಮಧ್ಯದ ದಿಕ್ಕು, ವಿದಿಶಾ(ವಿಸೇ)

ಅಣುದ್ದಿಟ್ಠ. ವಿ: [ಅನುದ್ದಿಷ್ಟ] ಉದ್ದೇಶಿಸಿರದ(ಪಣ್ಣ)

ಅಣುದ್ಧ. ವಿ: [ಅನೂರ್ಧ್ವ] ಎತ್ತರವಲ್ಲದ, ಮೇಲುಗಡೆಯಿಲ್ಲದ, ಕೆಳಗಿನ(ಕುಮಾ)

ಅಣುದ್ಧಯ. ವಿ: [ಅನುದ್ಧತ] ಉದ್ಧತನಲ್ಲದ, ವಿನಯಿ, ಸರಳ, ವಿಧೇಯ

ಅಣುದ್ಧರಿ. ಪು: [ಅನುದ್ಧರಿನ್] ಒಂದು ಕ್ಷುದ್ರ ಜಂತು,

ಅಣುದ್ಧಿಯ. ವಿ: [ಅನುದ್ಧೃತ] ಯಾರ ಉದ್ಧಾರವನ್ನು ಮಾಡಲಾಗಿಲ್ಲವೋ ಅವನು, ಮೇಲಕ್ಕೆ ಎತ್ತಲ್ಪಡದ

ಅಣುದ್ಧುಯ. ಪು: [ಅನುದ್ಧೂತ] ಅಪರಿತ್ಯಕ್ತ, ತ್ಯಜಿಸದೆ ಇರುವ(ಕಪ್ಪ)

ಅಣುಧಮ್ಮ. ಪು: [ಅಣುಧರ್ಮ] ಗೃಹಸ್ಥ ಧರ್ಮ(ವಿಸೇ)

ಅಣುಧಮ್ಮ. ಪು: [ಅನುಧರ್ಮ] ಅನುಕೂಲಕರವಾದ ಧರ್ಮ, -ಚಾರಿ. ವಿ: [-ಚಾರಿನ್] ಹಿತಕರವಾದ ಧರ್ಮದ ಅನುಯಾಯಿ, ಜೈನಧರ್ಮಿಯ

ಅಣುಧಮ್ಮಿಯ. ವಿ: [ಅನುಧಾರ್ಮಿಕ] ಧರ್ಮಕ್ಕೆ ಅನುಸಾರವಾದ, ಧರ್ಮೋಚಿತವಾದ(ಆಚಾ)

ಅಣುಧಾವ. ಸಕ: [ಅನು+ಧಾವ್] ಅನುಸರಿಸಿ ಓಡು, ಅನುಸರಿಸಿ ನಡೆ, ಹಿಂಬಾಲಿಸು, **ವ.ಕೃ**-ಅಣುಧಾವನ್-ಅನುಸರಿಸಿ ಹೋಗುತ್ತಿರುವ

ಅಣುಧಾವಿರ. ವಿ: [ಅನುಧಾವಿತೃ] ಹಿಂದೆ ಓಡುತ್ತಿರುವವನು, ಹಿಂಬಾಲಿಸುತ್ತಿರುವವನು

ಅಣುನಾಇ. ವಿ: [ಅನುನಾದಿನ್] ಪ್ರತಿಧ್ವನಿ ಮಾಡುವವನು(ಕಪ್ಪ)

ಅಣುನಾಯ. ವಿ: [ಅನುಜ್ಞಾತ] ಅನುಮತಿ ನೀಡಲಾದ, ಸಮ್ಮತಿಸಲ್ಪಟ್ಟ, ಅಪ್ಪಣೆ ಮಾಡಲ್ಪಟ್ಟ(ಸುಪಾ)

ಅಣುನಾಸ. 'ಅಣುಣಾಸ' ಶಬ್ದವನ್ನು ನೋಡುವುದು

ಅಣುನ್ನವ. 'ಅಣುಣ್ಣವ' ಶಬ್ದವನ್ನು ನೋಡುವುದು.. ವ.ಕೃ-ಅಣುನ್ನವೇಮಾಣ

ಅಣುನ್ನವಣಾ. 'ಅಣುಣ್ಣವಣಾ' ಶಬ್ದವನ್ನು ನೋಡುವುದು

ಅಣುನ್ನವಣೀ. 'ಅಣುಣ್ಣವಣೀ' ಶಬ್ದವನ್ನು ನೋಡುವುದು

ಅಣುನ್ನಾ. 'ಅಣುಣ್ಣಾ' ಶಬ್ದವನ್ನು ನೋಡುವುದು

ಅಣುನ್ನಾಯ. 'ಅಣುಣ್ಣಾಯ' ಶಬ್ದವನ್ನು ನೋಡುವುದು

ಅಣುಪಂಥ. ಪು: [ಅನುಪಥ] ಹತ್ತಿರದ ಮಾರ್ಗ, ಮಾರ್ಗದ ಸಮೀಪದಲ್ಲಿ, ಅನುಕೂಲವಾದ ಮಾರ್ಗ, ರಸ್ತೆಗೆ ಸಮೀಪದಲ್ಲಿ(ಬೃಹ)

ಅಣುಪತ್ತ. ವಿ: [ಅನುಪ್ರಾಪ್ತ] ದೊರಕಿದ, ಸಿಕ್ಕಿದ, ಪ್ರಾಪ್ತವಾದ(ಸುರ)

ಅಣುಪಯಾಣ. ನ: [ಅನುಪ್ರದಾನ] ದಾನಕ್ಕೆ ಪ್ರತಿಯಾದ ಪ್ರತಿಗ್ರಹಣ

ಅಣುಪಯಟ್ಟ. ವಿ: [ಅನುಪ್ರವೃತ್ತ] ಅನುಸರಿಸಲ್ಪಟ್ಟ, ಹಿಂಬಾಲಿಸಲ್ಪಟ್ಟ

ಅಣುಪರಿಯಟ್ಟ. ಸಕ: [ಅನುಪರಿ+ಅಟ್] ತಿರಗಾಡು, ಸಂಚರಿಸು ಕೃ–ಅಣುಪರಿಯಟ್ಟಿಯವ್ವ(ಣಾಯಾ)

ಅಣುಪರಿಯಟ್ಟ ಅಕ: [ಅನುಪರಿ+ವೃತ್] ತಿರುಗು, ತಿರುಗುತ್ತಿರು. ವ.ಕೃ–ಅಣುಪರಿಯಟ್ಟಮಾಣ(ಆಚಾ)

ಅಣುಪರಿಯಟ್ಟಣ. ನ: [ಅನುಪರ್ಯಟನ] ಸಂಚಾರ, ತಿರುಗಾಟ, ಪರಿಭ್ರಮಣ(ಸೂಅ)

ಅಣುಪರಿಯಟ್ಟಣ. ನ: [ಅನುಪರಿವರ್ತನ] ಪರಿವರ್ತನೆ, ತಿರುಗುವುದು

ಅಣುಪರಿವಟ್ಟ. 'ಅಣುಪರಿಯಟ್ಟ=ಅನುಪರಿ+ವೃತ್' ಶಬ್ದವನ್ನು ನೋಡುವುದು

ಅಣುಪರಿವಾಡಿ. –ಡೀ. ಸ್ತ್ರೀ: [ಅನುಪರಿಪಾಟಿ,–ಟೀ] ಅನುಕ್ರಮ

ಅಣುಪರಿಹಾರಿ. ವಿ: [ಅನುಪರಿಹಾರಿನ್] ಅಧಿಕಾರ ನಡೆಸುವವನಿಗೆ ನೆರವಾಗುವವನು, ತ್ಯಾಗಿಯಾದ ಮುನಿಯ ಸೇವೆ ಶುಶ್ರೂಷೆ ಮಾಡುವವನು(ಠಾ)

ಅಣುಪವನ್ನ. ವಿ: [ಅನುಪ್ರಪನ್ನ] ಪ್ರಾಪ್ತವಾದ, ದೊರಕಿದ

ಅಣುಪವಾಏತ್ತು. ವಿ: [ಅನುಪ್ರವಾಚಯಿತೃ] ಓದಿಸುವವನು, ಕಲಿಸುವವನು, ಪಾಠಕ, ಉಪಾಧ್ಯಾಯ(ಠಾ)

ಅಣುಪವಾಯ. 'ಅಣುಪ್ಪವಾಯ=ಅನುಪ್ರ+ವಾಚಯ್' ಶಬ್ದವನ್ನು ನೋಡುವುದು

ಅಣುಪವಿಟ್ಠ. ವಿ: [ಅನುಪ್ರವಿಷ್ಟ] ಹಿಂದಿನಿಂದ ಪ್ರವೇಶ ಮಾಡಿದವನು(ಣಾಯಾ)

ಅಣುಪವಿಸ. ಸಕ: [ಅನುಪ್ರ+ವಿಶ್] ಹಿಂದಿನಿಂದ ಪ್ರವೇಶಿಸು, ಪ್ರವೇಶಿಸು(ಕಪ್ಪ) ವ.ಕೃ–ಅಣುಪವಿಸಂತ: ಪ್ರವೇಶಿಸುತ್ತಿರುವ(ನಿಚೂ)

ಅಣುಪವೇಸ. ಪು: [ಅನುಪ್ರವೇಶ] ಪ್ರವೇಶಿಸುವುದು, ಒಳಕ್ಕೆ ಹೋಗುವುದು

ಅಣುಪಸ್ಸ. ಸಕ: [ಅನು+ದೃಶ್] ಪರ್ಯಾಲೋಚಿಸು, ವಿವೇಚಿಸು, ಸಂ.ಕೃ–ಅಣುಪಿಸ್ಸಿಯ

ಅಣುಪಸ್ಸಿ ವಿ: [ಅನುದರ್ಶಿನ್] ಪರ್ಯಾಲೋಚಕ, ವಿವೇಚಕ (ಆಚಾ)

ಅಣುಪಾಲ. ಸಕ: [ಅನುಪಾಲಯ್] ಅನುಭವಕ್ಕೆ ತಂದುಕೊಳ್ಳು, ರಕ್ಷಿಸು, ನಿರೀಕ್ಷಿಸು, ದಾರಿ ಕಾಯು, ವ.ಕೃ–ಅಣುಪಾಲಿಂತ (ಮಹಾ), ಅಣುಪಾಲೇಮಾಣ

ಅಣುಪಾಲಣ. ನ: [ಅನುಪಾಲನ] ರಕ್ಷಣೆ, ಪ್ರತಿಪಾಲಿಸುವುದು(ಪಂಚಭಾ)

ಅಣುಪಾಲಣಾ. 'ಅಣುವಾಲಣಾ' ಶಬ್ದವನ್ನು ನೋಡುವುದು

ಅಣುಪಾಲಿಯ. ವಿ: [ಅನುಪಾಲಿತ] ರಕ್ಷಿತ, ಪ್ರತಿಪಾಲಿತ

ಅಣುಪಾಸ. 'ಅಣುಪಸ್ಸ' ಶಬ್ದವನ್ನು ನೋಡುವುದು, ವ.ಕೃ–ಅಣುಪಾಸಮಾಣ

ಅಣುಪಿಟ್ಠ. ನ: [ಅನುಪೃಷ್ಠ] ಅನುಕ್ರಮ

ಅಣುಪಿಹಾ. 'ಅಣುಪೇಹಾ' ಶಬ್ದವನ್ನು ನೋಡುವುದು

ಅಣುಪುಂಖ. ನ: [ಅನುಪುಂಖ] ಮೂಲದವರೆಗೆ, ಪರ್ಯಂತ

ಅಣುಪುವ್ವ. ವಿ: [ಅನುಪೂರ್ವ] ಅನುಕ್ರಮ, ಕ್ರಮಪ್ರಕಾರ(ಠಾ) ಕ್ರಿ.ವಿ: ಕ್ರಮಶಃ –ಸೋ. [ಶಸ್] ಅನುಕ್ರಮವಾಗಿ

ಅಣುಪುವ್ವ. ನ: [ಆನುಪೂರ್ವ್ಯ] ಕ್ರಮಪ್ರಕಾರವಾಗಿ, ಅನುಕ್ರಮದಲ್ಲಿ(ರಾಯ)

ಅಣುಪುವ್ವೀ. ಸ್ತ್ರೀ: [ಆನುಪೂರ್ವೀ] ಮೇಲಿನ ಶಬ್ದವನ್ನು ನೋಡುವುದು

ಅಣುಪೆಕ್ಖಾ. ಸ್ತ್ರೀ: [ಅನುಪ್ರೇಕ್ಷಾ] ಭಾವನೆ, ಚಿಂತನೆ, ವಿಚಾರ (ಪ ಉಮ)

ಅಣುಪೇಹಣ. ನ: [ಅನುಪ್ರೇಕ್ಷಣ] ಮೇಲಿನ ಶಬ್ದವನ್ನು ನೋಡುವುದು

ಅಣುಪೇಹಾ. ಸ್ತ್ರೀ: [ಅನುಪ್ರೇಕ್ಷಾ] ಮೇಲಿನ ಶಬ್ದವನ್ನು ನೋಡುವುದು

ಅಣುಪೇಹಿ. ವಿ:[ಅನುಪ್ರೇಕ್ಷಿನ್] ಚಿಂತನೆ ಮಾಡುವವನು

ಅಣುಪ್ಪಇನ್ನ. ವಿ:[ಅನುಪ್ರಕೀರ್ಣ] ಒಂದರೊಡನೊಂದು ಸೇರಿಕೊಂಡಿರುವ, ಮಿಶ್ರಿತ (ಕಪ್ಪ)

ಅಣುಪ್ಪಣೀ. ಸಕ: [ಅನುಪ್ರ+ಣೀ] ಪ್ರಣಯದಲ್ಲಿ ತೊಡಗು, ಪ್ರಸನ್ನಗೊಳಿಸು. ವ.ಕ್ರ–ಅಣುಪ್ಪಣಂತ

ಅಣುಪ್ಪಗಂಥ. ವಿ: [ಅನುಪ್ರಗ್ರಂಥ] ಸಂತೋಷಿತನಾದವನು, ಅಲ್ಪ ಪರಿಗ್ರಹ (ಸ್ವೀಕರಿಸುವುದು) ವುಳ್ಳವನು(ಠಾ)

ಅಣುಪ್ಪಗಂಥ. ವಿ: [ಅನುಪ್ರಗ್ರಂಥ] ಮೇಲಿನ ಶಬ್ದವನ್ನು ನೋಡುವುದು

ಅಣುಪ್ಪಣ್ಣ. ವಿ: [ಅನುತ್ಪನ್ನ] ಉತ್ಪನ್ನವಾಗದಿರುವುದು, ಇಲ್ಲದಿರುವುದು(ನಿಚೂ)

ಅಣುಪ್ಪತ್ತ. 'ಅಣುಪತ್ತ' ಶಬ್ದವನ್ನು ನೋಡು(ಕಪ್ಪ)

ಅಣುಪ್ಪದಾ. ಸಕ: [ಅನುಪ್ರ +ದಾ) ದಾನ ಕೊಡು, ಕಾಣಿಕೆ ನೀಡುವುದು. 'ಅಣುಪ್ಪದೇಇ(ಕಸ)

ಅಣುಪ್ಪದಾಣ. ನ: [ಅನುಪ್ರದಾನ] ದಾನ, ಕಾಣಿಕೆ(ಆವ)

ಅಣುಪ್ಪಭು. ಪು: [ಅನುಪ್ರಭು] ಯಜಮಾನ ಅಥವಾ ಸ್ವಾಮಿಯ ಸ್ಥಾನದಲ್ಲಿರುವವನು, ಸ್ವಾಮಿಯ ಪ್ರತಿನಿಧಿ (ನಿಚೂ)

ಅಣುಪ್ಪಯಾ. 'ಅಣುಪ್ಪದಾ' ಶಬ್ದವನ್ನು ನೋಡುವುದು

ಅಣುಪ್ಪಯಾಣ. 'ಅಣುಪ್ಪದಾಣ' ಶಬ್ದವನ್ನುನೋಡುವುದು

ಅಣುಪ್ಪವತ್ತ. ಸಕ: [ಅಣು+ಪ್ರವೃತ್] ಅನುಸರಣೆ ಮಾಡು, ಹಿಂಬಾಲಿಸು

ಅಣುಪ್ಪವಾಇತ್ತು}. ವಿ: [ಅನುಪ್ರವಾಚಯಿತೃ]

ಅಣುಪ್ಪವಾಏತ್ತು}. ಪಾಠಕ, ಕಲಿಸುವವನು, ಓದಿಸುವವನು(ಠಾ), ಅಧ್ಯಾಪಕ,

ಅಣುಪ್ಪವಾದ. ಪು: [ಅನುಪ್ರವಾದ] ಕಥನ, ಹೇಳುವುದು

ಅಣುಪ್ಪವಾಯ. ಸಕ: [ಅನುಪ್ರ+ವಾಚಯ್] ಕಲಿಸು, ವ.ಕೃ–ಅಣುಪ್ಪವಾಏಮಾಣ=ಕಲಿಸುತ್ತರುವ (ಜಂ)

ಅಣುಪ್ಪವಾಯ. ನ: [ಅನುಪ್ರವಾದ] ಒಂಬತ್ತನೆಯದರ ಹಿಂದಿನ, ೧೨ನೇ ಜೈನ ಅಂಗ ಗ್ರಂಥದ ಒಂದು ಅಂಶವಿಶೇಷ (ಠಾ)

ಅಣುಪ್ಪವಿಟ್ಠ. 'ಅಣುಪವಿಟ್ಠ' ಶಬ್ದವನ್ನು ನೋಡುವುದು

ಅಣುಪ್ಪವಿತ್ತಿ. ಸ್ತ್ರೀ: [ಅನುಪ್ರವೃತ್ತಿ] ಒಳಗೆ ಪ್ರವೇಶಿಸುವುದು, ಹಿಂಬಾಲಿಸುವುದು(ವಿಸೇ)

ಅಣುಪ್ಪವಿಸ. 'ಅಣುಪವಿಸ' ಶಬ್ದವನ್ನು ನೋಡುವುದು

ಅಣುಪ್ಪವೇಸ. 'ಅಣುಪವೇಸ' ಶಬ್ದವನ್ನು ನೋಡುವುದು

ಅಣುಪ್ಪವೇಸಣ. ನ: [ಅನುಪ್ರವೇಶನ] 'ಅಣುಪವೇಸ' ಶಬ್ದವನ್ನು ನೋಡುವುದು

ಅಣುಪ್ಪಸಾದ.(ಶೌ). ಸಕ: [ಅನುಪ್ರ+ಸಾದಯ್] ಸಂತೋಷಪಡಿಸು, ಅಣುಪ್ಪಸಾದೇದಿ'(ನಾಟ)

ಅಣುಪ್ಪಸೂಯ. ವಿ: [ಅನುಪ್ರಸೂತ] ಉತ್ಪನ್ನವಾದ, ಹುಟ್ಟಿದ(ಆಚಾ)

ಅಣುಪ್ಪಾಇ. ವಿ: [ಅನುಪಾತಿನ್] ಯುಕ್ತನಾದ, ಸಂಬಂಧಿತ(ನಿಚೂ) ಅನುಸರಿಸಿ ಬರುವ

ಅನುಪ್ಪಿಯ. ವಿ: [ಅನುಪ್ರಿಯ] ಅನುಕೂಲವಾದ, ಇಷ್ಟವಾದ(ಸೂಅ)

ಅಣುಪ್ಪೆಂತ. ವಿ: [ಅನುತ್‌ಪ್ರಯತ್] ದೂರ ಮಾಡುತ್ತ, ತೊಲಗಿಸುತ್ತ

ಅಣುಪ್ಪೆಚ್ಛ. 'ಅಣುಪ್ಪೇಹ' ಶಬ್ದವನ್ನು ನೋಡುವುದು

ಅಣುಪ್ಪೇಸಿಯ. ವಿ: [ಅನುಪ್ರೇಷಿತ] ಅನಂತರ ಕಳುಹಿಸಲಾದ(ನಾಟ)

ಅಣುಪ್ಪೇಹ. ಸಕ: [ಅನುಪ್ರ+ಈಕ್ಷ್] ಚಿಂತನ ಮಾಡು, ವಿಚಾರ ಮಾಡು. 'ಅನುಪ್ಪೇಹಚಿತಿ'(ಪಿ)

ಅಣುಪ್ಪೇಹಾ. ಸ್ತ್ರೀ: [ಅನುಪ್ರೇಕ್ಷಾ] ಚಿಂತನೆ, ವಿಚಾರ, ಭಾವನೆ, ಸ್ವಾಧ್ಯಾಯ ವಿಶೇಷ(ಉತ್ತ)

ಅಣುಪ್ಫಾಸ. ಪು: [ಅನುಸ್ಪರ್ಶ] ಅನುಭಾವ, ಪ್ರಭಾವ

ಅಣುಘುಸಿಯ. ವಿ: [ಅನುಪ್ರೇಂಛಿತ] ಒರೆಸಲಾದ, ಸ್ವಚ್ಛ ಮಾಡಲಾದ(ಸ)

ಅಣುಬಂಧ. ಸಕ: [ಅನು+ಬಂಧ್] ಅನುಸರಿಸು, ಸಂಬಂಧ ಉಳಿಸಿಕೊ, –ಅಣುಬಂಧಂತಿ(ಉತ್ತರ) ವ.ಕೃ–ಅಣುಬಂಧಂತ=ಅನುಸಿಸುತ್ತಿರುವ

ಅಣುಬಂಧ. ಪು: [ಅನುಬಂಧ] ನಿರಂತರ ಸಂಬಂಧ, ಎಡೆಬಿಡದ ಸಂಬಂಧ, ವಿಚ್ಚೇದವಿಲ್ಲದ್ದು, ಕರ್ಮಗಳ ಸಂಬಂಧ(ಪಂಚಾ), ಕರ್ಮಗಳ ವಿಪಾಕ, ಪರಿಣಾಮ, ಸ್ನೇಹ, ಪ್ರೇಮ(ಸ), ಶಾಸ್ತ್ರಗಳ ಪ್ರಾರಂಭದಲ್ಲಿ ಹೇಳಬಹುದಾದ ಅಧಿಕಾರಿ, ವಿಷಯ, ಪ್ರಯೋಜನ ಮತ್ತು ಸಂಬಂಧ ಎಂಬ ಅನಬಂಧ ಚತುಷ್ಟಯಗಳು, ನಿರ್ಬಂಧ, ಆಗ್ರಹ

ಅಣುಬಂಧಅ. ವಿ: [ಅನುಬಂಧಕ] ಅನುಬಂಧವನ್ನುಂಟು ಮಾಡುವ (ನಾಟ)

ಅಣುಬಂಧಣ. ನ: [ಅನುಬಂಧನ] ಅನುಕೂಲವಾದ ಬಂಧನ, ಸಂಬಂಧ,

ಅಣುಬಂಧಣಾ. ಸ್ತ್ರೀ: [ಅನುಬಂಧನಾ] ವಿಚಾರಣೆ, ಚಿಂತನೆ, ಧ್ಯಾನ, ಮರೆತು ಹೋದ ಅರ್ಥವನ್ನು ಒಟ್ಟುಗೂಡಿಸುವುದು.

ಅಣುಬಂಧಿ. ವಿ: [ಅನುಬಂಧಿನ್] ಸಂಬಂಧವುಳ್ಳ, ಜೊತೆಗಾರ, ಸಂಬಂಧ ಮಾಡಿಸುವ, ಬೆರೆತಿರುವ

ಅಣುಬಂಧಿಅ. ನ: [ದೇ] ಬಿಕ್ಕಳಿಕೆಯ ರೋಗ (ದೇ)

ಅಣುಬಂಧೆಲ್ಲ. ವಿ: [ಅನುಬಂಧಿನ್] ವಿಚ್ಛೇದವಿಲ್ಲದ, ಅನುಸರಣೆ ಇರುವ, ಅವಿನಾಶಿ(ಉಪ)

ಅಣುಬಜ್ಝ}. ವಿ: [ಅನುಬದ್ಧ] ಸಂಬಂಧಿಸಿದ, ಕಟ್ಟಲ್ಪಟ್ಟ,

ಅಣುಬದ್ಧ}. ಸತತವಾಗಿ ಮುಂದುವರಿದ(ಸೇ) ವ್ಯಾಪ್ತ, ಪ್ರತಿಬದ್ಧ, ಬಹಳ, ಉತ್ಪನ್ನ

ಅಣುಬದ್ಧ. ವಿ: [ಅನುಬದ್ಧ] ಅನುಸರಿಸಿ ಹೋದ, ಹಿಂಬಾಲಿಸಿ ಹೋದ
ಅಣುಬೂಹ. 'ಅಣುವೂಹ' ಶಬ್ದವನ್ನು ನೋಡುವುದು
ಅಣುಬ್ಭಡ. ವಿ:[ಅನುದ್ಭಟ]ಉದ್ಧತನಲ್ಲದ, ವಿನಯಿ,ನಮ್ರ
ಅಣುಬ್ಭೂಯ ವಿ: [ಅನುದ್ಭೂತ] ಉತ್ಪನ್ನವಾಗದಿರುವ, ಹುಟ್ಟದಿರುವ, ಅಪ್ರಕಟ(ನಾಟ)
ಅಣುಭಅ. 'ಅಣುಭವ=ಅನುಭವ' ಶಬ್ದವನ್ನು ನೋಡುವುದು
ಅಣುಭವ ಸಕ: [ಅನು+ಭೂ] ಅನುಭವಕ್ಕೆ ತಂದುಕೊಳ್ಳು, ತಿಳಿ, ಅರ್ಥಮಾಡಿಕೊಳ್ಳು, ಕರ್ಮಫಲವನ್ನು ಅನುಭವಿಸು, 'ಅಣುಭವಚಿತಿ'
ಅಣುಭವ. ಪು: [ಅನುಭವ] ಜ್ಞಾನ, ಬುದ್ಧಿ, ತಿಳಿವಳಿಕೆ, ನಿಶ್ಚಯ, ಕರ್ಮಫಲವನ್ನು ಭವಿಸುವುದು
ಅಣುಭವ್ವ. ವಿ: [ಅನುಭವ್ಯ] ಆಸನ್ನಭವ್ಯ, ಮೋಕ್ಷ ಹತ್ತಿರ ಇರುವವನು
ಅಣುಭವಣ. ನ: [ಅನುಭವನ] ಮೇಲಿನ ಶಬ್ದವನ್ನು ನೋಡುವುದು
ಅಣುಭವಿ. ವಿ: [ಅನುಭವಿನ್] ಅನಭವಕ್ಕೆ ತಂದುಕೊಳ್ಳುವವನು, ಅನುಭವಿಸುವವನು
ಅಣುಭಾಗ. ಪು: [ಅನುಭಾಗ] ಪ್ರಭಾವ, ಮಹಾತ್ಮೆ, ಶಕ್ತಿ, ಸಾಮರ್ಥ್ಯ, ಕರ್ಮಗಳ ಫಲ(ಸೂಅ) ಕರ್ಮಗಳ ಫಲವನ್ನು ಉಂಟು ಮಾಡುವ ಶಕ್ತಿ, **-ಬಂಧ.** ಪು: [-ಬಂಧ] ಕರ್ಮ ಪುದ್ಗಲಗಳಲ್ಲಿ ಫಲ ಉಂಟುಮಾಡುವ ಆಸಕ್ತಿಯಾಗುವುದು
ಅಣುಭಾಯ}. ಪು: [ಅನುಭಾವ] ಮೇಲಿನ ಶಬ್ದವನ್ನು
ಅಣುಭಾವ}. ನೋಡುವುದು, ಅಲಂಕಾರ ಶಾಸ್ತ್ರದಲ್ಲಿ ಹೇಳಿರುವ ಮನಸ್ಸಿನ ಅಭಿಪ್ರಾಯಗಳನ್ನು ಸೂಚಿಸುವ ದೃಷ್ಟಿ, ಹುಬ್ಬು ಗಂಟಿಕ್ಕುವುದು ಇತ್ಯಾದಿ, ಕೃಪೆ, ದಯೆ
ಅಣುಭಾವಗ ವಿ: [ಅನುಭಾವಕ] ಬೋಧಕ, ಸೂಚಕ, ತಿಳಿಯಪಡಿಸುವವನು (ಆಠವಮ)
ಅಣುಭಾಸ. ಸಕ: [ಅಣು+ಭಾಷ್] ಅನುವಾದಿಸು, ಹೇಳಿದ ಮಾತನ್ನು ಬೇರೆ ಶಬ್ದಗಳಲ್ಲಿ ಅಥವಾ ಇನ್ನೊಂದು ಭಾಷೆಯಲ್ಲಿ ಹೇಳು, ಚಿಂತನೆ ಮಾಡು. ವ.ಕೃ-ಅಣುಭಾಸಯಂತ
ಅಣುಭಾಸಣ. ನ: [ಅನುಭಾಸಣ] ಅನುವಾದ, ಹೇಳಿದ ಮಾತನ್ನು ಬಳಿಕ ಹೇಳುವುದು(ನಾಟ)
ಅಣುಭಾಸಣಾ. ಸ್ತ್ರೀ: [ಅನುಭಾಸಣಾ] ಮೇಲಿನ ಶಬ್ದವನ್ನು ನೋಡುವುದು(ವಿಸೇ)
ಅಣುಭಾಸಯ. ವಿ: [ಅನುಭಾಷಕ] ಅನುವಾದಕ, ಅನುವಾದಿಸುವವನು (ವಿಸೇ)
ಅಣುಭುಂಜ. ಸಕ: [ಅನುಭುಜ್] ಅನುಭೋಗಿಸು, 'ಅಣುಭುಂಜಮಾಣ': ಅನುಭೋಗಿಸುತ್ತಿರುವ
ಅಣುಭೂಇ. ಸ್ತ್ರೀ: [ಅನುಭೂತಿ] ಅನುಭವ, ಜ್ಞಾನ
ಅಣುಭೂಯ. ವಿ: [ಅನುಭೂತ] ತಿಳಿಯಲ್ಪಟ್ಟ, ಅನುಭವಿಸಲ್ಪಟ್ಟ, ಅನಂತರ ಹುಟ್ಟಿದ. **-ಪುವ್ವ** ವಿ:[-ಪೂರ್ವ] ಮುಂಚೆಯೇ ಆಗಿರುವ ಅನುಭವ
ಅಣುಭೂಸ. ಸಕ: [ಅನುಭೂಷ್] ಅಲಂಕಾರ ಮಾಡು, ಶೋಭೆಯುಂಟುಮಾಡು
ಅಣುಮಇ. ಸ್ತ್ರೀ: [ಅನುಮತಿ] ಒಪ್ಪಿಗೆ, ಸಮ್ಮತಿ, ಅನುಮೋದನೆ(ಶ್ರಾ)
ಅಣುಮಂತವ್ವ 'ಅಣುಮಣ್ಣ' ಶಬ್ದವನ್ನು ನೋಡುವುದು
ಅಣುಮಗ್ಗ. ನ: [ದೇ] ಹಿಂದೆ ಹಿಂದೆ. **-ಗಾಮಿ.** ವಿ: [-ಗಾಮಿನ್] ಹಿಂಬಾಲಿಸುವವನು
ಅಣುಮಜ್ಜ. ಸಕ: [ಅನು+ಮೃಶ್] ವಿಚಾರಮಾಡು
ಅಣುಮಣ್ಣ}. ಸಕ: [ಅನು+ಮನ್] ಅನುಮತಿ ನೀಡು,
ಅಣುಮನ್ನ}.ಅನುಮೋದಿಸು, ಸಮ್ಮತಿಸು 'ಅಣುಮನ್ನಇ'
ಅಣುಮನ್ನಿಯ}. ವಿ: [ಅನುಮತ] ಒಪ್ಪಲಾದ,
ಅಣುಮಯ}. ಸಮ್ಮತಿಸಲಾದ, ಅನುಮೋದಿಸಲಾದ
ಅಣುಮರ. ಅಕ: [ಅನುಮೃ] ಸಾಯು, ಸಹಗಮನ ಮಾಡು, ಪತಿಯ ಸಾವಿನಿಂದ ಅವನ ಜೊತೆ ಚಿತೆಗೇರು, ಸಹಮರಣ
ಅಣುಮರಣ. ನ: [ಅನುಮರಣ] ಮೇಲಿನ ಶಬ್ದವನ್ನು ನೋಡುವುದು (ಗಉಡ)
ಅಣುಮಹತ್ತರ. ವಿ: [ಅನುಮಹತ್ತರ] ಮುಖಂಡನ ಪ್ರತಿನಿಧಿ(ನಿಚೂ)
ಅಣುಮಾಣ. ನ: [ಅನುಮಾನ] ಕಾರಣದಿಂದ ಅಜ್ಞಾತ ವಸ್ತುವನ್ನು ನಿರ್ಣಯಿಸುವುದು, ಊಹೆಗೆ ಕಾರಣ(ಗಾ) ತರ್ಕ, ಊಹೆ
ಅಣುಮಾಣ. ನ: [ಅನುಮಾನ] ಅಭಿಪ್ರಾಯ ಜ್ಞಾನ, ಅನುಸಾರ
ಅಣುಮಾಣ. ಸಕ: [ಅನು+ಮಾನಯ್] ಅನುಮಾನಿಸು, ಊಹಿಸು

ಅಣುಮಾಯ. ವಿ: [ಅಣುಮಾತ್ರ] ಅತ್ಯಲ್ಪ, ಕಡಿಮೆ ಪ್ರಮಾಣದ್ದು(ದಸ)
ಅಣುಮಾಲ ಸಕ: [ಅನು+ಮಾಲಯ್] ಶೋಭಿಸು, ಹೊಳೆ(ಭವಿ)
ಅಣುಮಿಣ. ಸಕ: [ಅನು+ಮಾ]ಅನುಮಾನದಿಂದ ತಿಳಿ
ಅಣುಮೇಅ. ವಿ: [ಅನುಮೇಯು] ಊಹಿಸಲು ಅರ್ಹವಾದ, ಊಹಿಸಲು ಶಕ್ಯವಾದ, ಊಹಿಸಲ್ಪಡುವ
ಅಣುಮೇರಾ. ಸ್ತ್ರೀ: [ಅನುಮರ್ಯಾದಾ] ಮರ್ಯಾದೆ, ಎಲ್ಲೆ, ಸೀಮೆ,
ಅಣುಮೋಯ. ವಿ: [ಅನು+ಮುದ್] ಅನುಮತಿಸು, ಪ್ರಶಂಸಿಸು, 'ಅಣುಮೋಏಮೋ' (ಚ ಉ)
ಅಣುಮೋಯಗ. ವಿ: [ಅನುಮೋದಕ] ಅನುಮೋದಿಸುವವನು, ಒಪ್ಪುವವನು(ವಿಸೇ)
ಅಣುಮೋಯಣ. ನ: [ಅನುಮೋದನ] ಅನುಮತಿ, ಸಮ್ಮತಿ, ಹೊಗಳಿಕೆ (ಪಂಚಾ)
ಅಣುಮ್ಮುಕ್ಕ ವಿ: [ಅನುನ್ಮುಕ್ತ] ಬಿಡುಗಡೆಗೊಳ್ಳದಿರುವ, ಮುಕ್ತನಲ್ಲದ (ಪಣ್ಣ)
ಅಣುಮ್ಮುಹ. ವಿ: [ಅನುನ್ಮುಖ]. ಅಸಮ್ಮುಖ, ವಿಮುಖ, ಮುಖ ತಿರುಗಿಸಿಕೊಂಡಿರುವ(ಮಹಾ)
ಅಣುಯ. ಪು: [ಅಣುಕ] ಕಿರು ನವಣೆ
ಅಣುಯಂಪಾ 'ಅಣುಕಂಪಾ' ಶಬ್ದವನ್ನು ನೋಡುವುದು
ಅಣುಯತ್ತ. 'ಅಣುವತ್ತ= ಅನು+ವೃತ್' ಶಬ್ದವನ್ನು ನೋಡುವುದು
ಅಣುಯತ್ತ. ಅಣುವತ್ತ=ಅನುವೃತ್ (ಭವಿ)
ಅಣುಯತ್ತಣಾ. ಸ್ತ್ರೀ: [ಅನುವರ್ತನಾ] ರೋಗಿಯ ಸೇವೆ ಶುಶ್ರೂಷೆ ಮಾಡುವುದು(ಬೃಹ), ಅನುಸರಣೆ, ಅನುಕೂಲಕರವಾದ ವರ್ತನೆ(ಜಿವ)
ಅಣುಯತ್ತಿಯ. ವಿ: [ಅನುವೃತ್ತ] ಅನುಕೂಲ ಮಾಡಲಾದ, ಮುಂದುವರೆದ, ಚರಿತ್ರೆಯನ್ನನುಸರಿಸಿದ
ಅಣುಯರಿಯ. ವಿ: [ಅನುಚರಿತ] ಆಚರಿಸಲ್ಪಟ್ಟ, ಅನುಷ್ಠಾನ ಮಾಡಲಾದ (ಣಾಯಾ)
ಅಣುಯಾ. 'ಅಣುಣ್ಣಾ' ಶಬ್ದವನ್ನು ನೋಡುವುದು
ಅಣುಯಾವ. 'ಅಣುತಾವ' ಶಬ್ದವನ್ನು ನೋಡುವುದು
ಅಣುಯಾಸ. ಪು: [ಅನುಕಾಶ] ವಿಶೇಷವಾದ ವಿಕಾಸ
ಅಣುರಂಗಾ. ಸ್ತ್ರೀ: [ದೇ] ಗಾಡಿ (ಬೃಹ)
ಅಣುರಂಗಿ. ವಿ: [ಅನುರಂಗಿನ್] ಅನುಕರಿಸುವವನು
ಅಣುರಂಗಿಯ. ವಿ: [ಅನುರಂಗಿತ] ಬಣ್ಣ ಬಳಿಯಲ್ಪಟ್ಟ (ಭವಿ)
ಅಣುರಂಜ ಸಕ: [ಅನು+ರಂಜಯ್] ಪ್ರೇಮಿಯನ್ನಾಗಿ ಮಾಡು, ಸಂತುಷ್ಟನನ್ನಾಗಿಸು. ವ.ಕೃ– ಅಣುರಂಜಂತ.
ಅಣುರಂಜಣ. ನ: [ಅನುರಂಜನ] ಪ್ರೀತಿ ಉಂಟುಮಾಡುವುದು, ಸಂತಸಗೊಳಿಸುವುದು
ಅಣುರಂಜಿಏಲ್ಲಯ}. ವಿ: [ಅನುರಂಜಿತ]. ಪ್ರೀತಿ
ಅಣುರಂಜಿಯ}. ತೋರಿಸಲ್ಪಟ್ಟ, ಸಂತುಷ್ಟಗೊಳಿಸಲಾದ
ಅಣುರಕ್ಕ. ವಿ: [ಅನುರಕ್ತ] ಪ್ರೀತಿಯುಳ್ಳ,. ಅನುರಾಗದಿಂದ ಕೂಡಿದ(ನಾಟ)
ಅಣುರಜ್ಜ. ಸಕ: [ಅನು+ರಂಜ್] ಅನುರಕ್ತನಾಗು, ಪ್ರೇಮಿಯಾಗು (ಮಹಾ)
ಅಣುರತ್ತ. 'ಅಣುರಕ್ಕ' ಶಬ್ದವನ್ನು ನೋಡುವುದು
ಅಣುರಸಿಯ. ವಿ: [ಅನುರಸಿತ] ಆಹ್ವಾನಿಸಲ್ಪಟ್ಟ, ಪ್ರತಿಧ್ವನಿಸಲ್ಪಟ್ಟ (ಣಾಯಾ)
ಅಣುರಾಇ}. ವಿ: [ಅನುರಾಗಿನ್]. ಪ್ರೀತಿಯುಳ್ಳ,
ಅಣುರಾಇಲ್ಲ}. ಪ್ರೇಮಿ, ಆಸಕ್ತಿ ಉಳ್ಳ (ಸ)
ಅಣುರಾಗ. ಪು: [ಅನುರಾಗ] ಪ್ರೀತಿ, ಪ್ರೇಮ (ಸುರ)
ಅಣುರಾಗಯ. ವಿ: [ಅನ್ವಾಗತ] ಹಿಂದೆ ಹಿಂದೆ ಬಂದವನು, ಸರಿಯಾಗಿ ಬಂದವನು, ನ: ಸ್ವಾಗತ
ಅಣುರಾಗಿ 'ಅಣುರಾಇ' ಶಬ್ದವನ್ನು ನೋಡುವುದು (ಮಹಾ)
ಅಣುರಾಯ. 'ಅಣುರಾಗ' ಶಬ್ದವನ್ನು ನೋಡುವುದು (ಪ್ರಾಸೂ)
ಅಣುರಾಹಾ ಸ್ತ್ರೀ: [ಅನುರಾಧಾ] ನಕ್ಷತ್ರ ವಿಶೇಷ, ೧೭ನೇ ನಕ್ಷತ್ರ (ಸಮ)
ಅಣುರುಂಧ. ಸಕ: [ಅನು+ರುಧ್] ಆಗ್ರಹ ಪಡಿಸು, ಒತ್ತಾಯ ಮಾಡು, ಅಡ್ಡಿಪಡಿಸು ಸ್ವೀಕರಿಸು, ಆಜ್ಞೆ ಪಾಲಿಸು, ಪ್ರಾರ್ಥಿಸು. ಅಕ. ಅಧೀನವಾಗು
ಅಣುರೂಅ}. ವಿ: [ಅನುರೂಪ] ಯೋಗ್ಯವಾದ,
ಅಣುರೂವ}. ಒಪ್ಪುವ, ಸರಿಯಾದ, ಸದೃಶ, ಹೋಲುವ, ಸಮಾನ
ಅಣುರೋಹ. ಪು: [ಅನುರೋಧ] ಕೋರಿಕೆ, ದಾಕ್ಷಿಣ್ಯ, ಅನುಸರಣ, ಹೊಂದಿಕೊಳ್ಳುವುದು, ಸಂತಸಪಡಿಸುವುದು

ಅಣುರೋಹಿ. ವಿ: [ಅನುರೋಧಿನ್] ಅನುವರ್ತಿ, ಅನುಕೂಲವಾಗಿ ನಡೆಯುವವನು

ಅಣುಲಗ್ಗ. ವಿ: [ಅನುಲಗ್ನ] ಹಿಂದೆ ಸೇರಿರುವ, ಲಗತ್ತಾದ(ಗಾ)

ಅಣುಲದ್ಧ. ವಿ: [ಅನುಲಬ್ಧ] ಅನಂತರ ಸಿಕ್ಕಿದ್ದು, ಅನಂತರ ದೊರೆತದ್ದು(ನಾಟ)

ಅಣುಲಾವ. ಪು: [ಅನುಲಾಪ] ಮತ್ತೆ ಮಾತನಾಡುವುದು(ತಾ)

ಅಣುಲಿಂಪ್. ಸಕ: [ಅನುಲಿಪ್] ಲೇಪಿಸು, ಬಳಿ, ಮತ್ತೆ ಬಳಿ(ಪಣ್ಣ)

ಅಣುಲಿಂಪಣ. ನ: [ಅನುಲೇಪನ] ಪೂಸುವುದು, ಹಚ್ಚುವುದು, ಬಳಿಯುವುದು(ಪಣ್ಣ)

ಅಣುಲಿತ್ತ. ವಿ: [ಅನುಲಿಪ್ತ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ

ಅಣುಲಿಹ. ಸಕ: [ಅನು+ಲಿಹ್] ನೆಕ್ಕು, ಸ್ಪರ್ಶಿಸು, ವ. ಕೃ–ಅಣುಲಿಹಂತ=ನೆಕ್ಕುತ್ತಿರುವ(ಸಮ)

ಅಣುಲೇವಣ. ನ: [ಅನುಲೇಪನ] ಲೇಪನ, ಬಳಿಯುವುದು(ಸ್ವಪ್ನ), ಮತ್ತೆ ಬಳಿಯುವುದು (ಪಣ್ಣ)

ಅಣುಲೇವಿಯ. ವಿ: [ಅನುಲೇಪಿತ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ

ಅಣುಲೋಮ. ಸಕ: [ಅನುಲೋಮಯ್] ಕ್ರಮದಲ್ಲಿಡು, ಅನುಕೂಲಮಾಡು(ತಾ)

ಅಣುಲೋಮ. ನ: [ಅನುಲೋಮ] ಕ್ರಮವಾದ, ಅನುಕೂಲವಾದ, ನಿಯಮಾನುಸಾರ(ಸುರ)

ಅಣುಲೋಮ. ವಿ: [ಅನುಲೋಮ] ನೇರವಾದ, ಅನುಕೂಲವಾದ(ಜಂ)

ಅಣುಲ್ಲಗ. 'ಅಣುಲ್ಲಯ' ಶಬ್ದವನ್ನು ನೋಡುವುದು

ಅಣುಲ್ಲಣ. ವಿ: [ಅನುಲ್ಬಣ] ಉದ್ಧಟನಲ್ಲದ, ನಮ್ರ, ಮೃದುಸ್ವಭಾವದ

ಅಣುಲ್ಲಯ. ಪು: [ಅನುಲ್ಲಕ] ಎರಡು ಇಂದ್ರಿಯಗಳ ಒಂದು ಕ್ಷುದ್ರ ಜಂತು(ಉತ್ತ)

ಅಣುಲ್ಲಾವ. ಪು: [ಅನುಲ್ಲಾಪ] ಕೆಟ್ಟ ಕಥನ, ದುಷ್ಟ ಮಾತು(ತಾ)

ಅಣುವ. ಪು: [ದೇ] ಬಲಾತ್ಕಾರ, ಬಲವಂತ(ದೇ)

ಅಣುವಇಟ್ಠ. ವಿ: [ಅನುಪದಿಷ್ಟ] ಹೇಳಿಲ್ಲದ, ಉಪದೇಶಿಸಲ್ಪಡದ, ಪೂರ್ವ ಪರಂಪರೆಯಿಂದ ಬರದ

ಅಣುವಉತ್ತ. ವಿ: [ಅನುಪಯುಕ್ತ]ಉಪಯೋಗಿಸಲ್ಪಡದ, ಉಪಯೋಗಕ್ಕೆ ಬರದ, ನಿರ್ಲಕ್ಷ್ಯದ

ಅಣುವಏಸ. ಪು: [ಅನುಪದೇಶ] ಯೋಗ್ಯವಲ್ಲದ ಉಪದೇಶ, ಉಪದೇಶವಿಲ್ಲದಿರುವುದು, ಸ್ವಭಾವ

ಅಣುವಓಗ. ವಿ: [ಅನುಪಯೋಗ] ಪ್ರಯೋಜನವಿಲ್ಲದ, ಉಪಯೋಗವಿಲ್ಲದ, ಎಚ್ಚರಗೇಡಿತನ(ಅಣು)

ಅಣುವಂಕ. ವಿ: [ಅನುವಕ್ರ] ಬಹಳ ಡೊಂಕಾದ, ಹೆಚ್ಚು ಬಗ್ಗಿರುವ

ಅಣುವಂದಣ. ನ: [ಅನುವಂದನ] ಪ್ರತಿ ನಮಸ್ಕಾರ (ಸಾರ್ಧ)

ಅಣುವಕ್ಕ. 'ಅಣುವಂಕ' ಶಬ್ದವನ್ನು ನೋಡುವುದು

ಅಣುವಕ್ಖ. ವಿ: [ಅನುಪಾಖ್ಯ] ಹೆಸರಿಲ್ಲದ, ಮಾತಿನಲ್ಲಿ ಹೇಳಲಾಗದ, ಅನಿರ್ವಚನೀಯ(ಬೃಹ)

ಅಣುವಕ್ಖಡ. ವಿ: [ಅನುಪಸ್ಕೃತ] ಬೇಯಿಸಲ್ಪಡದ, ವಿಕಾರ ಹೊಂದದ, ಸಂಸ್ಕಾರಗೊಳ್ಳದ

ಅಣುವಚ್ಚ. ಸಕ: [ಅನುವ್ರಜ್] ಅನುಸರಿಸು, ಹಿಂಬಾಲಿಸು, 'ಅಣುವಚ್ಚಇ' (ಹೇ)

ಅಣುವಚ್ಚಿಅ. ವಿ: [ಅನುವ್ರಜಿತ] ಅನುಸರಿಸಲ್ಪಟ್ಟ, ಹಿಂಬಾಲಿಸಲ್ಪಟ್ಟ (ಕುಮಾ)

ಅಣುವಜೀವಿ ವಿ: [ಅನುಪಜೀವಿನ್] ಇನ್ನೊಬ್ಬನ ಆಸರೆಯಿಂದ ಜೀವಿಸದ, ಜೀವನ ನಿರ್ವಾಹವಿಲ್ಲದವನು.

ಅಣುವಜುತ್ತ. ವಿ: [ಅನುಪಯುಕ್ತ] ಉಪಯೋಗಕ್ಕೆ ಬರದ, ಉಪಯೋಗಿಸಲ್ಪಡದ, ಎಚ್ಚರಗೇಡಿ

ಅಣುವಜ್ಜ. ಸಕ: [ಗಮ್] ಹೋಗು, ನಡೆ. 'ಅಣುವಜ್ಜಇ' (ಹೇ)

ಅಣುವಜ್ಜ ಸಕ: [ದೇ] ಸೇವೆಮಾಡು, ಶುಶ್ರೂಷೆ ಮಾಡು(ದೇ)

ಅಣುವಜ್ಜಣ. ನ: [ದೇ] ಸೇವೆ ಶುಶ್ರೂಷೆ(ದೇ)

ಅಣುವಜ್ಜಿಅ. ವಿ: [ದೇ] ಸೇವೆ ಶುಶ್ರೂಷೆ ಮಾಡಲ್ಪಟ್ಟವನು (ದೇ)

ಅಣುವಜ್ಜಿಅ. ವಿ: [ದೇ] ಹೋಗಲಾದ, ತಲುಪಿರುವ, ಕಳೆದು ಹೋದ, ಅತೀತ

ಅಣುವಟ್ಟ. 'ಅಣುವತ್ತ= ಅನು+ವೃತ್' ಶಬ್ದವನ್ನು ನೋಡುವುದು

ಅಣುವಟ್ಟಿ. ಅಣುವತ್ತಿ=ಅನುವರ್ತಿನ್ ಶಬ್ದವನ್ನು ನೋಡುವುದು(ವಿಸೇ)

ಅಣುವಡ. ಸಕ: [ಅನು+ಪತ್] ಅಭಿನ್ನವಾಗಿರು– '**ಅಣುವಡಇ**' (ಉವರ)
ಅಣುವಡಿಅ. ವಿ: [**ಅನುಪತಿತ**] ಹಿಂದೆ ಬಿದ್ದು ಹೋಗಿರುವ
ಅಣುವತ್ತ. ಸಕ: [ಅನು+ವೃತ್] ಅನುಸರಣೆ ಮಾಡು, ಸೇವೆ ಶುಶ್ರೂಷೆ ಮಾಡು, ಅನುಕೂಲವಾದ ನಡವಳಿಕೆ, ಸೂತ್ರ ಗ್ರಂಥಗಳಲ್ಲಿ ಹಿಂದಿನ ಸೂತ್ರದಿಂದ ಮುಂದಿನ ಸೂತ್ರಗಳಿಗೆ ತೆಗೆದುಕೊಂಡ ಪದ ಇತ್ಯಾದಿ(ಸ) **ವ. ಕೃ– 'ಅಣುತ್ತಂತ'** ಅಣುವತ್ತಂತ (ನಾಟ)
ಅಣುವತ್ತ. ವಿ: [**ಅನುದ್‌ವೃತ್ತ**] ಹುಟ್ಟಿಲ್ಲದ, ಇನ್ನೂ ಹುಟ್ಟದಿರುವ, ಇನ್ನೂ ಉಂಟಾಗದಿರುವ
ಅಣುವತ್ತ. ವಿ: [**ಅನುವೃತ್ತ**] ಅನುಸರಿಸಲ್ಪಟ್ಟ, ಹಿಂಬಾಲಿಸಲ್ಪಟ್ಟ, ಅನುಕೂಲ ಮಾಡಲ್ಪಟ್ಟ, ತೊಡಗಿದ, ಪ್ರಾರಂಭವಾದ(ವವ)
ಅಣುವತ್ತಗ. ವಿ: [**ಅನುವರ್ತಕ**] ಅನುಕೂಲವಾದ ರೀತಿಯಲ್ಲಿ ತೊಡಗಿಕೊಂಡವನು, ಸೇವೆ ಮಾಡುವವನು, ಅನುಸರಿಸುವವನು
ಅಣುವತ್ತಗ. ವಿ: [**ಅನುವರ್ತಕ**] ಅನುಸರಿಸುವವನು.
ಅಣುವತ್ತಣ. ನ: [**ಅನುವರ್ತನ**] ಅನುಸರಿಸುವುದು, ಹಿಂಬಾಲಿಸುವುದು, ಅನುಕೂಲವಾದ ರೀತಿಯ ತೊಡಗುವಿಕೆ, ಸೂತ್ರ ಗ್ರಂಥಗಳಲ್ಲಿ ಹಿಂದಿನ ಸೂತ್ರದಿಂದ ಮುಂಧಿನ ಸೂತ್ರಗಳಿಗೆ ತೆಗೆದುಕೊಂಡ ಪದ(ವಿಸೇ)
ಅಣುವತ್ತಣಾ. ಸ್ತ್ರೀ: [**ಅನುವರ್ತನಾ**] ಮೇಲಿನ ಶಬ್ದವನ್ನು ನೋಡುವುದು
ಅನುವತ್ತಯ. '**ಅಣುವತ್ತಗ**' ಶಬ್ದವನ್ನು ನೋಡುವುದು
ಅಣುವತ್ತಿ. ಸ್ತ್ರೀ: [**ಅನುವೃತ್ತಿ**] ಅನಸರಣೆ, ಸೇವೆ, ಅನುಕೂಲ ಪ್ರವೃತ್ತಿ, ಅನುಸರಿಸುವುದು, ಹಿಂಬಾಲಿಸುವುದು (ವಿಸೇ)
ಅಣುವತ್ತಿ. ವಿ: [**ಅನುವರ್ತಿನ್**] ಅನುಸರಿಸಿ ನಡೆಯುವವನು, ಅನುಕೂಲವಾದ ರೀತಿಯಲ್ಲಿ ತೊಡಗಿಸಿಕೊಳ್ಳವವನು, ಸೇವಕ, ಭಕ್ತ
ಅಣುವಮ. ವಿ: [**ಅನುಪಮ**] ಉಪಮೆಯಿಲ್ಲದ, ಎಣೆಯಿಲ್ಲದ, ಹೋಲಿಕೆಯಿಲ್ಲದ, ಅದ್ವಿತೀಯ(ಶ್ರಾ)
ಅಣುವಮಾ. ಸ್ತ್ರೀ: [**ಅನುಪಮಾ**] ಒಂದು ರೀತಿಯ ತಿನಿಸು(ಜೀವ), ಒಂದು ಹೆಣ್ಣಾನೆ
ಅಣುವಮಿಯ. ವಿ: [ಅನುಪಮಿತ] '**ಅಣುವಮ**' ಶಬ್ದವನ್ನು ನೋಡುವುದು
ಅಣುವಯ. ಸಕ: [ಅನು+ವದ್] ಅನುವಾದಿಸು, ಹೇಳಿದ ಮಾತನ್ನು ಮತ್ತೆ ಹೇಳು. **ವ.ಕೃ– ಅಣುವಯಮಾಣ**(ಆಚಾ)
ಅಣುವರಯ. ವಿ: [ಅನುಪರತ] ಸಂಯಮವಿಲ್ಲದ, ನಿಗ್ರಹವಿಲ್ಲದ(ಶಾ) ಕ್ರಿವಿ: ನಿರಂತರ, ಸದಾ
ಅಣುವಲದ್ಧಿ. ಸ್ತ್ರೀ: [ಅನುಪಲಬ್ಧಿ] ಪಡೆಯದಿರುವುದು, ಅಭಾವ, ಅಭಾವಸೂಚಕ(ವಿಶೇ)
ಅಣುವಲಬ್ಭಮಾಣ. ವಿ: [**ಅನುಪಲಭ್ಯಮಾನ**] ಉಪಲಬ್ಧವಿಲ್ಲದ, ದೊರೆಯುದಿರುವ, ತಿಳಿಯಲಾಗದ (ದಸನಿ)
ಅಣುವಲೇವಯ. ವಿ: [ಅನುಪಲೇಪಕ] ಏನೂ ಬಳಿದಿಲ್ಲದ, ಏನನ್ನೂ ಲೇಪಿಸಿಲ್ಲದ(ಪಣ್ಣ)
ಅಣುವಸಂತ. ವಿ: [ಅನುಪಶಾಂತ] ಅಶಾಂತ, ಕುಪಿತ
ಅಣುವಸಮ. ಪು: [**ಅನುಪಶಮ**] ಶಾಂತಿಯಿಲ್ಲ ದಿರುವುದು (ಉವ)
ಅಣುವಸು. ವಿ: [ಅನುವಸು] ಪ್ರೀತಿ ಉಳ್ಳವನು, (ಆಚಾ)
ಅಣುವಹ. ನ: [ಅನುಪಥ] ಹಿಂದೆ, ಅನುಕೂಲವಾದ ಮಾರ್ಗ, ಮಾರ್ಗದ ಸಮೀಪದಲ್ಲಿ
ಅಣುವಹಣ. ನ: [ಅನುವಹನ] ನದಿಯನ್ನು ದಾಟಲು ಬಳಸುವ ತೆಪ್ಪ ದೋಣಿ, ಹರಿಯುವುದು
ಅಣುವಹಯ. ವಿ: [ಅನುಪಹತ] ಗಾಯವಾಗದಿರುವ, ಉಪಯೋಗಿಸಲ್ಪಡದ, ಕೆಡಿಸಿಲ್ಲದ
ಅಣುವಹುಆ. ಸ್ತ್ರೀ: [**ದೇ**] ಹೊಸದಾಗಿ ಮದುವೆಯಾದವಳು, ಮದುಮಗಳು(ದೇ)
ಅಣುವಾಇ. ವಿ: [ಅನುಪಾತಿನ್] ಅನುಸರಿಸುವವನು, ಸಂಬಂಧ ಹೊಂದಿರುವವನು.
ಅಣುವಾಇ. ವಿ:[**ಅನುವಾದಿನ್**] ಅನುವಾದಕ, ಭಾಷಾಂತರಕಾರ, ಹೇಳಿದ್ದನ್ನು ಮತ್ತೆ ಹೇಳುವವನು
ಅಣುವಾಇ. ವಿ: [**ಅನುವಾಚಿನ್**] ಓದುವವನು, ಅಭ್ಯಾಸಿ
ಅಣುವಾಎಜ್ಜ. ವಿ: [ಅನುಪಾದೇಯ] ಸ್ವೀಕರಿಸಲು ಯೋಗ್ಯವಲ್ಲದ್ದು (ಆವಮ)
ಅಣುವಾದ}. ಪು: [ಅನುಪಾತ] '**ಅಣುವಾಯ**'
ಅಣುವಾಯು}. '=ಅನುವಾದ' ಶಬ್ದವನ್ನು ನೋಡುವುದು, ಅನುಸರಣೆ, ಸಂಬಂಧ, ಸಂಯೋಗ, ಆಗಮನ

ಅಣುವಾಯ. ಪು: [ಅನುವಾತ] ಅನುಕೂಲಕರವಾದ ಗಾಳಿ(ರಾಯ) ಶಿಷ್ಯನ ಕಡೆಯಿಂದ ಗುರುವಿನ ಕಡೆಗೆ ಬೀಸುವ ಗಾಳಿ, ಅನುಕೂಲಕರ ಗಾಳಿಯುಳ್ಳ ಪ್ರದೇಶ(ಭಗ)

ಅಣುವಾಯ. ಪು: [ಅನುವಾದ] ಹೇಳಿದ ಮಾತನ್ನು ಮತ್ತೆ ಹೇಳುವುದು, ಭಾಷಾಂತರ(ಉವಾ)

ಅಣುವಾಯಣ. ನ: [ಅನುಪಾತನ] ಅವತರಿಸುವುದು, ಕೆಳಕ್ಕೆ ಇಳಿಯುವುದು (ಧರ್ಮ)

ಅಣುವಾಯಯ. ವಿ: [ಅನುವಾಚಕ] ಹೇಳುವವನು, ವಾಚನ ಮಾಡುವವನು, ವಾಚಕ ಶಬ್ದ(ಸುಪಾ)

ಅಣುವಾಲ. '**ಅಣುಪಾಲ**' ಶಬ್ದವನ್ನು ನೋಡುವುದು. **ವ.ಕೃ–ಅಣುವಾಲೆಂತ**

ಅಣುವಾಲಣ. ನ: [ಅನುಪಾಲನ] ರಕ್ಷಣೆ, ರಕ್ಷಿಸುವುದು, ಪರಿಪಾಲಿಸುವುದು(ಆವಾ)

ಅಣುವಾಲಣಾ. ಸ್ತ್ರೀ: [ಅನುಪಾಲನಾ] ಮೇಲಿನ ಶಬ್ದವನ್ನು ನೋಡುವುದು. **–ಕಪ್ಪ.** ಪು: [–ಕಲ್ಪ] ಅಕಸ್ಮಾತ್ ಸಾಧುಗಳ ಗುಂಪಿನ ನಾಯಕ ತೀರಿ ಹೋದಾಗ ಗುಂಪಿನ ರಕ್ಷಣೆಗೆ ಅನುಸರಿಸುವ ಶಾಸ್ತ್ರೀಯ ವಿಧಾನ (ಪಂಚಭಾ)

ಅಣುವಾಲಯ. ವಿ: [ಅನುಪಾಲಕ] ರಕ್ಷಕ, ಪರಿಪಾಲಕ, ಗೋಶಾಲಕನ ಒಬ್ಬ ಭಕ್ತನ ಹೆಸರು

ಅಣುವಾಸ ಸಕ: [ಅನು+ವಾಸಯ್] ವ್ಯವಸ್ಥೆ ಮಾಡು

ಅಣುವಾಸ. ಪು: [ಅನುವಾಸ] ಒಂದು ಸ್ಥಳದಲ್ಲಿ ಕೆಲವು ಕಾಲದವರೆಗೆ ಇದ್ದು ಮತ್ತೆ ಅಲ್ಲಿಗೇ ಹೋಗಿ ವಾಸಿಸುವುದು(ಪಂಚಭಾ)

ಅನುವಾಸಣ ನ: [ಅನುವಾಸನ] ಮೇಲಿನ ಶಬ್ದವನ್ನು ನೋಡುವುದು. ಯಂತ್ರದ ಮೂಲಕ ಎಣ್ಣೆಯೇ ಮೊದಲಾದುವನ್ನು ಗುದದ್ವಾರದಿಂದ ಹೊಟ್ಟೆಗೆ ಏರಿಸುವುದು

ಅಣುವಾಸಣಾ. ಸ್ತ್ರೀ: [ಅನುವಾಸನಾ] ಮೇಲಿನ ಶಬ್ದವನ್ನು ನೋಡುವುದು(ಪಂಚಭಾ), **–ಕಪ್ಪ.** ಪು: [–ಕಲ್ಪ] ಅನುವಾಸಕ್ಕಾಗಿ ಮಾಡಿದ ಶಾಸ್ತ್ರೀಯ ವ್ಯವಸ್ಥೆ(ಪಂಚಭಾ)

ಅಣುವಾಸಗ. ವಿ: [ಅನುಪಾಸಕ] ಸೇವೆ ಮಾಡದವನು. ಪು: ಜೈನೇತರ ಗೃಹಸ್ಥ(ನಿಚೂ)

ಅಣುವಾಸರ. ನ: [ಅನುವಾಸರ] ಪ್ರತಿದಿನವೂ, ಯಾವಾಗಲೂ (ಸುರ)

ಅಣುವಿತ್ತಿ. ಸ್ತ್ರೀ: [ಅನುವೃತ್ತಿ] ಅನುಕೂಲ ನಡವಳಿಕೆ ಅನುಸರಣೆ, ಸೇವೆ, ವಿಧೇಯತೆ, ಸಾದೃಶ್ಯ

ಅಣುವಿದ್ಧ. ವಿ: [ಅನುವಿದ್ಧ] ಸಂಬಂಧ ಹೊಂದಿದ, ಸೇರಿಕೊಂಡಿರುವ (ಸೇ) ಇರಿಯಲ್ಪಟ್ಟ

ಅಣುವಿಸ. ಸಕ: [ಅನು+ವಿಶ್] ಪ್ರವೇಶಿಸು

ಅಣುವಿಹಾಣ. ನ: [ಅನುವಿಧಾನ] ಅನುಕರಣ, ಅನಸರಣೆ(ವಿಸೇ) ವಿಧೇಯತೆ, ಆಜ್ಞಾಪಾಲನೆ

ಅಣುವೀಇ. ಸ್ತ್ರೀ: [ಅನುವೀಚಿ] ಅನುಕೂಲತೆ, 'ವೇಯಾಣುವೀಯಂ ಮಾ ಕಾಸಿ...'(ಸೂಅ)

ಅಣುವೀಇ}. ಅ: [ಅನುವಿಚಿಂತ್ಯ] ವಿಚಾರಮಾಡಿ,
ಅಣುವೀಈ}. ಪರ್ಯಾಲೋಚಿಸಿ(ಪಿ) '**ಅಣುಚಿಂತ**'
ಅಣುವೀತಿ}. ಶಬ್ದವನ್ನು ನೋಡುವುದು
ಅಣುವೀತಿಯ}.

ಅಣುವೀಇತ್ತು}. '**ಅಣುವೀಇ**' ಶಬ್ದವನ್ನು ನೋಡುವುದು
ಅಣುವೀಇ}.

ಅಣುವೂಹ. ಸಕ: [ಅನು+ಬೃಂಹ್] ಅನಮೋದಿಸು, ಹೊಗಳು, –'**ಅಣುವೂಹೇಇ**'(ಕಪ್ಪ)

ಅಣುವೂಹೆತ್ತು. ವಿ: [ಅನುಬೃಂಹಿತೃ] ಅನುಮೋದಿಸುವವನು(ಠಾ)

ಅಣುವೇಧ}. ಪು: [ಅನುವೇಧ] ಅನ್ವಯ, ಸಂಬಂಧ,
ಅಣುವೇಹ}. ಸಸಂಮಿಶ್ರಣ

ಅಣುವೇದ. ಸಕ: [ಅನು+ವೇದಯ್] ಅನುಭವಕ್ಕೆ ತಂದುಕೊಳ್ಳು, **ವ. ಕೃ–ಅಣುವೇದಯಂತ**

ಅಣುವೇಯಣ. ನ: [ಅನುವೇದನ] ಅನಭವಿಸುವುದು, ಫಲದ ಅನಭವ(ಸ)

ಅಣುವೇಲ. ಅ: [ಅನುವೇಲ]ನಿರಂತರ, ಯಾವಾಗಲೂ

ಅಣುವೇಲಂಧರ. ಪು: [ಅನುವೇಲಂಧರ] ನಾಗಕುಮಾರ ದೇವರುಗಳ ಒಬ್ಬ ಇಂದ್ರ(ಸಮ)

ಅಣುವೇಹ. '**ಅಣುಪ್ಪೇಹ**' ಅನುಸರಣೆ, ಸೇವೆ, **ವ.ಕೃ–ಅಣುವೇಹಮಾಣ**

ಅಣುವ್ವಇಯ. ವಿ: [ಅನುವ್ರಜಿತ] ಅನುಸರಿಸಲ್ಪಟ್ಟ, ಹಿಂಬಾಲಿಸಲ್ಪಟ್ಟ

ಅಣುವ್ವಜ. ಸಕ: [ಅನು+ವ್ರಜ್] ಅನಸರಣ ಮಾಡು, ಎದುರಿನಲ್ಲಿ ಹೋಗು.–'**ಅಣುವ್ರಜೇ**'(ಸೂಅ)

ಅಣುವ್ವಯ. ನ: [ಅಣುವ್ರತ] ಸಣ್ಣ ವ್ರತ, ಸಾಧುಗಳ ಮಹಾವ್ರತಕ್ಕಿಂತ ಸಣ್ಣದಾದ ವ್ರತ, ಜೈನ ಗೃಹಸ್ಥರು ಆಚರಿಸಬೇಕಾದ ನಿಯಮ(ಠಾ). ಪು: ಶ್ರಾವಕ ಧರ್ಮ

ಅಣುವ್ವಯಣ. ನ: [ಅನುವ್ರಜನ] ಅನುಸರಿಸಿ ನಡೆಯುವುದು, ಹಿಂಬಾಲಿಸುವುದು, ಸಹಗಮನ

ಅಣುವ್ವಯಯ. ವಿ: [ಅನುವ್ರಜಕ] ಅನುಸರಿಸುವವನು, ಹಿಂಬಾಲಕ (ಣಾಯಾ)

ಅಣುವ್ವಯಾ. ಸ್ತ್ರೀ: [ಅನುವ್ರತಾ] ಪತಿವ್ರತೆ(ಉತ್ತ), ಅನುರಾಗವುಳ್ಳವಳು

ಅಣುವ್ವಸ. ವಿ: [ಅನುವಶ] ಆಶ್ರಿತ, ದೀನ, ಅಧೀನ, ಪರತಂತ್ರ(ಸೂಅ)

ಅಣುವ್ವಾಣ. ವಿ: [ಅನುದ್ವಾನ] ತೆರೆದಿರುವ(ಉಪ) ಸ್ನಿಗ್ಧ, ನುಣುಪಾದ, ಜಿಡ್ಡಿನಿಂದ ಕೂಡಿದ,

ಅಣುವ್ವಿಗ್ಗ. ವಿ: [ಅನುದ್ವಿಗ್ನ] ಉದ್ವೇಗರಹಿತ, ಖೇದವಿಲ್ಲದ(ಣಾಯಾ), ನಿಶ್ಶಂಕ, ಭಯವಿಲ್ಲದ

ಅಣುವ್ವಿವಾಗ. ನ: [ಅನುವಿಪಾಕ] ವಿಪಾಕಕ್ಕೆ ತಕ್ಕಂತೆ, ದುರ್ಗತಿಗೆ ತಕ್ಕಂತೆ, ಅವಸ್ಥೆಗೆ ತಕ್ಕಂತೆ

ಅಣುವ್ವೀಇಯ. 'ಅಣುವೀಇ' ಅನುಸರಣೆ, ಸೇವೆ

ಅಣುಸಂಕಮ. ಸಕ: [ಅನುಸಂ+ಕ್ರಮ್] ಅನುಸರಿಸು, ಹಿಂಬಾಲಿಸು

ಅಣುಸಂಗ ಪು: [ಅನುಷಂಗ] ಪ್ರಸಂಗ, ಅಂಟಿ ಕೊಂಡಿರುವಿಕೆ, ಸಂಬಂಧ, ಮಿಶ್ರಣ, ಸೇರಿರುವುದು

ಅಣುಸಂಗಿಅ. ವಿ: [ಆನುಷಂಗಿಕ] ಪ್ರಾಸಂಗಿಕ, ಇನ್ನೊಂದಕ್ಕೆ ಸೇರಿಕೊಂಡ

ಅಣುಸಂಚರ. ಸಕ: [ಅನುಸಂ+ಚರ್] ಸಂಚರಿಸು, ತಿರುಗಾಡು, ಹಿಂಬಾಲಿಸಿ ಹೋಗು(ಆಚಾ)

ಅಣುಸಂಜ. 'ಅಣುಸಜ್ಜ' ಶಬ್ದವನ್ನು ನೋಡುವುದು

ಅಣುಸಂಧ. ಸಕ: [ಅನುಸಂ+ಧಾ] ಹುಡುಕು, ಕಂಡುಹಿಡಿ, ವಿಚಾರಿಸು, ಪೂರ್ವಾಪರಗಳನ್ನು ಜೋಡಿಸುವುದು, ಚಿಂತಿಸು, ಧ್ಯಾನಿಸು. 'ಅಣುಸಂಧೇಮಿ'

ಅಣುಸಂಧಣ}. ನ: [ಅನುಸಂಧಾನ] ಹುಡುಕುವುದು,
ಅಣುಸಂಧಾಣ}. ಶೋಧಿಸುವುದು, ವಿಚಾರಣೆ, ಚಿಂತನೆ, ಪೂರ್ವಾಪರಗಳನ್ನು ಜೋಡಿಸುವುದು(ಪಂಚಾ)

ಅಣುಸಂಧಿಅ. ನ: [ದೇ] ಒಂದೇ ಸಮನೆ ಬಿಕ್ಕಳಿಕೆ ಬರುತ್ತಿರುವುದು, ನಿರಂತರ ಬಿಕ್ಕಳಿಕೆ(ದೇ)

ಅಣುಸಂಭರ. ಸಕ: [ಅನು+ಸ್ಮೃ] ನೆನಪಿಸಿಕೊಳ್ಳು, ಸ್ಮರಿಸಿಕೊಳ್ಳು

ಅಣುಸಂವೇಯಣ. ನ: [ಅನುಸಂವೇದನ] ಅನಂತರ ತಿಳಿ, ಅನುಭವಕ್ಕೆ ತಂದುಕೊಳ್ಳು(ಆಚಾ)

ಅಣುಸಂಸರ. ಸಕ: [ಅನುಸಂ+ಸೃ] ಓಡಾಡು, ತಿರುಗಾಡು, ಚಲಿಸು

ಅಣುಸಂಸರ. ಸಕ: [ಅನುಸಂ+ಸ್ಮೃ] ಸ್ಮರಿಸು, ನೆನಪಿಸಿಕೊಳ್ಳು –'ಅಣುಸಂಸರಇ' (ಆಚಾ)

ಅಣುಸಜ್ಜ. ಅಕ: [ಅನುಸಂ+ಸಂಜ್] ಅನಸರಿಸು, ಹಿಂದಿನ ಕಾಲದಿಂದ ಕಾಲಾಂತರದಲ್ಲಿ ಅನುಸರಿಸುವುದು, ಪ್ರೀತಿಸುವುದು, ಪರಿಚಯ ಮಾಡಿಕೊಳ್ಳವುದು

ಅಣುಸಜ್ಜಣಾ. ಸ್ತ್ರೀ: [ಅನುಸಜ್ಜನಾ] ಅನಸರಣೆ, ಅನುವರ್ತನೆ (ವವ)

ಅಣುಸಟ್ಠ. ವಿ: [ಅನುಶಿಷ್ಟ] ಶಿಕ್ಷೆಗೆ ಒಳಗಾಗಿರುವವನು, ಶಿಕ್ಷಿತ(ಸುರ)

ಅಣುಸಟ್ಠಿ. ವಿ: [ಅನುಶಿಷ್ಟಿ] ಶಿಕ್ಷಣ, ಕಲಿಸುವುದು, ಉಪದೇಶ(ಠಾ), ಆಜ್ಞೆ, ಸಮ್ಮತಿ, ಹೊಗಳಿಕೆ

ಅಣುಸಮಯ. ನ: [ಅನುಸಮಯ] ಪ್ರತಿಕ್ಷಣ(ಭಗ)

ಅಣುಸಯ. ಪು: [ಅನುಶಯ] ಪಶ್ಚಾತ್ತಾಪ, ಕೋಪ, ದ್ವೇಷ, ಸಮಾಧಾನ ಹೆಮ್ಮೆ, ಅಭಿಮಾನ

ಅಣುಸರ. ಸಕ: [ಅನು+ಸೃ] ಹಿಂಬಾಲಿಸು, ಅನುಸರಿಸು. 'ಅಣುಸರಇ' (ಸಣ) ವ.ಕೃ. ಅಣುಸರಂತ

ಅಣುಸರ. ಸಕ: [ಅನು+ಸ್ಮೃ] ಸ್ಮರಿಸಿಕೊಳ್ಳು, ನೆನಪಿಸಿಕೊಳ್ಳು, ಚಿಂತನೆ ಮಾಡವುದು(ಆವಮ)

ಅಣುಸರಣ. ನ: [ಅನುಸರಣ] ಹಿಂಬಾಲಿಸುವುದು, ಅನುಸರಿಸುವುದು, ಅನುವರ್ತನೆ(ವಿಸೇ)

ಅಣುಸರಣ. ನ: [ಅನುಸ್ಮರಣ] ನೆನಪಿಸಿಕೊಳ್ಳವುದು, ಸ್ಮರಿಸಿಕೊಳ್ಳುವುದು, ಚಿಂತನೆಮಾಡುವುದು

ಅಣುಸರಿ. 'ಅಣುಸಾರಿ' ಶಬ್ದವನ್ನು ನೋಡುವುದು

ಅಣುಸರಿಉ. ವಿ: [ಅನುಸ್ಮೃರ್ತೃ] ನೆನಪಿಸಿಕೊಳ್ಳುವವನು

ಅಣುಸರಿಚ್ಛ}. ವಿ: [ಅನುಸದೃಶ] ಸಮಾನ ಹೋಲುವ,
ಅಣುಸರಿಸ}. ಯೋಗ್ಯ, ಅರ್ಹ(ಪ)

ಅಣುಸಾರ. ಪು: [ಅನುಸ್ವಾರ] ಒಂದು ವರ್ಣವಿಶೇಷ, ಬಿಂದು, ಅನುನಾಸಿಕ ವರ್ಣ

ಅಣುಸಾರ. ಪು: ಅನುಸಾರ. ಅನುಸರಣೆ, ಅನುವರ್ತನೆ (ಗಉಡ), ತಕ್ಕಂತೆ, ಹಾಗೆ, ಅನುಸಾರ

ಅಣುಸಾರಿ. ವಿ: [ಅನುಸಾರಿನ್] ಅನುಸರಣೆ ಮಾಡುವವನು(ಗಉಡ)

ಅಣುಸಾಸ. ಸಕ: [ಅನು+ಶಾಸ್] ಉಪದೇಶಿಸು, ಶಿಕ್ಷಿಸು, ದಂಡಿಸು; ಕಲಿಸು, ಆಜ್ಞೆ, ವ.ಕೃ–ಅಣುಸಾಸಂತ(ಪಿ)

ಅಣುಸಾಸಣ. ನ: [ಅನುಶಾಸನ] ಉಪದೇಶ, ಆಜ್ಞೆ, ಶಿಕ್ಷೆ, ದಂಡ, ವಿಧಿಶಾಸ್ತ್ರ, ನಿಯಮಶಾಸ್ತ್ರ, ಶಿಕ್ಷಣ ಅನುಕಂಪೆ, ದಯೆ

ಅಣುಸಾಸಣಾ. ಸ್ತ್ರೀ: [ಅನುಶಾಸನಾ] ಮೇಲಿನ ಶಬ್ದವನ್ನು ನೋಡುವುದು

ಅಣುಸಾಸಿಯ. ವಿ: [ಅನುಶಾಸಿತ] ಶಿಕ್ಷೆಗೊಳಪಟ್ಟ, ದಂಡಿಸಲ್ಪಟ್ಟ, ಉಪದೇಶಿಸಲ್ಪಟ್ಟ, ಶಾಸನಕ್ಕೊಳಪಟ್ಟ

ಅಣುಸಿಕ್ಖಿರ. ವಿ: [ಅನುಶಿಕ್ಷಿತೃ] ಶಿಕ್ಷಣ ಪಡೆಯುವವನು

ಅಣುಸಿಟ್ಠ. 'ಅಣುಸಟ್ಠ' ಶಬ್ದವನ್ನು ನೋಡುವುದು

ಅಣುಸಿಟ್ಠಿ. 'ಅಣುಸಟ್ಠಿ' ಶಬ್ದವನ್ನು ನೋಡುವುದು

ಅಣುಸಿಣ. ವಿ: [ಅನುಷ್ಣ] ಬಿಸಿಯಲ್ಲದ, ಶೀತಲವಾದ, ಕನ್ನೈದಿಲೆ, ಸೋಮಾರಿ

ಅಣುಸೀಲ. ಸಕ: [ಅನುಶೀಲಯ್] ಪಾಲಿಸು, ವಿಚಾರಿಸು, ರಕ್ಷಿಸು, ಸತತ ಅಭ್ಯಾಸಮಾಡು,ತನಿಖೆ

ಅಣುಸುತ್ತಿ. ವಿ: [ದೇ] ಅನುಕೂಲ(ದೇ)

ಅಣುಸುಮರ. ಸಕ: [ಅನು+ಸ್ಮೃ] ನೆನಪಿಸಿಕೊಳ್ಳು, ಸ್ಮರಿಸಿಕೊಳ್ಳು

ಅಣುಸುಯ. ಅಕ: [ಅನು+ಸ್ವಪ್] ನಿದ್ರೆಮಾಡುವುದನ್ನು ಅನುಕರಿಸು

ಅಣುಸೂಅ. ಸ್ತ್ರೀ: [ದೇ} ಶೀಘ್ರವೇ ಪ್ರಸವಿಸಲಿರುವ ಹೆಣ್ಣು(ದೇ)

ಅಣುಸೂಯ. ವಿ: [ಅನುಸ್ಯೂತ] ಒಟ್ಟಿಗೆ ಸೇರಿಕೊಂಡಿರುವ, ಎಡೆಬಿಡದೆ ಸಂಬಂಧ ಹೊಂದಿರುವ

ಅಣುಸೂಯಗ. ವಿ: [ಅನುಸೂಚಕ] ಗುಪ್ತಚಾರ ಅಥವಾ ಗೂಢಚಾರರ ಒಂದು ವರ್ಗ(ವವ)

ಅಣುಸೇಢಿ. ಸ್ತ್ರೀ: [ಅನುಶ್ರೇಣಿ] ನೇರವಾದ ಗೆರೆ, ನೇರವಾದ ಸಾಲು(ಪಿ)

ಅಣುಸೋಯ. ಪು: [ಅನುಸ್ರೋತಸ್] ಅನುಕೂಲ ಪ್ರವಾಹ(ತಾ) ಪ್ರವಾಹಕ್ಕನುಸಾರವಾಗಿ

ಅಣುಸೋಯ. ಸಕ: [ಅನು+ಶುಚ್] ಯೋಚಿಸು, ಚಿಂತಿಸು, ದುಃಖಿಸು ವ.ಕೃ-**ಅಣುಸೋಯಮಾಣ** (ಸುಪಾ)

ಅಣುಸ್ಸರ. 'ಅಣುಸರ= ಅನು+ಸ್ಮೃ' ಶಬ್ದವನ್ನು ನೋಡುವುದು

ಅಣುಸ್ಸರ. 'ಅಣುಸ್ಸರ=ಅನು+ಸೃ' ಶಬ್ದವನ್ನು ನೋಡುವುದು.

ಅಣುಸ್ಸರಣ. ನ: [ಅನುಸ್ಮರಣ] ಚಿಂತನೆ ಮಾಡುವುದು, ನೆನಪಿಸಿಕೊಳ್ಳುವುದು, ಸ್ಮೃತಿ(ಉವ)

ಅಣುಸ್ಸಾರ. ಪು: [ಅನುಸ್ವಾರ] ಬಿಂದು, ಅನುಸ್ವಾರದಿಂದ ಕೂಡಿದ ಅಕ್ಷರ, ಅನುಸ್ವಾರದೊಂದಿಗೆ ಉಚ್ಚರಿಸಲ್ಪಡುವುದು ಯಾವುದೋ ಅದು (ಣಂದಿ)

ಅಣುಸ್ಸುಯ. ವಿ: [ಅನುತ್ಸುಕ] ಉತ್ಸುಕತೆಯಿಲ್ಲದಿರುವುದು, ಆತುರವಿಲ್ಲದ, ಶಾಂತ, ತವಕವಿಲ್ಲದ

ಅಣುಸ್ಸುಯ. ವಿ: [ಅನುಶ್ರುತ] ಕೇಳಿದ, ಕೇಳಲ್ಪಟ್ಟ ನಿಶ್ಚಯಿಸಲ್ಪಟ್ಟ, ನ: ಭಾರತವೇ ಮೊದಲಾದ ಪುರಾಣಶಾಸ್ತ್ರಗಳು.

ಅಣುಹರ. ಸಕ: [ಅನುಹೃ] ಅನಕರಣೆ ಮಾಡು, ನಕಲಿಸುವುದು -ಅಣುಹರಣ'

ಅಣುಹರಿಯ. ವಿ: [ಅನುಹೃತ] ಯಾವುದರ ಅನುಕರಣೆ ಮಾಡಲ್ಪಡುತ್ತದೋ ಅದು, ಅನುಕೃತ

ಅಣುಹವ. ಸಕ: [ಅನು+ಭೂ] ಅನುಭವಕ್ಕೆ ತಂದುಕೊ, ವ. ಕೃ-**ಅಣುಹವಮಾಣ**

ಅಣುಹವಣ. ನ: [ಅನುಭವನ] ಅನುಭವ, ಬುದ್ಧಿ, ಜ್ಞಾನ, ತಿಳಿವಳಿಕೆ((ಸ)

ಅಣುಹವಿಯ. ನ: [ಅನುಭೂತ] ಅನುಭವಕ್ಕೆ ತಂದುಕೊಂಡದ್ದು.(ಸುಪಾ)

ಅಣುಹಾರಿ. ನ: [ಅನುಹಾರಿನ್] ಅನಕರಿಸುವವನು, ನಕಲಿಸುವವನು(ಕುಮಾ)

ಅಣುಹಾವ. 'ಅಣುಭಾವ' ಶಬ್ದವನ್ನು ನೋಡುವುದು

ಅಣುಹಿಯಾಸಣ. ನ: [ಅನ್ವಧ್ಯಾಸನ] ಧೈರ್ಯದಿಂದ ಸಹಿಸುವುದು(ಜಂ)

ಅಣುಹು: ಸಕ: [ಅನುಭೂ] ಅನಭವಕ್ಕೆ ತಂದುಕೊಳ್ಳು, ಅನುಭವಿಸು **ವ.ಕೃ-ಅಣುಹುಂತ**

ಅಣುಹುಂಜ. ಸಕ: [ಅನುಭುಂಜ್] ಭೋಗಿಸು, **'ಅಣುಹುಂಜಣ'**(ಭವಿ)

ಅಣುಹುತ್ತ. 'ಅಣುಹೂಅ' ಶಬ್ದವನ್ನು ನೋಡುವುದು

ಅಣುಹೂಅ. ವಿ: [ಅನುಭೂತ] ಯಾವುದರ ಅನುಭವವಾಗಿದೆಯೋ ಅದು(ಕುಮಾ), ನ:ಅನುಭವ

ಅಣುಹೋ. ಸಕ: [ಅನು+ಭೂ] ಅನುಭವಕ್ಕೆ ತಂದುಕೊಳ್ಳು, -'ಅಣು ಹೋತಿ'(ಪಉಮ)

ಅಣೂಕಪ್ಪ. 'ಅಣುಕಪ್ಪ' ಶಬ್ದವನ್ನು ನೋಡುವುದು

ಅಣೂಣ. ವಿ: [ಅನೂನ] ಕೊರತೆಯಿಲ್ಲದ, ಅಧಿಕ (ಕುಮಾ)

ಅಣೂಯ}. ಪು: [ಅನೂಪ] ನೀರು ಸಮೃದ್ಧವಾಗಿರುವ

ಅಣೂವ}. ಪ್ರದೇಶ(ವಿಸೇ) ಜೌಗು ಪ್ರದೇಶ, ಕೋಣ, ಕಪ್ಪೆ, ಆನೆ, ನವಿಲು. ಗೌಜಿಗ ಹಕ್ಕಿ, ಬೆಟ್ಟದ ತಪ್ಪಲು, ಒಂದು ದೇಶ

ಅಣೇಅ. ವಿ: [ಅನೇಕ] 'ಅಣೆಕ್ಕ' ಶಬ್ದವನ್ನು ನೋಡುವುದು

ಅಣೇಕಜ್ಝ. ವಿ: [ದೇ] ಚಂಚಲ, ಚಪಲ (ದೇ)

ಅಣೆಕ್ಕ}. ವಿ: [ಅನೇಕ] ಒಂದಕ್ಕಿಂತ ಹೆಚ್ಚಿನ, ಬಹಳ

ಅಣೇಗ}. (ಔಪ) **–ಕರಣ.** ನ: [–ಕರಣ] ಪರ್ಯಾಯ, ಧರ್ಮ, ಅವಸ್ಥೆ. **–ರಾಇಯ.** ವಿ: [–ರಾತ್ರಿಕ] ಅನೇಕ ರಾತ್ರಿಗಳಲ್ಲಿ ನಡೆಯುವ, **–ಸೋ.** ಅ: [**–ಶಸ್**] ಅನೇಕಬಾರಿ

ಅಣೇಗಂತ. ಪು: [ಅನೇಕಾಂತ] ಅನಿಶ್ಚಿತ, ಅಸ್ಥಿರ, ನಿಯಮರಹಿತ, **–ವಾಯ.** ಪು: [**–ವಾದ**] ಸ್ಯಾದ್ವಾದ, ಜೈನರ ಮುಖ್ಯ ಸಿದ್ಧಾಂತ, ಸತ್ಯ–ಅಸತ್ಯ ಮೊದಲಾದ ಅನೇಕ ವಿರುದ್ಧ ಧರ್ಮಗಳನ್ನು ಒಂದು ವಸ್ತುವಿನಲ್ಲಿ ಸಾಪೇಕ್ಷವಾಗಿ ಸ್ವೀಕರಿಸುವುದು

ಅಣೇಗಂತಿಯ. ವಿ: [ಅನೈಕಾಂತಿಕ] ಏಕಾಂತಿಕವಲ್ಲದ, ಅನಿಶ್ಚಿತ, ಅನಿಯಮಿತ(ಭಗ)

ಅಣೇಗಾವಾಇ. ವಿ: [ಅನೇಕವಾದಿನ್] ಪದಾರ್ಥಗಳನ್ನು ಸಂಪೂರ್ಣವಾಗಿ ಬೇರೆ ಎಂದು ಒಪ್ಪುವ ಅಕ್ರಿಯಾವಾದ ಮತದ ಅನುಯಾಯಿ(ತಾ)

ಅಣೆಚ್ಛಂತ. ವಿ: [ಅನಿಚ್ಛತ್] ಇಚ್ಛೆಯಿಲ್ಲದ

ಅಣೇಜ. ವಿ: [ವಿ: [ಅನೇಜ] ನಿಶ್ಚಲ. ನಿಷ್ಕಂಪ, ಅಲ್ಲಾಡದ

ಅಣೆಜ್ಜ. ವಿ: [ಅಜ್ಞೇಯ] ತಿಳಿಯಲಾಗದ, ಗೊತ್ತಾಗದ

ಅಣೇಲಿಸ. ವಿ: [ಅನೀದೃಶ] ಅನುಪಮ, ಅಸಾಧಾರಣ, ಹೋಲಿಕೆಯಿಲ್ಲದ (ಸೂಅ)

ಅಣೇವಂಭೂಯ. ವಿ: [ಅನೇವಂಭೂತ] ವಿಲಕ್ಷಣ,ವಿಚಿತ್ರ

ಅಣೇಸ. 'ಅಣ್ಣೇಸ' ಶಬ್ದವನ್ನು ನೋಡುವುದು

ಅಣೇಸಣ. ನ: [ಅನ್ವೇಷಣ] ಹುಡುಕಾಟ, ಶೋಧನೆ, ತಲಾಶ್(ಮಹಾ)

ಅಣೇಸಣಾ. ಸ್ತ್ರೀ: [ಅನೇಷಣಾ] ಇಚ್ಛೆಯಿಲ್ಲದಿರುವುದು, ಸಂಪತ್ತಿನ ಬಯಕೆಯಿಲ್ಲದಿರುವುದು (ಉವಾ)

ಅಣೇಸಣಿಜ್ಜ. ವಿ: [ಅನೇಷಣೀಯ] ಕಲ್ಪನೆ ಮಾಡಲಾಗದದ್ದು, ಜೈನ ಸಾಧುಗಳಿಗೆ ಸ್ವೀಕರಿಸಲರ್ಹವಲ್ಲದ್ದು(ಭಿಕ್ಷೆ ಇತ್ಯಾದಿ)

ಅಣೋಉಉಯಾ. ಸ್ತ್ರೀ: [**ಅನೃತುಕಾ**] ಋತುಧರ್ಮವಿಲ್ಲದ ಹೆಂಗಸು. (ತಾ)

ಅಣೊಕ್ಕಂತ. ವಿ: [ಅನವಕ್ರಾಂತ] ಅಜೇಯ, ಸೋಲಿಸಲ್ಪಡದವನು, (ಔಪ)

ಅಣೊಗ್ಗಹ. 'ಅಣುಗ್ಗಹ=ಅನವಗ್ರಹ' ಶಬ್ದವನ್ನು ನೋಡುವುದು

ಅಣೊಗ್ಘಸಿಯ. ವಿ: [ಅನವಘರ್ಷಿತ] ಸವೆದಿಲ್ಲದ, ತಿಕ್ಕದಿರುವ

ಅಣೊಜ್ಜ. ವಿ: [ಅನವದ್ಯ] ದೋಷರಹಿತ, ಶುದ್ಧ (ಣಾಯಾ)

ಅಣೊಜ್ಜಂಗಿ. ಸ್ತ್ರೀ: [ಅನವದ್ಯಾಂಗೀ] ಭಗವಾನ್ ಮಹಾವೀರರ ಮಗಳ ಹೆಸರು, ದೋಷರಹಿತ ಸ್ತ್ರೀ

ಅಣೊಜ್ಜಾ. ಸ್ತ್ರೀ: [ಅನವದ್ಯಾ] ಮೇಲಿನ ಶಬ್ದವನ್ನು ನೋಡುವುದು

ಅಣೋಣಅ. ವಿ: [ಅನವನತ] ಬಾಗದಿರುವ, ನಮಸ್ಕರಿಸದ, ತಲೆ ತಗ್ಗಿಸದ,

ಅಣೊತ್ತಪ್ಪ. 'ಅಣುತ್ತಪ್ಪ' ಶಬ್ದವನ್ನು ನೋಡುವುದು

ಅಣೋಮ. ವಿ [ಅನವಮ] ಹೆಚ್ಚು ಕಡಿಮೆಯಿಲ್ಲದ, ಪರಿಪೂರ್ಣ(ಆಚಾ), ಒಂಬತ್ತನೆಯದಲ್ಲದ

ಅಣೋವಮಾಣ. ನ: [**ಅನಪಮಾನ**] ಅಪಮಾನವಲ್ಲದಿರುವುದು, ಮರ್ಯಾದೆ(ಓಘ)

ಅಣೋರಪಾರ. ವಿ: [ದೇ] ಬಹಳ, ಅಪಾರ, ಅಧಿಕ(ಆವಮ) ಅನಾದಿ, ಅನಂತ, ಬಹು ವಿಸ್ತೀರ್ಣವಾದ(ಪಣ್ಣ)

ಅಣೋರುಮ್ಮಿಅ. ವಿ: [ಅನುದ್ವಾನ] ಒದ್ದೆಯಾದ, ಹಸಿಯಾದ(ಕುಮಾ)

ಅಣೋಲಯ. ನ: [ದೇ] ಪ್ರಾತಃಕಾಲ, ಬೆಳಿಗ್ಗೆ(ದೇ)

ಅಣೋವಣಿಹಿಯಾ. ಸ್ತ್ರೀ: [**ಅನೌಪನಿಧಿಕೀ**] ಆನುಪೂರ್ವಿಯ ಒಂದು ಬಗೆ, ಕ್ರಮ–ವಿಶೇಷ (ಅಣು)

ಅಣೋವಣಿಹಿಯಾ. ಸ್ತ್ರೀ: [ಅನುಪನಿಹಿತಾ] ಮೇಲಿನ ಶಬ್ದವನ್ನು ನೋಡುವುದು

ಅಣೋವದಗ್ಗ. ವಿ: [ಅನವದಗ್ರ] ಅನಂತವಾದ

ಅಣೊಲ್ಲ. ವಿ: [**ಅನಾರ್ದ್ರ**] ಶುಷ್ಕ, ಒಣಗಿದ, ಒದ್ದೆಯಲ್ಲದ (ಗಾ). **–ಮಣ.** ವಿ: [**–ಮನಸ್ಕ**] ನಿಷ್ಠುರ ಮನಸ್ಸಿನ, ನಿರ್ದಯ, ನಿಷ್ಕರುಣಿ (ಕಾಪ್ರ)

ಅಣೋವಮ. ವಿ: [**ಅನುಪಮ**] ಹೋಲಿಕೆಯಿಲ್ಲದ, ಅದ್ವಿತೀಯ, ಎಣೆಯಿಲ್ಲದ (ಪಉಮ)

ಅಣೋವಮಿಯ. ವಿ: [**ಅನುಪಮಿತ**] ಮೇಲಿನ ಶಬ್ದವನ್ನು ನೋಡುವುದು

ಅಣೋವಸಂಖಾ. ಸ್ತ್ರೀ: [**ಅನುಪಸಂಖ್ಯಾ**] ಅಜ್ಞಾನ, ಜ್ಞಾನದ ಅಭಾವ(ಸೂಅ)

ಅಣೋವಹಿಂಯು. ವಿ: [**ಅನುಪಧಿಕ**] ಸಂತೋಷದಿಂದಿರುವವನು, ಸರಳ, ನಿಷ್ಕಪಟಿ (ಆಚಾ)

ಅಣೋವಾಹಣಗ}.ವಿ: [**ಅನುಪಾನತ್ಕ**] ಚಪ್ಪಲಿ

ಅಣೋವಾಹಣಯ}. ಧರಿಸಿಲ್ಲದವನು(ಔಪ)

ಅಣೋಸಿಯ. ವಿ: [**ಅನುಷಿತ**] ವಾಸಮಾಡದವನು, ಅವ್ಯವಸ್ಥಿತ (ಧರ್ಮ)

ಅಣೋಹಂತರ. ವಿ: [**ಅನೋಘಂತರ**] ದಡಸೇರಲು ಅಥವಾ ಪಾರಾಗಲು ಅಸಮರ್ಥನಾದವನು (ಆಚಾ)

ಅಣೋಹಟ್ಟಯ. ವಿ: [**ಅನಪಘಟ್ಟಕ**] ನಿರಂಕುಶ, ತಡೆಯಲಶಕ್ಯವಾದ, ಸ್ವಾತಂತ್ರ್ಯ ಸ್ವಚ್ಛಂದ

ಅಣೋಹೀಣ. ವಿ: [**ಅನವಹೀನ**] ಹೀನತೆಯಿಲ್ಲದ (ಪಿ)

ಅಣ್ಣ. ಸಕ: [**ಭುಜ್**] ಊಟಮಾಡು, ಭೋಜನ ಮಾಡು, ಆಳು. ಪಾಲಿಸು, ಭೋಗಿಸು

ಅಣ್ಣ ಸ: [**ಅನ್ಯ**] ಬೇರೆಯವನು, ಪರ(ಪ್ರಾಸು) **–ಉತ್ಥಿಯ.** ವಿ: [**–ತೀರ್ಥಕ, –ಯೂಥಿಕ**] ಬೇರೊಂದು ದರ್ಶನದ ಅನುಯಾಯಿ, **–ಗ್ಗಹಣ.** ನ: [**–ಗ್ರಹಣ**] ಸಂಗೀತದ ಸಮಯದಲ್ಲಿ ಆಗುವ ಒಂದು ಬಗೆಯ ಮುಖವಿಕಾರ. ಪು: ಹಾಡುಗಾರ, ಸಂಗೀತಗಾರ. (ನಿಚೂ) **–ಧಮ್ಮಿಯ.** [**–ಧರ್ಮಿಕ**] ಬೇರೆ ಧರ್ಮದವನು (ಓಘ)

ಅಣ್ಣ. ನ: [**ಅನ್ನ**] ಅಕ್ಕಿ, ಕಾಳು ಕಡ್ಡಿ ಮೊದಲಾದ ಧಾನ್ಯಗಳು, ತಿನ್ನುವ ಪದಾರ್ಥ(ಉತ್ತ) ಭಕ್ಷಣ, ಭೋಜನ(ಸೂಅ) **–ಇಲಾಯ, –ಗಿಲಾಯ.** ವಿ: [**–ಗ್ಲಾಯಕ**] ಹಳಸಿದ ಅನ್ನವನ್ನು ತಿನ್ನುವವನು(ಔಪ), **–ವಿಹಿ.** ಪುಂಸ್ತ್ರೀ: [**–ವಿಧಿ**] ಪಾಕ ಕಲೆ(ಔಪ)

ಅಣ್ಣ. ನ: [**ಅರ್ಣಸ್**] ನೀರು(ಉತ್ತ)

ಅಣ್ಣ. ವಿ: [**ದೇ**] ಆರೋಪಿತ, ಒಡೆಯಲಾದ, ಕತ್ತರಿಸಲಾದ, ನಾಶಮಾಡಲ್ಪಟ್ಟ(ಷಡ್)

–ಅಣ್ಣ. '**ಕಣ್ಣ**'=ಕಣ' ಶಬ್ದವನ್ನು ನೋಡುವುದು

ಅಣ್ಣಅ. ಪು: [**ದೇ**] ಯುವಕ, ತರುಣ. ಧೂರ್ತ, ಮೋಸಗಾರ, ಠಕ್ಕ, ಮೈದುನ(ದೇ)

ಅಣ್ಣಇಅ. ವಿ: [**ದೇ**] ತೃಪ್ತ(ದೇ), ಎಲ್ಲ ವಿಷಯಗಳಲ್ಲೂ ತೃಪ್ತ, ಸರ್ವಥಾ ತೃಪ್ತ

ಅಣ್ಣಓ. ಅ: [**ಅನ್ಯತಸ್**] ಮತ್ತೊಬ್ಬನಿಂದ, ಮತ್ತೊಂದರಿಂದ, ಬೇರೆ ಕಡೆಗೆ(ಉತ್ತ) '**ಅನ್ನಓ**' ಶಬ್ದವನ್ನು ನೋಡುವುದು

ಅಣ್ಣಣ್ಣ. ವಿ: [**ಅನ್ಯೋನ್ಯ**] ಪರಸ್ಪರ, ತಮ್ಮತಮ್ಮಲ್ಲಿ (ಷಡ್)

ಅಣ್ಣಣ್ಣ. ವಿ: [**ಅನ್ಯಾನ್ಯ**] ಬೇರೆಬೇರೆಯ, ಬೇರೆಬೇರೆ

ಅಣ್ಣತ್ತ. ಅ: [**ಅನ್ಯತ್ರ**] ಬೇರೆಯವರಲ್ಲಿ, ಬೇರೆಯ ಕಡೆ, ಬೇರೆಬೇರೆ ಸ್ಥಾನಗಳಲ್ಲಿ (ಗಾಅ)

ಅಣ್ಣತ್ತಿ. ಸ್ತ್ರೀ: [**ದೇ**] ತಿರಸ್ಕಾರ, ಅನಾದರ, ಅಪಮಾನ

ಅಣ್ಣತ್ತೋ.'**ಅಣ್ಣಓ**' ಶಬ್ದವನ್ನು ನೋಡುವುದು

ಅಣ್ಣತ್ಥ. '**ಅಣ್ಣತ್ತ**' ಶಬ್ದವನ್ನು ನೋಡುವುದು

ಅಣ್ಣತ್ಥ. ವಿ: [**ಅನ್ಯಸ್ಥ**] ಬೇರೆಕಡೆ ಇದ್ದವನು (ಗಾ)

ಅಣ್ಣತ್ಥ. ವಿ: [**ಅನ್ವರ್ಥ**] ಅರ್ಥಕ್ಕೆ ಅನುಸಾರವಾದ, ಅರ್ಥಕ್ಕೆ ತಕ್ಕಂತಿರುವ

ಅಣ್ಣಮಣ್ಣ.'**ಅಣ್ಣಣ್ಣ=ಅನ್ಯೋನ್ಯ**' ಶಬ್ದವನ್ನು ನೋಡುವುದು

ಅಣ್ಣಮಯ. ವಿ: [**ದೇ**] ಪುನರುಕ್ತ, ಮತ್ತೆ ಹೇಳಿದ್ದು(ದೇ)

ಅಣ್ಣಯ. '**ಅನ್ನಯ**' ಶಬ್ದವನ್ನು ನೋಡುವುದು

ಅಣ್ಣಯರ. ವಿ: [**ಅನ್ಯತರ**] ಎರಡರಲ್ಲಿ ಯಾವುದಾದರೂ ಒಂದು, ಇಬ್ಬರಲ್ಲಿ ಒಬ್ಬ (ಕಪ್ಪ)

ಅಣ್ಣಯಾ. ಅ: [**ಅನ್ಯದಾ**] ಯಾವ ಸಮಯದಲ್ಲಾದರೂ

ಅಣ್ಣವ. ಪು: [**ಅರ್ಣವ**] ಸಮುದ್ರ, ಕಡಲು(ಉತ್ತ)

ಅಣ್ಣವ. ನ: [**ಋಣವತ್**] ಲೋಕೋತ್ತರವಾದೊಂದು ಮುಹೂರ್ತದ ಹೆಸರು(ಜಂ)

ಅಣ್ಣಹ. ನ: [**ಅನ್ವಹ**] ಪ್ರತಿದಿನ, ಸದಾ(ಧರ್ಮ)

ಅಣ್ಣಹ. '**ಅಣ್ಣತ್ತ**' ಶಬ್ದವನ್ನು ನೋಡುವುದು

ಅಣ್ಣವ}. ಅ: [**ಅನ್ಯಥಾ**] ಬೇರೆ ರೀತಿಯಲ್ಲಿ,

ಅಣ್ಣಹಾ}. ಬೇರೆಪ್ರಕಾರವಾಗಿ, ವಿರುದ್ಧವಾಗಿ ಪ್ರತಿಯಾಗಿ **–ಭಾವ.** ಪು: [**–ಭಾವ**] ವಿರುದ್ಧ ರೀತಿ, ವೈಪರೀತ್ಯದಿಂದ

ಅಣ್ಣಹಿ. 'ಅಣ್ಣತ್ತ' ಶಬ್ದವನ್ನು ನೋಡುವುದು

ಅಣ್ಣಾ. ಸ್ತ್ರೀ: [ಆಜ್ಞಾ] ಆಜ್ಞೆ, ಆದೇಶ(ಗಾ)

ಅಣ್ಣಾಇಟ್ಠ. ವಿ: [ಅನ್ವಾದಿಷ್ಟ] ಆದೇಶಿಸಲ್ಪಟ್ಟವನು

ಅಣ್ಣಾಇಟ್ಠ. ವಿ: [ಅನ್ವಾವಿಷ್ಟ] ವ್ಯಾಪ್ತ, ಪರಾಧೀನ

ಅಣ್ಣಾಇಸ. ಅಪ: [ವಿ: [ಅನ್ಯಾದೃಶ] ಇನ್ನೊಬ್ಬನ ಹಾಗೆ ಕಾಣುವ, ಅಸಾಧಾರಣವಾದ

ಅಣ್ಣಾಣ. ನ: [ಅಜ್ಞಾನ] ಅಜ್ಞಾನ, ಗೊತ್ತಿಲ್ಲದಿರುವುದು, ಮೂರ್ಖತನ, ಮಿಥ್ಯಾಜ್ಞಾನ

ಅಣ್ಣಾಣ. ನ: [ದೇ] ವಿವಾಹ ಕಾಲದಲ್ಲಿ ವಧು ಅಥವಾ ವರನಿಗೆ ನೀಡಲಾಗುವ ಬಳುವಳಿ, ದಾಯ(ದೇ)

ಅಣ್ಣಾಣಿ. ವಿ: [ಅಜ್ಞಾನಿನ್] ತಿಳಿವಳಿಕೆಯಿಲ್ಲದವನು, ಮೂರ್ಖ(ಸೂಅ)

ಅಣ್ಣಾಯ. ವಿ: [ಅಜ್ಞಾತ] ಗೊತ್ತಿಲ್ಲದ, ತಿಳಿದಿಲ್ಲದ (ಪಣ್ಣ)

ಅಣ್ಣಾಯ. ಪು: [ಅನ್ಯಾಯ] ನ್ಯಾಯವಲ್ಲದ(ಶ್ರಾ)

ಅಣ್ಣಾಯ. ವಿ: [ದೇ] ಆರ್ದ್ರ, ಒದ್ದೆಯಾದ, ತೊಯ್ದ(ಸೇ)

ಅಣ್ಣಾಯು. ವಿ: [ಅನ್ಯಾಯ್ಯ] ನ್ಯಾಯವಿರುದ್ಧ, ನ್ಯಾಯದಿಂದ ಚ್ಯುತವಾದ

ಅಣ್ಣಾಯ್ಯ.(ಶೌ) ಮೇಲಿನ ಶಬ್ದವನ್ನು ನೋಡುವುದು

ಅಣ್ಣಾರಿಚ್ಛ. ವಿ: [ಅನ್ಯಾದೃಕ್ಷ] ಬೇರೆಯವನಂತೆ ಕಾಣುವ, ಅಸಾಧಾರಣವಾದ(ಪ್ರಾಮಾ)

ಅಣ್ಣಾರಿಸ್. ವಿ: [ಅನ್ಯಾದೃಶ] ಬೇರೆಯುವನಂತೆ ಕಾಣುವ, ಅಸಾಧಾರಣ, ವಿಲಕ್ಷಣ(ಪಿ)

ಅಣ್ಣಾಸಯ. ವಿ: [ದೇ] ಹರಡಲ್ಪಟ್ಟ(ಷಡ್)

ಅಣ್ಣಿಜ್ಜಮಾಣ '**ಅಣ್ಣೇ**' ಶಬ್ದವನ್ನು ನೋಡುವುದು

ಅಣ್ಣಿಯ. ವಿ: [ಅನ್ವಿತ] ಯುಕ್ತ, ಸೇರಿಸಲ್ಪಟ್ಟ, ಸಂಬಂಧ ಹೊಂದಿದ, ಸಹಿತ

ಅಣ್ಣಿಯಾ. ಸ್ತ್ರೀ: [ದೇ] '**ಅಣ್ಣೋ**' ಶಬ್ದವನ್ನು ನೋಡುವುದು

ಅಣ್ಣಿಂಯಾ. ಸ್ತ್ರೀ: [ಅನ್ನಿಕಾ] ಒಬ್ಬ ವಿಖ್ಯಾತ ಜೈನಮುನಿಯ ತಾಯಿಯ ಹೆಸರು(ತೀ) **–ಉತ್ತ.** **ಪು:[–ಪುತ್ರ]** ಒಬ್ಬ ಪ್ರಖ್ಯಾತ ಜೈನಮುನಿ

ಅಣ್ಣೀ. ಸ್ತ್ರೀ: [ದೇ] ಮೈದುನನ ಹೆಂಡತಿ (ಓರಗಿತ್ತಿ), ಗಂಡನ ಸೋದರಿ, ಸೋದರತ್ತೆ

ಅಣ್ಣು}. ವಿ: [ಅಜ್ಞ] ಅಜ್ಞಾನಿ, ಮೂರ್ಖ,

ಅಣ್ಣುಅ}. ತಿಳಿವಳಿಕೆಯಿಲ್ಲದವನು(ಷಡ್)

ಅಣ್ಣುಣ್ಣ. ವಿ: [ಅನ್ಯೋನ್ಯ] ಪರಸ್ಪರ, ತಮ್ಮತಮ್ಮಲ್ಲಿ, ಒಂದು ಅಲಂಕಾರದ ಹೆಸರು

ಅಣ್ಣೂಣ. ವಿ: [ಅನ್ಯೂನ] ಏನೂ ಕೊರತೆಯಿಲ್ಲದ, ಪರಿಪೂರ್ಣ(ಉಪ)

ಅಣ್ಣೇ. ಸಕ: [ಅನು+ಇ] ಅನುಸರಿಸುವುದು. 'ಅಣ್ಣೆಂತಿ'

ಅಣ್ಣೇಸ. ಸಕ: [ಅನು+ಇಷ್] ಹುಡುಕು, ಅನುಸಂಧಾನ ಮಾಡು, ಪರೀಕ್ಷಿಸು, ಇಚ್ಛಿಸು, ಪ್ರಾರ್ಥಿಸು ವ. ಕೃ– **ಅಣ್ಣೇಸಂತ**, ಅಣ್ಣೇಸಮಾಣ(ಮಹಾ)

ಅಣ್ಣೇಸಣ. ನ: [ಅನ್ವೇಷಣ] ಹುಡುಕಾಟ, ಶೋಧನೆ, ಅನುಸಂಧಾನ

ಅಣ್ಣೇಸಣಾ. ಸ್ತ್ರೀ: [ಅನ್ವೇಷಣಾ] ಹುಡುಕಾಟ, ಅನುಸಂಧಾನ, ತನಿಖೆ, ಪ್ರಾರ್ಥನೆ, ಗೃಹಸ್ಥನು ನೀಡುವ ಭಿಕ್ಷೆಯನ್ನು ಸ್ವೀಕರಿಸುವುದು(ಠಾ), ವಿಚಾರಿಸುವುದು

ಅಣ್ಣೇಸಯ. ವಿ: [ಅನ್ವೇಷಕ] ಹುಡುಕುವವನು

ಅಣ್ಣೇಸಿ. ವಿ: [ಅನ್ವೇಷಿನ್] ಹುಡುಕಾಟ ನಡೆಸುವವನು, ಅನುಸಂಧಾನಕಾರ(ಆಚಾ)

ಅಣ್ಣೇಸಿಯ. ವಿ: [ಅನ್ವೇಷಿತ] ಹುಡುಕಲ್ಪಟ್ಟ, ವಿಮರ್ಶಿಸಲ್ಪಟ್ಟ

ಅಣ್ಣೋಣ್ಣ. 'ಅಣ್ಣುಣ್ಣ' ಶಬ್ದವನ್ನು ನೋಡುವುದು

ಅಣ್ಣೋಸರಿಅ. ವಿ: [ದೇ] ಅತಿಕ್ರಾಂತ, ಉಲ್ಲಂಘಿಸಲ್ಪಟ್ಟ, ಮೀರಲ್ಪಟ್ಟ, ಕಳೆದು ಹೋದ

ಅಣ್ಹ. ಸಕ: [ಭುಜ್] ತಿನ್ನು ಉಣ್ಣು, ಭೋಗಿಸು, ಅನುಭವಿಸು, ಸ್ವೀಕರಿಸು– 'ಅಣ್ಹಇ"

–ಅಣ್ಹ. ನ: [ಅಹನ್] ದಿವಸ, ಹಗಲು

ಅಣ್ಹಗ}. ಪು: [ಆಶ್ರವ್] ಕರ್ಮಬಂಧನಕ್ಕೆ

ಅಣ್ಹಯ}.ಕಾರಣವಾದಹಿಂಸೆಯೇ ಮೊದಲಾದವುಗಳು

–ಅಣ್ಹಾ. [ತೃಷ್ಣಾ] ಬಾಯಾರಿಕೆ, ನೀರಡಿಕೆ(ಗಾ)

ಅಣ್ಹೋಅಅ. ವಿ: [ದೇ] ಭ್ರಮೆಗೊಳಗಾದವನು, ಮರೆವಿಗೊಳಗಾದವನು(ದೇ)

ಅತಕ್ಕಿಯ. ವಿ: [ಅತರ್ಕಿತ] ಅನಿರೀಕ್ಷಿತವಾದ, ಆಕಸ್ಮಿಕವಾದ, ಊಹಿಸಲ್ಪಡದ, ಸರಿಯಾಗಿ ಗಮನಿಸದಿರುವ

ಅತಡ. ತ್ರಿ [ಅತಟ] ಚಿಕ್ಕ ದಡ, ದಡವಿಲ್ಲದ, ಬೆಟ್ಟದ ಎತ್ತರವಾದ ಜಾಗ

ಅತಣ್ಹಾಅ. ವಿ: [ಅತೃಷ್ಣಾಕ] ಆಸೆಯಿಲ್ಲದವನು, ನಿಃಸ್ಪೃಹ

ಅತತ್ತ. ನ: [ಅತತ್ವ] ಅಸತ್ಯ, ಸುಳ್ಳು, ಮಿಥ್ಯೆ(ಉಪ)

ಅತತ್ಥ. ವಿ: [ಅತ್ರಸ್ತ] ಹೆದರದವನು, ನಿರ್ಭೀತ, ಕಳವಳಗೊಳ್ಳದವನು(ಕುಮಾ)

ಅತತ್ಥ. ವಿ: [ಅತಥ್ಯ] ಅಸತ್ಯ, ಯಥಾರ್ಥವಲ್ಲದ, ಸುಳ್ಳು (ಆಚಾ)

ಅತರ. 'ಅಯರ' ಶಬ್ದವನ್ನು ನೋಡುವುದು

ಅತವ. ಪು: [ಅತಪಸ್] ತಪಸ್ಸಿಲ್ಲದ, ನಿಯಮ ಪಾಲಿಸದ, ಅಧಾರ್ಮಿಕ

ಅತವ. ಪು: [ಅಸ್ತವ] ಪ್ರಶಂಸೆಯಲ್ಲದ, ನಿಂದೆ (ಕುಮಾ)

ಅತಸೀ. 'ಅಯಸೀ' ಶಬ್ದವನ್ನು ನೋಡುವುದು

ಅತಹ. ವಿ: [ಅತಥಾ] ಹಾಗಲ್ಲದೆ, ಆ ರೀತಿಯಲ್ಲ

ಅತಾರ. ವಿ: [ಅತಾರ] ಈಜಲು ಶಕ್ತನಲ್ಲದವನು

ಅತಾರಿಮ. ವಿ: [ಅತಾರಿಮ] ಮೇಲಿನ ಶಬ್ದವನ್ನು ನೋಡುವುದು

ಅತಿಉಟ್ಟ. ಅಕ: [ಅತಿ+ತ್ರುಟ್] ಪೂರ್ತಿ ಮುರಿದು ಹೋಗು, ಮುರಿದು ಹೋಗು, ಎಲ್ಲ ಬಂಧನದಿಂದ ಮುಕ್ತಗೊಳ್ಳು-'ಅತಿಉಟ್ಟಇ'

ಅತಿಉಟ್ಟ. ಸಕ: [ಅತಿ+ವೃತ್] ಉಲ್ಲಂಘಿಸು, ವ್ಯಾಪಿಸು

ಅತಿಉಟ್ಟ. ವಿ: [ಅತಿವೃತ್ತ] ಮೀರಿದ, ದಾಟಿ ಹೋದ, ವ್ಯಾಪಿಸಿದ, ಕಳೆದುಹೋದ

ಅತಿತ್ಥ. ನ: [ಅತೀರ್ಥ] ತೀರ್ಥವಲ್ಲದ, ತೀರ್ಥ ಉದಿಸದ(ಚತುರ್ವಿಧ ಸಂಘ) ತೀರ್ಥ ಉದಿಸದ ಅಥವಾ ಅದು ಇಲ್ಲದ ಕಾಲ, **-ಸಿದ್ಧ.** ವಿ: [ಸಿದ್ಧ] ತೀರ್ಥ ಉದಿಸದ ಕಾಲದಲ್ಲಿ ಮುಕ್ತನಾದವನು

ಅತಿಹಿ. 'ಅಇಹಿ' ಶಬ್ದವನ್ನು ನೋಡುವುದು

ಅತೀಗಾಢ. ವಿ: [ಅತಿಗಾಢ] ಅತಿ ನಿಬಿಡವಾದ. ತುಂಬ ದಟ್ಟವಾದ, **ಕ್ರಿ** ವಿ: ಅತ್ಯಂತ, ಬಹಳ

ಅತುಲ. ವಿ: [ಅತುಲ] ಹೋಲಿಕೆಯಿಲ್ಲದ, ಅಸದೃಶ, ಅಸಾಧಾರಣ(ಪಣ್ಣ)

ಅತುಲಿಯ. ವಿ: [ಅತುಲಿತ] ಅಸಾಧಾರಣ, ಅದ್ವಿತೀಯ, ಎಣೆಯಿಲ್ಲದ (ಭವಿ)

ಅತ್ತ. 'ಅಪ್ಪ=ಆತ್ಮನ್' ಶಬ್ದವನ್ನು ನೋಡುವುದು. **-ಲಾಭ.** ಪು:[-ಲಾಭ] ಸ್ವರೂಪ ಪ್ರಾಪ್ತವಾಗುವುದು, ಉತ್ಪತ್ತಿ

ಅತ್ತ. ವಿ: [ಆರ್ತ] ನೋಯಿಸಲ್ಪಟ್ಟ, ದುಃಖಕ್ಕೆ ಒಳಗಾದ, ಪೀಡಿತ

ಅತ್ತ. ವಿ: [ಆತ್ತ] ಗೃಹೀತ, ಸ್ವೀಕರಿಸಲಾದ, ಮಂಜೂರು ಮಾಡಲ್ಪಟ್ಟ(ಠಾ), ಮುನಿ, ಜ್ಞಾನಿ(ಬೃಹ)

ಅತ್ತ. ವಿ: [ಆಪ್ತ] ಜ್ಞಾನಾದಿ ಗುಣ ಸಂಪನ್ನ, ಗುಣವಂತ, ರಾಗದ್ವೇಷಾದಿಗಳನ್ನು ತ್ಯಜಿಸಿದವನು, ವೀತರಾಗಿ, ಪ್ರಾಯಶ್ಚಿತ್ತ ದಾತನಾದ ಗುರು(ವವ) ಮೋಕ್ಷ, ಏಕಾಂತ, ದೊರೆತ, ಪ್ರಾಪ್ತ

ಅತ್ತ. ವಿ: [ಆತ್ರ] ದುಃಖವನ್ನು ನಾಶ ಮಾಡುವವನು, ಸುಖವನ್ನುಂಟುಮಾಡುವವನು

ಅತ್ತ. ಅ: [ಅತ್ರ] ಇಲ್ಲಿ, ಈ ಸ್ಥಳದಲ್ಲಿ(ನಾಟ),**-ಭವ.** ವಿ: [-ಭವತ್], ಪೂಜ್ಯ, ಮಾನ್ಯ

ಅತ್ತಅ. 'ಅಚ್ಚಯ=ಅತ್ಯಯ' ಶಬ್ದವನ್ನು ನೋಡುವುದು

ಅತ್ತಕಮ್ಮ. ವಿ: [ಆತ್ಮಕರ್ಮನ್] ಯಾವುದರಿಂದ ಕರ್ಮಬಂಧನವಾಗುತ್ತದೋ ಅದು

ಅತ್ತಟ್ಠ. ವಿ: [ಆತ್ಮಾರ್ಥ] ಆತ್ಮೀಯ, ತನ್ನ ಸಂಬಂಧವಾದ, ಸ್ವಕೀಯ(ಧರ್ಮ)

ಅತ್ತಟ್ಠಿಯ. ವಿ: [ಆತ್ಮಾರ್ಥಿಕ] ತನಗೋಸ್ಕರ ಅಥವಾ ತನಗಾಗಿ ಮಾಡಿದ

ಅತ್ತಣ}.'ಅಪ್ಪ=ಆತ್ಮನ್' ಶಬ್ದವನ್ನು ನೋಡುವುದು

ಅತ್ತಣಅ}. (ಮೃಚ್ಛ), **-ಕೇರಕ.** ವಿ: [-ಆತ್ಮೀಯ] ತನ್ನ, ಸ್ವಕೀಯ

ಅತ್ತಣಅ}. (ಶೌ). ಅ: [ಆತ್ಮೀಯ] ಸ್ವಕೀಯ, ತನ್ನ

ಅತ್ತಣಕ}. (ಪಿ)

ಅತ್ತಣಿಜ್ಜಿಯ. ವಿ: [ಆತ್ಮೀಯ] ತನ್ನ, ಸ್ವಕೀಯ

ಅತ್ತಣೀಅ. (ಶೌ) ಮೇಲಿನ ಶಬ್ದವನ್ನು ನೋಡುವುದು

ಅತ್ತವಾಣ. 'ಆವತ್ತ=ಆ+ವೃತ್' ಶಬ್ದವನ್ನು ನೋಡುವುದು

ಅತ್ತಯ. ಪು: [ಆತ್ಮಜ] ಪುತ್ರ, ಮಗ. **□ಯಾ. ಸ್ತ್ರೀ:** [-ಜಾ] ಪುತ್ರಿ, ಮಗಳು(ವಿಪಾ)

ಅತ್ತವ್ವ. ವಿ: [ಅತ್ತವ್ವ] ತಿನ್ನಲು ಯೋಗ್ಯವಾದ, ಭಕ್ಷ್ಯ (ನಾಟ)

ಅತ್ತಾ. ಸ್ತ್ರೀ: [ದೇ] ಮಾತೆ, ತಾಯಿ(ದೇ), ಅತ್ತೆ, ತಂದೆಯ ಸೋದರಿಯ ಗಂಡ, ಗೆಳತಿ

-ಅತ್ತಾ. 'ಜತ್ತಾ' ಶಬ್ದವನ್ನು ನೋಡುವುದು

ಅತ್ತಾಣ. ವಿ: [ಅತ್ರಾಣ] ಆಶ್ರಯವಿಲ್ಲದ, ರಕ್ಷಕರಿಂದ ವರ್ಜಿತನಾದ, ಹೆಗಲ ಮೇಲೆ ಕೋಲು ಇಟ್ಟುಕೊಂಡು ಸಾಗುವ ಯಾತ್ರಿಕ, ಹರಕಲು ಬಟ್ಟೆ ತೊಟ್ಟು ಸಂಚರಿಸುವ ಯಾತ್ರಿಕ(ಬೃಹ)

ಅತ್ತಿ. ಸ್ತ್ರೀ: [ಅತ್ರಿ] ಈ ಹೆಸರಿನ ಪ್ರಖ್ಯಾತ ಋಷಿ

ಅತ್ತಿ. ಸ್ತ್ರೀ: [ಅರ್ತಿ] ದುಃಖ, ನೋವು(ಕುಮಾ), **-ಹರ.** ವಿ: [-ಹರ] ನೋವನ್ನು ನಾಶಾಡುವವನು, ದುಃಖನಾಶ ಮಾಡುವವನು(ಅಭಿ)

ಅತ್ತಿಹರಿ. ಸ್ತ್ರೀ: [**ದೇ**] ದೂತಿ, ಸುದ್ದಿಯನ್ನು ಮುಟ್ಟಿಸುವ ಹೆಂಗಸು, (ಷಡ್)
ಅತ್ತೀಕರ. ಸಕ: [**ಆತ್ಮೀ+ಕೃ**] ತನ್ನ ವಶಕ್ಕೆ ತೆಗೆದುಕೊಳ್ಳ, ಅಧೀನ ಪಡಿಸಿಕೊಳ್ಳು(ನಿಜೂ)
ಅತ್ತೀಕರಣ. ನ: [**ಆತ್ಮೀಕರಣ**] ಸ್ವಾಧೀನಪಡಿಸಿ ಕೊಳ್ಳುವುದು, ತನ್ನ ವಶಕ್ಕೆ ತಂದುಕೊಳ್ಳುವುದು
ಅತ್ತುಕ್ಕರಿಸ}. **ಪು:** [**ಆತ್ಮೋತ್ಕರ್ಷ**] ಅಭಿಮಾನ ಹೆಮ್ಮೆ,
ಅತ್ತುಕ್ಕೋಸ}. (ಔಪ)
ಅತ್ತುಕ್ಕೋಸಿಯ. ವಿ: [**ಆತ್ಮೋತ್ಕರ್ಷಿಕ**] ಗರ್ವಿಷ್ಠ, ಅಭಿಮಾನಿ (ಔಪ)
ಅತ್ತೇಯ. ಪು: [**ಆತ್ರೇಯ**] ಅತ್ರಿ ಋಷಿಯ ಮಗ, ಒಬ್ಬ ಜೈನ ಮುನಿ
ಅತ್ತೋ. ಅ: [**ಅತಸ್**] ಇದರಿಂದ, ಈ ಕಾರಣದಿಂದ, ಇವನಿಂದ, ಇವನಿಗಿಂತಲೂ
ಅತ್ಥ. ಅಟ್ಟ=ಅರ್ಥ ಶಬ್ದವನ್ನು ನೋಡುವುದು (ಕುಮಾ), **–ಜೋಣಿ. ಸ್ತ್ರೀ:** [**–ಯೋನಿ**] ಹಣ ಸಂಪಾದನೆಯ ಉಪಾಯಗಳು: ಸಾಮ, ದಾನ ಭೇದ, ದಂಡ ರೂಪದ ಅರ್ಥನೀತಿ **–ಣಯ. ಪು:** [**–ನಯ**] ಶಬ್ದವನ್ನು ಬಿಟ್ಟು ಅರ್ಥವನ್ನೇ ಮುಖ್ಯವೆಂದು ಒಪ್ಪುವ ಪಕ್ಷ. **–ಸತ್ಥ. ನ:** [**–ಶಾಸ್ತ್ರ**] ಅರ್ಥಶಾಸ್ತ್ರ, ಹಣಕಾಸಿಗೆ ಸಂಬಂಧಿಸಿದ ಶಾಸ್ತ್ರ **–ವಇ. ಪು:** [**–ಪತಿ**] ಶ್ರೀಮಂತ, ಕುಬೇರ. **–ವಾಯ. ಪು:** [**–ವಾದ**] ಗುಣ–ವರ್ಣನೆ. ದೋಷನಿರೂಪಣೆ, ಗುಣವಾಚಕ ಶಬ್ದ, ದೋಷವಾಚಕ ಶಬ್ದ. **–ವಿ. ವಿ:** [**–ವಿತ್**] ಅರ್ಥವನ್ನು ತಿಳಿದವನು. **–ಸಿದ್ಧ. ವಿ:** [**–ಸಿದ್ಧ**] ಅಪಾರ ಹಣವಿರುವವನು. **ಪು:** ಐರಾವತ ಕ್ಷೇತ್ರದ ಒಬ್ಬ ಭಾವೀ ಜಿನದೇವ. **–ಆಲಿಯ.ನ :**[**–ಆಲೀಕ**] ಹಣಕ್ಕಾಗಿ ಸುಳ್ಳು ಹೇಳುವುದು. **–ಆಲೋಯಣ. ನ:** [**–ಆಲೋಚನ**] ಪದಾರ್ಥದ ಸಾಮಾನ್ಯ ಜ್ಞಾನ. **–ಆಲೋಯಣ. ನ:** [**–ಆಲೋಕನ**] ಪದಾರ್ಥದ ನಿರೀಕ್ಷಣೆ
ಅತ್ಥ. ಪು: [**ಅಸ್ತ**] ಸೂರ್ಯನು ಅಸ್ತಂಗತನಾಗುವ ಪರ್ವತ(ಸೇ); ಮೇರು ಪರ್ವತ. **ವಿ:** ಇಲ್ಲದಿರುವುದು, **–ಗಿರಿ. ಪು:** [**–ಗಿರಿ**] ಅಸ್ತಾಚಲ. **–ಸೇಲ. ಪು:** [**–ಶೈಲ**] ಅಸ್ತಾಚಲ=ಸೂರ್ಯನು ಅಸ್ತಮಿಸುವ ಬೆಟ್ಟ, ಪರ್ವತ. **–ಚಲ. ಪು:** [**–ಚಲ**] ಅಸ್ತಗಿರಿ (ಕಪ್ಪ). ಸಮಾಪ್ತಿ, ಮುಗಿಸಲ್ಪಟ್ಟ, ಎಸೆಯಲ್ಪಟ್ಟ
ಅತ್ಥ. ನ: [**ಅಸ್ತ್ರ**] ಆಯುಧ, ಮಂತ್ರಶಕ್ತಿಯಿಂದ ಪ್ರಯೋಗಿಸಲಾಗುವ ಆಯುಧ, ಬಾಣ
ಅತ್ಥ. ಸಕ: [**ಅರ್ಥಯ್**] ಬೇಡು, ಯಾಚಿಸು, ಕೋರು, ಪ್ರಾರ್ಥಿಸು, ವಿನಂತಿಸು (ನಿಜೂ)
ಅತ್ಥ. ಅಕ: [**ಸ್ಥಾ**] ಕುಳಿತುಕೊಳ್ಳುವುದು. ▯'ಅತ್ಥಇ'(ಭಗ)
ಅತ್ಥ}. **'ಅತ್ತ=ಅತ್ರ'** ಶಬ್ದವನ್ನು ನೋಡುವುದು
ಅತ್ಥಂ}.
ಅತ್ಥಂಡಿಲ. ವಿ: [**ಅಸ್ಥಂಡಿಲ**] ಸಾಧುಗಳು ವಾಸಿಸಲು ಯೋಗ್ಯವಲ್ಲದ ಸ್ಥಳ, ಕ್ಷುದ್ರ ಜಂತುಗಳು ತುಂಬಿರುವ ಜಾಗ(ಓಘ)
ಅತ್ಥಕಿರಿಆ. ಸ್ತ್ರೀ: [**ಅರ್ಥಕ್ರಿಯಾ**] ವಸ್ತುವಿನ ವ್ಯಾಪಾರ, ಪದಾರ್ಥದಿಂದಾಗುವ ಕ್ರಿಯೆ
ಅತ್ಥಕ್ಕ. ನ: [**ದೇ**] ರೆಂಬೆಯಿಲ್ಲದ ಮರ, ಅಸಮಯ, ಅನಿರೀಕ್ಷಿತ ಕಾಲ. ಕ್ರಿ. ವಿ: ಯಾವಾಗಲೂ, ಸದಾ.
ಅತ್ಥಗ್ಘ. ವಿ: [**ದೇ**] ಮಧ್ಯವರ್ತಿ, ಅಗಾಧ, ಗಂಭೀರ, ನ: ಉದ್ದ, ಸ್ಥಾನ(ದೇ)
ಅತ್ಥಣ. ನ:[**ಅರ್ಥನ**] ಪ್ರಾರ್ಥನೆ, ಬೇಡುವುದು,ಕೋರಿಕೆ
ಅತ್ಥಣಿಊರ. ಪುಂನ: [**ಅರ್ಥನಿಪೂರ**] **'ಅಚ್ಛಣಿಉರ'** ಶಬ್ದವನ್ನು ನೋಡುವುದು
ಅತ್ಥಣಿಊರಂಗ. ಪುಂನ: [**ಅರ್ಥನಿಪೂರಾಂಗ**] **'ಅಚ್ಛಣಿಉರಂಗ'** ಶಬ್ದವನ್ನು ನೋಡುವುದು
ಅತ್ಥತ್ಥಿ. ವಿ: [**ಅರ್ಥಾರ್ಥಿನ್**] ಹಣವನ್ನು ಸಂಪಾದಿಸುವ ಇಚ್ಛೆಯುಳ್ಳವನು(ಉಪ)
ಅತ್ಥಮ. ಅಕ: [**ಅಸ್ತಮ್+ಇ**] ಅಸ್ತವಾಗು, ಅದೃಶ್ಯವಾಗು. **–ಅತ್ಥಮಇ' ವ. ಕೃ–ಅತ್ಥಮಂತ**
ಅತ್ಥಮಣ. ನ: [**ಅಸ್ತಮಾನ**] ಮುಳುಗುವುದು, ಅಸ್ತಮಾನ, ಅದೃಶ್ಯವಾಗುವುಲು(ಓಘ)
ಅತ್ಥಮಾವಿಯ. ವಿ: [**ಅಸ್ತಮಾಪಿತ**] ಅಸ್ತಗೊಳಿಸಲ್ಪಟ್ಟ, ಮರೆಮಾಡಿಸಲ್ಪಟ್ಟ
ಅತ್ಥಮಿಯ. ವಿ: [**ಅಸ್ತಮಿತ**] ಅಸ್ತಂಗತನಾದ, ಮುಳುಗಿದ. ಅದೃಶ್ಯನಾದ, ಅವನತಿ ಹೊಂದಿದ
ಅತ್ಥಯಾರಿಆ. ಸ್ತ್ರೀ: [**ದೇ**] ಗೆಳತಿ,ಸಖಿ ಸ್ನೇಹಿತೆ,(ದೇ)
ಅತ್ಥರ. ಸಕ: [**ಆ+ಸ್ತೃ**] ಹರಡು, ಹಾಸು, – **'ಅತ್ಥರಇ'**
ಅತ್ಥರಣ. ನ: [**ಆಸ್ತರಣ**] ಹಾಸಿಗೆ, ಶಯ್ಯೆ, ಹರಡುವಿಕೆ, ಚಾಪೆ(ವಿಸೇ)

ಅತ್ಥರಂಯು. ವಿ: [**ಆಸ್ತರಕ**] ಹಾಸಿಗೆ ಹಾಸಿ ಸಜ್ಜುಗೊಳಿಸುವವನು(ರಾಯ), **ಪು:** ಹಾಸಿಗೆಯ ಮೇಲಣ ಹಾಸು (ಭಗ)

ಅತ್ಥರಯ. ವಿ: [**ಅಸ್ತರಜಸ್ಕ**] ನಿರ್ಮಲ, ಶುದ್ಧ (ಭಗ)

ಅತ್ಥವಣ. '**ಅತ್ಥಮಣ**' ಶಬ್ದವನ್ನು ನೋಡುವುದು

ಅತ್ಥಸಿದ್ಧ. **ಪು:** [**ಅರ್ಥಸಿದ್ಧ**] ಪಕ್ಷದ ಹತ್ತನೇ ದಿನ

ಅತ್ಥಾ. '**ಅಟ್ಟಾ=ಆಸ್ಥಾ**' ಶಬ್ದವನ್ನು ನೋಡುವುದು

ಅತ್ಥಾ}. ಸಕ: [**ಅಸ್ತಾಯ್**] ಅಸ್ತವಾಗು, ಮುಳುಗು,

ಅತ್ಥಾಅ}. ಕಾಣದಾಗು ವ .ಕೃ–'**ಅತ್ಥಾಂತ**'

ಅತ್ಥಾಅ. ವಿ: [**ಅಸ್ತಮಿತ**] ಅಸ್ತನಾದ(ಅಸ್ತನಾಗಿರುವ) ಮುಳುಗಿದ(ಪಉಮ)

ಅತ್ಥಾಇಯಾ. **ಸ್ತ್ರೀ:** [**ದೇ**] ಗೋಷ್ಠಿ–ಮಂಟಪ

ಅತ್ಥಾಣ. ನ: [**ಆಸ್ಥಾನ**] ಸಭೆ, ಸಭಾಸ್ಥಾನ(ಸುರ)

ಅತ್ಥಾಣಿಯು. ವಿ: [**ಅಸ್ಥಾನಿನ್**] ಸರಿಯುಲ್ಲದ ಸ್ಥಳದಲ್ಲಿರುವುದು

ಅತ್ಥಾಣೀ. **ಸ್ತ್ರೀ:** [**ಆಸ್ಥಾನೀ**] ಸಭೆ, (ಕುಮಾ)'

ಅತ್ಥಾಣೀಅ. ವಿ: [**ಆಸ್ಥಾನೀಯ**] ಸಭೆಗೆ ಸಂಬಂಧಿಸಿದ

ಅತ್ಥಾಮ. ವಿ: [**ಅಸ್ಥಾಮನ್**] ನಿರ್ಬಲ, (ಣಾಯಾ)

ಅತ್ಥಾರ. **ಪು:** [**ದೇ**] ಸಹಾಯ, ನೆರವು

ಅತ್ಥಾರಿಯ. **ಪು:** [**ದೇ**} ನೌಕರ, ಕಾರ್ಯಕರ್ತ(ವವ)

ಅತ್ಥಾವಗ್ಗಹ. '**ಅತ್ಥುಗ್ಗಹ**' ಶಬ್ದವನ್ನು ನೋಡುವುದು

ಅತ್ಥಾವತ್ತಿ. **ಸ್ತ್ರೀ:** [**ಅರ್ಥಾಪತ್ತಿ**] ಅನುಕ್ತ ಅರ್ಥವನ್ನು ಅನುಮಾನದಿಂದ ತಿಳಿಯುವುದು. ಒಂದು ಬಗೆಯ ಅನುಮಾನ ಜ್ಞಾನ. ಉದಾ: 'ದೇವದತ್ತನು ಗಟ್ಟಿಮುಟ್ಟಾಗಿದ್ದಾನೆ ಮತ್ತು ಹಗಲು ಹೊತ್ತು ತಿನ್ನುತ್ತಾನೆ' ಎಂಬ ವಾಕ್ಯದಿಂದ 'ದೇವದತ್ತನು ರಾತ್ರಿ ಹೊತ್ತಿನಲ್ಲಿ ತಿನ್ನುತ್ತಾನೆ' ಎಂದು ಊಹಿಸುವುದು

ಅತ್ಥಾಹ. ವಿ: [**ಅಸ್ತಾಘ**] ಅತ್ಯಂತ ಆಳವಾದ, ಅಗಾಧ, ಗಂಭೀರ (ಣಾಯಾ). ಮೂಗಿನ ಮೇಲಣ ಭಾಗವೂ ಮುಳುಗಬಹುದಾದ ಜಲಾಶಯ, ಗತ ೨೪ ರಲ್ಲಿ ಭಾರತದಲ್ಲಿ ಹುಟ್ಟಿದ ಈ ಹೆಸರಿನ ಒಬ್ಬ ತೀರ್ಥಂಕರ ದೇವ

ಅತ್ಥಾಹ. ವಿ: [**ದೇ**] '**ಅತ್ಥಘ್ಘ** ಶಬ್ದವನ್ನು ನೋಡುವುದು

ಅತ್ಥಿ. ವಿ: [**ಅರ್ಥಿನ್**] ಬೇಡುವವನು, ಯಾಚಕ, ಶ್ರೀಮಂತ, ಧನಿಕ(ಪಂಚಾ), ಯಜಮಾನ, ಇಚ್ಛಿಸುವವನು

ಅತ್ಥಿ. ನ: [**ಅಸ್ಥಿ**] ಮೂಳೆ (ಮಹಾ)

ಅತ್ಥಿ. ಅ: [**ಅಸ್ತಿ**] ಸ್ಥಿತಿ ಅಥವಾ ಇರುವಿಕೆಯನ್ನು ಸೂಚಿಸುವ ಅವ್ಯಯ **–ಅವತ್ತವ್ವ.** ವಿ: [**–ಅವಕ್ತವ್ಯ**] ಸಪ್ತ ಭಂಗಿಗಳಲ್ಲಿ ಐದನೆಯ ಭಂಗಿ, ಸ್ವಕೀಯ ದ್ರವ್ಯವೇ ಮೊದಲಾದವುಗಳಿಗಿಂತ ಹೆಚ್ಚು ಇರುವ ವಿದ್ಯಮಾನ ಮತ್ತು ಒಂದೇ ಸಲ ಹೇಳಲು ಕಷ್ಟವಾದ ಪದಾರ್ಥ. **–ಕಾಯ. ಪು:** [**–ಕಾಯ**] ಪ್ರದೇಶಗಳ –ಅವಯುವಗಳ ಸಮೂಹ. **–ಣತ್ಥವತ್ತವ್ವ.** ವಿ: [**–ನಾಸ್ತ್ಯವಕ್ತವ್ಯ**] ಸಪ್ತ ಭಂಗಿಗಳ ಏಳನೆಯ ಭಂಗಿ, ಸ್ವಕೀಯ ದ್ರವ್ಯಾದಿಗಳಿಗಿಂತ ಹೆಚ್ಚಾಗಿ ಇರುವ ವಿದ್ಯಮಾನ, ಪರಕೀಯ ದ್ರವ್ಯಾದಿಗಳಿಗಿಂತ ಹೆಚ್ಚು ಇಲ್ಲದಿರುವ ಮತ್ತು ಏಕ ಕಾಲದಲ್ಲಿ ಎರಡೂ ಧರ್ಮಗಳಿಗೆ ಹೇಳಲು ಅಶಕ್ಯವಾದ ಪದಾರ್ಥ. **–ತ್ತ.** ನ: [**–ತ್ವ**] ಇರುವಿಕೆ, **–ತ್ತಾ.** **ಸ್ತ್ರೀ:** [**–ತಾ**] ಅಸ್ತಿತ್ವ, ಬದುಕು. **–ತ್ತಿಣಯ. ಪು:** [**–ಇತಿನಯ**] ದ್ರವ್ಯಾರ್ಥಿಕ ನಯ. **–ನತ್ಥಿ.** ವಿ: [**–ನಾಸ್ತಿ**] ಸಪ್ತ ಭಂಗಿಯ ಮೂರನೇ ಭಂಗಿ, 'ಸ್ವ ದ್ರವ್ಯಾದಿಗಳಿಗಿಂತ ಹೆಚ್ಚಾಗಿ ಇರುವ ಮತ್ತು ಪರಕೀಯ ದ್ರವ್ಯಾದಿಗಳಿಗಿಂತ ಹೆಚ್ಚು ಇಲ್ಲದಿರುವ ವಸ್ತು. **–ನತ್ಥಿಪ್ಪವಾಯ.** ನ: [**–ನಾಸ್ತಿಪ್ರವಾದ**] ೧೨ನೇ ಜೈನ ಅಂಗಗ್ರಂಥದ ಒಂದು ಭಾಗ, ೪ನೆಯದರ ಹಿಂದಿನದು.

ಅತ್ಥಿಕ್ಕ. ನ: [**ಆಸ್ತಿಕ್ಯ**] ಆಸ್ತಿಕತೆ: ಆತ್ಮ, ಪರಲೋಕ, ದೇವರು ಇತ್ಯಾದಿಗಳಲ್ಲಿನ ನಂಬಿಕೆ

ಅತ್ಥಿಯ. '**ಅತ್ಥಿ=ಅರ್ಥಿನ್**' ಶಬ್ದವನ್ನು ನೋಡುವುದು

ಅತ್ಥಿಯ. ವಿ: [**ಅರ್ಥಿಕ**] ಹಣವಂತ, ಶ್ರೀಮಂತ

ಅತ್ಥಿಯ. ನ: [**ಆಸ್ಥಿಕ**] ಮೂಳೆ, **ಪು:** ಒಂದು ವೃಕ್ಷ–ವಿಶೇಷ, ನ: ಬಹು ಬೀಜಗಳುಳ್ಳ ಒಂದು ಫಲವಿಶೇಷ(ಪಣ್ಣ)

ಅಸ್ಥಿಯ. ವಿ: [**ಆಸ್ತಿಕ**] ದೇವರು, ಆತ್ಮ ಪರಲೋಕ ಇತ್ಯಾದಿಗಳ ಅಸ್ತಿತ್ವದಲ್ಲಿ ನಂಬಿಕೆ ಉಳ್ಳವನು (ಧರ್ಮ)

ಅತ್ಥಿರ. '**ಅಥಿರ**' ಶಬ್ದವನ್ನು ನೋಡುವುದು

ಅತ್ಥೀಕರ. ಸಕ: [**ಅರ್ಥೀ+ಕೃ**] ಬೇಡು, ಕೋರು, ಯಾಚಿಸು– '**ಅತ್ಥೀಕರೇಇ**'(ನಿಚೂ)

ಅತ್ಥೀಕರಣ. ನ: [**ಅರ್ಥೀಕರಣ**] ಪ್ರಾರ್ಥನೆ, ಯಾಚನೆ ಬೇಡುವಿಕೆ

ಅತ್ಥು. ಸಕ: [ಆ+ಸ್ತೃ] ಹರಡು, ಹಾಸು(ವಿಸೇ)
ಅತ್ಥುಅ. ವಿ: [ಆಸ್ತೃತ] ಹರಡಿರುವ, ಹಾಜರುವ(ಪಾಅ)
ಅತ್ಥುಗ್ಗಹ. ಪು: [ಅರ್ಥಾವಗ್ರಹ] ಇಂದ್ರಿಯಗಳು ಮತ್ತು ಮನಸ್ಸಿನ ಮೂಲಕ ಉಂಟಾಗುವ ಜ್ಞಾನವಿಶೇಷ, ನಿರ್ವಿಕಲ್ಪ ಜ್ಞಾನ(ಸಮ)
ಅತ್ಥುಗ್ಗಹಣ. ನ: [ಅರ್ಥಾವಗ್ರಹಣ]ಫಲದ ನಿಶ್ಚಯ(ಭಗ)
ಅತ್ಥುಡ. ವಿ: [ದೇ] ಚಿಕ್ಕದು, ಸಣ್ಣ(ದೆ)
ಅತ್ಥುರಣ. ನ: [ದೇ.ಆಸ್ತರಣ] ಹಾಸಿಗೆ, ಹಾಸು, ಹರಡುವಿಕೆ ಚಾಪೆ(ಸ)
ಅತ್ಥುರಿಯ. ವಿ: [ದೇ. ಆಸ್ತೃತ] ಹರಡಲ್ಪಟ್ಟ, ಪಸರಿಸಲ್ಪಟ್ಟ, ಹಾಸಲಾದ
ಅತ್ಥವಡ. ನ: [ದೇ] ಗೇರು ಹಣ್ಣು(ದೇ)
ಅತ್ಥಕ್ಕ. ವಿ: [ದೇ] ಆಕಸ್ಮಿಕ, ಅನಿಶ್ಚಿತ
ಅತ್ಥೋಗ್ಗಹ. 'ಅತ್ಥುಗ್ಗಹ' ಶಬ್ದವನ್ನು ನೋಡುವುದು
ಅತ್ಥೋಗ್ಗಹಣ. 'ಅತ್ಥುಗ್ಗಹಣ' ಶಬ್ದವನ್ನು ನೋಡುವುದು
ಅತ್ಥೋಡಿಯ. ಏ: [ದೇ] ಅಕರ್ಷಣೆಗೆ ಒಳಗಾದವನು
ಅತ್ಥೋಭಯ. ಏ: [ಅಸ್ತೋಭಕ] 'ಉತ' 'ವೈ' ಮೊದಲಾದ ನಿರರ್ಥಕ ಶಬ್ದಗಳ ಪ್ರಯೋಗದಿಂದ ದೂಷಿತವಾಗದಿರುವುದು.
ಅತ್ಥೋವಗ್ಗಹ. 'ಅತ್ಥುಗ್ಗಹ' ಶಬ್ದವನ್ನು ನೋಡುವುದು
ಅಥಕ್ಕ. ನ: [ದೇ] ಅಕಸ್ಮಾತ್, ಯುಕ್ತವಲ್ಲದ ಸಮಯ, ವಿ: ಹರಡುವಂಥದು(ಕುಮಾ)
ಅಥವ್ವಣ. ಪು: [ಅಥರ್ವಣ] ನಾಲ್ಕನೇ ವೇದವಾದ ಅಥರ್ವಣ ವೇದ
ಅಥಿರ. ವಿ: [ಅಸ್ಥಿರ] ಚಂಚಲ, ಅನಿತ್ಯ, ಅಶಾಶ್ವತ, ಶಿಥಿಲ, ನಿರ್ಬಲ, ಭದ್ರವಾಗಿ ಕೂತಿಲ್ಲದ, **–ಣಾಮ.** ನ: [–ನಾಮನ್] ನಾಮಕರ್ಮದ ಒಂದು ಬಗೆ (ಸಮ)
ಅದ. ಸಕ: [ಅದ್] ತಿನ್ನು, ಊಟಮಾಡು
ಅದಂಸಣ.'ಅದ್ದಂಸಣ' ಶಬ್ದವನ್ನು ನೋಡುವುದು
ಅದಂಸಣ. ಪು: [ದೇ] ಕಳ್ಳ, ಚೋರ(ಷಡ್)
ಅದಂಸಿಯಾ. ಸ್ತ್ರೀ: [ಅದಂಶಿಕಾ] ಒಂದು ಬಗೆಯ ಸಿಹಿ ಭಕ್ಷ್ಯ
ಅದಕ್ಖು. ವಿ: [ಅದೃಷ್ಟ] ಕಣ್ಣಿಂದ ನೋಡಿಲ್ಲದ
ಅದಕ್ಖ. ವಿ: [ಅದಕ್ಷ] ಅನಿಪುಣ, ಅಸಮರ್ಥ, ಕುಶಲನಲ್ಲದ (ಸೂಅ)
ಅದಕ್ಖು. ವಿ: [ಅಪಶ್ಯ] ನೋಡದವನು

ಅದಣ. ನ: [ಅದನ] ಭೋಜನ, ಊಟ
ಅದತ್ತ. ವಿ: [ಅದತ್ತ] ಕೊಟ್ಟಿಲ್ಲದ (ಪಣ್ಣ). **–ಹಾರ.** ವಿ: [–ಹಾರ] ಕಳ್ಳ, **–ಹಾರಿ.** ವಿ: [–ಹಾರಿನ್] ಕಳ್ಳ, ಚೋರ. **ಆದಾಣ.** ನ: [ಆದಾನ] ಕಳ್ಳತನ **ಆದಾಣವೇರಮಣ.** ನ: [ಆದಾನವಿರಮಣ] ಕಳ್ಳತನದಿಂದ ವಿಮುಖನಾದವನು, ಮೂರನೇ ವ್ರತ
ಅದನ್ನ. 'ಅದ್ದಣ್ಣ' ಶಬ್ದವನ್ನು ನೋಡುವುದು
ಅದಬ್ಭ. ವಿ: [ಅದಭ್ರ] ಅಲ್ಪವಲ್ಲದ, ಬಹಳ, ಹೆಚ್ಚಿನ
ಅದಯ. ವಿ: [ಅದಯ] ದಯೆಯಿಲ್ಲದ, ನಿಷ್ಠುರ, ನಿರ್ದಯಿ (ನಿಚೂ)
ಅದಿಇ. ' ಅಇಇ' ಶಬ್ದವನ್ನು ನೋಡುವುದು
ಅದಿಣ್ಣ. 'ಅದತ್' ಶಬ್ದವನ್ನು ನೋಡುವುದು
ಅದಿತ್ತ. ವಿ: [ಅದೃಪ್ತ] ದರ್ಪವಿಲ್ಲದ, ನಮ್ರ, ವಿನಯಿ (ಬೃಹ) ಹಿಂಸೆಮಾಡದವನು
ಅದಿನ್ನ. 'ಅದತ್ತ' ಶಬ್ದವನ್ನು ನೋಡುವುದು
ಅದಿಸ್ಸ. 'ಅದ್ದಿಸ್ಸ' ಶಬ್ದವನ್ನು ನೋಡುವುದು
ಅದಿಹಿ. ಸ್ತ್ರೀ: [ಅಧೃತಿ] ಅಧೈರ್ಯ,
ಅದೀಣ. ವಿ: [ಅದೀನ] ದೀನನಲ್ಲದ, ಧೈರ್ಯಗೆಡದ, ಬಲಶಾಲಿ. **–ಸತ್ತು.** ಪು: [–ಶತ್ರು] ಹಸ್ತಿನಾಪುರದ ಒಬ್ಬ ರಾಜ
ಅದು. ಅ: [ದೇ] ಸಾತತ್ಯವನ್ನು ಸೂಚಿಸುವ ಅವ್ಯಯ, ಈಗ, ಆಮೇಲೆ, ಬಳಿಕ(ಆಚಾ), ಇದರಿಂದ
ಅದುತ್ತರಂ.ಅ.[ದೇ] ಎಡೆಬಿಡದಿರುವುದನ್ನು ಸೂಚಿಸುವ ಅವ್ಯಯ. ಈಗ, ಆಮೇಲೆ
ಅದುಯ. ನ: [ಅದ್ರುತ] ವೇಗವಿಲ್ಲದೆ, ನಿಧಾನವಾಗಿ, ಮೆಲ್ಲಮೆಲ್ಲಗೆ **–ಬಂಧಣ.** ನ: [–ಬಂಧನ] ದೀರ್ಘ ಕಾಲಕ್ಕಾದ ಬಂಧನ(ಸೂಅ)
ಅದುವ}. ಅ: [ದೇ] ಅಥವಾ, ಮತ್ತು
ಅದುವಾ}.
ಅದೋಲಿ}. ವಿ: [ಅದೋಲಿನ್] ಸ್ಥಿರ, ನಿಶ್ಚಲ
ಅದೋಲಿರ್}.
ಅದ್ದ. ವಿ: [ಆರ್ದ್ರ] ಒದ್ದೆಯಾದ, ನೆನೆದಿರುವ, ರಸವತ್ತಾದ, ಮೃದುವಾದ(ಕುಮಾ), ಈ ಹೆಸರಿನ ಒಬ್ಬ ರಾಜ, ಒಬ್ಬ ಪ್ರಸಿದ್ಧ ರಾಜಕುಮಾರ ಮತ್ತು ಅನಂತರ ಜೈನಮುನಿಯಾದವನು, ಆರ್ದ್ರರಾಜನ ವಂಶಜ, ಒಂದು ನಗರ ವಿಶೇಷ

(ಸೂಅ), **–ಕುವಾರ.** ಪು: [–ಕುಮಾರ] ರಾಜಕುಮಾರ ಮತ್ತು ಅನಂತರ ಜೈನಮುನಿ. **–ಮುತ್ಥಾ.** ಸ್ತ್ರೀ: [–ಮುಸ್ತಾ] ಒಂದು ಗಡ್ಡೆ, **–ಆಮಲಗ.** ನ: [–ಆಮಲಕ] ಹಸಿರು ಬೆಟ್ಟನೆಲ್ಲಿಕಾಯಿ, ತಾಳೆ ಮರದ ಮೊಗ್ಗು (ಧರ್ಮ) ಸಣಬಿನ ಚಿಗುರು, **ಅದ್ದಾರಿಟ್ಠ.** ಪು: [ಆರ್ದ್ರಾರಿಷ್ಟ] **ಕಮಲ ಕೌವಾ**

ಅದ್ದ. ಪು: [ಅಬ್ದ] ಮೋಡ, ಮಳೆ, (ಹೇ) ವರ್ಷ(ಸಂವತ್ಸರ), ಕೊನ್ನೇರಿ ಗಡ್ಡೆ

ಅದ್ದ. ಪು: [ಆರ್ದ] ಆಕಾಶ (ಭಗ)

ಅದ್ದ. ಸಕ: [ಅರ್ದ್] ಹೊಡೆ, ಬಡಿ, ಪೀಡಿಸು(ವವ)

ಅದ್ದಇಅ. ನ: [ಅದ್ವೈತ] ಅಭೇದ, ಜೀವ–ಬ್ರಹ್ಮ ಬೇರೆಬೇರೆಯಲ್ಲವೆಂದು ಹೇಳುವ ದರ್ಶನ

ಅದ್ದಇಜ್ಜ. ವಿ: [ಆರ್ದ್ರೀಯ] ಆರ್ದ್ರ ಕುಮಾರನಿಗೆ ಸಂಬಂಧಿಸಿದ, ಈ ಹೆಸರಿನ **'ಸೂತ್ರಕೃತಾಂಗದ'** ಒಂದು ಅಧ್ಯಯನ, (ಸೂಅ)

ಅದ್ದಂಸಣ. ನ: [ಅದರ್ಶನ] ನೋಡದಿರುವಿಕೆ, ಕಣ್ಣಿಗೆ ಕಾಣಿಸದ, ಅಂತರ್ಧಾನ, ನೋಡಲು ನಿಷೇಧ, ನೋಡಲಾಗದವನು ಕುರುಡ, ಲೋಪ, **–ಣಿಭೂಅ, ಣಿಹೂಯ.** ವಿ [–ಭೂತ] ಅದೃಶ್ಯನಾದವನು=ಮರೆಯಾದವನು

ಅದ್ದಣ.} ವಿ: [ದೇ] ವ್ಯಾಕುಲ, ಚಿಂತಿತ(ಆವ)
ಅದ್ದಣ್ಣ.}

ಅದ್ದವ. ವಿ: [ಆದ್ರವ] ಕರಗಿ ಹೋಗಿರುವ(ಆವ)

ಅದ್ದವ್ವ. ನ: [ಅದ್ರವ್ಯ] ಅವಸ್ತು, ಗುಣವಿಲ್ಲದ ವಸ್ತು, ಅಯೋಗ್ಯ ವಸ್ತು

ಅದ್ದಹ. ಸಕ: [ಆ+ದ್ರಹ್] ಕುದಿಸುವುದು, ನೀರು, ಎಣ್ಣೆ ಇತ್ಯಾದಿಗಳನ್ನು ಚೆನ್ನಾಗಿ ಬಿಸಿ ಮಾಡುವುದು (ಉವಾ)

ಅದ್ದಹಿಯ. ವಿ: [ಆಹಿತ] ಇಡಲ್ಪಟ್ಟ, ಇರಿಸಲಾದ ಸಂಪಾದಿಸಲಾದ(ವಿಪಾ)

ಅದ್ದಾ. ಸ್ತ್ರೀ: [ಆರ್ದ್ರಾ] ಆರಿದ್ರಾ ನಕ್ಷತ್ರ, ಒಂದು ಛಂದಸ್ಸಿನ ಹೆಸರು

ಅದ್ದಾಅ. ಪು: [ದೇ] ಕನ್ನಡಿ(ಪಣ್ಣಾ). **–ಪಸಿಣ.** ಪು: [–ಪ್ರಶ್ನ] ಕನ್ನಡಿಯಲ್ಲಿ ದೇವತೆಯನ್ನು ಬರಿಸುವ ಒಂದು ವಿದ್ಯಾ–ವಿಶೇಷ. **–ವಿಜ್ಜಾ.** ಸ್ತ್ರೀ: [–ವಿದ್ಯಾ] ಚಿಕಿತ್ಸೆಯ ಒಂದು ಪ್ರಕಾರ. ಇದರಲ್ಲಿ ರೋಗಿಯನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸುವ ಮೂಲಕ ನಿರೋಗಿಯಾಗಿಸಲಾಗುತ್ತದೆ.

ಅದ್ದಾಇಅ. ವಿ: [ದೇ] ಆದರ್ಶವನ್ನು ಹೊಂದಿರುವವನು ಆದರ್ಶದಿಂದ ಪವಿತ್ರನಾದ(ಬೃಹ)

ಅದ್ದಾಗ. (ದೇ) **'ಅದ್ದಾಅ'** ಶಬ್ದವನ್ನು ನೋಡುವುದು

ಅದ್ದಿ. ಪು: [ಅದ್ರಿ] ಬೆಟ್ಟ, ಪರ್ವತ(ಗಉಡ)

ಅದ್ದಿ. ಪುಂನ: [ದೇ] ಗಾಡಿಯ ಪಟ್ಟೆ

ಅದಿಟ್ಠ ವಿ: [ಅದೃಷ್ಟ] ನೋಡಿಲ್ಲದ, ಕಣ್ಣಿಗೆ ಕಾಣಿಸದ, ವಿಧಿ ಇತ್ಯಾದಿ

ಅದ್ದಿಯ. ವಿ: [ಆರ್ದ್ರಿತ] ನೆನೆಸಿದ, ಒದ್ದೆಮಾಡಲ್ಪಟ್ಟ, ಆರ್ದ್ರಗೊಳಿಸಿದ(ವಿಕ್ರ)

ಅದ್ದಿಯ. ವಿ: [ಅರ್ದಿತ] ಹೊಡೆಯಲ್ಪಟ್ಟ, ಪೀಡಿತ, ಕುಟ್ಟಿ ಚೂರ್ಣಮಾಡಲಾದ

ಅದ್ದಿಸ್ಸ. ವಿ: [ಅದೃಶ್ಯ] ನೋಡಲು ಸಾಧ್ಯವಿಲ್ಲದ, ಕಣ್ಣಿಗೆ ಕಾಣಿಸದ (ಸುರ) **ವ.ಕೃ– ಅದ್ದಿಸ್ಸಮಾಣ.**

ಅದ್ದೀಣ. ವಿ: [ಅದ್ರೀಣ] ಕ್ಷುಬ್ಧನಾಗದ, ನಿರ್ಭೀತ, ಹೆದರದ (ಪಣ್ಣ)

ಅದ್ದೀಣ **'ಅದೀಣ'** ಶಬ್ದವನ್ನು ನೋಡುವುದು

ಅದ್ದುಮಾಅ. ವಿ: [ದೇ] ಪೂರ್ಣ, ತುಂಬಿರುವ(ಷಡ್)

ಅದ್ದೇಸ. ವಿ: [ಅದೃಶ್ಯ] ಕಣ್ಣಿಗೆ ಕಾಣಿಸದ

ಅದ್ದೇಸೀಕಾರಿಣೀ. ಸ್ತ್ರೀ: [ಅದೃಶ್ಯೀಕಾರಿಣೀ] ಕಣ್ಣಿಗೆ ಕಾಣಿಸದಂತೆ ಮಾಡುವುದು, ಅದೃಶ್ಯಗೊಳಿಸುವ ವಿದ್ಯೆ

ಅದ್ದೋಹಿ. ವಿ: [ಅದ್ರೋಹಿನ್] ವಂಚನೆಯಿಲ್ಲದವನು, ದ್ರೋಹವಿಲ್ಲದವನು(ಧರ್ಮ), ದ್ವೇಷವಿಲ್ಲದವ

ಅದ್ಧ. ಪುನಂ: [ಅರ್ಧ] ಅರ್ಧ, ಅಂಶ, ಒಂದು ಭಾಗ **–ಕರಿಸ್.** ಪು: [–ಕರ್ಷ] ಅಳತೆ, ಕ್ಷಣದ ⁰/₈ ಭಾಗ, –ಕುಡವ., **–ಕುಲವ.** ಪು: [**–ಕುಡವ, –ಕುಲವ**] ಒಂದು ಬಗೆಯ ಧಾನ್ಯದ ಅಳತೆ(ರಾಯ); **–ಕ್ಖಿತ್ತ.** ನ: [–ಕ್ಷೇತ್ರ] ಒಂದು ಅಹೋರಾತ್ರಿ(ಇಡೀ ದಿನ) ಚಂದ್ರನ ಜೊತೆಗೂಡಿರುವ ನಕ್ಷತ್ರ; **–ಖಲ್ಲಾ.** ಸ್ತ್ರೀ: [–ಖಲ್ವಾ] ಒಂದು ಬಗೆಯ ಚಪ್ಪಲಿ; **–ಘಡಯ.** ಪು: [–ಘಟಕ] ಅರ್ಧ ಅಳತೆಯ ಗಡಿಗೆ, **–ಚಂದ.** ಪು: [–ಚಂದ್ರ] ಅರ್ಧಚಂದ್ರ(ಗಾ); ಅರ್ಧಚಂದ್ರಾಕಾರದ ಹಸ್ತ=ಕುತ್ತಿಗೆ ಹಿಡಿದು ಆಚೆಗೆ ನೂಕುವುದು. ಒಂದು ಆಯುಧ, ಒಂದು

ಜಾತಿಯ ಬಾಣ, **–ಚಕ್ಕವಾಲ.** ನ: [**–ಚಕ್ರವಾಲ**] ಒಂದು ಗತಿ–ವಿಶೇಷ; **–ಚಕ್ಕಿ.** ಪು: [**–ಚಕ್ರಿನ್**] ಚಕ್ರವರ್ತಿ ರಾಜನಿಂದ ಅರ್ಧ ಸಂಪತ್ತನ್ನು ಪಡೆದ ರಾಜ, ವಾಸುದೇವ; **–ಚ್ಛಟ್ಠ. –ಛಟ್ಠ.** ವಿ: [**–ಷಷ್ಟ**] ಐದೂವರೆ; **–ಟ್ಠಮ.**ವಿ: [**–ಅಷ್ಟಮ**] ಏಳೂವರೆ; **–ಣಾರಾಯ.** ನ: [**–ನಾರಾಚ**] ನಾಲ್ಕನೆಯ ದೇಹ, ಶರೀರದ ಮೂಳೆಗಳ ರಚನಾ ವಿಶೇಷ(ಜೀವ) **–ಣಾರೀಸರ.** ಪು: [**–ನಾರೀಶ್ವರ**] ಶಿವ, ಶಂಕರ, **–ತಇಯ.** ವಿ: [**–ತೃತೀಯ**] ಎರಡೂವರೆ; **–ತೇವನ್ನ.** ವಿ: [**–ತ್ರಿಪಂಚಾಶ**] ಐವತ್ತೆರಡೂವರೆ; **–ದ್ಧ.** ವಿ: [**–ಅರ್ಧ**] ನಾಲ್ಕನೇ ಒಂದು ಭಾಗ **–ನವಮ.** ವಿ [**–ನವಮ**] ಎಂಟೂವರೆ, **–ನಾರಾಯ –'ಣಾರಾಯ'** ಶಬ್ದವನ್ನು ನೋಡುವುದು; **–ಪಂಚಮ.** ವಿ: [**–ಪಂಚಮ**] ನಾಲ್ಕೂವರೆ; **–ಪಲಿಅಂಕ.** ವಿ: [**–ಪರ್ಯಂಕ**] ಆಸನ–ವಿಶೇಷ; **–ಪಹರ.** ಪು: [**–ಪ್ರಹರ**]; ಜ್ಯೋತಿಶ್ಯಾಸ್ತ್ರದಲ್ಲಿ ಹೆಸರಾದ ಒಂದು ಕುಯೋಗ, **–ಬಬ್ಬರ.** ಪು: [**–ಬರ್ಬರ**] ದೇಶವಿಶೇಷ(ಪಉಮ) **–ಮಾಗಹಾ, –ಹೀ.** ಸ್ತ್ರೀ: [**–ಮಾಗಧೀ**] ಜೈನ ಪ್ರಾಚೀನ ಸಾಹಿತ್ಯದ ಪ್ರಾಕೃತಭಾಷೆ; ಅದರಲ್ಲಿ ಮಾಗಧೀ ಭಾಷೆಯ ಎರಡು ನಿಯಮಗಳನ್ನು ಅನಸರಿಸಲಾಗಿದೆ; **–ಮಾಸ.** ಪು: [**–ಮಾಸ**] ಪಕ್ಷ(೧೫ ದಿನ); **–ಮಾಸಿಯ.** ಪು: [**–ಮಾಸಿಕ**] ಪಾಕ್ಷಿಕ, ಪಕ್ಷಕ್ಕೆ ಸಂಬಂಧಿಸಿದ್ದು, **–ಯಂದ '–ಚಂದ '**ಶಬ್ದವನ್ನು ನೋಡುವುದು. **–ರಜ್ಜಿಯ.** ವಿ: [**–ರಾಜ್ಯಿಕ**] ಅರ್ಧರಾಜ್ಯಕ್ಕೆ ಭಾಗೀದಾರ, **–ರತ್ತ.** ಪು: [**–ರಾತ್ರ**] ಮಧ್ಯರಾತ್ರಿಯ ಸಮಯ(ಗಾ); **–ವೇಯಾಲೀ.** ಸ್ತ್ರೀ: [**–ವೇತಾಲೀ**] ವಿದ್ಯಾ–ವಿಶೇಷ; **–ಸಂಕಾಸಿಯಾ.** ಸ್ತ್ರೀ: [**–ಸಾಂಕಾಶ್ಯಿಕಾ**] ಒಬ್ಬ ರಾಜಪುತ್ರಿಯ ಹೆಸರು. **–ಸಮ.** ನ: [**–ಸಮ**] ಒಂದು ವೃತ್ತ, ಒಂದು ಛಂದಸ್ಸು; **–ಹಾರ,** ಪು: [**–ಹಾರ**] ೬೪ ಎಳೆಗಳ ಹಾರ, ೯ ಲಡಿಗಳಹಾರ, ಈ ಹೆಸರಿನ ಒಂದು ದ್ವೀಪ; ಸಮುದ್ರವಿಶೇಷ, **–ಹಾರಭದ್ದ.** ಪು: [**–ಹಾರಭದ್ರ**] ಅರ್ಧಹಾರ ದ್ವೀಪದ ಅಧಿಷ್ಠಾತೃ ದೇವ; **–ಹಾರವರ.** ಪು: [**–ಹಾರವರ**] ಒಂದು ದ್ವೀಪ ವಿಶೇಷ, ಸಮುದ್ರ ವಿಶೇಷ: ಅವುಗಳ ಅಧಿಷ್ಠಾತೃ ದೇವ, **–ಹಾರವರಭದ್ದ.** ಪು: [**–ಹಾರವರಭದ್ರ**] ಅದೇ ಅರ್ಥ; **ಹಾರವರಮಹಾವರ.** ಪು: [**–ಹಾರವರಮಹಾವರ**] ಅರ್ಧಹಾರವರ ಸಮುದ್ರದ ಅಧಿಷ್ಠಾತೃ ದೇವ, **–ಹಾರೋಭಾಸ.** ಪು: [**–ಹಾರಾವಭಾಸ**] ಒಂದು ದ್ವೀಪ–ವಿಶೇಷ, ಸಮುದ್ರ ವಿಶೇಷ **–ಹಾರೋಭಾಸಮಹಾಭದ್ದ.** ಪು: [**–ಹಾರಾವಭಾಸಮಹಾಭದ್ರ**] ಹಿಂದೆ ಹೇಳಿದ ಅರ್ಥವೇ; **–ಹಾರೋಭಾಸಮಹಾವರ.** ಪು: [**–ಹಾರಾವಭಾಸ ಮಹಾವರ**] ಅರ್ಧಹಾರಾವಭಾಸ ಎಂಬ ಸಮುದ್ರದ ಅಧಿಷ್ಠಾತೃ ದೇವ; **–ಹಾರೋಭಾಸವರ.** ಪು: [**–ಹಾರಾವಭಾಸವರ**] ಹಿಂದೆ ಹೇಳಿದ ಅರ್ಥವೇ. **ಅದ್ಧಾಢಯ.** ಪು: [**ಅರ್ಧಾಢಕ**] **ಒಂದು** ಅಳತೆ –ನಾಲ್ಕು ಸೇರಿನ ಅರ್ಧ=೨ ಸೇರು.

ಅದ್ಧ. ಪು: [**ಅಧ್ವನ್**] ದಾರಿ, ಮಾರ್ಗ

ಅದ್ಧಂತ. ಪು: [ದೇ] ಅಂಚು, ಕೊನೆ, ಅಂತ್ಯಭಾಗ, ಪು: ಬ. ಕೆಲವು(ಸೇ)

ಅದ್ಧಕ್ಖಣ. ನ: [ದೇ] ಕಾಯುವುದು, ನಿರೀಕ್ಷಿಸುವುದು, ಪರೀಕ್ಷಿಸುವುದು

ಅದ್ಧಕ್ಖಿಅ. ನ: [ದೇ] ಸಂಜ್ಞೆ ಮಾಡುವುದು, ಸನ್ನೆ ಮಾಡುವುದು ಅಥವಾ ಸಂಕೇತಿಸುವುದು

ಅದ್ಧಕ್ಖಿಅ. ವಿ: [**ಅರ್ಧಾಕ್ಷಿಕ.** ವಿಕೃತ ಕಣ್ಣುಗಳುಳ್ಳವನು

ಅದ್ಧಜಂಘಾ.} ಸ್ತ್ರೀ: [**ಅರ್ಧಜಂಘಾ**] **'ಮೋಚಕ'**
ಅದ್ಧಜಂಘೀ.} ಎಂದು ಕರೆಯಲಾಗುವ ಚಪ್ಪಲಿ,

ಅದ್ಧದ್ಧಾ. ಸ್ತ್ರೀ [ದೇ.ಅದ್ಧಾದ್ಧಾ] ಹಗಲು ಅಥವಾ ರಾತ್ರಿಯ ಒಂದು ಭಾಗ

ಅದ್ಧಪೇಡಾ. ಸ್ತ್ರೀ: [**ಅರ್ಧಪೇಟಾ**] ಪೆಟ್ಟಿಗೆಯ ಅರ್ಧಭಾಗದ ಆಕಾರದಲ್ಲಿರುವ ಮನೆಗಳ ಸಾಲಿನಲ್ಲಿ ಭಿಕ್ಷಾಟನೆ ಮಾಡುವುದು

ಅದ್ಧರ. ಪು: [**ಅಧ್ವರ**] ಯಜ್ಞ, ಯಾಗ(ಪಾಅ)

ಅದ್ಧರ. ವಿ: [ದೇ] ಪ್ರಚ್ಛನ್ನ, ಗುಪ್ತ, ರಹಸ್ಯವಾದ, ಗುಟ್ಟಾದ

ಅದ್ಧವಿಆರ. ನ: [ದೇ] ಅಲಂಕರಿಸುವುದು, ಒಡವೆ, ದುಂಡಗಿನದು, ಚಿಕ್ಕ ಮಂಡಲ

ಅದ್ಧಾ. ಸ್ತ್ರೀ [ದೇ.ಅದ್ಧಾ] ಸಮಯ, ಸಂಕೇತ, ಪ್ರಾಪ್ತಿ, ಶಕ್ತಿ–ವಿಶೇಷ, ಅ: ವಸ್ತುತಃ, ಪ್ರತ್ಯಕ್ಷ, ಹಗಲು,

ರಾತ್ರಿ, –ಕಾಲ. ಪು:[–ಕಾಲ] ಸೂರ್ಯನ ಸುತ್ತುವಿಕೆಯಿಂದ ತಿಳಿದು ಬರುವ ಕಾಲ, **–ಭೇಯ.** ಪು: [–ಭೇದ] ಕಾಲದ ಒಂದು ಸಣ್ಣ ಅಳತೆ, **–ಪಚ್ಚಕ್ಖಾಣ.** ನ: [–ಪ್ರತ್ಯಾಖ್ಯಾನ] ಯಾವುದೋ ಒಂದು ನಿಯತ ಕಾಲದಲ್ಲಿ ಯಾವುದಾದರೂ ವ್ರತ, ನಿಯಮಮಾಡುವುದು, **–ಮೀಸಯ.** ನ: [–ಮಿಶ್ರಕ] ಒಂದು ರೀತಿಯ ಸತ್ಯ–ಮಿಥ್ಯೆಗಳ ಭಾಷೆ. **–ಮೀಸಿಯಾ.** ಸ್ತ್ರೀ: [–ಮಿಶ್ರಿತಾ ಹಿಂದಿನದಕ್ಕೆ ಹೇಳಲಾದ ಅರ್ಥವೇ. **–ಸಮಯ.** ಸರ್ವ ಸೂಕ್ಷ್ಮ ಕಾಲ(ಪಣಣಾ)

ಅದ್ಧಾಣ. ಪು: [ಅಧ್ವನ್] ಮಾರ್ಗ, ದಾರಿ(ಣಾಯಾ), **–ಸೀಸಯ.** ನ: [–ಶೀರ್ಷಕ] ದಾರಿಯ ಕೊನೆ, ಕಾಡು ಇತ್ಯಾದಿಯ ಅಂತ್ಯ ಭಾಗ

ಅದ್ಧಾಣಿಯ. ವಿ: [ಆಧ್ವಿಕ] ಪಥಿಕ, ದಾರಿಯಲ್ಲಿ ಪಯಣಿಸುವವನು, ಯಾತ್ರಿಕ

ಅದ್ಧಾಸಿಯ. ವಿ: [ಅಧ್ಯಾಸಿತ] ಆಶ್ರಿತ, ಅಧಿಷ್ಠಿತ, ಆಶ್ರಯಿಸಲ್ಪಟ್ಟ, ರಕ್ಷಿಸಲ್ಪಟ್ಟ, ಮೇಲಕ್ಕೆ ಹತ್ತಿದ, ಏರಿದ

ಅದ್ಧಿ. 'ಇಡ್ಢಿ' ಶಬ್ದವನ್ನು ನೋಡುವುದು

ಅದ್ಧಿಇ. ಸ್ತ್ರೀ: [ಅಧೃತಿ] ಧೈರ್ಯವಿಲ್ಲದಿರುವುದು, ಅಧೈರ್ಯ, ಭಯ

ಅದ್ಧುಇಅ. ವಿ: [ಅರ್ಧೋದಿತ] ಕಡಿಮೆ ಹೇಳಲಾದ, ಒಂದು ಪುಣ್ಯಕಾಲ

ಅದ್ಧುಗ್ಘಾಡ. ವಿ: [ಅರ್ಧೋದ್ಘಾಟ] ಅರ್ಧ ತೆರೆದ

ಅದ್ಧುಟ್ಠ. ವಿ: [ಅರ್ಧಚತುರ್ಥ] ಮೂರೂವರೆ

ಅದ್ಧುತ್ತ. ವಿ: [ಅರ್ಧೋಕ್ತ] ಕಡಿಮೆ ಹೇಳಲಾದ

ಅದ್ಧುಹ್ತ. ವಿ: [ಅಧ್ರುವ] ಅಸ್ಥಿರ, ಚಂಚಲ, ನಶ್ವರ, ಅಶಾಶ್ವತ, ಅನಿಯತ

ಅದ್ಧೇಅದ್ಧ. ವಿ: [ಅರ್ಧಾರ್ಧ] ಎರಡು ತುಂಡುಗಳುಳ್ಳ, ಅರ್ಧದಲ್ಲಿ ಅರ್ಧಭಾಗ, ನಾಲ್ಕನೇ ಒಂದು ಭಾಗ, ತುಂಡಾದ

ಅದ್ಧೋರು.} 'ಅಡ್ಢೋರುಗ' ಶಬ್ದವನ್ನು ನೋಡುವುದು
ಅದ್ಧೋರುಗ.}

ಅದ್ಧೋವಮಿಯ ವಿ: [ಅದ್ಧೌಪಮ್ಯ, ಅದ್ಧೌಪಮಿಕ] ಉಪಮೆಯಿಂದ ಒಪ್ಪಿಸಲು ಸಾಧ್ಯವಾದ ಕಾಲದ ಪರಿಮಾಣ, ಪಲ್ಯೋಪಮವೇ ಮೊದಲಾದ ಉಪಮಾ ಕಾಲ

ಅಧ. ಅ: [ಅಧಸ್] ಕೆಳಗೆ, ಕೆಳಭಾಗದಲ್ಲಿ,

ಅಧ (ಶೌ). ಅ: [ಅಥ] ಈಗ, ಅನಂತರ, ಬಳಿಕ(ಕಪ್ಪೂ) ಎಲ್ಲ, ಸಕಲ ಅಧೈರ್ಯ

ಅಧಇಂ.(ಶೌ). [ಅಥಕಿಮ್] ಹೌದು, ಮತ್ತೇನು? ಖಂಡಿತಾ, ಅವಶ್ಯವಾಗಿ (ಕಪ್ಪೂ)

ಅಧಂ. ಅ: [ಅಧಸ್] ಕೆಳಗೆ

ಅಧಟ್ಠ. ವಿ: [ಆಧೃಷ್ಟ] ಸಂಕೋಚ ಸ್ವಭಾವದ, ಧೈರ್ಯವಿಲ್ಲದ, ಭಯ ಸ್ವಭಾವದ

ಅಧಣ. ವಿ: [ಅಧನ] ಬಡವ, ಹಣವಿಲ್ಲದವನು

ಅಧಣಿ. ವಿ: [ಅಧನಿನ್] ಹಣವಿಲ್ಲದವನು, ಬಡವ, ಧನಿಕನಲ್ಲದ

ಅಧಣ್ಣ. ವಿ: [ಅಧನ್ಯ] ದೀನ, ನಿರ್ಗತಿಕ, ಕೃತಾರ್ಥನಲ್ಲದ, ಮೇಲ್ಮೈ ಪಡೆಯದ

ಅಧಮ. 'ಅಹಮ' ಶಬ್ದವನ್ನು ನೋಡುವುದು

ಅಧಮ್ಮ. ಪು: [ಅಧರ್ಮ] ಪಾಪ ಕಾರ್ಯ, ನಿಷಿದ್ಧ ಆಚರಣೆ, ಅನೀತಿ. ಜೀವವೇ ಮೊದಲಾದವುಗಳನ್ನು ಇರಿಸಿಕೊಳ್ಳುವುದರಲ್ಲಿ ನೆರವಾಗುವ ಒಂದು ಸ್ವತಂತ್ರ ಮತ್ತು ಲೋಕವ್ಯಾಪಿಯಾದ ಅಜೀವ ವಸ್ತು. ವಿ: ಧರ್ಮರಹಿತ, ಪಾಪಿ(ವಿಪಾ). **–ಕೇಉ.** ಪು: [–ಕೇತು] ಪಾಪಿಷ್ಠ, **–ಕ್ಖಾಇ.** ವಿ: [–ಖ್ಯಾತಿ] ಪ್ರಸಿದ್ಧ ಪಾಪಿ(ವಿಪಾ), **–ಕ್ಖಾಇ.** ವಿ: [–ಖ್ಯಾಯಿನ್] ಪಾಪದ ಉಪದೇಶ ನಿಡುವವನು. **–ತ್ಥಿಕಾಯ.** ಪು: [ಅಧರ್ಮಾಸ್ತಿಕಾಯ] ಅಧರ್ಮದ ಇನ್ನೊಂದು ಅರ್ಥವನ್ನು ನೋಡುವುದು(ಅಣು). **–ಬುದ್ಧಿ.** ವಿ: [–ಬುದ್ಧಿ] ಪಾಪಿ, ಪಾಪಿಷ್ಠ(ಉಪ)

ಅಧಮ್ಮಿಟ್ಠ. ವಿ: [ಅಧರ್ಮಿಷ್ಠ] ಧರ್ಮ ಮಾಡದವನು, ಮಹಾ ಪಾಪಿ, ಪಾಪಿಷ್ಠ(ಣಾಯಾ)

ಅಧಮ್ಮಿಟ್ಠ. ವಿ: [ಅಧರ್ಮೇಷ್ಟ] ಅಧರ್ಮ ಪ್ರಿಯ, ಪಾಪ ಪ್ರಿಯನಾದವನು(ಭಗ)

ಅಧಮ್ಮಿಟ್ಠ. ವಿ: [ಅಧರ್ಮೇಷ್ಟ] ಪಾಪಿಗಳಿಗೆ ಪ್ರಿಯನಾದವನು(ಭಗ)

ಅಧಮ್ಮಿಯ. 'ಅಹಮ್ಮಿಯ' ಶಬ್ದವನ್ನು ನೋಡುವುದು

ಅಧರ. 'ಅಹರ' ಶಬ್ದವನ್ನು ನೋಡುವುದು

ಅಧವಾ(ಶೌ). 'ಅಹವಾ' ಶಬ್ದವನ್ನು ನೋಡುವುದು

ಅಧಾ. ಸ್ತ್ರೀ: [ಅಧಸ್] ಕೆಳಗೆ, ಕೆಳಭಾಗ, ಕೆಳ ಪ್ರದೇಶ

ಅಧಿ. 'ಅಹಿ=ಅಧಿ' ಶಬ್ದವನ್ನು ನೋಡುವುದು

ಅಧಿಇ. 'ಅದ್ಧಿಇ' ಶಬ್ದವನ್ನು ನೋಡುವುದು

ಅಧಿಕರಣ. 'ಅಹಿರಗಣ' ಶಬ್ದವನ್ನು ನೋಡುವುದು

ಅಧಿಗ. ವಿ: [ಅಧಿಕ] ವಿಶೇಷ, ಹೆಚ್ಚು(ಬೃಹ)
ಅಧಿಗಮ. 'ಅಹಿಗಮ' ಶಬ್ದವನ್ನು ನೋಡುವುದು
ಅಧಿಗರಣ. 'ಅಹಿಗರಣ' ಶಬ್ದವನ್ನು ನೋಡುವುದು
ಅಧಿಗರಣೆಯಾ. 'ಅಹಿಗರಣೆಯಾ' ಶಬ್ದವನ್ನು ನೋಡುವುದು
ಅಧಿಗಾರ. 'ಅಹಿಗಾರ' ಶಬ್ದವನ್ನು ನೋಡುವುದು
ಅಧಿಣ್ಣ.} (ಅಪ). ವಿ: [ಅಧೀನ]ಇನ್ನೊಬ್ಬನ **ಅಧಿನ್ನ.}** ವಶದಲ್ಲಿರುವ, ಅಸ್ವತಂತ್ರ(ಪಿ)
ಅಧಿಮಾಸಗ. ಪು: [ಅಧಿಮಾಸಕ] ಅಧಿಕಮಾಸ
ಅಧಿರೋವಿಅ. ವಿ: [ಅಧಿರೋಪಿತ] ಮೇಲಕ್ಕೆ ಹತ್ತಿಸಲ್ಪಟ್ಟ, ಹೆಚ್ಚಿಸಲ್ಪಟ್ಟ, ಕಲ್ಪಿಸಲ್ಪಡುವ
ಅಧೀಗಾರ. 'ಅಹೀಗಾರ' ಶಬ್ದವನ್ನು ನೋಡುವುದು
ಅಧೀಯ. 'ಅಹೀಯ' ಶಬ್ದವನ್ನು ನೋಡುವುದು
ಅಧೀಸ. ವಿ: [ಅಧೀಶ] ಒಡೆಯ, ನಾಯಕ, ಸ್ವಾಮಿ, ಅಧಿಪತಿ (ಕುಮ್ಮಾ)
ಅಧುವ. 'ಅದ್ಧುವ' ಶಬ್ದವನ್ನು ನೋಡುವುದು
ಅಧೋ. 'ಅ ಹೋ=ಅಧಸ್' ಶಬ್ದವನ್ನು ನೋಡುವುದು
ಅನಂದಿ. ಸ್ತ್ರೀ: [ಅನಂದಿ] ಅಮಂಗಳ, ಸಂತೋಷವುಂಟು ಮಾಡದ, ದುಃಖ ಉಂಟುಮಾಡುವ
ಅನನ್ನ 'ಅಣಣ್ಣ' ಶಬ್ದವನ್ನು ನೋಡುವುದು (ಕುಮಾ)
ಅನಯ 'ಅಣಯ' ಶಬ್ದವನ್ನು ನೋಡುವುದು(ಸುಪಾ)
ಅನಲ. 'ಅಣಲ' ಶಬ್ದವನ್ನು ನೋಡುವುದು(ಹೇ)
ಅನಾಗಯ. 'ಅಣಾಗಯ' ಶಬ್ದವನ್ನು ನೋಡುವುದು
ಅನಾಗಾರ. 'ಅಣಾಗಾರ' ಶಬ್ದವನ್ನು ನೋಡುವುದು
ಅನಾಯ. 'ಅಣಾಯ' ಶಬ್ದವನ್ನು ನೋಡುವುದು
ಅನಾಲಂಫ.(ಚೂಪೈ). ವಿ: [ಅನಾರಂಭ] ಪಾಪರಹಿತ (ಕುಮಾ), ಪ್ರಾರಭಿಸದಿರುವುದು
ಅನಾಲಂಫ. (ಚೂಪೈ). ವಿ: [ಅನಾಲಂಭ] ದಯಾಳು, ಹಿಂಸೆಮಾಡದವನು, (ಕುಮಾ)
ಅನಿಗಿಣ. 'ಅಣಗಿಣ'ಶಬ್ದವನ್ನು ನೋಡುವುದು(ಸಮ)
ಅನಿದಾಯಾ.} 'ಅಣಿದಾ' ಶಬ್ದವನ್ನು ನೋಡುವುದು
ಅನಿದ್ಧಾಯಾ.} (ಪಣಣಾ)
ಅನಿಮಿತ್ತೀ. ಸ್ತ್ರೀ: [ಅನಿಮಿತ್ತೀ] ಲಿಪಿ–ವಿಶೇಷ
ಅನಿಯಮಿಯ. ವಿ: [ಅನಿಯಮಿತ] ಅವ್ಯವಸ್ಥಿತ, ಅಂಕೆ ಅಥವಾ ಕಟ್ಟಳೆಯಿಲ್ಲದಿರುವಿಕೆ, ಇಂದ್ರಿಯ ನಿಗ್ರಹವಿಲ್ಲದವನು(ಪಉಮ) ಅನಿಶ್ಚಿತ
ಅನು(ಅಪ) 'ಅಣ್ಣಹಾ' ಶಬ್ದವನ್ನು ನೋಡುವುದು

ಅನುಚಿಟ್ಠಿಯ. 'ಅಣುಟ್ಠಿಯ' ಶಬ್ದವನ್ನು ನೋಡುವುದು
ಅನ್ನಓ. 'ಅಣ್ಣಓ' ಶಬ್ದವನ್ನು ನೋಡುವುದು, **–ಹುತ್ತ.** ಕ್ರಿ ವಿ. [–ಮುಖ] ಬೇರೊಂದು ಕಡೆಗೆ
ಅನ್ನತ್ಥಂ. 'ಅಣ್ಣತ್ಥ' ಶಬ್ದವನ್ನು ನೋಡುವುದು(ಆಚಾ)
ಅನ್ನತ್ಥಂ.} ಪು: [ಅನ್ವಯ] ಒಂದೇ ಅಸ್ತಿತ್ವದಲ್ಲಿ(ಸತ್ತೆಯಲ್ಲಿ)ಇನ್ನೊಂದು ಕೂಡ
ಅನ್ನಯ.} ಇರುವುದು, ಬೆಂಕಿ ಉರಿಯುತ್ತಿರುವಾಗಲೇ ಹೊಗೆ ಇರುವಂತೆ, ಕ್ರಮವಾದ ಸಂಬಂಧ(ಉಪ), ವಂಶ, ಕುಲ ತಾತ್ಪರ್ಯ, ಅಭಿಪ್ರಾಯ, ಅನುಸರಿಸುವುದು
ಅನ್ನಾ. ಸ್ತ್ರೀ: [ದೇ] ಜನನಿ, ತಾಯಿ
ಅನ್ನಾಇಟ್ಠ. ವಿ: [ಅನ್ವಾವಿಷ್ಟ] ಆಕ್ರಾಂತ, ಆಕ್ರಮಿಸಲ್ಪಟ್ಟ, ಅತಿಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ
ಅನ್ನಾಹುತ್ತ. ವಿ: [ದೇ] ವಿಮುಖ, ಹಿಂದಕ್ಕೆ ತಿರುಗಿರುವ, ಪ್ರತಿಕೂಲ, ವಿರುದ್ಧ ನಡೆವಳಿಕೆಯ, ದ್ವೇಷ ಮನೋಭಾವದ
ಅನ್ನಿ. ವಿ: [ಅನ್ಯದೀಯ] ಪರಕೀಯ, ಇತರರಿಗೆ ಸಂಬಂಧಿಸಿದ
ಅನ್ನಿಯಸುಯ. ಪು: [ಅನ್ನಿಕಾಸುತ] ಒಬ್ಬ ಪ್ರಖ್ಯಾತ ಜೈನಮುನಿ.
ಅನ್ನುತ್ತಿ. ಸ್ತ್ರೀ: [ಅನ್ಯೋಕ್ತಿ] ಪ್ರಸಿದ್ಧವಾದ ಅನ್ಯೋಕ್ತಿ ಅಲಂಕಾರ. ಒಬ್ಬ ವ್ಯಕ್ತಿ ಅಥವಾ ಒಂದು ಘಟನೆ, ಸಂದರ್ಭಕ್ಕೆ ಹೇಳಿದ್ದು ಇನ್ನೊಬ್ಬ ವ್ಯಕ್ತಿ, ಘಟನೆ,ಸಂದರ್ಭಕ್ಕೆ ಅನ್ವಯವಾಗುತ್ತಿರುತ್ತದೆ, ಬೇರೆಮಾತು
ಅನ್ನುಮನ್ನ. 'ಅಣ್ಣುಣ್ಣ' ಶಬ್ದವನ್ನು ನೋಡುವುದು
ಅನ್ನೂಣ. ವಿ: [ಅನ್ಯೂನ] ಹೀನವಲ್ಲದ, ಕಡಿಮೆಯಾಗದ, ಕೊರತೆಯಿಲ್ಲದ
ಅಪ. ಸ್ತ್ರೀ.ಬ: [ಅಪ್] ನೀರು, **–ಕಾಯ.** ಪು:[–ಕಾಯ] ಜಲಚರ ಪ್ರಾಣಿ
ಅಪಇಟ್ಠಾಣ. 'ಅಪ್ಪಇಟ್ಠಾಣ' ಶಬ್ದವನ್ನು ನೋಡುವುದು
ಅಪಇಟ್ಠಿಅ. ಪು: [ಅಪ್ರತಿಷ್ಠಿತ] ನರಕ ಪ್ರದೇಶ, ಅಸ್ಥಿರ, ಚಂಚಲ. 'ಅಪ್ಪಇಟ್ಠಿಅ' ಶಬ್ದವನ್ನು ನೋಡುವುದು
ಅಪಏಸ ವಿ: [ಅಪ್ರದೇಶ] ಭಾಗವಿಲ್ಲದ, ಅವಯವ ರಹಿತ, ಸಂಪೂರ್ಣವಾದ, ಕೆಟ್ಟ ಜಾಗ
ಅಪಂಗ. ಪು: [ಅಪಾಂಗ] ಕಡೆಗಣ್ಣು, ಕಣ್ಣಿನ ಕಡೆಯ ಭಾಗ, ತಿಲಕ, ವಿ: ಅಂಗಹೀನ

ಅಪಂಡಿಅ. ವಿ: [ದೇ] ನಷ್ಟವಿಲ್ಲದ, ಲಾಭ, ಈಗ ಇರುವ, ಅಸ್ತಿತ್ವದಲ್ಲಿರುವ
ಅಪಂಡಿಅ. ವಿ: [ಅಪಂಡಿತ] ಮೂರ್ಖ, ಅಜ್ಞಾನಿ ತಿಳಿವಳಿಕೆಯಿಲ್ಲದ(ಬೃಹ)
ಅಪಕರಿಸ. ಪು: [ಅಪಕರ್ಷ] ಎಳೆದುಕೊಳ್ಳುವುದು, ನಾಶ
ಅಪಗಂಡ. ವಿ: [ಅಪಗಂಡ] ನಿರ್ದೋಷ, ಶಿಶು, ಬಾಲಕ, ನ: ನೊರೆ,
ಅಪಚಂಯ. ಪು: [ಅಪಚಯ] ಹೀನತೆ, ಕಡಿಮೆಯಾಗುವುದು(ಉತ್ತ) ನಷ್ಟ,
ಅಪಚ್ಚ. 'ಅವಚ್ಚ' ಶಬ್ದವನ್ನು ನೋಡುವುದು
ಅಪಚ್ಚಯ. ಪು: [ಅಪ್ರತ್ಯಯ] ಅವಿಶ್ವಾಸ, ಅಜ್ಞಾನ,
ಅಪಚ್ಚಲ. ವಿ: [ಅಪ್ರತ್ಯಲ] ಅಸಮರ್ಥ, ಅಯೋಗ್ಯ
ಅಪಚ್ಛ. ವಿ: [ಅಪಥ್ಯ] ಅಹಿತಕರವಾದ್ದು, ತೊಂದರೆಯುಗುವ ಆಹಾರ ಸೇವನೆ, ನ: ಜೀರ್ಣವಾಗದ ಆಹಾರ ಸೇವನೆ
ಅಪಚ್ಛಿಮ. ವಿ: [ಅಪಶ್ಚಿಮ] ಅಂತಿಮ, ಅಗ್ರೇಸರ, ಮಿತಿಮೀರಿದ
ಅಪಜ್ಜತ್ತ.} ವಿ: [ಅಪರ್ಯಾಪ್ತ] ಸಾಕಾಗದಿರುವ,
ಅಪಜ್ಜತ್ತಗ.} ಅಸಂಪೂರ್ಣ, ಅಸಮರ್ಥ, ಅಪಾರವಾದ, –ನಾಮ. ನ: [–ನಾಮನ್] ನಾಮ–ಕರ್ಮದ ಒಂದು ಭೇದ(ಸಮ)
ಅಪಜ್ಜವಸಿಯ. ವಿ: [ಅಪಯವಸಿತ] ನಾಶವಿಲ್ಲದ, ಕೊನೆಯಿಲ್ಲದ(ತಾ)
ಅಪಡಿಚ್ಛಿರ. ವಿ: [ದೇ]ಜಡ ಬುದ್ಧಿ, ಮೂರ್ಖ(ದೇ)
ಅಪಡಿಣ್ಣ.} ವಿ: [ಅಪ್ರತಿಜ್ಞ] ಪ್ರತಿಜ್ಞೆ ಮಾಡದ,
ಅಪಡಿನ್ನ.} ನಿಶ್ಚಯವಿಲ್ಲದ(ಆಚಾ), ರಾಗದ್ವೇಷಾದಿ ಬಂಧನಗಳಿಲ್ಲದ, ಫಲಾಪೇಕ್ಷೆಯಿಲ್ಲದೆ, ಕರ್ಮಾನುಷ್ಠಾನ ಮಾಡುವವನು, =ನಿಷ್ಕಾಮ (ಸೂಅ)
ಅಪಡಿಪೊಗ್ಗಲ. ವಿ: [ಅಪ್ರತಿಪುದ್ಗಲ] ಬಡವ, ಧನಿಕನಲ್ಲದವನು
ಅಪಡಿಬದ್ಧ. ವಿ: [ಅಪ್ರತಿಬದ್ಧ] ಪ್ರತಿಬಂಧ ಅಥವಾ ತಡೆಯಿಲ್ಲದ,
ಅಪಡಿವಾಇ. 'ಅಪ್ಪಡಿವಾಇ' ಶಬ್ದವನ್ನು ನೋಡುವುದು
ಅಪಡಿಸಂಲೀಣ.ವಿ:[ಅಪ್ರತಿಸಂಲೀನ] ಸಂಯಮವಿಲ್ಲದ, ಇಂದ್ರಿಯಗಳ ಮೇಲೆ ಹತೋಟಿಯಿಲ್ಲದ
ಅಪಡಿಹಟ್ಟು. ಅ: [ಅಪ್ರತಿಹೃತ್ಯ] ಕೊಡದೆ,
ಅಪಡಿಹಯ. 'ಅಪ್ಪಡಿಹಯ' ಶಬ್ದವನ್ನು ನೋಡುವುದು (ಣಾಯಾ)
ಅಪಡೀಕಾರ. ವಿ: [ಅಪ್ರತೀಕಾರ] ಚಿಕಿತ್ಸೆಯಿರದ, ಉಪಾಯವಿಲ್ಲದ(ಪಣ್ಣ) ಪ್ರತೀಕಾರ ಮಾಡಲಾಗದ?
ಅಪಡುಪ್ಪಣ್ಣ.} ವಿ: [ಅಪ್ರತ್ಯುತ್ಪನ್ನ] ಇಲ್ಲದಿರುವ,
ಅಪಡುಪ್ಪನ್ನ.} ಚುರುಕಿಲ್ಲದ, ಸಮಯಕ್ಕೆ ತಕ್ಕ ಬುದ್ಧಿಯಿಲ್ಲದ, ಉಪಾಯದಲ್ಲಿ ಕುಶಲನಲ್ಲದ
ಅಪಭಾಸಿಯ. 'ಅವಭಾಸಿಯ=ಅಪಭಾಷಿತ' ಶಬ್ದವನ್ನು ನೋಡುವುದು
ಅಪಣಟ್ಠ. ವಿ: [ಅಪ್ರನಷ್ಟ] ನಾಶವೊದಗದ
ಅಪತ್ತ. 'ಅಪ್ಪತ್ತ' ಶಬ್ದವನ್ನು ನೋಡುವುದು (ಬೃ)
ಅಪತ್ತಿಅಂತ. ವ.ಕೃ [ಅಪ್ರತಿಯತ್] ನಂಬಿಕೆಯಿಡದೆ
ಅಪತ್ತಿಯ. 'ಅಪ್ಪತ್ತಿಯ' ಶಬ್ದವನ್ನು ನೋಡುವುದು
ಅಪತ್ಥ. 'ಅಪಚ್ಛ' ಶಬ್ದವನ್ನು ನೋಡುವುದು(ಉತ್ತ)
ಅಪಭಾಸಿಯ. 'ಅವಭಾಸಿಯ=ಅಪಭಾಷಿತ' ಶಬ್ದವನ್ನು ನೋಡುವುದು
ಅಪಮತ್ತ. 'ಅಪ್ಪಮತ್ತ' ಶಬ್ದವನ್ನು ನೋಡುವುದು(ಆಚಾ)
ಅಪಮಾಣ. ನ: [ಅಪ್ರಮಾಣ] ಅಸತ್ಯ, ಸುಳ್ಳು, ಹೆಚ್ಚು, ವಿ: ಅಧಿಕ(ಉತ್ತ)
ಅಪಮಾಯ. ವಿ: [ಅಪ್ರಮಾದ] ಜಾಗರೂಕತೆ, ಎಚ್ಚರಿಕೆ, ಮೈಮರೆಯದಿರುವುದು,
ಅಪಯ ವಿ: [ಅಪದ] ಕಾಲಿಲ್ಲದ, ಮರ, ದ್ರವ್ಯ, ಭೂಮಿ, ಹಾವು ಹುಳು ಇತ್ಯಾದಿ ಕಾಲಿಲ್ಲದ ವಸ್ತು ಮತ್ತು ಪ್ರಾಣಿಗಳು, ಯೋಗ್ಯವಲ್ಲದ ಸ್ಥಳ. **ಪು: ಮುಕ್ತಾತ್ಮ,** (ಆಚಾ) ಸೂತ್ರದ ಒಂದು ದೋಷ
ಅಪಯ. ಸ್ತ್ರೀ: [ಅಪ್ರಜ] ಸಂತಾನವಿಲ್ಲದವನು(ಬೃಹ)
ಅಪರ. 'ಅವರ' ಶಬ್ದವನ್ನು ನೋಡುವುದು. ವೈಶೇಷಿಕ ದರ್ಶನದಲ್ಲಿ ಪ್ರಸಿದ್ಧವಾದ ಒಂದು ಅಂಗ ಸಾಮಾನ್ಯ
ಅಪರಚ್ಛ. ವಿ: [ಅಪರಾಕ್ಷ] ಪರೋಕ್ಷ ಜ್ಞಾನವುಳ್ಳವನು, ಎದುರಿಗೆ ಇಲ್ಲದಿರುವುದು, ಅಪ್ರತ್ಯಕ್ಷ ಜ್ಞಾನ (ಪಣ್ಣ)
ಅಪರದ್ಧ. 'ಅವರಜ್ಝ' ಶಬ್ದವನ್ನು ನೋಡುವುದು
ಅಪರಂತಿಯಾ. ಸ್ತ್ರೀ: [ಅಪರಾಂತಿಕಾ] ಒಂದು ಛಂದಸ್ಸು (ಅಜಿ)
ಅಪರಾಇಯ. ವಿ: [ಅಪರಾಜಿತ] ಜಯಿಸಲ್ಪಡದವನು, **ಪು:** ಏಳನೇ ಬಲದೇವನ ಪೂರ್ವಜನ್ಮದ

ಹೆಸರು(ಸಂ), ಉತ್ತಮ ಶ್ರೇಣಿಯ ದೇವರುಗಳ ಒಂದು ಜಾತಿ, ಭಗವಾನ್ ವೃಷಭದೇವನ ಒಬ್ಬ ಮಗ, ಮಹಾ ಗ್ರಹ(ಠಾ), ಅನುತ್ತರ ದೇವಲೋಕದ ಒಂದು ವಿಮಾನ–ದೇವಾವಾಸ, ರುಚಕ ಪರ್ವತದ ಒಂದು ಶಿಖರ(ಠಾ) ಜಂಬೂ ದ್ವೀಪದ ಜಗತಿಯ ಉತ್ತರ ದ್ವಾರ, **ಪು:** ವಿಷ್ಣು, ಈಶ್ವರ

ಅಪರಾಇಯಾ. ಸ್ತ್ರೀ: [ಅಪರಾಜಿತಾ] ವಿದೇಹ–ವರ್ಷದ ಒಂದು ನಗರ, ಎಂಟನೇ ಬಲದೇವನ ತಾಯಿ, ಅಂಗಾರಕ ಗ್ರಹದ ಪಟ್ಟದ ರಾಣಿಯ ಹೆಸರು, ಒಂದು ದಿಕ್ಕಿನ ಕುಮಾರಿ (ಠಾ), ಓಷಧೀ–ವಿಶೇಷ, ಅಂಜನಾದ್ರಿ ಪರ್ವತದ ಮೇಲಿರುವ ಒಂದು ಪುಷ್ಕರಿಣಿ, ಗರಿಕೆ ಹುಲ್ಲು, ಹೊನ್ನೆಮರ, ಶೇಪಾಲಿಕಾ ವೃಕ್ಷ, ವಿಷ್ಣುಕ್ರಾಂತಿಗಿಡ, ಈಶಾನ್ಯ ದಿಕ್ಕು, ದುರ್ಗಾದೇವಿ

ಅಪರಾಜಿಯು. 'ಅಪರಾಇಯು' ಶಬ್ದವನ್ನು ನೋಡುವುದು (ಕಪ್ಪ)

ಅಪರಾಜಿಯಾ 'ಅವರಾಇಯಾ' ಶಬ್ದವನ್ನು ನೋಡುವುದು (ಠಾ)

ಅಪರಾಜಿಯಾ. ಸ್ತ್ರೀ: [ಅಪರಾಜಿತಾ] ಭಗವಾನ್ ಮಲ್ಲಿನಾಥನ ದೀಕ್ಷಾ ಶಿಬಿಕೆ, ಪಕ್ಷದ ಹತ್ತನೇ ರಾತ್ರಿ

ಅಪರಿಗ್ಗಹ. ವಿ: [ಅಪರಿಗ್ರಹ] ಸ್ವೀಕರಿಸದಿರುವುದು, ಧನ, ಧಾನ್ಯಾದಿಗಳನ್ನು ತೆಗೆದುಕೊಳ್ಳದಿರುವುದು ಮಮತಾ–ರಹಿತ(ಪಣ್ಣ) ಸರ್ವಸಂಗ ಪರಿತ್ಯಾಗ ಮಾಡಿದ ಯತಿ, ಪತ್ನಿಯಿಲ್ಲದವನು

ಅಪರಿಗ್ಗಹಾ. ಸ್ತ್ರೀ: [ಅಪರಿಗ್ರಹಾ] ವೇಶ್ಯೆ(ವವ)

ಅಪರಿಗ್ಗಹಿಆ. ಸ್ತ್ರೀ: [ಅಪರಿಗೃಹೀತಾ] ವೇಶ್ಯೆ, ಕನ್ಯೆ(ಪಡಿ), ಪತಿಯಿಲ್ಲದ ಹೆಣ್ಣು, ಮನೆಯ ಆಳು, ನೀರು ತುಂಬುವವಳು, ದೇವಪುತ್ರಿ, ದೇವತೆಗೆ ಕೊಡುಗೆಯಾಗಿ ಕೊಟ್ಟಕನ್ಯೆ

ಅಪರಿಚ್ಛಣ್ಣ.} ವಿ: [ಅಪರಿಚ್ಛನ್ನ] ತೆರೆಯಿಂದ

ಅಪರಿಚ್ಛನ್ನ.} ಮರೆಮಾಡಿಲ್ಲದ, ಕುಟುಂಬವನ್ನು ಹೊಂದಿಲ್ಲದ(ವವ)

ಅಪರಿಣಯು. ವಿ: [ಅಪರಿಣತ] ರೂಪಾಂತರ ಹೊಂದಿಲ್ಲದ, (ಠಾ) ಜೈನ ಸಾಧುವಿನ ಭಿಕ್ಷೆಯ ಒಂದು ದೋಷ(ಆಚಾ), ಪಕ್ವವಾಗದಿರುವ, ನಿಮುಣನಲ್ಲದ

ಅಪರಿತ್ತ. ವಿ: [ಅಪರೀತ] ಅಪರಿಮಿತವಾದ, ಅನಂತ

ಅಪರಿಸೇಸ. ವಿ: [ಅಪರಿಶೇಷ] ಸಕಲ, ಎಲ್ಲ, ನಿಶ್ಶೇಷ

ಅಪರಿಹಾರಿಯ. ವಿ: [ಅಪರಿಹಾರಿಕ] ದೋಷಗಳನ್ನು ಪರಿಹರಿಸದವನು(ಆಚಾ), ಜೈನೇತರ ದರ್ಶನವನ್ನು ಅನುಸರಿಸುವ ಗೃಹಸ್ಥ(ನಿಚೂ)

ಅಪವಗ್ಗ. **ಪು:** [ಅಪವರ್ಗ] ಮೋಕ್ಷ(ಸುರ), ತ್ಯಾಗ, ದಾನ, ಸಮಾಪ್ತಿ

ಅಪವಿದ್ಧ. ವಿ: [ಅಪವಿದ್ಧ] ಪ್ರೇರಿತ(ಸೇ) **ನ:** ಗುರುವಿಗೆ ನಮಸ್ಕರಿಸಿ ಕೂಡಲೇ ಓಡಿಬಿಡುವ ಒಂದು ದೋಷ, **ಪು:** ತಂದೆತಾಯಿಯರಿಂದ ತ್ಯಜಿಸಲ್ಪಟ್ಟು ಬೇರೆಯವರಿಂದ ಸಾಕಲ್ಪಟ್ಟ ಮಗ, ತಿರಸ್ಕರಿಸಲ್ಪಟ್ಟ

ಅಪಹ. ವಿ: [ಅಪ್ರಭ] ನಿಸ್ತೇಜ, ಕಾಂತಿಹೀನ(ದೇ)

ಅಪಹತ್ಥ. **'ಅವಹತ್ಥ'** ಶಬ್ದವನ್ನು ನೋಡುವುದು

ಅಪಹಾರಿ. ವಿ: [ಅಪಹಾರಿನ್] ಅಪಹರಿಸುವವನು, ಕದಿಯುವವನು, ಸ್ಥಳಾಂತರಿಸುವವನು

ಅಪಹಿಯ. ವಿ: [ಅಪಹೃತ] ಅಪಹರಿಸಲ್ಪಟ್ಟ, ಕದಿಯಲ್ಪಟ್ಟ

ಅಪಹು. ವಿ: [ಅಪ್ರಭು] ಅಸಮರ್ಥ, ಅಶಕ್ತ, ಅನಾಥ(ಪಉಮ) ರಾಜನಿಲ್ಲದ ದೇಶ

ಅಪಾಇಯ. ವಿ: [ಅಪಾತ್ರಿತ] ಪಾತ್ರವಿಲ್ಲದ(ಕ ಸ)

ಅಪಾಉಡ. ವಿ: [ಅಪ್ರಾವೃತ] ಮರೆಮಾಡದಿರುವ, ಮುಚ್ಚಿಲ್ಲದ, ವಸ್ತ್ರವಿಲ್ಲದ, ನಗ್ನ(ಠಾ)

ಅಪಾದಾಣ. ನ: [ಅಪಾದಾನ] ಪಂಚಮೀ ವಿಭಕ್ತಿ ಹತ್ತುವ ಕಾರಕ, ಅಪಹರಿಸುವುದು

ಅಪಾಣ. ನ: [ಅಪಾನ] ವೀಳ್ಯವಿಲ್ಲದಿರುವುದು, ನೀರಿನಂಥ ಕುಡಿಯುವ ವಸ್ತು(ಭಗ) ಪಂಚ ಪ್ರಾಣವಾಯುಗಳಲ್ಲೊಂದು, ಗುದ, ವೃಷಣ, ಅಂಡಕೋಶ

ಅಪಾಯಾವಗಮ. ಪು: [**ಅಪಾಯಾಪಗಮ**] ತೀರ್ಥಂಕರನ ಒಂದು ಅತಿಶಯ

ಅಪಾರ. ವಿ: [ಅಪಾರ] ಪಾರವಿಲ್ಲದ, ಎಲ್ಲೆಯಿಲ್ಲದ, ಎದುರು ದಡ, ಅನಂತ, ಹೆಚ್ಚು, ಅಗಾಧವಾದ, ಸಮುದ್ರ

ಅಪಾರಮಗ್ಗ. **ಪು:** [ದೇ] ವಿಶ್ರಾಮ, ವಿಶ್ರಾಂತಿ(ದೇ)

ಅಪಾವ. ವಿ: [ಅಪಾಪ] ಪಾಪವಿಲ್ಲದ, **ನ: ಪುಣ್ಯ**

ಅಪಾವಾ. ಸ್ತ್ರೀ: [ಅಪಾಪಾ] ಮಹಾವೀರರ ನಿರ್ವಾಣವಾಗಿದ್ದ ನಗರ ವಿಶೇಷ ಇಂದು ಪಾವಾಪುರಿ ಎಂಬ ಹೆಸರಿನಿಂದ ಖ್ಯಾತ

ಅಪಿಟ್ಟ. ವಿ: [ದೇ] ಪುನರುಕ್ತ, ಮತ್ತೆ ಹೇಳಲಾದ(ಷಡ್)
ಅಪಿಯ. ವಿ: [ಅಪ್ರಿಯ] ಇಷ್ಟವಲ್ಲದ, ಪ್ರಿಯವಲ್ಲದ (ಜೀವ)
ಅಪಿಹ. ಅ: [ಅಪೃಥಕ್] ಬೇರೆಯಲ್ಲದ, ಭಿನ್ನವಲ್ಲದ (ಕುಮಾ)
ಅಪುಣಬಂಧಗ.} ವಿ: [ಅಪುನರ್ಬಂಧಕ] ಮತ್ತೆ
ಅಪುಣಬಂಧಯ.} ಉತ್ಕೃಷ್ಟ ಕರ್ಮಬಂಧವನ್ನು ಮಾಡಿಕೊಳ್ಳದ, ತೀವ್ರ ಭಾವದಲ್ಲಿ ಪಾಪ ಮಾಡದವನು
ಅಪುಣಬ್ಭವ. ಪು: [ಅಪುನರ್ಭವ] ಮತ್ತೆ ಆಗದಿರುವುದು, ವಿ: ಮತ್ತೆ ಹುಟ್ಟದಿರುವವನು, ಮುಕ್ತಿಪ್ರದ(ಪಣ್ಣ), ಬ್ರಹ್ಮಜ್ಞಾನಿ, ಪರಿಹಾರ
ಅಪುಣಬ್ಭಾವ. ವಿ: [ಅಪುನರ್ಭಾವ] ಮತ್ತೆ ಸಂಭವಿಸದಿರುವುದು,
ಅಪುಣಭವ. 'ಅಪುಣಬ್ಭವ' ಶಬ್ದವನ್ನು ನೋಡುವುದು
ಅಪುಣರಾಗಮ. ಪು: [ಅಪುನರಾಗಮ] ಮತ್ತೆ ಹುಟ್ಟಿ ಬರದವನು, ಮುಕ್ತಾತ್ಮ, ಮೋಕ್ಷ(ದಸಚೂ)
ಅಪುಣರಾವತ್ತಗ.} ಪು: [ಅಪುನರಾವರ್ತಕ] ಮತ್ತೆ
ಅಪುಣರಾವತ್ತಯ.} ಸಂಚರಿಸದಿರುವವನು, ಮುಕ್ತ ಆತ್ಮ, ಮೋಕ್ಷ, ಮುಕ್ತಿ(ಔಪ)
ಅಪುಣರಾವತ್ತಿ. ಪು: [ಅಪುನರಾವರ್ತಿನ್] ಮುಕ್ತ ಆತ್ಮ
ಅಪುಣರಾವಿತ್ತಿ. ಪು: [ಅಪುನರಾವೃತ್ತಿ] ಮೋಕ್ಷ, ಮುಕ್ತಿ(ಪಡಿ)
ಅಪುಣರುತ್ತ. ವಿ: [ಅಪುನರುಕ್ತ] ಮತ್ತೆ ಹೇಳಲ್ಪಡದ, ಪುನರುಕ್ತಿ ದೋಷವಿಲ್ಲದ(ರಾಯ)
ಅಪುಣಾಗಮ. 'ಅಪುಣರಾಗಮ' ಶಬ್ದವನ್ನು ನೋಡುವುದು
ಅಪುಣಾಗಮಣ. ನ: [ಅಪುನರಾಗಮನ] ಮತ್ತೆ ಬರದಿರುವುದು, ಮತ್ತೆ ಹುಟ್ಟದಿರುವುದು (ಗಉಡ)
ಅಪುಣ್ಣ. ನ: [ಅಪುಣ್ಯ] ಪಾಪ, ವಿ: ಪುಣ್ಯರಹಿತ, ಪುಣ್ಯವಿಲ್ಲದ ಹತಭಾಗ್ಯ(ವಿಪಾ)
ಅಪುಣ್ಣ. ನ: [ಅಪೂರ್ಣ] ಪೂರ್ಣವಾಗದಿರುವುದು, ಅರೆಬರೆ, ಅಪರಿಪೂರ್ಣ(ವಿಪಾ)
ಅಪುಣ್ಣ. ವಿ: [ದೇ] ಆಕ್ರಾಂತ, ಆಕ್ರಮಿಸಲ್ಪಟ್ಟ
ಅಪುತ್ತ. } ವಿ: [ಅಪುತ್ರ, -ಕ] ಮಗನಿಲ್ಲದ, ಅಯೋಗ್ಯ
ಅಪುತ್ತಿಯ.} ಮಗ, ಸ್ವಜನರಿಲ್ಲದ, ನಿರ್ಮಮ, ನಿಃಸ್ಪೃಹ
ಅಪುನ್ನ. 'ಅಪುಣ್ಣ' ಶಬ್ದವನ್ನು ನೋಡುವುದು

ಅಪುಮ. ನ: [ಅಪುಂಸ] ನಪುಂಸಕ
ಅಪುಲ್ಲ. 'ಅಪ್ಪುಲ್ಲ' ಶಬ್ದವನ್ನು ನೋಡುವುದು
ಅಪುವ್ವ. ವಿ: [ಅಪೂರ್ವ] ನೂತನ, ನವೀನ, ಅದ್ಭುತ, ಆಶ್ಚರ್ಯಕಾರಕ, ಅಸಾಧಾರಣ(ಹೇ) ಪೂರ್ವವಲ್ಲದ್ದು, **-ಕರಣ.** ನ: [-ಕರಣ] ಆತ್ಮದ ಒಂದು ಅಭೂತ ಪೂರ್ವವಾದ ಶುಭಪರಿಣಾಮ (ಆಚಾ), ಎಂಟನೆಯ ಗುಣಾಸ್ಥಾನಕ (ಪವ)
ಅಪೂಯ.} ಪು: [ಅಪೂಪ] ತಿನ್ನುವ ಪದಾರ್ಥ-
ಅಪೂವ.} ಹಿಟ್ಟಿನಿಂದ ಮಾಡಿದ ರೊಟ್ಟಿ, ದೋಸೆ ಹೋಳಿಗೆ ಇತ್ಯಾದಿ(ಔಪ), ಪುರೋಡಾಶ
ಅಪೆಕ್ಖ. ಸಕ: [ಅಪ+ಈಕ್ಷ್] ಬಯಸು, ಇಚ್ಛಿಸು, ಅಪೇಕ್ಷಿಸು, ನಿರೀಕ್ಷಿಸು, ಕಾಯು(ನಾಟ)
ಅಪೆಚ್ಛ. ವಿ: [ಅಪ್ರೇಕ್ಷ್ಯ] ನೋಡಲು ಸಾಧ್ಯವಿಲ್ಲದ, ನೋಡಲು ಯೋಗ್ಯವಲ್ಲದ(ಉವ)
ಅಪೇಯ. ವಿ: [ಅಪೇಯ] ಕುಡಿಯಲು ಯೋಗ್ಯವಲ್ಲದ, ಮದ್ಯ ಇತ್ಯಾದಿ(ಕುಮಾ)
ಅಪೇಯ. ವಿ: [ಅಪೇತ] ಹೊರಟು ಹೋದ, ಬಿಟ್ಟು ಹೋದ(ಬೃಹ)
ಅಪೇಹಯ. ವಿ: [ಅಪೇಕ್ಷಕ] ಅಪೇಕ್ಷಿಸುವವನು, ಇಚ್ಛಿಸುವವನು(ಆವ)
ಅಪೋರಿಸಿಯ.} ವಿ: [ಅಪೌರುಷಿಕ] ಪುರುಷನಿಗಿಂತ
ಅಪೋರಿಸೀಯ.} ಹೆಚ್ಚಿನ, ಪುರುಷನನ್ನು ಮೀರಿದ, ಅಗಾಧ(ಣಾಯಾ)
ಅಪೋರಿಸೀಯ. ವಿ:[ಅಪೌರುಷೇಯ] ಮನುಷ್ಯರಂತಲ್ಲದ, ಅಮಾನುಷ ಸಾಮರ್ಥ್ಯದ, ದಿವ್ಯಶಕ್ತಿ(ಠಾ)
ಅಪೋಹ. ಸಕ: [ಅಪ+ಊಹ್] ಸಂದೇಹ ಪರಿಹರಿಸು, ನಿಶ್ಚಯಿಸು
ಅಪೋಹ. ಪು: [ಅಪೋಹ] ನಿಶ್ಚಿತ ಜ್ಞಾನ, ಬೇರೆ ಎಂಬ ಭಾವ, ಪರಿತ್ಯಾಗ, ವರ್ಜಿಸುವುದು
ಅಪ್ಪ. 'ಅತ್ತ= ಪ್ರಾಪ್ತ' ಶಬ್ದವನ್ನು ನೋಡುವುದು
ಅಪ್ಪ. ವಿ:[ಅಲ್ಪ] ಕಡಿಮೆ, ಸ್ವಲ್ಪ, ಕೊಂಚ, ಅಭಾವ(ಜೀವ)
ಅಪ್ಪ. ಪು: [ಆತ್ಮನ್] ಆತ್ಮ, ಜೀವ, ಚೇತನ, ತನ್ನ, ದೇಹ, ಸ್ವಭಾವ, ಸ್ವರೂಪ(ಆಚಾ) **-ಘಾಇ.** ವಿ: [-ಘಾತಿನ್] ಆತ್ಮಹತ್ಯೆ ಮಾಡಿಕೊಳ್ಳುವವನು **-ಛಂದ.** ವಿ: [-ಚ್ಛಂದ] ಸ್ವಚ್ಛಂದವಾದ(ಉಪ) **-ಜ್ಜ.** ವಿ: [-ಜ್ಞ] ಆತ್ಮಜ್ಞ; ಆತ್ಮವನ್ನು ಅರಿತವನು, ಸ್ವತಂತ್ರ **-ಜ್ಜೋಇ.** ಪು: [-ಜ್ಯೋತಿಸ್]

ಜ್ಞಾನಸ್ವರೂಪ(ವಿಸೇ), –ಣ್ಣು. ವಿ: [–ಜ್ಞ] ಆತ್ಮಜ್ಞಾನಿ –ವಸ. ವಿ: [–ವಶ] ಸ್ವತಂತ್ರನಾದವನು (ಪ ಉಮ); –ವಹ. ಪು: [–ವಧ] ಆತ್ಮಹತ್ಯೆ; ವಾಇ. ವಿ: [–ವಾದಿನ್] ಆತ್ಮದ ಹೊರತು ಬೇರೆ ಪದಾರ್ಥವನ್ನು ಒಪ್ಪದವನು (ಣಂದಿ);

ಅಪ್ಪ. ಪು: [ದೇ] ತಂದೆ

ಅಪ್ಪ. ಸಕ: [ಅರ್ಪಯ್] ಅರ್ಪಿಸು, ಕೊಡು–'ಅಪ್ಪೇಇ'

ಅಪ್ಪಇಟ್ಠಾಣ. ಪುಂನ: [ಅಪ್ರತಿಷ್ಠಾನ] ಮೋಕ್ಷ, ಏಳನೇ ನರಕದಲ್ಲಿಯ ಮಧ್ಯದ ನೆಲೆ (ಸಮ)

ಅಪ್ಪಆಸ. 'ಅಪ್ಪಗಾಸ' ಶಬ್ದವನ್ನು ನೋಡುವುದು

ಅಪ್ಪ.ಆಸ. ಸಕ: [ಶ್ಲಿಷ್] ಆಲಿಂಗಿಸು–ಅಪ್ಪಆಸಇ(ಷಡ್)

ಅಪ್ಪ ಇಟ್ಠಿಅ. ವಿ: [ಅಪ್ರತಿಷ್ಠಿತ] ಪ್ರತಿಬದ್ಧನಲ್ಲದ, ಶರೀರ ರಹಿತ. 'ಅಪಇಟ್ಠಿಅ' ಶಬ್ದವನ್ನು ನೋಡುವುದು

ಅಪ್ಪಉಲಿಯ. ವಿ: [ಅಪಕ್ವೌಷಧಿ] ಪಕ್ವವಾಗದ ಹಣ್ಣು–ಹಂಪಲು

ಅಪ್ಪಓಜಗ. ವಿ: [ಅಪ್ರಯೋಜಕ] ನಿಶ್ಚಾಯಕನಲ್ಲದ.

ಅಪ್ಪಜಾಣುಅ. ವಿ: [ಆತ್ಮಜ್ಞ] ಆತ್ಮವನ್ನು ತಿಳಿದವನು

ಅಪ್ಪಜಾಣುಅ. ವಿ: [ಅಲ್ಪಜ್ಞ] ಅಜ್ಞ, ಮೂರ್ಖ

ಅಪ್ಪಂಭರಿ. ವಿ: [ಆತ್ಮಂಭರಿ] ತನ್ನ ಹೊಟ್ಟೆಯನ್ನು ಮಾತ್ರ ತುಂಬಿಕೊಳ್ಳುವ ಸ್ವಾರ್ಥಿ(ಉಪ)

ಅಪ್ಪಕಂಪ. ವಿ: [ಅಪ್ರಕಂಪ] ನಿಶ್ಚಲ; ಚಲಿಸದ, ಸ್ಥಿರ(ಠಾ)

ಅಪ್ಪಕೇರ. ವಿ: [ಆತ್ಮೀಯ] ತನ್ನ, ತನಗೆ ಸಂಬಂಧಿಸಿದ (ಪ್ರಾಮಾ)

ಅಪ್ಪಕ್ಕ. ವಿ: [ಅಪಕ್ವ] ಬೇಯಿಸಲ್ಪಡದ, ಬಲಿಯದ, ಮಾಗದ, ಹಣ್ಣಾಗದಿರುವ, ಕಚ್ಚಾ

ಅಪ್ಪಗ. 'ಅಪ್ಪ' ಶಬ್ದವನ್ನು ನೋಡುವುದು

ಅಪ್ಪಗಾಸ. ಪು: [ಅಪ್ರಕಾಶ] ಬೆಳಕು ಇಲ್ಲದಿರುವುದು, ಕತ್ತಲೆ,(ನಿಚೂ) ರಹಸ್ಯ, ಗುಟ್ಟು

ಅಪ್ಪಗುತ್ತಾ.ಸ್ತ್ರೀ:[ದೇ] ಸಂಪಿಗೆಮರ, ನಸುಗುನ್ನಿ ಗಿಡ

ಅಪ್ಪಜ್ಝ. ವಿ: [ದೇ] ಸ್ವಾಧೀನ, ತನ್ನ ವಶದಲ್ಲಿರುವ(ದೇ)

ಅಪ್ಪಡಿಆರ. ವಿ: [ಅಪ್ರತಿಕಾರ] ಚಿಕಿತ್ಸೆಯಿಲ್ಲದ, ಉಪಾಯವಿಲ್ಲದ(ವಾ)

ಅಪ್ಪಡಿಕಂಟಯ. ವಿ: [ಅಪ್ರತಿಕಂಟಕ] ವಿರುದ್ಧ ಪಕ್ಷವಿಲ್ಲದ, ಪ್ರತಿಸ್ಪರ್ಧಿಯೇ ಇಲ್ಲದ(ರಾಯ)

ಅಪ್ಪಡಿಕಮ್ಮ. ವಿ: [ಅಪ್ರತಿಕರ್ಮನ್] ಸಂಸ್ಕಾರವಿಲ್ಲದ, ಪರಿಷ್ಕಾರವಿಲ್ಲದ(ಪಣ್ಣ) ಪ್ರತೀಕಾರ ಮಾಡಲು ಶಕ್ಯವಲ್ಲದ, ಸಮನವಾದ ಕೆಲಸವಿಲ್ಲದ

ಅಪ್ಪಡಿಕ್ಕಂತ. ವಿ: [ಅಪ್ರತಿಕ್ರಾಂತ] ದೋಷದಿಂದ ಬಿಡುಗಡೆಯಾಗದ, ವ್ರತ ನಿಯಮಗಳಲ್ಲಿ ಸೇರಿರುವ ದೋಷಗಳನ್ನು ಶುದ್ಧಿಗೊಳಿಸದವನು

ಅಪ್ಪಡಿಕುಟ್ಠ. ವಿ: [ಅಪ್ರತಿಕ್ರುಷ್ಟ] ನಿವಾರಿಸಲ್ಪಡದ, ತಡಯಲ್ಪಡದ (ಠಾ)

ಅಪ್ಪಡಿಚಕ್ಕ. ವಿ: [ಅಪ್ರತಿಚಕ್ರ] ಹೋಲಿಕೆಯಿಲ್ಲದ, ಎಣೆಯಿಲ್ಲದ, ಅಸಮಾನ(ಣಂದಿ)

ಅಪ್ಪಡಿಣ್ಣ.} 'ಅಪಡಿಣ್ಣ' ಶಬ್ದವನ್ನು ನೋಡುವುದು
ಅಪ್ಪಡಿನ್ನ.}

ಅಪ್ಪಡಿಬಂಧ. ಪು: [ಅಪ್ರತಿಬಂಧ] ತಡೆಯಿಲ್ಲದಿರುವುದು, ಅಡ್ಡಿಯಿಲ್ಲದಿರುವುದು, ವಿರೋಧವಿಲ್ಲದ

ಅಪ್ಪಡಿಬದ್ಧ. 'ಅಪಡಿಬದ್ಧ' ಶಬ್ದವನ್ನು ನೋಡುವುದು

ಅಪ್ಪಡಿಬುದ್ಧ. ವಿ: [ಅಪ್ರತಿಬುದ್ಧ] ಅಜಾಗೃತ, ಕೋಮಲ, ಸುಕುಮಾರ(ಅಭಿ)

ಅಪ್ಪಡಿಮ. ವಿ: [ಅಪ್ರತಿಮ] ಅನುಪಮ, ಅಸಮಾನ, ಅಸದೃಶ(ಉಪ)

ಅಪ್ಪಡಿರೂವ. ವಿ: [ಅಪ್ರತಿರೂಪ] ಮೇಲಿನ ಶಬ್ದವನ್ನು ನೋಡುವುದು

ಅಪ್ಪಡಿಲದ್ಧ. ವಿ: [ಅಪ್ರತಿಲಬ್ಧ] ದೊರೆಯದಿರುವ, ಪ್ರಾಪ್ತವಾಗದ(ಣಾಯಾ)

ಅಪ್ಪಡಿಲೆಸ್ಸ. ವಿ: [ಅಪ್ರತಿಲೇಶ್ಯ] ಅಸಾಧಾರಣ ಮನೋಬಲದವನು(ಔಪ)

ಅಪ್ಪಡಿಲೇಹಣ. ನ: [ಅಪ್ರತಿಲೇಖನ] ನೋಡದಿರುವುದು, ಅವಲೋಕಿಸದಿರುವುದು(ಆವ)

ಅಪ್ಪಡಿಲೇಹಣಾ. ಸ್ತ್ರೀ: [ಅಪ್ರತಿಲೇಖನಾ] ಮೇಲಿನ ಶಬ್ದವನ್ನು ನೋಡುವುದು

ಅಪ್ಪಡಿಲೋಮ. ವಿ: [ಅಪ್ರತಿಲೋಮ] ಅನುಕೂಲವಾದ, (ಭಗ) ಸ್ನೇಹಪೂರ್ಣವಾದ

ಅಪ್ಪಡಿವರಿಯ. ಪು: [ಅಪ್ರತಿವೃತ] ಪ್ರದೋಷಕಾಲ, ರಾತ್ರಿಯ ಮೊದಲನೆಯ ಭಾಗ

ಅಪ್ಪಡಿವಾಇ.ವಿ:[ಅಪ್ರತಿಪಾತಿನ್] ನಾಶವಿಲ್ಲದವನು ನಿತ್ಯ, ಶಾಶ್ವತ, ಕೇವಲ ಜ್ಞಾನವನ್ನು ಉಂಟುಮಾಡಿಯೇ ತೀರುವ ಅವಧಿಜ್ಞಾನದ ಒಂದು ಭೇದ(ವಿಸೇ)

ಅಪ್ಪಡಿಹತ್ಥ. ವಿ: [ಅಪ್ರತಿಹಸ್ತ] ಅಸಮಾನ, ಅದ್ವಿತೀಯ

ಅಪ್ಪಡಿಹಯ. ವಿ: [ಅಪ್ರತಿಹತ] ಯಾರಿಂದಲೂ ತಡೆಯಲ್ಪಡದ, ಅಖಂಡಿತ, ಕೆಡಿಸಲ್ಪಡದ, ಅಸಂಗತವಲ್ಲದ, ವಿರುದ್ಧವಲ್ಲದ ಮಾತು

ಅಪ್ಪಡೀಬದ್ಧ. 'ಅಪಡಿಬದ್ಧ' ಶಬ್ದವನ್ನು ನೋಡುವುದು
ಅಪ್ಪಡ್ಢಿಯ. ವಿ: [ಅಲ್ಪರ್ಧಿಕ] ಅಲ್ಪ ವೈಭವವುಳ್ಳ
ಅಪ್ಪಣ. ನ: [ಅರ್ಪಣ] ಕೊಡುವುದು, ಅರ್ಪಿಸುವುದು, ಕಾಣಿಕೆ(ಶ್ರಾ), ಪ್ರಧಾನವಾಗಿ ಪ್ರತಿಪಾದಿಸುವುದು (ವಿಸೇ), ಬೆಂಕಿ, ಹವಿಸ್ಸು
ಅಪ್ಪಣ. 'ಅಪ್ಪ=ಆತ್ಮನ್' ಶಬ್ದವನ್ನು ನೋಡುವುದು
ಅಪ್ಪಣ. ವಿ: [ಆತ್ಮೀಯ] ತನ್ನ, ತನಗೆ ಸಂಬಂಧಿಸಿದ
ಅಪ್ಪಣಯ. ವಿ: [ಆತ್ಮೀಯ] ತನ್ನ, ತನಗೆ ಸಂಬಂಧಿಸಿದ, ತನ್ನದಾದ(ಪಉಮ)
ಅಪ್ಪಣಾ. ಅ:[ಸ್ವಯಮ್]ತಾನೇ, ತಾನಾಗಿಯೇ,ತನ್ನಿಂದ
ಅಪ್ಪಣಿಜ್ಜ.} ವಿ: [ಆತ್ಮೀಯ] ಸ್ವಕೀಯ, ತನ್ನ, ತನಗೆ
ಅಪ್ಪಣಿಜ್ಜಿಯ.} ಸಂಬಂಧಿಸಿದ
ಅಪ್ಪಣೋ ಅ: [ಸ್ವಯಮ್] ತಾನೇ, ಸ್ವತಃ,
ಅಪ್ಪಣ್ಣ. 'ಅಕ್ಕಮ=ಆ+ಕ್ರಮ್' ಶಬ್ದವನ್ನು ನೋಡುವುದು
ಅಪ್ಪಣ್ಣುಅ. "ಅಪ್ಪಜಾಣುಅ=ಆತ್ಮಜ್ಞ, ಅಲ್ಪಜ್ಞ"ಶಬ್ದವನ್ನು ನೋಡುವುದು
ಅಪ್ಪತಕ್ಕಿಯ. ವಿ: [ಅಪ್ರತರ್ಕಿತ] ಇದುವರೆಗೆ ವಿಚಾರವಾಡಿಲ್ಲದ, ನಡೆಯುಬಹುದೆಂದು ಊಹಿಸಲಾಗದ: ಅಸಂಭಾವಿತ (ಸ)
ಅಪ್ಪತ್ತ. ಪುಂ.ನ: [ಅಪಾತ್ರ] ಅಯೋಗ್ಯ, ನಿಷ್ಪ್ರಯೋಜಕ, ಕುಪಾತ್ರ ವಿ: ಆಧಾರವಿಲ್ಲದ
ಅಪ್ಪಕ್ಷ. ವಿ: [ಅಪತ್ರ] ಎಲೆಯಿಲ್ಲದ(ವೃಕ್ಷ,) ರೆಕ್ಕೆಯಿಲ್ಲದ (ಪಕ್ಷಿ)
ಅಪ್ಪತ್ತ. ವಿ: [ಅಪ್ರಾಪ್ತ] ದೊರೆಯದೆ ಇದ್ದದ್ದು, ಪಡೆಯದೆ ಇದ್ದದ್ದು(ಸುರ) **–ಕಾರಿ. ವಿ:** [–ಕಾರಿನ್] ವಸ್ತುವನ್ನು ಕೈಯಿಂದ ಸ್ಪರ್ಶಿಸದೆ ದೂರದಿಂದಲೇ ಅದರ ಬಗೆಗೆ ಜ್ಞಾನವನ್ನು ಉತ್ಪತ್ತಿ ಮಾಡಬಲ್ಲವನು(ವಿಸೇ)
ಅಪ್ಪತ್ತಿ. ಸ್ತ್ರೀ: [ಅಪ್ರಾಪ್ತಿ] ಪಡೆಯದಿರುವುದು, ಲಭಿಸದಿರುವುದು(ಸುರ)
ಅಪ್ಪತ್ತಿಯ. ಪುಂನ: [ಅಪ್ರತ್ಯಯ] ಅವಿಶ್ವಾಸ, ಅಪನಂಬಿಕೆ, ಅಜ್ಞಾನ(ಸುಪಾ)
ಅಪ್ಪತ್ತಿಯ. ನ: [ಅಪ್ರೀತಿ] ಪ್ರೀತಿಯಿಲ್ಲದಿರುವುದು(ಶಾ) ಕೋಪ, ಮಾನಸಿಕ ಪೀಡೆ, ಅಪಕಾರ(ನಿಚೂ) ದ್ವೇಷ, ದುಃಖ
ಅಪ್ಪತ್ತಿಂಯ. ವಿ: [ಅಪಾತ್ರಿಕ] ಪಾತ್ರರಹಿತ, ಆಧಾರವಿಲ್ಲದ(ಭಗ), ಯೋಗ್ಯನಲ್ಲದ
ಅಪ್ಪತ್ತಿಯಣ. ನ: [ಅಪ್ರತ್ಯಯನ] ಅವಿಶ್ವಾಸ, ಅಪನಂಬಿಕೆ, ಶ್ರದ್ಧೆಯಿಲ್ಲದಿರುವುದು (ಉಪ)
ಅಪ್ಪತ್ಥ. ವಿ: [ಅಪ್ರಾರ್ಥ್ಯ] ಪ್ರಾರ್ಥಿಸಲು ಯೋಗ್ಯನಲ್ಲದ, ಇಷ್ಟಪಡಲು ತಕ್ಕವನಲ್ಲದ(ಸುಪಾ)
ಅಪ್ಪತ್ಥಣ. ನ: [ಅಪ್ರಾರ್ಥನ] ಯಾಚಿಸಲು ಅಥವಾ ಕೋರಲು ಯೋಗ್ಯವಲ್ಲದ, ಅನಿಚ್ಛೆ(ಉತ್ತ)
ಅಪ್ಪತ್ಥಿಯ. ವಿ: [ಅಪ್ರಾರ್ಥಿತ] ಯಾಚಿಸದೆ, ಪ್ರಾರ್ಥಿಸದೆ ದೊರೆತದ್ದು, ಅಪೇಕ್ಷಿಸಲ್ಪಡದ, **–ಪತ್ಥಯ,–ಪತ್ಥಿಯ.** ವಿ: [**–ಪ್ರಾರ್ಥಕ, –ರ್ಥಿಕ**] ಸಾವನ್ನು ಬಯಸುವವನು, ಮರಣಾರ್ಥಿ(ಭಗ)
ಅಪ್ಪತ್ಥುಯ. ವಿ: [ಅಪ್ರಸ್ತುತ] ಪ್ರಕೃತ ವಿಷಯಕ್ಕೆ ಸಂಬಂಧಪಡದ, ವಿಷಯಾಂತರ(ಸುಪಾ) ಅರ್ಥವಿಲ್ಲದ ಮಾತು
ಅಪ್ಪದುಟ್ಠ. ವಿ: [ಅಪ್ರದ್ವಿಷ್ಟ] ಯಾರ ಮೇಲೆ ದ್ವೇಷವಿಲ್ಲವೋ ಅವನು, ಪ್ರೀತ್ಯಾಸ್ಪದ (ಓಘ)
ಅಪ್ಪಪ್ಪ. ವಿ: [ಅಪ್ರಾಪ್ಯ] ಪಡೆದುಕೊಳ್ಳಲು ಅಶಕ್ಯವಾದ(ವಿಸೇ)
ಅಪ್ಪಭಾಯ. ನ: [ಅಪ್ರಭಾತ] ನಸುಕು, ಬೆಳಕಿಲ್ಲದ, ಕಾಂತಿಯಿಲ್ಲದ
ಅಪ್ಪಭು. ವಿ [ಅಪ್ರಭು] ಅಸಮರ್ಥ, ಅಶಕ್ತ, **ಪು:** ಒಡೆಯನಲ್ಲದ
ಅಪ್ಪಮಜ್ಜಿಯ. ವಿ; [ಅಪ್ರಮಾರ್ಜಿತ] ಚೊಕ್ಕಟ ಮಾಡಿಲ್ಲದ, ತೊಳೆಯದ (ಉವಾ)
ಅಪ್ಪಮತ್ತ. ವಿ: [ಅಪ್ರಮತ್ತ] ಪ್ರಮತ್ತನಾಗದ, ಜಾಗರೂಕ, ಎಚ್ಚರಿಕೆ ಉಳ್ಳ, ಉಪಯೋಗಕ್ಕೆ ಬರುವವ(ಪಣ್ಣ), **–ಸಂಜಯ. ಪುಂಸ್ತ್ರೀ:** [–ಸಂಯತ] ಪ್ರಮಾದವಿರದ ಮುನಿ, ನ: **೭ನೇ** ಗುಣಸ್ಥಾನಕ(ಭಗ)
ಅಪ್ಪಮಾಣ. 'ಅಪಮಾಣ' ಶಬ್ದವನ್ನು ನೋಡುವುದು
ಅಪ್ಪಮಾಯ. ಪು: [ಅಪ್ರಮಾದ] ಪ್ರಮಾದವಿರದ, ಜಾಗರೂಕತೆ ಎಚ್ಚರಿಕೆ (ನಿಚೂ)
ಅಪ್ಪಮೇಯ. ವಿ: [ಅಪ್ರಮೇಯ] ಅಳೆಯಲಾಗದ, ತಿಳಿಯಲಾಗದ, ನಿರ್ಣಯಿಸಲಾಗದ, ಪರಮಾತ್ಮ
ಅಪ್ಪಯ. 'ಅಪ್ಪ' ಶಬ್ದವನ್ನು ನೋಡುವುದು
ಅಪ್ಪರಿಚತ್ತ ವಿ: [ಅಪರಿತ್ಯಕ್ತ] ತ್ಯಜಿಸಲ್ಪಡದ, ತೊರೆಯಲ್ಪಡದ(ಸುಪಾ)
ಅಪ್ಪರಿವಡಿಯ. ವಿ: [ಅಪರಿಪತಿತ] ನಷ್ಟವಲ್ಲದ, ವಿದ್ಯಮಾನ

ಅಪ್ಪಲಹುಅ. ವಿ: [ಅಪ್ರಲಘುಕ] ಮಹಾನ್, ದೊಡ್ಡ(ಸೇ)
ಅಪ್ಪಲೀಣ. ವಿ: [ಅಪ್ರಲೀನ] ಅಸಂಬದ್ಧ, ಸಂಗವನ್ನು ಬಿಟ್ಟ
ಅಪ್ಪಲೀಯಮಾಣ. ವ.ಕೃ: [ಅಪ್ರಲೀಯಮಾನ] ಆಸಕ್ತಿ ತೋರದಿರುವ (ಆಚಾ)
ಅಪ್ಪವಿತ್ತ. ವಿ: [ಅಪ್ರವೃತ್ತ] ಕೆಲಸದಲ್ಲಿ ತೊಡಗದಿರುವ, ಸೋಮಾರಿ
ಅಪ್ಪವಿತ್ತಿ. ಸ್ತ್ರೀ: [ಅಪ್ರವೃತ್ತಿ] ಕೆಲಸದಲ್ಲಿ ತೊಡಗದಿರುವುದು, ಜಡತೆ, ಸೋಮಾರಿತನ
ಅಪ್ಪಸಂತ. ವಿ: [ಅಪ್ರಶಾಂತ] ಅಶಾಂತ, ಕುಪಿತ(ಪಂಚಾ)
ಅಪ್ಪಸಂಸಣಿಜ್ಜ. ವಿ: [ಅಪ್ರಶಂಸನೀಯ] ಹೊಗಳಿಕೆಗೆ ಅರ್ಹವಲ್ಲದ, ಶ್ಲಾಘ್ಯವಲ್ಲದ, (ತಂದು)
ಅಪ್ಪಸಜ್ಝ. ವಿ: [ಅಪ್ರಸಹ್ಯ] ಸಹಿಸಲಾಗದ, ಅಸಹನೀಯ (ವವ)
ಅಪ್ಪಸಣ್ಣ. ವಿ: [ಅಪ್ರಸನ್ನ] ಅಸಂತುಷ್ಟ, ಸಮಾಧಾನವಿಲ್ಲದ, (ನಾಟ) ತಿಳಿಯಲ್ಲದ
ಅಪ್ಪಸತ್ಥ. ವಿ: [ಅಪ್ರಶಸ್ತ] ಪ್ರಶಸ್ತವಲ್ಲದ, ಶ್ಲಾಘ್ಯವಲ್ಲದ, ನಿಂದಿತ, ಸುಂದರವಲ್ಲದ (ತಾ)
ಅಪ್ಪಸತ್ತಿಯ. ವಿ: [ಅಲ್ಪಸತ್ತ್ವಿಕ] ಅಲ್ಪ ಸತ್ತ್ವವುಳ್ಳ (ಸೂಅ)
ಅಪ್ಪಸಾರಿಯ. ವಿ: [ಅಪ್ರಸಾರಿಕ] ಜನವಿಹೀನ, ನಿರ್ಜನ (ಉಪ)
ಅಪ್ಪಹವಂತ. ವ.ಕೃ: [ಅಪ್ರಭವತ್] ಸಮರ್ಥನಲ್ಲದ, ತಲುಪಲಾರದ (ಸ)
ಅಪ್ಪಹಿಯ. ವಿ: [ಅಪ್ರಥಿತ] ಪ್ರಸಿದ್ಧವಲ್ಲದ, ವಿಸ್ತೃತವಲ್ಲದ
ಅಪ್ಪಾಅಪ್ಪಿ. ಸ್ತ್ರೀ [ದೇ] ಔತ್ಸುಕ್ಯ, ತವಕ, ಆತುರ(ಪಿಂಗ)
ಅಪ್ಪಾಉಡ. ವಿ: [ಅಪ್ರಾವೃತ] ಮರೆಮಾಡಿಲ್ಲದ, ಹೊದಿಸಲ್ಪಡದ, ನಗ್ನ (ಸೂಅ)
ಅಪ್ಪಾಉಯ. ವಿ: [ಅಲ್ಪಾಯುಷ್ಕ] ಕಡಿಮೆ ಆಯುಸ್ಸುಳ್ಳ, ಅಲ್ಪಾಯು (ಪಉಮ)
ಅಪ್ಪಾಉರಣ. ವಿ: [ಅಪ್ರಾವರಣ] ಬೆತ್ತಲೆ, ನ: ಬಟ್ಟೆಯಿಲ್ಲದ, ವಸ್ತ್ರ ಧರಿಸದ ನಿಯಮ(ಪಂಚಾ)
ಅಪ್ಪಾಣ 'ಅಪ್ಪ= ಆತ್ಮನ್' ಶಬ್ದವನ್ನು ನೋಡುವುದು. ▯ರಕ್ಖಿ. ವಿ: [–ರಕ್ಷಿನ್] ಆತ್ಮದ ರಕ್ಷಣೆ ಮಾಡಿಕೊಳ್ಳುವವನು(ಉತ್ತ)
ಅಪ್ಪಾಬಹೂ..} ನ: [ಅಲ್ಪಬಹುತ್ವ] ಸ್ವಲ್ಪ ಕಡಿಮೆ ಮತ್ತು
ಅಪ್ಪಾಬಹುಯ.} ಸ್ವಲ್ಪ ಹೆಚ್ಚು
ಅಪ್ಪಾವಯ. ವಿ: [ಅಪ್ರಾವೃತ] ಮರೆಮಾಡಲ್ಪಡದ, ಮುಚ್ಚಲ್ಪಡದ, ತೆರೆದಿರುವ, ವಸ್ತ್ರವಿಲ್ಲದ(ಸೂಅ)
ಅಪ್ಪಾವಿಂಅ. ವಿ: [ಅರ್ಪಿತ] ಕೊಡಲ್ಪಟ್ಟ, ದಾನಮಾಡಲ್ಪಟ್ಟ, ಅರ್ಪಿಸಲಾದ
ಅಪ್ಪಾಹ. ಸಕ: [ಸಂ+ದಿಶ್] ಸಂದೇಶ ನೀಡು, ಸುದ್ದಿ ತಲುಪಿಸು–'ಅಪ್ಪಾಹಇ'
ಆಪ್ಪಾಹ. ಸಕ: [ಆ+ಭಾಷ್] ಸಂಭಾಷಿಸು, ಸಂವಾದಿಸು
ಅಪ್ಪಾಹ. ಸಕ: [ಅಧಿ+ಆಪಯ್] ಓದಿಸು, ಕಲಿಸು, ಬೋಧಿಸು. ಕರ್ಮ–ಅಪ್ಪಹೆಂತ(ಸೇ)
ಅಪ್ಪಾಹಣೀ: ಸ್ತ್ರೀ: [ದೇ] ಸಂದೇಶ, ಸಮಾಚಾರ
ಅಪ್ಪಾಹಣ್ಣ. ನ: [ಅಪ್ರಾಧಾನ್ಯ] ಪ್ರಧಾನತೆಯಿಲ್ಲದ, ಗೌಣ, ಅಮುಖ್ಯ(ಪಂಚಾ)
ಅಪ್ಪಾಹಿಯ. ವಿ: [ಸಂದಿಷ್ಟ] ಹೇಳಿಕಳುಹಿಸಲ್ಪಟ್ಟ,(ಭವಿ) ಆಜ್ಞಾಪಿಸಲಾದ
ಅಪ್ಪಾಹಿಯ. ವಿ: [ಅಧ್ಯಾಪಿತ] ಕಲಿಸಲ್ಪಟ್ಟ, ಓದಿಸಲ್ಪಟ್ಟ, ಉಪದೇಶಿಸಲ್ಪಟ್ಟ(ಉಪ)
ಅಪ್ಪಿಡ್ಢಿಯ. ವಿ: [ಅಲ್ಪರ್ಧಿಕ] ಕಡಿಮೆ ಸಂಪತ್ತುಳ್ಳವನು
ಅಪ್ಪಿಣ. ಸಕ: [ಅರ್ಪಯ್] ಅರ್ಪಿಸು, ದಾನ ನೀಡು, ಕಾಣಿಕೆ ಕೊಡು(ವಿಸೇ)
ಅಪ್ಪಿಣ್ಣ. ನ: [ಅರ್ಪಣ] ದಾನ, ನೀಡುವುದು, ಅರ್ಪಿಸುವುದು, ಕೊಡುವುದು(ಉಪ) ಬೆಂಕಿ,
ಅಪ್ಪಿಣಿಚ್ಚಿಯ. ವಿ: [ಆತ್ಮೀಯ] ತನ್ನ, ಸ್ವಂತದ, ತನಗೆ ಸಂಬಂಧಿಸಿದ
ಅಪ್ಪಿಯ. ವಿ: [ಅರ್ಪಿತ] ಅರ್ಪಿಸಲಾದ, ಕೊಡಲ್ಪಟ್ಟ, ವಿವಕ್ಷಿತ, ಪ್ರತಿಪಾದಿಸಲು ಬಯಸಿದ **ಪು:** ಪರ್ಯಾಯ ಆರ್ಥಿಕ ನಯ
ಅಪ್ಪಿಯ. ವಿ: [ಅಪ್ರಿಯ] ಪ್ರಿಯವಲ್ಲದ, ಇಷ್ಟವಲ್ಲದ, ಹಿತವಲ್ಲದ **ನ:** ಮನದ ದುಃಖ
ಅಪ್ಪೀಇ. ಸ್ತ್ರೀ: [ಅಪ್ರೀತಿ] ಪ್ರೀತಿಯಿಲ್ಲದಿರುವುದು, ಇಷ್ಟವಿಲ್ಲದಿರುವುದು(ಸುಪಾ) ವೈರ, ದುಃಖ
ಅಪ್ಪೀಕಯ. ವಿ: [ಆತ್ಮೀಕೃತ] ಆತ್ಮಕ್ಕೆ ಸಂಬಂಧಿಸಿದ, ಆತ್ಮದಲ್ಲಿ ಸೇರಿಸಿಕೊಂಡ
ಅಪ್ಪುಟ್ಠ. ವಿ [ಅಸ್ಪೃಷ್ಟ] ಸ್ಪರ್ಶಿಸದಿರುವ,
ಅಪ್ಪುಟ್ಠ. ವಿ: [ಅಪೃಷ್ಟ] ಕೇಳಿಲ್ಲದ, ಕೇಳದಿರುವ
ಅಪ್ಪುಣ್ಣ. ವಿ: [ದೇ. ಆಪೂರ್ಣ] ಪೂರ್ಣವಾದ(ದೇ)
ಅಪ್ಪುಲ್ಲ. ವಿ: [ಆತ್ಮೀಯ] ಆತ್ಮದಿಂದ ಹುಟ್ಟಿದ, ತನ್ನ ಸಂಬಂಧವಾದ, ತನ್ನ
ಅಪ್ಪುವ್ವ. 'ಅಪುವ್ವ' ಶಬ್ದವನ್ನು ನೋಡುವುದು
ಅಪ್ಪೇಯವ್ವ'ಅಪ್ಪ=ಅರ್ಪಯ್'ಶಬ್ದವನ್ನು ನೋಡುವುದು

ಅಪ್ಫೋಲಿ. ಸ್ತ್ರೀ:[**ಅಪ್ರಜ್ವಲಿತಾ**] ಮಾಗದಹಣ್ಣು–ಹಂಪಲು
ಅಪ್ಫೊಲ್ಲ. ವಿ:[**ದೇ**] ಪೊಳ್ಳುತನವಿಲ್ಲದ
ಅಪ್ಫಡಿಅ. ವಿ: [**ಆಸ್ಫಾಲಿತ**] ಹೊಡೆಯಲ್ಪಟ್ಟ, ಚಲಿಸುವಂತೆ ಮಾಡಲಾದ(ವಿಸಂ)
ಅಪ್ಫಾಲ. ಸಕ: [**ಆ+ಸ್ಫಾಲಯ್**] ಆಸ್ಫೋಟಿಸು, ಅಲುಗಾಡಿಸು, ಕೈಯಿಂದ ಹೊಡೆ, ತಾಳಬಾರಿಸು
ಅಪ್ಫಾಲಣ. ನ: [**ಆಸ್ಫಾಲನ**] ಹೊಡೆಯುವುದು, ತಟ್ಟುವುದು, ಚಲಿಸುವಂತೆ ಮಾಡುವುದು, ಗರ್ವ
ಅಪ್ಫಾಲಿಯ. ವಿ: [**ಆಸ್ಫಾಲಿತ**] ಕೈಯಿಂದ ಹೊಡೆಯಲ್ಪಟ್ಟ, ಚಲಿಸಲ್ಪಟ್ಟ, ವೃದ್ಧಿ ಹೊಂದಿದ, ಉನ್ನತ
ಅಪ್ಫುಂದ ಸಕ: [**ಆ+ಕ್ರಮ್**] ಆಕ್ರಮಿಸು, ಹೋಗು, ಮುತ್ತಿಗೆ ಹಾಕು, ಸ್ವಾಧೀನ ಪಡಿಸಿಕೊ
ಅಪ್ಫುಡಿಯ. '**ಅಫುಡಿಯ**' ಶಬ್ದವನ್ನು ನೋಡುವುದು
ಅಪ್ಫುಣ್ಣ. ವಿ: [**ದೇ. ಆಕ್ರಾಂತ**] ಮುತ್ತಿಗೆ ಹಾಕಲ್ಪಟ್ಟ, ಅತಿಕ್ರಮಿಸಲ್ಪಟ್ಟ, ನೋಯಿಸಲ್ಪಟ್ಟ
ಅಪ್ಫುಣ್ಣ. ವಿ: [**ಅಪೂರ್ಣ**] ಪೂರ್ಣವಾಗದ, ಅರೆಬರೆಯಾದ(ಗಉಡ)
ಅಪ್ಫುಣ್ಣ.} ವಿ: [**ದೇ. ಆಪೂರ್ಣ**] ಪೂರ್ಣವಾದ,
ಅಪ್ಫುನ್ನ.} ತುಂಬಿದ (ದೇ)
ಅಪ್ಫುಲ್ಲಯ. '**ಅಪ್ಫುಲ್ಲ**' ಶಬ್ದವನ್ನು ನೋಡುವುದು
ಅಪ್ಫೋಆ. ಸ್ತ್ರೀ: [**ದೇ**] ವನಸ್ಪತಿವಿಶೇಷ(ಪಣಣಾ}
ಅಪ್ಫೋಡ. ಸಕ: [**ಆ+ಸ್ಫೋಟಯ್**] ಕೈಯಿಂದ ಹೊಡೆ, ತಾಳ ಹಾಕು, ತೋಳುತಟ್ಟು
ಅಪ್ಫೋಡಣ. ನ: [**ಆಸ್ಫೋಟನ**] ಕೈಯಿಂದ ಹೊಡೆಯುವುದು, ತಾಳ ಹಾಕುವುದು(ಣಾಯಾ)
ಅಪ್ಫೋಡಿಯ.} ವಿ: [**ಆಸ್ಫೋಟಿತ**] ಹೊಡೆಯಲ್ಪಟ್ಟ
ಅಪ್ಫೋಲಿಯ.} (ಕಪ್ಪ)
ಅಪ್ಫೋಯಾ. ಸ್ತ್ರೀ: [**ದೇ**] ಒಂದು ವನಸ್ಪತಿ–ವಿಶೇಷ
ಅಪ್ಫೋವ. ವಿ: [**ದೇ**] ಮರಗಳಿಂದ ವ್ಯಾಪ್ತವಾದ, ಗಹನ, ನಿಬಿಡ(ಉತ್ತ)
ಅಫಲ. ವಿ: [**ಅಫಲ**] ನಿಷ್ಫಲ, ನಿರರ್ಥಕ, ಗೊಡ್ಡು(ಮರ), ಇಂದ್ರ, ಹೋತ
ಅಫಾಯ. ಪು: [**ದೇ**] ಭೂಮಿ ಸ್ಫೋಟ, ವನಸ್ಪತಿ ವಿಶೇಷ(ಪಣಣಾ)
ಅಫಾಸ. ವಿ: [**ಅಸ್ಪರ್ಶ**] ಸ್ಪರ್ಶಮಾಡದ, (ಭಗ), ಮಲಿನ ಸ್ಪರ್ಶದಿಂದ ಕೂಡಿರುವ(ಸೂಅ)
ಅಫಾಸುಯ. ವಿ: [**ಅಪ್ರಾಸುಕ**] ಧ್ಯಾನಮಗ್ನ, ಸಜೀವ, ಜೀವಿತ, ಸ್ವೀಕರಿಸಲು ಯೋಗ್ಯವಲ್ಲದ(ಭೀಕ್ಷೆ)
ಅಫುಡ. ವಿ:[**ಅಸ್ಫುಟ**] ಸ್ಫುಟವಲ್ಲದ, ಅಸ್ಪಷ್ಟ ಅವ್ಯಕ್ತ(ಗಾ)
ಅಫುಡಿಅ. ವಿ: [**ಅಸ್ಫುಟಿತ**] ಅಖಂಡಿತ, ಮುರಿಯದಿರುವ(ಕುಮಾ)
ಅಫುಸ.ವಿ: [**ಅಸ್ಪೃಶ್ಯ**] ಸ್ಪರ್ಶಿಸಲು ಯೋಗ್ಯವಲ್ಲದ(ಭಗ)
ಅಫುಸಿಯ. ವಿ: [**ಅಭ್ರಾಂತ**] ಭ್ರಮೆಯಿಂದ ಕೂಡಿರದ, ಭ್ರಾಂತಿಯಿಲ್ಲದ
ಅಫುಸ್ಸ. '**ಅಫುಸ**' ಶಬ್ದವನ್ನು ನೋಡುವುದು
ಅಬೂ–. ಸ್ತ್ರೀ.ಬ: [**ಅಪ್–**] ನೀರು, ಜಲ(ಶ್ರಾ)
ಅಬಂಭ. ನ: [**ಅಬ್ರಹ್ಮ**] ಮೈಥುನ, ಸ್ತ್ರೀಸಂಗ, (ಪಣ್ಣ), **–ಚಾರಿ.** ವಿ: [**–ಚಾರಿನ್**] ಬ್ರಹ್ಮಚರ್ಯೆಯನ್ನು ಪಾಲಿಸದವನು
ಅಬದ್ಧಿಯ. ಪು: [**ಅಬದ್ಧಿಕ**] ಕರ್ಮಗಳಿಗೆ ಆತ್ಮದ ಸ್ಪರ್ಶವೇ ಆಗುತ್ತದೆ; ಹಾಲು–ನೀರು ಸೇರಿದಂತೆ ಐಕ್ಯ ಹೊಂದುವುದಿಲ್ಲ ಎಂದು ಒಪ್ಪುವ ಒಂದು ನಿಹ್ನವ–ಜೈನಾಭಾಸ ಪಂಥ, ನ: ಅದರ ಅಭಿಪ್ರಾಯ(ಠಾ)
ಅಬಲ. ವಿ: [**ಅಬಲ**] ಬವಿಲ್ಲದ, ನಿರ್ಬಲ(ಪಉಮ)
ಅಬಲಾ. ಸ್ತ್ರೀ: [**ಅಬಲಾ**] ಹೆಣ್ಣು, ಮಹಿಳೆ(ಪಾಅ)
ಅಬಸ. ಪು: [**ಅಬಶ**] ಬಡಬಾನಲ, ಸಮುದ್ರದಲ್ಲಿ ಹುಟ್ಟುವ ಬೆಂಕಿ(ಸೇ)
ಅಬಹಿಟ್ಠ. ನ: [**ದೇ. ಅಬಹಿತ್ಥ**] ಮೈಥುನ, ಸ್ತ್ರೀ–(**ಸಂಗ**)
ಅಬಹಿಮ್ಮಣ. ವಿ: [**ಅಬಹಿರ್ಮನಸ್ಕ**] ಧರ್ಮಿಷ್ಠ, ಧರ್ಮ ತತ್ಪರ(ಆಚಾ)
ಅಬಹಿಲ್ಲೇಸ}. ವಿ: [**ಅಬಹಿರ್ಲೇಶ್ಯ**] ಯಾರ ಚಿತ್ತವೃತ್ತಿ,
ಅಬಹಿಲ್ಲೆಸ್ಸ.} ಹೊರಗಡೆ ಸಂಚರಿಸುವುದಿಲ್ಲವೋ ಅವನು, ಸಂಯಮಿ(ಭಗ)
ಅಬಾಧಾ. '**ಅಬಾಹಾ**' ಶಬ್ದವನ್ನು ನೋಡುವುದು
ಅಬಾಹ. ಪು: [**ಅಬಾಹ**] ದೇಶ–ವಿಶೇಷ
ಅಬಾಹಾ. ಸ್ತ್ರೀ: [**ಅಬಾಧಾ**] ತಡೆಯಿಲ್ಲದಿರುವುದು, ವಿಘ್ನವಿಲ್ಲದಿರುವುದು(ಓಘ) ಅಡ್ಡಿ ಯಿಲ್ಲದಿರುವುದು. ಅಂತರವಿರುವುದು
ಅಬಾಹಿರ. ಅ: [**ಅಬಹಿಸ್**] ಹೊರಗಡೆ ಅಲ್ಲದ, ಒಳಗೆ(ಕುಮಾ)
ಅಬಾಹಿರಯ. ವಿ: [**ಅಬಾಹ್ಯ**] ಒಳಗಿನ, ಒಳ ಪ್ರದೇಶ, ಮಧ್ಯಭಾಗ(ವವ)

ಅಬಾಹಿರಿಯ. ವಿ: [ಅಬಹಿರಿಕ] ಕೋಟೆಯ ಹೊರಗೆ ವಸತಿಯಿರದ ಹಳ್ಳಿ ಅಥವಾ ನಗರ (ಬೃಹ)

ಅಬೀಯ. **'ಅವೀಯ'** ಶಬ್ದವನ್ನು ನೋಡುವುದು

ಅಬುಜ್ಝ.ಅ:[ಅಬುದ್ಧ್ವಾ] ತಿಳಿಯದೆ, ಅವಿವೇಕದಿಂದ

ಅಬುದ್ಧ. ವಿ: [ಅಬುಧ] ಬುಧನಲ್ಲದ, ತಿಳಿಗೇಡಿ, ಹೆಡ್ಡ, ಮೂರ್ಖ(ಸೂಅ)

ಅಬುದ್ಧಸಿರೀ. ಸ್ತ್ರೀ: [ದೇ] ಬಯಸಿದ್ದಕ್ಕಿಂತ ಹೆಚ್ಚು ಫಲ ದೊರೆಯುವುದು

ಅಬುದ್ಧಿಯ.} ವಿ: [ಅಬುದ್ಧಿಕ] ಬುದ್ಧಿಯಿಲ್ಲದ,
ಅಬುದ್ಧೀಯ.} ಮೂರ್ಖ, ಅವಿವೇಕಿ(ಪ)

ಅಬುಹ. ವಿ: [ಅಬುಧ] ಅಜ್ಞಾನಿ, ಮೂರ್ಖ, ಹೆಡ್ಡ

ಅಬೋಹ. ವಿ:[ಅಬೋಧ] ಅಜ್ಞಾನಿ ತಿಳುವಳಿಕೆಯಿಲ್ಲದವನು, **ಪು:ಅಜ್ಞಾನ,** ಗೋಚರವಾಗದಿರುವುದು,

ಅಬೋಹಿ. **ಪುಂ. ಸ್ತ್ರೀ:** [ಅಬೋಧಿ] ಅಜ್ಞಾನ, ಜೈನಧರ್ಮ ಪ್ರಾಪ್ತವಾಗದಿರುವುದು, ಮಿಥ್ಯಾಜ್ಞಾನ, ಬೋಧಿರಹಿತ(ಭಗ)

ಅಬೋಹಿಯ. ನ: [ಅಬೋಧಿಕ] ಮೇಲಿನ ಶಬ್ದವನ್ನು ನೋಡುವುದು

ಅಬೂ– ಸ್ತ್ರೀಬ: [ಅಪ್–] ನೀರು

ಅಬ್ಬಂಭ. **'ಅಬಂಭ'** ಶಬ್ದವನ್ನು ನೋಡುವುದು

ಅಬ್ಬಂಭಣ್ಣ.} ನ: [ಅಬ್ರಹ್ಮಣ್ಯ] ಬ್ರಾಹ್ಮಣನು
ಅಬ್ಬಮ್ಹಣ್ಣ.} ಮಾಡಬಾರದ ಕೆಲಸ; ಹಿಂಸೆ, ರಕ್ಷಣೆಗಾಗಿ ಭಯಂಕರವಾಗಿ ಕೂಗಿಕೊಳ್ಳುವುದು(ನಾಟ)

ಅಬ್ಬೀಯ. **'ಅವೀಯ'** ಶಬ್ದವನ್ನು ನೋಡುವುದು

ಅಬ್ಬುದ್ಧಸಿರೀ. ಸ್ತ್ರೀ: [ದೇ] ಬಯಸಿದ್ದಕ್ಕಿಂತಲೂ ಹೆಚ್ಚಿನ ಫಲ ಪ್ರಾಪ್ತಿಯಾಗುವುದು

ಅಬ್ಬುಯ. ಪು: [ಅರ್ಬುದ] **'ಅಬು'** ಪರ್ವತ,

ಅಬ್ಬುಯ. ನ: [ಅರ್ಬುದ] ಸಂಗ್ರಹವಾಗಿರುವ ಶುಕ್ರ ಮತ್ತು ಶೋಣಿತ, ಮಾಂಸಪಿಂಡ, ಈಗ ಕ್ಯಾನ್ಸರ್‌ಗೆ ಬಳಸುವ ಶಬ್ದ, ಹತ್ತು ಕೋಟಿ, ಮೋಡ

ಅಬ್ಭ. ನ: [ಅಭ್ರ] ಆಕಾಶ, ಮೋಡ(ಪಾಅ), ಕರ್ಪೂರ, ಚಿನ್ನ, ಕಾಗೆ ಬಂಗಾರ

ಅಬ್ಭ. ಸಕ: [ಆ+ಭಿದ್] ಭೇದಿಸು.

ಅಬ್ಭಂಗ. ಸಕ: [ಅಭಿ+ಅಂಜ್] ತೈಲ ಇತ್ಯಾದಿಗಳನ್ನು ದೇಹಕ್ಕೆ ಹಚ್ಚಿ ತಿಕ್ಕು,

ಅಬ್ಭಂಗ. ಪು: [ಅಭ್ಯಂಗ] ತೈಲಮರ್ದನ, ಮಾಲಿಶ್ ಮಾಡುವುದು

ಅಬ್ಭಂಗಣ. ನ: [ಅಭ್ಯಂಜನ] ಮೇಲಿನ ಶಬ್ದವನ್ನು ನೋಡುವುದು, ಕಣ್ಣಿಗೆ ಕಾಡಿಗೆ, ಅಂಜನ ಹಚ್ಚುವುದು

ಅಬ್ಭಂಗಿಎಲ್ಲಯ.} ವಿ: [ಅಭ್ಯಕ್ತ] ತೈಲಾದಿಗಳಿಂದ
ಅಬ್ಭಂಗಿಯ.} ಮಾಲಿಶ್ ಮಾಡಲ್ಪಟ್ಟ(ಓಘ)

ಅಬ್ಭಂತರ. ನ: [ಅಭ್ಯಂತರ]. ಒಳಗೆ, ಮಧ್ಯಭಾಗ, ಒಳಗಿನ(ಮಹಾ), ಸಮೀಪದ, **–ಠಾಣಿಜ್ಜ.** ವಿ: [–ಸ್ಥಾನೀಯ] ಹತ್ತಿರದ ಬಂಧುಗಳು, **–ತವ.** **ಪು:** [–ತಪಸ್] ವಿನಯ, ಪ್ರಾಯಶ್ಚಿತ್ತ, ಸ್ವಾಧ್ಯಾಯ, ಧ್ಯಾನ ಮತ್ತು ಕಾಯೋತ್ಸರ್ಗದ ಅಂತರಂಗ ತಪಸ್ಸು. **–ಪರಿಸಾ.** ಸ್ತ್ರೀ: [–ಪರಿಷದ್] ಮಿತ್ರರೇ ಮೊದಲಾದ ಸಮಾನ ಜನರ ಸಭೆ. **–ಲದ್ಧಿ.** ಸ್ತ್ರೀ: [–ಲಬ್ಧಿ] ಅವಧಿ ಜ್ಞಾನದ ಒಂದು ಬಗೆ(ವಿಸೇ), **–ಸಂಬುಕ್ಕಾ.** ಸ್ತ್ರೀ: [–ಶಂಬೂಕಾ] ಭಿಕ್ಷೆಯ ಒಂದು ಚರ್ಯೆ, ನಡಿಗೆ, **–ಸಗಡುದ್ಧಿಯ.** ಸ್ತ್ರೀ: [–ಶಕಟೋರ್ಧ್ವಿಕಾ] ಕಾಯೋತ್ಸರ್ಗದ ಒಂದು ದೋಷ(ಪವ)

ಅಬ್ಭಂತರ. ವಿ: [ಅಭ್ಯಂತರ] ಒಳಭಾಗ, ಒಳಗಿನ(ಪಣ್ಣ)

ಅಬ್ಭಂಸಿ. ವಿ: [ಅಭ್ರಂಶಿನ್] ಭ್ರಷ್ಟವಾಗದಿರುವ, ನಷ್ಟವಲ್ಲದ(ಕುಮಾ)

ಅಬ್ಭಕ್ಖಇಜ್ಜ **'ಅಬ್ಭಕ್ಖಾ'** ಶಬ್ದವನ್ನು ನೋಡುವುದು

ಅಬ್ಭಕ್ಖಣ. ನ: [ದೇ] ಅಪಕೀರ್ತಿ, ಅಪಯಶಸ್ಸು, ಕೆಟ್ಟಹೆಸರು (ದೇ)

ಅಬ್ಭಕ್ಖಾ. ಸಕ: [ಅಭ್ಯಾ+ಖ್ಯಾ] ಸುಳ್ಳೇ ದೋಷಾರೋಪ ಮಾಡು, ಅಪವಾದ ಹೊರಿಸು

ಅಬ್ಭಕ್ಖಾಣ. ನ: [ಅಭ್ಯಾಖ್ಯಾನ] ಸುಳ್ಳು ಆರೋಪ, ಮಿಥ್ಯಾಪವಾದ (ಪಣ್ಣ)

ಅಬ್ಭಟ್ಟ. **'ಅಬ್ಭತ್ಥಿಯ'** ಶಬ್ದವನ್ನು ನೋಡುವುದು

ಅಬ್ಭಡ. ಅ: [ದೇ] ಹಿಂದಕ್ಕೆ ಹೋಗಿ(ಹೇ)

ಅಬ್ಭಣುಜಾಣ. ಸಕ: [ಅಭ್ಯನು+ಜ್ಞಾ] ಅಪ್ಪಣೆ ನೀಡು, ಅನುಮತಿ ನೀಡು, ಸಮ್ಮತಿಸು

ಅಬ್ಭಣುಣ್ಣಾ. ಸ್ತ್ರೀ: [ಅಭ್ಯನುಜ್ಞಾ] ಅನುಮತಿಸುವುದು, ಸಮ್ಮತಿಸುವುದು, ಆದೇಶಿಸುವುದು(ಶೌ)

ಅಬ್ಭಣುಣ್ಣಾಯ. ವಿ: [ಅಭ್ಯನುಜ್ಞಾತ] ಅನುಮತಿಸಲ್ಪಟ್ಟ, ಸಮ್ಮತಿಸಲ್ಪಟ್ಟ, ಆದೇಶಿಸಲ್ಪಟ್ಟ(ಠಾ)

ಅಬ್ಭಣುನ್ನಾ. 'ಅಬ್ಭಣುಣ್ಣಾ' ಶಬ್ದವನ್ನು ನೋಡುವುದು
ಅಬ್ಭಣುನ್ನಾಯ. 'ಅಬ್ಭಣುಣ್ಣಾಯ' ಶಬ್ದವನ್ನು ನೋಡುವುದು
ಅಬ್ಭಣ್ಣ. ನ: [ಅಭ್ಯರ್ಣ.] ನಿಕಟ, ಸಮೀಪ, ಹತ್ತಿರದಲ್ಲಿರುವ, –ಪುರ. ನ: [–ಪುರ] ಒಂದು ನಗರ–ವಿಶೇಷ. (ಪ ಉಮ)
ಅಬ್ಭತ್ತ. ವಿ: [ಅಭ್ಯಕ್ತ] ತೈಲಾದಿಗಳಿಂದ ಬಳಿಯಲ್ಪಟ್ಟ, ಮಾಲಿಶ್‌ಮಾಡಿದ, ನೆನೆದ
ಅಬ್ಭತ್ಥ. ವಿ: [ಅಭ್ಯಸ್ಥ] ಅಭ್ಯಾಸ ಮಾಡಲ್ಪಟ್ಟ, ಶಿಕ್ಷಿತ
ಅಬ್ಭತ್ತ. ಸಕ: [ಅಭಿ+ಅರ್ಥಯ್] ಸತ್ಕರಿಸು, ಪ್ರಾರ್ಥಿಸು, ವಿನಂತಿಸು
ಅಬ್ಭತ್ಥಣ. ನ: [ಅಭ್ಯರ್ಥನ] ಸತ್ಕಾರ, ವಿನಂತಿ, ಕೋರಿಕೆ, (ಕಪ್ಪೂ)
ಅಬ್ಭತ್ಥಣಾ.} ಸ್ತ್ರೀ: [ಅಭ್ಯರ್ಥನಾ] ಆದರ, ಸತ್ಕಾರ,
ಅಬ್ಭತ್ಥಣಿಯಾ.} ಕೋರಿಕೆ, ವಿಜ್ಞಾಪನೆ(ಪಂಚಾ)
ಅಬ್ಭತ್ಥಿಯ. ವಿ: [ಅಭ್ಯರ್ಥಿತ] ಆದರಿಸಲ್ಪಟ್ಟ, ಪ್ರಾರ್ಥಿಸಲ್ಪಟ್ಟ, "ವಿನಂತಿಸಲ್ಪಟ್ಟ(ಸುರ)
ಅಬ್ಭನ್ನ. 'ಅಬ್ಭಣ್ಣ' ಶಬ್ದವನ್ನು ನೋಡುವುದು
ಅಬ್ಭಪಡಲ. ನ: [ದೇ] ಅಭ್ರಕ ಧಾತು, ಕಾಗೆ ಬಂಗಾರ
ಅಬ್ಭಪಿಸಾಅ. ಪು: [ದೇ ಅಭ್ರಪಿಶಾಚಿ] ರಾಹು
ಅಬ್ಭಯ. ಪು: [ಅರ್ಭಕ] ಮಗು, ಬಾಲಕ(ಪಾಅ), ಹೆಂಗಸರ ಗರ್ಭ, ಮೂರ್ಖ
ಅಬ್ಭಯ. ಪು: [ಅಭ್ರಕ] ಕಾಗೆಬಂಗಾರ(ಜೀ)
ಅಬ್ಭರಹಿಯ. ವಿ: [ಅಭ್ಯರ್ಹಿತ] ಸತ್ಕರಿಸಲ್ಪಟ್ಟ, ಪೂಜಿಸಲ್ಪಟ್ಟ, ಗೌರವಶಾಲಿ(ಬೃಹ) ಶ್ರೇಷ್ಠವಾದ
ಅಬ್ಭವಹರಿಯ. ವಿ: [ಅಭ್ಯವಹೃತ] ತಿನ್ನಲ್ಪಟ್ಟ, ಭುಕ್ತ
ಅಬ್ಭವಹಾರ. ಪು: [ಅಭ್ಯವಹಾರ] ಭೋಜನ, ಊಟ,
ಅಬ್ಭವಾಲುಯಾ. ಸ್ತ್ರೀ: [ದೇ] ಅಭ್ರಕದ ಪುಡಿ
ಅಬ್ಭವ್ವ. 'ಅಭವ್ವ' ಶಬ್ದವನ್ನು ನೋಡುವುದು
ಅಬ್ಭಸ. ಸಕ: [ಅಭಿ+ಅಸ್] ಕಲಿ, ಅಭ್ಯಾಸಮಾಡು, ವ.ಕೃ–ಅಬ್ಭಸಂತ(ಸ)
ಅಬ್ಭಸಣ. ನ: [ಅಭ್ಯಸನ] ಅಭ್ಯಾಸ, ರೂಢಿ, ಪುನರಾವೃತ್ತಿ, ಅಂಗಸಾಧನೆ
ಅಬ್ಭಸಿಯ. ವಿ: [ಅಭ್ಯಸ್ತ] ಅಭ್ಯಾಸ ಮಾಡಿದ, ಅಭ್ಯಸಿಸಲಾದ (ಸುರ)
ಅಬ್ಭಹರ. ಪು: [ದೇ] ಅಭ್ರಕ

ಅಬ್ಭಹಿಯ. ವಿ: [ಅಭ್ಯಧಿಕ] ವಿಶೇಷ, ಬಹಳ ಹೆಚ್ಚಾದ, ಅಸಾಧಾರಣ, ಸರ್ವಶ್ರೇಷ್ಠ
ಅಬ್ಭಾಅಚ್ಛ. ವಿ: [ಅಭ್ಯಾ+ಗಮ್] ಎದುರುಗಡೆ ಬರುವುದು(ಷಡ್)
ಅಬ್ಭಾಇಕ್ಖ. 'ಅಬ್ಭಕ್ಖಾ' ಶಬ್ದವನ್ನು ನೋಡುವುದು
ಅಬ್ಭಾಗಮ. ಪು: [ಅಭ್ಯಾಗಮ] ಎದುರಾಗಿ ಬರುವುದು, ಎದುರುಗೊಳ್ಳುವುದು ಸಮೀಪ, ಯುದ್ಧ
ಅಬ್ಭಾಗಮಿಯ}. ವಿ: [ಅಭ್ಯಾಗತ] ಎದುರಾಗಿ ಬಂದ,
ಅಬ್ಭಾಗಯ}. ಊಟಕ್ಕೆ ಆಮಂತ್ರಣ ಪಡೆದು ಬಂದವನು, ಅತಿಥಿ(ಸುಪಾ) ಸಮೀಪಕ್ಕೆ ಬಂದ
ಅಬ್ಭಾಯತ್ತ.} ವಿ: [ದೇ] ಹಿಂತಿರುಗಿ ಬಂದವನು,
ಅಬ್ಭಾಯತ್ಥ.} ಹಿಂದಕ್ಕೆ ಬಂದ(ದೇ)
ಅಬ್ಭಾಸ. ಪು: [ಅಭ್ಯಾಸ] ಗುಣಾಕಾರ
ಅಬ್ಭಾಸ. ನ: [ಅಭ್ಯಾಸ] ನಿಕಟ ಸಮೀಪ, **ಪು:** ಕಲಿಕೆ, ಓದು, ಪುನರಾವೃತ್ತಿ, ಗಟ್ಟಿಯಾಗಿ ಹೇಳುವುದು(ಪಾಅ) ರೂಢಿ, ನಡತೆ(ಠಾ) ಅಂಗಸಾಧನೆ
ಅಬ್ಭಾಸ. ಸಕ: [ಅಭಿ+ಅಸ್] ಅಭ್ಯಾಸಮಾಡು, ರೂಡಿ ಮಾಡಿಕೊಳ್ಳುವುದು(ಮಹಾ)
ಅಬ್ಭಾಹಯ. ವಿ: [ಅಭ್ಯಾಹತ] ಆಘಾತ ಹೊಂದಿದ, ಹೊಡೆತಕ್ಕೊಳಗಾದ (ಮಹಾ)
ಅಬ್ಭಿಂಗ. 'ಅಬ್ಭಂಗ=ಅಭಿ+ಅಂಜ್' ಶಬ್ದವನ್ನು ನೋಡುವುದು
ಅಭಿಂಗ. 'ಅಬ್ಭಂಗ=ಅಭ್ಯಂಗ' ಶಬ್ದವನ್ನು ನೋಡುವುದು
ಅಬ್ಭಿಂಗಣ. 'ಅಬ್ಭಂಗಣ' ಶಬ್ದವನ್ನು ನೋಡುವುದು
ಅಬ್ಭಿಂಗಿಯ. 'ಅಬ್ಭಂಗಿಯ' ಶಬ್ದವನ್ನು ನೋಡುವುದು
ಅಬ್ಭಿಂತರ 'ಅಬ್ಭಂತರ'ಶಬ್ದವನ್ನು ನೋಡುವುದು(ಕಪ್ಪ)
ಅಬ್ಭಿಂತರಓ. ಅ: [ಅಭ್ಯಂತರತಸ್] ಒಳಗಿನಿಂದ, ಒಳಗೆ (ಆವಮ)
ಅಬ್ಭಿಂತರಿಯ. ವಿ: [ಅಭ್ಯಂತರಿಕ] ಒಳಗಿನ, ಅಂತರಂಗ
ಅಬ್ಭಿಂತರುದ್ಧಿ. ಪು: [ಅಭ್ಯಂತರೋರ್ಧ್ವಿನ್] ಕಾಯೋತ್ಸರ್ಗದ ಒಂದು ದೋಷ, ಎರಡೂ ಕಾಲುಗಳ ಹೆಬ್ಬೆಟ್ಟನ್ನು ಒಟ್ಟಿಗೆ ಸೇರಿಸಿ ಹಿಮ್ಮಡಿಗಳನ್ನು ಹೊರಗೆ ಚಾಚಿಕೊಂಡು ಮಾಡುವ ಒಂದು ಬಗೆಯ ಧ್ಯಾನ ವಿಶೇಷ
ಅಬ್ಭಿಟ್ಟ. ವಿ: [ದೇ] ಸಂಗತ, ಎದುರಿಗೆ ಬಂದು ಡಿಕ್ಕಿ ಹೊಡೆದ (ಪಉಮ)

ಅಬ್ಭಿಡ. ಸಕ: [ಸಂ+ಗಮ್] ಜೊತೆಗೂಡು, ಸೇರು
ಅಬ್ಭಿಡಿಅ. ವಿ: [ಸಂಗತ] ಯುಕ್ತವಾದ, ಸಮಂಜಸವಾದ
ಅಬ್ಭಿಡಿಅ. ವಿ: [ದೇ] ಸಾರ, ತಿರುಳು, ಬಲಿಷ್ಠವಾದ, ಪುಷ್ಟವಾದ(ದೇ)
ಅಭಿಣ್ಣ. ವಿ: [ಅಭಿನ್ನ] ಭೇದವಿಲ್ಲದ, ಒಡೆಯದಿರುವ, ಅಖಂಡವಾದ (ಧರ್ಮ)
ಅಬ್ಭುಅಅ. 'ಅಬ್ಭುದಯ' ಶಬ್ದವನ್ನು ನೋಡುವುದು
ಅಬ್ಭುಕ್ಖ. ಸಕ: [ಅಭಿ+ಉಕ್ಷ್] ನೀರನ್ನು ಚಿಮುಕಿಸುವುದು, ಎರಚುವುದು (ಸ)
ಅಬ್ಭುಕ್ಖಣೀಯಾ. ಸ್ತ್ರೀ: [ಅಭ್ಯುಕ್ಷಣೀಯಾ] ತುಂತುರು, ಮೇಲಿನಿಂದ ಬೀಳುತ್ತಿರುವ ನೀರಿನ ಧಾರೆ(ಬೃಹ)
ಅಬ್ಭುಕ್ಖಿಯ. ವಿ: [ಅಭ್ಯುಕ್ಷಿತ] ನೀರಿನಿಂದ ನೆನೆದ, ಒದ್ದೆಯಾದ
ಅಬ್ಭುಗ್ಗಮ. ಪು: [ಅಭ್ಯುದ್ಗಮ] ಉದಯ, ಉದ್ಭವಿಸುವುದು, ಸಂಭವಿಸುವುದು, ಉನ್ನತಿ (ಸೂಅ)
ಅಬ್ಭುಗ್ಗಯ. ವಿ: [ಅಭ್ಯುದ್ಗತ] ಉದಿಸಿದ, ಉದ್ಭವಿಸಿದ, (ಣಾಯಾ) ಮೇಲಕ್ಕೆ ಎತ್ತಲ್ಪಟ್ಟ (ಔಪ), ಸುತ್ತಲೂ ವ್ಯಾಪಿಸಿದ
ಅಬ್ಭುಗ್ಗಯ. ವಿ: [ಅಭ್ರೋದ್ಗತ] ಉನ್ನತವಾದ, ಎತ್ತರವಾದ(ಭಗ)
ಅಬ್ಭುಚ್ಚಯ. ಪು: [ಅಭ್ಯುಚ್ಚಯ] ಸಮುಚ್ಚಯ,(ಭಾಸ) ಅಭಿವೃದ್ಧಿ, ಐಶ್ವರ್ಯ
ಅಬ್ಭುಜ್ಜಯ. ವಿ: [ಅಭ್ಯುದ್ಯತ] ಕಾರ್ಯ ಪ್ರವೃತ್ತನಾದ, ಸಿದ್ಧನಾದ, (ಣಾಯಾ), ಜಿನಕಲ್ಪ ಮುನಿ, ಅಭಿವೃದ್ಧಿ ಹೊಂದಿದ, ಯಾಚಿಸದೆ ಲಭಿಸಿದ, ಏಕಾಂಗಿ ವಿಹಾರ
ಅಬ್ಭುಟ್ಠ. ಉಭ: [ಅಭ್ಯುತ್+ಸ್ಥಾ] ಗೌರವಿಸಲು ಎದ್ದುನಿಲ್ಲುವುದು, ಪ್ರಯತ್ನಿಸುವುದು, ಸಿದ್ಧತೆ ಮಾಡುವುದು
ಅಬ್ಭುಟ್ಠಣ. ನ: [ಅಭ್ಯುತ್ಥಾನ] ಗೌರವಿಸಲು ಎದ್ದುನಿಲ್ಲುವುದು, ಉತ್ಪತ್ತಿ, ಅಭಿವೃದ್ಧಿ, ಏಳಿಗೆ
ಅಬ್ಭುಟ್ಠಾ 'ಅಬ್ಭುಟ್ಠ' ಶಬ್ದವನ್ನು ನೋಡುವುದು
ಅಬ್ಭುಟ್ಠಾಣ. 'ಅಬ್ಭುಟ್ಠಣ' ಶಬ್ದವನ್ನು ನೋಡುವುದು
ಅಬ್ಭುಟ್ಠಿಯ. ವಿ: [ಅಭ್ಯುತ್ಥಿತ] ಗೌರವದಿಂದ ಎದರುಗೊಳ್ಳಲ್ಪಟ್ಟ, ಕಾರ್ಯಕ್ಕೆ ತೊಡಗಿದ, ಮೇಲಕ್ಕೆ ಎದ್ದಿರುವ, ಗೌರವಿಸಲುಎದ್ದುನಿಂತಿರುವ

ಅಬ್ಭುಟ್ಠೆತ್ತು. ವಿ: [ಅಭ್ಯುತ್ಥಾತೃ] ಗೌರವಿಸುವ ವ್ಯಕ್ತಿ(ಠಾ)
ಅಬ್ಭುಣ್ಣಯ. ವಿ: [ಅಭ್ಯುನ್ನತ] ಉನ್ನತವಾದ, ಎತ್ತರವಾದ(ಪಣ್ಹ)
ಅಬ್ಭುಣ್ಣಯಂತ. ವ.ಕೃ: [ಅಭ್ಯುನ್ನಯತ್] ಮೇಲಕ್ಕೆ ಮಾಡುತ್ತಿರುವ, ಉತ್ತೇಜಿತಗೊಳಿಸುತ್ತಿರುವ(ಗಾ)
ಅಬ್ಭುತ್ತ. ಅಕ: [ಸ್ನಾ] ಸ್ನಾನ ಮಾಡು
ಅಬ್ಭುತ್ತ. ಅಕ: [ಪ್ರ+ದೀಪ್] ಬೆಳಗು, ದೀಪ ಹೊತ್ತಿಸು
ಅಬ್ಭುತ್ತಿಅ. ವಿ: [ಪ್ರದೀಪ್ತ] ಬೆಳಗಲ್ಪಟ್ಟ, ಉರಿಯುವ, ಜ್ವಲಿಸುವ, ಹೊಳೆಯುವ
ಅಬ್ಭುತ್ಥ. ವಿ: [ಅಭ್ಯುತ್ಥ] ಉತ್ಪನ್ನ,
ಅಬ್ಭುತ್ಥ.} 'ಅಬ್ಭುಟ್ಠಾ' ಶಬ್ದವನ್ನು ನೋಡುವುದು
ಅಬ್ಭುತ್ಥಾ.}
ಅಬ್ಭುದಯ. ಪು: [ಅಭ್ಯುದಯ] ಉನ್ನತಿ, ಅಭಿವೃದ್ಧಿ, ಏಳಿಗೆ, ಉದಯ(ಪ್ರಯೌ)
ಅಬ್ಭುದ್ಧರ. ಸಕ: [ಅಭ್ಯುದ್+ಧೃ] ಉದ್ಧಾರಮಾಡು, ಮೇಲಕ್ಕೆ ಎತ್ತು-ಅಬ್ಭೂದ್ಧರಾಮಿ(ಭವಿ)
ಅಬ್ಭುದ್ಧರಣ. ನ: [ಅಭ್ಯುದ್ಧರಣ]ಉದ್ಧರಿಸುವುದು. ವಿ: ಉದ್ಧಾರ ಮಾಡುವವನು
ಅಬ್ಭುನ್ನಯ. 'ಅಬ್ಭುಣ್ಣಯ' ಶಬ್ದವನ್ನು ನೋಡುವುದು
ಅಬ್ಭುಬ್ಭಡ. ವಿ: [ಅಭ್ಯುದ್ಭಟ] ಅತ್ಯಂತ ಉದ್ಧಟನಾದ,
ಅಬ್ಭುಯ. ನ: [ಅದ್ಭುತ] ಆಶ್ಚರ್ಯ, ವಿಸ್ಮಯ (ಉಪ). ವಿ: ಆಶ್ಚರ್ಯಕಾರಕವಾದ(ರಾಯ) ಪ್ರಸಿದ್ಧವಾದ ಅದ್ಭುತ ರಸ
ಅಬ್ಭುವಗಚ್ಛ. ಸಕ:[ಅಭ್ಯುಪ+ಗಮ್] ಒಪ್ಪು, ಅಂಗೀಕರಿಸು, ಹತ್ತಿರಕ್ಕೆ ಹೋಗು(ಪಿ) ವಾಗ್ದಾನಮಾಡು
ಅಬ್ಭುವಗಚ್ಛಾವಿಅ. ವಿ: [ಅಭ್ಯುಪಗಮಿತ] ಒಪ್ಪಲಾದ, ಸ್ವೀಕರಿಸಲಾದ, (ಆಕ)
ಅಬ್ಭುವಗಮ. ಪು: [ಅಭ್ಯುಪಗಮ] ಒಪ್ಪಿಗೆ, ಅಂಗೀಕಾರ, (ಸಮ), ವಾಗ್ದಾನ, ತರ್ಕಶಾಸ್ತ್ರ-ಪ್ರಸಿದ್ಧ ಸಿದ್ಧಾಂತ-ವಿಶೇಷ (ಬೃಹ)
ಅಬ್ಭುವಗಮಣಾ. ಸ್ತ್ರೀ: [ಅಭ್ಯುಪಗಮನಾ] ಸ್ವೀಕಾರ, ಅಂಗೀಕಾರ (ಉಪ)
ಅಬ್ಭುವಗಯ. ವಿ: [ಅಭ್ಯುಪಗತ] ಸ್ವೀಕೃತ, ಅಂಗೀಕೃತ, ಹತ್ತಿರಕ್ಕೆ ಬಂದ (ಆಚಾ)
ಅಬ್ಭುವವಣ್ಣ.ವಿ:[ಅಭ್ಯುಪಪನ್ನ]ಅನುಗ್ರಹಿಸಲ್ಪಟ್ಟ(ನಾಟ)
ಅಬ್ಭುವವತ್ತಿ. ಸ್ತ್ರೀ: [ಅಭ್ಯುಪಪತ್ತಿ] ಅನುಗ್ರಹ, ಮೊರೆ ಹೊಕ್ಕವರ ರಕ್ಷಣೆ(ಅಭಿ), ವಾಗ್ದಾನ ಮಾಡುವುದು

ಅಬ್ಬುವೇ. ಸಕ: [ಅಭ್ಯುಪ+ಇ] ಸ್ವೀಕರಿಸು
ಅಬ್ಭೋ. 'ಅವ್ವೋ' ಶಬ್ದವನ್ನು ನೋಡುವುದು
ಅಬ್ಭೊಕ್ಖಿಯ. ವಿ: [ಅಭ್ಯುಕ್ಷಿತ] ಒದ್ದೆಯಾದ, ನೀರು ಚಿಮುಕಿಸಲ್ಪಟ್ಟ(ಸುರ)
ಅಬ್ಭೊಜ್ಜ. ವಿ: [ಅಭೋಜ್ಯ] ತಿನ್ನಲು ಅನರ್ಹವಾದ್ದು, ಭೋಜನಕ್ಕೆ ಅಯೋಗ್ಯವಾದ್ದು
ಅಭೋಯ. (ಅಪ). **'ಆಭೋಗ'** ಶಬ್ದವನ್ನು ನೋಡುವುದು
ಅಬ್ಭೋವಗಮಿಯ. ವಿ: [ಅಭ್ಯುಪಗಮಿಕ] ಸ್ವಂತ ಇಚ್ಛೆಯಿಂದ ಸ್ವೀಕರಿಸಿದ, **ಅಭ್ಯುಪಗಮಿಕಾ:** **ಸ್ತ್ರೀ:** **ಸ್ವಂತ** ಇಚ್ಛೆಯಿಂದ ಒಪ್ಪಿಕೊಂಡ ತಪಶ್ಚರ್ಯಾದಿಗಳ ವೇದನೆ(ತಾ)
ಅಬ್ಬಿಡ. **'ಅಬ್ಭಿಡ'** ಶಬ್ದವನ್ನು ನೋಡುವುದು
ಅಬ್ಬುತ್ತ. **'ಅಬ್ಭುತ್ತ'** ಶಬ್ದವನ್ನು ನೋಡುವುದು
ಅಭಗ್ಗ. ವಿ: [ಅಭಗ್ನ] ಭಗ್ನವಾಗದ, ಮುರಿಯದ(ಪಡಿ) ಈ ಹೆಸರಿನ ಒಬ್ಬ ಕಳ್ಳ(ವಿಪಾ)
ಅಭತ್ತ. ವಿ: [ಅಭಕ್ತ] ಭಕ್ತನಲ್ಲದ, ಸೇವಕನಲ್ಲದ, ಭೋಜನವಿಲ್ಲದಿರುವುದು, ಪ್ರತ್ಯೇಕಿಸಲ್ಪಡದ, **–ಟ್ಠ.ಪು:[ಅಭಕ್ತಾರ್ಥ]** ಉಪವಾಸ(ಆಚೂ) **–ಟ್ಠಿಂಯ.ವಿ:[ಅಭಕ್ತಾರ್ಥಿಕ]** ಉಪವಾಸ ಮಾಡಿದವನು(ಪಂಚವ)
ಅಭಯ. ನ: [ಅಭಯ] ಭಯವಿಲ್ಲದಿರುವುದು, ಧೈರ್ಯ(ರಾಯ), ಜೀವಿತ ವ್ಯಕ್ತಿ, ಜೀವಿತ, **ಪು:** ಮಹಾವೀರನಿಂದ ದೀಕ್ಷೆ ಪಡೆದಿದ್ದ ಶ್ರೇಣಿಕ ಮಹಾರಾಜನ ಮಗ, (ಣಾಯಾ), ರಕ್ಷಣೆ, ವಿಷ್ಣು, ಶಿವ, ಬ್ರಹ್ಮಜ್ಞಾನ, ಲಾವುಂಚದ ಬೇರು, **–ಕುಮಾರ.** **ಪು:** [**ಕುಮಾರ**] ಮೇಲೆ ನೀಡಿದ ಅರ್ಥ, **–ದಯ.** ವಿ; [**–ದಯ**] ಭಯ ವಿನಾಶಕ, ಜೀವದಾತ, (ಪಡಿ) **–ದಾಣ.** ನ: [**–ದಾನ**] ಜೀವದಾನ, **–ದೇವ.** **ಪು:** [**–ದೇವ**] ಅನೇಕ ವಿಖ್ಯಾತ ಜೈನಾಚಾರ್ಯರು ಮತ್ತು ಗ್ರಂಥಕಾರ ಹೆಸರುಗಳು, **–ಪ್ಪದಾಣ.** ನ: [**–ಪ್ರದಾನ**] ಜೀವದಾನ(ಸೂಅ), **–ವತ್ತ.** ನ: [**–ವತ್ತ್ವ**] ನಿರ್ಭಯತೆ, ಅಭಯ, **–ಸೇಣ.** **ಪು:** [**–ಸೇನ**] ಒಬ್ಬ ರಾಜನ ಹೆಸರು.
ಅಭಯಕರಾ. ಸ್ತ್ರೀ: [ಅಭಯಕರಾ] ಭಗವಾನ್ ಅಭಿನಂದನನ ದೀಕ್ಷಾ ಶಿಬಿಕೆ

ಅಭಯಂಕರ. ವಿ: [ಅಭಯಂಕರ] ಅಭಯವನ್ನು ನೀಡುವವನು, ಸೌಮ್ಯ, ಅಹಿಂಸಕ(ಸೂಅ)
ಅಭಯಾ. **ಸ್ತ್ರೀ:** [**ಅಭಯಾ**] ಅಳಲೆಗಿಡ(ನಿಚೂ) ರಾಜಾ ದಧಿವಾಹನನ ಹೆಂಡತಿಯ ಹೆಸರು
ಅಭಯಾರಿಟ್ಠ. ನ: [**ಅಭಯಾರಿಷ್ಟ**] ಒಂದು ಮದ್ಯ–ವಿಶೇಷ(ಸೂಅ)
ಅಭವಸಿದ್ಧಿಯ.} **ಪು:** [**ಅಭವಸಿದ್ಧಿಕ**] ಅಭವ್ಯ, ಮುಕ್ತಿಗೆ
ಅಭವಸಿದ್ಧೀಯ.} ಅರ್ಹನಲ್ಲದ ಜೀವ (ವಿಸೇ)(ತಾ)
ಅಭವಿಯ}. ವಿ: [**ಅಭವ್ಯ**] ಸುಂದರವಲ್ಲದ, ಮುಕ್ತಿಗೆ
ಅಭವ್ವ} ಅರ್ಹನಲ್ಲದ ಜೀವ(ವಿಸೇ), ದುರದೃಷ್ಟ, ಅಮಂಗಳವಾದ್ದು
ಅಭಾಅ. ವಿ: [**ಅಭಾಗ**] ಯೋಗ್ಯವಲ್ಲದ ಸ್ಥಳ(ಸೇ) ಜೈನಾಚಾರ್ಯ
ಅಭಾಇ. ವಿ: [**ಅಭಾಗಿನ್**] ದುರದೃಷ್ಟವಂತ, ಹತಭಾಗ್ಯ, ಅದೃಷ್ಟಹೀನ (ಚಾರು)
ಅಭಾಗಧೆಜ್ಜ. ವಿ: [**ಅಭಾಗಧೇಯ**] ಮೇಲಿನ ಶಬ್ದವನ್ನು ನೋಡುವುದು
ಅಭಾವ. **ಪು:** [**ಅಭಾವ**] ಇಲ್ಲದಿರುವುದು, ಕೊರತೆ, ಬಡತನ, ನಾಶ, ಅಶುಭ ಪರಿಣಾಮ ಅಸಂಭವ,
ಅಭಾವಿಯ. ವಿ: [**ಅಭಾವಿತ**] ಅಯೋಗ್ಯ, ಅನಂತ(ತಾ)
ಅಭಾವುಗ. ವಿ: [**ಅಭಾವುಕ**] ಬೇರೆಯವರ ಸಹವಾಸದ ಪ್ರಭಾವ ಬೀಳದಿರುವ ವ್ಯಕ್ತಿ(ಸುಪಾ)
ಅಭಾಸಗ}. ವಿ: [**ಅಭಾಷಕ**] ಮಾತಾಡುವ ಶಕ್ತಿ
ಅಭಾಸಯ}. ಇಲ್ಲದವನು, ಮಾತಾಡದವನು **ಪು:** ಒಂದೇ ಇಂದ್ರಿಯವುಳ್ಳವನು, ಮುಕ್ತಾತ್ಮ(ತಾ)
ಅಭಾಸಾ. **ಸ್ತ್ರೀ:** [**ಅಭಾಷಾ**] ಸತ್ಯವಲ್ಲದ ಮಾತು, ಸತ್ಯಮಿಶ್ರಿತ ಸುಳ್ಳು ಮಾತು(ಭಗ)
ಅಭಿ. ಅ: [**ಅಭಿ**] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಎದುರುಗಡೆ, ಸುತ್ತಲೂ, ಬಲಾತ್ಕಾರ, ಉಲ್ಲಂಘಿಸುವುದು, ಅತ್ಯಂತ, ಲಕ್ಷ್ಯ, ಪ್ರತಿಕೂಲ, ವಿಕಲ್ಪ, ಚಿಹ್ನೆ, ಗುರುತು, ಸಂಭಾವನೆ, ಒಳಗೆ, ವೀಪ್ಸೆ, ಇಚ್ಛೆ, ಸೌಮ್ಯತೆ, ಇತ್ಯಾದಿ
ಅಭಿಅಣ. **ಪು:** [**ಅಭಿಜನ**] ಕುಲ, ಜನ್ಮಭೂಮಿ(ನಾಟ) ಆಚಾರ್ಯ
ಅಭಿಆವಣ್ಣ. ವಿ: [**ಅಭ್ಯಾಪನ್ನ**] ಎದುರುಗಡೆ ಬಂದ(ಸೂಅ)
ಅಭಿಇ. **ಸ್ತ್ರೀ:** [**ಅಭಿಜಿತ್**] ನಕ್ಷತ್ರ–ವಿಶೇಷ(ತಾ)

ಅಭಿಇ. ಸಕ: [ಅಭಿ+ಇ] ಎದುರಿನಲ್ಲಿ ಹೋಗು, ಸಂಮುಖವಾಗಿ ಹೋಗು

ಅಭಿಉಂಜ 'ಅಭಿಜುಂಜ' ಶಬ್ದವನ್ನು ನೋಡುವುದು ಆಚಾರ್ಯ

ಅಭಿಓಅ}. **ಪು:** [**ಅಭಿಯೋಗ**] ಉದ್ಯಮ, ಉದ್ಯೋಗ,
ಅಭಿಓಗ}. ಆಜ್ಞೆ, ಬಲಾತ್ಕಾರ, ಅವಮಾನ, ಆಪಾದನೆ, ಆಸಕ್ತಿ, ವಶೀಕರಣ, ಹೆಮ್ಮೆ, ಅಭಿಮಾನ, ಹಠ, ದಾಳಿ, ಉದ್ಯೋಗ, ಪ್ರಯತ್ನ, ಶಪಥ, ತಡೆಗಟ್ಟುವುದು. **–ಪಣ್ಣತ್ತಿ. ಸ್ತ್ರೀ:** [**–ಪ್ರಜ್ಞಪ್ತಿ**] ವಿದ್ಯಾ–ವಿಶೇಷ. '**ಅಹಿಓಯ**' ಶಬ್ದವನ್ನು ನೋಡುವುದು

ಅಭಿಓಗೀ. ಸ್ತ್ರೀ: [**ಅಭಿಯೋಗೀ**] ಭಾವನಾ–ವಿಶೇಷ, ದೇವ ಜಾತಿಯ ಕೆಲಸದವರ ವರ್ಗದವರಲ್ಲಿ ಹುಟ್ಟುವ ಒಂದು ಬಗೆಯ ಧ್ಯಾನ–ವಿಶೇಷ(ಬೃಹ)

ಅಭಿಓಯಣ. ನ: [**ಅಭಿಯೋಜನ**] '**ಅಭಿಓಗ**' ಶಬ್ದವನ್ನು ನೋಡುವುದು

ಅಭಿಂಗಣ}. '**ಅಬ್ಭಂಗಣ**' ಶಬ್ದವನ್ನು ನೋಡುವುದು
ಅಭಿಂಜಣ}.

ಅಭಿಕಂಖ. ಸಕ: [**ಅಭಿ+ಕಾಂಕ್ಷ್**] ಬಯಸು, ಇಚ್ಛಿಸು, **ವ.ಕೃ–'ಅಭಿಕಂಖಮಾಣ'**

ಅಭಿಕಂಖಾ. ಸ್ತ್ರೀ: [**ಅಭಿಕಾಂಕ್ಷಾ**] ಅಭಿಲಾಷೆ, ಇಚ್ಛೆ(ಆಚಾ)

ಅಭಿಕಂಖಿ.} ವಿ: [**ಅಭಿಕಾಂಕ್ಷಿನ್**] ಬಯಸುವವನು,
ಅಭಿಕಂಖಿರಿರ}. ಇಚ್ಛಿಸುವವನು(ಸುಪಾ)

ಅಭಿಕ್ಕಂತ. ವಿ: [**ಅಭಿಕ್ರಾಂತ**] ಕಳೆದು ಹೋದ, ಆರಂಭಿಸಲ್ಪಟ್ಟ, ಮೀರಲಾದ, ಮುತ್ತಿಗೆ ಹಾಕಲ್ಪಟ್ಟ

ಅಭಿಕ್ಕಮ. ಪು: [**ಅಭಿಕ್ರಮ**] ಉಲ್ಲಂಘನೆ, ಮೀರುವುದು, ಪ್ರಾರಂಭ, ದಾಳಿ, ಎದುರಿನಲ್ಲಿ ಬರುವುದು, ಏರುವುದು, ಯುದ್ಧ

ಅಭಿಕ್ಖ.} ಅ: [**ಅಭೀಕ್ಷ್ಣ**] ಮತ್ತೆ ಮತ್ತೆ ಸಂಭವಿಸುವ,
ಅಭಿಕ್ಖಣ.} (ಉಪ) ನಿರಂತರವಾದ, ಅತಿಶಯವಾದ

ಅಭಿಕ್ಖಾ. ಸ್ತ್ರೀ: [**ಅಭಿಖ್ಯಾ**] ಹೆಸರು, ಕೀರ್ತಿ ಕಾಂತಿ, ಹೊಳಪು, ಮಹಿಮೆ, ಬುದ್ಧಿ

ಅಭಿಗಚ್ಛ. ಸಕ: [**ಅಭಿ+ಗಮ್**] ಎದುರಿನಲ್ಲಿ ಹೋಗು, ಎದುರಾಗಿ ಹೋಗು, ಪಡೆದುಕೊಳ್ಳು

ಅಭಿಗಜ್ಜ. ಅಕ: [**ಅಭಿ+ ಗರ್ಜ್**] ಗರ್ಜಿಸು, ಜೋರಾಗಿ ದನಿಯೆತ್ತು(ಣಾಯಾ)

ಅಭಿಗಮ. '**ಅಭಿಗಚ್ಛ**' ಶಬ್ದವನ್ನು ನೋಡುವುದು

ಅಭಿಗಮ. ಪು: [**ಅಭಿಗಮ**] ಪ್ರಾಪ್ತಿ, ಪಡೆದುಕೊಳ್ಳುವುದು, ಆದರ, ಸತ್ಕಾರ ಉಪದೇಶ, ಜ್ಞಾನ, ನಿಶ್ಚಯ(ಭಗ) ಸಮ್ಯಕ್ತ್ವದ ಒಂದು ಭೇದ(ಠಾ) ಎದುರಾಗಿ ಬರುವುದು, ಎದುರಾಗಿ ಹೋಗುವುದು, ಅನುಕೂಲ ಸಮಾಗಮ

ಅಭಿಗಮಣ. ನ: [**ಅಭಿಗಮನ**] ಮೇಲಿನ ಶಬ್ದವನ್ನು ನೋಡುವುದು

ಅಭಿಗಯ. ವಿ: [**ಅಭಿಗತ**] ಪ್ರಾಪ್ತವಾದ, ಸತ್ಕರಿಸಲ್ಪಟ್ಟ, ಪ್ರವೇಶಿಸಿದ, ನಿಶ್ಚಿತ, ಜ್ಞಾತ

ಅಭಿಗಹಿಯ. ನ: [**ಅಭಿಗ್ರಹಿಕ**] ಸುಳ್ಳಾಗಿರುವ, ಅಸತ್ಯವಾಗಿರುವ ಸಂದರ್ಭ

ಅಭಿಗಿಜ್ಝ. ಅಕ: [**ಅಭಿ+ಗೃಧ್**] ಅತಿಯಾಗಿ ಆಸೆಪಡು, ಅತಿ ಆಸಕ್ತಿ ಹೊಂದು(ಸೂಅ)

ಅಭಿಗಿಣ್ಹ}. **ಸಕ:** [**ಅಭಿಗ್ರಹ್**] ಸ್ವೀಕರಿಸು, ತೆಗೆದುಕೊಳ್ಳು
ಅಭಿಗಿಸ್ಹ}.

ಅಭಿಗ್ಗಹ. ಪು: [**ಅಭಿಗ್ರಹ**] ಪ್ರತಿಜ್ಞೆ ಮಾಡುವುದು, ಜೈನ ಸಾಧುಗಳ ಆಚಾರ–ವಿಶೇಷ,(ಬೃಹ) ಪ್ರತ್ಯಾಖ್ಯಾನ(ನಿಯಮ–ವಿಶೇಷದ ಒಂದು ಪ್ರಭೇದ(ಆವ), ಒಂದು ಬಗೆಯ ಶಾರೀರಿಕ ವಿನಯ, ಹಠ, ಲೂಟಿ(ವವ) ಯುದ್ಧ, ದೂರು, ಕೊಳ್ಳೆ, ದಾಳಿ, ಗೌರವ

ಅಭಿಗ್ಗಹಣೀ. ಸ್ತ್ರೀ: [**ಅಭಿಗ್ರಹಣೀ**] ಭಾಷೆಯ ಒಂದು ಪ್ರಭೇದ, ಸುಳ್ಳು ಮಾತು

ಅಭಿಗ್ಗಹಿಂಯ. ವಿ: [**ಅಭಿಗ್ರಹಿಕ**]ಅಭಿಗ್ರಹ ಹೊಂದಿರುವವನು

ಅಭಿಗ್ಗಹಿಯ. ವಿ: [**ಅಭಿಗೃಹೀತ**] ಅಭಿಗ್ರಹಕ್ಕೆ ಒಳಗಾದವನು, ಅವಧಾರಣೆ, ನಿಶ್ಚಯ

ಅಭಿಘಟ್ಟ. ಸಕ: [**ಅಭಿ+ಘಟ್ಟ್**] ವೇಗವಾಗಿ ಚಲಿಸು,

ಅಭಿಘಾಯ. ಪು: [**ಅಭಿಘಾತ**] ಹೊಡೆತ, ಏಟು, ಹಿಂಸೆ(ಪಣ್ಣ), ಬುಡಸಹಿತ ನಾಶಮಾಡುವುದು

ಅಭಿಚಂದ. ಪು: [**ಅಭಿಚಂದ್ರ**] ಯಾದವ ರಾಜ ಅಂಧಕ ವೃಷ್ಣಿಯ ಮಗ–ಜೈನ ದೀಕ್ಷೆ ವಹಿಸಿದವನು, ಈ ಹೆಸರಿನ ಒಬ್ಬ ಮುಖಂಡ(ಪಉಮ), ಮುಹೂರ್ತ–ವಿಶೇಷ(ಸಮ)

ಅಭಿಜಣ. '**ಅಭಿಅಣ**' ಶಬ್ದವನ್ನು ನೋಡುವುದು

ಅಭಿಜಸ್. ನ: [**ಅಭಿಯಶಸ್**] ಈ ಹೆಸರಿನ ಜೈನ ಸಾಧುಗಳ ಒಂದು ವರ್ಗ(ಆಚಾರ್ಯಸಂತತಿ)

ಅಭಿಜಾಇ. ಸ್ತ್ರೀ: [ಅಭಿಜಾತಿ] ಕುಲೀನತೆ, ಸತ್ಕುಲದಲ್ಲಿ ಹುಟ್ಟುವುದು, ಶ್ರೇಷ್ಠ ಜನ್ಮ(ಉತ್ತ)
ಅಭಿಜಾಣ. ಸಕ: [ಅಭಿ+ಜ್ಞಾ] ತಿಳಿದುಕೊಳ್ಳು, ಸ್ಮರಿಸು. **ವ. ಕೃ–ಅಭಿಜಾಣಮಾಣ**
ಅಭಿಜಾತ. ಪು:[ಅಭಿಜಾತ]ಪಕ್ಷದ ಹನ್ನೊಂದನೆಯ ದಿನ
ಅಭಿಜಾಯ. ವಿ: [ಅಭಿಜಾತ] ಕುಲೀನ(ರಾಜ) ಸತ್ಕುಲದಲ್ಲಿ ಹುಟ್ಟಿದ,
ಅಭಿಜುಂಜ. ಸಕ: [ಅಭಿಯುಜ್] ಮಂತ್ರ–ತಂತ್ರಾದಿಗಳಿಂದ ವಶಪಡಿಸಿಕೊ, ಕಾಯದಲ್ಲಿ ತೊಡಗಿಕೊ, ಆಲಿಂಗಿಸಿಕೊಳ್ಳು, ನೆನಪುಮಾಡು, ದಾಳಿಮಾಡು, ಮೇಲೆ ಬೀಳು
ಅಭಿಜುತ್ತ. ವಿ: [ಅಭಿಯುಕ್ತ] ವ್ರತ–ನಿಯಮಗಳಲ್ಲಿ ದೋಷಮಾಡದವನು(ಣಾಯಾ), ತಿಳಿದವನು, ಪಂಡಿತ(ಣಂದಿ), ಶತ್ರುಗಳಿಂದ ದಾಳಿಗೆ ಗುರಿಯಾದವನು, ಆಸಕ್ತ, ಅಪರಾಧಿ, ಪ್ರತಿವಾದಿ, ವೃದ್ಧ
ಅಭಿಜ್ಝಾ. ಸ್ತ್ರೀ: [ಅಭಿಧ್ಯಾ] ಲೋಭ, ಲೋಲುಪತೆ(ಸಮ) ಚಿಂತನೆ, ಆಲೋಚನೆ
ಅಭಿಜ್ಝಿಯ. ವಿ: [ಅಭಿಧ್ಯಿತ] ಇಷ್ಟಪಟ್ಟ, ಬಯಸಿದ(ಪಣ್ಣ)
ಅಭಿಟ್ಠಿಅ. ವಿ: [ಅಭೀಷ್ಟ] ಇಚ್ಛೆಪಟ್ಟ, ಬಯಸಿದ, ಆಶಿಸಿದ
ಅಭಿಟ್ಠುಂಯ. ವಿ: [ಅಭಿಷ್ಟುತ] ಶ್ಲಾಘಿಸಲ್ಪಟ್ಟ, ಹೊಗಳಲ್ಪಟ್ಟ, ವರ್ಣಿತ(ಆವ)
ಅಭಿಡ್ಡುಯ. 'ಅಭಿದ್ದುಯ' ಶಬ್ದವನ್ನು ನೋಡುವುದು
ಅಭಿಣಅಂತ.} **'ಅಭಿಣೀ'** ಶಬ್ದವನ್ನು ನೋಡುವುದು
ಅಭಿಣಇಜ್ಜಂತ}.
ಅಭಿಣಂದ. ಸಕ: [ಅಭಿನಂದ್] ಹೊಗಳು, ಸ್ತುತಿಸು, ಆಶೀರ್ವದಿಸು, ಪ್ರೀತಿಸು, ಆನಂದಿಸು, ಇಷ್ಟಪಡು ಗೌರವಿಸು, –'ಅಭಿಣಂದಇ' (ಸ), ಪ್ರೋತ್ಸಾಹಿಸು
ಅಭಿಣಂದಿಂಯ. ವಿ: [ಅಭಿಸಂದಿತ] ಅಭಿನಂದಿಸಲ್ಪಟ್ಟವನು(ಸುಪಾ) ಹೊಗಳಲ್ಪಟ್ಟ, ಪ್ರೋತ್ಸಾಹಿಸಲ್ಪಟ್ಟ
ಅಭಿಣಂದಣ. ನ: [ಅಭಿನಂದನ] ಪ್ರಶಂಸೆ, ಸಂತೋಷ, ಆನಂದವುಂಟುಮಾಡುವ, **ಪು:** ವರ್ತಮಾನ ಅವಸರ್ಪಿಣೀ ಕಾಲದ ನಾಲ್ಕನೇ ಜಿನದೇವ, ಲೋಕೋತ್ತರ ಶ್ರಾವಣ ಮಾಸ(ಸುಜ್ಜ)
ಅಭಿಣಯ. ವಿ: [ಅಭಿನಯ] ಮನಸ್ಸಿನ ಭಾವನೆಗಳನ್ನು ಅಂಗಚೇಷ್ಟೆಗಳಿಂದ (ಶರೀರ ವ್ಯಾಪಾರ) ವ್ಯಕ್ತಪಡಿಸುವುದು, ನಾಟ್ಯ ಕ್ರಿಯೆ(ಠಾ)
ಅಭಿಣಿಕ್ಖಂತ. ವಿ: [ಅಭಿನಿಷ್ಕ್ರಾಂತ] ದೀಕ್ಷೆ ಪಡೆದವನು, ಸಂನ್ಯಾಸ ಸ್ವೀಕರಿಸಿದವನು(ಸ) ಎದುರಾಗಿ ಹೊರಟರುವವನು
ಅಭಿಣಿಗಿಣ್ಹ. ಸಕ: [ಅಭಿನಿ+ಗ್ರಹ್] ತಡೆ, ಅಡ್ಡಿ ಉಂಟುಮಾಡು(ಪಿ)
ಅಭಿಣಿಚಾರಿಯಾ. ಸ್ತ್ರೀ: [ಅಭಿನಿಚಾರಿಕಾ] ಭಿಕ್ಷೆಗಾಗಿ ಸಂಚಾರಕ್ಕೆ ತೊಡಗುವುದು(ವವ)
ಅಭಿಣಿಪಯಾ ಸ್ತ್ರೀ [ಅಭಿನಿಪ್ರಜಾ] ಬೇರೆಯಾಗಿ ಇರುವ ಪ್ರಜೆಗಳು(ಪ್ರಜಾ)
ಅಭಿಣಿಬುಜ್ಝ. ಸಕ: [ಅಭಿನಿ+ಬುಧ್] ತಿಳಿದುಕೊಳ್ಳು, ಇಂದ್ರಿಯಾದಿಗಳಿಂದ ನಿಶ್ಚಿತ ರೂಪದ ಜ್ಞಾನ ಹೊಂದು.
ಅಭಿಣಿಬೋಹ. ಪು: [ಅಭಿನಿಬೋಧ] ಜ್ಞಾನ–ವಿಶೇಷ, ಮತಿ–ಜ್ಞಾನ(ಸಮ)
ಅಭಿಣಿಯಟ್ಟಣ. ನ: [ಅಭಿನಿವರ್ತನ] ಹಿಂದಕ್ಕೆ ಹೋಗುವುದು, ಮರಳುವುದು, ವಾಪಸ್
ಅಭಿಣಿವಿಟ್ಠ. ವಿ: [ಅಭಿನಿವಿಷ್ಟ] ಕಾರ್ಯ ಶ್ರದ್ಧೆಯುಳ್ಳ, ತೀವ್ರ ಆಸಕ್ತಿ ಹೊಂದಿರುವ, ಹಠಹಿಡಿದ(ಉತ್ತ)
ಅಭಿನಿವೇಸ. ಪು: [ಅಭಿನಿವೇಶ] ಆಗ್ರಹ, ಹಟ, ಕಾಯತತ್ಪರತೆ
ಅಭೀಣಿವೇಸಿ. ವಿ: [ಅಭಿನಿವೇಶಿನ್] ಆಗ್ರಹವುಳ್ಳ, ಉತ್ಸಾಹದಿಂದ ಕೂಡಿದ
ಅಭಿಣಿವೇಹ. ಪು: [ಅಭಿನಿವೇಧ] ತಲೆಕೆಳಕಾಗಿ ಅಳೆಯುವುದು (ಆವಮ)
ಅಭಿಣಿವ್ವಾಗಡ. ವಿ: [ದೇ. ಅಭಿನಿರ್ವ್ಯಾಕೃತ] ಭಿನ್ನವಾದ ಪರಿಧಿ ಉಳ್ಳ, ಪ್ರತ್ಯೇಕವಾಗಿರುವ(ಮನೆ ಇತ್ಯಾದಿ)
ಅಭಿಣಿವ್ವಟ್ಟ. ಸಕ: [ಅಭಿನಿ+ವೃತ್] ತಡೆ, ನಿಷೇಧಿಸು (ಆಚಾ)
ಅಭಿಣಿವ್ವಟ್ಟ. ಸಕ: [ಅಭಿನಿರ್+ವೃತ್] ಸಂಪಾದಿಸು, ಉತ್ಪನ್ನಮಾಡು, ನಿಷ್ಪನ್ನ ಮಾಡು
ಅಭಿಣಿವ್ವಟ್ಟ. ವಿ: [ಅಭಿನಿರ್ವೃತ್ತ] ನಿಷ್ಪನ್ನವಾದ, ಉತ್ಪನ್ನ(ಆಚಾ) ತಯಾರಾದ, ಸಿದ್ಧವಾದ
ಅಭಿಣಿವ್ವುಡ. ವಿ: [ಅಭಿನಿರ್ವೃತ್ತ] ಮುಕ್ತನಾದ, ಶಾಂತನಾದ, ಕೋಪಗೊಳ್ಳದ, ಪಾಪದಿಂದ ವಿಮುಖನಾದ, (ಸೂಅ)

ಅಭಿಣಿಸಜ್ಜಾ. ಸ್ತ್ರೀ: [ಅಭಿನಿಷದ್ಯಾ] ಜೈನ ಸಾಧುಗಳು ವಾಸಿಸಲು ಇರುವ ವಿಶೇಷ ಸ್ಥಳ (ವವ)

ಅಭಿಣಿಸಟ್ಠ.} ವಿ: [ಅಭಿನಿಸೃಷ್ಟ] ಹೊರದೂಡಲ್ಪಟ್ಟ,
ಅಭಿಣಿಸಿಟ್ಠ.} ಹೊರಹಾಕಲ್ಪಟ್ಟ(ಜೀವ)

ಅಭಿಣಿಸೇಹಿಯಾ. ಸ್ತ್ರೀ: [ಅಭಿನೈಷೇಧಿಕೀ] ಜೈನ ಸಾಧುಗಳು ಸ್ವಾಧ್ಯಾಯ ಮಾಡುವ ಸ್ಥಳ-ವಿಶೇಷ(ವವ)

ಅಭಿಣಿಸ್ಸವ. ಅಕ: [ಅಭಿನಿರ್+ಸ್ರು] ಹೊರಡು

ಅಭಿಣಿಸ್ಸಡ. ವಿ: [ಅಭಿನಿಸ್ಸೃತ] ಹೊರದೂಡಲ್ಪಟ್ಟ (ಭಗ)

ಅಭಿಣೀ. ಸಕ: [ಅಭಿ+ನೀ] ಅಭಿನಯಿಸು, ನೃತ್ಯಮಾಡು. ವ.ಕೃ-'ಅಭಿಣಂತ'

ಅಭಿಣೂಮ. ನ: [ಅಭಿನೂಮ] ಮಾಯೆ, ಕಪಟ (ಸೂಅ)

ಅಭಿಣ್ಣ. ವಿ: [ಅಭಿಜ್ಞ] ತಿಳಿದವನು, ಪಂಡಿತ, ನಿಪುಣ, ಚತುರ

ಅಭಿಣ್ಣ. ವಿ: [ಅಭಿನ್ನ] ಒಡೆಯದ, ಅಖಂಡವಾದ, ವ್ಯತ್ಯಾಸವಿರದ(ಬೃಹ), ಪೂರ್ಣವಾದ

ಅಭಿಣ್ಣಪುಡ. ಪು: [ದೇ] ಜನರನ್ನು ವಂಚಿಸಲು ರಸ್ತೆಯಲ್ಲಿ ಎಸೆದಿರುವ ಖಾಲಿ ಪೊಟ್ಟಣ,

ಅಭಿಣ್ಣಾಣ. ನ: [ಅಭಿಜ್ಞಾನ] ಗುರುತು, ನೆನಪಿಸುವ ಚಿಹ್ನೆ, ಸಂಕೇತ (ಶ್ರಾ)

ಅಭಿಣ್ಣಾಯ. ವಿ: [ಅಭಿಜ್ಞಾತ] ಗುರುತಿನಿಂದ ಅಥವಾ ನೆನಪಿನಿಂದ ತಿಳಿದು ಬಂದ, ವಿದಿತ(ಆಚಾ)

ಅಭಿತಜ್ಜ. ಸಕ: [ಅಭಿ+ತರ್ಜ್] ತಿರಸ್ಕರಿಸು, ಹೊಡೆ,

ಅಭಿತತ್ತ. ವಿ: [ಅಭಿತಪ್ತ] ಚೆನ್ನಾಗಿ ಕಾಯಿಸಲ್ಪಟ್ಟ, ಬಿಸಿಮಾಡಿದ(ಸೂಅ)

ಅಭಿತವ. ಸಕ: [ಅಭಿ+ತಪ್] ಕಾಯಿಸು, ಬಿಸಿಮಾಡು

ಅಭಿತಾವ. ಸಕ: [ಅಭಿ+ತಾಪಯ್] ಚೆನ್ನಾಗಿ ಕಾಯಿಸು, ಚೆನ್ನಾಗಿ ಬಿಸಿಮಾಡು, ನೋಯಿಸು

ಅಭಿತಾವ. ಪು: [ಅಭಿತಾಪ] ದಾಹ, ನೋವು(ಸೂಅ), ಅಧಿಕ ಸಂತಾಪ, ಹೆಚ್ಚು ಸೆಕೆ

ಅಭಿತಾಸ. ಸಕ: [ಅಭಿ+ತ್ರಾಸಯ್] ಕಷ್ಟಕೊಡು, ಭಯಭೀತಗೊಳಿಸು **ವ.ಕೃ-ಅಭಿತಾಸೇಮಾಣ** (ಣಾಯಾ)

ಅಭಿತ್ಥು. ಸಕ: [ಅಭಿ+ಸ್ತು] ಹೊಗಳು, ಸ್ತುತಿಸು, ವರ್ಣಿಸು- 'ಅಭಿತ್ಥುಣಂತಿ'(ಪಿ)

ಅಭಿತ್ಥುಯ. ವಿ: [ಅಭಿಷ್ಟುತ] ಹೊಗಳಲ್ಪಟ್ಟ, ವರ್ಣಿಸಲ್ಪಟ್ಟ (ಸಚಿಥಾ)

ಅಭಿಥು. 'ಅಭಿತ್ಥು' ಶಬ್ದವನ್ನು ನೋಡುವುದು

ಅಭಿದುಗ್ಗ. ವಿ: [ಅಭಿದುರ್ಗ] ದುಃಖವನ್ನುಂಟು ಮಾಡುವ ಸ್ಥಳ, ಅತಿ ವಿಷಮಸ್ಥಳ(ಸೂಅ)

ಅಭಿದೋ(ಶೌ). ಅ: [ಅಭಿತಃ] ನಾಲ್ಕೂ ಕಡೆಯಿಂದ, ಎಲ್ಲಕಡೆಯಿಂದ ಸುತ್ತಲೂ, (ಸ್ವಪ್ನ) ಎದುರಿನಲ್ಲಿ ಹತ್ತಿರದಲ್ಲಿ, ಸಂಪೂರ್ಣವಾಗಿ

ಅಭಿದ್ದವ. ಸಕ: [ಅಭಿ+ದ್ರು] ನೋವುಂಟುಮಾಡು, ದುಃಖ ಉಂಟು ಮಾಡು, ಕಕ್ಕಾಬಿಕ್ಕಿಮಾಡು, ಚಕಿತಗೊಳಿಸು(ಆಚಾ)

ಅಭಿದ್ದವಿಯ. ವಿ: [ಅಭಿದ್ರುತ] ಚಕಿತಗೊಳಿಸಲ್ಪಟ್ಟ, ಕಕ್ಕಾಬಿಕ್ಕಿಗೊಳಿಸಲ್ಪಟ್ಟ(ಸುರ)

ಅಭಿದ್ದುಯ. 'ಅಭಿದ್ದವಿಯ' ಶಬ್ದವನ್ನು ನೋಡುವುದು

ಅಭಿಧಾಇ. ವಿ: [ಅಭಿಧಾಯಿನ್]ವಾಚಕ, ಹೇಳುವ, ಮಾತನಾಡುವ (ವಿಸೇ)

ಅಭಿಧಾರ. ಸಕ: [ಅಭಿ+ಧಾರಯ್] ಚಿಂತನೆ ಮಾಡು, ಚಿಂತಿಸು, ತೆರೆ, ಧಾರಣಮಾಡು,

ಅಭಿಧಾರಣ. ನ: [ಅಭಿಧಾರಣ] ಧಾರಣ, ಮನಸ್ಸಿನಲ್ಲಿ ಗ್ರಹಿಸಿದ ವಿಚಾರ, ಚಿಂತನ, (ಬೃಹ)

ಅಭಿಧೆಜ್ಜ.} ಪು: [ಅಭಿಧೇಯ] ಮುಖ್ಯಾರ್ಥ,
ಅಭಿಧೇಯ}. ಅಭಿಧಾವೃತ್ತಿಯಿಂದ ಬೋಧಿತವಾಗುವ ವಾಚ್ಯಾರ್ಥ

ಅಭಿನಂದ.'ಅಭಿಣಂದ' ಶಬ್ದವನ್ನು ನೋಡುವುದು

ಅಭಿನಂದಣ. 'ಅಭಿಣಂದಣ' ಶಬ್ದವನ್ನು ನೋಡುವುದು

ಅಭಿನಂದಿ. ಸ್ತ್ರೀ: [ಅಭಿನಂದಿ] ಆನಂದ, ಸಂತಸ(ಅಜಿ)

ಅಭಿನಿಕ್ಖಂತ. 'ಅಭಿಣಿಕ್ಖಂತ' ಶಬ್ದವನ್ನು ನೋಡುವುದು (ಆಚಾ)

ಅಭಿನಿಕ್ಖಮ. ಅಕ: [ಅಭಿನಿರ್+ಕ್ರಮ] ಸನ್ಯಾಸ ದೀಕ್ಷೆ ತೆಗೆದುಕೊ, ದಿಕ್ಷೆ ತೆಗೆದುಕೊಳಲಿಚ್ಚಿಸು, ಮನೆಬಿಟ್ಟು ಹೊರಡು, ವ.ಕೃ-ಅಭಿನಿಕ್ಖಮಂತ (ಪಿ)

ಅಭಿನಿಗಿಣ್ಹ. 'ಅಭಿಣಿಗಿಣ್ಹ' ಶಬ್ದವನ್ನು ನೋಡುವುದು

ಅಭಿನಿಬುಜ್ಝ. 'ಅಭಿಣಿಬುಜ್ಝ' ಶಬ್ದವನ್ನು ನೋಡುವುದು

ಅಭಿನಿವಟ್ಟ. 'ಅಭಿಣಿವಟ್ಟ' ಶಬ್ದವನ್ನು ನೋಡುವುದು

ಅಭಿನಿವಿಟ್ಠ. 'ಅಭಿಣಿವಿಟ್ಠ' ಶಬ್ದವನ್ನು ನೋಡುವುದು

ಅಭಿನಿವೇಸ. ಸಕ: [ಅಭಿನಿ+ವೇಶಯ್] ಸ್ಥಾಪಿಸು, ಇಡು, ಮಾಡು

ಅಭಿನಿವೇಸಿಯ. ನ: [**ಅಭಿನಿವೇಶಿಕ**] ಮಿಥ್ಯಾತ್ವದ ಒಂದು ಬಗೆ, ಸತ್ಯವಸ್ತುವಿನ ಜ್ಞಾನವುಂಟಾದ ಮೇಲೂ ಅದನ್ನು ಒಪ್ಪದಿರುವ ಕೆಟ್ಟ ಹಟ(ಶ್ರಾ)

ಅಭಿನಿವ್ವಟ್ಟ. ಸಕ: [**ಅಭಿನಿ+ವೃತ್**] ಬೇರೆಯಾಗು, ಅಗಲು

ಅಭಿನಿವ್ವಟ್ಟ. ಸಕ: [**ಅಭಿನಿರ್+ವೃತ್**] ಎಳೆ

ಅಭಿನಿವ್ವಾಗಡ. ವಿ: [**ಅಭಿನಿರ್ವ್ಯಾಕೃತ**] ಬೇರೆ ಬಾಗಿಲು ಹೊಂದಿರುವ(ಮನೆ)

ಅಭಿನಿವ್ವಿಟ್ಠ. ವಿ; [**ಅಭಿನಿರ್ವಿಷ್ಟ**] ಸಂಜಾತ, ಹುಟ್ಟಿದ(ಕಪ್ಪ)

ಅಭಿನಿವ್ವುಡ. '**ಅಭಿಣಿವ್ವುಡ**' ಶಬ್ದವನ್ನು ನೋಡುವುದು

ಅಭಿನಿಸಢ. ವಿ: [**ಅಭಿನಿಃಸಟ**] ಹೆಗಲಿನ ಭಾಗ ಹೊರಕ್ಕೆ ಬಂದಿರುವನು

ಅಭಿನಿಸ್ಸವ. ಅಕ: [**ಅಭಿನಿ+ಸ್ರು**] ತೊಟ್ಟಿಕ್ಕು. ಸ್ರವಿಸು –'**ಅಭಿನಿಸ್ಸವಇ**' (ಭಗ)

ಅಭಿನ್ನ. '**ಅಭಿಣ್ಣ**' ಶಬ್ದವನ್ನು ನೋಡುವುದು

ಅಭಿನ್ನಾಣ. '**ಅಭಿಣ್ಣಾನ**' ಶಬ್ದವನ್ನು ನೋಡುವುದು

ಅಭಿನ್ನಾಯ. '**ಅಭಿಣ್ಣಾಯ**' ಶಬ್ದವನ್ನು ನೋಡುವುದು

ಅಭಿಪಲ್ಲಾಣಿಂಉ. ವಿ: [**ಅಭಿಪರ್ಯಾಣಿತ**] ಅಧ್ಯಾರೋಪಿತ, ಮೇಲೆ ಹೊರಿಸಿದ, ಮೇಲೆ ಆರೋಪಿಸಿದ

ಅಭಿಪವುಟ್ಠ. ವಿ: [**ಅಭಿಪ್ರವೃಷ್ಟ**] ಮಳೆ ಸುರಿದ

ಅಭಿಪಾಇಯ. ವಿ: [**ಅಭಿಪ್ರಾಯಿಕ**] ಅಭಿಪ್ರಾಯಕ್ಕೆ ಸಂಬಂಧಿಸಿದ, ಮನೋಭಾವ, ಉದ್ದೇಶ(ಅಣು)

ಅಭಿಪ್ಪಾಯ. ಪು: [**ಅಭಿಪ್ರಾಯ**] ಮನೋಭಾವ, ಆಶಯ, ಉದ್ದೇಶ, ಮನಸ್ಸಿನಲ್ಲಿ ಮೂಡಿದ್ದು (ಸುಪಾ)

ಅಭಿಪ್ಪೇಯ. ವಿ: [**ಅಭಿಪ್ರೇತ**] ಅಪೇಕ್ಷಿಸಲಾದ, ಇಷ್ಟ, ಅಭಿಮತ, ಅಂಗೀಕರಿಸಲಾದ(ಸ)

ಅಭಿಭವ. ಸಕ: [**ಅಭಿ+ಭೂ**] ಅವಮಾನಿಸು, ಸೋಲಿಸು, ತಿರಸ್ಕರಿಸು–ಅಭಿಭವಇ' (ಮಹಾ)

ಅಭಿಭವ. ಪು: [**ಅಭಿಭವ**] ಪರಾಭವ, ಸೋಲು, ಅವಮಾನ, ತಿರಸ್ಕಾರ (ಆಚಾ)

ಅಭಿಭವಣ. ನ: [**ಅಭಿಭವನ**] ಮೇಲಿನ ಶಬ್ದವನ್ನು ನೋಡುವುದು

ಅಭಿಭಾಸ. ಸಕ: [**ಅಭಿಭಾಷ್**] ಸಂಭಾಷಿಸು, –'**ಅಭಿಭಾಸೆ**' (ಪಿ)

ಅಭಿಭೂಇ. ಸ್ತ್ರೀ: [**ಅಭಿಭೂತಿ**] ಪರಾಭವ, ಸೋಲು, ಅಪಮಾನ

ಅಭಿಭೂಂಯ. ವಿ: [**ಅಭಿಭೂತ**] ಅವಮಾನಿತ, ಸೋಲಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ(ಆಚಾ)

ಅಭಿಮಂಜು. '**ಅಭಿಮಣ್ಣು**' ಶಬ್ದವನ್ನು ನೋಡುವುದು

ಅಭಿಮಂತ. ಸಕ: [**ಅಭಿ+ಮಂತ್ರಯ್**] ಮಂತ್ರವನ್ನು ಉಚ್ಚರಿಸಿ ಪವಿತ್ರಗೊಳಿಸು, ಮಂತ್ರಿಸು(ನಿಚೂ)

ಅಭಿಮಂತಿಯ. ವಿ: [**ಅಭಿಮಂತ್ರಿತ**] ಮಂತ್ರವನ್ನು ಉಚ್ಚರಿಸಿ ಪವಿತ್ರಗೊಳಿಸಿದ, ಮಂತ್ರಿಸಲಾದ(ಸುರ)

ಅಭಿಮನ್ನ. ಸಕ: [**ಅಭಿ+ಮನ್**] ಅಭಿಮಾನಪಡು, ಹೆಮ್ಮೆ ಪಡು, ಸಮತಿಸು(ವಿಸೇ) ದರ್ಪತೋರು, ಗರ್ವಪಡು

ಅಭಿಮಯ.ವಿ:[**ಅಭಿಮತ**] ಇಷ್ಟ, ಅಭಿಪ್ರಾಯ,(ಸೂಅ) ಆಶಯ, ಆದರಿಸಲ್ಪಟ್ಟ

ಅಭಿಮಾಣ. ಪು: [**ಅಭಿಮಾನ**] ಗರ್ವ, ಆತ್ಮಗೌರವ, ದರ್ಪ, ಪ್ರೀತಿ

ಅಭಿಮಾರ. ಪು: [**ಅಭಿಮಾರ**] ವೃಕ್ಷ–ವಿಶೇಷ(ರಾಜ)

ಅಭಿಮುಹ. ವಿ: [**ಅಭಿಮುಖ**] ಎದುರಿಗಿರುವ, ಎದುರಾಗುವ, ಸಮೀಪಿಸಿರುವ (ಭಗ)

ಅಭಿಮುಹಿಯ. ವಿ: [**ಅಭಿಮುಖಿತ**]ಎದುರಾಗಿ ಮಾಡಿದ

ಅಭಿಯಾಗಮ. ಪು: [**ಅಭ್ಯಾಗಮ**] ಎದುರಿನಲ್ಲಿ ಬರುವುದು, ಮುಂದುಗಡೆ ಬರುವುದು

ಅಭಿಯಾವನ್ನ.ವಿ: [**ಅಭ್ಯಾಪನ್ನ**] ಎದುರಿನಲ್ಲಿ ಬಂದಿರುವ

ಅಭಿರಇ. ಸ್ತ್ರೀ: [**ಅಭಿರತಿ**] ರತಿ, ಸಂಭೋಗ, ಪ್ರೀತಿ, ಅನುರಾಗ(ವಿಸೇ) ಸಂತೋಷ, ಆನಂದ

ಅಭಿರಮ. ಸಕ: [**ಅಭಿ+ರಮ್**] ಸಂಭೋಗಿಸು, ಪ್ರೀತಿಸು, ಕ್ರೀಡಿಸು, ಆಸಕ್ತನಾಗು, ತಲ್ಲೀನನಾಗು, '**ಅಭಿರಮಇ**'(ಮಹಾ)

ಅಭಿರಮಿಯ. ವಿ: [**ಅಭಿರಮಿತ**] ಅನುರಕ್ತಿಮಾಡಲ್ಪಟ್ಟ (ಸುಪಾ) ಭೋಗಿಸಿದ, ರಮಿಸಿದ

ಅಭಿರಯ.} ವಿ: [**ಅಭಿರತ**] ಅನುರಕ್ತನಾದ, ತಲ್ಲೀನನಾದ, ಸಂತೋಷ ಗೊಂಡಿರುವ (ಪಉಮ)

ಅಭಿರಾಮ. ಸಕ: [**ಅಭಿ+ರಾಮಯ್**] ತತ್ಪರತೆಯಿಂದ ಕಾಯದಲ್ಲಿ ತೊಡಗಿಸು

ಅಭಿರಾಮ. ವಿ: [**ಅಭಿರಾಮ**] ಸುಂದರನಾದ, ಮನೋಹರನಾದ/ವಾದ, ಮಧುರವಾದ (ಸ್ವಪ್ನ)

ಅಭಿರುಇಯ. ವಿ: [**ಅಭಿರುಚಿತ**] ಮನಸ್ಸಿಗೆ ಇಷ್ಟವಾದ, (ಣಾಯಾ)

ಅಭಿರುಯ. ಸಕ: [ಅಭಿ+ರುಚ್] ಮನಸ್ಸಿಗೆ ಇಷ್ಟವಾಗು, ರುಚಿಸು, **–ಅಭಿರುಯಇ'** (ಮಹಾ)
ಅಭಿರುಹ. ಸಕ: [ಅಭಿ+ರುಹ್] ತಡೆ, ಮೇಲೆ ಹತ್ತು (ಆಚಾ)
ಅಭಿರೂಯಂಸಿ. ವಿ: [ಅಭಿರೂಪಿನ್] ಸುಂದರ ರೂಪುಳ್ಳ, ಮನೋಹರನಾದ
ಅಭಿರೋಹಿಯ. ವಿ: [ಅಭಿರೋಧಿತ] ನಾಲ್ಕೂ ಕಡೆಯಿಂದ ತಡೆಯಲ್ಪಟ್ಟ, ನಿಲ್ಲಿಸಲಾದ(ಣಾಯಾ)
ಅಭಿರೋಹಿಯ. ವಿ: [ಅಭಿರೋಹಿತ] ಮೇಲಿನ ಶಬ್ದವನ್ನು ನೋಡುವುದು
ಅಭಿಲಂಘ. ಸಕ: [ಅಭಿಲಂಘ್] ಉಲ್ಲಂಘಿಸು, **ವ. ಕೃ–ಅಭಿಲಂಘಮಾಣ**(ನಾಯಾ), ಹಾರು, ದಾಟು
ಅಭಿಲಪ್ಪ. ವಿ: [ಅಭಿಲಾಪ್ಯ] ಕಥನ–ಯೋಗ್ಯ, ಹೇಳಬಹುದಾದ್ದು (ಆಚೂ)
ಅಭಿಲಸ. ಸಕ: [ಅಭಿ+ಲಷ್] ಇಷ್ಟಪಡು, ಅಪೇಕ್ಷಿಸು, ಆಸೆಪಡು,–**'ಅಭಿಲಸಇ'**(ಉವ) ಪ್ರೀತಿಸು
ಅಭಿಲಾಅ.} ಪು: [ಅಭಿಲಾಪ] ಶಬ್ದಪ್ರಯೋಗ,
ಅಭಿಲಾವ}. ಮಾತು(ಠಾ), ಸಂಭಾಷಣೆ, ಪ್ರಕಟಣೆ.
ಅಭಿಲಾಸ. ಪು: [ಅಭಿಲಾಷ] ಇಚ್ಛೆ, ಅಪೇಕ್ಷೆ, ಆಸೆ(ಣಾಯಾ) ಪ್ರೀತಿ, ಅನುರಾಗ
ಅಭಿಲಾಸಿ.}. ವಿ: [ಅಭಿಲಾಷಿನ್] ಇಷ್ಟಪಡುವವನು,
ಅಭಿಲಾಸಿಣ.}. ಅಪೇಕ್ಷಿಸುವವನು (ಪಉಮ)
ಅಭಿಲಾಸುಗ. ವಿ: [ಅಭಿಲಾಷುಕ] ಇಚ್ಛಿಸುವವನು, ಹೆಚ್ಚು ಆಸೆ ಪಡುವವನು, ಲುಬ್ಧ
ಅಭಿಲೋಯಣ. ನ: [ಅಭಿಲೋಕನ] ದೂರದ ವಸ್ತುವನ್ನು ನಿಂತಲ್ಲಿಂದಲೇ ನೋಡಬಹುದಾದ ಆ ಸ್ಥಳ
ಅಭಿಲೋಯಣ. ನ: [ಅಭಿಲೋಚನ] ಮೇಲಿನ ಶಬ್ದವನ್ನು ನೋಡುವುದು
ಅಭಿವಂದ. ಸಕ: [ಅಭಿ+ವಂದ್] ನಮಸ್ಕರಿಸು, ವಂದಿಸು **ವ.ಕೃ–ಅಭಿವಂದಂತ**(ಪಉಮ)
ಅಭಿವಂದಣಾ. ಸ್ತ್ರೀ: [ಅಭಿವಂದನಾ] ನಮಸ್ಕಾರ,
ಅಭಿವಂದಯ. ವಿ: [ಅಭಿವಂದಕ] ನಮಸ್ಕರಿಸುವವನು
ಅಭಿವಡ್ಡ. ಸಕ: [ಅಭಿ+ವೃಧ್] ಅಭಿವೃದ್ಧಿಪಡಿಸು, ಬೆಳೆಸು, ಹೆಚ್ಚಿಸು
ಅಭಿವಡ್ಢಿ 'ಅಭಿವುಡ್ಢಿ' ಶಬ್ದವನ್ನು ನೋಡುವುದು
ಅಭಿವಡ್ಢಿಯ. ವಿ: [ಅಭಿವರ್ಧಿತ] ಅಭಿವೃದ್ಧಿಪಡಿಸಿದ, ಬೆಳೆದ, ಹೆಚ್ಚಿಸಲಾದ, ಅಧಿಕವಮಾಸ, ಅಧಿಕಮಾಸವಿರುವ ವರ್ಷ(ಸಮ)
ಅಭಿವಡ್ಢೇ. ಸಕ: [ಅಭಿ+ವರ್ಧಯ್] ವೃದ್ಧಿಸು, ಹೆಚ್ಚಿಸು, ಅಧಿಕಗೊಳಿಸು
ಅಭಿವತ್ತ. ವಿ: [ಅಭಿವ್ಯಕ್ತ] ಕಾಣಿಸಿಕೊಂಡ, ಮೈದೋರಿದ
ಅಭಿವತ್ತಿ. ಸ್ತ್ರೀ: [ಅಭಿವ್ಯಕ್ತಿ] ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು, ಪ್ರಕಟವಾಗುವುದು (ಉಪ)
ಅಭಿವಯ ಸಕ: [ಅಭಿ+ವ್ರಜ್] ಎದುರಿಗೆ ಹೋಗುವುದು, ಎದುರಿನಲ್ಲಿ ಬರುವುದು(ಣಾಯಾ)
ಅಭಿವಾಇಯ. ವಿ; [ಅಭಿವಾದಿತ] ನಮಸ್ಕರಿಸಲ್ಪಟ್ಟ, (ಸುಪಾ)
ಅಭಿವಾತ. ಪು: [ಅಭಿವಾತ] ಎದರುಗಡೆಯಿಂದ ಬೀಸುವ ಗಾಳಿ, ಪ್ರತಿಕೂಲ ಪವನ (ಬಿಸಿ ಅಥವಾ ಒರಟು) (ಆಚಾ)
ಅಭಿವಾದ.} ಸಕ: [ಅಭಿ+ವಾದಯ್] ನಮಸ್ಕರಿಸು.
ಅಭಿವಾಯ.} –ಅಭಿವಾಎಇ' ವ.ಕೃ–ಅಭಿವಾಯಮಾಣ (ವಿಸೇ)
ಅಭಿವಾಯ. 'ಅಭಿವಾತ' ಶಬ್ದವನ್ನು ನೋಡುವುದು
ಅಭಿವಾಯಣ. ನ: [ಅಭಿವಾದನ] ನಮಸ್ಕಾರ, ಹೆಸರುಹೇಳಿ ಮಾಡುವ ನಮಸ್ಕಾರ(ಆಚಾ)
ಅಭಿವಾಹರಣ. ನ: [ಅಭಿವ್ಯಾಹರಣ] ಕರೆ, ಸ್ಫುಟವಾಗಿ ಕರೆಯುವುದು(ಪಂಚಾ)
ಅಭಿವಾಹಾರ. ಪು: [ಅಭಿವ್ಯಾಹಾರ] ಪ್ರಶ್ನೋತ್ತರ, ಸ್ಪಷ್ಟವಾದ ಉಚ್ಚಾರ (ವಿಸೇ)
ಅಭಿವಿಹಿ. ಪುಂಸ್ತ್ರೀ: [ಅಭಿವಿಧಿ] ಮಿತಿ, ವ್ಯಾಪ್ತಿ, ಸೇರಿಸಿಕೊಳ್ಳುವಿಕೆ (ವಿಸೇ)
ಅಭಿವುಟ್ಠಿ. ಸ್ತ್ರೀ: [ಅಭಿವೃಷ್ಟಿ] ಮಳೆ, ವೃಷ್ಟಿ
ಅಭಿವುಡ್ಢ. 'ಅಭಿವಡ್ಢ' ಶಬ್ದವನ್ನು ನೋಡುವುದು
ಅಭಿವುಡ್ಢಿ. ಸ್ತ್ರೀ: [ಅಭಿವೃದ್ಧಿ] ವೃದ್ಧಿ, ಹೆಚ್ಚುವುದು, ಬೆಳೆಯುವುದು, ಉತ್ತರಾಭಾದ್ರ ನಕ್ಷತ್ರ(ಜಂ)
ಅಭಿವುಡ್ಢೇ. 'ಅಭಿವಡ್ಢೇ' ಶಬ್ದವನ್ನು ನೋಡುವುದು
ಅಭಿವೇದಣಾ. ಸ್ತ್ರೀ: [ಅಭಿವೇದನಾ] ಅತ್ಯಂತ ನೋವು, ಪೀಡೆ, ಹಿಂಸೆ
ಅಭಿವ್ವಂಜಣ. ನ: [ಅಭಿವ್ಯಂಜನ] 'ಅಭಿವತ್ತಿ' ಶಬ್ದವನ್ನು ನೋಡುವುದು
ಅಭಿವ್ವಾಹಾರ.'ಅಭಿವಾಹಾರ'ಶಬ್ದವನ್ನು ನೋಡುವುದು
ಅಭಿಸಂಕಣ. ನ: [ಅಭಿಶಂಕನ] ಶಂಕೆ, ಸಂದೇಹ

ಅಭಿಸಂಕಾ. ಸ್ತ್ರೀ: [ಅಭಿಶಂಕಾ] ಸಂಶಯ, ಸಂದೇಹ (ಸೂಅ). ಭ್ರಾಂತಿ
ಅಭಿಸಂಕಿ. ವಿ [ಅಭಿಶಂಕಿನ್] ಸಂದೇಹಿಸುವವನು, ಅನುಮಾನಿಸುವವನು, ಭೀರು (ಆಚಾ)
ಅಭಿಸಂಗ. ಪು: [ಅಭಿಷ್ವಂಗ] ಆಸಕ್ತಿ, (ಠಾ), ಸಂಬಂಧ, ಸಂಪರ್ಕ, ಅನುರಾಗ
ಅಭಿಸಂಜಾಯ. ವಿ: [ಅಭಿಸಂಜಾತ] ಹುಟ್ಟಿದ, ಉತ್ಪನ್ನ
(ಅಭಿಸಂಥುಣ. ಸಕ: [ಅಭಿಸಂ+ಸ್ತು] ಪ್ರಶಂಸಿಸು, ಸ್ತುತಿಸು, ವರ್ಣಿಸು
ಅಭಿಸಂಧಾರಣ. ನ: [ಅಭಿಸಂಧಾರಣ] ಪರ್ಯಾಲೋಚನೆ, ವಿಚಾರಿಸುವುದು(ಆಚಾ)
ಅಭಿಸಂಧಿ. ಪುಂಸ್ತ್ರೀ: [ಅಭಿಸಂಧಿ] ಆಶಯ, ಅಭಿಪ್ರಾಯ (ಉಪ), ಪ್ರತಿಜ್ಞೆ, ಧ್ಯೇಯ, ಉದ್ದೇಶ, ಕರಾರು
ಅಭಿಸಂಧಿಯ. ವಿ: [ಅಭಿಸಂಹಿತ] ಗೃಹೀತ,
ಅಭಿಸಂಭೂಯ. ವಿ: [ಅಭಿಸಂಭೂತ] ಉತ್ಪನ್ನ, ಪ್ರಾದುರ್ಭಾವ ಹೊಂದಿದ (ಆಚಾ)
ಅಭಿಸಂಬುದ್ಧ. ವಿ: [ಅಭಿಸಂಬುದ್ಧ] ಜ್ಞಾನವನ್ನು ಗಳಿಸಿಕೊಂಡವನು, ಬೋಧಿಯುನ್ನು ಹೊಂದಿದವನು
ಅಭಿಸಂವುಡ್ಢ. ವಿ: [ಅಭಿಸಂವೃದ್ಧ] ಅಭಿವೃದ್ಧಿ ಹೊಂದಿದ, ಉನ್ನತ ಸ್ಥಿತಿಯನ್ನು ತಲುಪಿದ (ಆಚಾ)
ಅಭಿಸಮಣ್ಣಾಗಯ.} ವಿ: [ಅಭಿಸಮನ್ವಾಗತ] ಚೆನ್ನಾಗಿ
ಅಭಿಸಮನ್ನಾಗಯ}. ತಿಳಿದಿರುವ, ಸುಪರಿಚಿತ, ಚೆನ್ನಾಗಿ ನಿರ್ಧರಿತವಾದ, ವ್ಯವಸ್ಥಿತ, ಪ್ರಾಪ್ತವಾದ(ಭಗ)
ಅಭಿಸಮಾಗಮ. ಸಕ: [ಅಭಿಸಮಾ+ಗಮ್] ಎದುರಿನಲ್ಲಿ ಹೋಗು, ಪಡೆ, ನಿರ್ಣಯಿಸು, ಸರಿಯಾಗಿ ತಿಳಿ
ಅಭಿಸಮಾಗಮ. ಪು: [ಅಭಿಸಮಾಗಮ] ಎದುರಿನಲ್ಲಿ ಹೋಗು, ಪಡೆದುಕೊಳ್ಳು, ನಿರ್ಣಯ(ಠಾ)
ಅಭಿಸಮೇ. ಸಕ: [ಅಭಿಸಮಾ+ಇ] **'ಅಭಿಸಮಾಗಮ= ಅಭಿಸಮಾ+ಗಮ್'** ಶಬ್ದವನ್ನು ನೋಡುವುದು
ಅಭಿಸರ. ಸಕ: [ಅಭಿ+ಸೃ] ಪ್ರಿಯನ ಬಳಿಗೆ ಹೋಗು
ಅಭಿಸರಣ. ನ: [ಅಭಿಸರಣ] ಎದುರಿಗೆ ಹೋಗುವುದು, ಪ್ರಿಯನ ಸಮೀಪಕ್ಕೆ ಹೋಗುವುದು,
ಅಭಿಸವ. ಪು: [ಅಭಿಷವ] ಮದ್ಯವೇ ಮೊದಲಾದವುಗಳ ಅರ್ಕ, ಮದ್ಯ ಮಾಂಸಾದಿಗಳು ಸೇರಿರುವ ವಸ್ತು.
ಅಭಿಸಾರಿಆ. 'ಅಹಿಸಾರಿಆ' ಶಬ್ದವನ್ನು ನೋಡುವುದು
ಅಭಿಸಿಂಚ.ಸಕ: [ಅಭಿ+ಸಿಚ್] ಅಭಿಷೇಕಮಾಡು(ಕಪ್ಪ)
ಅಭಿಸಿತ್ತ. ವಿ: [ಅಭಿಷಿಕ್ತ] ಅಭಿಷಿಕ್ತನಾದವನು (ಆವಮ)
ಅಭಿಸೇಅ.}. ಪು: [ಅಭಿಷೇಕ] ರಾಜ, ಆಚಾರ್ಯ,
ಅಭಿಸೇಗ}. ಮೊದಲಾದ ಸ್ಥಾನಗಳನ್ನು ಏರುವುದು, ಪಟ್ಟಾಭಿಷೇಕ, ಸ್ನಾನ ಮಹೋತ್ಸವ, ಅಭಿಷೇಕ ಮಾಡುವ ಸ್ಥಳ, ನೀರು ಚಿಮುಕಿಸುವುದು, ಶುಕ್ರ-ಶೋಣಿತಗಳ ಸಂಯೋಗ, (ಭಗ,)
ಅಭಿಸೇಗಾ. ಸ್ತ್ರೀ: [ಅಭಿಷೇಕಾ] ಸಾಧ್ವಿ, ಸಂನ್ಯಾಸಿನಿ, ಸಾಧ್ವಿಯರ ಮುಖ್ಯಸ್ಥೆ (ನಿಚೂ)
ಅಭಿಸೆಜ್ಜಾ. ಸ್ತ್ರೀ: [ಅಭಿಶಯ್ಯಾ] **'ಅಭಿಣಿಸಜ್ಜಾ'** ಶಬ್ದವನ್ನು ನೋಡುವುದು(ವವ), ಬೇರೆಸ್ಥಳ
ಅಭಿಸೇವಣ. ನ: [ಅಭಿಷೇವಣ] ಪೂಜೆ, ಸೇವೆ, ಭಕ್ತಿ
ಅಭಿಸೇವಿ. ವಿ: [ಅಭಿಷೇವಿನ್] ಸೇವಾಕರ್ತ
ಅಭಿಸ್ಸಂಗ. ಪು: [ಅಭಿಷ್ವಂಗ] ಆಸಕ್ತಿ(ವಿಸೇ) ಸಂಬಂಧ ಸಂಪರ್ಕ, ಅನುರಾಗ
ಅಭಿಹಟ್ಟು. ಅ: [ಅಭಿಹೃತ್ಯ] ಬಲಾತ್ಕರಿಸಿ, ಬಲವಂತದಿಂದ (ಆಚಾ)
ಅಭಿಹಡ. ವಿ: [ಅಭುಹೃತ] ಮುಂದೆ ತರಲಾದ (ಪಂಚಾ), ಜೈನಸಾಧುಗಳ ಭಿಕ್ಷೆಯಲ್ಲಿನ ಒಂದು ದೋಷ(ಠಾ)
ಅಭಿಹಣ. ಸಕ: [ಅಭಿಹನ್] ಹೊಡೆ, ಹಿಂಸಿಸು, ಗಾಯಗೊಳಿಸು, ನಾಟಿಸು
ಅಭಿಹಣಣ. ನ: [ಅಭಿಹನನ] ಹೊಡೆಯುವುದು, ಹೊಡೆತ, ಹಿಂಸೆ
ಅಭಿಹಯ ವಿ: [ಅಭಿಹತ] ಹೊಡೆಯಲ್ಪಟ್ಟ, ಗಾಯಗೊಂಡ(ಪಡಿ)
ಅಭಿಹಾ. ಸ್ತ್ರೀ: [ಅಭಿಧಾ] ಹೆಸರು, ಶಬ್ದದ ಮೂರು ವೃತ್ತಿಗಳಲ್ಲೊಂದು: ಶಬ್ದಾರ್ಥ
ಅಭಿಹಾಣ. ನ: [ಅಭಿಧಾನ] ಹೆಸರು, ವಾಚಕ=ಶಬ್ದ, ಕಥನ, ಉಕ್ತಿ, ಉಚ್ಚಾರಣೆ(ವಿಸೇ), ನಿಘಂಟು
ಅಭಿಹಿಯ. ವಿ: [ಅಭಿಹಿತ] ಕಥಿತ, ಹೇಳಲ್ಪಟ್ಟ (ಆಚಾ)
ಅಭಿಹೇಅ. ವಿ: [ಅಭಿದೇಯ] ಅಭಿಧಾವೃತ್ತಿಯಿಂದ ಬೋಧಿತವಾಗುವ ಶಬ್ದಾರ್ಥ(ವಿಸೇ) ಪ್ರತಿಪಾದ್ಯ ವಿಷಯ
ಅಭೀಇ.} ಸ್ತ್ರೀ: [ಅಭಿಜಿತ್] ಒಂದು ನಕ್ಷತ್ರ,
ಅಭೀಜಿ}. ಅಭಿಜಿನ್ಮುಹೂರ್ತ, **ಪು:** ಒಬ್ಬ ರಾಜಕುಮಾರ, ಜೈನ ದೀಕ್ಷೆ ತೆಗೆದುಕೊಂಡ ಶ್ರೇಣಿಕ ಮಹರಾಜನ ಮಗ, ವಿಷ್ಣು, ಒಂದು ಯಾಗ

ಅಭೀರು. ವಿ: [ಅಭೀರು] ಹೆದರದವನು, ನಿರ್ಭೀತ, ಮಧ್ಯಮ ಗ್ರಾಮದ ಒಬ್ಬ ಮೂರ್ಛನಾ ಭೈರವ, ಸ್ತ್ರೀ: ಶತಾವರಿ ಗಿಡ
ಅಭೆಜ್ಞಾ. **'ಅಭಿಜ್ಞಾ'** ಶಬ್ದವನ್ನು ನೋಡುವುದು
ಅಭೋಜ್ಜ. ವಿ: [**ಅಭೋಜ್ಯ**] ತಿನ್ನಲು ಯೋಗ್ಯವಲ್ಲದ್ದು (ಣಾಯಾ), **–ಘರ.** ನ: [**–ಗೃಹ**] ಭಿಕ್ಷೆ ಸ್ವಿಕರಿಸಲು ಯೋಗ್ಯವಲ್ಲದ ಮನೆ, ನೀಚ ಜಾತಿಯ ಮನೆ
ಅಮ. ಸಕ: [ಅಮ್] ಹೋಗು, ಜೋರು ಗಂಟಲು ಮಾಡುವುದು, ತಿನ್ನು, ಪೀಡಿಸು, **ಅಕ:** ರೋಗಿಯಾಗುವುದು, ಜಾಗ್ರತೆ, ಸ್ವಲ್ಪ
ಅಮಗ್ಗ. ಪು: [ಅಮಾರ್ಗ] ಕೆಟ್ಟ ಹಾದಿ, ಮಿಥ್ಯಾತ್ವ ಸುಳ್ಳು, ಕಷಾಯವೇ ಮೊದಲಾದ ಹೇಯ ಪದಾರ್ಥ, ಕೆಟ್ಟ ಮತ, ಕೆಟ್ಟ ದರ್ಶನ
ಅಮುಗ್ಘಾಯ. ಪು: [ಅಮಾಘಾತ] ದ್ರವ್ಯವನ್ನು ಕದಿಯದಿರುವುದು, ಮಾರಿ–ನಿವಾರಣೆ ಅಭಯಘೋಷಣೆ, (ಪಂಚಾ)
ಅಮಚ್ಚ. ಪು: [ಅಮಾತ್ಯ] ಮಂತ್ರಿ, ಪ್ರಧಾನಿ(ಔಪ)
ಅಮಚ್ಚ. ಪು: [ಅಮರ್ತ್ಯ] ದೇವ, ದೇವತೆ (ಕುಮಾ)
ಅಮಜ್ಝ. ವಿ: [ಅಮಧ್ಯ] ಮಧ್ಯವಿಲ್ಲದ, ಅಖಂಡ (ತಾ) ಪರಮಾಣು (ಭಗ)
ಅಮಣ. ನ: [ಅಮನ] ಜ್ಞಾನ, ನಿರ್ಣಯ,(ತಾ), ಅಂತ, ಅವಸಾನ (ವಿಸೇ)
ಅಮಣ.} ವಿ: [ಅಮನಸ್ಕ] ಮನಸ್ಸಿಲ್ಲದ, ಅಪ್ರೀತಿಕರ,
ಅಮಣಕ್ಖ}. ಇಷ್ಟವಲ್ಲದ
ಅಮಣಾಮ. ವಿ: [ಅಮನಆಪ] ಇಷ್ಟವಲ್ಲದ, ಮನೋಹರವಲ್ಲದ (ವಿಪಾ)
ಅಮಣಾಮ. ವಿ: [ಅಮನೋಮ] ಮೇಲಿನ ಶಬ್ದವನ್ನು ನೋಡುವುದು
ಅಮಣಾಮ. ವಿ: [ಅವನೋಮ] ನೋವುಂಟು ಮಾಡುವಂಥದು, ದುಃಖವನ್ನು ಉಂಟು ಮಾಡುವಂಥದು(ಸೂಅ),ಬಗ್ಗಿ ನಮಸ್ಕರಿಸುವುದು
ಅಮಣುಸ್ಸ. ಪು: [ಅಮನುಷ್ಯ] ಮನುಷ್ಯನಲ್ಲದ ಕಿನ್ನರ, ಗಂಧರ್ವ ಇತ್ಯಾದಿ ದೇವಜಾತಿ, ನಪುಂಸಕ
ಅಮತ್ತ. ನ: [ಅಮತ್ರ] ಪಾತ್ರೆ, ಬಲ, ಶಕ್ತಿ
ಅಮಮ. ವಿ: [ಅಮಮ] ನನ್ನದು ನಮ್ಮದು ಎಂಬ ಅಭಿಮಾನ ತೊರೆದಿರುವ, ಮಮತೆಯಿಲ್ಲದ, ನಿಃಸ್ಪೃಹ(ಸುಪಾ), ಪು: ಮುಂದೆ ಹುಟ್ಟಲಿರುವ ಒಬ್ಬ ಜಿನದೇವನ ಹೆಸರು. ಜೋಡಿ ರೂಪದಲ್ಲಿ ಹುಟ್ಟುವ ಮನುಷ್ಯರ ಒಂದು ಜಾತಿ, ಹಗಲಿನ ೨೫ನೇ ಮುಹೂರ್ತದ ಹೆಸರು, **–ತ್ತ.** ವಿ: [**–ತ್ವ**] ನಿಃಸ್ಪೃಹ, ಮಮತೆಯಿಲ್ಲದ(ಪಂಚವ)
ಅಮಯ. ವಿ: [ಅಮಮ] ವಿಕಾರ ರಹಿತ
ಅಮಯ. ನ: [ಅಮೃತ] ಅಮೃತ, ಸುಧೆ, ಕ್ಷೀರ ಸಾಗರದ ನೀರು, ಮೋಕ್ಷ, ವಿ: ಸತ್ತಿಲ್ಲದ, ಜೀವಿತ, **–ಕರ.** ಪು: [–ಕರ] ಚಂದ್ರ, **–ಕಿರಣ.** ಪು: [ಕಿರಣ] ಚಂದ್ರ**–ಕುಂಡ.** ಪು: [**–ಕುಂಡ**] ಚಂದ್ರ, **–ಘೋಸ.** ಪು: [**–ಘೋಷ**] ಒಬ್ಬ ರಾಜನ ಹೆಸರು. **–ಫಲ.** ನ: [**–ಫಲ**] ಅಮೃತದಂಥ ಫಲ. **–ಮಯ.** ವಿ: [**–ಮಯ**] ಅಮೃತದಿಂದ ತುಂಬಿರುವ, (ಕುಮಾ) **–ಮಊಹ.** ಪು: [**–ಮಯೂಖ**] =ಅಮೃತಕಿರಣ =ಚಂದ್ರ, **–ವಲ್ಲರಿ.** ಸ್ತ್ರೀ: [**–ವಲ್ಲರಿ, –ರೀ**] ಅಮೃತಬಳ್ಳಿ, ಒಂದು ಬಗೆಯಬಳ್ಳಿ, **–ವಲ್ಲಿ, –ವಲ್ಲೀ.** ಸ್ತ್ರೀ: [**–ವಲ್ಲಿ, ಲ್ಲೀ**] ಅಮೃತಬಳ್ಳಿ(ಶ್ರಾ) **–ವಸ.** ಪು: [**–ವರ್ಷ**] ಅಮೃತದ ಮಳೆ, **'ಅಮಿಯ=ಅಮೃತ'** ಶಬ್ದವನ್ನು ನೋಡುವುದು
ಅಮಯಘಡಿಅ. ಪು: [ದೇ. **ಅಮೃತಘಟಿತ**] ಚಂದ್ರ
ಅಮಯಣಿಗ್ಗಮ. ಪು: [ದೇ. **ಅಮೃತನಿರ್ಗಮ**] ಚಂದ್ರ
ಅಮರ. ವಿ: [ಅಮರ] ದಿವ್ಯ, ದೇವತೆಗಳಿಗೆ ಸಂಬಂಧಿಸಿದ, (ಪಉಮ)
ಅಮರ. ಪು: [ಅಮರ] ದೇವ– ದೇವತೆಗಳು, ಮುಕ್ತ ಆತ್ಮ, ಭಗವಾನ್ ವೃಷಭದೇವನ ಒಬ್ಬ ಮಗ, ಅನಂತವೀರ್ಯನೆಂಬ ಭಾವೀ ಜಿನದೇವನ ಹಿಂದಿನ ಜನ್ಮದ ಹೆಸರು. ಭಗವಾನ್ ವೃಷಭದೇವನ ಒಬ್ಬ ಮಗ, (ರಾಜ), ವಿ: ಮರಣವಿಲ್ಲದ, **–ಕಂಕಾ.** ಸ್ತ್ರೀ: [**–ಕಂಕಾ**] ಒಂದು ನಗರದ ಹೆಸರು. **–ಕೇಉ.** ಪು: [**–ಕೇತು**] ಒಬ್ಬ ರಾಜಕುಮಾರ, **–ಗಿರಿ.** ಪು: [**–ಗಿರಿ**] ಮೇರುಪರ್ವತ(ಪಉಮ), **–ಗೇಹ.** ನ: [**–ಗೇಹ**] ಸ್ವರ್ಗ. **–ಚಂದಣ.** ನ: [**–ಚಂದನ**] ಶ್ರೀಗಂಧದ ಮರ, ಒಂದು ಬಗೆಯ ಸುಗಂಧದ ಒಣ ಮರ, **–ತರು.** ಪು: [**–ತರು**] ಕಲ್ಪವೃಕ್ಷ, **–ದತ್ತ.** ಪು: [**–ದತ್ತ**] ಒಬ್ಬ ಶ್ರೇಷ್ಠಿಪುತ್ರನ ಹೆಸರು. **–ನಾಹ.** ಪು: [**–ನಾಥ**] ಇಂದ್ರ**–ಪುರ.** ನ: [**–ಪುರ**] ಸ್ವರ್ಗ(ಪಉಮ), **–ಪುರೀ.** ಸ್ತ್ರೀ:

[–ಪುರೀ] ಸ್ವರ್ಗಪುರಿಯಾದ ಅಮರಾವತಿ. –ಪಭ. ಪು: [ಪ್ರಭ] ವಾನರದ್ವೀಪದ ಒಬ್ಬ ರಾಜ. –ವಇ. ಪು: [–ಪತಿ] ಇಂದ್ರ–ವಹೂ. ಸ್ತ್ರೀ: [–ವಧೂ] ದೇವತಾ ಸ್ತ್ರೀ, –ಸಾಮಿ. ಪು: [–ಸ್ವಾಮಿನ್] ಇಂದ್ರ (ವಿಸೇ). –ಸೇಣ. ಪು: [–ಸೇನ] ಒಬ್ಬ ರಾಜನ ಹೆಸರು, ಒಬ್ಬ ರಾಜಕುಮಾರನ ಹೆಸರು (ಣಾಯಾ), **ಅಮರಾಲಯ. ತ್ರಿ ಅಮರಾಲಯ.** ಸ್ವರ್ಗ. **ಅಮರಾವಈ.** ಸ್ತ್ರೀ: [ಅಮರಾವತೀ] ಇಂದ್ರನ ರಾಜಧಾನಿ. ಮರ್ತ್ಯಲೋಕದ ಶ್ರೀಸೇನನ ರಾಜಧಾನಿ(ಉಪ)

ಅಮರಂಗಣಾ. ಸ್ತ್ರೀ: [ಅಮರಾಂಗನಾ] ದೇವತಾ ಸ್ತ್ರೀಯರು(ಶ್ರಾ)

ಅಮರಿಂದ. ಪು: [ಅಮರೇಂದ್ರ] ದೇವತೆಗಳ ಅಧಿಪತಿ ಇಂದ್ರ (ಭವಿ)

ಅಮರಿಸ್. ಪು: [ಅಮರ್ಷ] ಅಸಹಿಷ್ಣುತೆ, ಕೋಪ(ಪಣ್ಣ)

ಅಮರಿಸಣ. ನ: [ಅಮರ್ಷಣ] ಮೇಲಿನ ಶಬ್ದವನ್ನು ನೋಡುವುದು. ವಿ: ಅಸಹಿಷ್ಣು, ಕೋಪಿಷ್ಟ, (ಹೇ)ಸಹಿಷ್ಣು, ಕ್ಷಮಾಶೀಲ(ಸಮ)

ಅಮರಿಸಣ. ವಿ: [ಅಮಸೃಣ] ಉದ್ಯೋಗಿ, ಉದ್ಯಮಿ (ಸಮ)

ಅಮರಿಸಿಯ. ವಿ: [ಅಮರ್ಷಿತ] ಅಸಹಿಷ್ಣು, ಕುಪಿತನಾದ, ಮತ್ಸರ ಪಡುವ(ಆವಮ)

ಅಮರೀ. ಸ್ತ್ರೀ: [ಅಮರೀ] ದೇವತಾ ಸ್ತ್ರೀ

ಅಮರೀಸ. ಪು: [ಅಮರೇಶ] ಇಂದ್ರ

ಅಮಲ. ವಿ: [ಅಮಲ] ನಿರ್ಮಲ, ಸ್ವಚ್ಛ, ದೋಷವಿಲ್ಲದ, ಕಳಂಕವಿಲ್ಲದ, (ಉವ) ಕಾಗೆಬಂಗಾರ ಭಗವಾನ್ ವೃಷಭದೇವನ ಒಬ್ಬ ಮಗನ ಹೆಸರು.(ರಾಜ)

ಅಮಲಾ. ಸ್ತ್ರೀ: [ಅಮಲಾ] ಇಂದ್ರನ ಪಟ್ಟದ ರಾಣಿಯೊಬ್ಬಳ ಹೆಸರು, ಇಂದ್ರಾಣಿ(ತಾ)

ಅಮವಸ್ಸಾ. 'ಅಮಾವಾಸ್ಸಾ' ಶಬ್ದವನ್ನು ನೋಡುವುದು

ಅಮಾಇ.} ವಿ: [ಅಮಾಇನ್] ನಿಷ್ಕಪಟ, ಸರಳ

ಅಮಾಇಲ್ಲ}.

ಅಮಾಘಾಯ. 'ಅಮಗ್ಘಾಯ' ಶಬ್ದವನ್ನು ನೋಡುವುದು

ಅಮಾಣ. ವಿ: [ಅಮಾನ] ನಿಗರ್ವಿ, ನಮ್ರ(ಕಪ್ಪ), ಅಸಂಖ್ಯ

ಅಮಾಯ. ವಿ: [ಅಮಾಯ] ನಿಷ್ಕಪಟ, ಸರಳ (ಕಪ್ಪ)

ಅಮಾಯ.ವಿ: [ಅಮಾತ] ಸಮಾವೇಶಗೊಳ್ಳದ

ಅಮಾಯಿ. 'ಅಮಾಇ' ಶಬ್ದವನ್ನು ನೋಡುವುದು

ಅಮಾರಿ. ಸ್ತ್ರೀ: [ಅಮಾರಿ] ಹಿಂಸಾ–ನಿವಾರಣೆ, ಜೀವನದಾನ (ಸುಪಾ). –ಘೋಸ. ಪು: [–ಘೋಷ] ಅಹಿಂಸೆಯ ಘೋಷಣೆ (ಸುಪಾ). –ಪಡಹ. ಪು: [–ಪಟಹ] ಹಿಂಸೆಯನ್ನು ನಿಷೇಧಿಸುವ ಭೇರಿ,

ಅಮಾವಸಾ.} ಸ್ತ್ರೀ: [ಅಮಾವಾಸ್ಯಾ] ತಿಥಿ–ವಿಶೇಷ

ಅಮಾವಸ್ಸಾ}. (ಕಪ್ಪ, ಸುಪಾ)

ಅಮಾವಾಸಾ}.

ಅಮಿಜ್ಜ. ವಿ: [ಅಮೇಯ] ಅಳೆಯಲು ಅಸಾಧ್ಯವಾದ, ಅಳತೆಗೆ ಸಿಗದ, ಅಸಂಖ್ಯ (ಕಪ್ಪ)

ಅಮಿಜ್ಝ. ನ: [ಅಮೇಧ್ಯ] ಅಶುಚಿಯಾದ ವಸ್ತು, ಮಲ, ಅಶುದ್ಧವಾದದ್ದು, (ಸುಪಾ)

ಅಮಿತ್ತ. ಪುಂ.ನ: [ಅಮಿತ್ರ] ಮಿತ್ರನಲ್ಲದ, ಶತ್ರು, ಹಗೆ(ತಾ)

ಅಮಿಯ. 'ಅಮಯ=ಅಮೃತ' ಶಬ್ದವನ್ನು ನೋಡುವುದು. –ಕುಂಡ. ನ: [–ಕುಂಡ] ಒಂದು ನಗರದ ಹೆಸರು. –ಗಈ. ಸ್ತ್ರೀ: [–ಗತಿ] ಒಂದು ಛಂದಸ್ಸಿನ ಹೆಸರು(ಪಿಂಗ) –ಣಾಣಿ. ಪು: [–ಜ್ಞಾನಿನ್] ಐರಾವತ ಕ್ಷೇತ್ರದ ಒಬ್ಬ ತೀರ್ಥಂಕರದೇವನ ಹೆಸರು. –ಭೂಯ. ವಿ: [–ಭೂತ] ಅಮೃತಸಮಾನ, –ಮೇಹ. ಪು: [–ಮೇಘ] ಅಮೃತದ ಮಳೆ(ಜಂ) –ರುಇ. ಪು: [–ರುಚಿ] ಚಂದ್ರ(ಶ್ರಾ)

ಅಮಿಯ. ವಿ: [ಅಮಿತ] ಮಿತಿಯಿಲ್ಲದ, ಅಳತೆಯಿಲ್ಲದ, ಹೆಚ್ಚಾದ, ಅಸಂಖ್ಯ, ಅನಂತ(ಭಗ) –ಗಇ. ಪು: [–ಗತಿ] ದಕ್ಷಿಣ ದಿಕ್ಕಿನ ಒಬ್ಬ ಇಂದ್ರನ ಹೆಸರು, ದಿಕ್ಕುಮಾರರ ಇಂದ್ರ, –ಜಸ. ಪು: [–ಯಶಸ್] ಒಬ್ಬ ಚಕ್ರವರ್ತಿಯ ಹೆಸರು. –ಣಾಣಿ. ವಿ: [–ಜ್ಞಾನಿನ್] ಸರ್ವಜ್ಞ(ವಿಸೇ), ಐರಾವತ ಕ್ಷೇತ್ರದ ಒಬ್ಬ ಜಿನದೇವನ ಹೆಸರು(ಸಮ), –ತೇಯ. ಪು: [–ತೇಜಸ್] ಒಬ್ಬ ಜೈನಮುನಿಯ ಹೆಸರು. –ವಲ. ಪು: [–ಬಲ] ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು(ಪಉಮ), –ವಾಹಣ. ಪು: [–ವಾಹನ] ದಿಕ್ ಕುಮಾರ ದೇವರುಗಳ ಒಬ್ಬ ಇಂದ್ರನ ಹೆಸರು. –ವೇಗ. ಪು: [–ವೇಗ] ರಾಕ್ಷಸ ವಂಶದ ಒಬ್ಬ ರಾಜನ ಹೆಸರು(ಪಉಮ). **ಅಮಿಯಾಸಣಿಯ.** ವಿ: [ಅಮಿತಾಸನಿಕ] ಒಂದು

ಆಸನದ ಮೇಲೆ ಕುಳಿತುಕೊಳ್ಳವಂಥವನಲ್ಲ, ಚಂಚಲ(ಕಪ್ಪ)

ಅಮಿಲ. ನ: [ದೇ] ಉಣ್ಣೆಯ ವಸ್ತ್ರ(ಶ್ರಾ), **ಪು:** ಕುರಿ (ಓಘ)

ಅಮಿಲ. ವಿ: [ದೇ. **ಆಮಿಲ**] ಅಮಿಲ ದೇಶದಲ್ಲಿ ಮಾಡಲಾದ

ಅಮಿಲಾ. ಸ್ತ್ರೀ: [ಅಮಿಲಾ] ೨೦ನೇ ಜಿನದೇವನ ಪ್ರಥಮ ಶಿಷ್ಯೆ, ಎಮ್ಮೆ ಕರು(ಬೃಹ)

ಅಮಿಲಾಣ.} ವಿ: [ಅಮ್ಲಾನ] ಬಾಡದಿರುವ,

ಅಮಿಲಾಯ.}. ಹೊಸದಾದ, ಸುಪ್ರೀತ, ರೋಮಾಂಚಿತ, **ಪು:** ಗೋರಂಟಿ ಮರ, **ನ:** ಗೋರಂಟಿ ಹೂವು (ದೇ)

ಅಮು. ಸ: [ಅದಸ್] ಅವನು, ಅಂಥ, ಇಂಥ

ಅಮುಅ. ಸ: [ಅಮುಕ] ಅವನು, ಯಾವನಾದರೂ

ಅಮುಅ. '**ಅಮಯ=ಅಮೃತ**' ಶಬ್ದವನ್ನು ನೋಡುವುದು

ಅಮುಅ. '**ಅಮುಯ=ಅಮುಯ**' ಶಬ್ದವನ್ನು ನೋಡುವುದು

ಅಮುಅ. ವಿ: [ಅಸ್ಮೃತ] ನೆನಪಿಗೆ ಬಾರದಿರುವ, ನೆನಪಿಸಿಕೊಳ್ಳದಿರುವ(ಭಗ)

ಅಮುಇ. ವಿ: [ಅಮೋಚಿನ್] ಬಿಡದಿರುವ

ಅಮುಗ. '**ಅಮುಅ=ಅಮುಕ**' ಶಬ್ದವನ್ನು ನೋಡುವುದು

ಅಮುಗತ್ಥ. ವಿ: [ಅಮುತ್ರ] ಅಲ್ಲಿ, ಅವನಲ್ಲಿ, ಅದರಲ್ಲಿ, ಇಂಥ ಜಾಗದಲ್ಲಿ(ಸುಪಾ)

ಅಮುಣ. ವಿ: [ಅಜ್ಞ] ತಿಳಿಯದವನು, ಅಜ್ಞಾನಿ, ಮೂರ್ಖ(ಬೃಹ)

ಅಮುಣಿಯ. ವಿ: [ಅಜ್ಞಾತ] ಗೊತ್ತಿಲ್ಲದ

ಅಮುಣಿಯು. ವಿ: [ಅಜ್ಞಾನ] ಮೂರ್ಖತನ, ಅಜ್ಞಾನ(ಪಣ್ಣ)

ಅಮುತ್ತ. ವಿ: [ಅಮುಕ್ತ] ಬಿಡುಗಡೆಯಾಗದ, ಮುಕ್ತಿ ಹೊಂದದಿರುವ

ಅಮುತ್ತ. ವಿ: [ಅಮೂರ್ತ] ಆಕಾರವಿಲ್ಲದ, ಪರಮಾತ್ಮ

ಅಮುದಗ್ಗ.} ನ: [ಅಮುದಗ್ರ] ಅತೀಂದ್ರಿಯ, ಮಿಥ್ಯಾ

ಅಮುಯಗ್ಗ.} ಜ್ಞಾನ–ವಿಶೇಷ: ದೇವತೆಗಳ ಪುದ್ಗಲ–ರಹಿತ ಶರೀರವನ್ನು ನೋಡಿ, ಜೀವದ ಶರೀರವು ಪುದ್ಗಲದಿಂದ ನಿರ್ಮಿತವಾಗಿದೆ. ಇಂಥ ನಿರ್ಧಾರಕ್ಕೆ ಬರುವುದು(ಶಾ)

ಅಮುಸ. ವಿ: [ಅಮೃಷ] ಸತ್ಯವಾದ, ನಿಜವಾದ

ಅಮುಸಾ. ಸ್ತ್ರೀ: [ಅಮೃಷಾ] ಸತ್ಯವಾಗಿ, ಸತ್ಯವಚನ. (ಸೂಅ). **–ವಾಇ.** ವಿ: [–ವಾದಿನ್] ಸತ್ಯವಾದಿ

ಅಮುಹ. ವಿ: [ಅಮುಖ] ನಿರುತ್ತರ

ಅಮುಹರಿ. ವಿ: [ಅಮುಖರಿನ್] ವಾಚಾಳಿಯಲ್ಲದ, ಮಿತಭಾಷಿ (ಉತ್ತ)

ಅಮೂಢ. ವಿ: [ಅಮೂಢ] ಮೂಢನಲ್ಲದ, ವಿಚಕ್ಷಣ (ಣಾಯಾ), **–ಣಾಣ.** ನ: [**–ಜ್ಞಾನ**] ಸತ್ಯವಾದ ಜ್ಞಾನ, **–ದಿಟ್ಠಿ.** ಸ್ತ್ರೀ: [**–ದೃಷ್ಟಿ**] ಸಮ್ಯಗ್ದರ್ಶನ(ಪವ) ವಿಚಲಿತವಾಗದ, ಸ್ಥಿರವಾದ ಬುದ್ಧಿ(ಉತ್ತ), ಅವಿಚಲಿತ ದೃಷ್ಟಿವುಳ್ಳವನು, ಸಮ್ಯಗ್‌ದೃಷ್ಟಿ(ಗಚ್ಛ)

ಅಮೂಸ. ವಿ: [ಅಮೃಷ] ಸತ್ಯವಾದಿ(ಕುಮಾ)

ಅಮೆಜ್ಜ. '**ಅಮಿಜ್ಜ**' ಶಬ್ದವನ್ನು ನೋಡುವುದು(ಭಗ)

ಅಮೆಜ್ಝ. '**ಅಮಿಜ್ಝ**' ಶಬ್ದವನ್ನು ನೋಡುವುದು(ಮಹಾ)

ಅಮೊಲ್ಲ. ವಿ: [ಅಮೂಲ್ಯ] ಬೆಲೆಕಟ್ಟಲಾಗದ, ಬಹುಮೂಲ್ಯವಾದ (ಗಉಡ)

ಅಮೋಸಲಿ: ನ: [ದೇ. **ಅಮುಶಲಿ**] ವಸ್ತ್ರಾದಿಗಳನ್ನು ನಿರೀಕಿಸುವ ಒಂದು ರೀತಿ (ಓಘ)

ಅಮೋಸಾ. '**ಅಮುಸಾ**' ಶಬ್ದವನ್ನು ನೋಡುವುದು

ಅಮೋಹ. ವಿ: [ಅಮೋಘ] ವ್ಯರ್ಥವಲ್ಲದ, ಸಫಲ, (ಸುಪಾ) **ಪು:** ಸೂರ್ಯೋದಯ ಮತ್ತು ಸೂರ್ಯಾಸ್ತದ ಹೊತ್ತಿನಲ್ಲಿ ಕಿರಣಗಳ ವಿಕಾರದಿಂದ ಆಗುವ ರೇಖಾ–ವಿಶೇಷ. ಒಬ್ಬ ಯಕ್ಷನ ಹೆಸರು(ವಿಪಾ), **–ದಂಸಿ.** ವಿ: [**–ದರ್ಶಿನ್**] ಸರಿಯಾಗಿ ದೃಷ್ಟಿಸುವವನು. ಉದ್ಯಾನ–ವಿಶೇಷ, ಯಕ್ಷ, **–ಪಹಾರಿ.** ವಿ:[**–ಪ್ರಹಾರಿನ್**] ಏಟು ತಪ್ಪದ ಹಾಗೆ ಬಾರಿಸುವವನು, ಗುರಿಕಾರ. **□ರಹ. ಪು:** [**–ರಥ**] ಈ ಹೆಸರಿನ ಒಬ್ಬ ರಥಿಕ

ಅಮೋಹ. ಪು; [ಅಮೋಹ] ಮೋಹವಿಲ್ಲದಿರುವುದು, ರುಚಕ ಪರ್ವತದ ಒಂದು ಶಿಖರ(ಶಾ) **ವಿ:** ನಿರ್ಮೋಹ

ಅಮೋಹ. ಪು: [ಅಮೋಘ] ಸೂರ್ಯಬಿಂಬದ ಕೆಳಗೆ ಒಮ್ಮೊಮ್ಮೆ ಕಾಣುವ ಕಪ್ಪು ಬಣ್ಣದ ರೇಖೆ

ಅಮೋಹಣ. ನ: [ಅಮೋಹನ] ವಿ: ಮೋಹವಿಲ್ಲದ, ಮೋಹಗೊಳಿಸದವನು (ಕಪ್ಪ)

ಅಮೋಹಾ. ಸ್ತ್ರೀ: [ಅಮೋಘಾ] ಒಂದು ಜಂಬೂ ವೃಕ್ಷ, ಒಂದು ಪುಷ್ಕರಿಣಿ (ದೀವ)

ಅಮ್ಮ. 'ಅಂಬ=ಆಮ್ಲ' ಶಬ್ದವನ್ನು ನೋಡುವುದು
ಅಮ್ಮಏವ. ಪು: [ಆಮ್ರದೇವ] ಒಬ್ಬ ಜೈನಾಚಾರ್ಯ (ಪವ) ಸೂರ್ಯ
ಅಮ್ಮಗಾ 'ಅಮ್ಮಯಾ' ಶಬ್ದವನ್ನು ನೋಡುವುದು
ಅಮ್ಮಚ್ಛ. ವಿ: [ದೇ] ಅಸಂಬದ್ಧ,
ಅಮ್ಮಡ. 'ಅಂಬಡ' ಶಬ್ದವನ್ನು ನೋಡುವುದು
ಅಮ್ಮಡೀ. (ಅಪ) ಸ್ತ್ರೀ: [ಅಂಬಾ] ತಾಯಿ, ಮಾತೆ(ಹೇ)
ಅಮ್ಮಣುಅಂಚಿಯ. ನ: [ದೇ) ಅನುಗಮನ, ಅನುಸರಣ(ದೇ)
ಅಮ್ಮಧಾಈ. 'ಅಂಬಧಾಈ' ಶಬ್ದವನ್ನು ನೋಡುವುದು
ಅಮ್ಮಯಾ. ಸ್ತ್ರೀ: [ಅಂಬಾ] ತಾಯಿ, ಅಮ್ಮ(ಉವಾ), ಐದನೇ ವಾಸುದೇವನ ತಾಯಿಯ ಹೆಸರು.
ಅಮ್ಮಹೇ (ಶೌ) ಅ: ಹರ್ಷ ಸೂಚಕ ಅವ್ಯಯ (ಹೇ)
ಅಮ್ಮಾ. ಸ್ತ್ರೀ: [ದೇ. ಅಂಬಾ] ಮಾತೆ, ತಾಯಿ, ಅಮ್ಮ (ದೇ) **-ಪಿಇ, -ಪಿಉ, -ಪಿಯರ್, -ಪೀಇ.** ಪು.ಬ: [-ಪಿತೃ]. ತಂದೆ-ತಾಯಿ, ಮಾತಾ-ಪಿತೃ(ಕಪ್ಪ) **-ಪೇಇಯ.** ವಿ: [-ಪೈತೃಕ] ತಂದೆ-ತಾಯಿಗೆ ಸಂಬಂಧಿಸಿದ
ಅಮ್ಮಾಇಆ. ಸ್ತ್ರೀ: [ದೇ] ಅನುಸರಿಸುವ ಹೆಣ್ಣು, ಹಿಂದೆ ಹಿಂದೆ ಬರುವ ಹೆಂಗಸು (ದೇ)
ಅಮ್ಮೋ. ಆಶ್ಚರ್ಯಸೂಚಕ ಅವ್ಯಯ, ತಾಯಿಯನ್ನು ಕುರಿತ ಸಂಬೋಧನೆ-ಹೇ, ಮಾತೆ, ಹೇ ಅಮ್ಮ!
ಅಮ್ಮೋಗಇಆ. ಸ್ತ್ರೀ: [ದೇ] ಎದುರಿನಲ್ಲಿ ಹೋಗುವುದು, ಸ್ವಾಗತಿಸುವ ಸಲುವಾಗಿ ಎದುರುಗಡೆ ಹೋಗುವುದು.
ಅಮ್ಮೋಸ. ವಿ: [ಅಮರ್ಷ] ಅಕ್ಷಮ್ಯ, ಕ್ಷಮಿಸಲು ಅರ್ಹವಲ್ಲದ್ದು(ಉವಾ)
ಅಮ್ಹ. ಸ: [ಅಸ್ಮತ್] ನಾವು, ತಾನು, (ಹೇ) **-ಕೇರ, -ಕ್ಕೇರ, -ಚ್ಚಯ.** ವಿ: [ಅಸ್ಮದೀಯ] ನಮ್ಮ, ನಮಗೆ ಸಂಬಂಧಿಸಿದ (ಹೇ)
ಅಮ್ಹುತ್ತ. ವಿ: [ದೇ] ಹೋಗಲಾಡಿಸಲ್ಪಟ್ಟ, ಚೆನ್ನಾಗಿ ತೊಳೆಯಲ್ಪಟ್ಟ(ಷಡ್)
ಅಮ್ಹಾರ.} (ಅಪ). ವಿ: [ಅಸ್ಮದೀಯ] ನಮ್ಮ,
ಅಮ್ಹಾರಯ.} ನಮ್ಮದಾದ, ನಮಗೆ ಸಂಬಂಧಿಸಿದ
ಅಮ್ಹಾರಿಚ್ಛ. ವಿ: [ಅಸ್ಮಾದೃಕ್ಷ] ನಮ್ಮ ಹಾಗೆ, ನಮ್ಮಂತೆ
ಅಮ್ಹಾರಿಸ. ವಿ: [ಅಸ್ಮಾದೃಶ] ನಮ್ಮ ಹಾಗೆ, ನಮ್ಮಂತೆ(ಹೇ)
ಅಮ್ಹೆಚ್ಚಯ. ವಿ: [ಅಸ್ಮಾಕಂ] ನಮ್ಮ, ನಮ್ಮದಾದ, ನಮಗೆ ಸಂಬಂಧಿಸಿದ(ಕುಮಾ)
ಅಮ್ಹೋ. ಅ: [ಅಹೋ] ಅಹೋ! ಆಶ್ಚರ್ಯ-ಸೂಚಕ ಅವ್ಯಯ
ಅಯ ಪು: [ಅಗ] ಬೆಟ್ಟ, ಪರ್ವತ, ಹಾವು, ಸೂರ್ಯ(ಶ್ರಾ)
ಅಯ. ಪು: [ಅಜ] ಆಡು, ಮೇಕೆ, ಪೂರ್ವಾಭಾದ್ರ ನಕ್ಷತ್ರದ ಅಧಿಷ್ಠಾತೃ ದೇವ(ಠಾ) ಮಹಾದೇವ, ವಿಷ್ಣು, ರಾಮಚಂದ್ರ, ಬ್ರಹ್ಮ, ಕಾಮದೇವ, ಮಹಾಗ್ರಹವಿಶೇಷ, ಸೂರ್ಯ, ಚಂದ್ರ,, ಆಕಾಶ, ಬೀಜೋತ್ಪಾದಕ ಶಕ್ತಿಯಿಲ್ಲದ ಧಾನ್ಯ(ಜೊಳ್ಳು) (ಪಉಮ), **-ಕರಕ.** ಪು: [-ಕರಕ] ಮಹಾಗ್ರಹದ ಹೆಸರು, **-ವಾಲ.** ಪು: [-ಪಾಲ] ಗೌಳಿಗ, ರಘುವಿನ ಪುತ್ರ ಅಜ.
ಅಯ. ಪು: [ಅಯ] ಗಮನ, ಗತಿ, ಲಾಭ, ಅನುಭವ, ನ: ಪುಣ್ಯ, ಅದೃಷ್ಟ, ಪಗಡೆಯ ದಾಳ, ಪೂರ್ವಜನ್ಮದ ಪುಣ್ಯ ಕಾಯ
ಅಯ. ನ: [ಅಕ] ದುಃಖ, ಪಾಪ(ಶ್ರಾ)
ಅಯ. ನ: [ಅಯಸ್] ಕಬ್ಬಿಣ, ಉಕ್ಕು, **-ಆಗರ.** ಪು: [-ಆಕರ] ಕಬ್ಬಿಣದ ಗಣಿ, ಕಬ್ಬಿಣದ ಕಾರ್ಖಾನೆ, **-ಕಂತ, -ಕ್ಕಂತ.** ಪು: [-ಕಾಂತ] ಸೂಜಿಗಲ್ಲು (ಆವಮ) **-ಕಡಿಲ್ಲ.** ನ: [ದೇ. ?ಕಡಿಲ್ಲ] ಹುರಿಯುವ ಬಾಣಲಿ, ಎಣ್ಣೆ ಮೊದಲಾದುವನ್ನು ಕಾಯಿಸುವ ಕೊಪ್ಪರಿಗೆ, ಅಡಿಗೆ ಪಾತ್ರೆ, **-ಕುಂಡೀ.** ಸ್ತ್ರೀ: [-ಕುಂಡೀ] ಕಬ್ಬಿಣದ ಒಂದು ಪಾತ್ರೆ, **-ಕೋಟ್ಠಯ.** ಪು: [-ಕೋಷ್ಟಕ] ಕಬ್ಬಿಣದ ಗುಂಡು, **-ಗೋಲಯ.** ಪು: [-ಗೋಲಕ] ಕಬ್ಬಿಣದ ಪೆಟ್ಟಿಗೆ(ಶ್ರಾ), **-ದವ್ವೀ.** ಸ್ತ್ರೀ: [-ದರ್ವೀ] ಕಬ್ಬಿಣದ ಸೌಟು. **-ಪಾಯ.** ನ: [-ಪಾತ್ರ] ಕಬ್ಬಿಣದ ಪಾತ್ರೆ, **-ಸಲಾಗಾ.** ಸ್ತ್ರೀ: [-ಶಲಾಕಾ] ಕಬ್ಬಿಣದ ಸಲಾಕೆ
ಅಯ. ಸಕ: [ಅಯ್] ಗಮಿಸು, ಹೋಗು, ಪಡೆದುಕೊಳ್ಳು ತಿಳಿ, ವ. ಕೃ-ಅಯಮಾಣ (ಸಮ)
ಅಯಂಛ. ಸಕ: [ಕೃಷ್] ಎಳೆ, ಉಳು, ವ್ಯವಸಾಯಮಾಡು, ಗೆರೆ ಎಳೆ(ಹೇ)
ಅಯಂಭಿರ. ವಿ: [ಕರ್ಷಿನ್] ಎಳೆಯುವವನು, ಆಕರ್ಷಿಸುವವನು(ಕುಮಾ)

ಅಯಂಡ. ಪು: [ಅಕಾಂಡ] ಅನುಚಿತ ಸಮಯ, ಅಸಮಯ, ಅಕಸ್ಮಾತ್(ಪಉಮ), ಕ್ರಿ.ವಿ: ಆಕಸ್ಮಿಕ,
ಅಯಂತ. ವ. ಕೃ [ಆಯಂತ] ಬರುತ್ತಿರುವ, ಪ್ರವೇಶಿಸುತ್ತಿರುವ (ಆವಮ)
ಅಯಂತಿಯ. ವಿ: [ಅಯಂತ್ರಿತ] ಅನಾದರಣೀಯ, ಅಗೌರವಕ್ಕೆ ಪಾತ್ರವಾದ/ನಾದ
ಅಯಂಪಿರ. ವಿ: [ಅಜಲ್ಪಿತೃ] ಮಾತಾಡದಿರುವವನು, ಮೌನಿ
ಅಯಂಪುಲ.ಪು:[ಅಯಂಪುಲ]ಗೋಶಾಲಕನ ಒಬ್ಬ ಶಿಷ್ಯ
ಅಯಂಸ. ಪು: [ಆದರ್ಶ] ಕನ್ನಡಿ, **–ಮುಹ. ಪು: [–ಮುಖ]** ಈ ಹೆಸರಿನ ಒಂದು ದ್ವೀಪ, ದ್ವೀಪದ ನಿವಾಸಿ(ಇಕ)
ಅಯಂಸಂಧಿ. ವಿ: [ಇದಂಸಂಧಿ] ಉಪಯುಕ್ತ ಕಾರ್ಯಗಳನ್ನು ಯಥಾ ಸಮಯದಲ್ಲಿ ಮಾಡುವವನು
ಅಯಕರಯ. ಪು: [ಅಯಕರಕ] ಒಂದು ಮಹಾ ಗ್ರಹ.
ಅಯಕ್ಕ.} ಪು: [ದೇ] ದಾನವ, ರಾಕ್ಷಸ
ಅಯಗ}.
ಅಯಗರ. ಪು: [ಅಜಗರ] ಹೆಬ್ಬಾವು(ಪಣ್ಣ)
ಅಯಡ. ಪು: [ದೇ. ಅವಟ] ಬಾವಿ, ಕೂಪ(ದೇ)
ಅಯಣ. ನ: [ಅತನ] ನಿರಂತರವಾಗಿ ಆಗುವುದು
ಅಯಣ. ನ: [ಅಯನ] ಗಮನ, ಸಂಚಾರ, ಪ್ರಾಪ್ತಿ (ವಿಸೇ) ಜ್ಞಾನ, ನಿರ್ಣಯ, ಮನೆ, ದೇವಸ್ಥಾನ, ವಿ: ಪಡೆಯುವವನು ಹೊಂದುವವನು. **ಪುಂ. ನ:** ಸೂರ್ಯನ ಸಂಚಾರ (ಉತ್ತರಾಯಣ, ದಕ್ಷಿಣಾಯನ) ಆಶ್ರಯಸ್ಥಾನ
ಅಯಣ. ನ: [ಅದನ] ಭೋಜನ, ಭಕ್ಷಣ, ಊಟ ಮಾಡುವುದು
ಅಯಣು. ವಿ: [ಅಜ್ಞ] ಏನೂ ತಿಳಿಯದವನು, ಮೂರ್ಖ (ಸುರ)
ಅಯಣು. ವಿ: [ಅತನು] ಸ್ಥೂಲ, ದಪ್ಪ, ದೊಡ್ಡದಾದ (ಸಣ) ಮನ್ಮಥ
ಅಯತಂಚಿಅ. ಅ: [ದೇ] ಪುಷ್ಟ, ವೃದ್ಧಿ ಹೊಂದಿದ(ದೇ)
ಅಯರ. ವಿ: [ಅಜರ] ಮುಪ್ಪಿಲ್ಲದ, ಜರೆಯಿಲ್ಲದ, ದೇವತೆ, ಪರಮಾತ್ಮ
ಅಯರ. ಪುಂನ: [ಅತರ] ಸಾಗರ, ಸಮುದ್ರ, ಸಮಯವನ್ನಳೆಯುವಂಥದು, ಸಾಗರೋಪಮ (ಸಂಗ), ವಿ: ಈಜಲು ಅಸಾಧ್ಯವಾದ(ಬೃಹ) ಅಸಮರ್ಥ, ರೋಗ, ಒಣಗುವುದು(ಬೃಹ)
ಅಯರಾಮರ. ವಿ: [ಅಜರಾಮರ] ಮುಪ್ಪು ಮರಣಗಳಿಲ್ಲದ, ನ: ಮುಕ್ತಿ(ಪಉಮ),
ಅಯಲ. 'ಅಚಲ=ಅಚಲ' ಶಬ್ದವನ್ನು ನೋಡುವುದು
ಅಯಲಾ. 'ಅಚಲಾ' ಶಬ್ದವನ್ನು ನೋಡುವುದು
ಅಯಸ್. 'ಅಜಸ್' ಶಬ್ದವನ್ನು ನೋಡುವುದು
ಅಯಸಿ. ವಿ: [ಅಯಶಸ್ವಿನ್] ಕೀರ್ತಿವಂತನಾಗದ (ಗಉಡ)
ಅಯಸಿ}. ಸ್ತ್ರೀ: [ಅತಸೀ] ಅಗಸೆಗಿಡ, ಅಗಸೆ ನಾರು
ಅಯಸೀ}. (ತಾ)
ಅಯಾ. ಸ್ತ್ರೀ: [ಅಜಾ] ಆಡು, ಕುರಿ, ಮಾಯೆ, ಅವಿದ್ಯೆ, ಪ್ರಕೃತಿ, ಅತಿಬಜೆ, **–ಕಿವಾಣಿಜ್ಜ. ಪು:[–ಕೃಪಾಣೀಯ]** "ಕುರಿಯ ಮೇಲೆ ಚೂರಿ ಬೀಳುವುದಕ್ಕೆ ತಕ್ಕನಾಗೇ ಯಾವುದೇ ಕೆಲಸ ಆಗಿಬಿಡುತ್ತೆ" ನ್ಯಾಯ–ವಿಶೇಷ, **–ಪಾಲ. ಪು: [–ಪಾಲ]** ಪಶುಪಾಲಕ, ಗೊಲ್ಲ, **–ವಯ. ಪು: [–ವ್ರಜ]** ಕುರಿದೊಡ್ಡಿ
ಅಯಾಗರ. 'ಅಯ–ಆಗರ' ಶಬ್ದವನ್ನು ನೋಡುವುದು
ಅಯಾಣ. ನ: [ಅಜ್ಞಾನ] ಅರಿವು ಇಲ್ಲದಿರುವುದು, ತಿಳಿವಿನ ಅಭಾವ(ಯಾ)
ಅಯಾಣ}. ವಿ: [ಅಜ್ಞ] ಅಜ್ಞಾನಿ, ಮೂರ್ಖ, ಅರಿವಿನ
ಅಜ್ಞಾನ.} ಕೊರತೆ, ಅಜ್ಞಾನ (ಓಘ, ಪಉಮ)
ಅಯಾಣ. ವಿ: [ಅಜ್ಞಾಯಕ] ಮೇಲಿನ ಶಬ್ದವನ್ನು ನೋಡುವುದು
ಅಯಾಣಂತ. 'ಅಜಾಣಂತ' ಶಬ್ದವನ್ನು ನೋಡುವುದು
ಅಯಾಣಮಾಣ. 'ಅಜಾಣಮಾಣ' ಶಬ್ದವನ್ನು ನೋಡುವುದು
ಅಯಾಣಿಯ. 'ಅಜಾಣಿಯ.' ಶಬ್ದವನ್ನು ನೋಡುವುದು
ಅಯಾಣುವ. 'ಅಜಾಣುವ' ಶಬ್ದವನ್ನು ನೋಡುವುದು
ಅಯಾರ. ಪು: [ಅಕಾರ] 'ಅ' ಅಕ್ಷರ
ಅಯಾಲ. ಪು: [ಅಕಾಲ] ಉಚಿತವಲ್ಲದ ಸಮಯ, ಅಸಮಯ, ಬಿಳುಪಾದ(ಪಉಮ)
ಅಯಾಲಿ. ಪು: [ದೇ] ಮೋಡ ಕವಿದ ದಿನ, ದುರ್ದಿನ
ಅಯಾಲಿಯ.ವಿ:[ಅಕಾಲಿಕ] ಆಕಸ್ಮಿಕ, ಅಸಮಯದಲ್ಲಿ ಉಂಟಾದ, ಅನುಚಿತಕಾಲ(ಹೇ) ಕಪ್ಪಿಲ್ಲದ
ಅಯಿ. 'ಅಇ=ಅಯಿ' ಶಬ್ದವನ್ನು ನೋಡುವುದು

ಅಯುಜರೇವಇ. ಸ್ತ್ರೀ: [ದೇ] ಹೊಸದಾಗಿ ಮದುವೆಯಾದವಳು, ಮದುಮಗಳು

ಅಯೋಮಯ. 'ಅಓ-ಮಯ' ಶಬ್ದವನ್ನು ನೋಡುವುದು(ಅಂತ)

ಅಯ್ಯಾವತ್ತ. (ಶೌ) ಪು: [ಆರ್ಯಾವರ್ತ] ಭಾರತ, ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ಮಧ್ಯದ ಪ್ರದೇಶ

ಅಯ್ಯುಣ. (ಮ) **'ಅಜ್ಜುಣ'** ಶಬ್ದವನ್ನು ನೋಡುವುದು

ಅರ. ಪು: [ಅರ] ಚಕ್ರದ ಮಧ್ಯದ ಮರ=ಗುಂಭ, ಚಕ್ರದ ಅರೆಕಾಲು, ೧೮ನೇ ಜಿನದೇವ ಮತ್ತು ೭ನೇ ಚಕ್ರವರ್ತಿ, ಸಮಯದ ಒಂದು ಅಳತೆ, ಕಾಲಚಕ್ರದ ಹನ್ನೆರಡನೇ ಭಾಗ(ತೀ)

-ಅರ. ಪು:[-ಕರ]ಕಿರಣ(ಗಾ), ಕೈ, ಶುಲ್ಕ, ಜಕಾತಿ(ಸೇ)

ಅರಇ. ಸ್ತ್ರೀ: [ಅರತಿ] ಮಾಂಸದ ಗುಳ್ಳೆ, ನೆಮ್ಮದಿಯಿಲ್ಲದಿರುವುದು (ಭ'ಗ) ಪ್ರೀತಿಯಿಲ್ಲದಿರುವುದು, ಕ್ರೋಧ, ಕೋಪ, ನೋವು, ದುಃಖ. **-ಕಮ್ಮ.** ನ: [-ಕರ್ಮನ್] ಅರತಿಗೆ ಕಾರಣವಾದ ಕರ್ಮ-ವಿಶೇಷ(ಠಾ), **-ಪರಿಸಹ, -ಪರೀಸಹ.**ಪು:[-ಪರಿಷಹ, ಪರೀಷಹ] ಅರತಿಯನ್ನು (ನೋವು ದುಃಖಗಳನ್ನು) ಸಹಿಸುವುದೇ ಪರೀಷಹ.**-ಮೋಹಣಿಜ್ಜ.** ಮೋ: [-ಮೋಹನೀಯ] ಅರತಿಯನ್ನು ಉಂಟುಮಾಡುವ ಕರ್ಮ-ವಿಶೇಷ(ಕಮ್ಮ), **-ರಇ.** ಸ್ತ್ರೀ: [-ರತಿ] ಸುಖ-ದುಃಖಗಳು

ಅರಂಗ. **'ತರಂಗ'** ಶಬ್ದವನ್ನು ನೋಡುವುದು

ಅರಂಜರ. ಪುಂ.ನ: [ಅರಂಜರ] ನೀರಿನ ಗಡಿಗೆ(ಠಾ)

-ಅರಕ್ಖ. **'ವರಕ್ಖ'** ಶಬ್ದವನ್ನು ನೋಡುವುದು

ಅರಕ್ಖರೀ. ಸ್ತ್ರೀ: [ಅರಾಕ್ಷರೀ] ನಗರ-ವಿಶೇಷ

ಅರಗ. 'ಅರಗ' ಶಬ್ದವನ್ನು ನೋಡುವುದು

ಅರಜ್ಝಿಯ. ವಿ: [ಅರಹಿತ] ನಿರಂತರ, ಸತತ(ಸೂಅ)

ಅರಡು. ಪು: [ಅರಟು] ವೃಕ್ಷ-ವಿಶೇಷ (ಉಪ)

ಅರಣ. ನ: [ಅರಣ] ಹಿಂಸೆ (ಉವ)

ಅರಣಿ. ಪು: [ಅರಣಿ] ಒಂದು ಮರ. ಬೆಂಕಿಯನ್ನು ಉತ್ಪತ್ತಿಮಾಡಲುಇದರ ಕಟ್ಟಿಗೆ ಬಳಸಲಾಗುತ್ತದೆ. (ಆವಮ), ಸೂರ್ಯ, ಬೆಂಕಿ, ಚಕಮಕಿ ಕಲ್ಲು

ಅರಣಿ. ಪುಂಸ್ತ್ರೀ: [ದೇ] ಹಾದಿ, ದಾರಿ, ಪಂಕ್ತಿ, ಸಾಲು(ಷಡ್)

ಅರಣಿಯಾ. ಸ್ತ್ರೀ: [ಅರಣಿಕಾ] ವನಸ್ಪತಿ-ವಿಶೇಷ

ಅರಣೇಟ್ಟಯ. ಪು: [ದೇ. **ಅರಣೇಟಕ**] ಕಲ್ಲುಗಳ ಚೂರುಗಳಿಂದ ದೊರೆಯುವ ಬಿಳಿಯ ಪುಡಿ

ಅರಣ್ಣ. ವಿ: [ಆರಣ್ಯ] ಕಾಡಿನಲ್ಲಿ ವಾಸಮಾಡುವವನು

ಅರಣ್ಣ. ನ: [ಅರಣ್ಯ] ಕಾಡು, ವನ(ಹೇ) **-ವಡಿಂಸಗ.** ನ: [ಅರಣ್ಯಾವತಂಸಕ] ದೇವ-ವಿಮಾನ-ವಿಶೇಷ **-ಸಾಣ.** ಪು: [-ಶ್ವಾನ] ಕಾಡಿನ ನಾಯಿ (ಕುಮಾ)

ಅರಣ್ಣಯ. ವಿ: [ಆರಣ್ಯಕ] ಅರಣ್ಯಕ್ಕೆ ಸಂಬಂಧಿಸಿದ, ಅರಣ್ಯದಲ್ಲಿರುವ, (ಅಭಿ) ವೇದದ ಒಂದು ಭಾಗ, ಮಹಾಭಾರತದ ಅರಣ್ಯಪರ್ವ, ಅರಣ್ಯಕಾಂಡ, ಹಸುವಿನ ಸಗಣಿ

ಅರತ್ತ. ವಿ: [ಅರಕ್ತ] ಬಣ್ಣವಿರದ, ರಾಗ-ರಹಿತ (ಆಚಾ)

ಅರನ್ನ. **'ಅರಣ್ಣ'** ಶಬ್ದವನ್ನು ನೋಡುವುದು (ಕಪ್ಪ)

ಅರಬಾಗ. ಪು: [ದೇ] ಒಂದು ಅನಾರ್ಯ ದೇಶ

ಅರಮಂತಿಯಾ. ಸ್ತ್ರೀ: [ಅರಮಂತಿಕಾ] ಆಸಕ್ತಿಯಿಲ್ಲದಿರುವಿಕೆ, ಕಾರ್ಯದಲ್ಲಿ ತೊಡಗದಿರುವುದು

ಅರಯ. **'ಅರ'** ಶಬ್ದವನ್ನು ನೋಡುವುದು

ಅರಯ. ವಿ: [ಅರಜಸ್] ರಜೋಗುಣವಿಲ್ಲದ (ಪಉಮ) ಒಂದು ಮಹಾ ಗ್ರಹದ ಹೆಸರು, ಧೂಳಿಲ್ಲದಿರುವುದು, ನಿರ್ಮಲ(ಕಪಪ), ಐದನೇ ದೇವಲೋಕದ ಒಂದು ಪ್ರತರ, ಪುಷ್ಪವತಿಯಾಗದಿರುವ ಕನ್ಯೆ.

ಅರಯ. ವಿ: [ಅರತ] ಅನಾಸಕ್ತ, ವಿರಕ್ತ, ಪ್ರೀತಿಯಿಲ್ಲದ

ಅರಯಾ. ಸ್ತ್ರೀ: [ಅರಜಾ] **'ಕುಮುದ'** ಎಂಬ ಹೆಸರಿನ ವಿಜಯದ ರಾಜಧಾನಿ(ಜಂ)

ಅರಯಣಿ. ಪು: [ಅರತ್ನಿ] ಮೊಳಕೈಯಿಂದ ಹಿಡಿದು ಕಿರುಬೆರಳಿನ ತುದಿಯವರೆಗಿನ ಅಳತೆ, ತೆರೆದ ಹಸ್ತ(ಠಾ) ಮೊಳಕೈ, ತೋಳು

ಅರರ. ನ: [ಅರರ] ಯುದ್ಧ, ಮುಚ್ಚಳ, ಚಂದ್ರ, ಕಬ್ಬಿಣ, ಬಾಗಿಲು, **-ಕುರೀ.** ಸ್ತ್ರೀ: [-ಕುರೀ] ನಗರ-ವಿಶೇಷ(ಧಮ್ಮ)

ಅರರಿ. ಪು.ನಂ: [ಅರರಿ] ಬಾಗಿಲು,

ಅರಲ. ನ: [ದೇ] ಜೀಂ ಎನ್ನುವ ಹಕ್ಕಿ, ಒಂದು ಕೀಟ(ದೇ), ಸೊಳ್ಳೆ

ಅರಲು. **'ಅರಡು'** ಶಬ್ದವನ್ನು ನೋಡುವುದು

ಅರವಾಗ. ಪು: [ದೇ] ಒಂದು ಅನಾರ್ಯ ದೇಶ, ಅರಬ್ ದೇಶ

ಅರವಿಂದ. ನ: [**ಅರವಿಂದ**] ಕಮಲ. ಪದ್ಮ (ಪಣ್ಣ), **ಪು:** ಕೊಕ್ಕರೆ, ತಾಮ್ರಲೋಹ

ಅರವಿಂದರ. ವಿ: [ದೇ] ಉದ್ದವಾದ, ದೀರ್ಘವಾದ

ಅರಸ. ಪು: [**ಅರಸ**] ರಸವಿಲ್ಲದ, ಸಪ್ಪೆಯಾದ, (ಣಾಯಾ), ಶಕ್ತಿಯಿಲ್ಲದ

ಅರಸ. ಪು: [**ಅರ್ಶಸ್**] ಮೂಲವ್ಯಾಧಿ

ಅರಸ. ನ: [**ಅರಸ**] ಒಂದು ಬಗೆಯ ತಪಸ್ಸು, ನಿರ್ವಿಕಲ್ಪ ತಪಸ್ಸು

ಅರಹ. ವ.ಕೃ: [**ಅರ್ಹತ್**] ಪೂಜಿಸಲು ಅರ್ಹನಾದವನು, ಪೂಜ್ಯ ಜಿನದೇವ, ತೀರ್ಥಂಕರ (ಸಮ್ಮ) ಬುದ್ಧ, **–ಮಿತ್ತ.** ಪು: [**ಮಿತ್ರ**] ಒಬ್ಬ ವ್ಯಾಪಾರಿಯ ಹೆಸರು(ಗಚ್ಛ)

ಅರಹ. '**ಅರಿಹ=ಅರ್ಹ್**' ಶಬ್ದವನ್ನು ನೋಡುವುದು

ಅರಹ್. ವಿ: [**ಅರಹಸ್**] ರಹಸ್ಯವಲ್ಲದ, ಪ್ರಕಟ, ಜಿನದೇವ, ಸರ್ವಜ್ಞ(ಠಾ)

ಅರಹ. ವಿ: [**ಅರಥ**] ಪರಿಗ್ರಹವಿಲ್ಲದ, ಏನನ್ನೂ ಸ್ವಿಕರಿಸದ (ಭಗ)

ಅರಹಂತ. ವ. ಕೃ: [**ಅರ್ಹತ್**] ಪೂಜಿಸಲು ಯೋಗ್ಯನಾದ, ಪೂಜ್ಯ **ಪು:** ಜಿನದೇವ, ತೀರ್ಥಂಕರ(ಠಾ)

ಅರಹಂತ. ವಿ: [**ಅರಹೋಂತರ್**] ಸರ್ವಜ್ಞ, ಎಲ್ಲವನ್ನೂ ತಿಳಿದವನು, ಜಿನದೇವ

ಅರಹಂತ. ವಿ: [**ಅರಥಾಂತ**] ನಿಃಸ್ಪೃಹ, ಮಮಕಾರರಹಿತ, ಜಿನದೇವ (ಭಗ)

ಅರಹಂತ. ವ. ಕೃ: [**ಅರಹಯತ್**] ತನ್ನ ಸ್ವಭಾವವನ್ನು ಬಿಡದವನು, ಜಿನದೇವ (ಭಗ)

ಅರಹಟ್ಟ. ಪು: [**ಅರಘಟ್ಟ**] ರಾಟೆ, ಬಾವಿಯಿಂದ ನೀರು ತೆಗೆಯುವ ಚಕ್ರ, ಆಳವಾದ ಬಾವಿ

ಅರಹಟ್ಟಿಯ. ವಿ: [**ಅರಘಟ್ಟಿಕ**] ರಾಟೆ ನಡೆಸುವವನು

ಅರಹಣಾ. ಸ್ತ್ರೀ: [**ಅರ್ಹಣಾ**] ಪೂಜೆ, ಅರ್ಹತೆ, ಯೋಗ್ಯತೆ

ಅರಹಣ್ಣಯ. ಪು: [**ಅರಹನ್ನಕ**] ಒಬ್ಬ ವ್ಯಾಪಾರಿಯ ಹೆಸರು(ಣಾಯಾ)

ಅರಹನ್ನ. ಪು: [**ಅರ್ಹನ್ನ**] ಒಬ್ಬ ಜೈನ ಮುನಿಯ ಹೆಸರು

ಅರಾಇ. ಪು: [**ಅರಾತಿ**] ಶತ್ರು, ವೈರಿ (ಕುಮಾ)

ಅರಾಇ. ಸ್ತ್ರೀ: [**ಅರಾತ್ರಿ**] ಹಗಲು(ಕುಮಾ)

ಅರಾಗಿ. ವಿ: [**ಅರಾಗಿನ್**] ರಾಗವಿಲ್ಲದವನು, ವಿರಾಗಿ, (ಪಉಮ)

ಅರಿ. '**ಅರೇ**' ಶಬ್ದವನ್ನು ನೋಡುವುದು

ಅರಿ. ಪು: [**ಅರಿ**] ಶತ್ರು, **–ಛವ್ವಗ.** ಪು: [**–ಷಡ್ವರ್ಗ**] ಅರಿ ಷಡ್ವರ್ಗಗಳಾದ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆಂತರಿಕ ಶತ್ರುಗಳು(ಸೂಅ), **–ದಮಣ.** ವಿ: [**–ದಮನ**] ಶತ್ರುನಾಶಕ, ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು(ಪಉಮ), ಅಜಿತನಾಥನ ಪೂರ್ವಜನ್ಮದ ಗುರುವಾಗಿದ್ದ ಜೈನಮುನಿ. **–ದಮಣೀ.** ಸ್ತ್ರೀ: [**–ದಮನೀ**]ಒಂದು ವಿದ್ಯಾವಿಶೇಷ(ಪಉಮ), **–ವಿಧ್ವಂಸೀ.** ಸ್ತ್ರೀ: [**–ವಿಧ್ವಂಸಿನೀ**] ಶತ್ರುವನ್ನು ಸಂಹರಿಸುವ ಒಂದು ವಿದ್ಯೆ(ಪಉಮ) **–ಸತಾಂಸ.** ಪು: [**ಸತ್ರಾಂಸ**] ರಾಕ್ಷಸ ವಂಶದಲ್ಲಿ ಹುಟ್ಟಿದ ಲಡಕ್‌ನ ಒಬ್ಬ ರಾಜ, **–ಹಂತ.** ವಿ: [**ಹಂತೃ**] ಶತ್ರುನಾಶಕ, ಜಿನದೇವ(ಆವಮ)

ಅರಿಅಲ್ಲಿ. ಪುಂಸ್ತ್ರೀ: [ದೇ] ವ್ಯಾಘ್ರ, ಹುಲಿ

ಅರಿಂಜಯ. ಪು: [**ಅರಿಂಜಯ**] ಭಗವಾನ್ ಋಷಭದೇವನ ಒಬ್ಬ ಮಗ, ಒಂದು ನಗರ.

ಅರಿಟ್ಠ. ಪು: [**ಅರಿಷ್ಟ**] ಒಂದು ವೃಕ್ಷ, ೧೫ನೇ ತೀರ್ಥಂಕರನ ಒಬ್ಬ ಗಣಧರ. **ಪು.ನ:** ಒಂದು ದೇವವಿಮಾನ, ಮಾಂಡವ್ಯ ಗೋತ್ರದ ಶಾಖೆ, ಒಂದು ಜಾತಿಯ ರತ್ನ, ಅಂಟುವಾಳಕಾಯಿ, ಅನಿಷ್ಟ ಸೂಚಕ ಉತ್ಪಾತ. **–ಣೇಮಿ, –ನೇಮಿ.** ಪು: ವರ್ತಮಾನ ಕಾಲದ ೨೨ನೇ ಜಿನದೇವ

ಅರಿಟ್ಠಾ. ಸ್ತ್ರೀ: [**ಅರಿಷ್ಟಾ**] ಕಚ್ಛವೆಂಬ ವಿಜಯದ ರಾಜಧಾನಿ

ಅರಿತ್ತ. ನ: [**ಅರಿತ್ರ**] ದೋಣಿಯ ಚುಕ್ಕಾಣಿ

ಅರಿರಿಹೋ. ಅ: [**ಅರಿರಿಹೋ**] ಪಾದ–ಪೂರಕ ಅವ್ಯಯ

ಅರಿಸ. '**ಅರಸ**' ಶಬ್ದವನ್ನು ನೋಡುವುದು

ಅರಿಸಲ್ಲ}. ವಿ: [**ಅರ್ಶಸ್ವತ್**] ಮೂಲವ್ಯಾಧಿ

ಅರಿಸಿಲ್ಲ}. ಉಳ್ಳವನು(ಪಾಅ)

ಅರಿಹ. ವಿ: [**ಅರ್ಹ**] ಯೋಗ್ಯ, **ಪು:** ಜಿನದೇವ(ಔಪ)

ಅರಿಹ. ಸಕ: [**ಅರ್ಹ್**] ಯೋಗ್ಯನೆನಿಸು, ಪೂಜ್ಯನಾಗು, ಪೂಜಿಸು–'ಅರಿಹಇ'

ಅರಿಹ. **'ಅರಹ=ಅರ್ಹನ್'** ಶಬ್ದವನ್ನು ನೋಡುವುದು(ಹೇ)-ದತ್ತ,-ದಿಣ್ಣ. **ಪು:** [-ದತ್ತ] ಜೈನಮುನಿ-ವಿಶೇಷದ ಹೆಸರು(ಕಪ್ಪ)

ಅರಿಹಣಾ.'ಅರಹಣಾ' ಶಬ್ದವನ್ನು ನೋಡುವುದು

ಅರಿಹಂತ.'ಅರಹಂತ'=ಅರ್ಹತ್' ಶಬ್ದವನ್ನು ನೋಡುವುದು. **-ಚೇಯಿಯ. ನ:[-ಚೈತ್ಯ]** ಜಿನಮಂದಿರ(ಉವಾ), **-ಸಾಸಣ. ನ: [-ಶಾಸನ]** ಜೈನ ಆಗಮಗ್ರಂಥಗಳು, ಜಿನನ ಆಜ್ಞೆ(ಪಣ್ಣ)

ಅರು. ವಿ: [ಅರುಜ] ರೋಗ-ರಹಿತ

ಅರುಗ. ನ: [ದೇ.ಅರುಕ] ವ್ರಣ, ಗಾಯ (ಬೃಹ)

ಅರುಂತುದ. ವಿ: [ಅರುಂತುದ] ಮರ್ಮ ಭೇದಕ, ಮರ್ಮ ಸ್ಪರ್ಶಿ

ಅರುಣ. **ಪು:** [ಅರುಣ] ಸೂರ್ಯ, ಸೂರ್ಯನ ಸಾರಥಿ, ಸಂಧ್ಯಾ ರಾಗ, ಎಳೆಗೆಂಪು, ಒಂದು ದ್ವೀಪ, ಸಮುದ್ರ, ಬುಧಗ್ರಹ(ಠಾ), ಗಂಧವತಿ - ಪರ್ವತದ ಅಧಿಷ್ಠಾತೃ ದೇವ(ಠಾ)ದೇವ-ವಿಶೇಷ, ವಿಮಾನ ವಿ: ಕೆಂಪು ಬಣ್ಣ, ಸಾಯಂಕಾಲದ ಮೋಡ, ತಾಮ್ರಲೋಹ. **-ಕಂತ. ನ: [-ಕಾಂತ]** ದೇವ-ವಿಮಾನ, -ಗಂಗಾ. ಸ್ತ್ರೀ: **[-ಗಂಗಾ]** ಮಹಾರಾಷ್ಟ್ರದ ನದಿ. **-ಜ್ಝಯ. ನ: [-ಧ್ವಜ]** ದೇವ-ವಿಮಾನ. **-ಪ್ಪಭ, -ಪ್ಪಹ. ನ: [-ಪ್ರಭ]** ಈ ಹೆಸರಿನ ದೇವ ವಿಮಾನ, **-ಭದ್ದ. ಪು: [-ಭದ್ರ]** ಒಬ್ಬ ದೇವತೆಯ ಹೆಸರು. **-ಭೂಯ. ನ:** [-ಭೂತ] ದೇವ-ವಿಮಾನ. **-ಮಹಾಭದ್ದ. ಪು:** [-ಮಹಾಭದ್ರ]. ದೇವ-ವಿಶೇಷ, **ಮಹಾವರ. ಪು:** [-ಮಹಾವರ] ದ್ವೀಪ-ವಿಶೇಷ, ಸಮುದ್ರ-ವಿಶೇಷ. □ವಡಿಂಸಯ. ನ: [ಅರುಣಾವತಂಸಕ] ಒಂದು ದೇವ ವಿಮಾನ, **-ವರ. ಪು: [-ವರ]** ದ್ವೀಪ-ವಿಶೇಷ, ಸಮುದ್ರ(ಸುಜ್ಜ), **-ವರೋಭಾಸ. ಪು:** [-ವರಾವಭಾಸ] ದ್ವೀಪ, ಮತ್ತು ಸಮುದ್ರ-ವಿಶೇಷ. **-ಸಿಟ್ಟ. ನ: [-ಶಿಷ್ಟ]** ಒಂದು ದೇವವಿಮಾನ, **ಅರುಣಾಭ. ನ: ಅರುಣಾಭ** ಒಂದು ದೇವ-ವಿಮಾನ-ವಿಶೇಷ

ಅರುಣ. ನ: [ದೇ] ಕಮಲ, ತಾವರೆ

ಅರುಣ. **ಪುಂನ:** [ಅರುಣ] ಒಂದು ದೇವ-ವಿಮಾನ, **-ಪ್ಪಭ. ಪು: [-ಪ್ರಭ]** ಅನುವೇಲಂಧರ ಎಂಬ ಹೆಸರಿನ ನಾಗರಾಜನು ವಾಸಿಸುವ ಪರ್ವತ, ಆ ಪರ್ವತದ ಮೇಲೆ ವಾಸಿಸುವ ದೇವ. **ಅರುಣಾಭ. ಪು: [ಅರುಣಾಭ]** ಕೃಷ್ಣ-ಪುದ್ಗಲ ವಿಶೇಷ

ಅರುಣಿಮ. **ಪುಂಸ್ತ್ರೀ:** [ಅರುಣಿಮನ್] ಕೆಂಪು, ಕೆಂಪುತನ

ಅರುಣಿಯ. ವಿ: [ಅರುಣಿತ] ಕೆಂಪು ಬಣ್ಣ

ಅರುಣುತ್ತರವಡಿಂಸಗ. ನ: [ಅರುಣೋತ್ತರಾವತಂಸಕ] ಈ ಹೆಸರಿನ ಒಂದು ದೇವ-ವಿಮಾನ (ಸಮ)

ಅರುಣೋದಯ. **ಪು:** [ಅರುಣೋದಕ]ಸಮುದ್ರ-ವಿಶೇಷ

ಅರುಣೋದಯ. **ಪು:** [ಅರುಣೋದಯ] ಸೂರ್ಯೋದಯಕ್ಕೆ ಪೂರ್ವದಲ್ಲಿ ಆಗುವ ಅರುಣೋದಯ, ಸಮುದ್ರ

ಅರುಣೋವವಾಯ. **ಪು:** [ಅರುಣೋಪಪಾತ] ಗ್ರಂಥ-ವಿಶೇಷದ ಹೆಸರು(ಣಂದಿ)

ಅರುಯ. ವಿ: [ಅರುಷ್] ವ್ರಣ, ಗಾಯ (ಸೂಅ)

ಅರುಯ. ವಿ: [ಅರುಜ್] ರೋಗವಿಲ್ಲದವನು, ನಿರೋಗಿ (ಸಮ)

ಅರುಹ. **'ಅರಹ=ಅರ್ಹತ್'** ಶಬ್ದವನ್ನು ನೋಡುವುದು

ಅರುಹ. ವಿ: [ಅರುಹ] ಹುಟ್ಟು ಇಲ್ಲದ, ಮುಕ್ತ ಆತ್ಮ, ಜಿನದೇವ (ಪಉಮ)

ಅರುಹ. **'ಅರಿಹ=ಅರ್ಹ್** ಶಬ್ದವನ್ನು ನೋಡುವುದು-'ಅರುಹಸಿ'

ಅರುಹ. ವಿ: [ಅರ್ಹ] ಯೋಗ್ಯ (ಉತ್ತರ)

ಅರುಹಂತ. **'ಅರಹಂತ=ಅರ್ಹತ್'** ಶಬ್ದವನ್ನು ನೋಡುವುದು

ಅರುಹಂತ. ವಿ: [ಅರೋಹತ್] ಬೆಳೆಯುತ್ತಿಲ್ಲದ, ಹುಟ್ಟದೆ ಇರುವ (ಭಗ)

ಅರೂವ. ವಿ: [ಅರೂಪ] ರೂಪವಿಲ್ಲದ, ಅಮೂರ್ತ, ಆಕಾರ-ರಹಿತ(ಪಉಮ)

ಅರೂವಿ. ವಿ: [ಅರೂಪಿನ್] ಮೇಲಿನ ಶಬ್ದವನ್ನು ನೋಡುವುದು(ಠಾ)

ಅರೇ. ಅ: [ಅರೇ] ಸಂಬೋಧನೆ, ಸಂಭಾಷಣೆ ಮತ್ತು ರತಿಕಲಹ ಸೂಚಕ ಅವ್ಯಯ (ಹೇ)

ಅರೇ. ಅ: [ಅರೇ] ಆಕ್ಷೇಪ, ವಿಸ್ಮಯ, ಆಶ್ಚರ್ಯ, ಪರಿಹಾಸ, ನಗೆ, -ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ.

ಅರೋಅ. ಅಕ: [ಉತ್+ಲಸ್] ಉಲ್ಲಾಸ ಹೊಂದು, ವಿಕಸಿತವಾಗು –**'ಅರೂಅಇ'**

ಅರೋಅಅ. ಪು: [ಅರೋಚಕ] ಒಂದು ರೋಗ, ಆಹಾರದ ಬಗ್ಗೆ ಅರುಚಿ ಹುಟ್ಟಿಸುವ ಅಜೀರ್ಣರೋಗ

ಅರೋಇ. ವಿ: [ಅರೋಚಿನ್] ಅರುಚಿ ರೋಗವುಳ್ಳವನು, ರುಚಿಯಿಲ್ಲದ (ಗೋಯ)

ಅರೋಗ. ವಿ: [ಅರೋಗ] ರೋಗವಿಲ್ಲದಿರುವುದು (ಭಗ) –**ಯಾ.**ಸ್ತ್ರೀ: [–ತಾ] ರೋಗ ವಿಲ್ಲದಿರುವುದು, ನೀರೋಗ(ಉಪ)

ಅರೊಗ್ಗ.} **'ಆರೋಯ= ಆರೋಗ್ಯ'** ಶಬ್ದವನ್ನು
ಅರೋಯ}. ನೋಡುವುದು

ಅರೋಗಿ. ವಿ: [ಅರೋಗಿನ್] ರೋಗವಿಲ್ಲದವನು, ಆರೋಗ್ಯದಿಂದ ಕೂಡಿದ. –**ಯಾ.** ಸ್ತ್ರೀ: [–ತಾ] ಆರೋಗ್ಯದಿಂದಿರುವುದು(ಮಹಾ)

ಅರೋಸ. ವಿ: [ಅರೋಷ] ಕೋಪವಿಲ್ಲದಿರುವುದು, ಒಂದು ಮ್ಲೇಚ್ಛ ದೇಶ, ಮತ್ತು ಅದರಲ್ಲಿ ವಾಸ ಮಾಡುತ್ತಿರುವ ಮ್ಲೇಚ್ಛಜಾತಿ(ಪಣ್ಣ)

ಅಲ. ನ: [ಅಲ] ಚೇಳಿನ ಕೊಂಡಿಯ ಮುಳ್ಳು, ಅಲಾ–ದೇವಿಯ ಒಂದು ಸಿಂಹಾಸನ(ಣಾಯಾ) ಅರಿಸಿನ ಬಣ್ಣ, ವಿ: ಸಮರ್ಥ, –**ಪಟ್ಟ.** ನ: [–ಪಟ್ಟ] ಚೇಳಿನ ಕೊಂಡಿಯಂಥ ಒಂದು ಆಯುಧ(ವಿಪಾ)

–ಅಲ. **'ತಲ'** ಶಬ್ದವನ್ನು ನೋಡುವುದು(ತಾ)

ಅಲಂ. ಅ: [ಅಲಂ] ಅಲಂಕಾರ, ಒಡವೆ

ಅಲಂ. ಅ: [ಅಲಮ್] ಪರ್ಯಾಪ್ತ, ಸಾಕು, ತಡೆ, ನಿಷೇಧ, ಹೆಚ್ಚಾಗಿ, ಮತ್ತೆ ಮತ್ತೆ –ಈ ಅರ್ಥಗಳನ್ನು ಸೂಚಿಸುವ ಅವ್ಯಯ(ಸುರ) ಭೂಷಣ, ಅಲಂಕಾರ, ಒಡವೆ

ಅಲಂಕರ. ಸಕ: [ಅಲಂ+ಕೃ] ಅಲಂಕರಿಸು, ಸಜ್ಜುಗೊಳಿಸು. –**'ಅಲಂಕರೇತಿ, ಅಲಂಕರಂತ** (ಮಾಲ)

ಅಲಂಕರಣ. ನ: [ಅಲಂಕರಣ] ಭೂಷಣ, ಒಡವೆ, ಶೃಂಗಾರವಿ: ಶೋಭೆಯನ್ನುಂಟುಮಾಡುವ (ವಿಕ್ರ)

ಅಲಂಕರಿಯ. ವಿ: [ಅಲಂಕೃತ] ಅಲಂಕರಿಸಲ್ಪಟ್ಟ, ಶೃಂಗರಿಸಲ್ಪಟ್ಟ (ಸುಪಾ)

ಅಲಂಕಾರ. ಪು: [ಅಲಂಕಾರ] ಭೂಷಣ, ಒಡವೆ, ಶೃಂಗಾರ(ಔಪ), –**ಸಹಾ** ಸ್ತ್ರೀ: [–**ಸಭಾ**] ಶೃಂಗಾರಭವನ, ಒಡವೆಗಳ ಮನೆ(ಇಕ), ಅಲಂಕಾರಶಾಸ್ತ್ರ

ಅಲಂಕಾರಿಯ. ಪು: [ಅಲಂಕಾರಿಕ] ನಾಪಿತ, ಕ್ಷೌರಿಕ, –**ಕಮ್ಮ.** ನ: [–ಕರ್ಮನ್] ಕ್ಷೌರದ ಕೆಲಸ, ಹಜಾಮತ್, –**ಸಹಾ.** ಸ್ತ್ರೀ: [–**ಸಭಾ**] ಕ್ಷೌರ ಮಾಡುವ ಸ್ಥಳ(ಣಾಯಾ)

ಅಲಂಕಿಯ. ವಿ: [ಅಲಂಕೃತ] ಅಲಂಕರಿಸಲ್ಪಟ್ಟ, ಶೃಂಗರಿಸಲ್ಪಟ್ಟ(ಕಪ್ಪ), ನ: ಸಂಗೀತದ ಒಂದು ಉಪಕರಣ

ಅಲಂಕುಣ. **'ಅಲಂಕರ'** ಶಬ್ದವನ್ನು ನೋಡುವುದು (ತಾ)– **'ಅಲಂಕುಣಂತಿ'**

ಅಲಂಘ. ವಿ: [ಅಲಂಘ್ಯ] ದಾಟಲಾಗದ, ಮೀರಲಾಗದ, ಉಲ್ಲಂಘಿಸಲಾಗದ, ಅಸಾಧ್ಯ(ಉಪ)

ಅಲಂಘಣಿಯ}. ವಿ: [ಅಲಂಘನೀಯ] ಮೀರಲು
ಅಲಂಘಣೀಯ}. ಯೋಗ್ಯವಲ್ಲದ, ಅತಿಕ್ರಮಿಸಲಾಗದ (ಸುಪಾ)

ಅಲಂಪ. ಪು: [ದೇ] ಕೋಳಿ, ಕುಕ್ಕುಟ(ದೇ)

ಅಲಂಬುಸಾ. ಸ್ತ್ರೀ: [ಅಲಂಬುಷಾ] ಒಬ್ಬ ದಿಗ್ವನಿತೆಯ ಹೆಸರು, ಮಂಗರವಳ್ಳಿ(ಪಾಅ), ರಾವಣನ ಮಂತ್ರಿ ಬೆರಳುಗಳುಳ್ಳ ಅಂಗೈ, ವಮನ, ವಾಂತಿ

ಅಲಂಭಿ.ಸ್ತ್ರೀ: [ಅಲಾಭ]ಅಪ್ರಾಪ್ತಿ, ದೊರೆಯದಿರುವುದು

ಅಲಕಾ. ಸ್ತ್ರೀ: [ಅಲಕಾ] ಪ್ರತಿವಾಸುದೇವನ ರಾಜಧಾನಿ, **'ಅಲಯಾ'** ಶಬ್ದವನ್ನು ನೋಡುವುದು(ತಾ)

ಅಲಕ್ಖ. ಪು: [ಅಲಕ್ಷ] ಮಹಾವೀರ ತೀರ್ಥಂಕರರಿಂದ ದೀಕ್ಷೆ ತೆಗೆದುಕೊಂಡು ಮುಕ್ತಿ ಹೊಂದಿದ್ದ ಒಬ್ಬ ರಾಜ. ನ: 'ಅಂತಗಡದಸಾ' ಸೂತ್ರದ ಒಂದು ಅಧ್ಯಯನದ ಹೆಸರು(ಅಂತ)

ಅಲಕ್ಖ. ವಿ: [ಅಲಕ್ಷ್ಯ] ಲಕ್ಷ್ಯಕ್ಕೆ ಬಾರದ, ನೋಡಲಾಗದ, ಯೋಗ್ಯವಲ್ಲದ, ಉದಾಸೀನವಾದ್ದು, ಕಪಟವಿಲ್ಲದ

ಅಲಕ್ಖಮಾಣ. ವಿ: [ಅಲಕ್ಷ್ಯಮಾಣ] ಗುರುತಿಸಲಾಗದ, ಗುಪ್ತ(ಉಪ)

ಅಲಕ್ಖಿಯ. ವಿ: [ಅಲಕ್ಷಿತ] ಅಜ್ಞಾತ, ಅಪರಿಚಿತ, ಗುರುತಿಸಲ್ಪಡದ(ಸುರ)

ಅಲಗ. **'ಅಲಯ= ಅಲಕ'** ಶಬ್ದವನ್ನು ನೋಡುವುದು

ಅಲಗಾ. 'ಅಲಯಾ' ಶಬ್ದವನ್ನು ನೋಡುವುದು
ಅಲಗ್ಗ. ನ: [ದೇ] ಸುಳ್ಳು ದೋಷಾರೋಪ ಮಾಡುವುದು(ದೇ)
ಅಲಚಪುರ. ನ: [ಅಚಲಪುರ] ಒಂದು ನಗರ (ಕುಮಾ)
ಅಲಜ್ಜ. ವಿ: [ಅಲಜ್ಜ] ನಿರ್ಲಜ್ಜ, ನಾಚಿಕೆಯಿಲ್ಲದ, ಲಜ್ಜೆಗೇಡಿ(ಪಣ್ಣ)
ಅಲಜ್ಜಿರ. ವಿ: [ಅಲಜ್ಜಾಲು] ಮೇಲಿನ ಶಬ್ದವನ್ನು ನೋಡುವುದು(ಗಾ)
ಅಲಟ್ಟಪಲ್ಲಟ್ಟ. ನ: [ದೇ] ಭಾಗಶಃ ಬದಲಾವಣೆ(ದೇ)
ಅಲತ್ತ. ಪು: [ಅಲಕ್ತ] ಅರಗು, ಒಂದು ಮರದ ರಸ, ಅಲತಿಗೆ ರಸ. ಸ್ತ್ರೀಯರು ಕಾಲು ಕೈಗಳಿಗೆ ಹಚ್ಚಿಕೊಳ್ಳುವ ಬಣ್ಣ (ಅನು)
ಅಲತ್ತಯ. ಪು: [ಅಲಕ್ತಕ] ಮೇಲಿನ ಶಬ್ದವನ್ನು ನೋಡುವುದು, ವಿ: ಅಲತಿಗೆ ರಸ ಬಳಿದ
-ಅಲಘೋಯ. 'ಕಲಘೋಯ' ಶಬ್ದವನ್ನು ನೋಡುವುದು
ಅಲಮಂಜುಲ. ವಿ: [ದೇ] ಸೋಮಾರಿ,
ಅಲಮಂಥು. ವಿ: [ಅಲಮಸ್ತು] ಸಮರ್ಥ, ನಿಷೇಧಕ, ನಿವಾರಕ (ತಾ)
ಅಲಮಲ. ಪು: [ದೇ] ತೊಂಡುದನ, ತುಡುಗು ದನ, ನಿಯಂತ್ರಣಕ್ಕೆ ಸಿಗದ ಎತ್ತು
ಅಲಮಲವಸಹ. ಪು: [ದೇ] ಉನ್ಮತ್ತ ಎತ್ತು
ಅಲಯ. ನ: [ದೇ] ಹವಳ
ಅಲಯ. ಪು: [ಅಲಕ] ಚೇಳಿನಮುಳ್ಳು, ಚೇಳಿನ ಕೊಂಡಿ(ಬಿಪಾ), ಮುಂಗುರುಳು, ಗುಂಗುರು ಕೂದಲು, ಮೈಗೆ ಹಚ್ಚಿಕೊಳ್ಳುವ ಸುಗಂಧ ಚೂರ್ಣ, ಹುಚ್ಚುನಾಯಿ
ಅಲಯಾ. ಸ್ತ್ರೀ: [ಅಲಕಾ] ಕುಬೇರನ ನಗರ(ಪಾಅ), 'ಅಲಕಾ' ಶಬ್ದವನ್ನು ನೋಡುವುದು
ಅಲವ. ವಿ: [ಅಲಪ] ಮಾತನಾಡದವನು, ಮೌನಿ
ಅಲವಲವಸಹ. ಪು: [ದೇ] ತೊಂಡುದನ(ಷಡ್)
ಅಲಸ. ವಿ: [ಅಲಸ] ಸೋಮಾರಿ, ಮಂದ, ಆಯಾಸಗೊಂಡ, ಕ್ಷುದ್ರಕೀಟ, ಭೂನಾಗ; ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಹಾವಿನಂಥ ಕೆಂಬಣ್ಣದ ಜಂತು(ಜೀ)
ಅಲಸ. ವಿ: [ದೇ] ಮಧುರ ಕಂಠವುಳ್ಳ, ಕುಂಕುಮ ಬಣ್ಣ ಬಳಿದ, ನ: ಮೇಣ(ದೇ)
-ಅಲಸ. 'ಕಲಸ' ಶಬ್ದವನ್ನು ನೋಡುವುದು
ಅಲಸಗ}. ಪು: [ಅಲಸಕ] ವಾಂತಿ-ಭೇದಿ ರೋಗ
ಅಲಸಯ}. (ವಿಷೂಚಿಕಾ), ಸೂಜಿ(ಆಚಾ)
ಅಲಸಾಇಅ. ವಿ: [ಅಲಸಾಯಿತ] ಸೋಮಾರಿಯ ಹಾಗೆ ವರ್ತಿಸುವವನು, ಮಂದ(ಗಾ)
ಅಲಸಾಯ. ಅಕ: [ಅಲಸಾಯ್] ಸೋಮಾರಿಯಾಗು, ಸೋಮಾರಿಯ ಹಾಗೆ ವರ್ತಿಸು(ಪಿ) ವ.ಕೃ- **'ಅಲಸಾಯಂತ'**
ಅಲಸೀ. 'ಅಯಸೀ' ಶಬ್ದವನ್ನು ನೋಡುವುದು
ಅಲಾ. ಸ್ತ್ರೀ: [ಅಲಾ] ಈ ಹೆಸರಿನ ಒಬ್ಬದೇವಿ, ಒಬ್ಬ ಇಂದ್ರಾಣಿಯ ಹೆಸರು(ಣಾಯಾ), **-ವಡಿಂಸಗ.** ನ: [-ವತಂಸಕ] ಅಲಾದೇವಿಯ ಭವನ,
-ಅಲಾ. 'ಕಲಾ' ಶಬ್ದವನ್ನು ನೋಡುವುದು
ಅಲಾಉ. ನ: [ಅಲಾಬೂ] ಸೋರೆಕಾಯಿ
ಅಲಾಊ. ಸ್ತ್ರೀ: [ಅಲಾಬೂ] ಸೋರೆಬಳ್ಳಿ
ಅಲಾಯ.} ನ: [ಅಲಾತ] ಅರ್ಧ ಉರಿದ ಕಟ್ಟಿಗೆ, ಕೊಳ್ಳಿ, ಇದ್ದಿಲು
ಅಲಾವಣೀ. ಸ್ತ್ರೀ:[ಅಲಾಬುವೀಣಾ]ಒಂದು ವಿಶೇಷವೀಣೆ
ಅಲಾವು. 'ಅಲಾಉ' ಶಬ್ದವನ್ನು ನೋಡುವುದು
ಅಲಾವೂ. 'ಅಲಾಊ' ಶಬ್ದವನ್ನು ನೋಡುವುದು
ಅಲಾಹ. ಪು: [ಅಲಾಭ] ನಷ್ಟ, ಲಾಭವಾಗದಿರುವುದು
ಅಲಾಹಿ. 'ಅಲಂ' ಶಬ್ದವನ್ನು ನೋಡುವುದು
ಅಲಿ. ಪು: [ಅಲಿ] ಭ್ರಮರ, ದುಂಬಿ, **-ಉಲ.** ನ: [-ಕುಲ] ದುಂಬಿಗಳ ಸಮೂಹ, ಗುಂಪು, **-ವಿರಯ.** ನ: [-ವಿರುತ] ದುಂಬಿಗಳ ಗುಂಜಾರವ(ಪಾಅ)
ಅಲಿ. ಪುಂಸ್ತ್ರೀ: [ಅಲಿ] ವೃಶ್ಚಿಕ ರಾಶಿ
ಅಲಿಅಲ್ಲೀ. ಸ್ತ್ರೀ: [ದೇ] ಕಸ್ತೂರಿ, ಹುಲಿ(ದೇ)
ಅಲಿಅ. ಸ್ತ್ರೀ; [ದೇ] ಸಖಿ(ದೇ)
ಅಲಿಆರ. ನ: [ದೇ] ಹಾಲು(ದೇ)
ಅಲಿಂಜರ. ನ: [ಅಲಿಂಜರ] ಕುಂಭ, ಮಣ್ಣಿನ ಗಡಿಗೆ, ಹೂಜಿ(ತಾ) ಕುಂಡ, ಪಾತ್ರೆ(ದೇ)
ಅಲಿಂಜರ. ಪು: [ಅಲಿಂಜರಕ] ಗಡಿಗೆ , ನೀರಿನ ಪಾತ್ರೆ, ಬಣ್ಣದ ಕುಂಡ
ಅಲಿಂದ. ನ: [ಅಲಿಂದ] ಒಂದು ಪಾತ್ರೆ, ಒಂದು ಬಗೆಯ ನೀರಿನ ಪಾತ್ರೆ(ಓಘ)
ಅಲಿಂದಗ. ಪು: [ಅಲಿಂದಕ] ಮನೆಯ ಬಾಗಿಲ ಮುಂದಿನ ಜಗುಲಿ, ಮನೆಯ ಮುಂಭಾಗದಲ್ಲಿನ

ಚಚ್ಚೌಕವಾದ ಒಂದು ಪ್ರದೇಶ, ಮನೆಯ ಹೊರಗಿನ ಅಗ್ರಭಾಗ(ಬೃಹ)

ಅಲಿಂದಯ. ಪು: [ಆಲಿಂದಕ] ಧಾನ್ಯವನ್ನು ಹಾಕಿಡುವ ಪಾತ್ರೆ

ಅಲಿಣ. ಪು: [ದೇ] ಚೇಳು(ದೇ)

ಅಲಿಣೀ. ಸ್ತರೀ: [ಅಲಿನೀ] ಹೆಣ್ಣುದುಂಬಿ(ಕುಮಾ)

ಅಲಿತ್ತ. ನ: [ಅರಿತ್ರ] ಹಡಗುಗಳನ್ನು ನಡೆಸುವ ದೊಡ್ಡಗಳು, ಹುಟ್ಟು(ಆಚಾ)

ಅಲಿಯ. ನ: [ಅಲಿಕ] ತಲೆಬುರುಡೆ, ಕೆನ್ನೆ(ಪಾಅ)

ಅಲಿಯ. ನ: [ಅಲೀಕ] ಮಿಥ್ಯೆ, ಸುಳ್ಳು, ವಿ: ಅಸತ್ಯ ವಚನ, ನಿಷ್ಫಲ, ನಿರರ್ಥಕ(ಪಣ್ಣ), –ವಾಇ. ವಿ: [–ವಾದಿನ್] ಅಸತ್ಯವಾದಿ(ಪಉಮ)

ಅಲಿಲ್ಲ. ಸಕ: [**ಕಥಯ್**] ಹೇಳು, –'ಅಲಿಲ್ಲಹ' (ಪಿಂಗ)

ಅಲಿಲ್ಲಹ. ನ: [ದೇ] ಒಂದು ಛಂದೋ–ವಿಶೇಷದ ಹೆಸರು, ವಿ: ಅಪ್ರಯೋಜಕ, ನಿಯಮರಹಿತ (ಪಿಂಗ)

ಅಲಿಲ್ಲಾ. ಸ್ತ್ರೀ:[ಅಲಿಲ್ಲಾ] ಈ ಹೆಸರಿನ ಒಂದು ಛಂದಸ್ಸು

ಅಲೀಗ}. **'ಅಲಿಯ=ಅಲೀಕ'** ಶಬ್ದವನ್ನು
ಅಲೀಯ}. ನೋಡುವುದು

ಅಲೀವಹೂ.ಸ್ತ್ರೀ:ಅಲೀವಧೂ] ಹೆಣ್ಣುದುಂಬಿ(ಕುಮಾ)

ಅಲೀಸಅ. ಪು: [ದೇ] ತರಕಾರಿಯ ಒಂದು ಮರ

ಅಲುಕ್ಖಿ. ವಿ: [ಅರುಕ್ಷಿನ್] ಕೋಮಲ (ಭಗ)

ಅಲೇಸಿ. ವಿ: [**ಅಲೇಶಿಯನ್**] ತುಂಡು ಇಲ್ಲದ(ಲೇಶ್ಯಾ ರಹಿತ?), ಮುಕ್ತ ಆತ್ಮ (ಠಾ)

ಅಲೋಗ. ಪು: [**ಅಲೋಕ**] ಜೀವ–ಪುದ್ಗಲ ಇತ್ಯಾದಿಗಳಿಲ್ಲದ ಆಕಾಶ(ಭಗ), ಪ್ರಳಯ, ಜಗತ್ತಿನ ನಾಶ, ಪಾತಾಳ ಲೋಕ, ಆಧ್ಯಾತ್ಮಿಕ ಪ್ರಪಂಚ, ಕಣ್ಣಿಗೆ ಕಾಣದ

ಅಲೋಣಿಯ. ವಿ: [**ಅಲವಣಿಕ**] ಲವಣವಿಲ್ಲದ, ಉಪ್ಪಿಲ್ಲದ(ಮಹಾ)

ಅಲೋಯ. 'ಅಲೋಗ' ಶಬ್ದವನ್ನು ನೋಡುವುದು

ಅಲೋಭ. ಪು: [**ಅಲೋಭ**] ಲೋಭವಲ್ಲದಿರುವುದು, ಸಂತೋಷ, ಲೋಭಿಯಲ್ಲದ, ಸಂತೋಷಿ

ಅಲೋಲ. ವಿ: [**ಅಲೋಲ**] ಲಂಪಟನಲ್ಲದ, ಲೋಭವಿಲ್ಲದ(ದಸ)

ಅಲೋಹ.'ಅಲೋಭ' ಶಬ್ದವನ್ನು ನೋಡುವುದು

ಅಲ್ಲ. ನ: [ದೇ] ದಿನ, ದಿವಸ(ದೇ)

ಅಲ್ಲ. 'ಅದ್ದ' ಶಬ್ದವನ್ನು ನೋಡುವುದು

ಅಲ್ಲ. ಅಕ: [**ನಮ್**] ನಮಸ್ಕರಿಸು, ತಲೆಬಾಗಿಸು(ಸೇ)

ಅಲ್ಲಈ. ಸ್ತ್ರೀ: [**ಆರ್ದ್ರಕೀ**] ಒಂದು ಬಳ್ಳಿ, ಹಸಿ ಶುಂಠಿ ಬಳ್ಳಿ (ಪಣಣಾ)

ಅಲ್ಲಗ 'ಅಲ್ಲಯ=ಆರ್ದ್ರಕ' ಶಬ್ದವನ್ನು ನೋಡುವುದು

ಅಲ್ಲತ್ಥ. ಸಕ: [**ಉತ್+ಕ್ಷಿಪ್**] ಮೇಲಕ್ಕೆ ಎಸೆ, **'ಅಲ್ಲತ್ಥಇ'**

ಅಲ್ಲತ್ಥ. ನ: [ದೇ] ನೀರಿನಿಂದ ಒದ್ದೆಯಾದ, ಒದ್ದೆಯಾದ ಬೀಸಣಿಗೆ, ಕೇಯೂರ–ತೋಳಿನ ಒಂದು ಆಭರಣ(ದೇ)

ಅಲ್ಲತ್ಥಿಅ. ವಿ: [**ಉತ್‌ಕ್ಷಿಪ್ತ**] ಮೇಲಕ್ಕೆ ಎಸೆಯಲ್ಪಟ್ಟ, ಮೇಲಕ್ಕೆ ಹಾರಿಸಲ್ಪಟ್ಟ(ಕುಮಾ) ಕಿತ್ತುಹಾಕಲ್ಪಟ್ಟ

ಅಲ್ಲಯ. ನ: [**ಆರ್ದ್ರಕ**] ಹಸಿಶುಂಠಿ(ಜೀ), **–ತಿಯ. ನ:** [**–ತ್ರಿಕ**] ಹಸಿಶುಂಠಿ

ಅಲ್ಲಯ. ನ: [ದೇ] ಪರಿಚಿತ, ತಿಳಿದಿರುವ(ದೇ)

ಅಲ್ಲಯ. ಪು: [**ಅಲ್ಲಕ**] ಈ ಹೆಸರಿನ ವಿಖ್ಯಾತ ಜೈನ ಮುನಿ ಮತ್ತು ಗ್ರಂಥಕರ್ತೃ ಉದ್ಯೋತನ ಸೂರಿ ಉಪಾಧ್ಯಾಯನಾಗಿದ್ದಾಗಿನ ಹೆಸರು(ಸುರ)

ಅಲ್ಲಲ್ಲ. ಪು: [ದೇ] ಮಯೂರ, ನವಿಲು

ಅಲ್ಲವಿಯ. (ಅಪ) 'ಆಲತ್ತ=ಆಲಪಿತ' ಶಬ್ದವನ್ನು ನೋಡುವುದು

ಅಲ್ಲಾ. ಸ್ತ್ರೀ: [ದೇ] ತಾಯಿ, ಮಾತೆ(ದೇ)

ಅಲ್ಲಿ}. **'ಅಲ್ಲಿ'** ಶಬ್ದವನ್ನು ನೋಡುವುದು. **–'ಅಲ್ಲಿಇ'**
ಅಲ್ಲಿಅ}. ವ.ಕೃ– **ಅಲ್ಲಿಂತ**

ಅಲ್ಲಿಅ. ಸಕ: [**ಉಪ+ಸೃಪ್**] ಹತ್ತಿರ ಹೋಗು. **–'ಅಲ್ಲಿಅಇ'**. ವ.ಕೃ–**ಅಲ್ಲಿಂತ**(ಕುಮಾ)

ಅಲ್ಲಿಅ. ವಿ: [**ಆರ್ದ್ರಿತ**] ತೊಯ್ದಿರುವ, ಒದ್ದೆಮಾಡಲ್ಪಟ್ಟ

ಅಲ್ಲಿಯಾವಣ. ನ: [**ಆಲಾಯನ**] ಆಲಿಂಗಿಸಿ ಕೊಳ್ಳುವುದು, ಅಪ್ಪಿಕೊಳ್ಳುವುದು

ಅಲ್ಲಿಲ್ಲ. ಪು: [ದೇ] ದುಂಬಿ

ಅಲ್ಲಿವ. ಸಕ: [**ಅರ್ಪಯ್**] ಅರ್ಪಿಸು, ದಾನಮಾಡು, ಇರಿಸು. –ಅಲ್ಲಿವಇ'(ಹೇ)

ಅಲ್ಲೀ.} **ಸಕ:** [**ಆ+ಲೀ**] ಬರು, ಪ್ರವೇಶಿಸು, ಜೋಡಿಸು,
ಅಲ್ಲೀಅ.} ಆಶ್ರಯಿಸು, ಆಲಿಂಗಿಸು ಅಕ: ಹೊಂದಿಕೊಳ್ಳು **–'ಅಲ್ಲೀಅಇ'**

ಅಲ್ಲೀಣ. ವಿ: [**ಆಲೀನ**] ಆಲಿಂಗಿಸಲ್ಪಟ್ಟ,, ಬಂದ, ಪ್ರವೇಶಿಸಿದ, ಹೊಂದಿಕೊಂಡ, ಸೇರಿಸಲ್ಪಟ್ಟ (ಹೇ), ಆಶ್ರಯಪಡೆದ, ತಲ್ಲೀನವಾದ, ತೊಡಗಿದ(ವವ)

ಅಲ್ಲೇಸ. ವಿ: [ಅಲೇಶ್ಯ] ಚೂರು ಇಲ್ಲದ(ಲೇಶ್ಯಾ–ರಹಿತ)
ಅಲ್ಲೋಗ. 'ಅಲೋಗ' ಶಬ್ದವನ್ನು ನೋಡುವುದು
ಅಲ್ಹಾದ. ಪು: [ಆಹ್ಲಾದ] ಸಂತಸ, ಪ್ರಮೋದ, ಆನಂದ (ಪ್ರಾಪ)
ಅವ. ಅ: [ಅಪ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ವಿರೋಧ,– 'ಅವಕಯ,' 'ಅವಂಗುಯ,' ಹಿಂಜರಿಕೆ,– 'ಅವಕ್ಕಮಣ' 'ಕೆಟ್ಟತನ–'ಅವಮಗ್ಗ', 'ಅವಸದ್ದ', ನ್ಯೂನತೆ,– 'ಅವಡ್ಢ,', ರಹಿತತೆ, ಅಥವಾ ವಿಯೋಗ–'ಅವವಾಣ' ಹೊರತಾಗಿರುವುದು?– 'ಅವಕ್ಕಮಣ'
ಅವ. ಅ: [ಅವ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ನಿಮ್ನತೆ(=ಕೆಳಗಿನ)–'ಅವಜಾಣಣಾ', ಹೀನದೆಶೆ– 'ಅವಚುಲಿ', ತಿರಸ್ಕಾರ, ಅನಾದರ– 'ಅವಣಂತ', ಕೇಡು, ದೋಷ –'ಅವಗುಣ', ಗಮನ, ಅನುಭವ, ಹಾನಿ, ಹ್ರಾಸ–'ಅವಕ್ಕಾಸ', ಅಭಾವ–'ಅವಲದ್ಧಿ', ಮರ್ಯಾದೆ(ವಿಸೇ) ನಿರರ್ಥಕತೆ–'ಅವಪುದ್ದ', 'ಅವಗಲ್ಲ'
ಅವ. ಸಕ: [ಅವ್] ರಕ್ಷಿಸು– 'ಅವಂತು ಮುಣಿಯೋ' ಹೋಗು, ಬಯಸು, ತಿಳಿ, ಪ್ರವೇಶಿಸು, ಕೇಳು, ಯಾಚಿಸು, ಮಾಡು, ಇಷ್ಟಪಡು, ಪಡೆ, ಆಲಿಂಗಿಸು, ಹೊಡೆ, ಸುಡು, ಅಕ: ಪ್ರೀತಿಸು, ತೃಪ್ತನಾಗು, ಪ್ರಕಾಶಿಸು, ವೃದ್ಧಿಸು
ಅವ. ಪು: [ಅವ] ಶಬ್ದ, ಸದ್ದು, ಸಪ್ಪಳ, ದನಿ(ಶ್ರಾ) ಸಂತಸ
ಅವಲಕ್ಖ. ಸಕ: [ದೃಶ್] ನೋಡು, –'ಅವಲಕ್ಖಇ' (ಹೇ)
ಅವಲಕ್ಖಿಅ. ನ: [ದೇ]ಕ್ಷೌರ ಮಾಡಲಾದ ಮುಖ(ದೇ)
ಅವಲಚ್ಛ. ನ: [ದೇ] ನರ್ತಕನ ವಸ್ತ್ರ(ಕಕ್ಷಾ–ವಸ್ತ್ರ)
ಅವಲಚ್ಛ. ಅಕ: [ಹ್ಲಾದ್] ಸಂತೋಷಪಡು, ಸಂತಸ ತಾಳು(ಹೇ)
ಅವಲಚ್ಛ. ಸಕ: [ಹ್ಲಾದಯ್] ಸಂತೋಷಪಡಿಸು, –'ಅವಲಚ್ಛಇ'
ಅವಲಚ್ಛಿಅ. ವಿ: [ಹ್ಲಾದಿತ] ಸಂತುಷ್ಟನಾದ, ಸಂತಸಹೊಂದಿದ, ಹರ್ಷಿತ(ಕುಮಾ)
ಅವಲಜ್ಝ.ಸಕ:[ದೃಶ್]ನೋಡು–'ಅವಭಿಅಜ್ಝಇ' (ಷಡ್)
ಅವಲಣಿಅ. ವಿ: [ದೇ] ಅಸಂಯುಕ್ತ, ಒಟ್ಟುಗೂಡಿಲ್ಲದ, ಸೇರಿಲ್ಲದ(ದೇ)
ಅವಲಣ್ಣ. ಪು: [ದೇ] ಒರಳು, ಗುಗ್ಗುಳ
ಅವಲತ್ತ. ವಿ: [ಅಪವೃತ್ತ] ಜಾರಿಬಿದ್ದ, ಕೆಳಗೆ ಸೋರಿದ, ಕೆಳಮುಖವಾದ(ಸೇ)
ಅವಲಆಸ.ಸಕ:[ದೃಶ್]ನೋಡು,–'ಅವಲಆಸಇ'(ಕುಮಾ)
ಅವಇ.ವಿ:[ಅವ್ರತಿನ್] ವ್ರತವಿಲ್ಲದ, ಹತೋಟಿಯಿಲ್ಲದ, ವ್ರತ–ರಹಿತ(ಬೃಹ)
ಅವಇಣ್ಣ ವಿ: [ಅವತೀರ್ಣ] ಕೆಳಕ್ಕೆ ಇಳಿದ, ಕೆಳಕ್ಕೆ ಬಂದಿರುವ, ಅವತರಿಸಿರುವ, ಜನ್ಮತಾಳಿರುವ
ಅವಇದ(ಶೌ). ವಿ: [ಅವಚಿತ] ಒಟ್ಟುಗೂಡಿಸಲಾದ, ಕೈಯಿಂದ ಕುಯ್ಯಲ್ಪಟ್ಟ, ಸಂಗ್ರಹಿಸಲ್ಪಟ್ಟ(ಅಭಿ)
ಅವಇದ(ಶೌ) ವಿ: [ಅಪಕೃತ] ಅಪಕಾರ ಮಾಡಲ್ಪಟ್ಟವನು, ನ: ಅಪಕಾರ, ಅಹಿತ
ಅವಇಣ್ಣ 'ಅವಜಣ್ಣ' ಶಬ್ದವನ್ನು ನೋಡುವುದು
ಅವಉಜ್ಜ. ಸಕ: [ಅವಕುಬ್ಜ್] ಕೆಳಕ್ಕೆ ಬಾಗುವುದು
ಅವಉಜ್ಝ. ಸಕ: [ಅಪ+ಉಜ್ಝ್] ಬಿಟ್ಟುಬಿಡು, ತ್ಯಜಿಸು
ಅವಉಜ್ಝ–. 'ಅವವಹ' ಶಬ್ದವನ್ನು ನೋಡುವುದು
ಅವಉಡಗ}. 'ಅವಓಡಗ' ಶಬ್ದವನ್ನು ನೋಡುವುದು
ಅವಉಡಯ}. (ಣಾಯಾ)
ಅವಉಂಠಣ. ನ: [ಅವಗುಂಠನ] ಮುಖಪರದೆ, ಮುಸುಕು, ತೆರೆ(ಚಾರು) ಕಸಬರಿಕೆ
ಅವಊಢ. ವಿ: [ಅವಗೂಢ] ಆಲಿಂಗಿತ(ಹೇ)
ಅವಊಸಣ. ನ: [ಅಪವಸನ] ತಪಶ್ಚರ್ಯೆ
ಅಪಊಸಣ. ನ: [ಅಪಜೋಷಣ] ಮೇಲಿನ ಶಬ್ದವನ್ನು ನೋಡುವುದು
ಅಪಊಹಣ. ನ: [ಅಪಗೂಹನ] ಆಲಿಂಗನ(ಗಾ)
ಅವಏಡ. ಪು: [ಅವಏಜ] ತಾಪಿಕಾ–ಹಸ್ತ, ಒಂದು ಪಾತ್ರೆ(ಣಾಯಾ)
ಅವಏಸ. ಪು: [ಅಪದೇಶ] ನೆಪ, ಛಲ(ಪಾಅ), ಕಪಟ, ವಂದನೆ, ಗುರಿ, ಆಕಾಶ, ಕಾರಣ
ಅವಓಡಗ. ನ: [ಅವಕೋಟಕ] ಕುತ್ತಿಗೆಯನ್ನು ತಿರುಗಿಸುವುದು, –ಬಂಧಣ. ನ: [–ಬಂಧನ] ಕೈ ಮತ್ತು ತಲೆಯನ್ನು ಸೇರಿಸಿ ಬೆನ್ನಿಗೆ ಕಟ್ಟುವುದು (ಪಣ್ಣ) ವಿ: ಹಗ್ಗದಿಂದ ಕುತ್ತಿಗೆ ಮತ್ತು ಕೈಯನ್ನು ತಿರುಚಿ ಬೆನ್ನಿನ ಕಡೆಯಿಂದ ಕಟ್ಟಲ್ಪಟ್ಟ ವ್ಯಕ್ತಿ
ಅವಂಗ. ಪು: [ಅಪಾಂಗ] ಕಣ್ಣಿನ ಕಡೆಯ ಭಾಗ, ಕಡೆಗಣ್ಣು(ಸುರ)
ಅವಂಗ. ಪು: [ದೇ] ಕಡೆಗಣ್ಣ ನೋಟ

ಅವಂಗು.} ವಿ: [ದೇ. ಅಪಾವೃತ] ತೆರಯಲ್ಪಟ್ಟ,
ಅವಂಗುಯ.} ಮುಚ್ಚಿರದ, ಆವರಣ ತೆರೆಯಲ್ಪಟ್ಟ
ಅವಂಗುಣ. ಸಕ: [ದೇ] ತೆರೆ
ಅವಂಚಿಅ. ವಿ: [ಅವಾಂಚಿತ] ಕೆಳಕ್ಕೆ ಮುಖಮಾಡಿರುವ, ಬಗ್ಗಿದ ಮುಖವುಳ್ಳ(ವಜ್ಜಾ)
ಅವಂಚಿಅ. ವಿ: [ಅವಂಚಿತ] ವಂಚಿಸಲ್ಪಡದ
ಅವಂಝ. ವಿ: [ಅವಂಧ್ಯ] ಸಫಲವಾದ, ವ್ಯರ್ಥವಲ್ಲದ, ಫಲವತ್ತಾದ(ಸುಪಾ) ಬಂಜೆಯಲ್ಲದ–**ಪವಾಯ.** ನ: [–ಪ್ರವಾದ] ೧೧ನೇ ಪೂರ್ವ ಜೈನಗ್ರಂಥಾಂಶ–ವಿಶೇಷ
ಅವಂತರ. ವಿ: [ಅವಾಂತರ] ಒಳಗಿನ, ಮಧ್ಯದ(ಆವಮ)
ಅವಂತಿ. ಪು: [ಅವಂತಿ] ಭಗವಾನ್ ಆದಿನಾಥನ ಒಬ್ಬ ಮಗ
ಅವಂತಿ.} ಸ್ತ್ರೀ: [ಅವಂತಿ, ತೀ] ಮಾಲವ ದೇಶ,
ಅವಂತೀ.} ಈಗ ಉಜ್ಜೈನಿ ಎಂದು ಪ್ರಸಿದ್ಧವಾದ ಮಾಲವದ ರಾಜಧಾನಿ(ಮಹಾ), –**ಗಂಗಾ.** ಸ್ತ್ರೀ: [–ಗಂಗಾ] ಆಜೀವಕ ಮತದಲ್ಲಿ ಪ್ರಸಿದ್ಧವಾದ ಕಾಲ–ವಿಶೇಷ, –**ವಡ್ಢಣ.** ಪು: [–ವರ್ಧನ] ಈ ಹೆಸರಿನ ಒಬ್ಬ ರಾಜ. –**ಸುಕುಮಾಲ.** ಪು: [–ಸುಕುಮಾಲ] ಆರ್ಯ ಸುಹಸ್ತಿ ಎಂಬ ಆಚಾರ್ಯನಿಂದ ದೀಕ್ಷೆ ಸ್ವೀಕರಿಸಿ ದೇವಲೋಕದಲ್ಲಿ ನಲಿನೀಗುಲ್ಮ ಎಂಬ ವಿಮಾನದಲ್ಲಿ ಜನಿಸಿರುವ ಒಬ್ಬ ಶ್ರೇಷ್ಠಿ–ಪುತ್ರ.–**ಸೇಣ.** ಪು: [–ಸೇನ] ಒಬ್ಬ ರಾಜ(ಆಕ)
ಅವಂದಿಮ. ವಿ: [ಅವಂದ್ಯ] ವಂದಿಸಲು ಯೋಗ್ಯನಲ್ಲದ, ನಮಸ್ಕಾರಕ್ಕೆ ಅನರ್ಹನಾದ(ದಸವೂ)
ಅವಕಂಖ. ಸಕ: [ಅವ+ಕಾಂಕ್ಷ್] ಇಷ್ಟಪಡು, ನೋಡು, –**'ಅವಕಂಖಇ'** ವ.ಕೃ–**ಅವಕಂಖಮಾಣ**
ಅವಕಂತ. **'ಅವಕ್ಕಂತ'** ಶಬ್ದವನ್ನು ನೋಡುವುದು
ಅವಕಪ್ಪ. ಸಕ: [ಅವ+ಕಲ್ಪಯ್] ಕಲ್ಪಿಸಿಕೊಳ್ಳು, ಒಪ್ಪಿಕೊಳ್ಳು
ಅವಕಯ. ವಿ: [ಅಪಕೃತ] ಅಪಕರಿಸಲ್ಪಟ್ಟವನು(ಉವ) ಅಪಕಾರ, ಅಹಿತ(ಸುಪಾ)
ಅವಕರ. ಸಕ: [ಅಪ+ಕೃ] ಅಹಿತವಾದ್ದನ್ನು ಮಾಡು, **'ಅವಕರೇಂತಿ'**
ಅವಕರಿಸ. ಪು: [ಅಪಕರ್ಷ] ಹಿಂದಕ್ಕೆ ತೆಗೆದುಕೊಳ್ಳುವುದು, ಹ್ರಾಸ, ಹಾನಿ, ಕಡಿಮೆಯಾಗುವುದು(ಸಮ)

ಅವಕಲುಸಿಯ. ವಿ: [ಅಪಕಲುಷಿತ] ಮಲಿನ, ಅಶುದ್ಧ (ಗಉಡ)
ಅವಕಸ. ಸಕ: [ಅವ+ಕೃಷ್]ಬಿಟ್ಟುಬಿಡು, ತ್ಯಜಿಸು(**ಚಉ**)
ಅವಕಾರಿ. ವಿ; [ಅಪಕಾರಿನ್]ಅಪಕಾರಮಾಡುವವನು, ಅಹಿತವುಂಟುಮಾಡುವವನು(ಪಉಮ)
ಅವಕಿಣ್ಣ. ವಿ: [ಅವಕೀರ್ಣ] ತ್ಯಜಿಸಲ್ಪಟ್ಟವನು(ದೇ)
ಅಪಕಿಣ್ಣಗ.} ಪು: [ಅಪಕೀರ್ಣಕ] ಕರಕಂಡೂ ಎಂಬ
ಅಪಕಿಣ್ಣಯ.} ಹೆಸರಿನ ಜೈನ ಮಹರ್ಷಿಯ ಹಿಂದಿನ ಹೆಸರು.
ಅವಕಿತ್ತಿ. ಸ್ತ್ರೀ: [ಅಪಕೀರ್ತಿ] ಕೆಟ್ಟ ಹೆಸರು, ಅಪಯಶಸ್ಸು (ದೇ)
ಅವಕಿದಿ. ಸ್ತ್ರೀ: [ಅಪಕೃತಿ] ಅಪಕಾರ, ಅಹಿತವಾದ್ದು
ಅವಕೀರಣ. ನ: [ಅವಕರಣ] ಬಿಡುವುದು, ತ್ಯಜಿಸುವುದು, ಉತ್ಸರ್ಗ(ತ್ಯಾಗ)(ಆವ)
ಅವಕೀರಿಅ. ವಿ: [ದೇ ಅವಕೀರ್ಣ] ಬೇರೆಯಾದ, ಅಗಲಿದ(ದೇ)
ಅವಕೀರಿಯುವ್ವ. ವಿ: [ಅವಕರಿತವ್ಯ] ಬಿಡಲು ಯೋಗ್ಯವಾದ, ತ್ಯಜಿಸಲು ಅರ್ಹವಾದ, ತ್ಯಾಜ್ಯ (ಪಣ್ಣ)
ಅವಕೂಜಿಯ. ನ: [ಅವಕೂಜಿತ] ಕೈಯನ್ನು ಮೇಲೆ–ಕೆಳಗೆ ಮಾಡುವುದು
ಅವಕೇಸಿ. ಪು: [ಅವಕೇಶಿನ್] ಹಣ್ಣು ಬಿಡದ ಮರ(**ಉರ**)
ಅವಕೋಡಕ. **'ಅವಓಡಗ'** ಶಬ್ದವನ್ನು ನೋಡುವುದು
ಅವಕ್ಕಂತ. ವಿ: [ಅಪಕ್ರಾಂತ] ಹಿಂದಕ್ಕೆ ಕಳುಹಿಸಲ್ಪಟ್ಟ, ಹಿಂದೆ ಸರಿದಿರುವ(ಸುಪಾ) ನಿಕೃಷ್ಟ, ನೀಚ(**ತಾ**)
ಅವಕ್ಕಂತ. ಪು: [ಅವಕ್ರಾಂತ] ಮೊದಲ ನರಕ–ಭೂಮಿಯ೧೧ನೇ ನರಕೇಂದ್ರಕ ಸ್ಥಳ
ಅವಕ್ಕಂತಿ. ಸ್ತ್ರೀ: [ಅಪಕ್ರಾಂತಿ] ನಿರ್ಗಮನ, ಹೊರಡುವುದು(ನಾಯಾ)
ಅವಕ್ಕಂತಿ. ಸ್ತ್ರೀ: [ಅವಕ್ರಾಂತಿ] ಗಮಿಸುವುದು, ಸಂಚಾರ, ನಡೆಯುವುದು(ಆಚಾ)
ಅವಕ್ಕಮ. ಅಕ: [ಅಪ+ಕ್ರಮ್] ಹಿಂದೆ ಸರಿ, ಹೊರಗೆ ಬರು ವ. ಕೃ–ಅವಕ್ಕಮಾಣ(ವಿಪಾ)
ಅವಕ್ಕಮ. ಸಕ: [ಅವ+ಕ್ರಮ್] ಹೋಗು. **'ಅವಕ್ಕಮಇ'** (ಭಗ)
ಅವಕ್ಕಮಣ. ನ: [ಅಪಕ್ರಮಣ] ಹೊರ ಹೋಗುವುದು, ಪಲಾಯನ, ಇಳಿಯುವಿಕೆ, ಹಿಂದೆ ಸರಿಯುವುದು

ಅವಕ್ಕಯ. ಪು: [ಅವಕ್ರಯ] ಬಾಡಿಗೆ, ಜಕಾತಿ(ಬೃಹ)
ಅವಕ್ಕಯ. ವಿ: [ಅಪಕೃತ] ಅಪಕಾರ ಮಾಡಲ್ಪಟ್ಟವನು
ಅವಕ್ಕರಸ. ಪು: [ದೇ]ಹೆಂಡ, ಮದ್ಯ
ಅವಕ್ಕರಿಸ}. ಪು: [ಅಪಕರ್ಷ] ಹಾನಿ, ನಾಶ(ವಿಸೇ)
ಅವಕ್ಕಾಸ}. ಎಳೆದುಕೊಳ್ಳುವುದು, ಹಿಂದಕ್ಕೆ ತೆಗೆದುಕೊಳ್ಳುವುದು
ಅವಕ್ಕಾಸ. ಪು: [ಅವಕರ್ಷ] ಮೇಲಿನ ಶಬ್ದವನ್ನು ನೋಡುವುದು
ಅವಕ್ಕಾಸ. ಪು: [ಅಪ್ರಕಾಶ] ಅಂಧಕಾರ, ಕತ್ತಲೆ(ಭಗ), ಪ್ರಕಾಶವಲ್ಲದ, ಗುಟ್ಟು, ರಹಸ್ಯವಾಗಿ
ಅವಕ್ಕೋಸ. ಪು: [ಅವಕ್ರೋಶ] ಕೋಪ, ಕ್ರೋಧ, ಗರ್ವ, ಅಹಂಕಾರ(ಸಮ)
ಅವಕ್ಖ. ಸಕ: [ದೃಶ್] ನೋಡು–**'ಅವಕ್ಖಇ'** ವ.ಕೃ–**'ಅವಕ್ಖಂತ'**
ಅವಕ್ಖಂದ. ಪು: [ಅವಸ್ಕಂದ] ಶಿಬಿರ, ಸೇನೆಯ ಶಿಬಿರ, ಆಕ್ರಮಣ, ಮುತ್ತಿಗೆ(ಹೇ)
ಅವಕ್ಖರ. ಪು: [ಅವಸ್ಕರ] ಮಲ, ಪುರೀಷ
ಅವಕ್ಖಾರಣ. ನ: [ಅಪಕ್ಷಾರಣ] ಗದರಿಸು, ಅವಮಾನಗೊಳಿಸುವುದು, ತಿರಸ್ಕರಿಸುವುದು, ಕಠಿಣ ಮಾತು
ಅವಕ್ಖೇವ. ಪು: [ಅವಕ್ಷೇಪ] ವಿಘ್ನ, ಅಡಚಣೆ, ಅಡ್ಡಿ (ವಿಪಾ)ನಿಂದೆ, ಆಕ್ಷೇಪಣೆ
ಅವಕ್ಖೇವಣ. ನ: [ಅವಕ್ಷೇಪಣ] ಅಡ್ಡಿ, ಅಡಚಣೆ, ಕ್ರಿ ವಿ–ಕೆಳಕ್ಕೆ ಹೋಗುವುದು(ಆವಮ)
ಅವಖೇರ. ಸಕ: [ದೇ] ಖಿನ್ನಗೊಳಿಸು, ತಿರಸ್ಕರಿಸು –**'ಅವಕ್ಖೇರಇ'**(ಭವಿ)
ಅವಗ. ಪುಂನ: [ದೇ. ಅವಕ] ನೀರಿನಲ್ಲಿ ಬೆಳೆಯುವ ವನಸ್ಪತಿ–ವಿಶೇಷ
ಅವಗಇ. ಸ್ತ್ರೀ: [ಅಪಗತಿ] ದುರ್ದೆಸೆ, ರಹಸ್ಯ ಸ್ಥಾನ
ಅವಗಂಡ. ನ: [ಅವಗಂಡ] ಚಿನ್ನ, ನೀರಿನ ನೊರೆ(ಸೂಅ) ಮುಖದ ಮೇಲೆ ಏಳುವ ಬೊಕ್ಕೆ
ಅವಗಂತವ್ವ **'ಅವಗಮ'** ಶಬ್ದವನ್ನು ನೋಡುವುದು
ಅವಗಚ್ಛ. ಸಕ: [ಅವ+ಗಮ್] ತಿಳಿದುಕೊಳ್ಳು, ಅರಿತುಕೊಳ್ಳು, **'ಅವಗಚ್ಛಇ'**
ಅವಗಚ್ಛ. ಅಕ: [ಅಪ+ಗಮ್] ದೂರವಾಗು, ಹೊರಟು ಹೋಗು,–**'ಅವಗಚ್ಛಇ'**(ಮಹಾ) ಓಡಿ ಹೋಗು, ಅದೃಶ್ಯವಾಗು, ಗತಿಸಿ ಹೋಗು

ಅವಗಣ.} ಸಕ: [ಅವಗಣಯ್] ಅನಾದರಿಸು,
ಅವಗಣ್ಣ.} ಅಗೌರವಿಸು, ತಿರಸ್ಕರಿಸು ವ.ಕೃ– ಅವಗಣಂತ(ಶ್ರಾ)
ಅವಗಣ್ಣಾ. ಸ್ತ್ರೀ: [ಅವಗಣನಾ] ಅನಾದರ, ಅಗೌರವ, ತಿರಸ್ಕಾರ, ಅಲಕ್ಷ್ಯ(ದೇ)
ಅವಗಣಿಯ.} ವಿ: [ಅವಗಣಿತ] ತಿರಸ್ಕರಿಸಲ್ಪಟ್ಟ,
ಅವಗಣ್ಣಿಯ.} ಅವಮಾನಗೊಳಿಸಲಾದ
ಅವಗದ. ವಿ: [ದೇ] ವಿಸ್ತೀರ್ಣ, ವಿಶಾಲ(ದೇ)
ಅವಗನ್ನ. **'ಅವಗಣ'** ಶಬ್ದವನ್ನು ನೋಡುವುದು
ಅವಗನ್ನಿಯ. **'ಅವಗಣ್ಣಿಯ'** ಶಬ್ದವನ್ನು ನೋಡುವುದು
ಅವಗಮ. ಪು: [ಅಪಗಮ] ಹೊರಡುವುದು, ಪಲಾಯನ, ವಿನಾಶ(ಸ) ಅದೃಶ್ಯವಾಗುವುದು,
ಅವಗಮ. ಸಕ: [ಅವ+ಗಮ್] ತಿಳಿ, ಅರಿತುಕೊ, ನಿಶ್ಚಯಿಸು, ನಿರ್ಣಯಿಸು
ಅವಗಮ. ಪು: [ಅವಗಮ} ಜ್ಞಾನ, ತಿಳಿವಳಿಕೆ, ನಿಶ್ಚಯ, ನಿರ್ಣಯ(ವಿಸಂ)
ಅವಗಮಣ. ನ: [ಅವಗಮನ] ಮೇಲಿನ ಶಬ್ದವನ್ನು ನೋಡುವುದು
ಅವಗಮಿಅ.} ವಿ: [ಅವಗತ] ತಿಳಿಯಲ್ಪಟ್ಟ, ಜ್ಞಾತ
ಅವಗಯ.} (ಸುಪಾ), ನಿಶ್ಚಯಿಸಲ್ಪಟ್ಟ
ಅವಗಯ. ವಿ: [ಅಪಗತ] ಕಳೆದು ಹೋದ, ನಾಶವಾದ, ಓಡಿ ಹೋದ, ಹೊರಟು ಹೋದ
ಅವಗರ. ಸಕ: [ಅಪ+ಕೃ] ಅಪಕರಿಸು, ಕೆಡುಕುಂಟು ಮಾಡು, ತೊಂದರೆಪಡಿಸು–**'ಅವಗರೇಇ'**
ಅವಗರಿಸ. **'ಅವಕ್ಕರಿಸ'** ಶಬ್ದವನ್ನು ನೋಡುವುದು
ಅವಗಲ. ವಿ: [ದೇ] ಆಕ್ರಾಂತ, ಆಕ್ರಮಿಸಲ್ಪಟ್ಟ, ಅತಿಕ್ರಮಿಸಲ್ಪಟ್ಟ, ವ್ಯಾಪಿಸಲ್ಪಟ್ಟ
ಅವಗಲ್ಲ. ವಿ: [ಅವಗ್ಲಾನ] ರೋಗಿ, ರೋಗಗ್ರಸ್ತ
ಅವಗಹಣ. ನ: [ಅವಗ್ರಹಣ] ನಿಶ್ಚಯ, ಅವಧಾರಣೆ
ಅವಗಾಢ. **'ಓಗಾಢ'** ಶಬ್ದವನ್ನು ನೋಡುವುದು
ಅವಗಾಹು. ವಿ: [ಅವಗಾಹಿತೃ] ಸ್ನಾನ ಮಾಡುವವನು
ಅವಗಾರ. ಪು: [ಅಪಕಾರ] ಅಪಕಾರ, ಅಹಿತವನ್ನು ಮಾಡುವುದು
ಅವಗಾರಯ.ವಿ:[ಅಪಕಾರಕ] ಅಪಕಾರವುಂಟು ಮಾಡುವ
ಅವಗಾರಿ ವಿ: [ಅಪಕಾರಿನ್] ಅಪಕಾರವುಂಟು ಮಾಡುವವ

ಅವಗಾಸ. ಪು: [ಅವಕಾಶ] ಅವಕಾಶ, ಸುಸಮಯ, ಸುಯೋಗ(ಮಹಾ), ಸ್ಥಲ, ನೆಲೆ, ಆಶ್ರಯ ಕಾಲದಂತರ

ಅವಗಾಹ. ಸಕ: [ಅವ+ಗಾಹ್] ಸ್ನಾನಮಾಡು, 'ಅವಗಾಹಇ'(ಸಣಾ)

ಅವಗಾಹ. ಪು: [ಅವಗಾಹ] ಸ್ನಾನ, ಅವಕಾಶ(ಉತ್ತ)

ಅವಗಾಹಣ. ನ: [ಅವಗಾಹನ] ಸ್ನಾನ

ಅವಗಾಹಣಾ. 'ಓಗಾಹಣಾ' ಶಬ್ದವನ್ನು ನೋಡುವುದು

ಅವಗಿಂಚಣ. ನ: [ದೇ. ಅವವೇಚನ] ಪೃಥಕ್ಕರಣ, ಬೇರ್ಪಡಿಸುವುದು(ಉಪ)

ಅವಿಗಿಜ್ಝ. 'ಓಗಿಜ್ಝ' ಶಬ್ದವನ್ನು ನೋಡುವುದು

ಅವಗೀಯ.ವಿ:[ಅವಗೀತ] ನಿಂದಿತ(ಉಪ), ಲೋಕಾಪವಾದ, ನಿಂದಾರೂಪದ ಪದ್ಯ, ಗದ್ಯ, ದುಷ್ಟ, ಅಪಸ್ವರದಲ್ಲಿ ಹಾಡಲಾದ

ಅವಗುಂಠಣ. 'ಅವಉಂಠಣ' ಶಬ್ದವನ್ನು ನೋಡುವುದು

ಅವಗುಂಠಿಯ. ವಿ: [ಅವಗುಂಠಿತ] ಮುಸುಕು ಹಾಲ್ಪಟ್ಟ, ಮುಖಪರದೆ ಹಾಕಲಾದ(ಮಹಾ), ಪುಡಿಮಾಡಲ್ಪಟ್ಟ

ಅವಗುಣ. ಪು: [ಅವಗುಣ] ದುರ್ಗುಣ, ದೋಷ(ಹೇ)

ಅವಗುಣ. ಸಕ: [ಅವ+ಗುಣಯ್] ತೆರೆ, ಉದ್ಘಾಟಿಸು. 'ಅವಗುನ್ಠೆಜಾ'(ಆಚಾ)

ಅವಗೂಢ. ವಿ: [ಅವಗೂಢ] ಆಲಿಂಗಿತ, ವ್ಯಾಪ್ತ

ಅವಗೂಢ.ನ:[ದೇ] ಅಪರಾಧ, ತಪ್ಪು, ವಂದನೆ, ಮೋಸ

ಅವಗೂಹಣ.ನ: [ಅವಗೂಹನ] ಆಲಿಂಗನ(ಪಲುಮ) ಮುಚ್ಚಿಡುವುದು, ರಹಸ್ಯಮಾಡು

ಅವಗೂಹಾವಿಯ. ವಿ: [ಅವಗೂಹಿತ] ಆಲಿಂಗಿಸಲ್ಪಟ್ಟ

ಅವಗ್ಗ. ವಿ: [ಅವ್ಯಕ್ತ] ಅಸ್ಪಷ್ಟ, ಅಗೋಚರ, ಅತಿ ಸೂಕ್ಷ್ಮ, ಅಗೀತಾರ್ಥ, ಶಾಸ್ತ್ರ ತಿಳಿಯದ ಸಾಧು, ವಿಷ್ಣು, ಶಿವ

ಅವಗ್ಗಹ. 'ಉಗ್ಗಹ' ಶಬ್ದವನ್ನು ನೋಡುವುದು

ಅವಗ್ಗಹಣ.ನ:[ಅವಗ್ರಹಣ] 'ಉಗ್ಗಹ' ನೋಡಿ.

ಅವಚ. 'ಅವಯ=ಅವಚ' ಶಬ್ದವನ್ನು ನೋಡುವುದು

ಅವಚಇಯ. ವಿ: [ಅಪಚಯಿಕ] ಅಪಕರ್ಷ ಹೊಂದಿದ, ನಾಶವುಳ್ಳ, ಕ್ಷೀಣವಾದ(ಆಚಾ) ಕೆಡುಕುಳ್ಳ

ಅವಚಯ. ಪು: [ಅಪಚಯ] ನಷ್ಟ, ಹಾನಿ, ಕೆಡುಕು(ಭಗ) ಕಡಿಮೆಯಾಗುವುದು, ಕ್ಷೀಣ

ಅವಚಯ. ಪು: [ಅವಚಯ] ಒಟ್ಟುಗೂಡಿಸುವುದು –'ಪುಷ್ಪಾಪಚಯ' ಕೀಳುವುದು

ಅವಚಯಣ. ನ: [ಅವಚಯನ] ಮೇಲಿನ ಶಬ್ದವನ್ನು ನೋಡುವುದು

ಅವಚಿ. ಅಕ: [ಅಪ+ಚಿ] ಕಡಿಮೆಯಾಗು, ನಷ್ಟವಾಗು, **'ಅವಚಿಜ್ಜಂತಿ'**(ಭಗ)

ಅವಚಿ}. ಸಕ: [ಅವ+ಚಿ] ಒಟ್ಟುಗೂಡಿಸು (ಮರ ಗಿಡ

ಅವಚಿಣ}. ದಿಂದ ಹೂವು ಇತ್ಯಾದಿಗಳನ್ನು ಕೊಯ್ಯು)

ಅವಚಿಯ. ವಿ: [ಅಪಚಿತ] ಕಡಿಮೆಮಾಡಲ್ಪಟ್ಟ, ನಾಶಮಾಡಲ್ಪಟ್ಟ, ಹಾನಿಂಗಾದ(ವಿಸೇ) ಪೂಜಿಸಲ್ಪಟ್ಟ

ಅವಚಿಯ. ವಿ: [ಅಪಚಿತ] ಒಟ್ಟುಗೂಡಿಸಲ್ಪಟ್ಟ, ಸಂಗ್ರಹಿಸಲ್ಪಟ್ಟ(ಪಾಅ)

ಅವಚುಣ್ಣಿಯ. ವಿ: [ಅವಚೂರ್ಣಿತ] ಪುಡಿಮಾಡಲ್ಪಟ್ಟ, ಅರೆಯಲ್ಪಟ್ಟ(ಮಹಾ)

ಅವಚುಲ್ಲ. ಪು: [ಅವಚುಲ್ಲ] ಒಲೆಯ ಹಿಂಭಾಗ (ಪಿಂಡ)

ಅವಚೂಲ. 'ಓಊಲ' ಶಬ್ದವನ್ನು ನೋಡುವುದು

ಅವಚ್ಚ. ನ: [ಅಪತ್ಯ] ಸಂತಾನ, ಸಂತತಿ(ಮಗ ಅಥವಾ ಮಗಳು) (ಕಪ್ಪ) **–ವ. ವಿ: [–ವತ್]** ಸಂತಾನ ಹೊಂದಿರುವ(ಸುಪಾ)

ಅವಚ್ಚ. ವಿ; [ಅವಾಚ್ಯ] ಹೇಳಲು ಅರ್ಹವಲ್ಲದ, ಹೇಳಲಾಗದ

ಅವಚ್ಚಿಜ್ಜ. 'ಅವಚ್ಚೀಯ' ಶಬ್ದವನ್ನು ನೋಡುವುದು

ಅವಚ್ಚೀಯ. ವಿ: [ಅಪತ್ಯೀಯ] ಸಂತಾನ ಹೊಂದಿರುವ, ಸಂತಾನಕ್ಕೆ ಸಂಬಂಧಿಸಿದ (ಠಾ)

ಅವಚ್ಛುಣ್ಣ. ನ:[ದೇ] ಕೋಪದಿಂದ ಹೇಳುವ ಮಾರ್ಮಿಕ ಮಾತು (ದೇ)

ಅವಚ್ಛೇಯ. ಪು: [ಅವಚ್ಛೇದ] ವಿಭಾಗ, ಅಂಶ, ಅವಯವ(ಠಾ) ಎಲ್ಲೆ, ಗಡಿ, ನಿರ್ಣಯ, ನಿಶ್ಚಯ

ಅವಛಂದ. ವಿ: [ಅಪಚ್ಛಂದಸ್ಕ] ಛಂದಸ್ಸಿನ ಲಕ್ಷಣವಿಲ್ಲದ, ಛಂದೋ ದೋಷದಿಂದ ಕೂಡಿದ(ಪಿಂಗ)

ಅವಜಸ. ಪು: [ಅಪಯಶಸ್] ಅಪಕೀರ್ತಿ(ಉಪ)

ಅವಜಾಣ. ಸಕ: [ಅಪ+ಜ್ಞಾ] ಅಸತ್ಯವನ್ನಾಡು, ಸತ್ಯವನ್ನು ಮುಚ್ಚಿಡು

ಅವಜಾಯ. ಪು: [ಅಪಜಾತ] ಕೆಟ್ಟ ಮಗ, ಅಯೋಗ್ಯನಾದ ಮಗ, ತಂದೆಗಿಂತ ಹೀನ ವೈಭವವಿರುವ ಮಗ(ಠಾ)

ಅವಜಿಬ್ಭ. ಪು: [ಅಪಜಿಹ್ವ] ಎರಡನೇ ನರಕ–ಭೂಮಿಯ ಎಂಟನೇ ನರಕ ಸ್ಥಾನ

ಅವಜೀವ. ವಿ: [ಅಪಜೀವ] ಜೀವವಿಲ್ಲದ, ಮೃತ, ಅಚೇತನ(ಗಲುಡ)
ಅವಜುಯ. ವಿ: [ಅವಯುತ] ಬೇರೆಯದಾದ
ಅವಜ್ಜ. ನ: [ಅವದ್ಯ] ಪಾಪ(ಪಣ್ಣ) ನಾಚಿಕೆ, ನಿಂದನೀಯ, ದೋಷ, ತುಚ್ಛ, ನೀಚ
ಅವಜ್ಜಸ. ಸಕ: [ಗಮ್] ಹೋಗು, ಸಂಚರಿಸು 'ಅವಜ್ಜಸಇ' (ಹೇ)
ಅವಜ್ಞಾ. ಸ್ತ್ರೀ: [ಅವಜ್ಞಾ] ಅನಾದರ, ತಿರಸ್ಕಾರ
ಅವಜ್ಝ. ವಿ:[ಅವಧ್ಯ] ವಧೆಗೆ ಅರ್ಹವಲ್ಲದ(ಣಾಯಾ)
ಅವಜ್ಝ. ಸಕ: [ದೃಶ್] ನೋಡು
ಅವಜ್ಝಸ. ನ: [ದೇ] ಕಟಿ, ಸೊಂಟ ನಡು, ಟೊಂಕ, ವಿ: ಕಠಿಣವಾದ(ದೇ)
ಅವಜ್ಝಾ. ಸ್ತ್ರೀ: [ಅವಧ್ಯಾ] ಅಯೋಧ್ಯಾ ನಗರಿ(ಇಕ), ವಿದೇಹ–ವರ್ಷದ ಒಂದು ನಗರ
ಅವಜ್ಝಾಣ.} ನ: [ಅಪಧ್ಯಾನ] ಕೆಟ್ಟ ಯೋಚನೆ,
ಅವಝಾಣ.} ಅನಿಷ್ಟಚಿಂತನೆ(ಸುಪಾ)
ಅವಜ್ಝಾಯ. ವಿ: [ಅಪಧ್ಯಾತ] ಕೆಟ್ಟ ಯೋಚನೆಯ ವಿಷಯ, ತಿರಸ್ಕೃತ, ಕಡೆಗಣಿಸಲ್ಪಟ್ಟ(ಣಾಯಾ)
ಅವಜ್ಝಾಯ(ಅಪ). **'ಉವಜ್ಝಾಯ'** ಶಬ್ದವನ್ನು ನೋಡುವುದು
ಅವಟ್ಟ. ಸಕ: [ಅಪ+ವೃತ್] ತಿರುಗಾಡಿಸು, ತಿರುಗಿಸು
ಅವಟ್ಟ. ಅಕ: [ಅಪ+ವೃತ್] ಹಿಂದೆ ಸರಿ
ಅವಟ್ಟಾ. ಸ್ತ್ರೀ: [ಆವರ್ತ್ತಾ] ರಾಜಮಾರ್ಗದ ಹೊರಗಿನ ಜಾಗ(ಉಪ) ನೀರಿನ ಸುಳಿ
ಅವಟ್ಟಂಭ. ಪು: [ಅವಷ್ಟಂಭ] ಅವಲಂಬನ, ಆಶ್ರಯ(ಪಉಮ) ಅಹಂಕಾರ, ತಡೆ, ಸಂಭ್ರಮ, ವಿಘ್ನ
ಅವಟ್ಠಂಭ. **'ಅವಠಂಭ'** ಶಬ್ದವನ್ನು ನೋಡುವುದು
ಅವಟ್ಟವ. ಸಕ: [ಅವ+ಸ್ತಂಭ್] ಆಶ್ರಯಿಸು, ಅವಲಂಬಿಸು(ವಿಕ್ರ)
ಅವಟ್ಠದ್ಧ. ವಿ: [ಅವಷ್ಟಬ್ಧ] ಅವಲಂಬಿತ, ಆಕ್ರಮಿಸಲ್ಪಟ್ಟ, ಆಶ್ರಯಿಸಲ್ಪಟ್ಟ, ತಡೆಯಲ್ಪಟ್ಟ
ಅವಟ್ಠಾಣ. ನ: [ಅವಸ್ಥಾನ] ಸ್ಥಿತಿ, ಇರುವಿಕೆ, ವ್ಯವಸ್ಥೆ(ಬೃಹ) ವಾಸಮಾಡುವುದು, ಮನೆ
ಅವಟ್ಠಿಯ. ವಿ: [ಅವಸ್ಥಿತ] ಸ್ನಾನಮಾಡಿ ನಿಂತಿರುವ, ಪ್ರಥಮ ಸಮಯದಲ್ಲಿ ಎಷ್ಟು ಕರ್ಮ–ಪ್ರಕೃತಿಗಳ ಬಂಧನ ಉಂಟಾಗುತ್ತದೋ ಎರಡನೇ ಸಮಯದಲ್ಲಿಯು ಅಷ್ಟೇ ಪ್ರಕೃತಿಗಳ ಬಂಧನ ವಾಗುವುದು. ಸ್ಥಿರವಾಗಿರುವ, ನಿತ್ಯ, ಶಾಶ್ವತ(ಠಾ), ನೆಲೆಸಿರುವ, ವಾಸವಾಗಿರುವ
ಅವಟ್ಠಿಇ. ಸ್ತ್ರೀ: [ಅವಸ್ಥಿತಿ] ಸ್ಥಿತಿ, ಇರುವಿಕೆ(ಠಾ), ವಾಸಸ್ಥಾನ, ಮನೆ
ಅವಠಂಭ. ಸಕ: [ಅವ+ಸ್ತಂಭ್] ಆಶ್ರಯಿಸು, ಅವಲಂಬಿಸು
ಅವಠಂಭ. ಪು: [ದೇ] ತಾಂಬೂಲ, ಎಲೆ(ದೇ)
ಅವಡ. ಪು: [ಅವಟ] ಬಾವಿ, (ಗಲುಡ) ಹಳ್ಳ, ಗುಂಡಿ, ಬಿಲ, ಬೇವಿನಮರ, ದುರ್ಜನ
ಅವಡ}. ಪು: [ದೇ] ಬಾವಿ ತೋಟ, ವಾಟಿಕೆ(ದೇ)
ಅವಡಅ}.
ಅವಡಅ. ಪು: [ದೇ] ಹುಲ್ಲು–ಉಬ್ಬಲು ತುಂಬಿ ಮಾಡಿದ ಬೊಂಬೆ, ಹುಲ್ಲಿನಿಂದ ಮಾಡಿದ ಮನುಷ್ಯಾಕೃತಿ(ದೇ)
ಅವಡಂಕ. ಪು: [ಅವಟಂಕ] ಪ್ರಸಿದ್ಧಿ, ಖ್ಯಾತಿ(ಮಹಾ)
ಅವಡಕ್ಕಿಅ. ವಿ: [ದೇ] ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರಬಹುದಾದವನು(ದೇ)
ಅವಡಾಹ. ಸಕ: [ಉತ್+ಕ್ರುಶ್] ಗಟ್ಟಿಯಾಗಿ ಅಳು, ಗಟ್ಟಿಯಾಗಿ ಕೂಗು, ವಿ: ಶ್ರೇಷ್ಠವಾದ
ಅವಡಾಹಿಅ. ನ: [ದೇ] ಗಟ್ಟಿ ದನಿಯಲ್ಲಿ ಅಳುವುದು
ಅವಡಿಅ. ವಿ: [ದೇ] ಖಿನ್ನನಾಗಿರುವ, ಆಯಾಸಗೊಂಡಿರುವ(ದೇ)
ಅವಡು. ಪು: [ಅವಟು] ಕುತ್ತಿಗೆಯ ಹಿಂಭಾಗ, ಹೆಕ್ಕತ್ತು,
ಅವಡುಅ. ಪು: [ದೇ) ಒರಳು(ದೇ)
ಅವಡುಲ್ಲಿಅ. ವಿ: [ದೇ] ಬಾವಿ, ಹಳ್ಳ ಇತ್ಯಾದಿಗಳಲ್ಲಿ ಬಿದ್ದಿರುವವನು(ಷಡ್)
ಅವಡ್ಡಾ. ಸ್ತ್ರೀ: [ದೇ] ಕುತ್ತಿಗೆಯ ಹಿಂಭಾಗ, ಹೆಕ್ಕತ್ತು
ಅವಡ್ಢ. ವಿ: [ಅಪಾರ್ಧ] ಅರ್ಧ, ಅರ್ಧ ದಿನ, ಅರ್ಧಕ್ಕಿಂತ ಕಡಿಮೆ(ಭಗ) –ಕ್ಖೇತ್ತ. ನ: [–ಕ್ಷೇತ್ರ], ನಕ್ಷತ್ರ ವಿಶೇಷ, ಒಂದು ಮುಹೂರ್ತ(ಠಾ)
ಅವಣ. ಪು: [ದೇ] ನೀರಿನ ಪ್ರವಾಹ
ಅವಣ. ನ: [ಅವನ] ನಡೆಯುವುದು, ಸಂಚಾರ, ಅನುಭವ(ಣಂದಿ] ತೃಪ್ತಿ, ಸಾಮರ್ಥ್ಯ, ರಕ್ಷಿಸುವುದು
ಅವಣಣ. **'ಅವಣಯಣ' ಶಬ್ದವನ್ನು ನೋಡುವುದು**
ಅವಣದ್ಧ. ವಿ: [ಅವನದ್ಧ] ಸಂಬಂಧಿಸಿದ, ಒಟ್ಟಿಗೆ ಸೇರಿಸಲಾದ, ಆವರಿಸಲ್ಪಟ್ಟ(ಭಗ), ಲೇಪಿಸಲ್ಪಟ್ಟ

ಅವಣಮ. ಅಕ: [ಅವ+ನಮ್] ಕೆಳಕ್ಕೆ ಬಗ್ಗಿ ನಮಸ್ಕರಿಸು, ವ. ಕೃ-ಅವಣಮಂತ(ರಾಯ)
ಅವಣಮಿಯ. ವಿ: [ಅವನತ] ಕೆಳಬಾಗಿರುವ, ನಮಸ್ಕರಿಸಲ್ಪಟ್ಟ(ಸುರ), ವಿನಯಿ
ಅವಣಮಿಅ. ವಿ: [ಅವನಮಿತ] ಕೆಳಬಾಗಿರುವ, ನಮಸ್ಕರಿಸಲ್ಪಟ್ಟ(ಸುರ), ವಿನಯಿ
ಅವಣಯ. ಪು: [ಅಪನಯ] ದೂರ ಸಾಗಿಸುವುದು, ನಿಂದೆ(ವಿಸೇ), ಕೆಟ್ಟನಡತೆ, ಕೆಟ್ಟನೀತಿ, ಅಪಕಾರ
ಅವಣಯಣ. ನ: [ಅಪನಯನ] ಬೇರೆಕಡೆಗೆ ಸಾಗಿಸುವುದು, ಪರಿಹರಿಸುವುದು, ಕಳೆಯುವುದು, ಕಣ್ಣಿಲ್ಲದ
ಅವಣಾಮ. ಪು: [ಅಪನಾಮ] ಎತ್ತರಕ್ಕೆ ಹೋಗು, ಮೇಲಕ್ಕೆ ಹೋಗು
ಅವಣಿ. ಸ್ತ್ರೀ: [ಅವನಿ] ಭೂಮಿ(ಉಪ) ಬೆರಳು
ಅವಣಿಂತ.'ಅವಣೀ' ಶಬ್ದವನ್ನು ನೋಡುವುದು
ಅವಣಿಂದ. ಪು: [ಅವನೀಂದ್ರ] ರಾಜ, ದೊರೆ
ಅವಣಿಯ. 'ಅವಣೀಯ' ಶಬ್ದವನ್ನು ನೋಡುವುದು
ಅವಣೀ. 'ಅವಣಿ' ಶಬ್ದವನ್ನು ನೋಡುವುದು. **-ಸರ.** ಪು:[-ಶ್ವರ] ದೊರೆ, ಭೂಪತಿ
ಅವಣೀ. ಸಕ: [ಅಪ+ನೀ] ದೂರಮಾಡು, ಬೇರೆಕಡೆಗೆ ಸಾಗಿಸು **'ಅವಣೇಇ'**(ಮಹಾ)
ಅವಣೀವಯಣ.ನ:[ಅಪನೀತವಚನ]ನಿಂದೆಯ ಮಾತು
ಅವಣೀಯ. ವಿ: [ಅಪನೀತ] ದೂರಮಾಡಲಾದ, ಬೇರೆಸಾಗಿಸಲಾದ(ಸುಪಾ)
ಅವಣೆಂತ. 'ಅವಣೀ=ಅಪ+ನೀ' ಶಬ್ದವನ್ನು ನೋಡುವುದು
ಅವಣೋಯ. ಪು: [ಅಪನೋದ] ಬೇರೆ ಕಡೆಗೆ ಸಾಗಿಸುವುದು(ವಿಸೇ)
ಅವಣೋಯಣ. ನ: [ಅಪನೋದನ] ದೂರೀಕರಣ, ಬೇರೆಡೆಗೆ ಕೊಂಡೊಯ್ಯುವುದು
ಅವಣ್ಣ. ವಿ: [ಅವರ್ಣ] 'ಅ' ಅಕ್ಷರ, ವರ್ಣ-ರಹಿತ, ರೂಪ-ರಹಿತ(ಭಗ) ನಿಂದೆ, ಅಪಕೀರ್ತಿ, **-ವ.** ವಿ:[-ವತ್] ನಿಂದಕ(ಸಮ), **-ವಾಯ.** ಪು: [-ವಾದ] ನಿಂದೆ
ಅವಣ್ಣ. ನ: [ದೇ] ಅವಜ್ಞೆ, ತಿರಸ್ಕಾರ, ಅನಾದರ
ಅವಣ್ಹಅ. ಪು: [ಅಪಹ್ನವ] ಸತ್ಯವನ್ನು ಮುಚ್ಚಿಡುವುದು(ಷಡ್), ಪ್ರೇಮ, ಸ್ತುತಿ
ಅವಣ್ಹವಣ. ನ: [ಅಪಹ್ನವನ] ಸತ್ಯವನ್ನು ಮರೆಮಾಚುವುದು(ಆಚಾ)
ಅವಣ್ಹಾಣ. ನ: [ಅವಸ್ನಾನ] ಸಬಕಾರದಿಂದ ಮಾಡುವ ಸ್ನಾನ (ಣಾಯಾ)
ಅವತಂಸ. ಪು; [ಅವತಂಸ] ಮೇರು ಪರ್ವತ
ಅವತಂಸ. 'ಅವಯಂಸ=ಅವತಂಸ ಶಬ್ದವನ್ನು ನೋಡುವುದು
ಅವತಂಸಿಯ. ವಿ: [ಅವತಂಸಿತ] ಅಲಂಕರಿಸಲ್ಪಟ್ಟ
ಅವತಟ್ಠ. ವಿ: [ಅವತಷ್ಟ] ಕೃಶವಾಗಿ ಮಾಡಲ್ಪಟ್ಟ, ಹೆರೆಯಲಾದ (ಸೂಅ)
ಅವತಟ್ಠಿ.'ಅವಯಟ್ಠಿ=ಅವತಷ್ಟಿ' ಶಬ್ದವನ್ನು ನೋಡುವುದು
ಅವತಾರಣ. ನ: [ಅವತಾರಣ] ಮೇಲಿನಿಂದ ಕೆಳಕ್ಕೆ ಇಳಿಸುವುದು, ಯೋಜಿಸುವುದು, ಪೀಠಿಕೆ
ಅವತಾಸಣ. ನ: [ಅವತ್ರಾಸನ] ಹೆದರಿಸುವುದು
ಅವತಿತ್ಥ. ನ: [ಅಪತೀರ್ಥ] ಹೊಲಸಾದ ದಡ, ಕುತ್ಸಿತಘಟ್ಟ (ಸುಪಾ)
ಅವತ್ತ. ವಿ: [ಅವ್ಯಕ್ತ] ಅಸ್ಪಷ್ಟ, ಗೋಚರಿಸದ, ಕಡಿಮೆ ವಯಸ್ಸಿನ, ಅಸಂಸ್ಕೃತ(ಗಚ್ಛ) ಪು: **'ಅವಗ್ಗ'** ಶಬ್ದವನ್ನು ನೋಡುವುದು
ಅವತ್ತ. ವಿ; [ಅವಾತ] ಗಾಳಿಯಿಲ್ಲದ(ಗಚ್ಛ)
ಅವತ್ತ. ವಿ: [ಅವಾಪ್ತ] ಪಡೆಯಲಾದ, ಹೊಂದಲಾದ
ಅವತ್ತ. ನ: [ಅವತ್ರ] ಒಂದು ಆಸನ-ವಿಶೇಷ(ನಿಚೂ)
ಅವತ್ತಯ. ವಿ: [ದೇ] ಅವ್ಯವಸ್ಥಿತ
ಅವತ್ತವ್ವ. ವಿ: [ಅವಕ್ತವ್ಯ] ಮಾತಿನಲ್ಲಿ ಹೇಳಲಾಗದ, ಅನಿರ್ವಚನೀಯ, ಸುಳ್ಳಾದ
ಅವತ್ತಿಯ. ನ: [ಅವ್ಯಕ್ತಿಕ] ಒಂದು ಜೈನಾಭಾಸಿಕ ಮತ, ಈ ಮತದ ಅನುಯಾಯಿ
ಅವತ್ಥಂತರ. ನ:[ಅವಸ್ಥಾಂತರ] ಭಿನ್ನ ಅವಸ್ಥೆ, ಒಂದು ಹಂತದಿಂದ ಮತ್ತೊಂದು ಅವಸ್ಥೆಗೆ ಬದಲಾಗುವುದು.
ಅವತ್ಥಗ. ವಿ: [ಅಪಾರ್ಥಕ] ನಿರರ್ಥಕ, ವ್ಯರ್ಥ, ಅಸಂಬದ್ಧ ಅರ್ಥವಿರುವ, ಒಂದು ಕಾವ್ಯದೋಷ
ಅವತ್ಥದ್ಧ. ವಿ: [ಅವಷ್ಟಬ್ಧ] ಆಶ್ರಯ ಪಡೆದುಕೊಂಡಿರುವ ಆಸರೆ ಸಿಕ್ಕಿರುವ(ಣಾಯಾ)
ಅವತ್ಥಯ. ವಿ: [ಅಪಾರ್ಥಕ] ನಿರರ್ಥಕ, ಅಸಂಬದ್ಧ ಅರ್ಥವಿರುವ(ವಿಸೆ)
ಅವತ್ಥರಾ. ಸ್ತ್ರೀ: [ದೇ] ಪಾದ-ಪ್ರಹಾರ, ಏಟು ಹೊಡೆಯುವುದು(ದೇ)

ಅವತ್ಥಾ. ಸ್ತ್ರೀ: [ಅವಸ್ಥಾ] ಸ್ಥಿತಿ, ಇರುವಿಕೆ, ಹಂತ(ಶಾ)
ಅವತ್ಥಾಣ. ನ: [ಅವಸ್ಥಾನ] ಅವಸ್ಥಿತಿ, ಸ್ಥಿತಿ, ವಾಸಸ್ಥಳ, ಮನೆ
ಅವತ್ಥಾವ. ಸಕ: [ಅವ+ಸ್ಥಾಪಯ್] ಸ್ಥಿರಪಡಿಸು, ನೆಲೆಗೊಳಿಸು, ಇಡುವುದು
ಅವತ್ಥಾವಿದ(ಶೌ). ವಿ: [ಅವಸ್ಥಾಪಿತ] ಇರಿಸಲ್ಪಟ್ಟ, ಇಡಲ್ಪಟ್ಟ, ನೆಲೆಗೊಳಿಸಲಾದ(ನಾಟ)
ಅವತ್ಥಿಯ. 'ಅವಟ್ಠಿಯ' ಶಬ್ದವನ್ನು ನೋಡುವುದು
ಅವತ್ಥಿಯ, ವಿ: [ಅವಸ್ತೃತ] ಹರಡಲ್ಪಟ್ಟ, ಪ್ರಸರಿಸಲ್ಪಟ್ಟ (ಣಾಯಾ)
ಅವಥಂಭ. 'ಅವಠಂಭ' ಶಬ್ದವನ್ನು ನೋಡುವುದು
ಅವತ್ಥು. ನ: [ಅವಸ್ತು] ಅಭಾವ, ಅಸತ್ವ(ಭವಿ), ವಿ: ನಿರರ್ಥಕ, ವ್ಯರ್ಥ(ಪಣ್ಣ)
ಅವದಗ್ಗ. 'ಅವಯಗ್ಗ' ಶಬ್ದವನ್ನು ನೋಡುವುದು
ಅವದಲ. ವಿ:[ಅಪದಲ] ನಿಸ್ಸಾರ, ಕಚ್ಚಾ, ಪಕ್ವವಲ್ಲದ(ಶಾ)
ಅವದಹಣ. ನ: [ಅವದಹನ] ಕಾದ ಕಬ್ಬಿಣದಿಂದ ಚರ್ಮದ ಮೇಲೆ ಬರೆಹಾಕುವುದು(ಣಾಯಾ)
ಅವದಾಣ. ನ: [ಅವದಾನ] ಶುದ್ಧ ಕರ್ಮ
ಅವದಾಯ. ವಿ: [ಅವದಾತ]ಪವಿತ್ರ, ನಿರ್ಮಲ(ಸುಪಾ), ದೋಷವಿಲ್ಲದ, ಬಿಳುಪಾದ, ಮನೋಹರ
ಅವದಾರ, ನ: [ಅಪದ್ವಾರ] ಚಿಕ್ಕ ದ್ವಾರ, ಗುಪ್ತ ದ್ವಾರ(ಉಪ) ಕಳ್ಳಬಾಗಿಲು
ಅವದಾಲ. ಸಕ: [ಅವ+ದಲಯ್] ತೆರೆ, ಅರಳಿಸು, ತೆಗೆ, 'ಅವದಾಲೇಇ'(ಔಪ)
ಅವದಾಲಿಯ. ವಿ: [ಅವದಲಿತ] ವಿಕಸಿತ, ಅರಳಿದ, ವಿಜೃಂಭಿತ. 'ಅವದಲಿಯ ಪುಂಡರೀನಯಣೇ
ಅವದಿಸಾ. ಸ್ತ್ರೀ: [ಅಪದಿಕ್] ಎರಡು ದಿಕ್ಕುಗಳ ಮಧ್ಯದ ಜಾಗ, ಆಗ್ನೇಯ, ಈಶಾನ್ಯ ಮೊದಲಾದವು
ಅವದೇಸ. 'ಅವಏಸ' ಶಬ್ದವನ್ನು ನೋಡುವುದು
ಅವದ್ದಾರ.} 'ಅವದಾರ' ಶಬ್ದವನ್ನು ನೋಡುವುದು
ಅವದ್ದಾಲ.} (ಣಾಯಾ)
ಅವದ್ದಾಹಣಾ. ಸ್ತ್ರೀ: 'ಅವದಹಣ' ಶಬ್ದವನ್ನು ನೋಡುವುದು
ಅವದ್ದುಸ. ನ: [ದೇ] ಒರಳು ಇತ್ಯಾದಿ ಮನೆಯ ಸಾಮಾನ್ಯ ಉಪಕರಣ(ದೇ)
ಅವದ್ಧಂಸ. ಪು: [ಅವಧ್ವಂಸ] ವಿನಾಶ, ಪುಡಿಮಾಡುವುದು(ಶಾ), ಪರಿತ್ಯಾಗ, ನಿಂದೆ

ಅವಧಂಸಿ. ವಿ: [ಅಪಧ್ವಂಸಿನ್] ವಿನಾಶಕಾರಕ
ಅವಧಾರ. ಸಕ: [ಅವ+ಧಾರಯ್] ನಿಶ್ಚಯಿಸು, ನಿರ್ಧರಿಸು, ನಿರ್ಣಯಿಸು(ಶ್ರಾ) ಮಿತಿಗೊಳಿಸು, ಬೇರ್ಪಡಿಸು
ಅವಧಾರಣ. ನ: [ಅವಧಾರಣ] ನಿಶ್ಚಯ, ನಿರ್ಣಯ, ದೃಢವಚನ, ಬೇರ್ಪಡಿಸುವಿಕೆ
ಅವಧಾರಣಾ. ಸ್ತ್ರೀ: [ಅವಧಾರಣಾ] ದೀರ್ಘ ಕಾಲದ ವರೆಗೆ ನೆನಪಿಟ್ಟುಕೊಳ್ಳುವ ಶಕ್ತಿ
ಅವಧಾರಿಯ. ವಿ: [ಅವಧಾರಿತ] ನಿಶ್ಚಯಿಸಲ್ಪಟ್ಟ, ನಿರ್ಧರಿಸಲ್ಪಟ್ಟ(ವಸು) ಬೇರ್ಪಡಿಸಲ್ಪಟ್ಟ
ಅವಧಾರಿಯವ್ವ. 'ಅವಧಾರ' ಶಬ್ದವನ್ನು ನೋಡುವುದು
ಅವಧಾವ. ಸಕ: [ಅಪ+ಧಾವ್] ಹಿಂದೆ ಓಡು, 'ಅವಧಾವಇ'(ಸಣಾ)
ಅವಧಿಕಾ. ಸ್ತ್ರೀ: [ದೇ] ಗೆದ್ದಲು ಹುಳ(ಪಣ್ಣ)
ಅವಧೀರಿಯ. ವಿ: [ಅವಧೀರಿತ] ತಿರಸ್ಕೃತ, ಅಪಮಾನಿತ(ಬೃಹ), ವಿಕ್ಷಿಪ್ತ(ಆವ)
ಅವಧುಣ.} ಸಕ: [ಅವ+ಧೂ] ಪರಿತ್ಯಜಿಸು, ಬಿಡು,
ಅವಧೂಣ.} ಅಲಕ್ಷಿಸು
ಅವಧೂಯ. ವಿ: [ಅವಧೂತ] ಕಡೆಗಣಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ
ಅವನಿದ್ದಯ. ಪು: [ಅಪನಿದ್ರಕ] ಪ್ರಕಾಶಮಯ, ನಿದ್ರಯಿಲ್ಲದಿರುವುದು(ಸುರ)
ಅವನ್ನ. 'ಅವಣ್ಣ=ಅವರ್ಣ' ಶಬ್ದವನ್ನು ನೋಡುವುದು
ಅವನ್ನಾ. 'ಅವಣ್ಣಾ' ಶಬ್ದವನ್ನು ನೋಡುವುದು(ಓಘ)
ಅವಪಂಗುಣ}. ಸಕ: [ದೇ] ತೆರೆ
ಅವಪಂಗುರ}.
ಅವಪಕ್ಕಾ. ಸ್ತ್ರೀ: [ಅವಪಾಕ್ಯಾ] ಕಬ್ಬಿಣದ ಹಂಚು, ತವಾ, ಚಿಕ್ಕ ತವಾ(ಣಾಯಾ)
ಅವಪುಟ್ಠ. ಪು: [ಅವಸ್ಪೃಷ್ಟ] ಸ್ಪರ್ಶಿಸಲ್ಪಟ್ಟ(ಸುಪಾ)
ಅವಪುಸಿಯ. ವಿ: [ದೇ] ಸಂಘಟಿತ, ಸಂಯುಕ್ತ ಒಟ್ಟುಗೂಡಿದ(ದೇ)
ಅವಪೂರ. ಸಕ; [ಅವ+ಪೂರಯ್] ಪೂರ್ಣಗೊಳಿಸು.
ಅವಪೆಕ್ಖ. ಸಕ: [ಅವಪ್ರ+ಈಕ್ಷ್] ನೋಡು, ಅವಲೋಕಿಸು
ಅವಪ್ಪಓಗ. ಪು: [ಅಪಪ್ರಯೋಗ] ವಿರುದ್ಧ ಪ್ರಯೋಗ, ವಿರುದ್ಧ ಔಷಧಿಗಳ ಮಿಶ್ರಣ(ಬೃಹ) ತಪ್ಪು ಪ್ರಯೋಗ
ಅವಪ್ಫಾರ. ಪು: [ಅವಸ್ಫಾರ] ವಿಸ್ತಾರ, ಹಬ್ಬುವುದು(ಸ)

ಅವಬಂಧ. ಪು: [ಅವಬಂಧ] ಬಂಧ, ಬಂಧನ(ಗಉಡ) ಸುತ್ತಲೂ ಕಟ್ಟುವಿಕೆ

ಅವಬದ್ಧ. ವಿ: [ಅವಬದ್ಧ] ಕಟ್ಟಲ್ಪಟ್ಟ, ಎಲ್ಲ ಕಡೆಯೂ ಬಂಧಿಸಲ್ಪಟ್ಟ

ಅವಬಾಣ. ವಿ: [ಅಪಬಾಣ] ಬಾಣವಿಲ್ಲದ(ಗಉಡ)

ಅವಬುಜ್ಝ. ಸಕ: [ಅವ+ಬುಧ್] ತಿಳಿದುಕೊ, ಅರಿತುಕೊ

ಅವಬೋಹ. ಪು: [ಅವಬೋಧ] ಜ್ಞಾನ, ತಿಳಿವು, ಎಚ್ಚರಿಕೆ(ಸುಪಾ), ವಿಕಾಸ, ಜಾಗರಣೆ, ಸ್ಮರಣೆ(ಆಚಾ) ತತ್ತ್ವದ ಉಪದೇಶ

ಅವಬೋಹಯ. ವಿ: [ಅವಬೋಧಕ] ಜ್ಞಾನವನ್ನು ಉಂಟುಮಾಡುವಂಥದು, ತಿಳಿಸುವ, ಸೂಚಿಸುವ, ಉಪದೇಶ ಕೊಡುವ ಗುರು, ಸೂರ್ಯ

ಅವಬೋಹಿ. ಪು: [ಅವಬೋಧಿ] ಜ್ಞಾನ, ತಿಳಿವು, ನಿಶ್ಚಯ ನಿರ್ಣಯ, ಜಾಗರಣೆ(ವಿಸೇ)

ಅವಭಾಸ. ಸಕ: [ಅವ+ಭಾಸ್] ಹೊಳೆ, ಪ್ರಕಾಶಿಸು

ಅವಭಾಸ. ಪು: [ಅವಭಾಸ] ಪ್ರಕಾಶ, ಕಾಂತಿ, ಬೆಳಕು, ಜ್ಞಾನ, ಕಾಣಿಸಿಕೊಳ್ಳುವುದು(ಸುಜ್ಜ)

ಅವಭಾಸಣ. ವಿ: [ಅವಭಾಸನ] ಬೆಳಕನ್ನು ಉಂಟುಮಾಡುವವನು

ಅವಭಾಸಯ. ವಿ: [ಅವಭಾಸಕ] ಪ್ರಕಾಶಕ, ಪ್ರಕಾಶಪಡಿಸುವ

ಅವಭಾಸಿ. ವಿ: [ಅವಭಾಸಿನ್] ಪ್ರಕಾಶಿಸುವ, ಹೊಳೆಯುವ(ಗಉಡ)

ಅವಭಾಸಿಯ. ವಿ: [ಅಪಭಾಷಿತ] ಪ್ರಕಾಶಪಡಿಸಲಾದ, ಹೊಳೆಯಲ್ಪಟ್ಟ(ವಿಸೇ)

ಅವಭಾಸಿಯ. ವಿ: [ಅವಭಾಷಿತ] ಕೋಪಕ್ಕೀಡು ಮಾಡಲಾದ, ಶಪಿಸಲ್ಪಟ್ಟ

ಆವಮ. 'ಓಮ' ಶಬ್ದವನ್ನು ನೋಡುವುದು

ಅವಮಗ್ಗ. ಪು: [ಅಪಮಾರ್ಗ] ಕೆಟ್ಟ ಹಾದಿ, ಹಾಳಾದ ಮಾರ್ಗ

ಅವಮಗ್ಗ. ಪು: [ಅಪಾಮಾರ್ಗ] ಉತ್ತರಾಣಿ ಗಿಡ

ಅವಮಚ್ಚು. ಪು: [ಅಪಮೃತ್ಯು] ಅಕಾಲ ಮೃತ್ಯು, ದುರ್ಮರಣ, ಆಕಸ್ಮಿಕ ಮರಣ(ಕುಮಾ)

ಅವಮಜ್ಜ. ಸಕ: [ಅವ+ಮೃಜ್] ಒರೆಸು, ತೊಳೆ, ಚೊಕ್ಕಟಗೊಳಿಸು, ಸ್ವಚ್ಛಗೊಳಿಸು(ಸ)

ಅವಮಣ್ಣ. ಸಕ: [ಅವ+ಮನ್] ಅವಮಾನಿಸು, ಅನಾದರ ಮಾಡು ತಿರಸ್ಕರಿಸು(ಉವರ)

ಅವಮದ್ದ. ಪು: [ಅವಮರ್ದ] ಮರ್ದನ, ಪೀಡಿಸುವುದು, ಬಾಧಿಸುವುದು, ಒತ್ತು(ಪಣ್ಣ), ನಾಶ

ಅವಮದ್ದಗ. ವಿ: [ಅವಮರ್ದಕ] ಮರ್ದನ ಮಾಡುವವನು, ನಾಶಮಾಡುವವನು(ಣಾಯಾ)

ಅವಮನ್ನ. ಸಕ: [ಅವ+ಮನ್] ಅವಮಾನಿಸು, ಅನಾದರಿಸು, ಕಡೆಗಣಿಸು ವ.ಕೃ_ಅವಮನ್ನಂತ (ಸೂಅ)

ಅವಮನ್ನಿಯ.} ವಿ: [ಅವಮತ] ತಿರಸ್ಕರಿಸಲ್ಪಟ್ಟ,
ಅವಮಯ.} ಅವಮಾನಗೊಳಿಸಲ್ಪಟ್ಟ(ಸುರ)

ಅವವಾಣ. ಪು: [ಅಪವಾನ] ತಿರಸ್ಕಾರ, ಕಡೆಗಣಿಸುವುದು

ಅವಮಾಣ. ಪುಂ.ನ: [ಅವಮಾನ] ತಿರಸ್ಕಾರ, ಅನಾದರ, ಕಡೆಗಣನೆ, ಪರಿಮಾಣ

ಅವಮಾಣ. ಸಕ: [ಅವ+ಮಾನಯ್] ಅವಮಾನಿಸು, ಅಗೌರವಿಸು, ಕಡೆಗಣಿಸು(ಭವಿ) 'ಅವಮಾಣಇ'

ಅವವಾಣಣ. ನ: [ಅವವಾನನ] ಅನಾದರ, ಕಡೆಗಣನೆ(ಪಣ್ಣ)

ಅವವಾಣಣ. ನ: [ಅಪವಾನನ] ತಿರಸ್ಕಾರ, ಅಪಮಾನ

ಅವಮಾಣಣಾ. ಸ್ತ್ರೀ: [ಅವಮಾನನಾ] ಕಡೆಗಣನೆ

ಅವಮಾಣಿ.ವಿ: [ಅವಮಾನಿನ್] ಅವಮಾನಿಸುವವನು, ಕಡೆಗಣಿಸುವವನು

ಅವಮಾಣಿಯ. ವಿ: [ಅವಮಾನಿತ] ತಿರಸ್ಕೃತ(ಸೇ)

ಅವವಾಣಿಯ. ವಿ: [ಅವವಾನಿತ] ಅವವಾನ ಮಾಡಲ್ಪಟ್ಟವನು, ಕಡೆಗಣಿಸಲ್ಪಟ್ಟವನು, ಚೆನ್ನಾಗಿ ತುಂಬಲ್ಪಟ್ಟ(ಭಗ)

ಅವಮಾರ. ಪು: [ಅಪಸ್ಮಾರ] ಮೂರ್ಛೆರೋಗ(ಆಚಾ)

ಅವಮಾರಿಯ. ವಿ: [ಅಪಸ್ಮಾರಿತ, –ರಿಕ] ಮೂರ್ಛೆ ರೋಗಿ(ಆಚಾ)

ಅವವಾರುಯ. ಪು: [ಅವವಾರುತ] ಕೆಳಗಡೆ ಬೀಸುತ್ತಿರುವ ಗಾಳಿ(ಗಉಡ)

ಅವಮಿಚ್ಚು.'ಅವಮಚ್ಚು' ಶಬ್ದವನ್ನು ನೋಡುವುದು

ಅವಮಿಯ. ವಿ: [ದೇ] ಗಾಯಗೊಂಡವನು, ವ್ರಣಿತ

ಅವಮುಕ್ಕ. ವಿ: [ಅವಮುಕ್ತ] ಪರಿತ್ಯಕ್ತ, ಬಿಡಲ್ಪಟ್ಟವನು(ಪಿ)

ಅವಮೇಹ. ವಿ: [ಅಪಮೇಧ] ಮೋಡವಿಲ್ಲದ(ಗಉಡ)

ಅವಯ. 'ಅಪಯ' ಶಬ್ದವನ್ನು ನೋಡುವುದು

ಅವಯ. ನ: [ಅಬ್ಜ] ಕಮಲ, ಚಂದ್ರ, ಧನ್ವಂತರಿ, ನೀರುಹಲಸಿನ ಮರ, ನೂರು ಕೋಟಿ ಹತ್ತು ಸಾವಿರ ಲಕ್ಷ, ಕಣಗಿಲೆ ಗಿಡ
ಅವಯ. ವಿ: [ಅವಚ] ಕೆಳಗಿನ, ಉಚ್ಚವಲ್ಲದ, ಹೀನ, ಕೀಳು, ಪ್ರತಿಕೂಲ, ವಿರುದ್ಧ(ಭಗ)
ಅವಯಂಸ. ಪು: [ಅವತಂಸ] ಶಿರೋಭೂಷಣ (ಕುಮಾ), ಕರ್ಣಾಭರಣ(ಪಾಅ) ಒಡವೆ
ಅವಯಂಸ. ಸಕ: [ಅವತಂಸಯ್] ಅಲಂಕರಿಸು. 'ಅವಅಂಸಅಂತಿ'
ಅವಯಕ್ಖ. ಸಕ: [ಅಪ+ಈಕ್ಷ್] ಅಪೇಕ್ಷಿಸು, ನಿರೀಕ್ಷಿಸು, ಕಾಯು. 'ಅವಯಕ್ಖಹ'(ಣಾಯಾ)
ಅವಯಕ್ಖ. ಸಕ: [ಅವ+ಈಕ್ಷ್] ನೋಡು, ಆಮೇಲೆ ನೋಡು, ಎಚ್ಚರದಿಂದ ನೋಡು
ಅವಯಕ್ಖಾ. ಸ್ತ್ರೀ: [ಅಪೇಕ್ಷಾ] ಅಪೇಕ್ಷೆ, ಇಚ್ಛೆ, ಆಸೆ, ನಿರೀಕ್ಷಣೆ(ಣಾಯಾ) ಎಚ್ಚರಿಕೆ, ಗಮನ
ಅವಯಗ್ಗ. ನ: [ದೇ] ಅಂತ, ಅವಸಾನ, ಕೊನೆ(ಭಗ)
ಅವಯಚ್ಛ. ಸಕ: [ಅವ+ಗಮ್] ತಿಳಿ, ಅರಿತುಕೋ, 'ಅವಯಚ್ಛಇ'.
ಅವಯುಚ್ಛ. ಸಕ: [ದೃಶ್] ನೋಡು, ವ.ಕೃ- 'ಅವಯಚ್ಛಂತ'(ಕುಮಾ)
ಅವಯಚ್ಛಿಯ. ವಿ: [ದೃಷ್ಟ] ನೋಡಲ್ಪಟ್ಟ, ನೋಡಲ್ಪಟ್ಟ, ನೋಟ, ದರ್ಶನ(ಣಾಯಾ)
ಅವಯಚ್ಛಿಯ. ವಿ: [ದೇ] ಪ್ರಸಾರವಾದ
ಅವಯಜ್ಝ. ಸಕ: [ದೃಶ್] ನೋಡು, **'ಅವಯಜ್ಝಇ'**(ಹೇ)
ಅವಯಟ್ಠಿ. ಸ್ತ್ರೀ [ಅವತಷ್ಟಿ] ಸಣ್ಣದಾಗಿ ಮಾಡುವುದು, ತೆಳ್ಳಗೆ ಮಾಡುವುದು(ಆಚಾ)
ಅವಯಟ್ಠಿ. ವಿ: [ಅವಸ್ಥಾಯಿನ್] ಇರುವ, ವಾಸಮಾಡುವ, ಸ್ಥಿರವಾಗಿರುವ(ಆಚಾ)
ಅವಯಟ್ಠಿ. ಸ್ತ್ರೀ: [ಅವಕೃಷ್ಟಿ] ಆಕರ್ಷಣೆ, ಎಳೆದು ಹೊರಕ್ಕೆ ತರಲ್ಪಟ್ಟ, ನಿಕೃಷ್ಟವಾದ
ಅವಯುಡ್ಢಿಅ. ವಿ: [ದೇ] ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ(ದೇ)
ಅವಯಣ. ನ: [ಅವಚನ] ಕುತ್ಸಿತ ವಚನ, ಕೆಟ್ಟ ಭಾಷೆ, ನಿಂದೆ, ದೂಷಣೆ, ಮೌನ(ತಾ)
ಅವಯರ. ಸಕ: [ಅವ+ತೃ] ಕೆಳಗೆ ಇಳಿ, ಕೆಳಕ್ಕೆ ಬರು, ಜನ್ಮ ತಾಳು(ಪಉಮ)
ಅವಯರಿಅ. ಪು: [ದೇ] ವಿಯೋಗ, ವಿರಹ(ದೇ)
ಅವಯರಿಅ. ವಿ: [ಅಪಕೃತ] ಅಪಕಾರಮಾಡಲ್ಪಟ್ಟವನು, ತೊಂದರೆಗೊಳಗಾದ, ಅಪಕಾರ(ಸುಪಾ)
ಅವಯರಿಅ. ವಿ: [ಅವತೀರ್ಣ] ಮೇಲಿನಿಂದ ಕೆಳಕ್ಕೆ ಇಳಿದ, ಜನ್ಮತಾಳಿದ, ಭಾಷಾಂತರಿಸಿದ(ಸುರ)
ಅವಯತ್ರ. ಪು: [ಅವಯವ] ಶರೀರದ ಒಂದು ಅಂಗ, ಒಂದು ವಸ್ತುವಿನ ಭಾಗ, ತಾರ್ಕಿಕರ ಅನುಮಾನದಲ್ಲಿ ಪ್ರತಿಜ್ಞಾ-ಹೇತು, ಉದಾಹರಣಾದಿಗಳು, ಇವನ್ನು ಪ್ರತಿಪಾದಿಸುವ ನೈಯಾಯಿಕ ಗ್ರಂಥ(ದಸನಿ)
ಅವಯವಿ. ವಿ: [ಅವಯವಿನ್] ಅವಯವವನ್ನು ಹೊಂದಿರುವ(ತಾ)
ಅವಯಾಢ. 'ಓಗಾಢ' ಶಬ್ದವನ್ನು ನೋಡುವುದು
ಅವಯಾಣ. ನ: [ದೇ] ಎಳೆಯುವ ಹುರಿ, ಲಗಾಮು
ಅವಯಾಯ. ವಿ: [ಅವದಾತ] ನಿರ್ಮಲವಾದ ಪರಿಶುದ್ಧವಾದ
ಅವಯಾವ. ಪು: [ಅವಯಾವ] ಅಪರಾಧ, ದೋಷ(ಊಫ)
ಅವಯಾರ. ಪು: [ಅಪಕಾರ] ಕೆಡುಕು, ತೊಂದರೆ(ಸ)
ಅವಯಾರ. ಪು: [ಅವತಾರ] ಮೇಲಿನಿಂದ ಕೆಳಕ್ಕೆ ಇಳಿಯುವುದು, ಜನ್ಮ ತಾಳುವುದು, ಮನುಷ್ಯ ರೂಪದಲ್ಲಿ ದೇವತೆ ಕಾಣಿಸಿಕೊಳ್ಳುವುದು, ಯೋಜನೆ, ಪ್ರವೇಶ(ವಿಸೇ)
ಅವಯಾರ. ಪು: [ದೇ] ಮಾಘ-ಪೂರ್ಣಿಮೆಯ ಒಂದು ಉತ್ಸವ-ಇದರಲ್ಲಿ ಕಬ್ಬಿನಿಂದ ದಂತ ಮಂಜನದ ಕಡ್ಡಿಯನ್ನು ಮಾಡಲಾಗುತ್ತದೆ(ದೇ)
ಅವಯಾರಿ: ವಿ: [ಅಪಕಾರಿನ್] ಅಪಕಾರ ಮಾಡುವವನು
ಅವಯಾಲಿಯ.ವಿ:[ಅವಚಾಲಿತ] ಚಾಲನೆಗೊಳಿಸಲಾದ
ಅವಯಾಸ. ಸಕ: [ಶ್ಲಿಷ್] ಆಲಿಂಗಿಸು. **'ಅವಯಾಸಇ'**
ಅವಯಾಸ. ಸಕ: [ಅವ+ಕಾಶ್] ಪ್ರಕಟಿಸು
ಅವಯಾಸ. 'ಅವಗಾಸ' ಶಬ್ದವನ್ನು ನೋಡುವುದು (ಗಉಡ)
ಅವಯಾಸಣ. ನ: [ಶ್ಲೇಷಣ] ಆಲಿಂಗನ [ಬೃಹ] ಒಂದಕ್ಕೊಂದು ಸೇರುವುದು
ಅವಯಾಸಾವಿಯ. ವಿ: [ಶ್ಲೇಷಿತ] ಆಲಿಂಗಿಸಲ್ಪಟ್ಟ, ಒಂದಕ್ಕೊಂದು ಸೇರಿಸಲ್ಪಟ್ಟ(ವಿಪಾ)
ಅವಯಾಸಿಯ. ವಿ: [ಶ್ಲಿಷ್ಟ] ಆಲಿಂಗಿಸಲ್ಪಟ್ಟ(ಪಾಅ)

ಅವಯಾಸಿಣೋ. ಸ್ತ್ರೀ: [ದೇ] ಮೂಗಿನೊಳಗಡೆ ಹಾಕಲಾಗುತ್ತಿದ್ದ ಹುರಿ(ದೆ)

ಅವರ. ವಿ: [ಅಪರ] ಅನ್ಯ, ಇನ್ನೊಬ್ಬ, ಬೇರೆಯ(ಶ್ರಾ). **–ಹಾ.** ಅ: [–ಥಾ] ಅನ್ಯಥಾ(ಪಂಚಾ)

ಅವರ. ಸ: [ಅಪರ] ಹಿಂದಿನ ಕಾಲ ಅಥವಾ ದೇಶ, ಹಿಂದಿನ ಕಾಲ ಅಥವಾ ದೇಶದಲ್ಲಿದ್ದ, ಪಾಶ್ಚಾತ್ಯ, ಪಶ್ಚಿಮ ದಿಕ್ಕಿನಲ್ಲಿರುವ. ಮುಂದಿನ, ಅನಂತರದ, ಹತ್ತಿರದ. **–ಕಂಕಾ.** ಸ್ತ್ರೀ: –[ಕಂಕಾ] ಧಾತಕೀ ಖಂಡದ ಭರತ ಕ್ಷೇತ್ರದ ಒಂದು ರಾಜಧಾನಿ. ಈ ಹೆಸರಿನ "ಜ್ಞಾತಾ–ಧರ್ಮಕಥಾ" ಸೂತ್ರದ ಒಂದು ಅಧ್ಯಯನ(ಣಾಯಾ). **–ಣ್ಹ.** ಪು: [ಅಪರಾಹ್ನ] ಹಗಲಿನ ಒನೇ ಪ್ರಹರ, **–ದಾಹಿಣ.** ಪು: [–ದಕ್ಷಿಣ] ನೈರುತ್ಯ ದಿಕ್ಕು, ನೈರುತ್ಯ ದಿಕ್ಕಿನಲ್ಲಿರುವ, **–ದಾಹಿಣಾ.** ಸ್ತ್ರೀ: [–ದಕ್ಷಿಣಾ] ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳ ಮಧ್ಯದ ದಿಕ್ಕು: ನೈರುತ್ಯ ಕೋನ, **–ಘಾಣು.** ಸ್ತ್ರೀ: [–ಪಾರ್ಷ್ಣಿ] ಹಿಮ್ಮಡ, ಕಾಲಿನ ಗಂಟುಗಳ ಹಿಂಭಾಗ–**ರಾಯ.** ಪು: [–ರಾತ್ರ] ನೋಡಿ ಅವರತ್ತ=ಅಪರಾತ್ರ (ಆಚಾ). **–ವಿದೇಹ.** ಪು: [–ವಿದೇಹ] ಮಹಾವಿದೇಹವೆಂಬ ವರ್ಷದ ಪಶ್ಚಿಮಭಾಗ (ಠಾ). **–ವಿದೇಹಕೂಡ.** ನ: [–ವಿದೇಹಕೂಟ] ಪರ್ವತದ ಶಿಖರ–ವಿಶೇಷ. **'ಅಪರ'** ಶಬ್ದ ನೋಡುವುದು

ಅವರ. ಸ: [ಅವರ] ಮೇಲಿನ ಶಬ್ದವನ್ನುನೋಡುವುದು

ಅವರಂಮುಹ. ವಿ: [ಅಪರಾಙ್ಮುಖ] ಸಂಮುಖ, ಎದುರುಗಡೆ, ತೊಡಗಿದ(ಪಿ)

ಅವರಚ್ಛ. **'ಅಪರಚ್ಛ'** ಶಬ್ದವನ್ನು ನೋಡುವುದು

ಅವರಜ್ಜ. ಪು: [ದೇ] ಕಳೆದು ಹೋದ ದಿನ, ಬರಲಿರುವ ದಿನ, ಬೆಳಿಗ್ಗೆ

ಅವರಜ್ಝ. ಅಕ: [ಅಪ+ರಾಧ್] ಅಪರಾಧ ಮಾಡು, ನಷ್ಟವಾಗು, –**'ಅವರಜ್ಝಇ'**

ಅವರತ್ತ. ಪು: [ಅಪರರಾತ್ರ,ಅವರರಾತ್ರ] ರಾತ್ರಿಯ ಅನಂತರದ ಭಾಗ(ಭಗ)

ಅವರತ್ತ. ವಿ: [ಅಪರಕ್ತ] ವಿರಕ್ತ, ಪ್ರೀತಿಯಿಲ್ಲದ, ಸಂತೃಪ್ತನಲ್ಲದ, ಕೋಪಗೊಂಡಿರುವ, ಕೆಂಪಗಿಲ್ಲದ

ಅವರತ್ತಅ.} ಪು: [ದೇ] ಪಶ್ಚಾತ್ತಾಪ, ಅನುತಾಪ(ದೇ)
ಅವರತ್ತೇಅ.}

ಅವರದ್ಧ. ನ: [ಅಪರಾದ್ಧ] ಅಪರಾಧ, ತಪ್ಪು, ವಿ: ಅಪರಾಧವಮಾಡಿದವನು–ಅಪರಾಧಿ(ವಿಪಾ) ನಾಶವಾದ, ಜಾರಿದ

ಅವರದ್ಧಿಗ. ವಿ: [ಅಪರಾಧಿಕ] ಅಪರಾಧಿ, ದೋಷಿ, ಪು: ಇರುವೆಯ ಕಡಿತದ ಬೊಬ್ಬೆ, ಹಾವಿನಕಡಿತ.

ಅವರದ್ಧಿಗ.} ಪುಂಸ್ತ್ರೀ: [ಅಪರಾಧಿಕ] ಹಾವಿನ ಕಡಿತ,
ಅವರದ್ಧಿಯ.} ಸಣ್ಣ ಗಾಯ, ಕುರು(ಓಘ)

ಅವರಾ. ಸ್ತ್ರೀ: [ಅಪರಾ] ವಿದೇಹ–ವರ್ಷದ ಒಂದು ನಗರ(ಠಾ), ಪಶ್ಚಿಮ ದಿಕ್ಕು

ಅವರಾಇಂಯಾ. **'ಅಪರಾಇಂಯಾ'** ಶಬ್ದವನ್ನು ನೋಡುವುದು

ಅವರಾಇಸ. **'ಅಣ್ಣಾಇಸ'** ಶಬ್ದವನ್ನು ನೋಡುವುದು

ಅವರಾಜಿಯ. **'ಅಪರಾಇಯ'** ಶಬ್ದವನ್ನು ನೋಡುವುದು

ಅವರಾಹ. ಪು: [ಅಪರಾಧ] ಅಪರಾಧ, ತಪ್ಪು(ಆವ), ಅನಿಷ್ಟ, ಕೆಟ್ಟದು(ಪ್ರಾಸೂ)

ಅವರಾಹ. ಪು: [ದೇ] ಕಟಿ, ಸೊಂಟ, ಟೊಂಕ

ಅವರಾಹಿಯ. ನ: [ಅಪರಾಧಿತ] ಅಪರಾಧ, ತಪ್ಪು, ಅಹಿತ, ಅಪಕಾರ(ಹೇ)

ಅವರಾಹಿಲ. ವಿ: [ಅಪರಾಧಿನ್] ಅಪರಾಧಿ

ಅವರಾಹುತ್ತ. ವಿ: [ಅಪರಾಭಿಮುಖ] ವಿಮುಖ, ಹಿಂದಕ್ಕೆ ತಿರುಗಿಕೊಂಡಿರುವ, ಪಶ್ಚಿಮದ ಕಡೆಗೆ ಮುಖ ಮಾಡಿರುವ(ಆವ)

ಅವರಿ.} ಅ: [ಉಪರಿ] ಮೇಲೆ(ದೇ)
ಅವರಿಂ.}

ಅವರಿಕ್ಕ. ವಿ:[ದೇ] ಅವಕಾಶವಿಲ್ಲದಿರುವುದು, ಅನುಚಿತವಾದ ಸಮಯ, ಅಕಾಲ

ಅವರಿಗಲಿಅ. ವಿ: [ಅಪರಿಗಲಿತ] ಪೂರ್ಣ, ತುಂಬಿದ

ಅವರಿಜ್ಜ. ವಿ: [ದೇ] ಅದ್ವಿತೀಯ, ಅಸಾಧಾರಣ(ದೇ)

ಅವರಿಲ್ಲ. ವಿ: [ಉಪರಿ] ಉತ್ತರೀಯ ವಸ್ತ್ರ, ಚಾದರ(ಗಉಡ) ಮೇಲುಗಡೆ, ಮೇಲುಭಾಗ

ಅವರಿಲ್ಲ. ವಿ: [ಉಪರೀಯ] ಪಶ್ಚಿಮ ದಿಕ್ಕಿಗೆ ಸಂಬಂಧಿಸಿದ(ಣಾಯಾ)

ಅವರಿಹಡ್ಢಪುಸಣ. ನ: [ದೇ] ಅಪಕೀರ್ತಿ, ಕೆಟ್ಟಹೆಸರು, ಅಸತ್ಯ, ದಾನ(ದೇ)

ಅವರುಂಡ. ಸಕ: [ದೇ] ಆಲಿಂಗಿಸು. **'ಅವರುಂಡಇ'**

ಅವರುಂಡಣ.} ನ: [ದೇ] ಆಲಿಂಗನ(ಭವಿ)
ಅವರುಂಡಿಅ.}

ಅವರುತ್ತರ. ಪು: [ಅಪರೋತ್ತರ] ವಾಯವ್ಯ ದಿಕ್ಕು: ಪಶ್ಚಿಮ ಮತ್ತು ಉತ್ತರಗಳ ಮಧ್ಯದ ದಿಕ್ಕು,
ಅವರುದ್ಧ. ವಿ: [ಅವರುದ್ಧ] ಮುತ್ತಿಗೆ ಹಾಕಲ್ಪಟ್ಟ(ವಿಸೇ), ತಡೆಯಲ್ಪಟ್ಟ, ಬಂಧಿತ, ರಹಸ್ಯವಾದ
ಅವರುಪ್ಪರ. **'ಅವರೊಪ್ಪರ'** ಶಬ್ದವನ್ನು ನೋಡುವುದು
ಅವರುಹ. ಅಕ: [ಅವ+ರುಹ] ಕೆಳಕ್ಕೆ ಇಳಿ,
ಅವರೂವ. **'ಅಪುವ್ವ'** ಶಬ್ದವನ್ನು ನೋಡುವುದು
ಅವರೊಪ್ಪರ.} ವಿ: [ಪರಸ್ಪರ] ತಮ್ಮ ತಮ್ಮಲ್ಲಿ(ಹೇ)
ಅವರೋವರ.}
ಅವರೋಹ. ಪು: [ಅವರೋಧ] ಅಂತಃಪುರ, ಅಂತಃಪುರದಲ್ಲಿರುವ ಹೆಣ್ಣು, ನಗರವನ್ನು ಸೈನ್ಯದಿಂದ ಮುತ್ತಿಗೆ ಹಾಕುವುದು(ನಿಚೂ), ತಡೆ, ಆಚ್ಛಾದನ,-ಜುವಇ.ಸ್ತ್ರೀ:[-ಯುವತಿ] ಅಂತಃಪುರದ ಯುವತಿ(ಪಿ)
ಅವರೋಹ. ಪು: [ದೇ] ಕಟಿ, ಸೊಂಟ, ನಡು
ಅವರೋಹ. ಪು: [ಅವರೋಹ] ಬುಡದಿಂದ ಮೇಲಿನ ತನಕ ಬೆಳೆಯುವ ಬಳ್ಳಿ, ಬಿಳಿಲು, ಹುಲ್ಲು, ಕೆಳಕ್ಕೆ ಇಳಿದು ಬರುವುದು(ಗಉಡ)
ಅವಲಂಬ. ಸಕ: [ಅವ+ಲಂಬ್] ಆಧಾರ ಪಡೆ, ಸಹಾಯ ಪಡೆ, ಆಶ್ರಯಿಸು, ನೇತುಬೀಳು **'ಅವಲಂಬೇಇ'. ವ. ಕೃ: ಅವಲಂಬಮಾಣ**
ಅವಲಂಬ.} ಪು: [ಅವಲಂಬ, -ಕ] ಆಧಾರ, ಆಶ್ರಯ,
ಅವಲಂಬಗ.} ಒತ್ತಾಸೆ, ಊರುಗೋಲು, ಸಹಾಯ ಪಡೆಯುವವನು ನೇತುಬೀಳುವವನು(ಔಪ)
ಅವಲಂಬಣ. ನ: [ಅವಲಂಬನ] ಆಶ್ರಯ, ಆಧಾರ, ಒರಗುವುದು, ನೆರವು(ತಾ)
ಅವಲಂಬಣಯಾ. ಸ್ತ್ರೀ: [ಅವಲಂಬನತಾ] ಅನಾವೃಷ್ಟಿಯ ಜ್ಞಾನ.
ಅವಲಂಬಿ. ವಿ: [ಅವಲಂಬಿನ್] ಆಶ್ರಯಿಸುವವನು ಆಧರಿಸುವವನು(ಗಉಡ)
ಅವಲಂಬಿಯ. ವಿ: [ಅವಲಂಬಿತ] ಆಶ್ರಯಿಸಿದ, ಆಧರಿಸಿದ, ಒರಗಿಕೊಂಡ(ಣಾಯಾ)
ಅವಲಂಬಿಯರ. **'ಅವಲಂಬಿ'** ಶಬ್ದವನ್ನು ನೋಡುವುದು
ಅವಲಕ್ಖಣ. ನ: [ಅಪಲಕ್ಷಣ] ಕೆಟ್ಟ ಲಕ್ಷಣ, ಕೆಟ್ಟ ಅಭ್ಯಾಸ
ಅವಲಗ್ಗ. ವಿ: [ಅವಲಗ್ನ] ಅಂಟಿಕೊಂಡಿರುವ, ಸೇರಿಕೊಂಡಿರುವ, ಮೇಲಕ್ಕೆ ಹತ್ತಿದ(ಮಹಾ) ದೇಹದ ಮಧ್ಯಭಾಗ, ಸೊಂಟ
ಅವಲತ್ತ. ವಿ: [ಅಪಲಪಿತ] ಮುಚ್ಚುಮರೆ, ನಿಜವನ್ನು ಮರೆಮಾಚುವುದು, ಅಡಗಿಸಿಡಲಾದ(ಸ)
ಅವಲದ್ಧ. ವಿ: [ಅಪಲಬ್ಧ] ಅಗೌರವದಿಂದ ಪ್ರಾಪ್ತವಾದ
ಅವಲದ್ಧಿ. ಸ್ತ್ರೀ: [ಅವಲಬ್ಧಿ] ಪಡೆಯದಿರುವುದು, ತಲುಪದಿರುವುದು(ಭಗ)
ಅವಲಯ. ನ: [ದೇ] ಮನೆ, ಗೃಹ(ದೇ)
ಅವಲವ. ಸಕ: [ಅಪ+ಲಪ್] ಸುಳ್ಳು ಹೇಳು, ಸತ್ಯವನ್ನು ಮುಚ್ಚಿಡು(ಸುಪಾ)
ಅವಲಾವ. ಪು: [ಅಪಲಾಪ] ಸತ್ಯವನ್ನು ಅಡಗಿಸುವುದು, ವಾಸ್ತವವನ್ನು ಅಲ್ಲವೆಂದು ಹೇಳುವುದು, ಪ್ರೇಮ, ಸ್ತುತಿ (ನಿಚೂ)
ಅವಲಿಅ. ನ: [ದೇ] ಅಸತ್ಯ, ಸುಳ್ಳು
ಅವಲಿಂಬ. ಪು: [ಅವಲಿಂಬ] ಜೀವ ಅಥವಾ ಪದ್ಗಲಗಳಿಂದ ತುಂಬಿದ ಪ್ರದೇಶ(ತಾ)
ಅವಲಿಚ್ಛ. ವಿ: [ದೇ] ಪಡೆಯದ, ಸೇರದಿರುವ, ತಲುಪದಿರುವ(ಸೇ)
ಅವಲಿತ್ತ. ವಿ: [ಅವಲಿಪ್ತ] ಲೇಪನಮಾಡಲಾದ, ಬಳಿಯಲ್ಪಟ್ಟ, ಕೊಬ್ಬಿದ, ಅಹಂಕಾರದಿಂದ ಕೂಡಿದ, ವ್ಯಾಪಿಸಿದ, ಹರಡಿದ
ಅವಲುಅ. **'ಅವಲ್ಲಯ'** ಶಬ್ದವನ್ನು ನೋಡುವುದು
ಅವಲುಆ. ಸ್ತ್ರೀ: [ದೇ] ಸಿಟ್ಟು, ಕೋಪ
ಅವಲುತ್ತ. ವಿ: [ಅವಲುಪ್ತ] ಲೋಪ ಹೊಂದಿದ ನಾಶವಾದ(ನಾಟ)
ಅವಲೇಹ. ಪು: [ಅವಲೇಹ] ನೆಕ್ಕುವುದು, ಲೇಹ್ಯ
ಅವಲೇಅ}. ಪು: [ಅವಲೇಪ] ಅಹಂಕಾರ, ಗರ್ವ,
ಅವಲೇವ}. ಲೇಪನ, ಅನಾದರ, ತಿರಸ್ಕಾರ(ಗಉಡ) ಮುತ್ತಿಗೆ
ಅವಲೇಹಣಿಯಾ. ಸ್ತ್ರೀ: [ಅವಲೇಖನಿಕಾ] ಬಿದಿರಿನ ಹೊಟ್ಟು, ಧೂಳು ಹೊಡೆಯುವ ಒಂದು ಉಪಕರಣ(ನಿಚೂ)
ಅವಲೇಹಿ}. ಸ್ತ್ರೀ: [ಅವಲೇಖಿ, -ಕಾ] ಬೊಂಬಿನ
ಅವಲೇಹಿಯಾ}. ಹೊಟ್ಟು, ಒಂದು ಬಗೆಯ ಲೇಹ್ಯ, ಹಾಲನ್ನು ಅಕ್ಕಿಹಿಟ್ಟನ್ನು ಹಾಲಿನೊಂದಿಗೆ ಬೆರೆಸಿ ಬೇಯಿಸಿದ್ದು(ಪಭಾ)
ಅವಲೋಅ. ಸಕ: [ಅವ+ಲೋಕ್] ನೋಡು, ಅವಲೋಕಿಸು ವ. ಕೃ-**ಅವಲೋಂತ**

ಅವಲೋಗ}. ಪು: [ಅವಲೋಕ] ಅವಲೋಕನ,
ಅವಲೋಯ}. ನೋಡುವುದು(ಸುಪಾ)
ಅವಲೋಯಣ. ನ: [ಅವಲೋಕನ] ನೋಡುವುದು, ಸ್ಥಾನ ವಿಶೇಷ, ಒಂದು ಶಿಖರ–ವಿಶೇಷ(ತೋ)
ಅವಲೋಯಣೀ. ಸ್ತ್ರೀ: [ಅವಲೋಕನೀ] ದೇವಿ–ವಿಶೇಷ
ಅವಲೋವ. ಪು: [ಅವಲೋಪ] ಮುಚ್ಚಿಡುವದು, ಅಡಗಿಸಿಡುವುದು(ಪಣ್ಣ)
ಅವಲೋವಣೀ. ಸ್ತ್ರೀ: [ಅಪಲೋಪನೀ] ಒಂದು ವಿದ್ಯಾವಿಶೇಷ(ಪಉಮ)
ಅವಲೋಹ. ವಿ: [ಅಪಲೋಹ]ಲೋಹ–ರಹಿತ(ಗಉಡ)
ಅವಲ್ಲಯ. ನ: [ದೇ. ಅವಲ್ಲಕ] ದೋಣಿಯನ್ನು ಹುಟ್ಟುಹಾಕಲು ಬಳಸುವ ಉಪಕರಣ(ಆಚಾ)
ಅವಲ್ಲಾವ}. ಪು: [ದೇ. ಅಪಲಾಪ] ಸುಳ್ಳು ಹೇಳುವುದು,
ಅವಲ್ಲಾವಯ}. ಸತ್ಯವನ್ನು ಮುಚ್ಚಿಡುವುದು
ಅವವ. ನ: [ಅವವ] ಒಂದು ಸಂಖ್ಯಾ–ವಿಶೇಷ, 'ಅವವಾಂಗ' ಅನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ
ಅವವಂಗ. ನ: [ಅವವಾಂಗ] ಒಂದು ಸಂಖ್ಯಾ–ವಿಶೇಷ. 'ಅಡಡ' ಅನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ತಾ)
ಅವವಕ್ಕಲ. ವಿ: [ಅಪವಲ್ಕಲ] ತ್ವಚೆಯಿಲ್ಲದ(ಗಉಡ)
ಅವವಕ್ಕಾ. ಸ್ತ್ರೀ: [ಅವಪಾಕ್ಯಾ] ಚಿಕ್ಕ ತವ, ಹೆಂಚು
ಅವವಗ್ಗ. ಪು: [ಅಪವರ್ಗ] ಮೋಕ್ಷ (ಆವಮ), ದಾನ, ಸಮಾಪ್ತಿ, ಕ್ರಿಯಾ ಸಾಫಲ್ಯ
ಅವವಟ್ಟಣ. ನ: [ಅಪವರ್ತನ] ನಿರ್ಗಮನ, ಹೊರಡುವುದು, ಕರ್ಮ–ಪರಮಾಣುಗಳ ದೀರ್ಘ ಸ್ಥಿತಿಯನ್ನು ಕಡಿಮೆ ಮಾಡುವುದು (ಪಂಚ)
ಅವವಟ್ಟಣಾ. ಸ್ತ್ರೀ: [ಅಪವರ್ತನಾ]. ಮೇಲಿನ ಶಬ್ದವನ್ನು ನೋಡುವುದು
ಅವವತ್ತ. ವಿ: [ಅಪವೃತ್ತ] ಹಿಂತಿರುಗಿ ಬಂದವನು, ನಿರ್ಗಮಿಸಿದವನು(ದೇ)
ಅವವರಕ: ಪು: [ಅಪವರಕ] ಸಣ್ಣ ಮನೆ, ಚಿಕ್ಕ ಕೋಣೆ
ಅವವಹ. ಸಕ: [ಅಪ+ವಹ್] ಹೊರಗೆ ಎಸೆ, ದೂರ ತಳ್ಳು
ಅವವಾಇಅ. ವಿ; [ಅಪವಾದಿಕ] ಅಪವಾದಕ್ಕೆ ಸಂಬಂಧಿಸಿದ
ಅವವಾಇಯ. ವಿ: [ಅಪವಾದಿಕ] ದೋಷವಿರುವವನು
ಅವವಾಯ. ಪು: [ಅಪವಾದ] ವಿಶೇಷ ನಿಯಮ, ಅಪವಾದ, ನಿಂದೆ, ಅಪಕೀರ್ತಿ(ಪಣ್ಣ), ಆಜ್ಞೆ, ಅರ್ಪಣೆ, ನಿಶ್ಚಯ, ನಿರ್ಣಯವನ್ನು ಹೊಂದಿರುವ ತತ್ತ್ವ(ನಿಊ)
ಅವವಾಸ. ಸಕ: [ಅವ+ಕಾಶ್] ಅವಕಾಶ ನೀಡು, ಜಾಗ ಕೊಡು.
ಅವವಾಹ. ಸಕ: [ಅವ+ಗಾಹ್] ಸ್ನಾನ ಮಾಡು 'ಅವವಹ ಇ'
ಅವವಿಹ. ಪು: [ಅವವಿಧ] ಗೋಶಾಲಕನ ಒಬ್ಬ ಭಕ್ತನ ಹೆಸರು(ಭಗ)
ಅವವೀಡ. ಪು: [ಅಪಪೀಡ] ಅದುಮುವಿಕೆ, ಒತ್ತುವುದು (ಗಉಡ)
ಅವವೀಡಣ. ನ: [ಅವಪೀಡನ] ಮೇಲಿನ ಶಬ್ದವನ್ನು ನೋಡುವುದು
ಅವಸ. ವಿ: [ಅವಶ] ಪರಾಧೀನ, ಸ್ವತಂತ್ರನಲ್ಲದ, ಕೆಲಸವಿಲ್ಲದ, ಇಚ್ಛೆಯಿಲ್ಲದ(ಸೂ)
ಅವಸಂ. ಅ:[ಅವಶ್ಯಮ್] ಖಂಡಿತ, ನಿಶ್ಚಯವಾಗಿಯೂ
ಅವಸಉಣ. ನ: [ಅಪಶಕುನ] ಅನಿಷ್ಟ ಸೂಚಕ ನಿಮಿತ್ತ, ಕೆಟ್ಟ ಶಕುನ(ಓಘ)
ಅವಸಂಕಿ. ವಿ: [ಅಪಶಂಕಿನ್] ನಿರ್ಗಮಿಸುವವನು
ಅವಸಕ್ಕ. ಸಕ: [ಅವ+ಷ್ವಷ್ಕ್] ಹಿಂದೆ ಸರಿ, ಹಿಮ್ಮೆಟ್ಟು (ಆಚಾ)
ಅವಸಕ್ಕಣ. ನ: [ಅವಷ್ವಷ್ಕಣ] ಹಿಂದೆ ಸರಿಯುವುದು, ನಿರ್ಗಮಿಸುವುದು(ಪಂಚಾ)
ಅವಸಕ್ಕಿ. ವಿ: [ಅವಷ್ವಷ್ಕಿನ್] ಹಿಂದೆ ಸರಿಯುವವನು (ಆಚಾ)
ಅವಸಣ್ಣ. ವಿ: [ದೇ] ಹನಿಹನಿಯಾಗಿ ಬಿದ್ದ, ತೊಟ್ಟಿಕ್ಕಿದ, ಹನಿಹನಿಯಾಗಿ ಬಿದ್ದ(ಷಡ್)
ಅವಸಣ್ಣ. ವಿ: [ಅವಸನ್ನ] ನಿಮಗ್ನ, ತಲ್ಲೀನ, ಮುಳುಗಿದ
ಅವಸದ್ದ. ಪು: [ಅಪಶಬ್ದ] ಅಶುದ್ಧಶಬ್ದ, ಕೆಟ್ಟಮಾತು (ಸುರ), ನಿಂದೆಯ ಮಾತುಗಳು, ಬೈಗಳು, ಅಪಕೀರ್ತಿ(ಕುಮಾ)
ಅವಸಪ್ಪ. ಅಕ: [ಅವ+ಸೃಪ್] ಹಿಂದೆ ಸರಿ, ನಿವೃತ್ತನಾಗು ಕೆಳಕೆಕಿಳಿ, ಇಳಿ. 'ಅವಸಪ್ಪಂತಿ'(ಪಿ)
ಅವಸಪ್ಪಣ. ನ: [ಅವಸರ್ಪಣ] ನಿರ್ಗಮನ, ಹೊರಡುವುದು, ಬದಲಾವಣೆ, ಅಪಹರಣ

ಅಪಸಪ್ಪಿ. ವಿ: [ಅಪಸರ್ಪಿನ್] ಹಿಂದೆ ಸರಿಯುವವನು, ನಿವೃತ್ತನಾಗುವವನು (ಸೂಅ)
ಅವಸಪ್ಪಿಯ. ವಿ: [ಅಪಸರ್ಪಿತ] ಹಿಂದೆ ಸರಿದ, ನಿವೃತ್ತನಾದ, ಕೆಳಕ್ಕೆ ಇಳಿದ(ಭವಿ)
ಅವಸಪ್ಪಿಣೀ. 'ಓಸಪ್ಪಿಣೀ' ಶಬ್ದವನ್ನು ನೋಡುವುದು
ಅವಸಮಿಆ. (ದೇ). 'ಅಂಬಸಮೀ' ಶಬ್ದವನ್ನು ನೋಡುವುದು
ಅವಸಯ. ವಿ: [ಅಪಶದ] ನೀಚ, ಅಧಮ (ಠಾ)
ಅವಸರ. ಅಕ: [ಅಪ+ಸೃ] ಹಿಂದೆ ಸರಿ, ಹಿಮ್ಮೆಟ್ಟು, ನಿವೃತ್ತನಾಗು. 'ಅವಸರಇ'(ಹೇ)
ಅವಸರ. ಸಕ: [ಅವ+ಸೃ] ಆಶ್ರಯಿಸು,
ಅವಸರ. ಪು: [ಅವಸರ] ಸಮಯ, ಅವಕಾಶ, ಸಕಾಲ, ವಿರಾಮ, ಪೀಠಿಕೆ, ಪ್ರಸ್ತಾವ,(ಪಾಅ)
ಅವಸರಣ. 'ಓಸರಣ' ಶಬ್ದವನ್ನು ನೋಡುವುದು
ಅವಸರಣ. ನ: [ಅಪಸರಣ] ಹಿಂದೆ ಸರಿಯುವುದು, ನಿವೃತ್ತಿ(ಗಉಡ)
ಅವಸರಿಯ. ವಿ: [ಆವಸರಿಕ] ಸಾಮಯಿಕ, ಸಮಯಕ್ಕೆ ಉಪಯುಕ್ತವಾದ
ಅವಸರೀರ. ಪು: [ಅಪಶರೀರ] ರೋಗ, ವ್ಯಾಧಿ(ಉಫ)
ಅವಸವಸ. ವಿ: [ಅಪಸ್ವವಶ] ಪರಾಧೀನ, ಅಸ್ವತಂತ್ರ
ಅವಸವ್ವ. ನ: [ಅಪಸವ್ವ] ಎಡಭಾಗ
ಅವಸವ್ವಯ. ನ: [ಅಪಸವ್ಯಕ] ಶರೀರದ ಬಲಭಾಗ
ಅವಸಹ. ಪು: [ಆವಸಥ] ಮನೆ, ಗೃಹ(ಉತ್ತ)
ಅವಸಹ. ನ: [ದೇ] ಉತ್ಸವ, ನಿಯಮ(ದೇ)
ಅವಸಾಇಅ. ವಿ: [ಅಪ್ರಸಾದಿತ] ಅಸಮಾಧಾನ ಗೊಳಿಸಲಾದ, ಕೋಪಕ್ಕೀಡುಮಾಡಲಾದ(ಸೇ)
ಅವಸಾಣ. ನ: [ಅವಸಾನ] ಅಂತ್ಯ, ನಾಶ, ಕೊನೆಯ ಭಾಗ(ಗಉಡ), ವಿರಾಮ, ಸೀಮೆ(ಗಉಡ)
ಅವಸಾಯ. ಪು: [ಅವಶ್ಯಾಯ] ಹಿಮ, ಹೆಪ್ಪುಗಟ್ಟಿದ ಮಂಜು(ಗಉಡ) ಗರ್ವ, ಅಭಿಮಾನ
ಅವಸಾರಿಅ. ವಿ: [ಅಪ್ರಸಾರಿತ] ಹರಡಲ್ಪಡದ, ವ್ಯಾಪಿಸಲ್ಪಡದ(ಸೇ)
ಅವಸಾವಣ. ನ: [ಅವಸ್ರಾವಣ] ಒಂದು ಬಗೆಯ ಹುಳಿಪದಾರ್ಥ, ಅನ್ನವೇ ಮುಂತಾದ್ದರ ನೀರು, ಗಂಜಿ
ಅವಸಾವಣಿಯಾ. ಸ್ತ್ರೀ: [ಅವಸ್ವಾಪನಿಕಾ] ನಿದ್ರೆ ಬರಿಸುವ ವಿದ್ಯೆ, ನಿದ್ದೆಮಾಡಿಸುವ ವಿದ್ಯೆ
ಅವಸಿಅ. ವಿ: [ಅಪಸೃತ] ಹಿಂದೆ ಸರಿದ (ಹೇ)
ಅವಸಿಅ. ವಿ: [ಅವಸಿತ] ಸಮಾಪ್ತ, ಮುಗಿಸಲ್ಪಟ್ಟ, ಕೊನೆಗೊಂಡ(ವಿಸೇ) ಚೆನ್ನಾಗಿ ಹಣ್ಣಾಗಿರುವ, ತಿಳಿಯಲ್ಪಟ್ಟ, ಗತಿ, ಒಕ್ಕಿದ ಧಾನ್ಯ
ಅವಸಿಜ್ಜ. ಅಕ: [ಅವ+ಸದ್] ಸೋಲು, ಪರಾಜಿತನಾಗು
ಅವಸಿತ್ತ. ವಿ: [ಅಪಸಿಕ್ತ] ನೆನೆದಿರುವ, ತೊಯ್ದಿರುವ
ಅವಸಿದ.(ಶೌ). ವಿ: [ಅವಸಿತ] ಸಮಾಪ್ತ, ಮುಗಿಸಲ್ಪಟ್ಟ, ಕೊನೆಗೊಂಡ(ವಿಸೇ) ಚೆನ್ನಾಗಿ ಹಣ್ಣಾಗಿರುವ,
ಅವಸಿದ್ಧಂತ. ಪು: [ಅಪಸಿದ್ಧಾಂತ] ದೂಷಿತ ಸಿದ್ಧಾಂತ, ತಪ್ಪು ಸಿದ್ಧಾಂತ (ವಿಸೇ)
ಅವಸೀಯ. ಅಕ: [ಅವ+ಸದ್] ಕ್ಲೇಶ ಹೊಂದು, ಖಿನ್ನನಾಗು, ನಾಶವಾಗು, ಸೋಲು, ಆಯಾಸಗೊಳ್ಳು, ಕೊನೆಗೊಳ್ಳು
ಅವಸುಅ. ಅಕ: [ಉದ್+ವ] ಒಣಗು(ಒಣಗುವುದು). 'ಅವಸುಅಇ'(ಷಡ್)
ಅವಸೇಅ. ಪು: [ಅವಸೇಕ] ಸಿಂಪಡಿಸುವುದು, ಸಿಂಪಡಿಕೆ
ಅವಸೇಅ. ವಿ: [ಅವಸೇಯ] ತಿಳಿದುಕೊಳ್ಳಲು ಯೋಗ್ಯವಾದ್ದು(ವಿಸೇ))
ಅವಸೇ(ಅಪ). 'ಅವಸಂ' ಶಬ್ದವನ್ನು ನೋಡುವುದು
ಅವಸೇಣ. 'ಅವಸಂ' ಶಬ್ದವನ್ನು ನೋಡುವುದು.
ಅವಸೇಸ. ಪು: [ಅವಶೇಷ] ಉಳಿದಿರುವುದು, ಉಳಿಕೆ. ವಿ: ಎಲ್ಲ(ಉಪ)
ಅವಸೇಸಿಯ. ವಿ: [ಅವಶೇಷಿತ] ಸಮಾಪ್ತಿಗೊಳಿಸಿದ, ದಡ ಮುಟ್ಟಿಸಲಾದ, ಉಳಿಕೆ, ಶೇಷ, ಹೆಚ್ಚಾದ
ಅವಸೇಹ. ಸಕ: [ಗಮ್] ಹೋಗು(ಹೋಗುವದು). **'ಅವಸೇಹಇ'**
ಅವಸೇಹ. ಅಕ: [ನಶ್] ಓಡು, ಪಲಾಯನ ಮಾಡು. 'ಅವಸೇಹಇ'
ಅವಸೋಇಯಾ. ಸ್ತ್ರೀ: [ಅವಸ್ವಾಪಿಕಾ] ನಿದ್ರೆ(ಸುಪಾ)
ಅವಸೋಗ. ವಿ: [ಅಪಶೋಕ] ಶೋಕ ರಹಿತ, ದುಃಖವಿಲ್ಲದ, ದೇವ–ವಿಶೇಷ(ದೀವ)
ಅವಸೋಣ. ವಿ: [ಅಪಶೋಣ] ಕಿಂಚಿತ್ ಕೆಂಪು (ಗಉಡ)
ಅವಸೋವಣಿ. ಸ್ತ್ರೀ: [ಅಪಸ್ವಾಪನೀ] ನಿದ್ರೆ(ಸುಪಾ)
ಅವಸ್ಸ. ವಿ: [ಅವಶ್ಯ] ಅನಿವಾರ್ಯ, ತಪ್ಪಿಸಲಾಗದ, ನಿಯತ(ಆವಮ). **–ಕಮ್ಮ.** ನ: [**–ಕರ್ಮನ್**] ಮಾಡಲೇ ಬೇಕಾದ ಕೆಲಸ(ಆಚೂ). **–ಕರಣಿಜ್ಜ.**

ವಿ: [–ಕರಣೀಯ] ಅನಿವಾರ್ಯವಾಗಿ ಮಾಡಲು ಅರ್ಹವಾದ ಕೆಲಸಗಳು.–**ಕಿರಿಯಾ.** ಸ್ತ್ರೀ:[–ಕ್ರಿಯಾ] ಅವಶ್ಯವಾಗಿ ಮಾಡಬೇಕಾದ ಕಾರ್ಯ. –**ಕಿಚ್ಚ.** ವಿ: [–ಕೃತ್ಯ] ಆವಶ್ಯಕ ಕಾರ್ಯ.

ಅವಸ್ಸಂ. **ಅ:** [**ಅವಶ್ಯಮ್**] ಅನಿವಾರ್ಯವಾದ, ನಿಶ್ಚಿತವಾದ

ಅವಸ್ಸಪ್ಪಿಣೀ. **'ಅವಸಪ್ಪಿಣೀ'** ಶಬ್ದವನ್ನು ನೋಡುವುದು.

ಅವಸ್ಸಾಅ. **'ಅವಸಾವ'** ಶಬ್ದವನ್ನು ನೋಡುವುದು.

ಅವಸ್ಸಿಯ. ವಿ: [ಅವಾಶ್ರಿತ] ಆಶ್ರಿತ, ಸಂಬಂಧಿಸಿರುವ, ಸೇರಿಕೊಂಡಿರುವ(ಅನು)

ಅವಹ.ಸಕ: [ರಚ್]ನಿರ್ಮಿಸು, ರಚಿಸು, ಮಾಡು(ಹೇ)

ಅವಹ. **ಸ:** [ಉಭಯ] ಎರಡೂ, ಅವಳಿಗಳು(ಹೇ)

ಅವಹ. ವಿ: [ಅವಹ]ಹರಿಯದಿರುವ, ಚಲಿಸದಿರುವ,

ಅವಹಇ. **ಸ್ತ್ರೀ:**[**ಅಪಹತಿ**] ವಿನಾಶ, ನಾಶಪಡಿಸುವುದು

ಅವಹಟ್ಟ.ವಿ: [**ದೇ**] ಅಭಿಮಾನಿ, ಗರ್ವಿತ, ಅಹಂಕಾರಿ(ದೇ)

ಅವಹಟ್ಟು. **'ಅವಹರ=ಅಪ+ಹೃ'** **'ಅವಸಂ'** ಶಬ್ದವನ್ನು ನೋಡುವುದು

ಅವಹಡ. ವಿ: [**ಅಪಹೃತ**] ಒಯ್ಯಲ್ಪಟ್ಟ, ಕದಿಯಲ್ಪಟ್ಟ (ಪಣ್ಣ)

ಅವಹಡ. ವಿ: [**ಅವಹೃತ**] **ಮೇಲಿನ** ಶಬ್ದವನ್ನು ನೋಡುವುದು

ಅವಹಡ. **ನ:** [ದೇ] ಒನಕೆ, ಒನಕೆಯ ಶಬ್ದ

ಅವಹಣ್ಣ. **ಪು:** [ದೇ] ಒರಳು(ದೇ), ಸುಗಂಧ ದ್ರವ್ಯ, ಗುಗ್ಗುಳ

ಅವಹತ್ಥ. **ಪು:** [**ಅಪಹಸ್ತ**] ಹೊಡೆಯಲು ಅಥವಾ ಎಳೆದು ಆಚೆಹಾಕಲು ಎತ್ತಿದ ಕೈ(ಮಹಾ)

ಅವಹತ್ಥ. **ಸಕ:** [**ಅಪಹಸ್ತಯ್**] ಕೈಯನ್ನು ಮೇಲಕ್ಕೆ ಎತ್ತು, ತ್ಯಜಿಸು, ಬಿಟ್ಟುಬಿಡು. ಅಪಹತ್ಥೇಇ

ಅವಹತ್ಥರಾ. **ಸ್ತ್ರೀ:** [**ದೇ**] ಏಟುಕೊಡುವುದು, ಕಾಲಿನಿಂದ ಒದೆಯುವುದು(ದೇ)

ಅವಹತ್ಥಿಯು. ವಿ: [**ಅಪಹಸ್ತಿತ್**] ಬಿಡಲ್ಪಟ್ಟ, ದೂರಮಾಡಿದ(ಗಾ)

ಅವಹಯ. ವಿ: [ಅಪಹತ] ನಷ್ಟ, ನಾಶಪಡಿಸಲಾದ(ಸೇ)

ಅವಹಯ. ವಿ: [**ಅಘಾತಕ**] ಘಾತವುಂಟುಮಾಡದ, ಹಿಂಸೆವುಂಟುಮಾಡದ

ಅವಹರ. **ಸಕ:** [ಗಮ್] ಹೋಗು, **'ಅವಹರಇ'**(ಹೇ)

ಅವಹರ. ಅಕ: [ನಶ್] ಓಡಿ ಹೋಗು, 'ಅವಹರಇ'

ಅವಹರ. ಸಕ: [ಅಪ+ಹೃ] ಕಿತ್ತುಕೊಳ್ಳು, ಕದಿ, ಭಾಗ ಕೊಡು 'ಅವಹರಇ'. ಪರಿತ್ಯಜಿಸು,

ಅವಹರ. ವಿ: [**ಅಪಹರ**] ಅಪಹರಿಸುವವನು, ಕಸಿದುಕೊಳ್ಳುವವನು(ಗಾ)

ಅವಹರಣ. ನ: [**ಅಪಹರಣ**] ಕಸಿದುಕೊಳ್ಳು, ಕದಿಯುವುದು(ಕುಮಾ)

ಅಪಹರಿಅ. ವಿ: [**ಗತ**] ಹೊರಟು ಹೋದ, ತಲುಪಿರುವ, ಕಳೆದು ಹೋದ, ಗಮನ (ಕುಮಾ)

ಅವಹರಿಅ. ವಿ: [**ಅಪಹೃತ**] ಕದಿಯಲಾದ, ಕಸಿದುಕೊಳ್ಳಲಾದ

ಅವಹಸ. **ಸಕ:** [**ಅವ, ಅಪ+ಹಸ್**] ತಿರಸ್ಕರಿಸು, ತುಚ್ಛೀಕರಿಸು, ಗೇಲಿಮಾಡು, ನಿಂದಿಸು

ಅವಹಸಿಯ. ವಿ: [**ಅಪ, ಅವಹಸಿತ**] ತಿರಸ್ಕರಿಸಲ್ಪಟ್ಟ, ಗೇಲಿಗೆ ಗುರಿಯಾದ(ನಾಯಾ)

ಅವಹಾಡ. **ಸಕ:** [ದೇ] ಆಕ್ರೋಶಗೊಳ್ಳು, ಕೂಗಾಡು, ಬೈಯು

ಅವಹಾಡಿಅ. ವಿ: [ದೇ] ಉತ್ಕೃಷ್ಟ, ಯಾರ ಮೇಲೆ ಆಕ್ರೋಶಗೊಳ್ಳಲಾಗಿದೆಯೋ ಅವನು

ಅವಹಾಣ. ನ: [**ಅವಧಾನ**] ಲಕ್ಷ್ಯ, ಗಮನ, ಉಪಯೋಗ, ಜ್ಞಾನ, ತಿಳಿಯುವುದು(ವಿಸೇ)

ಅವಹಾಯ. **ಪು:** [ದೇ] ವಿರಹ, ವಿಯೋಗ (ದೇ)

ಅವಹಾಯ. **ಅ:** [**ಅಪಹಾಯ**] ಬಿಟ್ಟುಬಿಟ್ಟು, ತ್ಯಜಿಸಿ

ಅವಹಾರ. **ಸಕ:** [**ಅವ+ಧಾರಯ್**] ನಿರ್ಣಯಿಸು, ನಿಶ್ಚಯಿಸು(ಭವಿ)

ಅವಹಾರ(ಅಪ). **'ಅವಹರ=ಅಪ+ಹೃ'** ಶಬ್ದವನ್ನು ನೋಡುವುದು

ಅವಹಾರ. **ಪು:** [**ಅಪಹಾರ**] ಅಪಹರಣ, ಕದಿಯುವುದು, ದೂರ ಮಾಡುವುದು, ಬಿಟ್ಟುಬಿಡುವುದು(ಣಾಯಾ), ಕಳ್ಳತನ, ಹೊರಗೆ ಹಾಕುವುದು, ಭಾಗಮಾಡುವುದು(ಭಗ)

ಅವಹಾರ. **ಪು:** [**ಅವಧಾರ**] ನಿಶ್ಚಯ, ನಿರ್ಧಾರ, –**ವ.** ವಿ: [–ವತ್] ನಿರ್ಧಾರ ಹೊಂದಿರುವ

ಅವಹಾರ. **ಪು;** [**ಅವಧಾರ್ಯ**] ಗಣಿತದಲ್ಲಿ ಪ್ರಸಿದವಾದ ಧ್ರುವರಾಶಿ

ಅವಹಾರಣ. **ನ:** [**ಅವಧಾರಣ**] ನಿಶ್ಚಯ, ನಿರ್ಣಯ, ವಾಗ್ಬಲ, ಮಿತಿಗೊಳಿಸುವಿಕೆ,

ಅವಹಾರಯ. ವಿ: [ಅಪಹಾರಕ] ಕಸಿಯುವವನು, ಅಪಹರಿಸುವವನು(ಸುರ)
ಅವಹಾರಿ. ವಿ: [ಅಪಹಾರಿನ್] ಕಸಿಯುವವನು, ಅಪಹರಿಸುವವನು, ಬೇರೆಡೆಗೆ ಒಯ್ಯುವವನು
ಅವಹಾರಿಯ. ವಿ: [ಅವಧಾರಿತ ನಿಶ್ಚಯಿಸಲ್ಪಟ್ಟ, ಇತರೆ ವಸ್ತುಗಳಿಂದ ಬೇರ್ಪಡಿಸಲಾದ
ಅವಹಾವ. ಸಕ: [ಕ್ರಪ್] ಕೃಪೆತೋರು, ದಯೆತೋರು, ಕನಿಕರಿಸು, 'ಅವಹಾವೇಇ'(ಷಡ್)
ಅವಹಾವಿಅ. ವಿ: [ಅವಧಾವಿತ] ಮುಂದೆ ಸಾಗಲು ಪ್ರೇರಿಸಲ್ಪಟ್ಟವನು
ಅವಹಾಸ. ಪು: [ಅವಭಾಸ] ಹೊಳೆಯುವುದು, ಪ್ರಕಾಶ, ಕಾಂತಿ, ಬೆಳಕು(ಗಲುಡ) ಜ್ಞಾನ, ತೋರಿಕೆ
ಅವಹಾಸಿಣೀ. ಸ್ತ್ರೀ: [ಅವಹಾಸಿನೀ] ನಾಸಾ–ರಜ್ಜು
ಅವಹಾಸಿಯ.ವಿ: [ಅವಭಾಸಿತ] ಪ್ರಕಾಶಿಸಲ್ಪಟ್ಟ(ಸುಪಾ)
ಅವಹಿ. 'ಓಹಿ' ಶಬ್ದವನ್ನು ನೋಡುವುದು
ಅವಹಿಯ. ವಿ: [ಅಪಹಿತ] ಅಹಿತ, ಶತ್ರು, ಹಿತವಲ್ಲದ
ಅವಹಿಯ. ನ: [ಅವಧೃತ] ಅವಧಾರಣೆ, ನಿಶ್ಚಯ
ಅವಹಿಟ್ಠ. ನ: [ದೇ] ಮೈಥುನ, ಸಂಭೋಗ,
ಅವಹಿಟ್ಠ. ವಿ: [ದೇ] ಅಹಂಕಾರಿ, ಅಭಿಮಾನಿ, ದರ್ಪಿಷ್ಟ (ಷಡ್)
ಅವಹಿಯ. ವಿ: [ಅಪಹೃತ] ಕಸಿದುಕೊಳ್ಳಲ್ಪಟ್ಟ, ಅಪಹರಣಕ್ಕೊಳಗಾದ(ಸುಪಾ)
ಅವಹಿಯ. ವಿ: [ಅವಧೃತ] ನಿಶ್ಚಯಿಸಲ್ಪಟ್ಟ(ವಿಸೇ)
ಅವಹಿಯ. ವಿ: [ಅವಹಿತ] ಎಚ್ಚರವಿಡಲಾದ, ಅವಧಾನವಿಡಲ್ಪಟ್ಟ(ಪಾಅ) **–ಮಣ.** ವಿ: [–ಮನಸ್] ತಲ್ಲೀನವಾದ ಮನ, ಏಕಾಗ್ರ ಚಿತ್ತ
ಅವಹಿಯ. ವಿ: [ರಚಿತ] ನಿರ್ಮಿಸಲ್ಪಟ್ಟ, ಮಾಡಲಾದ, ರಚಿಸಲಾದ(ಕುಮಾ)
ಅವಹೀಣ. ವಿ: [ಅವಹೀನ] ಇಳಿಯುತ್ತಿರುವ, ಕೆಳ ದರ್ಜೆಯ, ಹೀನ(ನಾಟ)
ಅವಹೀಯ. ವಿ: [ಅಪಧೀಕ] ಕೆಟ್ಟ ಬುದ್ಧಿಯುಳ್ಳ, ದುರ್ಬುದ್ಧಿ(ಪಣ್ಣ)
ಅವಹೀರ. ಸಕ: [ಅವ+ಧೀರಯ್] ಕಡೆಗಣಿಸು, ತಿರಸ್ಕರಿಸು, ಅನಾದರಿಸು. 'ಅವ ಹೋರೇಇ'
ಅವಹೀರಣಾ. ನ: [ಅವಧೀರಣಾ] ಮೇಲಿನ ಶಬ್ದವನ್ನು ನೋಡುವುದು
ಅವಹೀರಮಾಣ. **'ಅವಹರ=ಅಪ+ಹೃ'**
ಅವಹೀರಿಅ. ವಿ: [ಅವಧೀರಿತ] ಕಡೆಗಣಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ(ಸೇ)
ಅವಹೀಲ. **'ಅವಹೀರ'** ಶಬ್ದವನ್ನು ನೋಡುವುದು
ಅವಹೀಲಾ. ಸ್ತ್ರೀ: [ಅವಹೇಲಾ] ಅನಾದರ, ಅವಮಾನ
ಅವಹೂಯ. ವಿ: [ಅವಧೂತ] ಹೊಡೆದು ಓಡಿಸಲ್ಪಟ್ಟ
ಅವಹೇಅ. ವಿ: [ದೇ] ದಯೆಗೆ ಅರ್ಹನಾದ, ಕೃಪೆಗೆ ಪಾತ್ರನಾದ(ದೇ)
ಅವಹೇಡ. ಸಕ: [ಮುಚ್] ಬಿಡು, ತ್ಯಜಿಸು
ಅವಹೇಡಗ}. ಪುಂನ: [ಅವಹೇಟಕ] ಅರೆದಲೆ
ಅವಹೇಡಯ}. ನೋವು
ಅವಹೇಡಿಯ. ವಿ: [ದೇ] ಕೆಳಗಡೆಗೆ ತಿರುಗಿಸಿದ, 'ಅವಮೋಟಿತ'(ಉತ್ತ)
ಅವಹೇರಿ.} ಸ್ತ್ರೀ: [ಅವಹೇಲಾ] ಕಡೆಗಣಿಸುವುದು,
ಅವಹೇರೀ}. ತಿರಸ್ಕಾರ, ಅನಾದರ(ಉಪ)
ಅವಹೇಲಅ. ವಿ: [ಅವಹೇಲಕ] ತಿರಸ್ಕಾರ ಮಾಡುವವನು
ಅವಹೇಲಣ. ವಿ: [ಅವಹೇಲನ] ಉಪೇಕ್ಷೆ ಮಾಡುವವನು, ತಿರಸ್ಕರಿಸುವವನು
ಅವಹೋಡಯ. **'ಅವಓಡಗ'** ಶಬ್ದವನ್ನು ನೋಡುವುದು
ಅವಹೋಮುಹ. ವಿ: [ಉಭಯಮುಖ] ಎರಡೂ ಕಡೆಗೆ ಮುಖವಿರುವ
ಅವಹೋಲ. ಅಕ: [ಅವ+ಹೋಲಯ್] ತೂಗಾಡು, ಸಂದೇಹಿಸು. ವ.ಕೃ–**'ಅವಹೋಲಂತ'**
ಅವಾಇ. ವಿ: [ಅಪಾಯಿನ್] ದುಃಖಿ, ಅಪರಾಧಿ (ಸುಪಾ), ಅಪಾಯವುಳ್ಳ, ಅಗಲಿಕೆಯಿರುವ, ನಶ್ವರ
ಅವಾಯ. ಪು: [ಅಪಾಯ] ನೀರು ಬರುವುದು
ಅವಾಯ. ವಿ: [ಅಪಾಯ] ಭಾಗ್ಯವಿಲ್ಲದ, ಭಾಗ್ಯರಹಿತ
ಅವಾಯ. ವಿ: [ಅಪಾಗ] ವೃಕ್ಷ–ರಹಿತ, ಮರ ಇಲ್ಲದ
ಅವಾಯ. ವಿ: [ಅಪಾಕ] ಪಾಪ–ರಹಿತ
ಅವಾಯ. ವಿ: [ಅವಾಯ] ಪ್ರಾಪ್ತಿ, ದೊರಕುವುದು
ಅವಾಈಣ. ವಿ: [ಅವಾಚೀನ] ಅಧೋಮುಖ, ದಕ್ಷಿಣ ದೇಶದಲ್ಲಿರುವ, ದಕ್ಷಿಣ ದಿಕ್ಕಿನಲ್ಲಿರುವ
ಅವಾಈಣ. ವಿ: [ಅವಾತೀನ] ಗಾಳಿಯಿಂದ ತಡೆಯಲ್ಪಡದ, ಹೊಡೆಯಲ್ಪಡದ(ಣಾಯಾ)
ಅವಾಉಡ. ವಿ: [ಅ–ವ್ಯಾಪೃತ] ಯಾವುದೇ ಕಾರ್ಯದಲ್ಲಿ ತೊಡಗದಿರುವ (ಉಪ)
ಅವಾಉಡ. ವಿ: [ಅಪ್ರಾವೃತ] ಮುಚ್ಚದೆ ಇರುವ, ಹೊದಿಕೆಯಿಂದ ಮರೆಮಾಡದಿರುವ, ನಗ್ನ

ಅವಾಡಿಅ. ವಿ: [ದೇ] ವಂಚಿತ, ಮೋಸಕ್ಕೊಳಗಾದ
ಅವಾಣ. 'ಅಪಾಣ' ಶಬ್ದವನ್ನು ನೋಡುವುದು
ಅವಾಯ. ಪು: [ಅಪಾಯ] ಅನರ್ಥ, ವಿನಾಶ(ತಾ) ದೋಷ, ಹಾನಿ, ಕೇಡು, ಅಗಲಿಕೆ(ಣಂದಿ), ನಿಸ್ಸಂದೇಹವಾದ ಜ್ಞಾನ, ಪಲಾಯನ, ಉದಾಹರಣ ವಿಶೇಷ(ತಾ) **–ದಂಸಿ.** ವಿ: [–ದರ್ಶಿನ್] ಮುಂದಾಗಲಿರುವ ಅನರ್ಥವನ್ನು ತಿಳಿಯುವವನು(ತಾ) **–ವಿಜಯ.** ನ: [–ವಿಚಯ, –ವಿಜಯ] ಧ್ಯಾನವಿಶೇಷ
ಅವಾಯ. ಪು: [ಅಪಾಯ] ಸಂಶಯರಹಿತವಾದ ನಿಶ್ಚಯಾತ್ಮಕ ಜ್ಞಾನ–ವಿಶೇಷ, ಮತಿಜ್ಞಾನದ ಒಂದು ಬಗೆ(ತಾ)
ಅವಾಯ. ವಿ: [ಅಮ್ಲಾನ] ಬಾಡದಿರುವ, ನಿರ್ಮಲ, ಹಸನಾದ
ಅವಾಯಾಣ. ನ: [ಅಪಾದಾನ] ಕಾರಕ–ವಿಶೇಷ, ಅಪಹರಣ, ಸ್ಥಾನಾಂತರ(ತಾ) ಕಸಿದುಕೊಳ್ಳುವುದು
ಅವಾರ. ವಿ: [ಅಪಾರ] ಪಾರವಿಲ್ಲದ, ಮಿತಿಯಿಲ್ಲದ, ದಡವಿಲ್ಲದ, ಅನಂತ, ಸಮುದ್ರ,(ಮೈ)
ಅವಾರ. ಪು: [ದೇ] ಅಂಗಡಿ, ಪೇಟೆ (ದೇ) ವಂಚಿತ
ಅವಾರೀ. ಸ್ತ್ರೀ: [ದೇ] ಮೇಲಿನ ಶಬ್ದವನ್ನು ನೋಡುವುದು
ಅವಾಲುಆ. ಸ್ತ್ರೀ [ದೇ] ತುಟಿಯ ಒಳಭಾಗ
ಅವಾಲುಆ. ಸ್ತ್ರೀ: [ಅವಾಲುಕಾ] ಒಂದು ಸ್ನಿಗ್ಧ ದ್ರವ್ಯ
ಅವಾವ. ಪು: [ಅವಾಪ] ಅಡಿಗೆ, ಪಾಕ. **–ಕಹಾ.** ಸ್ತ್ರೀ: [–ಕಥಾ] ಅಡಿಗೆಗೆ ಸಬಂಧಿಸಿದ ಕಥೆ
ಅವಾಸ} (ಅಪ) 'ಅವಸೇ' ಶಬ್ದವನ್ನು ನೋಡುವುದು
ಅವಾಸೇ}.
ಅವಾಹ. ಪು: [ಅವಾಹ] ದೇಶ–ವಿಶೇಷ (ಇಕ)
ಅವಾಹಾ. 'ಅಬಾಹಾ' ಶಬ್ದವನ್ನು ನೋಡುವುದು
ಅವಿ. ಅ: [ಅಪಿ] ಈ ಮುಂದಿನ ಅರ್ಥಗಳನ್ನು ಸೂಚಿಸುವ ಅವ್ಯಯ: ಪ್ರಶ್ನೆ, ಅವಧಾರಣ, ಸಮುಚ್ಚಯ(ವಿಸೇ), ಸಂಭಾವನಾ, ವಿಲಾಪ (ಪಾಅ), ನಿರೀಕ್ಷಣೆ, ಬೈಗಳು, ಅನುಮತಿ, ೬–೭ ವಾಕ್ಯದ ಉಪನ್ಯಾಸ ಮತ್ತು ಪಾದಪೂರ್ತಿಯಲ್ಲಿ ಇದರ ಬಳಕೆಯಾಗುತ್ತದೆ
ಅವಿ. ಪು: [ಅವಿ] ಕುರಿ, ಟಗರು(ವಿಸೇ), ಸೂರ್ಯ, ಎಕ್ಕದ ಗಿಡ

ಅವಿಅ. ವಿ: [ದೇ] ಉಕ್ತ ಹೇಳಲಾದ(ದೇ)
ಅವಿಅ. ವಿ: [ಅವಿತ] ರಕ್ಷಿಸಲ್ಪಟ್ಟ, (ದೇ)
ಅವಿಅ. ಅ: [ಅಪಿಚ] ವಿಶೇಷಣ –ಸೂಚಕ ಹಾಗೂ ಮತ್ತೆ, ಇದಲ್ಲದೆ ಎಂಬ ಅರ್ಥ ಸೂಚಕ ಸಮುಚ್ಚಯ– ಅವ್ಯಯ(ಭಗ)
ಅವಿಅ. ಪು: [ಅವಿಕ] ಕುರಿ(ಆಚಾ) ಟಗರು(ವಿಸೇ), ಸೂರ್ಯ, ಎಕ್ಕದ ಗಿಡ
ಅವಿಉ. ವಿ: [ಅವಿತ್] ಅಜ್ಞ, ಮೂರ್ಖ
ಅವಿಉಕ್ಕಂತಿಯ. ವಿ: [ಅವ್ಯುತ್ಕ್ರಾಂತಿಕ] ಉತ್ಪತ್ತಿಯಿಲ್ಲದಿರುವುದು(ಭಗ)
ಅವಿಉಸರಣ. ನ: [ಅವ್ಯುತ್ಸರ್ಜನ] ಬಿಡದಿರುವುದು, ಹತ್ತಿರದಲ್ಲಿಟ್ಟುಕೊಳ್ಳುವುದು(ಭಗ)
ಅವಿಕಂಪ. ವಿ: [ಅವಿಕಂಪ] ನಿಶ್ಚಲವಾಗಿರುವ, ಅಲುಗಾಡದ
ಅವಿಕರಣ. ನ: [ಅವಿಕರಣ] ಪಡೆದಿರುವ ವಸ್ತುಗಳನ್ನು ಯಥಾ ಸ್ಥಾನದಲ್ಲಿ ಇಡದಿರುವುದು(ಬೃಹ)
ಅವಿಕ್ಖ. 'ಅವೇಕ್ಖ' ಶಬ್ದವನ್ನು ನೋಡುವುದು. 'ಅವಿಕ್ಖಇ'
ಅವಿಕ್ಖಗ. ವಿ: [ಅಪೇಕ್ಷಕ] ಅಪೇಕ್ಷಿಸುವವನು, ಇಚ್ಛಿಸುವವನು(ವಿಸೇ)
ಅವಿಕ್ಖಣ. ನ: [ಅವೇಕ್ಷಣ] ನೋಡುವುದು, ನಿರೀಕ್ಷಣೆ, ಗಮನಿಸುವುದು(ಭವಿ)
ಅವಿಕ್ಖಣ. ನ: [ಅಪೇಕ್ಷಣ] ಅಪೇಕ್ಷೆ, ಬಯಕೆ, ಕಾಳಜಿ, ಪರಿವೆ(ವಿಸೇ)
ಅವಿಕ್ಖಾ. 'ಅವೇಕ್ಖಾ' ಶಬ್ದವನ್ನು ನೋಡುವುದು
ಅವಿಕ್ಖಿಯ. ವಿ: [ಅಪೇಕ್ಷಿತ] ಅಪೇಕ್ಷಿಸಲಾದ, ನಿರೀಕ್ಷಿಸಲಾದ, ಗಮನಿಸಲಾದ, ನ: ಅಪೇಕ್ಷೆ, ಇಚ್ಛೆ
ಅವಿಕ್ಖಿಯ. ವಿ: [ಅವೇಕ್ಷಿತ] ನೋಡಲ್ಪಟ್ಟ, ಆಲೋಚಿಸಲ್ಪಟ್ಟ(ಸುಪಾ)
ಅವಿಗಇಯ. ವಿ: [ಅವಿಕೃತಿಕ] ಘೃತವೇ ಮೊದಲಾದ ವಿಕಾರವುಂಟು ಮಾಡುವ ವಸ್ತುಗಳನ್ನು ತ್ಯಜಿಸುವುದು(ಸೂಅ)
ಅವಿಗಡಿಯ. ವಿ: [ಅವಿಕಟಿತ] ಆಲೋಚಿಸಲ್ಪಡದ, ವಿಮರ್ಶಿಸಲ್ಪಡದ(ವವ)
ಅವಿಗಪ್ಪ. 'ಅವಿಯಪ್ಪ' ಶಬ್ದವನ್ನು ನೋಡುವುದು
ಅವಿಗಪ್ಪಗ. ವಿ: [ಅವಿಕಲ್ಪಕ] ವಿಕಲ್ಪ–ರಹಿತ, ಭ್ರಾಂತಿಯಿಲ್ಲದ, ನ: ಕಲ್ಪನಾ–ರಹಿತವಾದ ಪ್ರತ್ಯಕ್ಷ ಜ್ಞಾನ.

ಅವಿಗಲ. ವಿ: [ಅವಿಕಲ] ಅಖಂಡ, ಸಂಪೂರ್ಣವಾದ, ಕ್ರಮಬದ್ಧವಾದ(ಉಪ)

ಅವಿಗಿಚ್ಛ. ವಿ: [ಅವಿಚಿಕಿತ್ಸ್ಯ] ಯಾವುದರ ಚಿಕಿತ್ಸೆ ಆಗುವುದಿಲ್ಲವೋ ಅದು

ಅವಿಗೀಯ. ಪು: [ಅವಿಗೀತ] ಶಾಸ್ತ್ರಗಳ ರಹಸ್ಯವನ್ನು ತಿಳಿಯದ ಸಾಧು(ವವ) ದೂಷಿಸಲ್ಪಡದ, ವೇದವಿರುದ್ಧವಲ್ಲದ, ವಿವಾದಾಸ್ಪದವಲ್ಲದ

ಅವಿಗ್ಗಹ. ವಿ: [ಅವಿಗ್ರಹ] ಶರೀರವಿಲ್ಲದ, ಯುದ್ಧವಿಲ್ಲದ (ಸುಪಾ), ಸರಳ, ನೇರ, ನಿತ್ಯಸಮಾಸ, **–ಗ್ಗಇ.** ಸ್ತ್ರೀ: [–ಗತಿ] ಕುಟಿಲವಲ್ಲದ ಗತಿ, ನಡೆ

ಅವಿಚ್ಛ. ವಿ: [ಅವೀಪ್ಸ್ಯ] ವ್ಯಾಪ್ತಿಯಿಲ್ಲದ, ಹೆಚ್ಚಾಗಿ ಹೊಂದುವ ಅಪೇಕ್ಷೆಯಿಲ್ಲದ

ಅವಿಜಾಣಯ. ವಿ: [ಅವಿಜ್ಞಾಯಕ] ಚೆನ್ನಾಗಿ ತಿಳಿಯದ, ಮೂರ್ಖ(ಸೂಅ)

ಅವಿಜ್ಜ. ವಿ: [ಅಬೀಜ] ಬೀಜಶಕ್ತಿಯಿಲ್ಲದ(ಪಉಮ)

ಅವಿಣಯ. ಪು: [ಅವಿನಯ] ವಿನಯವಿಲ್ಲದಿರುವುದು, ಉದ್ಧಟತನ, ಅಸಭ್ಯತೆ

ಅವಿಣಯವಇ}. ಪು: [ದೇ] ಜಾರ, ಉಪ ಪತಿ(ದೇ)
ಅವಿಣಯವರ}.

ಅವಿಣಯವಈ. ಸ್ತ್ರೀ: [ದೇ] ಕುಲಟೆ, ಜಾರೆ

ಅವಿಣಿದ್ದ. ವಿ: [ಅವಿನಿದ್ರ] ನಿದ್ರೆಯಿಲ್ಲ ಎಂಬುದು ಇಲ್ಲದ=ನಿದ್ರೆ ಇರುವ(ಗಾ)

ಅವಿಣ್ಣಾ. ಸ್ತ್ರೀ: [ಅವಿಜ್ಞಾ] ಉಪಯೋಗವಿಲ್ಲದ, ಲಕ್ಷ್ಯವಿಲ್ಲದಿರುವುದು(ಸೂಅ), ಚೆನ್ನಾಗಿ ತಿಳಿಯದ

ಅವಿತಹ. ವಿ: [ಅವಿತಥ] ಸತ್ಯ, ನಿಜವಾದ, ವ್ಯರ್ಥವಲ್ಲದ

ಅವಿದ.} ಅ: [ಅವಿದ, –ದಾ] ವಿಷಾದ ಸೂಚಕ
ಅವಿದಾ.} ಅವ್ಯಯ(ಸ್ವಪ್ನ)

ಅವಿಧಿ. ಪುಂ.ಸ್ತ್ರೀ: [ಅವಿಧಿ] ಅಕ್ರಮ, ನಿಯಮವಿಲ್ಲದಿರುವುದು, ಕ್ರಮಬದ್ದವಲ್ಲದ(ಬೃಹ)

ಅವಿನ್ನಾಣ. ವಿ: [ಅವಿಜ್ಞಾನ] ತಿಳಿಯದ, ಗೊತ್ತಿಲ್ಲದ, ಅಪರಿಚಿತ(ಪಉಮ)

ಅವಿಯಡ್ಢ. ವಿ: [ಅವಿದಗ್ಧ] ನಿಪುಣನಲ್ಲದ, ವಿದ್ವಾಂಸನಲ್ಲದ, ದಡ್ಡ(ಸುಪಾ) ಚೆನ್ನಾಗಿ ಸುಡಲ್ಪಡದ

ಅವಿಯತ್ತ. ವಿ: [ಅವ್ಯಕ್ತ] ಅಸ್ಪಷ್ಟ, ಅಗೋಚರ, ಅಸ್ಫುಟ (ಸಮ್ಮ)

ಅವಿಯಪ್ಪ. ವಿ: [ಅವಿಕಲ್ಪ] ಭೇದವಿಲ್ಲದ, ವ್ಯತ್ಯಾಸ ಹೊಂದದ, ಕ್ರಿ. ವಿ: ನಿಸ್ಸಂಶಯ

ಅವಿಯಾಉರೀ. ಸ್ತ್ರೀ: [ದೇ. ಅವಿಜನಯಿತ್ರಿ] ಬಂಜೆ ಹೆಣ್ಣು(ಣಾಯಾ)

ಅವಿಯಾಣಯ. 'ಅವಿಜಾಣಯ' ಕ್ರಿ. ವಿ: ನಿಸ್ಸಂಶಯ,

ಅವಿರಇ. ಸ್ತ್ರೀ: [ಅವಿರತಿ] ವಿರಾಮವಿಲ್ಲದಿರುವುದು, ಎಡೆಬಿಡದೆ, ನಿರಂತರವಾಗಿ, ಪಾಪ ಕರ್ಮದಿಂದ ನಿವೃತ್ತನಾಗದಿರುವುದು, ಹಿಂಸೆ, ಅತಿಕಾಮುಕತೆ (ತಾ) **–ವಾಯ.** ಪು: [–ವಾದ] ವಿರಾಮ ವಿಲ್ಲದಿರುವುದರ ಚರ್ಚೆ, ಮೈಥುನದ ಚರ್ಚೆ (ತಾ)

ಅವಿರಇಯ. ವಿ: [ಅವಿರತಿಕ] ವಿರಾಮ ವಿಲ್ಲದಿರುವುದು, ಪಾಪದಿಂದ ನಿವೃತ್ತ ನಾಗದಿರುವುದು, ಪಾಪ ಕರ್ಮದಲ್ಲಿ ತೊಡಗಿರುವುದು (ಭಗ)

ಅವಿರತ್ತ. ವಿ: [ಅವಿರಕ್ತ] ವೈರಾಗ್ಯವಿಲ್ಲದ, ವಿರಕ್ತನಲ್ಲದ

ಅವಿರಯ. ವಿ: [ಅವಿರತ] ವಿರಾಮವಿಲ್ಲದ, ಎಡೆಬಿಡದೆ ನಡೆಯುವ, ಅನುಸ್ಯೂತ, ಪಾಪದಿಂದ ನಿವೃತ್ತಿಯಿಲ್ಲದ(ತಾ), ನಾಲ್ಕನೇ ಗುಣ–ಸ್ಥಾನಕ ಜೀವ(ಕಮ್ಮ), ಕ್ರಿ. ವಿ: ಸದಾ, ಯಾವಾಗಲೂ (ಪಾಅ), **–ಸಮ್ಮದಿಟ್ಠಿ.** ಸ್ತ್ರೀ: [–ಸಮ್ಯಗ್‌ದೃಷ್ಟಿ] ನಾಲ್ಕನೇ ಗುಣ–ಸ್ಥಾನಕ(ಕಮ್ಮ)

ಅವಿರಲ. ವಿ: [ಅವಿರಲ] ವಿರಳವಲ್ಲದ, ನಿಬಿಡವಾದ, ದಟ್ಟವಾದ(ಣಾಯಾ)

ಅವಿರಹಿ. ವಿ: [ಅವಿರಹಿನ್] ವಿರಹಿಯಲ್ಲದವನು (ಕುಮಾ)

ಅವಿರಾಮ. ವಿ: [ಅವಿರಾಮ] ವಿರಾಮವಿಲ್ಲದೆ, ಕ್ರಿ. ವಿ: ನಿರಂತರ, ಸದಾ(ಪಾಅ)

ಅವಿರಾಯ. ವಿ: [ಅವಿಲೀನ] ಭ್ರಷ್ಟನಲ್ಲದ, ಕರಗಿರದ, ಸೇರಿಕೊಂಡಿಲ್ಲದ

ಅವಿರಾಹಿಯ. ವಿ: [ಅವಿರಾಧಿತ] ತುಂಡಾಗದ, ಪೂರ್ಣವಾದ, ಪೂಜಿಸಲ್ಪಟ್ಟ(ಭಗ)

ಅವಿರಿಯ. ವಿ: [ಅವೀರ್ಯ] ವೀರ್ಯ–ರಹಿತ(ಭಗ), ಪರಾಕ್ರಮವಿಲ್ಲದ

ಅವಿಲ. ಪು: [ದೇ] ಪಶು, ವಿ: ಕಠಿಣ(ದೇ)

ಅವಿಲಂಬಿಯ. ವಿ: [ಅವಿಲಂಬಿತ] ವಿಲಂಬವಿಲ್ಲದೆ, ಬೇಗನೆ(ಕಪ್ಪ)

ಅವಿಲಾ. ಸ್ತ್ರೀ: [ಅವಿಲಾ] ಹೆಣ್ಣು ಕುರಿ(ಪಾಅ)

ಅವಿವೇಗ. ಪು: [ಅವಿವೇಕ] ವಿವೇಕವಿಲ್ಲದಿರುವುದು, –ವಂತ. ವಿ: [–ವತ್] ಅವಿವೇಕಿ(ಪಉಮ)
ಅವಿಸಂಧಿ. ವಿ: [ಅವಿಸಂಧಿ] ಪೂರ್ವಾಪರ–ವಿರೋಧವಿಲ್ಲದ, ಸಂಗತವಾದ, ಸುಸಂಬದ್ಧವಾದ
ಅವಿಸಂವಾಇ. ವಿ: [ಅವಿಸಂವಾದಿನ್] ಅನುಗುಣವಾಗಿರುವ, ಪ್ರಮಾಣಕ್ಕೆ ಸರಿಯಾಗಿರುವ, ಸತ್ಯವಾದ(ಕುಮಾ) ನಾಶ ಹೊಂದದಿರುವ
ಅವಿಸಮ. ವಿ: [ಅವಿಷಮ] ಸದೃಶ, ಹೋಲುವ, ಸಮವಾಗಿರುವ, ವಿರುದ್ಧವಲ್ಲದ(ಕುಮಾ)
ಅವಿಸಾಇ. ವಿ: [ಅವಿಷಾದಿನ್] ವಿಷಾದವಿರದ, ದುಃಖದಿದ ಕೂಡಿರದ, ನಿರಾಶನಲ್ಲದ(ಪಣ್ಣ)
ಅವಿಸೇಸ. ವಿ: [ಅವಿಶೇಷ] ಸಮಾನ, ವ್ಯತ್ಯಾಸವಿಲ್ಲದ, ಭೇದವಿಲ್ಲದ, ಸದೃಶವಾಗಿರುವ(ತಾ)
ಅವಿಸೇಸಿಯ. ವಿ: [ಅವಿಶೇಷಿತ] ವಿಶೇಷವಿರದ, ಸಾಧಾರಣ(ತಾ), ಭೇದವಿಲ್ಲದ
ಅವಿಸ್ಸ. ನ: [ಅವಿಶ್ರ] ಮಾಂಸ ಮತ್ತು ರಕ್ತ
ಅವಿಸ್ಸಾಮ. ವಿ: [ಅವಿಶ್ರಾಮ] ವಿಶ್ರಾಂತಿಯಿರದ(ಪಣ್ಣ), ಕ್ರಿ. ವಿ: ನಿರಂತರ, ಯಾವಾಗಲೂ(ಉಪ)
ಅವಿಹಡ. ಪು: [ದೇ] ಬಾಲಕ, ಹುಡುಗ (ಬೃಹ)
ಅವಿಹವ ವಿ: [ಅವಿಭವ] ದರಿದ್ರ, ವೈಭವವಿರದ(ಗಉಡ)
ಅವಿಹವಾ. ಸ್ತ್ರೀ: [ಅವಿಧವಾ] ಗಂಡ ಬದುಕಿರುವ ಹೆಣ್ಣು, ಮುತ್ತೈದೆ, ಸಧವೆ(ಣಾಯಾ)
ಅವಿಹಾ. 'ಅವಿದಾ' ಶಬ್ದವನ್ನು ನೋಡುವುದು
ಅವಿಹಾಡ. ವಿ: [ಅವಿಘಾಟ] ಕುರಿಗಳ ಮಂದೆ, ಟಗರುಗಳ ಗುಂಪು, ಉಗ್ರವಲ್ಲದ, ಸೌಮ್ಯ(ವವ)
ಅವಿಹಾವಿಅ. ಇ: [ದೇ] ದೀನ, ಬಡವ, ನ: ಮೌನ (ದೇ)
ಅವಿಹಾವಿಅ. ವಿ: [ಅವಿಭಾವಿತ] ಆಲೋಚಿಸಲ್ಪಡದ (ಗಉಡ), ತಿಳಿಯಲ್ಪಡದ, ನೋಡಲ್ಪಡದ
ಅವಿಹಿ. 'ಅವಿಧಿ' ಶಬ್ದವನ್ನು ನೋಡುವುದು
ಅವಿಹಿಅ. ವಿ: [ದೇ] ಮತ್ತ, ಉನ್ಮತ್ತ(ಷಡ್), ಮತ್ತೇರಿದವನು, ಹುಚ್ಚುಹಿಡಿದವನು
ಅವಿಹಿಂತ. ವ. ಕೃ: [ಅವಿಘ್ನತ್] ಹೊಡೆಯದಿರುವ, ಹಿಂಸೆ ಮಾಡದಿರುವ(ಓಘ)
ಅವಿಹಿಂಸ. ಅ: [ಅವಿಹಿಂಸ] ಅಹಿಂಸಕ, ಹಿಂಸೆ ಮಾಡದಿರುವವನು(ಆಚಾ)
ಅವಿಹಿಂಸಾ. ಸ್ತ್ರೀ: [ಅವಿಹಿಂಸಾ] ಅಹಿಂಸೆ(ಸೂಅ)
ಅವಿಹೀರ. ವಿ: [ಅಪ್ರತೀಕ್ಷ] ನಿರೀಕ್ಷೆ ಮಾಡದಿರುವವ, ಎದುರು ನೋಡದಿರುವ(ಕುಮಾ)
ಅವಿಹೇಡಯ. ವಿ: [ಅವಿಹೇಟಕ]ಆದರಿಸುವವನು
ಅವೀ. 'ಅವಿ' ಶಬ್ದವನ್ನು ನೋಡುವುದು
ಅವೀಇಯ. ಅ: [ಅವಿವಿಚ್ಯ] ಅಗಲದೆ, ಬೇರೆಯಾಗದೆ
ಅವೀಇಯ. ಅ: [ಅವಿಚಿಂತ್ಯ] ವಿಚಾರಮಾಡದೆ(ಭಗ)
ಅವೀಯ. ವಿ: [ಅದ್ವಿತೀಯ] ಅಸಾಧಾರಣ, ಅನುಪಮ (ಕುಮಾ) ಏಕಾಕಿ, ಅಸಹಾಯ(ವಿಪಾ), ಜೊತೆಗಾರಿಲ್ಲದ, ಪತ್ನಿಯಿಲ್ಲದವನು, ಪರಮಾತ್ಮ
ಅವುಕ್ಕ. ಸಕ: [ವಿ+ಜ್ಞಪಯ್] ವಿಜ್ಞಾಪಿಸು, ಪ್ರಾರ್ಥಿಸು, **'ಅವುಕ್ಕಇ'**
ಅವುಗ್ಗಹ. 'ಅವಿಗ್ಗಹ' ಶಬ್ದವನ್ನು ನೋಡುವುದು
ಅವುಡ್ಢ. ವಿ: [ಅವೃದ್ಧ] ಮುದುಕನಲ್ಲದ, ತರುಣ, ಯುವಕ(ಕುಮಾ)
ಅವುಹ. 'ಅಬುಹ' ಶಬ್ದವನ್ನು ನೋಡುವುದು
ಅವೂಹ. 'ಅವೋಹ' ಶಬ್ದವನ್ನು ನೋಡುವುದು
ಅವೇ. ಸಕ: [ಅವ+ಇ] ತಿಳಿದುಕೊ(ಳ್ಳುವುದು) 'ಅವೇಸಿ'(ವಿಸೇ)
ಅವೇ. ಅಕ: [ಅಪ+ಇ] ದೂರವಾಗು,'ಅವೇಇ' (ಸ)
ಅವೆಕ್ಖ. ಸಕ: [ಅವ+ಈಕ್ಷ್] ಅಪೇಕ್ಷಿಸು. **'ಅವೆಕ್ಖಇ'**
ಅವೆಕ್ಖ. ಸಕ: [ಅವ+ಈಕ್ಷ್] ನೋಡು 'ಅವೆಕ್ಖಾಹಿ'
ಅವೆಕ್ಖಾ. ಸ್ತ್ರೀ: [ಅಪೇಕ್ಷಾ] ಇಚ್ಛೆ, ಲಕ್ಷ್ಯ(ಸುರ) ಆಸೆ, ಅವಶ್ಯಕತೆ, ನಿರೀಕ್ಷಣೆ, ಕಾಯುವಿಕೆ
ಅಪೆಕ್ಖಿ. ವಿ: [ಅಪೇಕ್ಷಿನ್] ಅಪೇಕ್ಷಿಸುವವನು, ಇಚ್ಛಿಸುವವನು(ಗಉಡ)
ಅವೆಕ್ಖಿಯ. ವಿ: [ಅಪೇಕ್ಷಿತ] ಅಪೇಕ್ಷಿತವಾದ, ನಿರೀಕ್ಷಿಸಲ್ಪಟ್ಟ, (ಗಉಡ) ಗಮನಿಸಲ್ಪಟ್ಟ
ಅವೆಕ್ಖಿಯ. ವಿ: [ಅವೇಕ್ಷಿತ] ನೋಡಲ್ಪಟ್ಟ
ಅವೇಯ. ವಿ: [ಅಪೇತ] ರಹಿತ, ಇಲ್ಲದ, ನಿವಾರಿಸಲ್ಪಟ್ಟ, ದೂರವಾದ, ಬಿಟ್ಟು ಹೋದ. **–ರುಇ.ವಿ:[–ರುಚಿ]** ರುಚಿಯಿಲ್ಲದ(ಉಪ),
ಅವೇಯ.}. ವಿ: [ಅವೇದ, –ಕ] ಪುರುಷ–ವೇದಾದಿ
ಅವೇಯಗ}. ವೇದದಿಂದ ರಹಿತ(ಪಣ್ಣ), ಮುಕ್ತನಾದ
ಅವೇಸಿ. 'ಅಂಬೇಸಿ' ಶಬ್ದವನ್ನು ನೋಡುವುದು
ಅವೇಹ. 'ಅವೆಕ್ಖ=ಅವ+ಈಕ್ಷ್' ಶಬ್ದವನ್ನು ನೋಡುವುದು

ಅವೋಅಡ. ವಿ: [ಅವ್ಯಾಕೃತ] ಅವ್ಯಕ್ತ, ಅಸ್ಪಷ್ಟ
ಅವೊಚ್ಛಿಣ್ಣ. 'ಅವ್ವೊಚ್ಛಿಣ್ಣ' ಶಬ್ದವನ್ನು ನೋಡುವುದು
ಅವೊಚ್ಛಿತ್ತಿ. 'ಅವ್ವೊಚ್ಚಿತ್ತಿ' ಶಬ್ದವನ್ನು ನೋಡುವುದು
ಅವೋಹ. ಸಕ: [ಅಪ+ಊಹ] ವಿಚಾರಮಾಡು, ನಿರ್ಣಯಿಸು
ಅವೋಹ. ಪು: [ಅಪೋಹ] ವಿಕಲ್ಪ ಜ್ಞಾನ, ತರ್ಕ-ವಿಶೇಷ, ವರ್ಜಿಸುವುದು, ಬಿಟ್ಟುಬಿಡುವುದು, ನಿರ್ಣಯ(ಣಂದಿ) ಸಂದೇಹ ಪರಿಹರಿಸುವುದು
ಅವ್ವಈಭಾವ. ಪು: [ಅವ್ಯಯೀಭಾವ] ಪ್ರಸಿದ್ಧವಾದ ಸಮಾಸ(ಅಣು)
ಅವ್ವಂಗ. ವಿ: [ಅವ್ಯಂಗ] ಅಖಂಡ, ಪೂರ್ತಿ ಶರೀರ, ವಿ: ಸಂಪೂರ್ಣವಾದ, ಅಂಗಹೀನವಲ್ಲದ(ವವ), ನಸುಗುನ್ನಿಗಿಡ
ಅವ್ವಕ್ಖಿತ್ತ. ವಿ: [ಅವ್ಯಾಕ್ಷಿಪ್ತ] ವಿಕ್ಷೇಪವಿಲ್ಲದ, ತಲ್ಲೀನ, ಏಕಾಗ್ರ(ಉತ್ತ)
ಅವ್ವಗ್ಗ. ವಿ: [ಅವ್ಯಗ್ರ] ಶಾಂತ, ಸ್ಥಿರಚಿತ್ತ, ಉದಾಸೀನ, ತಟಸ್ಥ
ಅವ್ವತ್ತ.} ವಿ: [ಅವ್ಯಕ್ತ] ಅಸ್ಪಷ್ಟ, ಚಿಕ್ಕ ವಯಸ್ಸಿನ
ಅವ್ವತ್ತಯ.} ಬಾಲಕ, ಶಾಸ್ತ್ರರಹಸ್ಯ ತಿಳಿಯದ ಸಾಧು (ಆಚಾ), ಪು:ಅವ್ಯಕ್ತ ಮತದ ಪ್ರವರ್ತಕನಾದ ಒಬ್ಬ ಜೈನಾಭಾಸ ಮುನಿ.ನ: ಸಾಂಖ್ಯದ ಪ್ರಕೃತಿ (ಆವಮ) **-ಮಯ.** ನ: [-ಮತ] ಒಂದು ಜೈನಾಭಾಸ ಮತ
ಅವ್ವತ್ತವ್ವ. ವಿ: [ಅವಕ್ತವ್ಯ] ಹೇಳಲಾರದ, ಹೇಳಬಾರದ. ಪು: ಜೀವವು ಪೂರ್ತಿ ಕರ್ಮ-ಬಂಧ ರಹಿತವಾಗಿ ಮತ್ತೆ ಯಾವ ಕರ್ಮ-ಬಂಧವನ್ನುಂಟುಮಾಡುತ್ತದೋ ಅದು.
ಅವ್ವತ್ತಿಯ. **'ಅವತ್ತಿಯ'** ಶಬ್ದವನ್ನು ನೋಡುವುದು
ಅವ್ವಭಿಚಾರಿ. ವಿ: [ಅವ್ಯಭಿಚಾರಿನ್] ಏಕಾಂತಿಕ, ಅನುಕೂಲವಾದ, ವಿರುದ್ಧವಲ್ಲದ
ಅವ್ವಯ. ನ: [ಅವ್ಯಯ] 'ಚ', 'ತು' ಮೊದಲಾದ ನಿಪಾತಗಳು
ಅವ್ವಯ. ನ: [ಅವ್ರತ] ವ್ರತದ ಅಭಾವ(ಶ್ರಾ), ವ್ರತವಿಲ್ಲದ
ಅವ್ವಯು. ವಿ: [ಅವ್ಯಯು] ನಾಶ ಹೊಂದದ, ಶಾಶ್ವತವಾದ(ಸುಪಾ) ಎಲ್ಲ ಲಿಂಗ, ವಚನ, ವಿಭಕ್ತಿಗಳಲ್ಲೂ ವ್ಯತ್ಯಾಸ ಹೊಂದದೆ ಒಂದೇ ರೂಪವುಳ್ಳ ಶಬ್ದ, ವ್ಯಯವಿಲ್ಲದ, ಪರಮಾತ್ಮ

ಅವ್ವವಸಿಯ. ವಿ: [ಅವ್ಯವಸಿತ] ಅನಿಶ್ಚಿತ, ಸಂದಿಗ್ಧ(ಸುಪಾ) ಪರಾಕ್ರಮಿಯಲ್ಲದ(ಠಾ)
ಅವ್ವಸಣ. ವಿ: [ಅವ್ಯಸನ] ವ್ಯಸನ-ವಿಲ್ಲದ, **ಪುಂನ:** ಲೋಕೋತ್ತರ ರೀತಿಯಿಂದ ೧೨ನೇ ದಿನ, ಸನ್ಮಾರ್ಗ, ಪಾಪರಹಿತತೆ, ದೋಷವಿಲ್ಲದ, ಸದಾಚಾರ, ಆಸಕ್ತಿಯಿಲ್ಲದ
ಅವ್ವಹ. ವಿ: [ಅವ್ಯಥ] ವ್ಯಥೆಯಿಲ್ಲದಿರುವುದು, ದುಃಖವಿಲ್ಲದ, ನ: ನಿಶ್ಚಲ ಧ್ಯಾನ(ಔಪ) ಶುಂಠಿ, ಅಳಲೆಕಾಯಿ, ಬೆಟ್ಟದಾವರೆ
ಅವ್ವಹಿಂಯು. ವಿ: [ಅವ್ಯಥಿತ] ಪೀಡಿತನಲ್ಲದ, ದುಃಖಿತನಲ್ಲದ(ಪಂಚಾ), ನಿಶ್ಚಲ(ಬೃಹ)
ಅವ್ವಾ. **ಸ್ತ್ರೀ:** [ಅರ್ವಾಕ್] ಬೇರೆಯವರಿಗಿಂತ ಭಿನ್ನವಾದ, ಪರದಿಂದ ಭಿನ್ನವಾದ
ಅವ್ವಾ. **ಸ್ತ್ರೀ:** [ದೇ. ಅಂಬಾ] ತಾಯಿ,
ಅವ್ವಾಇದ್ಧ. ವಿ: [ಅವ್ಯಾವಿದ್ಧ], ವಿರುದ್ಧವಲ್ಲದ, ನ: ಸೂತ್ರದ ಒಂದು ಗುಣ, ಅಕ್ಷರಗಳು ವ್ಯತ್ಯಸ್ತವಾಗದಿರುವುದು(ಬೃಹ)
ಅವ್ವಾಗಡ. ವಿ: [ಅವ್ಯಾಕೃತ] ಅವ್ಯಕ್ತ, ಅಸ್ಫುಟ, ಅಸ್ಪಷ್ಟ(ಆಚಾ), ಪ್ರಧಾನ, ಮೂಲ ಪ್ರಕೃತಿ, ಮಾಯೆ
ಅವ್ವಾಣ. ವಿ: [ಆವ್ಯಾನ] ಸ್ವಲ್ಪ ಸ್ನಿಗ್ಧ, (ಓಘ)
ಅವ್ವಾವಾಹ. ವಿ: [ಅವ್ಯಾವಾಧ] ಬಾಧೆಯಿಲ್ಲದ, ಅಬಾಧಿತ(ಆವ), ನ: ರೋಗವಿಲ್ಲದಿರುವುದು, ಸುಖ, ಮುಕ್ತಿ, ಪು: ಲೋಕಾಂತಿಕ-ದೇವ. **ಪುಂನ:** ಒಂದು ದೇವ-ವಿಮಾನ
ಅವ್ವಾವಡ. ವಿ: [ಅವ್ಯಾಪೃತ] ವ್ಯವಹಾರದಲ್ಲಿ ತಾರದಿರುವುದು, ವ್ಯಾಪಾರವಿಲ್ಲದ, ಒಂದು ಬಗೆಯ ವಾಸ್ತು(ಬೃಹ)
ಅವ್ವಾವನ್ನ. ವಿ: [ಅವ್ಯಾಪನ್ನ] ನಾಶ ಹೊಂದದ, ಶಾಶ್ವತ
ಅವ್ವಾವಾರ. ವಿ: [ಅವ್ಯಾಪಾರ] ವ್ಯಾಪಾರವಿಲ್ಲದ
ಅವ್ವಾಹಯ. ವಿ: [ಅವ್ಯಾಹತ] ಅಡೆ-ತಡೆಯಿಲ್ಲದ, ನಿರಂತರ, ಆಘಾತ-ರಹಿತ(ಣಂದಿ)**-ಪುವ್ವಾವರತ್ತ.** ನ: [**-ಪೂರ್ವಾಪರತ್ವ**] ಪೂರ್ವಾಪರ-ವಿರೋಧ ಅಥವಾ ಅಸಂಗತಿಯಿಲ್ಲದ(ವಚನ)
ಅವ್ವಾಹಾರ. ಪು: [ಅವ್ಯಾಹಾರ] ಮಾತು ಆಡದಿರುವುದು, ಮೌನ(ಪಾಅ)
ಅವ್ವಾಹಿಯ. ವಿ: [ಅವ್ಯಾಹೃತ] ಕರೆಸಿಕೊಳ್ಳದ (ಜೀವ)

ಅವ್ವಿರಯ. ವಿ: [**ಅವಿರತ**] ವಿರಾಮವಿಲ್ಲದ, ಎಡೆಬಿಡದೆ, ಕಾಲಾವಕಾಶವಿಲ್ಲದಿರುವುದು,

ಅವ್ವೋ. **ಅ:** ಈ ಮುಂದಿನ ಅರ್ಥಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಯಾವುದಾದರೊಂದು ಅರ್ಥ ಸೂಚಿಸುವ ಅವ್ಯಯ: ಸೂಚನೆ, ದುಃಖ, ಸಂವಾದ, ಅಪರಾಧ, ವಿಸ್ಮಯ, ಆನಂದ, ಆದರ, ಭಯ, ಖೇದ, ವಿಷಾದ, ಪಶ್ಚಾತ್ತಾಪ(ಹೇ)

ಅವ್ವೋಗಡ. ವಿ: [**ಅವ್ಯಾಕೃತ**] ವಿಶೇಷವಲ್ಲದ, ವಿಸ್ತಾರವಿಲ್ಲದ, ಪ್ರಸಾರವಿಲ್ಲದ, ಹಂಚಿಕೆ ಯಾಗದಿರುವ ಅಸ್ಫುಟ, ಅಸ್ಪಷ್ಟ, **ನ:** ಒಂದು ಬಗೆಯ ವಾಸ್ತು(ಬೃಹ)

ಅವ್ವೋಚ್ಛಿಣ್ಣ. ವಿ: [**ಅವ್ಯುಚ್ಛಿನ್ನ, ಅವ್ಯವಚ್ಛಿನ್ನ**] ಸತತವಾಗಿ ಎಡೆಬಿಡದೆ, ನಿತ್ಯ, ನಿರಂತರವಾಗಿ(ಗಲುಡ)

ಅವ್ವೋಚ್ಛಿತ್ತಿ. ಸ್ತ್ರೀ: [**ಅವ್ಯುಚ್ಛಿತ್ತಿ, ಅವ್ಯವಚ್ಛಿತ್ತಿ**] ಸಾತತ್ಯ, ಮಧ್ಯದಲ್ಲಿ ಎಲ್ಲೂ ಹರಿಗಡಿಯದೆ, ಪರಂಪರೆಯಲ್ಲಿ ನಿರಂತರವಾಗಿ ಬರುತ್ತಿರುವುದು, **–ನಯ..** **ಪು:** [**–ನಯ**] ವಸ್ತುವನ್ನು ಯಾವುದಾದರೊಂದು ರೂಪದಲ್ಲಿ ಸ್ಥಾಯಿ ಎಂದು ಒಪ್ಪುವ ಪಕ್ಷ, ದ್ರವ್ಯಾರ್ಥಿಕ ನಯ(ಭಯ)

ಅವ್ವೋಚ್ಛಿನ್ನ. '**ಅವ್ವೋಚ್ಛಿಣ್ಣ.**' ಶಬ್ದವನ್ನು ನೋಡುವುದು

ಅವ್ವೋಯಡ. '**ಅವ್ವೋಗಡ**' ಶಬ್ದವನ್ನು ನೋಡುವುದು

ಅಸ. **ಸಕ:** [**ಅಶ್**] ವ್ಯಾಪ್ತಗೊಳಿಸು, ಹರಡು 'ಅಸಇ' (ಷಡ್)

ಅಸ. **ಅಕ:** [**ಅಸ್**] ಆಗು 'ಅಸ್ಸಿ', ಇರು 'ಅಂಸಿ'(ಪ್ರಾಪ), 'ಅತ್ಥಿ'(ಹೇ)

ಅಸ್. **ಸಕ:** [**ಅಶ್**] ಊಟಮಾಡುವುದು, ತಿನ್ನುವುದು, **ವ. ಕೃ: ಅಸಂತ**

ಅಸ್. **ವ.ಕೃ:** [**ಅಸತ್**] ಇಲ್ಲದಿರುವ, 'ಅಸತ್'(ಸೂಅ)

ಅಸಇ. ಸ್ತ್ರೀ: [**ಅಸೃತಿ**] ಮಗುಚಿ ಹಾಕಿರುವ ಅಂಗೈ, ಧಾನ್ಯವನ್ನಳೆಯುವ ಒಂದು ಅಳತೆ, ಅದರಿಂದ ಅಳೆಯಲ್ಪಟ್ಟ ಧಾನ್ಯ,

ಅಸಇ. ಸ್ತ್ರೀ: [**ದೇ. ಅಸತ್ತ್ವ**] ಅಭಾವ, ಇಲ್ಲದಿರುವುದು,

ಅಸಇ.} **ಅ:** [**ಅಸಕೃತ್**] ಪುನಃ ಪುನಃ,ಮತ್ತೆ ಮತ್ತೆ
ಅಸಂಇ.} (ಆಚಾ)
ಅಸಈ.}

ಅಸಈ. ಸ್ತ್ರೀ: [**ಅಸತೀ**] ಕುಲಟೆ, ವ್ಯಭಿಚಾರಿಣಿ(ಸುಪಾ), ದಾಸಿ, **–ಪೋಸ.** **ಪು:** [**ಪೋಷ**] ಹಣಕ್ಕಾಗಿ ದಾಸಿಯಾದವಳು, ನಪುಂಸಕ ಅಥವಾ ಪಶುಗಳ ಪಾಲನೆ **–ಪೋಸಣಯಾ.** ಸ್ತ್ರೀ: [**–ಪೋಷಣಾ**] ಅನಂತರ ನೀಡಿರುವ ಅರ್ಥವನ್ನು ನೋಡುವುದು.

ಅಸಉಣಾ. **ಪುಂನ:** [**ಅಶಕುನ**] ಅಪಶಕುನ (ಪಂಚಾ)

ಅಸಂಕ. ವಿ: [**ಅಶಂಕ**] ಸಂದೇಹವಿಲ್ಲದ, ಸಂಶಯವಿಲ್ಲದ, ನಿಸ್ಸಂದಿಗ್ಧವಾದ, ನಿರ್ಭಯ (ಆಚಾ)

ಅಸಂಕಲ. ವಿ: [**ಅಶೃಂಖಲ**] ಸಂಕೋಲೆಯಿಲ್ಲದ, ಅನಿಯಂತ್ರಿತ(ಕುಮಾ)

ಅಸಂಕಿ. ವಿ: [**ಅಶಂಕಿನ್**] ಸಂದೇಹಪಡದವನು (ಸೂಅ)

ಅಸಂಕಿಲಿಟ್ಠ. ವಿ: [**ಅಸಂಕ್ಲಿಷ್ಟ**] ಸಂಕ್ಲೇಶವಿಲ್ಲದ, ದೋಷರಹಿತ(ಔಪ)

ಅಸಂಖ. **ನ:** [**ಅಸಂಖ್ಯ**] ಲೆಕ್ಕವಿಲ್ಲದ, ಎಣಿಸಲಾಗದ, ಅಳತೆಯಿಲ್ಲದ(ಸುಪಾ)

ಅಸಂಖ. **ನ:** [**ಅಸಂಖ್ಯ**] ಸಾಂಖ್ಯ ದರ್ಶನಕ್ಕಿಂತ ಭಿನ್ನವಾದ ದರ್ಶನ (ಸುಪಾ)

ಅಸಂಖಡ. **ನ:** [**ದೇ**] ಕಲಹ, ಜಗಳ (ನಿಚೂ)

ಅಸಂಖಡಿಯ. ವಿ: [**ದೇ**] ಜಗಳ ಮಾಡುವವನು, ಜಗಳಗಂಟ(ಬೃಹ)

ಅಸಂಖಯ. '**ಅಸಂಖ=ಅಸಂಖ್ಯ**' ಶಬ್ದವನ್ನು ನೋಡುವುದು

ಅಸಂಖಯ. ವಿ: [**ಅಸಂಸ್ಕೃತ**] ಸಂಸ್ಕಾರ ಹೊಂದಿಲ್ಲದ, ಸಂಧಾನ ಮಾಡಲು ಅಸಮರ್ಥನಾದ, (ರಾಜ) ವ್ಯಾಕರಣ ಸಂಸ್ಕಾರವಿಲ್ಲದ ಅಪಶಬ್ದ

ಅಸಂಖಿಜ್ಜ. ವಿ: [**ಅಸಂಖ್ಯೇಯ**] ಎಣಿಕೆ ಮಾಡಲು ಅಥವಾ ಅಳೆಯಲು ಸಾಧ್ಯವಿಲ್ಲದ (ನವ)

ಅಸಂಖಿಜ್ಜಯ. '**ಅಸಂಖೆಜ್ಜಯ**' ಶಬ್ದವನ್ನು ನೋಡುವುದು

ಅಸಂಖೆಜ್ಜ. '**ಅಸಂಖಿಜ್ಜ**' ಶಬ್ದವನ್ನು ನೋಡುವುದು

ಅಸಂಖೆಜ್ಜಇ–.ವಿ: [**ಅಸಂಖ್ಯೇಯ**] ಅಸಂಖ್ಯಾತಗಳು, –ಭಗ. **ಪು:** [–ಭಾಗ] ಅಸಂಖ್ಯಾತ ಭಾಗಗಳು

ಅಸಂಖೆಜ್ಜಯ. **ಪುಂ.ನ:** [**ಅಸಂಖ್ಯೇಯಕ**] ಗಣನಾ–ವಿಶೇಷ (ಅಣು)

ಅಸಂಗ. ವಿ: [**ಅಸಂಗ**] ಸಂಬಂಧವಿಲ್ಲದ, ನಿಸ್ಸಂಗ, ಅನಾಸಕ್ತ (ಪಣಣಾ), **ಪು:** ಆತ್ಮ, ಮುಕ್ತ ಜೀವ. **ನ:** ಮೋಕ್ಷ(ಔಪ)

ಅಸಂಗಯ. ನ: [ದೇ] ವಸ್ತ್ರ, ಬಟ್ಟೆ(ದೇ)

ಅಸಂಗಹಿಯ. ವಿ: [**ಅಸಂಗೃಹೀತ**] ಸಂಗ್ರಹಿಸಿಲ್ಲದ್ದು, ಆಶ್ರಯ ಪಡೆಯದ, ಅಧೀನನಲ್ಲದ (ತಾ)

ಅಸಂಗಹಿಯ. ವಿ: [**ಅಸಂಗ್ರಹಿಕ**] ಸಂಗ್ರಹ ಮಾಡದವನು, **ಪು:** ನಿಗಮ ನಯದ ಒಂದು ಭೇದ (ವಿಸೇ)

ಅಸಂಗಿಅ. **ಪು:** [ದೇ] ಕುದುರೆ, ವಿ: ಚಂಚಲ(ದೇ)

ಅಸಂಘಯಣ. ವಿ: [**ಅಸಂಹನನ**] ದೇಹವಿಲ್ಲದಿರುವುದು, ವಜ್ರ, ವೃಷಭ, ನಾರಾಚವೇ ಮೊದಲಾದ ಪ್ರಾಥಮಿಕ ಮೂರು 'ಸಂಘಯಣ' ಗಳಿಲ್ಲದಿರುವುದು (ನಿಚೂ)

ಅಸಂಜಣ. ನ: [**ಅಸಂಜನ**] ನಿಸ್ಸಂಗತ್ವ, ಅನಾಸಕ್ತಿ

ಅಸಂಜಮ. ವಿ: [**ಅಸಂಯಮ**] ಹಿಂಸೆ ಸುಳ್ಳು ಇತ್ಯಾದಿ ಪಾಪ ಕಾರ್ಯಗಳಲ್ಲಿ ತೊಡಗಿರುವುದು(ಸೂಅ), ಮೇಲೆ ಹೇಳಿದ ಹಿಂಸಾ ಕಾರ್ಯಗಳನ್ನು ಬಿಡದಿರುವುದು, ಅಜ್ಞಾನ, ಸಮಾಧಿ ಹೊಂದದಿರುವುದು(ವವ), ಅಂಕೆ, ನಿರ್ಬಂಧ ಇಲ್ಲದ.

ಅಸಂಜಯ. ವಿ: [**ಅಸಂಯತ**] ಹಿಂಸೆಯೇ ಮೊದಲಾದ ಪಾಪ ಕಾರ್ಯಗಳನ್ನು ಬಿಡದಿರುವುದು(ಸೂಅ), ಹಿಂಸೆ, ಪೀಡೆ ಇತ್ಯಾದಿಗಳನ್ನು ಮಾಡುವವನು **ಪು:** ಸಾಧುವಲ್ಲದ, ಗೃಹಸ್ಥ(ಆಚಾ) ಅಂಕೆಯಲ್ಲಿರದ, ಬಂಧಿಸಲ್ಪಡದ

ಅಸಂಜಲ. **ಪು:** [**ಅಸಂಜ್ವಲ**] ಐರಾವತ–ವರ್ಷದ ಒಬ್ಬ ಜಿನದೇವನ ಹೆಸರು

ಅಸಂಜೋಗಿ. ವಿ: [**ಅಸಂಯೋಗಿನ್**] ಸಂಯೋಗ ವಿಲ್ಲದವನು, ಮುಕ್ತ ಜೀವ, ಮುಕ್ತಾತ್ಮ(ತಾ)

ಅಸಂತ. **ವ.ಕೃ:** [**ಅಸತ್**] ಈಗ ಇಲ್ಲದ, ಅಭಾವ, ಸುಳ್ಳು, ಅಸತ್ಯ, ಸುಂದರವಲ್ಲದ್ದು(ಪಣ್ಣ) ಅವ್ಯಕ್ತತೆ, ಕೆಟ್ಟದಾದ, ಇಂದ್ರ, ಶ್ರದ್ಧೆಯಿಲ್ಲದೆ ಮಾಡುವ ಕಾಯ

ಅಸಂತ. **'ಅಸ=ಅಶ್'** ಶಬ್ದವನ್ನು ನೋಡುವುದು

ಅಸಂತ. ವಿ: [**ಅಶಾಂತ**] ಶಾಂತನಲ್ಲದ, ಕೋಪಗೊಂಡ

ಅಸಂತ. ವಿ: [**ಅಸತ್ತ್ವ**] ಸತ್ತ್ವವಿಲ್ಲದ, ಬಲವಿಲ್ಲದ(ಪಣ್ಣ)

ಅಸಂಥಡ. ವಿ: [ದೇ. **ಅಸಂಸ್ಕೃತ**] ಅಶಕ್ತ, ಅಸಮರ್ಥ

ಅಸಂಥರಂತ. **ವ.ಕೃ:** [ದೇ. **ಅಸಂಸ್ತರತ್**] ಸಮರ್ಥನಾಗದಿರುವ, ಹುಡುಕಾಟ ಮಾಡುತ್ತಿಲ್ಲದ(ವವ), ತೃಪ್ತನಾಗದ

ಅಸಂಥರಣ. ನ: [ದೇ. **ಅಸಂಸ್ತರಣ**] ನಿರ್ವಹಿಸದಿರುವುದು, ಸಾಕಷ್ಟು ಲಾಭವಿಲ್ಲದ, (ಪಂಚವ), ಅಸಮರ್ಥತೆ ಅಶಕ್ತ, ಅಸ್ವಸ್ಥ(ಧರ್ಮ)

ಅಸಂಥರಮಾಣ. **ವ. ಕೃ:** [ದೇ.**ಅಸಂಸ್ತರಮಾಣ**] **'ಅಸಂಥರಂತ'** ಶಬ್ದವನ್ನು ನೋಡುವುದು

ಅಸಂಧಿಮ. ವಿ: [**ಅಸಂಧಿಮ**] ಸಂಧಾನವಿಲ್ಲದ, ಅಖಂಡ(ಬೃಹ)

ಅಸಂಭಂತ. **ಪು:** [**ಅಸಂಭ್ರಾಂತ**] ಪ್ರಥಮ ನರಕದ ಆರನೇ ನರಕ–ಸ್ಥಾನ

ಅಸಂಭವ್ವ. ವಿ: [**ಅಸಂಭಾವ್ಯ**] ಯಾವುದು ಆಗುವುದು ಅಥವಾ ನಡೆಯುವುದು ಸಾಧ್ಯವಿಲ್ಲವೋ ಅದು(ಶ್ರಾ) ಊಹಿಸಲು ಸಾಧ್ಯವಾಗದ, ಆಗಲು ಸಾಧ್ಯವಾಗದುದು

ಅಸಂಭಾವಣೀಯ. ವಿ: [**ಅಸಂಭಾವನೀಯ**] ಮೇಲಿನ ಶಬ್ದವನ್ನು ನೋಡುವುದು, ಊಹಿಸಲು ಅಸಾಧ್ಯವಾದ, ಆಗದ

ಅಸಂಲಪ್ಪ. ವಿ: [**ಅಸಂಲಪ್ಯ**] ಅನಿರ್ವಚನೀಯ, ಮಾತಿನಲ್ಲಿ ಹೇಳಲಾಗದ(ಅಣ)

ಅಸಂಲೋಯ. **ಪು:** [**ಅಸಂಲೋಕ**] ರಹಸ್ಯ, ಗುಟ್ಟು ಜನರ ಓಡಾಟವಿಲ್ಲದ ಸ್ಥಳ, ಗುಂಪು ಇಲ್ಲದ ಜಾಗ(ಆಚಾ)

ಅಸಂವರ. **ಪು:** [**ಅಸಂವರ**] ಅಂಗೀಕಾರ, ಮುಚ್ಚುವುದು ಇಲ್ಲದಿರುವುದು, ಮರೆಮಾಡದಿರುವುದು

ಅಸಂವರೀಯ.ವಿ:[**ಅಸಂವೃತ**] ಆಚ್ಛಾದಿಸದಿರುವುದು, ನಿಲ್ಲಿಸಲ್ಪಡದ(ಕುಮಾ)

ಅಸಂವುಡ. ವಿ: [**ಅಸಂವೃತ**] ಪಾಪ ಕರ್ಮಗಳನ್ನು ಬಿಡದಿರುವುದು (ಸೂಅ)

ಅಸಂಸಇಯ. ವಿ: [**ಅಸಂಶಯಿತ**] ಸಂಶಯವಿಲ್ಲದ, ನಿಸ್ಸಂದಿಗ್ಧ

ಅಸಂಸಟ್ಠ. ವಿ: [**ಅಸಂಸೃಷ್ಟ**] ಇನ್ನೊಂದರೊಂದಿಗೆ ಬೆರೆತಿರದ, ಲೇಪವಿಲ್ಲದ(ಔಪ) ಸಂಬಂಧವಿಲ್ಲದ **ಸ್ತ್ರೀ: ಪಿಂಡೈಶಣದ ಒಂದು ಭೇದ**

ಅಸಂಸತ್ತ. ವಿ: [**ಅಸಂಸಕ್ತ**] ಸೇರದಿರುವ(ಉತ್ತ), ಅನಾಸಕ್ತ

ಅಸಂಸಯ. ವಿ: [**ಅಸಂಶಯ**] ಸಂಶಯವಿಲ್ಲದ(ಬೃಹ), **ಕ್ರಿ ವಿ:** ನಿಸ್ಸಂದೇಹ, ಇಪ್ಪಿಟಿನ ಎಕ್ಕಾ

ಅಸಂಸಾರ. ಪು : [**ಅಸಂಸಾರ**] ಸಂಸಾರವಿಲ್ಲದಿರುವುದು, ಮೋಕ್ಷ(ಜೀವ)
ಅಸಂಸಿ: ವಿ: [**ಅಸ್ರಂಸಿನ್**] ನಶ್ವರವಲ್ಲದ (ಕುಮಾ)
ಅಸಕ್ಕ. ವಿ: [**ಅಶಕ್ಯ**] ಮಾಡಲು ಸಾಧ್ಯವಿಲ್ಲದ್ದು(ಸುಪಾ)
ಅಸಕ್ಕ. ವಿ: [**ಅಶಕ್ತ**] ಅಸಮರ್ಥ, ಶಕ್ತನಲ್ಲದ (ಕುಮಾ)
ಅಸಕ್ಕಯ. ವಿ: [**ಅಸಂಸ್ಕೃತ**] ಸಂಸ್ಕಾರ ವಿಲ್ಲದ (ಪಣ್ಣ)
ಅಸಕ್ಕಯ. ವಿ: [**ಅಸತ್ಕೃತ**] ಸತ್ಕರಿಸಲ್ಪಡದಿರುವ (ಪಣ್ಣ)
ಅಸಕ್ಕಣಿಜ್ಜ. ವಿ: [**ಅಶಕನೀಯ**] ಅಶಕ್ಯ
ಅಸಗಾಹ.} **ಪು:** [**ಅಸದ್ಗ್ರಹ**] ಭ್ರಾಂತಿಜ್ಞಾನ, ಮೊಂಡುತನ
ಅಸಗ್ಗಹ.} ಇಲ್ಲದಿರುವುದನ್ನು ಕೇಳುವ ಹಟ(ಉಪ)
ಅಸಗ್ಗಾಹ.} ಅತಿನಿರ್ಬಂಧ, ವಿಶೇಷ ಆಗ್ರಹ(ಭವಿ)
ಅಸಚ್ಚ. ನ: [**ಅಸತ್ಯ**] ಸುಳ್ಳು, ಸುಳ್ಳು ಮಾತು(ಪ್ರಾಸು), ಸತ್ಯವಲ್ಲದ. □**ಮೋಸ.** ನ: [**–ಮೃಷ**] ಸುಳ್ಳಿನೊಂದಿಗೆ ಸೇರಿರುವ ಸತ್ಯ. □**ವಾಇ.** ವಿ:[**–ವಾದಿನ್**] ಸುಳ್ಳು ಹೇಳುವವನು. (**ಅಸಚ್ಚಾಮೋಸ.**) ನ: [**ಅಸತ್ಯಾಮೃಷ**] ಸತ್ಯವೂ ಅಲ್ಲದ ಸುಳ್ಳೂ ಅಲ್ಲದ ಮಾತು(ಆಚಾ). (**ಅಸಚ್ಚಾಮೋಸಾ.**) ಸ್ತ್ರೀ: [**ಅಸತ್ಯಾಮೃಷಾ**] ಆ ನಂತರ ಹೇಳಿದ ಅರ್ಥವನ್ನು ನೋಡುವುದು. **–ಸಂಧ.** ವಿ: [**–ಸಂಧ**] ಅಸತ್ಯ ಪ್ರತಿಜ್ಞೆ ಮಾಡಿದವನು, ಅಸತ್ಯ ಅಭಿಪ್ರಾಯ ಹೊಂದಿರುವವನು.
ಅಸಜ್ಜ.} **ವ. ಕೃ:** [**ಅಸಜತ್**] ಜೊತೆ ಸೇರದಿರುವವನು
ಅಸಜ್ಜಮಾಣ}. (ಆಚಾ)
ಅಸಜ್ಝಾಇಯ. ವಿ: [**ಅಸ್ವಾಧ್ಯಾಯಿಕ**] ಅನಧ್ಯಯನದ ಕಾರಣ (ಪವ)
ಅಸಜ್ಝಾಯ. ವಿ: [**ಅಸ್ವಾಧ್ಯಾಯ**] ಅನಧ್ಯಯನ ಕಾಲ, ವೇದಾಧ್ಯಯನಕ್ಕೆ ನಿಷಿದ್ಧವಾದ ಕಾಲ
ಅಸಡ್ಢ. ವಿ: [**ಅಶ್ರದ್ಧ**] ಶ್ರದ್ಧೆಯಿಲ್ಲದ, ನಂಬಿಕೆಯಿಲ್ಲದ (ಕುಮಾ)
ಅಸಢ. ವಿ: [**ಅಶಠ**] ಶಠನಲ್ಲದವನು, ಸರಳ, ನಿಷ್ಕಪಟ, ವಂಚಕ, ಮೋಸಗಾರ (ಸುಪಾ). **–ಕರಣ.** ವಿ: [**–ಕರಣ**] ನಿಷ್ಕಪಟ ಭಾವದಿಂದ ಅನುಷ್ಠಾನ ಮಾಡುವವನು
ಅಸಣ. ನ: [**ಅಶನ**] ಭೋಜನ, ಆಹಾರ, ಖಾದ್ಯ ಪದಾರ್ಥ(ನಿಚೂ)
ಅಸಣ. **ಪು:** [**ಅಸನ**] ಬೀಜಕ ಎಂಬ ಮರ(ಣಾಯಾ), **ನ:** ಎಸೆಯುವುದು(ವಿಸೇ) ಹೊನ್ನೆಮರ
ಅಸಣಿ. **ಪುಂಸ್ತ್ರೀ:** [**ಅಶನಿ**] ಒಂದು ಬಗೆಯ ಮಿಂಚು, **ಪು:** ಒಂದು ನರಕ–ಸ್ಥಾನ
ಅಸಣಿ. **ಪುಂ ಸ್ತ್ರೀ:** [**ಅಶನಿ**] ಸಿಡಿಲು, ವಜ್ರಾಯುಧ, ಆಕಾಶದಿಂದ ಬೀಳುವ ಬೆಂಕಿಯ ಕಣಗಳು (ಪಣ್ಣ). ಸಿಡಿಲಿನ ಅಗ್ನಿ ಕಣಗಳು, ಅಗ್ನಿ, ಅಸ್ತ್ರ–ವಿಶೇಷ(ವಜ್ರಾಯುಧ). **–ಪ್ಪಹ.** **ಪು:** [**–ಪ್ರಭು**], ರಾವಣನ ಮಾವನ ಹೆಸರು, **–ಮೇಹ.** **ಪು:**[**–ಮೇಘ**] ಆಲಿಕಲ್ಲುಗಳು ಬೀಳುವ ಮಳೆ, ಅತಿ ಭಯಂಕರ ಮಳೆ, ಪ್ರಳಯ ಮೇಘ, **–ವೇಗ.** **ಪು:** [**–ವೇಗ**] ವಿದ್ಯಾಧರರಾಜ(ಪಉಮ)
ಅಸಣೀ. ಸ್ತ್ರೀ: [**ಅಸಣೀ**] ಒಬ್ಬ ಇಂದ್ರಾಣಿ(ಠಾ), ನಾಲಿಗೆ
ಅಸಣ್ಣ. ವಿ: [**ಅಸಂಜ್ಞ**] ಪ್ರಜ್ಞೆಯಿಲ್ಲದ, ಅಚೇತನ
ಅಸಣ್ಣಿ. ವಿ: [**ಅಸಂಜ್ಞಿನ್**] ಪ್ರಜ್ಞೆಯಿಲ್ಲದ, ಎಚ್ಚರವಿಲ್ಲದ, ತನ್ನ ಅರಿವಿಲ್ಲದ(ಜೀವ) ಸಮ್ಯಕ್ ದೃಷ್ಟಿಯಿಲ್ಲದ ಜೈನೇತರ(ಭಗ) **–ಸುಯ.** ನ: [**–ಶ್ರುತ**] ಜೈನೇತರಶಾಸ್ತ್ರ.
ಅಸತ್ತ. ವಿ: [**ಅಶಕ್ತ**] ಅಸಮರ್ಥ, ಕೈಲಾಗದ(ಸುರ)
ಅಸತ್ತ. ವಿ: [**ಅಸಕ್ತ**] ಅನಾಸಕ್ತ(ಆಚಾ), ಫಲಾಭಿಲಾಷೆಯಿಲ್ಲದ, ಸಂಬಂಧವಿಲ್ಲದ
ಅಸತ್ತ. ನ: [**ಅಸತ್ತ್ವ**] ಅಭಾವ, ಇಲ್ಲದ(ಣಂದಿ) ಶಕ್ತಿಯಿಲ್ಲದ, ಸತ್ತ್ವಗುಣವಿಲ್ಲದ, ಸುಳ್ಳು
ಅಸತ್ತಿ. ಸ್ತ್ರೀ: [**ಅಶಕ್ತಿ**] ಸಾಮರ್ಥ್ಯವಿಲ್ಲದಿರುವುದು, ದೌರ್ಬಲ್ಯ, **–ಮಂತ.** ವಿ: [**–ಮತ್**] ಅಸಮರ್ಥ, ಅಶಕ್ತ(ಪಉಮ)
ಅಸತ್ಥ. ವಿ: [**ಅಸ್ವಸ್ಥ**] ಆರೋಗ್ಯದಿಂದಿರದ, ರೋಗಪೀಡಿತ (ಸುರ)
ಅಸತ್ಥ. ನ: [**ಅಶಸ್ತ್ರ**] ಶಸ್ತ್ರವಿಲ್ಲದ, ಸಂಯಮ, ದೋಷವಿಲ್ಲದ ಆಚರಣೆ (ಆಚಾ)
ಅಸದ್ದ. **ಪು:** [**ಅಶಬ್ದ**] ಅಪಕೀರ್ತಿ, (ಗಚ್ಛ) ವಿ: ಶಬ್ದರಹಿತ
ಅಸದ್ಧ. ವಿ: [**ಅಶ್ರದ್ಧ**] ಶ್ರದ್ಧೆಯಿಲ್ಲದಿರುವುದು ಸ್ತ್ರೀ:–ದ್ಧೀ(ಉಪ)
ಅಸನ್ನಿ. '**ಅಸಣ್ಣಿ**' ಶಬ್ದವನ್ನು ನೋಡುವುದು
ಅಸಬಲ. ವಿ: [**ಅಶಬಲ**] ಮಿಶ್ರವಲ್ಲದ, ದೋಷ–ರಹಿತ, ಪವಿತ್ರ (ಪಣ್ಣ)
ಅಸಬ್ಭ. ವಿ: [**ಅಸಭ್ಯ**] ಶಿಷ್ಟವಲ್ಲದ, ಅಸಾಧು, ಅನಾಗರಿಕ(ಸ) ಸಭೆಗೆ ಯೋಗ್ಯನಲ್ಲದ. **–ಭಾಸಿ.** ವಿ: [**–ಭಾಷಿನ್**] ಅಸಭ್ಯ ಭಾಷೆ ಬಳಸುವವನು

ಅಸಬ್ಭಾವ. ಪು: [ಅಸದ್ಭಾವ] ವಾಸ್ತವಕ್ಕೆ ವಿರುದ್ಧವಾದ ಅಭಿಪ್ರಾಯ, ಸುಳ್ಳು, ವಿ: ಯಥಾರ್ಥವಲ್ಲದ (ಪಿಂಡ) ಅಭಾವ

ಅಸಬ್ಭಾವಿ. ವಿ: [ಅಸದ್ಭಾವಿನ್] ಸುಳ್ಳುಗಾರ(ಮಹಾ)

ಅಸಬ್ಭೂಯ. ವಿ: [ಅಸದ್ಭೂತ] ಅಸತ್ಯ, ಸುಳ್ಳು

ಅಸಮ. ವಿ: [ಅಸಮ] ಸಮಾನವಲ್ಲದ, ಸಮವಲ್ಲದ, ಅಸಾಧಾರಣ (ಸುರ), ಬೆಸ ಸಂಖ್ಯೆ ಹೊಂದಿರುವ, ವಿಷಮ. **–ಸರ.** ಪು: [–ಶರ] ಮನ್ಮಥ (ಗಉಡ)

ಅಸಮವಾಇ. ನ: [ಅಸಮವಾಇನ್] ನೈಯಾಯಿಕ ಮತ್ತು ವೈಶೇಷಿಕ ದರ್ಶನದ ಪ್ರಸಿದ್ಧ ಕಾರಣ–ವಿಶೇಷಗಳು

ಅಸಮಂಜಸ. ವಿ: [ಅಸಮಂಜಸ] ಅವ್ಯವಸ್ಥಿತ, ಸಮಂಜಸವಲ್ಲದ, ಅಸಂಗತವಾದ, ಅವ್ಯಕ್ತ, ಅಸ್ಪಷ್ಟ

ಅಸಮಿಕ್ಖಿಯ. ವಿ: [ಅಸಮೀಕ್ಷಿತ] ಆಲೋಚಿಸದ, ವಿಚಾರ ಮಾಡದ(ಪಣ್ಹ), ವಿವೇಚನೆಯಿಲ್ಲದ. **–ಕಾರಿ.** ವಿ:[–ಕಾರಿನ್] ಸಾಹಸಿಕ, **–ಕಾರಿಯಾ.** ಸ್ತ್ರೀ:[–ಕಾರಿತಾ] ಸಾಹಸದ ಕೆಲಸ, ಆಲೋಚಿಸದೆ ಮಾಡುವ

ಅಸರಾಸಯ. ವಿ:[ದೇ]ನಿರ್ದಯ, ನಿಷ್ಠುರ ಹೃದಯವುಳ್ಳ

ಅಸಲೀಲ. ವಿ: [ಅಶ್ಲೀಲ] ಅಸಭ್ಯ ಭಾಷೆ

ಅಸವ. ಪು: [ಅಸು] ಪ್ರಾಣ, ಶ್ವಾಸ, ಉಸಿರು: ಪಂಚ ಪ್ರಾಣವಾಯುಗಳು. ನೀರು

ಅಸವಣ್ಣ. ವಿ: [ಅಸವರ್ಣ] ಅಸಮಾನ, ಅಸಾಧಾರಣ, ಸಜಾತೀಯ ಅಲ್ಲದ(ಸಣಣಾ)

ಅಸವಾರ. ಪು: [ಅಶ್ವವಾರ] ಕುದುರೆ ಸವಾರ

ಅಸಹ. ವಿ: [ಅಸಹ] ಸಹಿಸದ, ಸಹನೆಯಿಲ್ಲದ, ಅಸಹಿಷ್ಣು (ಕುಮಾ), ಅಸಮರ್ಥ, ದುಃಖಿಸುವವನು(ಪಾಅ)

ಅಸಹಣ. ವಿ: [ಅಸಹನ] ಸಹನೆಯಿಲ್ಲದಿರುವುದು, ಅಸಹಿಷ್ಣು, ಕೋಪಗೊಂಡವನು(ಪಾಅ)

ಅಸಹಾಯ. ವಿ: [ಅಸಹಾಯ] ಇತರರ ನೆರವಿಲ್ಲದ, ಒಂಟಿಗ

ಅಸಹಿಜ್ಜ. ವಿ: [ಅಸಾಹಾಯ್ಯ] ಸಹಾಯವಿಲ್ಲದ, ನೆರವಿಲ್ಲದ, ನೆರವು ಬಯಸದವನು (ಉವಾ)

ಅಸಹೀಣ. ವಿ: [ಅಸ್ವಾಧೀನ] ಪರಾಧೀನ, ಸ್ವತಂತ್ರನಲ್ಲದ

ಅಸಹು. ವಿ: [ಅಸಹ] ಸಹಿಸದ, ಅಸಹಿಷ್ಣು(ಉವಾ), ಅಸಮರ್ಥ, ಅಶಕ್ತ, (ಓಘ), ರೋಗಿ ಸುಕುಮಾರ, ಕೋಮಲ(ತಾ)

ಅಸಹೆಜ್ಜ. 'ಅಸಹಿಜ್ಜ' ಶಬ್ದವನ್ನು ನೋಡುವುದು

ಅಸಾಗಾರಿಯಾ. ವಿ: [ಅಸಾಗಾರಿಕಾ] ಗೃಹಸ್ಥರ ಓಡಾಟ ಇಲ್ಲದಿರುವ ಸ್ಥಳ(ವವ)

ಅಸಾಢಭೂಇ. ಪು: [ಆಷಾಢಭೂತಿ] ಒಬ್ಬ ಜೈನ ಮುನಿ

ಅಸಾಢಯ. ನ: [ಅಸಾಢಕ] ತೃಣ–ವಿಶೇಷ(ಪಣಣಾ)

ಅಸಾಯ. ನ: [ಅಸಾತ] ದುಃಖ, ನೋವು, ಯಾತನೆ (ಪಣ್ಣ). **–ವೇಯಣಿಜ್ಜ.** ನ: [–ವೇದನೀಯ] ದುಃಖಕ್ಕೆ ಕಾರಣಭೂತವಾದ ಕರ್ಮ(ಠಾ)

ಅಸಾರ.} ವಿ: [ಅಸಾರ,–ಕ] ನಿಸ್ಸಾರ, ಸಾರವಿಲ್ಲದ,
ಅಸಾರಯ}. (ಮಹಾ)

ಅಸಾರಾ. ಸ್ತ್ರೀ: [ದೇ] ಬಾಳೆ ಗಿಡ(ದೇ)

ಅಸಾಲಿಯ. ಪುಂಸ್ತ್ರೀ: [ದೇ] ಹಾವಿನ ಒಂದು ಜಾತಿ

ಅಸಾಸಯ. ವಿ: [ಅಶಾಶ್ವತ] ನಶ್ವರ, ಅನಿತ್ಯ(ಣಾಯಾ)

ಅಸಾಹಣ. ನ: [ಅಸಾಧನ] ಕಾರಣವಿಲ್ಲದಿರುವುದು, ಉಪಕರಣವಿಲ್ಲದಿರುವುದು, ಸಿದ್ಧಿಯಿಲ್ಲದ್ದು

ಅಸಾಹಾರಣ. ವಿ: [ಅಸಾಧಾರಣ] ಸಾಮಾನ್ಯವಲ್ಲದ, ಅಸದೃಶ, ಹೋಲಿಕೆಯಿಲ್ಲದ, (ಭಗ)

ಅಸಿ. ಪು: [ಅಸಿ] ಖಡ್ಗ, ಕತ್ತಿ, ಈ ಹೆಸರಿನ ನರಕಪಾಲ ದೇವರುಗಳ ಒಂದು ಜಾತಿ(ಭಗ) ಸ್ತ್ರೀ: ವಾರಣಾಸಿಯ ಒಂದು ನದಿಯ ಹೆಸರು, ಉಸಿರು, ಒಂದು ದಿನ **–ಕುಂಡ.** ನ: [–ಕುಂಡ] ಮಥುರೆಯ ಒಂದು ತೀರ್ಥಕ್ಷೇತ್ರ. –(ಸುರ) **ಘಾಯ.** ಪು: –[–ಘಾತ] ಕತ್ತಿಯ ಹೊಡೆತ (ಪಉಮ). **–ಚಮ್ಮಪಾಯ.** ನ: [–ಚರ್ಮಪಾತ್ರ] ಕತ್ತಿಯ ಒರೆ, **–ಧಾರಾ.** ಸ್ತ್ರೀ: [–ಧಾರಾ] ಕತ್ತಿಯ ಅಲಗು, (ಉತ್ತ), **–ಧೇಣು, ಧೇಣುಆ.** ಸ್ತ್ರೀ: [–ಧೇನು, ಧೇನುಕಾ] ಸಣ್ಣ ಚೂರಿ, **–ಪತ್ತ,** ನ: [–ಪತ್ರ]ಕತ್ತಿ, ಕತ್ತಿಯ ಹಾಗೆ ಹರಿತವಾದ ಎಲೆ. ಪು: ನರಕಪಾಲ ದೇವರುಗಳ ಒಂದು ಜಾತಿ. **–ಪುತ್ತಗಾ.** ಸ್ತ್ರೀ: [–ಪುತ್ರಿಕಾ] ಚೂರಿ(ಉಪ), **–ಮುಟ್ಠಿ.** ಸ್ತ್ರೀ: [–ಮುಷ್ಟಿ]ಕತ್ತಿಯ ಹಿಡಿ(ಪಾಅ), **–ರಯಣ.** ನ: [–ರತ್ನ] ಚಕ್ರವರ್ತಿ ದೊರೆಯ ಒಂದು ಉತ್ತಮ ಖಡ್ಗ, **–ಲಟ್ಠಿ.** ಸ್ತ್ರೀ: [–ಯಷ್ಟಿ] ಖಡ್ಗಲತೆ, ಕತ್ತಿ. **–ವಣ.** ನ: [–ವನ]ಕತ್ತಿಯ ಆಕಾರದ ಎಲೆಗಳುಳ್ಳ ಮರಗಳ ಕಾಡು(ಪಣ್ಣ), **–ವತ್ತ.** **–ಪತ್ತ** ನೋಡಿ, **–ಹರ.** ವಿ: [–ಧರ] ಖಡ್ಗಧಾರಿ, ಯೋಧ(ಸೇ), **–ಹಾರಾ** **'–ಧಾರಾ'** ಶಬ್ದವನ್ನು ನೋಡುವುದು

ಅಸಿಇ.(ಅಪ) **'ಅಸೀಇ'** ಶಬ್ದವನ್ನು ನೋಡುವುದು

ಅಸಿತ್ಥ. ನ: [ಅಸಿಕ್ಥ] ಹಿಟ್ಟು ಕೈಗೆ ಹತ್ತಿರುವುದು ಅಥವಾ ಪಾತ್ರೆಯನ್ನು ಬಟ್ಟೆಯಿಂದ ಒರೆಸಿದ ನೀರು

ಅಸಿನ. ನ: [ಅಶನ] ಊಟ, ಆಹಾರ, ಅನ್ನ(ಆಚಾ)

ಅಸಿದ್ಧ. ವಿ: [ಅಸಿದ್ಧ] ಅನಿಷ್ಪನ್ನವಾದ, ಹುಟ್ಟದಿರುವ, ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಐದು ದುಷ್ಟ ಹೇತುಗಳು(ವಿಸೇ)

ಅಸಿಯ. ವಿ: [ಅಶಿತ] ತಿನ್ನಲ್ಪಟ್ಟ, ಭುಂಜಿಸಲಾದ (ಪಾಅ)

ಅಸಿಯ. ವಿ: [ಅಸಿತ] ಬಿಳುಪಲ್ಲದ, ಕಪ್ಪು (ಪಾಅ), ಅಶುಭ, ಅಬದ್ಧ, ಅಂಕೆಯಿಲ್ಲದ,(ಸೂಅ) ಶನಿ ಗ್ರಹ ಚಿಕ್ಕವಯಸ್ಸಿನ ದಾಸಿ. **–ಕ್ಖ ಪು: (ಅಸಿತಾಕ್ಷ)** ಒಬ್ಬ ಯಕ್ಷ

ಅಸಿಯ. ನ: [ದೇ] ಕುಡುಗೋಲು, ದೋಣಿಯನ್ನು ಕಟ್ಟಿಹಾಕುವ ಗೂಟ

ಅಸಿಯವ್ವ. **'ಅಸ=ಅಶ್'** ಶಬ್ದವನ್ನು ನೋಡುವುದು

ಅಸಿಲೇಸಾ. ಸ್ತ್ರೀ: [ಆಶ್ಲೇಷಾ] ಒಂದು ನಕ್ಷತ್ರ

ಅಸಿಲೋಗ. ಪು: [ಅಶ್ಲೋಕ] ಅಪಕೀರ್ತಿ

ಅಸಿವ. ನ: [ಅಶಿವ] ವಿನಾಶ, ಅಸುಖ, ದೇವತಾದಿಗಳಿಂದ ಆಗುವ ಉಪದ್ರ(ಓಘ), ಮಾರೀ ರೋಗ, ಅಶುಭ, ಅಮಂಗಳ

ಅಸಿವಿಣ. ಪು: [ಅಸ್ವಪ್ನ] ದೇವತೆ(ಪ್ರಾವಾ) ನಿದ್ರೆಯಿಲ್ಲದಿರುವಿಕೆ

ಅಸಿವ್ವ. **'ಅಸಿವ'** ಶಬ್ದವನ್ನು ನೋಡುವುದು

ಅಸಿಸುಈ. ಸ್ತ್ರೀ: [ಅಶಿಶ್ವೀ] ಮಗು ಇಲ್ಲದ ತಾಯಿ

ಅಸಿಹ. ವಿ: [ಅಶಿಖ] ಶಿಖೆಯಿಲ್ಲದ (ವವ)

ಅಸೀಇ. ಸ್ತ್ರೀ: [ಅಶೀತಿ] ಸಂಖ್ಯೆ=ಎಂಬತ್ತು. **–ಮ.** ವಿ: [**–ತಮ**] ಎಂಬತ್ತನೆಯ(ಪಉಮ)

ಅಸೀಇಗ. ವಿ: [ಅಶೀತಿಕ] ಎಂಬತ್ತು ವರ್ಷ ವಯಸ್ಸಿನ

ಅಸೀಮ. ವಿ: [ಅಸೀಮನ್] ನಿಸ್ಸೀಮ, ಸೀಮೆಯಿಲ್ಲದ, ಎಲ್ಲೆಯಿಲ್ಲದ(ಉಪ)

ಅಸೀಲ. ವಿ: [ಅಶೀಲ] ಶೀಲವಿಲ್ಲದ, ಕೆಟ್ಟ ನಡತೆಯವನು(ಪಣ್ಣ), ದುರ್ನಡತೆ, **–ಮಂತ.** ವಿ: [**–ವತ್**] ಸದಾಚಾರಿಯಲ್ಲದವನು,

ಅಸು. ಪು. ಬ: [ಅಸು} ಪ್ರಾಣ, ನ: ಮನಸ್ಸು, ಉಷ್ಣತೆ (ಪ್ರಾಪ)

ಅಸು. **'ಅಂಸು'** ಶಬ್ದವನ್ನು ನೋಡುವುದು

ಅಸುಇ. ವಿ: [ಅಶುಚಿ] ಶುಚಿಯಿಲ್ಲದ, ಮಲಿನ, ಅಪವಿತ್ರ,(ಔಪ) ನ: ಅಮೇಧ್ಯ(ಠಾ)

ಅಸುಇ. ವಿ: [ಅಶ್ರುತಿ] ಕಿವಿಯಲ್ಲದ, ಕೇಳದಿರುವುದು, ಶೃತಿಯ ಆಧಾರವಿಲ್ಲದಿರುವುದು(ಭಗ)

ಅಸುಈಕಯ. ವಿ: [ಅಶುಚೀಕೃತ] ಅಪವಿತ್ರಗೊಳಿಸಲ್ಪಟ್ಟ

ಅಸುಗ. ಪು: [ಅಸುಕ] **'ಅಸು=ಅಸು'** ಶಬ್ದವನ್ನು ನೋಡುವುದು

ಅಸುಜ್ಝಂತ. ವಿ: [ಅ–ದೃಶ್ಯಮಾನ] ಕಣ್ಣಿಗೆ ಕಾಣಿಸದಿರುವ (ಪಉಮ)

ಅಸುಣಿ. ವಿ: [ಅಶ್ರೋತೃ] ಕಿವಿ ಕೇಳಿಸದ, ಕಿವುಡ (ವಜ್ಜಾ)

ಅಸುದ್ಧ. ವಿ: [ಅಶುದ್ಧ] ಶುದ್ಧವಲ್ಲದ, ಮಲಿನ, ನ: ಕೊಳಕಾದ, **–ವಿಸೋಹಯ.** ಪು: [**–ವಿಶೋಧಕ**] ಭಂಗಿ, ಮಲವನ್ನು ತೊಳೆಯುವವನು(ಸುರ)

ಅಸುಭ. **'ಅಸುಹ=ಅಶುಭ'** ಶಬ್ದವನ್ನು ನೋಡುವುದು

ಅಸುಯ. ವಿ: [ಅಶ್ರುತ] ಕೇಳಿಲ್ಲದ, ಕೇಳದಿರುವ **–ಣಿಸ್ಸಿಯ.** ನ: [**–ನಿಶ್ರಿತ**] ಶಾಸ್ತ್ರಗಳನ್ನು ಕೇಳದೆಯೆ ಉಂಟಾಗುವ ಜ್ಞಾನ(ಣಂದಿ), **–ಪುವ್ವ.** ವಿ: [**–ಪೂರ್ವ**] ಹಿಂದೆಂದೂ ಕೇಳಿರದ (ಣಾಯಾ)

ಅಸುಯ. ವಿ: [ಅಸುತ] ಮಗನಿಲ್ಲದವನು, ಪುತ್ರ–ರಹಿತ(ಉತ್ತ)

ಅಸುರ. ಪು: [ಅಸುರ] ದೈತ್ಯ, ರಾಕ್ಷಸ, ದೇವಜಾತಿ–ವಿಶೇಷ, ಭವನಪತಿ ಮತ್ತು ವ್ಯಂತರ ದೇವರುಗಳಜಾತಿ(ಪಣ್ಣ),ದಾಸಸ್ಥಾನದಲ್ಲಿರುವದೇವ, **–ಕುಮಾರ.** ಪು: [**–ಕುಮಾರ**] ಭವನಪತಿ ದೇವರುಗಳ ಒಂದು ಒಳಜಾತಿ (ಠಾ) **–ರಾಯ.** ಪು [**–ರಾಜ**] ಅಸರರ ಒಡೆಯ (ಪಿ). **–ವಂದಿ.** ಪು: [**–ವಂದಿನ್**] ರಾಕ್ಷಸ (ಸೇ)

ಅಸುರಿಂದ. ಪು: [ಅಸುರೇಂದ್ರ] ರಾಕ್ಷಸರ ದೊರೆ, ಇಂದ್ರ–ವಿಶೇಷ

ಅಸುಹ. ನ: [ಅಶುಭ] ಅಮಂಗಳ, ಪಾಪ–ಕರ್ಮ, ವಿ. ಕೆಟ್ಟದ್ದು, ದುರ್ದಶೆ, **–ಣಾಮ.** ನ: [**–ನಾಮನ್**] ಅಶುಭ ಫಲವನ್ನು ಉಂಟುಮಾಡುವ ಕರ್ಮ–ವಿಶೇಷ

ಅಸುಹ. ನ: [ಅಸುಖ] ಸುಖವಲ್ಲದ್ದು, ದುಃಖ

ಅಸೂಅ. ಸಕ: [ಅಸೂಯ್] ಅಸೂಯೆಪಡುವುದು, ಹೊಟ್ಟೆಕಿಚ್ಚು ಪಡುವುದು **'ಅಸೂಏಹಿ'**

ಅಸೂಯಾ. ಸ್ತ್ರೀ: [ಅಸೂಚಾ] ಸೂಚನೆ ಅಥವಾ ಸುಳಿವು ಇಲ್ಲದಿರುವುದು, ಬೇರೆಯವರ ದೋಷಗಳನ್ನು ಹೇಳದೆ ತನ್ನದೇ ದೋಷಗಳನ್ನು ಹೇಳುವುದು(ನಿಚೂ)

ಅಸೂಯಾ. ಸ್ತ್ರೀ: [ಅಸೂಯಾ] ಅಸೂಯೆ, ಅಸಹಿಷ್ಣುತೆ

ಅಸೂರಿಯ. ವಿ: [ಅಸೂರ್ಯ] ಸೂರ್ಯ ನಿಲ್ಲದಿರುವುದು, ಕತ್ತಲೆ ತುಂಬಿದ ಪ್ರದೇಶ, **ಪು:** ನರಕ

ಅಸೆವ್ವ. 'ಅಸಿವ' ಶಬ್ದವನ್ನು ನೋಡುವುದು

ಅಸೆವ್ವ. ವಿ: [ಅಸೇವ್ಯ] ಸೇವೆಗೆ ಅಯೋಗ್ಯ (ಗಲುಡ)

ಅಸೇಸ. ವಿ: [ಅಶೇಷ] ಏನನ್ನೂ ಉಳಿಸದೆ, ಸಕಲ, ಎಲ್ಲ (ಪ್ರಾಪ)

ಅಸೋಅ}. ಪು: [ಅಶೋಕ]. ಒಬ್ಬ ದೇವ, **ಪುಂನ:**

ಅಸೋಗ}. ಒಂದು ದೇವ–ವಿಮಾನ. ಶಕ್ರನೇ ಮೊದಲಾದ ಇಂದ್ರರ ಒಂದು ಅಭಾವ್ಯ ವಿಮಾನ ವಿಶೇಷ **–ವಡಿಂಸಯ. ಪುಂನ:** [–**ಅಶೋಕಾವತಂಸಕ**] ಸೌಧರ್ಮ ದೇವ ಲೋಕದ ಒಂದು ವಿಮಾನ

ಅಸೋಗ. ಪು: [ಅಶೋಕ] ಸುಪ್ರಸಿದ್ಧ ಅಶೋಕ ವೃಕ್ಷ, ಮಹಾ ಗ್ರಹಹಸಿರು ಬಣ್ಣ(ರಾಯ) ಭಗವಾನ್ ಮಲ್ಲಿನಾಥನ ಚೈತ್ಯ–ವೃಕ್ಷ, ದೇವ–ವಿಶೇಷ, ನ: ತೀರ್ಥ, ಯಕ್ಷ, ವಿ: ಶೋಕವಿಲ್ಲದ, ಪಾದರಸ, ಕಟುಕರೋಹಿಣಿ, ಚೈತ್ರ ಶುಕ್ಲ ಷಷ್ಟಿ, **–ಚಂದ. ಪು:** [–**ಚಂದ್ರ**] ಶ್ರೇಣಿಕ ಮಹಾರಾಜನ ಮಗ. ಒಬ್ಬ ಪ್ರಸಿದ್ಧ ಜೈನಾಚಾರ್ಯ(ಸಾರ್ಧ). **–ಲಲಿಯ. ಪು:** [–**ಲಲಿತ**] ನಾಲ್ಕನೇ ಬಲದೇವನ ಹಿಂದಿನ ಜನ್ಮದ ಹೆಸರು(ಭಗ), **–ವಣ. ನ:**[–**ವನ**] ಅಶೋಕವೃಕ್ಷಗಳಿರುವ ವನ. **–ವಣಿಯಾ. ಸ್ತ್ರೀ:** [–ವನಿಕಾ] ಅಶೊಕವೃಕ್ಷಗಳಿರುವ ತೋಟ. –ಸಿರಿ. **ಪು:** [–ಶ್ರೀ] ಈ ಹೆಸರಿನ ಒಬ್ಬ ಹೆಸರಾಂತ ರಾಜ ಸಾಮ್ರಾಟ್ ಅಶೋಕ]

ಅಸೋಗಾ. ಸ್ತ್ರೀ: [ಅಶೋಕಾ] ಈ ಹೆಸರಿನ ಒಬ್ಬ ಇಂದ್ರಾಣಿ(ತಾ), ಭಗವಾನ್ ಶೀತಲನಾಥನ ಶಾಸನದೇವಿ, ಒಂದು ನಗರದ ಹೆಸರು (ಪಉಮ)

ಅಸೋಭಣ. ವಿ: [ಅಶೋಭನ] ಸುಂದರವಲ್ಲದ, ಕೆಟ್ಟ (ಪಉಮ) ಜೈನಾಚಾರ್ಯ

ಅಸೋಯ. 'ಅಸೋಗ' ಶಬ್ದವನ್ನು ನೋಡುವುದು

ಅಸೋಯು. ಪು: [ಅಶ್ವಯುಕ್] ಆಶ್ವಯುಜ ಮಾಸ(ಸಮ) ಅಶ್ವಿನೀ ನಕ್ಷತ್ರ

ಅಶಯ. ವಿ: [ಅಶೌಚ] ಅಶುಚಿ, ಅಪವಿತ್ರತೆ, ಮೈಲಿಗೆ **–ವಾಇ.** ವಿ: [–ವಾದಿನ್] ಅಶೌಚವನ್ನೇ ಮಾನ್ಯ ಮಾಡುವವನು

ಅಸೋಯಣಯಾ. ಸ್ತ್ರೀ: [ಅಶೋಚನತಾ] ಶೋಕವಿಲ್ಲದಿರುವುದು (ಪಕ್ಕಿ)

ಅಸೋಯಾ. 'ಅಸೋಗಾ' ಶಬ್ದವನ್ನು ನೋಡುವುದು

ಅಸೊಲ್ಲಿಯ. ವಿ: [ಅಪಕ್ವ] ಬಲಿಯದಿರುವ, ಮಾಗದಿರುವ, ಬೇಯಿಸದಿರುವ(ಉವಾ)

ಅಸೋಹಿ. ಸ್ತ್ರೀ: [ಅಶೋಧಿ] ಅಶುದ್ಧಿ, ಪೀಡಿಸುವುದು, ಹಿಂಸಿಸುವುದು(ಓಘ) **–ಠಾಣ. ನ:** [–**ಸ್ಥಾನ**] ಪಾಪ ಕರ್ಮ, ಅಶುದ್ಧಿಯ ಸ್ಥಳ, ದುರ್ಜನರ ಸಹವಾಸ, ಅಪವಿತ್ರ ಸ್ಥಳ

ಅಸ್ಸ. ಪು: [ಆಸ್ಯ] ಮುಖ(ಗಾ)

ಅಸ್ಸ. ವಿ: [ಅಸ್ವ] ಹಣವಿಲ್ಲದಿರುವುದು, ನಿರ್ಗ್ರಂಥ, ಸಾಧು, ಜೈನಮುನಿ(ಆಚಾ)

ಅಸ್ಸ. ಪು: [ಅಶ್ವ] ಕುದುರೆ, ಅಶ್ವಿನೀ ನಕ್ಷತ್ರದ ಅಧಿಷ್ಠಾತೃ ದೇವ(ತಾ), ಒಬ್ಬ ಋಷಿ,**–ಕಣ್ಣ. ಪು:** [–**ಕರ್ಣ**] **ಒಂದು** ಅಂತರ್‌ದ್ವೀಪ, ಈ ಅಂತರ್ ದ್ವೀಪದ ನಿವಾಸಿ(ಣಂದಿ) □ಕಣ್ಣೀ. **ಸ್ತ್ರೀ:** [–**ಕರ್ಣೀ**] ವನಸ್ಪತಿ–ವಿಶೇಷ(ಪಣ್ಣ) ಅಶ್ವಶಾಲೆ, ಕುದುರೆ ಲಾಯ(ಆಚಾ), **–ಗ್ಗೀವ. ಪು:** [–**ಗ್ರೀವ**] ಮೊದಲನೆಯ ಪ್ರತಿವಾಸುದೇವನ ಹೆಸರು. ಹಯಗ್ರೀವ ರೂಪ ತಾಳಿದ ವಿಷ್ಣು, ಒಬ್ಬ ರಾಕ್ಷಸ, **–ತರ. ಪುಂಸ್ತ್ರೀ:** [–**ತರ**] ಹೇಸರಗತ್ತೆ, **–ಮುಹ. ಪು:** [–**ಮುಖ**] ಈ ಹೆಸರಿನ ಒಂದು ಅಂತರ್ ದ್ವೀಪ ಮತ್ತು ಅದರ ನಿವಾಸಿಗಳು(ಣಂದಿ) **–ಮೇಧ. ಪು:** [–**ಮೇಧ**] ಕುದುರೆಯನ್ನು ಬಲಿಕೊಡುವ ಪ್ರಸಿದ್ಧವಾದ ಯಾಗ. **–ಸೇಣ. ಪು:** [–**ಸೇನ**] ಒಬ್ಬ ಪ್ರಸಿದ್ಧ ರಾಜ, ಪಾರ್ಶ್ವ ತೀರ್ಥಂಕರರ ತಂದೆ(ಪವ), ಒಂದು ಮಹಾ ಗ್ರಹದ ಹೆಸರು. **ಅಸ್ಸಾಯರ. ಪು:** [**ಅಶ್ವಾದರ**] ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು.

ಅಸ್ಸ. ನ: [ಅಸ್ರು] ಕಣ್ಣೀರು, ರಕ್ತ

ಅಸ್ಸಂಖ. ವಿ: [ಅಸಂಖ್ಯ] ಎಣಿಸಲಾಗದ, ಲೆಕ್ಕವಿಲ್ಲದಷ್ಟು

ಅಸ್ಸಂಗಿಲ. ವಿ: [ದೇ] ಆಸಕ್ತ(ಷಡ್)
ಅಸ್ಸಂಘಯಣಿ. ವಿ: [ಅಸಂಹನನಿನ್] ದೇಹವಿಲ್ಲದ, ಯಾವುದೇ ಬಗೆಯ ಶಾರೀರಿಕ ಬಂಧವಿಲ್ಲದ
ಅಸ್ಸಂಜಮ. **'ಅಸಂಜಮ'** ಶಬ್ದವನ್ನು ನೋಡುವುದು
ಅಸ್ಸಂಜಯ. ವಿ: [ಅಸ್ವಯತ] ಗುರುವಿನ ಆಜ್ಞೆಯನ್ನು ಅನುಸರಿಸಿ ನಡೆಯುವವನು, ಸ್ವಚ್ಛಂದಿಯಲ್ಲದ
ಅಸ್ಸಂಜಯ. **'ಅಸಂಜಯ'** ಶಬ್ದವನ್ನು ನೋಡುವುದು
ಅಸ್ಸಂದಮ. ಪು: [ಅಶ್ವಂದಮ] ಅಶ್ವಪಾಲಕ(ಸುಪಾ)
ಅಸ್ಸಚ್ಚ. **'ಅಸಚ್ಚ'** ಶಬ್ದವನ್ನು ನೋಡುವುದು
ಅಸ್ಸಣ್ಣಿ. **'ಅಸಣ್ಣಿ'** ಶಬ್ದವನ್ನು ನೋಡುವುದು
ಅಸ್ಸತ್ಥ. ಪು: [ಅಶ್ವತ್ಥ] ಅಶ್ವತ್ಥ ವೃಕ್ಷ, ಅರಳಿ ಮರ
ಅಸ್ಸತ್ಥ. ವಿ: [ಅಸ್ವಸ್ಥ] ಆರೋಗ್ಯದಿಂದಿಲ್ಲದವನು, ರೋಗಿ (ಸುರ)
ಅಸ್ಸನ್ನಿ. **'ಅಸಣ್ಣಿ'** ಶಬ್ದವನ್ನು ನೋಡುವುದು
ಅಸ್ಸಮ. ಪು: [ಆಶ್ರಮ] ಋಷಿ, ಮುನಿಗಳ ವಾಸಸ್ಥಳ, (ಅಭಿ)
ಅಸ್ಸಮಿಲ. ವಿ: [ಅಶ್ರಮಿತ] ಶ್ರಮವಿಲ್ಲದ, ಅನಭ್ಯಾಸಿ
ಅಸ್ಸವಾರ. **'ಅಸವಾರ'** ಶಬ್ದವನ್ನು ನೋಡುವುದು
ಅಸ್ಸಸ. ಅ: [ಆ+ಶ್ವಸ್] ರಕ್ಷಣೆಯ ಭರವಸೆಯನ್ನು ತೆಗೆದುಕೊಳ್ಳು
ಅಸ್ಸಾಇಯ. ವಿ: [ಆಸ್ವಾದಿತ] ಆಸ್ವಾದಿಸಲ್ಪಟ್ಟದ್ದು(ದೇ)
ಅಸ್ಸಾಏಮಾಣ. **'ಅಸ್ಸಾಯ=ಆಸ್ವಾದಯ್'** ಶಬ್ದವನ್ನು ನೋಡುವುದು
ಅಸ್ಸಾದ. ಸಕ: [ಆ+ಸಾದಯ್] ಪಡೆದುಕೊಳ್ಳು **'ಅಸ್ಸಾದೇಂತಿ'**
ಅಸ್ಸಾದ. ಸಕ: [ಆ+ಸ್ವಾದಯ್] ಆಸ್ವಾದಿಸು
ಅಸ್ಸಾದಣ. **'ಅಸ್ಸಾಯಣ'** ಶಬ್ದವನ್ನು ನೋಡುವುದು
ಅಸ್ಸಾದಿಯ. ವಿ: [ಆಸಾದಿತ] ಪಡೆದುಕೊಳ್ಳಲ್ಪಟ್ಟ (ಭಗ)
ಅಸ್ಸಾಯ. **'ಅಸ್ಸಾದ'= ಆ+ಸಾದಯ್'** ಶಬ್ದವನ್ನು ನೋಡುವುದು
ಅಸ್ಸಾಯ. **'ಅಸಾಯ'** ಶಬ್ದವನ್ನು ನೋಡುವುದು
ಅಸ್ಸಾಯಣ. ಪು: [ಆಶ್ವಾಯನ] ಅಶ್ವ ಋಷಿಯ ಸಂತಾನ, ಅಶ್ವಿನೀ ನಕ್ಷತ್ರದ ಗೋತ್ರ (ಇಕ)
ಅಸ್ಸಾವಿ. ವಿ: [ಆಸ್ರಾವಿನ್] ಸೋರುತ್ತಿರುವ, ತೊಟ್ಟಿಕ್ಕುತ್ತಿರುವ, ಸ್ರವಿಸುತ್ತಿರುವ(ಸೂಅ)
ಅಸ್ಸಾಸ. ಸಕ: [ಆ+ಶ್ವಾಸಯ್] ಆಶ್ವಾಸನೆ ಕೊಡು, ಭರವಸೆ ನೀಡು
ಅಸ್ಸಿ. ಸ್ತ್ರೀ: [ಅಶ್ರಿ] ಕೋಣ, ಒಂದು ಮೂಲೆ, ಮನೆ ಇತ್ಯಾದಿಗಳ ಕೋಣ(ನ), ಖಡ್ಗದ ಅಗ್ರಭಾಗ-ಅಲಗು(ಉಪ)
ಅಸ್ಸಿ. ಪು: [ಅಶ್ವಿನ್] ಅಶ್ವಿನೀ ನಕ್ಷತ್ರದ ಅಧಿಷ್ಠಾತೃ ದೇವ(ತಾ)
ಅಸ್ಸಿಣೀ. ಸ್ತ್ರೀ: [ಅಶ್ವಿನೀ] ಈ ಹೆಸರಿನ ಒಂದು ನಕ್ಷತ್ರ
ಅಸ್ಸಿಯ.ವಿ:[ಆಶ್ರಿತ]ಆಶ್ರಯವನ್ನು ಪಡೆದುಕೊಂಡವನು
ಅಸ್ಸು.(ಶೌ). ನ: [ಅಶ್ರು] ಕಣ್ಣೀರು(ಸ್ವಪ್ನ)
ಅಸ್ಸುಂಕ. ವಿ: [ಅಶುಲ್ಕ] ಯಾವ ತೆರಿಗೆ ಮಾಫಿಯಾಗಿದೆಯೋ ಅವನು(ಉಪ)
ಅಸ್ಸುದ. (ಶೌ) **'ಅಸುಯ=ಅಶ್ರುತ'** ಶಬ್ದವನ್ನು ನೋಡುವುದು
ಅಸ್ಸುಯ. ವಿ: [ಅಸ್ಮೃತ] ಸ್ಮರಿಸದಿರುವ(ಭಗ)
ಅಸ್ಸೇಸಾ. **'ಅಸಿಲೇಸಾ'** ಶಬ್ದವನ್ನು ನೋಡುವುದು
ಅಸ್ಸೋಈ. ಸ್ತ್ರೀ: [ಆಶ್ವಯುಜೀ] ಆಶ್ವಯುಜ ಮಾಸದ ಹುಣ್ಣಿಮೆ(ಚಂದ), ಆಶ್ವಯುಜ ಮಾಸದ ಅಮಾವಾಸ್ಯೆ. **'ಅಸೋಯಾ'** ಶಬ್ದವನ್ನು ನೋಡುವುದು
ಅಸ್ಸೊಕ್ಕಂತಾ. ಸ್ತ್ರೀ: [ಅಶ್ವೋತ್ಕ್ರಾಂತಾ] ಸಂಗೀತ ಶಾಸ್ತ್ರದ ಪ್ರಸಿದ್ಧ ಮಧ್ಯಮ ಕ್ರಮದ ಐದನೇ ಆರೋಹಣ
ಅಸ್ಸೊತ್ಥ. **'ಅಸ್ಸತ್ಥ'** ಶಬ್ದವನ್ನು ನೋಡುವುದು
ಅಸ್ಸೋಯವ್ವ. ವಿ: [ಅಶ್ರೋತವ್ಯ] ಕೇಳಲು ಯೋಗ್ಯವಲ್ಲದ(ಸುರ)
ಅಹ. ಅ: [ಅಥ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಈಗ, ಆಮೇಲೆ(ಸ್ವಪ್ನ), ಅಥವಾ, ಮತ್ತು, ಮಂಗಳ(ಕುಮಾ), ಪ್ರಶ್ನೆ, ಸಮುಚ್ಚಯ, ಉತ್ತರ, ವಿಶೇಷ(ತಾ), ವಾಸ್ತವವಾದದ್ದು, ಪೂರ್ವ-ಪಕ್ಷ, ವಾಕ್ಯದ ಶೋಭೆ ಹೆಚ್ಚಿಸಲು ಮತ್ತು ಪಾದ ಪೂರ್ತಿಯಲ್ಲಿ ಇದರ ಪ್ರಯೋಗವಾಗುತ್ತದೆ.
ಅಹ. ನ: [ಅಹನ್] ದಿವಸ, ಹಗಲು(ಶ್ರಾ)
ಅಹ. ಅ: [ಅಧಸ್] ಕೆಳಗೆ, **-ಲೋಗ.** ಪು: **[-ಲೊಕ]** ಪಾತಾಳ ಲೋಕ(ಸುಪಾ). **ತ್ಥ.** ವಿ: **[-ಸ್ಥ]** ಕೆಳಗೆ ಇರುವ, ಕೆಳಗಡೆ ಇರುವ(ಪಲುಮ)
ಅಹ. ಸ: [ಅದಸ್] ಇವನು, ಇದು, ಅವನು, ಅದು (ಪಾಅ)
ಅಹ. ನ: [ದೇ] ದುಃಖ(ದೇ)

ಅಹ. ನ: [ಅಘ] ಪಾಪ(ಪಾಅ)

ಅಹ– 'ಅಹಾ' ಶಬ್ದವನ್ನು ನೋಡುವುದು. **–ಕ್ಕಮ, –ಕ್ಕಮಸೋ.** ಅ: [–ಕ್ರಮ]. ಅನುಕ್ರಮವಾಗಿ, ಕ್ರಮಪ್ರಕಾರ(ಓಘ), **–ಕ್ಖಾಯ, –ಖಾಯ.** ನ: [–ಖ್ಯಾತ] ದೋಷರಹಿತ ಚಾರಿತ್ರ್ಯ, ಪರಿಪೂರ್ಣ ಸಂಯಮ(ಠಾ) **–ಕ್ಖಾಯಸಂಜಂ** ವಿ: [ಖ್ಯಾತಸಂಯುತ] ಪರಿಪೂರ್ಣ ಸಂಯಮವುಳ್ಳವನು(ಭಗ), **–ಚ್ಛಂದ.** 'ಅಹಾಛಂದ'ವನ್ನು ನೋಡುವುದು, **–ತ್ಥ** .ವಿ: [–ಸ್ಥ] ಸರಿಯಾಗಿರುವ, ಯಥಾಸ್ಥಿತಿಯಲ್ಲಿರುವ, **–ತ್ಥ.** ವಿ: [–ರ್ಥ] ವಾಸ್ತವಿಕ, **–ಪ್ಪಹಾಣ.** ಅ: [–ಪ್ರಧಾನ] ಪ್ರಧಾನ ಎಣಿಕೆಯಿಂದ(ಭಗ)

ಅಹಇಂ. ಅ: [ಅಥಕಿಮ್] ಅಂಗೀಕಾರ ಸೂಚಕ ಅವ್ಯಯ, ಹೌದು, ಒಳ್ಳೇದು, ಹೀಗೆ(ನಾಟ)

ಅಹಂಕಾರ. ಪು: [ಅಹಂಕಾರ] ಅಭಿಮಾನ, ಗರ್ವ

ಅಹಂಕಾರಿ. ವಿ: [ಅಹಂಕಾರಿನ್] ಗರ್ವಿಷ್ಟ, ಅಹಂಕಾರಿ, ಅಭಿಮಾನಿ, ಜಂಬದವನು(ಸೂಅ)

ಅಹಂಣಿಸ ನ: [ಅಹರ್ನಿಶ] ಹಗಲೂ–ರಾತ್ರಿ, ಸದಾಕಾಲ

ಅಹಕಮ್ಮ. 'ಅಹೇಕಮ್ಮ' ಶಬ್ದವನ್ನು ನೋಡುವುದು

ಅಹಣ. ವಿ: [ಅಧನ] ನಿರ್ಧನ, ಹಣವಿಲ್ಲದವನು, ಬಡವ

ಅಹಂಣಿಸ. ನ: [ಅಹರ್ನಿಶ] ಹಗಲೂ–ರಾತ್ರಿ, ನಿರಂತರವಾಗಿ(ನಾಟ)

ಅಹತ್ತಾ. ಅ: [ಅಧಸ್ತಾತ್] ಕೆಳಗೆ, ಕೆಳಗಡೆ(ಭಗ)

ಅಹನ್ನ. ವಿ: [ಅಧನ್ಯ] ದೀನ, ನಿರ್ಗತಿಕ, ಮೇಲ್ಮೆ ಹೊಂದದ(ಸುರ)

ಅಹಣ್ಣಿಸ. 'ಅಹಂಣಿಸ' ಶಬ್ದವನ್ನು ನೋಡುವುದು

ಅಹಮ. ವಿ: [ಅಧಮ] ನೀಚ(ಕುಮಾ)

ಅಹಮಂತಿ. ವಿ: [ಅಹಮಂತಿನ್] ಅಭಿಮಾನಿ, ಗರ್ವಿಷ್ಟ

ಅಹಮಹಮಿಅ.} ಸ್ತ್ರೀ: [ಅಹಮಹಮಿಕಾ] ನಾನು
ಅಹಮಹಮಿಯಾ}. ಮೊದಲು, ತಾನು ಮೊದಲು,
ಅಹಮಹಮಿಗಾ}. ಎಂಬ ಪರಸ್ಪರ ಅಹಂಕಾರ,

ಅಹಮಿಂದ. ಪು: [ಅಹಮಿಂದ್ರ] ಉತ್ತಮ ಶ್ರೇಣಿಯ, ಪೂರ್ಣ ಸ್ವಾಧೀನ ದೇವ–ಜಾತಿ– ವಿಶೇಷ, ಗ್ರೈವೇಯಕ ಅನುತ್ತರ ವಿಮಾನದಲ್ಲಿ ವಾಸಿಸುವ ದೇವ(ಇಕ), ತನ್ನನ್ನು ಇಂದ್ರನೆಂದು ತಿಳಿಯುವ ಗರ್ವಿಷ್ಠ(ಸುರ)

ಅಹಮ್ಮ. 'ಅಧಮ್ಮ' ಶಬ್ದವನ್ನು ನೋಡುವುದು

ಅಹಮ್ಮ. ವಿ: [ಅಧರ್ಮ್ಯ] ಧರ್ಮಚ್ಯುತ, ಧರ್ಮರಹಿತ

ಅಹಮ್ಮಾಣಿ. ವಿ: [ಅಹಮ್ಮಾನಿನ್] ಅಭಿಮಾನಿ (ಆವಮ)

ಅಹಮ್ಮಿ. ವಿ: [ಅಧರ್ಮಿನ್] ಧರ್ಮ–ರಹಿತ, ಪಾಪಾತ್ಮ, ಪಾತಕಿ, ಪಾಪ ಕಾರ್ಯಗಳನ್ನು ಮಾಡುವವನು (ಸುಪಾ)

ಅಹಮ್ಮಿಟ್ಠ. 'ಅಧಮ್ಮಿಟ್ಠ' ಶಬ್ದವನ್ನು ನೋಡುವುದು

ಅಹಮ್ಮಿಯ. ವಿ: [ಅಧಾರ್ಮಿಕ] ಅಧರ್ಮಿ, ಪಾಪಿ (ವಿಪಾ)

ಅಹಯ. ವಿ: [ಅಹತ] ಸಂಬಂಧಿಸಿದ, ಸೇರಿರುವ, ಹರಿಗಡಿಯದೆ ಮುಂದುವರಿದಿರುವ(ಠಾ) ಒಡೆಯದಿರುವ, ಮುರಿಯದಿರುವ(ಸೂಅ), ಬೇರೆಡೆಗೆ ಕೊಂಡೊಯ್ದಿರುವ, ಹೊಸದಾದ, (ಭಗ), ಒಗೆಯದೆ ಇರುವ ಬಟ್ಟೆ, ಹರಿಯದೆ ಇರುವ ಬಟ್ಟೆ

ಅಹರ. ವಿ: [ದೇ] ಅಶಕ್ತ, ಅಸಮರ್ಥ(ದೇ)

ಅಹರ. ಪು: [ಅಧರ] ಕೆಳತುಟಿ, ಓಷ್ಠ, ಕೆಳಭಾಗದ, ಹೀನವಾದ, ನೀಚವಾದ(ಪಣ್ಣ), ಬೇರೆಯ, ಅನ್ಯ(ಪ್ರಾಮಾ), **–ಗಿ.** ಸ್ತ್ರೀ: [–ಗತಿ] ಅಧೋಗತಿ, ದುರ್ಗತಿ

ಅಹರಿಯ. ವಿ: [ಅಧರಿತ] ತಿರಸ್ಕೃತ(ಸುಪಾ)

ಅಹರೀ. ಸ್ತ್ರೀ: [ಅಧರೀ] ಮಸಾಲೆ ಇತ್ಯಾದಿಗಳನ್ನು ಅರೆಯುವ ಕಲ್ಲು(ಉವಾ), **–ಲೋಟ್ಟ.** ಪು: [–ಲೋಷ್ಟ] ಯಾವುದರಿಂದ ಅರೆಯಲಾಗುತ್ತದೋ ಆ ಕಲ್ಲು, ರುಬ್ಬುಗುಂಡು

ಅಹರೀಕಯ. ವಿ: [ಅಧರೀಕೃತ] ತಿರಸ್ಕೃತ

ಅಹರೀಭೂಯ. ವಿ: [ಅಧರೀಭೂತ] ತಿರಸ್ಕೃತ(ಸುಪಾ)

ಅಹರುಟ್ಠ. ಪುಂ. ನ: [ಅಧರೋಷ್ಠ] ಕೆಳತುಟಿ(ಪಣ್ಣ)

ಅಹರೇಮ. 'ಅಹಿರೇಮ' ಶಬ್ದವನ್ನು ನೋಡುವುದು

ಅಹರೇಮಿಅ. ವಿ: [ಪೂರಿತ] ತುಂಬಲ್ಪಟ್ಟ, ಪೂರ್ತಿಮಾಡಿದ(ಕುಮಾ)

ಅಹಲ. ವಿ: [ಅಫಲ] ನಿರರ್ಥಕ, ನಿಷ್ಫಲ, ವ್ಯರ್ಥ

ಅಹಲಂದ. ನ: [ಯಥಾಲಂದ] ಐದು ರಾತ್ರಿಯ ಸಮಯ

ಅಹಲಂದಿ. 'ಅಹಾಲಂದಿ' ಶಬ್ದವನ್ನು ನೋಡುವುದು

ಅಹವ. 'ಅಹವಾ' ಶಬ್ದವನ್ನು ನೋಡುವುದು

ಅಹವಇ.(ಅಪ). **'ಅಹವಾ'** ಶಬ್ದವನ್ನು ನೋಡುವುದು

ಅಹವಣ.} ಅ: [**ಅಥವಾ**] ವಾಕ್ಯಾಲಂಕಾರದಲ್ಲಿ

ಅಹವಾ}. ಬಳಸುವ ಅವ್ಯಯ, ಪಕ್ಷಾಂತರ, ಮತಾಂತರ

ಅಹವ್ವ **'ಅಭವ್ವ'** ಶಬ್ದವನ್ನು ನೋಡುವುದು

ಅಹವ್ವಣ. ಪು: [**ಅಥರ್ವನ್**] ನಾಲ್ಕನೆಯ ವೇದ(ಔಪ)

ಅಹವ್ವಾ. ಸ್ತ್ರೀ: [ದೇ] ಅಸತಿ ಕುಲಟೆ, ವ್ಯಭಿಚಾರಿಣಿ(ದೇ)

ಅಹಹ. ಅ: [**ಅಹಹ**] ಆಶ್ಚರ್ಯ, ದುಃಖ, ಕಷ್ಟ, ಸಂಬೋಧನೆ, ಕರೆ(ಆಹ್ವಾನ), ಸಂತೋಷ, ಆಧಿಕ್ಯ, ಖೇದ ಈ ಅರ್ಥಗಳನ್ನು ಸೂಚಿಸುವ ಅವ್ಯಯ:

ಅಹಾ-. ಅ: [**ಯಥಾ**] ಹೇಗೆ, ಯಾವ ರೀತಿ, ಯಾವ ಪಾರವಾಗಿ, ಸಾದೃಶ್ಯ, ದೃಢವಾಗಿ ಸ್ಥಿರಪಡಿಸುವಲ್ಲಿ, ಯೋಗ್ಯತೆ, ಅನುರೂಪ್ಯ, ಸಾಮಂಜಸ್ಯ, ಕಾರಣ ಇವುಗಳನ್ನು ಸೂಚಿಸುವ ಅವ್ಯಯ. **-ಛಂದ.** ವಿ: [**-ಚ್ಛಂದ**] ಸ್ವಚ್ಛಂದ, ಸ್ವೈರ, ಇಚ್ಛೆಗೆ ತಕ್ಕಂತೆ(ಉಪ), **-ಜಾಯ.** ವಿ: [**-ಜಾತ**] ಬೆತ್ತಲೆ, ಹೊದಿಕೆಯಿಲ್ಲದೆ. ನ: ಜನ್ಮದ ಪ್ರಕಾರ, ಜೈನ ಸಾಧುಗಳಲ್ಲಿ ದೀಕ್ಷಾ ಕಾಲದ ಪರಿಣಾಮಕ್ಕೆ ತಕ್ಕಂತೆ ಮಾಡಲಾಗುವ ನಮಸ್ಕಾರ(ಧರ್ಮ). **-ಣುಪುವ್ವೀ.** ಸ್ತ್ರೀ: [**-ನುಪೂರ್ವೀ**] ಅನುಕ್ರಮವಾಗಿ (ಣಾಯಾ), **-ತಚ್ಚ.** ನ: [**-ತಥ್ಯ**] ಸತ್ಯ, **-ಪಡಿರೂವ.** ವಿ: [**-ಪ್ರತಿರೂಪ**] ಉಚಿತ, ಯೋಗ್ಯ ಕ್ರಿ. ವಿ: ಯಥಾಯೋಗ್ಯ. **-ಪವತ್ತ.** ವಿ: [**ಪ್ರವೃತ್ತ**] ಮೊದಲಿನಂತೆಯೇ ಪ್ರವೃತ್ತನಾದ, ಬದಲಾಗದ, ನ: ಆತ್ಮದ ಪರಿಣಾಮ ವಿಶೇಷ, **-ಪವಿತ್ತಿಕರಣ.** ನ: [**-ಪ್ರವೃತ್ತಿಕರಣ**] ಆತ್ಮದ ಪರಿಣಾಮ-ವಿಶೇಷ, [ಕಮ್ಮ] **-ಬಾಯರ.** ವಿ: [**-ಬಾದರ**] ಸಾರವಿಲ್ಲದ, **-ಭೂಯ.** ವ: [**-ಭೂತ**] ತಾತ್ವಿಕ, ವಾಸ್ತವಿಕ(ತಾ), **-ರಾಇಣಿಯ.** □**ರಾಯಣಿಯ.** ನ: [**-ರಾತ್ನಿಕ**] ಹಿರಿಯನ ಕ್ರಮದಲ್ಲಿ(ಆಚಾ), -ರಿಯ. ನ: [-**ಋಜು**] ಸರಳತೆಗೆ ತಕ್ಕಂತೆ, -ರಿಹ. ನ: [**-ರ್ಹ**] ಔಚಿತ್ಯಕ್ಕೆ ತಕ್ಕಂತೆ, ವಿ: ಉಚಿತ, ಯೋಗ್ಯ, **-ರೀಯ.** ನ: [-ರೀತ] ಪ್ರಕಾರವಾಗಿ, ಸ್ವಬಾವದ ಮೂಲಕ(ಭಗ), **-ಲಂದ.** ಪು: [**-ಲಂದ**] ಕಾಲದ ಒಂದು ಅಳತೆ, ನೀರಿನಲ್ಲಿ ಅದ್ದಿದ ಕೈ ಎಷ್ಟು ಸಮಯದಲ್ಲಿ ಆರುತ್ತದೋ ಅಷ್ಟು ಸಮಯ **-ವಗಾಸ.** ನ: [**-ವಕಾಶ**] ಅವಕಾಶದ ಮೇರೆಗೆ (ಸೂಅ), **-ವಚ್ಚ.** ವಿ:[**-ಪತ್ಯ**] ಪುತ್ರ ಸ್ಥಾನದಲ್ಲಿರುವವನು, **-ಸಂಥಡ.** ವಿ: [**-ಸಂಸ್ಕೃತ**] ಮಲಗಲು ಯೋಗ್ಯವಾದ(ಭಗ), **-ಸಂವಿಭಾಗ.** ಪು: [**-ಸಂವಿಭಾಗ**], ಸಾಧುವಿಗೆ ದಾನ ಕೊಡುವುದು, **-ಸಚ್ಚ.** ನ:[**-ಸತ್ಯ**] ವಸ್ತುಸ್ಥಿತಿ, **ಸತ್ಯ, -ಸತ್ತಿ.** ನ: [**ಶಕ್ತಿ**] ಶಕ್ತಿಯನ್ನನುಸರಿಸಿ, **-ಸುತ್ತ.** ನ: [**-ಸೂತ್ರ**], ಆಗಮದ ಪ್ರಕಾರ, **-ಸುಹ.** ನ: [-**ಸುಖ**] ಇಚ್ಛಾನುಸಾರ, **-ಸುಹುಮ.** ವಿ: [**-ಸೂಕ್ಷ್ಮ**] ಸಾರಭೂತ. **'ಅಹ-'**ವನ್ನು ನೋಡುವುದು

ಅಹಾಲಂದ. ವಿ: [**ಯಥಾಲಂದ**] ತಿಳಿದುಬಂದಂತೆ (ಕಾಲ), ಇಚ್ಛಾನುಸಾರ(ಸಮಯ)

ಅಹಾಲಂದಿ. ಪು: [**ಯಥಾಲಂದಿನ್**] **'ಯಥಾಲಂದ'** ವನ್ನು ಅನುಷ್ಠಾನ ಮಾಡುವ ಮುನಿ

ಅಹಾಸಂಖಡ. ವಿ: [ದೇ] ಅಲುಗಾಡದೆ, ನಿಶ್ಚಲ(ನಿಚೂ)

ಅಹಾಸಲ. ವಿ: [**ಅಹಾಸ್ಯ**] ಹಾಸ್ಯ- ರಹಿತ(ಸುಪಾ)

ಅಹಹ. ಅ: [**ಅಹಾಹ**] **'ಅಹಹ'** ಶಬ್ದವನ್ನು ನೋಡುವುದು

ಅಹಿ. **'ಅಭಿ'** ಶಬ್ದವನ್ನು ನೋಡುವುದು(ಗಉಡ)

ಅಹಿ. ಅ: [**ಅಧಿ**] ಮೇಲೆ, ಮೇಲುಭಾಗ-**'ಅಹಿಟ್ಠಾ'** ಅತಿಶಯವಾದ, ಹೆಚ್ಚಿನ, ವಿಶೇಷತೆ-ಅಹಿಗಂಧ' ಅಧಿಕಾರ,-'ಅಹಿಗಯ' ಪ್ರಾಧಾನ್ಯ, ಶ್ರೇಷ್ಠ, ಐಶ್ವರ್ಯ-'ಅಹಿಟ್ಠಾಣ' ಎಂಬ ಅರ್ಥಗಳನ್ನು ಸೂಚಿಸಲು ಸೇರಿಸಲಾಗುವ ಅವ್ಯಯ

ಅಹಿ. ಪು: [**ಅಹಿ**] ಸರ್ಪ, ಹಾವು, ಶೇಷನಾಗ(ಪಣ್ಣ, ಪಿಂಗ), ರಾಹು, ವೃತ್ರಾಸುರ, ಭೂಮಿ, ಆಕಾಶ, **-ಚ್ಛತಾ.** ಸ್ತ್ರೀ: [**-ಚ್ಛತ್ರಾ**] ಒಂದು ನಗರ, **-ಮಡ. ಪುಂ.** ನ: [**-ಮೃತಕ**] ಹಾವಿನ ಹೆಣ, **-ವಇ.** ಪು: [**-ಪತಿ**] ಶೇಷನಾಗ, **-ವಿಂಛಿಅ.** ಪು: [-**ಋಶ್ಚಿಕ**] ಸರ್ಪದ ಮೂತ್ರದಿಂದ ಹುಟ್ಟುವ ವೃಶ್ಚಿಕ ಜಾತಿ(ಕುಮಾ)

ಅಹಿಅಲ. ನ: [ದೇ] ಕೋಪ, ಸಿಟ್ಟು(ದೇ)

ಅಹಿಆಅ. ನ: [**ಅಭಿಜಾತ**] ಕುಲೀನತೆ, ಸತ್ಕುಲದಲ್ಲಿ ಹುಟ್ಟಿದ(ಷಡ್) ಪಂಡಿತ, ಜ್ಞಾನಿ, ಮಧುರ, ಮನೋಹರ

ಅಹಿಆರ. ಪು: [ದೇ] ಲೋಕಯಾತ್ರೆ, ಜೀವನ-ನಿರ್ವಹಣೆ (ದೇ)

ಅಹಿಉತ್ತ. ವಿ: [ದೇ] ವ್ಯಾಪ್ತ, ಖಚಿತ(ಗಉಡ)
ಅಹಿಉತ್ತ. ವಿ: [**ಅಭಿಯುಕ್ತ**] ವಿದ್ವಾನ್, ಪಂಡಿತ, ಆಸಕ್ತ, ಉದ್ಯೋಗಿ(ಪಾಅ), ಶತ್ರುವಿನಿಂದ ಸುತ್ತುವರಿಯಲ್ಪಟ್ಟ, ಅಪರಾಧಿ, ಪ್ರತಿವಾದಿ, ವೃದ್ಧ, ಅವಧಾನವುಳ್ಳ
ಅಹಿಊರ. ಸಕ:[**ಅಭಿ+ಪೂರಯ್**] ಪೂರ್ಣಗೊಳಿಸು, ವ್ಯಾಪ್ತಗೊಳಿಸು, ಹರಡು
ಅಹಿಊಲ. ಸಕ: [ದಹ್] ಸುಡು, ದಹನಮಾಡು– 'ಅಹಿಊಲಇ' (ಹೇ)
ಅಹಿಓಯ. ಪು: [ಅಭಿಯೋಗ] ಸಂಬಂಧ(ಗಉಡ) ದೋಷಾರೋಪಣೆ, ಅಭಿನಿವೇಶ, ಆಸಕ್ತಿ, ದಾಳಿ ಉದ್ಯೋಗ, ಪ್ರಯತ್ನ, **'ಅಭಿಓಅ'**
ಅಹಿಂದ. ಪು: [ಅಹೀಂದ್ರ] ಸರ್ಪಗಳ ರಾಜ, ಆದಿಶೇಷ, ಶ್ರೇಷ್ಠ ಸರ್ಪ, **–ಪುರ.** ನ: [**–ಪುರ**] ವಾಸುಕಿ–ನಗರ, **–ವುರಣಾಹ.** ಪು: [**–ಪುರನಾಥ**] ವಿಷ್ಣು, ಅಚ್ಯುತ
ಅಹಿಂಸಗ. ವಿ: [ಅಹಿಂಸಕ] ಹಿಂಸೆ ಮಾಡದಿರುವವನು
ಅಹಿಂಸಣ. ನ: [ಅಹಿಂಸನ] ಅಹಿಂಸೆ (ಧರ್ಮ)
ಅಹಿಂಸಯ. 'ಅಹಿಂಸಗ' ಶಬ್ದವನ್ನು ನೋಡುವುದು
ಅಹಿಂಸಾ. ಸ್ತ್ರೀ: [ಅಹಿಂಸಾ] ಹಿಂಸೆ ಮಾಡದಿರುವುದು, ಮಾತು,ಮನಸ್ಸು ಮತ್ತು ಶರೀರ ಇವುಗಳಿಂದ ನೋಯಿಸದಿರುವುದು, ದುಃಖ ನೀಡದಿರುವುದು
ಅಹಿಂಸಿಯ. ವಿ: [ಅಹಿಂಸಿತ] ನೋವಿಗೆ ಒಳಗಾಗದಿರುವವನು, ಪೀಡಿಸಲ್ಪಡದಿರುವವನು
ಅಹಿಕಂಖ. **'ಅಭಿಕಂಖ'** ಶಬ್ದವನ್ನು ನೋಡುವುದು
ಅಹಿಕಂಖಿ. **'ಅಹಿಕಂಖಿರ'** ಶಬ್ದವನ್ನು ನೋಡುವುದು
ಅಹಿಕಂಖಿರ. ವಿ: [**ಅಭಿಕಾಂಕ್ಷಿನ್**] ಅಭಿಲಾಷಿ, ಇಚ್ಛಿಸುವವನು(ಸಣ)
ಅಹಿಕಯ. ವಿ: [**ಅಧಿಕೃತ**] ಯಾರ ಅಧಿಕಾರ ನಡೆಯುತ್ತದೋ ಅವನು, ಪ್ರಭುತ್ವವುಳ್ಳವನು, ಪ್ರಸ್ತುತ.
ಅಹಿಕರಣ. **'ಅಹಿಗರಣ'** ಶಬ್ದವನ್ನು ನೋಡುವುದು
ಅಹಿಕರಣೀ. 'ಅಹಿಗರಣೀ' ಶಬ್ದವನ್ನು ನೋಡುವುದು
ಅಹಿಕಾರ. **'ಅಹಿಗಾರ'** ಶಬ್ದವನ್ನು ನೋಡುವುದು
ಅಹಿಕಾರಿ. **'ಅಹಿಗಾರಿ'** ಶಬ್ದವನ್ನು ನೋಡುವುದು
ಅಹಿಕಿಚ್ಚ. ಅ: [**ಅಧಿಕೃತ್ಯ**] ಅಧಿಕಾರವನ್ನು ಮಾಡಿ, ಉದ್ದೇಶಿಸಿ, ಕುರಿತು, ಸಂಬಂಧಿಸಿ(ಆಚೂ)

ಅಹಿಕ್ಖಣ. ನ: [ದೇ] ವ್ಯಂಗ್ಯದ ಮಾತು, ನಿಂದೆ, ದೂರು
ಅಹಿಕ್ಖಿತ್ತ. ವಿ: [**ಅಧಿಕ್ಷಿಪ್ತ**] ತಿರಸ್ಕೃತ, ನಿಂದಿತ, ಸ್ಥಾಪಿತ, ಪರಿತ್ಯಕ್ತ,, ಆಕ್ಷೇಪಿಸಲ್ಪಟ್ಟ, ಎಸೆಯಲ್ಪಟ್ಟ
ಅಹಿಕ್ಖಿವ. ಸಕ: [**ಅಧಿ+ಕ್ಷಿಪ್**] ತಿರಸ್ಕರಿಸು, ಎಸೆ, ನಿಂದಿಸು, ಸ್ಥಾಪಿಸು
ಅಹಿಕ್ಖೇವ. ಪು: [**ಅಧಿಕ್ಷೇಪ**] ತಿರಸ್ಕಾರ, ಸ್ಥಾಪನೆ, ಪ್ರೇರಣೆ(ನಾಟ) ನಿಂದೆ, ಎಸೆಯುವುದು, ಆಕ್ಷೇಪಣೆ
ಅಹಿಖಿವ. **'ಅಹಿಕ್ಖಿವ'** ಶಬ್ದವನ್ನು ನೋಡುವುದು
ಅಹಿಗ. **'ಅಹಿಯ=ಅಧಿಕ'** ಶಬ್ದವನ್ನು ನೋಡುವುದು
ಅಹಿಖೀರ. ಸಕ: [ದೇ] ಹಿಡಿಯುವುದು, ಆಘಾತ ಮಾಡುವುದು. 'ಅಹಿಖೀರಇ'
ಅಹಿಗಂಧ. ವಿ: [**ಅಧಿಗಂಧ**] ಹೆಚ್ಚು ಗಂಧವನ್ನು ಹೊಂದಿರುವ
ಅಹಿಗಮ. ಸಕ: [**ಅಧಿ+ಗಮ್**] ತಿಳಿ, ನಿರ್ಣಯಿಸು, ಪಡೆ
ಅಹಿಗಮ. ಸಕ: [**ಅಭಿ+ಗಮ್**] ಎದುರಾಗಿ ಹೋಗು, ಆದರಿಸು
ಅಹಿಗಮ. ಪು: [ಅಧಿಗಮ] ಜ್ಞಾನ, ಪ್ರಾಪ್ತಿ, ಪಡೆಯುವಿಕೆ, ಹೊಂದುವುದು, ಗುರುವೇ ಮೊದಲಾದವರ ಉಪದೇಶ, ಸೇವೆ, ಭಕ್ತಿ(ಸಮ) ಅಂಗೀಕಾರ. –ರುಇ. ಸ್ತ್ರೀ: [–ರುಚಿ] ಸಮ್ಯಕ್ತ್ವದ ಒಂದು ಭೇದ, ಸಮ್ಯಕ್ತ್ವ ಹೊಂದಿರುವ
ಅಹಿಗಮ. **'ಅಭಿಗಮ.'** ಶಬ್ದವನ್ನು ನೋಡುವುದು
ಅಹಿಗಮಣ. ನ: [**ಅಧಿಗಮನ**] ಜ್ಞಾನ, ತಿಳಿವಳಿಕೆ, ನಿರ್ಣಯ, ಪ್ರಾಪ್ತಿ, ನಿಂದೆ, ಆರೋಪ(ವಿಸೇ)
ಅಹಿಗಮಯ. ವಿ: [**ಅಧಿಗಮಕ**] ತಿಳಿದಿರುವವನು, ತಿಳಿಸುವವನು(ವಿಸೇ)
ಅಹಿಗಮಿಯ. ವಿ: [ಅಧಿಗತ] ತಿಳಿಯಲ್ಪಟ್ಟ, ನಿರ್ಣಯಿಸಲ್ಪಟ್ಟ,ಗಳಿಸಲ್ಪಟ್ಟ, ಕಲಿಯಲ್ಪಟ್ಟ(ಸುರ)
ಅಹಿಗಮ್ಮ. **'ಅಹಿಗಮ'=ಅಧಿ+ಗಮ್'** ಶಬ್ದವನ್ನು ನೋಡುವುದು
ಅಹಿಗಮ್ಮ. **'ಅಹಿಗಮ=ಅಭಿ+ಗಮ್'** ಶಬ್ದವನ್ನು ನೋಡುವುದು
ಅಹಿಗಯ. ವಿ: [**ಅಧಿಕೃತ**] ಪ್ರಸ್ತುತ, ನ: ಪ್ರಸ್ತಾವ, ಪ್ರಸಂಗ, ಅಧ್ಯಕ್ಷ, ಪ್ರಭುತ್ವವುಳ್ಳ, ಮೇಲ್ವಿಚಾರಕ
ಅಹಿಗಯ. ವಿ: [ಅಧಿಗತ] ಉಪಲಬ್ಧ, ಪ್ರಾಪ್ತ, ತಿಳಿಯಲ್ಪಟ್ಟ, ಪು: ಗೀತಾರ್ಥ ಮುನಿ, ಶಾಸ್ತ್ರ ಅರಿತ ಸಾಧು, ಸಂಪಾದಿಸಲ್ಪಟ್ಟ

ಅಹಿಗರ. ಪು: [ದೇ] ಅಜಗರ, ಹೆಬ್ಬಾವು(ಜಿವ)

ಅಹಿಗರಣ. ಪುಂ. ನ: [ಅಧಿಕರಣ] ಯುದ್ಧ, ಸಂಯುಮ–ರಹಿತ, ಪಾಪ ಕೆಲಸದಿಂದ ನಿವೃತ್ತನಾಗದಿರುವುದು, ಆತ್ಮಕ್ಕಿಂತ ಬೇರೆಯಾದ ಬಾಹ್ಯ ವಸ್ತು(ತಾ)ಪಾಪಕ್ಕೆ ಕಾರಣವಾದ ಕ್ರಿಯೆ, (ಣಾಯಾ)ಆಧಾರ, ಉಡುಗೊರೆ, ಕಲಹ, ವಿವಾದ, ಹಿಂಸೆಯ ಉಪಕರಣ, ನೇಮಕ, ಆಶ್ರಯ, –ಕಡ, –ಕರ. ವಿ: [–ಕರ] ಕಾರಕ, **–ಕಿರಿಯಾ** ಸ್ತ್ರೀ: [–ಕ್ರಿಯಾ] ಪಾಪಕ್ಕೆ ಕಾರಣವಾದ ಕ್ರಿಯೆ, ದುರ್ಗತಿಗೆ ಒಯ್ಯುವ ಕ್ರಿಯೆ, **–ಸಿದ್ಧಂತ.** ಪು: [–ಸಿದ್ಧಾಂತ] ಆನುಷಂಗಿಕ ಸಿದ್ಧಿಯನ್ನುಂಟು ಮಾಡುವ ಸಿದ್ಧಾಂತ(ಸೂಅ)

ಅಹಿಗರಣೀ. ಸ್ತ್ರೀ: [ಅಧಿಕರಣೀ] ಕಮ್ಮಾರನ ಒಂದು ಉಪಕರಣ(ಭಗ), **–ಖೋಡಿ.** ಸ್ತ್ರೀ: [–ಖೋಟಿ] ಅಧಿಕರಣಿಯನ್ನು ಇಡಲಾಗುವ ಕಾಷ್ಠ (ಭಗ)

ಅಹಿಗರಣಿಯಾ}. ಸ್ತ್ರೀ: [ಅಧಿಕರಣಿಕೀ] **'ಅಧಿಗರಣ–**
ಅಹಿಗರಣೀಯಾ}.**'ಕಿರಿಯಾ'** ಶಬ್ದವನ್ನು ನೋಡುವುದು

ಅಹಿಗರೀ. ಸ್ತ್ರೀ: [ದೇ] ಹೆಣ್ಣು ಹೆಬ್ಬಾವು(ಜೀವ)

ಅಹಿಗಾರ. ಪು: [ಅಧಿಕಾರ] ವೈಭವ, ಸಂಪತ್ತು, ಸ್ವಾಮ್ಯ, ಹಕ್ಕು, ಪ್ರಸ್ತಾವ, ಸಂದರ್ಭ ಯೋಗ್ಯತೆ, ಪಾತ್ರತೆ, ಪ್ರಭುತ್ವ(ಪ್ರಾಸೂ) ಮಾನ್ಯತೆ, ಸ್ಥಾನ, ಪದವಿ, ಪಾರುಪತ್ಯ

ಅಹಿಗಾರಿ.}. ವಿ: [ಅಧಿಕಾರಿನ್] ಅಧಿಕಾರವುಳ್ಳವನು,
ಅಹಿಗಾರಿಯು}. ನೇಮಕವಾದವನು, ಪಾತ್ರ, ಯಜಮಾನ

ಅಹಿಗಿಚ್ಚ. ಅ: [ಅಧಿಕೃತ್ಯ] ಅಧಿಕಾರ ನಡೆಸಿ, ಕುರಿತು, ಉದ್ದೇಶಿಸಿ(ಉವರ)

ಅಹಿಘಾಯ. ಪು: [ಅಭಿಘಾತ] ಏಟು, ಹೊಡೆತ

ಅಹಿಘಾಯ. ವಿ: [ಅಭಿಜಾತ] ಕುಲೀನ, ಸತ್ಕುಲದಲ್ಲಿ ಹುಟ್ಟಿದ, ಪಂಡಿತ, ಜ್ಞಾನಿ(ಭಗ)

ಅಹಿಛತ್ತಾ. ಸ್ತ್ರೀ: [ಅಹಿಚ್ಛತ್ರಾ] ಕುರುಜಾಂಗಣ ದೇಶದ ಪ್ರಾಚೀನ ರಾಜಧಾನಿ

ಅಹಿಜಾಇ. ಸ್ತ್ರೀ: [ಅಭಿಜಾತಿ] ಕುಲೀನತೆ, ಸತ್ಕುಲದಲ್ಲಿ ಹುಟ್ಟುವುದು(ಪ್ರಾಪ)

ಅಹಿಜಾಣ. ಸಕ: [ಅಭಿ+ಜ್ಞಾ] ಗುರುತಿಸು, ನೆನೆಸು, ಸ್ಮರಣೆ

ಅಹಿಜುಂಜ. **'ಅಭಿಜುಂಜ'** ಶಬ್ದವನ್ನು ನೋಡುವುದು

ಅಹಿಜುತ್ತ. **'ಅಭಿಜುತ್ತ'** ಶಬ್ದವನ್ನು ನೋಡುವುದು

ಅಹಿಜ್ಜ. ಸಕ: [ಅಧಿ+ಇ] ಓದು, ಅಭ್ಯಾಸ(ಮಾಡು), 'ಅಹಿಜ್ಜಇ'

ಅಹಿಜ್ಜ. ವಿ: [ಅಧಿಜ್ಯ] ಧನುಸ್ಸಿನ ಹೆದೆಗೇರಿಸಿರುವ ಬಾಣ

ಅಹಿಜ್ಜ.} ವಿ: [ಅಭಿಜ್ಞ] ತಿಳಿದವನು, ಬಲ್ಲವನು,
ಅಹಿಜ್ಜಗ}. ಪಂಡಿತ, ನಿಪುಣ(ಪಿ)

ಅಹಿಜ್ಜಣ. ನ: [ಅಧ್ಯಯನ] ಓದುವುದು, ಅಭ್ಯಾಸ,

ಅಹಿಜ್ಜಾವಿಯ. ವಿ: [ಅಧ್ಯಾಪಿತ] ಕಲಿಸಲ್ಪಟ್ಟ, ಓದಿಸಲ್ಪಟ್ಟ, ಉಪದೇಶೀಸಲ್ಪಟ್ಟ (ಸುರ)

ಅಹಿಜ್ಝಿಯ. ವಿ: [ಅಧೀತ] ಅಧ್ಯಯನ ಮಾಡಲ್ಪಟ್ಟ, ಕಲಿಯಲ್ಪಟ್ಟ(ಸುರ)

ಅಹಿಜ್ಝಿಯು. ವಿ: [ಅಭಿಧ್ಯಿತ] ಲೋಭವಿಲ್ಲದ, ಲುಬ್ಧನಲ್ಲದ(ಭಗ)

ಅಹಿಟ್ಠ. ಸಕ: [ಅಧಿ+ಷ್ಠಾ] ಮಾಡು,

ಅಹಿಟ್ಠಗ. ವಿ: [ಅಧಿಷ್ಠಕ] ಅಧ್ಯಕ್ಷ, ವ್ಯವಸ್ಥಾಪಕ, ಪ್ರಧಾನ, ವಿಧಾಯಕ

ಅಹಿಟ್ಠಣ. **'ಅಹಿಟ್ಠಾಣ'** ಶಬ್ದವನ್ನು ನೋಡುವುದು

ಅಹಿಟ್ಠಾ ಸಕ: [ಅಧಿ+ಸ್ಥಾ] ಮೇಲೆ ನಡೆ, ಆಶ್ರಯ ಪಡೆ, ವಾಸಿಸು ಆಡಳಿತಮಾಡು, ಸೋಲಿಸು, ಆಕ್ರಮಣ ಮಾಡು, ಮೇಲೆ ಹತ್ತಿ ಕುಳಿತುಕೊಳ್ಳು, ವಶಪಡಿಸಿಕೊಳ್ಳು. 'ಅಹಿಟ್ಠೇಇ'(ನಿಚೂ)

ಅಹಿಟ್ಠಾಣ. ನ: [ಅಧಿಷ್ಠಾನ] ಕುಳಿತುಕೊಳ್ಳುವುದು (ನಿಚೂ), ಆಶ್ರಯಿಸುವುದು, ಮಾಲಿಕನಾಗುವುದು (ಆಚಾ), ವಾಸಸ್ಥಾನ, ಆಶ್ರಯ(ಸ), ನಿಯಂತ್ರಣ ಶಕ್ತಿ, ಸಾನ್ನಿಧ್ಯ, ಆಧಿಪತ್ಯ, ರಥದ ಚಕ್ರ

ಅಹಿಟ್ಠಾಯಗ. ವಿ: [ಅಧಿಷ್ಠಾಯಕ] ಅಧ್ಯಕ್ಷ, ಅಧಿಪತಿ

ಅಹಿಟ್ಠಾವಣ. ನ: [ಅಧಿಷ್ಠಾಪನ] ಮೇಲೆ ಇಡುವುದು (ನಿಚೂ)

ಅಹಿಟ್ಠಿಯ. ವಿ: [ಅಧಿಷ್ಠಿತ] ಆಶ್ರಯಿಸಲ್ಪಟ್ಟ, ಹತ್ತಲ್ಪಟ್ಟ, ಸಮೀಪಿಸಲ್ಪಟ್ಟ, ಅಧೀನ ಪಡಿಸಿಕೊಳ್ಳಲಾದ, (ಣಾಯಾ), ಆಕ್ರಮಿಸಲ್ಪಟ್ಟ, ಪ್ರವೇಶಿಸಲ್ಪಟ್ಟ, ಭೂತದ ಆವೇಶವುಳ್ಳ,

ಅಹಿಠಾಣ. ನ: [ಅಧಿಷ್ಠಾನ] ಅಪಾನ–ಪ್ರದೇಶ

ಅಹಿಡ್ಡಯ. ವಿ: [ದೇ. ಅಭಿದ್ರುತ] ಪೀಡಿಸಲ್ಪಟ್ಟ. **'ಅಹಿಡ್ಡಯಂ ಪೀಡಿಅಂ ಪರದ್ಧಂ'**(ಪಾಅ)

ಅಹಿಣಂದ. 'ಅಭಿಣಂದ' ಶಬ್ದವನ್ನು ನೋಡುವುದು. ವ. ಕೃ– 'ಅಹಿಣಂದಮಾಣ,

ಅಹಿಣಂದಿ. ವಿ: [ಅಭಿನಂದಿನ್] ಸಂತಸವನ್ನು ಆಚರಿಸುತ್ತಿರುವವನು

ಅಹಿಣಂದಿಉ. 'ಅಭಿಣಂದಿಉ' ಶಬ್ದವನ್ನು ನೋಡುವುದು

ಅಹಿಣಾಯ. 'ಅಭಿನಾಯ' ಶಬ್ದವನ್ನು ನೋಡುವುದು

ಅಹಿಣವ. ಪು: [ಅಭಿನವ] ಸೇತುಬಂಧ ಕಾವ್ಯದ ಕರ್ತೃ ರಾಜಾ ಪ್ರವರಸೇನ, ವಿ: ಹೊಸದಾದ

ಅಹಿಣವೇಮಾಣ. 'ಅಹಿಣೀ' ಶಬ್ದವನ್ನು ನೋಡುವುದು

ಅಹಿಣವೇಮಾಣ. 'ಅಹಿಣು' ಶಬ್ದವನ್ನು ನೋಡುವುದು

ಅಹಿಣಿಬೋಹ. ಪು: [ಅಭಿನಿಬೋಧ] ಜ್ಞಾನ–ವಿಶೇಷ, ಮತಿಜ್ಞಾನ(ಪಣ್ಣ)

ಅಹಿಣಿವಸ. ಸಕ: [ಅಭಿನಿ+ವಸ್] ವಾಸಿಸು, ಇರು. ವ.ಕೃ: ಅಹಿಣಿವಸಮಾಣ(ಮುದ್ರಾ)

ಅಹಿಣಿವಿಟ್ಠ. ವಿ: [ಅಭಿನಿವಿಷ್ಟ] ಕಾರ್ಯತತ್ಪರ, ಆಸಕ್ತ ಹಟದಿಂದ ಕೂಡಿದ, ಆಗ್ರಹದಿಂದ ಕೂಡಿದ

ಅಹಿಣಿವೇಸ. ಪು: [ಅಭಿನಿವೇಶ] ಆಗ್ರಹ, ಹಟ, ಕಾರ್ಯ ತತ್ಪರತೆ, ಆಸಕ್ತಿ (ಅಭಿ)

ಅಹಿಣಿವಂಸಿ. ವಿ: [ಅಭಿನಿವೇಶಿನ್] ಆಗ್ರಹವುಳ್ಳ, ಕಾರ್ಯದಲ್ಲಿ ಆಸಕ್ತಿವುಳ್ಳ, ಉತ್ಸಾಹವುಳ್ಳ(ಪಿ)

ಅಹಿಣೀ. ಸ್ತ್ರೀ: [ಅಹಿ] ಹೆಣ್ಣು ಹಾವು, ನಾಗಿಣಿ

ಅಹಿಣೀ. 'ಅಭಿಣೀ' ಶಬ್ದವನ್ನು ನೋಡುವುದು

ಅಹಿಣೀಲ. ವಿ: [ಅಭಿನೀಲ] ಹಸಿರಿನ, ಹಸಿರು ಬಣ್ಣದ ರಾಶಿ (ಗಲುಡ)

ಅಹಿಣು. ಸಕ: [ಅಭಿ+ನು] ಸ್ತುತಿಸು, ಹೊಗಳುವುದು. ವ. ಕೃ–'ಅಹಿಣವೇಮಾಣ'(ಸುರ)

ಅಹಿಣ್ಣ. ವಿ: [ಅಭಿನ್ನ] ಭೇದವಿಲ್ಲದ, ಬೇರೆಯಲ್ಲದ, ಒಂದೇ ಆದ, (ಗಾ) ಒಡೆಯದಿರುವ, ಅಖಂಡ, ಪೂರ್ಣವಾದ

ಅಹಿಣ್ಣಾಣ. ನ: [ಅಭಿಜ್ಞಾನ] ಗುರುತು, ನೆನಪನ್ನುಂಟುಮಾಡುವ ಗುರುತು, ಲಕ್ಷಣ

ಅಹಿಣ್ಣು. ವಿ: [ಅಭಿಜ್ಞ] ನಿಪುಣ, ತಿಳಿದವನು, ಪಂಡಿತ, ಚತುರ (ಹೇ)

ಅಹಿತತ್ತ. ವಿ: [ಅಭಿತಪ್ತ] ಚೆನ್ನಾಗಿ ಕಾಯಿಸಲ್ಪಟ್ಟ, ಸುತ್ತಲೂ ಬಿಸಿಮಾಡಲ್ಪಟ್ಟ (ಉತ್ತ)

ಅಹಿತ್ತಾ. 'ಅಹಿಜ್ಜ=ಅಧಿ+ಇ' ಶಬ್ದವನ್ನು ನೋಡುವುದು

ಅಹಿದಾಯಗ. ವಿ: [ಅಭಿದಾಯಕ] ಕೊಡುವವನು, ದಾತ, ದಾತೃ (ಸುಪಾ)

ಅಹಿದೇವಯಾ. ಸ್ತ್ರೀ: [ಅಭಿದೇವತಾ] ಅಧಿಷ್ಠಾತೃ ದೇವ

ಅಹಿದ್ದವ. ಸಕ: [ಅಭಿ+ದ್ರು] ಚಕಿತಗೊಳಿಸಲಾದ

ಅಹಿಘಾವ. ಸಕ: [ಅಭಿ+ಘಾವ್] ಓಡು. ಎದುರಿನಲ್ಲಿ ಓಡುತ್ತ ಹೋಗುವುದು. 'ಅಹಿಘಾವಂತ'(ಸೇ)

ಅಹಿನಾಣ.} 'ಅಹಿಣ್ಣಾಣ' ಶಬ್ದವನ್ನು ನೋಡುವುದು
ಅಹಿನ್ನಾಣ.}

ಅಹಿನಿವೇಸ. 'ಅಹಿಣಿವೇಸ' ಶಬ್ದವನ್ನು ನೋಡುವುದು

ಅಹಿಪಚ್ಚುಅ. ಸಕ: [ಗ್ರಹ್] ಗ್ರಹಿಸು–'ಅಹಿಪುಚ್ಚುಅಇ'

ಅಹಿಪಚ್ಚುಅ. ಸಕ: [ಆ+ಗಮ್] ಬರು, ತಲುಪು(ಹೇ)

ಅಹಿಪಚ್ಚುಇಅ. ವಿ: [ಆಗತ] ಬಂದಿರುವ, ಸಂಭವಿಸಿರುವ, ಸಂಪಾದಿಸಿರುವ

ಅಹಿಪಚ್ಚುಇಅ. ನ: [ದೇ] ಅನುಗಮನ, ಅನುಸರಣ

ಅಹಿಪಡ. ಸಕ: [ಅಭಿ+ಪತ್] ಎದುರುಗಡೆ ಬರುವುದು

ಅಹಿಪಾಸ. ಸಕ: [ಅಧಿ+ದೃಶ್] ಹೆಚ್ಚು ನೋಡು, ಸಮಾನ ರೂಪದಿಂದ ನೋಡು

ಅಹಿಪ್ಪಾಂಉ. 'ಅಭಿಪ್ಪಾಂಉ' ಶಬ್ದವನ್ನು ನೋಡುವುದು

ಅಹಿಪ್ಪೇಯ. 'ಅಭಿಪ್ಪೇಯ' ಶಬ್ದವನ್ನು ನೋಡುವುದು

ಅಹಿಭವ. 'ಅಭಿಭವ' ಶಬ್ದವನ್ನು ನೋಡುವುದು

ಅಹಿಮಂಜು. ಪು: [ಅಭಿಮನ್ಯು] ಅರ್ಜುನನ ಒಬ್ಬ ಮಗನ ಹೆಸರು.

ಅಹಿಮಂತಣ. ವಿ: [ಅಭಿಮಂತ್ರಣ] ಮಂತ್ರಿಸುವುದು, ಮಂತ್ರವನ್ನು ಉಚ್ಚರಿಸಿ ಪವಿತ್ರಗೊಳಿಸುವುದು

ಅಹಿಮಂತಿಅ. ವಿ: [ಅಭಿಮಂತ್ರಿತ] ಮಂತ್ರೋಚ್ಚಾರಣೆ ಮಾಡಿ ಪವಿತ್ರಗೊಳಿಸಿದ(ಮಹಾ)

ಅಹಿಮಜ್ಜು} 'ಅಹಿಮಂಜು' ಶಬ್ದವನ್ನು ನೋಡುವುದು
ಅಹಿಮಣ್ಣು}. (ಕುಮಾ)
ಅಹಿಮನ್ನು}.

ಅಹಿಮಯ. ವಿ: [ಅಭಿಮತ] ಇಚ್ಛೆ, ಅಪೇಕ್ಷೆ, ಒಪ್ಪಿಗೆ, ಅಭಿಪ್ರಾಯ(ಸ), ಆದರಿಸಲ್ಪಟ್ಟ

ಅಹಿಮಯರ. ಪು: [ಅಹಿಮಕರ] ಸೂರ್ಯ, ರವಿ

ಅಹಿಮರ. ಪು: [ಅಭಿಮರ] ಹಣ, ಒಡವೆ ಇತ್ಯಾದಿಗಳ ಆಸೆಯಿಂದ ಬೇರೆಯವರನ್ನು ಕೊಲ್ಲುವ ಸಾಹಸ ಮಾಡುವವನು(ಸುರ), ಯುದ್ಧ, ಗಜಾದಿಗಳನ್ನು ಘಾತಿಸುವವನು

ಅಹಿಮಾಣ. ಪು: [**ಅಭಿಮಾನ**] ಗರ್ವ, ಅಹಂಕಾರ, ದರ್ಪ, ಆತ್ಮಗೌರವ(ಪ್ರಾಸೂ), ಪ್ರೀತಿ, ಹೆಮ್ಮೆ

ಅಹಿಮಾಣಿ. ವಿ: [**ಅಭಿಮಾನಿನ್**] ಅಭಿಮಾನಿ, ಅಹಂಕಾರಿ, ಸ್ವಾಭಿಮಾನವುಳ್ಳವನು(ಸ)

ಅಹಿಮಾರ. ಪು: [**ಅಭಿಮಾರ**] ಒಂದು ಬಗೆಯ ವೃಕ್ಷ

ಅಹಿಮಾಸ.} ಪು: [**ಅಧಿಮಾಸ, –ಕ**]

ಅಹಿಮಾಸಗ}. ಅಧಿಕಮಾಸ(ಆವ)

ಅಹಿಮುಹ. ವಿ: [**ಅಭಿಮುಖ**] ಎದುರಾಗಿರುವ, ಎದುರುಗೊಳ್ಳುವ, ಮುಂಭಾಗದಲ್ಲಿ, ಸಮೀಪಿಸಿರುವ

ಅಹಿಮುಹಿಹೂಅ.}. ವಿ: [**ಅಭಿಮುಖೀಭೂತ**]

ಅಹಿಮುಹೀಹೂಅ}. ಎದುರಿಗೆ ಬಂದಿರುವ, ಸಂಮುಖವಾಗಿರುವ(ಪಉಮ)

ಅಹಿಯ. ವಿ: [**ಅಧಿಕ**] ಹೆಚ್ಚಾದ, ವಿಶೇಷ, ದೊಡ್ಡದಾದ (ಔಪ), ಕ್ರಿ ವಿ: ಬಹಳ, ಅತ್ಯಂತ, ಹೇರಳ, ಶ್ರೇಷ್ಠ, ಮಿಗಿಲಾಗಿ

ಅಹಿಯ. ವಿ: [**ಅಹಿತ**] ಹಿತವಲ್ಲದ, ಶತ್ರು(ಮಹಾ) ನಷ್ಟ, ಅನರ್ಥಕರ

ಅಹಿಯ. ವಿ: [**ಅಧೀತ**] ಕಲಿಯಲ್ಪಟ್ಟ, ಅಧ್ಯಯನ ಮಾಡಲಾದ, ಓದಲ್ಪಟ್ಟ, ಅಧ್ಯಯನ(ಸುರ)

ಅಹಿಯಾ. ಸ್ತ್ರೀ: [**ಅಧಿಕಾ**] ಭಗವಾನ್ ಶ್ರೀ ನಮಿನಾಥನ ಮೊದಲ ಶಿಷ್ಯೆ(ಸಮ)

ಅಹಿಯಾಯ. '**ಅಹಿಜಾಯ**' ಶಬ್ದವನ್ನು ನೋಡುವುದು

ಅಹಿಯಾಇ. '**ಅಹಿಜಾಇ**' ಶಬ್ದವನ್ನು ನೋಡುವುದು

ಅಹಿಯಾರ. ಪು: [**ಅಭಿಚಾರ**] ಶತ್ರು ವಧೆಯ ಸಲುವಾಗಿ ಮಾಡಲಾಗುವ ಮಂತ್ರವೇ ಮೊದಲಾದವುಗಳ ಪ್ರಯೋಗ

ಅಹಿಯಾರ. '**ಅಹಿಗಾರ**' ಶಬ್ದವನ್ನು ನೋಡುವುದು

ಅಹಿಯಾರಿ. '**ಅಹಿಗಾರಿ**' ಶಬ್ದವನ್ನು ನೋಡುವುದು

ಅಹಿಯಾಸ. ಸಕ: [**ಅಧಿ+ಆಸ್, ಅಧಿ+ಸಹ್**] ಸಹಿಸು, ಕಷ್ಟಗಳನ್ನು ಶಾಂತವಾಗಿ ಸಹಿಸು, '**ಅಹಿಯಾಸಇ**'

ಅಹಿಯಾಸ. ವಿ: [**ಅಧ್ಯಾಸ, ಅಧಿಸಹ**) ಸಹಿಷ್ಣು (ಬೃಹ)

ಅಹಿಯಾಸಣ. ನ: [**ಅಧ್ಯಾಸನ, ಅಧಿಸಹನ**] ಸಹಿಸಿಕೊಳ್ಳುವುದು(ಉಪ)

ಅಹಿಯಾಸಣ. ನ: [**ಅಧಿಕಾಶನ**] ಅಧಿಕ ಭೋಜನ, ಮಿತಿಮೀರಿ ಊಟ, ಅಜೀರ್ಣ(ತಾ)

ಅಹಿಯಾಸಿಯ. ವಿ: [**ಅಧ್ಯಾಸಿತ, ಅಧಿಷೋಢ**] ಸಹಿಸಲ್ಪಟ್ಟ(ಆಚಾ), ಆಕ್ರಮಿಸಲ್ಪಟ್ಟ

ಅಹಿರ. ಪು: [**ಆಭೀರ**] ಗೋಪಾಲಕ, ಗೊಲ್ಲ(ಗಾ)

ಅಹಿರಮ. ಸಕ: [**ಅಭಿ+ರಮ್**] ಕ್ರೀಡಿಸು, ಸಂಭೋಗಿಸು, –'ಅಹಿರಮದಿ' (ಶೌ)(ನಾಟ)

ಅಹಿರಮ್ಮ. ವಿ: [**ಅಭಿರಮ್ಯ**] ಸುಂದರವಾದ, ಮನೋಹರವಾದ(ಭವಿ)

ಅಹಿರಾಮ. ವಿ: [**ಅಭಿರಾಮ**] ಸುಂದರವಾದ, ಮನೋಹರವಾದ(ಪಾಅ)

ಅಹಿರಾಮಿಣ.ವಿ: [**ಅಭಿರಾಮಿನ್**] ಆನಂದವನ್ನುಂಟು ಮಾಡುವ (ಸಣ)

ಅಹಿರಾಯ. ಪು: [**ಅಧಿರಾಜ**] ಚಕ್ರವರ್ತಿ, ಸಾಮ್ರಾಜ್ಯದ ಅಧಿಪತಿ (ಬೃಹ)

ಅಹಿರಾಯ. ನ: [**ಅಧಿರಾಜ್ಯ**] ಸಾಮ್ರಾಜ್ಯ, ಗಣರಾಜ್ಯ, ಪ್ರಭುತ್ವ(ಸಟ್ಟಿ)

ಅಹಿರಿಅ. '**ಅಹರೀಅ**' ಶಬ್ದವನ್ನು ನೋಡುವುದು

ಅಹಿರೀಅ. ವಿ: [ಅಹ್ರೀಕ] ನಿರ್ಲಜ್ಜ [ದೇ] ನಿಸ್ತೇಜ.

ಅಹಿರೀಮಾಣ. ವಿ: [**ದೇ. ಅಹಾರಿನ್, ಅಹ್ರೀಮನಸ್**] ಮನೋಹರವಲ್ಲದ, ಮನಸ್ಸಿಗೆ ವಿರುದ್ಧವಾದ, ನಾಚಿಕೆಗೇಡಿನ ನಿಸ್ತೇಜ (ಆಚಾ)

ಅಹಿರೂವ. ವಿ: [**ಅಭಿರೂಪ**] ಸುಂದರವಾದ, ಮನೋಹರವಾದ(ಅಭಿ),ಕಾಮ, ಯೋಗ್ಯ,ಜ್ಞಾನಿ

ಅಹಿರೇಮ. ಸಕ: [**ಪೃ**] ಪೂರ್ತಿಗೊಳಿಸು–'ಅಹಿರೇಮಇ'

ಅಹಿರೋಇಅ. ವಿ: [**ದೇ**] ಪೂರ್ಣ (ಷಡ್)

ಅಹಿರೋಹಣ. ನ: [**ಅಧಿರೋಹಣ**] ಮೇಲೆ ಹತ್ತುವುದು, ಆರೋಹಣ,(ಮಾ) ಹೆಚ್ಚಿಸುವುದು

ಅಹಿರೋಹಿ. ವಿ: [**ಅಧಿರೋಹಿನ್**] ಮೇಲೆ ಹತ್ತುವವನು

ಅಹಿರೋಹಿಣೀ. ಸ್ತ್ರೀ: [**ಅಧಿರೋಹಿಣೀ**] ಏಣಿ, ಸೋಪಾನ, ಮೆಟ್ಟಿಲು (ದೇ)

ಅಹಿಲ. ವಿ: [**ಅಖಿಲ**] ಸಕಲ, ಎಲ್ಲ, (ಗಉಡ)

ಅಹಿಲಂಖ}. ಸಕ: [**ಕಾಂಕ್ಷ್**] ಇಚ್ಛಿಸು, ಬಯಸು,

ಅಹಿಲಂಘ}. ಅಪೇಕ್ಷಿಸು 'ಅಹಿಲಂಖಇ'

ಅಹಿಲಕ್ಖ}.

ಅಹಿಲಕ್ಖ. ವಿ: [**ಅಭಿಲಕ್ಷ್ಯ**] ಅನುಮಾನದಿಂದ ತಿಳಿಯಲು ಅರ್ಹವಾದ್ದು(ಗಉಡ) ಉದ್ದೇಶಿಸಲ್ಪಡುವ. ಲಕ್ಷ್ಯಕ್ಕೆ ಎದುರಾಗಿ, ಗುರಿಯ ಕಡೆಗೆ

ಅಹಿಲವ. ಸಕ: [ಅಭಿಲಪ್] ಸಂಭಾಷಿಸು, ಹೇಳು
ಅಹಿಲಸ. ಸಕ: [ಅಭಿ+ಲಷ್] ಅಪೇಕ್ಷಿಸು, ಇಚ್ಛಿಸು ಇಷ್ಟಪಡು
ಅಹಿಲಸಿಯ. ವಿ: [ಅಭಿಲಷಿತ] ಇಷ್ಟಪಟ್ಟ, ಆಶಿಸಿದ, ಇಚ್ಛಿಸಿದ (ಸುರ)
ಅಹಿಲಸಿರ. ವಿ: [ಅಭಿಲಾಷಿನ್] ಬಯಸುವವನು, ಇಚ್ಛಿಸುವವನು, ಅಪೇಕ್ಷಿಸುವವನು(ದೇ)
ಅಹಿಲಾಣ. ನ: [ಅಭಿಲಾನ] ಮುಖದ ಬಂಧನ-ವಿಶೇಷ(ಣಾಯಾ)
ಅಹಿಲಾವ. ಪು: [ಅಭಿಲಾಪ] ಶಬ್ದ, ದನಿ, ಮಾತು, ಶಬ್ದಪ್ರಯೋಗ, ಪ್ರಕಟಣೆ, ಘೋಷಣೆ
ಅಹಿಲಾಸ. ಪು: [ಅಭಿಲಾಷ] ಇಚ್ಛೆ, ಬಯಕೆ, ಆಸೆ
ಅಹಿಲಿಅ. ನ: [ದೇ] ಸೋಲು, ಕೋಪ, ಸಿಟ್ಟು
ಅಹಿಲಿಹ. ಸಕ: [ಅಭಿ+ಲಿಖ್] ಚಿಂತಿಸು, ಬರೆ
ಅಹಿಲೋಯಣ. ನ: [ಅಭಿಲೋಕನ.] ಎತ್ತರವಾದ ಸ್ಥಾನ(ಪಣ್ಣ)
ಅಹಿಲೋಲ. ವಿ: [ಅಭಿಲೋಲ] ಚಪಲ, ಚಂಚಲ
ಅಹಿಲೋಹಿಆ. ಸ್ತ್ರೀ: [ಅಭಿಲೋಭಿಕಾ] ಲೋಲುಪತೆ, ಅತ್ಯಾಸೆ, ಲೋಭ(ಸೇ)
ಅಹಿಲ್ಲ. ವಿ: [ದೇ] ಹಣವುಳ್ಳವನು, ಶ್ರೀಮಂತ, ಧನಿಕ
ಅಹಿಲ್ಲಿಯಾ. ಸ್ತ್ರೀ: [ಅಹಿಲ್ಯಾ] ಗೌತಮ ಋಷಿಯ ಪತ್ನಿಯಾದ ಅಹಲ್ಯೆ, ಪಂಚ ಪತಿವ್ರತೆಯರಲ್ಲಿ ಒಬ್ಬಳು.
ಅಹಿವ. ವಿ: [ಅಧಿಪ] ಮುಖಂಡ, ನಾಯಕ(ಉಪ), ಮಾಲಿಕ, ಒಡೆಯ, ರಾಜ, ದೊರೆ
ಅಹಿವಇ. ವಿ: [ಅಧಿಪತಿ] ಮೇಲಿನ ಶಬ್ದವನ್ನು ನೋಡುವುದು
ಅಹಿವಂಜು. 'ಅಹಿಮಂಜು' ಶಬ್ದವನ್ನು ನೋಡುವುದು
ಅಹಿವಂದಿಯ. ವಿ: [ಅಭಿವಂದಿತ] ನಮಸ್ಕರಿಸಲ್ಪಟ್ಟ
ಅಹಿವಜ್ಜು. 'ಅಹಿಮಂಜು' ಶಬ್ದವನ್ನು ನೋಡುವುದು
ಅಹಿವಡ. ಸಕ: [ಅಧಿ+ಪತ್] ಬರು. ವ. ಕೃ: 'ಅಹಿವಡಂತ' **ಅಕ:** ಕ್ಷೀಣಿಸು
ಅಹಿವಡ್ಡ. 'ಅಭಿವಡ್ಡ' ಶಬ್ದವನ್ನು ನೋಡುವುದು
ಅಹಿವಡ್ಢಿ}. ಸ್ತ್ರೀ: [ಅಭಿವೃದ್ಧಿ] ಉತ್ತರ ಪ್ರೋಷ್ಠಪದಾ
ಅಹಿವಧ್ಧಿ}. ನಕ್ಷತ್ರದ ಅಧಿಷ್ಠಾತೃ ದೇವತೆ
ಅಹಿವಡ್ಢಿಯ. ವಿ: [ಅಭಿವರ್ಧಿತ] ಅಭಿವೃದ್ಧಿ ಮಾಡಲ್ಪಟ್ಟ, ಹೆಚ್ಚಿಸಲ್ಪಟ್ಟ

ಅಹಿವಣ್ಣ. ವಿ: [ದೇ] ಹಳದಿ ಮತ್ತು ಕೆಂಪು ಬಣ್ಣದಿಂದ ಕೂಡಿರುವ(ದೇ)
ಅಹಿವಣ್ಣು.} 'ಅಹಿಮಂಜು' ಶಬ್ದವನ್ನು ನೋಡುವುದು
ಅಹಿವನ್ನು.}
ಅಹಿವಲ್ಲೀ. ಸ್ತ್ರೀ: [ಅಹಿವಲ್ಲೀ] ನಾಗವಲ್ಲಿ, ವೀಳ್ಯದ ಬಳ್ಳಿ
ಅಹಿವಸ. ಸಕ: [ಅಧಿ+ವಸ್] ವಾಸಮಾಡು, ಇರು. ವ. ಕೃ-'ಅಹಿವಸಂತ'(ಸ)
ಅಹಿವಾಇಯ. ವಿ: [ಅಭಿವಾದಿತ] ಗೌರವದಿಂದ ನಮಸ್ಕರಿಸಲ್ಪಟ್ಟ
ಅಹಿವಾಯುಣ. 'ಅಭಿವಾಯುಣ' ಶಬ್ದವನ್ನು ನೋಡುವುದು(ಭವಿ)
ಅಹಿವಾಲ. ವಿ: [ಅಧಿಪಾಲ] ಪಾಲಕ, ರಕ್ಷಕ(ಭವಿ)
ಅಹಿವಾಸ. ಪು: [ಅಧಿವಾಸ] ವಾಸನೆ, ಸಂಸ್ಕಾರ(ದೇ) ಸೌರಭ, ಅವಿಚ್ಛಿನ್ನವಾಗಿರುವುದು, ವಾಸಿಸುವುದು
ಅಹಿವಾಸಣ. ನ: [ಅಧಿವಾಸನ] ಗಂಧ ಮಾಲ್ಯಾದಿಗಳಿಂದ ವಾಸನೆ ಕಟ್ಟುವುದು, ದೇವತಾಸ್ಥಾಪನೆ
ಅಹಿವಾಸಿ. ವಿ: [ಅಧಿವಾಸಿನ್] ನಿವಾಸಿ
ಅಹಿವಾಸಿಅ. ವಿ: [ಅಧಿವಾಸಿತ] ಸಜ್ಜುಗೊಳಿಸಲ್ಪಟ್ಟ, ಅಲಂಕರಿಸಲ್ಪಟ್ಟ
ಅಹಿವಿಣ್ಣಾ. ಸ್ತ್ರೀ: [ದೇ] ಸವತಿಯಿರುವ ಸ್ತ್ರೀ, ಉಪಪತ್ನಿ
ಅಹಿಸಂಕಾ. ಸ್ತ್ರೀ: [ಅಭಿಶಂಕಾ] ಸಂದೇಹ, ಸಂಶಯ, ಭ್ರಮೆ(ಪಉಮ)
ಅಹಿಸಂಜಮಣ. ನ: [ಅಭಿಸಂಯಮನ] ನಿಯಂತ್ರಣ, ಸಂಯಮ(ಗಉಡ), ಹೆದರಿಕೆ, ಭಯ
ಅಹಿಸಂಧಾರಣ. ನ: [ಅಭಿಸಂಧಾರಣ] ಅಭಿಪ್ರಾಯ.
ಅಹಿಸಂಧಿ. ಪುಂ.ಸ್ತ್ರೀ: [ಅಭಿಸಂಧಿ] ಅಭಿಪ್ರಾಯ, ಆಶಯ(ಪಣ್ಣ) ಪ್ರತಿಜ್ಞೆ, ಧ್ಯೇಯ, ವಿಶ್ವಾಸ, ಒಪ್ಪಂದ
ಅಹಿಸಂಧಿ. ಪು: [ದೇ] ಮತ್ತೆ ಮತ್ತೆ(ದೇ)
ಅಹಿಸಕ್ಕಣ. ಪುಂನ: [ಅಭಿಷ್ವಷ್ಕಣ] ಎದುರುಗಡೆ ಹೋಗುವುದು
ಅಹಿಸರ. ಸಕ: [ಅಭಿ+ಸೃ] ಪ್ರವೇಶಿಸು, ತನ್ನ ಪ್ರಿಯನ ಹತ್ತಿರಕ್ಕೆ ಹೋಗುವುದು
ಅಹಿಸರಣ. ನ: [ಅಭಿಸರಣ] ಪ್ರಿಯನ ಸಮೀಪಕ್ಕೆ ಹೋಗುವುದು, ಪ್ರೇಮಿಯ ಸಂಕೇತ ಸ್ಥಾನಕ್ಕೆ ಹೋಗುವುದು
ಅಹಿಸರಿಅ. ವಿ: [ಅಭಿಸೃತ] ಪ್ರಿಯನ ಸಮೀಪಕ್ಕೆ ಹೋದ, ಪ್ರವೇಶಿಸಿದ(ಆವಮ)

ಅಹಿಸಹಣ. ನ: [ಅಧಿಸಹನ] ಸಹಿಸಿಕೊಳ್ಳುವುದು(ತಾ)
ಅಹಿಸಾಅ. 'ಅಕ್ಕಮ=ಆ+ಕ್ರಮ್' ಅಧಿಷ್ಠಾತೃ ದೇವತೆ
ಅಹಿಸಾಮ. ವಿ: [ಅಭಿಶಾಮ] ಕಪ್ಪಗಿರುವ, ಕೃಷ್ಣವರ್ಣದ
ಅಹಿಸಾಯ. ವಿ: [ದೇ] ಪೂರ್ಣ, ಪೂರ್ತಿ(ದೇ)
ಅಹಿಸಾರಣ. ನ: [ಅಭಿಸಾರಣ] ತರುವುದು, ಪ್ರೇಮಿಯ ಸಲುವಾಗಿ ಸಂಕೇತ ಸ್ಥಾನಕ್ಕೆ ಹೋಗುವುದು
ಅಹಿಸಾರಿಅ. ವಿ: [ಅಭಿಸಾರಿತ] ತರಲ್ಪಟ್ಟ
ಅಹಿಸಾರಿಆ. ಸ್ತ್ರೀ: [ಅಭಿಸಾರಿಕಾ] ನಾಯಕನನ್ನು ಸಂಧಿಸಲು ಸಂಕೇತ ಸ್ಥಾನಕ್ಕೆ ಹೋಗುವ ಹೆಣ್ಣು
ಅಹಿಸಿಅ. ನ: [ದೇ] ಅನಿಷ್ಟ ಗ್ರಹದ ಹೆದರಿಕೆಯಿಂದ ದುಃಖಿತನಾಗುವುದು–ಅಳುವುದು(ದೇ)
ಅಹಿಸಿಂಚ. 'ಅಭಿಸಿಂಚ' ಶಬ್ದವನ್ನು ನೋಡುವುದು. 'ಅಹಿಸಿಂಚಇ'
ಅಹಿಸಿಂಚಣ. ನ: [ಅಭಿಷೇಚನ] ಅಭಿಷೇಕ, ದೇವ–ವಿಗ್ರಹಗಳಿಗೆ ಮಾಡಿಸುವ ಸ್ನಾನ, ಪ್ರೋಕ್ಷಣೆ(ಸಮ)
ಅಹಿಸಿತ್ತ. 'ಅಭಿಸಿತ್ತ' ಶಬ್ದವನ್ನು ನೋಡುವುದು
ಅಹಿಸೇಅ. 'ಅಭಿಸೇಅ' ಶಬ್ದವನ್ನು ನೋಡುವುದು
ಅಹಿಸೋಢ. ವಿ: [ಅಭಿಸೋಢ] ಸಹಿಸಲ್ಪಟ್ಟ
ಅಹಿಸ್ಸಂಗ. ಪು: [ಅಭಿಷ್ವಂಗ] ಆಸಕ್ತಿ(ನಾಟ), ಪ್ರೀತಿ, ಸಂಬಂಧ, ಸಂಪರ್ಕ
ಅಹಿಹಯ. ವಿ: [ಅಭಿಹತ] ಹೊಡೆಯಲ್ಪಟ್ಟ, ಗಾಯಗೊಳಿಸಲ್ಪಟ್ಟ, ತಗುಲಿಸಲ್ಪಟ್ಟ
ಅಹಿಹರ. ಸಕ: [ಅಭಿ+ಹೃ) ತೆಗೆದುಕೊಳ್ಳು, ಶೋಭಿಸು, ವಿರಾಜಿಸು, ಪ್ರಕಾಶಿಸು, ಹೊಳೆ
ಅಹಿಹರ. ನ: [ದೇ] ದೇವಕುಲ, ಪ್ರಾಚೀನ ದೇವಸ್ಥಾನ, ಹುತ್ತ
ಅಹಿಹವ. ಸಕ: [ಅಭಿ+ಭೂ] ಸೋಲಿಸು, ಗೆಲ್ಲು, ಅಪಮಾನಿಸು, ತಿರಸ್ಕರಿಸು
ಅಹಿಹಾಣ. ನ: [ದೇ. ಅಭಿಧಾನ] ವರ್ಣನೆ, ಪ್ರಶಂಸೆ
ಅಹಿಹಾಣ. 'ಅಭಿಹಾಣ' ಶಬ್ದವನ್ನು ನೋಡುವುದು
ಅಹಿಹೂ. 'ಅಹಿಹವ' ಶಬ್ದವನ್ನು ನೋಡುವುದು
ಅಹಿಹೂಅ. ವಿ: [ಅಭಿಭೂತ] ಸೋಲಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ, ಅಪಮಾನಗೊಳಿಸಲ್ಪಟ್ಟ(ದೇ)
ಅಹೀ. ಸಕ: [ಅಧಿ+ಇ] ಓದು, ಅಧ್ಯಯನಮಾಡು–'ಅಹೀಯಹ' (ವಿಸೇ)
ಅಹೀ. ಸ್ತ್ರೀ: [ಅಹೀ] ನಾಗಿನಿ, ಹೆಣ್ಣು ಸರ್ಪ (ಜೀವ)
ಅಹೀಕರಣ. ನ: [ಅಧಿಕರಣ] ಕಲಹ. ಜಗಳ(ನಿಚೂ), ಆಧಾರ, ಆಶ್ರಯ, ಸ್ಥಾನ, ಜಾಗ
ಅಹೀಗಾರ. 'ಅಹಿಗಾರ' ಶಬ್ದವನ್ನು ನೋಡುವುದು
ಅಹೀಣ. ವಿ: [ಅಧೀನ] ಅಸ್ವತಂತ್ರ, ಇನ್ನೊಬ್ಬನ ವಶದಲ್ಲಿರುವ, ಆಶ್ರಯದಲ್ಲಿರುವ
ಅಹೀಣ. ವಿ: [ಅ–ಹೀನ] ಕೊರತೆಯಿಲ್ಲದ, ಪೂರ್ಣವಾಗಿರುವ(ವಿಪಾ) ನಿಕೃಷ್ಟವಲ್ಲದ, ವಾಸುಕಿ
ಅಹೀಯ. 'ಅಹಿಯ=ಅಧಿಕ' ಶಬ್ದವನ್ನು ನೋಡುವುದು
ಅಹೀಯ. ವಿ: [ಅಧೀತ] ಪಠಿಸಲ್ಪಟ್ಟ, ಕಲಿಯಲ್ಪಟ್ಟ, ಅಧ್ಯಯನ ಮಾಡಲ್ಪಟ್ಟ
ಅಹೀರಗ. ವಿ: [ಅಹೀರಕ] ಸೂತ್ರವಿರದ(ಫಲಾದ)
ಅಹೀರು. ವಿ: [ಅಭೀರು] ಹೆದರದ, ನಿರ್ಭೀತ (ಭವಿ)
ಅಹೀಲಾಸ. 'ಅಹಿಲಾಸ' ಶಬ್ದವನ್ನು ನೋಡುವುದು
ಅಹೀಸರ. ಪು: [ಅಧೀಶ್ವರ] ಪರಮೇಶ್ವರ(ಪ್ರಾಮಾ), ಸಾರ್ವಭೌಮ, ಚಕ್ರವರ್ತಿ
ಅಹುಆಸೇಯ. ವಿ: [ಅಹುತಾಶೇಯ] ಅಗ್ನಿಗೆ ಯೋಗ್ಯನಲ್ಲದವನು (ಗಉಡ)
ಅಹುಣಾ. ಅ: [ಅಧುನಾ] ಈಗಲೇ, ಈಗ, ಈ ಕಾಲದಲ್ಲಿ(ತಾ)
ಅಹುಣಿ(ಪೈ). 'ಅಹುಣಾ' ಶಬ್ದವನ್ನು ನೋಡುವುದು
ಅಹುಲಣ. ವಿ: [ಅಮಾರ್ಜಕ] ನಾಶ ಮಾಡದ(ಕುಮಾ) ತೊಳೆಯದ, ಶುದ್ಧಮಾಡದ
ಅಹುಲ್ಲ. ವಿ: [ಅಫುಲ್ಲ] ಅರಳದಿರುವ, ವಿಕಾಸ ಹೊಂದದಿರುವ, ತೆರೆಯದ(ಕುಮಾ)
ಅಹುವಂತ. ವ. ಕೃ. [ಅಭವತ್] ಆಗುತ್ತಿಲ್ಲದ (ಕುಮಾ)
ಅಹೂಣ. 'ಅಹೀಣ=ಅಹೀನ' ಶಬ್ದವನ್ನು ನೋಡುವುದು
ಅಹೂವ. ವಿ: [ಅಭೂತ] ಹಿಂದೆ ಆಗದಿರುವ, ಇಲ್ಲದಿರುವ, ಹಿಂದಿನದಲ್ಲದ **–ಪುವ್ವ.** ವಿ: [–**ಪೂರ್ವ**] ಈ ಹಿಂದೆ ಎಂದೂ ಆಗದಿರುವ
ಅಹೇ. ಅ: [ಅಧಸ್] ಕೆಳಗೆ(ಆಚಾ), **–ಕಮ್ಮ.** ನ: [**–ಕರ್ಮನ್**] ಅಧರ್ಮ ಕರ್ಮ, ಭಿಕ್ಷೆಯ ಒಂದು ದೋಷ, (ಪಿಂಡ), **–ಕಾಯ.** ಪು: [**–ಕಾಯ**] ಶರೀರದ ಕೆಳಭಾಗ (ಸೂಅ), **–ಚರ.** ವಿ: [**–ಚರ**] ಬಿಲದಲ್ಲಿ ವಾಸಿಸುವ ಸರ್ಪವೇ ಮೊದಲಾದುವು. **–ತಾರಗ.** ಪು: [**–ತಾರಕ**]

ಪಿಶಾಚ–ವಿಶೇಷ(ಪಣ್ಣ), **–ದಿಸಾ.** ಸ್ತ್ರೀ: [**–ದಿಕ್**] ಕೆಳಗಿನ ದಿಕ್ಕು, ಪಾತಾಳ ಲೋಕ, **–ವಿಯಡ.** ವಿ: [**–ವಿಕಟ**] ಭಿತ್ತಿಯೇ ಮೊದಲಾದವು ಇಲ್ಲದಿರುವ ಸ್ಥಳ, ತೆರೆದ ಜಾಗ. **–ಸತ್ತಮಾ.** ಸ್ತ್ರೀ [**–ಸಪ್ತಮೀ**] ಏಳನೆಯ ಅಥವಾ ಅಂತಿಮ ನರಕ ಭೂಮಿ(ಸಮ) **'ಅ ಹೋ=ಅಧಸ್'** ಶಬ್ದವನ್ನು ನೋಡುವುದು.

ಅಹೇ. **'ಅಹ=ಅಥ'** ಶಬ್ದವನ್ನು ನೋಡುವುದು(ಭಗ)

ಅಹೇಉ. ಪು: [**ಅಹೇತು**] ಸತ್ಯ ಹೇತುವಿನ ವಿರೋಧಿ, ಹೇತ್ವಾಭಾಸ(ಠಾ), ವಿ: ಕಾರಣ–ರಹಿತ, ಶಾಶ್ವತ(ಸೂಅ), **–ವಾಯ.** ಪು: [**–ವಾದ**] ತರ್ಕ–ಹೇತುವನ್ನು ಬಿಟ್ಟು ಕೇವಲ ಶಾಸ್ತ್ರವನ್ನೇ ಪ್ರಮಾಣವೆಂದು ಒಪ್ಪಲಾಗುವ ಆಗಮ–ವಾದ

ಅಹೇಕಮ್ಮ. ಪುಂ.ನ: [**ಅಧಃಕರ್ಮನ್**] ಅಧೋಗತಿಗೆ ಕೊಂಡೊಯ್ಯುವ ಕರ್ಮ,ಭಿಕ್ಷೆಯ ಅರ್ಧಕರ್ಮ ದೋಷ

ಅಹೇಉಯ. ವಿ: [**ಅಹೇತುಕ**] ಕಾರಣವನ್ನು ಬಿಟ್ಟುಕೊಟ್ಟ, ನಿಷ್ಕಾರಣ(ಪಉಮ)

ಅಹೇಸಣಿಜ್ಜ. ವಿ: [**ಯಥೈಷಣೀಯ**] ಸಂಸ್ಕಾರ ಹೊಂದಿರದ, ಹೊಸ(ಆಚಾ)

ಅಹೇಸರ. ಪು: [**ಅಹರೀಶ್ವರ**] ಸೂರ್ಯ, ರವಿ (ಮಹಾ)

ಅಹೋ. **'ಅಹ=ಅಧಸ್'** ಶಬ್ದವನ್ನು ನೋಡುವುದು (ಭಗ), **–ಕರಣ.** ನ: [**–ಕರಣ**] ಕಲಹ, ಜಗಳ, (ನಿಚೂ), **–ಗಇ.** ಸ್ತ್ರೀ: [**–ಗತಿ**] ನರಕ ಅಥವಾ ತಿರ್ಯಗ್ ಯೋನಿ. ಅವನತಿ. **–ಗಾಮಿ.** ವಿ: [**–ಗಾಮಿನ್**] ದುರ್ಗತಿಪಡೆಯುವವನು(ಸಮ), **–ತರಣ.** ನ: [**–ತರಣ**] ಕಲಹ, ಜಗಳ, **–ಮುಹ.** ವಿ: –[**ಮುಖ**] ಅಧೋಮುಖ ಅವನತ ಮುಖ, ಲಜ್ಜೆಗೊಂಡ(ಸುರ), **–ಲೋಇಯ,** ವಿ: [**–ಲೋಕಿಕ**] ಪಾತಾಳ ಲೋಕದೊಂದಿಗೆ ಸಂಬಂಧವುಳ್ಳವನು(ಸಮ), **–ಹಿ.** ವಿ: [**–ಅವಧಿ**] ಕೆಳ ದರ್ಜೆಯ ಅವಧಿಜ್ಞಾನವನ್ನು ಹೊಂದಿರುವ. ಪುಂ. ಸ್ತ್ರೀ: ಕೆಳ ದರ್ಜೆಯ ಅವಧಿಜ್ಞಾನ. ಅವಧಿಜ್ಞಾನದ ಒಂದು ಬಗೆ.

ಅಹೋ. ಅ: [**ಅಹನಿ**] ಹಗಲಿನಲ್ಲಿ(ಪಉಮ)

ಅಹೋ. ಅ [**ಅ ಹೋ**] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ವಿಸ್ಮಯ, ಆಶ್ಚರ್ಯ, ದಯೆ, ದೀನತೆ, ಕನಿಕರ, ಕರುಣೆ, ನಿಂದೆ, ಬೈಗಳು, ಕರೆ, ಸಂಬೋಧನೆ, ಶೋಕ, ದುಃಖ, ಹೊಟ್ಟೆಕಿಚ್ಚು, ಸಂದೇಹ, ಸಂಶಯ, ಹೊಗಳಿಕೆ, ಸಂತೋಷ, ತೃಪ್ತಿ(ಆಚಾ), **–ದಾಣ.** ನ: [**–ದಾನ**] ಆಶ್ಚರ್ಯಕಾರಕ ದಾನ, **–ಪುರಿಸಿಗಾ, ಪುರಿಸಿಯಾ.** ಸ್ತ್ರೀ: [**–ಪುರುಷಿಕಾ**] ಗರ್ವ, ಅಭಿಮಾನ,**–ವಿಹಾರ.** ಪು: [**–ವಿಹಾರ**] ಸಂಯಮದ ಆಶ್ಚರ್ಯ–ಜನಕ ಅನುಷ್ಠಾನ

ಅಹೋ–. ಪುಂ. ನ: [**ಅಹನ್**] ಹಗಲು, ದಿವಸ. **–ಣಿಸ. –ನಿಸ, –ನಿಸಿ.** ನ: [**–ನಿಶಾ**] ರಾತ್ರಿ ಮತ್ತು ಹಗಲು, ಹಗಲು–ರಾತ್ರಿ (ಸೂಅ), **–ರತ್ತ.** ಪು: [**–ರಾತ್ರ**] ಹಗಲು ಮತ್ತು ರಾತ್ರಿಯ ಪರಿಮಿತ ಕಾಲ, ಎಂಟು ಪ್ರಹರಗಳು. (ಪಉಮ)ನಾಲ್ಕು ಪ್ರಹರಗಳ ಸಮಯ. **–ರಾಇಯಾ.** ಸ್ತ್ರೀ: [**–ರಾತ್ರಿಕೀ**] ಧ್ಯಾನ–ಪ್ರಧಾನ ಅನುಷ್ಠಾನ–ವಿಶೇಷ, (ಆವ), **–ರಾಇಂದಿಯ.** ನ: [**–ರಾತ್ರಿಂದಿವ**] ಹಗಲು–ರಾತ್ರಿ(ಭಗ)

ಅಹೋರಣ. ನ: [**ದೇ**] ಉತ್ತರೀಯದ ವಸ್ತ್ರ, ಚಾದರ

ಆ

ಆ. ಪು: [ಆ] ಪ್ರಾಕೃತ ವರ್ಣಮಾಲೆಯ ಎರಡನೇ ಸ್ವರ-ವರ್ಣ. ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಮರ್ಯಾದೆ, ಎಲ್ಲೆ, ಉದಾ: 'ಅಸಮುದ್ದ'(ಗಲುಡ), ವ್ಯಾಪ್ತಿ-' ಆಮೂಲಸಿರಂ', ಕಡಿಮೆ, ಸ್ವಲ್ಪ-'ಆಣಿಲಕಕ್ಕರುದ್ದ ತುರಂ, ಸುತ್ತಲೂ, ಅಧಿಕತೆ, ವಿಶೇಷತೆ-'ಆದೀಣ' (ಸೂಅ), ಸ್ಮರಣೆ, ವಿಸ್ಮಯ, ಕ್ರಿಯಾ-ಶಬ್ದದ ಜೊತೆಯಲ್ಲಿ ಅರ್ಥ-ವಿಸ್ತೃತಿ ಮತ್ತು ವಿಪರ್ಯಯ, ವಾಕ್ಯದ ಸೌಂದರ್ಯದ ಸಲುವಾಗಿಯೂ ಇದರ ಬಳಕೆಯಾಗುತ್ತದೆ(ಣಾಂಯಾ) ಪಾದ-ಪೂರ್ತಿಗಾಗಿಯೂ ಬಳಸಲಾಗುತ್ತದೆ

ಆ. ಅ: [ಆ] ಕೆಳಗೆ, ಕೆಳಗಡೆ

ಆ. ಅ: [ಆಸ್] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಖೇದ, ದುಃಖ, ಕೋಪ, ಆಕ್ಷೇಪಣೆ, ಸಂತಾಪ

ಆ. ಸಕ: [ಯಾ] ಹೋಗು

ಆಅ. ವಿ: [ದೇ] ಬಹಳ, ದೀರ್ಘ, ವಿಷಮ=ಕಠಿಣ, ನ: ಲೋಹ, ಕಬ್ಬಿಣ, ತಾಮ್ರ ಇತ್ಯಾದಿ ಲೋಹಗಳು, ಒನಕೆ, (ದೇ)

ಆಅ.ವಿ:[ಆಗತ] ಬಂದಿರುವ, ಸಂಭವಿಸಿರುವ, ಸಂಪಾದಿಸಿದ, ನ: ಆಗಮನ

ಆಅಅ. ವಿ: [ಆಗತ] ಬಂದಿರುವ

ಆಅಅ.ವಿ:[ಆಯತ] ಉದ್ದವಾದ, ದೀರ್ಘವಾದ(ಸೇ) ಉದ್ದವಾಗಿ ನೀಳವಾಗಿ, ಎಳೆಯಲ್ಪಟ್ಟ

ಆಅಂಛ. ಸಕ: [ಕೃಷ್] ಎಳೆ, ಉಳು, ನೇಗಿಲು ಹೊಡೆ, ಕೃಷಿಮಾಡು, 'ಆಅಂಛಇ'

ಆಅಂತವ್ವ. 'ಆಗಮ=ಆ+ಗಮ್' ಶಬ್ದವನ್ನು ನೋಡುವುದು

ಆಅಂತುಅ. 'ಆಗಂತುಯ' ಶಬ್ದವನ್ನು ನೋಡುವುದು

ಆಅಂಪಿಅ. 'ಆಕಂಪಿಯ' ಶಬ್ದವನ್ನು ನೋಡುವುದು

ಆಅಂಬ. ವಿ: [ಆತಾಮ್ರ] ಸ್ವಲ್ಪ ಕೆಂಪು(ಸೇ)

-ಆಅಂಬ. ಪು: [ಕಾದಂಬ] ಹಂಸ, ಒಂದು ಜಾತಿಯ ಹಂಸಪಕ್ಷಿ, ಈಚಲುಮರ

ಆಅಕ್ಖ. ಸಕ: [ಆ+ಚಕ್ಷ್] ಹೇಳು, ಉಪದೇಶಿಸು - 'ಆಯಕ್ಖಾಹಿ'

ಆಅಚ್ಛ. 'ಆಗಚ್ಛ' ಶಬ್ದವನ್ನು ನೋಡುವುದು. 'ಆಅಚ್ಛಇ'

ಆಅಡ್ಡ. ಅಕ: [ದೇ] ಪರವಶನಾಗಿ ಚಲಿಸು

ಆಅಡ್ಡ. ಅಕ: [ವ್ಯಾ+ಪೃ] ವ್ಯಾಪಿಸಿಕೊಳ್ಳು, ಕೆಲಸದಲ್ಲಿ ತೊಡಗು(ಕುಮಾ)

ಆಅಡ್ಡಿಅ. ವಿ: [ದೇ] ಪರವಶನಾಗಿ ಚಲಿಸಲ್ಪಟ್ಟ, ಇನ್ನೊಬ್ಬರ ಪ್ರೇರಣೆಯಿಂದ ನಡೆದಿರುವ (ದೇ)

ಆಅಡ್ಡಿಅ. ವಿ; [ವ್ಯಾಪೃತ] ಕಾರ್ಯದಲ್ಲಿ ನಿರತನಾಗಿರುವ, ತೊಡಗಿರುವ(ಕುಮಾ)

ಆಅಣ್ಣಣ. 'ಆಯನ್ನಣ' ಶಬ್ದವನ್ನು ನೋಡುವುದು (ಗಾ)

ಆಅತ್ತಿ. 'ಆಯಇ' ಶಬ್ದವನ್ನು ನೋಡುವುದು

ಆಅದ. 'ಆಗಯ' ಶಬ್ದವನ್ನು ನೋಡುವುದು

ಆಅಮ. 'ಆಗಮ' ಶಬ್ದವನ್ನು ನೋಡುವುದು(ಸ್ವಪ್ನ)

ಆಅಮಣ. 'ಆಗಮಣ' ಶಬ್ದವನ್ನು ನೋಡುವುದು

ಆಅರ. ಸಕ: [ಆ+ದೃ] ಆದರಿಸು, ಸತ್ಕರಿಸು, ಗೌರವಿಸು 'ಆಅರಇ'

ಆಅರ. ನ: [ದೇ] ಒರಳು, ಕೂರ್ಚ

ಆಅಲ್ಲ. ಪು: [ದೇ] ರೋಗ(ದೇ), ವಿ: ಚಂಚಲ. ಚಪಲ, 'ಆಯಲ್ಲಾಯಾ' ಶಬ್ದವನ್ನು ನೋಡುವುದು

ಆಅಲ್ಲಿ.} ಸ್ತ್ರೀ: [ದೇ] ಪೊದೆ, ಚಿಕ್ಕ ಸಸಿಗಳ ಸಮೂಹ,
ಆಅಲ್ಲೀ}. ಬಳ್ಳಿಗಳಿಂದ ನಿಬಿಡವಾದ ಸ್ಥಳ

ಆಅವ್ವ. ಅಕ: [ವೇಪ್] ನಡುಗು, ಕಂಪಿಸು 'ಆಅವ್ವಇ' (ಷಡ್)

ಆಆಮಿ. 'ಆಗಾಮಿ' ಶಬ್ದವನ್ನು ನೋಡುವುದು

ಆಆಸ. 'ಆಯಂಸ' ಶಬ್ದವನ್ನು ನೋಡುವುದು

ಆಆಸತಅ(ದೇ). 'ಆಯಾಸತಲ' ಶಬ್ದವನ್ನು ನೋಡುವುದು

ಆಇ. ಸಕ: [ಆ+ದಾ] ಗ್ರಹಿಸು, ತೆಗೆದುಕೊಳ್ಳು 'ಆಇಎಜ್ಜಾ'

ಆಇ. ಪು: [ಆದಿ] ಮೊದಲು, ಪ್ರಥಮ, ಪ್ರಾರಂಭ, ಮೊದಲನೆಯ, ಮುಖ್ಯವಾದ ಸಮೀಪ, ಹತ್ತಿರ,ಪ್ರಕಾರ, ಅವಯವ, ಉತ್ಪತ್ತಿ, ಪ್ರಪಂಚ, ಕಾರಣ, ಆಶ್ರಯ, ಮುಂತಾದವು. **-ಗರ. ವಿ:**[-ಕರ] ಆದಿ-ಪ್ರವರ್ತಕ, **ಪು:** ಭಗವಾನ್ ವೃಷಭದೇವ(ಪಉಮ), **-ಗುಣ. ಪು:**[-ಗುಣ]

ಸಹಭಾವಿ ಗುಣ, **–ಣಾಹ. ಪು:** [–ನಾಥ] ಭಗವಾನ್ ಋಷಭದೇವ(ಆವಮ), **–ತಿತ್ಥಯರ. ಪು:** [–ತೀರ್ಥಂಕರ] ಆದಿನಾಥ, **–ದೇವ. ಪು:**[–ದೇವ] ಭಗವಾನ್ ವೃಷಭದೇವ(ಸುರ), **–ಮ. ವಿ:** [–ಮ] ಆದ್ಯ, ಪ್ರಥಮ, **–ಮೂಲ. ನ:** [–ಮೂಲ] ಮುಖ್ಯ ಕಾರಣ, **–ಮೋಕ್ಖ. ಪು:** [–ಮೋಕ್ಷ] ಸಂಸಾರದಿಂದ ಬಿಡುಗಡೆ, ಮೋಕ್ಷ, ಶೀಘ್ರವೇ ಮುಕ್ತವಾಗಲಿರುವ ಆತ್ಮ, **–ರಾಯ. ಪು:** [–ರಾಜ] ಭಗವಾನ್ ವೃಷಭದೇವ(ತಾ), **–ವರಾಹ. ಪು:** [–ವರಾಹ] ಕೃಷ್ಣ, ನಾರಾಯಣ

ಆಇ. ವಿ: [ಆದಿನ್] ತಿನ್ನುವವನು, ಉಣ್ಣುವವನು

ಆಇ. ಸ್ತ್ರೀ: [ಆಜಿ] ಸಂಗ್ರಾಮ, ಯುದ್ಧ (ಸಂಥಾ)

ಆಇಅಂತಿಯ. 'ಅಚ್ಚಂತಿಯ' ಶಬ್ದವನ್ನು ನೋಡುವುದು

ಆಇಂ. ಅ: [ದೇ] ವಾಕ್ಯದ ಸೌಂದರ್ಯದ ಸಲುವಾಗಿ ಬಳಕೆಯಾಗುವ ಅವ್ಯಯ(ಭಗ)

ಆಇಂಖಣಾ.} ಸ್ತ್ರೀ: [ದೇ] ಕರ್ಣ–ಪಿಶಾಚಿಕಾ ದೇವಿ,
ಆಇಂಖಣಿಯಾ}. ಚಾಂಡಾಲಿ
ಆಇಂಖೀಣಿಯಾ}

ಆಇಂಗ. ನ: [ದೇ] ಒಂದು ವಾದ್ಯ–ವಿಶೇಷ(ಪಉಮ)

ಆಇಂಚ. 'ಆಯಂಚ' ಶಬ್ದವನ್ನು ನೋಡುವುದು

ಆಇಂಚ. 'ಅಕ್ಕಮ=ಆ+ಕ್ರಮ್' ಶಬ್ದವನ್ನು ನೋಡುವುದು.

ಆಇಂಚವಾರ. ಪು: [ಆದಿತ್ಯವಾರ] **ಭಾನುವಾರ**

ಆಇಂಚಿಯ. ವಿ: [ಆದಿತ್ಯಿಕ] **ಆದಿತ್ಯನಿಗೆ ಸಂಬಂಧಿಸಿದ**

ಆಇಂಛ. 'ಆಅಂಛ' ಶಬ್ದವನ್ನು ನೋಡುವುದು. **'ಆಇಂಛಇ'**

ಆಇಕ್ಖ. ಸಕ: [ಆ+ಚಕ್ಷ್] ಹೇಳು, ಉಪದೇಶಿಸು. **'ಆಇಕ್ಖಇ'**

ಆಇಕ್ಖಗ. ವಿ: [ಆಖ್ಯಾಯಕ] ಹೇಳುವವನು, ವಕ್ತಾ, ಸಂದೇಶವನ್ನು ತಿಳಿಸುವವನು(ಪಣ್ಣ)

ಆಇಕ್ಖಣ. ನ: [ಆಖ್ಯಾನ] ಕಲ್ಪಿತ ಕಥೆ, ಹೇಳುವುದು, ಉಪದೇಶ, ಕಥನ(ಬೃಹ)

ಆಇಕ್ಖಿಯ. ವಿ: [ಆಖ್ಯಾತ] ಉಕ್ತ, ಹೇಳಲ್ಪಟ್ಟ, ಪ್ರಸಿದ್ಧವಾದ, ಧಾತುವಿನ ಮುಂದೆ ಹತ್ತುವ ಕ್ರಿಯಾ ಪ್ರತ್ಯಯ

ಆಇಕ್ಖಿಯಾ. ಸ್ತ್ರೀ: [ಆಖ್ಯಾಯಿಕಾ] ವಾರ್ತೆ, ಕಥೆ, ನಡೆದ ಕಥೆ, ಒಂದು ಬಗೆಯ ಮಲಿನ ವಿದ್ಯೆ, ಅದರಿಂದ ಚಾಡಾಲಿನಿ ಭೂತಕಾಲವೇ ಮೊದಲಾದವುಗಳ ಬಗ್ಗೆ ಪರೋಕ್ಷ ವಿಷಯ ಹೇಳುತ್ತಾಳೆ(ಠಾ)

ಆಇಗ್ಗ. ವಿ: [ಆವಿಗ್ನ] ಖಿನ್ನ, ಉದ್ವಿಗ್ನ, ಕಷ್ಟಕ್ಕೊಳಗಾದ (ಪಾಅ) ಆಶ್ಚರ್ಯ

ಆಇಗ್ಘ. ಸಕ: [ಆ+ಘ್ರಾ] ಮೂಸು **'ಆಇಗ್ಘಇ'**

ಆಇಚ್ಚ. ಅ: [ದೇ] ಯಾವಾಗಲೋ ಒಮ್ಮೆ, ಯಾವುದೋ ಒಂದು ಸಮಯದಲ್ಲಿ(ಪಣ್ಣ)

ಆಇಚ್ಚ. ಪು: [ಆದಿತ್ಯ] ಸೂರ್ಯ, ರವಿ, ಲೋಕಾಂತಿಕ ದೇವ–ವಿಶೇಷ(ಣಾಯಯಾ), ದೇವ–ವಿಮಾನ, **ಪು:** ಅಲ್ಲಿ ವಾಸಿಸುವ ದೇವ, **ವಿ:** ಆದ್ಯ, ಪ್ರಥಮ, ಸೂರ್ಯನಿಗೆ ಸಂಬಂಧಿಸಿದ, ಆಕಾಶ, ಎಕ್ಕದ ಗಿಡ, ಭಾನುವಾರ, ಹಸ್ತ ನಕ್ಷತ್ರ, **–ಗಇ. ಪು:** [–ಗತಿ] ರಾಕ್ಷಸ ವಂಶದ ಒಬ್ಬ ರಾಜನ ಹೆಸರು, ಅವನಿಂದ ಇಕ್ಷ್ವಾಕು ವಂಶದ ಶಾಖೆಯಾದ ಸೂರ್ಯವಂಶದ ಆವಿರ್ಭಾವವಾಯಿತು. **–ಪಭ.ನ:** [–ಪ್ರಭ] ಈ ಹೆಸರಿನ ಒಂದು ನಗರ, **–ಪೀಢ. ನ:** [–ಪೀಠ] ಭಗವಾನ್ ವೃಷಭದೇವನ ಒಂದು ನೆನಪಿನ ಚಿಹ್ನೆ,–ಪಾದಪೀಠ. **–ರಕ್ಖ. ಪು:** [–ರಕ್ಷ] ಈ ಹೆಸರಿನ ಲಂಕೆಯ ಒಬ್ಬ ರಾಜಪುತ್ರ(ಪಉಮ) **–ರಯ. ಪು:** [–ರಜಸ್] ವಾನರ ವಂಶದ ಒಬ್ಬ ವಿದ್ಯಾಧರ ರಾಜ

ಆಇಜ್ಜ. 'ಆಎಜ್ಜ' ಶಬ್ದವನ್ನು ನೋಡುವುದು

ಆಇಜ್ಜಮಾಣ. ವ.ಕೃ: [ಆದ್ರೀಕ್ರಿಯಮಾಣ] ಒದ್ದೆಮಾಡಲ್ಪಡುತ್ತಿರುವ(ಆಚಾ)

ಆಇಜ್ಜಮಾಣ. 'ಆಢಾ=ಆ+ದ' ಆಇಜ್ಜಮಾಣ

ಆಇಟ್ಠ. ವಿ: [ಆದಿಷ್ಟ] ಅಪ್ಪಣೆ ಮಾಡಲ್ಪಟ್ಟ, ಉಕ್ತ, ಉಪದೇಶಿಸಲ್ಪಟ್ಟ(ಸುರ) ವಿವಕ್ಷಿತ, ಎಂಜಲು, ಆದೇಶವಾಗುವ ವರ್ಣ

ಆಇಟ್ಠ. ವಿ: [ಆವಿಷ್ಟ] ಅಧಿಷ್ಠಿತ, ಆಶ್ರಿತ(ಕಸ), ಹೊಂದಲ್ಪಟ್ಟ, ಆಸಕ್ತ, ವ್ಯಾಪ್ತ, ಭೂತದಆವೇಶವುಳ್ಳ

ಆಇಟ್ಠಿ. ಸ್ತ್ರೀ: [ಆದಿಷ್ಟಿ] ಪರಮಾತ್ಮನಲ್ಲಿ ಮನಸ್ಸನ್ನು ದೃಢವಾಗಿ ನಿಲ್ಲಿಸುವುದು, ವಹಿಸುವುದು, ಮನಸ್ಸಿನಲ್ಲಿ ಗ್ರಹಿಸಿ ನೆನಪಿನಲ್ಲಿಡುವುದು,

ಆಇಡ್ಢಿ. ಸ್ತ್ರೀ: [ಆತ್ಮರ್ದ್ಧಿ] ಆತ್ಮದ ಶಕ್ತಿ, ಆತ್ಮೀಯ ಸಾಮರ್ಥ್ಯ

ಆಇಡ್ಢಿಯ. ವಿ: [ಆಕೃಷ್ಟ] ಎಳೆಯಲ್ಪಟ್ಟ, ಸೆಳೆಯಲ್ಪಟ್ಟ

ಆಇಡ್ಢ್ಯ. ವಿ: [ಆತ್ಮರ್ದ್ಧಿಕ] ಆತ್ಮ ಶಕ್ತಿ ಸಂಪನ್ನ(ಭಗ)
ಆಇಣ್ಣ. 'ಆಇನ್ನ=(ದೇ) ಶಬ್ದವನ್ನು ನೋಡುವುದು
ಆಇತ್ತ. ವಿ: [ಆದೀಪ್ತ] ಪ್ರಕಾಶಗೊಳಿಸಲ್ಪಟ್ಟ, ಬೆಳಗಿಸಲ್ಪಟ್ಟ
ಆಇತ್ತ. ವಿ: [ಆಯತ್ತ] ಅಧೀನ, ವಶಕ್ಕೊಳಪಟ್ಟ, ಪರತಂತ್ರ(ಜೀವಾ)
ಆಇತ್ತು. ವಿ: [ಆದಾತೃ] ಗ್ರಹಿಸುವವನು, ತೆಗೆದುಕೊಳ್ಳುವವನು, ಸ್ವೀಕರಿಸುವವನು(ತಾ)
ಆಇತ್ತೂಣ. 'ಆಇ=ಆ+ದಾ' ಶಬ್ದವನ್ನು ನೋಡುವುದು
ಆಇತ್ಥ. ನ: [ಆತಿಥ್ಯ] ಅತಿಥಿ ಸತ್ಕಾರ
ಆಇದಿ. ಸ್ತ್ರೀ: [ಆಕೃತಿ] ಆಕಾರ(ಸ್ವಪ್ನ) ರೂಪ, ಮೂರ್ತಿ, ದೇಹ
ಆಇದ್ಧ. ವಿ: [ಆವಿದ್ಧ] ಪ್ರೇರಿತ, ಸ್ಪರ್ಶಿಸಲ್ಪಟ್ಟ, ಧರಿಸಲ್ಪಟ್ಟ(ಆಕ), ಕುಟಿಲವಾದ, ಸೊಟ್ಟಾದ, ಕೊರೆಯಲ್ಪಟ್ಟ, ಹೊಡೆಯಲ್ಪಟ್ಟ, ಎಸೆಯಲ್ಪಟ್ಟ
ಆಇದ್ಧ. ವಿ: [ಆದಿಗ್ಧ] ವ್ಯಾಪ್ತ, ಹರಡಲ್ಪಟ್ಟ(ಣಾಯಾ)
ಆಇನ್ನ. ವಿ: [ಆಕೀರ್ಣ] ವ್ಯಾಪ್ತ, ಹರಡಲ್ಪಟ್ಟ, ತುಂಬಿದ(ಸುರ), ಬಟ್ಟೆಯನ್ನು ನೀಡುವ ಕಲ್ಪವೃಕ್ಷ
ಆಇನ್ನ. ವಿ: [ಆಚೀರ್ಣ] ಆಚರಿಸಲ್ಪಟ್ಟ, ಮಾಡಲ್ಪಟ್ಟ, ಹೇಳಲ್ಪಟ್ಟ, ಶಾಸ್ತ್ರದಲ್ಲಿ ಉಕ್ತವಾದ(ಆಚಾ)
ಆಇನ್ನ. ವಿ: [ಆದೀರ್ಣ] ಉದ್ವಿಗ್ನ, ಖಿನ್ನ(ಸುಪಾ)
ಆಇನ್ನ. ಪು: [ದೇ] ಜಾತಿಕುದುರೆ, ಶ್ರೇಷ್ಠ ತಳಿಯ ಕುದುರೆ(ಪಣ್ಣ)
ಆಇಪ್ಪಣ. ನ: [ದೇ] ಹಿಟ್ಟು, ಮನೆಗೆ ಮಂಗಳವುಂಟು ಮಾಡಲು ಮಾಡುವ ಸುಣ್ಣ–ಬಣ್ಣ, ಅಕ್ಕಿಯ ಹಿಟ್ಟಿನ ಹಾಲು, ಮನೆಯ ಅಲಂಕಾರ, ಸಜ್ಜುಗೊಳಿಸುವುದು(ದೇ)
ಆಇಯ.(ಅಪ) ವಿ: [ಆಯಾತ] ಬಂದಿರುವ(ಭವಿ), ಆಗಮನ, ಆಧಿಕ್ಯ
ಆಇಯ. ವಿ: [ಆಚಿತ] ಸಂಗ್ರಹಿತ, ಒಟ್ಟುಗೂಡಿಸಲ್ಪಟ್ಟ, ವ್ಯಾಪ್ತ, ತುಂಬಿರುವ, ಸಂಗ್ರಹಿಸಲ್ಪಟ್ಟ, ಕಟ್ಟಲ್ಪಟ್ಟ, ಜೋಡಿಸಲ್ಪಟ್ಟ(ಕಪ್ಪ)
ಆಇಯ. ವಿ: [ಆದೃತ] ಆದರಿಸಲ್ಪಟ್ಟ, ಗೌರವಿಸಲ್ಪಟ್ಟ (ಕಪ್ಪ)
ಆಇಯಣ. ನ: [ಆದಾನ] ತೆಗೆದುಕೊಳ್ಳುವುದು, ಸ್ವೀಕರಿಸುವುದು(ತಾ)
ಆಇರಿಯ. 'ಆಯರಿಯ=ಆಚಾರ್ಯ' ಶಬ್ದವನ್ನು ನೋಡುವುದು

ಆಇಲ. ವಿ: [ಆವಿಲ] ಮಲಿನವಾದ, ಕಲುಷಿತವಾದ, ಕೊಳಕಾದ, ಮಲಿನ, ದೂಷಿತವಾದ(ಪಣ್ಣ) ಅಶುದ್ಧವಾದ
ಆಇಲ್ಲ.} ವಿ: [ಆದಿಮ] ಪ್ರಥಮ, ಮೊದಲನೆಯ
ಆಇಲ್ಲಿಯ}. (ಸಮ), ಮೊದಲು ಹುಟ್ಟಿದ
ಆಇವಾಹಿಅ. ಪು: [ಆತಿವಾಹಿಕ] ನಿಧನ ಹೊಂದಿದ ಜೀವವನ್ನು ಇನ್ನೊಂದು ಜನ್ಮಕ್ಕೆ ಕೊಂಡೊಯ್ಯಲು ನಿಯುಕ್ತನಾದ ದೇವ–ವಿಶೇಷ(ಅಚ್ಚು)
ಆಇಸ. ಸಕ: [ಆ+ದಿಶ್] ಆದೇಶಿಸು, ಆಜ್ಞೆ ಚಲಾಯಿಸು, ಉಪದೇಶಿಸು(ವುದು, ಸಲಹೆಮಾಡು, 'ಆಇಸಹ'
ಆಇಸಣ. ವಿ: [ದೇ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ(ದೇ)
ಆಈಣ. ವಿ: [ಆದೀನ] ಅತಿದೀನ, ಬಹಳ ಬಡವ ನ: ದೂಷಿತ ಭಿಕ್ಷೆ, (ಸೂಅ)
ಆಈಣ. ಪು: [ದೇ] ಜಾತಿ ಕುದುರೆ, ಶ್ರೇಷ್ಠ ತಳಿಯ ಕುದುರೆ(ಣಾಯಾ)
ಆಈಣ}. ನ: [ಆಜಿನ, –ಕ] ಚರ್ಮದಿಂದ ಮಾಡಿದ
ಆಈಣಗ.} ವಸ್ತ್ರ(ಣಾಯಾ), **ಪು:** ಒಂದು ದ್ವೀಪ, ಸಮುದ್ರ, (ಜೀವ). **–ಭದ್ದ. ಪು: [–ಭದ್ರ]** ಆಜಿನ ದ್ವೀಪದ ಅಧಿಷ್ಠಾತೃ ದೇವ(ಜೀವ), **– ಮಹಾಭದ್ದ. ಪು: [–ಮಹಾಭದ್ರ]** ಹಿಂದೆ ಹೇಳಿದ ಅರ್ಥ ನೋಡುವುದು, **–ಮಹಾವರ. ಪು: [–ಮಹಾವರ]** ಆಜಿನ ಮತ್ತು ಆಜಿನವರ ಎಂಬ ಹೆಸರಿನ ಸಮುದ್ರದ ಅಧಿಷ್ಠಾತೃ ದೇವ(ಜೀವ), **–ವರ. ಪು: [–ವರ]** ದ್ವೀಪ–ವಿಶೇಷ, ಸಮುದ್ರ–ವಿಶೇಷ, ಆಜಿನ ಮತ್ತು ಆಜಿವರ ಸಮುದ್ರದ ಅಧಿಷ್ಠಾತೃ ದೇವ, **–ವರಭದ್ದ. ಪು: [–ವರಭದ್ರ]** ಆಜಿನವರ ದ್ವೀಪ ಮತ್ತು ಅಧಿಷ್ಠಾತೃ ದೇವ(ಜೀವ)– **ವರಮಹಾಭದ್ದ. ಪು: [–ವರಮಹಾಭದ್ರ]** ಅನಂತರ ಹೇಳಿರುವ ಅರ್ಥವನ್ನು ನೋಡುವುದು. **–ವರೋಭಾಸ. ಪು: [–ವರಾವಭಾಸ]** ಒಂದು ದ್ವೀಪ, ಸಮುದ್ರ–ವಿಶೇಷ, **–ವರೋಭಾಸಭದ್ದ. ಪು: [–ವರಾವಭಾಸಭದ್ರ]** ಮೇಲೆ ಹೇಳಿದ ಅಧಿಷ್ಠಾತೃ ದೇವ, **–ವರಾವಭಾಸಮಹಾಭದ್ದ. ಪು: [–ವರಾವಭಾಸಮಹಾಭದ್ರ]** ಹಿಂದೆ ಹೇಳಿದ ಅರ್ಥವನ್ನೇ ನೋಡುವುದು(ಜೀವ), **–ವರೋಭಾಸಮಹಾವರ. ಪು: [–ವರಾವಭಾಸಮಹಾವರ]** ಆಜಿನ ವರಾವಭಾಸ

ಎಂಬ ಹೆಸರಿನ ಸಮುದ್ರದ ಅಧಿಷ್ಠಾತೃ ದೇವ. **–ವರೋಭಾಸವರ.** [**–ವರಾವಭಾಸವರ**] ಅನಂತರ ನೀಡಿದ ಅರ್ಥವನ್ನು ನೋಡುವುದು (ಜೀವ)

ಆಈನೀಇ. ಸ್ತ್ರೀ: [**ಆದಿನೀತಿ**] ಮೊದಲ ರಾಜನೀತಿಯಾದ ಸಾಮೋಪಾಯ.(ಸುಪಾ)

ಆಈಯ. '**ಆಇ=ಆದಿ**' ಶಬ್ದವನ್ನು ನೋಡುವುದು

ಆಈಯ. ವಿ: [**ಆತೀತ**] ವಿಶೇಷವಾಗಿ ತಿಳಿದ, ಸಂಸಾರವನ್ನು ಹೊಂದಿದ, ಸಂಸಾರದಲ್ಲಿ ತಿರಿಯುತ್ತಿರುವ (ಆಚಾ)

ಆಈಲ. ಪುಂ.ನ: [**ಆಚೀಲ**] ತಾಂಬೂಲವನ್ನು ಉಗುಳುವುದು

ಆಈವ. ಅಕ: [**ಆ+ದೀಪ್**] ಹೊಳೆ –'**ಆಈವಮಾಣ**'

ಆಈಸರ. ಪು: [**ಆದೀಶ್ವರ**] ಭಗವಾನ್ ಋಷಭದೇವ

ಆಉ. ಸ್ತ್ರೀ: [**ದೇ**] ನೀರು(ದೇ)ಈ ಹೆಸರಿನ ನಕ್ಷತ್ರದ ದೇವ(ತಾ), **–ಕಾಯ., –ಕ್ಕಾಯ.** ಪು: [**–ಕಾಯ**] ಜಲದ ಜೀವಿ(ಉಪ). **–ಕಾಇಯ, –ಕ್ಕಾಇಯ.** ಪು: [**–ಕಾಯಿಕ**] ನೀರಿನ ಜೀವಿ, **–ಜೀವ.** ಪು: [**–ಜೀವ**] ನೀರಿನ ಜೀವಿ(ಸೂಅ), **–ಬಹುಲ.** ವಿ: [**–ಬಹುಲ**] ನೀರಿನ ಸಮೃದ್ಧಿ, ರತ್ನಪ್ರಭಾ ಪೃಥ್ವಿಯ ಮೂರನೇ ಕಾಂಡ(ಸಮ)

ಆಉ. ಅ: [**ದೇ**] ಅಥವಾ

ಆಉ.} ನ: [**ಆಯುಷ್**] ಆಯು, ಜೀವಿತ–ಕಾಲ,
ಆಉಅ}. (ಕುಮಾ), ವಯಸ್ಸು, ಆಯುಸ್ಸಿಗೆ ಕಾರಣ ಭೂತವಾದ ಕರ್ಮ–ಪುದ್‌ಗಲ(ತಾ), **–ಕ್ಕಾಲ.** ಪು: [**–ಕಾಲ**] ಮರಣ, ಸಾವು. **–ಕ್ಖಯ.** ಪು: [**–ಕ್ಷಯ**] ಮರಣ, ಸಾವು(ವಿಪಾ), **–ಕ್ಖೇಮ.** ನ: [**–ಕ್ಷೇಮ**] ಆಯುಷ್ಯ ಪಾಲನೆ, ಜೀವನ, **–ವಿಜ್ಜಾ.** ಸ್ತ್ರೀ: [**–ವಿದ್ಯಾ**] ವೈದ್ಯಶಾಸ್ತ್ರ, ಚಿಕಿತ್ಸಾಶಾಸ್ತ್ರ(ಆವ). **–ವ್ವೇಯ.** ಪು:[**–ವೇದ**] ವೈದ್ಯ, ಚಿಕಿತ್ಸಾಶಾಸ್ತ್ರ(ವಿಪಾ)

ಆಉಂಚ. ಸಕ: [**ಆ+ಕುಂಚಯ್**] ಸಂಕುಚಿತಗೊಳಿಸು, ಅಡಕಮಾಡಿಕೊಳ್ಳು, ಎಳೆದುಕೊಳ್ಳು

ಆಉಂಚಣ. ನ: [**ಆಕುಂಚನ**] ಸಂಕೋಚ, ಅಡಕಮಾಡಿಕೊಳ್ಳವುದು, ಎಳೆದುಕೊಳ್ಳುವುದು

ಆಉಂಚಣಾ. ಸ್ತ್ರೀ: [**ಆಕುಂಚನಾ**] ಮೇಲಿನ ಶಬ್ದವನ್ನು ನೋಡುವುದು

ಆಉಂಚಿಅ. ವಿ: [**ಆಕುಂಚಿತ**] ಸಂಕುಚಿತ, ಅಡಕಮಾಡಿಕೊಳ್ಳಲಾದ,ಎಳೆದುಕೊಳ್ಳಲಾದ(ಸೇ)

ಆಉಂಜಿ. ವಿ: [**ಆಕುಂಚಿನ್**] ಸಂಕೋಚ ಮಾಡಿಕೊಳ್ಳುವ, ಅಡಕಮಾಡಿಕೊಳ್ಳುವ, ನಿಶ್ಚಲ

ಆಉಂಟ '**ಆಉಟ್ಟ=ಅ+ವರ್ತ್ತಯ್**' ಶಬ್ದವನ್ನು ನೋಡುವುದು

ಆಉಂಟ. ಸಕ: [**ಆ+ಕುಂಚ್**] ಸಂಕುಚಿತವಾಗು, ಅಡಕವಾಗು,

ಆಉಂಟಣ. ನ: [**ಆಕುಂಟನ**] ಅಡಕವಾಡಿ ಕೊಳ್ಳುವುದು, ಸಂಕುಚಿತಗೊಳಿಸುವುದು, ಬಗ್ಗಿಸುವುದು, ಬಿಡುವುದು

ಆಉಂಬಾಲಿಯ. ವಿ: [**ದೇ**] ನೀರಿನ ಪ್ರವಾಹದಲ್ಲಿ ಮುಳುಗಿಸಲ್ಪಟ್ಟ, ನೀರು ಮೊದಲಾದ ದ್ರವ ಪದಾರ್ಥದಿಂದ ಆವರಿಸಲ್ಪಟ್ಟ(ಪಾಅ)

ಆಉಕ್ಕ}, '**ಆಉ=ಆಯುಷ್**' ಶಬ್ದವನ್ನು
ಆಉಗ.}. ನೋಡುವುದು(ಸುಪಾ)

ಆಉಚ್ಛ. ಸಕ: [**ಆ+ಪ್ರಚ್ಛ್**] ಅಪ್ಪಣೆ ಪಡೆ, ಅನುಮತಿ ಪಡೆ, ಕುಶಲ ಪ್ರಶ್ನೆ ಮಾಡುವ. ಕೃ–'**ಆಉಚ್ಛಂತ**'

ಆಉಚ್ಛಣ. ನ: [**ಆಪ್ರಚ್ಛನ**] ಅಪ್ಪಣೆ ಪಡೆಯುವುದು, ಅನುಮತಿ ಪಡೆಯುವುದು, ಕುಶಲ ಪ್ರಶ್ನೆ ಕೇಳುವುದು

ಆಉಚ್ಛಣಾ. ಸ್ತ್ರೀ: [**ಆಪ್ರಚ್ಛನಾ**] ಪ್ರಶ್ನೆ

ಆಉಚ್ಛಾ. ಸ್ತ್ರೀ: [**ಆಪೃಚ್ಛಾ**] ಆಜ್ಞೆ, ಆದೇಶ

ಆಉಚ್ಛಿಯ. ವಿ: [**ಆಪೃಷ್ಟ**] ಯಾರಿಂದ ಆಜ್ಞೆ, ಅನುಮತಿ ಪಡೆಯಲಾಗಿದೆಯೋ ಅವನು(ಸೇ)

ಆಉಜ್ಜ. '**ಆಓಜ್ಜ=ಆತೋದ್ಯ**' ಶಬ್ದವನ್ನು ನೋಡುವುದು

ಆಉಜ್ಜ. ಪು: [**ಆವರ್ಜ**] ಎದುರಾಗುವುದು, ಶುಭಕಾಯ(ಪಣ್ಣ), ಬಗ್ಗಿಸುವುದು, ತ್ಯಜಿಸುವುದು

ಆಉಜ್ಜ. ವಿ: [**ಆವರ್ಜ್ಯ**] ಎದುರಾಗಿಸಲು ಯೋಗ್ಯನಾದ(ಆವಮ)

ಆಉಜ್ಜ. ವಿ: [**ಆಯೋಜ್ಯ**] ಕೂಡಿಸಲು ಯೋಗ್ಯವಾದ, ಸಂಬಂಧ ಸ್ಥಾಪಿಸಲು ಅರ್ಹವಾದ(ವಿಸೇ)

ಆಉಜ್ಜಿಯ. ಉ: [**ಆತೋದ್ಯಿಕ**] ವಾದ್ಯವನ್ನು ಬಾರಿಸುವವನು

ಆಉಜ್ಜಿಯ. ವಿ: [**ಆಯೋಗಿಕ**] ಉಪಯೋಗಕ್ಕೆ ಬರುವ, ಎಚ್ಚರಿಕೆ(ಭಗ)

ಆಉಜ್ಜಿಯ. ವಿ: [**ಆವರ್ಜಿತ**] ಎದುರುಗಡೆ ಬರುವಂತೆ ಮಾಡಲಾದ(ಪಣ್ಣ) ಬಗ್ಗಿಸಲ್ಪಟ್ಟ, ದಾನಮಾಡಲ್ಪಟ್ಟ,

ಆಉಜ್ಜಿಯಾ. ಸ್ತ್ರೀ: [ಆವರ್ಜಿಕಾ] ಕ್ರಿಯೆ, ವ್ಯಾಪಾರ (ಆವಮ),-ಕರಣ. ನ: [-ಕರಣ] ಶುಭ ವ್ಯಾಪಾರ

ಆಉಜ್ಜೀಕರಣ. ನ: [ಆವರ್ಜೀಕರಣ] ಶುಭವ್ಯಾಪಾರ-ವಿಶೇಷ(ಪಣ್ಣ)

ಆಉಟ್ಟ. ಸಕ: [ಆ+ವೃತ್] ಮಾಡು, ಮರೆಯುವಂತೆ ಮಾಡು, ವ್ಯವಸ್ಥೆಗೊಳಿಸು, ಅಕ:ಎದುರಾಗು, ಆಸಕ್ತನಾಗು, ಹಿಂತಿರುಗು, ಸುತ್ತುತ್ತಿರು, 'ಆಉಟ್ಟಇ' (ಭಗ)

ಆಉಟ್ಟ. ಸಕ: [ಆ+ಕುಟ್ಟ್] ತೂತು ಮಾಡು, ಹಿಂಸಿಸು 'ಆಉಟ್ಟಾಮೋ'(ಆಚಾ)

ಆಉಟ್ಟ. ವಿ: [ಆವೃತ್ತ] ಹಿಂತಿರುಗಿದ, ತಿರುಗಿಸಲ್ಪಟ್ಟ (ಉಪ), ಮರೆಸಲ್ಪಟ್ಟ, ಸರಿಯಾಗಿ ವ್ಯವಸ್ಥೆಗೊಳಿಸಲಾದ(ಆಚಾ), ಮಾಡಲ್ಪಟ್ಟ, ವಿಧಿಸಲ್ಪಟ್ಟ, ಹೇಳಲ್ಪಟ್ಟ

ಆಉಟ್ಟ.} ವಿ: [ಆದೃತ] ಆದರದಿಂದ ಕೂಡಿದ
ಆಉಟ್ಟಅ.}

ಆಉಟ್ಟ. ಪು: [ಆಕುಟ್ಟ] ತುಂಡುಮಾಡುವುದು, ಕತ್ತರಿಸುವುದು, ಹಿಂಸೆ

ಆಉಟ್ಟಣ. ನ: [ಆಕುಟ್ಟನ] ಹಿಂಸೆ(ಸೂಅ)

ಆಉಟ್ಟಣ. ನ: [ಆವರ್ತನ] ಆರಾಧನೆ, ಸೇವೆ ಭಕ್ತಿ, ಎದುರಾಗುವುದು, ತೊಡಗುವುದು, ಅಭಿಲಾಷೆ, ಇಚ್ಛೆ(ಆಚಾ), ತಿರುಗಿಸುವುದು, ಹಿಂತಿರುಗುವುದು, (ಸೂಅ), ಮಾಡುವುದು, ಮತ್ತೆ ಮತ್ತೆ ಮಾಡುವ ಕ್ರಿಯೆ

ಆಉಟ್ಟಣಯಾ. ಸ್ತ್ರೀ: [ಆವರ್ತನತಾ] ಅಪಾಯಜ್ಞಾನ

ಆಉಟ್ಟಾವಣ. ನ: [ಆವರ್ತನ] ಎದುರು ನಿಲ್ಲಿಸುವುದು, ಆಸಕ್ತನಾಗುವುದು, ತೊಡಗುವುದು(ಆಚಾ)

ಆಉಟ್ಟಿ. ಸ್ತ್ರೀ: [ಆಕುಟ್ಟಿ] ಹಿಂಸೆ, ಹೊಡೆಯುವುದು (ಆಚ), ನಿರ್ದಯೆ(ಆಪ)

ಆಉಟ್ಟಿ. ಸ್ತ್ರೀ: [ಆವೃತ್ತಿ] **'ಆಉಟ್ಟಣ=ಆವರ್ತನ'** ಶಬ್ದವನ್ನು ನೋಡುವುದು

ಆಉಟ್ಟಿ. ವಿ: [ಆಕುಟ್ಟಿನ್] ಹೊಡೆಯುವವನು, ಹಿಂಸಕ, ಮಾಡಬಾರದ್ದನ್ನು ಮಾಡುವವನು(ದಸಾ)

ಆಉಟ್ಟಿ. ವಿ: [ದೇ] ಮೂರೂವರೆ

ಅಉಟ್ಟಿಮ. ವಿ: [ಆಕುಟ್ಟಯ] ಕುಟ್ಟಿ ಕೂಡಿಸಲರ್ಹವಾದ

ಆಉಟ್ಟಿಯ. **'ಆಉಟ್ಟ=ಆವೃತ್ತ'** ಶಬ್ದವನ್ನು ನೋಡುವುದು

ಆಉಟ್ಟಿಯ. ಪು: [ಆಕುಟ್ಟಿಕ] ಒಂದು ದಂಡ-ವಿಶೇಷ

ಆಉಟ್ಟಿಯ. ವಿ: [ಆಕುಟ್ಟಿತ] ಕತ್ತರಿಸಲ್ಪಟ್ಟ, ಪ್ರತ್ಯೇಕಿಸಲ್ಪಟ್ಟ, ಸೀಳಲ್ಪಟ್ಟ

ಆಉಟ್ಟಿಯಾ. ಸ್ತ್ರೀ: [ಆಕುಟ್ಟಿಕಾ] ಹತ್ತಿರ ಬಂದು ಮಾಡುವುದು

ಆಉಟ್ಠ. ವಿ: [ಆತುಷ್ಟ] ಸಂತುಷ್ಟ(ನಿಚೂ)

ಆಉಡ. ಸಕ: [ಆ+ಜೋಡಯ್] ಜೋಡಿಸು, ಸೇರಿಸು

ಆಉಡ. ಸಕ: [ಆ+ಕುಟ್] ಹೊಡೆ, ದಂಡಿಸು, **'ಆಉಡೇಇ'**

ಆಉಡ. ಸಕ: [ಲಿಖ್] ಬರೆ

ಆಉಡಿಯ. ವಿ: [ಆಕುಟಿತ] ಹೊಡೆಯಲ್ಪಟ್ಟ, ಪೀಡಿಸಲ್ಪಟ್ಟ, ದಂಡಿಸಲ್ಪಟ್ಟ

ಆಉಡ್ಡ. ಅಕ: [ಮಸ್ಜ್] ಸ್ನಾನಮಾಡು, ಮುಳುಗು 'ಆಉಡ್ಡಇ'

ಆಉಡ್ಡಿಅ. ವಿ: [ಮಗ್ನ] ಮುಳುಗಿಬಿಟ್ಟಿರುವ, ತಲ್ಲೀನನಾದ(ಕುಮಾ)

ಆಉಣ್ಣ. ವಿ: [ಆಪೂರ್ಣ] ಚೆನ್ನಾಗಿ ತುಂಬಲ್ಪಟ್ಟ, ಭರ್ತಿಮಾಡಲಾದ, ವ್ಯಾಪಿಸಲ್ಪಟ್ಟ(ಪಉಮ)

ಆಉತ್ತ. ವಿ: [ಆಯುಕ್ತ] ಪ್ರಯೋಜನವಿರುವ, ಎಚ್ಚರಿಕೆಯುಳ್ಳ(ಕಪ್ಪ) ಕ್ರಿ. ವಿ: ಉಪಯೋಗ ಪೂರ್ವಕ ನ: ಮಲವಿಸರ್ಜನೆ, ಪು: ಅಧಿಕೃತವಾಗಿ ನೇಮಕಗೊಂಡ ಹಳ್ಳಿಯ ಮುಖ್ಯಸ್ಥ(ದೇ)

ಆಉತ್ತ. ವಿ: [ಆಗುಪ್ತ] ಸಂಕ್ಷಿಪ್ತ(ಠಾ), ಅಂಕೆಯಲ್ಲಿಡಲ್ಪಟ್ಟ,

ಆಉತ್ಥ. ವಿ: [ಆತ್ಮೋತ್ಥ] ತಾನು ಮಾಡಿದ

ಆಉರ. ವಿ: [ಆತುರ] ರೋಗಿ, ತವಕ ಪಡುವವನು, ಆತುರಗೊಂಡಿರುವವನು, ದುಃಖ ಗೊಂಡಿರುವವನು, ಪೀಡಿಸಲ್ಪಟ್ಟವನು(ಪ್ರಾಸೂ)

ಆಉರ. ನ: [ದೇ] ಯುದ್ಧ, ಬಹಳ, ಬಿಸಿಯಾದ(ದೇ)

ಆಉರಿಯ. ವಿ: [ಆತುರಿತ] ದುಃಖಿತ, ಪೀಡಿಸಲ್ಪಟ್ಟ (ಆಚಾ)

ಆಉಲ. ವಿ: [ಆಕುಲ] ವ್ಯಾಪ್ತ,ಹರಡಿದ(ಔಪ), ವ್ಯಗ್ರ, ವ್ಯಾಕುಲಗೊಂಡ, ಸಂಕೀರ್ಣ, ಪು: **ಸಮೂಹ**

ಆಉಲ. ಸಕ: [ಆಕುಲಯ್] ಹರಡು, ವ್ಯಾಕುಲಗೊಳಿಸು, ದುಃಖಿತಗೊಳಿಸು, ಸಂಕೀರ್ಣಗೊಳಿಸು, ಪ್ರಚುರಗೊಳಿಸು

ಆಉಲಿ. ಸ್ತ್ರೀ: [ಆತುಲಿ] ಒಂದು ಮರ(ದೇ)

ಆಉಲಿಅ. ವಿ: [ಆಕುಲಿತ]ವ್ಯಥೆಗೀಡುಮಾಡಲ್ಪಟ್ಟ(ಗಾ)

ಆಉಲೀಕರ. ಸಕ: [ಆಕುಲೀ+ಕೃ] ['ಆಉಲ=ಆಕುಲ್ಯ] ಶಬ್ದವನ್ನು ನೋಡುವುದು

ಆಉಲೀಭೂಅ. ವಿ: [ಆಕುಲೀಭೂತ] ಗಾಬರಿಗೊಳಿಸಲಾದ(ಸುರ)

ಆಉಲ್ಲಯ. ನ: [ದೇ] ಹಡಗನ್ನು ನಡಸುವ ಮರದ ಹುಟ್ಟು

ಆಉಸ. ಸಕ: [ಆ+ವಸ್] ಇರು, ವಾಸಮಾಡು ವ. ಕೃ: **ಆಉಸಂತ**

ಆಉಸ. ಸಕ: [ಆ+ಕ್ರುಶ್] ಕೋಪಗೊಳ್ಳು, ಶಾಪಕೊಡು, ಕಠಿಣ ಮಾತು ಹೇಳು'ಆಉಸಇ', ಆಉಸೇಜ್ಜ

ಆಉಸ. ಸಕ: [ಆ+ಮೃಶ್] ಸ್ಪರ್ಶಿಸು, ವ. ಕೃ– **'ಆಉಸಂತ'**

ಆಉಸ. ಸಕ: [ಆ+ಜುಷ್] ಸೇವೆಮಾಡು

ಆಉಸ. ನ: [ದೇ] ಕುಂಚ,(ದೇ),

ಆಉಸ. **'ಆಉ=ಆಯುಷ'** ಶಬ್ದವನ್ನು ನೋಡುವುದು

ಆಉಸ}. ವಿ: [**ಆಯುಷ್ಮತ್**] ದೀರ್ಘಾಯಸ್ಸುಳ್ಳ, ಹೆಚ್ಚು

ಆಉಸಂತ}. ವಯಸ್ಸಾದ ವೃದ್ಧ(ಆಚಾ), ವಿಷ್ಕಂಭಾದಿ ಯೋಗಗಳಲ್ಲೊಂದು

ಆಉಸಣಾ. ಸ್ತ್ರೀ: [ಆಕ್ರೋಶನಾ] ಶಾಪ, ಬೈಗಳು, ಕೂಗಾಟ(ಣಾಯಾ)

ಆಉಸ್ಸ. **'ಆಉಸ=ಆ+ಕ್ರುಶ್'** ಶಬ್ದವನ್ನು ನೋಡುವುದು. 'ಆಉಸ್ಸತಿ'

ಆಉಸ್ಸ. ಪು: [**ಆಕ್ರೋಶ**] ಕೆಟ್ಟಮಾತು, ಅಸಭ್ಯ ಮಾತು

ಆಉಸ್ಸಿಯ. ವಿ: [ಆವಶ್ಯಕ] ಅಗತ್ಯ, ಅನಿವಾರ್ಯ, ಅಗತ್ಯವಾಗಿ ಮಾಡಬೇಕಾದ. ಕ್ರಿ.ವಿ: ಅಗತ್ಯವಾಗಿ ಬೇಕಾದ–**ಕರಣ.** ನ: [–ಕರಣ] ಮನ, ವಚನ ಮತ್ತು ಕಾಯ–ಇವುಗಳ ಶುಭ ವ್ಯಾಪಾರಮೋಕ್ಷಕ್ಕಾಗಿ ಪ್ರಯತ್ನ(ಪಣ್ಣ)

ಆಉಹ. ನ: [**ಆಯುಧ**] ಶಸ್ತ್ರ, ಅಸ್ತ್ರ(ಕುಮಾ), ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು, –**ಘರ.** ನ: [–ಗೃಹ] ಶಸ್ತ್ರಗಳನ್ನಿಡುವ ಕೋಠಿ, ಆಯುಧಾಗಾರ,–**ಘರಸಾಲಾ.**ಸ್ತ್ರೀ: [–ಗೃಹಶಾಲಾ] ಆಮೇಲೆ ಹೇಳರುವಅರ್ಥವನ್ನುನೋಡುವುದು. –**ಘರಿಯ.** ವಿ: [–ಗೃಹಿಕ] ಆಯುಧಾಗಾರದ ಅಧ್ಯಕ್ಷ,– ಪ್ರದಾನ ಕೆಲಸಗಾರ. **ಆಉಹಾಗಾರ.** ನ: [ಆಯುಧಾಗಾರ] ಶಸ್ತ್ರಗಳನ್ನಿಡುವ ಕೊಠಡಿ (ಔಪ)

ಆಉಹಿ. ವಿ: [ಆಯುಧಿನ್] ಶಸ್ತ್ರವನ್ನು ಹಿಡಿದಿರುವ ಯೋಧ(ವಿಸೇ)

ಆಊಡ. ಅಕ: [ದೇ] ಜೂಜಿನಲ್ಲಿ ಪಣ ಒಡ್ಡು, ಪ್ರತಿಜ್ಞೆ ಮಾಡು 'ಆಊಡಇ'

ಆಊಡಿಯ. ನ: [ದೇ] ಜೂಜಿನ ಪಣ, ಜೂಜಿನಲ್ಲಿ ಮಾಡುವ ಪ್ರತಿಜ್ಞೆ

ಆಊರ. ಸಕ: [ಆ+ಪೂರಯ್] ಭರ್ತಿಮಾಡುವುದು, ತುಂಬಿಸುವುದು, ಪೂರ್ಣವಾಗಿ ತುಂಬುವುದು 'ಆಊರೇಇ'(ಮಹಾ)

ಆಊರಿಯ. ವಿ: [ಆಪೂರಿತ] ಭರ್ತಿ ಮಾಡಲ್ಪಟ್ಟ, ತುಂಬಿಸಲಾದ, ಹರಡಲ್ಪಟ(ಸುರ)

ಆಊಸಿಯ. ವಿ: [ಆಯೂಷಿತ] ಪ್ರವೇಶಿಸಿದ. ಒಳಕ್ಕೆ ಹೋದ, ಕುಗ್ಗಿರುವ, ಕಡಿಮೆಯಾಗಿರುವ

ಆಏಜ್ಜ. ವಿ: [ಆದೇಯ] ಗ್ರಹಿಸಲು ಅರ್ಹವಾದ, ಸ್ವೀಕರಿಸಲು ಅರ್ಹವಾದ. –**ಣಾಮ,** –**ನಾಮ.** ನ: [–ನಾಮನ್] ಒಂದು ಬಗೆಯ ಕರ್ಮ–ವಿಶೇಷ, ಅದು ಹುಟ್ಟಿದ್ದರ ಪರಿಣಾಮವಾಗಿ ಯಾರದ್ದೇ ಯಾವುದೇ ಮಾತು ಗ್ರಾಹ್ಯವೆಂದು ಮಾನ್ಯಮಾಡಲ್ಪಡುತ್ತದೆ(ಸಮ)

ಆಏಸ. ವಿ: [ಐಷ್ಯತ್] ಮುಂದೆ ಆಗುವ, ಭವಿಷ್ಯದಲ್ಲಿ ಆಗಲಿರುವ

ಆಏಸ. 'ಆವೇಸ' ಶಬ್ದವನ್ನು ನೋಡುವುದು

ಆಏಸ. ಪು: [ಆದೇಶ] ಅಪೇಕ್ಷೆ, ಪ್ರಕಾರ, ರೀತಿ,

ಆಏಸ.} ಪು: [ಆದೇಶ] ಆಜ್ಞೆ, ಉಪದೇಶ, ಅತಿಥಿ

ಆಏಸಗಮ.} (ಸೂಅ) ಸಮ್ಮತಿ, ಒಪ್ಪಿಗೆ,ಸಲಹೆ, ಭೇದ, ನಿರ್ದೇಶ, ಪ್ರಮಾಣ, ಇಚ್ಛೆ, 'ಆಏಸಿ' ಶಬ್ದವನ್ನು ನೋಡುವುದು. ಉದಾಹರಣೆ, ಸೂತ್ರ, ಗ್ರಂಥ, ಶಾಸ್ತ್ರ(ವಿಸೇ), ಆರೋಪ, ಶಿಷ್ಟ ಸಮ್ಮತ. ಒಂದು ವರ್ಣ ಅಥವಾ ಧಾತುವಿನ ಸ್ಥಾನದಲ್ಲಿ ಮತ್ತೊಂದು ವರ್ಣ ಅಥವಾ ವರ್ಣ ಸಮುದಾಯ ಬರುವುದು

ಆಏಸಣ. ನ: [ಆದೇಶನ] ಮೇಲಿನ ಶಬ್ದವನ್ನು ನೋಡುವುದು

ಆಏಸಣ. ನ: [ಆದೇಶನ, **ಆವೇಶನ**] ಕಬ್ಬಿಣವೇ ಮೊದಲಾದುವುಗಳ ಕಾರ್ಖಾನೆ, ಶಿಲ್ಪಶಾಲೆ

ಆಏಸಿಯ. ವಿ: [ಆದೇಶಿಕ] ಆದೇಶಕ್ಕೆ ಸಂಬಂಧಿಸಿದ, ವಿವಾಹದ ಸಂಬಂಧದಲ್ಲಿ ಔತಣದಲ್ಲಿ

ಉಳಿದಿರುವ ಖಾದ್ಯ ಪದಾರ್ಥ. ಶ್ರಮಣರಿಗೆ ಹಂಚಲು ಆದೇಶ ದೊರೆತಿದೆ, ಆದೇಶ ಮಾಡುವವನು, ಅಭಿಲಾಷಿ, ಇಚ್ಛಿಸುವವನು (ಆಚಾ)ಸಲಹೆಗಾರ, ಉಪದೇಶಕ

ಆಏಸಿಯ. ವಿ: [ಆದಿಷ್ಟ] ಆದೇಶಿಸಲ್ಪಟ್ಟವನು (ಭವಿ)

ಆಓ. ಅ: [ದೇ] ಅಥವಾ

ಆಓಗ. ಪು: [ಆಯೋಗ] ಲಾಭ(ಔಪ), ಅತ್ಯಧಿಕ ಬಡ್ಡಿಗೆ ಸಾಲ ತೆಗೆದುಕೊಳ್ಳುವುದು(ಭಗ), ಪರಿಕರ, ಹಣ ಸಂಪಾದನೆಯ ಸಾಧನ

ಆಓಗ್ಗ.ಪು: [ಆಯೋಗ್ಯ] ಪರಿಕರ, ಸರಂಜಾಮು(ಔಪ)

ಆಓಜ್ಜ. ಪುಂ. ನ: [ಆಯೋಗ್ಯ] ವಾದ್ಯ(ಮಹಾ)

ಆಓಜ್ಜ. ವಿ: [ಆಯೋಜ್ಯ] ಸೇರಿಸಲು ಅರ್ಹವಾದ್ದು, ಜೋಡಿಸಲು ಯೋಗ್ಯವಾದ್ದು(ವಿಸೇ)

ಆಓಡ. ಸಕ: [ಆ+ಖೋಟಯ್] ಪ್ರವೇಶ ಮಾಡಿಸು, ತುರುಕು, 'ಆಓಡಾವೇಂತಿ'

ಆಓಡಣ. ನ: [ಆಕೋಲನ] ದೃಢಗೊಳಿಸು, ಬಲಿಷ್ಠಗೊಳಿಸು(ಸೇ)

ಆಓಡಿಅ. ವಿ: [ದೇ] ಹೊಡೆಯಲ್ಪಟ್ಟ(ಸೇ)

ಆಓಧ. ಅಕ: [ಆ+ಯುಧ್] ಯುದ್ಧಮಾಡು, ಹೋರಾಡು. 'ಆಓಧೇಹಿ'

ಆಓಸ. ಸಕ: [ಆ+ಕ್ರುಶ್,ಕ್ರೋಶಯ್] ಕೋಪಿಸಿಕೊಳ್ಳು, ಶಾಪಕೊಡು, ಕೂಗಾಡು, ಆಕ್ಷೇಪಿಸು

ಆಓಸ. ಪು: [ದೇ] ಪ್ರದೋಷ ಸಮಯ, ರಾತ್ರಿಯ ಮೊದಲ ಭಾಗ, ಸಂಧ್ಯಾಕಾಲ

ಆಓಸಣಾ. ಸ್ತ್ರೀ: [ಆಕ್ರೋಶನಾ] ಶಾಪ, ಬೈಗಳು, ತಿರಸ್ಕಾರ(ನಿರ)

ಆಓಹಣ. ನ: [ಆಯೋಧನ] ಯುದ್ಧ, ರಣರಂಗ

ಆಂತ. ವಿ: [ಅಂತ್ಯ] ಅಂತ್ಯದ. ಕೊನೆಯ

ಆಕಂಖ. ಸಕ: [ಆ+ಕಾಂಕ್ಷ್] ಇಷ್ಟಪಡು, ಬಯಸು, ಅಪೇಕ್ಷಿಸು

ಆಕಾಂಖಾ. ಸ್ತ್ರೀ: [ಆಕಾಂಕ್ಷಾ] ಇಚ್ಛೆ, ಬಯಕೆ, ಅಪೇಕ್ಷೆ

ಆಕಂಖಿ. ವಿ: [ಆಕಾಂಕ್ಷಿನ್] ಇಚ್ಛುಕ, ಅಭಿಲಾಷಿ, ಅಪೇಕ್ಷಿಸುವವನು

ಆಕಂದ. ಅಕ: [ಆ+ಕ್ರಂದ್] ಅಳು, ಬಾಯಿತೆಗೆದು ಅಳು. 'ಆಕಂದಾಮಿ'

ಆಕಂದಿಯ. ನ: [ಆಕ್ರಂದಿತ] ರೋದನ, ಅಳುವಿಕೆ, ವಿ: ಆಳುತ್ತಿರುವ ವ್ಯಕ್ತಿ(ದೇ)

ಆಕಂಪ. ಅಕ: [ಆ+ಕಂಪ್] ಸ್ವಲ್ಪ ನಡುಗು, ಆಸಕ್ತಿ ತಾಳು, ಆರಾಧಿಸು

ಆಕಂಪ. ಪು: [ಆಕಂಪ] ಸ್ವಲ್ಪ ನಡುಕ, ಸ್ವಲ್ಪ ಚಲನೆ, ಆರಾಧನ(ವವ), ಕೆಲಸದಲ್ಲಿ ಆಸಕ್ತಿ, ತತ್ಪರತೆ, ಬಗ್ಗಿಸುವುದು, ದಾನ ಮಾಡುವುದು

ಆಕಂಪಿಯ. ವಿ: [ಆಕಂಪಿತ] ಪ್ರಸನ್ನಗೊಳಿಸಲ್ಪಟ್ಟ, ಸಂತೋಷಪಡಿಸಲ್ಪಟ್ಟ

ಆಕಂಪಣ. ನ: [ಆಕಂಪನ] ಮೇಲಿನ ಶಬ್ದವನ್ನು ನೋಡುವುದು

ಆಕಂಪಿಯ. ವಿ: [ಆಕಂಪಿತ] ಸ್ವಲ್ಪ ಕಂಪಿಸಲ್ಪಟ್ಟ, ಸ್ವಲ್ಪ ಚಲಿಸಲ್ಪಟ್ಟ(ಉಫ)

ಆಕಡ್ಢ. ಪು: [ಆಕರ್ಷ] ಎಳೆತ, ಸೆಳೆತ, –ವಿಕಡ್ಢಿ. ಸ್ತ್ರೀ: [–ವಿಕೃಷ್ಟಿ] ಆಕರ್ಷಣೆ, ಸೆಳೆತ(ಭಗ)

ಆಕಡ್ಢಣ. ನ: [ಆಕರ್ಷಣ] ಆಕರ್ಷಣೆ, ಸೆಳೆತ(ನಿಚೂ)

ಆಕಡ್ಢಿಯ. ವಿ: [ದೇ] ಹೊರಹಾಕಲ್ಪಟ್ಟ

ಆಕಣ್ಣಣ. ನ: [ಆಕರ್ಣನ] ಕೇಳುವುದು, ಆಲಿಸುವುದು (ನಾಟ)

ಆಕಣ್ಣಿಯ. ವಿ: [ಆಕರ್ಣಿತ] ಕೇಳಲ್ಪಟ್ಟ, ಆಲಿಸಲ್ಪಟ್ಟ (ಆಚಾ)

ಆಕದಿ. 'ಆಕಿದಿ' ಶಬ್ದವನ್ನು ನೋಡುವುದು

ಆಕಮ್ಹಿಯ. ವಿ: [ಆಕಸ್ಮಿಕ] ಅಕಸ್ಮಾತ್ತಾಗಿ ಅಥವಾ ಅನಿರೀಕ್ಷಿತವಾಗಿ ಉಂಟಾದ, ಕಾರಣವಿಲ್ಲದೆ ಆಗುವ(ವಿಸೇ)

ಆಕರ. ಪು: [ಆಕರ] ಗಣಿ, ಸಮೂಹ, ಚಿನ್ನ ಬೆಳ್ಳಿ ಮೊದಲಾದುವುಗಳ ಉತ್ಪತ್ತಿ ಸ್ಥಾನ(ಕುಮಾ)

ಆಕಸ. 'ಆಗಸ' ಶಬ್ದವನ್ನು ನೋಡುವುದು

ಆಕಾರ. 'ಆಗಾರ' ಶಬ್ದವನ್ನು ನೋಡುವುದು

ಆಕಾಸ. 'ಆಗಾಸ' ಶಬ್ದವನ್ನು ನೋಡುವುದು

ಆಕಾಸಿಯ. ವಿ: [ದೇ] ಪರ್ಯಾಪ್ತ, ಸಾಕಷ್ಟು(ಷಡ್)

ಆಕಿಇ. ಸ್ತ್ರೀ: [ಆಕೃತಿ] ಸ್ವರೂಪ, ಆಕಾರ(ಹೇ)

ಆಕಿಂಚಣ. ನ: [ಆಕಿಂಚನ್ಯ] ನಿಸ್ಪೃಹತೆ, ಸ್ವೀಕರಿಸದಿರುವುದು, (ನ), ದಾರಿದ್ರ್ಯ, ದುರ್ಗತಿ

ಆಕಿಂಚಣಯಾ. ಸ್ತ್ರೀ: [ಆಕಿಂಚನತಾ] ಮೇಲಿನ ಶಬ್ದವನ್ನು ನೋಡುವುದು, ದಾರಿದ್ರ್ಯ, ದುರ್ಗತಿ

ಆಕಿಂಚಣಿಯ}. 'ಆಕಿಂಚಣ' ಶಬ್ದವನ್ನು
ಆಕಿಂಚಣ್ಣ.} ನೋಡುವುದು

ಆಕಿಟ್ಠ. ಸ್ತ್ರೀ: [ಆಕೃಷ್ಟಿ] ಆಕರ್ಷಣೆ
ಆಕಿದಿ. 'ಆಕಿಇ' ಶಬ್ದವನ್ನು ನೋಡುವುದು
ಆಕುಂಚ. ಸಕ: [ಆ+ಕುಂಚಯ್] ಸಂಕೋಚಿಸು, ಕುಗ್ಗು, ಅಡಕಗೊಳಿಸು 'ಆಕುಂಚಇ'
ಆಕುಂಚಣ. ನ: [ಆಕುಂಚನ] ಸಂಕೋಚ, ಎಳೆದುಕೊಳ್ಳುವುದು, ಅಡಕಗೊಳಿಸುವುದು
ಆಕುಂಚಿಯ. ವಿ: [ಆಕುಂಚಿತ] ಎಳೆದುಕೊಳ್ಳಲ್ಪಟ್ಟ, ಅಡಕಮಾಡಲ್ಪಟ್ಟ(ಸುರ)
ಆಕುಟ್ಠ. ನ: [ಆಕ್ರುಷ್ಟ] ಆಕ್ರೋಶಕ್ಕೊಳಗಾದ, ಕೋಪಕ್ಕೊಳಗಾದ, ಬೈಯಲ್ಪಟ್ಟ, ಕರೆಯಲ್ಪಟ್ಟ
ಆಕುಲ. 'ಆಉಲ' ಶಬ್ದವನ್ನು ನೋಡುವುದು
ಆಕೂಯ. ನ: [ಆಕೂತ] ಅಭಿಪ್ರಾಯ, ಆಶಯ(ಉಪ)
ಆಕೇವಲಿಯ. ವಿ: [ಆಕೇವಲಿಕ] ಅಸಂಪೂರ್ಣ, ಸಂಪೂರ್ಣವಾಗದ(ಆಚಾ)
ಆಕೋಡಣ. ನ: [ಆಕೋಟನ] ಕೂರಿ ಕೂರಿ ತುಂಬುವುದು, ತುರುಕುವುದು(ಪಣ್ಣ)
ಆಕೋಸ. 'ಅಕ್ಕೋಸ=ಆಕ್ರೋಶ' ಶಬ್ದವನ್ನು ನೋಡುವುದು
ಆಕೋಸಾಯ. ಅಕ: [ಆಕೋಶಾಯ್] ವಿಕಸಿತವಾಗು, ಅರಳು ವ. ಕೃ 'ಆಕೋಸಾಯಂತ(ಪಣ್ಣ)
ಆಕ್ಕಂದ(ಮಾ). 'ಆಕಂದ' ಶಬ್ದವನ್ನು ನೋಡುವುದು
ಆಖಿಂಚ(ಅಪ). ಸಕ: [ಆ+ಕೃಷ್] ಹಿಂದಕ್ಕೆ ಎಳೆ
ಆಖಂಡಲ. ಪು: [ಆಖಂಡಲ] ಇಂದ್ರ, **–ಧಣುಹ.** ನ: [–ಧನುಷ್] ಇಂದ್ರ ಧನುಸ್ಸು, ಕಾಮನ ಬಿಲ್ಲು(ಉಪ)**–ಭೂಇ.** ಪು: [–ಭೂತಿ] ಭಗವಾನ್ ಮಹಾವೀರರ ಮುಖ್ಯ ಶಿಷ್ಯ ಗೌತಮ ಸ್ವಾಮಿ
ಆಗಇ. ಸ್ತ್ರೀ: [ಆಗತಿ] ಆಗಮನ, ಬರುವುದು(ಆಚಾ)
ಆಗಇ. 'ಆಕಿಇ' ಶಬ್ದವನ್ನು ನೋಡುವುದು
ಆಗಂತವ್ವ. 'ಆಗವು=ಆ+ಗವ್' ಶಬ್ದವನ್ನು ನೋಡುವುದು
ಆಗಂತಗಾರ}. ನ: [ಆಗಂತ್ರಾಗಾರ] ಧರ್ಮಶಾಲೆ,
ಆಗಂತಾರ}. ಪ್ರಯಾಣಿಕರು ತಂಗುವ ಸ್ಥಳ(ಔಪ)
ಆಗಂತು. ವಿ: [ಆಗಂತೃ] ಬರಲಿರುವವನು(ಸೂಅ)
ಆಗಂತು. 'ಆಗಮ=ಆ+ಗಮ' ಶಬ್ದವನ್ನು ನೋಡುವುದು
ಆಗಂತುಗ}. ವಿ: [ಆಗಂತುಕ] ಬರಲಿರುವವನು,
ಆಗಂತುಯ}.ಅತಿಥಿ(ಚಾರು), ಕೃತ್ರಿಮ, ಅಸ್ವಾಭಾವಿಕ (ಸುರ)

ಆಗಂತೂಣ. 'ಆಗವು=ಆ+ಗವ್' ಶಬ್ದವನ್ನು ನೋಡುವುದು
ಆಗಂಪ. ಸಕ: [ಆ+ಕಂಪಯ್] ಸ್ವಲ್ಪನಡುಗಿಸು, ಅಲ್ಲಾಡಿಸು
ಆಗಂಪಿಯ. 'ಆಕಂಪಿಯ' ಶಬ್ದವನ್ನು ನೋಡುವುದು (ಪಉಮ)
ಆಗಚ್ಛ. ಸಕ: [ಆ+ಗಮ್] ಬರು, ತಲುಪು 'ಆಗಚ್ಛಇ'. ವ. ಕೃ: **ಆಗಚ್ಛಮಾಣ**
ಆಗತ. 'ಆಗಯ' ಶಬ್ದವನ್ನು ನೋಡುವುದು
ಆಗತ್ತೀ. ಸ್ತ್ರೀ: [ದೇ] ಬಾವಿಯ ಮೇಲೆ ಅಡ್ಡಲಾಗಿ ಹಾಕಿರುವ ಮರ
ಆಗಮ. ಸಕ: [ಆ+ಗಮ್] ಬರು, ತಲುಪು ವ. ಕೃ: **ಆಗಮಮಾಣ**=ಬರುತ್ತಿರುವ
ಆಗಮ. ಪ: [ಆಗಮ] ಆಗಮನ, ಬರುವಿಕೆ(ಸೇ), ಸಮಾಗಮ, ಜ್ಞಾನ, ತಿಳಿವು, ಶಾಸ್ತ್ರ, ಸಿದ್ಧಾಂತ. **–ಕುಸಲ.** ವಿ: [–ಕುಶಲ] ಸಿದ್ಧಾಂತಗಳನ್ನು ಅರಿತವ(ಉತ್ತ), **–ಜ್ಞ.** ವಿ: [–ಜ್ಞ] ಶಾಸ್ತ್ರಗಳನ್ನ ತಿಳಿದವನು **–ಣೀಇ.** ಸ್ತ್ರೀ: [–ನೀತಿ] ಆಗಮೋಕ್ತ ವಿಧಿ, **–ಣ್ಣು.** ವಿ: [ಜ್ಞ] ಶಾಸ್ತ್ರಗಳಲ್ಲಿ ಬಲ್ಲಿದ **–ಪರತಂತ.** ವಿ: [–ಪರತಂತ್ರ] ಸಿದ್ಧಾಂತದ ಅಧೀನ(ಪಂಚವ). **–ವಲಿಯ.** ವಿ: [–ಬಲಿಕ] ಸಿದ್ಧಾಂತಗಳಲ್ಲಿ ನುರಿತವನು(ಭಗ), **–ವವಹಾರ.** ಪು: [–ವ್ಯವಹಾರ] ಸಿದ್ಧಾಂತದಿಂದ ಅನುಮೋದಿಸಲ್ಪಟ್ಟ ವ್ಯವಹಾರ(ವವ) ಉತ್ಪತ್ತಿ
ಆಗಮ. ಸಕ: [ಆ+ಗಮ್] ಪಡೆದುಕೊಳ್ಳು
ಆಗಮಣ. ನ: [ಆಗಮನ] ಆಗಮನ
ಆಗಮಿ. ವಿ: [ಆಗಮಿನ್] ಬರಲಿರುವ, ಭವಿಷ್ಯತ್ ಕಾಲದ, 'ತಲುಪುವ, ಸೇರುವ, ಶಾಸ್ತ್ರಜ್ಞಾನವುಳ್ಳ
ಆಗಮಿಅ. ವಿ: [ಆಗಮಿತ] ವಿದಿತ, ತಿಳಿದುಬಂದ, ಜ್ಞಾತ
ಆಗಮಿಯ. ವಿ: [ಆಗಮಿಕ] ಶಾಸ್ತ್ರ ಸಂಬಂಧೀ, ಶಾಸ್ತ್ರ ಪ್ರತಿಪಾದಿತ, ಶಾಸ್ತ್ರೋಕ್ತವಾದದ್ದನ್ನು ಮಾತ್ರ ಒಪ್ಪುವ
ಆಗಮಿರ. ವಿ: [ಆಗಂತೃ] ಬರುವವನು ಆಗಮಿಸುವವನು(ಸಣ)
ಆಗಮಿಸ್ಸ. ವಿ: [ಆಗಮಿಷ್ಯತ್] ಮುಂದೆ ಬರಲಿರುವ, ಸಂಭವಿಸಲಿರುವ(ಸಮ)

ಆಗಮಿಸ್ಸಾ. ಸ್ತ್ರೀ: [**ಆಗಮಿಷ್ಯಂತಿ**] ಬರಲಿರುವ ಕಾಲ, ಭವಿಷ್ಯ ಕಾಲ,

ಆಗಮೇಸ}. 'ಆಗಮಿಸ್ಸ' ಶಬ್ದವನ್ನು ನೋಡುವುದು

ಆಗಮೇಸಿ}.

ಆಗವ್ಮ. 'ಆಗವು=ಆ+ಗವ್' ಶಬ್ದವನ್ನು ನೋಡುವುದು

ಆಗಯ. ವಿ: [**ಆಗತ**]ಬಂದಿರುವ, ಸಂಭವಿಸಿರುವ, ಬರುವಿಕೆ, ಗಳಿಸಿದ, ಉತ್ಪನ್ನ=ಹುಟ್ಟಿರುವ

ಆಗರ. 'ಆಕರ=ಆಕರ' ಶಬ್ದವನ್ನು ನೋಡುವುದು (ಆಚಾ)

ಆಗರಿ. ವಿ: [**ಆಕರಿನ್**] ಗಣಿಯ ಮಾಲೀಕ, ಗಣಿ ಕೆಲಸ ಮಾಡುವವನು(ಪಣ್ಣ)

ಆಗರಿಸ. ಸಕ: [**ಆ+ಕೃಷ್**] ಎಳೆ, ಸೆಳೆ

ಆಗರಿಸ. ಪು: [**ಆಕರ್ಷ**] ಗ್ರಹಣ, ಎಳೆಯುವಿಕೆ, ಆಕರ್ಷಿಸುವಿಕೆ(ಸಮ), ಪ್ರಾಪ್ತಿ, ಜೂಜು, ಪಗಡೆ, ಪಗಡೆಕಾಯಿ, ಒರೆಗಲ್ಲು, ಪಗಡೆಯ ಹಾಸು

ಆಗರಿಸಣ. ನ: [**ಆಕರ್ಷಣ**] ಎಳೆತ, ಸೆಳೆತ

ಆಗರಿಸಗ. ವಿ: [**ಆಕರ್ಷಕ**] ಎಳೆಯುವವನು, ಪು: ಆಯಸ್ಕಾಂತ(ಆವಮ) ಆಕರ್ಷಿಸುವ, ಎಳೆಯುವ

ಆಗರಿಸಣೀ. ಸ್ತ್ರೀ: [**ಆಕರ್ಷಣೀ**] ತಂತ್ರೋಕ್ತವಾದ ಒಂದು ಬಗೆಯ ಮುದ್ರೆ, (ಸುರ)

ಆಗರಿಸಿಯ. ವಿ: [**ಆಕೃಷ್ಟ**] ಎಳೆಯಲ್ಪಟ್ಟ, ಸೆಳೆಯಲ್ಪಟ್ಟ,

ಆಗಲ. ಸಕ: [**ಆ+ಕಲಯ್**] ತಿಳಿದುಕೊಳ್ಳು, ತೊಡಗು, ತಲುಪಿಸು, ಊಹಿಸು, ಲೆಕ್ಕಹಾಕು, ಅನುಸಂಧಾನ, ವಿಮರ್ಶಿಸು, ಗ್ರಹಿಸು

ಆಗಲ್ಲ. ವಿ: [**ಆಗ್ಲಾನ.**] ರೋಗ, ವ್ಯಾಧಿ(ಬೃಹ)

ಆಗಸ. ಸಕ: [**ಆ+ಕೃಷ್**] ಎಳೆ. **'ಅಗಸಾಹಿ'**

ಆಗಹ. 'ಆಗಾಹ' ಶಬ್ದವನ್ನು ನೋಡುವುದು

ಆಗಹಿಲ. ವಿ: [**ಆಗೃಹೀತ**] ಸಂಗ್ರಹಿಸಲ್ಪಟ್ಟ

ಆಗಾಢ. ವಿ: [**ಆಗಾಢ**] ಪ್ರಬಲ, ದುಸ್ಸಾಧ್ಯ, ವಿಶೇಷ ಕಾರಣ, ಅತ್ಯಂತ ಗಾಢ, ಅತಿಶಯ, ದೃಢವಾಗಿ. **–ಜೋಗ.** ಪು: [**–ಯೋಗ**] ಯೋಗ–ವಿಶೇಷ ಗಣಿ–ಯೋಗ. **–ಪಣ್ಣ.** ನ: [**–ಪ್ರಜ್ಞ**] ಶಾಸ್ತ್ರ(ವವ), **–ಸುಯ.** ನ: [**–ಶ್ರುತ**] ಆಗಮ–ವಿಶೇಷ]

ಆಗಾಮಿ. ವಿ: [**ಆಗಾಮಿನ್**] ಬರಲಿರುವ, ಆಗಮಿಸಲಿರುವ

ಆಗಾರ. ಸಕ: [**ಆ+ಕಾರಯ್**] ಆಹ್ವಾನಿಸು, ಕರೆ,

ಆಗಾರ. ನ: [**ಆಗಾರ**] ಮನೆ(ಣಾಯಾ), ಗೃಹಸ್ಥ(ಠಾ), ವಿ:**–ತ್ಥ.** ವಿ: [**–ಸ್ಥ**] ಗೃಹಸ್ಥ

ಆಗಾರ. ಪು: [**ಆಕಾರ**] ಅಪವಾದ, ಇಂಗಿತ, ಸೂಚನೆ, ಸಂಜ್ಞೆ, ಆಕೃತಿ, ರೂಪ, ನೋಟ, ಮುಖಭಾವ

ಆಗಾರಿಯ. ವಿ: [**ಆಗಾರಿಕ**] ಗೃಹಸ್ಥನಿಗೆ ಸಂಬಂಧಿಸಿದ

ಆಗಾರಿಯ. ವಿ: [**ಆಕಾರಿತ**] ಕರೆಯಲ್ಪಟ್ಟ, ಹೆಸರಿಸಲ್ಪಟ್ಟ, ಚದುರಿಸಲ್ಪಟ್ಟ, ಓಡಿಸಲ್ಪಟ್ಟ, ಪರಿತ್ಯಕ್ತ(ಆವ)

ಆಗಾಲ. ಪು: [**ಆಗಾಲ**] ಸಮಾನ ಪ್ರದೇಶದಲ್ಲಿ ವಾಸಿಸುವುದು, ಸಮಾನ ಭಾವದಿಂದಿರುವುದು (ಆಚ), ಉಚ್ಚಾರಣೆ(ರಾಜ)

ಆಗಾಸ. ಪುಂ. ನ: [**ಆಕಾಶ**] ಆಕಾಶ, ಅಂತರಾಳ (ಉವಾ) **–ಗಮಾ.** ಸ್ತ್ರೀ: [**–ಗಮಾ**] ಆಕಾಶದಲ್ಲಿ ಸಂಚರಿಸುವುದನ್ನು ಸಾಧ್ಯಮಾಡುವ ವಿದ್ಯಾ–ವಿಶೇಷ(ಪುಮು) **□ಗಾಮಿ.ವಿ:[–ಗಾಮಿನ್]** ಆಕಾಶದಲ್ಲಿ ಸಂಚರಿಸುವ ಪಕ್ಷಿಂಯೇ ಮೊದಲಾದುವು(ಆಚಾ), **–ಜೋಇಣೀ.** ಸ್ತ್ರೀ: [**–ಯೋಗಿನೀ**] ಪಕ್ಷಿ–ವಿಶೇಷ,**–ತ್ಥಿಕಾಯ.** ಪು: [**–ಆಸ್ತಿಕಾಯ**] ಆಕಾಶ– ಪ್ರದೇಶಗಳ ಸಮೂಹ, ಅಖಂಡ ಆಕಾಶ ದ್ರವ್ಯ (ಪಣ್ಣ), **–ಥಿಗ್ಗಲ.** ನ: [**ದೇ**] ಮೋಡವಿಲ್ಲದ ಆಕಾಶದ ಭಾಗ, **–ಫಲಿಹ, ಫಾಲಿಯ.** ಪು: [**–ಸ್ಫಟಿಕ**] ನಿರ್ಮಲ ಸ್ಫಟಿಕ ರತ್ನ(ಔಪ), **–ಫಾಲಿಯಾ.** ಸ್ತ್ರೀ: [**–ಫಾಲಿಕಾ**] ಒಂದು ಸಿಹಿ ದ್ರವ್ಯ **ಆಗಾಸಾಇವಾಇ.** ವಿ: [**ಆಗಾಸಾಪಾತಿನ್**] ವಿದ್ಯೆಯೇ ಮೊದಲಾದುವುಗಳ ಬಲದಿಂದ ಆಕಾಶದಲ್ಲಿ ಸಂಚರಿಸುವವನು(ಔಪ)

ಆಗಾಸಿಯ. ವಿ: [**ಆಕಾಶಿತ**] ಆಕಾಶವನ್ನು ತಲುಪಿದ (ಔಪ)

ಆಗಾಸಿಯ. ವಿ: [**ಆಕರ್ಷಿತ**] ಎಳೆಯಲ್ಪಟ್ಟ (ಔಪ)

ಆಗಾಸಿಯಾ. ಸ್ತ್ರೀ: [**ಆಕಾಶಿಕೀ**] ಆಕಾಶದಲ್ಲಿ ಸಂಚರಿಸುವ ಯೋಗ

ಆಗಾಹ. ಸಕ: [**ಅವ+ಗಾಹ್**] ಸ್ನಾನ ಮಾಡು. **ಕ್ರಿಯಾ ರೂಪ; ಅವಗಾಹಇತ್ತಾ**

ಆಗಿಇ. ಸ್ತ್ರೀ: [**ಆಕೃತಿ**] ಆಕಾರ, ರೂಪ, ಮೂರ್ತಿ(ಸುರ)

ಆಗಿಟ್ಠಿ. ಸ್ತ್ರೀ [**ಆಕೃಷ್ಟ**] ಆಕರ್ಷಣೆ(ಸುಪಾ)

ಆಗೀ. 'ಆಗಿಇ' ಶಬ್ದವನ್ನು ನೋಡುವುದು

ಆಗು. ಪು: [**ಆಕು**] ಅಭಿಲಾಷೆ, ಇಚ್ಛೆ(ಆಕ)

ಆಘಂ. 'ಆಘವ' ಶಬ್ದವನ್ನು ನೋಡುವುದು

ಆಘಂಸ. ಸಕ: [ಆ+ಘೃಷ್] ಘರ್ಷಿಸು, ಉಜ್ಜು, ತಿಕ್ಕು
ಆಘಂಸಣ. ನ: [ಆಘರ್ಷಣ] ಒಮ್ಮೆ ಘರ್ಷಿಸುವುದು (ನಿಚೂ)
ಆಘಯಣ. ನ: [ದೇ] ವಧಾಸ್ಥಾನ(ಣಾಯಾ)
ಆಘವ. ಸಕ: [ಆ+ಖ್ಯಾ] ಹೇಳು, ಉಪದೇಶಿಸು, ಆಘವೇಇ. ವ.ಕೃ–ಆಘವೇಮಾಣ
ಆಘವಣಾ. ಸ್ತ್ರೀ: [ಆಖ್ಯಾನ] ಕಥನ, ಉಕ್ತಿ(ಣಾಯಾ)
ಅಘವಇತ್ತು. ವಿ: [ಆಖ್ಯಾಯಕ] ಕಥಕ, ಕಥೆ ಹೇಳುವವನು(ಠಾ)
ಅಘವಿಯ. ವಿ: [ಆಖ್ಯಾತ] ಉಕ್ತ, ಹೇಳಲಾದ(ಪಿ)
ಆಘವಿಯ. ವಿ: [ದೇ] ಸ್ವೀಕರಿಸಲ್ಪಟ್ಟ
ಅಘವೇತ್ತಗ. ವಿ: [ಆಖ್ಯಾಯಿತೃಕ] ಉಪದೇಶ ನೀಡುವವನು, ವಕ್ತೃ(ಆಚಾ)
ಆಘಸ. ಸಕ: [ಆ+ಘಸ್] ಸ್ವಲ್ಪ ತಿಕ್ಕು, ಸ್ವಲ್ಪ ಸವೆ
ಆಘಾ. ಸಕ: [ಆ+ಖ್ಯಾ] ಹೇಳು
ಆಘಾ. ಸಕ: [ಆ+ಘ್ರಾ] ಮೂಸು. ವ. ಕೃ–ಆಘ್ರಾಯಂತ (ಉಪ)
ಆಘಾಯ. ವಿ: [ಆಖ್ಯಾತ] ಹೇಳಲ್ಪಟ್ಟ, ಉಕ್ತ(ಆಚಾ)
ಆಘಾಯ. ಪು: [ಆಘಾತ] ವಧೆ, ಏಟು, ಹೊಡೆತ (ಕುಮಾ)
ಆಘಾಯ. ಪು: [ಆಘಾತ] ಒಂದು ನರಕ–ಸ್ಥಾನ, ವಿನಾಶ
ಆಘಾಯಂತ. 'ಆಘಾ=ಆ+ಘ್ರಾ' ಶಬ್ದವನ್ನು ನೋಡುವುದು
ಆಘಾವ. 'ಆಘವ' ಶಬ್ದವನ್ನು ನೋಡುವುದು. 'ಆಘಾವೇಇ'
ಆಘುಟ್ಠ. ವಿ: [ಆಘುಷ್ಟ] ಘೋಷಿಸಲ್ಪಟ್ಟ, ಪ್ರಕಟಿಸಲ್ಪಟ್ಟ (ಭವಿ)
ಆಘುಮ್ಮ. ಅಕ: [ಆ+ಘೂರ್ಣ] ಅಲ್ಲಾಡು, ನಡುಗು, ಸುತ್ತು=ತಿರುಗು
ಆಘೋಸ. ಸಕ: [ಆ+ಘೋಷಯ್] ಘೋಷಿಸು, ಡಂಗೂರ ಸಾರಿಸು. 'ಆಘೋಸೇಇ'
ಆಘೋಸಣ. ನ: [ಆಘೋಷಣ] ಡಂಗೂರ ಹೊಡೆಸುವುದು, ಘೋಷಣೆ ಮಾಡುವುದು (ಮಹಾ)
ಆಚಕ್ಖ. ಚಕ: [ಆ+ಚಕ್ಷ್] ಹೇಳು
ಆಚಕ್ಖಿದ.(ಶೌ). ವಿ: [ಆಖ್ಯಾತ] ಉಕ್ತ, ಹೇಳಲ್ಪಟ್ಟ(ಅಭಿ)

ಅಚರಿಯ. ವಿ: [ಆಚರಿತ] ಅನುಷ್ಠಾನಮಾಡಲಾದ, ಆಚರಿಸಲ್ಪಟ್ಟ, ಮಾಡಲ್ಪಟ್ಟ
ಆಚಾಮ. ಸಕ: [ಆ+ಚಾಮಯ್] ನೆಕ್ಕು, ತಿನ್ನು
ಆಚಾರ. 'ಆಯಾರ=ಆಚಾರ' ಶಬ್ದವನ್ನು ನೋಡುವುದು
ಆಚಾರಿಅ. 'ಆಯರಿಯ=ಆಚಾರ್ಯ' ಶಬ್ದವನ್ನು ನೋಡುವುದು
ಆಚಿಕ್ಖ. ಸಕ: [ಆ+ಚಕ್ಷ್] ಹೇಳು,
ಆಚಿಕ್ಖಿಯ. ವಿ: [ಆಖ್ಯಾತ] ಕಥಿತ, ಉಕ್ತ, ಹೇಳಲ್ಪಟ್ಟ
ಆಚುಣ್ಣಿಅ. ವಿ: [ಆಚೂರ್ಣಿತ] ಚೂಚೂರಾಗಿ ಮಾಡಲ್ಪಟ್ಟ(ಪಉಮ)
ಆಚೆಲಕ್ಕ. ನ: [ಆಚೇಲಕ್ಯ] ಬಟ್ಟೆಯಿಲ್ಲದಿರುವುದು, ವಿ: ಒಂದು ಬಗೆಯ ಆಚಾರ–ವಿಶೇಷ.(ಪಂಚಾ)
ಆಚ್ಛೇದಣ. ನ: [ಆಚ್ಛೇದನ] ನಾಶ, ಸುತ್ತಲೂ ಕತ್ತರಿಸುವುದು, ವಿ: ನಾಶಮಾಡುವವನು(ಕುಮಾ)
ಆಜತ್ಥ. 'ಆಗಮ=ಆ+ಗಮ್' ಶಬ್ದವನ್ನು ನೋಡುವುದು
ಆಜಾಇ. 'ಆಯಾಇ' ಶಬ್ದವನ್ನು ನೋಡುವುದು
ಆಜಿ 'ಆಇ=ಆಜಿ' ಶಬ್ದವನ್ನು ನೋಡುವುದು
ಆಜೀರಣ. ಪು: [ಆಜೀರಣ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನಮುನಿ
ಆಜೀವ}. ಪು: [ಆಜೀವ] ಜೀವನೋಪಾಯ,
ಆಜೀವಗ}. ಕಸಬು, ಹೊಟ್ಟೆಪಾಡು, ಜೈನ ಸಾಧುವಿಗೆ ಭಿಕ್ಷೆ ತೆಗೆದುಕೊಳ್ಳಲು ಇರುವ ಒಂದು ದೋಷ–ವೆಂದರೆ ಗೃಹಸ್ಥನಿಗೆ ತನ್ನ ಜಾತಿ–ಕುಲದ ಸಮಾನತೆ ತಿಳಿಸಿ ಅವನಿಂದ ಭಿಕ್ಷೆ ಸ್ವೀಕರಿಸುವುದು, ಗೋಶಾಲಕ ಮತವನ್ನನುಸರಿಸುವ ಸಾಧು (ಆಜೀವಕ), ಧನಸಂಪತ್ತು(ಶೂಅ)
ಆಜೀವಗ. ಪು: [ಆಜೀವಕ] ಹಣದ ಅಹಂಕಾರ, ಸಕಲ ಜೀವಗಳು, 'ಆಜೀವಂಯ' ಶಬ್ದವನ್ನು ನೋಡುವುದು
ಆಜೀವಣ. ನ: [ಆಜೀವನ] ಜೀವನೋಪಾಯ, ಜೈನ ಸಾಧುವಿಗೆ ಭಿಕ್ಷೆ ಸ್ವೀಕರಿಸಲು ಇರುವ ಒಂದು ದೋಷ.
ಆಜೀವಣಾ. ಸ್ತ್ರೀ: [ಆಜೀವನಾ] ಮೇಲಿನ ಶಬ್ದವನ್ನು ನೋಡುವುದು
ಆಜೀವಯ. 'ಆಜೀವಗ' ಶಬ್ದವನ್ನು ನೋಡುವುದು
ಆಜೀವಿಯ. ವಿ: [ಆಜೀವಿಕ] ಗೋಶಾಲಕ(ಆಜೀವಕ) ಮತದ ಅನುಯಾಯಿ(ಪಣ್ಣ)

ಆಜೀವಿಯಾ. ಸ್ತ್ರೀ: [ಆಜೀವಿಕಾ] ಜೀವನೋಪಾಯ, ಜೈನಸಾಧುವಿಗೆ ಭಿಕ್ಷೆ ಸ್ವೀಕರಿಸಲು ಇರುವ ಒಂದು ದೋಷ(ಉತ್ತ)

ಆಜುತ್ತ. ವಿ: (ಆಯುಕ್ತ] ಜಾಗರೂಕನಾಗಿರುವ, ಪ್ರಮಾದಿಯಲ್ಲದ (ನಿಚೂ)

ಆಜುಜ್ಝ. ಅಕ: [ಆ+ಯುಧ್] ಯುದ್ಧಮಾಡು, ಹೋರಾಡುವುದು

ಆಜುಹ. ನ: [ಆಯುಧ] ಆಯುಧ, ಶಸ್ತ್ರ

ಆಜೊಜ್ಜ. 'ಆಓಜ್ಜ' ಶಬ್ದವನ್ನು ನೋಡುವುದು(ವಿಸೇ)

ಆಡಂಬರ. ಪು: [ಆಡಂಬರ] ತೋರಿಕೆ ಪ್ರದರ್ಶನ, ನಗಾರಿ, ಭೇರಿ, ನಗಾರಿ ಸದ್ದು(ಠಾ), ಒಬ್ಬ ಯಕ್ಷ(ಆಚೂ), ನ: ಯಕ್ಷನ ಮನೆ(ಪವ), ನಗಾರಿ, ಭೇರಿ

ಆಡಂಬರಿಲ್ಲ. ವಿ: [ಆಡಂಬರವತ್] ಆಡಂಬರದ ವ್ಯಕ್ತಿ (ಪಾಅ)

ಆಡವಿಯ. ವಿ: [ದೇ] ಚೂರ್ಣಿತ, ಚೂರು ಚೂರು ಮಾಡಲ್ಪಟ್ಟ

ಆಡವಿಯ. ವಿ: [ಆಟವಿಕ] ಕಾಡಿನಲ್ಲಿ ವಾಸಿಸುವ, ಕಾಡಿಗೆ ಸಂಬಂಧಿಸಿದ

ಆಡಹ. ಸಕ: [ಆ+ದಹ್] ನಾಲ್ಕೂ ಕಡೆಯಿಂದ ಸುಡುವುದು 'ಆಡಹಇ'

ಆಡಹ ಸಕ: [ಆ+ಧಾ] ಸ್ಥಾಪಿಸು, ನಿಯುಕ್ತಿಗೊಳಿಸು 'ಆಡಹಇ'

ಆಡಾಡಾ. ಸ್ತ್ರೀ: [ದೇ] ಬಲಾತ್ಕಾರ,

ಆಡಾಸೇತೀಯ. ಪು: [ಆಡಾಸೇತೀಕ] ಒಂದು ಪಕ್ಷಿ-ವಿಶೇಷ

ಆಡಿ: ಸ್ತ್ರೀ: [ಆಟಿ] ಪಕ್ಷಿ-ವಿಶೇಷ, ಒಂದು ಬಗೆಯ ಮೀನು(ದೇ)

ಆಡಿಯತ್ತಿಯ. ಪು: [ದೇ] ಪಲ್ಲಕ್ಕಿಯನ್ನು ಹೊರುವ ವ್ಯಕ್ತಿ

ಆಡುಆಲ. ಸಕ: [ದೇ] ಮಿಶ್ರಮಾಡು, ಬೆರೆಸು

ಆಡುಆಲಿ. ಪು: [ದೇ] ಬೆರೆಸುವಿಕೆ, ಮಿಶ್ರಣಮಾಡುವಿಕೆ

ಆಡೋಯ. 'ಆಡೋವ=ಆಟೋಪ' ಶಬ್ದವನ್ನು ನೋಡುವುದು

ಆಡೋಲಿಯ. ವಿ: [ದೇ] ತಡೆಹಿಡಿಯಲ್ಪಟ್ಟ (ಣಾಯಾ)

ಆಡೋವ. ಸಕ: [ಆ+ಟೋಪಯ್] ಆಡಂಬರ ಮಾಡು, ಗರ್ವ, ಹೊಟ್ಟೆಯೊಳಗಿನ ವಾಯುವಿನ ಶಬ್ದ

ಆಡೋವ. ಪು: [ಆಟೋಪ] ಆಡಂಬರ(ಉವಾ) ಗರ್ವ

ಆಡೋವಿಅ. ವಿ: [ದೇ] ಆರೋಪಿಸಲ್ಪಟ್ಟ, ಏರಿಸಲ್ಪಟ್ಟ, ಸಿಟ್ಟುಮಾಡಿಕೊಂಡವನು

ಆಡೋವಿಅ. ವಿ: [ಆಟೋಪಿಕ] ಆಟೋಪವುಳ್ಳವನು (ಪಣ್ಣ)

ಆಢಈ. ಸ್ತ್ರೀ: [ಆಢಕೀ] ವನಸ್ಪತಿ-ವಿಶೇಷ(ಪಣ್ಣ)

ಆಢಗ. ಪುಂ. ನ: [ಆಢಕ] ಒಂದು ಕೊಳಗ (ನಾಲ್ಕು ಸೇರುಗಳದು), ಒಂದು ಅಳತೆ(ಔಪ), ೧೬ ಕುಡವಗಳ ಅಳತೆ

ಆಢತ್ತ. ವಿ: [ಆರಬ್ಧ] ಪ್ರಾಂಭಿಸಲಾದ, ಶುರು ಮಾಡಲಾದ. [ದೇ] ಆಕ್ರಮಿಸಲ್ಪಟ್ಟ

ಆಢತ್ತಿಅ.} ವಿ: [ಆರಬ್ಧ] ಪ್ರಾರಂಭಿಸಲ್ಪಟ್ಟ

ಆಢವಿಅ.}

ಆಢಪ್ಪ-. 'ಆಢವ' ಶಬ್ದವನ್ನು ನೋಡುವುದು

ಆಢಯ. 'ಆಢಗ' ಶಬ್ದವನ್ನು ನೋಡುವುದು

ಆಢವ. ಸಕ: [ಆ+ರಭ್] ಪ್ರಾರಂಭಮಾಡು, ಶುರು ಮಾಡು. 'ಆಢವಇ'

ಆಢಾ. ಸಕ: [ಆ+ದೃ] ಆದರಿಸು, ಗೌರವಿಸು. ವ. ಕೃ: 'ಆಢಾಮಾಣ'

ಆಢಾ. ಸ್ತ್ರೀ: [ಆದರ] ಸಂಮಾನ, ಗೌರವ, ಆದರ

ಆಢಿಅ. ವಿ: [ಆದೃತ] ಆದರಿಸಲ್ಪಟ್ಟ, ಸತ್ಕರಿಸಲ್ಪಟ್ಟ (ಹೇ)

ಆಢಿಅ. ವಿ: [ದೇ] ಇಷ್ಟ, ಎಣಿಕೆಗೆ ಅರ್ಹವಾದ, ಮಾನನೀಯ, ಜಾಗರೂಕ, ಉದ್ಯೋಗಶೀಲ, ಗಾಢವಾದ, ದಟ್ಟವಾದ(ದೇ)

ಆಣ. ಸಕ: [ಆ+ಣೀ] ತರು, ತೆಗೆದುಕೊಂಡುಬರು.

ಆಣ.ಸಕ: [ಜ್ಞಾ] ತಿಳಿದುಕೋ. 'ಆಣಇ'

ಆಣ. ಪು: [ಆನ] ಶ್ವಾಸೋಚ್ಛ್ವಾಸ, ಶ್ವಾಸದ ಪುದ್ಗಲ (ಪಣ್ಣ)

-ಆಣ. 'ಜಾಣ=ಯಾನ' ಶಬ್ದವನ್ನು ನೋಡುವುದು

ಆಣಂಥ. 'ಆಅಂಥ' ಶಬ್ದವನ್ನು ನೋಡುವುದು

ಆಣಂತ. 'ಆಣೇ' ಶಬ್ದವನ್ನು ನೋಡುವುದು

ಆಣಂತರಿಯ. ನ: [ಆನಂತರ್ಯ] ವಿಚ್ಛೇದವಿಲ್ಲದ, ನಿರಂತರವಾದ,(ಠಾ), ಅನುಕ್ರಮ (ಆಚೂ)

ಆಣಂದ. ಅಕ: [ಆ+ನಂದ್] ಆನಂದಿತನಾಗು, ಸಂತೋಷಪಡು

ಆಣಂದ. ಸಕ: [ಆ+ನಂದಯ್] ಸಂತೋಷಪಡಿಸು

ಆಣಂದ. ಪು: [ಆನಂದ] ಅಹೋರಾತ್ರದ ಹದಿನಾರನೇ ಮುಹೂರ್ತ, ಒಂದು ದೇವ–ವಿಮಾನ, ಹರ್ಷ, ಸಂತಸ(ಕುಮಾ), ಭಗವಾನ್ ಶೀತಲನಾಥನ ಒಬ್ಬ ಮುಖ್ಯ ಶಿಷ್ಯ, ಅಜಿತನಾಥನ ತಾಯಿಯ ತಂದೆ ಮತ್ತು ಪೋತನಪುರ ನಗರದ ರಾಜ(ಪಉಮ)ಮುಂದೆ ಸಂಭವಿಸಲಿರುವ ಆರನೇ ಬಲದೇವ, ನಾಗಕುಮಾರ–ಜಾತಿಯ ದೇವರುಗಳ ಸ್ವಾಮಿಯಾದ ಧರಣೇಂದ್ರನ ರಥ ಸೈನ್ಯದ ಒಬ್ಬ ಅಧಿಪತಿ ದೇವ. ಭಗವಾನ್ ವೃಷಭದೇವನ ಒಬ್ಬ ಮಗ. ಭಗವಾನ್ ಮಹಾವೀರನ ಒಬ್ಬ ಸಂನ್ಯಾಸಿ ಶಿಷ್ಯನ ಹೆಸರು(ಕಪ್ಪ), ಭಗವಾನ್ ಮಹಾವೀರನ ಹತ್ತು ಜನ ಮುಖ್ಯ ಉಪಾಸಕರಲ್ಲಿ ಮೊದಲನೆಯವನು. ದೇವ–ವಿಶೇಷ. ಶ್ರೇಣಿಕ ಮಹಾರಾಜನ ಮೊಮ್ಮಗನ ಹೆಸರು, 'ಉಪಾಸದಗಸಾ' ಸೂತ್ರದ ಅಧ್ಯಯನ. 'ಅಣುತರೋಪಪಾತಿಕ ದಸಾ' ಸೂತ್ರದ ಅಧ್ಯಯನ(ಭಗ), 'ನಿರಯಾವಲೀ' ಸೂತ್ರದ ಒಂದು ಅಧ್ಯಯನ, ಬ: ದೇಶ–ವಿಶೇಷ(ಬೃಹ). **–ರಕ್ಖಿಯ.** ಪು: [–ರಕ್ಷಿತ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಸಾಧು(ಭಗ)

ಆಣಂದಣ. ನ: [ಆನಂದನ] ಸಂತಸ,ಹರ್ಷ(ಸುಪಾ), ವಿ:ಸಂತಸವುಂಟುಮಾಡುವವನು,ಆನಂದದಾಯಕ

ಆಣಂದವಡ.} ಪು: [ದೇ] ಮೊದಲ ಬಾರಿಗೆ
ಆಣದವಸ.} ರಜಸ್ವಲೆಯಾದವಳ ರಕ್ತ ವಸ್ತ್ರ

ಆಣಂದಾ. ಸ್ತ್ರೀ: [ಆನಂದಾ] ದೇವೀ–ವಿಶೇಷ. ಮೇರು ಪರ್ವತದ ಪಶ್ಚಿಮ ದಿಕ್ಕಿನಲ್ಲಿರುವ ರುಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುಮಾರಿ, ಈ ಹೆಸರಿನ ಒಂದು ಪುಷ್ಕರಿಣಿ(ರಾಜ)

ಆಣಂದಿಯ. ವಿ:[ಆನಂದಿತ] ಹರ್ಷವನ್ನು ಹೊಂದಿದವನು. ರಾಮಚಂದ್ರನ ಸೋದರ ಭರತನೊಂದಿಗೆ ದೀಕ್ಷೆತೆಗೆದುಕೊಂಡ ಒಬ್ಬ ರಾಜ(ಪಉಮ)

ಆಣಂದಿರ. ವಿ:[ಆನಂದಿನ್]ಆನಂದದಿಂದಿರುವವನು, ಸಂತಸದಿಂದಿರುವವನು(ಭವಿ)

ಆಣಕ್ಖ. ಸಕ: [ಪರಿ+ಈಕ್ಷ್] ಪರೀಕ್ಷಿಸು,

ಆಣಚ್ಛ. 'ಆಅಂಛ' ಶಬ್ದವನ್ನು ನೋಡುವುದು

ಆಣಟ್ಠ. ವಿ: [ಆನಷ್ಟ] ಸರ್ವಥಾ ನಷ್ಟ, ಪೂರ್ಣ ನಷ್ಟ

ಆಣಣ. ನ: [ಆನನ] ಮುಖ

ಆಣಣ. ನ: [ಆನಯನ] ತರುವುದು

ಆಣತ್ತ. ವಿ: [ಆಜ್ಞಪ್ತ] ಆದೇಶಿಸಲ್ಪಟ್ಟವನು(ಣಾಯಾ)

ಆಣತ್ತಿ. ಸ್ತ್ರೀ: [ಆಜ್ಞಪ್ತಿ] ಆಜ್ಞೆ, ಆದೇಶ. **–ಅರ.** ವಿ: [–ಕರ] ಆಜ್ಞೆ ಪಾಲಿಸುವವನು, ನೌಕರ, **–ಕಿಂಕರ.** ವಿ:[–ಕಿಂಕರ] ಸೇವಕ, ಆಳು(ಪಣ್ಣ), **–ಹರ.**ವಿ:[–ಹರ]ಆಜ್ಞಾವಾಹಕ, ಸಂದೇಶವಾಹಕ

ಆಣತ್ಥ. ನ: [ಆನರ್ಥ್ಯ] ಅನರ್ಥತೆ

ಆಣತ್ತಿಯಾ. ಸ್ತ್ರೀ: [ಆಜ್ಞಪ್ತಿಕಾ] ಮೇಲಿನ ಶಬ್ದವನ್ನು ನೋಡುವುದು

ಆಣಪ.(ಅಶೋ). 'ಆಣವ=ಆ+ಜ್ಞಪಯ್' ಶಬ್ದವನ್ನು ನೋಡುವುದು

ಆಣಪಾಣ. 'ಆಣಾಪಾಣಾ' ಶಬ್ದವನ್ನು ನೋಡುವುದು

ಆಣಪ್ಪ. ವಿ: [ಆಜ್ಞಾಪ್ಯ] ಆಜ್ಞೆ ಮಾಡಲು ಅರ್ಹನಾದವನು(ಸೂಅ)

ಆಣಮ. ಅಕ: [ಆ+ಅನ್] ಉಸಿರು ತೆಗೆದುಕೊ.

ಆಣಮಣೀ. 'ಆಣವಣೀ' ಶಬ್ದವನ್ನು ನೋಡುವುದು

ಆಣಯ. ಪುಂ.ನ: [ಆನತ] ದೇವಲೋಕ–ವಿಶೇಷ, ಪು: ಆ ದೇವಲೋಕದಲ್ಲಿ ವಾಸಿಸುವ ದೇವತೆಗಳು. ಒಂದು ದೇವ–ವಿಮಾನ.

ಆಣಯಣ. ನ: [ಆನಯನ] ತರುವುದು(ಶ್ರಾ)

ಆಣವ. ಸಕ: [ಆ+ಜ್ಞಪಯ್] ಆಜ್ಞೆ ಮಾಡು, ಆದೇಶಿಸು 'ಆಣಾವಇ'

ಆಣವ. 'ಆಣಾವ=ಆ+ನಾಯಯಯ್' ಶಬ್ದವನ್ನು ನೋಡುವುದು

ಆಣವಣ.ನ:[ಆಜ್ಞಪನ] ಆಜ್ಞೆ,ಆದೇಶ(ಉವಾ)

ಆಣವಣ.ನ: [ಆನಾಯನ] ತರಿಸಿಕೊಳ್ಳುವುದು(ಸುಪಾ)

ಆಣವಣಿಯ.ವಿ:[ಆಜ್ಞಾಪನಿಕ] ಆಜ್ಞೆಯನ್ನು ಪಾಲಿಸುವವನು

ಆಣವಣಿಯಾ. ಸ್ತ್ರೀ: [ಆಜ್ಞಾಪನಿಕಾ, ಆನಾಯನಿಕಾ] ಎರಡೂ 'ಆಣವಣೀ' ಶಬ್ದಗಳನ್ನು ನೋಡುವುದು

ಆಣವಣೀ. ಸ್ತ್ರೀ: [ಆಜ್ಞಾಪನೀ] ಕ್ರಿಯಾವಿಶೇಷ, ಆಜ್ಞೆ ಮಾಡುವುದು, ಆಜ್ಞೆಯಿಂದುಂಟಾಗುವ ಕರ್ಮಬಂಧಗಳು(ನವ)

ಆಣವಣೀ. ಸ್ತ್ರೀ: [ಆನಾಯನೀ] ಕ್ರಿಯಾ–ವಿಶೇಷ, ತರಿಸಿಕೊಳ್ಳುವುದು, ತರಿಸಿಕೊಳ್ಳುವುದರಿಂದಾಗುವ ಕರ್ಮಬಂಧ

ಆಣಾ. ಸ್ತ್ರೀ: [ಆಜ್ಞಾ] ಅದೇಶ, ಆಜ್ಞೆ, ಉಪದೇಶ, ನಿರ್ದೇಶ, ಆಗಮ, ಸಿದ್ಧಾಂತ(ವಿಸೇ), ಸೂತ್ರದ ವ್ಯಾಖ್ಯಾನ(ಔಪ), **–ಈಸರ.** ಪು: [**–ಈಶ್ವರ**], ಆಜ್ಞೆಯನ್ನು ಮಾಡುವ ಯಜಮಾನ, **–ಜೋಗ.** ಪು: [**–ಯೋಗ**] ಆಜ್ಞೆಯ ಸಂಬಂಧ, ಶಾಸ್ತ್ರಕ್ಕೆ ಅನುಸಾರವಾದ ಕೃತಿ, **–ರುಇ.** ಸ್ತ್ರೀ: [**–ರುಚಿ**] ಸಮ್ಯಕ್ತ್ವ–ವಿಶೇಷ(ಉತ್ತ), ವಿ: ಆಗಮಗಳಲ್ಲಿ ಶ್ರದ್ಧೆಯಿರುವವನು, **–ವ.** ವಿ: [**–ವತ್**] ಆಜ್ಞೆಯನ್ನು ಒಪ್ಪಿಕೊಳ್ಳುವವನು, **–ವತ್ತ.** ನ: [**–ಪತ್ರ**] ಆಜ್ಞಾಪತ್ರ, ಆದೇಶದ ಪತ್ರ–**ವ್ಯವಹಾರ.** ಪು: [**–ವ್ಯವಹಾರ**] ವ್ಯವಹಾರ–ವಿಶೇಷ. **–ವಿಜಯ.**ನ: [**–ವಿಚು, –ವಿಜಯ**] ಆಗಮದ ಗುಣಗಳನ್ನು ಕುರಿತು ಚಿಂತನೆ ಮಾಡುವ ಧರ್ಮಧ್ಯಾನ(ಔಪ)

ಆಣಾಇ. ಪು: [ದೇ] ಶಕುನದ ಹಕ್ಕಿ(ದೇ)

ಆಣಾಇತ್ತ. ವಿ: [**ಆಜ್ಞಾವತ್**] ಆಜ್ಞೆಯನ್ನು ಒಪ್ಪಿಕೊಳ್ಳುವವನು(ಪಂಚಾ)

ಆಣಾಇಯ. ವಿ: [**ಆನಾಯಿತ**] ತರಿಸಿಕೊಳ್ಳಲಾದ, ಬೇಡಿಕೊಳ್ಳಲಾದ(ಕುಮಾ)

ಆಣಾಪಾಣ. ಪು: [**ಆನಪ್ರಾಣ**] ಶ್ವಾಸೋಚ್ಛ್ವಾಸ (ಉಸಿರಾಟ) ಶ್ವಾಸೋಚ್ಛ್ವಾಸಕ್ಕೆ ನಿಗದಿತವಾದ ಸಮಯ. **–ಪಜ್ಜತ್ತಿ.** ಸ್ತ್ರೀ: [**–ಪರ್ಯಾಪ್ತಿ**] ಉಸಿರಾಟ ಮಾಡಲು ಇರುವ ಶಕ್ತಿ(ಭಗ)

ಆಣಾಪಾಣು. ಸ್ತ್ರೀ: [**ಆನಪ್ರಾಣ**] ಮೇಲಿನದನ್ನು ನೋಡುವುದು(ಭಗ)

ಆಣಾಪಾಣುಯ. ಪು: [**ಆನಪ್ರಾಣಕ**] ಉಸಿರಾಟಕ್ಕೆ ಪರಿಮಿತವಾದ ಕಾಲ(ಕಪ್ಪ)

ಆಣಾಮ. ಪು: [**ಆನಾಮ**] ಶ್ವಾಸ, ಅಂತಃಶ್ವಾಸ(ಭಗ)

ಆಣಾಮಿಯ. ವಿ: [**ಆನಾಮಿತ**] ಸ್ವಲ್ಪ ಬಾಗಿಸಿದ, ಅಧೀನ ಮಾಡಿಕೊಂಡ(ಪಉಮ)

ಆಣಾಲ. ಪು: [**ಆಲಾನ**] ಬಂಧನ, ಆನೆಯನ್ನು ಕಟ್ಟಿಹಾಕುವ ಸರಪಳಿ. ಆನೆಯನ್ನು ಕಟ್ಟಿಹಾಕುವ ಸ್ಥಳ, **–ಕ್ಖಂಭ,–ಖಂಭ.** ಪು: [**–ಸ್ತಂಭ**] ಆನೆಯನ್ನು ಕಟ್ಟುವ ಸ್ತಂಭ

ಆಣಾವ. '**ಆಣವ=ಆ+ಜ್ಞಪಯ್**' ಶಬ್ದವನ್ನು ನೋಡುವುದು

ಆಣಾವ. ಸಕ: [**ಆ+ನಾಯಯ್**] ತರಿಸಿಕೊಳ್ಳು. 'ಆಣಾವಇ'

ಆಣಾವ(ಅಪ). ಸಕ: [ಆ+ನೀ] ತರು,

ಆಣಾವಣ. ನ: [**ಆಜ್ಞಾಪನ**] ಆಜ್ಞೆ, ಆದೇಶ(ಷಡ್)

ಆಣಾವಣ. ನ: [**ಆನಾಯನ**] ಬೇರೆಯವರಿಂದ ತರಿಸಿಕೊಳ್ಳುವುದು

ಆಣಾವಿಯ. ವಿ: [**ಆಜ್ಞಾಪಿತ**] ಆಜ್ಞೆ ಮಾಡಲ್ಪಟ್ಟವನು, ಆದೇಶಿಸಲ್ಪಟ್ಟವನು

ಆಣಾವಿಯ. ವಿ: [**ಆನಾಯಿತ**]ತರಿಸಿಕೊಳ್ಳಲ್ಪಟ್ಟ(ಸುಪಾ)

ಆಣಿ. '**ಆಣಿ**' ಶಬ್ದವನ್ನು ನೋಡುವುದು

ಆಣಿಅ. ವಿ: [**ಆನೀತ**] ತರಿಸಿಕೊಳ್ಳಲಾದ

ಆಣಿಅ.(ದೇ) '**ಆಢಿಅ**' ಶಬ್ದವನ್ನು ನೋಡುವುದು

ಆಣಿಕ್ಕ. ವಿ: [ದೇ] ವಕ್ರ, ಸೊಟ್ಟ, ಕುಟಿಲ(ಸೇ)

ಆಣಿಕ್ಕ. ನ: [ದೇ] ತಿರ್ಯಕ್ ಪ್ರಾಣಿಗಳ ಮೈಥುನ

ಆಣೀ. ಸಕ: [ಆ+ನೀ] ತರುವುದು. ವ.ಕೃ– ಆಣಂತೀಎ

ಆಣೀಯ. ವಿ: [**ಆನೀತ**] ತರಲ್ಪಟ್ಟ (ಹೇ)

ಆಣುಅ. ನ: [ದೇ] ಮುಖ(ದೇ), ಆಕಾರ, ಆಕೃತಿ

ಆಣುಓಗಿಅ. ವಿ: [**ಆನುಯೋಗಿಕ**] ವ್ಯಾಖ್ಯಾನ ಕರ್ತೃ, ವ್ಯಾಖ್ಯಾನಿಸುವವನು

ಆಣುಕಂಪಿಯ. ವಿ: [**ಆನುಕಂಪಿಕ**] ದಯಾಳು, ಕೃಪಾಳು

ಆಣುಗಾಮಿ. ವಿ: [**ಅನುಗಾಮಿನ್**] ಅನುಸರಣೆ ಮಾಡುವವನು, ಹಿಂಬಾಲಕ(ವಿಸೇ)

ಆಣುಗಾಮಿಯ. ವಿ: [**ಆನುಗಾಮಿಕ**] ಮೇಲಿನ ಬ್ದವನ್ನು ನೋಡುವುದು, ನ: ಅವಧಿಜ್ಞಾನದ ಒಂದು ಭೇದ(ಆವಮ)

ಆಣುಗುಣ್ಣ}. ನ: [**ಆನುಗುಣ್ಯ**] ಔಚಿತ್ಯ, ಅನುರೂಪತೆ,
ಆಣುಗುನ್ನ} ಅನುಕೂಲತೆ

ಆಣುಧಮ್ಮಿಯ. ವಿ: [**ಆನುಧರ್ಮಿಕ**] ಇತರೆ ಧರ್ಮೀಯರಿಗೂ ಇಷ್ಟವಾಗುವ(ಆಚಾ) ಸರ್ವಧರ್ಮಕ್ಕೆ ಸಮ್ಮತವಾಗುವ

ಆಣುಪಾಣು. '**ಆಣಾಪಾಣು**'ಶಬ್ದವನ್ನು ನೋಡುವುದು

ಆಣುಪುವ್ವ. ನ: [**ಆನುಪೂರ್ವ್ಯ**] ಅನುಕ್ರಮ, ರೂಢಿ(ಅಣು), **–ಣಾಮ, –ನಾಮ.** ನ: [**–ನಾಮನ್**] ನಾಮಕರ್ಮದ ಒಂದು ಬಗೆ(ಸಮ)

ಆಣುಪುವ್ವೀ. ಸ್ತ್ರೀ: [**ಆನುಪೂರ್ವೀ**] ಕ್ರಮ, ಪರಿಪಾಟಿ, **–ಣಾಮ.**ನ: [**–ನಾಮನ್**] ನಾಮಕರ್ಮದ ಒಂದು ಪ್ರಭೇದ

ಆಣುಲೋಮಿಅ. ವಿ: [**ಆನುಲೋಮಿಕ**] ಅನುಲೋಮ, ಯಥಾಕ್ರಮವಾಗಿರುವ, ಅನುಕೂಲ, ಮನೋಹರ

ಆಣುವಿತ್ತಿ. ಸ್ತ್ರೀ: [ಅನುವೃತ್ತಿ] ಅನುಸರಣ
ಆಣೂಗ. ಪುಂನ: [ಅನೂಪ] ನೀರಿನಿಂದ ಕೂಡಿರುವ ಪ್ರದೇಶ
ಆಣೂವ. ಪು: [ದೇ] ಶ್ವಪಚ, ಅಸ್ಪೃಶ್ಯ(ದೇ)
ಆಣೆ. ಸಕ: [ಆ+ನೀ] ತರು, ತೆಗೆದುಕೊಂಡು ಬರು
ಆಣೇ. ಸಕ: [ಜ್ಞಾ] ತಿಳಿದುಕೊಳ್ಳು, ಅರಿ
ಆಣೇಸರ. **'ಆಣಾ-ಈಸರ'** ಶಬ್ದವನ್ನು ನೋಡುವುದು
ಆತ. **'ಆಯ=ಆತ್ಮನ್'** ಶಬ್ದವನ್ನು ನೋಡುವುದು
ಆಂತ. ವಿ: [ಅಂತ್ಯ] **ಕೊನೆಯ, ಅಂತ್ಯದ**
ಆತಂಬ. **'ಆಯಂಬ=ಆತಾಮ್ರ'** ಶಬ್ದವನ್ನು ನೋಡುವುದು
ಆತಿತ್ಥ. **'ಆಇತ್ಥ'** ಶಬ್ದವನ್ನು ನೋಡುವುದು
ಆತ್ತ. **'ಆತ್ತ=ಆತ್ಮನ್'** ಶಬ್ದವನ್ನು ನೋಡುವುದು
ಆತ್ತ. **'ಅತ್ತ=ಆತ್ತ'** ಶಬ್ದವನ್ನು ನೋಡುವುದು
ಆತ್ತ. ವಿ: (ಆತ್ಮೀಯ] ಸ್ವಕೀಯ, ತನ್ನ, ತನ್ನ ಸಂಬಂಧದ
ಆದಂಸ}. **'ಆಯಂಸ'** ಶಬ್ದವನ್ನು ನೋಡುವುದು
ಆದಂಸಗ}.
ಆದ(ಶೌ). **'ಅತ್ತ=ಆತ್ಮನ್'** ಶಬ್ದವನ್ನು ನೋಡುವುದು
ಆದ. **'ಆಇ=ಆ+ದಾ'** ಶಬ್ದವನ್ನು ನೋಡುವುದು
ಆದಣ್ಣ.}. ವಿ: [ದೇ] ಆಕುಲ, ಚಿಂತಾಕ್ರಾಂತ,
ಆದನ್ನ}. ದಿಗ್ಭ್ರಮೆಗೊಂಡ ವ್ಯಾಕುಲ, ಗಾಬರಿಗೊಂಡ (ಉಪ)
ಆದಯಾಣ. ವಿ: [ಆದದಾನ] ಸ್ವೀಕರಿಸುತ್ತಿರುವ
ಆದರ. **'ಆಯರ=ಆ+ದೃ.'** ನೋಡುವುದು. **'ಆದರಇ'**
ಆದರಿಸ. **'ಆಯಂಸ'** ಶಬ್ದವನ್ನು ನೋಡುವುದು
ಆದಾಉ. ವಿ: [ಆದಾತೃ] ಸ್ವೀಕರಿಸುವವವನು, ತೆಗೆದುಕೊಳ್ಳುವವನು(ವಿಸೇ)
ಆದಾಣ. **'ಆಯಾಣ'** ಶಬ್ದವನ್ನು ನೋಡುವುದು (ಪಉಮ)
ಆದಾಣ. ನ: [ಆರ್ದ್ರಹಣ] ಕುದಿಸಲ್ಪಟ್ಟ, ಬಿಸಿಮಾಡಿದ (ನೀರು ಎಣ್ಣೆ ಇತ್ಯಾದಿ)
ಆದಾಣಿಯ. ನ: [ಆದಾನೀಯ] ಲಾಭ
ಆದಿ. **'ಆಇ=ಆದಿ'** ಶಬ್ದವನ್ನು ನೋಡುವುದು
ಆದಿಚ್ಚ. **'ಆಇಚ್ಚ'** ಶಬ್ದವನ್ನು ನೋಡುವುದು(ಠಾ)
ಆದಿಚ್ಛಾ. ಸ್ತ್ರೀ: [ಆದಿತ್ಸಾ] ಸ್ವೀಕರಿಸುವ ಇಚ್ಛೆ(ಆವ)
ಆದಿಜ್ಜ. **'ಆಎಜ್ಜ'** ಶಬ್ದವನ್ನು ನೋಡುವುದು
ಆದಿಟ್ಠ. **'ಆಇಟ್ಠ'** ಶಬ್ದವನ್ನು ನೋಡುವುದು
ಆದಿತ್ತ. **'ಆಇಚ್ಚ'** ಶಬ್ದವನ್ನು ನೋಡುವುದು
ಆದಿತ್ತು. ವಿ: [ಆದಾತೃ] ಸ್ವೀಕರಿಸುವವನು(ಠಾ)
ಆದಿಯ. ಸಕ: [ಆ+ದಾ] ಸ್ವೀಕರಿಸು **'ಆದಿಯಇ'**
ಆದಿಲ್ಲ.} **'ಆಇಲ್ಲ'** ಶಬ್ದವನ್ನು ನೋಡುವುದು
ಆದಿಲ್ಲಗ}.
ಆದೀ. ಸ್ತ್ರೀ: [ಆದೀ] ಈ ಹೆಸರಿನ ಒಂದು ಮಹಾನದಿ
ಆದೀಣ. ವಿ: [ಆದೀನ] ಅತ್ಯಂತ ದೀನ, ಬಹಳ ಬಡವ (ಸೂಅ), ನ: ದೂಷಿತವಾದ ಭಿಕ್ಷೆ, **-ಭೋಇ.** ವಿ: [ಭೋಜಿನ್] ದೂಷಿತ ಭಿಕ್ಷೆಯನ್ನು ನಿಡುವವನು (ಸೂಅ)
ಆದೀಣಿಯ. ವಿ: [ಆದೀನಿಕ] ಅತ್ಯಂತ ದೀನ ಸಂಬಂಧಿ
ಆದು(ಶೌ). **'ಅದು'** ಶಬ್ದವನ್ನು ನೋಡುವುದು
ಆದೇಜ್ಜ. **'ಆಎಜ್ಜ'** ಶಬ್ದವನ್ನು ನೋಡುವುದು
ಆದೇಸ. **'ಆಏಸ=ಆದೇಶ'** ಶಬ್ದವನ್ನು ನೋಡುವುದು (ಕುಮಾ)
ಆದೇಸ. ಪು: [ಆದೇಶ] ವಂಶ, ಕುಲ, ಕಪಟತನ, ಕೀರ್ತಿ, ವ್ಯವಹಾರ, ವ್ಯಾಪಾರ. **'ಆಏಸ=ಆದೇಶ'** ಶಬ್ದವನ್ನು ನೋಡುವುದು
ಆಧರಿಸ. ಸಕ: [ಆ+ಧರ್ಷಯ್] ಸೋಲಿಸು, ತಿರಸ್ಕರಿಸು
ಆಧಾ **'ಆಹಾ'** ಶಬ್ದವನ್ನು ನೋಡುವುದು
ಆಧಾರ **'ಆಹಾರ=ಆಧಾರ'** ಶಬ್ದವನ್ನು ನೋಡುವುದು
ಆಧೋರಣ. ಪು: [ಆಧೋರಣ] ಮಾವತಿಗ
ಆನಯ **'ಆಣಯ'** ಶಬ್ದವನ್ನು ನೋಡುವುದು
ಆನಾಮಿಯ. **'ಆಣಾಮಿಯ'** ಶಬ್ದವನ್ನು ನೋಡುವುದು
ಆಪಣ. **'ಆವಣ'** ಶಬ್ದವನ್ನು ನೋಡುವುದು
ಆಪಣ್ಣ. **'ಆವಣ್ಣ'** ಶಬ್ದವನ್ನು ನೋಡುವುದು
ಆಪತ್ತಿ. ಸ್ತ್ರೀ: [ಆಪತ್ತಿ] ಪ್ರಾಪ್ತಿ, ಹೊಂದುವುದು, ಅದೃಷ್ಟ
ಆಪಾಇಯ. ವಿ: [ಆಪಾದಿತ] ಆಪಾದನೆಗೆ ಒಳಗಾದವನು, ಉತ್ಪಾದಿತ, ಹುಟ್ಟಿದ(ವಿಸೇ)
ಆಪಾಯಣ. ನ: [ಆಪಾದನ] ಸಂಪಾದನೆ, ತಪ್ಪು ಹೊರಿಸುವುದು
ಆಪೀಡ. ಪು: [ಆಪೀಡ] ಶಿರೋ-ಭೂಷಣ(ಶ್ರಾ) ಹಾರ
ಆಪೀಣ. **'ಆವೀಣ'** ಶಬ್ದವನ್ನು ನೋಡುವುದು
ಆಪುಚ್ಛ. ಸಕ: [ಆ+ಪ್ರಚ್ಛ್] ಆಜ್ಞೆಯನ್ನು ಪಡೆ, ಒಪ್ಪಿಗೆ ಪಡೆ **'ಆಪುಚ್ಛಇ'** ವ.ಕೃ-ಆಪುಚ್ಛಂತ
ಆಪುಚ್ಛಣ. ನ: [ಆಪ್ರಚ್ಛನ] ಆಜ್ಞೆ, ಅನುಮತಿ, ಅಪ್ಪಣೆ (ಣಾಯಾ)

ಆಪುಟ್ಠ. ವಿ: [ಆಪೃಷ್ಟ] ಯಾರ ಆಜ್ಞೆ ಅಥವಾ ಸಮ್ಮತಿಯನ್ನು ತೆಗೆದುಕೊಳ್ಳಲಾಗಿದೆಯೋ ಅವನು(ಸುರ)

ಆಪುಣ್ಣ. ವಿ: [ಆಪೂರ್ಣ] ಪೂರ್ಣಗೊಂಡ, ತುಂಬಿದ

ಆಪೂರ. ಪು: [ಆಪೂರ] ತುಂಬುವವನು, ಚೆನ್ನಾಗಿ ತುಂಬಿದ, (ಕಪ್ಪ), ನೀರಿನ ಪ್ರವಾಹ

ಆಪೂರ. 'ಆಊರ' ಶಬ್ದವನ್ನು ನೋಡುವುದು

ಆಪೇಡ}. 'ಆಪೀಡ' ಶಬ್ದವನ್ನು ನೋಡುವುದು

ಆಪೆಡ್ಡ}.

ಆಪೆಲ್ಲ}.

ಆಪ್ಪಣ. ನ: [ದೇ] ಪಿಷ್ಟ, ಹಿಟ್ಟು(ಷಡ್)

ಆಫಂಸ. ಪು: [ಆಸ್ಪರ್ಶ] ಕಡಿಮೆ ಸ್ಪರ್ಶ(ಹೇ)

ಆಫರ. ಪು: [ದೇ] ಜೂಜು

ಆಫಾಲ. ಸಕ: [ಆ+ಸ್ಫಾಲಯ್] ಹೊಡೆ, ಆಘಾತಿಸು, ತಟ್ಟು

ಆಫಾಲಣ. 'ಆಪ್ಫಾಲಣ' ಶಬ್ದವನ್ನು ನೋಡುವುದು

ಆಫುಣ್ಣ. ವಿ: [ದೇ] ಆಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ, ಅತಿಕ್ರಮಿಸಲ್ಪಟ್ಟ

ಆಫೋಡಿಅ. ನ: [ಆಸ್ಫೋಟಿತ] ತೋಳುಗಳನ್ನು ಅಪ್ಪಳಿಸು(ಪಣ್ಣ)

ಆಬಂಧ. ಸಕ: [ಆ+ಬಂಧ್] ಭದ್ರವಾಗಿ ಕಟ್ಟು

ಆಬಂಧ. ಪು: [ಆಬಂಧ] ಸಂಬಂಧ, ಸಂಯೋಗ

ಆಬದ್ಧ. ವಿ: [ಆಬದ್ಧ] ಕಟ್ಟಲ್ಪಟ್ಟ, ಮಾಡಲ್ಪಟ್ಟ

ಆಬಾಹಾ. ಸ್ತ್ರೀ: [ಆಬಾಧಾ] ಅಲ್ಪ ಬಾಧೆ(ಣಾಯಾ), ಅಡ್ಡಿ, ಪೀಡೆ, ತೊಂದರೆ, ಮಾನಸಿಕ ಪೀಡೆ(ಬೃಹ)

ಆಭಂಕರ. ಪು: [ಆಭಂಕರ] ಗ್ರಹ-ವಿಶೇಷ, ನ: ವಿಮಾನ-ವಿಶೇಷ, -ಪಭಂಕರ. ನ: [-ಪ್ರಭಂಕರ] ವಿಮಾನವಿಶೇಷ

ಆಭಕ್ಖಾಣ. 'ಅಬ್ಭಕ್ಖಾಣ' ಶಬ್ದವನ್ನು ನೋಡುವುದು

ಆಭಟ್ಠ. ವಿ: [ಆಭಾಷಿತ] ಕಥಿತ, ಹೇಳಲ್ಪಟ್ಟ, ಉಕ್ತ, ಸಂಭಾಷಣೆ ಮಾಡಲಾದ (ಸುರ)

ಆಭರಣ. ನ: [ಆಭರಣ] ಅಲಂಕಾರ, ಒಡವೆ

ಆಭವ್ವ. ವಿ: [ಆಭಾವ್ಯ] ಸಂಭವಿಸುವಂಥದು, ಆಗಬಹುದಾದ್ದು, ಘಟಿಸಬಹುದಾದ(ಸುಪಾ)

ಆಭಾ. ಸ್ತ್ರೀ: [ಆಭಾ] ಕಾಂತಿ, ತೇಜಸ್ಸು, ಪ್ರಕಾಶ(ಔಪ)

ಆಭಾಗಿ. ವಿ: [ಆಭಾಗಿನ್] ಅನುಭವಿಸುವವನು, ಭೋಗಿ

ಆಭಾರ. ಪು: [ಆಭಾರ] ಭಾರ(ಸುಪಾ)

ಆಭಾಸ. ಸಕ: [ಆ+ಭಾಷ್] ಹೇಳು, ಸಂಭಾಷಿಸು. 'ಆಭಾಸಇ'

ಆಭಾಸ. ಪು: [ಆಭಾಸ] ಅದಲ್ಲದಿದ್ದರೂ ಅದರಂತೆ ತೋರುವ ಭ್ರಾಂತಿ, ತಪ್ಪು ತಿಳಿವಳಿಕೆ, ವಿರುದ್ಧ

ಆಭಾಸಿಯ. ಪು: [ಆಭಾಷಿಕ] ಈ ಹೆಸರಿನ ಒಂದು ಮ್ಲೇಚ್ಛದೇಶ, ಅದರಲ್ಲಿ ವಾಸಿಸುವ ಮ್ಲೇಚ್ಛ ಜಾತಿ(ಪಣ್ಣ), ಒಂದು ಅಂತರ್ ದ್ವೀಪ, ಅದರಲ್ಲಿ ವಾಸಿಸುವರು

ಆಭಾಸಿಯ. 'ಆಭಟ್ಠ' ಶಬ್ದವನ್ನು ನೋಡುವುದು

ಆಭಿಓಇಯ. ಆಭಿಓಗಿಯ' ಶಬ್ದವನ್ನು ನೋಡುವುದು

ಆಭಿಓಗ. ಪು: [ಆಭಿಯೋಗ್ಯ] ಕಿಂಕರ ಸ್ಥಾನದಲ್ಲಿರುವ ದೇವ-ವಿಶೇಷ, ನೌಕರ, ಕಿಂಕರತ್ವ, ನೌಕರಿ

ಆಭಿಓಗಾ. ಸ್ತ್ರೀ: [ಆಭಿಯೋಗ್ಯಾ] ಕಿಂಕರತ್ವದ ಭಾವನೆ

ಆಭಿಓಗಿ. ವಿ: [ಆಭಿಯೋಗಿನ್] ಕಿಂಕರ ಸ್ಥಾನದಲ್ಲಿರುವ ದೇವ

ಆಭಿಓಗಿಯ. ವಿ: [ಆಭಿಯೋಗಿಕ] ಮಂತ್ರವೇ ಮೊದಲಾದುವುಗಳಿಂದ ಜೀವನ ಸಾಗಿಸುವವನು (ಪಣ್ಣ) ಕಿಂಕರ ಸ್ಥಾನದಲಿರುವ ದೇವ-ವಿಶೇಷ (ಣಾಯಾ), ಬೇರೆಯವರನ್ನು ಮಂತ್ರಾದಿಗಳಿಂದ ವಶಮಾಡಿಕೊಳ್ಳುವ ಮಂತ್ರಾದಿ ಕರ್ಮಗಳು (ಪಂಚಾ)

ಆಭಿಯೋಗಿಯ. ವಿ: [ಆಭಿಯೋಗಿತ] ವಶೀಕರಣವೇ ಮೊದಲಾದುವುಗಳಿಂದ ಸಂಸ್ಕಾರಗೊಂಡ(ಆವ)

ಆಭಿಒಗ್ಗ. 'ಆಭಿಓಗ' ಶಬ್ದವನ್ನು ನೋಡುವುದು

ಆಭಿಗ್ಗಹಿಅ. ವಿ: [ಆಭಿಗ್ರಹಿಕ] ಅಭಿಪ್ರಾಯಕ್ಕೆ ಸಂಬಂಧಿಸಿದ, ಮಿಥ್ಯಾತ್ವ ವಿಶೇಷ

ಆಭಿಗ್ಗಹಿಯ. ವಿ: [ಆಭಿಗ್ರಾಹಿಕ] ಪ್ರತಿಜ್ಞೆಯೊಂದಿಗೆ ಸಂಬಂಧ ಇಟ್ಟುಕೊಂಡಿರುವ, ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳುವವನು ಮಿಥ್ಯಾತ್ವ ವಿಶೇಷ

ಆಭಿಣಂದಿಯ. ವಿ: [ಆಭಿನಂದಿತ] ಶ್ರಾವಣಮಾಸ.

ಆಭಿಟ್ಟ.} ವಿ: [ದೇ] ಪ್ರವೃತ್ತ, ಕೆಲಸದಲ್ಲಿ

ಆಭಿಡಿಯ.} ತೊಡಗಿಸಿಕೊಂಡಿರುವ

ಆಭಿಣಿಬೋಹಿಗ.} ನ: [ಆಭಿನಿಬೋಧಿಕ] ಇಂದ್ರಿಯ

ಆಭಿಣಿಬೋಹಿಯ.} ಮತ್ತು ಮನಸ್ಸಿನಿಂದ ಉಂಟಾಗುವ ಪ್ರತ್ಯಕ್ಷ ಜ್ಞಾನ-ವಿಶೇಷ

ಆಭಿಪ್ಪಾಇಅ. ವಿ: [ಆಭಿಪ್ರಾಯಿಕ] ಅಭಿಪ್ರಾಯವನ್ನು ಹೊಂದಿರುವ

ಆಭಿಸೆಕ್ಕ. ವಿ: [**ಆಭಿಷೇಕ್ಯ**] ಅಭಿಷೇಕಕ್ಕೆ ಅರ್ಹವಾದ, ಮುಖ್ಯ, ಪ್ರದಾನ(ಔಪ)

ಆಭೀರ}. ಪು: [**ಆಭೀರ**] ಗೋಪಾಲಕ, ಗೊಲ್ಲ,

ಆಭೀರಿಯ}. ಒಂದು ಶೂದ್ರ ಜಾತಿ(ಸೂಅ)

ಆಭೂಅ. ವಿ: [**ಆಭೂತ**] ಉತ್ಪನ್ನ,

ಆಭೇಡಿಯ. (ದೇ) '**ಆಭಿಟ್ಟ**' ಶಬ್ದವನ್ನು ನೋಡುವುದು

ಆಭೋಇಅ. ವಿ: [**ಆಭೋಗಿತ**] ನೋಡಿರುವ

ಆಭೋಗ. ಪು: [**ಆಭೋಗ**] ನೋಡುವುದು, ವಿಲೋಕನ, ಪ್ರದೇಶ, ಸ್ಥಾನ, ಉಪಕರಣ, ಸಾಧನ, ಪ್ರತಿಲೇಖನ, ಉಪಯೋಗ, ಗಮನ, ವಿಸ್ತಾರ, ಜ್ಞಾನ, ಭೋಗಪರ್ಯಂತ, ಸುಖಾನುಭವ

ಆಭೋಗಣ. ನ: [**ಆಭೋಗನ**] ಮೇಲಿನ ಶಬ್ದವನ್ನು ನೋಡುವುದು

ಆಭೋಗಿ. ವಿ: [**ಆಭೋಗಿನ್**] ಪರಿಪೂರ್ಣ, **–ಣೀ.** ಸ್ತ್ರೀ: [**–ನೀ**] ಮಾನಸಿಕ ನಿರ್ಣಯವನ್ನು ಉತ್ಪನ್ನ ಮಾಡುವ ವಿದ್ಯಾ–ವಿಶೇಷ

ಆಭೋಯ. ಸಕ: [**ಆ+ಭೋಗ್ಯ**] ನೋಡು, ತಿಳಿ, ಲಕ್ಷಿಸು, ಗಮನಿಸು '**ಆಭೋಏಇ**'. ವ.ಕೃ: **ಆಭೋಏಮಾಣ**

ಆಭೋಯ. ಪು: [**ಆಭೋಗ**] ಸರ್ಪದ ಹೆಡೆ, '**ಆಭೋಗ**' ಶಬ್ದವನ್ನು ನೋಡುವುದು

ಆಮ. ಅ: [**ಭವತ್**] ತಾವು

ಆಮ. ಅ: [**ಆಮ**] ಅಂಗೀಕಾರ, ಒಪ್ಪಿಗೆ, ಉತ್ತರಗಳನ್ನು ಸೂಚಿಸುವ ಅವ್ಯಯ(ಸುರ), ಅತಿಶಯ, ಅತ್ಯಂತ

ಆಮ.ಪು:[**ಆಮ**] ರೋಗ, ಪೀಡೆ, ಹಸಿಯಾದ,ಅಪಕ್ವ, ಅಜೀರ್ಣ ರೋಗ, ಅಶುದ್ಧ, ಅಪವಿತ್ರ, **–ಜ್ಜರ.** ಪು: [**–ಜ್ವರ**] ಅಜೀರ್ಣದಿಂದ ಹುಟ್ಟಿದ ಜ್ವರ(ಗಾ)

ಆಮಂಡ. ನ: [**ದೇ**] ಕೃತ್ರಿಮ ನೆಲ್ಲಿಕಾಯಿ

ಆಮಂಡಣ. ನ: [**ದೇ**] ಭಾಂಡ, ಪಾತ್ರೆ(ದೇ)

ಆಮಂತ. ಸಕ: [**ಆ+ಮಂತ್ರಯ್**] ಆಹ್ವಾನಿಸು, ಸಂಬೋಧಿಸು, ಅಭಿನಂದಿಸು

ಆಮಂತಣ.ನ:[**ಆಮಂತ್ರಣ**]ಆಹ್ವಾನಿಸುವುದು, ಸಂಬೋಧಿಸುವುದು,ಕರೆಯುವುದು.**–ವಯಣ.**ನ: [**–ವಚನ**] ಸಂಬೋಧನವಿಭಕ್ತಿ

ಆಮಂತಣೀ. ಸ್ತ್ರೀ: [**ಆಮಂತ್ರಣೀ**] ಸಂಬೋಧನೆಯ ಭಾಷೆ, ಕರೆಯುವ, ಆಹ್ವಾನಿಸುವ ಭಾಷೆ, ಸಂಬೋಧನ ವಿಭಕ್ತಿ

ಆಮಂತಿಯ. ವಿ: [**ಆಮಂತ್ರಿತ**] ಸಂಬೋಧಿತ, ಆಹ್ವಾನಿಸಲ್ಪಟ್ಟ, ಕರೆಯಲ್ಪಟ್ಟ(ವಿಪಾ)

ಆಮಗ. '**ಆಮ**' ಶಬ್ದವನ್ನು ನೋಡುವುದು

ಆಮಘಾಯ. ಪು: [**ಆಮಘಾತ**] ಅಂಬಾರಿಯನ್ನು ನೀಡುವುದು, ಹಿಂಸೆಯ ನಿವಾರಣೆ

ಆಮಜ್ಜ. ಸಕ: [**ಆ+ಮೃಜ್**] ಒಂದು ಬಾರಿ ಸ್ವಚ್ಛಗೊಳಿಸು.ವ.ಕೃ–**ಆಮಜ್ಜಂತ**

ಆಮದ್ದ. ಪು: [**ಆಮರ್ದ**] ಸಂಘರ್ಷ, ಬಲಾತ್ಕಾರವಾಗಿ ಎಳೆದು ಹಿಸುಕು, ಹೊಡೆತ(ಕುಮಾ)

ಆಮಯ. ಪು: [**ಆಮಯ**] ರೋಗ, ನೋವು, **–ಕರಣೀ.** ಸ್ತ್ರೀ: [**–ಕರಣೀ**] ಒಂದು ವಿದ್ಯಾ–ವಿಶೇಷ

ಆಮಯ. ವಿ: [**ಆಮತ್ತ**] ಸಮ್ಮತ, ಅನುಮತ, ಒಪ್ಪಲಾದ, ಅಂಗೀಕೃತ, ಅನುಮತಿಸಲಾದ

ಆಮರಿಸ. ಪು: [**ಆಮರ್ಷ**] ಸ್ಪರ್ಶ

ಆಮಲ. ಪುಂನ: [**ಆಮಲಕ**] ನೆಲ್ಲಿಕಾಯಿ

ಆಮಲಈ. ಸ್ತ್ರೀ: [**ಆಮಲಕೀ**] ನೆಲ್ಲಿಯ ಮರ, ನೆಲ್ಲಿಕಾಯಿ

ಆಮಲಕಪ್ಪಾ. ಸ್ತ್ರೀ: [**ಆಮಲಕಲ್ಪಾ**] ಒಂದು ನಗರ–ವಿಶೇಷ

ಆಮಲಗ. ಪು: [**ಆಮರಕ**] ನಾಲ್ಕೂ ಕಡೆಯಿಂದ ಹೊಡೆಯುವುದು, ವಿಪಾಕ ಶ್ರುತದ ಒಂದು ಅಧ್ಯಯನ(ಠಾ)

ಆಮಲಗ}. ಪುಂ. ನ: [**ಆಮಲಕ**] ನೆಲ್ಲಿಕಾಯಿ ಮರ,

ಆಮಲಯ}. ನೆಲ್ಲಿಕಾಯಿ(ಕುಮಾ)

ಆಮಲಯ. ನ: [**ದೇ**] ನೂಪುರಗಳನ್ನು ಇಡುವ ಕೊಠಡಿ, ನೂಪುರ ಇಡುವ ಜಾಗ(ದೇ)

ಆಮಿಣ. ವಿ: [**ಆಮಸೃಣ**] ಸ್ವಲ್ಪ ನುಣುಪಾದ, ಸ್ನಿಗ್ಧ, ಉಲ್ಲಸಿತ

ಆಮಿಲ್ಲ. ಸಕ: [**ಆ+ಮುಚ್**] ಬಿಟ್ಟುಬಿಡು, '**ಆಮಿಲ್ಲಇ**'

ಆಮಿಸ. ನ: [**ಆಮಿಷ**] ಮಾಂಸ(ಣಾಯಾ), ನೈವೇದ್ಯ, ವಿ: ಮನೋಹರವಾದ, ವಿ: ಸುಂದರವಾದ, ಆಸಕ್ತಿಗೆ ಕಾರಣವಾದ್ದು, ಆಹಾರ, ಹಣ್ಣು ಇತ್ಯಾದಿ ಭೋಜ್ಯ ವಸ್ತುಗಳು(ಪಂಚಾ) ಸುಖ ಸಾಮಗ್ರಿ, ಪ್ರಲೋಭನೆ

ಆಮುಂಚ. ಸಕ: [**ಆ+ಮುಚ್**] ಬಿಡು, ಇಳಿಸು, ಧರಿಸು, ವ. ಕೃ–**ಆಮುಂಚಂತ**

ಆಮುಕ್ಕ. ವಿ: [**ಆಮುಕ್ತ**] ಬಿಡಲ್ಪಟ್ಟ(ಗಾ), ಇಳಿಸಲ್ಪಟ್ಟ

ಆಮುಟ್ಟ. ವಿ: [ಆಮೃಷ್ಟ] ಸ್ಪರ್ಶಿಸಲ್ಪಟ್ಟ, ತಲೆಕೆಳಗು ಮಾಡಲಾದ, ಒರೆಸಲ್ಪಟ್ಟ, ಉಜ್ಜಲ್ಪಟ್ಟ

ಆಮುಸ. ಸಕ: [ಆ+ಮೃಶ್] ಸ್ವಲ್ಪ ಇಲ್ಲವೆ ಒಮ್ಮೆ ಸ್ಪರ್ಶಿಸು, ವ. ಕೃ– **'ಆಮುಸಂತ'**(ಆಚಾ)

ಆಮೇಡಣಾ. ಸ್ತ್ರೀ: [ಆಮ್ರೇಡನಾ] ತಲೆಕೆಳಗುಮಾಡು, ಪುನರುಕ್ತಿ(ಪಣ್ಣ)

ಆಮೇಲ. ಪು: [ದೇ] ಜಟೆ, ತೊಡಕಾದ ಕೂದಲು

ಆಮೇಲ}. ಪು: [ಆಪೀಡ] ತಲೆಯ ಮೇಲೆ

ಆಮೇಲಗ}. ಧರಿಸಲಾಗುವ ಹೂವಿನ ಹಾರ,

ಆಮೇಲಯ}. ಶಿರೋಭೂಷಣ(ಹೇ)

ಆಮೆಲ್ಲ. **'ಆಮೇಲ=ಆಪೀಡ'** ಶಬ್ದವನ್ನು ನೋಡುವುದು

ಆಮೆಲ್ಲಿಅ. ವಿ: [ಆಪೀಡಿತ] ಶಿರೋಭೂಷಣದಿಂದ ಅಲಂಕೃತವಾದ, ನೋಯಿಸಲ್ಪಟ್ಟ, ಹಿಸುಕಲ್ಪಟ್ಟ

ಆಮೋಅ. ಅಕ: [ಆ+ಮುದ್] ಸಂತೋಷ ಹೊಂದು, ಹರ್ಷಿತನಾಗು

ಆಮೋಅ. ಪು: [ದೇ.ಆಮೋದ] ಹರ್ಷ, ಖುಷಿ, ಸಂತಸ

ಆಮೋಅ. ಪು: [ಆಮೋದ] ಸುಗಂಧ, ಸುವಾಸನೆ(ಸೇ), ಒಂದು ವಾದ್ಯ

ಆಮೋಅಅ.ವಿ: [ಆಮೋದಕ] ಸುವಾಸನೆಯನ್ನುಂಟು ಮಾಡುವಂಥದು, ಆನಂದವನ್ನುಂಟು ಮಾಡುವಂಥದು

ಆಮೋಅಅ. ವಿ: [ಆಮೋದದ] ಸುಗಂಧವನ್ನು ನೀಡುವಂಥದು(ಸೇ)

ಆಮೋಇಅ. ವಿ: [ಆಮೋದಿತ] ಹರ್ಷಗೊಂಡ, ಸಂತಸತಾಳಿದ, ಮುದಗೊಂಡ (ಭವಿ)

ಆಮೊಕ್ಖ. ಪು: [ಆಮೋಕ್ಷ] ಬಿಡುಗಡೆ, ಮೋಕ್ಷ, ಪೂರ್ಣ ಬಿಡುಗಡೆ. ಸ್ತ್ರೀ:**–ಕ್ಖಾ:** ಬಿಡುಗಡೆ, ಪರಿತ್ಯಾಗ

ಆಮೋಡ. ಪು: [ದೇ] ಜಟೆ, ಗಂಟುಗಂಟಾದ ಕೂದಲು

ಆಮೋಡಗ. ನ: [ಆಮೋಟಕ] ವಾದ್ಯ–ವಿಶೇಷ(ಆಚೂ) ಜಟೆಯಲ್ಲಿ ಹೂವು ಕಟ್ಟಿಕೊಳ್ಳುವುದು

ಆಮೋಡಣ. ನ: [ಆಮೋಟನ] ಸ್ವಲ್ಪ ತಿರುಗುವುದು (ಪಣ್ಣ)

ಆಮೋಡಿಅ. ವಿ: [ಆಮೋಟಿತ] ನಾಶಪಡಿಸಲಾದ, ಪುಡಿಮಾಡಲ್ಪಟ್ಟ, ಅರೆಯಲ್ಪಟ್ಟ, ಉಜ್ಜಲ್ಪಟ್ಟ

ಆಮೋದ}. **'ಆಮೋಅ'** ಶಬ್ದವನ್ನು ನೋಡುವುದು

ಆಮೋಯ}.

ಆಮೋಯ. ಪು: [ಆಮೋಕ] ಕಸದ ರಾಶಿ(ಆಚಾ)

ಆಮೋರಅ. ವಿ: [ದೇ] ವಿಶೇಷಜ್ಞ, ಚೆನ್ನಾಗಿ ತಿಳಿದವನು(ದೇ)

ಆಮೋಸ. ಪು: [ಆಮರ್ಶ,–ರ್ಷ] ಸ್ಪರ್ಶ, ಮುಟ್ಟುವುದು(ಪಣ್ಣ)

ಆಮೋಸ. ಪು: [ಆಮೋಷ] ಕಳ್ಳ

ಆಮೋಸಗ. ವಿ: [ಆಮೋಷಕ] ಕಳ್ಳ, ಕಳ್ಳರ ಒಂದು ಜಾತಿ

ಆಮೋಸಹಿ. ಪು: [ಆಮರ್ಶೌಷಧಿ] ಯಾವುದರ ಸ್ಪರ್ಶಮಾತ್ರದಿಂದ ಸಕಲ ರೋಗಗಳೂ ಇಲ್ಲವಾಗುವ ಪ್ರಾಪ್ತಿ–ವಿಶೇಷ,

ಆಯ. ಪು: [ಆಯ] ಲಾಭ, ಪ್ರಾಪ್ತಿ, ವನಸ್ಪತಿ–ವಿಶೇಷ, ಕಾರಣ, ಹೇತು, ಅಧ್ಯಯನ, ಗಮನ(ವಿಸೇ)

ಆಯ. ಪು: [ಆಯ] ಅಧ್ಯಯನ, ಶಾಸ್ತ್ರಾಂಶ–ವಿಶೇಷ

ಆಯ. ವಿ: [ಆಜ] ಕುರಿಗೆ ಸಂಬಂಧಿಸಿದ, ಕುರಿಯ ಕೂದಲಿನಿಂದ ಆದ ಕಂಬಳಿ ಇತ್ಯಾದಿ(ಆಚಾ)

ಆಯ. ವಿ: [ಆಗತ] ಬಂದಿರುವ, ಆಗಮಿಸಿರುವ

ಆಯ. ವಿ: [ಆತ್ತ] ಗೃಹೀತ, ಸ್ವೀಕರಿಸಲ್ಪಟ್ಟ, ತೆಗೆದುಕೊಳ್ಳಲಾದ

ಆಯ. ಪು. [ಆಗಸ್] ಪಾಪ, ಅಪರಾಧ

ಆಯ. **ಪುಂಸ್ತ್ರೀ: [ಆತ್ಮನ್]** ಆತ್ಮ, ಜೀವ, ಸ್ವಯಂ, ತಾನು, ಶರೀರ (ಣಾಯಾ), ಜ್ಞಾನವೇ ಮೊದಲಾದ ಆತ್ಮದ ಗುಣಗಳು, **–ಗುತ್ತ.** ವಿ: [**–ಗುಪ್ತ**] ಸಂಯಮಿ, ಜಿತೇಂದ್ರಿಯ, **–ಜೋಗಿ.** ವಿ: [**–ಯೋಗಿನ್**] ಆತ್ಮದ ಸ್ವರೂಪ ತಿಳಿದ ಧ್ಯಾನಿ, ಮುಮುಕ್ಷು. **–ಟ್ಠಿ** ವಿ: [**ಆತ್ಮಾರ್ಥಿನ್**] ಆತ್ಮಸ್ವರೂಪ ತಿಳಿಯ ಹೊರಟ ಮುಮುಕ್ಷು, **–ತಂತ.** ವಿ: [**–ತಂತ್ರ**] ಸ್ವಾಧೀನ, ಸ್ವತಂತ್ರ, **–ತತ್ತ.** ನ: [**–ತತ್ತ್ವ**] ಪರಮ ಪದಾರ್ಥ, ಜ್ಞಾನಾದಿ ರತ್ನತ್ರಯ(ಆಚಾ), **–ಪ್ಪಮಾಣ.** ವಿ: [**–ಪ್ರಮಾಣ**] ಮೂರೂವರೆ ಹಸ್ತದ ಅಳತೆಯುಳ್ಳ(ಪವ) **ಪ್ಪವಾಯ.** ನ: [**–ಪ್ರವಾದ**] ಹನ್ನೆರಡನೇ ಜೈನ ಷಡ್‌ಗ್ರಂಥದ ಒಂದು ಭಾಗ, ಏಳನೆಯದರ ಹಿಂದಿನದು, **_ಭಾವ.** ಪು: [**–ಭಾವ**] ಆತ್ಮ–ಸ್ವರೂಪ. ತನ್ನ ಅಭಿಪ್ರಾಯ (ಭಗ), ವಿಷಯಾಸಕ್ತಿ, **–ಯ.** ಪು: [**–ಜ**] ಪುತ್ರ, ಮಗ, **–ರಕ್ಖ.** ವಿ: [**–ರಕ್ಷ**] ಜ್ಞಾನಾದಿ ಆತ್ಮ ಗುಣಗಳಿಂದ ಕೂಡಿರುವ, **–ಹಮ್ಮ.**

ವಿ: [–ಘ್ನ] ಆತ್ಮವನ್ನು ಅಧೋಗತಿಗೆ ಕೊಂಡೊಯ್ಯುವಂಥದು, 'ಆಹಾಕಮ್ಮ' ಶಬ್ದವನ್ನು ನೋಡುವುದು

ಆಯ–. 'ಆವಇ' ಶಬ್ದವನ್ನು ನೋಡುವುದು

ಆಯಇ. ಸ್ತ್ರೀ: [ಆಯತಿ] ಭವಿಷ್ಯತ್ ಕಾಲ ಮುಂದಿನ ಕಾಲ(ಸುರ)

ಆಯಇಜಣಗ. ನ: [ಆಯತಿಜನಕ] ಒಂದು ಬಗೆಯ ತಪಶ್ಚರ್ಯೆ

ಆಯಇತ್ತಾ. ಆಇ=ಆ+ದಾ' ಶಬ್ದವನ್ನು ನೋಡುವುದು

ಆಯಂಕ. ಪು: [ಆತಂಕ] ದುಃಖ, ನೋವು(ಆಚಾ), ದುಃಸಾಧ್ಯ ರೋಗ, ನೋವು, **ಆಶುಘಾತಿ ರೋಗ**(ಔಪ)

ಆಯಂಕಿ. ವಿ: [ಆತಂಕಿನ್] ರೋಗಿ

ಆಯಂಗುಲ. ನ: [ಆತ್ಮಾಂಗಲ] ಅಳತೆಯ ಒಂದು ಪ್ರಭೇದ

ಆಯಂಚ. ಸಕ: [ಆ+ತಂಚ್] ಚಿಮುಕಿಸು, ಸಿಂಪಡಿಸು. 'ಆಯಂಚಇ'

ಆಯಂಚಣಿಯಾ. ಸ್ತ್ರೀ: [ಆತಂಚನಿಕಾ] ಕುಂಬಾರನು ಮಡಕೆಗಳನ್ನು ಮಾಡುವಾಗ ಮಡಕೆ ಮಾಡುವ ಹಸಿಮಣ್ಣನ್ನು ಇಟ್ಟುಕೊಳ್ಳುವ ಪಾತ್ರೆ(ಭಗ)

ಆ ಯಂಚಣೀ. ಸ್ತ್ರೀ: [ಆತಂಚನೀ] ಮೇಲಿನ ಶಬ್ದವನ್ನು ನೋಡುವುದು

ಆಯಂತ. ವಿ: [ಆಚಂತ] ಆಚಮನ ಮಾಡಿದವನು

ಆಯುಂತ. 'ಆಉಣಾ=ಆ+ಉಣಾ' ಶಬ್ದವನ್ನು ನೋಡುವುದು

ಆಯುಂತವು. ವಿ: [ಆತ್ಮತಮು] ಆತ್ಮವನ್ನು ಖಿನ್ನ(ದುಃಖಿತ) ಗೊಳಿಸುವವನು(ಠಾ)

ಆಯಂತಮ. ವಿ: [ಆತ್ಮತಮಸ್] ಅಜ್ಞಾನಿ, ಅಜ್ಞಾನ, ಕೋಪಗೊಂಡವನು.

ಆಯುಂದವು. ವಿ: [ಆತ್ಮದಮು] ಆತ್ಮವನ್ನು ಶಾಂತವಾಗಿಟ್ಟುಕೊಳ್ಳುವವನು, ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸುವವನು, ಕುದುರೆ ಮೊದಲಾದ ಪ್ರಾಣಿಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವುದನ್ನು ಕಲಿಸುವವನು(ಅಶ್ವಹೃದಯ ಬಲ್ಲವನು)

ಆಯುಂಪ. ಪು: [ಆಕಂಪ] ಕಂಪಿಸುವುದು, ಅಲ್ಲಾಡುವುದು, ಅಲ್ಲಾಡಿಸುವವನು (ಪಉಮ)

ಆಯಂಪಿಯ. ವಿ: [ಆಕಂಪಿತ] ಅಲ್ಲಾಡಿಸಲ್ಪಟ್ಟ

ಆಯಂಬ. ಅಕ: [ವೇಪ್] ನಡುಗು, ಅಲ್ಲಾಡು

ಆಯಂಬ}. ವಿ: [ಆತಾಮ್ರ] ಸ್ವಲ್ಪ ಕೆಂಪಗಿರುವ(ಔಪ)

ಆಯಂಬಿರ}.

ಅಯಂಬಿಲ. ನ: [ಆಚಾಮ್ಲ] ಒಂದು ತಪೋ–ವಿಶೇಷ, ಆಯಂಬಿಲ(ಣಾಯಾ,) □**ವಡ್ಢಮಾಣ**. ನ: [–ವರ್ಧಮಾನ] ಒಂದು ಬಗೆಯ ತಪಶ್ಚರ್ಯೆ

ಆಯಂಭರ}. ವಿ: [ಆತ್ಮಂಭರಿ] ಸ್ವಾರ್ಥಿ

ಆಯಂಭರಿ}.

ಆಯಂವ. ಅಕ: [ಆ+ಕಂಪ್] ಕಂಪಿಸು, ನಡುಗು, ಅಲ್ಲಾಡು

ಆಯಂಸ.}. ಪು: [ಆದರ್ಶ] ಕನ್ನಡಿ(ಪಣ್ಣ) ಎತ್ತು

ಆಯಂಸಗ}. ಹಸು ಮೊದಲಾದ ಪ್ರಾಣಿಗಳ ಕೊರಳ ಆಭರಣ(ಅಣು). **–ಮುಹ**. ಪು: [–ಮುಖ] ಅಂತರ್‌ದ್ವೀಪ, ಅದರ ನಿವಾಸಿಗಳು(ಠಾ)

ಆಯಕ್ಖ. 'ಆಇಕ್ಖ' ಶಬ್ದವನ್ನು ನೋಡುವುದು

ಆಯಗ. ವಿ: [ಆಜಕ] 'ಆಯ=ಆಜ' ಶಬ್ದವನ್ನು ನೋಡುವುದು

ಆಯಜ್ಝ. ಅಕ: [ವೇಪ್] ನಡುಗು, ಕಂಪಿಸು, ಅಲ್ಲಾಡು. **ವ. ಕೃ–ಆಯಜ್ಝಂತ**

ಆಯಟ್ಟ. ಸಕ: [ಆ+ ವರ್ತಯ್] ತಿರುಗಾಡಿಸು, ಕುದಿಸು. **ವ. ಕೃ–ಆಅಟ್ಟಂತ**

ಆಯಟ್ಟಣ. ನ: [ಆವರ್ತನ] ತಿರುಗಿಸುವುದು(ಸುಪಾ)

ಆಯಡ್ಢ. ಸಕ: [ಆ+ಕೃಷ್] ಸೆಳೆ,ಎಳೆ,ಆಕರ್ಷಿಸು

ಆಯುಡ್ಢಣ. ನ: [ಆಕರ್ಷಣ] ಆಕರ್ಷಣೆ, ಸೆಳೆತ(ಸುಪಾ), ಮೋಹಗೊಳಿಸುವುದು

ಆಯಡ್ಢಿ. ಸ್ತ್ರೀ: [ಆಕೃಷ್ಟಿ] ಮೇಲಿನ ಶಬ್ದವನ್ನು ನೋಡುವುದು(ಗಉಡ)

ಆಯಡ್ಢಿ. ಪು: [ದೇ] ವಿಸ್ತಾರ

ಆಯಣ್ಣ. ಸಕ: [ಆ+ಕರ್ಣಯ್] ಕೇಳು, ಆಲಿಸು. ವ. ಕೃ–ಆಭಿಣ್ಣಂತ

ಆಯಣ್ಣಣ. ನ: [ಆಕರ್ಣನ] ಕೇಳುವುದು, ಆಲಿಸುವುದು

ಆಯಣ್ಣಿಯ. ವಿ: [ಆಕರ್ಣಿತ] ಕೇಳಲ್ಪಟ್ಟ

ಆಯಯಂತ. ವ. ಕೃ: [ಆದದತ್] ಗ್ರಹಣಮಾಡುತ್ತ, ಸ್ವೀಕರಿಸುತ್ತ, ತೆಗೆದುಕೊಳ್ಳುತ್ತ (ಸೂಅ)

ಆಯತ್ತ. ವಿ: [ಆಯತ್ತ] ಅಧೀನ, ತನ್ನ ವಶದಲ್ಲಿರುವ

ಆಯನ್ನ. 'ಆಯಣ್ಣ' ಶಬ್ದವನ್ನು ನೋಡುವುದು

ಆಯನ್ನಣ. 'ಆಯಣ್ಣಣ' ಶಬ್ದವನ್ನು ನೋಡುವುದು
ಆಯಮ. ಸಕ: [ಆ+ಚಮ್] ಆಚಮನ ಮಾಡು, ಜಲಪಾನಮಾಡು
ಆಯಮಣ. ನ: [ಆಚಮನ] ಶುದ್ಧಿ, ಶೌಚ, ಹಸುವಿನ ಕಿವಿಯ ಆಕಾರಮಾಡಿಕೊಂಡ ಅಂಗೈಯಲ್ಲಿ ಉದ್ದಿನ ಕಾಳು ಮುಳುಗುವಷ್ಟು ಮಾತ್ರ ನೀರನ್ನು ಹಾಕಿಕೊಂಡು ಮಂತ್ರಪೂರ್ವಕ ಮೂರುಸಲ ಕುಡಿಯುವುದು(ಶ್ರಾ)
ಆಯಮಿಲ. 'ಆಗಮಿಲ' ಶಬ್ದವನ್ನು ನೋಡುವುದು
ಆಯಮಿಣೀ. ಸ್ತ್ರೀ: [ಆಯಮಿನೀ] ವಿದ್ಯಾ-ವಿಶೇಷ
ಆಯಯ. ವಿ: [ಆಯತ] ಉದ್ದವಾದ, ದೀರ್ಘವಾದ, ವಿಸ್ತಾರವಾದ (ಉವಾ), **ಪು:** ಮೋಕ್ಷ
ಆಯಯ. ಸಕ: [ಆ+ದದ್] ಸ್ವೀಕರಿಸು
ಆಯಯಣ. ನ: [ಆಯತನ] ಪ್ರಕಟಿಸುವುದು, ಸ್ವೀಕರಿಸಲು ಕಾರಣವಾದ್ದು, ಮನೆ, ಆಶ್ರಯ, ವಿಶ್ರಾಂತಿಸ್ಥಾನ, ದೇವಸ್ಥಾನ, ಧಾರ್ಮಿಕರು ಕಲೆಯುವ ಜಾಗ, ಕಣಜ ಕರ್ಮಬಂಧಕ್ಕೆ ಕಾರಣವಾದ್ದು(ಆಚಾ), ನಿರ್ಣಯ, ನಿಶ್ಚಯ (ಸೂಲ), ನಿರ್ದೋಷ-ಸ್ಥಾನ
ಆಯರ. ಸಕ: [ಆಚರ್] ಆಚರಿಸು, ಮಾಡು, ವರ್ತಿಸು **ವ. ಕೃ-ಆಯರಮಾಣ**
ಆಯರ. ಪು: [ಆಕರ] ಗಣಿ, ಸಮೂಹ, ಗುಂಪು(ಕಪ್ಪೂ)
ಆಯರ. 'ಆಯಾರ=ಆಚಾರ' ಶಬ್ದವನ್ನು ನೋಡುವುದು
ಆಯುರ. ಪು: [ಆದರ] ಸತ್ಕಾರ, ಸವಮ್ಮಾನ, ಗೌರವ(ಗಲುಡ), ಪರಿಗ್ರಹ ಅಸಂತೋಷ(ಪಣ್ಣ) ಗಮನ, ರಕ್ಷಣೆ, ವ್ಯವಸ್ಥೆ, ಎಚ್ಚರ
ಆಯರಂಗ. ಪು: [ಆಯರಂಗ] ಈ ಹೆಸರಿನ ಒಬ್ಬ ಮ್ಲೇಚ್ಛ ರಾಜ(ಪಉಮ)
ಆಯರಣ. ನ: [ಆದರಣ] ಆದರ, ಸತ್ಕಾರ, ಮನ್ನಣೆ
ಆಯರಣಾ. ಸ್ತ್ರೀ: [ಆಚರಣಾ] ಆಚರಣೆ, ಅನುಷ್ಠಾನ (ಉವರ), ಪರಂಪರೆಯಿಂದ ಬಂದ ಪದ್ಧತಿ
ಆಯರಿಯ. ವಿ: [ಆಚರಿತ] ಅನುಷ್ಠಿತ, ಮಾಡಲಾದ, ಹೇಳಲ್ಪಟ್ಟ ಶಾಸ್ತ್ರ ಸಮ್ಮತವಾದ ನಡವಳಿಕೆ, ವರ್ತನೆ
ಆಯರಿಯ. ಪು: [ಆಚಾರ್ಯ] ಗುಂಪಿನ ಮುಖಂಡ, ಉಪದೇಶಕ, ಗುರು, ಶಿಕ್ಷಕ, ಶಾಸ್ತ್ರಾರ್ಥವನ್ನು ಬೋಧಿಸುವವ

ಆಯರಿಸ. 'ಆಯಂಸ' ಶಬ್ದವನ್ನು ನೋಡುವುದು
ಆಯಲ್ಲ. ಅಕ: [ಲಂಬ್] ವಿಸ್ತರಿಸು, ಜೋಲಾಡು, ನೇತಾಡು
ಆಯಲ್ಲಯಾ. ಸ್ತ್ರೀ: [ದೇ] ವ್ಯಾಕುಲತೆ, ಗಾಬರಿ, ಅಶಾಂತತೆ
ಆಯಲ್ಲಿಯ. ವಿ: [ದೇ] ಆಕ್ರಾಂತ, ವ್ಯಾಪ್ತ, ವಿಸ್ತರಿಸಲ್ಪಟ್ಟ
ಆಯವ. ಪು: [ಆತಪವತ್] ಅ ಹೋರಾತ್ರದ ೨೪ನೇ ಮುಹೂರ್ತ
ಆಯವ. ವಿ: [ಆತಪ] ಪ್ರಕಾಶ, ಬೆಳಕು ಬಿಸಿಲು, **ನ:** ಮುಹೂರ್ತ-ವಿಶೇಷ. **-ಣಾಮ, -ನಾಮ. ನ:** [-ನಾಮನ್] ನಾಮಕರ್ಮದ ಒಂದು ಬಗೆ(ಸಮ)
ಆಯವತ್ತ. ನ: [ಆತಪತ್ರ] ಛತ್ರಿ, ಕೊಡೆ(ಣಾಯಾ)
ಆಯವತ್ತ. ಪು: [ಆರ್ಯಾವರ್ತ] ಭಾರತ,
ಆಯವಾ. ಸ್ತ್ರೀ: [ಆತಪಾ] ಸೂರ್ಯನ ಒಬ್ಬ ಪಟ್ಟದ ರಾಣಿ, ಈ ಹೆಸರಿನ 'ಜ್ಞಾತಾ- ಧರ್ಮಕಥಾ' ಸೂತ್ರದ ಒಂದು ಅಧ್ಯಯನ
ಆಯಸ. ವಿ: [ಆಯಸ] ಕಬ್ಬಿಣ, ಕಬ್ಬಿಣದ್ದು, ಕಬ್ಬಿಣದಿಂದ ಮಾಡಿದ್ದು
ಆಯಸೀ. ಸ್ತ್ರೀ: [ಆಯಸೀ] ಕಬ್ಬಿಣದ ಕವಚ(ಪಣ್ಣ)
ಆಯಾ. 'ಆಯ=ಆತ್ಮನ್' ಶಬ್ದವನ್ನು ನೋಡುವುದು
ಆಯಾ. ಸಕ: [ಆ+ಯಾ] ಬರು, ಆಗಮಿಸು. **'ಆಯಾಇಂತಿ'**
ಆಯಾ. ಸಕ: [ಆ+ದಾ] ಸ್ವೀಕರಿಸು, ತೆಗೆದುಕೊಳ್ಳು **'ಆಯಇಜ್ಜ'**
ಆಯಾಇ. ಸ್ತ್ರೀ: [ಆಜಾತಿ] ಉದಿಸುವುದು, ಹುಟ್ಟುವುದು ಉತ್ಪತ್ತಿ, ಜಾತಿ, ಪ್ರಕಾರ, ಆಚರಣೆ (ಆಚಾ), **-ಟ್ಠಾಣ.** ನ:[-ಸ್ಥಾನ] ಜಗತ್ತು, ಪ್ರಪಂಚ, **'ಆಚಾರಾಂಗ'** ಸೂತ್ರದ ಒಂದು ಅಧ್ಯಯನದ ಹೆಸರು
ಆಯಾಇ. ಸ್ತ್ರೀ: [ಆಯಾತಿ] ಆಗಮನ, ಬರುವುದು ಉತ್ಪತ್ತಿ, ಗರ್ಭದಿಂದ ಹೊರಬರುವುದು, ಭವಿಷ್ಯ ಕಾಲ; ಮುಂಬರುವ ಕಾಲ.
ಆಯಾಎ. 'ಆಯಾ=ಆ+ದಾ' ಶಬ್ದವನ್ನು ನೋಡುವುದು
ಆಯಾಣ. ಪುಂ.ನ: [ಆದಾನ] ಸ್ವೀಕರಿಸುವುದು, ಇಂದ್ರಿಯ, ಸ್ವೀಕರಿಸಿದ ವಸ್ತು, ಕಾರಣ, ಆದಿ, ಮೊದಲನೆಯ

ಆಯಾಣ. ನ: [**ಆದಾನ**] ಸಂಯಮ, ಚಾರಿತ್ರ, ವಿ: ಸ್ವೀಕರಿಸಲು ಅರ್ಹವಾದ. **-ಪಯ.** ನ: [**-ಪದ**] ಗ್ರಂಥದ ಮೊದಲ ಶಬ್ದ.

ಆಯಾಣ. ನ: [**ಆಯಾನ**] ಆಗಮನ, ಬರುವುದು, ಕುದುರೆಗೆ ತೊಡಿಸುವ ಒಂದು ಆಭರಣ-ವಿಶೇಷ

ಆಯಾಮ. ಸಕ: [**ಆ+ಯಮಯ್**] ದೀರ್ಘಗೊಳಿಸು, ವಿಸ್ತರಿಸು, ಲಂಬಿಸು

ಆಯಾಮ. ಸಕ: [**ಆ+ಯಮ್**] ಶುದ್ಧಿಗೊಳಿಸು,

ಆಯಾಮ. ಸಕ: [**ದಾ**] ಕೊಡು, ದಾನಮಾಡು, -'**ಆಯಾಮೇಇ**'

ಆಯಾಮ. ಪು: [**ಆಯಾಮ**] ಉದ್ದ, ದೀರ್ಘ, ವಿಸ್ತಾರ, ವೈಶಾಲ್ಯ(ಸಮ). '**ಆಯಾಮೇಇ**'

ಆಯಾಮ. ಪು: [**ದೇ**] ಬಲ, ಶಕ್ತಿ

ಆಯಾಮ. ನ: [**ಆಚಾಮ್ಲ**] ತಪೋ-ವಿಶೇಷ, ಅಯಂಬಿಲ

ಆಯಾಮ.}. ನ: [**ಆಚಾಮ**] ಅನ್ನದ ಮೇಲಿನ ಗಂಜಿ

ಆಯಾಮಗ}.

ಆಯಾಮಣಯಾ. ಸ್ತ್ರೀ: [**ಆಯಾಮನತಾ**] ಉದ್ದ (ಗಉಡ)

ಆಯಾಮಿ. ವಿ: [**ಆಯಾಮಿನ್**] ಉದ್ದ

ಆಯಾಮುಹೀ. ಸ್ತ್ರೀ: [**ಆಯಾಮುಖೀ**] ಈ ಹೆಸರಿನ ಒಂದು ನಗರ

ಆಯಾಯ. '**ಆಯಾ=ಆ+ದಾ**' ಶಬ್ದವನ್ನು ನೋಡುವುದು

ಆಯಾಯ. ವಿ: [**ಆಯಾತ**] ಬಂದಿರುವ, (ಪಉಮ)

ಆಯಾರ. ಸಕ: [**ಆ+ಕಾರಯ್**] ಕರೆ, ಆಹ್ವಾನಿಸು

ಆಯಾರ. ಪು: [**ಆಕಾರ**] ಆಕೃತಿ, ರೂಪ, ಇಂಗಿತ, ಸಂಜ್ಞೆ, ಸೂಚನೆ

ಆಯಾರ. ಪು: [**ಆಕಾರ**] '**ಅ**' ಅಕ್ಷರ

ಆಯಾರ. ಪು: [**ಆಚಾರ**] ಆಚರಣೆ, ಅನುಷ್ಠಾನ, ಪದ್ಧತಿ, ಸಂಪ್ರದಾಯ, ೧೨ ಜೈನ ಅಙ್ಗ ಗ್ರಂಥಗಳಲ್ಲಿ ಮೊದಲನೆಯದಾದ '**ಆಯಾರ ಪಢಮಸುತ್ತೇ**'. ನಿಪುಣನಾದ ಶಿಷ್ಯ(ಭಗ) **-ಕ್ಖೇವಣೀ.** ಸ್ತ್ರೀ: [**ಆಚಾರಾಕ್ಷೇಪಣೀ**] ಕಥೆಯ ಒಂದು ಪ್ರಭೇದ(ಠಾ), **-ಭಂಡಗ, -ಭಂಡಯ.** ನ: [**-ಭಾಂಡಕ**] ಜ್ಞಾನವೇ ಮೊದಲಾದವುಗಳ ಸಾಧನ(ಣಾಯಾ)

ಆಯಾರಿಮಯ. ನ: [**ಆಚಾರಿಮಕ**] ವಿವಾಹ ಸಮಯದಲ್ಲಿ ನೀಡಲಾಗುವ ಒಂದು ಬಗೆಯ ದಾನ

ಆಯಾರಿಯ. ವಿ: [**ಆಕಾರಿತ**] ಆಹ್ವಾನಿಸಲ್ಪಟ್ಟ, ಕರೆಯಲ್ಪಟ್ಟ, ನ: ಆಹ್ವಾನಿಸುವ ಮಾತು, ಆಕ್ಷೇಪಣೆಯ ಮಾತು(ಸೇ)

ಆಯಾವ. ಸಕ: [**ಆ+ತಾಪಯ್**] ಸೂರ್ಯನ ಬಿಸಿಲಿನಲ್ಲಿ ಸ್ವಲ್ಪ ಮೈಕಾಯಿಸಿಕೊಳ್ಳುವುದು, ಚಳಿ ಬಿಸಿಲುಗಳನ್ನು ಸಹಿಸುವುದು. **ವ. ಕೃ-ಆಯಾವಂತ**(ಪಉಮ)

ಆಯಾವ. ಪು: [**ಆತಾಪ**] ಅಸುರಕುಮಾರ ಜಾತಿಯ ದೇವ-ವಿಶೇಷ(ಭಗ)

ಆಯಾವ. ಪು: [**ಆತಾಪ**] ಆತಪ-ನಾಮ-ಕರ್ಮ=ಬಿಸಿಲು ಎಂಬ ಕರ್ಮ

ಆಯಾವಗ. ವಿ: [**ಆತಾಪಕ**] ಶೀತವೇ ಮೊದಲಾದುವನ್ನು ಸಹಿಸುವವನು(ಸೂಅ)

ಆಯಾವಣ. ನ: [**ಆತಾಪನ**] ಒಂದು ಸಲ ಅಥವಾ ಸ್ವಲ್ಪ ಮಟ್ಟಿಗೆ ಬಿಸಿಲನ್ನು ಸಹಿಸಿಕೊಳ್ಳುವುದು, **-ಭೂಮಿ.** ಸ್ತ್ರೀ: [**-ಭೂಮಿ**] ಶೀತಾದಿಗಳನ್ನು ಸಹಿಸುವ ಸ್ಥಳ(ಭಗ)

ಆಯಾವಣಯಾ.}. ಸ್ತ್ರೀ: [**ಆತಾಪನಾ**] ಮೇಲಿನ

ಆಯಾವಣಾ}. ಶಬ್ದವನ್ನು ನೋಡುವುದು

ಆಯಾವಯ. ವಿ: [**ಆತಾಪಕ**] ಶೀತವೇ ಮೊದಲಾದುವನ್ನು ಸಹಿಸುವವನು(ಪಣ್ಣ)

ಆಯಾವಲ.}. ಪು: [**ದೇ**] ಎಳೆ ಬಿಸಿಲು

ಆಯಾವಲಯ}.

ಆಯಾವಿ. ವಿ: [**ಆತಾಪಿನ್**] '**ಆಯಾವಯ**' ಶಬ್ದವನ್ನು ನೋಡುವುದು

ಆಯಾಸ. ಸಕ: [**ಆ+ಯಾಸಯ್**] ತೊಂದರೆ ಕೊಡು, ದುಃಖಿತನನ್ನಾಗಿ ಮಾಡು

ಆಯಾಸ. ಪು: [**ಆಯಾಸ**] ಕಷ್ಟ, ತೊಂದರೆ, ಪರಿಶ್ರಮ, ದುಃಖ(ಗಉಡ), ಸ್ವೀಕಾರ, ಅಸಂತೋಷ, (ಪಣ್ಣ)-**ಲಿವಿ.** ಸ್ತ್ರೀ: [**ಲಿಪಿ**] ಲಿಪಿ-ವಿಶೇಷ

ಆಯಾಸ. '**ಆಯಂಸ**' ಶಬ್ದವನ್ನು ನೋಡುವುದು

ಆಯಾಸ. '**ಆಗಾಸ**' ಶಬ್ದವನ್ನು ನೋಡುವುದು. **-ತಿಲಯ.** ನ: [**-ತಿಲಕ**] ಒಂದು ನಗರ.

ಆಯಾಸಇತ್ತಿಅ. ವಿ: [**ಆಯಾಸಯಿತೃ**] ಕಷ್ಟ ಕೊಡುವವನು, ತೊಂದರೆಪಡಿಸುವವನು(ಭವಿ)

ಆಯಾಸತಲ. ನ: [ದೇ] ಉಪ್ಪರಿಗೆ ಅಥವಾ ಅರಮನೆಯ ಹಿಂಭಾಗ(ದೇ)

ಆಯಾಸತಲ. ನ: [**ಆಕಾಶತಲ**] ಚಂದ್ರಶಾಲೆ, ಮನೆಯ ಛಾವಣಿಯ ಮೇಲುಗಡೆಯ ತೆರೆದ ಭಾಗ

ಆಯಾಸಲವ. ನ: [ದೇ] ಪಕ್ಷಿಗೂಡು, ನೀಡ

ಆಯಾಸಿಅ. ವಿ: [**ಆಯಾಸಿತ**] ಆಯಾಸಗೊಂಡ, ಬಳಲಿದ ದುಃಖಿತ

ಆಯಾಹಮ್ಮ. ವಿ: [**ಆತ್ಮಘ್ನ**] ಆತ್ಮ-ವಿನಾಶಕವಾದ, ನ: ಆಘಾ ಕರ್ಮದ ದೋಷ

ಆಯಾಹಿಣ. ನ: [**ಆದಕ್ಷಿಣ**] ದಕ್ಷಿಣದ(ಬಲಭಾಗ) ಕಡೆಯಿಂದ ಸುತ್ತುಬರುವುದು(ಉವಾ), **-ಪಯಾಹಿಣ.** ವಿ: [**-ಪ್ರದಕ್ಷಿಣ**] ಬಲಭಾಗದಿಂದ ಸುತ್ತು ಬಂದು ಬಲಭಾಗದಲ್ಲಿ ನಿಲ್ಲುವವನು (ತಾ)-**ಪಯಾಹಿಣಾ.** ಸ್ತ್ರೀ: [**-ಪ್ರದಕ್ಷಿಣಾ**] ಅದೇ ಅರ್ಥ

ಆಯು. '**ಆಉ=ಆಯುಷ್**' ಶಬ್ದವನ್ನು ನೋಡುವುದು. **-ವಂತ.**ವಿ:[**-ವತ್**] ದೀರ್ಘವಾದ ಆಯುಷ್ಯವುಳ್ಳವನು, ಚಿರಾಯು

ಆರ. ಪು: [**ಆರ**] ಇಹ ಲೋಕ, ಈ ಜನ್ಮ, ಮನುಷ್ಯ-ಲೋಕ, ಚೂಪಾದ ಕಬ್ಬಿಣದ ಮೊಳೆ, ನ: ಗೃಹಸ್ಥಿಕೆ

ಆರ. ಪು: [**ಆರ**] ಮಂಗಳಗ್ರಹ(ಪಉಮ), ನಾಲ್ಕನೇ ನರಕದ ಒಂದು ನರಕವಾಸ(ತಾ), ವಿ: ಆಧುನಿಕ, ಪೂರ್ವದ, ಒಂದು ಮೂಲೆ

-ಆರಅ. ವಿ: [**ಕಾರಕ**] ಕರ್ತೃ, ಮಾಡುವವನು(ಗಾ)

ಆರಓ. ಅ: [**ಆರತಸ್**] ಮೊದಲಿನ, ಈಚಿನ(ಸೂಅ), ಸಮೀಪದಲ್ಲಿ, ಹತ್ತಿರದಲ್ಲಿ(ಉಪ), ಪ್ರಾರಂಭಿಸಿ, ಹಿಂದಿನಿಂದ

ಆರಂದರ. ವಿ: [ದೇ] ಅನೇಕಾಂತ, ಸಂಕಟ, ಹಬ್ಬಿದ(ದೇ)

ಆರಂಭ. ಸಕ: [**ಆ+ರಭ್**] ಪ್ರಾರಂಭಿಸು, ಹಿಂಸಿಸು, 'ಆರಂಭಇ'

ಆರಂಭ. ಪು: [**ಆರಂಭ**] ಪ್ರಾರಂಭಿಸುವುದು, ಜೀವ-ಹಿಂಸೆ, ವಧೆ(ಶ್ರಾ), ಜೀವ, ಪ್ರಾಣಿ(ಪಣ್ಣ) ಪಾಪಕರ್ಮ-**ಯ.** ವಿ: [**-ಜ**] ಪಾಪ ಕೆಲಸದಿಂದ ಉದಿಸಿದ(ಆಚಾ), **-ವಿಣಯ.** ಪು: [**-ವಿನಯ**] ಆರಂಭದ ಅಭಾವ, **-ವಿಣಇ** ವಿ: [**-ವಿನಯಿನ್**] ಆರಂಭವಿರದ(ಆಚಾ)

ಆರಂಭಗ}. ಪು: [**ಆರಂಭಕ**] ಮೇಲಿನ ಶಬ್ದವನ್ನು
ಆರಂಭಯ.} ನೋಡುವುದು. ಪ್ರಾರಂಭಿಸುವವನು (ವಿಸೇ), ಹಿಂಸೆ ಮಾಡುವವನು, ಪಾಪಕೆಲಸ ಮಾಡುವವನು

ಆರಂಭಿ. ವಿ: [**ಆರಂಭಿನ್**] ಪ್ರಾರಂಭಿಸುವವನು (ಗಉಡ), ಪಾಪಕೃತ್ಯ ಮಾಡುವವನು (ಉಪ)

ಆರಂಭಿಅ. ಪು: [ದೇ] ಹೂವಾಡಿಗ, ಹೂ ಮಾರುವವನು

ಆರಂಭಿಅ. ವಿ: [**ಆರಬ್ಧ**] ಪ್ರಾರಂಭಿಸಲ್ಪಟ್ಟ(ಭವಿ)

ಆರಂಭಿಅ. '**ಆರಂಭ=ಆ+ರಭ್**' ಶಬ್ದವನ್ನು ನೋಡುವುದು

ಆರಂಭಿಯಾ. ಸ್ತ್ರೀ: [**ಆರಂಭಿಕೀ**] ಹಿಂಸೆಯೊಂದಿಗೆ ಸಂಬಂಧ ಹೊಂದಿರುವ ಕ್ರಿಯೆ, ಹಿಂಸೆಯಿಂದಾಗುವ ಕರ್ಮಬಂಧ(ತಾ)

ಆರಕ್ಖ. ನ: [**ಆರಕ್ಷ್ಯ**] ಕೊತವಾಲನ ಸ್ಥಾನ, ಹುದ್ದೆ, ರಕ್ಷಕತನ

ಆರಕ್ಖ. ವಿ: [**ಆರಕ್ಷ**] ರಕ್ಷಣೆ ಮಾಡುವವನು, ರಕ್ಷಕ(ಕಪ್ಪ), ಪು: ಒಂದು ಕ್ಷತ್ರಿಯ ವಂಶ, ಆ ವಂಶದಲ್ಲಿ ಹುಟ್ಟಿದವನು(ತಾ)

ಆರಕ್ಖಿ. ವಿ: [**ಆರಕ್ಷಿನ್**] ರಕ್ಷಕ,

ಆರಕ್ಖಗ.}. ವಿ: [**ಆರಕ್ಷಕ**] ರಕ್ಷಕ, ಕಾವಲುಗಾರ,
ಆರಕ್ಖಿಯ}. ಪಹರೆಯವನು, ಕೊತವಾಲ(ನಿಚೂ)

ಆರಜ್ಝ. ಸಕ: [**ಆ+ರಾಧ್**] ಆರಾಧಿಸು

ಆರಜ್ಝ. ವಿ: [**ಆರಾಧ್ಯ**] ಪೂಜ್ಯ, ಮಾನನೀಯ,

ಆರಡ. ಸಕ: [**ಆ+ರಟ್**] ಕಿರಿಚಾಡು ಚೀರು, ಅಳು, **ವ. ಕೃ-ಆರಡಂತ**

ಆರಡಿಅ. ನ: [ದೇ] ಅಳುವುದು, ಪ್ರಲಾಪಿಸುವುದು ವಿ: ಚಿತ್ರದಿಂದ ಕೂಡಿದ

ಆರಣ. ಪು: [**ಆರಣ**] ದೇವಲೋಕ-ವಿಶೇಷ, ಆ ದೇವಲೋಕದಲ್ಲಿ ವಾಸಿಸುವ ದೇವ, **ಪುಂನ:** ಒಂದು ದೇವ ವಿಮಾನ.

ಆರಣ. ನ: [ದೇ] ಅಧರ, ಕೆಳತುಟಿ, ಫಲಕ

ಆರಣಾಲ. ನ: [**ಆರನಾಲ**] ಗಂಜಿ, ಅಂಬಲಿ(ದೇ)

ಆರಣಾಲ. ನ: [ದೇ] ಕಮಲ, ಪಂಕಜ

ಆರಣ್ಣ. ವಿ: [**ಆರಣ್ಯ**] ಅರಣ್ಯಕ್ಕೆ ಸಂಬಂಧಿಸಿದ, ಅರಣ್ಯದಲ್ಲಿ ವಾಸಿಸುವ

ಆರಣ್ಣಗ}. ವಿ: [ಆರಣ್ಯಕ] ಕಾಡಿನ, ಕಾಡಿಗೆ
ಆರಣ್ಣಯ}. ಸಂಬಂಧಿಸಿದ, ಕಾಡಿನಲ್ಲಿ ವಾಸಿಸುವ, ಕಾಡಿನಲ್ಲಿ ಹುಟ್ಟಿದ ನ: ವೇದದ ಒಂದು ಭಾಗವಾದ ಉಪನಿಷತ್ತು, ಶಾಸ್ತ್ರ–ವಿಶೇಷ
ಆರಣ್ಣಿಯ. ವಿ: [ಆರಣ್ಯಿಕ] ಕಾಡಿನಲ್ಲಿ ವಾಸಿಸುವ
ಆರತ. ವಿ: [ಆರತ] ಸ್ವಲ್ಪ ಕೆಂಪಾದ, ಅತ್ಯಂತ ಅನುರಕ್ತನಾದ(ಪಣ್ಣ)
ಆರತ್ತಿಯ. ನ:[ಆರಾತ್ರಿಕ] ಆರತಿ, ಮಂಗಳಾರತಿ (ಕುಮಾ)
ಆರದ್ಧ. ವಿ: [ಆರಬ್ಧ] ಪ್ರಾರಂಭಿಸಿದ, ಶುರು ಮಾಡಿದ (ಕಾಲ)
ಆರದ್ದ. ವಿ: [ದೇ] ವೃದ್ಧಿಸಿದ, ಬಾಯರಿಕೆಯಿಂದ ಕೂಡಿದ, ಉತ್ಸುಕ, ಮನೆಗೆ ಬಂದಿರುವ(ದೇ)
ಆರನಾಲ. 'ಆರಣಾಲ=ಆರನಾಲ' ಶಬ್ದವನ್ನು ನೋಡುವುದು
ಆರನಾಲ. ನ: [ದೇ] ಕಮಲ, ತಾವರೆ
ಆರಬ. 'ಆರವ' ಶಬ್ದವನ್ನು ನೋಡುವುದು
ಆರಬ್ಭ. ಕೆಳಗಿನ ಶಬ್ದವನ್ನು ನೋಡುವುದು
ಆರಭ. **'ಆರಂಭ=ಆ+ರಭ್'** ಶಬ್ದವನ್ನು ನೋಡುವುದು. ವ. ಕೃ–ಆರಭಂತ
ಆರಭಡ. ನ: [ಆರಭಟ] ನೃತ್ಯದೊಂದು ಪ್ರಭೇದ(ತಾ), ಈ ಹೆಸರಿನ ಒಂದು ಮುಹೂರ್ತ, **–ಭಸೋಲ**. ನ: [–ಭಸೋಲ] ಒಂದು ಬಗೆಯ ನಾಟ್ಯ ಕ್ರಮ
ಆರಭಡಾ. ಸ್ತ್ರೀ: [ಆರಭಟಾ] ಪ್ರತಿ–ಲೇಖನ ವಿಶೇಷ
ಆರಭಿಯ. ನ: [ಆರಭಿತ] ನಾಟ್ಯ–ವಿಧಿ–ವಿಶೇಷ (ರಾಯ)
ಆರಯ. ವಿ: [ಆರತ] ಕೆಲಸದಿಂದ ವಿಶ್ರಾಂತಿ ಹೊಂದಿದ, ಮೃತ್ಯು ಹೊಂದಿದ, ಕಳೆದು ಹೋದ, ಓಡಿ ಹೋದ
ಆರಯ. ವಿ: [ಆರತ] ಸರ್ವಥಾ ಕೆಲಸದಿಂದ ನಿವೃತ್ತನಾದ
ಆರವ. ಪು: [ಆರವ] ಶಬ್ದ, ಧ್ವನಿ(ಸಣ)
ಆರವ. ಪು: [ಆರಬ] ಈ ಹೆಸರಿನ ಒಂದು ಪ್ರಸಿದ್ಧ ಮ್ಲೇಚ್ಛ ದೇಶ
ಆರವ}. ವಿ: [ಆರಬ] ಅರಬ್ ದೇಶದಲ್ಲಿ ಹುಟ್ಟಿದ,
ಆರವಗ}. ಅರಬ್ ದೇಶದ ನಿವಾಸಿ. ಸ್ತ್ರೀ: –ವೀ (ಣಾಯಾ)
ಆರವಿಂದ. ವಿ: [ಆರವಿಂದ] ಕಮಲಕ್ಕೆ ಸಂಬಂಧಿಸಿದ (ಗಉಡ)
ಆರಸ. ಸಕ: [ಆ+ರಸ್] ಚೀರಾಡು, ಚೀರಾಡಲ್ಪಟ್ಟ, ವ. ಕೃ–ಆರಸಂತ
ಆರಸಿಯ. ನ: [ಆರಸಿತ] ಚೀರಾಟ, ಚೀರಾಡಲಾದ
ಆರಸಿಯ. ಪು: [ಆದರ್ಶ] ಕನ್ನಡಿ
ಆರಹ. 'ಆರಭ' ಶಬ್ದವನ್ನು ನೋಡುವುದು
ಆರಹಂತ.} ವಿ: [ಆರ್ಹತ] ಅರ್ಹಂತನ,
ಆರಹಂತಿಯ} ಜಿನದೇವನಿಗೆ ಸಂಬಂಧಿಸಿದ
ಆರಾ. ಸ್ತ್ರೀ: [ಆರಾ] ಕಬ್ಬಿಣದ ಸಲಾಕಿ, ಚರ್ಮವನ್ನು ಕತ್ತರಿಸುವ ಉಳಿ
ಆರಾ. ಅ: [ಆರಾತ್] ಮೊದಲಿನ, ಮುಂಚಿನ(ದೇ), ಪೂರ್ವಭಾಗ(ವಿಸೇ)
ಆರಾಇಅ. ವಿ: [ದೇ] ಸ್ವೀಕೃತ, ಸ್ವೀಕರಿಸಲ್ಪಟ್ಟ, ಪ್ರಾಪ್ತವಾದ
ಆರಾಡಿ. ಸ್ತ್ರೀ: [ಆರಾಟಿ] ಚೀತ್ಕಾರ, ಚೀರಾಟ, ಕೂಗಾಟ
ಆರಾಡೀ. ಸ್ತ್ರೀ: [ದೇ] **'ಆರಡಿಅ'** ಶಬ್ದವನ್ನು ನೋಡುವುದು
ಆರಾಮ. ಪು: [ಆರಾಮ] ತೋಟ, ಉಪವನ(ಔಪ)
ಆರಾಮಿಅ. ಪು: [ಆರಾಮಿಕ] ತೋಟಿಗ, ತೋಟದ
ಆರಾವ. ಪು: [ಆರಾವ] ಶಬ್ದ, ದನಿ
ಆರಾಹ. ಸಕ: [ಆ+ರಾಧಯ್] ಸೇವೆ ಮಾಡು, ಆರಾಧಿಸು, ಸರಿಯಾಗಿ ಪಾಲಿಸು
ಆರಾಹ. ವಿ: [ಆರಾಧ್ಯ] ಆರಾಧನೆಗೆ ಅರ್ಹನಾದವನು (ಆರಾ)
ಆರಾಹಗ. ವಿ: [ಆರಾಧಕ] ಆರಾಧಿಸುವವನು, ಮೋಕ್ಷ–ಸಾಧಕ (ಭಗ)
ಆರಾಹಣ. ನ: [ಆರಾಧನ] ಸೇವೆಮಾಡುವುದು, ಪೂಜೆ, ಉಪಾಸನೆ, ಊಟವಿಲ್ಲದಿರುವುದು, ಉಪವಾಸ (ರಾಜ)
ಆರಾಹಣಾ. ಸ್ತ್ರೀ: [ಆರಾಧನಾ] ಸೇವೆ, ಭಕ್ತಿ , ಮೋಕ್ಷ–ಮಾರ್ಗಕ್ಕೆ ತಕ್ಕ ನಡೆವಳಿ, ಆರಾಧಿಸಲ್ಪಡುವವನು, ಆರಾಧ್ಯ (ಆರಾ), ಆವಶ್ಯಕ ಸಾಮಯಿಕವೇ ಮೊದಲಾದ ಷಟ್ಕರ್ಮ
ಆರಾಹಣೀ. ಸ್ತ್ರೀ: [ಆರಾಧನೀ] ಭಾಷೆಯ ಒಂದು ಪ್ರಕಾರ
ಆರಾಹಿಯ. ವಿ: [ಆರಾಧಿತ] ಸೇವಿಸಲ್ಪಟ್ಟವನು, ಆರಾಧಿಸಲ್ಪಟ್ಟವನು(ಸಮ) ಅನುರೂಪ, ಅರ್ಹ

ಆರಿಟ್ಟ. ವಿ: [ದೇ] ಹೋದ, ಕಳೆದು ಹೋದ(ಷಡ್)
ಆರಿಯ. ನ: [ಆಋತ] ಆಗಮನ.
ಆರಿಯ. 'ಅಜ್ಜ=ಆರ್ಯ' ಶಬ್ದವನ್ನು ನೋಡುವುದು
ಆರಿಯ. ವಿ: [ಆರಿತ] ಸೇವಿತ
ಆರಿಯ. ವಿ: [ಆಕಾರಿತ] ಆಹ್ವಾನಿಸಲ್ಪಟ್ಟ, ಕರೆಯಲ್ಪಟ್ಟ
ಆರಿಯಾ. 'ಅಜ್ಜಾ=ಆರ್ಯಾ' ಶಬ್ದವನ್ನು ನೋಡುವುದು
ಆರಿಲ್ಲ. ವಿ: [ದೇ] ಮುಂಚೆ ಹುಟ್ಟಿದ, ಮೊದಲು ಹುಟ್ಟಿದ
ಆರಿಸ. ವಿ: [ಆರ್ಷ] ಋಷಿ–ಸಂಬಂಧವಾದ, ಋಷಿಪ್ರಣೀತ
ಆರಿಹಯ. 'ಆರಹಂತ' ಶಬ್ದವನ್ನು ನೋಡುವುದು
ಆರುಗ್ಗ. 'ಆರೊಗ್ಗ=ಆರೋಗ್ಯ' ಶಬ್ದವನ್ನು ನೋಡುವುದು
ಆರುಟ್ಠ. ವಿ: [ಆರುಷ್ಟ] ಕೋಪಗೊಂಡ, ರೋಷಗೊಂಡ (ಪಉಮ)
ಆರುಣ್ಣ(ಅಪ). ಸಕ: [ಆ+ಶ್ಲಿಷ್] ಆಲಿಂಗಿಸಿಕೊಳ್ಳು, ತಬ್ಬಿಕೊಳ್ಳು
ಆರುಭ. 'ಆರುಹ=ಆ+ರುಹ್' ಶಬ್ದವನ್ನು ನೋಡುವುದು
ಆರುವಣಾ. 'ಅರೋವಣಾ' ಶಬ್ದವನ್ನು ನೋಡುವುದು
ಆರುಸ. ಸಕ: [ಆ+ರುಷ್) ಕೋಪಗೊಳ್ಳು, ಕೃದ್ಧನಾಗು (ಣಾಯಾ)
ಆರುಸಿಯ. ವಿ: [ಆರುಷ್ಟ] ಕೋಪಗೊಂಡ, ರೋಷಗೊಂಡ
ಆರುಹ. ಸಕ: [ಆ+ರುಹ್] ಮೇಲೆ ಹತ್ತು, ಮೇಲೆ ಕುಳಿತುಕೊಳ್ಳು. **'ಆರುಹೇಇ'**
ಆರುಹ. ವಿ: [ಆರುಹ] ಉತ್ಪನ್ನ. ಹುಟ್ಟಿದ(ಗಾ)
ಆರುಹಣ. ನ: [ಆರೋಹಣ] ಮೇಲೆ ಕುಳಿತುಕೊಳ್ಳು, ಮೇಲಕ್ಕೆ ಹತ್ತಿಸುವುದು, (ಗಉಡ)
ಆರುಹಿಯ. ವಿ: [ಆರೋಪಿತ] ಸ್ಥಾಪಿತ, ಮೇಲೆ ಕುಳ್ಳಿರಿಸಲಾದ, ಏರಿಸಲ್ಪಟ್ಟ, ಕಲ್ಪಿಸಲ್ಪಟ್ಟ
ಆರುಹಿಯ} ವಿ: [ಆರೂಢ] ಮೇಲೆ ಹತ್ತಿರುವ, ಮೇಲೆ
ಆರೂಢ}. ಕುಳ್ಳಿರಿಸಲ್ಪಟ್ಟಿರುವ, ಮಾಡಲ್ಪಟ್ಟ
ಆರೇಇಅ. ವಿ: [ದೇ] ಮುಕುಲಿತ, ಅರೆಬಿರಿದ, ಸಂಕುಚಿತ, ಭ್ರಾಂತಿಗೊಳಗಾದ, ಮುಕ್ತ, ರೋಮಾಂಚಿತ, ಪುಲಕಿತ
ಆರೇಣ. ಅ: [ಆರೇಣ] ಸಮೀಪ, ಹತ್ತಿರ, ಮೊದಲು, ಪ್ರಾರಂಭಮಾಡಿ, (ವಿಸೇ)
ಆರೋಅ. ಅಕ: [ಉತ್+ಲಸ್] ಅರಳು, ಉಲ್ಲಾಸ ಹೊಂದು
ಆರೋಅಣಾ. 'ಆರೋವಣಾ' ಶಬ್ದವನ್ನು ನೋಡುವುದು
ಆರೋಇಅ. (ದೇ) 'ಆರೇಇಅ' ಶಬ್ದವನ್ನು ನೋಡುವುದು
ಆರೊಗ್ಗ. ಸಕ: [ದೇ] ಊಟವಾಡು, ತಿನ್ನು, ಆರೋಗಣೆ ಮಾಡು
ಆರೊಗ್ಗ. ನ: [ಆರೋಗ್ಯ] ಒಂದು ಊಟದ ತಪಸ್ಸು
ಆರೊಗ್ಗ. ನ: [ಆರೋಗ್ಯ] ರೋಗವಿಲ್ಲದಿರುವುದು, ವಿ:ರೋಗ–ರಹಿತ.ಪು: ಒಬ್ಬ ಬ್ರಾಹ್ಮಣೋಪಾಸಕನ ಹೆಸರು
ಆರೊಗ್ಗರಿಅ. ವಿ: [ದೇ] ರಕ್ತ, ಬಣ್ಣ ಬಳಿದ(ಷಡ್)
ಆರೊಗ್ಗಿಅ. ವಿ: [ದೇ] ತಿನ್ನಲ್ಪಟ್ಟ, ಆರೋಗಿಸಲಾದ
ಆರೊದ್ಧ. ವಿ: [ದೇ] ದೊಡ್ಡದಾಗಿ ಬೆಳೆದಿರುವ, ಅಧಿಕವಾದ, ಮನೆಗೆ ಬಂದಿರುವ(ಷಡ್)
ಆರೋಯ. ನ: [ಆರೋಗ್ಯ] ಕ್ಷೇಮ, ಕುಶಲ, ರೋಗವಿಲ್ಲದಿರುವುದು
ಆರೋಲ. ಸಕ: [ಪುಂಜ್] ಒಟ್ಟುಗೂಡಿಸು, ಗುಂಪುಗೂಡಿಸು
ಆರೋಲಿಅ. ವಿ: [ಪುಂಜಿತ] ಒಟ್ಟುಗೂಡಿಸಲ್ಪಟ್ಟ, ರಾಶಿ ಮಾಡಲಾದ(ಕುಮಾ)
ಆರೋವ. ಸಕ: [ಆ+ರೋಪಯ್] ಮೇಲಕ್ಕೆ ಹತ್ತಿಸು, ಮೇಲಕ್ಕೇರಿಸು, ಮೇಲೆ ಕೂರಿಸು ಸಂಭಾವನೆ (ದೇ). **'ಆರೋವೇಇ'**
ಆರೋವಣ. ನ: [ಆರೋಪಣ] ಮೇಲಕ್ಕೆ ಹತ್ತಿಸುವುದು, ಪ್ರಾಯಶ್ಚಿತ್ತ–ವಿಶೇಷ, ವ್ಯಾಖ್ಯಾನದ ಒಂದು ಬಗೆ, ಪ್ರಶ್ನೆ, ತಿಳಿದುಕೊಳ್ಳುವ ಆಶೆಯಿಂದ ಮಾಡುವ ಪ್ರಶ್ನೆ
ಆರೋವಿಯ. ವಿ: [ಆರೋಪಿತ] ಮೇಲಕ್ಕೆ ಏರಿಸಲ್ಪಟ್ಟ, ಸಂಸ್ಥಾಪಿಸಲ್ಪಟ್ಟ, ಕಲ್ಪಿಸಲಾದ, ತಪ್ಪಾಗಿ ತಿಳಿಯಲಾದ
ಆರೋಸ. ಪು: [ಆರೋಷ] ಮ್ಲೇಚ್ಛದೇಶ–ವಿಶೇಷ, ಆ ದೇಶದ ನಿವಾಸಿ
ಆರೋಸಿಅ. ವಿ: [ಆರೋಷಿತ]. ಕೋಪಕ್ಕೀಡು ಮಾಡಲಾದ, ಸಿಟ್ಟಿಗೆಬ್ಬಿಸಲ್ಪಟ್ಟ(ಸೇ)
ಆರೋಹ. ಸಕ: [ಆ+ರುಹ್] ಮೇಲಕ್ಕೆ ಏರಿಸು, ಮೇಲಕ್ಕೆ ಕೂರಿಸು
ಆರೋಹ. ಸಕ: [ಆ+ರೋಹಯ್] ಮೇಲಕ್ಕೆ ಹತ್ತಿಸು

ಆರೋಹ. ಪು: [ಆರೋಹ] ಆನೆ, ಕುದುರೆ ಇತ್ಯಾದಿಗಳ ಮೇಲೆ ಹತ್ತುವ ಸವಾರ, ಎತ್ತರ, ಉದ್ದ
ಆರೋಹ. ಪು: [ದೇ] ಸ್ತನ, ಕೆಚ್ಚಲು
ಆರೋಹಗ. ವಿ: [ಆರೋಹಕ] ಸವಾರ, ಮಾವತಿಗ, ಆನೆಯ ರಕ್ಷಕ
ಆರೋಹಿ. ವಿ: [ಆರೋಹಿನ್] ಮೇಲಿನ ಶಬ್ದವನ್ನು ನೋಡುವುದು
ಆರೋಹಿಯ. ವಿ: [ಆರೂಢ] ಮೇಲೆ ಕುಳಿತಿರುವ, ಮೆಲೆ ಹತ್ತಿರುವ
ಆಲ. ನ: [ದೇ] ಕಿರುಪ್ರವಾಹ, ವಿ: ಕೋಮಲ, ಮೃದು, ಬಂದಿರುವ(ರಂಭಾ)
ಆಲ. ನ: [ಆಲ] ದೋಷಾರೋಪಣೆ
ಆಲ. ನ: [ದೇ] ಅನರ್ಥಕ, ಅಸಂಬದ್ಧವಾದ ಮಾತು.
-ಆಲ. **'ಕಾಲ'** ಶಬ್ದವನ್ನು ನೋಡುವುದು
-ಆಲ. **'ಜಾಲ'** ಶಬ್ದವನ್ನು ನೋಡುವುದು
-ಆಲ. **'ತಾಲ'** ಶಬ್ದವನ್ನು ನೋಡುವುದು
ಆಲಇಅ. ವಿ: [ಆಲಗಿತ] ಯೋಗ್ಯ ಸ್ಥಾನದಲ್ಲಿ ಇಡಲಾಗಿರುವ,
ಆಲಇಅ. ವಿ: [ಆಲಯಿಕ] ಗೃಹಸ್ಥ, ಆಶ್ರಯ ಹೊಂದಿರುವವನು(ಆಚಾ)
ಆಲಇಯ. ವಿ: [ಆಲಗಿತ] ಧರಿಸಿರುವ
ಆಲಂಕಾರಿಯ. ವಿ: [ಆಲಂಕಾರಿಕ] ಅಲಂಕಾರಶಾಸ್ತ್ರ ಅರಿತವನು, ಅಲಂಕಾರಕ್ಕೆ ಸಂಬಂಧಿಸಿದ, ಅಲಂಕಾರಕ್ಕೆ ಅರ್ಹವಾದ
ಆಲಂಕಿಅ. ವಿ: [ದೇ] ಕುಂಟನಾಗಿ ಮಾಡಲ್ಪಟ್ಟ(ದೇ)
ಆಲಂದ. ನ: [ಆಲಂದ] ಸಮಯವನ್ನಳೆಯುವ ಅಳತೆ(ಪರಿಮಾಣ-ವಿಶೇಷ), ನೀರಿನಲ್ಲಿ ನೆನೆದ ಕೈ ಎಷ್ಟು ಸಮಯದಲ್ಲಿ ಒಣಗುತ್ತದೋ ಅಲ್ಲಿಂದ ಹಿಡಿದು ಐದುಅಹೋರಾತ್ರಿಗಳವರೆಗಿನ ಕಾಲ
ಆಲಂದಿಅ. ವಿ: [ಆಲಂದಿಕ] ಮೇಲೆ ಹೇಳಲಾದ ಸಮಯವನ್ನು ಉಲ್ಲಂಘಿಸದೆ ಕಾರ್ಯ ನಿರ್ವಹಿಸುವವನು
ಆಲಂಬ. ಸಕ: [ಆ+ಲಂಬ್] ಆಶ್ರಯಿಸು, ನೆರವು ಪಡೆ, ಆಧರಿಸು-'ಆಲಂಬಿಯ'
ಆಲಂಬ. ಪು: [ಆಲಂಬ] ಆಶ್ರಯ, ಆಧಾರ(ಸುಪಾ)
ಆಲಂಬ. ನ: [ದೇ] ಭೂಮಿ-ಛತ್ರ, ಮಲೆಯಲ್ಲಿ ಹುಟ್ಟುವ ವನಸ್ಪತಿ-ವಿಶೇಷ(ದೇ)
ಆಲಂಬಣ. ನ: [ಆಲಂಬನ] ಯಾವುದನ್ನು ಆಶ್ರಯಿಸಲಾಗಿದೆಯೋ, ಆಧರಿಸಲಾಗಿದೆಯೋ ಅವನು(ಆಧಾರ), ಕಾರಣ ಹೇತು, ಪ್ರಯೋಜನ (ಆವಮ)
ಆಲಂಬಣಾ. ಸ್ತ್ರೀ: [ಆಲಂಬನಾ] ಮೇಲಿನ ಶಬ್ದವನ್ನು ನೋಡುವುದು
ಆಲಂಬಿ. ವಿ: [ಆಲಂಬಿನ್] ಆಶ್ರಯಿಸುವವನು, ಅವಲಂಬಿಸುವವನು, ಆಶ್ರಯಿ(ಗಲುಡ)
ಆಲಂಭಿಯ. ನ: [ಆಲಂಭಿಕ] ನಗರ-ವಿಶೇಷ(ಠಾ), ಭಗವತೀ ಸೂತ್ರದ ೧೧ನೇ ಶತಕದ ೧೨ನೇ ಉದ್ದೇಶ(ಭಗ)
ಆಲಂಭಿಯಾ. ಸ್ತ್ರೀ: [ಆಲಂಭಿಕಾ] ನಗರ-ವಿಶೇಷ(ಭಗ)
ಆಲಕ್ಕ. ಪು: [ದೇ] ಹುಚ್ಚುನಾಯಿ(ಭತ್ತ)
ಆಲಕ್ಖ. ಸಕ: [ಆ+ಲಕ್ಷಯ್] ತಿಳಿದುಕೊಳ್ಳು, ಚಿಹ್ನೆಯಿಂದಗುರುತಿಸು. 'ಆಲಕ್ಖಿಮೋ'(ಗಲುಡ)
ಆಲಕ್ಖಿಯ. ವಿ: [ಆಲಕ್ಷಿತ] ತಿಳಿದಿರುವ, ಪರಿಚಿತ, ಚಿಹ್ನೆಯಿಂದ ಗೊತ್ತಾಗಿರುವ(ಗಲುಡ)
ಆಲಗ್ಗ. ವಿ: [ಆಲಗ್ನ] ಸೇರಿಕೊಂಡಿರುವ, ಅಂಟಿಕೊಂಡಿರುವ, ಸಂಯುಕ್ತ
ಆಲತ್ತ. ವಿ: [ಆಲಪಿತ] ಮಾತಾಡಿದ, ನುಡಿದ, ಸಂಭಾಷಿಸಿದ(ಪ ಉಮ)
ಆಲತ್ತಯ. **'ಆಲತ್ತ'** ಶಬ್ದವನ್ನು ನೋಡುವುದು
ಆಲತ್ಥ. ಪು: [ದೇ] ನವಿಲು (ದೇ)
ಆಲದ್ಧ. ವಿ: [ಆಲಬ್ಧ] ಸೃಷ್ಟಿಸಲ್ಪಟ್ಟ, ಒಟ್ಟುಗೂಡಿಸಲಾದ, ಸ್ಪರ್ಶಿಸಲ್ಪಟ್ಟ, ಹೊಡೆಯಲ್ಪಟ್ಟ, ಬೆರೆಸಲ್ಪಟ್ಟ (ನಾಟ)
ಆಲಪ್ಪ. ವಿ: [ಆಲಾಪ್ಯ] ಹೇಳಲು ಅರ್ಹವಾದ, ಹೇಳಬೇಕಾದ
ಆಲಭ. ಸಕ: [ಆ+ಲಭ್] ದೊರಕಿಸಿಕೊಳ್ಳು, ಪ್ರಾಪ್ತ ಮಾಡಿಕೊಳ್ಳು
ಆಲಭಣ. ನ: [ಆಲಭನ] ವಿನಾಶನ
ಆಲಭಿಯಾ. ಸ್ತ್ರೀ: [ಆಲಭಿಕಾ] ಒಂದು ನಗರ-ವಿಶೇಷ
ಆಲಯ. ಪುಂನ: [ಆಲಯ] ಬೌದ್ಧ ದರ್ಶನದಲ್ಲಿ ಪ್ರಸಿದ್ಧವಾದ ವಿಜ್ಞಾನ-ವಿಶೇಷ
ಆಲಯ. ಪುಂ. ನ: [ಆಲಯ] ಮನೆ, ಸ್ಥಳ(ಗಾ)
ಆಲಯಣ. ನ: [ದೇ] ವಾಸದ ಮನೆ, ಶಯ್ಯಾ-ಗೃಹ
ಆಲವ. ಸಕ: [ಆ+ಲಪ್] ಹೇಳು, ಮಾತುಕತೆಯಾಡು, ಒಮ್ಮೆ ಅಥವಾ ಸ್ವಲ್ಪ ಹೇಳು

ಅಲವಣ. ನ: [ಆಲಪನ] ಸಂಭಾಷಣೆ, ಮಾತುಕತೆ, ಸಂವಾದ(ಓಘ)
ಆಲವಾಲ. ನ: [ಆಲವಾಲ] ಸಸಿಮಡಿ, ಗಿಡದ ಪಾತಿ
ಆಲಸ. ವಿ: [ಆಲಸ] ಸೋಮಾರಿ, ದುರ್ಬಲ, –ತ್ತ. ನ: [–ತ್ವ] ಸೋಮಾರಿತನ, ದೌರ್ಬಲ್ಯ
ಆಲಸಿಯ.} ವಿ: [ಆಲಸಿತ] ಸೋಮಾರಿ, ಮಂದ
ಆಲಸುವ.}
ಆಲಸ್ಸ. ಪುಂನ: [ಆಲಸ್ಯ] ಸೋಮಾರಿತನ
ಆಲಸ್ಸಿ. ವಿ: [ಆಲಸ್ಯಿನ್] ಸೋಮಾರಿ
ಆಲಾಅ. 'ಆಲಾವ' ಶಬ್ದವನ್ನು ನೋಡುವುದು
ಆಲಾಣ. 'ಆಣಾಲ' ಶಬ್ದವನ್ನು ನೋಡುವುದು
ಆಲಾಣಿಯ. ವಿ: [ಆಲಾನಿತ] ನಿಯಂತ್ರಿತ, ಬಲವಾಗಿ ಕಟ್ಟಿಹಾಕಿದ
ಆಲಾವ. ಪು: [ಆಲಾಪ] ಸಂಭಾಷಣೆ, ಮಾತು–ಕತೆ, ಅಲ್ಪ–ಭಾಷಣ, ಮೊದಲ ಮಾತು, ಒಂದು ಸಲದ ಉಕ್ತಿ
ಆಲಾವಕ. 'ಆಲಾವಗ' ಶಬ್ದವನ್ನು ನೋಡುವುದು
ಆಲಾವಗ. ಪು: [ಆಲಾಪಕ] ಪರಿಚ್ಛೇದ, ಗ್ರಂಥದ ಅಂಶ–ವಿಶೇಷ
ಆಲಾವಣ. ನ: [ಆಲಾಪನ] ಕಟ್ಟಿಹಾಕುವ ಹಗ್ಗ, ಹುರಿ ಇತ್ಯಾದಿ ಸಾಧನ, ಪರಸ್ಪರ ಮಾತನಾಡುವುದು, –ಬಂಧ. ಪು: [–ಬಂಧ] ಬಂಧ–ವಿಶೇಷ
ಆಲಾವಣೀ. ಸ್ತ್ರೀ: [ಆಲಾಪನೀ] ವಾದ್ಯ–ವಿಶೇಷ,
ಆಲಾಸ. ಪು: [ದೇ] ಚೇಳು
ಆಲಾಹಿ. 'ಅಲಾಹಿ' ಶಬ್ದವನ್ನು ನೋಡುವುದು
ಆಲಿ. ಪು: [ಆಲಿ] ಭ್ರಮರ, ದುಂಬಿ, ಹೆಣ್ಣು ದುಂಬಿ
ಆಲಿ. 'ಆಲೀ' ಶಬ್ದವನ್ನು ನೋಡುವುದು
ಆಲಿಂಗ. ಸಕ: [ಆ+ಲಿಂಗ್] ಆಲಿಂಗಿಸು, ಅಪ್ಪಿಕೊಳ್ಳು
ಆಲಿಂಗ. ಪು: [ಆಲಿಂಗ] ವಾದ್ಯ–ವಿಶೇಷ, ಮದ್ದಳೆ
ಆಲಿಂಗ. ಪು: [ಆಲಿಂಗ್ಯ] ಆಲಿಂಗಿಸಲು ಯೋಗ್ಯವಾದ, ವಾದ್ಯ–ವಿಶೇಷ=ಮದ್ದಳೆ, ಮೃದಂಗ
ಆಲಿಂಗಣ. ನ: [ಆಲಿಂಗನ] ಆಲಿಂಗನ, ಅಪ್ಪುಗೆ (ಕಪ್ಪೂ), –ವಟ್ಟಿ. ಸ್ತ್ರೀ: [–ವೃತ್ತಿ] ಶರೀರ ಪ್ರಮಾಣದ ದಿಂಬು
ಆಲಿಂಗಣಿಯಾ. ಸ್ತ್ರೀ: [ಆಲಿಂಗನಿಕಾ] 'ಆಲಿಂಗಣವಟ್ಟಿ' ಶಬ್ದವನ್ನು ನೋಡುವುದು
ಆಲಿಂಗಿಣೀ. ಸ್ತ್ರೀ: [ಆಲಿಂಗಿನೀ] ತೊಡೆಯ ಕೆಳಗಡೆ ಇಟ್ಟುಕೊಳ್ಳುವ ಮೆತ್ತೆ, ದಿಂಬು.
ಆಲಿಂಗಿಯ. ವಿ: [ಆಲಿಂಗಿತ] ಅಪ್ಪಿಕೊಳ್ಳಲ್ಪಟ್ಟ ವ್ಯಕ್ತಿ (ಕಾಲ)
ಆಲಿಂದ. ಪು: [ಆಲಿಂದ] ಹೊರಬಾಗಿಲಿನ ಸಮೀಪದ ಕೈಸಾಲೆ
ಆಲಿಂಪ. ಸಕ: [ಆ+ಲಿಪ್] ಬಳಿ, ಲೇಪಿಸು. ವ. ಕೃ– 'ಆಲಿಂಪಂತ'
ಆಲಿಂಪಣ. ನ[[ಆಲೇಪನ] ಲೇಪಿಸುವುದು, ಬಳಿಯುವುದು, ಲೇಪನ ಮಾಡುವ ವಸ್ತು(ನಿಚೂ)
ಆಲಿಗಾ. 'ಆವಲಿಆ' ಶಬ್ದವನ್ನು ನೋಡುವುದು
ಆಲಿತ್ತ. ನ: [ಆಲಿತ್ರ] ಹಡಗು, ದೋಣಿ ನಡೆಸುವ ದಂಡ, ಹುಟ್ಟು
ಆಲಿತ್ತ. ವಿ: [ಆಲಿಪ್ತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ
ಆಲಿತ್ತ. ವಿ: [ಆದೀಪ್ತ] ನಾಲ್ಕೂ ಕಡೆಯಿಂದ ಬೆಂಕಿ ಹಚ್ಚಲ್ಪಟ್ಟ, ನ: ಬೆಂಕಿಯಿಂದ ಉರಿಯುವುದು, ಬೆಂಕಿ ಹತ್ತಿಕೊಳ್ಳುವುದು.
ಆಲಿದ್ಧ. ವಿ: [ಆಶ್ಲಿಷ್ಟ] ಆಲಿಂಗಿಸಲ್ಪಟ್ಟ (ಭಗ)
ಆಲಿದ್ಧ. ವಿ: [ಆಲೀಢ] ಆಸ್ವಾದಿಸಲ್ಪಟ್ಟ, ರುಚಿ ನೋಡಲ್ಪಟ್ಟ
ಆಲಿಸಂದಗ. ಪು: [ದೇ. ಆಲಿಸಂದಕ] ಧಾನ್ಯ ವಿಶೇಷ]
ಆಲಿಸಿಂದಯ. ಪು: [ದೇ.ಆಲಿಸಿಂದಕ] ಮೇಲಿನ ಶಬ್ದವನ್ನು ನೋಡುವುದು
ಆಲಿಹ. ಸಕ: [ಸ್ಪೃಶ್] ಸ್ಪರ್ಶಿಸು, ಮುಟ್ಟು
ಆಲಿಹ. ಸಕ: [ಆ+ಲಿಖ್] ವಿನ್ಯಾಸಗೊಳಿಸು, ಸ್ಥಾಪಿಸು, ಚಿತ್ರಿಸು
ಆಲಿಹಿಅ. ವಿ: [ಆಲಿಖಿತ] ಚಿತ್ರಿತ, ಬರೆಯಲ್ಪಟ್ಟ
ಆಲೀ. ಸಕ: [ಆ+ಲೀ] ಲೀನವಾಗು, ಆಸಕ್ತನಾಗು, ಆಲಿಂಗಿಸು, ವಾಸಿಸು
ಆಲೀ. ಸ್ತ್ರೀ: [ಆಲೀ] ಪಂಕ್ತಿ, ಶ್ರೇಣಿ, ಸಾಲು, ಸಖಿ, ಗೆಳತಿ, ವನಸ್ಪತಿ–ವಿಶೇಷ(ಣಾಯಾ)
ಆಲೀಢ. ವಿ: [ಆಲೀಢ] ಆಸಕ್ತ, ಆಸ್ವಾದಿಸಲ್ಪಟ್ಟ, ರುಚಿನೋಡಲ್ಪಟ್ಟ, ನ: ಆಸನ–ವಿಶೇಷ
ಆಲೀಢ. ಪುಂನ: [ಆಲೀಢ] ಯೋಧನ ಯುದ್ಧದ ಸಮಯದ ಒಂದು ರೀತಿಯ ಆಸನ
ಆಲೀಣ. ವಿ: [ಆಲೀನ] ಲೀನ, ಆಸಕ್ತ, ತತ್ಪರ, ಆಲಿಂಗಿತ, (ಕಪ್ಪ), ಲೇಪಿಸಲ್ಪಟ್ಟ

ಆಲೀಯಗ. ವಿ: [ಆದೀಪಕ] ಸುಡುವ, ಬೆಂಕಿಯನ್ನು ಪ್ರಜ್ವಲಗೊಳಿಸುವ, ಬೆಳಗಿಸುವ, ಪ್ರಕಾಶಗೊಳಿಸುವ
ಆಲೀಯಮಾಣ. 'ಆಲೀ=ಆ+ಲೀ' ಶಬ್ದವನ್ನು ನೋಡುವುದು
ಆಲೀಲ. ನ: [ದೇ] ಸಮೀಪದ ಭಯ (ವಿಪಾ)
ಆಲೀವಣ. ನ: [ಆದೀಪನ] ಬೆಂಕಿಹೊತ್ತಿಸುವುದು
ಆಲೀವಿಯ. ವಿ: [ಆದೀಪಿತ] ಬೆಂಕಿ ಹಚ್ಚಲ್ಪಟ್ಟ, ಬೆಳಗಿಸಲ್ಪಟ್ಟ, ಪ್ರಕಾಶಗೊಳಿಸಲ್ಪಟ್ಟ
ಆಲು. ಪುಂ. ನ: [ಆಲು] ಆಲೂಗೆಡ್ಡೆ (ಶ್ರಾ)
ಆಲುಈ. ಸ್ತ್ರೀ: [ಆಲುಕೀ] ಆಲೂಗೆಡ್ಡೆ ಬಳ್ಳಿ,
ಆಲುಂಖ. ಸಕ: [ದಹ್] ಸುಡು, ಬೆಂಕಿ ಹಚ್ಚು
ಆಲುಂಖ ಸಕ:[ಸ್ಪೃಶ್] ಮುಟ್ಟು, ಸ್ಪರ್ಶಿಸು. 'ಆಲುಂಖಇ'
ಆಲುಂಖಣ. ನ: [ಸ್ಪರ್ಶನ] ಸ್ಪರ್ಶಿಸುವುದು, ಮುಟ್ಟುವುದು
ಆಲುಂಖಿಅ. ವಿ: [ಸ್ಪೃಷ್ಟ] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ
ಆಲುಂಖಿಅ. ವಿ:[ದಗ್ಧ] ದಹಿಸಲ್ಪಟ್ಟಿರುವ, ಸುಡಲ್ಪಟ್ಟಿರುವ
ಆಲುಂಘ. ಸಕ: [ಸ್ಪೃಶ್] ಸ್ಪರ್ಶಿಸು, ಮುಟ್ಟು
ಆಲುಂಪ. ಸಕ: [ಆ+ಲುಂಪ] ಕದಿ, ಅಪಹರಣ ಮಾಡು
ಆಲುಂಪ. ವಿ: [ಆಲುಂಪ] ಕಳ್ಳ, ಅಪಹರಣಕಾರಕ, ಕದಿಯುವವನು(ಆಚಾ)
ಆಲುಗ. 'ಆಲು' ಶಬ್ದವನ್ನು ನೋಡುವುದು
ಆಲುಗಾ. ಸ್ತ್ರೀ: [ದೇ] ಸಣ್ಣ ಗಡಿಗೆ, ಚಿಕ್ಕ ಕೊಡ(ಉಪ)
ಆಲುಯಾರ. ವಿ: [ದೇ] ನಿರರ್ಥಕ, ವ್ಯರ್ಥ, ಪ್ರಯೋಜನವಿಲ್ಲದ(ಸುಪಾ)
ಆಲೆಕ್ಖ. ನ: [ಆಲೇಖ್ಯ] ಚಿತ್ರ
ಆಲೆಕ್ಖ}. ವಿ: [ಆಲೇಖ್ಯ] ಚಿತ್ರಿಸಲ್ಪಡುವ,
ಆಲೆಕ್ಖಿಯ}. ಬರೆಯಲ್ಪಡುವ
ಆಲೆಟ್ಠುಅಂ} 'ಆಸಿಲಿಸ' ಶಬ್ದವನ್ನು ನೋಡುವುದು
ಆಲೆಟ್ಠುಂ.}
ಆಲೇವ. ಪು: [ಆಲೇಪ] ಬಳಿಯು(ವುದು,), ಲೇಪಿಸು
ಆಲೇವಣ. ನ: [ಆಲೇಪನ] ಲೇಪನ, ಬಳಿಯುವುದು, ಲೇಪಿಸಲಾಗುವ ವಸ್ತು
ಆಲೇಸಿಯ. ವಿ: [ಆಶ್ಲೇಷಿತ] ಆಲಿಂಗಿಸಲ್ಪಟ್ಟ
ಆಲೇಹ. ಪು: [ಆಲೇಖ] ಚಿತ್ರ (ಆವಮ)
ಆಲೇಹಿಅ. ವಿ: [ಆಲೇಖಿತ] ಚಿತ್ರಿಸಲ್ಪಟ್ಟ, ಚಿತ್ರಿತ
ಆಲೋಅ. ಸಕ: [ಆ+ಲೋಕ್] ನೋಡು, ಈಕ್ಷಿಸು. ವ. ಕೃ– **ಆಲೋಏಮಾಣ**

ಆಲೋಅ. ಸಕ: [ಆ+ಲೋಚ್] ನೋಡಿಸು, ತೋರಿಸು, ಗುರುವಿಗೆ ತನ್ನ ಅಪರಾಧವನ್ನು ಹೇಳಿಬಿಡು, ವಿಚಾರಮಾಡು ಆಲೋಚಿಸು
ಆಲೋಅ. ಪು: [ಆಲೋಕ] ತೇಜಸ್ಸು, ಪ್ರಕಾಶ, ಬೆಳಕು, ಚೆನ್ನಾಗಿ ನೋಡುವುದು, ಭೂಮಿಯ ಸಮಾನ ಭಾಗ, ಸಮ ಭೂಭಾಗ, ಗವಾಕ್ಷವೇ ಮೊದಲಾದ ಬೆಳಕಿನ ಸ್ಥಾನಗಳು, ಜಗತ್ತು, ಜ್ಞಾನ
ಆಲೋಅಗ.}. ವಿ: [ಆಲೋಚಕ]ಆಲೋಚಿಸುವವನು
ಆಲೋಅಯ}. ವಿಚಾರ ಮಾಡುವವನು
ಆಲೋಅಣ. ನ: [ಆಲೋಕನ] ನೋಡುವುದು, ದರ್ಶನ, ನಿರೀಕ್ಷಣೆ (ಗಉಡ)
ಆಲೋಅಣ. ನ: [ಆಲೋಚನ] ಕೆಳಗಿನ ಶಬ್ದವನ್ನು ನೋಡುವುದು
ಆಲೋಅಣಾ. ಸ್ತ್ರೀ: [ಆಲೋಚನಾ] ನೋಡುವುದು, ನೋಟ, ತಿಳಿಸುವುದು, ಪ್ರಾಯಶ್ಚಿತ್ತದ ಸಲುವಾಗಿ ತನ್ನ ದೋಷಗಳನ್ನು ಗುರುವಿಗೆ ಹೇಳುವುದು, ವಿಚಾರ, ಮನನ, ಧ್ಯಾನ
ಆಲೋಇಅ. ವಿ: [ಆಲೋಕಿತ] ನೋಡಲ್ಪಟ್ಟ, ನಿರೀಕ್ಷಿಸಲಾದ (ಸೇ)
ಆಲೋಇಅ. ವಿ: [ಆಲೋಚಿತ] ಪ್ರದರ್ಶಿಸಲಾದ, ಗುರುವಿಗೆ ತಿಳಿಸಲಾದ, ವಿಚಾರಮಾಡಲ್ಪಟ್ಟ
ಆಲೋಇಅ. 'ಆಲೋಅ=ಆ+ಲೋಚ್' ಶಬ್ದವನ್ನು ನೋಡುವುದು
ಆಲೋಇತ್ತು. ವಿ: [ಆಲೋಕಯಿತೃ] ನೋಡುವವನು, ದರ್ಶಿಸುವವನು
ಆಲೋಇಲ್ಲ. ವಿ: [ಆಲೋಕವತ್] ಪ್ರಕಾಶದಿಂದ ಕೂಡಿದ, ಬೆಳಕಿನಿಂದ ಕೂಡಿದ
ಆಲೊಕ್ಕಂತ. 'ಆಲೋಅ= ಆ+ಲೋಕ್' ಶಬ್ದವನ್ನು ನೋಡುವುದು
ಆಲೋಗ. 'ಆಲೋಅ=ಆಲೋಕ್' ಶಬ್ದವನ್ನು ನೋಡುವುದು. –**ನಯರ.** ನ: [–ನಗರ] ಒಂದು ನಗರವಿಶೇಷ.
ಆಲೋಚ. 'ಆಲೋಅ=ಆ+ಲೋಚ್' ಶಬ್ದವನ್ನು ನೋಡುವುದು
ಆಲೋಚಣ. 'ಆಲೋಅಣ' ಶಬ್ದವನ್ನು ನೋಡುವುದು
ಆಲೋಡ. ಸಕ: [ಆ+ಲೋಡಯ್] ಕಲಕು, ಮಥನ ಮಾಡು

ಆಲೋಡಿಅ}. ವಿ: **[ಆಲೋಡಿತ]** ಮಥನ
ಆಲೋಲಿಯ}. ಮಾಡಲ್ಪಟ್ಟ=ಮಥಿತ, ಕಲಕಲ್ಪಟ್ಟ
ಆಲೋಯಣ. ನ: **[ಆಲೋಕನ]** ಗವಾಕ್ಷ
ಆಲೋವ. ಸಕ: [ಆ+ಲೋಪಯ್] ಆಚ್ಛಾದಿಸು, ಹೊದಿಸು, ಮರೆಮಾಡು
ಆಲೋವ. ಆಲೋಅ=ಆಲೋಕ.
ಆಲೋವಿಯ. ವಿ: **[ಆಲೋಪಿತ]** ಆಚ್ಛಾದಿತ, ಮರೆಮಾಡಲಾದ, ಹೊದಿಸಲ್ಪಟ್ಟ(ಣಾಯಾ)
ಆವ. ವಿ: **[ಯಾವತ್]** ಎಷ್ಟು ಪರಿಮಾಣವುಳ್ಳದ್ದು
ಆವ. ಅ: **[ಯಾವತ್]** ಎಲ್ಲಿಯವರೆಗೆ, ಈವರೆಗೆ, ಆವರೆಗೆ(ಅವಧಿ). **–ಕಹ.** ವಿ: **[–ಕಥ] '–ಕಹಿಯ'** ಶಬ್ದವನ್ನು ನೋಡುವುದು. **–ಕಹಂ.** ಅ: **[ಕಥಮ್]** ಯಾವಜ್ಜೀವ, ಜೀವನ ಪರ್ಯಂತ(ಆವ). **–ಕಹಾ.** ಸ್ತ್ರೀ: **[–ಕಥಾ]** ಜೀವನ ಪರ್ಯಂತ. **–ಕಹಿಯ.** ವಿ:**[–ಕಥಿಕ]** ಜೀವನಪರ್ಯಂತ ಇರುವವನು
ಆವ. ಪು: **[ಆಪ]** ಪ್ರಾಪ್ತಿ, ಲಾಭ(ಪಣ್ಹ), ಜಲರಾಶಿ, **–ವಹುಲ.** ನ: **[–ಬಹುಲ] 'ಆಉ=–ಬಹುಲ'** ಶಬ್ದವನ್ನು ನೋಡುವುದು
ಆವ. ಸಕ: [ಆ+ಯಾ] ಬರು, ಆಗಮಿಸು, 'ಆವಂತಿ'
ಆವಆಸ. ಸಕ: [ಉಪ+ಗೂಹ್] ಆಲಿಂಗಿಸಿಕೊಳ್ಳು
ಆವಇ. ಸ್ತ್ರೀ: **[ಆಪದ್]** ಆಪತ್ತು, ತೊಂದರೆ, ವಿಪತ್ತು
ಆವಂಗ. ಪು: [ದೇ] ಉತ್ತರಾಣಿ ಗಿಡ
ಆವಂಡು. ವಿ: **[ಆಪಾಂಡು]** ಸ್ವಲ್ಪ ಬಿಳುಪು, ಸ್ವಲ್ಪ ಬಿಳಿಚಿಕೊಂಡಿರುವುದು
ಆವಂಡುರ. ವಿ: **[ಆಪಾಂಡುರ]** ಮೇಲಿನ ಶಬ್ದವನ್ನು ನೋಡುವುದು
ಆವಂತ. 'ಜಾವಂತ' ಶಬ್ದವನ್ನು ನೋಡುವುದು
ಆವಗ್ಗಣ. ನ: **[ಆವಲ್ಗನ]** ಕುದುರೆಯನ್ನೇರಿ ಕುಳಿತುಕೊಳ್ಳುವ ಕಲೆ(ಭವಿ)
ಆವಚ್ಚಿಜ್ಜ. ವಿ: **[ಅಪತ್ಯೀಯ]** ಮಗನ ಸ್ಥಾನದಲ್ಲಿರುವವನು
ಆವಜ್ಜ. 'ಆಅಜ್ಜ' ಶಬ್ದವನ್ನು ನೋಡುವುದು
ಆವಜ್ಜ. ಅಕ: **[ಆ+ಪದ್]** ಪಡೆದುಕೊಳ್ಳು, ಅನ್ವಯಿಸು, **'ಆವಜ್ಜಣ'**
ಆವಜ್ಜ} ವಿ: **[ಆವರ್ಜ, ಕ]** ಪ್ರೀತಿಯನ್ನು
ಆವಜ್ಜಗ} ಉಂಟು ಮಾಡುವ

ಆವಜ್ಜ. ಸಕ: [ಆ+ವರ್ಜ್] ಎದುರು ತರು, ಮುಖಾಮುಖಿ ಮಾಡು, ಪ್ರಸನ್ನಗೊಳಿಸು
ಆವಜ್ಜಣ. ನ: **[ಆವರ್ಜನ]** ಎದುರು ತರುವುದು, ಮುಖಾಮುಖಿ ಮಾಡುವುದು, ಪ್ರಸನ್ನಗೊಳಿಸುವುದು, ಉಪಯೋಗ, ಗಮನ, ಉಪಯೋಗ–ವಿಶೇಷ, ವ್ಯಾಪಾರ–ವಿಶೇಷ (ವಿಸೇ)
ಆವಜ್ಜಿಯ. ವಿ: **[ಆವರ್ಜಿತ]** ಪ್ರಸನ್ನಗೊಳಿಸಲ್ಪಟ್ಟ, ಎದುರಿಗೆ ತರಲಾದ(ಆಚೂ), **–ಕರಣ.** ನ: **[–ಕರಣ]** ವ್ಯಾಪಾರ–ವಿಶೇಷ(ಆಚೂ)
ಆವಜ್ಜಿಯ. 'ಆಉಜ್ಜಿಯ=ಆತೋದ್ಯಿಕ' ಶಬ್ದವನ್ನು ನೋಡುವುದು
ಆವಜ್ಜೀಕರಣ. ನ: **[ಆವರ್ಜೀಕರಣ]** ಉದ್ಯೋಗ–ವಿಶೇಷ ಅಥವಾ ವ್ಯಾಪಾರ–ವಿಶೇಷದ ಕಾರ್ಯ, 'ಉದೀರಣಾವಲಿಕಾ'ದಲ್ಲಿ ಕರ್ಮ ಪ್ರಕ್ಷೇಪರೂಪ ವ್ಯಾಪಾರ(ಔಪ)
ಆವಟ್ಟ. ಅಕ: [ಆ+ವೃತ್] ಚಕ್ರದ ಹಾಗೆ ತಿರುಗು ಸುತ್ತು, ವಿಲೀನಗೊಳ್ಳು, **ಸಕ:** ಒಣಗಿಸು, ದುಃಖವುಂಟುಮಾಡು(ವುದು, ನೋಯಿಸು **'ಆವಟ್ಟಇ**(ಹೇ)
ಆವಟ್ಟಣಾ. ಸ್ತ್ರೀ: **[ಆವರ್ತನಾ]** ಮತ್ತೆ ಮತ್ತೆ ಮಾಡುವುದು, ಸುತ್ತುವುದು
ಆವಟ್ಟ. 'ಆವತ್ತ' ಶಬ್ದವನ್ನು ನೋಡುವುದು
ಆವಟ್ಟಿಅ.ಸ್ತ್ರೀ:**[ದೇ]**ಹೊಸದಾಗಿ ಮದುವೆಯಾದವಳು, ಪರಾಧೀನಳಾದ ಹೆಣ್ಣು (ದೇ)
ಆವಡ. 'ಆವತ್ತ=ಆವರ್ತ' ಶಬ್ದವನ್ನು ನೋಡುವುದು
ಆವಡ. ಸಕ: [ಆ+ಪತ್] ಬರು, ಆಗಮಿಸು, ಬಂದೊದಗು
ಆವಡಣ. ನ: **[ಆಪತನ]** ಬೀಳುವುದು, ಬರುವುದು, ಆಗಮನ, ಸಂಭವ
ಆವಡಿಅ. ವಿ: **[ಆಪತಿತ]** ಕೆಳಗೆ ಬಿದ್ದಿರುವ, ಹತ್ತಿರ ಬಂದಿರುವ
ಆವಡಿಅ. ವಿ: **[ದೇ]** ಸಂಗತ, ಸಂಬದ್ಧ, ಸಾರ, ಬಲಿಷ್ಠ
ಆವಣ. ಪು: [ಆಪಣ] ಅಂಗಡಿ(ಣಾಯಾ), ಬಜಾರು(ಪ್ರಾಮಾ)
ಆವಣವೀಹಿ. ಸ್ತ್ರೀ: **[ಆಪಣವೀಥಿ]** ಅಂಗಡಿ ಬೀದಿ, ಒಂದು ಮುಖ್ಯ ಮಾರ್ಗ

ಆವಣಿಯ. ಪು: [ಆಪಣಿಕ] ವ್ಯಾಪಾರಿ, ವರ್ತಕ(ಪಾಅ)
ಆವಣ್ಣ. ವಿ: [ಆಪನ್ನ] ವಿಪತ್ತಿಗೆ ಅಥವಾ ಆಪತ್ತಿಗೆ ಸಿಲುಕಿದವನು, ಪ್ರಾಪ್ತ, ಹೊಂದಲ್ಪಟ್ಟ. **–ಸತ್ತಾ.** ಸ್ತ್ರೀ: [–ಸತ್ವಾ] ಗರ್ಭಿಣಿ
ಆವಣ್ಣ. ವಿ: [ಆಪನ್ನ] ಆಶ್ರಿತ, ಆಶ್ರಯ ಪಡೆದವನು
ಆವತ್ತ. ಸಕ: [ಆ+ವೃತ್] ಬರು
ಆವತ್ತ. ಅಕ: [ಆ+ವೃತ್] ಪರಿಭ್ರಮಣ, ಸುತ್ತು, ಬದಲಾಯಿಸು, ಚಕ್ರಾಕಾರದಲ್ಲಿ ಸುತ್ತು **ಸಕ:** ಓದಿದ ಪಾಠವನ್ನು ನೆನಪಿಟ್ಟುಕೊಳ್ಳು ತಿರುಗಿಸು
ಆವತ್ತ. ಪು: [ಆವರ್ತ] ಚಕ್ರಾಕಾರದಲ್ಲಿ ಸುತ್ತುವುದು, ತಿರುಗುವುದು, ಸುಳಿ, ಮುಹೂರ್ತ–ವಿಶೇಷ, ಮಹಾ ವಿಜಯ ಕ್ಷೇತ್ರದಲ್ಲಿರುವ ಒಂದು ವಿಜಯದ(ಪ್ರದೇಶ) ಹೆಸರು, ಒಂದು ಖುರಪುಟವಿರುವ ಪಶು, ಲೋಕಪಾಲನ ಹೆಸರು, ಮಣಿಯ ಒಂದು ಲಕ್ಷಣ, ಗ್ರಾಮ–ವಿಶೇಷ, ಶಾರೀರಿಕ ಚೇಷ್ಟೆ, **–ಕೂಡ.** ನ: [–ಕೂಟ] ಪರ್ವತ–ವಿಶೇಷದ ಶಿಖರ,. **ಆವತ್ತಾಯಂತ.** ವ. ಕೃ: [ಆವರ್ತಾಯಮಾನ] ದಕ್ಷಿಣದ ಕಡೆಯಿಂದ ಚಕ್ರಾಕಾರದಲ್ಲಿ ಸುತ್ತುವವನು
ಆವತ್ತ. ಪುಂನ: [ಆವರ್ತ] ಒಂದು ಬಗೆಯ ಹಡಗು, ನಿರಂತರ ೧೫ ದಿನಗಳ ವರೆಗಿನ ಉಪವಾಸ
ಆವತ್ತ.ನ:[ಆವರ್ತಕ] 'ಆವತ್ತ' ಶಬ್ದವನ್ನು ನೋಡುವುದು. ವಿ: ಚಕ್ರಾಕಾರದಲ್ಲಿ ಸುತ್ತುವವನು.
ಆವತ್ತಾ. ಸ್ತ್ರೀ: [ಆವರ್ತಾ] ಮಹಾ ವಿದೇಹ ಕ್ಷೇತ್ರದ ಒಂದು ವಿಜಯದ(ಪ್ರದೇಶ) ಹೆಸರು.
ಆವತ್ತಿ. ಸ್ತ್ರೀ: [ಆಪತ್ತಿ] ಆಪತ್ತು, ತೊಂದರೆ, ದೋಷದ ಪ್ರಸಂಗ, ಉತ್ಪತ್ತಿ, ಪ್ರಾಪ್ತಿ, ಲಭಿಸಿದ್ದು
ಆವದಿ. ಸ್ತ್ರೀ: [ಆವೃತಿ] ಆವರಣ, ಬೇಲಿ
ಆವನ್ನ. 'ಆವಣ್ಣ' ಶಬ್ದವನ್ನು ನೋಡುವುದು
ಆವಯ. ಪು: [ಆವರ್ತ] 'ಆವತ್ತ' ಶಬ್ದವನ್ನು ನೋಡುವುದು.
ಆವಯ. 'ಆವಡ' ಶಬ್ದವನ್ನು ನೋಡುವುದು
ಆವಯಾ. ಸ್ತ್ರೀ: [ಆಪಗಾ] ನದಿ, (ಪಾಅ)
ಆವಯಾ. ಸ್ತ್ರೀ: [ಆಪದ್] ಆಪತ್ತು, ವಿಪತ್ತು, ತೊಂದರೆ ದುಃಖ
ಆವರ. ಸಕ: [ಆ+ವೃ] ಆಚ್ಛಾದಿಸು, ಹೊದಿಸು,
ಆವರಣ. ನ: [ಆವರಣ] ಆಚ್ಛಾದನ, ಹೊದಿಕೆ, ಮುಚ್ಚುವುದು, ಮರೆಮಾಡುವುದು, ಮುಚ್ಚಳ, ವಾಸ್ತು–ವಿದ್ಯೆ
ಆವರಿಯ. ವಿ: [ಆವರಣೀಯ] ಮರೆಮಾಡುವಂಥದು, ಆಚ್ಛಾದನೆ ಮಾಡುವಂಥದು, ಹೊದಿಕೆ, ಮುಚ್ಚಳ
ಆವರಿಯ. ವಿ: [ಆವೃತ] ಮರೆಮಾಡಲ್ಪಟ್ಟ, ಸುತ್ತುವರಿಯಲ್ಪಟ್ಟ, ಮುಚ್ಚಲ್ಪಟ್ಟ,
ಆವರಿಸಣ. ನ: [ಆವರ್ಷಣ] ಚಿಮುಕಿಸುವುದು, ಸಿಂಪಡಿಸುವುದು, ಸುವಾಸನೆಯ ನೀರನ್ನು ಸುರಿಯುವುದು
ಆವರೇಇಯಾ. ಸ್ತ್ರೀ: [ದೇ] ಮದ್ಯವನ್ನು ಹಂಚುವ ಪಾತ್ರೆ
ಆವಲಣ. ನ: [ಆವಲನ] ತಿರುಗಿಸುವುದು(ಪಣ್ಣ)
ಆವಲಿ. ಸ್ತ್ರೀ: [ಆವಲೀ] ಪಂಕ್ತಿ, ಸಾಲು. ಶ್ರೇಣಿ, **ಪು:** ಒಬ್ಬ ವಿದ್ಯಾರ್ಥಿಯ ಹೆಸರು(ಪಉಮ)
ಆವಲಿಆ. ಸ್ತ್ರೀ: [ಆವಲಿಕಾ] ಸಾಲು, ಶ್ರೇಣಿ, ಕ್ರಮ, ಪದ್ಧತಿ, ಸಮಯ–ವಿಶೇಷ, ಒಂದು ಸೂಕ್ಷ್ಮವಾದ ಕಾಲಪರಿಣಾಮ. **–ಪವಿಟ್ಠ.** ವಿ: [–ಪ್ರವಿಷ್ಟ] ಶ್ರೇಣಿಯಲ್ಲಿ ವ್ಯವಸ್ಥೆಗೊಂಡ, **–ಬಾಹಿರ.** ವಿ: [–ಬಾಹ್ಯ] ಶ್ರೇಣಿ ಬದ್ಧವಲ್ಲದ ಅವ್ಯವಸ್ಥಿತ(ಭಗ)
ಆವಲಿಯ. ವಿ: [ಆವಲಿತ] ಸುತ್ತುಗಟ್ಟಲ್ಪಟ್ಟ, ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ
ಆವಲೀ. ಸ್ತ್ರೀ: [ಆವಲೀ] ಸಾಲು, ಶ್ರೇಣಿ, ರಾವಣನ ಒಬ್ಬ ಮಗಳ ಹೆಸರು (ಪಉಮ)
ಆವಸ. ಸಕ: [ಆ+ವಸ್] ಇರು, ವಾಸಿಸು,
ಆವಸಹ. ಪು: [ಆವಸಥ] ಮನೆ, ಆಶ್ರಯ, ಸ್ಥಳ, ಸಂನ್ಯಾಸಿಗಳ ವಾಸಸ್ಥಾನವಾದ ಮಠ(ಪಣ್ಣ)
ಆವಸಹಿಯ. ಪು: [ಆವಸಥಿಕ] ಗೃಹಸ್ಥ, ಸಂನ್ಯಾಸಿ (ಸೂಅ)
ಆವಸಿಯ.} ವಿ: [ಆವಶ್ಯಕ] ಅವಶ್ಯ ಕರ್ತವ್ಯ,
ಆವಸಿಗ.} ಅಗತ್ಯವಾದ್ದು, ಅನಿವಾರ್ಯವಾಗಿ
ಆವಸ್ಸಯ.} ಮಾಡಬೇಕಾದ್ದು, ನ: ಸಾಮಯಿಕಾದಿ ಧರ್ಮಾನುಷ್ಠಾನ, ನಿತ್ಯ ಕರ್ಮ(ಉವ), ಜೈನಗ್ರಂಥ–ವಿಶೇಷ, ಆವಶ್ಯಕ ಸೂತ್ರಗಳು (ಆವಮ), **ಆವಸಿಯಾಣುಓಗ. ಪು:** [ಆವಶ್ಯಾಕಾನುಯೋಗ] ಆವಶ್ಯಕ ಸೂತ್ರದ ವ್ಯಾಖ್ಯೆ
ಆವಸ್ಸಯ. ಪುಂ.ನ: [ಆಪಾಶ್ರಯ] ಮೇಲಿನ ಶಬ್ದವನ್ನು ನೋಡುವುದು. ಆಧಾರ, ಆಶ್ರಯ(ವಿಸೇ)

ಆವಸ್ಸಿಯಾ. ಸ್ತ್ರೀ: [**ಆವಶ್ಯಕೀ**] ಸಾಮಾಚಾರಿ–ವಿಶೇಷ, ಜೈನಸಾಧುವಿನ ಅನುಷ್ಠಾನ–ವಿಶೇಷ(ಉತ್ತ)
ಆವಹ. ಸಕ: [**ಆ+ವಹ್**] ಧರಿಸು, ಹೊರು
ಆವಹ. ವಿ: [**ಆವಹ**] ಧಾರಣೆಮಾಡುವವನು (ಧರಿಸುವವನು)(ಆಚಾ)
ಆವಾ. ಸಕ: [**ಆ+ಪಾ**] ಕುಡಿ, ಭೋಗಿಸು
ಆವಾಇಯಾ. ಸ್ತ್ರೀ: [**ಆವಾಪಿಕಾ**] ಪ್ರಧಾನ ಹೋಮ
ಆವಾಗ. ಪು: [**ಆಪಾಕ**] ಕುಂಬಾರನು ಮಣ್ಣಿನ ಪಾತ್ರೆಗಳನ್ನು(ಮಡಕೆ) ಸುಡುವ ಸ್ಥಳ, ಆವಗೆ
ಆವಾಡ. ಪು: [**ಆಪಾತ**] ಭಿಲ್ಲವರ ಒಂದು ಜಾತಿ
ಆವಾಣಯ. ನ: [**ಆಪಾಣಕ**] ಅಂಗಡಿ, ಬಜಾರು (ಆಪಣಕ್ಕೆ ಸಂಬಂಧಿಸಿದ್ದು)
ಆವಾಯ. ಪು: [**ಆಪಾತ**] ಪ್ರಾರಂಭ, ಪ್ರಥಮ ಭೇಟಿ, ತತ್ಕಾಲ, ತತ್ ಕ್ಷಣ, ಕೂಡಲೇ, ಪತನ, ಬೀಳುವುದು, ಸಂಬಂಧ, ಸಂಯೋಗ(ಉವ)
ಆವಾಯ. ಪುಂನ: [**ಆಪಾತ**] ಬರುವುದು, ಆಗಮನ
ಆವಯ. '**ಆಪಾಕ**' ಶಬ್ದವನ್ನು ನೋಡುವುದು.
ಆವಾಯ. ಪು: [**ಆವಾಪ**] ಮಡಕೆಗಳನ್ನು ಸುಡುವ ಸ್ಥಳ, ಗಿಡದ ಪಾತಿ, ಎಸೆಯುವುದು, ಶತ್ರುವಿನ ಚಿಂತೆ, ಬೀಜಬಿತ್ತುವುದು(ಶ್ರಾ)
ಆವಾಯಣ. ನ: [**ಆಪಾದನ**] **ಸಂಪಾದನೆ,** ದೋಷಾರೋಪಣೆ
ಆವಾಲ. '**ಆಲವಾಲ**' ಶಬ್ದವನ್ನು ನೋಡುವುದು.
ಆವಾಲ.} ನ: [**ದೇ**] ನೀರಿಗೆ ಹತ್ತಿರದ ಪ್ರದೇಶ(ದೇ)
ಆವಾಲಯ.}
ಆವಾವ. '**ಆವಾಯ=ಆವಾಪ**' ಶಬ್ದವನ್ನು ನೋಡುವುದು. **–ಕಹಾ.** ಸ್ತ್ರೀ: [**–ಕಥಾ**] ಅಡುಗೆಗೆ ಸಂಬಂಧಿಸಿದ ಕಥೆ(ಪಣ್ಣ)
ಆವಾಸ. ಪು: [**ಆವಾಸ**] ವಾಸಸ್ಥಾನ, ನಿವಾಸ, ಮನೆ, ಇರುವುದು, ವಾಸಿಸುವುದು(ಔಪ), ಪಕ್ಷಿಗೂಡು, ತಂಗುದಾಣ, ಡೇರೆ ಬೀಡು, **–ಪವ್ವಯ.** ಪು: [**–ಪರ್ವತ**] ವಾಸಿಸುವ ಪರ್ವತ(ಇಕ)
ಆವಾಸ.}. '**ಆವಸ್ಸಯ=ಆವಶ್ಯಕ**' ಶಬ್ದವನ್ನು
ಆವಾಸಗ}. ನೋಡುವುದು (ಓಘ)
ಆವಾಸಣಿಯಾ. ಸ್ತ್ರೀ:[**ಆವಾಸನಿಕಾ**]ವಾಸವಿರು ಸ್ಥಳ, ನೆಲೆ
ಆವಾಸಯ. ನ: [**ಆವಾಸಕ**] ಆವಶ್ಯಕ, ಅಗತ್ಯವಾದ, ನಿತ್ಯ–ಕರ್ತವ್ಯ, ಧರ್ಮಾನುಷ್ಠಾನ, ಪು: ಪಕ್ಷಿ ಗೂಡು, ನೀಡ(ವವ), ವಿ: ವಾಸಗೃಹ, ಮನೆ, ಸಂಸ್ಕಾರವನ್ನುಂಟುಮಾಡುವಂಥದು, ಹೊದಿಕೆ, ಮುಚ್ಚಳ, ಮರೆಮಾಡುವುದು
ಆವಾಸಿ. ವಿ: [**ಆವಾಸಿನ್**] ವಾಸಿಸುವವನು
ಆವಾಸಿಯ. ವಿ: [**ಆವಾಸಿತ**] ಪ್ರದೇಶದಲ್ಲಿ ಇರಲಾದ, ಬೀಡುಬಿಡಿಸಲ್ಪಟ್ಟ(ಸುಪಾ)
ಆವಾಹ. ಸಕ: [**ಆ+ವಾಹಯ್**] ದೇವತೆಗಳನ್ನು ಆಹ್ವಾನಿಸು, ಕರೆ
ಆವಹ. ಪು: [**ಆಬಾಧ**] ಪೀಡೆ, ತೊಂದರೆ, ಅಡ್ಡಿ
ಆವಾಹ. ಪು: [**ಆವಾಹ**] ಹೊಸದಾಗಿ ಮದುವೆಯಾದ ಹೆಣ್ಣನ್ನು ವರನ ಮನೆಗೆ ಕರೆತರುವುದು(ಪಣ್ಣ), ಮದುವೆಗೆ ಮುನ್ನ ನಡೆಸಲಾಗುವ ತಾಂಬೂಲ ಸಮಾರಂಭ(ಜೀವ)
ಆವಾಹಣ. ನ: [**ಆವಾಹನ**] ಆಹ್ವಾನ ದೇವತೆಗಳಿಗೆ ಕೊಡುವ ಆಹ್ವಾನ(ವಿಸೇ)
ಆವಾಹಿಯ. ವಿ: [**ಆವಾಹಿತ**] ಕರೆಸಲ್ಪಟ್ಟವನು, ಆಹ್ವಾನಿಸಲ್ಪಟ್ಟವನು, ನೆರವಿಗಾಗಿ ಆಹ್ವಾನಿಸಲಾದ ದೇವ ಅಥವಾ ದೇವಾಧಿಷ್ಠಿತ ವಸ್ತು
ಆವಿ. ನ: [**ದೇ**] ಪ್ರಸವ ವೇದನೆ, ವಿ: ಶಾಶ್ವತವಾದ, ನೋಡಲ್ಪಟ್ಟ(ದೇ)
ಆವಿ. ಅ: [**ಚಾಪಿ**] ಸಮುಚ್ಚಯ ವಾಚಕ ಅವ್ಯಯ
ಆವಿ. ಅ: [**ಆವಿಸ್**] ಪ್ರಕಾಶಗೊಳ್ಳುವುದು, ತೋರುವುದು–ಇದನ್ನು ಹೇಳುವ ಅವ್ಯಯ
ಆವಿಅ. ಸಕ: [**ಆ+ಪಾ**] ಕುಡಿ
ಆವಿಅ. ವ: [**ಆವೃತ**]ಆಚ್ಛಾದಿತ, ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ
ಆವಿಅ. ಪು: [**ದೇ**] ಇಂದ್ರಗೋಪ, ಒಂದು ಬಗೆಯ ಕೀಟ, ವಿ: ಮಥಿತ, ಕಲಕಲ್ಪಟ್ಟ, ಕಡೆಯಲ್ಪಟ್ಟ, ಪೋಣಿಸಲ್ಪಟ್ಟ, ಹೊಲಿಯಲ್ಪಟ್ಟ
ಆವಿಅ. ವಿ: [**ಆವಿಚ**] ಅವಿಚ–ದೇಶೋತ್ಪನ್ನ
ಆವಿಅಜ್ಝಾ. ಸ್ತ್ರೀ: [**ದೇ**] ಹೊಸದಾಗಿ ಮದುವೆಯಾದ, ಮದುಮಗಳು, ಪರಾಧೀನ ಹೆಣ್ಣು(ದೇ)
ಆವಿಂಧ. ಸಕ: [**ಆ+ವ್ಯಧ್**] ಧರಿಸು, ಮಂತ್ರದಿಂದ ವಶಪಡಿಸಿಕೊಳ್ಳು(ಪಣ್ಣ)
ಆವಿಂಧಣ. ನ: [**ಆವ್ಯಧನ**] ಧರಿಸುವುದು, ಮಂತ್ರದಿಂದ ವಶವಾಡಿಕೊಳ್ಳುವುದು ಮಂತ್ರದಿಂದ ಆವೇಶಕ್ಕೊಳಪಡಿಸುವುದು

ಆವಿಕಮ್ಮ. ಪುಂನ: [ಆವಿಷ್ಕರ್ಮನ್] ಪ್ರಕಟವಾಗಿ ಮಾಡಿದ ಕೆಲಸ(ಆಚಾ)

ಆವಿಗ್ಗ. ವಿ: [ಆವಿಗ್ನ] ಉದ್ವಿಗ್ನ, ಉದಾಸೀನ, ಕಷ್ಟಕ್ಕೊಳಗಾದ

ಆವಿಟ್ಠ. ವಿ: [ಆವಿಷ್ಟ] ಆವರಿಸಲ್ಪಟ್ಟ, ವ್ಯಾಪ್ತ, ಪ್ರವೇಶಿಸಲ್ಪಟ್ಟ, ಅಧಿಷ್ಠಿತ, ಆಶ್ರಿತ, ಭೂತಾದಿಗಳಿಂದ ಪೀಡಿತ.

ಆವಿದ್ಧ. ವಿ: [ಆವಿದ್ಧ] ಆವೃತ, ಆಚ್ಛಾದಿತ, ಮುಚ್ಚಲ್ಪಟ್ಟ, ಧರಿಸಲ್ಪಟ್ಟ

ಆವಿದ್ಧ. ವಿ: [ದೇ] ಎಸೆಯಲ್ಪಟ್ಟ, ಬಿಸಾಡಲ್ಪಟ್ಟ, ಪ್ರೇರಿಸಲ್ಪಟ್ಟ

ಆವಿಬ್ಭಾವ. ಪು: [ಆವಿರ್ಭಾವ] ಉತ್ಪತ್ತಿ, ಹುಟ್ಟುವುದು, ಕಾಣಿಸಿಕೊಳ್ಳುವುದು(ವಿಸೇ)

ಆವಿಬ್ಭೂಯ. ವಿ: [ಆವಿರ್ಭೂತ] ಉತ್ಪನ್ನ, ಹುಟ್ಟಿದ, ಕಾಣಿಸಿಕೊಂಡ, ಅಭಿವ್ಯಕ್ತವಾದ

ಆವಿಲ. ವಿ: [ಆವಿಲ] ಮಲಿನ, ಅಶುದ್ಧ, ಕಲುಷಿತ, ವ್ಯಾಪ್ತ, ಚಿಂತಾಕ್ರಾಂತ

ಆವಿಲಿಅ. ವಿ: [ದೇ] ಕುಪಿತ, ಕೋಪಗೊಂಡ(ಷಡ್)

ಆವಿಲುಂಪಿಅ. ವಿ: [ಆಕಾಂಕ್ಷಿತ] ಆಸೆಪಟ್ಟ, ಇಚ್ಛೆಪಟ್ಟ

ಆವಿಸ. ಸಕ: [ಆ+ವಿಶ್] ಪ್ರವೇಶಿಸು, ಒಳ ಹೋಗು

ಆವಿಸ. ಅಕ: [ಆ+ವಿಶ್] ಸಂಬದ್ಧವಾಗು ಯುಕ್ತವಾಗು, ಉಚಿತವಾಗು. **ಸಕ:** ಉಪಭೋಗಿಸು, ಸೇವಿಸು (ವಿಸೇ)

ಆವಿಹವ. ಅಕ: [ಆವಿರ್+ಭೂ] ಪ್ರಕಟವಾಗು, ವ್ಯಕ್ತವಾಗು, ಹುಟ್ಟು **'ಆವಿಹವಣ'**

ಆವಿಹೂಅ. **'ಆವಿಬ್ಭೂಯ'** ಶಬ್ದವನ್ನು ನೋಡುವುದು.

ಆವೀ **'ಆವಿ=ಆವಿಸ್'**ಶಬ್ದವನ್ನುನೋಡುವುದು. **-ಕಮ್ಮ.**'**ಆವಿಕಮ್ಮ**'ಶಬ್ದವನ್ನು ನೋಡುವುದು.

ಆವೀಅ. ವಿ: [ಆಪೀತ] ಕುಡಿಯಲ್ಪಟ್ಟ, ಒಣಗಿಸಲ್ಪಟ್ಟ

ಆವೀಇ. ವಿ: [ಆವೀಚಿ] ನಿರಂತರ, ಎಡೆಬಿಡದೆ, ಅವಿಚ್ಛಿನ್ನ, **-ಮರಣ.** ನ: [-ಮರಣ] ಮರಣ-ವಿಶೇಷ

ಆವೀಕಮ್ಮ. ನ: [ಆವಿಷ್ಕರ್ಮನ್] ಉತ್ಪತ್ತಿ, ಅಭಿವ್ಯಕ್ತಿ, ಪ್ರಕಟವಾಗುವುದು

ಆವೀಡ. ಸಕ: [ಆ+ಪೀಡ] ಪೀಡಿಸು, ಹಿಂಸಿಸು, ಮರ್ದಿಸು, ಹತ್ತಿಕ್ಕು

ಆವೀಣ. ನ: [ಆಪೀನ] ಕೆಚ್ಚಲು(ಗಉಡ)

ಆವೀಲ.'**ಆಮೇಲ=ಆಪೀಡ**'ಶಬ್ದವನ್ನು ನೋಡುವುದು

ಆವೀಲ. **'ಆವೀಡ'** ಶಬ್ದವನ್ನು ನೋಡುವುದು.

ಆವೀಲಣ. ನ: [ಆಪೀಡನ] ಸಮೂಹ, ಗುಂಪು (ಗಉಡ)

ಆವುಅ. ಪು: [ಆವುಕ] ನಾಟಕದ ಭಾಷೆಯಲ್ಲಿ 'ತಂದೆ' (-ಅಪ್ಪ)(ನಾಟ)

ಆವುಣ್ಣ. ವಿ: [ಆಪೂರ್ಣ] ತುಂಬಿದ, ಪೂರ್ಣಗೊಂಡ

ಆವುತ್ತ. ಪು: [ದೇ] ಸೋದರಿಯ ಗಂಡ (ಭಾವಮೈದುನ) (ಅಭಿ)

ಆವುದ. ವಿ: [ಆವೃತ] ಆವರಿಸಲ್ಪಟ್ಟ, ಮುಚ್ಚಲ್ಪಟ್ಟ

ಆವುದಿ. ಸ್ತ್ರೀ: [ಆವೃತಿ] ಆವರಣ

ಆವೂರ. **'ಆಪೂರ=ಆ+ಪೂರಯ್'** ಶಬ್ದವನ್ನು ನೋಡುವುದು

ಆವೂರಣ. ನ: [ಆಪೂರಣ] ಭರ್ತಿಮಾಡುವುದು

ಆವೇಅ. ಸಕ: [ಆ+ವೇದಯ್] ನಿವೇದಿಸು, ಹೇಳು

ಆವೇಅ. ಪು: [ಆವೇಗ] ಕಷ್ಟ, ದುಃಖ (ಸೇ)

ಆವೇಉಂ. **'ಆವಾ'** ಶಬ್ದವನ್ನು ನೋಡುವುದು

ಆವೇಡ್ಢಿಯ. ವಿ: [ಆವೇಷ್ಟಿತ] ಸುತ್ತುವರಿಯಲ್ಪಟ್ಟ,

ಆವೇಡ.} **'ಆಮೇಲ'** ಶಬ್ದವನ್ನು ನೋಡುವುದು
ಆವೇಡಯ}.

ಆವೇಢ. ಪು: [ಆವೇಷ್ಟ] ಮಂಡಲಾಕಾರ ಮಾಡುವುದು, ಆವರಣ, ಸುತ್ತುವರಿಯುವುದು

ಆವೇಢಣ. ನ: [ಆವೇಷ್ಟನ] ಮೇಲಿನ ಶಬ್ದವನ್ನು ನೋಡುವುದು

ಆವೇಢಿಯ. ವಿ: [ಆವೇಷ್ಟಿತ] ನಾಲ್ಕೂ ಕಡೆಯಿಂದ ಸುತ್ತುವರಿಯಲ್ಪಟ್ಟ, ಒಮ್ಮೆ ಸುತ್ತುವರಿಯಲ್ಪಟ್ಟ (ತಾ)

ಅವೇಯಣ. ನ: [ಆವೇದನ] ನಿವೇದನೆ, ಹೇಳುವುದು, ವಿಜ್ಞಾಪನೆ,ಮನೋಭಾವವನ್ನು ವ್ಯಕ್ತಪಡಿಸುವುದು

ಆವೇವಅ. ವಿ: [ದೇ] ವಿಶೇಷವಾಗಿ ಆಸಕ್ತನಾದ, ಚೆನ್ನಾಗಿ ಬೆಳೆದಿರುವ, ಹೆಚ್ಚಾದ(ಷಡ್)

ಆವೇಸ: ಸಕ: [ಆ+ವೇಶಯ್] ಭೂತಾದಿಗಳು ಹಿಡಿಯುವಂತೆ ಮಾಡು,

ಆವೇಸ. ಪು: [ಆವೇಶ] ಆಗ್ರಹ, ಹಟ, ಶರೀರ, ಭೂತ-ಹಿಡಿಯುವಿಕೆ, ಪ್ರವೇಶ(ನಾಟ)

ಆವೇಸಣ. ನ: [ಆವೇಶನ] ಶೂನ್ಯ-ಗೃಹ, ಭೂತಾದಿಗಳು ಹಿಡಿಯುವುದು

ಆಸ. 'ಅಸ್ಸ=ಅಸ್ತ್ರ ಶಬ್ದವನ್ನು ನೋಡುವುದು.
ಆಸ. ಸಕ: [ಆಸ್] ಕುಳಿತುಕೊಳ್ಳು. ವ. ಕೃ–ಆಸಮಾಣ
ಆಸ. ಪು: [ಅಶ್ವ] ಕುದುರೆ(ಣಾಯಾ), ದೇವ–ವಿಶೇಷ, ಅಶ್ವಿನೀ ನಕ್ಷತ್ರದ ಅಧಿಷ್ಠಾತೃ–ದೇವ, ಅಶ್ವಿನಿ ನಕ್ಷತ್ರ, ಮನಸ್ಸು. **–ಕಣ್ಣ, –ಕನ್ನ. ಪು:** [–ಕರ್ಣ] ಒಂದು ಅಂತರ್‌ದ್ವೀಪ, ಅದರ ನಿವಾಸಿ(ತಾ), **–ಗ್ಗೀವ. ಪು:** [–ಗ್ರೀವ] ಒಬ್ಬ ಪ್ರಸಿದ್ಧ ರಾಜ, ಮೊದಲನೆಯ ಪ್ರತಿವಾಸುದೇವ(ಪಉಮ), **–ತರ. ಪು:** [–ತರ] ಖಚರ. **–ತ್ಥಾಮ. ಪು:** [–ತ್ಥಾಮನ್] ದ್ರೋಣನ ಹೆಸರಾಂತ ಪುತ್ರ, **–ದ್ಧಅ. ಪು:** [–ಧ್ವಜ] ವಿದ್ಯಾಧರ ವಂಶದ ಒಬ್ಬ ರಾಜ, **–ಧಮ್ಮ. ಪು:** [–ಧರ್ಮ] ಹಿಂದೆ ಹೇಳಿದ ಅರ್ಥ ನೋಡಿ(ಪಉಮ) **–ಧರ. ವಿ:** [–ಧರ] ಅಶ್ವಗಳನ್ನು ಹಿಡಿಯುವವನು, (ಔಪ), **–ಪುರ. ನ:** [–ಪುರ] ನಗರ–ವಿಶೇಷ, **–ಪುರಾ, –ಪುರೀ. ಸ್ತ್ರೀ:** [ಪುರೀ] ನಗರ ವಿಶೇಷ. **–ಮಕ್ಖಿಯಾ. ಸ್ತ್ರೀ:** [–ಮಕ್ಷಿಕಾ] ಚತುರಿಂದ್ರಿಯ ಜೀವ–ವಿಶೇಷ. **–ಮದ್ದಗ, –ಮದ್ದಯ. ಪು:** [–ಮರ್ದಕ] ಕುದುರೆಯ ಮೈ ಉಜ್ಜುವವನು (ಣಾಯಾ), **–ಮಿತ್ತ. ಪು:** [–ಮಿತ್ರ] ಒಬ್ಬ ಜೈನಾಭಾಸ ದಾರ್ಶನಿಕ, ಇವನು ಮಹಾಗಿರಿಯ ಶಿಷ್ಯ, ಕೌಂಡಿಣ್ಯನ ಶಿಷ್ಯ ಮತ್ತು ಸಾಮುಚ್ಛೇದಿಕ ಪಂಥವನ್ನು ಮುನ್ನಡೆಸಿದ್ದ(ತಾ), **–ಮುಹ. ಪು:** [–ಮುಖ] ಒಂದು ಅಂತರ್‌ದ್ವೀಪ, ಅದರ ನಿವಾಸಿ. **–ಮೇಹ. ಪು:** [–ಮೇಘ] ಯಜ್ಞ–ವಿಶೇಷ, (ಪಉಮ), **–ರಹ. ಪು;** [–ರಥ] ಕುದುರೆಗಾಡಿ. **–ವಾರ. ಪು:** [–ವಾರ] ಕುದುರೆ ಸವಾರಿ, ಅಶ್ವವಿಹಾರ(ವಿಪಾ). **–ಸೇಣ. ಪು:** [–ಸೇನ] ಭಗವಾನ್ ಪಾರ್ಶ್ವನಾಥನ ತಂದೆ, ನಾಲ್ಕನೇ ಚಕ್ರವರ್ತಿಯ ತಂದೆ(ಸಮ), **ಆಸಾರೋಹ. ಪು:** [ಅಶ್ವಾರೋಹ] ಕುದುರೆ ಸವಾರ
ಆಸ. ಪುಂಸ್ತ್ರೀ: [ಆಶ] ಭೋಜನ, ಊಟ
ಆಸ. ಪು: [ಆಸ] ಎಸೆಯುವುದು(ವಿಸೇ)
ಆಸಇ. ವಿ: [ಆಶ್ರಯಿನ್] ಆಶ್ರಯದಲ್ಲಿ ಇರುವ,
ಆಸ. ನ: [ಆಸ್ಯ] ಮುಖ(ಣಾಯಾ)
ಆಸಂಕ. ಸಕ: [ಆ+ಶಂಕ್]ಸಂದೇಹಿಸು, ಸಂಶಯಪಡು, **ಅಕ:** ಭಯಭೀತನಾಗು ವ.ಕೃ–ಆಸಂಕಂತ, **ಆಸಂಕಮಾಣ**
ಆಸಂಕಾ. ಸ್ತ್ರೀ: [ಆಶಂಕಾ] ಶಂಕೆ, ಸಂಶಯ, ಭಯ, ಭ್ರಮೆ(ಸುರ)
ಆಸಂಕಿ. ವಿ: [ಆಶಂಕಿನ್] ಸಂದೇಹಿಸುವವನು, ಭಯಪಡುವವನು
ಆಸಂಕಿಯ. ವಿ: [ಆಶಂಕಿತ] ಹೆದರಿದ, ಸಂದೇಹಿಸಲ್ಪಟ್ಟ. **ನ:** ಸಂಶಯ, ಸಂದೇಹ
ಆಸಂಕಿರ. ವಿ: [ಆಶಂಕಿತೃ] ಶಂಕಿಸುವವನು, ಸಂದೇಹಿಸುವವನು
ಆಸಂಗ. ಪು: [ದೇ] ವಾಸದ ಮನೆ, ಶಯ್ಯಾ ಗೃಹ
ಆಸಂಗ. ಪು: [ಆಸಂಗ] ಆಸಕ್ತಿ, ಪ್ರೀತಿ, ಸಂಬಂಧ (ಗಉಡ), ರೋಗ(ಆಚಾ)
ಆಸಂಗಿ. ವಿ: [ಆಸಂಗಿನ್] ಆಸಕ್ತನಾದ, ಸತತ ಸಂಬಂಧವುಳ್ಳ, ಸಂಯೋಗಿ (ಗಉಡ), **ಸ್ತ್ರೀ:–ಣೀ**
ಆಸಂದಯ. ಪುಂನ: [ಆಸಂದಕ] ಮಂಚ
ಆಸಂಘ. ಸಕ: [ಸಂ+ಭಾವಯ್] ಗೌರವಿಸು, ದೃಢ ಮನಸ್ಸು ಮಾಡು, ಪ್ರಯತ್ನಮಾಡು, ನಿಶ್ಚಿತಗೊಳಿಸು. **'ಆಸಂಘಇ'**
ಆಸಂಘ. ಪು: [ದೇ} ಶ್ರದ್ಧೆ, ನಂಬಿಕೆ, ಪ್ರಯತ್ನ, ಪರಿಣಾಮ(ಸೇ) ಇಚ್ಛೆ, ಬಯಕೆ, ಅಭಿಲಾಷೆ
ಆಸಂಘಾ. ಸ್ತ್ರೀ: [ದೇ] ಇಚ್ಛೆ, ಬಯಕೆ ಆಸಕ್ತಿ
ಆಸಂಘಿಅ. ವಿ: [ದೇ] ನಿಶ್ಚಯಿಸಲ್ಪಟ್ಟ, ಪ್ರಯತ್ನಿಸಲ್ಪಟ್ಟ, ಸಂಶಯದಿಂದ ನೋಡಲ್ಪಟ್ಟ, ಊಹಿಸಲ್ಪಟ್ಟ (ಕುಮಾ)
ಆಸಂಜಿಅ. ವಿ: [ಆಸಕ್ತ] ಹಿಂದೆಬಿದ್ದ, ಬೆನ್ನುಹತ್ತಿರುವ (ಉತ್ತರ)
ಆಸಂದಯ. ನ: [ಆಸಂದಕ] ಆಸನ–ವಿಶೇಷ(ಆಚಾ)
ಆಸಂದಾಣ. ನ: [ಆಸಂದಾನ] ವಿಘ್ನ, ತಡೆ, ಅಡ್ಡಿ (ಗಉಡ)
ಆಸಂದಿಆ. ಸ್ತ್ರೀ: [ಆಸಂದಿಕಾ] ಆಸನ–ವಿಶೇಷ, ಮಂಚ
ಆಸಂಧೀ. ಸ್ತ್ರೀ: [ಅಶ್ವಗಂಧೀ] ಒಂದು ವನಸ್ಪತಿ–ವಿಶೇಷ
ಆಸಂಬರ. ವಿ: [ಆಶಾಂಬರ] ದಿಗಂಬರ, ನಗ್ನ (ಪ್ರಾಮಾ), ಜೈನರ ಒಂದು ಮುಖ್ಯ ಪ್ರಭೇದ, ಅದರ ಅನುಯಾಯಿ
ಆಸಂಸಇಯ. ವಿ: [ಆಸಂಶಯಿತ] ಸಂಶಯ–ರಹಿತ, ಸಂದೇಹವಿಲ್ಲದ
ಆಸಂಸಣ. ನ: [ಆಶಂಸನ] ಇಚ್ಛೆ, ಅಭಿಲಾಷೆ

ಆಸಂಸಾ. ಸ್ತ್ರೀ: [ಆಶಂಸಾ] ಇಚ್ಛೆ, ಅಭಿಲಾಷೆ
ಆಸಂಸಿ. ವಿ: [ಆಶಂಸಿನ್] ಇಚ್ಛಿಸುವವನು, ಅಭಿಲಾಷಿ
ಆಸಂಸಿಅ. ವಿ: [ಆಶಂಸಿತ] ಅಪೇಕ್ಷಿಸಲ್ಪಟ್ಟ, ಇಚ್ಛಿಸಲ್ಪಟ್ಟ
ಆಸಕ್ಖಯ. ಪು: [ದೇ] ಪ್ರಶಸ್ತವಾದ ಪಕ್ಷಿ–ವಿಶೇಷ,
ಆಸಗ. 'ಆಸ=ಅಶ್ವ' ಶಬ್ದವನ್ನು ನೋಡುವುದು
ಆಸಗಲಿಅ. ವಿ: [ದೇ] ಆಕ್ರಾಂತ,ಆಕ್ರಮಿಸಲ್ಪಟ್ಟ, ಪ್ರಾಪ್ತ, ಹೊಂದಿದ, ಲಭ್ಯವಾದ
ಆಸಜ್ಜ. ಅ: [ಆಸಾದ್ಯ] ಪಡೆದುಕೊಂಡು, ಹೊಂದಿ
ಆಸಡ. ಪು: [ಆಸಡ] ವಿಕ್ರಮಶಕೆ ೧೩ನೇ ಶತಮಾನದ ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಗ್ರಂಥಕಾರ
ಆಸಣ. ನ: [ಆಸನ] ಕುಳಿತುಕೊಳ್ಳುವ ಪೀಠ, ಸ್ಥಳ, ಜಾಗ, ಹಾಸಿಗೆ(ಆಚಾ), ಕುಳಿತುಕೊಳ್ಳುವುದು
ಆಸಣಿಯ. ವಿ: [ಆಸನಿತ] ಪೀಠದ ಮೇಲೆ ಕುಳ್ಳಿರಿಸಲಾಗಿರುವ
ಆಸಣ್ಣ. ನ: [ಆಸನ್ನ] ಸಮೀಪದಲ್ಲಿರುವ, ಹತ್ತಿರಕ್ಕೆ ಬಂದ. **–ವತ್ತಿ.** ವಿ: [–ವರ್ತಿನ್] ಹತ್ತಿರದಲ್ಲಿ ಇರುವ
ಆಸತ್ತ. ವಿ: [ಆಸಕ್ತ] ಲೀನನಾದ, ತತ್ಪರನಾದ(ಮಹಾ)
ಆಸತ್ತ. ವಿ: [ಆಸಕ್ತ] ಕೆಳಗೆ ಅಂಟಿಕೊಂಡಿರುವ. ಪು: ವೀರ್ಯಪಾತವಾದರೂ ಹೆಣ್ಣನ್ನು ಆಲಿಂಗಿಸಿಕೊಂಡು ಅವಳ ಕಂಕುಳಿಗೆ ಅಂಟಿಕೊಂಡು ಮಲಗುವ ನಪುಂಸಕರ ಒಂದು ಪ್ರಭೇದ
ಆಸತ್ತಿ. ಸ್ತ್ರೀ: [ಆಸಕ್ತಿ] ಪ್ರೀತಿ, ತಲ್ಲೀನತೆ, ಶ್ರದ್ಧೆ, ತತ್ಪರತೆ
ಆಸತ್ಥ. ಪು: [ಅಶ್ವತ್ಥ] ಅರಳಿಮರ
ಆಸತ್ಥ. ವಿ: [ಆಶ್ವಸ್ತ] ಭರವಸೆ ಹೊಂದಿದ, ಆರೋಗ್ಯದಿಂದಿರುವ, ವಿಶ್ರಾಂತಿ ಹೊಂದಿದ (ಣಾಯಾ)
ಆಸನ್ನ. 'ಆಸಣ್ಣ' ಶಬ್ದವನ್ನು ನೋಡುವುದು. **–ವತ್ತಿ.** ವಿ: [–ವರ್ತಿನ್] ಹತ್ತಿರದಲ್ಲಿರುವ
ಆಸಮ. ಪು: [ಆಶ್ರಮ] ತಾಪಸರೇ ಮೊದಲಾದವರ ನಿವಾಸ ಸ್ಥಾನ, ತೀರ್ಥಸ್ಥಳ(ಪಣ್ಣ), ಬ್ರಹ್ಮಚರ್ಯೆ, ಗೃಹಸ್ಥ, ವಾನಪ್ರಸ್ಥ, ಮತ್ತು ಸಂನ್ಯಾಸವೆಂಬ ನಾಲ್ಕು ಅವಸ್ಥೆಗಳು
ಆಸಮಪಯ. ನ: [ಆಶ್ರಮಪದ] ತಾಪಸರ ಆಶ್ರಮದಿಂದ ಲಕ್ಷ್ಯವಿಟ್ಟು ನೋಡುವ ಸ್ಥಳ
ಆಸಮಿ. ವಿ: [ಆಶ್ರಮಿನ್] ಆಶ್ರಮದಲ್ಲಿ ವಾಸಿಸುವ ಋಷಿ, ಮುನಿ ಇತ್ಯಾದಿಗಳು. (ಪಂಚವ)
ಆಸಯ. ಅಕ: [ಆಸ್] ಕುಳಿತುಕೊಳ್ಳು, **'ಆಸಯಂತಿ'**
ಆಸಯ. ಸಕ: [ಆ+ಶ್ರೀ] ಆಶ್ರಯಿಸು, ಅವಲಂಬಿಸು, ಸ್ವೀಕರಿಸು
ಆಸಯ. ಪು: [ಆಶಕ] ತಿನ್ನುವವನು, ಊಟ ಮಾಡುವವನು
ಆಸಯ. ಪು: [ಆಶ್ರಯ] ಆಧಾರ, ಅವಲಂಬನೆ (ಉಪ)
ಆಸಯ. ಪು: [ಆಶಯ] ಮನಸ್ಸು, ಹೃದಯ(ಸುರ) ಅಭಿಪ್ರಾಯ(ಸೂಅ)
ಆಸಯ. ನ: [ದೇ] ಹತ್ತಿರ, ಸಮೀಪ
ಆಸರಿಅ. ವಿ: [ದೇ] ಹತ್ತಿರಕ್ಕೆ ಬಂದವನು, ಎದುರುಗಡೆ ಬಂದವನು
ಆಸವ, ಅಕ: [ಆ+ಸ್ರು] ನಿಧಾನವಾಗಿ ಸ್ರವಿಸು, ತೊಟ್ಟಿಕ್ಕು **ವ.ಕೃ–ಆಸವಮಾಣ**
ಆಸವ. ಸಕ: [ಆ+ಸ್ರು] ಬರು
ಆಸವ. ಪು: [ಆಶ್ರವ] ಸೂಕ್ಷ್ಮವಾದ ರಂಧ್ರ, ಕರ್ಮಗಳ ಪ್ರವೇಶದ್ವಾರ, ಕರ್ಮಬಂಧಗಳಿಗೆ ಕಾರಣವಾಗುವ ಹಿಂಸೆಯೇ ಮೊದಲಾದವು. ವಿ: ಗುರುವಚನ ವನ್ನಾಲಿಸುವ ಶ್ರೋತೃ, **–ಸಕ್ಕಿ.** ವಿ:[–ಸಕ್ತಿನ್]ಹಿಂಸೆಯೇ ಮೊದಲಾದವುಗಳಲ್ಲಿ ಆಸಕ್ತಿ ಉಳ್ಳವನು.
ಆಸವ. ಪು: [ಆಸವ] ಹೆಂಡ, ಮದ್ಯ
ಆಸವಣ. ನ: [ದೇ] ವಾಸದ ಮನೆ, ಮಲಗುವ ಕೊಠಡಿ
ಆಸವಾಹಿಯಾ. ಸ್ತ್ರೀ: [ಅಶ್ವವಾಹಿಕಾ] ಅಶ್ವ ಕ್ರೀಡೆ
ಆಸಸ. ಅಕ: [ಆ+ಶ್ವಸ್] ಆಶ್ವಾಸನೆ ಪಡೆ, ಸಮಾಧಾನ ಪಡೆ, ವಿಶ್ರಾಂತಿ ಪಡೆ,
ಆಸಸಣ. ನ: [ಆಶಸನ] ವಿನಾಶ, ಹಿಂಸೆ(ಪಣ್ಣ)
ಆಸಸಾ. ಸ್ತ್ರೀ: [ಆಶಂಸಾ] ಅಭಿಲಾಷೆ, ಇಚ್ಛೆ,
ಆಸಸಿಯ. ವಿ: [ಆಶ್ವಸ್ತ] ಆಶ್ವಾಸನೆಯನ್ನು ಹೊಂದಿದ
ಆಸಾ. ಸ್ತ್ರೀ: [ಆಶಾ] ಆಶೆ, ಭರವಸೆ(ಔಪ), ದಿಕ್ಕು, ನಿರೀಕ್ಷೆ, ಉತ್ತರ ದಿಕ್ಕಿನ ರುಚಕ ಪರ್ವತದ ಮೇಲೆ ವಾಸಿಸುವ ಒಬ್ಬ ದಿಕ್ಕುಮಾರಿ(ದೇ)
ಆಸಾಅ. ಸಕ: [ಆ+ಸ್ವಾದ್] ರುಚಿನೋಡು, ಸವಿ, ಅಗಿ, ತಿನ್ನು ವ. **ಕೃ–ಆಸಾಯಮಾಣ**

ಆಸಾಅ. ಸಕ: [ಆ+ಸಾದಯ್] ಹೊಂದು, ಪಡೆ, ಸ್ಪರ್ಶಿಸು

ಆಸಾಅ. ಸಕ: [ಆ+ಶಾತಯ್] ಅಲಕ್ಷಿಸು, ತಿರಸ್ಕರಿಸು, ಅಪಮಾನಿಸು

ಆಸಾಅ. ಪು: [ಆಸ್ವಾದ] ರಸವನ್ನು ಕುಡಿಯುವುದು, ರಸಾನುಭವ ಹೊಂದುವುದು, ರುಚಿ ಸವಿ, ತೃಪ್ತಿ

ಆಸಾಅ. ಪು: [ಆಸಾದ] ಪ್ರಾಪ್ತಿ

ಆಸಾಅ. ಪು: [ಆಸ್ವಾದ] ಸ್ವಲ್ಪವೂ ರುಚಿಯಿಲ್ಲದಿರುವುದು

ಆಸಾಅ. 'ಆಸಯ=ಆಶ್ರಯ' ಶಬ್ದವನ್ನು ನೋಡುವುದು.

ಆಸಾಇಅ. ವಿ: [ಆಶಾತಿತ] ತಿರಸ್ಕೃತಗೊಳಿಸಲ್ಪಟ್ಟ, ಅವಮಾನಗೊಳಿಸಲ್ಪಟ್ಟ, ನ: ತಿರಸ್ಕಾರ, ಅಲಕ್ಷ್ಯ

ಆಸಾಇಅ. ವಿ: [ಆಸ್ವಾದಿತ] ರುಚಿನೋಡಲ್ಪಟ್ಟ, ಸವಿಯಲಾದ, ತಿಂದ

ಆಸಾಇಅ. ವಿ: [ಆಸಾದಿತ] ಪ್ರಾಪ್ತ, ಪಡೆದುಕೊಂಡ

ಆಸಾಢ. ಪು: [ಆಷಾಢ] ಆಷಾಢ ಮಾಸ, ಒಂದು ಅವ್ಯಕ್ತಿಕ ಮತವನ್ನು ಹುಟ್ಟುಹಾಕಿದ ಒಬ್ಬ ಮೂರ್ಖ–**ಭೂಇ. ಪು:** [–ಭೂತಿ] ಒಬ್ಬ ಪ್ರಸಿದ್ಧ ಜೈನಮುನಿ

ಆಸಾಢಾ. ಸ್ತ್ರೀ: [ಆಷಾಢಾ] ಒಂದು ಪ್ರಸಿದ್ಧ ನಕ್ಷತ್ರ

ಆಸಾಢೀ ಸ್ತ್ರೀ: [ಆಷಾಢೀ] ಆಷಾಢ ಮಾಸದ ಹುಣ್ಣಿಮೆ, ಆಷಾಢದ ಅಮಾವಾಸ್ಯೆ

ಆಸಾದೆತ್ತು. ವಿ: [ಆಸ್ವಾದಯಿತೃ] ಆಸ್ವಾದಿಸುವವನು

ಆಸಾಮರ. ಪು: [ಆಶಾಮರ] ಏಳನೇ ವಾಸುದೇವ ಮತ್ತು ಬಲದೇವರ ಹಿಂದಿನ ಭವದ ಧರ್ಮಗುರುವಿನ ಹೆಸರು

ಆಸಾಯಣ. ನ: [ಆಸ್ವಾದನ] ರುಚಿಯನ್ನು ಹೊಂದುವುದು, ಸವಿಯುವುದು(ಪಉಮ)

ಆಸಾಯಣ. ನ: [ಆಶಾತನ] ಕೆಳಗಿನ ಶಬ್ದವನ್ನು ನೋಡುವುದು. ಅನಂತಾನುಬಂಧಿ ಕಷಾಯದ ವೇದನೆ

ಆಸಾಯಣಾ. ಸ್ತ್ರೀ: [ಆಶಾತನಾ] ವಿರುದ್ಧ ವರ್ತನೆ, ಅಪಮಾನ, ತಿರಸ್ಕಾರ

ಆಸಾರ. ಸಕ: [ಆ+ಸಾರಯ್] ವೀಣೆಯನ್ನು ಸರಿಪಡಿಸು

ಆಸಾರ. ಪು: [ಆಸಾರ] ನೀರು ವೇಗವಾಗಿ ಹರಿಯುವುದು

ಆಸಾರ. ಪು: [ಆಸಾರ] ಸಮೀಕರಣ, ವೀಣೆಯನ್ನು ಸರಿಪಡಿಸುವುದು

ಆಸಾರಿಯ. ವಿ: [ಆಸಾರಿತ] ಸರಿಪಡಿಸಲ್ಪಟ್ಟ

ಆಸಾಲಿಯ. ಪುಂ.ಸ್ತ್ರೀ: [ಆಶಾಲಿಕ] ಸರ್ಪದ ಒಂದು ಜಾತಿ, ಸ್ತ್ರೀ: ಒಂದು ವಿದ್ಯಾ–ವಿಶೇಷ

ಆಸಾವಲ್ಲೀ. ಸ್ತ್ರೀ: [ಆಶಾಪಲ್ಲೀ] ಒಂದು ನಗರ

ಆಸಾವಿ. ವಿ: [ಆಸ್ರಾವಿನ್] ತೊಟ್ಟಿಕ್ಕುವುದು, ಸ್ರವಿಸುವುದು, ಹನಿಹನಿಯಾಗಿ ಬೀಳುವುದು

ಆಸಾಸ. ಸಕ: [ಆ+ಶಾಸ್] ಆಶೆ ತಾಳು, ಭರವಸೆಯಿಟ್ಟುಕೊಳ್ಳು

ಆಸಾಸ. ಅಕ: [ಆ+ಶ್ವಾಸಯ್] ಆಶ್ವಾಸನೆ ಕೊಡು, ಸಮಾಧಾನ ಮಾಡು

ಆಸಾಸ. ಪು: [ಆಶ್ವಾಸ] ಸಾಂತ್ವನ,ಸಮಾಧಾನ(ಸುಪಾ) ವಿಶ್ರಾಂತಿ, ವಿರಾಮ, ದ್ವೀಪ–ವಿಶೇಷ(ಆಚಾ)

ಆಸಾಸಅ. ಪು: [ಆಶ್ವಾಸಕ] ವಿರಾಮಸ್ಥಳ, ಗ್ರಂಥದ ಅಂಶ: ಸರ್ಗ, ಪರಿಚ್ಛೇದ, ಅಧ್ಯಾಯ ವಿ: ಸಮಾಧಾನಪಡಿಸುವವನು

ಆಸಾಸಗ}. ಪು: [ಆಶಾಸಕ] ಗಜನಿಂಬೆಮರ(ಔಪ),
ಆಸಾಸಣ}.

ಆಸಾಸಣ. ನ: [ಆಶ್ವಾಸನ] ಸಾಂತ್ವನ, ಸಮಾಧಾನ, ಗ್ರಹಗಳ ದೇವರುಗಳು, ಒಂದು ಮಹಾ ಗ್ರಹ, ಆಶ್ವಾಸನೆ ನೀಡುವವನು.

ಆಸಾಸಿಅ. ವಿ: [ಆಶ್ವಾಸಿತ] ಆಶ್ವಾಸನೆ ಪಡೆದವನು, ಸಮಾಧಾನ ಮಾಡಲ್ಪಟ್ಟವನು

ಆಸಿ: ಸಕ: [ಆ+ಶ್ರಿ] ಆಶ್ರಯಿಸು, 'ಆಸಿಜ್ಜ'

ಆಸಿ. 'ಅಸ=ಅಸ್' ಶಬ್ದವನ್ನು ನೋಡುವುದು.

ಆಸಿ. ವಿ: [ಆಶಿನ್]ತಿನ್ನುವವನು,ಊಟ ಮಾಡುವವನು

ಆಸಿಅ. ವಿ: [ಆಶ್ವಿಕ] ಅಶ್ವ–ಶಿಕ್ಷಕ (ವವ)

ಆಸಿಅ. ವಿ: [ಆಶಿತ] ಊಟಮಾಡಲ್ಪಟ್ಟ, ಭುಜಿಸಲ್ಪಟ್ಟ,

ಆಸಿಅ. ವಿ: [ಆಶ್ರಿತ] ಆಶ್ರಯವನ್ನು ಪಡೆದ (ಕಪ್ಪ)

ಆಸಿಅ. ವಿ: [ಆಸಿತ] ಕುಳಿತುಕೊಂಡ, ಇರುವ, (ಪಉಮ) ನ: ಆಸನ, ಕುಳಿತುಕೊಳ್ಳುವುದು

ಆಸಿಅ. 'ಆಸಿತ್ತ' ಶಬ್ದವನ್ನು ನೋಡುವುದು.

ಆಸಿಅಅ. ವಿ: [ದೇ] ಕಬ್ಬಿಣದ, ಕಬ್ಬಿಣದಿಂದ ಮಾಡಲ್ಪಟ್ಟ

ಆಸಿಆ. ಸ್ತ್ರೀ: [ಆಸಿಕಾ] ಕುಳಿತುಕೊಳ್ಳುವುದು

ಆಸಿಆ. 'ಆಸೀ=ಆಶಿಷ್' ಶಬ್ದವನ್ನು ನೋಡುವುದು.

ಆಸಿಣ. ವಿ: [ಆಶಿನ್] ಉಣ್ಣುವವನು, ಭೋಕ್ತೃ, ಊಟಮಾಡುವವನು

ಆಸಿಣ. ಪು: [ಆಶ್ವಿನ್] ಆಶ್ವಯುಜಮಾಸ

ಆಸಿತ್ತ. ವಿ: [ಆಸಿಕ್ತ] ಸಿಂಪಡಿಸಲ್ಪಟ್ಟ, ಚಿಮುಕಿಸಲ್ಪಟ್ಟ, ಪು: ನಪುಂಸಕದ ಒಂದು ಪ್ರಭೇದ

ಆಸಿತ್ತಿಯಾ. ಸ್ತ್ರೀ: [ದೇ] ಒಂದು ಖಾದ್ಯ ಪದಾರ್ಥ, ತಿನ್ನುವ ಆಹಾರ

ಆಸಿಂಯಾವಾಯು. 'ಆಸೀ-ವಾಯು' ಶಬ್ದವನ್ನು ನೋಡುವುದು.

ಆಸಿಲ. ಪು: [ಆಸಿಲ] ಒಬ್ಬ ಮಹರ್ಷಿ

ಆಸಿಲಿಟ್ಠ. ವಿ: [ಆಶ್ಲಿಷ್ಟ] ಆಲಿಂಗಿಸಲ್ಪಟ್ಟ(ನಾಟ), ಸೇರಿಕೊಂಡಿರುವ

ಆಸಿಲಿಸ. ಸಕ: [ಆ+ಶ್ಲಿಷ್] ಆಲಿಂಗಿಸು

ಆಸಿಸಾ.. 'ಆಸೀ=ಆಶಿಷ್' ಶಬ್ದವನ್ನು ನೋಡುವುದು.

ಆಸೀ. 'ಅಸ್' ಶಬ್ದವನ್ನು ನೋಡುವುದು.

ಆಸೀ. ಸ್ತ್ರೀ: [ಆಶೀ] ದಾವಾನಲ, ಬೆಂಕಿ, -ವಿಸ. ಪು: [-ವಿಷ] ವಿಷಸರ್ಪ(ಪ್ರಾಸೂ), ಪರ್ವತ ಶಿಖರ, ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳ, ಲಬ್ಧವಿಶೇಷವನ್ನು ಪಡೆದ

ಆಸೀ. ಸ್ತ್ರೀ: [ಆಶಿಷ್] ಆಶೀರ್ವಾದ(ಸುರ), -ವಯಣ. ನ: [-ವಚನ] ಆಶೀರ್ವಾದದ ಮಾತು(ಸುಪಾ) -ವಾಯ. ಪು: [-ವಾದ] ಆಶೀರ್ವಾದ

ಆಸೀಣ. ವಿ: [ಆಸೀನ] ಕುಳಿತಿರುವ

ಆಸೀವಅ. ಪು: [ದೇ] ದರ್ಜಿ, ಬಟ್ಟೆ ಹೊಲಿಯುವವನು, ಸಿಂಪಿಗ

ಆಸೀಸಾ. 'ಆಸೀ=ಆಶಿಷ್' ಶಬ್ದವನ್ನು ನೋಡುವುದು.

ಆಸು. ಪುಂನ: [ಅಶ್ರು] ಕಣ್ಣೀರು

ಆಸು.} ಅ: [ಆಶು] ಶೀಘ್ರ, ಬೇಗನೆ, ತ್ವರಿತವಾಗಿ.

ಆಸುಂ.} ಕ್ಕಾರ. ಪು: [-ಕಾರ] ಹಿಂಸೆ, ಹೊಡೆಯುವುದು, ಸಾವಿನ ಕಾರಣ, ಕಾಲರಾ ರೋಗ ಇತ್ಯಾದಿ, ಶೀಘ್ರದಲ್ಲಿ ಬರಬಹುದಾದ. -ಪಣ್ಣ. ವಿ: [-ಪ್ರಜ್ಞ] ಶೀಘ್ರ-ಬುದ್ಧಿ, ದಿವ್ಯಜ್ಞಾನಿ, ಕೇವಲಜ್ಞಾನಿ

ಆಸುರ. ವಿ: [ಆಸುರ] ಅಸರನಿಗೆ ಸಂಬಂಧಿಸಿದ(ತಾ)

ಆಸುರತ್ತ. ನ: [ಆಸುರತ್ವ] ಕೋಪ, ಸಿಟ್ಟು

ಆಸುರಿಯ. ಪು: [ಆಸುರಿಕ] ಅಸುರ, ಅಸುರ ರೂಪದಿಂದ ಉದಿಸಿದ(ರಾಜ), ವಿ: ಅಸುರ-ಸಂಬಂಧಿಯಾದ

ಆಸುರೀಯ. ವಿ: [ಅಸುರೀಯ] ಅಸುರನಿಗೆ ಸಂಬಂಧಿಸಿದ

ಆಸುರುತ್ತ. ವಿ: [ಆಶುರುಪ್ತ] ಶೀಘ್ರಕೋಪಿ, ಅತಿಯಾಗಿ ಕೋಪಗೊಂಡ

ಆಸುರುತ್ತ. ವಿ: [ಆಸುರೋಕ್ತ] ಅತಿಯಾಗಿ ಕೋಪಗೊಂಡ(ಣಾಯಾ)

ಆಸುರುತ್ತ. ವಿ: [ಆಶುರುಷ್ಟ] ಅತಿಯಾಗಿ ಕುಪಿತನಾದ(ವಿಪಾ)

ಆಸೂಣಿ. ನ: [ಆಶೂನಿನ್] ಬಲಶಾಲಿಯಾಗಿ ಮಾಡುವ ಭೋಜನ, ರಸಾಯನ ಕ್ರಿಯೆ(ಸೂಅ)

ಆಸೂಣೀ. ಸ್ತ್ರೀ: [ಆಶೂನೀ] ಪ್ರಶಂಸೆ, ಹೊಗಳಿಕೆ

ಆಸೂಣಿಯ. ವಿ: [ಆಶೂನಿತ] ಸ್ವಲ್ಪ ಸ್ಥೂಲ ಮಾಡಲ್ಪಟ್ಟ (ಪಣ್ಣ)

ಆಸೂಯ. ನ: [ದೇ] ವಿನಂತಿ

ಆಸೇಅಣಯ. ವಿ: [ಆಸೇಚನಕ] ಯಾರನ್ನು ನೋಡುವುದರಿಂದ ಮನಸ್ಸಿಗೆ ತೃಪ್ತಿಯಾಗುವುದಿಲ್ಲವೋ ಅವನು/ಅವಳು

ಆಸೇವ. ಸಕ: [ಆ+ಸೇವ್] ಸೇವೆಮಾಡು, ಪಾಲಿಸು, ಆಚರಿಸು

ಆಸೇವಣ. ನ: [ಆಸೇವನ] ಪರಿಪಾಲನೆ, ಸಂರಕ್ಷಣೆ(ಸುಪಾ), ಆಚರಣೆ, ಮೈಥುನ

ಆಸೇವಣಯಾ.} ಸ್ತ್ರೀ: [ಆಸೇವನಾ] ಪರಿಪಾಲನೆ,
ಆಸೇವಣಾ.} ವಿರುದ್ಧ ಆಚರಣೆ(ಪವ), ಅಭ್ಯಾಸ, ಶಿಕ್ಷಣದ ಒಂದು ಪ್ರಭೇದ

ಆಸೇವಾ. ಸ್ತ್ರೀ: [ಆಸೇವಾ] ಮೇಲಿನ ಶಬ್ದವನ್ನು ನೋಡುವುದು.

ಆಸೇವಿಯ. ವಿ: [ಆಸೇವಿತ] ಪರಿಪಾಲಿಸಲ್ಪಟ್ಟ, ಅಭ್ಯಾಸವಾದ, ಆಚರಿಸಲ್ಪಟ್ಟ, ಅನುಷ್ಠಾನ ಮಾಡಲ್ಪಟ್ಟ

ಆಸೋಅ. ಪು: [ಆಶ್ವಯುಕ್] ಆಶ್ವಯುಜ ಮಾಸ

ಆಸೋಅ. ವಿ: [ಆಶೋಕ] ಅಶೋಕ ವೃಕ್ಷಕ್ಕೆ ಸಂಬಂಧಿಸಿದ(ಗಉಡ)

ಆಸೋಇಯಾ. ಸ್ತ್ರೀ: [ದೇ.ಆಸೋತಿಕಾ] ಔಷಧಿ-ವಿಶೇಷ

ಆಸೋಈ.} ಸ್ತ್ರೀ: [ಆಶ್ವಯುಜೀ] ಆಶ್ವಯುಜ
ಆಸೋಯಾ}. ಹುಣ್ಣಿಮೆ, ಆಶ್ವಯುಜದ ಅಮಾವಾಸ್ಯೆ

ಆಸೋಕಂತಾ. ಸ್ತ್ರೀ: [ಆಶೋಕಾಂತಾ] ಮಧ್ಯಮ ಗ್ರಾಮದ ಸಂಗೀತದ ಆರೋಹಣ-ಅವರೋಹಣ ಮೇಳ

ಆಸೊತ್ಥ. **ಪು:** [**ಅಶ್ವತ್ಥ**] ಅರಳಿಮರ
ಆಹ. **ಸಕ:** [**ಬ್ರೂ**] ಹೇಳು, **'ಆಹಂಸು,'** ಆಹು
ಆಹ. **ಸಕ:** [**ಕಾಂಕ್ಷ್**] ಇಷ್ಟಪಡು, ಬಯಸು. ವ. **ಕೃ**- **ಆಹಂತ**
ಆಹಂಡಲ. 'ಆಖಂಡಲ ಶಬ್ದವನ್ನು ನೋಡುವುದು.
ಆಹಂತುಂ. **'ಆಹಣ'** ಶಬ್ದವನ್ನು ನೋಡುವುದು.
ಆಹಚ್ಚ. **ಅ:** [**ದೇ**] ಅನ್ಯಥಾ, ನಿಷ್ಕಾರಣ, **-ಭಾವ.** **ಪು:** [**-ಭಾವ**] ಯಾವಾಗಲಾದರೂ ಒಮ್ಮೆ ಸಂಭವಿಸುವಂಥದು
ಆಹಚ್ಚ. **ನ:** [**ದೇ**] ಬಹಳ, ಅತಿಶಯ(ದೇ), **ಅ:** ಬೇಗನೆ, ಶೀಘ್ರ(ಆಚಾ), ಯಾವಾಗಲಾದರೂ, ಹಾಜರಿದ್ದು, ವ್ಯವಸ್ಥೆಗೊಳಿಸಿ, ವಿಭಾಗಿಸಿ, ಅಪಹರಿಸಿಕೊಂಡು
ಆಹಚ್ಚಾ. **ಸ್ತ್ರೀ:** [ ] ಪ್ರಹಾರ, ಹೊಡೆತ
ಆಹಟ್ಟ. **ನ:** [**ದೇ**] **'ಆಹಟ್ಟು=ದೇ'** ಶಬ್ದವನ್ನು ನೋಡುವುದು.
ಆಹಟ್ಟು. **ಸ್ತ್ರೀ:** [**ದೇ**] ಒಗಟುಗಳು, ಒಡಪುಗಳು
ಆಹಟ್ಟು. **'ಆಹರ=ಆ+ಹೃ'** ಶಬ್ದವನ್ನು ನೋಡುವುದು.
ಆಹಡ. **ವಿ:** [**ಆಹೃತ**] ಅಪಹರಿಸಲ್ಪಟ್ಟ, ಎದುರುಗಡೆ ತರಿಸಲಾದ, ಮುಂದೆ ಇಡಲಾದ, ಹತ್ತಿರಕ್ಕೆ ತಂದಿಟ್ಟ
ಆಹಡ. **ನ:** [**ದೇ**] ನಿಟ್ಟುಸಿರಿನ ಶಬ್ದ, ಸುರತ-ಶಬ್ದ
ಆಹಣ. **ಸಕ:** [**ಆ+ಹನ್**] ಎಬ್ಬಿಸು, ನಿಲ್ಲಿಸು, ಎತ್ತು
ಆಹಣ. **ಸಕ:** [**ಆ+ಹನ್**] ಹೊಡೆ, ಆಘಾತಗೊಳಿಸು
ಆಹಣ್ಣ. **ನ:** [**ಆಹನನ**] ಆಘಾತ, ಹೊಡೆತ
ಆಹಣಾವಿಯ. **ವಿ:** [**ಆಘಾತಿತ**] ಆಘಾತಗೊಳಿಸಲ್ಪಟ್ಟ, ಹೊಡೆಯಲ್ಪಟ್ಟ
ಆಹತ್ತಹೀಯ. **ನ:** [**ಯಾಥಾತಥ್ಯ**] ನಿಜಸ್ಥಿತಿ, ವಾಸ್ತವತೆ, ಸಮ್ಯಕ್‌ಜ್ಞಾನವೇ ಮೊದಲಾದ ತಥ್ಯಮಾರ್ಗ, ಸೂತ್ರಕೃತಾಂಗ-ಸೂತ್ರದ ಹದಿಮೂರನೇ ಅಧ್ಯಯನ (ಸೂಅ)
ಆಹಮ್ಮ. **ಸಕ:** [**ಆ+ಹಮ್ಮ್**] ಬರು, ಆಗಮಿಸು. **'ಆಹಮ್ಮಇ'**
ಆಹಮ್ಮಿಯ. **ವಿ:** [**ಅಧಾರ್ಮಿಕ**] ಅಧರ್ಮಿ, ಪಾಪಿ, ಅಧರ್ಮಕ್ಕೆ ಸಂಬಂಧಿಸಿದ
ಆಹಯ. **ವಿ:** [**ಆಹತ**] ಆಘಾತ ಹೊಂದಿದ, ಹೊಡೆಯಲ್ಪಟ್ಟ, ಪೀಡಿಸಲ್ಪಟ್ಟ, ಪ್ರೇರಿಸಲ್ಪಟ್ಟ(ಕಪ್ಪ)
ಆಹಯ. **ವಿ:** [**ಆಹತ**] ಆಕರ್ಷಿಸಲ್ಪಟ್ಟ, ಸೆಳೆಯಲ್ಪಟ್ಟ, ಅಪಹರಿಸಲ್ಪಟ್ಟ, (ಉಪ)
ಆಹರ. **ಸಕ:** [**ಆ+ಹೃ**] ಅಪಹರಿಸು, ಕಿತ್ತುಕೊಳ್ಳು, ಕಳವು ಮಾಡು, ಉಣ್ಣುವುದು
ಆಹರ. **ಸಕ:** [**ಆ+ಹೃ**] ತರು, **'ಆಹರಾಮಿ'**
ಆಹರಣ. **ಪುಂ. ನ:** [**ಆಹರಣ**] ಉದಾಹರಣೆ(ಓಘ), ಕರೆಯುವುದು, ಆಹ್ವಾನಿಸುವುದು, ಸ್ವೀಕರಿಸುವುದು, ಸಿದ್ಧಪಡಿಸುವುದು, ತರುವುದು
ಆಹರಣ. **ಪುಂ. ನ:** [**ಆಭರಣ**] ಒಡವೆ, ಅಲಂಕಾರ
ಆಹರಣಾ. **ಸ್ತ್ರೀ:** [**ದೇ**] ಗೊರಕೆ
ಆಹರಿಸಿಯ. **ವಿ:** [**ಆಧರ್ಷಿತ**] ತಿರಸ್ಕೃತ, ಅವಮಾನಿತ (ಆವಮ)
ಆಹಲ್ಲ. **(ಅಪ).** **ಅಕ:** [**ಆ+ಚಲ್**] ಅಲ್ಲಾಡು
ಆಹಲ್ಲಾ. **ಸ್ತ್ರೀ:** [**ಆಹಲ್ಯಾ**] ವಿದ್ಯಾಧರ ರಾಜನ ಒಬ್ಬ ಮಗಳು
ಆಹವ. **ಸಕ:** [**ಆ+ಹ್ವೇ**] ಕರೆ
ಆಹವ. **ಪು:** [**ಆಹವ**] ಯುದ್ಧ(ಪಾಅ)
ಆಹವಣ}. **ನ:** [**ಆಹ್ವಾನ**] ಕರೆಯುವುದು
ಆಹವ್ವಣ}. ಆಹ್ವಾನಿಸುವುದು, ಯುದ್ಧಕ್ಕೆ ಆಹ್ವಾನಿಸುವುದು(ಪಉಮ)
ಆಹವ್ವ. **ವಿ;** [**ಆಭಾವ್ಯ**] ಶಾಸ್ತ್ರೋಕ್ತ ಕ್ಷೇತ್ರಗಳು
ಆಹವ್ವಣೀ. **ಸ್ತ್ರೀ:** [**ಆಹ್ವಾನೀ**] ವಿದ್ಯಾ-ವಿಶೇಷ (**ಸೂಅ**)
ಆಹಾ. **ಸಕ:** [**ಆ+ಖ್ಯಾ**] ಹೇಳು,
ಆಹಾ. **ಸಕ:** [**ಆ+ ಖ್ಯಾ**] ಹೇಳುವುದು, ಹೆಸರು
ಆಹಾ. **ಸಕ:** [**ಆ+ಧಾ**] ಸ್ಥಾಪಿಸು(ವದು), (**ಸೂಅ**)
ಆಹಾ. **ಸ್ತ್ರೀ:** [**ಆಭಾ**] ಕಾಂತಿ, ತೇಜಸ್ಸು (**ಕಪ್ಪೂ**)
ಆಹಾ. **ಸ್ತ್ರೀ:** [**ಆಧಾ**] ಆಶ್ರಯ, ಆಧಾರ, ಸಾಧುವಿನ ಸಲುವಾದ ಆಹಾರಕ್ಕಾಗಿ ಮನಸ್ಸಿನ ಪ್ರಯತ್ನ -ಧ್ಯಾನ-ಕಡ. **ವಿ:** [**-ಕೃತ**] ಅರ್ಧ ಕರ್ಮದೋಷದಿಂದ ಕೂಡಿರುವ. **-ಕಮ್ಮ.** **ನ:** [**-ಕರ್ಮನ್**] ಸಾಧುವಿಗಾಗಿ ಅಡಿಗೆ ಬೇಯಿಸುವುದು. ಸಾಧುವಿನ ಸಲುವಾಗಿ ತಯಾರಿಸಲಾದ ಅಡುಗೆ. ಆದರೆ ಅದು ಜೈನ ಸಾಧುಗಳಿಗೆ ನಿಷಿದ್ಧ ಆಹಾರ(ಪಣ್ಣ)-**ಕಮ್ಮಿಯ.** **ವಿ:** [**-ಕಾರ್ಮಿಕ**] ಹಿಂದೆ ಹೇಳಿದ ಅರ್ಥವನ್ನು ನೋಡುವುದು
ಆಹಾಣ. **ನ:** [**ಆಧಾನ**] ಸ್ಥಾಪನೆ, ಸ್ಥಾನ, ಆಶ್ರಯ

ಆಹಾಣ}. ನ: [**ಆಖ್ಯಾನ, -ಕ**] ಉಕ್ತಿ, ಮಾತು,
ಆಹಾಣಯ}. ಜನರಾಡಿಕೊಳ್ಳುವ ಮಾತು, ಗಾದೆ, ನಾಣ್ಣುಡಿ
ಆಹಾತಹಿಯ. ವಿ: [**ಯಾಥಾತಥ್ಯ**] ಸತ್ಯ, ವಾಸ್ತವಿಕ. '**ಆಹತ್ತಹೀಯ**' ಶಬ್ದವನ್ನು ನೋಡುವುದು.
ಆಹಾರ. ಸಕ: [**ಆ+ಹಾರಯ್**] ತಿನ್ನು, ಊಟಮಾಡು, ಭಕ್ಷಿಸು
ಆಹಾರ. ಪು: [**ಆಹಾರ**] ಭೋಜನ, ಊಟ, ನ: '**ಆಹಾರಗ**' ಶಬ್ದವನ್ನು ನೋಡುವುದು. **-ಪಜ್ಜತ್ತಿ**. ಸ್ತ್ರೀ:[**-ಪರ್ಯಾಪ್ತಿ**] ತಿಂದ ಆಹಾರವನ್ನು ಶಕ್ತಿ ಮತ್ತು ರಸವನ್ನಾಗಿ ಬದಲಾಯಿಸುವ ಶಕ್ತಿ, **-ಪೋಸಹ**. ಪು: [**-ಪೋಷಧ**] ಆಹಾರವನ್ನು ಪೂರ್ತಿ ಇಲ್ಲವೆ ಸ್ವಲ್ಪಮಟ್ಟಿಗೆ ತ್ಯಜಿಸಿ ಮಾಡುವ ವ್ರತ-ವಿಶೇಷ.(ಆವ), **-ಸಣ್ಣಾ**. ಸ್ತ್ರೀ: [**-ಸಂಜ್ಞಾ**] ಅಹಾರ ತೆಗೆದುಕೊಳ್ಳುವ ಇಚ್ಛೆ
ಆಹಾರ. ಪು: [**ಆಧಾರ**] ಆಶ್ರಯ, ಆಧಾರ, ಅಕಾಶ, ಅವಧಾರಣೆ, ನೆನಪಿಟ್ಟುಕೊಳ್ಳುವುದು
ಆಹಾರಗ. ನ: [**ಆಹಾರಕ**] ಕ್ರಿ.ಶ.೧೪ನೇ ಶತಮಾನದ ಕೇವಲ ಜ್ಞಾನಿಯ ಬಳಿಗೆ ಕಳಿಸಲೋಸುಗ ಮಾಡಲಾಗುವ ಶರೀರ-ವಿಶೇಷ. ವಿ: ಭೋಜನ ಮಾಡುವವನು(ಠಾ), ಆಹಾರದ ಶರೀರವುಳ್ಳವನು (ವಿಸೇ), ಆಹಾರದ ಶರೀರವನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವುಳ್ಳವನು. **-ಜುಗಲ**. ನ: [**-ಯುಗಲ**] ಆಹಾರದ ಶರೀರ ಮತ್ತು ಅದರ ಅಂಗೋಪಾಂಗಗಳು(ಕಮ್ಮ). **-ಣಾಮ**. ನ: [**-ನಾಮನ್**] ಆಹಾರಕ ಶರೀರಕ್ಕೆ ಕಾರಣವಾದ ಕರ್ಮ, **-ದುಗ**. ನ: [**-ದ್ವಿಕ**] '**ಯುಗಲ**' ಶಬ್ದವನ್ನು ನೋಡುವುದು.
ಆಹಾರಣ. ವಿ: [**ಆಧಾರಣ**] ಧರಿಸುವವನು, ಧಾರಣೆ ಮಾಡುವವನು. ಆಧಾರಭೂತ
ಆಹಾರಣ. ವಿ: [**ಆಹಾರಣ**] ಆಕರ್ಷಕವಾದ(ಸೇ)
ಆಹಾರಯ. '**ಆಹಾರಗ**' ಶಬ್ದವನ್ನು ನೋಡುವುದು.
ಆಹಾರಾಇಣಿಯಾ.ಸ್ತ್ರೀ: [**ಯಾಥಾರಾತ್ನಿಕತಾ**] ಜ್ಯೇಷ್ಠಾನುಕ್ರಮ(ಜ್ಯೇಷ್ಠನ ಅನುಕ್ರಮದಲ್ಲಿ), ಯಥಾಜ್ಯೇಷ್ಠ
ಆಹಾರಿ. ವಿ: [**ಆಹಾರಿನ್**] ಆಹಾರ ತಯಾರಿಸುವವನು
ಆಹಾರಿಮ. ವಿ: [**ಆಹಾರ್ಯ**] ಆಹಾರವೆನಿಸಲು ಯೋಗ್ಯವಾದ, ನೀರಿನೊಂದಿಗೆ ತಿನ್ನಲು ಯೋಗ್ಯವಾದ(ನಿಜೂ)
ಆಹಾರಿಯ. ವಿ: [**ಆಹಾರಿತ**] ಆಹಾರ ಸ್ವೀಕರಿಸಿದವನು, ಊಟಮಾಡಿದವನು, ತಿಂದವನು
ಆಹಾವಣಾ. ಸ್ತ್ರೀ: [**ಆಭಾವನಾ**] ಉದ್ದೇಶ
ಆಹಾವಣಾ.ಸ್ತ್ರೀ: [**ಆಭಾವನಾ**] ಪರಿಗಣಿಸದಿರುವುದು, ಗಣನೆಗೆ ತೆಗೆದುಕೊಳ್ಳದಿರುವುದು(ರಾಜ)
ಆಹಾವಿಅ. ವಿ: [**ಆಧಾವಿತ**] ಓಡಿದ
ಆಹಾವಿರ. ವಿ: [**ಆಧಾವಿತೃ**] ಓಡುವವನು
ಆಹಾಸ. '**ಆಭಾಸ=ಆ+ಭಾಷ್**' ಶಬ್ದವನ್ನು ನೋಡುವುದು.
ಆಹಾಹ. ಅ: [**ಆಹಾಹ**] ಆಶ್ಚರ್ಯಸೂಚಕ ಅವ್ಯಯ
ಆಹಿ. ಪುಂಸ್ತ್ರೀ: [**ಆಧಿ**] ಮನಸ್ಸಿನ ವ್ಯಾಧಿ, ಮನೋಯಾತನೆ(ಧಮ್ಮ)
ಆಹಿಆಇ. ಸ್ತ್ರೀ: [**ಆಭಿಜಾತಿ**] ಕುಲೀನತೆ, ಉಚ್ಚಕುಲತ್ವ, ಸತ್ ಕುಲದಲ್ಲಿ ಹುಟ್ಟಿದ
ಆಹಿಆಈ. ಸ್ತ್ರೀ [**ಆಭಿಜಾತೀ**] ಕುಲೀನತೆ, ಶ್ರೇಷ್ಠ ಕುಲದಲ್ಲಿ ಹುಟ್ಟಿರುವುದು
ಆಹಿಂಡ. ಸಕ: [**ಆ+ಹಿಂಡ್**] ಹೋಗು, ಪರಿಶ್ರಮ ಮಾಡು, ತಿರುಗಾಡು, ಸಂಚರಿಸು
ಆಹಿಂಡಗ} ವಿ: [**ಆಹಿಂಡಕ**] ಚಲಿಸುವವನು,
ಆಹಿಂಡಯ}. ಸಂಚರಿಸುವವನು(ಔಪ)
ಆಹಿಕ್ಕ. ನ: [**ಆಧಿಕ್ಯ**] ಅಧಿಕತೆ, ಹೆಚ್ಚಾಗುವಿಕೆ
ಆಹಿಜಾಇ '**ಆಹಿಆಇ**' ಶಬ್ದವನ್ನು ನೋಡುವುದು.
ಆಹಿಜಾಈ. '**ಆಹಿಆಈ**' ಶಬ್ದವನ್ನು ನೋಡುವುದು.
ಆಹಿತುಂಡಿಅ. ಪು: [**ಆಹಿತುಂಡಿಕ**] ಗಾರುಡಿಗ, ಹಾವಾಡಿಸುವವನು
ಆಹಿತ್ಥ. ವಿ: [**ದೇ**] ಹೋದ, ಚಲಿಸಿದ, ಕೋಪಗೊಂಡ (ದೇ), ಆಕುಲಗೊಂಡ, ಗಾಬರಿಗೊಂಡ
ಆಹಿದ್ಧ. ವಿ: [**ದೇ**] ತಡೆಯಲ್ಪಟ್ಟ, ಪ್ರತಿಬಂಧಿಸಲ್ಪಟ್ಟ, ಕೆಳಗೆ ಬಿದ್ದ, ಜಾರಿಬಿದ್ದ
ಆಹಿಪತ್ತ. ನ: [**ಆಧಿಪತ್ಯ**] ನೇತೃತ್ವ
ಆಹಿಯ. ವೀ; [**ಆಹಿತ**] ವ್ಯಾಪಿಸಿದ, ಹುಟ್ಟಿದ, ಉತ್ಪಾದಿತವಾದ, ಪ್ರಸಿದ್ಧವಾದ, ಸರ್ವಥಾ ಹಿತಕಾರಿಯಾದ
ಆಹಿಯ. ವಿ: [**ಆಹಿತ**] ಸ್ಥಾಪಿತ, ಇರಿಸಲ್ಪಟ್ಟ, ಸಂಪೂರ್ಣ ಹಿತಕರ, ನಿರ್ಮಿತ, **-ಗ್ಗಿ**, ಪು: [-

ಆಹಿತಾಗ್ನಿ] ಅಗ್ನಿಹೋತ್ರೀಂಯು ಬ್ರಾಹ್ಮಣ, ಆಧಾನ-ಪೂರ್ವಕ ಸಂಸ್ಕಾರ ಮಾಡಿದ ಶ್ರೌತ ಅಗ್ನಿ ಉಳ್ಳವನು

ಆಹಿಯ. ವಿ: [**ಆಖ್ಯಾತ**] ಹೇಳಲ್ಪಟ್ಟ, ಉಕ್ತ, ಪ್ರತಿಪಾದಿತ, ಪ್ರಸಿದ್ಧವಾದ

ಆಹಿಯಾರ. **ಪು:** [**ಅಧಿಕಾರ**] ಅಧಿಕಾರ, ಸತ್ತೆ, ಹಕ್ಕು(ಪಉಮ)

ಆಹಿವತ್ತ. '**ಆಹಿಪತ್ತ.**' ಶಬ್ದವನ್ನು ನೋಡುವುದು.

ಆಹಿಸಾರಿಅ. ವಿ: [**ಅಭಿಸಾರಿತ**] ನಾಯಕನ ಬಳಿಗೆ ತೆರಳಿದ ಪ್ರೇಮಿನಿ, ಪತಿಬುದ್ಧಿಯಿಂದ ಸ್ವೀಕೃತಳಾದ

ಆಹೀರ. **ಪು:** [**ಆಹೀರ**] ದೇಶ-ವಿಶೇಷ, ಶೂದ್ರಜಾತಿ-ವಿಶೇಷ, ಗೌಳಿ, ಗೌಳಿಗ, ಈ ಹೆಸರಿನ ಒಬ್ಬ ರಾಜ(ಪಉಮ). ಸ್ತ್ರೀ: ರೀ- ಅಹೀರನ್, ಗೌಳಿಗಿತ್ತಿ

ಆಹು. **ಸಕ:** [**ಆ+ಹ್ವೇ**] ಕರೆ

ಆಹು [**ಆ+ಹು**] ದಾನ ಮಾಡುವುದು, ತ್ಯಜಿಸುವುದು

ಆಹು. **ಅ:** [**ಆಹು**] ಅಥವಾ(ನಾಟ)

ಆಹು. **ಪು:** [**ದೇ**] ಗೂಬೆ(ದೇ)

ಆಹು. '**ಆಹ=ಬ್ರೂ**' ಶಬ್ದವನ್ನು ನೋಡುವುದು.

ಆಹುಇ. ವಿ: [**ಆ ಹೋತೃ**] ದಾತಾ ದಾನಿ, ತ್ಯಾಗಿ,

ಆಹುಇ. **ಸ್ತ್ರೀ:** [**ಆಹುತಿ**] ಹವನ, ಹೋಮ, ಹೋಮ ದ್ರವ್ಯ, ಹವಿಸ್ಸು, ಬಲಿ

ಆಹುಂದುರ.} **ಪು: ದೇ]** ಬಾಲಕ, ಹುಡುಗ

ಆಹುಂದುರು}

ಆಹುಡ. **ನ:** [**ದೇ**] ಸೀತ್ಕಾರ, ಸುರತ ಸಮಯದ ಶಬ್ದ, ಮಾರಲ್ಪಟ್ಟ, ಮಾರುವುದು

ಆಹುಡ. **ಅಕ:** [**ದೇ**] ಬೀಳು

ಆಹುಡಿಅ. ವಿ: [**ದೇ**] ಕೆಳಗೆ ಬಿದ್ದ (ದೇ)

ಆಹುಣ. **ಸಕ:** [**ಆ+ಧು**] ಅಲ್ಲಾಡಿಸು, ನಡುಗಿಸು

ಆಹುಣಿಯ. ವಿ: [**ಆಧುನಿಕ**] ಈಚಿನ, ಹೊಸ, ಗ್ರಹ-ವಿಶೇಷ

ಆಹುತ್ತ. ನ: [ದೇ. **ಅಭಿಮುಖ**] ಎದುರುಗಡೆ, ಸಮ್ಮುಖ

ಆಹೂಅ. ವಿ: [**ಆಹೂತ**] ಕರೆಯಲ್ಪಟ್ಟ, ಆಹ್ವಾನಿಸಲ್ಪಟ್ಟ (ಪಾಅ)

ಆಹೂಅ. ವಿ: [**ಆಹೂಕ**] ಪಿಶಾಚ-ವಿಶೇಷ

ಆಹೂಅ. ವಿ: [**ಆಭೂತ**] ಉತ್ಪನ್ನ, ಹುಟ್ಟಿದ

ಆಹೇಉಂ. '**ಆಹಾ=ಆ+ಧಾ**' ಶಬ್ದವನ್ನು ನೋಡುವುದು.

ಆಹೇಡ.} **ಪುಂ.ನ:** [**ಆಖೇಟ, -ಕ**] ಬೇಟೆ, ಬೇಟೆಗಾರ

ಆಹೇಡಗ}.

ಆಹೇಡಯ}.

ಆಹೇಡಿಯ. ವಿ: [**ಆಖೇಟಿಕ**] ಬೇಟೆಗೆ ಸಂಬಂಧಿಸಿದ

ಆಹೇಣ. **ನ:** [**ದೇ**] ಮದುವೆಯ ನಂತರ, ವರನ ಮನೆಯಲ್ಲಿ ಸೊಸೆ ಬಂದ ಮೇಲೆ ನಡೆಸುವ ಬೀಗರ ಔತಣದ ಉತ್ಸವ

ಆಹೇಯ. ವಿ: [**ಆಧೇಯ**} ಆಶ್ರಯಿಸಲ್ಪಟ್ಟ, ಒತ್ತೆಯಿಡುವ ಪದಾರ್ಥ

ಆಹೇರ. '**ಆಹೀರ**' ಶಬ್ದವನ್ನು ನೋಡುವುದು.

ಆಹೇವಚ್ಚ. **ನ:** [**ಆಧಿಪತ್ಯ**] ನೇತೃತ್ವ, ಮುಖಂಡತ್ವ

ಆಹೇವಣ. **ನ:** [**ಆಕ್ಷೇಪಣ**] ಆಕ್ಷೇಪ, ಎಸೆಯುವುದು, ಬಿಸಡುವುದು, ಕ್ಷೋಭೆ ಉಂಟುಮಾಡುವುದು

ಆಹೋಅ. '**ಆಭೋಗ**' ಶಬ್ದವನ್ನು ನೋಡುವುದು.

ಆಹೋಅ. '**ಆಭೋಯ=ಆ+ಭೋಜ್ಯ**' ಶಬ್ದವನ್ನು ನೋಡುವುದು.

ಆಹೋಇಅ. ವಿ: [**ಆಭೋಗಿತ**] ತಿಳಿದುಬಂದ, ನೋಡಲ್ಪಟ್ಟ, ತಿಳಿಯಲ್ಪಟ್ಟ

ಆಹೋಇಅ. ವಿ. [**ಆಭೋಗಿಕ**] ಉಪಯೋಗ ಪ್ರಧಾನವಾದ, (ಕಪ್ಪ)

ಆಹೋಡ. **ಸಕ:** [**ತಾಡಯ್**] ಹೊಡೆ,

ಆಹೋರಣ. **ಪು:** [**ಆಧೋರಣ**] ಮಾವತಿಗ

ಆಹೋಹಿ}. ವಿ: [**ಆಧೋವಧಿಕ**] ಆ ಅವಧಿ ಜ್ಞಾನಿಗಳ

ಆಹೋಹಿಯ}. ಒಂದು ಪ್ರಭೇದ, ಒಂದು ಗೊತ್ತಾದ ಕ್ಷೇತ್ರವನ್ನು ಅವಧಿ ಜ್ಞಾನದಿಂದ ನೋಡುವವನು (ಭಗ)

ಇ

ಇ. ಪು: [**ಈ**] ಪ್ರಾಕೃತ ವರ್ಣಮಾಲೆಯ ಮೂರನೇ ಸ್ವರ–ವರ್ಣ(ಪ್ರಾಮಾ), ವಾಕ್ಯಾಲಂಕಾರ ಮತ್ತು ಪಾದಪೂರ್ತಿಯಲ್ಲಿ ಪ್ರಯೋಗವಾಗುವ ಅವ್ಯಯ.

ಇ '**ಇಇ**' ಯನ್ನು ನೋಡುವುದು

ಇ. ಸಕ: [ಇ] ಹೋಗು, ಗಮಿಸು, ತಿಳಿ. '**ಏಇ**', **ವ.ಕೃ**– ಏಂತ

ಇಅಹರಾ. '**ಇಯರಹಾ**' ಶಬ್ದವನ್ನು ನೋಡುವುದು

ಇಇ. ಅ: [**ಇತಿ**] ಸಮಾಪ್ತಿ, ಅವಧಿ, ಎಲ್ಲೆ, ಅಳತೆ, ಪರಿಮಾಣ, ನಿಶ್ಚಯ, ಕಾರಣ, ಹೀಗೆ, ಈ ರೀತಿಯಾಗಿ, ಈ ಪ್ರಕಾರ(ಉತ್ತ) '**ಇತಿ**' ಶಬ್ದವನ್ನು ನೋಡುವುದು

ಇಓ. ಅ: [**ಇತಸ್**] ಇದರಿಂದ, ಈ ಕಾರಣ, ಈ ಕಡೆ, ಈ ಪಕ್ಕ. ಇಲ್ಲಿ–ಈ ಲೋಕದಲ್ಲಿ(ವಿಸೇ)

ಇಓಅ. ಅ: [**ಇತಶ್ಚ**] ಪ್ರಸಂಗಾಂತರವನ್ನು ಸೂಚಿಸುವ ಅವ್ಯಯ. ಇಲ್ಲಿಂದ, ಇವನಿಂದ, ಇದರಲ್ಲಿ, ಇವನಲ್ಲಿ (ಶ್ರಾ)

ಇಂಖಿಣಿಯಾ. ಸ್ತ್ರೀ: [**ದೇ. ಇಂಖನಿಕಾ**] ನಿಂದೆ,

ಇಂಖಿಣೀ. ಸ್ತ್ರೀ: [**ದೇ. ಇಂಖಿನೀ**] ಮೇಲಿನ ಶಬ್ದವನ್ನು ನೋಡುವುದು

ಇಂಗಾರ}. '**ಅಂಗಾರ**' ಶಬ್ದವನ್ನು ನೋಡುವುದು.

ಇಂಗಾಲ}. □**ಕಮ್ಮ. ನ:** [**ಕರ್ಮನ್**] ಕಲ್ಲಿದ್ದಲು ಮೊದಲಾದವನ್ನು ಉತ್ಪಾದಿಸುವ ಮತ್ತು ವಿಕ್ರಯಿಸುವ ವ್ಯಾಪಾರ(ಪಡಿ). **–ಸಗಡಿಯಾ. ಸ್ತ್ರೀ:** [**–ಶಕಟಿಕಾ**] ಅಗ್ಗಿಷ್ಟಿಕೆ, ಕೆಂಡವನ್ನು ಇಡುವ ಪಾತ್ರೆ(ಭಗ)

ಇಂಗಾರಡಾಹ. ಪುಂನ: [ಅಂಗಾರದಾಹ] ಹಸಿ ಮಣ್ಣಿನ(ಆವೆ ಮಣ್ಣಿನ) ಮಡಕೆಗಳನ್ನು ಸುಡುವ ಸ್ಥಳ

ಇಂಗಾಲ. ವಿ: [ಅಂಗಾರ] ಕೆಂಡಕ್ಕೆ ಸಂಬಂಧಿಸಿದ

ಇಂಗಾಲಗ. '**ಅಂಗಾರಗ**' ಶಬ್ದವನ್ನು ನೋಡುವುದು

ಇಂಗಾಲಯ. '**ಇಂಗಾಲಗ**' ಶಬ್ದವನ್ನು ನೋಡುವುದು

ಇಂಗಾಲೀ. ಸ್ತ್ರೀ: [**ದೇ**] ಕಬ್ಬಿನ ಚೂರು, ಕಬ್ಬಿನ ತುಣುಕು

ಇಂಗಾಲೀ. ಸ್ತ್ರೀ: [ಅಂಗಾರೀ] '**ಇಂಗಾರ–ಕಮ್ಮ**' ಶಬ್ದವನ್ನು ನೋಡುವುದು

ಇಂಗಿಅ. ನ: [**ಇಂಗಿತ**] ಸೂಚನೆ, ಸಂಕೇತ, ಮನಸ್ಸಿನ ಅಭಿಪ್ರಾಯಕ್ಕೆ ತಕ್ಕ ಅಂಗಚಲನೆ(ಪಾಅ), **–ಜ್ಞ, –ಣ್ಣ,. –ಣ್ಣು, ವಿ:** [**–ಜ್ಞ**] ಸೂಚನೆ ಸಂಕೇತದಿಂದ ಅರಿಯ ಬಲ್ಲ. **–ಮರಣ. ನ:** [**ಮರಣ**] **–ವಿಶೇಷ** (ಪಂಚಾ)

ಇಂಗಿಅಜಾಣುಅ. ಸೂಚನೆ ಸಂಕೇತದಿಂದ ಅರಿಯ ಬಲ್ಲ.'**ಇಂಗಿಅ–ಜ್ಞ**' ಶಬ್ದವನ್ನು ನೋಡುವುದು

ಇಂಗಿಣೀ. ಸ್ತ್ರೀ: [**ಇಂಗಿನೀ**] ಮರಣ–ವಿಶೇಷ, ಉಪವಾಸ–ಆಚರಣೆ–ವಿಶೇಷ(ಸಮ)

ಇಂಗುಅ. ನ: [**ಇಂಗುದ**] ಇಂಗುದೀ ಮರದ ಹಣ್ಣು

ಇಂಗುಈ}. **ಸ್ತ್ರೀ:** [**ಇಂಗುದೀ**] ಇಂಗಳದ ಮರ

ಇಂಗುದೀ}.ಅಥವಾ ಗಾರೆಗಿಡ. ಇದರ ಹಣ್ಣು ಎಣ್ಣೆಯಿಂದ ಕೂಡಿರುತ್ತದೆ. ಇದರ ಇನ್ನೊಂದು ಹೆಸರು ವ್ರಣ–ವಿರೋಪಣ ಎಂದು. ಕಾರಣ ಇದರ ಎಣ್ಣೆಯಿಂದ ಗಾಯಗಳು ಬಹಳ ಬೇಗ ಗುಣವಾಗುತ್ತವೆ(ಆಚಾ)

ಇಂಧಿಅ. ವಿ: [**ದೇ**] ಮೂಸಿನೋಡಲ್ಪಟ್ಟ(ದೇ), **–ಇಂಣರ** – '**ಕಿಣ್ಣರ**' ಶಬ್ದವನ್ನು ನೋಡುವುದು

ಇಂತ. '**ಏ=ಅ+ಇ**' ಯನ್ನು ನೋಡುವುದು.

ಇಂದ. ಪು: [**ಇಂದ್ರ**] ದೇವತೆಗಳ ರಾಜ–ದೇವರಾಜ(ಠಾ), ಶ್ರೇಷ್ಠ, ಪ್ರಧಾನ, ನಾಯಕ–'ಣರಿಂದ' ಎಂಬಂತೆ(ಗಉಡ). ದೇವಿಂದ(ಕಪ್ಪ), ಪರಮೇಶ್ವರ, ಜೀವ, ಆತ್ಮ, ಐಶ್ವರ್ಯವಂತ, ವಿದ್ಯಾಧರರ ಪ್ರಸಿದ್ಧ ರಾಜ, ಪೃಥ್ವೀ ಕಾಯದ ಒಬ್ಬ ಅಧಿಷ್ಠಾತೃ ದೇವ, ಜ್ಯೇಷ್ಠಾ ನಕ್ಷತ್ರದ ಅಧಿಷ್ಠಾತೃ ದೇವ, ೧೯ನೇ ತೀರ್ಥಂಕರನ ಒಬ್ಬ ಹೆಸರಾಂತ ಗಣಧರ, ಸಪ್ತಮೀ ತಿಥಿ, ಮೇಘ, ಮಳೆ, **ನ:** ದೇವ–ವಿಮಾನ–ವಿಶೇಷ, **–ಇ. ಪು:** [**–ಜಿತ್**] ಈ ಹೆಸರಿನ ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕೇಶ(ಪಉಮ), ರಾವಣನ ಒಬ್ಬ ಮಗನ ಹೆಸರು. **–ಓವ.** '**–ಗೋವ**' ಶಬ್ದವನ್ನು ನೋಡುವುದು. **–ಕಾಇಯ. ಪು:** [**–ಕಾಯಿಕ**] ಮೂರು ಇಂದ್ರಿಯಗಳ ಜೀವ–ವಿಶೇಷ(ಪಣ್ಣ), **–ಕೀಲ. ಪು:** [**–ಕೀಲ**] ಬಾಗಿಲಿನ ಒಂದು ಅಂಗ. (ಔಪ), **–ಕುಂಭ. ಪು:** [**–ಕುಂಭ**] ದೊಡ್ಡ ಕಲಶ.

ಉದ್ಯಾನ, –ಕೇಲು. ಪು: [–ಕೇತು] ಇಂದ್ರಧ್ವಜ, ಇಂದ್ರ ಯಷ್ಟಿ(ಪಣ್ಣ), '–ಖೀಲ. '–ಕೀಲ' ಶಬ್ದವನ್ನು ನೋಡುವುದು. –ಗಾಇಯ.–'ಕಾಇಯ' ಶಬ್ದವನ್ನು ನೋಡುವುದು(ಉತ್ತ), –ಗಾಹ. ಪು: [–ಗ್ರಹ] ಇಂದ್ರಾವೇಶ, ಯಾರದಾದರೂ ದೇಹದಲ್ಲಿ ಇಂದ್ರನು ಸೇರಿಕೊಳ್ಳುವುದು. – ಗೋವ, –ಗೋವಗ, –ಗೋವಯ. ಪು: [–ಗೋಪ] ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಕೀಟ(ಸುಖ), –ಗ್ಗಹ. ಪು: [–ಗ್ರಹ] ಗ್ರಹ–ವಿಶೇಷ, –ಗ್ಗಿ. ಪು: [ಇಂದಾಗ್ನಿ] ವಿಶ್ವಾವಸು ನಕ್ಷತ್ರದ ಅಧಿಷ್ಠಾತೃ ದೇವ. ಮಹಾ ಗ್ರಹ –ಗ್ಗೀವ. ಪು: [–ಗ್ರೀವ] ಗ್ರಹದ ಅಧಿಷ್ಠಾತೃ ದೇವ –ಜಸಾ. ಸ್ತ್ರೀ: [–ಯಶಸ್] ಕಾಂಪಿಲ್ಯ ನಗರದ ಬ್ರಹ್ಮರಾಜನ ಒಬ್ಬ ಹೆಂಡತಿ. ಉತ್ತ), –ಜಾಲ. ನ: [–ಜಾಲ] ಮಾಯಾವಿದ್ಯೆ, ಮೋಸ, ಕಪಟ. –ಜಾಲಿ, –ಜಾಲಿಅ. ವಿ:[–ಜಾಲಿನ್, –ಕ] ಮಾಯಾವಿ, ಗಾರುಡಿಗ, ಕಣ್ಣುಕಟ್ಟು ಮಾಡುವವನು, –ಜುಇಣ್ಣ. ಪು: [–ದ್ಯುತಿಜ್ಞ] ತನ್ನ ಹೆಸರಿನಿಂದ ಖ್ಯಾತನಾದ ಇಕ್ಷ್ವಾಕು ವಂಶದ ಒಬ್ಬ ರಾಜ(ಪಉಮ) –ಜ್ಝಯ. ಪು: [–ಧ್ವಜ] ದೊಡ್ಡ ಬಾವುಟ, –ಜ್ಝಯಾ. ಸ್ತ್ರೀ: [–ಧ್ವಜಾ] ಇಂದ್ರನು ಭರತರಾಜನಿಗೆ ತೋರಿಸಿದ ತನ್ನ ದಿವ್ಯವಾದ ಹೆಬ್ಬೆರಳಿನ ನಿಮಿತ್ತವಾಗಿ ರಾಜಾ ಭರತನು ಆ ಹೆಬ್ಬೆರಳಿಗೆ ಸಮನಾದ ಆಕೃತಿಯನ್ನು ಸ್ಥಾಪಿಸಿದನು. ಮತ್ತು ಅದರ ಸಲುವಾಗಿ ಮಾಡಿದ ಉತ್ಸವ(ಆಚೂ), –ಣೀಲ. ಪುಂ. ನ: [–ನೀಲ] ನೀಲಂ, ನೀಲಮಣಿ, ರತ್ನ–ವಿಶೇಷ(ಗಉಡ). –ತರು. ಪು:[–ತರು] ವೃಕ್ಷ–ವಿಶೇಷ: ಇದರ ಕೆಳಗೆ ಭಗವಾನ್ ಸಂಭವನಾಥನಿಗೆ ಕೇವಲ ಜ್ಞಾನ ಪ್ರಾಪ್ತವಾಗಿತ್ತು (ಪಉಮ). –ತ್ತ. ನ: [–ತ್ವ] ಸ್ವರ್ಗದ ಆಧಿಪತ್ಯ, ಇಂದ್ರನ ಅಸಾಧಾರಣ ಧರ್ಮ, ರಾಜ್ಯತ್ವ, ಪ್ರಾಧಾನ್ಯ, –ದತ್ತ. ಪು: [–ದತ್ತ] ಈ ಹೆಸರಿನ ಒಬ್ಬ ಪ್ರಸಿದ್ಧ ರಾಜ, ಒಬ್ಬ ಜೈನಮುನಿ, –ದಿಣ್ಣ. ಪು: [–ದಿನ್ನ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಆಚಾರ್ಯ, –ಧಣು. ನ: [–ಧನುಷ್] ಇಂದ್ರ ಧನುಸ್ಸು, ಕಾಮನ ಬಿಲ್ಲು, ಮಳೆಬಿಲ್ಲು. ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು. –ನೀಲ. 'ಣೀಲ' ಶಬ್ದವನ್ನು ನೋಡುವುದು. –ಪಾಡಿವಯಾ. ಸ್ತ್ರೀ: [–ಪ್ರತಿಪತ್] ಕಾರ್ತೀಕ ಮಾಸದ ಕೃಷ್ಣ ಪಕ್ಷದ ಮೊದಲ ತಿಥಿ(ಠಾ). –ಪುರ. ನ: [–ಪುರ] ಇಂದ್ರನ ನಗರಿ. ಅಮರಾವತಿ, ನಗರ–ವಿಶೇಷ, ಇಂದ್ರದತ್ತ ರಾಜನ ರಾಜಧಾನಿ. –ಪುರಗ. ನ: [–ಪುರಕ] ಜೈನೀಯ ವೇಶ್ಯಾವಾಟಿಕಾ ಗಣದ ನಾಲ್ಕನೇ ಕುಲದ ಹೆಸರು(ಕಪ್ಪ). –ಪ್ಪಭ. ಪು: [–ಪ್ರಭ] ರಾಕ್ಷಸ ವಂಶದ ಒಬ್ಬ ರಾಜನ ಹೆಸರು. ಅವನು ಲಡ್ಕಾದ ರಾಜನಾಗಿದ್ದ. –ಭೂಇ. ಪು: [–ಭೂತಿ] ಭಗವಾನ್ ಮಹಾವೀರರ ಮೊದಲ ಮುಖ್ಯ ಶಿಷ್ಯ ಗೌತಮಸ್ವಾಮಿ. –ಮಹ. ಪು: [–ಮಹ] ಇಂದ್ರನ ಆರಾಧನೆಯ ಸಲುವಾಗಿ ಮಾಡುವ ಒಂದು ಉತ್ಸವ. ಆಶ್ವಯುಜ ಹುಣ್ಣಿಮೆ(ಠಾ), –ಮಾಲಿ. ಸ್ತ್ರೀ:[–ಮಾಲಿ] ರಾಜ ಆದಿತ್ಯನ ಹೆಂಡತಿ, –ಮುದ್ಧಾಭಿಸಿತ್ತ. ಪು:[–ಮೂರ್ಧಾಭಿಷಿಕ್ತ] ಪಕ್ಷದ ಏಳನೇ ತಿಥಿ, ಸಪ್ತಮಿ (ಚಂದ್ರ), –ಮೇಹ. ಪು: [–ಮೇಘ] ರಾಕ್ಷಸ ವಂಶದಲ್ಲಿ ಹುಟ್ಟಿದ ಒಬ್ಬ ರಾಜ(ಪಉಮ). –ಯ. ಪು: [–ಕ] 'ಇಂದ್ರ' ಶಬ್ದವನ್ನು ನೋಡುವುದು. ನರಕ, ದ್ವೀಪ, ನ: ವಿಮಾನ. –ಯಾಲ. '–ಜಾಲ' ಶಬ್ದವನ್ನು ನೋಡುವುದು. –ರಹ. ಪು: [–ರಥ] ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು. –ರಾಯ. ಪು: [–ರಾಜ] ಇಂದ್ರ –ಲಟ್ಠಿ. ಸ್ತ್ರೀ: [–ಯಷ್ಟಿ] ಇಂದ್ರ ಧ್ವಜ(ಣಾಯಾ), –ಲೇಹಾ. ಸ್ತ್ರೀ: [–ಲೇಖಾ] ರಾಜ ತ್ರಿಕಸಂಯತನ ಹೆಂಡತಿ (ಪಉಮ). –ವಜ್ಜಾ. ಸ್ತ್ರೀ: [–ವಜ್ರಾ] ಒಂದು ಪಾದದಲ್ಲಿ ೧೧ ಅಕ್ಷರಗಳಿರುವ ಛಂದಸ್ಸಿನ ಹೆಸರು. –ವಸು. ಸ್ತ್ರೀ: [–ವಸು] ಬ್ರಹ್ಮರಾಜನ ಒಬ್ಬ ಹೇಂಡತಿ. –ವಾಯ. ಪು: [–ವಾತ] ಒಬ್ಬ ಮಾಂಡಲಿಕ ರಾಜ(ಭವಿ), –ವಾರಣ. ಪು: [–ವಾರಣ] ಇಂದ್ರನ ಆನೆ. –ಸಮ್ಮ. ಪು: [–ಶರ್ಮನ್] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಬ್ರಾಹ್ಮಣ. ಸಾಮಣಿಯ. ಪು: [–ಸಾಮಾನಿಕ] ಇಂದ್ರನಂತೆಯೇ ಸಂಪತ್ಸಮೃದ್ಧಿಗಳನ್ನು ಹೊಂದಿರುವ ದೇವ. –ಸಿರಿ. ಸ್ತ್ರೀ: [–ಶ್ರೀ] ರಾಜಾ ಬ್ರಹ್ಮದತ್ತನ ಒಬ್ಬಹೆಂಡತಿ. –ಸುಅ. ಪು: [–ಸುತ] ಇಂದ್ರನ

ಮಗ ಜಯಂತ. -ಸೇಣಾ. ಸ್ತ್ರೀ: [-ಸೇನಾ] ಇಂದ್ರನ ಸೈನ್ಯ, ಒಂದು ಮಹಾನದಿ(ತಾ) -ಹಣೂ. 'ಧಣು' ಶಬ್ದವನ್ನು ನೋಡುವುದು. ಇಂದಾವುಹ. ನ: [ಇಂದ್ರಾಯುಧ] ಇಂದ್ರಧನುಸ್ಸು. ಇಂದಾಉಹಪ್ಪಭ. ಪು: [ಇಂದ್ರಾಯುಧಪ್ರಭ] ವಾನರ ದ್ವೀಪದ ಒಬ್ಬ ರಾಜ(ಪಉಮ) ಇಂದಾಮಅ. ಪು: [ಇಂದ್ರಾಮಯ] ರಾಜಾ ಇಂದ್ರಾಯುಧ ಪ್ರಭನ ಮಗ, ವಾನರ ದ್ವೀಪದ ರಾಜ(ಪಉಮ)

ಇಂದ. ವಿ: [ಐಂದ್ರ] ಇಂದ್ರನಿಗೆ ಸಂಬಂಧಿಸಿದ (ಣಾಯಾ), ನ: ಸಂಸ್ಕೃತದ ಒಂದು ಪ್ರಾಚೀನ ವ್ಯಾಕರಣ(ಆವಮ)

ಇಂದಗಾಹ. ಪು: [ದೇ] ಜೊತೆಂಯಲ್ಲಿ ಅಂಟಿಕೊಂಡಿರುವ ಕೀಟ-ವಿಶೇಷ

ಇಂದಗ್ಗಿ. ಪು: [ದೇ] ಹಿಮ

ಇಂದಗ್ಗಿಧೂಮ ನ: [ದೇ]. ಹಿಮ

ಇಂದಡ್ಢಲಅ. ಪು: [ದೇ] ಇಂದ್ರನನ್ನು ಅಲುಗಾಡಿಸುವುದು

ಇಂದಮಹ. ವಿ: [ದೇ] ಕುಮಾರಿಯಲ್ಲಿ ಹುಟ್ಟಿದ, ನ: ಕೌಮಾರ್ಯ, ಯೌವನ(ದೇ)

ಇಂದಮುಹಕಾಮುಅ.ಪು: [ಇಂದ್ರಮುಹಕಾಮುಕ] ನಾಯಿ(ದೇ)

ಇಂದಾ. ಸ್ತ್ರೀ: [ಇಂದ್ರಾ] ಒಂದು ಮಹಾನದಿ(ತಾ), ಧರಣೇಂದ್ರನ ಒಬ್ಬ ಪಟ್ಟದ ರಾಣಿ

ಇಂದಾ. ಸ್ತ್ರೀ: [ಐಂದ್ರೀ] ಪೂರ್ವದಿಕ್ಕು

ಇಂದಾಣೀ. ಸ್ತ್ರೀ: [ಇಂದ್ರಾಣೀ] ಇಂದ್ರನ ಹೆಂಡತಿ (ಸುರ), ಒಬ್ಬ ರಾಜನ ಹೆಂಡತಿ(ಪಉಮ)

ಇಂದಾಸಣಿ. ಪು: [ಇಂದ್ರಾಶನಿ] ಒಂದು ನರಕ-ಸ್ಥಾನ.

ಇಂದಿಂದಿರ. ಪು: [ಇಂದಿಂದಿರ] ದುಂಬಿ, ಹೆಣ್ದುಂಬಿ

ಇಂದಿಯ. ಪುಂ. ನ: [ಇಂದ್ರಿಯ] ಆತ್ಮದ ಚಿಹ್ನೆ, ಜ್ಞಾನ-ಸಾಧನ ಭೂತವಾದವು- ಕಿವಿ, ಕಣ್ಣು, ಮೂಗು, ನಾಲಗೆ ಚರ್ಮ, ಮತ್ತು ಮನಸ್ಸು. ಅಂಗ, ಶರೀರದ ಅವಯುವ. -ಅವಾಯ. ಪು: [ಇಂದ್ರಿಯಾಪಾಯ] ಇಂದ್ರಿಯಗಳ ಮೂಲಕ ಆಗುವ ವಸ್ತುವಿನ ನಿಶ್ಚಯಾತ್ಮಕ ಜ್ಞಾನ -ವಿಶೇಷ(ಪಣ್ಣ), -ಓಗಾಹಣ. ಸ್ತ್ರೀ: [ಇಂದ್ರಿಯಾವಗ್ರಹಣ] ಇಂದ್ರಿಯಗಳ ಮೂಲಕ ಉಂಟಾಗುವ ಜ್ಞಾನ-ವಿಶೇಷ, -ಜಯ. ಪು: [-ಜಯ] ಇಂದ್ರಿಯಗಳನ್ನು ನಿಗ್ರಹಿಸುವುದು, ಅಧೀನದಲ್ಲಿಟ್ಟುಕೊಳ್ಳುವುದು. ತಪೋ-ವಿಶೇಷ, -ಟ್ಠಾಣ. ನ: [-ಸ್ಥಾನ] ಇಂದ್ರಿಯಗಳ ಗ್ರಹಿಕೆಗೆ ಕಾರಣವಾದ್ದು: ಶ್ರೋತ್ರೇಂದ್ರಿಯಕ್ಕೆ ಆಕಾಶ, ಕಣ್ಣಿಗೆ ತೇಜಸ್ಸು ಇತ್ಯಾದಿಗಳು ಇದ್ದಂತೆ(ಸೂಅ). -ಣ್ಣಿವ್ವತ್ತಣಾ. ಸ್ತ್ರೀ: [-ನಿರ್ವರ್ತನಾ] ಇಂದ್ರಿಯಗಳ ಆಕಾರದ ನಿಷ್ಪತ್ತಿ(ಪಣ್ಣ), -ಣಾಣ. ನ: [-ಜ್ಞಾನ] ಇಂದ್ರಿಯಗಳ ಮೂಲಕ ಉತ್ಪನ್ನವಾಗುವ ಪ್ರತ್ಯಕ್ಷ ಜ್ಞಾನ. -ತ್ಥ. ಪು: [ಇಂದ್ರಿಂಯಾರ್ಥ] ಇಂದ್ರಿಯಗಳಿಂದ ತಿಳಿಯಲು ಯೋಗ್ಯವಾದ ವಸ್ತು, ರೂಪ, ರಸ, ಗಂಧ ಇತ್ಯಾದಿ-ಪಜ್ಜತ್ತಿ. ಸ್ತ್ರೀ: [-ಪರ್ಯಾಪ್ತಿ] ಶಕ್ತಿ-ವಿಶೇಷ. ಇದರ ಮೂಲಕ ಜೀವವು ಧಾತುಗಳಾಗಿ ಪರಿವರ್ತಿತವಾದ ಆಹಾರವನ್ನು ಇಂದ್ರಿಯಗಳಾಗಿ ಮಾರ್ಪಡಿಸುತ್ತದೆ (ಪಣ್ಣ). -ವಿಜಂಯ. ಪು: [-ವಿಜಂಯ] 'ಜಯ' ಶಬ್ದವನ್ನು ನೋಡುವುದು. -ವಿಸಯ. ಪು: [-ವಿಷಯ] 'ತ್ಥ' ಅನ್ನು ನೋಡುವುದು (ಉತ್ತ)

ಇಂದಿಯ. ನ: [ಇಂದ್ರಿಯ] ಲಿಂಗ, ಪುರುಷ-ಚಿಹ್ನೆ

ಇಂದಿಯಾಲ. 'ಇಂದ್ರಜಾಲ' ಶಬ್ದವನ್ನು ನೋಡುವುದು.

ಇಂದಿಯಾಲ} 'ಇಂದಜಾಲಿ' ಶಬ್ದವನ್ನು
ಇಂದಿಯಾಲಿ}. ನೋಡುವುದು

ಇಂದಿಯಾಲೀಅ 'ಇಂದ-ಜಾಲಿಅ' ಶಬ್ದವನ್ನು ನೋಡುವುದು.

ಇಂದಿರ. ಪು: [ಇಂದಿರ] ದುಂಬಿ, ಹೆಣ್ದುಂಬಿ

ಇಂದಿರಾ. ಸ್ತ್ರೀ: [ಇಂದಿರಾ] ಲಕ್ಷ್ಮಿ

ಇಂದೀವರ. ನ: [ಇಂದೀವರ] ಕಮಲ, ಪದ್ಮ(ಪಉಮ)

ಇಂದು. ಪು: [ಇಂದು] ಚಂದ್ರ

ಇಂದುತ್ತರವಡಿಂಸಗ. ನ: [ಇಂದ್ರೋತ್ತರಾವತಂಸಕ] ದೇವ-ವಿಮಾನ-ವಿಶೇಷ.

ಇಂದುರ. ಪುಂ. ಸ್ತ್ರೀ: [ಉಂದುರ] ಇಲಿ, ಮೂಷಕ

ಇಂದೋಕಂತ. ನ: [ಇಂದುಕಾಂತ] ವಿಮಾನ-ವಿಶೇಷ (ಸಮ) ಚಂದ್ರಕಾಂತ ಶಿಲೆ

ಇಂದೋವ. 'ಇಂದ-ಗೋವ' ಶಬ್ದವನ್ನು ನೋಡುವುದು

ಇಂದೋವತ್ತ. ಪು: [ದೇ] ಇಂದ್ರಗೋಪ-ಕೀಟವಿಶೇಷ

ಇಂದ್ರ 'ಇಂದ=ಇಂದ್ರ' ಶಬ್ದವನ್ನು ನೋಡುವುದು

ಇಂಧ. ನ: [ಚಿಹ್ನ] ಗುರುತು, ಚಿಹ್ನೆ
ಇಂಧಣ. ನ: [ಇಂಧನ] ಸೌದೆ, ಕಟ್ಟಿಗೆ, ಪ್ರಕಾಶ ಪಡಿಸುವ, ಉರಿಯುವ ವಸ್ತು, ಅಸ್ತ್ರ–ವಿಶೇಷ (ಪಉಮ)ಉತ್ತೇಜನ, ಹಣ್ಣುಗಳನ್ನು ಬೇಯಿಸಲು ಪಕ್ವಗೊಳಿಸಲು ಬಳಸುವ ಪಲಾಲ, ಹುಲ್ಲು ಇತ್ಯಾದಿ. –ಸಾಲಾ. ಸ್ತ್ರೀ: [–ಶಾಲಾ] ಸೌದೆಗಳನ್ನು ಒಟ್ಟುವ ಕೊಠಡಿ
ಇಂಧಿಯ. ವಿ: [ಇಂಧಿತ]ಉದ್ದೀಪಿತ, ಪ್ರಜ್ವಲಗೊಳಿಸಲ್ಪಟ್ಟ
ಇಕ. ನ: [ದೇ] ಪ್ರವೇಶ,
ಇಕ್ಕ. 'ಎಕ್ಕ' ಶಬ್ದವನ್ನು ನೋಡುವುದು
ಇಕ್ಕಡ. ಪು: [ಇಕ್ಕಡ] ತೃಣ–ವಿಶೇಷ, ಚಾಪೆಯನ್ನು ತಯಾರಿಸುವ ಹುಲ್ಲು
ಇಕ್ಕಡ. ವಿ: [ಐಕ್ಕಡ] ಚಾಪೆಯನ್ನು ತಯಾರಿಸುವ ಹುಲ್ಲಿನಿಂದ ಮಾಡಿದ (ಆಚಾ)
ಇಕ್ಕಣ. ವಿ: [ದೇ] ಕಳ್ಳ, ಕದಿಯುವವನು
ಇಕ್ಕಾರ. 'ಎಕ್ಕಾರಹ' ಶಬ್ದವನ್ನು ನೋಡುವುದು
ಇಕ್ಕಿಕ್ಕ. ವಿ: [ಏಕೈಕ] ಪ್ರತ್ಯೇಕವಾದ ಒಂದೊಂದು
ಇಕ್ಕಿಲ್ಲ. ವಿ: [ಏಕಾಕಿನ್] ಏಕಾಂಗಿ, ಒಬ್ಬಂಟಿಗ
ಇಕ್ಕುಸ. ನ: [ದೇ] ಕಮಲ, ನೀಲೋತ್ಪಲ
ಇಕ್ಖ. ಸಕ: [ಈಕ್ಷ್] ನೋಡು, 'ಇಕ್ಖಇ'
ಇಕ್ಖಅ. ವಿ: [ಈಕ್ಷಕ] ನೋಡುವವನು(ಗಾ)
ಇಕ್ಖಣ. ನ: [ಈಕ್ಷಣ] ಅವಲೋಕನ, ನೋಟ, ನೋಡುವಿಕೆ (ಪಉಮ)
ಇಕ್ಖಾಉ. 'ಇಕ್ಖಾಗು' ಶಬ್ದವನ್ನು ನೋಡುವುದು
ಇಕ್ಖಾಗ. ವಿ: [ಐಕ್ಷ್ವಾಕ] 'ಇಕ್ಷ್ವಾಕು' ಎಂಬ ಪ್ರಸಿದ್ಧ ಕ್ಷತ್ರಿಯ ವಂಶದಲ್ಲಿ ಹುಟ್ಟಿದವನು
ಇಕ್ಖಾಗ.}. ಪು: [ಇಕ್ಷ್ವಾಕು] ಒಂದು ಹೆಸರಾಂತ
ಇಕ್ಖಾಗು}.ಕ್ಷತ್ರಿಯ ರಾಜವಂಶ, ಭಗವಾನ್ ವೃಷಭದೇವನ ವಂಶ, ಆ ವಂಶದಲ್ಲಿ ಹುಟ್ಟಿದವನು(ಭಗ), ಕೋಸಲ ದೇಶ, –ಭೂಮಿ. ಸ್ತ್ರೀ: [–ಭೂಮಿ] ಅಯೋಧ್ಯಾ ನಗರಿ
ಇಕ್ಖು. ಪು: [ಇಕ್ಷು] ಕಬ್ಬು, ಬರಟ್ಟಿಕಾ ಎಂಬ ಧಾನ್ಯ–ವಿಶೇಷ, –ಗಂಡಿಯಾ. ಸ್ತ್ರೀ [–ಗಂಡಿಕಾ] ಕಬ್ಬಿನ ತುಣುಕು(ಆಚಾ), –ಘರ. ನ: [–ಗೃಹ] ಉದ್ಯಾನವನ, –ಚೋಯಗ. ನ: [ದೇ] ಕಬ್ಬಿನ ಸಿಪ್ಪೆ. –ಡಾಲಗ. ನ: [ದೇ] ಕಬ್ಬಿನ ಕವಲಿನ ಒಂದು ಭಾಗ. ಕಬ್ಬಿನ ಸಿಬುರು –ಪೇಸಿಯಾ. ಸ್ತ್ರೀ: [–ಪೇಶಿಕಾ] ಕಬ್ಬಿನ ತುಣುಕು, –ಭಿತ್ತಿ. ಸ್ತ್ರೀ: [ದೇ] ಕಬ್ಬಿನ ತುಂಡು. –ಮೇರಗ. ನ: [–ಮೇರಕ] ಕತ್ತರಿಸಿದ ಕಬ್ಬಿನ ಚೂರು (ಆಚಾ), –ಲಟ್ಠಿ. ಸ್ತ್ರೀ: [–ಯಷ್ಟಿ] ಕಬ್ಬಿನ ಕೋಲು ಕಬ್ಬಿನ ಜಲ್ಲೆ. ಇಕ್ಷುದಂಡ. –ವಾಡ. ಪು: [–ವಾಟ] ಕಬ್ಬಿನ ಗದ್ದೆ. –ಸಾಲಗ. ನ: [–ದೇ] ಕಬ್ಬಿನ ಉದ್ದನೆಯ ಕವಲು, ಕಬ್ಬಿನ ಸಿಪ್ಪೆ. 'ಉಚ್ಛು' ಶಬ್ದವನ್ನು ನೋಡುವುದು
ಇಗ. 'ಎಕ್ಕ' ಶಬ್ದವನ್ನು ನೋಡುವುದು
ಇಗಯಾಲ. ಸ್ತ್ರೀನ: [ಏಕಚತ್ವಾರಿಂಶತ್] ನಲವತ್ತೊಂದು
ಇಗವೀಸಇಮ. ವಿ: [ಏಕವಿಂಶ] ಇಪ್ಪತ್ತೊಂದನೆಯ
ಇಗುಚಾಲ. ವಿ: [ಏಕಚತ್ವಾರಿಂಶತ್] ಸಂಖ್ಯೆ–೪೧. (ನಲವತ್ತೊಂದು(ಭಗ)
ಇಗುಣವೀಸ. ವಿ: [ಏಕೋನವಿಂಶ] ಹತ್ತೊಂಬತ್ತನೆಯ
ಇಗುಣೀಸ}. ಸ್ತ್ರೀ: [ಏಕೋನವಿಂಶತಿ] ಹತ್ತೊಂಬತ್ತು
ಇಗುವೀಸ}.
ಇಗುಸಟ್ಠಿ. ಸ್ತ್ರೀ: [ಏಕೋನಷಷ್ಟಿ] ಐವತ್ತೊಂಬತ್ತು
ಇಗ್ಗ. ವಿ: [ದೇ] ಹೆದರಿದ, ಭಯಗೊಂಡ
ಇಗ್ಗ. 'ಎಕ್ಕ' ಶಬ್ದವನ್ನು ನೋಡುವುದು
ಇಗ್ಘಿಅ. ವಿ: [ದೇ] ತಿರಸ್ಕರಿಸಲ್ಪಟ್ಟ,
ಇಚ್ಚಾ. 'ಇ. ಸಕ:' ಶಬ್ದವನ್ನು ನೋಡುವುದು
ಇಚ್ಚಾಇ.ಪುಂ. ನ: [ಇತ್ಯಾದಿ] ಇತ್ಯಾದಿ, ಇನ್ನೂ ಇತರೆ
ಇಚ್ಚೇವಂ.ಅ: [ಇತ್ಯೇವಂ] ಈ ರೀತಿಯಲ್ಲಿ, ಈ ಪ್ರಕಾರವಾಗಿ (ಸೂಅ)
ಇಚ್ಛ. ಸಕ: [ಇಷ್] ಇಚ್ಚಿಸುವುದು, ಬಯಸುವುದು. ವ. ಕೃ–ಇಚ್ಛಂತ
ಇಚ್ಛ. ಸಕ: [ಆಪ್+ಸ್=ಈಪ್ಸ್] ಪಡೆಯಬೇಕೆಂದು ಬಯಸು
ಇಚ್ಛಕಾರ. 'ಇಚ್ಛಾ–ಕಾರ' ಶಬ್ದವನ್ನು ನೋಡುವುದು
ಇಚ್ಛಕ್ಕಾರ. ಪು: [ಇಚ್ಛಾಕಾರ] 'ಇಚ್ಛಾ' ಶಬ್ದ
ಇಚ್ಛಕಾರ. 'ಇಚ್ಛಾ–ಕಾರ' ಶಬ್ದವನ್ನು ನೋಡುವುದು
ಇಚ್ಛಾ. ಸ್ತ್ರೀ: [ಇಚ್ಛಾ] ಪಕ್ಷದ ಹನ್ನೊಂದನೇ ರಾತ್ರಿಅಭಿಲಾಷೆ, ಇಷ್ಟ, ಬಯಕೆ, ಆಸೆ. –ಕಾರ. ಪು: [–ಕಾರ] ಸ್ವಂತ ಇಚ್ಛೆ, ಅಭಿಲಾಷೆ, ಇಚ್ಛಿಸುವವನು. –ಛಂದ. ವಿ: [ಛಂದ] ಇಚ್ಛೆಗೆ ತಕ್ಕಂತೆ (ಆವ), –ಣುಲೋಮ. ವಿ: [–ನುಲೋಮ] ಇಚ್ಛಾನುಸಾರ, ಇಚ್ಛೆಗೆ ತಕ್ಕಂತೆ(ಆಚಾ). ಣುಲೋಮಿಯ. ವಿ:[–ನುಲೋಮಿಕ]

ಇಚ್ಛಾನುಸಾರ, ಇಚ್ಛೆಗೆ ತಕ್ಕಂತೆ. **-ಪಣ್ಣಿಯ.** ವಿ: [**-ಪ್ರಣೀತ**] ಇಚ್ಛೆಯ ಮೇರೆಗೆ ಮಾಡಿದ. **-ಪರಿಮಾಣ.** ನ: [**-ಪರಿಮಾಣ**] ಪರಿಗ್ರಹಿಸ ಬಹುದಾದ ವಸ್ತುಗಳ ಇಚ್ಛೆಯನ್ನು ಅಳೆಯುವುದು; ಅಂದಾಜಿಸುವುದು. ಶ್ರಾವಕನ ಐದನೆಯ ವ್ರತ. **-ಮುಚ್ಛಾ.** ಸ್ತ್ರೀ: [**-ಮೂರ್ಚ್ಛಾ**] ಅತಿಯಾದ ಆಸಕ್ತಿ. ಪ್ರಬಲವಾದ ಇಚ್ಛೆ(ಪಣ್ಣ). **-ಲೋಭ.** ಪು: [**-ಲೋಭ**] ಪ್ರಬಲವಾದ ಲೋಭ, **-ಲೋಭಿಯ** ವಿ: [**-ಲೋಭಿಕ**] ಮಹಾ ಲೋಭಿ(ತಾ), **-ಲೋಲ.** ಪು: [**-ಲೋಲ**] ಮಹಾನ್ ಲೋಭ, ಮಹಾ ಲೋಭಿ (ಬೃಹ)

-ಇಚ್ಛಾ. ಸ್ತ್ರೀ: [ದಿತ್ಸಾ] ಕೊಡುವ ಬಯಕೆ, ಆಸೆ(ಆವ)

ಇಚ್ಛಿಯ. ವಿ: [ಇಷ್ಟ] ಇಚ್ಛಿಸಿದ, ಇಷ್ಟಪಟ್ಟ, ಬಯಸಿದ

ಇಚ್ಛಿಯ. ವಿ: [ಇಚ್ಛಿತ] ಇಷ್ಟಪಟ್ಟ, ಬಯಸಿದ (ಭಗ)

ಇಚ್ಛಿರ. ವಿ: [ಏಷಿತೃ] ಇಚ್ಛಿಸುವವನು, ಇಚ್ಛೆಕಾರ

ಇಚ್ಛು. ವಿ: [ಇಚ್ಛು] ಅಭಿಲಾಷಿ, ಇಚ್ಛಿಸುವವನು (ಗಾ)

ಇಜ್ಜ. ಸಕ: [ಆ+ಇ] ಬರು, ಆಗಮಿಸು. ವ.ಕೃ-ಇಜ್ಜಂತ

ಇಜ್ಜ. ಪುಂನ: [ಇಜ್ಯಾ] ಯಜ್ಞ, ಯಾಗ

ಇಜ್ಜಾ. ಸ್ತ್ರೀ: [ಇಜ್ಯಾ] ಯಾಗ, ಪೂಜೆ, ಬ್ರಾಹ್ಮಣರ ಸಂಧ್ಯಾರ್ಚನೆ (ಅಣು)

ಇಜ್ಜಾ. ಸ್ತ್ರೀ: [ದೇ] ತಾಯಿ, ಜನನಿ, (ಅಣು)

ಇಜ್ಜೆಸಿಯ. ವಿ: [ಇಜ್ಯೈಷಿಕ] ಪೂಜಿಸುವ ಅಭಿಲಾಷೆ ಹೊಂದಿದ(ಭಗ)

ಇಜ್ಝಾ. ಅಕ: [ಇಂಧ್] ಹೊಳೆ, ಪ್ರಕಾಶಿಸು

ಇಟ್ಟಗಾ. ಸ್ತ್ರೀ: [ದೇ] ಖಾದ್ಯ-ಪದಾರ್ಥ, ಸೇವಿಗೆ

ಇಟ್ಟಗಾ. ಸ್ತ್ರೀ: [ಇಷ್ಟಕಾ] ಕೆಳಗಿನ 'ಇಟ್ಟಾ' ಶಬ್ದವನ್ನು ನೋಡುವುದು

ಇಟ್ಟವಾಯ. 'ಇಟ್ಟಾ-ವಾಯ' ಶಬ್ದವನ್ನು ನೋಡುವುದು

ಇಟ್ಟಾ. ಸ್ತ್ರೀ: [ಇಷ್ಟಕಾ] ಇಟ್ಟಿಗೆ (ಗಉಡ), **-ಪಾಯ, -ವಾಯ,** ಪು: [**-ಪಾಕ**] ಇಟ್ಟಿಗೆಗಳು ಬೇಯುವುದು: ಇಟ್ಟಿಗೆ ಬೇಯಿಸುವ ಸ್ಥಳ(ತಾ)

ಇಟ್ಟಾಲ. ನ: [ಇಟ್ಟಾಲ] ಇಟ್ಟಿಗೆ ಚೂರು

ಇಟ್ಠ. ವಿ: [ಇಷ್ಟ] ಇಷ್ಟಪಟ್ಟ, ಬಯಸಿದ, ಆಸೆಪಟ್ಟ (ವಿಪಾ), ಯಾಗ ಪೂಜಿಸಲ್ಪಟ್ಟ, ಸತ್ಕರಿಸಲ್ಪಟ್ಟ, ಆಗಮೋಕ್ತ, ಸಿದ್ಧಾಂತಕ್ಕೆ ವಿರುದ್ಧವಲ್ಲದ(ಔಪ). ನ: ತನ್ನ ಸಿದ್ಧಾಂತ, ನಿರ್ವಿಕಾರ ತಪಸ್ಸು, ಯಾಗ ಕ್ರಿಯೆ.

ಇಟ್ಠಿ. ಸ್ತ್ರೀ: [ಇಷ್ಟಿ] ಇಚ್ಛೆ, ಅಭಿಲಾಷೆ, ಇಷ್ಟ, ಆಶೆ, ಯಾಗ(ಅಭಿ)

-ಇಟ್ಠಿ. ಸ್ತ್ರೀ: [ಕೃಷ್ಟಿ] ಸೆಳೆತ, ಎಳೆಯುವುದು, ಆಕರ್ಷಣೆ,

ಇಡಾ. ಸ್ತ್ರೀ: [ಇಡಾ] ಶರೀರದ ಬಲ ಭಾಗದಲ್ಲಿ ಇರುವ ನಾಡಿ(ಕುಮಾ)

ಇಡ್ಡರ. ನ: [ದೇ] ಗಾಡಿ,(ಓಘ)

ಇಡ್ಡರಗ}. ನ: [ದೇ] ಅಡಿಗೆಯನ್ನು ಮುಚ್ಚಿಡುವ

ಇಡ್ಡರಯ}. ದೊಡ್ಡ ಪಾತ್ರೆ, ದೊಡ್ಡ ತಟ್ಟೆ

ಇಡ್ಡರಿಯಾ. ಸ್ತ್ರೀ; [ದೇ] ಮೃಷ್ಟಾ, ಒಂದು ಬಗೆಯ ಸಿಹಿಭಕ್ಷ್ಯ(ಸುಪಾ)

ಇಡ್ಢ. ವಿ: [ಋದ್ಧ] ಸಮೃದ್ಧಿಯಿಂದ ಕೂಡಿರುವ (ಭಗ)

ಇಡ್ಢಿ. ಸ್ತ್ರೀ: [ಋದ್ಧಿ] ವೈಭವ, ಸಮೃದ್ಧಿ, ಐಶ್ವರ್ಯ (ಸುಋ), ಲಬ್ಧಿ, ಶಕಿ, ಸಾಮರ್ಥ್ಯ(ಉತ್ತ), ಪದವಿ.**-ಗಾರವ.** ನ: [**-ಗೌರವ**] ಸಂಪತ್ತು ಅಥವಾ ಪದವಿ ದೊರೆತ ಮೇಲೆ ಅಭಿಮಾನ ಮತ್ತು ಗೌರವ, ದೊರಕದಿದ್ದಾಗ ಅದರ ಬಗೆಗೆ ಅತಿ ಆಸೆ. **-ಪತ್ತ.** ವಿ: [**-ಪ್ರಾಪ್ತ**]ಸಂಪತ್ತನ್ನು ಪಡೆದವನು(ಪಣ್ಣ), **-ಮ, -ಮಂತ,** ವಿ: [**-ಮತ್**] ಸಂಪತ್ಸಮೃದ್ಧಿ ಉಳ್ಳವನು.(ನಿಚೂ)

ಇಡ್ಢಿಸಿಯ. ವಿ: [ದೇ] ಯಾಚಕ, ಬೇಡುವ ಒಂದು ಜಾತಿ (ಭಗ)

ಇಣಂ}. ಅ: [ಏತತ್] ಇವನು, ಇವಳು, ಇದು

ಇಣಮೋ}.

-ಇಣ್ಣ. 'ದಿಣ್ಣ' ಶಬ್ದವನ್ನು ನೋಡುವುದು

-ಇಣ್ಣ. '-ಕಿಣ್ಣ.' ಶಬ್ದವನ್ನು ನೋಡುವುದು

ಇಣ್ಹ. ನ: [ಚಿಹ್ನ] ಗುರುತು, ಚಿಹ್ನೆ

-ಇಣ್ಹಾ. ಸ್ತ್ರೀ: [ತೃಷ್ಣಾ] ತೃಷ್ಣೆ, ಬಾಯಾರಿಕೆ, ಆಸೆ

ಇಣ್ಹಿಂ. ಅ: [ಇದಾನೀಮ್] ಈಗ, ಈ ಕಾಲದಲ್ಲಿ., ಈ ಸಮಯದಲ್ಲಿ(ದೇ)

ಇತಿ. 'ಇಇ' ಶಬ್ದವನ್ನು ನೋಡುವುದು. **-ಹಾಸ.** ಪು: [**-ಹಾಸ**] ಪೂರ್ವ ವೃತ್ತಾಂತ, ಚರಿತ್ರೆ, ಭೂತ ಕಾಲದ ಘಟನೆಗಳ ವಿವರಣೆ, ಪುರಾಣ-ಶಾಸ್ತ್ರ

ಇತ್ತಏ. 'ಇ' ಸಕ ವನ್ನು ನೋಡುವುದು

ಇತ್ತರ. ವಿ: [ಇತ್ವರ] ಅಲ್ಪ, ಕಡಿಮೆ, ಸ್ವಲ್ಪ(ಅಣು), ಅಲ್ಪಕಾಲಿಕ(ತಾ). **-ಪರಿಗ್ಗಹಾ.** ಸ್ತ್ರೀ: [**-ಪರಿಗ್ರಹಾ**] ಸ್ವಲ್ಪ ಸಮಯಕ್ಕಾಗಿ ಇಟ್ಟುಕೊಳ್ಳಲಾಗಿರುವ ವೇಶ್ಯೆ.

–ಪರಿಗ್ಗಹಿಯಾ. ಸ್ತ್ರೀ: [–ಪರಿಗೃಹೀತಾ] 'ಪರಿಗ್ಗಹಾ' ಶಬ್ದವನ್ನು ನೋಡುವುದು
ಇತ್ತರಿಯ. ವಿ: [ಇತ್ವರಿಕ] ಮೇಲಿನ ಶಬ್ದವನ್ನು ನೋಡುವುದು
ಇತ್ತರಿಯ. 'ಇಯರ' ಶಬ್ದವನ್ನು ನೋಡುವುದು
ಇತ್ತರೀ. ಸ್ತ್ರೀ: [ಇತ್ವರೀ] ಸ್ವಲ್ಪ ಸಮಯಕ್ಕಾಗಿ ಇಟ್ಟುಕೊಳ್ಳಲಾಗಿರುವ ವೇಶ್ಯೆ
ಇತರೇತರಾಸಯು. ಪು:[ಇತರೇತರಾಶ್ರಯು] ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ದೋಷ. ಪರಸ್ಪರ ಒಬ್ಬರು ಇನ್ನೊಬ್ಬರನ್ನುಅಪೇಕ್ಷಿಸುವುದು.
ಇತ್ತಹೇ(ಅಪ). ಅ: [ಅತ್ರ] ಇಲ್ಲಿ, ಈ ಪ್ರದೇಶದಲ್ಲಿ, ಈ ವಿಷಯದಲ್ಲಿ
ಇತ್ತಾಹೇ. ಅ: [ಇದಾನೀಮ್] ಈಗ, ಈಕಾಲದಲ್ಲಿ, ಈ ಸಮಯದಲ್ಲಿ(ಪಾಅ)
ಇತ್ತಿ. 'ಇಇ' ಯನ್ನು ನೋಡುವುದು
ಇತ್ತಿಯ. ವಿ: [ಇಯತ್, ಏತಾವತ್] ಇಷ್ಟು, ಇಷ್ಟು ಪರಿಮಾಣದ
ಇತ್ತಿರಿಯ. ವಿ: [ಇತ್ವರಿಕ] ಅಲ್ಪಕಾಲಿಕ, ತಾತ್ಕಾಲಿಕಕ್ಕೆ ಮಾಡಲಾಗುವಂಥದು
ಇತ್ತಿಲ. 'ಇತ್ತಿಯ' ಶಬ್ದವನ್ನು ನೋಡುವುದು
ಇತ್ತೋ. 'ಇಓ' ಅನ್ನು ನೋಡುವುದು
ಇತ್ತೋಅ. 'ಇಓಅ' ಶಬ್ದವನ್ನು ನೋಡುವುದು
ಇತ್ತೋಪಂ. ಅ: [ದೇ] ಇಲ್ಲಿಂದ ತೊಡಗಿ, ಇಲ್ಲಿಂದ ಮುಂದೆ, ಇನ್ನು ಮುಂದೆ
ಇತ್ಥ. ಅ: [ಅತ್ರ] ಇಲ್ಲಿ, ಈ ಪ್ರದೇಶದಲ್ಲಿ, ಈ ವಿಷಯದಲ್ಲಿ
ಇತ್ಥಂ. ಅ: [ಇತ್ಥಂ] ಈರೀತಿ, ಹೀಗೆ(ಪಣ್ಣ), –ಥ. ವಿ: [–ಸ್ಥ] ನಿಶ್ಚಿತವಾದ ಆಕೃತಿ ಉಳ್ಳ, ನಿಯಮಿತ.
ಇತ್ಥಂಥ. ವಿ: [ಇತ್ಥಂಸ್ಥ] ಈ ರೀತಿಯಲ್ಲಿ ಇದ್ದಿರುವ
ಇತ್ಥತ್ಥ. ಪು: [ಇತ್ಯರ್ಥ] ಆ ಅರ್ಥ, ಹೀಗೆಂದು ಅರ್ಥ
ಇತ್ಥತ್ಥ. ಪು: [ಸ್ತ್ರ್ಯರ್ಥ] ಸ್ತ್ರೀ ವಿಷಯ, ಹೆಣ್ಣಿಗೆ ಸಂಬಂಧಿಸಿದ ವಿಷಯ
ಇತ್ಥಯಂ. 'ಇತ್ಥ' ಶಬ್ದವನ್ನು ನೋಡುವುದು
ಇತ್ಥಿ. ಸ್ತ್ರೀನ: [ಸ್ತ್ರೀ] ಮಹಿಳೆ, ನಾರಿ, ಹೆಣ್ಣು
ಇತ್ಥಿ}. ಸ್ತ್ರೀ: [ಸ್ತ್ರೀ] ಹೆಣ್ಣು, ಸ್ತ್ರೀ, ಮಹಿಳೆ,–ಕಲಾ.
ಇತ್ಥೀ} ಸ್ತ್ರೀ: [–ಕಲಾ], ಹೆಣ್ಣಿನ ಗುಣಗಳು, ಹೆಣ್ಣು ಕಲಿಯಲರ್ಹವಾದ ಕಲೆ: –ಕಹಾ. ಸ್ತ್ರೀ: [–ಕಥಾ] ಸ್ತ್ರೀಗೆ ಸಂಬಂಧಿಸಿದ ಸಂವಾದ(ತಾ), –ಣಪುಂಸಗ. ಪುಂ.ನ: [–ನಪುಂಸಕ] ಒಂದು ಬಗೆಯ ನಪುಂಸಕ, –ಣಾಮ. ನ: [–ನಾಮನ್] ಕರ್ಮ–ವಿಶೇಷ, ಇದರ ಉತ್ಪತ್ತಿಯಿಂದ ಸ್ತ್ರೀತ್ವ ಲಭಿಸುತ್ತದೆ. (ಣಾಯಾ), –ಪರಿಸಹ. ಪು: [–ಪರಿಷಹ] ಬ್ರಹ್ಮಚಯು. –ವಿಪ್ಪಜಹ. ವಿ: [–ವಿಪ್ರಜಹ] ಸ್ತ್ರೀತ್ವವನ್ನು ತ್ಯಜಿಸುವವನು. ಪು: ಮುನಿ, ಸಾಧು(ಉತ್ತ), –ವೇದ, ವೇಯ. ಪು: [–ವಂದ] ಹೆಣ್ಣಿಗೆ ಪುರುಷನ ಸಂಗದ ಬಯಕೆ ಉಂಟಾಗುವುದು. ಕರ್ಮ–ವಿಶೇಷ: ಇದರ ಆವಿರ್ಭಾವದಿಂದ ಹೆಣ್ಣಿಗೆ ಪುರುಷನೊಂದಿಗೆ ಸಂಭೋಗಿಸುವ ಆಸೆ ಉಂಟಾಗುತ್ತದೆ(ಭಗ)
ಇತ್ಥೇಣ. ತ್ರಿ [ಸ್ತ್ರೈಣ] ಸ್ತ್ರೀಯರ ಸಮೂಹ, ಹೆಂಗಸರು (ಉಪ)
ಇದಾಣಿಂ. 'ಇಯಾಣಿಂ' ಶಬ್ದವನ್ನು ನೋಡುವುದು (ಆಚಾ)
ಇದಾಣಿ(ಶೌ). 'ಇಯಾಣಿಂ' ಶಬ್ದವನ್ನು ನೋಡುವುದು
ಇದಾಣೀಂ}. 'ಇದಾಣಿಂ' ಶಬ್ದವನ್ನು ನೋಡುವುದು
ಇದಾಣೀ}.
ಇದಿವಿತ್ತ.(ಶೌ). ನ: [ಇತಿವೃತ್ತ] ಇತಿಹಾಸ
ಇದುರ. ನ: [ದೇ] ಗಾಡಿಯ ಮೇಲೆ ಹೊದಿಕೆಯಾಗಿ ಹಾಕುವ ಬಟ್ಟೆ, ಆಚ್ಛಾದನ, ಮುಚ್ಚುವ ಪಾತ್ರೆ
ಇದ್ದಂಡ. ಪು: [ದೇ] ದುಂಬಿ, ಭ್ರಮರ
ಇದ್ಧಗ್ಗಿಧೂಮ. ನ: [ದೇ] ಹಿಮ, ಮಂಜು(ಷಡ್)
ಇದ್ಧಿ. 'ಇಡ್ಢಿ' ಶಬ್ದವನ್ನು ನೋಡುವುದು
ಇಧ(ಶೌ). 'ಇಹ' ಶಬ್ದವನ್ನು ನೋಡುವುದು
ಇಬ್ಭ. ಪು: [ಇಭ್ಯ] ಶ್ರೀಮಂತ, ಆಢ್ಯ, ಪ್ರತಿಷ್ಠಿತ (ಪಾಅ)
ಇಬ್ಭ. ಪು: [ದೇ] ವರ್ತಕ, ವ್ಯಾಪಾರಿ
ಇಭ. ಪು: [ಇಭ] ಆನೆ
ಇಭಪಾಲ. ಪು: [ಇಭಪಾಲ] ಆನೆಯ ಮಾವತಿಗ
ಇಮ. ಸ: [ಇದಮ್] ಇವನು, ಇವಳು, ಇದು (ಎದುರಿಗೆ ಕಾಣುತ್ತಿರುವ ವ್ಯಕ್ತಿ, ವಸ್ತು ಸೂಚಿಸಲು)
ಇಮೇರಿಸ್. ವಿ: [ಏತಾದೃಶ್] ಇವನಂತಿರುವ, ಇವಳಂತಿರುವ, ಇದರಂತಿರುವ (ಸಣ)
ಇಯ. 'ಇಮ' ಶಬ್ದವನ್ನು ನೋಡುವುದು

ಇಮ. 'ಇಇ' ನೋಡುವುದು
ಇಯ. ನ: [ದೇ] ಪ್ರವೇಶ, (ಆಯಂ)
ಇಯ. ವಿ: [ಇತ] ಹೋದ, ಹೊರಟು ಹೋಗಿರುವ (ಸೂಅ), ದೊರೆತಿರುವ, ತಿಳಿದಿರುವ (ಆಚಾ)
ಇಯಣಿಹಂ. ಅ: [ಇದಾನೀಮ್] ಈಗ, ಈಕಾಲದಲ್ಲಿ, ಈ ಸಮಯದಲ್ಲಿ (ತಾ)
ಇಯರ. ವಿ: [ಇತರ] ಅನ್ಯ, ಬೇರೆಯ, ನೀಚ, ಕೀಳು(ಆಚಾ)
ಇಯರಹಾ. ಅ: [ಇತರಥಾ] ಅನ್ಯಥಾ, ಬೇರೆ ರೀತಿಯಾಗಿ, ಹಾಗಿಲ್ಲದಿದ್ದಲ್ಲಿ, ಬೇರೆ ಪ್ರಕಾರವಾಗಿ
ಇಯರೇಯರ. ವಿ: [ಇತರೇತರ] ಅನ್ಯೋನ್ಯ, ಪರಸ್ಪರ
ಇಯಾಣಿ.} ಅ: [ಇದಾನೀಮ್] ಈಗ, ಈಕಾಲದಲ್ಲಿ,
ಇಯಾಣಿಂ}. ಈ ಸಮಯದಲ್ಲಿ
ಇರ. '**ಕಿಲ**' ಶಬ್ದವನ್ನು ನೋಡುವುದು
ಇರಮಂದಿರ. ಪು: [ದೇ] ಕರಭ: ಮುಂಗೈಯಿಂದ ಕಿರುಬೆರಳವರೆಗಿನ ಕೈಯ ಹೊರಭಾಗ, ಒಂಟೆ, ಆನೆಮರಿ
ಇರಾವ. ಪು: [ದೇ] ಆನೆ.
ಇರಾವದೀ (ಶೌ), ಸ್ತ್ರೀ: [ಇರಾವತೀ] ನದಿ,
ಇರಿ. '**ಗಿರಿ**' ಶಬ್ದವನ್ನು ನೋಡುವುದು
ಇರಿಯ. ಸಕ: [ಈರ್] ಹೋಗು, ಗಮಿಸು, ನಡೆ
ಇರಿಯಾ. ಸ್ತ್ರೀ: [ದೇ] ಕುಟೀರ, ಗುಡಿಸಿಲು,
ಇರಿಯಾ. ಸ್ತ್ರೀ: [ಈರ್ಯಾ] ಗಮನ, ನಡಿಗೆ, ನಡೆಯುವುದು(ಆಚಾ). **–ವಹ.** ಪು: [–ಪಥ] ಮಾರ್ಗದಲ್ಲಿ ನಡೆಯುವುದು, ನಡೆದಾಡುವ ರಸ್ತೆ, ಕೇವಲ ಶರೀರದಿಂದಾಗುವ ಕ್ರಿಯೆ. **–ವಹಿಯ.** ನ: [–ಪಥಿಕ] ಕೇವಲ ಶರೀರದ ಚಟುವಟಿಕೆಯಿಂದಾಗುವ ಕರ್ಮ–ಬಂಧ, ಕರ್ಮ–ವಿಶೇಷ. **–ವಹಿಯಾ.** ಸ್ತ್ರೀ: [–ಪಥಿಕೀ] ಕಷಾಯ–ರಹಿತವಾದ ಕೇವಲ ಶಾರೀರಿಕ ಕ್ರಿಯೆ., ಕ್ರಿಯಾ ವಿಶೇಷ. **–ಸಮಿಇ.** ಸ್ತ್ರೀ: [–ಸಮಿತಿ] ವಿವೇಕದಿಂದ ನಡೆಯುವುದು, ಬೇರೆ ಜೀವಗಳಿಗೆ ಯಾವುದೇ ರೀಯುಹಾನಿಯಾಗದಿರಲಿ–ಈ ರೀತಿಉಪಯೋಗವಾಗುವಂತೆ ನಡೆಯುವುದು.–**ಸಮಿಯ.** ವಿ: [–ಸಮಿತ] ವಿವೇಕಯುತವಾಗಿ ನಡೆಯುವವನು(ವಿಪಾ)
ಇರಿಣ. ನ: [ಋಣ] ಸಾಲ, ಋಣ
ಇರಿಣ. ನ: [ದೇ] ಚಿನ್ನ, ಬಂಗಾರ
ಇಲ. ಪು: [ಇಲ] ವಾರಣಾಸಿಯಲ್ಲಿದ್ದ ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಗೃಹ–ಪತಿ, ಗೃಹಸ್ಥ. ನ: ಇಲಾದೇವಿಯ ಸಿಂಹಾಸನದ ಹೆಸರು. (ಣಾಯಾ), **–ಸಿರಿ.** ಸ್ತ್ರೀ: [–ಶ್ರೀ] ಇಲ ಎಂಬ ಹೆಸರಿನ ಗೃಹಸ್ಥನ ಹೆಂಡತಿ
–ಇಲಂತ. '**ಕಿಲಂತ**' ಶಬ್ದವನ್ನು ನೋಡುವುದು
ಇಲಾ. ಸ್ತ್ರೀ: [ಇಲಾ] ಭೂಮಿ, ಪೃಥ್ವಿ, ಧರಣೇಂದ್ರನ ಒಬ್ಬ ಅಗ್ರ–ಮಹಿಷಿ. ಇಲ ಎಂಬ ಗೃಹಸ್ಥನ ಮಗಳು(ಣಾಯಾ). ರುಚಕ ಪರ್ವತದ ಮೇಲೆ ಇರುವ ಒಬ್ಬ ದಿಗ್ವನಿತೆ, ಜನಕ ರಾಜನ ತಾಯಿ(ಪಉಮ), ಇಲಾವರ್ಧನ ನಗರದಲ್ಲಿ ನೆಲೆನಿಂತ ಒಬ್ಬ ದೇವತೆ. **–ಕೂಡ.** ನ:[–**ಕೂಟ**] ಇಲಾ ದೇವಿ ನಿವಾಸದ ಒಂದು ಶಿಖರ(ತಾ), ಪುತ್ತ. ಪು: [–**ಪುತ್ರ**] ಇಲಾ ದೇವಿಯ ಪ್ರಸಾದದಿಂದ ಜನಿಸಿದ ಒಬ್ಬ ಶ್ರೇಷ್ಠಿ–ಪುತ್ರ. ಅವನು ನಟಿಯೊಬ್ಬಳ ಮೇಲೆ ಮೋಹಗೊಂಡು ನಟನಾ ವೃತ್ತಿಯನ್ನು ಕಲಿತು ಕೊನೆಯಲ್ಲಿ ನಾಟ್ಯ ಮಾಡುತ್ತ ಮಾಡುತ್ತಲೇ ಶುದ್ಧ ಭಾವನೆಯಿಂದ ಕೇವಲ ಜ್ಞಾನ ಪಡೆದು ಮುಕ್ತಿ ಹೊಂದಿದ (ಆಚೂ). **–ವಇ.** ಪು: [–ಪತಿ] ಏಲಾಪತ್ಯ ಗೋತ್ರದ ಮೂಲ–ಪುರುಷ. (ಣಂದಿ), **–ವಡಂಸಯ.** ನ: [ಇಲಾವತಂಸಕ] ಇಲಾ ದೇವಿಯ ಪ್ರಸಾದ(ಣಾಯಾ)
ಇಲಾಇಪುತ್ತ. '**ಇಲಾ–ಪುತ್ತ**' ಶಬ್ದವನ್ನು ನೋಡುವುದು
ಇಲಿಯಾ. ಸ್ತ್ರೀ: [ಇಲಿಕಾ] ಕ್ಷುದ್ರ ಜೀವ, ಸಕ್ಕರೆ ಮತ್ತು ಅಕ್ಕಿಯಲ್ಲಿ ಉತ್ಪನ್ನವಾಗುವ ಕೀಟಗಳು.
ಇಲೀ. ಸ್ತ್ರೀ: [ಇಲೀ] ಒಂದು ಬಗೆಯ ಕತ್ತಿಯಂಥ ಆಯುಧ, ಶಸ್ತ್ರ–ವಿಶೇಷ(ಪಣ್ಣ)
ಇಲ್ಲ. ಪು: [ದೇ] ಆಳು, ಪ್ರತೀಹಾರ, ಸೇವಕ, ಕುಡುಗೋಲು, ವಿ: ಬಡವ. ಕೋಮಲ, ಮೃದು, ಕಪ್ಪು ಬಣ್ಣದ
ಇಲ್ಲಪುಲಿಂದ. ಪು: [ದೇ] ಹುಲಿ, ಸಿಂಹ
ಇಲ್ಲಿ. ಪು: [ದೇ] ವ್ಯಾಘ್ರ, ಹುಲಿ, ಸಿಂಹ, ಕೊಡೆ
ಇಲ್ಲಿಯ. ವಿ: [ದೇ] ಚೆನ್ನಾಗಿ ಸಿಂಪಡಿಸಲ್ಪಟ್ಟ
ಇಲ್ಲಿಯಾ. ಸ್ತ್ರೀ: [ಇಲ್ಲಿಕಾ] ಕ್ಷುದ್ರ ಜೀವ, ಅನ್ನದಲ್ಲಿ ಉತ್ಪನ್ನವಾಗುವಂಥದು

ಇಲ್ಲೀರ. ನ [ದೇ] ಆಸನ–ವಿಶೇಷ, ಕೊಡೆ. ಬಾಗಿಲು
ಇವ. ಅ: [ಇವ] ಉಪಮೆ, ಸಾದೃಶ್ಯ, ಉತ್ಪ್ರೇಕ್ಷೆ, –ಈ ಅರ್ಥಗಳನ್ನು ಸೂಚಿಸುವ ಅವ್ಯಯ
ಇಸಅ. ವಿ: [ದೇ] ವಿಸ್ತೀರ್ಣ
ಇಸಣಾ. 'ಏಸಣಾ' ಶಬ್ದವನ್ನು ನೋಡುವುದು
ಇಸಾಣೀ. ಸ್ತ್ರೀ: [ಐಶಾನೀ] ಈಶಾನ್ಯ ಮೂಲೆ. ಉತ್ತರ–ಪೂರ್ವಗಳ ನಡುವಣ ದಿಕ್ಕು
ಇಸಿ. ಪು: [ಋಷಿ] ಸಾಧು, ಜ್ಞಾನಿ, ಮಹಾತ್ಮ(ಉತ್ತ), ಋಷಿ–ವಾದಿ ಗುಂಪಿನ ದಕ್ಷಿಣ ದಿಕ್ಕಿನ ಇಂದ್ರ, ಇಂದ್ರ–ವಿಶೇಷ, **–ಗುತ್ತ. ಪು: [–ಗುಪ್ತ]** ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನಮುನಿ(ಕಪ್ಪ), ನ: ಜೈನ ಮುನಿಗಳ ಒಂದು ಕುಲ. **–ದಾಸ. ಪು: [–ದಾಸ]**ಜೈನ ದೀಕ್ಷೆ ತೆಗೆದುಕೊಂಡ ಈ ಹೆಸರಿನ ಒಬ್ಬ ಸೇಠ್,'ಅನುತ್ತರೋವವಾಇದಸಾ' ಸೂತ್ರದ ಒಂದು ಅಧ್ಯಯನ, **–ದತ್ತ, –ದಿಣ್ಣ. ಪು: [–ದತ್ತ]** ಒಬ್ಬ ಜೈನಮುನಿ, **–ಪಾಲಿಯ ಪು: [–ಪಾಲಿತ]** ಐರಾವತ ಕ್ಷೇತ್ರದ ಐದನೇ ತೀರ್ಥಂಕರನ ಹೆಸರು.**–ಪಾಲಿಯಾ. ಸ್ತ್ರೀ: [–ಪಾಲಿತಾ]** ಜೈನಮುನಿಗಳ ಒಂದು ಶಾಖೆ, **–ಭದ್ದಪುತ್ತ. ಪು:[–ಭದ್ರಪುತ್ರ]** ಒಬ್ಬ ಜೈನಶ್ರಾವಕ. **–ಭಾಸಿಯ. ನ: [–ಭಾಷಿತ]** ಅಂಗ ಗ್ರಂಥಗಳ ಹೊರತಾಗಿ ಜೈನ ಆಚಾರ್ಯರು ರಚಿಸಿದ ಉತ್ತರಾಧ್ಯಯನವೇ ಮೊದಲಾದ ಶಾಸ್ತ್ರ(ಆವಮ), 'ಪ್ರಶ್ನ ವ್ಯಾಕರಣ' ಸೂತ್ರದ ಮೂರನೇ ಅಧ್ಯಯನ, **–ವಾಇ. –ವಾಇಯ. –ವಾದಿಯ. ಪು: [–ವಾದಿನ್]** ವ್ಯಂತರರ ಒಂದು ಜಾತಿ(ಔಪ)**–ವಾಲ. ಪು: [–ಪಾಲ]** ಋಷಿ–ವಾದಿ ವ್ಯಂತರರ ಉತ್ತರ ದಿಕ್ಕಿನ ಇಂದ್ರ. ಐದನೇ ವಾಸುದೇವನ ಹಿಂದಿನ ಜನ್ಮದ ಹೆಸರು. **–ವಾಲಿಯ. ಪು: [–ಪಾಲಿತ]** ಋಷಿ–ವಾದಿ ವ್ಯಂತರರ ಇಂದ್ರನ ಹೆಸರು(ದೇವ)
ಇಸಿಣ. ಪು: [ಇಸಿನ] ಅನಾರ್ಯ ದೇಶ
ಇಸಿಣಯ. ವಿ: [ಇಸಿನಕ] 'ಇಸಿನ' ವೆಂಬ ಅನ್ಯ ದೇಶದಲ್ಲಿ ಹುಟ್ಟಿದ
ಇಸಿಯಾ. ಸ್ತ್ರೀ: [ಇಷಿಕಾ] ಸಲಾಕೆ, ಸರಳು. ಕಡ್ಡಿ
ಇಸು. ಪು: [ಇಷು] ಬಾಣ
ಇಸ್ಸ. ವಿ: [ಏಷ್ಯತ್] ಮುಂದಿನ ಕಾಲದ, ಮುಂದೆ ಬರಬಹುದಾದ, ಭಾವೀ(ವಿಸೇ)
ಇಸ್ಸರ. 'ಈಸರ' ಶಬ್ದವನ್ನು ನೋಡುವುದು
ಇಸ್ಸರಿಯ. 'ಈಸರಿಯ' ಶಬ್ದವನ್ನು ನೋಡುವುದು
ಇಸ್ಸಾ. ಸ್ತ್ರೀ: [ಈರ್ಷ್ಯಾ] ಅಸೂಯೆ, ಹೊಟ್ಟೆಕಿಚ್ಚು(ಉತ್ತ)
ಇಸ್ಸಾಸ. ಪು: [ಇಷ್ವಾಸ] ಧನುಸ್ಸು, ಬಿಲ್ಲು, ಶರಾಸನ, ಬಿಲ್ಲುಗಾರ
ಇಹ. ಪು: [ಇಭ] ಆನೆ
ಇಹ. ಅ: [ಇಹ] ಇಲ್ಲಿ, ಈ ಜಾಗದಲ್ಲಿ, ಈಗ,(ಆಚಾ), **–ಪಾರಲೋಇಯ. ವಿ: [–ಪಾರಲೋಕಿಕ]** ಇಹ ಮತ್ತು ಪರಲೋಕಗಳೊಂದಿಗೆ ಸಂಬಂಧವಿಟ್ಟು ಕೊಂಡಿರುವ.**–ಭವಿಯ. ವಿ: [–ಐಹಭವಿಕ]** ಈ ಜನ್ಮಕ್ಕೆ ಸಂಬಂಧಿಸಿದ. **–ಲೋಅ, ಲೋಗ. ಪು: [–ಲೋಕ]** ಈಗಿನ ಜನ್ಮ, ಮನುಷ್ಯಲೋಕ. **–ಲೋಯ, –ಲೋಇಯ. ವಿ: [–ಐಹಲೋಕಿಕ]** ಈ ಜನ್ಮಕ್ಕೆ ಸಂಬಂಧಿಸಿದ, ವರ್ತಮಾನ ಜನ್ಮಕ್ಕೆ ಸಂಬಂಧಿಸಿದ, (ಕಪ್ಪ)
ಇಹ.} ಮೇಲಿನ ಶಬ್ದವನ್ನು ನೋಡುವುದು
ಇಹಇಂ.}
ಇಹಇಂ. ಅ: [ಇದಾನೀಮ್] ಈಗ, ಈ ಕಾಲದಲ್ಲಿ, ಈ ಸಮಯದಲ್ಲಿ(ಪಾ)
ಇಹಂ}. 'ಇಹ=ಇಹ' ಶಬ್ದವನ್ನು ನೋಡುವುದು
ಇಹಯಂ}
ಇಹರಹಾ}. 'ಇಯರ–ಹಾ' ಶಬ್ದವನ್ನು ನೋಡುವುದು
ಇಹರಾ}.
ಇಹರಾ. 'ಇಹಇಂ' =ಇದಾನೀಮ್' ಶಬ್ದವನ್ನು ನೋಡುವುದು
ಇಹಾಮಿಯ. 'ಈಹಾಮಿಯ' ಶಬ್ದವನ್ನು ನೋಡುವುದು
ಇಹಿಂ. ಅ: [ಇಹ] ಇಲ್ಲಿ

ಈ

ಈ. ಪು: [ಈ] ಪ್ರಾಕೃತ ವರ್ಣಮಾಲೆಯ ನಾಲ್ಕನೇ ವರ್ಣ. ಇದು ಸ್ವರ ವರ್ಣ

ಈಅ. ಸ: [ಏತತ್, ಇದವ್] ಇವನು(ಪು), ಇವಳು(ಸ್ತ್ರೀ), ಇದು(ನಪುಂ)

ಈಅ. ಅ: [ಇತಿ] ಈ ರೀತಿ, ಹೀಗೆ

ಈಇ.ಪುಂ. ಸ್ತ್ರೀ: [ಈತಿ] ಧಾನ್ಯವೇ ಮೊದಲಾದವುಗಳಿಗೆ ಹಾನಿ ಉಂಟುಮಾಡುವ ಇಲಿ, ಹೆಗ್ಗಣ ಮುಂತಾದ ಪ್ರಾಣಿ ಸಮೂಹ (ಔಪ)

ಈಇಸ. ವಿ: [ಈದೃಶ] ಇಂಥ, ಈ ರೀತಿಯ, ಈ ವಿಧವಾದ, ಈ ತರಹದ

ಈಜಿಹ. ಅಕ: [ಧ್ರಾ] ತೃಪ್ತಿ ಹೊಂದು

–ಈಡ. **'ಕೀಡ=ಕೀಟ'** ಶಬ್ದವನ್ನು ನೋಡುವುದು

ಈಡಾ. ಸ್ತ್ರೀ: [ಸ್ತುತಿ] ಹೊಗಳಿಕೆ, ಪ್ರಶಂಸೆ

ಈಣ. ವಿ: [ಈನ] ಇಚ್ಛಿಸುವವನು, ಆಶಿಸುವವನು

–ಈಣ. **'ದೀಣ'** ಶಬ್ದವನ್ನು ನೋಡುವುದು

ಈತಿ. **'ಈಇ'** ಯನ್ನು ನೋಡುವುದು

ಈದಿಸ. **'ಈಇಸ'** ಶಬ್ದವನ್ನು ನೋಡುವುದು

ಈರ. ಸಕ: [ಈರ್] ಪ್ರೇರಿಸು, ಹೇಳು, ನಡೆ, ಚಲಿಸು, ಎಸೆ, – **ಈರೇಇ**

ಈರಿಯ. ವಿ: [ಈರಿತ] ಪ್ರೇರಿತ, ಪ್ರೇರಿಸಲ್ಪಟ್ಟ, ಹೇಳಲ್ಪಟ್ಟ (ವಿಸೇ)

ಈರಿಯಾ. **'ಇರಿಆ'** ಶಬ್ದವನ್ನು ನೋಡುವುದು

ಈರಿಸ. **'ಈಇಸ'** ಶಬ್ದವನ್ನು ನೋಡುವುದು

ಈಸ. ನ: [ದೇ] ಗೂಟ, ಮೊಳೆ

ಈಸ. ಸಕ: [ಈರ್ಷ್] ಅಸೂಯೆ ಮಾಡು, ದ್ವೇಷಿಸು

ಈಸ. ಪು: [ಈಶ] **'ಈಸರ= ಈಶ್ವರ'** ಶಬ್ದವನ್ನು ನೋಡುವುದು.(ಪಉಮ), ನ: ಏಶ್ವಯ, ಪ್ರಭುತ್ವ

ಈಸ. **'ಈಸಿ'** ಶಬ್ದವನ್ನು ನೋಡುವುದು

ಈಸಅ. ಪು: [ದೇ] ಕರಿ ನೀಲ ಆಕಳು, ಜಿಂಕೆಯ ಒಂದು ಜಾತಿ

ಈಸತ್ಥ. ನ: [ಇಷ್ವಸ್ತ್ರ, ಇಷುಶಾಸ್ತ್ರ] ಧನುರ್ವೇದ, ಬಿಲ್ವಿದ್ಯೆ(ಪಉಮ)

ಈಸರ. ಪು: [ದೇ] ಮನ್ಮಥ, ಕಾಮದೇವ

ಈಸರ. ಪು: [ಈಶ್ವರ] ಪರಮೇಶ್ವರ, ಒಡೆಯ, ಶಿವ, ಮಹಾದೇವ, ಸ್ವಾಮಿ, ಪತಿ, ನಾಯಕ ಮುಖ್ಯಸ್ಥ ದೇವತೆಗಳ ಒಂದು ನೆಲೆ, ವೇಲಂಧರ ದೇವರುಗಳ, ಆವಾಸ ಸ್ಥಾನ, ಒಂದು ಪಾತಾಲ ಕಲಶ, ಪ್ರತಿಷ್ಠಿತ ವ್ಯಕ್ತಿ, ಶ್ರೀಮಂತ, ಐಶ್ವರ್ಯವಂತ, ಯುವರಾಜ, ಮಾಂಡಲಿಕ, ಸಾಮಂತರಾಜ, ಮಂತ್ರಿ, ಭೂತವಾದಿ ಸಮೂಹದ ಇಂದ್ರ, ಪಾತಾಳ, ಒಬ್ಬ ರಾಜನ ಹೆಸರು, ಒಬ್ಬ ಜೈನಮುನಿ, ಯಕ್ಷ

ಈಸರ. ಪು: [ಈಶ್ವರ] ಅಣಿಮಾದಿ ಎಂಟು ಪ್ರಕಾರದ ಸಿದ್ಧಿಗಳಿಂದ ಪ್ರಾಪ್ತವಾದ

ಈಸರಿಯ. ನ: [ಐಶ್ವರ್ಯ] ವೈಭವ, ಸಂಪತ್ತು, ಪ್ರಭುತ್ವ, ಒಡೆತನ (ಪಉಮ)

ಈಸಾ. ಸ್ತ್ರೀ: [ಈಷಾ] ಲೋಕಪಾಲರ ಅಗ್ರಮಹಿಷಿಯರ ಒಬ್ಬ ಮಂತ್ರಿ. ಪಿಶಾಚೇಂದ್ರನ ಒಂದು ಪರಿಷತ್ತು, ನೇಗಿಲಿನ ದಂಡ

ಈಸಾ. ಸ್ತ್ರೀ: [ಈರ್ಷಾ] ಈರ್ಷ್ಯೆ, ಅಸೂಯೆ, ದ್ರೋಹ, (ಗಉಡ), **–ರೋಸ.** ಪು: [**–ರೋಷ**] ಕೋಪ, ಸಿಟ್ಟು (ಕಪ್ಪೂ)

ಈಸಾಇಯ. ವಿ: [ಈರ್ಷ್ಯಾಯಿತ] ಅಸೂಯೆ ಉಂಟಾಗಿರುವವನು (ಸುಪಾ)

ಈಸಾಣ. ಪು: [ಈಶಾನ] ದೇವಲೋಕ, ಇನ್ನೊಂದು ದೇವಲೋಕ, ಇನ್ನೊಂದು ದೇವಲೋಕದ ಇಂದ್ರ(ಠಾ), ಉತ್ತರ ಮತ್ತು ಪೂರ್ವದ ನಡುವಣ ದಿಕ್ಕು–ಈಶಾನ್ಯ ಮೂಲೆ(ಸುಪಾ), ಮುಹೂರ್ತ–ವಿಶೇಷ, ಇನ್ನೊಂದು ದೇವಲೋಕದ ನಿವಾಸಿ ದೇವ, ಪ್ರಭು, ಒಡೆಯ(ವಿಸೇ), **–ವಡಿಸಂಗ.** ನ: [**–ಈಶಾನಾವತಂಸಕ**] ವಿಮಾನ–ವಿಶೇಷದ ಹೆಸರು

ಈಸಾಣ. ಪು: [ಈಶಾನ] ಅಹೋರಾತ್ರದ ಹನ್ನೊಂದನೆಯ ಮುಹೂರ್ತ

ಈಸಾಣಾ. ಸ್ತ್ರೀ: [ಐಶಾನೀ] ಈಶಾನ್ಯ–ಮೂಲೆ (ಠಾ)

ಈಸಾಣೀ. ಸ್ತ್ರೀ: [ಐಶಾನೀ] ಈಶಾನ್ಯ ಮೂಲೆ, ಅಸಹಿಷ್ಣು, ದ್ವೇಷಿ. ಸ್ತ್ರೀ: **–ಣೀ** (ಪಉಮ)

ಈಸಾಲು. ವಿ: [ಈರ್ಷ್ಯಾಲು] ಅಸಹಿಷ್ಣು

ಈಸಾಸ. **'ಇಸ್ಸಾಸ.'** ಶಬ್ದವನ್ನು ನೋಡುವುದು

ಈಸಿ. ಅ: [ಈಷತ್] ಸ್ವಲ್ಪ, ಅಲ್ಪ (ಪಣ್ಣ), ಪೃಥ್ವೀ– ವಿಶೇಷ, ಸಿದ್ಧಿ ಕ್ಷೇತ್ರ, ಮುಕ್ತ ಭೂಮಿ, **–ಪಬ್ಭಾರ.** ವಿ:[**–ಪ್ರಾಭಾರ**] ಸ್ವಲ್ಪ ಬಾಗಿದ, ನಮ್ರ (ಪಂಜಾ)

ಈಸಿಅ. ನ: [ಈರ್ಷ್ಯಿತ] ಅಸೂಯೆ, ದ್ವೇಷ, ವಿ: ಈರ್ಷ್ಯೆಗೆ ಗುರಿಯಾದವನು

ಈಸಿಅ. ನ: [ದೇ] ಭಿಲ್ಲರ ತಲೆಯ ಮೇಲಿನ ಎಲೆಗಳ ಗುಚ್ಛ, ಭಿಲ್ಲರ ಒಂದು ಬಗೆಯ ಪೇಟ, ಪಗಡಿ ವಿ: ವಶೀಕರಿಸಲ್ಪಟ್ಟ, ವಶಪಡಿಸಿಕೊಳ್ಳಲಾದ

ಈಸಿಂ}. '**ಈಸಿ**' ಶಬ್ದವನ್ನು ನೋಡುವುದು

ಈಸೀ}.

ಈಹ. ಸಕ: [ಈಕ್ಷ್, ಈಹ್] ನೋಡು, ವಿಚಾರಿಸು, ಪ್ರಯತ್ನಿಸು, **ವ. ಕೃ–ಈಹಂತ**

ಈಹಣ. ನ: [ಈಹನ] ಕೆಳಗಿನ ಶಬ್ದವನ್ನು ನೋಡುವುದು

ಈಹಾ. ಸ್ತ್ರೀ: [ಈಹಾ} ವಿಚಾರ, ಊಹಾಪೋಹ, ವಿಮರ್ಶೆ, (ಣಾಯಾ), ಪ್ರಯತ್ನ, ಮತಿ–ಜ್ಞಾನದ ಒಂದು ಪ್ರಭೇದ, ಇಚ್ಛೆ, **–ಮಿಗ, –ಮಿಯ. ಪು:** [**–ಮೃಗ**] ತೋಳ, ನಾಟಕದ ಒಂದು ಪ್ರಕಾರ (ರಾಯ)

ಈಹಾ. ಸ್ತ್ರೀ: [ಈಕ್ಷಾ] ನೋಡುವುದು, ಅವಲೋಕನ (ಔಪ)

ಈಹಿಯ. ವಿ: [ಈಹಿತ] ಪ್ರಯತ್ನಿಸಲಾದ, ವಿಚಾರ ಮಾಡಲ್ಪಟ್ಟ, ಈಹಾ–ವಿಷಯೀಕೃತ(ವಿಸೇ)

ಉ

ಉ. ಪು: [ಉ] ಪ್ರಾಕೃತ ವರ್ಣಮಾಲೆಯ ಐದನೆಯ ಅಕ್ಷರ. ಇದೊಂದು ಸ್ವರ-ವರ್ಣ. ಉಪಯೋಗ ಮಾಡುವುದು, ಗಮನಿಸುವುದು, ಲಕ್ಷಿಸುವುದು, ಚಲನೆಯ ಕ್ರಿಯೆ(ಆವಮ)

ಉ. ಅ: [ಉ] ಸಂಬೋಧನೆ, ಕೋಪದ ಮಾತುಗಳು, ಅನುಕಂಪೆ, ದಯೆ, ನಿಯೋಗ, ಆಜ್ಞೆ, ಆಶ್ಚರ್ಯ, ಅಂಗೀಕಾರ, ಪ್ರಶ್ನೆ ಈ ಮೊದಲಾದ ಅರ್ಥಗಳನ್ನು ಸೂಚಿಸುತ್ತದೆ(ಹೇ)

ಉ. ಅ: [ತು] ಮತ್ತು(ಸಮುಚ್ಚಯ), ಅವಧಾರಣ (ನಿಶ್ಚಯ)(ಆವಮ), ಆದರೆ, ನಿಯೋಗ: :ಆಜ್ಞೆ, ಹೊಗಳಿಕೆ, ಹತೋಟಿ, ಸಂದೇಹ, ವಿಶೇಷಣ, ಕಾರಣ, ನಿವಾರಣೆಂಯೇ ಮೊದಲಾದ ಅರ್ಥಗಳ ಸೂಚಕ. ಪಾದಪೂರ್ತಿಯಲ್ಲೂ ಬಳಕೆಯಾಗುತ್ತದೆ.

ಉ. **'ಉವ'** ವನ್ನು ನೋಡುವುದು

ಉ-.ಅ:[ಉತ್] ಎತ್ತರ-ಮೇಲೆ: ಉದಾ: 'ಉಕ್ಕಮಂತ,' ವಿರುದ್ಧಾರ್ಥ-'ಉಕ್ಕಮು', ಅಭಾವ-'ಉಕ್ಕರ', ಹೆಚ್ಚು-ಅಧಿಕ-'ಉಕ್ಕೋವಿಯ' ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ(ವಿಸೇ)

ಉಅ.. ಅ: [ದೇ] ನೋಡು(ದೇ)

ಉಅ. ಅ: [ಉತ] 'ಅಥವಾ, ವಿಮರ್ಶೆ(ವಿತರ್ಕ), ಪ್ರಶ್ನೆ, ಸಮುಚ್ಚಯ, ಅತಿಶಯ ಇವೇ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ(ಹೇ)

ಉಅ. ಅ: [ದೇ] ಋಜು, ನೇರ, ಸರಳ(ಷಡ್)

ಉಅ. **'ಉವ'** ಶಬ್ದವನ್ನು ನೋಡುವುದು(ಗಾ)

ಉಅ. ನ: [ಉದ] ನೀರು, **-ಸಿಂಧು. ಪು:** [-ಸಿಂಧು] ಸಮುದ್ರ, ಸಾಗರ

ಉಅ. ವಿ: [ಉದಂಚ್] ಉತ್ತರ, ಉತ್ತರ ದಿಕ್ಕಿನಲ್ಲಿ ಇರುವ **-ಮಹಿಹರ. ಪು:** [-ಮಹಿಧರ] ಹಿಮಾಲಯ ಪರ್ವತ(ಗಉಡ)

ಉಅಅ. ನ: [ಉದಕ] ನೀರು, ಜಲ

ಉಅಅ.. **'ಉದಯ'** ಶಬ್ದವನ್ನು ನೋಡುವುದು

ಉಅಅ. ನ: [ಉದರ] ಹೊಟ್ಟೆ, ಉದರ

ಉಅಅ. ವಿ: [ದೇ] ಋಜು, ಸರಳ, ನೇರ

ಉಅಅದ(ಶೌ). **'ಉವಗಯ'** ಶಬ್ದವನ್ನು ನೋಡುವುದು

ಉಅಆರಅ. ವಿ: [ಉಪಕಾರಕ] ಉಪಕಾರ ಮಾಡುವವನು

ಉಅಆರಿ. ವಿ: [ಉಪಕಾರಿನ್] ಮೇಲಿನ ಶಬ್ದವನ್ನು ನೋಡುವುದು

ಉಅಇವ್ವ. ವಿ: [ಉಪಜೀವ್ಯ] ಆಶ್ರಯಿಸಲು ಯೋಗ್ಯವಾದ, ಸೇವೆ ಮಾಡಲು ಯೋಗ್ಯವಾದ

ಉಅಊಹ. ಸಕ: [ಉಪ+ಗೂಹ] ಆಲಿಂಗಿಸು

ಉಅಏಸ. **'ಉವಏಸ'** ಶಬ್ದವನ್ನು ನೋಡುವುದು

ಉಅಂಚಣ. ನ: [ಉದಂಚನ] ಎತ್ತರಕ್ಕೆ ಎಸೆಯುವುದು, ಮುಚ್ಚುವ ತಟ್ಟೆ, ಮುಚ್ಚಳ

ಉಅಂಚಿದ್.(ಶೌ). ವಿ: [ಉದಂಚಿತ್] ಮೇಲಕ್ಕೆ ಎತ್ತಲ್ಪಟ್ಟ, ಮೇಲಕ್ಕೆ ಎಸೆಯಲ್ಪಟ್ಟ(ನಾಟ)

ಉಅಂತ. ಪು: [ಉದಂತ] ತಥ್ಯ, ವೃತ್ತಾಂತ, ಸಮಾಚಾರ

ಉಅಕಿದ.(ಶೌ). ವಿ: [ಉಪಕೃತ] ಉಪಕಾರ ಹೊಂದಿದವನು

ಉಅಕ್ಕಿಅ. ವಿ: [ದೇ] ಪುರಸ್ಕೃತ, ಮುಂಭಾಗದಲ್ಲಿ ಇಡಲಾದ, ಎದುರುಗಡೆ ಮಾಡಿದ,

ಉಅಗಅ. **'ಉವಗಯ'** ಶಬ್ದವನ್ನು ನೋಡುವುದು

ಉಅಚಿತ್ತ: [ದೇ] ಅಪಗತ, ಕಳೆದು ಹೋದ, ದೂರವಾದ(ಗಾ)

ಉಅಜೀವಿ. ವಿ: [ಉಪಜೀವಿನ್] ಆಶ್ರಿತ, ಆಶ್ರಯಿಸಿ ಬದುಕುತ್ತಿರುವವನು

ಉಅಜ್ಝಾಅ. **'ಉವಜ್ಝಾಯ'** ಶಬ್ದವನ್ನು ನೋಡುವುದು

ಉಅಟ್ಟೀ. ಸ್ತ್ರೀ: [ದೇ] ನೀವಿ, ಹೆಂಗಸರ ಸೀರೆಯ ನಿರಿಗೆ, ಹೆಣ್ಣು ಉಟ್ಟಿರುವ ಬಟ್ಟೆಯ ಗಂಟು, ಬಾಳೆಕಾಯಿ

ಉಅಟ್ಠಿಅ. **'ಉವಟ್ಠಿಯ'** ಶಬ್ದವನ್ನು ನೋಡುವುದು

ಉಅಣಿಅ.} **'ಉವಣೀಯ'** ಶಬ್ದವನ್ನು
ಉಅಣೀಅ.} ನೋಡುವುದು

ಉಅಣ್ಣಾಸ **'ಉವಣ್ಣಾಸ'** ಶಬ್ದವನ್ನು ನೋಡುವುದು

ಉಅತ್ತಂತ. **'ಉವ್ವಟ್ಟ=ಉದ್+ವೃತ್'** ಶಬ್ದವನ್ನು ನೋಡುವುದು

ಉಅತ್ಥಾಣ. **'ಉವಟ್ಠಾಣ'** ಶಬ್ದವನ್ನು ನೋಡುವುದು

ಉಅತ್ಥಿಅ. **'ಉವಟ್ಠಿಯ'** ಶಬ್ದವನ್ನು ನೋಡುವುದು

ಉಅಭುತ್ತ. 'ಉವಭುತ್ತ' ಶಬ್ದವನ್ನು ನೋಡುವುದು
ಉಅಭೋಗ. 'ಉವಭೋಗ' ಶಬ್ದವನ್ನು ನೋಡುವುದು
ಉಅಮಿಜ್ಜಂತ. ವ.ಕೃ:[ಉಪಮೀಂಯುಮಾನ] ಯಾವುದನ್ನು ಹೋಲಿಸಲಾಗುತ್ತದೋ ಅದು
ಉಅರ. ನ: [ಉದರ] ಹೊಟ್ಟೆ.
ಉಅರಿ}. 'ಉವರಿ' ಶಬ್ದವನ್ನು ನೋಡುವುದು(ಗಾ)
ಉಅರಿಂ}.
ಉಅರೀ. ಸ್ತ್ರೀ: [ದೇ] ಶಾಕಿನಿ(ದುರ್ಗಾದೇವಿಯ ಅನುಚರಿ), ಒಬ್ಬ ದೇವಿ
ಉಅರುಜ್ಝ. 'ಉವರುಜ್ಝ' ಶಬ್ದವನ್ನು ನೋಡುವುದು
ಉಅರೋಅ} 'ಉವರೋಹ' ಶಬ್ದವನ್ನು
ಉಅರೋಹ} ನೋಡುವುದು
ಉಅಲದ್ಧ. 'ಉವಲದ್ಧ' ಶಬ್ದವನ್ನು ನೋಡುವುದು
ಉಅವಿಟ್ಠಅ. ನ: [ಔಪವಿಷ್ಟಕ] ಆಸನ, ಪೀಠ
ಉಅವಿಯ. ವಿ: [ದೇ] ಯಜ್ಞಶೇಷ, ತಿಂದುಮಿಕ್ಕಿದ, ಎಂಜಲು
ಉಅಸಪ್ಪ. 'ಉವಸಪ್ಪ' ಶಬ್ದವನ್ನು ನೋಡುವುದು
ಉಅಸಮ.}. 'ಉವಸಮ=ಉಪ+ಶಮ್' ಶಬ್ದವನ್ನು
ಉಅಸಮ್ಮ.}. ನೋಡುವುದು
ಉಅಹ. ಅ: [ದೇ] ನೋಡಿರಿ
ಉಅಹಸ. 'ಉವಹಸ' ಶಬ್ದವನ್ನು ನೋಡುವುದು
ಉಅಹಾರ. 'ಉವಹಾರ' ಶಬ್ದವನ್ನು ನೋಡುವುದು
ಉಅಹಾರೀ. ಸ್ತ್ರೀ: [ದೇ] ಹಾಲು ಕರೆಯುವವಳು
ಉಅಹಿ. ಪು: [ಉದಧಿ] ಸಮುದ್ರ(ಗಉಡ), ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ವಿದ್ಯಾಧರ ರಾಜಕುಮಾರ(ಪಉಮ), ಕಾಲ-ಪರಿಮಾಣ: ಸಾಗರೋಪಮ(ಸುರ). ತನ್ನಹೆಸರಿನಿಂದ ಖ್ಯಾತನಾದ ಒಬ್ಬ ಜೈನಮುನಿ(ಪಉಮ). 'ಉದಹಿ' ಶಬ್ದವನ್ನು ನೋಡುವುದು.
ಉಅಹಿ. 'ಉವಹಿ= ಉಪಧಿ' ಶಬ್ದವನ್ನು ನೋಡುವುದು
ಉಅಹುಂಜ. 'ಉವಭುಂಜ' ನೋಡುವುದು
ಉಅಹುಜ್ಜಂತ. 'ಉವಭುಂಜ' ಶಬ್ದವನ್ನು ನೋಡುವುದು
ಉಅಹೋಅ. ಉವಭೋಗ' ಶಬ್ದವನ್ನು ನೋಡುವುದು
ಉಆಅ. 'ಉವಾಯ' ಶಬ್ದವನ್ನು ನೋಡುವುದು
ಉಆಅಣ 'ಉವಾಯಣ' ಶಬ್ದವನ್ನು ನೋಡುವುದು
ಉಆರ. 'ಉರಾಲ' ಶಬ್ದವನ್ನು ನೋಡುವುದು
ಉಆರ. 'ಉವಯಾರ' ಶಬ್ದವನ್ನು ನೋಡುವುದು
ಉಆಲಂಭ. 'ಉವಾಲಂಭ= ಉಪಾ+ಲಭ್' ಶಬ್ದವನ್ನು ನೋಡುವುದು
ಉಆಲಂಭ. 'ಉವಾಲಂಭ=ಉಪಾಲಂಭ' ಶಬ್ದವನ್ನು ನೋಡುವುದು
ಉಆಲಭ. 'ಉಆಲಂಭ=ಉಪಾ+ಲಭ್' ಶಬ್ದವನ್ನು ನೋಡುವುದು
ಉಆಲಿ. ಸ್ತ್ರೀ: [ದೇ] ಅವತಂಸ. ಶಿರೋಭೂಷಣ
ಉಆಸ. ವಿ: [ಉದಾಸ] ಕೆಳಗಿನ ಶಬ್ದವನ್ನು ನೋಡುವುದು
ಉಆಸ. 'ಉವಾಸ=ಉಪಾ+ಆಸ್' ಶಬ್ದವನ್ನು ನೋಡುವುದು
ಉಆಸೀಣ. ವಿ: [ಉದಾಸೀನ] ಖಿನ್ನ, ಉಪೇಕ್ಷೆ, ತಟಸ್ಥ, ಮಧ್ಯಸ್ಥ
ಉಆಹರಣ. 'ಉದಾಹರಣ' ಶಬ್ದವನ್ನು ನೋಡುವುದು
ಉಇ. ಸಕ: [ಉಪ+ಇ] ಹತ್ತಿರ ಹೋಗು, ಸಮೀಪಿಸು
ಉಇ. ಅಕ: [ಉದ್+ಇ] ಉದಯವಾಗು, ಹುಟ್ಟು
ಉಇ. 'ಉಉ' ಅನ್ನು ನೋಡುವುದು. **-ರಾಯ.** ಪು: [-ರಾಜ] ವಸಂತ ಋತು
ಉಇಅ. ವಿ: [ಉದಿತ] ಉದಯವಾದ, ಹುಟ್ಟಿದ, ಹೊರ ಹೊಮ್ಮಿದ, ಹೇಳಲ್ಪಟ್ಟ, ಮೇಲಕ್ಕೆ ಎದ್ದಿರುವ, **-ಪರಕ್ಕಮ** ಪು: [-ಪರಾಕ್ರಮ] ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು
ಉಇಅ. ವಿ: [ಉಚಿತ] ಯೋಗ್ಯ, ಅರ್ಹ
ಉಇಂತಣ. ನ: [ದೇ] ಉತ್ತರೀಯ, ಹೆಗಲ ಮೇಲೆ ಹಾಕಿಕೊಳ್ಳುವ ಬಟ್ಟೆ(ಕುಮಾ)
ಉಇಂದ. ಪು: [ಉಪೇಂದ್ರ] ಇಂದ್ರನ ತಮ್ಮ, ಅದಿತಿಯಿಂದ ಜನಿಸಿದ ವಿಷ್ಣುವಿನ ವಾಮನಾವತಾರ
ಉಇಟ್ಠ. ವಿ: [ಅಪಕೃಷ್ಟ] ಹೀನ, ಸಂಕುಚಿತ
ಉಇಣ್ಣ. 'ಉದಿಣ್ಣ' ಶಬ್ದವನ್ನು ನೋಡುವುದು(ಠಾ)
ಉಇಣ್ಣ. ವಿ: [ಉದೀಚ್ಯ] ಉತ್ತರ ದಿಕ್ಕಿಗೆ ಸಂಬಂಧಿಸಿದ, ಉತ್ತರ ದಿಕ್ಕಿನಲ್ಲಿ ಹುಟ್ಟಿದ
ಉಇನ್ನ. 'ಓಇಣ್ಣ' ಶಬ್ದವನ್ನು ನೋಡುವುದು
ಉಇಂಯುಂತ. 'ಉಇ=ಉದ್+ಇ' ಶಬ್ದವನ್ನು ನೋಡುವುದು
ಉಈಣ. 'ಉದೀಣ' ಶಬ್ದವನ್ನು ನೋಡುವುದು

ಉಈರ. 'ಉದೀರ' ಶಬ್ದವನ್ನು ನೋಡುವುದು.
ಉಈರಣ. 'ಉದೀರಣ' ಶಬ್ದವನ್ನು ನೋಡುವುದು
ಉಈರಣಯಾ}. 'ಉದೀರಣಾ' ಶಬ್ದವನ್ನು
ಉಈರಣಾ.}. ನೋಡುವುದು
ಉಈರಿಯ. 'ಉದೀರಿಯ' ಶಬ್ದವನ್ನು ನೋಡುವುದು
ಉಉ. ತ್ರಿ: [ಋತು] ಎರಡು ತಿಂಗಳ ಕಾಲಾವಧಿಯ ಋತು–ಕಾಲವಿಶೇಷ, ಪ್ರಸಿದ್ಧವಾದ ಆರು ಋತುಗಳು(ಔಪ), ಸ್ತ್ರೀ–ಕುಸುಮ, ರಜೋ–ದರ್ಶನ, ಸ್ತ್ರೀ–ಧರ್ಮ(ಠಾ), **–ಬದ್ಧ. ಪು:** [**–ಬದ್ಧ**] ಶೀತ ಮತ್ತು ಉಷ್ಣದ ಕಾಲ, ವರ್ಷಾ ಕಾಲವನ್ನು ಹೊರತುಪಡಿಸಿ ಎಂಟು ತಿಂಗಳ ಕಾಲ, **–ಮಾಸ. ಪು:** [**–ಮಾಸ**] ಶ್ರಾವಣ ಮಾಸ, ಮೂವತ್ತು ದಿನಗಳ ಮಾಸ, **–ಯ. ವಿ:** [**–ಜ**] ಋತುವಿನಲ್ಲಿ ಹುಟ್ಟಿದ, ಸಮಯಕ್ಕೆ ಸರಿಯಾಗಿ ಹುಟ್ಟುವ(ಪಣ್ಣ). **–ಸಂಧಿ. ಪುಂ. ಸ್ತ್ರೀ:** [**–ಸಂಧಿ**] ಋತುವಿನ ಸಂಧಿಕಾಲ, ಋತುವಿನ ಕೊನೆಗಾಲ. **–ಸಂವಚ್ಛರ. ಪು:** [**–ಸಂವತ್ಸರ**] ವರ್ಷ. ನೋಡಿ: ಉಇ=ಉಉ.
ಉಉಂಬರ. '**ಉಂಬರ=ಉದುಂಬರ**' ಶಬ್ದವನ್ನು ನೋಡುವುದು(ಕುಮಾ)
ಉಉವಹಿಯ. ನ: [**ಋತುಬದ್ಧ**] ಮಾಸ ಕಲ್ಪ: ಒಂದು ತಿಂಗಳ ವರೆಗೆ ಒಂದು ಜಾಗದಲ್ಲಿ ಸಾಧು ನೆಲೆಸಿ ಅನುಷ್ಠಾನ ಮಾಡುವುದು
ಉಊಖಲ.} **ಪುಂ.ನ:** [**ಉದೂಖಲ**] ಒರಳು
ಉಊಹಲ}.
ಉಎಟ್ಟ. ಪು: [ದೇ] ಶಿಲ್ಪಿ–ವಿಶೇಷ
ಉಒಗ್ಗಿಅ. ವಿ: [ದೇ] ಸಂಬದ್ಧ, ಸಂಬಂಧಿಸಿದ, ಸಂಯುಕ್ತ, ಒಟ್ಟುಗೂಡಿದ(ಷಡ್)
ಉಂ. ಅ: [ದೇ]. ಎಸೆ, ಇಡು, ನಿಂದೆ, ವಿಸ್ಮಯ, ದುಃಖ, ವಿತರ್ಕ, ಸೂಚನೆ–ಈ ಅರ್ಥಗಳನ್ನು ಸೂಚಿಸುವ ಅವ್ಯಯ.
ಉಂಘ. ಅಕ: [ನಿ+ದ್ರಾ] ನಿದ್ರಿಸು
ಉಂಚಹಿಆ. ಸ್ತ್ರೀ: [ದೇ] ಚಕ್ರದ ಅಗ್ರ ಭಾಗ, ಗಾಲಿಯ ಅಂಚು
ಉಂಛ. ಪು: [**ಉಂಛ**] ಭಿಕ್ಷೆ, ಭಿಕ್ಷಾನ್ನ. ಗದ್ದೆಗಳಲ್ಲಿ ಅಂಗಡಿಗಳಲ್ಲಿ ಕೆಳಗೆ ಬಿದ್ದ ಧಾನ್ಯವನ್ನು ಆರಿಸಿಕೊಳ್ಳುವುದು– ಮಾಧುಕರೀ
ಉಂಛಅ. ಪು: [ದೇ] ಬಟ್ಟೆಯ ಮೇಲೆ ಬಳ್ಳಿ, ಹೂಗಳನ್ನು ಹಾಕುವ ಶಿಲ್ಪಿ, ಕಲಾವಿದ, ಚೀಟಿ ಕಲಾವಿದ(ದೇ)
ಉಂಜ. ಸಕ: [**ಯುಜ್**] ಜೋಡಿಸು, ಪ್ರಯೋಗಮಾಡು
ಉಂಜ. ಸಕ: [**ಸಿಚ್**] ಸಿಂಪಡಿಸು
ಉಂಜಾಯಣ. ನ: [**ಉಂಜಾಯನ**] ವಶಿಷ್ಠ ಗೋತ್ರದ ಒಂದು ಶಾಖಾ ಗೋತ್ರ
ಉಂಜಿಅ. ವಿ: [**ಸಿಕ್ತ**] ಸಿಂಪಡಿಸಲ್ಪಟ್ಟ, ಚಿಮುಕಿಸಲ್ಪಟ್ಟ
ಉಂಡ}. **ವಿ:** [ದೇ] ಗಂಭೀರ, ಆಳವಾದ, **ಪು:**
ಉಂಡಗ}.ಪಿಂಡ.ಧ್ಯಾನಸ್ಥಳ, ನಡೆಯುವಾಗ
ಉಂಡಯ}.ಪಾದದಲ್ಲಿ ಗುಂಡಗೆ ಅಂಟಿಕೊಳ್ಳುವಷ್ಟು ಆಳವಾದ ಕೆಸರುಳ್ಳ, ಶರೀರದ ಒಂದು ಭಾಗ, ಮಾಂಸ–ಪಿಂಡ
ಉಂಡಗ} **ನ:** [ದೇ] ಸ್ಥಳ, ಜಾಗ, ಧ್ಯಾನಸ್ಥಳ
ಉಂಡುಅ}.
ಉಂಡಲ. ನ: [ದೇ] ಮಂಚ, ಉಚ್ಚಾಸನ, ನಿಕರ–ಸಮೂಹ(ದೇ)
ಉಂಡಿಯಾ. ಸ್ತ್ರೀ: [ದೇ] ಮುದ್ರಾ–ವಿಶೇಷ
ಉಂಡೀ. ಸ್ತ್ರೀ: [ದೇ] ಪಿಂಡ, ಗೋಳಾಕಾರದ ವಸ್ತು
ಉಂದರ}. **ಪುಂ. ಸ್ತ್ರೀ:** [**ಉಂದುರ**] ಇಲಿ, ಮೂಷಕ
ಉಂದುರ}. (ಉವಾ)
ಉಂದು. ನ: [ದೇ] ಮುಖ. **–ರುಕ್ಕ. ನ:**[**ದೇ**] ಬಾಯಿಂದ ಎತ್ತಿನ ಹಾಗೆ ಅರಚುವ ಶಬ್ದಮಾಡುವುದು
ಉಂದುರಅ. ಪು: [ದೇ] ಉದ್ದವಾದ ಅಥವಾ ದೀರ್ಘವಾದ ಹಗಲು
ಉಂದುರು. ಪುಂಸ್ತ್ರೀ: [**ಉಂದುರು**] ಇಲಿ
ಉಂಬ. ಪು: [**ಉಂಬ**] ಒಂದು ಮರ, ವೃಕ್ಷ
ಉಂಬರ. ಪು: [**ಉದುಂಬರ**] ಅತ್ತಿಮರ(ಪಣ್ಣ), **ನ:** ಅತ್ತಿ ಹಣ್ಣು, ಹೊಸಿಲು, **–ದತ್ತ. ಪು:** [**–ದತ್ತ**] ಯಜ್ಞ(ವಿಪಾ), ಒಬ್ಬ ಸಾರ್ಥವಾಹನ ಪುತ್ರ, **–ಪಂಚಗ, ಪಣಗ. ನ:** [**–ಪಂಚಕ**] ಆಲದ ಮರ, ಅರಳಿಮರ. ಅತ್ತಿ, ಅರಳಿ, ಕಲ್ಲತ್ತ ಈ ಐದೂ ಮರಗಳ ಹಣ್ಣು, **–ಪುಫ್ಫ. ನ:** [**–ಪುಷ್ಪ**] ಅತ್ತಿ ಹಣ್ಣು
ಉಂಬರ. ವಿ: [ದೇ] ಬಹಳ, ವಿಪುಲ
ಉಂಬರಉಪ್ಫ. ನ: [ದೇ] ನವೀನ, ಅಭ್ಯುದಯ, ಅಪೂರ್ವ, ಉನ್ನತಿ

ಉಂಬರಯ. ಪು: [ದೇ] ಕುಷ್ಠ ರೋಗದ ಒಂದು ಪ್ರಭೇದ

ಉಂಬಾ. ಸ್ತ್ರೀ: [ದೇ] ಬಂಧನ(ದೇ)

ಉಂಬೀ. ಸ್ತ್ರೀ: [ದೇ] ಬೇಯಿಸಿದ ಗೋಧಿ(ಸುಪಾ)

ಉಂಬೇಭರಿಯಾ. ಸ್ತ್ರೀ: [ದೇ] ಒಂದು ಬಗೆಯ ವೃಕ್ಷ, ಮರ

ಉಂಭ. ಸಕ: [ದೇ] ಪೂರ್ತಿಗೊಳಿಸುವುದು

ಉಕಿಟ್ಠ. '**ಉಕ್ಕಿಟ್ಠ**' ಶಬ್ದವನ್ನು ನೋಡುವುದು

ಉಕುರುಡಿಯಾ.(ದೇ). '**ಉಕ್ಕುರುಡಿಯಾ**' ಶಬ್ದವನ್ನು ನೋಡುವುದು

ಉಕ್ಕ. ವಿ: [**ಉತ್ಕ**] ಉತ್ಸುಕ, ಉತ್ಕಂಠಿತ, ತವಕದಿಂದ ಕೂಡಿದ, ಆತುರವುಳ್ಳ. ಒಬ್ಬ ವಿದ್ಯಾಧರ ರಾಜನ ಹೆಸರು(ಪ ಉಮ)

ಉಕ್ಕ. ವಿ: [**ಉಕ್ತ**] ಹೇಳಲ್ಪಟ್ಟ, ಕಥಿಸಲ್ಪಟ್ಟ(ಪಿಂಗ)

ಉಕ್ಕ.. ನ: [ದೇ] ಪಾದದ ಮೇಲೆ ಬಿದ್ದು ನಮಸ್ಕರಿಸುವುದು(ದೇ)

ಉಕ್ಕಅ. ವಿ: [ದೇ] ಹರಡಿರುವ (ಷಡ್)

ಉಕ್ಕಂಚಣ}. ನ: [ದೇ] ಸುಳ್ಳು ಪ್ರಶಂಸೆ ಮಾಡುವುದು

ಉಕ್ಕಂಚಣಯಾ}. (ಣಾಯಾ), ಎತ್ತರಿಸುವುದು, ಲಂಚ, ಮೋಸ ಮಾಡುತ್ತಿರುವವನು, ತನ್ನ ಸಮೀಪದಲ್ಲಿರುವ ವಿಚಕ್ಷಣ ವ್ಯಕ್ತಿಯ ಭಯದಿಂದ ಸ್ವಲ್ಪ ಕಾಲ ಪ್ರಯತ್ನಿಸದೆ ಸುಮ್ಮನಿದ್ದು ಬಿಡುವುದು (ಔಪ), **–ದೀವ.** ಪು: [**–ದೀಪ**] ಎತ್ತರದ ಕಂಬವುಳ್ಳ ದೀವಿಗೆ

ಉಕ್ಕಂಥಣ. ನ: [ದೇ] '**ಉಕ್ಕಂಬಣ**' ಶಬ್ದವನ್ನು ನೋಡುವುದು

ಉಕ್ಕಂಠ. ಅಕ: [**ಉತ್+ಕಂಠ್**] ಆತುರ ಮಾಡು, ತವಕ ಪಡು, ಉತ್ಸುಕನಾಗು

ಉಕ್ಕಂಠಾ. ಸ್ತ್ರೀ: [**ಉತ್ಕಂಠಾ**] ಉತ್ಸುಕತೆ, ಇಷ್ಟವಾದ ವಸ್ತುವನ್ನು ಹೊಂದಲು ಆಸೆ ಪಡುವುದು

ಉಕ್ಕಂಠಿಯ}. ವಿ: [**ಉತ್ಕಂಠಿತ**] ತವಕ ಪಡುವವನು,

ಉಕ್ಕಂಠಿರ}. ಇಚ್ಛಿತ ವಸ್ತುವನ್ನು ಪಡೆಯಲು

ಉಕ್ಕಂಠುಲಯ}. ಆತುರಪಡುವವನು(ಗಾ, ಪಉಮ)

ಉಕ್ಕಂಡ. ವಿ: [**ಉತ್ಕಂಡಿತ**] ಕಾಂತಿಯುಕ್ತಗೊಳಿಸಲ್ಪಟ್ಟ

ಉಕ್ಕಂಡಯ. ಸಕ: [**ಉತ್ಕಂಟಯ್**] ಪುಲಕಿತಗೊಳಿಸು

ಉಕ್ಕಂಡಯ. ವಿ: [**ಉತ್ಕಂಟಕ**] ಪುಲಕಿತಗೊಂಡ, ರೋಮಾಂಚಿತನಾದ (ಗಉಡ)

ಉಕ್ಕಂಡಾ. ಸ್ತ್ರೀ: [ದೇ] ಲಂಚ, ರುಷುವತ್ತು(ದೇ)

ಉಕ್ಕಂಡಿಅ. ವಿ: [ದೇ] ಆರೋಪಿಸಲ್ಪಟ್ಟ, ಕಲ್ಪಿಸಲ್ಪಟ್ಟ, ಒಡೆಯಲ್ಪಟ್ಟ, ಕತ್ತರಿಸಲ್ಪಟ್ಟ

ಉಕ್ಕಂತ. ವಿ: [**ಉತ್ಕ್ರಾಂತ**] ಮೇಲಕ್ಕೆ ಹಾರಿ ಹೋದ

ಉಕ್ಕಂತಿ}. ಸ್ತ್ರೀ: [ದೇ] '**ಉಕ್ಕಂದಾ**' ಶಬ್ದವನ್ನು

ಉಕ್ಕಂತೀ}. ನೋಡುವುದು

ಉಕ್ಕಂದ. ವಿ: [ದೇ] ಮೋಸ ಮಾಡಲ್ಪಟ್ಟ, ವಂಚನೆಗೊಳಗಾದ(ಷಡ್)

ಉಕ್ಕಂದಲ.ವಿ: [**ಉತ್ಕಂದಲ**] ಮೊಳಕೆ ಹೊರಟಿರುವ, ಅಂಕುರಿತ (ಗಉಡ)

ಉಕ್ಕಂದಿ}. ಸ್ತ್ರೀ: [ದೇ} ಬಾವಿಯ ಮೇಲೆ ಅಡ್ಡಲಾಗಿ

ಉಕ್ಕಂದೀ}. ಹಾಕುವ ಮರ

ಉಕ್ಕಂಪ. ಅಕ: [**ಉತ್+ಕಂಪ್**] ಕಂಪಿಸು, ಅಲ್ಲಾಡು, ನಡುಗು

ಉಕ್ಕಂಪ. ಪು: [**ಉತ್ಕಂಪ**] ನಡುಕ, ಚಲನೆ

ಉಕ್ಕಂಪಿಯ. ವಿ: [**ಉತ್ಕಂಪಿತ**] ಚಂಚಲಗೊಳಿಸಲ್ಪಟ್ಟ, ನಡುಗಿಸಲ್ಪಟ್ಟ ನ: ನಡುಕ, ಅಲ್ಲಾಡುವಿಕೆ

ಉಕ್ಕಂಪಿಯ. ವಿ: [ದೇ] ಬಿಳಿದಾಗಿ ಮಾಡಲ್ಪಟ್ಟ

ಉಕ್ಕಂಬಣ. ನ: [**ದೇ. ಅವಕಂಬನ**] ಕಟ್ಟಿಗೆಯ ಮೇಲೆ ಕಟ್ಟಿಗೆಯು ಮಂಡಲದಿಂದ ಮನೆಯ ಭಾವಣಿಯನ್ನು ಕಟ್ಟುವುದು, ಮನೆಯ ಸಂಸ್ಕಾರ–ವಿಶೇಷ

ಉಕ್ಕಂಬಿಯ. ವಿ: [**ದೇ. ಅವಕಂಬಿತ**] ಕಟ್ಟಿಗೆಯಿಂದ ಕಟ್ಟಲ್ಪಟ್ಟ (ರಾಜ)

ಉಕ್ಕಂಥ. ವಿ: [**ಉತ್ಕಚ್ಛ**] ಸ್ಫುಟ, ಸ್ಪಷ್ಟ

ಉಕ್ಕಚ್ಛಾ. ಸ್ತ್ರೀ: [**ಉತ್ಕಚ್ಛಾ**] ಒಂದು ಜಾತಿಯ ಛಂದಸ್ಸು

ಉಕ್ಕಚ್ಛಿಆ. ಸ್ತ್ರೀ [**ಔಪಕಕ್ಷಿಕಾ**] ಜೈನ ಸಾಧ್ವಿಯರು ಧರಿಸುವ ವಸ್ತ್ರ–ವಿಶೇಷ

ಉಕ್ಕಜ್ಜ. ವಿ: [ದೇ] ಚಂಚಲವಾಗಿರುವ, ಸ್ಥಿರವಾಗಿಲ್ಲದ (ಷಡ್)

ಉಕ್ಕಟ್ಠಿ. ಸ್ತ್ರೀ; [**ಅಪಕೃಷ್ಟಿ**] ಹಾನಿ

ಉಕ್ಕಟ್ಠಿ. ಸ್ತ್ರೀ: [**ಉತ್ಕೃಷ್ಟಿ**] ಶ್ರೇಷ್ಠತೆ, ಮೇಲ್ಮೆ, ಅತಿಶಯತೆ. '**ಉಕ್ಕಿಟ್ಠಿ**' ಶಬ್ದವನ್ನು ನೋಡುವುದು

ಉಕ್ಕಡ. ವಿ: [**ಉತ್ಕಟ**] ತೀವ್ರ, ಪ್ರಚಂಡ, ಪ್ರಖರ(ಣಂದಿ), ವಿಶಾಲ, ಪ್ರಬಲ(ಉವಾ)

–ಉಕ್ಕಡ. '**ದುಕ್ಕಡ**' ಶಬ್ದವನ್ನು ನೋಡುವುದು

ಉಕ್ಕಡಿಯ. ವಿ: [ದೇ] ಕತ್ತರಿಸಿದ, ಮುರಿದ(ಪಾಅ)

ಉಕ್ಕಡಿಯ. 'ಉಕ್ಕುಡುಯ' ಶಬ್ದವನ್ನು ನೋಡುವುದು
ಉಕ್ಕಡ್ಢಗ. ಪು: [ಅಪಕರ್ಷಕ] ಮನೆಯಲ್ಲಿ ಹಣ ಇತ್ಯಾದಿಗಳನ್ನು ಕದ್ದೊಯ್ಯುವ, ಕಳ್ಳರನ್ನು ಕರೆಸಿ ಕಳ್ಳತನ ಮಾಡಿಸುವ, ಕಳ್ಳರ ಬೆನ್ನು ತಟ್ಟುವ, ಕಳ್ಳರಿಗೆ ಸಕಾಯಕರಾದ ಕಳ್ಳರ ಒಂದು ವರ್ಗ.
ಉಕ್ಕಡ್ಢ. ಸಕ: [ಉತ್+ಕರ್ಷಯ್] ವೃದ್ಧಿಸು, ಹೆಚ್ಚಿಸು, ಪ್ರಶಸ್ತಗೊಳಿಸು
ಉಕ್ಕಡ್ಢಿಯ. ವಿ: [ಉತ್ಕರ್ಷಿತ] ಬುಡಸಹಿತ ಕಿತ್ತುಹಾಕಲ್ಪಟ್ಟ, ಒಂದು ಜಾಗದಿಂದ ಕಿತ್ತು ಇನ್ನೊಂದು ಕಡೆ ಸ್ಥಾಪಿಸಲಾದ(ಪಿಂಡ)
ಉಕ್ಕಣ್ಣ. ವಿ: [ಉತ್ಕರ್ಣ] ಕೇಳಲು ಉತ್ಸುಕನಾಗಿರುವ
ಉಕ್ಕತ್ತ. ಸಕ: [ಉತ್+ಕೃತ್] ಕತ್ತರಿಸು,
ಉಕ್ಕತ್ತಣ. ನ: [ಉತ್ಕರ್ತನ] ಕತ್ತರಿಸುವುದು, ಭೇದನ
ಉಕ್ಕತ್ತಿಯ. 'ಉಕ್ಕತ್ತ=ಉತ್ಕೃತ್ತ' ಶಬ್ದವನ್ನು ನೋಡುವುದು
ಉಕ್ಕತ್ಥಣ. ನ: [ಉತ್ಕತ್ಥನ] ಕಿತ್ತುಹಾಕುವುದು
ಉಕ್ಕನಾಹ. ಪು: [ದೇ] ಉತ್ತಮವಾದ ಕುದುರೆಯ ಒಂದು ಜಾತಿ
ಉಕ್ಕಪ್ಪ. ಪು; [ಉತ್ಕಲ್ಪ] ಶಾಸ್ತ್ರ ನಿಷಿದ್ಧ ಆಚರಣೆ
ಉಕ್ಕಮ. ಸಕ: [ಉತ್+ಕ್ರಮ್] ಮೇಲಕ್ಕೆ ಹೋಗು, ವಿರುದ್ಧ ಕ್ರಮದಲ್ಲಿ ಇಡು
ಉಕ್ಕಮ. ಪು: [ಉತ್ಕ್ರಮ] ವಿರುದ್ಧವಾದ ಕ್ರಮ, ಮೇಲಕ್ಕೆ ಹೋಗುವುದು
ಉಕ್ಕಮಣ. ನ: [ಉತ್ಕ್ರಮಣ] ಮೇಲಕ್ಕೆ ಹೋಗುವುದು
ಉಕ್ಕಮಿತ. ವಿ: [ಉಪಕ್ರಾಂತ] ಪ್ರಾರಂಭಿಸಲ್ಪಟ್ಟ, ಕ್ಷೀಣ
ಉಕ್ಕರ. ಸಕ: [ಉತ್+ಕೃ] ಅಗೆ
ಉಕ್ಕರ. ಪು: [ಉತ್ಕರ] ಸಮೂಹ, ಗುಪ್ಪೆ, ತೆರಿಗೆಯಿಲ್ಲದ(ಕರ-ರಹಿತ)(ಣಾಯಾ)
ಉಕ್ಕರಡ. ಪು: [ದೇ] ಕೊಳೆಯನ್ನು ತಳ್ಳುವ ಜಾಗ, ಕಸದ ರಾಶಿ
ಉಕ್ಕರಡ. 'ಉಕ್ಕರ= ಉತ್ಕರ' ಶಬ್ದವನ್ನು ನೋಡುವುದು
ಉಕ್ಕರಿಅ. ವಿ: [ದೇ] ವಿಸ್ತೀರ್ಣ, ದೀರ್ಘವಾದ, ಆರೋಪಿತ, ತುಂಡಾದ, ಕತ್ತರಿಸಲ್ಪಟ್ಟ(ಷಡ್)
ಉಕ್ಕರಿಅ. ವಿ: [ಉತ್ಕೀರ್ಣ] ಕೊರೆಯಲ್ಪಟ್ಟ, ಅಗೆಯಲ್ಪಟ್ಟ
ಉಕ್ಕರಿದ(.ಶೌ). ವಿ: [ಉತ್ಕೃತ] ಎತ್ತರಿಸಿದ, ಮೇಲಕ್ಕೆ ಮಾಡಿದ(ಸ್ವಪ್ನ)
ಉಕ್ಕರಿಯಾ. ಸ್ತ್ರೀ: [ಉತ್ಕರಿಕಾ] ಹರಳಿನ ಬೀಜದಿಂದ ಅದರ ಸಿಪ್ಪೆ ಬೇರೆಯಾಗಿರುವ ಹಾಗೆ ಬೇರೆಯಾಗಿರುವುದು, ಭೇದ-ವಿಶೇಷ.
ಉಕ್ಕರಿಸ. ಸಕ: [ಉತ್+ಕೃಷ್] ಎಳೆ, ಹೆಮ್ಮೆ ಪಡು, ದೊಡ್ಡಸ್ತಿಕೆ ಮೆರೆ
ಉಕ್ಕರಿಸ. 'ಉಕ್ಕಸ್ಸ=ಉತ್ಕರ್ಷ' ಶಬ್ದವನ್ನು ನೋಡುವುದು
ಉಕ್ಕರಿಸಣ. ನ: [ಉತ್ಕರ್ಷಣ] ಶ್ರೇಷ್ಠತೆ, ಮೇಲ್ಮೆ, ದೊಡ್ಡಸ್ತಿಕೆ, ಸ್ಥಾಪಿಸುವುದು(ಸ್ಥಾಪನೆ)
ಉಕ್ಕರಿಸಿಯ. ವಿ: [ಉತ್ಕೃಷ್ಟ] ಎಳೆದು ಹೊರತೆಗೆದ, ಬೇರು ಸಹಿತ ಕಿತ್ತುಹಾಕಲ್ಪಟ್ಟ(ಸೇ)
ಉಕ್ಕಲ. 'ಉಕ್ಕಡ' ಶಬ್ದವನ್ನು ನೋಡುವುದು
ಉಕ್ಕಲ. ಅಕ: [ಉತ್+ಕಲ್] ಉತ್ಕಟ ರೂಪದಲ್ಲಿ ವರ್ತಿಸು
ಉಕ್ಕಲ. ವಿ: [ಉತ್ಕಲ] ಧರ್ಮ-ರಹಿತ, ನ: ಕಳ್ಳತನ(ಪಣ್ಹಾ), ಈಗಿನ ಒರಿಸ್ಸಾ,
ಉಕ್ಕಲಂಬ. ಸಕ: [ಉತ್+ಲಂಬಯ್] ನೇಣಿಗೇರಿಸು, ನೇಣಿಗೆ ಹಾಕು
ಉಕ್ಕಲಾ}. ಸ್ತ್ರೀ: [ಉತ್ಕಲಿಕಾ] ಜೇಡರ ಹುಳು(ಕಪ್ಪ),
ಉಕ್ಕಲಿಯಾ} ಕೆಳಮುಖವಾಗಿ ಬೀಸುವ ಗಾಳಿ, ಚಿಕ್ಕ ಗುಂಪು, ಸಮೂಹ, ಅಲೆ, ತರಂಗ, ಅಲೆಯಲೆಯಾಗಿ ನಿಂತು ನಿಂತು ಬೀಸುವ ಗಾಳಿ
ಉಕ್ಕಲಿಯ. ವಿ: [ದೇ] ಕುದಿಸಿದ
ಉಕ್ಕಸ. ಸಕ: [ಗಮ್] ಹೋಗು, ಚಲಿಸು(ವುದು -'ಉಕ್ಕಸಇ'. ವ. ಕೃ-ಉಕ್ಕಸಾವಂತ
ಉಕ್ಕಸ. 'ಓಕಸ' ಶಬ್ದವನ್ನು ನೋಡುವುದು.
ಉಕ್ಕಸ 'ಉಕ್ಕುಸ' ಶಬ್ದವನ್ನು ನೋಡುವುದು (ಕುಮಾ)
ಉಕ್ಕಸ. 'ಉಕ್ಕಸ್ಸ=ಉತ್ಕರ್ಷ' ಶಬ್ದವನ್ನು ನೋಡುವುದು
ಉಕ್ಕಸಣ. ನ: [ಉತ್ಕರ್ಷಣ] ಅಭಿಮಾನ ಪಡುವುದು, ಹೆಮ್ಮೆ ಪಡುವುದು, ಮೇಲಕ್ಕೆ ಹೋಗುವುದು ಹಿಂತಿರುಗುವುದು,
ಉಕ್ಕಸಾಇ. ವಿ: [ಉತ್ಕಶಾಯಿನ್] ಸತ್ಕಾರಾದಿಗಳನ್ನು ಪಡೆಯಲು ಆತುರವುಳ್ಳ, ಆಸೆಯುಳ್ಳ,(ಉತ್ತ)
ಉಕ್ಕಸಾಇ. ವಿ: [ಉತ್ಕಷಾಯಿನ್] ಪ್ರಬಲವಾದ ರಾಗ ದ್ವೇಷಾದಿಗಳನ್ನು ಹೊಂದಿರುವ, ಪ್ರಬಲ ಅಶಾಂತಿಯಿಂದ ಕೂಡಿದ(ಉತ್ತ)
ಉಕ್ಕಸ್ಸ. ಸಕ: [ಅಪ+ಕೃಪ] ಕಡಿಮೆಯಾಗು, ಕುಗ್ಗು, ಹಿಂದಕ್ಕೆ ತಿರುಗು, ಬೀಳು, ಕಾಲು ಜಾರಿ ಬೀಳು

ಉಕ್ಕಸ್ಸ. ಪು: [ಉತ್ಕರ್ಷ] ಹೆಮ್ಮೆ, ಅಭಿಮಾನ, ಶ್ರೇಷ್ಠತೆ ಅತಿಶಯ, ಉತ್ಕೃಷ್ಟತೆ(ಭವಿ)

ಉಕ್ಕಸ್ಸ. ವಿ: [ಉತ್ಕರ್ಷವತ್] ಉತ್ಕೃಷ್ಟ, ಅತಿಶಯತೆ, ಅಭಿಮಾನಿ, ಹೆಮ್ಮೆ ಹೊಂದಿರುವ, ಗರ್ವಿಷ್ಠ

ಉಕ್ಕಾ. ಸ್ತ್ರೀ: [ಉಲ್ಕಾ] ಉಲ್ಕೆ: ಆಕಾಶದಲ್ಲಿ ಕಾಣಿಸಿಕೊಳ್ಳುವ ತೇಜಸ್ಸಿನ ರಾಶಿ, ಬಾಲಚುಕ್ಕಿ, ಅಗ್ನಿಪಿಂಡ(ಠಾ) ಆಕಾಶವಹ್ನಿ, –ಮುಹ. ಪು: [–ಮುಖ] ಅಂತರ್ ದ್ವೀಪ, ಅದರ ನಿವಾಸಿಗಳು (ಠಾ), –ವಾಯ. ಪು:[–ಪಾತ] ನಕ್ಷತ್ರ ಬೀಳುವುದು, ಉಲ್ಕಾಪಾತ

ಉಕ್ಕಾ. ಸ್ತ್ರೀ: [ದೇ] ಬಾವಿಯ ಮೇಲೆ ಅಡಲಾಗಿ ಹಾಕಿರುವ ಮರ

ಉಕ್ಕಾಮ. ಸಕ: [ಉತ್+ಕ್ರಾಮಯ್] ದೂರಮಾಡು, ಹಿಂದೆ ಸರಿಸು

ಉಕ್ಕಾರಿಯಾ. 'ಉಕ್ಕರಿಯಾ' ಶಬ್ದವನ್ನು ನೋಡುವುದು

ಉಕ್ಕಾಲಿಯ. ವಿ: [ಉತ್ಕಾಲಿಕ] ಇಂಥ ಸಮಯದಲ್ಲೇ ಅಧ್ಯಯನ ಮಾಡಬೇಕೆಂಬ ನಿಯಮವಿಲ್ಲದಿರುವ ಶಾಸ್ತ್ರ(ಠಾ)

ಉಕ್ಕಾಸ. 'ಉಕ್ಕಸ=ಉತ್ಕರ್ಷ' ಶಬ್ದವನ್ನು ನೋಡುವುದು

ಉಕ್ಕಾಸ. ವಿ: [ದೇ] ಉತ್ಕೃಷ್ಟ, ಅತಿಶಯತೆ, ಮೇಲ್ಮೆ

ಉಕ್ಕಾಸಿಅ. ವಿ: [ದೇ] ಮೇಲಕ್ಕೆ ಎದ್ದಿರುವ

ಉಕ್ಕಿಟ್ಠ. ವಿ: [ಉತ್ಕೃಷ್ಟ] ಹೆಚ್ಚಾದ, ಹೆಚ್ಚಿನ, ಪುಂನ: ಹುಣಿಸೆ ಎಲೆಯ ರಾಶಿ

ಉಕ್ಕಿಟ್ಠ. ವಿ: [ಉತ್ಕೃಷ್ಟ] ಉತ್ಕೃಷ್ಟ, ಉತ್ತಮ, ಆಯುಧದಿಂದ ಭಾಗ ಮಾಡಲಾದ ಹಣ್ಣಿನ ಚೂರು

ಉಕ್ಕಿಟ್ಠಿ. ಸ್ತ್ರೀ: [ಉತ್ಕೃಷ್ಟಿ] ಹರ್ಷಧ್ವನಿ, ಆನಂದದ ದನಿ(ಜಿಪ), 'ಉಕ್ಕಟ್ಠಿ' ಶಬ್ದವನ್ನು ನೋಡುವುದು

ಉಕ್ಕಿಣ್ಣ. ವಿ: [ಉತ್ಕೀರ್ಣ] ಕೊರೆಯಲ್ಪಟ್ಟ, ಕೊರೆಯಲಾಗಿರುವ(ಅಭಿ) ನಷ್ಟ (ಆಚೂ)

ಉಕ್ಕಿತ್ತ. ವಿ: [ಉತ್ಕೃತ್ತ] ಕೊಯ್ಯಲಾದ, ಕೊಯ್ದಿರುವ(ಸೇ)

ಉಕ್ಕಿತ್ತಣ. ನ: [ಉತ್ಕೀರ್ತನ] ಕಥನ(ಪಉಮ), ಹೊಗಳಿಕೆ, ಉಚ್ಚಸ್ವರದಿಂದ ಸ್ತುತಿಸುವುದು

ಉಕ್ಕಿತ್ತಿಯ. ವಿ: [ಉತ್ಕೀರ್ತಿತ] ಕಥಿತ, ಗಟ್ಟಿಯಾಗಿ ಹೇಳಲ್ಪಟ್ಟ(ಚಂದ), ಸ್ತುತಿಸಲ್ಪಟ್ಟ

ಉಕ್ಕಿನ್ನ. ವಿ: [ಉತ್ಕೀರ್ಣ] ಕೊರೆಯಲ್ಪಟ್ಟ, ಲೇಪಿಸಲ್ಪಟ್ಟ

ಉಕ್ಕಿರ. ಸಕ: [ಉತ್+ಕೃ] ಕಲ್ಲು, ಲೋಹಗಳ ಮೇಲೆ ಅಕ್ಷರಗಳನ್ನು ಕೊರೆ

ಉಕ್ಕಿರಣಗ. ನ: [ಉತ್ಕರಣಕ] ಉಡುಗೊರೆ, ಮಂಗಳಾಚರಣೆ

ಉಕ್ಕಿರಿಯ. 'ಉಕ್ಕರಿಅ'= ಉತ್ಕೀರ್ಣ' ಶಬ್ದವನ್ನು ನೋಡುವುದು

ಉಕ್ಕೀರ. 'ಉಕ್ಕಿರ' ಶಬ್ದವನ್ನು ನೋಡುವುದು. ವ. ಕೃ–ಉಕ್ಕೀರಮಾಣ

ಉಕ್ಕೀರಿಅ. 'ಉಕ್ಕರಿಅ=ಉತ್ಕೀರ್ಣ' ಶಬ್ದವನ್ನು ನೋಡುವುದು

ಉಕ್ಕೀಲಿಯ ನ: [ಉತ್ಕ್ರೀಡಿತ] ಉತ್ತಮ ಕ್ರೀಡೆ(ಪಉಮ)

ಉಕ್ಕೀಲಿಯ. ವಿ: [ಉತ್ಕೀಲಿತ] ಗೂಟದಿಂದ ನಿಯಂತ್ರಿಸಲ್ಪಡುವ

ಉಕ್ಕುಂಚಣ. ನ: [ಉತ್ಕುಂಚನ] ಮೇಲಕ್ಕೆ ಏರಿಸುವುದು, ಮೇಲೆ ಹತ್ತಿಸುವುದು

ಉಕ್ಕುಂಡ. ವಿ: [ದೇ] ಮತ್ತ, ಉನ್ಮತ್ತ

ಉಕ್ಕುಕ್ಕುರ. ಅಕ: [ಉತ್+ಸ್ಥಾ) ಏಳು, ಎದ್ದು ನಿಲ್ಲು. 'ಉಕ್ಕುಕ್ಕುರಇ'

ಉಕ್ಕುಜ್ಜ. ಅಕ: [ಉತ್+ಕುಬ್ಜ್] ಎತ್ತರಕ್ಕೇರಿ ಕೆಳಕ್ಕಿಳಿಯುವುದು

ಉಕ್ಕುಜ್ಜಿಯ. ನ: [ಉತ್ಕೂಜಿತ] ಅವ್ಯಕ್ತ ಶಬ್ದ(ನಿಚೂ)

ಉಕ್ಕುಟ್ಟ. ನ: [ಉತ್ಕುಷ್ಟ] ಗಿಡಮೂಲಿಕೆಯನ್ನು ಚೆನ್ನಾಗಿ ಕುಟ್ಟಿ ಪುಡಿಮಾಡಿದ ಚೂರ್ಣ(ಆಚಾ)

ಉಕ್ಕುಟ್ಠ. ವಿ: [ಉತ್ಕ್ರುಷ್ಟ] ಗಟ್ಟಿಯಾಗಿ ಅಳುವುದು, ಗಟ್ಟಿಯಾಗಿ ಕೂಗುವುದು

ಉಕ್ಕುಡುಗ}. ವಿ: [ಉತ್ಕುಟುಕ] ಆಸನ ವಿಶೇಷ, ಸಣ್ಣ
ಉಕ್ಕುಡುಯ}. ಮಂಚ, ಉಕ್ಕುಡುಗಾಸಣಿಯ. ವಿ: [ಉಕ್ಕುಡುಗಾಸನಿಕ] ಉತ್ಕುಟುಕ ಆಸನದಿಂದ ನಿಂತಿರುವ

ಉಕ್ಕುದ್ದ. ಅಕ: [ಉತ್+ಕೂರ್ದ್] ಹಾರು, ಜಿಗಿ, –'ಉಕ್ಕುದ್ದ'ಇ'

ಉಕ್ಕುರುಅ. 'ಉಕ್ಕರುಡಿಯಾ' ಶಬ್ದವನ್ನು ನೋಡುವುದು

ಉಕ್ಕುರುಡ. ಪು: [ದೇ] ರಾಶಿ

ಉಕ್ಕುರುಡ. 'ಉಕ್ಕುರುಡೀ' ಶಬ್ದವನ್ನು ನೋಡುವುದು

ಉಕ್ಕುರುಡಿಗಾ}. ಸ್ತ್ರೀ: [ದೇ] ತಿಪ್ಪೆ, ಕಸ ಹಾಕುವ
ಉಕ್ಕುರುಡಿಯಾ} ಜಾಗ (ಉಪ)
ಉಕ್ಕುರುಡೀ}.

ಉಕ್ಕುಸ. ಸಕ: [ಗಮ್] ಹೋಗು, ನಡೆ, ಚಲಿಸು
ಉಕ್ಕುಸ. ವಿ: [ಉತ್ಕೃಷ್ಟ] ಉತ್ತಮ, ಶ್ರೇಷ್ಠ(ಕುಮಾ)
ಉಕ್ಕೂಇಯ. ನ: [ಉತ್ಕೂಜಿತ] ಅವ್ಯಕ್ತ ಮಹಾಧ್ವನಿ (ಪಣ್ಣ)
ಉಕ್ಕೂಲ. ವಿ: [ಉತ್ಕೂಲ] ದಡವನ್ನು ಮೀರಿರುವ, ತೀರದವರೆಗೂ ಬಂದಿರುವ, ಸನ್ಮಾರ್ಗದಿಂದ ಭ್ರಷ್ಟಗೊಳಿಸುವ, ನ: ಕಳ್ಳತನ(ಪಣ್ಣ)
ಉಕ್ಕೂವ. ಅಕ: [ಉತ್+ಕೂಜ್] ಅವ್ಯಕ್ತ ಧ್ವನಿಮಾಡು, ಚೀರಾಡು
ಉಕ್ಕೇರ. ಪು: [ಉತ್ಕರ] ಸಮೂಹ, ರಾಶಿ(ಕುಮಾ), ಕರಣ-ವಿಶೇಷ, ಕರ್ಮಗಳ ಸ್ಥಿತಿ ಇತ್ಯಾದಿಗಳನ್ನು ಹೆಚ್ಚಿಸುವುದು(ವಿಸೇ), ಭಿನ್ನ ಹರಳು ಬೀಜದಂತೆ ಬೇರೆಮಾಡಲ್ಪಟ್ಟದ್ದು
ಉಕ್ಕೇರ. ಪು: [ದೇ] ಕಾಣಿಕೆ, ಕೊಡುಗೆ
ಉಕ್ಕೆಲ್ಲಾವಿಯ. ವಿ: [ದೇ] ತೆರೆಸಲ್ಪಟ್ಟಿರುವ
ಉಕ್ಕೊಟ್ಟಿಯ. ವಿ: [ದೇ] ತಡೆಯಿಲ್ಲದೆ ಅಥವಾ ವಿರೋಧವಿಲ್ಲದೆ ಮಾಡಲಾದ, ಗುಡಾರಾ ತೆಗೆದಿರುವ
ಉಕ್ಕೋಡ. ನ: [ದೇ] ರಾಜವಂಶದಲ್ಲಿ ದಾನ ಮಾಡಲರ್ಹವಾದ ದ್ರವ್ಯ, ರಾಜರೇ ಮೊದಲಾದವರಿಗೆ ಕೊಡುವಂಥ ಕಾಣಿಕೆ
ಉಕ್ಕೋಡಾ. ಸ್ತ್ರೀ: [ದೇ] ಲಂಚ, ರುಷುವತ್ತು(ವಿಪಾ)
ಉಕ್ಕೋಡಿಯ. ವಿ: [ದೇ] ಲಂಚ ತೆಗೆದುಕೊಂಡು ಕೆಲಸಮಾಡುವವನು, ಲಂಚಕೋರ
ಉಕ್ಕೋಡೀ. ಸ್ತ್ರೀ: [ದೇ] ಪ್ರತಿಧ್ವನಿ
ಉಕ್ಕೋಯ. ವಿ: ಉತ್ಕೋಪ] ಪ್ರಖರ, ತೀವ್ರ, ಉತ್ಕಟ
ಉಕ್ಕೋಯಣ. 'ಉಕ್ಕೋವಣ' ಶಬ್ದವನ್ನು ನೋಡುವುದು
ಉಕ್ಕೋಯಾ. ಸ್ತ್ರೀ: [ಉತ್ಕೋಚಾ] ಲಂಚ, ರುಷುವತ್ತು, ಮೂರ್ಖನಿಗೆ ಮೋಸ ಮಾಡುವುದರಲ್ಲಿ ತೊಡಗಿರುವ ವ್ಯಕ್ತಿಯು ಹತ್ತಿರದಲ್ಲಿರುವ ಬುದ್ಧಿವಂತ ಮನುಷ್ಯನ ಭಯದಿಂದ ತನ್ನ ಕೆಲಸವನ್ನು ಸ್ವಲ್ಪ ಹೊತ್ತು ಸ್ಥಗಿತಗೊಳಿಸುವುದು
ಉಕ್ಕೋಲ. ಪು: [ದೇ] ಬಿಸಿಲು, ಸೆಕೆ, ಉಷ್ಣತೆ
ಉಕ್ಕೋವಣ. ನ: [ಉತ್ಕೋಪನ] ಉದ್ದೀಪನ, ಉತ್ತೇಜನ, ಪ್ರೇರಿಸುವುದು
ಉಕ್ಕೋವಿಅ. ವಿ: [ಉತ್ಕೋಪಿತ] ಬಹಳವಾಗಿ ಸಿಟ್ಟಿಗೇರಿಸಲ್ಪಟ್ಟ (ಉಪ)
ಉಕ್ಕೋಸ. ಸಕ: [ಉತ್+ಕ್ರುಶ್] ಅಳು, ಚೀರಾಡು, ತಿರಸ್ಕಾರಮಾಡು
ಉಕ್ಕೋಸ. ಪು: [ಉತ್ಕರ್ಷ] ಪ್ರಕರ್ಷ, ಅತಿಶಯತೆ, ಗರ್ವ, ಹೆಮ್ಮೆ, ಅಭಿಮಾನ, ಶ್ರೇಷ್ಠ(ಸೂಅ)
ಉಕ್ಕೋಸ. ವಿ: [ಉತ್ಕೃಷ್ಟ] ಎಲ್ಲದಕ್ಕಿಂತ ಶ್ರೇಷ್ಠವಾದ, ಉತ್ಕೃಷ್ಟವಾದ
ಉಕ್ಕೋಸ. ಪು: [ಉತ್ಕ್ರೋಶ] ಕುರರೀ ಅಥವಾ ಕುರವ ಹಕ್ಕಿ, ನೀರಿನ ಮೇಲೆ ತೇಲಾಡುವ ಒಂದು ಜಲಚರ ಪ್ರಾಣಿ, ವಿ: ಗಟ್ಟಿಯಾಗಿ ಕೂಗುವ ಹಕ್ಕಿ.
ಉಕ್ಕೋಸಣ. ನ: [ಉತ್ಕ್ರೋಶನ] ಕ್ರಂದನ, ಜೋರಾಗಿ ಅಳುವುದು, ತಿರಸ್ಕಾರಮಾಡುವುದು, ಅವಮಾನಿಸುವುದು
ಉಕ್ಕೋಸಿಅ. ವಿ: [ಉತ್ಕ್ರೋಶಿತ] ತಿರಸ್ಕರಿಸಲ್ಪಟ್ಟ, ಅಪಮಾನಕ್ಕೊಳಗಾದ, ಧಿಕ್ಕೃತಿಗೊಳಗಾದ (ಉಪ)
ಉಕ್ಕೋಸಿಅ. 'ಉತ್ಕರ್ಷಿನ್=ಉತ್ಕೃಷ್ಟ' ಶಬ್ದವನ್ನು ನೋಡುವುದು
ಉಕ್ಕೋಸಿಅ. ವಿ: [ದೇ] ಪುರಸ್ಕೃತ, ಮುಂದೆ ಮಾಡಿದ
ಉಕ್ಕೋಸಿಅ. ಪು: [ಉತ್ಕೌಶಿಕ] ಕೌಶಿಕಗೋತ್ರ ಪ್ರರ್ತಕನಾದ ಒಬ್ಬ ಋಷಿ, ನ: ಕೌಶಿಕ ಗೋತ್ರ,
ಉಕ್ಕೋಸಿಯಾ. ಸ್ತ್ರೀ: [ಉತ್ಕೃಷ್ಟಿ] ಉತ್ಕರ್ಷ, ಆಧಿಕ್ಯ(ಭಗ)
ಉಕ್ಕೊಸ್ಸ. 'ಉಕ್ಕೋಸ=ಉತ್ಕೃಷ್ಟ' ಶಬ್ದವನ್ನು ನೋಡುವುದು
ಉಕ್ಖ. ಸಕ: [ಉಕ್ಷ್] ಸಿಂಪಡಿಸು, ಚಿಮುಕಿಸು
ಉಕ್ಖ. ಪು: [ಉಕ್ಷ] ಸಂಬಂಧ, ಜೈನ ಸಾಧುಗಳು ಧರಿಸುವ ವಸ್ತ್ರ-ವಿಶೇಷದ ಒಂದು ಅಂಶ
ಉಕ್ಖ. 'ಉಚ್ಛ=ಉಕ್ಷನ್' ಶಬ್ದವನ್ನು ನೋಡುವುದು
ಉಕ್ಖಇಅ. ವಿ: [ಉತ್ಖಚಿತ] ವ್ಯಾಪ್ತ, ತುಂಬಿದ, ಭರ್ತಿಯಾದ
ಉಕ್ಖಂಡ. ಸಕ: [ಉತ್+ಖಂಡಯ್] ಮುರಿ, ಚೂರುಮಾಡು, ಭಾಗಮಾಡು
ಉಕ್ಖಂಡ. ಪು: [ದೇ] ಸಮೂಹ, ಗುಂಪು, ಕೆಳಕ್ಕೆ ತಳ್ಳಲ್ಪಟ್ಟವನು, ತಗ್ಗು-ದಿಣ್ಣೆಯಿಂದ ಕೂಡಿರುವ ಪ್ರದೇಶ
ಉಕ್ಖಂಡಣ. ನ: [ಉತ್ಖಂಡನ] ಕತ್ತರಿಸುವುದು, ವಿಚ್ಛೇದನ

ಉಕ್ಖಂಡಿಅ. ವಿ: [ಉತ್ಖಂಡಿತ] ಕತ್ತರಿಸಲ್ಪಟ್ಟ, ತುಂಡರಿಸಲ್ಪಟ್ಟ
ಉಕ್ಖಂಡಿಅ. ವಿ: [ದೇ] ಆಕ್ರಮಿಸಲ್ಪಟ್ಟ, ತುಳಿಯಲ್ಪಟ್ಟ
ಉಕ್ಖಂದ. ಪು: [ಅವಸ್ಕಂದ] ಮುತ್ತಿಗೆ ಹಾಕುವುದು, ಮೋಸದಿಂದ ಶತ್ರು ಸೈನ್ಯವನ್ನು ಕೊಲ್ಲುವುದು
ಉಕ್ಖಂಭ. ಪು: [ಉತ್ತಂಭ] ಅವಲಂಬನೆ, ಆಧಾರ
ಉಕ್ಖಂಭಿಯ. 'ಉತ್ತಂಭಿಯ' ಶಬ್ದವನ್ನು ನೋಡುವುದು
ಉಕ್ಖಂಭಿಯ. ನ: [ಔತ್ತಂಭಿಕ] ಅವಲಂಬನೆ, ಆಧಾರ
ಉಕ್ಖಡಮಡ್ಡಾ. ಅ: [ದೇ] ಪುನಃ ಪುನಃ, ಮತ್ತೆ ಮತ್ತೆ (ವವ)
ಉಕ್ಖಣ. ಸಕ: [ಉತ್+ಖನ್] ಕಿತ್ತುಹಾಕು, ಕತ್ತರಿಸು, ಕೊಯ್ಯು
ಉಕ್ಖಣ. ಸಕ: [ದೇ] ಕುಟ್ಟು, ಈ ಮೂಲಕ ಭತ್ತ ಮೊದಲಾದ ಧಾನ್ಯಗಳ ಹೊಟ್ಟು ತೆಗೆಯುವುದು
ಉಕ್ಖಣ. ವಿ: [ದೇ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, ಪುಡಿಮಾಡಲ್ಪಟ್ಟ
ಉಕ್ಖಣಣ. ನ: [ಉತ್ಖನನ]ಅಗೆಯುವುದು, ಬೇರುಸಹಿತ ಕೀಳುವುದು, ನಾಶಪಡಿಸುವುದು (ಪಣ್ಣ)
ಉಕ್ಖಣಣ. ನ: [ದೇ] ಕುಟ್ಟುವುದು, ಕುಟ್ಟಿ ಸಿಪ್ಪೆ, ಹೊಟ್ಟು ತೆಗೆಯುವುದು (ದೇ)
ಉಕ್ಖಣಿಅ. ನ: [ದೇ] ಒಡೆಯಲ್ಪಟ್ಟ, ಕುಟ್ಟಲಾದ, ಹೊಟ್ಟು ತೆಗೆಯಲಾದ (ದೇ)
ಉಕ್ಖತ್ತ. 'ಉಕ್ಖಯ' ಶಬ್ದವನ್ನು ನೋಡುವುದು
ಉಕ್ಖಮ್ಮ– 'ಉಕ್ಖಣ=ಉತ್+ಖನ್' ಶಬ್ದವನ್ನು ನೋಡುವುದು
ಉಕ್ಖಯ. ವಿ: [ಉತ್ಖಾತ] ಕಿತ್ತುಹಾಕಲ್ಪಟ್ಟ, ಬೇರುಸಹಿತ ಕಿತ್ತುಹಾಕಲಾದ, (ಣಾಯಾ), ತೆರೆದಿರುವ, ಮೇಲಕ್ಕೆ ತೆಗೆಯಲ್ಪಟ್ಟ
ಉಕ್ಖಲ}. 'ಉಲೂಖಲ' ಶಬ್ದವನ್ನು ನೋಡುವುದು
ಉಕ್ಖಲಗ}.
ಉಕ್ಖಲಿಯ. ವಿ: [ದೇ. ಉತ್ಖಂಡಿತ] ಬೇರುಸಹಿತ ಕಿತ್ತುಹಾಕಲಾದ, ಕಿತ್ತುಹಾಕಲಾದ
ಉಕ್ಖಲಿಯಾ}. ಸ್ತ್ರೀ: [ದೇ.] ತಟ್ಟೆ, ಒಂದು ಪಾತ್ರೆ
ಉಕ್ಖಲೀ}.
ಉಕ್ಖಾ. ಸ್ತ್ರೀ: [ಊಖಾ] ಅಡಿಗೆಯ ಪಾತ್ರೆ, ಒಂದು ಬಗೆಯ ಪಾತ್ರೆ
ಉಕ್ಖಾಇದ.(ಶೌ). ವಿ: [ಉತ್ಖಾತಿತ] ಕಿತ್ತುಹಾಕಲ್ಪಟ್ಟ,
ಉಕ್ಖಾಯ. 'ಉಕ್ಖಯ' ಶಬ್ದವನ್ನು ನೋಡುವುದು
ಉಕ್ಖಾಲ.ಸಕ: [ಉತ್+ಖನ್, ಖಾಲಯ್] ಕೀಳು ಬೇರುಸಹಿತ ಕೀಳು
ಉಕ್ಖಿಣ. 'ಉಕ್ಖಣ=ಉತ್+ಖನ್' ಶಬ್ದವನ್ನು ನೋಡುವುದು.– 'ಉಕ್ಖಿಣಾಮಿ'
ಉಕ್ಖಿಣ್ಣ. ವಿ: [ದೇ] ನಾಶಮಾಡಲ್ಪಟ್ಟ, ಪುಡಿ ಮಾಡಲ್ಪಟ್ಟ, ರಹಸ್ಯವಾಗಿಡಲಾದ, ಒಂದು ಪಾರ್ಶ್ವದಲ್ಲಿ ಸಡಿಲವಾದ, ಒಂದು ರೀತಿಯಲ್ಲಿ ಸಡಿಲಗೊಂಡ
ಉಕ್ಖಿತ್ತ.} ವಿ: [ಉತ್ಕ್ಷಿಪ್ತ] ಎಸೆಯಲಾದ, ಮೇಲಕ್ಕೆ
ಉಕ್ಖಿತ್ತಯ}. ಹಾರಿಸಲಾದ, ಎತ್ತರಿಸಲಾದ, ಬೇರುಸಮೇತ ಕಿತ್ತುಹಾಕಲಾದ, ಹೊರಗೆ ಹಾಕಲ್ಪಟ್ಟ(ಪಣ್ಣ), ಮೇಲಕ್ಕೆ ಎದ್ದಿರುವ(ಪಿಂಗ) ಗೇಯ–ವಿಶೇಷ, **–ಚರಯ.** ವಿ: [**–ಚರಕ**] ಅಡಿಗೆ ಪಾತ್ರೆಯಿಂದ ಹೊರತೆಗೆದ ಭೋಜನವನ್ನೇ ಸ್ವೀಕರಿಸುವ ನಿಯಮದ ಸಾಧು(ಪಣ್ಣ)
ಉಕ್ಖಿಪ್ಪ. 'ಉಕ್ಖಿವ=ಉತ್ +ಕ್ಷಿಪ್' ಶಬ್ದವನ್ನು ನೋಡುವುದು
ಉಕ್ಖಿಯ. ವಿ: [ಉಕ್ಷಿತ] ಸಿಂಪಡಿಸಲ್ಪಟ್ಟ, ಚಿಮುಕಿಸಲಾದ (ಸೂಅ)
ಉಕ್ಖಿಲ್ಲ. ಸಕ: [ದೇ] ಬುಡ ಸಹಿತ ಕಿತ್ತುಹಾಕು
ಉಕ್ಖಿವ. ಸಕ: [ಉಪ+ಕ್ಷಿಪ್] ಸ್ಥಾಪಿಸು,
ಉಕ್ಖಿವ. ಸಕ: [ಉತ್+ಕ್ಷಿಪ್] ಎಸೆ, ಎತ್ತರಕ್ಕೆ ಎಸೆ, ಹಾರಿಸು,ಕತ್ತರಿಸು, ಎತ್ತು. ವ. ಕೃ–**ಉಕ್ಖಿವಂತಿ**
ಉಕ್ಖಿವಣ. ನ: [ಉತ್ಕ್ಷೇಪಣ] ಮೇಲಕ್ಕೆ ಎಸೆಯುವುದು, ದೂರಮಾಡುವುದು. ವಿ: ದೂರಮಾಡುವವನು(ಕುಮಾ)
ಉಕ್ಖಿವಣಾ. ಸ್ತ್ರೀ: [ಉತ್ಕ್ಷೇಪಣಾ] ಹೊರಗೆ ಹಾಕುವುದು, ದೂರಮಾಡುವುದು
ಉಕ್ಖಿವಿಯ. 'ಉಕ್ಖಿತ್ತ' ಶಬ್ದವನ್ನು ನೋಡುವುದು
ಉಕ್ಖುಂಡ. ಪು: [ದೇ] ಕೊಳ್ಳಿ, ಎರಡೂ ತುದಿ ಉರಿವ ಕಟ್ಟಿಗೆ, ಪಂಜು, ಸಮೂಹ, ಬಟ್ಟೆಯ ಅಂಚು
ಉಕ್ಖುಡ. ಸಕ: [ತುಡ್] ಮುರಿ, ಚೂರುಮಾಡು,
ಉಕ್ಖುಡಿಅ. ವಿ: [ತುಡಿತ] ತುಂಡಾದ, ಕತ್ತರಿಸಲ್ಪಟ್ಟ, ಬೇರೆಯಾದ(ಕುಮಾ), ಖರ್ಚು ಮಾಡಲಾದ
ಉಕ್ಖುತ್ತ. ವಿ: [ದೇ. ಉತ್ಕೃತ್ತ] ಕತ್ತರಿಸಿದ(ದೇ)
ಉಕ್ಖುಬ್ಭ. ಅಕ: [ಉತ್+ಕ್ಷುಭ್] ಕ್ಷುಬ್ಧಗೊಳ್ಳು, ಕದಡು

ಉಕ್ಖುರುಹುಂಚಿಅ. ವಿ: [ದೇ] ಎಸೆಯಲಾದ, ಮೇಲಕ್ಕೆ ಎಸೆಯಲಾದ
ಉಕ್ಖುಲಂಪ. ಸಕ: [ದೇ] ಹುಡುಕಿಸು
ಉಕ್ಖುಹಿಅ. ವಿ: [ಉತ್ಕ್ಷುಬ್ಧ] ಕ್ಷುಬ್ಧ, ಕಡೆಯಲ್ಪಟ್ಟ, ಕ್ಷೋಭೆಗೊಂಡ, ಅಲ್ಲೋಲಕಲ್ಲೋಲಗೊಂಡ
ಉಕ್ಖೇವ. ಪು: [ಉತ್ಕ್ಷೇಪ] ಕಿತ್ತುಹಾಕುವುದು, ಬುಡಸಹಿತ ಕಿತ್ತುಹಾಕುವುದು(ಔಪ), ಮೇಲೆ ಮಾಡುವುದು(ಗಉಡ), ಮೇಲಕ್ಕೆ ಎತ್ತಲಾದ
ಉಕ್ಖೇವ. ಪು: [ಉಪಕ್ಷೇಪ] ಉಪೋದ್ಘಾತ, ಭೂಮಿಕೆ, ಪೀಠಿಕೆ(ಉವಾ)
ಉಕ್ಖೇವಗ. ವಿ: [ಉತ್ಕ್ಷೇಪಕ] ಎತ್ತರಕ್ಕೆ ಎಸೆಯುವವನು, ಪು: ಒಂದು ಜಾತಿಯ ಬೀಸಣಿಗೆ(ಪಣ್ಣ)
ಉಕ್ಖೇವಣ. ನ: [ಉತ್ಕ್ಷೇಪಣ] ಎಸೆಯುವುದು (ಪಉಮ), ಬೇರುಸಹಿತ ಕಿತ್ತುಹಾಕುವುದು
ಉಕ್ಖೇವಿಅ. ವಿ: [ಉತ್ಕ್ಷೇಪಿತ] ಸುಟ್ಟಿರುವ, ಹೊತ್ತಿಸಿರುವ
ಉಕ್ಖೋಡಿಅ. ವಿ: [ಉತ್ಖೋಟಿತ] ಹಾರಿಸಲಾದ, ಕತ್ತರಿಸಲ್ಪಟ್ಟ, ಕಿತ್ತುಹಾಕಲಾದ
ಉಗ. ಅಕ: [ಉತ್+ಗಮ್] ಉದಯಿಸು(ವುದು)ಹುಟ್ಟು
ಉಗ(ಅಪ). ವಿ:[ಉದ್ಗತ]ಉದಯಿಸಿದ, ಹುಟ್ಟಿದ(ಪಿಂಗ)
ಉಗಾಹಿಅ. ವಿ: [ದೇ] ಮೇಲಕ್ಕೆ ಎಸೆಯಲಾದ(ಷಡ್)
ಉಗುಣಪಣ್ಣ ಸ್ತ್ರೀನ: [ಏಕೋನಪಂಚಾಶತ್]
ಉಗುಣುತ್ತರ. ನ: [ಏಕೋನಸಪ್ತತಿ] ಅರುವತ್ತೊಂಬತ್ತು
ಉಗುಣಉಇ. ಸ್ತ್ರೀ: [ಏಕೋನನವತಿ] ಎಂಬತ್ತೊಂಬತ್ತು
ಉಗುಸೀಇ. ಸ್ತ್ರೀ: [ಏಕೋನಶೀತಿ] ಎಪ್ಪತ್ತೊಂಬತ್ತು
ಉಗ್ಗ. ಅಕ: [ಉದ್+ಗಮ್] ಉದಿತವಾಗು, ಹುಟ್ಟು, –'ಉಗ್ಗಂತ'
ಉಗುಣವೀಸಾ. ಸ್ತ್ರೀ: [ಏಕೋನವಿಂಶತಿ] ಹತ್ತೊಂಬತ್ತು.
ಉಗ್ಗ. ಸಕ: [ಉದ್+ಘಾಟಯ್] ತೆರೆ
ಉಗ್ಗ. ವಿ: [ಉಗ್ರ] ತೀವ್ರ, ಪ್ರಬಲ, ತೀಕ್ಷ್ಣ, ಆದಿ ತೀರ್ಥಂಕರನು ರಕ್ಷಕರಾಗಿ ನೇಮಿಸಿದ **ಪು:** ಕ್ಷತ್ರಿಯರ ಒಂದು ಜಾತಿ, ಶಿವನ ಒಂದು ಹೆಸರು, **–ವಈ.** ಸ್ತ್ರೀ:[–ವತೀ] ಜ್ಯೋತಿಶ್ಶಾಸ್ತ್ರದ ಪ್ರಸಿದ್ಧ ನಂದಾ ತಿಥಿಯ ರಾತ್ರಿ, **–ಸಿರಿ.** ಪು: [–ಶ್ರೀಕ] ರಾಕ್ಷಸ ವಂಶದ ಒಬ್ಬ ರಾಜ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಲಂಕೇಶ(ಪಉಮ), **–ಸೇಣ.** ಪು: [–ಸೇನ] ಮಥುರಾ ನಗರದ ಒಬ್ಬ ಯದು ವಂಶದ ರಾಜ (ಣಾಯಾ)
ಉಗ್ಗಂಠ. ಸಕ: [ಉದ್+ಗ್ರಂಥ್] ಗಂಟು ಬಿಚ್ಚು, ಗಂಟು ಬಿಡಿಸು
ಉಗ್ಗಂಧ. ವಿ: [ಉದ್ ಗಂಧ] ಅತ್ಯಂತ ಸುಗಂಧಿತವಾದ (ಗಉಡ)
ಉಗ್ಗಚ್ಛ.} ಅಕ: [ಉದ್+ಗಮ್] ಉದಯವಾಗು,
ಉಗ್ಗಮ.} ವ. ಕೃ_ಉಗ್ಗಮಮಾಣ, ಉಗ್ಗಮಂತ
ಉಗ್ಗಮ. ಪು: [ಉದ್ಗಮ] ಉತ್ಪತ್ತಿ, ಹುಟ್ಟುವುದು, ಉತ್ಪತ್ತಿಗೆ ಸಂಬಂಧಿಸಿದ ಒಂದು ಭಿಕ್ಷಾ–ದೋಷ.
ಉಗ್ಗಮಣ. ನ: [ಉದ್ಗಮನ] ಉದಯ, ಉದಿಸುವುದು, ಹುಟ್ಟುವುದು
ಉಗ್ಗಮಿಯ. ವಿ: [ಉದ್ಗಮಿತ] ಸಂಪಾದಿಸಲ್ಪಟ್ಟ
ಉಗ್ಗಾಮಿಯ. ವಿ: [ಉದ್ಗಮಿತ] ಮೇಲಕ್ಕೆ ಎತ್ತಲ್ಪಟ್ಟ, ಎತ್ತರಿಸಲ್ಪಟ್ಟ
ಉಗ್ಗಯ. ವಿ: [ಉದ್ಗತ] ಹೊರ ಹೊಮ್ಮಿದ, ಹುಟ್ಟಿದ (ಆವ), ಉದಿಸಿದ, ವ್ಯವಸ್ಥಿತ
ಉಗ್ಗಹ. ಪು: [ಅವಗ್ರಹ] ಬಡಿಸಲು ಕೈಗೆತ್ತಿಕೊಂಡಿರುವ ಊಟ
ಉಗ್ಗಹ. ಸಕ: [ರಚಯ್] ರಚಿಸು, ನಿರ್ಮಿಸು, ಮಾಡು
ಉಗ್ಗಹ. ಪು: [ಅವಗ್ರಹ] ಇಂದ್ರಿಯಗಳ ಮೂಲಕ ಉಂಟಾಗುವ ಸಾಮಾನ್ಯ ಜ್ಞಾನ, ಅವಧಾರಣ, ನಿಶ್ಚಯ, ಪ್ರಾಪ್ತಿ, ಲಾಭ(ಆಚೂ), ಪಾತ್ರೆ ಸಾಧ್ವಿಯರ ಒಂದು ಉಪಕರಣ, ಯೋನಿ–ದ್ವಾರ, ಸ್ವೀಕರಿಲು ಯೋಗ್ಯವಾದ ವಸ್ತು (ಪಾಅ), ಆಶ್ರಯ, ವಾಸದ ನೆಲೆ, ವಸತಿ (ಣಾಯಾ), ನಮ್ಮ ವಶದಲ್ಲಿರುವ ವಸ್ತು, ದೇವ ಇಲ್ಲವೆ ಗುರುಗಳಿಂದ ಎಷ್ಟು ದೂರ ಇರಬೇಕೆಂದು ಶಾಸ್ತ್ರ ವಿಧಿಸಿದೆ. ಅಷ್ಟು ಪ್ರದೇಶ, ಒಂದು ಸೀಮಿತ ಭೂಭಾಗ, ಗುರುಗಳೇ ಮೊದಲಾದವರ ಸುತ್ತ ಇರುವ ಶರೀರ ಪ್ರಮಾಣದ ಜಮೀನು, **–ಣಂತ. –ಣಂತಗ.** ನ: [ಅವಗ್ರಹಾನಂತ, –ಕ], ಜೈನಸಾಧ್ವಿಯರ ಮಾನಬಿಂದುವನ್ನು ಮರೆ ಮಾಡಿರುವ ವಸ್ತ್ರ, ಲಂಗೋಟಿ, **–ಪಟ್ಟ, –ಪಟ್ಟಂಗ. ಪುಂ. ನ:** [–ಪಟ್ಟ, –ಕ] ಹಿಂದೆ ಕೊಡಲಾಗಿರುವ ಅರ್ಥವನ್ನು ನೋಡುವುದು
ಉಗ್ಗಹಣ. ನ: [ಅವಗ್ರಹಣ] ಇಂದ್ರಿಯಗಳ ಮೂಲಕ ಉಂಟಾಗುವ ಸಾಮಾನ್ಯ ಜ್ಞಾನ(ವಿಸೇ)

ಉಗ್ಗಹಿಅ. ವಿ: [ರಚಿತ] ನಿರ್ಮಿತವಾದ, ವಿಹಿತವಾದ (ಕುಮಾ)

ಉಗ್ಗಹಿಅ. ವಿ: [ಅವಗೃಹೀತ] ಸಾಮಾನ್ಯ ರೂಪದಿಂದ ತಿಳಿದುಬಂದ, ಬಡಿಸಲು ಕೈಗೆತ್ತಿಕೊಂಡ (ಶಾ), ಸ್ವೀಕರಿಸಲಾದ, ತರಲ್ಪಟ್ಟ, ಬಾಯಲ್ಲಿ ಇರಿಸಿಕೊಂಡ,

ಉಗ್ಗಹಿಅ. ವಿ: [ದೇ] ಕುಶಲತೆಯಿಂದ ಸ್ವೀಕರಿಸಲಾದ

ಉಗ್ಗಾ. ಸಕ: [ಉದ್+ಗೈ] ಉಚ್ಚ ಕಂಠದಿಂದ ಹಾಡು, ಹಾಡು, ವರ್ಣಿಸು, ಪ್ರಶಂಸಿಸು. ವ. ಕೃ-ಉಗ್ಗಾಯಂತ

ಉಗ್ಗಾಢ. ವಿ: [ಉದ್ಗಾಢ] ಅತಿ ಗಾಢವಾದ, ಪ್ರಬಲವಾದ(ಉಪ), ಆರೋಗ್ಯದಿಂದಿರುವ(ಬೃಹ)

ಉಗ್ಗಾಯಂತ. 'ಉಗ್ಗಾ' ಶಬ್ದವನ್ನು ನೋಡುವುದು

ಉಗ್ಗಾರ}. ಪು: [ಉದ್ಗಾರ] ಮಾತು, ಉಕ್ತಿ, ಶಬ್ದ,

ಉಗ್ಗಾಲ}. ಎತ್ತಿಹೇಳುವುದು, ಕಂಠಧ್ವನಿ, ತೇಗು, ವಾಂತಿಮಾಡುವಿಕೆ, ನೀರಿನ ಸಣ್ಣ ಹರಿವು, ಮೆಲುಕುಹಾಕುವುದು

ಉಗ್ಗಾಲ. ಪು: [ದೇ.ಉಗ್ಗಾಲ] ಅಡಕೆಲೆ ಪಿಚಕಾರಿ

ಉಗ್ಗಾಲ. ಪು: [ಉದ್ಗಾರ] ಹೊರ ಹೊಮ್ಮುವುದು, ಉದಾಹರಿಸುವುದು, ವಾಂತಿಮಾಡುವುದು

ಉಗ್ಗಾಹ. ಸಕ: [ಉದ್+ಗ್ರಹ್] ಸ್ವೀಕರಿಸು-'ಉಗ್ಗಾಹೇಇ'

ಉಗ್ಗಾಹ. ಸಕ: [ಅವ+ಗಾಹ್] ಸ್ನಾನಮಾಡು, ನೀರಿನೊಳಗೆ ಇಳಿ

ಉಗ್ಗಾಹ. ಸಕ: [ಉದ್+ಗ್ರಾಹಯ್] ತಗಾದೆಮಾಡು, ಒತ್ತಾಯದಿಂದ ಕೇಳು, ಮೇಲಿನಿಂದು ಓಡಿಸು

ಉಗ್ಗಾಹ. 'ಉಗ್ಗಾಹಾ' ಶಬ್ದವನ್ನು ನೋಡುವುದು

ಉಗ್ಗಾಹಣ. ನ: [ಉದ್ಗ್ರಾಹಣ] ತಗಾದೆಮಾಡುವುದು, ಕೊಟ್ಟ ವಸ್ತುವನ್ನು ಒತ್ತಾಯಪೂರ್ವಕವಾಗಿ ಕೇಳುವುದು

ಉಗ್ಗಾಹಣಿಆ. ಸ್ತ್ರೀ: [ಉದ್ಗ್ರಾಹಣಿಕಾ] ಮೇಲಿನ ಶಬ್ದವನ್ನು ನೋಡುವುದು.

ಉಗ್ಗಾಹಣೀ. ಸ್ತ್ರೀ: [ಉದ್ಗ್ರಾಹಣೀ] ಮೇಲಿನ ಶಬ್ದವನ್ನು ನೋಡುವುದು

ಉಗ್ಗಾಹಾ ಸ್ತ್ರೀ: [ಉದ್ಗಾಥಾ] ಒಂದು ಬಗೆಯ ಛಂದಸ್ಸು

ಉಗ್ಗಾಹಿಅ. ವಿ: [ದೇ. ಉದ್ಗ್ರಾಹಿತ] ಸ್ವೀಕರಿಸಲಾದ, ಎಸೆಯಲ್ಪಟ್ಟ, ಸ್ಥಾಪಿಸಲ್ಪಟ್ಟ, ಪ್ರಾರಂಭಿಸಲ್ಪಟ್ಟ(ದೇ) ಎತ್ತರದಿಂದ ನಡೆಸಿದ, ಮೇಲಿನಿಂದ ನಡೆಸಿದ (ಪಾಅ)

ಉಗ್ಗಾಹಿಮ. ವಿ: [ಅವಗಾಹಿಮ] ಕರಿದ ಪದಾರ್ಥ, (ಪಣ್ಣ)

ಉಗ್ಗಿಣ್ಣ}. ವಿ: [ಉದ್ಗೀರ್ಣ] ಹೇಳಲ್ಪಟ್ಟ, ಕಥಿತ(ಭವಿ),

ಉಗ್ಗಿನ್ನ}. ವಾಂತಿಮಾಡಲ್ಪಟ್ಟ, ಎತ್ತಿಕೊಂಡ, ಮೇಲೆಮಾಡಲ್ಪಟ್ಟ ಮೇಲಕ್ಕೆ ಹೊರಡಿಸಲ್ಪಟ್ಟ

ಉಗ್ಗಿರ. 'ಉಗ್ಗಿಲ' ಶಬ್ದವನ್ನು ನೋಡುವುದು. ವ. ಕೃ-ಉಗ್ಗಿರಂತ

ಉಗ್ಗಿರಣ. ನ: [ಉದ್ಗರಣ] ವಾಂತಿ, ಕಾರಿಕೊಳ್ಳುವುದು, ಉಕ್ತಿ, ಕಥನ

ಉಗ್ಗಿಲ. ಸಕ: [ಉದ್+ಗೃ] ಹೇಳು, ತೇಗು, ವಾಂತಿಮಾಡಿಕೊಳ್ಳು, ಎತ್ತು

ಉಗ್ಗಿಲಿಅ. 'ಉಗ್ಗಿಣ್ಣ' ಶಬ್ದವನ್ನು ನೋಡುವುದು(ಪಾಅ)

ಉಗ್ಗೀಯ. ವಿ: [ಉದ್ಗೀತ] ಉಚ್ಚ ಸ್ವರದಿಂದ ಹಾಡಲಾದ, ಗಟ್ಟಿಯಾಗಿ ಹಾಡಲಾದ, ನ: ಸಂಗೀತ, ಗಾನ, ಗೀತ

ಉಗ್ಗೀಯಮಾಣ. 'ಉಗ್ಗಾ' ಶಬ್ದವನ್ನು ನೋಡುವುದು

ಉಗ್ಗೀರ. 'ಉಗ್ಗಿರ' ಶಬ್ದವನ್ನು ನೋಡುವುದು

ಉಗ್ಗೀವ. ವಿ: [ಉದ್ಗ್ರೀವ] ತವಕದಿಂದ ಕೂಡಿದ, ಉತ್ಸುಕ, ಕತ್ತನ್ನು ಮೇಲಕ್ಕೆ ಎತ್ತಿರುವ. ಉಗ್ಗೀವೀಕಯ. ವಿ:[ಉದ್ಗ್ರೀವಕೃತ] ತವಕದಿಂದಿರುವಂತೆ ಮಾಡಲಾದ.

ಉಗ್ಗುಲುಂಛಿಆ. ಸ್ತ್ರೀ: [ದೇ] ಹೃದ್ರಸದ ಉಕ್ಕುವಿಕೆ, ಭಾವೋದ್ರೇಕ(ದೇ)

ಉಗ್ಗೋವ. ಸಕ: [ಉದ್+ಗೋಪಯ್] ಹುಡುಕು, ಪ್ರಕಟಿಸು, ಮುಗ್ಧಗೊಳಿಸು

ಉಗ್ಗೋವಣಾ. ಸ್ತ್ರೀ: [ಉದ್ಗೋಪನಾ] ಹುಡುಕುವುದು, ಸಂಶೋಧನೆ. 'ಉಗ್ಗವಾ' ಶಬ್ದವನ್ನು ನೋಡುವುದು

ಉಗ್ಗೋವಿಯ. ವಿ: [ಉದ್ಗೋಪಿತ] ವಿಮೋಹಿತ, ಭ್ರಾಂತಿಗೊಳಗಾದ(ಭಗ)

ಉಗ್ಘ. 'ಉಂಘ' ಶಬ್ದವನ್ನು ನೋಡುವುದು

ಉಗ್ಘಟ್ಟಿ}. ಸ್ತ್ರೀ: [ದೇ] ಅವತಂಸ, ಶಿರೋಭೂಷಣ:

ಉಗ್ಘಟ್ಟೀ}. ತಲೆಯಲ್ಲಿ ಧರಿಸುವ ಆಭರಣ

ಉಗ್ಘಡ. ಸಕ: [ಉದ್+ಘಾಟಯ್] ತೆರೆ, ತೆಗೆ ಉದ್ಘಾಟಿಸುವುದು(ಪ್ರಾಮಾ]

ಉಗ್ಘಡ. ಅಕ: [ಉದ್+ಘಟ್] ತೆರೆದುಕೊಳ್ಳು
ಉಗ್ಘಡಿಅ. ವಿ: [ಉದ್ಘಾಟಿತ] ತೆರೆಯಲಾಗಿರುವ, ಪ್ರಕಾಶಪಡಿಸಲ್ಪಟ್ಟ, ಕತ್ತರಿಸಲ್ಪಟ್ಟ, ನಾಶಮಾಡಲಾದ
ಉಗ್ಘರ. ವಿ: [ಉದ್ಗೃಹ] ಮನೆ-ಮಠ ತ್ಯಜಿಸಿ ಸಂನ್ಯಾಸಿಯಾದವನು, ಸಾಧು
ಉಗ್ಘವ. 'ಅಗ್ಘವ' ಶಬ್ದವನ್ನು ನೋಡುವುದು-'ಅಗ್ಘವಇ'
ಉಗ್ಘಸಿಯ. ನ: [ಅಪಘರ್ಷಿತ] ಘರ್ಷಣೆ, ಉಜ್ಜಲ್ಪಟ್ಟ
ಉಗ್ಘಾಅ. ಪು: [ದೇ] ಸಮೂಹ, ಗುಂಪು, ತಗ್ಗು-ದಿಣ್ಣೆಗಳಿಂದ ಕೂಡಿದ ಪ್ರದೇಶ
ಉಗ್ಘಾಅ. ಪು: [ಉದ್ಘಾತ] ಆರಂಭ, ಹೊಡೆತ, ಏಟು, ಕತ್ತರಿಸುವಿಕೆ, ಉಪೋದ್ಘಾತ, ಪೀಠಿಕೆ, ನಾಶ, ನ: **ಪ್ರಾಯಶ್ಚಿತ್ತ,** ಈ ಪ್ರಾಯಶ್ಚಿತ್ತದ ವರ್ಣನೆ ಇರುವ ನಿಶೀಥ ಸೂತ್ರದ ಒಂದು ಅಂಶ(ಆವ)
ಉಗ್ಘಾಅ. ಪು: [ಉದ್+ಘಾತಯ್] ವಿನಾಶಮಾಡು
ಉಗ್ಘಾಇಮ. ವಿ: [ಉದ್ಘಾತಿಮ] ಲಘುವಾದ, ಚಿಕ್ಕದಾದ, ನ: ಲಘು ಪ್ರಾಯಶ್ಚಿತ್ತ
ಉಗ್ಘಾಇಯ. ವಿ: [ಉದ್ಘಾತಿತ] ವಿನಾಶಮಾಡಲ್ಪಟ್ಟ, ನ:ಲಘು ಪ್ರಾಯಶ್ಚಿತ್ತ(ಠಾ),ಲಘು ಪ್ರಾಯಶ್ಚಿತ್ತವುಳ್ಳ
ಉಗ್ಘಾಇಯ. ನ: [ಉದ್ಘಾತಿಕ] ಲಘು ಪ್ರಾಯಶ್ಚಿತ್ತ
ಉಗ್ಘಾಡ. ಸಕ: [ಉದ್+ಘಾಟಯ್] ತೆರೆ, ತೆಗೆ, ಪ್ರಕಟಪಡಿಸು, ಹೊರಹಾಕು
ಉಗ್ಘಾಡ. ವಿ: [ಉದ್ಘಾಟ] ತೆರೆದಿರುವ, ಮರೆಮಾಡದಿರುವ(ಪಉಮ), ಸ್ವಲ್ಪ ಮುಚ್ಚಿರುವ, ಪ್ರಕಟ, ಪರಿಪೂರ್ಣ ಪು: ಪ್ರಕಟನೆ, ಪ್ರಕಾಶ
ಉಗ್ಘಾಡಣ. ನ: [ಉದ್ಘಾಟನ] ತೆರೆಯುವುದು, ತೆಗೆಯುವುದು, ಹೊರಹಾಕುವುದು, ದೂರಮಾಡುವುದು
ಉಗ್ಘಾಡಣಾ. ಸ್ತ್ರೀ: [ಉದ್ಘಾಟನಾ] ಮೇಲಿನ ಶಬ್ದವನ್ನು ನೋಡುವುದು
ಉಗ್ಘಾಡಿಅ. ವಿ: [ಉದ್ಘಾಟಿತ] ತೆರೆಯಲ್ಪಟ್ಟಿರುವ, ಪ್ರಕಟಿತವಾಗಿರುವ, ಪ್ರಕಾಶಗೊಂಡಿರುವ(ಸೇ)
ಉಗ್ಘಾಯಣ.ನ:[ಉದ್ಘಾತನ] ನಾಶ(ಆಚಾ), **ಪೂಜ್ಯ** ಸ್ಥಾನ, ಉತ್ತಮ ಸ್ಥಳ, ಸರೋವರಕ್ಕೆ ಹೋಗುವ ದಾರಿ
ಉಗ್ಘಾರ. ಪು: [ಉದ್ಘಾರ] ಸಿಂಪಡಿಕೆ, ಚಿಮುಕಿಸುವುದು
ಉಗ್ಘಿಟ್ಠ.}. ವಿ: [ಉದ್ಘೃಷ್ಟ] ಉಜ್ಜಲ್ಪಟ್ಟ, ತಿಕ್ಕಲ್ಪಟ್ಟ
ಉಗ್ಘುಟ್ಠ}.
ಉಗ್ಘುಟ್ಠ. ವಿ: [ಉದ್ಘೃಷ್ಟ] ಘೋಷಿತ, ಗಟ್ಟಿಯಾಗಿ ಕೂಗಿ ಹೇಳಲ್ಪಟ್ಟ, (ಸುರ)
ಉಗ್ಘುಟ್ಟ. ವಿ: [ದೇ] ನಷ್ಟವಾದ, ಕಳೆದು ಹೋದ, ದೂರಮಾಡಲ್ಪಟ್ಟ, ನಾಶಮಾಡಲ್ಪಟ್ಟ
ಉಗ್ಘುಸ. ಸಕ: [ಮೃಜ್] ತೊಳೆ, ಶುದ್ಧಮಾಡು(ಹೇ)
ಉಗ್ಘುಸ. ಸಕ: [ಉದ್+ಘುಷ್] 'ಉಗ್ಘೋಸ' ಶಬ್ದವನ್ನು ನೋಡುವುದು
ಉಗ್ಘುಸಿಅ. ವಿ: [ಮೃಷ್ಟ] ತೊಳೆಯಲ್ಪಟ್ಟ, ಶುದ್ಧಮಾಡಲ್ಪಟ್ಟ(ಕುಮಾ)
ಉಗ್ಘೋಸ. ಸಕ: [ಉದ್+ ಘೋಷಯ್] ಘೋಷಣೆ ಮಾಡು, ಡಂಗೂರ ಸಾರಿಸಿ ಪ್ರಕಟಪಡಿಸು
ಉಗ್ಘೋಸ. ಪು: [ಉದ್ಘೋಷ] ಕೆಳಗಿನ ಶಬ್ದವನ್ನು ನೋಡುವುದು
ಉಗ್ಘೋಸಣಾ. ಸ್ತ್ರೀ: [ಉದ್ಘೋಷಣಾ] ಡಂಗೂರ ಸಾರಿಸುವುದು, ಡಂಗೂರ ಸಾರಿಸಿ ಪ್ರಕಟಪಡಿಸುವುದು
ಉಗ್ಘೋಸಿಯ. ವಿ: [ಮಾರ್ಜಿತ] ಶುದ್ಧ ಮಾಡಲಾದ, ತೊಳೆಯಲಾಗಿರುವ
ಉಗ್ಘೋಸಿಯ. ವಿ: [ಉದ್ ಘೋಷಿತ] ಘೋಷಿಸಲಾದ, ಪ್ರಕಟಪಡಿಸಲಾದ
ಉಘೂಣ. ವಿ: [ದೇ] ಪೂರ್ಣ, ತುಂಬಿದ
ಉಚಿಯ. ವಿ: [ಉಚಿತ] ಯೋಗ್ಯ, ಅನುರೂಪ (ಕುಮಾ), -ಣ್ಣು. ವಿ: [-ಜ್ಞ] ವಿವೇಕಿ
ಉಚ್ಚ. ನ: [ದೇ] ಹೊಕ್ಕುಳ ಪ್ರದೇಶ
ಉಚ್ಚ}. ವಿ: [ಉಚ್ಚ,-ಕ,ಉಚ್ಚೈಸ್]ಎತ್ತರದ,ಉತ್ತಮ,
ಉಚ್ಚಅ. ಉತ್ಕೃಷ್ಟ, **-ಚ್ಛಂದ.** ವಿ: [**-ಚ್ಛಂದಸ್**] ಸ್ವೇಚ್ಛಾಚಾರಿ, -ಣಾಗರೀ. **'-ನಾಗರೀ'** ಶಬ್ದವನ್ನು ನೋಡುವುದು(ಕಪ್ಪ). -ತ್ತ. ನ: [-ತ್ವ]ಎತ್ತರ, ಶ್ರೇಷ್ಠತೆ, ಉತ್ತಮತೆ(ಠಾ), **ತ್ತಭಯಗ, -ತ್ತಭಯಯ** ಪು: [**-ತ್ವಭೃತಕ**]ಇದರಿಂದ ಕಾಲ ಮತ್ತು ವೇತನದ ಒಪ್ಪಂದ ಮಾಡಿಕೊಂಡು ಕಾಲಕ್ಕೆ ತಕ್ಕಂತೆ ಗೊತ್ತಾದ ಕೆಲಸವನ್ನು ನೌಕರನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ. **-ತ್ತರಿಯಾ.** ಸ್ತ್ರೀ: [**ತ್ತರಿಕಾ**] ಲಿಪಿ-ವಿಶೇಷ, **-ತ್ಥವಣಯ.** ನ: [**ಸ್ಥಾಪನಕ**] ಉದ್ದಗೋಲಾಕಾರದ ವಸ್ತು, **-ವಚಿಆ.** ಸ್ತ್ರೀ: [**ಉಚ್ಚಾವಚಿಕಾ**] ಮೇಲೆ-ಕೆಳಗೆಮಾಡುವುದು, ಹೇಗೆ ಎಂದರೆ ಹಾಗೆ ಇಡುವುದು, **-ವಾಯ.** ಪು:

[ವಾದ]ಪ್ರಶಂಸೆ, ಹೊಗಳಿಕೆ(ಉಪ), 'ಉಚ್ಚಾ' ಶಬ್ದವನ್ನು ನೋಡುವುದು

ಉಚ್ಚಇಅ. ವಿ: [ಉಚ್ಚಯಿತ] ಒಟ್ಟುಗೂಡಿಸಿದ, ಏಕತ್ರಗೊಳಿಸಿದ(ಕಾಲ)

ಉಚ್ಚಂತಯ. ಪು: [ಉಚ್ಚಂತಗ] ದಂತರೋಗ, ಹಲ್ಲಿನಲ್ಲಿ ಉಂಟಾಗುವ ಒಂದು ರೋಗ(ರಾಜ)

ಉಚ್ಚಂಪಿಅ. ವಿ: [ದೇ] ಉದ್ದವಾದ, ವಿಸ್ತಾರವಾದ, ಆಕ್ರಮಿಸಲ್ಪಟ್ಟ, ಹತ್ತಿಕ್ಕಲಾದ, ತುಳಿಯಲ್ಪಟ್ಟ(ತಂದು)

ಉಚ್ಚಂಡಿಯ. ವಿ: [ದೇ] ಎತ್ತರಕ್ಕೆ ಏರಿಸಲ್ಪಟ್ಟ, ಮೇಲಕ್ಕೆ ಹತ್ತಿಸಲ್ಪಟ್ಟ

ಉಚ್ಚಡ್ಡಿಅ. ವಿ: [ದೇ] ಎತ್ತರಕ್ಕೆ ಎಸೆಯಲ್ಪಟ್ಟ

ಉಚ್ಚತ್ತ. ವಿ: [ಉತ್ಯಕ್ತ] ಪತಿತ, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ

ಉಚ್ಚತ್ತವರತ್ತ. ನ: [ದೇ] ಎರಡೂ ಕಡೆಯ ಸ್ಥೂಲ ಭಾಗ, ಅನಿಯಮಿತ ತಿರುಗಾಟ, ಅವ್ಯವಸ್ಥಿತ ಪರಿವರ್ತನೆ

ಉಚ್ಚತ್ಥ. ವಿ: [ದೇ] ದೃಢ, ಬಲಿಷ್ಠವಾದ

ಉಚ್ಚದಿಅ. ವಿ: [ದೇ] ಕದಿಯಲ್ಪಟ್ಟ, ಕದ್ದ(ಷಡ್)

ಉಚ್ಚಪ್ಪ. ವಿ: [ದೇ] ಮೇಲೆ ಹತ್ತಿ ಕುಳಿತ(ದೇ)

ಉಚ್ಚಯ. ಸಕ: [ಉತ್+ತ್ಯಜ್] ಬಿಟ್ಟುಬಿಡು, ತ್ಯಜಿಸು (ಪಉಮ)

ಉಚ್ಚಯ. ಪು: [ಉಚ್ಚಯ] ರಾಶಿ, ಗುಪ್ಪೆ, ಎತ್ತರಕ್ಕೆ ಗುಡ್ಡೆ(ರಾಶಿ) ಮಾಡು, ನೀವಿ, ಸೀರೆಯ ಸೊಂಟದ ಗಂಟು(ಪಾಅ), **–ಬಂಧ.** ಪು: [–ಬಂಧ] ಕಟ್ಟುವಿಕೆ, ವಸ್ತುಗಳನ್ನು ಒಂದರ ಮೇಲೊಂದು ಇಟ್ಟು ಕಟ್ಟುವುದು

ಉಚ್ಚಯ. ಪು: [ಅವಚಯ] ಒಟ್ಟುಗೂಡಿಸುವುದು,

ಉಚ್ಚರ. ಸಕ: [ಉತ್+ಚರ] ದಾಟು, ಮೀರಿ ಹೋಗು, ಹೇಳು, ಉಚ್ಚರಿಸು, ಅಕ: ಸಮರ್ಥನಾಗು, ಹೊರ ಹೊರಡು –'ಉಚ್ಚರಏ'

ಉಚ್ಚರಣ. ನ: [ಉಚ್ಚರಣ] ಉಚ್ಚರಿಸುವುದು, ಹೇಳುವುದು (ಸುಪಾ)

ಉಚ್ಚರಿಂಯು. ವ: [ಉಚ್ಚರಿತ] ದಾಟಿದ(ನದಿ ಮುಂತಾದ್ದು), ದಡ ಮುಟ್ಟಿದ, ಹೇಳಲ್ಪಟ್ಟ, ಉಕ್ತ, ಕಥಿತ(ವಿಸೇ)

ಉಚ್ಚಲಣ. ನ: [ಉಚ್ಚಲನ] ಹಿಸುಕುವುದು, ಮರ್ದಿಸುವುದು, ತಿಕ್ಕುವುದು(ಪಾಅ)

ಉಚ್ಚಲಿಯ. ವಿ: [ಉಚ್ಚಲಿತ] ಚಲಿಸಿದ, ಹೋದ

ಉಚ್ಚಲ್ಲ. ವಿ: [ದೇ] ಆಕ್ರಮಿಸಲ್ಪಟ್ಟ, ಮೇಲೆ ಹತ್ತಿ ಕುಳಿತ, ಸೀಳಲ್ಪಟ್ಟ, ಕತ್ತರಿಸಲ್ಪಟ್ಟ(ಷಡ್)

ಉಚ್ಚಲ್ಲ. ಸಕ: [ಉತ್+ಚಲ್] ಚಲಿಸು, ಹೋಗು, ಸಮೀಪಕ್ಕೆ ಬರು

ಉಚ್ಚಲ್ಲಿಯ. ವಿ: [ಉಚ್ಚಲಿತ] ಹೋದ, ಹೋಗಿರುವ, ಸಮೀಪಕ್ಕೆ ಬಂದಿರುವ

ಉಚ್ಚಾ. ಅ: [ಉಚ್ಚೈಸ್] ಎತ್ತರವಾದ, ಶ್ರೇಷ್ಠವಾದ(ಠಾ), ಅಧಿಕವಾದ, **–ಗೋತ್ತ, –ಗೋಯ.** ನ: [–ಗೋತ್ರ] ಉತ್ತಮ ಗೋತ್ರ, ಶ್ರೇಷ್ಠ ವಂಶ, ಉತ್ತಮವೆಂದು ಪರಿಗಣಿತವಾದ ಕುಲದಲ್ಲಿ ಹುಟ್ಟಲು ಕಾರಣವಾದ ಕರ್ಮ–ವಿಶೇಷ(ಠಾ) **–ವಯ.** ನ: [–ವ್ರತ] ಮಹಾವ್ರತ(ಉತ್ತ), ವಿ: ಮಹಾವ್ರತಧಾರಿ(ಉತ್ತ)

ಉಚ್ಚಾಅ. ವಿ: [ದೇ] ಆಯಾಸಗೊಂಡ(ಓಘ), ಪು: ಆಲಿಂಗನ(ಸುಪಾ)

ಉಚ್ಚಾಇಯ. ವಿ: [ದೇ. ಉತ್ತ್ಯಾಜಿತ] ಮೇಲಕ್ಕೆ ಎಬ್ಬಿಸಲಾದ, ಎತ್ತಿ ನಿಲ್ಲಿಸಲಾದ

ಉಚ್ಚಾಗ. ಪು: [ಉಚ್ಚಾಗ] ಹಿಮಾಲಯ ಪರ್ವತ. **–ಯ.** ವಿ: [–ಜ] ಹಿಮಾಲಯದಲ್ಲಿ ಉದಿಸಿದ (ಕಪ್ಪ)

ಉಚ್ಚಾಡ. ವಿ: [ದೇ} ವಿಪುಲ. ವಿಶಾಲ (ದೆ)

ಉಚ್ಚಾಡ. ಸಕ: [ದೇ] ತಡೆ, ನಿವಾರಿಸು **ಅಕ:** ದುಃಖಿಸು, ಖಿನ್ನನಾಗು

ಉಚ್ಚಾಡಣ. ನ: [ಉಚ್ಚಾಟನ] ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಕೊಂಡೊಯ್ಯುವುದು ಸ್ವಸ್ಥಾನದಿಂದ ಹೊರಗಟ್ಟುವುದು. ವಸ್ತುವನ್ನು ಅದರ ಸ್ಥಾನದಿಂದ ಹಾರಿಸಬಹುದಾದ ಪ್ರಭಾವವುಳ್ಳ ಮಂತ್ರ–ವಿಶೇಷ

ಉಚ್ಚಾಡಣೀ: ಸ್ತ್ರೀ: [ಉಚ್ಚಾಟನೀ] ವಸ್ತುವನ್ನು ಅದರ ಜಾಗದಿಂದ ಹಾರಿಸಬಹುದಾದ ಪ್ರಭಾವವುಳ್ಳ ವಿದ್ಯೆ

ಉಚಚಾಡಿರ. ವಿ: [ದೇ] ತಡೆಯುವಂಥ, ನಿವಾರಿಸುವ, ದುಃಖಿಸುವವ, ಖಿನ್ನನಾದ

ಉಚ್ಚಾರ. ಸಕ: [ಉತ್+ಚಾರಯ್) ಹೇಳು, ಉಚ್ಚರಿಸು, ಕಕ್ಕಸ್ಸಿಗೆ ಹೋಗು ಮಲವಿಸರ್ಜನೆ, ವ. ಕೃ– **'ಉಚ್ಚಾರಯಂತ'**

ಉಚ್ಚಾರ. ಪು: [ಉಚ್ಚಾರ] ಉಚ್ಚಾರಣ, ಮಲ, ಮಲವಿಸರ್ಜಿಸುವುದು(ಉವಾ)

ಉಚ್ಚಾರ. ವಿ: [ದೇ] ವಿಮಲ, ಸ್ವಚ್ಛ

ಉಚ್ಚಾರಣ. ನ: [ಉಚ್ಚಾರಣ] ಕಥನ, ಹೇಳುವುದು

ಉಚ್ಚಾರಿಅ. ವಿ: [ದೇ] ಸ್ವೀಕರಿಸಲ್ಪಟ್ಟ, ಪಡೆದುಕೊಂಡ, ಹಿಡಿಯಲ್ಪಟ್ಟ

ಉಚ್ಚಾರಿಅ. ವಿ: [ಉಚ್ಚಾರಿತ] ಕಥಿತ, ಹೇಳಲ್ಪಟ್ಟ, ಉಕ್ತ, ಕಕ್ಕಸ್ಸಿಗೆ ಹೋಗಿರುವ

ಉಚ್ಚಾಲ. ಸಕ: [ಉತ್+ಚಾಲಯ್] ಮೇಲಕ್ಕೆ ಎಸೆ, ದೂರಮಾಡು

ಉಚ್ಚಾಲಇಉ. ವಿ: [ಉಚ್ಚಾಲಯಿತೃ] ದೂರ ಮಾಡುವವನು, ತ್ಯಜಿಸುವವನು,

ಉಚ್ಚಾಲಿಯ. ವಿ: [ಉಚ್ಚಾಲಿತ] ಮೇಲಕ್ಕೆ ಎಬ್ಬಿಸಲಾದ, ಎತ್ತಿಕೊಂಡ, ಮೇಲೆ ಮಾಡಲಾದ(ಓಘ)

ಉಚ್ಚಾವ. ಸಕ: [ಉಚ್ಚಯ್] ಮೇಲೆ ಮಾಡು, ಎಬ್ಬಿಸು ಎತ್ತರಿಸು

ಉಚ್ಚಾವಯ. ವಿ: [ಉಚ್ಚಾವಚ] ಮೇಲೆ ಮತ್ತು ಕೆಳಗೆ(ಪಣ್ಣ), ಉತ್ತಮ ಮತ್ತು ಅಧಮ(ಭಗ), ಅನುಕೂಲ ಮತ್ತು ಪ್ರತಿಕೂಲ(ಭಗ), ಅಸಮಂಜಸ, ಅವ್ಯವಸ್ಥಿತ, ವಿವಿಧ, ನಾನಾವಿಧ, ಅತಿ ಉತ್ಕೃಷ್ಟವಾದ(ಉವಾ)

ಉಚ್ಚಾವಿಯ. ವಿ: [ಉಚ್ಚಿತ] ಎತ್ತರಿಸಲ್ಪಟ್ಟ, ಮೇಲೆ ಮಾಡಲ್ಪಟ್ಟ

ಉಚ್ಚಿಟ್ಠ. ಅಕ: [ಉತ್+ಸ್ಥಾ] ಎದ್ದುನಿಲ್ಲು

ಉಚ್ಚಿಡಿಮ. ವಿ: [ದೇ] ಮರ್ಯಾದೆ ಇಲ್ಲದ, ನಿರ್ಲಜ್ಜ,

ಉಚ್ಚಿಣ. ಸಕ: [ಉತ್+ಚಿ] ಹೂವು ಇತ್ಯಾದಿಗಳನ್ನು ಕೊಯ್ದು ರಾಶಿಹಾಕು. –ವ. ಕೃ–**ಉಚ್ಚಿಣಂತ**

ಉಚ್ಚಿಣಣ. ನ: [ಉಚ್ಚಯನ] ಒಟ್ಟುಗೂಡಿಸುವುದು

ಉಚ್ಚಿಣಿಯ. ವಿ: [ಉಚ್ಚಿತ] ಒಟ್ಟುಗೂಡಿಸಲಾದ

ಉಚ್ಚಿಣಿರ. ವಿ: [ಉಚ್ಚೇತೃ] ಹೂವು ಇತ್ಯಾದಿಗಳನ್ನು ಆಯುವವನು(ಕುಮಾ)

ಉಚ್ಚಿಯ. '**ಉಚಿಯ**' ಶಬ್ದವನ್ನು ನೋಡುವುದು

ಉಚ್ಚಿವಲಯ. ನ: [ದೇ] ಕಲುಷಿತವಾದ ನೀರು, ಕೊಳೆನೀರು

ಉಚ್ಚುಂಚ. ವಿ: [ದೇ] ಅಹಂಕಾರಿ, ಗರ್ವಿಷ್ಟ, ಅಭಿಮಾನಿ

ಉಚ್ಚುಗ. ವಿ: [ದೇ] ಚಂಚಲವಾಗಿರುವ, ಸ್ಥಿರವಾಗಿಲ್ಲದ (ಷಡ್)

ಉಚ್ಚುಡ. ಅಕ: [ಉತ್+ಚುಡ] ದೂರ ಸರಿಸು, ವ. ಕೃ–**ಉಚ್ಚುಡಂತ**

ಉಚ್ಚುಪ್ಪ. ಸಕ: [ಚಟ್] ಹತ್ತು, ಮೇಲೆ ಹತ್ತಿ ಕುಳಿತುಕೊಳ್ಳು

ಉಚ್ಚುಪ್ಪಿಅ. ವಿ: [ದೇ. ಚಟಿತ] ಮೇಲೆ ಹತ್ತಿ ಕುಳಿತಿರುವ

ಉಚ್ಚುರಣ. (ದೇ) ಉಚ್ಛಿಷ್ಟ, ತಿಂದು ಮಿಕ್ಕ, ಎಂಜಲು

ಉಚ್ಚುಲಉಲಿಅ. ನ: [ದೇ] ಕುತೂಹಲದಿಂದ ಬೇಗ ಬೇಗ ಹೋಗುವುದು

ಉಚ್ಚುಲ್ಲ. ವಿ: [ದೇ] ಉದ್ವಿಗ್ನ, ಖಿನ್ನ, ಮೇಲೆ ಹತ್ತಿ ಕುಳಿತ, ಹೆದರಿದ

ಉಚ್ಚೂಡ. ಪು: [ಉಚ್ಚೂಡ] ಬಾವುಟದ ಕೆಳಗಡೆ ನೇತಾಡುತ್ತಿರುವ ಅಲಂಕರಿಸಿದ ಬಟ್ಟೆಯ ಅಂಚು

ಉಚ್ಚೂರ. ವಿ: [ದೇ] ನಾನಾ ವಿಧ, ಬಹುವಿಧ

ಉಚ್ಚೂಲ. ಪು: [ಅವಚೂಲ] ಬಾವುಟದ ಕೆಳಗೆ ಜೋಲಾಡುತ್ತಿರುವ ಅಲಂಕರಿಸಿದ ಬಟ್ಟೆಯ ಅಂಚು(ಉಪ) (ವಿಪಾ) ತಲೆಕೆಳಕಾಗಿ ನಿಲ್ಲಿಸಿದ

ಉಚ್ಚೇ. '**ಉಚ್ಚಿಣ**' ಶಬ್ದವನ್ನು ನೋಡುವುದು

ಉಚ್ಚೇಯ. ವಿ: [ಉಚ್ಚೇತಸ್] ಯೋಚನೆಯಿಂದ ಕೂಡಿದ ಮನಸ್ಸುಳ್ಳ(ಪಾಅ)

ಉಚ್ಚೆಲ್ಲರ. ನ: [ದೇ] ಚೌಳುಮಣ್ಣಿನ ಭೂಮಿ, ಬಂಜರುಭೂಮಿ, ಜಘನ ಸ್ಥಾನದಲ್ಲಿರುವ ಕೂದಲು

ಉಚ್ಚೇವ. ವಿ: [ದೇ] ಪ್ರಕಟ, ವ್ಯಕ್ತ(ದೇ)

ಉಚ್ಚೋಡ. ಪು: [ದೇ] ಶೋಷಣೆ(ಕಪ್ಪೂ)

ಉಚ್ಚೋದಯ. ಪು: [ಉಚ್ಚೋದಯ] ಚಕ್ರವರ್ತಿಯ ಒಬ್ಬ ದೇವನು ಮಾಡಿದ ಉಪ್ಪರಿಗೆ ಮಹಲು

ಉಚ್ಚೋಲ. ಪು: [ದೇ] ಖೇದ, ಉದ್ವೇಗ, ನೀವಿ, ಹೆಣ್ಣಿನ ಸೀರೆಯ ಬಾಳೆಕಾಯಿ ಗಂಟು(ದೇ)

ಉಚ್ಛ. ಪು: [ಉಕ್ಷನ್] ಎತ್ತು,

ಉಚ್ಛ. ಪು: [ದೇ] ಕರುಳಿನ ಹೊದಿಕೆ, ವಿ: ನೂನ, ಕೊರತೆ

ಉಚ್ಛಅ. ಪು: [ಉತ್ಸವ] ಕ್ಷಣ, ಉತ್ಸವ, ಸಂತೋಷವನ್ನುಂಟು ಮಾಡುವ ಹಬ್ಬ

–ಉಚ್ಛಅ. ವಿ: [ಪೃಚ್ಛಕ] ಪ್ರಶ್ನಿಸುವವನು(ಗಾ)

ಉಚ್ಛಇಅ. ವಿ: [ಉಚ್ಛದಿತ] ಆಚ್ಛಾದಿತ, ಮರೆಮಾಡಲ್ಪಟ್ಟ, ಹೊದಿಸಲ್ಪಟ್ಟ

ಉಚ್ಛಂಖಲ. ವಿ: [ಉಚ್ಛೃಂಖಲ] ಸರಪಳಿಯಿಲ್ಲದ, ಕಟ್ಟಿಲ್ಲದ, ಬಂಧನವಿಲ್ಲದ, ಸ್ವೇಚ್ಛಾ ವೃತ್ತಿಯ, ಉದ್ಧತ, ನಿರಂಕುಶ

ಉಚ್ಛಂಖಲಿಯ. ವಿ: [ಉಚ್ಛೃಂಖಲಿತ] ಕಟ್ಟಿಲ್ಲದೆ ಮಾಡಿದ, ಸ್ವೇಚ್ಛೆಯಾಗಿ ಮಾಡಿದ(ಗಉಡ)

ಉಚ್ಛಂಗ. ಪು: [ಉತ್ಸಂಗ] ಮಧ್ಯಭಾಗ, ತೊಡೆ, ಉಡಿ(ಪಾಅ), ಮಡಿಲು, ಹಿಂಭಾಗ(ಔಪ)
ಉಚ್ಛಂಗಿಅ. ವಿ: [ಉತ್ಸಂಗಿತ] ಮಡಿಲಿನಲ್ಲಿಟ್ಟುಕೊಂಡ, ಉಡಿಯಲ್ಲಿ ಇಟ್ಟುಕೊಂಡ
ಉಚ್ಛಂಗಿಅ. ವಿ: [ದೇ] ಮುಂದೆ ಮಾಡಿದ, ಮುಂದೆ ಇಟ್ಟಿರುವ(ದೇ)
ಉಚ್ಛಂಘ. 'ಉತ್ಥಂಘ' ಶಬ್ದವನ್ನು ನೋಡುವುದು
ಉಚ್ಛಂಟ. ಪು: [ದೇ] ಆವೇಶದಿಂದ ಮಾಡಿದ ಕಳ್ಳತನ
ಉಚ್ಛಟ್ಟ. ಪು: [ದೇ] ಕಳ್ಳ
ಉಚ್ಛಡಿಅ. ವಿ: [ದೇ] ಕದ್ದ ಮಾಲು
-ಉಚ್ಛಣ. ನ: [ಪ್ರಚ್ಛನ] ಪ್ರಶ್ನೆ ಮಾಡುವುದು, ಕೇಳುವುದು
ಉಚ್ಛಣ್ಣ. 'ಉಚ್ಛನ್ನ' ಶಬ್ದವನ್ನು ನೋಡುವುದು
ಉಚ್ಛತ. ನ: [ಅಪಚ್ಛತ್ರ] ತನ್ನ ದೋಷವನ್ನು ಮುಚ್ಚಿಕೊಳ್ಳುವ ವ್ಯರ್ಥ ಪ್ರಯತ್ನ, ಸುಳ್ಳು ಮಾತು
ಉಚ್ಛನ್ನ. ವಿ: [ಉತ್ಸನ್ನ] ಕತ್ತರಿಸಿದ, ತುಂಡರಿಸಲ್ಪಟ್ಟ, ನಾಶವಾದ(ಕುಮಾ)
ಉಚ್ಛಪ್ಪ. ಸಕ: [ಉತ್+ಸರ್ಪಯ್] ಮೇಲಕ್ಕೆ ಮಾಡು, ಉನ್ನತಿಗೊಳಿಸು, ಪ್ರಭಾವಿತಗೊಳಿಸು
ಉಚ್ಛಪ್ಪಣ. ನ: [ಉತ್ಸರ್ಪಣ] ಉನ್ನತಿ, ಅಭ್ಯುದಯ
ಉಚ್ಛಪ್ಪಣಾ. ಸ್ತ್ರೀ: [ಉತ್ಸರ್ಪಣಾ] ಮೇಲಿನ ಶಬ್ದವನ್ನು ನೋಡುವುದು
ಉಚ್ಛಲ. ಅಕ: [ಉತ್+ಶಲ್] ಮೇಲಕ್ಕೆ ಹಾರು, ನೆಗೆ, ಎತ್ತರಕ್ಕೆ ಹೋಗು, ಜಿಗಿ ಹರಡು. ವ. ಕೃ- **ಉಚ್ಛಲಂತ**
ಉಚ್ಛಲಣ. ನ: [ಉಚ್ಛಲನ] ಮೇಲಕ್ಕೆ ನೆಗೆಯುವುದು
ಉಚ್ಛಲಿಅ. ವಿ: [ಉಚ್ಛಲಿತ] ಮೇಲಕ್ಕೆ ಹಾರಿದ, ಎತ್ತರಕ್ಕೆ ಹೋದ(ಗಾ), ಹರಡಿದ, ವ್ಯಾಪ್ತ(ಸುಪಾ)
ಉಚ್ಛಲಿರ. ವಿ: [ಉಚ್ಛಲಿತೃ] ಮೇಲಕ್ಕೆ ಹಾರುವ, ಮೇಲೆ ನೆಗೆಯುವ
ಉಚ್ಚಲ್ಲ. ವಿ: [ಉಚ್ಛಲ] ಮೇಲಕ್ಕೆ ಹಾರುವ, ಮೇಲಕ್ಕೆ ನೆಗೆಯುವ
ಉಚ್ಛಲ್ಲಣಾ. ಸ್ತ್ರೀ: [ದೇ] ವರ್ಗಾಯಿಸುವುದು, ಬದಲಾಯಿಸುವುದು, ಅಪಹರಣ
ಉಚ್ಛಲ್ಲಿಅ. 'ಉಚ್ಛಲಿಅ' ಶಬ್ದವನ್ನು ನೋಡುವುದು
ಉಚ್ಛಲ್ಲಿಅ ವಿ: [ದೇ] ತೊಗಟೆ ತೆಗೆದಿರುವಂಥದು, ಸಿಪ್ಪೆ ತೆಗೆದಿರುವ

ಉಚ್ಛವ. 'ಉಚ್ಛಅ' ಶಬ್ದವನ್ನು ನೋಡುವುದು, ಗರ್ವ
ಉಚ್ಛವಿಅ. ನ: [ದೇ] ಹಾಸಿಗೆ, ಶಯ್ಯೆ(ದೇ)
ಉಚ್ಛಹ. ಸಕ: [ಉತ್+ಸಹ್] ಉದ್ಯೋಗಮಾಡು, ತೊಡಗು, ಅಕ: ಉತ್ಸಾಹಗೊಳ್ಳು,
ಉಚ್ಛಹಿಯ. ವಿ: [ಉತ್ಸಹಿತ] ಉತ್ಸಾಹದಿಂದ ಕೂಡಿದ
ಉಚ್ಛಾಇಅ. ವಿ: [ಅವಚ್ಛಾದಿತ] ಆಚ್ಛಾದಿಸಲ್ಪಟ್ಟ, ಮುಚ್ಚಲ್ಪಟ್ಟ(ಪಉಮ)
ಉಚ್ಛಾಡಿಅ.(ಅಪ) ವಿ: [ಅವಚ್ಛಾದಿತ] ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ
ಉಚ್ಛಾಣ. 'ಉಚ್ಛ=ಉಕ್ಷನ್' ಶಬ್ದವನ್ನು ನೋಡುವುದು
ಉಚ್ಛಾಯ. ಸಕ: [ಅವ+ಛಾದಯ್] ಆಚ್ಛಾದಿಸು, ಮುಚ್ಚು, ಹೊದಿಸು
ಉಚ್ಛಾಯ. ಪು: [ಉಚ್ಛ್ರಾಯ] ಎತ್ತರ, ಔನ್ನತ್ಯ, ಅಭಿವೃದ್ಧಿ
ಉಚ್ಛಾಯಣ. ವಿ: [ಅವಚ್ಛಾದನ] ಮುಚ್ಚುವಂಥದು, ಹೊದಿಕೆ,
ಉಚ್ಛಾಯಣ. ವಿ: [ಉಚ್ಛಾದನ] ನಾಶಕ, ನಾಶಮಾಡುವಂಥದು
ಉಚ್ಛಾಯಣಯಾ.} ಸ್ತ್ರೀ: [ಉಚ್ಛಾದನಾ] ವಿನಾಶ,
ಉಚ್ಛಾಯಣಾ.} ಕಿತ್ತುಹಾಕುವುದು, ತುಂಡು ಮಾಡುವುದು, ಹೊರದೂಡುವುದು, ಪ್ರತ್ಯೇಕಿಸುವುದು
ಉಚ್ಛಾರ. 'ಉತ್ಥಾರ'=ಆ+ಕ್ರಮ್' ಶಬ್ದವನ್ನು ನೋಡುವುದು
ಉಚ್ಛಾಲ. ಸಕ: [ಉತ್+ಶಾಲಯ್] ಎತ್ತರಕ್ಕೆ ಎಸೆ
ಉಚ್ಛಾಲಣ. ನ: [ಉಚ್ಛಾಲನ] ಮೇಲಕ್ಕೆ ಎಸೆಯುವುದು
ಉಚ್ಛಾಸ. 'ಊಸಾಸ' ಶಬ್ದವನ್ನು ನೋಡುವುದು
ಉಚ್ಛಾಹ. ಸಕ: [ಉತ್+ಸಾಹಯ್] ಉತ್ಸಾಹಿಸು
ಉಚ್ಛಾಹ. ಪು: [ಉತ್ಸಾಹ] ಉತ್ಸಾಹ, ಸ್ಥಿರವಾದ ಪ್ರಯತ್ನ, ಉತ್ಸುಕತೆ, ಪರಾಕ್ರಮ, ಬಲ, ಸಾಮರ್ಥ್ಯ, ಶಕ್ತಿ
ಉಚ್ಛಾಹ. ಪು: [ದೇ]ನೂಲಿನ ದಾರ
ಉಚ್ಛಾಹಣ. ನ: [ಉತ್ಸಾಹನ] ಉತ್ತೇಜನ, ಪ್ರೋತ್ಸಾಹನ
ಉಚ್ಛಾಹಿಯ. ವಿ: [ಉತ್ಸಾಹಿತ] ಉತ್ಸಾಹಿತನಾದವನು, ಉತ್ತೇಜಿತನಾದವನು
ಉಚ್ಛಿಂದ. ಸಕ: [ಉತ್+ಭಿದ್] ಬೇರುಸಹಿತ ಕೀಳು, ಕಿತ್ತುಹಾಕು

ಉಚ್ಚಿಂದಣ. ನ:[ದೇ]ಬಡ್ಡಿಗೆ ಸಾಲ ತೆಗೆದುಕೊಳ್ಳುವುದು
ಉಚ್ಚಿಂಪಗ. ವಿ: [ಅವಚ್ಛಿಂಪಕ] ಕಳ್ಳರಿಗೆ ಊಟ–ತಿಂಡಿಯ ನೆರವು ನೀಡುವವನು(ಪಣ್ಣ)
ಉಚ್ಚಿಂಪಣ. ನ: [ಉತ್ಕ್ಷೇಪಣ.] ಮೇಲಕ್ಕೆ ಎಸೆಯುವುದು, ಹೊರದೂಡುವುದು
ಉಚ್ಚಿಟ್ಠ. ವಿ: [ಉಚ್ಛಿಷ್ಟ] ತಿಂದು ಮಿಕ್ಕದ್ದು, ಎಂಜಲು (ಸುಪಾ), ಅಶಿಷ್ಟ, ಅಸಭ್ಯ.
ಉಚ್ಚಿಣ್ಣ. ವಿ: [ಉಚ್ಛಿನ್ನ] ಕಿತ್ತೆಸೆದ, ಬೇರುಸಹಿತ ಕಿತ್ತೆಸೆದ
ಉಚ್ಚಿತ್ತ. ವಿ: [ಉತ್ಕ್ಷಿಪ್ತ] ಎಸೆಯಲ್ಪಟ್ಟ, ವಿಕ್ಷಿಪ್ತ, ಹುಚ್ಚ
ಉಚ್ಚಿತ್ತ.. 'ಉಟ್ಠಿಯ' ಶಬ್ದವನ್ನು ನೋಡುವುದು
ಉಚ್ಚಿತ್ತ. ವಿ: [ಉತ್ಸಿಕ್ತ] ಸಿಂಪಡಿಸಲಾದ, ಚಿಮುಕಿಸಲ್ಪಟ್ಟ
ಉಚ್ಚಿನ್ನ. 'ಉಚ್ಚಿಣ್ಣ.' ಶಬ್ದವನ್ನು ನೋಡುವುದು
ಉಚ್ಚಿಪ್ಪಂತ. 'ಉಕ್ಖಿವ' ಶಬ್ದವನ್ನು ನೋಡುವುದು
ಉಚ್ಚಿಯ. ವಿ: [ಉಚ್ಛ್ರಿತ] ಉನ್ನತವಾದ, ಎತ್ತರದ,
ಉಚ್ಚಿರಣ. ವಿ: [ದೇ] ತಿಂದು ಮಿಕ್ಕದ್ದು, ಎಂಜಲು
ಉಚ್ಚಿಲ್ಲ. ನ: [ದೇ] ರಂಧ್ರ, ಬಿಲ, ತೂತಾದ
ಉಚ್ಚು. 'ಇಕ್ಖು' ಶಬ್ದವನ್ನು ನೋಡುವುದು. –ಜಂತ. ನ: [–ಯಂತ್ರ] ಕಬ್ಬು ಹಿಂಡುವ ಯಂತ್ರ
ಉಚ್ಚು. ಪು: [ದೇ] ಗಾಳಿ(ದೇ)
ಉಚ್ಚುಅ. ವಿ: [ಉತ್ಸುಕ] ಇಷ್ಟವಾದ ವಸ್ತುವನ್ನು ಪಡೆಯಲು ತವಕ ಪಡುವವನು, ಆತುರವುಳ್ಳವನು(ಹೇ)
ಉಚ್ಚುಅ. ನ: [ದೇ] ಹೆದರಿಕೊಂಡು ಹೆದರಿಕೊಂಡು ಕಳ್ಳತನ ಮಾಡುವವನು
ಉಚ್ಚುಅರಣ. ನ: [ದೇ] ಕಬ್ಬಿನ ಗದ್ದೆ(ದೇ)
ಉಚ್ಚುಆರ. ವಿ: [ದೇ] ಮುಚ್ಚಿರುವ
ಉಚ್ಚುಂಡಿಅ. ವಿ: [ದೇ] ಬಾಣವೇ ಮೊದಲಾದವುಗಳಿಂದ ಘಾತಿಸಲ್ಪಟ್ಟ, ಅಪಹರಿಸಲ್ಪಟ್ಟ, ಕಿತ್ತುಕೊಳ್ಳಲಾದ
ಉಚ್ಚುಗ. 'ಉಚ್ಚುಅ' ಶಬ್ದವನ್ನು ನೋಡುವುದು.
ಉಚ್ಚುಗೀಭೂಯ. ವಿ: [ಉಚ್ಚುಗೀಭೂತ] ತವಕಗೊಂಡಿರುವ, ಆತುರಗೊಂಡ(ಸುರ),
ಉಚ್ಚುಚ್ಚು. ವಿ: [ದೇ] ಗರ್ವಿಷ್ಠ, ಅಭಿಮಾನಿ, ಅಹಂಕಾರಿ
ಉಚ್ಚುಣ್ಣ. ವಿ: [ಉತ್‌ಕ್ಷುಣ್ಣ] ತುಂಡಾಗಿರುವ, ಕತ್ತರಿಸಲ್ಪಟ್ಟಿರುವ, ಮುತ್ತಿಗೆಗೆ ಒಳಗಾಗಿರುವ(ಸೇ)
ಉಚ್ಚುದ್ಧ. ವಿ: [ದೇ] ವ್ಯಾಕುಲ, ಹುಚ್ಚ(=ವಿಕ್ಷಿಪ್ತ,) ಕೆಳಕ್ಕೆ ಬಿದ್ದ, ಧರ್ಮಭ್ರಷ್ಟ
ಉಚ್ಚುಭ. ಸಕ: [ಅಪ್+ಕ್ಷಿಪ್] ನಿಂದಿಸು, ಬೈಯು
ಉಚ್ಚುಭಣ. ನ: [ಉತ್‌ಕ್ಷೇಪಣ] ಮೇಲಕ್ಕೆ ಎಸೆಯುವುದು
ಉಚ್ಚುರ. ವಿ: [ದೇ] ಶಾಶ್ವತವಾದ, ನಾಶವಿಲ್ಲದ(ದೇ)
ಉಚ್ಚುರಣ. ನ: [ದೇ] ಕಬ್ಬಿನ ಗದ್ದೆ, ಕಬ್ಬು(ದೇ)
ಉಚ್ಚುಲ್ಲ. ಪು: [ದೇ] ಅನುವಾದ, ಪುನರುಕ್ತಿ, ಖೇದ, ಉದ್ವೇಗ
ಉಚ್ಚೂಢ. ವಿ: [ದೇ] ಮೇಲೆ ಹತ್ತಿ ಕುಳಿತ(ಷಡ್)
ಉಚ್ಚೂಢ. ವಿ: [ಉತ್‌ಕ್ಷಿಪ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ (ಣಾಯಾ), ಕದ್ದ, ಹೊರದೂಡಲ್ಪಟ್ಟ(ಔಪ)
ಉಚ್ಚೂಢ. ವಿ: [ಉತ್+ಕ್ಷಿಬ್ಧ] ಮೇಲಿನ ಶಬ್ದವನ್ನು ನೋಡುವುದು.
ಉಚ್ಚೂರ. 'ಉಲ್ಲೂರ=ತುಡ' ಶಬ್ದವನ್ನು ನೋಡುವುದು(ಹೇ)
ಉಚ್ಚೂಲ. 'ಉಚ್ಚೂಲ' ಶಬ್ದವನ್ನು ನೋಡುವುದು.
ಉಚ್ಚೇಅ. ಪು: [ಉಚ್ಛೇದ] ನಾಶ, ಬುಡಸಮೇತ ಕಿತ್ತುಹಾಕುವುದು(ನಿಚೂ)
ಉಚ್ಚೇಯಣ. ನ: [ಉಚ್ಛೇದನ] ವಿನಾಶ, ಬುಡ ಸಮೇತ ಕಿತ್ತುಹಾಕುವುದು(ಸುಪಾ)
ಉಚ್ಚೇರ. ಅಕ: [ಉತ್+ಶ್ರಿ] ಎತ್ತರವಾಗು, ಅಧಿಕವಾಗು, ಅಭಿವೃದ್ಧಿ ಹೊಂದು ಬೇರೆಯಾಗು.–'ಉಚ್ಚೇರಂತ'
ಉಚ್ಚೇವ. ಪು: [ಉತ್+ಕ್ಷೇಪ] ಎತ್ತರಿಸುವುದು, ಮೇಲೆ ಎಬ್ಬಿಸುವುದು, ಎತ್ತುವುದು, ಎಸೆಯುವುದು(ವವ)
ಉಚ್ಚೇವಣ. ನ: [ಉತ್‌ಕ್ಷೇಪಣ] ಮೇಲಿನ ಶಬ್ದವನ್ನು ನೋಡುವುದು.
ಉಚ್ಚೇವಣ. ನ: [ದೇ] ತುಪ್ಪ
ಉಚ್ಚೇಹ. ಪು: [ಉತ್ಸೇಧ] ಎತ್ತರ
ಉಚ್ಚೇಡಿಯ. ವಿ: [ಉಚ್ಚೋಟಿತ]ಮುಕ್ತಗೊಳಿಸಲಾದ, ಬಿಡಲ್ಪಟ್ಟ
ಉಚ್ಚೋಭ. ವಿ: [ಉಚ್ಚೋಭ] ಶೋಭೆಯಿಲ್ಲದ, ನ: ಪಿಸುಣತೆ, ಚಾಡಿಕೋರತನ
ಉಚ್ಚೋಲ. ಸಕ: [ಉತ್+ಮೂಲಯ್] ಬೇರುಸಹಿತ ಕಿತ್ತೆಸೆ, –'ಉಚ್ಚೋಲಂತ'
ಉಚ್ಚೋಲ. ಸಕ: [ಉತ್+ಕ್ಷಾಲಯ್] ತೊಳೆ, ಶುಭ್ರಮಾಡು
ಉಚ್ಚೋಲಣ. ನ: [ಉತ್ಕ್ಷಾಲನ] ಅತಿ ಹೆಚ್ಚು ನೀರಿನಿಂದ ತೊಳೆ

ಉಚ್ಚೋಲಣಾ. ಸ್ತ್ರೀ: [ಉತ್ಕ್ಷಾಲನಾ]ತೊಳೆಯುವುದು
ಉಚ್ಚೋಲಾ. ಸ್ತ್ರೀ: [ದೇ] ಅತಿಹೆಚ್ಚು ನೀರು
ಉಚ್ಚೋಲಿತ್ತು. ವಿ: [ಉತ್‌ಕ್ಷಾಲಯಿತೃ] ಮುಳುಗಿಸುವವನು
ಉಜು. 'ಉಜ್ಜು' ಶಬ್ದವನ್ನು ನೋಡುವುದು.
ಉಜುಅ 'ಉಜ್ಜುಅ' ಶಬ್ದವನ್ನು ನೋಡುವುದು.
ಉಜ್ಜ. 'ಓಯ=ಓಜಸ್' ಶಬ್ದವನ್ನು ನೋಡುವುದು.
ಉಜ್ಜ. ನ: [ಊರ್ಜ] ತೇಜಸ್ಸು, ಪ್ರತಾಪ, ಬಲ(ಕಪ್ಪ)
ಉಜ್ಜಅಣೀ.} ಸ್ತ್ರೀ: [ಉಜ್ಜಯನೀ,ಯಿನೀ] ನಗರ
ಉಜ್ಜಇಣೀ.} ವಿಶೇಷ, ಮಾಲವ ದೇಶದ ಪ್ರಾಚೀನ ರಾಜಧಾನಿ, ಈಗಲೂ ಉಜ್ಜಯಿನಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.
ಉಜ್ಜಂಗಲ. ನ: [ದೇ] ಬಲಾತ್ಕರ, ಬಲವಂತ, ವಿ: ದೀರ್ಘವಾದ, ಉದ್ದವಾದ(ದೇ)
ಉಜ್ಜಗ್ಗಿರ. ನ: [ಉಜ್ಜಾಗರ] ಜಾಗರಣೆ
ಉಜ್ಜಗರಯ. ಪು: [ಉಜ್ಜಾಗರಕ] ಜಾಗರಣೆ, ನಿದ್ದೆಯಿಲ್ಲದಿರುವುದು
ಉಜ್ಜಗ್ಗುಜ್ಜ. ವಿ: [ದೇ] ಸ್ವಚ್ಛ, ನಿರ್ಮಲ
ಉಜ್ಜಡ. ವಿ: [ದೇ] ಮನೆಯಿಲ್ಲದ, ವಸತಿ–ರಹಿತ
ಉಜ್ಜಣಿಅ. ವಿ: [ದೇ] ವಕ್ರ, ಅಂಕು–ಡೊಂಕಾದ
ಉಜ್ಜಮ. ಅಕ: [ಉದ್+ಯಮ್] ಪ್ರಯತ್ನ ಮಾಡು. 'ಉಜ್ಜಮಇ'
ಉಜ್ಜಮ. ಪು: [ಉದ್ಯಮ] ಉದ್ಯೋಗ, ಪ್ರಯತ್ನ(ಉವ)
ಉಜ್ಜಮಣ.(ಅಪ). ನ: [ಉದ್ಯಾಪನ] ವ್ರತ–ಸಮಾಪ್ತಿ ಕಾರ್ಯ(ಭವಿ)
ಉಜ್ಜಮಿ. ವಿ: [ಉದ್ಯಮಿನ್] ಉದ್ಯೋಗಿ, ಉದ್ಯೋಗಶೀಲ, ಪ್ರಯತ್ನವುಳ್ಳವ
ಉಜ್ಜಮಿಯ.(ಅಪ). ವಿ [ಉದ್ಯಾಪಿತ] ಸಮಾಪ್ತಗೊಂಡ, ಪೂರ್ಣಮಾಡಲ್ಪಟ್ಟ (ಭವಿ)
ಉಜ್ಜಮ್ಹ. ಅಕ: [ಉತ್+ಜೃಂಭ್] ಜೋರಾಗಿ ಆಕಳಿಸು
ಉಜ್ಜಯ. ವಿ: [ಉದ್ಯತ] ಉದ್ಯೋಗಿ, ಪ್ರಯತ್ನಶೀಲ. –ಮರಣ. ನ. [–ಮರಣ] ಮರಣ–ವಿಶೇಷ
ಉಜ್ಜಯಂತ. ಪು: [ಉಜ್ಜಯಂತ] ಗಿರನಾರ ಪರ್ವತ
ಉಜ್ಜರ. ವಿ: [ದೇ] ಮಧ್ಯ ರಾತ್ರಿ, ಒಳಗಿನ, ಪು: ಕ್ಷಯ, ನಿರ್ಜರಣ
ಉಜ್ಜಲ. ಅಕ: [ಉದ್+ಜ್ವಲ್] ಉರಿಯುವುದು, ಪ್ರಕಾಶಗೊಳ್ಳು, ಹೊಳೆ. ವ.ಕೃ–ಉಜ್ಜಲಂತ
ಉಜ್ಜಲ. ವಿ: [ಉಜ್ಜ್ವಲ] ನಿರ್ಮಲ, ಸ್ವಚ್ಛ(ಭಗ) ಪ್ರಕಾಶಮಾನವಾದ, ಹೊಳೆಯುವ, ಉರಿಯುವ
ಉಜ್ಜಲ. (ದೇ) 'ಉಜ್ಜಲ್ಲ' ಶಬ್ದವನ್ನು ನೋಡುವುದು.
ಉಜ್ಜಲಣ. ವಿ: [ಉಜ್ಜ್ವಲನ] ಪ್ರಕಾಶಿಸುವ, ದೇದೀಪ್ಯಮಾನ
ಉಜ್ಜಲಿಅ. ವಿ: [ಉಜ್ಜ್ವಲಿತ] ಪ್ರಕಾಶಿಸುತ್ತಿರುವ (ಔಪ), ಎತ್ತರದ ಜ್ವಾಲೆಗಳಿಂದ ಕೂಡಿದ, ನ: ಪ್ರಕಾಶಗೊಳಿಸುವುದು, ಹುರಿದುಂಬಿಸುವುದು, ಪು: ಮೂರನೇ ನರಕ ಭೂಮಿಯ ಏಳನೇ ನರಕಸ್ಥಾನ
ಉಜ್ಜಲ್ಲ. ನ: [ಔಜ್ಜ್ವಲ್ಯ] ಉಜ್ಜ್ವಲತೆ, ಪ್ರಕಾಶ
ಉಜ್ಜಲ್ಲಾ. ಸ್ತ್ರೀ: [ದೇ] ಬಲಾತ್ಕಾರ
ಉಜ್ಜವ. ಅಕ: [ಉದ್+ಯತ್] ಪ್ರಯತ್ನಮಾಡು
ಉಜ್ಜವಣ. 'ಉಜ್ಜಾವಣ' ಶಬ್ದವನ್ನು ನೋಡುವುದು.
ಉಜ್ಜಹ. ಸಕ: [ಉದ್+ಹಾ] ಪ್ರೇರಿಸು, ಉತ್ತೇಜಿಸು
ಉಜ್ಜಾಅರ.} ಪು: [ಉಜ್ಜಾಗರ] ಜಾಗರಣೆ,
ಉಜ್ಜಾಗರ.} ನಿದ್ರೆಯಿಲ್ಲದಿರುವುದು
ಉಜ್ಜಾಡಿಅ. ವಿ: [ದೇ] ನಾಶಗೊಳಿಸಲ್ಪಟ್ಟ
ಉಜ್ಜಾಣ. ನ: [ಉದ್ಯಾನ] ತೋಟ, ಉಪವನ, ಉದ್ಯಾನ(ಅಣು), –ಜತ್ತಾ. ಸ್ತ್ರೀ: [–ಯಾತ್ರಾ] ಗೋಷ್ಠಿ, ಸಭೆ(ಣಾಯಾ), –ಪಾಲಅ, –ವಾಲ. ವಿ: [–ಪಾಲಕ, –ಪಾಲ] ತೋಟದ ರಕ್ಷಕ, ಮಾಲಿ
ಉಜ್ಜಾಣಿಅ. ವಿ: [ಔದ್ಯಾನಿಕ] ಉದ್ಯಾನಕ್ಕೆ ಸಂಬಂಧಿಸಿದ, ತೋಟಕ್ಕೆ ಸಂಬಂಧಿಸಿದ
ಉಜ್ಜಾಣಿಅ. ವಿ: [ದೇ] ಕೆಳಗುಮಾಡಿದ, ಕ್ಷುದ್ರಗೊಳಿಸಿದ
ಉಜ್ಜಾಣಿಆ.} ಸ್ತ್ರೀ: [ಔದ್ಯಾನಿಕಾ] ಗೋಷ್ಠಿ, ಸಭೆ
ಉಜ್ಜಾಣಿಗಾ.}
ಉಜ್ಜಾಣೀ. ಸ್ತ್ರೀ: [ಔದ್ಯಾನೀ] ಗೋಷ್ಠಿ, ಸಭೆ
ಉಜ್ಜಾಯಣ. ನ: [ಉದ್ಯಾಯನ] ಒಂದು ಗೋತ್ರ.
ಉಜ್ಜಾಲ. ಸಕ: [ಉತ್+ಜ್ವಾಲಯ್] ಉಜ್ವಲಗೊಳಿಸು, ವಿಶೇಷವಾಗಿ ಸ್ವಚ್ಛಗೊಳಿಸು
ಉಜ್ಜಾಲ. ಸಕ: [ಉದ್+ಜ್ವಾಲಯ್] ಪ್ರಕಾಶಗೊಳಿಸು, ಬೆಳಗು, ಉರಿಸು(ಆಚಾ)
ಉಜ್ಜಾಲಣ. ನ: [ಉಜ್ಜ್ವಾಲನ] ಉರಿಸು, ಹೊತ್ತಿಸು
ಉಜ್ಜಾಲಯ. ವಿ: [ಉಜ್ಜಾಲಕ] ಬೆಂಕಿಯನ್ನು ಹೊತ್ತಿಸುವವನು, ಬೆಂಕಿಯನ್ನು ಪ್ರಜ್ವಲಗೊಳಿಸುವವನು
ಉಜ್ಜಾಲಿಅ. ವಿ: [ಉಜ್ಜ್ವಾಲಿತ] ಉರಿಸಿದ, ಹೊತ್ತಿಸಿದ

ಉಜ್ಜಾವಣ. ನ:[ಉದ್ಯಾಪನ] ವ್ರತದ ಸಮಾಪ್ತಿ ಕಾರ್ಯ

ಉಜ್ಜಾವಿಯ. ವಿ: [ದೇ] ಅರಳಿಸಲ್ಪಟ್ಟ, ವೃದ್ಧಿಪಡಿಸಲಾದ, ಕಾಂತಿಗೊಳಿಸಲಾದ

ಉಜ್ಜಿಂತ. **'ಉಜ್ಜಯಂತ'** ಶಬ್ದವನ್ನು ನೋಡುವುದು.

ಉಜ್ಜೇರಿಅ. ವಿ: [ದೇ] ತಿರಸ್ಕರಿಸಲ್ಪಟ್ಟ, ಅಪಮಾನಿತ, ಅಗೌರವಿಸಲ್ಪಟ್ಟ

ಉಜ್ಜೀವಣ. ನ: [ಉಜ್ಜೀವನ] ಬದುಕುವುದು, ಬದುಕಿಸುವುದು

ಉಜ್ಜೀವಿಯ. ವಿ: [ಉಜ್ಜೀವಿತ] ಬದುಕಿಸಲ್ಪಟ್ಟ, ಜೀವಂತಗೊಳಿಸಲಾದ

ಉಜ್ಜು. ವಿ: [ಋಜು] ಸರಳ, ನೆರ, ನಿಷ್ಕಪಟ(ಔಪ), **–ಕಡ.** ವಿ: **[–ಕೃತ್]**, ನಿಷ್ಕಪಟ ತಪಸ್ವಿ(ಆಚಾ), **–ಕಡ.** ವಿ: **[–ಕೃತ್]** ಮಾಯಾ ರಹಿತವಾದ ಆವರಣವನ್ನು ಹೊಂದಿರುವ, **–ಜಡ, –ಜಡ್ಡ.** ವಿ: **[–ಜಡ]** ಸರಳ ಆದರೆ ಮೂರ್ಖ, ಅಶಯವನ್ನು ಅರ್ಥ ಅರ್ಥಮಾಡಿಕೊಳ್ಳದವನು, (ಉತ್ತ), **–ಮಇ.** ಸ್ತ್ರೀ: **[–ಮತಿ]**, ಮನಃಪರ್ಯಾಯ ಜ್ಞಾನದ ಒಂದು ಪ್ರಭೇದ, ಸಾಮಾನ್ಯ ಮನೋಜ್ಞಾನ, ಸಾಮಾನ್ಯ ರೀತಿಯಿಂದ ಇತರೆಯವರ ಮನೋಭಾವವನ್ನು ತಿಳಿದುಕೊಳ್ಳುವುದು. ವಿ: ಇಂಥ ಮನೋಜ್ಞಾನ ಹೊಂದಿರುವವನು(ಪಣ್ಣ) **–ವಾಲಿಯಾ.** ಸ್ತ್ರೀ: **[–ವಾಲಿಕಾ]** ಒಂದು ನದಿ. ಇದರ ದಡದಲ್ಲಿ ಭಗವಾನ್ ಮಹಾವೀರನಿಗೆ ಕೇವಲ ಜ್ಞಾನ ಪ್ರಾಪ್ತವಾಗಿತ್ತು(ಕಪ್ಪ). **–ಸುತ್ತ.** ಪು: **[–ಸೂತ್ರ]** ವರ್ತಮಾನದ ವಸ್ತುವನ್ನು ಮಾತ್ರ ಒಪ್ಪುವ ನ್ಯಾಯ–ವಿಶೇಷ(ಠಾ), **–ಸುಯ.** ಪು:**[–ಶ್ರುತ]** ಹಿಂದೆ ಹೇಳಿದ ಅರ್ಥವನ್ನು ನೋಡುವುದು. **–ಹತ್ಥ.** ಪು: **[–ಹಸ್ತ]** ಬಲಗೈ(ಓಘ). ಪು: ಸಂಯಮ

ಉಜ್ಜುಅ. ವಿ: [ಋಜುಕ] ಮೇಲಿನ ಶಬ್ದವನ್ನು ನೋಡುವುದು(ಆಚಾ)

ಉಜ್ಜುಆಇಅ. ವಿ: [ಋಜುಕಾಯಿತ] ಸರಳ ಮಾಡಲ್ಪಟ್ಟ, ನೇರಮಾಡಲಾದ

ಉಜ್ಜುಗ. **'ಉಜ್ಜುಅ'** ಶಬ್ದವನ್ನು ನೋಡುವುದು.

ಉಜ್ಜುತ್ತ. ವಿ: [ಉದ್ಯುಕ್ತ] ಉದ್ಯೋಗಶೀಲ,ಪ್ರಯತ್ನಶೀಲ, ಕೆಲಸದಲ್ಲಿ ತೊಡಗಿಕೊಂಡ (ಪಾಅ)

ಉಜ್ಜುರಿಅ. ವಿ: [ದೇ] ಕ್ಷೀಣ, ನಾಶವಾದ, ಒಣಗಿದ

ಉಜ್ಜೂಢ. ವಿ: [ಉದ್‌ವ್ಯೂಢ] ಧರಿಸಿದ, ಧಾರಣೆ ಮಾಡಿಕೊಂಡ

ಉಜ್ಜೇಣಗ. ಪು: [ಉಜ್ಜಯನಕ] ಶ್ರಾವಕ, ಜೈನ ಧರ್ಮೀಯ, ಒಬ್ಬ ಉಪಾಸಕನ ಹೆಸರು

ಉಜ್ಜೇಣೀ. **'ಉಜ್ಜಇಣೀ'** ಶಬ್ದವನ್ನು ನೋಡುವುದು.

ಉಜ್ಜೋಅ. ಸಕ: [ಉದ್+ದ್ಯೋತಂಯ್] ಪ್ರಕಾಶಗೊಳಿಸು, ಬೆಳಗು, ವ. ಕೃ–**ಉಜ್ಜೋಯಂತ**

ಉಜ್ಜೋಅ. ಪು: [ಉದ್ಯೋಗ] ಪ್ರಯತ್ನ, ಉದ್ಯಮ (ಪಉಮ)

ಉಜ್ಜೋಅ. ಪು: [ಉದ್ಯೋತ] ಪ್ರಕಾಶ, **–ಗರ.** ವಿ: [–ಕರ] ಪ್ರಕಾಶವನ್ನುಂಟುಮಾಡುವ, ಬೆಳಕನ್ನು ಉಂಟುಮಾಡುವ(ಪಾಅ), ಬೆಳಕನ್ನುಂಟು ಮಾಡಲು ಕಾರಣಭೂತವಾದ ಕರ್ಮ, **–ತ್ಥ.** ನ: [ಉದ್ಯೋತಾಸ್ತ್ರ] ಒಂದು ಬಗೆಯ ಶಸ್ತ್ರ

ಉಜ್ಜೋಅಗ. ವಿ: [ಉದ್ಯೋತಕ] ಬೆಳಕನ್ನು ಉಂಟುಮಾಡುವ

ಉಜ್ಜೋಅಣ. ನ: [ಉದ್ಯೋತನ] ಪ್ರಕಾಶ ಪಡಿಸುವುದು, ಕಣ್ಣಿಗೆ ಕಾಣಿಸಿಕೊಳ್ಳುವುದು, ಬೆಳಕನ್ನು ಉಂಟುಮಾಡುವ ಪು: ಸೂರ್ಯ, ಒಬ್ಬ ಪ್ರಸಿದ್ಧ ಜೈನಾಚಾರ್ಯ

ಉಜ್ಜೋಅಯ. ವಿ: [ಉದ್ಯೋತಕ] ಪ್ರಕಾಶವನ್ನು ಉಂಟುಮಾಡುವ, ಬೆಳಗುವ, ಉನ್ನತಿಯನ್ನುಂಟುಮಾಡುವ

ಉಜ್ಜೋಇಂತ. **'ಉಜ್ಜೋಅ=ಉದ್+ದ್ಯೋತಯ್'** ಶಬ್ದವನ್ನು ನೋಡುವುದು.

ಉಜ್ಜೋಇಯ. ವಿ: [ಉದ್ಯೋತಿತ] ಬೆಳಗಿದ, ಬೆಳಕಾದ

ಉಜ್ಜೋಎಮಾಣ. **'ಉಜ್ಜೋಅ=ಉದ್+ದ್ಯೋತಯ್'** ಶಬ್ದವನ್ನು ನೋಡುವುದು.

ಉಜ್ಜೋಮಿಆ. ಸ್ತ್ರೀ: [ದೇ] ರಶ್ಮಿ, ಕಿರಣ, ಹಗ್ಗ

ಉಜ್ಜೋವ. ಉಜ್ಜೋಅ=**'ಉದ್+ದ್ಯೋತಯ್'** ಶಬ್ದವನ್ನು ನೋಡುವುದು.

ಉಜ್ಜೋವಣ. ನ: [ಉದ್ಯೋತನ] ಬೆಳಗುವುದು, ಪ್ರಕಾಶಗೊಳಿಸುವುದು

ಉಜ್ಜೋವಿಯ. **'ಉಜ್ಜೋಇಯ'** ಶಬ್ದವನ್ನು ನೋಡುವುದು.

ಉಜ್ಝ. ಸಕ: [ಉಜ್ಝ್] ತ್ಯಜಿಸು, ಬಿಡು

ಉಜ್ಝ. ಪು: [ಉಜ್ಝ, ಉದ್ಧ್ಯ] ಉಪಾಧ್ಯಾಯ, ಓದುವವನು, ಅಧ್ಯಾಪಕ, ಪ್ರವಚನಕಾರ
ಉಜ್ಝಅ.} ವಿ: [ಉಜ್ಝಕ] ತ್ಯಜಿಸುವವನು,
ಉಜ್ಝಗ.} ಬಿಡುವವನು,ತ್ಯಜಿಸುವವನು (ಉಪ)
ಉಜ್ಝಣಾ. ಸ್ತ್ರೀ: [ಉಜ್ಝನಾ] ಪರಿತ್ಯಾಗ
ಉಜ್ಝಣಿಅ. ವಿ: [ದೇ] ವಿಕ್ರೀತ, ಮಾರಲ್ಪಟ್ಟ, ಕೆಳಗುಮಾಡಲ್ಪಟ್ಟ, ನಿಮ್ನೀಕೃತ
ಉಜ್ಝಮಣ. ನ: [ದೇ]ಪಲಾಯನ, ಓಡಿ ಹೋಗುವುದು
ಉಜ್ಝಮಾಣ. ವಿ: [ದೇ]. ಓಡಿಸಲ್ಪಟ್ಟವನು
ಉಜ್ಝರ. ಪು: [ನಿರ್ಝರ] ಪರ್ವತದಿಂದ ಬೀಳುವ ನೀರಿನ ಹರಿವು, ನೀರಿನ ಝರಿ(ಣಾಯಾ), **-ವಣ್ಣೀ.** ಸ್ತ್ರೀ: [-ಪರ್ಣೀ] ಜಲ ಪ್ರಪಾತ, ಜಲಪಾತ
ಉಜ್ಝರಿಅ. ವಿ: [ದೇ] ವಕ್ರ ದೃಷ್ಟಿಯಿಂದ ನೋಡಲಾದ, ವಿಕ್ಷಿಪ್ತ, ಎಸೆಯಲ್ಪಟ್ಟ, ಪರಿತ್ಯಕ್ತ, ಬಿಡಲ್ಪಟ್ಟ
ಉಜ್ಝಲ. ವಿ: [ದೇ] ಪ್ರಬಲ, ಬಲಿಷ್ಠ(ಷಡ್)
ಉಜ್ಝಲಿಅ. ವಿ: [ದೇ] ಪ್ರಕ್ಷಿಪ್ತ, ಎಸೆಯಲ್ಪಟ್ಟ, ವಿಕ್ಷಿಪ್ತ
ಉಜ್ಝಸ. ಪು: [ದೇ] ಉದ್ಯಮ, ಉದ್ಯೋಗ, ಪ್ರಯತ್ನ
ಉಜ್ಝಸಿಅ. ವಿ: [ದೇ] ಉತ್ಕೃಷ್ಟ, ಉತ್ತಮ
-ಉಜ್ಝಾ. 'ಅಉಜ್ಝಾ' ಶಬ್ದವನ್ನು ನೋಡುವುದು
ಉಜ್ಝಾಯ. ಪು: [ಉಪಾಧ್ಯಾಯ] ಗುರು, ಶಿಕ್ಷಕ, ಅಧ್ಯಾಪಕ, ಪಾಠಕ(ಸುರ)
ಉಜ್ಝಾಸಿ. ವಿ: [ಉದ್ಭಾಸಿನ್] ಹೊಳೆಯುವ, ಪ್ರಕಾಶಿಸುವ, ದೇದೀಪ್ಯಮಾನ
ಉಜ್ಝಿಂಖಿಅ. ನ: [ದೇ] ನಿಂದೆ, ಬೈಗಳು, ಲೋಕಾಪವಾದ, ನಿಂದನೀಯ, ಹೇಳಲು ಯೋಗ್ಯವಾದ
ಉಜ್ಝಿಯ. ವಿ: [ಉಜ್ಝಿತ] ಪರಿತ್ಯಕ್ತ, ಬಿಡಲ್ಪಟ್ಟ(ಕುಮಾ), ಒಡೆಯಲ್ಪಟ್ಟ, ಸೀಳಲ್ಪಟ್ಟ, ನ: ಪರಿತ್ಯಾಗ(ಅಣು) **-ಯ.** ಪು: [-ಕ] ಒಬ್ಬ ಸಾರ್ಥವಾಹನ ಮಗ
ಉಜ್ಝಿಯ. ವಿ: [ದೇ] ಒಣಗಿದ, ಕೀಳು ಮಾಡಲ್ಪಟ್ಟ, ನಿಮ್ನೀಕೃತ
ಉಜ್ಝಿಯಾ. ಸ್ತ್ರೀ: [ಉಜ್ಝಿತಾ] ಒಬ್ಬ ಸಾರ್ಥವಾಹನ ಹೆಂಡತಿ(ಣಾಯಾ)
ಉಟ್ಟ. ಪುಂ.ಸ್ತ್ರೀ [ಉಷ್ಟ್ರ] ಒಂಟೆ, ಸ್ತ್ರೀ: ಉಟ್ಟೀ
ಉಟ್ಟಾರ. ಪು: [ಅವತಾರ] ನದಿಗೆ ಇಳಿಯುವ ಮಾರ್ಗ, ಘಟ್ಟ, ಪುಣ್ಯತೀರ್ಥ, ಜಲಾಶಯದ ದಡ

ಉಟ್ಟಿಯ.} ವಿ: [ಔಷ್ಟ್ರಿಕ] ಒಂಟೆಗೆ ಸಂಬಂಧಿಸಿದ,
ಉಟ್ಟಿಯುಯ.} ಉಂಟೆಯ ಕೂದಲುಗಳಿಂದ ಮಾಡಿದ, ವಿ: ಆಳು(ಕುಮಾ), ಗಡಿಗೆ, ಕೊಡ
ಉಟ್ಟಿಯಾ. ಸ್ತ್ರೀ: [ಉಷ್ಟ್ರಿಕಾ] ಗಡಿಗೆ, ಕೊಡ(ವಿಪಾ), **-ಸಮಣ.** ಪು: [-ಶ್ರಮಣ] ದೊಡ್ಡ ಗಡಿಗೆಯಲ್ಲಿ ಕುಳಿತು ತಪಸ್ಸು ಮಾಡುವ ಆಜೀವಿಕ ಪಂಥದ ಸಾಧು(ಔಪ)
ಉಟ್ಠ. ಅಕ: [ಉತ್+ಸ್ಥಾ] ಏಳು, ಎದ್ದು ನಿಲ್ಲು. ವ. ಕೃ-ಉಟ್ಠಂತ
ಉಟ್ಠ. ವಿ: [ಉತ್ಥ] ಮೇಲಕ್ಕೆ ಎದ್ದಿರುವ, -ಬಇಸ.. ಅಪ: [ಉಟ್ಠೋಪವೇಶ] ಏಳು- ಕೂರು
ಉಟ್ಠ. ಪು: [ಓಷ್ಠ] ತುಟಿ, ಅಧರ
ಉಟ್ಠಂಭ. ಸಕ: [ಅವ+ಸ್ತಂಭ್] ಆಶ್ರಯ ನೀಡು, ಆಧಾರವಾಗು, ಆಸರೆಯಾಗು. ನೆರವಾಗು, ಆಕ್ರಮಣ ಮಾಡು
ಉಟ್ಠವಣ. ನ: [ಉತ್ಥಾಪನ] ಮೇಲಕ್ಕೆ ಎಬ್ಬಿಸು, ಎತ್ತರಿಸು
ಉಟ್ಠವಿಯ. ವಿ: [ಉತ್ಥಾಪಿತ] ಕಿತ್ತುಹಾಕಲ್ಪಟ್ಟ, ಎಬ್ಬಿಸಿದ, ಎದ್ದು ನಿಲ್ಲಿಸಿದ
ಉಟ್ಠಾ. ಉಟ್ಠ=ಉತ್+ಸ್ಥಾ(ಪ್ರಾಮಾ) ಶಬ್ದವನ್ನು ನೋಡುವುದು
ಉಟ್ಠಾ. ಸ್ತ್ರೀ: [ಉತ್ಥಾ] ಮೇಲೆತ್ತುವುದು, ಮೇಲಕ್ಕೆ ಏಳುವುದು(ಣಾಯಾ)
ಉಟ್ಠಾಇ. ವಿ: [ಉತ್ಥಾಇನ್] ಮೇಲೆ ಏಳುವವನು
ಉಟ್ಠಾಇಅ. ವಿ: [ಉತ್ಥಿತ] ಸಿದ್ಧವಾಗಿರುವ, ಉತ್ತಮ ಗುಣಗಳುಳ್ಳ(ಪಉಮ) ಹುಟ್ಟಿದ, ಉತ್ಪನ್ನವಾದ, ಮೇಲಕ್ಕೆ ಎದ್ದಿರುವ,
ಉಟ್ಠಾಇಅ. 'ಉಟ್ಠಾವಿಅ' ಶಬ್ದವನ್ನು ನೋಡುವುದು
ಉಟ್ಠಾಣ. ನ: [ಉತ್ಥಾನ] ಮೇಲಕ್ಕೆ ಏಳುವುದು, ಮೇಲಕ್ಕೆ ಬರುವುದು, ಹುಟ್ಟುವುದು, ಉತ್ಪತ್ತಿ, (ಣಾಯಾ), ಆರಂಭ, ಹೊರಗೆ ಹೊರಡುವುದು, **-ಸುಯ.** ನ: [-ಶ್ರುತ] ಶಾಸ್ತ್ರವಿಶೇಷ
ಉಟ್ಠಾಯ. 'ಉಟ್ಠ=ಉತ್+ಸ್ಥಾ' ಶಬ್ದವನ್ನು ನೋಡುವುದು
ಉಟ್ಠಾವ. ಸಕ: [ಉತ್+ಸ್ಥಾಪಯ್] ಮೇಲಕ್ಕೆ ಎಬ್ಬಿಸು, ನಿಲ್ಲಿಸು
ಉಟ್ಠಾವಣ. 'ಉಟ್ಠವಣ' ಶಬ್ದವನ್ನು ನೋಡುವುದು
ಉಟ್ಠಾವಣ. 'ಉವಟ್ಠಾವಣ' ಶಬ್ದವನ್ನು ನೋಡುವುದು

ಉಟ್ಠಾವಣಾ. 'ಉವಟ್ಠಾವಣಾ' ಶಬ್ದವನ್ನು ನೋಡುವುದು
ಉಟ್ಠಾವಿಅ. ವಿ: [ಉತ್ಥಾಪಿತ] ಮೇಲಕ್ಕೆ ಎಬ್ಬಿಸಲ್ಪಟ್ಟ, ಎತ್ತಿನಿಲ್ಲಿಸಿದ, ಉತ್ಪಾದಿಸಲ್ಪಟ್ಟ
ಉಟ್ಠಿಉಂ}. 'ಉಟ್ಠ=ಉತ್+ಸ್ಥಾ' ಶಬ್ದವನ್ನು
ಉಟ್ಠಿತಂ}. ನೋಡುವುದು
ಉಟ್ಠಿತ್ತಾ}.
ಉಟ್ಠಿತ್ತು}.
ಉಟ್ಠಿಯ. ವಿ: [ಉತ್ಥಿತ] ಮೇಲಕ್ಕೆ ಎದ್ದಿರುವ, ಹುಟ್ಟಿದ, ಉತ್ಪನ್ನವಾದ(ಪಣ್ಣ), ಉದಯವಾದ, ಪ್ರಯತ್ನಶೀಲ, ಹೊರದೂಡಲ್ಪಟ್ಟ(ಓಘ)
ಉಟ್ಠಿರ. ವಿ: [ಉತ್ಥಾತೃ] ಮೇಲಕ್ಕೆ ಏಳುವವನು
ಉಟ್ಠಿಸಿಯ. ವಿ: [ಉದ್‌ಘುಷಿತ] ಪುಲಕಿತ, ರೋಮಾಂಚನ ಹೊಂದಿದ, (ಕುಮಾ)
ಉಟ್ಠೀಅ(ಅಪ). 'ಉಟ್ಠಿಯ' ಶಬ್ದವನ್ನು ನೋಡುವುದು
ಉಟ್ಠುಭ.} ಅಕ: [ಅವ+ಷ್ಠೀವ] ಉಗುಳು.–
ಉಟ್ಠುಹ.} **'ಉಟ್ಠುಭಂತಿ'**
ಉಟ್ಠಿಅ(ಅಪ). 'ಉಟ್ಠಿಯ' ಶಬ್ದವನ್ನು ನೋಡುವುದು
–ಉಡ. ಪು.ನ: [ಪುಟ] ಗಡಿಗೆ, ಕೊಡ,
–ಉಡ. ಪು: [ಕೂಟ] ಸಮೂಹ, ಗುಂಪು, ರಾಶಿ
–ಉಡ. 'ಪುಡ' ಶಬ್ದವನ್ನು ನೋಡುವುದು
ಉಡಂಕ. ಪು: [ಉಟಂಕ] ಒಬ್ಬ ಋಷಿ, ತಾಪಸ
ಉಡಂಬ. ವಿ: [ದೇ] ಬಳಿಯಲ್ಪಟ್ಟ, ಲೇಪನ ಮಾಡಲಾದ
ಉಡಜ.} ಪು: [ಉಟಜ] ಋಷ್ಯಾಶ್ರಮ, ಪರ್ಣಶಾಲೆ,
ಉಡಯ.} ಕಾಡಿನ ಮರದ ಎಲೆಗಳಿಂದ ನಿರ್ಮಿಸಿದ
ಉಡವ.} ಕುಟೀರ(ಅಭಿ)
ಉಡಾಹಿಅ. ವಿ: [ದೇ] ಉತ್ಕ್ಷಿಪ್ತ, ಮೇಲಕ್ಕೆ ಎಸೆಯಲ್ಪಟ್ಟ
ಉಡಿಅ. ವಿ: [ದೇ] ಹುಡುಕಲಾದ, ಅನ್ವೇಷಿಸಲಾದ
ಉಡಿದ. ಪು: [ದೇ] ಉದ್ದು(ಧಾನ್ಯ)
ಉಡು. ನ: [ಉಡು] ನಕ್ಷತ್ರ, ವಿಮಾನ, –ಪ, –ವ. ಪು: [–ಪ],–ವ. ಪು: [–ಪ] ಚಂದ್ರ(ಔಪ), –ವಇ. ಪು: [–ಪತಿ] ಚಂದ್ರ. –ವರ. ಪು: [–ವರ] ಸೂರ್ಯ
ಉಡು. ಪು: [ಉಡು]ಒಂದು ದೇವ–ವಿಮಾನ, **–ಪ್ಪಭ. ಪುಂನ:** [–ಪ್ರಭ] ಉಡು ಎಂಬ ಹೆಸರಿನ ವಿಮಾನದ ಪೂರ್ವಕ್ಕೆ ಇರುವ ಒಂದು ದೇವ ವಿಮಾನ. **–ಮಜ್ಝ. ಪುಂನ: [–ಮಧ್ಯ]** ಉಡು ವಿಮಾನದ ದಕ್ಷಿಣದ ಕಡೆಗಿರುವ ವಿಮಾನ. **–ಯಾವತ್ತ. ಪುಂನ: [–ಕಾವರ್ತ]** ಉಡು ವಿಮಾನದ ಪಶ್ಚಿಮದ ಕಡೆಗಿರುವ ವಿಮಾನ. **–ಸಿಟ್ಠ. ಪುಂನ: [–ಸೃಷ್ಟ]** ಉಡು ವಿಮಾನದ ಒಂದು ದೇವವಿಮಾನ.
ಉಡು. **'ಉಉ'** ಶಬ್ದವನ್ನು ನೋಡುವುದು
ಉಡುಂಬರಿಜ್ಜಿಯಾ. ಸ್ತ್ರೀ: [ಉದುಂಬರೀಯಾ] ಜೈನಮುನಿಗಳ ಒಂದು ಶಾಖೆ
ಉಡುಹಿಅ. ನ: [ದೇ] ಮದುವೆಯಾದ ಹೆಣ್ಣಿನ ಕೋಪ, ಎಂಜಲು, ತಿಂದು ಮಿಕ್ಕದ್ದು
ಉಡೂಹಲ. ಪುಂ.ನ: [ಉಡೂಖಲ] ಒರಳು
ಉಡ್ಡ. ಪು: [ಉಡ್ರ] ಉತ್ಕಲ ದೇಶ, ಓಡ, ಓಡ್ರ ಎಂಬ ಹೆಸರಿನಿಂದ ಪ್ರಸಿದ್ಧವಾದ, ಈಗ ಒರಿಸ್ಸ' ಕರೆಯಲಾಗುವ ದೇಶ. ಈ ದೇಶದ ನಿವಾಸಿಗಳು. ಉಡಿಯಾ
ಉಡ್ಡ. ವಿ: [ದೇ] ಬಾವಿಯೇ ಮೊದಲಾದವನ್ನು ತೋಡುವವನು
ಉಡ್ಡಣ. ಪು: [ದೇ] ಎತ್ತು, ಗೂಳಿ, ವಿ: ಉದ್ದವಾದ, ದೀರ್ಘವಾದ
ಉಡ್ಡಹಣ. ಪು: [ದೇ] ಕಳ್ಳ
ಉಡ್ಡಾಅ. ಪು: [ದೇ] ಹುಟ್ಟುವುದು, ಉದಯ, ಉತ್ಪತ್ತಿ, ಮೂಲ
ಉಡ್ಡಾಣ. ನ: [ಉಡ್ಡಯನ] ಹಾರುವುದು, ಹಾರಾಟ
ಉಡ್ಡಾಣ. ಪು: [ದೇ] ಪ್ರತಿಧ್ವನಿ, ಕುರರ(ಪಕ್ಷಿ), ಮಲ, ಅಭಿಲಾಷೆ, ಇಚ್ಛೆ, ವಿ: ಗರ್ವಿಷ್ಠ, ಅಭಿಮಾನಿ
ಉಡ್ಡಾಮರ. ವಿ: [ಉಡ್ಡಾಮರ] ಭಯಂಕರವಾದ, ಪ್ರಬಲವಾದ, ಶ್ರೇಷ್ಠವಾದ
ಉಡ್ಡಾಮರ. ವಿ: [ಉಡ್ಡಾಮರ] ಪ್ರಬಲ, ಭಯ, ಆಡಂಬರದವನು(ಪಾಅ)
ಉಡ್ಡಾಮರಿಅ. ವಿ: [ಉಡ್ಡಾಮರಿತ] ಭಯ–ಭೀತಿ ಉಂಟುಮಾಡಿದವನು(ಕಪ್ಪೂ)
ಉಡ್ಡಾವ. ಸಕ: [ಉದ್+ಡಾಯಯ್] ಹಾರಿಸು
ಉಡ್ಡಾವ. ವಿ: [ಉಡ್ಡಾಯಕ] ಹಾರಿಸುವವನು
ಉಡ್ಡಾವಣ. ನ: [ಉಡ್ಡಾಯನ] ಹಾರಿಸುವುದು, ಆಕರ್ಷಣೆ
ಉಡ್ಡಾವಿಅ. ವಿ: [ಉಡ್ಡಾಯಿತ] ಹಾರಿಸಲ್ಪಟ್ಟ
ಉಡ್ಡಾವಿರ. ವಿ: [ಉಡ್ಡಾಯಿತೃ] ಹಾರಿಸುವವನು

ಉಡ್ಡಾಸ. ಪು: [ದೇ] ಸಂತಾಪ, ಪರಿತಾಪ
ಉಡ್ಡಾಹ. ಪು: [ಉದ್ದಾಹ] ಭಯಂಕರವಾದ ಕಿಚ್ಚು, ಸುಡುವುದು(ಉಪ), ಮಾಲಿನ್ಯ, ನಿಂದೆ, ಏಟು, ವಿನಾಶ
ಉಡ್ಡಿಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ
ಉಡ್ಡಿಂತ. 'ಉಡ್ಡೀ=ಉತ್+ಡೀ' ಶಬ್ದವನ್ನು ನೋಡುವುದು
ಉಡ್ಡಿಆಹರಣ. ನ: [ದೇ] ಸಣ್ಣ ಕತ್ತಿಯ ಮೇಲೆ ಇಟ್ಟಿರುವ ಹೂವನ್ನು ಕಾಲಿನ ಬೆರಳುಗಳಿಂದ ತೆಗೆದುಕೊಂಡು ಹೋಗುವುದು
ಉಡ್ಡಿಯ. ವಿ: [ಉಡ್ಡೀನ] ಹಾರಿದ
ಉಡ್ಡಿಹಿಅ. ವಿ: [ದೇ] ಮೇಲಕ್ಕೆ ಎಸೆಯಲಾಗಿರುವ (ಪಾಅ)
ಉಡ್ಡೀ. ಅಕ: [ಉದ್+ಡೀ] ಹಾರು. ವ. ಕೃ–ಉಡ್ಡಿಂತ
ಉಡ್ಡೀ. ಸ್ತ್ರೀ: [ಔಡ್ರೀ] ಉತ್ಕಲ ದೇಶದ ಲಿಪಿ(ವಿಸೇ)
ಉಡ್ಡೀಣ. ವಿ: [ಉಡ್ಡೀನ] ಹಾರಿಸಲಾದ(ಣಾಯಾ)
ಉಡೂಖಲ}. ಪುಂನ: [ಉಡೂಖಲ] ಒರಳು
ಉಡೂಹಲ}.
ಉಡ್ಡುಅ. ಪು: [ದೇ] ತೇಗು, ವಾಂತಿಮಾಡುವಿಕೆ
ಉಡ್ಡುಇಯ.} ಪು: [ದೇ] 'ಉಡ್ಡುಅ' ಶಬ್ದವನ್ನು
ಉಡ್ಡೋಅ.} ನೋಡುವುದು
ಉಡ್ಡುವಾಡಿಯ. ಪು: [ಉಡ್ಡುವಾಟಿಕ] ಭಗವಾನ್ ಮಹಾವೀರರ ಒಂದು ಗಣದ ಹೆಸರು.
ಉಡ್ಡುಹಿಅ. 'ಉಡುಹಿಅ' ಶಬ್ದವನ್ನು ನೋಡುವುದು
ಉಡ್ಡೋಯ 'ಉಡ್ಡುಅ' ಶಬ್ದವನ್ನು ನೋಡುವುದು
ಉಡ್ಢ. ನ: [ಊರ್ಧ್ವ] ಮೇಲೆ, ವಮನ, ವಾಂತಿ, ವಿ: ಉತ್ತಮ, ಮುಖ್ಯ, ನಿಂತಿರುವ, **ಮೇಲಿನ, ಮೇಲುಭಾಗದ. –ಕಂಡೂಯುಗ.** ಪು: [–**ಕಂಡೂಯಕ**] , ಹೊಕ್ಕುಳಿನ ಮೇಲುಭಾಗದಲ್ಲೇ ತುರಿಸುವತಪಸ್ವಿಗಳ ಒಂದು ಸಂಪ್ರದಾಯ(ಭಗ) **–ಕಾಯ.** ಪು: [–**ಕಾಯ**] ಶರೀರದ ಮೇಲುಭಾಗ, **–ಕಾಯ.** ಪು: [–**ಕಾಕ**] ಕಾಗೆ, ವಾಯಸ. **–ಗಮ.** ವಿ: [–**ಗಮ**] ಮೇಲೆ ಹೋಗುವವನು (ಸುಪಾ), **–ಗಾಮಿ.** ವಿ: [–**ಗಾಮಿನ್**] ಮೇಲೆ ಹೋಗುವವನು **–ಚರ.** ವಿ: [–**ಚರ**] ಮೇಲೆ ಓಡಾಡುವವನು, ಆಕಾಶದಲ್ಲಿ ಹಾರಾಡುವವನು (ಆಚಾ), **–ದಿಸಾ.** ಸ್ತ್ರೀ: [–**ದಿಶ್**] ಊರ್ಧ್ವ ದಿಕ್ಕು **–ರೇಣು.** ಪು: [–**ರೇಣು**] ಒಂದು ಅಳತೆ, ನಯವಾದ ಅಡಕೆ ಕಾಯಿ, **–ಲೋಗ, –ಲೋಯ.** ಪು: [–**ಲೋಕ**] ಸ್ವರ್ಗ, ದೇವ ಲೋಕ. **–ವಾಯ.** ಪು: [–**ವಾತ**] ಎತ್ತರಕ್ಕೆ ಹೋಗಿರುವ ವಾಯು, ವಾಯು–ವಿಶೇಷ (ಜೀ (ಜೀವ)
ಉಡ್ಢಂ. ಮೇಲಿನ ಶಬ್ದವನ್ನು ನೋಡುವುದು
ಉಡ್ಢಂಕ. ನ: [ದೇ] ಹಾದಿಯ ಎತ್ತರದ ಭೂಭಾಗ
ಉಡ್ಢಂಸ. 'ಉದ್ದಂಸ' ಶಬ್ದವನ್ನು ನೋಡುವುದು
ಉಡ್ಢಲ.} ಪು: [ದೇ] ಉಲ್ಲಾಸ, ವಿಕಾಸ
ಉಡ್ಢಲ್ಲ.}
ಉಡ್ಢವಿಯ. ವಿ: [**ಊರ್ಧ್ವಿತ**] ಎತ್ತರಿಸಲ್ಪಟ್ಟ, ಮೇಲೆ ಮಾಡಲಾದ
ಉಡ್ಢಾ. ಸ್ತ್ರೀ: [**ಊರ್ಧ್ವಾ**] ಊರ್ಧ್ವ– ದಿಕ್ಕು, ಮೇಲು–ದಿಕ್ಕು(ಠಾ)
ಉಡ್ಢಿ. 'ಇಢ್ಢಿ' ಶಬ್ದವನ್ನು ನೋಡುವುದು
ಉಡ್ಢಿ. '**ವುಡ್ಢಿ**' ಶಬ್ದವನ್ನು ನೋಡುವುದು
ಉಡ್ಢಿ. 'ಇದ್ಧಿ' ಶಬ್ದವನ್ನು ನೋಡುವುದು
ಉಡ್ಢಿಂಯ. '**ಉದ್ಧರಿಅ=ಉದ್ಧೃತ**' ಶಬ್ದವನ್ನು ನೋಡುವುದು
ಉಡ್ಢಿಯಾ. ಸ್ತ್ರೀ: [ದೇ] ಪಾತ್ರೆ, ಕಂಬಳಿ ಇತ್ಯಾದಿ ಹೊದೆಯುವ ಬಟ್ಟೆ
ಉಢಿ. 'ಬುದ್ಧಿ' ಶಬ್ದವನ್ನು ನೋಡುವುದು
ಉಣಂ. '**ಪುಣ=ಪುನರ್**' ಶಬ್ದವನ್ನು ನೋಡುವುದು
ಉಣ. ನ: [ಋಣ] ಸಾಲ, ಋಣ
ಉಣ.} '**ಪುಣ**' ಶಬ್ದವನ್ನು ನೋಡುವುದು
ಉಣಾ.}
ಉಣಾಇ.}
ಉಣಪನ್ನ. ಸ್ತ್ರೀನ: [**ಏಕೋನಪಂಚಾಶತ್**] ನಲವತ್ತೊಂಬತ್ತು
ಉಣಾಇ. ಪು: [ಉನಾದಿ] ವ್ಯಾಕರಣದ ಒಂದು ಪ್ರಕರಣ.
ಉಣಾಇ. ಪು: [ದೇ] ಪ್ರಿಯ, ಪತಿ, ನಾಯಕ
ಉಣೋ. '**ಪುಣ**' ಶಬ್ದವನ್ನು ನೋಡುವುದು(ಗಲುಡ)
ಉಣ್ಣ. ನ: [**ಊರ್ಣ**] ಕುರಿಯ ತುಪ್ಪಟ, ಉಣ್ಣೆ. **–ಕಪ್ಪಾಸ.** ಪು: [–**ಕಾರ್ಪಾಸ**] ಉಣ್ಣೆ, ಕುರಿಯ ತುಪ್ಪಟ(ನಿಚೂ). **–ಣಾಭ.** ಪು: [–**ನಾಭ**] ಜೇಡರ ಹುಳು.

-ಉಣ್ಣ. **'ಪುಣ್ಣ=ಪೂರ್ಣ'** ಶಬ್ದವನ್ನು ನೋಡುವುದು
ಉಣ್ಣಅ. **ಸಕ:** **[ಉದ್+ನದ್]** ಕರೆ, ಕೂಗು
ಉಣ್ಣಇ. **ಸ್ತ್ರೀ:** **[ಉನ್ನತಿ]** ಉನ್ನತಿ, ಅಭ್ಯುದಯ
ಉಣ್ಣಇಜ್ಜವಾಣ. **'ಉಣ್ಣೋ'** ಶಬ್ದವನ್ನು ನೋಡುವುದು
ಉಣ್ಣಮ. **ಅಕ:** **[ಉತ್+ನಮ್]** ಎತ್ತರವಾಗು
ಉಣ್ಣಮ. **ವಿ:** **[ದೇ]** ಎತ್ತರವಾಗಿರುವ(ದೇ)
ಉಣ್ಣಯ.ವಿ: **[ಉನ್ನತ]** ಉನ್ನತ, ಎತ್ತರವಾದ, ಗುಣವಂತ, ಅಭಿಮಾನಿ, ನ: ಅಭಿಮಾನ, ಹೆಮ್ಮೆ(ಭಗ)
ಉಣ್ಣಯ. **ಪು:** **[ಉನ್ನಯ]** ನೀತಿಯಿಲ್ಲದಿರುವುದು
ಉಣ್ಣಾ. **ಸ್ತ್ರೀ:** **[ಊರ್ಣಾ]** ಉಣ್ಣೆ, ಕುರಿಯ ತುಪ್ಪಟ, **-ಪಿಪೀಲಿಯಾ.** **ಸ್ತ್ರೀ:** **[-ಪಿಪೀಲಿಕಾ]** ಕೀಟ
ಉಣ್ಣಾಅಕ. **ವಿ:** **[ಉನ್ನಾಂಯಕ]** ಉನ್ನತಿ ಉಂಟುಮಾಡುವಂಥದು, **ಪುಂ.ನ:** ಛಂದಃಶಾಸ್ತ್ರದಲ್ಲಿ ಪ್ರಸಿದ್ಧವಾದ ಮಧ್ಯ-ಗುರುವಿರುವ ನಾಲ್ಕು ಮಾತ್ರೆಗಳ ಸಂಜ್ಞೆ
ಉಣ್ಣಾಗ. **ಪು:** **[ಉನ್ನಾಕ]** ಒಂದು ಗ್ರಾಮ(ಆವಮ)
ಉಣ್ಣಾಮ. **ಪು:** **[ಉನ್ನಾಮ]** ಉನ್ನತಿ, ಎತ್ತರ, ಹೆಮ್ಮೆ, ಅಭಿಮಾನ, ಹೆಮ್ಮೆಗೆ ಕಾರಣವಾದ ಕರ್ಮ
ಉಣ್ಣಾಮ. **ಸಕ:** **[ಉದ್+ನಮಯ್]** ಎತ್ತರಿಸು, ಉನ್ನತಗೊಳಿಸು
ಉಣ್ಣಾಮಿಯ. **ವಿ:** **[ಉನ್ನಮಿತ]** ಮೇಲಕ್ಕೆ ಎತ್ತಲ್ಪಟ್ಟ, ಮೇಲು ಮುಖವಾಗಿ ಮಾಡಲ್ಪಟ್ಟ ಎತ್ತರಿಸಲ್ಪಟ್ಟ
ಉಣ್ಣಾಲ. **ಸಕ:** **[ಉದ್+ನಮಯ್]** ಉನ್ನತೀಕರಿಸು, ಎತ್ತರಿಸು, ಮೇಲೆ ಮಾಡು
ಉಣ್ಣಾಲಿಯ. **ವಿ:** **[ದೇ]** ಕೃಶ, ದುರ್ಬಲ, ಮೇಲಕ್ಕೆ ಮಾಡಲ್ಪಟ್ಟ (ದೇ)
ಉಣ್ಣೆಅ. **ವಿ:** **[ಉನ್ನೀತ]** ವಿಚಾರ ಮಾಡಲ್ಪಟ್ಟ (ಸೇ)
ಉಣ್ಣೆಅ. **ವಿ:** **[ಔರ್ಣಿಕ]** ಉಣ್ಣೆಯಿಂದ ಮಾಡಿದ (ಓಘ)
ಉಣ್ಣಿದ್ದ. **ವಿ:** **[ಉನ್ನಿದ್ರ]** ವಿಕಸಿತ, ಉಲ್ಲಸಿತವಾದ, ನಿದ್ರೆಯಿಲ್ಲದ
ಉಣ್ಣೀ. **ಸಕ:** **[ಉದ್+ನೀ]** ಮೇಲಕ್ಕೆ ಕೊಂಡೊಯ್ಯು, ಹೇಳು
ಉಣ್ಣುಇಅ. **ಪು:** **[ದೇ]** ಹುಂಕಾರ, ಆಕಾಶದ ಕಡೆಗೆ ಮುಖಮಾಡಿದ ನಾಯಿಯ ದನಿ. ವಿ: ಗರ್ವಿತ

ಉಣ್ಹ. **ಪು:** **[ಉಷ್ಣ]** ಬಿಸಿಲು, ಸೆಕೆ, ಬೇಗೆ, ಕಾವು ಬೇಸಿಗೆ ಕಾಲ. ವಿ: ಬಿಸಿಯಾದ, ಕಾದಿರುವ (ಕುಮಾ)
ಉಣ್ಹವಣ. **ನ:** **[ಉಷ್ಣನ]** ಬಿಸಿಮಾಡು, ಕಾಯಿಸು
ಉಣ್ಹಿಆ. **ಸ್ತ್ರೀ:** **[ದೇ]** ಎಳ್ಳಿನೊಡನೆ ಬೇಯಿಸಿದ ಅನ್ನ, ಖಿಚಡಿ
ಉಣ್ಹೀಸ. **ಪು. ನಂ:** **[ಉಷ್ಣೀಷ]** ಪೇಟ, ಕಿರೀಟ, ತಲೆಯ ಅಲಂಕಾರ
ಉಣ್ಹೋದಯಭಂಡ. **ಪು:** **[ದೇ]** ದುಂಬಿ, ಹೆಣ್ದುಂಬಿ
ಉಣ್ಹೋಲಾ. **ಸ್ತ್ರೀ:** **[ದೇ]** ಕೀಟ-ವಿಶೇಷ
ಉತಾಹೋ.(ಅ) **[ಉತಾಹೋ]** ಅಥವಾ
ಉತ್ತ. **ವಿ:** **[ಉಕ್ತ]** ಹೇಳಲ್ಪಟ್ಟ, ಕಥಿತ
ಉತ್ತ. **ವಿ:** **[ಉಪ್ತ]** ಬಿತ್ತಿದ, ಉತ್ಪಾದಿಸಲಾದ,
ಉತ್ತ. **ಪು:** **[ದೇ]** ಒಂದು ಬಗೆಯ ವನಸ್ಪತಿ
-ಉತ್ತ. **'ಪುತ್ತ'** ಶಬ್ದವನ್ನು ನೋಡುವುದು
-ಉತ್ತ. **ವಿ:** **[ಗುಪ್ತ]** ರಕ್ಷಿಸಲ್ಪಟ್ಟ
ಉತ್ತಂಘ. **'ಉತ್ಥಂಘ=ರುಧ್'**ಶಬ್ದವನ್ನು ನೋಡುವುದು
ಉತ್ತಂಘ. **'ಉತ್ತಂಭ'** ಶಬ್ದವನ್ನು ನೋಡುವುದು
ಉತ್ತಂತ. **'ವುತ್ತಂತ'** ಶಬ್ದವನ್ನು ನೋಡುವುದು
ಉತ್ತಂಪಿಅ. **ವಿ:** **[ದೇ]** ಖಿನ್ನ, ಉದ್ವಿಗ್ನ (ದೇ)
ಉತ್ತಂಭ. **ಸಕ:** **[ಉತ್+ಸ್ತಂಭ್]** ತಡೆ, ಆಶ್ರಯ ನೀಡು, ನೆರವಾಗು, ಆಧಾರವಾಗು
ಉತ್ತಂಭಣ. **ನ:** **[ಉತ್ತಂಭನ]** ತಡೆ, ಆಧಾರ, ಆಶ್ರಯ
ಉತ್ತಂಭಯ. **ವಿ:** **[ಉತ್ತಂಭಕ]** ತಡೆಯುವವನು, ಆಶ್ರಯ ನೀಡುವವನು, ನೆರವಾಗುವವನು
ಉತ್ತಂಸ. **ಪು:** **[ಅವತಂಸ]** ಶಿರವನ್ನು ಅಲಂಕರಿಸುವ ಒಡವೆ, ಅವತಂಸ
ಉತ್ತಂಸ. **ಪು:** **[ಉತ್ತಂಸ]** ಕರ್ಣಾಭರಣ, ಕರ್ಣಪೂರ (ಪಾಅ)
ಉತ್ತಇಯ. **ವಿ:** **[ದೇ]** ಹುರಿದುಂಬಿಸಲ್ಪಟ್ಟ, ಹೆಚ್ಚು ಪ್ರಕಾಶಗೊಳಿಸಲ್ಪಟ್ಟ
ಉತ್ತಣ. **ವಿ:** **[ದೇ]** ಗರ್ವಿತ, ಅಹಂಕಾರಿ
ಉತ್ತಣ. **ವಿ:** **[ಉತೃಣ]** ಹುಲ್ಲಿರುವ ಭೂಮಿ
ಉತ್ತಣುಅ. **ವಿ:** **[ಉತ್ತನುಕ]** ಅಭಿಮಾನಿ, ಗರ್ವಿಷ್ಠ (ಪಾಅ)
ಉತ್ತತ್ತ. **ವಿ:** **[ಉತ್ತಪ್ತ]** ಅತಿಯಾಗಿ ಕಾದಿರುವ, ಬಹಳ ಬಿಸಿಯಾದ, ಸುಡುತ್ತಿರುವ

ಉತ್ತತ್ತ. ವಿ: [ದೇ] ಮೇಲೆ ಕುಳಿತ
ಉತ್ತತ್ಥ. ವಿ: [**ಉತ್ತ್ರಸ್ತ**] ಭಯಭೀತ, ಭಯಪಟ್ಟಿರುವ (ಪಣ್ಣ)
ಉತ್ತದ್ಧ. **'ಉತ್ತರದ್ಧ'** ಶಬ್ದವನ್ನು ನೋಡುವುದು
ಉತ್ತಪ್ಪ. ವಿ: [**ಉತ್ತಪ್ತ**] ದೇದೀಪ್ಯಮಾನ, ಅತಿಯಾಗಿ ಕಾದಿರುವ, ಬಹಳ ಬಿಸಿಯಾದ,
ಉತ್ತಪ್ಪ. ವಿ: [ದೇ] ಅಭಿಮಾನಿ, ಹೆಚ್ಚು ಗುಣವಂತ
ಉತ್ತಮ. ವಿ: [**ಉತ್ತಮ**] ಶ್ರೇಷ್ಠ, ಸುಂದರ(ಕಪ್ಪ), ಪ್ರಧಾನ, ಮುಖ್ಯ, ಪರಮ, ಅಂತಿಮ, **ಪು:** ಮೇರು ಪರ್ವತ, ಸಂಯಮ, ತ್ಯಾಗ, ರಾಕ್ಷಸ ವಂಶದ ಒಬ್ಬ ರಾಜ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಲಂಕೇಶ, (ಪಉಮ), ಒಂದು ದಿನದ ಉಪವಾಸ. **–ಟ್ಠ. ಪು:** [**ಉತ್ತಮಾರ್ಥ**] ಶ್ರೇಷ್ಠ ವಸ್ತು, ಮೋಕ್ಷ, (ಉತ್ತ), ಮೋಕ್ಷ–ಮಾರ್ಗ, ಊಟವಿಲ್ಲದಿರುವುದು, ಮರಣ. **–ಣ್ಣ.** ವಿ: [–**ರ್ಣ**] ತೆಗೆದುಕೊಳ್ಳುವ ವ್ಯಕ್ತಿ
ಉತ್ತಮ. ವಿ: [**ಉತ್ತಮಸ್**] ಅಜ್ಞಾನವಿಲ್ಲದ
ಉತ್ತಮಂಗ. ನ: [**ಉತ್ತಮಾಂಗ**] ಶಿರಸ್ಸು, ತಲೆ
ಉತ್ತಮಾ. ಸ್ತ್ರೀ: [**ಉತ್ತಮಾ**] ಒಬ್ಬ ಇಂದ್ರಾಣಿ, **'ಣಾಯಾಧಮ್ಮಕಹಾ'**ದ ಅಧ್ಯಯನ, ಪಕ್ಷದ ಮೊದಲ ರಾತ್ರಿ
ಉತ್ತಮ್ಮ. ಅಕ: [**ಉತ್+ತಮ್**] ಖಿನ್ನನಾಗು, ಉದ್ವಿಗ್ನನಾಗು
ಉತ್ತಮ್ಮಿಅ. ವಿ: [**ಉತ್ತಾಂತ**] ಖಿನ್ನನಾದ, ಉದಾಸ ವ್ಯಕ್ತಿ(ಪಾಅ)
ಉತ್ತರ. ಅಕ: [**ಉತ್+ತೃ**] ಹೊರಗೆಹಾಕು, **ಸಕ:** ದಾಟಿಸು
ಉತ್ತರ. ಅಕ: [**ಅವ+ತೃ**] ಇಳಿ, ಕೆಳಗೆ ಬರು(ವುದು), ಪ್ರಧಾನ, ಮುಖ್ಯ(ಸೂಅ), ಉತ್ತರ ದಿಕ್ಕಿನಲ್ಲಿ ಇದ್ದ, ಮೇಲುಭಾಗದಲ್ಲಿರುವ, ಹೆಚ್ಚಿನ, ಭೇದ, ಬಗೆ, ಶಾಖೆ, ಉಣ್ಣೆಯಿಂದ ಮಾಡಿದ ಕಂಬಳಿಯೇ ಮೊದಲಾದವು(ಕಪ್ಪ), ಪ್ರತ್ಯುತ್ತರ (ವವ), ವೃದ್ಧಿ(ಭಗ), **ಪು:** ಐರಾವತ ಕ್ಷೇತ್ರದ ೨೨ನೇ ಭಾವಿ ತೀರ್ಥಂಕರನ ಹೆಸರು, ವರ್ಷಾ–ಕಲ್ಪ(ಕಪ್ಪ), ಒಬ್ಬ ಜೈನಮುನಿ, ಆಯ ಮಹಾಗಿರಿಯ ಮೊದಲ ಶಿಷ್ಯ, **–ಕಂಚುಯ. ಪು:** [**–ಕಂಚುಕ**] ಕವಚ(ವಿಪಾ), **–ಕರಣ. ನ:** [**–ಕರಣ**] ಸಂಸ್ಕಾರ, ವಿಶೇಷ ಗುಣಗಳನ್ನು ಇರಿಸುವುದು. **–ಕುರಾ. ಸ್ತ್ರೀ:** [**–ಕುರು**] ತನ್ನ ಹೆಸರಿನಿಂದ ಖ್ಯಾತವಾದ ಕ್ಷೇತ್ರ, **–ಕುರು. ಪು:** [**–ಕುರು**] ವರ್ಷ–ವಿಶೇಷ, ದೇವ–ವಿಶೇಷ, **–ಕುರುಕೂಡ. ನ:** [**–ಕುರುಕೂಟ**] ಮಾಲ್ಯವಂತ ಪರ್ವತದ ಒಂದು ಶಿಖರ, ದೇವ–ವಿಶೇಷ, **–ಕೋಡಿ. ಸ್ತ್ರೀ:** [**–ಕೋಟಿ**] ಸಂಗೀತಶಾಸ್ತ್ರದ ಪ್ರಸಿದ್ಧ ಗಾಂಧಾರ–ಗ್ರಾಮದ ಒಂದು ಮೂರ್ಛನಾ(ಠಾ). **–ಗಂಧಾರಾ. ಸ್ತ್ರೀ:** [**–ಗಾಂಧಾರಾ**] ಹಿಂದೆ ಹೇಳಿದ ಅರ್ಥವನ್ನು ನೋಡುವುದು, **–ಗುಣ. ಪು:** [**–ಗುಣ**] ಶಾಖೆಯ ಗುಣ, **–ಚಾವಲಾ. ಸ್ತ್ರೀ:** [**–ಚಾವಲಾ**] ನಗರ(ಆವಮ), **–ಚೂಲ. ನ:** [**–ಚೂಡ**] ಗುರುವಂದನದ ಒಂದು ದೋಷ. ಗುರುವಿಗೆ ನಮಸ್ಕರಿಸಿ ದೊಡ್ಡದನಿಯಿಂದ "ಮತ್ಥಏಣ ವಂದಾಮಿ" ಎಂದು ಹೇಳುವುದು (ಧರ್ಮ), **–ಚೂಲಿಯಾ. ಸ್ತ್ರೀ:** [**–ಚೂಲಿಕಾ**] ಅನಂತರ ಹೇಳಿದ ಅರ್ಥವನ್ನು ನೋಡುವುದು. (ಬೃಹ). **–ದಿಸಾ. ಸ್ತ್ರೀ:** [**–ದಿಶ್**]ಉತ್ತರದಿಕ್ಕು, **–ದ್ಧ. ನ:** [**ಉತ್ತರಾರ್ಧ**] ಅನಂತರದ ಅರ್ಧಭಾಗ. **–ಪಗಇ. –ಪಯಡಿ, ಸ್ತ್ರೀ:** [**–ಪ್ರಕೃತಿ**] ಕರ್ಮಗಳ ಒಳಭೇದಗಳು(ಉತ್ತ),**–ಪಚ್ಚತ್ಥಿಮಿಲ್ಲ. ಪು:** [**–ಪಾಶ್ಚಾತ್ಯ**] ವಾಯವ್ಯದ ಮೂಲೆ, **–ಪಟ್ಟ. ಪು:** [**–ಪಟ್ಟ**] ಹಾಸಿಗೆಯ ಮೇಲು ಹೊದಿಕೆ(ಓಘ), **–ಪಾರಣಗ. ನ:** [**–ಪಾರಣಕ**] ಉಪವಾಸವೇ ಮೊದಲಾದ ವ್ರತಗಳ ಸಮಾಪ್ತಿ, ಪಾರಣೆ, ಒಳಭೇದಗಳು(ಉತ್ತ), **–ಪಚ್ಚತ್ಥಿಮಿಲ್ಲ. ಪು:** [**–ಪಾಶ್ಚಾತ್ಯ**] ವಾಯವ್ಯದ ಮೂಲೆ, **–ಪಟ್ಟ. ಪು:** [**–ಪಟ್ಟ**] ಹಾಸಿಗೆಯ ಮೇಲು ಹೊದಿಕೆ(ಓಘ), **–ಪಾರಣಗ. ನ:** [**–ಪಾರಣಕ**] ಉಪವಾಸವೇ ಮೊದಲಾದ ವ್ರತಗಳ ಸಮಾಪ್ತಿ, ಪಾರಣೆ, ಒಳಭೇದಗಳು(ಉತ್ತ), **–ಪಚ್ಚತ್ಥಿಮಿಲ್ಲ. ಪು:** [**–ಪಾಶ್ಚಾತ್ಯ**] ವಾಯವ್ಯದ ಮೂಲೆ, **–ಪಟ್ಟ. ಪು:** [**–ಪಟ್ಟ**] ಹಾಸಿಗೆಯ ಮೇಲು ಹೊದಿಕೆ(ಓಘ), **–ಪಾರಣಗ. ನ:** [**–ಪಾರಣಕ**]. ಉಪವಾಸಾದಿ ವ್ರತಗಳ ಸಮಾಪ್ತಿ. ಪಾರಣೆ, **–ಪುರಚ್ಛಿಮ, –ಪುರತ್ಥಿಮ, ಪು:** [**–ಪೌರಸ್ತ್ಯ**] **ಈಶಾನ** ಕೋಣ, ದಿಕ್ಕು(ಣಾಯಾ), **–ಪೋಟ್ಠವಯಾ. ಸ್ತ್ರೀ:** [**–ಪೌಷ್ಠಪದಾ**] ಉತ್ತರಾಭಾದ್ರ ನಕ್ಷತ್ರ, **–ಫಗ್ಗುಣೀ. ಸ್ತ್ರೀ:** [**–ಫಾಲ್ಗುನೀ**] ಉತ್ತರ–ಫಾಲ್ಗುಣೀ ನಕ್ಷತ್ರ

(ಕಪ್ಪೂ), –ಬಲಿಸ್ಸಹ. ಪು: [–ವಲಿಸ್ಸಹ] ಒಬ್ಬ ಪ್ರಸಿದ್ಧ ಜೈನ ಸಾಧು. ಉತ್ತರ ಬಲಿಸ್ಸಹ ಎಂಬ ಹೆಸರಿನ ವೃದ್ಧನಿಂದ ಹೊರಟ ಒಂದು ಗಣ, ಭಗವಾನ್ ಮಹಾವೀರರ ದ್ವಿತೀಯ ಗಣ–ಸಾಧು ಸಂಪ್ರದಾಯ(ಕಪ್ಪ) –ಭದ್ದವಯಾ. ಸ್ತ್ರೀ: [–ಭದ್ರಪದ] ನಕ್ಷತ್ರ–ವಿಶೇಷ, –ಮಂದಾ. ಸ್ತ್ರೀ: [–ಮಂದಾ] ಮಧ್ಯಮ ಗ್ರಾಮದ ಒಂದು ಮೂರ್ಛನಾ. –ಮಹುರಾ. ಸ್ತ್ರೀ: [–ಮಥುರಾ] ನಗರ, ವಾಯ. ಪು: [–ವಾದ] ಉತ್ತರವಾದ, =ವಿಕ್ಕಿಯ, –ವೇವುಕ್ಕಿಯ. ವಿ: [–ವೈಕ್ರಿಯ] ಭಾವಿಕ ಭಿನ್ನ ವೈಕ್ರಿಯ, ಕೃತ್ರಿಮ ವ್ಯತ್ಯಾಸ –ಸಾಲಾ. ಸ್ತ್ರೀ: [–ಶಾಲಾ] ಕ್ರೀಡಾಗೃಹ, ಅನಂತರದಲ್ಲಿ ನಿರ್ಮಿಸಿದ ಮನೆ, ವಾಹನ ಗೃಹ, ಆನೆ, ಕುದುರೆಗಳನ್ನು ಕಟ್ಟುವ ಲಾಯ(ನಿಚೂ), –ಸಾಹಗ.–ಸಾಹಯ. ವಿ: [–ಸಾಧಕ] ವಿದ್ಯೆ, ಮಂತ್ರ, ಇತ್ಯಾದಿಗಳ ಸಾಧನೆ ಮಾಡುವವರ ಸಹಾಯಕ. '–ಉತ್ತರಾ' ಶಬ್ದವನ್ನು ನೋಡುವುದು

ಉತ್ತರಒ. ಅ: [ಉತ್ತರತಃ] ಉತ್ತರ ದಿಕ್ಕಿನ ಕಡೆ

ಉತ್ತರಂಗ. ನ: [ಉತ್ತರಂಗ] ಬಾಗಿಲಿನ ಮೇಲುಭಾಗದ ಹಲಗೆ, ಚಂಚಲ

ಉತ್ತರಕುರು. ಪಂಬ: [ಉತ್ತರಕುರು] ದೇವ–ಭೂಮಿ, ಸ್ವರ್ಗ, ಸ್ತ್ರೀ: ಭಗವಾನ್ ನಮಿನಾಥನ ದೀಕ್ಷಾ ಶಿಬಿಕೆ

ಉತ್ತರಣ. ನ: [ಉತ್ತರಣ] ಇಳಿಯುವುದು, ದಾಟುವುದು, ಕೆಳಗೆ ಬರುವುದು,

ಉತ್ತರಣವರಂಡಿಯಾ. ಸ್ತ್ರೀ [ದೇ] ಚಂದ್ರ, ಹಡಗು, ಧೂರ್ತ

ಉತ್ತರವಿಉವ್ವಿಯ. ವಿ: [ಉತ್ತರವೈಕ್ರಿಯಿಕ] 'ಉತ್ತರ ವೈಕ್ರಿಯ' ಎಂಬ ಪ್ರಾಪ್ತಿಯಿಂದ ಕೂಡಿದ

ಉತ್ತರಸಂಗ. 'ಉತ್ತರಾ–ಸಂಗ' ಶಬ್ದವನ್ನು ನೋಡುವುದು

ಉತ್ತರಾ. ಸ್ತ್ರೀ: [ಉತ್ತರಾ] ಉತ್ತರ ದಿಕ್ಕು, ಮಧ್ಯಮ ಗ್ರಾಮದ ಒಂದು ಮೂರ್ಛನಾ, ಒಬ್ಬ ದಿಗ್ದೇವಿ, ದಿಗಂಬರ ಮತದ ಪ್ರವರ್ತಕ ಆಚಾರ್ಯ ಶಿಭೂತಿಯ ಖ್ಯಾತ ಸೋದರಿ(ವಿಸೇ), ಅಹಿಚ್ಛತ್ರಾ ನಗರಿಯ ಒಂದು ಬಾವಿಯ ಹೆಸರು. –ಣಂದಾ. ಸ್ತ್ರೀ: [–ನಂದಾ] ಒಬ್ಬ ದಿಗ್ದೇವಿ,–ಪಹ. ಪು:[–ಪಥ] ಉತ್ತರ ದಿಕ್ಕಿನಲ್ಲಿರುವ ದೇಶ, ಉತ್ತರದ ದೇಶ(ಆಚೂ) –ಫಗ್ಗುಣೀ. 'ಉತ್ತರ–ಫಗ್ಗುಣೀ' ಶಬ್ದವನ್ನು ನೋಡುವುದು. –ಭದ್ದವಯಾ. 'ಉತ್ತರ ಭದ್ದವಯಾ' ಶಬ್ದವನ್ನು ನೋಡುವುದು. –ಯಣ. ನ: [–ಯಣ] ಉತ್ತರಾಯಣ, ಸೂರ್ಯನು ಉತ್ತರ ದಿಕ್ಕಿಗೆ ಚಲಿಸುವುದು. ಮಾಘ ಮಾಸದಿಂ ಮುಂದೆ ಆರು ತಿಂಗಳು. –ಯಯಾ. ಸ್ತ್ರೀ: [–ಯತಾ] ಗಾಂಧಾರ ಗಾಮದ ಒಬ್ಬ ಸ್ವರದ ಬೆಳವಣಿಗೆ, –ವಹ. –ಪಹ ಶಬ್ದವನ್ನು ನೋಡುವುದು. –ಸಂಗ. ಪು: [–ಸಂಗ] ಉತ್ತರೀಯವನ್ನು ಶರೀರದ ಮೇಲೆ ಧರಿಸುವ ಒಂದು ರೀತಿ(ಕಪ್ಪ), –ಸಮಾ. ಸ್ತ್ರೀ: [–ಸಮಾ] ಮಧ್ಯಮ ಗ್ರಾಮದ ಒಂದು ಸ್ವರದ ಬೆಳವಣಿಗೆ. –ಸಾಢಾ. ಸ್ತ್ರೀ: [–ಷಾಢಾ] ನಕ್ಷತ್ರ, –ಹುತ್ತ. ನ: [–ಭಿಮುಖ] ಉತ್ತರದ ಕಡೆಗೆ, ವಿ: ಉತ್ತರದ ಕಡೆಗೆ ಮುಖಮಾಡಿರುವ(ಆವ)

ಉತ್ತರಿಜ್ಜ.} ನ: [ಉತ್ತರೀಯ] ಹೊದೆಯುವ ವಸ್ತ್ರ,
ಉತ್ತರಿಯ.} ದುಪಟ್ಟ(ಉವಾ)

ಉತ್ತರಿಯ. ವಿ: [ಉತ್ತೀರ್ಣ] ಇಳಿದ, ಕೆಳಕ್ಕಿಳಿದು ಬಂದ, ದಡಸೇರಿದ, ದಾಟಿದ

ಉತರಿಯ. ವಿ: [ಔತ್ತರಿಕ, ಔತ್ತರಾಹ] 'ಉತ್ತರ' ಶಬ್ದವನ್ನು ನೋಡುವುದು

ಉತ್ತರಿಲ್ಲ. ವಿ: [ಔತ್ತರಾಹ] ಉತ್ತರ ದಿಕ್ಕು ಅಥವಾ ಕಾಲದಲ್ಲಿ ಉಟ್ಟಿರುವ ಅಥವಾ ಇರುವ, ಉತ್ತರಕ್ಕೆ ಸಂಬಂಧಿಸಿದ, ಉತ್ತರೀಯ.

ಉತ್ತರೀಅ. 'ಉತ್ತರಿಯ=ಉತ್ತರೀಯ' ಶಬ್ದವನ್ನು ನೋಡುವುದು

ಉತ್ತರೀಕರಣ. ನ: [ಉತ್ತರೀಕರಣ] ಉತ್ಕೃಷ್ಟವಾಗಿ ಮಾಡುವುದು, ವಿಶೇಷವಾಗಿ ಶುದ್ಧಗೊಳಿಸುವುದು

ಉತ್ತರೊಟ್ಠ. ಪು: [ಉತ್ತರೌಷ್ಠ] ಮೇಲು ತುಟಿ, ಮೀಸೆ

ಉತ್ತಲಹಅ. ಪು: [ದೇ] ಮರ, ಬಳ್ಳಿ ಮೊದಲಾದುವುಗಳ ಶಾಖೆ, ರೆಂಬೆ, ಚಿಗುರು, ಮೊಳಕೆ

ಉತ್ತವ. ವಿ: [ಉಕ್ತವತ್] ಹೇಳಿದವನು, ಮಾತಾಡಿದವನು

ಉತ್ತಸ್. ಅಕ: [ಉತ್+ತ್ರಸ್] ಕಷ್ಟವುಂಟಾಗು, ಪೀಡನೆಗೆ ಒಳಗಾಗು, ಹೆದರು, ಭಯಭೀತನಾಗು. ವ. ಕೃ.–ಉತ್ತಸಂತ

ಉತ್ತಸಿಯ. ವಿ: [ಉತ್ತ್ರಸ್ತ] ಭಯಭೀತನಾದ, ಪೀಡಿಸಲ್ಪಟ್ಟ

ಉತ್ತಾಡ. ಸಕ: [ಉತ್+ತಾಡಯ್] ಹೊಡೆ, ವಾದ್ಯಬಾರಿಸು

ಉತ್ತಾಣ. ವಿ: [ಉತ್ತಾನ] ಮೇಲು ಮುಖವಾದ, ಮುಖ ಮೇಲೆತ್ತಿದ, ಚಿತ್ತ, ನಡುಗಿಸಲ್ಪಟ್ಟ, ಶಬ್ದಮಾಡಲ್ಪಟ್ಟ, ವಿವರಿಸಲ್ಪಟ್ಟ, ನಿಪುಣನಲ್ಲದ, ಕುಶಲನಲ್ಲದ(ಧಮ್ಮ) **–ಸಾಇಯ.** ವಿ: [–ಶಾಯಿನ್] ಮನಸ್ಸು ನಿದ್ದರಿಸುತ್ತಿರುವ

ಉತ್ತಾಣ.}. ಮೇಲಿನ ಶಬ್ದವನ್ನು ನೋಡುವುದು
ಉತ್ತಾಣಗ.}

ಉತ್ತಾಣಪತ್ತಯ. ವಿ: [ದೇ] ಹರಳುಗಿಡದ ಎಲೆ ಇತ್ಯಾದಿ

ಉತ್ತಾಣಿಅ. ವಿ: [ಉತ್ತಾನಿತ] ಕುಸ್ತಿಯಲ್ಲಿ ಎದುರಾಳಿಯಿಂದ ಬೀಳಿಸಲ್ಪಟ್ಟವನು. ನಿದ್ರಿಸುವ ಮನಸ್ಸಿನವನು

ಉತ್ತಾರ. ಸಕ: [ಅವ+ತಾರಯ್] ಕೆಳಕ್ಕಿಳಿಸು

ಉತ್ತಾರ. ಸಕ: [ಉತ್+ತಾರಯ್] ದಡ ತಲುಪಿಸು, ಹೊರಕ್ಕೆ ಹಾಕು, ದೂರಮಾಡು,

ಉತ್ತಾರ. ಪು: [ಉತ್ತಾರ] ಇಳಿಯುವುದು, ಪಾರು ಮಾಡುವುದು, ದಾಟಿಸುವುದು(ದಸ) ತ್ಯಜಿಸುವುದು(ವಿಸೇ) ಇಳಿಯುವವನು, ದಾಟುವವನು

ಉತ್ತಾರ. ಪು: [ದೇ] ಆವಾಸ-ಸ್ಥಾನ, ವಾಸಸ್ಥಳ

ಉತ್ತಾರಣ. ನ: [ಉತ್ತಾರಣ] ಇಳಿಸುವುದು, ದೂರಮಾಡುವುದು, ಹೊರಗೆ ಹಾಕುವುದು ದಾಟುವುದು

ಉತ್ತಾರಯ. ವಿ: [ಉತ್ತಾರಕ] ದಾಟಿಸುವವನು, ಪಾರು ಮಾಡುವವನು, ದಡವನ್ನು ಮುಟ್ಟಿಸುವವನು, ರಕ್ಷಕ

ಉತ್ತಾರಿಅ. ವಿ: [ಉತ್ತಾರಿತ] ದಡ ಮುಟ್ಟಿಸಲಾದವನು, ದೂರ ಮಾಡಲ್ಪಟ್ಟವನು, ಹೊರಗೆ ಹಾಕಲ್ಪಟ್ಟವನು

ಉತ್ತಾಲ. ವಿ: [ಉತ್ತಾಲ] ಬಹಳ ದೊಡ್ಡದಾದ, ಎತ್ತರವಾದ, ಚಂಚಲ, ಲಗುಬಗೆಯ, ಅವಿನೀತ, ತಾಲ–ವಿರುದ್ಧ, ಹಾಡಿನ ಒಂದು ದೋಷ,

ಉತ್ತಾಲ. ನ: [ದೇ] ಒಂದೇ ಸಮನೆ ಅಳುವುದು, ನಿರಂತರ ಅಳುವಿನ ಶಬ್ದ

ಉತ್ತಾಲಣ. 'ಉತ್ತಾಡಣ' ಶಬ್ದವನ್ನು ನೋಡುವುದು

ಉತ್ತಾವಲ. ನ: [ದೇ] ವೇಗವಾಗಿ, ಬೇಗ ಬೇಗನೆ, ವಿ: ವೇಗವಾಗಿ ಕೆಲಸ ಮಾಡುವವನು, ಚಟುವಟಿಕೆಯ, ವ್ಯಾಕುಲ, ವ್ಯಗ್ರಗೊಂಡ

ಉತ್ತಾಸ. ಸಕ: [ಉತ್+ತ್ರಾಸಯ್] ಹೆದರಿಸು, ಭಯಭೀತನನ್ನಾಗಿಸು, ಪೀಡಿಸು, ವ್ಯಗ್ರಗೊಳಿಸು

ಉತ್ತಾಸ. ಪು: [ಉತ್ತ್ರಾಸ] ಭಯ, ಭೀತಿ, ಹೆದರಿಕೆ, ವ್ಯಗ್ರತೆ(ಕಪ್ಪೂ)

ಉತ್ತಾಸಇತ್ತು. ವಿ: [ಉತ್ತ್ರಾಸಯಿತೃ] ಭಯಭೀತಿಗೊಳಿಸುವವನು, ಹೆದರಿಸುವವನು, ಪೀಡಿಸುವವನು, ವ್ಯಗ್ರಗೊಳಿಸುವವನು(ಆಚಾ)

ಉತ್ತಾಸಣಅ.}. ವಿ: [ಉತ್ತ್ರಾಸನಕ] ಭಯಂಕರ,
ಉತ್ತಾಸಣಗ}. ಉದ್ವೇಗವುಂಟು ಮಾಡುವವನು, ವ್ಯಗ್ರಗೊಳಿಸುವವನು(ಪಉಮ)

ಉತ್ತಾಸಿಯ. ವಿ: [ಉತ್ತ್ರಾಸಿತ] ವ್ಯಗ್ರಗೊಳಿಸಲ್ಪಟ್ಟವನು, ಭಯಭೀತಗೊಳಿಸಲ್ಪಟ್ಟವನು, ಪೀಡಿಸಲ್ಪಟ್ಟವನು (ಸುರ)

ಉತ್ತಾಹಿಯ. ವಿ: [ದೇ] ಎಸೆಯಲ್ಪಟ್ಟ, ಮೇಲಕ್ಕೆ ಹಾರಿಸಲ್ಪಟ್ಟ

ಉತ್ತಿ. ಸ್ತ್ರೀ: [ಉಕ್ತಿ] ಮಾತು, ವಾಣಿ

ಉತ್ತಿಂಗ. ಪು: [ಉತ್ತಿಂಗ] ಕತ್ತೆಯ ಆಕೃತಿಯ ಒಂದು ಕೀಟ, ಇರುವೆಗಳ ಗೂಡು, ಇರುವೆಗಳ ಸಂತಾನ, ಹುಲ್ಲಿನ ತುದಿಯಲ್ಲಿರುವ ನೀರಿನ ಹನಿ, ವನಸ್ಪತಿ ವಿಶೇಷ, ಸರ್ಪಚ್ಛತ್ರ, ನ: ರಂಧ್ರ, ತೂತು(ನಿಚೂ), **–ಲೋಣ.** ನ: [–ಲಯನ] ಕೀಟದ ಬಿಲ

ಉತ್ತಿಂಗಪಣಗ. ಪುಂನ: [ಉತ್ತಿಂಗಪನಕ] ಇರುವೆಗಳ ಬಿಲ

ಉತ್ತಿಟ್ಠ. ಅಕ: [ಉತ್+ಸ್ಥಾ] ಎತ್ತು, ಎಬ್ಬಿಸು, ಉದಯಿಸು, ಮೂಡು

ಉತ್ತಿಣ. ವಿ: [ಉತ್ತೃಣ] ಹುಲ್ಲಿಲ್ಲದ, ತೃಣಶೂನ್ಯ

ಉತ್ತಿಣಿಅ. ವಿ: [ಉತ್ತೃಣಿತ] ಹುಲ್ಲಿಲ್ಲದಂತೆ ಮಾಡಿದ

ಉತ್ತಿಣ್ಣ. ವಿ: [ಉತ್ತೀರ್ಣ] ಹೊರದೂಡಲಾದ, ಕಡಿಮೆಯಾದ, ಸಮಾಪ್ತಿಗೊಳಿಸಲಾದ, ಕಾರ್ಯವನ್ನು ಪೂರ್ಣಗೊಳಿಸಿದವನು, ದಾಟಿದ, ಮೀರಿದ,ದಾಟಲ್ಪಟ್ಟ, ದಾಟಿದ,ಪಾರಾದ

ಉತ್ತಿಣ್ಣ. ವಿ: [ಅವತೀರ್ಣ] ಕೆಳಕ್ಕೆ ಇಳಿದ, ಮೇಲಿನಿಂದ ಕೆಳಕ್ಕೆ ಬಂದಿರುವ

ಉತ್ತಿತ್ಥ. ಪುಂ. ನ: [ಉತ್ತೀರ್ಥ] ಕೆಟ್ಟಹಾದಿ, ಅಪಮಾರ್ಗ

ಉತ್ತಿಮ. 'ಉತ್ತಮ' ಶಬ್ದವನ್ನು ನೋಡುವುದು
ಉತ್ತಿಮಂಗ. 'ಉತ್ತಮಂಗ' ಶಬ್ದವನ್ನು ನೋಡುವುದು
ಉತ್ತಿನ್ನ. 'ಉತ್ತಿಣ್ಣ' ಶಬ್ದವನ್ನು ನೋಡುವುದು
ಉತ್ತಿರಿವಿಡಿ.} ಸ್ತ್ರೀ: [ದೇ] ಪಾತ್ರೆಯೇ
ಉತ್ತಿವಡಾ.} ಮೊದಲಾದವುಗಳಎತ್ತರದ ರಾಶಿ
ಉತ್ತುಂಗ. ವಿ: [ಉತ್ತುಂಗ] ಎತ್ತರವಾದ, ಉನ್ನತವಾದ
ಉತ್ತುಂಡ. ವಿ: [ಉತ್ತುಂಡ] ಮೇಲು ಮುಖವಾದ
ಉತ್ತುಣ. ವಿ: [ದೇ] ಗರ್ವದಿಂದ ಕೂಡಿದ, ಅಹಂಕಾರಿ, ಅಭಿಮಾನಿ
ಉತ್ತುಪ್ಪಿಯ. ವಿ: [ದೇ] ಸ್ನಿಗ್ಧವಾದ, ಸ್ನೇಹಿ, ನುಣುಪಾದ (ಬಿಪಾ)
ಉತ್ತುಯ. ಸಕ: [ಉತ್+ತುದ್] ವ್ಯಗ್ರಗೊಳಿಸು, ಯಾತನೆ ಉಂಟುಮಾಡು, ವ. ಕೃ-(ಉತ್ತುಯಂತ)
ಉತ್ತುರಿದ್ಧಿ. ಸ್ತ್ರೀ: [ದೇ] ಗರ್ವ, ಅಭಿಮಾನ, ವಿ: ಗರ್ವಿಷ್ಠ, ಅಭಿಮಾನಿ(ದೇ)
ಉತ್ತುರ್ವ. ವಿ: [ದೇ] ನೋಡಲ್ಪಟ್ಟ,
ಉತ್ತುಹಿಅ. ವಿ: [ದೇ] ಹಾಳಾದ, ನಾಶವಾದ, ಕಿತ್ತುಹಾಕಲಾದ
ಉತ್ತೂಹ. ಪು: [ದೇ] ದಡವಿಲ್ಲದ ಬಾವಿ(ದೇ)
ಉತ್ತೇಅ. ವಿ: [ಉತ್ತೇಜಸ್] ತೇಜಸ್ವಿ, ಪ್ರಖರ, ಪು: ಮಾತ್ರಾವೃತ್ತದ ಒಂದು ಪ್ರಭೇದ
ಉತ್ತೇಅಣ. ನ: [ಉತ್ತೇಜನ] ಉತ್ತೇಜನ, ಹುರಿದುಂಬಿಸುವುದು, ಹರಿತಮಾಡುವುದು
ಉತ್ತೇಇಅ.} ವಿ: [ಉತ್ತೇಜಿತ] ಹುರಿದುಂಬಿಸಲ್ಪಟ್ಟ,
ಉತ್ತೇಜಿಅ.} ಪ್ರೇರಿಸಲ್ಪಟ್ಟ, ಪ್ರೋತ್ಸಾಹಿಸಲ್ಪಟ್ಟ
ಉತ್ತೇಡ.} ಪು: [ದೇ] ಬಿಂದು
ಉತ್ತೇಡಯ.}
ಉತ್ಥ. ನ: [ಉಕ್ಥ] ಸ್ತೋತ್ರ, ಒಂದು ಯೋಗ-ವಿಶೇಷ
ಉತ್ಥ. ವಿ: [ಉತ್ಥ] ಉತ್ಪನ್ನ, ಮೇಲಕ್ಕೆ ಎದ್ದಿರುವ
ಉತ್ಥ.(ಶೌ). 'ಉಟ್ಠ=ಉತ್+ಸ್ಥಾ' ಶಬ್ದವನ್ನು ನೋಡುವುದು
ಉತ್ಥಇಯ. ವಿ: [ಅವಸೃತ] ವ್ಯಾಪಿಸಿದ, ಹರಡಿದ, ಪ್ರಸಾರವಾದ, ಹೊದಿಸಲ್ಪಟ್ಟ
ಉತ್ಥಂಗಿಅ. 'ಉತ್ಥಂಧಿಅ=ಉತ್ತಂಭಿತ' ಶಬ್ದವನ್ನು ನೋಡುವುದು
ಉತ್ತಂಘ. ಸಕ: [ಉದ್+ನಮಯ್] ಮೇಲಕ್ಕೆ ಎತ್ತು, ಮೇಲಕ್ಕೆ ಮಾಡು

ಉತ್ಥಂಘ. ಸಕ: [ಉತ್+ಸ್ತಂಭಯ್] ಮೇಲಕ್ಕೆ ಎತ್ತು, ಆಧಾರ ನೀಡು, ಒತ್ತಾಸೆಕೊಡು, ತಡೆ(ಗಲುಡ)
ಉತ್ಥಂಘ. ಸಕ: [ಉತ್+ಕ್ಷಿಪ್] ಮೆಲಕ್ಕೆ ಎಸೆ, -'ಉತ್ತಂಘಇ'
ಉತ್ಥಂಘ. ಸಕ: [ರುಧ್] ತಡೆ
ಉತ್ಥಂಘ. ಪು: [ಉತ್ತಂಭ] ಮೇಲಕ್ಕೆ ಹರಡು, ಎತ್ತರಕ್ಕೆ ಹರಡುವುದು
ಉತ್ಥಂಘಣ. ನ: [ಉತ್ಥಂಭನ] ಮೇಲಿನ ಶಬ್ದವನ್ನು ನೋಡುವುದು
ಉತ್ಥಂಘಿ. ವಿ: [ಉತ್ಕ್ಷೇಪಿನ್] ಮೇಲಕ್ಕೆ ಎಸೆಯುವವನು
ಉತ್ಥಂಘಿಅ. ವಿ: [ಉನ್ನಮಿತ] ಮೇಲಕ್ಕೆ ಎತ್ತಲ್ಪಟ್ಟ, ಎತ್ತರಿಸಲ್ಪಟ್ಟ (ಕುಮಾ)
ಉತ್ಥಂಘಿಅ. ವಿ: [ರುದ್ಧ] ತಡೆಯಲ್ಪಟ್ಟ(ಕುಮಾ)
ಉತ್ಥಂಘಿಅ. ವಿ: [ಉತ್ಥಂಭಿತ] ಮೇಲಕ್ಕೆ ಎತ್ತಲ್ಪಟ್ಟ
ಉತ್ಥಂಭಿ. ವಿ: [ಉತ್ಥಂಭಿನ್] ಆಘಾತಿಸಲ್ಪಟ್ಟ, ಆಶ್ರಯಿಸಿದವನು
ಉತ್ಥಂಭಿಅ. ವಿ: [ಉತ್ಥಂಭಿತ] ಅವಲಂಬಿತ, ಆಶ್ರಯಿಸಿದವನು, ತಡೆಯಲಾದ, ಬಂಧನ ಮುಕ್ತ ಮಾಡಲ್ಪಟ್ಟ
ಉತ್ತಂಭಿರ. 'ಉತ್ಥಂಭಿ' ಶಬ್ದವನ್ನು ನೋಡುವುದು
ಉತ್ಥಗ್ಗ. ಪು: [ದೇ] ಯುದ್ಧ,ಜಗಳ,ತಿಕ್ಕಾಟ,ಘರ್ಷಣೆ
ಉತ್ಥಪ್ಪಣ. 'ಉಟ್ಠವಣ' ಶಬ್ದವನ್ನು ನೋಡುವುದು
ಉತ್ಥಯ. 'ಉತ್ಥಇಯ' ಶಬ್ದವನ್ನು ನೋಡುವುದು
ಉತ್ಥರ. ಸಕ: [ಆ+ಕ್ರಮ್] ಆಕ್ರಮಣಮಾಡು
ಉತ್ಥರ. ಸಕ: [ಅವ+ಸ್ತೃ] ಆಚ್ಛಾದನ ಮಾಡು, ಮುಚ್ಚು, ಮರೆಮಾಡು ಸೋಲಿಸು
ಉತ್ಥರ.} ಸಕ: [ಉತ್+ಸ್ತೃ] ಆಚ್ಛಾದಿಸು, ಹೊದಿಸು,
ಉತ್ಥಲ್ಲ.} ಮರೆಮಾಡು
ಉತ್ಥರಿಅ. ವಿ: [ಆಕ್ರಾಂತ] ಮುತ್ತಿಗೆ ಹಾಕಲ್ಪಟ್ಟ, ಹತ್ತಿಕ್ಕಲ್ಪಟ್ಟ(ಭವಿ)
ಉತ್ಥರಿಯ. ವಿ: [ದೇ] ಹೊರಬಿದ್ದ, ಹೊರಬಂದ, ಮೇಲಕ್ಕೆ ಎದ್ದಿರುವ
ಉತ್ಥಲ. ನ: [ಉತ್ಸ್ಥಲ] ಎತ್ತರದ ದೂಳಿನ ರಾಶಿ, ಕೆಟ್ಟ ಹಾದಿ, ಅಪಮಾರ್ಗ
ಉತ್ಥಲಿಅ. ನ: [ದೇ] ಮನೆ,ವಿ: ಮೇಲಕ್ಕೆ ಹೋದ, ಎತ್ತರಕ್ಕೆ ಹೋದ

ಉತ್ಥಲ್ಲ. ಅಕ: [ಉತ್+ಶಲ್] ಹಾರು, ನೆಗೆ –ಉತ್ಥಲ್ಲಇ'
ಉತ್ಥಲ್ಲಪತ್ಥಲ್ಲಾ. ಸ್ತ್ರೀ: [ದೇ] ಎರಡೂ ಕಡೆಗಳಿಂದ ಪರಿವರ್ತನೆ
ಉತ್ಥಲ್ಲಾ. ಸ್ತ್ರೀ: [ದೇ] ಪರಿವರ್ತನೆ, ಬದಲಾವಣೆ, ಮೈಯನ್ನು ವಾಸನೆ ಪುಡಿಯಿಂದ ಶುದ್ಧಿ ಮಾಡುವುದು, ಹೊರಳಾಡುವಿಕೆ, ಉಜ್ಜುವಿಕೆ (ಗಉಡ)
ಉತ್ಥಲ್ಲಿಅ. ವಿ: [ಉಚ್ಛಲಿತ] ಮೇಲಕ್ಕೆ ಹಾರಿದ, ಮೇಲಕ್ಕೆ ಚಿಮ್ಮಿದ
ಉತ್ಥಾಇ. ವಿ: [ಉತ್ಥಾಯಿನ್] ಮೇಲಕ್ಕೆ ಏಳುವವನು
ಉತ್ಥಾಇಯ. ವಿ: [ಉತ್ಥಾಪಿತ] ಮೇಲಕ್ಕೆ ಎಬ್ಬಿಸಲ್ಪಟ್ಟ,
ಉತ್ಥಾಣ. ನ: [ಉತ್ಥಾನ] ಮೇಲಕ್ಕೆ ಏಳುವುದು, ಅಭಿವೃದ್ಧಿಗೆ ಬರುವುದು, ಶೌರ್ಯ, ಬಲ, ಪರಾಕ್ರಮ(ವಿಸೇ) ಉತ್ಪತ್ತಿ
ಉತ್ಥಾಮಿಯ.(ಅಪ) ವಿ: [ಉತ್ಥಾಪಿತ] ಮೇಲಕ್ಕೆ ಎಬ್ಬಿಸಲ್ಪಟ್ಟ, ಎಚ್ಚರಗೊಳಿಸಲ್ಪಟ್ಟ
ಉತ್ಥಾರ. ಸಕ: [ಆ+ಕ್ರಮ್] ಆಕ್ರಮಣ ಮಾಡು, ಹತ್ತಿಕ್ಕು– 'ಉತ್ಥಾರಇ'
ಉತ್ಥಾರ. 'ಉಚ್ಛಾಹ=ಉತ್ಸಾಹ' ಶಬ್ದವನ್ನು ನೋಡುವುದು
ಉತ್ಥಾರಿಯ. ವಿ: [ಆಕ್ರಾಂತ] ಆಕ್ರಮಿಸಲ್ಪಟ್ಟ, ಹತ್ತಿಕ್ಕಲ್ಪಟ್ಟ
ಉತ್ಥಿಯ. 'ಉಟ್ಠಿಯ' ಶಬ್ದವನ್ನು ನೋಡುವುದು
ಉತ್ಥಿಯ. 'ಉತ್ಥಇಅ' ಶಬ್ದವನ್ನು ನೋಡುವುದು
–ಉತ್ಥಿಯ. ವಿ: [–ತೀರ್ಥಕ] ಧರ್ಮದ ಅನುಯಾಯಿ, ದರ್ಶನದ ಅನುಯಾಯಿ(ಉವಾ)
–ಉತ್ಥಿಯ. ವಿ: [–ಯೂಥಿಕ] ಕಾಡು ಪ್ರಾಣಿಗಳ ಗುಂಪಿಲ್ಲಿ ಪ್ರವೇಶಮಾಡಿದ(ಉವಾ)
ಉತ್ಥುಭಣ. ನ: [ಅವಸ್ತೋಭನ] ಅನಿಷ್ಟವನ್ನು ಹೋಗಲಾಡಿಸಲು ಮಾಡುವ ಒಂದು ಬಗೆಯ ಕೌತುಕ, ಥೂ ಥೂ ಎಂದು ಶಬ್ದ ಮಾಡುವುದು
ಉದ. ನ: [ಉದ] ನೀರು, –ಉಲ್ಲ., ಓಲ್ಲ. ವಿ: [ಉದಾರ್ದ್ರ] ನೀರಿನಿಂದ ನೆನೆ, –ಗತ್ತಾಭ. ನ: [–ಗರ್ತಾಭ] ಒಂದು ಗೋತ್ರ(ಠಾ)
ಉದಇಯ. 'ಓದಇಯ' ಶಬ್ದವನ್ನು ನೋಡುವುದು (ಅಣು)
ಉದಇಲ್ಲ. ವಿ: [ಉದಯಿನ್] ಉದಯಿಸುತ್ತಿರುವ, ಉನ್ನತಿ ಹೊಂದುತ್ತಿರುವ,ಏರುತ್ತಿರುವ
ಉದಂಕ. ಪು: [ಉದಂಕ] ನೀರಿನ ಪಾತ್ರೆ, ಇದರಿಂದ ಎತ್ತರದಿಂದ ನೀರನ್ನು ಸಿಂಪಡಿಸಲಾಗುತ್ತದೆ.
ಉದಂಚ. ಸಕ: [ಉದ್+ಅಂಚ್] ಮೇಲಕ್ಕೆ ಅಥವಾ ಎತ್ತರಕ್ಕೆ ಹೋಗುವುದು
ಉದಂಚಣ. ನ: [ಉದಂಚನ] ಎತ್ತರಕ್ಕೆ ಎಸೆ, ವಿ: ಎತ್ತರಕ್ಕೆ ಎಸೆಯುವವನು(ಅಣು)
ಉದಂತ. ಪು: [ಉದಂತ] ತಥ್ಯ, ವೃತ್ತಾಂತ, ಸಮಾಚಾರ
ಉದಗ. ಪುಂ. ನ: [ಉದಕ] ನೀರು, ವನಸ್ಪತಿ–ವಿಶೇಷ, ಜಲಾಶಯ, ಪು: ಸ್ವನಾಮದಿಂದ ಖ್ಯಾತನಾದ ಒಬ್ಬ ಜೈನಸಾಧು, ಏಳನೆಯ ಭಾವಿ ಜಿನದೇವ, –ಗಬ್ಭ. ಪು: [–ಗರ್ಭ] ಮೋಡ, ಮುಗಿಲು(ಭಗ), –ದೋಣಿ. ಸ್ತ್ರೀ: [–ದ್ರೋಣಿ] ನೀರನ್ನು ಇಡುವ ಪಾತ್ರೆ, ತಣ್ಣಗೆ ಮಾಡಲು ಕಾದಿರುವ ಲೋಹವನ್ನು ಅದರಲ್ಲಿ ಹಾಕಲಾಗುತ್ತದೆ. ರಾಟೆಗೆ ಕಟ್ಟುವ ಸಣ್ಣ ಗಡಿಗೆ, –ಪೋಗ್ಗಲ. ನ: [–ಪೌದ್ಗಲ] ಮೋಡ, ಮೇಘ, –ಮಚ್ಛ. ಪು: [–ಮತ್ಸ್ಯ] ಕಾಮನ ಬಿಲ್ಲಿನ ತುಂಡು(ಭಾಗ), ಗಂಡಾಂತರ, ಕೇಡು, –ಮಾಲ. ಪುಂ.ಸ್ತ್ರೀ: [–ಮಾಲ] ಮೇಲೇರುತ್ತಿರುವ ನೀರಿನ ಅಲೆ, ಉದಕಶಿಖಾ, ಸಮುದ್ರದ ತರಂಗ. ▯ವತ್ಥಿ. ಸ್ತ್ರೀ: [–ವಸ್ತಿ] ತೊಗಲಿನ ಚೀಲ, ನೀರು ತುಂಬುವ ಚರ್ಮದ ಚೀಲ(ಣಾಯಾ), –ಸಿಹಾ. ಸ್ತ್ರೀ: [–ಶಿಖಾ] ಅಲೆ, ಸಮುದ್ರದ ದಡ, ನೀರಿನ ತುದಿ(ಉದಕ–ಶಿಖೆ) –ಸೀಮ. ಪು: [–ಸೀಮನ್] ಒಂದು ಪರ್ವತ
ಉದಗ್ಗ. ವಿ: [ಉದಗ್ರ] ಸುಂದರ, ಮನೋಹರ, ಶ್ರೇಷ್ಠ, ಉಗ್ರ, ಪ್ರಖರ(ಠಾ), ಪ್ರದಾನ, ಮುಖ್ಯ
ಉದಡ್ಢ. ಪು: [ಉದ್ದಗ್ಧ] ಒಂದು ನರಕ ಸ್ಥಾನ
ಉದತ್ತ. ವಿ: [ಉದಾತ್ತ] ಉದಾರ, ಕೃಪಣನಲ್ಲದ, ಉದಾರಿ
ಉದತ್ತ. ವಿ: [ಉದಾತ್ತ] ಉಚ್ಚ ಸ್ವರದಲ್ಲಿ ಹೇಳುವ ಸ್ವರ, ವೇದದ ಮೂರು ಸ್ವರಗಳಲ್ಲಿ ಒಂದು, ಉದಾರಿ, ದಾನಿ,
ಉದನ್ನಾ. ಸ್ತ್ರೀ: [ಉದನ್ಯಾ] ಬಾಯಾರಿಕೆ, ಪಿಪಾಸೆ
ಉದಯ. 'ಉದಗ' ಶಬ್ದವನ್ನು ನೋಡುವುದು
ಉದಯ. ಪು: [ಉದಯ] ಲಾಭ
ಉದಯ. ಪು: [ಉದಯ] ಅಭ್ಯುದಯ, ಉನ್ನತಿ, ಉತ್ಪತ್ತಿ(ವಿಸೇ), ಕರ್ಮದ ಪರಿಣಾಮ, ಪ್ರಾರಂಭ,

ಪ್ರಾದುರ್ಭಾವ, ಭರತ ಕ್ಷೇತ್ರದಲ್ಲಿ ಏಳನೆಯ ಭಾವಿ ಜಿನದೇವ, ಭರತ ಕ್ಷೇತ್ರದಲ್ಲಿ ಹುಟ್ಟಲಿರುವ ಮೂರನೇ ಜಿನದೇವನ ಹಿಂದಿನ ಜನ್ಮದ ಹೆಸರು, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ ಕುಮಾರ, **ಉದಯಾಯಲ.** ಪು: [ಉದಯಾಚಲ] ಸೂರ್ಯನು ಉದಯಿಸುವ ಪರ್ವತ

ಉದಯಂತ. 'ಉದಿ–' ಶಬ್ದವನ್ನು ನೋಡುವುದು

ಉದಯಣ. ಪು: [ಉದಯನ] ಸಿದ್ಧರಾಜನ ಪ್ರಸಿದ್ಧ ಮಂತ್ರಿ, ಕೌಶಾಂಬಿ ನಗರದ ರಾಜ ಶತಾನೀಕನ ಮಗ, ಒಬ್ಬ ವಿಖ್ಯಾತ ಜೈನರಾಜ, ನ: **ಉನ್ನತಿ,** ಉದಯ, ವಿ: ಉನ್ನತಿ ಹೊಂದುವವನು, ಪ್ರವರ್ಧಮಾನ

ಉದರ. ನ: [ಉದರ] ಹೊಟ್ಟೆ, ಜಠರ(ಸೂಅ), ಒಂದು ಬಗೆಯ ಉದರ ರೋಗ

ಉದರಂಭರಿ. ವಿ: [ಉದರಂಭರಿ] ಸ್ವಾರ್ಥಿ, ಹೊಟ್ಟೆಬಾಕ, ತನ್ನ ಹೊಟ್ಟೆಯ ಪಾಡನ್ನು ನೋಡಿಕೊಳ್ಳುವವನು

ಉದರಿ. ವಿ: [ಉದರಿನ್] ಉದರ ರೋಗವುಳ್ಳವನು

ಉದರಿಯ. ವಿ: [ಉದರಿಕ] ಮೇಲಿನ ಶಬ್ದವನ್ನು ನೋಡುವುದು

ಉದವಾಹ. ವಿ: [ಉದವಾಹ] ನೀರು ಹೊರುವವನು (ಪಣ್ಣ), ಜಲವಾಹಕ, ಸಣ್ಣ ಪ್ರವಾಹ(ಭಗ)

ಉದಹಿ. ಪು: [ಉದಧಿ] ಸಮುದ್ರ, ಸಾಗರ, ಭವನಪತಿ ದೇವರುಗಳ ಒಂದು ಜಾತಿ(ಪಣ್ಣ) **–ಕುಮಾರ.** ಪು: [–ಕುಮಾರ] ದೇವತೆಗಳ ಒಂದು ಜಾತಿ. **'ಉಅಹಿ'** ಶಬ್ದವನ್ನು ನೋಡುವುದು

ಉದಾಇ. ಪು: [ಉದಾಯಿನ್] ಒಬ್ಬ ಜೈನ ರಾಜ, ಮಹಾರಾಜ ಕೋಣಿಕನ ಮಗ, ಅವನನ್ನು ಒಬ್ಬ ದುಷ್ಟನು ಜೈನ ಸಾಧುವಾಗಿ ಬಂದು ಧರ್ಮಚ್ಛಲದಿಂದ ಕೊಂದಿದ್ದನು. ಅವನೇ ಮುಂದೆ ಮೂರನೇ ಜಿನದೇವನಾಗುವನು(ತಾ), ಪು: ರಾಜಾ ಕೂಣಿಕನ ಒಂದು ಪಟ್ಟದಾನೆ

ಉದಾಇಣ. 'ಉದಾಯಣ' ಶಬ್ದವನ್ನು ನೋಡುವುದು

ಉದಾತ್ತ. **'ಉದತ್ತ'** ಶಬ್ದವನ್ನು ನೋಡುವುದು

ಉದಾಯಣ. ಪು: [ಉದಾಯನ] ಭಗವಾನ್ ಮಹಾವೀರರಿಂದ ದೀಕ್ಷೆ ಪಡೆದಿದ್ದ ಸಿಂಧು ದೇಶದ ರಾಜ(ತಾ)

ಉದಾರ. **'ಉರಾಲ'** ಶಬ್ದವನ್ನು ನೋಡುವುದು

ಉದಾಸಿ. ವಿ: [ಉದಾಸಿನ್] ವಿರಕ್ತ, ನಿಸ್ಪೃಹ, ತಟಸ್ಥ. **–ವ.** ನ: [–ತ್ವ] ಔದಾಸೀನ್ಯ ಉಪೇಕ್ಷೆ, ಅಗೌರವ, ನಿರುತ್ಸಾಹ

ಉದಾಹಡ.ವಿ:[ಉದಾಹೃತ]ಕಥಿತ, ಉದಾಹರಿಸಲ್ಪಟ್ಟ, ದೃಷ್ಟಾಂತ ನೀಡಲಾದ

ಉದಾಹರ. ಸಕ: [ಉದಾ+ಹೃ] ಹೇಳು, ಉದಾಹರಿಸು **–ಉದಾಹರಂತಿ**

ಉದಾಹರಣ. ನ: [ಉದಾಹರಣ] ಕಥನ, ಪ್ರತಿಪಾದನೆ, ದೃಷ್ಟಾಂತ(ಸೂಅ)

ಉದಾಹಿಯ. ವಿ: [ಉದಾಹೃತ] ಕಥಿತ, ಹೇಳಲ್ಪಟ್ಟ, ಪ್ರತಿಪಾದಿತ, ಉದಾಹರಿಸಲಾದ(ಆಚಾ)

ಉದಾಹಿಯ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ(ಷಡ್)

ಉದಾಹು. **'ಉದಾಹರ'** ಶಬ್ದವನ್ನು ನೋಡುವುದು

ಉದಾಹು. ಅ: [ಉತಾಹೋ] ಅಥವಾ

ಉದಾಹೂ. **'ಉದಾಹರ'** ಶಬ್ದವನ್ನು ನೋಡುವುದು

ಉದಾಹೋ. **'ಉದಾಹು=ಉತಾಹೋ'** ಶಬ್ದವನ್ನು ನೋಡುವುದು(ಸ್ವಪ್ನ)

ಉದಿ. ಅಕ: [ಉದ್+ಇ] ಉನ್ನತವಾಗು, ಉತ್ಪನ್ನವಾಗು**–ಉದೇಇ**

ಉದಿಕ್ಖಿಅ. ವಿ: [ಉದೀಕ್ಷಿತ] ಅವಲೋಕಿಸಲ್ಪಟ್ಟ, ನೋಡಲ್ಪಟ್ಟ(ದೇ)

ಉದಿಣ್ಣ. ವಿ: [ಉದೀಚ್ಯ] ಉತ್ತರದಿಕ್ಕಿನಲ್ಲಿ ಹುಟ್ಟಿದ (ಆವಮ)

ಉದಿಣ್ಣ.} ವಿ: [ಉದೀರ್ಣ] ಉದಿತವಾದ, ಹುಟ್ಟಿದ,
ಉದಿನ್ನ.} ಉಂಟಾದ, ಫಲದ ಕಡಗೆ ಮುಖ ಮಾಡಿದ(ಕರ್ಮ), ಉತ್ಕಟ(ಭಗ), ಬಲಗೊಂಡ,

ಉದಿಯ. ವಿ: [ಉದಿತ] ಉತ್ಪನ್ನವಾದ, ಹೊರ ಹೊಮ್ಮಿದ, ಉನ್ನತ, ಹೇಳಲ್ಪಟ್ಟ,

ಉದೀಣ. ವಿ: [ಉದೀಚೀನ] ಉತ್ತರ ದಿಕ್ಕಿಗೆ ಸಂಬಂಧಿಸಿದ, ಉತ್ತರದಲ್ಲಿ ಹುಟ್ಟಿದ(ಆಚಾ), **–ಪಾಈಣಾ.** ಸ್ತ್ರೀ:[–ಪ್ರಾಚೀನಾ] ಈಶಾನ್ಯ ಮೂಲೆ

ಉದೀರ. ಸಕ: [ಉದ್+ಈರಯ್] ಪ್ರೇರಿಸು, ಹೇಳು, ಪ್ರತಿಪಾದಿಸು, ಉದಿಸದೆ ಇರುವ ಕರ್ಮವನ್ನು ಫಲದ ಕಡೆಗೆ ತಿರುಗಿಸಲು ಯತ್ನಿಸು–, **'ಉದೀರ ಇ'.** ವ. ಕೃ**–ಉದೀರೇಂತ**

ಉದೀರಗ. **'ಉದೀರಯ'** ಶಬ್ದವನ್ನು ನೋಡುವುದು

ಉದೀರಣ. ನ: [ಉದೀರಣ] ಕಥನ, ಹೇಳುವುದು, ಪ್ರೇರಣೆ, ಕಾಲ ಪ್ರಾಪ್ತವಾಗಿಲ್ಲದಿದ್ದರೂ ಪ್ರಯುತ್ನದಿಂದ ಮಾಡುವ ಕರ್ಮಫಲದ ಅನುಭವ(ಕಮ್ಮ)

ಉದೀರಣಯಾ.} ಸ್ತ್ರೀ: [ಉದೀರಣಾ] ಮೇಲಿನ
ಉದೀರಣಾ.} ಶಬ್ದವನ್ನು ನೋಡುವುದು

ಉದೀರಯ. ವಿ: [ಉದೀರಕ] ಕಥಕ, ಹೇಳುವವನು, ಪ್ರತಿಪಾದಕ, ಪ್ರೇರಕ, ಪ್ರವರ್ತಕ, ಕಾಲ ಪ್ರಾಪ್ತವಾಗದಿದ್ದರೂ ಪ್ರಯತ್ನ–ವಿಶೇಷದಿಂದ ಕರ್ಮಫಲದ ಅನುಭವ ಹೊಂದುವವನು.

ಉದೀರಿದ}. ವಿ: [ಉದೀರಿತ] ಪ್ರೇರಿಸಲ್ಪಟ್ಟ,
ಉದೀರಿಯ}. ಉಚ್ಚರಿಸಲ್ಪಟ್ಟ, ಹೇಳಲ್ಪಟ್ಟ, ಜನಿತ=ಹುಟ್ಟಿದ, ಮಾಡಲ್ಪಟ್ಟ, ಕಾಲ ಪ್ರಾಪ್ತವಾಗದಿದ್ದರೂ ಪ್ರಯತ್ನ–ವಿಶೇಷದಿಂದ ಬಲವಂತವಾಗಿ ಯಾವುದರ ಅನುಭವ ಮಾಡಿಕೊಳ್ಳಲಾಗುವುದೋ ಅದು (=ಕರ್ಮ) (ಪಣ್ಣ)

ಉದು. 'ಉಲು' ಶಬ್ದವನ್ನು ನೋಡುವುದು

ಉದುಂಬರ. 'ಉಂಬರ' ಶಬ್ದವನ್ನು ನೋಡುವುದು

ಉದುರುಹ. ಸಕ: [ಉದ್+ರುಹ್] ಮೇಲೆ ಹತ್ತು,

ಉದೂಖಲ. 'ಉಲೂಖಲ' ಶಬ್ದವನ್ನು ನೋಡುವುದು

ಉದೂಗ. ಪುಂನ: [ದೇ] ಪೃಥ್ವಿಯ ಶಿಲೆ

ಉದೂಲಿಯ. ವಿ: [ದೇ] ಕೆಳಕ್ಕೆ ಬಗ್ಗಿರುವ, ಕೆಳಮುಖವಾದ(ಷಡ್)

ಉದೂಹಲ. 'ಉಲೂಹಲ' ಶಬ್ದವನ್ನು ನೋಡುವುದು

ಉದ್ದ. ನ: [ದೇ] ಜಲ–ಮಾನುಷ, ಎತ್ತಿನ ಹೆಗಲ ಮೇಲಿರುವ ಹಿಣಿಲು(=ಕಕುದ), ಮೀನು, ಮೀನಿನ ಚರ್ಮದಿಂದ ಮಾಡಿದ ವಸ್ತ್ರ(ಆಚಾ)

ಉದ್ದ. ವಿ: [ಆರ್ದ್ರ] ಒದ್ದೆಯಾದ,

ಉದ್ದಅ. ವಿ: [ಉದ್ಯತ] ಉದ್ಯೋಗದಿಂದ ಕೂಡಿದ, ತೊಡಗಿದ, ಪ್ರವೃತ್ತನಾದ

ಉದ್ದಂಡ.}. ವಿ: [ಉದ್ದಂಡ] ಪ್ರಚಂಡ, ಭಯಂಕರ,
ಉದ್ದಂಡಗ.} ಉದ್ಧಟ(ಕುಮಾ), ಉದ್ದವಾದ ಕೋಲುಳ್ಳ, ಕೈಯಲ್ಲಿ ದಂಡವನ್ನು ಎತ್ತರಕ್ಕೆ ಎತ್ತಿಹಿಡಿದುಕೊಂಡು ಹೋಗುವ ತಪಸ್ವಿಗಳ ಒಂದು ವರ್ಗ

ಉದ್ದಂತುರ. ವಿ: [ಉದ್ದಂತುರ] ಹಲ್ಲು ಹೊರಗೆ ಬಂದಿರುವವನು ಎತ್ತರವಾದ

ಉದ್ದಂಭ. ಪು: [ಉದ್ದಂಭ] ಛಂದಸ್ಸಿನ ಒಂದು ಪ್ರಭೇದ

ಉದ್ದಂಸ. ಪು: [ಉದ್ದಂಶ] ಜೇನ್ನೊಣ, ತಗುಣೆ ಇತ್ಯಾದಿ ಸಣ್ಣ ಕೀಟಗಳು

ಉದ್ದಡ್ಢ. [ಉದ್ದಗ್ಧ] ರತ್ನ ಪ್ರಭೆಯೆಂಬ ನರಕ–ಲೋಕದ ಒಂದು ನರಕಾವಾಸ, **–ಮಜ್ಝಿಮ.** ಪು: [–ಮಧ್ಯಮ] ರತ್ನಪ್ರಭಾ ಭೂಮಿಯ ಒಂದು ನರಕ ಲೋಕ. **ಉದ್ದಡ್ಢಾವತ್ತ.** ಪು: [ಉದ್ದಡ್ಢಾವರ್ತ] ಪೂರ್ವೋಕ್ತ ಅರ್ಥವನ್ನು ನೋಡುವುದು **ಉದ್ದಡ್ಢಾವಸಿಟ್ಠ.** ಪು: [ಉದ್ದಡ್ಢಾವಶಿಷ್ಟ] ಹಿಂದೆ ಹೇಳಿರುವ ಅರ್ಥವನ್ನು ನೋಡುವುದು.

ಉದ್ದದ್ದರ. ನ:[ದೇ.ಊರ್ಧ್ವದರ] ಸುಭಿಕ್ಷ, ಸುಕಲ(ಬೃಹ)

ಉದ್ದಮ. ಪುಂನ: 'ಉಜ್ಜಮ=ಉದ್ಯಮ' ಶಬ್ದವನ್ನು ನೋಡುವುದು

ಉದ್ದರಿಅ. ವಿ: [ದೇ] ಕಿತ್ತುಹಾಕಲ್ಪಟ್ಟ, ಅರಳಿದ, ವಿಕಸಿತ (ಪಾಅ)

ಉದ್ದರಿಅ. ವಿ: [ಉದ್+ದೃಪ್ತ] ಗರ್ವಿತ, ಉದ್ಧಟ, ಅಭಿಮಾನಿ

ಉದ್ದಲಣ. ನ: [ಉದ್ದಲನ] ಸೀಳುವುದು, ಭೇದಿಸುವುದು(ಗಉಡ)

ಉದ್ದವ. ಸಕ: [ಉದ್, ಉಪ+ದೃ] ಉಪದ್ರವವುಂಟು ಮಾಡು, ನೋಯಿಸು, ಹೊಡೆ, ನಾಶಮಾಡು, ಹಿಂಸಿಸು

ಉದ್ದವಅ. ಪು: [ಉದ್ದ್ರವ, ಉಪದ್ರವ] ಉಪದ್ರವ, ವಿನಾಶ, ಹಿಂಸೆ

ಉದ್ದವಇತ್ತು ವಿ: [ಉದ್‌ದ್ರೋತೃ, ಉಪದ್ರೋತೃ] ಉಪದ್ರವವುಂಟು ಮಾಡುವವನು, ಹಿಂಸಕ, ವಿನಾಶಕ

ಉದ್ದವಣ. ನ: [ಉಪದ್ರಾವಣ] ಮೃತ್ಯುವನ್ನು ಹೊರತುಪಡಿಸಿ ಎಲ್ಲ ಬಗೆಯ ದುಃಖಗಳು

ಉದ್ದವಣ. ನ: [ಉದ್ದ್ರವಣ, ಉಪದ್ರವಣ] ಉಪದ್ರವ, ಹಗರಣ, ವಿನಾಶ, ಹಿಂಸೆ

ಉದ್ದವಣಾಯ.} ಸ್ತ್ರೀ: [ಉದ್‌ದ್ರವಣಾ, ಉಪದ್ರವಣಾ]
ಉದ್ದವಣಾ.} ಮೇಲಿನ ಶಬ್ದವನ್ನು ನೋಡುವುದು

ಉದ್ದವಾಇಅ. 'ಉಡ್ಡುವಾಇಅ' ಶಬ್ದವನ್ನು ನೋಡುವುದು

ಉದ್ದವಿಅ. ವಿ: [ಉದ್ದ್ರುತ, ಉಪದ್ರುತ] ಪೀಡಿತ, ವಿನಾಶವಾದ
ಉದ್ದವೆತ್ತು 'ಉದ್ದವಯಿತ್ತು' ಶಬ್ದವನ್ನು ನೋಡುವುದು
ಉದ್ದಾ. ಸಕ: [ಉದ್+ದಾ] ಮಾಡು, ನಿರ್ಮಿಸು, -ಉದ್ದಾಇ
ಉದ್ದಾ. ಅಕ: [ಅವ+ದ್ರಾ] ಸಾಯು, ಮೃತಿ ಹೊಂದು
ಉದ್ದಾಇಅ. ಸ್ತ್ರೀ: [ಉದ್ದ್ರೋತ್ರೀ, ಉಪದ್ರೋತ್ರೀ] ಉಪದ್ರವವುಂಟುಮಾಡುವ ಹೆಂಗಸು
ಉದ್ದಾಇಂತ. 'ಉದ್ದಾಯ'=ಶುಭ್' ಶಬ್ದವನ್ನು ನೋಡುವುದು
ಉದ್ದಾಇತ್ತಾ. 'ಉದ್ದಾ=ಅವ+ದ್ರಾ' ಶಬ್ದವನ್ನು ನೋಡುವುದು
ಉದ್ದಾಣ. ಸ್ತ್ರೀ: [ದೇ] ಅಡುಗೆ ಒಲೆ
ಉದ್ದಾಣ. ವಿ: [ಅವದ್ರಾತ] ಮೃತ, ನಿಧನ ಹೊಂದಿದ
ಉದ್ದಾಮ. ವಿ: [ಉದ್ದಾಮ] ಸ್ವಚ್ಛಂದ, ಸ್ವತಂತ್ರ(ಪಾಅ), ಪ್ರಚಂಡ, ಪ್ರಖರ ಪ್ರಚಂಡ, ಧೈರ್ಯ, ಪ್ರಗಲ್ಭತೆ ಅತಿಶಯ, ಪ್ರಬಳ, ಅವ್ಯವಸ್ಥಿತ
ಉದ್ದಾಮ. ಪು: [ದೇ] ಸಮೂಹ, ಗುಂಪು, ತಗ್ಗು-ದಿಣ್ಣೆಯ ಪ್ರದೇಶ
ಉದ್ದಾಮಿಯ. ವಿ: [ಉದ್ದಾಮಿತ] ನೇತಾಡುತ್ತಿರುವ, ತೂಗಾಡುತ್ತಿರುವ(ವಿಪಾ)
ಉದ್ದಾಯ. ಅಕ: [ಶುಭ್] ಶೋಭಿಸು, ಶೋಭೆಕೊಡು, ಒಳ್ಳೆಯದೆಂದು ಅನಿಸು(ಣಾಯಾ)
ಉದ್ದಾರ. 'ಉರಾಲ=ಉದ್ದಾರ' ಶಬ್ದವನ್ನು ನೋಡುವುದು
ಉದ್ದರಿಅ. ವಿ: [ದೇ] ಯುದ್ಧದಿಂದ ಪಲಾಯನ ಮಾಡಿದ, ರಣರಂಗದಿಂದ ಓಡಿ ಹೋದ, ಕೀಳಲ್ಪಟ್ಟ, ಬೇರುಸಹಿತ ಕಿತ್ತುಹಾಕಲ್ಪಟ್ಟ(ಷಡ್)
ಉದ್ದಾಲ. ಸಕ: [ಆ+ಛಿದ್) ಕಿತ್ತುಕೊಳ್ಳು, ಕೈಯಿಂದ ಅಪಹರಿಸು
ಉದ್ದಾಲ. ಪು: [ಅವದಾಲ] ಹತ್ತಿಕ್ಕುವುದು, ತುಳಿಯುವುದು, ವೃಕ್ಷ(ಜೀವ), ಅವಸರ್ಪಿಣೀ ಕಾಲದ ಮೊದಲ ಘಟ್ಟ-ಸಮಯವಿಶೇಷ
ಉದ್ದಾಲಿಯ. ವಿ: [ಆಚ್ಛಿನ್ನ] ಕಸಿದುಕೊಂಡ, ಸೆಳೆದುಕೊಂಡ(ಕುಮಾ)
ಉದ್ದಾವಣಯಾ. ಸ್ತ್ರೀ: [ಉಪದ್ರಾವಣಾ] ಉಪದ್ರವ, ತೊಂದರೆ, ಪೀಡೆ, ವ್ಯಗ್ರತೆ, ಚಕಿತತೆ

ಉದ್ದಾಹ. ಪು: [ಉದ್ದಾಹ] ತೀವ್ರವಾದ ಬಾಯಾರಿಕೆ, ಬೆಂಕಿ(ತಾ)
ಉದ್ದಾಹಗ. ವಿ: [ಉದ್ದಾಹಕ] ಬೆಂಕಿ ಇಡುವವನು
ಉದ್ದಿಟ್ಠ. ವಿ: [ಉದ್ದಿಷ್ಟ] ಕಥಿತ, ಪ್ರತಿಪಾದಿತ, ನಿರ್ದಿಷ್ಟ, ದಾನ ನೀಡಲು ಸಂಕಲ್ಪಿಸಲಾದ ಅನ್ನ, ಪಾನಾದಿಗಳು, ಗಮನಕ್ಕೆ ತಂದುಕೊಳ್ಳಲಾದ, ಉದ್ದೇಶಿಸಲ್ಪಟ್ಟ, ನ: ಉದ್ದೇಶ, **-ಕಡ.** ವಿ: [-ಕೃತ] ಸಾಧುವಿಗಾಗಿ ನಿರ್ಮಿಸಲಾದ, ಸಾಧುವಿನ ಸಲುವಾಗಿ ಮಾಡಲಾದ(ಭೋಜನಾದಿಗಳು)
ಉದ್ದಿಟ್ಠಾ. ಸ್ತ್ರೀ: [ದೇ. ಉದ್ದಿಷ್ಟಾ] ತಿಥಿ-ವಿಶೇಷ, ಅಮಾವಾಸ್ಯೆ(ಔಪ)
ಉದ್ದಿತ್ತ. ವಿ: [ಉದ್ದೀಪ್ತ] ಪ್ರಕಾಶವಮಾನವಾದ, ಹೊಳೆಯುವ (ಬೃಹ)
ಉದ್ದಿಸ. ಸಕ: [ಉದ್+ದಿಶ್] ನಾಮ ನಿರ್ದೇಶನದ ಮೂಲಕ ವಸ್ತುವನ್ನು ನಿರೂಪಿಸು, ನೋಡು, ಸಂಕಲ್ಪಮಾಡು, ಗಮನಿಸು, ಅಂಗೀಕರಿಸು, ಒಪ್ಪಿಗೆ ಪಡೆದುಕೊಳ್ಳು, ಸಮಾಪ್ತಗೊಳಿಸು, ಉಪದೇಶ ನೀಡು, ಆಜ್ಞಾಪಿಸು.
ಉದ್ದಿಸಿಅ. 'ಉದ್ದಿಟ್ಠ' ಶಬ್ದವನ್ನು ನೋಡುವುದು(ಆಚಾ)
ಉದ್ದಿಸಿಅ. ವಿ: [ದೇ] ಉತ್ಪ್ರೇಕ್ಷಿತ, ಸಂದೇಹಿಸಲಾದ(ದೇ)
ಉದ್ದೀರಣ. 'ಉದೀರಣ' ಶಬ್ದವನ್ನು ನೋಡುವುದು
ಉದ್ದೀವಣ. ನ: [ಉದ್ದೀಪನ] ಉತ್ತೇಜನ, ಹುರಿದುಂಬಿಸುವುದು, ವಿ: ಉತ್ತೇಜಕ(ರಂಭಾ)
ಉದೀವಣಿಜ್ಜ. ವಿ: [ಉದ್ದೀಪನೀಯ] ಉದ್ದೀಪಕ, ಉತ್ತೇಜಕ
ಉದ್ದೀವಿಅ. ವಿ: [ಉದ್ದೀಪಿತ] ಪ್ರಜ್ವಲಗೊಳಿಸಲ್ಪಟ್ಟ (ಪಾಅ), ಹುರಿದುಂಬಿಸಲ್ಪಟ್ಟ, ಅಧಿಕಗೊಳಿಸಲ್ಪಟ್ಟ
ಉದ್ದುಯ. ವಿ: [ಉದ್ದೃತ] ಪಲಾಯನಗೊಳಿಸಲ್ಪಟ್ಟ, ಓಡಿಸಲ್ಪಟ್ಟ(ಪಉಮ)
ಉದ್ದುಂಯ. ವಿ: [ಉಪದೃತ] ಪೀಡಿಸಲ್ಪಟ್ಟ, ತೊಂದರೆಗೊಳಗಾಗಿಸಲ್ಪಟ್ಟ, ವ್ಯಗ್ರಗೊಳಿಸಲ್ಪಟ್ಟ
ಉದ್ದೇಸ. 'ಉದ್ದಿಸ' ಶಬ್ದವನ್ನು ನೋಡುವುದು
ಉದ್ದೇಸ. ಪು: [ಉದ್ದೇಶ] ಓದುವ ವಿಷಯಕ್ಕೆ ಸಂಬಂಧಿಸಿದ ಗುರ್ವಾಜ್ಞೆ, ಹೆಸರಿನ ಉಚ್ಚಾರಣೆ, ವಾಚನ, ಸೂತ್ರಗಳ ಮೂಲ ಪಾಠದ ಅಧ್ಯಾಪನ.
ಉದ್ದೇಸ. ಪು: [ಉದ್ದೇಶ] ಹೆಸರು ಉಲ್ಲೇಖಿಸುವ ಮೂಲಕ ವಸ್ತು ನಿರೂಪಿಸುವುದು, ವಿವರಣೆ,

ಶಿಕ್ಷಣ, ಉಪದೇಶ, ವ್ಯವಹಾರ(ಆಚಾ), ಗುರಿ, ಅಭಿಪ್ರಾಯ, ಗ್ರಂಥದ ಒಂದು ಅಂಶ, ಜಾಗ, ಪ್ರದೇಶ, ಸ್ಥಳ(ಕಪ್ಪೂ) ಅವಯವ

ಉದ್ದೇಸ. ವಿ: [ಔದ್ದೇಶ] 'ಉದ್ದೇಸಿಯ=ಔದ್ದೇಶಿಕ' ಶಬ್ದವನ್ನು ನೋಡುವುದು.

ಉದ್ದೇಸಣ. ನ: [ಉದ್ದೇಶನ] ಪಠಣ, ವಾಚನ, ಅಧ್ಯಾಪನ, ಅಧಿಕಾರ, ಯೋಗ್ಯತೆ(ಠಾ)

ಉದ್ದೇಸಣಕಾಲ. ಪು: [ಉದ್ದೇಶನಕಾಲ] ಮೂಲ ಸೂತ್ರದ ಅಧ್ಯಾಪನದ ಸಮಯ

ಉದ್ದೇಸಣಾ. ಸ್ತ್ರೀ: [ಉದ್ದೇಶನಾ] ಮೇಲಿನ ಶಬ್ದವನ್ನು ನೋಡುವುದು

ಉದ್ದೇಸಿಯ. ವಿ: [ಔದ್ದೇಶಿಕ] ಉದ್ದೇಶಕ್ಕೆ ಸಂಬಂಧಿಸಿದ, ಉದ್ದೇಶದಿಂದ ಮಾಡಿದ, ವಿವಾಹದ ಸಲುವಾಗಿ ಏರ್ಪಡಿಸಿದ ಔತಣದಲ್ಲಿ ಆಹ್ವಾನಿತರ ಊಟದ ನಂತರ ಉಳಿದ ಆಹಾರ ಪದಾರ್ಥಗಳನ್ನು ಎಲ್ಲ ಜಾತಿಯ ಭಿಕ್ಷುಗಳಿಗೆ ನೀಡುವ ಸಂಕಲ್ಪ ಮಾಡಿರುವಂಥದು

ಉದ್ದೇಸಿಯ. ನ: [ಔದ್ದೇಶಿಕ] ಭಿಕ್ಷೆಯ ಒಂದು ದೋಷ, ಸಾಧುವಿಗೆ ಭೋಜನ ಸಿದ್ಧಪಡಿಸುವುದು, ವಿ: ಸಾಧುಗಳ ಸಲುವಾಗಿ ತಯಾರಿಸಿದ (ಭೋಜನ)

ಉದ್ದೇಹ. ಪು: [ಉದ್ದೇಹ] ಭಗವಾನ್ ಮಹಾವೀರನ ಒಂದು ಗಣ–ಸಾಧುಗಳ ಸಮುದಾಯ(ಠಾ)

ಉದ್ದೇಹಲಿಯಾ. ಸ್ತ್ರೀ: [ಉದ್ದೇಹಲಿಕಾ] ಒಂದು ಬಗೆಯ ವನಸ್ಪತಿ

ಉದ್ದೇಹಿಯಾ.} ಸ್ತ್ರೀ: [ದೇ] ಗೆದ್ದಲು ಹುಳ, ಮೂರು
ಉದ್ದೇಹೀ.} ಇಂದ್ರಿಯಗಳ ಒಂದು ಜಂತು–ವಿಶೇಷ

ಉದ್ದೋಹಗ. ವಿ: [ಉದ್ದ್ರೋಹಕ] ಘಾತಕ, ಹಿಂಸೆ ಉಂಟುಮಾಡುವವನು

ಉದ್ಧ. 'ಉಡ್ಢ' ಶಬ್ದವನ್ನು ನೋಡುವುದು

ಉದ್ಧಅ. ವಿ: [ಉದ್ಧತ] ಉನ್ಮತ್ತ(ಸೇ), ಗರ್ವಿತ, ವಿನೀತನಲ್ಲದ, ಅಭಿಮಾನಿ(ಭಗ), ಬೇರು ಸಹಿತ ಕಿತ್ತುಹಾಕಲ್ಪಟ್ಟ(ಣಾಯಾ), ಅತಿಪ್ರಬಲ

ಉದ್ಧಅ. 'ಉದ್ಧರಿಅ=ಉದ್ಧೃತ' ಶಬ್ದವನ್ನು ನೋಡುವುದು

ಉದ್ಧಅ. ವಿ: [ದೇ] ಶಾಂತ, ತಂಪಾದ

ಉದ್ಧಂತ. 'ಉದ್ಧಾ' ಶಬ್ದವನ್ನು ನೋಡುವುದು

ಉದ್ಧಂಸ. ಸಕ: [ಉತ್+ಧೃಷ್] ಹೊಡೆ, ಬೈಯು, ಸಾಯಿಸು

ಉದ್ಧಂಸ. ಸಕ: [ಉದ್+ಧ್ವಂಸ್] ವಿನಾಶಮಾಡು,

ಉದ್ಧಂಸಣ. ನ: [ಉದ್ಧರ್ಷಣ] ಆಕ್ರೋಶ, ವಾಗ್ದಂಡನೆ, ಬೈಗಳು, ವಧೆ, ಹಿಂಸೆ

ಉದ್ಧಂಸಣಾ. ಸ್ತ್ರೀ: [ಉದ್ಧರ್ಷಣಾ] ಮೇಲಿನ ಶಬ್ದವನ್ನು ನೋಡುವುದು(ಓಘ)

ಉದ್ಧಂಸಿಯ. ವಿ: [ಉದ್ಧರ್ಷಿತ] ಆಕ್ರೋಶಕ್ಕೆ ಗುರಿಯಾದವನು(ನಿಚೂ)

ಉದ್ಧಚ್ಛವಿ. ವಿ: [ದೇ] ವಿರುದ್ಧವಾಗಿಸಲ್ಪಟ್ಟ, ಅಸಂಗತವಾಗಿ ಮಾತಾಡಿಸಲ್ಪಟ್ಟ, ಸುಳ್ಳಾಗಿಸಲ್ಪಟ್ಟ, ಪ್ರಮಾಣಿತವಾಗಿಸದ(ದೇ)

ಉದ್ಧಚ್ಛವಿಅ. ವಿ: [ದೇ] ಸಜ್ಜುಗೊಳಿಸಲ್ಪಟ್ಟ, ಸಿದ್ಧಗೊಳಿಸಲ್ಪಟ್ಟ(ದೇ)

ಉದ್ಧಚ್ಚಿಅ. ವಿ: [ದೇ] ನಿಷಿದ್ಧ, ಪ್ರತಿಷೇಧಿಸಲ್ಪಟ್ಟ, ತಡೆಯಲ್ಪಟ್ಟ, ವಿರೋಧಿಸಲ್ಪಟ್ಟ(ದೇ)

ಉದ್ಧಟ್ಟು. 'ಉದ್ಧರ' ಶಬ್ದವನ್ನು ನೋಡುವುದು

ಉದ್ಧಡ. ವಿ: [ಉದ್ಧೃತ] ಮೇಲಕ್ಕೆ ಎತ್ತಿ ಇಡಲಾದ, ಮೇಲೆ ಎತ್ತಲ್ಪಟ್ಟ

ಉದ್ಧಣ. ವಿ: [ದೇ] ಉದ್ಧಟ, ಗರ್ವಿಷ್ಠ, ಅವಿನೀತ, ಕೊಬ್ಬಿದ(ಷಡ್)

ಉದ್ಧತ್ಥ. ವಿ: [ದೇ] ವಂಚಿಸಲ್ಪಟ್ಟ, ಮೋಸಮಾಡಲ್ಪಟ್ಟ

ಉದ್ಧದೇಹಿಯ. ನ: [ಔರ್ಧ್ವದೇಹಿಕ] ಅಗ್ನಿಸಂಸ್ಕಾರ ಮೊದಲಾದ ಅಂತ್ಯೇಷ್ಟಿ(ಉತ್ತರ) ಕ್ರಿಯೆಗಳು

ಉದ್ಧಮ. ಸಕ: [ಉದ್+ಹನ್] ಶಂಖವೇ ಮೊದಲಾದುವನ್ನು ಊದು, ಗಾಳಿಯನ್ನು ತುಂಬು, ಹಾರಿಸು

ಉದ್ಧರ. ಸಕ: [ಉದ್+ಹೃ] ಜಾಲದಲ್ಲಿ ಸಿಕ್ಕಿ ಹಾಕಿಕೊಂಡವನನ್ನು ಪಾರುಮಾಡು, ಬೇರು ಸಹಿತ ಕಿತ್ತುಹಾಕು, ದೂರಮಾಡು, ಎಳೆ, ಹೊರತೆಗೆ, ಹಳೆಯ ದೇವಸ್ಥಾನಗಳನ್ನು ಪುನರುಜ್ಜೀವನ ಗೊಳಿಸು, ಗ್ರಂಥದ ಅಥವಾ ಲೇಖನದ ಭಾಗವನ್ನು ಯಥಾವತ್ತಾಗಿ ಉದಾಹರಿಸುವುದು

ಉದ್ಧರ(ಅಪ). 'ಉದ್ಧುರ' ಶಬ್ದವನ್ನು ನೋಡುವುದು

ಉದ್ಧರಣ. ನ: [ಉದ್ಧರಣ] ಮೇಲಕ್ಕೆ ಎತ್ತುವುದು, ಜಾಲದಲ್ಲಿ ಸಿಕ್ಕಿಹಾಕಿಕೊಂಡವನನ್ನು ಪಾರು

ಮಾಡುವುದು, ಬುಡಸಮೇತ ಕಿತ್ತುಹಾಕುವುದು, ಬೇರೆಕಡೆಗೆ ಸಾಗಿಸುವುದು
ಉದ್ಧರಣ. ವಿ: [ದೇ] ಎಂಜಲು
ಉದ್ಧರಿಅ. ವಿ: [ಉದ್ಧೃತ] ಬುಡಸಮೇತ ಕಿತ್ತುಹಾಕಲ್ಪಟ್ಟ, ಗ್ರಂಥದ ಅಥವಾ ಲೇಖನದ ಭಾಗವನ್ನು ಯಥಾವತ್ತಾಗಿ ಉದಾಹರಿಸುವುದು, ಸೆಳೆಯಲ್ಪಟ್ಟ, ಹೊರಹಾಕಲ್ಪಟ್ಟ, ಜೀರ್ಣ ದೇವಾಲಯ ಇತ್ಯಾದಿಗಳನ್ನು ಪುನರುಜ್ಜೀವನಗೊಳಿಸುವುದು.
ಉದ್ಧರಿಅ. ವಿ: [ದೇ] ನಾಶಮಾಡಲ್ಪಟ್ಟ(ಷಡ್)
ಉದ್ಧಲ. ಪು: [ದೇ] ಎರಡೂ ಕಡೆಯ ಸೋಮಾರಿತನ, ಆಲಸ್ಯ(ಷಡ್)
ಉದ್ಧವ. ಪು: [ಉದ್ಧವ] ಶ್ರೀಕೃಷ್ಣನ ಚಿಕ್ಕಪ್ಪ, ಮಿತ್ರ ಮತ್ತು ಭಕ್ತ
ಉದ್ಧವಅ. ವಿ:[ದೇ] ಮೇಲಕ್ಕೆ ಹಾರಿಸಲ್ಪಟ್ಟ, ಎಸೆಯಲ್ಪಟ್ಟ
ಉದ್ಧವಿಅ. ಅರ್ಚಿಸಲ್ಪಟ್ಟ, ಪೂಜಿಸಲ್ಪಟ್ಟ
ಉದ್ಧಾ.} **ಸಕ:** [ಉದ್+ಧಾವ್] ಓಡು, ವೇಗವಾಗಿ
ಉದ್ಧಾಅ.} ಹೋಗು, ಎತ್ತರಕ್ಕೆ ಹೋಗು **ವ.ಕೃ–ಉದ್ಧಂತ**
ಉದ್ಧಾಅ. **ಅಕ:** [ಊರ್ಧ್ವಾಯ್] ಎತ್ತರವಾಗು, ಮೇಲುಮುಖವಾಗಿ ಹೋಗು
ಉದ್ಧಾಅ. ವಿ: [ಉದ್ಧಾವ] ಮೇಲಕ್ಕೆ ಹೋದವನು
ಉದ್ಧಾಅ. ಪು: [ದೇ] ತಗ್ಗು–ದಿಣ್ಣೆಗಳ ಪ್ರದೇಶ, ಸಮೂಹ, ಗುಂಪು, ವಿ: ಆಯಾಸಗೊಂಡ
ಉದ್ಧಾಅ. ವಿ: [ಉದ್ಧಾವಿತ] ವ್ಯಾಪಿಸಲ್ಪಟ್ಟ, ವಿಸ್ತೀರ್ಣವಾದ, ಮೇಲಕ್ಕೆ ಓಡಿಕೊಂಡು ಹೋದ
ಉದ್ಧಾರ. ಪು: [ಉದ್ಧಾರ] ರಕ್ಷಣೆ(ಕುಮಾ), ಸಾಲ ಕೊಡುವುದು(ಸುಪಾ), ಕದಿಯುವುದು, ಅಪವಾದ, ಧಾರಣೆ ಮಾಡುವುದು: ಮನಸ್ಸನ್ನು ದೃಢವಾಗಿ ನಿಲ್ಲಿಸುವುದು, ಮನಸ್ಸಿನಲ್ಲಿ ಗ್ರಹಿಸಿ ನೆನಪಿಡುವುದು, **–ಪಲಿಓವಮ.** ನ: [–ಪಲ್ಯೋಪಮ] ಕಾಲದ ಅಳತೆ **–ಸಮಯ.** ಪು: [–ಸಮಯ] ಸಮಯ–ವಿಶೇಷ(ಅಣು), **– ಸಾಗರೋವಮ.** ನ: [–ಸಾಗರೋಪಮ] ಕಾಲದ ಒಂದು ದೀರ್ಘ ಅಳತೆ
ಉದ್ಧಾರಯ. ವಿ:[ಉದ್ಧಾರಕ] ಉದ್ಧಾರ ಮಾಡುವವನು
ಉದ್ಧಾವ. 'ಉದ್ಧಾ' ಶಬ್ದವನ್ನು ನೋಡುವುದು
ಉದ್ಧಾವಣ. ನ: [ಉದ್ಧಾವನ] ಕೆಳಗಿನ ಶಬ್ದವನ್ನು ನೋಡುವುದು
ಉದ್ಧಾವಣಾ. ಸ್ತ್ರೀ: [ಉದ್ಧಾವನಾ] ಪ್ರಬಲವಾದ ಪ್ರವೃತ್ತಿ, ದೂರ ಹೋಗವುದು, ದೂರದ ಕ್ಷೇತ್ರಕ್ಕೆ ಹೋಗುವುದು(ಧರ್ಮ), ಕಾರ್ಯದ ಶೀಘ್ರ ಸಿದ್ಧಿ
–ಉದ್ಧಿ. 'ಬುದ್ಧಿ' ಶಬ್ದವನ್ನು ನೋಡುವುದು
ಉದ್ಧಿ. ಸ್ತ್ರೀ: [ದೇ] ಗಾಡಿಯ ಒಂದು ಅಂಗ(=ಭಾಗ),
ಉದ್ಧಿಅ. 'ಉದ್ಧರಿಅ'=ಉದ್ಧೃತ' ಶಬ್ದವನ್ನು ನೋಡುವುದು(ಔಪ)
ಉದ್ಧೀಮುಹ. ವಿ: [ಊರ್ಧ್ವೀಮುಖ] ಮೇಲು ಮುಖವಾದ
ಉದ್ಧುಂಥಲಿಯ. ವಿ: [ದೇ] ಹೊಗೆಬಣ್ಣದ, ಕತ್ತಲೆಯಿಂದ ಕೂಡಿದ,
ಉದ್ಧುಣಿಯ. 'ಉದ್ಧುಯ' ಶಬ್ದವನ್ನು ನೋಡುವುದು
ಉದ್ಧುಮ. ಸಕ: [ಪೃ] ಪೂರ್ಣಗೊಳಿಸು(ಹೇ)
ಉದ್ಧುಮಾ. ಸಕ: [ಉದ್+ಧ್ಮಾ] ಜೋರು ದನಿಮಾಡು, ನಾಡಿಯನ್ನು ಜೋರಾಗಿ ಚಲಿಸುವಂತೆ ಮಾಡು
ಉದ್ಧುವಾಇಅ. ವಿ: [ಉದ್‌ಧ್ಮಾಪಿತ] ಶಾಂತ ಗೊಳಿಸಲಾದ, ತಣ್ಣಗೆ ಮಾಡಲ್ಪಟ್ಟ
ಉದ್ಧುಮಾಯ. ವಿ: [ದೇ] ಪರಿಪೂರ್ಣ, ಉನ್ಮತ್ತ,
ಉದ್ಧುಯ. ವಿ: [ಉದ್‌ಧೃತ] ಗಾಳಿಯಿಂದ ಹಾರಿಸಲ್ಪಟ್ಟ ಹರಡಿದ, ವ್ಯಾಪಿಸಿದ, ಪ್ರಕಂಪಿತ, ಉತ್ಕಟವಾದ, ಪ್ರಬಲವಾದ, ವ್ಯಕ್ತ, ಪ್ರಕಟ (ಕಪ್ಪ)
ಉದ್ಧುರ. ವಿ: [ಉದ್ಧುರ] ಎತ್ತರವಾದ, ಉಚ್ಚ, ಪ್ರಚಂಡವಾದ, ಪ್ರಬಲವಾದ
ಉದ್ಧುವ್ವಂತ.} **'ಉದ್ಧೂ'** ಶಬ್ದವನ್ನು ನೋಡುವುದು
ಉದ್ಧುವ್ವಮಾಣ.}
ಉದ್ಧುಸಿಯ. ವಿ: [ಉದ್ಧುಷಿತ] ರೋಮಾಂಚ, ರೋಮಾಂಚನಗೊಂಡ, ಪುಲಕಿತ
ಉದ್ಧೂ. ಸಕ: [ಉದ್+ಧೂ] ಕಂಪಿಸು, ನಡುಗು, ಅಲ್ಲಾಡಿಸು, ಅಲುಗಾಡಿಸು, ನಡೆಸು (ಚಾಮರವೇ ಮೊದಲಾದವನ್ನು) ಚಾಮರ ಬೀಸುವುದು, ಗಾಳಿ ಬೀಸುವುದು
ಉದ್ಧೂಣಿಯ. 'ಉದ್ಧುಯ' ಶಬ್ದವನ್ನು ನೋಡುವುದು
ಉದ್ಧೂದ (ಶೌ). 'ಉದ್ಧುಯ' ಶಬ್ದವನ್ನು ನೋಡುವುದು
ಉದ್ಧೂಲ. ಸಕ: [ಉದ್+ಧೂಲಯ್] ಹರಡು, ಚೆಲ್ಲು, ಚೂರ್ಣ ಅಥವಾ ಪುಡಿಯನ್ನು ಹಚ್ಚಿಕೊಳ್ಳು– 'ಉದ್ಧೂಲೇಹಿ'

ಉದ್ಧೂಲಣ. ನ: [ಉದ್ಧೂಳನ] ಪುಡಿ, ಚೂರ್ಣವನ್ನು ಶರೀರಕ್ಕೆ ಹಚ್ಚಿಕೊಳ್ಳುವುದು

ಉದ್ಧೂಲಿಯ. ವಿ: [ಉದ್ಧೂಲಿತ] ಪುಡಿ ಅಥವಾ ಚೂರ್ಣದಿಂದ ಪೂಸಲಾದ(=ಹಚ್ಚಲ್ಪಟ್ಟ), ಹರಡಿದ(ಕುಮಾ)

ಉದ್ಧೂವಣಿಯಾ. ಸ್ತ್ರೀ: [ಉದ್ಧೂಪನಿಕಾ] ಧೂಪವನ್ನು ಹಾಕುವುದು

ಉದ್ಧೂವಿಅ. ವಿ: [ಉದ್ಧೂಪಿತ] ಧೂಪವನ್ನು ಯಾರಿಗೆ ಹಾಕಿದೆಯೋ ಅವನು

ಉದ್ಧೋಸ. ಪು: [ಉದ್ಧರ್ಷ] ಉಲ್ಲಾಸ, ಎತ್ತರವಾಗುವುದು, ಶ್ರೇಷ್ಠವಾಗುವುದು

ಉನ್ನ. ನ: [ಊರ್ಣ] ಉಣ್ಣೆ, ಕುರಿಯ ತುಪ್ಪಟ, –ಮಯ. ವಿ: [–ಮಯ] ಉಣ್ಣೆಯಿಂದ ಮಾಡಿದ

ಉನ್ನ. ವಿ: [ವಿಷಣ್ಣ] ವಿಷಾದವುಂಟಾಗಿರುವ, ಖಿನ್ನ

ಉನ್ನಇ. 'ಉಣ್ಣಇ' ಶಬ್ದವನ್ನು ನೋಡುವುದು

ಉನ್ನಇಜ್ಜಮಾಣ. 'ಉನ್ನೀ' ಶಬ್ದವನ್ನು ನೋಡುವುದು

ಉನ್ನಇಆ. ವಿ: [ಉನ್ನೀತ] ಮೇಲಕ್ಕೆ ಕೊಂಡೊಯ್ಯಲಾದ(ಪಉಮ)

ಉನ್ನಂದ. ಸಕ: [ಉದ್+ನಂದ್] ಅಭಿನಂದಿಸು,

ಉನ್ನಯ. 'ಉಣ್ಣಯ' ಶಬ್ದವನ್ನು ನೋಡುವುದು

ಉನ್ನಾ. 'ಉಣ್ಣಾ' ಶಬ್ದವನ್ನು ನೋಡುವುದು. –ಮಯ. ವಿ: [–ಮಯ] ಉಣ್ಣೆಯಿಂದ ಮಾಡಿದ

ಉನ್ನಾಡಿಯ. ನ: [ಉನ್ನಾಟಿತ] ಹರ್ಷ ಸೂಚಕ ದನಿ

ಉನ್ನಾಮ. ಪು: [ಉನ್ನಾಮ] ಶ್ರೇಷ್ಠತೆ, ಅಭಿಮಾನ, ಗರ್ವ

ಉನ್ನಾಮಿಅ. ವಿ: [ಉನ್ನಮಿತ] ಮೇಲಕ್ಕೆ ಎತ್ತಲ್ಪಟ್ಟ, ಮೇಲುಮುಖವಾಗಿ ಮಾಡಲ್ಪಟ್ಟ(ಪಾಅ)

ಉನ್ನಾಲಿಅ. ವಿ: [ದೇ] 'ಉಣ್ಣಾಲಿಅ' ಶಬ್ದವನ್ನು ನೋಡುವುದು

ಉನ್ನಾಹ. ಪು: [ಉನ್ನಾಹ] ಎತ್ತರ, ಶ್ರೇಷ್ಠತೆ, ಕುಲೀನತೆ,

ಉನ್ನಿಅ. 'ಉಣ್ಣಿಅ=ಔರ್ಣಿಕ' ಶಬ್ದವನ್ನು ನೋಡುವುದು (ಓಘ)

ಉನ್ನಿಕ್ಖ. ಸಕ: [ಉನ್ನಿ+ಖನ್] ಕಿತ್ತುಹಾಕು, ಬೇರುಸಹಿತ ಕೀಳು

ಉನ್ನಿಕ್ಖಮಣ. ನ: [ಉನ್ನಿಷ್ಕ್ರಮಣ] ದೀಕ್ಷೆಯನ್ನು ತ್ಯಜಿಸಿ ಮತ್ತೆ ಗೃಹಸ್ಥನಾಗುವುದು(ಉಪ)

ಉನ್ನೀ. 'ಉಣ್ಣೀ' ಶಬ್ದವನ್ನು ನೋಡುವುದು

ಉಪ್ಹಾಲ.(ಅಪ). ಪು: [ಉಷ್ಣಕಾಲ] ಗ್ರೀಷ್ಮ ಋತು, ಬೇಸಿಗೆ(ಭವಿ)

ಉಪಕ್ಖರ. ನ: [ಉಪಸ್ಕರ] ಮನೆಗೆ ಬೇಕಾದ ಉಪಕರಣ; ಅಗತ್ಯ ಪದಾರ್ಥಗಳು

ಉಪಂತ. ನ: [ಉಪಾಂತ] ಹಿಂದಿನದು, ಕೊನೆಯದರ ಸಮೀಪ, ವಿ: ಸಮೀಪದ, :

ಉಪರಿ.} 'ಉವರಿ' ಶಬ್ದವನ್ನು ನೋಡುವುದು
ಉಪರಿಂ.}

ಉಪರಿಲ್ಲ. 'ಉವರಿಲ್ಲ' ಶಬ್ದವನ್ನು ನೋಡುವುದು

ಉಪವಜ್ಜಮಾಣ. 'ಉವವಾಯ=ಉಪ+ವಾದಯ್' ಶಬ್ದವನ್ನು ನೋಡುವುದು

ಉಪಸಪ್ಪ. 'ಉವಸಪ್ಪ' ಶಬ್ದವನ್ನು ನೋಡುವುದು

ಉಪಾಣಹಿಯ. ಪುಂ.ಸ್ತ್ರೀ: [ಉಪಾನತ್] ಚರ್ಮದ ಚಪ್ಪಲಿ

ಉಪ್ಪ. 'ಓಪ್ಪ=ಅರ್ಪಯ್' ಶಬ್ದವನ್ನು ನೋಡುವುದು

ಉಪ್ಪಇಅ. ವಿ: [ಉತ್ಪತಿತ] ಮೇಲಕ್ಕೆ ಹೋದ, ಮೇಲಕ್ಕೆಹಾರಿದ, ಎತ್ತರದ ಶ್ರೇಷ್ಠ, ಹುಟ್ಟಿದ, ಸಂಭವಿಸಿದ, ನ: ಮೇಲಕ್ಕೆ ಹೋಗಿರುವ

ಉಪ್ಪಇಅ. ವಿ: [ಉತ್ಪಾಟಿತ] ಮೇಲಕ್ಕೆ ಎಬ್ಬಿಸಲ್ಪಟ್ಟ

ಉತ್ಪಇಅವ್ವ.} 'ಉಪ್ಪಯ=ಉತ್+ಪತ್' ಶಬ್ದವನ್ನು
ಉಪ್ಪಇಉಂ.} ನೋಡುವುದು

ಉಪ್ಪಂಕ. ವಿ: [ದೇ] ಹೆಚ್ಚಿನ, ಅತ್ಯಂತ, ಪು: ಕೆಸರು, ಉನ್ನತಿ, ಸಮೂಹ, ರಾಶಿ(ದೇ, ಪಾಅ)

ಉಪ್ಪಂಗ. ಪು: [ದೇ] ರಾಶಿ, ಗುಂಪು

ಉಪ್ಪಜ್ಜ. ಅಕ: [ಉತ್+ಪದ್] ಹುಟ್ಟು, ಸಂಭವಿಸು, –ಉಪ್ಪಜ್ಜಂತಿ

ಉಪ್ಪಡ. ಸಕ: [ಉತ್+ಪತ್] ಹಾರು, ಮೇಲಕ್ಕೆ ಹೋಗು(ಪ್ರಾಮಾ)

ಉಪ್ಪಡ. ಪು: [ಉತ್ಪಟ] ಮೂರು ಇಂದ್ರಿಯಗಳ ಜಂತು–ವಿಶೇಷ, ಕ್ಷುದ್ರ ಕೀಟ(ರಾಜ)

ಉಪ್ಪಡಿಅ. 'ಉಪ್ಪಇಅ.' ಶಬ್ದವನ್ನು ನೋಡುವುದು

ಉಪ್ಪಣ. ಸಕ: [ಉತ್+ಪೂ] ಧಾನ್ಯವೇ ಮೊದಲಾದವುಗಳನ್ನು ಮೊರ ಮುಂತಾದುವುಗಳಿಂದ ಸ್ವಚ್ಛಗೊಳಿಸು(ಪಣ್ಹ)

ಉಪ್ಪಣ್ಣ. ವಿ: [ಉತ್ಪವನ] ಮೊರವೇ ಮೊದಲಾದುವುಗಳಿಂದ ಧಾನ್ಯಾದಿಗಳನ್ನು ಸ್ವಚ್ಛಗೊಳಿಸುವುದು(ದೇ)

ಉಪ್ಪಣ್ಣ. ವಿ: [ಉತ್ಪನ್ನ] ಹುಟ್ಟಿದ, ಉದಿಸಿದ, ಉತ್ಪತ್ತಿ ಹೊಂದಿದ(ಭಗ)

ಉಪ್ಪತ್ತ. ವಿ: [ದೇ] ನಷ್ಟ, ಜೀರ್ಣವಾಗಿರುವ, ವಿರಕ್ತ

ಉಪ್ಪತ್ತಿ. ಸ್ತ್ರೀ: [ಉತ್ಪತ್ತಿ] ಪ್ರಾದುರ್ಭಾವ, ಹುಟ್ಟುವಿಕೆ, ತಯಾರಿಕೆ(ಉವ)

ಉಪ್ಪತ್ತಿಯಾ. ಸ್ತ್ರೀ: [ಔತ್ಪತ್ತಿಕೀ] ಬುದ್ಧಿ–ವಿಶೇಷ, ಶಾಸ್ತ್ರಾಭ್ಯಾಸವಿಲ್ಲದೆ ಉದಿಸುವ ಬುದ್ಧಿ, ಸ್ವಾಭಾವಿಕ ಅಥವಾ ಸಹಜ ಬುದ್ಧಿ,

ಉಪ್ಪಯ. ಸಕ: [ಉತ್+ಪತ್) ಹಾರು, ನೆಗೆ, ವ. ಕೃ–'ಉಪ್ಪಯಂತ'

ಉಪ್ಪಯ. 'ಉಪ್ಪವ' ಶಬ್ದವನ್ನು ನೋಡುವುದು

ಉಪ್ಪಯ. ಪು: [ಉತ್ಪಾತ] ಮೇಲಕ್ಕೆ ಹೋಗುವುದು, ಮೇಲಕ್ಕೆ ಹಾರುವುದು, ಉತ್ಪತ್ತಿ. **–ನಿವಯ.** ಪು: [–ನಿಪಾತ] ಮೇಲೆ ಇದ್ದದ್ದು ಕೆಳಗಾಗುವುದು, ನಾಟ್ಯ–ವಿಧಿಯ ಒಂದು ಬಗೆ

ಉಪ್ಪಯಣ. ನ: [ಉತ್ಪತನ] ಮೇಲಕ್ಕೆ ಹಾರುವುದು, ಮೇಲಕ್ಕೆ ಹೋಗುವುದು(ಸೇ)

ಉಪ್ಪಯಣ. ನ: [ಉತ್ಪ್ಲವನ] ನೀರಿನಲ್ಲಿ ಮುಳುಗು ಹಾಕುವುದು

ಉಪ್ಪಯಣೀ. ಸ್ತ್ರೀ: [ಉತ್ಪತನೀ] ಒಂದು ಬಗೆಯ ವಿದ್ಯೆ

ಉಪ್ಪರಿ(ಅಪ). 'ಉವರಿ' ಶಬ್ದವನ್ನು ನೋಡುವುದು

ಉಪ್ಪರಿವಾಡಿ, –ಡೀ .ಸ್ತ್ರೀ: [ಉತ್ಪರಿಪಾಟಿ,–ಟೀ] ವಿರುದ್ಧ ರೀತಿ, ವಿಪರ್ಯಯ, ಪ್ರತಿಕೂಲ

ಉಪ್ಪರೋಪ್ಪರ. ಅ: [ಉಪರ್ಯುಪರಿ] ಮೇಲೆ ಮೇಲೆ

ಉಪ್ಪಲ. ನ: [ಉತ್ಪಲ] ಕಮಲ(ಣಾಯಾ), ವಿಮಾನ ವಿಶೇಷ, ಸಂಖ್ಯಾ–ವಿಶೇಷ, ಸುಗಂಧ ದ್ರವ್ಯ –ವಿಶೇಷ, ಪು: **ಪರಿವ್ರಾಜಕ**(ಆಚೂ), ದ್ವೀಪ–ವಿಶೇಷ, ಸಮುದ್ರ–ವಿಶೇಷ(ಪಣ್ಣ) **–ವೆಂಟಗ.** ಪು: [–ವೃಂತಕ] ಆಜೀವಿಕ ಧರ್ಮದ ಒಂದು ಸಾಧು–ಸಮಾಜ(ಔಪ)

ಉಪ್ಪಲಂಗ. ನ: [ಉತ್ಪಲಾಂಗ] ಸಂಖ್ಯಾ–ವಿಶೇಷ,

ಉಪ್ಪಲಾ. ಸ್ತ್ರೀ: [ಉತ್ಪಲಾ] ಒಬ್ಬ ಇಂದ್ರಾಣಿ, 'ಕಾಲ' ಎಂಬ ಪಿಶಾಚೇಂದ್ರನ ಒಬ್ಬ ಅಗ್ರ ಮಹಿಷಿ, ಈ ಹೆಸರಿನ 'ಜ್ಞಾತಾ–ಧರ್ಮಕಥಾ'ದ ಒಂದು ಅಧ್ಯಯನ (ಆಯಾ, ತನ್ನ ಹೆಸರಿನಿಂದ ಖ್ಯಾತಳಾದ ಒಬ್ಬ ಶ್ರಾವಿಕೆ, ಒಂದು ಪುಷ್ಕರಿಣಿ

ಉಪ್ಪಲಿಣೀ. ಸ್ತ್ರೀ: [ಉತ್ಪಲಿನೀ] ಕಮಲಿನಿ, ಕಮಲದ ಸಸಿ(ಪಣ್ಣ)

ಉಪ್ಪಲ್ಲ. ವಿ: [ದೇ] ಆಕ್ರಮಿಸಲ್ಪಟ್ಟ, ಮೇಲಕ್ಕೆ ಹತ್ತಿದ, ಹತ್ತಲ್ಪಟ್ಟ(ಷಡ್)

ಉಪ್ಪವ. ಸಕ: [ಉತ್+ಪ್ಲು] ಮುಳುಗುಹಾಕು, ಈಜು, ಮೇಲಕ್ಕೆ ಹೋಗು, ಹಾರು. ವ. ಕೃ–'**ಉಪ್ಪವಂತ**'

ಉಪ್ಪವಇಯು. [ಉತ್ಪ್ರವ್ರಜಿತ್] ದೀಕ್ಷೆಯನ್ನು ತ್ಯಜಿಸಿದವನು, ಸಾಧುವಾಗಿದ್ದು, ಮತ್ತೆ ಗೃಹಸ್ಥನಾದವನು

ಉಪ್ಪಹ. ಪು: [ಉತ್ಪಥ] ಉನ್ಮಾರ್ಗ, ಕೆಟ್ಟ ಹಾದಿ, **–ಜಾಇ.** ವಿ: [–ಯಾಯಿನ್) ವಿರುದ್ಧ ದಾರಿಯಲ್ಲಿ ಸಾಗುತ್ತಿರುವವನು(ಠಾ), ವಿಪಥಗಾಮಿ

ಉಪ್ಪಾ. ಸ್ತ್ರೀ: '**ಉಪ್ಪಾಯ=ಉತ್ಪಾದ**' ಶಬ್ದವನ್ನು ನೋಡುವುದು

ಉಪ್ಪಾಇ. ವಿ: [ಉತ್ಪಾದಿನ್] ಸೃಷ್ಟಿಸಲ್ಪಟ್ಟ, ಉತ್ಪತ್ತಿಯಾದ(ವಿಸೇ)

ಉಪ್ಪಾಇತ್ತಾ. '**ಉಪ್ಪಾಯ=ಉತ್+ಪಾದಯ್**' ಶಬ್ದವನ್ನು ನೋಡುವುದು

ಉಪ್ಪಾಯಿತ್ತು. ವಿ: [ಉತ್ಪಾದಯಿತೃ] ಉತ್ಪಾದಕ, ಉತ್ಪತ್ತಿ ಮಾಡುವವನು(ಠಾ)

ಉಪ್ಪಾಇಯ. ವಿ: [ಉತ್ಪಾದಿತ]ಉತ್ಪತ್ತಿಯಾದ(ರಾಯ)

ಉಪ್ಪಾಇಯ. ವಿ: [ಔತ್ಪಾತಿಕ] ಅಸ್ವಾಭಾವಿಕ, ಕೃತ್ರಿಮ, ಆಕಸ್ಮಿಕ. ನ: ಅನಿಷ್ಟ ಸೂಚಕವಾದ ಆಕಸ್ಮಿಕ ಉಪದ್ರವ, ಉತ್ಪಾತ

ಉಪ್ಪಾಏವುಂ.} '**ಉಪ್ಪಾಯ=ಉತ್+ಪಾದಯ್**'
ಉಪ್ಪಾಏಂತ.} ಶಬ್ದವನ್ನು ನೋಡುವುದು
ಉಪ್ಪಾಏತ್ತ ಏ.}

ಉಪ್ಪಾಡ. ಸಕ: [ಉತ್+ಪಾಟಯ್] ಮೇಲಕ್ಕೆ ಎತ್ತು, ಕಿತ್ತುಹಾಕು, ಬುಡ ಸಮೇತ ಕಿತ್ತುಹಾಕು

ಉಪ್ಪಾಡ. ಸಕ: [ಉತ್+ಪಾದಯ್] ಉತ್ಪತ್ತಿ ಮಾಡು

ಉಪ್ಪಾಡ. ಪು: [ಉತ್ಪಾಟ] ಬುಡ ಸಮೇತ ಕಿತ್ತುಹಾಕುವುದು, ಅಗೆಯುವುದು(ಉಪ)

ಉಪ್ಪಾಡಣ. ನ: [ಉತ್ಪಾಟಣ] ಮೇಲಕ್ಕೆ ಎಬ್ಬಿಸುವುದು, ಬೇರುಸಹಿತ ಕೀಳುವುದು, ಅಗೆಯುವುದು (ರಾಜ)

ಉಪ್ಪಾಡಿಯ. ವಿ: [ಉತ್ಪಾಟಿತ] ಮೇಲಕ್ಕೆ ಎಬ್ಬಿಸಲ್ಪಟ್ಟ, ಬೇರುಸಹಿತ ಕಿತ್ತುಹಾಕಲಾದ(ಆಕ)

ಉಪ್ಪಾಡಿಯ. ವಿ: [ಉತ್ಪಾದಿತ] ಉತ್ಪಾದಿಸಲಾದ
ಉಪ್ಪಾದಅ. ವಿ: [ಉತ್ಪಾದಕ] ಉತ್ಪಾದಿಸುವವನು
ಉಪ್ಪಾಯ. ಸಕ: [ಉತ್+ಪಾದಯ್] ಉತ್ಪತ್ತಿ ಮಾಡು, ನಿರ್ಮಿಸು, ಮಾಡು. ವ.ಕೃ- ಉಪ್ಪಾಯೆಂತ, ಉಪ್ಪಾಯಂತ
ಉಪ್ಪಾಯ. ಪುಂ.ನ:[ಉತ್ಪಾತ]ಮೇಲಕ್ಕೆ ಹೋಗುವುದು, ಮೇಲಕ್ಕೆ ಹಾರುವುದು, ಆಕಸ್ಮಿಕವಾಗಿ ಬರುವ ಉಪದ್ರವವನ್ನು ಪ್ರತಿಪಾದಿಸುವ ಶಾಸ್ತ್ರ, ನಿಮಿತ್ತ ಶಾಸ್ತ್ರ-ವಿಶೇಷ. **-ನಿವಾಯ.** ಪು: [-ನಿಪಾತ] ಹತ್ತುವುದು ಮತ್ತು ಇಳಿಯುವುದು
ಉಪ್ಪಾಯು. ಪು: [ಉತ್ಪಾದ] ಹುಟ್ಟುವುದು, ಉದಿಸುವುದು, (ಸುಪಾ). **-ಪವ್ವಯ.** ಪು: [-ಪರ್ವತ] ವ್ಯಂತರ ಜಾತಿಯ ದೇವ-ದೇತೆಗಳು "ಚಿತ್ರಪ್ರಕಾರದ ಶರೀರಾಕೃತಿಗಳನ್ನು ತಾಳಿ ಕ್ರೀಡೆಯಾಡುವ ಸಲುವಾಗಿ ಬಂದು ಸೇರುವ ಪರ್ವತ(ಸಮ), **-ಪುವ್ವ** ನ: [-ಪೂರ್ವ] ಪ್ರಥಮ ಪೂರ್ವ, ೧೨ನೇ ಜೈನ ಅಂಗ ಗ್ರಂಥದ ಒಂದು ಭಾಗ
ಉಪ್ಪಾಯಗ. ವಿ: [ಉತ್ಪಾದಕ] ಉತ್ಪತ್ತಿ ಮಾಡುವವನು, ಮೂರು ಇಂದ್ರಿಯಗಳ ಒಂದು ಕೀಟ, ಜಂತು (ವವ)
ಉಪ್ಪಾಯಣ. ನ: [ಉತ್ಪಾದನ] ಉತ್ಪಾದನೆ, ಸೃಷ್ಟಿಸುವಿಕೆ, ನಿರ್ಮಾಣ, ಸಂಪಾದಿಸುವುದು, ವಿ: ಉತ್ಪಾದಕ, ಸಂಪಾದಿಸುವವನು(ಪಉಮ)
ಉಪ್ಪಾಯಣಯಾ.} ಸ್ತ್ರೀ: [ಉತ್ಪಾದನಾ] ಸಂಪಾದನೆ,
ಉಪ್ಪಾಯಣಾ.} ಉಪಾರ್ಜನೆ, ಉತ್ಪಾದಿಸುವುದು, ನಿರ್ಮಿಸುವುದು, ಜೈನ- ಸಾಧುವಿನ ಭಿಕ್ಷೆಯ ಒಂದು ದೋಷ
ಉಪ್ಪಾಯಯ. ವಿ: [ಉತ್ಪಾದಕ] ಉತ್ಪತ್ತಿ ಮಾಡುವವನು
ಉಪ್ಪಾಲ. ಸಕ: [ಕಥ್] ಹೇಳು, -'ಉಪ್ಪಾಲಇ'
ಉಪ್ಪಾವ. ಸಕ: [ಉತ್+ಪ್ಲಾವಯ್] ಈಜಿಸು, ದಾಟಿಸು, ಜಿಗಿಯುವಂತೆ ಮಾಡು
ಉಪ್ಪಾಸ. ಸಕ: [ಉತ್ಪ್ರ+ಅಸ್] ಆಡಿಕೊಳ್ಳು, ಹಾಸ್ಯಮಾಡು, ತಮಾಶೆ ಮಾಡು
ಉಪ್ಪಾಹಲ. ನ: [ದೇ] ಉತ್ಸುಕತೆ, ಉತ್ಕಂಠೆ(ಪಾಅ),
ಉಪ್ಪಿ. ಸಕ: [ಅರ್ಪಯ್] ಕೊಡು, ಅರ್ಪಿಸು(ಕಪ್ಪ)
ಉಪ್ಪಿಂ. ಅ: [ಉಪರಿ] ಮೇಲೆ(ಣಾಯಾ)

ಉಪ್ಪಿಂಗಲಿಆ. ಸ್ತ್ರೀ: [ದೇ] ಕೈಯ ಮಧ್ಯಭಾಗ,
ಉಪ್ಪಿಂಜಲ. ನ: [ದೇ] ಸುರತ, ಸಂಭೋಗ, ದೂಳು, ಅಪಕೀರ್ತಿ (ದೇ)
ಉಪ್ಪಿಂಜಲ. ವಿ: [ಉತ್ಪಿಂಜಲ] ಅತ್ಯಂತ ವ್ಯಾಕುಲ
ಉಪ್ಪಿಂಜಲ. ಅಕ: [ಉಪ್ಪಿಂಜಲಯ್] ವ್ಯಾಕುಲ ಗೊಂಡವನಂತೆ ವರ್ತಿಸು ವ.ಕೃ- **ಉಪ್ಪಿಂಜಲಮಾಣ**
ಉಪ್ಪಿಚ್ಛ. (ದೇ) 'ಉಪ್ಪಿತ್ಥ' ಶಬ್ದವನ್ನು ನೋಡುವುದು (ಜೀವ)
ಉಪ್ಪಿಣ. 'ಉಪ್ಪಣ' ಶಬ್ದವನ್ನು ನೋಡುವುದು. ವ. ಕೃ- **ಉಪ್ಪಿಣಂತ**
ಉಪ್ಪಿತ್ಥ. ವಿ: [ದೇ] ತ್ರಸ್ತ, ಭಯಗೊಂಡ(ಭೀತ), ಕುಪಿತ, ವ್ಯಥೆಗೊಂಡ, ಚಿಂತಾಕ್ರಾಂತ, ವಿಧುರ(ದೇ)
ಉಪ್ಪಿಯ. ಸಕ: [ಉತ್+ಪಾ] ಆಸ್ವಾದಿಸು, ಮೇಲಿಂದ ಮೇಲೆ ಉಸಿರು ತೆಗೆದುಕೊಳ್ಳು, ವ. ಕೃ- **ಉಪ್ಪಿಯಂತ**
ಉಪ್ಪಿಯ. ವಿ: [ಅರ್ಪಿತ] ಅರ್ಪಿಸಲಾದ (ಹೇ)
ಉಪ್ಪಿಯಣ. ನ: [ಉತ್ಪಾನ] ಮತ್ತೆ ಮತ್ತೆ ಉಸಿರು ತೆಗೆದುಕೊಳ್ಳುವುದು,
ಉಪ್ಪಿಲಣ. ನ: [ಉತ್‌ಪ್ಲಾವನ] ಹಾರುವುದು
ಉಪ್ಪಿಲಾವ. 'ಉಪ್ಪಾವ' ಶಬ್ದವನ್ನು ನೋಡುವುದು
ಉಪ್ಪೀಡ. ಪು:[ದೇ. ಉತ್ಪೀಡ] ಸಮೂಹ, ರಾಶಿ (ಮೇ)
ಉಪ್ಪೀಡಣ. ನ: [ಉತ್ಪೀಡನ] ಬಿಗಿದು ಕಟ್ಟುವುದು, ಹತ್ತಿಕ್ಕುವುದು (ಸೇ)
ಉಪ್ಪೀಲ. ಸಕ: [ಉತ್+ಪೀಡಯ್] ಬಿಗಿದು ಕಟ್ಟು, ಎಬ್ಬಿಸು, (ಆಚಾ)
ಉಪ್ಪೀಲ. ಪು: [ದೇ] ಸಮೂಹ, ರಾಶಿ(ಸುಪಾ)
ಉಪ್ಪೀಲಣ. ನ: [ಉತ್ಪೀಡನ] ತೊಂದರೆ, ಉಪದ್ರವ
ಉಪ್ಪೀಲಿಯ. ವಿ: [ಉತ್ಪೀಡಿತ]ಬಿಗಿದುಕಟ್ಟಲ್ಪಟ್ಟವನು (ಪಣ್ಣ)
ಉಪ್ಪುಅ. ವಿ: [ಉತ್‌ಪ್ಲುತ] ಜಿಗಿಸಲ್ಪಟ್ಟ, ಮೇಲಕ್ಕೆ ಹಾರಿಸಲ್ಪಟ್ಟ(ಸೇ)
ಉಪ್ಪುಂಸಿಅ. 'ಉಪ್ಪುಸಿಅ' ಶಬ್ದವನ್ನು ನೋಡುವುದು
ಉಪ್ಪುಣಿಅ. ವಿ: [ಉತ್ಪೂತ] ಮೊರದಿಂದ ಸ್ವಚ್ಛ ಮಾಡಿಸಲಾದ
ಉಪ್ಪುಣ್ಣ. ವಿ: [ಉತ್ಪೂರ್ಣ]ಪೂರ್ಣವಾದ, ಹರಡಿದ, ವ್ಯಾಪ್ತ

ಉಪ್ಪುಲಇಅ. ವಿ:[ಉತ್ಪುಲಕಿತ] ರೋಮಾಂಚನಗೊಂಡ
ಉಪ್ಪುಸಿಅ. ವಿ: [ಉತ್ಪ್ರೋಂಛಿತ] ನಷ್ಟವಾದ, ಒರೆಸಿಹಾಕಲಾದ(ಗಉಡ)
ಉಪ್ಪೂರ. ಪು: [ಉತ್ಪೂರ] ಹೆಚ್ಚಳ, ಸಮೃದ್ಧಿ, ಅಧಿಕವಾದ ಪ್ರವಾಹ(ಔಪ)
ಉಪ್ಪೆಕ್ಖ. (ಅಪ) 'ಉವಿಕ್ಖ' ಶಬ್ದವನ್ನು ನೋಡುವುದು
ಉಪ್ಪೆಕ್ಖ. ಸಕ: [ಉತ್ಪ್ರ+ಈಕ್ಷ್] ಊಹಿಸು, ಕಲ್ಪಿಸು. –ಉಪ್ಪೇಕ್ಖಾಮಿ
ಉಪ್ಪೆಕ್ಖಾ. ಸ್ತ್ರೀ: [ಉತ್ಪ್ರೇಕ್ಷಾ] ಒಂದು ಅಲಂಕಾರ, ಅನುಮಾನ, ಸಂದೇಹ(ಗಾ)
ಉಪ್ಪೆಕ್ಖಿಅ. ವಿ: [ಉತ್ಪ್ರೇಕ್ಷಿತ] ಊಹಿಸಲಾದ, ತರ್ಕಿಸಲಾದ(ದೇ)
ಉಪ್ಪೇಯ. ನ: [ದೇ] ಅಭ್ಯಂಗ, ತೈಲಾದಿಗಳಿಂದ ಮರ್ದನ ಮಾಡುವುದು, ತಿಕ್ಕುವುದು
ಉಪ್ಪೇಲ. ಸಕ: [ಉದ್+ನಮಯ್] ಎತ್ತರಿಸು, ಮೇಲಕ್ಕೆ ಎತ್ತು, –ಉಪ್ಪೇಲಇ
ಉಪ್ಪೆಲ್ಲ. ಪು: [ಉನ್ನಮನ] ಎತ್ತರಿಸುವುದು, ಮೇಲಕ್ಕೆ ಎತ್ತುವುದು, ಮೇಲಕ್ಕೆ ಏರಿಸುವುದು
ಉಪ್ಪೇಲಿಅ. ವಿ: [ಉನ್ನಮಿತ] ಮೇಲುಮುಖವಾಗಿ ಮಾಡಲ್ಪಟ್ಟ, ಮೇಲಕ್ಕೆ ಎತ್ತಲ್ಪಟ್ಟ, ಎತ್ತರಿಸಲಾದ
ಉಪ್ಪೇಸ. ಪು: [ಉತ್ಪೇಷ] ಭಯ, ಹೆದರಿಕೆ,
ಉಪ್ಪೇಹಡ. ವಿ: [ದೇ] ಆಡಂಬರದಿಂದ ಕೂಡಿದ, ಶ್ರೇಷ್ಠ
–ಉಫ. 'ಪುಫ' ಶಬ್ದವನ್ನು ನೋಡುವುದು
ಉಪ್ಫಣ. ಸಕ: [ಉತ್+ಫಣ] ತೂರು, ಗಾಳಿಯಲ್ಲಿ ಧಾನ್ಯದ ಹೊಟ್ಟು ತೂರು
ಉಪ್ಫಂದೋಲ. ವಿ: [ದೇ] ಚಂಚಲ,ಅಸ್ಥಿರವಾದ(ದೇ)
ಉಪ್ಫಾಲ. ಸಕ: [ದೇ] ಖಳ, ದುಷ್ಟ, ದುರ್ಜನ(ದೇ, ಪಾಅ)
ಉಪ್ಫಾಲ. ಸಕ: [ಉತ್+ಪಾಟಯ್] ಎಬ್ಬಿಸುವುದು, ಬುಡಸಮೇತ ಕಿತ್ತುಹಾಕು
ಉಪ್ಫಾಲ. ಸಕ: [ಕಥ್] ಹೇಳು
ಉಪ್ಫಾಲ. ವಿ: [ಕಥಕ] ಹೇಳುವವನು, ನಿರೂಪಕ, ಸೂಚಕ
ಉಪ್ಫಾಲಿಅ. ವಿ: [ಕಥಿತ] ಹೇಳಲ್ಪಟ್ಟ, ಸೂಚಿತ, ನಿರೂಪಿತ
ಉಪ್ಫಿಡ. ಅಕ: [ಉತ್+ಸ್ಫಿಟ್] ಕುಂಠಿತವಾಗು, ಅಸಮರ್ಥವಾಗು
ಉಪ್ಫಿಡ. ಸಕ: [ಉತ್+ಸ್ಫಿಟ್] ಕಪ್ಪೆಯ ಹಾಗೆ ಹಾರು, ನೆಗೆ
ಉಪ್ಫಿಡಣ. ನ: [ಉತ್ಸ್ಫೇಟನ] ಕುಂಠಿತಗೊಳ್ಳು
ಉಪ್ಫಿಡಿಯ. ವಿ: [ಉತ್ಸ್ಫಿಟಿತ] ಕುಂಠಿತಗೊಂಡ, ಹೊರಗೆ ಹೊರಟಿರುವ,
ಉಪ್ಫುಂಕಿಆ. ಸ್ತ್ರೀ: [ದೇ] ಅಗಸರವಳು, ಬಟ್ಟೆ ಒಗೆಯುವವಳು(ದೇ)
ಉಪ್ಫುಂಡಿಅ. ವಿ: [ದೇ] ಹಾಸಲಾದ, ಹರವಲಾದ(ದೇ)
ಉಪ್ಫುಣ್ಣ. ವಿ: [ದೇ] ತುಂಬಿದ, ಹರಡಿದ(ದೇ)
ಉಪ್ಫುನ್ನ. ವಿ: [ದೇ] ಸ್ಪರ್ಶಿಸಲ್ಪಟ್ಟ, ಮುಟ್ಟಲ್ಪಟ್ಟ
ಉಪ್ಫುಲ್ಲ. ವಿ: [ಉತ್ಫುಲ್ಲ] ವಿಕಸಿತ, ಅರಳಿದ (ಪಾಅಂ)
ಉಪ್ಫುಲ್ಲಿಆ. ಸ್ತ್ರೀ: [ಉತ್ಫುಲ್ಲಿಕಾ] ಮತ್ತೆ ಮತ್ತೆ ಕೂತು–ಎದ್ದು ಮಾಡುವ(ಉಠ್ ಬೈಸ್) ಒಂದು ಬಗೆಯ ಕ್ರೀಡೆ
ಉಪ್ಫುಸ. ಸಕ: [ಉತ್+ಸ್ಪೃಶ್] ಚಿಮುಕಿಸು, ಸಿಂಪಡಿಸು
ಉಪ್ಫೇಣಉಪ್ಫೇಣಿಯ. ಕ್ರಿ. ವಿ: [ದೇ] ಕೋಪದಿಂದ ಕೂಡಿದ ಪ್ರಬಲವಾದ ಮಾತುಗಳಿಂದ
ಉಪ್ಫೇಸ. ಪು: [ದೇ] ಭಯ, ಕಿರೀಟ, ಪೇಟ, ಶಿರೋವೇಷ್ಟನ(ತಾ, ಆಚಾ)
ಉಪ್ಫೇಸಣ. ನ: [ದೇ] ಹೆದರಿಸುವುದು, ಭಯ ಹುಟ್ಟಿಸುವುದು
ಉಪ್ಫೋಅ. ಪು: [ದೇ] ಹುಟ್ಟುವಿಕೆ, ಉದಯ(ದೇ)
ಉಬುಸ. ಸಕ: [ಮೃಜ್] ತೊಳೆ, ಶುದ್ಧಗೊಳಿಸು, ತಿಕ್ಕು
ಉಬ್ಬಂಧ. ಸಕ: [ಉದ್+ಬಂಧ್] ನೇಣಿಗೇರಿಸು ನೇಣುಹಾಕಿಕೊಂಡು ಸಾಯು, ಸುತ್ತು,
ಉಬ್ಬಣ. ವಿ: [ಉಲ್ಬಣ] ಉತ್ಕಟ
ಉಬ್ಬಂಧಣ. ನ: [ಉದ್ಬಂಧನ] ನೇಣುಹಾಕುವುದು, (ಪಣ್ಣ)
ಉಬ್ಬದ್ಧ. ವಿ: [ಉದ್ಬದ್ಧ] ನೇಣುಹಾಕಿಕೊಂಡವನು, ನೇಣುಹಾಕಿ ಸಾಯಿಸಲ್ಪಟ್ಟ ವ್ಯಕ್ತಿ, ಸುತ್ತುವರಿಯಲ್ಪಟ್ಟ ಅಧ್ಯಾಪಕನೊಂದಿಗೆ ಷರತ್ತುಗಳಿಂದ ಬದ್ಧನಾದವನು
ಉಬ್ಬಿಂಬ. ವಿ: [ದೇ] ಖಿನ್ನನಾದ, ಶೂನ್ಯ, ಆಕ್ರಮಿಸಲ್ಪಟ್ಟ, ಶೂನ್ಯ, ಆಕ್ರಮಿಸಲ್ಪಟ್ಟ, ಪ್ರಕಟ ವೇಷವುಳ್ಳ,, ಹೆದರಿದ, ಶ್ರೇಷ್ಠ,
ಉಬ್ಬಿಂಬಲ. ನ: [ದೇ] ಕಲುಷಿತವಾದ ನೀರು, ಕೊಳಕು ನೀರು. ವಿ: ಕಲುಷಿತವಾದ ನೀರುಳ್ಳ, ನೀರಿನ

ಉಬ್ಬಿಂಬಿರ. ವಿ: [ದೇ] ಖಿನ್ನ, ವ್ಯಥಿತ, ಉದ್ವಿಗ್ನ (ಕಪ್ಪೂ)
ಉಬ್ಬುಕ್ಕ. ಸಕ: [ಉದ್+ಬುಕ್ಕ್] ಹೇಳು(ಹೇ)
ಉಬ್ಬುಕ್ಕ. ನ: [ದೇ] ಅಳು, ರೋದನ, ಸಂಕಟ, ಬಲಾತ್ಕಾರ
ಉಬ್ಬುಡ. ಅಕ: [ಉದ್+ಬ್ರುಡ್] ಈಜು
ಉಬ್ಬುಡ.} ಪು: [ಉದ್ಬ್ರುಡ] ಈಜುವುದು. –ನಿಬುಡ,
ಉಬ್ಬುಡ್ಡ.} –ನಿಬ್ಬುಡ್ಡಣ. ನ: [–ನಿಬ್ರುಡ, –ಣ] ಏಳುವುದು ಮುಳುಗುವುದು
ಉಬ್ಬುಡ್ಡ. ವಿ: [ಉದ್ಬ್ರುಡಿತ] ಮುಳುಗಿದ, ದಾಟಲ್ಪಟ್ಟ
ಉಬ್ಬುಡ್ಡಣ. ನ: [ಉದ್ಬ್ರುಡನ] ಮುಳುಗಿ ಏಳುವುದು
ಉಬ್ಬುಹ. ಅಕ: [ಉತ್+ಕ್ಷುಭ್] ಮನಸ್ಸು ಕೆರಳು, ಕ್ಷೋಭೆಗೊಳ್ಳು, ಅಲುಗಾಡು
ಉಬ್ಬೂರ. ವಿ: [ದೇ] ಅಧಿಕ, ಹೆಚ್ಚಾದ, ಪು: ಸಮೂಹ, ರಾಶಿ, ತಗ್ಗು–ದಿಣ್ಣೆಗಳಿಂದ ಕೂಡಿದ ಪ್ರದೇಶ
ಉಬ್ಭ. ಸಕ: [ಊರ್ಧ್ವಯ್] ಮೇಲೆ ಮಾಡು, ಎತ್ತಿ ನಿಲ್ಲಿಸು
ಉಬ್ಭ. 'ಉಡ್ಢ' ಶಬ್ದವನ್ನು ನೋಡುವುದು
ಉಬ್ಭಂಡ. ಪು: [ಉದ್ಭಾಂಡ] ಉತ್ಕಟ ವಿದೂಷಕ, ಬಹುರೂಪಿ, ನ: ಬೈಗಳು,
ಉಬ್ಭಂತ. ವಿ: [ದೇ] ಗ್ಲಾನಿ ಹಿಡಿದ, ರೋಗಿ
ಉಬ್ಭಂತ. ಪು: [ಉದ್ಭ್ರಾಂತ] ಪ್ರಥಮ ನರಕ ಭೂಮಿಯ ನಾಲ್ಕನೇ ನರಕ ಸ್ಥಾನ
ಉಬ್ಭಂತ. ವಿ: [ಉದ್ಭ್ರಾಂತ] ವ್ಯಾಕುಲಗೊಂಡಿರುವ, ಚಿಂತಿತ, ಖಿನ್ನ, ಮೂರ್ಛೆ ಹೋದವನು, ಭ್ರಾಂತಿಯಿಂದ ಕೂಡಿದ, ಆಶ್ಚರ್ಯ ಚಕಿತನಾದವನು
ಉಬ್ಭಗ್ಗ. ವಿ: [ದೇ] ದೂಳಿನಿಂದ ಮುಚ್ಚಲ್ಪಟ್ಟ, ಸುತ್ತುವರಿಯಲ್ಪಟ್ಟ, ವ್ಯಾಪ್ತ
ಉಬ್ಭಜ್ಜಿ. ಸ್ತ್ರೀ: [ದೇ] ಹಾರಕ ಧಾನ್ಯದ ರಾಶಿ
ಉಬ್ಭಡ. ವಿ: [ಉದ್ಭಟ] ಪ್ರಬಲ, ಪ್ರಚಂಡ, ಭಯಂಕರ, ಉದ್ಧತ, ಆಡಂಬರದ(ಪಾಅ)
ಉಬ್ಭಮ. ಪು: [ಉದ್ಭ್ರಮ] ಉದ್ವೇಗ, ಸುತ್ತುವಿಕೆ, ತಿರುಗುವುದು
ಉಬ್ಭವ. ಅಕ: [ಉದ್+ಭೂ] ಹುಟ್ಟು(ವುದು), ಉದ್ಭವಿಸು. ವ. ಕೃ–ಉಬ್ಭವಂತ
ಉಬ್ಭವ. ಅಕ: [ಊರ್ಧ್ವಯ್] ಮೇಲೆ ಮಾಡು, ನಿಲ್ಲಿಸು
ಉಬ್ಭಾಅ. ವಿ: [ದೇ] ಶಾಂತ, ತಣ್ಣನೆಯ(ದೇ)

ಉಬ್ಭಾಮ. ಸಕ: [ಉದ್+ಭ್ರಾಮಯ್] ತಿರುಗಿಸು
ಉಬ್ಭಾಮ. ಪು: [ಉದ್ಭ್ರಾಮ] ತಿರುಗುವಿಕೆ, ಸಂಚಾರ, ಬಿ: ತಿರುಗಾಡುವವನು, ಸಂಚರಿಸುವವನು.
ಉಬ್ಭಾಮಇಲ್ಲಾ. ಸ್ತ್ರೀ: [ಉದ್ಭ್ರಾಮಿಣೀ] ಸ್ವೇಚ್ಛಾಚಾರಿಣಿ, ಕುಲಟೆ(ವವ)
ಉಬ್ಭಾಮಗ. ಪು: [ಉದ್ಭ್ರಾಮಕ] ಪರದಾರಭೋಗಿ, ಪರಸ್ತ್ರೀ ಲಂಪಟ, ತೃಣವೇ ಮೊದಲಾದವನ್ನು ಮೇಲಕ್ಕೆ ಕೊಂಡೊಯ್ಯುವ ಗಾಳಿ, ವಿ: ತಿರುಗುವವನು(ವವ)
ಉಬ್ಭಾಮಯ. ಪು: [ಉದ್ಭ್ರಾಮಕ] ಜಾರ, ಉಪಪತಿ
ಉಬ್ಭಾಮಿಗಾ.} ಸ್ತ್ರೀ:[ಉದ್ಭ್ರಾಮಿಕಾ] ಕುಲಟೆಯಾದ
ಉಬ್ಭಾಮಿಯಾ.} ಹೆಣ್ಣು, ಸ್ವೈರಿಣಿ (ಉಪ)
ಉಬ್ಭಾಲಣ.ನ:[ದೇ]ಮೊರವೇ ಮುಂತಾದುವುಗಳಿಂದ ಸ್ವಚ್ಛಗೊಳಿಸುವುದು,ವಿ:ಅಪೂರ್ವ,ಅದ್ವಿತೀಯ(ದೇ)
ಉಬ್ಭಾವ. ಅಕ: [ರಮ್] ಕ್ರೀಡಿಸು, ಆಟವಾಡು, ವ.ಕೃ–ಉಬ್ಭಾವಂತ
ಉಬ್ಭಾವಣಯಾ.} ಸ್ತ್ರೀ: [ಉದ್ಭಾವನಾ] ಗೌರವ,
ಉಬ್ಭಾವಣಾ}. ಉನ್ನತಿ(ತಾ), ಊಹಿಸುವುದು, ಪ್ರಕಟಿಸುವುದು(ಣಂದಿ), ಉತ್ಪ್ರೇಕ್ಷೆ
ಉಬ್ಭಾವಿಅ. ನ: [ರಮಣ] ಸುರತ, ಕ್ರೀಡೆ, ಸಂಭೋಗ (ದೇ)
ಉಬ್ಭಾಸ. ಸಕ:[ಉದ್+ಭಾಸಯ್] ಪ್ರಕಾಶಪಡಿಸು (ವುದು), ಪ್ರಕಟಿಸು (ಪಉಮ)
ಉಬ್ಭಾಸಿಯ. ವಿ: [ಉದ್ಭಾಸಿತ] ಪ್ರಕಾಶಿಸಲ್ಪಟ್ಟ, ಬೆಳಗಿಸಲ್ಪಟ್ಟ (ಹೇಕಾ)
ಉಬ್ಭಾಸುಅ.ವಿ:[ದೇ] ಶೋಭಾವಿಹೀನ, ಕಾಂತಿಹೀನ,
ಉಬ್ಭಿ. 'ಉಬ್ಭಿಯ=ಉದ್ಭಿದ್' ಶಬ್ದವನ್ನು ನೋಡುವುದು
ಉಬ್ಭಿಉಡಿ. ವಿ: [ಉದ್ಭ್ರುಕುಟಿ] ಹುಬ್ಬುಗಂಟಿಕ್ಕಿರುವ, (ಗಉಡ)
ಉಬ್ಭಿಜ್ಜಾ. ಸ್ತ್ರೀ:[ಉದ್ಭೇದ್ಯಾ] ಒಂದು ಬಗೆಯತರಕಾರಿ
ಉಬ್ಭಿಂದ. ಸಕ: [ಉದ್+ಭಿದ್] ಮೇಲೆ ಮಾಡು, ನಿಲ್ಲಿಸು, ಅರಳಿಸು, ಮೊಳಕೆ ಬರಿಸು, ತೆರೆ
ಉಬ್ಭಿಗ. 'ಉಬ್ಭಿಯ=ಉದ್ಭಿದ್' ಶಬ್ದವನ್ನು ನೋಡುವುದು
ಉಬ್ಭಿಡಣ. ನ: [ಉದ್ಭೇದನ] ಸಂಬಂಧ ಹೊಂದಿ ಬೇರೆಯಾಗುವುದು, ಹೊಡೆತ ಕೊಟ್ಟು ಹಿಮ್ಮೆಟ್ಟುವುದು

ಉಬ್ಭಿಣ್ಣ.} ವಿ: [ಉದ್ಭಿನ್ನ] ಮೊಳಕೆಹೊರಟಿರುವ
ಉಬ್ಭಿನ್ನ.} (ಓಘ), ನ: ತೆರೆಯಲಾಗಿರುವ, ಮಣ್ಣು ಇತ್ಯಾದಿ ಮೆತ್ತಿಕೊಂಡಿರುವ ಪಾತ್ರೆಯನ್ನು ತೆರೆದು ಅದರಲ್ಲಿ ನೀಡಲಾಗುವ ಭಿಕ್ಷೆ; ಇದು ಜೈನ ಸಾಧುಗಳಿಗೆ ನೀಡುವ ಭಿಕ್ಷೆಯಲ್ಲಿನ ಒಂದು ದೋಷ(ಪಂಚಾ), ವಿ: ಮೇಲೆ ಎತ್ತರವಾಗಿರುವ ಎದ್ದು ನಿಂತಿರುವ.

ಉಬ್ಭಿಯ. ವಿ: [ಉದ್ಭಿದ್] ನೆಲವನ್ನು ಸೀಳಿಕೊಂಡು ಮೇಲಕ್ಕೆ ಹೊರ ಹೊಮ್ಮುವ ಸಸ್ಯ, ಗಿಡ ಇತ್ಯಾದಿ

ಉಬ್ಭಿಯ. ವಿ: [ಊರ್ಧ್ವಿತ] ಮೇಲೆ ಮಾಡಲ್ಪಟ್ಟಿರುವ, ನಿಲ್ಲಿಸಲಾಗಿರುವ(ಸುಪಾ)

ಉಬ್ಭಿಯ. ನ: [ಉದ್ಭಿದ್ದ] ಸಮುದ್ರದ ದಡದಲ್ಲಿ ಉಪ್ಪು ನೀರಿನೊಂದಿಗೆ ಸಂಸರ್ಗ ಹೊಂದುವ ಒಂದು ಬಗೆಯ ಲವಣ, ಉಪ್ಪು. **ಪುಂನ:** ಕೆಂಬೂತದ ಹಕ್ಕಿ, ಪತಂಗ ಇತ್ಯಾದಿ ಪ್ರಾಣಿ

ಉಬ್ಭೀಕಯ. ವಿ: [ಊರ್ಧ್ವೀಕೃತ] ಮೇಲೆ ಮಾಡಲಾಗಿರುವ,ಎತ್ತಿನಿಲ್ಲಿಸಲಾಗಿರುವ (ಸುಪಾ)

ಉಬ್ಭುಅ. ಅಕ: [ಉದ್+ಭೂ] ಉತ್ಪನ್ನವಾಗು, ಹುಟ್ಟು

ಉಬ್ಭುಆಣ. ವಿ: [ದೇ] ಕುದಿಯುತ್ತಿರುವ, ಬೆಂಕಿಯಿಂದ ಕಾದು ಉಕ್ಕುವ ಹಾಲು ಇತ್ಯಾದಿ

ಉಬ್ಭುಗ್ಗ. ವಿ: [ದೇ] ಚಂಚಲ, ಅಸ್ಥಿರ

ಉಬ್ಭುತ್ತ.ಸಕ: [ಉತ್+ಕ್ಷಿಪ್]ಮೇಲಕ್ಕೆ ಎಸೆ, **–ಉಬ್ಭುತ್ತಇ**

ಉಬ್ಭುತ್ತಿಅ. ವಿ:[ಉತ್‌ಕ್ಷಿಪ್ತ]ಮೇಲಕ್ಕೆ ಎಸೆಯಲ್ಪಟ್ಟಿರುವ

ಉಬ್ಭುತ್ತಿಅ.ವಿ:[ದೇ] ಅಧಿಕಗೊಳಿಸಲ್ಪಟ್ಟ, ಉರಿಯುವಂತೆ ಮಾಡಲ್ಪಟ್ಟ, ಪ್ರಕಾಶಿಸಲ್ಪಟ್ಟ (ಪಾಅ)

ಉಬ್ಭೂಅ. ವಿ: [ಉದ್ಭೂತ] ಉತ್ಪನ್ನ, ಹುಟ್ಟಿದ, ಆಗಂತುಕ ಕಾರಣ

ಉಬ್ಭೂಇಆ. ಸ್ತ್ರೀ: [ಔದ್‌ಭೂತಿಕೀ] ಅಕಸ್ಮಾತ್ತಾಗಿ ಒದಗಿಬಂದ ಸಂದರ್ಭದಲ್ಲಿ ಬಾರಿಸುತ್ತಿದ್ದ ಶ್ರೀಕೃಷ್ಣನ ಒಂದು ಭೇರಿ

ಉಬ್ಭೇಅ. ಪು: [ಉದ್ಭೇದ] ಉತ್ಪತ್ತಿ, ಹೊರ ಹೊಮ್ಮು,

ಉಬ್ಭೇಇಮ. ವಿ: [ಉದ್‌ಭೇದಿಮ] ತನಗೆ ತಾನೇ ಹುಟ್ಟುವ, ಕಾಣಿಸಿಕೊಳ್ಳುವ(ನಿಚೂ)

ಉಭ. ಸ: [ಉಭ] ಉಭಯ, ಎರಡೂ, ಇಬ್ಬರೂ

ಉಭಓ. ಅ: [ಉಭತಸ್] ಎರಡೂ ರೀತಿಯಲ್ಲಿ, ಎರಡೂ ಕಡೆಯಿಂದ(ಉವ, ಔಪ)

ಉಭಜ್ಞಾಯಣ. 'ಓಮುಜ್ಞಾಯಣ' ಶಬ್ದವನ್ನು ನೋಡುವುದು

ಉಭಯ. ವಿ: [ಉಭಯ] ಜೋಡಿ, ಎರಡು, ಎರಡೂ(ತಾ) **–ತ್ಥ.** ಅ: [–ತ್ರ] ಎರಡೂ ಸ್ಥಳ, **–ಲೋಗ.** ಪು: [–ಲೋಕ] ಇಹ ಜನ್ಮ ಮತ್ತು ಪರಜನ್ಮ(ಪಂಚಾ), **–ಹಾ.** ಅ: [–ಥಾ] ಎರಡೂ ಕಡೆಯಿಂದ, ಉಭಯತಃ

ಉಮಚ್ಛ. ಸಕ: [ವಂಚ್] ವಂಚಿಸು, ಮೋಸಮಾಡು, **– ಉಮಚ್ಛಇ. ವ. ಕೃ–ಉಮಚ್ಛಂತ**

ಉಮಚ್ಛ. ಸಕ: [ಅಭ್ಯಾ+ಗಮ್] ಎದುರುಗಡೆ ಬರು, ಮುಂದುಗಡೆ ಬರುವುದು

ಉಮಾ. ಸ್ತ್ರೀ: [ಉಮಾ] ಗೌರಿ, ಪಾರ್ವತಿ(ಪಾಅ), ಎರಡನೇ ವಾಸುದೇವನ ತಾಯಿ, ಒಬ್ಬಳು ಗಣಿಕೆ(ಆಚೂ), **ಸ್ತ್ರೀ–ವಿಶೇಷ(ಕುಮಾ), –ಸಾಇ. ಸ್ವಾತಿ.** ತನ್ನ ಹೆಸರಿನಿಂದ ಖ್ಯಾತಳಾದ ಪ್ರಾಚೀನ ಜೈನಾಚಾರ್ಯೆ ಮತ್ತು ವಿಖ್ಯಾತ ಗ್ರಂಥ ವಿಶೇಷ

ಉಮಾಣ. ನ: [ದೇ] ಪ್ರವೇಶ

–ಉಮಾರ. '**ಕುಮಾರ**' ಶಬ್ದವನ್ನು ನೋಡುವುದು

ಉಮೀಸ. ವಿ: [ಉನ್ಮಿಶ್ರ] ಮಿಶ್ರಿತ

ಉಮುಯ. ಸಕ: [ಉದ್+ಮುಚ್] ಬಿಡು(ಉತ್ತ)

ಉಮ್ಮಇಅ. ವಿ: [ದೇ] ಮೂರ್ಖ, ಮೂಢ, ಉನ್ಮತ್ತ

ಉಮ್ಮಊಹ. ವಿ: [ಉನ್ಮಯೂಖ] ಪ್ರಭಾಶಾಲಿ, ಕಾಂತಿಯುಕ್ತ, (ಗಲುಡ)

ಉಮ್ಮಂಡ. ಪು: [ದೇ] ಹಠ, ವಿ: ಆಧಿಕ್ಯ, ಉಜ್ಜುವುದು

ಉಮ್ಮಂಥಿಯ. ವಿ: [ದೇ] ಸುಡಲ್ಪಟ್ಟ

ಉಮ್ಮಗ್ಗ. ವಿ: [ಉನ್ಮಗ್ನ] ನೀರಿನ ಮೇಲೆ ಬಂದ, ದಾಟಿದ, ನ: ನೀರಿನೊಳಗಿಂದ ಎದ್ದು ತೇಲಾಡುವುದು. ನ: ಈಜುವುದು, ನೀರಿನ ಮೇಲೆ ಬರುವುದು. **–ಜಲಾ.** ಸ್ತ್ರೀ: [–ಜಲಾ] ಕಲ್ಲು ಗುಂಡು ಮೊದಲಾದವೂ ತೇಲಬಹುದಾದ ಒಂದು ನದೀ–ವಿಶೇಷ

ಉಮ್ಮಗ್ಗ. ಪು: [ಉನ್ಮಾರ್ಗ] ಕೆಟ್ಟ ಹಾದಿ, ತಪ್ಪು ಮಾರ್ಗ, ರಂಧ್ರ(ಆಚಾ), ಅಕೃತ್ಯಗಳನ್ನು ಮಾಡುವುದು

ಉಮ್ಮಗ್ಗಣಾ. ಸ್ತ್ರೀ: [ಉನ್ಮಾರ್ಗಣಾ] ಛಿದ್ರ, ರಂಧ್ರ(ಆಚಾ)

ಉಮ್ಮಚ್ಛ. ನ: [ದೇ] ಕೋಪ, ಸಿಟ್ಟು(ದೇ) ವಿ: ಅಸಂಬದ್ಧ, ಸುತ್ತು ಬಳಸಿ ಹೇಳಿದ್ದು

ಉಮ್ಮಚ್ಛರ. ವಿ: [ಉನ್ಮತ್ಸರ] ಅಸೂಯಾಪರ, ದ್ವೇಷಿ, ವೀರ(ಗಾ)
ಉಮ್ಮಚ್ಛವಿಅ. ವಿ: [ದೇ] ಉದ್ಭಟ
ಉಮ್ಮಚ್ಛಿಅ. ವಿ: [ದೇ] ಕೋಪಗೊಂಡವನು, ಕುಪಿತ, ವ್ಯಾಕುಲಗೊಂಡ(ದೇ)
ಉಮ್ಮಜ್ಜ. ನ: [ಉನ್ಮಜ್ಜನ] ಈಸುವುದು, –ಣಿಮಜ್ಜಿಯಾ. ಸ್ತ್ರೀ: [–ನಿಮಜ್ಜಿಕಾ] ನೀರಿನೊಳಗಿಂದ ಎದ್ದು ತೇಲಾಡುವುದು
ಉಮ್ಮಜ್ಜಗ. ವಿ: [ಉನ್ಮಜ್ಜಕ] ನೀರಿನೊಳಗಿಂದ ಎದ್ದು ತೇಲಾಡುವವನು, ಹೀಗೆ ನೀರಿನೊಳಗಿಂದ ಎದ್ದು ತೇಲಾಡುವ ಮೂಲಕವೇ ಸ್ನಾನಮಾಡುವ ತಪಸ್ವಿಗಳ ಒಂದು ವರ್ಗ(ಔಪ)
ಉಮ್ಮಡ್ಡಾ. ಸ್ತ್ರೀ: [ದೇ] ಬಲಾತ್ಕಾರ, ಜೋರು ಮಾಡುವುದು, ನಿಷೇಧ, ಸ್ವೀಕರಿಸದಿರುವುದು
ಉಮ್ಮಣ. ವಿ: [ಉನ್ಮನಸ್] ಉತ್ಕಂಠಿತನಾದ, ಉತ್ಸುಕನಾದ
ಉಮ್ಮತ್ತ. ಪು: [ದೇ] ದತ್ತೂರಿ, ವಿಷಕಾರಿಯಾದ ಗಿಡ, ಹರಳು ಗಿಡ, ಒಂದು ಜಾತಿಯ ಮರ
ಉಮ್ಮತ್ತ. ವಿ: [ಉನ್ಮತ್ತ] ಹುಚ್ಚು ಹಿಡಿದವನು, ಉನ್ಮಾದ ಹಿಡಿದವನು, ಭೂತ ಹಿಡಿದವನು,
ಉಮ್ಮತ್ತಯ. ನ: [ದೇ] ದತ್ತೂರಿ ಕಾಯಿ
ಉಮ್ಮತ್ಥ. ಸಕ: [ಅಭ್ಯಾ+ಗಮ್] ಎದುರಿನಲ್ಲಿ ಬರು, ಮುಂದುಗಡೆ ಬರು
ಉಮ್ಮತ್ಥ. ವಿ: [ದೇ] ಅಧೋಮುಖ, ವಿರುದ್ಧ
ಉಮ್ಮರ. ಪು: [ದೇ] ಹೊಸಿಲು, ಹೊಸ್ತಿಲು,
ಉಮ್ಮರಿಅ. ವಿ: [ದೇ] ಹಳ್ಳ ತೋಡುವುದು, ಅಗೆಯುವುದು, ಬೇರುಸಹಿತ ಕೀಳಲ್ಪಟ್ಟ(ದೇ),
ಉಮ್ಮಲ. ವಿ: [ದೇ] ಸಾಂದ್ರತೆ, ಘನವಾಗಿರುವುದು, ಕಠಿಣ, ಸ್ನಾನ ಘಟ್ಟ
ಉಮ್ಮಲಣ. ನ: [ಉನ್ಮರ್ದನ] ಉಜ್ಜುವುದು, ತಿಕ್ಕುವುದು
ಉಮ್ಮಲ್ಲ. ಪು: [ದೇ] ರಾಜ, ಮೋಡ, ಬಲಾತ್ಕಾರ, ವಿ: ದಪ್ಪವಾದ, ಪುಷ್ಟವಾದ
ಉಮ್ಮಲ್ಲಾ. ಸ್ತ್ರೀ: [ದೇ] ಬಾಯಾರಿಕೆ
ಉಮ್ಮಹಣ. ವಿ: [ಉನ್ಮಥನ] ನಾಶಪಡಿಸುವುದು, ವಿನಾಶಕಾರಿ(ಸುರ)
ಉಮ್ಮಾಇಅ. ವಿ: [ಉನ್ಮಾದಿತ] ಹುಚ್ಚುಹಿಡಿಸಲ್ಪಟ್ಟ (ಪಉಮ)
ಉಮ್ಮಾಡಿಯ. ನ: [ದೇ] ಉರಿಯುತ್ತಿರುವ ಕಟ್ಟಿಗೆ, ಅರ್ಧ ಸುಟ್ಟಿರುವ ಕೊಳ್ಳಿ
ಉಮ್ಮಾಣ. ನ: [ಉನ್ಮಾನ] ಅಳತೆ, ತ್ರಾಸು, ತಕ್ಕಡಿ ಅಳತೆಯ ಮಾನ, ತೂಗಲ್ಪಡುವ ವಸ್ತು
ಉಮ್ಮಾದ. 'ಉಮ್ಮಾಯ' ಶಬ್ದವನ್ನು ನೋಡುವುದು
ಉನ್ಮಾದಇತ್ತಅ. (ಶೌ). ವಿ: [ಉನ್ಮಾದಯಿತೃ] ಹುಚ್ಚು ಹಿಡಿಯುವಂತೆ ಮಾಡುವವನು(ಅಭಿ)
ಉಮ್ಮಾಯ.ಅಕ: [ಉದ್+ಮದ್] ಉನ್ಮಾದವುಂಟು ಮಾಡು, ಉನ್ಮತ್ತನಾಗುವುದು
ಉಮ್ಮಾಯ. ಪು: [ಉನ್ಮಾದ] ಚಿತ್ತಪಲ್ಲಟ, ಹುಚ್ಚು(ಠಾ), ಕಾಮುವಶನಾಗುವಿಕೆ, ವಿಷಯಸುಖದಲ್ಲಿ ಅತ್ಯಾಸಕ್ತಿ, ಆಲಿಂಗನ(ವಿಸೇ)
ಉಮ್ಮಾಲ. 'ಓಮಾಲ' ಶಬ್ದವನ್ನು ನೋಡುವುದು
ಉಮ್ಮಾಲಿಯ. ವಿ: [ಉನ್ಮಾಲಿತ] ಸುಶೋಭಿತ(ಭವಿ)
ಉಮ್ಮಾಹ. ಪು: [ಉನ್ಮಾಥ] ವಿನಾಶ, ಕೊಲ್ಲುವುದು
ಉಮ್ಮಾಹಯ. ವಿ: [ಉನ್ಮಾಥಕ] ವಿನಾಶಕ
ಉಮ್ಮಾಹಿ. ವಿ: [ಉನ್ಮಾಥಿನ್] ವಿನಾಶಕ
ಉಮ್ಮಾಹಿಯ. ವಿ: [ಉನ್ಮಾಥಿತ] ವಿನಾಶವಾದವನು
ಉಮ್ಮಿ. ಪುಂ. ಸ್ತ್ರೀ: [ಊರ್ಮಿ] ಅಲೆ, ತರಂಗ, ಜನರ ಗುಂಪು, –ಮಾಲಿಣೀ. ಸ್ತ್ರೀ: [–ಮಾಲಿನೀ] ಒಂದು ನದಿ.
ಉಮ್ಮಿಂಠ. ವಿ: [ದೇ] ಮಾವುತನಿರದ ಸಂದರ್ಭ, ನಿರಂಕುಶ
ಉಮ್ಮಿಣ. ಸಕ: [ಉದ್+ಮೀ] ತೂಕಮಾಡು, ಅಳತೆಮಾಡು
ಉಮ್ಮಿಯ. ವಿ: [ಉನ್ಮಿತ] ಬಹಳ ಅಲ್ಪವಾದ, ಕೊಂಚ,
ಉಮ್ಮಿಲಿರ. ವಿ: [ಉನ್ಮೀಲಿತೃ] ಅರಳಿಸುವವನು, ವಿಕಸಿತಗೊಳಿಸುವವನು (ಸುಪಾ)
ಉಮ್ಮಿಲ್ಲ. ಅಕ: [ಉದ್+ಮೀಲ್] ಅರಳು, ತೆರೆ, ಪ್ರಕಾಶಿಸು, ವ. ಕೃ–ಉಮ್ಮಿಲ್ಲಂತ
ಉಮ್ಮಿಲ್ಲ.ವಿ: [ಉನ್ಮೀಲ] ಅರಳಿದ, ವಿಕಸಿತವಾದ (ಪಾಅ), ಪ್ರಕಾಶಮಾನವಾದ(ಸೇ)
ಉಮ್ಮಿಲ್ಲಣ. ನ: [ಉನ್ಮೀಲನ] ಅರಳುವಿಕೆ, ವಿಕಾಸವಾಗುವುದು, ಉಲ್ಲಾಸ(ಗಉಡ)
ಉಮ್ಮಿಲ್ಲಿಯ. ವಿ: [ಉನ್ಮೀಲಿತ] ಅರಳಿದ, ವಿಕಸಿತವಾದ, ಪ್ರಕಾಶಮಾನವಾದ, ತೆರೆದಿರುವ, ಪ್ರಕಾಶಿತ, ಬಹಿಷ್ಕೃತ. ನ: ವಿಕಾಸ(ಅಣು)

ಉಮ್ಮಿಸ. ಅಕ: [ಉದ್+ಮಿಷ್] ತೆರೆ, ಅರಳು,

ಉಮ್ಮಿಸಿಯ. ವಿ: [ಉನ್ಮಿಷಿತ] ವಿಕಸಿತ, ಚೆನ್ನಾಗಿ ಅರಳಿದ(ಭಗ) ನ: ವಿಕಾಸ, ತೆರೆಯುವುದು, ವಿಕಾಸ ಹೊಂದುವುದು(ಜೀವ)

ಉಮ್ಮಿಸ್ಸ. 'ಉಮ್ಮೀಸ' ಶಬ್ದವನ್ನು ನೋಡುವುದು

ಉಮ್ಮೀಲಣ. 'ಉಮ್ಮಿಲ್ಲಣ' ಶಬ್ದವನ್ನು ನೋಡುವುದು

ಉಮ್ಮೀಲಣಾ. ಸ್ತ್ರೀ: [ಉನ್ಮೀಲನಾ] ಜನ್ಮ, ಉತ್ಪತ್ತಿ

ಉಮ್ಮೀಲಿಯ. 'ಉಮ್ಮಿಲ್ಲಿಯ' ಶಬ್ದವನ್ನು ನೋಡುವುದು (ರಾಜ)

ಉಮ್ಮೀಸ. ವಿ: [ಉನ್ಮಿಶ್ರ] ಮಿಶ್ರಗೊಂಡ, ಯುಕ್ತ(ಸುಪಾ)

ಉಮ್ಮುಅ. ನ: [ಉಲ್ಮುಕ] ಕೊಳ್ಳಿ, ಉರಿಯುತ್ತಿರುವ ಕಟ್ಟಿಗೆ (ಪಾಅ)

ಉಮ್ಮುಅ. 'ಉಮುಯ' ಶಬ್ದವನ್ನು ನೋಡುವುದು

ಉಮ್ಮುಂಚ. ಸಕ: [ಉದ್+ಮುಚ್] ತ್ಯಜಿಸು, ಬಿಟ್ಟುಬಿಡು, ವ. ಕೃ–ಉಮ್ಮುಂಚಂತ

ಉಮ್ಮುಕ್ಕ. ವಿ: [ಉನ್ಮುಕ್ತ] ಬಿಡಲ್ಪಟ್ಟ, ಬಂಧನದಿಂದ ಬಿಡುಗಡೆಯಾದ (ಸೂಅ), ಎಸೆಯಲ್ಪಟ್ಟ(ಔಪ), ಪರಿತ್ಯಕ್ತ, ಬಿಡಲ್ಪಟ್ಟ

ಉಮ್ಮುಗ್ಗ. ವಿ: [ಉನ್ಮಗ್ನ] ನೀರಿನ ಮೇಲೆ ಈಜಿದ, ನ: ಈಜುವುದು, –ನಿಮುಗ್ಗಿಯಾ. ಸ್ತ್ರೀ: [–ನಿಮಗ್ನತಾ] ನೀರಿನಲ್ಲಿ ಮುಳುಗಿ– ತೇಲಿ ಮಾಡುವುದು

ಉಮ್ಮುಗ್ಗಾ.} ಸ್ತ್ರೀ: 'ಉಮ್ಮಗ್ಗ=ಉನ್ಮಗ್ನ' ಶಬ್ದವನ್ನು
ಉಮ್ಮುಜ್ಜಾ.} ನೋಡುವುದು(ಪಣ್ಣ)

ಉಮ್ಮುಟ್ಠ. ವಿ: [ಉನ್ಮೃಷ್ಟ] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ

ಉಮ್ಮುದ್ದಿಅ. ವಿ: [ಉನ್ಮುದ್ರಿತ] ಅರಳಿದ, (ಗಲುಡ), ತೆರೆಯಲ್ಪಟ್ಟ(ಸುಪಾ)

ಉಮ್ಮುಯಣ. ನ: [ಉನ್ಮೋಚನ] ತ್ಯಜಿಸುವುದು, ಬಿಟ್ಟುಬಿಡುವುದು

ಉಮ್ಮುಯಣಾ. ಸ್ತ್ರೀ: [ಉನ್ಮೋಚನಾ] ತ್ಯಾಗ, ಬಿಡುವುದು(ಆವ)

ಉಮ್ಮುಹ. ವಿ: [ದೇ] ಅಹಂಕಾರಿ, ಅಭಿಮಾನಿ

ಉಮ್ಮುಹ. ವಿ: [ಉನ್ಮುಖ] ಎದುರಿಗೆ, ಮೇಲು ಮುಖವಾದ, ಮೇಲೆ ನೋಡುವ

ಉಮ್ಮೂಢ. ವಿ: [ಉನ್ಮೂಢ] ವಿಶೇಷ ಮೂಢ, ಅತ್ಯಂತ ಮುಗ್ಧ. –ವಿಸೂಇಯಾ. ಸ್ತ್ರೀ:[–ವಿಸೂಚಿಕಾ] ಒಂದು ರೋಗ

ಉಮ್ಮೂಲ. ವಿ: [ಉನ್ಮೂಲ] ಬೇರುಸಹಿತ ಕಿತ್ತುಹಾಕುವವನು, ವಿನಾಶಕ

ಉಮ್ಮೂಲ.ಸಕ: [ಉದ್+ಮೂಲಯ್] ಕೀಳು, ಬುಡಸಹಿತ ಕಿತ್ತು ಎಸೆ. ವ.ಕೃ– **ಉನ್ಮೂಲಂತ**

ಉಮ್ಮೂಲಣ. ನ: [ಉನ್ಮೂಲನ] ಬುಡಸಮೇತ ಕಿತ್ತುಹಾಕುವುದು, ಅಗೆಯುವುದು

ಉಮ್ಮೂಲಣಾ..ಸ್ತ್ರೀ: [ಉನ್ಮೂಲನಾ] ಮೇಲಿನ ಶಬ್ದವನ್ನು ನೋಡುವುದು(ಪಣ್ಣ)

ಉಮ್ಮೂಲಿಅ. ವಿ: [ಉನ್ಮೂಲಿತ] ಕಿತ್ತುಹಾಕಲ್ಪಟ್ಟ, ಬೇರುಸಹಿತ ಕಿತ್ತುಹಾಕಲ್ಪಟ್ಟ(ಗಾ)

ಉಮ್ಮೆಂಠ.(ದೇ) 'ಉಮ್ಮಿಂಠ' ಶಬ್ದವನ್ನು ನೋಡುವುದು (ಪಉಮ)

ಉಮ್ಮೇಸ. ಪು: [ಉನ್ಮೇಷ] ತೆರೆಯುವುದು, ಅರಳುವಿಕೆ (ಭಗ)

ಉಮ್ಮೋಯಣೀ. ಸ್ತ್ರೀ: [ಉನ್ಮೋಚನೀ] ಒಂದು ವಿದ್ಯೆ

ಉಮ್ಹ. ಪುಂಸ್ತ್ರೀ: [ಊಷ್ಮನ್] ಸಂತಾಪ, ಬೇಸಿಗೆ ಕಾಲ, ಉಷ್ಣತೆ, ಬಿಸಿ (ಉಪ), ಆವಿ

ಉಮ್ಹಾಇಅ.} ವಿ: [ಉಷ್ಮಾಯಿತ] ಕಾಯಿಸಿದ,
ಉಮ್ಹವಿಯ.} ಬಿಸಿಮಾಡಲ್ಪಟ್ಟ(ಪಉಮ)

ಉಮ್ಹಾಅ. ಅಕ: [ಊಷ್ಮಾಯ್] ಬಿಸಿಯಾಗು, ಆವಿ ಬರಿಸು(ಸೇ)

ಉಮ್ಹಾಲ. ವಿ: [ಊಷ್ಮವತ್] ಬಿಸಿ, ಚೆನ್ನಾಗಿ ಕಾಯಿಸಲ್ಪಟ್ಟ, ಆವಿಯಿಂದ ಕೂಡಿದ(ಗಲುಡ)

ಉಮ್ಹಾವಿಅ. ನ: [ದೇ] ಸುರತ, ಸಂಭೋಗ

ಉಯಟ್ಟ. 'ಉವ್ವಟ್ಟ.'=ಉದ್+ವೃತ್' ಶಬ್ದವನ್ನು ನೋಡುವುದು

ಉಯಟ್ಟ. 'ಉವ್ವಟ್ಟ=ಉದ್ವೃತ್ತ' ಶಬ್ದವನ್ನು ನೋಡುವುದು

ಉಯಚಿಯ. [ದೇ]. 'ಉವಿಅ=ಪರಿಕರ್ಮಿತ' ಶಬ್ದವನ್ನು ನೋಡುವುದು

ಉಯತ್ತ. ಅಕ: [ಅಪ+ವೃತ್] ದೂರಾಗು, ಹಿಂದೆ ಸರಿ

ಉಯರ. ವಿ: [ಉದಾರ] ಶ್ರೇಷ್ಠ, ಉತ್ತಮ, ದಾನಿ

ಉಯರಿಯಾ. ಸ್ತ್ರೀ: [ಅಪವರಿಕಾ] ಸಣ್ಣ ಕೊಠಡಿ

ಉಯವಿಯ. 'ಉವಿಅ=(ದೇ)' ಶಬ್ದವನ್ನು ನೋಡುವುದು

ಉಯಾಇಯ. ನ: [ಉಪಯಾಚಿತ] ವಿನಂತಿ

ಉಯಾರಣ. ನ: [ಅವತಾರಣ] ಬಲಿ, ನಿವಾಳಿಸುವುದು

ಉಯಾಾಯ. ವಿ: [ಉಪಯಾತ] ಸಮೀಪಕ್ಕೆ ಹೋದ, ಸ್ವೀಕರಿಸಿದ, ಅಂಗೀಕರಿಸಿದ, ಹಣ ಸಂದ ಬಗ್ಗೆ ರುಜುಮಾಡಿಕೊಡುವ ರಶೀದಿ

ಉಯಾರಣ. ನ: [ಅವತಾರಣ] ಬಲಿ, ಇಳಿಯುವಿಕೆ, ಹರ್ಷದಾನ

ಉಯಾಹು. 'ಉದಾಹು' ಶಬ್ದವನ್ನು ನೋಡುವುದು

ಉಯ್ಯಕಿಅ. ವಿ: [ದೇ] ಒಟ್ಟುಗೂಡಿಸಿದ(ಷಡ್)

ಉಯ್ಯಲ. ವಿ: [ದೇ] ಆಕ್ರಮಿಸಲ್ಪಟ್ಟ, ಏರಲ್ಪಟ್ಟ(ಷಡ್)

ಉರ. ಪುಂ. ನ: [ಉರಸ್] ಎದೆ, ವಕ್ಷಸ್ಥಲ, **–ಅ, –ಗ. ಪುಂ ಸ್ತ್ರೀ:** [–ಗ] ಸರ್ಪ, **–ತವ. ಪು:** [–ತಪಸ್] ತಪಸ್ಸು. **–ತ್ಥ.** ನ: [– ಉರಾಸ್ತ್ರ] ಅಸ್ತ್ರ ವಿಶೇಷ– ಇದನ್ನು ಪ್ರಯೋಗಿಸುವುದರಿಂದ ವ್ಯಕ್ತಿ, ಸರ್ಪಗಳಿಂದ ಸುತ್ತುಗಟ್ಟಲ್ಪಡುತ್ತಾನೆ (ಪಉಮ).– **ಪರಿಸಪ್ಪ. ಪುಂಸ್ತ್ರೀ:** [–ಪರಿಸರ್ಪ] ಹೊಟ್ಟೆಯ ಮೇಲೆ ಚಲಿಸುವ ಪ್ರಾಣಿ, **–ಸುತ್ತಿಯಾ. ಸ್ತ್ರೀ:** [–ಸೂತ್ರಿಕಾ] ಮುತ್ತುಗಳ ಹಾರ

ಉರ. ನ: [ದೇ] ಪ್ರಾರಂಭ

ಉರಂಉರೇಣ. ಅ: [ದೇ] ಸಾಕ್ಷಾತ್(ಬಿಪಾ) (ದೇ)

ಉರತ್ತ. ವಿ: [ದೇ] ಒಡೆಯಲ್ಪಟ್ಟ, ಕತ್ತರಿಸಲ್ಪಟ್ಟ(ದೇ)

ಉರತ್ಥ. ವಿ: [ಉರಃಸ್ಥ] ಎದೆಯಲ್ಲಿ ಇರುವ, ಎದೆಯ ಮೇಲೆ ಧರಿಸುವ ಆಭರಣ.

ಉರತ್ಥಯ. ನ: [ದೇ] ಕವಚ(ಪಾಅ)

ಉರಬ್ಭ ಪುಂಸ್ತ್ರೀ: [ಉರಭ್ರ] ಕುರಿ(ಟಗರು)(ಣಾಯಾ)

ಉರಬ್ಭಿಅ. ವಿ: [ಔರಭ್ರಿಕ] ಕುರಿ ಮೇಯಿಸುವವನು

ಉರಬ್ಭಿಜ್ಜ.} ವಿ: [ಉರಭ್ರೀಯ] ಕುರಿಗೆ ಸಂಬಂಧಿಸಿದ,
ಉರಬ್ಭಿಯ.} ಉತ್ತರಾಧ್ಯಯನ ಸೂತ್ರದ ಒಂದು ಅಧ್ಯಯನ

ಉರಯ. ಪು: [ಉರಜ] ವನಸ್ಪತಿ–ವಿಶೇಷ

ಉರರಿ: ಪು: [ದೇ} ಪಶು, ಕುರಿ(ದೇ)

ಉರಲ. 'ಉರಾಲ' ಶಬ್ದವನ್ನು ನೋಡುವುದು

ಉರವಿಯ. ವಿ: [ದೇ] ಆರೋಪಿತ, ಕತ್ತರಿಸಲ್ಪಟ್ಟ, ಚೂರು ಚೂರಾದ(ಷಡ್)

ಉರಸಿಜ. ಪು: [ಉರಸಿಜ] ಮೊಲೆ, ಸ್ತನ

ಉರಸ್ಸ. ವಿ: [ಉರಸ್ಯ] ಸಂತಾನ, ಮಗ(ಠಾ), ಹಾರ್ದಿಕ, ಮಧ್ಯದಲ್ಲಿರುವ, ಒಳಗಿರುವ

ಉರಾಲ. ವಿ: [ಉದಾರ] ಪ್ರಧಾನ, ಮುಖ್ಯ, ಸುಂದರ, (ಸೂಅ), ಅದ್ಭುತ, (ಚಂದ), ವಿಶಾಲ(ಠಾ), ನ: ಮನುಷ್ಯ ಮತ್ತು ತಿರ್ಯಕ್ಜಂತು ಈ ಎರಡರ ಶರೀರ(ಅಣು)

ಉರಾಲ. ವಿ: [ದೇ] ಭಯಂಕರ

ಉರಾಲ. ವಿ: [ಉದಾರ] ಸ್ಥೂಲವಾದ, ದಪ್ಪನಾದ

ಉರಾಲಿಯ. ನ: [ಔದಾರಿಕ] ಶರೀರ–ವಿಶೇಷ(ಸಣ)

ಉರಿಅ. ಸ್ತ್ರೀ: [ಉಡ್ರಿಕಾ] ಒಂದು ಬಗೆಯ ಲಿಪಿ

ಉರಿತಿಯ. ನ: [ದೇ. ಉರಸಿ–ತ್ರಿಕ] ಮೂರು ಸರಗಳ ಹಾರ(ಔಪ)

ಉರಿಸ. 'ಪುರಿಸ' ಶಬ್ದವನ್ನು ನೋಡುವುದು(ಗಾ)

ಉರು.ವಿ:[ಉರು]ವಿಶಾಲವಾದ,ಅಗಲವಾದ (ಪಾಅ)

ಉರುಪುಲ್ಲ. ಪು: [ದೇ] ಹಿಟ್ಟಿನಿಂದ ಮಾಡಿದ ರೊಟ್ಟಿ, ದೋಸೆ, ಹೋಳಿಗೆ ಮುಂತಾದವು, ಖಿಚಡಿ(ದೇ)

ಉರುಮಲ್ಲ}. ವಿ: [ದೇ] ಪ್ರೇರಿತ, ಪ್ರೇರಿಸಲ್ಪಟ್ಟ
ಉರುಮಿಲ್ಲ.}
ಉರುಸೊಲ್ಲ.}

ಉರೋರುಹ. ಪು: [ಉರೋರುಹ] ಸ್ತನ, ನ: ಜೈನ ಸಾಧ್ವಿಯರ ಉಪಕರಣ–ವಿಶೇಷ(ಓಘ)

–ಉಲ. 'ಕುಲ' ಶಬ್ದವನ್ನು ನೋಡುವುದು

ಉಲಯ.} ಪುಂ.ನ: [ಉಲಪ] ತೃಣ, ಹುಲ್ಲು(ಸುಪಾ)
ಉಲವ.}

ಉಲವೀ. ಸ್ತ್ರೀ: [ಉಲಪೀ] ತೃಣ, ಹುಲ್ಲು(ಪಾಅ)

ಉಲಿಅ. ವಿ: [ದೇ] ಸಂಕುಚಿತವಲ್ಲದ ವಿಶಾಲ ದೃಷ್ಟಿಯ(ದೇ)

ಉಲಿತ್ತ. ನ: [ದೇ] ಶ್ರೇಷ್ಠವಾದ ಬಾವಿ(ದೇ)

–ಉಲೀಣ. 'ಕುಲೀಣ' ಶಬ್ದವನ್ನು ನೋಡುವುದು

ಉಲುಉಡಿಅ. ವಿ: [ದೇ] ಹೊಡೆಯಲ್ಪಟ್ಟ, ಹೊರಳಾಡುವ(ದೇ)

ಉಲುಓಸಿಅ. ವಿ: [ದೇ] ರೋಮಾಂಚನಗೊಂಡ, ಪುಲಕಿತ (ಷಡ್)

ಉಲುಕಸಿಅ. ವಿ: [ದೇ] ಮೇಲಿನ ಶಬ್ದವನ್ನು ನೋಡುವುದು

ಉಲುಖಡ. ಪು: [ದೇ] ಕೊಳ್ಳಿ, ಉರಿಯುವ ಕಟ್ಟಿಗೆ(ದೇ)

ಉಲುಗ. ಪು: [ಉಲುಕ] ಗೂಬೆ, ಒಂದು ದೇಶ–ವಿಶೇಷ(ಪಉಮ)

ಉಲುಗೀ. ಸ್ತ್ರೀ: [ಔಲುಕೀ] ಒಂದು ವಿದ್ಯೆ(ವಸೇ)

ಉಲುಗ್ಗ. ವಿ: [ಅವರುಗ್ಣ] ರೋಗಿ(ಮಹಾ)

ಉಲುಗ್ಗ. ವಿ: 'ಓಲುಗ್ಗ' ಶಬ್ದವನ್ನು ನೋಡುವುದು

ಉಲುಘುಂಟಿಅ. ವಿ: [ದೇ]ವಿನಾಶವಾದ, ಪ್ರಶಾಂತ(ದೇ)
ಉಲುಯ. 'ಉಲೂಅ' ಶಬ್ದವನ್ನು ನೋಡುವುದು
ಉಲುಹಂತ. ಪು: [ದೇ] ಕಾಗೆ
ಉಲುಹುಲ. ವಿ: [ದೇ] ಅತೃಪ್ತ(ಷಡ್)
ಉಲೂಅ. ಪು: [ಉಲೂಕ] ಗೂಬೆ(ಪಾಅ), ವೈಶೇಷಿಕಮತದ ಪ್ರವರ್ತಕ ಕಣಾದಮುನಿ(ವಿಸೇ)
ಉಲೂಖಲ.'ಉಊಖಲ' ಶಬ್ದವನ್ನುನೋಡುವುದು
ಉಳೂಲು.ಪು: [ಉಳೂಲು] ಮಂಗಳಧ್ವನಿ (ರಂಭಾ)
ಉಲ್ಲ.ವಿ:[ಆರ್ದ್ರ] ಒದ್ದೆಯಾದ, ಹಸಿಯಾದ(ಕುಮಾ), –ಗಚ್ಛ. ಪು: [–ಗಚ್ಛ] ಜೈನಮುನಿಗಳ ಗಣ
ಉಲ್ಲ. ಸಕ: [ಆರ್ದ್ರಯ್] ನೆನೆಯಿಸು, ಒದ್ದೆಮಾಡು ಅಕ: ಒದ್ದೆಯಾಗುವುದು
ಉಲ್ಲ. ನ: [ದೇ] ಸಾಲ(ಸುಪಾ)
ಉಲ್ಲಅಣ. ನ: [ಉಲ್ಲಯನ] ಅರ್ಪಣೆ, ಸಮರ್ಪಣೆ
ಉಲ್ಲಂಕ. ಪು: [ಉಲ್ಲಂಕ] ಕಾಷ್ಠ–ಮಯ ಬಾರಕ್
ಉಲ್ಲಂಘ. ಸಕ: [ಉತ್+ಲಂಘ್] ಉಲ್ಲಂಘಿಸು, ಅತಿಕ್ರಮಿಸು, ಮೀರು(ಪಿ)
ಉಲ್ಲಂಘಣ. ನ: [ಉಲ್ಲಂಘನ] ಅತಿಕ್ರಮಣ, ಮೇಲಕ್ಕೆ ಹಾಉವುದು, ಮೀರುವುದು(ಪಣ್ಣ), ವಿ: ಅತಿಕ್ರಮಿಸುವವನು, ಮೀರುವವನು
ಉಲ್ಲಂಠ. ವಿ: [ಉಲ್ಲಂಠ] ಉದ್ಧತ, ಗರ್ವಿತ, ಅವಿನೀತ
ಉಲ್ಲಂಡಗ. ಪು: [ಉಲ್ಲಂಡಕ] ಚಿಕ್ಕ ಮೃದಂಗ,
ಉಲ್ಲಂಡಿಅ. ವಿ: [ದೇ] ಬಹಿಷ್ಕರಿಸಲ್ಪಟ್ಟ(ಪಾಅ)
ಉಲ್ಲಂಬಣ. ನ: [ಉಲ್ಲಂಬನ] ನೇಣಿಗೇರಿಸುವುದು ಕಟ್ಟಿ ತೂಗುಹಾಕುವುದು(ಸಮ)
ಉಲ್ಲಕ್ಕ. ವಿ: [ದೇ] ಖಾಲಿಮಾಡಿದ
–ಉಲ್ಲಟ್ಟ. 'ಉವ್ವಟ್ಟ=ಉದ್–ವೃತ್' ಶಬ್ದವನ್ನು ನೋಡುವುದು
ಉಲ್ಲಟ್ಟ. ವಿ: [ದೇ] ಖಾಲಿಮಾಡಿದ
ಉಲ್ಲಣ. ವಿ: [ಉಲ್ಬಣ] ಉತ್ಕಟವಾದ, ಮಿತಿಮೀರಿದ
ಉಲ್ಲಣ. ನ: [ಆರ್ದ್ರೀಕರಣ] ನೆನೆಸುವುದು, ಒದ್ದೆ ಮಾಡುವುದು(ಉವಾ)
ಉಲ್ಲಣ. ನ: [ದೇ] ಆಹಾರ ಪದಾರ್ಥ
ಉಲ್ಲಣಿಯಾ. ಸ್ತ್ರೀ: [ಆರ್ದ್ರಯಣಿಕಾ] ನೀರನ್ನು ಒರೆಸಿಕೊಳ್ಳುವ ವಸ್ತ್ರ, ಟವೆಲ್
ಉಲ್ಲದ್ದಿಯ. ವಿ: [ದೇ] ಭಾರವನ್ನು ಹೇರಲಾಗಿರುವ, ಭಾರ ಹೊರಿಸಲ್ಪಟ್ಟ

ಉಲ್ಲರಯ. ನ: [ದೇ] ಕವಡೆಗಳ ಆಭರಣ(ದೇ)
ಉಲ್ಲಲ. ಅಕ: [ಉತ್+ಲಲ್] ಚಲಿಸು, ಅಲುಗಾಡು, ಹಾರಾಡು, ಉತ್ಪನ್ನವಾಗು, –ಉಲ್ಲಲಇ.
ಉಲ್ಲಲಿಅ. ವಿ: [ಉಲ್ಲಲಿತ] ಚಂಚಲ, ಅಲುಗಾಡುವ, ಉತ್ಪನ್ನವಾದ(ಸೇ)
ಉಲ್ಲಲಿಅ. ವಿ: [ದೇ] ಶಿಥಿಲ, ಸಡಿಲ(ದೇ)
ಉಲ್ಲವ. ಸಕ: [ಉತ್+ಲಪ್] ಹೇಳು, ಬೊಗಳು, ಬಡಬಡಿಸು, ಹರಟೆ ಹೊಡೆ, ನಿರರ್ಥಕ ಮಾತಾಡು, ಕೆಟ್ಟ ಮಾತು ಆಡು
ಉಲ್ಲವ. ಸಕ: [ಉದ್+ಲೂ] ಬುಡಸಮೇತ ಕಿತ್ತುಹಾಕು.
ಉಲ್ಲವಣ. ನ: [ಉಲ್ಲಪನ] ಹರಟೆ, ಹೇಳುವುದು
ಉಲ್ಲವಿಯ. ವಿ: [ಉಲ್ಲಪಿತ] ಹೇಳಲ್ಪಟ್ಟ, ನ: ಮಾತು (ಉತ್ತ)
ಉಲ್ಲವಿರ. ವಿ: [ಉಲ್ಲಪಿತೃ] ಹೇಳುವವನು, ಮಾತನಾಡುವವನು, ವಕ್ತೃ, ಹರಟೆಮಲ್ಲ, ವಾಚಾಳಿ(ಗಾ)
ಉಲ್ಲಸ. ಅಕ: [ಉತ್+ಲಸ್] ಹರ್ಷಗೊಳ್ಳು,
ಉಲ್ಲಸ. 'ಉಲ್ಲಾಸ' ಶಬ್ದವನ್ನು ನೋಡುವುದು (ಗಉಡ)
ಉಲ್ಲಸಿಅ. ವಿ: [ಉಲ್ಲಸಿತ] ಅರಳಿದ, ಅಭಿವೃದ್ಧಿ ಹೊಂದಿದ, ಹರ್ಷಗೊಂಡ(ಷಡ್)
ಉಲ್ಲಸಿಅ. ವಿ: [ದೇ. ಉಲ್ಲಸಿತ] ರೋಮಾಂಚನಗೊಂಡ, ಪುಲಕಿತ(ದೇ)
ಉಲ್ಲಾಯ. ವಿ: [ದೇ] ಕಾಲಿನಿಂದ ಒದೆಯುವುದು
ಉಲ್ಲಾಯ. ಪು: [ಉಲ್ಲಾಪ] ವಕ್ರ ಮಾತು, ಹೇಳುವುದು, ನಿಂದನೆಯ ನುಡಿ(ಭಗ)
ಉಲ್ಲಾಲ. ಸಕ: [ಉತ್+ನಮಯ್] ಮೇಲಕ್ಕೆ ಎಸೆ, ತಲೆಯನ್ನು ಮೇಲಕ್ಕೆ ಮಾಡು
ಉಲ್ಲಾಲ. ಸಕ: [ಉತ್+ಲಾಲಯ್] ಹೊಡೆ, ಪೀಡಿಸು, ವ. ಕೃ–ಉಲ್ಲಾಲೇಮಾಣ
ಉಲ್ಲಾಲ. ಪುಂನ: [ಉಲ್ಲಾಲ] ಒಂದು ಛಂದಸ್ಸು
ಉಲ್ಲಾಲಿಅ. ವಿ: [ಉನ್ನಮಿತ] ಮೇಲಕ್ಕೆ ಮಾಡಲಾದ, ಮೇಲಕ್ಕೆ ಎಸೆಯಲ್ಪಟ್ಟಿರುವ
ಉಲ್ಲಾಲಿಯ. ವಿ: [ಉಲ್ಲಾಲಿತ] ಹೊಡೆಯಲ್ಪಟ್ಟ
ಉಲ್ಲಾವ. ಸಕ: [ಉತ್+ಲಪ್, ಲಾಪಯ್] ಹೇಳು, ಹರಟೆ ಹೊಡೆ, ಹರಟೆ ಹೊಡೆಯಿಸುವುದು, ನಿರರ್ಥಕ ಮಾತಾಡು(ವುದು

ಉಲ್ಲಾವ. ಪು: [ಉಲ್ಲಾಪ] ಶಬ್ದ, ಸಪ್ಪಳ, ಉತ್ತರ(ಓಘ) ನಿರರ್ಥಕವಾದ ಮಾತು, ಮಾತು, ಕಥನ(ಪಉಮ) ಸಂವಾದ

ಉಲ್ಲಾವಿಅ. ವಿ: [ಉಲ್ಲಪಿತ] ಹೇಳಲಾದ, ಕಥಿತ, ಮಾತು

ಉಲ್ಲಾವಿರ. ವಿ: [ಉಲ್ಲಪಿತೃ] ಹೇಳುವವನು(ಸುಪಾ)

ಉಲ್ಲಾಸಗ. ವಿ: [ಉಲ್ಲಾಸಕ] ಅರಳುವ, ಆನಂದವನ್ನುಂಟುಮಾಡುವವನು, ಹರ್ಷದಿಂದ ಕೂಡಿದವನು

ಉಲ್ಲಾಸಣ. ನ:[ಉಲ್ಲಾಸನ] ವಿಕಾಸ, ಹರ್ಷಗೊಳಿಸುವುದು

ಉಲ್ಲಾಸಿ.} ವಿ: [ಉಲ್ಲಾಸಿನ್] ಮೇಲಿನ ಶಬ್ದವನ್ನು
ಉಲ್ಲಾಸಿರ.} ನೋಡುವುದು

ಉಲ್ಲಾಹ. ಸಕ: [ಉತ್+ಲಾಘಯ್] ಕಡಿಮೆ ಮಾಡು, ಲಘು ಮಾಡು

ಉಲ್ಲಿಅ. ವಿ: [ದೇ] ಹತ್ತಿರಕ್ಕೆ ಬಂದಿರುವ, ಒದಗಿದ,

ಉಲ್ಲಿಅ. ವಿ: [ದೇ] ಸೀಳಲ್ಪಟ್ಟ, ತುಂಡುಮಾಡಲ್ಪಟ್ಟ, ನಿಂದಿಸಲ್ಪಟ್ಟ, ಬೈಯಲ್ಪಟ್ಟ

ಉಲ್ಲಿಅ. ವಿ: [ಆರ್ದ್ರಿತ] ನೆನೆಸಲ್ಪಟ್ಟಿರುವ, ಒದ್ದೆಮಾಡಲಾಗಿರುವ

ಉಲ್ಲಿಂಗಣ. ವಿ: [ಉಲ್ಲಿಂಗನ] ದಾರಿತೋರಿಸುವವನು, ಬಾಗಿಲು ಕಾಯುವವನು

ಉಲ್ಲಿಂಚ.. ಸಕ: [ಉದ್+ರಿಚ್] ಖಾಲಿಮಾಡು

ಉಲ್ಲಿಂಚಿಯ. ವಿ: [ದೇ] ಉದ್ರಿಕ್ತ, ಖಾಲಿಮಾಡಲ್ಪಟ್ಟ

ಉಲ್ಲಿಂಪಣ. ನ: [ಉಪಲೇಪನ] ಬಳಿಯುವುದು, ಲೇಪಿಸುವುದು

ಉಲ್ಲಿಕ್ಕ. ನ: [ದೇ] ಕೆಟ್ಟ ಕೆಲಸ, ಕೆಟ್ಟಕೆಲಸವುಳ್ಳ

ಉಲ್ಲಿಯಾ. ಸ್ತ್ರೀ: [ದೇ] ರಾಧಾ-ವೇಧದ ಗುರಿ

ಉಲ್ಲಿರ. ವಿ: [ಆರ್ದ್ರ] ಒದ್ದೆಯಾದ

ಉಲ್ಲಿಹ. ಸಕ: [ಉದ್+ಲಿಹ್] ನೆಕ್ಕು, ತಿನ್ನು

ಉಲ್ಲಿಹ. ಸಕ: [ಉದ್+ಲಿಖ್] ರೇಖಿಸು, ಬರೆ, ಸವೆ, ತಿಕ್ಕು

ಉಲ್ಲಿಹಣ. ನ: [ಉಲ್ಲೇಖನ] ಘರ್ಷಣೆ(ಸುಪಾ), ಬರೆಯುವುದು, ಗೆರೆಹಾಕುವುದು

ಉಲ್ಲಿಹಿಯ. ವಿ: [ಉಲ್ಲಿಖಿತ] ಉಜ್ಜಲ್ಪಟ್ಟ, ಸವೆದು ಹೋದ(ಣಾಯಾ), ತಿಕ್ಕಲ್ಪಟ್ಟ, ರೇಖಿಸಲ್ಪಟ್ಟ (ಸುಪಾ)

ಉಲ್ಲೀ. ಸ್ತ್ರೀ: [ದೇ] ಒಲೆ, ಹಲ್ಲಿನ ಕೊಳೆ

ಉಲ್ಲೀಣ. ವಿ: [ಉಪಲೀನ] ಪ್ರಚ್ಛನ್ನ, ರಹಸ್ಯವಾದ, ಗುಟ್ಟಾದ

ಉಲ್ಲುಅ. ವಿ: [ದೇ] ಮುಂಭಾಗದಲ್ಲಿ ಇಡಲ್ಪಟ್ಟ, ರಕ್ತ, ಬಣ್ಣ ಬಳಿಯಲ್ಪಟ್ಟ

ಉಲ್ಲುಅ. ವಿ: [ದೇ. ಉದ್ಗತ] ಹುಟ್ಟಿದ, ಉದಯಿಸಿದ, ಹೊಮ್ಮಿದ

ಉಲ್ಲುಅ. ವಿ: [ಉನ್ಮೂಲನ] ಬೇರುಸಹಿತ ಕಿತ್ತುಹಾಕಲ್ಪಟ್ಟ, ನ: ಬೇರು ಸಹಿತ ಕಿತ್ತುಹಾಕುವುದು

ಉಲ್ಲುಂಚಿಅ. ವಿ: [ಉಲ್ಲುಂಚಿತ] ಕಿತ್ತುಹಾಕಲ್ಪಟ್ಟ, ಬುಡಸಮೇತ ಕಿತ್ತುಹಾಕಲ್ಪಟ್ಟ

ಉಲ್ಲುಂಟಿಅ. ವಿ: [ದೇ] ಪುಡಿಮಾಡಲ್ಪಟ್ಟ, ಚೂರು ಚೂರು ಮಾಡಲಾದ

ಉಲ್ಲುಂಠ. ವಿ: [ಉಲ್ಲುಂಠ] ಉದ್ಧತ, ಗರ್ವಿತ, ಕೊಬ್ಬಿದ (ಸುಪಾ)

ಉಲ್ಲುಂಡ. ಅಕ: [ವಿ+ರೇಚಯ್] ತೊಟ್ಟಿಕ್ಕು, ಹನಿಹನಿಯಾಗಿ ಬೀಳು ಹೊರಬರು,

ಉಲ್ಲುಕ್ಕ. ವಿ: [ದೇ] ಹರಿಯಲ್ಪಟ್ಟ, ಸೀಳಲ್ಪಟ್ಟ, ಮುರಿದು ಹೋದ

ಉಲ್ಲುಕ್ಕ. ಸಕ: [ತುಡ್] ಮುರಿ,

ಉಲ್ಲುಕ್ಕಿಅ. ವಿ: [ತುಡಿತ] ಮುರಿಯಲ್ಪಟ್ಟ, ಸೀಳಲ್ಪಟ್ಟ (ಕುಮಾ)

ಉಲ್ಲುಗ.-.} ಸ್ತ್ರೀ: [ಉಲ್ಲುಕಾ] ನದಿ, ಉಲ್ಲುಕಾ ನದಿಯ
ಉಲ್ಲುಗಾ}. ದಡದ ಪ್ರದೇಶ(ವಿಸೇ) -ತೀರ. ನ: [-ತೀರ] ಉಲ್ಲುಕಾ ನದಿಯ ದಡದಲ್ಲಿ ಇರುವ ಒಂದು ನಗರ

ಉಲ್ಲುಜ್ಝಣ. ನ: [ದೇ] ಪುನರುತ್ಥಾನ, ಕತ್ತರಿಸಿ ಹೋದ ಪಾದ ಮತ್ತೆ ಮೂಡಿಬರುವುದು

ಉಲ್ಲುಟ್ಟ. ಅಕ: [ಉತ್+ಲುಟ್] ನಷ್ಟವಾಗು, ಹಾಳಾಗು

ಉಲ್ಲುಟ್ಟ. ವಿ: [ದೇ] ಸುಳ್ಳು, ಅಸತ್ಯ

ಉಲ್ಲುರುಹ. ಪು: [ದೇ] ಸಣ್ಣ ಶಂಖ(ದೇ)

ಉಲ್ಲುಲಿಅ. ವಿ: [ಉಲ್ಲುಲಿತ] ಚಲಿಸಲ್ಪಟ್ಟ(ಗಾ)

ಉಲ್ಲುವ. 'ಉಲ್ಲವ=ಉದ್+ಲೂ' ಶಬ್ದವನ್ನು ನೋಡುವುದು

ಉಲ್ಲುಹ. ಅಕ: [ನಿಸ್+ಸೃ] ಹೊರ ಹೊರಡು

ಉಲ್ಲುಂಡಿಅ. ವಿ: [ದೇ] ಉನ್ನತ, ಎತ್ತರವಾದ(ಷಡ್)

ಉಲ್ಲೂಢ. ವಿ: [ದೇ] ಮೇಲಕ್ಕೆ ಹತ್ತಿದ, ಹತ್ತಲ್ಪಟ್ಟ, ಮೊಳಕೆಬಂದ, ಅಂಕುರಿತ(ದೇ)

ಉಲ್ಲೂಢ. ಸಕ: [ಆ+ರುಹ್] ಹತ್ತು, ಏರು
ಉಲ್ಲೂರ. ಸಕ: [ತುಡ್] ಮುರಿ, ನಾಶಮಾಡು,
ಉಲ್ಲೂರಣ. ನ: [ತೋಡನ] ಛೇದನ, ಒಡೆಯುವುದು, ಭೇದಿಸುವುದು(ಗಾ)
ಉಲ್ಲೂರಿಅ. ವಿ: [ತುಡಿತ] ವಿನಾಶಗೊಂಡ(ಪಾಅ)
ಉಲ್ಲೂಹ. ವಿ: [ದೇ] ಶುಷ್ಕ, ಒಣಗಿದ(ಓಘ)
ಉಲ್ಲೆತ್ತಾ. 'ಉಲ್ಲ =ಆರ್ದ್ರಂಯ್' ಶಬ್ದವನ್ನು ನೋಡುವುದು
ಉಲ್ಲೇವ. ಪು: [ದೇ] ಹಾಸ್ಯ
ಉಲ್ಲೇಹಡ. ವಿ: [ದೇ] ಲಂಪಟ, ಲುಬ್ಧ, ಕಾಮುಕ, ಅತಿ ಆಸೆ ಉಳ್ಳವನು(ಪಾಅ)
ಉಲ್ಲೋಇಂಯ. ನ: [ದೇ] ಬಳಿಂಯುವುದು, ಗೋಡೆಯನ್ನು ಸುಣ್ಣವೇ ಮೊದಲಾದವುಗಳಿಂದ ಬಿಳಿದು ಮಾಡುವುದು, ವಿ:ಬಳಿಂಯಲ್ಪಟ್ಟ (ಣಾಯಾ)
ಉಲ್ಲೋಕ. ವಿ: [ದೇ] ತ್ರುಟಿತ, ಹರಿಯಲ್ಪಟ್ಟ, ಸೀಳಲ್ಪಟ್ಟ (ಷಡ್)
ಉಲ್ಲೋಚ. ಪು: [ದೇ.ಉಲ್ಲೋಚ]ಬೆಳುದಿಂಗಳು(ದೇ)
ಉಲ್ಲೋಢ. ಸಕ: [ಉಲ್ಲೋಧ್ರಯ್] ಸಾಂಬ್ರಾಣಿಯಿಂದ ಉಜ್ಜು
ಉಲ್ಲೋಯ. ಪು: [ಉಲ್ಲೋಕ] ಛತ್ತು, ಮಾಳಿಗೆ (ಣಾಯಾ), ಸ್ವಲ್ಪ ತಡವಾಗಿ, ಸ್ವಲ್ಪ ವಿಳಂಬ
ಉಲ್ಲೋಯ. 'ಉಲ್ಲೋಚ' ಶಬ್ದವನ್ನು ನೋಡುವುದು
ಉಲ್ಲೋಲ.ಅಕ: [ಉತ್+ಲುಲ್] ನೆಲದ ಮೇಲೆ ಉರುಳಾಡು, ಮಲಗು, ಪು: ಶೋಕಾಕುಲೆಯಾದ ಹೆಣ್ಣಿನ ಅಳುವಿನ ಶಬ್ದ
ಉಲ್ಲೋಲ. ಪು: [ದೇ] ಶತ್ರು, ಕೋಲಾಹಲ, (ಪಉಮ), ದೊಡ್ಡ ಅಲೆ
ಉಲ್ಲೋಲ. ಸಕ: [ಉದ್+ಲೋಲಯ್] ಒರೆಸು
ಉಲ್ಲೋಲ. ಪು: [ಉಲ್ಲೋಲ] ಪ್ರಬಂಧ, ವಿ: ಉದ್ಭಟ, ಉದ್ಧತ, ವಿ: ಉತ್ಸುಕ
ಉಲ್ಲೋವ. (ಅಪ). 'ಉಲ್ಲೋಚ' ಶಬ್ದವನ್ನು ನೋಡುವುದು
ಉಲ್ಹವ. ಸಕ: [ವಿ+ಧ್ಮಾಪಯ್] ತಣ್ಣಗೆ ಮಾಡು, ಬೆಂಕಿಯನ್ನು ಆರಿಸು (ಹೇ)
ಉಲ್ಹವಿಯ. ವಿ: [ದೇ. ವಿಧ್ಮಾಪಿತ] ಆರಿಸಲ್ಪಟ್ಟ, ಶಾಂತಗೊಳಿಸಲಾದ(ಪಉಮ)
ಉಲ್ಹಸಿಅ. ವಿ: [ದೇ] ಉದ್ಭಟ, ಗರ್ವಿತ, ಕೊಬ್ಬಿದ
ಉಲ್ಹಾ. ಅಕ: [ವಿ+ಧ್ಮಾ] ಆರಿ ಹೋಗು,
ಉವ. ನ: [ಉದ] ನೀರು
ಉವ. ಅ: [ಉಪ] ಸಾಮೀಪ್ಯ, ಸಾದೃಶ್ಯ(ಹೋಲಿಕೆ) ಸಮಸ್ತತೆ, ಒಂದು ಬಾರಿ, ಒಳಗೆ– ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ಉವಅಂಠ. ವಿ: [ಉಪಕಂಠ] ಹತ್ತಿರ, ಸಮೀಪ, ಸಮೀಪದಲ್ಲಿ(ಗಉಡ)
ಉವಇಟ್ಠ. ವಿ: [ಉಪದಿಷ್ಟ] ಹೇಳಲ್ಪಟ್ಟ, ಪ್ರತಿಪಾದಿತ, ಶಿಕ್ಷಿತ(ಓಘ)
ಉವಇಣ್ಣ. ವಿ: [ಉಪಚೀರ್ಣ] ಸೇವಿಸಲ್ಪಟ್ಟ,
ಉವಇಯ. ವಿ: [ಉಪಚಿತ] ಮಾಂಸಲವಾದ, ಪುಷ್ಟವಾದ, ಉನ್ನತವಾದ(ಔಪ)
ಉವಇಯ. ಪುಂಸ್ತ್ರೀ: [ದೇ] ಮೂರು ಇಂದ್ರಿಯಗಳ ಜೀವಿ, 'ಓವಾಇಯ' ಶಬ್ದವನ್ನು ನೋಡುವುದು (ಝೀವ)
ಉವಇಸ.. ಸಕ: [ಉಪ+ದಿಶ್] ಉಪದೇಶ ನೀಡು, ಕಲಿ(ಸುವುದು), ಪ್ರತಿಪಾದಿಸು –ಉವಇಸಂತಿ
ಉವಉಂ. ಸಕ: [ಉಪ+ಯುಜ್] ಉಪಯೋಗಿಸು
ಉವಉಜ್ಜ. ಪು: [ದೇ] ಉಪಕಾರ (ದೇ), ವಿ: ಉಪಕಾರಕ
ಉವಉತ್ತ. ವಿ: [ಉಪಯುಕ್ತ] ನ್ಯಾಯಯುತವಾದ, ಉಪಂಯೋಗಕ್ಕೆ ಬರುವ, ಜಾಗರೂಕ, ಎಚ್ಚರಿಕೆಯುಳ್ಳ(ಉವ)
ಉವಊಢ. ವಿ: [ಉಪಗೂಢ] ಆಲಿಂಗಿಸಲ್ಪಟ್ಟ (ಪಾಅ)
ಉವವೂಹ. ಸಕ: [ಉಪ+ಗೂಹ] ಆಲಿಂಗಿಸಿಕೊಳ್ಳು, ತಬ್ಬಿಕೊಳ್ಳು
ಉವಊಹಣ. ನ: [ಉಪಗೂಹನ] ಆಲಿಂಗನ,
ಉಪಊಹಿಅ. ವಿ: [ಉಪಗೂಹತ] ಆಲಿಂಗಿಸಲ್ಪಟ್ಟ
ಉವಏಇಆ. ಸ್ತ್ರೀ: [ದೇ] ಮದ್ಯವನ್ನು ಹಂಚುವ ಪಾತ್ರೆ
ಉವಏಸ. ಪು: [ಉಪದೇಶ] ಉಪದೇಶ, ಬೋಧನೆ, ಕಥನ, ಪ್ರತಿಪಾದನೆ, ಶಾಸ್ತ್ರ, ಸಿದ್ಧಾಂತ(ಆಚಾ), ಉಪದೇಶಕ್ಕೆ ಅರ್ಹವಾದ, ಬೋಧಿಸಲ್ಪಡುವ, ಉಪದೇಶ್ಯ (ಧರ್ಮ)
ಉಪಏಸಗ. ವಿ: [ಉಪದೇಶಕ] ಉಪದೇಶಿಸುವವನು,
ಉವಏಸಣ. ನ: [ಉಪದೇಶನ] 'ಉವಏಸ' ಶಬ್ದವನ್ನು ನೋಡುವುದು

ಉವಏಸಣಯಾ.} ಸ್ತ್ರೀ: [ಉಪದೇಶನಾ] ಉಪದೇಶ
ಉವಏಸಣ.}
ಉವಏಸಿಯ. ವಿ: [ಉಪದೇಶಿತ] ಉಪದೇಶಿಸಲ್ಪಟ್ಟ
ಉವಓಗ. ಪು: [ಉಪಯೋಗ] ಜ್ಞಾನ, ಚೈತನ್ಯ(ಪಣ್ಣ), ಗಮನ, ಜಾಗರೂಕತೆ, ಎಚ್ಚರಿಕೆ, ಪ್ರಯೋಜನ, ಆವಶ್ಯಕತೆ
ಉವಓಗಿ. ವಿ: [ಉಪಯೋಗಿನ್] ಉಪಯುಕ್ತ, ಯೋಗ್ಯ, ಪ್ರಯೋಜನಕ್ಕೆ ಬರುವ.
ಉವಂಗ. ಪುಂನ: [ಉಪಾಂಗ] ಸಣ್ಣ ಸಣ್ಣ ಅವಯವ, ಗ್ರಂಥ, ಮೂಲಗ್ರಂಥದ ವಿಶೇಷ ಭಾಗವನ್ನು ವಿಸ್ತಾರವಾಗಿ ವರ್ಣಿಸುವ ಗ್ರಂಥ, ಅದರ ಟೀಕು, ಪುರಾಣ, ನ್ಯಾಯಶಾಸ್ತ್ರ, ಮೀಮಾಂಸಾ ಇತ್ಯಾದಿ ಔಪಪಾತಿಕ ಸೂತ್ರವೇ ಮೊದಲಾದ ಹನ್ನೆರಡು ಜೈನ ಗ್ರಂಥಗಳು(ಕಪ್ಪ)
ಉವಂಜಣ. ನ: [ಉಪಾಂಜನ] ಮಾಲೀಶು, ತಿಕ್ಕುವುದು (ಪಣ್ಣ)
ಉವಕಂಠ. ನ: [ಉಪಕಂಠ] ಸಮೀಪ, ಹತ್ತಿರ
ಉವಕಂಠ. 'ಉವಅಂಠ' ಶಬ್ದವನ್ನು ನೋಡುವುದು
ಉವಕದುಅ.(ಶೌ). ಅ: [ಉಪಕೃತ್ಯ] ಉಪಕಾರಮಾಡಿ
ಉವಕಪ್ಪ. ಪು: [ಉಪಕಲ್ಪ] ಸಾಧುವಿಗೆ ಕೊಡುವ ಅನ್ನ ಪಾನಾದಿ ಭಿಕ್ಷೆ
ಉವಕಯ. ವಿ: [ಉಪಕೃತ] ಉಪಕರಿಸಲ್ಪಟ್ಟವನು, ಉಪಕಾರ ಪಡೆದವನು(ಆವ)
ಉವಕಯ. ವಿ: [ದೇ] ಸಜ್ಜುಗೊಂಡ, ಸಿದ್ಧವಾದ, ಉತ್ತಮ ಗುಣವುಳ್ಳ, ತಕ್ಕುನಾದ
ಉವಕರ. 'ಉವಯುರ=ಉಪ+ಕೃ' ಶಬ್ದವನ್ನು ನೋಡುವುದು
ಉವಕರ. ಸಕ: [ಅವ+ಕೃ] ವ್ಯಾಪಿಸು,
ಉವಕರಣ. 'ಉವಗರಣ' ಶಬ್ದವನ್ನು ನೋಡುವುದು (ಔಪ)
ಉವಕಸ. ಸಕ: [ಉಪ+ಕಷ್] ಪ್ರಾಪ್ತವಾಗು
ಉವಕಸಿಅ. ವಿ: [ದೇ] ಸಮೀಪದಲ್ಲಿ ಇಡಲಾಗಿರುವ, ಸಮೀಪಕ್ಕೆ ಬಂದಿರುವ, ಪೂಜಿಸಲ್ಪಟ್ಟ, ಆರಾಧಿಸಲ್ಪಟ್ಟ, ಸೃಷ್ಟಿಮಾಡಲ್ಪಟ್ಟ, ಉತ್ಪಾದಿಸಲ್ಪಟ್ಟ
ಉವಕಾರ. 'ಉವಗಾರ' ಶಬ್ದವನ್ನು ನೋಡುವುದು
ಉವಕಾರಿಯಾ. 'ಉವಗಾರಿಯಾ' ಶಬ್ದವನ್ನು ನೋಡುವುದು
ಉವಕಿಇ.} ಸ್ತ್ರೀ: [ಉಪಕೃತಿ] ಉಪಕಾರ
ಉವಕಿದಿ.}
ಉವಕುಲ. ನ: [ಉಪಕುಲ] ಶ್ರಾವಣವೇ ಮೊದಲಾದ ನಕ್ಷತ್ರ. ಪುಂನ: ಕುಲ ನಕ್ಷತ್ರದ ಹತ್ತಿರದ ನಕ್ಷತ್ರ
ಉವಕೋಸಾ. ಸ್ತ್ರೀ: [ಉಪಕೋಶಾ] ಒಬ್ಬ ಪ್ರಸಿದ್ಧ ವೇಶ್ಯೆ
ಉವಕ್ಕಂತ. ವಿ: [ಉಪಕ್ರಾಂತ] ಹತ್ತಿರಕ್ಕೆ ತರಲಾದ, ಪ್ರಾರಂಭಿಸಲಾದ, ನಿರ್ದೇಶಿಸಿ ಹೇಳಲಾದ(ವಿಸೇ)
ಉವಕ್ಕಮ. ಸಕ: [ಉಪಕ್ರಮ್] ಪ್ರಾರಂಭಿಸು, ಪ್ರಾಪ್ತಮಾಡಿಕೊಳ್ಳು, ಅರಿತುಕೊಳ್ಳು, ಹತ್ತಿರಕ್ಕೆ ತರು, ಅನುಸರಿಸು ವ. ಕೃ–ಉವಕ್ಕಮಂತ
ಉವಕ್ಕಮ. ಪು: [ಉಪಕ್ರಮ] ಆರಂಭ, ಪ್ರಾಪ್ತಿಗಾಗಿ ಪ್ರಯತ್ನಿಸುವುದು, ಪಾಪ–ಪುಣ್ಯ ಕರ್ಮಫಲದ ಅನುಭವ, ಕರ್ಮಗಳ ಪರಿಣಾಮದ ಕಾರಣ ಹೆದರಿದ ಜೀವ ಮಾಡು ಪ್ರಯತ್ನ(ಠಾ), ಮರಣ, ವಿನಾಶ, ದೂರದಲ್ಲಿರುವುದನ್ನು ಸಮೀಪಕ್ಕೆ ತರುವುದು, ಆಯುಷ್ಯವನ್ನು ಕೊನೆಗಾಣಿಸುವಂಥ ವಸ್ತು, ಉಪಚಾರ, ಜ್ಞಾನ, ನಿಶ್ಚಯ, ಅನುಕೂಲಕರವಾದ ರೀತಿಯಲ್ಲಿ ತೊಡಗಿಸಿಕೊಳ್ಳುವುದು, ಅಂಗ ಸಂಸ್ಕಾರ: ಸುವಾಸನೆಯ ಪುಡಿಯನ್ನು ಮೈಗೆ ಹಚ್ಚಿಕೊಳ್ಳುವುದು. ಉದಿಸದೆ ಇರುವ ಕರ್ಮಗಳನ್ನು ಉದಿಸುವಂತೆ ಮಾಡುವುದು.
ಉವಕ್ಕಮಣ. ನ: [ಉಪಕ್ರಮಣ] ಮೇಲಿನ ಶಬ್ದವನ್ನು ನೋಡುವುದು(ಅಣು)
ಉವಕ್ಕಮಿಯ. ವಿ: [ಔಪಕ್ರಮಿಕ] ಉಪಕ್ರಮಕ್ಕೆ ಸಂಬಂಧಿಸಿದ(ಠಾ)
ಉವಕ್ಕಾಮ. 'ಉವಕ್ಕಮ=ಉಪ+ಕಮ್' ಶಬ್ದವನ್ನು ನೋಡುವುದು
ಉವಕ್ಕಾಮ. ಸಕ: [ಉಪ+ಕ್ರಮ್] ದೀರ್ಘ ಕಾಲದಲ್ಲಿ ಅನುಭವಿಸಲು ಅರ್ಹವಾದ ಕರ್ಮಗಳನ್ನು ಅಲ್ಪ ಸಮಯದಲ್ಲೇ ಅನುಭವಿಸು
ಉವಕ್ಕಾಮಣ. ನ: [ಉಪಕ್ರಾಮಣ] ಉಪಕ್ರಮ ಮಾಡಿಸುವುದು, ಪ್ರಾರಂಭ ಮಾಡಿಸುವುದು
ಉವಕ್ಕೇಸ. ಪು: [ಉಪಕ್ಲೇಶ] ಅಡಚಣೆ, ಶೋಕ (ರಾಜ)
ಉವಕ್ಖಡ. ಸಕ: [ಉಪ+ಸ್ಕೃ] ಬೇಯಿಸು, ಅಡುಗೆ ಮಾಡು, ಅಡುಗೆಗೆ ಮಸಾಲೆ ಬೆರೆಸಿ ಸಂಸ್ಕರಿಸು

ಉವಕ್ಖಡ.} ವಿ: [ಉಪಸ್ಕೃತ] ಬೇಯಿಸಲಾದ,
ಉವಕ್ಖಡಿಯ.} ಮಸಾಲೆಇತ್ಯಾದಿಗಳನ್ನು ಬೆರೆಸಿ ಬೇಯಿಸಿದ್ದು, ಪುಂನ: ಅಡುಗೆ(ಣಾಂಯಾ), ಉವಕ್ಖಡಾಮ. ವಿ: [ಉಪಸ್ಕೃತಾಮ] ಬೇಯಿಸಿದ ಬಳಿಕವೂ ಹಸಿಯಾಗಿಯೇ ಉಳಿಯುವ ಹೆಸರುಕಾಳು ಮೊದಲಾದವು

ಉವಕ್ಖರ. ಪು: [ಉಪಸ್ಕರ] ಯಾವುದರಿಂದ ಸಂಸ್ಕಾರಗೊಳಿಸಲಾಗುವುದೋ ಅದು, ಮನೆಗೆ ಬೇಕಾದ ಉಪ್ಪಿನಕಾಯಿ ಇತ್ಯಾದಿ ವ್ಯಂಜನ(ಠಾ)

ಉವಕ್ಖರಣ. ನ: [ಉಪಸ್ಕರಣ] ಮೇಲಿನ ಶಬ್ದವನ್ನು ನೋಡುವುದು. -ಸಾಲಾ. ಸ್ತ್ರೀ: [-ಶಾಲಾ] ಅಡುಗೆಮನೆ

ಉವಕ್ಖಾ. ಸಕ: [ಉಪಾ+ಖ್ಯಾ] ಹೇಳು, ಕಥಿಸು

ಉವಕ್ಖಾ. ಸ್ತ್ರೀ: [ಉಪಾಖ್ಯಾ] ಉಪನಾಮ, ಅಡ್ಡ ಹೆಸರು, ಇನ್ನೊಂದು ಹೆಸರು

ಉವಕ್ಖಾಇತ್ತು. ವಿ: [ಉಪಖ್ಯಾಪಯಿತೃ] ಪ್ರಸಿದ್ಧಿಗೊಳಿಸುವವನು

ಉವಕ್ಖಾಇಯಾ. ಸ್ತ್ರೀ: [ಉಪಾಖ್ಯಾಯಿಕಾ] ಉಪಕಥೆ, ಮಧ್ಯದಲ್ಲಿ ಬರುವ ಕಥೆ(ಸಮ)

ಉವಕ್ಖಾಣ. ನ: [ಉಪಾಖ್ಯಾನ] ಕಥೆ, ಪೂರ್ವ ಕಥೆಯನ್ನು ಹೇಳುವುದು(ಪಉಮ)

ಉವಕ್ಖಿತ್ತ. ವಿ: [ಉಪಕ್ಷಿಪ್ತ] ಪ್ರಾಂಭವಾಗಿರುವ, ಪ್ರಾರಂಭಿಸಲ್ಪಟ್ಟ

ಉವಕ್ಖಿವ. ಸಕ: [ಉಪ+ಕ್ಷಿಪ್] ಸ್ಥಾಪಿಸು, ಪ್ರಯತ್ನಿಸು, ಪ್ರಾರಂಭಿಸು

ಉವಕ್ಖೀಣ.ವಿ:[ಉಪಕ್ಷೀಣ]ಕ್ಷಯಹೊಂದಿದ, ಕ್ಷೀಣಿಸಿದ

ಉವಕ್ಖೇಅ. ಪು: [ಉಪಕ್ಷೇಪ] ಪ್ರಯತ್ನ, ಉದ್ಯೋಗ, ಉಪಾಯ

ಉವಕ್ಖೇವ. ಪು: [ದೇ. ಉಪಕ್ಷೇಪ] ತಲೆ ಬೋಳಿಸಿಕೊಳ್ಳುವುದು, ಮುಂಡನ

ಉವಗ. ವಿ: [ಉಪಗ] ಅನುಸರಿಸುವವನು(ಉಪ), ಸಮೀಪದಲ್ಲಿ ಹೋಗುವವನು (ವಿಸೇ)

ಉವಗಚ್ಛ. ಸಕ: [ಉಪ+ಗಮ್] ಸಮೀಪದಲ್ಲಿ ಹೋಗು, ಪಡೆದುಕೊಳ್ಳು, ಅರಿತುಕೊಳ್ಳು, ಸ್ವೀಕರಿಸು 'ಉವಗಚ್ಛಂತಿ'

ಉವಗಣಿಯ. ವಿ: [ಉಪಗಣಿತ] ಎಣಿಸಲಾದ, ಪರಿಗಣಿಸಲ್ಪಟ್ಟ

ಉವಗಪ್ಪಿಯ. ವಿ: [ಉಪಕಲ್ಪಿತ] ವಿರಚಿತ, ರಚಿಸಲ್ಪಟ್ಟ

ಉವಗಮ. 'ಉವಗಚ್ಛ' ಶಬ್ದವನ್ನು ನೋಡುವುದು

ಉವಗಯ. ವಿ: [ಉಪಗತ] ಹತ್ತಿರ ಬಂದ, ಸಮೀಪಿಸಿದ, ತಿಳಿದಿರುವ, ಕೂಡಿಕೊಂಡು, ಪ್ರಾಪ್ತ, ಅಧಿಕವಾಗಿ ಪ್ರಾಪ್ತಿಯಾದ, ಸ್ವೀಕರಿಸಲ್ಪಟ್ಟ, ಒಳಗೆ ಸೇರಿರುವ, ಒಳಗಡೆ ಇರುವ

ಉವಗಯ. ವಿ: [ಉಪಕೃತ] ಉಪಕರಿಸಲ್ಪಟ್ಟವನು

ಉವಗರ. ಸಕ: [ಉಪ+ಕೃ] ಪಕರಿಸು, ಒಳ್ಳೆಯದನ್ನು ಮಾಡು

ಉವಗರಣ. ನ: [ಉಪಕರಣ] ಸಾಧನ, ಸಲಕರಣೆ, ಸಾಧಕ ವಸ್ತು, ಬಾಹ್ಯ ಇಂದ್ರಿಯ(ವಿಸೇ)

ಉವಗರಿಅ. ವಿ: [ಉಪಕೃತ] ಉಪಕಾರ ಮಾಡಲ್ಪಟ್ಟ, ಉಪಕೃತ

ಉವಗಸ. ಸಕ: [ಉಪ+ಕಸ್] ಸಮೀಪಕ್ಕೆ ಬರು, ವ. ಕೃ-ಉವಗಸಂತ

ಉವಗಾ. ಸಕ: [ಉಪ+ಗೈ] ವರ್ಣಿಸು, ಪ್ರಶಂಸಿಸು, ಗುಣಗಾನಮಾಡು

ಉವಗಾರ. 'ಉವಯಾರ=ಉಪಕಾರ' ಶಬ್ದವನ್ನು ನೋಡುವುದು

ಉವಗಾರಿ. ವಿ: [ಉಪಕಾರಿನ್] ಮೇಲಿನ ಶಬ್ದವನ್ನು ನೋಡುವುದು

ಉವಗಾರಿಯಾ. ಸ್ತ್ರೀ: [ಉಪಕಾರಿಕಾ] ಉಪ್ಪರಿಗೆಯ ಮನೆಯಲ್ಲಿನ ಮಣೆ

ಉವಗಿಅ. ನ: [ಉಪಕೃತ] ಉಪಕಾರ, ಉಪಕರಿಸಲ್ಪಟ್ಟವನು

ಉವಗಿಣ್ಹ. ಸಕ: [ಉಪ+ಗ್ರಹ್] ಉಪಕಾರ ಮಾಡು, ಪುಷ್ಟಿಗೊಳಿಸು, ಗ್ರಹಿಸು,

ಉವಗೀಯ. ವಿ: [ಉಪಗೀತ] ವರ್ಣಿಸಲ್ಪಟ್ಟ, ಪ್ರಶಂಸಿಸಲ್ಪಟ್ಟ, ನ: ಸಂಗೀತ, ಗಾನ,

ಉವಗಿಜ್ಜಮಾಣ. 'ಉವಗಾ' ಶಬ್ದವನ್ನು ನೋಡುವುದು

ಉವಗೂಢ. ವಿ: [ಉಪಗೂಢ] ಆಲಿಂಗಿಸಲ್ಪಟ್ಟ, ನ: ಆಲಿಂಗನ (ರಜ)

ಉವಗೂಹ. ಸಕ: [ಉಪ+ಗುಹ್] ಆಲಿಂಗಿಸಿಕೊಳ್ಳು, ಗುಪ್ತ ರೀತಿಯಲ್ಲಿ ರಕ್ಷಣೆ ಮಾಡು, ರಚಿಸು, ಮಾಡು

ಉವಗೂಹಣ. ನ: [ಉಪಗೂಹನ] ಆಲಿಂಗನ, ಗುಪ್ತವಾಗಿ ರಕ್ಷಿಸು, ರಚಿಸು, ನಿರ್ಮಿಸು

ಉವಗೂಹಿಯ. ವಿ: [ಉಪಗೂಢ] ಆಲಿಂಗಿಸಲ್ಪಟ್ಟ

ಉವಗೂಹಿಯ. ನ: [ಉವಗೂಹಿತ] ಗಾಢವಾದ ಆಲಿಂಗನ

ಉವಗ್ಗ. ನ: [ಉಪಾಗ್ರ] ಅಗ್ರಕ್ಕೆ ಸಮೀಪ, ಆಷಾಢ ಮಾಸ (ವವ)

ಉವಗ್ಗಹ. ಪು: [ಉಪಗ್ರಹ] ಪೋಷಣೆ, ಉಪಕಾರ(ಉಪ) ಸ್ವೀಕರಿಸುವುದು, ಉಪಕರಣ, ಸಾಧನ(ಓಘ)

ಉವಗ್ಗಹ. ಪು: [ಉಪಗ್ರಹ] ಸಾಮೀಪ್ಯ ಸಂಬಂಧ

ಉವಗ್ಗಹಗ. ವಿ: [ಉಪಗ್ರಾಹಕ] ಉಪಕಾರ ಮಾಡುವವನು

ಉವಗ್ಗಹಿಅ. ವಿ: [ಉಪಗೃಹೀತ] ಸಮೀಪಕ್ಕೆ ತಂದಿಡಲಾದ, ಹಿಂದಿನ ಅನುಭವಗಳನ್ನು ನೆನಪಿಗೆ ತಂದ(ಪಣ್ಣ), ಆಲಿಂಗನವೇ ಮೊದಲಾದ ಚೇಷ್ಟೆಗಳು, ಉಪಕಾರ ಮಾಡಲ್ಪಟ್ಟವನು, ಆಶ್ರಯ ನೀಡಲ್ಪಟ್ಟ

ಉವಗ್ಗಹಿಅ. ನ: [ಉಪಗೃಹೀತ] ಉಪಕಾರ

ಉವಗ್ಗಹಿಅ. 'ಓವಗ್ಗಹಿಅ' ಶಬ್ದವನ್ನು ನೋಡುವುದು

ಉವಗ್ಗಾಹಿ. ವಿ: [ಉಪಗ್ರಾಹಿನ್] ಸಂಬಂಧಿ, ಸಂಬಂಧವನ್ನು ಹೊಂದಿರುವವನು(ವಿಸೇ)

ಉವಗ್ಘಾಯ. ಪು: [ಉಪೋದ್ಘಾತ] ಪ್ರಾರಂಭ, ಗ್ರಂಥದ ಆರಂಭದಲ್ಲಿಯ ಪೀಠಿಕೆ, ಪ್ರಸ್ತಾವನೆಯ ಭಾಗ

ಉವಘಾಇ. ವಿ: [ಉಪಘಾತಿನ್] ಉಪಘಾತ(ಏಟು, ಹೊಡೆತ)ವನ್ನುಂಟುಮಾಡುವವನು(ವಿಸೇ)

ಉವಘಾಇಯ. ವಿ: [ಉಪಘಾತಿಕ] ಉಪಘಾತ ವನ್ನುಂಟುಮಾಡುವವನು, ಹಿಂಸೆಯು ಸಂಬಂಧವುಳ್ಳವನು

ಉವಘಾಯ. ಪು: [ಉಪಘಾತ] ಹೊಡೆತ, ಏಟು, ವಧೆ(ಓಘ) ಅಶುದ್ಧತೆ, ವಿನಾಶ, ಉಪದ್ರವ, ಇನ್ನೊಬ್ಬರಿಗೆ ಕೇಡು ಬಗೆಯುವುದು. **–ನಾಮ.** ನ: [–ನಾಮನ್] ಕಿರುನಾಲಗೆ, ವಿಸ್ಡಮ್ ಟೀತ್, ಕಣ್ಣಿನ ಮೇಲೆ ಹುಬ್ಬುಗಳ ಹತ್ತಿರ ಆಗುವ ಗಂಟು ಇವೇ ಮೊದಲಾದ ತನ್ನ ಶರೀರದ ಅವಯವಗಳಿಂದ ಉಂಟಾಗುವ ಕ್ಲೇಶಗಳಿಗೆ ಕಾರಣವಾದ ಕರ್ಮ–ವಿಶೇಷ(ಸಮ)

ಉವಗಾಯುಗ. ವಿ: [ಉಪಘಾತಕ] ವಿನಾಶಕ, ನಾಶಮಾಡುವ

ಉವಘಾಯುಣ. ನ: [ಉಪಘಾತನ] ಮೇಲಿನ ಶಬ್ದವನ್ನು ನೋಡುವುದು

ಉವಚಯ. ಪು: [ಉಪಚಯ] ವೃದ್ಧಿ, ಬೆಳವಣಿಗೆ, ರಾಶಿ, ಗುಪ್ಪೆ, ಶರೀರ(ಆವ), ಇಂದ್ರಿಯ ಪರ್ಯಾಪ್ತಿ(ಪಣ್ಣ)

ಉವಚಯಣ. ನ: [ಉಪಚಯನ] ವೃದ್ಧಿ, ಬೆಳವಣಿಗೆ, ಪುಷ್ಟಿ

ಉವಚರ. ಸಕ: [ಉಪ+ಚರ್] ಸೇವೆಮಾಡು, ಸಮೀಪದಲ್ಲಿ ತಿರುಗಾಡು, ಆರೋಪ ಮಾಡು, ಹತ್ತಿರದಲ್ಲಿ ತಿನ್ನು, ತೊಂದರೆ ಉಂಟುಮಾಡು, **'ಉವಚರಂತಿ'**

ಉವಚರಯ. ವಿ: [ಉಪಚರಕ] ಸೇವೆಯ ನೆಪದಿಂದ ಬೇರೆಯವರಿಗೆ ಕೆಟ್ಟದ್ದನ್ನು ಮಾಡುವ ಸಂದರ್ಭಕ್ಕೆ ಕಾಯುವವನು, ಪು: ಗುಪ್ತಚರ,

ಉವಚರಿಯ. ವಿ: [ಉಪಚರಿತ] ಸೇವೆ ಮಾಡಲ್ಪಟ್ಟವನು ಶುಶ್ರೂಷೆ ಮಾಡಲ್ಪಟ್ಟವನು, ಪೂಜಿಸಲ್ಪಟ್ಟ, ಗೌರವಿಸಲ್ಪಟ್ಟ, ನ: ಉಪಚಾರ, ಸೇವೆ(ಪಂಚಾ), ಕಲ್ಪಿತ

ಉವಚಿ. ಸಕ: [ಉಪ+ಚಿ] ಒಟ್ಟುಗೂಡಿಸು, ಪುಷ್ಟಿಗೊಳಿಸು(ಠಾ)

ಉವಚಿಟ್ಠ. ಸಕ: [ಉಪ+ಸ್ಥಾ] ಸಮೀಪಕ್ಕೆ ಬರು,

ಉವಚಿಣಿಯ.} ವಿ: [ಉಪಚಿತ] ಪುಷ್ಟ,

ಉವಚಿಯ.} ವೃದ್ಧಿಹೊಂದಿದ, ಸ್ಥಿರವಾಗಿ ನಿಲ್ಲಿಸಲ್ಪಟ್ಟ, ನೆಲೆಗೊಳಿಸಲ್ಪಟ್ಟ(ಕಪ್ಪ), ಉನ್ನತಿ (ಔಪ) ಹರಡಿದ, ಬೆಳವಣಿಗೆ ಹೊಂದಿದ (ಆಚಾ)

ಉವಚ್ಚಯಾ. ಸ್ತ್ರೀ: [ಉಪತ್ಯಕಾ] ಪರ್ವತದ ಹತ್ತಿರದ ಕೆಳಗಿನ ಜಮೀನು, ತಪ್ಪಲು

ಉವಚ್ಛಂದಿದ.(ಶೌ). ವಿ: [ಉಪಚ್ಛಂದಿತ] ಪ್ರಾರ್ಥಿಸಲ್ಪಟ್ಟ

ಉವಜಂಗಲ. ವಿ: [ದೇ] ದೀರ್ಘವಾದ, ಉದ್ದವಾದ

ಉವಜಾ. ಅಕ: [ಉಪ+ಜನ್] ಉತ್ಪತ್ತಿಯಾಗು, ಸೃಷ್ಟಿಯಾಗು(ವಿಸೇ)

ಉವಜಾಇ. ಸ್ತ್ರೀ: [ಉಪಜಾತಿ] ಒಂದು ಬಗೆಯ ಛಂದಸ್ಸು

ಉವಜಾಇಯು. 'ಉವಯಾಇಯು' ಶಬ್ದವನ್ನು ನೋಡುವುದು

ಉವಜಾಯ. ವಿ: [ಉಪಜಾತ] ಉತ್ಪನ್ನವಾದ

ಉವಜೀವ. ಸಕ: [ಉಪ+ಜೀವ್]ಆಶ್ರಯಿಸು(ಮಹಾ)

ಉಪಜೀವಗ ವಿ: [ಉಪಜೀವಗ] ಆಶ್ರಯ ಪಡೆದವನು, ಆಶ್ರಿತ

ಉವಜೀವಿ. ವಿ: [ಉಪಜೀವಿನ್] ಆಶ್ರಯವು ತೆಗೆದುಕೊಳ್ಳುವವನು, ಉಪಕಾರ ಮಾಡುವವನು

ಉವಜೋಇಯ. ವಿ: [ಉಪಜ್ಯೋತಿಷ್ಕ] ಅಗ್ನಿಯ ಸಮೀಪದಲ್ಲಿರುವವನು, ಪವಿತ್ರ ಸ್ಥಳದಲ್ಲಿರುವ (ಉತ್ತ)

ಉವಜ್ಜ. ಅಕ: [ಉತ್+ಪದ್] ಉತ್ಪನ್ನವಾಗು, ಉದಿಸು

ಉವಜ್ಜಣ. ನ: [ಉಪಾರ್ಜನ] ಹುಟ್ಟಿಸುವುದು, ಸಂಪಾದಿಸುವುದು

ಉವಜ್ಜಿಣ. ಸಕ: [ಉಪ+ಅರ್ಜ್] ಸಂಪಾದಿಸು, ಉತ್ಪತ್ತಿ ಮಾಡು, ಅಧ್ಯಾಪಕ, ಪಾಠ ಮಾಡುವವನು, ಸೂತ್ರಾಧ್ಯಾಪಕನಾದ ಜೈನಮುನಿಗೆ ಕೊಡಲಾಗುವ ಒಂದು ಪದವಿ(ವಿಸೇ)

ಉವಜ್ಝಿಯ. ವಿ: [ದೇ] ಕರೆಸಲ್ಪಟ್ಟ(ರಾಜ್)

ಉವಟ್ಟಣ 'ಉವ್ವಟ್ಟಣ' ಶಬ್ದವನ್ನು ನೋಡುವುದು

ಉವಟ್ಟಣಾ. ಉವ್ವಟ್ಟಣಾ ಶಬ್ದವನ್ನು ನೋಡುವುದು

ಉವಟ್ಠ. ವಿ: [ಉಪಸ್ಥ] ಒಂದೇ ಸ್ಥಳದಲ್ಲಿ ಸತತವಾಗಿ ಇರುವ, **–ಕಾಲ.** ಪು: [–ಕಾಲ] ಬರುವ ಸಮಯ, ಆಗಮಿಸುವ ವೇಳೆ,

ಉವಟ್ಠಂಭ. ಪು: [ಉಪಷ್ಟಂಭ] ವಾಸಸ್ಥಳ, ಇರುವಿಕೆ, ಅನುಕಂಪೆ, ಕರುಣೆ(ಠಾ)

ಉವಟ್ಠಪ್ಪ. ವಿ: [ಉಪಸ್ಥಾಪ್ಯ] ವಾಸಿಸಲು ಯೋಗ್ಯವಾದ, ವ್ರತ, ದೀಕ್ಷೆಗಳಿಗೆ ಯೋಗ್ಯವಾದ

ಉವಟ್ಠವ. ಸಕ: [ಉಪ+ಸ್ಥಾಪಯ್] ಯುಕ್ತಿಯಿಂದ ಸ್ಥಾಪಿಸು, ವ್ರತಗಳನ್ನು ಆಚರಿಸು, ದೀಕ್ಷೆನೀಡುವುದು

ಉವಟ್ಠವಣಾ. ಸ್ತ್ರೀ: [ಉಪಸ್ಥಾಪನಾ] ಒಂದು ಬಗೆಯ ಜೈನದೀಕ್ಷೆ, ಚಾರಿತ್ರ್ಯ–ವಿಶೇಷ, ಶಿಷ್ಯನಲ್ಲಿ ವ್ರತವನ್ನು ನೆಲೆಗೊಳಿಸುವುದು(ಪಂಚಭಾ)

ಉವಟ್ಠವಣೀಯ. ವಿ: [ಉಪಸ್ಥಾಪನೀಯ] 'ಉವಟ್ಠಪ್ಪ' ಶಬ್ದವನ್ನು ನೋಡುವುದು

ಉವಟ್ಠಾ. ಸಕ: [ಉಪ+ಸ್ಥಾ] ಇರುವುದು, ಹಾಜರಿರುವುದು(ಭಗ)

ಉವಟ್ಠಾಣ. ನ: [ಉಪಸ್ಥಾನ] ಕುಳಿತುಕೊಳ್ಳುವುದು (ಣಾಯಾ), ವ್ರತವನ್ನು ಸ್ಥಾಪಿಸುವುದು, ಒಂದೇ ಸ್ಥಳದಲ್ಲಿ ವಿಶೇಷ ಕಾಲದ ವರೆಗೂ ಇರುವುದು, ಅನುಷ್ಠಾನ, ಆಚಾರ. **–ದೋಸ.** ಪು: [–ದೋಷ] ನಿತ್ಯ ವಾಸದ ದೋಷ, **–ಸಾಲಾ.** ಸ್ತ್ರೀ: [–ಶಾಲಾ] ಆಸ್ಥಾನ ಮಂಟಪ, ಸಭಾ ಸ್ಥಾನ

ಉವಟ್ಠಾಣಾ. ಸ್ತ್ರೀ: [ಉಪಸ್ಥಾನಾ] ಜೈನ ಸಾಧುಗಳು ಒಂದು ಬಾರಿ ಅಲ್ಲಿ ತಂಗಿದ್ದರೂ ಶಾಸ್ತ್ರ ನಿಷಿದ್ಧ. ಅವಧಿಗೆ ಮುನ್ನವೇ ಬಂದು ತಂಗುವ ಸ್ಥಳ (ವವ)

ಉವಟ್ಠಾವ. 'ಉವಟ್ಠವ' ಶಬ್ದವನ್ನು ನೋಡುವುದು

ಉವಟ್ಠಾವಣಾ. 'ಉವಟ್ಠವಣಾ' ಶಬ್ದವನ್ನು ನೋಡುವುದು (ಬೃಹ)

ಉವಟ್ಠಿಯ. ವಿ: [ಉಪಸ್ಥಿತ] ಲಬ್ಧವಾದ, ಪ್ರಾಪ್ತವಾದ, (ಉತ್ತ) ಹತ್ತಿರಕ್ಕೆ ಬಂದಿರುವ, ಸಮೀಪದಲ್ಲಿರುವ, ಸಿದ್ಧವಾಗಿರುವ(ಧರ್ಮ), ಆಶ್ರಯ ಪಡೆದಿರುವ, ಮುಮುಕ್ಷು, ಸನ್ಯಾಸ ತೆಗೆದುಕೊಳ್ಳಲು ಸಿದ್ಧವಾಗಿರುವ

ಉವಡಹಿತ್ತು. ವಿ: [ಉಪದಹಿತೃ] ಸುಡುವವನು, ದಹಿಸುವ(ಸೂಅ)

ಉವಡಿಅ. ವಿ: [ದೇ] ತಲೆ ಬಾಗಿರುವ, ನಮಿಸಿರುವ

ಉವಣಗರ. ನ: [ಉಪನಗರ] ಉಪನಗರ, ಶಾಖಾ ನಗರ

ಉವಣಚ್ಚ. ಸಕ: [ಉಪ+ನರ್ತಯ್] ನೃತ್ಯ ಮಾಡಿಸು, ನಾಟ್ಯ ಮಾಡಿಸು(ಔಪ)

ಉವಣದ್ಧ. ವಿ: [ಉಪನದ್ಧ] ಘಟಿಸಿದ, ನಡೆದುಹೋದ

ಉವಣಮ. ಸಕ: [ಉಪ+ನಮ್] ತಂದು ಇಡುವುದು, ಹಾಜರುಪಡಿಸು, ಪಡೆದುಕೊಳ್ಳು

ಉವಣಮಿಯ. ವಿ: [ಉಪನಮಿತ] ಹತ್ತಿರಕ್ಕೆ ತಂದಿಡಲಾದ, ನೆನಪಿಗೆ ತರಲ್ಪಟ್ಟ(ಸಣ)

ಉವಣಯ. ವಿ: [ಉಪನತ] ಸನ್ನಿಹಿತವಾದ, ಹತ್ತಿರಕ್ಕೆ ಬಂದಿರುವ, ಪ್ರಾಪ್ತವಾದ

ಉವಣಯ. ಪು: [ಉಪನಯ] ಉಪಸಂಹಾರ, ಸಮಾಪ್ತಿಗೊಳಿಸುವುದು, ದೃಷ್ಟಾಂತದ ಅರ್ಥವನ್ನು ಪ್ರಕೃತಕ್ಕೆ ಜೋಡಿಸುವುದು, ಪ್ರಶಂಸೆ(ವಿಸೇ), ಮುಖ್ಯ ನೀತಿಗೆ ಅಂಗವಾದ ನೀತಿ(ರಾಜ), ಉಪನಯನ ಸಂಸ್ಕಾರ, ಕಾಣಿಕೆ

ಉವಣಯಣ. ನ: [ಉಪನಯನ] ಯಜ್ಞೋಪವೀತ ಸಂಸ್ಕಾರ(ಮುಂಜಿ)(ಪಣ್ಣ), ಉಪಸಂಹಾರ, ಹತ್ತಿರಕ್ಕೆ ತಂದಿಡುವುದು.

ಉವಣೆಅ. 'ಉವಣೇಯ' ಶಬ್ದವನ್ನು ನೋಡುವುದು

ಉವಣಿಕ್ಖಿತ್ತ. ವಿ: [ಉಪನಿಕ್ಷಿಪ್ತ] ಸರಿಯಾದ ರೀತಿಯಲ್ಲಿ ಸಿದ್ಧಪಡಿಸಲ್ಪಟ್ಟ(ಆಚಾ)

ಉವಣಿಕ್ಖೇವ. ಪು: [ಉಪನಿಕ್ಷೇಪ] ಅಡವಿಟ್ಟದ್ದು, ರಕ್ಷಣೆಗಾಗಿ ಮತ್ತೊಬ್ಬರ ವಶದಲ್ಲಿ ಇಡಲಾದ ಹಣ(ವವ)

ಉವಣಿಗ್ಗಮ. ಪು: [ಉಪನಿರ್ಗಮ] ಬಾಗಿಲು(ಸೇ), ಉಪವನ, ತೋಟ(ಗಉಡ)

ಉಪಣಿಗ್ಗಯ. ವಿ: [ಉಪನಿರ್ಗತ] ಸಮೀಪದಲ್ಲಿ ಹೊರಟಿರುವ, ಹತ್ತಿರದಲ್ಲಿ ಹೊಮ್ಮಿರುವ(ಔಪ)

ಉವಣಿಜ್ಜಂತ. 'ಉವಣಿ' ಶಬ್ದವನ್ನು ನೋಡುವುದು

ಉವಣಿಮಂತ. ಸಕ: [ಉಪನಿ+ಮಂತ್ರಯ್] ಆಹ್ವಾನ ನೀಡು(ಭ)

ಉವಣಿವಾಯ. ಪು: [ಉಪನಿಪಾತ] ಸಂಬಂಧ

ಉವಣಿಮಂತಣ. ನ: [ಉಪನಿಮಂತ್ರಣ] ಆಹ್ವಾನ (ಭಗ)

ಉವಣಿವಿಟ್ಟ. ವಿ: [ಉಪನಿವಿಷ್ಟ] ಹತ್ತಿರದಲ್ಲಿರುವ (ರಾಯ)

ಉವಣಿಸಆ. ಸ್ತ್ರೀ: [ಉಪನಿಷತ್] ವೇದಾಂತ ಶಾಸ್ತ್ರ, ಈಶ, ಕೇನ ಕಠ ಮೊದಲಾದ ಉಪನಿಷತ್ತುಗಳು, ವೇದಾಂತ ರಹಸ್ಯ

ಉವಣಿಹಾ. ಸ್ತ್ರೀ: [ಉಪನಿಧಾ] ಬಾಣ, ಯಾಚಕ, ಅನ್ವೇಷಣೆ, ಹುಡುಕುವುದು

ಉವಣಿಹಿ. ಪುಂಸ್ತ್ರೀ: [ಉಪನಿಧಿ] ಹತ್ತಿರಕ್ಕೆ ತರಲ್ಪಟ್ಟ, ನಿರ್ಮಿಸುವುದು, ವಿರಚನೆ(ಅಣು)

ಉವಣಿಹಿಅ. ವಿ: [ಔಪನಿಧಿಕ] ರಕ್ಷಣೆಗಾಗಿ ಮತ್ತೊಬ್ಬರಲ್ಲಿಡುವುದಕ್ಕೆ ಸಂಬಂಧಿಸಿದ್ದು. -ಆ. ಸ್ತ್ರೀ: [-ಕೀ] ಕ್ರಮ-ವಿಶೇಷ

ಉವಣಿಹಿಯ. ವಿ: [ಉಪನಿಹಿತ] ಸಮೀಪದಲ್ಲಿ ಸ್ಥಾಪಿಸಲಾದ, ಹತ್ತಿರದಲ್ಲಿ ಇರುವ(ಸೂಅ), -ಯ. ಪು: [-ಕ] ನಿಯಮ-ವಿಶೇಷವನ್ನು ಧಾರಣೆ ಮಾಡುವ ಭಿಕ್ಷು(ಸೂಅ)

ಉವಣೀ. ಸಕ: [ಉಪ+ನೀ] ಸಮೀಪಕ್ಕೆ ತರು, ಹಾಜರುಪಡಿಸು, ಅರ್ಪಿಸು, ಒಟ್ಟುಗೂಡಿಸು,

ಉವಣೀಅ. ನ: [ಉಪನೀತ] ಹತ್ತಿರಕ್ಕೆ ತರಲ್ಪಟ್ಟ. -ವಯಣ. ನ: [-ವಚನ] ಹೊಗಳಿಕೆಯ ಮಾತು

ಉವಣೀಯ. ವಿ: [ಉಪನೀತ] ಹತ್ತಿರಕ್ಕೆ ತರಲ್ಪಟ್ಟ, ಅರ್ಪಿಸಲಾದ, ಉಪನಯದಿಂದ ಕೂಡಿದ, ಪ್ರಶಸ್ತ, ಹೊಗಳಲ್ಪಟ್ಟ(ಆಚಾ), -ಚರಯ. ಪು: [-ಚರಕ] ವಿಶೇಷ ಮರ್ಯಾದೆಯನ್ನು ಧಾರಣೆ ಮಾಡುವ ಸಾಧು(ಔಪ)

ಉವಣ್ಣತ್ಥ. ವಿ: [ಉಪನ್ಯಸ್ತ] ವಿವರಿಸಿ ಹೇಳಲ್ಪಟ್ಟ, ರಕ್ಷಣೆಗಾಗಿ ಇಡಲ್ಪಟ್ಟ, ಸೂಚಿಸಲ್ಪಟ್ಟ

ಉವಣ್ಣಾಸ. ಪು: [ಉಪನ್ಯಾಸ] ವಾಕ್ಯದ ಪ್ರಾರಂಭ, ಮಾತಿನ ಆರಂಭ, ಪ್ರಸ್ತಾವನೆ, ದೃಷ್ಟಾಂತ(ದಸ), ರಚನೆ, ವಂದನೆಯ ಪ್ರಯೋಗ(ಪ್ರಯೌ)

ಉವತಲ. ನ: [ಉಪತಲ] ಅಂಗೈನ ನಾಲ್ಕೂ ಕಡೆಯ ಪಾರ್ಶ್ವಭಾಗ(ನಿಚೂ)

ಉವತಾವ. ಪು: [ಉಪತಾಪ] ಬಿಸಿ, ಕಾವು, ನೋವು, ಜ್ವರ(ಸೂಅ)

ಉವತಾವಿಯ. ವಿ: [ಉಪತಾಪಿತ] ನೋವಿಗೊಳಗಾದವನು, (=ಪೀಡಿತ), ಕಾಯಿಸಲ್ಪಟ್ಟ, ಬಿಸಿಮಾಡಲ್ಪಟ್ಟ

ಉವತ್ತ. ವಿ: [ಉಪಾತ್ತ] ಗೃಹೀತ, (ಪಉಮ), ಸ್ವೀಕರಿಸಲ್ಪಟ್ಟ, ಹಿಡಿಯಲ್ಪಟ್ಟ

ಉವತ್ಥಡ. ವಿ: [ಉಪಸ್ತೃತ] ಮೇಲೆಮೇಲೆ ಹೊದಿಸಲ್ಪಟ್ಟ, (ಭಗ)

ಉವತ್ಥಾಣಾ. 'ಉವಟ್ಠಾಣಾ' ಶಬ್ದವನ್ನು ನೋಡುವುದು

ಉವತ್ಥಿಯ. 'ಉವಟ್ಠಿಯ' ಶಬ್ದವನ್ನು ನೋಡುವುದು

ಉವತ್ಥು. ಸಕ: [ಉಪ+ಸ್ತು] ಸ್ತುತಿಸು, ಹೊಗಳು,

ಉವದಂಸ. ಸಕ: [ಉಪ+ದರ್ಶಯ್] ತೋರಿಸು, ತಿಳಿಯ ಹೇಳು

ಉವದಂಸ. ಪು: [ಉಪದಂಶ] ಒಂದು ರೋಗ, ಉಷ್ಣತೆ(ಜ್ವರ) ನೆಕ್ಕುವುದು (ಚಾರು)

ಉವದಂಸಣ. ನ: [ಉಪದರ್ಶನ] ತೋರಿಸುವುದು (ಸಣ), -ಕೂಡ. ಪು: [-ಕೂಟ] ನೀಲವಂತವೆಂಬ ಪರ್ವತದ ಒಂದು ಶಿಖರ(ಠಾ)

ಉವದಂಸಿಯ. ವಿ: [ಉಪದರ್ಶಿತ] ತೋರಿಸಲ್ಪಟ್ಟ, (ಸುಪಾ)

ಉವದಂಸಿರ. ವಿ: [ಉಪದರ್ಶಿನ್] ತೋರಿಸುವವನು

ಉವದವ. ಪು: [ಉಪದ್ರವ] ತೊಂದರೆ, ಪೀಡೆ, ವಿವಾದ, ಜಗಳ

ಉವದಾ. ಸ್ತ್ರೀ: [ಉಪದಾ] ಕಾಣಿಕೆ, ನಜರು(ರಂಭಾ)

ಉವದಾಈ. ಸ್ತ್ರೀ: [ಉದಕದಾಇಕಾ] ನೀರು ಕೊಡುವವಳು(ಣಾಯಾ)

ಉಪದಾಣ. ನ: [ಉಪದಾನ] ಕಾಣಿಕೆ, ನಜರು

ಉವದಿಸ. ಸಕ: [ಉಪ+ದಿಶ್] ಉಪದೇಶಿಸು (ಕಪ್ಪ)
ಉವದೀವ. ನ: [ದೇ] ಬೇರೊಂದು ದ್ವೀಪ, ದ್ವೀಪಾಂತರ
ಉವದೇಸಗ.ವಿ: [ಉಪದೇಶಕ] ವ್ಯಾಖ್ಯಾನಿಸುವವನು, ಉಪಾಧ್ಯಾಯ, ಶಿಕ್ಷಕ(ಔಪ)
ಉವದೇಸಣಯಾ. 'ಉವವಿಸಣಯಾ' ಶಬ್ದವನ್ನು ನೋಡುವುದು
ಉವದೇಸಿ. ವಿ: [ಉಪದೇಶಿನ್] ಉಪದೇಶಕ(ಚಾರು)
ಉವದೇಹೀ. ಸ್ತ್ರೀ: [ಉಪದೇಹಿಕಾ] ಕ್ಷುದ್ರಜಂತು, ಗೆದ್ದಲು ಹುಳು
ಉವದ್ದವ. ಸಕ: [ಉಪ+ದ್ರು]ತೊಂದರೆ ಕೊಡು, ಪೀಡಿಸು
ಉವದ್ದವ. 'ಉವದವ' ಶಬ್ದವನ್ನು ನೋಡುವುದು
ಉವದ್ದವಣ. ನ: [ಉಪದ್ರವಣ] ಉಪದ್ರವ ಉಂಟು ಮಾಡುವುದು, ತೊಂದರೆ ಕೊಡುವುದು(ಧರ್ಮ)
ಉವದ್ದವಿಯ.ವಿ:[ಉಪದ್ರುತ] ವ್ಯಗ್ರಗೊಳಿಸಲ್ಪಟ್ಟ(ಭತ್ತ)
ಉವಧಾಉ. ಪು: [ಉಪಧಾತು] ನಿಕೃಷ್ಟವಾದ ಲೋಹ
ಉವಧಾರಣಯಾ. ಸ್ತ್ರೀ: [ಉಪಧಾರಣಾ] ಗ್ರಹಿಕೆ, ಮನಸ್ಸಿನಲ್ಲಿ ಹಿಡಿದ ಭಾವ(ತಾ), ಧಾರಣ ಮಾಡುವುದು
ಉವಧಾರಿಯ. ವಿ: [ಉಪಧಾರಿತ] ಗ್ರಹಿಸಲ್ಪಟ್ಟ(ಭಗ)
ಉವನಂದ. ಪು: [ಉಪನಂದ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನಮುನಿ
ಉವನಂದ. ಸಕ: [ಉಪ+ನಂದ್] ಅಭಿನಂದಿಸು(ಕಪ್ಪ)
ಉವನಯರ. 'ಉವಣಯರ' ಶಬ್ದವನ್ನು ನೋಡುವುದು
ಉವನಿಕ್ಖಿತ್ತ. 'ಉವಣಿಕ್ಖಿತ್ತ' ಶಬ್ದವನ್ನು ನೋಡುವುದು
ಉವನಿಕ್ಖೇವ. ಸಕ: [ಉಪನಿ+ಕ್ಷೇಪಯ್] ರಕ್ಷಣೆಗಾಗಿ ಬೇರೆಯವರ ಹತ್ತಿರ ನಮ್ಮ ವಸ್ತುವನ್ನು ಅಡವಿಡುವುದು ಸ್ಥಾಪಿಸು
ಉವನಿಗ್ಗಯ. 'ಉವಣಿಗ್ಗಯ' ಶಬ್ದವನ್ನು ನೋಡುವುದು
ಉವನಿಬಂಧಣ. ನ: [ಉಪನಿಬಂಧನ] ಸಂಬಂಧ, ವಿ: ಸಂಬಂಧಕಾರಣ, ನಿಯಮ, ಕಟ್ಟಳೆ
ಉವನಿವಿಟ್ಠ. ವಿ: [ಉಪನಿವಿಷ್ಟ] ಸಮೀಪದಲ್ಲಿ ಇರುವ
ಉವನಿಮಂತ. 'ಉವಣಿಮಂತ' ಶಬ್ದವನ್ನು ನೋಡುವುದು
ಉವನಿಹಿಯ. ವಿ: [ಔಪನಿಧಿಕ] 'ಉವಣಿಹಿಯ' ಶಬ್ದವನ್ನು ನೋಡುವುದು
ಉವನ್ನತ್ಥ. ವಿ: [ಉಪನ್ಯಸ್ತ] ಸ್ಥಾಪಿತ, ವಿವರಿಸಿ ಹೇಳಲ್ಪಟ್ಟ
ಉವನ್ನಾಸ. ಪು: [ಉಪನ್ಯಾಸ] ನಿವೇದನೆ
ಉವಪ್ಪದಾಣ.} ನ: [ಉಪಪ್ರದಾನ] ನೀತಿ–ವಿಶೇಷ,
ಉವಪ್ಪಯಾಣ.} ದಾಮ–ನೀತಿ, ಒಪ್ಪಲಾದ ಹಣ ನೀಡುವುದು(ತೆರಿಗೆ ಇತ್ಯಾದಿ)(ವಿಪಾ)
ಉವಪ್ಪುಯ. ವಿ: [ಉಪಪ್ಲುತ] ಭಯದಿಂದ ವ್ಯಾಪಿಸಲ್ಪಟ್ಟ, ಹಿಂಸಿಸಲ್ಪಟ್ಟ
ಉವಭುಂಜ್. ಸಕ: [ಉಪ+ಭುಜ್] ಉಪಭೋಗಿಸು
ಉವಭುಂಜಣ. ನ: [ಉಪಭೋಜನ] ಉಪಭೋಗ, ತಿನ್ನಲು ಯೋಗ್ಯವಾದ, ಅನುಭವಿಸಲು ಯೋಗ್ಯವಾದ
ಉಪಭುತ್ತ. ವಿ: [ಉಪಭುಕ್ತ] ಉಪಯೋಗಿಸಲ್ಪಟ್ಟ, ಅನುಭವಿಸಲ್ಪಟ್ಟ(ವವ) ತಿನ್ನಲ್ಪಟ್ಟ, ಅಧಿಕೃತ (ಉಪ)
ಉವಭೋಗ. ಪು: [ಉಪಭೋಗ] ಒಂದು ವಾರ ವಿಷಯಾನುಭವ, ಅಂತರಂಗ ಭೋಗ, ಧಾರಣ ಮಾಡುವುದು
ಉವಭೋಅ.} ಪು: [ಉಪಭೋಗ] ಭೋಜನದ
ಉವಭೋಗ.} ಹೊರತಾದ ಭೋಗ, ವಿಷಯಾನುಭವ, ಮತ್ತೆ ಮತ್ತೆ ಅನುಭವಿಸುವ ವಸ್ತ್ರ, ಗೃಹ ಇತ್ಯಾದಿಗಳು(ಉತ್ತ), ಒಮ್ಮೆ ಸವಿಯುವಂಥ ಅನ್ನಾಹಾರ ಇತ್ಯಾ(ಭಗ)
ಉವಭೋಗ್ಗ}. ವಿ: [ಉಪಭೋಗ್ಯ] ಅನುಭವಿಸಲು
ಉವಭೋಜ್ಜ}. ಯೋಗ್ಯವಾದ(ಬೃಹ)
ಉವಮಾ. ಸ್ತ್ರೀ: [ಉಪಮಾ] ಸಾದೃಶ್ಯ, ಹೋಲಿಕೆ, ದೃಷ್ಟಾಂತ, ತನ್ನ ಹೆಸರಿನಿಂದ ಖ್ಯಾತಳಾದ ಒಬ್ಬ ಇಂದ್ರಾಣಿ(ತಾ), ತಿನ್ನಲು ಯೋಗ್ಯವಾದ ಪದಾರ್ಥ(ಜೀವ), ಪ್ರಶ್ನ–ವ್ಯಾಕರಣ ಸೂತ್ರದ ಒಂದು ಲುಪ್ತ ಅಧ್ಯಯನ, ಅರ್ಥಾಲಂಕಾರ–ವಿಶೇಷ, ಪ್ರಮಾಣ–ವಿಶೇಷ, ಉಪಮಾನ–ಉಪಮೇಯಗಳ ಸಾಧಾರಣ ಧರ್ಮ, ಉಪಮಾನ–ಪ್ರಮಾಣ
ಉವಮಾಣ. ನ: [ಉಪಮಾನ] ಸಾದೃಶ್ಯ, ಹೋಲಿಕೆ, ಯಾವುದಕ್ಕೆ ಹೋಲಿಸಲಾಗುತ್ತದೋ ಅದು (ಹೋಲಿಕೆಯ ವಸ್ತು), ಪ್ರಮಾಣ–ವಿಶೇಷ)
ಉವಮಾಲಿಯ. ವಿ: [ಉಪಮಾಲಿತ] ಅಲಂಕೃತಗೊಂಡ
ಉವಮಿಯ. ವಿ: [ಉಪಮಿತ] ಯಾವುದನ್ನು ಹೋಲಿಸಲಾಗಿದೆಯೋ ಅದು, ಹೋಲಿಸಲ್ಪಟ್ಟದ್ದು, ನ: ಉಪಮಾ.

ಉವಮೇಅ. ವಿ: [ಉಪಮೇಯ] ಪ್ರಸಿದ್ಧವಾದ ಒಂದು ವಸ್ತುವಿನೊಂದಿಗೆ ಹೋಲಿಸಲ್ಪಡುವ ವಸ್ತು(ಮೈ)
ಉವಯ. ಪು: [ದೇ] ಆನೆಯನ್ನು ಹಿಡಿಯುವ ಖೆಡ್ಡಾ
ಉವಯ. 'ಓವಯ' ಶಬ್ದವನ್ನು ನೋಡುವುದು
ಉವಯ. (ಅಪ). 'ಉದಯ' ಶಬ್ದವನ್ನು ನೋಡುವುದು
ಉವಯರ. ಸಕ: [ಉಪ+ಕೃ] ಉಪಕಾರ ಮಾಡು- ವ. ಕೃ-ಉವಯರಿಯವ್ವ(ಸುಪಾ)
ಉವಯರ. ಸಕ: [ಉಪ+ಚರ್] ಆರೋಪಮಾಡು, ಭಕ್ತಿ ತೋರಿಸು, ಕಲ್ಪನೆಮಾಡು, ಶುಶ್ರೂಷೆಮಾಡು, ಚಿಕಿತ್ಸೆಮಾಡು
ಉವಯರಣ. ನ: [ಉಪಕರಣ] ಸಾಧನ, ಸಲಕರಣೆ, ಉಪಕಾರ (ಸತ್ತ)
ಉವಯರಿಯ. ವಿ: [ಉಪಕೃತ] ಉಪಕಾರ, ನೆರವು, ಉಪಕಾರ ಮಾಡಲ್ಪಟ್ಟವನು
ಉವಯರಿಯ. ವಿ: [ಉಪಚರಿತ] ಆರೋಪಿತ, ಆರೋಪಿಸಲ್ಪಟ್ಟ (ವಿಸೇ)
ಉವಯರಿಯಾ. ಸ್ತ್ರೀ: [ಉಪಚಾರಿಕಾ] ದಾಸಿ(ಉಪ)
ಉವಯಾ. ಸಕ: [ಉಪ+ಯಾ] ಹತ್ತಿರಕ್ಕೆ ಹೋಗು- ಉವಯಂತಿ
ಉವಯಾಇಯ. ವಿ: [ಉಪಯಾಚಿತ] ಹತ್ತಿರಕ್ಕೆ ಬಂದು ಪ್ರಾರ್ಥಿಸಲ್ಪಟ್ಟ, ಯಾಚಿಸಲ್ಪಟ್ಟ, ನ: ವಿನಂತಿ, ಯಾವುದಾದರೂ ಕೆಲಸ ಈಡೇರಿದ ಮೇಲೆ ಯಾವುದಾದರೂ ದೇವತೆಯನ್ನು ವಿಶೇಷವಾಗಿ ಆರಾಧಿಸಬೇಕೆಂದು ಮಾನಸಿಕ ಸಂಕಲ್ಪ ಮಾಡುವುದು(ಣಾಯಾ)
ಉವಯಾಣ. ನ: [ಉಪಯಾನ] ಸಮೀಪಕ್ಕೆ ಬರುವುದು(ಸೂಅ)
ಉವಯಾರ. ಪು: [ಉಪಕಾರ] ನೆರವು, ಸಹಾಯ, ಒಳಿತು(ಗಲುಡ)
ಉವಯಾರ. ಪು: [ಉಪಚಾರ] ಪೂಜೆ, ಸೇವೆ, ಆದರ, ಚಿಕಿತ್ಸೆ, ಶುಶ್ರೂಷೆ, ಶಬ್ದ-ಶಕ್ತಿ ವಿಶೇಷ, ಅಧ್ಯಾರೋಪ, ವ್ಯವಹಾರ, ಕಲ್ಪನೆ, ಆದೇಶ (ಆವಮ)
ಉವಯಾರಗ. ವಿ: [ಉಪಚಾರಕ] ಶುಶ್ರೂಷೆ ಮಾಡುವವನು(ನಿಚೂ)
ಉವಯಾರಣ. ನ: [ಉಪಕಾರಣ] ಅನ್ಯರ ಮೂಲಕ ಉಪಕಾರ ಮಾಡುವುದು(ಪಣ್ಣ)
ಉವಯಾರಯ. ವಿ: [ಉಪಕಾರಕ] ಉಪಕಾರ ಮಾಡುವವನು
ಉವಯಾರಿ. ವಿ: [ಉಪಕಾರಿನ್] ಉಪಕಾರ ಮಾಡುವವನು
ಉವಯಾರಿಅ. ವಿ: [ಔಪಚಾರಿಕ] ಉಪಚಾರಕ್ಕೆ (ಉಪಚಾರ, ಶುಶ್ರೂಷೆ) ಸಂಬಂಧಿಸಿದ, ಲಾಕ್ಷಣಿಕ: ಮುಖ್ಯವಲ್ಲದ ಅರ್ಥದಲ್ಲಿ ಮುಖ್ಯಾರ್ಥದ ಸಾದೃಶ್ಯದಿಂದ ಪ್ರಯೋಗಿಸಲ್ಪಡುವ ಪದ
ಉವಯಾಲಿ. ಪು: [ಉಪಜಾಲಿ] ವಸುದೇವನ ಮಗನಾದ ಒಬ್ಬ ಮುನಿ. ಇವನು ಭಗವಾನ್ ನೇಮಿನಾಥರಿಂದ ದೀಕ್ಷೆ ತೆಗೆದುಕೊಂಡು ಶತ್ರುಂಜಯದ ಮೇಲೆ ಮುಕ್ತಿ ಹೊಂದಿದ್ದನು. ಶ್ರೇಣಿಕ ಮಹಾರಾಜನಿಗೆ ಈ ಹೆಸರಿನ ಒಬ್ಬ ಮಗನಿದ್ದ. ಇವನು ಮಹಾವೀರ ತೀರ್ಥಂಕರರಿಂದ ದೀಕ್ಷೆ ತೆಗೆದುಕೊಂಡು ಅನುತರ ವಿಮಾನದಲ್ಲಿ ದೇವಗತಿಯನ್ನು ಹೊಂದಿದ್ದನು.
ಉವರಇ. ಸ್ತ್ರೀ: [ಉಪರತಿ] ಕೆಲಸದಿಂದ ವಿಶ್ರಾಂತಿ ಹೊಂದುವುದು(ವಿಸೇ)
ಉವರಂಜ. ಸಕ: [ಉಪರಂಜ್] ಹಿಡಿದುಕೊಳ್ಳು
ಉವರಗ. [ಓಅರಯ] ಶಬ್ದವನ್ನು ನೋಡುವುದು.
ಉವರತ್ತ. ವಿ: [ಉಪರಕ್ತ] ಅನುರಕ್ತ, ಬಣ್ಣದಿಂದ ಕೂಡಿರುವ, ರಾಹುವಿನಿಂದ ಹಿಡಿಯಲ್ಪಟ್ಟ, ಮ್ಲಾನ, ವ್ಯಸನದಿಂದಿರುವ
ಉವರಮ. ಅಕ: [ಉಪ+ರಮ್] ವಿಶ್ರಾಂತಿ ಹೊಂದು, ಕೆಲಸದಿಂದ ನಿವೃತ್ತನಾಗು
ಉವರಮ. ಪು: [ಉಪರಮ] ಕೆಲಸದಿಂದ ನಿವೃತ್ತಿ, ವಿಶ್ರಾಂತಿ, ನಾಶ(ವಿಸೇ)
ಉವರಯ. ವಿ: [ಉಪರತ] ನಿವೃತ್ತನಾದ, ಮೃತನಾದ(ಆಚಾ)
ಉವರಯ. 'ಉವರಗ' ಶಬ್ದವನ್ನು ನೋಡುವುದು
ಉವರಲ. (ಅಪ). 'ಉವ್ವರಿಯ' ಶಬ್ದವನ್ನು ನೋಡುವುದು
ಉವರಾಗ.} ಪು: [ಉಪರಾಗ] ರಾಹುವಿನಿಂದ
ಉವರಾಯ.} ಸೂರ್ಯ ಅಥವಾ ಚಂದ್ರ ಗ್ರಹಣ (ಪಣ್ಣ)

ಉಪರಾಯ. ಪು: [ಉಪರಾತ್ರ] ದಿನ, ಹಗಲು
ಉವರಿ. ಅ: [ಉಪರಿ] ಮೇಲೆ, ಮೇಲುಗಡೆ(ಉವ). **–ಭಾಸಾ.** ಸ್ತ್ರೀ: [–ಭಾಷಾ] ಗುರು ಮಾತನಾಡಿದ ನಂತರವೇ ವಿಶೇಷ ಮಾತನಾಡುವುದು. **–ಮ, –ಮಗ, –ಮಯ, ಲ್ಲ.** ವಿ: [–ತನ] ಮೇಲುಗಡೆಯ, ಮೇಲುಗಡೆ ಇರುವ(ಸಮು)**–ಹುತ್ತ.** ವಿ: [–ಅಭಿಮುಖ] ಮೇಲು ಭಾಗದ ಕಡೆಗೆ, ಮೇಲಿನತ್ತ
ಉವರಿಂ. ಮೇಲಿನ ಶಬ್ದವನ್ನು ನೋಡುವುದು
ಉವರಿತಣ. 'ಉವರಿ–ಮ' ಶಬ್ದವನ್ನು ನೋಡುವುದು
ಉವರುಂಧ. ಸಕ: [ಉಪ+ರುಧ್] ತಡೆಗಟ್ಟು, ಅಡ್ಡಿಪಡಿಸು, ಅಡಚಣೆ ಉಂಟುಮಾಡು, ಪ್ರತಿಬಂಧಿಸು
ಉವರುದ್ದ ಪು: [ಉಪರುದ್ರ] ನರಕ ಜೀವಿಗಳಿಗೆ ದುಃಖವನ್ನುಂಟುಮಡುವ ಪರಮ ಅಧಾರ್ಮಿಕ ದೇವರುಗಳ ಒಂದು ಜಾತಿ
ಉವರುದ್ಧ. ವಿ: [ಉಪರುದ್ಧ] ರಕ್ಷಿಸಲ್ಪಟ್ಟ, ತಡೆಯಲ್ಪಟ್ಟ, ಪ್ರತಿಬಂಧಿಸಲ್ಪಟ್ಟ
ಉವರೋಹ. ಸಕ: [ಉಪ+ರೋಧಯ್] ಅಡಚಣೆ ಮಾಡು, ತಡೆ
ಉವರೋಹ. ಪು: [ಉಪರೋಧ] ಅಡಚಣೆ, ಅಡ್ಡಿ (ವಿಸೇ), ತೊಡಕು, ಆಕ್ರಮಣ, ಮುತ್ತಿಗೆ, ನಿರ್ಬಂಧ
ಉವರೋಹಿ. ವಿ: [ಉಪರೋಧಿನ್] ಅಡಚಣೆ ಉಂಟು ಮಾಡುವವನು, ಅಡ್ಡಿ ಉಂಟುಮಾಡುವವನು
ಉವರೋಹಿಅ. ವಿ: [ಉಪರೋಧಿತ] ನಿರ್ಬಂಧ ಪಡಿಸಲಾದ
ಉವಲ. ಪು: [ಉಪಲ] ಕಲ್ಲು, ಬಂಡೆ, ಚಾಣ, ಉಳಿ ಮುಂತಾದವುಗಳನ್ನು ಹರಿತ ಮಾಡುವ ಬೆಣಚುಕಲ್ಲು ಮುಂತಾದವು
ಉವಲಂಬಣ. ಪು: [ಉಪಲಂಬನ] ಚೈನು ಹೊಂದಿರುವ ಒಂದು ಬಗೆಯ ದೀಪ(ಅನು)
ಉವಲಂಭ. ಸಕ: [ಉಪಲಭ್] ಹೊಂದು, ಪಡೆ, ತಿಳಿದುಕೊಳ್ಳು, ನಿಂದಿಸು
ಉವಲಂಭ. 'ಉವಾಲಂಭ=ಉಪಾಲಂಭ' ಶಬ್ದವನ್ನು ನೋಡುವುದು
ಉವಲಂಭ. ಪು: [ಉಪಲಂಭ] ಲಾಭ, ಪ್ರಾಪ್ತಿ, ಪಡೆಯುವುದು(ಸುಪಾ), ಜ್ಞಾನ, ನಿಂದೆ, ಬೈಗಳು
ಉವಲಂಭಣ. ನ: [ಉಪಲಂಭನ] ಪ್ರಾಪ್ತಿ, ಲಾಭ, ಪಡೆಯುವುದು
ಉವಲಂಭಣಾ. ಸ್ತ್ರೀ: [ಉಪಲಂಭನಾ] ನಿಂದಿಸುವುದು, ಬಯ್ಯುವುದು(ಣಾಯಾ)
ಉವಲಕ್ಖ. ಸಕ: [ಉಪ+ಲಕ್ಷ ಯ್] ತಿಳಿದುಕೊಳ್ಳು, ಗುರುತಿಸು
ಉವಲಕ್ಖಣ. ನ: [ಉಪಲಕ್ಷಣ] ಗುರುತು(ಸುಪಾ) ಅನ್ಯಾರ್ಥ ಬೋಧಕ ಸಂಕೇತ
ಉವಲಕ್ಖಿಅ. ವಿ: [ಉಪಲಕ್ಷಿತ] ಗುರುತು ಹಿಡಿಯಲ್ಪಟ್ಟ, ಪರಿಚಿತ
ಉವಲಗ್ಗ. ವಿ: [ಉಪಲಗ್ನ] ಕೂಡಿಕೊಂಡ, ಸೇರಿಕೊಂಡ, ಅಂಟಿಕೊಂಡ(ಕಪ್ಪ)
ಉವಲದ್ಧ. ವಿ: [ಉಪಲಬ್ಧ] ಪಡೆಯಲಾದ, ಪ್ರಾಪ್ತ, ತಿಳಿಯಲ್ಪಟ್ಟ, ಉಪಾಲಬ್ಧ: ನಿಂದಿಸಲ್ಪಟ್ಟ, ಬೈಯಲ್ಪಟ್ಟ
ಉವಲದ್ಧಿ. ಸ್ತ್ರೀ: [ಉಪಲಬ್ಧಿ] ಲಾಭ, ಪ್ರಾಪ್ತಿ, ಜ್ಞಾನ, ತಿಳಿವಳಿಕೆ, ಜ್ಞಾನ
ಉವಲದ್ಧು. ವಿ: [ಉಪಲಬ್ಧೃ] ಗ್ರಹಿಸುವವನು, ತಿಳಿಯುವವನು(ವಿಸೆ)
ಉವಲಭ. 'ಉವಲಂಭ=ಉಪ+ಲಭ್' ಶಬ್ದವನ್ನು ನೋಡುವುದು
ಉವಲಭತ್ತಾ.} ಸ್ತ್ರೀ: [ದೇ] ಬಳೆ (ದೇ)
ಉವಲಯಭಗ್ಗಾ.}
ಉವಲಲ. ಅಕ: [ಉಪ+ಲಲ್] ಕ್ರೀಡಿಸು, ಮುದ್ದಾಡುವುದು, ಪ್ರೀತಿಸು
ಉವಲಲಯ. ನ: [ದೇ] ಸುರತ, ಮೈಥುನ
ಉವಲಲಿಯ. ನ: [ಉಪಲಲಿತ] ಕ್ರೀಡೆ(ಣಾಯಾ)
ಉವಲಾ. ಸಕ: [ಉಪ+ಲಾ] ಗ್ರಹಿಸು, ಆಶ್ರಯಿಸು,
ಉವಲಿ. 'ಉವಲ್ಲಿ' ಶಬ್ದವನ್ನು ನೋಡುವುದು
ಉವಲಿಂಪ. ಸಕ: [ಉಪ+ಲಿಪ್] ಬಳಿ, ಲೇಪಿಸು, ಸಾರಿಸು, ಚಂಬಿಸು
ಉವಲಿತ್ತ. ವಿ: [ಉಪಲಿಪ್ತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ, ಸಾರಿಸಲಾದ(ಣಾಯಾ)
ಉವಲೀಣ. 'ಉವಲ್ಲೀಣ' ಶಬ್ದವನ್ನು ನೋಡುವುದು
ಉವಲುಅ. ವಿ: [ದೇ] ನಾಚಿಕೆಯಿಂದ ಕೂಡಿದ, ಲಜ್ಜಾಯುಕ್ತ(ದೇ)

ಉವಲೇವ. ಪು: [ಉಪಲೇಪ] ಬಳಿಯುವುದು, ಕರ್ಮಬಂಧ(ಔಪ), ಒಟ್ಟಿಗೆ ಸೇರಿಕೊಂಡಿರುವುದು, ಸಂಬಂಧ(ಆಚಾ), ಒಂದು ಭಾಗದಲ್ಲಿ ಮಾತ್ರ ಸೇರಿರುವುದು, ಆಲಿಂಗನ (ಸೂಅ)

ಉವಲೇವಣ. ನ: [ಉಪಲೇಪನ] ಮೇಲಿನ ಶಬ್ದವನ್ನು ನೋಡುವುದು

ಉವಲೇವಿಯ. ವಿ: [ಉಪಲೇಪಿತ] ಬಳಿದ, ಲೇಪಿಸಿದ, ಸಾರಿಸಿದ(ಕಪ್ಪ)

ಉವಲೋಭ. ಸಕ: [**ಉಪ+ಲೋಭಯ್**] ಅತ್ಯಾಸೆ ಉಂಟುಮಾಡು, ದುರಾಸೆ ತೋರು

ಉವಲೋಹಿಯ. ವಿ: [**ಉಪಲೋಭಿತ**] ಯಾರಿಗೆ ದುರಾಸೆ ತೋರಿಸಲಾಗಿದೆಯೋ ಅವನು(ಉಪ)

ಉವಲ್ಲಿ. ಸಕ: [ಉಪ+ಲೀ] ಇರು, ಅಸ್ತಿತ್ವದಿಂದಿರು, ಆಶ್ರಯಿಸು

ಉವಲ್ಲೀಣ. ವಿ: [ಉಪಲೀನ] ಇರುವ, ಗುಪ್ತವಾಗಿ ಇರುವ(ಆಚಾ)

ಉವವಇ. ಪು: [ಉಪಪತಿ] ಜಾರ

ಉವವಜ್ಜ. ಅಕ: [ಉಪ+ಪದ್] ಉತ್ಪನ್ನವಾಗು, ಯುಕ್ತವಾಗು, ಸಂಗತವಾಗು

ಉವವಜ್ಜಣ. ನ: [ಉಪವರ್ಜನ] ತ್ಯಾಗ,

ಉವವಜ್ಝ. ವಿ: [ಔಪವಾಹ್ಯ] ರಾಜರ ಪ್ರಧಾನಿ, ಸೇನಾಪತಿ ಮೊದಲಾದವರು

ಉವವಟ್ಟ. ಅಕ: [ಉಪ+ವೃತ್] ನಾಶವಾಗು, ಮೃತಿ ಹೊಂದು, ಒಂದು ಗತಿಯಿಂದ ಇನ್ನೊಂದು ಗತಿಗೆ ಸಾಗು

ಉವವಣ. ನ: [ಉಪವನ] ತೋಟ(ಣಾಯಾ)

ಉವವಣ. ವಿ: [ಉಪಪನ್ನ] ಉತ್ಪನ್ನ, ಸಂಗತ, ಯುಕ್ತ, ಪ್ರೇರಿಸಲ್ಪಟ್ಟ, ನ: ಉತ್ಪತ್ತಿ, ಹುಟ್ಟುವುದು(ಭಗ)

ಉವವತ್ತಿ. ಸ್ತ್ರೀ: [ಉಪಪತ್ತಿ] ಉತ್ಪತ್ತಿ, ಹುಟ್ಟು(ತಾ), ಯುಕ್ತಿ, ನ್ಯಾಯ(ಪಉಮ), ವಿಷಯ, ಕಾರಣ, ಹೊಂದಿಕೆ(ಆಚೂ)

ಉವವತ್ತು. ವಿ: [ಉಪಪತ್ತೃ] ಉತ್ಪನ್ನವಾಗುವಂಥದು

ಉವವನ್ನ. '**ಉವವಣ್ಣ**' ಶಬ್ದವನ್ನು ನೋಡುವುದು

ಉವವಯಣ. ನ: [ಉಪಪತನ] '**ಉವವಾಯ= ಉಪಪಾತ**' ಶಬ್ದವನ್ನು ನೋಡುವುದು

ಉವವಸಣ. ನ: [ಉಪವಸನ] ಉಪವಾಸ

ಉವವಾಇಯ. ವಿ: [ಔಪಪಾದಿಕ, ಔಪಪಾತಿಕ] ಉತ್ಪತ್ತಿಯಾಗುವಂಥ, ದೇವ ಅಥವಾ ನಾರಕ ರೂಪದಲ್ಲಿ ಹುಟ್ಟುವ

ಉವವಾಯ. ಸಕ: [**ಉಪ+ಪಾದಯ್**] ಸಂಪಾದಿಸು, ಅರ್ಜಿಸು

ಉವವಾಯ. ಪು: [**ಉಪ+ವಾದಯ್**] ವಾದ್ಯವನ್ನು ಬಾರಿಸುವುದು

ಉವವಾಯ. ಪು: [ಉಪಪಾತ] ದೇವ ಅಥವಾ ನಾರಕ ಜೀವದ ಉತ್ಪತ್ತಿ, ಸೇವೆ, ಆದರ, ವಿನಯ, ಆಜ್ಞೆ, ಹುಟ್ಟುವುದು, ಕಾಣಿಸಿಕೊಳ್ಳುವುದು, ಉಪಸಂಪಾದನೆ, ಹೊಂದುವುದು, ಸಂಪಾದಿಸುವುದು(ನಿಚೂ) **–ಕಪ್ಪ.** ಪು: [**–ಕಲ್ಪ**] ಸಾಧ್ವಾಚಾರ, ಹತ್ತಿರದಲ್ಲಿರುವವರೊಂದಿಗೆ ಇದ್ದುಕೊಂಡು ಸಂವಿಗ್ನ– ವಿಹಾರವನ್ನು ಪಡೆದುಕೊಳ್ಳುವುದು (ಪಂಚಭಾ), **–ಯ.** ವಿ: [–ಜ] ದೇವ ಅಥವಾ ನಾರಕ ಗತಿಯಲ್ಲಿ ಹುಟ್ಟಿದ ಜೀವ.

ಉವವಾಸ. ಪುಂನ: [ಉಪವಾಸ] ಉಪವಾಸ, ಆಹಾರ ಸೇವಿಸದಿರುವುದು, ಹಗಲು–ರಾತ್ರಿ ಊಟವಿಲ್ಲದಿರುವುದು(ಉವಾ)

ಉವವಾಸಿ. ವಿ: [ಉಪವಾಸಿನ್] ಉಪವಾಸ ಮಾಡಿದವನು

ಉವವಾಸಿಯ. ವಿ: [ಉಪವಾಸಿತ] ಉಪವಾಸ ಮಾಡಿದವ

ಉವವಿಅ. '**ಉವವೀಅ**' ಶಬ್ದವನ್ನು ನೋಡುವುದು

ಉಪವಿಟ್ಠ. ವಿ: [ಉಪವಿಷ್ಟ] ಕುಳಿತಿರುವ(ಆವಮ)

ಉವವಿಣಿಗ್ಗಯ. ವಿ: [ಉಪವಿನಿರ್ಗತ] ಸತತವಾಗಿ ಹೊರ ಬರುತ್ತಿರುವ(ಜೀವ)

ಉವವಿಸ. ಅಕ: [**ಉಪ+ವಿಶ್**] ಕುಳಿತುಕೊಳ್ಳು

ಉವವಿಸಣ. ನ: [ಉಪವೇಶನ] ಕುಳಿತುಕೊಳ್ಳುವುದು

ಉವವೀಅ. ನ: [ಉಪವೀತ] ಯಜ್ಞೋಪವೀತ, ಜನಿವಾರ(ಣಾಯಾ), ವಿ: ಸಹಿತ, ಯುಕ್ತ

ಉಪವೀಡ. ಅ: [ಉಪಪೀಡ] ಉಪಮರ್ದನ, ಉಜ್ಜುವುದು, ತಿಕ್ಕುವುದು, ಧಾನ್ಯಗಳ ಹೊಟ್ಟು ತೆಗೆಯುವುದು

ಉಪವೂಹ. ಸಕ: [ಉಪ+ಬೃಂಹ] ಪುಷ್ಟಿಗೊಳಿಸು, ಹೊಗಳು

ಉವವೂಹಣ. ನ: [ಉಪಬೃಂಹಣ] ವೃದ್ಧಿ, ಅಧಿಕವಾಗುವುದು, ಪ್ರಶಂಸಿಸುವುದು(ಪಂಚಾ)
ಉವವೂಹಾ. ಸ್ತ್ರೀ: [ಉಪಬೃಂಹಾ] ಮೇಲಿನ ಶಬ್ದವನ್ನು ನೋಡುವುದು
ಉವವೂಹಣೆಯ. ವಿ: [ಉಪಬೃಂಹಣೀಯ] ಪುಷ್ಟಿಕರ್ತ, ಸ್ತ್ರೀ: ಶಾಸನ ವಿಶೇಷ, ರಾಜರೇ ಮೊದಲಾದವರ ಭೋಜನ ಸಮಯದಲ್ಲಿ ಉಪಭೋಗಕ್ಕೆ ಒದಗುವ ಭೂಮಿ ಇತ್ಯಾದಿ ಉಂಬಳಿ, ಶಾಸನ
ಉವವೂಹಿಯ. ವಿ: [ಉಪವೃಂಹಿತ ವೃದ್ಧಿಯನ್ನು ಹೊಂದಿದ, ಹೊಗಳಲ್ಪಟ್ಟ
ಉವವೂಹಿರ. ವಿ: [ಉಪವೃಂಹಿನ್] ಪೋಷಕ, ಪುಷ್ಟಿಕಾರಕ, ಪ್ರಶಂಸಕ
ಉವೇಯ. ವಿ: [ಉಪೇತ] ಕೂಡಿಕೊಂಡು, ಸಹಿತ (ಣಾಯಾ)
ಉವಸಂಕಮ. ಸಕ: [ಉಪಸಂ+ಕ್ರಮ್] ಹತ್ತಿರಕ್ಕೆ ಬರು, ಸಮೀಪಿಸು
ಉವಸಂಖಡ. ಸಕ: [ಉಪಸಂ+ಕೃ] ಬೇಯಿಸು
ಉವಸಂಖಾ. ಸ್ತ್ರೀ: [ಉಪಸಂಖ್ಯಾ] ಇದ್ದಂತೆಯೇ ಇರುವ ಪದಾರ್ಥಗಳ ಜ್ಞಾನ(ಸೂಅ)
ಉವಸಂಗಹ. ಸಕ: [ಉಪಸಂ+ಗ್ರಹ್] ಉಪಕಾರ ಮಾಡು
ಉವಸಂಘರ. ಸಕ: [ಉಪಸಂ+ಹೃ] ಉಪಸಂಹರಿಸು, ಸಮಾಪ್ತಿಗೊಳಿಸು, ಹಿಂದಕ್ಕೆ ಎಳೆದುಕೊಳ್ಳು
ಉವಸಂಘರಿಯ. 'ಉವಸಂಹರಿಯ' ಶಬ್ದವನ್ನು ನೋಡುವುದು
ಉವಸಂಘಿಯ. ವಿ: [ಉಪಸಂಹೃತ] ಉಪ ಸಂಹರಿಸಲಾದ
ಉವಸಂಚಿ. ಸಕ: [ಉಪಸಂ+ಚಿ] ಸಂಚಯಿಸು
ಉವಸಂಠಿಯ. ವಿ: [ಉಪಸಂಸ್ಥಿತ] ಸಮೀಪದಲ್ಲಿ ಇರುವ, ಹತ್ತಿರಕ್ಕೆ ಬಂದಿರುವ, ಪ್ರಾಪ್ತವಾದ(ಸಣ)
ಉವಸಂತ. ವಿ: [ಉಪಶಾಂತ] ಕ್ರೋಧವೇ ಮೊದಲಾದ ವಿಕಾರಗಳಿಲ್ಲದ, ನಷ್ಟ, ಕಳೆದು ಹೋದ ಪು: ಐರಾವತ ಕ್ಷೇತ್ರದ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ತೀರ್ಥಂಕರ-ದೇವ. **-ಮೋಹ.** ಪು: [-ಮೋಹ] ಹನ್ನೊಂದನೆಯ ಗುಣ-ಸ್ಥಾನಕ
ಉವಸಂತಿ: ಸ್ತ್ರೀ: [ಉಪಶಾಂತಿ] ಉಪಶಮ(ಆಚಾ)
ಉವಸಂಧಾರಿಯ. ವಿ: [ಉಪಸಂಧಾರಿತ] ಸಂಕಲ್ಪ ಮಾಡಿದ
ಉವಸಂಪಜ್ಜ. ಅ: [ಉಪಸಂ+ಪದ್] ಹತ್ತಿರಕ್ಕೆ ಹೋಗುವುದು, ಸ್ವೀಕರಿಸುವುದು, ಪಡೆಯುವುದು, ವ. ಕೃ-ಉವಸಂಪಜ್ಜಂತ
ಉವಸಂಪಣ್ಣ. ವಿ: [ಉಪಸಂಪನ್ನ] ಪ್ರಾಪ್ತವಾದ, ಹತ್ತಿರಕ್ಕೆ ಹೋಗಿರುವ
ಉವಸಂಪಯಾ. ಸ್ತ್ರೀ: [ಉಪಸಂಪದ್] ಜ್ಞಾನವೇ ಮೊದಲಾದವನ್ನು ಗಳಿಸಲು ಬೇರೆ ಗುರುಗಳ ಬಳಿಗೆ ಹೋಗುವುದು, ಇತರೆ ಗುರುಗಳ ಅಧಿಕಾರವನ್ನು ಅಂಗೀಕರಿಸುವುದು, ಲಾಭ, ಪ್ರಾಪ್ತಿ(ಉತ್ತ)
ಉವಸಂಹರ. ಸಕ: [ಉಪಸಂ+ಹೃ] ದೂರಮಾಡು, ಸರಿಸು, ತೊಲಗಿಸು.
ಉವಸಂಹರಿಯ. ವಿ:[ಉಪಸಂಹೃತ] ಒಟ್ಟುಗೂಡಿಸಲ್ಪಟ್ಟ
ಉವಸಂಹಾರ. ಪು: [ಉಪಸಂಹಾರ] ಸಮಾಪ್ತಿ, ಕೊನೆ, ಹತ್ತಿರಕ್ಕೆ ತರುವುದು, ಒಟ್ಟುಗೂಡಿಸುವುದು, ಸಂಕ್ಷೇಪಿಸುವುದು
ಉವಸಗ್ಗ. ಪು: [ಉಪಸರ್ಗ] ತೊಂದರೆ, ಪೀಡೆ, ಅಡ್ಡಿ, ಧಾತುವಿಗೆ ಪೂರ್ವದಲ್ಲಿ ಸೇರುವ ಅವ್ಯಯಗಳು. ಇವು ಸೇರುವುದರಿಂದ ಧಾತುವಿನ ಅರ್ಥಕ್ಕೆ ವಿಶೇಷತೆ ಉಂಟಾಗುತ್ತದೆ(ಪಣ್ಣ)
ಉವಸಗ್ಗ. ವಿ: [ದೇ] ಸೋಮಾರಿ, ಅಲಸಿ
ಉವಸಗ್ಗಿಅ. ವಿ: [ಉಪಸರ್ಗಿತ] ಪೀಡಿಸಲ್ಪಟ್ಟ, ವ್ಯಗ್ರಗೊಳಿಸಲ್ಪಟ್ಟ
ಉವಸಜ್ಜ. ಅಕ: [ಉಪ+ಸೃಜ್] ಆಶ್ರಯಿಸು,
ಉವಸಜ್ಜಣ. ನ: [ಉಪಸರ್ಜನ] ಅಪ್ರಧಾನ, ಗೌಣ, ಸಂಬಂಧ (ವಿಸೇ)
ಉವಸತ್ತ. ವಿ: [ಉಪಸಕ್ತ] ವಿಶೇಷ ಆಸಕ್ತಿ ಹೊಂದಿರುವ (ಉತ್ತ)
ಉವಸದ್ದ. ಪು: [ಉಪಶಬ್ದ] ಸುರತ ಸಮಯದಲ್ಲಿಯ ಶಬ್ದ, ರಹಸ್ಯ ಶಬ್ದ, ಹತ್ತಿರದ ಸದ್ದು
ಉವಸಪ್ಪ. ಸಕ: [ಉಪ+ಸೃಪ್] ಹತ್ತಿರಕ್ಕೆ ಹೋಗು
ಉವಸಪ್ಪಿ. ವಿ: [ಉಪಸರ್ಪಿನ್] ಸಮೀಪಕ್ಕೆ ಹೋಗುವವನು
ಉವಸಪ್ಪಿಯ. ವಿ: [ಉಪಸರ್ಪಿತ] ಹತ್ತಿರಕ್ಕೆ ಹೋದವನು, ಸಮೀಪಿಸಿದವನು(ಪಾಅ)

ಉವಸಮ. ಪು: [ಉಪಶಮ] ಕ್ರೋಧವಿಲ್ಲದಿರುವುದು, ಕ್ಷಮೆ, ಸಹನೆ, ಇಂದ್ರಿಯ–ನಿಗ್ರಹ ಹದಿನೈದನೆಯ ದಿನ, ಮುಹೂರ್ತ–ವಿಶೇಷ, –ಸಮ್ಮ. ನ: [–ಸಮ್ಯಕ್ತ್ವ] ಸಮ್ಯಕ್ತ್ವವಿಶೇಷ

ಉವಸಮಿ. ವಿ: [ಉಪಶಮಿನ್] ಉಪಶಮ(ಶಾಂತಿ) ಉಳ್ಳವನು

ಉವಸಮಿಯ. ಪು: [ಔಪಶಮಿಕ] ಕರ್ಮಗಳ ಉಪಶಮನ

ಉವಸಮಿಯ. ವಿ: [ಉಪಶಮಿತ] ಉಪಶಮವನ್ನು ಹೊಂದಿದವನು,

ಉವಸಮಿಯ. ವಿ: [ಔಪಶಮಿಕ] ಉಪಶಮದಿಂದ ಕೂಡಿರುವವನು, ಉಪಶಮದ ಸಂಬಂಧ ಹೊಂದಿರುವವನು

ಉವಸಾಮ. ಸಕ: [ಉಪ+ಶಮಯ್] ಶಾಂತಗೊಳಿಸು, ಇಲ್ಲದಂತೆ ಮಾಡು,

ಉವಸಾಮ. ಪು: [ಉಪಶಮ] ಸಹನೆ ತಾಳ್ಮೆ, ಉಪಶಾಂತಿ

ಉವಸಾಮ. **'ಉವಸಮ'** ಶಬ್ದವನ್ನು ನೋಡುವುದು

ಉವಸಾಮಗ. ವಿ: [ಉಪಶಾಮಕ] ಕ್ರೋಧವೇ ಮೊದಲಾದವನ್ನು ಉಪಶಮನಗೊಳಿಸಿ ಕೊಂಡವನು(ವಿಸೇ) ಉಪಶಮದೊಂದಿಗೆ ಸಂಬಂಧ ಹೊಂದಿರುವವನು

ಉವಸಾಮಣ. ನ: [ಉಪಶಮನ] ಉಪಶಾಂತಿ, ಉಪಶಮ

ಉವಸಾಮಣಯಾ. ಸ್ತ್ರೀ: [ಉಪಶಮನಾ] ಉಪಶಮ

ಉವಸಾಮಯ. **'ಉವಸಾಮಗ'** ಶಬ್ದವನ್ನು ನೋಡುವುದು

ಉವಸಾಮಿಯ. ವಿ: [ಔಪಶಾಮಿಕ] ಉಪಶಮಕ್ಕೆ ಸಂಬಂಧಿಸಿದ, ಪು:ಭಾವ–ವಿಶೇಷ, ನ: ಸಮ್ಯಕ್ತ್ವ–ವಿಶೇಷ(ವಿಸೇ)

ಉವಸಾಮಿಯ.ವಿ:[ಉಪಶಮಿತ] ಶಾಂತಗೊಳಿಸಲ್ಪಟ್ಟ

ಉವಸಾಹ. ಸಕ: [ಉಪ+ಕಥ್] ಹೇಳು,

ಉವಸಾಹಣ. ವಿ: [ಉಪಸಾಧನ] ಉತ್ಪತ್ತಿ ಮಾಡುವವ, ತಯಾರಿಸುವವ(ಸಣ)

ಉವಸಾಹಿಯ. ವಿ: [ಉಪಸಾಧಿತ] ತಯಾರಿಸಲಾದ

ಉವಸಿತ್ತ. ವಿ: [ಉಪಸಿಕ್ತ] ಸಿಂಪಡಿಸಲ್ಪಟ್ಟ, ನೀರು ಚಿಮುಕಿಸಲ್ಪಟ್ಟ

ಉವಸಿಲೋಅ. ಸಕ: [ಉಪಶ್ಲೋಕಯ್] ವರ್ಣಿಸು, ಪ್ರಶಂಸಿಸು

ಉವಸುತ. ವಿ: [ಉಪಸುಪ್ತ] ನಿದ್ರಿಸಿರುವ

ಉವಸುದ್ಧ. ವಿ: [ಉಪಶುದ್ಧ] ನಿರ್ದೋಷ, ದೋಷರಹಿತ(ಸೂಅ)

ಉವಸೂಇಯ ವಿ: [ಉಪಸೂಚಿತ] ಚೆನ್ನಾಗಿ ಸೂಚಿಸಲ್ಪಟ್ಟ, ಸೂಕ್ಷ್ಮವಾಗಿ ಸೂಚಿಸಲ್ಪಟ್ಟ

ಉವಸೇರ. ವಿ: [ದೇ] ರತಿಗೆ ಅರ್ಹವಾದ

ಉವಸೇವಣ. ನ: [ಉಪಸೇವನ] ಸೇವೆ, ಪರಿಚಯ

ಉವಸೇವಯ್. ವಿ: [ಉಪಸೇವಕ] ಸೇವೆ ಸಲ್ಲಿಸುವವನು, ಭಕ್ತ(ಭವಿ)

ಉವಸೋಭ. ಅಕ: [ಉಪ+ಶುಭ್] ಶೋಭಿಸು

ಉವಸೋಭಿಯ. ವಿ: [ಉಪಶೋಭಿತ] ಸುಶೋಭಿತ, ವಿರಾಜಿತ(ಔಪ)

ಉವಸೋಹಾ. ಸ್ತ್ರೀ: [ಉಪಶೋಭಾ] ಅಲಂಕಾರ, ಶೃಂಗಾರ(ಸುರ)

ಉವಸೋಹಿಯ. **'ಉವಸೋಭಿಯ'** ಶಬ್ದವನ್ನು ನೋಡುವುದು

ಉವಸ್ಸಗ್ಗ. **'ಉವಸಗ್ಗ'** ಶಬ್ದವನ್ನು ನೋಡುವುದು

ಉವಸ್ಸಯ. ಪು: [ಉಪಾಶ್ರಯ] ಜೈನ ಸಾಧುಗಳು ವಾಸಿಸುವ ಸ್ಥಳ

ಉವಸ್ಸಾ. ಸ್ತ್ರೀ: [ಉಪಾಶ್ರಾ] ದ್ವೇಷ

ಉವಸ್ಸಿಯ. ವಿ: [ಉಪಾಶ್ರಿತ] ದ್ವೇಷಿ(ವವ), ಅಂಗೀಕರಿಸಲ್ಪಟ್ಟ, ಹತ್ತಿರದಲ್ಲಿ ಇರುವ, ನ: ದ್ವೇಷ (ರಾಜ)

ಉವಸ್ಸುದಿ. ಸ್ತ್ರೀ: [ಉಪಶ್ರುತಿ] ಪ್ರಶ್ನೆಯ ಫಲವನ್ನು ತಿಳಿಯಲು ಜ್ಯೋತಿಷಿಯೊಂದಿಗೆ ಹೇಳುವ ಮೊದಲ ವಾಕ್ಯ

ಉವಹ. ಸ: [ಉಭಯ] ಎರಡೂ, ಯುಗಳ,

ಉವಹ. ಅ: [ದೇ] **'ನೋಡು'** ಎಂಬ ಅರ್ಥವನ್ನು ಹೇಳುವ ಅವ್ಯಯ

ಉವಹಟ್ಟ. ಸಕ: [ಸಮಾ+ರಭ್] ಪ್ರಾರಂಭಿಸು,

ಉವಹಡ. ವಿ: [ಉಪಹೃತ] ಕಾಣಿಕೆ ನೀಡಲಾದ, ಹತ್ತಿರಕ್ಕೆ ತಂದಿಡಲಾದ, ಊಟದ ಸ್ಥಳದಲ್ಲಿ ಅರ್ಪಿಸಲಾದ ಆಹಾರ

ಉವಹಣ. ಸಕ: [ಉಪ+ಹನ್] ವಿನಾಶಗೊಳಿಸು, ಆಘಾತವುಂಟು ಮಾಡು

ಉವಹಣ್ಣ. ನ: [ಉಪಹನನ] ಆಘಾತ, ವಿನಾಶ
ಉವಹತ್ಥ. ಸಕ: [ಸಮಾ+ರಚ್] ರಚಿಸು, ನಿರ್ಮಿಸು, ಉತ್ತೇಜಿಸು
ಉವಹತ್ಥಿಯಾ. ವಿ: [ಸಮಾರಚಿತ] ನಿರ್ಮಿಸಲ್ಪಟ್ಟ, ಮಾಡಲ್ಪಟ್ಟ, ಉತ್ತೇಜಿಸಲಾದ(ಕುಮಾ)
ಉವಹಮ್ಮ. 'ಉವಹಣ' ಶಬ್ದವನ್ನು ನೋಡುವುದು
ಉವಹಯ. ವಿ: [ಉಪಹತ] ವಿನಾಶಗೊಳಿಸಲ್ಪಟ್ಟ, ದೂಷಿಸಲ್ಪಟ್ಟ (ಬೃಹ)
ಉವಹರ. ಸಕ: [ಉಪ+ಹೃ] ಪೂಜಿಸು, ಎದುರುಗಡೆ ಹಾಜರು ಪಡಿಸು, ಹತ್ತಿರಕ್ಕೆ ತರು, ಅರ್ಪಿಸು (ಠಾ)–'ಉವಹರಇ'
ಉವಹಸ. ಸಕ: [ಉಪ+ಹಸ್] ಉಪಹಾಸ ಮಾಡು, ಹಾಸ್ಯಮಾಡುವುದು
ಉವಹಸಿಅ. ವಿ: [ಉಪಹಸಿತ] ಉಪಹಾಸಕ್ಕೆ ಒಳಗಾದವನು. ನ: ಉಪಹಾಸ
ಉವಹಾ. ಸ್ತ್ರೀ: [ಉಪಧಾ] ಮೋಸ, ಕಪಟ, ವಂದನೆ
ಉವಹಾಣ. ನ: [ಉಪಧಾನ] ತಲೆದಿಂಬು, ತಪಶ್ಚರ್ಯೆ(ಸೂಅ), ಬಿರುದು
ಉವಹಾರ. ಪು: [ಉಪಾಹಾರ] ಕಾಣಿಕೆ, ಕೊಡುಗೆ, ವಿಸ್ತಾರ, ಹರಡು
ಉವಹಾರಣಯಾ. 'ಉವಧಾರಣಯಾ' ಶಬ್ದವನ್ನು ನೋಡುವುದು
ಉವಹಾರಿಅ. ವಿ: [ಉಪಧಾರಿತ] ನಿಶ್ಚಯಿಸಲ್ಪಟ್ಟ
ಉವಹಾರಿಆ.} ಸ್ತ್ರೀ: [ದೇ] ಹಾಲುಕರೆಯುವ
ಉವಹಾರೀ.} ಹೆಂಗಸು(ಗಾ)
ಉವಹಾರುಲ್ಲ.
ಉವಹಾಸ. ಪು: [ಉಪಹಾಸ] ನಗೆಪಾಟಲು, ಗೇಲಿ, ಹಾಸ್ಯ
ಉವಹಾಸ. ವಿ: [ಉಪಹಾಸ್ಯ] ಗೇಲಿಗೆ ಗುರಿಯಾದವನು, ಹಾಸ್ಯಕ್ಕೆ ಗುರಿಯಾದವನು
ಉವಹಾಸಣಿಜ್ಜ. ವಿ: [ಉಪಹಾಸನೀಯ] ಹಾಸ್ಯಾಸ್ಪದ (ಪಉಮ)
ಉವಹಿ. ಪು: [ಉದಧಿ] ಸಮುದ್ರ, ಸಾಗರ
ಉವಹಿ. ಪುಂಸ್ತ್ರೀ: [ಉಪಾಧಿ] ಮಾಯೆ, ವಂದನೆ, ಕಪಟ(ಆಚಾ), ಉಪಕರಣ, ಸಾಧನ(ಠಾ)
ಉವಹಿಂಡ. ಸಕ: [ಉಪ+ಹಿಂಡ್] ಸಂಚರಿಸು, ತಿರುಗಾಡು, ತಿರುಗು
ಉವಹಿಯ. ವಿ: [ಉಪಹಿತ] ಅರ್ಪಿತ, ಇಡಲ್ಪಟ್ಟ, ಇರಿಸಿದ, ನ: ಅರ್ಪಣೆ(ನಿಚೂ)
ಉವಹಿಯ. ವಿ: [ಔಪಧಿಕ] ಮೋಸಗಾರ, ವೇಷ ಮರೆಸಿಕೊಂಡು ತಿರುಗುವವನು(ಣಾಯಾ)
ಉವಹುಂಜ. ಸಕ: [ಉಪ+ಭುಜ್] ಉಪಭೋಗಿಸು, ಕಾರ್ಯಗತಗೊಳಿಸು
ಉವಹುತ್ತ. 'ಉವಭುತ್ತ' ಶಬ್ದವನ್ನು ನೋಡುವುದು
ಉವಾಇಕಮ. ಸಕ: [ಉಪಾತಿ+ಕ್ರಮ್] ಉಲ್ಲಂಘಿಸು, ಮೀರು, ದಾಟು
ಉವಾಇಣ. ಸಕ: [ಉಪಾತಿ+ನೀ] ಕಳೆ, ಗತಿಸು
ಉವಾಇಣ. ಸಕ: [ಉಪ+ಯಾಚ್] ವಿನಂತಿಸು, ಯಾವುದಾದರೂ ಕೆಲಸ ಪೂರ್ತಿಯಾದ ನಂತರದಲ್ಲಿ ಯಾವುದಾದರೂ ದೇವತೆಯ ವಿಶೇಷ ಆರಾಧನೆ ಮಾಡುವ ಸಂಕಲ್ಪ ಮಾಡುವುದು,
ಉವಾಇಣ. ಸಕ: [ಉಪ+ದಾ] ಗ್ರಹಿಸು, ಪ್ರವೇಶಿಸು(ಠಾ)
ಉವಾಇಣಾವ. ಸಕ: [ಅತಿ+ಕ್ರಮ್] ಉಲ್ಲಂಘಿಸು, ಕಳೆ, ಪಸರಿಸು
ಉವಾಇಣಾವಿಯ. ವಿ: [ಅತಿಕ್ರಾಂತ] ಉಲ್ಲಂಘಿಸಲ್ಪಟ್ಟ, ಕಳೆದುಹಾಕಿದ, ಪ್ರಸಾರಮಾಡಲ್ಪಟ್ಟ
ಉವಾಇಯ. 'ಉವಯಾಇಯ' ಶಬ್ದವನ್ನು ನೋಡುವುದು(ಣಾಯಾ)
ಉವಾಈ. ಸ್ತ್ರೀ: [ಉಲಾವಕೀ] **'ಪೋತಾಕೀ'** ಎಂಬ ಹೆಸರಿನ ವಿದ್ಯೆಯ ವಿರುದ್ಧವೆಂಬಂಥ ಒಂದು ವಿದ್ಯೆ.
ಉವಾಏಜ್ಜ.} ವಿ: [ಉಪಾದೇಯ] ಸ್ವೀಕರಿಸಲು
ಉವಾಏಯ.} ಅರ್ಹವಾದ್ದು
ಉವಾಗಚ್ಛ.} ಸಕ: [ಉಪಾ+ಗಮ್] ಹತ್ತಿರಕ್ಕೆ ಬರು
ಉವಾಗಮ.} (ರಾಜ)
ಉವಾಗಮಣ. ನ: [ಉಪಾಗಮನ] ಹತ್ತಿರಕ್ಕೆ ಬರುವುದು, ಸ್ಥಾನ, ಸ್ಥಿತಿ(ಆಚಾನಿ)
ಉವಾಗಯ. ವಿ: [ಉಪಾಗತ] ಹತ್ತಿರಕ್ಕೆ ಬಂದಿರುವ (ಆಚಾ), ಒದಗಿದ, ಪ್ರಾಪ್ತವಾದ
ಉವಾಡಿಯ. ವಿ: [ಉತ್ಪಾಟಿತ] ಕಿತ್ತು ಹಾಕಲ್ಪಟ್ಟ (ವಿಪಾ)
ಉವಾಣಯಾ.} ಸ್ತ್ರೀ: [ಉಪಾನಹ್] ಚರ್ಮದ ಚಪ್ಪಲಿ
ಉವಾಣಹಾ.}

ಉವಾದಾ. ಸಕ: [ಉಪಾ+ದಾ] ಸ್ವೀಕರಿಸು
ಉವಾದಾಣ. ನ: [ಉಪಾದಾನ] ಗ್ರಹಣ, ಸ್ವೀಕಾರ, ಕಾರ್ಯರೂಪದಲ್ಲಿ ಫಲಿಸುವ ಕಾರಣ, ಸ್ವೀಕರಿಸಲ್ಪಟ್ಟದ್ದು
ಉವಾದಿಯ. ವಿ: [ಉಪಜಗ್ಧ] ಅನುಭವಿಸಲ್ಪಟ್ಟ, ಉಪಯೋಗಿಸಲ್ಪಟ್ಟ
ಉವಾಯ. ಪು: [ಉಪಾಯ] ಸಾಧನ, ಸಲಕರಣೆ, ಪ್ರತೀಕಾರ(ತಾ)
ಉವಾಯ. ಸಕ:[ಉಪ+ಯಾಚ್] ವಿನಂತಿಸು, ಕೋರು
ಉವಾಯಣ. ನ: [ಉಪಾಯನ] ಕೊಡುಗೆ, ಕಾಣಿಕೆ, ನಜರು(ಉಪ, ಗಉಡ)
ಉವಾಯಣಾವ. 'ಉವಾಇಣಾವ' ಶಬ್ದವನ್ನು ನೋಡುವುದು
ಉವಾಂಯಾಣ. 'ಉವಾದಾಣ' ಶಬ್ದವನ್ನು ನೋಡುವುದು(ಅಚ್ಚು)
ಉವಾಯಾಯ. ವಿ: [ಉಪಾಯಾತ] ಸಮೀಪಕ್ಕೆ ಬಂದಿರುವ
ಉವಾರೂಢ. ವಿ: [ಉಪಾರೂಢ] ಮೇಲಕ್ಕೆ ಹತ್ತಿದ, ಏರಿದ
ಉವಾಲಂಭ. ಪು: [ಉಪಾಲಂಭ] ನಿಂದೆ, ಬೈಗಳು
ಉವಾಲದ್ಧ. ವಿ: [ಉಪಾಲಬ್ಧ] ನಿಂದಿಸಲ್ಪಟ್ಟ, ಬೈಗಳಿಗೆ ಗುರಿಯಾದ
ಉವಾಲಹ. ಸಕ: [ಉಪಾ+ಲಭ್] ನಿಂದಿಸು, ಬೈಯು
ಉವಾವತ್ತ. ಪು: [ಉಪಾವೃತ್ತ] ಮಲಗಿದ್ದರಿಂದಾಗಿ ಆಯಾಸ ನೀಗಿಕೊಂಡ ಕುದುರೆ
ಉವಾವತ್ತಿದ(ಶೌ). ವಿ: [ಉಪಾವೃತ್ತಿತ] ಮೇಲೆ ಹೇಳಿದ ಕುದುರೆಯಿರುವ
ಉವಾಸ. ಪು: [ಅವಕಾಶ] ಖಾಲಿ ಜಾಗ, ಸ್ಥಳ, ಆಕಾಶ
ಉವಾಸಗ. ವಿ: [ಉಪಾಸಕ] ಉಪಾಸನೆ ಮಾಡುವವನು, ಸೇವಕ, **ಪು: ಶ್ರಾವಕ,** ಜೈನ ಅಥವಾ ಬೌದ್ಧ ಗೃಹಸ್ಥ, **–ದಸಾ. ಸ್ತ್ರೀ:** [–ದಶಾ] ಏಳನೆಯ ಜೈನಗ್ರಂಥ(ಸಮ), **–ಪಡಿಮಾ. ಸ್ತ್ರೀ:** [**–ಪ್ರತಿಮಾ**] ಶ್ರಾವಕರು ಆಚರಿಸಲು ಅರ್ಹವಾದ ನಿಯಮಗಳು(ಉತ್ತ)
ಉವಾಸಣ. ನ: [ಉಪಾಸನ] ಉಪಾಸನೆ, ಸೇವೆ
ಉವಾಸಣಾ. ಸ್ತ್ರೀ: [ಉಪಾಸನಾ] ಕ್ಷೌರ ಕರ್ಮ, ಸ್ವಚ್ಛತೆ, ಸೇವೆ, ಶುಶ್ರೂಷೆ(ಆವಮ)
ಉವಾಸಯ. ಪು: [ಉಪಾಶ್ರಯ] ಜೈನಮುನಿಗಳ ನಿವಾಸ ಸ್ಥಾನ(ಉಪ)
ಉವಾಸಿಯ. ವಿ: [ಉಪಾಸಿತ] ಸೇವಿಸಲ್ಪಟ್ಟ(ಪಉಮ)
ಉವಾಹಣ. 'ಉವಾಣಹಾ' ಶಬ್ದವನ್ನು ನೋಡುವುದು
ಉವಾಹಣ. ಸಕ:[ಉಪಾ+ಹನ್]ನಾಶಮಾಡು,ಸಾಯು
ಉವಾಹಿ. ಪುಂಸ್ತ್ರೀ: [ಉಪಾಧಿ] ಕರ್ಮ–ಜನಿತ ವಿಶೇಷಣ(ಆಚಾ), ಸಾಮೀಪ್ಯ, ಸಾನ್ನಿಧ್ಯ, ಅಸ್ವಾಭಾವಿಕ ಧರ್ಮ
ಉವಿ. ಸಕ: [ಉಪ+ಇ] ಹತ್ತಿರಬರು, ಸಮೀಪಿಸು, ಸ್ವೀಕರಿಸು, ಹೊಂದು, ಪಡೆದುಕೊಳ್ಳು
ಉವಿಅ. 'ಅವಿಅ=ಅಪಿಚ' ಶಬ್ದವನ್ನು ನೋಡುವುದು
ಉವಿಅ. ವಿ: [ಉಪೇತ] ಯುಕ್ತ, ಕೂಡಿಕೊಂಡು, ಸಹಿತ(ಭವಿ)
ಉವಿಅ. ನ: [ದೇ] ಶೀಘ್ರ, ಬೇಗನೆ(ದೇ), ಸಂಸ್ಕರಿಸಲ್ಪಟ್ಟ
ಉವಿಂದ. ಪು: [ಉಪೇಂದ್ರ] ವಿಷ್ಣು, ಕೃಷ್ಣ(ಕುಮಾ). **–ವಜ್ಜಾ. ಸ್ತ್ರೀ:** [–ವಜ್ರಾ] ಹನ್ನೊಂದು ಅಕ್ಷರಗಳ ಪಾದವುಳ್ಳ ಒಂದು ವೃತ್ತ. **ಪುಂನ:** ಒಂದುದೇವ –ವಿಮಾನ
ಉವಿಕ್ಖ. ಸಕ: [ಉಪ+ಈಕ್ಷ್] ಅಲಕ್ಷಿಸು, ಅನಾದರ ತೋರು
ಉವಿಕ್ಖಾ. ಸ್ತ್ರೀ: [ಉಪೇಕ್ಷಾ] ಅನಾದರ, ಅಲಕ್ಷ್ಯ(ಕಾಲ)
ಉವಿಕ್ಖಿಯ. ವಿ: [ಉಪೇಕ್ಷಿತ] ತಿರಸ್ಕೃತ, ಕಡೆಗಣಿಸಲ್ಪಟ್ಟ
ಉವಿಕ್ಖೇವ. ಪು: [ಉದ್ವಿಕ್ಷೇಪ] ಹಜಾಮತ್ತು, ಕ್ಷೌರ, ಮುಂಡನ(ತಂದು)
ಉವಿಯಗ್ಗ. ವಿ: [ಉದ್ವಿಗ್ನ] ಖಿನ್ನ, ಉದ್ವೇಗದಿಂದ ಕೂಡಿರುವ
ಉವೀವ. ಅಕ: [ಉದ್+ವಿಚ್] ಉದ್ವೇಗಗೊಳ್ಳು, ಖಿನ್ನನಾಗು(ನಾಟ)
ಉವೇ. 'ಉವಿ' ಶಬ್ದವನ್ನು ನೋಡುವುದು. **ವ. ಕೃ–** **ಉವೇಂತ**
ಉವೆಕ್ಖಿಅ. 'ಉವಿಕ್ಖಿಯ' ಶಬ್ದವನ್ನು ನೋಡುವುದು
ಉವೆಚ್ಚ. 'ಉವೇ' ಶಬ್ದವನ್ನು ನೋಡುವುದು
ಉವೇಯ. ವಿ: [ಉಪೇತ] ಯುಕ್ತ, ಕೂಡಿಕೊಂಡ, ಸಹಿತ, ಹತ್ತಿರಕ್ಕೆ ಹೋದ(ಸಂಥಾ)
ಉವೇಯ. ವಿ: [ಉಪೇಯ] ಉಪಾಯದಿಂದ ಸಾಧಿಸಲು ಅರ್ಹವಾದ, ಶಕ್ಯವಾದ(ರಾಜ)
ಉವೆಲ್ಲ. ಅಕ: [ಪ್ರ+ಸೃ] ಹರಡು, ಪ್ರಸಾರಮಾಡು

ಉವೇಸ. ಅಕ: [ಉಪ+ವಿಶ್] ಕುಳಿತುಕೊಳ್ಳು
ಉವೇಹ. ಸಕ: [ಉಪ+ಈಕ್ಷ್] ಉಪೇಕ್ಷಿಸು, ತಿರಸ್ಕರಿಸು, ಅಲಕ್ಷಿಸು ವ. ಕೃ-**ಉವೇಹಂತ**
ಉವೇಹ. ಸಕ: [ಉತ್ಪ್ರ+ಈಕ್ಷ್] ತಿಳಿದುಕೊಳ್ಳು, ನಿಶ್ಚಯಿಸು, ಊಹಿಸು, ಕಲ್ಪನೆಮಾಡು, ವ. ಕೃ-**ಉವೇಹಮಾಣ**
ಉವೇಹಣ. ನ: [ಉಪೇಕ್ಷಣ] ಉದಾಸೀನತೆ, ಅಲಕ್ಷ್ಯ
ಉವೇಹಾ. ಸ್ತ್ರೀ: [ಉಪೇಕ್ಷಾ] ತಿರಸ್ಕಾರ, ಅನಾದರ, ಅಲಕ್ಷ್ಯ, ಔದಾಸೀನ್ಯ. □ಕರ. ವಿ: [-ಕರ] ಉಪೇಕ್ಷೆ ಮಾಡುವವನು, ಉದಾಸೀನ ಮಾಡುವವನು
ಉವೇಹಾ. ಸ್ತ್ರೀ: [ಉತ್ಪ್ರೇಕ್ಷಾ] ಜ್ಞಾನ, ಕಲ್ಪನೆ, ಊಹೆ, ಅವಧಾರಣೆ, ನಿಶ್ಚಯ(ಔಪ)
ಉವೇಹಿಯ. ವಿ: [ಉಪೇಕ್ಷಿತ] ತಿರಸ್ಕೃತ, ಅಲಕ್ಷಿತ
-ಉವ್ವ. **'ಪುವ್ವ'** ಶಬ್ದವನ್ನು ನೋಡುವುದು
ಉವ್ವಂತ. ವಿ: [ಉದ್ವಾಂತ] ವಾಂತಿಮಾಡಲಾದ, ಹೊರಕ್ಕೆ ಹೊರಟಿರುವ, ಹೊರಗೆ ಹೋಗಿರುವ
ಉವ್ವಕ. ಸಕ: [ಉದ್+ವಮ್] ಹೊರಕ್ಕೆ ಹೊರಡಿಸು, ವಾಂತಿಮಾಡು
ಉವ್ವಕ್ಕ.} ವಿ: [ಉದ್ವಾಂತ] ಹೊರಕ್ಕೆ ಹೊರಡಿಸಲ್ಪಟ್ಟ,
ಉವ್ವಕ್ಕಿಯ.} ವಾಂತಿಮಾಡಲಾದ
ಉವ್ವಗ್ಗ. 'ಓವಗ್ಗ' ಶಬ್ದವನ್ನು ನೋಡುವುದು
ಉವ್ವಟ್ಟ. ಉಭ. [ಉದ್+ವೃತ್, ವರ್ತ್ತಯ್] ಅತ್ತಿತ್ತ ಓಡಾಡು, ಮೃತಿ ಹೊಂದು, ಒಂದು ಗತಿಯಿಂದ ಇನ್ನೊಂದು ಗತಿಯಲ್ಲಿ ಜನ್ಮ ತಾಳುವುದು, ಹಿಟ್ಟು ಮುಂತಾದ್ದರಿಂದ ಉಜ್ಜಿ ಶರೀರದ ಕೊಳೆಯನ್ನು ತೊಳೆಯುವುದು, ಕರ್ಮ-ಪರಮಾಣುಗಳ ಅಲ್ಪ ಸ್ಥಿತಿಯನ್ನು ಕಳೆದು ಬೃಹತ್ ಸ್ಥಿತಿಗೆ ತರುವುದು, ಪಾರ್ಶ್ವವನ್ನು ಚಲಾಯಿಸುವುದು, ಹುಟ್ಟುವುದು, ಉದಿಸುವುದು.
ಉವ್ವಟ್ಟ. **'ಉವ್ವಟ್ಟಿಯ=ಉದ್ವೃತ್ತ'** ಶಬ್ದವನ್ನು ನೋಡುವುದು(ಗ)
ಉವ್ವಟ್ಟ. ವಿ: [ದೇ] ಬಣ್ಣವಿಲ್ಲದ, ರಾಗ-ರಹಿತ, ಭ್ರಷ್ಟ, ಪತಿತ, ಜೀರ್ಣ
ಉವ್ವಟ್ಟಣ. ನ: [ಉದ್ವರ್ತ್ತನ] ದೇಹದಿಂದ ಕೊಳೆಯನ್ನು ತೊಡೆದು ಸ್ವಚ್ಛಗೊಳಿಸುವುದು, ಶರೀರವನ್ನು ಸ್ವಚ್ಛಗೊಳಿಸುವ ಸುಗಂಧ ದ್ರವ್ಯ, ಬೇರೊಂದು ಜನ್ಮಕ್ಕೆ ಸಾಗುವುದು, ಮರಣ(ಠಾ), ಪಾರ್ಶ್ವವನ್ನು ಪರಿವರ್ತಿಸುವುದು, ಕರ್ಮ ಪರಮಾಣುಗಳನ್ನು ಲಘು ಸ್ಥಿತಿಯಿಂದ ದೀರ್ಘ ಸ್ಥಿತಿಗೆ ತರುವುದು (ಪಂಚ)
ಉವ್ವಟ್ಟಣ. ನ: [ಉದ್ವರ್ತನ] ಸಿಪ್ಪೆಯಿಂದ ಬೀಜವನ್ನು ಬೇರ್ಪಡಿಸುವುದು.
ಉವ್ವಟ್ಟಣ. ನ: [ಅಪವರ್ತನ] **'ಉವ್ವಟ್ಟಣಾ= ಅಪವರ್ತ್ತನಾ'** ಶಬ್ದವನ್ನು ನೋಡುವುದು
ಉವ್ವಟ್ಟಣಾ. ಸ್ತ್ರೀ: [ಉದ್ವರ್ತ್ತನಾ] ಸಾವು, ದೇಹದಿಂದ ಜೀವ ಹೊರಡುವುದು(ಠಾ), ಪಾರ್ಶ್ವದ ಬದಲಾವಣೆ, ಕರ್ಮ-ಪರಮಾಣುಗಳ ಲಘು-ಸ್ಥಿತಿಯನ್ನು ದೀರ್ಘಗೊಳಿಸುವಂಥ ಜೀವದ ಒಂದು ಪ್ರಯತ್ನ, ಕರಣ-ವಿಶೇಷ
ಉವ್ವಟ್ಟಣಾ. ಸ್ತ್ರೀ: [ಅಪವರ್ತ್ತನಾ] ಕರ್ಮಗಳ ದೀರ್ಘ ಸ್ಥಿತಿಯನ್ನು ನಾಶಗೊಳಿಸುವ ಜೀವದ ಒಂದು ಪ್ರಯತ್ನ(ವಿಸೇ)
ಉವ್ವಟ್ಟಿಯ. ವಿ: [ಉದ್ವೃತ್ತ] ಯಾವುದಾದರೂ ಗತಿಯಿಂದ ಹೊರಗೆ ಬಂದಿರುವ, ಸತ್ತಿರುವ
ಉವ್ವಟ್ಟಿಯ.ವಿ:[ಉದ್ವರ್ತ್ತಿತ] ಯಾವುದಾದರೊಂದು ದ್ರವ್ಯದಿಂದ ದೇಹದ ಎಣ್ಣೆಯೇ ಮೊದಲಾದ ಕೊಳೆಯನ್ನು ತೊಡೆದುಹಾಕಿದವನು(ಮಹಾ), ಯಾವುದಾದರೊಂದು ಸ್ಥಿತಿಯಿಂದ ಭ್ರಷ್ಟಗೊಳಿಸಲ್ಪಟ್ಟವನು. ಸ್ವಚ್ಛಗೊಳಿಸಲ್ಪಟ್ಟ.
ಉವ್ವಡ್ಡ. ವಿ: [ಉದ್ವೃದ್ಧ] ಹೆಚ್ಚಳವನ್ನು, ವೃದ್ಧಿಯನ್ನು ಹೊಂದಿದ(ಆವಮ)
ಉವ್ವಣ ವಿ: [ಉಲ್ಬಣ] ಉತ್ಕಟವಾದ, ಮಿತಿಮೀರಿದ
ಉವ್ವತ್ತ. **'ಉವ್ವಟ್ಟ=ಉದ್+ವೃತ್'** ಶಬ್ದವನ್ನು ನೋಡುವುದು
ಉವ್ವತ್ತ. **'ಉವ್ವಟ್ಟ'** ಶಬ್ದವನ್ನು ನೋಡುವುದು
ಉವ್ವತ್ತ. ವಿ: [ಉದ್ವರ್ತ] ನಿಲ್ಲುವಂತೆ ಮಾಡುವವನು, ನಿಲ್ಲಿಸುವವನು
ಉವ್ವತ್ತ. ಸಕ: [ಉದ್+ವರ್ತಯ್] ನಿಲ್ಲಿಸು, ತಲೆಕೆಳಗುಮಾಡು
ಉವ್ವತ್ತ. ವಿ: [ಉದ್ವೃತ್ತ] ಮೇಲುಮುಖವಾದ, ಚಿತ್ತ, ಉಲ್ಲಾಸಗೊಂಡಿರುವ(ಹೇ), ಪಾರ್ಶ್ವವನ್ನು ತಿರುಗಿಸಿದವನು, ಮೇಲೆ ಇರುವ, ಮೇಲುಗಡೆ ಇರುವ, ತಿರುಗಿಸಲ್ಪಟ್ಟ(ಪ್ರಾಪ)

ಉವ್ವತ್ತ. ವಿ: [ಅಪವೃತ್ತ] ತಲೆಕೆಳಕಾಗಿರುವ, ವಿರುದ್ಧವಾಗಿ ಇರುವ

ಉವ್ವತ್ತಣ. ನ: [ಉದ್‌ವರ್ತ್ತನ] ಪಾರ್ಶ್ವದ ಬದಲಾವಣೆ(ಗಾ), ಮೇಲೆ ಇರುವುದು, ಮೇಲಕ್ಕೆ ಹಾರುವುದು.

ಉವ್ವತ್ತಿಯ. ವಿ: [ಉದ್ವರ್ತ್ತಿತ] ಬದಲಾಯಿಸಲ್ಪಟ್ಟ, ಚಕ್ರಾಕಾರದಲ್ಲಿ ತಿರುಗಿಸಲಾದ,

ಉವ್ವದ್ಧ. 'ಉವ್ವಡ್ಢ' ಶಬ್ದವನ್ನು ನೋಡುವುದು

ಉವ್ವಮ. ಸಕ: [ಉದ್+ವಮ್] ವಾಂತಿಮಾಡು, ಹೊರ ಹೊರಡಿಸು

ಉವ್ವಮಿಅ. ವಿ: [ಉದ್ವಾಂತ] ವಾಂತಿಮಾಡಿಸಲ್ಪಟ್ಟ

ಉವ್ವರ. ಅಕ: [ಉದ್+ವೃ] ಉಳಿದು ಬಿಡುವುದು, ಶೇಷವಿರುವುದು

ಉವ್ವರ. ಪು: [ದೇ] ಧರ್ಮ, ತಾಪ, ಕಾವು, ಬಿಸುಪು

ಉವವರಿಅ. ವಿ: [ದೇ] ಅಧಿಕ, ಉಳಿದಿರುವ, ಅವಶಿಷ್ಟ, ಇಷ್ಟಪಡದ, ನಿಶ್ಚಿತ, ಅಗಣಿತ, ನ: ತಾಪ, ಉಷ್ಣತೆ,ವಿ:ಮೀರಲಾದ, ಉಲ್ಲಂಘಿಸಲ್ಪಟ್ಟ(ಸುಪಾ)

ಉವ್ವರಿಅ. ನ: [ಅಪವರಿಕಾ] ಕೊಠಡಿ, ಕೋಣೆ, ಸಣ್ಣ ಮನೆ(ಸುರ)

ಉವ್ವಲ. ಸಕ: [ಉದ್+ವಲ್] ಹಿಂತಿರುಗು, ವಾಪಸ್ ಬರು, ಬಳಿ, ಲೇಪಿಸು ಮಾಲಿಶ್ ಮಾಡು

ಉವ್ವಲ. ಸಕ: [ಉದ್+ವಲಯ್] ಬೇರು ಸಹಿತ ಕೀಳು

ಉವ್ವಲಣ. ನ: [ಉದ್ವಲನ] ಶರೀರಕ್ಕೆ ಲೇಪಿಸುವಂಥದು (ಣಾಯಾ), ಮಾಲೀಶು, ಅಭ್ಯಂಗನ

ಉವ್ವಲಣಾ. ಸ್ತ್ರೀ: [ಉದ್ವಲನಾ] ಬೇರುಸಹಿತ ಕೀಳುವುದು, ಕಿತ್ತುಹಾಕಲು ಯೋಗ್ಯವಾದ ಕರ್ಮ–ಪ್ರಕೃತಿ

ಉವ್ವಲಿಯ. ವಿ: [ಉದ್ವಲಿತ] ಹಿಂತಿರುಗಿದ(ಮಹಾ)

ಉವ್ವಸ. ವಿ: [ಉದ್ವಸ] ಹಾಳುಸ್ಥಳ, ನಿರ್ಜನ ಪ್ರದೇಶ

ಉವ್ವಸಿಯ. ವಿ: [ಉದ್ವಸಿತ] ಮೇಲಿನ ಶಬ್ದವನ್ನು ನೋಡುವುದು

ಉವ್ವಸೀ. ಸ್ತ್ರೀ: [ಉರ್ವಶೀ] ಒಬ್ಬ ಅಪ್ಸರೆ, ರಾವಣನ ಒಬ್ಬ ಖ್ಯಾತ ಪತ್ನಿ

ಉವ್ವಹ. ಸಕ: [ಉದ್+ವಹ್] ಹೊರುವುದು, ಎತ್ತುವುದು

ಉವ್ವಹಣ. ನ: [ಉದ್ವಹನ] ಹೊರುವಿಕೆ, ಮೇಲಕ್ಕೆ ಎಬ್ಬಿಸುವುದು(ಗಉಡ)

ಉವ್ವಹಣ. ನ: [ದೇ] ಮಹಾನ್ ಆವೇಶ

ಉವ್ವಾ. ಸ್ತ್ರೀ: [ದೇ] ಧರ್ಮ, ತಾಪ(ದೇ)

ಉವ್ವಾ.} ಅಕ: [ಉದ್+ವಾ] ಒಣಗು

ಉವ್ವಾಅ.}

ಉವ್ವಾಅ. ವಿ: [ಉದ್ವಾತ] ಒಣಗಿದ, ಶುಷ್ಕ(ಗಉಡ)

ಉವ್ವಾಅ.} ವಿ: [ದೇ] ಖಿನ್ನ, ದಣಿದಿರುವ,

ಉವ್ವಾಇಅ.} ಆಯಾಸಗೊಂಡಿರುವ(ದೇ)

ಉವ್ವಾಉಲ. ನ: [ದೇ] ಗೀತ, ಉಪವನ, ತೋಟ

ಉವ್ವಾಡುಲ. ನ: [ದೇ] ವಿರುದ್ಧ ಮೈಥುನ, ನ್ಯಾಯವಲ್ಲದ ರೀತಿಯ ರತಿ

ಉವ್ವಾಢ. ವಿ: [ದೇ] ವಿಸ್ತೀರ್ಣವಾದ, ವಿಶಾಲವಾದ, ದುಃಖವಿರದ(ದೇ)

ಉವ್ವಾಣ. 'ಉವ್ವಾಅ= ಉದ್ವಾತ' ಶಬ್ದವನ್ನು ನೋಡುವುದು

ಉವ್ವಾಯ. 'ಉವಾಯ= ಉಪಾಯ' ಶಬ್ದವನ್ನು ನೋಡುವುದು

ಉವ್ವಾರ (ಅಪ). ಸಕ: [ಉದ್+ವರ್ತಯ್] ತ್ಯಜಿಸು, ಬಿಟ್ಟುಬಿಡು

ಉವ್ವಾಲ. ಸಕ: [ಕಥ್] ಹೇಳು

ಉವ್ವಾಸ. ಸಕ: [ಉದ್+ವಾಸಯ್] ದೂರಮಾಡು, ದೇಶದಿಂದ ಹೊರಗಟ್ಟು, ನಾಶಮಾಡು

ಉವ್ವಾಸಿಯ. ವಿ: [ಉದ್ವಾಸಿತ] ನಾಶವಾಡಲ್ಪಟ್ಟ (ಪಉಮ), ದೇಶಭ್ರಷ್ಟಗೊಳಿಸಲ್ಪಟ್ಟ(ಸುಪಾ), ದೂರಮಾಡಲ್ಪಟ್ಟ

ಉವ್ವಾಹ. ಪು: [ದೇ] ಧರ್ಮ, ತಾಪ, ಉಷ್ಣತೆ

ಉವ್ವಾಹ. ಪು: [ಉದ್ವಾಹ] ಮದುವೆ, ವಿವಾಹ

ಉವ್ವಾಹ. ಸಕ: [ಉದ್+ಬಾಧಯ್] ವಿಶೇಷ ರೀತಿಯಲ್ಲಿ ಪೀಡಿಸು,

ಉವ್ವಾಹಿಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ

ಉವ್ವಾಹುಲ. ನ: [ದೇ] ಉತ್ಸುಕತೆ, ತವಕ, ದ್ವೇಷಿಸಲ್ಪಡುವ, ಶತ್ರು

ಉವ್ವಿಆಇಅ. ವಿ: [ಉದ್ವೇದಿತ] ಪೀಡಿಸಲ್ಪಟ್ಟ,

ಉವ್ವಿಕ್ಕ. ನ: [ದೇ] ರೋದನ, ಪ್ರಲಾಪ(ಷಡ್)

ಉವ್ವಿಗ್ಗ. ವಿ: [ಉದ್ವಿಗ್ನ] ಆಯಾಸಗೊಂಡ, ದಣಿದ, ಹೆದರಿದ

ಉವ್ವಿಗ್ಗಿರ. ವಿ: [ಉದ್ವೇಗಶೀಲ] ಕಳವಳಕ್ಕೊಳಗಾಗುವವನು, ಗಾಬರಿಗೊಳ್ಳುವವನು

ಉವ್ವಿಜ್ಞ. 'ಉವ್ವಿಯ' ಶಬ್ದವನ್ನು ನೋಡುವುದು
ಉವ್ವಿಡ. ವಿ: [ದೇ] ಹೆದರಿದ, ಬಳಲಿದ, ಆಯಾಸಗೊಂಡ, ಕ್ಲೇಶದಿಂದ ಕೂಡಿದ
ಉವ್ವಿಡಿಮ. ವಿ: [ದೇ] ಅಧಿಕವಾದ ಪ್ರಮಾಣವನ್ನು ಉಳ್ಳ, ಮರ್ಯಾದೆ ಇಲ್ಲದ, ನಿರ್ಲಜ್ಜ(ದೇ)
ಉವ್ವಿಣ್ಣ. 'ಉವ್ವಿಗ್ಗ' ಶಬ್ದವನ್ನು ನೋಡುವುದು
ಉವ್ವಿದ್ಧ. ವಿ: [ಉದ್ವಿದ್ಧ] ಎತ್ತರಕ್ಕೆ ಹೋಗಿರುವ, ಉನ್ನತವಾದ, ಎತ್ತರವಾದ, ಎತ್ತರವು ಅಳೆಯಲ್ಪಟ್ಟಿರುವ ಗಂಭೀರ, ಆಳವಾದ(ಸಮ), ಹೊಡೆಯಲ್ಪಟ್ಟ, ಗಾಯವಮಾಡಲ್ಪಟ್ಟ, ಪೀಡಿಸಲ್ಪಟ್ಟ
ಉವ್ವಿನ್ನ. 'ಉವ್ವಿಗ್ಗ' ಶಬ್ದವನ್ನು ನೋಡುವುದು
ಉವ್ವಿಯ. ಅಕ: [ಉದ್+ವಿಜ್] ಉದ್ವೇಗ ಉಂಟು ಮಾಡು, ಕಳವಳವುಂಟುಮಾಡು, ದುಃಖಿತನಾಗು,
ಉವ್ವಿಯಣಿಜ್ಜ. ವಿ: [ಉದ್ವೇಜನೀಯ] ಉದ್ವೇಗವುಂಟು ಮಾಡುವ(ಪಉಮ)
ಉವ್ವಿರೇಯಣ. ನ: [ಉದ್ವಿರೇಚನ] ಖಾಲಿ ಮಾಡುವುದು
ಉವ್ವಿಲ್ಲ. ಸಕ: [ಉದ್+ವೇಲ್] ಚಲಿಸು, ನಡುಗು, ಸುತ್ತಿಕೊಳ್ಳು, ಅತ್ತ-ಇತ್ತ ಚಲಿಸು
ಉವ್ವಿಲ್ಲ. ಅಕ: [ಪ್ರ+ಸೃ] ಹರಡು, ಪಸರಿಸು,
ಉವ್ವಿಲ್ಲ. ವಿ: [ಉದ್ವೇಲ] ಚಂಚಲ, ಚಪಲ(ಸುಪಾ)
ಉವ್ವಿಲ್ಲಿರ. ವಿ: [ಉದ್ವೇಲಿತೃ] ಚಲಿಸುವವನು, ನಡೆಯುವವನು, ಅಲ್ಲಾಡುವವನು, ಹೊಯ್ದಾಡುವವನು(ಸುಪಾ)
ಉವ್ವಿವ. ಅಕ: [ಉದ್+ವಿಜ್] ಉದ್ವೇಗಗೊಳ್ಳು, ಚಿಂತಿತನಾಗು, ದುಃಖಿತನಾಗು
ಉವ್ವಿಷ್ಣ. ವಿ: [ದೇ] ಕೋಪದಿಂದ ಕೂಡಿದ, ಕ್ರುದ್ಧ (ಷಡ್), ಪ್ರಚಂಡ ವೇಷವುಳ್ಳ(ಪಾಅ)
ಉವ್ವಿಹ. ಸಕ: [ಉತ್+ವೃಧ್] ಮೇಲಕ್ಕೆ ಎಸೆ, ಮೇಲಕ್ಕೆ ಹೋಗು, ಹಾರು
ಉವ್ವಿವಹ. ಪು: [ಉದ್ವಿಹ] ತನ್ನ ಹೆಸರಿನಿಂದ ಖ್ಯಾತನಾದ ಆಜೀವಕ ಪಂಥದ ಒಬ್ಬ ಉಪಾಸಕ
ಉವ್ವೀ. ಸ್ತ್ರೀ: [ಊರ್ವೀ] ಪೃಥ್ವಿ, ಭೂಮಿ, -ಸ. ಪು: [-ಶ] ರಾಜ(ಕುಮಾ)
ಉವ್ವೀಢ. 'ಉವ್ವೂಢ' ಶಬ್ದವನ್ನು ನೋಡುವುದು
ಉವ್ವೀಢ. ವಿ: [ದೇ] ಹಳ್ಳ ತೋಡಿರುವುದು, ಹಳ್ಳ
ಉವ್ವೀಢ. ವಿ: [ಉದ್ವಿದ್ಧ] ಮೇಲಕ್ಕೆ ಹಾರಿಸಲ್ಪಟ್ಟ

ಉವ್ವೀಲ. ಸಕ: [ಅವ+ಪೀಡಯ್] ಪೀಡಿಸು, ಹೊಡೆದುಬಡಿದು ಮಾಡು
ಉವ್ವೀಲಯ. ವಿ: [ಅಪವ್ರೀಡಕ] ಲಜ್ಜಾರಹಿತನನ್ನಾಗಿ ಮಾಡುವ, ಪ್ರಾಯಶ್ಚಿತ್ತ ಮಾಡಿಕೊಳ್ಳುವಾಗ ಲಜ್ಜೆಯನ್ನು ದೂರ ಮಾಡುವಂತೆ ಶಿಷ್ಯನಿಗೆ ಉಪದೇಶಿಸುವವನು(ಭಗ)
ಉವ್ವುಣ್ಣ.} ವಿ: [ದೇ] ಉದ್ವಿಗ್ನ, ಕೊಬ್ಬಿದ, ಗರ್ವದಿಂದ
ಉವ್ವುನ್ನ.} ಕೂಡಿದ, ಶೂನ್ಯ, ಪ್ರಚಂಡ, ಉತ್ಕಟವಾದ, ಮಿತಿಮೀರಿದ(ದೇ)
ಉವ್ವೂಢ. ವಿ: [ಉದ್ ವ್ಯೂಢ] ಧರಿಸಿರುವ, ಮೇಲಕ್ಕೆ ಕೊಂಡೊಯ್ದಿರುವ, ಮೇಲುಗಡೆ ಧರಿಸಿರುವ, ವಿವಾಹಿತ, ಮದುವೆಯಾಗಿರುವ
ಉವ್ವೇಅಣಿಅ. ವಿ: [ಉದ್ವೇಜನೀಯ] ಉದ್ವೇಗ ಕಾರಕ,
ಉವ್ವೇಗ. ಪು: [ಉದ್ವೇಗ] ಶೋಕ, ವ್ಯಾಕುಲತೆ,
ಉವ್ವೇಢ. ಸಕ: [ಉದ್+ವೇಷ್ಟ] ಕಟ್ಟು, ಬೇರೆಮಾಡು, ಬಂಧನಮುಕ್ತಗೊಳಿಸು
ಉವ್ವೇಢಣ. ನ: [ಉದ್ವೇಷ್ಟನ] ಬಂಧನ, ವಿ: ಬಂಧನಮುಕ್ತಗೊಳಿಸುವುದು
ಉವ್ವೇಢಿಅ. ವಿ: [ಉದ್ವೇಷ್ಟಿತ] ಬಂಧನ ಮುಕ್ತಗೊಳಿಸಲ್ಪಟ್ಟ, ಸುತ್ತುವರಿಯಲ್ಪಟ್ಟ
ಉವ್ವೆತ್ತಾಲ. ನ: [ದೇ] ಒಂದೇ ಸಮನೆ ಚೀರಾಡುವುದು, ಒಂದೇ ಸಮನೆ ಅಳುವುದು(ದೇ)
ಉವ್ವೇಯ. 'ಉವ್ವೇಗ' ಶಬ್ದವನ್ನು ನೋಡುವುದು
ಉವೇಯಗ. ವಿ: [ಉದ್ವೇಜಕ] ಉದ್ವೇಗ ಉಂಟು ಮಾಡುವ
ಉವ್ವೇಯಣಗ.} ವಿ: [ಉದ್ವೇಜನಕ] ಉದ್ವೇಗ-ಜನಕ
ಉವ್ವೇಯಣಯ.} (ಪಾಅ), ಪುಂನ: ಒಂದು ನರಕ-ಸ್ಥಾನ
ಉವ್ವೇಲ. ಅಕ: [ಪ್ರ+ಸೃ] ಪಸರಿಸು, ಹರಡು
ಉವ್ವೇಲ. ವಿ: [ಉದ್ವೇಲ] ಮೇಲಕ್ಕೆ ಹಾರಲ್ಪಟ್ಟ
ಉವ್ವೇಲಿಅ. ವಿ: [ಉದ್ವೇಲಿತ] ಹಾರಡಲ್ಪಟ್ಟಿರುವ, ಪ್ರಸಾರಿಸಲ್ಪಟ್ಟಿರುವ
ಉವ್ವೆಲ್ಲ. 'ಉವ್ವೇಢ' ಶಬ್ದವನ್ನು ನೋಡುವುದು
ಉವ್ವೆಲ್ಲ. ಸಕ: [ಉದ್+ವೇಲ್ಲ್] ಬೇಗನೆ ಹೋಗು(ವುದು,) ತ್ಯಜಿಸು, ಬಿಟ್ಟುಬಿಡು, ಎತ್ತರಕ್ಕೆ ಹಾರು, ಎತ್ತರಕ್ಕೆ ಹೋಗು, **ಅಕ:** ಹರಡು, ಪಸರಿಸು

ಉವ್ವೆಲ್ಲ. ವಿ: [ಉದ್ವೇಲ] ಮೇಲಕ್ಕೆ ಹಾರಿದ, ಹರಡಿರುವ, ಪಸರಿಸಿರುವ, ಹುಟ್ಟಿದ, ಉತ್ಪನ್ನವಾದ ಸೀಳಲ್ಪಟ್ಟ
ಉವ್ವೆಲ್ಲಿಅ. ವಿ: [ಉದ್ವೇಲ್ಲಿತ] ಕಂಪಿತ(ಗಾ), ಚದುರಿಸಲ್ಪಟ್ಟ, ಪ್ರಸಾರಿಸಲ್ಪಟ್ಟ
ಉವ್ವೆಲ್ಲಿರ. ವಿ: [ಉದ್ವೇಲಿತೃ] ಶೀಘ್ರವಾಗಿ ಹೋಗುವ, ಬೇಗನೆ ಹೋಗುವ
ಉವ್ವೇವ. 'ಉವ್ವಿವ' ಶಬ್ದವನ್ನು ನೋಡುವುದು
ಉವ್ವೇವ. 'ಉದ್ವೇಗ' ಶಬ್ದವನ್ನು ನೋಡುವುದು
ಉವ್ವೇವಗ. ವಿ: [ಉದ್ವೇಜಕ] ಉದ್ವೇಗ-ಕಾರಕ
ಉವ್ವೇವಣಾಯ. ವಿ: [ಉದ್ವೇಜನಕ] ಉದ್ವೇಗವನ್ನುಂಟು ಮಾಡುವ, ಉದ್ವೇಗಜನಕ
ಉವ್ವೇವಯ. 'ಉವ್ವೇವಗ' ಶಬ್ದವನ್ನು ನೋಡುವುದು
ಉವ್ವೇಸರ. ಪು: [ಉದ್ವೇಶ್ವರ] ಈ ಹೆಸರಿನ ಒಬ್ಬ ರಾಜ
ಉವ್ವೇಹ. ಪು: [ಉದ್ವೇಧ] ಎತ್ತರ, ಶ್ರೇಷ್ಠತೆ, ಆಳ(ತಾ), ನೆಲದ ಆಳ(ತಾ)
ಉವ್ವೇಹಲಿಯಾ. ಸ್ತ್ರೀ: [ಉದ್ವೇಧಲಿಯಾ] ಒಂದು ಬಗೆಯ ವನಸ್ಪತಿ
ಉಸಢ. 'ಊಸಢ=ದೇ' ಶಬ್ದವನ್ನು ನೋಡುವುದು
ಉಸಡ್ಡ. ವಿ: [ದೇ] ಎತ್ತರ
ಉಸಣ. ಪು: [ಉಶನಸ್] ಗ್ರಹ-ವಿಶೇಷ, ಶುಕ್ರ, ಭಾರ್ಗವ(ಪಾಅ)
ಉಸಣಸೇಣ. ಪು: [ದೇ] ಬಲಭದ್ರ, ಬಲರಾಮ
ಉಸತ್ತ. ವಿ: [ಉತ್ಸಕ್ತ] ಮೇಲೆ ಕಟ್ಟಲ್ಪಟ್ಟ
ಉಸನ್ನ. ಪು: [ಉತ್ಸನ್ನ] ಭ್ರಷ್ಟವಾದ ಯತಿಗಳ ಒಂದು ವರ್ಗ
ಉಸಪ್ಪಿಣೀ. 'ಉಸ್ಸಪ್ಪಿಣೀ' ಶಬ್ದವನ್ನು ನೋಡುವುದು
ಉಸಭ. ಪು: [ಋಷಭ, ವೃಷಭ] ಖ್ಯಾತನಾದ ಮೊದಲ ತೀರ್ಥಂಕರ , ಗೂಳಿ, ಎತ್ತು(ಜೀವ), ಸೊಂಟಪಟ್ಟಿ (ವೇಷ್ಟನ-ಪಟ್ಟ), ದೇವ-ವಿಶೇಷ(ತಾ), ಬ್ರಾಹ್ಮಣ-ವಿಶೇಷ, **-ಕಂಠ.** ಪು:[-ಕಂಠ] ಎತ್ತಿನ ಕೊರಳು, ರತ್ನ-ವಿಶೇಷ, **-ಕೂಡ.** ಪು: [-ಕೂಟ] ಪರ್ವತ, **-ಣಾರಾಯ.** ನ: [-ನಾರಾಚ] ದೇಹ-ವಿಶೇಷ, ಶರೀರ ಬಂಧ**-ದತ್ತ.** ಪು: [-ದತ್ತ] ಬ್ರಾಹ್ಮಣ -ಕುಂಡ ಗ್ರಾಮದಲ್ಲಿ ವಾಸಿಸುವ ಒಬ್ಬ ಬ್ರಾಹ್ಮಣ. ಅವನ ಮನೆಯಲ್ಲಿಯೇ ಭಗವಾನ್ ಮಹಾವೀರರು ಅವತರಿಸಿದ್ದು(ಕಪ್ಪ). **-ಪುರ.** ನ: [-ಪುರ] ನಗರ-ವಿಶೇಷ, **-ಪುರೀ.** ಸ್ತ್ರೀ: [-ಪುರೀ] ಒಂದು ರಾಜಧಾನಿ(ತಾ), **-ಸೇಣ.** ಪು: -[ಸೇನ] ಭಗವಾನ್ ವೃಷಭದೇವನ ಪ್ರಥಮ ಗಣಧರ (ಆಚೂ) **ಪುಂನ:** ಒಂದು ದೇವ-ವಿಮಾನ.
ಉಸರ(ಪೈ). ಪುಂಸ್ತ್ರೀ: [ಉಷ್ಟ್ರ] ಒಂಟೆ
ಉಸಲಿಅ. ವಿ: [ದೇ] ರೋಮಾಂಚನಗೊಂಡ, ಪುಲಕಿತ
ಉಸಹ. 'ಉಸಭ' ಶಬ್ದವನ್ನು ನೋಡುವುದು
ಉಸಹಸೇಣ. ಪು: [ವೃಷಭಸೇನ] ತೀರ್ಥಂಕರ, ಜಿನದೇವನ ಒಂದು ಶಾಶ್ವತವಾದ ಮೂರ್ತಿ
ಉಸಾ. ಅ: [ಉಷಸ್] ಬೆಳಿಗ್ಗೆ, ಹೊತ್ತಾರೆ, ಪ್ರಾತಃಕಾಲ
ಉಸಿಣ. ವಿ: [ಉಷ್ಣ] ಬಿಸಿ, ಕಾವು, ಬೇಗೆ. **ಪುಂ.ನ:** ಬಿಸಿ ಸ್ಪರ್ಶ(ಉತ್ತ), ಉಷ್ಣತೆ,
ಉಸಿಅ. ವಿ: [ಉತ್ಸೃತ] ಹರಡಿದ, ವ್ಯಾಪಿಸಿದ
ಉಸಿಅ. ವಿ: [ಉಷಿತ] ವಾಸಮಾಡಲಾದ, ಇದ್ದ(ಸೇ)
ಉಸಿರ 'ಉಸೀರ= ಉಶೀರ' ಶಬ್ದವನ್ನು ನೋಡುವುದು
ಉಸೀರ. ನ: [ಉಶೀರ] ಸುವಾಸನೆಯಿಂದ ಕೂಡಿದ ಒಂದು ಬೇರು, ಲಾಮಂಚದ ಬೇರು(ಪಣ್ಣ)
ಉಸಾರ. ನ: [ದೇ] ಕಮಲದ ದಂಟು, ಬಿಸ
ಉಸು. ಪು:]ಇಷು} ಬಾಣ, ಶರ (ಸೂಅ), **-ಕಾರ, -ಗಾರ, -ಯಾರ,** ಪು: [**-ಕಾರ.**] ಪರ್ವತ ವಿಶೇಷ(ತಾ), ಈ ಹೆಸರಿನ ಒಬ್ಬ ರಾಜ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಪುರೋಹಿತ. ವಿ: ಬಾಣ ತಯಾರಿಸುವವನು, ಒಂದು ಹೆಸರಾಂತ ನಗರ(ಉತ್ತ)
ಉಸುಅ. ನ: [ಇಷುಕ] ಬಾಣದ ಆಕೃತಿಯ ಒಂದು ಆಭರಣ
ಉಸುಅ. ಪು: [ದೆ] ದೋಷ, ದೂಷಣ
ಉಸುಅ. ವಿ: [ಉತ್ಸುಕ] ಇಷ್ಟವಾದುದನ್ನು ಪಡೆಯಲು ತವಕಿಸುವವನು
ಉಸುಯಾಲ. ನ: [ದೇ] ಒರಳು(ರಾಜ)
ಉಸೂಲಗ. ಪು: [ದೇ] ತಗ್ಗು, ಶತ್ರು ಸೈನ್ಯವನ್ನು ನಾಶ ಮಾಡಲು ಮೇಲಿನಿಂದ ಮರೆಮಾಡಿರುವ ಹಳ್ಳ(ಖೆಡ್ಡಾ)
ಉಸ್ಸ. ಪು: ದೇ] ಹಿಮ, ಮಂಜು
ಉಸ್ಸಂಕಲಿಅ. ವಿ: [ಉತ್ಸಂಕಲಿತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ
ಉಸ್ಸಂಖಲಅ. ವಿ: [ಉಚ್ಛೃಂಕ್ಖಲಕ] ನಿರಂಕುಶ, ಅಡೆತಡೆಯಿಲ್ಲದ

ಉಸ್ಸಂಗ. ಪು: [ಉತ್ಸಂಗ] ತೊಡೆ, ಮಡಿಲು, ಉಡಿ(ನಾಟ)

ಉಸ್ಸಂಘಟ್ಟ. ವಿ: [ಉತ್ಸಂಘಟ್ಟ] ಶರೀರ ಸ್ಪರ್ಶವಿಲ್ಲದ

ಉಸ್ಸಕ್ಕ. ಅಕ: [ಉತ್+ಷ್ವಷ್ಕ್] ತವಕಪಡು, ಹಿಂದೆ ಸರಿ, ಸಕ: ಸ್ಥಗಿತಗೊಳಿಸು

ಉಸ್ಸಕ್ಕ. ಸಕ: [ಉತ್+ಷ್ವಷ್ಕ್] ಉರಿಸು, ಪ್ರಕಾಶಿಸು, ಬೆಳಗು

ಉಸ್ಸಕ್ಕಣ. ನ: [ಉತ್ಷ್ವಷ್ಕಣ] ಯಾವುದಾದರೂ ಕೆಲಸವನ್ನು ಕೆಲ ಕಾಲ ಸ್ಥಗಿತಗೊಳಿಸುವುದು

ಉಸ್ಸಕ್ಕಣ. ನ: [ಉತ್ಷ್ವಷ್ಕಣ] ಸಮೀಪಕ್ಕೆ ಬರುವುದು, ಮೇಲಕ್ಕೆ ಬರುವುದು, ಮೇಲಕ್ಕೆ ಹಾರುವುದು

ಉಸ್ಸಕ್ಕಿಯ. ವಿ: [ಉತ್ಷ್ವಷ್ಕಿತ] ಗೊತ್ತಾದ ಕಾಲದ ನಂತರ ಮಾಡಿದ

ಉಸ್ಸಗ್ಗ. ಪು: [ಉತ್ಸರ್ಗ] ತ್ಯಾಗ, ಕೆಲವು ಕಡೆ ಅನ್ವಯವಾಗುವ ಸಾಮಾನ್ಯ ನಿಯಮ(ಉಪ)

ಉಸ್ಸಗ್ಗಿ. ವಿ: [ಉತ್ಸರ್ಗಿನ್] ಸಾಮಾನ್ಯ ನಿಯಮವನ್ನು ಅರಿತವನು

ಉಸ್ಸಣ್ಣ. ವಿ: [ಅವಸನ್ನ] ನಿಮಗ್ನ, ಮುಳುಗಿ ಹೋಗಿರುವ(ಪಣ್ಣ)

ಉಸ್ಸಣ್ಣ. ಅ: [ದೇ] ಪ್ರಾಯಶಃ, ಬಹುಶಃ

ಉಸ್ಸಣ್ಹಸಣ್ಹಿಆ. ಸ್ತ್ರೀ: [ಉತ್ ಶ್ಲಕ್ಷ್ಣಶ್ಲಕ್ಷ್ಣಿಕಾ] ಒಂದು ಅಳತೆ, ಊರ್ಧ್ವರೇಣುವಿನ ೬೪ನೇ ಭಾಗ

ಉಸ್ಸನ್ನ. ವಿ: [ಉತ್ಸನ್ನ] ತನ್ನ ಧರ್ಮದಲ್ಲಿ ಸೋಮಾರಿಯಾದ ಸಾಧು(ಗುಭಾ)

ಉಸ್ಸನ್ನ. 'ಉಸ್ಸಣ್ಣ=ದೇ' ಶಬ್ದವನ್ನು ನೋಡುವುದು. **–ಭಾವ.** ಪು: [–ಭಾವ] ಸಮೃದ್ಧತೆಯ ಭಾವ, ಹೇರಳವಾಗಿರುವ ಭಾವ

ಉಸ್ಸಪ್ಪಣಾ. ಸ್ತ್ರೀ: [ಉತ್ಸರ್ಪಣಾ] ಉನ್ನತಿ, ಕಲ್ಪನೆ, ಪ್ರಕಾಶ, ಪ್ರಸಿದ್ಧಿಪಡಿಸುವುದು,

ಉಸ್ಸಪ್ಪಣ. ನ: [ಉತ್ಸರ್ಪಣ]ಉನ್ನತಿ, ಪೋಷಣೆ, ಉನ್ನತಗೊಳಿಸುವವನು

ಉಸ್ಸಪ್ಪಿಣೀ. ಸ್ತ್ರೀ: [ಉತ್ಸರ್ಪಿಣೀ] ಉನ್ನತಿಯ ಕಾಲ, ಹತ್ತಾರು ಕೋಟ್ಯಾನುಕೋಟಿ ಸಾಗರೋಪಮ ಆಳತೆಯ ಕಾಲ–ವಿಶೇಷ: ಅದರಲ್ಲಿ ಎಲ್ಲ ಪದಾರ್ಥಗಳ ಕ್ರಮಿಕ ಔನ್ನತ್ಯ ಸಾಧ್ಯವಾಗುತ್ತದೆ.

ಉಸ್ಸಯ. ಪು: [ಉಚ್ಛ್ರಯ್] ಉನ್ನತಿ, ಉಚ್ಚತೆ, ಅಹಿಂಸೆ, ಶರೀರ

ಉಸ್ಸಯಣ. ನ: [ಉಚ್ಛ್ರಯಣ] ಅಭಿಮಾನ, ಹೆಮ್ಮೆ

ಉಸ್ಸರ. ಅಕ: [ಉತ್+ಸೃ] ದೂರ ಸರಿ(ಸ್ವಪ್ನ)

ಉಸ್ಸವ. ಪು: [ಉತ್ಸವ] ಉತ್ಸವ (ಅಭಿ)

ಉಸ್ಸವಣಯಾ. ಸ್ತ್ರೀ: [ಉಚ್ಛ್ರಯಣತಾ] ಎತ್ತರದ ರಾಶಿ ಮಾಡುವುದು, ಒಟ್ಟುಗೂಡಿಸುವುದು, ಗುಡ್ಡೆಹಾಕುವುದು(ಭಗ)

ಉಸ್ಸಸ. ಅಕ: [ಉತ್+ಶ್ವಸ್] ಉಸಿರು ಒಳಕ್ಕೆ ತೆಗೆದುಕೊಳ್ಳು(=ಉಚ್ಛ್ವಾಸ), ಉಲ್ಲಾಸಗೊಳ್ಳು

ಉಸ್ಸಸಿಯ. ವಿ: [ಉಚ್ಛ್ವಸಿತ] ಉಸಿರು ಒಳಕ್ಕೆ ತೆಗೆದುಕೊಂಡ, ಉಲ್ಲಾಸಗೊಂಡ, ಉಸಿರಾಡುವ

ಉಸ್ಸಾ. ಸ್ತ್ರೀ: [ಉಸ್ರಾ] ಹಸು, ಆಕಳು, ಎತ್ತು

ಉಸ್ಸಾ.(ದೇ). 'ಓಸಾ' ಶಬ್ದವನ್ನು ನೋಡುವುದು. **–ಚಾರಣ.** ಪು: [–ಚಾರಣ] ಹಿಮವನ್ನಾಧರಿಸಿ ನಡೆಯುವ ಸಾಮರ್ಥ್ಯವುಳ್ಳ ಮುನಿ

ಉಸ್ಸಾರ. ಸಕ: [ಉತ್+ಸಾರಯ್] ದೂರ ಮಾಡು, ದೂರ ಸರಿಸು, ಹಲವು ದಿನಗಳಲ್ಲಿ ಓದಬಹುದಾದ ಗ್ರಂಥವನ್ನು ಒಂದೇ ದಿನದಲ್ಲಿ ಪಾಠಮಾಡು

ಉಸ್ಸಾರ. ಪು: [ಉತ್ಸಾರ] ಹಲವು ದಿನಗಳಲ್ಲಿ ಓದಬಹುದಾದ ಗ್ರಂಥವನ್ನು ಒಂದೇ ದಿನದಲ್ಲಿ ಪಾಠಮಾಡುವುದು, **–ಕಪ್ಪ.** ಪು: [–ಕಲ್ಪ] ಪಾಠಕ್ಕೆ ಸಂಬಂಧಿಸಿದ ಆಚಾರ–ವಿಶೇಷ(ಬೃಹ)

ಉಸ್ಸಾರಗ. ವಿ: [ಉತ್ಸಾರಕ] ದೂರ ಸರಿಸುವವನು, ಉತ್ಸಾರ ಕಲ್ಪಕ್ಕೆ ಅರ್ಹನಾದವನು

ಉಸ್ಸಾರಣ. ನ: [ಉತ್ಸಾರಣ] ದೂರೀಕರಣ, ಹಲವು ದಿನಗಳಲ್ಲಿ ಪಾಠ ಮಾಡಬೇಕಾದ ಗ್ರಂಥವನ್ನು ಒಂದೇ ದಿನದಲ್ಲಿ ಬೋಧಿಸುವುದು

ಉಸ್ಸಾರಿಯ. ವಿ: [ಉತ್ಸಾರಿತ] ದೂರೀಕರಿಸಲಾದ, ದೂರಮಾಡಲ್ಪಟ್ಟ

ಉಸ್ಸಾಸ. ಪು: [ಉಚ್ಛ್ವಾಸ] ನೀಳವಾದ ಉಸಿರು, ನಿಡಿದಾದ ಉಸಿರು, ನಿಟ್ಟುಸಿರು, ದೀರ್ಘಶ್ವಾಸ (ಆವ)**–ನಾಮ.** ನ: [–ನಾಮನ್] ದೀರ್ಘಶ್ವಾಸಕ್ಕೆ ಕಾರಣವಾದ ಕರ್ಮ–ವಿಶೇಷ

ಉಸ್ಸಾಸಯ. ವಿ: [ಉಚ್ಛ್ವಾಸಕ] ನೀಳಶ್ವಾಸ ಅಥವಾ ದೀರ್ಘಶ್ವಾಸ ತೆಗೆದುಕೊಳ್ಳುವವನು

ಉಸ್ಸಾಹ. 'ಉಚ್ಛಾಹ' ಶಬ್ದವನ್ನು ನೋಡುವುದು.

ಉಸ್ಸಿಂಖಲ. ವಿ: [ಉಚ್ಛೃಂಖಲ] ಸ್ವೇಚ್ಛೆಯಿಂದ ವರ್ತಿಸುವ, ಅಡೆತಡೆಯಿಲ್ಲದ, ನಿರಂಕುಶ

ಉಸ್ಸಿಂಘಿಯ. ವಿ: [ದೇ] ಮೂಸಿನೋಡಲ್ಪಟ್ಟ, ಆಘ್ರಾತ,
ಉಸ್ಸಿಂಚ. ಸಕ: [ಉತ್+ಸಿಚ್] ಸಿಂಪಡಿಸು, ಮೇಲೆ ಚಿಮುಕಿಸು,ಆಕ್ಷೇಪಿಸು, ಖಾಲಿಮಾಡು–ಉಸ್ಸಿಂಚತಿ
ಉಸ್ಸಿಂಚಣ. ನ: [ಉತ್ಸೇಚನ] ಸಿಂಪಡಿಸುವುದು, ಬಾವಿಯಿಂದ ನೀರನ್ನು ಹೊರತೆಗೆಯುವುದು, ಸಿಂಪಡಿಕೆಯ ಉಪಕರಣ(ಆಚಾ)
ಉಸ್ಸಿಕ್ಕ. 'ಉಸ್ಸಕ್ಕ' ಶಬ್ದವನ್ನು ನೋಡುವುದು
ಉಸ್ಸಿಕ್ಕ. ಸಕ: [ಮುಚ್] ಬಿಟ್ಟುಬಿಡು, ತ್ಯಜಿಸು
ಉಸ್ಸಿಕ್ಕ. ಸಕ: [ಉತ್+ಕ್ಷಿಪ್] ಮೇಲಕ್ಕೆ ಎಸೆ
ಉಸ್ಸಿಕ್ಕಿಅ. ವಿ: [ಮುಕ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ(ಕುಮಾ)
ಉಸ್ಸಿಕ್ಕಿಅ. ವಿ: [ಉತ್ಕ್ಷಿಪ್ತ] ಮೇಲಕ್ಕೆ ಎಸೆಯಲ್ಪಟ್ಟ, ಮೇಲೆ ಇಡಲಾಗಿರುವ
ಉಸ್ಸಿನ್ನ. ವಿ: [ಉತ್ಸ್ವಿನ್ನ] ವಿಕಾರಗೊಳಿಸಲ್ಪಟ್ಟ, ಮಂಕುಗೊಳಿಸಲ್ಪಟ್ಟ
ಉಸ್ಸಿಯ. ವಿ: [ಉಚ್ಛ್ರಿತ] ಉನ್ನತವಾದ, ಎತ್ತರವಾದ, ಮೇಲಕ್ಕೆ ಏರಿಸಲಾದ
ಉಸ್ಸಿಯ.ವಿ: [ಉತ್ಸೃತ] ಹರಡಿರುವ, ವ್ಯಾಪಿಸಿರುವ, ಮೇಲೇರಿಸಲಾದ(ಕಪ್ಪ), ಅಹಂಕಾರಿ
ಉಸ್ಸೀಸ. ನ: [ಉಚ್ಛೀರ್ಷ] ದಿಂಬು, ಲೋಡುದಿಂಬು
ಉಸ್ಸುಆವ. ಸಕ: [ಉತ್ಸುಕಯ್] ತವಕಿತನನ್ನಾಗಿಸು, ಉತ್ಸುಕನನ್ನಾಗಿಸುವುದು)
ಉಸ್ಸುಂಕ.} ವಿ: [ಉಚ್ಛುಲ್ಕ] ಶುಲ್ಕವಿಲ್ಲದ,
ಉಸ್ಸುಕ್ಕ.} ತೆರಿಗೆಯಿಲ್ಲದ, (ಣಾಯಾ)
ಉಸ್ಸುಕ್ಕ. ವಿ: [ಉತ್ಸುಕ] ತವಕದಿಂದ ಕೂಡಿದ, ಉತ್ಸುಕನಾದ
ಉಸ್ಸುಕ್ಕ.} ನ: [ಔತ್ಸುಕ್ಯ] ಉತ್ಸುಕತೆ
ಉಸ್ಸುಗ.}
ಉಸ್ಸುಕ್ಕಾವ. ವಿ: [ಉತ್ಸುಕಯ್] ಉತ್ಸುಕನನ್ನಾಗಿಸು, ತವಕಿಗನನ್ನಾಗಿ ಮಾಡುವುದದು
ಉಸ್ಸುಗ. ವಿ: [ಉತ್ಸುಕ] ಇಷ್ಟವಾದದ್ದನ್ನು ಪಡೆಯಲು ತವಕದಿಂದಿರುವವನು(ಪಣ್ಣ), ಉತ್ಸು
ಉಸ್ಸುತ್ತ. ವಿ: [ಉತ್ಸೂತ್ರ] ಸೂತ್ರ–ವಿರುದ್ಧ, ಸಿದ್ಧಾಂತಕ್ಕೆ ವಿರುದ್ಧವಾದ(ಉಪ)
ಉಸ್ಸುಯ. 'ಉಸ್ಸುಗ' ಶಬ್ದವನ್ನು ನೋಡುವುದು
ಉಸ್ಸುಯ. ನ: [ಔತ್ಸುಕ್ಯ] ಉತ್ಸುಕತೆ, ಕುತೂಹಲ, –ಕರ. ವಿ: [–ಕರ] ಉತ್ಸುಕತೆಯನ್ನುಂಟು ಮಾಡುವಂಥ
ಉಸ್ಸೂಣ. ವಿ: [ಉಚ್ಛೂನ] ಊದಿಕೊಂಡಿರುವ, ದಪ್ಪವಾದ(ಉಪ)
ಉಸ್ಸೂರ. ನ: [ಉತ್ಸೂರ] ಸಾಯಂಕಾಲ, ಸಂಜೆ
ಉಸ್ಸೇಅ. ಪು: [ಉತ್ಸೇಕ] ಸಿಂಚನ, ಉನ್ನತಿ, ಗರ್ವ, ಅಹಂಕಾರ(ಚಾರು)
ಉಸ್ಸೇಇಮ. ವಿ: [ಉತ್ಸ್ವೇದಿಮ] ಹಿಟ್ಟನ್ನು ನೀರಿನಲ್ಲಿ ಕಲಸಿದ ಮಿಶ್ರಣ, ನೀರಿನೊಂದಿಗೆ ಬೆರೆತಿರುವ ಹಿಟ್ಟು
ಉಸ್ಸೇಹ. ಪು: [ಉತ್ಸೇಧ] ಎತ್ತರ, ಶಿಖರ, ಔನ್ನತ್ಯ, ಅಭ್ಯುದಯ,
ಉಸ್ಸೇಹಂಗುಲ. ನ: [ಉತ್ಸೇಧಾಂಗುಲ] ಒಂದು ಬಗೆಯ ಅಳತೆ(ವಿಸೇ)
ಉಹ. ಸ: [ಉಭ] ಎರಡೂ, ಇಬ್ಬರು, ಯುಗ್ಮ, ಯುಗಲ, ಜೊತೆ, ಜೋಡಿ(ಷಡ್)
ಉಹಟ್ಟ. ಅಕ: [ಅಪ+ಘಟ್ಟ್] ನಷ್ಟವಾಗು, ಹಾನಿಯಾಗು
ಉಹಟ್ಟು. 'ಉವ್ವಟ್ಟ=ಉದ್+ವೃತ್' ಶಬ್ದವನ್ನು ನೋಡುವುದು
ಉಹಯ. ಸ: [ಉಭಯ] ಎರಡೂ, ಇಬ್ಬರೂ, ಯುಗಲ
ಉಹರ. ನ: [ಉಪಗೃಹ] ಸಣ್ಣ ಮನೆ, ಆಶ್ರಯ (ಪಣ್ಣ)
ಉಹಸ. ಸಕ: [ಉಪ+ಹಸ್] ಉಪಹಾಸ ಮಾಡು
ಉಹಾರ. ಪು: [ಉಹಾರ] ಒಂದು ಮತ್ಸ್ಯ, ಮೀನು
ಉಹಿಂಜಲ.} ಪು: [ದೇ] ಸ್ತ್ರೀ: ನಾಲ್ಕು ಇಂದ್ರಿಯಗಳ
ಉಹಿಂಜಲಿಆ.} ಒಂದು ಜಂತು
ಉಹು(ಅಪ). 'ಅ ಹೋ=ಅಹೋ' ಶಬ್ದವನ್ನು ನೋಡುವುದು
ಉಹುರ. ವಿ: [ದೇ] ಕೆಳಮುಖವಾದ, ಮುಖಬಾಗಿರುವ

ಊ

ಊ. ಪು: [ಊ] ಪ್ರಾಕೃತ ವರ್ಣಮಾಲೆಯ ಆರನೇ ಸ್ವರ;

ಊ. ಅ: [ದೇ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ನಿಂದೆ, 'ಊಣಿಲ್ಲಜ್ಜ' ಎಂಬಂತೆ. **ಆಕ್ಷೇಪ,** ಪ್ರಸ್ತುತ ವಾಕ್ಯದ ವಿರುದ್ಧಾರ್ಥದ ಶಂಕೆಯಿಂದ ಅದನ್ನು ತಿರುಗು-ಮುರುಗು ಮಾಡುವುದು-' **ಊ ಕಿ ಮಯೇ ಭಣಿಅಂ'** ಎಂಬಂತೆ, ವಿಸ್ಮಯ **'ಕಹ ಮುಣಿಯಾ ಅಹಯಂ'** **ಎಂಬಂತೆ, ಸೂಚನೆ-'ಊ ಕೇಣ ಣಾ ವಿಗಣಾಯಂ'** ಎಂಬಂತೆ

ಊಅಟ್ಠ. ವಿ: [ಅವವೃಷ್ಟ] ಮಳೆಯಿಲ್ಲದ(ಪಾಅ)

ಊಆ. ಸ್ತ್ರೀ: [ದೇ] ಹೇನು, ಕೂರೆ

ಊಆಸ. ಪು: [ಉಪವಾಸ] ಊಟವಿಲ್ಲದೆ ಇರುವುದು

ಊಗಿಯ. ವಿ: [ದೇ] ಅಲಂಕರಿಸಲ್ಪಟ್ಟ

ಊಜ್ಝಾಅ. 'ಉವಜ್ಝಾಯ' ಶಬ್ದವನ್ನು ನೋಡುವುದು

-ಊಡ. 'ಕೂಡ' ಶಬ್ದವನ್ನು ನೋಡುವುದು

ಊಢ. ವಿ: [ಊಢ] ಹೊರಿಸಲ್ಪಟ್ಟಿರುವ, ಧರಿಸಲ್ಪಟ್ಟಿರುವ (ಗಉಡ), ಮದುವೆಯಾಗಿರುವ, ವಿವಾಹಿತ

ಊಢಾ. ಸ್ತ್ರೀ: [ಊಢಾ] ವಿವಾಹಿತ ಸ್ತ್ರೀ(ಪಾಅ)

ಊಢಿಅಯ. ವಿ: [ದೇ] ಹೊದಿಸಲ್ಪಟ್ಟ, ಆವರಿಸಲ್ಪಟ್ಟ, ನ: ಆಚ್ಛಾದನ, ಆವರಣ

ಊಣ. ವಿ: [ಋಣ] ಸಾಲ

ಊಣಂದಿಅ.ವಿ:[ದೇ]ಆನಂದಿತನಾದ,ಹರ್ಷಗೊಂಡ

ಊಣಿಮಾ. ಸ್ತ್ರೀ: [**ಪೂರ್ಣಿಮಾ**] ಹುಣ್ಣಿಮೆ

ಊಣಿಯ. ವಿ: [ಊನಿತ] ಕಡಿತಗೊಳಿಸಲಾದ, ಊನಗೊಳಿಸಲಾದ(ಜಂ)

ಊಣೋಯರಿಆ. ಸ್ತ್ರೀ: [ಊನೋದರಿತಾ] ಕಡಿಮೆ ಆಹಾರ ಸೇವಿಸುವುದು, ಒಂದು ತಪಸ್ಸು

ಊತಾಲೀಸ.} ಸ್ತ್ರೀನ: [**ಏಕೋನಚತ್ವಾರಿಂಶತ್**]
ಊಯಾಲ.} ಮೂವತ್ತೊಂಬತ್ತು

ಊಮಿಣಣ. ನ: [ದೇ] ಮುದ್ದಿಸುವುದು

ಊಮಿಣಿಯ. ವಿ: [ದೇ] ಸ್ನಾನಾನಂತರ ಶರೀರವನ್ನು ಒರೆಸಿಕೊಂಡವನು

ಊಮಿತ್ತಿಅ. ನ: [ದೇ] ಎರಡೂ ಪಾರ್ಶ್ವಗಳಿಗೆ ಆಘಾತ ಉಂಟುಮಾಡುವುದು(ದೇ)

ಊರ. ಪು: [ದೇ] ಗ್ರಾಮ, ಸಮೂಹ

-ಊರ. **'ತೂರ'** ಶಬ್ದವನ್ನು ನೋಡುವುದು

-ಊರ. **'ಪೂರ'** ಶಬ್ದವನ್ನು ನೋಡುವುದು

ಊರಣ. ಪು: [**ಪೂರಣ**] ಕುರಿ(ದೇ)

ಊರಣೀ. ಸ್ತ್ರೀ: [ದೇ] ಹೆಣ್ಣು ಕುರಿ

ಊರಣೀಅ. ವಿ: [ಔರಣಿಕ] ಕುರಿ ಮೇಯಿಸುವವನು

-ಊರಯ. ವಿ: [**ಪೂರಕ**] ಪೂರ್ತಿ ಮಾಡುವಂಥದು (ಭವಿ)

ಊರಸ. ವಿ: [ಔರಸ] ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ, ಮದುವೆಯಾದ ಹೆಂಡತಿಯಲ್ಲಿ ಹುಟ್ಟಿದ ಮಗ(ತಾ)

ಊರಿಸಂಕಿಅ. ವಿ: [ದೇ] ರುದ್ಧ, ತಡೆಯಲ್ಪಟ್ಟ

ಊರೀ. ಅ: [ಊರೀ] ಅಂಗೀಕಾರ, ಒಪ್ಪಿಗೆ, ವಿಸ್ತಾರ, **-ಕಯ.** ವಿ: [-ಕೃತ] ಅಂಗೀಕೃತ ಸ್ವೀಕೃತ(ಣಾಯಾ)

ಊರು. ಪು: [ಊರು] ತೊಡೆ

ಊರುದಗ್ಘ. ವಿ: [ಊರುದಘ್ನ] ತೊಡೆಯವರೆಗಿನ ಆಳತೆಉಳ್ಳ

ಊರುದ್ದಆಸ. ವಿ: [ಊರುದ್ವಯುಸ] ಮೇಲಿನ ಶಬ್ದವನ್ನು ನೋಡುವುದು

ಊರುಮೆತ್ತ. ವಿ: [ಊರುಮಾತ್ರ] ಮೇಲಿನ ಶಬ್ದವನ್ನು ನೋಡುವುದು

ಊಲ. ಪು: [ದೇ] ಸಂಚಾರಕ್ಕೆ ತಡೆ, ಹೊರಡಲು ಅಡ್ಡಿ(ದೇ)

-ಊಲ. **'ಕೂಲ'** ಶಬ್ದವನ್ನು ನೋಡುವುದು(ಗಾ)

ಊಸ. ಪು: [ಉಸ್ರ] ಕಿರಣ, **-ಮಾಲಿ.** ಪು: [-**ಮಾಲಿನ್**] ಸೂರ್ಯ(ಕುಮಾ)

ಊಸ. ಪು: [ಊಷ] ಚೌಳುಭೂಮಿ(ಪಣ್ಣ)

ಊಸಅ. ನ: [ದೇ] ತಲೆದಿಂಬು

ಊಸಢ. ವಿ: [ದೇ.ಉಚ್ಛ್ರಿತ] ಉಚ್ಚ, ಶ್ರೇಷ್ಠ(ಆಚಾ), **ಹೊಸತಾದ,** ಹಸನಾದ

ಊಸಣ. ನ: [ದೇ] ಸಂಚಾರಕ್ಕೆ ತಡೆ, ಹೊರಡಲು ಅಡ್ಡಿ

ಊಸಣ್ಣಸಣಿಹಯಾ. **'ಉಸ್ಸಣ್ಣಸಣಿಹಯಾ.'** ಶಬ್ದವನ್ನು ನೋಡುವುದು

ಊಸತ್ತ. **'ಉಸತ್ತ'** ಶಬ್ದವನ್ನು ನೋಡುವುದು

ಊಸತ್ಥ. ಪು: [ದೇ] ಆಕಳಿಕೆ, ವಿ: ಆಕುಲ, ವ್ಯಾಕುಲ
ಊಸಯ. ಪು: [ಉಚ್ಛ್ರಯ] ಎತ್ತರ, ಔನ್ನತ್ಯ, ಎತ್ತರವನ್ನಳೆಯುವ ಅಂಗುಲ
ಊಸರ. ಅಕ: [ಉತ್+ಸೃ] ದೂರಾಗು, ದೂರ ಸರಿ, ಸಕ: ಬಿಟ್ಟುಬಿಡು
ಊಸರ. ನ: [ಊಷರ] ಬೀಜ ಮೊಳೆಯದ ಚೌಳುಭೂಮಿ
ಊಸರಣ. ನ: [ಉತ್ಸರಣ] ಆರೋಹಣ, ಹತ್ತುವುದು, ಮೆಟ್ಟಿಲು
ಊಸಲ. ಅಕ: [ಉತ್+ಲಸ್] ಉಲ್ಲಾಸ ಹೊಂದು, –'ಊಸಲಇ'(ಕುಮಾ)
ಊಸಲ. ವಿ: [ದೇ] ಬಲಿಷ್ಠವಾದ, ದಪ್ಪಗಿರುವ, ಪುಷ್ಟ
ಊಸಲಿಅ. ವಿ: [ಉಲ್ಲಸಿತ] ಉಲ್ಲಾಸಗೊಂಡ, ಹೊಳೆಯುವ, ಹುಟ್ಟಿದ(ಪಾಅ)
ಊಸಲಿಅ. ವಿ: [ದೇ] ರೋಮಾಂಚನಗೊಂಡ, ಪುಲಕಿತ(ದೇ)
ಊಸವ. 'ಉಸ್ಸವ=ಉತ್ಸವ' ಶಬ್ದವನ್ನು ನೋಡುವುದು
ಊಸವಿಅ. ವಿ: [ದೇ] ಉದ್ಭ್ರಾಂತ, ಗಾಬರಿಗೊಂಡ, ಕಳವಳಗೊಂಡ, ಉನ್ನತಗೊಳಿಸಲಾದ, ವಾಂತಿ ಮಾಡಲ್ಪಟ್ಟ(ಷಡ್)
ಊಸವಿಅ. ವಿ: [ಉಚ್ಛ್ರಿತ] ನೆಟ್ಟಗೆ ನಿಂತಿರುವ ಶ್ರೇಷ್ಠವಾದ
ಊಸಸ. ಸಕ: [ಉತ್+ಶ್ವಸ್] ಉಸಿರು ತೆಗೆದುಕೊಳ್ಳು, ನಿಡಿದಾದ ಉಸಿರು ತೆಗೆದುಕೊಳ್ಳು, ವಿಕಸಿತಗೊಳ್ಳು, ಪುಲಕಿತಗೊಳ್ಳುವುದು
ಊಸಸಣ, ನ: [ಉಚ್ಛ್ವಸನ] ಉಸಿರಾಡುವಿಕೆ, ನಿಟ್ಟುಸಿರು ಬಿಡುವಿಕೆ. **–ಲದ್ಧಿ.** ಸ್ತ್ರೀ: [–ಲಬ್ಧಿ] ಶ್ವಾಸೋಚ್ಛ್ವಾಸದ ಶಕ್ತಿ(ಕಮ್ಮ)
ಊಸಸಿಅ. ನ: [ಉಚ್ಛ್ವಸಿತ] ಉಸಿರಾಡುವ, ವಿ: ಉಲ್ಲಾಸದಿಂದ ಕೂಡಿದ, ಪುಲಕಿತ
ಊಸಸಿರ. ವಿ: [ಉಚ್ಛ್ವಸಿತೃ] ಉಸಿರು ತೆಗೆದು ಕೊಳ್ಳುವವನು,
ಊಸಾಅಂತ. ವಿ: [ದೇ] ದುಃಖದಿಂದ ದಣಿದ
ಊಸಾಇಅ. ವಿ: [ದೇ] ಎಸೆಯಲ್ಪಟ್ಟ, ಬಿಸಾಡಲ್ಪಟ್ಟ (=ವಿಕ್ಷಿಪ್ತ), ಮೇಲಕ್ಕೆ ಹಾರಿಸಲ್ಪಟ್ಟ
ಊಸಾರ. ಸಕ: [ಉತ್+ಸಾರಯ್] ದೂರಮಾಡು, ಇಟ್ಟುಬಿಡು
ಊಸಾರ. ಪು: [ದೇ] ಹಳ್ಳ, ಗುಹೆ
ಊಸಾರ. ಪು: [ಉತ್ಸಾರ] ತ್ಯಜಿಸುವುದು, ಬಿಟ್ಟುಬಿಡುವುದು
ಊಸಾರ. ಪು: [ಆಸಾರ] ವೇಗವಾದ ಮಳೆ(ಷಡ್)
ಊಸಾರಿ. ವಿ: [ಆಸಾರಿನ್] ವೇಗದಿಂದ ಸುರಿಯುವ ಮಳೆ
ಊಸಾರಿಅ. ವಿ: [ಉತ್ಸಾರಿತ] ದೂರಮಾಡಲಾದ, (ಮಹಾ)
ಊಸಾಸ. ಪು: [ಉಚ್ಛ್ವಾಸ] ಉಸಿರು, ನಿಡಿದಾದ ಉಸಿರು, ಮರಣ(ಬೃಹ), **–ಣಾಮ.** ನ: [–ನಾಮನ್] ಕರ್ಮ–ವಿಶೇಷ
ಊಸಾಸಯ. ವಿ: [ಉಚ್ಛ್ವಾಸಕ] ಉಸಿರು ತೆಗೆದುಕೊಳ್ಳುವವನು
ಊಸಾಸಿಅ. ವಿ: [ಉಚ್ಛ್ವಾಸಿತ] ಅಡೆತಡೆಯಿಲ್ಲದೆ ಸರಾಗವಾಗಿ ಉಸಿರು ತೆಗೆದುಕೊಂಡ,
ಊಸಾಹ. ಪು: [ಉತ್ಸಾಹ] ಉತ್ಸಾಹ, ಹುರುಪು
ಊಸಿ. ಸಕ: [ಉತ್+ಶ್ರಿ] ಉನ್ನತೀಕರಿಸು, ಎತ್ತರವಾಗಿಸು
ಊಸಿಕ್ಕ. ಸಕ: [ಉತ್+ಷ್ವಷ್ಕ್] ಉನ್ನತಗೊಳಿಸು, ಉನ್ನತೀಕರಿಸು
ಊಸಿಕ್ಕಿಅ. ವಿ: [ದೇ] ಉರಿಯುವ, ಪ್ರಕಾಶಿಸುವ, ಶೋಭಿಸುವ
ಊಸಿತ್ತ. ವಿ: [ಉತ್ಸಿಕ್ತ] ಗರ್ವಿತ, ಉದ್ಧಟ, ಮಿತಿಮೀರಲಾದ, ಹೆಚ್ಚಾದ
ಊಸಿತ್ತ. ವಿ: [ಅವಸಿಕ್ತ] ಚಿಮುಕಿಸಲ್ಪಟ್ಟ, ನೆನೆಸಲ್ಪಟ್ಟ, ಬಳಿಯಲ್ಪಟ್ಟ
ಊಸಿಯ. 'ಉಸ್ಸಿಯ=ಉಚ್ಛ್ರಿತ' ಶಬ್ದವನ್ನು ನೋಡುವುದು
ಊಸೀಸ.} ನ: [ಉಚ್ಛೀರ್ಷ,ಕ] ತಲೆದಿಂಬು(ಣಾಯಾ)
ಊಸೀಸಗ.}
ಊಸೀಸಯ.}
ಊಸುಅ. ವಿ: [ಉತ್ಸುಕ] ಇಷ್ಟವಾದ್ದನ್ನು ಪಡೆಯಲು ತವಕಿಸುವವನು(ಗಾ)
ಊಸುಅ. ವಿ: [ಉಚ್ಛುಕ] ಶುಕ ಹೊರ ಹೊಮ್ಮುವ ಸ್ಥಾನ
ಊಸುಇಅ. ವಿ: [ಉತ್ಸುಕಿತ] ಉತ್ಸುಕನಾಗಿ ಮಾಡಲ್ಪಟ್ಟ
ಊಸುಂಭ. ಅಕ: [ಉತ್+ಲಸ್] ಉಲ್ಲಾಸಗೊಳ್ಳು
ಊಸುಂಭಿಅ. ನ: [ದೇ] ಉಲ್ಲಾಸಗೊಂಡ(ಕುಮಾ)

ಊಸುಂಭಿಅ. ನ: [ದೇ] ರೋದನ, ಗದ್ಗದಿಸಿ ಅಳುವುದು
ಊಸುಕ್ಕಿಅ. ವಿ: [ದೇ] ವಿಮುಕ್ತ, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ
ಊಸುಗ. **'ಊಸುಅ=ಉತ್ಸುಕ'** ಶಬ್ದವನ್ನು ನೋಡುವುದು
ಊಸುಗ. ನ: [ದೇ] ಮಧ್ಯಭಾಗ
ಊಸುಮ್ಮಿಅ. ವಿ: [ದೇ] ತಲೆದಿಂಬಾಗಿ ಮಾಡಿಕೊಂಡ (ಷಡ್)
ಊಸುರ. ನ: [ದೇ] ತಾಂಬೂಲ, ಎಲೆ-ಅಡಿಕೆ
ಊಸುಸ್ಸುಂಭಿಅ. (ದೇ) **'ಊಸುಂಭಿಅ'** ಶಬ್ದವನ್ನು ನೋಡುವುದು
ಊಹ. ಸಕ: [ಊಹ್] ತರ್ಕಮಾಡು, ವಿಚಾರಮಾಡು,
ಊಹ. ಪು: [ಊಹ] ವಿಚಾರ, ವಿವೇಕ-ಬುದ್ಧಿ, ತರ್ಕ, ವಿತರ್ಕ, ಸಂಖ್ಯಾ-ವಿಶೇಷ(ರಾಜ), ಅವ್ಯಕ್ತ ಜ್ಞಾನ (ವಿಸೇ)
ಊಹಂಗ. ನ: [ಊಹಾಂಗ] ಸಂಖ್ಯಾ-ವಿಶೇಷ,
ಊಹಟ್ಟ. ವಿ: [ದೇ] ಉಪಹಾಸ್ಯ, ನಗುವಿನಿಂದ ಮಾಡುವ ಗೇಲಿ
ಊಹಸಿಯ. ವಿ: [ಉಪಹಸಿತ] ಉಪಹಾಸ ಮಾಡಲ್ಪಟ್ಟ, ಗೇಲಿಮಾಡಲ್ಪಟ್ಟ
ಊಹಾ. ಸ್ತ್ರೀ: [ಊಹಾ] ತರ್ಕ, ವಿಚಾರ-ಬುದ್ಧಿ (ಆವಮ)
ಊಹಾಪೋಹ. ತರ್ಕ-ವಿತರ್ಕ
ಊಹಿಅ. ವಿ: [ಊಹಿತ] ಊಹೆ ಅಥವಾ ಕಲ್ಪನೆಯಿಂದ ತಿಳಿದು ಬಂದ, ಊಹಿಸಲ್ಪಟ್ಟ(ಸೇ)

ಏ-ಐ

ಏ. ಪು: [ಏ] ಸ್ವರ-ವರ್ಣ ವಿಶೇಷ
ಏ. ಅ: [ಏ, ಐ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಕರೆ, ಸಂಬೋಧನೆ - 'ಏ ಏಹಿ ಸವಡಹುತ್ತೋ ಮಜ್ಝ' ಎಂಬಂತೆ. ವಾಕ್ಯಾಲಂಕಾರ, ಸ್ಮರಣೆ, ಅಸೂಯೆ, ಅನುಕಂಪೆ, ಆಹ್ವಾನ.
ಏ. ಸಕ: [ಆ+ಇ] ಬರುವುದು, ಆಗಮಿಸುವುದು- 'ಏಹ'. ವ. ಕೃ-ಏಂತ
ಏಅ. ವಿ: [ಏತ] ಬಂದಿರುವ
ಏ-. 'ಎತ್ತಿಅ' ಶಬ್ದವನ್ನು ನೋಡುವುದು
ಏ-. 'ಏವಂ' ಅನ್ನು ನೋಡುವುದು
ಏಅ. ಸ: [ಏತತ್] ಇವನು, ಇವಳು, ಇದು(ಭಗ), -ಏಆರಿಸ್. ವಿ: [ಏತಾದೃಶ್] ಇಂಥ, ಇದರಂಥ, ಈ ರೀತಿಯ(ದ್ರ), -ಏಆರೂವ. ವಿ: [-ರೂಪ] ಇಂಥ, ಈ ಬಗೆಯ, ಈ ಥರದ(ಣಾಯಾ)
ಏಅ. 'ಏಗ' ಶಬ್ದವನ್ನು ನೋಡುವುದು(ಗಉಡ). -ಆಇ. ವಿ: [-ಆಕಿನ್] ಏಕಾಕಿ, ಒಬ್ಬನೇ. ಏಆರಹ. ತ್ರಿ ಬ. [ಏಕಾದಶನ್] ಹನ್ನೊಂದು, ಏಆರಹಮ. ವಿ: [ಏಕಾದಶ] ಹನ್ನೊಂದನೆಯ (ಭವಿ)
ಏಅ. 'ಏವ=ಏವ' ಶಬ್ದವನ್ನು ನೋಡುವುದು
ಏಅ.} 'ಏವಂ' ಶಬ್ದವನ್ನು ನೋಡುವುದು
ಏಅಂ.}
ಏಅಂತ. 'ಏಕ್ಕಂತ' ಶಬ್ದವನ್ನು ನೋಡುವುದು
ಏಆಈಸ(ಅಪ). ಪು. ಬ. [ಏಕವಿಂಶತಿ] ಇಪ್ಪತ್ತೊಂದು
ಏಯಾರಿಚ್ಛ. ವಿ: [ಏತಾದೃಶ] ಇಂಥ
ಏಇಜ್ಜಮಾಣ. 'ಏಯ=ಏಜ್'ಶಬ್ದವನ್ನು ನೋಡುವುದು
ಏಇಯ. ವಿ: [ಏಜಿತ] ಕಂಪಿತ, ಅಲಗಾಡಿಸಲ್ಪಟ್ಟ, ನಡುಗಿಸಲ್ಪಟ್ಟ
ಏಇಸ. 'ಏಈಸ' ಶಬ್ದವನ್ನು ನೋಡುವುದು.
ಏಇಸ. ವಿ: [ಏತಾದೃಶ] ಏಸಈ. ಇಂಥ, ಈ ರೀತಿಯ, ಇದರಂಥ
ಏಉಂಜೆ(ಅಪ). ಅ: [ಏವಮೇವ] ಹೀಗೆಯೇ, ಇದೇ, ಈ ರೀತಿಯೇ

ಏಊಣ. 'ಏಗೂಣ' ಶಬ್ದವನ್ನು ನೋಡುವುದು
ಏಂತ. ಇ=ಇ ಅನ್ನು ನೋಡುವುದು
ಏಂತ. 'ಏ=ಆ+ಇ' ಅನ್ನು ನೋಡುವುದು
ಏಕ. 'ಎಕ್ಕ ಹಾಗೂ ಏಗ' ಶಬ್ದಗಳನ್ನು ನೋಡುವುದು. -ಇಆ. ಅ [ದಾ] ಒಂದು ಕಾಲದಲ್ಲಿ, ಯಾವುದೋ ಸಮಯದಲ್ಲಿ. -ಲ. (ಅಪ). ವಿ: [-ಕ] ಏಕಾಕಿ. -ಲಿಯ. ವಿ: [ಏಕಾಕಿನ್] ಏಕಾಕಿ, ಒಬ್ಬನೇ, ಏಕಾಣಉಇ. ಸ್ತ್ರೀ: [-ನವತಿ] ತೊಂಬತ್ತೊಂದು
ಏಕೂಣ. 'ಅಉಣ=ಏಕೋನ' ಶಬ್ದವನ್ನು ನೋಡುವುದು
ಎಕ್ಕ. 'ಏಕ ಮತ್ತು ಏಗ' ಶಬ್ದವನ್ನು ನೋಡುವುದು (ಸುಪಾ). -ವಏ. 'ಏಗಪಏ' ಶಬ್ದವನ್ನು ನೋಡುವುದು. -ಸಣಿಯ. ವಿ: [-ಏಕ್ಕಾಶನಿಕ] ಒಮ್ಮೆ ಮಾತ್ರ ಊಟಮಾಡುವವನು. -ಸತ್ತರಿ. ಸ್ತ್ರೀ: [-ಸಪ್ತತಿ] ಸಂಖ್ಯೆ: ಎಪ್ಪತ್ತೊಂದು. -ಸರಗ. -ಸರಯ. ವಿ: [-ಸರಕ, -ಸರ್ಗ] ಒಂದೇ ಸಮ ಒಂದೇಥರ(ಉವಾ, ಭಗ), -ಸಿ. ಅ: [-ಶಸ್] ಒಮ್ಮೆ, ಒಂದು ಬಾರಿ. -ಸಿ. ಅ. [-ತ್ರ] ಯಾವುದಾದರೂ ಒಂದರಲ್ಲಿ. -ಸಿ, -ಸಿಅಂ, ಅ: [-ದಾ] ಯಾವುದೋ ಒಂದು ಕಾಲದಲ್ಲಿ, -ಸಿಂ. ಅ: [-ಶಸ್] ಒಂದು ಸಲ. ಎಕ್ಕಾಇ. ವಿ: [ಏಕಾಕಿನ್] ಏಕಾಕಿ(ಪ್ರಯೌ), ಎಕ್ಕಾಇ. ಪು: [ಏಕಾದಿ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಮಾಂಡಲಿಕ. ಎಕ್ಕಾಣಉಯ. ವಿ :[-ನವತ] ತೊಂಬತ್ತೊಂದನೆಯ. ಎಕ್ಕಾರಸಮ. ವಿ: [ಏಕಾದಶ] ಹನ್ನೊಂದನೆಯ(ವಿಪಾ). -ರಹ. ತ್ರಿ. ಬ. [ಏಕಾದಶನ್] ಹನ್ನೊಂದು(ಹತ್ತು+ ಒಂದು), ಎಕ್ಕಾಸೀಇ. ಸ್ತ್ರೀ: [ಏಕಾಶೀತಿ] ಸಂಖ್ಯೆ: ಎಂಬತ್ತೊಂದು. ಎಕ್ಕಾಸೀಇವಿಹ. ವಿ: [ಏಕಾಶೀತಿವಿಧಾ] ೮೧ ರೀತಿಯ. ಎಕ್ಕಾಸೀಯ. ವಿ: [ಏಕಾಶೀತ] ಎಂಬತ್ತೊಂದನೆಯ. ಎಕ್ಕೋತ್ತರಸ್ಯ. ವಿ: [ಏಕೋತ್ತರಶತವು] ಒಂದುನೂರಾ ಒಂದನೆಯ(ಪಉವ). ಏಕ್ಕೋಯರ. ಪು: [ಏಕೋದರ] ಸಹೋದರ (ಪಉಮ) ಎಕ್ಕೋಯರಾ. ಸ್ತ್ರೀ: [ಏಕೋದರಾ] ಸಹೋದರಿ.

ಎಕ್ಕ. ವಿ: [ಏಕಕ] ಏಕಾಕಿ(ಹೇಕಾ)
ಎಕ್ಕ. ವಿ: [ದೇ] ಸ್ನೇಹಪರ, ಪ್ರೇಮದಲ್ಲಿ ಮುಳುಗಿರುವ(ಭವಿ)
ಎಕ್ಕಂಗ. ನ: [ದೇ] ಚಂದನ
ಎಕ್ಕಂತ. ಪು: [ಏಕಾಂತ] ಶಾಶ್ವತ, ತತ್ವ, ಅವಶ್ಯಕವಾಗಿ, ಅಸಾಧಾರಣತೆ, ಅತಿಶಯ(ಸೇ), ನಿರ್ಜನ, ವಿಚಿತ್ರ(ಗಾ). ಏಕಾಂತ ಶಬ್ದವನ್ನು ನೋಡುವುದು
ಎಕ್ಕಕ್ಕ. ವಿ: [ಏಕೈಕ] ಪ್ರತ್ಯೇಕವಾದ, ಒಂದೊಂದು
ಎಕ್ಕಕ್ಕಮ. ವಿ: [ದೇ] 'ಏಕ್ಕೈಕ್ಕಮ' ಶಬ್ದವನ್ನು ನೋಡುವುದು
ಎಕ್ಕಗಸಿತ್ಥ ನ: [ಏಕಸಿಕ್ಥ] ತಪೋ–ವಿಶೇಷ
ಎಕ್ಕಗ್ಗ. 'ಏಗ–ಗ್ಗ' ಶಬ್ದವನ್ನು ನೋಡುವುದು
ಎಕ್ಕಘರಿಲ್ಲ. ಪು: [ದೇ] ಮೈದುನ,
ಎಕ್ಕಣಡ. ಕಥಕ, ಕಥೆ ಹೇಳುವವನು(ದೇ)
ಎಕ್ಕಮುಹ. ವಿ: [ದೇ] ಧರ್ಮವಿರದ, ಧರ್ಮರಹಿತ, ಬಡವ, ದರಿದ್ರ, ಇಷ್ಟವಾದ
ಎಕ್ಕಮೆಕ್ಕ. ವಿ: [ಏಕೈಕ] ಪ್ರತ್ಯೇಕ, ಬೇರೆಬೇರೆಯಾದ ಒಂದೊಂದು
ಎಕ್ಕಲ್ಲ. ವಿ: [ದೇ] ಪ್ರಬಲ, ಬಲಿಷ್ಠ(ಷಡ್)
ಎಕ್ಕಲ್ಲಪುಡಿಂಗ. ನ: [ದೇ] ತೀರ ಕಡಿಮೆ ಮಳೆಹನಿ ಬೀಳುವುದು
ಎಕ್ಕಸರಿಅಂ. ಅ: [ದೇ] ಶೀಘ್ರ, ಬೇಗನೆ, ತಕ್ಷಣ, ಈಗ, ಈ ದಿನಗಳಲ್ಲಿ, ಈ ಕಾಲದಲ್ಲಿ
ಎಕ್ಕಸಿರಿಆ. ಅ: [ದೇ] ಶೀಘ್ರ, ಬೇಗನೆ
ಎಕ್ಕಸಾಹಿಲ್ಲ. ವಿ: [ದೇ] ಒಂದು ಜಾಗದಲ್ಲಿ ಇರುವವನು, ವಾಸಿಸುವವನು
ಎಕ್ಕಸಿಂಬಲೀ. ಸ್ತ್ರೀ: [ದೇ] ಶಾಲ್ಮಲಿ ಹೂಗಳಿಂದ ಹೊಸ ಫಲ ಪಡೆದಿರುವ
ಎಕ್ಕಸೇಸ. 'ಏಗ–ಸೇಸ' ಶಬ್ದವನ್ನು ನೋಡುವುದು
ಎಕ್ಕಹ. 'ಏಗ' ಶಬ್ದವನ್ನು ನೋಡುವುದು
ಎಕ್ಕಾರ. ಪು: [ಅಯಸ್ಕಾರ] ಕಮ್ಮಾರ(ಹೇ, ಕುಮಾ)
ಎಕ್ಕೀ. ಸ್ತ್ರೀ: [ಏಕಾ] ಒಬ್ಬ ಹೆಣ್ಣು (ನಿಚೂ)
ಎಕ್ಕೂಣ. 'ಅಉಣ' ಶಬ್ದವನ್ನು ನೋಡುವುದು.
ಎಕ್ಕೆಕ್ಕಮ. ವಿ: [ದೇ] ಪರಸ್ಪರ, ಅನ್ಯೋನ್ಯ (ಪಉಮ)
ಎಕ್ಕೆಲ್ಲ.} 'ಏಗ' ಶಬ್ದವನ್ನು ನೋಡುವುದು
ಎಕ್ಕೊಲ್ಲ.}
ಏಗ. ಸ: [ಏಕ] ಒಂದು(ಮೊದಲ ಸಂಖ್ಯೆ), ಏಕಾಕಿ, ಒಬ್ಬಂಟಿ, ಅದ್ವಿತೀಯ, ಅಸಹಾಯ. (=ಇತರರ ನೆರವಿಲ್ಲದವನು), ಅನ್ಯ, ಬೇರೆಯವನು, ಸಮಾನ, ಸದೃಶ(ಉವಾ), **–ಇಯ.** 'ಏಗ' ಶಬ್ದವನ್ನು ನೋಡುವುದು. **ಇಯ.** ವಿ: [–ಕ] ಏಕಾಕಿ, ಒಬ್ಬಂಟಿ(ಭಗ), **–ಓ.** ಅ: [–ತಸ್] ಒಂದು ಕಡೆಯಲ್ಲಿ(ಕಪ್ಪ)**–ಕ್ಖರಿಯ.** ವಿ: [ಏಕಾಕ್ಷರಿಕ] ಒಂದು ಅಕ್ಷರವುಳ್ಳ, **–ಖಂಧೀ.** ಸ್ತ್ರೀ: [–ಸ್ಕಂಧ], ಒಂದು ಕೊಂಬೆಉಳ್ಳ(ಮರವೇ ಮೊದಲಾದವು), **–ಖುರ.** ವಿ: [–ಖುರ] ಒಂದು ಖುರವುಳ್ಳ(ಹಸುಮೊದಲಾದ ಪಶುಗಳು)(ಪಣ್ಣ), **–ಗ.** ವಿ:[–ಕ] ಏಕಾಕಿ, ಒಬ್ಬಂಟಿ, **–ಚಕ್ಖು.** ವಿ: [**–ಚಕ್ಷುಷ್ಕ**] ಒಂದು ಕಣ್ಣುಳ್ಳ: ಏಕಾಕ್ಷ, ಒಕ್ಕಣ್ಣ, **–ಚತ್ತಾಲ.**ವಿ:[**–ಚತ್ವಾರಿಂಶ**] ನಲವತ್ತೊಂದನೆಯ, **–ಚರ.** ವಿ: [**–ಚರ**] ಏಕಾಂಗಿಯಾಗಿ ಅಲೆದಾಡುವವನು (ಆಚಾ), **–ಚರಿಯಾ.** ಸ್ತ್ರೀ: [**–ಚರ್ಯಾ**] ಏಕಾಂಗಿಯಾಗಿ ವಿಹರಿಸುವುದು,**–ಚಾರಿ.** ವಿ: [**–ಚಾರಿನ್**] ಒಬ್ಬನೇ ಸಂಚರಿಸುವುದು(ಸೂಅ), **–ಚೂಡ.** ಪು: [**–ಚೂಡ**] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). **–ಚ್ಛತ್ತ.** ವಿ: [**–ಚ್ಛತ್ರ**] (ಪಉಮ), ಪೂರ್ಣ ಪ್ರಭುತ್ವ ಹೊಂದಿದವನು. ಯಾವುದೇ ಕಂಟಕವಿಲ್ಲದವನು(ಪಣ್ಣ), ಅದ್ವಿತೀಯ. **–ಜಡಿ.** ವಿ: [**–ಜಟಿನ್**] ಮಹಾ ಗ್ರಹ(ಠಾ), **–ಜಾಯ.** ವಿ: [**–ಜಾತ**] ಒಬ್ಬಂಟಿ, ಒಂಟಿಯಾಗಿ ಹುಟ್ಟಿದವನು. **–ಟ್ಠ.** ವಿ: [**–ಸ್ಥ**] ಒಟ್ಟುಗೂಡಿಸಲ್ಪಟ್ಟ, **–ಟ್ಠ.** ವಿ: [**ಏಕಾರ್ಥ**] ಒಂದೇ ಅರ್ಥ ಹೊಂದಿರುವ, (ಓಘ), **–ಟ್ಠ. ಟ್ಠ.** ಅ: [**–ತ್ರ**] ಒಂದು ಕಡೆಯಲ್ಲಿ, **–ಟ್ಠಿಯ.** ವಿ: [**ಏಕಾರ್ಥಿಕ**] ಒಂದು ಅರ್ಥ ಮಾತ್ರ ಉಳ್ಳ, ಸಮಾನಾರ್ಥಕ ಶಬ್ದ, **–ಟ್ಠಿಯ.** ವಿ: [ಏಕಾಸ್ಥಿಕ] ಹಣ್ಣಿನಲ್ಲಿ ಒಂದೇ ಒಂದು ಬೀಜ ಹೊಂದಿರುವ ಮಾವು, ನೇರಳೆ ಮುಂತಾದ ಮರಗಳು(ಪಣ್ಣ), **–ಣಾಸಾ.** ಸ್ತ್ರೀ: [**–ನಾಸಾ**] ಒಬ್ಬ ದಿಗ್ದೇವತೆ **–ತ್ತ.** ನ: [**–ತ್ರ**] ಒಂದೇ ಜಾಗದಲ್ಲಿ, **–ತ್ಥಂ. –ಟ್ಠ** ಅನ್ನು **ನೋಡುವುದು.** **–ನಾಸಾ.** **'–ಣಾಸಾ' ನೋಡುವುದು**(ಠಾ), **–ಪಏ.** ಅ: [**–ಪದೇ**] **ಒಂದೇ** ಸಲಕ್ಕೆ **–ಪಕ್ಖ.** ವಿ: [**ಪಕ್ಷ**] ಅಸಹಾಯ, ಅವಶ್ಯಕವಾಗಿ ಆಗಬೇಕಾದ, ಅವಿರುದ್ಧ(**ಸೂಅ**). **–ಪನ್ನಾಸ.** ಸ್ತ್ರೀ.ನ: [–

ಪಂಚಾಶತ್] ಐವತ್ತೊಂದು. -ಪನ್ನಾಸಇವು. ವಿ: [-ಪಂಚಾಶತ್ತಮ] ಐವತ್ತೊಂದನೆಯ(ಪಉಮ) -ಪಾಇಅ. ವಿ: [-ಪಾದಿಕ] ಒಂದು ಹೆಜ್ಜೆಯನ್ನು ಮೇಲೆ ಇಡುವವನು. -ಪಾಸಗ. ವಿ: [-ಪಾರ್ಶ್ವಕ] ಒಂದೇ ಪಕ್ಕದ ಭೂಮಿಯ ಸಂಬಂಧ ಹೊಂದಿರುವವನು(ಆತಾಪನಾ ಮೆ). -ಪಾಸಿಯ. ವಿ: [-ಪಾರ್ಶ್ವಿಕ] ಹಿಂದಿನ ಅರ್ಥವನ್ನು ನೋಡುವುದು. -ಭತ್ತ. ನ: [-ಭಕ್ತ] ಒಂದು ಬಗೆಯ ವ್ರತ. ಏಕಾಶನ ವ್ರತ. -ಭೂಯ. ವಿ: [-ಭೂತ] ಸೇರಿಕೊಂಡುಬಿಟ್ಟಿರುವ, ಒಂದೇ ಆಗಿರುವ(ಠಾ), ಸಮಾನ, -ಮಣ. ವಿ: [-ಮಾನಸ್] ಏಕಾಗ್ರ ಚಿತ್ತ, ತಲ್ಲೀನ, -ಮೇಗ. ವಿ: [-ಏಕ] ಪ್ರತ್ಯೇಕ ;ಒಂದೊಂದೂ, -ಯ. ವಿ: [-ಕ] ಏಕಾಕಿ ಏಕಾಕಿ, ಒಂಟಿ. -ಯ. ವಿ: [-ಕ] ಏಕಾಕಿ, ಒಬ್ಬನೇ, -ಯ. ವಿ: [-ಗ] ಒಂಟಿಯಾಗಿ ಹೋಗುವವನು, ಒಬ್ಬನೇ, -ಯರ. ವಿ: [-ತರ] ಇಬ್ಬರಲ್ಲಿ/ಎರಡರಲ್ಲಿ ಯಾರಾದರೂ ಒಬ್ಬರು. ▯ಯಾ. ಅ: [ದಾ] ಒಂದು ಕಾಲದಲ್ಲಿ, -ರಾಇಯ. ವಿ: [-ರಾತ್ರಿಕ] ಒಂದು ರಾತ್ರಿಯಲ್ಲಿ ನಡೆಯುವ, ಒಂದು ರಾತ್ರಿಗೆ ಸಂಬಂಧಿಸಿದ(ಸಮ), -ರಾಯ. ನ: [-ರಾತ್ರ] ಒಂದು ರಾತ್ರಿ. -ಲ್ಲ. ವಿ: [-ಏಕ] ಏಕಾಕಿ. ಒಂಟಿ. -ವಿಹ. ವಿ: [-ವಿಧ] ಒಂದು ಬಗೆಯ, -ವಿಹಾರಿ. ವಿ: [-ವಿಹಾರಿನ್] ಏಕಾಂಗಿಯಾಗಿ ಸಂಚರಿಸುವವನು(ಬೃಹ), -ವೀಸಇವು. ವಿ: [-ವಿಂಶತಿತಮ] ಇಪ್ಪತ್ತೊಂದನೆಯ(ಪಉಮ), ವೀಸಾ. ಸ್ತ್ರೀ: [-ವಿಂಶತಿ] ಇಪ್ಪತ್ತೊಂದು. -ಸಟ್ಠ. ವಿ: [-ಷಷ್ಟ] ಅರುವತ್ತೊಂದನೆಯ(ಪಉಮ) -ಸಟ್ಠಿ. ಸ್ತ್ರೀ: [-ಷಷ್ಟಿ] ಅರುವತ್ತೊಂದು, -ಸತ್ತರ. ವಿ: [-ಸಪ್ತತ] ಎಪ್ಪತ್ತೊಂದನೆಯ-ಸಮಇಯ. ವಿ: [-ಸಾಮಯಿಕ] ಒಂದು ಸಮಯದಲ್ಲಿ ನಡೆಯುವ, ಸಮಯಕ್ಕೆ ಅನುಗುಣವಾದ(ಭಗ), -ಸರಿಯಾ. ಸ್ತ್ರೀ: [-ಸರಿಕಾ] ಏಕಾವಳಿ ಸರ. -ಸಾಡಿಯ. ವಿ: [-ಶಾಟಿಕ] ಏಕವಸ್ತ್ರಧಾರಿ, -ಸಿಅಂ. ಅ: [-ದಾ] ಒಂದು ಕಾಲದಲ್ಲಿ(ಷಡ್), -ಸೇಲ. ಪು: [-ಶೈಲ] ಪರ್ವತ-ವಿಶೇಷ. ಶೇಲಕೂಡ. ಪುಂ.ನ: [-ಶೈಲಕೂಟ] ಏಕಶೈಲ ಪರ್ವತದ ಶಿಖರ. -ಸೇಸ. ಪು: [-ಶೇಷ] ವ್ಯಾಕರಣದಲ್ಲಿ ಪ್ರಸಿದ್ಧವಾದ ಸಮಾಸ -ಹಾ. ಅ: [-ಧಾ] ಒಂದು ವಿಧದ. -ಹುತ್ತ. ಅ: [-ಸಕೃತ್] ಒಮ್ಮೆ, ಒಂದು ಸಲ(ಪ್ರಾವಾ), ಏಗಾಣಿಅ. ವಿ: [ಏಕಾಕಿನ್] ಏಕಾಂಗಿ, ಒಂಟಿ, ಏಗಾದಸ. ತ್ರಿ [ಏಕಾದಶನ್] ಹನ್ನೊಂದು. ಏಕಾದಸುತ್ತರಸಯ.ವಿ: [ಏಕಾದಶೋತ್ತರಶತತಮ] ಒಂದುನೂರಾ ಹನ್ನೊಂದನೆಯ(ಪಉಮ) ಏಗಾಭೋಗ. ಪು: [ಏಕಾಭೋಗ] ಒಂದೆಡೆ ಬಂಧನ. ಏಗಾಮೋಸ. ವಿ: [ಏಕಾಮರ್ಶ] ಪ್ರತ್ಯುಪೇಕ್ಷಣಾದ ಒಂದು ದೋಷ, ವಸ್ತ್ರವನ್ನು ಮಧ್ಯದಲ್ಲಿ ಹಿಡಿದು ಎರಡೂ ತುದಿಗಳನ್ನು ಕೈಯಿಂದ ಜಗ್ಗಿ ಮೇಲಕ್ಕೆ ಎತ್ತಿಕೊಳ್ಳುವುದು(ಓಘ), ಏಗಾಯಯ. ವಿ: [ಏಕಾಯತ] ಒಂದೆಡೆ ಕಟ್ಟಲ್ಪಟ್ಟ. ಏಗಾರಸ. 'ಏಕಾದಸ' ನೋಡುವುದು. ಏಗಾರಸ್ಸೀ. ಸ್ತ್ರೀ: [ಏಕಾದಶೀ]. ಏಕಾದಶಿ ತಿಥಿ(ಕಪ್ಪ). ಏಗಾವಣ್ಣ. ಸ್ತ್ರೀ. ನ: [ಪಂಚಾಶತ್] ಐವತ್ತೊಂದು. ಏಗಾವಲಿ, ಲೀ. ಸ್ತ್ರೀ: [ಏಕಾವಲಿ, ಲೀ] ನಾನಾ ಪ್ರಕಾರದ ಮಣಿಗಳ ಸರ(ಔಪ). ಏಗಾವಲೀಪವಿಭತ್ತಿ. ನ: [ಏಕಾವಲೀಪ್ರವಿಭಕ್ತಿ] ಒಂದು ನಾಟಕ. ಏಗಾವಾಇ. ಪು: [ಏಕವಾದಿನ್] ಒಂದೇ ಆತ್ಮ ಇತ್ಯಾದಿ ಪದಾರ್ಥಗಳನ್ನು ಒಪ್ಪುವ ದರ್ಶನ, ವೇದಾಂತ ದರ್ಶನ(ಠಾ). ಏಗಾವೀಸ. ಸ್ತ್ರೀನ: [ಏಕವಿಂಶತಿ] ಇಪ್ಪತ್ತೊಂದು, ಸಂಖ್ಯಾ-ವಿಶೇಷ(ಪಉಮ). ಏಗಾಸಣ. ನ: ಏಕಾಶನ, ಏಕಾಸನ. ಒಂದು ವ್ರತ-ವಿಶೇಷ(ಧರ್ಮ), ಏಗಾಹ. ಪುಂನ: [ಏಕಾಹ] ಒಂದು ದಿನ, ಏಗಾಹಚ್ಚ. ವಿ: [ಏಕಾಹತ್ಯ] ಒಂದೇ ವಿಧದಲ್ಲಿ ನಾಶವಾಗುವಂಥದು. ಏಗಾಹಿಯ. ವಿ: [ಏಕಾಹಿಕ] ಒಂದು ದಿನದ ಉತ್ಪನ್ನ. ಪು: ಏಕಾಂತರ ಎಂಬ ಒಂದು ಬಗೆಯ ಜ್ವರ. ಏಗಾಹಿಯ. ವಿ: [ಏಕಾಧಿಕ]. ಒಂದಕ್ಕಿಂತ ಹೆಚ್ಚಿನ 'ಏಅ, ಏಕ, ಮತ್ತು ಎಕ್ಕ'ಶಬ್ದಗಳನ್ನು ನೋಡುವುದು.

ಏಗಂತ. 'ಎಕ್ಕಂತ' ಶಬ್ದವನ್ನು ನೋಡುವುದು(ಠಾ) -ದಿಟ್ಠಿ. ಸ್ತ್ರೀ: [-ದೃಷ್ಟಿ] ಜೈನೇತರ ದರ್ಶನ, ವಿ: ಜೈನೇತರ ದರ್ಶನವನ್ನು ಒಪ್ಪುವವನು

(ಸೂಅ)ಸ್ತ್ರೀ: ನಿಶ್ಚಿತ ಸಮ್ಯಕ್ತ್ವ, ನಿಶ್ಚಲ ಸತ್ಯ ಶ್ರದ್ಧೆ. **–ದೂಸಮಾ.** ಸ್ತ್ರೀ: [**–ದುಷ್ಮಾ**] ಅವಸರ್ಪಿಣೀ ಕಾಲದ ಆರನೇ ಅವಧಿ ಮತ್ತು ಉತ್ಸರ್ಪಿಣೀ ಕಾಲದ ಮೊದಲ ಅವಧಿ, ಕಾಲವಿಶೇಷ(ಸೂಅ), **–ಪಂಡಿಯ.** ಪು: [**–ಪಂಡಿತ**] ಸಾಧು, **–ಬಾಲ.** ಪು: [**–ಬಾಲ**] ಜೈನೇತರ ದರ್ಶನವನ್ನು ಒಪ್ಪುವವನು. ಅಸಂಯಮಿ ಜೀವ(ಭಗ), **–ವಾಇ.** ವಿ: [**–ವಾದಿನ್**] ಜೈನೇತರ ದರ್ಶನದ ಅನುಯಾಯಿ. **–ಸುಸಮಾ.** ಸ್ತ್ರೀ: [**ಸುಷಮಾ**] ಕಾಮ–ವಿಶೇಷ, ಅವಸರ್ಪಿಣೀ ಕಾಲದ ಮೊದಲ ಮತ್ತು ಉತ್ಸರ್ಪಿಣೀ ಕಾಲದ ಆರನೇ ಅವಧಿ (ಣಂದಿ)

ಏಗಂತಿಯ. ನ: [**ಐಕಾಂತಿಕ**] ಅನಿವಾರ್ಯವಾಗಿ ಆಗುವಂಥದು(ವಿಸೇ), ಅದ್ವಿತೀಯ, ಜೈನೇತರ ದರ್ಶನ. ನ: ಮಿಥ್ಯಾತ್ವದ ಒಂದು ಪ್ರಭೇದ, ವಸ್ತುವು ಕ್ಷಣಿಕ ಎಂಬ ಒಂದೇ ದೃಷ್ಟಿಯಿಂದ ನೋಡುವುದು

ಏಗಟ್ಠಿ. **'ಏಗ–ಸಟ್ಠಿ'** ಶಬ್ದವನ್ನು ನೋಡುವುದು

ಏಗಟ್ಠಿಯಾ. ಸ್ತ್ರೀ: [**ದೇ**] ನೌಕೆ, ದೋಣಿ, ಹಡಗು (ಣಾಯಾ)

ಏಗಠಾಣ. ನ: [**ಏಕಸ್ಥಾನ**] ಒಂದು ಬಗೆಯ ತಪಸ್ಸು

ಏಗಿಂದಿಯ. ವಿ: [**ಏಕೇಂದ್ರಿಯ**] ಒಂದು ಇಂದ್ರಿಯವನ್ನು ಹೊಂದಿರುವ, ಕೇವಲ ಸ್ಪರ್ಶೇಂದ್ರಿಯವುಳ್ಳ (ಜೀವ)

ಏಗೀಭೂತ. ವಿ: [**ಏಕೀಭೂತ**] ಸೇರಿಕೊಂಡಿರುವ, ಒಂದೇ ಆಗಿಬಿಟ್ಟಿರುವ(ಸುಪಾ)

ಏಗೂಣ. **'ಅಉಣ'** ಶಬ್ದವನ್ನು ನೋಡುವುದು. **–ಚತ್ತಾಲ.** ವಿ: [**ಚತ್ವಾರಿಂಶ**] ಮೂವತ್ತೊಂಬತ್ತನೆಯ. **–ಚತ್ತಾಲೀಸ.** ಸ್ತ್ರೀ.ನ: [**ಚತ್ವಾರಿಂಶತ್**], ಮೂವತ್ತೊಂಬತ್ತು. **–ಚತ್ತಾಲೀಸಇಮ.** ವಿ: [**–ಚತ್ವಾರಿಂಶತ್ತಮ**] ಮೂವತ್ತೊಂಬತ್ತನೆಯ. **–ಣಉಇ.** ಸ್ತ್ರೀ: [**–ನವತಿ**] ಎಪ್ಪತ್ತೊಂಬತ್ತು. **–ತೀಸ.** ಸ್ತ್ರೀನ: [**–ತ್ರಿಂಶತ್**] ಇಪ್ಪತ್ತೊಂಬತ್ತು. **–ತೀಸಇಮ.** ವಿ: [**–ತ್ರಿಂಶತ್ತಮ**] ಇಪ್ಪತ್ತೊಂಬತ್ತನೆಯ **–ನಉಇ.** **'–ಣಉಇ'** ಶಬ್ದವನ್ನು ನೋಡುವುದು. **–ನಉಯ.**ವಿ: **–ನವತ** ಎಂಬತ್ತೊಂಬತ್ತನೆಯ **–ಪನ್ನ,–ಪನ್ನಾಸ.** ಸ್ತ್ರೀನ: [**–ಪಂಚಾಶತ್**] ನಲವತ್ತೊಂಬತ್ತು. **–ಪನ್ನಾಸ.** ವಿ: [**–ಪಂಚಾಶ**] ನಲವತ್ತೊಂಬತ್ತನೆಯ **–ಪನ್ನಾಸಇಮ.** ವಿ: **–ಪಂಚಾಶತ್ತಮ**] ನಲವತ್ತೊಂಬತ್ತನೆಯ **–ವೀಸ.** ಸ್ತ್ರೀನ. [**ವಿಂಶತಿ**] ಹತ್ತೊಂಬತ್ತು. **–ವೀಸಇ.** ಸ್ತ್ರೀ: [**–ವಿಂಶತಿ**] ಹತ್ತೊಂಬತ್ತು, **–ವೀಸಇಮ, –ವೀಸಈಮ, –ವೀಸಮ.**ವಿ.[**–ವಿಂಶತಿತಮ**] ಹತ್ತೊಂಬತ್ತನೆಯ **–ಸಟ್ಠ.** ವಿ: [**–ಷಷ್ಟ**] ಐವತ್ತೊಂಬತ್ತನೆಯ (ಪಉಮ). **–ಸತ್ತರ.** ವಿ: [**–ಸಪ್ತತ**] ಅರುವತ್ತೊಂಬತ್ತನೆಯ. **ಏಗೂಣಾಸಿ, ಏಗೂಣಾಸೀಯ.** ವಿ: [**–ಏಕೂಣಾಶೀತ**] ಎಪ್ಪತ್ತೊಂಬತ್ತನೆಯ(ಪಉಮ) **'ಅಉಣ'** ಶಬ್ದವನ್ನು ನೋಡುವುದು

ಏಗೂರುಯ. ಪು: [**ಏಕೋರುಕ**] ಈ ಹೆಸರಿನ ಒಂದು ಅಂತರ್‌ದ್ವೀಪ, **ಪು:** ಅದರಲ್ಲಿ ವಾಸಿಸುವವನು

ಏಗ್ಗ.(ಅಪ). **'ಏಗ'** ಶಬ್ದವನ್ನು ನೋಡುವುದು

ಏಜ. ಪು: [**ಏಜ**] ವಾಯು, ಗಾಳಿ(ಆಚಾ)

ಏಜಣಯಾ. ಸ್ತ್ರೀ: [**ಏಜನಾ**] ನಡುಕ, ನಡುಗುವುದು

ಏಜ್ಜ. **'ಏಯ=ಏಜ್'** ಶಬ್ದವನ್ನು ನೋಡುವುದು

ಏಜ್ಜಂತ. **'ಏ=ಆ+ಇ'** ಅನ್ನು ನೋಡುವುದು

ಏಜ್ಜಣ. ನ: [**ಆಯನ**] ಆಗಮನ

ಏಜ್ಜಮಾಣ. **'ಏ=ಆ+ಇ'** ಅನ್ನು ನೋಡುವುದು

ಏಡ. ಸಕ: [**ಏಡ್**] ತ್ಯಜಿಸು ಬಿಟ್ಟುಬಿಡು

ಏಡ. ಸಕ: [**ಏಡಯ್**] ದೂರಮಾಡು, ಸರಿಸು, ತೊಲಗಿಸು

ಏಡಕ್ಕ. ಪು: [**ಏಡಕ**] ಕುರಿ

ಏಡಯಾ. ಸ್ತ್ರೀ: [**ಏಡಕಾ**] ಹೆಣ್ಣು ಕುರಿ(ಷಡ್)

ಏಣ. ಪು: [**ಏಣ**] ಕೃಷ್ಣ ಮೃಗ, ಹರಿಣ, ಜಿಂಕೆ(ಕಪ್ಪೂ), **–ಣಾಹಿ.** ಸ್ತ್ರೀ: [**–ನಾಭಿ**] ಕಸ್ತೂರಿ.

ಏಣಂಕ. ಪು: [**ಏಣಾಂಕ**] ಚಂದ್ರ,

ಏಣೆಜ್ಜ. ವಿ: [**ಏಣೇಯ**] ಜಿಂಕೆಗೆ ಸಂಬಂಧಿಸಿದ (ಮಾಂಸ) ಇತ್ಯಾದಿ

ಏಣೆಜ್ಜಯ. ಪು: [**ಏಣೇಯಕ**] ಭಗವಾನ್ ಮಹಾವೀರರಿಂದ ದೀಕ್ಷೆ ತೆಗೆದುಕೊಂಡ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ

ಏಣೆಸ. ಪು: [**ಏಣೆಸ**] ವೃಕ್ಷ(ಉಪ)

ಏಣೀ. ಸ್ತ್ರೀ: [**ಏಣೀ**] ಹರಿಣಿ, ಹೆಣ್ಣು ಜಿಂಕೆ(ಪಾಅ)

–ಯಾರ. ಪು: [–ಚಾರ] ಜಿಂಕೆ ಮೇಯಿಸುವವನು ಅದನ್ನು ಪೋಷಿಸುವವನು
ಣುವಾಸಿಅ. ಪು: [ದೇ] ಕಪ್ಪೆ
ಣೆಜ್ಜ. 'ಏಣಿಜ್ಜ' ಶಬ್ದವನ್ನು ನೋಡುವುದು
ಣಹಂ.} ಅ: [ಇದಾನೀಂ] ಈಗ, ಈ ಕಾಲದಲ್ಲಿ
ಣಿಹಂ.}
ತಾವ. 'ಏತ್ತಿಅ=ಏತಾವತ್' ಶಬ್ದವನ್ನು ನೋಡುವುದು
ತ್ತಅ. ವಿ: [ಇಯತ್, ಏತಾವತ್] ಇಷ್ಟು,
ತ್ತಏ. 'ಇ=ಇ' ಅನ್ನು ನೋಡುವುದು
ತ್ತಹಿ(ಅಪ). ಅ: [ಇತಸ್] ಇಲ್ಲಿಂದ
ತ್ತಹೇ. 'ಇತ್ತಹೇ' ಶಬ್ದವನ್ನು ನೋಡುವುದು
ತ್ತಾಹೇ. 'ಇತ್ತಾಹೇ' ಶಬ್ದವನ್ನು ನೋಡುವುದು
ತ್ತಿಅ.} ವಿ: [ಇಯತ್, ಏತಾವತ್] ಇಷ್ಟು, –ಮತ್ತ,
ತ್ತಿಲ.} –ಮೇತ್ತ. ವಿ: [–ಮಾತ್ರ] ಇಷ್ಟೇ, ಇಷ್ಟುಮಾತ್ರ
ತ್ತಿಕ(ಶೌ) 'ಏತ್ತಿಅ=ಏತಾವತ್' ಶಬ್ದವನ್ನು ನೋಡುವುದು
ತ್ತುಲ. (ಅಪ). ಮೇಲಿನ ಶಬ್ದವನ್ನು ನೋಡುವುದು
ತ್ತೂಣ. ಅ: [ದೇ] ಈಗ, ಈ ಹೊತ್ತು
ತ್ತೋ. 'ಇಓ' ಅನ್ನು ನೋಡುವುದು
ತ್ತೋಅ. ಅ: [ದೇ] ಇಲ್ಲಿಂದ ಪ್ರಾರಂಭಿಸಿ
ತ್ಥ. ಅ: [ಅತ್ರ] ಇಲ್ಲಿ, ಈ ಪ್ರದೇಶದಲ್ಲಿ, ಈ ವಿಷಯದಲ್ಲಿ
ತ್ಥೀ. 'ಇತ್ಥೀ' ಶಬ್ದವನ್ನು ನೋಡುವುದು
ದಂಪಜ್ಜ. ನ: [ಏದಂಪಯ] ತತ್ಪಯ, ಭಾವಾರ್ಥ (ಉಪ)
ದಿಹಸಿಅ(ಶೌ). ವಿ: [ಐತಿಹಾಸಿಕ] ಇತಿಹಾಸಕ್ಕೆ ಸಂಬಂಧಿಸಿದ, ಐತಿಹಾಸಿಕ(ಪ್ರಾಪ)
ದ್ದಹ. 'ಎತ್ತಿಅ' ಶಬ್ದವನ್ನು ನೋಡುವುದು
ಮ.(ಅಪ). ಅ: [ಏವಂ] ಹೀಗೆ, ಈರೀತಿ, ಈ ರೀತಿಯಾಗಿ, ಅಹುದು, ಹಗೆಯೇ ಸರಿ
ಮಇ(ಅಪ). ಅ: [ಏವಮೇವ] ಹೀಗೆಯೇ, ಇದೇ ರೀತಿ
ಮಾಇ.} ವಿ: [ಏವಮಾದಿ] ಇತ್ಯಾದಿ, ವಗೈರೆ
ಮಾಇಯ.}
ಮಾಣ. ವಿ: [ದೇ] ಪ್ರವೇಶಿಸುತ್ತಿರುವ
ಮಿಣಿಆ. ಸ್ತ್ರೀ: [ದೇ] ಯಾವುದೋ ದೇಶದ ಪದ್ಧತಿಯ ಮೇರೆಗೆ ದಾರದ ಎಳೆಯಿಂದ ಒಂದು ಹೆಣ್ಣಿನ ದೇಹವನ್ನು ಅಳೆದು ಆ ದಾರವನ್ನು ಎಸೆದು ಬಿಡಲಾಗುತ್ತದೆಯೋ ಆ ಹೆಣ್ಣು.
ಏಮೇಅ.} ಅ: [ಏವಮೇವ] ಹೀಗೆಯೇ, ಇದೇರೀತಿ
ಏಮೇವ.}
ಎಮ್ವ.(ಅಪ). ಅ: [ಏವಮ್] ಹೀಗೆ, ಈ ರೀತಿಯಾಗಿ, ಅಹುದು
ಎಮ್ವಇ. (ಅಪ). ಅ: [ಏವಮೇವ] ಹೀಗೆಯೇ, ಇದೇರೀತಿ, ಇದೇ ಥರ
ಏಮ್ವಹಿಂ(ಅಪ). ಅ: [ಇದಾನೀಮ್] ಈಗ, ಈ ಕಾಲದಲ್ಲಿ
ಏಯ. ಅಕ: [ಏಜ್] ಅಲುಗಾಡು, ನಡುಗು, ಚಲಿಸು
ಏಯ. ಪು: [ಏಜ] ಗತಿ, ಚಲನೆ
ಏಯಂತ. 'ಎಕ್ಕಂತ' ಶಬ್ದವನ್ನು ನೋಡುವುದು
ಏಯಣ. ನ: [ಏಜನ] ನಡುಗುವಿಕೆ, ಅಲುಗಾಡುವಿಕೆ
ಏಯಣಾ. ಸ್ತ್ರೀ: [ಏಜನಾ] ನಡುಗುವಿಕೆ, ಗತಿ, ಚಲನೆ, ಅಲುಗಾಡುವಿಕೆ
ಏಯಾಣಿಂ. 'ಇಯಾಣಿಂ' ಶಬ್ದವನ್ನು ನೋಡುವುದು
ಏಯಾವಂತ. ವಿ: [ಏತಾವತ್] ಇಷ್ಟು
ಏರಂಡ. ಪು: [ಏರಂಡ] ಹರಳು ಗಿಡ(ಣಾಯಾ), ಒಂದು ಬಗೆಯ ತೃಣ
ಏರಂಡ. ವಿ: [ಐರಂಡ] ಹರಳು ಗಿಡಕ್ಕೆ ಸಂಬಂಧಿಸಿದ
ಏರಂಡಇಯ.} ಪು: [ದೇ] ಹುಚ್ಚುನಾಯಿ(ಬೃಹ)
ಏರಂಡಯ.}
ಏರಣ್ಣವಯ. ನ: [ಐರಣ್ಯವತ್] ಕ್ಷೇತ್ರ–ವಿಶೇಷ, ವಿ: ಆ ಕ್ಷೇತ್ರದಲ್ಲಿ ವಾಸಿಸುವವನು
ಏರವಈ. ಸ್ತ್ರೀ: [ಐರಾವತೀ] ಒಂದು ನದಿ
ಏರವಯ. ವಿ: [ಐರಾವತ್] ಕ್ಷೇತ್ರ–ವಿಶೇಷ, ಪು: ಪರ್ವತ ವಿ: ಏರಾವತ ಕ್ಷೇತ್ರದ ನಿವಾಸಿ. –ಕೂಡ. ನ: [–ಕೂಟ] ಪರ್ವತದ ಶಿಖರ
ಏರಾಣೀ. ಸ್ತ್ರೀ: [ದೇ] ಇಂದ್ರಾಣಿ, ಇಂದ್ರಾಣಿಯ ವ್ರತವನ್ನಾಚರಿಸುವ ಹೆಂಗಸು
'ಏರಾವಈ. ಸ್ತ್ರೀ: [ಐರಾವತೀ] ನದಿಯ ಹೆಸರು(ಠಾ)
ಏರಾವಣ. ಪು: [ಐರಾವಣ] ಇಂದ್ರನ ಆನೆ, ಇಂದ್ರನ ಹಸ್ತಿ ಸೈನ್ಯದ ಅಧಿಪತಿ. –ವಾಹಣ. ಪು: [–ವಾಹನ] ಇಂದ್ರ
ಏರಾವಯ. ಪು: [ಐರಾವತ] ಸರೋವರ, ಸರೋವರದ ಅಧಿಷ್ಠಾತೃ ದೇವ, ಛಂದಃಶಾಸ್ತ್ರದಲ್ಲಿ ಪ್ರಸಿದ್ಧವಾದ

ಪಂಚಕಲೆಯ ಪ್ರಸ್ತಾರದಲ್ಲಿ ಆದಿ ಮತ್ತು ಅಂತ್ಯದ ಎರಡು ಗುರು ಅಕ್ಷರಗಳ ಸಂಕೇತ(ಪಿಂಗ), ಗಜನಿಂಬೆ ಮರ, ಸರಳ ಮತ್ತು ಉದ್ದವಾದ ಇಂದ್ರ–ಧನುಸ್ಸು, ಇರಾವತಿ ನದಿಯು ಸಮೀಪದಲ್ಲಿರುವ ದೇಶ, ಇಂದ್ರನ ಆನೆ.

ಏರಿಸ್. ವಿ: [**ಈದೃಶ್**] ಇಂಥ, ಈ ರೀತಿಯ, ಈ ವಿಧವಾದ

ಏರಿಸಿಅ. (ಅಪ). ಮೇಲಿನ ಶಬ್ದವನ್ನು ನೋಡುವುದು

ಏಲ. ವಿ: [**ದೇ**] ಕುಶಲ, ನಿಪುಣ (ದೇ)

ಏಲ.} **ಪು:** [**ಏಡ, ಏಲ**] ಮೃಗಗಳ ಒಂದು ಜಾತಿ,

ಏಲಗ.} ಟಗರು, ಕುರಿ(ಸೂಅ), **–ಮೂಅ, ಮೂಗ.** ವಿ: [**–ಮೂಕ**] ಮೂಕ, ಕುರಿಯು ಹಾಗೆ ಅಸ್ಫುಟವಾಗಿ ಮಾತಾಡುವ(ಶ್ರಾ)

ಏಲಗಚ್ಛ. **ನ:** [ಏಲಕಾಕ್ಷ] ತನ್ನ ಹೆಸರಿನಿಂದ ಖ್ಯಾತವಾದ ನಗರ–ವಿಶೇಷ(ಉಪ).

ಏಲಯ. 'ಏಲ' ಶಬ್ದವನ್ನು ನೋಡುವುದು

ಏಲವಿಲ. ವಿ: [**ದೇ**] ಶ್ರೀಮಂತ, **ಪು:** ವೃಷಭ, ಎತ್ತು

ಏಲಾ. **ಸ್ತ್ರೀ:** [ಏಲಾ] ಏಲಕ್ಕಿ ಗಿಡ, ಏಲಕ್ಕಿ, **–ರಸ. ಪು:** [**–ರಸ**] ಏಲಕ್ಕಿ ರಸ(ಪಣ್ಣ)

ಏಲಾಲುಯ. **ಪುಂನ:** [ಏಲಾಲುಕ] ಆಲೂ ಗೆಡ್ಡೆಯ ಒಂದು ಜಾತಿ, ಕಂದ–ಮೂಲ

ಏಲಾವಚ್ಚ. **ನ:** [ಏಲಾಪತ್ಯ] ಮಾಂಡವ್ಯ ಗೋತ್ರದ ಒಂದು ಶಾಖಾಗೋತ್ರ

ಏಲಾವಚ್ಚ. ವಿ: [**ಐಲಾಪತ್ಯ**] ಏಲಾಪತ್ಯ ಗೋತ್ರದ

ಏಲಾವಚ್ಚಾ. **ಸ್ತ್ರೀ:** [ಏಲಾಪತ್ಯಾ] ಪಕ್ಷದ ಮೂರನೇ ರಾತ್ರಿ

ಏಲಿಕ್ಖ. ವಿ: [**ಈದೃಕ್ಷ**] ಇಂಥ, ಈ ತರಹದ

ಏಲಿಂಘ. **ಪು:** [**ಏಲಿಂಘ**] ಒಂದು ಬಗೆಯ ಧಾನ್ಯ (ಪಣ್ಣ)

ಏಲಿಯಾ. **ಸ್ತ್ರೀ:** [ಏಡಿಕಾ, **ಏಲಿಕಾ**] ಒಂದು ಜಾತಿಯ ಪ್ರಾಣಿ(ಹೆಣ್ಣು), ತೋಳ

ಏಲಿಸ. 'ಏರಿಸ' ಶಬ್ದವನ್ನು ನೋಡುವುದು

ಏಲು. **ಪು:** [ಏಲು] ಒಂದು ವೃಕ್ಷ–ವಿಶೇಷ,

ಏಲುಗ.} **ಪುಂ.ನ:** [ಏಲುಕ] ಹೊಸಿಲು, ಹೊಸತಿಲು

ಏಲುಯ.}

ಏಲ್ಲ. ವಿ: [**ದೇ**] ಬಡವ, ದರಿದ್ರ

ಏವ. ಅ: [ಏವ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಅವಧಾರಣೆ, ಹೋಲಿಕೆ(ಸಾದೃಶ್ಯ), ನಾಲ್ಕು ನಿಯೋಗಗಳು, ನಿಗ್ರಹ, ಪರಿಭವ, ಸ್ವಲ್ಪ

ಏವ. '**ಏತ್ರಂ**' ಶಬ್ದವನ್ನು ನೋಡುವುದು

ಏವಇ. ವಿ: [**ಇಯತ್, ಏತಾವತ್**] ಇಷ್ಟು, **–ಖುತ್ತೋ.** ಅ: [**–ಕೃತ್ವಸ್**] ಇಷ್ಟೊಂದು ಬಾರಿ

ಏವಇಯ. ವಿ: [**ಇಯತ್, ಏತಾವತ್**] ಇಷ್ಟು

ಏವಂ. ಅ: [**ಏವಮ್**] ಈ ರೀತಿಯಾಗಿ, ಹೀಗೆ, **–ಭೂಅ. ಪು:** [**–ಭೂತ**] ವ್ಯುತ್ಪತ್ತಿಯ ಪ್ರಕಾರ ಆ ಕ್ರಿಯೆಯಿಂದ ಸೂಚಿತವಾಗುವ ವಿಶಿಷ್ಟ ಅರ್ಥವನ್ನು ಮಾತ್ರ ಶಬ್ದದ ಅಭಿಧೇಯ ಅರ್ಥವೆಂದು ಒಪ್ಪುವ ಪಕ್ಷ. ವಿ: ಈ ರೀತಿಯ, ಈ ವಿಧದ–**ವಿಧ, ವಿಹ.** ವಿ: [**–ವಿಧ**] ಈ ಬಗೆಯ, ಈ ವಿಧದ

ಏವಂಹಾಸ. **ಪು:** [ಏವಂಹಾಸ] ಇತಿಹಾಸ

ಏವಡ(ಅಪ). ವಿ: [**ಇಯತ್**] ಇಷ್ಟು

ಏವಮಾಇ. 'ಏಮಾಇ' ಶಬ್ದವನ್ನು ನೋಡುವುದು

ಏವಮೇವ.} '**ಏಮೇವ**' ಶಬ್ದವನ್ನು ನೋಡುವುದು

ಏವಾಮೇವ.}

ಏವ್ವ. 'ಏವ=ಏವ' ಶಬ್ದವನ್ನು ನೋಡುವುದು

ಏವ್ವಂ. 'ಏವಂ' ಶಬ್ದವನ್ನು ನೋಡುವುದು

ಏವ್ವಹಿ(ಅಪ). ಅ: [**ಇದಾನೀಮ್**] ಈ ಕಾಲದಲ್ಲಿ, ಈಗ

ಏವ್ವಾರು. **ಪು:** [ಏರ್ವಾರು] ಸೌತೆ ಕಾಯಿ(ಕುಮಾ)

ಏಸ. **ಸಕ:** [**ಇಷ್**] ಇಚ್ಛಿಸು, ಬಯಸು, ಹುಡುಕು, ಪ್ರಕಟಿಸು

ಏಸ. **ಸಕ:** [**ಆ+ಇಷ್**] ಮಾಡು, ಹುಡುಕು, ಶುದ್ಧ ಭಿಕ್ಷೆಯನ್ನು ಹುಡುಕು, ದೋಷವಿಲ್ಲದ ಭಿಕ್ಷೆಯನ್ನು ಸ್ವೀಕರಿಸು,

ಏಸ. ವಿ: [**ಏಷ್ಯ**] ಭಾವೀ ಪದಾರ್ಥ, ಮುಂದೆ ಬರಬಹುದಾದ ವಸ್ತು, ಭವಿಷ್ಯತ್ ಕಾಲ.

–ಏಸ. 'ದೇಸ' ಶಬ್ದವನ್ನು ನೋಡುವುದು.

ಏಸಗ. ವಿ: [**ಏಷಕ**] ಅನ್ವೇಷಕ(ಆಚಾ)

ಏಸಜ್ಜ. **ನ:** [**ಐಶ್ವರ್ಯ**] ವೈಭವ, ಪ್ರಭುತ್ವ, ಸಂಪತ್ತು(ಠಾ)

ಏಸಣಾ. **ನ:** [ಏಷಣಾ] ಅನ್ವೇಷಣೆ, ಹುಡುಕುವಿಕೆ, ಭಿಕ್ಷೆಯನ್ನು ಸ್ವೀಕರಿಸುವುದು(ಉತ್ತ)

ಏಸಣಾ. **ನ:** [ಏಷಣಾ] ಅನ್ವೇಷಣೆ, ಹುಡುಕುವಿಕೆ, ಲಾಭ, ಪ್ರಾರ್ಥನೆ, ದೋಷವಿಲ್ಲದ ಆಹಾರವನ್ನು ಹುಡುಕುವುದು, ದೋಷವಿಲ್ಲದ ಭಿಕ್ಷೆ(ಆಚಾ), ಇಚ್ಛೆ, ಅಭಿಲಾಷೆ, ಭಿಕ್ಷೆ ಸ್ವೀಕರಿಸುವುದು,

–**ಸಮಿಇ.** **ಸ್ತ್ರೀ:** [–**ಸಮಿತಿ**] ದೋಷ ರಹಿತ ಭಿಕ್ಷೆಯನ್ನು ಸ್ವೀಕರಿಸುವುದು(ತಾ), –**ಸಮಿಯ.** **ವಿ:** [–**ಸಮಿತ**] ದೋಷ ರಹಿತ ಭಿಕ್ಷೆಯನ್ನು ಸ್ವೀಕರಿಸುವವನು. (ಉತ್ತ)

ಏಸಣಿಜ್ಜ. **ವಿ:** [**ಏಷಣೀಯ**] ಯೋಗ್ಯವಾದದ್ದು. (ಣಾಯಾ)

ಏಸಿ. **ವಿ:** [**ಏಷಿನ್**]ಅನ್ವೇಷಕ, ಹುಡುಕುವವನು (ಆಚಾ)

ಏಸಿಯ. **ವಿ:** [**ಏಷಿಕ**] ಅನ್ವೇಷಕ, ಹುಡುಕುವವನು, **ಪು:** ವ್ಯಾಧ, ಬೇಟೆಗಾರ, ಪಾಖಂಡಿ, ನಾಸ್ತಿಕ, ವೇದ–ವಿರುದ್ಧ ಆಚರಣೆಯವನು, ಮನುಷ್ಯರ ಒಂದು ನೀಚ ಜಾತಿ(ಆಚಾ)

ಏಸಿಯ. **ವಿ:** [**ಏಷಿತ**] ಹುಡುಕಲ್ಪಟ್ಟ, ಶೋಧಿಸಲ್ಪಟ್ಟ (ಭಗ), ದೋಷ–ರಹಿತ ಭಿಕ್ಷೆ.

ಏಸಿಯ. **ವಿ:** [**ಏಷಿತ**] ಭಿಕ್ಷಾ ಚರ್ಯೆಯ ವಿಧಿಯಲ್ಲಿ ಪ್ರಾಪ್ತವಾದ್ದು

ಏಸ್ಸರಿಯ. '**ಏಸ್ಸಜ್ಜ**' ಶಬ್ದವನ್ನು ನೋಡುವುದು.

ಏಹ. **ಅಕ:** [**ಏಘ್**] ವೃದ್ಧಿ ಹೊಂದುವುದು, ಉನ್ನತಿ ಹೊಂದುವುದು, ಏಳಿಗೆ ಹೊಂದುವುದು

ಏಹ(ಅಪ). **ವಿ:** [**ಈದೃಕ್**] ಇಂಥ, ಇದರಂಥ, ಇದರ ಹಾಗೆ, ಹೀಗೆ(ಭವಿ)

ಏಹತ್ತರಿ.(ಅಪ). **ಸ್ತ್ರೀ:** [**ಏಕಸಪ್ತತಿ**] ಸಂಖ್ಯೆ: ಎಪ್ಪತ್ತೊಂದು

ಏಹಾ. **ಸ್ತ್ರೀ:** [**ಏಧಸ್**] ಸಮಿತ್ತು, ಇಂಧನ,

ಏಹಿಅ. **ವಿ:** [**ಐಹಿಕ**] ಈ ಜನ್ಮಕ್ಕೆ ಸಂಬಂಧಿಸಿದ, ಈ ಲೋಕಕ್ಕೆ ಸಂಬಂಧಿಸಿದ

ಐ

ಐ. **ಅ:** [**ಅಯಿ**] ಸಂಭಾವನೆ, ಆಹ್ವಾನ, ಕರೆ, ಸಂಬೋಧನೆ, ಪ್ರಶ್ನೆ, ಪ್ರೀತಿ, ಅನುನಯ, ಈ ಅರ್ಥಗಳನ್ನು ಸೂಚಿಸುವ ಅವ್ಯಯ.

ಒ-ಓ

ಓ. ಪು: [ಓ] ಸ್ವರ-ವರ್ಣ

ಓ. **'ಅವ=ಅಪ'** ಅನ್ನು ನೋಡುವುದು.

ಓ. **'ಅವ=ಅವ'** ಅನ್ನು ನೋಡುವುದು.

ಓ. **'ಉಅ=ಉತ'** ಅನ್ನು ನೋಡುವುದು

ಓ. **'ಉವ'** ಅನ್ನು ನೋಡುವುದು

ಓ. ಅ: [ಓ] ಈ ಅರ್ಥಗಳನ್ನು ಸೂಚಿಸುವ ಅವ್ಯಯ: ಸೂಚನೆ- ವಿಸ್ಮಯ, ಪಶ್ಚಾತ್ತಾಪ, ವಿತರ್ಕ, ಕರೆಯುವುದು(=ಆಮಂತ್ರಣ), ಸಂಬೋಧನೆ ಹಾಗೂ ಪಾದಪೂರ್ತಿಯಲ್ಲಿ ಬಳಕೆಯಾಗುವ ಅವ್ಯಯ

ಓಅ. ನ: [ದೇ] ವಾರ್ತೆ, ಕಥೆ

ಓಅಅ. ವಿ: [ಅಪಗತ] ಕಳೆದು ಹೋದ, ಓಡಿ ಹೋದ

ಓಅಂಕ. ಪು: [ದೇ] ಗರ್ಜಿತ, ಗರ್ಜನೆ, ಗಟ್ಟಿಯಾಗಿ ಶಬ್ದವುಂಟಾಗುವುದು

ಓಂದ. ಸಕ: [ಆ+ಛಿದ್] ಬಲಾತ್ಕಾರವಾಗಿ ಕಸಿದುಕೊಳ್ಳು, ನಾಶಗೊಳಿಸು,

ಓಂದಣಾ. ಸ್ತ್ರೀ: [ಆಚ್ಛೇದನಾ] ನಾಶ, ಬಲವಂತವಾಗಿ ಕಸಿದುಕೊಳ್ಳುವುದು.

ಓಅಕ್ಖ. ಸಕ: [ದೃಶ್] ನೋಡು-**'ಓಅಕ್ಖಇ'**

ಓಅಗ್ಗ. ಸಕ: [ವಿ+ಆಪ್] ಹರಡು, ವ್ಯಾಪಿಸು

ಓಅಗ್ಗಿಅ. ವಿ: [ವ್ಯಾಪ್ತ] ಹರಡಲ್ಪಟ್ಟ, ವಿಸ್ತೃತ

ಓಅಗ್ಗಿಅ. ವಿ: [ದೇ] ತಿರಸ್ಕರಿಸಲ್ಪಟ್ಟ, ಸೋಲಿಸಲ್ಪಟ್ಟ, ಅವಮಾನಗೊಳಿಸಲ್ಪಟ್ಟ. ನ: ಕೂದಲು ಮೊದಲಾದವನ್ನು ಒಟ್ಟುಗೂಡಿಸುವುದು

ಓಅಗ್ಘಿಅ.} ವಿ: [ದೇ] ಮೂಸಲ್ಪಟ್ಟ, ವಾಸನೆ
ಓಅಘಿಅ.} ನೋಡಲಾದ(ದೇ)

ಓಅಣ್ಣ. ವಿ: [ಅವನತ] ಬಾಗಿದ, ಕೆಳಕ್ಕೆ ಮುಖ ಮಾಡಿರುವ

ಓಅತ್ತ. ವಿ: [ಅಪವೃತ್ತ] ತಲೆಕೆಳಕಾದ(ಗಾ)

ಓಅತ್ತಅ. ವಿ: [ಅಪವರ್ತಿತವ್ಯ] ವರ್ಗಾಯಿಸಲು ಅಥವಾ ಬದಲಾಯಿಸಲು ಅರ್ಹವಾದ್ದು, ತ್ಯಜಿಸಲು ಅಥವಾ ಬಿಟ್ಟುಬಿಡಲು ಅರ್ಹವಾದ್ದು (ಸೇ)

ಓಅಮ್ಮಅ. ವಿ: [ದೇ] ತಿರಸ್ಕರಿಸಲ್ಪಟ್ಟ, ಸೋಲಿಸಲ್ಪಟ್ಟ (ಷಡ್)

ಓಅರ. ಸಕ: [ಅವ+ತೃ] ಜನ್ಮ ಧರಿಸು, ಅವತರಿಸು, ಕೆಳಕ್ಕೆ ಇಳಿ

ಓಅರಣ. ನ: [ಉಪಕರಣ] ಸಾಧನ, ಸಾಮಗ್ರಿ, ಉಪಕರಣ(ಗಾ)

ಓಅರಣ. ನ: [ಅವತರಣ] ಇಳಿಯುವುದು, ಕೆಳಕ್ಕೆ ಬರುವುದು(ಪಾಅ)

ಓಅರಯ. ಪು: [ಅಪವರಕ] ಕೊಠಡಿ, ಕೋಣೆ

ಓಅರಿಅ. ವಿ: [ಅವತೀರ್ಣ] ಕೆಳಕ್ಕೆ ಇಳಿದ (ಪಾಅ)

ಓಅರಿಅ. ವಿ: [ಔದರಿಕ] ಹೊಟ್ಟೆ ತುಂಬಿದ, ಹೊಟ್ಟೆ ತುಂಬಿಸುವುದನ್ನು ಮಾತ್ರವೇ ಯೋಚಿಸುವವನು

ಓಅರಿಯಾ. ಸ್ತ್ರೀ: [ಅಪವರಿಕಾ] ಕೊಠಡಿ, ಚಿಕ್ಕ ಕೋಣೆ (ಸುಪಾ)

ಓಅಲ್ಲ. **'ಓವಟ್ಟ=ಅಪ+ವೃತ್'** ಶಬ್ದವನ್ನು ನೋಡುವುದು

ಓಅಲ್ಲ. ಅಕ: [ಅವ+ಚಲ್] ಚಲಿಸು, ನಡೆ

ಓಅಲ್ಲ. ಪು: [ದೇ] ಅಪಚಾರ, ಕೆಟ್ಟ ಆಚರಣೆ, ನಡುಗುವುದು, ದನದ ಕೊಟ್ಟಿಗೆ, ವಿ: ಇಡಲ್ಪಟ್ಟ, ಎಸೆಯಲ್ಪಟ್ಟ, ಹೊಸದಾಗಿ ಸೇರಿಸಲ್ಪಟ್ಟ, ತೂಗಾಡುತ್ತಿರುವ, ಜೋತಾಡುತ್ತಿರುವ, ಯಾರ ಕಣ್ಣುಗಳು ಮುಚ್ಚಿರುತ್ತವೆಯೋ ಅವನು

ಓಅಲ್ಲಅ. ವಿ: [ದೇ] ಮೋಸಗೊಳಿಸಲ್ಪಟ್ಟ, ವಂಚಿಸಲ್ಪಟ್ಟ

ಓಅವ. ಸಕ: [ಸಾಧಯ್] ಸಾಧಿಸು, ವಶಪಡಿಸಿಕೊಳ್ಳು, ಗೆಲ್ಲು

ಓಅವಣ. ನ: [ದೇ] ವಿಜಯ,ವಶಪಡಿಸಿಕೊಳ್ಳುವುದು, ಸ್ವಾಧೀನಪಡಿಸಿಕೊಳ್ಳುವುದು

ಓಆಅ. ಪು: [ದೇ] ಗ್ರಾಮ ಮುಖಂಡ, ಊರಿನ ಯಜಮಾನ, ಆಜ್ಞೆ, ಆನೆಗಳನ್ನು ಹಿಡಿಯುವ ಖೆಡ್ಡ, ವಿ: ಅಪಹರಿಸಲ್ಪಟ್ಟ, ಕಸಿದುಕೊಳ್ಳಲಾದ

ಓಆಅವ. ಪು: [ದೇ] ಸೂರ್ಯನು ಮುಳುಗುವ ಸಮಯ

ಓಆರ. ಸಕ: [ಅಪ+ವಾರಯ್] ಮುಚ್ಚು

ಓಆರ. ಪು: [ಅಪಕಾರ] ಕೆಡುಕು, ಪೀಡೆ, ನಷ್ಟ, ತೊಂದರೆ, ನಾಶ(ಕುಮಾ)

ಓಆರ. ಪು: [ಅವತಾರ] ಇಳಿಯುವಿಕೆ, ಕೆಳಕ್ಕೆ ಬರುವುದು, ಬೇರೆ ದೇಹವನ್ನು ಧರಿಸುವುದು, ಹುಟ್ಟುವುದು, ಪುನರ್ ಜನ್ಮತಾಳುವುದು, ಪ್ರವೇಶ

ಓಆರ. 'ಉವಯಾರ' ಶಬ್ದವನ್ನು ನೋಡುವುದು
ಓಆರಣ. ನ: [ಅವತಾರಣ] ಇಳಿಯುವುದು, ಅವತಾರ ತಾಳುವುದು
ಓಆರಿಅ. ವಿ: [ಅವತಾರಿತ] ಕೆಳಕ್ಕಿಳಿದ
ಓಆಲ. ಪು: [ದೇ] ಸಣ್ಣ ಪ್ರವಾಹ, ಲಘು ಪ್ರವಾಹ
ಓಆಲೀ. ಸ್ತ್ರೀ: [ದೇ] ಖಡ್ಗದ ದೋಷ, ಪಂಕ್ತಿ
ಓಆವಲ. ಪು: [ದೇ] ಬೆಳಗಿನ ಸೂರ್ಯನ ಬಿಸಿಲು, ಬಾಲ ಸೂರ್ಯನ ಬಿಸುಪು
ಓಆಸ. 'ಅವಗಾಸ' ಶಬ್ದವನ್ನು ನೋಡುವುದು.
ಓಆಸ. 'ಉವವಾಸ' ಶಬ್ದವನ್ನು ನೋಡುವುದು
ಓಆಹಿಅ. ವಿ: [ಅವಗಾಹಿತ] ಸ್ನಾನವಾದವನು
ಓಇಂಧ. ಸಕ: [ಆ+ಮುಚ್] ಬಿಟ್ಟುಬಿಡು, ತ್ಯಜಿಸು, ಎಸೆ, ಕೆಳಕ್ಕಿಳಿದು ಇಟ್ಟುಬಿಡು
ಓಇಣ್ಣ. ವಿ: [ಅವತೀರ್ಣ] ಕೆಳಕ್ಕಿಳಿದವನು(ಪಾಅ)
ಓಇತ್ತ.} ನ: [ದೇ] ಉಡುವ ಬಟ್ಟೆ, ವಸ್ತ್ರ
ಓಇತ್ತಣ.}
ಓಇಲ್ಲ. ವಿ: [ದೇ] ಮೇಲಕ್ಕೆ ಹತ್ತಿದ, ಹತ್ತಲ್ಪಟ್ಟ
ಓಉಂಠಣ. ನ: [ಅವಗುಂಠನ] ಸ್ತ್ರೀಯು ಮುಖದ ಮೇಲೆ ಮರೆಮಾಡಿಕೊಳ್ಳುವ ಪರದೆ(ಭಿ)
ಓಉಲ್ಲಿಯ. ವಿ: [ದೆ] ಪುರಸ್ಕೃತ, ಮುಂದೆ ಇಡಲಾದ
ಓಊಲ. ನ: [ಅವಚೂಲ] ಜೋತಾಡುತ್ತಿರುವ ಬಟ್ಟೆಯ ಅಂಚು ಅಥವಾ ಸೆರಗು. **'ಓಚೂಲ'** ಶಬ್ದವನ್ನು ನೋಡುವುದು
ಓಂ. ಅ: [ಓಮ್] ಪ್ರಣವ ಮಂತ್ರ– ಓಂಕಾರ ಘೋಷ
ಓಂಕಾರ. ಪು: [ಓಂಕಾರ] 'ಓಂ' ಅಕ್ಷರ
ಓಂಗಣ. ಅಕ: [ಕ್ವಣ್] ಅವ್ಯಕ್ತವಾಗಿ ಶಬ್ದಮಾಡು
ಓಂಫ. 'ಉಂಫ' ಶಬ್ದವನ್ನು ನೋಡುವುದು
ಓಂಡಲ. ನ: [ದೇ] ಕೇಶ–ರಚನೆ, ಹೆಳಿಲು, ಮುಡಿ
ಓಂದುರ. 'ಉಂದುರ' ಶಬ್ದವನ್ನು ನೋಡುವುದು
ಓಂಬಾಲ. ಸಕ: [ಛಾದಯ್] ಮುಚ್ಚು, ಹೊದಿಸು
ಓಂಬಾಲ. ಸಕ: [ಪ್ಲಾವಯ್] ಮುಳುಗಿಸು, ವ್ಯಾಪಿಸು
ಓಂಬಾಲಿಅ. ವಿ: [ಛಾದಿತ] ಮುಚ್ಚಲ್ಪಟ್ಟ,
ಓಂಪಾಲಿಅ. ವಿ: [ಪ್ಲಾಯಿತ] ಮುಳುಗಿಸಲ್ಪಟ್ಟ, ವ್ಯಾಪಿಸಿದ
ಓಕಂಬಣ. 'ಉಕ್ಕಂಬಣ' ಶಬ್ದವನ್ನು ನೋಡುವುದು
ಓಕಚ್ಛಿಯಾ. 'ಉಕ್ಕಚ್ಛಿಆ' ಶಬ್ದವನ್ನು ನೋಡುವುದು
ಓಕಡ್ಢ. ವಿ: [ಅಪಕೃಷ್ಟ]ಎಳೆಯಲ್ಪಟ್ಟ, ನ: ಎಳೆದು ಕೊಳ್ಳುವುದು, ಹಿಂದಕ್ಕೆ ತೆಗೆದುಕೊಳ್ಳುವುದು, ಎಳೆತ

ಓಕಡ್ಢಗ. 'ಉಕ್ಕಡ್ಢಗ' ಶಬ್ದವನ್ನು ನೋಡುವುದು
ಓಕರಗ. ಪು: [ಅವಕರಕ] ಮಲ, ಪುರೀಷ.
ಓಕ್ಕಸ. ಸಕ: [ಅವ+ಕೃಷ್] ಮುಳುಗಿ ಹೋಗು, ಹೂತು ಹೋಗು, ಎಳೆ
ಓಕ್ಕಂತ. ವಿ: [ಅವಕ್ರಾಂತ] ನಿರಾಕರಿಸಲ್ಪಟ್ಟ,
ಓಕ್ಕಂದಿ. 'ಉಕ್ಕಂದಿ' ಶಬ್ದವನ್ನು ನೋಡುವುದು
ಓಕ್ಕಣೀ. ಸ್ತ್ರೀ: [ದೇ] ಹೇನು, ಕೂರೆ
ಓಕ್ಕಿಅ. ನ: [ದೇ] ಮನೆ, ವಸ್ತ್ರ, ಬಟ್ಟೆ, ಸ್ಥಿತಿ, ವಾಸಮಾಡುವುದು, ವಾಂತಿ
ಓಕ್ಖಂಚ. ಸಕ: [ಆ+ಕೃಷ್] ಎಳೆ,
ಓಕ್ಖಂಡ. ಸಕ: [ಅವ+ಖಂಡಯ್] ಮುರಿ
ಓಕ್ಖಂಡಿಅ. ವಿ: [ದೇ] ಮುತ್ತಿಗೆ ಹಾಕಲ್ಪಟ್ಟ, ಆಕ್ರಮಿಸಲ್ಪಟ್ಟ
ಓಕ್ಖಂದ. 'ಅವಕ್ಖಂದ' ಶಬ್ದವನ್ನು ನೋಡುವುದು
ಓಕ್ಖಮಾಣ(ಶೌ). ವಿ: [ಭವಿಷ್ಯತ್] ಭವಿಷ್ಯದಲ್ಲಿ ಆಗಲಿರುವ, ಭಾವೀ
ಓಕ್ಖಲ. 'ಉಊಖಲ' ಶಬ್ದವನ್ನು ನೋಡುವುದು
ಓಕ್ಖಲೀ(ದೇ). 'ಉಕ್ಖಲೀ' ಶಬ್ದವನ್ನು ನೋಡುವುದು
ಓಕ್ಖಿಣ್ಣ.ವಿ:[ದೇ] ತುಂಡುಮಾಡಲ್ಪಟ್ಟ, ಭಂಗಗೊಳಿಸಲ್ಪಟ್ಟ, ಮುಚ್ಚಲ್ಪಟ್ಟ, ಪಾರ್ಶ್ವದಲ್ಲಿ ಶಿಥಿಲವಾದ
ಓಕ್ಖಿತ್ತ. ವಿ: [ಅವಕ್ಷಿಪ್ತ] ಎಸೆಯಲ್ಪಟ್ಟ(ಕಸ)
ಓಖಂಚ. 'ಓಕ್ಖಂಚ' ಶಬ್ದವನ್ನು ನೋಡುವುದು
ಓಗಮ. 'ಅವಗಮ' ಶಬ್ದವನ್ನು ನೋಡುವುದು
ಓಗಯ. ವಿ: [ಉಪಗತ] ದೊರಕಿದ, ಪ್ರಾಪ್ತ
ಓಗರ 'ಒಸಗ್ಗರ' ಶಬ್ದವನ್ನು ನೋಡಿ
ಓಗಲಿಅ. ವಿ: [ಅವಗಲಿತ] ಕೆಳಕ್ಕೆ ಬಿದ್ದ, ದೂರ ಸರಿದ
ಓಗಸಣ. ನ: [ಅಪಕಸನ] ಹ್ರಾಸ, ಕ್ಷಯ ಹೊಂದುವುದು, ನಾಶವಾಗುವುದು
ಓಗಹಿಯ. ವಿ: [ಅವಗೃಹೀತ] ಸ್ವೀಕರಿಸಲ್ಪಟ್ಟ
ಓಗಾಢ. ವಿ: [ಅವಗಾಢ] ಆಶ್ರಿತ, ಹರಡಲಾದ, ಮುಳುಗಿರುವ, ಆಳವಾದ,
ಓಗಾಸ. ಪು: [ಅವಕಾಶ] ಸ್ಥಳ, ಜಾಗ, ಮಾರ್ಗ
ಓಗಾಹ. ಸಕ: [ಅವ+ಗಾಹ್] ಸ್ನಾನಮಾಡು, ಕಾಲಿನಿಂದ ನಡೆಯುವುದು(ಕಾಲ್ನಡಿಗೆ)
ಓಗಾಹಣ. ನ: [ಅವಗಾಹನ] ಸ್ನಾನ
ಓಗಾಹಣಾ. ಸ್ತ್ರೀ: [ಅವಗಾಹನಾ] ಆಧಾರಭೂತವಾದ, ಅವಕಾಶ ಕ್ಷೇತ್ರ, ಶರೀರ, ಶರೀರದ ಅಳತೆ, ಇರುವಿಕೆ, ಸ್ಥಿತಿ, **–ಣಾಮ.** ನ: [–ನಾಮನ್]

ಕರ್ಮ-ವಿಶೇಷ, -ಣಾಮ. ನ: [-ನಾಮ], ಸ್ನಾನಮಾಡಿದ್ದರ ಪರಿಣಾಮ
ಓಗಾಹಿಮ. ವಿ: [ಅವಗಾಹಿಮ] ಬೇಯಿಸಿದ ಅನ್ನ, ಬೇಯಿಸಿದ ಆಹಾರ
ಓಗಿಜ್ಝ.} ಸಕ: [ಅವ+ಗ್ರಹ್] ಆಶ್ರಯ ಪಡೆ, ಅನುಮತಿ
ಓಗಿಣ್ಹ.} ಪಡೆದು ಸ್ವೀಕರಿಸು, ಯಿಳಿದಉದ್ದೇಶಿಸು, ಗಮನಕ್ಕೆ ತಂದುಕೊಳ್ಳು
ಓಗಿಣ್ಹಣ. ನ: [ಅವಗ್ರಹಣ] ಸಾಮಾನ್ಯ ಜ್ಞಾನ-ವಿಶೇಷ, ನಿರ್ಬಂಧ, ಆತಂಕ
ಓಗಿಣ್ಹಣಯಾ. ಸ್ತ್ರೀ: [ಅವಗ್ರಹಣತಾ] ಮೇಲಿನ ಶಬ್ದವನ್ನು ನೋಡುವುದು, ಮನಸ್ಸಿನಿಂದ ವಿಷಯ ಗ್ರಹಿಸುವುದು
ಓಗಿನ್ಹ. 'ಓಗಿಣ್ಹ' ಶಬ್ದವನ್ನು ನೋಡುವುದು
ಓಗುಂಡಿಯ. ವಿ: [ಅವಗುಂಡಿತ] ಲೇಪನ ಮಾಡಲ್ಪಟ್ಟ, ಬಳಿಯಲ್ಪಟ್ಟ, ಬೆರೆತಿರುವ
ಓಗುಟ್ಠಿ. ಸ್ತ್ರೀ: [ಅಪಕೃಷ್ಟಿ] ಎಳೆದುಕೊಳ್ಳುವುದು, ಹಿಂದಕ್ಕೆ ತೆಗೆದುಕೊಳ್ಳುವುದು, ತುಚ್ಛತೆ, ಹೀನತನ
ಓಗೂಹಿಯ. ವಿ: [ಅವಗೂಹಿತ] ಆಲಿಂಗಿಸಲ್ಪಟ್ಟ
ಒಗ್ಗರ. ಪು: [ಓಗರ] ಧಾನ್ಯ, ಬತ್ತ
ಒಗ್ಗಹ. ಸಕ: [ಪ್ರತಿ+ಇಷ್] ಸ್ವೀಕರಿಸು.
ಒಗ್ಗಹ. 'ಉಗ್ಗಹ' ಶಬ್ದವನ್ನು ನೋಡುವುದು,
ಒಗ್ಗಹಣ. 'ಓಗಿಣ್ಹಣ' ಶಬ್ದವನ್ನು ನೋಡುವುದು. -ಪಟ್ಟಗ. ಪುಂ.ನ: [-ಪಟ್ಟಕ] ಜೈನ ಸಾಧ್ವಿಯರು ಧರಿಸುವ ಗೋಪ್ಯ ಅಂಗವನ್ನು ಮರೆಮಾಡುವ ಒಂದು ವಸ್ತ್ರ, ಮೊಳಕಾಲವರೆಗಿನ ಚಲ್ಲಣ, ಲಂಗೋಟಿ
ಒಗ್ಗಹಿಯ. ವಿ: [ಅವಗೃಹೀತ] ಅವಗ್ರಹ ಜ್ಞಾನದಿಂದ ತಿಳಿಯಲಾದ, ಅನುಜ್ಞೆಯಿಂದ ಗ್ರಹಿಸಲ್ಪಟ್ಟ, ಬದ್ಧವಾದ, ಕೊಡುವ ಸಲುವಾಗಿ ಎತ್ತಿಕೊಂಡ
ಒಗ್ಗಹಿಯ. ವಿ: [ಅವಗ್ರಹಿಕ] ಅನುಮತಿ ಪಡೆದು ಸ್ವೀಕರಿಸಲಾದ, ನಿರ್ಬಂಧವುಳ್ಳ
ಒಗ್ಗಾರಣ. ನ: [ಉದ್ಗಾರಣ] ಉದ್ಗಾರ, ಎತ್ತಿ ಹೇಳುವುದು, ಉದಾಹರಿಸುವುದು
ಒಗ್ಗಾಲ. ಸಕ: [ದೇ] ಸಣ್ಣ ಪ್ರವಾಹ, ಲಘು ಪ್ರವಾಹ
ಒಗ್ಗಾಲ. ಸಕ: [ರೋಮಂಥಯ್] ಮೆಲುಕುಹಾಕು
ಒಗ್ಗಾಲಿರ. ಸಕ: [ರೋಮಂಥಾಯಿತೃ] ಮೆಲುಕು ಹಾಕುವವ
ಒಗ್ಗಾಹ. 'ಉಗ್ಗಾಹ=ಉದ್+ಗ್ರಾಹಯ್' ಶಬ್ದವನ್ನು ನೋಡುವುದು
ಒಗ್ಗಿಅ. ವಿ: [ದೇ] ತಿರಸ್ಕರಿಸಲ್ಪಟ್ಟ, ಸೋಲಿಸಲ್ಪಟ್ಟ
ಒಗ್ಗೀಅ. ಪು: [ದೇ] ಹಿಮ, ಮಂಜು
ಒಗ್ಘ. 'ಉಗ್ಘಡ' ಶಬ್ದವನ್ನು ನೋಡುವುದು
ಒಗ್ಘಸಿಂಉ. ವಿ: [ಅವಘರ್ಷಿತ] ಚೆನ್ನಾಗಿ ಸ್ವಚ್ಛಗೊಳಿಸಲಾದ, ತೊಳೆಯಲ್ಪಟ್ಟ
ಓಘ. ಪು: [ಓಘ] ಸಮೂಹ, ರಾಶಿ, ಜಗತ್ತು, ನಿರಂತರವಾಗಿ ಸಾಗಿಬಂದ(= ಪರಂಪರೆ), ಸಾಧಾರಣ, -ಸಣ್ಣಾ. ಸ್ತ್ರೀ: [-ಸಂಜ್ಞಾ] ಸಾಮಾನ್ಯ ಜ್ಞಾನ, ಓಘಾದೇಸ.ಪು: [ಓಘಾದೇಶ] ಸಾಮಾನ್ಯ ವಿವಕ್ಷೆ, 'ಓಹ=ಓಘ' ನೋಡುವುದು
ಓಘಟ್ಟಿದ.(ಶೌ). ವಿ: [ಅವಘಟ್ಟಿತ] ಏಟು, ಹೊಡೆತ, ಹೊಡೆಯಲ್ಪಟ್ಟ, ಮರ್ದಿಸಲ್ಪಟ್ಟ
ಓಘಸರ. ಪು: [ದೇ] ಮನೆಯ ಜಲ-ಪ್ರವಾಹ, ಅನರ್ಥ, ವಿನಾಶ, ನಷ್ಟ
ಓಘಸಿಯ. 'ಒಗ್ಘಸಿಯ' ಶಬ್ದವನ್ನು ನೋಡುವುದು
ಓಘಾಯಯಣ.ನ: [ಓಘಾಯತನ] ಪರಂಪರೆಯಿಂದ ಪೂಜಿಸಲ್ಪಡುವ ಸ್ಥಳ, ಕೆರೆ ನೀರು ಸಾಗುವ ಸಹಜ ಮಾರ್ಗ
ಓಘೆತ್ತವ್ವ. 'ಓಗಿಣ್ಹ' ಶಬ್ದವನ್ನು ನೋಡುವುದು
ಓಚಾರ. ಪು: (ದೇ. ಅಪಚಾರ] ಧಾನ್ಯವನ್ನು ಸಂಗ್ರಹಿಸಿ ಇಡುವ ದೊಡ್ಡ ವಾಡೆ
ಓಚಿದೀ(ಶೌ). ಸ್ತ್ರೀ: [ಔಚಿತೀ] ಔಚಿತ್ಯ (ರಂಭಾ)
ಓಚುಂಬ. ಸಕ: [ಅವ+ಚುಂಬ್] ಮುತ್ತಿಡು, ಚುಂಬಿಸು
ಓಚುಲ್ಲ. ನ: [ದೇ] ಒಲೆಯ ಒಂದು ಭಾಗ(ದೇ)
ಓಚೂಲ.} 'ಓಊಲ' ಶಬ್ದವನ್ನು ನೋಡುವುದು.
ಓಚೂಲಗ.} ಮುಖದಿಂದ ದೂರ ಸರಿಸಲ್ಪಟ್ಟ, ಸಡಿಲ
ಒಚ್ಚಯ. 'ಅವಚಯ' ಶಬ್ದವನ್ನು ನೋಡುವುದು
ಒಚ್ಚಿಯಾ. ಸ್ತ್ರೀ: [ಅವಚಾಯಿಕಾ] ಹೂವುಗಳನ್ನು ಕಿತ್ತು ಒಟ್ಟುಗೂಡಿಸುವುದು
ಒಚ್ಚೆಲ್ಲರ. ನ: [ದೇ] ಚೌಳುಭೂಮಿ, ತೊಡೆಯ ರೋಮಗಳು
ಒಚ್ಛಅ.} ವಿ: [ಅವಸ್ತೃತ] ಹೊದಿಸಲ್ಪಟ್ಟ, ಮುಚ್ಚಿರುವ,
ಒಚ್ಛಇಯ.} ತಡೆಯಲ್ಪಟ್ಟ(ಪಣ್ಹ)
ಒಚ್ಛಂದಿಅ. ವಿ: [ದೇ] ಅಪಹರಿಸಲ್ಪಟ್ಟ, ವ್ಯಥೆಗೊಳಗಾದ, ಪೀಡಿಸಲ್ಪಟ್ಟ

ಒಚ್ಛಣ್ಣ. ವಿ: [ಅವಚ್ಛನ್ನ] ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ
ಒಚ್ಛತ್ತ. ನ: [ದೇ] ದಂತಮಂಜನ ಕಡ್ಡಿ, ಹಲ್ಲನ್ನು ಉಜ್ಜಿ ತೊಳೆಯುವುದು
ಒಚ್ಛನ್ನ. 'ಒಚ್ಛಣ್ಣ' ಶಬ್ದವನ್ನು ನೋಡುವುದು, ಆಕ್ರಮಿಸಲ್ಪಟ್ಟ
ಒಚ್ಛರ (ಶೌ). ಸಕ: [ಅವ+ಸ್ತೃ] ಹರಡು, ಹೊದಿಸು, ಮುಚ್ಚು, ಮರೆಮಾಡು
ಒಚ್ಛವಿಯ.} ವಿ: [ಅವಚ್ಛಾದಿತ] ಹೊದಿಸಲ್ಪಟ್ಟ,
ಒಚ್ಛಾಇಯ.} ಮುಚ್ಚಲ್ಪಟ್ಟ(ಣಾಯಾ)
ಒಚ್ಛಾಇವಿ. ಕೆಳಗಿನ ಶಬ್ದವನ್ನು ನೋಡುವುದು
ಒಚ್ಛಾಯ. ಸಕ: [ಅವ+ಛಾದಯ್] ಆಚ್ಛಾದಿಸು, ಹೊದಿಸುವುದು
ಒಚ್ಛಾಯಣ. ವಿ: [ಅವಚ್ಛಾದನ] ಮುಚ್ಚುವುದು,
ಒಚ್ಛಾಹಿಯ, 'ಉಚ್ಛಾಹಿಯ' ಶಬ್ದವನ್ನು ನೋಡುವುದು
ಒಚ್ಛಿಲ ಕೇಶ–ವಿವರಣೆ,
ಒಚ್ಛಿಣ್ಣ. ವಿ: [ಅವಚ್ಛಿನ್ನ] ಹೊದಿಸಲ್ಪಟ್ಟ, ಆಚ್ಛಾದಿಸಲ್ಪಟ್ಟ
ಒಚ್ಛುಂದ. ಸಕ: [ಆ+ಕ್ರಮ್] ಆಕ್ರಮಣ ಮಾಡು, ಗಮಿಸು, –ಒಚ್ಛುಂದಂತಿ
ಒಚ್ಛುಣ್ಣ. ವಿ: [ಆಕ್ರಾಂತ] ಹತ್ತಿಕ್ಕಲ್ಪಟ್ಟ, ಉಲ್ಲಂಘಿಸಲ್ಪಟ್ಟ, ಆಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ
ಒಚ್ಛೋಅಅ. ನ: [ದೇ] ಮನೆಯ ಛಾವಣಿಯಿಂದ ಕೆಳಗೆ ಬೀಳುತ್ತಿರುವ ನೀರು
ಒಜಿಮ್ಘ. ಅಕ: [ಘ್ರಾ] ತೃಪ್ತಿಗೊಳ್ಳು
ಒಜ್ಜರ. ವಿ: [ದೇ] ಹೆದರುವವನು, ಭೀರು, ಹೆದರುವ ಸ್ವಭಾವದವನು, ಪುಕ್ಕಲ
ಒಜ್ಜಲ. 'ಉಜ್ಜಲ' ಶಬ್ದವನ್ನು ನೋಡುವುದು
ಒಜ್ಜಲ್ಲ. ವಿ: [ದೇ] ಬಲಿಷ್ಠ, ಪ್ರಬಲನಾದವನು
ಒಜ್ಜಾಅ. ಪು: [ದೇ] ಗಟ್ಟಿಯಾಗಿ ಕೂಗಿದ, ಗರ್ಜಿಸಿದ, ಗುಡುಗು, ಗರ್ಜನೆ
ಒಜ್ಝ. ವಿ: [ದೇ] ಕೊಳಕಾದ, ಅಶುದ್ಧವಾದ್ದು
ಒಜ್ಝಂತ. 'ಓಜ್ಝಾ=ಅಪ+ಧ್ಯಾ'ಶಬ್ದವನ್ನು ನೋಡುವುದು
ಒಜ್ಝಮಣ. ನ: [ದೇ] ಪಲಾಯನ, ಓಡಿ ಹೋಗುವುದು
ಒಜ್ಝರ. ಪು: [ನಿರ್ಝರ] ಬೆಟ್ಟದಿಂದ ಹರಿಯುವ ಜಲಧಾರೆ, ನಿರ್ಝರಿ
ಒಜ್ಝರಿಅ.(ದೇ). 'ಉಜ್ಝರಿಅ' ಶಬ್ದವನ್ನು ನೋಡುವುದು
ಒಜ್ಝರೀ. ಸ್ತ್ರೀ: [ದೇ] ಕರುಳಿನ ಆವರಣ, ಕರುಳಿನ ಒಳಭಾಗ

ಒಜ್ಝಾ. ಸಕ: [ಅಪ+ಧ್ಯಾ] ಕೆಟ್ಟದ್ದನ್ನು ಯೋಚಿಸು
ಒಜ್ಝಾ. 'ಅಉಜ್ಝಾ' ಶಬ್ದವನ್ನು ನೋಡುವುದು
ಒಜ್ಝಾಯ. ವಿ: [ದೇ] ಇತರೆಯವರನ್ನು ಪ್ರೇರಿಸಿ ಕೈಯಿಂದ ತೆಗೆದುಕೊಂಡದ್ದು
ಒಜ್ಝಾವಗ. 'ಉವಜ್ಝಾಯ' ಶಬ್ದವನ್ನು ನೋಡುವುದು
ಒಟ್ಠ. ಪು: [ಓಷ್ಠ] ತುಟಿ
ಒಟ್ಠಿಯ. ವಿ: [ಔಷ್ಟ್ರಿಕ] ಒಂಟೆಗೆ ಸಂಬಂಧಿಸಿದ, ಒಂಟೆಯ ಕೂದಲುಗಳಿಂದ ಮಾಡಿದ
ಓಢಣ. ನ: [ದೇ] ಮುಖ ಪರದೆ, ಅವಗುಂಠನ
ಒಡ್ಢ. ವಿ: [ದೇ] ಅನುರಕ್ತ, ಪ್ರೇಮಿ
ಒಡ್ಡ. ಪು: [ಓಡ್ರ] ಉತ್ಕಲ ದೇಶ, ವಿ: ಉತ್ಕಲದ ನಿವಾಸಿ, ಒರಿಸ್ಸಾ
ಒಡ್ಡಿಅ. ವಿ: [ಓಡ್ರಿಯ] ಉತ್ಕಲ ದೇಶದವನು, ಒರಿಸ್ಸಾ ದೇಶೀಯ
ಒಡ್ಢಣ. ನ: [ದೇ] ಉತ್ತರೀಯ, ಹೊದೆಯುವ ವಸ್ತ್ರ, ಚಾದರ
ಒಡ್ಢಿಗಾ. ಸ್ತ್ರೀ: [ದೇ] ಸ್ತ್ರೀಯರ ಮೇಲು ಹೊದಿಕೆ,
ಓಣ. 'ಊಣ=ಊನ' ಶಬ್ದವನ್ನು ನೋಡುವುದು (ರಂಭಾ)
ಓಣಂದ. ಸಕ: [ಅವ+ನಂದ್] ಅಭಿನಂದಿಸು
ಓಣಮ. ಅಕ: [ಅವ+ನಮ್] ಬಗ್ಗಿ ನಮಸ್ಕರಿಸು(ಆಚಾ)
ಓಣಯ. ವಿ: [ಅವನತ] ಬಗ್ಗಿರುವ, ಕೆಳಮುಖವಾದ, ನಮಸ್ಕರಿಸಲ್ಪಟ್ಟ ನ: ನಮಸ್ಕಾರ
ಓಣಲ್ಲ. ಅಕ: [ಅವ+ಲಂಬ್] ಜೋಲಾಡು, ತೂಗಾಡು,
ಓಣವಿಯ. ವಿ: [ಅವನಮಿತ] ನಮಸ್ಕರಿಸಲ್ಪಟ್ಟಿರುವ, ಕೆಳಗೆ ಬಾಗಿಸಲ್ಪಟ್ಟಿರುವ
ಓಣಾಮ. ಸಕ: [ಅವ+ನಮಯ್] ನಮಸ್ಕರಿಸಲ್ಪಡು, ತಲೆ ಬಾಗಿಸು
ಓಣಾಮಣೀ. ಸ್ತ್ರೀ: [ಅವನಾಮನೀ] ಮರಗಿಡಗಳು ಫಲಗಳನ್ನು ನೀಡುವ ಸಲುವಾಗಿ ತಾವಾಗಿ ತಾವೇ ಕೆಳಗೆ ಭಾಗುವಂತೆ ಮಾಡುವ ಒಂದು ವಿದ್ಯೆ
ಓಣಾಮಿಯ.} ವಿ: [ಅವನಮಿತ] ಕೆಳಗೆ
ಓಣಾವಿಯ.} ಬಾಗಿಸಲ್ಪಟ್ಟಿರುವ(ಗಾ)
ಓಣಿಅತ್ತ. ವಿ: [ಅಪನಿವೃತ್ತ] ಹಿಂದಕ್ಕೆ ಸರಿಸಲ್ಪಟ್ಟ, ಹಿಂತಿರುಗಿ ಬಂದ
ಓಣಿಮಿಲ್ಲ. ವಿ: [ಅವನಿಮೀಲಿತ] ಕಣ್ಣು ಮುಚ್ಚಿಕೊಂಡಿರುವ

ಒಣೆಯಟ್ಟ. 'ಓನಿಯಟ್ಟ' ತಾವಾಗಿ ತಾವೇ
ಓಣಿವ್ವ. ಪು: [ದೇ] ವಲ್ಮೀಕ, ಹುತ್ತ
ಓಣೀವಿ. ಸ್ತ್ರೀ: [ದೇ] ನೀವಿ, ಸ್ತ್ರೀಯರ ನಿರಿಗೆ, ಸೀರೆಯ ಬಾಳೆಕಾಯಿ ಗಂಟು
ಓಣುಣಅ. ವಿ: [ದೇ] ಸೋಲಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ
ಒಣ್ಣಿದ್ದ. ನ: [ಔನ್ನಿದ್ರ್ಯ] ನಿದ್ರೆಯ ಅಭಾವ, ನಿದ್ರೆಯಿಲ್ಲದಿರುವಿಕೆ
ಒಣ್ಣಿಯ. ವಿ: [ಔರ್ಣಿಕ] ಉಣ್ಣೆಯಿಂದ ಮಾಡಲಾದ,
ಓಣೆಜ್ಜ. ವಿ: [ಉಪನೇಯ] ಪಡಿಯಚ್ಚಿನಲ್ಲಿ ಹಾಕಿ ಮಾಡಿದ ಹೂವು ಮೊದಲಾದವು, ಅಚ್ಚಿನಲ್ಲಿ ತಯಾರಾಗುವ ಮೇಣದ ಪುತ್ಥಳಿ
ಒತ್ತಲಹಅ. ಪು: [ದೇ] ಮರ, ಬಳ್ಳಿಗಳ ಕೊಂಬೆ, ಶಾಖೆ
ಒತ್ತಾಣ. 'ಉತ್ತಾಣ' ಶಬ್ದವನ್ನು ನೋಡುವುದು
ಒತ್ಥ. ಸಕ: [ಸ್ಥಗ್] ಮುಚ್ಚು
ಒತ್ಥಅ. ವಿ: [ಅವಸ್ತೃತ] ಹರಡಿರುವ, ಹೊದಿಸಲ್ಪಟ್ಟಿರುವ, ಮುಚ್ಚಲ್ಪಟ್ಟಿರುವ
ಒತ್ಥಅ. ವಿ: [ದೇ] ಧೈರ್ಯಗುಂದಿದ, ಕುಗ್ಗಿದ ಮನಸ್ಸಿನ, ವ್ಯಥೆಭರಿತ
ಒತ್ಥಇಯ. 'ಒಚ್ಛಇಯ' ಶಬ್ದವನ್ನು ನೋಡುವುದು
ಒತ್ಥರ. 'ಒಚ್ಛರ' ಶಬ್ದವನ್ನು ನೋಡುವುದು
ಒತ್ಥರ. ಪು: [ದೇ] ಉತ್ಸಾಹ
ಒತ್ಥರಣ. ನ: [ಅವಸ್ತರಣ] ಹಾಸಿಗೆ(ಪಉಮ)
ಒತ್ಥರಿಅ. ವಿ: [ಅವಸ್ತೃತ] ಹಾಸಲ್ಪಟ್ಟ, ವ್ಯಾಪಿಸಲ್ಪಟ್ಟ, ವ್ಯಾಪ್ತ, ಹರಡಲ್ಪಟ್ಟ
ಒತ್ಥರಿಅ. ವಿ: [ದೇ] ಆಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ, ಆಕ್ರಮಣಕಾರಿ(ದೇ)
ಒತ್ಥಲ್ಲ. 'ಉತ್ಥಲ್ಲ=ಉತ್+ಸ್ಥ' ಶಬ್ದವನ್ನು ನೋಡುವುದು
ಒತ್ಥಲ್ಲಪತ್ಥಲ್ಲ. 'ಉತ್ಥಲ್ಲಪತ್ಥಲ್ಲಾ' ಶಬ್ದವನ್ನು ನೋಡುವುದು
ಒತ್ಥಾಡಿಯ. ವಿ: [ಅವಸ್ತೃತ] ಹಾಸಲ್ಪಟ್ಟ, ಹರಡಲ್ಪಟ್ಟ, ವ್ಯಾಪಿಸಲ್ಪಟ್ಟ(ಭವಿ)
ಒತ್ಥಾರ. ಸಕ: [ಅವ+ಸ್ತಾರಯ್] ಹೊದಿಸು
ಓದಇಗ.} ಪುಂನ: [ಔದಯಿಕ] ಉದಯಕ್ಕೆ
ಓದಇಯ.} ಸಂಬಂಧಿಸಿದ, ಕರ್ಮ-ವಿಪಾಕ, ಉದಯದಿಂದ ಹುಟ್ಟಿದ(ವಿಸೇ), ಪು: ಕರ್ಮೋದಯ ರೂಪ: ಭಾವ; ವಿ: ಉದಯಿಸಿದ ಮೇಲೆ ಉಂಟಾಗುವಂಥದು(ವಿಸೇ)

ಓದಚ್ಚ. ನ: [ಔದಾತ್ಯ] ಉದಾತ್ತತೆ, ಶ್ರೇಷ್ಠತೆ
ಓದಜ್ಜ, ನ: [ಔದಾರ್ಯ] ಉದಾರತೆ, ಶ್ರೇಷ್ಠತೆ
ಓದಣ. ನ: [ಓದನ] ಅನ್ನ(ಪಣ್ಣ)
ಓದರಿಯ. ವಿ: [ಔದರಿಕ] ಹೊಟ್ಟೆಬಾಕ, ಹೊಟ್ಟೆ ತುಂಬಿಸಲೆಂದೇ ಸಾಧುವಾಗಿರುವವನು(ನಿಚೂ)
ಓದಹಣ. ನ: [ಅವದಹನ] ಕಾದ ಕಬ್ಬಿಣದ ಸಲಾಕೆಯಿಂದ ಸುಡುವುದು(ಬರೆಹಾಕುವುದು)
ಓದಾರಿಯ. ನ: [ಔದಾರ್ಯ] ಉದಾರತೆ
ಒದ್ದ. ವಿ: [ಆರ್ದ್ರ] ಒದ್ದೆಯಾದ, ನೆನೆದಿರುವ
ಒದ್ದಂಪಿಅ. ವಿ: [ದೇ] ಮುತ್ತಿಗೆ ಹಾಕಲ್ಪಟ್ಟ, ನಷ್ಟ,
ಒದ್ದಂಸ. ಸಕ: [ಅವ+ಧ್ವಂಸ್] ಬೀಳಿಸು, ದೂರ ಸರಿಸು, ಸೋಲಿಸು
ಓಧಾವ. ಸಕ: [ಅವ+ಧಾವ್] ಬೆಂಬತ್ತಿ ಓಡು
ಓಧುಣ್ಣ. 'ಅವಧುಣ' ಶಬ್ದವನ್ನು ನೋಡುವುದು
ಓಧೂಅ. ವಿ: [ಅವಧೂತ] ಕಂಪಿತ, ನಡುಗಿಸಲ್ಪಟ್ಟ, ಅಲುಗಾಡಿಸಲ್ಪಟ್ಟ
ಓಧೂಸರಿಅ. ವಿ: [ಅವಧೂಸರಿತ] ಧೂಳಿನ ಬಣ್ಣದ, ಹಗುರ ಹಳದಿಯ ಬಣ್ಣವುಳ್ಳ
ಓನಡಿಯ. ವಿ: [ಅವನಟಿತ] ಕಡೆಗಣಿಸಲ್ಪಟ್ಟ ತಿರಸ್ಕರಿಸಲ್ಪಟ್ಟ
ಓನಿಯಟ್ಟ. ವಿ: [ಅವನಿವೃತ್ತ] 'ಓಣಿಅತ್ತ=ಅಪನಿವೃತ್ತ' ಶಬ್ದವನ್ನು ನೋಡುವುದು
ಓಪಲ್ಲ. ವಿ: [ದೇ] ಕುಂಠಿತ(ಣಾಯಾ)
ಒಪ್ಪ. ವಿ: [ದೇ] ಶುದ್ಧ ಮಾಡಲ್ಪಟ್ಟ, ತೊಳೆಯಲ್ಪಟ್ಟ, ಹೊಳಪು ನೀಡಲಾದ(ಷಡ್)
ಒಪ್ಪ. ಸಕ: [ಅರ್ಪಯ್] ಅರ್ಪಿಸು
ಒಪ್ಪಾ. ಸ್ತ್ರೀ: [ದೇ] ಮಣಿ, ಹರಳು ಇತ್ಯಾದಿಗಳನ್ನು ಸಾಣೆ ಹಿಡಿಯುವುದು
ಒಪ್ಪಾಇಯ. ವಿ: [ಔತ್ಪಾತಿಕ] ಪ್ರಾಕೃತಿಕ ಉತ್ಪಾತಕ್ಕೆ ಸಂಬಂಧಿಸಿದ, ಧೂಮಕೇತು, ಕಾಳ್ಗಿಚ್ಚು ಮುಂತಾದವುಗಳಿಂದ ಉಂಟಾಗುವ ಶುಭಾಶುಭ ಫಲಗಳು
ಒಪ್ಪಿಅ. ವಿ: [ಅರ್ಪಿತ] ಕೊಡಲ್ಪಟ್ಟ, ಇರಿಸಲ್ಪಟ್ಟ
ಒಪ್ಪಿಅ. ವಿ: [ದೇ] ಸಾಣೆ ಕಲ್ಲಿನ ಮೇಲೆ ಉಜ್ಜಲಾದ
ಒಪ್ಪೀಲ. ಪು: [ದೇ] ಸಮೂಹ
ಒಪ್ಪುಂಸಿಅ.} 'ಉಪ್ಪುಸಿಅ' ಶಬ್ದವನ್ನು ನೋಡುವುದು
ಒಪ್ಪುಸಿಅ.} (ಗಉಡ)

ಓಬದ್ಧ. ವಿ: [ಅವ+ಬದ್ಧ] ಕಟ್ಟಲ್ಪಟ್ಟ, ಎಲ್ಲ ಕಡೆಯೂ ಬಂಧಿಸಲ್ಪಟ್ಟ, ಧೈರ್ಯಗುಂದಿದ, ಕುಗ್ಗಿದ ಮನಸ್ಸುಳ್ಳ (ವವ)

ಓಬುಜ್ಝ. ಸಕ: [ಅವ+ಬುಧ್] ಕಳಿದುಕೊಳ್ಳು,

ಒಬ್ಭಾಲಣ. 'ಉಬ್ಭಾಲಣ' ಶಬ್ದವನ್ನು ನೋಡುವುದು

ಓಭಗ್ಗ. ವಿ: [ಅವಭಗ್ನ] ಒಡೆಯಲ್ಪಟ್ಟ, ಮುರಿಯಲ್ಪಟ್ಟ, ನಾಶಮಾಡಲ್ಪಟ್ಟ

ಓಭಾವಣಾ. ಸ್ತ್ರೀ: [ಅಪಭ್ರಾಜನಾ] ಲೋಕನಿಂದೆ, ಜನಾಪವಾದ, ಅಪಕೀರ್ತಿ

ಓಭಾಸ. ಅಕ: [ಅವ+ಭಾಸ್] ಹೊಳೆ, ಪ್ರಕಾಶಿಸು ▯ಓಭಾಸಂತಿ(ಸುಜ್ಜ)

ಓಭಾಸ. ಸಕ: [ಅವ+ಭಾಷ್] ಯಾಚಿಸು, ಬೇಡು

ಓಭಾಸ. ಪು: [ಅವಭಾಸ] ಪ್ರಕಾಶ, ಕಾಂತಿ, ಮಹಾಗ್ರಹ

ಓಭಾಸಣ. ನ: [ಅವಭಾಸನ] ಬೆಳಕನ್ನುಂಟು ಮಾಡುವುದು, ತೋರಿಸುವುದು, ಉತ್ಪತ್ತಿ, ಕಾಣಿಸಿಕೊಳ್ಳುವುದು, ಲಭಿಸುವುದು(ಸೂಅ)

ಓಭಾಸಣ. ನ: [ಅವಭಾಷಣ] ಬೇಡುವುದು, ಕೋರುವುದು

ಓಭಾಸಿಯ. ವಿ: [ಅವಭಾಷಿತ] ಬೇಡಲಾದ, ಕೋರಲಾದ, ಯಾಚನೆ, ಪ್ರಾರ್ಥನೆ

ಓಭುಗ್ಗ. ವಿ: [ಅವಭುಗ್ನ] ವಕ್ರ, ಬಾಗಿದ(ಣಾಯಾ)

ಓಭೇಡಿಯ. ವಿ: [ಅವಮುಕ್ತ] ಬಿಡಿಸಲ್ಪಟ್ಟ, ಮುಕ್ತಗೊಳಿಸಲಾದ

ಓಮ. ವಿ: [ಅವಮ] ಅಸಾರ, ಸಾರವಿಲ್ಲದ

ಓಮ. ವಿ: [ಅವಮ] ಕಡಿಮೆ, ಕೊರತೆ, ನ್ಯೂನತೆ, ಚಿಕ್ಕ(ಓಘ), ನ: ದುರ್ಭಿಕ್ಷೆ, ಬರಗಾಲ, **-ಕೊಟ್ಠ.** ವಿ: [-ಕೋಷ್ಠ] ಅಲ್ಪಾಹಾರ ಸೇವಿಸಿದವನು, ಊನೋದರ(ಠಾ) **-ಚೇಲಗ. -ಚೇಲಯ.** ವಿ: [-ಚೇಲಕ] ಹಳೆಯ ಮತ್ತು ಕೊಳಕಾದ ಬಟ್ಟೆ ಧರಿಸಿದವನು(ಉತ್ತ), **-ರತ್ತ.** ಪು: [-ರಾತ್ರ] ಹಗಲು ಕಡಿತ, ಜ್ಯೋತಿಷಿಯ ಲೆಕ್ಕಾಚಾರದ ಮೇರೆಗೆ ಯಾವ ತಿಥಿ ಕ್ಷಯ ಹೊಂದುತ್ತದೋ ಅದು(ಠಾ), ಹಗಲು-ರಾತ್ರಿ(ಓಘ)

ಓಮಇಲ್ಲ. ವಿ: [ಅವಮಿಲನ] ಮಲಿನ, ಕೊಳಕಾದ

ಓಮಂಥ.(ದೇ). 'ಓಮತ್ಥ' ಶಬ್ದವನ್ನು ನೋಡುವುದು

ಓಮಂಥಿಯ. ವಿ: [ಅವಮುಸ್ತಿಕ] ತಲೆಕೆಳಕಾಗಿ ಶೀರ್ಷಾಸನದ ಭಂಗಿಯಲ್ಲಿರುವ

ಓಮಂಥಿಯ. ವಿ: [ದೇ] ಕೆಳಕ್ಕೆ ಮುಖಮಾಡಿರುವ, ತಲೆಬಗ್ಗಿಸಿರುವ(ಣಾಯಾ)

ಓಮಂಸ. ವಿ: [ದೇ] ಕಳೆದು ಹೋದ

ಓಮಜ್ಜಣ. ನ: [ಅವಮಜ್ಜನ] ಸ್ನಾನ ಮಾಡಿರುವ,

ಓಮಜ್ಜಾಯಣ. ಪು: [ಅವಮಜ್ಜಾಯನ] ಋಷಿ-ವಿಶೇಷ,

ಓಮಜ್ಜಿಅ. ವಿ: [ಅವಮಾರ್ಜಿತ] ಸ್ಪರ್ಶ ಮಾಡಿಸಲ್ಪಟ್ಟವನು, ಸ್ಪರ್ಶಿತ

ಓಮಟ್ಠ ವಿ: [ಅವಮೃಷ್ಟ] ಸ್ಪರ್ಶಿಸಲ್ಪಟ್ಟ,

ಓಮತ್ಥ. ವಿ: [ದೇ] ಕೆಳಮುಖಮಾಡಿದ, ಬಾಗಿದ

ಓಮತ್ಥಿಯ(ದೇ). 'ಓಮಂಥಿಯ' ಶಬ್ದವನ್ನು ನೋಡುವುದು

ಓಮಲ್ಲ. ವಿ: [ನಿರ್ಮಾಲ್ಯ] ದೇವರಿಗೆ ಅರ್ಪಿಸಿದ ಹೂವು ಮೊದಲಾದವು, ಪೂಜಾನಂತರ ವಿಗ್ರಹದಿಂದ ತೆಗೆದುಹಾಕಿದ ಹೂವು, ಉಳಿಕೆ, ಉಚ್ಛಿಷ್ಟ

ಓಮಲ್ಲ. ವಿ: [ದೇ] ಗಟ್ಟಿಯಾದ, ದಟ್ಟವಾದ

ಓಮಾಣ. ಪು: [ಅಪಮಾನ] ಅಪಮಾನ, ತಿರಸ್ಕಾರ, ಅವಮಾನ(ಉತ್ತ)

ಓಮಾಣ. ನ: [ಅವಮಾನ] ಯಾವುದರಿಂದ ಕ್ಷೇತ್ರವೇ ಮೊದಲಾದವುಗಳನ್ನು ಅಳೆಯಲಾಗುತ್ತದೆಯೋ ಅದು, ಕೈ, ದಂಡ, ಮೊದಲಾದ ಮಾನಗಳು. ಯಾವುದರ ಅಳತೆ ಮಾಡಲಾಗುತ್ತದೆಯೋ ಅಂಥ ಕ್ಷೇತ್ರವೇ ಮೊದಲಾದವು

ಓಮಾಣ. ನ: [ಅವಮಾನನ, ಅಪ-] ಅಪಮಾನ, ತಿರಸ್ಕಾರ

ಓಮಾಯ. ವಿ: [ಅವಮಿತ] ಅಳೆಯಲ್ಪಟ್ಟ

ಓಮಾಲ. 'ಓಮಲ್ಲ=ನಿರ್ಮಾಲ್ಯ' ಶಬ್ದವನ್ನು ನೋಡುವುದು

ಓಮಾಲ. ಅಕ: [ಉಪ+ಮಾಲ್] ಶೋಭಿಸು, ಸಕ: ಸೇವೆ ಮಾಡು, ಪೂಜಿಸು

ಓಮಾಲಿಅ. 'ಓಮಲ್ಲ=ನಿರ್ಮಾಲ್ಯ' ಶಬ್ದವನ್ನು ನೋಡುವುದು

ಓಮಾಲಿಅ. ವಿ: [ಉಪಮಾಲಿತ] ಶೋಭಿತವಾಗುವುದು, ಪೂಜಿಸಲ್ಪಟ್ಟ, ಅರ್ಚಿಸಲ್ಪಟ್ಟ

ಓಮಾಲಿಆ. ಸ್ತ್ರೀ: [ಅವಮಾಲಿಕಾ] ಬಾಡಿ ಹೋದ ಹೂಮಾಲೆ

ಓಮಾಸ. ಪು: [ಅವಮರ್ಶ] ಸ್ಪರ್ಶ

ಓಮಿಣ. ಸಕ: [ಅವ+ಮಾ] ಅಳೆ, ಅಳತೆಮಾಡು

ಓಮಿಣಣ. ನ: [ದೇ] ವಿವಾಹದ ಒಂದು ವಿಧ: ವರನಿಗೆ ಅತ್ತೆಯು ತೆಗೆಯುವ ನಿವಾಳಿ
ಓಮಿಯ. ವಿ: [ಅವಮಿತ] ಮಿತವಾದ, ಇಷ್ಟೇ ಎಂದು ಅಳೆಯಲ್ಪಟ್ಟ
ಓಮೀಲ. ಅಕ: [ಅವ+ಮೀಲ್] ಮುಚ್ಚು
ಓಮೀಸ. ವಿ: [ಅವಮಿಶ್ರ] ಮಿಶ್ರಿತ, ಹತ್ತಿರದಲ್ಲಿರುವ, ನ: ಸಾಮೀಪ್ಯ, ಹತ್ತಿರ
ಓಮುಕ್ಕ. ವಿ: [ಅವಮುಕ್ತ] ಪರಿತ್ಯಕ್ತ, ಬಿಡಲ್ಪಟ್ಟ
ಓಮುಗ್ಗ. 'ಉಮ್ಮುಗ್ಗ' ಶಬ್ದವನ್ನು ನೋಡುವುದು
ಓಮುಚ್ಛಿಅ. ವಿ: [ಅವಮೂರ್ಛಿತ] ಮಹಾಮೂರ್ಛೆಗೆ ಒಳಗಾದ
ಓಮುದ್ಧಗ. ವಿ: [ಅವಮೂರ್ಧಕ] ಕೆಳಕ್ಕೆ ಮುಖಮಾಡಿದ, ತಲೆ ತಗ್ಗಿಸಿದ
ಓಮುಯ. ಸಕ: [ಅವ+ಮುಚ್] ಧರಿಸು,
ಓಮೋಯ. ಪು: [ಓಮೋಕ] ಆಭರಣ, ಒಡವೆ(ಭಗ)
ಓಮೋಯರ. ವಿ: [ಅವಮೋದರ] ಹಸಿವಾಗಿರುವುದಕ್ಕಿಂತ ಕಡಿಮೆ ಊಟ ಮಾಡುವವನು
ಓಮೋಯರಿಯ. ನ: [ಅವಮೋದರಿಕ] ಅಲ್ಪ ಭೋಜನ, ಒಂದು ಬಗೆಯ ತಪಸ್ಸು, ದುರ್ಭಿಕ್ಷ, ಬರಗಾಲ
ಓಮೋಯರಿಯಾ. ಸ್ತ್ರೀ: [ಅವಮೋದರಿತಾ, ರಿಕಾ] ಅಲ್ಪ ಭೋಜನ, ಒಂದು ವ್ರತ
ಓಮ್ಮಾಯ. ಪು: [ಉನ್ಮಾದ] ಉನ್ಮತ್ತತೆ, ಹುಚ್ಚು ಹಿಡಿದವನು
ಓಯ. ನ: [ಓಜಸ್] ಒಂದು, ಮೂರು, ಐದು ಮುಂತಾದ ವಿಷಮ ಸಂಖ್ಯೆಗಳು, ತಾನು ಹುಟ್ಟಿದಾಗ ಪ್ರಥಮ ಜೀವವು ಏನು ಆಹಾರ ಸ್ವೀಕರಿಸುತ್ತದೋ ಅದು, ಬಲ, ಪ್ರಕಾಶ. ಜನನ ಸ್ಥಾನದಲ್ಲಿ ಆಹತಗೊಂಡ ಪದ್ಗಲ ಸಮೂಹ. ಋತು ಧರ್ಮ
ಓಯ. ವಿ: [ಓಕಸ್] ಮನೆ
ಓಯ. ವಿ: [ಓಜ] ಒಂದು, ಅಸಹಾಯ, ಮಧ್ಯಸ್ಥ, ತಟಸ್ಥ, ಉದಾಸೀನ, ಪು: ವಿಷಮ ರಾಶಿ
ಓಯಂಸಿ. ವಿ: [ಓಜಸ್ವಿನ್] ಬಲಶಾಲಿ, ತೇಜಸ್ವಿ
ಓಯಟ್ಟಣ. ನ: [ಅಪವರ್ತ್ತನ] ಹಿಂದೆ ಸರಿಯುವುದು,
ಓಯಡ್ಢ. ಸಕ: [ಅಪ+ಕೃಷ್] ಎಳೆ, ಎಳೆದುಕೊಳ್ಳು, ಹಿಂದಕ್ಕೆ ತೆಗೆದುಕೊಳ್ಳು

ಓಯಡ್ಢಿಯಾ.} ಸ್ತ್ರೀ: [ದೇ] ಸ್ತ್ರೀಯರ ಮೇಲು
ಓಯಡ್ಢೀ.}. ಹೊದಿಕೆ, ದುಪಟ್ಟಾ, ಚಾದರ
ಓಯಣ. 'ಓದಣ' ಶಬ್ದವನ್ನು ನೋಡುವುದು
ಓಯತ್ತ. ಸಕ: [ಅಪ+ವರ್ತಯ್] ತಲೆಕೆಳಗು ಮಾಡುವುದು, ಖಾಲಿಮಾಡಲು ಬಗ್ಗಿಸುವುದು
ಓಯತ್ತಣ. ನ: [ಅಪವರ್ತನ] ಸರಿಸುವುದು, ದೂರಮಾಡುವುದು
ಓಯವಿಯ. ವಿ: [ದೇ] ಸೇವೆ ಮಾಡಲ್ಪಟ್ಟ, ಪೂಜಿಸಲ್ಪಟ್ಟ, ಶೃಂಗರಿಸಲ್ಪಟ್ಟ
ಓಯತ್ತ. ವಿ: [ಅವವೃತ್ತ] ಬಗ್ಗಿರುವ, ಕೆಳಮುಖ (ಪಾಅ)
ಓಯತ್ತ. ಸಕ: [ಅಪ+ವರ್ತಯ್] ಖಾಲಿ ಮಾಡಿಸಲು ಬಗ್ಗಿಸು
ಓಯತ್ತಣ. ನ: [ಅಪವರ್ತನ] ದೂರಾಗಿಸುವುದು
ಓಯವಿಯ. ವಿ: [ದೇ] ಸೇವೆ ಮಾಡಲಾದ, ಪೂಜಿಸಲ್ಪಟ್ಟ, ಸಿಂಗರಿಸಲ್ಪಟ್ಟ
ಓಯಾ. ಸ್ತ್ರೀ [ಓಜಸ್] ಶಕ್ತಿ, ಸಾರ್ಥ್ಯ, ಪ್ರಕಾಶ, ಮಾತೆಯ ಶುಕ್ರ-ಶೋಣಿತ(ಣಾಯಾ)
ಓಯಾಇಯ. 'ಉವಯಾಇಅ' ಶಬ್ದವನ್ನು ನೋಡುವುದು
ಓಯಾಯ. ವಿ: [ಉಪಯಾತ] ಸಮೀಪಕ್ಕೆ ತಲುಪಿದ, ಹತ್ತಿರಕ್ಕೆ ಹೋದ(ಣಾಯಾ)
ಓಯಾರ. ಸಕ: [ಅವ+ತಾರಯ್] ಕೆಳಕ್ಕೆ ಇಳಿಸು
ಓಯಾರ. ಪು: [ಅವತಾರ] ಇಳಿಯುವಿಕೆ, ದೇವತೆಗಳು ಭೂಮಿಯಲ್ಲಿ ಹುಟ್ಟುವುದು, ಪುಣ್ಯ ತೀರ್ಥ, ನದಿಗೆ ಇಳಿಯುವ ಮಾರ್ಗ
ಓಯಾರಗ. ವಿ: [ಅವತಾರಕ] ಕೆಳಕ್ಕೆ ಇಳಿಸಿಕೊಳ್ಳುವವನು, ಪ್ರಾಪಂಚಿಕ ವ್ಯವಹಾರದಲ್ಲಿ ತೊಡಗುವವನು
ಓಯಾರಣ. 'ಉಯಾರಣ' ಶಬ್ದವನ್ನು ನೋಡುವುದು
ಓಯಾವಇ. ಅ: [ಓಜಯಿತ್ವಾ] ಶಕ್ತಿಯನ್ನು ತೋರಿಸಿ, ಚಮತ್ಕಾರ ಪ್ರದರ್ಶಿಸಿ, ವಿದ್ಯೆಯೇ ಮೊದಲಾದ ಸಾಮರ್ಥ್ಯ ಪ್ರದರ್ಶಿಸಿ(ಠಾ)
ಓರ. ವಿ: [ದೇ] ಸುಂದರ, ಸಮೀಪ
ಓರಂಪಿಅ. ವಿ: [ದೇ] ಮುತ್ತಿಗೆ ಹಾಕಲ್ಪಟ್ಟ, ನಷ್ಟ, ತೆಳ್ಳಗೆ ಮಾಡಲಾದ, ಹೆರೆಯಲ್ಪಟ್ಟ
ಓರತ್ತ. ವಿ: [ದೇ] ಗರ್ವಿಷ್ಟ, ಅಭಿಮಾನಿ, ಕುಂಕುಮ ಕೇಸರಿಯಿಂದ ಕೆಂಪಾಗಿರುವ, ಸೀಳಲ್ಪಟ್ಟ ಕತ್ತರಿಸಲ್ಪಟ್ಟ

ಓರದ್ಧ. 'ಅವರದ್ಧ=ಅಪರಾದ್ಧ' ಶಬ್ದವನ್ನು ನೋಡುವುದು
ಓರಮ. ಅಕ: [ಉಪ+ರಮ್] ವಿರಮಿಸು, ನಿವೃತ್ತನಾಗು
ಓರಲ್ಲೀ. ಸ್ತ್ರೀ: [ದೇ] ದೀರ್ಘವೂ ಮಧುರವೂ ಆದ ದನಿ
ಓರಸ. ಸಕ: [ಅವ+ತೃ] ಕೆಳಕ್ಕೆ ಇಳಿ
ಓರಸ. ವಿ: [ಉಪರಸ] ಸ್ನೇಹದಿಂದ ಕೂಡಿದ, ಅನುರಾಗಿ, ಪ್ರೀತಿಯುಳ್ಳ
ಓರಸ. ವಿ: [ಔರಸ] ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ, ಸ್ವಪುತ್ರ, ಉರದಲ್ಲಿ ಹುಟ್ಟಿದವನು, ತನ್ನ ಹೃದಯದಲ್ಲಿ ಹುಟ್ಟಿದ(ಜೀವ)
ಓರಸಿಅ. ವಿ: [ಅವತೀರ್ಣ] ಕೆಳಕ್ಕೆ ಇಳಿದಿರುವ
ಓರಸ್ಸ. ವಿ: [ಔರಸ್ಯ] ಉರದಲ್ಲಿ=ಎದೆಯಲ್ಲಿ= ಹೃದಯದಲ್ಲಿ ಹುಟ್ಟಿದವನು, ಒಳಗಿನ(ಪ್ರಾರು)
ಓರಾಲ. 'ಉರಾಲ= ಉದಾರ' ಶಬ್ದವನ್ನು ನೋಡುವುದು
ಓರಾಲ. 'ಉರಾಲ(ದೇ)' ಶಬ್ದವನ್ನು ನೋಡುವುದು
ಓರಾಲ. ನ: [ಔದಾರ] ಕೆಳಗಿನ ಶಬ್ದವನ್ನು ನೋಡುವುದು
ಓರಾಲಿಯ. ನ: [ಔದಾರಿಕ] ಶರೀರ ವಿಶೇಷ, ಮನುಷ್ಯರು ಮತ್ತು ಪಶುಗಳ ಶರೀರ(ಔಪ), ವಿ: ಹೊಳೆಯುವ, ಪ್ರಕಾಶಿಸುವ, ಕಾಂತಿ ಯುಕ್ತವಾದ(ಪಾಅ), ಅತಿ ಆಹಾರದ ರೂಢಿ ಇರುವ ಶರೀರದ. –ಣಾಮ. ನ: [–ನಮನ್] ಅತಿ ಅಹಾರದ ರೂಢಿ ಮಾಡಿಕೊಂಡಿರುವ ಶರೀರಕ್ಕೆ ಕಾರಣವಾದ ಕರ್ಮ
ಓರಾಲಿಯ. ವಿ: [ದೇ] ಒರೆಸಿದ, ವ್ಯಾಪಿಸಿದ, ಹರಡಿದ, ಬಳಿಯಲ್ಪಟ್ಟ, ಲೇಪಿಸಲ್ಪಟ್ಟ
ಓರಾಲೀ 'ಓರಲ್ಲೀ' ಶಬ್ದವನ್ನು ನೋಡುವುದು
ಓರಿಂಕಿಯ. ನ: [ಅವರಿಂಕಿತ] ಎಮ್ಮೆಯ ಅರಚುವಿಕೆ (ಪಉಮ)
ಓರಿಲ್ಲ. ಪು: [ದೇ] ದೀರ್ಘಕಾಲ
ಓರುಂಜ. ನ: [ದೇ] ಕ್ರೀಡಾ ವಿಶೇಷ
ಓರುಂಭಿಅ. ವಿ: [ಉಪರುದ್ಧ] ಆವರಿಸಲ್ಪಟ್ಟ, ಮರೆಮಾಡಲ್ಪಟ್ಟ, ಹೊದಿಸಲ್ಪಟ್ಟ
ಓರುಣ್ಣ. ವಿ: [ಅವರುದಿತ] ಅಳಿಸಲ್ಪಟ್ಟ(ಗಾ)
ಓರುದ್ಧ. ವಿ: [ಅವರುದ್ಧ] ತಡೆಯಲ್ಪಟ್ಟ, ಬಂದ್ ಮಾಡಲ್ಪಟ್ಟ,
ಓರುಭ. ಸಕ: [ಅವ+ರುಹ್] ಇಳಿ
ಓರುವ್ಮಾ. ಅಕ: [ಉದ್+ವಾ] ಒಣಗು, ಒಣಗಿ ಹೋಗು(ಹೇ)
ಓರುಹ. 'ಓರುಭ' ಶಬ್ದವನ್ನು ನೋಡುವುದು
ಓರುಹಣ. ನ: [ಅವರೋಹಣ] ಕೆಳಕ್ಕೆ ಇಳಿಯುವುದು (ಪಉಮ)
ಓರೋಧ. 'ಓರೋಹ=ಅವರೋಹ' ಶಬ್ದವನ್ನು ನೋಡುವುದು(ವಿಪಾ)
ಓರೋಹ. 'ಓರುಭ' ಶಬ್ದವನ್ನು ನೋಡುವುದು
ಓರೋಹ. ಪು: [ಅವರೋಧ] ಅಂತಃಪುರ, ಅಂತಃಪುರ ಸ್ತ್ರೀ(ಸುರ), ನಗರದ ಹೆಬ್ಬಾಗಿಲಿನ ಒಳಬಾಗಿಲು (ಣಾಯಾ), ಸಮೂಹ, ಗುಂಪು
ಓಲಅ. ಪು: [ದೇ] ಗಿಡುಗ, ಸತ್ಯವನ್ನಲ್ಲಗಳೆಯುವುದು
ಓಲಅಣೀ. ಸ್ತ್ರೀ: [ದೇ] ಹೊಸದಾಗಿ ಮದುವೆ ಆದವಳು
ಓಲಇಅ. ವಿ: [ದೇ. ಅವಲಗಿತ] ಶರೀರಕ್ಕೆ ಅಂಟಿಕೊಂಡಿರುವ, ಅಂಟಿಕೊಂಡಿರುವ(ಸೇ)
ಓಲಇಣೀ. ಸ್ತ್ರ: [ದೇ] ಪ್ರಿಯೆ, ಹೆಣ್ಣು
ಓಲಂಡ. ಸಕ: [ಉತ್+ಲಂಘ್] ಉಲ್ಲಂಘಿಸು, ದಾಟು
ಓಲಂಬ. 'ಅವಲಂಬ=ಅವ+ಲಂಬ್' ಶಬ್ದವನ್ನು ನೋಡುವುದು
ಓಲಂಬ. ಪು: [ಅವಲಂಬ] ಕೆಳಕ್ಕೆ ತೂಗಾಡುವುದು, ಜೋತಡುವುದು(ಔಪ)
ಓಲಂಬಣ. ನ: [ಅವಲಂಬನ] ಆಶ್ರಯ, ಒತ್ತಾಸೆ, ನೆರವು. –ದೀವ. ಪು: [–ದೀಪ] ಸರಪಣಿ ಅಳವಡಿಸಿರುವ ದೀಪ(ರಾಜ)
ಓಲಂಬಿಯ. ವಿ: [ಅವಲಂಬಿತ] ಆಶ್ರಯಿಸಲ್ಪಟ್ಟ, ನೇತುಹಾಕಲಾಗಿರುವ(ಔಪ)
ಓಲಂಭ. ಪ: [ಉಪಾಲಂಭ] ನಿಂದೆ, ಬೈಗಳು(ಣಾಯಾ)
ಓಲಕ್ಖಿಅ. ವಿ: [ಉಪಲಕ್ಷಿತ] ಗುರುತಿಸಲ್ಪಟ್ಟಿರುವ (ಪಉಮ)
ಓಲಗಿ.(ಅಪ). 'ಓಲಗ್ಗಿ' ಶಬ್ದವನ್ನು ನೋಡುವುದು
ಓಲಗ್ಗ. ಸಕ: [ಅವ+ಲಗ್] ಹಿಂದೆಬೀಳು, ಸೇವೆಮಾಡು
ಓಲಗ್ಗ. ವಿ: [ಅವರುಗ್ಣ] ರೋಗಿ, ದುರ್ಬಲ, ವ್ಯಾಧಿ
ಓಲಗ್ಗ. ವಿ: [ಅವಲಗ್ನ] ಸೇರಿಕೊಂಡಿರುವ, ಅಂಟಿಕೊಂಡಿರುವ,
ಓಲಗ್ಗ(ದೇ). 'ಓಲುಗ್ಗ' ಶಬ್ದವನ್ನು ನೋಡುವುದು
ಓಲಗ್ಗಾ. ಸ್ತ್ರೀ: [ದೇ] ಸೇವೆ, ಭಕ್ತಿ,

ಓಲಗ್ಗಿ. ವಿ: [ಅವಲಾಗಿನ್] ಸೇವೆ ಮಾಡುವವನು,
ಓಲಗ್ಗಿಅ. ವಿ: [ಅವಲಗ್ನ] ಸೇವಿಸಲ್ಪಟ್ಟ
ಓಲಾವಅ. ಪು: [ದೇ] ಗಿಡುಗ
ಓಲಿ. 'ಓಲಿ=ಆಲಿ' ಶಬ್ದವನ್ನು ನೋಡುವುದು
ಓಲಿಂದಅ. ಪು: [ಅಲಿಂದಕ] ಮನೆಯ ಬಾಗಿಲ ಮುಂದಿನ ಜಗುಲಿ, ಮನೆಯ ಮುಂಭಾಗದಲ್ಲಿರುವ ಚಚ್ಚೌಕವಾದ ಒಂದು ಪ್ರದೇಶ
ಓಲಿಂಪ. ಸಕ: [ಅವ+ಲಿಪ್] ಬಳಿಯುವುದು, ಲೇಪಿಸು. ವ. ಕೃ-ಓಲಿಂಪಮಾಣ
ಓಲಿಂಪ. ಸಕ: [ದೇ] ತೆರೆ
ಓಲಿಂಭಾ. ಸ್ತ್ರೀ: [ದೇ] ಗೆದ್ದಲುಹುಳ
ಓಲಿತ್ತ. ವಿ: [ಅವಲಿಪ್ತ, ಉಪಲಿಪ್ತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ (ಪಣ್ಹ)
ಓಲಿತ್ತೀ}. ಸ್ತ್ರೀ: [ದೇ] ಖಡ್ಗವೇ ಮೊದಲಾದವುಗಳ
ಓಲಿಪ್ಪಂತೀ}.ಒಂದು ದೋಷ.
ಓಲಿಪ್ಪ. ನ: [ದೇ] ನಗು, ನಗುವಿಕೆ
ಓಲಿಹ. ಸಕ: [ಅವ+ಲಿಹ್] ಆಸ್ವಾದಿಸು,
ಓಲೀ. ಸಕ: [ಅವ+ಲೀ] ಬರುವುದು, ಕೆಳಕ್ಕೆ ಬರುವುದು, ಹಿಂದೆ ಬರುವುದು
ಓಲೀ. ಸಕ: [ಆಲೀ] ಪಂಕ್ತಿ, ಶ್ರೇಣಿ(ಕುಮಾ)
ಓಲೀ. ಸ್ತ್ರೀ: [ದೇ] ಕುಲ ಪದ್ಧತಿ, ಕುಲಾಚಾರ
ಓಲುಂಕೀ. ಸ್ತ್ರೀ: [ದೆ] ಬಾಲಕರ ಒಂದು ಬಗೆಯ ಕ್ರೀಡೆ
ಓಲುಂಡ. ಸಕ: [ವಿ+ರೇಚಯ್] ಹನಿ ಹನಿಯಾಗಿ ಬೀಳು, ತೊಟ್ಟಿಕ್ಕು, ಹೊರತೆಗೆ
ಓಲುಂಡಿರ. ವಿ: [ವಿರೇಚಯಿತೃ] ಹನಿಹನಿಯಾಗಿ ಬೀಳುತ್ತಿರುವ, ತೊಟ್ಟಿಕ್ಕುತ್ತಿರುವ
ಓಲುಂಪ. ಪು: [ಅವಲೋಪ] ನಾಶಮಾಡುವುದು, ಮರ್ದಿಸುವುದು, ಕತ್ತರಿಸು
ಓಲುಂಪಅ. ಪು: [ದೇ] ತವದ ಕೈ,
ಓಲುಗ್ಗ. ವಿ: [ಅವರುಗ್ಣ] ರೋಗಿ(ಪಾಅ), ಭಗ್ನ, ನಾಶಮಾಡಲ್ಪಟ್ಟ, ಒಡೆದಿರುವ(ಪಣ್ಹ)
ಓಲುಗ್ಗ. ವಿ: [ದೇ] ಸೇವಕ, ಆಳು, ನಿಸ್ತೇಜ, ನಿರ್ಬಲ
ಓಲುಗ್ಗಾವಿಯ. ವಿ: [ದೇ] ರೋಗಿ, ವಿರಹ- ಪೀಡಿತ
ಓಲುಟ್ಟ. ವಿ: [ದೇ] ಅಸಂಗತ, ಮಿಥ್ಯೆ, ಸುಳ್ಳು(ದೇ)
ಓಲೇಹಡ. ವಿ: [ದೇ] ಅನ್ಯಾಸಕ್ತ, ಬಾಯಾರಿದ, ಅತ್ಯಾಸೆಯುಳ್ಳ, ಚೆನ್ನಾಗಿ ಬೆಳೆದಿರುವ, ಅಧಿಕವಾದ
ಓಲೋಅ. 'ಅವಲೋಅ' ಶಬ್ದವನ್ನು ನೋಡುವುದು
ಓಲೊಟ್ಟ. ಸಕ: [ಅಪ+ಲುಠ್] ಹಿಂತಿರುಗು
ಓಲೋಯಣ. ನ: [ಅವಲೋಕನ] ನೋಡುವುದು, ಶೋಧ, ಹುಡುಕುವುದು (ವವ), ಗವಾಕ್ಷ, ಕಿಟಕಿ
ಒಲ್ಲ. ಪು: [ದೇ] ಪತಿ, ಯಜಮಾನ, ರಾಜ-ಪುರುಷ(ಪಿಂಗ)
ಒಲ್ಲ. 'ಉಲ್ಲ=ಆರ್ದ್ರ' ಶಬ್ದವನ್ನು ನೋಡುವುದು
ಒಲ್ಲ. 'ಉಲ್ಲ=ಆರ್ದ್ರಯ್' ಶಬ್ದವನ್ನು ನೋಡುವುದು
ಒಲ್ಲಟ್ಟಣ. ಪು: [ಅವಲಟನ] ಒಂದು ನರಕ-ಸ್ಥಾನ.
ಒಲ್ಲಣ. ನ: [ಆರ್ದ್ರಯಣ] ಒದ್ದೆ ಮಾಡುವುದು, ತೋಯಿಸುವುದು
ಒಲ್ಲಣೀ. ಸ್ತ್ರೀ: [ದೇ] ಏಲಕ್ಕಿ, ದಾಲಚಿನ್ನಿ, ಶುಂಠಿ, ಹಿಪ್ಪಲಿ, ಮೆಣಸು ಇವೇ ಮೊದಲಾದ ಮಸಾಲೆಗಳಿಂದ ಸಂಸ್ಕಾರಗೊಂಡ, ಮೊಸರು
ಒಲ್ಲರಣ. ನ: [ದೇ] ನಿದ್ರೆ,
ಒಲ್ಲರಿಅ. ವಿ: [ದೇ] ಮಲಗಿರುವ,
ಒಲ್ಲವಿದ.(ಶೌ). ಕೆಳಗಿನ ಶಬ್ದವನ್ನು ನೋಡುವುದು
ಒಲ್ಲಿಅ. ವಿ: [ಆರ್ದ್ರಿತ] ತೋಯಿಸಲ್ಪಟ್ಟಿರುವ, ಒದ್ದೆಮಾಡಲ್ಪಟ್ಟಿರುವ, ನೆನೆಸಿರುವ
ಒಲ್ಲೀ. ಸ್ತ್ರೀ: [ದೇ] ಹಾವಸೆ, ಪಾಚಿ
ಒಲ್ಹವ. ಸಕ: [ವಿ+ಧ್ಯಾಪಯ್] ಆರಿಸು, ತಣ್ಣಗೆ ಮಾಡು,
ಒಲ್ಹವಿಅ(ದೇ). 'ಉಲ್ಹವಿಯ' ಶಬ್ದವನ್ನು ನೋಡುವುದು
ಓವ. ನ: [ದೇ] ಆನೆಯೇ ಮೊದಲಾದವನ್ನು ಪಳಗಿಸಿ ಕಟ್ಟಿಹಾಕಲು ತೋಡಿರುವ ಖೆಡ್ಡಾ
ಓವಅಣ. ನ: [ಅವಪತನ] ಕೆಳಗೆ ಬೀಳುವುದು, ಕೆಳಕ್ಕೆ ಇಳಿಯುವುದು, ಅಧಃ ಪಾತ
ಓವಇಣೀ. ಸ್ತ್ರೀ: [ಅವಪಾತಿನೀ] ಇದೊಂದು ವಿದ್ಯೆ. ಈ ವಿದ್ಯೆಯ ಬಲದಿಂದ ತಾನೇ ಕೆಳಗೆ ಬರುತ್ತಾನೆ, ಅಥವಾ ಬೇರೆಯವರನ್ನು ಕೆಳಕ್ಕೆ ಇಳಿಸುತ್ತಾನೆ
ಓವಇಯ. ವಿ: [ಅವಪತಿತ] ಕೆಳಕ್ಕೆ ಇಳಿದುಬಂದ, ಕೆಳಕ್ಕೆ ಬಂದು ಬಿದ್ದಿರುವ, ಬಂದು ಸ್ಥಿರವಾಗಿ ನಿಂತಿರುವ, ನ: ಪತನ
ಓವಇಯ. ಪುಂಸ್ತ್ರೀ: [ದೇ] ಮೂರು ಇಂದ್ರಿಯಗಳುಳ್ಳ ಒಂದು ಕ್ಷುದ್ರ ಜಂತು,
ಓವಇಯ. ವಿ: [ಔಪಚಯಿಕ] ಪರಿಪುಷ್ಟಗೊಂಡಿರುವ,
ಓವಗಾರಿಯ. ವಿ: [ಔಪಕಾರಿಕ] ಉಪಕಾರ ಮಾಡುವವನು(ಭಗ)

ಓವಗ್ಗ. ಸಕ: [ಅವ+ಕ್ರಮ್] ಆವರಿಸು, ಮುಚ್ಚು, ಹೊದಿಸು

ಓವಗ್ಗ. ಸಕ: [ಉಪ+ವಲ್ಗ್, ಆ+ಕ್ರಮ್] ಆಕ್ರಮಣ ಮಾಡು, ಸೋಲಿಸು

ಓವಗ್ಗಹಿಯ. ವಿ: [ಔಪಗ್ರಹಿಕ] ಜೈನ ಸಾಧುಗಳ ಒಂದು ಬಗೆಯ ಉಪಕರಣ. ಯಾವುದೋ ಕಾರಣಕ್ಕಾಗಿ ಸ್ವಲ್ಪ ಸಮಯಕ್ಕೆ ಪಡೆದುಕೊಳ್ಳುವಂಥದು(ಪವ)

ಓವಗ್ಗಿಅ. ವಿ: [ದೇ. ಉಪವಲ್ಗಿತ] ತಿರಸ್ಕರಿಸಲ್ಪಟ್ಟ, ಸೋಲಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ,

ಓವಘಾಇಯ.ವಿ: [ಔಪಘಾತಿಕ] ನಾಶಪಡಿಸುವವ, ಹಿಂಸೆ ಮಾಡುವವ, ಪೀಡೆಯನ್ನುಂಟುಮಾಡುವವ

ಓವಚ್ಚ.. ಸಕ: [ಉಪ+ವ್ರಜ್] ಹತ್ತಿರ ಹೋಗುವುದು, ಸಮೀಪಕ್ಕೆ ಹೋಗುವುದು

ಓವಟ್ಟ. ಅಕ: [ಅಪ+ವೃತ್] ಹಿಂದೆ ಸರಿ, ಕಡಿಮೆಯಾಗು, ಕ್ಷಯ ಹೊಂದು

ಓವಟ್ಟ. ಪು: [ಅಪವರ್ತ] ಹ್ರಾಸ, ಹಾನಿ, ಪೂರ್ಣಾಂಕವನ್ನು ಭಾಗಿಸುವುದು

ಓವಟ್ಟಣಾ. ಸ್ತ್ರೀ: [ಅಪವರ್ತನಾ] ಭಾಗಾಕಾರ,

ಓವಟ್ಟಿಅ. ನ: [ದೇ] ಪ್ರಿಯವಚನ, ಸಂತೋಷ ಪಡಿಸಲು ಆಡುವ ಸುಳ್ಳು ಮಾತುಗಳು

ಓವಟ್ಠ. ವಿ: [ಅವವೃಷ್ಟ] ಮಳೆ ಸುರಿಸಿದ

ಓವಟ್ಠ ಪು: [ದೇ. ಅವವರ್ಷ] ಮಳೆ, ಮೋಡದ ಜಲ ಸಿಂಚನ

ಓವಟ್ಠಿಇಅ. ವಿ: [ಔಪಸ್ಥಿತಿಕ] ಸೇವೆ ಅಥವಾ ಶುಶ್ರೂಷೆಗೆ ಅರ್ಹನಾದ, ನೌಕರ

ಓವಡ. ಅಕ: [ಅವ+ಪತ್] ಬೀಳು, ಕೆಳಕ್ಕೆ ಬೀಳು

ಓವಡಣ. ನ: [ಅವಪತನ] ಅಧಃಪಾತ, ಮೇಲಕ್ಕೆ ಹಾರಿ ಕೆಳಕ್ಕೆ ಬೀಳುವುದು

ಓವಡ್ಢ. ವಿ: [ಉಪಾರ್ಧ] ಸುಮಾರು ಅರ್ಧಭಾಗ, ಅರ್ಧಕ್ಕೆ ಹತ್ತಿರ, **ಓವಡ್ಢೋಮೋಯರಿಯಾ. ಸ್ತ್ರೀ: [ಉಪಾರ್ಧಾವಮೋದರಿಕಾ]** ಹನ್ನೆರಡು ತುತ್ತುಗಳ ಆಹಾರವನ್ನು ಮಾತ್ರ ಸೇವಿಸುವಂಥ ಒಂದು ಬಗೆಯ ತಪಸ್ಸು (ಭಗ)

ಓವಡ್ಢಿ. ಸ್ತ್ರೀ: [ಅಪವೃದ್ಧಿ] ಕ್ಷಯ ಹೊಂದುವುದು, ಕಡಿಮೆಯಾಗುವುದು

ಓವಡ್ಢಾ. ಸ್ತ್ರೀ: [ದೇ] ಸ್ತ್ರೀಯರ ಮೇಲು ಹೊದಿಕೆಯ ಒಂದು ಭಾಗ

ಓವಣ. ನ: [ಉಪವನ] ಕೈತೋಟ, ಉದ್ಯಾನ (ಕುಮಾ)

ಓವಣಿಹಿಯ. ಪು: [ಔಪನಿಹಿತ, ಔಪನಿಧಿಕ] ಭಿಕ್ಷಾಟನೆ, ಹತ್ತಿರದ ಭಿಕ್ಷೆ ಸ್ವೀಕರಿಸುವ ಸಾಧು(ಔಪ)

ಓವಣಿಹಿಯಾ. ಸ್ತ್ರೀ: [ಔಪನಿಧಿಕೀ] ಆನುಪೂರ್ವೀ, ಅನುಕ್ರಮ, ಒಂದಾದ ಮೇಲೊಂದು ಕ್ರಮವಾಗಿ ಬರುವುದು

ಓವತ್ತ. ಸಕ: [ಅಪ+ವರ್ತಯ್] ತಲೆಕೆಳಗು ಮಾಡು, ತಿರುಗಿಸು, ಎಸೆ

ಓವತ್ತ. ವಿ: [ಅಪವೃತ್ತ] ತಿರುಗಿಸಲ್ಪಟ್ಟ

ಓವತ್ತಿಯ. ವಿ: [ಅಪವರ್ತಿತ] ತಿರುಗಿಸಲಾದ, ಎಸೆಯಲ್ಪಟ್ಟ(ಣಾಯಾ)

ಓವತ್ಥಾಣಿಯ. ವಿ: [ಔಪಸ್ಥಾನಿಕ] ಸಭೆಯ ಕೆಲಸ ನಿರ್ವಹಿಸುವ ಕೆಲಸಗಾರ

ಓವಮ. 'ಓವಮ್ಮ' ಶಬ್ದವನ್ನು ನೋಡುವುದು

ಓವಮಿಯ. ವಿ: [ಔಪಮಿಕ] ಉಪಮೆಗೆ ಸಂಬಂಧಿಸಿದ

ಓವಮಿಯ.} ನ: [ಔಪಮ್ಯ] ಉಪಮೆ, ಹೋಲಿಕೆ,
ಓವಮ್ಮ.} ಉಪಮಾನ-ಪ್ರಮಾಣ

ಓವಯ. ಸಕ: [ಅವ+ಪತ್] ಕೆಳಕ್ಕೆ ಇಳಿ, ಬಂದು ಬೀಳು(ಣಾಯಾ)

ಓವಯಣ. ನ: [ಅವಪತನ] ಕೆಳಕ್ಕೆ ಇಳಿಯುವುದು (ಭಗ)

ಓವಯಣ. ನ: [ದೇ. ಅವಪದನ] ಚುಂಬಿಸುವುದು

ಓವಯಾಇಯಯ. ವಿ: [ಔಪಯಾಚಿತಕ] ವಿನಂತಿಸಿ ಪಡೆದುಕೊಂಡದ್ದು, ಕೋರಿಕೆಯಿಂದ ದೊರೆತದ್ದು

ಓವವಾಇಯ. ವಿ: [ಔಪಪಾತಿಕ] ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹೋಗುವವನು. ಯಾರು ಹುಟ್ಟುತ್ತಾನೋ ಅವನು, ಪು: ಮನುಷ್ಯ, ಪ್ರಾಣಿ (ಆಚಾ), ದೇವ ಅಥವಾ ನರಕ ಜೀವ, ಜೈನ ಆಗಮ ಗ್ರಂಥ, ಔಪಪಾತಿಕ ಸೂತ್ರ(ಔಪ)

ಓವಯಾರಿಯ. ವಿ: [ಔಪಚಾರಿಕ] ಉಪಚಾರ, ಶುಶ್ರೂಷೆಗೆ ಸಂಬಂಧಿಸಿದ್ದು

ಓವರ. ಪು: [ದೇ] ಸಮೂಹ, ಗುಂಪು

ಓವಸಗ್ಗಿಯ. ವಿ: [ಔಪಸರ್ಗಿಕ] ಉಪಸರ್ಗಗಳೊಂದಿಗೆ ಸಂಬಂಧ ಹೊಂದಿರುವ, ಸಮರ್ಥ ರೋಗವೇ ಮೊದಲಾದ ಉಪದ್ರವ, ಶಬ್ದ-ವಿಶೇಷ, ಪ್ರ, ಪರಾ ಮೊದಲಾದ ಅವ್ಯಯ ರೂಪದ ಶಬ್ದಗಳು

ಓವಸಮಿಅ. ಪುಂನ: [**ಔಪಶಮಿಕ**] ಉಪಶಮ (=ಇಂದ್ರಿಯ ನಿಗ್ರಹ), ಉಪಶಮದಿಂದ ಉಂಟಾದ, ಉಪಶಮ ಉಂಟಾದ ಮೇಲೆ ಆಗುವಂಥದು

ಓವಸೇರ. ನ: [**ದೇ**] ಚಂದನ, ಶ್ರೀಗಂಧ, **ವಿ:** ರತಿ ಯೋಗ್ಯವಾದ

ಓವಸ್ಸಯ. '**ಉವಸ್ಸಯ**' ಶಬ್ದವನ್ನು ನೋಡುವುದು

ಓವಹ. ಸಕ: [**ಅವ+ವಹ್**] ಹರಿದು ಹೋಗು, ಪ್ರವಹಿಸು

ಓವಹಾರಿಅ. ವಿ: [**ಔಪಹಾರಿಕ**] ಉಪಾಹಾರ ಅಥವಾ ಕಾಣಿಕೆಗೆ ಸಂಬಂಧಿಸಿದ್ದು

ಓವಹಿಯ. ವಿ: [**ಔಪಧಿಕ**] ಮಾಯೆಯಿಂದ (ಕಪಟದಿಂದ)ಗುಟ್ಟಾಗಿ ಸಂಚರಿಸುವವನು. (ಣಾಯಾ)

ಓವಾಅಅ.ಪು:[**ದೇ**] ಕೆರೆ ಕಟ್ಟೆ ಮೊದಲಾದವುಗಳಿಂದ ಉಂಟಾಗುವ ಉಷ್ಣತೆ, ಸೆಕೆ

ಓವಾಇಯ. '**ಓವವಾಇಯ**' ಶಬ್ದವನ್ನು ನೋಡುವುದು

ಓವಾಇಯ. '**ಉವಯಾಇಯ**' ಶಬ್ದವನ್ನು ನೋಡುವುದು

ಓವಾಇಯ. ವಿ: [**ಆವಪಾತಿಕ**] ಸೇವೆ ಮಾಡುವವನು

ಓವಾಡಣ. ನ: [**ಅವಪಾಟನ**] ಸೀಳುವುದು, ನಾಶ(ಠಾ)

ಓವಾಡಿಯ. ವಿ: [**ಅವಪಾಟಿತ**] ಸೀಳಲ್ಪಟ್ಟ, ನಾಶಮಾಡಲ್ಪಟ್ಟ

ಓವಾಯ. ಸಕ: [**ಉಪ+ಯಾಚ್**] ವಿನಂತಿಸು, ಪ್ರಾರ್ಥಿಸು(ಣಾಯಾ)

ಓವಾಯ. ಪು: [**ಅವಪಾತ**] ಸೇವೆ, ಭಕ್ತಿ(ಠಾ), ಖೆಡ್ಡ, ಹಳ್ಳ(ಪಣ್ಣ), ಕೆಳಗೆ ಬೀಳುವುದು

ಓವಾಯ. ವಿ: [**ಔಪಾಯ**] ಉಪಾಯ-ಜನ್ಯ, ಉಪಾಯಕ್ಕೆ ಸಂಬಂಧಿಸಿದ

ಓವಾರ. ಸಕ: [**ಅಪ+ವಾರಯ್**] ಹೊದಿಸು, ಮುಚ್ಚು, ಆಚ್ಛಾದಿಸು

ಓವಾರಿ. ನ: [**ದೇ**] ಧಾನ್ಯವನ್ನು ತುಂಬುವ ಒಂದು ಉದ್ದನೆಯ ಕೋಠಿ(=ವಾಡೆ), ಗೋದಾಮು

ಓವಾರಿಅ. ವಿ: [**ದೇ**] ರಾಶಿ ಹಾಕಲಾದ

ಓವಾರಿಅ. ವಿ: [**ಅಪವಾರಿತ**] ಆಚ್ಛಾದಿಸಲ್ಪಟ್ಟ, ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ

ಓವಾಸ. ಅಕ: [**ಅವ+ಕಾಶ್**] ಶೋಭಿಸು, ವಿರಾಜಿಸು, ಸ್ಥಳ ದೊರೆಯುವುದು

ಓವಾಸ. ಪು: [**ಅವಕಾಶ**] ಸ್ಥಳ, ಖಾಲಿ ಜಾಗ(ಪಾಅ), ಸುಸಮಯ

ಓವಾಸ. ಪು: [**ಉಪವಾಸ**] ಉಪವಾಸ, ಊಟಮಾಡದಿರುವುದು

ಓವಾಸಂತರ. ಪುಂನ: [**ಅವಕಾಶಾಂತರ**] ಆಕಾಶ, ಗಗನ

ಓವಾಹ. ಸಕ: [**ಅವ+ಗಾಹ್**] ಸ್ನಾನ ಮಾಡು, ನೀರಿನಲ್ಲಿ ಮುಳುಗು

ಓವಾಹಿಅ. ವಿ: [**ಅಪವಾಹಿತ**] ಕೆಳಗೆ ಬೀಳಿಸಲ್ಪಟ್ಟ, ತಿರುಗಿಸಿ ಕೆಳಕ್ಕೆ ಹಾಕಲಾದ(ಸೇ)

ಓವಿಅ. ವಿ: [**ದೇ**] ಆರೋಪಿಸಲ್ಪಟ್ಟ, ಏರಿಸಲ್ಪಟ್ಟ, ಆಶ್ರಯಿಸಲ್ಪಟ್ಟ, ತ್ಯಜಿಸಲ್ಪಟ್ಟ, ಬಿಡಲ್ಪಟ್ಟ, ಕಸಿದುಕೊಳ್ಳಲಾದ, **ನ:** ಸಂತೋಷಪಡಿಸಲು ಆಡುವ ಸುಳ್ಳು ಪ್ರಶಂಸೆ, ರೋದನ, ಅಳುವಿಕೆ, **ವಿ:** ಸಂಸ್ಕಾರಗೊಂಡ, ಖಚಿತ, ಹರಡಲಾದ, ಬೆಳಗಿಸಲ್ಪಟ್ಟ, ಪ್ರಕಾಶಿಸಲ್ಪಟ್ಟ, ಒಡವೆಗಳಿಂದ ಸಿಂಗರಿಸಲ್ಪಟ್ಟ

ಓವಿದ್ಧ. ವಿ: [**ಅಪವಿದ್ಧ**] ಪ್ರೇರಿಸಲ್ಪಟ್ಟ, ಪೆಟ್ಟುತಿಂದ, ಕೆಳಗೆ ಬೀಳಿಸಲ್ಪಟ್ಟ,

ಓವೀಲ.ಸಕ:[**ಅವ+ಪೀಡಯ್**] ನೋವುಂಟುಮಾಡು, ಹೊಡೆದು-ಬಡಿದುಮಾಡು

ಓವೀಲಯ. '**ಉವ್ವೀಲಯ**' ಶಬ್ದವನ್ನು ನೋಡುವುದು

ಓವುಬ್ಭಮಾಣ. '**ಓವಹ**' ಶಬ್ದವನ್ನು ನೋಡುವುದು

ಓವೇಹಾ. ಸ್ತ್ರೀ: [**ಉಪೇಕ್ಷಾ**] ನೋಡುವುದು, ತಿರಸ್ಕಾರ, ಕಡೆಗಣಿಸುವುದು, ಅವಮಾನ

-ಓವ್ವಣ. '**ಜೊವ್ವಣ**' ಶಬ್ದವನ್ನು ನೋಡುವುದು

ಒವ್ವತ್ತ. ಅಕ: [**ಅಪ+ವೃತ್**] ಹಿಂತಿರುಗು

ಒವ್ವತ್ತ. ವಿ: [**ಅಪವೃತ್ತ**] ಹಿಂದಕ್ಕೆ ತಿರುಗಿಸಲ್ಪಟ್ಟ, ಕೆಳಕ್ಕೆ ಬಾಗಿದ, ಕೆಳಮುಖವಾದ

ಒವ್ವೇವ್ವ. '**ಉವ್ವೇವ**' ಶಬ್ದವನ್ನು ನೋಡುವುದು

ಓಸ. '**ಊಸ=ಊಷ**' ಶಬ್ದವನ್ನು ನೋಡುವುದು

ಓಸ. ಪು: [**ದೇ**] '**ಓಸಾ**' ಶಬ್ದವನ್ನು ನೋಡುವುದು.
-ಚಾರಣ. ಪು: [**-ಚಾರಣ**] ಹಿಮದ ಆಧಾರದ ಮೇಲೆ ನಡೆದು ಹೋಗುವ ಸಾಧು(ಗಚ್ಛ)

ಓಸಕ್ಕ. ಅಕ: [**ಅವ+ಷ್ವಷ್ಕ್**] ಕಡಿತಗೊಳಿಸು, ಹಿಂದೆ ಸರಿ, ಪಲಾಯನ ಮಾಡು, ಹುರಿದುಂಬಿಸುವುದು, ಉತ್ತೇಜಿಸು, ಗೊತ್ತಾದ ಕಾಲಕ್ಕಿಂತ ಮುಂಚೆ ಮಾಡು

ಓಸಕ್ಕ. ವಿ: [ದೇ.ಅವಷ್ವಷ್ಕಿತ] ಹಿಂದೆ ಸರಿಸಲ್ಪಟ್ಟ, ಹಿಂದೆ ಸರಿದ

ಓಸಕ್ಕಣ. ನ: [ಅವಷ್ವಷ್ಕಣ] ಹಿಂದೆ ಸರಿಯುವುದು, ಗೊತ್ತಾದ ಕಾಲಕ್ಕಿಂತಲೂ ಮೊದಲೇ ಮಾಡುವುದು, ಉತ್ತೇಜನ

ಓಸಕ್ಕಿಯ. ವಿ: [ಅವಷ್ವಷ್ಕಿತ] ನಿಗದಿತ ಕಾಲಕ್ಕಿಂತ ಮುಂಚೆಯೇ ಮಾಡಲ್ಪಟ್ಟ

ಓಸಟ್ಟ. ಅಕ: [ವಿ+ಸೃಪ್] ಹರಡು, ಪಸರಿಸು

ಓಸಟ್ಟ. ವಿ: [ದೇ] ಅರಳಿದ

ಓಸಡಿಅ. ವಿ: [ದೇ] ವ್ಯಾಪಿಸಿದ, ಹರಡಲ್ಪಟ್ಟ(ಷಡ್)

ಓಸಢ. ನ: [ಔಷಧ] ಔಷಧ, ಚಿಕಿತ್ಸೆ, ಔಷಧ, ಮದ್ದು

ಓಸಢಿಅ. ವಿ: [ಔಷಧಿಕ] ವೈದ್ಯ, ಚಿಕಿತ್ಸಕ

ಓಸಣ. ನ: [ದೇ] ಉದ್ವೇಗ, ಖೇದ

ಓಸಣ್ಣ. ವಿ: [ಅವಸನ್ನ] ಖಿನ್ನ, ವ್ಯಥೆಯಿಂದ ಕೂಡಿದ, ಸಡಿಲ, 'ಓಸನ್ನ' ಶಬ್ದವನ್ನು ನೋಡುವುದು ನಿಮಗ್ನ, ನ: ಏಕಾಂತ

ಓಸಣ್ಣ. ವಿ: [ದೇ] ಹರಿಯಲ್ಪಟ್ಟ, ಸೀಳಲ್ಪಟ್ಟ, ಮುರಿಯಲ್ಪಟ್ಟ, ಒಡೆಯಲ್ಪಟ್ಟ

ಓಸಣ್ಣಂ. ಅ: ಪ್ರಾಯಶಃ, ಬಹುಶಃ

ಓಸತ್ತ. ವಿ: [ಅವಸಕ್ತ] ಸೇರಿಕೊಂಡಿರುವ, ಅಂಟಿಕೊಂಡಿರುವ, ಸಂಯುಕ್ತ(ಣಾಯಾ)

ಓಸಧಿ. 'ಓಸಹಿ' ಶಬ್ದವನ್ನು ನೋಡುವುದು

ಓಸದ್ಧ. ವಿ: [ದೇ] ಪತಿತ, ಕೆಳಕ್ಕೆ ಬಿದ್ದ, ಬೀಳಿಸಲ್ಪಟ್ಟ

ಓಸನ್ನ. ವಿ: [ಅವಸನ್ನ] ನಿಮಗ್ನ, ಮುಳುಗಿ ಹೋದ

ಓಸಪ್ಪಿಣೀ. ಸ್ತ್ರೀ: [ಅವಸರ್ಪಿಣೀ] ಹತ್ತು ಕೋಟ್ಯಾನುಕೋಟಿ ಸಾಗರೋಪಮ ಕಾಲ-ವಿಶೇಷ. ಈ ಕಾಲದಲ್ಲಿ ಎಲ್ಲ ಪದಾರ್ಥಗಳ ಗುಣಗಳಲ್ಲಿ ಕ್ರಮವಾಗಿ ಅವನತಿ ಉಂಟಾಗುತ್ತದೆ

ಓಸಮ. ಸಕ: [ಉಪ+ಶಮಯ್] ಉಪಶಮನ ಮಾಡು

ಓಸಮಿಅ. ವಿ: [ಉಪಶಮಿತ] ಶಾಂತಿ ಪ್ರಾಪ್ತ ವಾಗಿರುವುದು, ಇಂದ್ರಿಯ ನಿಗ್ರಹ ಉಂಟಾದ ಸ್ಥಿತಿ

ಓಸರ. ಅಕ: [ಅವ+ತೃ] ಕೆಳಗೆ ಬರು, ಜನ್ಮ ಧರಿಸು, ಅವತರಿಸು

ಓಸರ. ಅಕ: [ಅಪ+ಸೃ] ಹಿಂದೆ ಸರಿ, ಜಾರು, ಸರಿ ಅಪಸರಣ

ಓಸರ. ಸಕ: [ಅವ+ಸೃ] ಬರುವುದು, ತೀರ್ಥಂಕರರೇ ಮೊದಲಾದ ಮಹಾಪುರುಷರು ಆಗಮಿಸುವುದು

ಓಸರ. ಪು: [ಅವಸರ] ಸಮಯ, ಅವಕಾಶ, ಸದವಕಾಶ, ಅಂತರ, ಒಳಭಾಗ, ವ್ಯತ್ಯಾಸ

ಓಸರಣ. ನ: [ಅವಸರಣ] ಜಿನನ ಉಪದೇಶ ಸ್ಥಾನ. ಸಾಧುಗಳೆಲ್ಲ ಒಟ್ಟುಗೂಡುವುದು

ಓಸರಣ. ನ: [ಅಪಸರಣ] ಸರಿಯುವುದು, ದೂರವಾಗುವುದು, ವಿ: ದೂರ ಮಾಡುವವನು,

ಓಸರಿಅ. ವಿ: [ದೇ] ವ್ಯಾಪಿಸಿದ, ಹರಡಿದ, ಕಣ್ಣಿನ ಸಂಜ್ಞೆಯಿಂದ ಸೂಚಿತವಾದ್ದು(ಷಡ್), ಕೆಳಕ್ಕೆ ತಗ್ಗಿಸಿದ ಮುಖ, ನ: ಕಣ್ಣಿನ ಸೂಚನೆ

ಓಸರಿಅ. ವಿ: [ಅವಸೃತ] ಬಂದ, ಆಗಮಿಸಿದ

ಓಸರಿಅ. ವಿ: [ಅಪಸೃತ] ಹಿಂದೆ ಸರಿದ(ಪಉಮ), ನ: ಅಪಸರಣ, ನಿರ್ಗಮನ

ಓಸರಿಅ. ವಿ: [ಉಪಸೃತ] ಅಭಿಮುಖವಾಗಿ ಬಂದ, ಎದುರುಗಡೆ ಬಂದ(ಪಾಅ)

ಓಸರಿಆ. ಸ್ತ್ರೀ: [ದೇ] ಮನೆಯ ಬಾಗಿಲ ಮುಂದಿನ ಜಗುಲಿ, ಮನೆಯ ಮುಂಭಾಗದಲ್ಲಿಯ ಚಚ್ಚೌಕವಾದ ಪ್ರದೇಶ.

ಓಸವ. ಪು: [ಉತ್ಸವ] ಉತ್ಸವ, ಹಬ್ಬ

ಓಸವ. 'ಓಸಮ' ಶಬ್ದವನ್ನು ನೋಡುವುದು

ಓಸವಿಯ. ವಿ: [ಉಛ್ರಯಿತ] ಮೇಲಕ್ಕೆ ಎತ್ತರಿಸಲಾದ

ಓಸವ್ವಿಅ. ವಿ: [ದೇ] ಶೋಭೆಯಿಲ್ಲದ, ನ: ಖೇದ, ವಿಷಾದ

ಓಸಹ. ನ: [ಔಷಧ] ಔಷಧಿ(ಔಪ)

ಓಸಹಿ– ಹೀ. ಸ್ತ್ರೀ: [ಓಷಧಿ] ವನಸ್ಪತಿ, ಗಿಡಮೂಲಿಕೆ, ಒಂದು ನಗರಿ. **–ಮಹಿಹರ.** ಪು: [–ಮಹಿಧರ] ಪರ್ವತ–ವಿಶೇಷ

ಓಸಹಿಅ. ವಿ: [ಆವಸಥಿಕ] ಚಂದ್ರಾರ್ಥ–ದಾನಾದಿ ವ್ರತವನ್ನು ಮಾಡುವವನು(ಗಾ)

ಓಸಾ. ಸ್ತ್ರೀ: [ದೇ] ಇಬ್ಬನಿ, ಮಂಜು, ಹಿಮ

ಓಸಾಅ. ಪು: [ದೇ] ಹೊಡೆತದ ನೋವು, ಯಾತನೆ

ಓಸಾಅ. ಪು: [ಅವಶ್ಯಾಯ] ಹಿಮ. ಹೆಪ್ಪುಗಟ್ಟಿದ ಮಂಜು

ಓಸಾಅಂತ. ವಿ: [ದೇ] ಆಕಳಿಸುತ್ತಿರುವ ಸೋಮಾರಿ, ವೇದನೆಯಿಂದ ಕೂಡಿದ(ದೇ)

ಓಸಾಅಣ. ವಿ: [ದೇ] ಭೂಮಿಯ ಒಡೆಯ, ಭೂಪತಿ, ಆಪೋಶನ: ಭೋಜನಕ್ಕೆ ಮುನ್ನ ಮತ್ತು ಭೋಜನಾನಂತರ ಮಂತ್ರ ಪೂರ್ವಕವಾಗಿ ಜಲಪ್ರಾಶನ ಮಾಡುವುದು

ಓಸಾಣ. ನ: [ಅವಸಾನ] ಅಂತ್ಯ, ಕೊನೆ, ಸಾಮೀಪ್ಯ

ಓಸಾಣಿಹಾಣ. ವಿ: [ದೇ] ವಿಧಿ ಪೂರ್ವಕವಾಗಿ ಅನುಷ್ಠಾನ ಮಾಡಿದ್ದು(ದೇ)
ಓಸಾಯ. ಪು: [ಅವಶ್ಯಾಯ] ಹಿಮ, ಹೆಪ್ಪುಗಟ್ಟಿದ ಮಂಜು
ಓಸಾಯಣ. ನ: [ಅವಸಾದನ] ನಾಶಪಡಿಸುವಿಕೆ
ಓಸಾರ. ಪು: [ಅಪಸಾರಯ್] ದೂರಮಾಡು
ಓಸಾರ. ಪು: [ದೇ] ದನಗಳ ಕೊಟ್ಟಿಗೆ
ಓಸಾರ. ಪು: [ಅಪಸಾರ] ಹಿಂದೆ ಸರಿಯುವುದು
ಓಸಾರ. 'ಊಸಾರ=ಉತ್ಸಾರ' ಶಬ್ದವನ್ನು ನೋಡುವುದು
ಓಸಾರ. ಪು: [ಅವಸಾರ] ಕವಚ
ಓಸಾರಿಅ. ವಿ: [ಅಪಸಾರಿತ] ದೂರಮಾಡಲಾದ (ಗಾ)
ಓಸಾರಿಅ. ವಿ: [ಅವಸಾರಿತ] ತೂಗುಹಾಕಲಾದ, ಕೆಳಕ್ಕೆ ಇಳಿಬಿಟ್ಟಿರುವ(ಔಪ)
ಓಸಾಸ(ಅಪ). 'ಓವಾಸ=ಅವಕಾಶ' ಶಬ್ದವನ್ನು ನೋಡುವುದು
ಓಸಿಅ. ವಿ: [ದೇ] ಅಬಲ, ಅಶಕ್ತ, ಅಪೂರ್ವ, ಅಸಾಧಾರಣ
ಓಸಿಅ. ವಿ: [ಉಷಿತ] ವಾಸಮಾಡಲ್ಪಟ್ಟ, ನಿಶ್ಚಯಿಸಿದ
ಓಸಿಅಂತ. ವ.ಕೃ: [ಅವಸೀದತ್] ನೋವು ಅಥವಾ ಯಾತನೆ ಅನುಭವಿಸುತ್ತಿರುವ
ಓಸಿಂಘಿಅ. ವಿ: [ದೇ] ಮೂಸಿನೋಡಲ್ಪಟ್ಟ, ಆಘ್ರಾಣಿಸಲ್ಪಟ್ಟ
ಓಸಿಂಚಿತ್ತು. ವಿ: [ಅಪಸೇಚಯಿತೃ] ನೀರನ್ನು ಚಿಮುಕಿಸುವವನು
ಓಸಿಕ್ಖಿಅ. ನ: [ದೇ] ಚಲನೆಗೆ ಅಡ್ಡಿ, ಕೋಪವನ್ನು ಇರಿಸಿಕೊಂಡಿರುವುದು
ಓಸಿತ್ತ. ವಿ: [ಅವಸಿಕ್ತ] ಸಿಂಪಡಿಸಲ್ಪಟ್ಟ, ಸೇಚನೆ ಮಾಡಿಸಲಾದ, ತೋಯಿಸಲ್ಪಟ್ಟ
ಓಸಿತ್ತ. ವಿ: [ದೇ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ
ಓಸಿಯ. ವಿ: [ಅವಸಿತ] ನಿಷ್ಕೃಷ್ಟವಾದ, ಖಚಿತವಾದ, ಶಾಂತವಾದ, ಸೋಲಿಸಲ್ಪಟ್ಟ
ಓಸಿರಣ. ನ: [ದೇ] ತ್ಯಜಿಸುವುದು, ಬಿಟ್ಟುಬಿಡುವುದು
ಓಸೀಅ. ವಿ: [ದೇ] ಕೆಳಮುಖ, ಬಾಗಿದ
ಓಸೀರ. 'ಉಸೀರ' ಶಬ್ದವನ್ನು ನೋಡುವುದು
ಓಸೀಸ. ಅಕ: [ಅಪ+ವೃತ್] ಹಿಂದೆ ಸರಿ, ಹಿಮ್ಮೆಟ್ಟುವುದು, ತಿರುಗಾಡು
ಓಸುಅ. ವಿ: [ಉತ್ಸುಕ] ಇಷ್ಟವಾದುದನ್ನು ಪಡೆಯಲು ತವಕಿಸುವವನು
ಓಸುಂಖಿಅ. ವಿ: [ದೇ] ಉತ್ಪ್ರೇಕ್ಷಿತ, ಕಲ್ಪಿತ, ಊಹಿತ
ಓಸುಂಭ. ಸಕ: [ಅವ+ಪಾತಯ್] ಬೀಳಿಸು, ಕೆಳಕ್ಕೆ ಹಾಕು ನಾಶಮಾಡು
ಓಸುಕ್ಕ. ಸಕ: [ತಿಜ್] ತೀಕ್ಷ್ಣಗೊಳಿಸು, ಹರಿತಗೊಳಿಸು,
ಓಸುಕ್ಕ. ವಿ: [ಅವಶುಷ್ಕ] ಒಣಗಿದ(ಪಉಮ)
ಓಸುಕ್ಖ. ಅಕ: [ಅವ+ಶುಷ್] ಒಣಗಿಸು
ಓಸುದ್ಧ. ವಿ: [ದೇ] ಕೆಳಗೆ ಬಿದ್ದ, ನಾಶಗೊಂಡ
ಓಸುಬ್ಭಂತ. 'ಓಸುಂಭ' ಶಬ್ದವನ್ನು ನೋಡುವುದು
ಓಸುಯ. ನ: [ಔತ್ಸುಕ್ಯ] ಉತ್ಸುಕತೆ, ತವಕ
ಓಸೋಯಣೀ.} ಸ್ತ್ರೀ: [ಅಪಸ್ವಾಪನೀ] ಬೇರೆಯವರನ್ನು
ಓಸೋವಣಿಯಾ.} ಗಾಢ ನಿದ್ರೆಗೆ ಒಳಪಡಿಸುವಂಥ
ಓಸೋವಣೀ.} ವಿದ್ಯಾ-ವಿಶೇಷ
ಒಸ್ಸಕ್ಕ. ಪು: [ಅವಷ್ವಷ್ಕ] ಹಿಂದೆ ಸರಿಯವುದು
ಒಸ್ಸಾ(ದೇ). 'ಓಸಾ' ಶಬ್ದವನ್ನು ನೋಡುವುದು
ಒಸ್ಸಾಡ. ಪು: [ಅವಶಾಟ] ನಾಶ
ಓಹ. ಸಕ: [ಅವ+ತೃ] ಕೆಳಗೆ ಇಳಿ
ಓಹ. ಪುಂ.ನ: [ಓಘ] ಉತ್ಸರ್ಗ, ಸಾಮಾನ್ಯ ನಿಯಮ, ಸಾಮಾನ್ಯ, ನೀರಿಗೆ ಪ್ರವೇಶಿಸುವುದು ಆಸ್ರವ-ದ್ವಾರ, ಜಗತ್ತು, -ಸೂಯ. ನ: [-ಶ್ರುತ] ಶಾಸ್ತ್ರ ವಿಶೇಷ, ಶಾಸ್ತ್ರ ಸಂಬಂಧಿ ವಾಕ್ಯ
ಓಹಂಕ. ಪು: [ದೇ] ನಗೆ, ನಗು
ಓಹಂಜಲಿಯಾ. ಸ್ತ್ರೀ: [ದೇ] ಕ್ಷುದ್ರ ಜಂತು, ನಾಲ್ಕು ಇಂದ್ರಿಯಗಳ ಒಂದು ಜೀವ
ಓಹಂತರ. ವಿ: [ಓಘತರ] ಸಂಸಾರವನ್ನು ದಾಟುವವನು
ಓಹಂಸ. ಪು: [ದೇ] ಶ್ರೀಗಂಧ. ಗಂಧವನ್ನು ತೇಯುವ ಕಲ್ಲು(ದೇ)
ಓಹಟ್ಟ. ಅಕ: [ಅಪ+ಘಟ್] ಕಡಿಮೆಯಾಗು, ಕ್ಷಯಿಸು, ಹಿಂದೆ ಸರಿ, ಸಕ:ದೂರ ಸರಿಸು, ಹಿಂದಕ್ಕೆ ಕಳಿಸು
ಓಹಟ್ಟ. ಪು: [ದೇ] ಮುಖದ ಮೇಲಿನ ಪರದೆ, ಮುಸುಕು, ನೀವಿ, ಸ್ತ್ರೀಯರು ಸೊಂಟದಲ್ಲಿ ಕಟ್ಟಿಕೊಳ್ಳುವ ಬಾಳೆಕಾಯಿ ಗಂಟು ವಿ: ಹಿಂದೆಸರಿದ
ಓಹಟ್ಟ.} ವಿ: [ಅಪಘಟ್ಟಕ] ನಿವಾರಕ, ದೂರ
ಓಹಟ್ಟಯ.} ಸರಿಸುವ, ಹೋಗಲಾಡಿಸುವ(ವಿಪಾ)
ಓಹಟ್ಟಿಅ. ವಿ: [ದೇ] ಬೇರೆಯವರನ್ನು ತುಳಿದು ಕೈಹಿಡಿಯುವುದು

ಓಹಟ್ಟ. ಪು: [ದೇ] ನಗು, ನಗೆ
ಓಹಟ್ಟ. ವಿ: [ಅವಘೃಷ್ಟ] ಉಜ್ಜಿದ, ತಿಕ್ಕಿದ, ಸವೆದ
ಓಹಡ. ವಿ: [ಅಪಹೃತ] ಕೆಳಗೆ ತರಲ್ಪಟ್ಟ
ಓಹಡಣೀ. ಸ್ತ್ರೀ: [ದೇ] ಅಗಳಿ. ಚಿಲಕ(ದೇ)
ಓಹತ್ತ. ವಿ: [ದೇ] ಬಾಗಿದ, ಕೆಳಮುಖವಾದ
ಓಹತ್ಥಿಅ. ವಿ: [ಅಪಹಸ್ತಿತ] ಪರಿತ್ಯಕ್ತ, ದೂರ ಮಾಡಲ್ಪಟ್ಟ, ಬಿಡಲ್ಪಟ್ಟ
ಓಹಯು. ವಿ: [ಉಪಹತ] ಹೊಡೆಯಲ್ಪಟ್ಟ, ನೋಯಿಸಲ್ಪಟ್ಟ, ನಾಶಪಡಿಸಲಾದ
ಓಹಯು. ವಿ: [ಅವಹತ] ವಿನಾಶಗೊಂಡ, ಬಡಿಯಲ್ಪಟ್ಟ, ಒಕ್ಕಲ್ಪಟ್ಟ
ಓಹರ. ಸಕ: [ಅಪ+ಹೃ] ಅಪಹರಿಸು
ಓಹರ. ಅಕ: [ಅವ+ಹೃ] ವಕ್ರವಾಗು, ಸೊಟ್ಟಾಗು, ಸಕ: ತಲೆಕೆಳಗುಮಾಡು, ತಿರುಗಿಸು
ಓಹರ. ನ: [ಉಪಗೃಹ] ಸಣ್ಣ ಮನೆ, ಚಿಕ್ಕ ಮನೆ, ಕೊಠಡಿ (ಪಣ್ಣ)
ಓಹರಣ. ನ: [ಅಪಹರಣ] ಕದಿಯುವುದು, ಕೊಂಡೊಯ್ಯುವುದು
ಓಹರಣ. ನ: [ದೇ] ವಿನಾಶ, ಹಿಂಸೆ, ಅಸಂಭವವಾದ ಅರ್ಥ ಸಂಭವವಾಗುವುದು, ಆಯುಧ, ಶಸ್ತ್ರ. ವಿ: ಮೂಸಿಸಲ್ಪಟ್ಟ, ವಾಸನೆ ನೋಡಲಾದ(ಷಡ್)
ಓಹರಿಅ. ವಿ: [ದೇ. ಅಪಹೃತ] ಎಸೆಯಲಾದ, ಕೆಳಗೆ ಬೀಳಿಸಲ್ಪಟ್ಟ, ಕೆಳಗೆ ಇಳಿಸಲಾದ, ಒಯ್ಯಲ್ಪಟ್ಟ, ಅಪಹರಿಸಲಾದ
ಓಹರಿಸ. ವಿ: [ದೇ] ಮೂಸಿನೋಡಲ್ಪಟ್ಟ, ವಾಸನೆ ನೋಡಲ್ಪಟ್ಟ, ಪು: ಶ್ರೀಗಂಧ ತೇಯುವ ಕಲ್ಲು(=ಸಾಣೆ ಕಲ್ಲು) (ದೇ)
ಓಹಲ. 'ಉಲೂಖಲ' ಶಬ್ದವನ್ನು ನೋಡುವುದು
ಓಹಲ. ಸಕ: [ಅವ+ಖಲ್] ಉಜ್ಜು, ತಿಕ್ಕು
ಓಹಲಿಯ. ವಿ: [ಅವಖಲಿತ] ನಿಸ್ತೇಜಗೊಳಿಸಲಾದ, ಮಲಿನಗೊಳಿಸಲಾದ
ಓಹಲೀ. ಸ್ತ್ರೀ: [ದೇ] ಓಘ, ಸಮೂಹ, ರಾಶಿ
ಓಹಸ. ಸಕ: [ಉಪ+ಹಸ್] ಉಪಹಾಸಮಾಡು, ಗೇಲಿಮಾಡು
ಓಹಸಿಅ. ವಿ: [ಉಪಹಸಿತ] ಉಪಹಾಸಮಾಡಲ್ಪಟ್ಟ, ಗೇಲಿಗೊಳಗಾದ
ಓಹಾಇಅ. ವಿ: [ಅವಧಾವಿತ] ಚಾರಿತ್ರದಿಂದ ಭ್ರಷ್ಟನಾದ
ಓಹಾಇಅ. ವಿ: [ದೇ] ಅಧೋಮುಖ, ಕೆಳಮುಖವಾದ, ಮುಖ ಬಾಗಿದ
ಓಹಾಡಣ. ನ: [ಅವಘಾಟನ] ಮುಚ್ಚುವುದು, ಆಚ್ಛಾದನ, ಮುಚ್ಚುವ ತಟ್ಟೆ, ಮುಚ್ಚಳ(ವವ), ಒಂದು ಬಗೆಯ ಪ್ರಾಯಶ್ಚಿತ್ತ
ಓಹಾಡಣೀ. ಸ್ತ್ರೀ: [ದೇ. ಅವಘಾಟನೀ] ಮುಚ್ಚಳ, ಒಂದು ಬಗೆಯ ಸ್ತ್ರೀಯರ ಮೇಲು ಹೊದಿಕೆ
ಓಹಾಡಿಯ. ವಿ: [ಅವಘಾಟಿತ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, ನಿಲ್ಲಿಸಿದ, ಸ್ಥಗಿತ
ಓಹಾಣ. ನ: [ಅವಧಾನ] ಏಕಾಗ್ರತೆ, ಗಮನ, ಉಪಯೋಗ (ಆಚಾ)
ಓಹಾಣ. ನ: [ಅವಧಾವನ] ಇಳಿಕೆ, ಹಿಂದೆ ಸರಿಯುವುದು
ಓಹಾಮ. ಸಕ: [ತುಲಯ್] ತಕ್ಕಡಿಯಲ್ಲಿ ತೂಗು, ಹೋಲಿಸು
ಓಹಾಮಿಯ. ವಿ: [ತುಲಿತ] ತೂಕಮಾಡಲಾದ (ಪಾಅ)
ಓಹಾಮಿಯ. ವಿ: [ದೇ] ತಿರಸ್ಕರಿಸಲ್ಪಟ್ಟ, ಸೋಲಿಸಲ್ಪಟ್ಟ, ನಿಲ್ಲಿಸಿದ, ಸ್ಥಗಿತ
ಓಹಾರ. ಸಕ: [ಅವ+ಧಾರಯ್] ನಿಶ್ಚಯಿಸು
ಓಹಾರ. ಪು: [ದೇ] ಆಮೆ, ನದಿ, ಸರೋವರಗಳಲ್ಲಿಯ ನೀರಿಲ್ಲದ ನಡುವಣ ಭಾಗ(= ದ್ವೀಪ) ಅಂಶ, ಭಾಗ, ಒಂದು ಜಲಚರ-ಪ್ರಾಣಿ
ಓಹಾರ. ಪು: [ಅವಧಾರ] ನಿಶ್ಚಯ, ನಿರ್ಧಾರ, -ವ. ವಿ: [-ವತ್] ನಿಶ್ಚಯವುಳ್ಳವನು
ಓಹಾರಇತ್ತು.ವಿ: [ಅವಧಾರಯಿತೃ] ನಿಶ್ಚಯಿಸುವವನು
ಓಹಾರಇತ್ತು. [ಅವಹಾರಯಿತೃ] ಬೇರೆಯವನ ಮೇಲೆ ಸುಳ್ಳು ದೋಷಾರೋಪ ಮಾಡುವವನು (ರಾಜ)
ಓಹಾರಣ. ನ: [ಅವವಾರಣ] ನಿಯಮ, ನಿಶ್ಚಯ
ಓಹಾರಣೀ.} ಸ್ತ್ರೀ: [ಅವವಾರಣೀ] ನಿಶ್ಚಯಾತ್ಮಕವಾದ
ಓಹಾರಿಣೀ.} ಭಾಷೆ
ಓಹಾವ. ಅಕ: [ಅವ+ಧಾವ್] ಹಿಂದೆ ಸರಿ, ಹಿಮ್ಮೆಟ್ಟು, ಪಲಾಯನ
ಓಹಾವಣ. ನ: [ಅವಭಾವನ] ಹಿಮ್ಮೆಟ್ಟುವುದು, ಪಲಾಯನ, ದೀಕ್ಷೆ ತಪ್ಪಿಸಿ ಓಡುವುದು, ದೀಕ್ಷೆಯನ್ನು ಬಿಟ್ಟುಬಿಡುವುದು
ಓಹಾವಣಾ. ಸ್ತ್ರೀ: [ಅಪಹಾಪನಾ] ಲಘುತ್ವ, ಲಾಘವ

ಓಹಾವಣಾ. ಸ್ತ್ರೀ: [ಅಪಭಾವನಾ] ತಿರಸ್ಕಾರ. ಅನಾದರ

ಓಹಾವಣಾ. ಸ್ತ್ರೀ: [ಆಕ್ರಾಂತಿ] ಆಕ್ರಮಣ(ಕಾಲ)

ಓಹಾವಿಅ. ವಿ: [ಅಪಭಾವಿತ] ತಿರಸ್ಕೃತ(ಸುಪಾ), ಆಯಾಸ, ಬಳಲಿದ, ಮನೋದೌರ್ಬಲ್ಯ ವುಂಟಾಗಿರುವ

ಓಹಾವಿಅ. ವಿ: [ಅವಧಾವಿತ] ಪಲಾಯನ ಮಾಡಿದ, ಹಿಮ್ಮೆಟ್ಟಿದ

ಓಹಾಸ. ಪು: [ಅವಹಾಸ, ಉಪಹಾಸ]ನಗೆ, ನಗು, ಹಾಸ್ಯ

ಓಹಾಸಣ. ನ: [ಅವಭಾಷಣ] ಯಾಚನೆ, ಬೇಡುವುದು, ವಿಶಿಷ್ಟ ಭಿಕ್ಷೆ

ಓಹಾಸಿಯ. ವಿ: [ಅವಭಾಷಿತ] ಬೇಡಲ್ಪಟ್ಟ, ಯಾಚಿತ

ಓಹಿ. ಪುಂಸ್ತ್ರೀ: [ಅವಧಿ] ಎಲ್ಲೆ, ಹದ್ದು, ಸೀಮೆ, ಗಡಿ (ಗಾ), ರೂಪವುಳ್ಳ ಪದಾರ್ಥದ ಅತೀಂದ್ರಿಯ ಜ್ಞಾನ(ಉವಾ), **–ಜಿಣ.** ಪು: [–ಜಿನ] ಅವಧಿ ಜ್ಞಾನ ಹೊಂದಿರುವವನು **–ಣಾಣ.** ನ: [–ಜ್ಞಾನ] ಅವಧಿಜ್ಞಾನ, **–ಣಾಣಾವರಣ.** ನ: [–ಜ್ಞಾನಾವರಣ] ಅವಧಿಜ್ಞಾನವನ್ನು ಪ್ರತಿಬಂಧಿಸುವ ಕರ್ಮ, **–ದಂಸಣ.** ನ: [–ದರ್ಶನ] ರೂಪವುಳ್ಳ ವಸ್ತುವಿನ ಅತೀಂದ್ರಿಯ ಸಾಮಾನ್ಯ ಜ್ಞಾನ.– **ದಂಸಣಾವರಣ.** ನ: [–ದರ್ಶನಾವರಣ] ಅವಧಿ ದರ್ಶನದ ಆವಾರಕ ಕರ್ಮ?(ಠಾ), **–ನಾಣ.** '**–ಣಾಣ**' ವನ್ನು ನೋಡುವುದು. **–ಮರಣ.** ನ: **–ಮರಣ.** ನ: [–ಮರಣ] ಮರಣ–ವಿಶೇಷ(ಭಗ)

ಓಹಿಅ. ವಿ: [ಅಪಭಿನ್ನ] ತಡೆಯಲ್ಪಟ್ಟ, ಅಡ್ಡಿಮಾಡಲ್ಪಟ್ಟ (ಸೇ)

ಓಹಿಅ. ವಿ: [ಔಧಿಕ] ಸಾಮಾನ್ಯ ರೂಪದಲ್ಲಿ ಹೇಳಿದ

ಓಹಿತ್ಥ. ನ: [ದೇ] ವಿಷಾದ, ಖೇದ, ರಭಸ, ವೇಗ, ವಿ: ವಿಚಾರಿತ

ಓಹಿರ. '**ಓಹೀರ**' ಶಬ್ದವನ್ನು ನೋಡುವುದು

ಓಹಿರ. '**ಓಹರ=ಅಪ+ಹೃ**' ಶಬ್ದವನ್ನು ನೋಡುವುದು

ಓಹೀಅಂತ. ವಿ: [ಅವಹೀಯಮಾನ] ಕ್ರಮಶಃ ಕಡಿಮೆಯಾಗುತ್ತಾ ಹೋಗುವ(ಸೇ)

ಓಹೀಣ. ವಿ: [ಅವಹೀನ] ಹಿಂದೆ ಉಳಿದಿರುವ (ಅಭಿ) ಕಳೆದು ಹೋದ, ಅಪಗತ

ಓಹೀರ. ಅಕ: [ನಿ+ದ್ರಾ] ನಿದ್ರಿಸು, ನಿದ್ರೆ ಮಾಡು

ಓಹೀರ. ಅಕ: [ಸದ್] ಖಿನ್ನನಾಗು

ಓಹೀರಿಅ. ವಿ: [ಅವಧೀರಿತ] ತಿರಸ್ಕೃತ, ಅಪಮಾನಿತ

ಓಹೀರಿಅ. ವಿ: [ದೇ] ಉಚ್ಚ ಸ್ವರದ ಗಾನ, ಖಿನ್ನ, ಚಿಂತಿತ

ಓಹುಅ. ವಿ: [ದೇ] ಸೋಲಿಸಲ್ಪಟ್ಟ, ಅವಮಾನಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ

ಓಹುಂಜ. '**ಉವಹುಂಜ**' ಶಬ್ದವನ್ನು ನೋಡುವುದು

ಓಹುಡ. ವಿ: [ದೆ] ವಿಫಲ, ವ್ಯರ್ಥ(ದೇ)

ಓಹುಪ್ಪಂತ. ವಿ: [ಆಕ್ರಮ್ಯಮಾಣ] ಆಕ್ರಮಣ ಮಾಡಲ್ಪಪಟ್ಟ, ಆಕ್ರಮಕ್ಕೊಳಗಾದವನು(ಸೇ)

ಓಹುರ. ವಿ: [ದೇ] ಮುಖ ಕೆಳಗೆ ಮಾಡಿದ, ಬಗ್ಗಿರುವ (ಗಉಡ), ಖಿನ್ನ, ಖೇದಗೊಂಡಿರುವನಾಶವಾದ, ನಾಶ ಮಾಡಲ್ಪಟ್ಟ,

ಓಹುಲ್ಲ. ವಿ: [ದೇ] ಮುಖ ಕೆಳಗೆ ಮಾಡಿರುವ, ಬಾಗಿರುವ, ವಿಷಾದಕ್ಕೊಳಗಾದ, ಚಿಂತಿತ

ಓಹೂಣಣ. ನ: [ಅವಧೂನನ] ಕಂಪ, ನಡುಗುವುದು, ನಡುಕ, ಮೀರುವುದು, ದಾಟುವುದು, ಅಪೂರ್ವ ಕಾರಣದಿಂದ ಭಿನ್ನವಾದ ಗ್ರಂಥಿಯನ್ನು ಭೇದಿಸುವುದು(ಆಚಾ)

ಓಹೂಯ. ವಿ: [ಅವಧೂತ] ಉಲ್ಲಂಘಿಸಲ್ಪಟ್ಟ, ಮೀರಲಾದ (ಬೃಹ)

ಕ

ಕ. ಪು: [ಕ] ಪ್ರಾಕೃತ ವರ್ಣಮಾಲೆಯ ಮೊದಲ ವ್ಯಂಜನಾಕ್ಷರ. ಇದರ ಉಚ್ಚಾರಣಾ ಸ್ಥಾನ ಕಂಠ. ಬ್ರಹ್ಮ(ದೇ), ಮಾಡಿದ ಅಪರಾಧದ ತಪ್ಪೊಪ್ಪಿಗೆ. ನ: ನೀರು,ಸುಖ(ಸುರ), **–ಅ=ಕ** ಅನ್ನು ನೋಡುವುದು

ಕ. 'ಕಿಮ್' ಶಬ್ದವನ್ನು ನೋಡುವುದು(ಗಉಡ)

ಕಅವಂತ. 'ಕಯು–ವ'=ಕೃತವತ್' ಶಬ್ದವನ್ನು ನೋಡುವುದು

ಕಇ. ವಿ: [**ಕೃತಿನ್**] ವಿದ್ವಾಂಸ, ಪುಣ್ಯವಂತ

ಕಇ. ವಿ: [**ಕ್ವಚಿತ್**] ಎಲ್ಲೋ, ಯಾವುದೋ ಜಾಗದಲ್ಲಿ

ಕಇ. ವಿ: ಬ: [**ಕತಿ**] ಎಷ್ಟು, **–ಅ. ವಿ:** [**–ಕ**] ಕೆಲವು, ಸ್ವಲ್ಪ, **–ಅವ. ವಿ:** [**–ಪಯ**] ಕೆಲವು, ಸ್ವಲ್ಪ. **–ಇ. ಅ:** [**–ಚಿತ್**] ಕೆಲವು, ಹಲವು(ಉಪ), **–ತ್ಥ. ವಿ:** [**–ಥ**] ಎಷ್ಟನೆಯದು? **–ವಇಯ, –ವಯ, –ವಾಹ. ವಿ:** [**–ಪಯ**] ಕೆಲವು, ಕೆಲವೊಂದು (ಪಉಮ), **–ವಿ. ಅ:** [**–ವಿಧ**] ಎಷ್ಟು ವಿಧ? ಎಷ್ಟು ಬಗೆ? (ಭಗ)

ಕಇ. ಅ. [**ಕದಾ**] ಯಾವಾಗ? ಯಾವ ಸಮಯದಲ್ಲಿ?

ಕಇ. ಪು: [**ಕಪಿ**] ಕೋತಿ, ಮಂಗ. **–ದೀವ. ಪು:** [**–ದ್ವೀಪ**] ದ್ವೀಪ–ವಿಶೇಷ, ವಾನರ ದ್ವೀಪ (ಪಉಮ). **–ದ್ಧಯ, ಧಯ. ಪು:** [**–ಧ್ವಜ**] ವಾನರ ದ್ವೀಪದ ಒಬ್ಬ ರಾಜನ ಹೆಸರು. ಅರ್ಜುನ. (ಹೇ), **–ಹಸಿಅ. ನ:** [**–ಹಸಿತ**] ನಿರ್ಮಲವಾದ ಆಕಾಶದಲ್ಲಿ ಇದ್ದಕ್ಕಿದ್ದಂತೆ ಮಿಂಚು ಕಾಣಿಸಿಕೊಳ್ಳುವುದು ಕೋತಿಯ ಹಾಗೆ ವಿಕಾರ ಮುಖದ ನಗೆ ಬೀರುವುದು(ಭಗ)

ಕಇ. 'ಕವಿ= ಕವಿ' ಶಬ್ದವನ್ನು ನೋಡುವುದು (ಗಉಡ). **–ಅರ(ಅಪ). ಪು:** [**ಕವಿ**] ಶ್ರೇಷ್ಠ ಕವಿ, **–ಮಾ. ಸ್ತ್ರೀ:** [**–ತ್ವ**] ಕವಿತ್ವ, ಕವಿತನ. **ರಾಯ. ಪು:** [**–ರಾಜ**] ಶ್ರೇಷ್ಠ ಕವಿ, (ಪಿಂಗ). 'ಗಉಡವ ಹೋ' ಎಂಬ ಪ್ರಾಕೃತ ಕಾವ್ಯದ ಕರ್ತೃ ವಾಕ್ಪತಿ ರಾಜನೆಂಬ ಕವಿ.

ಕಇಅ. ವಿ: [**ಕ್ರಯಿಕ**] ಕೊಳ್ಳುವವನು, ಗ್ರಾಹಕ(ಉತ್ತ)

ಕಇಅಂಕ.} ಪು: [**ದೇ**] ನಿಕರ, ಗುಂಪು,
ಕಇಅಂಕಸಇ.}ಸಮೂಹ(ದೇ)

ಕಇಅವ. ನ: [**ಕೈತವ**] ಕಪಟ, ದಂಭ, ಮೋಸ

ಕಇಆ. ಅ: [**ಕದಾ**] ಯಾವಾಗ? ಯಾವಾಗಲೋ ಒಮ್ಮೆ(ಗಾ)

ಕಇಉಲ್ಲ. ವಿ: [**ದೇ**] ಸ್ವಲ್ಪ, ತುಸು

ಕಇಂದ. ಪು: [**ಕವೀಂದ್ರ**] ಶ್ರೇಷ್ಠ ಕವಿ (ಗಉಡ)

ಕಇಕಚ್ಛು. ಸ್ತ್ರೀ: [**ಕಪಿಕಚ್ಛು**] ನಸುಗುನ್ನಿ ಗಿಡ

ಕಇಗಈ. ಸ್ತ್ರೀ: [**ಕೈಕಯೀ**] ರಾಜಾ ದಶರಥನ ಹೆಂಡತಿ

ಕಇತ್ಥ. ಪು: [**ಕಪಿತ್ಥ**] ಬೇಲದ ಮರ, ಬೇಲದ ಹಣ್ಣು

ಕಇಮ. ವಿ: [**ಕತಮ**] ಬಹು ಮಂದಿಯಲ್ಲಿ ಯಾರು?

ಕಇಯವ್ವ. 'ಕಇಅವ' ಶಬ್ದವನ್ನು ನೋಡುವುದು

ಕಇಯಹಾ. (ಅಪ). ಅ: [**ಕದಾ**] ಯಾವಾಗ? ಯಾವ ಹೊತ್ತಿನಲ್ಲಿ?(ಸಣ)

ಕಇಯಾಇ. ಅ: [**ಕದಾಚಿತ್**] ಯಾವುದೋ ಕಾಲದಲ್ಲಿ, ಯಾವಾಗಲೋ ಒಮ್ಮೆ

ಕಇರ. ಪು: [**ಕದರ**] ಬಿಳಿ ಕಗ್ಗಲಿಮರ

ಕಇರ. 'ಕಯರ=ಕತರ' ಶಬ್ದವನ್ನು ನೋಡುವುದು

ಕಇರವ. ನ: [**ಕೈರವ**] ಕುಮುದ, ಬಿಳಿ ನೈದಿಲೆ, ಕಮಲ (ಹೇ)

ಕಇರವಿಣೀ. ಸ್ತ್ರೀ: [**ಕೈರವಿಣೀ**] ಕುಮುದಿನಿ, ಕಮಲಿನಿ(ಕುಮಾ)

ಕಇಲಾಸ. ಪು: [**ಕೈಲಾಸ, ಶ**] ಹೆಸರಾಂತ ಕೈಲಾಸ ಪರ್ವತ (ಪಉಮ), ಮೇರು ಪರ್ವತ, ದೇವ–ವಿಶೇಷ, ನಾಗರ ಒಬ್ಬ ರಾಜ(ಜೀವ), **–ಸಯ. ಪು:** [**–ಶಯ**] ಮಹಾದೇವ, ಶಿವ. **'ಕೆಲಾಸ'** ಶಬ್ದವನ್ನು ನೋಡುವುದು

ಕಇಲಾಸಾ. ಸ್ತ್ರೀ: [**ಕೈಲಾಸಾ, ಶಾ**] ದೇವನೊಬ್ಬನ ರಾಜಧಾನಿ

ಕಇಲ್ಲಬಇಲ್ಲ. ಪು: [**ದೇ**] ಸ್ವೇಚ್ಛೆಯಾಗಿ ಓಡಾಡುವ ಎತ್ತು(ದೇ)

ಕಇವಿಯಾ. ಸ್ತ್ರೀ: [**ದೇ**] ಒಂದು ಪಾತ್ರೆ, ಪೀಕದಾನಿ (=ಉಗುಳುವ ಪಾತ್ರೆ) (ಣಾಯಾ)

ಕಇಸ(ಅಪ). ವಿ: [**ಕೀದೃಶ**] ಎಂಥದು? ಯಾವ ವಿಧವಾದ್ದು? (ಕುಮಾ)

ಕಈಯಾ(ಅಪ). 'ಕಇಆ' ಶಬ್ದವನ್ನು ನೋಡುವುದು

ಕಈವಯ. 'ಕಇವಯ' ಶಬ್ದವನ್ನು ನೋಡುವುದು

ಕಈಸ. ಪು: [ಕವೀಶ] ಕವಿಶ್ರೇಷ್ಠ, ಉತ್ತಮ ಕವಿ
ಕಈಸರ. ಪು: [ಕವೀಶ್ವರ] ಉತ್ತಮ ಕವಿ, ಶ್ರೇಷ್ಠ ಕವಿ (ರಂಭಾ)
ಕಉ. ಪು: [ಕ್ರತು] ಯಜ್ಞ (ಕಪ್ಪೂ)
ಕಉ(ಅಪ). ಅ: [ಕುತಃ] ಎಲ್ಲಿಂದ? (ಹೇ)
ಕಉಅ. ವಿ: [ದೇ] ಪ್ರಧಾನ, ಮುಖ್ಯ, ಪುಂನ: ಚಿಹ್ನೆ, ಗುರುತು
ಕಉಚ್ಛೇಅಯ. ಪು: [ಕೌಕ್ಷೇಯಕ] ಹೊಟ್ಟೆಯ ಮೇಲೆ ಕಟ್ಟಿಕೊಂಡ ಖಡ್ಗ(ಹೇ)
ಕಉಡ. ನ: [ದೇ. ಕಕುದ] **'ಕಉಹ= ಕಕುದ'** ಶಬ್ದವನ್ನು ನೋಡುವುದು
ಕಉರಅ.} ಪು: [ಕೌರವ] ಕುರು ದೇಶದ ರಾಜ,
ಕಉರವ.} **ಪುಂಸ್ತ್ರೀ:** ಕುರುವಂಶದಲ್ಲಿ ಹುಟ್ಟಿದ, ವಿ: ಕುರುವಿಗೆ (ದೇಶ ಅಥವಾ ವಂಶ] ಸಂಬಂಧಿಸಿದ್ದು, ಕುರುದೇಶದಲ್ಲಿ ಹುಟ್ಟಿದ(ಪ್ರಾಪ್ರ)
ಕಉಲ. ನ: [ದೇ] ಸಗಣಿ(ದೇ)
ಕಉಲ. ನ: [ಕೌಲ] ತಾಂತ್ರಿಕ ಪಂಥದ ಪ್ರವರ್ತಕ ಗ್ರಂಥ, ಕೌಲೋಪನಿಷದ್ ಇತ್ಯಾದಿ. ವಿ: ಶಕ್ತಿಯ ಉಪಾಸಕ, ತಾಂತ್ರಿಕ ಪಂಥವನ್ನು ತಿಳಿದವನು, ತಾಂತ್ರಿಕ ಪಂಥದ ಅನುಯಾಯಿ, ದೇವತಾ– ವಿಶೇಷ
ಕಉಲವ. **'ಕಉರವ'** ಶಬ್ದವನ್ನು ನೋಡುವುದು
ಕಉಸಲ. ನ: [ಕೌಶಲ] ಕುಶಲತೆ, ಚಾತುರ್ಯ, ದಕ್ಷತೆ
ಕಉಹ. ನ: [ದೇ] ನಿತ್ಯ, ಸದಾ, ಯವಾಗಲೂ
ಕಉಹ. ಪುಂ.ನ: [ಕಕುದ] ಎತ್ತಿನ ಹಿಣಿಲು ಅಥವಾ ಡುಬ್ಬು, ಶ್ವೇತಚ್ಛತ್ರ, ಚಾಮರ ಮೊದಲಾದ ರಾಜ ಚಿಹ್ನೆಗಳು, ಪರ್ವತ ಶಿಖರ(ಹೇ), ವಿ: ಪ್ರಧಾನ, ಮುಖ್ಯ. ಕಕುಹ **'ಕಕುಹ'** ಶಬ್ದವನ್ನು ನೋಡುವುದು
ಕಉಹಾ. ಸ್ತ್ರೀ: [ಕಕುಭ] ದಿಕ್ಕು, ಕಾಂತಿ, ಶೋಭೆ, ಸಂಪಿಗೆ ಹೂಗಳ ಮಲೆ, ಈ ಹೆಸರಿನ ಒಬ್ಬ ಪ್ರೇಮಿನಿ, ಶಾಸ್ತ್ರ, ಹಾರಾಡುತ್ತಿರುವ ಕೂದಲು, ಕೆದರಿದ ಕೂದಲು(ಹೇ)
ಕಉಹಿ. [ಕಕುದಿನ್] ಎತ್ತು
ಕಏ.} ಅ: [ಕೃತೇ] ಸಲುವಾಗಿ, ನಿಮಿತ್ತ,
ಕಏಣ.} ಓಸ್ಕರ(ಕುಮಾ)
ಕಏಣಂ.}

ಕಏಲ್ಲ. ವಿ: [ಕೃತ] ಮಾಡಿದ
ಕಓ. ಅ: [ಕುತಃ] ಎಲ್ಲಿಂದ, ಯಾವ ಕಾರಣದಿಂದ (ಆಚಾ) **–ಹುತ್ತ.** ಕ್ರಿ ವಿ: [ದೇ] ಯಾವ ಕಡೆಗೆ?
ಕಓ. ಅ: [ಕ್ವ] ಎಲ್ಲಿ? ಯಾವ ಜಾಗದಲ್ಲಿ? ಯಾರಲ್ಲಿ?
ಕಓಣ್ಣ. ವಿ: [ಕದುಷ್ಣ] ಉಗುರು ಬೆಚ್ಚಗಿನ
ಕಓಲ. **'ಕವೋಲ'** ಶಬ್ದವನ್ನು ನೋಡುವುದು
ಕಂ. ಅ: [ಕಮ್] ನೀರು, ಜಲ
ಕಂಇ. ಅ: [ದೇ] ಯಾರಿಂದ?
ಕಂಕ. ಪು: [ಕಂಕ] ಒಂದು ಜಾತಿಯ ಹದ್ದು (ಪಣ್ಣ), ಒಂದು ಬಗೆಯ ಕಠಿಣವಾದ ಮತ್ತು ಹರಿತವಾದ ಲೋಹ, ಒಂದು ಜಾತಿಯ ಮರ, **–ಪತ್ತ.** ನ: [**–ಪತ್ರ**] ಒಂದು ಬಗೆಯ ಹಾರುವ ಬಾಣ,(ವೇಣೀ), **–ಲೋಹ.** ಪುಂ.ನ: [**–ಲೋಹ**] ಒಂದು ಬಗೆಯ ಲೋಹ. ▯**ವತ್ತ.** **'–ಪತ್ತ'** ಶಬ್ದವನ್ನು ನೋಡುವುದು.
ಕಂಕಇ. ಪು: [ಕಂಕತಿ] ಒಂದು ಬಗೆಯ ವೃಕ್ಷ, ಬೋಳಗಡಲೆ, ಒಂದು ಔಷಧಿ(ಹೀರೆ ಗಿಡ?)
ಕಂಕಡ. ಪು: [ಕಂಕಟ] ಕವಚ(ಔಪ)
ಕಂಕಡಇಯ. ವಿ: [ಕಂಕಟಿತ] ಕವಚವನ್ನು ತೊಟ್ಟಿರುವ ಅಥವಾ ಹೊಂದಿರುವ (ಪಣ್ಣ)
ಕಂಕಡುಅ}. ಪು: [ಕಾಂಕಟುಕ] ಬೇಯದ ಉದ್ದಿನ
ಕಂಕಡುಗ}. ಒಂದು ಜಾತಿ
ಕಂಕಣ. ಪು: [ದೇ] ನಾಲ್ಕು ಇಂದ್ರಿಯಗಳ ಒಂದು ಪ್ರಾಣಿ ಜಾತಿ
ಕಂಕಣ. ನ: [ಕಂಕಣ] ಬಳೆ, ಕೈಯಿನ ಆಭರಣ(ಗಾ)
ಕಂಕಣೀ. ಸ್ತ್ರೀ: [ಕಂಕಣ] ಕೈ ಆಭರಣ, ಬಳೆ
ಕಂಕತಿ. ಪು: [ಕಂಕತಿ] ಒಂದು ಗ್ರಾಮ(ರಾಜ)
ಕಂಕತಿಜ್ಜ. **ಪುಂಸ್ತ್ರೀ:** [**ಕಾಂಕತೀಯ**] ಮಾಥರಾಜ ವಂಶದಲ್ಲಿ ಹುಟ್ಟಿದ
ಕಂಕಯ. ಪು: [ಕಂಕತ] ಬೋಳುಗಡಲೆ, ಹೀರೆ(?) ಎಂಬ ಔಷಧ ಬಳ್ಳಿ, ಸರ್ಪದ ಒಂದು ಜಾತಿ, ಪುಂ.ಸ್ತ್ರೀ: ಬಾಚಣಿಗೆ(ಸೂಅ)
ಕಂಕಲಾಸ. ಪು: [ಕೃಕಲಾಸ] ಕರ್ಕೋಟ ಎಂಬ ಒಂದು ಹೆಂಟೆಗೊದ್ದ,ಸರ್ಪಜಾತಿ.ಓತಿಕ್ಯಾತ
ಕಂಕಸೀ. ಸ್ತ್ರೀ: [ದೇ] ಬಾಚಣಿಗೆ
ಕಂಕಾಲ. ನ: [ಕಂಕಾಲ] ಚರ್ಮ ಮತ್ತು ಮಾಂಸ ರಹಿತವಾದ ಅಸ್ಥಿಪಂಜರ

ಕಂಕಾವಂಸ. ಪು: [ಕಂಕಾವಂಶ] ಒಂದು ವನಸ್ಪತಿ-ವಿಶೇಷ(ಪಣ್ಣ)

ಕಂಕಿಲ್ಲಿ. '**ಕಂಕೆಲ್ಲಿ**' ಶಬ್ದವನ್ನು ನೋಡುವುದು

ಕಂಕುಣ. '**ಕಂಕಣ=ದೇ**' ಶಬ್ದವನ್ನು ನೋಡುವುದು

ಕಂಕೇಲಿ. ಪು: [ಕಂಕೇಲಿ] ಅಶೋಕ ವೃಕ್ಷ(ಮೈ)

ಕಂಕೆಲ್ಲಿ. ಪು: [ದೇ. ಕಂಕೆಲ್ಲಿ] ಅಶೋಕ ವೃಕ್ಷ

ಕಂಕೋಡ. ನ: [ದೇ. ಕರ್ಕೋಟ] ಒಂದು ಬಗೆಯ ವನಸ್ಪತಿ, ಮಳೆಗಾಲದಲ್ಲಿ ಮಾತ್ರ ಬೆಳೆಯುವ ಒಂದು ಬಗೆಯ ತರಕಾರಿ, **ಪು:** ಒಬ್ಬ ನಾಗ ರಾಜ, ಸರ್ಪದ ಒಂದು ಜಾತಿ, (ಹೇ)

ಕಂಕೋಲ. ಪು: [ಕಂಕೋಲ] ಶೀತಲ ಚೀನೀ ವೃಕ್ಷದ ಒಂದು ಪ್ರಭೇದ, ನ: ಅದರ ಹಣ್ಣು. '**ಕಕ್ಕೋಲ**' ಶಬ್ದವನ್ನು ನೋಡುವುದು

ಕಂಖ. ಸಕ: [ಕಾಂಕ್ಷ್] ಇಚ್ಛಿಸು, ಬಯಸು(ಷಡ್)

ಕಂಖಣ. ನ: [ಕಾಂಕ್ಷಣ] ಕೆಳಗಿನ ಶಬ್ದವನ್ನು ನೋಡುವುದು

ಕಂಖಾ. ಸ್ತ್ರೀ: [ಕಾಂಕ್ಷಾ] ಇಚ್ಛೆ, ಆಸೆ, ಬಯಕೆ(ಸೂಅ), ಆಸಕ್ತಿ, ಅನ್ಯಧರ್ಮ ಇಷ್ಟಪಡುವುದು ಅಥವಾ ಅದರಲ್ಲಿನ ಆಸಕ್ತಿರೂಪದ ಸಮ್ಯಕ್ತ್ವವನ್ನು ಮೀರುವುದು. **–ಮೋಹಣಿಜ್ಜ.** ನ: [ಮೋಹನೀಯ] ಕರ್ಮ-ವಿಶೇಷ

ಕಂಖಿ. ವಿ: [ಕಾಂಕ್ಷಿನ್] ಇಷ್ಟಪಡುವವನು, ಆಸೆ ಪಡುವವನು (ಆಚಾ)

ಕಂಖಿಅ. ವಿ: [ಕಾಂಕ್ಷಿತ] ಅಪೇಕ್ಷಿಸಲ್ಪಟ್ಟ, ಆಸೆಪಟ್ಟ, ಇಷ್ಟಪಟ್ಟ

ಕಂಖಿರ. ವಿ: [ಕಾಂಕ್ಷಿತೃ] ಅಪೇಕ್ಷಿಸುವವನು, ಇಷ್ಟ ಪಡುವವನು, ಬಯಸುವವನು(ಗಾ)

ಕಂಗಣೀ. ಸ್ತ್ರೀ: [ದೇ] ಒಂದು ಜಾತಿಯ ಬಳ್ಳಿ,

ಕಂಗು. ಸ್ತ್ರೀನ: [ಕಂಗು] ಒಂದು ಬಗೆಯ ಧಾನ್ಯ, ಒಂದು ಜಾತಿಯ ಬಳ್ಳಿ(ಪಣ್ಣ)

ಕಂಗುಲಿಯಾ. ಸ್ತ್ರೀ: [ದೇ.ಕಂಗುಲಿಕಾ] ಜೈನ ದೇವಾಲಯದ ಒಂದು ದೊಡ್ಡ ಸಭಾಂಗಣ, ಜೈನ ದೇವಾಲಯ ಅಥವಾ ಅದರ ಹತ್ತಿರದಲ್ಲಿ ಸಣ್ಣ ಅಥವಾ ಹಿರಿಯ ತತ್ತ್ವಚರಣೆ (ಧರ್ಮ)

ಕಂಚಣ. ಪುಂನ: [ಕಾಂಚನ] ಒಂದು ದೇವ-ವಿಮಾನ, ವಿ: ಚಿನ್ನದ, **–ಪಹ.** ನ: [–ಪ್ರಭ] ಒಂದು ರತ್ನ, ವಿ: ರತ್ನ ವಿಶೇಷದಿಂದ ಮಾಡಿದ, **–ಪಾಯವ.** ಪು: [–ಪಾದಪ] ಒಂದು ಬಗೆಯ ವೃಕ್ಷ.

ಕಂಚಣ. ಪು: [ಕಾಂಚನ] ಸಂಪಿಗೆ ಮರ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಶ್ರೇಷ್ಠಿ, ನ: ಚಿನ್ನ–**ಉರ.** ನ: [–ಪುರ] ಕಳಿಂಗ ದೇಶದ ಒಂದು ಪ್ರಮುಖ ನಗರ, ಆಕ), **–ಕೂಡ.** ನ: [–ಕೂಟ] ಸೌಮನಸವೆಂಬ ವಕ್ಷಸ್ಕಾರ ಪರ್ವತದ ಒಂದು ಶಿಖರ(ಠಾ), ಒಂದು ದೇವ ವಿಮಾನ, ರುಚಕ ಪರ್ವತದ ಒಂದು ಶಿಖರ **–ಕೇಅಈ.** ಸ್ತ್ರೀ: [–ಕೇತಕೀ] ಒಂದು ಬಳ್ಳಿ. **□ತಿಲಯ.** ನ: [–ತಿಲಕ] ಈ ಹೆಸರಿನ ವಿದ್ಯಾಧರರ ಒಂದು ನಗರ, **–ತ್ಥಲ.** ನ: [–ಸ್ಥಲ] ತನ್ನ ಹೆಸರಿನಿಂದ ಖ್ಯಾತವಾದ ಒಂದು ನಗರ. **□ವಲಾಣಗ.** ನ: [–ವಲಾನಕ] ಎಂಬತ್ತನಾಲ್ಕು ತೀರ್ಥಗಳಲ್ಲಿ ಒಂದರ ಹೆಸರು, **–ಸೇಲ.** ಪು: [–ಶೈಲ] ಮೇರು ಪರ್ವತ

ಕಂಚಣಗ. ಸ್ತ್ರೀ: [ಕಾಂಚನಕ] ಒಂದು ಪರ್ವತ, ಕಾಂಚನಕ ಪರ್ವತದ(ಸುಮೇರು) ನಿವಾಸಿಗಳಾದ ದೇವಗಣ(ಜೀವ)

ಕಂಚಣಾ. ಸ್ತ್ರೀ: [ಕಂಚನಾ] ತನ್ನ ಹೆಸರಿನಿಂದ ಖ್ಯಾತಳಾದ ಒಬ್ಬ ಸ್ತ್ರೀ(ಪಣ್ಹಾ)

ಕಂಚಣಾರ. ಪು: [ಕಂಚನಾರ] ಕೋವಿದಾರ ವೃಕ್ಷ(ಪಉಮ)

ಕಂಚಣಿಯಾ. ಸ್ತ್ರ: [ಕಾಂಚನಿಕಾ] ರುದ್ರಾಕ್ಷಿ ಮಾಲೆ(ಔಪ)

ಕಂಚಾ(ಪೈ). '**ಕಣ್ಣಾ**' ಶಬ್ದವನ್ನು ನೋಡುವುದು

ಕಂಚಿ.} ಸ್ತ್ರೀ: [ಕಾಂಚಿ, –ಚೀ] ಹೆಸರಾಂತ

ಕಂಚೀ.} ಕಾಂಚೀನಗರ, ಒಡ್ಯಾಣ, ಡಾಬು(ಪಾಅ), ಹೆಸರಾಂತ ಪರ್ವತ

ಕಂಚೀ. ಸ್ತ್ರೀ: [ದೇ] ಒನಕೆಯ ಅಗ್ರಭಾಗದಲ್ಲಿ ಹಾಕುವ ಕಬ್ಬಿಣದ ಬಳೆ ಆಕಾರದ ವಸ್ತು

ಕಂಚೀರಯ. ನ: [ದೇ] ಒಂದು ಬಗೆಯ ಹೂವು

ಕಂಚೀರಯ. ನ: [ಕಾಂಚೀರತ] ಒಂದು ಬಗೆಯ ಸುರತ

ಕಂಚು}. ಪು: [ಕಂಚುಕ] ಹೆಣ್ಣು ತನ್ನ ಸ್ತನವನ್ನು

ಕಂಚುಅ}. ಮರೆಮಾಡಲು ಬಳಸುವ ಕುಪ್ಪಸ, ಕವಚ, ಒಂದು ಬಗೆಯ ಮರ, ಬಟ್ಟೆ,

ಕಂಚುಇ. ಪು: [ಕಂಚುಕಿನ್] ಅಂತಃಪುರದ ಕಾವಲಿನವನು (=ಪ್ರತೀಹಾರಿ)(ಣಾಯಾ), ಹಾವು, ಗೋಧಿ, ಕಡಲೆ, ಜೂಜುಕೋರ,

ಮಾರ್ಗಶಿರ ಮಾಸದಲ್ಲಿ ಕೊಯ್ಲಿಗೆ ಬರುವ ಒಂದು ಬಗೆಯ ಆಹಾರ ಧಾನ್ಯ, ಬೆಳುದಿಂಗಳು, ವಿ: ಕವಚ ಧರಿಸಿದವನು

ಕಂಚುಇಅ. ವಿ: [**ಕಂಚುಕಿತ**] ಕಂಚುಕ(ಕವಚ)ವನ್ನು ಧರಿಸಿದವನು(ಕುಮಾ)

ಕಂಚುಇಜ್ಜ. ಪು: [**ಕಂಚುಕೀಯ**] ಅಂತಃಪುರದ ಪ್ರತೀಹಾರಿ(ಭಗ)

ಕಂಚುಇಜ್ಜಂತ. ವಿ: [**ಕಂಚುಕಾಯಮಾನ**] ಕಂಚುಕನ ಹಾಗೆ ಆಚರಿಸುವ

ಕಂಚುಗ. '**ಕಂಚುಅ**' ಶಬ್ದವನ್ನು ನೋಡುವುದು

ಕಂಚುಗಿ. '**ಕಂಚುಇ**' ಶಬ್ದವನ್ನು ನೋಡುವುದು

ಕಂಚುಲಿಆ. ಸ್ತ್ರೀ: [**ಕಂಚುಲಿಕಾ**] ಕುಪ್ಪುಸ, ರವಿಕೆ(ಕಪ್ಪೂ)

ಕಂಭುಲ್ಲೀ. ಸ್ತ್ರೀ: [ದೇ] ಹಾರ, ಕಂಠಾಭರಣ(ಭವಿ)

ಕಂಜಿಅ. ನ: [**ಕಾಂಜಿಕ**] ಸಿಹಿ(ಸೀ)ಹಾಲೆ ಗಿಡ(ಸುರ)

ಕಂಟ. '**ಕಂಟಗ**' ಶಬ್ದವನ್ನು ನೋಡುವುದು

ಕಂಟಅಂತ. ವಿ: [**ಕಂಟಕಾಯುಮಾನ**] ಮುಳ್ಳಿನ ಹಾಗಿರುವ, ಮುಳ್ಳಿನ ಹಾಗೆ ವರ್ತಿಸುವ(ಸೇ), ರೋಮಾಂಚನಗೊಳ್ಳುವ

ಕಂಟಇಅ. ವಿ: [**ಕಂಟಕಿತ**] ಮುಳ್ಳಿನಿಂದ ಕೂಡಿರುವ, ಪುಲಕಿತ, ರೋಮಾಂಚನಗೊಂಡ (ಪಾಅ)

ಕಂಟಇಜ್ಜಂತ. '**ಕಂಟಂತ**' ಶಬ್ದವನ್ನು ನೋಡುವುದು

ಕಂಟಇಲ. ಪು: [**ಕಂಟಕಿಲ**] ಒಂದು ಜಾತಿಯ ಬಿದಿರು, ವಿ: ಮುಳ್ಳಿನಿಂದ ಆವೃತವಾದ(ಸೂಅ)

ಕಂಟಇಲ್ಲ. '**ಕಂಟಇಅ**' ಶಬ್ದವನ್ನು ನೋಡುವುದು

ಕಂಟಉಚ್ಚ. ವಿ: [ದೇ] ಮುಳ್ಳಿನಿಂದ ಭರಿತವಾದ, ಮುಳ್ಳಿನಿಂದ ತುಂಬಿರುವ

ಕಂಟಕಿಲ್ಲ. 'ಕಂಟಇಅ' ಶಬ್ದವನ್ನು ನೋಡುವುದು

ಕಂಟಗ.} ಪು: [**ಕಂಟಕ**] ಮುಳ್ಳು, ಪುಲಕ,

ಕಂಟಯ}. ರೋಮಾಂಚ, ಶತ್ರು(ಣಾಯಾ), ಚೇಳಿನ ಕೊಂಡಿ, ಭರ್ಜಿ, ಈಟಿ, ಬಾಣ, ದುಃಖವನ್ನು ಉಂಟುಮಾಡುವ ವಸ್ತು, ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಕುಯೋಗ(ಗಣ), **–ಬೋಂದಿಯಾ.** ಸ್ತ್ರೀ: [–ದೇ] ಮುಳ್ಳಿನ ಶಾಖೆ(ಹೆಗ್ಗುಳದ ಗಿಡದ ಕೊಂಬೆ)

ಕಂಟಾಲೀ. ಸ್ತ್ರೀ: [ದೇ] ವನಸ್ಪತಿ–ವಿಶೇಷ, ಹೆಗ್ಗುಳದ ಗಿಡ

ಕಂಟಿಯ. ವಿ: [**ಕಂಟಿಕ**] ಮುಳ್ಳಿನಿಂದ ಕೂಡಿರುವ, ಬೂರುಗದ ಮರ

ಕಂಟಿಯಾ. ಸ್ತ್ರೀ: [**ಕಂಟಿಕಾ**] ವನಸ್ಪತಿ, ಹೆಗ್ಗುಳದ ಗಿಡ (ಬೃಹ)

ಕಂಟೀ. ಸ್ತ್ರೀ: [ದೇ] ಹತ್ತಿರ, ಸಮೀಪ, ಪರ್ವತದ ತಪ್ಪಲು ಪ್ರದೇಶ, ಕಂಠಾಭರಣ, ಹಾರ(ಗಲುಡ)

ಕಂಟುಲ್ಲ.} (ದೇ) '**ಕಂಕೋಡ**' ಶಬ್ದವನ್ನು

ಕಂಟೋಲ.} ನೋಡುವುದು

ಕಂಠ. ಪು: [ದೇ] ಹಂದಿ, ಎಲ್ಲೆ, ಗಡಿ, ಸೀಮೆ(ದೇ)

ಕಂಠ. ಪು: [**ಕಂಠ**] ಕತ್ತು, ಗಂಟಲು, ಕೊರಳು, ಹತ್ತಿರ, ಅಂಚು, ಸೆರಗು, □ದರಖಲಿಅ. ವಿ: [**–ದರಸ್ಖಲಿತ**] ಗದ್ಗದ(ಪಾಅ), **–ಮುರಯ.** ನ: [**–ಮುರಜ**] ಒಂದು ಆಭರಣ(ಣಾಯಾ), **–ಮುರವೀ.** ಸ್ತ್ರೀ: [**–ಮುರವೀ**] ಒಂದು ಕಂಠಾಭರಣ(ಔಪ). □ **ಮುಹೀ.** ಸ್ತ್ರೀ: [**–ಮುಖೀ**] ಕೊರಳ ಆಭರಣ. **–ಸುತ್ತ.** ನ: [**–ಸೂತ್ರ**] ಒಂದು ಬಗೆಯ ಸುರತ ಬಂಧ, ಒಂದು ಕಂಠಾಭರಣ

ಕಂಠ. ವಿ: [**ಕಂಠ್ಯ**] ಕಂಠದಿಂದ ಹುಟ್ಟಿದ, ಸರಳ, ಸುಗಮ

ಕಂಠಕುಂಚೀ. ಸ್ತ್ರೀ: [ದೇ] ವಸ್ತ್ರವೇ ಮುದಲಾದವುಗಳ ಸೆರಗಿನಲ್ಲಿ ಕಟ್ಟಿಕೊಂಡ ಗಂಟು, ಕುತ್ತಿಗೆಯಲ್ಲಿ ಸೇರಿರುವ ಒಂದು ಉದ್ದನೆಯ ನಾಡಿ– ಗ್ರಂಥಿ

ಕಂಠದೀಣಾರ. ಪು: [ದೇ] ರಂಧ್ರ, ಬಿಲ

ಕಂಠಮಲ್ಲ. ನ: [ದೇ] ಅಸ್ಥಿಪಂಜರ, ಚಿಕ್ಕ ಹಡಗು, ವಾಹನ

ಕಂಠಮಾಲ. ಪುಂಸ್ತ್ರೀ: [**ಕಂಠಮಾಲ**] ಒಂದು ಬಗೆಯ ರೋಗ, ಗಳಗಂಡ ರೋಗ

ಕಂಠಯ. ಪು: [**ಕಂಠಕ**] ತನ್ನ ಹೆಸರಿನಿಂದ ಖ್ಯಾತನಾದ ಕಳ್ಳರ ಮುಖಂಡ (ಮಹಾ)

ಕಂಠಾಕಂಠಿ. ಅ: [**ಕಂಠಾಕಂಠಿ**] ಪರಸ್ಪರ ಕುತ್ತಿಗೆ ಹಿಡಿಯುವುದು(**ಣಾಯಾ**)

ಕಂಠಾಲ. ವಿ: [**ಕಂಠವತ್**] ದೊಡ್ಡ ಗಂಟಲಿನ

ಕಂಠಿಅ. ಪು: [ದೇ] ಆಳು, ಬಾಗಿಲು ಕಾಯುವವನು

ಕಂಠಿಆ. ಸ್ತ್ರೀ: [**ಕಂಠಿಕಾ**] ಕೊರಳ ಹಾರ, ಕಂಠಾಭರಣ(ಗಾ)

ಕಂಠೀಅ}. ಪು: [**ಕಂಠೀರವ**] ಸಿಂಹ, ಶಾರ್ದೂಲ

ಕಂಠೀರವ}.

ಕಂಡ. ಸಕ: [**ಕಂಡ್**] ಬತ್ತವೇ ಮುಂತಾದವುಗಳನ್ನು ಕುಟ್ಟಿ ಹೊಟ್ಟು ಬೇರ್ಪಡಿಸುವುದು, ಎಳೆ, ತುರಿಸು, ವ. ಕೃ: ಕಂಡಂತ

ಕಂಡ. ಪುಂ.ನ: [ಕಾಂಡ] ದಂಡ, ಕೋಲು, ನಿಂದೆಗೊಳಗಾದ ಸಮುದಾಯ, ನೀರು, ಪರ್ವ, ಉತ್ಸವ, ಹಬ್ಬ), ಮರದ ಕಾಂಡ, ಮರದ ಕೊಂಬೆ, ಕೊಂಬೆಗಳು ಮೂಡುವ ಮರದ ಆ ಭಾಗ (=ಗೆಣ್ಣು) ಗ್ರಂಥದ ಒಂದು ಭಾಗ, ಗುಚ್ಛ, ಕುದುರೆ, ಪ್ರೇತ, ಪಿತೃ ಮತ್ತು ದೇವತೆಗಳ ಯಜ್ಞದ ಒಂದು ಭಾಗ, ಬೆನ್ನು ಮೂಳೆ, ಸಂತುಷ್ಟಗೊಳಿಸಲು ಮಾಡುವ ಸುಳ್ಳು ಪ್ರಶಂಸೆ, ಹೊಗಳಿಕೆ, ಗೌಪ್ಯತೆ, ಏಕಾಂತ, ತೃಣ, ನಿರ್ಜನ ಪೃಥ್ವಿ, ಅವಕಾಶ, ಸಮಯ, ಪ್ರಸ್ತಾವ, ಸಮೂಹ, ಗುಂಪು, ಬಾಣ(ಉಪ), ದೇವ ವಿಮಾನ, ಪರ್ವತದ ಒಂದು ಭಾಗ, ತುಂಡು,ಚೂರು, ಭಾಗ, **–ಚ್ಛಾರಿಯ.** ಪು: [–ಚ್ಛಾರಿಕ] ಈ ಹೆಸರಿನ ಒಂದು ಗ್ರಾಮ, ಗ್ರಾಮ ಮುಖಂಡ, **'ಕಂಡಗ', 'ಕಂಡಯ'** ಶಬ್ದಗಳನ್ನು ನೋಡುವುದು.

ಕಂಡ. ಪು: [ದೇ] ನೊರೆ, ವಿ: ದುರ್ಬಲ, ಕಷ್ಟಕ್ಕೆ ಸಿಕ್ಕಿದವನು, ತೊಂದರೆಗೆ ಸಿಲುಕಿದ

ಕಂಡ. ನ: [ಕಾಂಡ] ಅಂಗುಲದ ಅಸಂಖ್ಯದ ಭಾಗ

ಕಂಡಇಲ. **'ಕಂಟಇಲ'** ಶಬ್ದವನ್ನು ನೋಡುವುದು

ಕಂಡಇಜ್ಜಂತ. **'ಕಂಟಇಜ್ಜಂತ'** ಶಬ್ದವನ್ನು ನೋಡುವುದು

ಕಂಡಗ. **ಪುಂನ:** [ಕಾಂಡಕ] **'ಕಂಡ= ಕಾಂಡ'** ಶಬ್ದವನ್ನು ನೋಡುವುದು(ಆಚಾ), ಸಂಯಮ ಶ್ರೇಣಿ,ಈ ಹೆಸರಿನ ಒಂದು ಗ್ರಾಮ. **'ಕಂಡಯ'** ಶಬ್ದವನ್ನು ನೋಡುವುದು

ಕಂಡಣ.ನ: [ಕಂಡನ] ಬತ್ತವೇ ಮೊದಲಾದವುಗಳನ್ನು ಕುಟ್ಟಿ ಹೊಟ್ಟು ಬೇರ್ಪಡಿಸಿ ಸ್ವಚ್ಛಗೊಳಿಸುವುದು,

ಕಂಡಪಂಡವಾ. ಸ್ತ್ರೀ: [ದೇ] ಯವನಿಕೆ, ಪರದೆ

ಕಂಡಯ. ಪುಂ.ನ: [ಕಾಂಡಕ] **'ಕಂಡ=ಕಾಂಡ'** ಮತ್ತು **'ಕಂಡಗ'** ಶಬ್ದಗಳನ್ನು ನೋಡುವುದು, ಒಂದು ಮರ, ರಾಕ್ಷಸರ ಚೈತ್ಯ ವೃಕ್ಷ, ತಾಯತ, ಯಂತ್ರ

ಕಂಡರೀಯ. ಪು: [ಕಂಡರೀಕ] ಮಹಾಪದ್ಮ ರಾಜನ ಒಬ್ಬ ಮಗ, ಪುಂಡರೀಕನ ತಮ್ಮ, ಅವನು ಅನೇಕ ವರ್ಷಗಳವರೆಗೆ ಜೈನ ದೀಕ್ಷೆಯನ್ನು ಪಾಲಿಸಿ ಕೊನೆಯಲ್ಲಿ ಅದನ್ನು ತ್ಯಜಿಸಿದ್ದನು (ಣಾಯಾ)

ಕಂಡರೀಯ. ವಿ: [ಕಂಡರೀಕ] ಸುಂದರವಲ್ಲದ, ಕುರೂಪ, ಪ್ರಧಾನವಲ್ಲದ, ಗೌಣ

ಕಂಡಲಿ}. ಸ್ತ್ರೀ: [ಕಂದರಿಕಾ] ಗುಹೆ, ಕಂದರ(ಹೇ)
ಕಂಡಲಿಆ}.

ಕಂಡವಾ. ಸ್ತ್ರೀ: [ಕಂಡವಾ] ವಾದ್ಯ ವಿಶೇಷ

ಕಂಡಾರ. ಸಕ: [ಉತ್+ಕೃ] ಅಗೆ, ಎಲ್ಲ ಕಿತ್ತುಹಾಕಿ ಸರಿಪಡಿಸು

ಕಂಡಾವೆಲ್ಲೀ.ಸ್ತ್ರೀ: [ಕಾಂಡವಲ್ಲೀ] ಒಂದು ವನಸ್ಪತಿಯ ಬಳ್ಳಿ

ಕಂಡಿಅ. ವಿ:[ಕಂಡಿತ] ಚೊಕ್ಕಟಗೊಳಿಸಿದ, ಸ್ವಚ್ಛಗೊಳಿಸಿದ

ಕಂಡಿಯಾಯಣ. ನ: [ಕಂಡಿಕಾಯನ] ವೈಶಾಲೀ ನಗರದ ಒಂದು ಚೈತ್ಯ

ಕಂಡಿಲ್ಲ. **ಪು:** [ಕಾಂಡಿಲ್ಯ] ಕಾಂಡಿಲ್ಯ ಗೋತ್ರದ ಪ್ರವರ್ತಕ ಋಷಿ, **ಪುಂ.ಸ್ತ್ರೀ:** ಕಾಂಡಿಲ್ಯ ಗೋತ್ರದಲ್ಲಿ ಹುಟ್ಟಿದ. ನ: ಮಾಂಡವ್ಯ ಗೋತ್ರದ ಒಂದು ಶಾಖೆಯಾದ ಗೋತ್ರ–ವಿಶೇಷ(ಠಾ). **–ಕಂಡಿಲ್ಲಾಯಣ.** **ಪು:** [–ಕಾಂಡಿಲ್ಯಾಯನ] ಖ್ಯಾತನಾದ ಋಷಿ(ಚಂದ).

ಕಂಡು. **'ಕಂಡೂ'** ಶಬ್ದವನ್ನು ನೋಡುವುದು

ಕಂಡು. **'ಕಂದು'** ಶಬ್ದವನ್ನು ನೋಡುವುದು

ಕಂಡುಅ. **ಸಕ:** [ಕಂಡೂಯ್] ತುರಿಸಿಕೊಳ್ಳು ವ. **ಕೃ–ಕಂಡುಂತ, ಕಂಡುಅಮಾಣ**

ಕಂಡುಅ. **ಸಕ:** [ಕಾಂದವಿಕ] ಬಾಣಲೆಯಲ್ಲಿ ಕರಿದ ತಿಂಡಿಗಳನ್ನು ಮಾರುವವನು (ಆವಮ್)

ಕಂಡುಅ}. ಪು: [ಕಂದುಕ] ಚೆಂಡು(ದೇ)
ಕಂಡಗ}.

ಕಂಡುಜ್ಜುಯ. ವಿ: [ಕಾಂಡರ್ಜು] ಬಾಣದ ಹಾಗೆ ನೇರವಾಗಿರುವ

ಕಂಡುಯಗ.ವಿ: [ಕಂಡೂಯಕ] ತುರಿಸುವವನು(ಔಪ)

ಕಂಡುಯಣ. ನ: [ಕಂಡೂಯನ] ಕಜ್ಜಿ, ತುರಿಕೆ – ಒಂದು ರೋಗ, ತುರಿಸಿಕೊಳ್ಳುವುದು (ಗಉಡ)

ಕಂಡುಯಯ. **'ಕಂಡುಯಗ'** ಶಬ್ದವನ್ನು ನೋಡುವುದು

ಕಂಡುರು. ಪು: [ಕಂಡುರು] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ. ಅವನು ರಾಮನ ಸೋದರ ಭರತನೊಂದಿಗೆ ಜೈನ ದೀಕ್ಷೆಯನ್ನು ತೆಗೆದುಕೊಂಡಿದ್ದನು.

ಕಂಡೂ. ಸ್ತ್ರೀ: [ಕಂಡೂ] ತುರಿಕೆ, ನವೆ, ತುರಿಸುವುದು, ಕಜ್ಜಿ –ಚರ್ಮರೋಗ(ಣಾಯಾ)

ಕಂಡೂಇ. ಸ್ತ್ರೀ: [ಕಂಡೂತಿ] ಮೇಲಿನ ಶಬ್ದವನ್ನು ನೋಡುವುದು

ಕಂಡೂಇಅ. ನ: [ಕಂಡೂಯಿತ]ಕೆರೆಯಲ್ಪಟ್ಟ, ತುರಿಸಲ್ಪಟ್ಟ

ಕಂಡೂಯ. '**ಕಂಡುಅ=ಕಂಡೂಯ್**' ಶಬ್ದವನ್ನು ನೋಡುವುದು

ಕಂಡೂಯುಗ. ವಿ: [ಕಂಡೂಯುಕ] ತುರಿಕೆ ಮಾಡಿಸಿಕೊಳ್ಳುವವನು(ಠಾ)

ಕಂಡೂಯಣ. '**ಕಂಡುಯಣ**' ಶಬ್ದವನ್ನು ನೋಡುವುದು

ಕಂಡೂಯುಯು. '**ಕಂಡೂಯುಗ**' ಶಬ್ದವನ್ನು ನೋಡುವುದು

ಕಂಡೂರ. ಪು: [ದೇ] ಬಕ ಪಕ್ಷಿ

ಕಂಡೂಲ. ವಿ: [ಕಂಡೂಲ] ನವೆಯಿಂದ ಕೂಡಿದ, ನವೆ ಉಂಟುಮಾಡುವ(ಕುಮಾ)

ಕಂತ. ವಿ: [**ಕಾಂತ**] ಮನೋಹರ, ಸುಂದರ, ಇಚ್ಛಿಸಿದ, ಆಸೆಪಟ್ಟ, **ಪು:** ಪತಿ, ಗಂಡ, ದೇವ-ವಿಶೇಷ, ನ: ಕಾಂತಿ, ಪ್ರಭೆ(ಆಚಾ)

ಕಂತ. ವಿ: [**ಕ್ರಾಂತ**] ಕಳೆದು ಹೋದ, ಗತ (ಪ್ರಾಪ)

ಕಂತ. ಸಕ: [**ಕೃತ್**] ಕತ್ತರಿಸು, ಕೊಯ್ಯು, ಸೀಳು

ಕಂತಾ. ಸ್ತ್ರೀ: [**ಕಾಂತಾ**] ಹೆಣ್ಣು, ರಾವಣನ ಒಬ್ಬ ಹೆಂಡತಿಯ ಹೆಸರು(ಪಉಮ), ಒಂದು ಯೋಗ ದೃಷ್ಟಿ

ಕಂತಾರ. ನ: [**ಕಾಂತಾರ**] ಅರಣ್ಯ, ದುಷ್ಟ, ದೂಷಿತ, ಆಶ್ರಯವಿಲ್ಲದ, ಹುಚ್ಚ (ಕಪ್ಪೂ), ಜಲ ಫಲಾದಿಗಳಿಲ್ಲದ ಅರಣ್ಯ.

ಕಂತಿ. ಸ್ತ್ರೀ: [**ಕಾಂತಿ**] ತೇಜಸ್ಸು, ಪ್ರಕಾಶ, ಸೌಂದರ್ಯ, ಶೋಭೆ(ಪಾಅ), ರಾವಣನ ಒಬ್ಬ ಹೆಂಡತಿಯ ಹೆಸರು. ಅಹಿಂಸೆ, ಇಚ್ಛೆ, ಚಂದ್ರನ ಒಂದು ಕಲೆ. **-ಪುರೀ.** ಸ್ತ್ರೀ: [**-ಪುರೀ**] ಒಂದು ನಗರ. **-ಮ, -ಲ್ಲ.** ವಿ: [**-ಮತ್**] ಕಾಂತಿಯಿಂದ ಕೂಡಿರುವ, (ಆವಮ್)-

ಕಂತಿ. ಸ್ತ್ರೀ: [**ಕ್ರಾಂತಿ**] ಪರಿವರ್ತನೆ, ಬದಲಾವಣೆ ಗಮಿಸುವುದು, ನಡೆಯುವುದು

ಕಂತು. ಪು: [ದೇ] ಕಾಮ, ಮನ್ಮಥ

ಕಂಥಕ}. ಪು: [**ಕಂಥಕ**] ಕುದುರೆಯ ಒಂದು
ಕಂಥಗ}.ಜಾತಿ(ಠಾ)
ಕಂಥಯ}.

ಕಂಥಾ. ಸ್ತ್ರೀ: [**ಕಂಥಾ**] ಹಳೆಯ ಬಟ್ಟೆಯ ತುಂಡುಗಳನ್ನು ಸೇರಿಸಿ ಹೊಲಿದು ಮಾಡಿದ ದುಬಟಿ ಅಥವಾ ದುಪಟ್ಟಾ

ಕಂಥಾರ. ಪು: [**ಕಂಥಾರ**] ಒಂದು ಬಗೆಯ ವೃಕ್ಷ

ಕಂಥಾರಿಯಾ.} ಸ್ತ್ರೀ: [**ಕಂಥಾರಿಕಾ, ರೀ**] ಒಂದು
ಕಂಥಾರೀ}.ಬಗೆಯ ವೃಕ್ಷ. □ವಣ. ನ: [**-ವನ**] ಉಜ್ಜೈನಿಯ ಹತ್ತಿರದ ಒಂದು ಕಾಡು, ಅಲ್ಲಿ ಅವಂತಿ ಕುಮಾರನೆಂಬ ಜೈನಮುನಿ ನಿರಶನ ವ್ರತ ಆಚರಿಸಿದ್ದನು(ಆಕ)

ಕಂಥೇರ. ಪು: [**ಕಂಥೇರ**] ಒಂದು ಬಗೆಯ ವೃಕ್ಷ

ಕಂಥೇರೀ.} ಸ್ತ್ರೀ: [**ಕಂಥೇರೀ**] ಮುಳ್ಳಿನಿಂದ ಇಡಿಕಿರಿದ
ಕಂಥಾರೀ}. ಒಂದು ವೃಕ್ಷ

ಕಂದ. ಅಕ: [**ಕ್ರಂದ್**] ಅಳು, **ವ. ಕೃ-ಕಂದಂತ, ಕಂದಮಾಣ(ಗಾ)**

ಕಂದ. ವಿ: [ದೇ] ದೃಢವಾದ, ಬಲವಾದ, ಮತ್ತ, ಉನ್ಮತ್ತ, ನ: ಮುಚ್ಚುವಿಕೆ, ಹೊದಿಕೆ(ದೇ)

ಕಂದ. ಪು: [**ಕಂದ**] ಗಿಡಗಳ ದಪ್ಪ ಬೇರು, ಗೆಡ್ಡೆ, ಸೂರಣ ಗೆಡ್ಡೆ, ಗೆಣಸು, ಮೂಲಂಗಿ, ಮೊದಲಾದ ಗೆಡ್ಡೆಗಳು, ಬೇರು(ಗಉಡ)

ಕಂದ. ಪು: [**ಸ್ಕಂದ**] ಷಣ್ಮುಖ, ಕುಮಾರ ಸ್ವಾಮಿ

ಕಂದಣಯಾ. ಸ್ತ್ರೀ: [**ಕ್ರಂದನತಾ**] ಗಟ್ಟಿ ದನಿಯಿಂದ ಚೀರಾಡುವುದು, ಕಿರಿಚಾಡುವುದು, ಅಳುವುದು

ಕಂದಪ್ಪ. ಪು: [**ಕಂದರ್ಪ**] ಮನ್ಮಥ, ಅನಂಗ ಕಾಮದೇವ, ಕಾಮೋದ್ದೀಪಕವಾದ ಹಾಸ್ಯಾದಿಗಳು, ದೇವ, ಕಾಮ ಸಂಬಂಧಿ ಕಷಾಯ,(=ದೋಷ) ಕಾಮದಿಂದ ಕೂಡಿದ, ಕಾಮಿ

ಕಂದಪ್ಪ. ವಿ: [**ಕಾಂದರ್ಪ**] ಕಂದರ್ಪ-ಸಂಬಂಧಿ

ಕಂದಪ್ಪಿ. ವಿ: [**ಕಂದರ್ಪಿನ್**] ಕಾಮೋದ್ದೀಪಕ, ಕಾಮೋತ್ತೇಜಕ

ಕಂದಪ್ಪಿಯ. ಪು: [**ಕಾಂದರ್ಪಿಕ**] ಹಾಸ್ಯ ಮಾಡಿ ಓಡುವುದೇ ಮೊದಲಾದವು(ಔಪ), ಪಲಾಯನವಾದಿ ದೇವರುಗಳ ಒಂದು ವರ್ಗ, ಹಾಸ್ಯವೇ ಮುಂತಾದವು, ಪಲಾಯನ ಮಾಡುವ ಮೂಲಕ ಜೀವನ ಸಾಗಿಸುವವನು, ವಿ: ಕಾಮಸಂಬಂಧಿಯಾದ್ದು

ಕಂದರ. ನ: [**ಕಂದರ**] ರಂಧ್ರ, ಬಿಲ(ಣಾಯಾ), ಗುಹೆ

ಕಂದರಾ.} ಸ್ತ್ರೀ: [**ಕಂದರಾ**] ಗುಹೆ
ಕಂದರೀ.}

ಕಂದಲ. ಪು: [**ಕಂದಲ**] ಅಂಕುರ, ಮೊಳಕೆ, ಒಂದು ಬಳ್ಳಿ(ಣಾಯಾ)

ಕಂದಲ. ನ:[ದೇ] ತಲೆಬುರುಡೆ, ಶಿವನ ಕೈಯ ತಲೆಓಡು
ಕಂದಲಗ. ಪು: [ಕಂದಲಕ] ಒಂದು ಖುರವುಳ್ಳ ಪ್ರಾಣಿ (ಪಣ್ಣ)
ಕಂದಲಿಅ.} ವಿ: [ಕಂದಲಿತ] ಮೊಳಕೆ ಬಂದಿರುವ,
ಕಂದಲಿಲ್ಲ.} ಚಿಗುರಿದ
ಕಂದಲೀ. ಸ್ತ್ರೀ: [ಕಂದಲೀ] ಒಂದು ಬಗೆಯ ಬಳ್ಳಿ, ಮೊಳಕೆ, ಚಿಗುರು, ಒಂದು ಬಗೆಯ ಗೆಡ್ಡೆ
ಕಂದವಿಯ. ಪು: [ಕಾಂದವಿಕ] ಕರಿದ ತಿಂಡಿಗಳು ಮತ್ತು ಮಿಠಾಯಿಗಳನ್ನು ಮಾರುವವನು
ಕಂದಿಂದ. ಪು: [ಕ್ರಂದೇಂದ್ರ, ಕ್ರಂದಿತೇಂದ್ರ] ಕ್ರಂದಿತವೆಂಬ ಹೆಸರಿನ ದೇವನಿಕಾಯದ ಇಂದ್ರ(ಠಾ)
ಕಂದಿಯ. ಪು: [ಕ್ರಂದಿತ] ವಾಣವ್ಯಂತರ ದೇವರುಗಳ ಒಂದು ಜಾತಿ(ಪಣ್ಣ), ನ: ರೋದನ, ಅಳುವಿಕೆ
ಕಂದಿರ. ವಿ: [ಕ್ರಂದಿನ] ಅಳುತ್ತಿರುವವನು(ಭವಿ)
ಕಂದು. ಪುಂಸ್ತ್ರೀ: [ಕಂದು] ಅನ್ನದ ಗಂಜಿಯನ್ನು ಬೇಯಿಸುವ ಒಂದು ಬಗೆಯ ಪಾತ್ರೆ,
ಕಂದುಅ. ಪು: [ಕಂದುಕ]ಚೆಂಡು, ಒಂದು ವನಸ್ಪತಿ(ಪಣ್ಣ)
ಕಂದುಇಅ. ಪು: [ಕಾಂದವಿಕ] ಕರಿದ ತಿಂಡಿಗಳು, ಮಿಠಾಯಿಗಳನ್ನು ಮಾರುವವನು
ಕಂದುಕ. **'ಕಂದುಅ'** ಶಬ್ದವನ್ನು ನೋಡುವುದು
ಕಂದುಗ. **'ಕಂದುಅ'** ಶಬ್ದವನ್ನು ನೋಡುವುದು
ಕಂದುಟ್ಟ.(ದೇ). **'ಕಂದೊಟ್ಟ'** ಶಬ್ದವನ್ನು ನೋಡುವುದು
ಕಂದುಬ್ಬಯ. ಪುಂನ: [ದೇ] ಒಂದು ಬಗೆಯ ಗೆಡ್ಡೆ
ಕಂದುಯ. **'ಕಂದುಇಅ'** ಶಬ್ದವನ್ನು ನೋಡುವುದು
ಕಂದೋಇಯ. **'ಕಂದುಇಅ'** ಶಬ್ದವನ್ನು ನೋಡುವುದು
ಕಂದೊಟ್ಟ. ನ: [ದೇ] ನೀಲ ಕಮಲ(ಉತ್ತರ)
ಕಂಧ. **'ಖಂಧ= ಸ್ಕಂಧ'** ಶಬ್ದವನ್ನು ನೋಡುವುದು
ಕಂಧರಾ. ಸ್ತ್ರೀ: [ಕಂಧರಾ] ಕೊರಳು, ಕುತ್ತಿಗೆ(ಪಾಅ)
ಕಂಧಾರ. ಪು: [ದೇ] ಹೆಗಲು(ಉಪ)
ಕಂಪ. ಅಕ: [ಕಂಪ] ನಡುಗು, ಅಲ್ಲಾಡು, ವ. ಕೃ- **ಕಂಪಂತ, ಕಂಪಮಾಣ**
ಕಂಪ. ಪು: [ಕಂಪ] ಸ್ಥಿರವಲ್ಲದ, ಚಂಚಲವಾದ, ಅಲುಗುವ(ಕುಮಾ)
ಕಂಪಡ. ಪು: [ದೇ] ಪಥಿಕ, ಪ್ರಯಾಣಿಕ(ದೇ)
ಕಂಪಣ. ನ: [ಕಂಪನ] ನಡುಕ, ಅಲುಗಾಡಿಸುವಿಕೆ (ಭವಿ), **-ವಾಇಅ.** ವಿ: [-ವಾತಿಕ] **'ಕಂಪವಾಯು'** ಎಂಬ ಹೆಸರಿನ ರೋಗವುಳ್ಳ

ಕಂಪಿ. ವಿ: [ಕಂಪಿನ್] ನಡುಗುತ್ತಿರುವ, ನಡುಕವುಳ್ಳ (ಕಪ್ಪೂ)
ಕಂಪಿಅ. ವಿ: [ಕಂಪಿತ] ನಡುಗಿಸಲ್ಪಟ್ಟ, ನಡುಕವುಳ್ಳ, ಅಲುಗಾಡಿಸಲ್ಪಟ್ಟ
ಕಂಪಿರ. ವಿ: [ಕಂಪಿತೃ] ನಡುಗುತ್ತಿರುವ, ನಡುಕವುಳ್ಳ(ಗಾ)
ಕಂಪಿಲ್ಲ. ವಿ: [ಕಂಪವತ್] ನಡುಗುತ್ತಿರುವ, ಅಸ್ಥಿರ,
ಕಂಪಿಲ್ಲ. ಪು: [ಕಾಂಪಿಲ್ಯ] ಯದುವಂಶದ ರಾಜ ಅಂಧಕ ವೃಷ್ಣಿಯ ಒಬ್ಬ ಮಗನ ಹೆಸರು(ಅಂತ), ಪಂಜಾಬಿನ ಒಂದು ನಗರ. **-ಪುರ.** ನ: [ಪುರ] ಒಂದು ನಗರ(ಪಉಮ)
ಕಂಬ. ವಿ: [ಕಮ್ರ] ಕಾಮುಕ, ಕಾಮಿ, ಸುಂದರ(ಪ್ರಿ)
ಕಂಬ. **'ಕಂಬಾ'** ಶಬ್ದವನ್ನು ನೋಡುವುದು
ಕಂಬರ. ಪು: [ದೇ] ವಿಜ್ಞಾನ (ದೇ)
ಕಂಬಲ. ಪುಂ.ನ: [ಕಂಬಲ] ಕಂಬಳಿ, ಶಾಲು, ಉಣ್ಣೆಯಿಂದ ತಯಾರಾದ ಬಟ್ಟೆ(ಆಚಾ), **ಪು:** ತನ್ನ ಹೆಸರಿನಿಂದ ಖ್ಯಾತವಾದ ಒಂದು ಎತ್ತು, ಹೋರಿ, ಗಂಗೆದೊಗಲು, ಬಲೆಬಲೆಯಾಗಿರುವ ಬಿಳಿ ಬಟ್ಟೆ
ಕಂಬಾ. ಸ್ತ್ರೀ: [ಕಂಬಾ] ಕೋಲು, ಕಡ್ಡಿ, ದಂಡ
ಕಂಬಿ}. ಸ್ತ್ರೀ: [ಕಂಬಿ, ಕಂಬೀ] ಸೌಟು, ಮಿಳ್ಳೆ,
ಕಂಬೀ}.ಶೋಕಿಗಾಗಿ ಇಷ್ಟಪಟ್ಟು ಕೈಯಲ್ಲಿ ಹಿಡಿಯುವ ಕೋಲು(ಉಪ)
ಕಂಬಿಯಾ. ಸ್ತ್ರೀ: [ಕಂಬಿಕಾ] ಪುಸ್ತಕದ ಹೊದಿಕೆಯ ಹಿಂಭಾಗ
ಕಂಬು. ಪು: [ಕಂಬು] ಶಂಖ, ಈ ಹೆಸರಿನ ಒಂದು ದ್ವೀಪ(ಪಉಮ), ಒಂದು ಪರ್ವತ, ಒಂದು ದೇವ- ವಿಮಾನ, **-ಗ್ಗೀವ.** ನ: [-ಗ್ರೀವ] ಒಂದು ದೇವ ವಿಮಾನ
ಕಂಬೋಇಯ. ಪು: [ಕಂಬೋಜ] ಒಂದು ದೇಶ(ಪಉಮ)
ಕಂಬೋಇಯ. ವಿ: [ಕಾಂಬೋಜ] ಕಂಬೋಜ ದೇಶದಲ್ಲಿ ಹುಟ್ಟಿದ
ಕಂಭಾರ. ಪು.ಬ: [ಕಶ್ಮೀರ] ಈ ಹೆಸರಿನ ಪ್ರಸಿದ್ಧ ದೇಶ. **-ಜಮ್ಮ.** ನ: [ಜನ್ಮನ್] ಕುಂಕುಮ, ಕೇಸರಿ (ಕುಮಾ), **'ಕಮ್ಹಾರ'** ಶಬ್ದವನ್ನು ನೋಡುವುದು
ಕಂಭೂರ (ಅಪ). ಮೇಲಿನ ಶಬ್ದವನ್ನು ನೋಡುವುದು
ಕಂಸ. ಪು: [ಕಂಸ] ರಾಜಾ ಉಗ್ರಸೇನನ ಪುತ್ರ, ಶ್ರೀಕೃಷ್ಣನ ಸೋದರ ಮಾವ(ಪಣ್ಣ), ಮಹಾಗ್ರಹ(ಠಾ),

ಕಾಂಸಾ= ಒಂದು ಲೋಹ=ಕಂಚು(ಣಾಯಾ), **-ಣಾಭ. ಪು:** [-ನಾಭ] ಗ್ರಹ ವಿಶೇಷ, **-ವಣ್ಣ. ಪು:** [-ವರ್ಣ] ಗ್ರಹ-ವಿಶೇಷ, **-ವಣ್ಣಾಭ. ಪು:** [ವರ್ಣಾಭ] ಒಂದುಗ್ರಹ-ವಿಶೇಷ. **-ಸಂಹಾರಣ. ಪು:** [-ಸಂಹಾರಣ] ಕೃಷ್ಣ, ವಿಷ್ಣು(ಪಿಂಗ)

ಕಂಸ. ನ: [ಕಾಂಸ್ಯ] ಧಾತು ವಿಶೇಷ=ಕಂಚು, ಕಂಚಿನ ಜಾಗಟೆ, ಅಳತೆ, ನೀರು ಕುಡಿಯುವ ಪಾತ್ರೆ, ಬಟ್ಟಲು, **-ತಾಲ. ನ:** [-ತಾಲ] ಕಂಸಾಳೆ ವಾದ್ಯ, **-ಪತ್ತೀ, -ಪಾಈ. ಸ್ತ್ರೀ:** [-ಪಾತ್ರೀ] ಕಂಚಿನಿಂದ ಮಾಡಿದ ಪಾತ್ರೆ(ಕಪ್ಪ), **-ಪಾಯ. ನ:** [-ಪಾತ್ರ] ಕಂಚಿನಿಂದ ಮಾಡಿದ ಪಾತ್ರೆ(ದಸ)

ಕಂಸಾರ. ಪು: [ದೇ] ತಂಬಿಟ್ಟು (=ಒಂದು ಬಗೆಯ ಸಿಹಿ ತಿಂಡಿ)

ಕಂಸಾರೀ. ಸ್ತ್ರೀ: [ದೇ] ಮೂರು ಇಂದ್ರಿಯಗಳ ಕ್ಷುದ್ರ ಜಂತುವಿನ ಒಂದು ಬಗೆ(ಜೀ)

ಕಂಸಾಲ. ಪು: [ಕಾಂಸ್ಯಾಲ] ಕಂಸಾಳೆ ವಾದ್ಯ (ಕಂಚಿನ ತಾಳ)(ಸುಪಾ)

ಕಂಸಾಲಾ. ಸ್ತ್ರೀ: [ಕಂಸತಾಲಾ, ಕಾಂಸ್ಯತಾಲಾ] ಕಂಸಾಳೆ ವಾದ್ಯದ ಘೋಷ(ಣಂದಿ)

ಕಂಸಾಲಿಯಾ. ಸ್ತ್ರೀ: [ಕಾಂಸ್ಯತಾಲಿಕಾ] ಕಂಚಿನ ವಾದ್ಯ-ಕಂಸಾಳೆ ವಾದ್ಯ (ಸುಪಾ)

ಕಂಸಿಅ. ಪು: [ಕಾಂಸ್ಯಿಕ] ಕಂಚುಗಾರ, ಕಾಂಸ್ಯಕಾರ, ವಾದ್ಯ-ವಿಶೇಷ(ಸುಪಾ)

ಕಂಸಿಆ. ಸ್ತ್ರೀ: [ಕಂಸಿಕಾ] ತಾಳ(ಣಾಯಾ), ವಾದ್ಯ

ಕಕಾಣಿ. ಪುಂಸ್ತ್ರೀ: [ದೇ] ಮರ್ಮಸ್ಥಾನ

ಕಕುಧ.} '**ಕಉಹ= ಕಕುದ**' ಶಬ್ದವನ್ನು

ಕಕುಭ}. ನೋಡುವುದು(ಪಿ)

ಕಕುಹ. '**ಕಉಹ=ಕಕುದ**' ಶಬ್ದವನ್ನು ನೋಡುವುದು (ಣಾಯಾ), ಹರಿವಂಶದ ಒಬ್ಬ ರಾಜ(ಪಉಮ)

ಕಕುಹಾ. '**ಕಉಹಾ**' ಶಬ್ದವನ್ನು ನೋಡುವುದು

ಕಕ್ಕ. ಪು: [ಕಲ್ಕ] ಶರೀರದ ಕೊಳೆಯುನ್ನು ಹೋಗಲಾಡಿಸಲು ಬಳಸುವ ಉಜ್ಜುವ ಅಥವಾ ಲೇಪನ ದ್ರವ್ಯ(ಸೂಅ), **ನ:** ಪಾಪ, ಕಪಟ, ಮಾಯೆ(ಪಣ್ಹ), **-ಗರುಗ. ನ:** [-ಗುರುಕ] ಮಾಯೆ, ಕಪಟ(ಪಣ್ಹ)

ಕಕ್ಕ. ಪುಂನ: [ಕಲ್ಕ] ಶ್ರೀಗಂಧವೇ ಮೊದಲಾದ ಲೇಪನ ದ್ರವ್ಯ, ಪ್ರಸೂತಿ ರೋಗದಲ್ಲಿ ಮಾಡಲಾಗುವ ಕ್ಷಾರ-ಪತನ, ಸಾಂಬ್ರಾಣಿಯಿಂದ ಉಜ್ಜವುದು, **-ಕುರುಯಾ, ಸ್ತ್ರೀ;** [-ಕುರುಕಾ] ಮಾಯೆ, ಕಪಟ, ವಂಚನೆ

ಕಕ್ಕ. ಪು: [ಕರ್ಕ] ದೇವನು ನಿರ್ಮಿಸಿದ ಚಕ್ರವರ್ತಿಯ ಒಂದು ಉಪ್ಪರಿಗೆ, ಕರ್ಕರಾಶಿ

ಕಕ್ಕಂಧ. ಪು: [ಕರ್ಕಂಧ] ಗ್ರಹದ ಅಧಿಷ್ಠಾತೃ ದೇವ(ಠಾ)

ಕಕ್ಕಂಧು. ಸ್ತ್ರೀ: [ಕರ್ಕಂಧು] ಎಲಚಿ ಮರ, ಬದರೀ ವೃಕ್ಷ(ಪಾಅ)

ಕಕ್ಕಡ. ನ: [ಕರ್ಕಟ] ಕರ್ಕಾಟಕ ರಾಶಿ, ಒಂದು ಜಲಚರ ಪ್ರಾಣಿ=ಏಡಿ, ನಳ್ಳಿ, ಸೌತೆಕಾಯಿ, ಹೃದಯದ ಒಂದು ಬಗೆಯ ವಾಯು(ಭಗ)

ಕಕ್ಕಡಚ್ಛ. ಪು: [ಕರ್ಕಟಾಕ್ಷ] ಸೌತೆಕಾಯಿ(ಕಪ್ಪ)

ಕಕ್ಕಡಿಯಾ}. **ಸ್ತ್ರೀ:** [ಕರ್ಕಟಿಕಾ, ಟೀ] ಸೌತೆ ಬಳ್ಳಿ

ಕಕ್ಕಡೀ}.

ಕಕ್ಕಣಾ. ಸ್ತ್ರೀ: [ಕಲ್ಕನಾ] ಪಾಪ, ಮಾಯೆ(ಪಣ್ಹ)

ಕಕ್ಕಬ. ಪು: [ದೇ] ಬೆಲ್ಲ ತಯಾರಿಸುವಾಗ ಕಂಡುಬರುವ ಕಬ್ಬಿನ ರಸದ ಒಂದು ಅವಸ್ಥೆ=ಕಾಕಂಬಿ

ಕಕ್ಕರ. ಪು: [ಕರ್ಕರ] ಕಲ್ಲು, **ವಿ:** ಕಠಿಣ, ಕರ್ಕಶ ಶಬ್ದವುಳ್ಳ

ಕಕ್ಕರಣಯಾ. ಸ್ತ್ರೀ: [ಕರ್ಕರಣತಾ] ದೋಷೋದ್ಭಾವನೆ =ದೋಷ ಉಂಟಾಗುವುದು, ದೋಷ ಹುಟ್ಟಿದ್ದರಿಂದ ಬರುವ ಅಳು.

ಕರ್ಕರಾಇಯ. ನ: [ಕರ್ಕರಾಯಿತ] ಕಲ್ಲಿನಂಥ ಅರ್ಥಾತ್ ಕರ್ಕಶ ನಡವಳಿಕೆ, ದೋಷೋಚ್ಚಾರಣೆ

ಕಕ್ಕವ. ಪು: [ದೇ] ಬೆಲ್ಲ ತಯಾರಿಸುವಾಗ ಕಬ್ಬಿನ ಹಾಲಿಗೆ ಉಂಟಾಗುವ ಒಂದು ಸ್ಥಿತಿ ಕಾಕಂಬಿ

ಕಕ್ಕಸ. ವಿ: [ಕರ್ಕಶ] ಕಠಿಣ, ಪರುಷ, (ಪಾಅ), ಪ್ರಖರ, ಪ್ರಚಂಡ, ತೀವ್ರ, ಅನಿಷ್ಟ, ಹಾನಿಕಾರಕ(ಭಗ), ನಿಷ್ಠುರ, ನಿರ್ದಯ(ಉವಾ) 'ಒತ್ತಿ ಒತ್ತಿ ಹೇಳಿದ ಮಾತು'

ಕಕ್ಕಸ}. **ಪು:** [ದೇ] ಮೊಸರನ್ನ

ಕಕ್ಕಸಾರ}.

ಕಕ್ಕಸೇಣ. ಪು: [ಕರ್ಕಸೇನ] ಕಳೆದ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಿದ್ದ ತನ್ನ ಹೆಸರಿನಿಂದ ಖ್ಯಾತನಾದ ಕುಲಪುರುಷ(ರಾಜ)

ಕಕ್ಕಾಲುಆ. ಸ್ತ್ರೀ: [ಕರ್ಕಾರುಕಾ] ಬೂದುಗುಂಬಳದ ಬಳ್ಳಿ

ಕಕ್ಕಿ. ಪು: [ಕಲ್ಕಿನ್] ಭವಿಷ್ಯದಲ್ಲಿ ಆಗಲಿರುವ ಪಾಟಲಿಪುತ್ರದ ಒಬ್ಬ ರಾಜ(ತೀ)

ಕಕ್ಕಿಡ. ಪು: [ದೇ] ಓತಿಕ್ಯಾತ
ಕಕ್ಕಿಯ. ನ: [ಕಲ್ಕಿಕ] ಮಾಂಸ
ಕಕ್ಕೇಅಣ. ಪುಂನ: [ಕರ್ಕೇತನ] ರತ್ನದ ಒಂದು ಜಾತಿ(ಪಉಮ)
ಕಕ್ಕೇರಅ. ಪು: [ಕರ್ಕೇರಕ] ಒಂದು ಬಗೆಯ ಮಣಿ–ವಿಶೇಷ(ಮೃಚ್ಛ)
ಕಕ್ಕೋಡ. ನ: [ಕರ್ಕೋಟ] 'ಕಕ್ಕೋಡಯ' ಶಬ್ದವನ್ನು ನೋಡುವುದು
ಕಕ್ಕೋಡಈ. ಸ್ತ್ರೀ: [ಕರ್ಕೋಟಕೀ] ಬಿಲ್ವದ ಮರ,
ಕಕ್ಕೋಡಯ. ನ: [ಕರ್ಕೋಟಕ] 'ಕಕ್ಕೋಡ' ಶಬ್ದವನ್ನು ನೋಡುವುದು, ಅನುವೇಲಂಧರ ಎಂಬ ಹೆಸರಿನ ನಾಗರಾಜ, ಅವನ ಆವಾಸ ಸ್ಥಾನ ಪರ್ವತ
ಕಕ್ಕೋಲ. ಪು: [ಕಂಕೋಲ] ಒಂದು ವೃಕ್ಷ–ವಿಶೇಷ, ಕಕ್ಕೋಲ ವೃಕ್ಷದ ಒಂದು ಪ್ರಭೇದ(ಗಉಡ) ನ:ಸುವಾಸನೆಯಿಂದ ಕೂಡಿದ ಒಂದು ಬಗೆಯ ಹಣ್ಣು, 'ಕಂಕೋಲ' ಶಬ್ದವನ್ನು ನೋಡುವುದು
ಕಕ್ಕೋಲೀ. ಸ್ತ್ರೀ: [ಕಂಕೋಲೀ] ಒಂದು ಬಗೆಯ ವೃಕ್ಷ,
ಕಕ್ಖ. 'ಕಚ್ಛ=ಕಕ್ಷ' ಶಬ್ದವನ್ನು ನೋಡುವುದು(ಉವ, ಪಉಮ)
ಕಕ್ಖಗ. ವಿ: [ಕಕ್ಷಗ] ಕಂಕುಳನ್ನು ಹೊಂದಿರುವ, ಕಂಕುಳಿನ ಕೂದಲು
ಕಕ್ಖಡ. 'ಕಕ್ಕಸ' ಶಬ್ದವನ್ನು ನೋಡುವುದು
ಕಕ್ಖಡ. ವಿ: [ದೇ] ದಪ್ಪನಾಗಿರುವ, ಪುಷ್ಟವಾಗಿರುವ (ದೇ, ಆಚಾ)
ಕಕ್ಖಡಂಗೀ. ಸ್ತ್ರೀ: [ದೇ] ಸಖಿ, ಗೆಳತಿ (ದೇ)
ಕಕ್ಖಲ(ದೇ). 'ಕಕ್ಕಸ' ಶಬ್ದವನ್ನು ನೋಡುವುದು
ಕಕ್ಖಾ. 'ಕಚ್ಛಾ=ಕಕ್ಷಾ' ಶಬ್ದವನ್ನು ನೋಡುವುದು
ಕಗ್ಘಾಡ. ಪು: [ದೇ] ಉತ್ತರಾಣಿ ಗಿಡ, ಶಾಜೀರಿಗೆ, ಹಾಲುಖೋವ, ಹಾಲಿನ ಕೆನೆ
ಕಗ್ಘಾಯಲ. ಪು: [ದೇ] ಹಾಲುಖೋವ, ಹಾಲಿನ ಕೆನೆ
ಕಚ್ಚ. ನ: [ದೇ. ಕೃತ್ಯ] ಕಾಯ
ಕಚ್ಚ. (ಪೈ). 'ಕಜ್ಜ' ಶಬ್ದವನ್ನು ನೋಡುವುದು (ಪ್ರಾಪ)
ಕಚ್ಚ. ನ: [ಕಾಚ] ಗಾಜು (ಕಪ್ಪೂ)
ಕಚ್ಚಂತ. ವಿ: [ಕೃತ್ಯಮಾನ] ಪೀಡಿಸಲ್ಪಡುತ್ತಿರುವ
ಕಚ್ಚರಾ. ಸ್ತ್ರೀ: [ದೇ] ಕಸ, ಪಕ್ವವಾಗದ ಕಲ್ಲಂಗಡಿ ಹಣ್ಣು, ಧಾನ್ಯದ ವ್ಯರ್ಥ ಭಾಗವನ್ನು ಒಣಗಿಸಿ ಮಸಾಲೆ ಬೆರೆಸಿ ಮಾಡಿದ ಆಹಾರ–ವಿಶೇಷ, ಗುಜರಾತಿಯಲ್ಲಿ 'ಕಾಚರೀ' ಎಂದು ಕರೆಯಲಾಗುವ ಒಂದು ಬಗೆಯ ಉಪ್ಪಿನ ಕಾಯಿ,(ಭವಿ)
ಕಚ್ಚವಾರ. ಪು: [ದೇ] ಕಸ, (ಸೂಕ್ತ)
ಕಚ್ಚಾಇಣೀ. ಸ್ತ್ರೀ: [ಕಾತ್ಯಾಯನೀ] ದೇವಿ, ಚಂಡಿ,
ಕಚ್ಚಾಯಣ. ಪು: [ಕಾತ್ಯಾಯನ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಋಷಿ, ಕೌಶಿಕ ಗೋತ್ರದ ಶಾಖಾ ರೂಪದ ಒಂದು ಗೋತ್ರ, **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದ(ಠಾ)
ಕಚ್ಚಾಯಣೀ. ಸ್ತ್ರೀ: [ಕಾತ್ಯಾಯನೀ] ಪಾರ್ವತಿ, ಗೌರಿ (ಪಾಅ)
ಕಚ್ಚಿ. ಅ: [ಕಚ್ಚಿತ್] ಪ್ರಶ್ನೆ, ಮಂಗಳ, ಮಾತು, ಹರ್ಷ–ಇವೇ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ಕಚ್ಚು. (ಅಪ). ಮೇಲಿನ ಶಬ್ದವನ್ನು ನೋಡುವುದು
ಕಚ್ಚೂರ. ಪು: [ಕರ್ಚೂರ] ವನಸ್ಪತಿ–ವಿಶೇಷ, ಅರಿಶಿನ
ಕಚ್ಚೋಲ.} ಪುಂ.ನ: [ಕಚ್ಚೋಲಕ] ಪಾತ್ರೆ, ಬಟ್ಟಲು,
ಕಚ್ಚೋಲಯ}. (ಭವಿ)
ಕಚ್ಛ. ಪು: [ಕಕ್ಷ] ಕಂಕುಳು, ಕಾಡು, ಹುಲ್ಲು, ಒಣ ಹುಲ್ಲು, ಬಳ್ಳಿ, ಒಣ ಮರಗಳಿಂದ ಕೂಡಿದ ಕಾಡು, ರಾಜರುಗಳ ಅಂತಃಪುರ, ಆನೆಯನ್ನು ಕಟ್ಟಿಹಾಕುವ ಹಗ್ಗ, ಪಾರ್ಶ್ವ, ಗ್ರಹದ ಸುತ್ತುವಿಕೆ, ಶ್ರೇಣಿ, ಬಗಿಲು, ಗುಗ್ಗುಳ, ತಾರೆ ಗಿಡ, ಮನೆಯ ಒಳಭಾಗ, ಸ್ಪರ್ಧಿಸುವ ಸ್ಥಳ, ಜಲ ಬಾಹುಳ್ಯದ ದೇಶ
ಕಚ್ಛ. ಪು. ಬ: [ಕಚ್ಛ] ಈಗಲೂ 'ಕಚ್ಛ' ಹೆಸರಿನಿಂದ ಪ್ರಸಿದ್ಧವಾದ ಹೆಸರಾಂತ ಪ್ರಾಂತ(ಪಉಮ)ಜಲ ಬಾಹುಳ್ಯವಿರುವ ಪ್ರದೇಶ(ಣಾಯಾ), ಲಂಗೋಟಿ, ಕಬ್ಬಿನ ತೋಟ(ಕುಮಾ), ಮಹಾ–ವಿದೇಹ ವರ್ಷದಲ್ಲಿರುವ ಒಂದು ವಿಜಯದ ಪ್ರದೇಶ, ತಟ, ದಡ, ನದಿಯ ನೀರಿನಿಂದ ವ್ಯಾಪಿಸಲ್ಪಟ್ಟ, ಭಗವಾನ್ ವೃಷಭದೇವನ ಒಬ್ಬ ಮಗ, ಕಚ್ಛ ವಿಜಯದ ಒಬ್ಬ ರಾಜ, ಕಚ್ಛ–ವಿಜಯದ ಅಧಿಷ್ಠಾತೃ ದೇವ, ಪಕ್ಕದಲ್ಲಿರುವ ಪ್ರದೇಶ, ರಾಜರುಗಳ ಉದ್ಯಾನದ ಸಮೀಪದ ಪ್ರದೇಶ, ದೋಧಕ ಛಂದಸ್ಸಿನ ಒಂದು ಪ್ರಭೇದ(ಪಿಂಗ),

–ಕೂಡ. ನ: [–ಕೂಟ] ಮಾಲ್ಯವಂತವೆಂಬ ಹೃದಯ ಭಾಗದಲ್ಲಿರುವ ಪರ್ವತದ ಶಿಖರ, ಕಚ್ಛ– ವಿಜಯದ ವಿಭಜಕ ವೈತಾಢ್ಯ ಪರ್ವತದ ದಕ್ಷಿಣೋತ್ತರ ಪಾರ್ಶ್ವದಲ್ಲಿರುವ ಎರಡು ಶಿಖರಗಳು, ಚಿತ್ರಕೂಟ ಪರ್ವತದ ಒಂದು ಶಿಖರ, **ಕಚ್ಛಾಹಿವ. ಪು:** [**ಕಚ್ಛಾಧಿಪ**] ಕಚ್ಛ ದೇಶದ ರಾಜ(ಭವಿ)

ಕಚ್ಛ. ಪುಂನ: [**ಕಚ್ಛ**] ನದಿಯ ಹತ್ತಿರದ ಪ್ರದೇಶ, ಶತಾವರಿಯೇ ಮೊದಲಾದವುಗಳ ತೋಟ

ಕಚ್ಛಗಾವಈ. ಸ್ತ್ರೀ: [**ಕಚ್ಛಕಾವತೀ**] ಮಹಾ ವಿದೇಹ ವರ್ಷದ ಒಂದು ವಿಜಯ–ಪ್ರದೇಶ

ಕಚ್ಛಟ್ಟೀ. ಸ್ತ್ರೀ: [**ದೇ**] ಲಂಗೋಟಿ, ಚಿಕ್ಕ ಧೋತ್ರ,

ಕಚ್ಛಭ. ಪು: [**ಕಚ್ಛಪ**] ಆಮೆ, ರಾಹು ಗ್ರಹ. **–ರಿಂಗಿಯ.** ನ: [–ರಿಂಗಿತ] ಗುರು ವಂದನೆಯ ಒಂದು ದೋಷ, ಆಮೆಯು ಹಾಗೆ ನಡೆಯುತ್ತ ನಮಸ್ಕರಿಸುವುದು(ಬೃಹ)

ಕಚ್ಛಭಾಣಿಯಾ. ಸ್ತ್ರೀ: [**ದೇ**] ನೀರಿನಲ್ಲಿ ಬೆಳೆಯುವ ಒಂದು ವನಸ್ಪತಿ–ವಿಶೇಷ

ಕಚ್ಛಭೀ. ಸ್ತ್ರೀ: [**ಕಚ್ಛಪೀ**] ಹೆಣ್ಣು ಆಮೆ, ಒಂದು ಬಗೆಯ ವಾದ್ಯ, ನಾರದನ ವೀಣೆ(ಣಾಯಾ), ಪುಸ್ತಕ(ಠಾ)

ಕಚ್ಛರ. ಪು: [**ದೇ**] ಕೆಸರು, ಹುದುಲು(ದೇ)

ಕಚ್ಛರೀ. ಸ್ತ್ರೀ: [**ಕಚ್ಛರೀ**] ಗುಚ್ಛ(ಪಣ್ಣ)

ಕಚ್ಛವ(ಅಪ). ಪು: [**ಕಚ್ಛ**] ತನ್ನ ಹೆಸರಿನಿಂದ ಖ್ಯಾತವಾದ ದೇಶ

ಕಚ್ಛವ. '**ಕಚ್ಛಭ**' ಶಬ್ದವನ್ನು ನೋಡುವುದು (ಪಉಮ)

ಕಚ್ಛವೀ. '**ಕಚ್ಛಭೀ**' ಶಬ್ದವನ್ನು ನೋಡುವುದು(ಬೃಹ)

ಕಚ್ಛಹ. '**ಕಚ್ಛಭ**' ಶಬ್ದವನ್ನು ನೋಡುವುದು

ಕಚ್ಛಾ. ಸ್ತ್ರೀ: [**ಕಕ್ಷಾ**] ವಿಭಾಗ, ಅಂಶ(ಪಉಮ), ಆನೆಯ ಹೊಟ್ಟೆಯು ಮೇಲೆ ಕಟ್ಟುವ ಹಗ್ಗ (=ಉರೋಬಂಧನ), ಕಂಕುಳು, ಶ್ರೇಣಿ, ಪಂಕ್ತಿ, ಸೊಂಟದ ಮೇಲೆ ಕಟ್ಟುವ ವಸ್ತ್ರ, ಅಂತಃಪುರ, ಸಂಶಯ–ಕೋಟಿ, ಸ್ಪರ್ಧಾ ಸ್ಥಾನ, ಮನೆಯ ಒಳಭಾಗ, ಕೋಣೆ

ಕಚ್ಛಾ. ಸ್ತ್ರೀ: [**ಕಚ್ಛಾ**] ಸೊಂಟದ ಡಾಬು, ಒಡ್ಯಾಣ, **–ವಈ.** ಸ್ತ್ರೀ: [–ವತೀ] '**ಕಚ್ಛಗಾವಈ**' ಶಬ್ದವನ್ನು ನೋಡುವುದು. **–ವಈಕೂಡ.** ನ: [**–ವತೀಕೂಟ**] ಮಹಾ–ವಿದೇಹ ವರ್ಷದಲ್ಲಿ ಇರುವ ಬ್ರಹ್ಮಕೂಟ ಪರ್ವತದ ಶಿಕರ(ಇಕ)

ಕಚ್ಛಾದಬ್ಭ. ಪು: [**ದೇ. ಕಕ್ಷಾದರ್ಭ**] ಒಂದು ಬಗೆಯ ರೋಗ

ಕಚ್ಛು. ಸ್ತ್ರೀ: [**ಕಚ್ಛೂ**] ಕಜ್ಜಿ ರೋಗ, ಕಜ್ಜಿಯನ್ನುಂಟು ಮಾಡುವ(ನವೆ ಉಂಟು ಮಾಡುವ) ಗಿಡ, ನಸುಗುನ್ನಿ ಗಿಡ(ಪಣ್ಣ), **–ಲ, –ಲ್ಲ,** ವಿ: [–ಮತ್] ಕಜ್ಜಿ ಇರುವವನು(ರಾಜ)

ಕಚ್ಛುಟ್ಟಿಯಾ. ಸ್ತ್ರೀ: [**ದೇ. ಕಚ್ಛಪಟಿಕಾ**] ಲಂಗೋಟಿ

ಕಚ್ಛುರಿಅ. ವಿ: [**ಕಚ್ಛುರಿತ**] ವ್ಯಾಪಿಸಲ್ಪಟ್ಟ, ಖಚಿತವಾದ(ಕುಮ್ಮಾ)

ಕಚ್ಛುರಿಅ. ವಿ: [**ದೇ**] ಅಸೂಯೆಗೊಳಗಾದ, **ನ:** ಅಸೂಯೆ

ಕಚ್ಛುರೀ. ಸ್ತ್ರೀ: [**ದೇ**] ನಸುಗುನ್ನಿ ಗಿಡ–ಕಪಿಗಳಿಗೂ ನವೆಯನ್ನುಂಟು ಮಾಡುವಂಥದ್ದು

ಕಚ್ಛುಲ. ಪು: [**ಕಚ್ಛುಲ**] ಗುಲ್ಮ– ಗಿಡ ಗೆಂಟೆ, ಲತೆ ಹುಲ್ಲುಗಳ ಪೊದರು(ಪಣ್ಣ)

ಕಚ್ಛುಲ್ಲ. ಪು: [**ಕಚ್ಛುಲ್ಲ**] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ನಾರದ ಮುನಿ(ಣಾಯಾ)

ಕಚ್ಛೂ. '**ಕಚ್ಛು**' ಶಬ್ದವನ್ನು ನೋಡುವುದು

ಕಚ್ಛೋಟೀ. ಸ್ತ್ರೀ: [**ದೇ**] ಲಂಗೋಟಿ

ಕಜ್ಜ. ವಿ: [**ಕಾರ್ಯ**] ಕೆಲಸ, ಮಾಡಲು ಯೋಗ್ಯವಾದ್ದು, ಮಾಡಲು ಸಾಧ್ಯವಾಗುವಂಥದು, **ನ:** ಪ್ರಯೋಜನ, ಉದ್ದೇಶ, ಕಾರಣ, ಹೇತು, **–ಜಾಣ.** ವಿ: [–ಜ್ಞ] ಕಾರ್ಯವನ್ನು ತಿಳಿದವನು, **–ಸೇಣ. ಪು:** [–ಸೇನ] ಕಳೆದು ಹೋದ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಿದ್ದ ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಕುಲ–ಪುರುಷ.

ಕಜ್ಜ ಅ(ಶೌ). ಸ್ತ್ರೀ: [**ಕನ್ಯಕಾ**] ಕನ್ಯೆ, ಕಮಾರಿ

ಕಜ್ಜಉಡ. ಪು: [**ದೇ**] ಅನರ್ಥ(ದೇ)

ಕಜ್ಜಮಾಣ. ವಿ: [**ಕ್ರಿಯಮಾಣ**] ಮಾಡಲ್ಪಡುತ್ತಿರುವಂಥದು

ಕಜ್ಜಲ: ನ: [**ಕಜ್ಜಲ**] ಕಾಡಿಗೆ, ಅಂಜನ, **–ಪ್ಪಭಾ. ಸ್ತ್ರೀ:** [**ಪ್ರಭಾ**] ಸುದರ್ಶನಾ ಎಂಬ ಹೆಸರಿನ ನೇರಿಳೆ ಮರದ ಉತ್ತರ ದಿಕ್ಕಿನಲ್ಲಿರುವ ಪುಷ್ಕರಿಣೀ(ಜೀವ)

ಕಜ್ಜಲಇಅ. ವಿ: [**ಕಜ್ಜಲಿತ**] ಕಾಡಿಗೆ ಹಚ್ಚಿರುವ, ಕಪ್ಪನೆಯ, ಕೃಷ್ಣ ವರ್ಣದ(ಪಾಅ)

ಕಜ್ಜಲಂಗೀ. ಸ್ತ್ರೀ: [ಕಜ್ಜಲಾಂಗೀ] ಕಾಡಿಗೆ– ಗೃಹ, ದೀಪದ ಮೇಲೆ ಇಟ್ಟಿರುವ ಕಾಡಿಗೆ ತುಂಬಿರುವ ಪಾತ್ರೆ (ಣಾಯಾ)

ಕಜ್ಜಲಾ. ಸ್ತ್ರೀ: [ಕಜ್ಜಲಾ] ಈ ಹೆಸರಿನ ಒಂದು ಪುಷ್ಕರಿಣಿ(ಇಕ)

ಕಜ್ಜಲಾವ. ಅಕ: [ವ್ರಡ್] ಮುಳುಗು, (ಆಚಾ)

ಕಜ್ಜವ}. ಪು: [ದೇ] ಮಲ, ಪುರೀಷಾ, ಹುಲ್ಲಿನ

ಕಜ್ಜವಯ}. ರಾಶಿ, ಕಸ

ಕಜ್ಜಿಯ. ವಿ: [ಕಾರ್ಯಿಕ] ಕಾರ್ಯಾರ್ಥಿ, ಪ್ರಯೋಜನದ ಅಪೇಕ್ಷಿ (ವವ)

ಕಜ್ಜೋವಗ. ಪು: [ಕಾರ್ಯೋಪಗ] ಎಂಬತ್ತೆಂಟು ಮಹಾ ಗ್ರಹಗಳಲ್ಲಿ ಒಂದು ಗ್ರಹದ ಹೆಸರು

ಕಜ್ಞಾಲ. ನ: [ದೇ] ಕೆರೆ, ಕಟ್ಟೆ ಮುಂತಾದ ಜಲಾಶಯಗಳಲ್ಲಿ ಕಟ್ಟುವ ಪಾಚಿ, ಶೈವಾಲ

ಕಟರಿ. (ಅಪ). ಅ: [ಕಟರೇ] ಆಶ್ಚರ್ಯ, ವಿಸ್ಮಯ, ಹೊಗಳಿಕೆ ಮುಂತಾದ ಅರ್ಥಗಳನ್ನು ಸೂಚಿಸುವ ಅವ್ಯಯ(ಧಮ್ಮ)

ಕಟಾರ(ಅಪ). ನ: [ದೇ] ಚೂರಿ, ಸಣ್ಣಕತ್ತಿ(ಹೇ)

ಕಟ್ಟ. ಸಕ: [ಕೃತ್] ಕತ್ತರಿಸು, ಗಾಯಗೊಳಿಸು(ರಂಭಾ)

ಕಟ್ಟ. ವಿ: [ಕೃತ್ತ] ಕತ್ತರಿಸಲ್ಪಟ್ಟ, ಕೊಯ್ಯಲ್ಪಟ್ಟ(ಉಪ)

ಕಟ್ಟ. ನ: [ಕಷ್ಟ] ದುಃಖ, ವಿ: ಕಷ್ಟವನ್ನುಂಟುಮಾಡುವ, ಕಷ್ಟಕಾರಕ, ಕಷ್ಟ ಕೊಡುವ(ಪಿಂಗ)

ಕಟ್ಟರ. ನ: [ದೇ] ಖಂಡ, ಒಂದು ಭಾಗ, ತುಂಡು

ಕಟ್ಟರ. ಪುಂನ: [ದೇ] ಪಳದ್ಯದಲ್ಲಿ ಹಾಕಿರುವ ತುಪ್ಪದ ವಡೆ, ಒಂದು ಆಹಾರ ಪದಾರ್ಥ

ಕಟ್ಟಾರಯ. ನ: [ದೇ] ಚೂರಿ, ಒಂದು ಶಸ್ತ್ರ

ಕಟ್ಟಾರೀ. ಸ್ತ್ರೀ: [ದೇ] ಚೂರಿ, ಸಣ್ಣಕತ್ತಿ (ದೇ)

ಕಟ್ಟಿಅ. ವಿ: [ಕರ್ತ್ರಿತ] ಕೊಯ್ಯಲ್ಪಟ್ಟ, ಕತ್ತರಿಸಲ್ಪಟ್ಟ(ಪಿಂಗ)

ಕಟ್ಟು. ಅ: [ಕರ್ತೃ] ಕರ್ತ, ಮಾಡುವವನು(ಷಡ್)

ಕಟ್ಟು. ಅ: [ಕೃತ್ವಾ] ಮಾಡಿ(ಣಾಯಾ)

ಕಟ್ಟೋರಗ. ಪು: [ದೇ] ಬಟ್ಟಲು,

ಕಟ್ಠ. ನ: [ಕಷ್ಟ] ದುಃಖ, ನೋವು, ವ್ಯಥೆ(ಕುಮಾ), ಪಾಪ,ವಿ: ಕಷ್ಟದಾಯಕ, ನೋವುಂಟುಮಾಡುವ, **–ಹರ.** ನ: [–ಗೃಹ] ಮರದಿಂದ ಮಾಡಿದ ನಾಲ್ಕು ಗೋಡೆಗಳ ಆವರಣ

ಕಟ್ಠ ನ: [ಕಾಷ್ಠ] ಕಟ್ಟಿಗೆ, ಮರ, ಪು: ರಾಜಗೃಹ ನಗರದ ನಿವಾಸಿಯಾಗಿದ್ದ ಹೆಸರಾಂತ ಶ್ರೇಷ್ಠಿ(ಆವಮ), **–ಕಮ್ಮಂತ.** ನ: [ಕರ್ಮಾಂತ] ಮರದ ಕಾರ್ಖಾನೆ, **–ಕರಣ.** ನ: [–ಕರಣ] ಶ್ಯಾಮನೆಂಬ ಗೃಹಸ್ಥನ ಒಂದು ಹೊಲದ ಹೆಸರು(ಕಪ್ಪ) **–ಕಾರ.** ಪು: [–ಕಾರ] ಮರಗೆಲಸದಿಂದ ಜೀವನ ನಡೆಸುವವನು. **–ಕೋಲಂಬ.** ಪು: [–ಕೋಲಂಬ] ಮರದ ಕೊಂಬೆಯ ಕೆಳಗಡೆ ಬಾಗುತ್ತಿರುವ ತುದಿಯ ಭಾಗ. **–ಖಾಯ.** ಪು: [–ಖಾದ] ಮರವನ್ನು ಕೊರೆಯುವ ಒಂದು ಜಾತಿಯ ಕೀಟ, **–ಖಾಯ.** ಪು: [–ಖಾದ] ಮರ ಕೊರೆಯುವ ಹುಳು(ಠಾ), **–ದಲ.** ನ: [–ದಲ] **ತೊಗರಿ ಬೇಳೆ, –ಪಾಉಯಾ.** ಸ್ತ್ರೀ: [–ಪಾದುಕಾ] ಮರದ ಪಾದುಕೆ, ಆವುಗೆ(ಅನು) **–ಪುತ್ತಲಿಯ** ಸ್ತ್ರೀ: [–ಪುತ್ತಲಿಕಾ] ಮರದ ಗೊಂಬೆ(ಸೂತ್ರದ ಗೊಂಬೆ) **–ಪೆಜ್ಞಾ.** ಸ್ತ್ರೀ: [–ಪೇಯಾ] ಹೆಸರು ಕಾಳಿನ ಕಟ್ಟು, ತುಪ್ಪದಲ್ಲಿ ಹುರಿದು ಮಾಡಿದ ಅನ್ನದ ಗಂಜಿ(ಉವಾ), **–ಮಹು.** ನ: [–ಮಧು] ಹೂವಿನ ಮಕರಂದ, **–ಮೂಲ.** ನ: [–ಮೂಲ] ಕಡಲೆ ಬೇಳೆ, ಹೆಸರು ಕಾಳನ್ನು ಬೇಯಿಸಿ ಮಾಡಿದ್ದು(ಬೃಹ), **–ಹಾರ.** ಪು: [–ಹಾರ] **ಮೂರು** ಇಂದ್ರಿಯಗಳ ಪ್ರಾಣಿ, ಕ್ಷುದ್ರ ಕೀಟ **–ಹಾರಯ.** ಪು: [–ಹಾರಕ] ಕಟ್ಟಿಗೆ ಮಾರುವವನು,

ಕಟ್ಠ. ವಿ: [ಕೃಷ್ಟ] ಉಳುಮೆ ಮಾಡಿದ(ಓಘ)

ಕಟ್ಠಣ. ನ: [ಕರ್ಷಣ] ಎಳೆಯುವಿಕೆ, ಸೆಳೆಯುವಿಕೆ (ಗಉಡ)

ಕಟ್ಠಹಾರ. ಪು: [ಕಾಷ್ಠಹಾರ] ಮರಗೆಲಸ ಮಾಡುವವನು

ಕಟ್ಠಾ. ಸ್ತ್ರೀ: [ಕಾಷ್ಠಾ] ದಿಕ್ಕು, ಹದ್ದು, ಎಲ್ಲೆ, ಸೀಮೆ, ಕಾಲದ ಒಂದು ಅಳತೆ; ಹದಿನೆಂಟು ನಿಮೇಷ, ಪ್ರಕರ್ಷ, ಹೇರಳ, ಅತಿಶಯ

ಕಟ್ಠಿಅ. ಪು: [ದೇ] ಆಳು, ಪ್ರತೀಹಾರಿ

ಕಟ್ಠಿಅ. ವಿ: [ಕಾಷ್ಠಿತ] ಮರದಿಂದ ಆವೃತವಾದ ಗೋಡೆ ಮುಂತಾದವು(ಆಚಾ)

ಕಟ್ಠಿಣ. 'ಕಢಿಣ' ಶಬ್ದವನ್ನು ನೋಡುವುದು

ಕಟ್ಠೇಅ. ವಿ: [ಕಾಷ್ಠೇಯ] **'ಕಟ್ಠಿಅ–ಕಾಷ್ಠಿತ'** ಶಬ್ದವನ್ನು ನೋಡುವುದು

ಕಟ್ಠೋಲ. **'ಕಟ್ಠ=ಕೃಷ್ಟ'** ಶಬ್ದವನ್ನು ನೋಡುವುದು

ಕಡ.ವಿ:[ದೇ] ಕ್ಷೀಣ, ದುರ್ಬಲ, ಮೃತವಾದ, ನಾಶವಾದ

ಕಡ. ಪು: [ಕಟ] ಆನೆಯ ಗಂಡಸ್ಥಲ, ಕೆನ್ನೆ, ಹುಲ್ಲು, ಚಾಪೆ, ಮರದ ಕೋಲು, ಕಟ್ಟಿಗೆ, ಒಂದು ಬಗೆಯ ಹುಲ್ಲು, ಬಿದಿರು, ಕೆತ್ತನೆ ಕೆಲಸ ಮಾಡಿದ ಮರ, **–ಚ್ಛೆಜ್ಜ.** ನ: [–ಚ್ಛೇದ್ಯ] ಒಂದು ಬಗೆಯ ಕಲಾ–ವಿಶೇಷ(ಔಪ), **–ತಡ.** ನ: [–ತಟ] ಸೈನ್ಯದ ಒಂದು ಭಾಗ(ಣಾಂಯಾ), **–ಪೂಯಣಾ.** ಸ್ತ್ರೀ: [–ಪೂತನಾ] ಒಂದು ವ್ಯಂತರಿ (ವಿಸೇ)

ಕಡ. ವಿ: [ಕೃತ] ಮಾಡಿದ್ದು, ಕಾರ್ಯ, ರಚಿಸಿದ(ಭಗ), ಪುಂನ: ಸತ್ಯ ಯುಗ, ಸಂಖ್ಯೆ ನಾಲ್ಕು, **–ಜುಗ.** ನ: [–ಯುಗ] ಆದಿ ಯುಗವಾದ ಸತ್ಯಯುಗ, ಉನ್ನತಿಯ ಕಾಲ, ಒಂದು ಯುಗಕ್ಕೆ ೭, ೨೮೦೦ ವರ್ಷಗಳು) **–ಜುಮ್ಮ.** ಪು: [–ಯುಗ್ಮ] ಸಮ ರಾಶಿ, (ನಾಲ್ಕರಿಂದ ಭಾಗಿಸಿದಾಗ ಶೇಷ ಏನೂ ಉಳಿಯದಿರುವುದು) **–ಜುಮ್ಮಕಡಜುಮ್ಮ.** ಪು: [–ಯುಗ್ಮಕೃತ ಯುಗ್ಮ] ಒಂದು ರಾಶಿ, **ಜುಮ್ಮಕಲಿಓಯ.** [–ಯುಗ್ಮಕಲ್ಯೋಜ] ಒಂದು ರಾಶಿ, **–ಜುಮ್ಮತೇಓಗ.** ಪು: [–ಯುಗ್ಮತ್ರ್ಯೋಜ] ಒಂದು ರಾಶಿ–ವಿಶೇಷ(ಭಗ), **–ಜುಮ್ಮದಾವರಜುಮ್ಮ.** ಪು: [–ಜುಮ್ಮದ್ವಾಪರಯುಗ್ಮ] ರಾಶಿ–ವಿಶೇಷ **–ಜೋಗಿ.** ವಿ: [–ಯೋಗಿನ್] ಮಾಡಿದ ಕ್ರಿಯೆ, ಗೀತಾರ್ಥ, ಜ್ಞಾನಿ(ಓಘ), ತಪಸ್ವಿ, **–ವಾಇ.** ಪು: [–ವಾದಿನ್] ಸೃಷ್ಟಿಯು ನೈಸರ್ಗಿಕವೆಂಬುದನ್ನು ಒಪ್ಪದೆ ಯಾರೋ ಸೃಷ್ಟಿಸಿದ್ದೆಂದು ವಾದಿಸುವವರು, ಜಗತ್ಕರ್ತೃತ್ವವಾದಿ (ಸೂಅ), **ಕಡಾಇ.** ಪು: [ಕಟಾದಿ] '–ಜೋಗಿ' ಶಬ್ದವನ್ನು ನೋಡುವುದು. **'ಕಯ=ಕೃತ'** ಶಬ್ದವನ್ನು ನೋಡುವುದು

ಕಡಅಲ್ಲ. ಪು: [ದೇ] ಬಾಗಿಲು ಕಾಯುವವನು, ದ್ವಾರಪಾಲಕ

ಕಡಅಲ್ಲೀ. ಸ್ತ್ರೀ: [ದೇ] ಕಂಠ, ಗಂಟಲು

ಕಡಇಯ. ಪು: [ದೇ] ಶಿಲ್ಪಿ, ಸ್ಥಪತಿ

ಕಡಇಅ. ವಿ: [ಕಟಕಿತ] ಬಳೆಯ ಹಾಗೆ ನಿಂತಿರುವ

ಕಡಇಲ್ಲ. ಪು: [ದೇ] ಬಾಗಿಲು ಕಾಯುವವನು, ದ್ವಾರಪಾಲಕ

ಕಡಂಗರ. ನ: [ಕಡಂಗರ] ಧಾನ್ಯದ ಮೇಲಿನ ಹೊಟ್ಟು,

ಕಡಂತ. ನ: [ದೇ] ಬೇರು, ಗೆಡ್ಡೆ, ಒನಕೆ(ದೇ)

ಕಡಂತರ. ನ: [ದೇ] ಮೊರವೇ ಮೊದಲಾದ ಉಪಕರಣಗಳು

ಕಡಂತರಿಅ. ವಿ: [ದೇ] ಸೀಳಲ್ಪಟ್ಟ, ನಾಶಗೊಳಿಸಲಾದ

ಕಡಂಬ. ಪು: [ಕಡಂಬ] ವಾದ್ಯ–ವಿಶೇಷ

ಕಡಂಬಾ. ಪುಂಸ್ತ್ರೀ: [ಕಡಂಬಾ] ವಾದ್ಯ–ವಿಶೇಷ

ಕಡಂಭುಅ. ನ: [ದೇ] ಕುಂಭಗ್ರೀವ ಎಂದು ಕರೆಯಲಾಗುವ ಪಾತ್ರೆ. ಕೊಡದ ಕಂಠಭಾಗ

ಕಡಕ. 'ಕಡಗ' ಶಬ್ದವನ್ನು ನೋಡುವುದು

ಕಡಕಡಾ. ಸ್ತ್ರೀ: [ಕಡಕಡಾ] ಅನುಕರಣ ಶಬ್ದ, ಕಡ, ಕಡ ಎಂದು ಶಬ್ದ ಮಾಡುವ

ಕಡಕಡಿಅ. ವಿ: [ಕಡಕಡಿತ] 'ಕಡಕಡ' ಎಂದು ಶಬ್ದ ಮಾಡಿದವನು, ಜೀರ್ಣವಾದ, ಸವೆದ, ಹಳೆಯ

ಕಡಕಡಿರ. ವಿ: [ಕಡಕಡಾಯಿತೃ] **'ಕಡಕಡ'** ಎಂದು ಶಬ್ದ ಮಾಡುವವನು

ಕಡಕ್ಕಿಯ. ನ: [ಕಡಕ್ಕಿತ] **ಕಡಕಡ** ಶಬ್ದ

ಕಡಕ್ಖ. ಪು: [ಕಟಾಕ್ಷ] ಕಡೆಗಣ್ಣ ನೋಟ, ಭಾವದಿಂದ ಕೂಡಿದ ನೋಟ

ಕಡಕ್ಖ. ಸಕ: [ಕಟಾಕ್ಷಯ್] ಕಡೆಗಣ್ಣಿನಿಂದ ನೋಡು

ಕಡಕ್ಖಣ. ನ: [ಕಟಾಕ್ಷಣ] ಕಡೆಗಣ್ಣ ನೋಟ ಬೀರುವುದು (ಭವಿ)

ಕಡಕ್ಖಿಅ. ವಿ: [ಕಟಾಕ್ಷಿತ] ಕಡೆಗಣ್ಣಿನಿಂದ ನೋಡಲ್ಪಟ್ಟವನು(ರಂಭಾ), ನ: ಕಡೆಗಣ್ಣ ನೋಟ

ಕಡಗ. ಪುಂ.ನ: [ಕಟಕ] ಬಳೆ, ಕೈಯ ಆಭರಣ(ಣಾಯಾ), ಯವನಿಕೆ, ಪರದೆ, ಪರ್ವತ ಅಥವಾ ಬೆಟ್ಟದ ಬುಡ, ಬೆಟ್ಟದ ತಪ್ಪಲು, ಬೆಟ್ಟದ ಮಧ್ಯಭಾಗ, ಬೆಟ್ಟದ ಸಮತಲ ಭಾಗ, ಬೆಟ್ಟದೊಂದು ಭಾಗ, ಸರ್ವಸೈನ್ಯ, ಸೇನೆಯ ಶಿಬಿರ, ಪು: ದೇಶ–ವಿಶೇಷ. **'ಕಡಯ'** ಶಬ್ದವನ್ನು ನೋಡುವುದು

ಕಡಚ್ಛು. ಸ್ತ್ರೀ: [ದೇ] ದೊಡ್ಡ ಸೌಟು, ದೊಡ್ಡ ಚಮಚ,

ಕಡಣ. ನ: [ಕದನ] ಸಂಹರಿಸುವುದು, ಹಿಂಸೆ, ನಾಶಮಾಡುವುದು, ಮರ್ದಿಸುವುದು, ಯುದ್ಧ, ಪಾಪ, ಆಕುಲತೆ

ಕಡಣ. ನ: [ಕಟನ] ಮನೆಯ ಮಾಡು(ಛಾವಣಿ), ಮನೆಯ ಮೇಲೆ ಛಾವಣಿ ಹಾಕುವುದು (ಗಚ್ಛ)

ಕಡಣಾ. ಸ್ತ್ರೀ: [ಕಟನಾ] ಮನೆಯ ಒಂದು ಭಾಗ

ಕಡಣೀ. ಸ್ತ್ರೀ: [ಕಟನೀ] ಒಡ್ಯಾಣ, ಡಾಬು

ಕಡತಲಾ. ಸ್ತ್ರೀ: [ದೇ] ಕಬ್ಬಿಣದ ಒಂದು ಆಯುಧ, ಉಪಕರಣ, ಮಚ್ಚು

ಕಡತ್ತರಿಅ. (ದೇ). **'ಕಡಂತರಿಅ'** ಶಬ್ದವನ್ನು ನೋಡುವುದು
ಕಡದ್ದರಿಅ. ವಿ: [ದೇ] ಕತ್ತರಿಸಲಾದ, ನ: ತೂತು ಮಾಡಲಾದ
ಕಡಪ್ಪ. ಪು: [ದೇ. **ಕಟಪ್ರ**] ಸಮೂಹ, ನಿಕರ, ಗುಂಪು, ಬಟ್ಟೆಯ ಒಂದು ಭಾಗ
ಕಡಮಡ. ಪುಂನ: [ದೇ] ಉದ್ವೇಗ
ಕಡಯ. ನ: [ಕಟಕ] ಕಬ್ಬಿನ ಕೋಲು
ಕಡಯ. **'ಕಡಗ'** ಶಬ್ದವನ್ನು ನೋಡುವುದು, ಸೈನ್ಯ, **ಪು:** ಕಾಶಿಯ ಒಬ್ಬ ರಾಜ–**ಕಡಯಾವಈ. ಸ್ತ್ರೀ:** [–**ಕಡಯಾವತೀ**] ದೊರೆ ಕಟಕನ ಒಬ್ಬ ಮಗಳು
ಕಡಯಡ. ಪು: [**ಕಡಕಡ**] ಕಡಕಡ ಶಬ್ದ(ಪಉಮ)
ಕಡಯಡಿಯ. ವಿ: [ದೇ] ತಿರುಗಿಸಲ್ಪಟ್ಟ,
ಕಡಸಕ್ಕರಾ. ಸ್ತ್ರೀ: [ದೇ] ಬಿದಿರಿನ ಕಡ್ಡಿ, ಬಿದಿರು ಕೋಲು
ಕಡಸಾರ. ನ: [ಕಟಸಾರ]ಮುನಿಯ ಒಂದು ಉಪಕರಣ
ಕಡಸೀ. ಸ್ತ್ರೀ: [ದೇ] ಶ್ಮಶಾನ, ಮಸಣ
ಕಡಹೂ. ಪು: [**ಕಟಭೂ**] ಒಂದು ಜಾತಿಯ ಮರ(ಬೃಹ)
ಕಡಾ. ಸ್ತ್ರೀ: [ದೇ] ಸರಪಳಿಯ ಕೊಂಡಿ
ಕಡಾರ. ನ: [ದೇ] ತೆಂಗಿನ ಕಾಯಿ, ತೆಂಗಿನ ಮರ
ಕಡಾರ. ಪು: [**ಕಡಾರ**] ತಾಮ್ರ ವರ್ಣ, ಕಂದು ಬೆರೆತ ಹಳದಿ ಬಣ್ಣ, ವಿ: ಕೆಂಪು ಬೆರೆತ ಹಳದಿ(=ಕಪಿಲ) ಬಣ್ಣದ, ಮಣ್ಣಿನ ಬಣ್ಣದ(ಪಾಅ)
ಕಡಾಲೀ. ಸ್ತ್ರೀ: [ದೇ. **ಕಟಾಲಿಕಾ**] ಕಡಿವಾಣ (ಅನು)
ಕಡಾಹ. ಪು: [**ಕಟಾಹ**] ಕಡಾಯಿ, ಕಬ್ಬಿಣದ ಭಾರೀ ಪಾತ್ರೆ, ಕೊಪ್ಪರಿಗೆ, ಹುರಿಯುವ ಬಾಣಲೆ, ಒಂದು ಜಾತಿಯ ಮರ, ಅಸ್ಥಿಪಂಜರದ ಮೂಳೆ, ಶರೀರದ ಒಂದು ಅವಯವ(ಪಣ್ಣ)
ಕಡಾಹಪಲ್ಲತ್ಥಿಅ. ನ: [ದೇ] ಎರಡೂ ಪಾರ್ಶ್ವಗಳನ್ನು ಅತ್ತ–ಇತ್ತ ತಿರುಗಿಸುವುದು
ಕಡಿ. ಸ್ತ್ರೀ: [**ಕಟಿ**] ಸೊಂಟ, ಟೊಂಕ, ವೃಕ್ಷಾದಿಗಳ ಮಧ್ಯಭಾಗ, –**ತಡ.** ನ: [–**ತಟ**] ಸೊಂಟ, ಮಧ್ಯಭಾಗ, –**ಪಟ್ಟಯ.** ನ: [–**ಪಟ್ಟಕ**] ಧೋತ್ರ, ಪಂಚೆ, –**ಪತ್ತ.** ನ: [–ಪತ್ರ] ಮರದ ಎಲೆ, ತೆಳ್ಳನೆಯ ಸೊಂಟ, –**ಯಲ.** ನ: [–ತಲ] **ಸೊಂಟ,** –**ಲ್ಲ.** ವಿ: [–**ಟೀಯ**] ಸೊಂಟಕ್ಕೆ ಸುತ್ತಿಕೊಳ್ಳುವ ವಸ್ತ್ರ, ಪಂಚೆ. –**ವಟ್ಟೀ.** ಸ್ತ್ರೀ: [–**ಪಟ್ಟೀ**] ಸೊಂಟಪಟ್ಟಿ, –**ವತ್ಥ.** ನ: [–**ವಸ್ತ್ರ**] ಸೊಂಟದಲ್ಲಿ ಧರಿಸುವ ವಸ್ತ್ರ, **ಸುತ್ತ.** ನ: [–**ಸೂತ್ರ**] ಸೊಂಟದ ಒಡ್ಯಾಣ, –**ಹತ್ಥ.ಪು:** [–**ಹಸ್ತ**] ಸೊಂಟದ ಮೇಲೆ ಇರಿಸಿರುವ ಕೈ
ಕಡಿ. ವಿ: [**ಕಟಿನ್**] ಚಾಪೆ ಹೊಂದಿರುವ
ಕಡಿಅ. ವಿ: [**ಕಟಿತ**] ಚಾಪೆಯಿಂದ ಮುಚ್ಚಲ್ಪಟ್ಟಿರುವ, ಚಾಪೆಯಿಂದ ಪರಿಷ್ಕೃತವಾದ(ಆಚಾ), ಒಂದು ಇನ್ನೊಂದರಲ್ಲಿ ಸೇರಿಕೊಂಡಿರುವ(ಔಪ)
ಕಡಿಅ. ವಿ: [ದೇ] ಸಂತೋಷಪಡಿಸಲಾದ, ತೃಪ್ತಿಪಡಿಸಲಾದ(ಷಡ್)
ಕಡಿಖಂಭ. ಪು: [ದೇ] ಸೊಂಟದ ಮೇಲೆ ಇಟ್ಟುಕೊಂಡಿರುವ ಕೈ, ಸೊಂಟಕ್ಕೆ ಮಾಡಿದ ಆಘಾತ
ಕಡಿಣ. ಪುಂನ: [ದೇ] ಒಂದು ಬಗೆಯ ತೃಣ.
ಕಡಿತ್ತ. **'ಕಲಿತ್ತ'** ಶಬ್ದವನ್ನು ನೋಡುವುದು
ಕಡಿಭಿಲ್ಲ. ನ: [ದೇ] ದೇಹದ ಒಂದು ಭಾಗದಲ್ಲಿ ಆಗುವ ಕುಷ್ಠ(ಬೃಹ)
ಕಡಿಲ್ಲ. ವಿ: [ದೇ] ಛಿದ್ರವಿಲ್ಲದ, ಸೊಂಟದಲ್ಲಿ ಧರಿಸುವ ಪಂಚೆ ಮುಂತಾದವು(ಪಾಅ), ಕಾಡು **ವಿ:** ಗಹನ, ನಿಬಿಡ, ದಟ್ಟ(ಉಪ), ಆಶೀರ್ವಾದ, **ಪು:** ಬಾಗಿಲು ಕಾಯುವವನು. ವಿರೋಧಿ, ಶತ್ರು(ಷಡ್), ಹುರಿಯುವ ಬಾಣಲೆ, ಕೊಪ್ಪರಿಗೆ, ಒಂದು ಉಪಕರಣ–ವಿಶೇಷ
ಕಡೀ. **'ಕಡಿ'** ಶಬ್ದವನ್ನು ನೋಡುವುದು
ಕಡು.}. **ಪು:** [**ಕಟುಕ**] ಕಹಿ, ಒಂದು ರಸ(ಠಾ),
ಕಡುಅ.} ವಿ: ಕಹಿರಸ ಹೊಂದಿರುವ, ಅನಿಷ್ಟ, ದಾರುಣ, ಭಯಂಕರ, ಕಠಿಣವಾದ, ಸ್ತ್ರೀ: ಒಂದು ವನಸ್ಪತಿ–ಕುಟಕೀ
ಕಡುಅ(ಶೌ). ಅ: [**ಕೃತ್ವಾ**] ಮಾಡಿ
ಕಡುಆಲ. ಪು: [ದೇ] ಘಂಟೆ, ಸಣ್ಣ ಮೀನು
ಕಡುಇಯ. ವಿ: [**ಕಟುಕಿತ**] ಕಹಿಗೊಳಿಸಲಾದ, ದೂಷಿತ (=ಅಶುದ್ಧಗೊಳಿಸಲ್ಪಟ್ಟ)(ಗಉಡ)
ಕಡುಇಯಾ. ಸ್ತ್ರೀ: [**ಕಟುಕೀ**] ಒಂದು ಬಳ್ಳಿ, ಕಟುಕರೋಹಿಣಿ
ಕಡುಚ್ಛಯ}. ಪುಂ.ಸ್ತ್ರೀ; **'ಕಡಚ್ಛು'** ಶಬ್ದವನ್ನು
ಕಡುಚ್ಛು}. ನೋಡುವುದು
ಕಡುಚ್ಛಯ}.

ಕಡುಯಾವಿಯ. ವಿ: [ದೇ] ಹೊಡೆತಕ್ಕೆ ಈಡಾದವನು, ದುಃಖಕ್ಕೆ, ನೋವಿಗೆ ಒಳಗಾದವನು, ಸೋಲಿಸಲ್ಪಟ್ಟ,ಭಾರೀವಿಪತ್ತಿನಲ್ಲಿ ಸಿಕ್ಕಿಕೊಂಡವನು
ಕಡೂಇದ.(ಶೌ).ವಿ: [ಕಟೂಕೃತ] ಖಾರಗೊಳಿಸಲಾದ, ಕಹಿಮಾಡಲಾದ
ಕಡೇವರ. ನ: [ಕಲೇವರ] ಶರೀರ, ದೇಹ
ಕಡ್ಢ. ಸಕ: [ಕೃಷ್] ಎಳೆ, ಉಳು, ನೇಗಿಲು ಹೊಡೆ(ಯುವುದ), ಓದು, ಉಚ್ಚರಿಸು
ಕಡ್ಢ. ಪು: [ಕರ್ಷ] ಸೆಳೆತ, ಆಕರ್ಷಣೆ(ಉತ್ತ)
ಕಡ್ಢಣ. ನ: [ಕರ್ಷಣ] ಸೆಳೆತ, ಆಕರ್ಷಣೆ(ಸುಪಾ), ವಿ: ಎಳೆಯುವವನು, ಆಕರ್ಷಕ(ಉಪ)
ಕಡ್ಢಣಯಾ. ಸ್ತ್ರೀ: [ಕರ್ಷಣತಾ] ಆಕರ್ಷಣೆ, ಸೆಳೆತ
ಕಡ್ಢಾವಿಯ. ವಿ: [ಕರ್ಷಿತ] ಸೆಳೆಯಲ್ಪಟ್ಟವನು, ಹೊರ ಹೊರಡಿಸಲ್ಪಟ್ಟವನು(ಭವಿ)
ಕಡ್ಢಿಅ. ವಿ: [ದೇ] ಹೊರಗೆ ಹೊರಟಿರುವ, ಹೊರಕ್ಕೆ ಬಂದಿರುವ
ಕಡ್ಢಿಯ. ವಿ: [ಕೃಷ್ಟ] ಸೆಳೆಯಲ್ಪಟ್ಟ, ಉಳಲ್ಪಟ್ಟ(ಪಣ್ಣ) ಓದಲಾದ, ಉಚ್ಚರಿಸಲ್ಪಟ್ಟ
ಕಡ್ಢೋಕಡ್ಢ. ನ: [ಕರ್ಷಾಪಕರ್ಷ] ಎಳೆದಾಟ, ಜಗ್ಗಾಟ(ಉತ್ತ)
ಕಢ. ಸಕ: [ಕ್ವಥ್] ಕುದಿಸು, ಕಾಯಿಸು, ಬಿಸಿಮಾಡು, ವ. ಕೃ–**ಕಢಮಾಣ**
ಕಢಕಢಕಢೇಂತ. ವಿ: [ಕಡಕಡಾಯಮಾನ] ಕಡಕಡ ಎಂದು ಶಬ್ದಮಾಡುವುದು(ಪಉಮ)
ಕಢಣ. ನ: [ಕ್ವಥನ] ಬೇಯಿಸುವುದು, ಕುದಿಸುವುದು
ಕಢಿಅ. ನ: [ದೇ] ಕಡಲೆ ಹಿಟ್ಟಿನ ಪಳದ್ಯ
ಕಢಿಅ. ವಿ: [ಕ್ವಥಿತ] ಕುದಿಸಿದ, ಚೆನ್ನಾಗಿ ಕಾಯಿಸಿದ,
ಕಢಿಆ. ಸ್ತ್ರೀ: [ದೇ] ಕಡಲೆ ಹಿಟ್ಟಿನಿಂದ ತಯಾರಿಸಿದ ಪದಾರ್ಥ, ಒಂದು ಖಾದ್ಯ
ಕಢಿಣ}. ವಿ: [ಕಠಿಣ] ಕಠಿಣ, ಕರ್ಕಶ, ಕಠೋರವಾದ,
ಕಢಿಣಗ}. ಪರುಷ, ನ: ಒಂದು ಜಾತಿಯ ಹುಲ್ಲು,ಎಲೆ
ಕಢೋರ. ವಿ: [ಕಠೋರ] ಕಠಿಣ, ಪರುಷ, ನಿಷ್ಠುರ, ಪು: ಈ ಹೆಸರಿನ ಒಬ್ಬ ರಾಜ
ಕಣ. ಸಕ: [ಕ್ವಣ್] ಶಬ್ದಮಾಡು, –ಕಣಇ
ಕಣ. ಸಕ: [ಕಣ್] ಶಬ್ದ ಮಾಡು
ಕಣ. ಪು: [ಕಣ] ಕಣ, ಬಹಳ ಸೂಕ್ಷ್ಮಾಂಶ, ಧಾನ್ಯದ ಒಂದು ಅಂಶ, ಕಾಳಿ ನ: ಕಿರು ನುಚ್ಚು, ಜೀರಿಗೆ, ಪು: ಒಂದು ಮ್ಲೇಚ್ಛ ದೇಶ, ಗ್ರಹ–ವಿಶೇಷ, ಗ್ರಹದ ಅಧಿಷ್ಠಾತೃ ದೇವ, ಅನ್ನ(ಉತ್ತ), ಕಣಕ, ರೆವೆ. ಬಿಂದು, –ಇಅ. ವಿ: [–ವತ್] ಬಿಂದುವಿನಿಂದ ಕೂಡಿರುವ, **–ಕುಂಡಗ.** ಪು: [**–ಕುಂಡಕ**] ಅನ್ನದಿಂದ ತಯಾರಿಸಲಾದ ಒಂದು ಖಾದ್ಯ, **–ಪೂಪಲಿಯಾ.** ಸ್ತ್ರೀ: [**–ಪೂಪಲಿಕಾ**] ಒಂದು ಖಾದ್ಯ(ಆಚಾ), ಗೋಧಿ ಹಿಟ್ಟಿನಿಂದ ತಯಾರಿಸಲಾದ ಒಂದು ಭಕ್ಷ್ಯ. **–ಭಕ್ಖ.** ಪು: [**–ಭಕ್ಷ**] ವೈಶೇಷಿಕ ಮತದ ಪ್ರವರ್ತಕನಾದ ಒಬ್ಬ ಋಷಿ, –ವಿತ್ತಿ. ಸ್ತ್ರೀ: [**–ವೃತ್ತಿ**] ಭಿಕ್ಷೆ(ಸುಪಾ), **–ವಿಯಾಣಗ.** ಪು: [–ವಿತಾನಕ] 'ಕಣಗ–ವಿಯಾಣಗ' ಶಬ್ದವನ್ನು ನೋಡುವುದು. **–ಸಂತಾಣಯ.** ಪು: [**–ಸಂತಾನಕ**] '**ಕಣಗ–ಸಂತಾಣಯ**' ಶಬ್ದವನ್ನು ನೋಡುವುದು. **ಕಣಾದ.** ಪು: [**ಕಣಾದ**] **ವೈಶೇಷಿಕ ಮತದ ಪ್ರವರ್ತಕ ಋಷಿ**(ವಿಸೇ) **ಕಣಾಯಣ್ಣ.** ವಿ: [**ಕಣಾಕೀರ್ಣ**] ಬಿಂದು ಹೊಂದಿರುವ(ಪಾಅ)
ಕಣ. ಪು: [ಕ್ವಣ] ಶಬ್ದ (ಉಪ)
ಕಣಇಕೇಉ. ಪು: [ಕನಕಿಕೇತು]ಈ ಹೆಸರಿನ ಒಬ್ಬ ರಾಜ
ಕಣಇಪುರ. ನ: [ಕನಕಿಪುರ] ಜನಕ ಮಹಾರಾಜನ ತಮ್ಮ ಕನಕನ ರಾಜಧಾನಿ
ಕಣಇರ. ಪು: [ಕರ್ಣಿಕಾರ] ಕಕ್ಕೆ ಗಿಡ– ಒಂದು ವನಸ್ಪತಿ, ಬೊಟ್ಟಗಣಗಿಲೆ ಗಿಡ
ಕಣಇಲ್ಲ. ಪು: [ದೇ] ಗಿಳಿ(ಪಾಅ)
ಕಣಇ. ಸ್ತ್ರೀ: [ದೇ] ಬಳ್ಳಿ
ಕಣಂಗರ. ನ: [ಕನಂಗರ] ಕಲ್ಲಿನ ಒಂದು ವಿಧದ ಆಯುಧ
ಕಣಕಣ. ಪು: [ಕಣಕಣ] ಕಣಕಣ ಶಬ್ದ
ಕಣಕಣಕಣ. ಅಕ: [ದೇ] ಕಣಕಣ ಎಂದು ಶಬ್ದ ಮಾಡುವುದು
ಕಣಕಣಗ. ಪು: [ಕನಕನಕ] ಒಂದು ಗ್ರಹ, ಗ್ರಹದ ಅಧಿಷ್ಠಾತೃ ದೇವ
ಕಣಕ್ಕಣಿಅ. ವಿ: [ಕ್ವಣಕ್ವಣಿತ] ಕಣಕಣ ಶಬ್ದ ಹೊಂದಿರುವ, ವೀಣೆ ಮೊದಲಾದ ತಂತೀ ವಾದ್ಯಗಳ ಧ್ವನಿ
ಕಣಖಲ. ನ: [ದೇ] ಉದ್ಯಾನ–ವಿಶೇಷ
ಕಣಗ. '**ಕಣ**' ಶಬ್ದವನ್ನು ನೋಡುವುದು

ಕಣಗ. ವಿ: [ಕಾನಕ] ಚಿನ್ನದ ರಸ ದೊರೆತಿರುವ. **–ಪಟ್ಟ.** ವಿ: [–ಪಟ್ಟ] ಚಿನ್ನದ ಪಟ್ಟಿ ಉಳ್ಳ

ಕಣಗ. ಪು: [ಕನಕ] ಒಂದು ಗ್ರಹ. ಗ್ರಹದ ಅಧಿಷ್ಠಾತೃ ದೇವತೆ(ಠಾ), ಆಕಾಶದಿಂದ ಬೀಳುವ ರೇಖೆಯಿಂದ ಕೂಡಿದ ಜ್ಯೋತಿರಾಶಿ(ಓಘ), ಬಿಂದು, ಸಲಾಕೆ, ಘೃತವರ ದ್ವೀಪದ ಅಧಿಪತಿ–ದೇವ, ಬಿಲ್ವದ ಮರ, ನ: ಚಿನ್ನ, **–ಕಂತ.** ವಿ: [–**ಕಾಂತ**] ಬಂಗಾರದ ಹಾಗೆ ಹೊಳೆಯುವ, ಪು: ಒಬ್ಬ ದೇವ, **–ಕೂಡ.** ನ: [–**ಕೂಟ**] ಪರ್ವತದ ಶಿಖರ, ಬಂಗಾರದ ಶಿಖರವುಳ್ಳ ಪರ್ವತ (ಜೀವ)–**ಕೇಉ.** ಪು: [–**ಕೇತು**] **ಈ ಹೆಸರಿನ ಒಬ್ಬ ರಾಜ(ಣಾಯಾ), –ಗಿರಿ.** ಪು: [–ಗಿರಿ] **ಮೇರು ಪರ್ವತ, ಬಂಗಾರ ಭರಿತ ಪರ್ವತ. □ಜ್ಝಯ.** ಪು: [–ಧ್ವಜ] ಈ ಹೆಸರಿನ ಒಬ್ಬ ರಾಜ. **–ಪುರ.** ನ: [–**ಪುರ**] ಒಂದು ನಗರ, **–ಪ್ಪಭ.** ಪು: [–**ಪ್ರಭ**] **ಒಬ್ಬ ದೇವ, –**ಪ್ಪಭಾ. ಸ್ತ್ರೀ: [–**ಪ್ರಭಾ**] ಒಬ್ಬ ದೇವಿ. **'ಜ್ಞಾತಾ ಧರ್ಮ ಸೂತ್ರ'** ದ **ಅಧ್ಯಯನ(ಣಾಯಾ), –**ಫುಲ್ಲಿಅ. ನ: [–**ಪುಷ್ಪಿತ**] ಚಿನ್ನದ ಹೂಗಳನ್ನು ಅಳವಡಿಸಿರುವ ವಸ್ತ್ರ. **–ಮಾಲಾ.** ಸ್ತ್ರೀ: [–**ಮಾಲಾ**] ಒಬ್ಬ ವಿದ್ಯಾಧರನ ಮಗಳು, ತನ್ನ ಹೆಸರಿನಿಂದ ಖ್ಯಾತಳಾದ ಸಾಧ್ವಿ. **–ರಹ.** ಪು: [–ರಥ] ಈ ಹೆಸರಿನ ಒಬ್ಬ ರಾಜ. **–ಲಯಾ.** ಸ್ತ್ರೀ: [–**ಲತಾ**] ಚಮರೇಂದ್ರನ ಸೋಮನೆಂಬ ಹೆಸರಿನ ಲೋಕಪಾಲ ದೇವನ ಒಬ್ಬ ಅಗ್ರ ಮಹಿಷಿ(ಠಾ). **–ವಿಯಾಣಗ.** ಪು: [–ವಿತಾನಕ] ಒಂದು ಗ್ರಹ, **ಗ್ರಹದ ಅಧಿಷ್ಠಾತೃ ದೇವ, –ಸಂತಾಣಗ.** ಪು: [–**ಸಂತಾನಕ**] ಗ್ರಹ–ವಿಶೇಷ, ಗ್ರಹದ ಅಧಿಷ್ಠಾತೃ **ದೇವ. ಕಣಗಾಗಾವಲಿ.** ಸ್ತ್ರೀ: [–**ಕನಕಾವಲಿ**] ಚಿನ್ನದ ಒಡವೆ, ಚಿನ್ನದ ಮಣಿಗಳಿಂದ ಮಾಡಿದ ಒಡವೆ. ಒಂದು ಬಗೆಯ ತಪಸ್ಸು, ಒಂದು ದ್ವೀಪ, ಸಮುದ್ರ–ವಿಶೇಷ(ಜಿವ). **ಕಣಗಾವಲಿಪವಿಭತ್ತಿ.** ಸ್ತ್ರೀ: [**ಕನಕಾವಲಿಪ್ರವಿಭಕ್ತಿ**] ನಾಟ್ಯದ ಒಂದು ಪ್ರಕಾರ, **ಕಣಗಾವಲಿಭದ್ದ.** ಪು: [**ಕನಕಾವಲಿಭದ್ರ**] ಕನಕಾವಲಿ ದ್ವೀಪದ ಒಬ್ಬ ಅಧಿಷ್ಠಾತೃ ದೇವ (ಜೀವ) **–ವಲಿಮಹಾಭದ್ದ.** ಪು: [–**ವಲಿಮಹಾಭದ್ರ**] ಕನಕಾವಲಿವರ ಎಂಬ ಹೆಸರಿನ ಸಮುದ್ರದ ಒಬ್ಬ ಅಧಿಷ್ಠಾತೃ ದೇವ(ಜೀವ), **ಕಣಗಾವಲಿಮಹಾವರ.** ಪು: [**ಕನಕಾವಲಿಮಹಾವರ**] ಕನಕಾವಲಿವರ ಎಂಬ **ಹೆಸರಿನ ಸಮುದ್ರದ ಅಧಿಷ್ಠಾತೃ ದೇವ, ಕಣಗಾವಲಿವರಭದ್ದ.** ಪು: [**ಕಕಾವಲಿವರಭದ್ರ**] ಕನಕಾವಲಿವರ ಎಂಬ ದ್ವೀಪದ ಒಬ್ಬ ಅಧಿಪತಿ ದೇವ, **ಕಣಗಾವಲಿವರಮಹಾಭದ್ದ.** ಪು: [**ಕನಕಾವಲಿವರಮಹಾಭದ್ರ**] ಕನಕಾವಲಿವರ ಎಂಬ ಹೆಸರಿನ ದ್ವೀಪದ ಒಬ್ಬ ಅಧಿಷ್ಠಾತೃ ದೇವ. **ಕಣಗಾವಲಿವರೋಭಾಸಮಹಾಭದ್ದ.** ಪು: [**ಕನಕಾವಲಿವರಾವಭಾಸಮಹಾವಲಿಮಹಾಭದ್ರ**] ಕನಕನಕಾವಲಿವರಾಭಾಸ ದ್ವೀಪದ ಒಬ್ಬ ಅಧಿಷ್ಠಾತೃದೇವ.**ಕಣಗಾವಲಿವರೋಭಾಸಮಹಾವರ.** ಪು: [**ಕನಕಾವಲಿವರಾವಭಾಸಮಹಾವರ**] ಕನಕಾವಲಿವರಾವಭಾಸ –ಸಮುದ್ರದ ಒಬ್ಬ ಅಧಿಷ್ಠಾತೃ ದೇವ. **ಕಣಗಾವಲಿವರೋಭಾಸವರ.** ಪು: [ಕನಕಾವಲಿವರಾವಭಾಸವರ] **ಕನಕಾವಲಿವರಾವಭಾಸ** – ಸಮುದ್ರದ ಒಬ್ಬ ಅಧಿಷ್ಠಾತೃದೇವ. **ಕಣಗಾವಲಿ.** ಸ್ತ್ರೀ: [ಕನಕಾವಲೀ] **'ಕಣಗಾವಲಿ'** ಶಬ್ದದ ಒಳ್ಳೆಯ ಮತ್ತು ಕೆಟ್ಟ ಅರ್ಥವನ್ನು ನೋಡುವುದು. **'ಕಣಯ=ಕನಕ'** ಶಬ್ದವನ್ನು ನೋಡುವುದು.

ಕಣಗಸತ್ತರಿ. ಸ್ತ್ರೀ: [**ಕನಕಸಪ್ತತಿ**] ಒಂದು ಪ್ರಾಚೀನ ಜೈನೇತರ ಶಾಸ್ತ್ರ

ಕಣಗಾ. ಸ್ತ್ರೀ: [ಕನಕಾ] ಭೀಮನೆಂಬ ರಾಕ್ಷಸೇಂದ್ರನ ಒಬ್ಬ ಅಗ್ರ ಮಹಿಷಿ. ಚಮರೇಂದ್ರನ ಸೋಮನೆಂಬ ಹೆಸರಿನ ಲೋಕಪಾಲನ ಒಬ್ಬ ಅಗ್ರ ಮಹಿಷಿ(ಠಾ), 'ಣಾಯಾ ಧಮ್ಮ ಕಹಾ' ಸೂತ್ರದ ಒಂದು ಅಧ್ಯಯನ(ಣಾಯಾ), ಕ್ಷುದ್ರ ಜಂತುವಿನ ಒಂದು ಜಾತಿ, ನಾಲ್ಕು ಇಂದ್ರಿಯಗಳ ಜೀವ–ವಿಶೇಷ

ಕಣಗುತ್ತಮಾ. ಪು: [ಕನಕೋತ್ತಮ] ಈ ಹೆಸರಿನ ಒಬ್ಬ ದೇವ

ಕಣಂಯು. ಪು: [ದೇ] ಹೂವುಗಳನ್ನು ಒಟ್ಟು ಗೂಡಿಸುವುದು, ಪುಷ್ಪಾಪಚಯ, ಬಾಣ,

ಕಣಯ. **'ಕಣಗ= ಕನಕ'** ಶಬ್ದವನ್ನು ನೋಡುವುದು. ಪು: ಜನಕ ಮಹಾರಾಜನ ಒಬ್ಬ ತಮ್ಮನ ಹೆಸರು. ಈ ಹೆಸರಿನ ರಾವಣನ ಒಬ್ಬ ಸೈನಿಕ(ಪಉಮ). ಒಂದು ವೃಕ್ಷ, ನ: ಒಂದು ಜಾತಿಯ ಛಂದಸ್ಸು.

–ಪವ್ವಯ. ಪು: [–ಪರ್ವತ] 'ಕಣಗ–ಗಿರಿ' ಶಬ್ದವನ್ನು ನೋಡುವುದು. –ಮಯ. ವಿ: [–ಮಯ] ಚಿನ್ನದಿಂದ ಮಾಡಿದ, ಕಣಯಾಭ. ನ: [ಕನಕಾಭ] ವಿದ್ಯಾಧರರ ಒಂದು ನಗರ. –ಕಣಯಾಲೀ. ಸ್ತ್ರೀ: [–ಕನಕಾಲೀ] ಮನೆಯ ಒಂದು ಭಾಗ. ಕಣಯಯಾವಲೀ. ಸ್ತ್ರೀ: [ಕನಕಾವಲೀ] 'ಕಣಗಾವಲೀ' ಶಬ್ದವನ್ನು ನೋಡುವುದು, ಒಬ್ಬ ರಾಜಪತ್ನಿ(ಪಉಮ)

ಕಣಯಂದೀ. ಸ್ತ್ರೀ: [ದೇ] ಒಂದು ಜಾತಿಯ ಮರ; ಪಾದರಿ ಮರ

ಕಣವಿಆಣಯ.ಪು: [ಕಣವಿತಾನಕ] 'ಕಣಗವಿಯಾಣಗ' ಶಬ್ದವನ್ನು ನೋಡುವುದು

ಕಣವೀ. ಸ್ತ್ರೀ: [ದೇ] ಕನ್ಯೆ

ಕಣವೀರ. ಪು: [ಕರವೀರ] ಮತ್ತೀಮರ, ಗನ್ನೇರಳೆ ಗಿಡ, ಕೆಂಪು ಅಥವಾ ಹಳದಿ ಹೂವಿನ ಗಿಡ, ನ: ಅದರ ಹೂವು

ಕಣಿ. ಪುಂ.ಸ್ತ್ರ: [ದೇ] ಬುದ್ಧಿಗೆ ಹೊಳೆಯುವುದು, ಪ್ರಕಾಶಿಸುವುದು, ಸ್ಫೂರ್ತಿ(ಪಾಅ)

ಕಣಿಆರ. 'ಕಣ್ಣಿಆರ' ಶಬ್ದವನ್ನು ನೋಡುವುದು

ಕಣಿಆರಿಅ. ವಿ: [ದೇ] ಒಕ್ಕಣ್ಣಿನಿಂದ ನೋಡಲ್ಪಟ್ಟ, ನ: ಒಕ್ಕಣ್ಣಿನಿಂದ ನೋಡುವುದು

ಕಣಿಕಾ. ಸ್ತ್ರೀ: [ಕಣಿಕಾ] ಗೋಧಿ ಹಿಟ್ಟು, ರೊಟ್ಟಿ ಮಾಡಲು ನೀರಿನಲ್ಲಿ ನೆನೆಸಿದ ಗೋಧಿ ಹಿಟ್ಟು=ಕಣಕ

ಕಣಿಕ್ಕ. ವಿ: [ಕಣಿಕ್ಕ] ಒಂದು ಜಾತಿಯ ಮೀನು(ಜೀವ)

ಕಣಿಕ್ಕಾ. 'ಕಣಿಕಾ' ಶಬ್ದವನ್ನು ನೋಡುವುದು

ಕಣಿಟ್ಠ. ವಿ: [ಕನಿಷ್ಠ] ಲಘುವಾದ, ಚಿಕ್ಕದಾದ, ನಿಕೃಷ್ಟವಾದ, ಅಲ್ಪವಾದ(ರಂಭಾ)

ಕಣಿಯ. ನ: [ಕಣಿತ] ಆರ್ತ ಸ್ವರ, ನೋವಿನಿಂದ ಕೂಗಿಕೊಳ್ಳುವ ಧ್ವನಿ,

ಕಣಿಯ.} 'ಕಣಿಕಾ' ಶಬ್ದವನ್ನು ನೋಡುವುದು.

ಕಣಿಯಾ.}ಅಕ್ಕಿಯ ಚೂರು. **–ಕುಂಡಯ.** 'ಕಣ–ಕುಂಡಗ' ಶಬ್ದವನ್ನು ನೋಡುವುದು

ಕಣಿಯಾ. ಸ್ತ್ರೀ: [ಕ್ವಣಿತಾ] ವೀಣೆ ಮೊದಲಾದ ತಂತೀವಾದ್ಯಗಳ ನಾದ

ಕಣಿರ. ವಿ: [ಕ್ವಣಿತೃ] ನಾದ ಹೊರಡಿಸುವವನು

ಕಣಿಲ್ಲ. ನ: [ಕನಿಲ್ಯ] ಒಂದು ನಕ್ಷತ್ರ–ವಿಶೇಷದ ಗೋತ್ರ

ಕಣಿಲ್ಲಿಕಾ. ಸ್ತ್ರೀ: [ಕನಿಷ್ಠಿಕಾ] ಕಿರುಬೆರಳು

ಕಣಿಸ. ನ: [ಕಣಿಶ] ಧಾನ್ಯದ ಅಗ್ರ ಭಾಗ, ಅಕ್ಕಿಯ ಮೊನೆ (ದೇ)

ಕಣಿಸ. ನ: [ದೇ] ಪೈರಿನ ಅಥವಾ ಸಸ್ಯದ ತುದಿ

ಕಣೀಅ}. ವಿ: [ಕನೀಯಸ್] ಚಿಕ್ಕದು, ಕಿರಿಯ, ಅಲ್ಪ,

ಕಣೀಅಸ}. ಕನಿಷ್ಠ

ಕಣೀಣಿಗಾ. ಸ್ತ್ರೀ: [ಕನೀನಿಕಾ] ಕಣ್ಣಿನ ಕಪ್ಪುಗುಡ್ಡೆ, ಕೈಯ ಕಿರುಬೆರಳು

ಕಣೀರ. 'ಕಣೇರ' ಶಬ್ದವನ್ನು ನೋಡುವುದು

ಕಣುಯ. ನ: [ಕಣುಕ] ಚರ್ಮವೇ ಮೊದಲಾದವುಗಳ ಅವಯವ(ಆಚಾ)

ಕಣೂಂಯಾ. 'ಕಣಿಂಯಾ=ಕಣಿಕಾ' ಶಬ್ದವನ್ನು ನೋಡುವುದು

ಕಣೆಡ್ಡಿಆ. ಸ್ತ್ರೀ: [ದೇ] ಗುಲಗಂಜಿ [ದೇ]

ಕಣೇರ. 'ಕಣ್ಣಿಆರ' ಶಬ್ದವನ್ನು ನೋಡುವುದು

ಕಣೇರು.} ಸ್ತ್ರೀ: [ಕರೇಣು] ಹೆಣ್ಣಾನೆ, ಕರಿಣಿ

ಕಣೇರುಯಾ}.

ಕಣೋವಅ. ನ: [ದೇ] ಕಾಯಿಸಿದ ನೀರು, ಎಣ್ಣೆ ಇತ್ಯಾದಿ(ದೇ)

ಕಣ್ಣ. ಪು: [ಕನ್ಯಾ] ಕನ್ಯಾರಾಶಿ(ಪಉಮ)

ಕಣ್ಣ. ಪು: [ಕಣ್ವ] ಪ್ರಖ್ಯಾತನಾದ ಕಣ್ವ ಮುನಿ

ಕಣ್ಣ. ಪು: [ಕರ್ಣ] ಕೋಟಿ–ಭಾಗ, ಅಗ್ರ ಭಾಗ, ಒಂದು ಮ್ಲೇಚ್ಛ ಜಾತಿ

ಕಣ್ಣ. ಪುಂ.ನ: [ಕರ್ಣ] ಕಿವಿ, ಶ್ರೋತ್ರೇಂದ್ರಿಯ, **ಪು:** ಅಂಗ ದೇಶದ ಈ ಹೆಸರಿನ ಒಬ್ಬ ರಾಜ, ಧರ್ಮರಾಯನ ಅಣ್ಣ(ಣಾಯಾ), **–ಉರ. –ಊರ.** ನ: [–ಪೂರ] ಕಿವಿಯ ಆಭರಣ, **–ಗಇ.** ಸ್ತ್ರೀ: [–ಗತಿ] ಮೇರು ಪರ್ವತಕ್ಕೆ ಸಂಬಂಧಿಸಿದ ಒಂದು ಹುರಿ. **–ಜಯಸಿಂಹದೇವ. ಪು:** [–ಜಯಸಿಂಹದೇವ] ಗುಜರಾತಿನ ಹನ್ನೆರಡನೇ ಶತಮಾನದ ಒಬ್ಬ ಯಶಸ್ವೀ ದೊರೆ. **–ದೇವ. ಪು:** [–ದೇವ] ವಿಕ್ರಮಶಕೆ ಹದಿಮೂರನೇ ಶತಮಾನದ ಒಬ್ಬ ಸೌರಾಷ್ಟ್ರ ದೇಶದ ದೊರೆ. **–ಧಾರ.** ಪು: [–ಧಾರ] ನಾವಿಕ(ಣಾಯಾ). **–ಪಾಉರಣ.** ಪು: [–ಪ್ರಾವರಣ] ಈ ಹೆಸರಿನ ಒಂದು ದ್ವೀಪ. ಆದ್ವೀಪದ ನಿವಾಸಿ, **–ಪಾವರಣ.** '–ಪಾವರಣ. 'ಪಾಉರಣ' ಶಬ್ದವನ್ನು

ನೋಡುವುದು. **–ಪೋಢ.** ನ: [–ಪೀಠ] ಒಂದು ಬಗೆಯ ಕಿವಿಯ ಆಭರಣ. **–ಪೂರ.** 'ಉರ' ಶಬ್ದವನ್ನು ನೋಡುವುದು. **–ರವಾ.** ಸ್ತ್ರೀ: [–ರವಾ] ಒಂದು ನದಿ(ಪಉಮ). **–ವಾಲಿಯಾ.** ಸ್ತ್ರೀ: [–ವಾಲಿಕಾ] ಕಿವಿಯ ಮೇಲ್ಭಾಗದಲ್ಲಿ ಧರಿಸುವ ಒಂದು ಬಗೆಯ ಆಭರಣ(ಔಪ). **–ವೇಹಣಗ.** ನ: [–ವೇಧನಕ] ಕಿವಿ ಚುಚ್ಚುವ ಹಬ್ಬ, ಕರ್ಣವೇಧೋತ್ಸವ(ಔಪ) **–ಸಕ್ಕುಲೀ.** ಸ್ತ್ರೀ: **[–ಶಷ್ಕುಲೀ] ಕಿವಿಯ ತೂತು, ಕಿವಿಯ ಉದ್ದ. –ಸೋಹಣ.** ನ: [–ಶೋಧನ] ಕಿವಿಯ ಕೊಳೆಯನ್ನು(ಕುಗ್ಗಿ) ತೆಗೆವ ಒಂದು ಉಪಕರಣ. **–ಹಾರ.** ಪು: [–ಧಾರ] '–ಧಾರ' ಶಬ್ದವನ್ನು ನೋಡುವುದು. 'ಕನ್ನ' ಶಬ್ದವನ್ನು ನೋಡುವುದು

ಕಣ್ಣಆರ. 'ಕಣ್ಣಿಆರ' ಶಬ್ದವನ್ನು ನೋಡುವುದು

ಕಣ್ಣಉಜ್ಜ. ಪು: [ಕಾನ್ಯಕುಬ್ಜ] ಒಂದು ದೇಶ. ನ: ಆ ದೇಶದ ಪ್ರಧಾನ ನಗರ.

ಕಣ್ಣಲೋಯಣ. ಪುಂನ: [ಕರ್ಣಲೋಚನ] **'ಕಣ್ಣಿಲಾಯಣ'** ಶಬ್ದವನ್ನು ನೋಡುವುದು

ಕಣ್ಣಲ್ಲ. ಪುಂನ: [ಕರ್ಣಲ] **ಮೇಲಿನ** ಶಬ್ದವನ್ನು ನೋಡುವುದು

ಕಣ್ಣಂಬಾಲ. ನ: [ದೇ] ಕರ್ಣಾಭರಣ; ಕುಂಡಲವೇ ಮೊದಲಾದವು

ಕಣ್ಣಗಾ. 'ಕನ್ನಗಾ' ಶಬ್ದವನ್ನು ನೋಡುವುದು

ಕಣ್ಣಚ್ಚುರೀ. ಸ್ತ್ರೀ: [ದೇ] ಹಲ್ಲಿ (ದೇ)

ಕಣ್ಣಡಯ(ಅಪ). 'ಕಣ್ಣ' ಶಬ್ದವನ್ನು ನೋಡುವುದು

ಕಣ್ಣಲ(ಅಪ). ವಿ: [ಕರ್ಣಾಟ] ಕರ್ಣಾಟಕ ದೇಶ, ವಿ: ಆ ದೇಶದ ನಿವಾಸಿ(ಪಿಂಗ)

ಕಣ್ಣಸ. ವಿ: [ಕನ್ಯಸ] ಅಧಮ, ಕೆಳಮಟ್ಟದ

ಕಣ್ಣಸ್ಸರಿಯ. ವಿ: [ದೇ] ಒಕ್ಕಣ್ಣಿನಿಂದ ನೋಡಲ್ಪಟ್ಟ, ಒಕ್ಕಣ್ಣಿನಿಂದ ನೋಡುವುದು

ಕಣ್ಣಾ. ಸ್ತ್ರೀ: [ಕನ್ಯಾ] ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ಕನ್ಯಾ ರಾಶಿ, ಕನ್ಯೆ, ಅವಿವಾಹಿತ ಹುಡುಗಿ, ಕುಮಾರಿ, **–ಚೋಲಯ.** ನ: **[–ಚೋಲಕ] ಒಂದು** ಬಗೆಯ ಧಾನ್ಯ–ಣಯ. ನ: [–ನಯ] ಚೋಳ ದೇಶದ ಒಂದು ಪ್ರಮುಖ ನಗರ, **–ಲಿಯ.** ನ: [–ಲೀಕ] ಕನ್ಯೆಯ ವಿಷಯದಲ್ಲಿ ಹೇಳುವ ಸುಳ್ಳು

ಕಣ್ಣಾಆಸ. ನ: [ದೇ] ಕರ್ಣಾಭರಣ, ಕುಂಡಲಿ ಮುಂತಾದವು

ಕಣ್ಣಾಇಂಧಣ. ನ: [ದೇ] ಕರ್ಣಾಭರಣ, ಕುಂಡಲಿ ಮುಂತಾದವು

ಕಣ್ಣಾಡ. ಪು: [ಕರ್ಣಾಟ] ಈಗ ಕರ್ಣಾಟಕವೆಂದು ಹೆಸರಾಗಿರುವ ನಾಡು, ವಿ: ಆ ದೇಶದಲ್ಲಿ ಹುಟ್ಟಿದವ, ಅಲ್ಲಿಯ ನಿವಾಸಿ

ಕಣ್ಣಾಸ. ಪು: [ದೇ] ಅಂಚು, ಕೊನೆ, ಕಡೆಯ ಭಾಗ

ಕಣ್ಣಿ. ಪು: [ಕರ್ಣಿ] ಒಂದು ನರಕ–ಸ್ಥಾನ

ಕಣ್ಣಿಆ. ಸ್ತ್ರೀ: [ಕರ್ಣಿಕಾ] ಕಮಲದ ಬೀಜಕೋಶ, ಅಸ್ತ್ರ (ಅಣು), ಭತ್ತವೇ ಮುಂತಾದ ಬೀಜಗಳ ಮುಖ–ಮೂಲ, ಹೊಟ್ಟಿನ ಮೇಲುಭಾಗ

ಕಣ್ಣಿಆರ. ಪು: [ಕರ್ಣಿಕಾರ] ಕಕ್ಕೆ ಗಿಡ, ಬೊಟ್ಟಗಣಗಿಲೆ ಗಿಡ, ದನದ ಕೊಟ್ಟಿಗೆಯ ಒಬ್ಬ ಭಕ್ತ ನ: ಕೆಂಪು ಅಥವಾ ಹಳದಿ ಬಣ್ಣದ ಹೂವು(ಣಾಯಾ)

ಕಣ್ಣಿಲಾಯಣ. ನ: [ಕರ್ಣಿಲಾಯನ] ನಕ್ಷತ್ರ–ವಿಶೇಷದ ಒಂದು ಗೋತ್ರ,

ಕಣ್ಣೀರಹ. 'ಕನ್ನೀರಹ' ಶಬ್ದವನ್ನು ನೋಡುವುದು

ಕಣ್ಣೇರ. 'ಕಣ್ಣಿಆರ' ಶಬ್ದವನ್ನು ನೋಡುವುದು

ಕಣ್ಣೊಚ್ಚಡಿಆ. ಸ್ತ್ರೀ: [ದೇ] ಬೇರೆಯವರ ಮಾತನ್ನು ಕದ್ದು ಕೇಳುವ ಹೆಣ್ಣು

ಕಣ್ಣೊಢ.} ಸ್ತ್ರೀ: [ದೇ] ಹೆಂಗಸರು ಧರಿಸುವ ವಸ್ತ್ರ,
ಕಣ್ಣೊಢಿಆ}. ನೀರಂಗಿ

ಕಣ್ಣೊಢತ್ತೀ(ದೇ). **'ಕಣ್ಣೊಚ್ಚಡಿಆ'** ಶಬ್ದವನ್ನು ನೋಡುವುದು

ಕಣ್ಣೊಪ್ಪಲ. 'ಕಣ್ಣುಪ್ಪಲ' ಶಬ್ದವನ್ನು ನೋಡುವುದು

ಕಣ್ಣೊಲ್ಲೀ. ಸ್ತ್ರೀ: [ದೇ] ಪಕ್ಷಿಗಳ ಕೊಕ್ಕು, ಚಂಚು, ಮುಕುಟ, ಶಿರೋಭೂಷಣ ಒಡವೆ,

ಕಣ್ಣೋವಗಣ್ಣಿಅ ಸ್ತ್ರೀ: **[ಕರ್ಣೋಪಕರ್ಣಿಕಾ]** ಕರ್ಣಾಕರ್ಣಿ, ಕಿವಿಯಿಂದ ಕಿವಿಗೆ ಕೇಳುವುದು, ಒಬ್ಬರಿಂದ ಒಬ್ಬರಿಗೆ ತಿಳಿಯುವುದು[ದೇ]

ಕಣ್ಣೊಸ್ಸರಿಅ. (ದೇ) **'ಕಣ್ಣಸ್ಸರಿಅ'** ಶಬ್ದವನ್ನು ನೋಡುವುದು

ಕಣ್ಹ. ಪು: [ಕೃಷ್ಣ] ಒಂದು ಗೆಡ್ಡೆ, ವಸುದೇವ–ದೇವಕಿಯರ ಎಂಟನೇ ಮಗುವಾಗಿ ಜನಿಸಿದ ಶ್ರೀ ಕೃಷ್ಣ, ಒಂಬತ್ತನೇ ವಾಸುದೇವ(ಣಾಯಾ), ಐದನೇ ವಾಸುದೇವ ಮತ್ತು ಬಲದೇವರ ಪೂರ್ವ ಜನ್ಮದ

ಗುರುವಿನ ಹೆಸರು(ರಾಮ), ದೇಶಾವಕಾಶಿಕ ವ್ರತವನ್ನು ಅತಿಯಾಗಿ ಆಚರಿಸಿದ ಒಬ್ಬ ಉಪಾಸಕ, ವಿಕ್ರಮ ಶಕೆ ಮೂರನೇ ಶತಮಾನದ ಒಬ್ಬ ಪ್ರಸಿದ್ಧ ಜೈನಾಚಾರ್ಯ, ದಿಗಂಬರ ಜೈನ ಮತದ ಪ್ರವರ್ತಕ ಶಿವಭೂತಿ ಮುನಿಯ ಗುರು(ವಿಸೇ), ಕಪ್ಪು ಬಣ್ಣ, ಈ ಹೆಸರಿನ ಒಬ್ಬ ಪರಿವ್ರಾಜಕ ತಪಸ್ವಿ, ವಿ: ಶ್ಯಾಮಲ ವರ್ಣ, ಕಪ್ಪು ಬಣ್ಣದವ(ಕುಮಾ), **–ಓರಾಲ. ಪು: [–ಓರಾಲ]** ಒಂದು ವನಸ್ಪತಿ, **–ಕಂದ. ಪು: [–ಕಂದ]** ಕೆಂದಾವರೆ ಗೆಡ್ಡೆ, (ಪಣ್ಣ), **–ಕಣ್ಣಿಯಾರ. ಪು: [–ಕರ್ಣಿಕಾರ]** ಕಕ್ಕೆ ಗಿಡ, ಬೊಟ್ಟಗಣಗಿಲೆ ಗಿಡ, **–ಕುಮಾರ. ಪು: [–ಕುಮಾರ]** ಶ್ರೇಣಿಕ ಮಹಾರಾಜನ ಒಬ್ಬ ಮಗ. **–ಗೋಮೀ.ಸ್ತ್ರೀ: [–ಗೋಮಿನ್]** ಕಪ್ಪು ನರಿ, **–ಣಾಮ. ನ: [–ನಾಮನ್]** ಒಂದು ಬಗೆಯ ಕರ್ಮ, ಇದು ಹುಟ್ಟುವುದರಿಂದ ದೇಹ ಕಪ್ಪಾಗುತ್ತದೆ(ರಾಜ), **–ಪಕ್ಖಿಯ. ವಿ: [–ಪಾಕ್ಷಿಕ]** ಕ್ರೂರ ಕರ್ಮವನ್ನು ಮಾಡುವವನು, ಬಹಳ ಕಾಲದ ವರೆಗೆ ಈ ಪ್ರಪಂಚದಲ್ಲಿ ಭ್ರಮಣ ಮಾಡುವವನು(ಠಾ), **–ಬಂಧುಜೀವ. ಪು: [–ಬಂಧುಜೀವ]** ಕೆಂಪು ದಾಸವಾಳದ ಗಿಡ. **–ಭೂಮ, –ಭೋಮ. ಪು: [–ಭೂಮ]** ಕಪ್ಪು ಮಣ್ಣಿನ ಪ್ರದೇಶ (ಆವಮ), **–ರಾಇ, –ರಾಈ. ಸ್ತ್ರೀ: [–ರಾಜಿ, ಜೀ]** ಕಪ್ಪು ಗೆರೆ, ಈಶಾನೇಂದ್ರನ ಒಬ್ಬ ಅಗ್ರ ಮಹಿಷಿಯಾದ ಒಬ್ಬ ಇಂದ್ರಾಣಿ, 'ಜ್ಞಾತಾಧರ್ಮಕಥಾ ಸೂತ್ರ'ದ ಒಂದು ಅಧ್ಯಯನ–ಪರಿಚ್ಛೇದ(ಣಾಯಾ), **–ರಿಸಿ. ಪು: [–ಋಷಿ]** ಶಂಖವತೀ ನಗರದಲ್ಲಿ ಜನಿಸಿದ್ದ ಈ ಹೆಸರಿನ ಒಬ್ಬ ಋಷಿ, **–ಲೇಸ, –ಲೇಸ್ಸ. ವಿ: [–ಲೇಶ್ಯ]** ಕೃಷ್ಣ ಲೇಪಳ್ಳವನು, ಜೀವದ ಅತಿ ನಿಕೃಷ್ಟ ಮನಃ ಪರಿಣಾಮ, ನೀಚ ವೃತ್ತಿ (ಭಗ), **–ವಡಿಂಸಯ, –ವಡೇಂಸಯ. ನ: [ಕೃಷ್ಣಾವತಂಸಕ]** ಒಂದು ದೇವ–ವಿಮಾನ (ರಾಜ), **–ವಲ್ಲಿ, –ವಲ್ಲೀ. ಸ್ತ್ರೀ: [–ವಲ್ಲಿ, ವಲ್ಲೀ]** ಕೃಷ್ಣ ತುಳಸಿ(ಪಣ್ಣ), **–ಸಪ್ಪ. ಪು: [–ಸರ್ಪ]** ಕೃಷ್ಣ ಸರ್ಪ, ಕಾಳಿಂಗ ಸರ್ಪ(ಜೀವ), ರಾಹು. **'ಕಣ್ಹ'** ಶಬ್ದವನ್ನು ನೋಡುವುದು

ಕಣ್ಹಈ. ಅ: [ಕೃತಶ್ಚಿತ್] ಯಾರಿಂದಲಾದರೂ, **'ಕಣ್ಹುಇ'** ಶಬ್ದವನ್ನು ನೋಡುವುದು

ಕಣ್ಹಾ. ಸ್ತ್ರೀ: [ಕೃಷ್ಣಾ] ಒಬ್ಬ ಇಂದ್ರಾಣಿ, ಈಶಾನೇಂದ್ರನ ಒಬ್ಬ ಅಗ್ರ ಮಹಿಷಿ, ಒಬ್ಬ ಅಂತಃಪುರ ಸ್ತ್ರೀ, ಪಾಂಡವರ ಪತ್ನಿಯಾದ ದ್ರೌಪದಿ, ಶ್ರೇಣಿಕ ಮಹಾರಾಜನ ಒಬ್ಬ ರಾಣಿ, ಬರ್ಮಾದೇಶದ ಒಂದು ನದಿ(ಆವಮ)

ಕಣ್ಹುಇ.} **ಅ: [ಕ್ವಚಿತ್]** ಕೆಲವು ಕಡೆ, ಯಾವುದೋ
ಕಣ್ಹುಈ}. ಎಲ್ಲೋ ಒಂದು ಕಡೆ, ಯಾವಾಗಲೋ ಒಮ್ಮೆ, ಎಲ್ಲಿಂದ? ಎಲ್ಲೇ ಆದರೂ

ಕತವಾರ. ಪು: [ದೇ] ಕಸ

ಕತಿ. 'ಕಿ=ಕತಿ' ಶಬ್ದವನ್ನು ನೋಡುವುದು.

ಕತು. 'ಕು=ಕತು' ಶಬ್ದವನ್ನು ನೋಡುವುದು

ಕತ್ತ. ಸಕ: [ಕೃತ್] ಕೊಯ್ಯು, ಕತ್ತರಿಸು, ರಂಧ್ರ ಮಾಡು, ಚರಖದಿಂದ ನೂಲು ತೆಗೆ.

ಕತ್ತ. ವಿ: [ಕ್ಲುಪ್ತ] ನಿರ್ಮಿತವಾದ

ಕತ್ತ. ನ: [ದೇ] ಹೆಂಡತಿ,

ಕತ್ತಣ. ನ: [ಕರ್ತನ] ಕತ್ತರಿಸುವುದು, ಕೊಯ್ಯುವುದು (ಸಮ), ವಿ: ಕತ್ತರಿಸುವವನು,

ಕತ್ತಣಯಾ. ಸ್ತ್ರೀ: [ಕರ್ತನತಾ] ಕತ್ತರಿಸುವುದು, ಕುಡುಗೋಲು, ಈಳಿಗೆ ಮಣೆ

ಕತ್ತರ. ಪು: [ದೇ] ಕಸ

ಕತ್ತರಿಅ. ವಿ: [ಕೃತ್ತ,ಕರ್ತಿತ] ಕತ್ತರಿಸಲಾದ, ಕೊಯ್ಯಲ್ಪಟ್ಟ

ಕತ್ತರೀ. ಸ್ತ್ರೀ: [ಕರ್ತರೀ] ಕತ್ತರಿ

ಕತ್ತವೀರಿಅ. ಪು: [ಕಾರ್ತವೀರ್ಯ] ಒಬ್ಬ ರಾಜ(ಸಮ)

ಕತ್ತವ್ವ. ವಿ: [ಕರ್ತವ್ಯ] ಕರ್ತವ್ಯ, ಮಾಡಲು ಅರ್ಹವಾದ್ದು, ನ: ಕಾಯ, ಕೆಲಸ

ಕತ್ತಾ. ಸ್ತ್ರೀ: [ದೇ] ಅಂಧಿಕಾ– ದ್ಯೂತದ ಸಣ್ಣ ಕವಡೆ

ಕತ್ತಿ–. ವಿ: [ಕರ್ತೃ] ಮಾಡುವವನು

ಕತ್ತಿ. ಸ್ತ್ರೀ: [ಕೃತ್ತಿ] ಚರ್ಮ(ಗಉಡ)

ಕತ್ತಿಕೇಅ. ಪು: [ಕಾರ್ತಿಕೇಯ] ಶಿವನ ಪುತ್ರನಾದಷಣ್ಮುಖ

ಕತ್ತಿಗೀ. ಸ್ತ್ರೀ: [ಕಾರ್ತಿಕೀ] ಕಾರ್ತಿಕ ಮಾಸದ ಹುಣ್ಣಿಮೆ

ಕತ್ತಿಮ. ವಿ: [ಕೃತ್ರಿಮ] ಕೃತ್ರಿಮ, ಕೃತಕ, ನಕಲಿ

ಕತ್ತಿಯ. ಪು: [ಕಾರ್ತಿಕ] ಕಾರ್ತಿಕ ಮಾಸ, ಈ ಹೆಸರಿನ ಒಬ್ಬ ಶ್ರೇಷ್ಠಿ, ಭರತ ಕ್ಷೇತ್ರದ ಭಾವೀ ತೀರ್ಥಂಕರನ ಹಿಂದಿನ ಜನ್ಮದ ಹೆಸರು

ಕತ್ತಿಯಾ. ಸ್ತ್ರೀ: [ಕೃತ್ತಿಕಾ] ಪ್ರಸಿದ್ಧ ನಕ್ಷತ್ರ

ಕತ್ತಿಯಾ. ಸ್ತ್ರೀ: [**ಕರ್ತಿಕಾ**] ಕತ್ತರಿ(ಸುಪಾ)
ಕತ್ತಿಯಾ. ಸ್ತ್ರೀ: [**ಕಾರ್ತ್ತಿಕೀ**] ಕಾರ್ತಿಕ ಮಾಸದ ಹುಣ್ಣಿಮೆ, ಕಾರ್ತಿಕ ಮಾಸದ ಅಮಾವಾಸ್ಯೆ
ಕತ್ತಿವವಿಯ. ವಿ: [ದೇ] ಕೃತ್ರಿಮ, ತೋರಿಕೆಯ, ನಕಲಿ
ಕತ್ತು. ವಿ: [**ಕರ್ತೃ**] ಕಾರ್ಯ ಮಾಡುವವನು,
ಕತ್ತೋ. ಅ: [**ಕುತಃ**] ಎಲ್ಲಿಂದ, ಯಾವುದರಿಂದ? **–ಚ್ಚಯ.** ವಿ: [**–ತ್ಯ**] ಎಲ್ಲಿಂದ ಬಂದಿರುವ? ಯಾರಿಂದ ಉಂಟಾದ?(ವಿಸೇ)
ಕತ್ಥ. ಸಕ: [**ಕತ್ಥ್**] ಹೊಗಳು, ಪ್ರಶಂಸಿಸು
ಕತ್ಥ. ಅ: [**ಕುತಃ**] ಎಲ್ಲಿಂದ?(ಷಡ್)
ಕತ್ಥ. ಅ: [**ಕ್ವ, ಕುತ್ರ**] ಎಲ್ಲ?(ಕುಮಾ), **–ಇ.** ಅ: [**–ಚಿತ್**] ಎಲ್ಲಿಯಾದರೂ, ಯಾವ ಜಾಗವಾದರೂ
ಕತ್ಥ. ವಿ: [**ಕಥ್ಯ**] ಹೇಳಲು ಯೋಗ್ಯವಾದ, ಹೇಳಬಹುದಾದ, ಹೇಳುವಂಥ(=ಕಥನೀಯ), ನ: ಕಾವ್ಯದ ಒಂದು ಪ್ರಭೇದ, ಒಂದು ವನಸ್ಪತಿ
ಕತ್ಥಂತ. **'ಕಹ= ಕಥಯ್'** ಶಬ್ದವನ್ನು ನೋಡುವುದು
ಕತ್ಥಭಾಣೀ. ಸ್ತ್ರೀ: [**ಕಸ್ತಭಾನೀ**] ನೀರಿನಲ್ಲಿ ಬೆಳೆಯುವ ಒಂದು ವನಸ್ಪತಿ
ಕತ್ಥೂರಿಯಾ.}. ಸ್ತ್ರೀ: [**ಕಸ್ತೂರೀ**] ಕಸ್ತೂರಿ ಮೃಗದ
ಕತ್ಥೂರೀ}. ಹೊಕ್ಕುಳಿನಲ್ಲಿ ಸಿಗುವ ಒಂದು ಸುಗಂಧ ದ್ರವ್ಯ, ಮೃಗಮದ
ಕಥ. ವಿ: [ದೇ] ತೀರಿ ಹೋದ, ಮೃತ, ಕ್ಷೀಣ, ದುರ್ಬಲ ಶಬ್ದವನ್ನು ನೋಡುವುದು
ಕದ(ಮಾ). **'ಕಡ=ಕೃತ'** ಶಬ್ದವನ್ನು ನೋಡುವುದು
ಕದಗ. **'ಕಯಗ'** ಶಬ್ದವನ್ನು ನೋಡುವುದು
ಕದಣ. ಕಡಣ=ಕದನ' ಶಬ್ದವನ್ನು ನೋಡುವುದು
ಕದಲೀ. **'ಕಯಲೀ'** ಶಬ್ದವನ್ನು ನೋಡುವುದು
ಕದು. **'ಕಉ=ಕ್ರತು'** ಶಬ್ದವನ್ನು ನೋಡುವುದು
ಕದುಅ(ಶೌ). ಅ: [**ಕೃತ್ವಾ**] ಮಾಡಿ
ಕದುಇಯಾ. ಸ್ತ್ರೀ: [ದೇ] ಒಂದು ಬಳ್ಳಿ: ಹಾಲುಗುಂಬಳ ಕಾಯಿ, ಸೋರೆಕಾಯಿ(ಪಣ್ಣ)
ಕದುಶಣ(ಮಾ). ವಿ: [**ಕದುಷ್ಣ**] ಸ್ವಲ್ಪ ಬಿಸಿಯಾದ, ಉಗುರು ಬೆಚ್ಚಗಿನ
ಕದ್ದಮ. ಪುಂ.ನ: [**ಕರ್ದಮ**] ಕೆಸರು,
ಕದ್ದಮ. ಪುಂ.ನ: [**ಕರ್ದಮ**] ಕೆಸರು, ಹುದಲು, ಒಬ್ಬ ದೇವ, ಒಬ್ಬ ನಾಗ–ರಾಜ(ಭಗ). **ಕದ್ದಮಾಲ.** ವಿ: [**ಕರ್ದಮಾಲ**] ಕೆಸರುಳ್ಳ, ಕೆಸರಿನಿಂದ ಕೂಡಿದ

ಕದ್ದಮಿಅ. ವಿ: [**ಕರ್ದಮಿತ**] ಕೆಸರಿನಿಂದ ಕೂಡಿದ (ಗಉಡ)
ಕದ್ದಮಿಅ. ಪು: [ದೇ] ಮಹಿಷ, ಎಮ್ಮೆ (ದೇ)
ಕನ್ನ. **'ಕಣ್ಣ=ಕರ್ಣ'** ಶಬ್ದವನ್ನು ನೋಡುವುದು. **ಕನ್ನಾಯಂಸ.** ಪು: [**ಕರ್ಣಾವತಂಸ**] ಕಿವಿಯ ಆಭರಣ,
ಕನ್ನ. **'ಕಣ್ಣ'** ಶಬ್ದವನ್ನು ನೋಡುವುದು. **–ಏವ.** **'ಕಣ್ಣದೇವ'** ಶಬ್ದವನ್ನು ನೋಡುವುದು **–ವಟ್ಟಿ, ಕನ್ನಾವಟ್ಟಿ.** ಸ್ತ್ರೀ: [**–ವೃತ್ತಿ**] **ದಡ, ತೀರ, ಅಗ್ರಭಾಗ**
ಕನ್ನಉಜ್ಜ. **'ಕಣ್ಣಉಜ್ಜ'** ಶಬ್ದವನ್ನು ನೋಡುವುದು
ಕನ್ನಗಾ. ಸ್ತ್ರೀ: [**ಕನ್ಯಕಾ**] ಕನ್ಯೆ, ಮದುವೆಯಾಗದ ಕುಮಾರಿ (ಸುರ)
ಕನ್ನಸ. ವಿ: [**ಕನೀಯಸ್**] ಕನಿಷ್ಠ, ಅಧಮ, ಕೆಳಗಿನ
ಕನ್ನಾ. **'ಕಣ್ಣಾ'** ಶಬ್ದವನ್ನು ನೋಡುವುದು
ಕನ್ನಾಡ. **'ಕಣ್ಣಾಡ'** ಶಬ್ದವನ್ನು ನೋಡುವುದು (ಭವಿ)
ಕನ್ನಾರಿಯ. ವಿ: [ದೇ] ಅಲಂಕರಿಸಲ್ಪಟ್ಟ, ವಿಭೂಷಿತ
ಕನ್ನೀರಹ. ಪು: [**ಕರ್ಣೀರಥ**] ಒಂದು ಬಗೆಯ ಪಲ್ಲಕ್ಕಿ, ಶ್ರೀಮಂತರ ವಾಹನ
ಕನ್ನುಲ್ಲಡ(ಅಪ). ಪು: [**ಕರ್ಣ**] ಕಿವಿ, ಶ್ರವಣೇಂದ್ರಿಯ
ಕನ್ನೇರಯ. **'ಕಣ್ಣೆಆರ'** ಶಬ್ದವನ್ನು ನೋಡುವುದು
ಕನ್ನೋಲೀ(ದೇ). **'ಕಣ್ಣೊಲ್ಲೀ'** ಶಬ್ದವನ್ನು ನೋಡುವುದು
ಕನ್ಹ. **'ಕಣ್ಹ'** ಶಬ್ದವನ್ನು ನೋಡುವುದು. **–ಸಹ.** ನ: [**–ಸಹ**] ಜೈನ ಸಾಧುಗಳ ಒಂದು ಕುಲದ ಹೆಸರು
ಕಪಂಧ. **'ಕಮಂಧ'** ಶಬ್ದವನ್ನು ನೋಡುವುದು
ಕಪಿಂಜಲ. ಪು: [**ಕಪಿಂಜಲ**] ಚಾತಕ ಪಕ್ಷಿ, ತಿತ್ತಿರಿ ಪಕ್ಷಿ (ಪಣ್ಣ), ಬಾಣನ ಕಾದಂಬರಿಯ ಒಂದು ಪಾತ್ರ
ಕಪೂರ. **'ಕಪ್ಪೂರ'** ಶಬ್ದವನ್ನು ನೋಡುವುದು
ಕಪ್ಪ. ಅಕ: [**ಕೃಪ್**] ಸಮರ್ಥನಾಗು, ಕಲ್ಪಿಸು, ಜಾರಿಗೆ ತರು, **ಸಕ:** ಕತ್ತರಿಸು, ಸೀಳು.
ಕಪ್ಪ. ಸಕ: [**ಕಲ್ಪಯ್**] ಕಲ್ಪನೆಮಾಡು, ಮಾಡು, ನಿರ್ಮಿಸು, ವರ್ಣಿಸು
ಕಪ್ಪ. ವಿ: [**ಕಲ್ಪ್ಯ**] ಸ್ವೀಕರಿಸಲು ಯೋಗ್ಯವಾದ್ದು
ಕಪ್ಪ. ಪು: [**ಕಲ್ಪ**] ತೊಳೆಯುವುದು, ಶುಭ್ರಮಾಡುವುದು, ಆಚಾರ, ವ್ಯವಹಾರ, ದಶಾಶ್ರುತಸ್ಕಂಧ ಸೂತ್ರ, ಕಲ್ಪ ಸೂತ್ರ, ವ್ಯವಹಾರ ಸೂತ್ರ, ವಿ: ಉಚಿತವಾದ, **–ಕಾಲ.** ಪು: ಪ್ರಭೂತ ಕಾಲ, **–ಧರ.** ವಿ: ಕಲ್ಪ ಮತ್ತು ವ್ಯವಹಾರ ಸೂತ್ರವನ್ನು ಬಲ್ಲವ.

ಕಪ್ಪ. ಪು: [ಕಲ್ಪ] ಕಾಲ-ವಿಶೇಷ, ದೇವತೆಗಳ ಎರಡು ಸಾವಿರಯುಗಕ್ಕೆ ಪರಿಮಿತವಾದ ಕಾಲ, ಶಾಸ್ತ್ರೋಕ್ತ ವಿಧಿ, ಅನುಷ್ಠಾನ(ಠಾ), ಶಾಸ್ತ್ರ-ವಿಶೇಷ, ಕಂಬಳಿ-ಉಪಕರಣ, (ಓಘ), ದೇವತೆಗಳ ಸ್ಥಾನ, ೧೨ ದೇವ ಲೋಕ(ಭಗ), ೧೨ ದೇಲೋಕಗಳ ನಿವಾಸಿ ದೇವತೆಗಳು, ವೈಮಾನಿಕ ದೇವತೆಗಳು, ಮನಸ್ಸಿನಲ್ಲಿ ಇಷ್ಟಪಟ್ಟ ಫಲವನ್ನು ಕೊಡುವ ಕಲ್ಪ-ವೃಕ್ಷ, ಅಧಿವಾಸ, ಸ್ಥಾನ, ರಾಜ ನಂದನನ ಒಬ್ಬ ಮಂತ್ರಿ, ವಿ: ಸಮರ್ಥ, ಶಕ್ತಿವಂತ, ಸದೃಶ, ಹೋಲುವ, 'ಕೇವಲ ಕಲ್ಪಂ', **-ಟ್ಠ.** ಪು: [-ಸ್ಥ] ಬಾಲಕ, **-ಟ್ಠಿಇ.** ಸ್ತ್ರೀ: [-ಸ್ಥಿತಿ] ಸಾಧುಗಳ ಶಾಸ್ತ್ರೋಕ್ತವಾದ ಅನುಷ್ಠಾನ, (ಬೃಹ), **-ಟ್ಠಿಯಾ.** ಸ್ತ್ರೀ: [-ಸ್ಥಿಕಾ] ಹುಡುಗಿ, ಯುವತಿ(ಬೃಹ), **-ಟ್ಠೀ.** ಸ್ತ್ರೀ: [-ಸ್ಥಾ] ಬಾಲಕಿ, ಕುಲಸ್ತ್ರೀ, **-ತರು.** ಪು: [-ತರು] ಕಲ್ಪ ವೃಕ್ಷ, **-ತ್ಥೀ.** ಸ್ತ್ರೀ: [-ಸ್ತ್ರೀ] ದೇವತೆ, **-ದುಮ, -ದ್ದುಮ.** ಪು: [-ದ್ರುಮ] ಕಲ್ಪವೃಕ್ಷ(ಸುಪಾ), **-ಪಾಯವ.** ಪು: [-ಪಾದಪ] ಕಲ್ಪ ವೃಕ್ಷ(ಪಣ್ಣ), **-ಪಾಹುಡ.** ನ: [-ಪ್ರಾಭೃತ] ಜೈನ ಗ್ರಂಥ. **-ರುಕ್ಖ.** ಪು: [-ವೃಕ್ಷ] ಕಲ್ಪ ವೃಕ್ಷ, **-ವಡಿಂಸಯ.** ನ: [ಕಲ್ಪಾವತಂಸಕ] ವಿಮಾನ-ವಿಶೇಷ, ವಿಮಾನ-ವಾಸಿ ದೇವರುಗಳು, **-ವಡಿಂಸಂಯಾ.** ಸ್ತ್ರೀ: [ಕಲ್ಪಾವತಂಸಿಕಾ] ಕಲ್ಪಾವತಂಸಕ ದೇವ-ವಿಮಾನಗಳ ವರ್ಣನೆ ಇರುವ ಜೈನ ಗ್ರಂಥ(ರಾಯ), **-ವಿಡವಿ.** ಪು: [-ವಿಟಪಿನ್] ಕಲ್ಪವೃಕ್ಷ, **-ಸಾಹಿ.** ಪು: [-ಶಾಖಿನ್] ಕಲ್ಪವೃಕ್ಷ(ಸುಪಾ), **-ಸುತ್ತ.** ನ: [-ಸೂತ್ರ] ಶ್ರೀ ಭದ್ರಬಾಹು ಸ್ವಾಮಿಗಳು ರಚಿಸಿದ ಒಂದು ಜೈನ ಗ್ರಂಥ(ಕಪ್ಪ), **-ಸುಯ.** ನ: [-ಶ್ರುತ] ಜ್ಞಾನ-ವಿಶೇಷ, ಗ್ರಂಥ-ವಿಶೇಷ, **ಕಪ್ಪಾಈಅ.** ಪು: [ಕಲ್ಪಾತೀತ] ಉತ್ತಮ ಜಾತಿಯ ದೇವ-ವಿಶೇಷ, ಗ್ರೈವೇಯಕ ಮತ್ತು ಅವರ ಮೇಲ್ಪಟ್ಟ ವಿಮಾನಗಳ ನಿವಾಸಿಗಳಾದ ದೇವರುಗಳು(ಪಣ್ಣ), **ಕಪ್ಪಾಗ.** ಪು: [ಕಲ್ಪಾಕ] ವಿಧಿಯನ್ನು ಬಲ್ಲವನು. **ಕಪ್ಪಾಯ.** ಪು: [ಕಲ್ಪಾಯ] ತೆರಿಗೆ, ದೊರೆಗೆ ಕೊಡಬೇಕಾದ ತೆರಿಗೆ(ವಿಪಾ)

ಕಪ್ಪಂತ. ಪು: [ಕಲ್ಪಾಂತ] ಪ್ರಳಯ ಕಾಲ, ಲೋಕಾಂತದ ಸಮಯ, ಸಂಹಾರ-ಸಮಯ

ಕಪ್ಪಡ. ಪು: [ಕರ್ಪಟ] ಬಟ್ಟೆ, ವಸ್ತ್ರ, ಜೀರ್ಣವಾದ ವಸ್ತ್ರ(ಪಣ್ಣ)

ಕಪ್ಪಡಿಅ. ವಿ: [ಕಾರ್ಪಟಿಕ] ಕಪಟಿ, ಮಾಯಾವಿ, ಭಿಕ್ಷುಕ

ಕಪ್ಪಣ. ನ: [ಕಲ್ಪನ] ಛೇದಿಸುವುದು, ಕತ್ತರಿಸುವುದು

ಕಪ್ಪಣಾ. ಸ್ತ್ರೀ: [ಕಲ್ಪನಾ] ನಿರ್ಮಿಸುವುದು, ರಚನೆ, ನಿರೂಪಣೆ, ಕಲ್ಪನೆ,

ಕಪ್ಪಣೀ. ಸ್ತ್ರೀ: [ಕಲ್ಪನೀ] ಕತ್ತರಿ (ಪಣ್ಣ)

ಕಪ್ಪರ. ಪು: [ಕರ್ಪರ] ಕಪಾಲ, ತಲೆಬುರುಡೆ, ತಲೆಯ ಚಿಪ್ಪು. **'ಕುಪ್ಪರ=ಕರ್ಪರ'** ಶಬ್ದವನ್ನು ನೋಡುವುದು

ಕಪ್ಪರಿಅ. ವಿ: [ದೇ] ಭೇದಿಸಲ್ಪಟ್ಟ, ಸೀಳಲ್ಪಟ್ಟ (ಭವಿ)

ಕಪ್ಪಾಸ. ಪು: [ಕಾರ್ಪಾಸ] ಹತ್ತಿ, ಹತ್ತಿ ಬಟ್ಟೆ, ಉಣ್ಣೆ,

ಕಪ್ಪಾಸತ್ಥಿ. ಪು: [ಕಾರ್ಪಾಸಾಸ್ಥಿ] ಮೂರು ಇಂದ್ರಿಯಗಳ ಒಂದು ಕ್ಷುದ್ರ ಜಂತು

ಕಪ್ಪಾಸಿಅ. ವಿ: [ಕಾರ್ಪಾಸಿಕ] ಹತ್ತಿಯಿಂದ ಮಾಡಿದ, ಹತ್ತಿ ಮಾರುವವನು, ನ: ಜೈನೇತರ ಶಾಸ್ತ್ರ-ವಿಶೇಷ

ಕಪ್ಪಾಸೀ. ಸ್ತ್ರೀ: [ಕರ್ಪಾಸೀ] ಹತ್ತಿಯ ಗಿಡ

ಕಪ್ಪಿಅಕಪ್ಪಿಅ. ನ: [ಕಲ್ಪಾಕಲ್ಪ] ಒಂದು ಜೈನ ಶಾಸ್ತ್ರ

ಕಪ್ಪಿಯ. ವಿ: [ಕಲ್ಪಿತ] ರಚಿಸಲ್ಪಟ್ಟ, ನಿರ್ಮಿತ(ಔಪ), ಸ್ಥಾಪಿಸಲಾದ,ಹತ್ತಿರದಲ್ಲಿಇಟ್ಟಿರುವ,ಕಲ್ಪನೆಯಿಂದ ರಚಿಸಿದ, ವ್ಯವಸ್ಥಿತ, ಕತ್ತರಿಸಿದ, ಭೇದಿಸಿದ

ಕಪ್ಪಿಯ. ವಿ: [ಕಲ್ಪಿಕ] ಅನುಮೋದಿಸಲ್ಪಟ್ಟ, ಯೋಗ್ಯವಾದ, ಉಚಿತವಾದ(ಗಚ್ಛ), **ಪು:** ಗೀತೆಯ ಅರ್ಥ, ಜ್ಞಾನಿಯಾದ ಸಾಧು,

ಕಪ್ಪಿಯಾ. ಸ್ತ್ರೀ: [ಕಲ್ಪಿಕಾ] ಜೈನಗ್ರಂಥ, ಒಂದು ಉಪಾಂಗ ಗ್ರಂಥ

ಕಪ್ಪೂರ. ಪು: [ಕರ್ಪೂರ] ಕರ್ಪೂರ, ಸುಗಂಧ ದ್ರವ್ಯ

ಕಪ್ಪೋವಗ. ಪು: [ಕಲ್ಪೋಪಗ] ಕಲ್ಪದಿಂದ ಕೂಡಿದ, ೧೨ ದೇವಲೋಕವಾಸಿ ದೇವರುಗಳು

ಕಪ್ಪೋವವಣ್ಣ. ಪು: [ಕಲ್ಪೋಪಪನ್ನ] ಮೇಲಿನ ಶಬ್ದವನ್ನು ನೋಡುವುದು

ಕಪ್ಪೋವವತ್ತಿಆ. ಸ್ತ್ರೀ: [ಕಲ್ಪೋಪಪತ್ತಿಕಾ] ದೇವಲೋಕದಲ್ಲಿ ಹುಟ್ಟಿದ

ಕಪ್ಫಲ. ನ: [ಕಟ್ಫಲ] ಈ ಹೆಸರಿನ ಒಂದು ವನಸ್ಪತಿ, ಕಾಯಫಲ

ಕಪ್ಫಾಡ. **'ಕವಾಡ= ಕಪಾಟ'** ಶಬ್ದವನ್ನು ನೋಡುವುದು

ಕಪ್ಫಾಡ(ದೇ). **'ಕಫಾಡ'** ಶಬ್ದವನ್ನು ನೋಡುವುದು

ಕಫ. ಪು: [ಕಫ] ಕಫ, ಶರೀರದಲ್ಲಿರುವ ಧಾತು
ಕಫಾಡ. ಪು: [ದೇ] ಗುಹೆ
ಕಬಂಧ. (ಶೌ). **'ಕಮಂಧ'** ಶಬ್ದವನ್ನು ನೋಡುವುದು
ಕಬ್ಬಟ್ಟೀ. ಸ್ತ್ರೀ: [ದೇ] ಚಿಕ್ಕ ಹುಡುಗಿ
ಕಬ್ಬಡ.} ಪುಂ.ನ: [ಕರ್ಬಟ] ಕುತ್ಸಿತವಾದ ಪಟ್ಟಣ,
ಕಬ್ಬಡಗ}. ಹಾಳಾದ ನಗರ, ಪು: ಒಂದು ಗ್ರಹ, ಗ್ರಹದ ಅಧಿಷ್ಠಾತೃ ದೇವ, ವಿ: ಕೆಟ್ಟ ನಗರದ ನಿವಾಸಿ
ಕಬ್ಬರ. **'ಕಬ್ಬುರ'** ಶಬ್ದವನ್ನು ನೋಡುವುದು
ಕಬ್ಬಾಡಭಯಯ. ಪು: [ದೇ] ಗುತ್ತಿಗೆ ಮೇಲೆ ನೆಲ ಅಗೆಯುವ ಕೆಲಸ ಮಾಡುವ ಕಾರ್ಮಿಕ
ಕಬ್ಬುರ}. ವಿ: [ಕರ್ಬುರ] ನಾನಾ ಬಣ್ಣದ, ಚಿತ್ರ ವರ್ಣ,
ಕಬ್ಬುರಯ್}. ಪು: ಗ್ರಹ ಗ್ರಹದ ಅಧಿಷ್ಠಾತೃ ದೇವ(ಠಾ)
ಕಬ್ಬುರಿಯ. ವಿ: [ಕರ್ಬುರಿತ] ನಾನಾ ವರ್ಣದ, ಚಿತ್ರವರ್ಣದ(ಪಉಮ)
ಕಭ(ಅಪ). **'ಕಫ'** ಶಬ್ದವನ್ನು ನೋಡುವುದು
ಕಭಲ್ಲ. ನ: [ದೇ] ಕಪಾಲ, ತಲೆ ಎಲುಬಿನ ಚಿಪ್ಪು, ತಲೆಬುರುಡೆ
ಕಮ. ಸಕ: [ಕ್ರಮ್] ನಡೆ, ಹೆಜ್ಜೆಯಿಡು, ಮೀರು, ದಾಟು, ಹರಡು
ಕಮ. ಸಕ: [ಕಮ್] ಇಷ್ಟಪಡು, ಬಯಸು, ಅಪೇಕ್ಷಿಸು
ಕಮ. ಸಕ: [ಕ್ರಮ್] ಯುಕ್ತವಾಗು, ಅಧಿಕವಾಗು, ಆಗು, ಸಂಭವಿಸು
ಕಮ. ಪು: [ಕ್ರಮ] ಪಾದ, ಹೆಜ್ಜೆ, ಅನುಕ್ರಮ, ಕ್ರಮವಾಗಿ, ಎಲ್ಲೆ, ಮಿತಿ, ತೀರ್ಪು, ನಿರ್ಣಯ(ಸ್ವಪ್ನ) **ನಿಯಮ**
ಕಮ. ಪು: [ಕ್ಲಮ] ಶ್ರಮ, ಆಯಾಸ
ಕಮಂಡಲು. ಪುಂ.ನ: [ಕಮಂಡಲು] ಸನ್ಯಾಸಿಗಳು ಬಳಸುವ ಮರದ ಅಥವಾ ಮಣ್ಣಿನ ಪಾತ್ರೆ
ಕಮಂಧ. ಪುಂ. ನ: [ಕಬಂಧ] ರುಂಡವಿಲ್ಲದ ದೇಹ, ಮುಂಡ, ಒಬ್ಬ ರಾಕ್ಷಸ
ಕಮಢ. ಪು: [ದೇ] ಮೊಸರಿನ ಚಿಕ್ಕ ಗಡಿಗೆ, ಅಡಿಗೆಯ ಪಾತ್ರೆ,(=ಮಡಕೆ) ಬಲದೇವ, ಮುಖ
ಕಮಢ.} ಪು: [ಕಮಠ, –ಕ] ಭಗವಾನ್
ಕಮಢಗ}. ಪಾರ್ಶ್ವನಾಥನು ವಾದದಲ್ಲಿ ಸೋಲಿಸಿದ್ದ
ಕಮಢಯ}. ಹಾಗೂ ಸತ್ತು ದೈತ್ಯನಾಗಿದ್ದ ಒಬ್ಬ ತಾಪಸ(ಣಾಮಿ), ಆಮೆ, ಬಿದಿರು, ಸಲ್ಲಕೀ ವೃಕ್ಷ, ಆನೆಬೇಲದ ಮರ, ನ: ಮಲ, ಕೊಳೆ, ಸಾಧ್ವಿಗಳ ಒಂದು ಪಾತ್ರೆ, ಸಾಧ್ವಿಗಳು ಧರಿಸುವ ಒಂದು ವಸ್ತ್ರ

ಕಮಣ. ನ: [ಕ್ರಮಣ] ಚಲನೆ, ನಡಿಗೆ, ಪ್ರವೃತ್ತಿ(ಆಚೂ)
ಕಮಣಿಯಾ. ಸ್ತ್ರೀ: [ಕ್ರಮಣಿಕಾ] ಚರ್ಮದ ಚಪ್ಪಲಿ(ಬೃಹ)
ಕಮಣಿಲ್ಲ. ವಿ: [ಕ್ರಮಣೀವತ್] ಚರ್ಮದ ಚಪ್ಪಲಿಯನ್ನು ಧರಿಸಿರುವವನು
ಕಮಣೀ. ಸ್ತ್ರೀ: [ಕ್ರಮಣೀ] ಚರ್ಮದ ಚಪ್ಪಲಿ
ಕಮಣೀ. ಸ್ತ್ರ: [ದೇ] ಮೆಟ್ಟಿಲು(ದೇ)
ಕಮಣೀಯ. ವಿ: [ಕಮನೀಯ] ಸುಂದರವಾದ, ಮನೋಹರವಾದ(ಸುಪಾ)
ಕಮಲ. ಪು: [ದೇ] ಮಡಕೆ(=ಅನ್ನ ಬೇಯಿಸುವ ಮಣ್ಣಿನ ಪಾತ್ರೆ) ಪಟಹ, ನಗಾರಿ, ತಮಟೆ, ಮುಖ, ಜಿಂಕೆ(ಅಣು), ಜಗಳ(ಷಡ್)
ಕಮಲ. ನ: [ಕಮಲ] ಪುಂನ: ಒಂದು ದೇವ–ವಿಮಾನ. ನ: ಕಮಲ, ಪದ್ಮ, ತಾವರೆ, ಕಮಲ ಎಂಬ ಹೆಸರಿನ ಇಂದ್ರಾಣಿಯು ಸಿಂಹಾಸನ, ಒಂದು ಸಂಖ್ಯೆ, ಕಮಲಾಂಗವನ್ನು ೮೪ ಲಕ್ಷದಿಂದ ಗುಣಿಸಿದರೆ ಬರುವ ಸಂಖ್ಯೆ, ಒಂದು ಛಂದಸ್ಸು, ಪು: ಕಮಲ ಎಂಬ ಹೆಸರಿನ ಇಂದ್ರಾಣಿಯ ಪೂರ್ವ ಜನ್ಮದ ತಂದೆ(ಣಾಯಾ), ಒಬ್ಬ ಶ್ರೇಷ್ಠಿ, ಪಿಂಗಳ ಛಂದಸ್ಸಿನಲ್ಲಿ ಹೆಸರಾದ, ಕೊನೆಯ ಅಕ್ಷರ ಗುರುವಾಗಿರುವ ಒಂದು ಗಣ, ಒಂದು ಜಾತಿಯ ಅಕ್ಕಿ, ಲೇಖನಿ, **–ಕ್ಖ.** ಪು: [–ಕ್ಷ] ಈ ಹೆಸರಿನ ಒಬ್ಬ ಯಕ್ಷ, ವಿಷ್ಣುವಿನ ಒಂದು ಹೆಸರು, **–ಜಯ.** ನ: [–ಜಯ] ವಿದ್ಯಾಧರರ ಒಂದು ನಗರ, **–ಜೋಣಿ.** ಪು: [–ಯೋನಿ] ಬ್ರಹ್ಮ(ಪಾಅ), **–ಣಅಣ.** ಪು: [–ನಯನ] ವಿಷ್ಣು **–ಪುರ.** ನ: [–ಪುರ] ವಿದ್ಯಾಧರ ಒಂದು ನಗರ, **–ಪ್ಪಭಾ.** ಸ್ತ್ರೀ: [–ಪ್ರಭಾ] ಕಾಲನೆಂಬ ಒಬ್ಬ ಪಿಶಾಚ ರಾಜನ ಒಬ್ಬ ಅಗ್ರಮಹಿಷಿ, 'ಜ್ಞಾತಾ ಧರ್ಮಕಥಾ' ಸೂತ್ರದ ಒಂದು ಅಧ್ಯಯನ (ಣಾಯಾ), **–ವಂಧು.** ಉ: [–ಬಂಧು] ಸೂರ್ಯ, ಈ ಹೆಸರಿನ ಒಬ್ಬ ರಾಜ, **–ಮಾಲಾ.** ಸ್ತ್ರೀ: [–ಮಾಲಾ] ಪೋತನಪುರ ನಗರದ ರಾಜ ಆನಂದನ ಒಬ್ಬ ರಾಣಿ, ಭಗವಾನ್ ಅಜಿತನಾಥನ ಮಾತಾಮಹಿ(ಪಉಮ), **–ರಯ.** ಪು: [–ರಜಸ್] ಕಮಲದ ಪರಾಗ, **–ವಡಿಂಸಯ.** ನ: [ಕಮಲಾವತಂಸಕ] ಕಮಲಾ ಎಂಬ ಇಂದ್ರಾಣಿಯ ಉಪ್ಪರಿಗೆ ಮನೆ(ಣಾಯಾ), **–ಸಿರಿ.** ಸ್ತ್ರೀ: [–ಶ್ರೀ] ಕಮಲಾ ಎಂಬ ಇಂದ್ರಾಣಿಯ

ಪೂರ್ವ ಜನ್ಮದ ತಾಯಿಯ ಹೆಸರು, **-ಸುಂದರೀ.** ಸ್ತ್ರೀ: [-ಸುಂದರೀ] ಈ ಹೆಸರಿನ ಒಬ್ಬ ರಾಣಿ, **-ಸೇಣಾ.** ಸ್ತ್ರೀ: [-ಸೇನಾ] ಒಬ್ಬ ರಾಜಪುತ್ರಿ, **ಕಮಲಾಅರ, ಕಮಲಾಗರ.** ಪು: [ಕಮಲಾಕರ] ಕಮಲಗಳ ಸಮೂಹ, ಸರೋವರ, **ಕಮಲಾಪೀಡ, ಕಮಲಾಮೇಲ,** ಪು: [ಕಮಲಾಪೀಡ] ಭರತ ಚಕ್ರವರ್ತಿಯ ಅಶ್ವರತ್ನ, **ಕಮಲಾಸಣ.** ಪು: [ಕಮಲಾಸನ] ಬ್ರಹ್ಮ(ಪಾಅ)

ಕಮಲಂಗ. ನ: [ಕಮಲಾಂಗ] ಒಂದು ಸಂಖ್ಯಾ-ವಿಶೇಷ, ೮೪ ಲಕ್ಷ ಮಹಾಪದ ಸಂಖ್ಯೆ

ಕಮಲಾ. ಸ್ತ್ರ: [ದೇ] ಹೆಣ್ಣು ಜಿಂಕೆ, ಹರಿಣಿ(ಪಾಅ)

ಕಮಲಾ. ಸ್ತ್ರೀ: [ಕಮಲಾ] ಲಕ್ಷ್ಮಿ(ಸುಪಾ), ರಾವಣನ ಒಬ್ಬ ಹೆಂಡತಿ(ಪಉಮ), ಕಾಲನೆಂಬ ಹೆಸರಿನ ಪಿಶಾಚರಾಜನ ಒಬ್ಬ ಹೆಂಡತಿ(ತಾ), 'ಜ್ಞಾತ ಧರ್ಮಕಥಾ ಸೂತ್ರದ' ಒಂದು ಅಧ್ಯಯನ. ಒಂದು ಬಗೆಯ ಛಂದಸ್ಸು, **-ಅರ.** ಪು: [-ಕರ] ಶ್ರೀಮಂತ

ಕಮಲಿಣೀ. ಸ್ತ್ರೀ: [ಕಮಲಿನೀ] ಪದ್ಮಿನಿ, ಕಮಲದ ಬಳ್ಳಿ,

ಕಮಲುಬ್ಭವ. ಪು: [ಕಮಲೋದ್ಭವ] ಬ್ರಹ್ಮ

ಕಮವ.}. ಅಕ: [ಸ್ವಪ್] ನಿದ್ರೆಮಾಡು

ಕಮವಸ.}.

ಕಮಸೋ. ಅ: [ಕ್ರಮಶಃ] ಕ್ರಮವಾಗಿ ಒಂದೊಂದಾಗಿ

ಕಮಿಅ. ವಿ: [ದೇ] ಸಮೀಪಕ್ಕೆ ಬಂದಿರುವ

ಕಮಿಯ. ವಿ: [ಕ್ರಾಂತ] ಉಲ್ಲಂಘಿತ, ಮೀರಲಾದ, ದಾಟಲಾದ

ಕಮೇಲಗ}. ಪುಂ.ಸ್ತ್ರೀ: [ಕ್ರಮೇಲಕ] ಒಂಟೆ, ಸ್ತ್ರೀ: **-ಕಮೇಲಯ}.** -ಗೀ

ಕಮ್ಮ. ಸಕ: [ಕೃ] ಕ್ಷೌರಮಾಡು

ಕಮ್ಮ. ಸಕ: [ಭುಜ್] ತಿನ್ನು, ಭೋಗಿಸು, ಊಟಮಾಡು

ಕಮ್ಮ. **'ಕಮ=ಕಮ್'** ಶಬ್ದವನ್ನು ನೋಡುವುದು

ಕಮ್ಮ. ಪುಂ.ನ: [ಕರ್ಮನ್] ಜೀವವು ಸ್ವೀಕರಿಸುವ ಅತ್ಯಂತ ಸೂಕ್ಷ್ಮವಾದ ಪುದ್ಗಲ, ಕೆಲಸ, ಕಾರ್ಯ, ವ್ಯಾಪಾರ(ತಾ), ವ್ಯಾಕರಣದಲ್ಲಿ ಪ್ರಸಿದ್ಧವಾದ ಕಾರಕವಿಶೇಷ, ಸುಣ್ಣವೇ ಮೊದಲಾದುವನ್ನು ಬೇಯಿಸುವ ಸ್ಥಳ, ಹಿಂದೆ ಮಾಡಿದ್ದು, ಭಾಗ್ಯ(ಆಚಾ), ಕಾರ್ಮಣ ಶರೀರ, ಕಾರ್ಮಣ ಶರೀರವೆಂಬ ಕರ್ಮ, ಕರ್ಮ-ವಿಶೇಷ, **-ಕರ.** ವಿ: [-ಕರ] ನೌಕರ, ಆಳು, -ಗಾರ ಶಬ್ದವನ್ನು ನೋಡುವುದು. **-ಕರಣ.** ನ: [-ಕರಣ] ಕರ್ಮವಿಷಯುಕವಾದ ಬಂಧನ, ಜೀವ-ಪರಾಕ್ರಮ-ವಿಶೇಷ-**ಕಾರ.** ವ: [-ಕಾರ] ನೌಕರ, **-ಕಿಬ್ಬಿಸ.** ವಿ: [-ಕಿಲ್ಬಿಷ] ಕರ್ಮ ಚಾಂಡಾಲ, ಕೆಟ್ಟ ಕೆಲಸವನ್ನು ಮಾಡುವವನು. **-ಕ್ಖಂಧ.** ಪು: [-ಸ್ಕಂಧ] ಕರ್ಮ-ಪುದ್ಗಲಗಳ ರಾಶಿ(ಕಮ್ಮ), **-ಗರ.** **'-ಕರ'** ಶಬ್ದವನ್ನು ನೋಡುವುದು **-ಗಾರ.** ಪು: [-ಕಾರ] ಶಿಲ್ಪಿ, (ಣಾಯಾ), 'ಕರ' ಶಬ್ದವನ್ನು ನೋಡುವುದು, **-ಜೋಗ.** ಪು: [-ಯೋಗ] ಶಾಸ್ತ್ರೋಕ್ತವಾದ ಅನುಷ್ಠಾನ. **-ಟ್ಠಾಣ.** ನ: [-ಸ್ಥಾನ] ಕಾರ್ಖಾನೆ, **-ಟ್ಠಿಇ.** ಸ್ತ್ರೀ: [-ಸ್ಥಿತಿ] ಕರ್ಮ-ಪುದ್ಗಲಗಳ ಅವಸ್ಥಾನ-ಸಮಯ(ಭಗ), ವಿ: ಸಂಸಾರೀ ಜೀವ, **-ಣಿಸೇಗ.** ಪು: [-ನಿಷೇಕ] ಕರ್ಮ-ಪುದ್ಗಲಗಳ ರಚನಾ-ವಿಶೇಷ, **-ಧಾರಯ.** ಪು: [-ಧಾರಯ] ವ್ಯಾಕರಣದಲ್ಲಿ ಹೆಸರಾದ ಕರ್ಮಧಾರಯ ಸಮಾಸ. **-ಪರಿಸಾಡಣಾ.** ಸ್ತ್ರೀ: [-ಪರಿಶಾಟನಾ] ಕರ್ಮ-ಪುದ್ಗಲಗಳ ಜೀವ-ಪ್ರದೇಶಗಳಲ್ಲಿ ಆಗುವ ಪೃಥಕ್ಕರಣೆ(ಸೂಅ), **-ಪುರಿಸ.** ಪು: [-ಪುರುಷ] ಕರ್ಮ-ಪ್ರಧಾನವಾದ ಪುರುಷರು-೧, ಶಿಲ್ಪಿ, ಮಹಾರಂಭ ಮಾಡುವ ವಾಸುದೇವನೇ ಮೊದಲಾದ ರಾಜರುಗಳು(ತಾ), **-ಪ್ಪವಯ.** ನ: [-ಪ್ರವಾದ] ಜೈನ-ಗ್ರಂಥಾಂಶ-ವಿಶೇಷ, ಎಂಟನೆಯದರ ಹಿಂದಿನದು. **-ಬಂಧ.** ಪು: [-ಬಂಧ] ಕರ್ಮ ಪುದ್ಗಲಗಳು ಆತ್ಮದಲ್ಲಿ ಸೇರಿಕೊಳ್ಳುವುದು, ಕರ್ಮಗಳಲ್ಲಿ ಆತ್ಮದ ಬಂಧನ (ಆವ), **-ಭೂಭಗ.** ವಿ: [-ಭೂಮಿಕ] ಕರ್ಮಭೂಮಿಯಲ್ಲಿ ಹುಟ್ಟುವುದು, **-ಭೂಮಿ.** ಸ್ತ್ರೀ: [-ಭೂಮಿ] ಕರ್ಮ-ಪ್ರಧಾನ ಭೂಮಿ, ಭರತ-ಕ್ಷೇತ್ರವೇ ಮೊದಲಾದವು. **-ಭೂಮಿಗ.** **'ಭೂಮಗ'**ಶಬ್ದವನ್ನು ನೋಡುವುದು. **-ಭೂಮಿಯ.** ವಿ: [-ಭೂಮಿಜ] ಕರ್ಮ ಭೂಮಿಯಲ್ಲಿ ಹುಟ್ಟಿದ, **-ಮಾಸ.** ಪು: [-ಮಾಸ] ಶ್ರಾವಣ ಮಾಸ, **-ಮಾಸಗ.** ಪು: [-ಮಾಷಕ] ಒಂದು ಅಳತೆ; ಐದು ಗುಂಜಿ, ತೂಕ. **-ಯ.** ವಿ: [-ಜ] ಕರ್ಮದಿಂದ ಹುಟ್ಟುವ, ಕರ್ಮ-ಪುದ್ಗಲಗಳಿಂದ

ಆಗಿರುವ ಶರೀರ-ವಿಶೇಷ, ಕಾರ್ಮಣ-ಶರೀರ(ಠಾ), **-ಯಾ.** ಸ್ತ್ರೀ: [-ಜಾ] ಅಭ್ಯಾಸದಿಂದ ಹುಟ್ಟುವ ಬುದ್ಧಿ, ಅನುಭವ. **-ಲೆಸ್ಸಾ.** ಸ್ತ್ರೀ: [-ಲೇಶ್ಯಾ] ಕರ್ಮದ ಮೂಲಕ ಉಂಟಾಗುವ ಜೀವದ ಪರಿಣಾಮ(ಭಗ)**-ವಗ್ಗಣಾ.** ಸ್ತ್ರೀ: [-ವರ್ಗಣಾ] ಕರ್ಮ ರೂಪದಲ್ಲಿ ಕೊನೆಮುಟ್ಟುವ ಪುದ್ಗಲ ಸಮೂಹ, **-ವಾಇ.** ವಿ: [-ವಾದಿನ್] ಭಾಗ್ಯ ಅಥವಾ ಅದೃಷ್ಟ (=ಪ್ರಾರಬ್ಧ)ವೇ ಸಕಲವೂ ಎಂದು ಒಪ್ಪುವವನು. **-ವಿವಾಗ.** ಪು: [-ವಿಪಾಕ] ಕರ್ಮದ ಪರಿಣಾಮ, ಕರ್ಮ-ಫಲ, ಕರ್ಮ-ವಿಪಾಕವನ್ನು ಪ್ರತಿಪಾದಿಸುವ ಗ್ರಂಥ, **-ಸಂವಚ್ಛರ.** [-ಸಂವತ್ಸರ] ಲೌಕಿಕ ವರ್ಷ, **-ಸಾಲಾ.** ಸ್ತ್ರೀ: [-ಶಾಲಾ] ಕಾರ್ಖಾನೆ, ಕುಂಬಾರನು ಗಡಿಗೆ ಮಡಕೆ ಇತ್ಯಾದಿಗಳನ್ನು ಮಾಡುವ ಸ್ಥಳ. **-ಸಿದ್ಧ.** ಪು: [-ಸಿದ್ಧ] ಶಿಲ್ಪಿ, **ಕಮ್ಮಾಜೀವ.** ವಿ: [ಕರ್ಮಾಜೀವ] ಶಿಲ್ಪಿ, ಶಿಲ್ಪಕಲೆಯ ಯಾವುದಾದರೂ ಕೆಲಸವನ್ನು ಹೇಳಿ ಭಿಕ್ಷಾದಿಯನ್ನು ಪಡೆದುಕೊಳ್ಳುವ ಸಾಧು(ಠಾ), **ಕಮ್ಮಾದಾಣ.** ನ: [ಕರ್ಮಾದಾನ] ಭಾರೀ ಪಾಪ ತುಂಬಿರುವ ವ್ಯಾಪಾರ. **ಕಮ್ಮಾಯರಿಯ.** ಪು: [ಕರ್ಮಾರ್ಯ] ಕರ್ಮದಿಂದ ದೋಷವಿಲ್ಲದ, ನಿರ್ದೋಷ ಅಥವಾ ಆರ್ಯವ್ಯಾಪಾರವೆನಿಸಿಕೊಳ್ಳುವ(ಪಣ್ಣ) **ಕಮ್ಮಾವಾಇ.** '-ವಾಇ' ಶಬ್ದವನ್ನು ನೋಡುವುದು

ಕಮ್ಮ. ವಿ: [ಕಾರ್ಮಣ] ಕರ್ಮ ಸಂಬಂಧಿಯಾದ, ಕರ್ಮದಿಂದ ಹುಟ್ಟಿದ, ಕರ್ಮ-ನಿರ್ಮಿತವಾದ, ಕರ್ಮಮಯವಾದ, ಬೇರೆ ಜನ್ಮದಲ್ಲೂ ಆತ್ಮದೊಂದಿಗೇ ಇರುವ ಕರ್ಮ ಪುದ್ಗಲಗಳಿಂದಲೇ ಆಗಿರುವ ಒಂದು ಅತ್ಯಂತ ಸೂಕ್ಷ್ಮ ಶರೀರ. ಕರ್ಮ-ವಿಶೇಷ, ಕಾರ್ಮಣ-ಶರೀರಕ್ಕೆ ಹೇತು-ಭೂತವಾದ ಕರ್ಮ. ಕಾರ್ಮಣ ಶರೀರದ ವ್ಯಾಪಾರ.

ಕಮ್ಮಇಯ. ನ: [ಕರ್ಮಚಿತ್, ಕಾರ್ಮಣ] ಮೇಲಿನ ಶಬ್ದವನ್ನು ನೋಡುವುದು(ಪಉಮ)

ಕಮ್ಮಂತ. ಪು: [ದೇ. ಕರ್ಮಾಂತ] ಕರ್ಮ-ಬಂಧನದ ಕಾರಣ(ಆಚಾ) ಕೆಲಸದ ಸ್ಥಳ

ಕಮ್ಮಂತ. ವಿ: [ಕುರ್ವತ್] ಕ್ಷೌರ ಮಾಡುತ್ತಿರುವ, ಕ್ಷೌರಿಕ, ನಾಪಿತ, **-ಸಾಲಾ.** ಸ್ತ್ರೀ: [-ಶಾಲಾ] ಚಿಕ್ಕಕತ್ತಿ, ಚೂರಿ ಮೊದಲಾದ ಸಲಕರಣೆಗಳನ್ನು ಜೋಡಿಸಿಡುವ ಸ್ಥಳ.

ಕಮ್ಮಕ್ಕರ. **'ಕಮ್ಮ-ಕರ'** ಶಬ್ದವನ್ನು ನೋಡುವುದು

ಕಮ್ಮಗ. ನ:[ಕರ್ಮಕ, ಕಾರ್ಮಕ, ಕಾರ್ಮಣ] **'ಕಮ್ಮ=ಕಾರ್ಮಣ'** ಶಬ್ದವನ್ನು ನೋಡುವುದು (ಪಣ್ಣ)

ಕಮ್ಮಣ. ನ: [ಕಾರ್ಮಣ] ಕರ್ಮಮಯ ಶರೀರ, ಔಷಧ, ಮಂತ್ರ ಇತ್ಯಾದಿಗಳ ಮೂಲಕ ಮೋಹನ, ವಶೀಕರಣ-ಉಚ್ಚಾಟನ ಇವೇ ಮೊದಲಾದುವನ್ನು ಮಾಡುವುದು. **-ಗಾರಿ.** ವಿ: [-ಕಾರಿನ್] ಕಾರ್ಮಣವನ್ನು ಮಾಡುವವನು. **-ಜೋಯ.** ಪು: [-ಜೋಗ] ಕಾರ್ಮಣದ ಪ್ರಯೋಗ (ಣಾಯಾ)

ಕಮ್ಮಣ. ನ: [ಭೋಜನ] ಭೋಜನ

ಕಮ್ಮಮಾಣ. **'ಕಮ=ಕಮ್'** ಶಬ್ದವನ್ನು ನೋಡುವುದು

ಕಮ್ಮಯ. **'ಕಮ್ಮಗ'** ಶಬ್ದವನ್ನು ನೋಡುವುದು

ಕಮ್ಮವ. ಸಕ: [ಉಪ+ಭುಜ್] ವಿಷಯಾನುಭವ ಹೊಂದು, ಉಪಭೋಗಿಸು

ಕಮ್ಮವಣ. ನ: [ಉಪಭೋಗ] ಉಪಭೋಗ, ವಿಷಯ ಸುಖ, ಜಾರಿಗೆ ತರುವುದು

ಕಮ್ಮಸ. ವಿ: [ಕಲ್ಮಷ] ಮಾಲಿನ್ಯ, ಕೊಳೆ, ನ: ಪಾಪ

ಕಮ್ಮಾ. ಸ್ತ್ರೀ: [ಕರ್ಮನ್] ಕ್ರಿಯೆ, ಮಾಡುವಿಕೆ, ಕೆಲಸ, ಉದ್ಯೋಗ, ವ್ಯಾಪಾರ(ಠಾ)

ಕಮ್ಮಾರ. ಪು: [ಕರ್ಮಾರ] ಕಬ್ಬಿಣದ ಕೆಲಸ ಮಾಡುವವನು, ಶಿಲ್ಪಿ, ಕಮ್ಮಾರ, ಒಂದು ಗ್ರಾಮ

ಕಮ್ಮಾರ}. ವಿ: [ಕರ್ಮಕಾರ, -ಕ] ಕಮ್ಮಾರ, ಆಳು,
ಕಮ್ಮಾರಗ}. ಶಿಲ್ಪಿ
ಕಮ್ಮಾರಯ}.

ಕಮ್ಮಾರಿಯಾ. ಸ್ತ್ರೀ: [ಕರ್ಮಕಾರಿಕಾ] ನೌಕರಳು, ಸ್ತ್ರೀ ಕೆಲಸಗಾರ್ತಿ, ದಾಸಿ

ಕಮ್ಮಿ}. ವಿ: [ಕರ್ಮಿನ್] ಕೆಲಸ ಮಾಡುವವನು,
ಕಮ್ಮಿಅ}. ಅಭ್ಯಾಸಿ, ಪಾಪ ಕೃತ್ಯ ಮಾಡುವವನು

ಕಮ್ಮಿಯಾ. ಸ್ತ್ರೀ: [ಕರ್ಮಿಕಾ, ಕಾರ್ಮಿಕಾ] ಅಭ್ಯಾಸದಿಂದ ಹುಟ್ಟುವ ಬುದ್ಧಿ(ಣಾಯಾ), ಸವೆಯದೆ ಇರುವ ಕರ್ಮ-ಶೇಷ, ಉಳಿದಿರುವ ಕರ್ಮ

ಕಮ್ಮಲ. ನ: [ಕಶ್ಮಲ] ಪಾಪ

ಕಮ್ಹಾ. ಅ: [ಕಸ್ಮಾತ್] ಏಕೆ?, ಯಾವ ಕಾರಣದಿಂದ

ಕಮ್ಹಾರ. '**ಕಭಾರ**' ಶಬ್ದವನ್ನು ನೋಡುವುದು. **–ಜ.** ನ: [**–ಜ**] ಕೇಸರ, ಕುಂಕುಮ

ಕಮ್ಹಿಅ. ಪು: [ದೇ] ಮಾಲಿ,

ಕಮ್ಹೀರ. '**ಕಂಭಾರ**' ಶಬ್ದವನ್ನು ನೋಡುವುದು.

ಕಯ. ಪು: [**ಕಚ**] ಕೇಶ, ಕೂದಲು

ಕಯ. ಪು: [**ಕ್ರಯ**] ಕೊಂಡುಕೊಳ್ಳುವುದು

ಕಯ. '**ಕಡ=ಕೃತ**' ಶಬ್ದವನ್ನು ನೋಡುವುದು. **–ಉಣ್ಣ, ಉನ್ನ.** ವಿ: [**–ಪುಣ್ಯ**] ಪುಣ್ಯಶಾಲಿ, ಭಾಗ್ಯವಂತ. **–ಕ.** '**–ಗ**' ಅನ್ನು ನೋಡುವುದು. **–ಕಜ್ಜ.** ವಿ:[**–ಕಾಯ**] ಕೃತಾರ್ಥನಾದವನು, ತನ್ನ ಇಷ್ಟಾರ್ಥ ಸಾಧಿಸಿಕೊಂಡವನು, **–ಕರಣ.** ವಿ: [**–ಕರಣ**] ಅಭ್ಯಾಸಿ, ಅಭ್ಯಾಸವನ್ನು ಮಾಡಿದವನು, **–ಕಿಚ್ಚ.**ವಿ: [**–ಕೃತ್ಯ**] ತನ್ನ ಮನೋರಥವನ್ನು ಈಡೇರಿಸಿಕೊಂಡವನು(ಸುಪಾ),**–ಗ.** ವಿ: [**–ಕ**] ತನ್ನ ಉತ್ಪತ್ತಿಯಲ್ಲಿ ಬೇರೊಂದರ ಅಪೇಕ್ಷೆ ಇಟ್ಟುಕೊಂಡವನು, ಪ್ರಯತ್ನದಿಂದ ಹುಟ್ಟಿದ್ದು. ಪು: ದಾಸ, ಆಳು, ನ: ಚಿನ್ನ **–ಗ್ಘ.** ವಿ: [**–ಘ್ನ**] ಉಪಕಾರ ಸ್ಮರಣೆ ಮಾಡದವನು=ಕೃತಘ್ನ.

–ಜಾಣುಅ. ವಿ: [**–ಜ್ಞಾಯಕ**] ಕೃತಜ್ಞ, ಮಾಡಿದ ಉಪಕಾರ ಸ್ಮರಿಸುವವನು. **–ಣ್ಣು.** ವಿ: [**–ಜ್ಞ**] ಉಪಕಾರ ಸ್ಮರಿಸುವವನು. **–ಣ್ಣುಯಾ.** ಸ್ತ್ರೀ: [**–ಜ್ಞತಾ**]ಕೃತಜ್ಞತೆ, ಮಾಡಿದ ಉಪಕಾರ ಸ್ಮರಿಸುವುದು, **–ತ್ಥ.** ವಿ: [**–ಕೃತಾರ್ಥ**] ಸಫಲನಾದವನು, ಕರ್ತವ್ಯ ನೆರವೇರಿಸಿದವನು. **–ನಾಸಿ.** ವಿ: [**–ನಾಶಿನ್**] ಕೃತಘ್ನ, **–ಪಂಜಲಿ.** ವಿ: [**–ಪ್ರಾಂಜಲಿ**] ಕೃತಾಂಜಲಿ: ನಮಸ್ಕರಿಸುವ ಸಲುವಾಗಿ ತನ್ನ ಕೈ ಜೋಡಿಸಿದವನು. **–ಪಡಿಕಇ.** ಸ್ತ್ರೀ: [**–ಪ್ರತಿಕೃತಿ**] ಪ್ರತ್ಯುಪಕಾರ, ವಿನಯ–ವಿಶೇಷ **–ಪಡಿಕಇಯಾ.** ಸ್ತ್ರೀ: [**–ಪ್ರತಿಕೃತಿತಾ**] ಪ್ರತ್ಯುಪಕಾರ(ಣಾಯಾ), ವಿನಯದ ಇನ್ನೊಂದು ಭೇದ, **–ಬಲಿಕಮ್ಮ.** ವಿ: [**–ಬಲಿಕರ್ಮನ್**] ದೇವತೆಗಳ ಪೂಜೆಯನ್ನು ಮಾಡಿದವನು(ಭಗ), **–ಮಂಗಲಾ.** ಸ್ತ್ರೀ: [**–ಮಂಗಲಾ**] ಈ ಹೆಸರಿನ ಒಂದು ನಗರ, **–ಮಾಲಾ, –ಮಾಲಯ.** ವಿ: [**–ಮಾಲ, –ಕ**] ಹಾರವನ್ನು ಮಾಡಿದವನು, ಪು: ಕಕ್ಕೆ ಗಿಡ, ಕಣಿಗಲ ಗಿಡ(ಉಪ), ತಮಿಸ್ರಾ ಎಂಬ ಗುಹೆಯ ಅಧಿಷ್ಠಾತೃ ದೇವ(ಠಾ), **–ಲಕ್ಖಣ.** ವಿ: [**–ಲಕ್ಷಣ**] ತನ್ನ ಶರೀರ ಚಿಹ್ನೆಯನ್ನು ಸಫಲ ಮಾಡಿಕೊಂಡಿರುವವನು. **–ಬ.** ವಿ: [**–ವತ್**] ಮಾಡಿದವನು. **–ವಣಮಾಲಪಿಯ.** ಪು: [**–ವನಮಾಲಪ್ರಿಯ**] ಈ ಹೆಸರಿನೊಬ್ಬ ಯಕ್ಷ, **–ವಮ್ಮ.** ಪು: [**–ವರ್ಮನ್**] ಭಗವನ್ ವಿಮಲನಾಥನ ತಂದೆಯಾದ ಒಬ್ಬ ರಾಜ. **–ವೀರಿಯ.** ಪು: [**–ವೀರ್ಯ**] ಕಾರ್ತವೀಯನ ತಂದೆಯ ಹೆಸರು.(ಸೂಅ)

ಕಯಂ. ಅ: [**ಕೃತಮ್**] ಸಾಕು, ಸಾಕುಮಾಡು, ನಿಲ್ಲಿಸು, ಪರ್ಯಾಪ್ತ, ಇಷ್ಟೇ

ಕಯಂಗಲಾ. ಸ್ತ್ರೀ: [**ಕೃತಂಗಲಾ**] ಶ್ರಾವಸ್ತಿ ನಗರದ ಸಮೀಪದಲ್ಲಿರುವ ಒಂದು ನಗರ.

ಕಯಂತ. ಪು: [**ಕೃತಾಂತ**] ಯಮ, ಮೃತ್ಯು, ಶಾಸ್ತ್ರ, ಸಿದ್ಧಾಂತ, ರಾವಣನ ಈ ಹೆಸರಿನ ಒಬ್ಬ ಯೋಧ. **–ಮುಹ.** ಪು: [**–ಮುಖ**] ರಾಮಚಂದ್ರನ ಒಬ್ಬ ಸೇಪತಿಯ ಹೆಸರು. **–ವಯಣ.** ಪು: [**–ವದನ**] ರಾಮನ ಒಬ್ಬ ಸೇನಾಪತಿ.

ಕಯಂಧ. '**ಕಮಂಧ**' ಶಬ್ದವನ್ನು ನೋಡುವುದು.

ಕಯಂಬ. '**ಕಲಂಬ**' ಶಬ್ದವನ್ನು ನೋಡುವುದು.

ಕಯಂಬ. ಪು: ಕದಂಬ. ಸಮೂಹ

ಕಯಂಬಿಯ. ವಿ: [**ಕದಂಬಿತ**] ಅಲಂಕೃತ, ಅಲಂಕರಿಸಲ್ಪಟ್ಟ

ಕಯಂಬುಅ. '**ಕಲಂಬುಅ**' ಶಬ್ದವನ್ನು ನೋಡುವುದು.

ಕಯಂವ. ಪು: [**ಕದಂಬ**] ಸಮೂಹ, ರಾಶಿ

ಕಯಗ. ವಿ: [**ಕೃತಕ**] ಪ್ರಯತ್ನದಿಂದ ಹುಟ್ಟಿದ್ದು.

ಕಯಗ. ವಿ: [**ಕ್ರಾಯಕ**] ಕೊಳ್ಳುವವನು

ಕಯಗ. ಪು: [**ಕತಕ**] ಚಿಲ್ಲದ ಗಿಡ, ನ: ಚಿಲ್ಲದ ಬೀಜ. ಇದರ ಸಂಪರ್ಕದಿಂದ ನೀರು ಶುದ್ಧಿಯಾಗುವುದು

ಕಯಜ್ಜ. ವಿ: [**ಕದರ್ಯ**] ಜಿಪುಣ. ಕೃಪಣ

ಕಯಡ್ಡಿ. ಪು: [**ಕಪರ್ದಿನ್**] ಈ ಹೆಸರಿನ ಒಬ್ಬ ಯಕ್ಷದೇವತೆ(ಸುಪಾ), ಶಿವ

ಕಯಣ. ನ: [**ಕದನ**] ಹಿಂಸೆ, ಕೊಲ್ಲುವುದು, ಸಂಹಾರ,

ಕಪತ್ಥ. ಸಕ: [**ಕದರ್ಥಯ್**] ಚಕಿತಗೊಳಿಸು, ವ್ಯಗ್ರಗೊಳಿಸು, ಪೀಡಿಸು(ಧಮ)

ಕಯನ್ನ. ವಿ: [**ಕದನ್ನ**] ಹಾಳಾಗಿರುವ ಅನ್ನ

ಕಯತ್ಥಣ. ನ: [**ಕದರ್ಥನ**] ಚಕಿತಗೊಳಿಸುವುದು, ಪೀಡಿಸುವುದು(ಸುಪಾ)

ಕಯತ್ಥಣಾ. ಸ್ತ್ರೀ: [ಕದರ್ಥನಾ] ಮೇಲಿನ ಶಬ್ದವನ್ನು ನೋಡುವುದು.
ಕಯತ್ಥಿಯ. ವಿ: [ಕದರ್ಥಿತ] ಚಕಿತಗೊಳಿಸಲ್ಪಟ್ಟ, ಪೀಡಿತ
ಕಯಮ. ವಿ: [ಕತಮ] ಬಹುಮಂದಿಗಳಲ್ಲಿ ಯಾರು?
ಕಯರ. ವಿ: [ಕತರ] ಇಬ್ಬರಲ್ಲಿ ಯಾರು?
ಕಯರ. ಪು: [ಕ್ರಕರ] ಮುಳ್ಳು ಅಜ್ಜಿ ಗಿಡ, ಬರಲು ಮರ, ನ: ಬರಲು ಮರದ ಹಣ್ಣು
ಕಯಲ. ಪು: [ಕದಲ] ಬಾಳೆ ಗಿಡ, ಬಾಳೆ ಕಂಬ, ನ: ಬಾಳೆ ಹಣ್ಣು
ಕಯಲ. ನ: [ದೇ] ನೀರು ತುಂಬುವ ಮಣ್ಣಿನ ಹೂಜಿ,
ಕಯಲಿ, –ಲೀ. ಸ್ತ್ರೀ: [ಕದಲಿ, ಕದಲೀ] ಬಾಳೆ ಗಿಡ, **–ಸಮಾಗಮ.** ಪು: [–ಸಮಾಗಮ] ಈ ಹೆಸರಿನ ಒಂದು ಹಳ್ಳಿ, **–ಹರ.** ನ: [–ಗೃಹ] ಬಾಳೆಕಂಬದಿಂದ ಮಾಡಿದ ಮನೆ,
ಕಯಲ್ಲಯ. 'ಕಯ=ಕೃತ' ಶಬ್ದವನ್ನು ನೋಡುವುದು
ಕಯವರ. ಪು: [ದೇ] ಕಸ, ಕೊಳೆ(ಣಾಯಾ), ಪುರೀಷ, ಮಲ
ಕಯವರುಜ್ಝಿಯಾ. ಸ್ತ್ರೀ: [ದೇ. ಕಚವರೋಜ್ಝಿಕಾ] ಕಸವನ್ನು ಚೊಕ್ಕಟಗೊಳಿಸುವ ಹೆಣ್ಣಾಳು,
ಕಯವಾಲು. ಪು: [ಕೃಕವಾಕು] ಹುಂಜ(ಗಉಡ)
ಕಯವಾಯ. ಪು: [ಕೃಕವಾಕ] ಹುಂಜ(ಪಾಅ)
ಕಯಸಣ. ನ: [ಕದಶನ] ಕೆಟ್ಟ ಊಟ
ಕಯಸೇಹರ. ಪು: [ದೇ] ಹುಂಜ
ಕಯಾ. ಅ: [ಕದಾ] ಯಾವಾಗ? ಯಾವ ಹೊತ್ತಿನಲ್ಲಿ?
ಕಯಾಇ. ಅ: [ಕದಾಪಿ] ಯಾವಾಗಲೋ ಒಮ್ಮೆ, ಯಾವುದೋ ಒಂದು ಸಮಯದಲ್ಲಿ (ಉವಾ)
ಕಯಾಇ.} ಅ: [ಕದಾಚಿತ್] ಎಂದಾದರೂ,
ಕಯಾಇಂ}. ಯಾವಾಗಲಾದರೂ, ಸಂದೇಹವನ್ನು,
ಕಯಾಈ}. ಸಂಭಾವನಾರ್ಥವನ್ನು ಸೂಚಿಸುವ ಅವ್ಯಯ
ಕಯಾಣ. ನ: [ಕ್ರಯಾಣಕ] ಮಾರಲು ಯೋಗ್ಯವಾದ ವಸ್ತು
ಕಯಾಣಗ. ಪುಂನ: 'ಕಯಾಣ' ಶಬ್ದವನ್ನು ನೋಡುವುದು
ಕಯಾರ. ಪು: [ದೇ] ಕಸ, ಕೊಳೆ, ಮಲ
ಕಯಾವಿ. 'ಕಯಾಇ'=ಕದಾಪಿ' ಶಬ್ದವನ್ನು ನೋಡುವುದು.

ಕರ. ಸಕ: [ಕೃ] ಮಾಡು– 'ಕರಇ' . ಕರ್ಮ–ಕಜ್ಜಇ', ವ. ಕೃ–ಕರಂತ, ಕವಕೃ–ಕಜ್ಜಮಾಣ
ಕರ. ಪು: [ಕರ] ಒಂದು ಮಹಾ ಗ್ರಹ, ಕೈ, ಕಂದಾಯ, ಬಾಡಿಗೆ, ತೆರಿಗೆ, ಕಿರಣ, ಆನೆಯ ಸೊಂಡಿಲು, ಆಲಿಕಲ್ಲು, **–ಗ್ಗಹ.** ಪು: [–ಗ್ರಹ] ಕೈಯಿಂದ ಹಿಡಿದುಕೊಳ್ಳುವುದು(ಗಾ), ಪಾಣಿ–ಗ್ರಹಣ. ಮದುವೆ **–ಯ.** ಪು: [–ಜ] ಉಗುರು, **–ರುಹ.** ಪುಂನ: [–ಕರರುಹ] ಉಗುರು, ಪು: ಒಬ್ಬ ರಾಜ(ಪಉಮ), **–ಲಾಘವ.** ನ: [–ಲಾಘವ] ಹಸ್ತ–ಲಾಘವ, **–ವಂದಣ.** ನ: [–ವಂದನ] ನಮಸ್ಕಾರದಲ್ಲಿ ಕಂಡುಬರುವ ಒಂದು ದೋಷ: ಇದೊಂದು ಬಗೆಯ ಶುಲ್ಕ ಎಂದು ಭಾವಿಸಿ ನಮಸ್ಕರಿಸುವುದು.
ಕರಅಡೀ}. ಸ್ತ್ರೀ: [ದೇ] ದಪ್ಪ ಬಟ್ಟೆ
ಕರಅರೀ}.
ಕರಆ. ಸ್ತ್ರೀ: [ಕರಕಾ] ಆಲಿಕಲ್ಲು
ಕರಇಲ್ಲೀ. ಸ್ತ್ರೀ: [ದೇ] ಒಣಗಿದ ಮರ
ಕರಂಕ. ಪು: [ದೇ. ಕರಂಗ] ಭಿಕ್ಷಾಪಾತ್ರೆ, ಅಶೋಕವೃಕ್ಷ
ಕರಂಕ. ಪುಂ.ನ: [ಕರಂಕ] ಮೂಳೆ, ಅಸ್ಥಿ–ಪಂಜರ, ತಾಂಬೂಲದ ಪೆಟ್ಟಿಗೆ, ಮೂಳೆಗಳ ರಾಶಿ
ಕರಂಜ. ಸಕ: [ಭಂಜ್] ಮುರಿ, ತುಂಡು ಮಾಡು–
ಕರಂಜ. ಪು: [ಕರಂಜ] ಹೊಂಗೆ ಮರ(ಪಣ್ಣ)
ಕರಂಜ. ಪು: [ದೇ] ಒಣ ಚರ್ಮ
ಕರಂಡ. ಪುಂ.ನ: [ದೇ] ಬಿದಿರಿನ ಆಕೃತಿಯ ಮೂಳೆ,
ಕರಂಜಿಅ. ವಿ: [ಭಗ್ನ] ಮುರಿದುಹಾಕಿದ, ತುಂಡು ಮಾಡಿದ(ಕುಮಾ)
ಕರಂಡ}. ಪು: [ಕರಂಡ. –ಕ] ಸಣ್ಣ ಡಬ್ಬಿ,
ಕರಂಡಗ}. ಭರಣಿ(ಪಣ್ಣ)
ಕರಂಡಯ}.
ಕರಂಡಿಯಾ. ಸ್ತ್ರೀ: [ಕರಂಡಿಕಾ] ಸಣ್ಣ ಡಬ್ಬಿ, ಭರಣಿ (ಣಾಯಾ)
ಕರಂಡೀ. ಸ್ತ್ರೀ: [ಕರಂಡೀ] ಡಬ್ಬಿ, ಸಣ್ಣ ಪೆಟ್ಟಿಗೆ, ಬಟ್ಟಲಿನ ಆಕಾರದ ಪಾತ್ರೆ(ಉಪ)
ಕರಂಡುಯ. ನ: [ದೇ] ಬೆನ್ನಿನ ಪಕ್ಕದ ಮೂಳೆ
ಕರಂತ. 'ಕರ=ಕೃ' ಶಬ್ದವನ್ನು ನೋಡುವುದು.
ಕರಂಬ. ಪು: [ಕರಂಬ] ಮೊಸರು ಮತ್ತು ಅನ್ನ ಸೇರಿಸಿ ಮಾಡಿದ ಒಂದು ಖಾದ್ಯ ಪದಾರ್ಥ, ಮೊಸರನ್ನ

ಕರಂಬಿಯ. ವಿ: [ಕರಂಬಿತ] ಹರಡಿದ, ವ್ಯಾಪಿಸಿದ, ಖಚಿತ(ಗಉಡ), ಬೆರಕೆಯಾದ
ಕರಕಂಟ. ಪು: [ಕರಕಂಟ] ಈ ಹೆಸರಿನ ಒಬ್ಬ ಪರಿವ್ರಾಜಕ ಸಂನ್ಯಾಸಿ, ಒಬ್ಬ ತಾಪಸ(ಔಪ)
ಕರಕಂಡು. ಪು: [ಕರಕಂಡು] ಒಬ್ಬ ಜೈನ ಮಹರ್ಷಿ
ಕರಕಚಿಯ. ವಿ: [ಕ್ರಕಚಿತ] ಗರಗಸದಿಂದ ಸೀಳಲ್ಪಟ್ಟ
ಕರಕಡ. ವಿ: [ದೇ. **ಕರ್ಕರ, ಕರ್ಕಟ**] ಕಠಿಣವಾದ, ಕರ್ಕಶವಾದ, ಕಠೋರವಾದ(ಉವಾ)
ಕರಕಡೀ. ಸ್ತ್ರೀ: [ದೇ. **ಕರಕಟೀ**] ಚಿಂದಿ ಬಟ್ಟೆ, ಪ್ರಾಚೀನ ಕಾಲದಲ್ಲಿ ವಧ್ಯ ಪುರುಷನಿಗೆ ತೊಡಿಸುತ್ತಿದ್ದ ನಿಂದನೀಯ ವಸ್ತ್ರ(ವಿಪಾ)
ಕರಕಯ. ಪು: [ಕ್ರಕಚ] ಗರಗಸ(ಪಣ್ಣ)
ಕರಕರ. ಪು: [ಕರಕರ] '**ಕರಕರ**' ಶಬ್ದ, **–ಸುಂಠ.** ಪುಂ.ನ: [**–ಶುಂಠ**] ಒಂದು ಬಗೆಯ ಹುಲ್ಲು(ಪಣ್ಣ)
ಕರಕರಿಗ. ಪು: [ಕರಕರಿಕ] ಒಂದು ಗ್ರಹ, ಗ್ರಹದ ಅಧಿಷ್ಠಾತೃ–ದೇವ(ಠಾ)
ಕರಗ. ಪು: [ಕರಕ] ಆಲಿಕಲ್ಲು (ಶ್ರಾ), ನೀರಿನ ಸಣ್ಣ ಪಾತ್ರೆ, ಕಮಂಡಲು. '**ಕರಯ=ಕರಕ**' ಶಬ್ದವನ್ನು ನೋಡುವುದು.
ಕರಗ. '**ಕಾರಗ=ಕಾರಕ**' ಶಬ್ದವನ್ನು ನೋಡುವುದು.
ಕರಗಯ. '**ಕರಕಯ**' ಶಬ್ದವನ್ನು ನೋಡುವುದು.
ಕರಗ್ಗಹ. '**ಕರ–ಗಹ**' ಶಬ್ದವನ್ನು ನೋಡುವುದು
ಕರಘಾಯಲ. ಪು: [ದೇ] ಹಾಲಿನ ಕೆನೆ, ಹಾಲುಖೋವ
ಕರಚ್ಛೋಡಿಯಾ. ಸ್ತ್ರೀ: [ದೇ] ಬೀಗದ ಕೈ, ಕೆರೆ, ಹೊಂಡ
ಕರಟ್ಟ. ಪು: [ದೇ] ಅಪವಿತ್ರ ಅನ್ನವನ್ನು ತಿನ್ನುವ ಬ್ರಾಹ್ಮಣ
ಕರಡ. ಪು: [ಕರಟ] ಕಾಗೆ, ಆನೆಯ ಗಂಡಸ್ಥಲ, ಒಂದು ವಾದ್ಯ–ವಿಶೇಷ, ಕುಸುಬೆ ಗಿಡ, ಬರಲು ಮರ, ಮರಳುಗಾಡಿನಲ್ಲಿ ಬೆಳೆಯುವ ಒಂಟೆಗೆ ಪ್ರಿಯವಾದ ಮುಳ್ಳಿನ ಗಿಡ, ಓತಿಕ್ಯಾತ, ನಾಸ್ತಿಕ, ಶ್ರದ್ಧಾ–ವಿಶೇಷ
ಕರಡ. ಪು: [ದೇ] ವ್ಯಾಘ್ರ, ಹುಲಿ, ವಿ: ಕೆಂಪು–ಹಳದಿ ಬಣ್ಣ, ನಾನಾ ವರ್ಣದ(ದೇ)
ಕರಡಾ. ಸ್ತ್ರೀ: [ದೇ] ಒಂದು ಜಾತಿಯ ಹೊಂಗೆ ಮರ, ಒಂದು ಜಾತಿಯಪಕ್ಷಿ, ದುಂಬಿ, ವಾದ್ಯ–ವಿಶೇಷ
ಕರಡಿ. ಪು: [ಕರಟಿನ್] ಆನೆ
ಕರಡೀ. ಸ್ತ್ರೀ: [ದೇ. **ಕರಟೀ**] ವಾದ್ಯ–ವಿಶೇಷ–ಕರಡೀವಾದ್ಯ
ಕರಡುಯಭತ್ತ ನ: [ದೇ] ಶ್ರಾದ್ಧ–ವಿಶೇಷ
ಕರಣ. ನ: [ಕರಣ] ಇಂದ್ರಿಯ, ಪದ್ಮಾಸನವೇ ಮೊದಲಾದ ಆಸನಗಳು, ಆಶ್ರಯ, ಕೃತಿ, ಕ್ರಿಯೆ, ವಿಧಾನ, ಕರಣ–ಕಾರಕ, ಉಪಕರಣ, ನ್ಯಾಯಾಲಯ, ವೀರ್ಯ–ಸ್ಫುರಣ, ಜ್ಯೋತಿ ಶ್ಯಾಸ್ತ್ರದಲ್ಲಿ ಪ್ರಸಿದ್ಧವಾದ ಬವ, ಬಾಲವ ಮೊದಲಾದ ೧೧ ಕರಣಗಳು, ನಿಮಿತ್ತ, ಪ್ರಯೋಜನ, ಜೈಲು, ಮಾಡಿದ್ದು–ಕರಣ, ಮಾಡುವವನು, **ಕರಣಾಹಿವಇ.** ಪು: [**ಕರಣಾಧಿಪತಿ**] ಬಂದೀಖಾನೆಯ ಅಧ್ಯಕ್ಷ(ಭವಿ)
ಕರಣಯಾ. ಸ್ತ್ರೀ: [ಕರಣತಾ] ಅನುಷ್ಠಾನ ಕ್ರಿಯೆ, ಸಂಯಮದ ಅನುಷ್ಠಾನ
ಕರಣಸಾಲಾ. ಸ್ತ್ರೀ: [ಕರಣಶಾಲಾ] ನ್ಯಾಯ ದೇಗುಲ
ಕರಣಿ. ಸ್ತ್ರೀ: [ದೇ] ಕ್ರಿಯೆ
ಕರಣಿ. ಸ್ತ್ರೀ: [ದೇ] ರೂಪ, ಆಕರ, ಸಾದೃಶ್ಯ, ಅನುಕರಣೆ, ನಕಲಿಸುವುದು, ಒಪ್ಪಿಗೆ(ಉಪ)
ಕರಣಿಜ್ಜ. '**ಕರ=ಕೃ**' ಶಬ್ದವನ್ನು ನೋಡುವುದು.
ಕರಣಿಲ್ಲ. ವಿ: [ದೇ] **ಸಮಾನ, ಸದೃಶ, ಹೋಲುವ**
ಕರಣೀಅ. '**ಕರ=ಕೃ**' ಶಬ್ದವನ್ನು ನೋಡುವುದು.
ಕರಪತ್ತ. ನ: [ಕರಪತ್ರ] ಗರಗಸ(ವಿಪಾ)
ಕರಭ. ಪು: [ಕರಭ] ಒಂಟೆ(ಪಣ್ಣ)
ಕರಭೀ. ಸ್ತ್ರೀ: [ಕರಭೀ] ಹೆಣ್ಣು ಒಂಟೆ (ಪಿಂಡ), ಧಾನ್ಯ ತುಂಬುವ ಒಂದು ದೊಡ್ಡ ಪಾತ್ರೆ(ಬೃಹ). '**ಕರಹೀ**' ಶಬ್ದವನ್ನು ನೋಡುವುದು.
ಕರಮ. ವಿ: [ದೇ] ಕ್ಷೀಣ, ದುರ್ಬಲ(ದೇ)
ಕರಮಂದ. ಪು: [ಕರಮಂದ] ಫಲ ಬಿಡುವ ಒಂದು ಮರ(ಗಉಡ)
ಕರಮದ್ದ. ಪು: [ಕರಮರ್ದ] ಕಮರಿಕೆ ಗಿಡ, ಕವಳೆ ಹಣ್ಣಿನ ಗಿಡ(ಪಣ್ಣ)
ಕರಮರೀ. ಸ್ತ್ರೀ: [ದೇ] ದಾಸಿ(ಪಾಅ)
ಕರಯ. '**ಕರಗ**' ಶಬ್ದವನ್ನು ನೋಡುವುದು. ಒಂದು ಪಕ್ಷಿ(ಪಣ್ಣ)
ಕರಯಂದೀ. ಸ್ತ್ರೀ: [ದೇ] ಮಲ್ಲಿಗೆ, ಮಲ್ಲಿಗೆ ಬಳ್ಳಿ
ಕರಯರ. ಅಕ: [ಕರಕರಾಯ್] '**ಕರಕರ**' ಎಂದು ಶಬ್ದಮಾಡುವುದು.

ಕರರುದ್ದ. ಪು: [**ಕರರುದ್ರ**] ಒಂದು ಛಂದಸ್ಸು
ಕರಲಿ}. ಸ್ತ್ರೀ: [**ಕದಲಿ, ಕದಲೀ**] ಬಾವುಟ, ಜಿಂಕೆಯ
ಕರಲೀ}. ಒಂದು ಜಾತಿ, ಆನೆಯ ಒಂದು ಆಭರಣ(ಕುಮಾ)
ಕರವ. ಪುಂ.ನ: [ದೇ. **ಕರಕ**] ನೀರಿನ ಪಾತ್ರೆ
ಕರವಂದೀ. ಸ್ತ್ರೀ: [**ಕರಮಂದೀ**] ಒಂದು ಬಗೆಯ ಬಳ್ಳಿ, ಒಂದು ಜಾತಿಯ ಮರ
ಕರವತ್ತಿಆ. ಸ್ತ್ರೀ: [**ಕರಪಾತ್ರಿಕಾ**] ಜಲಪಾತ್ರೆ, ಕರ(=ಕೈ) ಎಂಬ ಪಾತ್ರೆ
ಕರವಾಲ. ಪು: [**ಕರವಾಲ**] ಖಡ್ಗ, ಕತ್ತಿ (ಸುಪಾ)
ಕರವಿಯಾ. ಸ್ತ್ರೀ: [ದೇ. **ಕರಕಿಕಾ**] ಪಾನ ಪಾತ್ರೆ
ಕರವೀರ. ಪು: [**ಕರವೀರ**] ಮತ್ತಿಮರ, ಗನ್ನೇರಳೆ ಗಿಡ
ಕರಸೀ. (ದೇ). '**ಕಡಸೀ**' ಶಬ್ದವನ್ನು ನೋಡುವುದು.
ಕರಹ. ಪು: [**ಕರಭ**] ಒಂಟೆ, ಒಂದು ಸುಗಂಧ-ದ್ರವ್ಯ(ಗಉಡ), ಆನೆಮರಿ
ಕರಹಂಚ. ನ: [**ಕರಹಂಚ**] ಒಂದು ಛಂದಸ್ಸು
ಕರಹಾಡ. ಪು: [**ಕರಹಾಟ**] ತಾವರೆಗೆಡ್ಡೆ, ಮುಂಗಾರೆಗಿಡ
ಕರಹಾಡಯ. ಪು: [**ಕರಹಾಟಕ**] ಮೇಲಿನ ಶಬ್ದವನ್ನು ನೋಡುವುದು. ಒಂದು ದೇಶ-ವಿಶೇಷ
ಕರಹೀ. '**ಕರಭೀ**' ಶಬ್ದವನ್ನು ನೋಡುವುದು. ಈ ಹೆಸರಿನ ಒಂದು ಛಂದಸ್ಸು, **-ರುಹ.** ವಿ: [**-ರೋಹ**] ಒಂಟೆ ಸವಾರ,
ಕರಾಇಣೀ. ಸ್ತ್ರೀ: [ದೇ] ಶಾಲ್ಮಲಿ ವೃಕ್ಷ, ಬೂರುಗದ ಮರ
ಕರಾದಲ್ಲ. ಪು: [**ಕರಾದಲ್ಲ**] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ದೊರೆ
ಕರಾಲ. ವಿ: [**ಕರಾಲ**] ಉನ್ನತವಾದ, ಎತ್ತರವಾದ, ಉದ್ದವಾದ ಹಾಗೂ ಹೊರಗೆ ಚಾಚಿದ (ಕೋರೆಹಲ್ಲು) ಹಲ್ಲುಳ್ಳವನು(ಗಉಡ), ಭಯಾನಕ,ಭಯಂಕರ, ತುಂಡುಮಾಡುವವನು, ಸೀಳುವವನು, ಅರಳಿದ, ಮರೆಯಾಗಿರುವ, ಈ ಹೆಸರಿನ ವಿದೇಹ ದೇಶದ ರಾಜ
ಕರಾಲ. ಸಕ: [**ಕರಾಲಯ್**] ತುಂಡರಿಸು, ಸೀಳು ಅರಳಿಸು
ಕರಾಲಿಅ. ವಿ: [**ಕರಾಲಿತ**] ಹೊರಚಾಚಿದ ಹಾಗೂ ಉದ್ದನೆಯ ಹಲ್ಲುಗಳುಳ್ಳವನು, ಮರೆಮಾಡಲ್ಪಟ್ಟ ಭಯಂಕರವಾಗಿಸಲ್ಪಟ್ಟ(ಕಪ್ಪೂ)

ಕರಾಲೀ. ಸ್ತ್ರೀ: [ದೇ] ದಂತಮಂಜನ ಕಡ್ಡಿ(ದೇ)
ಕರಾವಣ. ನ: [**ಕಾರಣ**] ಮಾಡಿಸುವುದು, ನಿರ್ಮಾಣ ಮಾಡಿಸುವುದು(ಸುಪಾ)
ಕರಾವಿಯ. ವಿ: [**ಕಾರಿತ**] ಮಾಡಿಸಲಾದ
ಕರಿ. ಪು: [**ಕರಿನ್**] ಆನೆ, **-ಧರಣಟ್ಠಾಣ.** ನ: [**-ಧರಣಸ್ಥಾನ**] ಆನೆಯನ್ನು ಕಟ್ಟಿಹಾಕುವ ಕಂಬ (ಪಾಅ). **-ನಾಹ.** ಪು: [**-ನಾಥ**] ಐರಾವತ ಇಂದ್ರನ ಆನೆ. ಉತ್ತಮ ಜಾತಿಯ ಆನೆ, **-ಬಂಧಣ.** ನ: [**-ಬಂಧನ**] ಖೆಡ್ಡ. **-ಮಯರ.** ಪು: [**-ಮಕರ**] ನೀರಾನೆ
ಕರಿಅ}. '**ಕರ=ಕೃ**' ಶಬ್ದವನ್ನು ನೋಡುವುದು.
ಕರಿಅವ್ವ}.
ಕರಿಅ. ಪು: [**ಕರಿಕ**] ಒಂದು ಮಹಾ ಗ್ರಹ
ಕರಿಆ. ಸ್ತ್ರೀ: [ದೇ] ಮದಿರೆಯನ್ನು ಬಡಿಸುವ ಪಾತ್ರೆ
ಕರಿಂತ. '**ಕರ=ಕೃ**' ಶಬ್ದವನ್ನು ನೋಡುವುದು.
ಕರಿಣಿಯಾ}. ಸ್ತ್ರೀ: [**ಕರಿಣೀ**] ಹೆಣ್ಣಾನೆ (ಪಉಮ)
ಕರಿಣೀ}.
ಕರಿಣ. ಪು: [**ಕರಿನ್**] ಆನೆ
ಕರಿತ್ತಾ}.
ಕರಿತ್ತಾಣಂ}. '**ಕರ=ಕೃ**' ಶಬ್ದವನ್ನು ನೋಡುವುದು.
ಕರಿದೂಣ}.
ಕರಿಮರೀ(ದೇ). '**ಕರಮರೀ**' ಶಬ್ದವನ್ನು ನೋಡುವುದು.
ಕರಿಲ್ಲ. ನ: [ದೇ] ಬಿದಿರಿನ ಮೊಳಕೆ, ಮರಳು-ಭೂಮಿಯಲ್ಲಿ ಬೆಳೆಯುವ, ಒಂಟೆಗಳು ತಿನ್ನುವ ಮರ, ಹಾಗಲ ಕಾಯಿ, ಚಿಗುರು, ಮೊಳಕೆ, ಬರಲು ಮರ, ವಿ: ಬಿದಿರಿನ ಮೊಳಕೆ
ಕರಿಸ. '**ಕಡ್ಢ=ಕೃಷ್**' ಶಬ್ದವನ್ನು ನೋಡುವುದು. **ವ.ಕೃ-ಕರಿಸಂತ**
ಕರಿಸ. ಪು: [**ಕರ್ಷ**] ಆಕರ್ಷಣೆ, ಸೆಳೆತ, ಗೆಯ್ಯುವುದು, ಒಂದು ಅಳತೆ- ಒಂದು ಕ್ಷಣದ ನಾಲ್ಕನೇ ಒಂದು ಭಾಗ
ಕರಿಸ. '**ಕರೀಸ**' ಶಬ್ದವನ್ನು ನೋಡುವುದು.
ಕರಿಸಗ. ವಿ: [**ಕರ್ಷಕ**] ಬೇಸಾಯ ಮಾಡುವವನು, ರೈತ (ಉತ್ತ)
ಕರಿಸಣ. ನ: [**ಕರ್ಷಣ**] ಸೆಳೆತ, ಆಕರ್ಷಣೆ, ಉಳುವುದು, ಕೃಷಿ, ವ್ಯವಸಾಯ
ಕರಿಸಯ. '**ಕರಿಸಗ**' ಶಬ್ದವನ್ನು ನೋಡುವುದು.

ಕರಿಸಾವಣ. ಪುಂ.ನ: [**ಕಾರ್ಷಾಪಣ**] ತಾಮ್ರದ ಅಥವಾ ಬೆಳ್ಳಿಯ ಒಂದು ನಾಣ್ಯ(ವಿಸೇ)

ಕರಿಸಿದ(ಶೌ). ವಿ: [**ಕರ್ಷಿತ**] ಆಕರ್ಷಿತ, ಉಳುಮೆ ಮಾಡಲಾದ, ಗೆಯ್ಮೆ ಮಾಡಲಾದ(ಹೇಕಾ)

ಕರಿಸಿಯ. ವಿ: [**ಕೃಶಿತ**] ದುರ್ಬಲ ಮಾಡಲಾದ, ತೆಳ್ಳಗಾಗಿಸಲ್ಪಟ್ಟ

ಕರೀರ. ಪು: [**ಕರೀರ**] ಒಂಟೆಗೆ ಪ್ರಿಯವಾದ ಒಂದು ಮುಳ್ಳಿನ ಮರ - ಬರಲುಮರ(ಉಪ)

ಕರೀಸ. ಪು: [**ಕರೀಷ**] ಬೆರಣಿ

ಕರುಣ. '**ಕಲುಣ**' ಶಬ್ದವನ್ನು ನೋಡುವುದು(ಗಉಡ)

ಕರುಣಾ. ಸ್ತ್ರೀ: [**ಕರುಣಾ**] ದಯೆ, ಕರುಣೆ, ಬೇರೆಯವರ ದುಃಖವನ್ನು ನಿವಾರಿಸುವ ಇಚ್ಛೆ(ಕುಮಾ)

ಕರುಣಾಇಯ. ವಿ: [**ಕರುಣಾಯಿತ**] ಕರುಣೆಗೆ ಪಾತ್ರನಾದವನು, ಕರುಣೆ ತೋರಲ್ಪಟ್ಟವನು

ಕರುಣಿ. ವಿ: [**ಕರುಣಿನ್**] ಕರುಣಿ, ಕರುಣೆ ತೋರಿಸುವವನು

ಕರೇ. ಸಕ: [**ಕಾರಯ್**] ಮಾಡಿಸು

ಕರೇಡು. ಪು: [ದೇ] ಹೆಂಟೆ ಗೊದ್ದ, ಓತಿ ಕೇತ

ಕರೇಣು. ಪು: [**ಕರೇಣು**] ಆನೆ, ಬೆಟ್ಟಗಣಗಿಲೆ ಗಿಡ, ಸ್ತ್ರೀ: ಹೆಣ್ಣಾನೆ(ಹೇ)=**ಕರೇಣುಆ**, **–ದತ್ತಾ.** ಸ್ತ್ರೀ: [**–ದತ್ತಾ**] ಬ್ರಹ್ಮದತ್ತರಾಜನ ಒಬ್ಬ ಹೆಂಡತಿ, **–ಸೇಣಾ.** ಸ್ತ್ರೀ: [**–ಸೇನಾ**] ಹಿಂದೆ ಹೇಳಿದ ಅರ್ಥವನ್ನು ನೋಡುವುದು

ಕರೇಮಾಣ}. '**ಕರ=ಕೃ**' **ಶಬ್ದವನ್ನು ನೋಡುವುದು.**
ಕರೇಅವ್ವ}.

ಕರೇವಾಹಿಯ. ವಿ: [**ಕರಬಾಧಿತ**] ರಾಜನ ತೆರಿಗೆಯಿಂದ (=ಕಂದಾಯ) ಪೀಡಿತರಾದ,

ಕರೋಡ. ಪು: [ದೇ] ತೆಂಗಿನ ಕಾಯಿ, ತೆಂಗಿನ ಮರ, ಕಾಗೆ, ಎತ್ತು (ದೇ)

ಕರೋಡಗ. ಪು: [ದೇ] ಬಟ್ಟಲಿನಂಥ ಒಂದು ಪಾತ್ರೆ,

ಕರೋಡಿ. ಸ್ತ್ರೀ: [**ಕರೋಟಿ**] ತಲೆಯ ಎಲುಬು

ಕರೋಡಿಯ. ಪು: [**ಕರೋಟಿಕ**] ಕಾಪಾಲಿಕ, ಭಿಕ್ಷುಕ

ಕರೋಡಿಯಾ.}. ಸ್ತ್ರೀ: [**ಕರೋಟಿಕಾ, ಟೀ**] ಹರಿವೆ,
ಕರೋಡೀ}. ಕಂಚಿನ ಪಾತ್ರೆ, ವೀಳ್ಯದ ಡಬ್ಬಿ, ಮಣ್ಣಿನ ಒಂದು ಬಗೆಯ ಪಾತ್ರೆ(ಔಪ), ತಲೆಯ ಚಿಪ್ಪು= ಕಪಾಲ, ಬಡಿಸುವ ಒಂದು ಉಪಕರಣ

ಕರೋಡೀ. ಸ್ತ್ರೀ: [ದೇ] ಗೊದ್ದ

ಕರೋಡೀ. ಸ್ತ್ರೀ: [ದೇ] ಹೆಣ

ಕಲ. ಸಕ: [**ಕಲಯ್**] ಎಣಿಸು, ಸದ್ದು ಮಾಡು, ತಿಳಿದುಕೊಳ್ಳು, ಗುರುತುಹಿಡಿ, ಸಂಬಂಧ ಬೆಳೆಸು, '**–ಕಲಯಂತ**'

ಕಲ. ವಿ: [**ಕಲ**] ಮಧುರ, ಮನೋಹರ, ಪು: ಅವ್ಯಕ್ತ ಮಧುರ ಶಬ್ದ, ಕೋಲಾಹಲ, ಕಲಕಲ ಶಬ್ದ, ಕೆಸರು, ಬಟಾಣಿ, **–ಕಂಠೀ.** ಸ್ತ್ರೀ: [**–ಕಂಠೀ**] ಕೋಗಿಲೆ, **–ಮಂಜುಲ.** ವಿ: [**–ಮಂಜುಲ**] ಮಧುರ ನಾದ, **–ಯಂಠ.** ಪು: [**–ಕಂಠ**]. ಕೋಗಿಲೆ (ಕುಮಾ), **–ಯಂಠೀ.** '**–ಕಂಠೀ**' **ಶಬ್ದವನ್ನು ನೋಡುವುದು.** **–ಹಂಸ.** ಪು: [**ಹಂಸ**] ರಾಜಹಂಸ (ಕಪ್ಪ)

ಕಲಂಕ. ಪು: [**ಕಲಂಕ**] ಕಲೆ, ದೋಷ, ಕಳಂಕ, ಚಿಹ್ನೆ, ಗುರುತು(ಕುಮಾ)

ಕಲಂಕ. ಸಕ: [**ಕಲಂಕಯ್**] ಕಳಂಕಿತಗೊಳಿಸು,

ಕಲಂಕ. ಪು: [ದೇ] ಬಿದಿರು, ಬಿದಿರುಮೆಳೆ(ಣಾಯಾ)

ಕಲಂಕಣ. ನ: [**ಕಲಂಕನ**] ಕಲಂಕಿತಗೊಳಿಸುವುದು

ಕಲಂಕಲ. ವಿ: [**ಕಲಂಕಲ**] ಅಸಮಂಜಸ, ಅಶುಭ (ಔಪ)

ಕಲಂಕಲೀಭಾಗಿ. ವಿ: [**ಕಲಂಕಲೀಭಾಗಿನ್**] ದುಃಖದಿಂದ ವ್ಯಾಕುಲಗೊಂಡ, ಸಂಸಾರದಲ್ಲಿ ಸುತ್ತುತ್ತಿರುವುದು

ಕಲಂಕವಈ. ಸ್ತ್ರೀ: [ದೇ] ಮುಳ್ಳು ಕಂಟೆಗಳಿಂದ ಆವೃತವಾದ ಪ್ರದೇಶ

ಕಲಂತರ. ನ: [**ಕಲಾಂತರ**] ಬಡ್ಡಿ

ಕಲಂಕಿಅ. ವಿ: [**ಕಲಂಕಿತ**] ಕಳಂಕಿತ, ಕೊಳೆಯಾಗಿರುವ, ಗುರುತು ಮಾಡಲ್ಪಟ್ಟ

ಕಲಂಕಿಲ್ಲ. ವಿ: [**ಕಲಂಕಿನ್**] ಕಲಂಕವುಳ್ಳ, ಕಲಂಕಿತ, ಕಲೆಬಿದ್ದ

ಕಲಂದ. ಪು: [**ಕಲಂದ**] ಕುಂಡ, ಹರಿವೆ, ಬಣ್ಣದ ಪಾತ್ರೆ, ಆರ್ಯ ಜಾತಿಗೆ ಸೇರಿದ ಒಂದು ಬಗೆಯ ಮನುಷ್ಯರು

ಕೊಟ್ಟುವಾಣೀ. ಸ್ತ್ರೀ: [ಕೋಟ್ಟುವಾಣೀ] ಜೈನ ಮುನಿಗಣದ ಒಂದು ಶಾಖೆ
ಕೊಟ್ಠ. 'ಕುಟ್ಠ=ಕುಷ್ಠ' ಶಬ್ದವನ್ನು ನೋಡುವುದು
ಕೊಟ್ಠ.} **'ಕುಟ್ಠ=ಕುಷ್ಠ' ಶಬ್ದವನ್ನು ನೋಡುವುದು,**
ಕೊಟ್ಠಗ}. ಆಶ್ರಯ, ಒಂದು ಆವಾಸ, ಕೊಠಡಿ,
ಕೊಟ್ಠಯ}. ಕೋಣೆ, ಚೈತ್ಯ, (ಣಾಯಾ), **ಕೋಟ್ಠಾಗಾರ.** ನ: [ಕೋಷ್ಠಾಗಾರ] ಧಾನ್ಯವನ್ನು ತುಂಬುವ ಮನೆ, ಉಗ್ರಾಣ(ಣಾಯಾ)
ಕೊಟ್ಠ. ಪು: [ಕೋಷ್ಠ] ನಿಶ್ಚಯಿಸಲ್ಪಟ್ಟ ಅರ್ಥದ ಕಾಲಾಂತರದಲ್ಲಿ ನೆನಪಿಸಿಕೊಳ್ಳಲು ಯೋಗ್ಯವಾದ ಸ್ಥಿತಿ, ಸುಗಂಧ ದ್ರವ್ಯ
ಕೊಟ್ಠಾರ. ಪುಂನ: [ಕೋಷ್ಠಾಗಾರ] ಉಗ್ರಾಣ, ಭಂಡಾರ (ಪಉಮ)
ಕೊಟ್ಠಿ. ವಿ: [ಕುಷ್ಠಿನ್] ಕುಷ್ಠರೋಗಿ
ಕೊಟ್ಠಿಯಾ. ಸ್ತ್ರೀ: [ಕೋಷ್ಠಿಕಾ] ಚಿಕ್ಕ ಉಗ್ರಾಣ(ಉವಾ)
ಕೊಟ್ಠು. ಪು: [ಕ್ರೋಷ್ಟು] ನರಿ(ಷಡ್)
ಕೋಡಂಡ. 'ಕೋದಂಡ' ಶಬ್ದವನ್ನು ನೋಡುವುದು
ಕೋಡಂಡಿಯು. 'ಕೋದಂಡಿಯು' ಶಬ್ದವನ್ನು ನೋಡುವುದು
ಕೋಡಂಬ. ನ: [ದೇ] ಕಾರ್ಯ, ಕೆಲಸ
ಕೋಡಯ.(ದೇ). **'ಕೋಡಿಅ'** ಶಬ್ದವನ್ನು ನೋಡುವುದು
ಕೋಡರ. ನ: [ಕೋಟರ] ಮರದ ಪೊಟರೆ
ಕೋಡಲ. ಪು: [ಕೋಟರ] ಒಂದು ಪಕ್ಷಿ(ರಾಜ)
ಕೋಡಾಕೋಡಿ. ಸ್ತ್ರೀ: [ಕೋಟಾಕೋಟಿ] ಕೋಟಿಯನ್ನು ಕೋಟಿಯಿಂದ ಗುಣಿಸಿದಾಗ ಬರುವ ಸಂಖ್ಯೆ, ಅಸಂಖ್ಯಾತ

ಕೋಡಾಲ. ಪು: [**ಕೋಡಾಲ**] ಗೋತ್ರ ಪ್ರವರ್ತಕ ಪುರುಷ, ನ: ಒಂದು ಗೋತ್ರ

ಕೋಡಿ. ಸ್ತ್ರೀ: [**ಕೋಟಿ**] ಒಂದು ಕೋಟಿ. ಧನುಸ್ಸಿನ ಅಗ್ರಭಾಗ, ತುದಿ, ಅಂಶ, ಭಾಗ, ಪ್ರಕಾರ–**ಕೋಡಿ.** '**ಕೋಡಾಕೋಡಿ**' ಶಬ್ದವನ್ನು ನೋಡುವುದು. –**ಬದ್ಧ.** ವಿ: [–**ಬದ್ಧ**] ಕೋಟಿ ಸಂಖ್ಯೆಯವನು. –**ಭೂಮಿ.** ಸ್ತ್ರೀ: [–**ಭೂಮಿ**] ಒಂದು ಜೈನ ತೀರ್ಥ, –ಸಿಲಾ. ಸ್ತ್ರೀ: [–**ಶಿಲಾ**] ಒಂದು ಜೈನ ತೀರ್ಥ, –**ಸೋ.** ಅ: [–**ಶಸ್**] ಅನೇಕ ಕೋಟಿ. '**ಕೋಡಿ**' ಶಬ್ದವನ್ನು ನೋಡುವುದು

ಕೋಡಿಅ. ನ: [ದೇ] ಸಣ್ಣ ಮಣ್ಣಿನ ಪಾತ್ರೆ, ಪು: ಚಾಡಿಕೋರ, ದುಷ್ಟ

ಕೋಡಿಅ. ಪು: [**ಕೋಟಿಕ**] ಒಬ್ಬ ಜೈನಮುನಿ(ಕಪ್ಪ), ಒಂದು ಜೈನ ಮುನಿಗಣ

ಕೋಡಿಅ. ವಿ: [**ಕೋಟಿತ**] ಕಿರಿದಾಗಿ ಮಾಡಲ್ಪಟ್ಟ, ಕುಗ್ಗಿಸಲ್ಪಟ್ಟ

ಕೋಡಿಣ್ಣ}. ನ: [**ಕೌಂಡಿನ್ಯ**] ಈ ಹೆಸರಿನ

ಕೋಡಿಣ}.ಒಂದು ನಗರ, ವಸಿಷ್ಠ ಮುನಿಯ ಶಾಖಾರೂಪದ ಗೋತ್ರ, ಪು: ಕೌಂಡಿಣ್ಯ ಗೋತ್ರದ ಪ್ರವರ್ತಕ ಪುರುಷ, ವಿ: ಕೌಂಡಿಣ್ಯ ಗೋತ್ರದವನು, ಶಿವಭೂತಿಯ ಶಿಷ್ಯನಾದ ಒಬ್ಬ ಜೈನ ಮುನಿ, ಮಹಗಿರಿಸೂರಿಯ ಶಿಷ್ಯನಾದೊಬ್ಬ ಜೈನಮುನಿ, ಗೌತಮ ಸ್ವಾಮಿಯಿಂದ ದೀಕ್ಷೆ ತೆಗೆದುಕೊಂಡ ೫೦೦ ತಪಸ್ವಿಗಳ ಗುರು.

ಕೋಡಿನ್ನಾ. ಸ್ತ್ರೀ: [**ಕೌಂಡಿನ್ಯಾ**] ಕೌಂಡಿಣ್ಯ ಗೋತ್ರದ ಮಹಿಳೆ.

ಕೋಡಿಲ್ಲ. ಪು: [ದೇ] ಚಾಡಿಕೋರ, ದುರ್ಜನ

ಕೋಡಿಲ್ಲ. '**ಕೊಟ್ಟಿಲ**' ಶಬ್ದವನ್ನು ನೋಡುವುದು

ಕೋಡಿಲ್ಲ. ಪು: [**ಕೌಟಿಲ್ಯ**] ಪ್ರಸಿದ್ಧನಾದ ಚಾಣಕ್ಯ ಮುನಿ

ಕೋಡಿಲ್ಲಯ. ನ: [**ಕೌಟಿಲ್ಯಕ**]ಚಾಣಕ್ಯ ಪ್ರಣೀತ ನೀತಿಶಾಸ್ತ್ರ

ಕೋಡಿಸಹಿಯ. ನ: [**ಕೋಟಿಸಹಿತ**] ಮೊದಲ ದಿನ ಉಪವಾಸ ಮಾಡಿ ಎರಡನೇ ದಿನವೂ ಉಪವಾಸ ಮಾಡುವ ಪ್ರತಿಜ್ಞೆ ಕೈಗೊಳ್ಳುವುದು

ಕೋಡೀ. '**ಕೋಡಿ**' ಶಬ್ದವನ್ನು ನೋಡುವುದು. □ಕರಣ. ನ: [–**ಕರಣ**] ವಿಭಾಗ, ವಿಭಜನೆ, **ಣಾರ.** ನ: [–ನಾರ] ಈ ಹೆಸರಿನ ಸೂರತ್ತಿನ ಒಂದು ನಗರ, –**ಮಾತಸಾ.** ಸ್ತ್ರೀ: [–**ಮಾತಸಾ**] ಗಾಂಧಾರ ಸ್ವರ ಸಮೂಹದ ಏಳನೇ ಒಂದು ಭಾಗ, –**ವಾರಿಸ.** ನ: [–**ವರ್ಷ**] ಲಾಟ ದೇಶದ ರಾಜಧಾನಿ, –**ವರಿಸಿಯಾ.** ಸ್ತ್ರೀ: [–**ವರ್ಷಿಕಾ**] ಜೈನಮುನಿಗಳ ಒಂದು ಶಾಖೆ, –**ಸರ.** ಪು: [–**ಶ್ವರ**] ಕೋಟ್ಯಧೀಶ

ಕೋಡೀಣ. ನ: [**ಕೋಡೀನ**] ಕೌತ್ಸ ಗೋತ್ರದ ಶಾಖೆಯೆನಿಸಿದ ಈ ಹೆಸರಿನ ಒಂದು ಗೋತ್ರ, ವಿ: ಈ ಗೋತ್ರದಲ್ಲಿ ಹುಟ್ಟಿದವನು

ಕೋಡುಂಬ. ನ: [ದೇ] ಕಾರ್ಯ, ಕೆಲಸ

ಕೋಡುಂಬಿ. '**ಕುಡುಂಬಿ**' ಶಬ್ದವನ್ನು ನೋಡುವುದು

ಕೋಡುಂಬಿಯ. ಪು: [**ಕೌಟುಂಬಿಕ**] ಕುಟುಂಬದ ಯಜಮಾನ, ಕುಟುಂಬದ ಮುಖ್ಯಸ್ಥ, ಹಳ್ಳಿಯ ಪ್ರಧಾನ, ಊರಿನ ದೊಡ್ಡ ಮನುಷ್ಯ(ಪಣ್ಣ), ವಿ: ಕುಟುಂಬದಲ್ಲಿ ಹುಟ್ಟಿದ, ಕುಟುಂಬದೊಂದಿಗೆ ಸಂಬಂಧವಿರುವ, ಕುಟುಂಬ ಸಂಬಂಧಿ

ಕೋಡೂಸಗ. ಪು: [**ಕೋದ್ರೂಷಕ**] ಹಾರಕ ಧಾನ್ಯವರ್ಗಕ್ಕೆ ಸೇರಿದ ಒಂದು ಧಾನ್ಯ

ಕೊಡ್ಡ. [ದೇ]. '**ಕುಡ್ಡ**' ಶಬ್ದವನ್ನು ನೋಡುವುದು

ಕೊಡ್ಡಮ. '**ಕೋಟ್ಟುಮ**' ಶಬ್ದವನ್ನು ನೋಡುವುದು

ಕೊಡ್ಡಮಿಅ. ನ: [ರತ] ರತಿಕ್ರೀಡೆ(ಕುಮಾ)

ಕೊಡ್ಡಿಯ. ವಿ: [ದೇ] ಕುತೂಹಲಿ, ಉತ್ಸುಕ(ಉಪ)

ಕೊಢ}. ಪು: [**ಕುಷ್ಠ**] ಕುಷ್ಠ ರೋಗ

ಕೋಢ}.

ಕೋಢಿ. ವಿ: [**ಕುಷ್ಠಿನ್**] ಕುಷ್ಠ ರೋಗಿ

ಕೋಢಿಕ}. ವಿ: [**ಕುಷ್ಠಿಕ**] ಕುಷ್ಠ ರೋಗಿ(ಪಣ್ಣ)

ಕೋಢಿಯ}.

ಕೋಣ. ವಿ: [ದೇ] ಕಪ್ಪನೆಯ, ಶ್ಯಾಮಲ ವರ್ಣದ ವ್ಯಕ್ತಿ, ಪು: ಕೋಲು, ನಗಾರಿ, ಪಿಟೀಲು ಮುಂತಾದವನ್ನು ನುಡಿಸುವ ಸಾಧನ, ವೀಣಾ–ವಾದನ ದಂಡ(ಜೀವ)

ಕೋಣ}. ಪುನ: [**ಕೋಣ**] ಕೋಣ, ಒಂದು

ಕೋಣಗ}.ಆಯುಧ, ಕೋಣೆ(ಗಉಡ)

ಕೋಣವ. ಪು: [**ಕೌಣಪ**] ರಾಕ್ಷಸ

ಕೋಣಾಯಲ. ಪು: [**ಕೋಣಾಚಲ**] ಭಗವಾನ್ ಶಾಂತಿನಾಥನ ಮೊದಲ ಶ್ರಾವಕನ ಹೆಸರು

ಕೋಣಾಲಗ. ಪು: [**ಕೋನಾಲಕ**] ಒಂದು ಜಲಚರ ಪಕ್ಷಿ

ಕೋಣಾಲೀ. ಸ್ತ್ರೀ: [ದೇ] ಗೋಷ್ಠಿ

ಕೋಣಿಅ}. ಪು: [**ಕೋಣಿಕ**] ಶ್ರೇಣಿಕ ಮಹಾರಾಜನ
ಕೋಣಿಗ}. ಮಗ, ಒಬ್ಬ ದೊರೆ
ಕೋಣು. ಸ್ತ್ರೀ: [ದೇ] ರೇಖೆ, ಗೆರೆ(ದೇ)
ಕೊಣ್ಣ. ಪು: [ದೇ. **ಕೋಣ**] ಮನೆಯ ಕೋಣೆ, ಕೊಠಡಿ
ಕೋತವ. ನ: [**ಕೌತವ**] ಇಲಿಯ ರೋಮದಿಂದ ಮಾಡಿದ ದಾರ
ಕೋತುಹಲ. '**ಕುಊಹಲ**' ಶಬ್ದವನ್ನು ನೋಡುವುದು
ಕೊತ್ತಲಂಕಾ. ಸ್ತ್ರೀ: [ದೇ] ಮದ್ಯವನ್ನು ಬಡಿಸುವ ಪಾತ್ರೆ
ಕೊತ್ತಿಅ. ವಿ: [**ಕೌತುಕಿಕ**] ಕುತೂಹಲಿ
ಕೊತ್ತಿಅ. ವಿ: [**ಕೌತ್ರಿಕ**] ನೆಲದ ಮೇಲೆ ಮಲಗುವ ವಾನಪ್ರಸ್ಥ, ಒಂದು ಬಗೆಯ ಮದಿರೆ
ಕೊತ್ಥ. '**ಕೊಚ್ಛ=ಕೌಕ್ಷ**' ಶಬ್ದವನ್ನು ನೋಡುವುದು
ಕೊತ್ಥರ. ನ: [ದೇ] ವಿಜ್ಞಾನ, ಮರದ ಪೊಟರೆ
ಕೊತ್ಥಲ. ಪು: [ದೇ] ಉಗ್ರಾಣ, ಗೋಣೀ ಚೀಲ, **-ಕಾರಾ**. ಸ್ತ್ರೀ: [**-ಕಾರೀ**] **ಒಂದು** ಬಗೆಯ ಕೀಟ
ಕೊತ್ಥುಭ}. [**ಕೌಸ್ತುಭ**] ವಾಸುದೇವನ ವಕ್ಷಸ್ಥಲವನ್ನ
ಕೊತ್ಥುಹ}. ಲಂಕರಿಸಿರುವ ವಿಶೇಷ ಮಣಿ
ಕೋಥುಭ}.
ಕೋದಂಡ. ಪು: [**ಕೋದಂಡ**] ಧನುಸ್ಸು, ಬಿಲ್ಲು
ಕೋದಂಡಿಮ}. '**ಕು-ದಂಡಿಮ**' ಶಬ್ದವನ್ನು
ಕೋದಂಡಿಯ}. ನೋಡುವುದು
ಕೋದೂಸಗ. '**ಕೋಡೂಸಗ**' ಶಬ್ದವನ್ನು ನೋಡುವುದು
ಕೊದ್ದವ. '**ಕುದ್ದವ**' ಶಬ್ದವನ್ನು ನೋಡುವುದು
ಕೊದ್ದವಿಯಾ. ಸ್ತ್ರೀ: [ದೇ] ಒಂದು ಕ್ಷುದ್ರ ಕೀಟ
ಕೊದ್ದಾಲ. '**ಕುದ್ದಾಲ**' ಶಬ್ದವನ್ನು ನೋಡುವುದು(ಪಣ್ಣ)
ಕೊದ್ದಾಲಿಯಾ. ಸ್ತ್ರೀ: [**ಕುದ್ದಾಲಿಕಾ**] ಸಣ್ಣ ಗುದ್ದಲಿ (ವಿಪಾ)
ಕೋಧ. ಪು: [**ಕೋಧ**] ದಶರಥ ಪುತ್ರ ಭರತನೊಂದಿಗೆ ಜೈನ ದೀಕ್ಷೆಯನ್ನು ಸ್ವೀಕರಿಸಿದ್ದ ಈ ಹೆಸರಿನ ಒಬ್ಬ ರಾಜ(ಪಉಮ)
ಕೊಪ್ಪ. '**ಕುಪ್ಪ=ಕುಪ್**' ಶಬ್ದವನ್ನು ನೋಡುವುದು
ಕೊಪ್ಪ. ಪು: [ದೇ] ಅಪರಾಧ, ತಪ್ಪು
ಕೊಪ್ಪ. ವಿ: [**ಕೋಪ್ಯ**] ದ್ವೇಷ ಮಾಡಬೇಕಾದ, ಅಪ್ರೀತಿಕರವಾದ
ಕೊಪ್ಪರ. ಪುಂನ: [**ಕೂರ್ಪರ**] ಮೊಳಕೈ, ನದಿಯ ದಡ(ಓಘ)
ಕೋಬೇರೀ. ಸ್ತ್ರೀ: [**ಕೌಬೇರೀ**] ವಿದ್ಯಾ-ವಿಶೇಷ

ಕೋಭಗ.} ಪು: [**ಕೋಭಕ**] ಒಂದು ಜಾತಿಯ ಪಕ್ಷಿ
ಕೋಭಗಕ}. (ಔಪ)
ಕೋಮಲ. ವಿ:[**ಕೋಮಲ**] ಮೃದು, ಸುಕುಮಾರ(ಪಾಅ)
ಕೋಮಾರ. ವಿ: [**ಕೌಮಾರ**] ಕುಮಾರ ಕ್ಕೆ ಸಂಬಂಧಿಸಿದ. ಬಾಲ್ಯ, ಬಾಲಕ, ಕುಮಾರಿಗೆ ಸಂಬಂಧಿಸಿದ, ಕುಮಾರಿಗೆ ಹುಟ್ಟಿದವನು, ಸ್ತ್ರೀ: **-ರಿಯಾ, -ರೀ, -ಭಿಚ್ಚ**. ನ: [**ಭೃತ್ಯ**] ಬಾಲಕರ ಸ್ತನ-ಪಾನಕ್ಕೆ ಸಂಬಂಧಿಸಿದ ವರ್ಣನೆ ಉಳ್ಳ, ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ,
ಕೋಮಾರೀ. ಸ್ತ್ರೀ: [**ಕೌಮಾರೀ**] ವಿದ್ಯಾ-ವಿಶೇಷ,
ಕೋಮುಇಯಾ. ಸ್ತ್ರೀ: [**ಕೌಮುದಿಕಾ**] ಉತ್ಸವ ಸೂಚಿಸುವ ಕಾಲದಲ್ಲಿ ಬಾರಿಸಲಾಗುತ್ತಿದ್ದ ವಾಸುದೇವ ಕೃಷ್ಣನ ಒಂದು ಭೇರಿ.
ಕೋಮುಈ. ಸ್ತ್ರೀ: [ದೇ] ಹುಣ್ಣಿಮೆ
ಕೋಮುಈ. ಸ್ತ್ರೀ: [**ಕೌಮುದೀ**] ಶರದೃತುವಿನ ಹುಣ್ಣಿಮೆ, ಬೆಳುದಿಂಗಳು(ಔಪ), ಈ ಹೆಸರಿನ ಒಂದು ನಗರ, ಕಾರ್ತಿಕದ ಹುಣ್ಣಿಮೆ(ರಾಯ), **-ನಾಹ**. ಪು: [**-ನಾಥ**] ಚಂದ್ರ, **-ಮಹೂಸವ**. ಪು: [**ಮಹೋತ್ಸವ**] ಬೆಳುದಿಂಗಳಿನ ಉತ್ಸವ(ಪಿ)
ಕೋಮುದಿಯಾ. '**ಕೋಮುಇಯಾ**' ಶಬ್ದವನ್ನು ನೋಡುವುದು
ಕೋಮುದೀ. '**ಕೋಮುಈ= ಕೌಮುದೀ**' ಶಬ್ದವನ್ನು ನೋಡುವುದು
ಕೋಯವ. ವಿ: [**ಕೌತವ**] ಇಲಿಯ ರೋಮಗಳಿಂದ ಮಾಡಿದ
ಕೋಯವ. ವಿ:[**ಕೌಯವ**] ಕೋಯವ ದೇಶದಲ್ಲಿ ಹುಟ್ಟಿದ
ಕೋಯವಗ.} ಪು: [ದೇ] ಹತ್ತಿ ಬಟ್ಟೆಯಿಂದ ಮಾಡಿದ
ಕೋಯವಯ.} ನ: ಉತ್ತರೀಯ (ಣಾಯಾ)
ಕೋಯವೀ. ಸ್ತ್ರೀ: [ದೇ] ಹತ್ತಿಯಿಂದ ತುಂಬಿದ ಬಟ್ಟೆ
ಕೋರಂಗ. ಪು: [**ಕೋರಂಕ**] ಒಂದು ಪಕ್ಷಿ(ಪಣ್ಣ)
ಕೋರಂಟ}. ಪು: [**ಕೋರಂಟ, ಕ**] ಒಂದು ವೃಕ್ಷ,
ಕೋರಂಟಗ}. ಈ ಹೆಸರಿನ ಭೃಗಕಚ್ಛ ನಗರದ ಒಂದು ಉದ್ಯಾನ ವನ. ಕೋರಂಟಕ ವೃಕ್ಷದ ಹೂವು
ಕೋರಅ. (**ಶೌ**). '**ಕಉರವ**' ಶಬ್ದವನ್ನು ನೋಡುವುದು
ಕೋರವಿಆ. ಸ್ತ್ರೀ: [**ಕೌರವ್ಯಾ**] '**ಕೋರವ್ವಿಅ**' ಶಬ್ದವನ್ನು ನೋಡುವುದು

ಕೋರಯ}. **ಪುಂನ:** [**ಕೋರಕ**] ಫಲವನ್ನು ನೀಡುವ
ಕೋರವ}. ವೃಕ್ಷ, ಫಲದ ಚೈತ್ರ
ಕೋರವ್ವ. ಪುಂಸ್ತ್ರೀ: [**ಕೌರವ್ಯ**] ಕುರುವಂಶದಲ್ಲಿ ಹುಟ್ಟಿದ, ಕೌರವ ಗೋತ್ರಕ್ಕೆ ಸೇರಿದ, **ಪು:**ಎಂಟನೇ ಚಕ್ರವರ್ತಿ ಬ್ರಹ್ಮದತ್ತ(ಜೀವ)
ಕೋರವ್ವೀಯಾ. ಸ್ತ್ರೀ: [**ಕೌರವೀಯಾ**] ಈ ಹೆಸರಿನ ಷಡ್ಜದ ಸ್ವರಸಮೂಹದ ಒಂದು ಭಾಗ
ಕೋರಿಂಟ}. '**ಕೋರಂಟ**' ಶಬ್ದವನ್ನು ನೋಡುವುದು
ಕೋರಿಂಟಯ}. (ಣಾಯಾ)
ಕೋರೆಂಟ}.
ಕೋಲ. ಪು: [**ದೇ**] ಕೊರಳು, ಕಂಠ, ಕುತ್ತಿಗೆ(ದೇ)
ಕೋಲ. ಪು: [**ಕ್ರೋಡ**] ಹಂದಿ(ಪಣ್ಣ), ಮಡಿಲು
ಕೋಲ. ಪು: [**ಕೋಲ**] ಒಂದು ದೇಶ, ಮರವನ್ನು ಕೊರೆಯುವ ಒಂದು ಹುಳು, ಹಂದಿ(ಉಪ), ಇಲಿಯ ಜಾತಿಗೆ ಸೇರಿದ ಒಂದು ಪ್ರಾಣಿ, ಮನುಷ್ಯರ ಒಂದು ಅಧಮ ಜಾತಿ, ಬದರೀವೃಕ್ಷ, ಎಲಚಿ ಮರ, **ನ:** ಎಲಚಿ ಹಣ್ಣು, **–ಪಾಗ. ನ:**[**–ಪಾಕ**] ಭಗವಾನ್ ವೃಷಭದೇವನ ಮಂದಿರವಿರುವ ದಕ್ಷಿಣಭಾರತದ ಒಂದು ನಗರ, **–ಪಾಲ.ಪು:** [**–ಪಾಲ**] ಧರಣೇಂದ್ರನ ಲೋಕಪಾಲ ದೇವ, **–ಸುಣಯ. ಸುಣಹ. ಪುಂಸ್ತ್ರೀ:** [**ಶುನಕ**] ಕಾಡುಹಂದಿ(ಆಚಾ), ಬೇಟೆ ನಾಯಿ, **ಸ್ತ್ರೀ–ಣಿಯಾ. ಕೋಲಾವಾಸ. ಪುಂನ:** [**ಕೋಲಾವಾಸ**] ಕಟ್ಟಿಗೆ, ಕೋಲು
ಕೋಲ. ವಿ: [**ಕೌಲ**] ಶಕ್ತಿಯ ಉಪಾಸಕ, ತಾಂತ್ರಿಕ ಪಂಥದ ಅನುಯಾಯಿ, ತಾಂತ್ರಿಕ ಪಂಥದೊಂದಿಗೆ ಸಂಬಂಧ ಹೊಂದಿರುವವ (ಪಕ್ಕೂ), **ನ:** ಎಲಚಿ ಹಣ್ಣಿಗೆ ಸಂಬಂಧಿಸಿದ, **–ಚುಣ್ಣ. ನ:** [**–ಚೂರ್ಣ**] ಬೋರೆಯ ಪುಡಿ, ಚೂರ್ಣ. **–ಟ್ಠಿಯ. ನ:**[**ಕೌಲಾಸ್ಥಿಕ**] ಬೋರೆಯ ಗುಳಿಗೆ
ಕೋಲಂಬ. ಪು: [**ದೇ**] ಅನ್ನ ಬೇಯಿಸುವ ಮಣ್ಣಿನ ಪಾತ್ರೆ, ಅಡಿಗೆಯ ಪಾತ್ರೆ, ಮನೆ(ದೇ)
ಕೋಲಂಬ. ಪು: [**ಕೋಲಂಬ**] ಮರದ ಕೊಂಬೆಯ ಬಾಗಿದ ತುದಿಯ ಭಾಗ(ಅನೂ)
ಕೋಲಗಿಣೀ. ಸ್ತ್ರೀ: [**ಕೋಲೀ, ಕೋಲಕೀ**] ಕೋಲ ಜನಾಂಗದ ಮಹಿಳೆ (ಆಚೂ)
ಕೋಲಘರಿಯ. ವಿ: [**ಕೌಲಗೃಹಿಕ**] ಕುಲದ ಮನೆಗೆ ಸಂಬಂಧಿಸಿದ, ಪಿತೃ–ಗೃಹದೊಂದಿಗೆ ಸಂಬಂಧವುಳ್ಳವ(ಉವಾ)
ಕೋಲಜ್ಜಾ. ಸ್ತ್ರೀ: [**ದೇ**] ಧಾನ್ಯವನ್ನು ಸಂಗ್ರಹಿಸಿಡುವ ಒಂದು ಬಗೆಯ ಹಳ್ಳ, ಹಗೇವು, ಕಣಜ(ಆಚಾ)
ಕೋಲರ. '**ಕೋಟರ**' ಶಬ್ದವನ್ನು ನೋಡುವುದು(ಗಾ)
ಕೋಲವ. ನ: [**ಕೌಲವ**] ಜ್ಯೋತಿಶ್ಶಾಸ್ತ್ರದಲ್ಲಿ ಹೆಸರುವಾಸಿಯಾದ ಒಂದು ಕರಣ(ವಿಸೇ)
ಕೋಲಾಲ. ವಿ: [**ಕೌಲಾಲ**] ಕುಂಬಾರನಿಗೆ ಸಂಬಂಧಪಟ್ಟ, **ನ:** ಮಣ್ಣಿನ ಪಾತ್ರೆ
ಕೋಲಾಲಿಯ. ಪು: [**ಕೌಲಾಲಿಕ**] ಮಣ್ಣಿನ ಪಾತ್ರೆಗಳನ್ನು ಮಾರುವವನು.(ಬೃಹ)
ಕೋಲಾಹ. ಪು: [**ಕೋಲಾಭ**] ಸರ್ಪದ ಒಂದು ಜಾತಿ (ಪಣ್ಣ)
ಕೋಲಾಹಲ. ಪು: [**ಕೋಲಾಹಲ**] ತುಮುಲ, ಗುಂಪಿನ ಗಲಭೆ, ಗದ್ದಲ, ದೂರದವರೆಗೆ ಕೇಳಿಸುವ ಶಬ್ದ
ಕೋಲಾಹಲಿಯ. ವಿ: [**ಕೋಲಾಹಲಿಕ**] ಗದ್ದಲದಿಂದ ಕೂಡಿದ, ಗಲಭೆಯುಳ್ಳ
ಕೋಲಿಅ. ಪು: [**ದೇ**] ಒಂದು ಕೆಳ ಜಾತಿ
ಕೋಲಿಅ. ಪು: [**ದೇ**] ಬಟ್ಟೆ ನೇಯುವವನು, ನೇಕಾರ (ಣಂದಿ), ಬಲೆ ಹೆಣೆಯುವ ಜೇಡರ ಹುಳು
ಕೋಲಿತ್ತ. ನ: [**ದೇ**] ಬೆಂಕಿಯ ಜ್ವಾಲೆ, ಒಂದು ಕಡೆ ಉರಿಯುತ್ತಿರುವ ಕೊಳ್ಳಿ(ದೇ)
ಕೋಲಿನ್ನ. ನ: [**ಕೌಲೀನ್ಯ**] ಕುಲೀನತೆ, ಶ್ರೇಷ್ಠ ಕುಲತ್ವ
ಕೋಲೀಕಯ. ವಿ: [**ಕ್ರೋಡೀಕೃತ**] ಅಂಗೀಕೃತ(ದೇ)
ಕೋಲೀಣ. ನ: [**ಕೌಲೀನ**] ಕಿಂವದಂತಿ, ಲೋಕ–ವಾರ್ತೆ, **ವಿ:** ವಂಶಪಾರಂಪರ್ಯವಾಗಿ ಬಂದಿರುವ, ಕುಲಕ್ರಮದಿಂದ ಬಂದಿರುವ, ಉತ್ತಮ ಕುಲದಲ್ಲಿ ಹುಟ್ಟಿದ, ತಾಂತ್ರಿಕ ಪಂಥದ ಅನುಯಾಯಿ
ಕೋಲೀರ. ನ: [**ದೇ**] ಕೊನ್ನಾರಿ ಗೆಡ್ಡೆ, ಗಂಧ, ಪದ್ಮರಾಗ
ಕೋಲುಣ್ಣ. ನ: [**ಕಾರುಣ್ಯ**] ದಯೆ, ಕರುಣೆ, ಅನುಕಂಪೆ(ನಿಚೂ), **–ಪಡಿಯಾ, –ವಡಿಯಾ. ಸ್ತ್ರೀ:** [**–ಪ್ರತಿಜ್ಞಾ**] (ನಿಚೂ)
ಕೋಲೆಜ್ಜ. ಪು: [**ದೇ**] ಧಾನ್ಯವನ್ನು ತುಂಬುವ ಮಳಿಗೆ, ವಾಡೆ
ಕೋಲೇಯ. ಪು: [**ಕೌಲೇಯಕ**] ನಾಯಿ, ಶ್ವಾನ
ಕೊಲ್ಲ. ಪುಂ.ನ: [**ದೇ**] ಇದ್ದಿಲು(ನಿಚೂ)

ಕೊಲ್ಲಇರ. ನ: [**ಕೋಲ್ಲಿಕರ**] ವೃದ್ಧಾಪ್ಯ, ಒಂದು ನಗರ
ಕೊಲ್ಲಪಾಗ. ನ: [**ಕೋಲ್ಲಪಾಕ**] ವೃಷಭದೇವನ ಮಂದಿರವಿರುವ ದಕ್ಷಿಣ ಭಾಗದ ಒಂದು ನಗರ
ಕೊಲ್ಲರ. ಪು: [ದೇ] ಮಡಕೆ, ಅನ್ನ ಬೇಯಿಸುವ ಮಣ್ಣಿನ ಪಾತ್ರೆ
ಕೊಲ್ಲಾ. '**ಕುಲ್ಲಾ**' ಶಬ್ದವನ್ನು ನೋಡುವುದು
ಕೊಲ್ಲಾಗ. '**ಕುಲ್ಲಾಗ**' ಶಬ್ದವನ್ನು ನೋಡುವುದು
ಕೊಲ್ಲಾಪುರ. ನ: [**ಕೋಲ್ಲಾಪುರ**] ದಕ್ಷಿಣ ಭಾಗದ ಒಂದು ನಗರ
ಕೊಲ್ಲಾಸುರ. ಪು: [**ಕೋಲ್ಲಾಸುರ**] ಈ ಹೆಸರಿನ ಒಬ್ಬ ದೈತ್ಯ
ಕೊಲ್ಲುಗ(ದೇ). '**ಕೊಲ್ಲುಅ**' ಶಬ್ದವನ್ನು ನೋಡುವುದು
ಕೊಲ್ಲಾಹಲ. ನ: [ದೇ] ತೊಂಡೆ ಹಣ್ಣು
ಕೊಲ್ಲುಅ. ಪು: [ದೇ] ನರಿ, ಕಬ್ಬಿನ ಜಲ್ಲೆಯಿಂದ ರಸ ತೆಗೆಯುವ ಗಾಣ
ಕೋವ. ಸಕ: [**ಕೋಪಯ್**] ಕುಪಿತಗೊಳಿಸು, ಸಿಟ್ಟಿಗೇಳಿಸು, ನಿಂದಿಸು
ಕೋವ. ಪು: [**ಕೋಪ**] ಕೋಪ, ಸಿಟ್ಟು
ಕೋವಣ. ವಿ: [**ಕೋಪನ**] ಕೋಪಿಷ್ಠ, ಕೋಪ ಮಾಡಿಕೊಂಡವನು,
ಕೋವಾಯ. ಪು: [**ಕೋರ್ಪಕ**] ಒಂದು ಅನಾರ್ಯ ದೇಶ
ಕೋವಾಸಿಅ. '**ಕೋಆಸಿಯ**' ಶಬ್ದವನ್ನು ನೋಡುವುದು
ಕೋವಿ. ವಿ: [**ಕೋಪಿನ್**] ಕೋಪಿಷ್ಠ, ಕೋಪದಿಂದ ಕೂಡಿದ(ಸುಪಾ) ಕೋಪವುಂಟು ಮಾಡುವ
ಕೋವಿಅ. ವಿ: [**ಕೋವಿದ**] ನಿಪುಣ, ವಿದ್ವಾಂಸ, ತಿಳಿದವನು(ಸುಪಾ)
ಕೋವಿಅ. ವಿ: [**ಕೋಪಿತ**] ಸಿಟ್ಟಿಗೆಬ್ಬಿಸಲಾದ, ಕೋಪಗೊಳಿಸಲ್ಪಟ್ಟ, ದೂಷಿತನಾಗಿ ಮಾಡಲಾದ
ಕೋವಿಆ. ಸ್ತ್ರೀ: [ದೇ] ಹೆಣ್ಣು ನರಿ
ಕೋವಿಆರ. ಪು: [**ಕೋವಿದಾರ**] ಕೆಂಗಾಂಜಾಳದ ಗಿಡ
ಕೋವಿಣೀ. ಸ್ತ್ರೀ: [**ಕೋಪಿನೀ**] ಕೋಪಗೊಂಡಿರುವ ಹೆಣ್ಣು,
ಕೋಶಣ(ಮಾ). ವಿ: [**ಕದುಷ್ಣ**] ಸ್ವಲ್ಪ ಬೆಚ್ಚನೆಯ, ಉಗುರು ಬೆಚ್ಚಗಿನ
ಕೋಸ. ಪು: [ದೇ] ಕುಂಕುಮ ಬಣ್ಣದಿಂದ ಕೆಂಪಾದ ಬಟ್ಟೆ, ಸಮುದ್ರ
ಕೋಸ. ಪು: [**ಕ್ರೋಶ**] ದಾರಿಯ ಉದ್ದವನ್ನಳೆಯುವ ಅಳತೆ, ಮೂರು ಮೈಲಿಗಳ ದೂರಕ್ಕೆ ಕ್ರೋಶ ಎನ್ನಲಾಗುತ್ತದೆ. ಒಂದು ಹರಿದಾರಿ ದೂರ(ಕಪ್ಪ)
ಕೋಸ. ಪು: [**ಕೋಶ, ಷ**] ಖಜಾನೆ, ಭಂಡಾರ, ಕತ್ತಿಯ ಒರೆ, ಮೊಗ್ಗು, ಗೋಳ, ವೃತ್ತಾಕಾರ, ಕಾಸಿದ ಕುಳವನ್ನು ಹಿಡಿದು ಮಾಡುವ ಪ್ರಮಾಣ, ದಿವ್ಯ ಪ್ರವಾಣ, ಅಭಿಧಾನಶಾಸ್ತ್ರ, **ಪು.ನ:** ಪಾನಪಾತ್ರೆ, **–ಪಾಣ.** ನ: [**–ಪಾನ**] ಶಪಥ, **ಕೋಸಾಹಿವ.** ಪು: [**ಕೋಶಾಧಿಪ**] ಖಜಾನೆಯ ಮುಖ್ಯಸ್ಥ, ಭಂಡಾರಿ(ಸುಪಾ)
ಕೋಸಂಬ. ಪು: [**ಕೋಶಾಮ್ರ**] ಒಂದು ಹಣ್ಣು ಬಿಡುವ ಮರ(ಪಣ್ಣ), **–ಗಂಡಿಯಾ.** ಸ್ತ್ರೀ: [**–ಗಂಡಿಕಾ**] ಒಂದು ಬಗೆಯ ಖಡ್ಗ,ಕತ್ತಿ
ಕೋಸಂಬಿಯಾ. ಸ್ತ್ರೀ: [**ಕೌಶಾಂಬಿಕಾ**] ಜೈನ ಮುನಿಗಣದ ಒಂದು ಶಾಖೆ(ಕಪ್ಪ)
ಕೋಸಂಬೀ. ಸ್ತ್ರೀ: [**ಕೌಶಾಂಬೀ**] ವತ್ಸ ದೇಶದ ಮುಖ್ಯ ಪಟ್ಟಣ
ಕೋಸಗ. ಪು: [**ಕೋಶಕ**] ಸಾಧುಗಳು ಬಳಸುವ ಚರ್ಮದ ಒಂದು ಬಗೆಯ ಚೀಲ
ಕೋಸಟ್ಟಇರಿಆ. ಸ್ತ್ರೀ: [ದೇ] ಪಾರ್ವತಿ, ಗೌರಿ, ಶಿವನ ಭಾರ್ಯೆ
ಕೋಸಯ. ನ: [**ದೇ.ಕೋಶಕ**] ಚಿಕ್ಕ ಪಾನ–ಪಾತ್ರೆ (ಪಾಅ)
ಕೋಸಲ. ನ: [**ಕೌಶಲ**] ಕುಶಲತೆ, ನೈಪುಣ್ಯ, ಚಾತುರ್ಯ(ಕುಮಾ)
ಕೋಸಲ. ನ: [ದೇ] ನೀವಿ, ನಿರಿಗೆ,
ಕೋಸಲ}. ಪು: [**ಕೋಸಲ, –ಕ**]**ದೇಶ–ವಿಶೇಷ,**
ಕೋಸಲಗ}. ಒಬ್ಬ ಜೈನ ಮಹರ್ಷಿ, ಕೋಸಲದ ರಾಜ, ವಿ: ಕೋಸಲದಲ್ಲಿ ಹುಟ್ಟಿದ, **–ಪುರ.** ನ: [**–ಪುರ**] ಅಯೋಧ್ಯೆ
ಕೋಸಲಾ. ಸ್ತ್ರೀ: [ಕೋಸಲಾ] ಅಯೋಧ್ಯಾ ನಗರ.
ಕೋಸಲಿಅ. ನ: [ದೇ.ಕೌಶಲಿಕ] ಕಾಣಿಕೆ
ಕೋಸಲ್ಲ. ನ: [ದೇ] ಕಾಣಿಕೆ, ಕೊಡುಗೆ
ಕೋಸಲ್ಲಯಾ. ಸ್ತ್ರೀ: [**ಕೌಶಲ್ಯ**] ನಿಪುಣತೆ, ಚಾತುರ್ಯ
ಕೋಸಲ್ಲಾ. ಸ್ತ್ರೀ: [**ಕೌಶಲ್ಯಾ**] ದಶರಥ ಪುತ್ರ ರಾಮನ ತಾಯಿ(ಉಪ)
ಕೋಸಲ್ಲಿಅ. ನ: [**ದೇ. ಕೌಶಲಿಕ**] ಕಾಣಿಕೆ, ಕೊಡುಗೆ

ಕೋಸಾ. ಸ್ತ್ರೀ: [ಕೋಶಾ] ಈ ಹೆಸರಿನ ಒಬ್ಬ ವೇಶ್ಯೆ. ಜೈನ ಮಹರ್ಷಿ ಸ್ಥೂಲಭದ್ರ ಮುನಿಯು ಇವಳ ಮನೆಯಲ್ಲಿ ನಿರ್ವಿಕಾರ ಭಾವದಿಂದ ಚಾತುರ್ಮಾಸ್ಯವನ್ನು ಮಾಡಿದ್ದ

ಕೋಸಿಣ. ವಿ: [ಕೋಷ್ಣ] ಸ್ವಲ್ಪ ಬಿಸಿ

ಕೋಸಿಯ. ನ: [ಕೌಶಿಕ] ಒಂದು ಗೋತ್ರ, ೨೦ನೇ ನಕ್ಷತ್ರದ ಗೋತ್ರ, **ಪು:** ಗೂಬೆ, ಸರ್ಪ, ಚಂಡಕೋಶಿಕ ಎಂಬ ದೃಷ್ಟಿ-ವಿಷ ಸರ್ಪ, ಮಹಾವೀರ ತೀರ್ಥಂಕರರು ಇದಕ್ಕೆ ಧರ್ಮೋಪದೇಶ ಮಾಡಿದ್ದರು. ಒಂದು ಮರ, ಇಂದ್ರ, ನಕುಲ, ಕೊಶಾಧ್ಯಕ್ಷ, ಪ್ರೀತಿ, ಈ ಹೆಸರಿನ ಒಬ್ಬ ರಾಜ, ಈ ಹೆಸರಿನ ಒಬ್ಬ ರಾಜ, ಗಾರುಡಿಗ, ಮಜ್ಜೆ, ಶೃಂಗಾರ ರಸ, ಈ ಹೆಸರಿನೊಬ್ಬ ತಾಪಸ, **ಪುಂ.**ಸ್ತ್ರೀ: ಕೌಶಿಕ ಗೋತ್ರದಲ್ಲಿ ಹುಟ್ಟಿದ ಕೌಶಿಕ ಗೋತ್ರೀಯ, -ಸ್ತ್ರೀ: **ಕೋಸಿಈ.**

ಕೋಸಿಯಾ, ಸ್ತ್ರೀ: [ಕೋಶಿಕಾ] ಭರತಖಂಡದ ಒಂದು ನದಿ. ಈ ಹೆಸರಿನ ಒಬ್ಬ ವಿದ್ಯಾಧರ ರಾಜ ಕನ್ಯೆ, ಚರ್ಮದ ಚಪ್ಪಲಿ, **'ಕೋಸೀ'** ಶಬ್ದವನ್ನು ನೋಡುವುದು

ಕೋಸಿಯಾರ. ಪು: [ಕೋಶಿಕಾರ] ಒಂದು ಕೀಟ, ರೇಷ್ಮೆ ಹುಳು, ನ: ರೇಷ್ಮೆ ವಸ್ತ್ರ,

ಕೋಸೀ. ಸ್ತ್ರೀ: [ಕೋಶೀ] ಅವರೆ, ಬಟಾಣಿ ಮುಂತಾದ ಕಾಯಿಗಳು, ಕತ್ತಿಯ ಒರೆ

ಕೋಸೀ. ಸ್ತ್ರೀ: [ಕೋಶೀ] **'ಕೋಸಿಯಾ'** ಶಬ್ದವನ್ನು ನೋಡುವುದು. ಗೋಲಾಕಾರದ ಒಂದು ವಸ್ತು

ಕೋಸುಂಭ. ವಿ: [ಕೌಸುಂಭ] ಕುಸುಂಬೆ ಗಿಡಕ್ಕೆ ಸಂಬಂಧಿಸಿದ

ಕೋಸುಮ. ವಿ: [ಕೌಸುಮ] ಕುಸುಮಕ್ಕೆ ಸಂಬಂಧಿಸಿದ, ಹೂವಿನಿಂದ ಮಾಡಿದ(ಗಲುಡ)

ಕೋಸುಮ್ಹ. **'ಕುಸುಂಭ'** ಶಬ್ದವನ್ನು ನೋಡುವುದು

ಕೋಸೇಅ.} ನ: [ಕೌಶೇಯ] ರೇಷ್ಮೆ ವಸ್ತ್ರ, ದಪ್ಪ

ಕೋಸೆಜ್ಜ.} ರೇಷ್ಮೆಯ ವಸ್ತ್ರ

'ಕೋಹ. ಪು: [ಕ್ರೋಧ] ಕೋಪ, ಸಿಟ್ಟು(ಓಘ), **-ಮುಂಡ.** ವಿ: [-ಮುಂಡ] ಕ್ರೋಧವಿಲ್ಲದ

ಕೋಹ. ಪು: [ಕೋಥ] ಕೊಳೆಯುವುದು, ಕೆಡುವುದು, ಜೀರ್ಣವಾದ(ಜೀರ್ಣ-ಶೀರ್ಣ)

ಕೋಹ. ಪು: [ದೇ. ಕೋಥ] ಹಮ್ಮಿಣಿ, ಹಣದ ಚೀಲ

ಕೋಹಂಗಕ. ಪು: [ಕೋಭಂಗಕ] ಒಂದು ಪಕ್ಷಿ ಜಿಪ)

ಕೋಹಂಝಾಣ. ನ: [ಕ್ರೋಧಧ್ಯಾನ] ಕೋಪದಿಂದ ಕೂಡಿದ ಚಿಂತನೆ(ಆವ)

ಕೋಹಂಡ. ನ: [ಕೂಷ್ಮಾಂಡ] ಕುಂಬಳ ಕಾಯಿ, ನ: ದೇವ-ವಿಮಾನ, **ಪು:** ವ್ಯಂತರ ಶ್ರೇಣಿಯ ದೇವ ಜಾತಿ

ಕೋಹಂಡೀ. ಸ್ತ್ರೀ: [ಕೂಷ್ಮಾಂಡೀ] ಕುಂಬಳದ ಬಳ್ಳಿ, ಕಂಬಳದ ಗಿಡ

ಕೋಹಣ. ವಿ: [ಕ್ರೋಧನ] ಕೋಪಿಷ್ಠ , ಈ ಹೆಸರಿನ ರಾವಣನ ಒಬ್ಬ ಯೋಧ(ಪಉಮ)

ಕೋಹಲ. **'ಕುಊಹಲ'** ಶಬ್ದವನ್ನು ನೋಡುವುದು.

ಕೋಹಲಿಅ.ವಿ:[ಕುತೂಹಲಿನ್] ಕುತೂಹಲವುಳ್ಳವನು, ಕುತೂಹಲ, ಪ್ರೇಮಿ, ಸ್ತ್ರೀ:-ಆ.(ಗಾ)

ಕೋಹಲಿಆ. ಸ್ತ್ರೀ: [ಕೂಷ್ಮಾಂಡಿಕಾ] ಕುಂಬಳದ ಬಳ್ಳಿ

ಕೋಹಲೀ. **'ಕೋಹಂಡೀ'** ಶಬ್ದವನ್ನು ನೋಡುವುದು.

ಕೋಹಲ್ಲ. **'ಕೋಹಲ'** ಶಬ್ದವನ್ನು ನೋಡುವುದು.

ಕೋಹಲ್ಲೀ. ಸ್ತ್ರೀ: [ದೇ] ಕಬ್ಬಿಣದ ಹಂಚು, ತವ,

ಕೋಹಲ್ಲೀ. **'ಕೋಹಂಡೀ'** ಶಬ್ದವನ್ನು ನೋಡುವುದು.

ಕೋಹಿ}. ವಿ: [ಕ್ರೋಧಿನ್] ಕೋಪಿಷ್ಠ, ಕೋಪಸ್ವಭಾವಿ

ಕೋಹಿಲ್ಲ}. (ಬೃಹ)

ಕೌರವ}. **'ಕಉರವ'** ಶಬ್ದವನ್ನು ನೋಡುವುದು

ಕೌಲವ}.

-ಕ್ಕಿಸಿಯ. **'ಕಿಸಿಯ=ಕೃಷಿತ'** ಶಬ್ದವನ್ನು ನೋಡುವುದು.

-ಕ್ಕೂರ. **'ಕೂರ=ಕೂರ'** ಶಬ್ದವನ್ನು ನೋಡುವುದು.

-ಕ್ಕೇರ. **'-ಕೇರ'** ಶಬ್ದವನ್ನು ನೋಡುವುದು.

-ಕ್ಖಂಡ. **'ಖಂಡ'** ಶಬ್ದವನ್ನು ನೋಡುವುದು.

-ಕ್ಖಂಭ. **'ಖಂಭ'** ಶಬ್ದವನ್ನು ನೋಡುವುದು.

-ಕ್ಖಮ. **'ಖಮ'** ಶಬ್ದವನ್ನು ನೋಡುವುದು.

ಕ್ಖಲಣ. **'ಖಲಣ.'** ಶಬ್ದವನ್ನು ನೋಡುವುದು.

-ಕ್ಖಿಂಸಾ **'ಖಿಂಸಾ.'** ಶಬ್ದವನ್ನು ನೋಡುವುದು.

-ಕ್ಖು. **'ಖು'** ಶಬ್ದವನ್ನು ನೋಡುವುದು.

-ಕ್ಖುತ್ತ. **'ಖುತ್ತ'** ಶಬ್ದವನ್ನು ನೋಡುವುದು.

ಕ್ಖೆಡ್ಡ **'ಖೆಡ್ಡ.'** ಶಬ್ದವನ್ನು ನೋಡುವುದು.

-ಕ್ಖೇವ. **'ಖೇವ'** ಶಬ್ದವನ್ನು ನೋಡುವುದು.

-ಕ್ಖೋಡೀ. **'ಖೋಡೀ.'** ಶಬ್ದವನ್ನು ನೋಡುವುದು.

ಖ

ಖ. ಪು: [ಖ] ವ್ಯಂಜನ ವರ್ಣ, ಇದು ಹುಟ್ಟುವ ಸ್ಥಾನ ಕಂಠ. ನ: **ಆಕಾಶ**(ಕುಮಾ) ಇಂದ್ರಿಯ (ವಿಸೇ), **–ಗ. ಪು:** [–ಗ] ಪಕ್ಷಿ=ಖಗ, ತಮಗಿರುವ ವಿದ್ಯೆಯ ಬಲದಿಂದ ಆಕಾಶದಲ್ಲಿ ಸಂಚರಿಸುವ ವಿದ್ಯಾಧರರ ಒಂದು ಜನವರ್ಗ, **'ಖಯ'** ಶಬ್ದವನ್ನು ನೋಡುವುದು. **–ಗಇ. ಸ್ತ್ರೀ: [–ಗತಿ]** ಆಕಾಶ ಗತಿ, ಆಕಾಶ ಗತಿಯ ಕಾರಣವಾದ ಕರ್ಮ(ಕಮ್ಮ), **–ಗಾಮಿಣೀ. ಸ್ತ್ರೀ: [–ಗಾಮಿನೀ]** ಆಕಾಶದಲ್ಲಿ ಸಂಚರಿಸಲು ಸಾಧ್ಯಮಾಡುವಂಥ ವಿದ್ಯೆ. **–ಪುಫ್ಫ. ನ: [–ಪುಷ್ಪ]** ಆಕಾಶ–ಕುಸುಮ, ಅಸಂಭಾವ್ಯವಾದ್ದು(ಕುಮಾ),

ಖಅ}. ಸಕ: [ಖವ್] ಸಂಪದ್ಭರಿತವಾಗಿ ಮಾಡು,

ಖಉರ}. ಶ್ರೀಮಂತಗೊಳಿಸು

ಖಇ. ವಿ: [**ಕ್ಷಯಿನ್**] ನಾಶವುಳ್ಳದ್ದು. ಕ್ಷಯರೋಗವುಳ್ಳವನು

ಖಇಅ. ವಿ: [**ಖಂತ**] ವ್ಯಾಪಿಸಿರುವ ಹರಡಿ ಕೊಂಡಿರುವ, ವಿಭೂಷಿತ, ಅಲಂಕೃತ(ಔಪ)

ಖಇಅ. ವಿ: [**ಖಾದಿತ**] ತಿನ್ನಲ್ಪಟ್ಟ, ಭುಕ್ತ, ಆಕ್ರಮಿಸಲ್ಪಟ್ಟ, ನ: ಭೋಜನ, ಆಹಾರ

ಖಇಅ. ವಿ: [**ಕ್ಷಯಿತ**] ನಾಶ ಹೊಂದಿದ, ಕ್ಷೀಣ

ಖಇಅ. ಪು: [ದೇ] ಸ್ವಭಾವ(ತಾ)

ಖಇಅ}. ಪು: [**ಕ್ಷಾಯಿಕ**] ಕ್ಷಯ, ವಿನಾಶ, ವಿ: ಕ್ಷಯಕ್ಕೆ

ಖಇಗ}. ಸಂಬಂಧಿಸಿದ, ಕರ್ಮ–ನಾಶದಿಂದ ಹುಟ್ಟಿದ

ಖಇತ್ತ. ನ: [**ಕ್ಷೇತ್ರ**] ಹೊಲಗಳ ಸಮೂಹ, ಅನೇಕ ಹೊಲಗಳು (ಪಿ)

ಖಇಯಾ. ಸ್ತ್ರೀ: [**ಖದಿಕಾ**] ಬತ್ತದ ಅರಳು, ಪುರಿ(ಭವಿ)

ಖಇರ. ಪು: [ಖದಿರ.] ಕಗ್ಗಲಿ ಮರ, ಮುಟ್ಟಿದರೆ ಮುನಿ ಗಿಡ(ಆಚಾ)

ಖಇರ. ವಿ: [**ಖಾದಿರ**] ಕಗ್ಗಲಿ ಮರಕ್ಕೆ ಸಂಬಂಧಿಸಿದ, ಕಗ್ಗಲಿ ಮರದ ಗೋಂದು ಇತ್ಯಾದಿ(ದೇ)

ಖಇವ. (ದೇ). **'ಖಇಅ'** ಶಬ್ದವನ್ನು ನೋಡುವುದು.

ಖಉಡ. ಪು: [**ಖಪುಟ**] ತನ್ನ ಹೆಸರಿನಿಂದ ಖ್ಯಾತನಾದ ಜೈನ ಸಂನ್ಯಾಸಿ(ಆವಮ)

ಖಉರ. ಅಕ: [**ಕ್ಷುಭ್**] ಕ್ಷುಬ್ಧಗೊಳ್ಳು, ಭಯದಿಂದ ವಿಹ್ವಲಗೊಳ್ಳು, ಅಲುಗಾಡು, **ಸಕ:** ಕಲುಷಿತಗೊಳ್ಳು,

ಖಉರ. ವಿ: [ದೇ] ಕಲುಷಿತ,

ಖಉರ. ನ: [**ಕ್ಷೌರ**] ಕ್ಷೌರ–ಕರ್ಮ, ಹಜಾಮತಿ

ಖಉರ. ಪುಂ.ನ: [**ಖಪುರ**] ಅಡಕೆ, ಭದ್ರಮುಸ್ತೆ ಮುಂತಾದ ಮರಗಳ ಸ್ನಿಗ್ಧ ಹಾಲು, ರಸ, ಗೋಂದು(ಬೃಹ)–**ಕಢಿಣಯ.** ನ: [**–ಕಠಿನಕ**] ತಪಸ್ವಿಗಳ ಒಂದು ಬಗೆಯ ಪಾತ್ರೆ(ವಿಸಂ)

ಖಉರಿಅ. ವಿ: [**ಕ್ಷುಬ್ಧ**] ಕಲುಷಿತ

ಖಉರಿಅ. ವಿ: [**ಕ್ಷೌರಿತ**] ತಲೆ ಬೋಳಿಸಲಾದ, ಕ್ಷೌರ ಮಾಡಲಾದ

ಖಉರಿಅ. ವಿ: [**ಖಪುರಿತ**] ಅಂಟಿಸಲ್ಪಟ್ಟ(ನಿಚೂ)

ಖಉರೀಕಯ. ವಿ: [**ಖಪುರೀಕೃತ**] ಗೋಂದಿನ ಹಾಗೆ ಸ್ನಿಗ್ಧ, ಗಟ್ಟಿ– ಗೊಳಿಸಲಾದ

ಖಓವಸಮ. ಪು: [**ಕ್ಷಯೋಪಶಮ**] ನಾಶದ ಉಪಶಮನ, ತಡೆಯುವಿಕೆ

ಖಓವಸಮಿಯ. ವಿ: [**ಕ್ಷಯೋಪಶಮಿಕ**] ಕ್ಷಯದ ಉಪಶಮನ ಮಾಡುವಂಥ, **ಪುಂ.ನ** ಕ್ಷಯದ ಉಪಶಮನ(ಭಗ)

ಖಂಖರ. ಪು: [ದೇ] ಮುತ್ತುಗದ ಮರ(ತೀ)

ಖಂಗಾರ. ಪು: [**ಖಂಗಾರ**] ಗುಜರಾತಿನ ದೊರೆ ಸಿದ್ಧರಾಜನು ಸೋಲಿಸಿದ್ದ, ವಿಕ್ರಮ ಶಕೆ ೧೨ನೇ ಶತಮಾನದ ಸೌರಾಷ್ಟ್ರದ ರಾಜ ಖೇಂಗಾರ(ತೀ), **–ಗಢ. ಪು: [–ಗಢ]** ಸೌರಾಷ್ಟ್ರದ ಜೂನಾಗಢ ನಗರ.

ಖಂಚ. ಸಕ: [**ಕೃಷ್**] ಎಳೆ, ನೇಗಿಲು ಹೊಡೆ, ವಶಪಡಿಸಿಕೊಳ್ಳು,

ಖಂಚಿಯ. ವಿ: [**ಕೃಷ್ಟ**] ಎಳೆಯಲಾದ, ಉಳುಮೆ ಮಾಡಲಾದ, ವಶಪಡಿಸಿಕೊಳ್ಳಲಾದ(ಭವಿ)

ಖಂಜ. ಅಕ: [**ಖಂಜ್**] ಕುಂಟು(ಕಪ್ಪೂ)

ಖಂಜ. ವಿ: [**ಖಂಜ**] ಕುಂಟ (ಸುಪಾ), **ನ:** ಗಾಡಿಯಲ್ಲಿ ಕಬ್ಬಿಣದ ಸಲಾಕೆಯ ಸಮೀಪ ಕಟ್ಟಲಾಗುತ್ತಿದ್ದ, ಎಣ್ಣೆಯಲ್ಲಿ ನೆಂದ ಸಣಬಿನ ಉಂಡೆ ಬಟ್ಟೆ

ಖಂಜಣ. ಪು: [**ಖಂಜನ**] ರಾಹುವಿನ ಕೃಷ್ಣ ಪುದ್ಗಲ– ವಿಶೇಷ, ಕಾಡಿಗೆ ಸೊಗಸಿನ ಹಕ್ಕಿ, ಕೆಂಬೂತದಹಕ್ಕಿ. ಒಂದು ಮರ

ಖಂಜಣ. ಪು: [ದೇ] ಕೆಸರು, ಕಾಡಿಗೆ, ಅಂಜನ, ಮಸಿ, ಗಾಡಿಯ ಚಕ್ರದ ಒಳಗಿರುವ ಕಪ್ಪನೆಯ ಕೆಸರು(ಪಣ್ಣ)

ಖಂಜರ. ಪು: [ದೇ] ಒಣಗಿದ ಮರ

ಖಂಜಾ. ಸ್ತ್ರೀ: [ಖಂಜಾ] ಒಂದು ಛಂದಸ್ಸು

ಖಂಜಿಅ. ವಿ: [ಖಂಜಿತ] ಕುಂಟಾದವನು.

ಖಂಡ. ಸಕ: [ಖಂಡಯ್] ಮುರಿ, ಒಡೆ ಭೇದಿಸು,

ಖಂಡ. ಪು: [ಖಂಡ] ಒಂದು ನರಕ-ಸ್ಥಾನ. **-ಕವ್ವ** ನ: [-ಕಾವ್ಯ] ಸಣ್ಣ ಕಾವ್ಯ ಗ್ರಂಥ

ಖಂಡ. ಪುಂ.ನ: [ಖಂಡ) ಭಾಗ, ಅಂಶ, ತುಂಡು, ಸಕ್ಕರೆ, ಭೂಮಿಯ ಒಂದು ಭಾಗ. **-ಘಡಗ.** ಪು: [-ಘಟಕ] ಭಿಕ್ಷುಕನ ನೀರಿನ ಪಾತ್ರೆ, **-ಪ್ಪವಾಯಾ.** ಸ್ತ್ರೀ: [-ಪ್ರಪಾತ] ವೈತಾಢ್ಯ ಪರ್ವತದ ಒಂದು ಗುಹೆ, **-ಭೇಯ.** ಪು: [-ಭೇದ] ವಿಚ್ಛೇದ, ಪದಾರ್ಥದ ಒಂದು ರೀತಿಯ ಬೇರ್ಪಡಿಕೆ. ಕುಕ್ಕಿದ ಗಡಿಗೆಯ ಹಾಗೆ ಬೇರ್ಪಡುವುದು(ಭಗ), **-ಮಲ್ಲಯ.** ಪುಂನ: [-ಮಲ್ಲಕ] ಭಿಕ್ಷಾ ಪಾತ್ರ(ಣಾಯಾ), **-ಸೋ.** ಅ: [-ಶಸ್] ತುಂಡು ತುಂಡು, ಚೂರು ಚೂರು. ಖಂಡಾಭೇಯ. '**-ಭೇಯ**' ನೋಡುವುದು(ತಾ)

ಖಂಡ. ನ: [ದೇ] ಮುಂಡ, ಶಿರಸ್ಸು, ತಲೆ, ಮದ್ಯದ ಪಾತ್ರೆ

ಖಂಡ(ಅಪ). '**ಖಗ್ಗ**' ಶಬ್ದವನ್ನು ನೋಡುವುದು

ಖಂಡಈ. ಸ್ತ್ರೀ: [ದೇ] ಕುಲಟೆ, ವ್ಯಭಿಚಾರಿಣಿ

ಖಂಡಗ. ನ: [ಖಂಟಕ] ಶಿಖರ(ತಾ), **ಪುಂನ:** ನಾಲ್ಕನೇ ಒಂದು ಭಾಗ

ಖಂಡಗ. ನ: [ಖಂಡನ] ವಿಚ್ಛೇದ, ನಾಶ(ಣಾಯಾ), ಧಾನ್ಯಗಳ ಹೊಟ್ಟನ್ನು ಬೇರ್ಪಡಿಸುವುದು ವಿ:ನಾಶಮಾಡುವ

ಖಂಡಣಾ. ಸ್ತ್ರೀ: [ಖಂಡನಾ] ತುಂಡಾಗುವುದು, ವಿನಾಶ

ಖಂಡಪಟ್ಟ. ಪು: [ಖಂಡಪಟ್ಟ] ಜೂಜುಕೋರ, ಧೂರ್ತ, ಅನ್ಯಾಯದಲ್ಲಿ ವ್ಯವಹರಿಸುವವನು (ವಿಪಾ)

ಖಂಡರಕ್ಖ. ಪು: [ಖಂಡರಕ್ಷ] ಕೊತ್ವಾಲ, ಕೋಟೆಯ ರಕ್ಷಕ(ಔಪ), ಶುಲ್ಕ ವಸೂಲು ಮಾಡುವವನು

ಖಂಡವ. ನ: [ಖಾಂಡವ] ಅರ್ಜುನನು ಸುಟ್ಟನೆಂದು ಹೇಳಲಾದ ಇಂದ್ರನ ವನ(ವೇಣೀ)

ಖಂಡಾ. ಸ್ತ್ರೀ: [ಖಂಡ] ಸಕ್ಕರೆ(ಓಘ)

ಖಂಡಾ. ಸ್ತ್ರೀ: [ಖಂಡಾ] ಈ ಹೆಸರಿನ ಒಬ್ಬ ವಿದ್ಯಾಧರ ಕನ್ಯೆ (ಮಹಾ)

ಖಂಡಾಖಂಡಿ. ಅ: [ಖಂಡಶಸ್] ತುಂಡು ತುಂಡು, ಚೂರು ಚೂರು(ಉವಾ), **-ಡೀಕಯ.** ವಿ: [-ಕೃತ] ತುಂಡುತುಂಡು ಮಾಡಲ್ಪಟ್ಟ(ಸುರ)

ಖಂಡಾಮಣಿಕಂಚಣ. ನ: [ಖಂಡಾಮಣಿಕಾಂಚನ] ಈ ಹೆಸರಿನ ಒಂದು ವಿದ್ಯಾಧರ ನಗರ

ಖಂಡಾವತ್ತ. ನ: [ಖಂಡಾವರ್ತ] ಈ ಹೆಸರಿನ ಒಂದು ವಿದ್ಯಾಧರ ನಗರ

ಖಂಡಾಹಂಡ. ವಿ: [ಖಂಡಖಂಡ] ತುಂಡು ತುಂಡು ಮಾಡಲಾಗಿರುವ(ಸುಪಾ)

ಖಂಡಿಅ. ಪು: [ಖಂಡಿಕ] ವಿದ್ಯಾರ್ಥಿ(ಔಪ)

ಖಂಡಿಅ. ವಿ: [ಖಂಡಿತ] ಕತ್ತರಿಸಲ್ಪಟ್ಟ, ಒಡೆಯಲ್ಪಟ್ಟ, ಚೂರು ಮಾಡಲ್ಪಟ್ಟ(ಮಹಾ)

ಖಂಡಿಅ. ಪು: [ದೇ] ವಂದಿ ಮಾಗಧ, ಭಟ್ಟಂಗಿ, ಅನಿವಾರ್ಯ

ಖಂಡಿಆ. ಸ್ತ್ರೀ: [ಖಂಡಿಕಾ] ತುಂಡು, ಭಾಗ(ಅಭಿ)

ಖಂಡಿಆ. ಸ್ತ್ರೀ; [ದೇ] ಅಳತೆ, ೨೦ ಮಣದ ಒಂದು ತೂಕ

ಖಂಡೀ. ಸ್ತ್ರೀ: [ದೇ] ಸಣ್ಣ ಗುಪ್ತ ದ್ವಾರ(ಣಾಯಾ), ಕೋಟೆಯ ಬಿರುಕು, ರಂಧ್ರ

ಖಂಡು(ಅಪ). '**ಖಗ್ಗ**' ಶಬ್ದವನ್ನು ನೋಡುವುದು.

ಖಂಡುಅ. ನ: [ದೇ] ತೋಳ ಬಳೆ, ಕೈಯ ಆಭರಣ

ಖಂಡುಯ. '**ಖಂಡಗ**' ಶಬ್ದವನ್ನು ನೋಡುವುದು

ಖಂತ. '**ಖಾ**' ಅನ್ನು ನೋಡುವುದು.

ಖಂತ. ಪು: [ದೇ] ತಂದೆ

ಖಂತ. ವಿ: [ಕ್ಷಾಂತ] ಕ್ಷಮಾಶೀಲ, ಕ್ಷಮೆಯಿಂದ ಕೂಡಿದ(ಕಪ್ಪೂ)

ಖಂತವ್ವ. ವಿ: [ಕ್ಷಂತವ್ಯ] ಕ್ಷಮಿಸಲರ್ಹವಾದ, ಕ್ಷಮೆಗೆ ಯೋಗ್ಯವಾದ(ವಿಕ್ರ)

ಖಂತಿ. ಸ್ತ್ರೀ: [ಕ್ಷಾಂತಿ] ಕ್ಷಮೆ, ಸಹನೆ, ತಾಳ್ಮೆ

ಖಂತಿ. '**ಖಾ**' ಅನ್ನು ನೋಡುವುದು

ಖಂತಿಯಾ}. ಸ್ತ್ರೀ: [ದೇ] ಮಾತೆ, ತಾಯಿ
ಖಂತೀ}.

ಖಂದ. ಪು: [ಸ್ಕಂದ] ಷಣ್ಮುಖ, ಶಿವನ ಮಗ, ರಾಮನ ಈ ಹೆಸರಿನ ಒಬ್ಬ ಯೋಧ, **-ಕುಮಾರ.** ಪು: [-ಕುಮಾರ] ಒಬ್ಬ ಜೈನಮುನಿ(ಉವ), **-ಗ್ಗಹ.**

ಪು: [ಗ್ರಹ] ಕಾರ್ತಿಕೇಯನು ಮಾಡಿದ ಉಪದ್ರವ, ಒಂದು ಜ್ವರ, **–ಮಹ. ಪು: [–ಮಹ]** ಕಾರ್ತಿಕೇಯನ ಉತ್ಸವ(ಣಾಯಾ), **–ಸಿರಿ.** ಸ್ತ್ರೀ: [ಶ್ರೀ] ಒಬ್ಬ ಚೋರರ ಸೇನಾಪತಿಯ ಹೆಂಡತಿಯ ಹೆಸರು.

ಖಂದಗ.} **ಪು: [ಸ್ಕಂದಕ] ಮೇಲಿನ ಶಬ್ದವನ್ನು**
ಖಂದಯ}. **ನೋಡುವುದು.** ಒಬ್ಬ ಜೈನ ಮುನಿ(ಉವ), ಭಗವಾನ್ ಮಹಾವೀರನಿಂದ ಅನಂತರದಲ್ಲಿ ದೀಕ್ಷೆ ತೆಗೆದುಕೊಂಡಿದ್ದ ಒಬ್ಬ ಪರಿವ್ರಾಜಕ.

ಖಂದರುದ್ದ. ನ: [ಸ್ಕಂದರುದ್ರ] ಒಂದು ಬಗೆಯ ಶಾಸ್ತ್ರ

ಖಂದಿಲ. ಪು: [ಸ್ಕಂದಿಲ] ಮಥುರೆಯಲ್ಲಿ ಜೈನಾಗಮಗಳನ್ನು ಲಿಪಿಬದ್ಧಗೊಳಿಸಿದ ಒಬ್ಬ ಪ್ರಖ್ಯಾತ ಜೈನಾಚಾರ್ಯ(ಗಚ್ಛ)

ಖಂಧ. ಪು: [ಸ್ಕಂಧ] ಹೆದರಿದವನು, ಪುದ್ಗಲಗಳ ರಾಶಿ(ಕಮ್ಮ), ಸಮೂಹ, ಗುಂಪು, ಗಾಜು, ಮರದ ಕಾಂಡ, ಒಂದು ಛಂದಸ್ಸು(ಕಂದ), **–ಕರಣೀ.** ಸ್ತ್ರೀ: [**–ಕರಣೀ**] ಸಾಧ್ವಿಯರು ಧರಿಸುವ ಒಂದು ಉಪಕರಣ(ಓಘ), **–ಮಂತ.** ವಿ: [**–ಮತ್**] ಹೆಗಲುಳ್ಳವನು, ದೇಹವುಳ್ಳವನು, **–ವೀಯ. ಪು: [–ಬೀಜ]** ಗೆಡ್ಡೆಯೇ ಬೀಜವಾಗಿರುವ ಬಾಳೆ ಮುಂತಾದ ಗಿಡಗಳು. **–ಸಾಲಿ. ಪು: [–ಶಾಲಿನ್]** ವ್ಯಂತರ ದೇವರುಳ ಒಂದು ಜಾತಿ

ಖಂಧಗ್ಗಿ. ಪು: [ದೇ. ಸ್ಕಂಧಾಗ್ನಿ] ಕಟ್ಟಿಗೆಗಳಿಂದ ಉಂಟಾದ ಬೆಂಕಿ (ದೇ)

ಖಂಧಮಂಸ. ಪು: [ದೇ] ಬಾಹು, ತೋಳು, ಹಸ್ತ

ಖಂಧಮಸೀ. ಸ್ತ್ರೀ: [ದೇ] ಕೈ, ತೋಳು(ದೇ)

ಖಂಧಯ. '**ಖಂಧ**' ಶಬ್ದವನ್ನು ನೋಡುವುದು.

ಖಂಧಯಟ್ಠಿ. ಸ್ತ್ರೀ: [ದೇ **ಖಂಧಯಷ್ಟಿ**] ಕೈ, ತೋಳು(ದೇ)

ಖಂಧರ. ಪುಂಸ್ತ್ರೀ: [ಕಂಧರ] ಕೊರಳು, ಕುತ್ತಿಗೆ

ಖಂಧಲಟ್ಠಿ. ಸ್ತ್ರೀ: [ದೇ. **ಸ್ಕಂಧಯಷ್ಟಿ**] ಭುಜ, ತೋಳು, ಕೈ

ಖಂಧವಾರ. '**ಖಂಧಾವಾರ**' ಶಬ್ದವನ್ನು ನೋಡುವುದು.

ಖಂಧಾಆರ. '**ಖಂಧಾವಾರ**' ಶಬ್ದವನ್ನು ನೋಡುವುದು

ಖಂಧಾರ. ಪು.ಬ: [ಸ್ಕಂಧಾರ] ಒಂದು ದೇಶ

ಖಂಧಾರ. '**ಖಂಧಾವಾರ**' ಶಬ್ದವನ್ನು ನೋಡುವುದು.

ಖಂಧಾಲ. ವಿ: [**ಸ್ಕಂಧವತ್**] ದೇಹವುಳ್ಳವನು, ಹೆಗಲುಳ್ಳವನು

ಖಂಧಾವಾರ. ಪು: [ಸ್ಕಂಧಾವಾರ] ಛಾವಣಿ, ಸೈನ್ಯದ ಶಿಬಿರ(ಣಾಯಾ)

ಖಂಧಿ. ವಿ: [**ಸ್ಕಂಧಿನ್**] ದೇಹವುಳ್ಳವನು, ಹೆಗಲುಳ್ಳವನು

ಖಂಧಿಲ್ಲ. '**ಖಂಧಿ**' ಶಬ್ದವನ್ನು ನೋಡುವುದು

ಖಂಧೀಧಾರ. ಪು: [ದೇ] ಬಹಳ ಬಿಸಿಯಾದ ನೀರಿನ ಪ್ರವಾಹ

ಖಂಪ. ಸಕ: [ಸಿಚ್] ಸಿಂಪಡಿಸು, ಚಿಮುಕಿಸು(ಭವಿ)

ಖಂಪಣಯ. ನ: [ದೇ] ಬಟ್ಟೆ, ವಸ್ತ್ರ(ಸುಪಾ)

ಖಂಭ. ಪು: [ಸ್ತಂಭ] ಕಂಬ

ಖಂಭ. ಸಕ: [ಸ್ಕಭ್] ಕ್ಷುಬ್ಧಗೊಳ್ಳು, ತಳಮಳಗೊಳ್ಳು

ಖಂಭತಿತ್ಥ. ನ: [**ಸ್ತಂಭತೀರ್ಥ**] ಒಂದು ಜೈನ ತೀರ್ಥ, ಗುಜರಾತಿನ ಪ್ರಾಚೀನ '**ಖಂಭಣಾ**' ಎಂಬ ಊರು

ಖಂಭಲ್ಲಿಅ. ವಿ: [ಸ್ತಂಭಿತ] ಕಂಬಕ್ಕೆ ಕಟ್ಟಿಹಾಕಲಾದ

ಖಂಭಾಇತ್ತ. ನ: [**ಸ್ತಂಭಾದಿತ್ಯ**] ಗೂರ್ಜರ ದೇಶದ ಪ್ರಾಚೀನ ನಗರ ಖಂಭಾತ

ಖಂಭಾಲಣ. ನ: [**ಸ್ತಂಭಾಲಗನ**] ಕಂಬಕ್ಕೆ ಕಟ್ಟುವುದು (ಪಣ್ಹ)

ಖಕ್ಖರಗ. ಪುಂನ: [ದೇ] ಒಣರೊಟ್ಟಿ (ಧರ್ಮ)

ಖಗ್ಗ. ಪು: [ಖಡ್ಗ] ಕತ್ತಿ, ಖಡ್ಗ, ಖಡ್ಗ ಮೃಗ, **–ಧೇಣೂಅ.** ಸ್ತ್ರೀ: [**–ಧೇನು**] ಚೂರಿ, ಚಾಕು. **–ಪುರಾ.** ಸ್ತ್ರೀ: [**ಪುರಾ**] ವಿದೇಹ–ವರ್ಷದ ತನ್ನ ಹೆಸರಿನಿಂದ ಖ್ಯಾತವಾದ ನಗರ. **–ಪುರೀ.** ಸ್ತ್ರೀ: [**–ಪುರೀ**] ಹಿಂದಿನ ಅರ್ಥವೇ.

ಖಗ್ಗಾಖಗ್ಗಿ. ನ: [ಖಡ್ಗಾಖಡ್ಗಿ] ಖಡ್ಗ ಯುದ್ಧ.ಕತ್ತಿ ಕಾಳಗ

ಖಗ್ಗಿ. ಪು: [ಖಡ್ಗಿನ್] ಖಡ್ಗ ಮೃಗ(ಕುಮಾ)

ಖಗ್ಗಿಅ. ಪು: [ದೇ] ಗ್ರಾಮದ ಮುಖಂಡ(ದೇ)

ಖಗ್ಗೀ. ಸ್ತ್ರೀ: [ಖಡ್ಗೀ] ವಿದೇಹ–ವರ್ಷದ ನಗರ

ಖಗ್ಗೂಡ. ವಿ: [ದೇ] ಶಠಪ್ರಾಯ, ಧೂರ್ತನಂಥವ, ಧರ್ಮ–ರಹಿತ, ನಾಸ್ತಿಕ ಸಮಾನ, ನಿದ್ರೆಯ ಸ್ವಭಾವದ, ರಸ–ಲಂಪಟ(ಬೃಹ)

ಖಚ. ಸಕ: [**ಖಚ್**] ಪವಿತ್ರಗೊಳಿಸು, ಬಿಗಿಯಾಗಿ ಕಟ್ಟು

ಖಚಿಅ. '**ಖಇಅ=ಖಂತ**' ಶಬ್ದವನ್ನು ನೋಡುವುದು. ಹಳದಿ ಬಣ್ಣದ

ಖಚ್ಚಲ್ಲ. ಪು: [ದೇ] ಕರಡಿ(ದೇ)

ಖಚ್ಚೋಲ. ಪು: [ದೇ] ವ್ಯಾಘ್ರ, ಹುಲಿ
ಖಜ್ಜ. ಪು: [ಖರ್ಜ] ಒಂದು ಜಾತಿಯ ಮರ
ಖಜ್ಜ. ವಿ: [ಖಾದ್ಯ] ತಿನ್ನಲು ಯೋಗ್ಯವಾದ ವಸ್ತು(ಪಣ್ಣ), ನ: ಖಾದ್ಯ–ವಿಶೇಷ
ಖಜ್ಜ. ವಿ: [ಕ್ಷಯ್ಯ] ನಾಶಪಡಿಸಲು ಸಾಧ್ಯವಾದ
ಖಜ್ಜಯ. 'ಖಜ್ಜ=ಖಾದ್ಯ' ಶಬ್ದವನ್ನು ನೋಡುವುದು.
ಖಜ್ಜಿಅ. ವಿ: [ದೇ] ಜೀರ್ಣವಾದ, ಕೊಳೆತು ಹೋದ, ಯರನ್ನು ನಿಂದಿಸಲಾಗಿದೆಯೋ ಅವನು
ಖಜ್ಜಿರ(ಅಪ). ವಿ: [ಖಾದ್ಯಮಾನ] ತಿನ್ನಲ್ಪಡುತ್ತಿರುವ
ಖಜ್ಜೂ. ಸ್ತ್ರೀ: [ಖರ್ಜೂ] ಕಜ್ಜಿ, ತುರಿಕೆ
ಖಜ್ಜೂರ. ಪು: [ಖರ್ಜೂರ] ಖರ್ಜೂರದ ಮರ(ಕುಮಾ), ಖರ್ಜೂರದ ಹಣ್ಣು(ಪಉಮ)
ಖಜ್ಜೂರೀ. ಸ್ತ್ರೀ: [ಖರ್ಜೂರೀ] ಖರ್ಜೂರದ ಮರ
ಖಜ್ಜೋಅ. ಪು: [ಖದ್ಯೋತ] ಮಿಂಚುಹುಳು(ಸುಪಾ)
ಖಟ್ಟ. ನ: [ದೇ] ಕಡಲೆ ಹಿಟ್ಟಿನ ಪದಾರ್ಥ, ವಿ: ಹುಳಿಯಾದ, –ಮೇಹ. ಪು: [–ಮೇಘ] ಹುಳಿ ನೀರಿನ ಮಳೆ, ಆಮ್ಲದ ಮಳೆ
ಖಟ್ಟಂಗ. ನ: [ದೇ] ನೆರಳು, ಬಿಸಿಲು ಇಲ್ಲದಿರುವುದು (ದೇ)
ಖಟ್ಟಂಗ. ನ: [ಖಟ್ವಾಂಗ] ಶಿವನ ಒಂದು ಆಯುಧ, ತ್ರಿಶೂಲ, ಚಿಕ್ಕ ಮಂಚದ ಹಲಗೆ, ಪ್ರಾಯಶ್ಚಿತ್ತದ ರೂಪದಲ್ಲಿ ಮಾಡುವ ಭಿಕ್ಷೆಯ ಪಾತ್ರೆ
ಖಟ್ಟಕ್ಖಡ. ಪು: [ಖಟ್ವಾಕ್ಷಕ] ರತ್ನ ಪ್ರಭಾ ಎಂಬ ಭೂಮಿಯ ಒಂದು ನರಕದ ನೆಲೆ.
ಖಟ್ಟಾ. ಸ್ತ್ರೀ: [ಖಟ್ವಾ] ಮಂಚ, –ಮಲ್ಲ. ಪು: [–ಮಲ್ಲ] ವಿಪರೀತ ಕಾಯಿಲೆಯಿಂದಾಗಿ ಮಂಚದಿಂದ ಮೇಲೇಳಲಾರದವನು(ಬೃಹ)
ಖಟ್ಟಿಅ.} [ದೇ. ಖಟ್ಟಿಕ] ಕಟುಕ, ಮಾಂಸ
ಖಟ್ಟಿಕ್ಕ}. ಮಾರಾಟದಲ್ಲಿ ತೊಡಗಿದವನು(ಗಾ)
ಖಡ. ನ: [ದೇ] ತೃಣ, ಹುಲ್ಲು(ದೇ)
ಖಡಇಅ. ವಿ: [ದೇ] ಸಂಕುಚಿತ, ಕುಗ್ಗಿದ
ಖಡಂಗ. ನ: [ಷಡಂಗ] ವೇದದ ಆರು ಅಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ಜ್ಯೋತಿಷ, ಛಂದ ಮತ್ತು ನಿರುಕ್ತ. –ವಿ. ವಿ: [–ವಿತ್] ಆರೂ ಅಂಗಗಳನ್ನು ತಿಳಿದವನು(ಪಿ)
ಖಡಕ್ಕಯ. ಪುಂನ: [ಖಟತ್ಕೃತ] ಸರಪಳಿ ಚಿಲಕ ಮೊದಲಾದವುಗಳ ಶಬ್ದ ಮಾಡುವುದು
ಖಡಕ್ಕಾರ. ಪು: [ಖಟತ್ಕಾರ] ಮೇಲಿನ ಶಬ್ದವನ್ನು ನೋಡುವುದು.
ಖಡಕ್ಕಿಆ}. ಸ್ತ್ರೀ: [ದೇ] ಕಿಟಕಿ
ಖಡಕ್ಕೀ}.
ಖಡಕ್ಕಿಯ. 'ಖಡಕ್ಕಯ' ಶಬ್ದವನ್ನು ನೋಡುವುದು
ಖಡಖಡ. ಪು: [ಖಟತ್ಖಟ] ಖಟಖಟ ಶಬ್ದ
ಖಡಕ್ಖರ. 'ಛಡಕ್ಕರ' ಶಬ್ದವನ್ನು ನೋಡುವುದು
ಖಡಖಡ 'ಖಾಡಖಡ' ಶಬ್ದವನ್ನು ನೋಡುವುದು
ಖಡಖಡಗ. ವಿ: [ದೇ] ಚಿಕ್ಕದಾದ ಮತ್ತು ಉದ್ದವಾದ
ಖಡಟ್ಟೋಬಿಲ. ಪು: [ದೇ] ಒಂದು ಮ್ಲೇಚ್ಛಜಾತಿ.
ಖಡಣಾ. ಸ್ತ್ರೀ: [ದೇ] ಹಸು, ಗೋವು
ಖಡಹಡ. ಪು: [ಖಟಖಟ] ಸರಪಳಿ ಮೊದಲಾದವುಗಳ ಶಬ್ದ
ಖಡಹಡೀ. ಸ್ತ್ರೀ: [ದೇ] ಅಳಿಲು, ಇಣಚಿ
ಖಡಿಅ. 'ಖಟ್ಟಿಅ' ಶಬ್ದವನ್ನು ನೋಡುವುದು.
ಖಡಿಅ. 'ಖಲಿಅ' ಶಬ್ದವನ್ನು ನೋಡುವುದು.
ಖಡಿಅ. ಪು: [ದೇ] ಮಸಿಯ ಪಾತ್ರೆ, ಮಸಿಕುಡಿಕೆ
ಖಡಿಆ. ಸ್ತ್ರೀ: [ಖಟಿಕಾ] ಮಕ್ಕಳು ಬರೆಯುವ ಬಳಪ
ಖಡೀ. ಸ್ತ್ರೀ: [ಖಟೀ] ಮೇಲಿನ ಶಬ್ದವನ್ನು ನೋಡುವುದು.
ಖಡುಆ. ಸ್ತ್ರೀ: [ದೇ] ಮುತ್ತು
ಖಡುಕ್ಕ. ಅಕ: [ಆವಿಸ್+ಭೂ] ಪ್ರಕಟವಾಗು, ಹುಟ್ಟು
ಖಡು. ಸಕ: [ಮೃದ್] ಮರ್ದಿಸು, ಒತ್ತು, ಉಜ್ಜು, ಪುಡಿಮಾಡು
ಖಡ್ಡ}. ನ: [ದೇ] ಮೀಸೆ, ಗಡ್ಡ–ಮೀಸೆ, ದೊಡ್ಡ,
ಖಕಡ್ಡಗ}. ಮಹಾನ್, ಹಳ್ಳದ ಆಕೃತಿಯ
ಖಡ್ಡಾ. ಸ್ತ್ರೀ: [ದೇ] ಗಣಿ, ಆಕರ, ಭಂಡಾರ, ಪರ್ವತದ ಕಂದರ, ಪರ್ವತದ ಆಳ
ಖಡ್ಡಿಅ. ವಿ: [ಮೃದಿತ] ಮರ್ದಿಸಲ್ಪಟ್ಟ, ಉಜ್ಜಲ್ಪಟ್ಟ, ಕುಟ್ಟಿ ಪುಡಿಮಾಡಲ್ಪಟ್ಟ
ಖಡ್ಡುಯಾ. ಸ್ತ್ರೀ: [ದೇ] ಪೆಟ್ಟು, ಹೊಡೆತ, ಆಘಾತ
ಖಡ್ಡೋಲಯ. ಪು: [ದೇ] ತಗ್ಗು, ಹಳ್ಳ
ಖಡ. ಪು: [ದೇ] ಒಂದು ಮ್ಲೇಚ್ಛ ಜಾತಿ
ಖಢಕ್ಕಿಯ. 'ಖಢಕ್ಕಯ' ಶಬ್ದವನ್ನು ನೋಡುವುದು
ಖಢಕ್ಖಢ. ಪು: [ಖಟಖಟ]
ಖಣ. ಸಕ: [ಖನ್] ಅಗೆ, ತೋಡು. ವ. ಕೃ– ಖನ್ನಮಾಣ.

ಖಣ. ಪು: [ಕ್ಷಣ] ಬಹಳ ಅಲ್ಪ ಸಮಯ, **–ಜೋಇ.** ವಿ: [**–ಯೋಗಿನ್**] ಕ್ಷಣ ಕಾಲ ಮಾತ್ರ ಇರುವವನು. **–ಭಂಗುರ.** ವಿ: [**–ಭಂಗುರ**] ಕ್ಷಣ ಭಂಗುರ ನಶ್ವರ, ಕ್ಷಣಿಕ (ಪಉಮ) **–ಯಾ.** ಸ್ತ್ರೀ: [–ದಾ] ರಾತ್ರಿ, ಇರುಳು(ಉಪ)
ಖಣಖಣ}. **ಅಕ:** [**ಖಣಖಣಾಯ್**] ಖಣಖಣ
ಖಣಖಣಖಣ}. ಎಂದು ಶಬ್ದ ಮಾಡು
ಖಣಗ. ವಿ: [ಖನಕ] ಅಗೆಯುವವನು, ತೋಡುವವನು(ಣಾಯಾ)
ಖಣಣ. ನ: [ಖನನ] ಅಗೆಯುವುದು, ತೋಡುವುದು
ಖಣಯ. **'ಖಣ=ಕ್ಷಣ'** ಶಬ್ದವನ್ನು ನೋಡುವುದು.
ಖಣಯ. ಪು: [ಖನಕ] ಅಗೆಯುವವನು, ತೋಡುವವನು
ಖಣಾವಿಯ. ವಿ: [ಖಾನಿತ] ಅಗೆಸಲ್ಪಟ್ಟ
ಖಣಿ. ಸ್ತ್ರೀ: [ಖನಿ] ಗಣಿ, ಅಕರ
ಖಣಿಕ್ಕ.} **'ಖಣಿಯ=ಕ್ಷಣಿಕ'** ಶಬ್ದವನ್ನು
ಖಣಿಗ.} ನೋಡುವುದು.
ಖಣಿತ್ತ. ನ: [ಖನಿತ್ರ] ಅಗೆಯುವ ಸಾಧನ, ಗುದ್ದಲಿ
ಖಣಿಯ. ವಿ: [ಕ್ಷಣಿಕ] ನಶ್ವರ, ಕ್ಷಣ ಭಂಗುರ (ವಿಸೇ) ವಿ: ಕೆಲಸ–ಬೊಗಸೆ ಇಲ್ಲದೆ ಪುರಸೊತ್ತಾಗಿರುವವನು(ಧಮ್ಮ) **–ವಾಇ.** ವಿ: [**–ವಾದಿನ್**] ಎಲ್ಲ ವಸ್ತುಗಳೂ ಕ್ಷಣದಲ್ಲಿ ನಾಶವಾಗುವಂಥವೆಂದು ನಂಬುವವ, ಬೌದ್ಧ ಧರ್ಮಾನುಯಾಯಿ
ಖಣೀ. **'ಖಣಿ'** ಶಬ್ದವನ್ನು ನೋಡುವುದು.
ಖಣೂಸಾ. ಸ್ತ್ರೀ: [ದೇ] ಮಾನಸಿಕ ವೇದನೆ, ಮನಸ್ಸಿನ ದುಃಖ(ದೇ)
ಖಣ್ಣ. ನ: [ದೇ] ಅಗೆದಿರುವ
ಖಣ್ಣ. ವಿ: [ಖನ್ಯ] ಅಗೆಯಲು ಯೋಗ್ಯವಾದ, ತೋಡಲು ಅರ್ಹವಾದ
ಖಣ್ಣು. **'ಖಾಣು'** ಶಬ್ದವನ್ನು ನೋಡುವುದು.
ಖಣ್ಣುಅ. ಪು: [ದೇ. **ಸ್ಥಾಣುಕ**] **ಗೂಟ**(ದೇ)
ಖತ್ತ. ನ: [ದೇ] ಅಗೆದಿರುವ, ಗುದ್ದಲಿಯಿಂದ ತೋಡಿರುವ, ಕಳ್ಳತನ ಮಾಡಲು ಗೋಡೆಯಲ್ಲಿ ಮಾಡಿರುವ ರಂಧ್ರ, ಕನ್ನ. ಗೊಬ್ಬರ(ಉಪ), **–ಖಣಗ.** ಪು: [ಖನಕ] ಕನ್ನಹಾಕಿ ಕಳವು ಮಾಡುವವನು, **–ಖಣಣ.** ನ: [–ಖನನ] ಕನ್ನ ಕೊರೆಯುವುದು(ಣಾಯಾ), **–ಮೇಹ.** ಪು: [**–ಮೇಘ.**] ಒಣ ಸಗಣಿಯಂಥ ರಸವಿರುವ ಮೋಡ.
ಖತ್ತ. ಪು: [ಕ್ಷತ್ರ] ಕ್ಷತ್ರಿಯ, ನಾಲ್ಕು ವರ್ಣಗಳಲ್ಲೊಂದು
ಖತ್ತ. ವಿ: [ಕ್ಷಾತ್ರ] ಕ್ಷತ್ರಿಯನಿಗೆ ಸಂಬಂಧಿಸಿದ, ಕ್ಷತ್ರಿಯನ, ನ: ಕ್ಷತ್ರಿಯತ್ವ(ಧಮ್ಮ)
ಖತ್ತಯ. ಪು: [ದೇ] ಹೊಲ ಅಗೆಯುವವನು, ಕನ್ನ ಹಾಕಿ ಕಳ್ಳತನ ಮಾಡುವವನು, ರಾಹು ಗ್ರಹ(ಭಗ)
ಖತ್ತಿ. ಪು: [ದೇ] ಒಂದು ಮ್ಲೇಚ್ಛ ಜಾತಿ
ಖತ್ತಿ: **ಪುಂಸ್ತ್ರೀ:** [**ಕ್ಷತ್ರಿನ್**] ಮುಂದಿನ ಶಬ್ದವನ್ನು ನೋಡುವುದು.
ಖತ್ತಿಅ. **ಪುಂಸ್ತ್ರೀ:** [**ಕ್ಷತ್ರಿಯ**] ನಾಲ್ಕು ವರ್ಣಗಳಲ್ಲಿ ಒಂದಾದ ಕ್ಷತ್ರಿಯ, **–ಕುಂಡಗ್ಗಮ.** ಪು: [**–ಕುಂಡಗ್ರಾಮ**] ಮಹಾವೀರ ತೀರ್ಥಂಕರರು ಹುಟ್ಟಿದ ನಗರ. **ಕುಂಡಪುರ.** ನ: [**–ಕುಂಡಪುರ**] **ಅದೇ ಅರ್ಥ(ಆಚಾ),** –ವಿಜ್ಜಾ. ಸ್ತ್ರೀ: [–ವಿದ್ಯಾ] **ಧನುರ್ವಿದ್ಯೆ**
ಖತ್ತಿಣೀ}. ಸ್ತ್ರೀ: [**ಕ್ಷತ್ರಿಯಾಣೀ**] ಕ್ಷತ್ರಿಯ ಜಾತಿಯ
ಖತ್ತಿಯಾಣೀ}. ಹೆಣ್ಣು(ಕಪ್ಪ)
ಖದ್ಧ. ನ: [ದೇ] ಬಹಳ ಲಾಭ, ಅತ್ಯಧಿಕ ಲಾಭ
ಖದ್ಧ. ವಿ: [ದೇ] ತಿಂದ, ತಿನ್ನಲಾದ, ಬಹಳ, ಪ್ರಚುರ(ಬೃಹ), ವಿಶಾಲವಾದ, ದೊಡ್ಡ(ಓಘ), ಅ: ಬೇಗನೆ, ಶೀಘ್ರ, **ಖದ್ಧಾದ್ದಾಣಿಅ.** ವಿ: [ಖದ್ಧಾದಾನಿಕ] ಸಮೃದ್ಧವಾದ, ಹೆಚ್ಚು ಐಶ್ವರ್ಯದಿಂದ ಕೂಡಿದ(ಓಘ)
ಖನ್ನ.(ದೇ). **'ಖಣ್ಣ'** ಶಬ್ದವನ್ನು ನೋಡುವುದು.
ಖನ್ನುಅ.(ದೇ). **'ಖಣುಅ'** ಶಬ್ದವನ್ನು ನೋಡುವುದು.
ಖಪುಸಾ. ಸ್ತ್ರೀ: [ದೇ] ಒಂದು ಬಗೆಯ ಚಪ್ಪಲಿ
ಖಪ್ಪರ. ಪು: [**ಕರ್ಪರ**] ಮನುಷ್ಯರ ಒಂದು ವರ್ಗ, ಭಿಕ್ಷಾಪಾತ್ರೆ, ತಲೆಬುರುಡೆ, ಕಪಾಲ. ಗಡಿಗೆಯ ಚೂರು(ಪಉಮ)
ಖಪ್ಪರ}. ವಿ: [ದೇ] ಒರಟಾದ, ಕಠಿಣವಾದ,
ಖಪ್ಪುರ}. ನಿಷ್ಠುರವಾದ(ಪಾಅ)
ಖಮ. ಸಕ: [ಕ್ಷಮ್] ಕ್ಷಮಿಸು, ಸಹಿಸು
ಖಮ. ವಿ: [ಕ್ಷಮ] ಉಚಿತ, ಯೋಗ್ಯ, ಸಮರ್ಥ, ಶಕ್ತನಾದ(ಪಾಅ)
ಖಮಗ. ಪು: [**ಕ್ಷಮಗ, ಕ್ಷಪಕ**] ತಪಸ್ವಿಯಾದ ಜೈನ ಸಾಧು

ಖಮಣ. ನ: [ಕ್ಷಪಣ] ಒಂದು ಬಗೆಯ ತಪಶ್ಚರ್ಯೆ
ಖಮಣ. ನ: [ಕ್ಷಪಣ, ಕ್ಷಮಣ] ಉಪವಾಸ, ಪು: ತಪಸ್ವಿಯಾದ ಜೈನ ಸಾಧು
ಖಮಯ. 'ಖಮಗ' ಶಬ್ದವನ್ನು ನೋಡುವುದು.
ಖಮಾ. ಸ್ತ್ರೀ: [ಕ್ಷಮಾ] ಭೂಮಿ, ಪೃಥ್ವಿ, ಕ್ರೋಧವಿಲ್ಲದಿರುವುದು, ಕ್ಷಮೆ, ಸಹನೆ. **–ವಇ.** ಪು: [–ಪತಿ] ಭೂಪತಿ, ರಾಜ, **–ಸಮಣ.** ಪು: [–ಶ್ರಮಣ] ಸಾಧು, ಋಷಿ, ಮುನಿ. **–ಹರ.** ಪು: [–ಧರ] ಪರ್ವತ, ಬೆಟ್ಟ, ಸಾಧು, ಮುನಿ(ಸುಪಾ)
ಖಮಿಯ. ವಿ: [ಕ್ಷಮಿತ] ಕ್ಷಮಿಸಲ್ಪಟ್ಟ
ಖಮ್ಮ. 'ಖಣ=ಖನ್' ಶಬ್ದವನ್ನು ನೋಡುವುದು.
ಖಮಾವಣಯಾ}. ಸ್ತ್ರೀ: [ಕ್ಷಮಣಾ] ಕ್ಷಮೆ
ಖಮಾವಣಾ}. ಬೇಡುವುದು, (ಭಗ)
ಖಮಾವಿಯ. ವಿ: [ಕ್ಷಮಿತ] ಕ್ಷಮಿಸಲ್ಪಟ್ಟ(ಸುಪಾ)
ಖಮ್ಮಕ್ಖಮ. ಪು: [ದೇ] ಯುದ್ಧ, ಸಂಗ್ರಾಮ, ಮನಸ್ಸಿನ ನೋವು, ಪಶ್ಚಾತ್ತಾಪದ ನಿಟ್ಟುಸಿರು(ದೇ)
ಖಯ. 'ಖಚ' ಶಬ್ದವನ್ನು ನೋಡುವುದು.
ಖಯ. ಅಕ: [ಕ್ಷಿ] ಕ್ಷಯ ಹೊಂದು, ನಷ್ಟ ಹೊಂದು
ಖಯ. 'ಖಗ' ಶಬ್ದವನ್ನು ನೋಡುವುದು. ಆಕಾಶದಷ್ಟು ಎತ್ತರಕ್ಕೆ ತಲುಪಿದವನು. **–ರಾಯ.** ಪು: [–ರಾಜ] ಪಕ್ಷಿರಾಜ, ಗರುಡ(ಪಾಅ), **–ವಇ.** ಪು: [–ಪತಿ] ಗರುಡ ಪಕ್ಷಿ
ಖಯ. ನ: [ಕ್ಷತ] ಗಾಯ, ವ್ರಣ, ವಿ: ಗಾಯಗೊಳಿಸಲ್ಪಟ್ಟ, ಗಾಯವಾದ, **–ಖಯಾಯಾರ.** ಪುಂ.ಸ್ತ್ರೀ: [ಕ್ಷತಾಚಾರ] ಸಡಿಲವಾದ ಆಚಾರವುಳ್ಳ ಸಾಧು ಅಥವಾ ಸಾಧ್ವಿ
ಖಯ. ವಿ: [ಖಾತ] ಅಗೆಯಲಾದ, ತೋಡಲ್ಪಟ್ಟ
ಖಯ. ಪು: [ಕ್ಷಯ] ವಿನಾಶ, ಪ್ರಳಯ, ಕ್ಷಯರೋಗ, **–ಕಾರಿ.** ವಿ: [–ಕಾರಿನ್] ನಾಶ ಕಾರಕ, **–ಕಾಲ. –ಗಾಲ.** ಪು: [–ಕಾಲ] ಪ್ರಳಯ ಕಾಲ(ಭವಿ), **ಖಯಾಗ್ಗಿ.** ಪು: [ಕ್ಷಯಾಗ್ನಿ] ಪ್ರಳಯ ಕಾಲದ ಬೆಂಕಿ, **–ನಾಣಿ.** ಪು: [–ಜ್ಞಾನಿನ್] ಕೇವಲಜ್ಞಾನಿ, ಪರಿಪೂರ್ಣ ಜ್ಞಾನ ಹೊಂದಿದ, ಸರ್ವಜ್ಞ, **–ಸಮಯ.** ಪು: [–ಸಮಯ] ಪ್ರಳಯಕಾಲ
ಖಯಂಕರ. ವಿ: [ಕ್ಷಯಕರ] ನಾಶಕಾರಕ(ಪಉಮ)
ಖಯಂತಕರ. ವಿ: [ಕ್ಷಯಾಂತಕರ] ನಾಶಕಾರಕ
ಖಯರ. ಪುಂಸ್ತ್ರೀ: [ಖಚರ] ಆಕಾಶದಲ್ಲಿ ಸಂಚರಿಸುವ, ಪಕ್ಷಿ, ಆಕಾಶಗಾಮಿನಿ ವಿದ್ಯೆಯ ಬಲದಿಂದ ಗಗನಲ್ಲಿ ಸಂಚರಿಸಬಲ್ಲ ವಿದ್ಯಾಧರರು. **–ರಾಯ.** ಪು: [–ರಾಜ] ವಿದ್ಯಾಧರರ ರಾಜ(ಸುಪಾ)
ಖಯರ. 'ಖಇರ=ಖದಿರ' ಶಬ್ದವನ್ನು ನೋಡುವುದು.
ಖಯರಕ್ಕ. ವಿ: [ಖಾದಿರಕ] ಕಗ್ಗಲಿ ಮರಕ್ಕೆ ಸಂಬಂಧಿಸಿದ
ಖಯಾಲ. ಪುಂನ: [ದೇ] ಬಿದಿರು ಮೆಳೆ(ಭವಿ)
ಖರ. ಅಕ: [ಕ್ಷರ್] ತೊಟ್ಟಿಕ್ಕು, ಸ್ರವಿಸು, ನಾಶವಾಗು,
ಖರ. ವಿ: [ಖರ] ಒರಟು, ಕಠಿಣ, ನಿಷ್ಠುರ(ಸುರ), ಪುಂಸ್ತ್ರೀ: ಕತ್ತೆ, ಪು: ಒಂದು ಛಂದಸ್ಸು, ನ: ಎಳ್ಳೆಣ್ಣೆ, **–ಕಂಟ.** ನ: [–ಕಂಟ] ಒಂದು ಮುಳ್ಳಿನ ಮರದ ಕೊಂಬೆ, **–ಕಂಡ.** ನ: [–ಕಾಂಡ] ರತ್ನ ಪ್ರಭಾ ಪೃಥ್ವಿಯ ಮೊದಲ ಭಾಗ, **–ಕಮ್ಮ.** ನ: [–ಕರ್ಮನ್] ಅನೇಕ ಜೀವಗಳಿಗೆ ಹಾನಿಯಾಗುವಂಥ ಕೆಲಸ, **–ಕಮ್ಮಿಅ.** ವಿ: [–ಕರ್ಮಿನ್] ಒರಟಾದ ಅಥವಾ ಕಠಿಣವಾದ ಕೆಲಸ ಮಾಡುವವನು, ಪು: ಕೊತವಾಲ, ನಗರ ರಕ್ಷಕ, **–ಕಿರಣ.** ಪು: [–ಕಿರಣ] **ಸೂರ್ಯ, –ದೂಸಣ.** ಪು: [–ದೂಷಣ] ರಾವಣನ ಭಾವಮೈದುನನಾಗಿದ್ದ ಈ ಹೆಸರಿನ ವಿದ್ಯಾಧರ ರಾಜ(ಪಉಮ), **–ನಹರ.** ಪು: [–ನಖರ] **ಕ್ರೂರ ಪ್ರಾಣಿ,** ನಿಸ್ಸಣ. ಪು: [ನಿಃಸ್ವನ] ಈ ಹೆಸರಿನ ರಾವಣನ ಒಬ್ಬ ಯೋಧ, **–ಮುಹ.** ಪು: [–ಮುಖ] ಅನಾರ್ಯದೇಶ, ಅದರ ನಿವಾಸಿ, **–ಮುಹೀ.** ಸ್ತ್ರೀ: [–ಮುಖೀ] ಒಂದು ವಾದ್ಯ, ನಪುಂಸಕ ದಾಸಿ, **–ಯರ.** ವಿ: [–ತರ] ಅತಿ ಕಠೋರ, ಪು: ಈ ಹೆಸರಿನ ಒಂದು ಜೈನ ಗಚ್ಛ, **–ಸನ್ನಯ.** ನ: [–ಸಂಜ್ಞಕ] ಎಳ್ಳೆಣ್ಣೆ, **–ಸಾವಿಆ.** ಸ್ತ್ರೀ: [–ಶ್ರಾವಿಕಾ] ಒಂದು ಲಿಪಿ–ವಿಶೇಷ, **–ಸ್ಸರ.** ಪು: [–ಸ್ವರ] ಅತಿ ಅಧಾರ್ಮಿಕ ದೇವರುಗಳ ಒಂದು ವರ್ಗ
ಖರ. ವಿ: [ಕ್ಷರ] ಅಶಾಶ್ವತ, ನಾಶವಾಗುವಂಥದು
ಖರಂಟ. ಸಕ: [ಖರಂಟಯ್] ಅವಮಾನಗೊಳಿಸು, ತಿರಸ್ಕರಿಸು, ಲೇಪಿಸು, ಬಳಿ
ಖರಂಟ. ವಿ: [ಖರಂಟ] ಅವಮಾನಗೊಳಿಸುವವನು, ತಿರಸ್ಕರಿಸುವವನು, ಲೇಪಿಸುವವನು, ಶುಚಿಯಲ್ಲದ ಪದಾರ್ಥ(ತಾ),

ಖರಂಟಣ. ನ: [ಖರಂಟನ] ಅವಮಾನ, ತಿರಸ್ಕಾರ, ಪ್ರೇರಣೆ(ಓಘ)

ಖರಂಟಣಾ. ಸ್ತ್ರೀ: [ಖರಂಟನಾ] ಮೇಲಿನ ಶಬ್ದವನ್ನು ನೋಡುವುದು.

ಖರಂಟಿಅ. ವಿ: [ಖರಂಟಿತ] ತಿರಸ್ಕರಿಸಲ್ಪಟ್ಟ, ಅವಮಾನಿಸಲ್ಪಟ್ಟ

ಖರಂಸೂಯಾ. ಸ್ತ್ರೀ: [ದೇ] ಒಂದು ಬಗೆಯ ವನಸ್ಪತಿ

ಖರಡ. ಪು: [ದೇ] ಆನೆಯ ಬೆನ್ನ ಮೇಲೆ ಹಾಸುವ ಹೊದಿಕೆ

ಖರಡ. ಸಕ: [ಲಿಪ್] ಲೇಪಿಸು, ಬಳಿ

ಖರಡ. ಪು: [ಖರಟ] ಒಂದು ಅಧಮ ಮನುಷ್ಯಜಾತಿ

ಖರಡಿಅ. ವಿ: [ದೇ] ಒರಟಾದ, ರೂಕ್ಷವಾದ, ನಾಶವಾದ

ಖರಡಿಅ. ವಿ: [ಲಿಪ್ತ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ(ಓಘ)

ಖರಣ. ನ: [ದೇ] ಮುಳ್ಳಿನ ಮರದ ಕೊಂಬೆ

ಖರಪ್ಫಸ. ಪು: [ಖರಪರುಷ] ಒಂದು ನರಕ–ಸ್ಥಾನ.

ಕರಯ. ಪು: [ಖರಕ] ಭಗವನ್ ಮಹಾವೀರನ ಕಿವಿಯಿಂದ ಕುಗ್ಗಿಯನ್ನು ತೆಗೆಯವ ಒಬ್ಬ ವೈದ್ಯ.

ಖರಯು. ಪು: [ದೇ] ಕೆಲಸಗಾರ, ನೌಕರ, ಕಾರ್ಮಿಕ(ಓಘ), ರಾಹು

ಖರಹರ. ಅಕ: [ಖರಖರಾಯ್] 'ಖರಖರ' ಎಂಬ ಶಬ್ದ ಮಾಡು

ಖರಹಿಅ. ಪು: [ದೇ] ಮೊಮ್ಮಗ, ಮಗನ ಮಗ,ಪೌತ್ರ

ಖರಾ. ಸ್ತ್ರೀ: [ಖರಾ] ಮುಂಗುಸಿಯು ಹಾಗೆ ಭುಜದಿಂದ ಚಲಿಸುವ ಒಂದು ಪ್ರಾಣಿ(ಜೀವ)

ಖರಿಅ. ವಿ: [ದೇ] ತಿನ್ನಲ್ಪಟ್ಟ, ಭಕ್ಷಿಸಲಾದ

ಖರಿಆ. ಸ್ತ್ರೀ: [ದೇ] ನೌಕರಳು, ದಾಸಿ, ಆಳು, ಸೇವಕಿ

ಖರಿಂಸುಅ. ಪು: [ದೇ. ಖರಿಂಶುಕ] ಒಂದು ಬಗೆಯ ಗೆಡ್ಡೆ

ಖರುಟ್ಠೀ. ಸ್ತ್ರೀ: [ಖರೋಷ್ಟೀ] ಒಂದು ಪ್ರಾಚೀನ ಲಿಪಿ, ಗಾಂಧಾರ ಲಿಪಿ

ಖರುಲ್ಲ. ವಿ: [ದೇ] ಕಠಿಣ, ಕಠೋರ, ಕಷ್ಟ ಸ್ಥಿತಿಯಲ್ಲಿ ಜೀವಿಸುವವನು, ಎತ್ತರವಾಗಿರುವವನು

ಖರೊಟ್ಠಿಆ. ಸ್ತ್ರೀ: [ಖರೋಷ್ಟಿಕಾ] ಪ್ರಸಿದ್ಧವಾದ ಲಿಪಿ, ಬಲಗಡೆಯಿಂದ ಎಡಗಡೆಗೆ ಬರೆಯಲಾಗುವ ಲಿಪಿ.ಅರಬ್ಬಿ, ಪಾರ್ಸಿ ಇತ್ಯಾದಿ

ಖಲ. ಅಕ: [ಸ್ಖಲ್] ಬೀಳು, ಮರೆ, ನಿಲ್ಲು, ವ. ಕೃ– ಖಲಮಾಣ

ಖಲ. ಅಕ: [ಸ್ಖಲ್] ಸರಿ, ಹಿಮ್ಮೆಟ್ಟು

ಖಲ. ವಿ: [ಖಲ] ದುಷ್ಟ, ದುರ್ಜನ, ಅಧಮ, ನ: ಧಾನ್ಯವನ್ನು ಒಕ್ಕುವ ಜಾಗ, ಕಣ(ಕುಮಾ)– ಪೂ. ವಿ: [–ಪೂ] ಶೌಚದ ಮನೆಯನ್ನು ಚೊಕ್ಕಟ ಮಾಡುವವನು

ಖಲ. ಅ: ಪಾದ ಪೂರ್ತಿಗಾಗಿ ಬಳಕೆಯಾಗುವ ಅವ್ಯಯ

ಖಲಇಅ. ವಿ: [ದೇ] ರಿಕ್ತ, ಖಾಲಿ, ಬರಿದು

ಖಲಕ್ಖಲ. ಅಕ: [ಖಲಖಲಾಯ್] 'ಖಲಖಲ' ಎಂದು ಶಬ್ದ ಮಾಡು

ಖಲಗಂಡಿಅ. ವಿ: [ದೇ] ಅಮಲೇರಿದವನು, ಹುಚ್ಚ.

ಖಲಣ. ನ: [ಸ್ಖಲನ] ಮುಂದಿನ ಶಬ್ದವನ್ನು ನೋಡುವುದು.

ಖಲಣಾ. ಸ್ತ್ರೀ: [ಸ್ಖಲನಾ] ಬೀಳುವುದು, ಜಾರುವುದು, ಮುರಿಯುವುದು, ಪೀಡಿಸುವುದು, ತಡೆಯುವುದು, ಅಡ್ಡಿಪಡಿಸುವುದು

ಖಲಭಲಿಯ. ವಿ: [ದೇ] ಕ್ಷುಬ್ಧಗೊಂಡ, ಕಲಕಾಡಿದ

ಖಲಹರ}. ಪು: [ಖಲಖಲ] ನದಿ ಹರಿಯುವ
ಖಲಹಲ} 'ಕಲಕಲ' ನಿನಾದ

ಖಲಾ. ಅಕ: [ದೇ] ಹಾಳುಮಾಡು, ಹಾನಿ ಮಾಡು

ಖಲಿಅ. ವಿ: [ಸ್ಖಲಿತ] ಕೆಳಗೆ ಬಿದ್ದಿರುವ, ಜಾರಿದ, ಸೋರಿದ, ತಡೆಯಲ್ಪಟ್ಟಿರುವ, ನ: ಅಪರಾಧ,

ಖಲಿಅ. ವಿ: [ಖಲಿಕ] ಕೊಳೆಯಿಂದ ತುಂಬಿದ

ಖಲಿಣ. ಪುಂ.ನ: [ಖಲಿನ] ಲಗಾಮು, ಕಾಯೋತ್ಸರ್ಗದ ಒಂದು ದೋಷ,

ಖಲಿಯಾ. ಸ್ತ್ರೀ: [ಖಲಿಕಾ] ಎಳ್ಳು ಮೊದಲಾದವುಗಳ ಎಣ್ಣೆಯಿಲ್ಲದ ಪುಡಿ(ಸುಪಾ)

ಖಲಿಯಾರ. ಸಕ: [ಖಲೀ+ಕೃ] ತಿರಸ್ಕರಿಸು, ಅಪಮಾನಗೊಳಿಸು, ಮೋಸಗೊಳಿಸು, ತೊಂದರೆ ಉಂಟುಮಾಡು, (ಸುಪಾ)

ಖಲಿಯಾರ. ಪು: [ಖಲಿಕಾರ] ಅವಮಾನ, ತಿರಸ್ಕಾರ(ಪಉಮ)

ಖಲಿಯಾರಣ. ನ: [ಖಲೀಕರಣ] ತಿರಸ್ಕಾರ

ಖಲಿಯಾರಣಾ. ಸ್ತ್ರೀ: [ಖಲೀಕರಣಾ] ವಂದನೆ, ಮೋಸ(ಸ)

ಖಲಿಯಾರಿಅ. ವಿ: [ಖಲೀಕೃತ] ತಿರಸ್ಕೃತ, ವಂಚಿತ, ಮೋಸಕ್ಕೊಳಗಾದ

ಖಲಿರ. ವಿ: [ಸ್ಖಲಿತೃ] ಸ್ಖಲನೆ ಉಂಟುಮಾಡುವವನು
ಖಲೀ. ಸ್ತ್ರೀ: [ದೇ. ಖಲೀ] ಎಳ್ಳಿನ ಉಂಡೆ, ಎಣ್ಣೆಯಿಲ್ಲದ ಎಳ್ಳಿನ ಪುಡಿ
ಖಲೀಣ. ನ: [ಖಲೀನ] 'ಖಲಿಣ' ಶಬ್ದವನ್ನು ನೋಡುವುದು. ನದಿಯ ದಡ,
ಖಲು. ಅ: [ಖಲು]. ಅವಧಾರಣೆ, ನಿಶ್ಚಯ, ಪುನಃ, ಇವುಗಳನ್ನು ಸೂಚಿಸುವ ಅವ್ಯಯ. ಪಾದಪೂರ್ತಿ ಮತ್ತು ವಾಕ್ಯದ ಶೋಭೆಯನ್ನು ಹೆಚ್ಚಿಸಲೂ ಇದರ ಬಳಕೆಯಾಗುತ್ತದೆ(ಆಚಾ) –ಖಿತ್ತ. ನ: [–ಕ್ಷೇತ್ರ] ಅಗತ್ಯ ವಸ್ತುಗಳು ದೊರೆಯುವ ಕ್ಷೇತ್ರ
ಖಲುಗ. 'ಖಲುಯ' ಶಬ್ದವನ್ನು ನೋಡುವುದು
ಖಲುಂಕ. ಪು: [ದೇ] ಬೀದಿಯ ದನ, ಮೊಂಡು ದನ, ವಿನೀತನಲ್ಲದ ಶಿಷ್ಯ, ಕೆಟ್ಟ ಶಿಷ್ಯ
ಖಲುಂಕಿಜ್ಜ. ವಿ: [ದೇ] ಬೀದಿಯ ಎತ್ತಿಗೆ ಸಂಬಂಧಿಸಿದ, ನ: ಉತ್ತರಾಧ್ಯಯನ ಸೂತ್ರದ ಈ ಹೆಸರಿನ ಒಂದು ಅಧ್ಯಯನ(ಉತ್ತ)
ಖಲುಯ. ನ: [ಖಲುಕ] ಕಾಲಿನ ಮಣಿಗಂಟು(ವಿಪಾ)
ಖಲ್ಲ. ವಿ: [ದೇ] ಮಧ್ಯಭಾಗ ಕೆಕೆಳಗಡೆ ಇರುವ
ಖಲ್ಲ. ನ: [ದೇ] ಪ್ರವಾಹದ ಬಿರುಕು, ವಿಲಾಸ, ವಿ: ಖಾಲಿಯಾದ(ಉಪ)
ಖಲ್ಲಇಯ. ವಿ: [ದೇ] ಸಂಕುಚಿತ, ಸಂಕೋಚದಿಂದ ಕೂಡಿದ, ಕುಗ್ಗಿದ, ಹಿಗ್ಗಿದ, ಹರ್ಷದಿಂದ ಕೂಡಿದ
ಖಲ್ಲಗ.} ಪುಂನ: [ದೇ] ಪಾದದ ರಕ್ಷಣೆ ಮಾಡುವ
ಖಲ್ಲಯ.}. ಚರ್ಮ, ಒಂದು ಬಗೆಯ ಚಪ್ಪಲಿ, ದೊಡ್ಡ ಚೀಲ
ಖಲ್ಲಗ}. ಎಲೆ, ಎಲೆಗಳಿಂದ ಮಾಡಿದ ಪೊಟ್ಟಣ,
ಖಲ್ಲಯ}. ದೊನ್ನೆ
ಖಲ್ಲಾ. ಸ್ತ್ರೀ: [ದೇ] ಚರ್ಮ
ಖಲ್ಲಾಡ. 'ಖಲ್ಲೀಡ' ಶಬ್ದವನ್ನು ನೋಡುವುದು.
ಖಲ್ಲಿರಾ. ಸ್ತ್ರೀ: [ದೇ] ಸಂಕೇತ
ಖಲ್ಲಿಹಡ.(ಅಪ). 'ಖಲ್ಲೀಡ' ಶಬ್ದವನ್ನು ನೋಡುವುದು.
ಖಲ್ಲೀ. ಸ್ತ್ರೀ: [ದೇ] ಕೂದಲು ಬೆಳೆಯದ ತಲೆಯ ಭಾಗದ ಚರ್ಮ(ಆವಮ)
ಖಲ್ಲೀಡ. ಪು: [ಖಲ್ವಾಟ] ಬೊಕ್ಕ ತಲೆ ಅಥವಾ ಬೋಳು ತಲೆ
ಖಲ್ಲೂಡ. ಪು: [ಖಲ್ಲೂಟ] ಒಂದು ಬಗೆಯ ಗೆಡ್ಡೆ, ಕಂದ
ಖವ. ಸಕ: [ಕ್ಷಪಂತ್] ನಾಶವಾಡು, ಕೆಡವಿಹಾಕುವುದು, ಎಸೆ ಉಲ್ಲಂಘಿಸು(ಉವಾ)
ಖವ: ಪು: [ದೇ] ಎಡಗೈ, ಕತ್ತೆ(ದೇ)
ಖವಗ. ವಿ: [ಕ್ಷಪಕ] ನಾಶ ಮಾಡುವವನು, ಪು: ತಪಸ್ವಿ, ಜೈನ ಮುನಿ, ವಿ: ಸಾಧು(ಕ್ಷಪಕ) ಶ್ರೇಣಿಗೆಏರಿದವನು, –ಸೇಢಿ. ಸ್ತ್ರೀ: [–ಶ್ರೇಣಿ] ಕ್ಷಪಣ ಕರ್ಮಗಳ ನಾಶದ ಕ್ರಮ(ಭಗ)
ಖವಡಿಅ. ವಿ: [ದೇ] ಸೋರಿದ, ಜಿನುಗಿದ, ಕೆಳಗೆ ಜಾರಿಬಿದ್ದ, ತಡೆಯಲ್ಪಟ್ಟ
ಖವಣ}. ನ: [ಕ್ಷಪಣ] ನಾಶ, ಕೆಡವುವುದು,
ಖವಣಯ}. ಎಸೆಯುವುದು, ಪು: ಜೈನ ಸಾಧು(ಕಮ್ಮ)
ಖವಣಾ. ಸ್ತ್ರೀ; [ಕ್ಷಪಣಾ] ಅಧ್ಯಯನ, ಶಾಸ್ತ್ರ–ಪ್ರಕರಣ
ಖವಯ. ಪು: [ದೇ] ಹೆಗಲು, ಭುಜ(ದೇ)
ಖವಯ. 'ಖವಗ' ಶಬ್ದವನ್ನು ನೋಡುವುದು.
ಖವಲಿಅ. ವಿ: [ದೇ] ಕುಪಿತ, ಕೋಪಗೊಂಡವನು
ಖವಲ್ಲ. ಪು: [ಖವಲ್ಲ] ಒಂದು ಬಗೆಯ ಮೀನು
ಖವಾ. ಸ್ತ್ರೀ: [ಕ್ಷಪಾ] ರಾತ್ರಿ, –ಜಲ. ನ: [–ಜಲ] ಹಿಮ(ತಾ)
ಖವಿಅ. ವಿ: [ಕ್ಷಪಿತ] ನಾಶ ಮಾಡಲ್ಪಟ್ಟ, ಭಯಗೊಳಿಸಲಾದ, ಕಳವಳಕ್ಕೀಡುಮಾಡಲ್ಪಟ್ಟ
ಖವ್ವ. ಪು: [ದೇ] ಎಡಗೈ, ಕತ್ತೆ(ದೇ)
ಖವ್ವ. ವಿ: [ಖರ್ವ] ಕುಳ್ಳ, ಕುಬ್ಜ, ಲಘುವಾದ, ಕಿರಿದಾದ
ಖವ್ವುರ. 'ಕವ್ವುರ' ಶಬ್ದವನ್ನು ನೋಡುವುದು.
ಖವ್ವುಲ. ನ: [ದೇ] ಮುಖ(ದೇ)
ಖಸ. ಅಕ: [ದೇ] ಸರಿ, ಬಿದ್ದು ಹೋಗು
ಖಸ. ಪು.ಬ: [ಖಸ] ಒಂದು ಅನಾರ್ಯದೇಶ, ಹಿಂದೂಸ್ತಾನದ ಉತ್ತರಕ್ಕಿರುವ ಈ ಹೆಸರಿನ ಒಂದು ಬೆಟ್ಟ–ಗುಡ್ಡಗಳ ನಾಡು(ಪಉಮ). ಪುಂ.ಸ್ತ್ರೀ: 'ಖಸ' ದೇಶದಲ್ಲಿ ವಾಸಿಸುವ ವ್ಯಕ್ತಿ
ಖಸಖಸ. ಪು: [ಖಸಖಸ] ಲಾಮಂಚದ ಬೇರು, ಬಾಳದ ಬೇರು
ಖಸಫಸ. ಅಕ: [ದೇ] ಸರಿ, ಬಿದ್ದು ಹೋಗು, ಜಾರಿ ಹೋಗು
ಖಸಫಸಿ. ವಿ: [ದೇ] ವ್ಯಾಕುಲ, ಗಾಬರಿಯಿಂದ ಭಯಗೊಂಡಿರುವ –ಹೂಅ. ವಿ: [–ಭೂತ] ವ್ಯಾಕುಲಗೊಂಡಿರುವ
ಖಸರ. 'ಕಸರ=ದೇ. ಕಸರ' ಶಬ್ದವನ್ನು ನೋಡುವುದು.

ಖಸಿಅ. 'ಖಇಅ=ಖಂತ' ಶಬ್ದವನ್ನು ನೋಡುವುದು.
ಖಸಿಅ. ನ: [ಕಸಿತ] ಕೆಮ್ಮಿನ ರೋಗ
ಖಹ. ಪುಂ.ನ: [ಖಹ] ಆಕಾಶ, ಗಗನ
ಖಸಿಅ. ವಿ: [ದೇ] ಜಾರಿ ಹೋಗಿರುವ, ಸರಿದಿರುವ, ದೂರಾಗಿರುವ(ಸುಪಾ)
ಖಸು. ಪು: ದೇ] ಒಂದು ರೋಗ
ಖಹ. 'ಖ' ವನ್ನು ನೋಡುವುದು
ಖಹಯರ. 'ಖಯರ' ಶಬ್ದವನ್ನು ನೋಡುವುದು.
ಖಹಯರೀ. ಸ್ತ್ರೀ: [ಖಚರೀ] ಹೆಣ್ಣು ಪಕ್ಷಿ, ವಿದ್ಯಾಧರನ ಹೆಂಡತಿ–ವಿದ್ಯಾಧರಿ(ಶಾ)
ಖಾ}. ಸಕ: [ಖಾದ್] ಉಣ್ಣು, ತಿನ್ನು, ಭಕ್ಷಿಸು
ಖಾಅ}.
ಖಾಅ. ವಿ: [ಖ್ಯಾತ] ಪ್ರಸಿದ್ಧ, ಹೆಸರಾಂತ(ಉಪ) **–ಕಿತ್ತೀಯ.** ವಿ: [–ಕೀರ್ತಿಕ] ಯಶಸ್ವಿಯಾದ, ಕೀರ್ತಿವಂತನಾದ(ಪಉಮ). **–ಜಸ.** ವಿ: [–ಯಶಸ್] ಅದೇ ಅರ್ಥ
ಖಾಅ. ವಿ: [ಖಾದಿತ] ಉಂಡ, ತಿಂದ, ಭಕ್ಷಿಸಲಾದ
ಖಾಅ. ವಿ: [ಖಾತ] ಅಗೆಯಲ್ಪಟ್ಟ, ನ: ಅಗೆಯಲಾದ ಜಲಾಶಯ. ಮೇಲೆ ಅಗಲವಾಗಿದ್ದು ಕೆಳಗೆ ಅಗಲ ಕಿರಿದಾಗಿರುವ ತಗ್ಗು, ಹಳ್ಳ, ಮೇಲೆ ಮತ್ತು ಕೆಳಗೆ ಸಮನಾಗಿ ತೋಡಿರುವ ಹಳ್ಳ, ತಗ್ಗು
ಖಾಇ. ಸ್ತ್ರೀ: [ಖಾತಿ] ಹಳ್ಳ, ತಗ್ಗು, ಕಂದಕ
ಖಾಇ. ಸ್ತ್ರೀ: [ಖ್ಯಾತಿ] ಪ್ರಸಿದ್ಧಿ, ಕೀರ್ತಿ(ಸುಪಾ)
ಖಾಇ(ದೇ). 'ಖಾಇಂ' ಶಬ್ದವನ್ನು ನೋಡುವುದು
ಖಾಇಅ. 'ಖಾಇಅ=ಕ್ಷಾಯಿಕ' ಶಬ್ದವನ್ನು ನೋಡುವುದು.
ಖಾಇಆ. ವಿ: [ಖಾದಿತ] ತಿಂದ, ಉಂಡ, ಭಕ್ಷಿಸಲಾದ
ಖಾಇಆ. ಸ್ತ್ರೀ: [ದೇ. ಖಾತಿಕಾ] ತಗ್ಗು, ಹಳ್ಳ, ಕಂದಕ
ಖಾಇಂ. ಅ: [ದೇ] ವಾಕ್ಯದ ಶೋಭೆ ಮತ್ತು 'ಪುನಃ' ಎಂಬ ಅರ್ಥ ಸೂಚಿಸುವ ಅವ್ಯಯ
ಖಾಇಗ. 'ಖಾಇಅ=ಕ್ಷಾಯಿಕ' ಶಬ್ದವನ್ನು ನೋಡುವುದು.
ಖಾಇಮ. ನ: [ಖಾದಿಮ] ಅನ್ನ ಹೊರತು ಪಡಿಸಿದಂತೆ, ಹಣ್ಣು, ಔಷದ ಇತ್ಯಾದಿ ಸೇವಿಸುವ ವಸ್ತುಗಳು(ಔಪ)
ಖಾಇರ. ವಿ: [ಖಾದಿರ] ಖರ್ಜೂರದ ಮರಕ್ಕೆ ಸಂಬಂಧಿಸಿದ
ಖಾಓವಸಮ}. 'ಖಾಓವಸಮಿಯ' ಶಬ್ದವನ್ನು
ಖಾಓವಸಮಿಅ}. ನೋಡುವುದು.
ಖಾಡಇಅ. ವಿ: [ದೇ] ಪ್ರತಿಬಿಂಬಿತವಾದ
ಖಾಡಖಡ. ಪು: [ಖಾಡಖಡ] ನಾಲ್ಕನೇ ನರಕ, ಪೃಥ್ವಿಯ ಒಂದು ನರಕಾವಾಸ(ಶಾ)
ಖಾಡಹಿಲಾ. ಸ್ತ್ರೀ: [ದೇ] ಅಳಿಲು(ಪಣ್ಣ)
ಖಾಣ. ಪು: [ದೇ] ಒಂದು ಮ್ಲೇಚ್ಛ ಜಾತಿ
ಖಾಣ. ನ: [ಖಾದನ] ಭೋಜನ, ಆಹಾರ, ತಿನ್ನುವ ವಸ್ತು
ಖಾಣ. ನ: [ಖ್ಯಾನ] ಕಥನ, ಹೇಳುವುದು, ಉಕ್ತಿ
ಖಾಣಿ. ಸ್ತ್ರೀ: [ಖಾನಿ] ಗಣಿ, ಆಕರ
ಖಾಣಿಅ. ವಿ: [ಖಾನಿತ] ಅಗೆಸಲಾದ, ತೋಡಿಸಲಾದ
ಖಾಣೀ. 'ಖಾಣಿ' ಶಬ್ದವನ್ನು ನೋಡುವುದು.
ಖಾಣು}. ಉ: [ಸ್ಥಾಣು] ರೆಂಬೆಗಳಿಲ್ಲದ ಮೋಟುಮರ
ಖಾಣುಯ}. (ಪಣ್ಣ), ಶಿವ
ಖಾದಿ. ಖಾಇ=ಖ್ಯಾತಿ' ಶಬ್ದವನ್ನು ನೋಡುವುದು
ಖಾಮ. ಸಕ: [ಕ್ಷಮಯ್] ಕ್ಷಮೆ ಯಾಚಿಸು, ಕ್ಷಮಿಸು
ಖಾಮ. ವಿ: [ಕ್ಷಾಮ] ಕೃಶ, ದುರ್ಬಲ, ನಿಶ್ಶಕ್ತ, ಕ್ಷೀಣತೆ
ಖಾಮಣ. ನ: [ಕ್ಷಮಣ] ತಾಳ್ಮೆಯಿಂದಿರುವುದು
ಖಾಮಣಾ. ಸ್ತ್ರೀ: [ಕ್ಷಮಣಾ} ಕ್ಷಮೆ ಯಾಚಿಸು
ಖಾಮಿಯ. ವಿ: [ಕ್ಷಮಿತ] ಯಾರ ಬಳಿ ಕ್ಷಮೆ ಕೇಳಲಾಗಿದೆಯೋ ಅವನು, ಸಹಹಿಸಲ್ಪಟ್ಟ, ವಿಳಂಬಮಾಡಲಾದ, ವಿಳಂಬಿತ
ಖಾಯ. ಪು: [ಖಾದ] ಐದನೇ ನರಕ–ಭೂಮಿಯ ಒಂದು ನರಕ–ಸ್ಥಾನ
ಖಾಯರ. 'ಖಾಇರ' ಶಬ್ದವನ್ನು ನೋಡುವುದು
ಖಾರ. ಪು: [ಕ್ಷಾರ] ಒಂದು ನರಕ–ಸ್ಥಾನ, ಭುಜದಿಂದ ಚಲಿಸುವ ಒಂದು ಪ್ರಾಣಿ ಜಾತಿ, **–ಡಾಹ.** ಪುಂನ: [–ದಾಹ] ಉಪ್ಪನ್ನು ಬೇಯಿಸುವ ಭಟ್ಟಿ, **–ತಂತ.** ಪಂನ: [–ತಂತ್ರ] ಆಯುರ್ವೇದದ ಒಂದು ಪ್ರಕಾರವಾದ ವಾಜೀಕರಣ
ಖಾರ. ಪು: [ಕ್ಷಾರ] ಸುರಿಯುವುದು, ಸೋರುವುದು, ಹನಿಹನಿಯಾಗಿ ಬೀಳುವುದು, ಬೂದಿ, ಕ್ಷಾರ, ಲವಣ, ಉಪ್ಪು, ಒಂದು ಪ್ರಾಣಿ, ಸದ್ಯ ಕ್ಷಾರ, ಖಾರದ ರುಚಿಯುಳ್ಳ, ಖಾರದ ವಸ್ತು, ಉಪ್ಪಿನ ರುಚಿಯುಳ್ಳದ್ದು, **–ತಉಸೀ.** ಸ್ತ್ರೀ: [–ತ್ರಪುಷೀ] ಕಟುವಾದ, ಒಂದು ವನಸ್ಪತಿ, **–ತಿಲ್ಲ.** ನ: [–

ತೈಲ] ಕ್ಷಾರದ ಸಂಸ್ಕರಿಸಲ್ಪಟ್ಟ ಎಣ್ಣೆ(ಪಣ್ಣ) –ಮೇಹ. ಪು: [–ಮೇಘ] ಲವಣ ರಸದಿಂದ ಕೂಡಿದ ಮಳೆ, –ವತ್ತಿಯ. ವಿ: [–ಪಾತ್ರಿಕ] ಉಪ್ಪಿನ ಪಾತ್ರೆಯಲ್ಲಿ ಬಡಿಸಲಾದ, ಉಪ್ಪಿನ ಪಾತ್ರೆಯ ಆಧಾರಭೂತ(ಔಪ), –ವತ್ತಿಯ. ವಿ: [–ವೃತ್ತಿಕ] ಕ್ಷಾರದಲ್ಲಿ ಎಸೆಯಲಾದ, ಕ್ಷಾರದಿಂದ ಸಿಂಪಡಿಸಲಾದ, –ವಾವೀ. ಸ್ತ್ರೀ: [–ವಾಪೀ] ಕ್ಷಾರದಿಂದ ತುಂಬಿದ ಬಾವಿ

ಖಾರಂಫಿಡೀ. ಸ್ತ್ರೀ: [ದೇ] ದೊಡ್ಡ ಜಾತಿಯ ಹಲ್ಲಿ, ಉಡ

ಖಾರದೂಸಣ. ವಿ: [ಖಾರದೂಷಣ] ಖರ–ದೂಷಣರಿಗೆ ಸಂಬಂಧಿಸಿದ

ಖಾರಯ. ನ: [ದೇ] ಮೊಗ್ಗು

ಖಾರಾಯಣ. ಪು: [ಕ್ಷಾರಾಯಣ] ಒಬ್ಬ ಋಷಿ, ಮಾಂಡವ್ಯ ಗೋತ್ರದ ಒಂದು ಶಾಖೆಯಂಥ ಒಂದು ಗೋತ್ರ

ಖಾರಿ. ಸ್ತ್ರೀ: [ಖಾರಿ]ಒಂದು ಬಗೆಯ ಅಳತೆ, ಮಾನದಂಡ

ಖಾರಿಂಭರೀ. ಸ್ತ್ರೀ: [ಖಾರಿಂಭರೀ] ಉಪ್ಪು ಹಿಡಿಸುವಷ್ಟು ಪಾತ್ರೆಯ ತುಂಬ ಹಾಲು ಕೊಡುವ(ಗಾ)

ಖಾರಿಕ್ಕ. ನ: [ದೇ] ಒಂದು ಬಗೆಯ ಕಾಯಿ

ಖಾರಿಯ. ವಿ: [ಕ್ಷಾರಿತ] ಸೋರುವಂತೆ ಮಾಡಲಾದ, ನೀರಿನಲ್ಲಿ ಉಜ್ಜಲಾದ, ನೀರಿನಲ್ಲಿ ಸವೆಸಲಾದ

ಖಾರೀ. 'ಖಾರಿ' ಶಬ್ದವನ್ನು ನೋಡುವುದು.

ಖಾರುಗಣಿಯ. ಪು: [ಕ್ಷಾರುಗಣಿಕ] ಮ್ಲೇಚ್ಛ ದೇಶ, ಅದರಲ್ಲಿ ವಾಸಿಸುವವರು(ಭಗ)

ಖಾರೋದಾ. ಸ್ತ್ರೀ: [ಕ್ಷಾರೋದಾ] ಒಂದು ನದಿ

ಖಾಲ. ಸಕ: [ಕ್ಷಾಲಯ್] ತೊಳೆ, ಶುದ್ಧಿಮಾಡು,

ಖಾಲ. ಸ್ತ್ರೀ.ನ: [ದೇ] ಚರಂಡಿ. ಹೊಲಸು ನೀರು ಹೋಗುವ ಕಾಲುವೆ(ಠಾ)

ಖಾಲಣ. ನ: [ಕ್ಷಾಲನ] ತೊಳೆಯುವುದು, ಶುದ್ಧಿ ಮಾಡುವುದು

ಖಾಲಿಅ. ವಿ: [ಕ್ಷಾಲಿತ] ತೊಳೆದ, ಶುದ್ಧ ಮಾಡಿದ

ಖಾವಣ. ನ: [ಖಾಪನ] ಪ್ರತಿಪಾದನೆ

ಖಾವಣಾ. ಸ್ತ್ರೀ: [ಖ್ಯಾಪನಾ] ಪ್ರಸಿದ್ಧಿಪಡಿಸುವುದು, ಪ್ರಕಾಶ ಪಡಿಸುವುದು, ತಿಳಿಯುವಂತೆ ಮಾಡುವುದು(ವಿಸೇ)

ಖಾವಿಯಂತ. ವಿ:[ಖಾದ್ಯಮಾನ]ತಿನ್ನಿಸಲಾಗುತ್ತಿರುವವನು

ಖಾವಿಯಗ. ವಿ: [ಖಾದಿತಕ] ತಿನ್ನಿಸಲ್ಪಟ್ಟವನು

ಖಾವೆಂತ. ವಿ: [ಖ್ಯಾಪಯುತ್] ಪ್ರಸಿದ್ಧಿ ಪಡಿಸುತ್ತಿರುವವನು

ಖಾಸ. ಅಕ: [ಕಾಸ್] ಕೆಮ್ಮು

ಖಾಸ. ಪು: [ಕಾಸ] ಕೆಮ್ಮಿನ ಕಾಯಿಲೆ, ಕೆಮ್ಮು

ಖಾಸಿ. ವಿ: [ಕಾಸಿನ್] ಕೆಮ್ಮಿನ ರೋಗಿ(ಸುಪಾ)

ಖಾಸಿಅ. ಪು: [ಕಾಸಿತ] ಕೆಮ್ಮು, ಕೆಮ್ಮುವುದು

ಖಾಸಿಅ. ಪು: [ಖಾಸಿಕ] ಮ್ಲೇಚ್ಛ ದೇಶ, ಅದರಲ್ಲಿ ವಾಸಿಸುವ ಮ್ಲೇಚ್ಛ ಜನ ವರ್ಗ

ಖಿ. ಕ: [ಕ್ಷಿ] ಕ್ಷಯಿಸು, ಕ್ಷೀಣವಾಗು

ಖಿಇ. ಸ್ತ್ರೀ: [ಕ್ಷಿತಿ] ಭೂಮಿ, ಪೃಥ್ವಿ(ಪಉಮ) –ಗೋಯರ. ಪು: [–ಗೋಚರ] ಮನುಷ್ಯ, –ಪಇಟ್ಠ. ನ: [–ಪ್ರತಿಷ್ಠ] ಒಂದು ನಗರ, –ಪಇಟ್ಠಿಯ. ನ: [–ಪ್ರತಿಷ್ಠಿತ] ಈ ಹೆಸರಿನ ಒಂದು ನಗರ, ಈಗ 'ರಾಜಗಿರ' ಎಂದು ಕರೆಯಲಾಗುವ ಬಿಹಾರದ ರಾಜಗೃಹ ನಗರ. –ಸಾರ. ಪು: [–ಸಾರ] ಈ ಹೆಸರಿನ ಒಂದು ದುರ್ಗ (ಪಉಮ)

ಖಿಂಖಿ. ಅಕ: [ಖಿಂಖಯ್] 'ಖಿಂಖಿಂ' ಎಂದು ಶಬ್ದ ಮಾಡು

ಖಿಂಖಿಣಿಯಾ. ಸ್ತ್ರೀ: [ಕಿಂಕಿಣಿಕಾ] ಕಿರು ಗೆಜ್ಜೆ

ಖಿಂಖಿಣೀ. ಸ್ತ್ರೀ: [ಕಿಂಕಿಣೀ] ಮೇಲಿನ ಶಬ್ದವನ್ನು ನೋಡುವುದು.

ಖಿಂಖಿಣೀ. ಸ್ತ್ರೀ: [ದೇ] ಹೆಣ್ಣುನರಿ(ದೇ)

ಖಿಂಗ. ಪು: [ಖಿಂಗ] ವ್ಯಭಿಚಾರಿ

ಖಿಂಸ. ಸಕ: [ಖಿಂಸ್]ನಿಂದಿಸು, ದೂಷಿಸು, ತುಚ್ಛೀಕರಿಸು(ಉಪ)

ಖಿಂಸಣ. ನ: [ಖಿಂಸನ] ನಿಂದೆ, ದೂಷಣೆ, ಬೈಯುವುದು

ಖಿಂಸಣಾ. ಸ್ತ್ರೀ: [ಖಿಂಸನಾ] ನಿಂದೆ, ದೂಷಣೆ, ಬೈಯುವುದು(ಔಪ)

ಖಿಂಸಾ. ಸ್ತ್ರೀ: [ಖಿಂಸಾ] ಮೇಲಿನ ಶಬ್ದವನ್ನು ನೋಡುವುದು(ಓಘ)

ಖಿಂಸಿಯ. ವಿ: [ಖಿಂಸಿತ] ನಿಂದಿತ, ನಿಂದಿಸಲ್ಪಟ್ಟ, ದೂಷಿಸಲ್ಪಟ್ಟ

ಖಿಕ್ಖಿಂಡ. ಪು: [ದೇ] ಓತಿಕೇತ(ದೇ)

ಖಿಕ್ಖಿಯಂತ. ವಿ: [ಖಿಕೀಯಮಾನ] 'ಖಿ–ಖಿ' ಎಂದು ಶಬ್ದ ಮಾಡುತ್ತ

ಖಿಕ್ಖಿರೀ. **ಸ್ತ್ರೀ:** [ದೇ] ಅಸ್ಪೃಶ್ಯರೇ ಮೊದಲಾದವರನ್ನು ಸ್ಪರ್ಶಿಸುವುದನ್ನು ತಡೆಯುವ ಕಡ್ಡಿ(ಪಣ್ಹಾ)

ಖಿಚ್ಚ. **ಪುಂ.ನ:** [ದೇ] ಎಳ್ಳಿನ ಜೊತೆ ಬೇಯಿಸಲಾದ ಅನ್ನ

ಖಿಜ್ಜ. **ಅಕ:** [**ಖಿದ್**] ದುಃಖಿಸು, ವ್ಯಸನ ಪಡು, ಉದ್ವಿಗ್ನಗೊಳ್ಳು, ಆಯಾಸಗೊಳ್ಳು(ಗಉಡ)

ಖಿಜ್ಜಣಿಯಾ. **ಸ್ತ್ರೀ:** [**ಖೇದನಿಕಾ**] ದುಃಖ, ವ್ಯಸನ, ಮನಸ್ಸಿನ ಉದ್ವೇಗ(ಣಾಯಾ)

ಖಿಜ್ಜಿಅ. **ನ:** [ದೇ] ನಿಂದೆ, ವ್ಯಂಗ್ಯ,

ಖಿಜ್ಜಿಅ. **ವಿ:** [ಖಿನ್ನ] ದುಃಖಿತ, ವ್ಯಸನಪೀಡಿತ, **ನ:** ದುಃಖ, ಪ್ರಣಯದಿಂದುಂಟಾದ ಕೋಪ

ಖಿಜ್ಜಿಅಯ. **ನ:** [**ಖೇದಿತಕ**] ಒಂದು ಛಂದಸ್ಸು

ಖಿಜ್ಜಿರ. **ವಿ:** [**ಖೇದಿತೃ**] ದುಃಕಿಸುವವನು, ಖಿನ್ನಗೊಳ್ಳುವ ಸ್ವಭಾವದವನು(ಕುಮಾ]

ಖಿಡ್ಡ. **ನ:** [**ಖೇಲ**] ಆಟ, ಕ್ರೀಡೆ, ತಮಾಷೆ(ಸುಪಾ), **–ಕರ.** **ವಿ:** [**–ಕರ**] ಆಟವಾಡುವವನು, ಆಟಗಾರ, ತಮಾಷೆ ಮಾಡುವವನು(ಸುಪಾ)

ಖಿಣ್ಣ. **ವಿ:** [**ಖಿನ್ನ**] ದುಃಖಿ, ಆಯಾಸಗೊಂಡವ(ಗಾ)

ಖಿಣ್ಣ. **'ಖೀಣ'** ಶಬ್ದವನ್ನು ನೋಡುವುದು.

ಖಿತ್ತ. **ವಿ:** [**ಕ್ಷಿಪ್ತ**] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ, **–ಇತ್ತ.**, **–ಚಿತ್ತ.** **ವಿ:** [**–ಚಿತ್ತ**] ಭ್ರಾಂತಗೊಂಡ ಮನಸ್ಸಿನ, ವಿಕ್ಷಿಪ್ತ ಮನಸ್ಸಿನ, ಹುಚ್ಚ(ಠಾ), **–ಮಣ.** **ವಿ:** [**–ಮನಸ್**] ಚಿತ್ತ–ಭ್ರಮೆಗೆ ಗುರಿಯಾದವನು

ಖಿತ್ತ. **'ಖೆತ್ತ'** ಶಬ್ದವನ್ನು ನೋಡುವುದು. **–ದೇವಯಾ.** **ಸ್ತ್ರೀ:** [**–ದೇವತಾ**] ಕ್ಷೇತ್ರದ ಅಧಿಷ್ಠಾತೃದೇವ, **–ವಾಲ.** **ಪು:** [**–ಪಾಲ**] ಕ್ಷೇತ್ರ ರಕ್ಷಕ ದೇವ(ಸುಪಾ)

ಖಿಪ್ಪ. **ಅಕ:** [**ಕೃಪ್**] ಸಮರ್ಥನಾಗು, ದುರ್ಬಲನಾಗು

ಖಿಪ್ಪ. **ವಿ:** [**ಕ್ಷಿಪ್ರ**] ಶೀಘ್ರ, ಬೇಗನೆ. **–ಗಇ.** **ವಿ:** [**–ಗತಿ**] ಶೀಘ್ರವಾದ ನಡಿಗೆ ಉಳ್ಳ, ಅಮಿತಗತಿ ಇಂದ್ರನ ಲೋಕಪಾಲ.

ಖಿತ್ತಜ. **ಪು:** [**ಕ್ಷೇತ್ರಜ**] ಹಿರಿಯರ ಅನುಮತಿಯಿಂದ ಪತಿಯ ಸೋದರರಿಂದ ಹುಟ್ಟಿದ ಮಗ

ಖಿತ್ತಯ. **ನ:** [**ಕ್ಷಿಪ್ತಕ**] ಒಂದು ಛಂದಸ್ಸು.

ಖಿತ್ತಯ. **ನ:** [ದೇ] ಹಾನಿ, ನಷ್ಟ, ಲುಕ್ಸಾನು, **ವಿ:** ಪ್ರಕಾಶಮಾನವಾದ, ಹೊಳೆಯುವ(ದೇ)

ಖಿತ್ತಿಅ. **ವಿ:** [**ಕ್ಷೈತ್ರಿಕ**] ಕ್ಷೇತ್ರಕ್ಕೆ ಸಂಬಂಧಿಸಿದ, **ಪು:** ಒಂದು ವ್ಯಾಧಿ

ಖಿನ್ನ. **'ಖಿಣ್ಣ=ಖಿನ್ನ'** ಶಬ್ದವನ್ನು ನೋಡುವುದು.

ಖಿಪ್ಪ. **ವಿ:** [**ಕ್ಷಿಪ್ರ**] ಶೀಘ್ರ, ಬೇಗನೆ, **–ಗಇ.** **ವಿ:** [**–ಗತಿ**] ಶೀಘ್ರವಾದ ಚಲನೆ ಉಳ್ಳ, **ಪು:** ಅಮಿತಗತಿ ಇಂದ್ರನ ಒಬ್ಬ ಲೋಕಪಾಲ(ಠಾ)

ಖಿಪ್ಪಂ. **ಅ:** [**ಕ್ಷಿಪ್ರಮ್**] ಕೂಡಲೆ, ತಕ್ಷಣ, ಬೇಗನೆ

ಖಿಪ್ಪಂತ. **'ಖಿವ'** ಶಬ್ದವನ್ನು ನೋಡುವುದು.

ಖಿಪ್ಪಾಮೇವ. **ಅ:** [**ಕ್ಷಿಪ್ರಮೇವ**] ಶೀಘ್ರದಲ್ಲಿಯೇ, ತಕ್ಷಣವೇ

ಖಿರ. **ಅಕ:** [**ಕ್ಷರ್**] ಬೀಳು, ಬಿದ್ದು ಹೋಗು, ತೊಟ್ಟಿಕ್ಕು, ಸೋರು

ಖಿರಿಯ. **ವಿ:** [**ಕ್ಷರಿತ**] ಸೋರಿದ, ತೊಟ್ಟಿಕ್ಕಿದ, ಸ್ರವಿಸಿದ, ಬಿದ್ದ

ಖಿಲ. **ನ:** [**ಖಿಲ**] ಉಳದೆ ಇರುವ ಭೂಮಿ,

ಖಿಲೀಕರಣ. **ನ:** [**ಖಿಲೀಕರಣ**] ಖಾಲಿಮಾಡುವುದು,

ಖಿಲ್ಲ. **ಸಕ:** [**ಕೀಲಯ್**] ತಡೆ, ಅಡ್ಡಿಪಡಿಸು

ಖಿಲ್ಲ. **ಅಕ:** [**ಕೀಲಯ್**] ಆಟವಾಡು, ಕ್ರೀಡೆಯಾಡು, ತಮಾಷೆ ಮಾಡು

ಖಿಲ್ಲಣ. **ನ:** [**ಖೇಲನ**] ಆಟದ ಸಾಮಾನು, ಆಟಿಕೆಗಳು

ಖಿಲ್ಲಹಡ}. **ಪು:** [**ದೇ. ಖಿಲ್ಲಹಡ**] ಒಂದು ಬಗೆಯ

ಖಿಲ್ಲಹಲ}. ಗೆಡ್ಡೆ

ಖಿಲ್ಲುಹಡಾ. ಸ್ತ್ರೀ: [ದೇ] ಗೆಡ್ಡೆ

ಖಿವ. **ಸಕ:** [**ಕ್ಷಿಪ್**] ಎಸೆ, ಪ್ರೇರಿಸು, ಹಾಕು

ಖಿವಣ. **ನ:** [**ಕ್ಷೇಪಣ**] ಎಸೆಯುವುದು, ಎಸೆತ, ಪ್ರೇರಣೆ, ಉತ್ಸಾಹ, ಅತ್ತ ಇತ್ತ ನಡೆಸುವುದು

ಖಿವಿಯ. **ವಿ:** [**ಕ್ಷಿಪ್ತ**] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ

ಖಿವ್ವ. **'ಖಿವ'** ಶಬ್ದವನ್ನು ನೋಡುವುದು.

ಖಿಸ. **ಅಕ:** [ದೇ] ಸರಿ, ಜಾರು, ದೂರಾಗು

ಖೀಣ. **'ಖಿಣ್ಣ=ಖಿನ್ನ'** ಶಬ್ದವನ್ನು ನೋಡುವುದು.

ಖೀಣ. **ವಿ:** [**ಕ್ಷೀಣ**] ನಾಶ ಹೊಂದಿದ, ಅವನತಿ ಹೊಂದಿದ, ಕಡಿಮೆಯಾದ, ಕ್ಷಯ ಹೊಂದಿದ ಕತ್ತರಿಸಲ್ಪಟ್ಟ, ದುರ್ಬಲ, ಕೃಶ, **–ದುಹ.** **ವಿ:** [**–ದುಃಖ**] ದುಃಖವಿಲ್ಲದ, **–ಮೋಹ.** **ವಿ:** [**–ಮೋಹ**] ಮೋಹವನ್ನು ನೀಗಿಕೊಂಡವನು, **ನ:** ೧೨ ನೇ ಗುಣ–ಸ್ಥಾನಕ, **–ರಾಗ.** **ವಿ:** [**–ರಾಗ**] ರಾಗ–ರಹಿತ, ವೀತರಾಗ, **ಪು:** ತೀರ್ಥಂಕರ.

ಖೀಯಮಾಣ. **ವಿ:** [**ಕ್ಷೀಯಮಾಣ**] ಕ್ಷಯಿಸುತ್ತಾ ಹೋಗುತ್ತಿರುವ, ನಾಶ ಹೊಂದುತ್ತಾ ಹೋಗುತ್ತಿರುವ(ಗಾ)

ಖೀರ. ನ: [ಕ್ಷೀರ] ಮಲ್ಲಿಗೆಯ ಹೂವು, ಸಮುದ್ರದ ದಂಡೆ, ಎರಡು ದಿನದ ಉಪವಾಸ, **–ಡಿಂಡಿರ.** ಪು: [–ಡಿಂಡಿರ] ದೇವ–ವಿಶೇಷ, **–ಡಿಂಡೀರಾ.** ಸ್ತ್ರೀ: [–ಡಿಂಡೀರಾ] ದೇವಿ–ವಿಶೇಷ, **–ವರ.** ಪು: [–ವರ] ಸಮುದ್ರ, ಒಂದು ದ್ವೀಪ

ಖೀರ. ನ: [ಕ್ಷೀರ] ಹಾಲು, ನೀರು, ಪು: ಕ್ಷೀರ ಸಮುದ್ರದ ಅಧಿಷ್ಠಾತೃ–ದೇವ, ಕ್ಷೀರ ಸಮುದ್ರ (ಪಉಮ), **–ಕಯಂಬ.** ಪು: [–ಕದಂಬ] ಈ ಹೆಸರಿನ ಒಬ್ಬ ಬ್ರಾಹ್ಮಣ ಉಪಾಧ್ಯಾಯ (ಪಉಮ), **–ಕಾಓಲೀ.** ಸ್ತ್ರೀ: [–ಕಾಕೋಲೀ] ಒಂದು ವನಸ್ಪತಿ **–ಜಲ.** ಪು: [–ಜಲ] ಕ್ಷೀರ ಸಮುದ್ರ, **–ಜಲನಿಹಿ.** ಪು: [–ಜಲನಿಧಿ] ಅದೇ ಅರ್ಥ, **–ದುಮ,–ದ್ದುಮ.** ಪು: [–ದ್ರುಮ] ಹಾಲು ಸುರಿಸುವ ಮರ(ಓಘ), **–ಧಾಈ.** ಸ್ತ್ರೀ: [ಧಾತ್ರೀ] ಹಾಲೂಡುವ ದಾದಿ, **–ಪೂರ.** ಪು: [–ಪೂರ] ಉಕ್ಕುತ್ತಿರುವ ಹಾಲು, **–ಪ್ಪಭ.** ಪು: [ಪ್ರಭ] ಕ್ಷೀರವರ ದ್ವೀಪದ ಅಧಿಷ್ಠಾತೃ ದೇವ, **–ಮೇಹ.** ಪು: [–ಮೇಘ] ಹಾಲಿನಂಥ ರುಚಿಯುಳ್ಳ ನೀರಿನ ಮಳೆ. **–ವಈ.** ಸ್ತ್ರೀ: [–ವತೀ] ಸಮೃದ್ಧವಾಗಿ ಹಾಲನ್ನು ನೀಡುವವಳು, **–ವರ.** ಪು: [–ವರ] ಒಂದು ದ್ವೀಪ, **–ವಾರಿ.** ನ: [–ವಾರಿ] ಕ್ಷೀರ ಸಮುದ್ರದ ನೀರು, **–ಹರ.** ಪು: [–ಗೃಹ, –ಧರ] ಕ್ಷೀರ ಸಾಗರ, **ಖೀರಾಸವ.** ಪು: [ಕ್ಷೀರಾಶ್ರವ] ಯಾವ ಲಬ್ಧಿಯ ಪ್ರಭಾವದಿಂದ ಮಾತುಹಾಲಿನ ಹಾಗೆ ಮಧುರವೆನಿಸುತ್ತದೆಯೋ ಅಂಥ ಲಬ್ಧಿಯುಳ್ಳ ಜೀವ

ಖೀರಇಯ. ವಿ: [ಕ್ಷೀರಕಿತ] ಯಾವುದರಲ್ಲಿ ಹಾಲು ಉತ್ಪನ್ನವಾಗಿದೆಯೋ ಆ ಸಂಜಾತ ಕ್ಷೀರ

ಖೀರಿ. ವಿ: [ಕ್ಷೀರಿನ್] ಹಾಲುಳ್ಳ, ಹಾಲಿನಂಥ ರಸವುಳ್ಳ ಆಲ, ಅತ್ತಿ, ಅರಳಿ, ಎಕ್ಕ ಮುಂತಾದ ವೃಕ್ಷ ಜಾತಿ

ಖೀರಿಜ್ಜಮಾಣ. ವಿ: [ಕ್ಷೀಯಮಾಣ] ಹಾಲು ಕರೆಯಲ್ಪಡುತ್ತಿರುವಂಥ(ಆಜಾ)

ಖೀರಿಣೀ. ಸ್ತ್ರೀ: [ಕ್ಷೀರಿಣೀ] ಹಾಲುಳ್ಳ, ಹಾಲಿನವಳು, ಹಾಲು ಸುರಿಸುವ ಮರ(ಪಣ್ಣ)

ಖೀರೀ. ಸ್ತ್ರೀ: [ಕ್ಷೈರೇಯೀ] ಖೀರು, ಪಕ್ವಾನ್ನ

ಖೀರೋಅ. ಪು: [ಕ್ಷೀರೋದ] ಕ್ಷೀರ ಸಾಗರ

ಖೀರೋಆ. ಸ್ತ್ರೀ: [ಕ್ಷೀರೋದಾ] ಈ ಹೆಸರಿನ ಒಂದು ನದಿ

ಖೀರೋದ. 'ಖೀರೋಅ' ಶಬ್ದವನ್ನು ನೋಡುವುದು.

ಖೀರೋದಕ}. [ಕ್ಷೀರೋದಕ] ಕ್ಷೀರಸಾಗರ (ಣಾಯಾ) **ಖೀರೋದಯ**}.

ಖೀರೋದಾ. 'ಖೀರೋಆ' ಶಬ್ದವನ್ನು ನೋಡುವುದು.

ಖೀಲ}. ಪು: [ಕೀಲ, ಕ] ಗೂಟ, **–ಮಗ್ಗ.** ಪು: [ಮಾರ್ಗ] **ಖೀಲಯ**}.ಧೂಳು ಜಾಸ್ತಿಯಾಗಿರುವ ಕಾರಣ ಗೂಟದ **ಖೀಲಗ**}. ಗುರುತು ಮಾಡಲಾಗಿರುವ ಮಾರ್ಗ

ಖೀಲಾವಣ. ನ: [ಕ್ರೀಡನ] ಆಟವಾಡಿಸುವುದು, ಕ್ರೀಡೆಯಾಡಿಸುವುದು, **–ಧಾಈ.** ಸ್ತ್ರೀ: [–ಧಾತ್ರೀ] ಆಟಪಾಟವಾಡಿಸುವ ಸೇವಕಿ

ಖೀಲಿಯಾ. ಸ್ತ್ರೀ: [ಕೀಲಿಕಾ] ಚಿಕ್ಕ ಗೂಟ(ಆವಮ)

ಖೀವ. ಪು: [ಕ್ಷೀಬ] ಮದಿಸಿದ, ಮದ್ಯಪಾನದಿಂದ ಉನ್ಮಾದಿತನಾದ

ಖು. ಅ: [ಖಲು] ನಿಶ್ಚಯ, ಅವಧಾರಣೆ, ವಿತರ್ಕ, ಸಂದೇಹ, ಸಂಭಾವನೆ, ವಿಸ್ಮಯ– ಈ ಅರ್ಥಗಳನ್ನು ಸೂಚಿಸುವ ಅವ್ಯಯ

ಖು–. 'ಖುಹಾ' ಶಬ್ದವನ್ನು ನೋಡುವುದು.

ಖುಇ. ಸ್ತ್ರೀ: [ಕ್ಷುತಿ] ಸೀನು, ಸೀನಿನ ಚಿಹ್ನೆ

ಖುಇಯ. ವಿ: [ದೇ] ಕತ್ತರಿಸಲ್ಪಟ್ಟ, ಶಾಂತವಾದ

ಖುಂಖುಣಯ. ಪು: [ದೇ] ಮೂಗಿನ ಹೊಳ್ಳೆ

ಖುಂಖುಣೀ. ಸ್ತ್ರೀ: [ದೇ] ಮುಖ್ಯ ರಸ್ತೆ, ಮುಖ್ಯಮಾರ್ಗ

ಖುಂಗಾಹ.ಪು:[ದೇ] ಕುದುರೆಯ ಒಂದು ಉತ್ತಮಜಾತಿ

ಖುಂಟ. ಪು: [ದೇ] ಗೂಟ, ಚಿಕ್ಕ ಗೂಟ, **–ಓಡಯ.** ವಿ: [–ಮೋಟಕ] ಗೂಟವನ್ನು ತಿರುಗಿಸುವಂಥ, ಅದರಿಂದ ಬಿಡಿಸಿಕೊಂಡು ಓಡಿ ಹೋಗುವ, ಪು: ಈ ಹೆಸರಿನ ಒಂದು ಆನೆ

ಖುಡಯ. ವಿ: [ದೇ] ಸೋರಿದ, ಜಿನುಗಿದ, ಕೆಳಗೆ ಜಾರಿಬಿದ್ದ (ದೇ)

ಖುಂದ(ಶೌ). ಸಕ: [ಕ್ಷುದ್] ಹೋಗು, ಕುಟ್ಟು, ಹಿಟ್ಟುಮಾಡು

ಖುಂದ. ಸಕ: [ಕ್ಷುಧ್] ಹಸಿವಾಗು

ಖುಂಪಾ. ಸ್ತ್ರೀ: [ದೇ] ಮಳೆಯನ್ನು ತಡೆಯಲು ಬಳಸಲಾಗುವ ಹುಲ್ಲಿನಿಂದ ನಿರ್ಮಿತವಾದ ಒಂದು ಸಾಧನ

ಖುಂಭಣ. ವಿ: [ಕ್ಷೋಭಣ] ಕ್ಷೋಭೆಯನ್ನು ಹುಟ್ಟಿಸುವ, ಕಲಕಾಟವನ್ನುಂಟುಮಾಡುವ, ತಳಮಳವನ್ನು ಉಂಟುಮಾಡುವ

ಖಜ್ಜ. **ಸಕ:** [**ಪರಿ+ಅಸ್**] ಎಸೆ, ಬೀಳಿಸು, ಕೊಲ್ಲು
ಖಜ್ಜಿಯ. **ವಿ:** [**ಕುಬ್ಜಿನ್**] ಗೂನು ಬೆನ್ನುಳ್ಳ, ಕುಳ್ಳ(ಆಚಾ)
ಖಟ್ಟ. **ಸಕ:** [**ತುಡ್**] ಮುರಿ, ತುಂಡುಮಾಡು. **ಅಕ:** ಕಡಿಮೆಯಾಗು, ಅವನತಿ ಹೊಂದು, ಮುರಿದು ಹೋಗು, ಒಡೆದು ಹೋಗು, ಹರಿದು ಹೋಗು
ಖಟ್ಟ. **ವಿ:** [**ದೇ**] ಹರಿದು ಹೋದ, ಮುರಿದು ಹೋದ, ಸೀಳಿ ಹೋದ(ಭವಿ)
ಖಡ. '**ಖಟ್ಟ=ತುಡ್**' ಶಬ್ದವನ್ನು ನೋಡುವುದು.
ಖಡಕ್ಕ. '**ಖುಡಕ್ಕ=ದೇ**' ಶಬ್ದವನ್ನು ನೋಡುವುದು.
ಖಡಕ್ಕ. **ಸಕ:** [**ಅಪ+ಕ್ರಮಯ್**] ದೂರಮಾಡು, ತೊಲಗಿಸು
ಖಡಿಅ. **ವಿ:** [**ಖಂಡಿತ**] ಹರಿದು ಹೋದ, ಮುರಿದು ಹೋದ, ಕತ್ತರಿಸಲ್ಪಟ್ಟ
ಖಡುಕ್ಕ. **ಅಕ:** [**ದೇ**] ಕೆಳಕ್ಕೆ ಇಳಿ, ಸೋರಿ ಹೋಗು, ಜಾರಿ ಹೋಗು, ಭರ್ಜಿಯ ಹಾಗೆ ಚುಚ್ಚು, ಸಿಟ್ಟಿನಿಂದಾಗಿ ಮೌನದಿಂದಿರು
ಖಡುಕ್ಕಿಅ. **ವಿ:** [**ದೇ**] ಭರ್ಜಿಯ ಹಾಗೆ ಚುಚ್ಚಿರುವ, ಕೋಪದ ಕಾರಣ ಮೌನದಿಂದಿರುವ, **ಸ್ತ್ರೀ:**–ಆ
ಖಡ್ಡ}. **ವಿ:** [**ದೇ. ಕ್ಷುದ್ರ, ಕ್ಷುಲ್ಲಕ**] ಚಿಕ್ಕದಾದ,
ಖಡ್ಡಗ}. ಲಘುವಾದ(ಉತ್ತ), **ಪು:** ಕಿರಿಯ ಸಾಧು, ಕಿರಿಯ ಶಿಷ್ಯ, **ಪುಂ.ನ:** ಒಂದು ಬಗೆಯ ಉಂಗುರ(ಔಪ)
ಖಡ್ಡಮಡ್ಡಾ. **ಅ:** [**ದೇ**] ಬಹಳ, ಹೆಚ್ಚು, ಮತ್ತೆ ಮತ್ತೆ, ಪುನಃ ಪುನಃ (ನಿಚೂ)
ಖಡ್ಡಯ. '**ಖುಡ್ಡ**' ಶಬ್ದವನ್ನು ನೋಡುವುದು.
ಖಡ್ಡಾಗ.} '**ಖುಡ್ಡಗ**' ಶಬ್ದವನ್ನು ನೋಡುವುದು
ಖಡ್ಡಾಯ}. (ಪಣ್ಣ). **–ಣಿಯಂಠ.** **ನ:** [**–ನೈರ್ಗ್ರಂಥ**] ಉತ್ತರಾಧ್ಯಯನ ಸೂತ್ರದ ಆರನೇ ಅಧ್ಯಯನ
ಖಡ್ಡಿಅ. **ನ:** [**ದೇ**] ಸುರತ, ಮೈಥುನ, ಸಂಭೋಗ
ಖಡ್ಡಿಆ. **ಸ್ತ್ರೀ:** [**ದೇ. ಕ್ಷುದ್ರಿಕಾ**] ಚಿಕ್ಕದಾದ ಸಣ್ಣದಾದ, ಲಘು, ಗುಂಡಿ, ತಗ್ಗು, ತೋಡಿದ ಸಣ್ಣ ಕೆರೆ(ಪಣ್ಣ)
ಖುಣುಕ್ಕುಡಿಆ **ಸ್ತ್ರೀ:** [**ದೇ**] ಮೂಗು(ದೇ)
ಖುಣ್ಣ. **ವಿ:** [**ಕ್ಷುಣ್ಣ.**] ಚೆನ್ನಾಗಿ ತುಳಿದ, ಪುಡಿಮಾಡಲ್ಪಟ್ಟ, ಮಗ್ನ, ಲೀನ
ಖುಣ್ಣ. **ವಿ:** [**ದೇ**] ಸುತ್ತುವರಿಯಲ್ಪಟ್ಟ, ಸುತ್ತಲೂ ಆವರಿಸಲ್ಪಟ್ಟ(ದೇ)
ಖುತ್ತ. **ವಿ:** [**ದೇ**] ನಿಮಗ್ನ, ಮುಳುಗಿರುವ(ಗಾ)

–ಖುತ್ತೋ. **ಅ:** [**–ಕೃತ್ವಸ್**] ಸಲ, ಬಾರಿ(ಒಂದನೇ ಸಲ, ಎರಡನೇ ಬಾರಿ. ಹೀಗೆ)
ಖುದ್ದ. **ವಿ:** [**ಕ್ಷುದ್ರ**] ತುಚ್ಛ, ನೀಚ, ಅಧಮ, ದುಷ್ಟ, ಸಣ್ಣ
ಖುದ್ದ. **ನ:** [**ಕ್ಷೋದ್ರ್ಯ**] ಕ್ಷುದ್ರತೆ, ಸಣ್ಣತನ, ನೀಚತನ, ಅಧಮತನ
ಖುದ್ದ. **ವಿ:** [**ಕ್ಷುಬ್ಧ**] ಕ್ಷೋಭೆಗೊಂಡ, ಕಲಕಾಡಿದ ಗಾಬರಿಗೊಂಡ, ಗಲಿಬಿಲಿಗೊಂಡ(ಸುಪಾ)
ಖುಧಾ. **ಸ್ತ್ರೀ:** [**ಕ್ಷುಧ್**] ಹಸಿವು
ಖುಧಿಯ. **ವಿ:** [**ಕ್ಷುಧಿತ**] ಹಸಿದ, ಹಸಿವಿನಿಂದ ಪೀಡಿತನಾದ(ಸೂಅ)
ಖುಪ್ಪ. **ಸಕ:** [**ಪ್ಲುಷ್**] ಸುಡು
ಖುಪ್ಪ. **ಅಕ:** [**ಮಸ್ಜ್**] ಮುಳುಗು
ಖುಪ್ಪಿಪಾಸಾ. **ಸ್ತ್ರೀ:** [**ಕ್ಷುತ್ಪಿಪಾಸಾ**] ಹಸಿವು ಮತ್ತು ಬಾಯಾರಿಕೆ
ಖುಬ್ಭ. **ಅಕ:** [**ಕ್ಷುಭ್**] ಕ್ಷೋಭೆಗೊಳ್ಳು, ಕೆಳಗೆ ಮುಳುಗು
ಖುಬ್ಭಣ. **ನ:** [**ಕ್ಷೋಭಣ**] ಕ್ಷೋಭೆ, ಗಾಬರಿ, ಕಲಮಲ
ಖುಭ. **ಅಕ:** [**ಕ್ಷುಭ್**] ಹೆದರು, ಗಾಬರಿಗೊಳ್ಳು
ಖುಭಿಯ. **ವಿ:** [**ಕ್ಷುಭಿತ**] ಕ್ಷೋಭೆಗೊಂಡಿರುವ, **ನ:** ಗಾಬರಿಗೊಂಡಿರುವ, ಕಲಹ, ಜಗಳ
ಖುಮ್ಮ. **ಅಕ:** [**ಕ್ಷುಧ್**] ಹಸಿವಾಗು
ಖುಮ್ಮಿಯ. **ವಿ:** [**ದೇ**] ನಮಸ್ಕಾರ ಮಾಡಿಸಲ್ಪಟ್ಟ, ಬಗ್ಗಿಸಲ್ಪಟ್ಟ(ಣಾಯಾ)
ಖುಯ. **ನ:** [**ಕ್ಷುತ್**] ಸೀನು
ಖುರ. **ಪು:** [**ಖುರ**] ಪ್ರಾಣಿಗಳ ಕಾಲಿನ ಗೊರಸು
ಖುರ. **ಪು:** [**ಕ್ಷುರ**] ಚೂರಿ, ಕ್ಷೌರಿಕನಕತ್ತಿ(ಣಾಯಾ), **–ಪತ್ತ.** **ನ:** [**–ಪತ್ರ**] ಕೌರಿಕನ ಕತ್ತಿ
ಖುರಪ್ಪ. **ಪುಂ.ನ:** [**ಕ್ಷುರಪ್ರ**] ಒಂದು ಬಗೆಯ ಹಡಗು, **ಪು:** ಹುಲ್ಲು ಕೊಯ್ಯುವ ಕುಡುಗೋಲು, ಒಂದು ಬಗೆಯ ಬಾಣ
ಖುರಸಾಣ. **ಪು:** [**ಖುರಶಾನ**]ದೇಶ, ಖುರಶಾನಿನ ರಾಜ (ಪಿಂಗ)
ಖುರಹಖುಡೀ. **ಸ್ತ್ರೀ:** [**ದೇ**] ಪ್ರಣಯ ಕೋಪ(ಷಡ್)
ಖುರಾಸಾಣ '**ಖುರಸಾಣ**' ಶಬ್ದವನ್ನು ನೋಡುವುದು.
ಖುರಿ. **ವಿ:** [**ಖುರಿನ್**] ಖುರ(=ಗೊರಸು)ವನ್ನು ಹೊಂದಿರುವ ಪ್ರಾಣಿ(ಆವ)
ಖುರು. **ವಿ:** [**ಖುರು**] ಆಯುಧ–ವಿಶೇಷ
ಖುರುಡುಕ್ಕುಡೀ. **ಸ್ತ್ರೀ:** [**ದೇ**] ಪ್ರಣಯ–ಕೋಪ(ದೇ)

ಖುರುಪ್ಪ. 'ಖುರಪ್ಪ' ಶಬ್ದವನ್ನು ನೋಡುವುದು.

ಖುಲ. ಕ: [ದೇ] ಸಾಧುಗಳಿಗೆ ಕಡಿಮೆ ಭಿಕ್ಷೆ ಸಿಗುವ ಇಲ್ಲವೆ ಭಿಕ್ಷೆಯಲ್ಲಿ ತುಪ್ಪ ಇತ್ಯಾದಿಗಳು ಸಿಕ್ಕದಿರುವ ಊರು.

ಖುಲ. 'ಖುಮ್ಮ' ಶಬ್ದವನ್ನು ನೋಡುವುದು.

ಖುಲಿಅ. 'ಖುಡಿಅ' ಶಬ್ದವನ್ನು ನೋಡುವುದು.

ಖುಲುಹ. ಪು: [ದೇ] ಕಾಲಿನ ಹರಡು, ಹರಡ(ಪಾಅ)

ಖುಲ್ಲ. 'ಖುಮ್ಮ' ಶಬ್ದವನ್ನು ನೋಡುವುದು.

ಖುಲ್ಲ. ನ: [ದೇ] ಕುಟಿ, ಕುಟೀರ, ಪರ್ಣಶಾಲೆ,ಗುಡಿಸಿಲು

ಖುಲ್ಲ.} ವಿ: [ಕ್ಷುಲ್ಲ, –ಕ] ಸಣ್ಣ, ಕಿರಿಯ, ಲಘು,
ಖುಲ್ಲಗ.} ಅಧಮ(ಪಣ್ಣ), ಪು: ಎರಡು ಇಂದ್ರಿಯಗಳ ಒಂದು ಜೀವ–ಜಂತು

ಖುಲ್ಲಗ. 'ಖುಡ್ಡಗ' ಶಬ್ದವನ್ನು ನೋಡುವುದು.

ಖುಲ್ಲಣ.(ಅಪ). 'ಖುಡ್ಡ' ಶಬ್ದವನ್ನು ನೋಡುವುದು.

ಖುಲ್ಲಯ. ವಿ: [ಕ್ಷುಲ್ಲಕ] ಸಣ್ಣ, ಕಿರಿಯ, ಲಘು, ಅಧಮ (ಭವಿ), ಸಣ್ಣ ಕವಡೆ(ಣಾಯಾ)

ಖುಲ್ಲಾಸಯ. ಪು: [ದೇ] ಹಡಗಿನ ಕೆಲಸಗಾರ

ಖುಲ್ಲಿರೀ. ಸ್ತ್ರೀ: [ದೇ] ಸಂಕೇತ

ಖುವ. ಪು: [ಕ್ಷುಪ] ಬೇರು ಮತ್ತು ಕೊಂಬೆಗಳು ಚಿಕ್ಕದಾಗಿರುವ ಮರ(ಣಾಯಾ)

ಖುವಯ. ಪು: [ದೇ] ಮುಳ್ಳಿನಿಂದ ಕೂಡಿರುವ ಒಂದು ಬಗೆಯ ಹುಲ್ಲು, ತೃಣ(ದೇ)

ಖುವ್ವ. 'ಖುಭ' ಸಣ್ಣ, ಕಿರಿಯ, ಲಘು, ಅಧಮ

ಖುವ್ವಯ. ನ: [ದೇ] ಎಲೆಯ ಮಡಿಕೆ

ಖುಹ. 'ಖುಭ' ಶಬ್ದವನ್ನು ನೋಡುವುದು.

ಖುಹಾ. ಸ್ತ್ರೀ: [ಕ್ಷುಧ್] ಹಸಿವು(ಮಹಾ). –**ಪರಿಸಹ, ಪರೀಸಹ.** ಪು: [–ಪರಿಷಹ, ಪರೀಷಹ] ಹಸಿವಿನ ಬಾಧೆಯನ್ನು ಶಾಂತಿಯಿಂದ ಸಹಿಸುವುದು

ಖುಹಿಯ. ವಿ: [ಕ್ಷುಭಿತ] ಕ್ಷೋಭೆಗೊಂಡಿರುವ, ತಳಮಳಗೊಂಡಿರುವ, ಭಯ, ಹೆದರಿಕೆ

ಖೂಣ. ನ: [ಕ್ಷೂಣ] ನಷ್ಟ, ಹಾನಿ, ಅಪರಾಧ, ತಪ್ಪು, ಕೊರತೆ, ನ್ಯೂನತೆ(ಸುಪಾ)

ಖೇಅ. ಸಕ: [ಖೇದಯ್] ಖಿನ್ನ ಗೊಳಿಸು, ಖೇದ ದುಃಖವುಂಟು ಮಾಡು

ಖೇಅ. ಪು: [ಖೇದ] ದುಃಖ, ಉದ್ವೇಗ, ಹಿಂಸೆ, ಬಳಲಿಕೆ, ಆಯಾಸ, ಸಂಯಮ, –**ಣ್ಣ. –ನ್ನ.** ವಿ: [–ಜ್ಞ] ನಿಪುಣ, ಚತುರ, ತಿಳಿದವನು

ಖೇಅ. 'ಖೆತ್ತ' ಶಬ್ದವನ್ನು ನೋಡುವುದು.

ಖೇಅ. ಪು: [ಕ್ಷೇಪ] ತ್ಯಾಗ, ಬಿಡುಗಡೆ(ಸೇ)

ಖೇಅಣ. ನ: [ಖೇದನ] ದುಃಖ, ಉದ್ವೇಗ ವಿ: ದುಃಖವನ್ನುಂಟುಮಾಡುವ(ಕುಮಾ)

ಖೇಅರ. 'ಖಯರ' ಶಬ್ದವನ್ನು ನೋಡುವುದು. **ಖೇಅರಾಹಿವ.** ಪು: [ಖೇಚರಾಧಿಪ] ವಿದ್ಯಾಧರ ರಾಜ(ಪಉವ). **ಖೇಅರಾಹಿವಇ.** ಪು: [ಖೇಚರಾಧಿಪತಿ] ವಿದ್ಯಾಧರರ ರಾಜ

ಖೇಅರಿಂದ. ಪು: [ಖೇಚರೇಂದ್ರ] ಖೇಚರರ ರಾಜ

ಖೇಅರೀ. 'ಖಯಹರೀ' ಶಬ್ದವನ್ನು ನೋಡುವುದು.

ಖೇಆಲು. ವಿ: [ದೇ] ಆಲಸಿ, ಸೋಮಾರಿ, ಚುರುಕಿಲ್ಲದ ಅಸಹಿಷ್ಣು, ಅಸೂಯಾಪರ(ದೇ)

ಖೇಇಯ. ವಿ: [ಖೇದಿತ] ದುಃಖಿತನಾಗಿಸಲ್ಪಟ್ಟ, ನೋಯಿಸಲ್ಪಟ್ಟ

ಖೇಚರ. 'ಕೇಅರ' ಶಬ್ದವನ್ನು ನೋಡುವುದು.

ಖೆಜ್ಜಣಾ. ಸ್ತ್ರೀ: [ಖೇದನಾ] ದುಃಖ ಸೂಚಕ ಮಾತು, ಖೇದ(ಣಾಯಾ)

ಖೇಡ. ಸಕ:}. ಗಾಡಿ ಹೊಡೆ
ಖೇಟಯ್}.

ಖೇಡ. ಸಕ: [ಕೃಷ್] ಉಳುಮೆ ಮಾಡು, ಉಳು(ಸುಪಾ)

ಖೇಡ. ನ: [ಖೇಟ] ಧೂಳಿನ ಪ್ರಾಕಾರವುಳ್ಳ ನಗರ(ಔಪ), ನದಿ ಮತ್ತು ಪರ್ವತದಿಂದ ಸುತ್ತುವರಿಯಲ್ಪಟ್ಟ ನಗರ, ಬೇಟೆ(ಭವಿ)

ಖೇಡಗ. ನ: [ಖೇಟಕ] ಗುರಾಣಿ(ಪಣ್ಣ)

ಖೇಡಣ. ನ: [ಕರ್ಷಣ] ಉಳುಮೆ ಮಾಡುವುದು, ಬೇಸಾಯ ಮಾಡುವುದು (ಸುಪಾ)

ಖೇಡಣ. ನ: [ಖೇಟನ] ಹಿಂದಕ್ಕೆ ದೂಡುವುದು, ಹಿಂದೆ ತಳ್ಳುವುದು. ಸರಿಸುವುದು(ಉಪ)

ಖೇಡಣಅ. ನ: [ಖೇಲನಕ] ಆಟಿಕೆ, ಆಟದ ಸಾಮಾನು

ಖೇಡಯ. ವಿ: [ಕ್ಷ್ವೇಟಕ] ವಿಷ, ಒಂದು ಬಗೆಯ ಜ್ವರ

ಖೇಡಯ. ವಿ: [ಸ್ಫೇಟಕ] ನಾಶ ಮಾಡುವ, ನಾಶಕ

ಖೇಡಯ. ನ: [ಖೇಟಕ] ಸಣ್ಣ ಹಳ್ಳಿ(ಪಾಅ)

ಖೇಡಾವಗ. ವಿ: [ಖೇಲಕ] ಆಟಗಾರ, ಆಟ ತೋರಿಸುವವನು

ಖೇಡಿಅ. ವಿ: [ಕೃಷ್ಟ] ಉಳುಮೆ ಮಾಡಲಾದ, ಉತ್ತ

ಖೇಡಿಅ. ಪು: [ಸ್ಫೇಟಿಕ] ನಶ್ವರ, ನಾಶವುಳ್ಳ, ಗೌರವವಿಲ್ಲದವನು

ಖೆಡ್ಡ. ಅಕ: [ರಮ್] ಕ್ರೀಡೆಯಾಡು, ಆಟವಾಡು
ಖೆಡ್ಡ}. ನ: [ಖೇಲ] ಕ್ರೀಡೆ, ಆಟ, ತಮಾಶೆ, ಹಾಸ್ಯ
ಖೆಡ್ಡಯ}. ನೆಪ(ಸುಪಾ)
ಖೆಡ್ಡಾ. ಸ್ತ್ರೀ: [ಕ್ರೀಡಾ] ಕ್ರೀಡೆ, ಆಟ, ತಮಾಶೆ, ಹಾಸ್ಯ
ಖೆಡ್ಡಿಯಾ. ಸ್ತ್ರೀ: [ದೇ] ಸಲ, ಬಾರಿ
ಖೆತ್ತ. ಪುಂ.ನ: [ಕ್ಷೇತ್ರ] ಆಕಾಶ, ಕೃಷಿ–ಭೂಮಿ, ಹೊಲ, ಭೂಮಿ, ದೇಶ, ಹಳ್ಳಿ, ನಗರ ಇತ್ಯಾದಿ. ಹೆಂಡತಿ, –ಕಪ್ಪ. ಪು: [–ಕಲ್ಪ] ದೇಶದ ರೀತಿ–ರಿವಾಜು, ಪದ್ಧತಿ. ಕ್ಷೇತ್ರಕ್ಕೆ ಸಂಬಂಧಿಸಿದ ನಡೆವಳಿ, ಕ್ಷೇತ್ರದ ಆಚಾರ–ವಿಚಾರಗಳನ್ನು ಪ್ರತಿಪಾದಿಸಿರುವ ಗ್ರಂಥ –ಪಲಿಓವಮ. ನ: [ಪಲ್ಯೋಪಮ] ಕಾಲದ ಅಳತೆ,
ಖೆತ್ತಾರಿಯ. ಪು: [ಕ್ಷೇತ್ರಾರ್ಯ] ಆರ್ಯ ಭೂಮಿಯಲ್ಲಿ ಹುಟ್ಟಿದ ವ್ಯಕ್ತಿ. 'ಖಿತ್ತ=ಕ್ಷೇತ್ರ' ಶಬ್ದವನ್ನು ನೋಡುವುದು.
ಖೆತ್ತಯ. ಪು: [ಕ್ಷೇತ್ರಕ] ರಾಹು
ಖೆತ್ತಿ. ವಿ: [ಕ್ಷೇತ್ರಿನ್] ಕ್ಷೇತ್ರದ ಒಡೆಯ, ಕ್ಷೇತ್ರದವನು
ಖೇಮ. ನ: [ಕ್ಷೇಮ] ಕುಶಲ, ಹಿತ, ಮಂಗಳ, ಶುಭ, ದೊರಕಿರುವ ವಸ್ತುವನ್ನು ಕಾಪಾಡಿಕೊಳ್ಳುವುದು,ವಿ:ಉಪದ್ರವವಿಲ್ಲದಿರುವುದು, ಹಿತಕರ, ಪು: ಪಾಟಲಿ ಪುತ್ರದ ರಾಜಾ ಜಿತಶತ್ರುವಿನ ಒಬ್ಬ ಮಂತ್ರಿ, –ಪುರೀ. ಸ್ತ್ರೀ: [–ಪುರೀ] ಒಂದು ನಗರ, ವಿದೇಹ–ವರ್ಷದ ಒಂದು ನಗರ(ಠಾ)
ಖೇಮಂಕರ. ಪು: [ಕ್ಷೇಮಂಕರ] ಮುಖಂಡ(ಪಉಮ), ಐರಾವತ ಕ್ಷೇತ್ರದ ನಾಲ್ಕನೇ ಕುಲ–ಪುರುಷ, ಒಂದು ಗ್ರಹ ಗ್ರಹದ ಅಧಿಷ್ಠಾತೃ ದೇವ, ತನ್ನ ಹೆಸರಿನಿಂದ ಪ್ರಸಿದ್ಧನಾದ ಒಬ್ಬ ಜೈನ ಮುನಿ(ಪಉಮ), ವಿ: ಕ್ಷೇಮಕಾರಕ ವ್ಯಕ್ತಿ
ಖೇಮಂಧರ. ಪು: [ಕ್ಷೇಮಂಧರ] ಮುಖಂಡ, ಐರಾವತ ಕ್ಷೇತ್ರದ ಐದನೇ ಮುಖ್ಯ ವ್ಯಕ್ತಿ ವಿ: ಕ್ಷೇಮಧಾರಕ, ಉಪದ್ರವ–ರಹಿತ
ಖೇಮಯ. ಪು: [ಕ್ಷೇಮಕ] ತನ್ನ ಹೆಸರಿನಿಂದ ಪ್ರಸಿದ್ಧನಾದ ಒಬ್ಬ ಅಂತಕೃತ ಜೈನ ಮುನಿ
ಖೇಮಲಿಜ್ಜಿಯಾ. ಸ್ತ್ರೀ: [ಕ್ಷೇಮಲಿಯಾ] ಜೈನ–ಮುನಿಗಣದ ಒಂದು ಶಾಖೆ(ಕಪ್ಪ)
ಖೇಮರಾಯ. ಪು: [ಕ್ಷೇಮರಾಜ] ರಾಜಾ ಕುಮಾರಪಾಲನ ಪೂರ್ವಜ
ಖೇಮಾ. ಸ್ತ್ರೀ: [ಕ್ಷೇಮಾ} ವಿದೇಹ ವರ್ಷದ ಒಂದು ನಗರ(ಠಾ), ಕ್ಷೇಮಪುರಿ ಎಂಬ ಹೆಸರಿನ ನಗರ,
ಖೇರ. ಪು: [ದೇ] ಒಂದು ಮ್ಲೇಚ್ಛ ಜಾತಿ
ಖೇರಿ. ಸ್ತ್ರೀ: [ದೇ] ನಾಶ, ದುಃಖ, ಉದ್ವೇಗ, ಉತ್ಸುಕತೆ, ತವಕ(ಭವಿ)
ಖೇಲ. ಅಕ: [ಖೇಲ್] ಆಡು, ಆಟವಾಡು, ತಮಾಶೆ ಮಾಡು
ಖೇಲ. ಪು: [ಶ್ಲೇಷ್ಮನ್] ಕಫ, ಶ್ಲೇಷ್ಮ
ಖೇಲ. ಪು: [ದೇ] ಹಡಗಿನ ಕೆಲಸಗಾರ
ಖೇಲ. ವಿ: [ಖೇಲ] ಆಟ ನಡೆಸುವವನು, ನಾಟಕದ ಪಾತ್ರ. ಸ್ತ್ರೀ: –ಲಿಯಾ
ಖೇಲಣ}. ನ: [ಖೇಲನ, –ಕ] ಕ್ರೀಡೆ, ಆಟ, ಆಟಿಕೆ,
ಖೇಲಣಯ}. ಆಟದ ಸಾಮಾನು
ಖೇಲೋಸಹಿ. ಸ್ತ್ರೀ: [ಶ್ಲೇಷ್ಮೌಷಧಿ] ಶ್ಲೇಷ್ಮವು ಔಷಧಿಯ ಕೆಲಸ ಮಾಡುವಂಥ ಒಂದು ಲಬ್ಧಿ–ವಿಶೇಷ, ವಿ: ಇಂಥ ಲಬ್ಧಿಯನ್ನು ಪಡೆದವನು(ಆವಮ)
ಖೆಲ್ಲ. 'ಖೇಲ=ಖೇಲ್' ಶಬ್ದವನ್ನು ನೋಡುವುದು.
ಖೆಲ್ಲ. 'ಖೇಲ=ಶ್ಲೇಷ್ಮನ್' ಶಬ್ದವನ್ನು ನೋಡುವುದು.
ಖೆಲ್ಲಣ. 'ಖೇಲಣ' ಶಬ್ದವನ್ನು ನೋಡುವುದು.
ಖೆಲ್ಲಾವಣ}. ನ: [ಖೇಲನಕ] ಆಟವಾಡಿಸುವುದು,
ಖೆಲ್ಲಾವಣಯ}. ಆಟಿಕೆ, –ಧಾಈ. ಸ್ತ್ರೀ: [–ಧಾತ್ರೀ] ಆಟ ಆಡಿಸುವ ಸೇವಕಿ
ಖೆಲ್ಲಿಅ. ನ: [ದೇ] ನಗೆ, ಹಾಸ್ಯ, ತಮಾಷೆ
ಖೆಲ್ಲುಡ. 'ಖಲ್ಲೂಡ' ಶಬ್ದವನ್ನು ನೋಡುವುದು.
ಖೇವ. ಪು: [ಕ್ಷೇಪ] ವಿಳಂಬ, ತಡ
ಖೇವ. ಪು: [ಕ್ಷೇಪ] ಎಸೆಯುವುದು, ಇಡುವುದು, ಇರಿಸುವುದು, ಒಂದು ಸಂಖ್ಯೆ
ಖೇವ. ಪು: [ಖೇದ] ಉದ್ವೇಗ, ದುಃಖ, ಕಷ್ಟ
ಖೇವಣ. ನ: [ಕ್ಷೇಪಣ] ಪ್ರೇರಣೆ, (ಣಾಯಾ)
ಖೇವಯ. ವಿ: [ಕ್ಷೇಪಕ] ಎಸೆಯುವವನು(ಗಾ)
ಖೇವಿಯ. ವಿ: [ಖೇದಿತ] ದುಃಖಕ್ಕೆ ಗುರಿಮಾಡಲ್ಪಟ್ಟ, ನೋಯಿಸಲ್ಪಟ್ಟ(ಭವಿ)
ಖೇಹ. ಪುಂನ: [ದೇ] ರಜ, ದೂಳು(ಸುರ)
ಖೋಅ. ಪು: [ಕ್ಷೋದ] ಕಬ್ಬು, ಕಬ್ಬಿನ ದ್ವೀಪ, ಇಕ್ಷುರಸದ ಸಮುದ್ರ
ಖೋಇಯ. ವಿ: [ದೇ] ಕತ್ತರಿಸಲ್ಪಟ್ಟ, ಬೇರೆಮಾಡಲ್ಪಟ್ಟ
ಖೋಉದಯ. ಪು: [ಕ್ಷೋದೋದಕ] ಸಮುದ್ರ–ವಿಶೇಷ

ಖೋಓದ. 'ಖೋದೋದ' ಶಬ್ದವನ್ನು ನೋಡುವುದು.
ಖೊಂಟಗ}. ಪು: [ದೇ] ಗೂಟ, ಸಣ್ಣ ಗೂಟ(ಉಪ)
ಖೊಂಟಯ}.
ಖೊಕ್ಖ. ಅಕ: [ಖೋಖ್] ಕಪಿಯ ದನಿತೆಗೆಯುವುದು
ಖೊಕ್ಖಾ}. ಸ್ತ್ರೀ: [ಖೋಖಾ] ಕಪಿಯ ದನಿ(ಗಾ)
ಖೋಖಾ}.
ಖೋಖುಬ್ಭ. ಅಕ: [ಚೋಕ್ಷುಭ್ಯ] ಅತಿಯಾಗಿ ಹೆದರುವುದು, ಬಹಳವಾಗಿ ಭೀತಿಪಡುವುದು
ಖೊಜ್ಜ. ಪುಂನ: [ದೇ] ಮಾರ್ಗಚಿಹ್ನೆ, ದಾರಿಯ ಗುರುತು
ಖೊಟ್ಟ. ಸಕ: [ದೇ] ಖಟಪಟ ಶಬ್ದಮಾಡು, ತಟ್ಟು
ಖೊಟ್ಟೀ. ಸ್ತ್ರೀ: [ದೇ] ದಾಸಿ, ಆಳು, ಸೇವಕ
ಖೋಡ. ಪು: [ಸ್ಫೋಟ] ಕುರು, ವ್ರಣ
ಖೋಡ. ಪು: [ದೇ] ಎಲ್ಲೆಯನ್ನು ಗೊತ್ತುಪಡಿಸುವ ಗೂಟ ವಿ: ಧಾರ್ಮಿಕ, ಧರ್ಮಿಷ್ಠ(ದೇ) ಕುಂಟ, ನರಿ(ಮೃಚ್ಛ), ಸ್ಥಳ, ಅರಳುವುದು, ಬಿರಿಯುವುದು, ಚೆನ್ನಾಗಿ ತೊಳೆಯುವುದು, ನ: ರಾಜ ವರ್ಗದವರಿಗೆ ಕೊಡಲು ಯೋಗ್ಯವಾದ ಚಿನ್ನವೇ ಮೊದಲಾದ ದ್ರವ್ಯ(ವವ)
ಖೋಡಪಜ್ಜಾಲಿ. ಪು: [ದೇ] ಕಟ್ಟಿಗೆ ಸುಡುವುದರಿಂದ ಹೊಮ್ಮುವ ಬೆಂಕಿ
ಖೋಡಯ. ಪು: [ಕ್ಷ್+ವೋಟಕ] ಉಗುರು ಚರ್ಮವನ್ನು ಒತ್ತುವುದು
ಖೋಡಯ. ಪು: [ಸ್ಫೋಟಕ] ಕುರು
ಖೋಡಿಯ. ಪು: [ಖೋಟಿಕ] ಗಿರನಗರ ಪರ್ವತದ ಕ್ಷೇತ್ರಪಾಲಕ ದೇವತೆ(ತೀ)
ಖೋಡೀ. ಸ್ತ್ರೀ: [ದೇ] ದೊಡ್ಡ ಸೌದೆ, ಕಟ್ಟಿಗೆ, ಒಂದು ಬಗೆಯ ಮರದ ಪೆಟ್ಟಿಗೆ
ಖೋಣಿ. ಸ್ತ್ರೀ: [ಕ್ಷೋಣಿ] ಪೃಥ್ವಿ, ಧರಣಿ, ಭೂಮಿ, –ವಇ. ಪು: [–ಪತಿ] ದೊರೆ, ಭೂಪತಿ
ಖೋಣಿಂದ. ಪು: [ಕ್ಷೋಣೀಂದ್ರ] ರಾಜ, ನೃಪ(ಸಣ)
ಖೋಣೀ. 'ಖೋಣಿ' ಶಬ್ದವನ್ನು ನೋಡುವುದು.
ಖೋದ. ಪು: [ಕ್ಷೋದ] ಪುಡಿಮಾಡುವುದು, ಅರೆಯುವುದು, ಕಬ್ಬಿನ ರಸ, **–ರಸ.** ಪು: [–ರಸ] ಸಮುದ್ರ, **–ವರ.** ಪು: [–ವರ] ಒಂದು ದ್ವೀಪ
ಖೋದ. ಪು: [ಕ್ಷೋದ] ಪುಡಿ, ಚೂರ್ಣ
ಖೋದೋಅ}. ಪು: [ಕ್ಷೋದೋದ] ಕಬ್ಬಿನ ರಸದಂಥ
ಖೋದೋದ}. ರುಚಿಯುಳ್ಳ ನೀರಿನ ಸಮುದ್ರ(ಜೀವ), ಮಧುರವಾದ ನೀರಿನ ಬಾವಿ, ನ: ಕಬ್ಬಿನ ರಸದ ಹಾಗೆ ರುಚಿಕರವಾದ ನೀರು (ಪಣ್ಣ)
ಖೊದ್ದ. ನ: [ಕ್ಷೌದ್ರ] ಜೇನು, ಮಧು
ಖೋಭ. ಸಕ: [ಕ್ಷೋಭಯ್] ಕ್ಷುಬ್ಧಗೊಳಿಸು, ಅಲ್ಲೋಲ ಕಲ್ಲೋಲ ಗೊಳಿಸು, ಧೈರ್ಯ ಗೆಡಿಸು, ವಿಸ್ಮಯ ಹುಟ್ಟಿಸು, ದುಃಖವುಂಟುಮಾಡು
ಖೋಭ. ಪು: [ಕ್ಷೋಭ] ಕುಲುಕಾಟ, ಗಾಬರಿ, ಕದಡುವುದು. ಈ ಹೆಸರಿನ ರಾವಣನ ಒಬ್ಬ ಯೋಧ (ಪಉಮ)
ಖೋಭಣ. ನ: [ಕ್ಷೋಭಣ] ಕ್ಷೋಭೆಯನ್ನುಂಟು ಮಾಡುವುದು, ವಿಚಲಿತಗೊಳಿಸುವುದು,
ಖೋಭಿಯ. ವಿ: [ಕ್ಷೋಭಿತ] ಕ್ಷುಬ್ಧಗೊಳಿಸಲ್ಪಟ್ಟ, ವಿಚಲಿತಗೊಳಿಸಲ್ಪಟ್ಟ(ಪಉಮ)
ಖೋಮ}. ನ: [ಕ್ಷೌಮ]ಹತ್ತಿಬಟ್ಟೆ, ಹತ್ತಿಯಿಂದಮಾಡಿದ
ಖೋಮಗ}. ವಸ್ತ್ರ(ಣಾಯಾ), ಸೆಣಬಿನಿಂದ ಮಾಡಿದ ವಸ್ತ್ರ, ರೇಷ್ಮೆ ವಸ್ತ್ರ, ವಿ: ಅಗಸೆಗೆ ಸಂಬಂಧಿಸಿದ, ಸೆಣಬಿಗೆ ಸಂಬಂಧಿಸಿದ(ಠಾ), **–ಪಸಿಣ.** ನ: [–ಪ್ರಶ್ನ] ಉಟ್ಟಿರುವ ವಸ್ತ್ರಕ್ಕೆ ದೇವತೆಗಳನ್ನು ಆಹ್ವಾನಿಸಬಹುದಾದ ಒಂದು ವಿದ್ಯೆ(ಠಾ)
□**ಖೋಮಿಯ.** ನ: [–ಕ್ಷೌಮಿಕ] ಹತ್ತಿಯಿಂದ ಮಾಡಿದ ಬಟ್ಟೆ, ಸೆಣಬಿನಿಂದ ಮಾಡಿದ ಬಟ್ಟೆ,
ಖೋಮಿಯ. ವಿ: [ಕ್ಷೌಮಿಕ] ರೇಷ್ಮೆಗೆ ಸಂಬಂಧಿಸಿದ, ಸಣಬಿಗೆ ಸಂಬಂಧಿಸಿದ
ಖೋಯ. 'ಖೋದ' ಶಬ್ದವನ್ನು ನೋಡುವುದು.
ಖೋರ.} ನ: [ದೇ] ಬಟ್ಟಲು(ಉಪ)
ಖೋರು.}
ಖೋಲ. ಪು: [ದೇ] ಕತ್ತೆ ಮರಿ, ಸಣ್ಣ ಕತ್ತೆ, ವಸ್ತ್ರದ ಒಂದು ಭಾಗ, ಮದ್ಯದ ಕೆಳಗಡೆಯ ಗಷ್ಟ
ಖೋಲ. ವಿ: [ದೇ] ಗುಪ್ತಚಾರ, ಗೂಢಚಾರ
ಖೊಲ್ಲ. ನ: [ದೇ] ಮರದ ಪೊಟರೆ
ಖೋಸಲಯ. ವಿ: [ದೇ] ಉಬ್ಬುಹಲ್ಲಿನವ
ಖೋಸಿಯ. ವಿ: [ದೇ] ಜೀರ್ಣಪ್ರಾಯ ಮಾಡಲ್ಪಟ್ಟ
ಖೋಹ. '**ಖೋಭ=ಕ್ಷೋಭಯ್**' ಶಬ್ದವನ್ನು ನೋಡುವುದು.

ಗ

ಗ. ಪು: [ಗ] ವ್ಯಂಜನ ವರ್ಣ, ಇದು ಕಂಠ್ಯ ವರ್ಣ
–ಗ. ವಿ: [–ಗ] ಹೋಗುವವನು, ಪ್ರಾಪ್ತ ವಾಗುವಂಥ –'ಪಾರಗ' ಎಂಬಂತೆ
ಗಅವಂತ. ವಿ: [ಗತವತ್] ಹೋದ, ಹೊರಟು ಹೋಗಿರುವ
ಗಇ. ಸ್ತ್ರೀ: [ಗತಿ] ಜ್ಞಾನ, ತಿಳಿವು, ಪ್ರಕಾರ, ಭೇದ, ಚಲನೆ, ಇನ್ನೊಂದು ಸ್ಥಳವನ್ನು ತಲುಪುವುದು ಬೇರೊಂದು ಜನ್ಮ ಪ್ರಾಪ್ತವಾಗುವುದು(ಠಾ), ದೇವ, ನಾರಕ, ತಿರ್ಯಕ್ ಮತ್ತು ಮುಕ್ತ ಜೀವದ ಅವಸ್ಥೆ, ದೇವಾದಿ ಯೋನಿ, –ತಸ್. ಪು: [–ತ್ರಸ್] ಅಗ್ನಿ ಮತ್ತು ವಾಯುವಿನ ಜೀವ(ಕಮ್ಮ), –ನಾಮ. ನ: [–ನಾಮನ್] ದೇವಾದಿ ಗತಿಗಳ ಕಾರಣ–ಭೂತ ಕರ್ಮ, –ಪ್ಪವಾಯ. ಪು: [–ಪ್ರಪಾತ] ಗತಿಯ ನಿಯತತೆ, ಗ್ರಂಥಾಂಶ
ಗಇಲ್ಲಯ. 'ಗಯ=ಗತ' ಶಬ್ದವನ್ನು ನೋಡುವುದು.
ಗಇಂದ. ಪು: [ಗಜೇಂದ್ರ] ಇಂದ್ರನ ಆನೆಯಾದ ಐರಾವತ ಗಜ, ಶ್ರೇಷ್ಠ ಆನೆ(ಗಉಡ), –ಪಯ. ನ:[–ಪದ] ಗಿರನಾರ ಪರ್ವತದ ಮೇಲಿರುವ ಒಂದು ಜಲ–ತೀರ್ಥ
ಗಉ}. ಪು: [ಗೋ] ಎತ್ತು, ವೃಷಭ, –ಪುಚ್ಛ. ನ:
ಗಉಅ}. –ಪುಚ್ಛ] ಎತ್ತಿನ ಬಾಲ, ಒಂದು ಬಾಣ
ಗಉಅ. ಪು: [ಗವಯ] ಗಂಗೆದೊಗಲಿಲ್ಲದ ಗೋವಿನಂಥ ಆಕಾರವುಳ್ಳ ಒಂದು ಪ್ರಾಣಿ, ಕಾಡುಹಸು
ಗಉಆ. ಸ್ತ್ರೀ: [ಗೋ] ಹಸು,
ಗಉಡ. ಪು: [ಗೌಡ] ಬಂಗಾಳದ ಪೂರ್ವಭಾಗದ, ತನ್ನ ಹೆಸರಿನಿಂದ ಖ್ಯಾತವಾದ 'ಗೌಡ' ದೇಶ, ಅದರ ನಿವಾಸಿ, ಗೌಡ ದೇಶದ ರಾಜ, –ವಹ. ಪು: [–ವಧ] ವಾಕ್ಪತಿ ರಾಜನು ರಚಿಸಿದ ಪ್ರಾಕೃತದ ಒಂದು ಕಾವ್ಯ(ಗಉಡ)
ಗಉಣ. ವಿ: [ಗೌಣ] ಅಮುಖ್ಯವಾದ. ಪ್ರಧಾನವಲ್ಲದ
ಗಉಣೀ. ಸ್ತ್ರೀ: [ಗೌಣೀ] ಶಬ್ದದ ಒಂದು ಶಕ್ತಿಯಾದ 'ಗೌಣೀ' ಲಕ್ಷಣ
ಗಉರವ. 'ಗಾರವ' ಶಬ್ದವನ್ನು ನೋಡುವುದು.
ಗಉರವಿಯ. ವಿ: [ಗೌರವಿತ] ಸನ್ಮಾನಿತನಾದ, ಗೌರವಿಸಲ್ಪಟ್ಟ(ಸುಪಾ)
ಗಉರೀ ಸ್ತ್ರೀ: [ಗೌರೀ] ಶಿವನ ಪತ್ನಿಯಾದ ಪಾರ್ವತಿ, ಗೌರವರ್ಣದ ಮಹಿಳೆ, ಮಹಿಳೆ, –ಪುತ್ರ. ಪು: [–ಪುತ್ರ] ಪಾರ್ವತಿಯ ಪುತ್ರ ಸ್ಕಂದ,
ಗಂಅ. 'ಗಯ=ಗತ' ಶಬ್ದವನ್ನು ನೋಡುವುದು.
ಗಂಗ. ಪು: [ಗಂಗ] ದ್ವಿಕ್ರಿಯ ಮತದ ಪ್ರವರ್ತಕ ಮುನಿ, ಆಚಾರ್ಯ, –ದತ್ತ. ಪು: [–ದತ್ತ] ೬ನೇ ವಾಸುದೇವನ ಪೂರ್ವ ಜನ್ಮದ ಗುರುವಾಗಿದ್ದ ಒಬ್ಬ ಜೈನಮುನಿ, ೯ನೇ ವಾಸುದೇವನ ಪೂರ್ವ ಜನ್ಮದ ಹೆಸರು. ಈ ಹೆಸರಿನ ಒಬ್ಬ ಜೈನ ಶ್ರೇಷ್ಠಿ, –ದತ್ತಾ. ಸ್ತ್ರೀ: [–ದತ್ತಾ] ಒಬ್ಬ ಸಾರ್ಥವಾಹನ (ವರ್ತಕರ ಮುಂದಾಳು) ಹೆಂಡತಿಯ ಹೆಸರು.
ಗಂಗ. 'ಗಂಗಾ' ಶಬ್ದವನ್ನು ನೋಡುವುದು. –ಪ್ಪವಾಯ. ಪು: [–ಪ್ರಪಾತ] ಗಂಗಾ ನದಿ ಹುಟ್ಟುವ ಹಿಮಾಲಯ ಪರ್ವತದ ಒಂದು ಮಹಾನ್ ಸರೋವರ, –ಸೋಅ. ಪು: [–ಸ್ರೋತಸ್] ಗಂಗಾ ಪ್ರವಾಹ
ಗಂಗಲೀ. ಸ್ತ್ರೀ: [ದೇ] ಮೌನ, ಸುಮ್ಮನಿರುವುದು (ಸುಪಾ)
ಗಂಗಾ. ಸ್ತ್ರೀ: [ಗಂಗಾ] ಪ್ರಖ್ಯಾತವಾದ ನದಿ, ಹೆಣ್ಣು. ಗೋಶಾಲಕನ ಮತದಂತೆ ಒಂದು ಕಾಲದ ಅಳತೆ, ಗಂಗಾ ನದಿಯ ಅಧಿಷ್ಠಾತೃ–ದೇವಿ, ಭೀಷ್ಮನ ತಾಯಿಯ ಹೆಸರು(ಣಾಯಾ), ಕುಂಡ. ನ: [–ಕುಂಡ] ಗಂಗೆ ಹುಟ್ಟುವ ಹಿಮಾಲಯ ಪರ್ವತದಲ್ಲಿರುವ ಒಂದು ಸರೋವರ(ಠಾ), –ಕೂಡ. ನ: [–ಕೂಟ] ಹಿಮಾಲಯದ ಒಂದು ಶಿಖರ, –ದೀವ. ಪು: [–ದ್ವೀಪ] ಗಂಗಾ ದೇವಿಯ ಭವನ ಇರುವ ಒಂದು ದ್ವೀಪ, –ದೇವೀ. ಸ್ತ್ರೀ: [–ದೇವೀ] ಗಂಗೆಯ ಅಧಿಷ್ಠಾತೃ ದೇವಿ, –ವತ್ತ. ಪು: [–ವರ್ತ] ಒಂದು ಸುಳಿ, –ಸಯ. ನ: [–ಶತ] ಗೋಶಾಲಕನ ಮತದಲ್ಲಿ ಕಾಲದ ಒಂದು ಅಳತೆ, –ಸಾಗರ. ಪು: [–ಸಾಗರ] ಗಂಗೆ ಸಮುದ್ರ ಸೇರುವ ಪ್ರಸಿದ್ಧ ತೀರ್ಥ(ಉತ್ತ)
ಗಂಗೇಅ. ಪು: [ಗಾಂಗೇಯ] ಗಂಗೆಯ ಮಗ ಭೀಷ್ಮ(ಣಾಯಾ), ದ್ವೈಕ್ರಿಯ ಮತದ ಪ್ರವರ್ತಕ

ಆಚಾರ್ಯ(ಆಚೂ), ಪಾರ್ಶ್ವನಾಥ ತೀರ್ಥಂಕರರ ವಂಶದ ಒಬ್ಬ ಜೈನಮುನಿ,
ಗಂಭ}. **ಪು**: [ದೇ] **'ವರುಡ'** ಎಂಬ ಹೆಸರಿನ ಒಂದು
ಗಂಭಯ}. ಮ್ಲೇಚ್ಛ ಜಾತಿ
ಗಂಭಿಯ. ಪು: [ದೇ] ಗಾಣಿಗ
ಗಂಜ. ಸಕ: [ಗಂಜ್] ತಿರಸ್ಕಾರ ಮಾಡು, ಉಲ್ಲಂಘಿಸು, ಮರ್ದಿಸು, ತುಳಿ, ಅವಮಾನಮಾಡು, ಪೀಡಿಸು, ಹೊಡೆ
ಗಂಜ. ಪು: [ದೇ] ಕೆನ್ನೆ
ಗಂಜ. ಪು: [ಗಂಜ] ಒಂದು ಬಗೆಯ ಖಾದ್ಯ ವಸ್ತು, ಭೋಜನ(ಪಣ್ಹ), **–ಸಾಲಾ. ಸ್ತ್ರೀ**: [**–ಶಾಲಾ**] ಹುಲ್ಲು ಸೌದೆಯೇ ಮೊದಲಾದುವನ್ನು ಇಡುವ ಸ್ಥಳ, ದನದ ಕೊಟ್ಟಿಗೆ(ನಿಚೂ)
ಗಂಜಣ. ನ: [ಗಂಜನ] ಅಪಮಾನ, ಕಲೆ, ಕಲಂಕ
ಗಂಜಣ. ವಿ: [ಗಂಜನ] ಕೈ, ಕಾಲು ಒತ್ತುವವನು, ತಿಕ್ಕುವವನು
ಗಂಜಾ. ಸ್ತ್ರೀ: [ಗಂಜಾ] ಹೆಂಡದಂಗಡಿ, ಪಡಖಾನೆ(ದೇ)
ಗಂಜಿಅ. ಪು: [ಗಾಂಜಿಕ] ಹೆಂಡ ಮಾರುವವನು,
ಗಂಜಿಅ. ವಿ: [ಗಂಜಿತ] ಪರಾಜಿತ, ಸೋತವನು, ಕೊಲ್ಲಲ್ಪಟ್ಟವನು, ನಾಶ ಮಾಡಲ್ಪಟ್ಟವನು, ಪೀಡಿತ, ನೋಯಿಸಲ್ಪಟ್ಟವನು
ಗಂಜಿಲ್ಲ. ವಿ: [ದೇ] ಬೇರೆಯಾದ, ಅಗಲಿದ, ಭ್ರಾಂತ ಚಿತ್ತ, ಹುಚ್ಚ
ಗಂಜುಲ್ಲಿಯ ವಿ: [ದೇ] ರೋಮಾಂಚನಗೊಂಡವನು,
ಗಂಜೋಲ. ವಿ: [ದೇ] ವ್ಯಾಕುಲಗೊಂಡಿರುವ, ತೊಂದರೆಗೊಳಗಾಗಿರುವ, ಗಾಬರಿಗೊಂಡಿರುವ
ಗಂಜೊಲ್ಲಿಅ.ವಿ: [ದೇ] ರೋಮಾಂಚನಗೊಂಡವನು, ನ: ನಗಿಸಲು ಮಾಡುವ ಅಂಗ ಸ್ಪರ್ಶ, ಕಚಗುಳಿ
ಗಂಠ. ಸಕ: [ಗ್ರಂಥ್] ಪೋಣಿಸು, ಹೆರಳು ಹಾಕು, ರಚಿಸು, ಮಾಡು
ಗಂಠ. **'ಗಂಥ'** ಶಬ್ದವನ್ನು ನೋಡುವುದು.
ಗಂಠಿ. ಪುಂಸ್ತ್ರೀ: [ಗ್ರಂಥಿ] ಗಂಟು, ಬಿದಿರು, ಕಬ್ಬು ಮೊದಲಾದವುಗಳ ಗೆಣ್ಣು, ಒಂದು ರೋಗ, ಗಂಟು, ರಾಗ–ದ್ವೇಷಗಳ ದಟ್ಟ ಪರಿಣಾಮ (ಉಪ), **–ಚ್ಛೇಅ. ಪು**: [**–ಚ್ಛೇದ**] ಗಂಟನ್ನು ಬಿಡಿಸುವವನು, ಜೇಬು ಕತ್ತರಿಸುವವನು, **–ಭೇಯ. ಪು**: [**–ಭೇದ**] ಗಂಟನ್ನು ಭೇದಿಸುವುದು, ಒಡೆಯುವುದು, **–ಭೇಯಗ. ವಿ**: [**–ಭೇದಕ**] ಗಂಟನ್ನು ಒಡೆಯುವವನು, **ಪು**: ಕಳ್ಳ, (ಣಾಯಾ), **–ವಣ್ಣ. ಪು**: [**–ಪರ್ಣ**] ಮಾಚಿ ಪತ್ರೆ, ಸುಗಂಧಿ ಗಿಡ, **–ಸಹಿಯ. ವಿ**: [**–ಸಹಿತ**] ಗಂಟಿನಿಂದ ಕೂಡಿದ, ನ: ಪ್ರತ್ಯಾಖ್ಯಾನ–ವಿಶೇಷ, ಒಂದು ವ್ರತ
ಗಂಠಿ. ಸ್ತ್ರೀ: [ಗೃಷ್ಟಿ] ಒಂದು ಕರು ಹಾಕಿದ ಹಸು
ಗಂಠಿಮ. ನ: [ಗ್ರಂಥಿಮ] ಪೋಣಿಸಿ, ಅಥವಾ ಕಟ್ಟಿ ಮಾಡಲಾದ ಹಾರವೇ ಮೊದಲಾದವು, ಲತೆ, ಹುಲ್ಲುಗಳ ಪೊದರು
ಗಂಠಿಯ. ವಿ: [ಗ್ರಥಿತ] ಒಟ್ಟಿಗೆ ಸೇರಿಸಿ ಕಟ್ಟಲ್ಪಟ್ಟ, ಪೋಣಿಸಲಾದ, (ಕುಮಾ)
ಗಂಠಿಯ. ವಿ: [ಗ್ರಂಥಿಕ] ಗಂಟನ್ನು ಹೊಂದಿರುವವನು (ಸೂಅ)
ಗಂಠಿಲ್ಲ. ವಿ: [ಗ್ರಂಥಿಮತ್] ಗಂಟನ್ನು ಉಳ್ಳ,
ಗಂಡ. ಪು: [ದೇ] ವನ, ಕಾಡು, ಕೊತವಾಲ, ಕೋಟೆ ರಕ್ಷಕ, ಸಣ್ಣ ಜಿಂಕೆ, ಕ್ಷೌರಿಕ, ನ: ಗುಚ್ಛ, ಸಮೂಹ
ಗಂಡ. ಪುಂ.ನ: [ಗಂಡ] ಕೆನ್ನೆ, ಕಪೋಲ, ಗಂಡಮಾಲೆ ರೋಗ, ಆನೆಯ ಕುಂಭಸ್ಥಲ, ಕುಚ, ಮೊಲೆ, ಕಬ್ಬಿನ ಜಲ್ಲೆಗಳ ಕಟ್ಟು, ಒಂದು ಛಂದಸ್ಸು, ಕುರು(ಉತ್ತ), ಗಂಟು, **–ಭೇಅ, –ಭೇಅಅ. ಪು**: [**–ಭೇದಕ**] ಜೇಬುಗಳ್ಳ(ಅವಿ), **–ಮಾಣಿಯಾ. ಸ್ತ್ರೀ**: [**–ಮಾಣಿಕಾ**] ಧಾನ್ಯದ ಒಂದು ಬಗೆಯ ಅಳತೆ, **–ಮಾಲಾ. ಸ್ತ್ರೀ**: [**–ಮಾಲಾ**] ಗಂಟಲು ಊತ ಬರುವ ಒಂದು ರೋಗ(ಸಣ), **–ಯಲ. ನ**: [**–ತಲ**] ಕಪೋಲ ಪ್ರದೇಶ, **–ಲೇಹಾ. ಸ್ತ್ರೀ**: [**–ಲೇಖಾ**] ಕೆನ್ನೆಯ ಮೇಲೆ ಅಂಕಿಸಿರುವ ಕಸ್ತೂರಿ ಮೊದಲಾದವು, **–ವಚ್ಛಾ. ಸ್ತ್ರೀ**: [**–ವಕ್ಷಸ್ಕಾ**] ಉಬ್ಬಿದ ಮೊಲೆಗಳುಳ್ಳವಳು, ಪೀನಸ್ತನ, **–ವಾಣಿಯಾ. ಸ್ತ್ರೀ**: [**–ಪಾಣಿಕಾ**] ಬಿದಿರಿನ ಪಾತ್ರೆ, **–ವಾಸ. ಪು**: [**–ಪಾರ್ಶ್ವ**] ಕೆನ್ನೆಯ ಪಾರ್ಶ್ವಭಾಗ.
ಗಂಡ. ನ: [ಗಂಡ] ದೋಷ, ಕಲೆ, ಕಲಂಕ**–ಮಾಣಿಯಾ. ಸ್ತ್ರೀ**: [**–ಮಾನಿಕಾ**] ಒಂದು ಪಾತ್ರೆ, **–ವಿಇವಾಯ. ಪು**: [**–ವ್ಯತಿಪಾತ**] ಜ್ಯೋತಿಶ್ಶಾಸ್ತ್ರದ ಒಂದು ಪ್ರಸಿದ್ಧ ಯೋಗ
ಗಂಡಇಯಾ. ಸ್ತ್ರೀ: [ಗಂಡಕಿಕಾ] ಒಂದು ನದಿ(ಆವಮ)
ಗಂಡಯ. ಪು: [ಗಂಡಕ] ಖಡ್ಗ ಮೃಗ, ಕೂಗುವವನು, ಕಿರಿಚುವವನು(ಓಘ)

ಗಂಡಲೀ. ಸ್ತ್ರೀ: [ದೇ] ಕಬ್ಬಿನ ತುಣುಕುಗಳು, ಅಕ್ಕಸಾಲಿಗನ ಒಂದು ಉಪಕರಣ

ಗಂಡಾ. 'ಗಂಠಿ=ಗ್ರಂತಿ' ಶಬ್ದವನ್ನು ನೋಡುವುದು.

ಗಂಡಾಗ. ಪು: [ಗಂಡಕ] ಕ್ಷೌರಿಕ(ಆಚಾ)

ಗಂಡಿ. ಪು: [ಗಂಡಿ] ಒಂದು ಹುಳು

ಗಂಡಿ. ವಿ: [ಗಂಡಿನ್] ಗಂಡಮಾಲೆ ರೋಗವುಳ್ಳವನು,

ಗಂಡಿಯಾ. ಸ್ತ್ರೀ: [ಗಂಡಿಕಾ] ಕಬ್ಬಿನ ತುಣುಕು, ಅಕ್ಕಸಾಲಿಗನ ಒಂದು ಉಪಕರಣ, ಒಂದು ಅರ್ಥದ ಅಧಿಕಾರವುಳ್ಳ ಗ್ರಂಥ ಪದ್ಧತಿ

ಗಂಡಿಲ. 'ಗಂಧಿಲ' ಶಬ್ದವನ್ನು ನೋಡುವುದು.

ಗಂಡಿಲಾವಈ. 'ಗಂಧಿಲಾವಈ' ಶಬ್ದವನ್ನು ನೋಡುವುದು.

ಗಂಡೀ. ಸ್ತ್ರೀ: [ಗಂಡೀ] ಅಕ್ಕಸಾಲಿಗನ ಒಂದು ಉಪಕರಣ, ಕಮಲದ ಹೂವಿನ ಬೀಜಕೋಶ (ಉತ್ತ),**–ತಿಂದುಗ.** ನ: [**–ತಿಂದುಕ**] ಒಬ್ಬ ಯಕ್ಷ, **–ಪಯ.** ಪು: [**–ಪದ**] ಆನೆಯೇ ಮೊದಲಾದ ಚತುಷ್ಪಾದಿ ಪ್ರಾಣಿಗಳು, **–ಪೋತ್ಥಯ.** ಪುಂನ: [**–ಪುಸ್ತಕ**] ಒಂದು ಪುಸ್ತಕ(ಠಾ)

ಗಂಡೀರೀ. ಸ್ತ್ರೀ: [ದೇ] ಕಬ್ಬಿನ ತುಣುಕು

ಗಂಡೀವ. ನ: [ಗಾಂಡೀವ] ಅರ್ಜುನನ ಧನುಸ್ಸು (ವೇಣೀ)

ಗಂಡೀವ. ನ: [ದೇ. ಗಾಂಡೀವ] ಧನುಸ್ಸು

ಗಂಡೀವಿ. ಪು: [ಗಾಂಡೀವಿನ್] ಅರ್ಜುನ, ಮಧ್ಯಮ ಪಾಂಡವ

ಗಂಡುಅ. ನ: [ಗಂಡು] ತಲೆದಿಂಬು(ಮಹಾ)

ಗಂಡುಅ. ನ: [ಗಂಡುತ್] ಒಂದು ಬಗೆಯ ಹುಲ್ಲು

ಗಂಡುಲ. ಪು: [ಗಂಡೋಲ] ಹೊಟ್ಟೆಯಲ್ಲಿ ಹುಟ್ಟುವ ಒಂದು ಬಗೆಯ ಕ್ರಿಮಿ

ಗಂಡುವಹಾಣ. ನ: [ಗಂಡೋಪಧಾನ] ತಲೆದಿಂಬು, ಕೆನ್ನೆಗೆ ಅನುಕೂಲಕರವಾದ ದಿಂಬು

ಗಂಡೂಪಯ. ಪು: [ಗಂಡೂಪದ] ಕೆಸರಿನಲ್ಲಿರುವ ಎರುಬು ಹುಳು

ಗಂಡೂಲ. 'ಗಂಡುಲ' ಶಬ್ದವನ್ನು ನೋಡುವುದು.

ಗಂಡೂಸ. ಪು: [ಗಂಡೂಷ] ಬಾಯಿ ಮುಕ್ಕಳಿಸುವುದು

ಗಂತ. 'ಗ–ಗಮ್' ಶಬ್ದವನ್ನು ನೋಡುವುದು.

ಗಂತಿಯ. ನ: [ಗಂತೃಕ] ಒಂದು ಬಗೆಯ ಹುಲ್ಲು(ಪಣ್ಣ)

ಗಂತೀ. ಸ್ತ್ರೀ: [ಗಂತ್ರೀ] ಎತ್ತಿನ ಗಾಡಿ(ಧಮ್ಮ)

ಗಂತುಂಪಚ್ಚಾಗಯಾ. ಸ್ತ್ರೀ: [ಗತ್ವಾಪ್ರತ್ಯಾಗತಾ] ಜೈನ ಮುನಿಗಳ ಭಿಕ್ಷಾಚರ್ಯೆ(ಠಾ)

ಗಂತುಕಾಮ. ವಿ: [ಗಂತುಕಾಮ] ಹೋಗಬೇಕೆಂದು ಇಚ್ಛಿಸುವವನು(ಶ್ರಾ)

ಗಂಥ. 'ಗಂಠ=ಗ್ರಂಥ' ಶಬ್ದವನ್ನು ನೋಡುವುದು.

ಗಂಥ. ಪು: [ಗ್ರಂಥ] ಶಾಸ್ತ್ರ, ಸೂತ್ರ, ಪುಸ್ತಕ(ವಿಸೇ), ಧನ, ಧಾನ್ಯವೇ ಮೊದಲಾದ ಬಾಹ್ಯ ಮಿಥ್ಯಾತ್ವಗಳು ಮತ್ತು ಕ್ರೋಧ, ಪ್ರತಿಷ್ಠೆ, ಮೊದಲಾದ ಆಂತರಿಕ ವಿಘ್ನಗಳು(ಠಾ) ಸಂಪತ್ತು, ಸ್ವಜನರು, **ಗಂಥಾಈಅ.** ಪು: [ಗ್ರಂಥಾತೀತ] ಜೈನ ಸಾಧು(ಸೂಅ)

ಗಂಥಿ. 'ಗಂಠಿ' ಶಬ್ದವನ್ನು ನೋಡುವುದು.

ಗಂಥಿ. ವಿ: [ಗ್ರಂಥಿನ್] ಗ್ರಂಥ ಕರ್ತೃ, ಲೇಖಕ

ಗಂಥಿಮ. 'ಗಂಠಿಮ' ಶಬ್ದವನ್ನು ನೋಡುವುದು (ಣಾಯಾ)

ಗಂದಿಲಾ. ಸ್ತ್ರೀ: [ಗಂದಿಲಾ] '**ಗಂಧಿಲ**' ಶಬ್ದವನ್ನು ನೋಡುವುದು.

ಗಂದೀಣೀ. ಸ್ತ್ರೀ: [ದೇ] ಕಣ್ಣಾ ಮುಚ್ಚಾಲೆ ಆಟ(ದೇ)

ಗಂದುಅ. '**ಗೇಂದುಅ**' ಶಬ್ದವನ್ನು ನೋಡುವುದು.

ಗಂಧ. ಪು: [ಗಂಧ] ಮೂಗಿನಿಂದ ಆಘ್ರಾಣಿಸಲು ಯೋಗ್ಯವಾದ ಪದಾರ್ಥಗಳ ವಾಸನೆ, ಗಂಧ(ಔಪ) ಅಲ್ಪ, ಲೇಶ, ಪುಡಿ(ಪಣ್ಣ), ವಾನವ್ಯಂತರ ದೇವರುಗಳ ಒಂದು ವರ್ಗ, ನ: ದೇವ–ವಿಮಾನ, ವಿ: ವಾಸನೆಯಿಂದ ಕೂಡಿದ ಪದಾರ್ಥ, **–ಉಡೀ.** ಸ್ತ್ರೀ: [**–ಕುಟೀ**] ಶ್ರೀಗಂಧದ ಮನೆ(ಗಉಡ), **–ಕಾಸಾಇಯಾ.** ಸ್ತ್ರೀ: [**–ಕಾಷಾಯಿಕಾ**] ಸುಗಂಧ ಯುಕ್ತ ಕಾಷಾಯ ಬಣ್ಣದ ಸೀರೆ(ಉವಾ), **–ಗುಣ.** ಪು: [**–ಗುಣ**] ಗಂಧವೆಂಬ ಗುಣ, **–ಟ್ಟಯ.** ನ: [**ಗಂಧಾಟ್ಟಕ**] ಶ್ರೀಗಂಧದ ಪುಡಿ, **–ಡ್ಡ.** ವಿ: [**ಗಂಧಾಢ್ಯ**] ಸುಗಂಧಯುಕ್ತ. **–ಣಾಮ.** ನ: [**–ನಾಮನ್**] ಗಂಧಕ್ಕೆ ಕಾರಣವಾದ ಕರ್ಮ–ವಿಶೇಷ(ಅಣು), **–ತೆಲ್ಲ.** ನ: [**–ತೈಲ**] ಸುಗಂಧದಿಂದ ಕೂಡಿದ ಎಣ್ಣೆ, **–ದವ್ವ.** ನ: [**–ದ್ರವ್ಯ**] ಸುವಾಸನೆಯಿಂದ ಕೂಡಿದ ವಸ್ತು(ಉತ್ತ), **–ದೇವೀ.** ಸ್ತ್ರೀ: [**–ದೇವೀ**] ಸೌಧರ್ಮ ದೇವಲೋಕದ ಒಬ್ಬ ದೇವಿ, **–ದ್ಧಣಿ.** ಸ್ತ್ರೀ: [**–ಧ್ರಾಣಿ**] ಗಂಧ–ತೃಪ್ತಿ(ಔಪ), **–ನಾಮ.** '**–ಣಾಮ**'

ವನ್ನು ನೋಡುವುದು. **-ಮಯ. ಪು:** [**-ಮೃಗ**] ಕಸ್ತೂರೀ ಮೃಗ, **-ಮಂತ. ವಿ:** [**-ಮತ್**] ಸುಗಂಧದಿಂದ ಕೂಡಿದ, ಅತಿಶಯವಾದ ಸುವಾಸನೆಯುಳ್ಳ, **-ಮಾದಣ, -ಮಾಯಣ. ಪು:** [**-ಮಾದನ**] ಈ ಹೆಸರಿನ ಒಂದು ಪರ್ವತ(ಪಣ್ಣ), **ಪುಂನ:** ಪರ್ವತದ ಶಿಖರ, ನ: ಒಂದು ನಗರ, **-ವಈ. ಸ್ತ್ರೀ:** [**-ವತೀ**] ಭೂತಾನಂದ ಎಂಬ ಹೆಸರಿನ ನಾಗೇಂದ್ರನ ಆವಾಸ ಸ್ಥಾನ, **-ವಟ್ಟಯ. ನ:** [**-ವರ್ತ್ತಕ**] ಸುವಾಸನೆಯಿಂದ ಕೂಡಿದ ಲೇಪನ-ದ್ರವ್ಯ, **-ವಟ್ಟಿ. ಸ್ತ್ರೀ:** [**-ವರ್ತ್ತಿ**] ಶ್ರೀಗಂಧದಿಂದ ಗುಳಿಗೆ, **-ವಹ. ಪು:** [**-ವಹ**] ಗಾಳಿ. **-ವಾಸ. ಪು** [**-ವಾಸ**] ಸುವಾಸನೆಯಿಂದ ಕೂಡಿದ ಹೊದಿಕೆ, ಪುಡಿ. **-ಸಮಿದ್ಧ. ವಿ:** [**-ಸಮೃದ್ಧ**] ಸುಗಂಧಭರಿತ, ನ: ಒಂದು ನಗರ, **-ಸಾಲಿ. ಪು:** [**-ಶಾಲಿ**] ಸುವಾಸನೆಯಿಂದ ಕೂಡಿದ ಬತ್ತ, **-ಹತ್ಥಿ. ಪು:** [**-ಹಸ್ತಿ**] ಉತ್ತಮ ಆನೆ, **-ಹರಿಣ. ಪು:** [**-ಹರಿಣ**] ಕಸ್ತೂರಿ ಮೃಗ. **-ಹಾರಗ. ಪು:** [**-ಹಾರಕ**] ಈ ಹೆಸರಿನ ಒಂದು ಮ್ಲೇಚ್ಛ ದೇಶ, ಆ ಗಂಧಹಾರಕ ದೇಶದ ನಿವಾಸಿ

ಗಂಧನ. ಪು: [**ಗಂಧನ**] ಒಂದು ಸರ್ಪ ಜಾತಿ

ಗಂಧಪಿಸಾಯ. ಪು: [**ದೇ**] ಗ್ರಂಧಿಗೆ ವ್ಯಾಪಾರಿ, ಕಿರಾಣಿ ಮತ್ತು ಔಷಧಿ ವ್ಯಾಪಾರಿ

ಗಂಧಯ. '**ಗಂಧ**' ಶಬ್ದವನ್ನು ನೋಡುವುದು.

ಗಂಧಲಯಾ. ಸ್ತ್ರೀ: [**ದೇ**] ಮೂಗು,

ಗಂಧವಾಹ. ಪು: [**ಗಂಧವಾಹ**] ವಾಯು, ಗಾಳಿ

ಗಂಧವ್ವ. ಪು: [**ಗಂಧರ್ವ**] ಸ್ವರ್ಗದ ಗಾಯಕ(ಉತ್ತ), ಒಂದು ಬಗೆಯ ದೇವಜಾತಿ, ವ್ಯಂತರ ದೇವತೆಗಳ ಒಂದು ಜಾತಿ, ಯಕ್ಷ, ಭಗವಾನ್ ಕುಂಥುನಾಥನ ಶಾಸನದ ಅಧಿಷ್ಠಾತೃ ಯಕ್ಷ, ನ: ಒಂದು ಮುಹೂರ್ತ, ನೃತ್ಯದಿಂದ ಕೂಡಿದ ಗಾನ(ವಿಪಾ), **-ಕಂಠ. ನ:**[**-ಕಂಠ**] ರತ್ನದ ಒಂದು ಪ್ರಭೇದ, **-ಘರ. ನ:** [**-ಗೃಹ**] ಸಂಗೀತಾಲಯ, ಸಂಗೀತಾಭ್ಯಾಸದ ಸ್ಥಳ, **-ಣಗರ, -ನಗರ. ನ:** [**-ನಗರ**] ಸಾಯಂಕಾಲದ ಹೊತ್ತು ಆಕಾಶದಲ್ಲಿ ಕಾಣುವ ಒಂದು ಮಿಥ್ಯಾನಗರ, ಭಾವೀ ಉತ್ಪಾತದ ಸೂಚಕ. **-ಪುರ. ನ:** [**-ಪುರ**] '**-ಣಗರ**' ಶಬ್ದವನ್ನು ನೋಡುವುದು(**ಗಲುಡ**) **-ಲಿವಿ. ಸ್ತ್ರೀ:** [**-ಲಿಪಿ**] ಒಂದು ಬಗೆಯ ಲಿಪಿ. **-ವಿವಾಹ. ಪು:** [**-ವಿವಾಹ**] ಗಂಡು ಮತ್ತು ಹೆಣ್ಣಿನ ಪರಸ್ಪರ ಒಪ್ಪಿಗೆಯ ಮೇರೆಗೆ ನಡೆಯುವ ಉತ್ಸವವಿಲ್ಲದ ಮದುವೆ, **-ಸಾಲಾ. ಸ್ತ್ರೀ:** [**-ಶಾಲಾ**] ಸಂಗೀತಶಾಲೆ,

ಗಂಧವ್ವ. ವಿ: [**ಗಾಂಧರ್ವ**] ಗಂಧರ್ವಕ್ಕೆ ಸಂಬಂಧಿಸಿದ, ಗಂಡು ಮತ್ತು ಹೆಣ್ಣಿನ ಪರಸ್ಪರ ಒಪ್ಪಿಗೆಯ ಮೇರೆಗೆ ನಡೆಯುವ ಉತ್ಸವವಿಲ್ಲದ ಮದುವೆ (ಆವಮ)

ಗಂಧವ್ವಿಅ. ವಿ: [**ಗಾಂಧರ್ವಿಕ**] ಗಾಂಧರ್ವ ವಿದ್ಯೆಯಲ್ಲಿ ನಿಪುಣನಾದ

ಗಂಧಾ. ಸ್ತ್ರೀ: [**ಗಂಧಾ**] ಒಂದು ನಗರ-ವಿಶೇಷ

ಗಂಧಾಣ. ನ: [**ಗಂಧಾನ**] ಒಂದು ಛಂದಸ್ಸು

ಗಂಧಾರ. ಪು: [**ಗಂಧಾರ**] ಕಂಧಾರ ದೇಶ, ಪರ್ವತ ವಿಶೇಷ, ನ: ನಗರ-ವಿಶೇಷ

ಗಂಧಾರ. ಪು: [**ಗಾಂಧಾರ**] ಸ್ವರ-ವಿಶೇಷ, ರಾಗಿಣಿ-ವಿಶೇಷ

ಗಂಧಾರೀ. ಸ್ತ್ರೀ: [**ಗಾಂಧಾರೀ**] ಒಂದು ವಿದ್ಯಾ-ವಿಶೇಷ, ಕೃಷ್ಣ ವಾಸುದೇವನ ಒಬ್ಬ ಹೆಂಡತಿ, ವಿದ್ಯಾದೇವಿ, ಭಗವಾನ್ ನಮಿನಾಥನ ಶಾಸನ-ದೇವಿ, ಗಾಂಧಾರ ದೇಶದ ಸಬಲ ರಾಜನ ಮಗಳು, ಧೃತರಾಷ್ಟ್ರನ ಹೆಂಡತಿ

ಗಂಧಾವಇ}. **ಪು:** [**ಗಂಧಾಪಾತಿನ್**] ತನ್ನ
ಗಂಧಾವಾಇ}. ಹೆಸರಿನಿಂದ ಖ್ಯಾತವಾದ ಒಂದು ವೃತ್ತ, ವೈತಾಢ್ಯ ಪರ್ವತ

ಗಂಧಿ. ವಿ: [**ಗಂಧಿನ್**] ಗಂಧದಿಂದ ಕೂಡಿದ, ಗಂಧವುಳ್ಳ (ಕಪ್ಪ)

ಗಂಧಿಅ. ವಿ: [**ದೇ**] ದುರ್ಗಂಧ, ಕೆಟ್ಟ ವಾಸನೆ ಉಳ್ಳ

ಗಂಧಿಅ. ವಿ: [**ಗಾಂಧಿಕ**] ಶ್ರೀ ಗಂಧದ ದ್ರವ್ಯವನ್ನು ಮಾರುವವನು, ಗ್ರಂಧಿಗೆ ವ್ಯಾಪಾರಿ

ಗಂಧಿಅ. ವಿ: [**ಗಂಧಿಕ**] ಗಂಧವುಳ್ಳ (ಔಪ),**-ಸಾಲಾ. ಸ್ತ್ರೀ:** [**-ಶಾಲಾ**] ಮದ್ಯವೇ ಮೊದಲಾದ ವಾಸನೆಯುಳ್ಳ ವಸ್ತುಗಳ ಅಂಗಡಿ, ಗ್ರಂಧಿಗೆ ಅಂಗಡಿ

ಗಂಧಿಅ. ವಿ: [**ಗಂಧಿಕ**] ಗಂಧವುಳ್ಳ(ಗಾ)

ಗಂಧಿಲ. ಪು: [**ಗಂಧಿಲ**] ವರ್ಷ-ವಿಶೇಷ, ವಿಜಯ-ಕ್ಷೇತ್ರವಿಶೇಷ(ಠಾ)

ಗಂಧಿಲಾವಈ. ಸ್ತ್ರೀ: [ಗಂಧಿಲಾವತೀ] ವರ್ಷ–ವಿಶೇಷ, ವಿಜಯ–ಕ್ಷೇತ್ರವಿಶೇಷ, ನಗರಿ–ವಿಶೇಷ, **–ಕೂಡ.** ನ: [–ಕೂಟ] ಗಂಧಮಾದನ ಪರ್ವತದ ಒಂದು ಶಿಖರ. ವೈತಾಢ್ಯ ಪರ್ವತದ ಶಿಖರ

ಗಂಧಿಲ್ಲೀ. ಸ್ತ್ರೀ: [ದೇ] ನೆರಳು(ಉಪ)

ಗಂಧುತ್ತಮಾ. ಸ್ತ್ರೀ: [ಗಂಧೋತ್ತಮಾ] ಮದಿರೆ, ಹೆಂಡ

ಗಂಧೆಲ್ಲೀ. ಸ್ತ್ರೀ: [ದೇ] ನೆರಳು, ಜೇನ್ನೊಣ

ಗಂಧೋದಗ}. ನ: [ಗಂಧೋದಕ] ಸುಗಂಧ

ಗಂಧೋದಯ}. ಯುಕ್ತವಾದ ನೀರು, ಸುವಾಸನೆಯಿಂದ ಕೂಡಿದ ನೀರು(ಔಪ)

ಗಂಧೊಲ್ಲೀ. ಸ್ತ್ರೀ: [ದೇ] ಇಚ್ಛೆ, ಅಭಿಲಾಷೆ, ರಾತ್ರಿ(ದೇ)

ಗಂಪ್ಪಿ}. 'ಗಮ=ಗಮ್' ಶಬ್ದವನ್ನು ನೋಡುವುದು.

ಗಂಪಿಣ್ಣು}.

ಗಂಭಿರ. ನ: [ಗಾಂಭೀರ್ಯ] ಗಂಭೀರತೆ, ಉದ್ಧಟತನವಿಲ್ಲದಿರುವುದು

ಗಂಭೀರ. ವಿ: [ಗಂಭೀರ] ಗಂಭೀರ, ಆಳವಾದ, ತುಚ್ಛವಲ್ಲದ, **ಪುಂ.ನ:** ಗಹನವಾದ ಪ್ರದೇಶ, **ಪು:** ರಾವಣನ ಒಬ್ಬ ಯೋಧ(ಪಉಮ), ಯದುವಂಶದ ರಾಜ ಅಂಧಕ ವೃಷ್ಣಿಯ ಒಬ್ಬ ಪುತ್ರ, ನ: ಸಮುದ್ರದ ದಡದಲ್ಲಿ ಇರುವ ಈ ಹೆಸರಿನ ಒಂದು ನಗರ. **–ಪೋಯ.** ನ: [–ಪೋತ] ಒಂದು ನಗರ(ಣಾಯಾ), **–ಮಾಲಿಣೀ.** ಸ್ತ್ರೀ: [–ಮಾಲಿನೀ] ಮಹಾ ವಿದೇಹ– ವರ್ಷದ ಒಂದು ನಗರ(ಠಾ)

ಗಂಭೀರಾ. ಸ್ತ್ರೀ: [ಗಂಭೀರಾ] ಗಂಭೀರ ಹೃದಯದ ಹೆಣ್ಣು, ಮಾತ್ರಾ ಛಂದಸ್ಸಿನ ಒಂದು ಪ್ರಭೇದ, ನಾಲ್ಕು ಇಂದ್ರಿಯಗಳ ಒಂದು ಕ್ಷುದ್ರ ಜಂತು.

ಗಂಭೀರಿಅ. ನ: [ಗಾಂಭೀರ್ಯ] ಗಂಭೀರತೆ, ಗಾಂಭೀರ್ಯ

ಗಂಭೀರಿಮ. ಪುಂ.ಸ್ತ್ರೀ: [ಗಾಂಭೀರ್ಯ] ಮೇಲಿನ ಶಬ್ದವನ್ನು ನೋಡುವುದು.

ಗಗಣ. ನ: [ಗಗನ] ಆಕಾಶ, ಅಂಬರ(ಕಪ್ಪ). **–ಣಂದಣ.** ನ:[–ನಂದನ] ವೈತಾಢ್ಯ ಪರ್ವತದ ಮೇಲಿರುವ ಒಂದು ನಗರ. **–ವಲ್ಲಭ, ವಲ್ಲಹ.** ನ: [–ವಲ್ಲಭ] ವೈತಾಢ್ಯ ಪರ್ವತದ ಮೇಲಿರುವ ಒಂದು ನಗರ.

ಗಗಣಂಗ. ಪುಂನ: [ಗಗನಾಂಗ] ಒಂದು ಛಂದಸ್ಸು.

ಗಗ್ಗ. ಪು: [ಗರ್ಗ] ಒಬ್ಬ ಋಷಿ, ಗೌತಮ ಗೋತ್ರದ ಒಂದು ಶಾಖಾ ಗೋತ್ರ(ಠಾ), ಒಬ್ಬ ಜೈನ ಮಹರ್ಷಿ, ವಿಕ್ರಮ ಶಕೆ ೧೨ನೇ ಶತಮಾನದ ಒಬ್ಬ ಶ್ರೇಷ್ಠಿ

ಗಗ್ಗ. ಪು: [ಗಾರ್ಗ್ಯ] ಗರ್ಗ ಗೋತ್ರದಲ್ಲಿ ಹುಟ್ಟಿದ ಒಬ್ಬ ಋಷಿ(ಉತ್ತ).

ಗಗ್ಗರ. ವಿ: [ಗದ್ಗದ] ಗದ್ಗದ ಧ್ವನಿಯ ವ್ಯಕ್ತಿ, ಅತ್ಯಂತ ಅಸ್ಪಷ್ಟವಾಗಿ ಮಾತನಾಡುವವ, ಆನಂದ ಅಥವಾ ದುಃಖದಿಂದ ಮಾತು ವ್ಯಕ್ತವಗದ ಸ್ಥಿತಿ(ಕುಮಾ)

ಗಗರೀ. ಸ್ತ್ರೀ: [ಗರ್ಗರೀ] ಚಿಕ್ಕ ಕೊಡ, ಚಿಕ್ಕ ಗಡಿಗೆ

ಗಗ್ಗಿರ. 'ಗಗ್ಗರ' ಶಬ್ದವನ್ನು ನೋಡುವುದು.

ಗಚ್ಛ. ಸಕ: [ಗಮ್] ಹೋಗು, ತಿಳಿ, ಪಡೆದುಕೊಳ್ಳು,

ಗಚ್ಛ. ಪುಂನ: [ಗಚ್ಛ] ಸಮೂಹ, ಗುಂಪು. ಒಬ್ಬ ಆಚಾರ್ಯನ ಪರಿವಾರ(ಔಪ), ಗುರುಪರಿವಾರ– **ವಾಸ.ಪು:**[–ವಾಸ] ಗುರುಕುಲದಲ್ಲಿರುವುದು. ಗಚ್ಛ ಪರಿವಾರದೊಂದಿಗೆ ವಾಸಿಸುವುದು. **[]ವಿಹಾರ.** ಪು: [–ವಿಹಾರ] ಗಚ್ಛದ ಆಚಾರ. **–ಸಾರಣಾ.** ಸ್ತ್ರೀ: [–ಸಾರಣಾ] ಗಚ್ಛದ ರಕ್ಷಣೆ

ಗಚ್ಛಾಗಚ್ಛಿಂ. ಅ: ಗಚ್ಛ ಗಚ್ಛದಿಂದ ಆಗಿ

ಗಚ್ಛಿಲ್ಲ. ವಿ: [ಗಚ್ಛವತ್] ಗಚ್ಛದವನು, ಗಚ್ಛದಲ್ಲಿರುವವನು

ಗಜ. 'ಗಯ=ಗಜ' ಶಬ್ದವನ್ನು ನೋಡುವುದು. **–ಸಾರ.** ಪು: [–ಸಾರ] ದಂಡಕ ಗ್ರಂಥದ ಕರ್ತೃವಾದ ಒಬ್ಬ ಜೈನ ಮುನಿ

ಗಜ್ಜ. ಪು: [ದೇ] ಯವ ಧಾನ್ಯ, ಜವೆ ಗೋಧಿ,

ಗಜ್ಜ. ನ: [ಗದ್ಯ]ಛಂದೋ ರಹಿತವಾದ ವಾಕ್ಯ, ಗದ್ಯ

ಗಜ್ಜ. ಅಕ: [ಗರ್ಜ್] ಗರ್ಜಿಸು, **ಕ್ರಿಯಾ ರೂಪ: 'ಗಜ್ಜಇ'**

ಗಜ್ಜಣ. ನ: [ಗರ್ಜನ] ಗರ್ಜಿಸುವುದು, ಮೇಘ ಅಥವಾ ಸಿಂಹದ ನಾದ, ಗರ್ಜನೆ, ಒಂದು ನಗರ

ಗಜ್ಜಣಸದ್ದ. ಪು: [ದೇ. ಗರ್ಜನಶಬ್ದ] ಪಶು ಮತ್ತು ಆನೆಯ ಶಬ್ದಮಾಡುವಿಕೆ

ಗಜ್ಜಫಲ}. ವಿ: [ದೇ] ದೇಶ–ವಿದೇಶದಲ್ಲಿ

ಗಜ್ಜಲ}. ಉತ್ಪನ್ನವಾಗುವ ವಸ್ತ್ರ

ಗಜ್ಜಭ. ಪು: [ಗರ್ಜಭ] ಪಶ್ಚಿಮೋತ್ತರ(ವಾಯವ್ಯ) ದಿಕ್ಕಿನ ಗಾಳಿ(ಆವಮ)

ಗಜ್ಜರ. ಪು: [ದೇ] ಗಜ್ಜರಿ ಗೆಡ್ಡೆ, ಕ್ಯಾರೆಟ್

ಗಜ್ಜಲ. ವಿ: [ಗರ್ಜಲ] ಗರ್ಜಿಸುವವ

ಗಜ್ಜಹ. 'ಗಜ್ಜಭ' ಶಬ್ದವನ್ನು ನೋಡುವುದು(ಆವಮ)

ಗಜ್ಜಿ. ಸ್ತ್ರೀ: [ಗರ್ಜಿ–] ಗರ್ಜನೆ, ಆನೆಯೇ ಮೊದಲಾದ ಪ್ರಾಣಿಗಳ ದನಿ(ಸುಪಾ)

ಗಜ್ಜಿಅ. ವಿ: [ಗರ್ಜಿತ] ಗರ್ಜಿಸಿದ ವ್ಯಕ್ತಿ/ಪ್ರಾಣಿ. ನ: ಮೇಘವೇ ಮೊದಲಾದವುಗಳ ಶಬ್ದ(ಪಣ್ಹ)

ಗಜ್ಜಿತ್ತು}. ವಿ: [ಗರ್ಜಿತೃ] ಗರ್ಜಿಸುವ ವ್ಯಕ್ತಿ/ಪ್ರಾಣಿ

ಗಜ್ಜಿರ}.

ಗಜ್ಜಿಲ್ಲಿಅ. ನ: [ದೇ] ಕಚಗುಳಿ, ಅಂಗ ಸ್ಪರ್ಶದಿಂದ ಉಂಟಾಗುವ ರೋಮಾಂಚ, ಪುಲಕ

ಗಜ್ಝ. ವಿ: [ಗ್ರಾಹ್ಯ] ಗ್ರಹಿಸಲು ಅರ್ಹವಾದ

ಗಟ್ಟಣ. ಪು: [ಗಟ್ಟನ] ಧರಣೇಂದ್ರನ ನಾಟ್ಯ–ಸೇನೆಯ ಅಧಿಪತಿ

ಗಟ್ಟಿಯಾ. ಸ್ತ್ರೀ: [ದೇ] ಚಿಕ್ಕಗಂಟು, ಒಂದು ವಾತ ರೋಗ

ಗಡ. ನ: [ಗಡ] ದೊಡ್ಡ ಬಂಡೆ, ಹಳ್ಳ, ತಗ್ಗು(ಸುರ)

ಗಡ. 'ಗಯ=ಗತ' ಶಬ್ದವನ್ನು ನೋಡುವುದು.

ಗಡಯಡ. ಪುಂನ: [ದೇ] ಗರ್ಜನೆ, ಭಯಾನಕ ಧ್ವನಿ, ಆನೆ, ಸಿಂಹ ಮೊದಲಾದವುಗಳ ಧ್ವನಿ

ಗಡಯಡ. ಅಕ: [ದೇ] ಗರ್ಜಿಸು, ಭಯಾನಕವಾಗಿ ದನಿ ತೆಗೆ

ಗಡಯಡೀ. ಸ್ತ್ರೀ: [ದೇ] ವಜ್ರಾಯುಧದ ಘೋಷ, ಸಿಡಿಲಿನ ದನಿ, ಮೋಡದ ಮೊಳಗು,

ಗಡಬಡ. ನ: [ದೇ] ಅಕ್ರಮ, ಮೋಸ(ಸುಪಾ)

ಗಡಿಅ}. 'ಗಮ=ಗಮ್' ಶಬ್ದವನ್ನು ನೋಡುವುದು.

ಗಡುಅ}.

ಗಡುಲ. ನ: [ದೇ] ಅಕ್ಕಿ ಮೊದಲಾದವನ್ನು ತೊಳೆದ ನೀರು, ಕಲಗಚ್ಚು

ಗಡ್ಡ. ಪುಂಸ್ತ್ರೀ: [ಗರ್ತ್ತ] ಹಳ್ಳ, ತಗ್ಗು

ಗಡ್ಡ. ನ: [ದೇ] ಗಾಡಿ

ಗಡ್ಡರಿಗಾ}. ಸ್ತ್ರೀ: [ದೇ] ಟಗರು(ಧಮ್ಮ)

ಗಡ್ಡರಿಯಾ}.

ಗಡ್ಡರೀ. ಸ್ತ್ರೀ: [ದೇ] ಹೆಣ್ಣು ಕುರಿ

ಗಡ್ಡಹ. ಪುಂಸ್ತ್ರೀ: [ಗರ್ದಭ] ಕತ್ತೆ. □ವಾಹಣ. ಪು: [–ವಾಹನ] ರಾವಣ(ಕುಮಾ)

ಗಡ್ಡಿಆ}. ಸ್ತ್ರೀ: [ದೇ] ಗಾಡಿ, ಎತ್ತಿನ ಗಾಡಿ(ಸುಪಾ)

ಗಡ್ಡೀ}.

ಗಡ್ಡ. ನ: [ದೇ] ಹಾಸಿಗೆ, ಶಯ್ಯೆ

ಗಢ. 'ಘಟ=ಘಟ್' ಶಬ್ದವನ್ನು ನೋಡುವುದು.

ಗಢ. ಪುಂಸ್ತ್ರೀ: [ದೇ] ದುರ್ಗ, ಕೋಟೆ.

ಗಢಿಅ. ವಿ: [ಘಟಿತ] ಹೂತಿಟ್ಟ(ಕುಮಾ)

ಗಢಿಅ. ವಿ: [ಗ್ರಥಿತ] ಕಟ್ಟಲಾದ, ಹೆಣೆಯಲಾದ, ಪೋಣಿಸಲಾದ(ಹೂವಿನ ಮಾಲೆ ಮೊದಲಾದವು) ನಿರ್ಮಿಸಿದ, ರಚಿಸಿದ, ಆಸಕ್ತ(ಆಚಾ)

ಗಣ. ಸಕ: [ಗಣಯ್] ಎಣಿಸು, ಆದರಿಸು, ಅಭ್ಯಾಸ ಮಾಡು, ಪರ್ಯಾಲೋಚಿಸು

ಗಣ. ಪು: [ಗಣ] ಸಮೂಹ, ಸಮುದಾಯ(ಕುಮಾ], ಗಚ್ಛ, ಸಮಾನ ಆಚಾರ–ವ್ಯವಹಾರವುಳ್ಳ ಸಾಧುಗಳ ಸಮೂಹ(ಕಪ್ಪ), ಛಂದಶ್ಶಾಸ್ತ್ರದಲ್ಲಿನ ಪ್ರಸಿದ್ಧ 'ಗಣ', ಶಿವನ ಅನುಚರರು. ಮಲ್ಲರ ಸಮುದಾಯ(ಅಣೂ), **–ಓ. ಅ:** [**–ತಸ್**] ಅನೇಕ ಸಲ. **–ನಾಯಗ. ಪು:** [**–ನಾಯಕ**] ಗಣದ ಮುಖ್ಯಸ್ಥ. **–ನಾಹ. ಪು:** [**–ನಾಥ**] ಗಣದ ಯಜಮಾನ, ಮುಖಂಡ, ಗಣಧರ, ಆಗಿನ ಪ್ರಧಾನ ಶಿಷ್ಯ(ಪಉಮ). ಆಚಾರ್ಯ, ಸೂರಿ. **–ಭಾವ. ಪು:** [**–ಭಾವ**] ವಿವೇಕ–ವಿಶೇಷ, **–ರಾಯ. ಪು:** [**–ರಾಜ**] ಸಾಮಂತ ರಾಜ, ಸೇನಾಪತಿ. **□ವಇ. ಪು:** [**–ಪತಿ**] ಗಣದ ಯಜಮಾನ, ಗಣೇಶ, ಶಿವಪುತ್ರ(ಗಾ). **–ಸಾಮಿ. ಪು:** [**–ಸ್ವಾಮಿನ್**] ಗಣದ ಮುಖಂಡ, ಗಣಧರ. **–ಹರ. ಪು:** [**–ಧರ**] ಜಿನದೇವನ ಪ್ರಧಾನ ಶಿಷ್ಯ. ಅನುಪಮ ಜ್ಞಾನವೇ ಮೊದಲಾದ ಗುಣ ಸಮೂಹವನ್ನು ಹೊಂದಿರುವ ಜೈನ ಸಾಧು, ಆಚಾರ್ಯ ಇತ್ಯಾದಿ. **–ಹರಿಂದ. ಪು:** [**ಧರೇಂದ್ರ**] ಗಣಧರರಲ್ಲಿ ಶ್ರೇಷ್ಠನಾದ, ಪ್ರಧಾನ ಗಣಧರ (ಪಉಮ) **–ಹಾರಿ. ಪು:** [**–ಧಾರಿನ್**] '–ಹರ'ವನ್ನು ನೋಡುವುದು. **ಗಣಾಜೀವ. ಪು:** [ಗನಾಜೀವ] ಗಣದ ಹೆಸರಿನಿಂದ ಜೀವನ ಸಾಗಿಸುವವನು. **ಗಣಾವಚ್ಛೇಇಯ, ಗಣಾವಚ್ಛೇದಯ, ಗನಾವಚ್ಛೇಯಯ. ಪು:** [**ಗಣಾವಚ್ಛೇದಕ**] ಸಾಧು(ಆಚಾ), **ಗಣಾಹಿವಇ. ಪು:** [**ಗಣಾಧಿಪತಿ**] ಶಿವ ಪುತ್ರ ಗಜಾನನ(ಪಾಅ). ತೀರ್ಥಂಕರನ ಪ್ರಧಾನ ಶಿಷ್ಯ(ಪಉಮ)

ಗಣಗ. ಪು: [ಗಣಕ] ಜ್ಯೋತಿಷಿ,ದೈವಜ್ಞ, ಜ್ಯೋತಿಷಜ್ಞ

ಗಣಣ. ನ: [ಗಣನ] ಎಣಿಕೆ, ಸಂಖ್ಯೆ(ಸೂಅ)

ಗಣಣಾ. ಸ್ತ್ರೀ: [ಗಣನಾ] ಎಣಿಕೆ, ಸಂಖ್ಯೆ

ಗಣಣಾಇಆ. ಸ್ತ್ರೀ: [ದೇ. ಗಣ–ನಾಯಿಕಾ] ಪಾರ್ವತಿ, ಚಂಡಿ(ದೇ)
ಗಣಯ. 'ಗಣಗ' ಶಬ್ದವನ್ನು ನೋಡುವುದು.
ಗಣಸಮ. ವಿ: [ದೇ] ಗೋಷ್ಠಿಯಲ್ಲಿ ಮಗ್ನನಾಗಿರುವ,
ಗಣಾಯಮಹ. ಪು: [ದೇ} ವಿವಾಹ–ಗಣಕ(ದೇ)
ಗಣಾವಿಅ. ವಿ: [ಗಣಿತ] ಎಣಿಕೆ ಮಾಡಿಸಲಾದ,
ಗಣಿ. ವಿ: [ಗಣಿನ್] ಗಣದ ಮುಖಂಡ, ಯಜಮಾನ. ಸ್ತ್ರೀ–ಗಣಿಣೀ(ಸುಪಾ). ಪು: ಆಚಾರ್ಯ ಸಾಧು ಸಮುದಾಯದ ನಾಯಕ(ಠಾ), ತೀರ್ಥಂಕರನ ಪ್ರಧಾನ ಶಿಷ್ಯ. ನಿಶ್ಚಯ, ನಿರ್ಧಾರ. –ಪಿಡಗ. ನ: [–ಪಿಟಕ] ಹನ್ನೆರಡು ಮುಖ್ಯ ಜೈನ ಆಗಮ ಗ್ರಂಥಗಳು, ದ್ವಾದಶಾಂಗಿ(ಸಮ), ನಿರ್ಯುಕ್ತಿಯೇ ಮೊದಲಾದವುಗಳಿಂದ ಕೂಡಿದ ಜೈನಾಗಮಗಳು (ಔಪ), ಪು: ಜಿನಶಾಸನದ ಅಧಿಷ್ಠಾತೃ ದೇವನಾದ ಯಕ್ಷ, ನಿಶ್ಚಯ ಸಮೂಹ, ಸಿದ್ಧಾಂತ ಸಮೂಹ. –ವಿಜ್ಜಾ. ಸ್ತ್ರೀ: [–ವಿದ್ಯಾ] ಶಾಸ್ತ್ರ–ವಿಶೇಷ, ಜ್ಯೋತಿಷ್ಯ ಮತ್ತು ನಿಮಿತ್ತ ಶಾಸ್ತ್ರದ ಜ್ಞಾನ.
ಗಣಿ. ಪುಂಸ್ತ್ರೀ: [ಗಣಿ] ಅಧ್ಯಯನ, ಪರಿಚ್ಛೇದ, ಪ್ರಕರಣ
ಗಣಿಮ. ನ: [ಗಣಿಮ] ಎಣಿಕೆ, ಸಂಖ್ಯೆ, ಎಣಿಕೆಯಿಂದ ಮಾರಾಟವಾಗುವ ವಸ್ತು, ಸಂಖ್ಯೆಯ ಮೇಲೆ ಯಾವುದರ ಮೌಲ್ಯ ಇದೆಯೋ ಅದು(ಶ್ರಾ) ವಿ: ಎಣಿಸಬಹುದಾದ್ದು
ಗಣಿಯ. ವಿ: [ಗಣಿತ] ಎಣಿಕೆ ಮಾಡಲ್ಪಟ್ಟ, ನ: ಎಣಿಕೆ, ಸಂಖ್ಯೆ(ಠಾ), ಜೈನ ಸಾಧುಗಳ ಒಂದು ವರ್ಗ, ಗಣಿತ ಶಾಸ್ತ್ರ. –ಲಿವಿ. ಸ್ತ್ರೀ: [–ಲಿಪಿ] ಅಂಕ ಲಿಪಿ, ಲಿಪಿ–ವಿಶೇಷ
ಗಣಿಯ. ಪು: [ಗಣಿಕ] ಗಣಿತ ಶಾಸ್ತ್ರಜ್ಞ
ಗಣಿಯಾ. ಸ್ತ್ರೀ: [ಗಣಿಕಾ] ವೇಶ್ಯೆ, ಗಣಿಕೆ(ವಿಪಾ)
ಗಣಿರ. ವಿ: [ಗಣಯಿತೃ] ಎಣಿಕೆ ಮಾಡುವವನು,
ಗಣೆತ್ತಿಆ}. ಸ್ತ್ರೀ: [ದೇ] ರುದ್ರಾಕ್ಷಿಯಿಂದ ಮಾಡಿದ
ಗಣೆತ್ತಿ}. ಹಸ್ತಾಭರಣ(ಣಾಯಾ), ಅಕ್ಷರಮಾಲೆ
ಗಣೇಸರ. ಪು: [ಗಣೇಶ್ವರ] ಗಣದ ನಾಯಕ, ಒಂದು ಛಂದಸ್ಸು
ಗಣ್ಣ. ವಿ: [ಗಣ್ಯ] ಎಣಿಸಬಹುದಾದ್ದು, ಗಣನೀಯ
ಗಣ್ಣಾ.(ಮಾ). ಸ್ತ್ರೀ: [ಗಣನಾ] ಎಣಿಕೆ
ಗತ್ತ. ನ: [ಗಾತ್ರ] ದೇಹ, ಶರೀರ(ಔಪ)
ಗತ್ತ. 'ಗಡ್ಡ' ಶಬ್ದವನ್ನು ನೋಡುವುದು. ಸ್ತ್ರೀ: ಗತ್ತಾ.
ಗತ್ತ. ನ: [ದೇ] ಸಣ್ಣ ಮಂಚದ ಕಾಲು, ಬಂಡಿಯ ಮೂಕಿಮರ, ಕೆಸರು, ವಿ: ತಲುಪಿರುವ, ಹೋಗಿರುವ, ಕಳೆದು ಹೋದ,
–ಗತ್ತಣ. ವಿ: [ಕರ್ತನ] ಕತ್ತರಿಸುವ, ತುಂಡುಮಾಡುವ
ಗತ್ತಡೀ}. ಸ್ತ್ರೀ: [ದೇ] ಹುಲ್ಲುಗಾವಲು, ಗಾಯಕಿ,
ಗತ್ತಾಡೀ}. ಹಾಡುಗಾರ್ತಿ
ಗತ್ಥ. ವಿ: [ಗ್ರಸ್ತ] ತಿನ್ನಲ್ಪಟ್ಟ, ನುಂಗಲ್ಪಟ್ಟ(ಪಣ್ಣ)
ಗದ. ಸಕ: [ಗದ್] ಹೇಳು. ವ. ಕೃ–ಗದಂತ
ಗದಿ. 'ಗಇ=ಗತಿ' ಶಬ್ದವನ್ನು ನೋಡುವುದು.
ಗದುಅ.(ಶೌ). ಅ: [ಗತ್ವಾ] ಹೋಗಿ
ಗದ್ದ. 'ಗಜ್ಜ=ಗದ್ಯ ಶಬ್ದವನ್ನು ನೋಡುವುದು.
ಗದ್ದತೋಯ. ಪು: [ಗರ್ದತೋಯ] ಲೋಕಾಂತಿಕ ದೇವರುಗಳ ಒಂದು ಜಾತಿ(ಸಮ)
ಗದ್ದಬ್ಬ. ಪು: [ದೇ] ಕರ್ಕಶ ಧ್ವನಿ, ಕರ್ಣ–ಕಟುವಾದ ಧ್ವನಿ(ಪಾಅ)
ಗದ್ದಭ. 'ಗದ್ದಹ=ಗರ್ದಭ' ಶಬ್ದವನ್ನು ನೋಡುವುದು (ಆಕ)
ಗದ್ದಭಯ. 'ಗದ್ದಹಯ' ಶಬ್ದವನ್ನು ನೋಡುವುದು. (ಆಚಾ)
ಗದ್ದಭಾಲ. ಪು: [ಗರ್ದಭಾಲ] ಖ್ಯಾತನಾದ ಒಬ್ಬ ಪರಿವ್ರಾಜಕ
ಗದ್ದಭಣಾಲಿ. ಪು: [ಗರ್ದಭಾಲಿ] ಒಬ್ಬ ಜೈನಮುನಿ
ಗದ್ದಭಿಲ್ಲ. ಪು: [ಗರ್ದಭಿಲ್ಲ] ಉಜ್ಜಯಿನಿಯ ಒಬ್ಬ ರಾಜ
ಗದ್ದಭೀ. ಸ್ತ್ರೀ: [ಗರ್ದಭೀ] ಹೆಣ್ಣು ಕತ್ತೆ
ಗದ್ದಹ. ಪು: [ಗರ್ದಭ] ಕತ್ತೆ. ಈ ಹೆಸರಿನ ಒಬ್ಬ ಮಂತ್ರಿ ಪುತ್ರ(ಬೃಹ)
ಗದ್ದಹ. ನ: [ದೇ] ನೈದಿಲೆ
ಗದ್ದಹಯ. ಪು: [ಗರ್ದಭಕ] ದನದ ಕೊಟ್ಟಿಗೆಯಲ್ಲಿ ಉತ್ಪನ್ನವಾಗುವ ಕ್ಷುದ್ರ ಜಂತು
ಗದ್ದಹೀ. 'ಗದ್ದಭೀ' ಶಬ್ದವನ್ನು ನೋಡುವುದು.
ಗದ್ದಿಅ. ವಿ: [ದೇ ಗರ್ವದಿಂದ ಕೂಡಿದ, ಗರ್ವಿತ(ದೇ)
ಗದ್ಧ. ಪು: [ಗೃಧ್ರ] ಹದ್ದು(ಪಕ್ಷಿ)
ಗನ್ನ. ವಿ: [ಗಣ್ಯ] ಮಾನನೀಯ, ಗೌರವಾನ್ವಿತ. ನ: ಗಣನೆ, ಎಣಿಕೆ(ಸುಪಾ)
ಗಬ್ಭ. ಪು: [ಗರ್ಭ] ಹೊಟ್ಟೆ, ಒಡಲು, ಬಸಿರು, ಉದರ(ಠಾ), ಜನ್ಮ ಸ್ಥಾನ, ಭ್ರೂಣ, ಶಿಶು, ಮಧ್ಯೆ,

ಒಳಗೆ, ಒಳಗಿನ(ಣಾಯಾ). **–ಗರಾ.** ಸ್ತ್ರೀ: [–ಕರೀ] ಗರ್ಭಾಧಾನ ಮಾಡುವಂಥ ವಿದ್ಯೆ(ಸೂಅ). **–ಘರ.** ನ: [–ಗೃಹ] ಒಳಗಿನ ಮನೆ, ಮನೆಯ ಒಳಭಾಗ(ಣಾಯಾ), **–ಜ.** ವಿ: [–ಜ] ಗರ್ಭದಲ್ಲಿ ಉದಿಸುವ ಪ್ರಾಣಿ ಮನುಷ್ಯ, ಪಶು ಇತ್ಯಾದಿ(ಪಉವು), **–ತ್ಥ.** ವಿ: [–ಸ್ಥ] ಗರ್ಭದಲ್ಲಿರುವ, ಗರ್ಭದಿಂದ ಜನಿಸುವ ಮನುಷ್ಯ ಇತ್ಯಾದಿ. **–ವಾಸ.** ಪು: [–ವಾಸ] ಕಾರ್ತೀಕದಿಂದ ಪ್ರಾರಂಭಿಸಿ ಮಾಘ ಮಾಸದ ವರೆಗಿನ ತಿಂಗಳು. **–ಯ.** '–ಜ' ವನ್ನು ನೋಡುವುದು. **–ವಈ.** ಸ್ತ್ರೀ: [–ವತೀ] ಗರ್ಭಿಣೀ ಮಹಿಳೆ(ಸುಪಾ) **–ವಕ್ಕಂತಿ.**ಸ್ತ್ರೀ: [–ವ್ಯುತ್ಕ್ರಾಂತಿ] ಗರ್ಭಾಶಯದಲ್ಲಿ ಹುಟ್ಟುವುದು(ತಾ), **–ವಕ್ಕಂತಿಅ.**ವಿ: [–ವ್ಯುತ್ಕ್ರಾಂತಿಕ] ಗರ್ಭಾಶಯದಲ್ಲಿ ಹುಟ್ಟುವವ.**–ಹರ.** '**–ಘರ**' ನೋಡುವುದು(ಸುರ)

ಗಬ್ಭರ. ನ: [ಗಹ್ವರ] ಬಿಲ, ಗುಹೆ, ಗಹನ, ವಿಷಮವಾದ ಸ್ಥಾನ (ಆವ)

ಗಬ್ಭರ. '**ಗಹರ**' ಶಬ್ದವನ್ನು ನೋಡುವುದು

ಗಬ್ಭಾಹಾಣ. ನ: [ಗರ್ಭಾಧಾನ] ದೇಹಕ್ಕೆ ಆಗಬೇಕಾದ ಹದಿನಾರು ಸಂಸ್ಕಾರಗಳಲ್ಲೊಂದು, ಗರ್ಭವನ್ನು ಇಡುವುದು

ಗಬ್ಭಿಜ್ಜ. ಪು: [ದೇ. ಗರ್ಭಜ] ಹಡಗಿನ ಕೆಳದರ್ಜೆಯ ನೌಕರ(ಣಾಯಾ)

ಗಬ್ಭಿಣ}. ವಿ: [ಗರ್ಭಿತ] ಗರ್ಭವುಂಟಾಗಿರುವ,
ಗಬ್ಭಿಯ}. ಗರ್ಭಯುಕ್ತ. ಸಹಿತ, ಗರ್ಭಿಣಿ(ಕುಮಾ)

ಗಬ್ಭಿಲ್ಲ. '**ಗಬ್ಭಿಜ್ಜ**' ಶಬ್ದವನ್ನು ನೋಡುವುದು.

ಗಮ. ಸಕ: [ಗಮ್] ಹೋಗು, ಚಲಿಸು, ಅರಿ, ಪಡೆದುಕೊಳ್ಳು

ಗಮ. ಸಕ: [ಗಮಯ್] ಕೊಂಡೊಯ್ಯು, ಕಳೆ, ಪ್ರಸಾರ ಮಾಡು(ಗಉಡ)

ಗಮ. ಪು: [ಗಮ] ಗಮನ, ಗಮಿಸುವುದು, ಚಲನೆ, ಗತಿ, ಪ್ರವೇಶಿಸುವುದು(ಪಉಮ). ಶಾಸ್ತ್ರಕ್ಕೆ ಸರಿಸಮವಾದ ಪಾಠ, ತಾತ್ಪರ್ಯ ಬೇರೆ ರೀತಿಯಾದ ಪಾಠ(ದೇ), ವ್ಯಾಖ್ಯಾನ, ಟೀಕೆ(ವಿಸೇ). ಜ್ಞಾನ, ತಿಳಿವು. ಮಾರ್ಗ, ಹಾದಿ(ತಾ), ಪ್ರಕಾರ. ವಿ: ಸಂಚರಿಸುವ, ತಿರುಗಾಡುವ

ಗಮಗ. ವಿ: [ಗಮಕ] ಬೋಧಕ, ನಡೆಯಿಸುವ, ನಿಶ್ಚಯಿಸುವ(ವಿಸೇ)

ಗಮಣ. ನ: [ಗಮನ] ನಡೆಯುವುದು, ಹೋಗುವುದು, ಸಂಚಾರ, ಗತಿ, ವ್ಯಾಖ್ಯಾನ, ಪುಷ್ಯವೇ ಮೊದಲಾದ ೯ ನಕ್ಷತ್ರಗಳು

ಗಮಣಯಾ}. ಸ್ತ್ರೀ: [ಗಮನ] ನಡೆಯುವುದು,
ಗಮಣಾ}. ಹೋಗುವುದು, (ಣಾಯಾ)

ಗಮಣಿಜ್ಜ. '**ಗಮ=ಗಮ್**' ಶಬ್ದವನ್ನು ನೋಡುವುದು.

ಗಮಣಿಯಾ. ಸ್ತ್ರೀ: [ಗಮಣಿಕಾ] ಸಂಕ್ಷಿಪ್ತ ವ್ಯಾಖ್ಯಾನ, ದಿಗ್ದರ್ಶನ, ಕಳೆಯುವುದು, ಅತಿಕ್ರಮಣ, ಉಲ್ಲಂಘನೆ(ಉಪ)

ಗಮಣೀ. ಸ್ತ್ರೀ: [ಗಮನೀ] ಆಕಾಶದಲ್ಲಿ ಸಂಚರಿಸುವುದು ಸಾಧ್ಯವಾಗುವಂಥ ವಿದ್ಯೆ(ಣಾಯಾ), ಚಪ್ಪಲಿ

ಗಮಣೀಅ. '**ಗಮ=ಗಮ್**' ಶಬ್ದವನ್ನು ನೋಡುವುದು.

ಗಮಯ. '**ಗಮಗ**' ಶಬ್ದವನ್ನು ನೋಡುವುದು.

ಗಮಾರ. ವಿ: [ದೇ. ಗ್ರಾಮ್ಯ] ತಿಳಿದವನಲ್ಲದ, ಮೂರ್ಖ

ಗಮಾವ. '**ಗಮ=ಗಮಯ್**' ಶಬ್ದವನ್ನು ನೋಡುವುದು.

ಗಮಿಅ. ವಿ: [ಗಮಿಕ] ಪ್ರಕಾರವುಳ್ಳ

ಗಮಿದ. ವಿ: [ದೇ] ಅಪೂರ್ಣ, ಗೂಢ, ಜಾರಿದ, ಸೋರಿದ

ಗಮಿಯ. ನ: [ಗಮಿತ] ಕಳೆಯಲಾದ, ಮೀರಲಾದ, ದಾಟಲಾದ(ಗಉಡ), ಬೋಧಿಸಲ್ಪಟ್ಟ, ನಿವೇದಿಸಲ್ಪಟ್ಟ

ಗಮಿಯ. ನ: [ಗಮಿಕ] ಸದೃಶ ಪಾಠವನ್ನು ಹೊಂದಿರುವ ಶಾಸ್ತ್ರ,

ಗಮಿರ. ವಿ: [ಗಂತೃ] ಹೋಗುವವನು, ಪಡೆಯುವವನು

ಗಮೇಪ್ಪಿ}. '**ಗಮ=ಗಮ್**' ಶಬ್ದವನ್ನು ನೋಡುವುದು.
ಗಮೇಪ್ಪಿಣು}.

ಗಮೇರ. '**ಗಮಾರ**' ಶಬ್ದವನ್ನು ನೋಡುವುದು

ಗಮೇಸ. '**ಗವೇಸ**' ಶಬ್ದವನ್ನು ನೋಡುವುದು.

ಗಮ್ಮ. ವಿ: [ಗಮ್ಯ] ತಿಳಿಯಲು ಯೋಗ್ಯವಾದ, ಹೋಗಬಹುದಾದ(ಸುಪಾ), ಸೋಲಿಸಲು ಅರ್ಹವಾದ, ಆಕ್ರಮಣ ಮಾಡಬಹುದಾದ (ಸುರ), ಹೊಂದಲು ಯೋಗ್ಯವಾದ ಹೋಗಲು ಅರ್ಹವಾದ. ಭೋಗಿಸಲು ಅರ್ಹಳಾದ ಹೆಂಡತಿ ಇತ್ಯಾದಿ. ನ: ನಡೆಯುವುದು, ಹೋಗುವುದು

ಗಮ್ಮ. ನ: [ಗಮ್ಯ] ಗಮನ, ಗಮಿಸಬಹುದಾದ

ಗಯ. ವಿ: [ದೇ] ತಿರುಗಿಸಲ್ಪಟ್ಟ, ಸುತ್ತಿಸಲ್ಪಟ್ಟ, ತೀರಿಕೊಂಡ, ನಿಧನ ಹೊಂದಿದ, ನಿಜೀವ

ಗಯ. ವಿ: [ಗತ] ಹೋದ, ಸೇರಿರುವ, ತಲುಪಿರುವ, ಕಳೆದು ಹೋದ, ತಿಳಿಯಲ್ಪಟ್ಟ, ತಿಳಿದುಬಂದ, ನಾಶವಾದ, ಮರಣ ಹೊಂದಿದ, ಲಭ್ಯವಾದ. ಇರುವ, ಪ್ರವೇಶಿಸಿದ, ಪ್ರವೃತ್ತ. ವ್ಯವಸ್ಥಿತವಾದ, ನ: ಗತಿ, ಗಮನ ಚಲನೆ, **-ಪಾಣ**. ವಿ:[-**ಪ್ರಾಣ**], ಮೃತ, ತೀರಿಕೊಂಡ, **-ರಾಯ**. ವಿ: [-**ರಾಗ**] ವೀತರಾಗ, ಮುಗ್ಧ. **-ವಇಯಾ**. **-ವಈ**. ಸ್ತ್ರೀ: [**ಪತಿಕಾ**] ವಿಧವೆ(ಔಪ). ಹೊರದೇಶಕ್ಕೆ ಹೋಗಿರುವವನ ಪತ್ನಿ(ಗಾ), **-ವಯ**. ವಿ: [-**ವಯಸ್**] ವೃದ್ಧ, ಮುದುಕ, **-ಗಯಾಣುಗ ಇಯಾ**. ವಿ: [**ಗತಾನುಗತಿಕ**] ಕುರುಡನನ್ನು ಕುರುಡ ಅನುಸರಿಸುವುದು, ಅಂಧ ಶ್ರದ್ಧೆಯವನು

ಗಯ. ಪು: [ಗಜ] ಆನೆ. ಗಜ- ಸುಕುಮಾಲ ಮುನಿ ಎಂಬ ಒಬ್ಬ ಅಂತಕೃತ ಜೈನಮುನಿ, ಈ ಹೆಸರಿನ ಒಬ್ಬ ಸೇಠ್, ರಾವಣನಒಬ್ಬ ಯೋಧ(ಪಉಮ), **-ಉರ**. ನ: [-**ಪುರ**] ಕುರು ದೇಶದ ಪ್ರಧಾನ ನಗರವಾದ ಹಸ್ತಿನಾವತಿ(ಉಪ), **-ಕಣ್ಣ,-ಕನ್ನ**. ಪು: [-**ಕರ್ಣ**] ಒಂದು ದ್ವೀಪ, ಅದರಲ್ಲಿ ವಾಸಿಸುವವನು.**ಕಲಭ**. ಪು: [-**ಕಲಭ**] ಆನೆಯ ಮರಿ, **-ಗಯ**. ವಿ: [-**ಗತ**] ಆನೆಯ ಮೇಲೆ ಸವಾರಿ ಮಾಡುವವನು(ಔಪ), **-ಗ್ಗಪಯ**. ಪು: [**ಗಜಾಗ್ರಪದ**] ಒಂದು ಪರ್ವತ. **-ತ್ಥ**. ವಿ: [-**ಸ್ಥ**] ಆನೆಯ ಮೇಲೆ ಕುಳಿತಿರುವವನು. (ಪಉಮ). **-ಪುರ. 'ಉರ' ಶಬ್ದ ನೋಡುವುದು**. **-ಬಂಧಯ**. ಪು: [-**ಬಂಧಕ**] ಆನೆಯನ್ನು ಹಿಡಿಯುವ ವರ್ಗ. **-ಮಾರಿಣೀ**. ಸ್ತ್ರೀ: [-**ಮಾರಿನೀ**] ಒಂದು ವನಸ್ಪತಿ-ವಿಶೇಷ. **-ಮುಹ**. ಪು: [-**ಮುಖ**] ಶಿವ ಪುತ್ರ ಗಣಪತಿ, ಒಂದು ಯಜ್ಞ, **-ರಾಯ**. ಪು: [-**ರಾಜ**] ಪ್ರಧಾನ ಗಜ, ಶ್ರೇಷ್ಠ ಆನೆ. **-ವಇ**. ಪು: [-**ಪತಿ**] ಗಜೇಂದ್ರ, ಶ್ರೇಷ್ಠಆನೆ(ಣಾಯಾ). **-ವರ**. ಪು: [-**ವರ**] ಪ್ರಧಾನ ಗಜ. **-ವರಾರಿ**. ಪು: [-**ವರಾರಿ**] ಸಿಂಹ, ಕಾಡಿನ ರಾಜ. **-ವಹೂ**. ಸ್ತ್ರೀ: [-**ವಧೂ**] ಹೆಣ್ಣಾನೆ. **-ವೀಹೀ**. ಸ್ತ್ರೀ: [-**ವೀಥೀ**] ಶುಕ್ರನೇ ಮೊದಲಾದ ಮಹಾಗ್ರಹಗಳ ನಾಲ್ಕು ಕ್ಷೇತ್ರಗಳು. **-ಸಸಣ**. ಪು: [-**ಶ್ವಸನ**] ಆನೆಯ ಸೊಂಡಿಲು(ಔಪ). **-ಸುಕುಮಾಲ**. ಪು: [-**ಸುಕುಮಾಲ**] ಅದೇ ಭವದಲ್ಲೇ ಮುಕ್ತಿಗೆ ಸಂದ ಒಬ್ಬ ಪ್ರಸಿದ್ಧ ಜೈನಮುನಿ. **ಗಯಾಗಿರಿ**. ಪು: [ಗಂಜಾಗಿರಿ] ಸಿಂಹ(ಭವಿ). **ಗಯಾರೋಹ**. ಪು: [ಗಜಾರೋಹ] ಮಾವತಿಗ.

ಗಯ. ಪು [ಗದ] ಒಂದು ರೋಗ(ಸುಪಾ)

ಗಯಂಕ. ಪು: [ಗಜಾಂಕ] ದಿಕ್ಕುಮಾರ ದೇವ, ದೇವತೆಗಳ ಒಂದು ಜಾತಿ(ಔಪ)

ಗಯಂದ. ಪು: [ಗಜೇಂದ್ರ] ಶ್ರೇಷ್ಠ ಆನೆ(ಗಉಡ)

ಗಯಕನ್ನ. ಪು: [ಗಜಕರ್ಣ] ಅನಾರ್ಯ ದೇಶ-ವಿಶೇಷ

ಗಯಕಂಠ. ಪು: [ಗಜಕಂಠ] ಒಂದು ರತ್ನ-ವಿಶೇಷ

ಗಯಗ್ಗಪಯ. ನ: [ಗಜಾಗ್ರಪದ] ದಶಾರ್ಣಕೂಟದ ಒಂದು ತೀರ್ಥ

ಗಯಣ. ನ: [ಗಗನ] 'ಹ' ಅಕ್ಷರ, **-ಮಣಿ**. ಪು: [-**ಮಣಿ**] ಸೂರ್ಯ

ಗಯಣ. ನ: [ಗಗನ] ಆಕಾಶ, ಅಂಬರ. **-ಗಇ**. ಪು: [-**ಗತಿ**] ಒಬ್ಬ ರಾಜಕುಮಾರ. **-ಚರ**. ವಿ: [-**ಚರ**] ಆಕಾಶದಲ್ಲಿ ಸಂಚರಿಸುವವನು. ವಿದ್ಯಾಧರ. **-ಮಂಡಲ**. ಪು: [-**ಮಂಡಲ**] ಒಬ್ಬ ರಾಜ.

ಗಯಣರಇ. ಪು: [ದೇ] ಮೇಘ, ಮೋಡ

ಗಯಣಿಂದು. ಪು: [ಗಗನೇಂದು] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ)

ಗಯನಿಮೀಲಿಯಾ. ಸ್ತ್ರೀ: [ಗಜನಿಮೀಲಿಕಾ] ಉಪೇಕ್ಷೆ, ಕಡೆಗಣಿಸುವುದು, ಉದಾಸೀನತೆ, ಅಲಕ್ಷ್ಯ

ಗಯಮುಹ. ಪು: [ಗಜಮುಖ] ಒಂದು ಅನಾರ್ಯ-ದೇಶ-ವಿಶೇಷ

ಗಯಸಾಉಲ}. ವಿ: [ದೇ] ವಿರಕ್ತ, ವೈರಾಗಿ(ಷಡ್)

ಗಯಸಾಉಲ್ಲ}.

ಗಯಾ. ಸ್ತ್ರೀ: [ಗದಾ] ಗದೆ. **-ಹರ**. ಪು: [=**ಧರ**] ವಾಸುದೇವ, ಒಂದು ದೇವ-ವಿಮಾನ

ಗಯಾ. ಸ್ತ್ರೀ: [ಗಯಾ] ಹೆಸರುವಾಸಿಯಾದ ಗಯಾಕ್ಷೇತ್ರ(ಉಪ). **-ಗರ**. ವಿ: [-**ಕರ**] ಕರ್ತ, ಮಾಡುವವನು.

ಗರ. ಪು: [ಗರ] ವತ್ಸನಾಭವೆಂಬ ಒಂದು ಬಗೆಯ ವಿಷ, ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ಹನ್ನೊಂದು ವಿಧವಾದ ಕರಣಗಳಲ್ಲಿ ಐದನೆಯದು.

-ಗರಣ. **'ಕರಣ'ವನ್ನು** ನೋಡುವುದು

ಗರಲ. ನ: [ಗರಲ] ವಿಷ(ಪಾಅ), ರಹಸ್ಯ, ವಿ: ಅವ್ಯಕ್ತ, ಅಸ್ಪಷ್ಟ
ಗರಲಿಗಾಬದ್ಧ. ವಿ: [ಗರಲಿಕಾಬದ್ಧ] ಇಡಲ್ಪಟ್ಟ, ಇರಿಸಲ್ಪಟ್ಟ(ನಿಚೂ)
ಗರಹ. ಸಕ: [ಗರ್ಹ್] ನಿಂದಿಸು, ತಿರಸ್ಕರಿಸು, ಬೈಯು
ಗರಹಣ. ನ: [ಗರ್ಹಣ] ನಿಂದೆ, ಬೈಗಳು, ತಿರಸ್ಕಾರ(ಪಿ)
ಗರಹಣಯಾ}. ನ: [ಗರ್ಹಣಾ] ನಿಂದೆ, ಬೈಗಳು,
ಗರಹಣಾ}. ತಿರಸ್ಕಾರ(ಭಗ)
ಗರಹಾ. ಸ್ತ್ರೀ: [ಗರ್ಹಾ] ನಿಂದೆ, ಬೈಗಳು, ತಿರಸ್ಕಾರ
ಗರಹಿಅ. ವಿ: [ಗರ್ಹಿತ] ನಿಂದಿತ, ನಿಂದಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ
–ಗರಿಅ. ವಿ: [ಕೃತ] ಮಾಡಲಾದ, ನಿರ್ಮಿಸಲ್ಪಟ್ಟ
ಗರಿಟ್ಟ. ವಿ: [ಗರಿಷ್ಠ] ಅತ್ಯಂತ ಭಾರವಾದ, ಅತ್ಯಂತ ದೊಡ್ಡದಾದ(ಸುಪಾ)
ಗರಿಮ. ಪುಂಸ್ತ್ರೀ: [ಗರಿಮನ್] ಭಾರ, ತೂಕ, ಘನತೆ, ಗೌರವ, ಷಮರ್ಯಾದೆ(ಸುಪಾ)
ಗರಿಹ. 'ಗರಹ' ಶಬ್ದವನ್ನು ನೋಡುವುದು
ಗರಿಹ. ಪು: [ಗರ್ಹ] ನಿಂದೆ, ಬೈಗಳು
ಗರಿಹಣಂಸಾ. 'ಗರಹಣಂಸಾ' ಶಬ್ದವನ್ನು ನೋಡುವುದು
ಗರಿಹಾ. ಸ್ತ್ರೀ: [ಗರ್ಹಾ] ನಿಂದೆ, ತಿರಸ್ಕಾರ, ದೂಷಣೆ, ಜುಗುಪ್ಸೆ
ಗರು. 'ಗುರು' ಶಬ್ದವನ್ನು ನೋಡುವುದು.
ಗರುಅ. ವಿ: [ಗುರುಕ] ಅತ್ಯಂತ ಭಾರವಾದ, ಅತ್ಯಂತ ದೊಡ್ಡದಾದ, ಮಹಾನ್ ಆದ
ಗರುಅ. ಸಕ: [ಗುರುಕಾರಯ್] ಭಾರ ಮಾಡು, ದೊಡ್ಡದು ಮಾಡು,
ಗರುಆ.} ಅಕ: [ಗುರುಕಾರಯ್] ದೊಡ್ಡದು ಮಾಡು,
ಗರುಆಅ.} ದೊಡ್ಡವನ ಹಾಗೆ ನಡೆದುಕೊಳ್ಳುವುದು
ಗರುಇಅ. ವಿ: [ಗುರುಕಿತ] ದೊಡ್ಡದಾಗಿ ಮಾಡಲ್ಪಟ್ಟ
ಗರುಈ}. ಸ್ತ್ರೀ: [ಗುರ್ವೀ] ದೊಡ್ಡವಳು, ಹಿರಿಯಳು,
ಗರುಗೀ}. ಮಹಾನಳು
ಗರುಲ. ಪು: [ಗರುಡ] ಒಂದು ದೇವ–ವಿಮಾನ
ಗರುಕ್ಕ. 'ಗರುಅ' ಶಬ್ದವನ್ನು ನೋಡುವುದು.
ಗರುಡ. 'ಗರುಲ' ಶಬ್ದವನ್ನು ನೋಡುವುದು. ಒಂದು ಛಂದಸ್ಸು. **–ತ್ಥ.** ನ: [ಗರುಡಾಸ್ತ್ರ] ಉರಗಾಸ್ತ್ರಕ್ಕೆ ಪ್ರತಿಯಾದ ಒಂದು ಅಸ್ತ್ರ(ಪಉಮ) **–ದ್ಧಯ.** ಪು: [–ಧ್ವಜ] ವಿಷ್ಣು. **–ವೂಹ.** ಪು: [–ವ್ಯೂಹ] ಸೇನೆಯ ಒಂದು ರಚನಾ ರೀತಿ(ಮಹಾ)
ಗರುಡಂಕ. ಪು: [ಗರುಡಾಂಗ] ವಿಷ್ಣು, ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು(ಪಉಮ)
ಗರುಲ. ಪು: [ಗರುಡ] ಪಕ್ಷಿರಾಜ, ಭಗವಾನ್ ಶಾಂತಿನಾಥನ ಶಾಸನದ ಯಕ್ಷ, ಭವನಪತಿ ದೇವರುಗಳ ಒಂದು ಜಾತಿ, ಸುಪರ್ಣಕುಮಾರ ದೇವ(ಪಣ್ಣ). ಸುಪರ್ಣ ಕುಮಾರ ದೇವರುಗಳ ಇಂದ್ರ **–ಕೇಉ.** ಪು: [–ಕೇತು] '**–ಜ್ಝಯ**' ಶಬ್ದವನ್ನು ನೋಡುವುದು. **–ಜ್ಝಯ, –ದ್ಧಯ.** ಪು: [–ಧ್ವಜ] ಗರುಡ ಪಕ್ಷಿಯ ಚಿತ್ರವುಳ್ಳ ಧ್ವಜ. ವಾಸುದೇವ ಕೃಷ್ಣ. ಸುಪರ್ಣ ಕುಮಾರ ದೇವ(ಆವಮ). **–ವ್ಯೂಹ.** 'ಗರುಡವ್ಯೂಹ' ಶಬ್ದವನ್ನು ನೋಡುವುದು. **–ಸತ್ಥ.** ನ: [–ಶಸ್ತ್ರ] ಗರುಡಾಸ್ತ್ರ
ಗರುಲಾಸಣ. ನ: [ಗರುಡಾಸನ] ಆಸನ–ವಿಶೇಷ,
ಗರುಲೋವವಾಯ. ನ: [ಗರುಡೋಪಪಾತ] ಒಂದು ಶಾಸ್ತ್ರ, ಅದನ್ನು ನೆನಪಿಸಿಕೊಂಡರೆ ಗರುಡದೇವನು ಪ್ರತ್ಯಕ್ಷನಾಗುತ್ತಾನಂತೆ(ಠಾ) '**ಗರುಡ**' ಶಬ್ದವನ್ನು ನೋಡುವುದು.
ಗಲ. ಅಕ: [ಗಲ್] ಕೆಡು, ಕೊಳೆ, ಮುಗಿದು ಹೋಗು, ಕೊನೆಗೊಳ್ಳು, ತೊಟ್ಟಿಕ್ಕು, ಸೋರು, ಬೀಳು, ಕರಗು, ಸಕ: ಬೀಳಿಸು, ತೊಟ್ಟಿಕ್ಕಿಸು, ಬೀಳಿಸು,
ಗಲ}. ಪು: [ಗಲ] ಕಂಠ, ಕೊರಳು, ಕೊಳಲು,
ಗಲಅ}. ಕುತ್ತಿಗೆ. ಮೀನುಹಿಡಿಯುವ ಬಲೆ, **–ಗಜ್ಜಿ.** ಸ್ತ್ರೀ: [–ಗರ್ಜಿ] ಗಂಟಲ ಗರ್ಜನೆ, **–ಗಜ್ಜಿಯ.** ನ: [–ಗರ್ಜಿತ] ಗಂಟಲ ಗರ್ಜನೆ, **–ಲಾಯ.** ವಿ: [–ಲಾತ] ಕುತ್ತಿಗೆಗೆ ಹಾಕಿಕೊಂಡಿರುವ(ಔಪ)
ಗಲಈ. ಸ್ತ್ರೀ: [ಗಲಕೀ] ಒಂದು ವನಸ್ಪತಿ
ಗಲಗ. 'ಗಲಅ' ಶಬ್ದವನ್ನು ನೋಡುವುದು.
ಗಲತ್ಥ. 'ಖಿವ' ಶಬ್ದವನ್ನು ನೋಡುವುದು.
ಗಲತ್ಥಣ. ನ: [ಕ್ಷೇಪಣ] ಎಸೆಯುವುದು, ಪ್ರೇರಣೆ
ಗಲತ್ಥಲಿಅ. ವಿ: [ದೇ] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ
ಗಲತ್ಥಲ್ಲ. ಪು: [ದೇ] ಕೈಯಿಂದ ಕುತ್ತಿಗೆ ಹಿಡಿಯುವುದು (ನಾಯಾ)
ಗಲತ್ಥಲ್ಲಿಅ. [ದೇ] '**ಗಲತ್ಥಲಿಅ**' ಶಬ್ದವನ್ನು ನೋಡುವುದು.
ಗಲತ್ಥಾ. ಸ್ತ್ರೀ: [ದೇ] ಪ್ರೇರಣೆ

ಗಲತ್ಥಿಅ. ವಿ: [ಕ್ಷಿಪ್ತ] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ, ಹೊರ ಹಾಕಲ್ಪಟ್ಟ(ಪಾಅ)
ಗಲದ್ಧಅ.ಪು: [ದೇ] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ(ಷಡ್)
ಗಲಹತ್ಥಿಅ. ವಿ: [ಗಲಹಸ್ತಿತ] ಕುತ್ತಿಗೆ ಹಿಡಿದು ಆಚೆಗೆ ದಬ್ಬಲ್ಪಟ್ಟವನು
ಗಲಾಣ. 'ಗಿಲಾಣ' ಶಬ್ದವನ್ನು ನೋಡುವುದು.
ಗಲಿ. 'ಗಲ=ಗಲ' ಶಬ್ದವನ್ನು ನೋಡುವುದು
ಗಲಿ}. ವಿ: [ಗಲಿ, ಕ] ಅವಿಧೇಯ, ವಿನೀತನಲ್ಲದ,
ಗಲಿಅ}. ಹತೋಟಿಗೆ ತರಲು ಕಷ್ಟವಾದ(ಶ್ರಾ), –ಗದ್ದಹ. ಪು: [–ಗರ್ದಭ] ಪುಂಡು ಕತ್ತೆ. –ಬಇಲ್ಲ. ಪು: [–ಬಲೀವರ್ದ] ಪುಂಡು ಎತ್ತು, ಗಲಿಆಸ್ಸ. ಪು: [ಗಲಿಆಶ್ವ] ಪುಂಡು ಕುದುರೆ, ಹತೋಟಿಗೆ ಸಿಕ್ಕದ ಕುದುರೆ(ಉತ್ತ)
ಗಲಿಅ. ವಿ: [ಗಲಿತ] ಕರಗಿದ(ಕಪ್ಪ), ತೊಳೆಯಲ್ಪಟ್ಟ, ಶುದ್ಧಿಮಾಡಲ್ಪಟ್ಟ, ಜಾರಿದ, ಕೆಳಗೆ ಬಿದ್ದ, ನಾಶವಾದ(ಸುಪಾ)
ಗಲಿಅ. ವಿ: [ದೇ] ನೆನಪಿಗೆ ತಂದುಕೊಂಡ, ಸ್ಮರಿಸಲ್ಪಟ್ಟ
ಗಲಿಚ್ಚ. ವಿ: [ಗಲೀಯ, ಗಲ್ಯ] ಕುತ್ತಿಗೆಯ
ಗಲಿಂತ. 'ಗಲ=ಗಲ್' ಶಬ್ದವನ್ನು ನೋಡುವುದು.
ಗಲಿರ. ವಿ: [ಗಲಿತೃ] ನಿರಂತರವಾಗಿ ಕರಗುತ್ತಿರುವ, ತೊಟ್ಟಿಕ್ಕುತ್ತಿರುವ
ಗಲುಲ. 'ಗರುಲ' ಶಬ್ದವನ್ನು ನೋಡುವುದು.
ಗಲೋಈ}. ಸ್ತ್ರೀ: [ಗಡೂಚೀ] ಒಂದು ಬಳ್ಳಿ
ಗಲೋಯಾ}.
ಗಲ್ಲ. ಪು: [ಗಲ್ಲ] ಕೆನ್ನೆ, ಕಪೋಲ, ಆನೆಯ ಗಂಡಸ್ಥಲ, ಕುಂಭಸ್ಥಲ(ಷಡ್). –ಮಸೂರಿಯಾ. ಸ್ತ್ರೀ: [–ಮಸೂರಿಕಾ] ಕೆನ್ನೆಯ ಆಧಾರ, ಒರಗುವಿಕೆ
ಗಲ್ಲಕ್ಕ. ಪುಂ.ನ: [ದೇ] ಸ್ಫಟಿಕ ಮಣಿ
ಗಲ್ಲತ್ಥ. 'ಗಲತ್ಥ' ಶಬ್ದವನ್ನು ನೋಡುವುದು.
ಗಲ್ಲಪ್ಫೋಡ. ಪು: [ದೇ] ಡಮರುಗ– ವಾದ್ಯ
ಗಲ್ಲೂರಣ. ನ: [ದೇ] ಮಾಂಸ ತಿನ್ನುತ್ತ ಕೋಪಗೊಂಡಿರುವ ಸಿಂಹದ ಗರ್ಜನೆ
ಗಲ್ಲೋಲ್ಲ. ನ: [ದೇ] ಒಂದು ನೀರಿನ ಪಾತ್ರೆ, ಗಿಂಡಿ (ನಿಚೂ)
ಗವ. ಪುಂಸ್ತ್ರೀ: [ಗೋ] ಹಸು(ಸೂಅ)
ಗವಕ್ಖ. ಪು: [ಗವಾಕ್ಷ] ಗವಾಕ್ಷ, ಬೆಳಕಿಂಡಿ(ಔಪ), ಗವಾಕ್ಷದ ಆಕಾರದ ಒಂದು ರತ್ನ, –ಜಾಲ. ನ: [–ಜಾಲ] ರತ್ನದ ರಾಶಿ(ಜೀವ), ಜಾಲವನ್ನು ಹೊಂದಿರುವ ಬೆಳಕಿಂಡಿ(ಔಪ)
ಗವಚ್ಛ. ಪು: [ದೇ] ಹೊದಿಕೆ(ರಾಯ), ಮುಚ್ಚಳ
ಗವಚ್ಛಿಯ. ವಿ: [ದೇ] ಆಚ್ಛಾದಿತ, ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ
ಗವತ್ತ. ನ: [ದೇ] ಹುಲ್ಲು, ತೃಣ(ದೇ)
ಗವಯ. ಪು: [ಗವಯ] ಗಂಗೆದೊಗಲಿಲ್ಲದ ಹಸುವಿನಂತಿರುವ ಒಂದು ಪ್ರಾಣಿ, ಕಾಡುಹಸು
ಗವರ. ಪು: [ದೇ] ಒಂದು ವನಸ್ಪತಿ
ಗವಲ. ಪು: [ಗವಲ] ಕಾಡುಕೋಣ(ಪಉಮ), ನ: ಕಾಡು ಕೋಣದ ಕೋಡು
ಗವಾ. ಸ್ತ್ರೀ: [ಗೋ] ಹಸು
ಗವಾದಣೀ.} ಸ್ತ್ರೀ: [ಗವಾದನೀ] ಗೋಚರಭೂಮಿ
ಗವಾಯಣೀ.}
ಗವಾರ. ವಿ: [ದೇ] ಹಳ್ಳಿಗ, ಸಣ್ಣ ಹಳ್ಳಿಯ ನಿವಾಸಿ
ಗವಾಲಿಯ. ನ: [ಗವಾಲೀಕ] ಹಸುವಿನ ವಿಷಯದಲ್ಲಿ ಸುಳ್ಳು ಮಾತು
ಗವಿಅ. ವಿ: [ದೇ] ನಿಶ್ಚಿತ
ಗವಿಟ್ಠ. ವಿ: [ಗವೇಷಿತ] ಹುಡುಕಲಾದ(ಸುಪಾ)
ಗವಿಲ. ನ: [ದೇ] ಶುದ್ಧ ಸಕ್ಕರೆ
ಗವೇಧುಆ. ಸ್ತ್ರೀ: [ಗವೇಧುಕಾ] ಜೈನ ಮುನಿಗಣದ ಒಂದು ಶಾಖೆ
ಗವೇಲಗ. ಪುಂಸ್ತ್ರೀ: [ಗವೇಲಕ] ಕುರಿ(ಣಾಯಾ), ಹಸು ಮತ್ತು ಕುರಿ(ಔಪ)
ಗವೇಸ. ಸಕ: [ಗವೇಷಯ್] ಹುಡುಕು
ಗವೇಸಇತ್ತು. ವಿ: [ಗವೇಷಯಿತೃ] ಹುಡುಕುವವನು, ಅನ್ವೇಷಕ(ಠಾ)
ಗವೇಸಗ. ವಿ: [ಗವೇಷಕ] ಮೇಲಿನ ಶಬ್ದವನ್ನು ನೋಡುವುದು.
ಗವೇಸಣ. ನ: [ಗವೇಷಣ] ಹುಡುಕಾಟ, ಅನ್ವೇಷಣೆ(ಔಪ)
ಗವೇಸಣಯಾ. ಸ್ತ್ರೀ; [ಗವೇಷಣಾ] ಸಂಭಾವನಾ ಜ್ಞಾನ, ಊಹಾತ್ಮಕ ಜ್ಞಾನ
ಗವೇಸಣಯಾ}. ಸ್ತ್ರೀ: [ಗವೇಷಣಾ] ಹುಡುಕಾಟ,
ಗವೇಸಣಾ}. ಅನ್ವೇಷಣೆ(ಔಪ), ಶುದ್ಧ ಭಿಕ್ಷೆಯನ್ನು ಬೇಡುವುದು(ಓಘ), ಭಿಕ್ಷೆಯನ್ನು ಸ್ವೀಕರಿಸುವುದು (ಠಾ)

ಗವೇಸಯ. 'ಗವೇಸಗ' ಶಬ್ದವನ್ನು ನೋಡುವುದು.
ಗವೇಸಾವಿಯ. ವಿ: [ಗವೇಷಿತ] ಬೇರೆಯವರಿಂದ ಹುಡುಕಿಸಲಾದ, ಅನ್ವೇಷಣೆ ಮಾಡಿಸಲಾದ. ಹುಡುಕಲಾದ, ಅನ್ವೇಷಿಸಲಾದ
ಗವೇಸಿ. ವಿ: [ಗವೇಷಿನ್] ಹುಡುಕುವವನು, ಅನ್ವೇಷಕ
ಗವೇಸಿಅ. ವಿ: [ಗವೇಷಿತ] ಹುಡುಕಲಾದ, ಅನ್ವೇಷಿಸಲಾದ(ಸುರ)
ಗವ್ವ. ಪು: [ಗರ್ವ] ಅಹಂಕಾರ, ಮದ, ಅಭಿಮಾನ (ಭಗ)
ಗವ್ವರ. ನ: [ಗಹ್ವರ] ಗುಹೆ, ಗವಿ, ಬಿಲ
ಗವ್ವಿಟ್ಠ. ವಿ: [ಗರ್ವಿಷ್ಠ] ವಿಶೇಷ ಅಭಿಮಾನಿ, ಗರ್ವಿಷ್ಠ (ದೇ)
ಗಸ. ಸಕ: [ಗ್ರಸ್] ತಿನ್ನು, ಭಕ್ಷಿಸು, ನುಂಗು
ಗಸಣ. ನ: [ಗ್ರಸನ] ಭಕ್ಷಣ, ನುಂಗುವುದು,
ಗಸಿಅ. ವಿ: [ಗ್ರಸ್ತ] ತಿಂದ, ಭಕ್ಷಿಸಲಾದ, ನುಂಗಲ್ಪಟ್ಟ (ಕುಮಾ)
ಗಹ. ಸಕ: [ಗ್ರಥ್] ಸೇರಿಸಿ ಕಟ್ಟುವುದು, ಹೂಮಾಲೆ ಕಟ್ಟುವುದು
ಗಹ. ಸಕ: [ಗ್ರಹ್] ಹಿಡಿ, ಸ್ವೀಕರಿಸು, ತೆಗೆದುಕೊಳ್ಳು
ಗಹ. ಪು: [ಗ್ರಹ] ಗ್ರಹಣ, ಸ್ವೀಕರಿಸುವುದು, ಸೂರ್ಯ, ಚಂದ್ರರೇ ಮೊದಲಾದ ಗ್ರಹಗಳು(ಗಉಡ), ಕರ್ಮದ ಬಂಧನ(ದಸ), ಭೂತ, ಪಿಶಾಚಾದಿಗಳು ಹಿಡಿಯುವುದು, ಆಸಕ್ತಿ, ತಲ್ಲೀನತೆ(ಆಚಾ), ಸಂಗೀತದ ರಸ. ಸಂಬಂಧ, ಹಿಡಿದುಕೊಳ್ಳುವುದು, ಜ್ಞಾನ, **–ಖೋಭ.** ಪು: [–ಕ್ಷೋಭ] ರಾಕ್ಷಸ ವಂಶದ ರಾಜನ ಹೆಸರು, ಒಬ್ಬ ಲಂಕಾದಿಪತಿ. **–ಗಜ್ಜಿಯ.** ನ: [–ಗರ್ಜಿತ] ಗ್ರಹಗಳ ಸಂಚಾರದಿಂದಾಗುವ ಶಬ್ದ. □**ಗಹಿಯ.** ವಿ: [–ಗೃಹೀತ] ಭೂತಾದಿಗಳು ಹಿಡಿದವನು, ಹುಚ್ಚ(ಕುಮಾ). **–ಚರಿಯ.** ನ: [–ಚರಿತ] ಜ್ಯೋತಿಶ್ಯಾಸ್ತ್ರ, ಜ್ಯೋತಿಶ್ಯಾಸ್ತ್ರದ ಪರಿಜ್ಞಾನ, **–ದಂಡ.** ಪು: [–ದಂಡ] ದಂಡಾಕಾರದಲ್ಲಿರುವ ಗ್ರಹ ಪಂಕ್ತಿ(ಭಗ), **–ನಾಹ.** ಪು: [–ನಾಥ] ಸೂಯ, ಚಂದ್ರ. **–ಭಿನ್ನ.** ನ: [–ಭಿನ್ನ] ಯಾವುದರ ಮಧ್ಯದಿಂದ ಗ್ರಹದ ಚಲನೆ ಉಂಟಾಗುತ್ತದೋ ಆ ನಕ್ಷತ್ರ. **–ಮುಸಲ.** ನ: [–ಮುಶಲ] ಒನಕೆಯ ಆಕಾರದ ಗ್ರಹ ಪಂಕ್ತಿ. **–ಸಮ.** ನ: [–ಸಮ] ಗೇಯ ಕಾವ್ಯದ ಒಂದು ಪ್ರಭೇದ. **–ಸಿಂಘಾಡಗ.** ನ: [–ಶೃಂಗಾಟಕ] ಕುಬ್ಜಕ ವೃಕ್ಷದ ಆಕಾರವುಳ್ಳ ಗ್ರಹ ಪಂಕ್ತಿ(ಭಗ), ಜೋಡಿ ಗ್ರಹಗಳು. **ಗ್ರಹಾಹಿವ.** ಪು: [ಗ್ರಹಾಧಿಪ] ಸೂರ್ಯ.
ಗಹ–. ನ: [ಗೃಹ] ಮನೆ, **–ವಇ.** ಪು: [–ಪತಿ] ಗೃಹಸ್ಥ, ಸಂಸಾರಿ.(ಪಉಮ). **–ವಇಣೀ.** ಸ್ತ್ರೀ: [–ಪತ್ನೀ] ಗೃಹಿಣಿ, ಹೆಂಡತಿ,
ಗಹಕಲ್ಲೋಲ. ಪು: [ದೇ. ಗ್ರಹಕಲ್ಲೋಲ] ರಾಹು ಗ್ರಹ (ದೇ)
ಗಹಗಹ. ಅಕ: [ದೇ] ಹರ್ಷಭರಿತನಾಗು, ಆನಂದಪೂರ್ಣನಾಗು(ಭವಿ)
ಗಹಣ. ನ: [ಗ್ರಹಣ] ತೆಗೆದುಕೊಳ್ಳುವುದು, ಸ್ವೀಕರಿಸುವುದು, ಅದರ, ಸನ್ಮಾನ, ಜ್ಞಾನ, ತಿಳಿವು, ಶಬ್ದ(ಆಚಾ). ವಿ: ಸ್ವೀಕರಿಸುವವನು. ಸೂರ್ಯ ಮತ್ತು ಚಂದ್ರ ಗ್ರಹಣಗಳು. ವಿ: ಸ್ವೀಕರಿಸಲಾದ ವಸ್ತು, ವ್ಯಕ್ತಿ, ನ: ಶಿಕ್ಷಣ(ಆವ). ವಿ: ಸ್ವೀಕರಿಸಲು ಅರ್ಹವಾದ, ಸ್ವೀಕರಿಸುವುದರ ಕಾರಣ, ಆಕ್ಷೇಪಕ, ನಿಂದಿಸುವವನು ನ: ಇಂದ್ರಿಯ
ಗಹಣ. ನ: [ಗ್ರಾಹಣ] ಗ್ರಹಣ ಮಾಡಿಸುವುದು, ಸ್ವೀಕರಿಸುವಂತೆ ಮಾಡಿಸುವುದು,
ಗಹಣ. ವಿ: [ಗಹನ] ನಿಬಿಡ, ದಟ್ಟ ದುರ್ಗಮ. ದುರ್ಭೇದ್ಯ, ದಟ್ಟ ಕಾಡು, ಮರದ ಪೊಟರೆಅರಣ್ಯ ಕ್ಷೇತ್ರ, **–ವಿದುಗ್ಗ.** ನ: [–ವಿದುರ್ಗ] ಪರ್ವತದ ಒಂದು ಪ್ರದೇಶದಲ್ಲಿರುವ ಮರ, ಗಿಡ, ಬಳ್ಳಗಳ ಸಮೂಹ
ಗಹಣ. ನ: [ದೇ] ನೀರಿಲ್ಲದ ಪ್ರದೇಶ(ಆಚಾ), ಅಡವು, ಗಿರವಿ(ಸುಪಾ)
ಗಹಣಯ. ನ: [ದೇ] ಒಡವೆಗಳು(ಸುಪಾ) ಸೂರ್ಯ
ಗಹಣಯಾ. ಸ್ತ್ರೀ: [ಗ್ರಹಣ] ಗ್ರಹಣ ಮಾಡುವುದು, ಸ್ವೀಕರಿಸುವುದು(ಔಪ)
ಗ್ರಹಣೀ. ಸ್ತ್ರೀ: [ಗ್ರಹಣೀ] ಗುದಾಶಯ, ಹೊಟ್ಟೆ
ಗಹಣೀ. ಸ್ತ್ರೀ: [ದೇ] ಬಲವಂತದಿಂದ ಅಪಹರಿಸಲಾದ ಹೆಣ್ಣು, ದಾಸಿ(ದೇ)
ಗಹಣೀ. ಸ್ತ್ರೀ: [ಗ್ರಹಣೀ] ಹೊಟ್ಟೆ
ಗಹತ್ಥಿ. ಪು: [ಗಭಸ್ತಿ] ಕಿರಣ
ಗಹರ. ಪು: [ದೇ] ಹದ್ದು, ಗೃಧ್ರ(ದೇ)
ಗಹರ. ಪುಂನ: [ಗಹ್ವರ] ಕಾಡು, ಅರಣ್ಯ, ಲತಾಗೃಹ,

ಕಪಟ, ಮೋಸ, ವಿಷಮ ಸ್ಥಾನ, ಅಳು, ಗುಹೆ,ಅನೇಕ ಅನರ್ಥಗಳ ನೋವು, ಪೀಡೆ

ಗಹವಇ. ವಿ: [ದೇ] ಗ್ರಾಮೀಣ, ಹಳ್ಳಿಯಲ್ಲಿ ವಾಸಿಸುವವನು(ದೇ), ಪು: ಚಂದ್ರ

ಗಹವಇ. ಪು: [ಗೃಹಪತಿ] ರೈತ, ಕೃಷಿಕ

ಗಹಿಅ. ವಿ: [ದೇ] ವಕ್ರಗೊಳಿಸಲ್ಪಟ್ಟ, ಡೊಂಕಾಗಿ ಮಾಡಲಾದ,

ಗಹಿಅ. ವಿ: [ಗೃಹೀತ] ಸ್ವೀಕರಿಸಲ್ಪಟ್ಟ(ಔಪ), ಹಿಡಿಯಲ್ಪಟ್ಟ, ತಿಳಿದು ಬಂದ, ವಿದಿತ(ಉತ್ತ)

ಗಹಿಅ. ವಿ: [ಗೃದ್ಧ] ಆಸಕ್ತನಾದ, ತಲ್ಲೀನನಾದ(ಆಚಾ)

ಗಹಿಆ. ಸ್ತ್ರೀ: [ದೇ] ಕಾಮಸುಖದ ಸಲುವಾಗಿ ವಿನಂತಿಸಲ್ಪಟ್ಟ ಹೆಣ್ಣು, ಸ್ವೀಕರಿಸಲರ್ಹಳಾದ ಹೆಣ್ಣು

ಗಹಿರ. ವಿ: [ಗಂಭೀರ] ಆಳವಾದ, ಅಗಾಧವಾದ(ಔಪ)

ಗಹಿಲ. ವಿ: [ಗ್ರಹಿಲ] ಗ್ರಹ ಭೂತಾದಿಗಳು ಹೊಕ್ಕಿರುವ ಮನುಷ್ಯ, ಹುಚ್ಚ(ಶ್ರಾ)

ಗಹಿಲಿಯ}. ವಿ: [ದೇ. ಗ್ರಹಿಲ] ಆವೇಶದಿಂದ ಕೂಡಿದ,
ಗಹಿಲ್ಲ}. ಹುಚ್ಚ, ಭ್ರಾಂತಚಿತ್ತ(ಪಉಮ)

ಗಹೀಅ. **'ಗಹಿಅ=ಗೃಹೀತ'** ಶಬ್ದವನ್ನು ನೋಡುವುದು.

ಗಹೀರ. **'ಗಭೀರ'** ಶಬ್ದವನ್ನು ನೋಡುವುದು.

ಗಹೀರಿಅ. ನ: [ಗಾಂಭೀರ್ಯ] ಆಳ, ಅಗಾಧ, ತಳವನ್ನು ಮುಟ್ಟಲಾಗದಿರುವಿಕೆ

ಗಹೀರಿಮ. ಪುಂ.ಸ್ತ್ರೀ: [ಗಂಭೀರಿಮನ್] ಆಳ, ಗಾಂಭೀರ್ಯ

ಗಹೇಅವ್ವ}. **'ಗಹ=ಗ್ರಹ್'** ಶಬ್ದವನ್ನು ನೋಡುವುದು.
ಗಹೇಉಂ}.

ಗಹೂಣ(ಅಪ). **'ಗಹ=ಗ್ರಹ್'** ಶಬ್ದವನ್ನು ನೋಡುವುದು.

ಗಾ}. ಸಕ: [ಗೈ] ಹಾಡು, ಗಾನಮಾಡು, ವರ್ಣಿಸು,
ಗಾಅ}. ಹೊಗಳು

ಗಾಅ. ಪು: [ಗೋ] ಎತ್ತು, ವೃಷಭ, ಸ್ತ್ರೀ: ಹಸು, ಆಕಳು.

ಗಾಅ. ನ: [ಗಾತ್ರ] ಶರೀರ, ದೇಹ, ಶರೀರದ ಅಂಗಾಂಗ (ಔಪ)

ಗಾಅ. ವಿ: [ಗಾಯಕ] ಹಾಡುವವನು, ಹಾಡುಗಾರ

ಗಾಅಂಕ. ಪು: [ಗವಾಂಕ] ಶಿವ, ಮಹಾದೇವ(ಕುಮಾ)

ಗಾಅಣ. ವಿ: [ಗಾಯನ] ಹಾಡುವವನು, ಹಾಡುಗಾರ (ಸುಪಾ)

ಗಾಇಅ. ವಿ: [ಗೀತ] ಹಾಡಲ್ಪಟ್ಟ, ನ: ಗೀತ, ಗಾನ, ಹಾಡು, ಹಾಡುಗಾರಿಕೆ

ಗಾಇಆ. ಸ್ತ್ರೀ: [ಗಾಯಿಕಾ] ಹಾಡುಗಾರ್ತಿ(ಗಾ)

ಗಾಇರ. ವಿ: [ಗಾಥಕ] ಹಾಡುವವನು, ಹಾಡುಗಾರ.

ಗಾಈ. ಸ್ತ್ರೀ: [ಗೋ] ಹಸು

ಗಾಉ}. ನ: [ಗವ್ಯೂತ] ಒಂದು ಕ್ರೋಶ ದೂರ, ೨
ಗಾಉಅ}. ಸಾವಿರ ಧನುಸ್ಸಿನ ಪ್ರಮಾಣದಷ್ಟು ಭೂಮಿ,
ಗಾಊಅ}. ಕ್ರೋಶ ಯುಗ್ಮ(ಓಘ)

ಗಾಗರ. ಪು: [ದೇ] ಹೆಣ್ಣಿನ ಉಡುಗೆ, ಲಂಗ, ಪರಕಾರ, ಮೀನು(ಪಣ್ಣ)

ಗಾಗರೀ. **'ಗಾಯರೀ'** ಶಬ್ದವನ್ನು ನೋಡುವುದು.

ಗಾಗಲಿ. ಪು: [ಗಾಗಲಿ] ಒಬ್ಬ ಜೈನಮುನಿ(ಉತ್ತ)

ಗಾಗೆಜ್ಜ. ವಿ: [ದೇ] ಮಥನ ಮಾಡಲ್ಪಟ್ಟ, ಕದಡಲ್ಪಟ್ಟ

ಗಾಗೆಜ್ಜಾ. ಸ್ತ್ರೀ: [ದೇ] ಮದುಮಗಳು,

ಗಾಡಿಅ. ವಿ: [ದೇ] ವಿಧುರ, ಪತ್ನೀ ವಿಯೋಗವಾದವನು

ಗಾಢ. ವಿ: [ಗಾಢ] ನಿಬಿಡ, ಸಾಂದ್ರ, ದಟ್ಟ, ಗಾಢವಾದ, ಗಟ್ಟಿಯಾದ, ದೃಢವಾದಕ್ರಿ. ವಿ: ಅತಿಶಯವಾದ

ಗಾಣ. ನ: [ಗಾನ] ಗೀತೆ, ಗಾನ, ಹಾಡುವುದು

ಗಾಣ. ವಿ: [ಗಾಯನ] ಹಾಡುಗಾರ, ಸಂಗೀತಜ್ಞ(ದೇ)

ಗಾಣಂಗಣಿಅ. ಪು: [ಗಾಣಂಗಣಿಕ] ಆರು ತಿಂಗಳೊಳಗೇ ಒಂದು ಸಾಧುಗಣದಿಂದ ಇನ್ನೊಂದು ಸಾಧುಗಣಕ್ಕೆ ಹೋಗುವ ಸಾಧು (ಬೃಹ)

ಗಾಣೀ. ಸ್ತ್ರೀ: [ದೇ] **ಗೋಚರಭೂಮಿ,** ಹುಲ್ಲುಗಾವಲು

ಗಾಥಾ. **'ಗಾಹಾ'** ಶಬ್ದವನ್ನು ನೋಡುವುದು.

ಗಾಧ. ವಿ: [ಗಾಧ] ಆಳವಲ್ಲದ.

ಗಾಮ. ಪು: [ಗ್ರಾಮ] ಸಮೂಹ, ನಿಕರ, ಪ್ರಾಣಿಸಮೂಹ, ಹಳ್ಳಿ, ಜನರ ವಾಸಸ್ಥಾನ (ಣಾಯಾ), ಇಂದ್ರಿಯ- ಸಮೂಹ(ಭಗ), **-ಕಂಡಗ, -ಕಂಡಯ.** ಪು: [**-ಕಂಟಕ**] ಇಂದ್ರಿಯ ಸಮೂಹವೆಂಬ ಮುಳ್ಳು(ಔಪ), ದುರ್ಜನರ ಒರಟು ಮಾತು, ಬೈಗುಳ, **-ಘಾಯಗ.** ವಿ: [**-ಘಾತಕ**] ಹಳ್ಳಿಯನ್ನು ನಾಶಮಾಡುವವನು (ಪಣ್ಹ). **-ಣಿದ್ಧಮಣ.** ನ: [**-ನಿರ್ಧಮನ**] ಹಳ್ಳಿಯ ನೀರಿನ ಕಾಲುವೆ. **-ಧಮ್ಮ.** ಪು: [**-ಧರ್ಮ**] ವಿಷಯಾಭಿಲಾಷೆ, ಇಂದ್ರಿಯಗಳ ಸ್ವಭಾವ; ವಿಷಯ-ಪ್ರವೃತ್ತಿ(ಆಚಾ). ಮೈಥುನ.

ಇಂದ್ರಿಯಗಳ ವಿಷಯಗಳಾದ ಶಬ್ದ, ರೂಪ, ವಾಸನೆ ಇತ್ಯಾದಿ. ಗ್ರಾಮದ ಧರ್ಮ, ಗ್ರಾಮದ ಕರ್ತವ್ಯ(ಠಾ). –ದ್ಧ. ಪು.ನಂ: [ಗ್ರಾಮಾರ್ಧ] ಅರ್ಧ ಹಳ್ಳಿ, ಭಾರತದ ಉತ್ತರ ಭಾಗ(ನಿಚೂ). –ಮಾರೀ. ಸ್ತ್ರೀ: [–ಮಾರೀ] ಹಳ್ಳಿಯಲ್ಲೆಲ್ಲಾ ಹರಡಿರುವ ಕಾಯಿಲೆ. –ರೋಗ. ಪು: [–ರೋಗ] ಗ್ರಾಮದಲ್ಲಿ ವ್ಯಾಪಿಸಿರುವ ಕಾಯಿಲೆ. –ವಇ. ಪು: [–ಪತಿ] ಗ್ರಾಮದ ಮುಖಂಡ(ಪಾಅ). **ಗಾಮಾಣುಗ್ಗಾಮ.** ನ: [ಗ್ರಾಮಾನುಗ್ರಾಮ] ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ(ಔಪ). **ಗಾಮಾಯಾರ.** ಪು: [ಗ್ರಾಮಾಚಾರ] ವಿಷಯ.

ಗಾಮಲುಡ}. ಪು: [ದೇ] ಗ್ರಾಮದ ಮುಖಂಡ,

ಗಾಮಲೂಡ}. ಗೌಡ(ದೇ)

ಗಾಮಂತಿಯ. ನ: [ಗ್ರಾಮಾಂತಿಕ] ಹಳ್ಳಿಯ ಗಡಿ, ಗ್ರಾಮದ ಎಲ್ಲೆ(ಆಚಾ), ವಿ: ಹಳ್ಳಿಯ ಗಡಿಯಲ್ಲಿ ವಾಸಿಸುವವನು ಪು: ಜೈನೇತರ ದಾರ್ಶನಿಕ–ವಿಶೇಷ(ಸೂಅ)

ಗಾಮಗೋಹ. ಪು: [ದೇ] ಗ್ರಾಮದ ಮುಖಂಡ(ದೇ)

ಗಾಮಡ. ಪು: [ಗ್ರಾಮಕ] ಹಳ್ಳಿ, ಸಣ್ಣ ಹಳ್ಳಿ

ಗಾಮಣ. ನ: [ದೇ. ಗಮನ] ಭೂಮಿಯಲ್ಲಿ ಸಂಚರಿಸುವುದು, ನೆಲದಲ್ಲಿ ಚಲಿಸುವುದು

ಗಾಮಣಹ. ನ: [ದೇ] ಗ್ರಾಮ– ಪ್ರದೇಶ(ಷಡ್)

ಗಾಮಣಿ. 'ಗಾಮಣೀ' ಶಬ್ದವನ್ನು ನೋಡುವುದು.

ಗಾಮಣಿಸುಅ. ಪು: [ದೇ] ಗ್ರಾಮದ ಮುಖಂಡ(ದೇ)

ಗಾಮಣೀ. ಪು: (ದೇ) ಗ್ರಾಮದ ಮುಖಂಡ(ದೇ)

ಗಾಮಣೀ. ವಿ: (ಗ್ರಾಮಣೀ] ಶ್ರೇಷ್ಠ, ಪ್ರಧಾನ, ನಾಯಕ(ಗಾ), ಪು: ಒಂದು ಬಗೆಯ ಹುಲ್ಲು: ನೀಲಿಗಿಡ.

ಗಾಮಪಿಂಡೋಲಗ. ಪು: [ದೇ] ಭಿಕ್ಷೆಯಿಂದ ಹೊಟ್ಟೆ ತುಂಬಿಸಿಕೊಳ್ಳಲು ಗ್ರಾಮವನ್ನಾಶ್ರಯಿಸುವ ಭಿಕ್ಷುಕ(ಆಚಾ)

ಗಾಮರೋಡ. ಪು: [ದೇ] ಮೋಸದಿಂದ ಗ್ರಾಮದ ಮುಖಂಡನಾಗಿ ಬಿಡುವವನು; ಹಳ್ಳಿಯ ಜನರಲ್ಲಿ ದ್ವೇಷ ಹುಟ್ಟಿಸಿ ಹಳ್ಳಿಯ ಯಜಮಾನ ನೆನಿಸುವವನು(ದೇ)

ಗಾಮಾಗ. ಪು: [ಗ್ರಾಮಾಕ] ಒಂದು ಗ್ರಾಮ; ಈ ಹೆಸರಿನ ಒಂದು ಸನ್ನಿವೇಶ(ಆವಮ)

ಗಾಮಾರ. ವಿ: [ದೇ. ಗ್ರಾಮೀಣ] ಹಳ್ಳಿಗ, ಸಣ್ಣ ಹಳ್ಳಿಯಲ್ಲಿ ವಾಸಿಸುವವನು

ಗಾಮಿ. ವಿ: [ಗಾಮಿನ್] ಹೋಗುವವನು, ನಡೆಯುವವನು(ಆಚಾ), ಸ್ತ್ರೀ: –ಣೀ

ಗಾಮಿಅ. ವಿ: [ಗ್ರಾಮಿಕ] 'ಗಾಮಿಲ್ಲ' ಶಬ್ದವನ್ನು ನೋಡುವುದು. ಗ್ರಾಮದ ಮುಖಂಡ; ವಿಷಯ ಸುಖದ ಅಭಿಲಾಷಿ(ಆಚಾ)

ಗಾಮಿಣಿಆ. ಸ್ತ್ರೀ: [ಗಾಮಿನಿಕಾ] ಹೋಗುತ್ತಿರುವವಳು, ನಡೆಯುತ್ತಿರುವವಳು

ಗಾಮಿಲ್ಲ}. ವಿ: [ಗ್ರಾಮೀಣ] ಹಳ್ಳಿಯಲ್ಲಿ

ಗಾಮಿಲ್ಲುಅ}. ವಾಸಿಸುವವನು, ಹಳ್ಳಿಗ(ಪಉಮ), ಸ್ತ್ರೀ:

ಗಾಮೀಣ}. –ಲ್ಲೀ.

ಗಾಮುಅ. ವಿ: [ಗಾಮುಕ] ಹೋಗುವವನು

ಗಾಮೇಇಆ. ಸ್ತ್ರೀ: [ಗ್ರಾಮೇಯಿಕಾ] ಹಳ್ಳಿಯಲ್ಲಿ ವಾಸಿಸುವವಳು(ಗಉಡ)

ಗಾಮೇಣೀ. ಸ್ತ್ರೀ: [ದೇ] ಹೆಣ್ಣುಕುರಿ

ಗಾಮೇಯ.} ವಿ: [ಗ್ರಾಮೇಯಕ] ಹಳ್ಳಿಯ

ಗಾಮೇಯಗ}. ನಿವಾಸಿ(ಬೃಹ)

ಗಾಮೇರೇಡ(ದೇ). 'ಗಾಮರೋಡ' ಶಬ್ದವನ್ನು ನೋಡುವುದು.

ಗಾಮೇಲುಅ}. 'ಗಾಮಿಲ್ಲ' ಶಬ್ದವನ್ನು ನೋಡುವುದು

ಗಾಮೆಲ್ಲ}.

ಗಾಮೇಸ. ಪು: [ಗ್ರಾಮೇಶ] ಗ್ರಾಮದ ಅಧಿಪತಿ

ಗಾಯಣ. ವಿ: [ಗಾಯನ] ಗಾಯಕ, ಹಾಡುಗಾರ

ಗಾಯರೀ. ಸ್ತ್ರೀ: [ದೇ] ಸಣ್ಣ ಕೊಡ, ಸಣ್ಣಭ ಗಡಿಗೆ

–ಗಾರ. ವಿ: [–ಕಾರ] ಮಾಡುವವನು, ಕರ್ತೃ

ಗಾರ. ಪು: [ದೇ. ಗ್ರಾವನ್] ಕಲ್ಲು(ವವ)

ಗಾರ. ನ: [ಆಗಾರ] ಮನೆ, **–ತ್ಥ.** ಪುಂಸ್ತ್ರೀ: [–ಸ್ಥ] ಗೃಹಸ್ಥ, **–ತ್ಥಿಯ.** ಪುಂಸ್ತ್ರೀ:[–ಸ್ಥಿತ] ಗೃಹಸ್ಥ, ಸಂಸಾರಿ

–ಗಾರಯ. ವಿ: [ಕಾರಕ] ಕರ್ತೃ, ಮಾಡುವವನು

ಗಾರವ. ಪುಂನ: [ಗೌರವ] ಅಭಿಮಾನ, ಅಹಂಕಾರ, ಅಭಿಲಾಷೆ, ಮಹತ್ವ, ಗುರುತ್ವ, ಗಣ್ಯತೆ, ಮರ್ಯಾದೆ(ಕುಮಾ), ಸಮ್ಮಾನ, ಆದರ (ಷಡ್)

ಗಾರವಿಯ. ವಿ: [ಗೌರವಿತ] ಗೌರವಾನ್ವಿತ, ಅಭಿಮಾನಿ, ಅಭಿಲಾಷೆಯುಳ್ಳವ(ಸೂಅ)

ಗಾರವಿಲ್ಲ. ವಿ: [ಗೌರವವತ್] ಮೇಲಿನ ಶಬ್ದವನ್ನು ನೋಡುವುದು.

ಗಾರಹತ್ಥ. ವಿ: [ಗಾರ್ಹಸ್ಥ್ಯ] ಗೃಹಸ್ಥನಿಗೆ ಸಂಬಂಧಿಸಿದ
ಗಾರಿ. ಪುಂಸ್ತ್ರೀ: [ಅಗಾರಿನ್] ಗೃಹಸ್ಥ, ಸಂಸಾರಿ(ಉತ್ತ)
ಗಾರಿಹತ್ಥಿಯ. ಸ್ತ್ರೀನ: [ಗಾರ್ಹಸ್ಥ್ಯ] ಗೃಹಸ್ಥನಿಗೆ ಸಂಬಂಧಿಸಿದ
ಗಾರುಡ}. ವಿ: [ಗಾರುಡ] ಗರುಡನಿಗೆ ಸಂಬಂಧಿಸಿದ,
ಗಾರುಲ}. ಹಾವಿನ ವಿಷವನ್ನು ಇಳಿಸುವವನು(ಉಪ). ಪು: ಸರ್ಪದ ವಿಷವನ್ನು ಹೋಗಲಾಡಿಸುವ ಮಂತ್ರ, ನ: ಸರ್ಪದ ವಿಷವನ್ನು ನಾಶಮಾಡುವ ವರ್ಣನೆ ಇರುವ ಶಾಸ್ತ್ರ; ಮಂತ್ರಶಾಸ್ತ್ರ. **–ಮಂತ.** ಪು: [–ಮಂತ್ರ] ಹಾವಿನ ವಿಷ ನಾಶಮಾಡುವ ಮಂತ್ರ. **–ವಿಉ.** ವಿ: [–ವಿತ್] ಗರುಡ ಮಂತ್ರ ತಿಳಿದವನು(ಉಪ)
ಗಾಲ. ಸಕ: [ಗಾಲಯ್] ಸೋಸು, ಶುದ್ಧೀಕರಿಸು. ನಾಶಮಾಡುವುದು, ಉಲ್ಲಂಘಿಸು ಮೀರು
ಗಾಲಣ. ನ: [ಗಾಲನ] ಶೋಧಿಸುವುದು, ಸೋಸುವುದು (ಪಣ್ಣ)
ಗಾಲಣಾ. ಸ್ತ್ರೀ: [ಗಾಲನಾ] ಶೋಧಿಸುವುದು, ಸೋಸುವುದು. ಬೀಳಿಸುವುದು, ಕರಗಿಸಿಸು(ವಿಪಾ)
ಗಾಲವಾಹಿಯಾ. ಸ್ತ್ರೀ: [ದೇ] ಸಣ್ಣ ನೌಕೆ
ಗಾಲಿ. ಸ್ತ್ರೀ: [ಗಾಲಿ] ಬೈಗಳು, ಅಪಶಬ್ದ(ಸುಪಾ)
ಗಾಲಿಯ. ವಿ: [ಗಾಲಿತ] ಶೋಧಿಸಲಾದ, ಮೀರಲಾದ, ದಾಟಿದ. ನಾಶಮಾಡಲ್ಪಟ್ಟ, ಎಸೆಯಲ್ಪಟ್ಟ
ಗಾಲೀ. ಸ್ತ್ರೀ: [ಗಾಲೀ] **'ಗಾಲಿ'** ಶಬ್ದವನ್ನು ನೋಡುವುದು.
ಗಾವ(ಅಪ). **'ಗಾ'** ಶಬ್ದವನ್ನು ನೋಡುವುದು.
ಗಾವ.(ಅಪ). **'ಗವ್ವ'** ಶಬ್ದವನ್ನು ನೋಡುವುದು.
ಗಾವ. ವಿ: [ದೇ] ಹೋದ, ಕಳೆದು ಹೋದ(ಷಡ್)
ಗಾವ}. ಪು: [ಗ್ರಾವನ್] ಕಲ್ಲು(ಪಾಅ), ಬಂಡೆ,
ಗಾವಾಣ}. ಪರ್ವತ, ಬೆಟ್ಟ(ಹೇ)
ಗಾವಿ(ಅಪ). **'ಗವ್ವಿಯ'** ಶಬ್ದವನ್ನು ನೋಡುವುದು.
ಗಾವಿ. ಸ್ತ್ರೀ: [ಗೋ] ಹಸು
ಗಾಸ. ಪು: [ಗ್ರಾಸ] ಕವಳ, ಭೋಜನ, ತುತ್ತು(ಸುಪಾ)
ಗಾಹ. **'ಗಹ=ಗ್ರಹ್'** ಶಬ್ದವನ್ನು ನೋಡುವುದು.
ಗಾಹ. ಸಕ: [ಗ್ರಾಹಯ್] ಗ್ರಹಣ ಮಾಡು, ಸ್ವೀಕರಿಸು, ಹಿಡಿದುಕೊಳ್ಳು
ಗಾಹ. ಸಕ: [ಗಾಹ್] ಹುಡುಕು, ಓದು, ಅಭ್ಯಾಸಮಾಡು, ಅನುಭವಕ್ಕೆ ತಂದುಕೊಳ್ಳು

ಗಾಹ. ಪು: [ಗಾಧ] ಆಳ
ಗಾಹ. ಪು: [ಗ್ರಾಹ] ಮೊಸಳೆ, ಹಠ, ಆಗ್ರಹ(ವಿಸೇ), ಸ್ವೀಕಾರ, ತೆಗೆದುಕೊಳ್ಳುವುದು(ನಿಚೂ), ಗಾರುಡಿಗ; ಹಾವನ್ನು ಹಿಡಿಯುವ ಜನವರ್ಗ(ಬೃಹ), **–ವಈ.** ಸ್ತ್ರೀ: [–ವತೀ] ಒಂದು ನದಿ.
ಗಾಹಗ. ವಿ: [ಗ್ರಾಹಕ] ತೆಗೆದುಕೊಳ್ಳುವವನು, ಸ್ವೀಕರಿಸುವವನು(ಸುಪಾ).ತಿಳಿದುಕೊಳ್ಳುವವನು. ತಿಳಿಸುವವನು, ಹೇಳಿಕೊಡುವವನು, ಶಿಕ್ಷಕ, ಗುರು(ಔಪ) ಜ್ಞಾಪಿಸುವವನು, ಬೋಧಕ
ಗಾಹಣ. ನ: [ಗ್ರಾಹಣ] ಸ್ವೀಕರಿಸುವುದು, ತೆಗೆದುಕೊಳ್ಳುವಂತೆ ಮಾಡುವುದು, ಶಾಸ್ತ್ರ, ಸಿದ್ಧಾಂತ. ಬೋಧನೆಯ ಮಾತುಗಳು, ಶಿಕ್ಷಣ, ಉಪದೇಶ(ಪಣ್ಣ)
ಗಾಹಣಯಾ}. ಸ್ತ್ರೀ: [ಗ್ರಾಹಣಾ] ಮೇಲಿನ ಶಬ್ದವನ್ನು
ಗಾಹಣಾ}. ನೋಡುವುದು.
ಗಾಹಯ. **'ಗಾಹಗ'** ಶಬ್ದವನ್ನು ನೋಡುವುದು.
ಗಾಹಾ. ಸ್ತ್ರೀ: [ಗಾಥಾ] ಅಧ್ಯಯನ, ಗ್ರಂಥದ ಪ್ರಕರಣ, ಒಂದು ಛಂದಸ್ಸು, ಆರ್ಯಾದ ಒಂದು ಪ್ರಭೇದ, ಗೀತಿ. ಮರ್ಯಾದೆ, ಪ್ರತಿಷ್ಠೆ, ನಿಶ್ಚಯ, 'ಸೂತ್ರ ಕೃತಾಂಗ'ದ ೧೬ನೇ ಅಧ್ಯಯನ(ಸೂಅ)
ಗಾಹಾ. ಸ್ತ್ರೀ: [ದೇ] ಗೃಹ, ಮನೆ. **–ವಇ.** ಪುಂಸ್ತ್ರೀ: [–ಪತಿ] ಗೃಹಸ್ಥ, ಸಂಸಾರಿ, ಶ್ರೀಮಂತ ಕೋಶಾಧ್ಯಕ್ಷ, ಸ್ತ್ರೀ: –ಣೀ(ಣಾಯಾ)
ಗಾಹಾಲ. ಪು: [ಗ್ರಾಹಾಲ] ಮೂರು ಇಂದ್ರಿಯಗಳ ಒಂದು ಕೀಟ.
ಗಾಹಾವಈ. ಸ್ತ್ರೀ: [ಗ್ರಾಹಾವತೀ] ಒಂದು ನದಿ, ಒಂದು ದ್ವೀಪ. ಗ್ರಾಹಾವತಿ ನದಿಯ ಮೂಲವಾದಮಡು.
ಗಾಹಾವಿಯ. ವಿ: [ಗ್ರಾಹಿತ] ಹಿಡಿಯುವಂತೆ ಮಾಡಲ್ಪಟ್ಟವನು, ಸ್ವೀಕರಿಸುವಂತೆ ಮಾಡಲಾದವನು
ಗಾಹಿಣೀ. ಸ್ತ್ರೀ: [ಗಾಹಿನೀ] ಮುಳುಗುತ್ತಿರುವ ಹೆಂಗಸು, ಒಂದು ಛಂದಸ್ಸು
ಗಾಹಿಪುರ. ನ: [ಗಾಧಿಪುರ] ಒಂದು ನಗರ
ಗಾಹಿಯ. ವಿ: [ಗ್ರಾಹಿತ] ಹಿಡಿಯುವಂತೆ ಮಾಡಲ್ಪಟ್ಟವನು, ಸ್ವೀಕರಿಸುವಂತೆ ಮಾಡಲಾದವನು(ಸೂಅ), ತಿರುಗಿಸಲ್ಪಟ್ಟವನು, ಉತ್ತೇಜನಗೊಳಿಸಲ್ಪಟ್ಟವನು

ಗಾಹೀಕಯ. ವಿ: [ಗಾಥೀಕೃತ] ಒಟ್ಟುಗೂಡಿಸಲ್ಪಟ್ಟ,
ಗಾಹು. ಸ್ತ್ರೀ: [ಗಾಹು] ಒಂದು ಛಂದಸ್ಸು
ಗಾಹುಲಿ. ಪುಂಸ್ತ್ರೀ: [ದೇ] ಮೊಸಳೆ
ಗಾಹುಲ್ಲಿಂಸಾ. 'ಗಾಹಾ=ಗಾಥಾ' ಶಬ್ದವನ್ನು ನೋಡುವುದು.
ಗಿಂಠಿ. ಸ್ತ್ರೀ: [ಗೃಷ್ಟಿ] ಒಂದು ಮಗುವನ್ನು ಹೆತ್ತ ಹೆಂಗಸು, ಒಂದು ಕರು ಹಾಕಿದ ಹಸು(ಹೇ)
ಗಿಂಥುಅ.(ದೇ). 'ಗೇಂತುಅ' ಶಬ್ದವನ್ನುನೋಡುವುದು
ಗಿಂಥುಲ್ಲ.(ದೇ). 'ಗೇಂತುಲ್ಲ'ಶಬ್ದವನ್ನುನೋಡುವುದು
ಗಿಂಭ.(ಅಪ). 'ಗಿಮ್ಹ' ಶಬ್ದವನ್ನು ನೋಡುವುದು.
ಗಿಂಹ. 'ಗಿಮ್ಹ' ಶಬ್ದವನ್ನು ನೋಡುವುದು.
ಗಿಜ್ಜಂತ. 'ಗಾ' ಶಬ್ದವನ್ನು ನೋಡುವುದು.
ಗಿಜ್ಝ. ಅಕ: [ಗೃಧ್] ಅತ್ಯಾಶೆ ಹೊಂದು, ಲಂಪಟನಾಗು
ಗಿಜ್ಝ. ವಿ: [ಗೃಹಾ, ಗ್ರಾಹಾ] ಸ್ವೀಕರಿಸಲು ಅರ್ಹವಾದ್ದು, ತೆಗೆದುಕೊಳ್ಳಲು ಯೋಗ್ಯವಾದ್ದು. ತನ್ನದಾಗಿ ಮಾಡಿಕೊಳ್ಳಬಹುದಾದ್ದು(ಶಾ)
ಗಿಟ್ಠಿ. 'ಗಿಂಠಿ' ಶಬ್ದವನ್ನು ನೋಡುವುದು.
ಗಿಡ್ಡಿಯಾ. ಸ್ತ್ರೀ: [ದೇ] ಚೆಂಡಾಟವಾಡುವ ಕೋಲು
ಗಿಣ. 'ಗಣ=ಗಣಯ್' ಶಬ್ದವನ್ನು ನೋಡುವುದು.
ಗಿಣ್ಹ. 'ಗಹ=ಗ್ರಹ್' ಶಬ್ದವನ್ನು ನೋಡುವುದು.
ಗಿಣ್ಹಣ. 'ಗಹಣ= ಗ್ರಹಣ' ಶಬ್ದವನ್ನು ನೋಡುವುದು.
ಗಿಣ್ಹಣಾ. ಸ್ತ್ರೀ: [ಗ್ರಹಣ] ಸ್ವೀಕರಣ, ತೆಗೆದುಕೊಳ್ಳುವುದು (ಉತ್ತ)
ಗಿದ್ಧ. ವಿ: [ಗೃಧ್ರ] ಹದ್ದು(ಪಾಅ)
ಗಿದ್ಧ. ವಿ: [ಗೃದ್ಧ] ಆಸಕ್ತ, ಅತ್ಯಾಶಿ, ಲಂಪಟ, ಲೋಲುಪ(ಸೂಅ)
ಗಿದ್ಧಪಿಟ್ಠ. ನ: [ಗೃಧ್ರಸ್ಪೃಷ್ಟ, ಗೃಧ್ರಪುಷ್ಟ] ಆತ್ಮಹತ್ಯೆಯ ಉದ್ದೇಶದಿಂದ ಹದ್ದಿಗೆ ತನ್ನ ಶರೀರವನ್ನು ತಿನ್ನಲು ಒಪ್ಪಿಸುವುದು
ಗಿದ್ಧಿ. ಸ್ತ್ರೀ:[ಗೃದ್ಧಿ]ಆಸಕ್ತಿ, ಲಂಪಟತೆ, ಒಂದು ದೇವ ವಿಮಾನ
ಗಿನ್ಹಣಾ. 'ಗಿಣ್ಹಣಾ' ಶಬ್ದವನ್ನು ನೋಡುವುದು.
ಗಿಮ್ಹ. ಪು: [ಗ್ರೀಷ್ಮ] ಬೇಸಿಗೆ, ಗ್ರೀಷ್ಮ ಋತು(ಹೇ)
ಗಿಮ್ಹಾ. ಸ್ತ್ರೀ: 'ಗಿಮ್ಹ' ಶಬ್ದವನ್ನು ನೋಡುವುದು.
ಗಿರ. ಸಕ: [ಗೃ] ಮಾತನಾಡು, ಉಚ್ಚರಿಸು, ನುಂಗು
ಗಿರಾ. ಸ್ತ್ರೀ: [ಗಿರ್] ವಾಣಿ, ಮಾತು, ಭಾಷೆ(ಹೇ)
ಗಿರಿ. ಪು: [ಗಿರಿ] ಬೆಟ್ಟ, ಪರ್ವತ(ಗಉಡ) –ಅಡೀ. ಸ್ತ್ರೀ: [–ತಟೀ] ಪರ್ವತದಲ್ಲಿಯ ನದಿ. –ಕಣ್ಣಈ. ಸ್ತ್ರೀ: [–ಕರ್ಣೀ] ವಿಷ್ಣುಕ್ರಾಂತಿಯ ಬಳ್ಳಿ, ಗಿಡ. –ಕೂಡ. ನ:[–ಕೂಟ] ಪರ್ವತದ ಶಿಖರ. ಪು: ರಾಮಚಂದ್ರನ ಅರಮನೆ(ಪಉಮ)–ಜಣ್ಣ. ಪು: [–ಯಜ್ಞ] ಕೊಂಕಣ ಸೀಮೆಯಲ್ಲಿ ಆಚರಿಸುವ ಒಂದು ಬಗೆಯ ಉತ್ಸವ(ಬೃಹ). –ಣಈ. ಸ್ತ್ರೀ: [–ನದೀ] ಪರ್ವತದಲ್ಲಿಯ ನದಿ. –ಣಾಲ. ಪು: [–ನಾರ] ಕಾಥೇವಾಡದಲ್ಲಿ ಇಂದಿಗೂ 'ಗಿರನಾರ್' ಎಂಬ ಹೆಸರಿನಿಂದಪ್ರಸಿದ್ಧವಾಗಿರುವ ಪರ್ವತ. –ದಾರಿಣೀ. ಸ್ತ್ರೀ: [–ದಾರಿಣೀ] ಒಂದು ವಿದ್ಯೆ(ಪಉಮ). [–ನಈ]. '–ಣಈ' ಅನ್ನು ನೋಡುವುದು. –ಪಕ್ಖಂದಣ. ನ: [–ಪ್ರಸ್ಕಂದನ] ಬೆಟ್ಟದ ಮೇಲಿನಿಂದ ಬೀಳುವುದು(ನಿಚೂ). –ಯಡಯ. ನ: [–ಕಟಕ] ಪರ್ವತದ ಮಧ್ಯಭಾಗ. –ಪಬ್ಭಾರ. ಪು: [–ಪ್ರಾಗ್ಭಾರ] ಪರ್ವತದ ತಪ್ಪಲು. –ರಾಯ. ಪು: [–ರಾಜ] ಮೇರು ಪರ್ವತ. –ವರ. ಪು: [–ವರ] ಪ್ರಧಾನ ಪರ್ವತ. –ವರಿಂದ. ಪು: [–ವರೇಂದ್ರ] ಮೇರು ಪರ್ವತ. –ಸುಆ. ಸ್ತ್ರೀ: [–ಸುತಾ] ಪಾರ್ವತಿ, ಗೌರಿ
ಗಿರಿ. ಪು: [ದೇ] ಬೀಜಕೋಶ
ಗಿರಿಕನ್ನೀ. 'ಗಿರಿ–ಕಣ್ಣೀ' ಶಬ್ದವನ್ನು ನೋಡುವುದು.
ಗಿರಿಂದ. ಪು: [ಗಿರೀಂದ್ರ] ಶ್ರೇಷ್ಠ ಪರ್ವತ, ಮೇರು ಪರ್ವತ, ಹಿಮಾಚಲ(ಕಪ್ಪೂ)
ಗಿರಿಡೀ. ಸ್ತ್ರೀ: [ದೇ] ಪ್ರಾಣಿಗಳ ಹಲ್ಲನ್ನು ಕಟ್ಟುವ ಒಂದು ಉಪಕರಣ
ಗಿರಿನಯರ. ನ: [ಗಿರಿನಗರ] ಗಿರನಾರ ಪರ್ವತದ ಕೆಳಗಿನ ನಗರ, ಈಗ ಜೂನಾಗಢ ಎಬ ಹೆಸರಿದೆ.
ಗಿರಿಫುಲ್ಲಿಯ. ನ: [ಗಿರಿಪುಷ್ಪಿತ] ಒಂದು ನಗರ–ವಿಶೇಷ
ಗಿರಿಸ. ಪು: [ಗಿರಿಶ] ಶಿವ, –ವಾಸ. ಪು: [– ವಾಸ] ಕೈಲಾಸ ಪರ್ವತ
ಗಿರೀಸ ಪು: [ಗಿರೀಶ] ಹಿಮಾಚಲ, ಶಿವ
ಗಿಲ. ಸಕ: [ಗೃ] ನುಂಗು, ಭಕ್ಷಿಸು
ಗಿಲಣ. ನ: [ಗರಣ] ಭಕ್ಷಿಸುವುದು, ನುಂಗುವುದು
ಗಿಲಾ}. ಅಕ: [ಗ್ಲೈ] ರೋಗಿಯಾಗು, ಖಿನ್ನನಾಗು,
ಗಿಲಾಅ}. ಆಯಾಸಗೊಳ್ಳು, ದುಃಖಿಯಾಗು
ಗಿಲಾ. ಸ್ತ್ರೀ: [ಗ್ಲಾನಿ] ಕಾಯಿಲೆ, ರೋಗ, ಆಯಾಸ, ಖೇದ

ಗಿಲಾಣ. 'ಗಿಲಾಅ' ಶಬ್ದವನ್ನು ನೋಡುವುದು.
ಗಿಲಾಣ. ವಿ: [ಗ್ಲಾನ] ರೋಗಿ(ಸೂಅ), ಅಶಕ್ತ, ಆಯಾಸಗೊಂಡ, ದುಃಖಿ, ವ್ಯಥಿತ (ಣಾಯಾ)
ಗಿಲಾಣೀ. ಸ್ತ್ರೀ: [ಗ್ಲಾನಿ] ಖೇದ, ಆಯಾಸ, ಗ್ಲಾನಿ(ಠಾ)
ಗಿಲಾಯಯ. ವಿ: [ಗ್ಲಾಯಕ] ಗ್ಲಾನಿಯಿಂದ ಕೂಡಿದ
ಗಿಲಾಸಿ. ಪುಂಸ್ತ್ರೀ: [ಗ್ರಾಸಿನ್] ಹೆಚ್ಚು ಹಸಿವನ್ನುಂಟು ಮಾಡುವ ರೋಗ, ಭಸ್ಮಕ ರೋಗ. ಸ್ತ್ರೀ: –ಣೀ.
ಗಿಲಿಅ. ವಿ: [ಗಿಲಿತ] ನುಂಗಲ್ಪಟ್ಟ, ಭಕ್ಷಿಸಲಾದ(ಸುಪಾ)
ಗಿಲಿಅವಂತ. ವಿ: [ಗಿಲಿತವತ್] ನುಂಗಿದವನು, ಭಕ್ಷಿಸಿದವನು
ಗಿಲೋಇಯಾ}. ಸ್ತ್ರೀ: [ದೇ] ಹಲ್ಲಿ(ಸುಪಾ)
ಗಿಲೋಈ}.
ಗಿಲ್ಲೀ. ಸ್ತ್ರೀ: [ದೇ] ಆನೆಯ ಬೆನ್ನ ಮೇಲೆ ಹೊದಿಸುವ ಹೌಡಾ. ಇಬ್ಬರು ಎತ್ತುವಂಥ ಒಂದು ಪಲ್ಲಕ್ಕಿ ಮೇನೆ(ಸುಪಾ)
ಗಿವ್ವಾಣ. ಪು: [ಗೀರ್ವಾಣ] ದೇವ, ಸುರರು,
ಗಿಹ. ನ: [ಗೃಹ] ಮನೆ, (ಆಚಾ). –ತ್ಥ. ಪು: [–ಸ್ಥ.] ಗೃಹಸ್ಥ, ಸಂಸಾರಿ.–ನಾಹ. ಪು: [–ನಾಥ] ಮನೆಯ ಮಾಲೀಕ, –ಲಿಂಗಿ. ಪುಂಸ್ತ್ರೀ: [–ಲಿಂಗಿನ್] ಗೃಹಸ್ಥ, ಸಂಸಾರಿ. –ವಇ. ಪುಂಸ್ತ್ರೀ: [–ಪತಿ] ಮನೆಯ ಮಾಲೀಕ, ಗೃಹಸ್ಥ. –ವಾಸ. ಪು: [–ವಾಸ] ಮನೆಯಲ್ಲಿ ವಾಸಿಸುವುದು, ಗೃಹಸ್ಥಾಶ್ರಮ, ಗಿಹಾವಟ್ಟ. ಪು: [ಗೃಹಾವರ್ತ] ಎರಡನೇ ಆಶ್ರಮ, ಗೃಹಸ್ಥಿಕೆ(ಸೂಅ), ಗಿಹಾಸಮ. ಪು: [ಗೃಹಾಶ್ರಮ] ಎರಡನೇ ಆಶ್ರಮವಾದ ಗೃಹಸ್ಥಾಶ್ರಮ
ಗಿಹಕೋಇಲಾ. ಸ್ತ್ರೀ: [ಗೃಹಕೋಕಿಲಾ] ಓತಿಕ್ಯಾತ
ಗಿಹಮೇಹಿ. ಪು: [ಗೃಹಮೇಧಿನ್] ಗೃಹಸ್ಥ
ಗಿಹವಇ. ಪು: [ಗೃಹಪತಿ] ದೇಶದ ಅಧಿಪತಿ
ಗಿಹಿ. ಪು: [ಗೃಹಿನ್] ಸಂಸಾರಿ, ಗೃಹಸ್ಥ(ಓಘ). –ಧಮ್ಮ. ಪು: [–ಧರ್ಮ] ಗೃಹಸ್ಥ ಧರ್ಮ, ಶ್ರಾವಕ ಧರ್ಮ. –ಲಿಂಗ. ನ: [–ಲಿಂಗ] ಗೃಹಸ್ಥನ ವೇಷ
ಗಿಹಿಣೀ. ಸ್ತ್ರೀ: [ಗೃಹಿಣೀ] ಗೃಹಿಣಿ, ಭಾರ್ಯೆ(ಸುಪಾ)
ಗಿಹೀಅ. ವಿ: [ಗೃಹೀತ] ಸ್ವೀಕರಿಸಲ್ಪಟ್ಟ, ತೆಗೆದುಕೊಂಡ,
ಗಿಹೇಲುಗ}. ಪು: [ಗೃಹೈಲುಕ] ಹೊಸಿಲು, ಹೊಸ್ತಿಲು
ಗಿಹೇಲುಯ}. (ನಿಚೂ)
ಗೀ. ಸ್ತ್ರೀ: [ಗಿರ್] ವಾಣಿ, ಮಾತು, ಭಾಷೆ(ಗಲುಡ)
ಗೀಆ. ಸ್ತ್ರೀ: [ಗೀತಾ] ಒಂದು ಛಂದಸ್ಸು
ಗೀಇ. ಸ್ತ್ರೀ: [ಗೀತಿ] ಆರ್ಯಾ ವೃತ್ತದ ಒಂದು ಪ್ರಭೇದವಾದ ಗೀತಿ ಛಂದಸ್ಸು. ಗಾನ, ಹಾಡುಗಾರಿಕೆ, ಗಾನ(ಠಾ)
ಗೀಇಯಾ. ಸ್ತ್ರೀ: [ಗೀತಿಕಾ] ಮೇಲಿನ ಶಬ್ದವನ್ನು ನೋಡುವುದು(ಔಪ)
ಗೀಯ. ವಿ: [ಗೀತ] ಪದ್ಯಮಯವಾದ ವಾಕ್ಯ, ಯಾವುದನ್ನು ಹಾಡಲಾಗುತ್ತದೋ ಅದು(ಪಣ) ಹೇಳಲ್ಪಟ್ಟ, ಪ್ರತಿಪಾದಿತ. ಪ್ರಸಿದ್ಧ, ಖ್ಯಾತ. ನ: ತಾಳ ಮತ್ತು ವಾದ್ಯಕ್ಕೆ ತಕ್ಕಂತೆ ಹಾಡುವಂಥದು. ಗಾನ–ಕಲೆ, ಸಂಗೀತಶಾಸ್ತ್ರದ ಪರಿಜ್ಞಾನ. ಪು: ಗೀತಾರ್ಥ. ಉತ್ಸರ್ಗ ಅಪವಾದವೇ ಮೊದಲಾದವುಗಳ ಜ್ಞಾನ ಹೊಂದಿರುವ ಜೈನ ಸಾಧು ವಿದ್ವಾನ್ ಜೈನಮುನಿ. –ಜಸ್. ಪು: [–ಯಶಸ್] ಗಂಧರ್ವ ದೇವತೆಗಳ ಸಇಂದ್ರ(ಠಾ), –ತ್ಥ. ಪು: [ಗೀತಾರ್ಥ] ವಿದ್ವಾಂಸ ಜೈನಮುನಿ, ಸಂಗೀತ ರಹಸ್ಯ. –ಪುರ. ನ: [–ಪುರ] ಒಂದು ನಗರ. –ರಇ. ಸ್ತ್ರೀ: [–ರತಿ] ಸಂಗೀತ–ಕ್ರೀಡೆ, ಪು: ಗಂಧರ್ವ ದೇವತೆಗಳ ಒಬ್ಬ ಇಂದ್ರ(ಭಗ). ಗಂಧರ್ವ ಸೇನೆಯ ಅಧಿಪತಿ ದೇವ(ಠಾ). ಸಂಗೀತಪ್ರಿಯ, ಗಾನಪ್ರಿಯ(ವಿಪಾ)
ಗೀವಾ. ಸ್ತ್ರೀ: [ಗ್ರೀವಾ] ಕೊರಳು, ಕಂಠ, ಕತ್ತು
ಗುಂಛ. 'ಗುಚ್ಛ' ಶಬ್ದವನ್ನು ನೋಡುವುದು
ಗುಂಛಾ. ಸ್ತ್ರೀ: [ದೇ] ಬಿಂದು, ಗಡ್ಡ–ಮೀಸೆ, ಅಧಮ
ಗುಂಜ.ಅಕ:[ಹಸ್] ನಗು, ಹಾಸ್ಯಮಾಡು(ವುದು(ಹೇ)
ಗುಂಜ. ಅಕ: [ಗುಂಜ್] ಗುನುಗುನಿಸುವುದು, ದುಂಬಿಯ ಹಾಗೆ ಮಧುರ ಧ್ವನಿಮಾಡು, ಸಿಂಹವೇ ಮೊದಲಾದವುಗಳ ರೀತಿ ಗರ್ಜಿಸು, ಶಬ್ದ ಮಾಡು
ಗುಂಜ. ಪು: [ಗುಂಜ] ಗುಂಜಾರವ ಮಾಡುತ್ತಿರುವ ವಾಯು, ಒಂದು ಪರ್ವತ(ಪಉಮ)
ಗುಂಜಾ. ಸ್ತ್ರೀ: [ಗುಂಜಾ] ಒಂದು ಲತೆ, ಗುಲಗಂಜಿ ಬಳ್ಳಿ, ಗುಲಗಂಜಿ ಕಾಯಿ, ತಮಟೆ, ಅಳತೆ: ನಾಲ್ಕು ಅಕ್ಕಿ ಕಾಳು ತೂಕ, ಎರಡು ಗೋಧಿ ಕಾಳು ತೂಕ, ಗುಂಜಾರವ, ಮಧುರ ಧ್ವನಿ ಗುಂಜಾರವ ಮಾಡುತ್ತಿರುವ ಗಾಳಿ, –ಫಲ, –ಹಲ. ನ: [–ಫಲ] ಗುಲಗಂಜಿ ಕಾಯಿ(ಸುಪಾ)

ಗುಂಜಾಲಿಆ. ಸ್ತ್ರೀ: [ಗುಂಜಾಲಿಕಾ] ಆಳವಾದ ಮತ್ತು ಡೊಂಕಾದ ಬಾವಿ

ಗುಂಜಾಲಿಯಾ. ಸ್ತ್ರೀ: [ಗುಂಜಾಲಿಕಾ] ಡೊಂಕಾದ ಸಸಿ ಮಡಿ(ಣಾಯಾ), ಗುಂಡನೆಯ ಆಕಾರದ ಪುಷ್ಕರಿಣಿ. ಡೊಂಕಾದ ನದಿ(ಪಣ್ಣ)

ಗುಂಜಾವಿಅ. ವಿ: [ಹಾಸಿತ] ನಗಿಸಲ್ಪಟ್ಟ

ಗುಂಜಿಅ. ನ:[ಗುಂಜಿತ] ಭ್ರಮರದ ಗುಂಜಾರವ (ಕುಮಾ)

ಗುಂಜಿರ. ವಿ:[ಗುಂಜಿತೃ] ಗುಂಜಾರವ ಮಾಡುವ(ಉಪ)

ಗುಂಜುಲ್ಲ. 'ಗುಂಜೊಲ್ಲ' ಶಬ್ದವನ್ನು ನೋಡುವುದು

ಗುಂಜೆಲ್ಲಿಅ. ವಿ: [ದೇ] ರಾಶಿಮಾಡಿದ, ಒಟ್ಟುಗೂಡಿಸಲಾದ

ಗುಂಜೊಲ್ಲ. ಸಕ: [ವಿ+ಉಲ್] ಹರಡು, ಪಸರಿಸು

ಗುಂಜೊಲ್ಲ. ಅಕ: [ಉತ್+ಲಸ್) ಉಲ್ಲಾಸಗೊಳ್ಳು, ಅರಳು

ಗುಂಜೊಲ್ಲಿಅ. ವಿ: [ಉಲ್ಲಸಿತ] ಸಂತಸಗೊಂಡ, ಅರಳಿದ(ಕುಮಾ)

ಗುಂಠ. ಸಕ: [ಉದ್+ಧೂಲಯ್, ಗುಂಠ್] ಧೂಲು ಮುಸುಕಿದಂತೆ ಮಾಡು, ಧೂಲಿ-ಧೂಸರಿತಗೊಳ್ಳುವಂತೆ ಮಾಡು(ಕುಮಾ)

ಗುಂಠ. ಪು: [ದೇ] ದುಷ್ಟ ಕುದುರೆ(ದೇ) ವಿ: ಮಾಯಾವಿ, ಕಪಟಿ

ಗುಂಠಾ. ಸ್ತ್ರೀ: [ದೇ] ಮಾಯೆ, ಅಹಂಕಾರ, ಮೋಸ

ಗುಂಠಿಅ. ವಿ: [ಗುಂಠಿತ] ಧೂಳಿನಿಂದ ಮುಚ್ಚಲ್ಪಟ್ಟ, ಬಳಿಯಲ್ಪಟ್ಟ, ವಾಪಿಸಲ್ಪಟ್ಟ, ಮುಚ್ಚಲ್ಪಟ್ಟ(ದೇ)

ಗುಂಠೀ. ಸ್ತ್ರೀ: [ದೇ] ಬಣ್ಣವಿಲ್ಲದ, ಮಹಿಳೆಯ ವಸ್ತ್ರ-ವಿಶೇಷ

ಗುಂಡ. ನ: [ದೇ] ಕೊನ್ನಾರಿ ಗೆಡ್ಡೆಯಿಂದ ಹೊಮ್ಮುವ ಒಂದು ಬಗೆಯ ಹುಲ್ಲು(ಮುಸ್ತಾ?)

ಗುಂಡಣ. ನ: [ಗುಂಡನ] ದೂಳಿನ ಲೇಪನ, ಶರೀರಕ್ಕೆ ದೂಳನ್ನು ಹಚ್ಚಿಕೊಳ್ಳುವುದು(ಣಾಯಾ)

ಗುಂಡಿಅ. ವಿ: [ಗುಂಡಿತ] ದೂಳಿನಿಂದ ಮುಚ್ಚಲ್ಪಟ್ಟ, ದೂಳಿನಿಂದ ಲೇಪಿಸಲಾದ, ಬಳಿಯಲ್ಪಟ್ಟ, ಮುಚ್ಚಲಾದ

ಗುಂಥಣ. ನ: [ಗ್ರಂಥನ] ಪೋಣಿಸುವುದು, ಹೆಣೆಯುವುದು, ಒಟ್ಟಿಗೆ ಸೇರಿಸಿ ಕಟ್ಟುವುದು (ರಯಣ)

ಗುಂದ. ಪು: [ಗುಂದ್ರ] ಕಾಗೆ ಬಿದಿರು(ಪಾಅ)

ಗುಂದಲ. ನ: [ದೇ. ಗುಂದಲ] ಸಂತಸದ ದನಿ, ಹರ್ಷದ ತುಮುಲ ಧ್ವನಿ, ಖುಶಿ ಹೆಚ್ಚಾಗಿರುವುದು. ವಿ: ಸಂತೋಷದಲ್ಲಿ ಮುಳುಗಿ ಹೋಗಿರುವ(ಸುಪಾ)

ಗುಂದವಡಯ. ನ: [ದೇ] ಗುಜರಾತಿಯಲ್ಲಿ 'ಗುಂದವಡಾ' ಎಂದು ಕರೆಯಲಾಗುವ ಒಂದು ಬಗೆಯ ಮಿಠಾಯಿ(ಸುಪಾ)

ಗುಂದಾ}. ಸ್ತ್ರೀ: [ದೇ] ಬಿಂದು, ಅಧಮ

ಗುಂಪಾ}.

ಗುಂಧ. ಸಕ: [ಗ್ರಂಥ್] ಕಟ್ಟು(ಹೂವನ್ನು ಹಾರವಾಗಿ ಕಟ್ಟುವುದು)

ಗುಂಫ. ಸಕ: [ಗುಂಫ್] ಹೆಣೆ, ಕಟ್ಟು, ಒಟ್ಟುಗೂಡಿಸು

ಗುಂಫ. ಪು: [ಗುಂಫ್] ರಚನೆ, ಹೂವನ್ನು ಕಟ್ಟುವುದು, ಶಬ್ದಾರ್ಥಗಳ ಜೋಡಣೆ, ಗ್ರಂಥ ರಚಿಸುವುದು

ಗುಂಫ. ಪು: [ದೇ] ಸೆರೆಮನೆ, ಜೈಲು

ಗುಂಫಣ. ನ: [ದೇ] ಕವಣೆ,

ಗುಂಫೀ. ಸ್ತ್ರೀ: [ದೇ] ಶತಪದಿ, ಒಂದು ಕ್ಷುದ್ರಕೀಟ

ಗುಗ್ಗುಲ. ಪು: [ಗುಗ್ಗುಲ] ಸುವಾಸನೆಯಿಂದ ವನಸ್ಪತಿ(ಗುಗ್ಗುಳ), ಹಾಲುಮಡ್ಡಿ(ಸುಪಾ)

ಗುಗ್ಗುಲೀ. ಸ್ತ್ರೀ: [ಗುಗ್ಗುಲ] ಗುಗ್ಗುಳದ ಗಿಡ

ಗುಗ್ಗುಲು. 'ಗುಗ್ಗುಲ' ಶಬ್ದವನ್ನು ನೋಡುವುದು

ಗುಚ್ಛ}. ಪು: [ಗುಚ್ಛ] ಗೊಂಚಲು, ಗುಚ್ಛ,

ಗುಚ್ಛಯ}. ಹೂಗೊಂಚಲು, ಪೊದರು, ಮರಗಳ ಒಂದು ಜಾತಿ ಎಲೆತಳ ಗೊಂಚಲು

ಗುಚ್ಛಯ. 'ಗೋಚ್ಛಯ' ಶಬ್ದವನ್ನು ನೋಡುವುದು

ಗುಚ್ಛಿಯ. ವಿ: [ಗುಚ್ಛಿತ] ಗುಚ್ಛದಿಂದ ಕೂಡಿದ

ಗುಜ್ಜ. 'ಗೊಜ್ಜ' ಶಬ್ದವನ್ನು ನೋಡುವುದು(ಸುಪಾ)

ಗುಜ್ಜರ. ಪು: [ಗೂರ್ಜರ] ಭಾರತದ ಒಂದು ಪ್ರಾಂತವಾದ ಗುಜರಾತ್. ಗುಜರಾತಿನ ನಿವಾಸಿ. ಸ್ತ್ರೀ–ರೀ

ಗುಜ್ಜರತ್ತಾ. ಸ್ತ್ರೀ: [ಗೂರ್ಜರತ್ರಾ] ಗುಜರಾತ್ ಪ್ರಾಂತ್ಯ

ಗುಜ್ಜಲಿಅ. ವಿ:[ದೇ] ಸಂಘಟಿತ, ಒಟ್ಟುಗೂಡಿದ(ಷಡ್)

ಗುಜ್ಝ}. ವಿ: [ಗುಹ್ಯ] ಗುಟ್ಟಾಗಿರಿಸಲು ಅರ್ಹವಾದ,

ಗುಜ್ಝಅ}. ಗೋಪನೀಯ(ಣಾಯಾ), ಪುರುಷ ಮತ್ತು ಸ್ತ್ರೀ ಜನನೇಂದ್ರಿಯಗಳು, ಮೈಥುನ. **–ಹರ.** ವಿ: [–ಧರ] ಗುಟ್ಟನ್ನು ರಟ್ಟುಮಾಡದಿರುವವನು. **–ಹರ.** ವಿ:[–ಹರ] ಗುಟ್ಟನ್ನು ರಟ್ಟುಮಾಡುವವನು.

ಗುಜ್ಝಗ}. ಪು: [**ಗುಹ್ಯಕ**] ದೇವತೆಗಳ ಒಂದು ಜಾತಿ
ಗುಜ್ಝಗ}.
ಗುಟ್ಠ. ನ: [ದೇ] ಹುಲ್ಲು ಮೊದಲಾದವುಗಳ ಕಾಂಡ,
ಗುಟ್ಠ. 'ಗೊಟ್ಠ' ಶಬ್ದವನ್ನು ನೋಡುವುದು(ಪಾಅ)
ಗುಟ್ಠೀ. 'ಗೊಟ್ಠೀ' ಶಬ್ದವನ್ನು ನೋಡುವುದು
ಗುಡ. ಸಕ: [**ಗುಡ್**] ಆನೆಗೆ ಜೀನು ಹೊದಿಸಿ ಸಜ್ಜುಗೊಳಿಸು, ಯುದ್ಧಕ್ಕೆ ಸಿದ್ಧಗೊಳಿಸು
ಗುಡ. ಪು: [**ಗುಡ**] ಬೆಲ್ಲ, ಒಂದು ಬಗೆಯ ಕವಚ. **–ಸತ್ಥ. ನ:** [**–ಸಾರ್ಥ**] ಒಂದು ನಗರ
ಗುಡ. ಸಕ: [**ಗುಡ್**] ನಿಯಂತ್ರಿಸು
ಗುಡದಾಲಿಅ. ವಿ: [ದೇ] ರಾಶಿಮಾಡಲ್ಪಟ್ಟ, ಒಟ್ಟುಗೂಡಿಸಲಾದ(ದೇ)
ಗುಡಾ. ಸ್ತ್ರೀ: [**ಗುಡಾ**] ಆನೆಯ ಕವಚ, ಕುದುರೆಯ ಕವಚ(ವಿಪಾ)
ಗುಡಿಅ. ವಿ: [**ಗುಡಿತ**] ಕವಚವನ್ನು ಧರಿಸಿರುವ,
ಗುಡಿಆ. ಸ್ತ್ರೀ: [**ಗುಟಿಕಾ**] ಗುಳಿಗೆ(ಗಾ)
ಗುಡಿಲದ್ಧಿಆ. ಸ್ತ್ರೀ: [ದೇ] ಚುಂಬನ
ಗುಡ್ಡರ. ಪುಂನ: [ದೇ] ಡೇರೆ, ಬಟ್ಟೆಯ ಗುಡಾರ
ಗುಣ. ಸಕ: [**ಗುಣಯ್**] ಎಣಿಸು, ಪುನರಾವರ್ತಿಸು
ಗುಣ. ಪುಂ.ನ: [**ಗುಣ**] ಉಚ್ಚಾರಣೆ, ನಾಲಿಗೆ, ಒಡ್ಯಾಣ, ಗುಣ, ಸ್ವಭಾವ, ಧರ್ಮ, ಜ್ಞಾನ, ಸುಖ ಇತ್ಯಾದಿ ಒಟ್ಟಿಗೆ ಇರುವ ಧರ್ಮ(ಸಮ್ಮ), ಜ್ಞಾನ, ವಿನಯ, ದಾನ, ಶೌರ್ಯ, ಸದಾಚಾರವೇ ಮೊದಲಾದ ದೋಷವಿರುದ್ಧ ಪದಾರ್ಥಗಳು(ಕುಮಾ), ಲಾಭ, ಪ್ರಶಂಸೆ, ದಾರ, ವ್ಯಾಕರಣ ಪ್ರಸಿದ್ಧವಾದ ಅ, ಏ, ಓ, ಮತ್ತು ಅರ್ ಕಾರಗಳು(ಸುಪಾ), ಜೈನ ಗೃಹಸ್ಥನು ಪಾಲಿಸ ಬೇಕಾದ ವ್ರತ–ವಿಶೇಷ ಗುಣ–ವ್ರತ. ರೂಪ, ರಸ, ಗಂಧವೇ ಮೊದಲಾದ ದ್ರವ್ಯಾಶ್ರಿತ ಧರ್ಮ(ಠಾ), ಬಿಲ್ಲಿನ ಹೆದೆ(ಕುಮಾ), ಕಾರ್ಯ, ಪ್ರಯೋಜನ, ಅಮುಖ್ಯ, ಗೌಣ, ಅಂಶ, ವಿಭಾಗ, ಉಪಕಾರ, ಹಿತ(ಪಂಚಾ), **–ಕರ. ವಿ:** [**–ಕರ**] ಲಾಭಕರವಾದ, ಉಪಕಾರಕ, **–ಕಾರ. ಪು:** [**–ಕಾರ**] ಗುಣಿಸುವುದು. **–ಚಂದ. ಪು:** [**–ಚಂದ್ರ**] ಒಬ್ಬ ರಾಜಕುಮಾರ.(ಆವಮ), ಒಬ್ಬ ಜೈನ–ಮುನಿ ಮತ್ತು ಗ್ರಂಥಕಾರ. ಒಬ್ಬ ಶ್ರೇಷ್ಠಿ. **–ಠಾಣ. ನ:** [**–ಸ್ಥಾನ**] ಗುಣಗಳ ಸ್ವರೂಪ–ವಿಶೇಷ; ಮಿಥ್ಯಾದೃಷ್ಟಿ ಮೊದಲಾದ ಹದಿನಾಲ್ಕು ಗುಣಸ್ಥಾನಗಳು. **–ಟ್ಠಿಅ. ಪು:** [**ಗುಣಾರ್ಥಿಕ**] ಗುಣವನ್ನು ಪ್ರಧಾನವೆಂದು ಭಾವಿಸುವ ಮತ. ನಯ–ವಿಶೇಷ **–ಡ್ಢ. ವಿ:** [**ಗುಣಾಢ್ಯ**] ಗುಣವಂತ. **–ಣ್ಣ, –ಣ್ಣು, –ನ್ನ, –ನ್ನು. ವಿ:** [**–ಜ್ಞ**] ಗುಣವನ್ನು ಬಲ್ಲವನು. **–ಪುರಿಸ್. ಪು:** [**–ಪುರುಷ**] ಗುಣವಂತನಾದ ಪುರುಷ(ಆಚಾ). **–ರಯಣಸಂವಚ್ಛರ. ನ:** [**–ರತ್ನಸಂವತ್ಸರ**] ಒಂದು ಬಗೆಯ ತಪಶ್ಚರ್ಯೆ. **–ವ, –ವಂತ. ವಿ:** [**–ವತ್**] ಗುಣವಂತ. **–ವಯ. ನ:** [**–ವ್ರತ**] ಜೈನಗೃಹಸ್ಥರು ಪಾಲಿಸಲು ಯೋಗ್ಯವಾದ ವ್ರತ. **–ಸಿಲಯ. ನ:** [**–ಶಿಲಕ**] ರಾಜಗೃಹ ನಗರದ ಒಂದು ಚೈತ್ಯ. **–ಸೇಢಿ. ಸ್ತ್ರೀ:** [**–ಶ್ರೇಣಿ**] ಕರ್ಮ–ಪುದ್ಗಲಗಳ ರಚನಾ–ವಿಶೇಷ. **–ಸೇಣ. ಪು:** [**–ಸೇನ**] ಈ ಹೆಸರಿನ ಒಬ್ಬ ಪ್ರಸಿದ್ಧ ರಾಜ. **–ಹರ. ವಿ:** [**–ಧರ**] ಗುಣಗಳನ್ನು ಧರಿಸಿರುವವನು, ಗುಣವಂತ. ದಾರವನ್ನು ಹಿಡಿದವನು. **ಸ್ತ್ರೀ: –ರಾ.** **ಗುಣಾಯರ. ಪು:** [**ಗುಣಾಕರ**] ಗುಣಗಳಿಗೆ ಗಣಿಯಾದವನು, ಗುಣಿ(ಪಉಮ)
ಗುಣ. 'ಏಗೂಣ' ಶಬ್ದವನ್ನು ನೋಡುವುದು
–ಗುಣ. ವಿ: [**–ಗುಣ**] ಆವರ್ತನೆ, ಗುಣಿಸಲ್ಪಟ್ಟ, ಪಟ್ಟು; ಉದಾ: ಹತ್ತುಪಟ್ಟು(ಕುಮಾ)
ಗುಣಣ}. ನ: [**ಗುಣನ**] ಗುಣಾಕಾರ, ಗ್ರಂಥದ ಆವೃತ್ತಿ
ಗುಣಣಾ}.
ಗುಣಯಾಲೀಸ. ಸ್ತ್ರೀನ: [**ಏಕೋನ ಚತ್ವಾರಿಂಶತ್**] ಮೂವತ್ತೊಂಬತ್ತು
ಗುಣವುಡ್ಢಿ. ಸ್ತ್ರೀ: [**ಗುಣವೃದ್ಧಿ**] ನಿರಂತರ ಎಂಟು ದಿನಗಳ ಉಪವಾಸ
ಗುಣಸೇಣ. ಪು: [**ಗುಣಸೇನ**] ಪ್ರಸಿದ್ಧ ಹೇಮಾಚಾರ್ಯನ ಗುರುವಾದ ಒಬ್ಬ ಜೈನಾಚಾರ್ಯ.
ಗುಣಾ. ಸ್ತ್ರೀ: [ದೇ] ಮೃಷ್ಟಾನ್ನ(ಭವಿ)
ಗುಣಾವಿಯ. ವಿ: [**ಗುಣಿತ**]ಕಲಿಸಲ್ಪಟ್ಟ, ಪಾಠಮಾಡಲ್ಪಟ್ಟ
ಗುಣೀ. ವಿ: [**ಗುಣಿನ್**] ಗುಣದಿಂದ ಕೂಡಿದ, ಗುಣವಂತ(ಗಉಡ)
ಗುಣಿಅ. ವಿ: [**ಗುಣಿತ**] ಗುಣಿಸಲ್ಪಟ್ಟ, ಹೆಚ್ಚಿಸಲ್ಪಟ್ಟ, ಸ್ಮರಿಸಲ್ಪಟ್ಟ, ಎಣಿಸಲ್ಪಟ್ಟ, ಪಠಿಸಲಾದ, ಗಟ್ಟುಮಾಡಲಾದ, ಆವೃತ್ತಿ ಮಾಡಲಾದ

ಗುಣಿಲ್ಲ. ವಿ: [**ಗುಣವತ್**] ಗುಣವಂತ, ಗುಣಿ
ಗುಣ್ಣ. '**ಗೊಣ್ಣ**' ಶಬ್ದವನ್ನು ನೋಡುವುದು
ಗುಣ್ಣ(ಅಪ). '**ಗಿಣ್ಣ**' ಶಬ್ದವನ್ನು ನೋಡುವುದು
ಗುತ್ತ. ವಿ: [**ಗುಪ್ತ**] ಗುಟ್ಟುಮಾಡಲಾದ, ಪ್ರಚ್ಛನ್ನ, ಅಡಗಿಸಿಟ್ಟ(ಣಾಯಾ), ರಕ್ಷಿತ, ತನ್ನ ಮತ್ತು ಇತರರನ್ನು ರಕ್ಷಿಸುವ, ಮನಸ್ಸು, ಬುದ್ಧಿ ಇತ್ಯಾದಿಗಳನ್ನುದೋಷರಹಿತವಾಗಿಟ್ಟುಕೊಂಡಿರುವ ಸ್ವಭಾವದ, ಒಬ್ಬ ಪ್ರಸಿದ್ಧ ಜೈನಾಚಾರ್ಯ
ಗುತ್ತ. '**ಗೋತ್ತ**' ಶಬ್ದವನ್ನು ನೋಡುವುದು
ಗುತ್ತ. ನ: [**ಗೋತ್ರ**] ಸಾಧುತ್ವ ಸಾಧುತನ, ಸಂನ್ಯಾಸತ್ವ
ಗುತ್ತಣ್ಹಾಣ. ನ: [**ದೇ**] ಪಿತೃ–ತರ್ಪಣ
ಗುತ್ತಿ. ಸ್ತ್ರೀ: [**ಗುಪ್ತಿ**] ಸೆರೆಮನೆ, ಜೈಲು(ಸುಪಾ), ಮನಸ್ಸು, ವಚನ ಮತ್ತು ಕಾರ್ಯದಿಂದ ಅಶುಭ ಪ್ರವೃತ್ತಿಯನ್ನು ತಡೆಯುವುದು. ಮನಸ್ಸು ಬುದ್ಧಿಗಳ ನಿರ್ದೋಷ ಪ್ರವೃತ್ತಿ.(ತಾ), ಬಚ್ಚಿಡುವುದು, ರಕ್ಷಿಸುವುದು **–ಗುತ್ತ.** ವಿ: [**–ಗುಪ್ತ**] ಮನಸ್ಸು, ಬುದ್ಧಿ ಮೊದಲಾದವುಗಳನ್ನು ಶುದ್ಧವಾಗಿಟ್ಟು ಕೊಂಡಿರುವ ಸ್ವಭಾವದವನು. ಸಂಯಮಿ, **–ಪಾಲ.** ಪು: [**–ಪಾಲ**] ಸೆರೆಮನೆಯ ರಕ್ಷಕ, ಅದರ ಅಧ್ಯಕ್ಷ. **–ಸೇಣ.** ಪು: [**–ಸೇನ**] ಐರಾವತ ಕ್ಷೇತ್ರದಲ್ಲಿ ಹುಟ್ಟಿದ ಜಿನದೇವ.
ಗುತ್ತಿ. ಸ್ತ್ರೀ: [**ದೇ**] ಬಂಧನ, ಇಚ್ಛೆ, ಅಭಿಲಾಷೆ, ಮಾತು, ದನಿ, ಲತೆ, ಬಳ್ಳಿ. ತಲೆಯಲ್ಲಿ ಮುಡಿಯುವ ಹೂವಿನ ದಂಡೆ.
ಗುತ್ತಿಂದಿಯ. ವಿ: [**ಗುಪ್ತೇಂದ್ರಿಯ**] ಇಂದ್ರಿಯ ನಿಗ್ರಹ ಮಾಡುವವನು, ಇಂದ್ರಿಯ ಸಂಯಮಿ.
ಗುತ್ತಿಯ. ವಿ: [**ಗೌಪ್ತಿಕ**] ರಕ್ಷಕ
ಗುತ್ತಿಯ. ವಿ: [**ಗೌತ್ರಿಕ**] ಒಂದೇ ಗೋತ್ರಕ್ಕೆ ಸೇರಿದ
ಗುತ್ತಿವಾಲ. '**ಗುತ್ತಿ–ಪಾಲ**' ಶಬ್ದವನ್ನು ನೋಡುವುದು
ಗುತ್ಥ. ವಿ: [**ಗ್ರಥಿತ**] ಹೆಣೆಯಲ್ಪಟ್ಟ, ಒಟ್ಟಿಗೆ ಸೇರಿಸಿ ಕಟ್ಟಲ್ಪಟ್ಟ,
ಗುತ್ಥಂಡ. ಪು: [**ದೇ**] ಹದ್ದು, ಪಕ್ಷಿ
ಗುದ. ಪುಂಸ್ತ್ರೀ: [**ಗುದ**] ಗುದ, ಮಲದ್ವಾರ, ತಿಕ
ಗುದ್ದಹ. ನ: [**ಗೋದ್ರಹ**] ಒಂದು ನಗರ
ಗುಪ್ಪ. ಅಕ: [**ಗುಪ್**] ವ್ಯಾಕುಲಗೊಳ್ಳು
ಗುಪ್ಪ. ವಿ: [**ಗೋಪ್ಯ**] ಗೋಪ್ಯವಾಗಿಡಲು ಅರ್ಹವಾದ, ರಕ್ಷಿಸಲ್ಪಡಬೇಕಾದ, ನ: ಏಕಾಂತ(ತಾ)
ಗುಪ್ಪಈ. ಸ್ತ್ರೀ: [**ಗೋಷ್ಪದೀ**] ಗೋವಿನ ಹೆಜ್ಜೆ ಮುಳುಗುವಷ್ಟು ಆಳವಾದ(ಧಮ್ಮ)
ಗುಪ್ಪಂತ. ನ: [**ದೇ**] ಹಾಸಿಗೆ, ವಿ: ಗೋಪ್ಯಮಾಡಲಾದ, ರಕ್ಷಿಸಲ್ಪಟ್ಟ, ಸಂಮೂಢ, ಮುಗ್ಧ, ಗಾಬರಿಗೊಂಡಿರುವ, ವ್ಯಾಕುಲನಾದ(ದೇ)
ಗುಪ್ಪಯ. '**ಗೋಪಯ**' ಶಬ್ದವನ್ನು ನೋಡುವುದು
ಗುಪ್ಫ. ಪು: [**ಗುಲ್ಫ**] ಕಾಲಿನ ಗಂಟು
ಗುಫಗುಮಿಅ. ವಿ: [**ದೇ**] ಸುಗಂಧದಿಂದ ಕೂಡಿದ
ಗುಬ್ಭ. '**ಗುಪ್ಫ**' ಶಬ್ದವನ್ನು ನೋಡುವುದು
ಗುಭ. ಸಕ: [**ಗುಫ್**] ಹೆಣೆ, ಕಟ್ಟು,
ಗುಮ. ಸಕ: [**ಭ್ರಮ್**] ಸುತ್ತು, ತಿರುಗು. ಅಲೆದಾಡು
ಗುಮಗುಮ}. ಅಕ: [**ಗುಮಗುಮಾಯ್**] ಗುಮ ಗುಮ
ಗುಮಗುಮಾಅ}. ಎಂದು ಶಬ್ದ ಮಾಡು, ಮಧುರವಾದ ಅವ್ಯಕ್ತ ಧ್ವನಿಮಾಡು
ಚಂದಗ. 'ಚಂದ' ಶಬ್ದವನ್ನು ನೋಡುವುದು. **-ವಿಜ್ಝ, ವೆಜ್ಝ, ನ:** [-ವೇಧ್ಯ] ರಾಧಾವೇಧ(ನಿಚೂ)

ಚಂದಟ್ಠಿಆ.ಸ್ತ್ರೀ: [ದೇ] ಭುಜ, ಶಿಖರ, ಹೆಗಲು, ಗುಚ್ಛ

ಚಂದಣ. ಪು: [ಚಂದನ] ದು ದೇವ-ವಿಮಾನ, ರತ್ನದ ಒಂದು ಜಾತಿ, ಪು: ಎರಡು ಇಂದ್ರಿಯಗಳ ಒಂದು ಜೀವ-ವಿಶೇಷ.

ಚಂದಣ. ಪುಂನ: [ಚಂದನ] ಶ್ರೀಗಂಧದ ಮರ, **ನ:** ಸ್ರೀ ಗಂಧದ ಕೊರಡು(ಭಗ), ತೇಯ್ದ ಶ್ರೀಗಂಧ, ಒಂದು ಬಗೆಯ ಛಂದಸ್ಸು, ರುಚಕ ಪರ್ವತದ ಒಂದು ಶಿಖರ. **-ಕಲಸ. ಪು:** [**-ಕಲಶ**] ಶ್ರೀಗಂಧ ತೊಡೆದ ಕುಂಭ, ಕಲಶ(ಔಪ). **-ಘಡ. ಪು:** [**ಘಟ**] ಮಂಗಳವನ್ನುಂಟುಮಾಡುವ ಕುಂಭ, **-ಬಾಲಾ. ಸ್ತ್ರೀ:** [**-ಬಾಲಾ**] ಭಗವಾನ್ ಮಹಾವೀರರ ಮೊದಲ ಶಿಷ್ಯೆ, ಒಬ್ಬ ಸಾಧ್ವೀ ಮಹಿಳೆ(ಪಡಿ). **ವಇ. ಪು:** [**-ಪತಿ**] ಖ್ಯಾತನಾದ ಒಬ್ಬ ರಾಜ.

ಚಂದಣಗ. ಪುಂನ: [**ಚಂದನಕ**] ಮೇಲಿನ ಶಬ್ದವನ್ನು ನೋಡುವುದು. ಒಂದು ದೇವ-ವಿಮಾನ. ರತ್ನದ ಒಂದು ಜಾತಿ, **ಪು:** ಎರಡು ಇಂದ್ರಿಯಗಳ ಒಂದು ಜಂತು. ಜೈನ ಸಾಧುಗಳು ಇದರ ದೇಹವನ್ನು ಸ್ಥಾಪನಾಚಾರ್ಯ ಸ್ಥಾನದಲ್ಲಿಟ್ಟಿದ್ದಾರೆ.

ಚಂದಣಾ. ಸ್ತ್ರೀ: [**ಚಂದನಾ**] ಭಗವಾನ್ ಮಹಾವೀರರ ಮೊದಲ ಶಿಷ್ಯೆಯಾದ ಚಂದನಬಾಲಾ(ಸಮ)

ಚಂದಣಿ. ಸ್ತ್ರೀ: [**ದೇ**] ಆಚಮನ, ಬಾಯಿ ಮುಕ್ಕಳಿಸುವುದು. **-ಉದಯ. ನ:** [**-ಉದಕ**] ಬಾಯಲ್ಲಿರುವ ನೀರನ್ನು ಉಗುಳುವ ಜಾಗ.

ಚಂದಣೀ. ಸ್ತ್ರೀ: [**ದೇ**] ಚಂದ್ರನ ಹೆಂಡತಿಯಾದ ರೋಹಿಣಿ.

ಚಂದಮ. ಪು: [**ಚಂದ್ರಮಸ್**] ಚಂದ್ರ, ಚಂದ್ರಮ(ಭಗ)

ಚಂದವಡಾಯಾ. ಸ್ತ್ರೀ: [ದೇ] ಅರ್ಧ ದೇಹ ತೆರೆದಿದ್ದು ಇನ್ನರ್ಧ ದೇಹ ಮುಚ್ಚಿರುವ ಮಹಿಳೆ.

ಚಂದರುಹ. 'ಚಂಡ-ರುದ್ದ' ಶಬ್ದವನ್ನು ನೋಡುವುದು

ಚಂದಾ. ಸ್ತ್ರೀ: [ಚಂದ್ರಾ]ಚಂದ್ರ ದ್ವೀಪದ ರಾಜಧಾನಿ

ಚಂದಾಅವ. ಪು: [ಚಂದ್ರಾತಪ] ಬೆಳುದಿಂಗಳು, ಚಂದ್ರ ಪ್ರಭೆ. **'ಚಂವಾದಯ'** ಶಬ್ದವನ್ನು ನೋಡುವುದು

ಚಂದಾಣಣ. ಸ್ತ್ರೀ: [ಚಂದ್ರಾನನ] ಐರಾವತ ಕ್ಷೇತ್ರದ ಪ್ರಥಮ ತೀರ್ಥಂಕರ

ಚಂದಾಣಣಾ. ಸ್ತ್ರೀ: [ಚಂದ್ರಾನನಾ] ಚಂದ್ರನ ಹಾಗೆ ಸುಂದರ ಮುಖ ಹೊಂದಿದ್ದು ಆಹ್ಲಾದವುಂಟು ಮಾಡುವವಳು. ಶಾಶ್ವತೀ ಜಿನ-ಪ್ರತಿಮೆ(ಠಾ)

ಚಂದಾಭ. ವಿ: [ಚಂದ್ರಾಭ] ಚಂದ್ರನಂತೆ ಆಹ್ಲಾದವುಂಟು ಮಾಡುವ, ಎಂಟನೇ ತೀರ್ಥಂಕರನಾದ ಚಂದ್ರಪ್ರಭ ತೀರ್ಥಂಕರ. ಈ ಹೆಸರಿನ ಒಬ್ಬ ರಾಜಕುಮಾರ. ನ: ಒಂದು ದೇವ ವಿಮಾನ.

ಚಂದಾಯಣ. ನ: [ಚಾಂದ್ರಾಯಣ] ಒಂದು ತಪಸ್ಸು.

ಚಂದಾಯಣ. ನ: [ಚಂದ್ರಾಯಣ] ಆರಾರು ತಿಂಗಳಿಗೆ ಚಂದ್ರನು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಚಲಿಸುವುದು

ಚಂದಾಯಯ. 'ಚಂದಾಅವ' ಶಬ್ದವನ್ನು ನೋಡುವುದು. ಆಚ್ಛಾದನ, ಮುಸುಕು, ಮಂಟಪ(ಸುರ)

ಚಂದಾಲಗ. ನ: [ದೇ] ತಾಮ್ರದ ಪಾತ್ರೆ(ಸುಆ)

ಚಂದಾವತ್ತ. ನ: [ಚಂದ್ರಾವರ್ತ] ಒಂದು ದೇವ ವಿಮಾನ.

ಚಂದಾವಿಜ್ಝಯ. 'ಚಂದಗ-ವಿಜ್ಝ' ಶಬ್ದವನ್ನು ನೋಡುವುದು(ಣಂದಿ)

ಚಂದಿಅ. ವಿ: [ಚಾಂದ್ರಿಕ] ಚಂದ್ರನ, ಚಂದ್ರನಿಗೆ ಸಂಬಂಧಿಸಿದ

ಚಂದಿಆ. ಸ್ತ್ರೀ: [ಚಂದ್ರಿಕಾ] ಚಂದ್ರನ ಪ್ರಭೆ, ಬೆಳುದಿಂಗಳು

ಚಂದ್ರಿಕೊಜ್ಜಲೀಯ. ವಿ: [ದೇ.ಚಂದ್ರಿಕೋಜ್ವಲಿತ] ಚಂದ್ರನ ಕಾಂತಿಯಿಂದ ಉಜ್ವಲಗೊಳಿಸಲ್ಪಟ್ಟ,

ಚಂದಿಣ. ನ: [ದೇ] ಚಂದ್ರನ ಪ್ರಭೆ, ಬೆಳುದಿಂಗಳು

ಚಂದಿಮ. 'ಚಂದಮ' ಶಬ್ದವನ್ನು ನೋಡುವುದು. ಒಬ್ಬ ಜೈನ ಮುನಿ

ಚಂದಿಮಾ. ಸ್ತ್ರೀ: [ಚಂದ್ರಿಕಾ] ಚಂದ್ರನ ಪ್ರಭೆ, ಬೆಳುದಿಂಗಳು

ಚಂದಿಮಾಇಯ.ನ: [ಚಾಂದ್ರಿಕ] 'ಜ್ಞಾತಾಧರ್ಮಕಥಾ' ಸೂತ್ರದ ಒಂದು ಅಧ್ಯಯನ.

ಚಂದಿಲ. ಪು: [ಚಂದಿಲ] ಕ್ಷೌರಿಕ, ನಾಪಿತ(ಗಾ)

ಚಂದುತ್ತರವಡಿಂಸಗ.ನ: [ಚಂದ್ರೋತ್ತರಾವತಂಸಕ] ಒಂದು ದೇವ-ವಿಮಾನ

ಚಂದೇರೀ. ಸ್ತ್ರೀ: [ದೇ] ಒಂದು ನಗರಿ

ಚಂದೊಜ್ಜ}. ನ: [ದೇ] ಕುಮುದ. ನೈದಿಲೆ.

ಚಂದೊಜ್ಜಯ}.

ಚಂದೊತ್ತರಣ. ನ: [ಚಂದ್ರೋತ್ತರಣ] ಕೌಶಾಂಬಿ ನಗರದ ಒಂದು ಉದ್ಯಾನ.

ಚಂದೋಯರ. ಪು: [ಚಂದ್ರೋದರ] ಒಬ್ಬ ರಾಜಕುಮಾರ

ಚಂದೋವಗ. ನ: [ಚಂದ್ರೋಪಕ] ಸಂನ್ಯಾಸಿಯ ಒಂದು ಉಪಕರಣ(ಠಾ)

ಚಂದೋವರಾಗ. ಪು: [ಚಂದ್ರೋಪರಾಗ] ರಾಹುಗ್ರಸ್ತ ಚಂದ್ರಗ್ರಹಣ(ಠಾ)

ಚಂದ್ರ. 'ಚಂದ' ಶಬ್ದವನ್ನು ನೋಡುವುದು

ಚಂಪ. ಸಕ: [ಆ+ರುಹ್] ಹತ್ತು, ಏರು. ಕ್ರಿಯಾ ರೂಪ: 'ಚಂಪಇ'

ಚಂಪ. ಸಕ: [ದೇ] ಹತ್ತಿಕ್ಕು(ಆರಾ)

ಚಂಪ. ಸಕ: [ಚರ್ಚ್] ಚರ್ಚಿಸು,

ಚಂಪ. 'ಚಂಪಯ' ಶಬ್ದವನ್ನು ನೋಡುವುದು

ಚಂಪಗ. 'ಚಂಪಯ' ಶಬ್ದವನ್ನು ನೋಡುವುದು

ಚಂಪಡಣ. ನ: [ದೇ] ಪ್ರಹಾರ, ಹೊಡೆತ(ವಿಕ್ರ)

ಚಂಪಣ. ನ: [ದೇ] ಹತ್ತಿಕ್ಕುವುದು, ತುಳಿಯುವುದು.

ಚಂಪಯ. ಪು: [ಚಂಪಕ] ಸಂಪಿಗೆ ಮರ, ದೇವ-ವಿಶೇಷ, ನ: ಸಂಪಿಗೆ ಹೂವು, **-ಮಾಲಾ.** ಸ್ತ್ರೀ: [-ಮಾಲಾ] ಪ್ರಸಿದ್ಧವಾದ ಚಂಪಕಮಾಲಾ ವೃತ್ತ. ಸಂಪಿಗೆ ಹೂವುಗಳ ಹಾರ. **-ಲಯಾ.** ಸ್ತ್ರೀ: [-ಲತಾ] ಬಳ್ಳಿ ಆಕಾರದ ಸಂಪಿಗೆ ಮರ. ಸಂಪಿಗೆ ಮರದ ಕೊಂಬೆ(ಔಪ), **-ವಣ.** ನ: [-ವನ] ಸಂಪಿಗೆ ಮರಗಳು ಹೆಚ್ಚಾಗಿರುವ ಒಂದು ವನ(ಭಗ)

ಚಂಪಯುವಡಿಂಸಯ. ಪು: [ಚಂಪಕಾವತಂಸಕ] ಸೌಧರ್ಮ ದೇವಲೋಕದಲ್ಲಿ ಇರುವ ಒಂದು ವಿಮಾನ

ಚಂಪಾ. ಸ್ತ್ರೀ: [ಚಂಪಾ) ಅಂಗ ದೇಶದ ರಾಜಧಾನಿ, ಈಗ ಭಾಗಲಪುರ ಎಂದು ಹೇಳುವ ನಗರ (ವಿಪಾ), **-ಪುರೀ.** ಸ್ತ್ರೀ: [-ಪುರೀ] ಅದೇ ಅರ್ಥ.

ಚಂಪಾ. ಸ್ತ್ರೀ: 'ಚಂಪಯ' ಶಬ್ದವನ್ನು ನೋಡುವುದು. **-ಕುಸುಮ.** ನ: [-ಕುಸುಮ] ಸಂಪಿಗೆ ಹೂವು. **-ವಣ್ಣ.** ವಿ: [-ವರ್ಣ] ಸಂಪಿಗೆಯ ಬಣ್ಣವನ್ನು ಹೋಲುವಂಥ ಬಣ್ಣದ. ಸ್ತ್ರೀ: **-ಣ್ಣೀ**(ಅಪ)

ಚಂಪಾರಣ(ಅಪ). ಪು: [ಚಂಪಾರಣ್ಯ ಭಾಗಲ್ಪುರದಲ್ಲಿರುವ ಚಂಪಾರಣ್ ಊರು, ಚಂಪಾರಣ್‌ನ ನಿವಾಸಿ

ಚಂಪಿಅ. ವಿ:[ದೇ] ಹತ್ತಿಕ್ಕಲಾದ, ತುಳಿಯಲ್ಪಟ್ಟ(ಸುಪಾ)

ಚಂಪಿಅ. ನ: [ದೇ] ಆಕ್ರಮಣ, ಹತ್ತಿಕ್ಕುವುದು

ಚಂಪಿಜ್ಜಿಯಾ. ಸ್ತ್ರೀ: [ಚಂಪೀಯಾ] ಜೈನ ಮುನಿಗಣದ ಒಂದು ಶಾಖೆ

ಚಂಭ. ಪು: [ದೇ] ನೇಗಿಲಿನಿಂದ ಉಳಲ್ಪಟ್ಟ ಭೂಮಿ

ಚಕಪ್ಪಾ. ಸ್ತ್ರೀ: [ದೇ] ಚರ್ಮ

ಚಕಿದ. 'ಚಇದ.' ಶಬ್ದವನ್ನು ನೋಡುವುದು

ಚಕೋರ. ಪುಂಸ್ತ್ರೀ: [ಚಕೋರ] ಚಕೋರಪಕ್ಷಿ, ಸ್ತ್ರೀ: -ರೀ

ಚಕ್ಕ. ಪು: [ಚಕ್ರ] ಚಕ್ರವಾಕ ಪಕ್ಷಿ(ಪಾಅ), ನ: ಗಾಡಿಯ ಚಕ್ರ(ಪಣ್ಣ), ಸಮೂಹ(ಕುವಾ), ವಿಷ್ಣುವಿನ ಚಕ್ರಾಯುಧ(ಪಉಮ), ಚಕ್ರಾಕಾರದ ಆಭರಣ, ಶಿರೋಭೂಷಣ, ಚಕ್ರವ್ಯೂಹ(ಣಾಯಾ), **-ಕಂತ.** ಪು: [-ಕಾಂತ] ಸ್ವಯಂಭೂ ರಮಣ, ಸಮುದ್ರದ ಅಧಿಷ್ಠಾತೃ ದೇವ. **-ಜೋಹಿ.** ಪು: [-ಯೋಧಿನ್] ಚಕ್ರಾಯುಧ ಹಿಡಿದು ಹೋರಾಡುವ ಯೋಧ, ವಾಸುದೇವ, ಮೂರುಖಂಡ ಭೂಮಿಯ ರಾಜ, **-ಜ್ಝಯ.** ಪು: [-ಧ್ವಜ] ಚಕ್ರದ ಗುರುತಿನ ಬಾವುಟ. **-ಪಹು.** ಪು: [-ಪ್ರಭು] ಚಕ್ರವರ್ತಿ, ವಾಸುದೇವ, ಧರ್ಮಚಕ್ರವರ್ತಿ(ಪಉಮ). **-ಪುರಾ, ಪುರೀ.** ಸ್ತ್ರೀ: [ವಿದೇಹ] ವರ್ಷದ ನಗರ(ಠಾ), **-ಪ್ಪಹು.** '-ಪಹು' ಶಬ್ದವನ್ನು ನೋಡುವುದು. **-ಯರ.** ಪು: [-ಚರ] ಭಿಕ್ಷುಕ. **-ರಯಣ.** ನ: [-ರತ್ನ] ಚಕ್ರವರ್ತಿ ರಜನ ಮುಖ್ಯ ಆಯುಧ(ಪಣ್ಣ), **-ವಇ.** ಪು: [-ಪತಿ] ಸಾಮ್ರಾಟ. **-ವಇ, -ವಟ್ಟಿ.** ಪು: [-ವರ್ತಿನ್] ಆರು ಖಂಡಗಳ ಅಧಿಪತಿ. **-ವಟ್ಟಿತ.** ನ: [-ವರ್ತಿತ್ವ] ಸಮ್ರಾಟತನ, ಸಾಮ್ರಾಜ್ಯ (ಸುರ) **-ವತ್ತಿ.** '[-ವಟ್ಟಿ]' ಶಬ್ದವನ್ನು ನೋಡುವುದು. **-ವಿಜಯ.** ಪು: [-ವಿಜಯ] ಚಕ್ರವರ್ತಿಯು ಜಯಿಸಲು ಅರ್ಹವಾದ ಕ್ಷೇತ್ರ. **-ಸಾಲಾ.** ಸ್ತ್ರೀ: [-ಶಾಲಾ] ಎಳ್ಳು ಹಳದಿ ಬಣ್ಣಕ್ಕೆ ತಿರುಗುವ ಮನೆ. ತೈಲಗೃಹ(ವವ). **-ಸುಹ.** ಪು: [-ಶುಭ, -ಸುಖ] ಮಾನುಷೋತ್ತರ ಪರ್ವತದ ಅಧಿಪತಿಯಾದ ದೇವ. **-ಸೇಣ.** ಪು: [-ಸೇನ] ವಿಖ್ಯಾತನಾದ ಒಬ್ಬ ರಾಜ. **-ಹರ.** ಪು: [-ಧರ] ಸಾಮ್ರಾಟ(ಕಪ್ಪ). ವಾಸುದೇವ, ಅರ್ಧ ಚಕ್ರಿ ರಾಜ.

ಚಕ್ಕಆಅ. 'ಚಕ್ಕವಾಯ' ಶಬ್ದವನ್ನು ನೋಡುವುದು

ಚಕ್ಕಂಗ. ಪು: [ಚಕ್ರಾಂಗ] ಹಂಸ ಪಕ್ಷಿ, ಚಕ್ರವಾಕ ಪಕ್ಷಿ

ಚಕ್ಕಣಭಯ. ನ: [ದೇ] ಕಿತ್ತಳೆ ಹಣ್ಣು(ದೇ) ದೇವ
ಚಕ್ಕಣಾಹಯ. ನ: [ದೇ] ಅಲೆ, ತರಂಗ ದೇವ
ಚಕ್ಕಮ}. ಅಕ: [ಭ್ರಮ್] ತಿರುಗು, ಸಂಚರಿಸು,
ಚಕ್ಕಮ್ಮ}.ಸುತ್ತಾಡು. ವ. ಕೃ: 'ಚಕ್ಕಮಂತ'
ಚಕ್ಕಮ್ಮವಿಅ. ವಿ: [ಭ್ರಮಿತ] ತಿರುಗಿಸಲ್ಪಟ್ಟ, ಸುತ್ತಿಸಲ್ಪಟ್ಟ (ಕುಮಾ)
ಚಕ್ಕಯ. 'ಚಕ್ಕ' ಶಬ್ದವನ್ನು ನೋಡುವುದು
ಚಕ್ಕಲ. ನ: [ದೇ] ಕುಂಡಲ, ಕರ್ಣಾಭರಣ, ಜೋಕಾಲಿಯ ಹಲಗೆ. ವಿ: ಗೋಲಾಕಾರದ ವಸ್ತು ಗುಂಡಗಿರುವ ಪದಾರ್ಥ(ಭವಿ), ವಿಶಾಲವಾದ
ಚಕ್ಕವಾಈ. ಸ್ತ್ರೀ: [ಚಕ್ರವಾಕೀ] ಹೆಣ್ಣು ಚಕ್ರವಾಕ ಪಕ್ಷಿ(ರಂಭಾ)
ಚಕ್ಕವಾಗ}. ಪು: [ಚಕ್ರವಾಕ] ಚಕ್ರವಾಕ ಪಕ್ಷಿ(ಣಾಯಾ)
ಚಕ್ಕವಾಯ}.
ಚಕ್ಕವಾಲ. ನ: [ಚಕ್ರವಾಲ] ಚಕ್ರಾಕಾರದಲ್ಲಿ ಸುತ್ತು, ಚಕ್ರಾಕಾರದಲ್ಲಿರುವ ವಸ್ತು, ಗುಂಡಾದ ಜಲಾಶಯ, ಗೋಳಾಕಾರದಲ್ಲಿರುವ ಜಲರಾಶಿ, ನಿತ್ಯ ಕರ್ಮ, ಸಮೂಹ, ಗುಂಪು. **ಪು:** ಪರ್ವತ. **–ವಿಕ್ಖಂಭ. ಪು:** [**–ವಿಷ್ಕಂಭ**] ಗೋಳದ ಪರಿಧಿ (ಭಗ). **–ಸಾಮಾಯಾರೀ. ಸ್ತ್ರೀ:** [**–ಸಾಮಾಚಾರೀ**] ನಿತ್ಯಕರ್ಮ
ಚಕ್ಕವಾಲಾ. ಸ್ತ್ರೀ: [ಚಕ್ರವಾಲಾ] ಚಕ್ರಾಕಾರದ ಸಾಲು
ಚಕ್ಕಾಅ. 'ಚಕ್ಕವಾಯ' ಶಬ್ದವನ್ನು ನೋಡುವುದು
ಚಕ್ಕಾಗ. ನ: [ಚಕ್ರಕ] ಚಕ್ರಾಕಾರದ ವಸ್ತು(ಪಣ್ಣ)
ಚಕ್ಕಾರ. ಪು: [ಚಕ್ರಾರ] ರಾಕ್ಷಸ ವಂಶದ ಒಬ್ಬ ರಾಜ, ಲಂಕಾಧಿಪತಿ(ಪಉಮ). **–ಬದ್ಧ. ನ:** [**ಬದ್ಧ**] ಗಾಡಿ
ಚಕ್ಕಾವಾಯ. ಪುಂನ: '**ಚಕ್ಕವಾಯ**' ಶಬ್ದವನ್ನು ನೋಡುವುದು
ಚಕ್ಕಾಹ. ಪು: [ಚಕ್ರಾಭ] ಹದಿನಾರನೇ ತೀರ್ಥಂಕರನ ಪ್ರಥಮ ಶಿಷ್ಯ(ಸಮ)
ಚಕ್ಕಾಹಿವ. ಪು: [ಚಕ್ರಾಧಿಪ] ಚಕ್ರವರ್ತಿ ರಾಜ, ಸಾಮ್ರಾಟ
ಚಕ್ಕಾಹಿವಇ. ಪು: [ಚಕ್ರಾಧಿಪತಿ] ಮೇಲಿನ ಶಬ್ದವನ್ನು ನೋಡುವುದು
ಚಕ್ಕಿ}. ವಿ: [ಚಕ್ರಿನ್, ಚಕ್ರಿಕ] ಚಕ್ರಾಯುಧವುಳ್ಳ ಶ್ರೀಕೃಷ್ಣ,
ಚಕ್ಕಿಯ}. ಪು: ಚಕ್ರವರ್ತಿ ಸಮ್ರಾಟ, ಕುಂಬಾರ(ಔಪ) ಗಾಣಿಗ, **–ಸಾಲಾ. ಸ್ತ್ರೀ:** [**–ಶಾಲಾ**] ಎಣ್ಣೆಯನ್ನು ಮಾರುವ ಅಂಗಡಿ

ಚಕ್ಕಿಯ. ವಿ: [ಚಕಿತ] ಭಯಭೀತ(ಉತ್ತ)
ಚಕ್ಕಿಯ. ಪು: [ಚಾಕ್ರಿಕ] ಚಕ್ರವನ್ನು ಹಿಡಿದು ಹೋರಾಡುವ ಯೋಧ, ಭಿಕ್ಷುಕರ ಒಂದು ವರ್ಗ(ಔಪ)
ಚಕ್ಕಿಯಾ. ಕ್ರಿ: [ಶಕ್ನುಯಾತ್] ಮಾಡಬಲ್ಲ, ಸಮರ್ಥನಾಗಿರುವ(ಕಪ್ಪ)
ಚಕ್ಕೀ. ಸ್ತ್ರೀ: [ಚಕ್ರೀ] ಒಂದು ಛಂದಸ್ಸು.
ಚಕ್ಕುಲಂಡಾ. ಸ್ತ್ರೀ: [ದೇ] ಸರ್ಪದ ಒಂದು ಜಾತಿ(ದೇ)
ಚಕ್ಕೇಸರ. ಪು: [ಚಕ್ರೇಶ್ವರ] ಚಕ್ರವರ್ತಿ ರಾಜ, ವಿಕ್ರಮ ಶಕೆಯ ೧೩ನೇ ಶತಮಾನದಲ್ಲಿದ್ದ ಒಬ್ಬ ಜೈನ ಗ್ರಂಥಕಾರ.
ಚಕ್ಕೇಸರೀ. ಸ್ತ್ರೀ: [ಚಕ್ರೇಶ್ವರೀ] ಭಗವಾನ್ ಆದಿನಾಥನ ಶಾಸನ–ದೇವಿ. ಒಬ್ಬ ವಿದ್ಯಾ–ದೇವಿ.
ಚಕ್ಕೋಡಾ. ಸ್ತ್ರೀ: [ದೇ] ಅಗ್ನಿ–ಭೇದ, ಅಗ್ನಿ–ವಿಶೇಷ
ಚಕ್ಖ(ಅಪ). ಸಕ: [**ಆ+ಚಕ್ಷ್**] **ಹೇಳು**
ಚಕ್ಖ. ಸಕ: [ಆ+ಸ್ವಾದಯ್] ರುಚಿನೋಡು, ಆಸ್ವಾದಿಸು
ಚಕ್ಖಡಿಅ. ನ: [ದೇ] ಜೀವನ, ಅವಶ್ಯಕವಾಗಿ ಜೀವಿಸಬೇಕಾದ(ದೇ)
ಚಕ್ಖಣ. ನ: [ಆಸ್ವಾದನ] ರುಚಿನೋಡುವುದು, ಸವಿಯುವುದು, ಆಸ್ವಾದಿಸುವುದು(ಉಪ)
ಚಕ್ಖಿಅ. ವಿ: [ಆಸ್ವಾದಿತ] ರುಚಿನೋಡಲ್ಪಟ್ಟ, ಆಸ್ವಾದಿಸಲ್ಪಟ್ಟ(ಘಾ)
ಚಕ್ಖಿಂದಿಯ. ನ: [ಚಕ್ಷುರಿಂದ್ರಿಯ] ನಯನೇಂದ್ರಿಯ, ಕಣ್ಣು
ಚಕ್ಖು. ಪುಂನ: [ಚಕ್ಷುಷ್] ಕಣ್ಣು, ನೇತ್ರ. **ಪು:** ಈ ಹೆಸರಿನ ಒಬ್ಬ ಕುಲವಂತ ಪುರುಷ(ಪಉಮ). ನ: ಇಲ್ಲೇ ಕೆಳಗೆ ಬರುವ '**–ದಂಸಣ**' ಶಬ್ದವನ್ನು ನೋಡುವುದು. **ಜ್ಞಾನ,** ನೋಡುವುದು(ಆಚಾ). **–ಕಂತ. ಪು:** [**–ಕಾಂತ**] ಕುಂಡಲೋದ ಸಮುದ್ರದ ಅಧಿಷ್ಠಾತೃ ದೇವ. **–ಕಂತಾ. ಸ್ತ್ರೀ:** [**–ಕಾಂತಾ**] ಒಬ್ಬ ಕುಲವಂತ ಪುರುಷನ ಪತ್ನಿ(ಸಮ). **–ದಂಸಣ.** ನ: [**–ದರ್ಶನ**] ಕಣ್ಣಿನಿಂದ ವಸ್ತುವಿನ ಸಾಮಾನ್ಯ ಜ್ಞಾನದ ತಿಳಿವು. **–ದಂಸಣವಡಿಯಾ. ಸ್ತ್ರೀ:** [**–ದರ್ಶನ ಪ್ರತಿಜ್ಞಾ**]. ಕಣ್ಣಿನಿಂದ ನೋಡುವ ನಿಯಮ, ಕಣ್ಣಿನ ಸಂಯಮ(ಆಚಾ). **–ದಯ.** ವಿ: [**–ದಯ**] ಜ್ಞಾನದಾತ(ಪಡಿ). **–ಪಡಿಲೇಹಾ.** ಸ್ತ್ರೀ: [**–ಪ್ರತಿಲೇಖಾ**] ಕಣ್ಣಿನಿಂದ ನೋಡುವುದು

(ನಿಚೂ). –ಪರಿನ್ನಾಣ. ನ: [–ಪರಿಜ್ಞಾನ] ರೂಪಕ್ಕೆ ಸಂಬಂಧಿಸಿದ ಜ್ಞಾನ. ಕಣ್ಣಿನಿಂದ ಉಂಟಾಗುವ ಜ್ಞಾನ. –ಪಹ. ಪು: [–ಪಥ] ಕಣ್ಣಿನ –ಮಾರ್ಗ, ಕಣ್ಣಿಗೆ ಗೋಚರವಾಗುವುದು. –ಫಾಸ. ಪು: [–ಸ್ಪರ್ಶ] ಅವಲೋಕನ. –ಭೀಯ.ವಿ: [–ಭೀತ] ನೋಟ ಮಾತ್ರದಿಂದಲೇ ಹೆದರಿದ(ಆಚಾ). –ಮ, –ಮಂತವಿ: [–ಮತ್] ಕಣ್ಣುಳ್ಳವನು. ಪು:ಒಬ್ಬ ಕುಲವಂತ ಪುರುಷನ ಹೆಸರು. –ಲೋಲ. ವಿ:[–ಲೋಲ] ನೋಡುವ ಚಪಲವುಳ್ಳವ; ನೇತ್ರೇಂದ್ರಿಯದ ಸಂಯಮವಿಲ್ಲದವನು. –ಲೋಲುಯ. ವಿ: [–ಲೋಲುಪ] ಅದೇ ಅರ್ಥ. –ಲ್ಲೋಯಣಲೇಸ್ಸ. ವಿ: [–ಲೋಕನಲೇಶ್ಯ] ಸ್ಫುರದ್ರೂಪಿ. –ವಿತ್ತಿಹಯ. ವಿ: [–ವೃತ್ತಿಹತ] ನೋಟದಿಂದ ಅಪರಿಚಿತ. –ಸ್ಸವ. ವಿ: [–ಶ್ರವಸ್] ಸರ್ಪ

ಚಕ್ಖುಡ್ಡಣ. ನ: [ದೇ] ತಮಾಶೆ, ಮನೋರಂಜಕ ದೃಶ್ಯ(ದೇ)

ಚಕ್ಖುಯ. 'ಚಕ್ಖುಸ' ಶಬ್ದವನ್ನು ನೋಡುವುದು

ಚಕ್ಖುರಕ್ಖಣೀ. ಸ್ತ್ರೀ: [ದೇ] ಲಜ್ಜೆ, ನಾಚಿಕೆ.

ಚಕ್ಖುಸ.ವಿ: [ಚಾಕ್ಷುಷ] ಕಣ್ಣಿನಿಂದ ನೋಡಲರ್ಹವಾದ ವಸ್ತು, ನಯನಗ್ರಾಹ್ಯ(ಪಣ್ಣ)

ಚಕ್ಖುಹರ. ವಿ: [ಚಕ್ಷುರ್ಹರ] ಸುಂದರವಾದ, ಮಣೋಹರವಾದ, ನೋಡಬೇಕಾದ

ಚಗೋರ. 'ಚಓರ'. ಶಬ್ದವನ್ನು ನೋಡುವುದು

ಚಚ್ಚ. ಪು: [ಚರ್ಚ] ಗಂಧ ಮೊದಲಾದ ಸುಗಂಧ ದ್ರವ್ಯಗಳನ್ನು ಮೈಗೆ ಲೇಪಿಸಿಕೊಳ್ಳುವುದು

ಚಚ್ಚ. ಪು: [ಚರ್ಚ] ಹೇಮಾಚಾರ್ಯನ ತಂದೆಯ ಹೆಸರು

ಚಚ್ಚರ. ನ: [ಚತ್ವರ] ನಾಲ್ಕು ರಸ್ತೆಗಳು ಸೇರುವ ಸ್ಥಳ, ಚೌಕ(ಣಾಯಾ)

ಚಚ್ಚರಿಅ. ಪು: [ದೇ. ಚಂಚರೀಕ] ದುಂಬಿ, ಭ್ರಮರ, ಭ್ರಮರಿ

ಚಚ್ಚರಿಯಾ. ಸ್ತ್ರೀ: [ಚರ್ಚರಿಕಾ] ಒಂದು ಬಗೆಯ ನೃತ್ಯ, 'ಚಚ್ಚರೀ' ಶಬ್ದವನ್ನು ನೋಡುವುದು

ಚಚ್ಚರೀ. ಸ್ತ್ರೀ: [ಚರ್ಚರೀ] ಒಂದು ಬಗೆಯ ಗಾನ, ಹಾಡುವ ಗಾನ ಮಂಡಳಿ, ಒಂದು ಬಗೆಯ ಛಂದಸ್ಸು, ಕೈ ಚಪ್ಪಾಳೆಯ ಶಬ್ದ(ಆವ)

ಚಚ್ಚಸಾ. ಸ್ತ್ರೀ: [ದೇ] ಒಂದು ವಾದ್ಯ–ವಿಶೇಷ

ಚಚ್ಚಾ. ಸ್ತ್ರೀ: [ದೇ] ಶರೀರಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುವುದು(ಪಾಅ) ಕೈ ಚಪ್ಪಾಳೆ

ಚಚ್ಚಾರ. ಸಕ: [ಉಪಾ+ಲಭ್] ನಿಂದಿಸು, ವ್ಯಂಗ್ಯದ ಮಾತಾಡು

ಚಚ್ಚಿಯ. ವಿ: [ಚರ್ಚಿತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ

ಚಚ್ಚಿಕ್ಕ. ವಿ: [ದೇ] ಅಲಂಕರಿಸಲ್ಪಟ್ಟ, ಪುಂನ: ಶ್ರೀಗಂಧವೇ ಮೊದಲಾದ ಸುಗಂಧ ದ್ರವ್ಯಗಳನ್ನು ಮೈಗೆ ಲೇಪಿಸಿಕೊಳ್ಳುವುದು(ಮೃಚ್ಛ)

ಚಚ್ಚುಪ್ಪ. ಸಕ: [ಅರ್ಪಯ್] ಅರ್ಪಿಸು, ಕೊಡು

ಚಚ್ಛ. ಸಕ: [ತಕ್ಷ್] ಕೊಯ್ಯು, ಕತ್ತರಿಸು

ಚಜ್ಜ. ಸಕ: [ದೃಶ್] ನೋಡು, ಅವಲೋಕಿಸು

ಚಜ್ಜಾ. ಸ್ತ್ರೀ: [ಚರ್ಯಾ] ಆಚರಣೆ, ನಡವಳಿಕೆ, ಚಲನೆ, ಗಮನ, ಗತಿ, ಪರಿಭಾಷೆ, ಸಂಕೇತ(ವಿಸೇ)

ಚಜ್ಜಿಯ ವಿ: [ದೃಷ್ಟ] ನೋಡಿದ

ಚಟುಅ. 'ಚಟ್ಟುಅ' ಶಬ್ದವನ್ನು ನೋಡುವುದು

ಚಟ್ಟ. ಸಕ: [ದೇ] ನೆಕ್ಕು(ಮಹಾ)

ಚಟ್ಟ. ಪುಂನ: [ದೇ] ಹಸಿವು, ಪು: ವಿದ್ಯಾರ್ಥಿ, –ಸಾಲಾ. ಸ್ತ್ರೀ: [–ಶಾಲಾ] ಚಿಕ್ಕ ಮಕ್ಕಳ ಪಾಠಶಾಲೆ

ಚಟ್ಟಿ. ವಿ: [ಚಟ್ಟಿನ್] ನೆಕ್ಕುವವನು

ಚಟ್ಟು}. ಪು: [ದೇ] ಮರದ ಸಣ್ಣ ಸೌಟು

ಚಟ್ಟುಅ}.

ಚಟ್ಟುಲ}.

ಚಡ. ಸಕ: [ಆ+ರುಹ್] ಹತ್ತು, ಆರೂಢನಾಗು

ಚಡ. ಪು: [ದೇ] ಜುಟ್ಟು, ಚಂಡಿಕೆ

ಚಡಕ್ಕ. ಪುಂನ: [ದೇ] ಸ್ಫೂರ್ತಿ, ಹುರುಪು, ಒಂದು ಆಯುಧ(ಪಉಮ)

ಚಡಕ್ಕಾರಿ. ವಿ: [ಚಟತ್ಕಾರಿನ್] 'ಚಟತ್' ಎಂದು ಶಬ್ದ ಮಾಡುವವ(ಗಉಡ)

ಚಡಗ. 'ಚಡಯ' ಶಬ್ದವನ್ನು ನೋಡುವುದು

ಚಡಗರ. ಪು: [ದೇ] ಸಮೂಹ, ಗುಂಪು, ಆಡಂಬರ, ಆಟೋಪ

ಚಡಚಡ. ಪು: [ಚಡಚಡ] 'ಚಡಚಡ' ಎಂಬ ಶಬ್ದ

ಚಡಚಡಚಡ. ಅಕ: [ಚಡಚಡಾಯ್] 'ಚಡಚಡ' ಎಂದು ಶಬ್ದ ಮಾಡು

ಚಡಡ. ಪು: [ಚಟಟ] ಸಿಡಿಲು ಹೊಡೆಯುವ ಶಬ್ದ.

ಚಡಣ. ನ: [ಆರೋಹಣ] ಹತ್ತುವುದು, ಮೇಲೆ ಹತ್ತಿ ಕುಳಿತುಕೊಳ್ಳು

ಚಡಪಡ. ಅಕ: [ದೇ] ತೊಂದರೆ ಪಡು, ಕಷ್ಟಪಡು. ವ. ಕೃ: ಚಡಪಡಂತ
ಚಡಯ. ಪುಂಸ್ತ್ರೀ: [ಚಟಕ] ಗುಬ್ಬಚ್ಚಿ ಹಕ್ಕಿ
ಚಡವೇಲಾ. ಸ್ತ್ರೀ: 'ಚವೇಡಾ' ಶಬ್ದವನ್ನು ನೋಡುವುದು
ಚಡಾವಣ. ನ: [ಆರೋಹಣ] ಹತ್ತುವುದು(ಉಪ)
ಚಡಾವಿಯ. ವಿ: [ಆರೋಹಿತ] ಹತ್ತಿಸಲ್ಪಟ್ಟ, ಮೇಲೆ ಕೂಡಿಸಲ್ಪಟ್ಟ
ಚಡಾವಿಯ. ವಿ: [ದೇ] ಕಳುಹಿಸಲ್ಪಟ್ಟ,
ಚಡಿಅ. ವಿ: [ಆರೂಢ] ಮೇಲೆ ಹತ್ತಿದ, ಏರಿದ(ಸುಪಾ)
ಚಡಿಆರ. ಪು: [ದೇ] ಆಡಂಬರ
ಚಡು. ಪು: [ಚಟು] ಪ್ರಿಯವಾದ ಮಾತು, ವ್ರತ ಹಿಡಿದವನ ಒಂದು ಬಗೆಯ ಆಸನ, ಹೊಟ್ಟೆ, ಉದರ, ಪುಂನ: ಸುಳ್ಳು ಪ್ರಶಂಸೆ **–ಆರ.** ವಿ: [–ಕಾರ] ಹೊಗಳು ಭಟ್ಟನ ಕೆಲಸ ಮಾಡುವವನು. **–ಆರಅ.** ವಿ: [–ಕಾರಕ] ಭಟ್ಟಂಗಿತನ, ಸುಳ್ಳು ಪ್ರಶಂಸೆ ಮಾಡುವಿಕೆ.
ಚಡುಕಾರಿ. ವಿ: [ಚಟುಕಾರಿನ್] ಸುಳ್ಳು ಪ್ರಶಂಸೆ ಮಾಡುವವನು, ಹೊಗಳುಭಟ್ಟ
ಚಡುತ್ತರಿಯಾ. ಸ್ತ್ರೀ; [ದೇ] ಏರಿಳಿಯುವುದು, ವಾದ–ವಿವಾದ
ಚಡುಯಾರಿ. 'ಚಡುಕಾರಿ' ಶಬ್ದವನ್ನು ನೋಡುವುದು
ಚಡುಲ. ವಿ: [ಚಟುಲ] ಚಂಚಲ, ಅಲುಗಾಡುತ್ತಿರುವ (ಸೇ)
ಚಡುಲಗ. ವಿ: [ದೇ. ಚಟುಲಕ] ತುಂಡುತುಂಡು ಮಾಡಲ್ಪಟ್ಟ
ಚಡುಲಾ. ಸ್ತ್ರೀ: [ದೇ] ರತ್ನ ತಿಲಕ, ಚಿನ್ನದ ಒಡ್ಯಾಣದಲ್ಲಿ ನೇತಾಡುತ್ತಿರುವ ರತ್ನದಿಂದ ಮಾಡಿದ ತಿಲಕ.
ಚಡುಲಾತಿಲಯ. ನ: [ದೇ] ಮೇಲಿನ ಶಬ್ದವನ್ನು ನೋಡುವುದು
ಚಡುಲಿಯಾ. ಸ್ತ್ರೀ: [ದೇ] ಕೊನೆಯಲ್ಲಿ ಸುಟ್ಟಿರುವ ಹುಲ್ಲಿನ ಹೊರೆ, ಹುಲ್ಲಿನ ಕಂತೆ
ಚಡ್ಡ. ಸಕ: [ಮೃದ್] ತುಳಿ, ತಿಕ್ಕು, ಮರ್ದಿಸು(ಸುಪಾ)
ಚಡ್ಡ. ನ: [ಪಿಷ್] ಬೀಸುವುದು
ಚಡ್ಡ. ಸಕ: [ಭುಜ್] ಊಟಮಾಡು, ತಿನ್ನು,
ಚಡ್ಡ. ನ: [ದೇ] ಸೊಡರು, ಸೊಡಿಲು
ಚಡ್ಡಣ. ನ: [ಭೋಜನ] ಊಟ, ತಿನ್ನುವ ವಸ್ತು, ಖಾದ್ಯ ಸಾಮಗ್ರಿ
ಚಡ್ಡಾವಲ್ಲೀ. ಸ್ತ್ರೀ: [ಚಡ್ಡಾವಲ್ಲೀ] ವಿಕ್ರಮ ಶಕೆ ೧೧ನೇ ಶತಮಾನದಲ್ಲಿ ಈ ಹೆಸರಿನ ನಗರದಲ್ಲಿದ್ದುಕೊಂಡು ಶ್ರೀ ಘನೇಶ್ವರ ಮುನಿ ಎಂಬಾತನು 'ಸುರಸುಂದರೀ ಚರಿಅ' ಎಂಬ ಪ್ರಾಕೃತ ಕಾವ್ಯ ರಚಿಸಿದ್ದನು(ಸುರ)
ಚಡ್ಡಿಅ. ವಿ: [ಮೃದಿತ] ತುಳಿಯಲ್ಪಟ್ಟ, ಮರ್ದಿಸಲ್ಪಟ್ಟ (ಕುಮಾ)
ಚಢ. 'ಚಡ=ಆ+ರುಹ್' ಶಬ್ದವನ್ನು ನೋಡುವುದು
ಚಢಣ. 'ಚಡಣ' ಶಬ್ದವನ್ನು ನೋಡುವುದು
ಚಣ}. ಪು: [ಚಣಕ] ಕಡಲೆ(ಗಾ)
ಚಣಅ}.
ಚಣಇಯಾ. ಸ್ತ್ರೀ: [ಚಣಕಿಕಾ] ಚನ್ನಂಗಿ ಬೇಳೆ, ಕೆಂಪು ಬೇಳೆ(ತಾ)
ಚಣಗ. 'ಚಣಅ' ಶಬ್ದವನ್ನು ನೋಡುವುದು. **–ಗಾಮ.** ಪು: [–ಗ್ರಾಮ] ಗೌಡ ದೇಶದ ಒಂದು ಗ್ರಾಮ. **–ಪುರ.** ನ: [–ಪುರ] ರಾಜಗೃಹ ನಗರದ ನಿಜವಾದ ಹೆಸರು
ಚಣಯುಗ್ಗಾಮ. 'ಚಣಗ–ಗಾಮ' ಶಬ್ದವನ್ನು ನೋಡುವುದು
ಚತ್ತ. ಪುಂನ: [ದೇ] ನೂಲು ತೆಗೆಯುವ ಉಪಕರಣ, ತಕಲಿ(ದೇ)
ಚತ್ತ. ವಿ: [ತ್ಯಕ್ತ] ಬಿಟ್ಟ, ತ್ಯಜಿಸಲ್ಪಟ್ಟ (ಕುಮಾ)
ಚತ್ತಾ. ಸ್ತ್ರೀ: [ಚರ್ಚಾ] ಶರೀರದ ಮೇಲೆ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುವುದು, ಚರ್ಚೆ, ವಿಚಾರ
ಚತ್ತರ. 'ಚಚ್ಚರ' ಶಬ್ದವನ್ನು ನೋಡುವುದು
ಚತ್ತಾ. 'ಚತ್ತಾಲೀಸಾ' ಶಬ್ದವನ್ನು ನೋಡುವುದು
ಚತ್ತಾಲ. ವಿ: [ಚತ್ವಾರಿಂಶ] ನಲವತ್ತನೆಯ(ಪಉಮ)
ಚತ್ತಾಲೀಸ. ನ: [ಚತ್ವಾರಿಂಶತ್] ನಲವತ್ತು ವಿ: ನಲವತ್ತು ವಯಸ್ಸಿನ
ಚತ್ತಾಲೀಸಾ. ಸ್ತ್ರೀ: [ಚತ್ವಾರಿಂಶತ್] ನಲವತ್ತು
ಚತ್ಥರಿ. ಪುಂಸ್ತ್ರೀ: [ದೇ. ಚಸ್ತರಿ] ಹಾಸ್ಯ(ದೇ)
ಚಪೇಟಾ. ಸ್ತ್ರೀ: [ದೇ. ಚಪೇಟಾ] ಕಪಾಳಮೋಕ್ಷ (ಷಡ್)
ಚಪ್ಪ. ಸಕ: [ಆ+ಕ್ರಮ್] ಆಕ್ರಮಣ ಮಾಡು, ಹತ್ತಿಕ್ಕು
ಚಪ್ಪ. ಸಕ: [ಚರ್ಚ್] ಅಧ್ಯಯನ ಮಾಡು, ಹೇಳು, ಹೆದರಿಸು, ನಿಂದಿಸು
ಚಪ್ಪಡಗ. ನ: [ದೇ] ಮರದ ಯಂತ್ರ
ಚಪ್ಪರಣ. ನ: [ದೇ] ತಿರಸ್ಕಾರ, ಹೊರದೂಡುವುದು

ಚಪ್ಪುಡಿಯಾ}. ಸ್ತ್ರೀ: [ಚಪ್ಪುಟಿಕಾ] ಚುಟುಕಿ(ಣಾಯಾ)
ಚಪ್ಪುಡೀ}.
ಚಪ್ಫಲ}. ನ: [ದೇ] ಒಂದು ಬಗೆಯ ಶಿರೋಭೂಷಣ,
ಚಪ್ಫಲಯ}. ವಿ: ಸುಳ್ಳುಗಾರ(ಕುಮಾ)
ಚಮಕ್ಕ. ಪು: [ಚಮತ್ಕಾರ] ಆಶ್ಚರ್ಯ,**–ಯರ**. ವಿ: [–ಕರ] ವಿಸ್ಮಯಜನಕ.
ಚಮಕ್ಕ}. ಸಕ: [ಚಮತ್+ಕೃ]ವಿಸ್ಮಿತಗೊಳಿಸು
ಚಮಕ್ಕರ}.
ಚಮಕ್ಕಾರ. ಪು: [ಚಮತ್ಕಾರ] ಆಶ್ಚರ್ಯ, ವಿಸ್ಮಯ
ಚಮಕ್ಕಿಅ. ವಿ: [ಚಮತ್ಕೃತ] ಆಶ್ಚರ್ಯಗೊಂಡಿರುವ
ಚಮಡ}. ಸಕ: [ಭುಜ್] ಭೋಜನ ಮಾಡು,
ಚಮಢ}. ಊಟಮಾಡು,
ಚಮಢ. ಸಕ: [ದೇ] ತುಳಿ, ತಿಕ್ಕು, ಹೊಡೆ, ಪೀಡಿಸು, ನಿಂದಿಸು, ಆಕ್ರಮಿಸು, ದುಃಖಿತನನ್ನಾಗಿಸು
ಚಮಢಣ. ನ: [ಭೋಜನ] ಭೋಜನ,ಊಟ(ಕುಮಾ)
ಚಮಢಣ. ನ: [ದೇ] ತುಳಿಯುವುದು, ತಿಕ್ಕುವುದು, ಆಕ್ರಮಣ, ಪೀಡನೆ, ಹೊಡೆತ, ನಿಂದೆ(ಓಘ), ವಿ: ಪೀಡಿಸಲ್ಪಟ್ಟವನು(ಓಘ)
ಚಮಢಣಾ. ಸ್ತ್ರೀ: [ದೇ] ಮೇಲಿನ ಶಬ್ದವನ್ನು ನೋಡುವುದು(ಬೃಹ)
ಚಮಢಿಅ. ವಿ: [ದೇ] ನಾಶಗೊಂಡ, ತುಳಿಯಲ್ಪಟ್ಟ(ವವ)
ಚಮರ. ಪು: [ಚಮರ] ಚಮರೀ ಮೃಗ, ಅದರ ಕೂದಲುಗಳಿಂದ ಚಾಮರ ತಯಾರಿಸಲಾಗುತ್ತದೆ. ಪು: ಐದನೇ ತೀರ್ಥಂಕರನ ಮೊದಲ ಶಿಷ್ಯ. ದಕ್ಷಿಣ ದಿಕ್ಕಿನ ರಾಜಕುಮಾರರ ಇಂದ್ರ **–ಚಂಚ**. ಪು: [–ಚಂಚ] ಚಮರೇಂದ್ರನು ನೆಲೆಸಿರುವ ಪರ್ವತ(ಭಗ), **–ಚಂಚಾ**. ಸ್ತ್ರೀ: [**–ಚಂಚಾ**] ಚಮರೇಂದ್ರನ ರಾಜಧಾನಿ. ಸ್ವರ್ಗದ ನಗರ (ಣಾಯಾ). **–ಪುರ**. ನ: [–ಪುರ] ವಿದ್ಯಾಧರರ ನಗರ
ಚಮರ. ಪುಂನ: [ಚಾಮರ] ಚಾಮರ, ಚಮರೀ ಮೃಗದ ಕೂದಲ ಬೀಸಣಿಗೆ, **–ಧಾರೀ**, **–ಹಾರೀ**. ಸ್ತ್ರೀ: [–ಧಾರಿಣೀ] ಚಾಮರ ಬೀಸುವವಳು(ಸುಪಾ)
ಚಮರೀ. ಸ್ತ್ರೀ: [ಚಮರೀ] ಹೆಣ್ಣು ಚಮರೀ ಮೃಗ(ಔಪ)
ಚಮಸ. ಪುಂನ: [ಚಮಸ್] ಮರದ ಸೌಟು
ಚಮುಕ್ಕಾರ. ಪು: [ಚಮತ್ಕಾರ] ಆಶ್ಚರ್ಯ, ಮಿಂಚಿನ ಬೆಳಕು

ಚಮೂ. ಸ್ತ್ರೀ: [ಚಮೂ] ಸೈನ್ಯ(ಅವಮ), ೭೨೯ ಹಸ್ತಿ(ಆನೆ), ೨೧೮೭ ಅಶ್ವ, ೭೨೯ ರಥ, ೩೬೪೫ ಪದಾತಿ ಹೀಗೆ ಈ ನಾಲ್ಕೂ ಇರುವಂಥದು.
ಚಮ್ಮ. ನ: [ಚರ್ಮನ್] ತ್ವಚೆ, ಚರ್ಮ(ಸ್ವಪ್ನ). **–ಕಿಡ**. ವಿ: [–ಕಿಟ] ಚರ್ಮದೊಂದಿಗೆ ಹೊಲಿದು ಕೊಂಡಿರುವ(ಭಗ), **–ಕೋಸ**, **–ಕೋಸಯ**. ಪು: [**–ಕೋಶ**, **–ಕ**] ಚರ್ಮದಿಂದ ತಯಾರಿಸಿದ ಚೀಲ, ಒಂದು ಬಗೆಯ ಚರ್ಮದ ಚಪ್ಪಲಿ (ಓಘ), **–ಕೋಸಿಯಾ**. ಸ್ತ್ರೀ: [**–ಕೋಶಿಕಾ**] ಚರ್ಮದಿಂದ ಮಾಡಿದ ಚೀಲ**–ಖಂಡಿಯ**. ವಿ: [–ಖಂಡಿಕ] ಚರ್ಮದಿಂದ ಮಾಡಿದ ವಸ್ತ್ರ ಧರಿಸಿದವನು. ಎಲ್ಲ ಉಪಕರಣಗಳೂ ಚರ್ಮದವೇ ಆಗಿರುವವನು(ಣಾಯಾ), **–ಗ**. ವಿ: [–ಕ] ಚರ್ಮದಿಂದಲೇ ಮಾಡಿದ, (ಸೂಅ), **–ಪಕ್ಖಿ**. ಪು: [–ಪಕ್ಷಿನ್] ಚರ್ಮದ ರೆಕ್ಕೆ ಉಳ್ಳ ಹಕ್ಕಿ. **–ಪಟ್ಟ**. ಪು: [–ಪಟ್ಟ] ಚರ್ಮದ ಪಟ್ಟಿ, **–ಪಾಯ**. ನ: [–ಪಾತ್ರ] ಚರ್ಮದ ಪಾತ್ರೆ. **–ಯರ**. ಪು: [–ಕರ) ಮೋಚಿ, ಚಮ್ಮಾರ. **–ರಯಣ**. ನ: [–ರತ್ನ] ಚಕ್ರವರ್ತಿಯ ರತ್ನ. ಅದರಲ್ಲಿ ಬೆಳಿಗ್ಗೆ ಬಿತ್ತಿದ ಬತ್ತವೇ ಮೊದಲಾದವು ಅಂದೇ ಬೇಯಿಸಿ ಅಡುಗೆ ಮಾಡಿ ಊಟ ಮಾಡಲರ್ಹವಾಗಿರುತ್ತವೆ. **–ರುಕ್ಖ** ಪು: [– **ವೃಕ್ಷ**.] ಭೂರ್ಜವೃಕ್ಷ
ಚಮ್ಮಟ್ಠಿ. ಸ್ತ್ರೀ: [ಚರ್ಮಯಷ್ಟಿ] ಚರ್ಮದಿಂದ ತಯಾರಿಸಿದ ಕೋಲು, ದಂಡ(ಕಪ್ಪೂ)
ಚಮ್ಮಟ್ಠಿಅ. ಅಕ: [ಚರ್ಮಯಷ್ಟೀಯ್] ಚರ್ಮದ ದಂಡದ ಹಾಗೆ ಬಳಸು
ಚಮ್ಮಟ್ಠಿಲ. ಪು: [ಚರ್ಮಾಸ್ಥಿಲ] ಒಂದು ಬಗೆಯ ಪಕ್ಷಿ
ಚಮ್ಮಾರ. ಪು: [ಚರ್ಮಕಾರ] ಚಮ್ಮಾರ, ಮೋಚಿ(ವಿಸೇ)
ಚಮ್ಮಾರಯ. ಪು: [ಚರ್ಮಕಾರಕ] ಮೇಲಿನ ಶಬ್ದವನ್ನು ನೋಡುವುದು
ಚಮ್ಮಿಯ. ವಿ: [ಚರ್ಮಿತ] ಚರ್ಮದಿಂದ ಸುತ್ತಿರುವ, ಚರ್ಮದಿಂದ ಕಟ್ಟಿರುವ(ಔಪ)
ಚಮ್ಮೆಟ್ಠ. ಪು: [ಚರ್ಮೇಷ್ಟ] ಚರ್ಮದಿಂದ ಆವೃತವಾದ ಕಲ್ಲಿನ ಆಯುಧ
ಚಮ್ಮೆಟ್ಠಗ. ಪುಂಸ್ತ್ರೀ: [ಚರ್ಮೇಷ್ಟಕ] ಒಂದು ಬಗೆಯ ಆಯುಧ. ಸ್ತ್ರೀ: **–ಗಾ**

ಚಯ. ಸಕ: [ತ್ಯಜ್] ತ್ಯಜಿಸು, ಬಿಟ್ಟುಬಿಡು
ಚಯ. ಸಕ: [ಶಕ್] ಸಮರ್ಥನಾಗು, ಸಾಧ್ಯವಾಗು. ವ. ಕೃ–ಚಯಂತ]
ಚಯ. ಅಕ: [ಚ್ಯು] ಮರಣ ಹೊಂದು, ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಹೋಗು. 'ಚಯಂತಿ'
ಚಯ. ಪು: [ಚಯ] ಶರೀರ, ದೇಹ(ವಿಪಾ), ಸಮೂಹ, ರಾಶಿ, ಗುಂಪು, ಒಟ್ಟುಗೂಡುವುದು, ವೃದ್ಧಿ, ಇಟ್ಟಿಗೆಗಳಿಂದ ಮಾಡಿದ ನಿರ್ಮಾಣ
ಚಯು. ಪು: [ಚ್ಯವ] ಮರಣ, ಜನ್ಮಾಂತರ ಹೊಂದು(ಠಾ)
ಚಯಣ. ನ: [ಚಯನ] ಒಟ್ಟುಗೂಡಿಸುವುದು, ಸ್ವೀಕರಿಸುವುದು
ಚಯಣ. ನ: [ತ್ಯಜನ] ತ್ಯಾಗ, ಬಿಟ್ಟು ಹೋಗುವುದು, ಪರಿತ್ಯಾಗ, ನಾಶ ಹೊಂದುವುದು
ಚಯಣ. ನ: [ಚ್ಯವನ] ಮರಣ, ಜನ್ಮಾಂತರಕ್ಕೆ ನಡೆಯುವುದು(ಠಾ), ಪತನ, **–ಕಪ್ಪ.** ಪು: [–ಕಲ್ಪ] ಚಾರಿತ್ರ್ಯವೇ ಮೊದಲಾದ ಪತನದ ವಿವಿಧ ಪ್ರಕಾರಗಳು, ಒಂಟಿ ಸಾಧುಗಳ ವಿಹಾರ(ಗಚ್ಛ)
ಚರ. ಸಕ: [ಚರ್] ಚಲಿಸು, ನಡೆ, ತಿನ್ನು, ಸೇವಿಸು, ತಿಳಿ(ಉವ)
ಚರ. ಪು: [ಚರ] ಚಲನೆ, ಗತಿ, ವರ್ತನೆ(ಆವಮ), ದೂತ, ನಡೆದಾಡುವವನು. ಸೇವಕ, ಗೂಢಚಾರ. ಓಡಾಡುವ ಪ್ರಾಣಿ
–ಚರ. ವಿ: [–ಚರ] ನಡೆಯುವವನು(ಆಚಾ)
ಚರಂತೀ. ಸ್ತ್ರೀ: [ಚರಂತೀ] ತೀರ್ಥಂಕರ ಭಗವಾನರಂಥ ಜ್ಞಾನಿಗಳು ಸಂಚರಿಸುವ ದೇಶ
ಚರಗ. ಪು: [ಚರಕ] 'ಚರ=ಚರ' ಶಬ್ದವನ್ನು ನೋಡುವುದು. ಸಂನ್ಯಾಸಿಗಳ ಒಂದು ತಂಡ, ಗುಂಪು ಗುಂಪಾಗಿ ಸಂಚಾರ ಮಾಡುವ ತ್ರಿದಂಡಿಗಳ ಒಂದು ವರ್ಗ. ಭಿಕ್ಷುಗಳ ಒಂದು ವರ್ಗ. ಸೊಳ್ಳೆ–ನೊಣ ಮುಂತಾದ ಕೀಟಗಳು.
ಚರಚರಾ. ಸ್ತ್ರೀ: [ಚರಚರಾ] ಚರಚರ ಎಂಬ ಶಬ್ದ
ಚರಡ. ಪು: [ಚರಟ] ಲೂಟಿಕೊರರ ಒಂದು ವರ್ಗ.
ಚರಣ. ನ: [ಚರಣ] ಸಂಯಮ, ಚಾರಿತ್ರ, ಆಚರಣೆ ವ್ರತ, ನಿಯಮ, ಹಸುಗಳು ಹುಲ್ಲು ಮೇಯುವುದು. ಪದ್ಯದ ಒಂದು ಪಾದ, ಸಂಚರಿಸುವುದು, ತಿರುಗಾಡುವುದು, ಸೇವೆ ಸಲ್ಲಿಸುವುದು, ಪಾದ, ಕಾಲು. **–ಕರಣ.** ನ: [–ಕರಣ] ಸಂಯಮದ ಮೂಲ ಮತ್ತು ಅನಂತರದ ಗುಣ(ಸೂಅ), **–ಕರಣಾಣುಓಗ.** ಪು: [–ಕರಣಾನುಯೋಗ] ಸಂಯಮದ ಮೂಲ ಮತ್ತು ಉತ್ತರ ಗುಣಗಳ ವ್ಯಾಖ್ಯಾನ(ನಿಚೂ). **–ಕುಸೀಲ.** ಪು: [–ಕುಶೀಲ] ಚಾರಿತ್ರ್ಯವನ್ನು ಕಳಂಕಿತಗೊಳಿಸುವ ಸಾಧು. **–ಣಯ.** [–ನಯ] ಕ್ರಿಯೆಯನ್ನು ಮುಖ್ಯವೆಂದು ಪರಿಗಣಿಸುವ ಮತ. **–ಮೋಹ.** ಪುಂನ: [–ಮೋಹ] ಚಾರಿತ್ರ್ಯದ ಆವಾರಕ ಕರ್ಮ–ವಿಶೇಷ. (ಕಮ್ಮ)
ಚರಮಂತ. ಪು: [ಚರಮಾಂತ] ಎಲ್ಲಕ್ಕಿಂತ ಅಂತಿಮವಾದ, ಎಲ್ಲಕ್ಕಿಂತ ಕೊನೆಯ(ಸಮ)
ಚರಯ. 'ಚರಗ' ಶಬ್ದವನ್ನು ನೋಡುವುದು
ಚರಿ. ಪುಂಸ್ತ್ರೀ: [ಚರಿ] ಪಶುಗಳು ಮೇಯುವ ಸ್ಥಳ, ಮೇವು, ಹುಲ್ಲು
ಚರಿಗಾ. 'ಚರಿಯಾ=ಚರಿಕಾ' ಶಬ್ದವನ್ನು ನೋಡುವುದು
ಚರಿತ್ತ. ನ: [ಚರಿತ್ರ] ಆಚರಣೆ, ನಡವಳಿಕೆ, ವ್ಯವಹಾರ, ಸ್ವಭಾವ, ಜೀವನ ಕಥೆ, ಕಥೆ
ಚರಿತ್ತ. ನ: [ಚಾರಿತ್ರ] ಸಂಯಮ, ವೈರಾಗ್ಯ, ವ್ರತ, ನಿಯಮ(ಠಾ). **–ಕಪ್ಪ.** ಪು: [–ಕಲ್ಪ] ಸಂಯಮನುಷ್ಠಾನವನ್ನು ಪ್ರತಿಪಾದಿಸುವ ಗ್ರಂಥ. **–ಮೋಹ.** ಪುಂ.ನ: [–ಮೋಹ] ಕರ್ಮ–ವಿಶೇಷ, ಸಂಯಮ ಮತ್ತು ಆವಾರಕ ಕರ್ಮ(ಭಗ), **–ಮೋಹಣಿಜ್ಜ.** ನ: [–ಮೋಹನೀಯ] ಅದೇ ಹಿಂದೆ ಹೇಳಿದ ಅರ್ಥ. **ಚರಿತ್ತಾಚರಿತ್ತ.** ನ: [ಚಾರಿತ್ರಾಚಾರಿತ್ರ] ಆಂಶಿಕ ಸಂಯಮ, ಶ್ರಾವಕ–ಧರ್ಮ(ಭಗ) **ಚರಿತ್ತಾಯಾರ.** ಪು: [ಚಾರಿತ್ರಾಚಾರ] ಸಂಯಮದ ಅನುಷ್ಠಾನ. **ಚರಿತ್ತಾರಿಯ.** ಪು: [ಚಾರಿತ್ರಾಯ] ಚಾರಿತ್ರ್ಯದಿಂದ ಆರ್ಯನಾದ, ವಿಶುದ್ಧ ಚಾರಿತ್ರ್ಯವುಳ್ಳ, ಸಾಧು, ಮುನಿ (ಪಣ್ಣ)
ಚರಿತ್ತಿ. ಪುಂಸ್ತ್ರೀ: [ಚಾರಿತ್ರಿನ್] ಸಂಯಮ ಹೊಂದಿರುವ ಸಾಧು, ಮುನಿ(ಉಪ)
ಚರಿಮ. 'ಚರಮ' ಶಬ್ದವನ್ನು ನೋಡುವುದು
ಚರಿಯ. ಪು: [ಚರಕ] ಸಂಚರಿಸುವ ವ್ಯಕ್ತಿ, ಗೂಢಚಾರ, ದೂತ

ಚರಿಯ. ನ: [ಚರಿತ] ಅನುಷ್ಠಾನ, ನಡವಳಿಕೆ, ಆಚರಣೆ (ಔಪ), ಚರಿತ್ರೆ, ಜೀವನ ಚರಿತ್ರೆ, ಚರಿತ್ರ-ಗ್ರಂಥ, ಆಶ್ರಿತ, ಪೂಜಿಸಲ್ಪಟ್ಟ

ಚರಿಯಾ. ಸ್ತ್ರೀ: [ಚರಿಕಾ] ಸಂನ್ಯಾಸಿನಿ(ಓಘ), ಕೋಟೆ ಮತ್ತು ನಗರದ ಮಧ್ಯದ ಮಾರ್ಗ(ಪಣ್ಣ)

ಚರಿಯಾ. ಸ್ತ್ರೀ: [ಚರ್ಯಾ] ಆಚರಣೆ, ಅನುಷ್ಠಾನ, ಗಮಿಸುವುದು, ವಿಹಾರ

ಚರು. ಪು: [ಚರು] ಹವಿಸ್ಸನ್ನು ಪಾಕ ಮಾಡುವ ಪಾತ್ರೆ, ಹೋಮಕ್ಕಾಗಿ ಪಾಕ ಮಾಡಿದ ಹವಿಸ್ಸು, ಅನ್ನ

ಚರುಗಿಣಂಯು. 'ಚಾರುಇಣಂಯು' ಶಬ್ದವನ್ನು ನೋಡುವುದು

ಚರುಲ್ಲೇವ. ನ: [ದೇ] ಹೆಸರು.

ಚಲ. ಸಕ: [ಚಲ್] ಚಲಿಸು, ನಡೆ, **ಅಕ:** ಅಲುಗಾಡು, ನಡುಗು, **ವ.ಕೃ-** ಚಲಂತ, ಚಲಮಾಣ

ಚಲ. ವಿ: [ಚಲ] ಚಂಚಲ, ಅಸ್ಥಿರ, **ಪು:** ರಾವಣನ ಒಬ್ಬ ಯೋಧ(ಪಉಮ)

ಚಲಚಲ. ವಿ: [ಚಲಚಲ] ಚಂಚಲ, ಅಸ್ಥಿರ, **ಪು:** ತುಪ್ಪದಲ್ಲಿ ಕರಿಯುತ್ತಿರುವ ವಸ್ತುವಿನ ಮೊದಲ ಮೂರು ಕಾಳು.

ಚಲಣ. ಪು: [ಚರಣ] ಪಾದ, ಕಾಲು(ಔಪ). **-ಮಾಲಿಯಾ.** ಸ್ತ್ರೀ: [-ಮಾಲಿಕಾ] ಕಾಲಿನ ಆಭರಣ (ಪಣ್ಣ), **-ವಂದಣ.** ನ: [-ವಂದನ] ಪಾದಕ್ಕೆ ತಲೆಬಾಗಿ ವಂದಿಸುವುದು(ಪಉಮ).

ಚಲಣ. ನ: [ಚಲನ] ಚಲನೆ, ಗತಿ, ನಡತೆ

ಚಲಣಾ. ಸ್ತ್ರೀ: [ಚಲನಾ] ಚಲನೆ, ಗತಿ, ಕಂಪನ, ಅಲುಗಾಡುವುದು(ಭಗ)

ಚಲಣಾಉಹ. ಪು: [ಚರಣಾಯುಧ] ಕೋಳಿ

ಚಲಣಾಓಹ. ಪು: [ದೇ. ಚರಣಾಯುಧ] ಮೇಲಿನ ಶಬ್ದವನ್ನು ನೋಡುವುದು(ಷಡ್)

ಚಲಣಿಯಾ}. ಸ್ತ್ರೀ: [ಚಲನಿಕಾ, -ನೀ] ಜೈನ ಸಾಧ್ವಿಗಳು
ಚಲಣೀ}. ಧರಿಸುವ ಕಟಿವಸ್ತ್ರ

ಚಲಣೀ. ಸ್ತ್ರೀ: [ಚಲನೀ] ಸಾಧ್ವಿಯರ ಒಂದು ಉಪಕರಣ, ಪಾದದವರೆಗಿನ ಕೆಸರು.

ಚಲವಲಣ. ನ: [ದೇ] ಚಂಚಲತೆ(ಪ ಉಮ)

ಚಲಾಚಲ. ವಿ: [ಚಲಾಚಲ] ಚಂಚಲ, ಅಸ್ಥಿರ

ಚಲಿಂದಿಯ. ವಿ: [ಚಲೇಂದ್ರಿಯ.] ಇಂದ್ರಿಯ ನಿಗ್ರಹ ಮಾಡುವಲ್ಲಿ ಅಸಮರ್ಥ(ಆಚಾ)

ಚಲಿಅ. ನ: [ಚಲಿತ] ವಿಕಲತೆ, ಚಂಚಲತೆ, ಅಲುಗಾಡಿಸಿದ, ಕಂಪಿತ, ಚಲಿಸತೊಡಗಿದ, ನಾಶವಾದ (ಧಮ್ಮ)

ಚಲಿರ. ವಿ: [ಚಲಿತೃ] ನಡೆಯುವವನು, ಚಂಚಲ, ಅಸ್ಥಿರ(ಉಪ)

ಚಲ್ಲ. 'ಚಲ=ಚಲ್' ಶಬ್ದವನ್ನು ನೋಡುವುದು

ಚಲ್ಲಣಗ. ನ: [ದೇ] ಕಟೀವಸ್ತ್ರ, ಸೊಂಟದ ವಸ್ತ್ರ(ಷಡ್)

ಚಲ್ಲಿ. ಸ್ತ್ರೀ: [ದೇ] ಮದನ-ವೇದನೆ

ಚಲ್ಲಿ. ಸ್ತ್ರೀ: [ದೇ] ನಾಟ್ಯ ಮಾಡುವಾಗಿನ ಒಂದು ಬಗೆಯ ಚಲನೆ(ಕಪ್ಪೂ)

ಚಲ್ಲಿಅ. 'ಚಲಿಅ' ಶಬ್ದವನ್ನು ನೋಡುವುದು

ಚವ. ಸಕ: [ಕಥಯ್] ಹೇಳು

ಚವ. ಅಕ: [ಚ್ಯು] ಮರಣ ಹೊಂದು, ಜನ್ಮಾಂತರಕ್ಕೆ ನಡೆ, ಪತನವಾಗು, ಬೀಳು

ಚವ. ಪು: [ಚ್ಯವ] ಮರಣ, ಸಾವು(ಉತ್ತ)

ಚವಚವ. ಪು: [ಚವಚವ] 'ಚವಚವ' ಶಬ್ದ(ಓಘ)

ಚವಣ. ಪು: [ಚ್ಯವನ] ಮರಣ, ಜನ್ಮಾಂತರಕ್ಕೆ ನಡೆಯುವುದು(ಸುರ), ಪತನ

ಚವಲ. ವಿ: [ಚಪಲ] ಚಂಚಲ, ಅಸ್ಥಿರ(ಸುರ), ಆಕುಲ, ವ್ಯಾಕುಲ, **ಪು:** ರಾವಣನ ಒಬ್ಬ ಯೋಧ

ಚವಲ. ಪು: [ದೇ] ಅಕ್ಕಿ, ಅನ್ನ ವಿಶೇಷ, ಹೆಬ್ಬಾವು

ಚವಲಯ. ಪು: [ದೇ] ಒಂದು ಬಗೆಯ ಧಾನ್ಯ

ಚವಲಾ. ಸ್ತ್ರೀ: [ಚಪಲಾ] ಮಿಂಚು,

ಚವಿಅ. ವಿ: [ಚ್ಯುತ] ಮರಣ ಹೊಂದಿದ. ಮೃತ

ಚವಿಅ. ವಿ: [ಕಥಿತ] ಹೇಳಿದ

ಚವಿಆ. ಸ್ತ್ರೀ: [ಚವಿಕಾ] ಒಂದು ವನಸ್ಪತಿ(ಪಣ್ಣ)

ಚವಿಡಾ}. ಸ್ತ್ರೀ: [ಚಪೇಟಾ] ಕಪಾಳಮೋಕ್ಷ, ಕೆನ್ನೆಗೆ
ಚವಿಲಾ}. ಹೊಡೆಯುವುದು(ಕುಮಾ)
ಚವೇಲಾ}.

ಚವೇಡೀ. ಸ್ತ್ರೀ: [ದೇ] ಜೋಡಿಸಿದ ಕೈಗಳು, ಭರಣಿ, ಡಬ್ಬಿ, ಸಮುದ್ರ

ಚವೇಣ. ನ: [ದೇ] ಲೋಕಾಪವಾದ, ನಿಂದೆ, ಬೈಗಳು

ಚವೇಲಾ. 'ಚವಿಡಾ' ಶಬ್ದವನ್ನು ನೋಡುವುದು

ಚವ್ವ. ಸಕ: [ಚರ್ವ್] ಹಲ್ಲಿನಿಂದ ನುರಿಸು

ಚವ್ವಕ್ಕಿಅ. ವಿ: [ದೇ] ಬಿಳಿದಾಗಿ ಮಾಡಿದ, ಸುಣ್ಣದಿಂದ ಬಳಿಯಲ್ಪಟ್ಟ(ಸುಪಾ)

ಚವ್ವಾಇ. 'ಚವ್ವಾಗಿ' ಶಬ್ದವನ್ನು ನೋಡುವುದು

ಚವ್ವಾಕ}. ಪು: [ಚಾರ್ವಾಕ] ನಾಸ್ತಿಕ, ಬೃಹಸ್ಪತಿಯ
ಚವ್ವಾಗ}. ಶಿಷ್ಯ, ಲೋಕಾಯತ ಮತದವನು
ಚವ್ವಾಗಿ. ವಿ: [ಚಾರ್ವಾಕಿನ್] ದುರ್ವ್ಯವಹಾರಿ(ವವ), ಅಗಿಯುವವನು
ಚವ್ವಿಯ. ವಿ: [ಚರ್ವಿತ] ಅಗಿಯಲ್ಪಟ್ಟ
ಚಸ. ಸಕ: [ಚಷ್] ರುಚಿನೋಡು, ಅಸ್ವಾದಿಸು
ಚಸಗ}. ಪು: [ಚಷಕ] ಮದ್ಯದ ಬಟ್ಟಲು(ಪಾಅ),
ಚಸಯ}. ಪಾನ-ಪಾತ್ರೆ, ಒಂದು ಪಕ್ಷಿ
ಚಹುಂತಿಯಾ. ಸ್ತ್ರೀ: [ದೇ] ಲಟಿಕೆ,
ಚಹುಟ್ಟ. ಅಕ: [ದೇ] ಅಂಟಿಕೊಳ್ಳು,
ಚಹುಟ್ಟ}. ವಿ: [ದೇ] ಅಂಟಿಕೊಂಡಿರುವ
ಚಹುಟ್ಟಿಯ}.
ಚಹುಟ್ಟ. ವಿ: [ದೇ] ನಿಮಗ್ನ, ಮುಳುಗಿರುವಿಕೆ, ಲೀನ
ಚಹೋಡ. ಪು: [ದೇ] ಒಂದು ಮನುಷ್ಯ ಜಾತಿ(ಭವಿ)
ಚಾಇ. ವಿ: [ತ್ಯಾಗಿನ್] ತ್ಯಜಿಸುವವನು, ಬಿಟ್ಟುಬಿಡುವವನು, ದಾನಿ, ಉದಾರ, ನಿಸ್ಸಂಗಿ, ಸಂಯಮಿ, ಅನಾಶಕ್ತ(ಆಚಾ)
ಚಾಇಯ. ವಿ: [ತ್ಯಾಜಿತ] ತ್ಯಜಿಸುವಂತೆ ಮಾಡಲ್ಪಟ್ಟ, ಬಿಡುವಂತೆ ಮಾಡಲ್ಪಟ್ಟ
ಚಾಇಯ. ವಿ: [ಶಕಿತ] ಸಮರ್ಥನಾದವನು(ಸೂಅ)
ಚಾಇಯ. ವಿ: [ತ್ಯಾಜಿತ] ಬಿಡಿಸಲ್ಪಟ್ಟ, ತ್ಯಜಿಸುವಂತೆ ಮಾಡಲ್ಪಟ್ಟ
ಚಾಉಅಂಗೀ. ಸ್ತ್ರೀ: [ಚಾರ್ವಂಗೀ] ಸುಂದರ ಅಂಗವುಳ್ಳ ಹೆಣ್ಣು
ಚಾಉಂಡ. ಪು: [ಚಾಮುಂಡ] ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ
ಚಾಉಕ್ಕಾಲ. ನ: [ಚತುಷ್ಕಾಲ] ನಾಲ್ಕು ವೇಳೆ, ನಾಲಕ್ಕು ಸಮಯ
ಚಾಉಕ್ಕೋಣ. ವಿ: [ಚತುಷ್ಕೋಣ] ನಾಲ್ಕು ಮೂಲೆಗಳುಳ್ಳ, ಚೌಕ
ಚಾಉಗ್ಘಂಟ.}. ವಿ:[ಚತುರ್ಘಂಟ] ನಾಲ್ಕು
ಚಾಉಘಂಟ}. ಘಂಟೆಗಳುಳ್ಳ, ನಾಲ್ಕು ಘಂಟೆಗಳಿಂದ ಕೂಡಿದ
ಚಾಉಜ್ಜಾಮ. ನ: [ಚಾತುರ್ಯಾಮ] ನಾಲ್ಕು ಮಹಾವ್ರತಗಳು, ಸಾಧು-ಧರ್ಮ, ಅಹಿಂಸೆ, ಸತ್ಯ, ಅಸ್ತೇಯ, ಮತ್ತು ಅಪರಿಗ್ರಹ-ಇವು ನಾಲ್ಕೂ ಸಾಧು-ಧರ್ಮಗಳು(ಠಾ)

ಚಾಉಜ್ಜಾಯ. ಪು: [ಚಾತುರ್ಜಾತ] ದಾಲ-ಚಿನ್ನಿ, ಜಾ-ಪತ್ರೆ, ಏಲಕ್ಕಿ ಮತ್ತು ನಾಗ-ಕೇಸರ(ನಾಗಸಂಪಿಗೆ) ಈ ನಾಲ್ಕರ ಗುಂಪು(ಉಪ)
ಚಾಉತ್ಥಿಗ}. ಪು: [ಚಾತುರ್ಥಿಕ] ನಾಲಕ್ಕು ನಾಲಕ್ಕು
ಚಾಉತ್ಥಿಯ}. ದಿನಗಳಿಗೆ ಬರುವ ಜ್ವರ(ಜಿವ)
ಚಾಉದ್ದಸಿಯಾ. ಸ್ತ್ರೀ: [ಚತುರ್ದಶಿಕಾ] ಚತುರ್ದಶಿ-ತಿಥಿ
ಚಾಉದ್ದಸೀ. ಸ್ತ್ರೀ: [ಚತುರ್ದಶೀ] ಮೇಲಿನ ಶಬ್ದವನ್ನು ನೋಡುವುದು
ಚಾಉದ್ದಾಹ(ಅಪ). ವಿ: [ಚತುರ್ದಶನ್] ಹದಿನಾಲ್ಕು
ಚಾಉದ್ದಿಸಿ. 'ಚಉದ್ದಿಸಿ' ಶಬ್ದವನ್ನು ನೋಡುವುದು
ಚಾಉಪ್ಪಾಯ. ನ: [ಚತುಷ್ಪಾದ] ನಾಲ್ಕು ಬಗೆಯ, ನಾಲ್ಕು ವಿಧದ
ಚಾಉಮಾಸ}.ಪುಂನ:[ಚಾತುರ್ಮಾಸ] ಆಷಾಢದಿಂದ
ಚಾಉಮ್ಮಾಸ}. ಹಿಡಿದು ಕಾರ್ತೀಕದ ವರೆಗಿನ ನಾಲ್ಕು ತಿಂಗಳುಗಳು. ಆಷಾಢ, ಕಾರ್ತಿಕ, ಮತ್ತು ಫಾಲ್ಗುಣ ಮಾಸದ ಶುಕ್ಲ ಚತುರ್ದಶಿ ತಿಥಿ
ಚಾಉಮ್ಮಾಸೀ. ಸ್ತ್ರೀ: [ಚಾತುರ್ಮಾಸೀ] ಆಷಾಢದಿಂದ ಕಾರ್ತಿಕದ ವರೆಗೆ, ಕಾರ್ತಿಕದಿಂದ ಫಾಲ್ಗುಣದ ವರೆಗೆ ಮತ್ತು ಫಾಲ್ಗುಣದಿಂದ ಆಷಾಢದ ವರೆಗಿನ ನಾಲ್ಕು ತಿಂಗಳುಗಳು.
ಚಾಉಮ್ಮಾಸೀ}. ಸ್ತ್ರೀ: [ಚಾತುರ್ಮಾಸಿಕ] ಆಷಾಢದಿಂದ
ಚಾಉಮ್ಮಾಸಿಯ}. ಕಾರ್ತೀಕದವರೆಗಿನ ಮಾಸಗಳಿಗೆ ಸಂಬಂಧಿಸಿದ್ದು, ನ: ಆಷಾಢ, ಕಾರ್ತೀಕ ಮತ್ತು ಫಾಲ್ಗುಣ ಮಾಸದ ಶುಕ್ಲ ಚತುರ್ದಶಿ
ಚಾಉರಂಗ. 'ಚಉರಂಗ' ಶಬ್ದವನ್ನು ನೋಡುವುದು
ಚಾಉರಂಗಿ. 'ಚಉರಂಗಿ' ಶಬ್ದವನ್ನು ನೋಡುವುದು (ಭಗ)
ಚಾಉರಂಗಿಜ್ಜ. ವಿ: [ಚತುರಂಗೀಯ.] ನಾಲ್ಕು ಅಂಗಗಳಿಗೆ ಸಂಬಂಧಿಸಿದ, ನ: ಉತ್ತರಾಧ್ಯಯನ ಸೂತ್ರದ ಒಂದು ಅಧ್ಯಯನ
ಚಾಉರಂತ.ಪು: 'ಚಉರಂತ' ಶಬ್ದವನ್ನು ನೋಡುವುದು
ಚಾಉರಂತ. ಪು: [ಚಾತುರಂತ] ಚಕ್ರವರ್ತಿ, ಸಾಮ್ರಾಟ. ನ. ಲಗ್ನ ಮಂಟಪ, ಸಣ್ಣ ಚೌರಿ
ಚಾಉರಂತ. ನ: [ಚತುರಂತ] ಚಕ್ರ
ಚಾಉರಕ್ಕ. ವಿ: [ಚಾತುರಕ್ಯ] ನಾಲ್ಕು ಬಾರಿ ಪರಿಣತ, **-ಗೋಖೀರ. ನ: [-ಗೋಕ್ಷೀರ]** ನಾಲ್ಕು ಸಲ

ಪಕ್ವಗೊಳಿಸಲಾದ ಹಸುವಿನ ಹಾಲು. ಹೇಗೆಂದರೆ ಕೆಲವು ಹಸುಗಳ ಹಾಲನ್ನು ಬೇರೆಹಸುಗಳಿಗೆ ಕುಡಿಸುವುದು, ಅನಂತರ ಆ ಗೋವುಗಳ ಹಾಲನ್ನು ಬೇರೆ ಹಸುಗಳಿಗೆ ಕುಡಿಸುವುದು– ಹೀಗೆ ನಾಲ್ಕು ಸಲ ಪಕ್ವಗೊಳಿಸಲಾದ ಹಾಲು.

ಚಾಉಲ. **ಪು:** [ದೇ] ಅಕ್ಕಿ, (ಆಚಾ), **ವಿ:** ಅಕ್ಕಿಯ

ಚಾಉಲ್ಲಗ. **ನ:** [ದೇ] ಪುರುಷನ ಪುತ್ಥಳಿ

ಚಾಉವನ್ನ}. **ವಿ:** [**ಚತುರ್ವರ್ಣ**] ನಾಲ್ಕು

ಚಾವುವ್ವಣ್ಣ}. ವರ್ಣಗಳುಳ್ಳ,ನಾಲ್ಕು ಪ್ರಕಾರಗಳುಳ್ಳ. ಧರ್ಮ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಜಾತಿಗಳು **ಪು:** ಸಾಧು, ಸಾಧ್ವಿ, ಶ್ರಾವಕ, ಶ್ರಾವಿಕೆ, ಮತ್ತು ಸಮುದಾಯ(ಭಗ)

ಚಾಉವ್ವಿಜ್ಜ}. **ನ:** [**ಚಾತುರ್ವೈದ್ಯ**] ನ್ಯಾಯ, ವ್ಯಾಕರಣ,

ಚಾಉವ್ವೆಜ್ಜ}. ಸಾಹಿತ್ಯ ಮತ್ತು ಧರ್ಮಶಾಸ್ತ್ರಗಳೆಂಬ ನಾಲ್ಕು ಪ್ರಕಾರದ ವಿದ್ಯೆ, **ಪು:** ಬ್ರಾಹ್ಮಣರ ಒಂದು ಪದವಿ ಅಥವಾ ಶಾಖೆಯಾದ ಚೌಬೆ(ಮಹಾ) ನಾಲ್ಕು ವೇದಗಳನ್ನು ಅಧ್ಯಯನ ಮಾಡಿದವನು.

ಚಾಉಸ್ಸಾಲಾ. **ಸ್ತ್ರೀ:** [**ಚತುಶ್ಶಾಲಾ**] ನಾಲ್ಕೂ ಕಡೆಯ ಕೋಣೆಗಳಿಂದ ಕೂಡಿದ ಮನೆ

ಚಾಉಂಡಾ. **ಸ್ತ್ರೀ:** [**ಚಾಮುಂಡಾ**] ಪ್ರಖ್ಯಾತ ಚಾಮುಂಡೇಶ್ವರಿ ದೇವಿ. **–ಕಾಉಅ.** **ಪು:** [**–ಕಾಮುಕ**] ಶಿವ(ಕುಮಾ)

ಚಾಗ. **'ಚಾಯ=ತ್ಯಾಗ'** ಶಬ್ದವನ್ನು ನೋಡುವುದು

ಚಾಗಿ. **'ಚಾಇ'** ಶಬ್ದವನ್ನು ನೋಡುವುದು

ಚಾಡ. **ವಿ:** [ದೇ] ಮಾಯಾವಿ, ಕಪಟಿ(ದೇ)

ಚಾಡು. **ಪುಂನ:** [**ಚಾಟು**] ಪ್ರಿಯವಾದ ವಾಕ್ಯ, ಸಂತುಷ್ಟಗೊಳಿಸಲು ಮಾಡುವ ಸುಳ್ಳು ಪ್ರಶಂಸೆ, **–ಯಾರ.** **ವಿ:** [**–ಕಾರ**] ಸುಳ್ಳು ಪ್ರಶಂಸೆ ಮಾಡುವವನು. ಭಟ್ಟಂಗಿ(ಪಣ್ಣ)

ಚಾಡುಅ. **ನ:** [**ಚಾಟುಕ**] ಮೇಲಿನ ಶಬ್ದವನ್ನು ನೋಡುವುದು

ಚಾಣಕ್ಕ. **ಪು:** [**ಚಾಣಕ್ಯ**] ಚಂದ್ರಗುಪ್ತನ ಪ್ರಖ್ಯಾತ ಪ್ರಧಾನ ಮಂತ್ರಿ. ಒಂದು ಮನುಷ್ಯ ಜಾತಿ

ಚಾಣಕ್ಕೀ. **ಸ್ತ್ರೀ:** [**ಚಾಣಕ್ಯೀ**] ಒಂದು ಬಗೆಯ ಲಿಪಿ

ಚಾಣಿಕ್ಕ. **'ಚಾಣಕ್ಕ'** ಶಬ್ದವನ್ನು ನೋಡುವುದು

ಚಾಣೂರ. **ಪು:** [**ಚಾಣೂರ**] ಶ್ರೀ ಕೃಷ್ಣನು ಸೋಲಿಸಿದ ಇಬ್ಬರು ಜಟ್ಟಿಗಳು(ಪಣ್ಣ)

ಚಾಮರ. **ಪುಂನ:** [**ಚಾಮರ**] ಚಮರೀ ಮೃಗದ ಬಾಲದ ಕೂದಲಿನಿಂದ ತಯಾರಿಸಿದ ಬೀಸಣಿಗೆ. ಒಂದು ಛಂದಸ್ಸು. **–ಗಾಹಿ.** **ವಿ:** [**–ಗ್ರಾಹಿನ್**] ಚಾಮರ ಬೀಸುವ ಸೇವಕ. **ಸ್ತ್ರೀ: –ಣೀ. –ಛಾಯಣ.** **ನ:** [**–ಚ್ಛಾಯನ**] ಸ್ವಾತಿ ನಕ್ಷತ್ರದ ಗೋತ್ರ. **–ಜ್ಝಯ** **ಪು:** [**–ಧ್ವಜ್**] ಚಾಮರದಿಂದ ಕೂಡಿದ ಧ್ವಜ(ಔಪ). **–ಧಾರ.** **ವಿ:** [**–ಧಾರ**] ಚಾಮರ ಬೀಸುವವನು(ಪಉಮ)

ಚಾಮರಚ್ಛ. **ನ:** [**ಚಾಮರಥ್ಯ**] ಒಂದು ಗೋತ್ರ–ವಿಶೇಷ

ಚಾಮರಾ. **ಸ್ತ್ರೀ:** ಮೇಲಿನ ಶಬ್ದವನ್ನು ನೋಡುವುದು

ಚಾಮೀಅರ. **ನ:** [**ಚಾಮೀಕರ**] ಚಿನ್ನ, ಬಂಗಾರ(ಪಾಅ)

ಚಾಮುಂಡರಾಯ. **ಪು:** [**ಚಾಮುಂಡರಾಜ**] ಗುಜರಾತಿನ ಚಾಲುಕ್ಯ ವಂಶದ ರಾಜ

ಚಾಮುಂಡಾ. **'ಚಾಉಂಡಾ'** ಶಬ್ದವನ್ನು ನೋಡುವುದು

ಚಾಯ. **'ಚಯ=ಶಕ್'** ಶಬ್ದವನ್ನು ನೋಡುವುದು

ಚಾಯ. **'ಚಾವ'** ಶಬ್ದವನ್ನು ನೋಡುವುದು

ಚಾಯ. **ಪು:** [**ತ್ಯಾಗ**] ಬಿಡುವುದು, ತ್ಯಜಿಸುವುದು, ದಾನ(ಸುರ)

ಚಾಯಗ}. **ಪು:** [**ಚಾತಕ**] ಕವಿಸಮಯ ಪ್ರಸಿದ್ಧವಾದ

ಚಾಯವ}. ಚಾತಕ ಪಕ್ಷಿ(ಪಾಅ)

ಚಾರ. **ಸಕ:** [**ಚಾರಯ್**] ಮೇಯಿಸು, ತಿನ್ನಿಸು

ಚಾರ. **ಪು:** [**ಚಾರ**] ಗತಿ, ನಡಿಗೆ, ಸುತ್ತಾಡುವುದು, ಗೂಢಚಾರ, ದೂತ. ಸೆರೆಮನೆ, ಸಂಚಾರ, ಆಚರಣೆ, ನಡೆವಳಿಕೆ, ಜ್ಯೋತಿಷ್ಯ ಕ್ಷೇತ್ರ, ಆಕಾಶ

ಚಾರ. **ಪು:** [ದೇ] ಪ್ರಿಯಂಗು ವೃಕ್ಷ(ಪಣ್ಣ), ಸೆರೆಮನೆ, ಇಚ್ಛೆ, ಅಭಿಲಾಷೆ, **ನ:** ದ್ರಾಕ್ಷಿ, ಬಾದಾಮಿ ಮುಂತಾದ ಒಣ ಹಣ್ಣುಗಳು. **–ಕ್ಕಯ.** **ಪು:** [**–ಕ್ರಯ**] ಮಾರುವವನು ಹೇಳಿದಂತೆ ಬೆಲೆಕೊಟ್ಟು ಕೊಳ್ಳುವುದು(ಸುಪಾ)

ಚಾರಏ. **'ಚರ=ಚರ್'** ಶಬ್ದವನ್ನು ನೋಡುವುದು

ಚಾರಗ. **ದೇ:** [**ಚಾರಕ**] **'ಚಾರ'** ಶಬ್ದವನ್ನು ನೋಡುವುದು(ಔಪ). **–ಪಾಲ.** **ಪು:** [**–ಪಾಲ**] ಸೆರೆಮನೆಯ ಅಧ್ಯಕ್ಷ, **–ಪಾಲಗ.** **ಪು:** [**–ಪಾಲಕ**] ಸೆರೆಮನೆಯ ಅಧ್ಯಕ್ಷ, ಜೈಲರ್(ಉಪ). **–ಭಂಡ.** **ನ:** [**–ಭಾಂಡ**] ಕೈದಿಯನ್ನು ಶಿಕ್ಷಿಸುವ ಉಪಕರಣ

ಚಾರಗಾಹಿವ. **ಪು:** [**ಚಾರಕಾಧಿಪ**] ಸೆರೆಮನೆಯ ಅಧ್ಯಕ್ಷ.

ಚಾರಣ. ಪು: [ದೇ] ಜೇಬುಗಳ್ಳ, ಜೇಬುಕತ್ತರಿಸುವವ
ಚಾರಣ. ಪು: [ಚಾರಣ] ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯವುಳ್ಳ ಜೈನಮುನಿಗಳ ಒಂದು ವರ್ಗ. ಸ್ತುತಿ ಮಾಡುವ ಮನುಷ್ಯರ ಒಂದು ವರ್ಗ; ವಂದಿ ಮಾಗಧರು, ಭಟ್ಟಂಗಿಗಳು. ಒಂದು ಜೈನಮುನಿ ಸಮೂಹ
ಚಾರಣಿಆ. ಸ್ತ್ರೀ: [ಚಾರಣಿಕಾ] ಒಂದು ಬಗೆಯ ಗಣಿತ
ಚಾರಭಡ. ಪು: [ಚಾರಭಟ] ಶೂರ ಪುರುಷ, ವೀರ ಯೋಧ, ಸೈನಿಕ(ಬೃಹ), ಲೂಟಿಕೋರ(ಪಿಂಡ)
ಚಾರಯ. **'ಚಾರಗ'** ಶಬ್ದವನ್ನು ನೋಡುವುದು
ಚಾರವಾಯ. ಪು: [ದೇ] ಗ್ರೀಷ್ಮ ಋತುವಿನ ಗಾಳಿ
ಚಾರಹಡ. **'ಚಾರಭಡ'** ಶಬ್ದವನ್ನು ನೋಡುವುದು
ಚಾರಹಡೀ. ಸ್ತ್ರೀ: [ಚಾರಭಟೀ] ಶೌರ್ಯವೃತ್ತಿ, ಸೈನಿಕ–ವೃತ್ತಿ(ಸುಪಾ)
ಚಾರಾಗಾರ. ನ: [ಚಾರಾಗಾರ] ಸೆರೆಮನೆ, ಜೈಲು
ಚಾರಿ. ಸ್ತ್ರೀ: [ಚಾರಿ] ಮೇವು, ಹುಲ್ಲು ಸೊಪ್ಪು ಮುಂತಾದ ಪಶುಗಳ ಆಹಾರ(ಓಘ)
ಚಾರಿ. ವಿ: [ಚಾರಿನ್] ಆಚರಿಸುವ ಕ್ರಿಯೆ, ಮಾಡುವ ಕ್ರಿಯೆ, ಆಚರಿಸುವವನು, ನಡೆಯುವವನು, ಸಂಚರಿಸುವವನು(ಔಪ)
ಚಾರಿಅ. ವಿ: [ಚಾರಿತ] ಯಾರಿಗೆ ಉಣಿಸಲಾಗಿದೆಯೋ ಅವನು. ತಿಳಿಸಲ್ಪಟ್ಟ, ಗೌರವಪೂರ್ವಕವಾಗಿ ತಿಳಿಸಲ್ಪಟ್ಟ(ಪಣ್ಣ)
ಚಾರಿಅ. ಪು: [ಚಾರಿಕ] ಸಂಚರಿಸುವವನು, ಗೂಢಚಾರ (ಪಉಮ), ಪಂಚಾಯಿತಿಯ ಮುಖ್ಯಸ್ಥ, ಸಮುದಾಯದ ನಾಯಕ.
ಚಾರಿತ್ತ. **'ಚರಿತ್ತ' =ಚಾರಿತ್ರ'** ಶಬ್ದವನ್ನು ನೋಡುವುದು
ಚಾರಿತ್ತಿ. **'ಚರಿತ್ತಿ'** ಶಬ್ದವನ್ನು ನೋಡುವುದು
ಚಾರಿಯವ್ವ. **'ಚರ=ಚರ್'** ಶಬ್ದವನ್ನು ನೋಡುವುದು
ಚಾರಿಯಾ. ಸ್ತ್ರೀ: [ಚರ್ಯಾ] ಆಚರಣೆ, ಉಪಜೀವನದ ಸಾಧನ, ಅತ್ತ ಇತ್ತ ಚಲಿಸುವುದು
ಚಾರೀ. ಸ್ತ್ರೀ: [ಚಾರೀ] **'ಚಾರಿ=ಚಾರಿ'** ಶಬ್ದವನ್ನು ನೋಡುವುದು
ಚಾರು. ವಿ: [ಚಾರು] ಸುಂದರ, ಶೋಭಾಯಮಾನ (ಔಪ), ಪು: ಮೂರನೇ ತೀರ್ಥಂಕರನ ಮೊದಲ ಶಿಷ್ಯ(ಸಮ). ನ: ಒಂದು ಬಗೆಯ ಹೊಡೆತ. ಒಂದು ಬಗೆಯ ಶಸ್ತ್ರ.
ಚಾರುಇಣಯ. ಪು: [ಚಾರುಕಿನಕ] ಒಂದು ದೇಶ, ಅದರ ನಿವಾಸಿ. ಸ್ತ್ರೀ: –ಣಿಯಾ(ಔಪ)
ಚಾರುಣಯ. ಪು: [ಚಾರುನಕ] ಮೇಲಿನ ಶಬ್ದವನ್ನು ನೋಡುವುದು. ಸ್ತ್ರೀ: **–ಣಿಯಾ**
ಚಾರುವಚ್ಛಿ. ಪು: [ಚಾರುವತ್ಸಿ] ಒಂದು ದೇಶ.
ಚಾರುಸೇಣೀ. ಸ್ತ್ರೀ: [ಚಾರುಸೇನೀ] ಒಂದು ಛಂದಸ್ಸು.
ಚಾಲ. ಸಕ: [ಚಾಲಯ್] ನಡೆಸು, ಅಲುಗಾಡಿಸು, ಅಲ್ಲಾಡಿಸು, ನಾಶಗೊಳಿಸು
ಚಾಲಣ. ನ: [ಚಾಲನ] ನಡೆಸು, ಅಲ್ಲಾಡಿಸು, ವಿಚಾರ(ವಿಸೇ), ಶಂಕೆ, ಸಂದೇಹ, ಪ್ರಶ್ನೆ, ಪೂರ್ವಪಕ್ಷ
ಚಾಲಣಾ. ಸ್ತ್ರೀ: [ಚಾಲನಾ] ಶಂಕೆ, ಪೂರ್ವಪಕ್ಷ, ಆಕ್ಷೇಪ(ಅಣು)
ಚಾಲಣಿಯಾ. ಸ್ತ್ರೀ: [ಚಾಲನಿಕಾ] ಕೆಳಗಿನ ಶಬ್ದವನ್ನು ನೋಡುವುದು.
ಚಾಲಣೀ. ಸ್ತ್ರೀ: [ಚಾಲನೀ] ಒಂದರಿ, ಜರಡಿ(ಆವಮ)
ಚಾಲವಾಸ. ಪು: [ದೇ] ಶಿರೋಭೂಷಣ
ಚಾಲಿಯ. ವಿ: [ಚಾಲಿತ] ಚಾಲನೆ ಮಾಡಲ್ಪಟ್ಟ, ಅಲ್ಲಾಡಿಸಲ್ಪಟ್ಟ
ಚಾಲಿರ. ವಿ: [ಚಾಲಯಿತೃ] ಚಾಲನೆ ಮಾಡುವವನು, ಚಲಿಸುವವನು, ನಡೆಯುವವನು(ವಜ್ಜಾ)
ಚಾಲೀ. ಸ್ತ್ರೀ: [ಚತ್ವಾರಿಂಶತ್] ನಲವತ್ತು
ಚಾಲೀಸ. ಸ್ತ್ರೀನ:[ಚತ್ವಾರಿಂಶತ್]ನಲವತ್ತು. ಸ್ತ್ರೀ:–ಸಾ
ಚಾಲುಕ್ಕ. ಪುಂಸ್ತ್ರೀ: [ಚೌಲುಕ್ಯ] ಚಾಲುಕ್ಯ ವಂಶದಲ್ಲಿ ಹುಟ್ಟಿದ, ಗುಜರಾತಿನ ಪ್ರಸಿದ್ಧ ರಾಜ ಕುಮಾರಪಾಲ.
ಚಾವ. ಸಕ: [ಚರ್ವ್] ಅಗಿ(ಉತ್ತ)
ಚಾವ. ಸಕ: [ಚಾಪ] ಧನುಸ್ಸು, ಬಿಲ್ಲು(ಸ್ವಪ್ನ)
ಚಾವಲ. ನ: [ಚಾಪಲ] ಚಪಲತೆ, ಚಂಚಲತೆ(ಅಭಿ)
ಚಾವಲ್ಲ. ನ: [ಚಾಪಲ್ಯ] ಮೇಲಿನ ಶಬ್ದವನ್ನು ನೋಡುವುದು.
ಚಾವಾಲೀ. ಸ್ತ್ರೀ: [ಚಾವಾಲೀ] ಈ ಹೆಸರಿನ ಒಂದು ಗ್ರಾಮ(ಆವಮ)
ಚಾವಿಯ. ವಿ: [ಚರ್ವಿತ] ಅಗಿಯುಲ್ಪಟ್ಟ, ರುಚಿ ನೋಡಲ್ಪಟ್ಟ, ವಿಮರ್ಶಿಸಲ್ಪಟ್ಟ
ಚಾವಿಯ. ವಿ: [ಚ್ಯಾವಿತ] ಕೊಲ್ಲಿಸಲ್ಪಟ್ಟ(ಪಣ್ಣ), ಕೆಳಕ್ಕೆ ಬೀಳಿಸಲ್ಪಟ್ಟ

ಚಾವೇಡೀ. **ಸ್ತ್ರೀ:** **[ಚಾಪೇಟೀ]** ಬೇರೆಯವರ ಕಪಾಳಕ್ಕೆ ಹೊಡೆದರೆ ರೋಗಿಯ ರೋಗವನ್ನು ಹೋಗಿಸುವ ಒಂದು ವಿದ್ಯಾವಿಶೇಷ

ಚಾವೇಂಯುವ್ವ. **'ಚಾವ=ಚರ್ವ್'** ಶಬ್ದವನ್ನು ನೋಡುವುದು.

ಚಾವೊಣ್ಣಯ. **ನ:** **[ಚಾಪೋನ್ನತ]** ಒಂದು ದೇವ-ವಿಮಾನ

ಚಾಸ. **ಪು:** **[ಚಾಷ]** ಹಂಗನ ಹಕ್ಕಿ(ಪಣ್ಣ)

ಚಾಸ. **ಪು:** **[ದೇ]** ನೇಗಿಲಿನಿಂದ ಗೆಯ್ಮೆ(ಉಳುಮೆ) ಮಾಡಲಾದ ಭೂಮಿ

ಚಾಹ. **ಸಕ:** **[ವಾಂಛ್]** ಇಷ್ಟಪಡು, ಬಯಸು, ಬೇಡು

ಚಾಹಿಣೀ. **ಸ್ತ್ರೀ:** **[ಚಾಹಿನೀ]** ಹೇಮಾಚಾರ್ಯನ ತಾಯಿಯ ಹೆಸರು

ಚಾಹಿಯ. **ವಿ:** **[ವಾಂಛಿತ]** ಇಷ್ಟಪಟ್ಟ, ಬಯಸಿದ, ಅಪೇಕ್ಷಿಸಿದ, ಬೇಡಿದ(ಭವಿ)

ಚಾಹುಆಣ. **ಪು:** **[ಚಾಹುಯಾನ]** ಒಂದು ಪ್ರಸಿದ್ಧ ಕ್ಷತ್ರಿಯ ವಂಶವಾದ ಚೌಹಾನ ವಂಶ, **ಪುಂಸ್ತ್ರೀ:** ಚೌಹಾನ ವಂಶದಲ್ಲಿ ಹುಟ್ಟಿದ(ಸುಪಾ)

ಚಿ. **'ಚಿಣ'** ಶಬ್ದವನ್ನು ನೋಡುವುದು. ಕರ್ಮ- **'ಚಿಮ್ಮಇ'**

ಚಿಅ. **ಅ:** **[ಇವ, ಏವ]** ಉಪಮಾ ಉತ್ಪ್ರೇಕ್ಷಾ ಮತ್ತು ನಿಶ್ಚಯಾರ್ಥ ಸೂಚಕ ಅವ್ಯಯ

ಚಿಅ. **ನ:** **[ಚಿತ]** ಇಟ್ಟಿಗೆಯ ರಾಶಿ

ಚಿಅ. **ವಿ:** **[ಚಿತ]** ಒಟ್ಟುಗೂಡಿಸಲಾದ(ಭಗ), ವ್ಯಾಪಿಸಲ್ಪಟ್ಟ, ಪುಷ್ಟವಾದ, ಮಾಂಸಲವಾದ

ಚಿಆ. **ಸ್ತ್ರೀ:** **[ತ್ವಿಷ್]** ಕಾಂತಿ, ತೇಜಸ್ಸು, ಪ್ರಭೆ(ಷಡ್)

ಚಿಆ. **'ಚಿಯಗಾ'** ಶಬ್ದವನ್ನು ನೋಡುವುದು.

ಚಿಅ. **'ಚಿತ್ತ=ಚಿತ್ತ'** ಶಬ್ದವನ್ನು ನೋಡುವುದು.

ಚಿಇ. **ಸ್ತ್ರೀ:** **[ಚಿತಿ]** ಪುಷ್ಟಿ ಹೊಂದುವುದು, ವೃದ್ಧಿ ಹೊಂದುವುದು, ಒಟ್ಟುಗೂಡಿಸುವುದು, ಬುದ್ಧಿ, ಇಟ್ಟಿಗೆಯಿಂದ ಯಜ್ಞ ವೇದಿಕೆ ಇತ್ಯಾದಿ ರಚಿಸುವುದು. ಚಿತೆ.(ಪಣ್ಣ). **-ಕಮ್ಮ.** **ನ:** **[-ಕರ್ಮನ್]** ವಂದನೆ, ನಮಸ್ಕಾರ(ಆವ)

ಚಿಇ. **'ಚೇಇಅ'** ಶಬ್ದವನ್ನು ನೋಡುವುದು.

ಚಿಇಗಾ. **'ಚಿಯಗಾ'** ಶಬ್ದವನ್ನು ನೋಡುವುದು.

ಚಿಇಚ್ಛ. **ಸಕ:** **[ಚಿಕಿತ್ಸ್]** ಚಿಕಿತ್ಸೆ ಮಾಡು, ಸಂಶಯ ಪಡು, ಸಂದೇಹಿಸು

ಚಿಇಚ್ಛಅ. **ವಿ:** **[ಚಿಕಿತ್ಸಕ]** ಚಿಕಿತ್ಸೆ ಮಾಡುವವನು, **ಪು:** ವೈದ್ಯ

ಚಿಇಯ. **'ಚಿಂತಿಯ'** ಶಬ್ದವನ್ನು ನೋಡುವುದು.

ಚಿಉರ. **ಪು:** **[ಚಿಕುರ]** ಕೇಶ, ಕೂದಲು, ಹಳದಿ ಬಣ್ಣದ ಸುಗಂಧ ದ್ರವ್ಯ

ಚಿಂಚ.} **ಸಕ:** **[ಮಂಡಯ್]** ಅಲಂಕಾರ ಮಾಡು,
ಚಿಂಚಅ}. ಅಲಂಕೃತಗೊಳಿಸು

ಚಿಂಚಇಅ. **ವಿ:** **[ಮಂಡಿತ]** ಶೋಭಿತ, ಅಲಂಕೃತ

ಚಿಂಚಇಅ. **ವಿ:** **[ದೇ]** ಚಲಿಸಲ್ಪಟ್ಟ, ಚಲಿಸಿದ

ಚಿಂಚಣಿಆ}. **ಸ್ತ್ರೀ:** **[ದೇ]** **'ಚಿಂಚಿಣೀ'** ಶಬ್ದವನ್ನು
ಚಿಂಚಣಿಗಾ}. ನೋಡುವುದು.
ಚಿಂಚಣೀ}.

ಚಿಂಚಣೀ. **ಸ್ತ್ರೀ:** **[ದೇ]** ಬೀಸುವ ಕಲ್ಲು(ದೇ)

ಚಿಂಚಾ. **ಸ್ತ್ರೀ:** **[ಚಂಚಾ]** ಹುಲ್ಲಿನಿಂದ ಹೆಣೆಯಲಾದ ಚಾಪೆ ಇತ್ಯಾದಿ. **-ಪುರಿಸ.** **ಪು:** **[-ಪುರುಷ]** ಹೊಲಗಳಲ್ಲಿ ಪಶು, ಪಕ್ಷಿಗಳಿಂದ ಬೆಳೆ ರಕ್ಷಿಸಲು ನಿಲ್ಲಿಸುವ ಬೆರ್ಚಪ್ಪ(ಸುಪಾ)

ಚಿಂಚಾ. **ಸ್ತ್ರೀ:** **[ದೇ. ಚಿಂಚಾ]** ಹುಣಿಸೆ ಮರ(ಸುಪಾ)

ಚಿಂಚಿಅ. **ವಿ:** **[ಮಂಡಿತ]** ಅಲಂಕೃತಗೊಂಡ

ಚಿಂಚಿಣಿಆ}. **ಸ್ತ್ರೀ:** **[ದೇ]** ಹುಣಿಸೆ ಮರ(ಓಘ)
ಚಿಂಚಿಣಿಚಿಂಚಾ}.
ಚಿಂಚಿಣೀ}.

ಚಿಂಚಿಲ್ಲ. **ಸಕ:** **[ಮಂಡಯ್]** ಅಲಂಕರಿಸು, -**'ಚಿಂಚಿಲ್ಲಇ.'**

ಚಿಂಚಿಲ್ಲಿಅ.ಶವಿ: **[ಮಂಡಿತ]** ಅಲಂಕೃತಗೊಂಡ(ಪಾಅ)

ಚಿಂತ. **ಸಕ:** **[ಚಿಂತಯ್]** ಚಿಂತನೆ ಮಾಡು, ವಿಚಾರ ಮಾಡು, ನೆನಪಿಸಿಕೊಳ್ಳು ಧ್ಯಾನಿಸು, ಚಿಂತೆಮಾಡು, ದುಃಖಿಸು

ಚಿಂತ. **ವಿ:** **[ಚಿಂತ್ಯ]** ಚಿಂತನೀಯ, ಚಿಂತಿಸಲು ಯೋಗ್ಯವಾದ, ವಿಚಾರಣೀಯ, (ಉಪ)

ಚಿಂತಣ. **ನ:** **[ಚಿಂತನ]** ಚಿಂತನ, ವಿಚಾರ, ಸ್ಮರಣೆ

ಚಿಂತಣಾ. **ಸ್ತ್ರೀ:** **[ಚಿಂತನಾ]** ಮೇಲಿನ ಶಬ್ದವನ್ನು ನೋಡುವುದು.

ಚಿಂತಣಿಯಾ. **ಸ್ತ್ರೀ:** **[ಚಿಂತನಿಕಾ]** ಸ್ಮರಿಸುವುದು, ಚಿಂತನ ಮಾಡುವುದು (ಠಾ)

ಚಿಂತಯ. **ವಿ:** **[ಚಿಂತಕ]** ಚಿಂತನೆ ಮಾಡುವವನು

ಚಿಂತವ. **'ಚಿಂತ=ಚಿಂತಯ್'** ಶಬ್ದವನ್ನು ನೋಡುವುದು.

ಚಿಂತವಿಯು. ವಿ: [ಚಿಂತಿತ] ಯಾರ ಬಗ್ಗೆ ಚಿಂತಿಸಲಾಗಿದೆಯೋ ಆತ(ಭವಿ)

ಚಿಂತಾ. ಸ್ತ್ರೀ: [ಚಿಂತಾ] ವಿಚಾರ, ಪರ್ಯಾಲೋಚನೆ (ಪಾಅ), ಶೋಕ, ಚಿಂತೆ, (ಸೂಅ), ಧ್ಯಾನ, (ಆವ) ಸ್ಮರಣೆ, ಇಚ್ಛಿಸಿದ್ದು ದೊರೆಯುವ ಬಗ್ಗೆ ಸಂದೇಹ, **–ಉರ.** ವಿ: [–ತುರ] ಶೋಕದಿಂದ ಚಿಂತೆಗೊಳಗಾದ. **–ದಿಟ್ಠ.** ವಿ: [–ದೃಷ್ಟ] ವಿಚಾರ ಪೂರ್ವಕವಾಗಿ ನೋಡಿದ, **–ಮಇಅ.** ವಿ: [–ಮಯ] ಚಿಂತೆಯಿಂದ ಆವೃತವಾದ, **–ಮಣಿ.** ಪು: [–ಮಣಿ] ಮನಸ್ಸು ಬಯಸಿದಷ್ಟು ಸಂಪತ್ತನ್ನು ನೀಡುವ ದಿವ್ಯ ಮಣಿ., ವೀತಶೋಕ ನಗರದ ರಾಜ(ಪಉವು). **–ವರ.** ವಿ: [–ಪರ] ಚಿಂತಾಮಗ್ನನಾಗಿರುವವನು (ಪಉಮ)

ಚಿಂತಾಯಗ.} ವಿ: [ಚಿಂತಕ] ಆಲೋಚಿಸುವವನು,
ಚಿಂತಾವಗ}. ವಿಚಾರ ಮಾಡುವವನು. ಸ್ತ್ರೀ: –ಗಾ

ಚಿಂತಿಯು. ವಿ: [ಚಿಂತಿತ] ಯೋಚಿಸಲ್ಪಟ್ಟ, ವಿಚಾರಿಸಲಾದ, ನೆನಪಿಸಿಕೊಂಡ(ಣಾಯಾ), ಚಿಂತೆ ಉಂಟಾದವನು(ಔಪ), ನ: ಸ್ಮರಣೆ, ನೆನಪು

ಚಿಂತಿರ. ವಿ: [ಚಿಂತಾಯಿತೃ] ಆಲೋಚನೆಯಲ್ಲಿರುವ, ಚಿಂತನಶೀಲ(ಸಣ)

ಚಿಂಧ. ನ: [ಚಿಹ್ನ] ಚಿಹ್ನೆ, ಲಾಂಛನ, ಗುರುತು, ಧ್ವಜ, **–ಪಟ್ಟ.** ಪು: [–ಪಟ್ಟ] ಲಾಂಛನ ರೂಪದ ಬಟ್ಟೆಯ ತುಂಡು(ಣಾಯಾ). **–ಪುರಿಸ.** ಪು: [–ಪುರುಷ] ಗಡ್ಡ ಮೀಸೆ ಮೊದಲಾದ ಗಂಡಸಿನ ಚಿಹ್ನೆ ಉಳ್ಳ ನಪುಂಸಕ, ಪುರುಷನ ವೇಷಧಾರಣೆ ಮಾಡುವ ಹೆಣ್ಣು(ಠಾ)

ಚಿಂಧಾಲ. ವಿ: [ಚಿಹ್ನವತ್] ಚಿಹ್ನೆಯುಳ್ಳ, ಗುರುತು ಹೊಂದಿರುವ

ಚಿಂಧಾಲ. ವಿ: [ದೇ] ರಮ್ಯ, ಸುಂದರ, ಮನೋಹರ, ಮುಖ್ಯ, ಪ್ರಧಾನ(ದೇ)

ಚಿಂಧಿಯ. ವಿ: [ಚಿಹ್ನಿತ] ಚಿಹ್ನೆಯಿಂದ ಕೂಡಿದ, ಗುರುತಿನಿಂದ ಕೂಡಿದ

ಚಿಂಘುಲ್ಲಣೀ. ಸ್ತ್ರೀ: [ದೇ] ಮಹಿಳೆ ಧರಿಸುವ ವಸ್ತ್ರ–ವಿಶೇಷ, ಲಂಗ

ಚಿಕಿಚ್ಛ. 'ಚಿಇಚ್ಛ' ಶಬ್ದವನ್ನು ನೋಡುವುದು. 'ಚಿಕಿಚ್ಛಾಮಿ'

ಚಿಕುರ. 'ಚಿಉರ' ಶಬ್ದವನ್ನು ನೋಡುವುದು.

ಚಿಕ್ಕ. ವಿ: [ದೇ] ಸ್ವಲ್ಪ, ಕಡಿಮೆ, ನ: ಸೀನು(ಷಡ್)

ಚಿಕ್ಕಣ. ವಿ: [ಚಿಕ್ಕಣ] ಸ್ನಿಗ್ಧ, ನುಣುಪಾದ, ನಯವಾದ (ಪಣ್ಣ), ನಿಬಿಡ, ಒತ್ತೊತ್ತಾದ, ದಟ್ಟವಾದ, ಭೇದಿಸಲು ದುಸ್ಸಾಧ್ಯವಾದ, ದುಃಖದಿಂದ ಬಿಡುಗಡೆ ಪಡೆಯಲರ್ಹವಾದ(ಪಣ್ಣ)

ಚಿಕ್ಕಾ. ಸ್ತ್ರೀ: [ದೇ] ಕಡಿಮೆ ವಸ್ತು, ತುಂತುರು ಮಳೆ(ದೇ)

ಚಿಕ್ಕಾರ. ಪು: [ಚೀತ್ಕಾರ] ಚೀತ್ಕಾರ, ಕೂಗಾಟ, ಅರಚುವಿಕೆ

ಚಿಕ್ಕಿಣ. 'ಚಿಕ್ಕಣ' ಶಬ್ದವನ್ನು ನೋಡುವುದು.

ಚಿಕ್ಖಅಣ. ವಿ: [ದೇ] ಸಹಿಸುವವನು, ಸಹಿಷ್ಣು

ಚಿಕ್ಖಲ್ಲ. ಪು: [ದೇ] ಕೆಸರು (ದೇ)

ಚಿಕ್ಖಲ್ಲಯ. ನ: [ಚಿಕ್ಖಲ್ಲಕ] ಕಾಥಿಯಾವಾಡದ ಒಂದು ನಗರ

ಚಿಕ್ಖಿಲ್ಲ.}.(ದೇ) 'ಚಿಕ್ಖಲ್ಲ' ಶಬ್ದವನ್ನು
ಚಿಖಲ್ಲ}.ನೋಡುವುದು(ಗಾ)
ಚಿಖಿಲ್ಲ.}.

ಚಿಗಿಚಿಗಾಯ. ಅಕ: [ಚಿಕಚಿಕಾಯ್] ಒದ್ದೆ ಮಾಡು, ನೆನೆಸುವುದು, ತೋಯಿಸು

ಚಿಗಿಚ್ಛಗ. 'ಚಿಇಚ್ಛಅ' ಶಬ್ದವನ್ನು ನೋಡುವುದು.

ಚಿಗಿಚ್ಛಣ. ನ: [ಚಿಕಿತ್ಸನ] ಚಿಕಿತ್ಸೆ (ಉಪ)

ಚಿಗಿಚ್ಛಯ. 'ಚಿಇಚ್ಛಅ' ಶಬ್ದವನ್ನು ನೋಡುವುದು.

ಚಿಗಿಚ್ಛಾ. ಸ್ತ್ರೀ: [ಚಿಕಿತ್ಸಾ] ಚಿಕಿತ್ಸೆ, ಔಷಧಿ, ರೋಗವನ್ನು ವಾಸಿಮಾಡುವ ಕಾರ್ಯ. **–ಸಂಹಿಯಾ.** ಸ್ತ್ರೀ: [–ಸಂಹಿತಾ] ಚಿಕಿತ್ಸಾ ಶಾಸ್ತ್ರ, ವೈದ್ಯಶಾಸ್ತ್ರ

ಚಿಚ್ಚ. ವಿ: [ದೇ] ಅಂಟಿಕೊಂಡಿರುವ ಮೂಗು, ಒಳಕ್ಕೆ ಹೋಗಿರುವ ಮೂಗು, ಸಂಭೋಗ, ರತಿ (ದೇ)

ಚಿಚ್ಚ. ವಿ: [ತ್ಯಾಜ್ಯ] ತ್ಯಜಿಸಲು ಅರ್ಹವಾದ, ಬಿಡಲು ಯೋಗ್ಯವಾದ(ಸುಪಾ)

ಚಿಚ್ಚರ. ವಿ: [ದೇ] ಅಂಟಿಕೊಂಡಿರುವ ಮೂಗುಳ್ಳ,

ಚಿಚ್ಚಾ. 'ಚಯ=ತ್ಯಜ್' ಶಬ್ದವನ್ನು ನೋಡುವುದು

ಚಿಚ್ಚಿ. ಪು: [ಚಿಚ್ಚಿ] ಚೀತ್ಕಾರ, ಜೋರಾಗಿ ಕೂಗುವುದು, ಭಯಂಕರ ಶಬ್ದ ಮಾಡುವುದು

ಚಿಚ್ಚಿ. ಪು: [ದೇ] ಬೆಂಕಿ, ಅಗ್ನಿ

ಚಿಟ್ಠಂ. ಅ: [ದೇ] ಅತ್ಯಂತ, ಹೆಚ್ಚಾದ ಅತಿಶಯ

ಚಿಟ್ಠ. ಅಕ: [ಸ್ಥಾ] ಕುಳಿತುಕೊಳ್ಳು ವ. ಕೃ–**ಚಿಟ್ಠಂತ**

ಚಿಟ್ಠ. 'ಚೇಟ್ಠ' ಶಬ್ದವನ್ನು ನೋಡುವುದು

ಚಿಟ್ಠಇತ್ತು. ವಿ: [ಸ್ಥಾತೃ] ಕುಳಿತುಕೊಳ್ಳುವವನು(ಭಗ)
ಚಿಟ್ಠಣ. ನ: [ಸ್ಥಾನ] ನಿಂತಿರುವುದು
ಚಿಟ್ಠಣ. ನ: [ಚೇಷ್ಟನ] ಪ್ರಯತ್ನ
ಚಿಟ್ಠಣಾ. ಸ್ತ್ರೀ: [ಸ್ಥಾನ] ಸ್ಥಿತಿ, ಇರುವಿಕೆ, ಕುಳಿತುಕೊಳ್ಳುವುದು
ಚಿಟ್ಠಾ. **'ಚೇಟ್ಠಾ'** ಶಬ್ದವನ್ನು ನೋಡುವುದು
ಚಿಟ್ಠಿಂಯ. ವಿ: [ಸ್ಥಿತ] ಸ್ಥಿರವಾಗಿರುವ, ನೆಲೆಮಾಡಿಕೊಂಡಿರುವ, ಕುಳಿತಿರುವ
ಚಿಡಿಗ. ಪು: [ಚಟಿಕ] ಒಂದು ಪಕ್ಷಿ(ಪಣ್ಹಾ)
ಚಿಣ. ಸಕ: [ಚಿ] ಒಟ್ಟುಗೂಡಿಸು, ಹೂವು ಇತ್ಯಾದಿಗಳನ್ನು ಕಿತ್ತು ಒಟ್ಟುಗೂಡಿಸುವುದು
ಚಿಣ. **'ಚಣ'** ಶಬ್ದವನ್ನು ನೋಡುವುದು
ಚಿಣ. **'ಚಿತ್ತ=ಚಿತ್ತ'** ಶಬ್ದವನ್ನು ನೋಡುವುದು.
ಚಿಣಅ. ವಿ: [ಚಿತ್ತ] ಒಟ್ಟುಗೂಡಿಸಲ್ಪಟ್ಟ, ರಾಶಿ ಮಾಡಲಾದ
ಚಿಣೋಟ್ಠೀ. ಸ್ತ್ರೀ: [ದೇ] ಗುಲಗಂಜಿ(ದೇ)
ಚಿಣ್ಣ. ವಿ: [ಚೀರ್ಣ] ಆಚರಿಸಲ್ಪಟ್ಟ, ಮಾಡಲ್ಪಟ್ಟ, ಅಂಗೀಕರಿಸಲ್ಪಟ್ಟ, (ಉತ್ತ)
ಚಿಣ್ಹ. ನ: [ಚಿಹ್ನ] ಗುರುತು, ಚಿಹ್ನೆ
ಚಿತ್ತ. ಸಕ: [ಚಿತ್ರಯ್] ಚಿತ್ರ ಬರೆ. 'ಚಿತ್ತೇಇ
ಚಿತ್ತ: ನ: [ಚಿತ್ತ] ಮನಸ್ಸು, ಅಂತಃಕರಣ(ಠಾ), ಜ್ಞಾನ, ಚೇತನ, ಬುದ್ಧಿ, ಮತಿ(ಆವ), ಅಭಿಪ್ರಾಯ, ಉಪಯೋಗ, ಲಕ್ಷ್ಯ(ಅಣು), **–ಣ್ಣು.** ವಿ: [–ಜ್ಞ] ಹೃದಯವನ್ನು ಅರಿತವನು, ಮನಸ್ಸನ್ನು ತಿಳಿದವನು, **–ನಿವಾಇ.** ವಿ: [–ನಿಪಾತಿನ್] ಅಭಿಪ್ರಾಯಕ್ಕನುಸಾರವಾಗಿ ನಡೆದುಕೊಳ್ಳುವವನು(ಆಚಾ). **–ಮಂತ.** ವಿ: [–ವತ್] ಜೀವಂತ ವಸ್ತು
ಚಿತ್ತ: [ಚಿತ್ರ] ಕಾಂತಿ, ಆಲೇಖ್ಯ, ಚಿತ್ರ(ಸ್ವಪ್ನ). ಆಶ್ಚರ್ಯ, ಚೌಬೀನೆ, ಕಟ್ಟಿಗೆ, ವಿ: ವಿಲಕ್ಷಣ, ವಿಚಿತ್ರ, ಅನೇಕ ವಿಧದ , ನಾನಾ ಪ್ರಕಾರದ, ಅದ್ಭುತ, ಆಶ್ಚರ್ಯ–ಜನಕ(ವಿಪಾ), ನಾನಾ ಬಣ್ಣದ(ಣಾಯಾ), **ಪು:** ಒಬ್ಬ ಲೋಕಪಾಲ(ಠಾ), ಒಂದು ಪರ್ವತ, ಹುಲಿ, ಚಿರತೆ, ಕಿರುಬ ಮುಂತಾದ ಚತುಷ್ಪಾದಿಗಳು. ಚಿತ್ರಾ ನಕ್ಷತ್ರ, **–ಉತ್ತ.** **ಪು:** [–ಗುಪ್ತ] ಭರತ ಕ್ಷೇತ್ರದ ಭಾವೀ ತೀರ್ಥಂಕರ. **–ಕಣಗಾ.** ಸ್ತ್ರೀ: [–ಕನಕಾ] ಒಬ್ಬ ವಿದ್ಯುತ್ ಕುಮಾರೀದೇವಿ. **–ಕನಕಾದೇವಿ.** **–ಕಮ್ಮ.** ನ: [–ಕರ್ಮನ್] ಆಲೇಖ್ಯ, ಕಾಂತಿ, ಚಿತ್ರ–ಕರ. **'–ಗರ'** ಶಬ್ದವನ್ನು ನೋಡುವುದು **–ಕಹ.** ವಿ: [–ಕಥ] ನಾನಾ ಥರದ ಕಥೆಗಳನ್ನು ಹೇಳುವವನು. **–ಕೂಡ.** **ಪು:** [–ಕೂಟ] ಸೀತಾನದಿಯ ಉತ್ತರ ಭಾಗದ ದಡದಲ್ಲಿರುವ ಒಂದು ವಿಶಾಲವಾದ ಪರ್ವತ, ಒಂದು ಪರ್ವತ–ವಿಶೇಷ. ಈಗ ಚಿತ್ತೂರು ಎಂದು ಹೆಸರಾಗಿರುವ ನಗರ, ಒಂದು ಶಿಖರ. **–ಕ್ಖರಾ.** ಸ್ತ್ರೀ: [ಚಿತ್ರಾಕ್ಷರಾ] ಒಂದು ಛಂದಸ್ಸು. **–ಗರ.** **ಪು:** [–ಕರ] ಚಿತ್ರಕಾರ. ಸೋಮನಾಂಯಕ ಲೋಕಪಾಲನ ಅಗ್ರಮಹಿಷಿಯಾದ ಒಬ್ಬ ದೇವಿ(ಠಾ), ದಕ್ಷಿಣ ರುಚಕ ಪರ್ವತದ ಮೇಲೆ ನೆಲೆಸಿರುವ ಒಬ್ಬ ದಿಕ್ಕುಮಾರಿ ದೇವತೆ(ಠಾ), **–ಪಕ್ಖ.** **ಪು:** [–ಪಕ್ಷ] ವೇಣು ದೇವ ಎಂಬ ಹೆಸರಿನ ಇಂದ್ರನ ಒಬ್ಬ ಲೋಕಪಾಲ, ನಾಲ್ಕು ಇಂದ್ರಿಯಗಳ ಒಂದು ಕ್ಷುದ್ರ ಜಂತು. **–ಫಲ, –ಫಲಗ, –ಫಲಯ.** ನ: [–ಫಲಕ] ಚಿತ್ರವನ್ನು ಹೊಂದಿರುವ ವೇದಿಕೆ(ಭಗ). **–ಭಿತ್ತಿ.** ಸ್ತ್ರೀ: [–ಭಿತ್ತಿ] ಚಿತ್ರವನ್ನು ಒಳಗೊಂಡಿರುವ ಗೋಡೆ, ಹೆಣ್ಣಿನ ಚಿತ್ರ–**ಯರ.** **'–ಗರ' ಶಬ್ದವನ್ನು ನೋಡುವುದು.** **–ರಸ.** **ಪು:** [–ರಸ] ಭೋಜನವನ್ನು ನೀಡುವ ಕಲ್ಪ ವೃಕ್ಷಗಳ ಒಂದು ಜಾತಿ(ಪಉಮ). **–ಲೇಹಾ.** ಸ್ತ್ರೀ: [–ಲೇಖಾ] **ಒಂದು** ಬಗೆಯ ಛಂದಸ್ಸು. **–ಸಂಭೂಇಂಯ.** ನ: [–ಸಂಭೂತೀಂಯ] ಚಿತ್ರ ಮತ್ತು ಸಂಭೂತ ಎಂಬ ಚಾಂಡಾಲ–ವಿಶೇಷದ ವೃತ್ತಾಂತವನ್ನೊಳಗೊಂಡಿರುವ ಉತ್ತರಾಧ್ಯಯಂಯನ ಸೂತ್ರದ ಒಂದು ಅಧ್ಯಯನ. **–ಸಭಾ.** ಸ್ತ್ರೀ: [–ಸಭಾ] ಚಿತ್ರವನ್ನು ಹೊಂದಿರುವ ಮನೆ. **–ಸಾಲಾ.** ಸ್ತ್ರೀ: [–ಶಾಲಾ]
ಚಿತ್ತಂಗ. **ಪು:** [ಚಿತ್ರಾಂಗ] ಹೂವುಗಳನ್ನು ನಿಡುವ ಕಲ್ಪ ವೃಕ್ಷಗಳ ಒಂದು ಜಾತಿ
ಚಿತ್ತಜಾಣುಅ. **'ಚಿತ್ತ–ಣ್ಣು'**
ಚಿತ್ತಗ. 'ಚಿತ್ತ=ಚಿತ್ರ'(ಉಪ) ಶಬ್ದವನ್ನು ನೋಡುವುದು
ಚಿತ್ತಠಿಅ. ವಿ: [ದೇ] ಸಂತೋಷಪಡಿಸಲ್ಪಟ್ಟ, ಆನಂದಪಡಿಸಲಾದ
ಚಿತ್ತಣ. ನ: [ಚಿತ್ರಣ] ಚಿತ್ರ–ಕರ್ಮ=ಚಿತ್ರ ಬರೆಯುವುದು
ಚಿತ್ತದಾಉ. **ಪು:** [ದೇ] ಜೇನು ಹುಟ್ಟು(ದೇ)

ಚಿತ್ತಪತ್ತಯ. **ಪು:** [**ಚಿತ್ರಪತ್ರಕ**] ನಾಲ್ಕು ಇಂದ್ರಿಯಗಳ ಒಂದು ಪ್ರಾಣಿಜಾತಿ
ಚಿತ್ತಪರಿಚ್ಛೇಯ. ವಿ: [ದೇ] ಲಘುವಾದ, ಚಿಕ್ಕದಾದ(ಭಗ)
ಚಿತ್ತಯ. **ಚಿತ್ತ=ಚಿತ್ರ'** ಶಬ್ದವನ್ನು ನೋಡುವುದು(ಪಾಅ)
ಚಿತ್ತಯಲಯಾ. ಸ್ತ್ರೀ: [**ಚಿತ್ರಕಲತಾ**] ಒಂದು ಬಳ್ಳಿ
ಚಿತ್ತಲ. ವಿ: [ದೇ] ಅಲಂಕೃತಗೊಂಡ, ರಮಣೀಯ, ಸುಂದರ(ದೇ)
ಚಿತ್ತಲ. ವಿ: [**ಚಿತ್ರಲ**] ಕೆಂಪು–ಹಳದಿ ಬಣ್ಣದ, ನಾನಾ ಬಣ್ಣದ(ಪಾಅ), **ಪು:** ಜಿಂಕೆಯ ಆಕಾರದ ಒಂದು ಕಾಡು ಮೃಗ
ಚಿತ್ತಲಿ. **ಪುಂಸ್ತ್ರೀ:** [**ಚಿತ್ರಲಿನ್**] ಹಾವಿನ ಒಂದು ಪ್ರಭೇದ(ಪಣ್ಣ)
ಚಿತ್ತಲಿಅ. ವಿ: [**ಚಿತ್ರಲಿತ್, ಚಿತ್ರಿತ**] ನಾನಾ ವಿಧವಾಗಿ ಬಣ್ಣ ಹಾಕಲಾದ(ಗಾ), ಚಿತ್ರಿಸಲಾದ
ಚಿತ್ತವಿಅಅ. ವಿ: [ದೇ] ಸಂತೋಷಪಡಿಸಲ್ಪಟ್ಟ
ಚಿತ್ತವೀಣಾ. ಸ್ತ್ರೀ: [**ಚಿತ್ರವೀಣಾ**] ಚಿತ್ರವೀಣೆ ಎಂಬ ವಾದ್ಯ
ಚಿತ್ತಾ. ಸ್ತ್ರೀ: [**ಚಿತ್ರಾ**] ಚಿತ್ತಾ ನಕ್ಷತ್ರ, ಒಬ್ಬ ವಿದ್ಯುತ್ ಕುಮಾರಿ ದೇವಿ(ಠಾ), ಶಕ್ರೇಂದ್ರನ ಒಬ್ಬ ಲೋಕಪಾಲನ ಹೆಂಡತಿ, ದೇವಿ. ಒಂದು ಔಷಧಿ.
ಚಿತ್ತಾಚಿಲ್ಲಡಯ}. **ಪು:** [ದೇ] ಕಾಡು ಪ್ರಾಣಿ
ಚಿತ್ತಾಚೆಲ್ಲರಯ}.
ಚಿತ್ತಾವಡೀ. ಸ್ತ್ರೀ: [**ಚಿತ್ರಪಟೀ**] ಚಿತ್ರ ಬರೆಯುವ ವಸ್ತ್ರ
ಚಿತ್ತಿ. **ಪು:** [**ಚಿತ್ರಿನ್**] ಚಿತ್ರಕಾರ(ಕಮ್ಮ)
ಚಿತ್ತಿಅ. ವಿ: [**ಚಿತ್ರಿತ**] ಚಿತ್ರದಿಂದ ಕೂಡಿರುವಂತೆ ಮಾಡಿದ, ನಾನಾ ವಿಧವಾಗಿ ಬಣ್ಣ ಹಾಕಲ್ಪಟ್ಟ (ಔಪ)
ಚಿತ್ತಿಯಾ. ಸ್ತ್ರೀ: [**ಚಿತ್ರಿಕಾ**] ಹೆಣ್ಣು ಚಿರತೆ,
ಚಿತ್ತೀ. ಸ್ತ್ರೀ: [**ಚೈತ್ರೀ**] ಚೈತ್ರಮಾಸದ ಹುಣ್ಣಿಮೆ
ಚಿತ್ತೀ. **'ಚೆತ್ತೀ'** ಶಬ್ದವನ್ನು ನೋಡುವುದು
ಚಿದ್ದವಿಅ.}. ವಿ: [ದೇ] ನಾಶಗೊಂಡ (ಭವಿ)
ಚಿದ್ದಾವಿಅ}.
ಚಿನ್ನ. **'ಚಿಣ್ಣ'** ಶಬ್ದವನ್ನು ನೋಡುವುದು
ಚಿಪ್ಪ. **ಸಕ:** [ದೇ] ಕುಟ್ಟು, ತುಳಿ, ಬಡಿ
ಚಿಪ್ಪಗ. **ಪುಂನ:** [ದೇ] ಬಡಿದ ತೊಗಟೆ, ಬಡಿದ ಚರ್ಮ
ಚಿಪ್ಪಡ. **'ಚಿವಿಡ'** ಶಬ್ದವನ್ನು ನೋಡುವುದು
ಚಿಪ್ಪಯ. **'ಚಿಪ್ಪಗ'** ಶಬ್ದವನ್ನು ನೋಡುವುದು
ಚಿಪ್ಪಿಅ. **ಪು:** [ದೇ] ಬಾಲಕನಾಗಿದ್ದಾಗಲೇ ಬೀಜವನ್ನು ಹೆಬ್ಬೆರಳಿನಿಂದ ಅಮುಕಿ ನಿರ್ವೀರ್ಯಗೊಳಿಸಲಾಗಿರುವ ನಪುಂಸಕ
ಚಿಪ್ಪಿಡಯ. **ಪು:** [ದೇ] ಅನ್ನ ವಿಶೇಷ, ಆಹಾರ.
ಚಿಪ್ಪಿಣ. **ಪು:** [ದೇ] ಹರಗಿದ ಹೊಲ, ಸಸಿಮಡಿ, ಸಸಿಮಡಿ ಇರುವ ಪ್ರದೇಶ, ತೀರ ಪ್ರದೇಶ(ಭಗ)
ಚಿಬುಅ. **ನ:** [**ಚಿಬುಕ**] ಗದ್ದ, ಗಲ್ಲ.
ಚಿಬ್ಭಡ. **ನ:** [**ಚಿರ್ಭಿಟ**] ಮುಳ್ಳು ಸೌತೆ ಕಾಯಿ
ಚಿಬ್ಭಡಿಯಾ. ಸ್ತ್ರೀ: [**ಚಿರ್ಭಿಟಿಕಾ**] ಸೌತೆ ಬಳ್ಳಿ, ಸೌತೆ ಗಿಡ, ಮೀನಿನ ಒಂದು ಜಾತಿ
ಚಿಬ್ಭಿಡ. **'ಚಿಬ್ಭಡ'** ಶಬ್ದವನ್ನು ನೋಡುವುದು(ಸುಪಾ)
ಚಿಮಿಟ} ವಿ: [**ಚಿಪಿಟ**] ಚಪ್ಪಟೆಯಾದ, ಕುಳಿತಿರುವ,
ಚಿಮಿಢ}. ಬಗ್ಗಿದ ಮೂಗುಳ್ಳ(ಣಾಯಾ)
ಚಿಮಿಣ. ವಿ: [ದೇ] ಪುಲಕಿತ, ರೋಮಾಂಚನಗೊಂಡ
ಚಿಯ. **'ಚೇಇಅ=ಚೈತ್ಯ'** ಶಬ್ದವನ್ನು ನೋಡುವುದು
ಚಿಯಕಾ}. ಸ್ತ್ರೀ: [**ಚಿತಾ**] ಶವವನ್ನು ಸುಡಲು
ಚಿಯಗಾ}. ಹಾಕಿರುವ ಕಟ್ಟಿಗೆಯ ರಾಶಿ
ಚಿಯತ್ತ. **'ಚತ್ತ'** ಶಬ್ದವನ್ನು ನೋಡುವುದು
ಚಿಯತ್ತ. ವಿ: [ದೇ] ಅಭಿಮತ, ಅಭಿಪ್ರಾಯ, ಸಮ್ಮತ, ಪ್ರಿಯವಾದ, ಪ್ರೀತಿವುಂಟುಮಾಡುವನ: ಪ್ರೀತಿ, ಆಸಕ್ತಿ, ಅಪ್ರೀತಿ ಇಲ್ಲದಿರುವುದು(ಠಾ)
ಚಿಯಯಾ. **'ಚಿಯಗಾ'** ಶಬ್ದವನ್ನು ನೋಡುವುದು
ಚಿಯಾಗ}. **'ಚಾಯ=ತ್ಯಾಗ'** ಶಬ್ದವನ್ನು ನೋಡುವುದು
ಚಿಯಾಯ}. (ಠಾ)
ಚಿರ. **ನ:** [**ಚಿರ**] ದೀರ್ಘಕಾಲ, ಚಿರಕಾಲ, ವಿಳಂಬ, ವಿ: ಬಹಳ ಕಾಲದವರೆಗೂ ಇರುವ, **–ಆರಅ.** ವಿ: [**–ಕಾರಕ**] ವಿಳಂಬಿಸುವವನು. **–ಜೀವಿ.** ವಿ: [**–ಜೀವಿನ್**] ದೀರ್ಘ ಸಮುಯದವರೆಗೂ ಬದುಕಿರುವವನು. **–ಜೀವಿಅ.** ವಿ: [**–ಜೀವಿತ**] ದೀರ್ಘಕಾಲದ ವರೆಗೂ ಜೀವಿಸಿರುವ, ವೃದ್ಧ. **–ಟ್ಠಿಇ, ಟ್ಠಿಇಯ, –ಟ್ಠಿಈಯ.** ವಿ: [**–ಸ್ಥಿತಿಕ**] ದೀರ್ಘಾಯುಷ್ಯ ಉಳ್ಳವನು, ದೀರ್ಘ ಸಮಯದವರೆಗೂ ಬದುಕುವವನು. **–ರಾಅ.** **ಪು:** [**–ರಾತ್ರ**] ದೀರ್ಘ ಕಾಲ(ಆಚಾ)
ಚಿರ. **ಅಕ:** [**ಚಿರಯ್**]ವಿಳಂಬ ಮಾಡು, ಆಲಸ್ಯ ತೋರು
ಚಿರಂ. **ಅ:** [**ಚಿರಮ್**] ಬಹಳ ಸಮಯದವರೆಗೆ, ಹಲವು ಕಾಲದವರೆಗೆ, **–ತಣ.** ವಿ: [**–ತನ**] ಹಳೆಯ, ಪುರಾತನ ಕಾಲದ, ಪ್ರಾಚೀನ

ಚಿರಚ್ಚಿಯು. ವಿ: [**ಚಿರಚಿತ**] ಚಿರಕಾಲದಿಂದ ವೃದ್ಧಿಗೊಳಿಸಲ್ಪಟ್ಟ
ಚಿರಡೀ. ಸ್ತ್ರೀ: [ದೇ] ವರ್ಣಮಾಲೆ
ಚಿರಡ್ಡಿಹಿಲ್ಲ.(ದೇ). '**ಚಿರಿಡ್ಡಿಹಿಲ್ಲ**' ಶಬ್ದವನ್ನು ನೋಡುವುದು
ಚಿರಮಾಲ. ಸಕ: [**ಪ್ರತಿ+ಪಾಲಯ್**] ಪರಿಪಾಲಿಸು,ರಕ್ಷಿಸು
ಚಿರಯಾ. ಸ್ತ್ರೀ: [ದೇ] ಗುಡಿಸಿಲು, ಕುಟೀರ
ಚಿರಸ್ಸ. ಅ: [**ಚಿರಸ್ಯ**] ಬಹಳ ಕಾಲದವರೆಗೆ(ಉತ್ತರ)
ಚಿರಾಅ. '**ಚಿರ=ಚಿರಯ್**' ಶಬ್ದವನ್ನು ನೋಡುವುದು
ಚಿರಾಇಯ. ವಿ: [**ಚಿರಾದಿಕ**] ಹಳೆಯ, ಪ್ರಾಚೀನವಾದ
ಚಿರಾಈಯ. ವಿ: [**ಚಿರಾತೀತ**] ಹಳೆಯ,ಪ್ರಾಚೀನವಾದ
ಚಿರಾಉ. ಅ: [**ಚಿರಾತ್**] ಚಿರಕಾಲದಿಂದ
ಚಿರಾಣಯು.(ಅಪ). ವಿ: [**ಚಿರಂತನ**] ಹಳೆಯ, ಪ್ರಾಚೀನವಾದ(ಭವಿ)
ಚಿರಾದಣ. ವಿ: [**ಚಿರಂತನ**] ಮೇಲಿನ ಶಬ್ದವನ್ನು ನೋಡುವುದು
ಚಿರಾವ. ಅಕ: [**ಚಿರಯ್**] ತಡಮಾಡು, ವಿಳಂಬ ಮಾಡು, ಆಲಸ್ಯ ಮಾಡು, **ಸಕ:** ವಿಳಂಬ ಮಾಡಿಸು, ತಡೆದಿಡು
ಚಿರಾವಿಯ. ವಿ: [**ಚಿರಾಯಿತ**] ವಿಳಂಬ ಮಾಡಿದವನು, ತಡೆಹಿಡಿಯಲ್ಪಟ್ಟ, ನ: ವಿಳಂಬ, ತಡ
ಚಿರಿಂಚಿರಾ. ಸ್ತ್ರೀ: [ದೇ] ಮಳೆ, ಜಲಧಾರೆ(ದೇ)
ಚಿರಿಕ್ಕಾ. ಸ್ತ್ರೀ: [ದೇ] ನೀರು ತುಂಬುವ ಚರ್ಮದ ಚೀಲ, ತುಂತುರು ಮಳೆ, ಬೆಳಿಗ್ಗೆ,
ಚಿರಿಚಿರಾ.(ದೇ).'**ಚಿರಿಂಚಿರಾ**' ಶಬ್ದವನ್ನು ನೋಡುವುದು
ಚಿರಿಡೀ. '**ಚಿರಡೀ**' ಶಬ್ದವನ್ನು ನೋಡುವುದು
ಚಿರಿಡ್ಡಿಹಿಲ್ಲ. ನ: [ದೇ] ಮೊಸರು(ದೇ)
ಚಿರಿಹಿಟ್ಟೀ. ಸ್ತ್ರೀ: [ದೇ] ಗುಲಗಂಜಿ
ಚಿಲಾಅ. ಪು: [**ಕಿರಾತ**] ಅನಾರ್ಯದೇಶ–ವಿಶೇಷ, ಕಿರಾತ ದೇಶದಲ್ಲಿ ಇರುವ ಮ್ಲೇಚ್ಛ ಜಾತಿ, ಬೇಟೆಗಾರ (ಔಪ), ಹಣ ವ್ಯವಹಾರ ಮಾಡುವ ಒಬ್ಬ ವರ್ತಕನ ಸೇವಕ
ಚಿಲಾಇಯಾ. ಸ್ತ್ರೀ: [**ಕಿರಾತಿಕಾ**] ಕಿರಾತ ದೇಶದಲ್ಲಿ ವಾಸಿಸುವ ಮಹಿಳೆ
ಚಿಲಾಈ. ಸ್ತ್ರೀ: [**ಕಿರಾತೀ**] ಮೇಲಿನ ಶಬ್ದವನ್ನು ನೋಡುವುದು. **–ಪುತ್ತ.** ಪು: [**–ಪುತ್ರ**] ದಾಸೀ ಪುತ್ರನಾದ ಒಬ್ಬ ಜೈನ ಮಹರ್ಷಿ(ಣಾಯಾ)

ಚಿಲಾದ. '**ಚಿಲಾಅ**' ಶಬ್ದವನ್ನು ನೋಡುವುದು
ಚಿಲಿಚಿಲಿಆ. ಸ್ತ್ರೀ: [ದೇ] ಮಳೆ, ವೃಷ್ಟಿ
ಚಿಲಿಚಿಲಿಯ. ವಿ: [ದೇ] ನೆನೆಸಲ್ಪಟ್ಟ, ತೋಯಿಸಲ್ಪಟ್ಟ
ಚಿಲಿಚಿಲ್ಲ}. ವಿ: [ದೇ] ನೆಂದ, ಒದ್ದೆಯಾದ,
ಚಿಲಿಚ್ಚಿಲ}.ಆರ್ದ್ರ(ಪಣ್ಣ)
ಚಿಲಿಚ್ಚೀಲ}.
ಚಿಲಿಣ.(ದೇ) '**ಚಿಲೀಣ**' ಶಬ್ದವನ್ನು ನೋಡುವುದು
ಚಿಲಿಮಿಣೀ}. ಸ್ತ್ರೀ: [ದೇ] ಯವನಿಕೆ, ಪರದೆ,
ಚಿಲಿಮಿಲಿಗಾ}. ಮರೆಮಾಡುವ ವಸ್ತ್ರ(ಓಘ)
ಚಿಲಿಮಿಲಿಯಾ}.
ಚಿಲೀಣ. ನ: [ದೇ] ಕೊಳೆ, ಕೊಳಕು, ಅಶುಚಿ(ಉಘ)
ಚಿಲ್ಲ. ನ: [ದೇ] ಧಾನ್ಯವನ್ನು ಕೇರುವ ಮೊರ
ಚಿಲ್ಲ. ಪು: [ದೇ] ಬಾಲಕ, ಹುಡುಗ(ದೇ), ಶಿಷ್ಯ (ಆವಮ)
ಚಿಲ್ಲ. ಪು: [**ಚಿಲ್ಲ**] ಒಂದು ಮರ. ಒಂದು ಬಗೆಯ ಹೂವು
ಚಿಲ್ಲಅ. ನ: [ದೇ] ದೇದೀಪ್ಯಮಾನ, ಹೊಳೆಯುತ್ತಿರುವ, ಪ್ರಕಾಶಮಾನವಾದ
ಚಿಲ್ಲಗ (ದೇ). '**ಚಿಲ್ಲಿಯ**' ಶಬ್ದವನ್ನು ನೋಡುವುದು
ಚಿಲ್ಲಡ. (ದೇ). '**ಚಿಲ್ಲಲ**' ಶಬ್ದವನ್ನು ನೋಡುವುದು
ಚಿಲ್ಲಣಾ. ಸ್ತ್ರೀ: [**ಚಿಲ್ಲಣಾ**] ಶ್ರೇಣಿಕ ಮಹಾರಾಜನ ಸತೀ ಸಾಧ್ವಿ ಹೆಂಡತಿ(ಪಡಿ)
ಚಿಲ್ಲಯ. ನ: [ದೇ] ಹಾಳಾದ ಕಣ್ಣು
ಚಿಲ್ಲಲ. ಪು: [**ಚಿಲ್ವಲ**] ಒಂದು ಅನಾರ್ಯದೇಶ, ಆ ದೇಶದ ನಿವಾಸಿ
ಚಿಲ್ಲಲ. ಪುಂಸ್ತ್ರೀ: [ದೇ] ಚಿರತೆ(ಪಣ್ಣ), ಸ್ತ್ರೀ: **–ಲಿಯಾ,** ನ: ಕೆಸರು ಇರುವ ಜಲಾಶಯ. ಸಣ್ಣ ಕೆರೆ ಮೊದಲಾದವು. ದೇದೀಪ್ಯಮಾನ, ಹೊಳೆಯುವ
ಚಿಲ್ಲಾ. ಸ್ತ್ರೀ: [ದೇ] ಹದ್ದು(ದೇ)
ಚಿಲ್ಲಿಯ. ವಿ: [ದೇ] ಲೀನನಾದ, ಆಸಕ್ತ(ಣಾಯಾ), ದೇದೀಪ್ಯಮಾನ, ಪ್ರಜ್ವಲಿಸುವ(ಔಪ)
ಚಿಲ್ಲಿರಿ. ಪು: [ದೇ] ಸೊಳ್ಳೆ
ಚಿಲ್ಲೂರ. ನ: [ದೇ] ಒನಕೆ(ದೇ)
ಚಿಲ್ಹಯ. ಪು: [ದೇ] ಚಕ್ರದ ಹಾದಿ, ಚಕ್ರದ ಜಾಡು
ಚಿವಿಟ್ಟ}. ವಿ: [**ಚಿಪಿಟ**] ಬಗ್ಗಿದ (ಒಳಕ್ಕೆ ಹೋದ)
ಚಿವಿಡ}. ಮೂಗು
ಚಿವಿಡಾ. ಸ್ತ್ರೀ: [**ಚಿಪಿಟಾ**] ಗಂಧ ದ್ರವ್ಯ

ಚಿವಿಢ. 'ಚಿವಿಡ' ಶಬ್ದವನ್ನು ನೋಡುವುದು

ಚಿಹುರ. ಪು: [ಚಿಕುರ] ಕೂದಲು, ಕೇಶ(ಸುಪಾ)

ಚೀ}. 'ಚೀಇಅ' ಶಬ್ದವನ್ನು ನೋಡುವುದು

ಚೀಅ}.

ಚೀಅ. ನ: [ಚಿತಾ] ಹೆಣಗಳನ್ನು ಸುಡಲು ಮಾಡಿರುವ ಸೌದೆಗಳ ರಾಶಿ

ಚೀಇ. 'ಚೀಇಅ' ಶಬ್ದವನ್ನು ನೋಡುವುದು

ಚೀಡ. ವಿ: [ದೇ] ಕಪ್ಪು ಕಾಜಿನ ಮಣಿ ಉಳ್ಳ

ಚೀಣ. ವಿ: [ಚೀನ] ಸಣ್ಣದಾದ, ಚಿಕ್ಕದಾದ, ಲಘುವಾದ (ಣಾಯಾ), **ಪು:** ಮ್ಲೇಚ್ಛ ದೇಶ–ವಿಶೇಷ; ಚೀಣಾ ದೇಶ, ಚೀಣಾದ ನಿವಾಸಿಗಳು, ಬತ್ತದ ಒಂದು ಪ್ರಭೇದ. **–ಪಟ್ಟ. ಪು:** ಚೀಣಾ ದೇಶದಲ್ಲಿ ತಯಾರಾಗುವ ರೇಷ್ಮೆ ಬಟ್ಟೆ(ಪಣ್ಣ). **–ಪಿಟ್ಠ. ನ:** [–ಪಿಷ್ಟ] ಸಿಂದೂರ

ಚೀಣಾಂಸು}. ಪು: [ಚೀನಾಂಶು,–ಕ] ಚೀಣಾ ದೇಶದ

ಚೀಣಾಂಸುಯ}. ರೇಷ್ಮೆ ವಸ್ತ್ರ.

ಚೀಯಾ.ಸ್ತ್ರೀ: 'ಚೀಅ=ಚಿತಾ' ಶಬ್ದವನ್ನು ನೋಡುವುದು

ಚೀರ. ನ: [ಚೀರ] ಬಟ್ಟೆಯ ತುಂಡು(ಓಘ). **□ಕಂಡೂಸಗಪಟ್ಟ. ಪು:** [**–ಕಂಡೂಸಕಪಟ್ಟ**] ಜೈನ ಸಾಧುಗಳು ರಜೋಹರಣವನ್ನು ಬಂಧಿಸಲು ಕಟ್ಟಿಕೊಳ್ಳುವ ಒಂದು ಸಾಧನ(ನಿಚೂ)

ಚೀರಗ. ಪು: [ಚೀರಕ] ಕೆಳಗಿನ ಶಬ್ದವನ್ನು ನೋಡುವುದು

ಚೀರಿಯ. ಪು: [ಚೀರಿಕ] ದಾರಿಯಲ್ಲಿ ಬಿದ್ದಿರುವ ಚಿಂದಿ ಬಟ್ಟೆಯನ್ನು ಧರಿಸುವ ಭಿಕ್ಷುಕ; ಹರಕು–ಮುರುಕು ಬಟ್ಟೆ ಧರಿಸುವ ಸಾಧುಗಳ ಒಂದು ಪಂಗಡ.

ಚೀರಿಯಾ. ಸ್ತ್ರೀ: [ಚೀರಿಕಾ] ಕೆಳಗಿನ ಶಬ್ದವನ್ನು ನೋಡುವುದು

ಚೀರೀ. ಸ್ತ್ರೀ: [ಚೀರೀ] ಬಟ್ಟೆಯ ತುಂಡು, ಜೀರುಂಡೆ

ಚೀವಟ್ಟೀ. ಸ್ತ್ರೀ: [ದೇ] ಭರ್ಜಿ, ಭಲ್ಲೆ

ಚೀವರ. ನ: [ಚೀವರ] ಸನ್ಯಾಸಿಗಳು ಅಥವಾ ಭಿಕ್ಷುಕರು ಧರಿಸುವ ವಸ್ತ್ರ, ಬಟ್ಟೆ

ಚೀಹಾಡೀ. ಸ್ತ್ರೀ: [ದೇ] ಚೀತ್ಕಾರ, ಚೀರಾಟ, ಕೂಗುವುದು, ಆನೆಯ ಘೀಳಿಡುವಿಕೆ

ಚೀಹೀ. ಸ್ತ್ರೀ: [ದೇ] ಮುಸುಕಿನ ಜೋಳದ ಎಲೆ

ಚು. ಅಕ: [ಚ್ಯು] ಬೇರೆ ಜನ್ಮದಲ್ಲಿ ಹುಟ್ಟು, ಕೆಳಕ್ಕೆ ಬೀಳು, ಜಾರಿ ಬೀಳು

ಚುಅ. ಅಕ: [ಶ್ಚುತ್] ತೊಟ್ಟಿಕ್ಕು, ಹನಿಹನಿಯಾಗಿ ಬೀಳು

ಚುಅ. ವಿ: [ಚ್ಯುತ] ಮರಣಿಸಿದ, ನಾಶವಾದ, ಇನ್ನೊಂದು ಜನ್ಮದಲ್ಲಿ ಅವತರಿಸಿದ, ಕೆಳಕ್ಕೆ ಬಿದ್ದ

ಚುಅ. ಸಕ: [ತ್ಯಜ್] ಬಿಡು, ತ್ಯಜಿಸು

ಚುಇ. ಸ್ತ್ರೀ: [ಚ್ಯುತಿ] ಮರಣ, ನಾಶ

ಚುಂಕಾರಪುರ. ನ: [ಚುಂಕಾರಪುರ] ಒಂದು ನಗರ

ಚುಂಚುಅ. ಪು: [ಚುಂಚುಕ] ಮ್ಲೇಚ್ಛ ದೇಶ, ಆ ದೇಶದಲ್ಲಿ ನೆಲೆಸಿರುವ ನಿವಾಸಿಗಳು

ಚುಂಚುಣ. ಪು: [ಚುಂಚನ] 'ಇಭ್ಯ' ಎಂಬ ಶ್ರೀಮಂತ ವೈಶ್ಯ ಜಾತಿ

ಚುಂಚುಣಿಅ. ವಿ: [ದೇ] ಚಲಿಸಿದ, ಮುಂದೆ ಹೋದ, ನಾಶವಾದ

ಚುಂಚುಣಿಆ. ಸ್ತ್ರೀ: [ದೇ] ಗೋಷ್ಠಿಯ ಪ್ರತಿಧ್ವನಿ, ಸಂಭೋಗ, ರತಿ, ಹುಣಿಸೆ ಮರ, ಮುಷ್ಟಿ ದ್ಯೂತ ಹೇನು, ಕೂರೆ

ಚುಂಚುಮಾಲಿ. ವಿ: [ದೇ] ಆಲಸಿ, ಸೋಮಾರಿ

ಚುಂಚುಲಿ. ಪು: [ದೇ] ಕೊಕ್ಕು, ಒಂದು ಕೈ ಬೊಗಸೆ(ದೇ)

ಚುಂಚುಲಿಅ. ವಿ: [ದೇ] ನಿಶ್ಚಿತ, **ನ:** ಅತ್ಯಾಸೆ, ಅಪೇಕ್ಷೆ(ದೇ)

ಚುಂಚುಲಿಪೂರ. ಪು: [ದೇ] ಒಂದು ಕೈ ಬೊಗಸೆ

ಚುಂಛ. ವಿ: [ದೇ] ಒಣಗಿಸಲಾದ

ಚುಂಛಿಅ. ವಿ: [ದೇ] ಚೆನ್ನಾಗಿ ಒಣಗಿದ(ಸುಪಾ)

ಚುಂಟ. ಸಕ: [ಚಿ] ಹೂವು ಮೊದಲಾದವನ್ನು ಕಿತ್ತು ಒಟ್ಟುಗೂಡಿಸುವುದು. **ವ. ಕೃ–ಚುಂಟಂತ**

ಚುಂಟಿರ. ವಿ: [ದೇ] ಆಯ್ಕೆ ಮಾಡುವವನು

ಚುಂಢೀ. ಸ್ತ್ರೀ: [ದೇ] ಸ್ವಲ್ಪ ನೀರಿರುವ ಆಳವಲ್ಲದ ಕೆರೆ, ಜಲಾಶಯ

ಚುಂಪಾಲಯ. (ದೇ) **'ಚುಪ್ಪಾಲಯ'** ಶಬ್ದವನ್ನು ನೋಡುವುದು.

ಚುಂಬ. ಸಕ: [ಚುಂಬ್] ಚುಂಬಿಸು. □ಚುಂಬಇ. ವ. ಕೃ–ಚುಂಬಂತ

ಚುಂಬಣ. ನ: [ಚುಂಬನ] ಚುಂಬನ, ಮುತ್ತಿಡುವುದು

ಚುಂಬಿಅ. ವಿ: [ಚುಂಬಿತ] ಚುಂಬಿಸಲ್ಪಟ್ಟ, ಮುತ್ತಿಡಲ್ಪಟ್ಟ, ನ: ಚುಂಬನ

ಚುಂಬಿರ. ವಿ: [ಚುಂಬಿತೃ] ಚುಂಬಿಸುವವನು(ಭವಿ)

ಚುಂಭಲ. ಪು: [ದೇ] ಕರ್ಣಾಭರಣ, ಶಿರೋಭೂಷಣ

ಚುಕ್ಕ. ಅಕ: [ಭ್ರಂಶ್] ತಪ್ಪು ಮಾಡು, ಕಳಚಿ ಹೋಗು, ಇಲ್ಲವಾಗು, **ಸಕ:** ನಷ್ಟವುಂಟುಮಾಡು, ಖಂಡಿಸು.

ಚುಕ್ಕ. ವಿ: [ಭ್ರಷ್ಟ] ತಪ್ಪು ಮಾಡಲಾದ, ಮರೆತು ಹೋದ, ಕೆಳಕ್ಕೆ ಕಳಚಿಕೊಂಡ, ಲಕ್ಷ್ಯವಿಲ್ಲದ(ಸುಪಾ)

ಚುಕ್ಕ. ಪು: [ದೆ] ಮುಷ್ಟಿ, ಹಿಡಿ

ಚುಕ್ಕಾರ. ಪು: [ದೇ] ಶಬ್ದ(ಸೇ)

ಚುಕ್ಕುಡ. ಪು: [ದೇ] ಮೇಕೆ, ಹೋತ, ಆಡು

ಚುಕ್ಖ. (ದೇ). **'ಚೊಕ್ಖ'** ಶಬ್ದವನ್ನು ನೋಡುವುದು

ಚುಚುಯ}. ನ: [ಚೂಚುಕ] ಮೊಲೆತೊಟ್ಟು, ಚೂಚುಕ

ಚುಚ್ಚುಯ}. (ಪಣ್ಣ)

ಚುಚೂಯ. ಪುಂನ: [ಚೂಚುಕ] ಮೊಲೆಯ ತೊಟ್ಟು

ಚುಚ್ಛ. ವಿ: [ತುಚ್ಛ] ಅಲ್ಪ, ಕಡಿಮೆ, ಹಗುರ, ಹೀನ, ಕ್ಷುದ್ರ, ನಗಣ್ಯ(ಹೇ)

ಚುಜ್ಜ. ನ: [ದೇ] ಆಶ್ಚರ್ಯ

ಚುಡಣ. ನ: [ದೇ] ಜೀರ್ಣವಾಗುವುದು, ಕೊಳೆತು ಹೋಗವುದು(ಓಘ)

ಚುಡಲಿಅ. ನ: [ದೇ] ಗುರುವಂದನೆಯಲ್ಲಿಯ ಒಂದು ದೋಷ, ರಜೋಹರಣವನ್ನು ಉರಿಯುವ ಕೊಳ್ಳಿಯ ಹಾಗೆ ಮುಂದಿಟ್ಟು ನಮಸ್ಕರಿಸುವುದು.

ಚುಡಲೀ. (ದೇ). **'ಚುಡುಲೀ'** ಶಬ್ದವನ್ನು ನೋಡುವುದು

ಚುಡಿಲೀ. **'ಚುಡುಲೀ'** ಶಬ್ದವನ್ನು ನೋಡುವುದು

ಚುಡುಪ್ಪ. ನ: [ದೇ] ಚರ್ಮ ಸುಲಿಯುವುದು, ಗಾಯ, ಚರ್ಮ

ಚುಡುಪ್ಪಾ. ಸ್ತ್ರೀ: [ದೇ] ಚರ್ಮ, ತೊಗಲು(ಪಾಅ)

ಚುಡುಲೀ. ಸ್ತ್ರೀ: [ದೇ] ಉರಿಯುವ ಕೊಳ್ಳಿ(ದೇ)

ಚುಣ. ಸಕ: [ಚಿ] ಕಾಳು ಕಡಿ, ಪಕ್ಷಿಗಳ ಆಹಾರ

ಚುಣಅ. ಪು: [ದೇ] ಚಾಂಡಾಲ, ಬಾಲಕ, ಛಂದಸ್ಸು, ಇಚ್ಛೆ, ಭೋಜನದ ಬಗ್ಗೆ ಅರುಚಿ, ಸಂಬಂಧ, ವ್ಯತಿಕರ, ವಿ: ಸ್ವಲ್ಪ, ಬಿಡಲ್ಪಟ್ಟ, ತ್ಯಜಿಸಲಾದ, ಮೂಸಿನೋಡಲ್ಪಟ್ಟ(ದೇ)

ಚುಣಿಅ. ವಿ: [ದೇ] ಧರಿಸಿರುವ(ದೇ)

ಚುಣ್ಣ. ಸಕ: [ಚೂರ್ಣಯ್] ಪುಡಿಮಾಡು

ಚುಣ್ಣ. ಪುಂನ; [ಚೂರ್ಣ] ಪುಡಿ, ಚೂರು, ಹಿಟ್ಟು, ಧೂಳು, ಗಂಧ ದ್ರವ್ಯದ ರಜ, ಸುಣ್ಣ, ವಶೀಕರಣಾದಿಗಳ ಸಲುವಾಗಿ ಮಾಡುವ ದ್ರವ್ಯ-ಮಿಶ್ರಣ(ಣಾಯಾ), **-ಕೋಸಯ.** ನ: [-ಕೋಶಕ] ಒಂದು ಬಗೆಯ ಭಕ್ಷ್ಯ(ಪಣ್ಣ)

ಚುಣ್ಣ. ನ: [ಚೌರ್ಣ] ಗಂಭೀರವಾದ ಅರ್ಥ ಸೂಚಕ ಪದ, ಮಹಾ ಅರ್ಥ ಸೂಚಕ ಶಬ್ದ.

ಚುಣ್ಣಇಯ. ವಿ: [ದೇ] ಚೂರ್ಣದಿಂದ ಪೆಟ್ಟು ತಿಂದ, ಯಾರ ಮೇಲೆ ಪುಡಿ ಎಸೆಯಲಾಗಿದೆಯೋ ಅವನು(ದೇ)

ಚುಣ್ಣಗ. ಪು: [ಚೂರ್ಣಕ] ಒಂದು ವೃಕ್ಷ

ಚುಣ್ಣಾ. ಸ್ತ್ರೀ: [ಚೂರ್ಣಾ] ಒಂದು ವೃತ್ತ ಛಂದಸ್ಸು

ಚುಣ್ಣಾಆ. ಸ್ತ್ರೀ: [ದೇ] ಕಲೆ, ವಿಜ್ಞಾನ

ಚುಣ್ಣಾಸೀ. ಸ್ತ್ರೀ: [ದೇ] ದಾಸಿ, ಸೇವಕಿ

ಚುಣ್ಣಿ. ಸ್ತ್ರೀ: [ಚೂರ್ಣಿ] ಗ್ರಂಥದ ಟೀಕೆ.

ಚುಣ್ಣಿಅ. ಅ: [ಚೂರ್ಣಿತ] ಚೂರು ಚೂರಾಗಿ ಮಾಡಲ್ಪಟ್ಟ(ಪಾಅ), ಪುಡಿಮಾಡಲ್ಪಟ್ಟ ಧೂಳಿನಿಂದ ಆವೃತವಾದ

ಚುಣ್ಣಿಆ. ಸ್ತ್ರೀ: [ಚೂರ್ಣಿಕಾ] ಭೇದ-ವಿಶೇಷ, ಹಿಟ್ಟಿನ ಭಾಗಗಳು ಬೇರೆಬೇರೆಯಾಗಿರುವುದು(ಪಣ್ಣ) ಹುರಿದು ಪುಡಿಮಾಡಿದ ಧಾನ್ಯ.

ಚುಣ್ಣಿಯ. ವಿ: [ಚೂರ್ಣಿಕ] ಗಣಿತದಲ್ಲಿ ಪ್ರಸಿದ್ಧವಾದ ಉಳಿಕೆಯ ಅಂಶ

ಚುದ್ದಸ. **'ಚಉ-ದ್ದಸ'** ಶಬ್ದವನ್ನು ನೋಡುವುದು

ಚುನ್ನ. **'ಚುಣ್ಣ'** ಶಬ್ದವನ್ನು ನೋಡುವುದು

ಚುನ್ನಣ.ನ:[ಚೂರ್ಣನ] ಚೂರುಚೂರು ಮಾಡುವುದು

ಚುನ್ನಿ. **'ಚುಣ್ಣಿ'** ಶಬ್ದವನ್ನು ನೋಡುವುದು

ಚುನ್ನಿಅ. **'ಚುಣ್ಣಿಅ'** ಶಬ್ದವನ್ನು ನೋಡುವುದು

ಚುನ್ನಿಆ. **'ಚುಣ್ಣಿಆ'** ಶಬ್ದವನ್ನು ನೋಡುವುದು

ಚುಪ್ಪ. ವಿ: [ದೇ] ಸ್ನಿಗ್ಧ, ಜಿಡ್ಡಿನಿಂದ ಕೂಡಿದ, ಪ್ರೇಮದಿಂದ ಕೂಡಿದ

ಚುಪ್ಪಲ. ಪು: [ದೇ] ಕರ್ಣಾಭರಣ

ಚುಪ್ಪಲಿಅ. ನ: [ದೇ] ಹೊಸದಾಗಿ ಬಣ್ಣ ಹಾಕಿದ ಬಟ್ಟೆ

ಚುಪ್ಪಾಲಯ. ಪು: [ದೇ] ಗವಾಕ್ಷ, ಕಿಟಕಿ(ದೇ)

ಚುರಿಮ. ನ: [ದೇ] ಒಂದು ಖಾದ್ಯ-ವಿಶೇಷ, ತಿನ್ನುವ ಆಹಾರ.

ಚುಲಚುಲ. ಅಕ: [ಚುಲಚುಲಾಯ್] ಅತ್ಯಂತ ಉತ್ಸುಕನಾಗು, ತವಕ ಪಡು, ಆತುರಪಡು

ಚುಲಣೀ. ಸ್ತ್ರೀ: [ಚುಲನೀ] ದ್ರುಪದ ರಾಜನ ಹೆಂಡತಿ (ಉಪ), ಬ್ರಹ್ಮದತ್ತ ಚಕ್ರವರ್ತಿಯ ತಾಯಿ. **-ಪಿಯ.**ಪು: [-ಪಿತೃ] ಭಗವಾನ್ ಮಹಾವೀರನ ಮುಖ್ಯ ಉಪಾಸಕ.

ಚುಲಸೀ. ಸ್ತ್ರೀ: [ಚತುರಶೀತಿ] ಎಂಬತ್ತನಾಲ್ಕು

ಚುಲಸೀಇ. **'ಚುಲಸೀ'** ಶಬ್ದವನ್ನು ನೋಡುವುದು

ಚುಲಿಆಲಾ. ಸ್ತ್ರೀ; [**ಚುಲಿಯಾಲಾ**] ಒಂದು ಕೈ–ಬೊಗಸೆ
ಚುಲುಕ್ಕ. '**ಚಾಲುಕ್ಕ**' ಶಬ್ದವನ್ನು ನೋಡುವುದು
ಚುಲುಚುಲ. ಅಕ: [**ಸ್ಪಂದ್**] ಸ್ವಲ್ಪ ಅಲ್ಲಾಡು, ಕಂಪಿಸು, ಮಿಡಿ
ಚುಲುಚುಲಿಅ. ವಿ: [**ಸ್ಪಂದಿತ**] ಸ್ವಲ್ಪ ಅಲುಗಾಡಿದ, ಕಂಪಿಸಿದ, ನ: ಸ್ಫುರಣ, ಸ್ಪಂದನ
ಚುಲುಪ್ಪ. ಪು: [**ದೇ**] ಮೇಕೆ, ಆಡು
ಚುಲ್ಲ. ಪು: [**ದೇ**] ಮಗು, ಬಾಲಕ, ಆಳು, ದಾಸ, ವಿ: ಚಿಕ್ಕ, **–ತಾಯ.** ಪು: [**–ತಾತ**] ಚಿಕ್ಕಪ್ಪ, **–ಪಿಉ.** ಪು: [**–ಪಿತೃ**] ಚಿಕ್ಕಪ್ಪ. **–ಮಾಉಯಾ.** ಸ್ತ್ರೀ: [**–ಮಾತೃ**]ಚಿಕ್ಕ ಮಲತಾಯಿ. ಚಿಕ್ಕಮ್ಮ, (ತಾಯಿಯ ತಂಗಿ), ಚಿಕ್ಕಮ್ಮ(ತಂದೆಯ ತಮ್ಮನ ಹೆಂಡತಿ). **–ಸಯಗ., –ಸಯಯ,** ಪು: [**–ಶತಕ**] ಭಗವನ್ ಮಹಾವೀರರ ಹತ್ತು ಪ್ರಮುಖ ಉಪಾಸಕರಲ್ಲಿ ಒಬ್ಬ. **–ಹಿಮವಂತ.** ಪು: [**–ಹಿಮವತ್**] ಸಣ್ಣ ಹಿಮವತ್ ಪರ್ವತ. **–ಹಿಮವಂತಕೂಡ.** ನ: [**–ಹಿಮವತ್ಕೂಟ**] ಸಣ್ಣ ಹಿಮವತ್ ಪರ್ವತದ ಶಿಖರ. ಪು: ಅದರ ಅಧಿಪತಿ ದೇವ. **–ಹಿಮವಂತ ಗಿರಿಕುಮಾರ.** ಪು: [**–ಹಿಮವದ್ಗಿರಿಕುಮಾರ**] ಸಣ್ಣ ಹಿಮವತ್ಕೂಟದ ಅಧಿಷ್ಠಾತೃ ದೇವ.
ಚುಲ್ಲಗ. (**ದೇ**). '**ಚೊಲ್ಲಕ**' ಶಬ್ದವನ್ನು ನೋಡುವುದು
ಚುಲ್ಲಗ. ನ: [**ದೇ**] ಪೆಟ್ಟಿಗೆ
ಚುಲ್ಲಿ}. ಸ್ತ್ರೀ: [**ಚುಲ್ಲಿ, –ಲ್ಲೀ**] ಒಲೆ(ದೇ)
ಚುಲ್ಲೀ}.
ಚುಲ್ಲೀ. ಸ್ತ್ರೀ: [**ದೇ**] ಶಿಲೆ, ಕಲ್ಲಿನ ಚೂರು
ಚುಲ್ಲುಚ್ಛಲ. ಅಕ: [**ದೇ**] ಹಾರು, ಜಿಗಿ
ಚುಲ್ಲೋಡಯ. ಪು: [**ದೇ**] ಹಿರಿಯ ಸೋದರ, ಅಣ್ಣ
ಚೂಅ. ಪು: [**ದೇ**] ಮೊಲೆಯ ತುದಿ, ಮೊಲೆತೊಟ್ಟು
ಚೂಅ. ಪು: [**ಚೂತ**] ಮಾವಿನ ಮರ. ದೇವ–ವಿಶೇಷ (ಜೀವ). **–ವಡಿಂಸಗ.** ನ: [**ಚೂತಾವತಂಸಕ**] ವಿಮಾನ ಸೌಧರ್ಮ **–ವಡಿಂಸಾ.** ಸ್ತ್ರೀ: [**–ಚೂತಾವತಂಸಾ**] ಶಕ್ರೇಂದ್ರನ ಒಬ್ಬ ಅಗ್ರ ಮಹಿಷಿ, ಇಂದ್ರಾಣಿ.
ಚೂಚುಅ. ಪುಂನ: [**ಚೂಚುಕ**] ಮೊಲೆತೊಟ್ಟು
ಚೂಆ. ಸ್ತ್ರೀ: [**ಚೂತಾ**] ಶಕ್ರೇಂದ್ರನ ಒಬ್ಬ ಅಗ್ರ ಮಹಿಷಿ, ಇಂದ್ರಾಣಿ.

ಚೂಡ. ಪು: [**ದೇ**] ತೋಳಬಳೆ, ಅಂಗದ(ಪಾಅ)
ಚೂಡಾ. '**ಚೂಲಾ**' ಶಬ್ದವನ್ನು ನೋಡುವುದು
ಚೂಡುಲ್ಲಅ.(ಅಪ). '**ಚೂಡ**' ಶಬ್ದವನ್ನು ನೋಡುವುದು
ಚೂರ. ಸಕ: [**ಚೂರಯ್, ಚೂರ್ಣಯ್**] ಚೂರು ಮಾಡು, ಮುರಿ, ತುಂಡು ಮಾಡು ವ. ಕೃ–ಚೂರಂತ
ಚೂರ(ಅಪ). ಪುಂನ: [**ಚೂರ್ಣ**] ಚೂರು, ಪುಡಿ, ಚೂರ್ಣ
ಚೂರಣ. '**ಚುನ್ನಣ**' ಶಬ್ದವನ್ನು ನೋಡುವುದು
ಚೂರಿಅ. ವಿ: [**ಚೂರ್ಣ, ಚೂರ್ಣಿತ**] ಚೂರು ಚೂರಾಗಿ ಮಾಡಲಾದ, ತುಂಡು ತುಂಡಾಗಿ ಮಾಡಲಾದ (ಭವಿ)
ಚೂರಿಮ. ಪುಂನ: [**ದೇ**] ಲಾಡು, ಸಿಹಿ ಭಕ್ಷ್ಯ
ಚೂಲ– '**ಚೂಲಾ**' ಶಬ್ದವನ್ನು ನೋಡುವುದು. **–ಮಣಿ.** ನ: [**–ಮಣಿ**] ವಿದ್ಯಾಧರರ ಒಂದು ನಗರ
ಚೂಲಅ(ದೇ). '**ಚೂಡ**' ಶಬ್ದವನ್ನು ನೋಡುವುದು
ಚೂಲಾ. ಸ್ತ್ರೀ: [**ಚೂಡಾ**] ಜುಟ್ಟು, ಶಿಖರ, ನವಿಲಿನ ತಲೆಯ ಮೇಲಿನ ಜುಟ್ಟು, ಹುಂಜದ ಜುಟ್ಟು, ಸಿಂಹದ ಕೇಸರ, ಭರ್ಜಿ ಮುಂತಾದವುಗಳ ತುದಿ, ಅಂಗದ(ತೋಳಿನ ಆಭರಣ ವಂಕಿ), ಅಧಿಕ ಮಾಸ, ಅಧಿಕ ವರ್ಷ, ಗ್ರಂಥದ ಪರಿಶಿಷ್ಟ, **–ಕಮ್ಮ.** ನ:[**–ಕರ್ಮನ್**] ಹದಿನಾರು ವಿಧದ ಸಂಸ್ಕಾರಗಳಲ್ಲೊಂದಾದ ಚೌಲ, **–ಮಣಿ.** ಪುಂಸ್ತ್ರೀ: [**–ಮಣಿ**] ತಲೆಯಲ್ಲಿ ಧರಿಸುವ ರತ್ನಾಭರಣ, ಶಿರೋಮಣಿ(ಔಪ) ಸರ್ವಶ್ರೇಷ್ಠ,
ಚೂಲಿಯ. ಪು: [**ಚೂಲಿಕ**] ಅನಾರ್ಯದೇಶ–ವಿಶೇಷ, ಅದರ ನಿವಾಸಿಗಳು, ಸ್ತ್ರೀನ: ಸಂಖ್ಯಾ ವಿಶೇಷ, ಚೂಲಿಕಾಂಗವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖೆ. ಸ್ತ್ರೀ: –ಯಾ.
ಚೂಲಿಯಂಗ. ನ: [**ಚೂಲಿಕಾಂಗ**] ಪ್ರಯುತ(ಹತ್ತು ಲಕ್ಷ)ವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)
ಚೂಲಿಯಾ. '**ಚೂಲಾ**' ಶಬ್ದವನ್ನು ನೋಡುವುದು
ಚೂವ. '**ಚೂಅ**' ಶಬ್ದವನ್ನು ನೋಡುವುದು
ಚೂಹ. ಸಕ: [**ಕ್ಷಿಪ್**] ಎಸೆ, ಹಾಕು, ಪ್ರೇರಿಸು
ಚೇ. ಅ: [**ಚೇತ್**] ಒಂದು ವೇಳೆ, ಯಾವುದು(ವಿಸೇ)
ಚೇ. '**ಚಯ=ತ್ಯಜ್**' ಶಬ್ದವನ್ನು ನೋಡುವುದು

ಚೇ}. '**ಚಿ**' ಅನ್ನು ನೋಡುವುದು.

ಚೇಅ}.

ಚೇಅ. ಅಕ: [**ಚಿತ್**] ಚೈತನ್ಯ, ಗಮನದಲ್ಲಿಟ್ಟುಕೊಳ್ಳು, ಎಚ್ಚರವಹಿಸು, ಎಚ್ಚರ ಬರು, ಜ್ಞಾಪಿಸಿಕೊಳ್ಳು, ತಿಳಿ, ಅನುಭವಕ್ಕೆ ತಂದುಕೊಳ್ಳು(ಆವಮ)

ಚೇಅ. ಸಕ: [**ಚೇತಯ್**] ಮೇಲಿನ ಶಬ್ದವನ್ನು ನೋಡುವುದು. ಕೊಡು, ಅರ್ಪಿಸು, ವಿತರಿಸು, ಮಾಡು

ಚೇಅ. ಅ: (ಏವ) ಅವಧಾರಣ–ಸೂಚಕ ಅವ್ಯಯ, ನಿಶ್ಚಯವನ್ನು ಸೂಚಿಸುವ ಅವ್ಯಯ

ಚೇಅ. ನ: [**ಚೇತಸ್**] ಜ್ಞಾನ, ಚೇತನ, ಚೈತನ್ಯ(ವಿಸೇ), ಮನಸ್ಸು, ಚಿತ್ತ, ಅಂತಃಕರಣ, ಹೃದಯ

ಚೇಇ. ಪು: [**ಚೇದಿ**] ಚೇದಿ ದೇಶ, **–ವಇ. ಪು:** [**–ಪತಿ**] ಚೇದಿ ದೇಶದ ರಾಜ

ಚೇಇ}. ಪುಂನ: [**ಚೈತ್ಯ**] ಚಿತೆಯ ಮೇಲೆ ನಿರ್ಮಿಸಿದ

ಚೇಇಅ}. ಸ್ಮಾರಕ, ಸ್ತೂಪ, ಸಮಾಧಿ ಇತ್ಯಾದಿ. ವ್ಯಂತರರದ ಸ್ಥಳ, ಜಿನಮಂದಿರ, ತೀರ್ಥಂಕರ ಮಂದಿರ, ಬೌದ್ಧ ದೇವಾಲಯ, ಇಷ್ಟ ದೇವರ ಮೂರ್ತಿ, ತೀಥಂಕರ ಪ್ರತಿಮೆ, ಉದ್ಯಾನ, ಸಭಾ ಗೃಹದ ಸಮೀಪದಲ್ಲಿರುವ ಮರ, ವೇದಿಕೆ ಉಳ್ಳ ವೃಕ್ಷ, ದೇವತೆಗಳ ಚಿಹ್ನ ಹೊಂದಿರುವ ವೃಕ್ಷ, ಯಾವ ವೃಕ್ಷದ ಕೆಳಗೆ ಕುಳಿತಾಗ ಜಿನದೇವನಿಗೆ ಕೇವಲ ಜ್ಞಾನ ಪ್ರಾಪ್ತವಾಗಿತ್ತೋ ಆ ವೃಕ್ಷ, ಮರ, ಯಜ್ಞ ಸ್ಥಳ, ಜನರ ವಿಶ್ರಾಂತಿ ಸ್ಥಳ, **–ಖಂಭ. ಪು:** [**–ಸ್ತಂಭ**] ಸ್ತೂಪ, **–ಘರ. ನ:** [**–ಗೃಹ**] ಜಿನಮಂದಿರ(ಪಉಮ), **–ಜತ್ತಾ. ಸ್ತ್ರೀ:** [**–ಯಾತ್ರಾ**] ಜಿನ ಪ್ರತಿಮೆಗೆ ಸಂಬಂಧಿಸಿದ ಮಹೋತ್ಸವ, **–ಥೂಮ. ಪು:** [**–ಸ್ತೂಪ**] ಜಿನ ಮಂದಿರದ ಸಮೀಪದಲ್ಲಿರುವ ಸ್ತೂಪ(ಠಾ), **–ದವ್ವ. ನ:** [**–ದ್ರವ್ಯ**] ದೇವ ದ್ರವ್ಯ, ಜಿನ ಮಂದಿರಕ್ಕೆ ಸಂಬಂಧಿಸಿದ ಸ್ಥಾವರ ಅಥವಾ ಜಂಗಮ ಸಂಪತ್ತು. **–ಪರಿವಾಡೀ. ಸ್ತ್ರೀ:** [**–ಪರಿಪಾಟೀ**] ಕ್ರಮವಾಗಿ ಜಿನಮಂದಿರಗಳ ಯಾತ್ರೆ ಮಾಡುವುದು. **–ಮಹ. ಪು:** [**–ಮಹ**] ಚೈತ್ಯಕ್ಕೆ ಸಂಬಂಧಿಸಿದ ಉತ್ಸವ(ಆಚಾ). **–ರುಕ್ಖ. ಪು:** [**–ವೃಕ್ಷ**] ಕಟ್ಟೆಯನ್ನು ಹೊಂದಿರುವ ವೃಕ್ಷ, ತೀರ್ಥಂಕರನಿಗೆ ಯಾವುದರ ಕೆಳಗೆ ಕೇವಲ ಜ್ಞಾನವುಂಟಾಗುತ್ತದೋ ಆ ವೃಕ್ಷ. ದೇವತೆಗಳ ಚಿಹ್ನ ಉಳ್ಳ ವೃಕ್ಷ, ದೇವ ಸಭೆಯ ಸಮೀಪದ ವೃಕ್ಷ(ಪವ), **–ವಂದಣ. ನ:** [**–ವಂದನ**] ಜಿನ ಪ್ರತಿಮೆಯನ್ನು ಮನಸ್ಸು, ವಚನ ಮತ್ತು ಕಾಯದಿಂದ ಸ್ತುತಿಸುವುದು. ಅದೇ ಹಿಂದೆ ಹೇಳಿದ ಅರ್ಥ. **–ವಾಸ. ಪು:** [**–ವಾಸ**] ಜಿನ ಮಂದಿರದಲ್ಲಿ ಯತಿಗಳು ವಾಸಿಸುವುದು. –ಹರ. '**–ಘರ**' ಶಬ್ದವನ್ನು ನೋಡುವುದು(ಸುಪಾ)

ಚೇಇಅ. ವಿ: [**ಚೇತಿತ**] ಮಾಡಲ್ಪಟ್ಟ

ಚೆಂಧ. '**ಚಿಂಧ**' ಶಬ್ದವನ್ನು ನೋಡುವುದು

ಚೆಚ್ಚಾ. '**ಚೇ=ತ್ಯಜ್**' ಶಬ್ದವನ್ನು ನೋಡುವುದು

ಚೆಟ್ಠ. ಅಕ: [**ಚೇಷ್ಟ್**] ಪ್ರಯತ್ನ ಮಾಡು, ಕಾರ್ಯಗತಗೊಳಿಸು, ವ. ಕೃ–ಚೇಷ್ಟಮಾಣ

ಚೆಟ್ಠ. '**ಚಿಟ್ಠ= ಸ್ಥಾ**' ಶಬ್ದವನ್ನು ನೋಡುವುದು

ಚೆಟ್ಠಣ. '**ಚಿಟ್ಠಣ=ಚೇಷ್ಟನ**' ಶಬ್ದವನ್ನು ನೋಡುವುದು

ಚೆಟ್ಠಣ. ನ: [**ಸ್ಥಾನ**] ಸ್ಥಿತಿ, ಇರುವಿಕೆ, ಸ್ಥಿರತೆ

ಚೆಟ್ಠಾ. ಸ್ತ್ರೀ: [**ಚೇಷ್ಟಾ**] ಪ್ರಯತ್ನ, ಆಚರಣೆ, ಚಲನ

ಚೆಟ್ಠಿಯ. '**ಚೆಟ್ಠಿಯ=ಚೇಷ್ಟಿತ**' ಶಬ್ದವನ್ನು ನೋಡುವುದು(ಔಪ)

ಚೇಡ. ಪು: [**ದೇ**] ಬಾಲಕ, ಕುಮಾರ(ಣಾಯಾ)

ಚೇಡ}. ಪು: [**ಚೇಟ. –ಕ**] ದಾಸ, ಸೇವಕ, ವೈಸಾಲಿಕಾ

ಚೇಡಗ}. ನಗರದ ಒಬ್ಬ ಪ್ರಖ್ಯಾತ ರಾಜ. ಕೊಳಕು

ಚೇಡಯ}. ದೇವತೆ, ದೇವರುಗಳ ಒಂದು ನೀಚ ಜತಿ

ಚೇಡಿಆ. ಸ್ತ್ರೀ: [**ಚೇಟಿಕಾ**] ದಾಸಿ, ಆಳು(ಭಗ)

ಚೇಡೀ. ಸ್ತ್ರೀ: [**ಚೇಟೀ**] ಮೇಲಿನ ಶಬ್ದವನ್ನು ನೋಡುವುದು(ಆವಮ)

ಚೇಡೀ. ಸ್ತ್ರೀ: [**ದೇ**] ಕುಮಾರಿ, ಬಾಲಕಿ

ಚೆತ್ತ. ನ: [**ಚೈತ್ಯ**] ಚೈತ್ಯ–ವಿಶೇಷ

ಚೆತ್ತ. ಪು: [**ಚೈತ್ರ**] ಚೈತ್ರ ಮಾಸ, ಜೈನ ಮುನಿಗಳ ಒಂದು ಗಚ್ಛ

ಚೆತ್ತೀ. ಸ್ತ್ರೀ: [**ಚೈತ್ರೀ**] ಚೈತ್ರಮಾಸದ ಹುಣ್ಣಿಮೆ, ಚೈತ್ರಮಾಸದ ಅಮಾವಾಸ್ಯೆ

ಚೇದಿ. '**ಚೇಇ**' ಶಬ್ದವನ್ನು ನೋಡುವುದು

ಚೇದೀಸ. ಪು: [**ಚೇದೀಶ**] ಚೇದಿ ದೇಶದ ರಾಜ.

ಚೇಯಗ. ವಿ: [**ಚೇತಕ**] ದಾತ, ಕೊಡುವವನು(ಉಪ)

ಚೇಯಣ. ಪು: [**ಚೇತನ**] ಆತ್ಮ, ಜೀವ, ಪ್ರಾಣಿ, ವಿ: ಚೇತನವುಳ್ಳ, ಜ್ಞಾನವುಳ್ಳ

ಚೇಯಣ್ಣ}. ನ: [ಚೈತನ್ಯ] ಮೇಲಿನ ಶಬ್ದವನ್ನು
ಚೇಯನ್ನ}. ನೋಡುವುದು
ಚೇಯಸ. **'ಚೇಅ=ಚೇತಸ್'** ಶಬ್ದವನ್ನು ನೋಡುವುದು
ಚೇಯಾ. **'ಚೇಯಣಾ'** ಶಬ್ದವನ್ನು ನೋಡುವುದು
ಚೇಲ}. ನ: [ಚೇಲ] ವಸ್ತ್ರ, ಬಟ್ಟೆ(ಆಚಾ). **-ಕಣ್ಣ.** ನ:
ಚೇಲಯ}. [-ಕರ್ಣ] ಒಂದು ಬಗೆಯ ಬೀಸಣಿಗೆ. **-ಗೋಲ.** ನ: [-ಗೋಲ] ಬಟ್ಟೆಯ ಚೆಂಡು (ಸೂಅ). **-ಹರ.** ನ:[-ಗೃಹ] ಸಣ್ಣ ಶಿಬಿರ, ಸಣ್ಣಗೂಡಾರ.
ಚೇಲಯ. ನ: [ದೇ] ತಕ್ಕಡಿಯ ತಟ್ಟೆ
ಚೇಲಿಯ. **'ಚೇಲ'** ಶಬ್ದವನ್ನು ನೋಡುವುದು
ಚೇಲುಂಪ. ನ: [ದೇ] ಒನಕೆ
ಚೆಲ್ಲ}. (ದೇ) **'ಚಿಲ್ಲ'** ಶಬ್ದವನ್ನು ನೋಡುವುದು
ಚೆಲ್ಲಅ}.
ಚೆಲ್ಲಗ}. (ದೇ) **'ಚಿಲ್ಲಗ'** ಶಬ್ದವನ್ನು ನೋಡುವುದು
ಚೆಲ್ಲಯ}.
ಚೇವ. ಅ: [ಏವ, ಚೈವ] ಅವಧಾರಣ ಸೂಚಕ ಅವ್ಯಯ, ನಿಶ್ಚಯವನ್ನು ಸೂಚಿಸುವ ಶಬ್ದ, ಪಾದಪೂರಕ ಅವ್ಯಯ(ಪಉಮ)
ಚೇವ. ಅ: [ಇವ] ಸಾದೃಶ್ಯ ಸೂಚಕ ಅವ್ಯಯ(ಉತ್ತ)
ಚೋ. **'ಚಉ'** ಶಬ್ದವನ್ನು ನೋಡುವುದು. **-ಆಲಾ.** ಸ್ತ್ರೀ: [-ಚತ್ವಾರಿಂಶತ್] ನಲವತ್ತ ನಾಲ್ಕು. **-ವಟ್ಠಿ.** ಸ್ತ್ರೀ: [-ಷಷ್ಟಿ] ಅರುವತ್ತ ನಾಲ್ಕು. **-ವತ್ತರಿ.** ಸ್ತ್ರೀ: [-ಸಪ್ತತಿ] ಎಪ್ಪತ್ತ ನಾಲ್ಕು(ಸಮ)
ಚೋಅ. ಸಕ: **[ಚೋದಯ್]** ಪ್ರಚೋದಿಸು, ಪ್ರೇರಿಸು, ಹೇಉ
ಚೋಅಅ. ವಿ: **[ಚೋದಕ]** ಪ್ರೇರಕ, ಪ್ರಶ್ನಿಸುವವನು, ಪೂರ್ವಪಕ್ಷದವನು
ಚೋಅಣ. ನ: **[ಚೋದನ]** ಪ್ರೇರಣೆ, ಪ್ರಚೋದನೆ, ಹುರಿದುಂಬಿಸುವವನು.
ಚೋಇಅ. ವಿ: **[ಚೋದಿತ]** ಪ್ರೇರಿಸಲ್ಪಟ್ಟವನು, ಹುರಿದುಂಬಿಸಲ್ಪಟ್ಟವನು(ಔಪ)
ಚೋಏ. ಸಕ: **[ಚೋದಯ್]** ಪ್ರಶ್ನಿಸು, ಕಲಿಸುವುದು, ಶಿಕ್ಷಣ ನೀಡು
ಚೊಕ್ಕ. (ದೇ). **'ಚುಕ್ಕ'** ಶಬ್ದವನ್ನು ನೋಡುವುದು
ಚೊಕ್ಖ. ವಿ:[ದೇ] ಶುದ್ಧವಾದ, ಶುಚಿಯಾದ, ಪವಿತ್ರವಾದ
ಚೊಕ್ಖಲಿ. ವಿ:[ದೇ] ಶುದ್ಧತೆ ಉಳ್ಳವನು, ಮಡಿ ಆ...ಸುವವನು
ಚೊಕ್ಖಾ. ಸ್ತ್ರೀ: **[ಚೋಕ್ಷಾ]** ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿನಿ
ಚೊಜ್ಜ. ನ: [ದೇ] ಆಶ್ಚರ್ಯ, ವಿಸ್ಮಯ(ಸುಪಾ)
ಚೊಜ್ಜ. ನ: **[ಚೌಯ]** ಕಳ್ಳತನ
ಚೊಜ್ಜ. ನ: **[ಚೋದ್ಯ]** ಪ್ರಶ್ನೆ, ಆಶ್ಚರ್ಯ, ಅದ್ಭುತ. ವಿ: ಪ್ರೇರಿಸಲು ಯೋಗ್ಯವಾದ(ಗಾ)
ಚೊಟ್ಟೀ. ಸ್ತ್ರೀ: [ದೇ] ಜುಟ್ಟು, ಶಿಖೆ
ಚೊಡ್ಡ. ನ: [ದೇ] ಹಣ್ಣು, ಕಾಯಿ, ಎಲೆ ಮೊದಲಾದವುಗಳ ತೊಟ್ಟು
ಚೋಢ. ನ: [ದೇ] ಬಿಲ್ವ ವೃಕ್ಷ
ಚೊಣ್ಣ. ನ: [ದೇ] ಜಗಳ, ಕಲಹ(ನಿಚೂ), ರೆಪ್ಪೆ ಮಿಟುಕಿಸುವುದೇ ಮೊದಲಾದ ನೀಚ ಕೃತ್ಯ, ಕಾಷ್ಠಾನಯನ
ಚೊತ್ತ}. ಪಂನ: [ದೇ] ಅಂಕುಶ(ಪಾಅ)
ಚೊತ್ತಅ}.
ಚೋದ(ದೇ). **'ಚೋಯ'** ಶಬ್ದವನ್ನು ನೋಡುವುದು
ಚೋದಗ. **'ಚೋಅಅ'** ಶಬ್ದವನ್ನು ನೋಡುವುದು
ಚೋದಣಾ. ಸ್ತ್ರೀ: **[ಚೋದನಾ]** ಪ್ರೇರಣೆ, ಪ್ರಚೋದನೆ
ಚೊಪ್ಪಡ. ಸಕ: **[ಮ್ರಕ್ಷ್]** ಎಣ್ಣೆ ತುಪ್ಪ ಇತ್ಯಾದಿ ಹಾಕು, ಸ್ನಿಗ್ಧಗೊಳಿಸು
ಚೊಪ್ಪಡ. ನ: **[ಮ್ರಕ್ಷಣ]** ಎಣ್ಣೆ, ತುಪ್ಪ ಇತ್ಯಾದಿ
ಚೊಪ್ಪಡಿಯ. ವಿ: [ದೇ] ಲೇಪಿಸಲ್ಪಟ್ಟ, ಅಡಗಿಸಲ್ಪಟ್ಟ
ಚೊಪ್ಪಾಲ. ಪು: **[ಚತುಷ್ಪಾಲ]** ಸೂರ್ಯಾಭ ದೇವನ ಆಯುಧಶಾಲೆ
ಚೊಪ್ಪಾಲ. ನ: [ದೇ] ಮದ್ದಾನೆ.
ಚೊಪ್ಪುಚ್ಛ. ವಿ: [ದೇ] ಸ್ನಿಗ್ಧ, ಸ್ನೇಹದಿಂದ ಕೂಡಿದ, ಪ್ರೇಮದಿಂದ ಕೂಡಿದ
ಚೋಯ}. ನ: [ದೇ] ತ್ವಚೆ, ಚರ್ಮ, ಮಾವು
ಚೋಯಗ}. ಮೊದಲಾದವುಗಳ ಸಿಪ್ಪೆ, ತೊಗಟೆ, ಗಂಧ-ದ್ರವ್ಯ-ವಿಶೇಷ(ಆಚಾ)
ಚೋಯಗ. **'ಚೋಅಅ'** ಶಬ್ದವನ್ನು ನೋಡುವುದು
ಚೋಯಣಾ. ಸ್ತ್ರೀ: **[ಚೋದನಾ]** ಪ್ರೇರಣೆ
ಚೋಯಯ. ಪು: [ದೇ] ಒಂದು ಬಗೆಯ ಫಲ
ಚೋಯಾಲೀಸ. ಸ್ತ್ರೀನ: **[ಚತುಶ್ಚತ್ವಾರಿಂಶತ್]** ನಲವತ್ತನಾಲಕ್ಕು
ಚೋರ. ಪು: **[ಚೋರ]** ಕ... **-ಕೀಡ.** ಪು: **[-ಕೀಟ]** ಮಲದಲ್ಲಿ ಉತ್ಪತ್ತಿಯಾಗುವ ಕ್ರಿಮಿಗಳು

ಚೋರಂಕಾರ. ಪು: [ಚೌರ್ಯಕಾರ] ಕಳ್ಳ, ಚೋರ,
ಚೋರಗ. ವಿ: [ಚೋರಕ] ಕಳ್ಳತನ ಮಾಡಿಸುವವನು, ಪುಂನ: ಗ್ರಂಥಿಪರ್ಣ, ಮಾಚಿಪತ್ರೆ(ಪಣ್ಣ)
ಚೋರಣ. ನ: [ಚೋರಣ] ಕಳ್ಳತನ, ಕಳುವು ಮಾಡಿಸುವುದು. ವಿ: ಕಳ್ಳ
ಚೋರಲೀ. ಸ್ತ್ರೀ: [ದೇ] ಶ್ರಾವಣ ಮಾಸದ ಕೃಷ್ಣ ಚತುರ್ದಶಿ
ಚೋರಾಗ. ಪು: [ಚೋರಾಕ] ಸನ್ನಿವೇಶ–ವಿಶೇಷ, ಈ ಹೆಸರಿನ ಒಂದು ಸಣ್ಣ ಹಳ್ಳಿ(ಆವಮ)
ಚೋರಾವ. ಸಕ: [ಚೋರಯ್] ಕದಿ, ಕಳ್ಳತನ ಮಾಡು
ಚೋರಾಸೀ}. **'ಚಉರಾಸೀ'** ಶಬ್ದವನ್ನು
ಚೋರಾಸೀಇ}. ನೋಡುವುದು.
ಚೋರಿಅ. ನ: [ಚೌರ್ಯ] ಕಳ್ಳತನ, ಅಪಹರಣ.
ಚೋರಿಅ. ವಿ: [ಚೌರಿಕ] ಕಳ್ಳತನ ಮಾಡುವವನು. ಪು: ಗುಪ್ತಚಾರ, ಗೂಢಚರ(ಪಣ್ಣ)
ಚೋರಿಅ. ವಿ: [ಚೋರಿತ] ಕಳವು ಮಾಡಲ್ಪಟ್ಟ,
ಚೋರಿಆ. ಸ್ತ್ರೀ: [ಚೌರ್ಯ, ಚೌರಿಕಾ] ಕಳ್ಳತನ, ಅಪಹರಣ(ಗಾ)
ಚೋರಿಕ್ಕ. ನ: [ಚೌರಿಕ್ಯ] ಮೇಲಿನ ಶಬ್ದವನ್ನು ನೋಡುವುದು.
ಚೋರೀ. ಸ್ತ್ರೀ: [ಚೌರೀ] ಕಳ್ಳತನ, ಅಪಹರಣ
ಚೋಲ. ವಿ: [ದೇ] ಕುಳ್ಳ, ವಾಮನ, ಕುಬ್ಜ. ಪು: ಪುರುಷ ಚಿಹ್ನವಾದ ಲಿಂಗ. ನ: ಗಂಧ–ದ್ರವ್ಯವಾದ ಮಂಜಿಷ್ಠ, **–ಪಟ್ಟ.** ಪು: [–ಪಟ್ಟ] ಜೈನ ಮುನಿಯ ಕಟಿವಸ್ತ್ರ(ಓಘ), **–ಯ.** ಪು: [–ಜ] ಮಂಜಿಷ್ಠದ ಬಣ್ಣ
ಚೋಲ. ಪು: [ಚೋಲ] ದ್ರಾವಿಡ ಮತ್ತು ಕಳಿಂಗದ ಮಧ್ಯದ ಚೋಳ ದೇಶ.
ಚೋಲಅ. ನ: [ದೇ] ಕವಚ(ನಾಟ)
ಚೋಲಅ}. ನ: [ಚೌಲ, –ಕ] ಮುಂಡನ ಸಂಸ್ಕಾರ,
ಚೋಲಗ}. ಚೂಡಾ ಕರ್ಮ(ಆವಮ)
ಚೋಲುಕ್ಕ. **'ಚಾಲುಕ್ಕ'** ಶಬ್ದವನ್ನು ನೋಡುವುದು.
ಚೋಲೋಯಣಗ.} ನ: [ಚೂಲಾಪನಯನ]
ಚೋಲೋವಣಯ}. ಚೂಲೋಪನಯನ ಸಂಸ್ಕಾರ
ಚೋಲೋವಣಂಯುಣ}. ವಿಶೇಷ, ಕ್ಷೌರ ಮಾಡಿಸುವುದು(ಮುಂಡನ=ಚೌಲ)(ಣಾಯಾ), ಶಿಖೆಯನ್ನು ಧರಿಸುವುದು(ಭಗ)

ಚೊಲ್ಲಕ.(ದೇ). **'ಚೋಲಗ'** ಶಬ್ದವನ್ನು ನೋಡುವುದು.
ಚೊಲ್ಲಕ}. ಪುಂನ: [ದೇ] ಭೋಜನ(ಆವಮ), ವಿ:
ಚೊಲ್ಲಗ}. ಕ್ಷುದ್ರ, ಲಘುವಾದ, ಚಿಕ್ಕದಾದ
ಚೊಲ್ಲಯ. ಪುಂನ: [ದೇ] ಗೋಣಿಚೀಲ
ಚೋವತ್ತರಿ. ಸ್ತ್ರೀ: [ಚತುಃಸಪ್ತತಿ] ಎಪ್ಪತ್ತನಾಲಕ್ಕು
ಚೋವಾಲಯ. ಪುಂನ: [ಚತುರ್‌ದ್ವಾರ] ನಾಲ್ಕು ಬಾಗಿಲುಗಳುಳ್ಳ ಮನೆ, ಮೇಲಿನ ಶಯನಗೃಹ
ಚೊಪ್ಪಡ. **'ಚೊಪ್ಪಡ=ಮ್ರಕ್ಷ್'** ಶಬ್ದವನ್ನು ನೋಡುವುದು.
ಚ್ಚ. ಅ: [ಏವ] ಅವಧಾರಣವನ್ನು ಸೂಚಿಸುವ ಅವ್ಯಯ
ಚ್ಚಿಅ}. **'ಚಿಅ=ಏವ'** ಶಬ್ದವನ್ನು ನೋಡುವುದು.
ಚ್ಚೇಅ}. **'ಚೇವ=ಏವ'** ಶಬ್ದವನ್ನು ನೋಡುವುದು.
ಚ್ಚೇವ}.

ಛ

ಛ. ಪು: [ಛ] ತಾಲು ಸ್ಥಾನದಲ್ಲಿ ಹುಟ್ಟುವ ವ್ಯಂಜನ ವರ್ಣ. ಆಚ್ಛಾದನ, ಮುಚ್ಚುವುದು

ಛ. ತ್ರಿ. ಬ: [**ಷಷ್**] ಸಂಖ್ಯಾ ವಿಶೇಷ, ಆರು. **–ಉತ್ತರಸಯ. ವಿ:** [**–ಉತ್ತರಶತತಮ**] ಒಂದು ನೂರಾ ಆರು. **–ಕ್ಕಮ್ಮ. ನ:** [**–ಕರ್ಮನ್**] ಬ್ರಾಹ್ಮಣರ ಕರ್ತವ್ಯಗಳಾದ ಆರು ಬಗೆಯ ಕರ್ಮಗಳು: ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹ(ನಿಚೂ). **–ಕ್ಕಾಯಾ. ನ:** [**–ಕಾಯ**] ಆರು ಬಗೆಯ ಜೀವಗಳಾದ, ಪೃಥ್ವಿ, ಅಗ್ನಿ, ವಾಯು, ನೀರು, ವೃಕ್ಷ, ತ್ರಸ ಜೀವ. **–ಗುಣ. ಗ್ಗುಣ, ವಿ:** [**–ಗುಣ**] **ಆರು ಗುಣಗಳು**(ತಾ), **–ಚ್ಚರಣ. ಪು:** [**–ಚರಣ**] ದುಂಬಿ, ಭ್ರಮರ. **–ಜ್ಜೀವನಿಕಾಯ. ಪು:** [**ಜೀವನಿಕಾಯ**] **'ಕ್ಕಾಯ'** ಶಬ್ದವನ್ನು ನೋಡುವುದು. **–ಣ್ಣಉಇ, –ಣ್ಣವಇ. ಸ್ತ್ರೀ:** [**–ಣ್ಣವತಿ**] ತೊಂಬತ್ತಾರು**–ತ್ತೀಸ. ಸ್ತ್ರೀನ:** [**–ತ್ರಿಂಶತ್**] ಮೂವತ್ತಾರು. **–ತ್ತೀಸಇಮ. ವಿ:** [**–ತ್ರಿಂಶತ್ತಮ**]ಮೂವತ್ತಾರನೆಯ(ಪಉಮ). **–ಇಸ. ತ್ರಿ ಬ:** [**ಷೋಡಷನ್**] ಹದಿನಾರು**–ಇಸಹಾ. ಅ:** [**ಷೋಡಶಧಾ**] **ಹದಿನಾರು ವಿಧದ.** **–ದ್ದಿಸಿ. ನ:** [**–ದಿಶ್**] ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಊರ್ಧ್ವ ಮತ್ತು ಅಧೋ ಎಂಬ ಆರು ದಿಕ್ಕುಗಳು (ಭಗ), **–ದ್ಧಾ. ಅ:** [**–ಧಾ**]. ಆರು ವಿಧ. **–ನವಇ. –ನುವಇ, –ನ್ನಉಇ. 'ಣ್ಣಉಇ.'** ಯನ್ನು ನೋಡುವುದು. **–ನ್ನಉಯ. ವಿ:** [**–ಣವತ**] ತೊಂಬತ್ತಾರನೆಯ(ಪಉಮ). **–ಪ್ಪಣ್ಣ, –ಪ್ಪನ್ನ. ಸ್ತ್ರೀನ:** [**–ಪಂಚಾಶತ್**] ಐವತ್ತಾರು. (ಪಉಮ). **ಪ್ಪನ್ನ. ವಿ:** [**–ಪ್ಪಂಚಾಶ**] ಐವತ್ತಾರನೆಯ. **–ಬ್ಭಾಯ. ಪು:** [**–ಭಾಗ**] ಆರನೇ ಭಾಗ. **–ಬ್ಭಾಸಾ. ಸ್ತ್ರೀ:** [**–ಭಾಷಾ**] ಪ್ರಾಕೃತ, ಸಂಸ್ಕೃತ, ಮಾಗಧಿ, ಶೌರಸೇನಿ, ಪೈಶಾಚಿಕಾ ಮತ್ತು ಅಪಭ್ರಂಶ ಈ ಆರು ಭಾಷೆಗಳು. **–ಮಾಸಿಯ, –ಮ್ಮಾಸಿಯ. ವಿ:** [**–ಷಾಣ್ಮಾಸಿಕ**] ಆರು ತಿಂಗಳಲ್ಲಿ ನಡೆಯುವ, ಆರು ತಿಂಗಳಿಗೆ ಸಂಬಂಧಿಸಿದ(ಔಪ). **–ವರಿಸ. ವಿ:** [**–ವಾರ್ಷಿಕ**] ಆರು ವರ್ಷ ವಯಸ್ಸಿನ. **–ವೀಸ. 'ವ್ವೀಸ'** ಅನ್ನು ನೋಡುವುದು. ವ್ವಿಹ. ವಿ: [**–ವಿಧ**] ಆರು ಬಗೆಯ. **–ವ್ವೀಸ. ಸ್ತ್ರೀನ:** [**–ವಿಶಂತಿ**] ಇಪ್ಪತ್ತಾರು. **–ವ್ವೀಸಇಮ. ವಿ:** [**–ವಿಂಶತಿತಮ**] ಇಪ್ಪತ್ತಾರನೆಯ, ನಿರಂತರವಾಗಿ ೧೨ ದಿನಗಳ ಉಪವಾಸ. **–ಸಟ್ಠಿ. ಸ್ತ್ರೀ:** [**–ಷಷ್ಟಿ**] ಅರುವತ್ತಾರು. **–ಸ್ಸಯರಿ. ಸ್ತ್ರೀ:** [**–ಸಪ್ತತಿ**] ಎಪ್ಪತ್ತಾರು. **–ಹಾ. '–ದ್ಧಾ'** ಅನ್ನು ನೋಡುವುದು(ಕಮ್ಮ)

ಛಇ. 'ಛವಿ=ಛವಿ' ಶಬ್ದವನ್ನು ನೋಡುವುದು.

ಛಇಅ. ವಿ: [**ಸ್ಥಗಿತ**] ಆವೃತ, ಆಚ್ಛಾದಿಸಲ್ಪಟ್ಟ, ಮರೆಮಾಡಲ್ಪಟ್ಟ,

ಛಇಲ}. ವಿ: [ದೇ] ವಿದಗ್ಧ, ಚತುರ, ನಿಪುಣ(ಗಾ)

ಛಇಲ್ಲ}.

ಛಉಅ. ವಿ: [ದೇ] ಕೃಶವಾದ, ತೆಳುವಾದ,

ಛಉಮ. ಪುಂನ: [**ಛದ್ಮನ್**] ಕಪಟ, ಮೋಸ, ಶಠತನ, ವಂದನೆ, ನೆಪ, ಆವರಣ, ಆಚ್ಛಾದನೆ, ಮರೆಮಾಡುವುದು, **ನ:** ಜ್ಞಾನಾವರಣೀಯವೇ ಮೊದಲಾದ ನಾಲ್ಕು ಘಾತಿ ಕರ್ಮಗಳು.

ಛಉಮತ್ಥ. ವಿ: [**ಛದ್ಮಸ್ಥ**] ಸರ್ವಜ್ಞನಲ್ಲದವನು, ರಾಗಸಹಿತ,

ಛಉಲೂಅ. 'ಛಲೂಅ.' ಶಬ್ದವನ್ನು ನೋಡುವುದು.

ಛಂಕುಈ. ಸ್ತ್ರೀ: [ದೇ] ನಸುಗುನ್ನಿ ಗಿಡ(ದೇ)

ಛಂಟ. ಪು: [ದೇ] ಜುಬ್ಬರು ಮಳೆ, ತುಂತುರು ಮಳೆ, **ವಿ:** ತ್ವರಿತವಾಗಿ ಮಾಡುವವನು, ಬೇಗ ಮಾಡುವವನು

ಛಂಟ. ಸಕ: [**ಸಿಚ್**] ಚಿಮುಕಿಸು,

ಛಂಟಣ. ನ: [**ಸೇಚನ**] ಸಿಂಚನ, ಚಿಮುಕಿಸುವುದು (ಸುಪಾ)

ಛಂಟಾ. ಸ್ತ್ರೀ: [ದೇ] **'ಛಂಟ'** ಶಬ್ದವನ್ನು ನೋಡುವುದು.

ಛಂಟಿಅ. ವಿ: [**ಸಿಕ್ತ**] ಚಿಮುಕಿಸಲ್ಪಟ್ಟ(ಸುಪಾ)

ಛಂಡ. 'ಛಡ್ಡ= ಮುಚ್' ಶಬ್ದವನ್ನು ನೋಡುವುದು.

ಛಂಡಿಅ. ವಿ: [**ಮುಕ್ತ**] ಪರಿತ್ಯಕ್ತ, ಬಿಡಲ್ಪಟ್ಟ(ಭವಿ)

ಛಂದ. ಸಕ:]**ಛಂದ್**] ಇಷ್ಟಪಡು, ಬಯಸು, ಅನುಮತಿ ನೀಡು, ಒಪ್ಪಿಗೆ ನೀಡು, ಆಹ್ವಾನಿಸು

ಛಂದ. ಪುಂನ: [**ಛಂದ**] ಇಚ್ಛೆ, ಅಭಿಲಾಷೆ, ಅಭಿಪ್ರಾಯ, ಆಶಯ(ಆಚಾ), ಅಧೀನತೆ(ಉತ್ರ), **–ಚಾರಿ.ವಿ:** [**–ಚರಿನ್**] ತನ್ನ ಇಷ್ಟಕ್ಕೆ ಬಂದಂತೆ

ನಡೆಯುವವನು. **ಛಂದಾಇತ್ತ.** ವಿ: [**ಛಂದಾವತ್**] ಸ್ವೇಚ್ಛಾಚಾರಿ, **ಛಂದಾಣುವತ್ತಣ.** ನ: [**ಛಂದಾನುವರ್ತನ**] ಇಷ್ಟಕ್ಕನುಸಾರವಾದ ನಡವಳಿಕೆ. **ಛಂದಾಣುವತ್ತಂಯ.** ವಿ: [**ಛಂದಾನುವರ್ತ್ತಕ**] ತನ್ನ ಇಚ್ಛೆಯನ್ನನುಸರಿಸಿ ನಡೆಯುವವನು(ಣಾಯಾ)

ಛಂದ. **ಪುಂನ:** [**ಛಂದಸ್**] ಸ್ವಚ್ಛಂದತೆ, ಸ್ವೇಚ್ಛತೆ(ಉತ್ತ). ಅಭಿಲಾಷೆ, ಇಚ್ಛೆ, ಆಶಯ, ಅಭಿಪ್ರಾಯ(ಆಚಾ) ಛಂದಶ್ಯಾಸ್ತ್ರ, ವೃತ್ತ, **–ಣ್ಣುಯ.** ವಿ: [**–ಜ್ಞ**] ಛಂದಸ್ಸನ್ನು ತಿಳಿದವನು(ಗಉಡ)

ಛಂದಣ. **ಪುಂನ:** [**ಛಾದನ**} ಮುಚ್ಚುವುದು, ಹೊದಿಕೆ

ಛಂದಣ. ನ: [**ಛಂದನ**] ನಿಮಂತ್ರಣ, ಆಹ್ವಾನ

ಛಂದಣ. ನ: [**ವಂದನ**] ನಮಸ್ಕಾರ ವಂದನೆ

ಛಂದಣಾ. **ಸ್ತ್ರೀ:** [**ಛಂದನಾ**] ನಿಮಂತ್ರಣ, ಪ್ರಾರ್ಥನೆ (ಬೃಹ)

ಛಂದಾ. **ಸ್ತ್ರೀ:** [**ಛಂದಾ**] ಸಂನ್ಯಾಸ ದೀಕ್ಷೆಯ ಒಂದು ಪ್ರಭೇದ, ತನ್ನ ಅಥವಾ ಬೇರೆಯವರ ಅಭಿಪ್ರಾಯದಿಂದ ತೆಗೆದುಕೊಂಡ ಸಂನ್ಯಾಸ

ಛಂದಿಅ. ವಿ: [**ಛಂದಿತ**] ಒಪ್ಪಿಗೆ ಪಡೆದುಕೊಂಡ, ಅನುಮತಿ ಪಡೆದುಕೊಂಡ(ಓಘ), ಆಹ್ವಾನಿಸಲ್ಪಟ್ಟ

ಛಂದೋ–. **'ಛದ= ಛಂದಸ್'** ಶಬ್ದವನ್ನು ನೋಡುವುದು.

ಛಕ್ಕ. ವಿ: [**ಷಟ್ಕ**[ಆರರ ಒಂದು ಗುಂಪು

ಛಗ. **'ಛ=ಷಷ್'** ಅನ್ನು ನೋಡುವುದು

ಛಗ. **'ಛಕ್ಕ'** ಶಬ್ದವನ್ನು ನೋಡುವುದು

ಛಗ. ನ: [**ದೇ**] ಮಲ, ಅಮೇಧ್ಯ

ಛಗಣ. ನ: [**ದೇ**] ಗೋಮಯ, ಸಗಣಿ(ನಿಚೂ)

ಛಗಣ. ನ: [**ಸ್ಥಗನ**] ಮುಚ್ಚಳ

ಛಗಣಿಯಾ. **ಸ್ತ್ರೀ:** [**ದೇ**] ಬೆರಣಿ, ಕುಳ್ಳು

ಛಗಲ. **ಪುಂಸ್ತ್ರೀ:** [**ಛಗಲ**] ಹೋತ, ಗಂಡು ಮೇಕೆ. **ಸ್ತ್ರೀ:** **–ಲೀ.** **–ಪುರ.** ನ: [**–ಪುರ**] ಒಂದು ನಗರ.

ಛಗ್ಗ. **'ಛಕ್ಕ'** ಶಬ್ದವನ್ನು ನೋಡುವುದು.

ಛಗ್ಗುರು. **ಪು:** [**ಷಡ್ಗುರು**] ೧೮೦ ದಿನಗಳ ಉಪವಾಸ, ಮೂರು ದಿನಗಳ ಉಪವಾಸ(ಠಾ)

ಛಚ್ಛುಂದರ. **ಪುಂನ:** [**ದೆ**] ಸೊಂಡಿಲಿ.

ಛಜ್ಜ. **ಅಕ:** [**ರಾಜ್**] ಶೋಭಿಸು, ಹೊಳೆ

ಛಜ್ಜಿಅ. ವಿ: [**ರಜಿತ**] ಶೋಭಿತ, ಅಲಂಕೃತ(ಕುಮಾ)

ಛಜ್ಜಿಆ. **ಸ್ತ್ರೀ:** [**ದೇ**] ಹೂವಿನ ಬುಟ್ಟಿ

ಛಟ್ಟಾ. (**ದೇ**). **'ಛಂಟಾ'** ಶಬ್ದವನ್ನು ನೋಡುವುದು.

ಛಟ್ಠ. ವಿ: [**ಷಷ್ಠ**] ಆರನೆಯ, ನ: ನಿರಂತರ ಎರಡು ದಿನಗಳ ವರೆಗೆ ಉಪವಾಸ. **–ಕ್ಷಮಣ.** ನ: [**–ಕ್ಷಮಣ, –ಕ್ಷಪಣ**] ನಿರಂತರ ಎರಡು ದಿನಗಳ ವರೆಗೆ ಉಪವಾಸ. **–ಕ್ಷಮಯ.** **ಪು:** [**–ಕ್ಷಮಕ, ಕ್ಷಪಕ**] ಎರಡು ದಿನಗಳ ಕಾಲ ನಿಟ್ಟುಪವಾಸ ಮಾಡುವ ತಪಸ್ವಿ. **–ಭತ್ತ.** ನ: [**–ಭಕ್ತ**] ನಿರಂತರ ಎರಡು ದಿಗಳವರೆಗೆ ಉಪವಾಸ. **–ಭತ್ತಿಯ.** ವಿ: [**–ಭಕ್ತಿಕ**] ನಿರಂತರ ಎರಡು ದಿನಗಳವರೆಗೆ ಉಪವಾಸ ಮಾಡುವವನು(ಪಣ್ಣ)

ಛಟ್ಠೀ. **ಸ್ತ್ರೀ:** [**ಷಷ್ಠೀ**] ಷಷ್ಠೀ ತಿಥಿ, ಸಂಬಂಧ ಕಾರಕ ವಿಭಕ್ತಿ(ಣಂದಿ), ಹುಟ್ಟಿನ ನಂತರದಲ್ಲಿ ಮಾಡುವ ಹಬ್ಬ(ಸುಪಾ)

ಛಡ. **ಸಕ:** [**ಆ+ರುಹ್**] ಹತ್ತು, ಏರುವುದು.

ಛಡಕ್ಖರ. **ಪು:** [**ದೇ**] ಸ್ಕಂದ, ಷಣ್ಮುಖ,

ಛಡಛಡಾ. **ಸ್ತ್ರೀ:** [**ಛಟಚ**] ಮೊರದಲ್ಲಿ ಅಕ್ಕಿಯನ್ನು ಕೇರುವಾಗ ಆಗುವ ಅವ್ಯಕ್ತ ಶಬ್ದ.

ಛಡಾ. **ಸ್ತ್ರೀ:** [**ದೇ**] ಮಿಂಚು.

ಛಡಾ. **ಸ್ತ್ರೀ:** [**ಛಟಾ**] ಸಮೂಹ, ಗುಂಪು , ಜಲಬಿಂದು, ತುಂತುರು ಮಳೆ(ಪಾಅ)

ಛಡಾಲ. ವಿ: [**ಛಟಾವತ್**] ಗುಂಪನ್ನು ಹೊಂದಿರುವ

ಛಡಿಯ. ವಿ: [**ಛಟಿತ**] ಮೊರದಲ್ಲಿ ಹಾಕಿ ಕೇರಲಾದ

ಛಡ್ಡ. **ಸಕ:** [**ಛರ್ದಯ್, ಮುಚ್**] ವಾಂತಿ ಮಾಡು, ಬಿಡು, ತ್ಯಜಿಸು, ಬೀಳಿಸು, ಹಾಕು

ಛಡ್ಡಣ. ನ: [**ಛರ್ದನ, ಮೋಚನ**] ಬಿಡುವುದು, ವಿಮೋಚನೆ, ವಾಂತಿ ಮಾಡುವುದು(ವಿಪಾ)

ಛಡ್ಡಯ. ವಿ: [**ಛರ್ದಕ**] ಬಿಡುವವನು.

ಛಡ್ಡವಣ. ನ: [**ಛರ್ದನ, ಮೋಚನ**] ಬಿಡಿಸುವುದು, ವಾಂತಿ ಮಾಡಿಸುವುದು, ವಿ: ವಾಂತಿ ಮಾಡಿಸುವವನು, ಬಿಡಿಸುವವನು(ಕುಮಾ)

ಛಡ್ಡವಯ. ವಿ: [**ಛರ್ದಕ, ಮೋಚಕ**] ಬಿಡುಗಡೆ ಮಾಡಿಸುವವನು

ಛಡ್ಡಾವಣ. **'ಛಡ್ಡವಣ'** ಶಬ್ದವನ್ನು ನೋಡುವುದು.

ಛಡ್ಡಾವಿಯ. ವಿ: [**ಛರ್ದಿತ, ಮೋಚಿತ**] ವಾಂತಿ ಮಾಡಿಸಲ್ಪಟ್ಟ, ಬಿಡುಗಡೆ ಮಾಡಿಸಲ್ಪಟ್ಟ(ಆವಮ)

ಛಡ್ಡಿ. **ಸ್ತ್ರೀ:** [**ಛರ್ದಿ**] ವಾಂತಿ ರೋಗ

ಛಡ್ಡಿ. ಸ್ತ್ರೀ: [ಛರ್ದಿಸ್] ಛಿದ್ರ, ದೂಷಣೆ
ಛಡ್ಡಿಯ.} **ವಿ: [ಛರ್ದಿತ, ಮುಕ್ತ]** ಬಿಡಲ್ಪಟ್ಟ,
ಛಡ್ಡಿಯಲ್ಲಿಯ}. ವಾಂತಿಮಾಡಿಕೊಂಡ, ಮುಕ್ತ (ಔಪ)
ಛಣ. ಸಕ: [ಕ್ಷಣ್] ಹಿಂಸಿಸು, ತೂತು ಮಾಡು, ಗಾಯಗೊಳಿಸು
ಛಣ. ಪು: [ಕ್ಷಣ] ಉತ್ಸವ, ಹಬ್ಬ, ಹಿಂಸೆ(ಆಚಾ), **-ಚಂದ. ಪು: [-ಚಂದ್ರ]** ಶರದೃತುವಿನ ಹುಣ್ಣಿಮೆಯ ಚಂದ್ರ. **-ಸಸಿ. ಪು: [-ಶಶಿನ್]** ಅದೇ ಹಿಂದೆ ಹೇಳಿದ ಅರ್ಥವೇ.
ಛಣಣ. ನ: [ಕ್ಷಣನ] ಹಿಂಸೆ
ಛಣಿದು. ಪು: [ಕ್ಷಣೇಂದು] ಶರದೃತುವಿನ ಹುಣ್ಣಿಮೆಯ ಚಂದ್ರ(ಸುಪಾ)
ಛಣ್ಣ. ವಿ: [ಛನ್ನ] ಗುಪ್ತ, ರಹಸ್ಯವಾಗಿರುವ, ಗೂಢವಾಗಿರುವ, ಅಡಗಿಸಿಟ್ಟಿರುವ(ಬೃಹ), ಮುಚ್ಚಲ್ಪಟ್ಟಿರುವ, ಮರೆಮಾಡಿರುವ, ಹೊದಿಸಿರುವ, **ನ:** ಮಾಯೆ, ಮೋಸ, ಕಪಟ, ನಿರ್ಜನ(ಉಪ), ರಹಸ್ಯ
ಛಣ್ಣಾಲಯ. ನ: [ದೇ. ಷಣ್ಣಾಲಕ] ಮೂರು ಕಾಲಿನ ಚಿಕ್ಕ ಸ್ಟೂಲು. ಸಂನ್ಯಾಸಿಗಳ ಒಂದು ಉಪಕರಣ
ಛತ್ತ. ನ: [ಛತ್ರ] ಕೊಡೆ, ಛತ್ರಿ(ಣಾಯಾ). ನಿರಂತರ ಮೂರು ದಿನಗಳವರೆಗೆ ಉಪವಾಸ, **-ಇಲ್ಲ. ವಿ: [-ವತ್]** ಛತ್ರಿ ಹೊಂದಿರುವ, **-ಕಾರ. ವಿ: [-ಕಾರ],** ಛತ್ರಿಯನ್ನು ಮಾಡುವ ಕಸಬುದಾರ. **-ಗ. ಪುಂನ: [-ಕ]** ಒಂದು ವನಸ್ಪತಿ **-ಧಾರ. ಪು: [-ಧಾರ]** ಛತ್ರಿಯನ್ನು ಹೊರುವ ಸೇವಕ, **-ಪಡಾಗಾ. ಸ್ತ್ರೀ: [-ಪತಾಕಾ]** ಛತ್ರಿಯ ಮೇಲಿರುವ ಧ್ವಜ(ಔಪ). **-ಪಲಾಸಯ. ನ: [-ಪಲಾಶಕ]** ಕೃತಮಂಗಲಾ ನಗರದ ಒಂದು ಚೈತ್ಯ. **-ಭಂಗ. ಪು: [-ಭಂಗ]** ರಾಜನ ಮರಣ. **-ಹಾರ. '-ಧಾರ'** ಶಬ್ದವನ್ನು ನೋಡುವುದು. **ಪು:** ಜ್ಯೋತಿಷ ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಯೋಗ-ವಿಶೇಷ: ಇದರಲ್ಲಿ ಚಂದ್ರಾದಿ ಗ್ರಹಗಳು ಛತ್ರಿಯ ಆಕಾರದಲ್ಲಿರುತ್ತವೆ. **ಪುಂನ:** ಒಂದು ದೇವ ವಿಮಾನ
ಛತ್ತ. ಪು: [ಛಾತ್ರ] ವಿದ್ಯಾರ್ಥಿ(ಉಪ)
ಛತ್ತಂತಿಯಾ. ಸ್ತ್ರೀ: [ಛತ್ರಾಂತಿಕಾ] ಒಂದು ಪರಿಷದ್-ವಿಶೇಷ, ಒಂದು ಸಭೆ(ಬೃಹ)
ಛತಚ್ಛಯ(ಅಪ). ಪು: [ಸಪ್ತಚ್ಛದ] ಏಳೆಲೆ ಬಾಳೆಗಿಡ
ಛತ್ತಧನ್ನ. ನ: [ದೇ] ಹುಲ್ಲು, ತೃಣ
ಛತ್ತವಣ್ಣ. 'ಛತ್ತಿವಣ್ಣ' ಶಬ್ದವನ್ನು ನೋಡುವುದು
ಛತ್ತಾ. ಸ್ತ್ರೀ: [ಛತ್ರಾ] ಒಂದು ನಗರಿ
ಛತ್ತಾರ. ಪು: [ಛತ್ರಕಾರ] ಕೊಡೆಗಳನ್ನು ಮಾಡುವ ಶಿಲ್ಪಿ(ಪಣ್ಣ)
ಛತ್ತಾಹ. ಪು: [ಛತ್ರಾಭ] ಒಂದು ಬಗೆಯ ವೃಕ್ಷ
ಛತ್ತಿ. ವಿ: [ಛತ್ರಿನ್] ಛತ್ರವನ್ನು ಹಿಡಿದವನು
ಛತ್ತಿವಣ್ಣ. ಪು: [ಸಪ್ತಪರ್ಣ] ಏಳೆಲೆ ಬಾಳೆಗಿಡ,
ಛತ್ತೋಯ. ಪು: [ಛತ್ರೌಕ] ಒಂದು ಜಾತಿಯ ಮರ(ಪಣ್ಣ)
ಛತ್ತೋವ. ಪು: [ಛತ್ರೋಪ] ಒಂದು ಜಾತಿಯ ಮರ
ಛತ್ತೋಹ. ಪು: [ಛತ್ರೌಘ] ಒಂದು ಬಗೆಯ ವೃಕ್ಷ(ಔಪ)
ಛದಮತ್ಥ. 'ಛಉಮತ್ಥ' ಶಬ್ದವನ್ನು ನೋಡುವುದು
ಛದ್ದವಣ. 'ಛಡ್ಡವಣ' ಶಬ್ದವನ್ನು ನೋಡುವುದು.
ಛದ್ದಸಮ. ವಿ: [ಷಡ್‌ದಶ] ಆರು ಅಥವಾ ಹತ್ತು
ಛದ್ದೀ. ಸ್ತ್ರೀ: [ದೇ] ಹಾಸಿಗೆ, ಶಯ್ಯೆ
ಛನ್ನ. 'ಛಣ್ಣ' ಶಬ್ದವನ್ನು ನೋಡುವುದು.
ಛನ್ನ. ವೀ; [ಕ್ಷಣ] ಹಿಂಸಾ ಪ್ರಧಾನ, ಹಿಂಸಾ ಜನಕ
ಛಪ್ಪಇಗಿಲ್ಲ. ವಿ: [ಷಟ್ಪದಿಕಾವತ್] ಹೇನುಗಳಿಂದ ಕೂಡಿದ
ಛಪ್ಪಇಯಾ. ಸ್ತ್ರೀ: [ಷಟ್ಪದಿಕಾ] ಹೇನು
ಛಪ್ಪಂತೀ. ಸ್ತ್ರೀ: [ದೇ] ಪದ್ಯವನ್ನು ಬರೆಯಬೇಕಾದ ಒಂದು ನಿಯಮ-ವಿಶೇಷ.
ಛಪ್ಪಣ್ಣ}. **ವಿ: [ದೇ. ಷಟ್ ಪ್ರಜ್ಞಕ]** ವಿದಗ್ಧ, ಚತುರ,
ಛಪ್ಪಣ್ಣಯ}. ಪಂಡಿತ
ಛಪ್ಪತ್ತಿಆ. ಸ್ತ್ರೀ: [ದೇ] ಕಪಾಳಮೋಕ್ಷ, ಕೆನ್ನೆಗೆ ಹೊಡೆಯುವುದು, ಚಪಾತಿ, ಫುಲ್ಕ
ಛಪ್ಪನ್ನ.(ದೇ). 'ಛಪ್ಪಣ್ಣ' ಶಬ್ದವನ್ನು ನೋಡುವುದು.
ಛಪ್ಪಯ. ಪು: [ಷಟ್‌ಪದ] ಭ್ರಮರ, ದುಂಬಿ, **ವಿ:** ಆರು ಸ್ಥಳಗಳುಳ್ಳ, ಆರು ಪ್ರಕಾರಗಳ, **ನ:** ಒಂದು ಛಂದಸ್ಸು
ಛಬ್ಬ}. ಪುಂನ: [ದೇ] ಒಂದು ಪಾತ್ರೆ
ಛಬ್ಬಗ}.
ಛಬ್ಬಯ. ನ: [ದೇ] ತುಪ್ಪವೇ ಮೊದಲಾದವನ್ನು ಸೋಸುವ ಬಿದಿರಿನ ಜಾಲರಿ
ಛಬ್ಭಾಮರೀ. ಸ್ತ್ರೀ: [ಷಡ್ಭ್ರಾಮರೀ] ಒಂದು ಬಗೆಯ ವೀಣೆ(ಣಾಯಾ)

ಛಮಚ್ಛಮ. ಅಕ: [ಛಮಚ್ಛಮಾಯ್] ಛಮ್ ಛಮ್ ಎಂದು ಶಬ್ದ ಮಾಡುವುದು. ಕಾದಿರುವ ವಸ್ತುವಿನ ಮೇಲೆ ನೀರು ಬಿದ್ದಾಗ ಹೊರಡುವ ಶಬ್ದ
ಛಮ–. 'ಛಮಾ' ಶಬ್ದವನ್ನು ನೋಡುವುದು. **–ರುಹ.** ಪು: [–ರುಹ] ಮರ, ವೃಕ್ಷ
ಛಮಲಯ. ಪು: [ದೇ] ಸಪ್ತಚ್ಛದ: ಏಳೆಲೆ ಬಾಳೆಗಿಡ.
ಛಮಾ. ಸ್ತ್ರೀ: [ಕ್ಷಮಾ, ಕ್ಷ್ಮಾ] ಪೃಥ್ವಿ, ಭೂಮಿ. **–ಹರ.** ಪು: [–ಧರ] ಪರ್ವತ, ಬೆಟ್ಟ. 'ಛಮ–' ಶಬ್ದ ನೋಡುವುದು
ಛಮೀ. ಸ್ತ್ರೀ: [ಶಮೀ] ಶಮೀ ವೃಕ್ಷ, ಬನ್ನಿಮರ
ಛಮ್ಮ. 'ಛಉಮ' ಶಬ್ದವನ್ನು ನೋಡುವುದು.
ಛಮ್ಮುಹ. ಪು: [ಷಣ್ಮುಖ] ಸ್ಕಂದ, ಕಾರ್ತಿಕೇಯ, ಭಗವಾನ್ ವಿಮಲನಾಥರ ಅಧಿಷ್ಠಾತೃ ದೇವ
ಛಯ. ನ: [ಛದ] ಎಲೆ, ಪರ್ಣ, ಆವರಣ, ಮುಚ್ಚುವಿಕೆ, ಹೊದಿಕೆ
ಛಯ. ನ: [ಕ್ಷತ] ಗಾಯ, ವ್ರಣ, ಗಾಯಗೊಳಿಸಲ್ಪಟ್ಟ, ಪೀಡಿತ(ಸೂಅ)
ಛಯಲ್ಲ.(ದೇ). 'ಛಇಲ್ಲ' ಶಬ್ದವನ್ನು ನೋಡುವುದು.
ಛರು. ಪು: [ತ್ಸರು] ಕತ್ತಿಯ ಹಿಡಿ(ಪಣ್ಣ), **–ಪ್ಪವಾಯ.** ನ: [–ಪ್ರವಾದ] ಖಡ್ಗ–ವಿದ್ಯಾಶಾಸ್ತ್ರ
ಛಲ. 'ಛ=ಷಷ್' ಶಬ್ದವನ್ನು ನೋಡುವುದು
ಛಲ. ಸಕ: [ಛಲಯ್] ವಂಚಿಸು. ಮೋಸಮಾಡು
ಛಲ. ನ: [ಛಲ] ಕಪಟ, ಮೋಸ(ಉವ). ನೆಪ, ಶಬ್ದಾರ್ಥಗಳ ಪ್ರಹಾರ, ಒಂದು ಬಗೆಯ ಮಾತಿನ ಯುದ್ಧ, **ಛಲಾಯಂಯಣ.** ನ: [ಛಲಾಯತನ] ಮೋಸ, ಮಾತಿನ ಏಟು(ಸೂಅ)
ಛಲಂಸ. ವಿ: [ಷಡಸ್ರ] ಷಟ್ಕೋಣ, ಆರು ಕೋನಗಳುಳ್ಳ
ಛಲಂಸಿಅ. ವಿ: [ಷಡಸ್ರಿಕ] ಆರು ಕೋಣಗಳುಳ್ಳ
ಛಲಣ. ನ: [ಛಲನ] ಮೋಸ, ವಂಚನೆ, ಎಸೆಯುವುದು
ಛಲಣಾ. ಸ್ತ್ರೀ: [ಛಲನಾ] ಮೋಸ, ವಂಚನೆ, ಕಪಟ
ಛಲತ್ಥ. ವಿ: [ಷಡರ್ಥ] ಆರು ಅರ್ಥಗಳುಳ್ಳ(ವಿಸೇ)
ಛಲಸೋಅ. ಸ್ತ್ರೀನ: [ಷಡಶೀತಿ] ಎಂಬತ್ತಾರು
ಛಲಸೀಇ. ಸ್ತ್ರೀ: ಮೇಲಿನ ಶಬ್ದವನ್ನು ನೋಡುವುದು.
ಛಲಿಅ. ವಿ: [ಛಲಿತ] ವಂಚಿತ, ಮೋಸಕ್ಕೊಳಗಾದ (ಛಪ), ಶೃಂಗಾರ ಕಾವ್ಯ, ಕಳ್ಳನ ಸಂಕೇತ, ನನ್ನೆ
ಛಲಿಅ. ವಿ: [ದೇ] ವಿದಗ್ಧ, ಚತುರ
ಛಲಿಅ. ನ: [ಛಲಿಕ] ನಾಟ್ಯ–ವಿಶೇಷ
ಛಲಿಅ. ವಿ: [ಸ್ಖಲಿತ] ಸೋರಿದ, ಜಿನುಗಿದ, ಮುಗ್ಗರಿಸಿದ
ಛಲಿಯಾ. 'ಛಾಲಿಯಾ' ಶಬ್ದವನ್ನು ನೋಡುವುದು.
ಛಲುಅ}. ಪು: [ಷಡುಲೂಕ] ವೈಶೇಷಿಕ ದರ್ಶನದ
ಛಲುಗ}. ಪ್ರವರ್ತಕನಾದ ಕಣಾದ ಮಹರ್ಷಿ(ವಿಸೇ)
ಛಲೂಅ}.
ಛಲ್ಲೀ. ಸ್ತ್ರೀ: [ದೇ] ಚರ್ಮ, ಮರದ ತೊಗಟೆ(ಗಾ)
ಛಲ್ಲುಯ. 'ಛಲುಅ' ಶಬ್ದವನ್ನು ನೋಡುವುದು.
ಛವ. 'ಛಿವ' ಶಬ್ದವನ್ನು ನೋಡುವುದು.
ಛವಡೀ. ಸ್ತ್ರೀ: [ದೇ] ಚರ್ಮ,
ಛವಿ. ಸ್ತ್ರೀ: [ಛವಿ] ಕಾಂತಿ, ತೇಜಸ್ಸು, ಅಂಗ, ಚರ್ಮ, ಅವಯವ, ಶರೀರಿ(ಠಾ), ಅಲಂಕಾರ, **ಚ್ಛೇಅ.** ಪು: **ಚ್ಛೇಯಣ.** ನ: [–ಚ್ಛೇದನ] ಅಂಗವನ್ನು ಕತ್ತರಿಸುವುದು. **–ತ್ತಾಣ.** ನ: [–ತ್ರಾಣ] ಚರ್ಮದ ಹೊದಿಕೆ, ಕವಚ(ಉತ್ತ).
ಛವಿಅ. ವಿ: [ಸ್ಪೃಷ್ಟ] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ
ಛವಿಪವ್ವ. ನ: [ಛವಿಪರ್ವನ್] ಉದರಪ್ರಧಾನವಾದ ಶರೀರ
ಛವೀಇಯ. ವಿ: [ಛವಿಮತ್] ಕಾಂತಿಯುಕ್ತವಾದ, ದಟ್ಟವಾದ
ಛವ್ವಗ.(ದೇ). 'ಛಬ್ಬಯ' ಶಬ್ದವನ್ನು ನೋಡುವುದು.
ಛವ್ವಿಅ. ವಿ: [ದೇ] ಹೊದಿಸಲ್ಪಟ್ಟ, ಮರೆಮಾಡಲ್ಪಟ್ಟ, ಆಚ್ಛಾದಿತ
ಛಹ.(ಅಪ). 'ಛ=ಷಷ್' ಶಬ್ದವನ್ನು ನೋಡುವುದು.
ಛಹತ್ತರ. ವಿ: [ಷಟ್‌ಸಪ್ತತ] ಎಪ್ಪತ್ತಾರನೆಯ(ಪಉಮ)
ಛಹತ್ತರಿ. ಸ್ತ್ರೀ: [ಷಟ್‌ಸಪ್ತತಿ] ಎಪ್ಪತ್ತಾರು
ಛಾಅ. 'ಛಾವ' ಶಬ್ದವನ್ನು ನೋಡುವುದು
ಛಾಇಅ. ವಿ: [ಛಾದಿತ] ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ(ಪಉಮ)
ಛಾಇಲ್ಲ. ವಿ: [ಛಾಯಾವತ್] ಕಾಂತಿಯುಕ್ತ, ತೇಜಸ್ವಿ
ಛಾಇಲ್ಲ. ಪು: [ದೇ] ದೀಪ.ವಿ: ಸದೃಶ, ಅದರಂಥ, ಸಮಾನ, ಅರೆಬರೆ, ನ್ಯೂನ, ಸುಂದರವಾದ, ಸುರೂಪದಿಂದ ಕೂಡಿದ
ಛಾಈ. 'ಛಾಯಾ' ಶಬ್ದವನ್ನು ನೋಡುವುದು.
ಛಾಈ. ಸ್ತ್ರೀ: [ದೇ] ಮಾತೆ, ದೇವಿ, ದೇವತೆ
ಛಾಉಮತ್ಥ. ನ: [ಛಾದ್ಮಸ್ಥ್ಯ] ಮೋಸಗಾರನ ಸ್ಥಿತಿ
ಛಾಉಮತ್ಥಿಯ. ವಿ: [ಛಾದ್‌ಮಸ್ಥಿಕ] ಕೇವಲ–ಜ್ಞಾನವುಂಟಾಗುವುದಕ್ಕಿಂತ ಮೊದಲ ಹಂತದಲ್ಲಿ

ಉಂಟಾದ, ಸರ್ವಜ್ಞತ್ವದ ಪೂರ್ವಾವಸ್ಥೆಗೆ ಸಂಬಂಧಿಸಿದ

ಛಾಓವಗ. ವಿ: [ಛಾಯೋಪಗ] ಮರಗಳ ನೆರಳಿನಿಂದ ಕೂಡಿದ, **ಪು:** ಸೇವೆಗೆ ಅರ್ಹನಾದ ವ್ಯಕ್ತಿ, ಮಾನನೀಯ ವ್ಯಕ್ತಿ(ಠಾ)

ಛಾಗಲ. ವಿ: [ಛಾಗಲ] ಅಜಕ್ಕೆ ಸಂಬಂಧಿಸಿದ **ಪು:** ಹೋತ, ಮೇಕೆ, ಸ್ತ್ರೀ: –ಲೀ

ಛಾಗಲಿಯ. ಪು: [ಛಾಗಲಿಕ] ಮೇಕೆ, ಹೋತಗಳಿಂದ ಜೀವನಯಾಪನೆಮಾಡುವವ, ಕುರಿಮೇಕೆ ಪಾಲಕ

ಛಾಣ. ನ: [ದೇ] ಧಾನ್ಯವೇ ಮೊದಲಾದುವನ್ನು ಉಜ್ಜುವುದು, ತಿಕ್ಕುವುದು, ಸಗಣಿ(ಣಾಯಾ), ಬಟ್ಟೆ, ವಸ್ತ್ರ

ಛಾಣಣ. ನ: [ದೇ] ಸೋಸುವುದು, ಶೋಧಿಸುವುದು

ಛಾಣವಇ. (ಅಪ). **'ಛಣ್ಣವಇ'** ಶಬ್ದವನ್ನು ನೋಡುವುದು.

ಛಾಣೀ. ಸ್ತ್ರೀ: [ದೇ] ಧಾನ್ಯವೇ ಮೊದಲಾದವುಗಳನ್ನು ಉಜ್ಜುವುದು, ತಿಕ್ಕುವುದು, ವಸ್ತ್ರ, ಬಟ್ಟೆ, ಸಗಣಿ.

ಛಾಣೀ. ಸ್ತ್ರೀ: [ದೇ] ಬೆರಣಿ

ಛಾಯ. ವಿ: [ಛಾತ] ಗಾಯಗೊಂಡಿರುವವನು

ಛಾಯ. ವಿ: [ದೇ. ಛಾತ] ಹಸಿದವನು, ಕೃಶ, ದುರ್ಬಲ

ಛಾಯಂಸಿ. ವಿ: [ಛಾಯವತ್] ಕಾಂತಿಯುಕ್ತ, ತೇಜಸ್ವಿ

ಛಾಯಣ. ನ: [ಛಾದನ] ಆಚ್ಛಾದನ, ಹೊದಿಕೆ, ಮುಚ್ಚುವುದು, ಮರೆಮಾಡುವುದು, ಮನೆಯ ಸೂರು, ಮೇಲ್ಛಾವಣಿ, ಮುಚ್ಚಳ, ವಸ್ತ್ರ

ಛಾಯಣಿಯಾ}. ಸ್ತ್ರೀ: [ದೇ] ಡೇರಾ, ಶಿಬಿರ
ಛಾಯಣೀ}.

ಛಾಯಾ. ಸ್ತ್ರೀ: [ಛಾಯಾ] ನೆರಳು, ಬಿಸಿಲಿಲ್ಲದಿರುವುದು, ಕಾಂತಿ, ಪ್ರಭೆ, ತೇಜಸ್ಸು, ಶೋಭೆ(ಔಪ), ಪ್ರತಿಬಿಂಬ(ಉತ್ತ), ಬಿಸಿಲಿಲ್ಲದಿರುವ ಪ್ರದೇಶ(ಠಾ). **–ಗಇ.** ಸ್ತ್ರೀ: [–ಗತಿ] ನೆರಳಿನ ಹಾಗೆ ಚಲಿಸುವುದು. ನೆರಳನ್ನಾಧರಿಸಿ ನಡೆಯುವುದು, ನೆರಳಿನಂತೆ ಅನುಸರಿಸುವುದು **–ಪಸ.** ಪು: [**–ಪಾರ್ಶ್ವ**] ಹಿಮಾಲಯದಲ್ಲಿ ನೆಲೆನಿಂತಿರುವ ಭಗವಾನ್ ಪಾರ್ಶ್ವನಾಥನ ಮೂರ್ತಿ.

ಛಾಯಾ. ಸ್ತ್ರೀ: [ದೇ] ಕೀರ್ತಿ, ಯಶಸ್ಸು, ಹೆಣ್ಣು ದುಂಬಿ

ಛಾಯಾಇತ್ತಯ. ವಿ: [ಛಾಯಾವತ್] ನೆರಳಿನಿಂದ ಕೂಡಿರುವ, ಸ್ತ್ರೀ: **–ಇತ್ತಿಆ.**

ಛಾಯಾಲಾ. ಸ್ತ್ರೀ: [ಷಟ್‌ಚತ್ವಾರಿಂಶತ್] ನಲವತ್ತಾರು.

ಛಾಯಾಲೀಸ. ಸ್ತ್ರೀನ: ಮೇಲಿನ ಶಬ್ದವನ್ನು ನೋಡುವುದು.

ಛಾಯಾಲೀಸ. ವಿ: [ಷಟ್‌ಚತ್ವಾರಿಂಶ] ನಲವತ್ತಾರನೆಯ (ಪಉಮ)

ಛಾರ. ವಿ: [ಕ್ಷಾರ] ಕರಗುವ, ಸೋರುವ ಜಿನುಗುವ, ಲವಣ–ರಸದಿಂದ ಕೂಡಿದ, **ಪು:** ಲವಣ ಉಪ್ಪು, ಮಣ್ಣಿನ ಬಣ್ಣದ ಒಂದು ಬಗೆಯ ಕ್ಷಾರ, ಬೆಲ್ಲ, ಭಸ್ಮ, ಬೂದಿ, ಮಾತ್ಸರ್ಯ, ಅಸಹಿಷ್ಣುತೆ

ಛಾರ. ಪು: [ದೇ] ಕರಡಿ

ಛಾರಯ. **'ಛಾರ'** ಶಬ್ದವನ್ನು ನೋಡುವುದು.

ಛಾರಯ. ನ: [ದೇ] ಕಬ್ಬಿನ ಸಿಪ್ಪೆ, ಮೊಗ್ಗು

ಛಾರಿಯ. ವಿ: [ಕ್ಷಾರಿಕ] ಕ್ಷಾರಕ್ಕೆ ಸಂಬಂಧಿಸಿದ

ಛಾಲ. ಪು: [ಛಾಗ] ಮೇಕೆ, ಹೋತ

ಛಾಲಿಯಾ. ಸ್ತ್ರೀ: [ಛಾಗಿಕಾ] ಮೇಕೆ(ಹೆಣ್ಣು)

ಛಾವ. ಪು: [ಶಾವ] ಬಾಲಕ, ಶಿಶು

ಛಾವಣ. **'ಛಾಯಗ'** ಶಬ್ದವನ್ನು ನೋಡುವುದು.

ಛಾವಟ್ಠಿ. ಸ್ತ್ರೀ: [ಷಟ್‌ಷಷ್ಟಿ] ಅರುವತ್ತಾರು

ಛಾವತ್ತರಿ. ಸ್ತ್ರೀ: [ಷಟ್‌ಸಪ್ತತಿ] ಎಪ್ಪತ್ತಾರು(ಪಉಮ), **–ಮ.** ವಿ: [**–ತಮ**] ಎಪ್ಪತ್ತಾರನೆಯ

ಛಾವಲಿಯ. ವಿ: [ಷಡಾವಲಿಕ] ಆರು ಸಾಲುಗಳಿಗೆ ಮಿತಿಗೊಳ್ಳುವ ಸಮಯವುಳ್ಳ

ಛಾಸಟ್ಠ. ವಿ: [ಷಟ್‌ಷಷ್ಟ] ಅರುವತ್ತಾರನೆಯ

ಛಾಸೀ. ಸ್ತ್ರೀ: [ದೇ] ಮಜ್ಜಿಗೆ

ಛಾಸೀಇ. ಸ್ತ್ರೀ: [ಷಡಶೀತಿ] ಎಂಬತ್ತಾರು. **–ಮ.** ವಿ: [**–ತಮ**] ಎಂಬತ್ತಾರನೆಯ]

ಛಾಹತ್ತರಿ(ಅಪ). **'ಛಾವತ್ತರಿ'** ಶಬ್ದವನ್ನು ನೋಡುವುದು.

ಛಾಹಾ}. ಸ್ತ್ರೀ: [ಛಾಯಾ] ನೆರಳು, ಪ್ರತಿಬಿಂಬ,
ಛಾಹಿಯಾ}. ಪಡಿನೆಳಲು
ಛಾಹೀ}.

ಛಾಹೀ. ಸ್ತ್ರೀ: [ದೇ] ಗಗನ, ಆಕಾಶ. **–ಮಣಿ.** ಪು: [**–ಮಣಿ**] ಸೂರ್ಯ, ರವಿ

ಛಿಅ. **'ಛೀಅ' ಶಬ್ದವನ್ನು ನೋಡುವುದು.**

ಛಿಂಛಈ. ಸ್ತ್ರೀ: [ದೇ] ಕುಲಟೆ, ವ್ಯಭಿಚಾರಿ

ಛಿಂಛಟರಮಣ. ನ: [ದೇ] ಕಣ್ಣಾಮುಚ್ಚಾಲೆ ಆಟ

ಛಿಂಛಯ. ಪು: [ದೇ] ದೇಹ, ಜಾರ, ಉಪಪತಿ. ನ: ಎಳೆಯ ಕಾಯಿ

ಭಿಂಭೋಲೀ. ಸ್ತ್ರೀ: [ದೇ] ಸಣ್ಣ ಜಲ–ಪ್ರವಾಹ.
ಭಿಂಡ. ನ: [ದೇ] ಜುಟ್ಟು, ಶಿಖೆ, ಕೊಡೆ, ಛತ್ರಿ, ಧೂಪ–ಯಂತ್ರ
ಭಿಂಡಿಆ. ಸ್ತ್ರೀ: [ದೇ] ಬೇಲಿಯಲ್ಲಿನ ಬಿರುಕು, ಅಪವಾದ,
ಭಿಂಡೀ. ಸ್ತ್ರೀ: [ದೇ] ಬೇಲಿಯಲ್ಲಿನ ಬಿರುಕು(ಣಾಯಾ)
ಭಿಂದ. ಸಕ: [ಛಿದ್] ಕತ್ತರಿಸು, ತೂತುಮಾಡು ವ. ಕೃ: **ಭಿಂದಮಾಣ**
ಭಿಂದಾವಣ. ನ: [ಛೇದನ] ಕತ್ತರಿಸಿಸುವುದು, ರಂಧ್ರಮಾಡಿಸುವುದು
ಭಿಂಪಯ. ಪು: [ಛಿಂಪಕ] ಬಟ್ಟೆಯನ್ನು ಛಾಪಿಸುವವನು
ಭಿಕ್ಕ. ನ: [ದೇ] ಸೀನು
ಭಿಕ್ಕ. ವಿ: [ದೇ. **ಛುಪ್ತ**] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ. **–ಪರೋಇಯಾ.** ಸ್ತ್ರೀ: [**–ಪ್ರರೋದಿಕಾ**] ಒಂದು ಬಗೆಯ ವನಸ್ಪತಿ.
ಭಿಕ್ಕ. ವಿ: [**ಛೀತ್ಕೃತ**] ಛೀಂಛೀಂ ಧ್ವನಿಯಿಂದ ಆಹ್ವಾನಿಸಲ್ಪಟ್ಟ
ಭಿಕ್ಕಂತ. ವಿ: [ದೇ] ಸೀನುತ್ತ
ಭಿಕ್ಕಾ. ಸ್ತ್ರೀ: [ದೇ] ಸೀನು
ಭಿಕ್ಕಾರಿಯ. ವಿ: [**ಛೀತ್ಕಾರಿತ**] ಛೀಂಛೀಂ ಧ್ವನಿಯಿಂದ ಆಹ್ವಾನಿಸಲ್ಪಟ್ಟ
ಭಿಕ್ಕಿಯ. ನ: [ದೇ] ಸೀನುವುದು
ಭಿಕ್ಕೋಅಣ. ವಿ: [ದೇ] ಅಸಹಿಷ್ಣು
ಭಿಕ್ಕೋಟ್ಟಲೀ.ಸ್ತ್ರೀ: [ದೇ] ಕಾಲಿನ ಸಪ್ಪುಳ, ಕಾಲಿನಿದ ಧಾನ್ಯವನ್ನು ಉಜ್ಜುವುದು, ಸಗಣಿ ಚೂರು
ಭಿಕ್ಕೋಲಿಅ. ವಿ: [ದೇ] **ತೆಳ್ಳನೆಯ, ಕೃಶ**
ಭಿಕ್ಕೋವಣ.(ದೇ). '**ಛಿಕ್ಕೋವಣ**' ಶಬ್ದವನ್ನು ನೋಡುವುದು
ಭಿಗ್ಗ.(ಶೌ). ಸಕ: [**ಛುಪ್**] ಮುಟ್ಟು, ಸ್ಪರ್ಶಿಸು
ಭಿಚ್ಚೋಲಯ. ಪು: [ದೇ] '**ಛಿವ್ವೊಲ್ಲ**' ಶಬ್ದವನ್ನು ನೋಡುವುದು
ಭಿಚ್ಛಈ. ಭಿಂಭಈ
ಭಿಚ್ಛಯ. '**ಛಿಂಭಯ**' ಶಬ್ದವನ್ನು ನೋಡುವುದು
ಭಿಚ್ಛಿಕಾರ. ಪು: [**ಛಿಚ್ಛಿಕಾರ**] 'ಛೀ ಛೀ' ಎಂಬ ನಿವಾರಣ ಸೂಚಕ ಶಬ್ದ.
ಭಿಭಿ. ಅ: [ದೇ. **ಧಿಕ್‌ಧಿಕ್**] ಛಿ ಛಿ, ಧಿಕ್‌ಧಿಕ್ ಎಂಬ ಧಿಕ್ಕಾರಗಳು.
ಭಿಜ್ಜ. '**ಭಿಂದ್=ಭಿದ್**' ಶಬ್ದವನ್ನು ನೋಡುವುದು
ಭಿಜ್ಜ. ವಿ: [**ಛೇದ್ಯ**] ಕತ್ತರಿಸಬಹುದಾದ,ನ: ಕತ್ತರಿಸುವುದು
ಭಿಜ್ಜಂತ. ವಿ: [**ಕ್ಷೀಯಮಾಣ**] ಕ್ಷಯಿಸುತ್ತಿರುವ, ದುರ್ಬಲವಾಗುತ್ತಿರುವ
ಭಿಜ್ಜಂತ}. '**ಭಿಂದ**' ಶಬ್ದವನ್ನು ನೋಡುವುದು
ಚಿಜ್ಜಮಾಣ}.
ಭಿಡ್ಡ. ನ: [**ಛಿದ್ರ**] ರಂಧ್ರ, ತೂತು(ಪಉಮ), ಸುಸಮಯ, ಸುಯೋಗ, ದೂಷಣ, ದೋಷ, **–ಪಾಣಿ.** ಪು: [**–ಪಾಣಿ**] ಒಂದು ಬಗೆಯ ಜೈನ ಸಾಧು,
ಭಿಡ್ಡ. ಪುಂನ: [**ಛಿದ್ರ**] ಆಕಾಶ, ಗಗನ
ಭಿಣ್ಣ. '**ಛಿನ್ನ**' ಶಬ್ದವನ್ನು ನೋಡುವುದು.
ಭಿಣ್ಣ. ಪು: [ದೇ] ಜಾರ, ಉಪಪತಿ, ಮಿಂಡ
ಭಿಣ್ಣಚ್ಛೋಡಣ. ನ: [ದೇ] ಕೂಡಲೆ, ತಕ್ಷಣ, ಬೇಗನೆ(ದೇ)
ಭಿಣ್ಣಯಡ. ವಿ: [ದೇ] ಉಳಿಯಿಂದ ಛಿದ್ರಿಸಲ್ಪಟ್ಟ, ಕತ್ತಿಯಿಂದ ಕತ್ತರಿಸಿದ
ಭಿಣ್ಣಾ. ಸ್ತ್ರೀ: [ದೇ] ಕುಲಟೆ, ಜಾರಿಣಿ
ಭಿಣ್ಣಾಲ. ಪು: [ದೇ] ಜಾರ, ಉಪಪತಿ, ಮಿಂಡ(ಉತ್ತ)
ಭಿಣ್ಣಾಲಿಆ.}. ಸ್ತ್ರೀ: [ದೇ] ಕುಲಟೆ, ಜಾರಿಣಿ (ಮೃಚ್ಛ)
ಭಿಣ್ಣಾಲೀ}
ಭಿಣ್ಣೊಬ್ಭವಾ. ಸ್ತ್ರೀ: [ದೇ] ದೂರ್ವಾ, ಗರಿಕೆ ಹುಲ್ಲು.
ಭಿತ್ತ. '**ಖಿತ್ತ=ಕ್ಷೇತ್ರ**' ಶಬ್ದವನ್ನು ನೋಡುವುದು.
ಭಿತ್ತ. ವಿ: [ದೇ] ಸ್ಪರ್ಶಿಸಲ್ಪಟ್ಟ
ಭಿತ್ತರ.(ದೇ) '**ಛೇತ್ತರ**' ಶಬ್ದವನ್ನು ನೋಡುವುದು.
ಭಿತ್ತಿ. ಸ್ತ್ರೀ: [**ಛಿತ್ತಿ**] ಕತ್ತರಿಸುವುದು, ತುಂಡರಿಸುವುದು
ಭಿತ್ತು. ವಿ: [**ಛೇತ್ತೃ**] ಕತ್ತರಿಸುವವನು
ಭಿದ್ದ. '**ಭಿಡ್ಡ**' ಶಬ್ದವನ್ನು ನೋಡುವುದು.
ಭಿದ್ದ. ಪು: [ದೇ] ಸಣ್ಣ ಮೀನು
ಭಿದ್ದಿಯ. ವಿ: [**ಛಿದ್ರಿತ**] ರಂಧ್ರ ಮಾಡಲ್ಪಟ್ಟ, ಕೊರೆಯಲ್ಪಟ್ಟ, ರಂದ್ರವುಳ್ಳ
ಭಿನ್ನ. ವಿ: [**ಛಿನ್ನ**] ಕತ್ತರಿಸಲ್ಪಟ್ಟ, ಪ್ರತ್ಯೇಕಿಸಲ್ಪಟ್ಟ, ರಂಧ್ರವಿರುವ, ನಿರ್ಧರಿಸಲ್ಪಟ್ಟ, ನಿಶ್ಚಯಿಸಲ್ಪಟ್ಟನ: ತುಂಡು, ಚೂರು, ಮುರಿಯುವುದು. **–ಗ್ಗಂಥ.** ವಿ: [**–ಗ್ರಂಥ**] ಸ್ನೇಹವಿಲ್ಲದ, ಪು: ತ್ಯಾಗಿ, ಸಾಧು, ಮುನಿ, ನಿರ್ಗ್ರಂಥ(ಠಾ), **–ಚ್ಛೇಯ.** ಪು: [**–ಚ್ಛೇದ**] ನಯ–ವಿಶೇಷ, ಪ್ರತಿಯೊಂದು ಸೂತ್ರವೂ ಬೇರೊಂದು ಸೂತ್ರವನ್ನು ಅಪೇಕ್ಷಿಸದ

ಸೂತ್ರವೆಂದು ಒಪ್ಪುವ ಮತ(ಣಂದಿ), –ದ್ಧಾಣಂತರ. ವಿ: [ಛಿನ್ನಾಧ್ವಾಂತರ] ಹಳ್ಳಿ, ನಗರ ಇತ್ಯಾದಿಗಳೇನೊಂದೂ ಇಲ್ಲದಿರುವ ಹಾದಿ (ಬೃಹ). –ಮಡಂಬ. ವಿ: [–ಮಡಂಬ] ಯಾವ ಹಳ್ಳಿ ಅಥವಾ ನಗರದ ಸಮೀಪದಲ್ಲಿ ಬೇರೆಯಾವುದೇ ಹಳ್ಳಿ ನಗರ ಇತ್ಯಾದಿಗಳು ಇರುವುದಿಲ್ಲವೋ ಅಂಥ ಹಳ್ಳಿ ಅಥವಾ ನಗರ(ನಿಚೂ), –ರುಹ. ವಿ: [–ರುಹ] ಕತ್ತರಿಸಿ ನಾಟಿ ಹಾಕಿದರೂ ಬೆಳೆಯುವ ವನಸ್ಪತಿ

ಛಿನ್ನಾಲ. ವಿ: [ದೇ] ಹಗುರ ಜಾತಿಯ ಎತ್ತು

ಛಿಪ್ಪ. ನ: [ಕ್ಷಿಪ್ರ] ಬೇಗನೆ, ಶೀಘ್ರವಾಗಿ, ತ್ವರೆಯಿಂದ, **–ತೂರ.** ನ: [–ತೂರ್ಯ] ಬಹಳ ಬೇಗ ಬಾರಿಸಲಾಗುವ ವಾದ್ಯ(ವಿಪಾ)

ಛಿಪ್ಪ. ನ: [ದೇ] ಭಿಕ್ಷೆ, (ದೇ), ಬಾಲ

ಛಿಪ್ಪಂತ. 'ಛಿವ=ಸ್ಪೃಶ್' ಶಬ್ದವನ್ನು ನೋಡುವುದು.

ಛಿಪ್ಪಂತೀ. ಸ್ತ್ರೀ: [ದೇ] ವ್ರತ ವಿಶೇಷ, ಉತ್ಸವ ವಿಶೇಷ

ಛಿಪ್ಪಂದೂರ. ನ: [ದೇ]. ಸಗಣಿಯ ಚೂರು, ಕಠಿಣ

ಛಿಪ್ಪಾಲ. ಪು: [ದೇ] ಹುಲ್ಲು ತಿನ್ನುತ್ತಿರುವ ಎತ್ತು

ಛಿಪ್ಪಾಲುಅ. ನ: [ದೇ]. ಬಾಲ

ಛಿಪ್ಪಿಂಡೀ. ಸ್ತ್ರೀ: [ದೇ] ವ್ರತ–ವಿಶೇಷ, ಉತ್ಸವ– ವಿಶೇಷ, ಹಿಟ್ಟು, ಚೂರ್ಣ

ಛಿಪ್ಪಿಅ. ವಿ: [ದೇ] ಹನಿಹನಿಯಾಗಿ ಬಿದ್ದಿರುವ, ತೊಟ್ಟಿಕ್ಕಿರುವ, ಸ್ರವಿಸಿರುವ

ಛಿಪ್ಪೀರ. ನ: [ದೇ] ದಂಡು, ತೃಣ

ಛಿಪ್ಪೊಲ್ಲೀ. ಸ್ತ್ರೀ: [ದೇ] ಮೇಕೆ ಕುರಿ ಇತ್ಯಾದಿಗಳ ಹಿಕ್ಕೆ, ಪಿಚಿಗೆ(ನಿಚೂ)

ಛಿಬ್ಭ. ಸಕ: [ಕ್ಷಿಪ್] ಎಸೆ

ಛಿಮಿಛಿಮಿಛಿಮಿ. ಅಕ: [ಛಿಮಿಛಿಮಾಯ್] 'ಛಿಮ ಛಿಮ' ಎಂದು ಶಬ್ದಮಾಡು

ಛಿರಾ. ಸ್ತ್ರೀ [ಶಿರಾ] ನಾಡಿ, ನರ

ಛಿರಿ. ಪು: [ದೇ] ಕರಡಿಯ ಶಬ್ದ

ಛಿಲ್ಲ. ನ: [ದೇ] ರಂಧ್ರ, ತೂತು, ಕುಟೀರ, ಸಣ್ಣ ಕುಟೀರ, ಸಣ್ಣ ಮನೆ, ಬೇಲಿಯಲ್ಲಿನ ಬಿರುಕು. ಮುತ್ತುಗದ ಮರ

ಛಿಲ್ಲರ. ನ: [ದೇ] ಸಣ್ಣ ಕೊಳ, ಕಿರು ಜಲಾಶಯ

ಛಿಲ್ಲರ. ವಿ: [ದೇ] ಸಾರ ರಹಿತ, ಟೊಳ್ಳು

ಛಿಲ್ಲೀ. ಸ್ತ್ರೀ: [ದೇ] ಜುಟ್ಟು, ಶಿಖೆ

ಛಿವ. ಸಕ: [ಸ್ಪೃಶ್] ಸ್ಪರ್ಶಿಸು, ಮುಟ್ಟು

ಛಿವಟ್ಟ. (ದೇ). 'ಛೇವಟ್ಟ' ಶಬ್ದವನ್ನು ನೋಡುವುದು.

ಛಿವಣ. ನ: [ಸ್ಪರ್ಶನ] ಸ್ಪರ್ಶಿಸುವುದು, ಮುಟ್ಟುವುದು(ಉಪ)

ಛಿವಾ. ಸ್ತ್ರೀ: [ದೇ] ನಯವಾದ ಚಾಟಿ, ನುಣುಪಾದ ಬಾರುಕೋಲು

ಛಿವಾಡಿಆ}. ಸ್ತ್ರೀ: [ದೇ] ಬಳ್ಳಿಯಲ್ಲಿ ಬಿಟ್ಟ ಕಾಯಿ,

ಛಿವಾಡೀ}. ತುಂಬ ಉದ್ದ ಇದ್ದು ಅಗಲ ಕಡಿಮೆ ಇರುವ ತೆಳ್ಳನೆಯ ಹಾಳೆಗಳ ದೊಡ್ಡ ಪುಸ್ತಕ(ತಾ)

ಛಿವಿಅ. ವಿ: [ಸ್ಪೃಷ್ಟ] ಸ್ಪರ್ಶಿಸಲಪಟ್ಟ, ಮುಟ್ಟಲಾಗಿರುವ, ನ: ಸ್ಪರ್ಶಿಸುವುದು, ಮುಟ್ಟುವುದು

ಛಿವಿಅ. ನ: [ದೇ] ಕಬ್ಬಿನ ತುಣುಕು.

ಛಿವೊಲ್ಲಅ(ದೇ) 'ಛಿವ್ವೊಲ್ಲ.' ಶಬ್ದವನ್ನು ನೋಡುವುದು.

ಛಿವ್ವ. ವಿ: [ದೇ] ಕೃತ್ರಿಮ, ಕೃತಕ, ನಕಲಿ

ಛಿವ್ವೊಲ್ಲ. ನ: [ದೇ] ನಿಂದಾರ್ಥಕವಾಗಿ ಮುಖ ಕಿವುಚುವುದು, ಅಸಂತೋಷವನ್ನು ವ್ಯಕ್ತಪಡಿಸಲು ಮುಖ ತಿರುಚುವುದು.

ಛಿಹ. ಸಕ: [ಸ್ಪೃಶ್] ಸ್ಪರ್ಶಿಸು, ಮುಟ್ಟು

ಛಿಹಂಡ. ನ: [ಶಿಖಂಡ] ನವಿಲಿನ ಶಿಖೆ(ಣಾಯಾ)

ಛಿಹಂಡಅ. ಪು: [ದೇ] ಮೊಸರಿನಿಂದ ಮಾಡಿದ ಮೃಷ್ಟಾನ್ನ.

ಛಿಹಂಡಿ. ಪು: [ಶಿಖಂಡಿನ್] ನವಿಲು, ನವಿಲು ಗರಿಯನ್ನು ಧರಿಸುವವನು(ಣಾಯಾ)

ಛಿಹಲೀ. ಸ್ತ್ರೀ: [ದೇ] ಶಿಖೆ, ಜುಟ್ಟು

ಛಿಹಾ. ಸ್ತ್ರೀ: [ಸ್ಪೃಹಾ] ಆಸೆ, ಅಭಿಲಾಷೆ

ಛಿಹಿಂಡಿಭಿಲ್ಲ. ನ: [ದೇ] ಮೊಸರು

ಛಿಹಿಅ. ವಿ: [ಸ್ಪೃಷ್ಟ] ಸ್ಪರ್ಶಿಸಲಾದ, ಮುಟ್ಟಲಾದ

ಛೀಆ. ಸ್ತ್ರೀನ: [ಕ್ಷುತ್] ಸೀನು(ಓಘ), ಸ್ತ್ರೀ: –ಆ

ಛೀಅಮಾಣ. ವಿ: [ಕ್ಷುವತ್] ಸೀನುತ್ತಿರುವ

ಛೀಣ. ವಿ: [ಕ್ಷೀಣ] ಕ್ಷಯ ಹೊಂದಿದ, ದುರ್ಬಲವಾದ, ತೆಳುವಾದ, ಅವನತಿ ಹೊಂದಿದ

ಛೀಯಂತ. ವಿ: [ಕ್ಷವತ್] ಸೀನುತ್ತಿರುವ

ಛೀರ. ನ: [ಕ್ಷೀರ] ನೀರು, ಹಾಲು. **–ಬಿರಾಲೀ.** ಸ್ತ್ರೀ: [–ಬಿಡಾಲೀ] ನೆಲಗುಂಬಳ ಗಿಡ(ಪಣ್ಣ)

ಛೀರಲ. ಪು: [ಕ್ಷೀರಲ] ಕೈಯಿಂದ ಚಲಿಸುವ ಹಾವಿನ ಜಾತಿಯ ಒಂದು ಪ್ರಾಣಿ

ಛೀವೊಲ್ಲಅ.(ದೇ). 'ಛಿವ್ವೊಲ್ಲ' ಶಬ್ದವನ್ನು ನೋಡುವುದು.

ಛು: ಸಕ:[ಕ್ಷುದ್] ಬೀಸು, ಪುಡಿಮಾಡು, ಚೂರುಮಾಡು
ಛುಅ. 'ಛೀಅ' ಶಬ್ದವನ್ನು ನೋಡುವುದು.
ಛುಅ. 'ಛುವ' ಶಬ್ದವನ್ನು ನೋಡುವುದು.
ಛುಈ. ಸ್ತ್ರೀ: [ದೇ] ಬಲಾಕ ಹಕ್ಕಿ, ಬೆಳ್ಳಕ್ಕಿ, ಒಂದು ಜಾತಿಯ ಬಕ ಪಕ್ಷಿ
ಛುಂಛುಈ. ಸ್ತ್ರೀ: [ದೇ] ನಸುಗುನ್ನಿ ಗಿಡ
ಛುಂಛುಮುಸವ. ನ: [ದೇ] ಉತ್ಸುಕತೆ, ಉತ್ಕಂಠತೆ
ಛುಂದ. ಸಕ: [ಆ+ಕ್ರಮ್] ಆಕ್ರಮಿಸು,
ಛುಂದ. ವಿ: [ದೇ] ಹೇರಳವಾದ, ಪ್ರಚುರವಾದ
ಛುಕ್ಕಾರಣ. ನ: [ಧಿಕ್ಕಾರಣ] ಧಿಕ್ಕಾರ, ನಿಂದೆ, ಬೈಗಳು (ಬೃಹ)
ಛುಚ್ಛ. ವಿ: [ತುಚ್ಛ] ತುಚ್ಛ, ಕ್ಷುದ್ರ, ಹಗುರ
ಛುಚ್ಛುಕ್ಕರ. ಸಕ: [ಛುಚ್ಛು+ಕೃ] 'ಛು' 'ಛು' ಎಂದು ಶಬ್ದ ಮಾಡುವುದು, ನಾಯಿ ಬೆಕ್ಕುಗಳನ್ನು ಕರೆಯುವ ಶಬ್ದ
ಛುಟ್ಟ. ಅಕ: [ಛುಟ್] ಬಿಡಿಸಿಕೊಳ್ಳು, ಬಂಧನದಿಂದ ಮುಕ್ತವಾಗು
ಛುಟ್ಟ. ವಿ: [ಛುಟಿತ] ಬಿಡುಗಡೆಗೊಂಡ, ಬಂಧನದಿಂದ ಮುಕ್ತವಾದ(ಸುಪಾ)
ಛುಟ್ಟ. ವಿ: [ದೇ] ಚಿಕ್ಕ, ಕ್ಷುದ್ರ, ಹಗುರ
ಛುಟ್ಟಣ. ನ: [ಛೋಟನ] ಬಿಡುಗಡೆ, ಮುಕ್ತಿ(ಶ್ರಾ)
ಛುಟ್ಠ. ವಿ: [ದೇ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ(ಭವಿ) ಎಸೆಯಲ್ಪಟ್ಟ
ಛುಡು. ಅ: [ದೇ] –ರೆ, ಆದರೆ, ಒಂದುವೇಳೆ, ಯಾವುದು, ಯಾವನು, ಬೇಗನೆ, ಕೂಡಲೆ(ಹೇ)
ಛುಡ್ಡ. ವಿ: [ಕ್ಷುದ್ರ] ಕ್ಷುದ್ರ, ತುಚ್ಛ, ಲಘು(ಔಪ)
ಛುಡ್ಡಿಯಾ. ಸ್ತ್ರೀ: [ಕ್ಷುದ್ರಿಕಾ] ಒಂದು ಆಭರಣ.
ಛುಣ್ಣ. ವಿ: [ಕ್ಷುಣ್ಣ] ಪುಡಿಮಾಡಲ್ಪಟ್ಟ, ಚೂರು ಚೂರು ಮಾಡಲಾದ, ನಾಶಮಾಡಲ್ಪಟ್ಟ, ಅಭ್ಯಾಸವಾದ (ಹೇ)
ಛುತ್ತ. ವಿ: [ಛುಪ್ತ] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ
ಛುತ್ತಿ. ಸ್ತ್ರೀ: [ದೇ] ಮೈಲಿಗೆ, ಅಶೌಚ
ಛುದ್ದಹೀರ. ಪು: [ದೇ] ಬಾಲಕ, ಶಿಶು, ಚಂದ್ರ
ಛುದ್ದಿಯಾ. 'ಛುಡ್ಡಿಯಾ' ಶಬ್ದವನ್ನು ನೋಡುವುದು.
ಛುದ್ಧ. 'ಖುದ್ಧ' ಶಬ್ದವನ್ನು ನೋಡುವುದು.
ಛುದ್ಧ. ವಿ: [ದೇ] ಎಸೆಯಲ್ಪಟ್ಟ, ಪ್ರೇರಿತ, ಹುರಿದುಂಬಿಸಲ್ಪಟ್ಟ
ಛುಧ. ವಿ: [ಕ್ಷುಧ] ಹಸಿದಿರುವ, ಹಸಿದ
ಛುನ್ನ. ಪುಂನ: [ಕ್ಷುಣ್ಣ] ನಪುಂಸಕ
ಛುನ್ನ. 'ಛುಣ್ಣ' ಶಬ್ದವನ್ನು ನೋಡುವುದು.
ಛುಪ್ಪಂತ. 'ಛುವ' ಶಬ್ದವನ್ನು ನೋಡುವುದು.
ಛುಬ್ಭ. ಅಕ: [ಕ್ಷುಭ್] ಕ್ಷುಬ್ಧಗೊಳ್ಳು, ವಿಚಲಿತಗೊಳ್ಳು
ಛುಬ್ಭತ್ಥ. (ದೇ). 'ಛೊಬ್ಭತ್ಥ' ಶಬ್ದವನ್ನು ನೋಡುವುದು.
ಛುಭ. 'ಛುಹ' ಶಬ್ದವನ್ನು ನೋಡುವುದು.
ಛುಮಾ. 'ಛಮಾ' ಶಬ್ದವನ್ನು ನೋಡುವುದು.
ಛುರ. ಸಕ: [ಛುರ್] ಲೇಪಿಸು, ಬಳಿ, ವ್ಯಾಪಿಸು,
ಛುರ. ಪು: [ಕ್ಷುರ] ಕ್ಷೌರಿಕನ ಕತ್ತಿ, ಪಶುಗಳ ಗೊರಸು, ನೆಗ್ಗಿಲುಗಿಡ, ಮಂಗಾರೆ ಗಿಡ, ಬಾಣ, ನ: ತೃಣ–ವಿಶೇಷ, –ಧರಯ. ನ: [–ಗೃಹಕ] ಕ್ಷೌರಿಕನ ಕತ್ತಿ ಇತ್ಯಾದಿಗಳನ್ನು ಇಡುವ ಹಡಪ(ನಿಚೂ)
ಛುರಣ. ನ: [ಕ್ಷುರಣ] ಅವಲೇಪನ, ಬಳಿಯುವಿಕೆ
ಛುರಮಡ್ಡಿ. ಪು: [ದೇ] ಕ್ಷೌರಿಕ, ನಾಪಿತ
ಛುರಹತ್ಥ. ಪು: [ದೇ. ಕ್ಷುರಹಸ್ತ] ಕ್ಷೌರಿಕ, ನಾಪಿತ(ದೇ)
ಛುರಿಆ. ಸ್ತ್ರೀ: [ದೇ] ಮೃತ್ತಿಕೆ, ಮಣ್ಣು
ಛುರಿಆ}. ಸ್ತ್ರೀ: [ಕ್ಷುರಿಕಾ] ಕ್ಷೌರಿಕನ ಕತ್ತಿ. ಚಾಕು(ಸುಪಾ)
ಛುರಿಗಾ}.
ಛುರಿವ. ವಿ: [ಛುರಿತ] ವ್ಯಾಪಿಸಲ್ಪಟ್ಟ, ಬಳಿಯಲ್ಪಟ್ಟ, ಕತ್ತರಿಸಲ್ಪಟ್ಟ
ಛುರೀ. ಸ್ತ್ರೀ: [ಕ್ಷುರೀ] ಚೂರಿ, ಸಣ್ಣಕತ್ತಿ
ಛುಲ್ಲುಚ್ಛುಲ. 'ಚುಲ್ಲುಚ್ಛಲ' ಶಬ್ದವನ್ನು ನೋಡುವುದು.
ಛುಲ್ಲ. 'ಛುಡ್ಡ' ಶಬ್ದವನ್ನು ನೋಡುವುದು.
ಛುವ. ಸಕ: [ಛುಪ್] ಸ್ಪರ್ಶಿಸು, ಮುಟ್ಟು
ಛುಹ. ಸಕ: [ಕ್ಷಿಪ್] ಎಸೆ, ಹಾಕು
ಛುಹಾ. ಸ್ತ್ರೀ: [ಸುಧಾ] ಅಮೃತ, ಸುಣ್ಣ, –ಅರ. ಪು: [–ಕರ] ಚಂದ್ರ
ಛುಹಾ. ಸ್ತ್ರೀ: [ಕ್ಷುಧ್] ಹಸಿವು, ಕ್ಷುಧಾ
ಛುಹಾಇಅ}. ವಿ: [ಕ್ಷುದಿತ] ಹಸಿದವನು
ಛುಹಾಉಲ}. ವಿ: [ಕ್ಷುಧಾಕುಲ] ಹಸಿವಾದವನು
ಛುಹಾಲು}. ವಿ: [ಕ್ಷುಧಾಲು]
ಛುಹಿಅ}. ವಿ: [ಕ್ಷುಧಿತ]
ಛುಹಿಅ. ವಿ: [ದೇ] ಲಿಪ್ತ, ಬಳಿಯಲ್ಪಟ್ಟ, ಲೇಪಿಸಲ್ಪಟ್ಟ
ಛೂಢ. ವಿ: [ಕ್ಷಿಪ್ತ] ಎಸೆಯಲ್ಪಟ್ಟ, ಪ್ರೇರಿಸಲ್ಪಟ್ಟ (ಹೇ)
ಛೂಹಿಅ. ನ: [ದೇ] ಪಕ್ಕ ಬದಲಾಯಿಸುವುದು

ಛೇಅ. ಸಕ: [**ಛೇದಯ್**] ಕತ್ತರಿಸು, ಮುರಿಸು, ತುಂಡು ಮಾಡಿಸು

ಛೇಅ. ಪು: [ದೇ] ಅಂತ, ಎಲ್ಲೆ, ಗಡಿ, ಮೈದುನ, ಒಂದು ಭಾಗ, ಭಾಗರಹಿತ ಅಂಶ

ಛೇಅ. ವಿ: [**ಛೇಕ**] ನಿಪುಣ, ಚತುರ, ಜಾಣ(ಔಪ) **ಛೇಆಯರಿಯ.** ಪು:[**ಛೇಕಾಚಾರ್ಯ**] ಶಿಲ್ಪಾಚಾರ್ಯ, ಕಲಾಚಾರ್ಯ

ಛೇಅ. ವಿ: [ದೇ. **ಛೇಕ**] ವಿಶುದ್ಧ, ನಿರ್ಮಲ, ನ: ಕಾಲೋಚಿವಾದ ಹಿತ

ಛೇಅ. ಪು: [**ಛೇದ**] ನಾಶ, ವಿನಾಶ, ಭಾಗ, ತುಂಡು, ಕತ್ತರಿಸುವುದು, ತುಂಡುಮಾಡುವುದು, ನಿಶೀಥ ಸೂತ್ರ, ಮಹಾನಿಶೀಥ ಸೂತ್ರ, ದಶಾ–ಶ್ರುತಸ್ಕಂಧ, ಬೃಹತ್ಕಲ್ಪ, ವ್ಯವಹಾರ–ಸೂತ್ರ, ಪಂಚಕಲ್ಪ–ಸೂತ್ರ, ಇವೇ ಮೊದಲಾದ ಆರು ಜೈನ ಆಗಮಗ್ರಂಥಗಳು. ಬೇರ್ಪಡಿಸಲಾದ ಅಂಶ, ಕೊರತೆ, ನ್ಯೂನತೆ, ಪ್ರಾಯಶ್ಚಿತ್ತ ವಿಶೇಷ, ಧರ್ಮಶುದ್ಧಿ ತಿಳಿಯುವ ಒಂದು ಲಕ್ಷಣ, ನಿರ್ದೋಷ ಬಾಹ್ಯ ಆಚರಣೆ. **ಛೇಆರಿಹ.** ನ: [**ಛೇದಾರ್ಹ**] ಪ್ರಾಯಶ್ಚಿತ್ತ– ವಿಶೇಷ

ಛೇಅಅ}. ವಿ: [**ಛೇದಕ**] ಕತ್ತರಿಸುವವನು,
ಛೇಅಗ}. ತುಂಡುಮಾಡುವವನು, ಭಾಜಕ(ವಿಸೇ)

ಛೇಅಣ. ನ: [**ಛೇದನ**] ಕತ್ತರಿಸುವುದು, ತುಂಡುಮಾಡುವುದು, ಕೊರತೆ, ನ್ಯೂನತೆ, ಕತ್ತರಿಸುವ ಸಾಧನವಾದ ಶಸ್ತ್ರ, ಕತ್ತಿ ಮೊದಲಾದವು. ನಿರ್ಧಾರಕವಾದ ಮಾತು, ಸೂಕ್ಷ್ಮಅವಯವ, ಜಲ–ಜೀವ ವಿಶೇಷ

ಛೇಓವಟ್ಠಾವಣ. ನ: [**ಛೇದೋಪಸ್ಥಾಪನ**] ಜೈನ–ಸಂಯಮ ವಿಶೇಷ, ದೊಡ್ಡ ದೀಕ್ಷೆ(ಸೂಅ)

ಛೇಓವಟ್ಠಾವಣಿಯ. ನ: [**ಛೇದೋಪಸ್ಥಾಪನೀಯ**] ಮೇಲಿನ ಶಬ್ದವನ್ನು ನೋಡುವುದು.

ಛೆಂಭಈ.(ದೇ) '**ಛಿಂಭಈ**' ಶಬ್ದವನ್ನು ನೋಡುವುದು.

ಛೆಂಡ(ದೇ). '**ಛಿಂಡ**' ಶಬ್ದವನ್ನು ನೋಡುವುದು.

ಛೆಂಡಾ. ಸ್ತ್ರೀ: [ದೇ] ಶಿಖೆ, ಜುಟ್ಟು, ನವಮಲ್ಲಿಕಾ ಬಳ್ಳಿ

ಛೆಂಡೀ. ಸ್ತ್ರೀ: [ದೇ] ಸಣ್ಣ ರಸ್ತೆ, ಸಣ್ಣ ಗಲ್ಲಿ

ಛೇಗ. '**ಛೇಅ=ಛೇಕ**' ಶಬ್ದವನ್ನು ನೋಡುವುದು.

ಛೆಜ್ಜ. '**ಛಿಜ್ಜ**' ಶಬ್ದವನ್ನು ನೋಡುವುದು.

ಛೆಜ್ಜಾ. ಸ್ತ್ರೀ; [**ಛೇದ್ಯಾ**] ಕತ್ತರಿಸುವ ಕ್ರಿಯೆ

ಛೇಣ. ಪು: [ದೇ] ಕಳ್ಳ

ಛೆತ್ತ. '**ಖೇತ್ತ**' ಶಬ್ದವನ್ನು ನೋಡುವುದು.

ಛೆತ್ತರ. ನ: [ದೇ] ಧಾನ್ಯಗಳನ್ನು ಕೇರುವ ಮೊರ ಇತ್ಯಾದಿ ಮನೆಯ ಸಲಕರಣೆಗಳು

ಛೆತ್ತಸೋವಣಯ. ನ: [ದೇ] ಹೊಲದಲ್ಲಿ ಜಾಗರ ಇರುವುದು.

ಛೆತ್ತು. ವಿ: [**ಛೇತೃ**] ಕತ್ತರಿಸುವವನು, ತುಂಡು ಮಾಡುವವನು(ಆಚಾ)

ಛೇದ. '**ಛೇಅ=ಛೇದಯ್**' ಶಬ್ದವನ್ನು ನೋಡುವುದು.

ಛೇದ. '**ಛೇಅ=ಛೇದ**' ಶಬ್ದವನ್ನು ನೋಡುವುದು.

ಛೇದಅ. ವಿ: [**ಛೇದಕ**] ಕತ್ತರಿಸುವವನು

ಛೇದಣ. ವಿ: [**ಛೇದನ**] ಕತ್ತರಿಸುವವನು,ಸ್ತ್ರೀ:–ಣೀ

ಛೇದೋವಟ್ಠಾಣಿಯ. '**ಛೇಓವಟ್ಠಾವಣಿಯ**' ಶಬ್ದವನ್ನು ನೋಡುವುದು.

ಛೇಧ. ಪು: [ದೇ] ಶ್ರೀಗಂಧವೇ ಮೊದಲಾದ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುವುದು. ಕಳ್ಳ

ಛೆಪ್ಪ. ನ: [ದೇ. **ಶೇಪ**] ಬಾಲ(ವಿಪಾ)

ಛೇಭಯ. ಪು: [ದೇ] ಚಂದನಾದಿಗಳ ವಿಲೇಪನ.

ಛೇಲ}. **ಪುಂಸ್ತ್ರೀ**: [ದೇ] ಮೇಕೆ, ಹೋತ. **ಸ್ತ್ರೀ:**
ಛೇಲಗ}. **–ಲಿಆ, –ಲೀ**
ಛೇಲಯ}.

ಛೇಲಾವಣ. ನ: [ದೇ] ಉಚ್ಚ ಹರ್ಷ ಧ್ವನಿ, ಮಕ್ಕಳ ಆಟದ ಜೋರು ಕೇಕೆ. ಚೀತ್ಕಾರ

ಛೇಲಿಯ. ನ: [ದೇ] ಅವ್ಯಕ್ತ ಧ್ವನಿ(ಪಣ್ಣ), ಮೂಗು ಸೀದುವ ಶಬ್ದ

ಛೇಲೀ. ಸ್ತ್ರೀ: [ದೇ] ಸ್ವಲ್ಪ ಹೂವಿರುವ ಹಾರ

ಛೇವಗ. ನ: [ದೇ] ಜನರಲ್ಲಿ ಹರಡಿರುವ ಮಾರಿ ರೋಗವೇ ಮೊದಲಾದವು

ಛೇವಟ್ಟ}. ನ: [ದೇ. **ಸೇವಾರ್ತ, ಛೇದವೃತ್ತ**] ಮರ್ಕಟ
ಛೇವಟ್ಠ}. ಬಂಧನ, ಕುಳಿತುಕೊಳ್ಳುವಿಕೆ, ಕೀಲುಗಳು ಇರದೆ ಮೂಳೆಗಳು ತನಗೆ ತಾನೇ ಜೋಡಣೆಯಾಗಿರುವಂತೆ ಇರುವ ಶರೀರ–ರಚನಾವಿಶೇಷ, ಕರ್ಮ–ವಿಶೇಷ, ಇದು ಹುಟ್ಟುವುದರಿಂದ ಮೇಲೆ ಹೇಳಿದ ಶರೀರ ರಚನೆ ಸಾಧ್ಯವಾಗುತ್ತದೆ.

ಛೇವಾಡೀ.(ದೇ). '**ಛಿವಾಡೀ**' ಶಬ್ದವನ್ನು ನೋಡುವುದು.

ಛೇಹ. ಪು: [ದೇ. ಕ್ಷೇಪ] ಪ್ರೇರಣೆ, ಎಸೆಯುವುದು.
ಛೇಹತ್ತರಿ(ಅಪ). '**ಛಾಹತ್ತರಿ**' ಶಬ್ದವನ್ನು ನೋಡುವುದು.
ಛೋಅ. ಪ: [ದೇ] ಸಿಪ್ಪೆ, ಹೊಟ್ಟು
ಛೋಇಅ. ಪು: [ದೇ] ದಾಸ, ಸೇವಕ
ಛೋಇಆ. ಸ್ತ್ರೀ: [ದೇ] ಕಬ್ಬು ಮುಂತಾದವುಗಳ ಸಿಪ್ಪೆ (ಉಪ)
ಛೊಕ್ಕರೀ. ಸ್ತ್ರೀ: [ದೇ] ಹುಡುಗಿ
ಛೊಟ್ಟಿ. ಸ್ತ್ರೀ: [ದೇ] ಎಂಜಲು, ಬೇರೆಯವರು ತಿಂದು ಮಿಕ್ಕಿದ್ದು
ಛೋಡ. ಸಕ: [**ಛೋಟಯ್**] ಬಿಡು, ಬಂಧನದಿಂದ ಮುಕ್ತಗೊಳಿಸು
ಛೋಡಯ. ವಿ: [ದೇ] ಚಿಕ್ಕದು, ಸಣ್ಣದು
ಛೋಡಾವಿಯ. ವಿ: [**ಛೋಟಿತ**] ಬಿಡಿಸಲಾದ, ಬಂಧನ ಮುಕ್ತಗೊಳಿಸಲ್ಪಟ್ಟ, ಅದುಮಲ್ಪಟ್ಟ, ತುಳಿಯಲ್ಪಟ್ಟ, ಹೊಡೆಯಲ್ಪಟ್ಟ
ಛೋಡಿ. ಸ್ತ್ರೀ: [ದೇ] ಚಿಕ್ಕ, ಲಘುವಾದ, ಕ್ಷುದ್ರವಾದ
ಛೋಡಿಅ. '**ಘೋಡಿಅ**' ಶಬ್ದವನ್ನು ನೋಡುವುದು.
ಛೋಢೂಣ. ವಿ: [ದೇ] ಬಿಟ್ಟು
ಛೋಢೂಣ}. '**ಛುಹ**' ಶಬ್ದವನ್ನು ನೋಡುವುದು.
ಛೋಢೂಣಂ}.
ಛೊಪ್ಪ. ವಿ: [ಸ್ಪೃಶ್ಯ] ಸ್ಪರ್ಶಿಸಲು ಯೋಗ್ಯವಾದ
ಛೊಬ್ಬ. ಪು: [ದೇ] ಚಾಡಿಕೋರ, ದುಷ್ಟ, ದುರ್ಜನ. '**ಛೋಭ**' ಶಬ್ದವನ್ನು ನೋಡುವುದು.
ಛೊಬ್ಭ. ವಿ: [ಕ್ಷೋಭ್ಯ] ಕಲಕಬಹುದಾದ, ಕಲಕಲರ್ಹವಾದ
ಛೊಬ್ಭಮತ್ಥ. ವಿ: [ದೇ] ಅಪ್ರಿಯವಾದ, ಇಷ್ಟವಾಗದ
ಛೊಬ್ಭಾಇತ್ತೀ. ಸ್ತ್ರೀ: [ದೇ] ಅಸ್ಪೃಶ್ಯಳಾದ, ಇಷ್ಟವಾಗದವಳು, ದ್ವೇಷಕ್ಕೆ ಅರ್ಹಳಾದ
ಛೋಭ(ದೇ). '**ಛೊಬ್ಭ**' ಶಬ್ದವನ್ನು ನೋಡುವುದು. ನಿಸ್ಸಹಾಯ, ದೀನ, ನ: ದೋಷಾರೋಪಣೆ, ತಪ್ಪು ಹೊರಿಸುವುದು. ಎರಡು ಖಮಾಸಮಣ ರೂಪ ವಂದನೆ, ಆಘಾತ
ಛೋಮ. '**ಛಉಮ**' ಶಬ್ದವನ್ನು ನೋಡುವುದು
ಛೋಯರ. ಪು: [ದೇ] ಹುಡುಗ, ಪೋರ
ಛೋಲಿಅ. '**ಛೋಡಿಅ=ಛೋಟಿತ**' ಶಬ್ದವನ್ನು ನೋಡುವುದು
ಛೊಲ್ಲ. ಸಕ: [ತಕ್ಷ್] ತೊಗಟೆ ಸುಲಿ, ತೊಗಟೆ ಕೆತ್ತು
ಛೊಲ್ಲಣ. ನ: [ತಕ್ಷಣ] ಮರವನ್ನು ಕೆತ್ತುವುದು, ಮರದ ತೊಗಟೆ ತೆಗೆಯುವುದು
ಛೊಲ್ಲಿಯ. ವಿ: [ತಷ್ಟ] ತೊಗಟೆ ತೆಗೆಯಲಾದ, ಸಿಪ್ಪೆ ತೆಗೆಯಲ್ಪಟ್ಟ(ಉಪ)
ಛೋಹ. ಪು: [ದೇ] ಸಮೂಹ, ಗುಂಪು, ವಿಕ್ಷೇಪ, '**ಆಘಾತ**'
ಛೋಹ. ಪು: [ಕ್ಷೇಪ] ಎಸೆಯುವುದು
ಛೋಹರ.(ದೇ). '**ಛೋಯರ**' ಶಬ್ದವನ್ನು ನೋಡುವುದು.
ಛೋಹಿಯ. ವಿ: [ಕ್ಷೋಭಿತ] ವ್ಯಾಕುಲಗೊಳಿಸಲ್ಪಟ್ಟ, ಕಲಕಾಡಿಸಲ್ಪಟ್ಟ, ದಿಗಿಲುಗೊಳಿಸಲ್ಪಟ್ಟ(ಉಪ)

ಜ

ಜ. ಪು: [ಜ] ತಾಲವ್ಯ- ಅಘೋಷ- ವ್ಯಂಜನ ವರ್ಣ

ಜ. ಸ: [ಯತ್] ಯಾವನು, ಯಾವಳು, ಯಾವುದು, ಯಾರು: ಸಂಬಂಧ ವಾಚಕ ಸರ್ವನಾಮ(ತಾ)

-ಜ. ವಿ: [-ಜ] ಉತ್ಪನ್ನ,

ಜಅಕ್ಕಾರ. ಪು: [ಜಯಕಾರ] ಜಯ, ಅಭ್ಯುದಯ.

ಜಅಡ. ಅಕ: [ತ್ವರ್] ತ್ವರೆ ಮಾಡು, ಅವಸರ ಮಾಡು

ಜಅಲ. ವಿ: [ದೇ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, ಆಚ್ಛಾದಿತ(ಷಡ್)

ಜಇ. ಪು: [ಯತಿ] ಸಾಧು, ಜಿತೇಂದ್ರಿಯ, ಸಂನ್ಯಾಸಿ (ಔಪ). ಛಂದಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ನಿಲುಗಡೆಯ ಸ್ಥಾನ ಎಂಬ ಅರ್ಥದ **'ಯತಿ'**.

ಜಇ. ಅ: [ಯದಾ] ಯಾವ ಸಮಯದಲ್ಲಿ, ಯಾವ ಹೊತ್ತಿನಲ್ಲಿ

ಜಇ. ಅ: [ಯದಿ] ಒಂದು ವೇಳೆ, **-ವಿ. ಅ:** [-ಅಪಿ] ಯಾರಾದರೂ

ಜಇ. ಅ: [ಯತ್ರ] ಎಲ್ಲಿ, ಯಾವ ಜಾಗದಲ್ಲಿ

ಜಇ. ವಿ: [ಯತಿ] ಎಷ್ಟು

ಜಇ. ವಿ: [ಜಯಿನ್] ಜಯಶಾಲಿ, ವಿಜಯಿ

ಜಇಅವ್ವ. ವಿ: [ಜೇತವ್ಯ] ಜಯಿಸಲು ಯೋಗ್ಯವಾದ

ಜಇಆ. ಅ: [ಯದಾ] ಯಾವ ಸಮಯದಲ್ಲಿ, ಯಾವ ಹೊತ್ತಿನಲ್ಲಿ(ಉವ)

ಜಇಚ್ಛಾ. ಸ್ತ್ರೀ: [ಯದೃಚ್ಛಾ] ಸ್ವತಂತ್ರತೆ, ಸ್ವೇಚ್ಛಾಚಾರ.

ಜಇಣ. ವಿ: [ಜೈನ] ತೀರ್ಥಂಕರರ ಭಕ್ತ, ಜೈನಧರ್ಮ, ಜಿನನೊಂದಿಗೆ, ಸಂಬಂಧ ಹೊಂದಿರುವನು

ಜಇಣ. ವಿ: [ಜಯಿನ್] ಗೆದ್ದವನು(ಉವಾ)

ಜಇಣ. ವಿ: [ಜವಿನ್] ವೇಗವನ್ನು ಹೊಂದಿರುವ, ವೇಗದಿಂದ ಕೂಡಿದ,

ಜಇತ್ತ ವಿ: [ಜೈತ್ರ] ಜಯಶೀಲ, ಗೆಲ್ಲುವ ಸ್ವಭಾವದವನು, ವಿಜಯಿ. **ಪು:** ಒಬ್ಬ ರಾಜ

ಜಇತ್ತಾ. 'ಜಯ=ಜಿ' ಶಬ್ದವನ್ನು ನೋಡುವುದು.

ಜಇಯ. ವಿ: [ಜಯಿಕ] ವಿಜಯಿ(ಣಾಯಾ)

ಜಇಯ. ವಿ: [ಯಷ್ಟ] ಯಾಗ ಮಾಡುವವನು(ಉತ್ತ)

ಜಇಯವ್ವ. **'ಜಯ=ಯತ್'** ಶಬ್ದವನ್ನು ನೋಡುವುದು.

ಜಇವಾ. ಅ: [ಯದಿವಾ] ಅಥವಾ

ಜಇಸ(ಅಪ). ವಿ [ಯಾದೃಶ] ಯಾವ ರೀತಿಯ, ಯಾವ ಥರದ

ಜಉ. ನ: [ಜತು] ಅರಗು, ಲಾಕ್ಷಾ

ಜಉ. ಪು: [ಯದು] ಹೆಸರಾಂತ ಯದು ಮಹಾರಾಜ, ಸುಪ್ರಸಿದ್ಧ ಕ್ಷತ್ರಿಯ ವಂಶ, **-ಣಂದಣ. ಪು:** [-ನಂದನ] ಯದುವಂಶೀಯ, ಶ್ರೀಕೃಷ್ಣ(ಉಪ)

ಜಉ. ಪು: [ಯಜುಷ್] ಯಜುರ್ವೇದ

ಜಉಣ. ಪು: [ಯಮುನ] ಒಬ್ಬ ಹೆಸರಾಂತ ರಾಜ

ಜಉಣ}. **ಸ್ತ್ರೀ:** [ಯಮುನಾ] ಭಾರತದ ಪ್ರಸಿದ್ಧ

ಜಉಣ-}. ಯಮುನಾ ನದಿ

ಜಉಣಾ}.

ಜಓ. ಅ: [ಯತಃ] ಏಕೆಂದರೆ, ಯಾವ ಕಾರಣದಿಂದ, ಯಾರಿಂದ, ಯಾವುದರಿಂದ, ಎಲ್ಲಿ

ಜಂ. ಅ: [ಯತ್] ಏಕೆಂದರೆ, ಕಾರಣವೆಂದರೆ, ವಾಕ್ಯದ ಮಧ್ಯದಲ್ಲಿ ಬರುವ ಸಂಬಂಧ ಸೂಚಕ ಅವ್ಯಯ. **-ಕಿಂಚಿ. ಅ:** [-ಕಿಂಚಿತ್] ಏನು, ಸ್ವಲ್ಪ, ಯಾರಾದರೂ(ಪಡಿ) ಅಸಂಬದ್ಧ, ಅಯುಕ್ತ, ತುಚ್ಛ, ನಗಣ್ಯ.

ಜಂಕಯಸುಕಯ. ವಿ: [ದೇ] ಅಲ್ಪ ಉಪಕಾರದಿಂದಲೇ ನಮ್ಮ ವಶವಾಗುವಂಥ

ಜಂಗಮ. ವಿ: [ಜಂಗಮ] ಚಲಿಸುವ, ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋಗುವಂಥ, ಚಲನಶೀಲ(ತಾ). ಒಂದು ಛಂದಸ್ಸು

ಜಂಗಲ. ಪು: [ಜಂಗಲ] ಸಪಾದ ಲಕ್ಷ ದೇಶ, ನೀರಿಲ್ಲದ ಪ್ರದೇಶ(ಬೃಹ)

ಜಂಗಾ. ಸ್ತ್ರೀ: [ದೇ] ಗೋಮಾಳ, ಹಸುಗಳು ಮೇಯುವ ಹುಲ್ಲುಗಾವಲು

ಜಂಗಿಅ. ವಿ: [ಜಾಂಗಮಿಕ] ಜಂಗಮ ವಸ್ತುಗಳೊಂದಿಗೆ ಸಂಬಂಧ ಹೊಂದಿರುವ. **ನ:** ಜಂಗಮ ಪಶುಗಳ ಕೂದಲಿನಿಂದ ತಯಾರಿಸಿದ ಬಟ್ಟೆ.

ಜಂಗುಲಿ. ಸ್ತ್ರೀ: [ಜಾಂಗುಲಿ] ವಿಷವನ್ನು ಇಳಿಸುವ ಮಂತ್ರ, ವಿಷ-ವಿದ್ಯೆ

ಜಂಗುಲಿಯ. ಪು: [ಜಾಂಗುಲಿಕ] ವಿಷ ಮಂತ್ರವನ್ನು ಬಲ್ಲ ಗಾರುಡಿಗ(ಪಉಮ)

ಜಂಗೋಲ. ಸ್ತ್ರೀನ: [ಜಾಂಗುಲ] ವಿಷ ನಾಶಕ ತಂತ್ರ,

ವಿಷ ಚಿಕಿತ್ಸೆಯನ್ನು ವಿವರಿಸುವ ಆಯುರ್ವೇದದ ಒಂದು ವಿಭಾಗವಾದ ವಿಷ-ವಿದ್ಯೆ.

ಜಂಘಾ: ಸ್ತ್ರೀ: [ಜಂಘಾ] ಮೊಳ ಕಾಲು(ಆಚಾ), **-ಚರ.** ವಿ: [-ಚರ] ಕಾಲಿನಿಂದ ನಡೆಯುವ, ಪಾದಚಾರಿ. **-ಚಾರಣ.** ಪು: [-ಚಾರಣ] ತಮ್ಮ ತಪೋಬಲದಿಂದ ಆಕಾಶದಲ್ಲಿ ಸಂಚರಿಸ ಬಲ್ಲ ಜೈನಮುನಿಗಳ ಒಂದು ಪ್ರಭೇದ. **-ಸಂತಾರಿಮ.** ವಿ: [-ಸಂತಾಯು] ಮೊಳಕಾಲಿನವರೆಗೂ ನೀರಿರುವ ಜಲಾಶಯ

ಜಂಘಾಚ್ಛೇಅ. ಪು: [ದೇ] ಚೌಕ

ಜಂಘಾಮಯ}. ವಿ: [ದೇ] ವೇಗವಾಗಿ ಹೋಗುವ

ಜಂಘಾಲುಅ}. (ಉಪ)

ಜಂಘಾಲ. ವಿ: [ಜಂಘಾಲ] ವೇಗವಾಗಿ ಚಲಿಸುವ

ಜಂತ. ಸಕ: [ಯಂತ್ರ] ವಶಕ್ಕೆ ತೆಗೆದುಕೊಳ್ಳು, ಬಿಗಿಯಾಗಿ ಕಟ್ಟು

ಜಂತ. ನ: [ಯಂತ್ರ] ಬುದ್ಧಿ ಪೂರ್ವಕವಾಗಿ ಶಿಲ್ಪವೇ ಮೊದಲಾದ ಕೆಲಸಗಳನ್ನು ಮಾಡಲು ತಯಾರಿಸಲಾದ ಪದಾರ್ಥ-ವಿಶೇಷ, ಎಳ್ಳಿನ ಯಂತ್ರ, ಜಲ-ಯಂತ್ರ ಇತ್ಯಾದಿ.(ಕುಮಾ)ರಕ್ಷಣೆ ಇತ್ಯಾದಿಗಳ ಸಲುವಾಗಿ ಮಾಡಲಾಗುವ ರೇಖಾ ಪ್ರಯೋಗ ಸಂಯಮ, ನಿಯಂತ್ರಣ, **-ಪತ್ಥರ.** ಪು: [-ಪ್ರಸ್ತರ] ಕವಣೆಯಲ್ಲಿ ಬಳಸುವ ಕಲ್ಲು. **-ಪಿಲ್ಲಣಕಮ್ಮ.** ನ: [-ಪೀಡನಕರ್ಮ] ಯಂತ್ರದ ಮೂಲಕ ಎಳ್ಳು, ಕಬ್ಬು, ಮೊದಲಾದವನ್ನು ಹಿಂಡುವ ಉದ್ಯೋಗ. **-ಪುರಿಸ.** ಪು: [-ಪುರುಷ] ಯಂತ್ರದಿಂದ ಪುರುಷನ ಕೆಲಸಗಳನ್ನು ಮಾಡುವ ಬೊಂಬೆ. **-ವಾಡಚುಲ್ಲೀ.** ಸ್ತ್ರೀ: [-ಪಾಟಕುಲ್ಲೀ] ಕಬ್ಬಿನ ಹಾಲನ್ನು ಕಾಯಿಸುವ ಒಲೆ(ಠಾ), **-ಹರ.** ನ: [-ಗೃಹ] ನೀರಿನ ಕಾರಂಜಿ (ಬುಗ್ಗೆ) ಇರುವ ಸ್ಥಳ.

ಜಂತ. **'ಜಾ=ಯಾ'** ಶಬ್ದವನ್ನು ನೋಡುವುದ.

ಜಂತಣ. ನ: [ಯಂತ್ರಣ] ನಿಯಂತ್ರಣ, ಸಂಯಮ, ತಡೆಯುವವ, ಪ್ರತಿರೋಧಕ

ಜಂತಿಅ. ಪು: [ಯಾಂತ್ರಿಕ] ಯಂತ್ರದ ಕೆಲಸವನ್ನು ಮಾಡುವವ, ಯಂತ್ರವನ್ನು ನಡೆಸುವವ(ಗಾ)

ಜಂತಿಅ. ಪು: [ಯಂತ್ರಿತ] ನಿಯಂತ್ರಿತ, ಹತೋಟಿಗೆ ತರಲ್ಪಟ್ಟ

ಜಂತು. ಪು: [ಜಂತು] ಜೀವ, ಪ್ರಾಣಿ

ಜಂತುಗ. ನ: [ಜಂತುಕ] ಜಲಾಶಯದಲ್ಲಿ ಉತ್ಪತ್ತಿಯಾಗುವ ತೃಣ(ಪಣ್ಣ)

ಜಂತುಯ. ವಿ: [ಜಾಂತುಕ] 'ಜಂತುಕ' ಎಂಬ ಹುಲ್ಲಿನ

ಜಂಪ. ಸಕ: [ಜಲ್ಪ್] ಹೇಳು, ಆಡು. - 'ಜಂಪಇ'

ಜಂಪಣ. ನ: [ಜಲ್ಪನ] ಉಕ್ತಿ, ಮಾತು, ಹೇಳುವುದು, ಕಥನ(ಗಉಡ)

ಜಂಪಣ. ನ: [ದೇ] ಅಪಯಶಸ್ಸು, ಅಪಕೀರ್ತಿ, ಮುಖ (ಭವಿ)

ಜಂಪಯ. ವಿ: [ಜಲ್ಪಕ] ಮಾತಾಡುವವನು, ವಕ್ತಾರ

ಜಂಪಾಣ. ನ: [ಜಂಪಾನ] ವಾಹನ-ವಿಶೇಷ, ಸುಖಾಸನ, ಪಲ್ಲಕ್ಕಿ(ಔಪ), ಶವಯಾನ,

ಜಂಪಿಚ್ಛಯ. ವಿ: [ದೇ] ಯಾರನ್ನು ನೋಡುತ್ತಾನೋ ಅವರನ್ನೇ ಬಯಸುವವನು(ಪಾಅ)

ಜಂಪಿಯ. ವಿ: [ಜಲ್ಪಿತ] ಕಥಿತ, ಹೇಳಿದ

ಜಂಪಿಯ. **'ಜಂಪ'** ಶಬ್ದವನ್ನು ನೋಡುವುದು.

ಜಂಪಿರ. ವಿ: [ಜಲ್ಪಿತೃ] ಹರಟುವವನು, ಹೆಚ್ಚು ಮಾತಾಡುವವನು, ವಾಚಾಟ, ಮಾತನಾಡುತ್ತಿರುವವನು

ಜಂಪೆಕ್ಖಿರಮಗ್ಗಿರ}. ವಿ: [ದೇ] ಯಾರನ್ನು ನೋಡಿದರೆ

ಜಂಪೆಚ್ಛಿರಮಗ್ಗಿರ}. ಅವರೇ ಬೇಕೆಂದು ಅವರನ್ನು ಯಾಚಿಸುವವನು

ಜಂಬವಈ. ಸ್ತ್ರೀ: [ಜಾಂಬವತೀ] ಶ್ರೀಕೃಷ್ಣನ ಒಬ್ಬಳು ಹೆಂಡತಿ(ಆಚೂ)

ಜಂಬವಂತ. ಪು: [ಜಾಂಬವತ್] ಒಬ್ಬ ವಿದ್ಯಾಧರ ರಾಜ

ಜಂಬಾಲ. ನ: [ದೇ] ಕೆಸರು, ಗರ್ಭಕ್ಕೆ ಸುತ್ತಿಕೊಂಡಿರುವ ಚರ್ಮದ ಹೊದಿಕೆ(ಸೂಅ)

ಜಂಬೀರಿಯ(ಅಪ). ನ: [ಜಂಬೀರ] ನಿಂಬೆ ಹಣ್ಣು

ಜಂಬು. ಪು: [ಜಂಬು] ನರಿ, ಸುಧರ್ಮ ಸ್ವಾಮಿಯ ಶಿಷ್ಯನೂ ಅಂತಿಮ ಕೇವಲಿಯೂ ಆದ ಒಬ್ಬ ಪ್ರಸಿದ್ಧ ಜೈನಮುನಿ, **ಪುಂನ:** ನೇರಳೆ ಹಣ್ಣು

ಜಂಬು-. **'ಜಂಬೂ'** ಶಬ್ದವನ್ನು ನೋಡುವುದು. (ಕುಮಾ)

ಜಂಬುಅ. ಪು: [ದೇ] ಜೊಂಡು, ಹಬ್ಬೆ ಗಿಡ, ಪಶ್ಚಿಮ ದಿಕ್‌ಪಾಲ.

ಜಂಬುಅ}. ಪು: [ಜಂಬುಕ] ನರಿ, ನ: ನೇರಳೆ ಹಣ್ಣು,

ಜಂಬುಗ}. ನೇರಳೆ ಮರ(ಸುಪಾ)

ಜಂಬುಲ. ಪು: [ದೇ] ಬೆತ್ತಲಾಳದ ಗಿಡ, ಹೆಂಡದ ಪಾತ್ರೆ
ಜಂಬುಲ್ಲ. ವಿ: [ದೇ] ಹರಟೆ ಮಲ್ಲ, ಭಾರೀ ಮಾತಾಳಿ
ಜಂಬುವಈ. **'ಜಂಬವಈ'** ಶಬ್ದವನ್ನು ನೋಡುವುದು.
ಜಂಬೂ. ಸ್ತ್ರೀ: [ಜಂಬೂ] ನೇರಿಳೆ ಮರ, ಜಂಬೂ ವೃಕ್ಷದ ಆಕಾರದ ಒಂದು ರತ್ನಮಯ ಶಾಶ್ವತ ಪದಾರ್ಥವಾದ ಸುದರ್ಶನ. ಇದರಿಂದಲೇ ಇದಕ್ಕೆ ಜಂಬೂ ದ್ವೀಪವೆಂದು ಹೆಸರಾಯಿತು. ಸುಧರ್ಮ ಸ್ವಾಮಿಯ ಮುಖ್ಯ ಶಿಷ್ಯನಾದ ಒಬ್ಬ ಪ್ರಸಿದ್ಧ ಜೈನಮುನಿ. **–ದೀವ. ಪು:** [**–ದ್ವೀಪ**] ಭಾರತವೇ ಮೊದಲಾದ ಕ್ಷೇತ್ರಗಳು ಸದ್ಯ ಇರುವ, ಎಲ್ಲ ದ್ವೀಪಗಳ ಮತ್ತು ಸಮುದ್ರಗಳ ಮಧ್ಯದ ದ್ವೀಪ. **–ದೀವಗ. ವಿ:** [**–ದ್ವೀಪಕ**] ಜಂಬೂ ದ್ವೀಪಕ್ಕೆ ಸಂಬಂಧಿಸಿದ, ಜಂಬೂ ದ್ವೀಪದಲ್ಲಿ ಹುಟ್ಟಿದ(ತಾ). **–ದೀವಪಣ್ಣತ್ತಿ. ಸ್ತ್ರೀ:** [**–ದ್ವೀಪಪ್ರಜ್ಞಪ್ತಿ**] ಜಂಬೂ ದ್ವೀಪದ ವರ್ಣನೆ ಇರುವ ಜೈನ ಆಗಮ ಗ್ರಂಥ. **–ಪೀಢ, –ಪೇಢ, ನ:** [**–ಪೀಠ**] ಸುದರ್ಶನಾ ಜಂಬೂವಿನ ಅಧಿಷ್ಠಾತೃ ಪ್ರದೇಶ. **–ಪುರ. ನ:** [**–ಪುರ**] ನಗರ–ವಿಶೇಷ. **–ಮಾಲಿ. ಪು:** [**–ಮಾಲಿನ್**] ರಾವಣನ ಒಬ್ಬ ಮಗ, ರಾವಣನ ಒಬ್ಬ ಯೋಧ(ಪಉಮ). **–ಮೇಘಪುರ. ನ:** [**–ಮೇಘಪುರ**] ವಿ: ದ್ಯಾಧರ ನಗರ. **–ಸಂಡ. ಪು:** [**–ಷಂಡ**] ಒಂದು ಗ್ರಾಮ. **–ಸಾಮಿ. ಪು:** [**–ಸ್ವಾಮಿನ್**] ಒಬ್ಬ ಪ್ರಸಿದ್ಧ ಜೈನಮುನಿ.
ಜಂಬೂಅ. ಪು: [**ಜಂಬೂಕ**] ನರಿ(ಓಘ)
ಜಂಬೂಣಯ. ನ: [**ಜಾಂಬೂನದ**] ಚಿನ್ನ, ಸುವರ್ಣ, **ಪು:** ಖ್ಯಾತನಾದ ಒಬ್ಬ ರಾಜ(ಪು)
ಜಂಬೂಲಯ. ಪುಂನ: [**ಜಂಬೂಲಕ**] ನೀರಿನ ಪಾತ್ರೆ,
ಜಂಭ. ಪು: [ದೇ] ಧಾನ್ಯದ ಮೇಲಿನ ಹೊಟ್ಟು
ಜಂಭ'ಂತ. **'ಜಂಭಾ=ಜೃಂಭ್'** ಶಬ್ದವನ್ನು ನೋಡುವುದು.
ಜಂಭಗ. ವಿ: [**ಜೃಂಭಕ**] ಆಕಳಿಸುವವನು. **ಪು:** ವ್ಯಂತರ ದೇವತೆಗಳ ಒಂದು ಜಾತಿ
ಜಂಭಣಂಭಣ}. **ವಿ:** [ದೇ] ಮನಸ್ಸಿಗೆ ಬಂದದ್ದನ್ನು
ಜಂಭಣಭಣ}. ಆಡಿಬಿಡುವ ಸ್ವಚ್ಛಂದ ಮಾತುಗಾರ
ಜಂಭಣಯ}. (ಷಡ್)
ಜಂಭಣೀ. ಸ್ತ್ರೀ: [**ಜೃಂಭಣೀ**] ತಂತ್ರದಲ್ಲಿ ಪ್ರಸಿದ್ಧವಾದ ಒಂದು ವಿದ್ಯೆ(ಸೂಅ)

ಜಂಭಯ. **'ಜಂಭಗ'** ಶಬ್ದವನ್ನು ನೋಡುವುದು.
ಜಂಭಲ. ಪು: [ದೇ] ಜಡ, ಮಂದ, ಆಲಸಿ
ಜಂಭಾ. ಸ್ತ್ರೀ: [**ಜೃಂಭಾ**] ಆಕಳಿಕೆ
ಜಂಭಾ. ಸ್ತ್ರೀ: [**ಜೃಂಭಾ**] ಒಂದು ದೇವಿಯ ಹೆಸರು
ಜಂಭಾ}. **ಅಕ:** [**ಜೃಂಭ್**] ಆಕಳಿಸು
ಜಂಭಾಅ}.
ಜಂಭಾಇಅ. ನ: [**ಜೃಂಭಿತ**] ಆಕಳಿಕೆ.
ಜಂಭಿಯ. ನ: [ಜೃಂಭಿತ] ಆಕಳಿಕೆ. **ಪು:** ಭಗವಾನ್ ಮಹಾವೀರರಿಗೆ ಕೇವಲ ಜ್ಞಾನ ಪ್ರಾಪ್ತವಾಗಿದ್ದ ಊರು. ಈ ಊರು ಪಾರಸನಾಥ ಪರ್ವತದ ಹತ್ತಿರದ ಋಜುವಾಲಿಕಾ ನದಿಯ ದಡದ ಮೇಲಿದೆ(ಕಪ್ಪ)
ಜಕ್ಖ. ಪು: [**ಯಕ್ಷ**] ವ್ಯಂತರ ದೇವತೆಗಳ ಒಂದು ಜಾತಿ. ಧನಪತಿಯೂ ಯಕ್ಷರ ಅಧಿಪತಿಯೂ ಆದ ಕುಬೇರ. ರಾವಣನ ತಾಯಿಯ ಕಡೆಯ ಸೋದರನಾದ ಒಬ್ಬ "ವಿದ್ಯಾಧರ ರಾಜ (ಪಉಮ). ಒಂದು ದ್ವೀಪ; ಸಮುದ್ರ–ವಿಶೇಷ, ನಾಯಿ, **–ಕದ್ದಮ. ಪು:** [**–ಕರ್ದಮ**] ಕೇಸರಿ, ಅಗರು, ಚಂದನ ಕರ್ಪೂರ ಮತ್ತು ಕಸ್ತೂರಿಗಳನ್ನು ಸಮಪ್ರಮಾಣದಲ್ಲಿ ಸೇರಿಸಿ ಮಾಡಿದ ಮಿಶ್ರಣ. ಒಂದು ದ್ವೀಪ **–ಗ್ಗಹ. ಪು:** [**–ಗ್ರಹ**] ಯಕ್ಷನ ಆವೇಶ, ಯಕ್ಷನಿಂದಾಗುವ ಉಪದ್ರವ, **–ಣಾಯಗ. ಪು:** [**–ನಾಯಕ**] ಯಕ್ಷರ ಅಧಿಪತಿಯಾದ ಕುಬೇರ. **–ದಿತ್ತ. ನ:**[**–ದೀಪ್ತ**] ಮುಂದಿನ ಶಬ್ದವಾದ **'–ದಿತ್ತಯ'** ನೋಡುವುದು. **–ದಿನ್ನಾ. ಸ್ತ್ರೀ:** [**–ದತ್ತಾ**] ಮಹರ್ಷಿ ಸ್ಥೂಲಭದ್ರನ ಸೋದರಿ. ಒಬ್ಬ ಜೈನ ಸಾಧ್ವಿ. **–ಭದ್ದ. ಪು:** [**–ಭದ್ರ**] ಯಕ್ಷ ದ್ವೀಪದ ಅಧಿಪತಿ ದೇವ–ವಿಶೇಷ. **–ಮಂಡಲಪವಿಭತ್ತಿ. ಸ್ತ್ರೀ:** [**–ಮಂಡಲಪ್ರವಿಭಕ್ತಿ**] ಒಂದು ಬಗೆಯ ನಾಟ್ಯ. **–ಮಹ. ಪು:** [**–ಮಹ**] ಯಕ್ಷನ ಸಲುವಾಗಿ ಮಾಡಲಾಗುವ ಮಹೋತ್ಸವ(ಆಚಾ). **–ಮಹಾಭದ್ದ. ಪು:** [**–ಮಹಾಭದ್ರ**] ಯಕ್ಷ ದ್ವೀಪದ ಅಧಿಪತಿ ದೇವ. **–ಮಹಾವರ. ಪು:** [**–ಮಹಾವರ**] ಯಕ್ಷ ಸಮುದ್ರದ ಅಧಿಷ್ಠಾತೃ ದೇವ. **–ರಾಯ. ಪು:** [**–ರಾಜ**] ಯಕ್ಷರ ರಾಜ, ಕುಬೇರ. ಪ್ರಧಾನ ಯಕ್ಷ(ಸುಪಾ). ಒಬ್ಬ ವಿದ್ಯಾಧರ ರಾಜ. **–ವರ. ಪು:** [**–ವರ**] ಯಕ್ಷ

ಸಮುದ್ರದ ಅಧಿಪತಿಯಾದ ದೇವ. **ಜಕ್ಖಾಇಟ್ಠ.** ವಿ: [**ಯಕ್ಷಾವಿಷ್ಟ**] ಯಕ್ಷನ ಆವೇಶವುಳ್ಳವನು. **ಯಕ್ಷಾಧಿಷ್ಠಿತ(ತಾ). ಜಕ್ಖಾದಿತ್ತಯ, ಜಕ್ಖಾಲಿತ್ತಯ.** ನ: [**ಯಕ್ಷಾದೀಪ್ತಕ**] ಕೆಲವೊಮ್ಮೆ ಯಾವುದಾದರೊಂದು ದಿಕ್ಕಿನಲ್ಲಿ ಆಕಾಶದಲ್ಲಿ ಮಿಂಚಿನ ಹಾಗೆ ಬೆಳಗುವ ವ್ಯಂತರರು ನಿರ್ಮಿಸಿದ ಅಗ್ನಿ –ದೀಪನ. ಆಕಾಶದಲ್ಲಿ ಕಾಣುವ, ಬೆಂಕಿ ಹಿಡಿದ ಪಿಶಾಚ(ಜೀವ). **ಜಕ್ಖಾವೇಸ. ಪು:** [**ಯಕ್ಷಾವೇಶ**] ಯಕ್ಷರು ಮನುಷ್ಯ ದೇಹವನ್ನು ಪ್ರವೇಶಿಸುವುದು. **ಜಕ್ಖಾಹಿವ. ಪು:** [**ಯಕ್ಷಾಧಿಪ**] ಯಕ್ಷರ ಅಧಿಪತಿಯಾದ ವೈಶ್ರವಣ, ಕುಬೇರ. ಒಬ್ಬ ವಿದ್ಯಾಧರ ರಾಜ(ಪಉಮ). **ಜಕ್ಖಾಹಿವಇ. ಪು:** [**ಯಕ್ಷಾಧಿಪತಿ**] ಮೇಲಿನ ಅರ್ಥವನ್ನೇ ನೋಡುವುದು(ಪಾಅ)

ಜಕ್ಖರತ್ತಿ. ಸ್ತ್ರೀ: [**ದೇ. ಯಕ್ಷರಾತ್ರಿ**] ದೀಪಾವಳಿ, ಕಾರ್ತೀಕದ ಅಮಾವಾಸ್ಯೆಯ ಪರ್ವ

ಜಕ್ಖಾ. ಸ್ತ್ರೀ: [**ಯಕ್ಷಾ**] ಮಹರ್ಷಿ ಸ್ಥೂಲಭದ್ರನ ಸೋದರಿಯಾದ ಒಬ್ಬ ಜೈನ ಸಾಧ್ವಿ

ಜಕ್ಖಿಂದ. ಪು: [**ಯಕ್ಷೇಂದ್ರ**] ಯಕ್ಷರ ಅಧಿಪತಿ, ಯಕ್ಷರ ರಾಜ. ಭಗವಾನ್ ಅರನಾಥನ ಶಾಸನದ ಅಧಿಷ್ಠಾತೃ ದೇವ.

ಜಕ್ಖಿಣೀ. ಸ್ತ್ರೀ: [**ಯಕ್ಷಿಣೀ**] **'ಜಕ್ಖಾ'** ಶಬ್ದವನ್ನು ನೋಡುವುದು.

ಜಕ್ಖಿಣೀ. ಸ್ತ್ರೀ: [**ಯಕ್ಷಿಣೀ**] ಯಕ್ಷ ಯೋನಿಯಲ್ಲಿ ಹುಟ್ಟಿದ ಸ್ತ್ರೀ, ದೀವಿಯರ ಒಂದು ಜಾತಿ. ಭಗವಾನ್ ನೇಮಿನಾಥರ ಮೊದಲ ಶಿಷ್ಯೆ

ಜಕ್ಖೀ. ಸ್ತ್ರೀ: [**ಯಾಕ್ಷೀ**] ಒಂದು ಬಗೆಯ ಲಿಪಿ.

ಜಕ್ಖುತ್ತಮ. ಪು: [**ಯಕ್ಷೋತ್ತಮ**] ಯಕ್ಷ ದೇವರುಗಳ ಒಂದು ಉಪ ಜಾತಿ

ಜಕ್ಖೇಸ. ಪು: [**ಯಕ್ಷೇಶ**] ಯಕ್ಷರ ಅಧಿಪತಿ. ಭಗವಾನ್ ಅಭಿನಂದನನ ಶಾಸನ ಯಕ್ಷ.

ಜಗ. ನ: [**ಯಕೃತ್**] ಹೊಟ್ಟೆಯ ಬಲಭಾಗದಲ್ಲಿರುವ ಗ್ರಂಥಿ(ಪಣ್ಣ)

ಜಗ. ಪು: [**ದೇ**] ಜೀವ, ಪ್ರಾಣಿ(ಸೂಅ)

ಜಗ. ಪುಂನ: [**ಜಗತ್**] ಜೀವ, ಪ್ರಾಣಿ, ನ: ಜಗತ್ತು, ಪ್ರಪಂಚ. **–ಗುರು. ಪು:** [**–ಗುರು**] ಜಗತ್ತಿನ ಸರ್ವಶ್ರೇಷ್ಠ ವ್ಯಕ್ತಿ, ಜಗತ್ತಿನ ಪೂಜ್ಯ ವ್ಯಕ್ತಿ. ಜಿನದೇವ, ತೀರ್ಥಂಕರ. **–ಜೀವಣ. ವಿ:** [**–ಜೀವನ**] ಜಗತ್ತನ್ನು ಬದುಕಿಸುವವನು. **ಪು:** ಜಿನದೇವ. **–ಣಾಹ. ಪು:** [**–ನಾಥ**] ಜಗತ್ತಿನ ಪಾಲಕ, ರಕ್ಷಕ ಪರಮೇಶ್ವರ, ಜಿನ–ದೇವ(ಣಂದಿ). **–ಪಿಯಾಮಹ. ಪು:** [**–ಪಿತಾಮಹ**] ಬ್ರಹ್ಮ, ವಿಧಾತ, ಜಿನದೇವ. **–ಪ್ಪಗಾಸ. ವಿ:** [**–ಪ್ರಕಾಶ**] ಜಗತ್ತನ್ನು ಬೆಳಗುವವನು. ಜಗತ್ ಪ್ರಕಾಶಕ(ಪಉಮ), **–ಪ್ಪಹಾಣ. ನ:** [**–ಪ್ರಧಾನ**] ಜಗತ್ತಿನಲ್ಲಿ ಶ್ರೇಷ್ಠ

ಜಗಈ. ಸ್ತ್ರೀ: [**ಜಗತೀ**] ಪ್ರಾಕಾರ, ಕೋಟೆ, ಪೃಥ್ವಿ, ಭೂಮಿ(ಉತ್ತ) ಲೋಕ

ಜಗಈಪವ್ವಯ. ಪು: [**ಜಗತೀಪರ್ವತ**] ಒಂದು ಪರ್ವತ

ಜಗಜಗ. ಅಕ: [**ಚಕಾಸ**] ಹೊಳೆ, ಪ್ರಕಾಶಿಸು

ಜಗಡ. ಸಕ: [**ದೇ**] ಜಗಳಾಡು, ಕಲಹ ಮಾಡು.

ಜಗಡಣ. ವಿ: [**ದೇ**] ಜಗಳ ಮಾಡುವವನು, ಹಾಳು ಮಾಡುವವನು, ಕೆಡಿಸುವವನು

ಜಗಡಣ. ನ: [**ದೇ**] ಕೆಳಗಿನ ಶಬ್ದವನ್ನು ನೋಡುವುದು

ಜಗಡಣಾ. ಸ್ತ್ರೀ: [**ದೇ**] ಜಗಳ, ಕಲಹ. ಪೀಡಿಸುವುದು

ಜಗಡಿಅ. ವಿ: [**ದೇ**] ಪೀಡಿಸಲ್ಪಟ್ಟ, ಕರಗಿಸಲ್ಪಟ್ಟ

ಜಗಡಿಅ. ವಿ: [**ದೇ**] ಯುದ್ಧ ಮಾಡಿಸಲ್ಪಟ್ಟ

ಜಗರ. ಪು: [**ಜಗರ**] ಕವಚ

ಜಗಲ. ನ: [**ದೇ**] ಮದ್ಯದ ತಳಭಾಗ. ಕಬ್ಬಿನ ಮದಿರೆಯ ಕೆಳಗಡೆಯ ಭಾಗ

ಜಗಾರ. ಪು: [**ಜಕಾರ**] 'ಜ' ಅಕ್ಷರ, 'ಜ' ವರ್ಣ

ಜಗಾರ. ಪು: [**ಯತ್ಕಾರ**] **'ಯತ್'** ಶಬ್ದ,

ಜಗಾರೀ. ಸ್ತ್ರೀ: [**ಜಗಾರೀ**] ಒಂದು ಬಗೆಯ ಕ್ಷುದ್ರ ಅನ್ನ

ಜಗುತ್ತಮ. ವಿ: [**ಜಗದುತ್ತಮ**] ಜಗತ್ತಿನಲ್ಲಿ ಉತ್ತಮವಾದ, ಶ್ರೇಷ್ಠವಾದ(ಪಣ್ಣ)

ಜಗ್ಗ. ಅಕ: [**ಜಾಗೃ**] ನಿದ್ರೆಯಿಂದ ಏಳು, ಎಚ್ಚರಾಗು, ಜಾಗ್ರತವಾಗು

ಜಗ್ಗಣ. ನ: [**ಜಾಗರಣ**] ಏಳುವುದು, ನಿದ್ರೆಯಿಂದ ಏಳುವುದು(ಓಘ)

ಜಗ್ಗವಿಅ. ವಿ: [**ಜಾಗರಿತ**] ಎಚ್ಚರಿಸಲ್ಪಟ್ಟ, ನಿದ್ರೆಯಿಂದ ಎಬ್ಬಿಸಲ್ಪಟ್ಟ(ಸುಪಾ)

ಜಗ್ಗಾವಿಅ. 'ಜಗ್ಗವಿಅ' ಶಬ್ದವನ್ನು ನೋಡುವುದು.

ಜಗ್ಗಾಹ. 'ಜಗ್ಗಹ' ಶಬ್ದವನ್ನು ನೋಡುವುದು.

ಜಗ್ಗಿಅ. ವಿ: [**ಜಾಗೃತ**] ಎಚ್ಚರಗೊಂಡ, ನಿದ್ರೆ ತ್ಯಜಿಸಿದವನು(ಗಾ)

ಜಗ್ಗಿರ. ವಿ: [ಜಾಗರಿತೃ] ಎಚ್ಚರಗೊಂಡಿರುವ(ಸುಪಾ)
ಜಘಣ. ನ: [ಜಘನ] ಸೊಂಟದ ಕೆಳಗಿನ ಭಾಗ, ತೊಡೆಯ ಭಾಗ(ಔಪ)
ಜಚ್ಚ. ಪು: [ದೇ] ಪುರುಷ, ಗಂಡಸು
ಜಚ್ಚ. ವಿ: [ಜಾತ್ಯ] ಉತ್ತಮ ಜಾತಿಯವನು, ಕುಲೀನ, ಶ್ರೇಷ್ಠ, ಸುಂದರ(ಣಾಯಾ). ಸ್ವಾಭಾವಿಕ ಸಜಾತೀಯ, ಶುದ್ಧನಾದವ(ಜೀವ)
ಜಚ್ಚಂಜಣ. ನ: [ಜಾತ್ಯಾಂಜನ] ಶ್ರೇಷ್ಠ ಅಂಜನ, ಎಣ್ಣೆ ಮೊದಲಾದವುಗಳಿಂದ ಮರ್ದಿತವಾದ ಅಂಜನ.
ಜಚ್ಚಂದಣ. ನ: [ದೇ] ಧೂಪ ಹಾಕಲು ಬಳಸಲಾಗುವ ಸುಗಂಧ ದ್ರವ್ಯವಾದ ಅಗರು, ಕುಂಕುಮ, ಕೇಸರ
ಜಚ್ಚಂಧ. ವಿ: [ಜಾತ್ಯಂಧ] ಹುಟ್ಟಿನಿಂದ ಕುರುಡಾದವನು
ಜಚ್ಚಣ್ಣಿಯ}. ವಿ: [ಜಾತ್ಯನ್ವಿತ] ಒಳ್ಳೆಯ ಕುಲದಲ್ಲಿ
ಜಚ್ಚನ್ನಿಯ}. ಹುಟ್ಟಿದ, ಶ್ರೇಷ್ಠ ಜಾತಿಯವನು.
ಜಚ್ಚಾಸ. ಪು: [ಜಾತ್ಯಶ್ವ, ಜಾತ್ಯಾಶ್ವ] ಉತ್ತಮ ಜಾತಿಯ ಕುದುರೆ(ಪಉಮ)
ಜಚ್ಚಿಯ(ಅಪ). ವಿ: [ಜಾತೀಯ] ಸಮಾನ ಜಾತಿಯ
ಜಚ್ಚಿರ. ನ: [ಯಚ್ಚಿರ] ಎಲ್ಲಿಯ ತನಕ, ಎಲ್ಲಿಯವರೆಗೆ.
ಜಚ್ಛ. ಸಕ: [ಯಮ್] ವಿರಮಿಸು(ವುದು.), ವಿಶ್ರಮಿಸು, ಕೊಡು. ದಾನ ಮಾಡು
ಜಚ್ಛ. ಪು: [ಯಕ್ಷ್ಮನ್] ಕ್ಷಯರೋಗ
ಜಚ್ಛಂದ. ವಿ: [ದೇ] ಸ್ವಚ್ಛಂದ, ಸ್ವೈರ
ಜಜು. 'ಜಉ=ಯಜುಷ್' ಶಬ್ದವನ್ನು ನೋಡುವುದು.
ಜಜ್ಜ. ವಿ: [ಜಯ್ಯ] ಜಯಿಸಲು ಶಕ್ಯನಾದವನು
ಜಜ್ಜರ. ವಿ: [ಜರ್ಜರ] ಜೀರ್ಣವಾದ, ಪೊಳ್ಳು,
ಜಜ್ಜರ. ಸಕ: [ಜರ್ಜರಯ್] ಜೀರ್ಣ ಮಾಡು, ಪೊಳ್ಳು ಮಾಡು
ಜಜ್ಜರಿಯ. ವಿ: [ಜರ್ಜರಿತ] ಜೀರ್ಣವಾಗಿ ಮಾಡಲ್ಪಟ್ಟ, ಛಿದ್ರ ಮಾಡಲ್ಪಟ್ಟ, ಚೂರುಚೂರಾಗಿ ಮಾಡಲ್ಪಟ್ಟ
ಜಜ್ಜಿಗ. ಪು: [ಜಯ್ಯಿಕ] ಒಬ್ಬ ಜೈನಾಚಾರ್ಯನ ಹೆಸರು
ಜಜ್ಜೀಯ}. ನ: [ಯಾವಜ್ಜೀವ] ಜೀವನ ಪರ್ಯಂತ
ಜಜ್ಜೀವ}.
ಜಟ್ಟ. ವಿ: [ಇಷ್ಟ] ಯಜ್ಞ ಮಾಡಲ್ಪಟ್ಟ, ಯಾಗ ಮಾಡಲ್ಪಟ್ಟ, ನ: ಯಾಗ
ಜಟ್ಟ. ಪು: [ಜರ್ತ] ದೇಶವಿಶೇಷ, ಅದರ ನಿವಾಸಿ
ಜಟ್ಠಿ. ಸ್ತ್ರೀ: [ಯಷ್ಟಿ] ಕೋಲು, ಕಡ್ಡಿ
ಜಡ. ವಿ: [ಜಡ] ಅಚೇತನ, ಜೀವವಿಲ್ಲದ ಪದಾರ್ಥ, ಮೂರ್ಖ, ಸೋಮಾರಿ, ವಿವೇಕ ಹೀನ, ಶಿಶಿರ, ಚಳಿಯಿಂದ ತಣ್ಣಗಾಗಿ ನಡೆಯಲು ಅಶಕ್ತನಾದ
ಜಡ. 'ಜಢ' ಶಬ್ದವನ್ನು ನೋಡುವುದು(ಷಡ್)
ಜಡಹಾರಿ. 'ಜಡ-ಧಾರಿ' ಶಬ್ದವನ್ನು ನೋಡುವುದು.
ಜಡ.}. ಸ್ತ್ರೀ: [ಜಟಾ] ಒಂದಕ್ಕೊಂದು ಹೆಣೆದು
ಜಡಾ}. ಕೊಂಡಿರುವ, ಸೇರಿಕೊಂಡಿರುವ. ▯ಧರ. ವಿ: [-ಧರ] ಜಟೆಯನ್ನು ಧಾರಣ ಮಾಡುವವನು, ಸಂನ್ಯಾಸಿ, ತಪಸ. -ಧಾರಿ. ಪು: [-ಧಾರಿನ್] ಹಿಂದೆ ಹೇಳಿದ ಅರ್ಥವನ್ನು ನೋಡುವುದು.
ಜಡಾಉ}. ಪು: [ಜಟಾಯು] ಹದ್ದಿನ ಜಾತಿಗೆ ಸೇರಿದ
ಜಡಾಉಣ}. ರಾಮಾಯಣದ ಹೆಸರಾಂತ ಜಟಾಯು ಪಕ್ಷಿ.
ಜಡಾಗಿ. ಪು: [ಜಟಾಕಿನ್] ಮೇಲಿನ ಶಬ್ದವನ್ನು ನೋಡುವುದು.
ಜಡಾಲ. ವಿ: [ಜಟಾವತ್] ಜಟೆಯಿಂದ ಕೂಡಿದ. ಜಟಾಧಾರಿ.
ಜಡಾಸುರ. ಪು: [ಜಟಾಸುರ] ಒಬ್ಬ ಅಸುರ.
ಜಡಿ. ವಿ: [ಜಟಿನ್] ಜಟೆಯುಳ್ಳವನು, ಪು: ಜಟಾಧಾರಿ ತಪಸ(ಔಪ)
ಜಡಿಅ. ವಿ: [ಜಟಿತ] ಮುಚ್ಚಲ್ಪಟ್ಟಿರುವ
ಜಡಿಅ. ವಿ: [ದೇ. ಜಟಿತ] ಕೂಡಿಸಿದ, ಕೂಡಿ ಕೊಂಡಿರುವ, ಸೇರಿಕೊಂಡಿರುವ(=ಖಚಿತ) (ರತ್ನ)
ಜಡಿಮ. ಪುಂಸ್ತ್ರೀ: [ಜಡಿಮನ್] ಜಡತೆ, ಜಡತ್ವ, ದಡ್ಡತನ, ಸೋಮಾರಿತನ
ಜಡಿಯಾಇಲಗ}. ಪು: [ದೇ.ಜಟಿಕಾದಿಲಕ] ಗ್ರಹ-
ಜಡಿಯಾಇಲಯ}. ವಿಶೇಷ, ಗ್ರಹದ ಅಧಿಷ್ಠಾತೃ ದೇವ.
ಜಡಿಲ. ವಿ: [ಜಟಿಲ] ಜಟೆಯನ್ನು ಹೊಂದಿರುವ, ಜಟೆಯಿಂದ ಕೂಡಿದ, ವ್ಯಾಪಿಸಿದ, ಖಚಿತ, ಪು: ಸಿಂಹ, ಜಟಾದಾರಿ ತಪಸ್ವಿ(ಹೇ)
ಜಡಿಲಯ. ಪು: [ಜಟಿಲಕ] ರಾಹು ಗ್ರಹ
ಜಡಿಲಿಯ}. ವಿ: [ಜಟಿಲಿತ] ಜಟಿಲಗೊಳಿಸಲಾದ,
ಜಡಿಲಿಲ್ಲ}. ತೊಡಕುಗೊಳಿಸಲಾದ, ಜಟೆಯಿಂದ ಕೂಡಿದಂತೆ ಮಾಡಲಾದ.
ಜಡಿಲ್ಲ. ವಿ: [ಜಟಿನ್] ಜಟಾಧಾರಿ
ಜಡುಲ. 'ಜಡಿಲ' ಶಬ್ದವನ್ನು ನೋಡುವುದು.
ಜಡ್ಡ. ನ: [ಜಾಡ್ಯ] ಜಡತೆ, ಜಾಡ್ಯತ್ವ
ಜಡ್ಡ. 'ಜಡ' ಶಬ್ದವನ್ನು ನೋಡುವುದು.

ಜಡ್ಡ. ವಿ: [ದೇ] ಅಶಕ್ತ, ಅಸಮರ್ಥ
ಜಡ್ಡ. ಪು: [ದೇ] ಆನೆ(ಓಘ)
ಜಡ್ಡಾ. ಸ್ತ್ರೀ: [ದೇ] ಚಳಿಗಾಲ, ಶೀತ
ಜಢ. ವಿ: [ತ್ಯಕ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ, ವರ್ಜಿತ
ಜಢರ}. ನ: [ಜಠರ] ಹೊಟ್ಟೆ, ಉದರ
ಜಢಲ}.
ಜಣ. ಸಕ: [ಜನಯ್]ಉತ್ಪತ್ತಿಮಾಡು, ಹುಟ್ಟಿಸು, 'ಜಣಂತಿ'
ಜಣ. ಪು: [ಜನ] ಮನುಷ್ಯ, ಮಾನವ, ಜನರು(ಔಪ). ಗ್ರಾಮೀಣ ವ್ಯಕ್ತಿ, ಹಳ್ಳಿಯ ಮನುಷ್ಯ. ಸಮುದಾಯ, ಲೋಕ, ವಿ: ಉತ್ಪಾದಕ, ಹುಟ್ಟಿಸುವವನು(ವಿಸೇ). –ಜತ್ತಾ. ಸ್ತ್ರೀ: [–ಯಾತ್ರಾ] ಜನರ ಸಮಾಗಮ. –ಟ್ಠಾಣ. ನ: [–ಸ್ಥಾನ] ದಂಡಕಾರಣ್ಯ, ದಕ್ಷಿಣದ ಒಂದು ಕಾಡು, ನಾಸಿಕ ನಗರ. –ವಇ. ಪು: [–ಪತಿ] ಜನರ ಮುಖ್ಯಸ್ಥ (ಔಪ). –ವಯ. ಪು: [–ವ್ರಜ] ಮನುಷ್ಯ ಸಮೂಹ(ಪಉಮ), –ವಾಯ. ಪು: [–ವಾದ] ಜನರ ಕಿಂವದಂತಿ, ಜನರು ಆಡಿಕೊಳ್ಳುವ ಮಾತು(ಸುಪಾ), ಲೋಕಾಪವಾದ. –ಸ್ಸುಇ. ಸ್ತ್ರೀ: [–ಶ್ರುತಿ] ಕಿಂವದಂತಿ. ಜಣಾವವಾಯ. ಪು: [ಜನಾಪವಾದ] ಲೋಕನಿಂದೆ(ಗಾ)
ಜಣಇ. ಸ್ತ್ರೀ: [ಜನಿಕಾ] ಉತ್ಪತ್ತಿ ಮಾಡುವವಳು, ಜನ್ಮ ಕೊಡುವ ತಾಯಿ(ಕುಮಾ)
ಜಣಇಉ}. ಪು: [ಜನಯಿತೃ] ಜನಕ, ತಂದೆ,
ಜಣಇತ್ತು}. ವಿ: ಉತ್ಪಾದಕ
ಜಣಉತ್ತ. ಪು: [ದೇ] ಹಳ್ಳಿಯ ಮುಖ್ಯ ವ್ಯಕ್ತಿ, ಗ್ರಾಮದ ಮುಖಂಡ. ವಿಟ, ಪಾತ್ರೆ
ಜಣಂಗಮ. ಪು: [ಜನಂಗಮ] ಚಾಂಡಾಲ
ಜಣಗ. 'ಜಣಯ' ಶಬ್ದವನ್ನು ನೋಡುವುದು.
ಜಣಣ. ನ: [ಜನನ] ಜನ್ಮ ಕೊಡುವುದು, ಉತ್ಪತ್ತಿ ಮಾಡುವುದು, ಹುಟ್ಟಿಸುವುದು. ವಿ: ಉತ್ಪಾದಕ ತಂದೆ, ಜನಕ.
ಜಣಣಿ}. ಸ್ತ್ರೀ: [ಜನನಿ, –ನೀ] ತಾಯಿ, ಮಾತೆ,
ಜಣಣೀ}. ಉತ್ಪತ್ತಿ ಮಾಡುವವಳು
ಜಣದ್ದಣ. ಪು: [ಜನಾರ್ದನ] ಶ್ರೀಕೃಷ್ಣ, ವಿಷ್ಣು (ಉಪ)
ಜಣಪ್ಪವಾದ. ಪು: [ಜನಪ್ರವಾದ] ಲೋಕೋಕ್ತಿ, ಗಾದೆ

ಜಣಮೇಅಅ}. ಪು: [ಜನಮೇಜಯ] ಪ್ರಖ್ಯಾತನಾದ
ಜಣಮೇಜಯ}. ಪಾಂಡವ ವಂಶಜ ರಾಜ
ಜಣಯ. ವಿ: [ಜನಕ] ಉತ್ಪತ್ತಿ ಮಾಡುವವನು, ತಂದೆ, ಪಿತ, 'ಜಣ=ಜನ' ಶಬ್ದನ್ನು ನೋಡುವುದು. ಮಿಥಿಲೆಯ ರಾಜ, ಸೀತೆಯ ತಂದೆ. ಪುಂನ.ಬ: ತಂದೆ–ತಾಯಿ. □ತಣಆ. ಸ್ತ್ರೀ: [–ತನಯಾ] ಜನಕ ಮಹಾರಾಜನ ಮಗಳು, ಸೀತೆ. □ದುಹಿಯಾ, –ಧೂಆ(–ದುಹಿತೃ). ಅದೇ ಅರ್ಥ. –ನಂದಣ. ಪು: [–ನಂದನ] ಜನಕ ಮಹಾರಾಜನ ಮಗ, ಭಾಮಂಡಲ(ಪಉಮ). –ನಂದಣೀ. ಸ್ತ್ರೀ: [–ನಂದನೀ] ಸೀತೆ, ಜಾನಕಿ. □ಣಂದಿಣೀ. ಸ್ತ್ರೀ: [–ನಂದಿನೀ] ಅದೇ ಅರ್ಥ. –ನಿವತಣಯಾ. ಸ್ತ್ರೀ: [–ನೃಪತನಯಾ] ಅದೇ ಅರ್ಥ. –ಪುತ್ತೀ. ಸ್ತ್ರೀ: [–ಪುತ್ರೀ] ಅದೇ ಅರ್ಥ. –ಸುಅ. ಪು: [–ಸುತ] ಜನಕ ರಾಜನ ಮಗ ಭಾಮಂಡಲ(ಪಉಮ). ಸುಆ. ಸ್ತ್ರೀ: [–ಸುತಾ] ಜಾನಕಿ, ಸೀತೆ
ಜಣಯಂಗಯಾ. ಸ್ತ್ರೀ: [ಜನಕಾಂಗಜಾ] ಜಾನಕಿ, ಸೀತೆ
ಜಣವಯ. ಪು: [ಜನಪದ] ದೇಶ, ರಾಷ್ಟ್ರ, ಜನಸ್ಥಾನ(ಔಪ), ದೇಶದ ನಿವಾಸಿಗಳು, ಜನತೆ(ಪಣ್ಣ)
ಜಣಸ್ಸುಇ. ಸ್ತ್ರೀ: [ಜನಶ್ರುತಿ] ಕಿಂವದಂತಿ, ಜನರು ಆಡಿಕೊಳ್ಳುವ ಮಾತು
ಜಣಿ.(ಅಪ). ಅ: [ಇವ] ಅಂತೆ, ಹಾಗೆ, ಆ ರೀತಿ
ಜಣಿಅ. ವಿ: [ಜನಿತ] ಸೃಷ್ಟಿಸಲ್ಪಟ್ಟ, ಉತ್ಪಾದಿಸಲಾದ
ಜಣೀ. ಸ್ತ್ರೀ: [ಜನೀ] ಹೆಣ್ಣು, ನಾರಿ, ಮಹಿಳೆ(ಣಾಯಾ)
ಜಣು. 'ಜಣಿ' ಶಬ್ದವನ್ನು ನೋಡುವುದು.
ಜಣುಕ್ಕಲಿಆ. ಸ್ತ್ರೀ: [ಜನೋತ್ಕಲಿಕಾ] ಮನುಷ್ಯರ ಸಣ್ಣ ಗುಂಪು (ಭಗ)
ಜಣುಮ್ಮಿ. ಸ್ತ್ರೀ: [ಜನೋರ್ಮಿ] ಅಲೆಗಳ ಹಾಗಿರುವ ಮನುಷ್ಯರ ಗುಂಪು
ಜಣೇವಮಾಣ. 'ಜಣ=ಜನಂಯ್' ಶಬ್ದವನ್ನು ನೋಡುವುದು.
ಜಣೇರ.(ಅಪ). ವಿ: [ಜನಕ] ಉತ್ಪಾದಕ, ಹುಟ್ಟಿಸುವವನು, ಸೃಷ್ಟಿಸುವವನು, ಪು: ತಂದೆ (ಭವಿ)
ಜಣೇರಿ.(ಅಪ). ಸ್ತ್ರೀ: [ಜನನೀ] ತಾಯಿ, ಮಾತೆ
ಜಣ್ಣ. 'ಜನ್ನ=ಜನ್ಯ' ಶಬ್ದವನ್ನು ನೋಡುವುದು.

ಜಣ್ಣ. ಪು: [ಯಜ್ಞ] ಯಜ್ಞ, ಯಾಗ, ದೇವ–ಪೂಜೆ, ಶ್ರಾದ್ಧ, –ಇ, –ಜಾಇ. ವಿ: [–ಯಾಜಿನ್] ಯಜ್ಞ ಮಾಡುವವನು(ಔಪ). –ಇಜ್ಜ. ವಿ: [–ಜ್ಞೀಯ] ಯಜ್ಞ ಸಂಬಂಧವಾದ, ಯಜ್ಞ, ನ: ಉತ್ತರಾಧ್ಯಯನ–ಸೂತ್ರದ ಒಂದು ಪ್ರಕರಣ (ಉತ್ತ). –ಟ್ಠಾಣ. ನ: [–ಸ್ಥಾನ] ಯಜ್ಞದ ಸ್ಥಳ, ನಾಸಿಕ ನಗರ. –ಮುಹ.ನ: [–ಮುಖ] ಯಜ್ಞದ ಉಪಾಯ. –ವಾಡ. ಪು: [–ವಾಟ] ಯಜ್ಞಸ್ಥಾನ. –ಸೆಟ್ಠ. ಪು: [–ಶ್ರೇಷ್ಠ] ಶ್ರೇಷ್ಠ ಯಜ್ಞ, ಉತ್ತಮ ಯಾಗ.

ಜಣ್ಣಯ. 'ಜಣಯ' ಶಬ್ದನ್ನು ನೋಡುವುದು.

ಜಣ್ಣಯತ್ತಾ. ಸ್ತ್ರೀ: [ದೇ. ಯಜ್ಞಯಾತ್ರಾ] ವರನ ಮೆರವಣಿಗೆ, ಮದುವೆ ದಿಬ್ಬಣ(ಉಪ)

ಜಣ್ಣಸೇಣೀ. ಸ್ತ್ರೀ: [ಯಾಜ್ಞಸೇನೀ] ದ್ರೌಪದಿ, ದ್ರುಪದನ ಮಗಳು

ಜಣ್ಣಹರ. ಪು: [ದೇ] ನರ–ರಾಕ್ಷಸ, ದುಷ್ಟ ಮನುಷ್ಯ (ಷಡ್)

ಜಣ್ಹುಕನ್ನಾ. ಸ್ತ್ರೀ: [ಜಹ್ನುಕನ್ಯಾ] ಗಂಗಾನದಿ

ಜಣ್ಣಿಯ. ಪು: [ಯಾಜ್ಞಿಕ] ಯಾಜಕ, ಯಜ್ಞವನ್ನು ಮಾಡುವವನು(ಆವಮ)

ಜಣ್ಣೋವಈಯ}. ನ: [ಯಜ್ಞೋಪವೀತ] ಯಜ್ಞ–
ಜಣ್ಣೋವವೀಯ}. ಸೂತ್ರ, ಜನಿವಾರ (ಉತ್ತ)

ಜಣ್ಣೋಹಣ. ಪು: [ದೇ] ರಾಕ್ಷಸ, ಪಿಶಾಚ

ಜಣ್ಹ. ನ: [ದೇ] ಸಣ್ಣ ಅಡುಗೆ ಪಾತ್ರೆ, ವಿ: ಕಪ್ಪು ಬಣ್ಣದ

ಜಣ್ಹಈ. ಸ್ತ್ರೀ :[ಜಾಹ್ನವಿ]ಗಂಗಾನದಿ, ಭಾಗೀರಥಿ(ಅಚ್ಚು)

ಜಣ್ಹಲೀ. ಸ್ತ್ರೀ: [ದೇ] ಹೆಂಗಸರು ಸೊಂಟದಲ್ಲಿ ಕಟ್ಟಿಕೊಳ್ಳುವ ಸೀರೆ ಗಂಟು, ಲಾಡಿ

ಜಣ್ಹವೀ. ಸ್ತ್ರೀ: [ಜಾಹ್ನವೀ] ಸಗರ ಚಕ್ರವರ್ತಿಯ ಒಬ್ಬ ಹೆಂಡತಿ, ಭಗೀರಥನ ತಾಯಿ(ಪಉಮ), ಗಂಗಾ ನದಿ(ಪಉಮ)

ಜಣ್ಹು. ಪು: [ಜಹ್ನು] ಭರತ ವಂಶದ ಒಬ್ಬ ರಾಜ, –ಸುಆ. ಸ್ತ್ರೀ: [–ಸುತಾ] ಗಂಗಾನದಿ(ಪಾಅ)

ಜಣ್ಹುಆ. ಸ್ತ್ರೀ: [ದೇ] ಮೊಳಕಾಲು

ಜತ್ತ. 'ಜಯ=ಯತ್' ಶಬ್ದವನ್ನು ನೋಡುವುದು.

ಜತ್ತ. ಪು: [ಯತ್ನ] ಪ್ರಯತ್ನ, ಉದ್ಯೋಗ(ಉಪ)

ಜತ್ತಾ. ಸ್ತ್ರೀ: [ಯಾತ್ರಾ] ದೇಶಾಟನೆ, ತಿರುಗಾಟ, ಚಲನೆ, ದೇವಪೂಜೆಯ ನಿಮಿತ್ತವಾಗಿ ಮಾಡಲಾಗುವ ಅಷ್ಟಾಹ್ನಿಕ, ರಥಯಾತ್ರೆ ಮೊದಲಾದ ಉತ್ಸವಗಳು. ತೀರ್ಥಯಾತ್ರೆ, ಶುಭ ಪ್ರವೃತ್ತಿ

ಜತ್ತಾ. ಸ್ತ್ರೀ: [ಯಾತ್ರಾ] ಸಂಯಮದ ನಿರ್ವಹಣೆ

ಜತ್ತಿ. ಸ್ತ್ರೀ: [ದೇ] ಚಿಂತೆ, ಸೇವೆ, ಶುಶ್ರೂಷೆ.

ಜತ್ತಿಅ. '–ಯತ್ತಿಅ' ಶಬ್ದವನ್ನು ನೋಡುವುದು.

ಜತ್ತಿಯ. ವಿ: [ಯಾವತ್] ಎಷ್ಟು ಅಳತೆ, ಎಷ್ಟು ಪ್ರಮಾಣ

ಜತ್ತೋ. 'ಜಟ' ಶಬ್ದವನ್ನು ನೋಡುವುದು.

ಜತ್ಥ. ಅ: [ಯತ್ರ] ಎಲ್ಲಿ, ಯಾವುದರಲ್ಲಿ

ಜದಿ. 'ಜಇ=ಯದಿ' ಶಬ್ದವನ್ನು ನೋಡುವುದು.

ಜದಿಚ್ಛಾ. 'ಜಇಚ್ಛಾ' ಶಬ್ದವನ್ನು ನೋಡುವುದು.

ಜದು. 'ಜಉ=ಯದು' ಶಬ್ದವನ್ನು ನೋಡುವುದು.

ಜದ್ದರ. ಪುಂನ: [ದೇ] ವಸ್ತ್ರ–ವಿಶೇಷ.

ಜಧಾ. 'ಜಹಾ' ಶಬ್ದವನ್ನು ನೋಡುವುದು.

ಜನ್ನ. ವಿ: [ಜನ್ಯ] ಜನ–ಹಿತ, ಲೋಕಕ್ಕೆ ಹಿತಕಾರಿಯಾದ, ಹುಟ್ಟುವ, ಹುಟ್ಟಲು ಅರ್ಹವಾದ

ಜನ್ನ. 'ಜಣ್ಣ' ಶಬ್ದವನ್ನು ನೋಡುವುದು.

ಜನ್ನತ್ತಾ.}. ಸ್ತ್ರೀ: [ದೇ] ಮದುವೆ ದಿಬ್ಬಣ, ವರನ
ಜನ್ನಾ}. ಮೆರವಣಿಗೆ

ಜನ್ನಸೇಣೀ. 'ಜಣ್ಣಸೇಣೀ' ಶಬ್ದವನ್ನು ನೋಡುವುದು.

ಜನ್ನು. 'ಜಾಣು' ಶಬ್ದವನ್ನು ನೋಡುವುದು.

ಜನ್ನೋವಇಯ. 'ಜಣ್ಣೋವಈಯ' ಶಬ್ದವನ್ನು ನೋಡುವುದು(ಣಾಯಾ)

ಜನ್ನವೀ 'ಜಣ್ಹವೀ' ಶಬ್ದವನ್ನು ನೋಡುವುದು.

ಜಪ. 'ಜವ=ಜಪ್' ಶಬ್ದವನ್ನು ನೋಡುವುದು.

ಜಪಿರ. ವಿ: [ಜಪಿತೃ] ಜಪ ಮಾಡುವವನು

ಜಪ್ಪ. 'ಜಂಪ' ಶಬ್ದವನ್ನು ನೋಡುವುದು.

ಜಪ್ಪ. ಪು: [ಜಲ್ಪ] ಉಕ್ತಿ, ಕಥನ, ಮಾತು, ಹೇಳುವುದು, ಮೋಸದ ಕುರಿತು ನಿಂದಾರೂಪದ ಮಾತು

ಜಪ್ಪ. ವಿ: [ಯಾಪ್ಯ] ಹೋಗಲು ಯೋಗ್ಯವಾದ್ದು. –ಜಾಣ. ನ: [–ಯಾನ] ಪಲ್ಲಕ್ಕಿ

ಜಪ್ಪಭಿಇ}. ಅ: [ಯತ್‌ಪ್ರಭೃತಿ] ಯಾವಾಗಿನಿಂದ,
ಜಪ್ಪಭಿಇಂ}. ಎಲ್ಲಿಂದ ತೊಡಗಿ(ಕಪ್ಪ)

ಜಪ್ಪಿಅ. ವಿ: [ಜಲ್ಪಿತ] ಉಕ್ತಿ, ಕಥನ, ನ: ಮಾತು

ಜಮ. ಸಕ: [ಯಮಯ್] ವಶದಲ್ಲಿಟ್ಟುಕೊಳ್ಳು, ಹತೋಟಿಯಲ್ಲಿಡು(ವುದು ನಿಯಂತ್ರಣ ದಲ್ಲಿಟ್ಟುಕೊಳ್ಳು, ಸ್ಥಿರಪಡಿಸು

ಜಮ. ಪು: [ಯಮ] ಅಹಿಂಸೆಯೇ ಮೊದಲಾದ ಐದು ಮಹಾವ್ರತಗಳು, ದಕ್ಷಿಣ ದಿಕ್ಕಿನ ಒಬ್ಬ ದಿಕ್ ಪಾಲಕನಾದ ಯಮರಾಜ(ಪಣ್ಣ), ಭರಣಿ ನಕ್ಷತ್ರದ ಅಧಿಪತಿ–ದೇವ. ಕಿಷ್ಕಿಂಧಾ ನಗರದ ಒಬ್ಬ ರಾಜ. ಒಬ್ಬ ತಾಪಸ, ಮೃತ್ಯು, ಸಂಯಮ, ಹತೋಟಿ(ಆವಮ)–**ಕಾಇಯ.** ಪು: [–ಕಾಯಿಕ] ನರಕದ ಜೀವಿಗಳಿಗೆ ದುಃಖವನ್ನುಂಟುಮಾಡುವ ಮಹಾನ್ ಅಧಾರ್ಮಿಕ ಅಸುರ. **–ಘೋಸ.** ಪು: [–ಘೋಷ] ಐರಾವತ ವರ್ಷದ ಒಬ್ಬ ಭಾವಿ ಜಿನದೇವ.–**ಪುರೀ.** ಸ್ತ್ರೀ:[–ಪುರೀ] ಯಮಲೋಕ.–**ಪ್ಪಭ.** ಪು: [–ಪ್ರಭ] ಯಮರಾಜನ ಉತ್ಪಾತ ಪರ್ವತ. –**ಭಡ.** ಪು: [–ಭಟ] ಯಮರಾಜನ ಯೋಧ. **–ಮಂದಿರ.** ನ: [–ಮಂದಿರ] ಯಮನ ಮನೆ, ಮೃತ್ಯು ಸ್ಥಾನ. **ಜಮಾಲಯ.** ನ: [ಯಮಾಲಯ] ಅದೇ ಅರ್ಥ(ಪಉಮ)

ಜಮಗ. ಪು: [ಯಮಕ] ಒಂದು ಪಕ್ಷಿ, ದೇವ–ವಿಶೇಷ. ಒಂದು ಪರ್ವತ, ಒಂದು ಸರೋವರ **'ಜಮಯ'** ಶಬ್ದವನ್ನು ನೋಡುವುದು.

ಜಮಗಂ}. ಅ: [ದೇ] ಒಟ್ಟೊಟ್ಟಿಗೆ, ಏಕ ಕಾಲದಲ್ಲಿ

ಜಮಗಸಮಗಂ}.

ಜಮಣಿಯಾ. ಸ್ತ್ರೀ: [ಜಮನಿಕಾ] ಜೈನ ಸಾಧುವಿನ ಉಪಕರಣ

ಜಮದಗ್ಗಿ. ಪು: [ಜಮದಗ್ನಿ] ಪರಶುರಾಮನ ತಂದೆಯಾದ ಜಮದಗ್ನಿ ಋಷಿ

ಜಮದಗ್ಗಿಜಡಾ. ಸ್ತ್ರೀ: [ಯಮದಗ್ನಿಜಟಾ] ಗಂಧದ್ರವ್ಯ–ವಿಶೇಷ, ಸುವಾಸನೆಯಿಂದ ಕೂಡಿದ

ಜಮಯ. **'ಜಮಗ'** ಶಬ್ದವನ್ನು ನೋಡುವುದು. ನ: ಅಲಂಕಾರಶಾಸ್ತ್ರದಲ್ಲಿ ಪ್ರಸಿದ್ಧವಾದ ಅನುಪ್ರಾಸಾಲಂಕಾರ. ಒಂದು ಛಂದಸ್ಸು.

ಜಮಲ. ನ: [ಯಮಲ] ಜೋಡಿ, ಜೊತೆ, ಅವಳಿ, ಯುಗ್ಮ, ಸಮಾನ ಶ್ರೇಣಿಯಲ್ಲಿರುವ, ಸದೃಶ ಪಂಕ್ತಿ ಉಳ್ಳ, ಸಹವರ್ತಿ, ಸಮಾನ, ಸದೃಶ, **–ಜ್ಜುಣಭಂಜಗ.**ಪು: [–ಯಮಲಾರ್ಜುನಭಂಜಕ] ಶ್ರೀಕೃಷ್ಣ ವಾಸುದೇವ. **–ಪದ, –ಪಯ.** ನ:[–ಪದ] ಒಂದು ಬಗೆಯ ಪ್ರಾಯಶ್ಚಿತ್ತ, ಎಂಟು ಅಂಕಿಗಳ ಸಂಖ್ಯೆ. **–ಪಾಣಿ.** ಪು: [–ಪಾಣಿ] ಮುಷ್ಟಿ

ಜಮಲಿಯ. ವಿ: [ಯಮಲಿತ] ಜೋಡಿ ಅಥವಾ ಜೊತೆಯಾಗಿ ಸ್ಥಿತವಾಗಿರುವ, ಸಮ–ಶ್ರೇಣಿಯ ರೂಪದಲ್ಲಿ ಇರುವ(ಣಾಯಾ)

ಜಮಲೋಇಯ. ವಿ: [ಯಮಲೌಕಿಕ] ಯಮಲೋಕಕ್ಕೆ ಸಂಬಂಧಿಸಿದ, ಪರಮ ಅಧಾರ್ಮಿಕ ದೇವ, ಅಸುರರ ಒಂದು ಜಾತಿ

ಜಮಾ. ಸ್ತ್ರೀ: [ಯಮೀ] ದಕ್ಷಿಣ ದಿಕ್ಕು

ಜಮಾಲಿ. ಪು: [ಜಮಾಲಿ] ಖ್ಯಾತನಾದ ಒಬ್ಬ ರಾಜಕುಮಾರ. ಭಗವಾನ್ ಮಹಾವೀರರಿಂದ ದೀಕ್ಷೆ ತೆಗೆದುಕೊಂಡ ಮತ್ತು ಅನಂತರದಲ್ಲಿ ತನ್ನದೇ ಬೇರೆಯಾದ ಪಂಥವನ್ನು ಪ್ರಾರಂಭಿಸಿದ ಮಹಾವೀರರ ಅಳಿಯ(ಣಾಯಾ)

ಜಮಾವಣ. ನ: [ಯಮನ] ನಿಯಂತ್ರಿಸುವುದು, ತಡೆಯುವುದು. ವಿಷಮ ವಸ್ತುವನ್ನು ಸಮವಾಗಿಸುವುದು

ಜಮಿಯ. ವಿ: [ಯಮಿತ] ನಿಯಂತ್ರಿಸಲ್ಪಟ್ಟ, ಹತೋಟಿಗೆ ತರಲಾದ ಸಂಯಮಕ್ಕೊಳಪಡಿಸಲಾದ(ಸುಪಾ)

ಜಮುಣಾ. **'ಜಂಉಣಾ'** ಶಬ್ದವನ್ನು ನೋಡುವುದು.

ಜಮೂ. ಸ್ತ್ರೀ: [ಜಮೂ] ಈಶಾನೇಂದ್ರನ ಒಬ್ಬ ಅಗ್ರ–ಮಹಿಷಿಯ ಹೆಸರು

ಜಮ್ಮ. ಅಕ: [ಜನ್] ಹುಟ್ಟು, ಉತ್ಪನ್ನವಾಗು.**'ಜಮ್ಮ ಇ'**

ಜಮ್ಮ. ಸಕ: [ಜಮ್] ತಿನ್ನು, ಭಕ್ಷಿಸು

ಜಮ್ಮ}. ಪುಂನ: [ಜನ್ಮನ್] ಜನ್ಮ, ಹುಟ್ಟು, ಉತ್ಪತ್ತಿ(ಠಾ)

ಜಮ್ಮಣ}.

ಜಮ್ಮಾ. ಸ್ತ್ರೀ: [ಯಾಮ್ಯಾ] ದಕ್ಷಿಣ ದಿಕ್ಕು

ಜಮ್ಹಾಅ}.**'ಜಂಭಾಅ'** ಶಬ್ದವನ್ನು ನೋಡುವುದು.

ಜಮ್ಹಾಹ}.

ಜಮ್ಹಾಹಾ}.

ಜಯ. ಸಕ: [ಜಿ] ಗೆಲ್ಲು, ಜಯಿಸು, ಉತ್ಕೃಷ್ಟವಾಗಿ ವರ್ತಿಸು

ಜಯ. ಸಕ: [ಯಜ್] ಪೂಜಿಸು,ಯಜ್ಞಮಾಡು(ಉತ್ತ). ವ. ಕೃ–**'ಜಯಂತ, 'ಜಯಮಾಣ'**

ಜಯ. ಅಕ: [ಯತ್] ಯತ್ನಿಸು, ಪ್ರಯತ್ನಿಸು

ಜಯ. ಪು: [ಯತ] ಪ್ರಯತ್ನ

ಜಯ. ನ: [ಜಗತ್] ಜಗತ್ತು, ಪ್ರಪಂಚ, ಲೋಕ. **–ತ್ತಯ.** ನ: [–ತ್ರಯ] ಸ್ವರ್ಗ, ಮರ್ತ್ಯ, ಮತ್ತು ಪಾತಾಳಗಳೆಂಬ ಮೂರು ಲೋಕಗಳು. **–ನಾಹ.**

ಪು: [–ನಾಥ] ಪರಮಾತ್ಮ, ಪರಮೇಶ್ವರ. **–ಪಹು. ಪು:** [**–ಪ್ರಭು**] ಪರಮೇಶ್ವರ. **ಜಯಾಣಂದ.** ವಿ: [ಜಯಾನಂದ] ಜಗತ್ತಿಗೆ ಆನಂದವನ್ನು ನೀಡುವವನು(ಪಉಮ)

ಜಯ. ವಿ: [**ಯತ**] ಸಂಯಮಿ, ಜಿತೇಂದ್ರಿಯ. ಗಮನ ವಹಿಸುವವನು, ಲಕ್ಷ್ಯ ವಹಿಸುವವನು (ಉತ್ತ). ನ: ಆರನೆಯ ಗುಣಸ್ಥಾನದವನು. ಲಕ್ಷ್ಯ, ಉಪಯೋಗ, ಎಚ್ಚರಿಕೆ(ಣಾಯಾ)

ಜಯ. ಪು: [ಜವ] ವೇಗ, ಶೀಘ್ರ, ಬೇಗನೆ,

ಜಯ. ಪು: [**ಜಯ**] ಗೆಲುವು, ಶತ್ರುವಿನ ಸೋಲು. ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಚಕ್ರವರ್ತಿ, **–ಉರ. ನ:** [**–ಪುರ**] ಒಂದು ನಗರ. **□ಕಮ್ಮಾ. ಸ್ತ್ರೀ:** [**–ಕರ್ಮಾ**] ಒಂದು ವಿದ್ಯಾ–ವಿಶೇಷ. □ **ಘೋಸ. ಪು:** [**–ಘೋಷ**] ಜಯಧ್ವನಿ. **□ಚಂದ. ಪು:** [**–ಚಂದ್ರ**] ವಿಕ್ರಮ ಶಕೆಯ ೧೨ನೇ ಶತಮಾನದಲ್ಲಿದ್ದ ಕನ್ನೌಜಿನ ಕೊನೆಯ ದೊರೆ. ೧೨ನೇ ಶತಮಾನದ ಒಬ್ಬ ಜೈನ ಆಚಾರ್ಯ. **□ಜತ್ತಾ. ಸ್ತ್ರೀ:** [**–ಯಾತ್ರಾ**] ಶತ್ರುವಿನ ಮೇಲೆ ದಂಡೆತ್ತಿ ಹೋಗುವುದು. **–ಪಡಾಯಾ. ಸ್ತ್ರೀ:** [–**ಪತಾಕಾ**] ವಿಜಯದ ಧ್ವಜ. **–ಪುರ. 'ಉರ'** ಶಬ್ದವನ್ನು ನೋಡುವುದು. **–ಮಂಗಲಾ. ಸ್ತ್ರೀ:** [**–ಮಂಗಲಾ**] ಒಬ್ಬ ರಾಜಕುಮಾರಿ. **–ಲಚ್ಛೀ. ಸ್ತ್ರೀ:** [**–ಲಕ್ಷ್ಮೀ**] ಜಯಲಕ್ಷ್ಮೀ. **–ವಂತ. ವಿ:** [–**ವತ್**] ಜಯವನ್ನು ಪಡೆದವನು, ವಿಜಯಿ. **–ವಲ್ಲಹ. ಪು:** [**–ವಲ್ಲಭ**] ಒಬ್ಬ ರಾಜ, **–ಸಂಧ. ಪು:** [**ಸಂಧ**] ಪುಂಡರೀಕನೆಂಬ ದೊರೆಯ ಒಬ್ಬ ಮಂತ್ರಿ. **–ಸಂಧಿ. ಪು:** [**–ಸಂಧಿ**] ಅದೇ ಹಿಂದೆ ಹೇಳಿದ ಅರ್ಥ. **–ಸದ್ದ. ಪು:** [**–ಶಬ್ದ**] ವಿಜಯವನ್ನು ಸೂಚಿಸುವ ದನಿ(ಔಪ). **–ಸಿಂಹ. ಪು:** [**–ಸಿಂಹ**] ಸಿಂಹಳ ದ್ವೀಪದ ದೊರೆ. ಸಿದ್ಧರಾಜ ಎಂಬ ಇನ್ನೊಂದು ಹೆಸರನ್ನು ಹೊಂದಿದ್ದ ಸಿಂಹಳ ದ್ವೀಪದ ವಿ. ಸಂ. ೧೨ನೇ ಶತಮಾನದ ರಾಜ. ಹೆಸರಾಂತ ಜೈನಾಚಾರ್ಯ. **–ಸಿರೀ. ಸ್ತ್ರೀ:** [**–ಶ್ರೀ**] ವಿಜಯ ಲಕ್ಷ್ಮೀ(ಆವಮ). **–ಸೇಣ. ಪು:** [**–ಸೇನ**] ಖ್ಯಾತನಾದ ಒಬ್ಬ ಅರಸು **ಜಯಾವಹ. ವಿ:** [**ಜಯಾವಹ**] ಜಯವನ್ನು ಹೊರುವವನು (ಪಉಮ).ಒಂದು ವಿದ್ಯಾಧರ ನಗರ. **ಜಯಾವಹಪುರ. ನ:** [**ಜಯಾವಹಪುರ**] ಒಂದು ವಿದ್ಯಾಧರ ನಗರ.**ಜಯಾವಾಸ. ನ:** [**ಜಯಾವಾಸ**] ವಿದ್ಯಾಧರರ ಒಂದು ವಿಖ್ಯಾತ ನಗರ.

ಜಯ. ಪು: [**ಯತ**] ಪ್ರಯತ್ನ

ಜಯ. ಪುಂಸ್ತ್ರೀ: [**ಜಯಾ**] ತಿಥಿ– ವಿಶೇಷ– ತದಿಗೆ, ಅಷ್ಟಮಿ ಮತ್ತು ತ್ರಯೋದಶಿ ತಿಥಿ

ಜಯ–. 'ಜಯಾ=ಯದಾ' ಶಬ್ದವನ್ನು ನೋಡುವುದು. **–ಪ್ಪಭಿಇ. ಅ:** [**–ಪ್ರಭೃತಿ**]ಯಾವಾಗಿನಿಂದ, ಯಾವ ಕಾಲದಿಂದ

ಜಯಂತ. ಪು: [**ಜಯಂತ**] ಇಂದ್ರನ ಮಗ, ಒಬ್ಬ ಭಾವಿ ಬಲದೇವ. ವಜ್ರಸೇನ ಮುನಿಯ ಮೂರನೇ ಶಿಷ್ಯನಾದ ಒಬ್ಬ ಜೈನ ಮುನಿ. ಈ ಹೆಸರಿನ ದೇವ–ವಿಮಾನದಲ್ಲಿ ವಾಸಿಸುವ ಒಂದು ಉತ್ತಮ ದೇವ–ಜಾತಿ. ಜಂಬೂ ದ್ವೀಪದ ಜಗತ್ತಿನ ಪಶ್ಚಿಮ ದಿಕ್ಕಿನ ಒಬ್ಬ ಅಧಿಷ್ಠಾತೃ–ದೇವ. ಒಂದು ದೇವ–ವಿಮಾನ. ಜಂಬೂ ದ್ವೀಪದ ಜಗತ್ತಿನ ಪಶ್ಚಿಮ ದಿಕ್ಕಿನ ದ್ವಾರ. ರುಚಕ ಪರ್ವತದ ಒಂದು ಶಿಖರ.

ಜಯಂತೀ. ಸ್ತ್ರೀ: [**ಜಯಂತೀ**] ಪಕ್ಷದ ಒಂಬತ್ತನೇ ರಾತ್ರಿ, ಭಗವನ್ ಅರನಾಥನ ದೀಕ್ಷಾ ಶಿಬಿಕೆ

ಜಯಂತೀ. ಸ್ತ್ರೀ: [**ಜಯಂತೀ**] ತಕ್ಕಿಲೆ ಗಿಡದ ಬಳ್ಳಿ, ಏಳನೇ ಬಲದೇವನ ತಾಯಿ, ವಿದೇಹ–ವರ್ಷದ ಒಂದು ನಗರಿ(ಠಾ), ಅಂಗಾರಕ ಗ್ರಹದ ಒಬ್ಬ ಅಗ್ರ ಮಹಿಷಿ. ಜಂಬೂ ದ್ವೀಪದ ಮೇರುವಿನಿಂದ ಪಶ್ಚಿಮದಲ್ಲಿರುವ ರುಚಕ–ಪರ್ವತದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ. ಭಗವಾನ್ ಮಹಾವೀರರ ಒಬ್ಬ ಉಪಾಸಕಿ. ಭಗವಾನ್ ಮಹಾವೀರರ ಎಂಟನೇ ಗಣಧರನ ತಾಯಿ. ಅಂಜನಕ ಪರ್ವತದ ಒಂದು ಬಾವಿ. ನವಮಿ–ತಿಥಿ. ೯೦ ಜೈನ ಮುನಿಗಳ ಒಂದು ಶಾಖೆ(ಕಪ್ಪ)

ಜಯಣ. ನ: [**ಯಜನ**] ಯಾಗ, ಪೂಜೆ, ಅಭಯದಾನ (ಪಣ್ಣ)

ಜಯಣ. ನ: [**ಯತನ**] ಯತ್ನ, ಪ್ರಯತ್ನ, ಪ್ರಾಣಿಯ ರಕ್ಷಣೆ

ಜಯಣ. ವಿ: [ಜವನ] ವೇಗವುಳ್ಳ, ವೇಗದಿಂದ ಕೂಡಿದ(ಕಪ್ಪ)

ಜಯಣ. ನ: [ಜಯನ] ಜಯ, ವಿಜಯ, ಗೆಲುವು, ವಿ: ಗೆಲ್ಲುವವನು

ಜಯಣ. ನ: [ದೇ] ಕುದುರೆಯ ಕವಚ

ಜಯಣಾ. ಸ್ತ್ರೀ: [ಯತನಾ] ಪ್ರಯತ್ನ, ಪ್ರಾಣಿಯ ರಕ್ಷಣೆ, ಹಿಂಸೆ ತ್ಯಜಿಸುವುದು, ಯಾವ ಜೀವಿಗೂ ದುಃಖವಾಗದಿರಲೆಂದು ಮಾಡುವ ಯತ್ನ (ನಿಚೂ)

ಜಯದ್ದಹ. ಪು: [ಜಯದ್ರಥ] ಸಿಂಧು ದೇಶದ ಪ್ರಸಿದ್ಧನಾದ ಹಾಗೂ ದುರ್ಯೋಧನನ ಭಾವ ಮೈದುನನೂ ಆದ ಒಬ್ಬ ರಾಜ(ಣಾಯಾ)

ಜಯಾ. ಅ: [ಯದಾ] ಯಾವಾಗ, ಯಾವ ಹೊತ್ತು (ಕಪ್ಪ)

ಜಯಾ. ಸ್ತ್ರೀ: [ಜಯಾ] ಒಂದು ಬಗೆಯ ವಿದ್ಯೆ, ನಾಲ್ಕನೇ ಚಕ್ರವರ್ತಿ ರಾಜನ ಅಗ್ರ ಮಹಿಷಿ. ಭಗವಾನ್ ವಾಸು ಪೂಜ್ಯರ ಹೆಸರಾಂತ ತಾಯಿ, ತೃತೀಯಾ, ಅಷ್ಟಮಿ, ಮತ್ತು ತ್ರಯೋದಶಿ ತಿಥಿಗಳು. ಭಗವಾನ್ ಪಾರ್ಶ್ವನಾಥನ ಶಾಸನ–ದೇವಿ, ತಕ್ಕಿಲೆ ಗಿಡ

ಜಯಾರ. ಪು: [ಜಕಾರ] 'ಜ' ಅಕ್ಷರ, 'ಜ' ಕಾರದಿಂದ ಪ್ರಾರಭವಾಗುವ ಅಶ್ಲೀಲ ಶಬ್ದ

ಜಯಿಣ. 'ಜಇಣ' ಶಬ್ದವನ್ನು ನೋಡುವುದು.

ಜರ. ಅಕ: [ಜೃ] ಜೀರ್ಣವಾಗು, ಹಳತಾಗು, ಮುದಿಯಾಗು

ಜರ. ಪು: [ಜ್ವರ] ಜ್ವರ, ಕಾಯಿಲೆ

ಜರ. ಪು: [ಜರ] ರಾವಣನ ಒಬ್ಬ ಯೋಧ(ಪಉಮ), ಜೀರ್ಣವಾದ, ಹಳತಾದ

ಜರ. ವಿ: [ಜರತ್] ಜೀರ್ಣ, ಹಳತು, ಮುದಿ(ಕುಮಾ). ಸ್ತ್ರೀ: –ಈ. ▯ಗ್ಗವ. ಪು: [–ಗವ] ಮುದಿ ಎತ್ತು, –ಗ್ಗವೀ. ಸ್ತ್ರೀ: [–ಗವೀ] ಮುದಿ ಹಸು(ಗಾ). ▯ ಗ್ಗು. ಪು: [–ಗು] ಮುದಿ ಎತ್ತು, ಸ್ತ್ರೀ: ಮುದಿ ಹಸು

ಜರ–. 'ಜರ' ಶಬ್ದವನ್ನು ನೋಡುವುದು.

ಜರಂಡ. ವಿ: [ದೇ] ವೃದ್ಧ, ಮುದುಕ

ಝುಡಿಅ. ವಿ: [ದೇ] ಶಿಥಿಲ, ಸಡಿಲ, ಆಲಸಿ, ಮಂದ, ಆಯಾಸಗೊಂಡ, ಉದುರಿದ, ಕೆಳಗೆ ಬಿದ್ದ
ಝುಡಿತ್ತಿ. **'ಝುಡತ್ತಿ'** ಶಬ್ದವನ್ನು ನೋಡುವುದು.
ಝುಡಿಲ. **'ಜಡಿಲ'** ಶಬ್ದವನ್ನು ನೋಡುವುದು.
ಝುಡೀ. ಸ್ತ್ರೀ: [ದೇ] ಬಿಡದೆ ಒಂದೇ ಸಮನೆ ಮಳೆ ಸುರಿಯುವುದು, ಜಡಿಮಳೆ
ಝುಣ.. **ಸಕ:** [ಜುಗುಪ್ಸ್] ಅಸಹ್ಯ ಪಡು, ತಿರಸ್ಕರಿಸು
ಝುಣಜ್ಝುಣ. **ಅಕ:** [ಝುಣಝುಣಾಯ್] **'ಝುಣ ಝುಣ'** ಎಂದು ಶಬ್ದ ಮಾಡು
ಝುಣಝುಣೆಯು. **'ಝುಣಜ್ಝುಣ'** ಶಬ್ದವನ್ನು ನೋಡುವುದು.
ಝುಣಝುಣಾರವ. ಪು: [ಝುಣಝುಣಾರವ] **'ಝುಣಝುಣ'** ಎಂದು ಶಬ್ದ ಮಾಡುವುದು.
ಝುಣಝುಣೆಯು. **'ಝುಣಜ್ಝುಣೆಅ'** ಶಬ್ದವನ್ನು ನೋಡುವುದು.
ಝುಣಿ. **'ಝುಣಿ'** ಶಬ್ದವನ್ನು ನೋಡುವುದು.
ಝುತ್ತಿ. **'ಝುಡತ್ತಿ'** ಶಬ್ದವನ್ನು ನೋಡುವುದು.
ಝುತ್ಥ. ವಿ: [ದೇ] ಹೊರಟು ಹೋದ, ತಲುಪಿರುವ, ಕಳೆದು ಹೋದ, ನಾಶವಾದ, ಮೃತಿ ಹೊಂದಿದ
ಝುಪಿಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ(ಷಡ್)
ಝುಪ್ಪ. **'ಝುಣ'** ಶಬ್ದವನ್ನು ನೋಡುವುದು.
ಝುಮಾಲ. ನ: [ದೇ] ಇಂದ್ರಜಾಲ, ಮಾಯಾಜಾಲ
ಝುಯ. **ಪುಂಸ್ತ್ರೀ:** [ಧ್ವಜ] ಧ್ವಜ, ಪತಾಕೆ, ಬಾವುಟ(ಔಪ). ಸ್ತ್ರೀ: -ಯಾ
ಝುರ. **ಅಕ:** [ಕ್ಷರ್] ಹನಿಹನಿಯಾಗಿ ತೊಟ್ಟಿಕ್ಕು, ಸೋರು, ಜಿನುಗು
ಝುರ. **ಸಕ:** [ಸ್ಮೃ] ನೆನಪಿಸಿಕೊಳ್ಳು, ಸ್ಮರಿಸು
ಝುರಂಕ}. ಪು: [ದೇ] ಬೆರ್ಚಪ್ಪ, ಬೆದರುಬೊಂಬೆ
ಝುರಂತ}.
ಝುರಗ. ವಿ: [ಸ್ಮಾರಕ] ನೆನಪುಂಟುಮಾಡುವ, ಚಿಂತನೆ ಉಂಟುಮಾಡುವ, ಧ್ಯಾನಿಸುವ
ಝುರಝುರ. ಪು: [ಝುರಝುರ] ಝುರಿ, ನದಿಗಳ ಹರಿಯುವ **'ಝುರ ಝುರ'** ಶಬ್ದ
ಝುರಣ. ನ: [ಕ್ಷರಣ] ತೊಟ್ಟಿಕ್ಕುವುದು, ಜಿನುಗುವುದು, ಸೋರುವುದು.
ಝುರಣಾ. ಸ್ತ್ರೀ: [ಕ್ಷರಣಾ] ಮೇಲಿನ ಶಬ್ದವನ್ನು ನೋಡುವುದು(ಆವಮ)
ಝುರಯ. ಪು: [ದೇ] ಅಕ್ಕಸಾಲಿ, ಚಿನ್ನದ ಕೆಲಸ ಮಾಡುವವನು
ಝುರಿಯ. ವಿ: [ಕ್ಷರಿತ] ತೊಟ್ಟಿಕ್ಕಿದ, ಸೋರಿದ, ಜಿನುಗಿದ, ಕೆಳಕ್ಕೆ ಬಿದ್ದ(ವವ)
ಝುರಣಾ. ಸ್ತ್ರೀ: [ಕ್ಷರಣಾ]
ಝುರುಅ. ಪು: [ದೇ] ಸೊಳ್ಳೆ
ಝುಲಕ್ಕಿಅ. ವಿ: [ದಗ್ಧ] ಸುಟ್ಟಿರುವ, ಸುಟ್ಟ
ಝುಲಝುಲ. **ಅಕ:** [ಜಾಜ್ವಲ್] ಹೊಳೆ, ಅತಿಶಯವಾಗಿ ಪ್ರಕಾಶಿಸು

ಝುಲಝುಲಿಆ. ಸ್ತ್ರೀ: [ದೇ] ಚೀಲ, ಜೋಳಿಗೆ, ಹಮ್ಮಿಣಿ
ಝುಲಹಲ. 'ಝುಲಝುಲ' ಶಬ್ದವನ್ನು ನೋಡುವುದು.
ಝುಲಹಲಿಯ. ವಿ: [ದೇ] ಕ್ಷುಬ್ಧ, ಕದಡಿದ, ವಿಚಲಿತ
ಝುಲಾ. ಸ್ತ್ರೀ: [ದೇ] ಮರೀಚಿಕೆ, ಬಿಸಿಲುಗುದುರೆ
ಝುಲುಂಕಿಅ}. ವಿ: [ದೇ] ಸುಟ್ಟಿರುವ, ಸುಟ್ಟ(ದೇ)
ಝುಲುಸಿಅ}.
ಝುಲ್ಲರೀ. ಸ್ತ್ರೀ: [ಝುಲ್ಲರೀ] ವೃತ್ತಾಕಾರದ ವಾದ್ಯ-ವಿಶೇಷ, ಕೇತಾಳ, ಛತ್ರಿಯ ಅಂಚಿನಲ್ಲಿ ಜೋಲಾಡುತ್ತಿರುವ ಜಾಲರಿ
ಝುಲ್ಲರೀ. ಸ್ತ್ರೀ: [ದೇ] ಹೆಣ್ಣುಕುರಿ
ಝುಲ್ಲೊಜ್ಝಲ್ಲಿಅ. ವಿ: [ದೇ] ಸಂಪೂರ್ಣ, ಪರಿಪೂರ್ಣ, ತುಂಬಿದ(ಭವಿ)
ಝುವಣಾ. ಸ್ತ್ರೀ: [ಕ್ಷಪನಾ] ವಿನಾಶ, ಅಧ್ಯಯನ(ವಿಸೇ)
ಝುಸ. ಪು: [ಝುಷ] ಮೀನು, ಮತ್ಸ್ಯ(ಪಣ್ಣ), **-ಚಿಂಧಯ.** ಪು: [-ಚಿಹ್ನಕ] ಕಾಮದೇವ, ಮನ್ಮಥ, ಒಂದು ದೇವ ವಿಮಾನ.
ಝುಸ. ಪು: [ದೇ] ಅಪಕೀರ್ತಿ, ತಟ, ದಡ, ವಿ: ತಟಸ್ಥ, ಮಧ್ಯಸ್ಥ. ದೀರ್ಘವೂ ಗಂಭೀರವೂ ಆದ, ಉದ್ದವೂ ಆಳವೂ ಆದ, ಭಾರದಿಂದ ಹಾಳಾದ
ಝುಸಯ. ಪು: [ಝುಷಕ] ಸಣ್ಣ ಮೀನು
ಝುಸರ. ಪು: [ದೇ] ಒಂದು ಬಗೆಯ ಆಯುಧ
ಝುಸಿಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ, ಕೋಪಕ್ಕೆ ಗುರಿಯಾದವನು, ದೂಷಣೆಗೆ ಒಳಗಾದ
ಝುಸಿಂಧ. ಪು: [ಝುಷಚಿಹ್ನ] ಕಾಮ, ಮನ್ಮಥ(ಕುಮಾ)
ಝುಸುರ. ನ: [ದೇ] ತಾಂಬೂಲ, ವೀಳ್ಯದೆಲೆ, ಅರ್ಥ
ಝಾ. ಸಕ: [ಧ್ಯೈ] ಧ್ಯಾನ ಮಾಡು, ಚಿಂತಿಸು
ಝಾಇ. ವಿ: [ಧ್ಯಾಯಿನ್] ಧ್ಯಾನ ಮಾಡುವವನು, ಚಿಂತನೆ ಮಾಡುವವನು(ಆಚಾ)
ಝಾಇಅ. ವಿ: [ಧ್ಯಾತ] ಚಿಂತಿಸಲ್ಪಟ್ಟ, ಧ್ಯಾನ ಮಾಡಲ್ಪಟ್ಟ
ಝಾಉ. ವಿ: [ಧ್ಯಾತೃ] ಧ್ಯಾನಿಸುವವನು, ಚಿಂತನೆ ಮಾಡುವವನು, ಚಿಂತಕ(ಆಚಾ)
ಝಾಡ. ನ: [ದೇ. ಝಾಟ] ಲತೆಗಳ ಪೊದರು, ಸಣ್ಣ ಸಸಿಗಳ ಸಮೂಹ.
ಝಾಡಣ. ನ: [ಝಾಟನ] ಕ್ಷಯ, ನಾಶ, ಕ್ಷೀಣವಾಗುವುದು. ಅರಳು,
ಝಾಡಲ. ನ: [ದೇ] ಹತ್ತಿಯ ಕಾಯಿ, ಹತ್ತಿ
ಝಾಡಾವಣ. ಸ್ತ್ರೀನ: [ಝಾಟನ] ಸ್ವಚ್ಛಮಾಡಿಸುವುದು, ಉಜ್ಜಿಸುವುದು, ಶುದ್ಧಗೊಳಿಸು
ಝಾಣ. ಪುಂನ: [ಧ್ಯಾನ] ಚಿಂತನೆ, ವಿಚಾರ, ಉತ್ಸುಕತೆಯಿಂದ ನೆನಪಿಸಿಕೊಳ್ಳುವುದು, ಯೋಚಿಸುವುದು. ಒಂದೇ ವಸ್ತುವಿನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು. ಮನಸ್ಸಿನ ಕ್ರಿಯೆಗೆ ನಿಯಂತ್ರಣ ಹಾಕುವುದು. ದೃಢವಾದ ಪ್ರಯತ್ನದಿಂದ ಮನಸ್ಸು ಪ್ರವೃತ್ತವಾಗುವುದು. ಪು: ಧ್ಯಾನಿಸುವವನು
ಝಾಣಂತರಿಯಾ. ಸ್ತ್ರೀ: [ಧ್ಯಾನಂತರಿಕಾ] ಮೊದಲ ಧ್ಯಾನ ಮುಗಿದು, ಎರಡನೇ ಧ್ಯಾನ ಇನ್ನೂ ಶುರುವಾಗದಿರುವ ಮತ್ತು ಇನ್ನೂ ಹಲವು ಧ್ಯಾನಗಳನ್ನು ಮಾಡಬೇಕಾಗಿರುವ ಆ ಮಧ್ಯಂತರದ ಭಾಗ(ಠಾ)
ಝಾಣಿ. ವಿ: [ಧ್ಯಾನಿನ್] ಧ್ಯಾನ ಮಾಡುವವನು
ಝಾಮ. ಸಕ: [ದಹ್] ಸುಡು, ಬೆಂಕಿಹಚ್ಚು, ಸುಟ್ಟುಹಾಕು(ಸೂಅ)
ಝಾಮ. ವಿ: [ದೇ] ಸುಡಲ್ಪಟ್ಟ, ಸುಟ್ಟು ಹೋಗಿರುವ (ಆಚಾ), **-ಥಂಡಿಲ.** ನ: [ಸ್ಥಂಡಿಲ] ಸುಟ್ಟನೆಲ (ಆಚಾ)
ಝಾಮ. ವಿ: [ಧ್ಯಾಮ] ಪ್ರಕಾಶಮಾನವಲ್ಲದ (ಅನುಜ್ಜ್ವಲ)
ಝಾಮಣ. ನ: [ದೇ] ಸುಡುವುದು, ಬೆಂಕಿ ಹಚ್ಚುವುದು, ಪ್ರಕಾಶಗೊಳಿಸುವುದು
ಝಾಮರ. ವಿ: [ದೇ] ವೃದ್ಧ, ಮುದುಕ
ಝಾಮಲ. ನ: [ದೇ] ಒಂದು ಬಗೆಯ ಕಣ್ಣಿನ ರೋಗ, ವಿ: ಕಣ್ಣಿನ ರೋಗವುಳ್ಳವನು
ಝಾಮಲ. ವಿ: [ಧ್ಯಾಮಲ] ಕಪ್ಪನೆಯ
ಝಾಮಲಿಯ. ವಿ: [ಧ್ಯಾಮಲಿತ] ಕರಿದು ಮಾಡಲ್ಪಟ್ಟ
ಝಾಮಿಅ. ವಿ: [ದೇ] ಸುಡಲ್ಪಟ್ಟ, ಕಪ್ಪಗೆ ಮಾಡಲಾದ, ಕಲಂಕಗೊಳಿಸಲ್ಪಟ್ಟ
ಝಾಯ. ವಿ: [ಧ್ಮಾತ] ಬೂದಿಮಾಡಲ್ಪಟ್ಟ, ಸುಡಲ್ಪಟ್ಟ
ಝಾಯವ್ವ. 'ಝಾ' ಶಬ್ದವನ್ನು ನೋಡುವುದು
ಝಾರುಆ. ಸ್ತ್ರೀ: [ದೆ] ಜೀಂ ಎನ್ನುವ ಜಿಟ್ಟೆ, ಒಂದು ಕೀಟ
ಝಾವಣ. ನ: [ಧ್ಮಾಪನ] 'ಝಾಮಣ' ಶಬ್ದವನ್ನು ನೋಡುವುದು

ಝೂವಣಾ. ನ: [ಧ್ಮಾಪನಾ] ಸುಡುವುದು, ಅಗ್ನಿ ಸಂಸ್ಕಾರ(ಆವಮ)

ಝೂವಣಾ. 'ಅಝೂವಣಾ' ಶಬ್ದವನ್ನು ನೋಡುವುದು.

ಝಿಂಖಣ. ನ: [ದೇ] ಕೋಪಗೊಳ್ಳುವುದು, ಸಿಟ್ಟಿಗೇಳುವುದು(ಉಪ)

ಝಿಂಖಿಅ. ನ: [ದೇ] ಲೋಕಾಪವಾದ, ಜನಗಳ ನಿಂದೆ

ಝಿಂಗಿರ}. ಪು: [ದೇ] ಮೂರು ಇಂದ್ರಿಯಗಳ

ಝಿಂಗಿರಡ}. ಒಂದು ಕ್ಷುದ್ರ ಕೀಟ

ಝಿಂಝಿಅ. ವಿ: [ದೇ] ಹಸಿದವನು(ಬೃಹ)

ಝಿಂಝಿಣೀ}. ಸ್ತ್ರೀ: [ದೇ] ಒಂದು ಜಾತಿಯ ಮರ,

ಝಿಂಝಿರೀ}. ಒಂದು ಬಗೆಯ ಬಳ್ಳಿ

ಝಿಜ್ಝ ಅಕ: [ಕ್ಷಿ] ಕ್ಷೀಣವಾಗು

ಝಿಜ್ಝಂತ}. ವಿ: [ಕ್ಷೀಯಮಾಣ] ಕೃಶವಾಗುತ್ತಿರುವ,

ಝಿಜ್ಝಮಾಣ}. ಕ್ಷಯಿಸುತ್ತಿರುವ(ಉಪ)

ಝಿಜ್ಝಿರೀ. ಸ್ತ್ರೀ: [ದೇ] ಒಂದು ಬಗೆಯ ಬಳ್ಳಿ

ಝಿಣ್ಣ. 'ಝೀಣ' ಶಬ್ದವನ್ನು ನೋಡುವುದು

ಝಿಮಿಯ}. ನ: [ದೇ] ಶರೀರದ ಅಂಗಾಂಗಗಳ

ಝಿಮ್ಮಿಯ}. ಜಡತ್ವ(ಆಚಾ)

ಝಿಯಾ. 'ಝಾ' ಶಬ್ದವನ್ನು ನೋಡುವುದು

ಝಿರಿಡ. ನ: [ದೇ] ಹಾಳು ಬಾವಿ

ಝಿಲಿಅ. ವಿ: [ದೇ] ಮೇಲಿನಿಂದ ಬೀಳುವ ವಸ್ತುವನ್ನು ಹಿಡಿದಿರುವುದು

ಝಿಲ್ಲ. ಅಕ: [ಸ್ನಾ] ಸ್ನಾನ ಮಾಡು

ಝಿಲ್ಲಿಆ. ಸ್ತ್ರೀ: [ಝಿಲ್ಲಿಕಾ] ಜೀರುಂಡೆ ಹುಳ(ಪಾಅ)

ಝಿಲ್ಲಿರಿಆ. ಸ್ತ್ರೀ: [ದೇ] 'ಚೀಹೀ' ಎಂಬ ಹೆಸರಿನ ಹುಲ್ಲು, ಸೊಳ್ಳೆ,

ಝಿಲ್ಲಿರೀ. ಸ್ತ್ರೀ: [ದೇ] ಮೀನಿನ ಬಲೆ(ವಿಪಾ)

ಝಿಲ್ಲೀ. ಸ್ತ್ರೀ: [ದೇ] ಅಲೆ, ತರಂಗ(ಗಉಡ)

ಝಿಲ್ಲೀ. ಸ್ತ್ರೀ: [ಝಿಲ್ಲೀ] ಒಂದು ಬಗೆಯ ವನಸ್ಪತಿ, ಜೀರುಂಡೆ(ಗಾ)

ಝೀಣ. ವಿ: [ಕ್ಷೀಣ] ದುರ್ಬಲನಾದ, ಕೃಶನಾದ,

ಝೀಣ. ನ: [ದೇ] ಅಂಗ, ಶರೀರ, ಕೀಟ

ಝೀರಾ. ಸ್ತ್ರೀ: [ದೇ] ಲಜ್ಜೆ, ನಾಚಿಕೆ

ಝುಂಖ. ಪು: [ದೇ] ತುಣಯ ಎಂಬ ವಾದ್ಯ

ಝುಂಝಿಯ. ವಿ: [ದೇ] ಹಸಿದವನು, ಬಾಡಿರುವ, ಕಮರಿ ಹೋಗಿರುವ(ಭಗ)

ಝುಂಝುಮುಸಯ. ನ: [ದೇ] ಮನಸ್ಸಿನ ದುಃಖ

ಝುಂಟಣ. ನ: [ದೇ] ಪ್ರವಾಹ, ಮನುಷ್ಯನ ಶರೀರದ ಶಾಖದಿಂದ ಜೀವಿಸಿರುವ ಮತ್ತು ಬಟ್ಟೆ ತಂಯಾರಿಸಲು ಅತ್ಯಮೂಲ್ಯ ರೋಮ ಹೊಂದಿರುವ ಒಂದು ಪ್ರಾಣಿ(ಉಪ)

ಝುಂಪಡಾ. ಸ್ತ್ರೀ: [ದೇ] ಗುಡಿಸಿಲು, ಹುಲ್ಲಿನಿಂದ ನಿರ್ಮಿಸಲಾದ ಕುಟೀರ

ಝುಂಬಣಗ. ನ: [ದೇ] ಮುತ್ತಿನ ಹಾರ, ಕುತ್ತಿಗೆಯಿಂದ ಎದೆಯ ಮೇಲೆ ಜೋತಾಡುವ ಮಾಲೆ

ಝುಜ್ಝ. 'ಜುಜ್ಝ=ಯುಧ್' ಶಬ್ದವನ್ನು ನೋಡುವುದು

ಝುಟ್ಠ. ವಿ: [ದೇ] ಸುಳ್ಳು, ಅಸತ್ಯ

ಝುಣ. ಸಕ: [ಜುಗುಪ್ಸ್] ಅಸಹ್ಯಪಡು, ತಿರಸ್ಕಾರ ಮಾಡು, ನಿಂದಿಸು

ಝುಣಿ. ಪು: [ಧ್ವನಿ] ಶಬ್ದ, ಸದ್ದು, ದನಿ

ಝುಣಿಅ. ಅ: [ಜುಗುಪ್ಸಿತ] ನಿಂದಿಸಲ್ಪಟ್ಟ, ಅಸಹ್ಯಗೊಂಡ, ತಿರಸ್ಕರಿಸಲ್ಪಟ್ಟ

ಝುತ್ತೀ. ಸ್ತ್ರೀ: [ದೇ] ಕತ್ತರಿಸುವುದು, ತುಂಡು ಮಾಡುವುದು

ಝುಮುರಝುಮುಸಯ. ನ: [ದೇ] ಮನಸ್ಸಿನ ದುಃಖ, ನೋವು

ಝುಲುಕ್ಕ. ಪು: [ದೇ] ಅಕಸ್ಮಾತ್ ಬೆಳಕು

ಝುಲ್ಲ. ಅಕ: [ಅಂದೋಲ್] ತೂಗಾಡು, ಅತ್ತಿತ್ತ ಅಲ್ಲಾಡು, ನೇತಾಡು. ವ. ಕೃ–ಝುಲ್ಲಂತ

ಝುಲ್ಲಣ. ಸ್ತ್ರೀನ: [ದೇ] ಒಂದು ಛಂದೋ–ವಿಶೇಷ. **ಸ್ತ್ರೀ: –ಣಾ**

ಝುಲ್ಲರೀ. ಸ್ತ್ರೀ: [ದೇ] ಲತೆಗಳ ಪೊದರು, ಬಳ್ಳಿ

ಝುಸ. 'ಝೂಸ' ಶಬ್ದವನ್ನು ನೋಡುವುದು

ಝುಸಣಾ. 'ಝೂಸಣಾ' ಶಬ್ದವನ್ನು ನೋಡುವುದು

ಝುಸಿಯ. 'ಝೂಸಿಯ' ಶಬ್ದವನ್ನು ನೋಡುವುದು

ಝುಸಿರ. ನ: [ಶುಷಿರ] ರಂಧ್ರ, ಬಿಲ(ಣಾಯಾ), ವಿ: ಖಾಲಿಯಾದ

ಝೂಝು. 'ಜೂಝು' ಶಬ್ದವನ್ನು ನೋಡುವುದು

ಝೂರ. ಸಕ: [ಜುಗುಪ್ಸ್] ನಿಂದಿಸು, ತಿರಸ್ಕರಿಸು, ಅಸಹ್ಯಪಡು

ಝೂರ. ಅಕ: [ಕ್ಷಿ] ಬಾಡು, ಕ್ಷೀಣವಾಗು, ಒಣಗು, ಮುದುಡು

ಝೂರ. ವಿ: [ದೇ] ಡೊಂಕಾದ, ವಕ್ರವಾದ, ಕುಟಿಲವಾದ

ಝೂರಿಯ. ವಿ: [ಸ್ಮೃತ] ನೆನಪಿಸಿಕೊಂಡ, ಸ್ಮರಿಸಿಕೊಂಡ
ಝೂಸ. ಸಕ: [ಜುಷ್] ಸೇವೆಮಾಡು, ಪ್ರೀತಿಸು, ನಷ್ಟಮಾಡು, ಖರ್ಚುಮಾಡು
ಝೂಸಣಾ. ಸ್ತ್ರೀ: [ಜೋಷಣಾ] ಸೇವೆ, ಪೂಜೆ, ಆರಾಧನೆ(ಔಪ)
ಝೂಸರಿಅ. ವಿ: [ದೇ] ಅತ್ಯಂತ, ಸ್ವಚ್ಛ, ನಿರ್ಮಲ (ದೇ)
ಝೂಸಿಯ. ವಿ: [ಜುಷ್ಟ] ಪೂಜಿಸಲ್ಪಟ್ಟ, ಆರಾಧಿಸಲ್ಪಟ್ಟ, ತ್ಯಜಿಸಲ್ಪಟ್ಟ, ಎಸೆಯಲ್ಪಟ್ಟ
ಝೆಂಡುಅ. ಪು: [ದೇ] ಚೆಂಡು, ಕಂದುಕ
ಝೇಯ. 'ಝಾ' ಶಬ್ದವನ್ನು ನೋಡುವುದು–
ಝೇರ. ಪು: [ದೇ] ಹಳೆಯ ಘಂಟೆ
ಝೊಂಡಲಿಆ. ಸ್ತ್ರೀ: [ದೇ] ರಾಸ ಕ್ರೀಡೆಯ ಹಾಗೆ ಒಂದು ಕ್ರೀಡೆ.
ಝೋಟಿಂಗ. ಪು: [ದೇ] ದೇವ–ವಿಶೇಷ
ಝೋಟ್ಟೀ. ಸ್ತ್ರೀ: [ದೇ] ಅರ್ಧ ಮಹಿಷಿ, ಎಮ್ಮೆಯ ಒಂದು ಜಾತಿ.
ಝೋಡ. ಸಕ: [ಶಾಟಯ್] ಮರದಿಂದ ಎಲೆಯನ್ನು ಬೀಳಿಸು
ಝೋಡ. ನ: [ದೇ] ಮರದಿಂದ ಎಲೆಯನ್ನು ಬೀಳಿಸು, ಹಳೆಯದಾದ, ಮುದಿಯಾದ ಮರ
ಝೋಡಣ. ನ: [ಶಾಟನ] ಬೀಳಿಸುವುದು, ಕೆಡವುವುದು
ಝೋಡಪ್ಪ. ಪು: [ದೇ] ಕಡಲೆ, ಒಣಗಡಲೆಯ ಪಲ್ಯೆ
ಝೋಡಿಅ. ಪು: [ದೇ] ಬೇಟೆಗಾರ, ವ್ಯಾದ(ದೇ)
ಝೋಲಿಆ}. ಸ್ತ್ರೀ: [ದೇ. ಝೋಲಿಕಾ] ಜೋಳಿಗೆ,
ಝೊಲ್ಲಿಆ}. ಚೀಲ, ಹಮ್ಮಿಣಿ
ಝೋಸ. 'ಝೂಸ' ಶಬ್ದವನ್ನು ನೋಡುವುದು
ಝೋಸ. ಸಕ: [ಝೋಷಯ್] ಹಾಕು, ಇಡು, ಎಸೆ, ಚಾಚು
ಝೋಸ. ಸಕ: [ಗವೇಷಯ್] ಹುಡುಕು, ಅನ್ವೇಷಿಸು
ಝೋಸ. ಪು: [ದೇ] ಕೊಡುವುದು, ದೂರಮಾಡು
ಝೋಸ. ಪು: [ಝೋಷ] ಶೇಷ ಉಳಿಯದೆ ಭಾಗಿಸಲ್ಪಡುವ, ಸಮಾನ ಭಾಗಾಕಾರವಾಗುವ ರಾಶಿ
ಝೋಸಣ. ನ: [ದೇ] ಹುಡುಕಾಟ, ಅನ್ವೇಷಣೆ
ಝೋಸಣಾ. 'ಝೂಸಣಾ' ಶಬ್ದವನ್ನು ನೋಡುವುದು
ಝೋಸಣಾ. ಸ್ತ್ರೀ: [ಜೋಷಣಾ] ಸಲ್ಲೇಖನ, ಅಂತ್ಯ ಸಮಯದ ಆರಾಧನೆ
ಝೋಸಿಅ. 'ಝೂಸಿಯ' ಶಬ್ದವನ್ನು ನೋಡುವುದು

ಟ

ಟ. ಟ ವರ್ಗದ ಮೊದಲನೆಯ ವ್ಯಂಜನ. ಮೂರ್ಧ ಸ್ಥಾನೀಯ; ಮೂರ್ಧನ್ಯ ಅಲ್ಪ ಪ್ರಾಣ, ಘೋಷ.
ಟಉುಯಾ. ಸ್ತ್ರೀ: [ದೇ] ಕರೆಯುವ ಶಬ್ದ
ಟಂಕ. ಪು: [ಟಂಕ] ನಾಣ್ಯದ ಮೇಲಿನ ಚಿತ್ರ, ಕತ್ತಿಯ ಅಗ್ರಭಾಗ, ತುದಿ. ಮುದ್ರಿಸಿದ ನಾಣ್ಯ, ಬೆಟ್ಟದ ಇಳಿಜಾರು ಪ್ರದೇಶ, ಕಲ್ಲನ್ನು ಒಡೆಯುವ ಸಾಧನವಾದ ಕುಟ್ಟಿಗನ ಉಳಿ, ಚಾಣ. ನಾಲ್ಕು ಮಾಸೆಗಳ ಒಂದು ತೂಕ, ಜಾತಿಯ ಪಕ್ಷಿ.
ಟಂಕ. ಪು: [ದೇ] ಕತ್ತಿ, ಖಡ್ಗ, ಅಗೆದಿರುವ ನೀರಿನ ಹಳ್ಳ, ತೊಡೆ, ಭಿತ್ತಿ, ಗೋಡೆ, ದಡ, ತಟ, ಗುದ್ದಲಿ ವಿ: ಕತ್ತರಿಸಲ್ಪಟ್ಟ, ತುಂಡರಿಸಲ್ಪಟ್ಟ
ಟಂಕಣ. ಪು: [ಟಂಕನ] ಮ್ಲೇಚ್ಛರ ಒಂದು ಜಾತಿ(ವಿಸೇ)
ಟಂಕವತ್ಥುಲ. ಪು: [ದೇ] ಒಂದು ಬಗೆಯ ಗೆಡ್ಡೆ, ಒಂದು ಬಗೆಯ ತರಕಾರಿ
ಟಂಕಾ. ಸ್ತ್ರೀ: [ದೇ] ತೊಡೆ, ಮೊಣಕಾಲು, ಒಂದು ಹೆಸರಾಂತ ತೀರ್ಥಕ್ಷೇತ್ರ
ಟಂಕಾರ. ಪು: [ಟಂಕಾರ] ಬಿಲ್ಲಿನ ಹೆದೆಯನ್ನು ಮಿಡಿದಾಗ ಹೊಮ್ಮುವ ಶಬ್ದ, ಧನುಷ್ಟಂಕಾರ
ಟಂಕಾರ. ಪು: [ದೇ] ತೇಜಸ್ಸು, ಓಜಸ್ಸು(ಗಉಡ)
ಟಂಕಿಅ. ವಿ: [ದೇ] ಹರಡಿರುವ
ಟಂಕಿಅ. ವಿ: [ಟಂಕಿತ] ಚಾಣದಿಂದ ಕತ್ತರಿಸಿದ ಅಥವಾ ಸೀಳಿದ
ಟಂಕಿಯಾ. ಸ್ತ್ರೀ: [ಟಂಕಿಕಾ] ಕಲ್ಲನ್ನು ಕತ್ತರಿಸುವ, ಸೀಳುವ ಸಾಧನವಾದ ಚಾಣ
ಟಂಬರಯ. ವಿ: [ದೇ] ಭಾರವಾದ, ದೊಡ್ಡದಾದ,
ಟಕ್ಕ. ಪು: [ಟಕ್ಕ] ಒಂದು ದೇಶ, ಟಕ್ಕ ದೇಶದ, ಪು: ಹೊಗಳು ಭಟ್ಟರ ಒಂದು ವರ್ಗ
ಟಕ್ಕರಾ. ಸ್ತ್ರೀ: [ದೇ] ಬೋಳು ತಲೆಗೆ ಬೆರಳಿನಿಂದ ಹೊಡೆಯುವ ಪೆಟ್ಟು.
ಟಕ್ಕರ. ಪು: [ದೇ] ಆಘಾತ, ಪೆಟ್ಟು, ಹೊಡೆತ, ಶರೀರದ ಅಂಗದಿಂದ ಶರೀರದ ಅಂಗಕ್ಕಾಗುವ ಪೆಟ್ಟು
ಟಕ್ಕಾರಾ. ಸ್ತ್ರೀ: [ದೇ] ಅಗ್ನಿಮಂಥ ವೃಕ್ಷದ ಹೂವು
ಟಗರ. ಪು: [ತಗರ] ನಂದಿಬಟ್ಟಲು ಗಿಡ, ಮಂಗಾರ ಗಿಡ, ಸುವಾಸನೆಯ ಚೌಬೀನೆ ಮರ(ಕುಮಾ)
ಟಚ್ಚಕ. ಸ್ತ್ರೀ: [ದೇ] ಕಟ್ಟಿಗೆಯ ಹೊಡೆತದ ಶಬ್ದ
ಟಟ್ಟಇಆ. ಸ್ತ್ರೀ: [ದೇ] ಪರದೆ, ಯವನಿಕೆ
ಟಪ್ಪರ. ವಿ: [ದೇ] ಭಯಂಕರವಾದ ಕಿವಿ ಉಳ್ಳ(ಸುಪಾ)
ಟಮರ. ಪು: [ದೇ] ಕೇಶ ಕಲಾಪ, ಕೂದಲುಗಳು
ಟಯರ. 'ಟಗರ' ಶಬ್ದವನ್ನು ನೋಡುವುದು
ಟಲಟಲ. ಅಕ: [ಟಲಟಲಾಯ್] 'ಟಲಟಲ' ಎಂದು ಶಬ್ದ ಮಾಡು. ವ. ಕೃ: 'ಟಲಟಲಂತ'
ಟಲಟಟಲಿಯ. ವಿ: [ಟಲಟಲಿತ] 'ಟಲಟಲ' ಎಂಬ ಶಬ್ದವುಳ್ಳ
ಟಲವಲ. ಅಕ: [ದೇ] ವೇದನೆಯಿಂದ ಒದ್ದಾಡು, ಗಾಬರಿಗೊಳ್ಳು, ವ್ಯಗ್ರಗೊಳ್ಳು
ಟಲಿಅ. ವಿ: [ದೇ] ದೂರ ಸರಿಸಲ್ಪಟ್ಟ
ಟಸರ. ನ: [ದೇ] ತಿರುಗಿಸುವುದು
ಟಸರ. ಪು: [ತ್ರಸರ] ಒಂದು ಬಗೆಯ ದಪ್ಪ ರೇಷ್ಮೆದಾರ
ಟಸರೋಟ್ಟ. ನ: [ದೇ] ಶಿರೋಭೂಷಣ, ತಲೆಯಲ್ಲಿ ಧರಿಸುವ ಆಭರಣ
ಟಹರಿಯ. ವಿ: [ದೇ] ಎತ್ತರಿಸಲ್ಪಟ್ಟ, ಮೇಲೆ ಮಾಡಲಾದ
ಟಾರ. ಪು: [ದೇ] ಕೆಳ ದರ್ಜೆಯ ಕುದುರೆ, ಮಾತು ಕೇಳದ ಹಠಮಾರಿ ಕುದುರೆ, ಗಿಡ್ಡ ಕುದುರೆ, ತಟ್ಟು(ಉಪ)
ಟಾಲ. ನ: [ದೇ] ಪೀಚು, ಇನ್ನೂ ಬೀಜ ಬಲಿಯದ ಸ್ಥಿತಿ
ಟಿಂಟ–}.(ದೇ). **'ಟೆಂಟಾ'** ಶಬ್ದವನ್ನು
ಟಿಂಟಾ}. ನೋಡುವುದು. **–ಸಾಲಾ.** ಸ್ತ್ರೀ: [**–ಶಾಲಾ**] ಜೂಜಾಡುವ ಸ್ಥಳ, ಜೂಜು ಕಟ್ಟೆ(ಸುಪಾ)
ಟಿಂಬರು}. **ಪುಂನ:** [ದೇ] ಕರಿ ಕಟ್ಟಿಗೆಯ ಮರ
ಟಿಂಬರುಅ}.
ಟಿಂಬರುಣೀ. ಸ್ತ್ರೀ: [ದೇ] ಮೇಲಿನ ಶಬ್ದವನ್ನು ನೋಡುವುದು
ಟಿಕ್ಕ. ನ: [ದೇ] ತಿಲಕ, ತಲೆಯ ಮೇಲೆ ಇಟ್ಟುಕೊಳ್ಳುವ ಹೂಗುಚ್ಛ
ಟಿಕ್ಕಿದ.(ಶೌ). ವಿ: [ದೇ] ತಿಲಕದಿಂದ ಅಲಂಕೃತವಾದ
ಟಿಗ್ಘರ. ವಿ: [ದೇ] ಮುದುಕ, ವೃದ್ಧ
ಟಿಟ್ಟಿಭ. ಪು: [ಟಿಟ್ಟಿಭ] ಒಂದು ಜಾತಿಯ ಹಕ್ಕಿ, ಒಂದು ಬಗೆಯ ಜಲಚರ ಪ್ರಾಣಿ, ಸ್ತ್ರೀ: **–ಭೀ**

ಟಿಟ್ಟಿಯಾವ. ಸಕ: [ದೇ] ಮಾತಾಡಲು ಉತ್ತೇಜಿಸುವ ರೀತಿ. 'ಟಿ ಟಿ' ಎಂದು ಉಚ್ಚರಿಸಲು ಕಲಿಸು
ಟಿಪ್ಪಣಯ. ನ: [ಟಿಪ್ಪನಕ] ವಿವರಣೆ, ಸಣ್ಣ ತಿಲಕ
ಟಿಪ್ಪೀ. ಸ್ತ್ರೀ: [ದೇ] ತಿಲಕ
ಟಿರಿಟಿಲ್ಲ. ಸಕ: [ಭ್ರಮ್] ತಿರುಗು, ಸುತ್ತಾಡು, ಸಂಚರಿಸು
ಟಿಲ್ಲಿಕ್ಕಿಯ. ವಿ: [ದೇ] ಅಲಂಕರಿಸಲ್ಪಟ್ಟ
ಟಿವಿಡಿಕ್ಕ. ಸಕ: [ಮಂಡಯ್] ಅಲಂಕರಿಸು
ಟಿವಿಡಿಕ್ಕಿಅ. ವಿ: [ಮಂಡಿತ] ಅಲಂಕರಿಸಲ್ಪಟ್ಟ(ಪಾಅ)
ಟುಂಟ. ವಿ: [ದೇ] ತುಂಡರಿಸಲ್ಪಟ್ಟ ಕೈ ಉಳ್ಳ(ದೇ)
ಟುಂಟುಣ್ಣ. ಅಕ: [ಟುಂಟುಣಾಯ್] 'ಟುನ್ ಟುನ್' ಎಂದು ಶಬ್ದ ಮಾಡು
ಟುಂಬಯ. ಪು: [ದೇ] ಒಂದು ಬಗೆಯ ಹೊಡೆತ, ಏಟು
ಟುಟ್ಟ. ಅಕ: [ತ್ರುಟ್] ಮುರಿ, ಕತ್ತರಿಸು
ಟುಪ್ಪರಗ. ನ: [ದೇ] ಜೈನ ಸಾಧುವಿನ ಒಂದು ಸಣ್ಣ ಪಾತ್ರೆ
ಟೂವರ. ಪು: [ತೂವರ] ಗಡ್ಡ ಮೀಸೆ ಬೆಳೆದಿಲ್ಲದ ಸೇವಕ, ಗಡ್ಡ ಮೀಸೆಯನ್ನು ಬೋಳಿಸಿರುವ ದ್ವಾರ ಪಾಲಕ
ಟೆಂಟ. ಪು: [ದೇ] ಮಧ್ಯದಲ್ಲಿರುವ ಮಣಿ. ವಿ:ಭಯವನ್ನುಂಟುಮಾಡುವ, ಭಯಂಕರವಾದ
ಟೆಂಟಾ. ಸ್ತ್ರೀ: [ದೇ] ಜೂಜಾಡುವ ಸ್ಥಳ, ಜೂಜುಕಟ್ಟೆ ಕಣ್ಣಿನ ಗೊಂಬೆ, ಎದೆಯ ಮೇಲಿನ ಒಣಗಾಯ
ಟೆಂಬರುಯ. ನ: [ದೇ] ಒಂದು ಫಲ.
ಟೆಕ್ಕರ. ನ: [ದೇ] ಸ್ಥಳ, ಪ್ರದೇಶ
ಟೊಕ್ಕಣ}. ನ: [ದೇ] ಮದ್ಯವನ್ನಳೆಯುವ ಪಾತ್ರೆ
ಟೊಕ್ಕಣಖಂಡ}.
ಟೋಪಿಆ. ಸ್ತ್ರೀ: [ದೇ] ತಲೆಯ ಮೇಲೆ ಧರಿಸುವ ಟೋಪಿ
ಟೊಪ್ಪ. ಪು: [ದೇ] ಒಬ್ಬ ಶ್ರೇಷ್ಠಿ
ಟೊಪ್ಪರ. ಪುಂನ: [ದೇ] ತಲೆಯಲ್ಲಿ ಧರಿಸುವಂಥದು, ಟೋಪಿ
ಟೋಲ. ಪು: [ದೇ] ಪತಂಗ, ದೀಪದ ಹುಳು, ಪಶುಗಳ ಗುಂಪು, ಪಿಶಾಚ. ▯ಗಇ. ಸ್ತ್ರೀ: [–ಗತಿ] ಗುರು ವಂದನದಲ್ಲಿಯ ಒಂದು ದೋಷ. **ಟೋಲಾಗಇ.** ವಿ: [**ಟೋಲಾಕೃತಿ**] ಪ್ರಶಸ್ತವಾದ ಆಕಾರವುಳ್ಳ
ಟೋಲಂಬ. ಪು: [ದೇ] ಹಿಪ್ಪೆಮರ

ಠ

ಠ. **ಪು:** [ಠ] 'ಟ' ವರ್ಗದ ಎರಡನೆಯ ವ್ಯಂಜನ. ಮೂರ್ಧನ್ಯ, ಮಹಾಪ್ರಾಣ, ಅಘೋಷ ವರ್ಣ

ಠಇಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ, **ಪು:** ಎರಡು ಕಾಲಗಳಿಗೆ ಮಧ್ಯೆ ಇರುವ ಅಂತರ, ಅವಕಾಶ, ಸುಸಮಯ

ಠಇಅ. ವಿ: [ಸ್ಥಗಿತ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, ನಿಲ್ಲಿಸಲಾಗಿರುವ ತಡೆಯಲ್ಪಟ್ಟಿರುವ

ಠಇಅ. **'ಠವಿಅ'** ಶಬ್ದವನ್ನು ನೋಡುವುದು

ಠಂಡಿಲ್ಲ. **'ಥಂಡಿಲ್ಲ'** ಶಬ್ದವನ್ನು ನೋಡುವುದು

ಠಂಭ. **'ಥಂಭ=ಸ್ತಂಭ'** ಶಬ್ದವನ್ನು ನೋಡುವುದು

ಠಂಭ. **'ಥಂಭ=ಸ್ತಂಭ್'** ಶಬ್ದವನ್ನು ನೋಡುವುದು

ಠಕುರ}. **ಪು:** [ಠಕ್ಕುರ] ಕ್ಷತ್ರಿಯ, ಠಾಕೂರ, ರಾಜಪೂತ,
ಠಕ್ಕುರ}. ಗ್ರಾಮ ಮುಖಂಡ, ನಾಯಕ(ಆವಮ)

ಠಕ್ಕಾರ. **ಪು:** [ಠಃಕಾರ] 'ಠ' ಅಕ್ಷರ

ಠಗ. **ಪು:** [ಠಕ] ಧೂರ್ತ, ವಂಚಕ, ಮೋಸಗಾರ (ಕುಮಾ)

ಠಗ}. **ಸಕ:** [ಸ್ಥಗ್] ಮುಚ್ಚು
ಠಯ}.
ಠಣ}.

ಠಗಿಯ. ವಿ: [ದೇ] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ (ಸುಪಾ)

ಠಗಿಯ. **'ಠಇಯ=ಸ್ಥಗಿತ'** ಶಬ್ದವನ್ನು ನೋಡುವುದು

ಠಟ್ಠಾರ. **ಪು:** [ದೇ] ತಾಮ್ರ, ಹಿತ್ತಾಳೆ, ಮೊದಲಾದ ಲೋಹಗಳ ಪಾತ್ರೆಗಳನ್ನು ಮಾಡಿ ಜೀವನ ಸಾಗಿಸುವವನು(ಧರ್ಮ)

ಠಡ್ಢ. ವಿ: [ಸ್ತಬ್ಧ] ಗಾಬರಿಗೊಂಡ, ಶಕ್ತಿಗುಂದಿದ, ಜಡ.

ಠಪ್ಪ. ವಿ: [ಸ್ಥಾಪ್ಯ] ಸ್ಥಾಪಿಸಲು ಯೋಗ್ಯವಾದ, ಇರಿಸಲು ಅರ್ಹವಾದ

ಠಯ. **ಸಕ:** [ಸ್ಥಗ್] ನಿಲ್ಲಿಸು, ತಡೆ

ಠಯಣ. ನ: (ಸ್ಥಗನ). ತಡೆ, ಅಡ್ಡಿ, ತೊಡಕು. ಮುಚ್ಚುವುದು, ವಿ: ತಡೆಯುವವನು. ಸ್ತ್ರೀ: –ಣೀ

ಠರಿಅ. ವಿ: [ದೇ] ಗೌರವಿಸಲ್ಪಟ್ಟ, ಮೇಲೆ ನಿಂತ(ದೇ)

ಠಲಿಂಯ. ವಿ: [ದೇ] ಖಾಲಿ, ಶೂನ್ಯ, ಬರಿದಾಗಿಸಲ್ಪಟ್ಟಿರುವ

ಠಲ್ಲ. ವಿ: [ದೇ] ಬಡವ, ಹಣವಿಲ್ಲದ, ದರಿದ್ರ(ದೇ)

ಠವ. **ಸಕ:** [**ಸ್ಥಪಯ್**] ಸ್ಥಾಪಿಸು

ಠವಣ. ನ: [**ಸ್ಥಾಪನ**] ಸ್ಥಾಪನೆ, ಸಂಸ್ಥಾಪಿಸುವುದು

ಠವಣಾ. ಸ್ತ್ರೀ: [ಸ್ಥಾಪನಾ] ಪ್ರತಿಕೃತಿ, ಚಿತ್ರ, ಮೂರ್ತಿ, ಆಕೃತಿ. ಇರಿಸುವುದು, ಪ್ರತಿಷ್ಠಾಪಿಸುವುದು, ಮುಖ್ಯ ವಸ್ತು ಇಲ್ಲದಿದ್ದಾಗ ಅದರ ಜಾಗದಲ್ಲಿ ಅದನ್ನು ಸಂಕೇತಿಸುವ ವಸ್ತು. ಜೈನ ಸಾಧುಗಳ ಭಿಕ್ಷೆಯಲ್ಲಿನ ಒಂದು ದೋಷ. ಸಾಧುಗಳಿಗೆ ಭಿಕ್ಷೆಯ ರೂಪದಲ್ಲಿ ನೀಡುವುದಕ್ಕಿಟ್ಟಿರುವ ವಸ್ತು. ಒಪ್ಪಿಗೆ, ಸಮ್ಮತಿ. ಎಂಟು ದಿನಗಳ ಜೈನ ಪರ್ವ– ವಿಶೇಷವಾದ ಪರ್ಯುಷಣಾ(ನಿಚೂ). **–ಕುಲ. ಪುಂನ:** [**–ಕುಲ**] ಭಿಕ್ಷೆಗೆ ನಿಷೇಧಿತವಾಗಿರುವ ಕುಲ. **–ಣಯ. ಪು:** [**–ನಯ**] ಸ್ಥಾಪನೆಯನ್ನೇ ಪ್ರಧಾನವೆಂದು ಒಪ್ಪುವ ಮತ. **–ಪುರಿಸ. ಪು:** [**–ಪುರುಷ**] ಪುರುಷನ ಮೂರ್ತಿ ಅಥವಾ ಚಿತ್ರ(ಸೂಅ). **–ಯರಿಯ. ಪು:** [**–ಚಾಯ**] ಆಚಾರ್ಯನನ್ನು ಸಂಕೇತಿಸುವ ವಸ್ತು. **–ಸಚ್ಚ.** ನ: [**–ಸತ್ಯ**] ಸ್ಥಾಪನೆಯ ವಿಷಯಕ್ಕೆ ಸಂಬಂಧಿಸಿದ ಸತ್ಯ; ಅಂದರೆ ಯಾವ ಭಗವಂತನ ಮೂರ್ತಿಯನ್ನು ಜಿನನೆಂದು ಕರೆಯುವುದೆಂಬುದು ಸ್ಥಾಪನಾ ಸತ್ಯ(ಠಾ)

ಠವಣಾ. ಸ್ತ್ರೀ: [**ಸ್ಥಾಪನಾ**] ಇರಿಸುವುದು, ಸ್ಮರಣೆಯನ್ನುಂಟುಮಾಡುವ ಒಂದು ಶಕ್ತಿ.

ಠವಣೀ. ಸ್ತ್ರೀ: [**ಸ್ಥಾಪನೀ**] ನ್ಯಾಸ ರೂಪದಲ್ಲಿ ಇಡಲಾಗಿರುವ ದ್ರವ್ಯ. □**ಮೋಸ. ಪು:** [**–ಮೋಷ**] ನ್ಯಾಸವನ್ನು ಅಪಹರಿಸುವುದು

ಠವಿಅ. ವಿ: [ಸ್ಥಾಪಿತ] ಇಡಲ್ಪಟ್ಟ, ಸಂಸ್ಥಾಪಿಸಲಾದ

ಠವಿಆ. ಸ್ತ್ರೀ: [ದೇ] ಪ್ರತಿಮೆ, ಮೂರ್ತಿ, ಪ್ರತಿಕೃತಿ

ಠವಿರ. **'ಸ್ಥವಿರ'** ಶಬ್ದವನ್ನು ನೋಡುವುದು

ಠಾ. **ಅಕ:** [ಸ್ಥಾ] ಕುಳಿತುಕೊಳ್ಳು, ಸ್ಥಿರವಾಗು, ಗತಿಯನ್ನು ತಡೆ. ವ. ಕೃ– **'ಠಾಯಮಾಣ'**

ಠಾಇ.ವಿ: [**ಸ್ಥಾಪಿನ್**] ಇರುವವನು, ಸ್ಥಿರವಾಗುವವನು, ಸ್ಥಿರವಾಗುವಂಥದು(ಔಪ)

ಠಾಏಯವ್ವ **'ಠಾ'** ಅನ್ನು ನೋಡುವುದು.

ಠಾಣ. **ಪು:** [ದೇ] ಹೆಮ್ಮೆ, ಅಭಿಮಾನ

ಠಾಣ. ನ: [ಸ್ಥಾನ] ಕೊಂಕಣ ದೇಶದ ಒಂದು ನಗರ. ೧೩ ದಿನಗಳ ನಿರಂತರ ಉಪವಾಸ
ಠಾಣ. ಪುಂನ: [ಸ್ಥಾನ] ಸ್ಥಿತಿ, ಇರುವಿಕೆ, ಚಲನೆಯಿಲ್ಲದಿರುವುದು, ಸ್ವರೂಪ ಪಡೆಯುವುದು, ಕಾರಣ, ನಿಮಿತ್ತ, ಪರ್ಯಂಕವೇ ಮೊದಲಾದ ಆಸನ, ಪ್ರಕಾರ, ಪ್ರಭೇದ, ಸ್ಥಳ, ಗುಣ, ಪರ್ಯಾಯ, ಧರ್ಮ ಆಶ್ರಯ, ಆಧಾರ, ಮನೆ, ವಸತಿ. ಮೂರನೇ ಜೈನ ಅಂಗ ಗ್ರಂಥ 'ಠಾಣಾಂಗ' ಸೂತ್ರ, ಠಾಣಾಂಗ ಸೂತ್ರದ ಅಧ್ಯಯನ, ಪರಿಚ್ಛೇದ(ಠಾ), ಕಾಯೋತ್ಸರ್ಗ (ಔಪ), **-ಭಟ್ಟ.** ವಿ: [**-ಭ್ರಷ್ಟ**] ತನ್ನ ಸ್ಥಾನದಿಂದ ಚ್ಯುತನಾದ, ಚಾರಿತ್ರ್ಯದಿಂದ ಪತಿತನಾದ, ಠಾಣಾಇಯ. ವಿ: [**ಠಾಣಾತಿಂಗ**] ಕಾಯೋತ್ಸರ್ಗ ಮಾಡುವವನು, **-ಠಾಣಾಯಂಯ.** ನ: [**ಠಾಣಾಯತ**] ಎತ್ತರದ ಸ್ಥಾನ(ಬೃಹ)
ಠಾಣಗ. ನ: [ಸ್ಥಾನಕ] ಶರೀರದ ಚಾಲನೆ, ಚೇಷ್ಟೆ
ಠಾಣಿ. ವಿ: [ಸ್ಥಾನಿನ್] ಸ್ಥಾನವುಳ್ಳ, ಸ್ಥಾನದಿಂದ ಕೂಡಿದ
ಠಾಣಿಜ್ಜ. '**ಠಾ**' ನೋಡುವುದು
ಠಾಣಿಜ್ಜ. ವಿ: [ದೇ] ಗೌರವಿಸಲ್ಪಟ್ಟ, ಸನ್ಮಾನಿಸಲ್ಪಟ್ಟ, ನ: ಗೌರವ.
ಠಾಣುಕ್ಕಡಿಯ.}. ವಿ: [**ಸ್ಥಾನೋತ್ಕಟುಕ**] ಅತ್ಯಂತ
ಠಾಣುಕ್ಕುಡುಯ}. ಹೆಮ್ಮೆಯ ಆಸನವುಳ್ಳ, ನ: ಒಂದು ಆಸನ-ವಿಶೇಷ
ಠಾಣು. '**ಖಾಣು**' ಶಬ್ದವನ್ನು ನೋಡುವುದು. □**ಖಂಡ.** ನ: [**-ಖಂಡ**] ಸ್ಥಾಣುವಿನ ಅವಯವ. ವಿ: ಸ್ಥಾಣುವಿನ ಹಾಗೆ ಎತ್ತರವಾಗಿ ಮತ್ತು ಸ್ಥಿರವಾಗಿರುವ, ಸ್ತಂಭಿತ ಶರೀರವುಳ್ಳ (ಣಾಯಾ)
ಠಾಮ}. (ಅಪ). '**ಠಾಣ**' ಶಬ್ದವನ್ನು ನೋಡುವುದು
ಠಾಯ}.
ಠಾಯ. ಪು: [**ಸ್ಥಾಯ**] ಸ್ಥಾನ, ಆಶ್ರಯ.
ಠಾವ. ಸಕ: [**ಸ್ಥಾಪಯ್**] ಸ್ಥಾಪಿಸು, ಇಡು. ವ. ಕೃ- 'ಠಾವಂತ'
ಠಾವಣ. ನ: [ಸ್ಥಾಪನ] ಇರಿಸುವುದು, ಸ್ಥಾಪಿಸುವುದು.
ಠಾವಣಯಾ}. '**ಠವಣಾ**' ಶಬ್ದವನ್ನು ನೋಡುವುದು
ಠಾವಣಾ}.
ಠಾವಯ. ವಿ: [ಸ್ಥಾಪಕ] ಸ್ಥಾಪಿಸುವವನು(ಣಾಯಾ)
ಠಾವರ. ವಿ: [ಸ್ಥಾವರ] ಸ್ಥಿರವಾಗಿ ಇರುವಂಥದು
ಠಾವಿಅ. ವಿ: [ಸ್ಥಾಪಿತ] ಸ್ಥಾಪಿಸಲಾದ, ಇರಿಸಲಾದ(ಠಾ)
ಠಾವಿತ್ತು. ವಿ: [**ಸ್ಥಾಪಯಿತೃ**] ಮೇಲಿನ ಶಬ್ದವನ್ನು ನೋಡುವುದು
ಠಿಅಅ. ನ: [ದೇ] ಊರ್ಧ್ವ, ಮೇಲುಗಡೆ, ಎತ್ತರವಾದ
ಠಿಇ. ಸ್ತ್ರೀ: [**ಸ್ಥಿತಿ**] ವ್ಯವಸ್ಥೆ, ಇರುವಿಕೆ, ಕ್ರಮ, ನಿಯಮ(ಉಪ), ಸ್ಥಳ, ವಯಸ್ಸು, ಕಾಲದ ಮಿತಿ, ಎಲ್ಲೆ, ಗಡಿ. ಕ್ಖಯ. ಪು: [**-ಕ್ಷಯ**] ಆಯುಸ್ಸಿನ ತೀರುವಿಕೆ, ಮರಣ. **-ಪಡಿಯಾ. '-ವಡಿಯಾ'** ಶಬ್ದವನ್ನು ನೋಡುವುದು. **-ಬಂಧ.** ಪು: [**-ಬಂಧ**] ಕರ್ಮ ಬಂಧದ ಕಾಲದ ಮಿತಿ(ಕಮ್ಮ), **-ವಡಿಯಾ.** ಸ್ತ್ರೀ: [**-ಪತಿತಾ**] ಪುತ್ರ ಜನ್ಮಕ್ಕೆ ಸಂಬಂಧಿಸಿದ ಉತ್ಸವ-ವಿಶೇಷ.
ಠಿಕ್ಕ. ನ: [ದೇ] ಪುರುಷ ಚಿಹ್ನೆ.
ಠಿಕ್ಕರಿಆ. ಸ್ತ್ರೀ: [ದೇ] ಗಡಿಗೆಯ ಚೂರು,
ಠಿಯ. ವಿ: [ಸ್ಥಿತ] ಇರುವ, ನಿಂತಿರುವ , ನೆಲೆಸಿರುವ, ವ್ಯವಸ್ಥಿತ, ನಿಯಮಿತ, ಕುಳಿತಿರುವ(ನಿಚೂ)
ಠಿರ. '**ಥಿರ**' ಶಬ್ದವನ್ನು ನೋಡುವುದು
ಠಿವಿಅ. ನ: [ದೇ] ಮೇಲೆ, ಮೇಲುಗಡೆ, ಎತ್ತರವಾದ, ನಿಕಟ, ಹತ್ತಿರ, ಸಮೀಪ, ಬಿಕ್ಕಳಿಕೆ
ಠಿವ್ವ. ಸಕ: [**ವಿ+ಘುಟ್**] ತಿರುಗಿಸು,
ಠೀಣ. ವಿ: [**ಸ್ತ್ಯಾನ**] ಶೇಖರಿಸಿರುವ(ತುಪ್ಪ ಇತ್ಯಾದಿ), ಶಬ್ದಮಾಡುವವನು, ದನಿ ಮಾಡುವವನು, ನ: ಒಟ್ಟುಗೂಡಿಸುವುದು, ಶೇಖರಣೆ, ಆಲಸ್ಯ, ಪ್ರತಿಧ್ವನಿ
ಠುಂಠ. ಪುಂನ: [ದೇ] ಸ್ಥಿರವಾಗಿ ಇರುವ, ಚಲಿಸದಿರುವ, ಶಿವ
ಠುಕ್ಕ. ಸಕ: [ಹಾ] ತ್ಯಜಿಸು, ಬಿಡು
ಠೇರ. ಪುಂಸ್ತ್ರೀ: [ಸ್ಥವಿರ] ವೃದ್ಧ, ಸ್ತ್ರೀ: -ರೀ(ಗಾ)
ಠೋಡ. ಪು: [ದೇ] ಜ್ಯೋತಿಷಿ, ದೈವಜ್ಞ, ಪುರೋಹಿತ (ಸುಪಾ)

ಡ

ಡ. ಪು: [ಡ] 'ಟ' ವರ್ಗದಲ್ಲಿ ಮೂರನೆಯ ವರ್ಣ. ಮೂರ್ಧನ್ಯ, ಅಲ್ಪಪ್ರಾಣ,ಘೋಷ–ಸ್ಪರ್ಶ–ವರ್ಣ.
ಡಓಯರ. ನ: [ದಕೋದರ] ಹೊಟ್ಟೆಯಲ್ಲಿ ನೀರು ತುಂಬಿಕೊಂಡದ್ದರಿಂದ ಉಂಟಾಗುವ ರೋಗ, ಜಲೋದರ(ನಿಚೂ)
ಡಂಕ. ಪು: [ದೇ] ಚೇಳಿನ ಮುಳ್ಳು(ಪಣ್ಣ), ಚೇಳು ಕಚ್ಚಿದ ಭಾಗ
ಡಂಕಿಯ. 'ಡಕ್ಕ=ದಷ್ಟ' ಶಬ್ದವನ್ನು ನೋಡುವುದು
ಡಂಗಾ. ಸ್ತ್ರೀ: [ದೇ] ಕೋಲು, ಕಡ್ಡಿ , ಯಷ್ಟಿ
ಡಂಡ. 'ದಂಡ' ಶಬ್ದವನ್ನು ನೋಡುವುದು
ಡಂಡ. ನ: [ದೇ] ಹೊಲಿದ ಬಟ್ಟೆಯ ತುಣುಕು
ಡಂಡಗಾ. ಸ್ತ್ರೀ: [ದಂಡಕಾ] ದಕ್ಷಿಣದ ಒಂದು ಪ್ರಸಿದ್ಧ ಅರಣ್ಯ
ಡಂಡಯ. ಪು: [ದೇ] ಬೀದಿ, ರಸ್ತೆ
ಡಂಡಾರಣ್ಣ. ನ: [ದಂಡಾರಣ್ಯ] ದಕ್ಷಿಣದ ಪ್ರಸಿದ್ಧವಾದ ದಂಡಕಾರಣ್ಯ(ಪಉಮ)
ಡಂಡಿ}. ಸ್ತ್ರೀ: [ದೇ] ಹೊಲಿದ ಬಟ್ಟೆಯ ಭಾಗ
ಡಂಡೀ}.
ಡಂಬರ. ಪು: [ದೇ] ಬೆವರು, ಉಷ್ಣತೆ, ಸೆಖೆ,
ಡಂಬರ. ಪು: [ಡಂಬರ] ಆಡಂಬರ, ಅಟ್ಟಹಾಸ
ಡಂಭ. 'ದಂಭ' ಶಬ್ದವನ್ನು ನೋಡುವುದು
ಡಂಭಣ. ನ: [ದಂಭನ] ಸುಡುವ ಶಸ್ತ್ರ–ವಿಶೇಷ
ಡಂಭಣ. ನ: [ದಂಭನ] ವಂದನೆ, ಮೋಸ
ಡಂಭಣಯಾ}. ಸ್ತ್ರೀ: [ದಂಭನಾ] ಸುಡುವುದು, ಮೋಸ,
ಡಂಭಣಾ}. ಕಪಟ, ವಂದನೆ(ಉಪ)
ಡಂಭಿಅ. ಪು: [ದೇ] ಜೂಜುಕೋರ, ಜೂಜಾಡುವವನು
ಡಂಭಿಅ. ವಿ: [ದಾಂಭಿಕ] ವಂಚಕ, ಮೋಸಗಾರ, ಕಪಟಿ(ಕುಮಾ)
ಡಂಸ. ಸಕ: [ದಂಶ್] ಕಚ್ಚು, ಕುಟುಕು
ಡಂಸ. ಪು: [ದಂಶ] ಕಾಡುನೊಣ, ತೊಣಚಿ, ದಂತ–ಕ್ಷತ, ಸರ್ಪ ಕಚ್ಚಿ ಉಂಟಾದ ಗಾಯ, ದೋಷ, ಖಂಡನೆ, ಹಲ್ಲು, ಕವಚ, ಮರ್ಮ–ಸ್ಥಾನ
ಡಂಸಣ. ಪುಂನ: [ದಂಶನ] ಕವಚ
ಡಕ್ಕ. ವಿ: [ದಷ್ಟ] ಕಚ್ಚಲ್ಪಟ್ಟ, ಹಲ್ಲಿನಿಂದ ಕಚ್ಚಲ್ಪಟ್ಟಿರುವ(ಗಾ)
ಡಕ್ಕ. ವಿ: [ದೇ] ಹಲ್ಲಿನಿಂದ ಹಿಡಿಯಲ್ಪಟ್ಟ
ಡಕ್ಕ. ಸ್ತ್ರೀನ: [ಡಕ್ಕ] ಒಂದು ವಾದ್ಯ
ಡಗಣ. ನ: [ದೇ] ಆನೆ, ಕುದುರೆ ಮೊದಲಾದ ಸಂಚರಿಸುವ ವಾಹನ–ವಿಶೇಷ
ಡಗಮಗ. ಅಕ: [ದೇ] ಅಲ್ಲಾಡು, ನಡುಗು
ಡಗಲ. ನ: [ದೇ] ಹಣ್ಣಿನ ತುಣುಕು(ನಿಚೂ), ಕಲ್ಲು ಇತ್ಯಾದಿಗಳ ಚೂರು(ಓಘ)
ಡಗ್ಗಲ. ನ: [ದೇ] ಮನೆಯ ಮೇಲಿನ ನೆಲ
ಡಜ್ಝ}. 'ಡಹ' ಶಬ್ದವನ್ನು ನೋಡುವುದು
ಡಜ್ಝಂತ}.
ಡಜ್ಝಮಾಣ}.
ಡಟ್ಠ. 'ಡಕ್ಕ=ದಷ್ಟ' ಶಬ್ದವನ್ನು ನೋಡುವುದು
ಡಡ್ಢ. ವಿ: [ದಗ್ಧ] ಸುಡಲ್ಪಟ್ಟ, ಉರಿದು ಹೋದ(ಗಾ)
ಡಡ್ಡಾಡೀ. ಸ್ತ್ರೀ: [ದೇ] ಬೆಂಕಿಯ ಮಾರ್ಗ, ಬೆಂಕಿಯ ಹಾದಿ
ಡಪ್ಫ. ನ: [ದೇ] ಭರ್ಜಿ, ಕೊಂತವೆಂಬ ಆಯುಧ
ಡಬ್ಭ. ಪು: [ದರ್ಭ] ದರ್ಭೆ, ಕುಶ
ಡಮಡಮ. ಅಕ: [ಡಮಡಮಾಯ್] 'ಡಮಡಮ' ಎಂದು ಶಬ್ದ ಮಾಡು, ಡಮರುಗದ ಶಬ್ದ
ಡಮಡಮಿಯ. ವಿ: [ಡಮಡಮಾಯಿತ] 'ಡಮಡಮ' ಎಂದು ಶಬ್ದ ಮಾಡಿದವನು(ಸುಪಾ)
ಡಮರ. ಪುಂನ: [ಡಮರ] ರಾಷ್ಟ್ರದೊಳಗಿನ ಅಥವಾ ಹೊರಗಿನ ದಂಗೆ, ಉಪದ್ರವ, ಹೊರಗಿನ ಅಥವಾ ಒಳಗಿನ ಉಪದ್ರವ(ಣಾಂಗಾ). ಕಲಹ, ಯುದ್ಧ(ಪಣ್ಣ)
ಡಮರುಅ}. ಪುಂನ: [ಡಮರುಕ] ಕಾಪಾಲಿಕ
ಡಮರುಗ}. ಯೋಗಿಗಳು ಬಾರಿಸುವ ಡಮರುಗ ವಾದ್ಯ
ಡರ. ಅಕ: [ತ್ರಸ್] ಹೆದರು, ಭಯಭೀತನಾಗು
ಡರ. ಪು: [ದರ] ಹೆದರಿಕೆ, ಭಯ, ಭೀತಿ
ಡರಿಅ. ವಿ: [ತ್ರಸ್ತ] ಭಯಗೊಂಡ, ಹೆದರಿದ(ಕುಮಾ)
ಡಲ. ಪು: [ದೇ] ಮಣ್ಣಿನ ಹೆಂಟೆ, ಮಲ
ಡಲ್ಲ. ಸಕ: [ಪಾ] ಕುಡಿ
ಡಲ್ಲ}. ನ: [ದೇ] ಹೂವು ಹಣ್ಣು ಹಾಕಿಡುವ ಬಿದಿರಿನ
ಡಲ್ಲಗ}. ಬುಟ್ಟಿ(ಆವಮ)
ಡಲ್ಲಾ. ಸ್ತ್ರೀ: [ದೇ] ರೆಂಬೆ

ಡಲ್ಲಿರ. ವಿ: [ಪಾತೃ] ಕುಡಿಯುವವನು(ಕುಮಾ)
ಡವ. ಸಕ: [ಆ+ರಭ್] ಆರಂಭಿಸು, ಶುರು ಮಾಡು
ಡವಡವ. ಅ: [ದೇ] ಮುಖ ಮೇಲೆಮಾಡಿ ವೇಗವಾಗಿ ಅತ್ತ ಇತ್ತ ಓಡಾಡುವುದು
ಡವ್ವ. ಪು: [ದೇ] ಎಡಗೈ
ಡಸ. 'ಡಂಸ' ಶಬ್ದವನ್ನು ನೋಡುವುದು
ಡಸಣ. ನ: [ದಶನ] ಹಲ್ಲಿನಿಂದ ಕಚ್ಚುವುದು, ಹಲ್ಲು ವಿ: ಕಚ್ಚುವವನು
ಡಸಿಅ. ವಿ: [ದಷ್ಟ] ಕಚ್ಚಲ್ಪಟ್ಟವನು
ಡಹ. ಸಕ: [ದಹ್] ಸುಡು, ಸುಟ್ಟು ಬೂದಿಮಾಡು
ಡಹಣ. ನ: [ದಹನ] ಸುಡುವುದು, ಬೂದಿಮಾಡು ಪು: ಬೆಂಕಿ, ವಿ: ಸುಡುವವನು
ಡಹರ. ಪು: [ದೇ] ಶಿಶು, ಬಾಲಕ, ವಿ: ಚಿಕ್ಕದಾದ, ಸಣ್ಣದಾದ, ಲಘುವಾದ. **–ಗ್ಗಾಮ.** ಪು: [–ಗ್ರಾಮ] ಚಿಕ್ಕ ಹಳ್ಳಿ
ಡಹರಕ. ಪು: [ದೇ] ಒಂದು ಬಗೆಯ ವೃಕ್ಷ, ಒಂದು ಜಾತಿಯ ಹೂವು
ಡಹರಿಯಾ. ಸ್ತ್ರೀ: [ದೇ] ಹದಿನೆಂಟು ವರ್ಷದವರೆಗಿನ ಹುಡುಗಿ(ವವ)
ಡಹರೀ. ಸ್ತ್ರೀ: [ದೇ] ಮಣ್ಣಿನ ಗಡಿಗೆ, ಮಣ್ಣಿನ ಕೊಡ
ಡಾಅಲ. ನ: [ದೇ] ಕಣ್ಣು, ನೇತ್ರ
ಡಾಇಣೀ. ಸ್ತ್ರೀ: [ಡಾಕಿನೀ] ಹೆಣ್ಣು ಭೂತ, ರಾಕ್ಷಸಿ, ಯಂತ್ರ–ಮಂತ್ರದಕಡೆಗೆ ಹೋಗುವವಳು(ಪಣ್ಣ)
ಡಾಲು. ಪು: [ದೇ] ಕಾಯಿ– ಪಲ್ಯೆ, ಎಲೆಯ ರೂಪದ ತರಕಾರಿ
ಡಾಗಿಣೀ. 'ಡಾಇಣೀ' ಶಬ್ದವನ್ನು ನೋಡುವುದು
ಡಾಗ. ನ: [ದೇ] ರೆಂಬೆ, ಕೊಂಬೆ
ಡಾಮರ. ವಿ: [ಡಾಮರ] ಭಯಂಕರ, ಪು: ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಮುನಿ
ಡಾಮರಿಯ. ವಿ: [ಡಾಮರಿಕ] ಯುದ್ಧ ಮಾಡುವನು,
ಡಾಯ(ದೇ). 'ಡಾಗ' ಶಬ್ದವನ್ನು ನೋಡುವುದು
ಡಾಯಾಲ. ನ: [ದೇ] ಉಪ್ಪರಿಗೆಯ ನೆಲ,
ಡಾಲ. ಸ್ತ್ರೀನ: [ದೇ] ಮರದ ಕೊಂಬೆ, ಕೊಂಬೆಯ ಒಂದು ಭಾಗ, ಸ್ತ್ರೀ: –ಲಾ., –ಲೀ
ಡಾವ. ಪು: [ದೇ] ಎಡಗೈ
ಡಾಹ. 'ದಾಹ' ಶಬ್ದವನ್ನು ನೋಡುವುದು
ಡಾಹರ. ಪು: [ದೇ] ಒಂದು ದೇಶ–ವಿಶೇಷ
ಡಾಹಾಲ. ಪು: [ದೇ] ಒಂದು ದೇಶ–ವಿಶೇಷ
ಡಾಹಿಣ. 'ದಾಹಿಣ' ಶಬ್ದವನ್ನು ನೋಡುವುದು
ಡಿಅಲೀ. ಸ್ತ್ರೀ: [ದೇ] ಕಂಬ, ಸ್ತಂಭ, ಗೂಟ
ಡಿಂಡವ. ವಿ: [ದೇ] ನೀರಿನಲ್ಲಿ ಬಿದ್ದಿರುವ
ಡಿಂಡಿಮ. ನ: [ಡಿಂಡಿಮ] ಹೆಸರಾಂತ ಚರ್ಮವಾದ್ಯವಾದ ಡಿಂಡಿಮ. ಕಂಚಿನ ಪಾತ್ರೆ
ಡಿಂಡಿಲ್ಲಿಅ. ನ: [ದೇ] ಎಣ್ಣೆಯ ಜಿಡ್ಡಿನಿಂದ ಮಲಿನವಾದ ಬಟ್ಟೆ, ಜಾರಿದ, ಚಲಿಸಿದ ಕೈ.
ಡಿಂಡೀ. ಸ್ತ್ರೀ: [ದೇ] ಹೊಲಿದ ಬಟ್ಟೆಯ ಒಂದು ಭಾಗ. **–ಬಂಧ.** ಪು: [–ಬಂಧ] ಗರ್ಭದಲ್ಲಿ ಹುಟ್ಟಿದ(ನಿಚೂ)
ಡಿಂಡೀರ. ಪುಂನ: [ಡಿಂಡೀರ] ಸಮುದ್ರದ ನೊರೆ.
ಡಿಂಡುಯಾಣ. ನ: [ಡಿಂಡುಯಾಣ] ಒಂದು ನಗರ.
ಡಿಂಫಿಅ. ವಿ: [ದೇ] ನೀರಿನಲ್ಲಿ ಬಿದ್ದಿರುವ
ಡಿಂಬ. ಪುಂನ: [ಡಿಂಬ] ಭಯ, ಹೆದರಿಕೆ, ವಿಘ್ನ, ಅಡ್ಡಿ, ವಿಪ್ಲವ, ದಂಗೆ
ಡಿಂಬ. ಪು: [ಡಿಂಬ] ಶತ್ರು ಸೈನ್ಯದ ಭಯ, ಪರ ಮಂಡಲದ ಹೆದರಿಕೆ
ಡಿಂಭ. ಅಕ: [ಸ್ರಂಸ್] ಕೆಳಕ್ಕೆ ಬೀಳಿಸು, ನಾಶವಾಗು
ಡಿಂಭ. ಪುಂನ: [ಡಿಂಭ] ಬಾಲಕ, ಶಿಶು, ಸಣ್ಣ ಮಗು.
ಡಿಂಭಿಯಾ. ಸ್ತ್ರೀ: [ಡಿಂಭಿಕಾ] ಚಿಕ್ಕ ಹುಡುಗಿ(ಣಾಯಾ)
ಡಿಕ್ಕ. ಅಕ: [ಗರ್ಜ್] (ಗೂಳಿ) ಗರ್ಜಿಸು, ಗೂಳಿಯ ಗರ್ಜನೆ
ಡಿಡ್ಡರ. ಪು: [ದೇ] ಕಪ್ಪೆ, ಮಂಡೂಕ
ಡಿತ್ಥ. ಪು: [ಡಿತ್ಥ] ಮರದ ಆನೆ, ನೋಡಲು ಸುಂದರನೂ ವಿದ್ವಾಂಸನೂ ಯುವಕನೂ ಮತ್ತು ನೋಡಲು ಪ್ರಿಯವೆನಿಸುವವನೂ ಆದ ವ್ಯಕ್ತಿ(ಭಾಸ)
ಡಿಪ್ಪ. ಅಕ: [ದೀಪ್] ಹೊತ್ತಿಸು, ಬೆಳಗು, ಹೊಳೆ
ಡಿಪ್ಪ. ಅಕ: [ವಿ+ಗಲ್] ಕೊಳೆ, ಬೀಳು
ಡಿಮಿಲ. ನ: [ದೇ] ಒಂದು ಬಗೆಯ ವಾದ್ಯ
ಡಿಲ್ಲೀ. ಸ್ತ್ರೀ: [ದೇ] ಒಂದು ಜಲಚರ ಪ್ರಾಣಿ
ಡಿವ. ಸಕ: [ಡಿಪ್] ಉಲ್ಲಂಘಿಸು, ಮೀರು, ದಾಟು
ಡೀಣ. ವಿ: [ದೇ] ಇಳಿದಿರುವ, ಮೇಲಿನಿಂದ ಕೆಳಕ್ಕೆ ಬಂದಿರುವ, ಅನ್ಯ ರೂಪದಿಂದ ಹುಟ್ಟಿರುವ
ಡೀಣೋವಯ. ನ: [ದೇ] ಮೇಲೆ, ಮೇಲುಗಡೆ, ಮೇಲುಭಾಗ

ಡೀರ. ನ: [ದೇ] ಹೊಸ ಚಿಗುರು(ದೇ)
ಡುಂಗರ. ಪು: [ದೇ] ಶೈಲ, ಪರ್ವತ, ಬೆಟ್ಟ
ಡುಂಘ. ಪು: [ದೇ] ತೆಂಗಿನ ಚಿಪ್ಪು, ಕರಟ
ಡುಂಡುಅ. ಪು: [ದೇ] ಹಳೆಯ ಘಂಟೆ, ದೊಡ್ಡ ಘಂಟೆ
ಡುಂಡುಕ್ಕಾ. ಸ್ತ್ರೀ: [ದೇ] ಒಂದು ಬಗೆಯ ವಾದ್ಯ
ಡುಂಡುಲ್ಲ. ಅಕ: [ಭ್ರಮ್] ಸುತ್ತು, ತಿರುಗು,
ಡುಂಬ. ಪು: [ದೇ] ಅಸ್ಪೃಶ್ಯ, ಶ್ವಪಚ, **'ಡೊಂಬ'** ಶಬ್ದವನ್ನು ನೋಡುವುದು
ಡುಜ್ಜಯ. ನ: [ದೇ] ಬಟ್ಟೆಯ ತುಣುಕು(ಸುಪಾ)
ಡುಲ. ಅಕ: [ದೋಲಯ್] ಅಲ್ಲಾಡು, ನಡುಗು, ಅತ್ತಿತ್ತ ಅಲುಗಾಡು
ಡುಲ್ಲಿ. ಪು: [ದೇ] ಆಮೆ
ಡುಹುಡುಹುಡುಹು. ಅಕ: [ಡುಹಡುಹಾಯ್] **'ಡುಹ, ಡುಹ'** ಎಂದು ಶಬ್ದ ಮಾಡು,
ಡೇಕುಣ. ಪು: [ದೇ] ತಗುಣೆ, ತಿಗಣೆ
ಡೆಡ್ಡುರ. ಪು: [ದೇ] ಕಪ್ಪೆ, ಮಂಡೂಕ
ಡೇರ. ವಿ: [ದೇ] ಮೆಳ್ಳೆ ಗಣ್ಣಿನವ, ಮಾಲಗಣ್ಣಿನವ, ವಂಡರ್ ಕಣ್ಣುಳ್ಳ
ಡೇವ. ಸಕ: [ಡಿಪ್] ಮೀರು, ಹಾರು, ಅತಿಕ್ರಮಿಸು
ಡೇವಣ. ನ: [ಡೇಪನ] ಮೀರುವುದು, ಅತಿಕ್ರಮಣ ಮಾಡುವುದು
ಡೋಅ. ಪು: [ದೇ] ಬೇಳೆ, ತರಕಾರಿ, ಸಾರು ಇತ್ಯಾದಿಗಳನ್ನೆಲ್ಲ ಬಡಿಸಲು ಬಳಸುವ ಮರದ ಸೌಟು
ಡೋಅಣ. ನ: [ದೇ] ಕಣ್ಣು, ಲೋಚನ(ದೇ)
ಡೊಂಗರ. **'ಡುಂಗರ'** ಶಬ್ದವನ್ನು ನೋಡುವುದು
ಡೊಂಗಿಲೀ. ಸ್ತ್ರೀ: [ದೇ] ತಾಂಬೂಲ ಕರಂಡಕ, ಎಲೆ ಅಡಿಕೆ ಡಬ್ಬಿ, ವೀಳ್ಯದೆಲೆ ಮಾರುವವನ ಹೆಂಡತಿ(ದೇ)
ಡೊಂಗೀ. ಸ್ತ್ರೀ: [ದೇ] ಮೈಗೆ ಗಂಧ ಮೊದಲಾದವುಗಳ ಲೇಪನ, ವೀಳ್ಯದೆಲೆ ಇಡುವ ಸಂಪುಟ
ಡೊಂಬ. ಪು: [ದೇ] ಮ್ಲೇಚ್ಛ ದೇಶ–ವಿಶೇಷ, ಒಂದು ಮ್ಲೇಚ್ಛ ಜಾತಿ(ಪಣ್ಣ)
ಡೊಂಬಿಲಗ}. ಪು: [ದೇ] ಒಂದು ಮ್ಲೇಚ್ಛ ದೇಶ
ಡೊಂಬಿಲಯ}. ಒಂದು ಆರ್ಯೇತರ ಜಾತಿ
ಡೊಕ್ಕರೀ. ಸ್ತ್ರೀ: [ದೇ] ಮುದಿ ಹೆಂಗಸು, ಮುದುಕಿ
ಡೋಡ. ಪು: [ದೇ] ಬ್ರಾಹ್ಮಣ
ಡೋಡಿಣೀ. ಸ್ತ್ರೀ: [ದೇ] ಬ್ರಾಹ್ಮಣಿತಿ
ಡೊಡ್ಡ. ಪು: [ದೇ] ಬ್ರಾಹ್ಮಣ ಜಾತಿ
ಡೋರ. ಪು: [ದೇ] ದಾರ, ಹುರಿ, ಹಗ್ಗ(ಗಾ)
ಡೋಲ. ಅಕ: [ದೋಲಯ್] ಅಲ್ಲಾಡು, ಅಲುಗಾಡು, ಅತ್ತಿತ್ತ ತೂಗಾಡು, ಸಂದೇಹಪಡು
ಡೋಲ. ಪು: [ದೇ] ನಾಲ್ಕು ಇಂದ್ರಿಯಗಳ ಒಂದು ಜೀವ
ಡೋಲ. ಪು: [ದೇ] ಕಣ್ಣು, ಲೋಚನ, ಒಂದು ಪ್ರಾಣಿ(ಬೃಹ)
ಡೋಲಾ. ಸ್ತ್ರೀ: [ದೋಲಾ] ತೂಗಾಡುವುದು, ಜೋಕಾಲಿ
ಡೋಲಾ. ಸ್ತ್ರೀ: [ದೇ] ಡೋಲಿ, ಪಲ್ಲಕ್ಕಿ, ಮೇನೆ
ಡೋಲಾಅಂತ. ವಿ: [ಡೋಲಾಯಮಾನ] ತೂಗುಯ್ಯಾಲೆ ಯಾಡುವುದು, ಸಂಶಯ ಪಡುವವನು
ಡೋಲಿಅ. ಪು: [ದೇ] ಕೃಷ್ಣಸಾರ, ಕಪ್ಪು ಜಿಂಕೆ
ಡೋಲಿರ. ವಿ: [ದೋಲವತ್] ತೂಗಾಡುವವನು, ಅಲುಗಾಡುವವನು
ಡೊಲ್ಲಣಗ. ಪು: [ದೇ] ನೀರಿನಲ್ಲಿ ಉತ್ಪತ್ತಿಯಾಗುವ ಜಂತು
ಡೋವ.(ದೇ). **'ಡೋಅ'** ಶಬ್ದವನ್ನು ನೋಡುವುದು. ಸ್ತ್ರೀ: –ವಾ.
ಡೋಸಿಣೀ. ಸ್ತ್ರೀ: [ದೇ] ಬೆಳುದಿಂಗಳು, ಜ್ಯೋತ್ಸ್ನಾ
ಡೋಹಲ. ಪು: [ದೋಹದ] ಗರ್ಭಿಣಿಯರ ಬಯಕೆ, ಅಭಿಲಾಷೆ, ಗಿಡ, ಬಳ್ಳಿಗಳಿಗೆ ಹೂಬಿಡಲು ಗರ್ಭಿಣಿಯರ ಪಾದಾಘಾತ(ಕಾಲಿನಿಂದ ಒದೆಯುವುದು) ಮೊದಲಾದವು, ಮನೋರಥ

ಢ

ಢ. ಪು: [ಢ] 'ಟ' ವರ್ಗದ ವ್ಯಂಜನಗಳಲ್ಲಿ ನಾಲ್ಕನೆಯದು. ಮೂರ್ಧನ್ಯ, ಮಹಾಪ್ರಾಣ, ಘೋಷ-ಸ್ಪರ್ಶ ವರ್ಣ.
ಢಂಕ. ಪು: [ದೇ] ಕಾಗೆ, ವಾಯಸ, -ವತ್ಥುಲ. ನ: [-ವಾಸ್ತುಲ] ಒಂದು ಬಗೆಯ ತರಕಾರಿ
ಢಂಕ. ಪು: [ಢಂಕ] ಕುಂಬಾರ ಜಾತಿಗೆ ಸೇರಿದ ಒಬ್ಬ ಜೈನ-ಉಪಾಸಕ.
ಢಂಕ. 'ಢಕ್ಕ' ಶಬ್ದವನ್ನು ನೋಡುವುದು
ಢಂಕಣ. ನ: [ದೇ. ಛಾದನ] ಮುಚ್ಚಳ, ಮುಚ್ಚುವ ತಟ್ಟೆ, ಮುಚ್ಚುವುದು(ಅಣು)
ಢಂಕಣ. 'ಢಿಂಕುಣ' ಶಬ್ದವನ್ನು ನೋಡುವುದು
ಢಂಕಣೀ. ಸ್ತ್ರೀ: [ದೇ. ಛಾದನೀ] ಮುಚ್ಚಳ, ಮುಚ್ಚುವ ತಟ್ಟೆ
ಢಂಕಿಅ. 'ಢಕ್ಕಿಅ' ಶಬ್ದವನ್ನು ನೋಡುವುದು
ಢಂಕುಣ. ಪು: [ದೇ] ತಗುಣೆ, ತಿಗಣೆ
ಢಂಕುಣ. ಪು: [ಢಂಕುಣ] ಒಂದು ವಾದ್ಯ
ಢಂಖ. 'ಢಂಕ=(ದೇ)' ಶಬ್ದವನ್ನು ನೋಡುವುದು
ಢಂಖರ. ಪುಂನ: [ದೇ] ಎಲೆ, ಹಣ್ಣುಗಳಿಲ್ಲದ ಕೊಂಬೆ
ಢಂಖರೀ. ಸ್ತ್ರೀ: [ದೇ] ಒಂದು ಬಗೆಯ ವೀಣೆ
ಢಂಢ. ಪು: [ದೇ] ಕೆಸರು, ಪಂಕ, ವಿ: ನಿರರ್ಥಕ, ನಿಷ್ಪ್ರಯೋಜಕ
ಢಂಢ. ಪು: [ಢಂಢಣ] ಢಣಾಢಣ ಋಷಿ
ಢಂಢ. ವಿ: [ದೇ] ಡಾಂಬಿಕ, ಕಪಟಿ
ಢಂಢಣ. ಪು: [ಢಂಢನ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಮುನಿ
ಢಂಢಣೀ. ಸ್ತ್ರೀ: [ದೇ] ನಸುಗುನ್ನಿ ಗಿಡ
ಢಂಢರ. ಪು: [ದೇ] ಪಿಶಾಚಿ, ಅಸೂಯೆ, ಹೊಟ್ಟೆಕಿಚ್ಚು
ಢಂಢರಿಅ. ಪು: [ದೇ] ಕೆಸರು, ಪಂಕ
ಢಂಢಲ್ಲ. ಸಕ: [ಭ್ರಮ್] ತಿರುಗಾಡು, ಸುತ್ತು, ಸಂಚರಿಸು
ಢಂಢಲ್ಲಿಅ. ವಿ: [ಭ್ರಾಂತ] ಸುತ್ತಾಡಿದ, ತಿರುಗಾಡಿದ, ಸಂಚರಿಸಿದ(ಕುಮಾ)
ಢಂಢಸಿಅ. ಪು: [ದೇ] ಊರಿನ ಯಕ್ಷ, ಊರಿನ ವೃಕ್ಷ(ದೇ)
ಢಂಢುಲ್ಲ. 'ಢಂಢಲ್ಲ' ಶಬ್ದವನ್ನು ನೋಡುವುದು
ಢಂಢೋಲ. ಸಕ: [ಗವೇಷಯ್] ಹುಡುಕು, ಅನ್ವೇಷಿಸು
ಢಂಢೋಲ್ಲ. 'ಢುಂಢುಲ್ಲ' ಶಬ್ದವನ್ನು ನೋಡುವುದು
ಢಂಸ. ಅಕ: [ವಿ+ವೃತ್] ಒಳಸೇರು, ಕೆಳಗೆ ಸರಿ, ಬಿದ್ದು ಹೋಗು
ಢಂಸಯ. ನ: [ದೇ] ಅಪಕೀರ್ತಿ, ಕುಖ್ಯಾತಿ
ಢಕ್ಕ. ಸಕ: [ಛಾದಯ್] ಆಚ್ಛಾದಿಸು, ಆವರಿಸು, ಮುಚ್ಚು. ಕೃ- ಢಕ್ಕೇಯವ್ವ'
ಢಕ್ಕ. ಪು: [ಢಕ್ಕ] ಒಂದು ದೇಶ, ಆ ದೇಶದಲ್ಲಿ ನಿವಾಸಿ, ವಂದಿ ಮಾಗಧರ ಒಂದು ವರ್ಗ.
ಢಕ್ಕಯ. ನ: [ದೇ] ತಿಲಕ
ಢಕ್ಕರಿ. ವಿ: [ದೇ] ಅದ್ಭುತ, ಆಶ್ಚರ್ಯ-ಜನಕ
ಢಕ್ಕವತ್ಥುಲ. 'ಢಂಕ-ವತ್ಥುಲ' ಢಣಾಢಣ ಋಷಿ
ಢಕ್ಕಾ. ಸ್ತ್ರೀ: [ಢಕ್ಕಾ] ಬುಡುಬುಡಿಕೆ ವಾದ್ಯ(ಸುಪಾ)
ಢಕ್ಕಿಅ. ವಿ: [ಛಾದಿತ] ಆಚ್ಛಾದಿಸಲ್ಪಟ್ಟ, ಮುಚ್ಚಲ್ಪಟ್ಟ, ಆವರಿಸಲ್ಪಟ್ಟ(ಕುಮಾ)
ಢಕ್ಕಿಅ. ನ: [ದೇ] ಗೂಳಿಯ ಗುಟುರು
ಢಗ್ಗಢಗ್ಗಾ. ಸ್ತ್ರೀ: [ದೇ] 'ಢಗ ಢಗ' ಎಂಬ ಶಬ್ದ, ನೀರು ಕುಡಿಯುವ ಶಬ್ದ
ಢಜ್ಜಂತ. 'ಡಜ್ಝಂತ' ಶಬ್ದವನ್ನು ನೋಡುವುದು
ಢಡ್ಢ. ಪು: [ದೇ] ಭೇರಿ ವಾದ್ಯ
ಢಡ್ಢರ. ಪು: [ದೇ] ರಾಹು
ಢಡ್ಢರ. ಪು: [ದೇ] ಭಾರೀ ಶಬ್ದ. ನ: ಗುರು ವಂದನೆಯಲ್ಲಿನ ಒಂದು ದೋಷ. ದೊಡ್ಡ ಗಂಟಲಿನಿಂದ ನಮಸ್ಕಾರ ಮಾಡುವುದು. ವಿ: ಮುದುಕ, ವೃದ್ಧ
ಢಣಿಯ. ವಿ: [ಧ್ವನಿತ] ಶಬ್ದ ಮಾಡಲ್ಪಟ್ಟ,
ಢಮರ. ನ: [ದೇ] ಅಡಿಗೆ ಪಾತ್ರೆ, ಬಿಸಿ ನೀರು
ಢಯರ. ಪು: [ದೇ] ಅಸೂಯೆ, ಹೊಟ್ಟೆಕಿಚ್ಚು, ಪಿಶಾಚ
ಢಲ. ಅಕ: [ದೇ] ತೊಟ್ಟಿಕ್ಕು, ಹನಿಹನಿಯಾಗಿ ಬೀಳು, ಭಾಗು
ಢಲಹಲಯ. ವಿ: [ದೇ] ಮೃದು, ಕೋಮಲ
ಢಲಿಯ. ವಿ: [ದೇ] ಜರುಗಿ ಬಿದ್ದ, ಸರಿದ
ಢಾಲ. ಸಕ: [ದೇ] ಕೆಳಕ್ಕೆ ಬೀಳಿಸು, ಚಾಮರ ಇತ್ಯಾದಿಗಳನ್ನು ಬೀಸು(ಸುಪಾ)
ಢಾಲಿಅ. ವಿ: [ದೇ] ಕೆಳಕ್ಕೆ ಬೀಳಿಸಲ್ಪಟ್ಟ
ಢಾವ. ಪು: [ದೇ] ಆಗ್ರಹ ಹಟ, ಒತ್ತಾಯ,

ಢಿಂಕ. **ಪು:** [**ಢಿಂಕ**] ಒಂದು ಪಕ್ಷಿ(ಪಣ್ಹಾ)
ಢಿಂಕಣ}. **ಪು:** [**ದೇ**] ಹಸು, ಎಮ್ಮೆಗಳಿಗೆ ಹತ್ತುವ
ಢಿಂಕುಣ}. ಉಣ್ಣೆ
ಢಿಂಕಲೀಅ. **ಸ್ತ್ರೀ:** [**ದೇ**] ಪಾತ್ರೆ
ಢಿಂಗ. **'ಢಿಂಕ'** ಶಬ್ದವನ್ನು ನೋಡುವುದು
ಢಿಂಢಯ. **ವಿ:** [**ದೇ**] ನೀರಿನಲ್ಲಿ ಬಿದ್ದಿರುವ
ಢಿಕ್ಕ. **ಅಕ:** [**ಗರ್ಜ್**] (ಗೂಳಿ) ಗರ್ಜಿಸು
ಢಿಕ್ಕಯ. **ನ:** [**ದೇ**] ಸದಾ, ಯಾವಾಗಲೂ, ದಿನವೂ
ಢಿಕ್ಕಿಯ. **ನ:** [**ಗರ್ಜನ**] ಗೂಳಿಯ ಗರ್ಜನೆ
ಢಿಡ್ಢಿಸ. **ನ:** [**ಢಿಡ್ಢಿಸ**] ದೇವ ವಿಮಾನ
ಢಿಲ್ಲಿ. **ಸ್ತ್ರೀ:** [**ಢಿಲ್ಲೀ**] ಭರತ ಖಂಡದ ಹಿಂದಿನ ಮತ್ತು ಇಂದಿನ ರಾಜಧಾನಿ ದೆಹಲಿ ನಗರ. **–ನಾಹ.** **ಪು:** [**–ನಾಥ**] ದೆಹಲಿಯ ದೊರೆ
ಢಿಲ್ಲ. **ವಿ:** [**ದೇ**] ಸಡಿಲವಾದ
ಢುಂಢುಲ್ಲ. **ಸಕ:** [**ಭ್ರಮ್**] ತಿರುಗು, ಸುತ್ತಾಡು, ಸಂಚರಿಸು
ಢುಂಢುಲ್ಲ. **ಸಕ:** [**ಗವೇಷಯ್**] ಹುಡುಕು, ಅನ್ವೇಷಿಸು
ಢುಂಢುಲ್ಲಣ. **ನ:** [**ಗವೇಷಣ**] ಹುಡುಕಾಟ, ಅನ್ವೇಷಣೆ(ಕುಮಾ)
ಢುಂಢುಲ್ಲಿಅ. **ವಿ:** [**ಗವೇಷಿತ**] ಹುಡುಕಲ್ಪಟ್ಟ, ಅನ್ವೇಷಿಸಲಾದ(ಪಾಅ)
ಢುಕ್ಕ. **ಸಕ:** [**ಢೌಕ್**] ಕಾಣಿಕೆ ಕೊಡು, ಅರ್ಪಿಸು ಹಾಜರುಪಡಿಸು **ಅಕ:** ತೊಡಗು, ಪ್ರವೃತ್ತನಾಗು, ಸೇರು, ಸಿಕ್ಕು
ಢುಕ್ಕ. **ಸಕ:** [**ಪ್ರ+ವಿಶ್**] ಪ್ರವೇಶಿಸು
ಢುಕ್ಕ. **ವಿ:** [**ದೇ. ಢೌಕಿತ**] ಹತ್ತಿರಕ್ಕೆ ಬಂದಿರುವ, ಪ್ರಾಪ್ತವಾಗಿರುವ, ಸೇರಿರುವ, ತೊಡಗಿದ
ಢುಕ್ಕಿಅ. **ವಿ:** [**ಢೌಕಿತ**] ಮೇಲಿನ ಶಬ್ದವನ್ನು ನೋಡುವುದು
ಢುಕ್ಕಲುಕ್ಕ. **ನ:** [**ದೇ**] ಚರ್ಮದಿಂದ ಮಾಡಿದ ವಾದ್ಯ
ಢಮ}. **ಸಕ:** [**ಭ್ರಮ್**] ತಿರುಗಾಡು, ಸುತ್ತಾಡು
ಢುಸ}.
ಢುರುಢುಲ್ಲ. **'ಢುಂಢುಲ್ಲ=ಭ್ರಮ್'** ಶಬ್ದವನ್ನು ನೋಡುವುದು
ಢೆಂಕ. **ಪು:** [**ಢೇಂಕ**] ಒಂದು ಬಗೆಯನೀರುಹಕ್ಕಿ
ಢೆಂಕಾ. **ಸ್ತ್ರೀ:** [**ದೇ**] ಹರ್ಷ, ಸಂತೋಷ, ರಾಟೆ
ಢೆಂಕಿಯ. **'ಢಿಕ್ಕಿಯ'** ಶಬ್ದವನ್ನು ನೋಡುವುದು
ಢೆಂಕೀ. **ಸ್ತ್ರೀ:** [**ದೇ**]– ಬಲಾಕ ಪಕ್ಷಿ, ಬಕಪಕ್ಷಿ
ಢೆಂಕುಣ. **ಪು:** [**ದೇ**] ತಗುಣೆ (=ತಿಗಣೆ)
ಢೆಂಢಿಅ. **ವಿ:** [**ದೇ**] ಧೂಪವನ್ನು ನೀಡಲಾಗಿರುವ
ಢೇಣಿಯಾಲಗ}. **ಪುಂಸ್ತ್ರೀ:** [**ಢೇಣಿಕಾಲಕ**] ಒಂದು
ಢೇಣಿಯಾಲಯ}. ಪಕ್ಷಿ–ವಿಶೇಷ. **ಸ್ತ್ರೀ:**[**–ಲಿಯಾ**]
ಢೆಲ್ಲ. **ವಿ:** [**ದೇ**] ಬಡವ, ಹಣವಿಲ್ಲದವನು
ಢೋಅ. **'ಢುಕ್ಕ=ಢೌಕ'** ಶಬ್ದವನ್ನು ನೋಡುವುದು
ಢೋಇಯ. **ವಿ:** [**ಢೌಕಿತ**] ಕಾಣಿಕೆ ಕೊಡಲಾದ, ಅರ್ಪಿಸಲಾದ, ಪ್ರಾಪ್ತ ಮಾಡಲ್ಪಟ್ಟ(ಸುಪಾ)
ಢೊಂಘರ. **ವಿ:** [**ದೇ**] ತಿರುಗುವ ಸ್ವಭಾವದ, ಸುತ್ತಾಡುತ್ತಿರುವ, ತಿರುಗು ಜೀವಿ
ಢೋಯಣ. **'ಢೋವಣ'** ಶಬ್ದವನ್ನು ನೋಡುವುದು
ಢೋಯಣಿಯಾ. **ಸ್ತ್ರೀ:** [**ಢೌಕನಿಕಾ**] ಕಾಣಿಕೆ, ಕೊಡುಗೆ
ಢೊಲ್ಲ. **ಪು:** [**ದೇ**] ಪತಿ, ಪ್ರಿಯ
ಢೊಲ್ಲ. **ಪು:** [**ದೇ**] ಡೋಲು, ಪಟಹ, ಭೇರಿ, ಧೌಲಪುರವನ್ನು ರಾಜಧಾನಿಯಾಗುಳ್ಳ ದೇಶ
ಢೋವಿಯ. **ವಿ:** [**ಢೌಕಿತ**] ಹತ್ತಿರಕ್ಕೆ ತಂದಿಡಲಾದ, ಹಾಜರು ಪಡಿಸಲಾದ

ಣ, ನ

ಣ. ಪು: [ನ] ಮೂರ್ಧನ್ಯ ವರ್ಣ. ಅನುನಾಸಿಕ-ಘೋಷ- ಸ್ಪರ್ಶ ವರ್ಣ

ಣ. ಅ: [ನ] ನಿಷೇಧಾರ್ಥಕ ಅವ್ಯಯ, ಇಲ್ಲ, ಅಲ್ಲ, ಬೇಡ. **-ಉಣ, ಉಣಾ, -ಉಣಾಇ. -ಉಣೋ.** ಅ: [ಪುನಃ] ಇಲ್ಲವಲ್ಲ, ಅದಲ್ಲ, **-ಸಂತಿಪರಲೋಗವಾಇ.** ವಿ: [-ಶಾಂತಿಪರಲೋಕವಾದಿನ್] ಮೋಕ್ಷ ಮತ್ತು ಪರಲೋಕ ಎಂಬುವು ಇಲ್ಲ ಎಂದು ಒಪ್ಪುವವರು.

ಣ. ಸ: [ತತ್] ಅವನು

ಣ. ಸ: [ಇದಮ್] 'ಇವನು, ಇದು' ಎಂದು ಎದುರಿಗೆ ಕಾಣುತ್ತಿರುವ, ಸಮೀಪದಲ್ಲಿರುವವರನ್ನು ಉದ್ದೇಶಿಸಿ ಹೇಳುವುದು

ಣ. ವಿ: [ಜ್ಞ] ತಿಳಿದವನು, ಪಂಡಿತ, ವಿಚಕ್ಷಣ(ಕುಮಾ)

ಣಅ. 'ಣವ=ನವ' ಶಬ್ದವನ್ನು ನೋಡುವುದು. **-ದೀಅ.** ಪು: [-ದ್ವೀಪ] ಬಂಗಾಳದ ಒಂದು ಪ್ರಸಿದ್ಧ ನಗರ.

ಣಅಂಚರ. 'ಣತ್ತಂಚರ' ಶಬ್ದವನ್ನು ನೋಡುವುದು

ಣಇ. ಸ್ತ್ರೀ: [ನತಿ] ನಮಸ್ಕರಿಸುವುದು, ಬಗ್ಗುವುದು ನಮ್ರತೆ, ಅಂತ್ಯ

ಣಇ. ಅ: ನಿಶ್ಚಯ ಸೂಚಕ ಅವ್ಯಯ, ನಿಷೇಧಾರ್ಥಕ ಅವ್ಯಯ

ಣಇ- 'ಣಈ' ಶಬ್ದವನ್ನು ನೋಡುವುದು

ಣಇಅ. ವಿ: [ನಯಿಕ] ನಯದಿಂದ ಕೂಡಿದ, ಅಭಿಪ್ರಾಯ-ವಿಶೇಷವುಳ್ಳ

ಣಇಅ. 'ಣೇ=ನೀ' ಶಬ್ದವನ್ನು ನೋಡುವುದು

ಣಇಮಾಸಯ. ನ: [ದೇ] ನೀರಿನಲ್ಲಿ ಬೆಳೆಯುವ ಒಂದು ಫಲ

ಣಇರಾಯ. ನ: [ನೈರಾತ್ಮ್ಯ] ಆತ್ಮದ ಅಭಾವ, **-ವಾದ.** ಪು: [-ವಾದ] ಆತ್ಮದ ಅಸ್ತಿತ್ವವನ್ನು ಒಪ್ಪದಿರುವ ಬೌದ್ಧ ಮತ್ತು ಚಾರ್ವಾಕ ದರ್ಶನಗಳು

ಣಈ. ಸ್ತ್ರೀ: [ನದೀ] ಪರ್ವತದಲ್ಲಿ ಹುಟ್ಟಿ ಇನ್ನೊಂದು ನದಿಯನ್ನೋ ಸಮುದ್ರವನ್ನೋ ಸೇರುವ ಆ ಹೊಳೆ, ಅಥವಾ ಹರಿವು. **-ಕಚ್ಛ.** ಪು: [-ಕಚ್ಛ] ನದಿಯ ದಡದ ಮೇಲಿನ ಸಸಿಗಳ ಸಮೂಹ, ಪೊದರು(ಣಾಯಾ), **-ಗಾಮ.** ಪು: [-ಗ್ರಾಮ] ನದಿಯ ದಡದ ಮೇಲಿರುವ ಊರು. **-ಣಾಹ.** ಪು: [-ನಾಥ] ಸಮುದ್ರ, ಸಾಗರ(ಉಪ). **-ವಇ.** ಪು: [-ಪತಿ] ಸಮುದ್ರ, ಸಾಗರ. **-ಸಂತಾರ.** ಪು: [-ಸಮತಾರ] ಹಡಗು ಇತ್ಯಾದಿಗಳ ಮೂಲಕ ನದಿಯನ್ನು ದಾಟುವುದು. **-ಸೋತ್ತ.** ಪು: [-ಸ್ರೋತಸ್] ನದಿಯ ಪ್ರವಾಹ

ಣಉ(ಅಪ). 'ಇವ' ಶಬ್ದವನ್ನು ನೋಡುವುದು.

ಣಉಮ. ನ: [ನಯುತ] **'ನಯುತಾಂಗ'** ವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ

ಣಉಅಂಗ. ನ: [ನಯುತಾಂಗ] **'ಪ್ರಯುತ'** ವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ

ಣಉಇ. ಸ್ತ್ರೀ: [ನವತಿ] ತೊಂಬತ್ತು

ಣಉಇಯ. ವಿ: [ನವತ] ತೊಂಬತ್ತನೆಯ(ಪಉಮ)

ಣಉಲ. ಪು: [ನಕುಲ] ಮುಂಗುಸಿ. ಐದನೆಯ ಪಾಂಡವ, ಒಂದು ವಾದ್ಯ-ವಿಶೇಷ

ಣಉಲೀ. ಸ್ತ್ರೀ: [ನಕುಲೀ] ಸರ್ಪವಿದ್ಯೆಯ ಪ್ರತಿಪಕ್ಷ ವಿದ್ಯೆ, ಜಟಾಮಾಂಸಿ, ಒಂದು ಮಹೌಷಧಿ

ಣ. ಅ: [ದೇ] 'ಪ್ರಶ್ನೆ' ಮತ್ತು 'ಉಪಮೆ' ಗಳನ್ನು ಸೂಚಿಸುವ ಅವ್ಯಯ

ಣಂ. ಅ: [ದೇ] ವಾಕ್ಯಾಲಂಕಾರದಲ್ಲಿ ಬಳಕೆಯಾಗುವ ಅವ್ಯಯ. 'ಒಪ್ಪಿಗೆ'ಯನ್ನು ದ್ಯೋತಿಸುವ ಅವ್ಯಯ.

ಣಂ (ಶೌ). **'ಣಣು'** ಶಬ್ದವನ್ನು ನೋಡುವುದು

ಣಂ(ಅಪ). 'ಇವ' ಶಬ್ದವನ್ನು ನೋಡುವುದು

ಣಂಗಅ. ವಿ: [ದೇ] ತಡೆಹಿಡಿಯಲ್ಪಟ್ಟಿರುವ, ತಡೆಯಲಾಗಿರುವ, ಪ್ರತಿಬಂಧಿಸಲಾಗಿರುವ

ಣಂಗರ. ಪ: [ದೇ] ಸಮುದ್ರದಲ್ಲಿ ಹಡಗನ್ನು ನಿಲ್ಲಿಸಲು ನೀರಿನಲ್ಲಿ ಹಾಕಿರುವ ಹಗ್ಗವಾದ 'ಲಂಗರು.'

ಣಂಗರ}. ನ: [ಲಾಂಗಲ] ನೇಗಿಲು(ಪಉಮ)

ಣಂಗಲ}.

ಣಂಗಲ. ಪುಂನ: [ದೇ] ಕೊಕ್ಕು, ಮೂತಿ

ಣಂಗಲಿ. ಪು: [ಲಾಂಗಲಿನ್] ಬಲರಾಮ, ಹಲಿ (ಕುಮಾ)

ಣಂಗಲಿಯ. ಪು: [ಲಾಂಗಲಿಕ] ನೇಗಿಲಿನ ಆಕೃತಿಯ ಆಯುಧಗಳನ್ನು ಹಿಡಿಯುವ ಯೋಧ(ಔಪ)

ಣಂಗೂಲ. ನ: [ಲಾಂಗೂಲ] ಬಾಲ
ಣಂಗೂಲಿ. ವಿ: [ಲಾಂಗೂಲಿನ್] ಉದ್ದನೆಯ ಬಾಲವುಳ್ಳ, ಪು: ಕೋತಿ, ವನರ(ಕುಮಾ)
ಣಂಗೂಲಿ. 'ಣಂಗೋಲಿ' ಶಬ್ದವನ್ನು ನೋಡುವುದು
ಣಂಗೋಲ. 'ಣಂಗೂಲ.' ಶಬ್ದವನ್ನು ನೋಡುವುದು
ಣಂಗೋಲಿ}. ಪು: [ಲಾಂಗೂಲಿನ್,-ಕ] ಅಂತರ್
ಣಂಗೋಲಿಯ}. ದ್ವಿಪ, ಅದರಲ್ಲಿ ವಾಸಿಸುವವನು.
ಣಂತಗ. ನ: [ದೇ] ವಸ್ತ್ರ, ಬಟ್ಟೆ(ಆವ)
ಣಂದ. ಅಕ: [ನಂದ್] ಸಂತಸಪಡು, ಸಮೃದ್ಧಗೊಳ್ಳು
ಣಂದ. ಪು: [ನಂದ] ಪಾಟಲಿಪುತ್ರದ ಹೆಸರಾಂತ ರಾಜನಾಗಿದ್ದವನು. ಭರತ ಕ್ಷೇತ್ರದ ಭಾವೀ ಪ್ರಥಮ ವಾಸುದೇವ. ಭರತ ಕ್ಷೇತ್ರದಲ್ಲಿ ಆಗಲಿರುವ ಒಂಬತ್ತನೇ ತೀರ್ಥಂಕರನ ಹಿಂದಿನ ಜನ್ಮದ ಹೆಸರು. ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಮುನಿ. ಖ್ಯಾತನಾದ ಒಬ್ಬ ಶ್ರೇಷ್ಠಿ, ನ: ದೇವ-ವಿಮಾನ. ಕಬ್ಬಿಣದ ಗುಂಡನೆಯ ಆಸನ. ವಿ: ಸಂವೃದ್ಧವಾಗುವ(ಔಪ). **-ಕಂತ.** ನ: [-ಕಾಂತ] ಒಂದು ದೇವ-ವಿಮಾನ. **-ಕೂಡ.** ನ: [-ಕೂಟ] ಒಂದು ದೇವ- ವಿಮಾನ-ವಿಶೇಷ. **-ಜಝಯ.** ನ: [-ಧ್ವಜ] ಒಂದು ದೇವ-ವಿಮಾನ. **-ಪ್ಪಭ.** ನ: [-ಪ್ರಭ] ಒಂದು ದೇವ-ವಿಮಾನ. **-ಮಈ.** ಸ್ತ್ರೀ: [-ಮತೀ] ಒಬ್ಬ ಅಂತಕೃತ ಸಾಧ್ವಿ, **-ಮಿತ್ತ.** ಪು: [-ಮಿತ್ರ] ಭರತ ಕ್ಷೇತ್ರದಲ್ಲಿ ಹುಟ್ಟಲಿರುವ ದ್ವಿತೀಯ ವಾಸುದೇವ. **-ಲೇಸ.** ನ: [-ಲೇಶ್ಯ] ಒಂದು ದೇವ-ವಿಮಾನ. **-ವಈ.** ಸ್ತ್ರೀ: [-ವತೀ] ಏಳನೇ ವಾಸುದೇವನ ತಾಯಿ. (ಪಉಮ). ರತಿಕರ ಪರ್ವತದ ಮೇಲಿರುವ ಒಂದು ದೇವ ನಗರಿ. **-ವಣ್ಣ.** ನ: [-ವರ್ಣ] ಒಂದು ದೇವ-ವಿಮಾನ. **-ಸಿಂಗ.** ನ: [-ಶೃಂಗ] ಒಂದು ದೇವ-ವಿಮಾನ. **-ಸಿಟ್ಠ.** ನ: [-ಸೃಷ್ಟ] ಒಂದು ದೇವ-ವಿಮಾನ. **-ಸಿರೀ.** ಸ್ತ್ರೀ; [-ಶ್ರೀ] ತನ್ನ ಹೆಸರಿನಿಂದ ಖ್ಯಾತಳಾದ ಒಬ್ಬ ಶ್ರೇಷ್ಠಿ ಕನ್ಯೆ. **-ಸೇಣಿಯಾ.** ಸ್ತ್ರೀ:[-ಸೇನಿಕಾ] ಒಬ್ಬ ಜೈನ-ಸಾಧ್ವಿ,
ಣಂದ. ಪು: [ನಂದ] ಶ್ರೀಕೃಷ್ಣನ ಸಾಕು-ತಂದೆಯಾದ ನಂದ ಗೋಪ.
ಣಂದ. ಪುಂಸ್ತ್ರೀ: [ನಂದಾ] ಪಕ್ಷದ ಮೊದಲ ದಿನವಾದ ಪಾಡ್ಯ, ಷಷ್ಠಿ ಮತ್ತು ಏಕಾದಶಿ ತಿಥಿ
ಣಂದ. ನ: [ದೇ] ಕಬ್ಬನ್ನು ಅರೆಯುವ ಗಾಣ, ಒಂದು ಪಾತ್ರೆ
ಣಂದಗ. ಪು: [ನಂದಕ] ವಾಸುದೇವನ ಖಡ್ಗ(ಪಣ್ಣ)
ಣಂದಣ. ಪು: [ನಂದನ] ಪುತ್ರ, ಹುಡುಗ(ಗಾ), ರಾಮನ ಹೆಸರಾಂತ ಯೋಧ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಬಲದೇವ. ಭರತ ಕ್ಷೇತ್ರದ ಭಾವೀ ಏಳನೇ ವಾಸುದೇವ. ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಶ್ರೇಷ್ಠಿ. ಶ್ರೇಣಿಕ ಮಹಾರಾಜನ ಒಬ್ಬ ಮಗ. ಮೇರು ಪರ್ವತದ ಮೇಲಿರುವ ಒಂದು ಪ್ರಸಿದ್ಧ ವನ(ಠಾ). ಒಂದು ಚೈತ್ಯ. ವೃದ್ಧಿ. ಒಂದು ನಗರ-ವಿಶೇಷ. (ಉಪ). **-ಕರ.** ವಿ: [-ಕರ] ವೃದ್ಧಿಯನ್ನುಂಟುಮಾಡುವ, **-ಕೂಡ.** ನ: [-ಕೂಟ] ನಂದನವನದ ಶಿಖರ. **-ಭದ್ದ.** ನ: [-ಭದ್ರ] ಒಬ್ಬ ಜೈನ ಮುನಿ. **-ವಣ.** ನ: [-ವನ] ಮೇರು ಪರ್ವತದ ಮೇಲಿರುವ ಒಂದು ಪ್ರಸಿದ್ಧ ವನ. ಒಂದು ಉದ್ಯಾನ
ಣಂದಣ. ಪು: [ದೇ] ದಾಸ, ಸೇವಕ
ಣಂದಣ. ಪುಂನ: [ನಂದನ] ಒಂದು ದೇವ-ವಿಮಾನ, ನ: ಸಂತೋಷ.
ಣಂದಣಾ. ಸ್ತ್ರೀ: [ನಂದನಾ] ಮಗಳು
ಣಂದಣೀ. ಸ್ತ್ರೀ: [ನಂದನೀ] ಹುಡುಗಿ,
ಣಂದತಣಯ. ಪು: [ನಂದತನಯ] ಶ್ರೀ ಕೃಷ್ಣ
ಣಂದಮಾಣಗ. ಪು: [ನಂದಮಾನಕ] ಪಕ್ಷಿಯ ಒಂದು ಜಾತಿ
ಣಂದಯಾವತ್ತ}. ಪುಂನ: [ನಂದಾವರ್ತ] ಒಂದು
ಣಂದಾವತ್ತ}. ದೇವ ವಿಮಾನ, ಪು: ನಾಲ್ಕು ಇಂದ್ರಿಯಗಳ ಒಂದು ಪ್ರಾಣಿ ಜಾತಿ. ನಿರಂತರ ಇಪ್ಪತ್ತು ದಿನಗಳ ವರೆಗೆ ಉಪವಾಸ
ಣಂದಾ. ಸ್ತ್ರೀ: [ನಂದಾ] ಭಗವನ್ ವೃಷಭದೇವನ ಹೆಂಡತಿ(ಪ), ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ ಮತ್ತು ಅಭಯಕುಮಾರನ ತಾಯಿ (ಣಾಯಾ). ಭಗವಾನ್ ಶ್ರೀ ಶೀತಲನಾಥನ ತಾಯಿ. ಭಗವಾನ್ ಮಹಾವೀರರ ಅಚಲ ಭ್ರಾತೃ ಎಂಬ ಹೆಸರಿನ ಗಣಧರರ ತಾಯಿ. ರಾವಣನ ಒಬ್ಬ ಹೆಂಡತಿ. ಪಶ್ಚಿಮ ರುಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುವಾರಿ ದೇವಿ. ಈಶಾನೇಂದ್ರನ ಒಬ್ಬ ಅಗ್ರ-ಮಹಿಷಿಯ

ರಾಜಧಾನಿ. ಒಂದು ಹೆಸರಾಂತ ಪುಷ್ಕರಿಣಿ. ಜ್ಯೋತಿಶ್ಯಾಸ್ತ್ರದಲ್ಲಿ ಪ್ರಸಿದ್ಧವಾದ ಪಾಡ್ಯ, ಷಷ್ಠಿ ಮತ್ತು ಏಕಾದಶಿ ತಿಥಿಗಳು(ಚಂದ)

ಣಂದಾ. ಸ್ತ್ರೀ: [ದೇ] ಹಸು

ಣಂದಾವತ್ತ. ಪು: [ನಂದಾವರ್ತ್ತ] ಒಂದು ಬಗೆಯ ಸ್ವಸ್ತಿಕ, ಕ್ಷುದ್ರ ಪ್ರಾಣಿಯ ಒಂದು ಜಾತಿ, ನ: ಒಂದು ದೇವ ವಿಮಾನ-ವಿಶೇಷ.

ಣಂದಿ: **ಪುಂಸ್ತ್ರೀ:** [ನಂದಿ] ೧೨ ಬಗೆಯ ವಾದ್ಯಗಳು ಒಟ್ಟಿಗೇ ಸದ್ದು ಮಾಡುವುದು, ಒಟ್ಟಿಗೇ ಬಾರಿಸುವುದು. ಪ್ರಮೋದ, ಸಂತೋಷ, ಮತಿ ಜ್ಞಾನವೇ ಮೊದಲಾದ ಐದೂ ಜ್ಞಾನಗಳು. ಬಯಸಿದ ಸಂಪತ್ತು ದೊರಕುವುದು, ಮಂಗಳ, ಸಮೃದ್ಧಿ, ಜೈನ ಆಗಮ ಗ್ರಂಥ-ವಿಶೇಷ(ಣಂದಿ), ಇಚ್ಛೆ, ಅಭಿಲಾಷೆ. ಗಾಂಧಾರ ಎಂಬ ಹಳ್ಳಿಯ ಒಬ್ಬ ಮೂರ್ಛಾ ಪೀಡಿತಳು. ಒಬ್ಬ ಹೆಸರಾಂತ ರಾಜಕುಮಾರ. ತನ್ನ ಮುಂದಿನ ಜನ್ಮದಲ್ಲಿ ಎರಡನೇ ಬಲದೇವನಾಗಿ ಹುಟ್ಟಲಿರುವ ಒಬ್ಬ ಜೈನ-ಮುನಿ(ಪಉಮ). ನಂದಿ ಮರ. **□ಆವತ್ತ. 'ಯಾವತ್ತ'** ಶಬ್ದವನ್ನು ನೋಡುವುದು. **□ಉಡ್ಢ.** **ಪು:** [-ವೃದ್ಧ] ಒಬ್ಬ ಪ್ರಾಚೀನ ಕವಿಯ ಹೆಸರು(ಕಪ್ಪ). **□ಕರ, -ಗರ.** ವಿ: [-ಕರ] ಮಂಗಳ ಕಾರಕ(ಣಾಯಾ). **□ಗಾಮ.** **ಪು:** [-ಗ್ರಾಮ] ಒಂದು ಗ್ರಾಮ-ವಿಶೇಷ(ಉಪ). **-ಘೋಸ.** **ಪು:** [-ಘೋಷ] ೧೨ ಬಗೆಯ ವಾದ್ಯಗಳ ಶಬ್ದ. ನ: ದೇವ-ವಿಮಾನ. **-ಚುಣ್ಣಗ.** **ನ:** [-ಚೂರ್ಣಕ] ತುಟಿಯ ಮೇಲೆ ಹಚ್ಚಿಕೊಳ್ಳುವ ಒಂದು ಬಗೆಯ ಪುಡಿ.**-ತೂರ.** **ನ:** [-ತೂಯ] ಒಟ್ಟೊಟ್ಟಿಗೇ ಬಾರಿಸಲಾಗುತ್ತಿರುವ ೧೨ ಬಗೆಯ ವಾದ್ಯಗಳು (ಬೃಹ). **-ಪುರ.** ನ: [-ಪುರ] ಸಾಂಡಿಲ್ಯ ದೇಶದ ಒಂದು ನಗರ. **-ಫಲ.** **ಪು:** [-ಫಲ] ಒಂದು ಬಗೆಯ ವೃಕ್ಷ. **-ಭಾಣ.** ನ: [-ಭಾಜನ] ಒಂದು ಬಗೆಯ ಉಪಕರಣ. **-ಮಿತ್ತ.** **ಪು:** [-ಮಿತ್ರ] **'ಣಂದ-ಮಿತ್ತ'** ಶಬ್ದವನ್ನು ನೋಡುವುದು. ಮಲ್ಲಿನಾಥನೊಂದಿಗೆ ದೀಕ್ಷೆ ಸ್ವೀಕರಿಸಿದ್ದ ಒಬ್ಬ ರಾಜಕುಮಾರ(ಣಾಯಾ).**-ಮುಇಂಗ.** **ಪು:** [-ಮೃದಂಗ] ಒಂದು ಬಗೆಯ ಮೃದಂಗ-ವಾದ್ಯ. **-ಮುಹ.** ನ: [-ಮುಖ] ಒಂದು ಪಕ್ಷಿ. **□ಯರ. '-ಕರ'** ಶಬ್ದವನ್ನು ನೋಡುವುದು. **-ಯವತ್ತ.** **ಪು:** [-ಆವರ್ತ] ಒಂದು ಬಗೆಯ ಸ್ವಸ್ತಿಕ(ಔಪ). ಒಬ್ಬ ಲೋಕಪಾಲ-ದೇವ. ಒಂದು ಕ್ಷುದ್ರ ಜಂತು. ನ: ಒಂದು ದೇವ-ವಿಮಾನ. **-ರಾಯ.** **ಪು:** [-ರಜ] ಪಾಂಡವರ ಸಮಕಾಲೀನನಾದ ಒಬ್ಬ ರಾಜ. **-ರಾಯ.** **ಪು:** [-ರಾಗ] ಸಮೃದ್ಧಿಯಲ್ಲಿ ಸಂತೋಷ(ಭಗ), **-ರುಕ್ಖ.** **ಪು:** [-ವೃಕ್ಷ] ನಂದಿ ಮರ. **-ವಡ್ಢಣಾ. '-ವದ್ಧಣಾ'** ಶಬ್ದವನ್ನು ನೋಡುವುದು. **-ವದ್ಧಣ.** **ಪು:** [-ವರ್ಧನ] ಭಗವಾನ್ ಮಹಾವೀರರ ಅಣ್ಣ(ಕಪ್ಪ). ಪಕ್ಷ-ವಿಶೇಷ. ಒಬ್ಬ ರಾಜಕುಮಾರ. ನ: ಒಂದು ನಗರ. **-ವದ್ಧಣಾ.** ಸ್ತ್ರೀ: [-ವರ್ಧನಾ] ಒಬ್ಬ ದಿಕ್ಕುಮಾರಿ ದೇವಿ, ಒಂದು ಪುಷ್ಕರಿಣಿ(ಠಾ). **-ಸೇಣ.** **ಪು:** [-ಷೇಣ] ಐರಾವತ ಕ್ಷೇತ್ರದಲ್ಲಿ ಹುಟ್ಟಿದ ನಾಲ್ಕನೇ ಜಿನದೇವ, ಒಬ್ಬ ಜೈನ ಕವಿ, ಒಬ್ಬ ರಾಜಕುಮಾರ. ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನಮುನಿ, ದೇವ-ವಿಶೇಷ. **-ಸೇಣಾ.** ಸ್ತ್ರೀ: [ಷೇಣಾ] ಒಂದು ಪುಷ್ಕರಿಣಿ. ಒಬ್ಬ ದಿಕ್ಕುಮಾರಿ ದೇವಿ. **-ಸೇಣಿಯಾ.** ಸ್ತ್ರೀ: [-ಷೇಣಿಕಾ] ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ. **-ಸ್ಸರ.** **ಪು:** [-ಸ್ವರ] **'ಣಂದೀಸರ'** ಶಬ್ದವನ್ನು ನೋಡುವುದು. ಏಕಕಾಲಕ್ಕೆ ಹನ್ನೆರಡು ವಿಧದ ವಾದ್ಯಗಳ ಶಬ್ದ ಕೇಳಿಬರುವುದು.

ಣಂದಿಅ. ನ: [ದೇ] ಸಿಂಹದ ಗರ್ಜನೆ(ದೇ)

ಣಂದಿಅ. ವಿ: [ನಂದಿತ] ಸಂತೋಷ ಪಟ್ಟಿರುವ, ಆನಂದ(ಔಪ). ಒಬ್ಬ ಜೈನಮುನಿ.

ಣಂದಿಕ್ಕ. **ಪು:** [ದೇ] ಸಿಂಹ, ಮೃಗರಾಜ

ಣಂದಿಘೋಸ. **ಪು:** [ನಂದಿಘೋಷ] ವಾದ್ಯ-ವಿಶೇಷ

ಣಂದಿಜ್ಜ. ನ:[ನಂದೀಯ] ಜೈನ ಮುನಿಗಳ ಒಂದು ಕುಲ

ಣಂದಿಣೀ. ಸ್ತ್ರೀ: [ನಂದಿನೀ] ಮಗಳು, ಹುಡುಗಿ. **-ಪಿಉ.** **ಪು:** [-ಪಿತೃ] ಭಗವಾನ್ ಮಹಾವೀರರ ಒಬ್ಬ ಒಬ್ಬ ಹೆಸರಾಂತ ಗೃಹೀ-ಭಕ್ತ.

ಣಂದಿಣೀ. ಸ್ತ್ರೀ: [ದೇ] ಹಸು.

ಣಂದಿಲ. **ಪು:** [ನಂದಿಲ] ಆಯಮಂಗುವಿನ ಶಿಷ್ಯನಾದ ಒಬ್ಬ ಜೈನ ಮುನಿ

ಣಂದಿಸ್ಸರ}. **ಪು:** [ನಂದೀಶ್ವರ] ಒಂದು ದ್ವೀಪ, ಒಂದು

ಣಂದೀಸರ}. ಸಮುದ್ರ, ಒಂದು ದೇವ-ವಿಮಾನ.

ಣಂದೀ. 'ಣಂದಿ' ಶಬ್ದವನ್ನು ನೋಡುವುದು.
ಣಂದೀ. ಸ್ತ್ರೀ: [ದೇ] ಹಸು.
ಣಂದೀಸರ. ಪು: [**ನಂಧೀಶ್ವರ**] ಒಂದು ಪ್ರಖ್ಯಾತ ದ್ವೀಪ. **–ವರ.** ಪು: [**–ವರ**] ನಂದೀಶ್ವರ ದ್ವೀಪ)(ಠಾ); **–ವರೋದ.** ಪು: [**–ವರೋದ**] ಸಮುದ್ರ–ವಿಶೇಷ.
ಣಂದುತ್ತರ. ಪು: [**ನಂದೋತ್ತರ**] ನಾಗಕುಮಾರನ ಭೂತಾನಂದನೆಂಬ ಹೆಸರಿನ ಇಂದ್ರನ ರಥ–ಸೈನ್ಯದ ಅಧಿಪತಿ–ದೇವ. **–ವಡಿಸಂಗ.** ನ: [**ನಂದೋತ್ತರಾವತಂಸಕ**] ಒಂದು ದೇವ–ವಿಮಾನ.
ಣಂದುತ್ತರಾ. ಸ್ತ್ರೀ: [**ನಂದೋತ್ತರಾ**] ಪಶ್ಚಿಮ ರುಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುಮಾರಿ ದೇವತೆ. ಕೃಷ್ಣಾ ಎಂಬ ಇಂದ್ರಾಣಿಯ ಒಂದು ರಾಜಧಾನಿ. ಒಂದು ಪುಷ್ಕರಿಣಿ. ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ.
ಣಕಾರ. ಪು: [**ಣಕಾರ, ನಕಾರ**] '**ಣ**' **ಅಥವಾ** '**ನ**' ಅಕ್ಷರ
ಣಕ್ಕ. ಪು: [**ನಕ್ರ**] ಮೊಸಳೆ(ಪಣ್ಣ), ರಾವಣನ ಒಬ್ಬ ಖ್ಯಾತ ಯೋಧ(ಪಉಮ).
ಣಕ್ಕ. ಪು: [ದೇ] ಮೂಗು, ವಿ: ಮೂಗ, ಮೂಕ; ಮಾತಾಡಲಾಗದವನು. **–ಸಿರಾ.** ಸ್ತ್ರೀ: [**–ಸಿರಾ**] ಮೂಗಿನ ಹೊಳ್ಳೆ, ಮೂಗಿನ ತೂತು(ಪಾಅ)
ಣಕ್ಕಂಚರ. ಪು: [**ನಕ್ತಂಚರ**] ರಾಕ್ಷಸ, ಗೂಢಚಾರ, ಬೆಕ್ಕು, ವಿ: ರಾತ್ರಿಯಲ್ಲಿ ಸಂಚರಿಸುವವನು.
ಣಕ್ಖ. ಪು: [**ನಖ**] ಉಗುರು, **–ಅ.** ವಿ: [**–ಜ**] ಉಗುರಿನಿಂದ ಹುಟ್ಟಿದ(ಗಾ); **–ಆಉಹ.** ಪು: [**–ಆಯುಧ**] ಸಿಂಹ.
ಣಕ್ಖತ್ತ. ಪುಂನ: [**ನಕ್ಷತ್ರ**] ಅಶ್ವಿನಿ, ಭರಣಿ, ಕೃತ್ತಿಕಾದಿ ಆಕಾಶ ಕಾಯಗಳಾದ ನಕ್ಷತ್ರಗಳು. **–ದಮಣ.** ಪು:[**–ದಮನ**] ರಾಕ್ಷಸ–ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ(ಪಉಮ). **–ಮಾಸ.** ಪು: [**–ಮಾಸ**] ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ಸಮಯದ ಮಾನಗಳಾದ ಚೈತ್ರ, ವೈಶಾಖಾದಿ ಮಾಸಗಳು. **–ಮುಹ.** ನ: [**–ಮುಹ**] ಚಂದ್ರ. **–ಸಂವಚ್ಛರ.** ಪು: [**–ಸಂವತ್ಸರ**] ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ವರ್ಷ–ವಿಶೇಷ.
ಣಕ್ಖತ್ತ. ವಿ: [**ನಕ್ಷತ್ರ**] ಕ್ಷತ್ರಿಯ ಜಾತಿಗೆ ಯೋಗ್ಯವಲ್ಲದ ಕಾರ್ಯ ಮಾಡುವವನು. ಪುಂನ: ಒಂದು ದೇವ–ವಿಮಾನ
ಣಕ್ಖತ್ತ. ವಿ: [**ನಾಕ್ಷತ್ರ**] ನಕ್ಷತ್ರಕ್ಕೆ ಸಂಬಂಧಿಸಿದ.
ಣಕ್ಖತ್ತಣೇಮಿ. ಪು: [**ದೇ. ನಕ್ಷತ್ರನೇಮಿ**] ವಿಷ್ಣು, ನಾರಾಯಣ
ಣಕ್ಖನ್ನಣ. ನ: [ದೇ] ಉಗುರು ಮತ್ತು ಮುಳ್ಳನ್ನು ತೆಗೆಯುವ ಒಂದು ಆಯುಧ, ಉಪಕರಣ.
ಣಕ್ಖಿ.ವಿ: [**ನಖಿನ್**] ಸುಂದರವಾದ ಉಗುರುಗಳನ್ನುಳ್ಳ (ಬೃಹ)
ಣಖ. 'ಣಕ್ಖ' ಶಬ್ದವನ್ನು ನೋಡುವುದು
ಣಗ. '**ಣಯ=ನಗ**' ಶಬ್ದವನ್ನು ನೋಡುವುದು. **–ರಾಯ.** ಪು: [**–ರಾಜ**] ಮೇರು ಪರ್ವತ **–ವರ.** ಪು: [**–ವರ**] ಶ್ರೇಷ್ಠ ಪರ್ವತ. **–ವರಿಂದ.** ಪು: [**–ವರೇಂದ್ರ**] ಮೇರು ಪರ್ವತ(ಪಉಮ)
ಣಗರ. ನ: [**ನಕರ, ನಗರ**] ಪಟ್ಟಣ, ಪುರ. **–ಗುತ್ತಿಯ, –ಗೋತ್ತಿಯ.** ಪು: [**–ಗುಪ್ತಿಕ**] ನಗರ–ರಕ್ಷಕ. ಕೊತವಾಲ(ಔಪ). **–ಘಾಯ.** ಪು: [**–ಘಾತ**] ನಗರದಲ್ಲಿ ಲೂಟಿ–ಕೊಳ್ಳೆ. **–ಣಿದ್ಧಮಣ.** ನ: [**ನಿರ್ಧಮನ**] ನಗರದ ನೀರು ಹರಿಯುವ ದಾರಿ, ಮೋರಿ(ಣಾಯಾ). **–ರಕ್ಖಿಯ.** ಪು: [**–ರಕ್ಷಿಕ**] '**ಗುತ್ತಿಯ**' ಶಬ್ದವನ್ನು ನೋಡುವುದು. **ಣಗರಾವಾಸ.** ಪು: [**ನಗರಾವಾಸ**] ರಾಜಧಾನಿ.
ಣಗರೀ. '**ಣಯರೀ**' ಶಬ್ದವನ್ನು ನೋಡುವುದು.
ಣಗಾಣಿಆ. ಸ್ತ್ರೀ: [**ನಗಾಣಿಕಾ**] ಒಂದು ಛಂದಸ್ಸು.
ಣಗಿಂದ. ಪು: [**ನಗೇಂದ್ರ**] ಶ್ರೇಷ್ಠ ಪರ್ವತ, ಮೇರು ಪರ್ವತ
ಣಗಿಣ. ವಿ: [**ನಗ್ನ**] ಬೆತ್ತಲೆ(ಆಚಾ)
ಣಗ್ಗ. ವಿ: [**ನಗ್ನ**] ಬೆತ್ತಲೆ. **–ಇ.** ಪು: [**–ಜಿತ್**] ಗಾಂಧಾರ ದೇಶದ ಒಬ್ಬ ಖ್ಯಾತ ರಾಜ(ಔಪ)
ಣಗ್ಗ. '**ಣಗ**' ಶಬ್ದವನ್ನು ನೋಡುವುದು
ಣಗ್ಗಠ. ವಿ: [ದೇ] ಹೊರಕ್ಕೆ ಹಾಕಲಾದ, ಹೊರಗೆ ಹೋಗಿರುವ, ಹೊರಟು ಹೋದ
ಣಗ್ಗೋಹ. ಪು: [**ನ್ಯಗ್ರೋಧ**] ಆಲದ ಮರ(ಪಾಅ) **–ಪರಿಮಂಡಲ.** ನ: [**–ಪರಿಮಂಡಲ**] ಒಂದು ಸಂಸ್ಥಾನ, ಶರೀರದ ಆಕಾರ–ವಿಶೇಷ(ಠಾ)
ಣಘುಸ. ಪು: [**ನಘುಷ**] ಖ್ಯಾತನಾದ ಒಬ್ಬ ರಾಜ
ಣಚಿರಾ. '**ಅಇರಾ=ಅಚಿರಾತ್**' ಶಬ್ದವನ್ನು ನೋಡುವುದು.
ಣಚ್ಚ. ಅಕ: [**ನೃತ್**] ನರ್ತಿಸು, ನಾಟ್ಯ ಮಾಡು

ಣಚ್ಚ. ನ: [ಜ್ಞತ್ವ] ತಿಳಿವು, ಪಾಂಡಿತ್ಯ
ಣಚ್ಚ. ನ: [ನೃತ್ಯ] ನರ್ತನ, ನಾಟ್ಯ
ಣಚ್ಚಗ. ವಿ: [ನರ್ತಕ] ನೃತ್ಯ ಮಾಡುವವನು, ಪು: ನಟ, ನರ್ತಕ(ವವ)
ಣಚ್ಚಣ. ನ: [ನರ್ತನ] ನೃತ್ಯ, ನಾಟ್ಯ
ಣಚ್ಚಣೀ. ಸ್ತ್ರೀ: [ನರ್ತನೀ] ನರ್ತಿಸುವವಳು, ನರ್ತಕಿ (ಕುಮಾ)
ಣಚ್ಚಾ}. 'ಣಾ=ಜ್ಞಾ' ಶಬ್ದವನ್ನು ನೋಡುವುದು.
ಣಚ್ಚಾಣ}.
ಣಚ್ಚಾವಿಅ. ವಿ: [ನರ್ತಿತ] ನರ್ತನ ಮಾಡಿಸಲ್ಪಟ್ಟ(ಓಘ)
ಣಚ್ಚಾಸನ್ನ. ನ: [ನಾತ್ಯಾಸನ್ನ] ಅತಿ ಸಮೀಪವಲ್ಲ.
ಣಚ್ಚಿರ. ವಿ: [ನರ್ತಿತೃ] ನೃತ್ಯ ಮಾಡುವವನು, ನರ್ತಕ
ಣಚ್ಚಿರ. ವಿ: [ದೇ] ರಮಣ–ಶೀಲ
ಣಚ್ಚುಣ್ಹ. ವಿ: [ನಾತ್ಯುಷ್ಣ] ತುಂಬಾ ಬಿಸಿಯಲ್ಲದಿರುವ, ಅತಿ ಬಿಸಿಯಲ್ಲದ
ಣಜ್ಜ. ಸಕ: [ಜ್ಞಾ] ಅರಿಯುವುದು, ತಿಳಿಯುವುದು
ಣಜ್ಜ. ವಿ: [ನ್ಯಾಯ್ಯ] ನ್ಯಾಯ ಸಂಗತವಾದ
ಣಜ್ಜಂತ}. 'ಣಾ=ಜ್ಞಾ' ಶಬ್ದವನ್ನು ನೋಡುವುದು.
ಣಜ್ಜಮಾಣ}.
ಣಜ್ಜರ. ವಿ: [ದೇ} ಮಲಿನ, ಕೊಳೆಯಾದ
ಣಜ್ಝರ. ವಿ: [ದೇ] ನಿರ್ಮಲ, ಶುಭ್ರವಾದ
ಣಟ್ಟ. ಅಕ: [ನಟ್] ನರ್ತಿಸು. ಸಕ: ಹಿಂಸಿಸು
ಣಟ್ಟ. ಪು: [ನಟ] ನರ್ತಕರ ಒಂದು ಜಾತಿ
ಣಟ್ಟ. ನ: [ನಾಟ್ಯ] ನೃತ್ಯ, ಗೀತ ಮತ್ತು ವಾದ್ಯ. ನಟ=ಕರ್ಮ. –ಪಾಲ. ಪು: [–ಪಾಲ] ನಾಟ್ಯದ ಯಜಮಾನ, ಸೂತ್ರಧಾರ, –ಮಾಲಯ. ಪು: [–ಮಾಲಕ] ಖಂಡ–ಪ್ರಪಾತ ಗುಹೆಯ ಅಧಿಷ್ಠಾತೃ –ದೇವ. (ಠಾ). ಣಟ್ಟಾಅರಿಅ. ಪು: [ನಾಟ್ಯಾಚಾರ್ಯ] ಸೂತ್ರಧಾರ
ಣಟ್ಟ. ನ: [ನೃತ್ಯ] ನಾಟ್ಯ, ನರ್ತನ
ಣಟ್ಟಅ. ನ: [ನಾಟ್ಯಕ] 'ಣಟ್ಟ=ನಾಟ್ಯ' ಶಬ್ದವನ್ನು ನೋಡುವುದು.
ಣಟ್ಟಅ}. ವಿ: [ನರ್ತಕ] ನೃತ್ಯ ಮಾಡುವವನು,
ಣಟ್ಟಗ}. ಸ್ತ್ರೀ: –ಇ
ಣಟ್ಟಾರ. ಪು: [ನಾಟ್ಯಕಾರ] ನಾಟ್ಯ ಮಾಡುವವನು
ಣಟ್ಟಾವಅ. ವಿ: [ನರ್ತಕ] ನರ್ತನ ಮಾಡಿಸುವವನು (ಕಪ್ಪೂ)
ಣಟ್ಟಿಯಾ. ಸ್ತ್ರೀ: [ನರ್ತಿಕಾ] ನಟಿ, ನರ್ತಕಿ
ಣಟ್ಟುಮತ್ತ. ಪು: [ನರ್ತುಮತ್ತ] ಒಬ್ಬ ಹೆಸರಾಂತ ವಿದ್ಯಾಧರ
ಣಟ್ಠ. ವಿ: [ನಷ್ಟ] ನಾಶವಾದ, ಕಳೆದು ಹೋದ, ಅಹೋರಾತ್ರಿಯ ಹದಿನೇಳನೇ ಮುಹೂರ್ತ. –ಸುಇಅ. ವಿ: [–ಶ್ರುತಿಕ] ಕಿವುಡನಾಗಿರುವವನು, ಶಾಸ್ತ್ರದ ವಾಸ್ತವ ಜ್ಞಾನ ವಿಲ್ಲದಿರುವವನು
ಣಟ್ಠ. ಪು: [ನಷ್ಟ] ಒಂದು ನರಕ–ಸ್ಥಾನ, ನ: ಪಲಾಯನ
ಣಟ್ಠವ. ವಿ: [ನಷ್ಟವತ್] ನಾಶ ಹೊಂದಿದ, ನ: ಅಹೋರಾತ್ರಿಯ ಒಂದು ಮುಹೂರ್ತ
ಣಡ. ಅಕ: [ಗುಪ್] ದುಃಖಿತನಾಗು, ವ್ಯಾಕುಲಗೊಳ್ಳು, ಸಕ: ದುಃಖಿತಗೊಳಿಸು
ಣಡ. 'ಣಲ=ನಡ' ಶಬ್ದವನ್ನು ನೋಡುವುದು.
ಣಡ. ಪು: [ನಟ] ನರ್ತಕರ ಒಂದು ಜಾತಿ, ನಟ. –ಖಾಇಯಾ. ಸ್ತ್ರೀ: [–ಖಾದಿತಾ] ಒಂದು ಬಗೆಯ ದೀಕ್ಷೆ, ನಟನ ಹಾಗೆ ನಕಲಿ ಒಳ್ಳೆಯತನ
ಣಡ. 'ಣಟ್ಟ=ನಟ್' ಶಬ್ದವನ್ನು ನೋಡುವುದು.
ಣಡ. 'ಣಲ=ನಡ' ಶಬ್ದವನ್ನು ನೋಡುವುದು.
ಣಡಾಲ. ನ: [ಲಲಾಟ] ಹಣೆ(ಗಉಡ)
ಣಡಾಲಿಆ. ಸ್ತ್ರೀ: [ಲಲಾಟಿಕ] ಹಣೆಯ ಮೇಲೆ ಧರಿಸುವ ಆಭರಣ, ತಿಲಕ, ಚಂದನವೇ ಮೊದಲಾದವುಗಳಿಂದ ಮಾಡಿದ ಬಟ್ಟು ಇಟ್ಟುಕೊಳ್ಳುವುದು(ಕುಮಾ)
ಣಡಾವಿಅ. ವಿ: [ಗೋಪಿತ] ವ್ಯಾಕುಲಗೊಳಿಸಲ್ಪಟ್ಟ, ದುಃಖಿತನಾಗಿಸಲಾದ(ಸುಪಾ)
ಣಡಿಅ. ವಿ: [ಗುಪಿತ] ವ್ಯಾಕುಲ
ಣಡಿಅ. ವಿ: [ದೇ] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ, ಚಿಂತೆಗೀಡಾಗಿಸಲ್ಪಟ್ಟ(ಣಾಯಾ)
ಣಡೀ. ಸ್ತ್ರೀ: [ನಟೀ] ನಟನ ಹೆಂಡತಿ(ಗಾ), ನರ್ತಕಿ, ಒಂದು ಬಗೆಯ ಲಿಪಿ
ಣಡುಲೀ. ಸ್ತ್ರೀ: [ದೇ] ಆಮೆ
ಣಡುರೀ. ಸ್ತ್ರೀ: [ದೇ] ಕಪ್ಪೆ
ಣಡುಲ. ನ: [ದೇ] ಮೈಥುನ, ಸಂಭೋಗ, ಮೋಡ ಕವಿದ ದಿನ
ಣಡೂಲ. ನ: [ನಡ್ಡುಲ] ನಗರ–ವಿಶೇಷ, ಪು: ದೇಶ–ವಿಶೇಷ
ಣಡ್ಡುಲೀ. 'ಣಡುಲೀ' ಶಬ್ದವನ್ನು ನೋಡುವುದು.

ಣಣಂದಾ. ಸ್ತ್ರೀ: [ನನಾಂದೃ] ಗಂಡನ ಸೋದರಿ
ಣಣು. ಅ: [ನನು] ಅವಧಾರಣ, ನಿಶ್ಚಯ, ಆಶಂಕೆ, ವಿತರ್ಕ, ಪ್ರಶ್ನೆ, ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ಣಣ್ಣ. ಪು: [ದೇ] ಬಾವಿ, ದುಷ್ಟ, ದುರ್ಜನ, ಅಣ್ಣ
ಣತ್ತ. ನ: [ನಕ್ತ] ರಾತ್ರಿ, ಇರುಳು
ಣತ್ತ. 'ಣತ್ತು' ಶಬ್ದವನ್ನು ನೋಡುವುದು.
ಣತ್ತಂಚರ. 'ಣಕ್ಕಂಚರ' ಶಬ್ದವನ್ನು ನೋಡುವುದು (ಕುಮಾ)
ಣತ್ತಣ. ನ: [ನರ್ತನ] ನೃತ್ಯ, ನರ್ತನ
ಣತ್ತಿ. ಸ್ತ್ರೀ: [ಜ್ಞಪ್ತಿ] ಜ್ಞಾನ
ಣತ್ತಿಅ. ಪು: [ನಪ್ತೃಕ] ಮಗನ ಮಗ; ಮೊಮ್ಮಗ, ಪೌತ್ರ, ಮಗಳ ಮಗ-ದೌಹಿತ್ರ (ಕುಮಾ)
ಣತ್ತಿಆ}. ಸ್ತ್ರೀ: [ನಪ್ತ್ರೀ] ಮಗನ ಮಗಳು; ಮೊಮ್ಮಗಳು.
ಣತ್ತೀ}. ಮಗಳ ಮಗಳು;
ಣತ್ತು}. ಪು: [ನಪ್ತೃ, -ಕ] **'ಣತ್ತಿಅ'** ಶಬ್ದವನ್ನು
ಣತ್ತುಅ}. ನೋಡುವುದು.
ಣತ್ತುಆ. **'ಣತ್ತಿಆ'** ಶಬ್ದವನ್ನು ನೋಡುವುದು(ಬೃಹ)
ಣತ್ತುಣಿಅ. ಪು: [ನಪ್ತೃ] ಮೊಮ್ಮಗ(=ಮಗನ ಮಗ), ಮೊಮ್ಮಗ.
ಣತ್ತುಣೀ. ಸ್ತ್ರೀ: [ನಪ್ತೃಕಿನೀ] ಮೊಮ್ಮಗನ(ಪೌತ್ರ)ಹೆಂಡತಿ, ದೌಹಿತ್ರನ(ಮಗಳಮಗ) ಹೆಂಡತಿ(ವಿಪಾ)
ಣತ್ತುಈ. **'ಣತ್ತೀ'** ಶಬ್ದವನ್ನು ನೋಡುವುದು.
ಣತ್ತುಣಿಆ. **'ಣತ್ತಿಆ'** ಶಬ್ದವನ್ನು ನೋಡುವುದು.
ಣತ್ಥ. ವಿ: [ನ್ಯಸ್ತ] ಇಡಲ್ಪಟ್ಟ, (ಣಾಯಾ)
ಣತ್ಥಣ. ನ: [ದೇ] ಮೂಗಿನಲ್ಲಿ ತೂತು ಮಾಡುವುದು
ಣತ್ಥಾ. ಸ್ತ್ರೀ: [ದೇ] ಮೂಗಿನ ದಾರ
ಣತ್ಥಿ.ಅ:[ನಾಸ್ತಿ] ಅಭಾವವನ್ನು (ಇಲ್ಲದಿರುವಿಕೆಯನ್ನು) ಸೂಚಿಸುವ ಅವ್ಯಯ (ಕಪ್ಪ)
ಣತ್ಥಿಅ. ವಿ: [ನಾಸ್ತಿಕ] ದೇವರು, ಪರಲೋಕ ಇತ್ಯಾದಿಗಳನ್ನು ನಂಬದ, ಒಪ್ಪದ ವ್ಯಕ್ತಿ. **ಪು:** ನಾಸ್ತಿಕ ಮತದ ಪ್ರವರ್ತಕನಾದ ಚಾರ್ವಾಕ. **-ವಾಯ.** ಪು: [-ವಾದ] ನಾಸ್ತಿಕ ದರ್ಶನ(ಉಪ)
ಣತ್ಥಿಯವಾಇ. ವಿ: [ನಾಸ್ತಿಕವಾದಿನ್] ಆತ್ಮದ ಅಸ್ತಿತ್ವವನ್ನು ಒಪ್ಪದವನು
ಣದ. ಸಕ: [ನದ್] ಶಬ್ದ ಮಾಡು, ನಾದ ಮಾಡು. ವ. ಕೃ-ಣದಂತ
ಣದ. ಪು: [ನದ] ನಾದ, ಶಬ್ದ
ಣದೀ. 'ಣಈ' ಶಬ್ದವನ್ನು ನೋಡುವುದು.
ಣದ್ದಿಅ. ವಿ: [ದೇ] ದುಃಖಿತ
ಣದ್ದಿಅ. ನ: [ನರ್ದಿತ] ಘೋಷ, ಕೂಗು, ಶಬ್ದ, ಮೊಳಗು, ಕೂಗಿದ, ಮೊಳಗಿದ
ಣದ್ಧ.ವಿ: [ನದ್ಧ] ಬಂಧಿಸಲ್ಪಟ್ಟ, ಆಚ್ಛಾದಿಸಲ್ಪಟ್ಟ ನಿಯಂತ್ರಿತ, ಕವಚ ತೊಟ್ಟಿರುವ
ಣದ್ಧ. ವಿ: [ದೇ] ಮೇಲಕ್ಕೆ ಹತ್ತಿದ, ಏರಿದ, ಹತ್ತಲ್ಪಟ್ಟ
ಣದ್ಧಂಬವಯ.ನ: [ದೇ] ದಯೆಯ ಅಭಾವ, ನಿಂದೆ
ಣಪಹುತ್ತ. ವಿ: [ಅಪ್ರಭೂತ]ಪರ್ಯಾಪ್ತವಲ್ಲದ(ಗಉಡ)
ಣಪಹುಪ್ಪಂತ. ವಿ: [ಅಪ್ರಭವತ್] ಸಾಕಾಗದಿರುವುದು
ಣಪುಂಸ}. ಪುಂನ: [ನಪುಂಸಕ] ನಪುಂಸಕ,
ಣಪುಂಸಗ}. ಪುಂಸತ್ವವಿಲ್ಲದ, ಷಂಡ. **-ವೇಯ.**
ಣಪುಂಸಯ}.ಪು: [-ವೇದ] ಕರ್ಮ-ವಿಶೇಷ: ಇದು ಹುಟ್ಟುವುದರಿಂದ ಹೆಂಗಸು ಮತ್ತು ಗಂಡಸು ಇಬ್ಬರಲ್ಲೂ ಸ್ಪರ್ಶಿಸಬೇಕೆಂಬ ಇಚ್ಛೆ ಹುಟ್ಟುತ್ತದೆ.
ಣಪ್ಪ. ಸಕ: [ಜ್ಞಾ] ತಿಳಿದುಕೊಳ್ಳು, ಅರಿ
ಣಭ. **'ಣಹ=ನಭಸ್'** ಶಬ್ದವನ್ನು ನೋಡುವುದು.
ಣಭಸೂರಯ. ಪು: [ನಭಃಶೂರಕ] ಕೃಷ್ಣ-ಪುದ್ಗಲ-ವಿಶೇಷ, ರಾಹು
ಣಮ. ಸಕ: [ನಮ್] ನಮಸ್ಕರಿಸು, ಣಮಾಮಿ, ವ. ಕೃ-ಣಮಂತ
ಣಮಂಸ. ಸಕ: [ನಮಸ್ಯ] ನಮಸ್ಕರಿಸು
ಣಮಂಸಣ. ನ: [ನಮಸ್ಯನ] ನಮಸ್ಕಾರ, ನಮನ(ಅಜೀ)
ಣಮಂಸಣಯಾ.}. ಸ್ತ್ರೀ: [ನಮಸ್ಯನಾ] ನಮಸ್ಕಾರ,
ಣಮಂಸಣಾ}. ನಮನ(ಭಗ)
ಣಮಂಸಿಯ. ವಿ: [ನಮಸ್ಯಿತ] ನಮಸ್ಕರಿಸಲ್ಪಟ್ಟ(ಪಣ್ಣ)
ಣಮಕ್ಕಾರ. **'ಣಮೋಕ್ಕಾರ'** ಶಬ್ದವನ್ನು ನೋಡುವುದು.
ಣಮಣ. ನ: [ನಮನ] ನಮಸ್ಕಾರ, ನಮನ
ಣಮಸಿಅ. ನ: [ದೇ] ಹತ್ತಿರಕ್ಕೆ ಬಂದು ಬೇಡುವುದು, ದೇವರ ಸನ್ನಿಧಿಗೆ ಬಂದು ಪ್ರಾರ್ಥಿಸುವುದು.
ಣಮಿ. ಪು: [ನಮಿ] ತನ್ನ ಹೆಸರಿನಿಂದ ಖ್ಯಾತನಾದ ೨೧ನೆಯ ತೀರ್ಥಂಕರ, ಖ್ಯಾತ ರಾಜರ್ಷಿ, ಭಗವಾನ್ ವೃಷಭದೇವನ ಒಬ್ಬ ಮೊಮ್ಮಗ(ಉತ್ತ)
ಣಮಿಅ. ವಿ: [ನತ] ನಮಸ್ಕರಿಸಿದ, ತಲೆಬಾಗಿದ,
ಣಮಿಅ. ವಿ: [ನಮಿತ] ನಮಸ್ಕಾರ ಮಾಡಿಸಲ್ಪಟ್ಟ, ಬಗ್ಗಿಸಲ್ಪಟ್ಟ(ಗಾ)

ಣಮಿಅ. ಸ್ತ್ರೀ: [ನಮಿತಾ] ಖ್ಯಾತಳಾದ ಒಬ್ಬ ಮಹಿಳೆ, 'ಜ್ಞಾತಾಧರ್ಮ ಕಥಾಸೂತ್ರ'ದ ಒಂದು ಅಧ್ಯಯನ.

ಣಮಿರ. ವಿ: [ನವ್ರ] ನಮಸ್ಕರಿಸುವವನು, ಬಗ್ಗಿರುವವನು, ವಿನಯಿ

ಣಮುಇ. ಪು: [ನಮುಚಿ] ಖ್ಯಾತನಾದ ಒಬ್ಬ ಮಂತ್ರಿ

ಣಮುದಯ. ಪು: [ನಮುದಯ] ಆಜೀವಿಕ ಮತದ ಉಪಾಸಕ(ಭಗ)

ಣಮೇರು. ಪು: [ನಮೇರು] ಪುನ್ನಾಗ ವೃಕ್ಷ, ಸುರ ಹೊನ್ನೆಮರ

ಣಮೋ. ಅ: [ನಮಸ್] ನಮಸ್ಕಾರ, ನಮನ(ಕುಮಾ)

ಣಮೊಕ್ಕಾರ}. ಪು: [ನಮಸ್ಕಾರ] ನಮನ, ಜೈನ

ಣಮೋಯಾರ}. ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಸೂತ್ರ–ಮಂತ್ರ–ವಿಶೇಷ. **–ಸಹಿಯ.** ನ: [–ಸಹಿತ] ಪ್ರತ್ಯಾಖ್ಯಾನ–ವಿಶೇಷ

ಣಮ್ಮ. ಪುಂನ: [ನರ್ಮನ್] ಪರಿಹಾಸ, ವಿನೋದ, ಕ್ರೀಡೆ

ಣಮ್ಮಯಾ. ಸ್ತ್ರೀ: [ನರ್ಮದಾ] ಹೆಸರಾಂತ ನರ್ಮದಾ ನದಿ. ಹೆಸರಾಂತ ರಾಜ ಪತ್ನಿ

ಣಯ. **'ಣದ=ನದ್'** ಶಬ್ದವನ್ನು ನೋಡುವುದು.

ಣಯ. ಪು: [ನಗ] ಪರ್ವತ, ಬೆಟ್ಟ(ಉಪ) **'ಣಗ'** ಶಬ್ದವನ್ನು ನೋಡುವುದು.

ಣಯ. ಅ: [ನಚ] ಇಲ್ಲ.

ಣಯ. ವಿ: [ನತ] ಬಾಗಿದ, ನಮಸ್ಕರಿಸಿದ, ವಿನಯಿ (ಣಾಯಾ), ನಮಸ್ಕರಿಸಲ್ಪಟ್ಟವನು, ದೇವ–ವಿಮಾನ. **–ಸಚ್ಚ.** ಪು: [–ಸತ್ಯ] ಶ್ರೀಕೃಷ್ಣ, ನಾರಾಯಣ

ಣಯ. ಪು: [ನಯ] ನ್ಯಾಯ, ನೀತಿ(ಸುಪಾ), ಯುಕ್ತಿ, ಪ್ರಕಾರ, ರೀತಿ. ವಸ್ತುವಿನ ಅನೇಕ ಧರ್ಮಗಳಲ್ಲಿ ಒಂದರ ಮುಖ್ಯ ರೂಪವನ್ನು ಒಪ್ಪಿಕೊಂಡು ಇತರೆ ಧರ್ಮಗಳನ್ನು ಅಲಕ್ಷಿಸುವ ಮತ. ವಿವೇಕದಿಂದ ಕೂಡಿದ ಆಡಳಿತದ ನೈಪುಣ್ಯ, ವಿಧಿ. **–ಚಂದ್ರ.** ಪು: [–ಚಂದ್ರ] ಹೆಸರಾಂತ ಜೈನ ಗ್ರಂಥಕಾರ. ತ್ಥಿ. ವಿ: [ನಯಾರ್ಥಿನ್] ನ್ಯಾಯವನ್ನು ಅಪೇಕ್ಷಿಸುವವನು. **–ವ, ವಂತ.** ವಿ:[–ವತ್] ನೀತಿವಂತ. ನೀತಿ ಹೊಂದಿರುವವನು, ನ್ಯಾಯ–ಪರಾಯಣ. **–ವಿಜಯ.** ಪು: [–ವಿಜಯ] ವಿಕ್ರಮ ಶಕೆಯ ೧೭ನೇ ಶತಮಾನದಲ್ಲಿದ್ದ, ಸುಪ್ರಸಿದ್ಧ ವಿದ್ವಾಂಸ ಯಶೋವಿಜಯನ ಗುರುವಾಗಿದ್ದ ಒಬ್ಬ ಜೈನಮುನಿ.

ಣಯಚಕ್ಕ. ನ: [ನಯಚಕ್ರ] ಒಂದು ಪ್ರಾಚೀನ ಜೈನ ಪ್ರಮಾಣ ಗ್ರಂಥ

ಣಯಣ. ನ: [ನಯನ] ಕೊಂಡೊಯ್ಯುವುದು, ತಿಳಿದುಕೊಳ್ಳುವುದು, ಜ್ಞಾನ, ನಿಶ್ಚಯ, ವಿ: ಕೊಂಡೊಯ್ಯುವವನು. **ಪುಂನ:** ಕಣ್ಣು, ನೇತ್ರ. **–ಜಲ.** ನ: [–ಜಲ] ಕಣ್ಣೀರು.

ಣಯುಯ. ಪು: [ದೇ. ನವತ] ಉಣ್ಣೆಯಿಂದ ತಯಾರಿಸಿದ ಹಾಸು(ಣಾಯಾ)

ಣಯರ. **'ಣಗರ'** ಶಬ್ದವನ್ನು ನೋಡುವುದು.

ಣಯರಂಗಣಾ. ಸ್ತ್ರೀ: [ನಗರಾಂಗನಾ] ವೇಶ್ಯೆ, ಗಣಿಕೆ(ಶ್ರಾ)

ಣಯರೀ. ಸ್ತ್ರೀ: [ನಗರೀ] ಪಟ್ಟಣ, ಪುರ(ಉವಾ)

ಣರ. ಪು: [ನರ] ಮನುಷ್ಯ, ಪುರುಷ, ಮಧ್ಯಮ ಪಾಂಡವನಾದ ಅರ್ಜುನ. **–ಉಸಭ.** ಪು: [–ವೃಷಭ] ಶ್ರೇಷ್ಠ ಮನುಷ್ಯ, ಒಪ್ಪಿಕೊಂಡ ಕೆಲಸವನ್ನು ಸಾಧಿಸುವ ಪುರುಷ. **–ಕಂತಪ್ಪವಾಯ.** ಪು: [–ಕಾಂತಪ್ರಪಾತ] ಸರೋವರ(ಠಾ), **–ಕಂತಾ.** ಸ್ತ್ರೀ: [–ಕಾಂತಾ] ಒಂದು ನದಿ. **–ಕಂತಾಕೂಡ.** ನ: [–ಕಾಂತಾಕೂಟ] ರುಕ್ಮಿ ಪರ್ವತದ ಒಂದು ಶಿಖರ. **–ದತ್ತಾ.** ಸ್ತ್ರೀ: [–ದತ್ತಾ] ಮುನಿ ಸುವ್ರತ ಜಿನನ ಶಾಸನ ದೇವಿ, ವಿದ್ಯಾ–ದೇವಿ–ವಿಶೇಷ. **–ದೇವ.** ಪು: [–ದೇವ] ಚಕ್ರವರ್ತಿ ರಾಜ. **–ನಾಯಗ.** ಪು: [ನಾಯಕ] ರಾಜ, ದೊರೆ. **–ನಾಹ.** ಪು: [–ನಾಥ] ಭೂಪತಿ. **–ಪಹು.** ಪು: [–ಪ್ರಭು] ದೊರೆ, ನರಪತಿ(ಉಪ) **–ಪೌರುಸಿ.** ಪು: [–ಪೌರುಷಿನ್] ಒಬ್ಬ ಭೂಪತಿ. **–ಲೋಅ.** ಪು: [–ಲೋಕ] ಮನುಷ್ಯ ಲೋಕ.–ಲೋಅ. ಪು: [–ಲೋಕ] ಮನುಷ್ಯ ಲೋಕ. **–ವಇ.** ಪು: [–ಪತಿ] ದೊರೆ. **–ವರ.** ಪು: [–ವರ] ದೊರೆ. ಶ್ರೇಷ್ಠ ಮನುಷ್ಯ. **–ವರಿಂದ.** ಪು: [–ವರೇಂದ್ರ] ಭೂಪತಿ. **–ವರೀಸರ.** ಪು: [–ವರೇಶ್ವರ] ಶ್ರೇಷ್ಠ ದೊರೆ. **–ವಸಭ, –ವಸಹ.** ಪು: [–ವೃಷಭ] **'–ಉಸಭ'** ಶಬ್ದವನ್ನು ನೋಡುವುದು. ಅರಸು, ರಾಜ(ಪಉಮ) **ಪು:** ಹರಿವಂಶದ ಒಬ್ಬ ಖ್ಯಾತನಾದ ರಾಜ. **–ವಾಲ.** ಪು: [–ಪಾಲ] ಭೂಪಾಲ(ಸುಪಾ). **–ವಾಹಣ.**

ಪು: [-ವಾಹನ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ದೊರೆ. **-ವೇಯ. ಪು: [-ವೇದ]** ಪುರುಷ ವೇದ, ಪುರುಷನಿಗೆ ಹೆಣ್ಣಿನ ಸ್ಪರ್ಶಮಾಡಬೇಕೆಂಬ ಅಭಿಲಾಷೆ(ಕಮ್ಮ). **-ಸಿಂಘ, ಸಿಂಹ, -ಸೀಹ. ಪು: [-ಸಿಂಹ]** ಶ್ರೇಷ್ಠ ಮನುಷ್ಯ. ಅರ್ದ ಭಾಗ ಪುರುಷ ಮತ್ತು ಅರ್ಧಭಾಗ ಸಿಂಹದ ಆಕಾರ ಇರುವವ, ನರಸಿಂಹ, ಶ್ರೀಕೃಷ್ಣ(ಣಾಯಾ). **-ಸುಂದರ. ಪು: [-ಸುಂದರ]** ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ. **-ನರಾಹಿವ. ಪು: [-ನರಾಧಿಪ]** ದೊರೆ.

ಣರಇಂದಯ. ಪು: [ನರಕೇಂದ್ರಕ] ನರಕ-ಸ್ಥಾನ-ವಿಶೇಷ

ಣರಕಂಠ. ಪು: [ನರಕಂಠ] ರತ್ನದ ಒಂದು ಜಾತಿ

ಣರಗ}. ಪು: [ನರಕ] ನಾರಕ ಜೀವಿಗಳು ಇರುವ

ಣರಯ}. ಪ್ರದೇಶ(ವಿಪಾ), **-ವಾಲ. -ವಾಲಯ. ಪು: [-ಪಾಲ, -ಪಾಲಕ]** ನರಕದ ಜೀವಿಗಳನ್ನು ಯಾತನೆಗೊಳಪಡಿಸುವ ಪರಮ ಅಧಾರ್ಮಿಕ ದೇವ(ಪಉಮ)

ಣರಸಿಂಹ. ಪು: [ನರಸಿಂಹ] ಬಲದೇವ, ಒಬ್ಬ ರಾಜಕುಮಾರ

ಣರಾಅ}. ಪುಂನ: [ನಾರಾಚ] ಲೋಹದ ಬಾಣ),

ಣರಾಚ}. ಸಂಹನನ-ವಿಶೇಷ, ಶರೀರದ ರಚನೆಯ ಒಂದು ರೀತಿ, ಛಂದೋ-ವಿಶೇಷ.

ಣರಾಯಣ. ಪು: [ನಾರಾಯಣ] ಶ್ರೀಕೃಷ್ಣ, ವಿಷ್ಣು

ಣರಿಂದ. ಪು: [ನರೇಂದ್ರ] ರಾಜ, ದೊರೆ, ಸರ್ಪದ ವಿಷವನ್ನು ಇಳಿಸಬಲ್ಲ ಗಾರುಡಿಗ; **-ಕಂತ. ನ:[-ಕಾಂತ] -ಪಹ. ಪು: [-ಪಥ]** ಮಹಾಮಾರ್ಗ, ರಾಜಮಾರ್ಗ**-ವಸಹ. ಪು:[-ವೃಷಭ]** ಶ್ರೇಷ್ಠ ದೊರೆ

ಣರಿಂದತ್ತರವಡಿಂಸಗ. ನ : **[ನರೇಂದ್ರೋತ್ತರಾವತಂಸಕ]** ದೇವ-ವಿಮಾನ-ವಿಶೇಷ

ಣರೀಸರ. ಪು: [ನರೇಶ್ವರ] ರಾಜ, ದೊರೆ

ಣರುತ್ತಮ. ಪು: [ನರೋತ್ತಮ] ಶ್ರೇಷ್ಠ ಮನುಷ್ಯ (ಪಉಮ), ಶ್ರೀ ಕೃಷ್ಣ

ಣರೆಂದ. 'ಣರಿಂದ' ಶಬ್ದವನ್ನು ನೋಡುವುದು.

ಣರೇಸರ. 'ಣರೀಸರ' ಶಬ್ದವನ್ನು ನೋಡುವುದು.

ಣರೇಸ. ಪು: [ನರೇಶ] ರಾಜ, ಭೂಪತಿ

ಣಲ. ನ: [ನಡ] ಒಳಗಿನಿದ ಟೊಳ್ಳಾಗಿರುವ ಬಾಣದ ಆಕಾರದ ಹುಲ್ಲು

ಣಲ. ನ: [ನಲ] ಮೇಲಿನ ಶಬ್ದವನ್ನು ನೋಡುವುದು. **ಪು:** ರಾಜಾ ರಾಮಚಂದ್ರನ ಒಬ್ಬ ಯೋಧ. ವೈಶ್ರಮಣನ ಒಬ್ಬ ಹೆಸರಾಂತ ಪುತ್ರ. **-ಕುವ್ವರ, -ಕೂವರ. ಪು: [-ಕೂವರ]** ದುರ್ಲಂಘ್ಯ ಪುರದ ಹೆಸರಾಂತ ರಾಜ(ಪಉಮ). ವೈಶ್ರಮಣನ ಒಬ್ಬ ಮಗ(ಆವಮ). **-ಗಿರಿ. ಪು: [-ಗಿರಿ]** ಚಂಡ ಪ್ರದ್ಯೋತ ರಾಜನ ಖ್ಯಾತ ಆನೆ.

ಣಲಯ. ನ: [ದೇ] ಉಶೀರ, ಲಾಮಂಚದ ಬೇರು

ಣಲಾಡ. 'ಣಡಾಲ' ಶಬ್ದವನ್ನು ನೋಡುವುದು.

ಣಲಾಡಂತವ. ವಿ: [ಲಲಾಟಂತಪ] ಹಣೆಯನ್ನು ಕಾಯಿಸುವಂಥ

ಣಲಿಅ. ನ: [ದೇ] ಮನೆ, ಗೃಹ

ಣಲಿಣ. ನ: [ನಲಿನ] ನಿರಂತರ ೨೩ ದಿನಗಳವರೆಗೆ ಉಪವಾಸ, ಒಂದು ದೇವ-ವಿಮಾನ, ರಕ್ತಕಮಲ, ಮಹಾ-ವಿದೇಹ ವರ್ಷದ ಒಂದು ವಿಜಯ, ಒಂದು ಪ್ರದೇಶ-ವಿಶೇಷ. 'ನಳಿನಾಂಗ'ವನ್ನು ೮೪ ಲಕ್ಷದಿಂದ ಗುಣಿಸಿದರೆ ಬರುವ ಸಂಖ್ಯೆ. ದೇವ-ವಿಮಾನ-ವಿಶೇಷ, ರುಚಕ ಪರ್ವತದ ಒಂದು ಶಿಖರ. **-ಕೂಡ. ಪು: [-ಕೂಟ] -ಗುಮ್ಮ. ನ: [-ಗುಲ್ಮ]** ಒಬ್ಬ ರಾಜ. ಅಧ್ಯಯನ **-ವಿಶೇಷ.** ಶ್ರೇಣಿಕ ಮಹಾರಾಜನ ಒಬ್ಬ ಮಗ. **ಣಲಿಣಾವಈ. ಸ್ತ್ರೀ: [ನಲಿನಾವತೀ]** ವಿದೇಹ ವರ್ಷದ ಒಂದು ವಿಜಯ, ಒಂದು ಪ್ರದೇಶ-ವಿಶೇಷ.

ಣಲಿಣಂಗ. ನ: [ನಲಿನಾಂಗ] ಸಂಖ್ಯಾ-ವಿಶೇಷ. ಪದ್ಮವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ಠಾ)

ಣಲಿಣಿಂ}. ಸ್ತ್ರೀ: [ನಲಿನೀ] ಕಮಲಿನಿ, ಪದ್ಮಿನಿ(ಪಾಅ),

ಣಲಿಣೀ}. -ಗುಮ್ಮ. 'ಣಲಿಣ-ಗುಮ್ಮ' ಶಬ್ದವನ್ನು ನೋಡುವುದು. **-ವಣ. ನ: [-ವನ]** ಒಂದು ಉದ್ಯಾನ(ಣಾಯಾ)

ಣಲಿಣೋದಗ. ಪು: [ನಲಿನೋದಕ] ಸಮುದ್ರ-ವಿಶೇಷ

ಣಲ್ಲಯ. ನ: [ದೇ] ಬೇಲಿಯಲ್ಲಿನ ಬಿರುಕು, ಪ್ರಯೋಜನ, ನಿಮಿತ್ತ, ಕರಣ. ವಿ: ಕೆಸರುಳ್ಳ

ಣವ. 'ಣಮ' ಶಬ್ದವನ್ನು ನೋಡುವುದು.

ಣವ. ವಿ: [ನವ] ಹೊಸತು, ನೂತನ, ನವೀನ(ಠಾ). **-ವಹುಯಾ, ವಹೂ. ಸ್ತ್ರೀ: [-ವಧೂ]** ಹೊಸದಾಗಿ ಮದುವೆಯಾದವಳು, ಮದುಮಗಳು

ಣವ. ತ್ರಿಬ: [ನವನ್] ಒಂಬತ್ತು. **–ಇ.** ಸ್ತ್ರೀ: [–ತಿ] ತೊಂಬತ್ತು, **–ಗ.** ನ: [–ಕ] ಒಂಬತ್ತರ ಗುಂಪು, **–ಜೋಯಣಿಯ.** ವಿ: [**–ಯೋಜನಿಕ**] ಒಂಬತ್ತು ಯೋಜನೆಗಲ ಪರಿಣಾಮ ಹೊಂದಿರುವ(ತಾ). **–ಣಉಇ.–ನಉಇ.** ಸ್ತ್ರೀ: [**–ನವತಿ**] ತೊಂಬತ್ತೊಂಬತ್ತು. **–ನಉಯ.** ವಿ: [**–ನವತ**] ತೊಂಬತ್ತೊಂಬತ್ತನೆಯ(ಪಉಮ), **–ನವಇ.** **'ಣಉಇ'** ಶಬ್ದವನ್ನು ನೋಡುವುದು. **–ನವಮಿಯಾ.** ಸ್ತ್ರೀ: [**–ನವಮಿಕಾ**] ಜೈನ ಸಾಧುಗಳ ಒಂದು ವ್ರತ–ವಿಶೇಷ, **–ಮ.** ವಿ: [–ಮ] ಒಂಬತ್ತನೇ ದಿನ, **–ಮೀ.** ಸ್ತ್ರೀ: [–ಮೀ] ಪಕ್ಷದ ಒಂಬತ್ತನೇ ದಿನ. **–ಮೀಪಕ್ಖ.** ಪು: [**–ಮೀಪಕ್ಷ**] ಅಷ್ಟಮಿ.

ಣವಕಾರ. **'ಣಮೊಕ್ಕಾರ'** ಶಬ್ದವನ್ನು ನೋಡುವುದು.

ಣವಕಾರಸೀ. ಸ್ತ್ರೀ: [**ನಮಸ್ಕಾರಸಹಿತ**] ಪ್ರತ್ಯಾಖ್ಯಾನ–ವಿಶೇಷ, ಒಂದು ವ್ರತ

ಣವಖ(ಅಪ). ವಿ: [ನವ] ಹೊಸದಾದ, ನೂತನ, ನವ. ಸ್ತ್ರೀ: –ಖೀ

ಣವಣೀಅ. ಪುಂನ: [ನವನೀತ] ಬೆಣ್ಣೆ

ಣವಣೀಇಯಾ. ಸ್ತ್ರೀ: [ನವನೀತಿಕಾ] ವನಸ್ಪತಿ

ಣವಪಯ. ನ: [ನವಪದ] ನಮಸ್ಕಾರ–ಮಂತ್ರ

ಣವಮಾಲಿಯಾ. ಸ್ತ್ರೀ: [**ನವಮಾಲಿಕಾ**] ವೀರ ಜಾಜಿಬಳ್ಳಿ

ಣವಮಿಯಾ. ಸ್ತ್ರೀ: [**ನವಮಿಕಾ**] ರುಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುವಾರಿ ದೇವಿ. ಸತ್ಪುರುಷನೆಂಬ ಇಂದ್ರನ ಒಬ್ಬ ಅಗ್ರ ಮಹಿಷಿ. ಶಕ್ರೇಂದ್ರನ ಒಬ್ಬ ಪಟ್ಟದ ರಾಣಿ

ಣವಯ. **'ಣಯಯ'** ಶಬ್ದವನ್ನು ನೋಡುವುದು.

ಣವಯ. **'ಣವ–ಗ'** ಶಬ್ದವನ್ನು ನೋಡುವುದು.

ಣವಯಾರ. **'ಣವಕಾರ'** ಶಬ್ದವನ್ನು ನೋಡುವುದು.

ಣವರ. **ಸಕ:** [**ಕಥ್**] ಹೇಳು

ಣವರ}. **ಅ:** ಕೇವಲ, ಮಾತ್ರ, ಅನಂತರ

ಣವರಂ}.

ಣವರಂಗ}. **ಪು:** [**ನವರಂಗ, –ಕ**] ಹೊಸ ಬಣ್ಣ,

ಣವರಂಗಯ}. ಒಂದು ಛಂದಸ್ಸು. ಕುಸುಂಭೆ ಹೂವಿನ ಬಣ್ಣದ ವಸ್ತ್ರ(ಗಉಡ)

ಣವರತ್ತಿ. ಸ್ತ್ರೀ: [**ನವರಾತ್ರಿ**] ಆಶ್ವೀಜ ಮಾಸದಲ್ಲಿ ನಡೆಸುವ ಒಂಬತ್ತು ದಿನಗಳ ಒಂದು ಹಬ್ಬ

ಣವರಿ. **ಅ:** [ದೇ] ಬೇಗನೆ, ಕೂಡಲೆ, ಶೀಘ್ರ

ಣವರಿ}. **'ಣವರ'** ಶಬ್ದವನ್ನು ನೋಡುವುದು

ಣವರಿಅ}.

ಣವರಿಅ. ನ: [ದೇ] ಕೂಡಲೇ, ಒಮ್ಮೆಲೇ, ಬೆಗನೆ(ದೇ)

ಣವರು. **'ಣವರ' ಶಬ್ದವನ್ನು ನೋಡುವುದು.**

ಣವಲಿಯಾ. ಸ್ತ್ರೀ: [ದೇ] ಗಂಡನ ಹೆಸರನ್ನು ಕೇಳಿದರೆ ಅದನ್ನು ಹೇಳದ ಹೆಣ್ಣನ್ನು ಮುತ್ತುಗದ ಬಳ್ಳಿಯಿಂದ ಹೊಡೆಯಲಾಗುವ ಒಂದು ವ್ರತ(ದೇ)

ಣವಲ್ಲ. **'ಣತ್ರ= ನವ'** ಶಬ್ದವನ್ನು ನೋಡುವುದು.

ಣವಸಿಅ. ನ: [ದೇ] ಹತ್ತಿರಕ್ಕೆ ಬಂದು ಪ್ರಾರ್ಥಿಸುವುದು, ವಿನಂತಿ, ಹತ್ತಿರಕ್ಕೆ ಬಂದು ಪ್ರಾರ್ಥಿಸಲ್ಪಟ್ಟ

ಣವಾ. ಸ್ತ್ರೀ: [ನವಾ] ಹೊಸದಾಗಿ ಮದುವೆಯಾದವಳು, ಮದುಮಗಳು, ಯುವತಿ, ದೀಕ್ಷೆ ಸ್ವೀಕರಿಸಿ ಮೂರು ವರ್ಷವಾದ ಸಾಧ್ವಿ. ಪ್ರಶ್ನಾರ್ಥಕ ಅವ್ಯಯ; ಅಥವಾ ಅಲ್ಲವೆ?

ಣವಿ: **ಅ:** ವಿರೋಧ ಸೂಚಕ ಅವ್ಯಯ, ನಿಷೇಧಾರ್ಥಕ ಅವ್ಯಯ.

ಣವಿಅ. **'ಣಮಿಅ=ನತ'** ಶಬ್ದವನ್ನು ನೋಡುವುದು.

ಣವಿಅ. ವಿ: [ನವ್ಯ] ಹೊಸ, ನೂತನ(ಆಚಾ)

ಣವೀಣ. ವಿ: [ನವೀನ] ನೂತನ, ಹೊಸದು

ಣವುತ್ತರಸಯ. ವಿ: [**ನವೋತ್ತರಶತತಮ**] ಒಂದು ನೂರಾ ಒಂಬತ್ತನೆಯ(ಪಉಮ)

ಣವುಲ್ಲಡಯ(ಅಪ). **'ಣವ=ನವ'** ಶಬ್ದವನ್ನು ನೋಡುವುದು.

ಣವೋಢಾ. ಸ್ತ್ರೀ: [**ನವೋಢಾ**] ಹೊಸದಾಗಿ ಮದುವೆಯಾದ ಹೆಣ್ಣು, ಮದುಮಗಳು

ಣವೋದ್ಧರಣ. ನ: [ದೇ] ಎಂಜಲು, ಉಚ್ಛಿಷ್ಟ

ಣವ್ವ. ಪು: [ದೇ] ಆಯುಕ್ತ, ಹಳ್ಳಿಯ ಮುಖಂಡ

ಣವ್ವ. ವಿ: [ನವ್ಯ] ಹೊಸತು, ನೂತನ

ಣವ್ವ.– **'ಣಾ=ಜ್ಞಾ'** ಶಬ್ದವನ್ನು ನೋಡುವುದು.

ಣವ್ವಾಉತ್ತ. ಪು: [ದೇ] ದೇವರು, ಶ್ರೀಮಂತ, ಭೋಗಿ, ನಿಯೋಗಿಯ ಮಗ, ಸುಬೇದಾರನ ಮಗ

ಣಸ. **ಸಕ:** [**ನಿ+ಅಸ್**] ಸ್ಥಾಪಿಸು, ಇರಿಸು

ಣಸ. **ಸಕ:** [**ನಶ್**] ಓಡುವುದು, ಪಲಾಯನ

ಣಸಣ. ನ: [ನ್ಯಸನ] ನ್ಯಾಸ, ಇಡುವುದು, ಸ್ಥಾಪನೆ

ಣಸಾ. ಸ್ತ್ರೀ: [ದೇ] ನಾಡಿ

ಣಸಿಅ. ವಿ: [ನಷ್ಟ] ನಾಶ ಹೊಂದಿದ

ಣಸ್ಸ. '**ನಸ=ನಶ್**' ಶಬ್ದವನ್ನು ನೋಡುವುದು

ಣಸ್ಸರ. ವಿ: [ನಶ್ವರ] ನಾಶವಾಗುವಂಥ, ನಾಶ ಸ್ವಭಾವದ

ಣಸ್ಸಾ. ಸ್ತ್ರೀ: [ನಾಸಾ] ಮೂಗು, ನಸಿಕ

ಣಹ. '**ಣಕ್ಖ**' ಶಬ್ದವನ್ನು ನೋಡುವುದು

ಣಹ. ನ: [**ನಭಸ್**] ಆಕಾಶ, ಗಗನ **ಪು:** ಶ್ರಾವಣ ಮಾಸ. **–ಅರ: ವಿ: [–ಚರ]** ಆಕಾಶದಲ್ಲಿ ಸಂಚರಿಸುವವನು. **ಪು:** "ವಿದ್ಯಾಧರ, ಆಕಾಶದಲ್ಲಿ ವಿಹರಿಸುವ ಮನುಷ್ಯ. **–ಕೇಉಮಂಡಿಯ. ನ: [–ಕೇತುಮಂಡಿತ]** ವಿದ್ಯಾಧರರ ಒಂದು ನಗರ. **–ಗಮಾ.** ಸ್ತ್ರೀ: **[–ಗಮಾ]** ಆಕಾಶಗಾಮಿನಿ ವಿದ್ಯೆ. **–ಗಾಮಿಣೀ.** ಸ್ತ್ರೀ: **[–ಗಾಮಿನೀ]** ಆಕಾಶಗಾಮಿನಿ ವಿದ್ಯೆ. **–ಚ್ಚರ.** '**–ಅರ**' ಶಬ್ದವನ್ನು ನೋಡುವುದು. **–ಚ್ಛೇದಣಯ.** ನ: **[–ಚ್ಛೇದನಕ]** ಉಗುರನ್ನು ಕತ್ತರಿಸುವ ಉಪಕರಣ. **–ತಿಲಯ. ನ: [–ತಿಲಕ]** ಒಂದು ನಗರ, ಒಬ್ಬ ಯೋಧ. **–ವಾಹಣ. ಪು: [–ವಾಹನ]** ಒಬ್ಬ ಒರೆ. **–ಸಿರ. ನ: [–ಶಿರಸ್]** ಉಗುರಿನ ತುದಿ. **–ಸಿಹಾ.** ಸ್ತ್ರೀ: **[–ಶಿಖಾ]** ಉಗುರಿನ ತುದಿ. **–ಸೇಣ. ಪು: [ಸೇನ]** ಉಗ್ರಸೇನ ಮಹಾರಾಜನ ಒಬ್ಬ ಮಗ. **–ಹರಣೀ.** ಸ್ತ್ರೀ: **[–ಹರಣೀ]** ಉಗುರನ್ನು ತೆಗೆಯುವ ಒಂದು ಉಪಕರಣ(ಬೃಹ)

ಣಹಂಸಿ. ವಿ: [ನಖವತ್] ಉಗುರುಳ್ಳ

ಣಹಮುಹ. ಪು: [ದೇ] ಗೂಬೆ.

ಣಹರ. ಪು: [ನಖರ] ಉಗುರು(ಸುಪಾ)

ಣಹರಣ. ಪು: [ದೇ] ಉಗುರುಳ್ಳ, ಉಗುರನ್ನು ಹೊಂದಿರುವ ಪ್ರಾಣಿ, ಕ್ರೂರ ಮೃಗ

ಣಹರಣೀ. ಸ್ತ್ರೀ: [ನಖಹರಣೀ] ಉಗುರು ತೆಗೆಯುವ ಉಪಕರಣ

ಣಹರಾಲ. ಪು: [ನಖರಿನ್] ಉಗುರನ್ನು ಹೊಂದಿರುವ ಕ್ರೂರ ಮೃಗ

ಣಹರೀ. ಸ್ತ್ರೀ: [ದೇ] ಸಣ್ಣಕತ್ತಿ, ಚೂರಿ

ಣಹವಲ್ಲೀ. ಸ್ತ್ರೀ: [ದೇ] ಮಿಂಚು

ಣಹಿ. ಪು: [ನಖಿನ್] ಉಗುರೇ ಪ್ರಧಾನವಾದ ಕಾಡಿನ ಕ್ರೂರ ಮೃಗ

ಣಹಿ. ಅ: [ನಹಿ] ನಿಷೇಧಾರ್ಥಕ ಅವ್ಯಯ; ಇಲ್ಲ(ಸ್ವಪ್ನ)

ಣಹು. ಅ: [ನಖಲು] ಮೇಲಿನ ಶಬ್ದವನ್ನು ನೋಡುವುದು.

ಣಾ. ಸಕ: [ಜ್ಞಾ] ತಿಳಿದುಕೊಳ್ಳು, ಅರಿತುಕೊಳ್ಳು

ಣಾ. ಅ: [ನ] ನಿಷೇಧ– ಸೂಚಕ ಅವ್ಯಯ(ಗಉಡ)

ಣಾಅಅ}. **(ಅಪ).** '**ಣಾಯಗ**' ಶಬ್ದವನ್ನು

ಣಾಅಕ್ಕ}. ನೋಡುವುದು.

ಣಾಇ. ಪು: [**ಜ್ಞಾತಿ**] ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ಕ್ಷತ್ರಿಯ–ವಿಶೇಷ. **–ಪುತ್ತ. ಪು: [–ಪುತ್ರ]** ಭಗವಾನ್ ಮಹಾವೀರ(ಆಚಾ). **–ಸುಯ. ಪು: [–ಸುತ]** ಭಗವಾನ್ ಮಹಾವೀರ.

ಣಾಇ. ಸ್ತ್ರೀ: [**ಜ್ಞಾತಿ**] ಸಮಾನ ಜಾತಿಯ, ತಂದೆ–ತಾಯಿ ಮುಂತಾದ ಸ್ವಜನರು, ಸಹೋದರ, ತಂದೆಯ ವಂಶದಲ್ಲಿ ಹುಟ್ಟಿದ ದಾಯಾದರು, ಇವರಲ್ಲಿ ಸಪಿಂಡರು, ಸಮಾನೋದಕರು, ಮತ್ತು ಸಗೋತ್ರರು ಎಂದು ಮೂರು ವಿಧ, ಜ್ಞಾನ

ಣಾಇ(ಅಪ). '**ಇವ**' ಶಬ್ದವನ್ನು ನೋಡುವುದು.

ಣಾಇ(ಅಪ). ಕೆಳಗಿನ ಶಬ್ದವನ್ನು ನೋಡುವುದು.

ಣಾಇ. '**ಣ=ನ**' ಶಬ್ದವನ್ನು ನೋಡುವುದು.

ಣಾಇಣೀ(ಅಪ). ಸ್ತ್ರೀ: [ನಾಗೀ] ನಾಗಿಣಿ, ಸರ್ಪಿಣಿ, ಹೆಣ್ಣು ಹಾವು.

ಣಾಇತ್ತ}. **ಪು:** [ದೇ] ಹಡಗಿನ ಮೂಲಕ ವ್ಯಾಪಾರ–

ಣಾಇತ್ತಗ}. ವಹಿವಾಟು ನಡೆಸುವ ವ್ಯಾಪಾರಿ

ಣಾಇಯ. ವಿ: [ನಾದಿತ] ಹೇಳಲ್ಪಟ್ಟ, ಕರೆಯಲ್ಪಟ್ಟ, ನ: ಶಬ್ದ(ಣಾಯಾ), ಪ್ರತಿಧ್ವನಿ

ಣಾಇಲ. ಪು: [ನಾಗಿಲ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಜೈನ ಮುನಿ, ಜೈನಮುನಿಗಳ ವಂಶ (ಪಉಮ), ಒಬ್ಬ ಶ್ರೇಷ್ಠಿ

ಣಾಇಲಾ}. ಸ್ತ್ರೀ: [ನಾಗಿಲಾ] ಜೈನಮುನಿಗಳ ಒಂದು

ಣಾಇಲೀ}. ಶಾಖೆ(ಕಪ್ಪ)

ಣಾಇವ. ವಿ: [**ಜ್ಞಾತಿಮತ್**] ಸ್ವಜನರಿಂದ ಕೂಡಿದ

ಣಾಇಲ್ಲ. '**ಣಾಇಲ**' ಶಬ್ದವನ್ನು ನೋಡುವುದು.

ಣಾಉ. ವಿ: [**ಜ್ಞಾತೃ**] ತಿಳಿದವನು, ಜ್ಞಾನಿ

ಣಾಉಡ್ಡ. ಪು: [ದೇ] ಸದ್ಭಾವ, ಅಭಿಪ್ರಾಯ, ಮನಸ್ಸಿನ ಅಭಿಲಾಷೆ, ಇಚ್ಛೆ

ಣಾಉಲ್ಲ. ವಿ: [ದೇ] ಅನೇಕ ಗೋವುಗಳನ್ನು ಹೊಂದಿರುವವನು

ಣಾಉಂ}. '**ಣಾ=ಜ್ಞಾ**' ಶಬ್ದವನ್ನು ನೋಡುವುದು.

ಣಾಊಣ}.

ಣಾಊಣಂ}.

ಣಾಗ. ಪುಂನ: [ನಾಕ] ಸ್ವರ್ಗ, ದೇವಲೋಕ(ಉಪ)
ಣಾಗ. ಪು: [ನಾಗ] ಸರ್ಪ, ಹಾವು, ಭವನ-ಪತಿ ದೇವರುಗಳ ಒಂದು ಒಳ ಜಾತಿ, ನಾಗಕುಮಾರ ದೇವ. ಆನೆ, ನಾಗಸಂಪಿಗೆ ಮರ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಗೃಹಸ್ಥ, ಒಂದು ಪ್ರಸಿದ್ಧ ವಂಶ, ನಾಗ-ವಂಶದಲ್ಲಿ ಹುಟ್ಟಿದ ಒಬ್ಬ ಜೈನಾಚಾರ್ಯ(ಕಪ್ಪ), ಒಂದು ಪ್ರಖ್ಯಾತ ದ್ವೀಪ, ಒಂದು ಸಮುದ್ರ, ವಕ್ಷಸ್ಕಾರ- ಪರ್ವತ-ವಿಶೇಷ, ನ: ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಒಂದು ಸ್ಥಿರ ಕರಣ. -ಕುಮಾರ. ಪು: [-ಕುಮಾರ] ಭವನ-ಪತಿ ದೇವರುಗಳ ಒಂದು ಒಳ ಜಾತಿ. -ಕೇಸರ. ಪು: [-ಕೇಶರ] ಪುಷ್ಪ-ಪ್ರಧಾನವಾದ ಒಂದು ವನಸ್ಪತಿ ವೃಕ್ಷ; ನಾಗಕೇಸರ ವೃಕ್ಷ, - ಗ್ಗಹ. ಪು: [-ಗ್ರಹ] ನಾಗದೇವತೆ ಹೊಕ್ಕಿದ್ದರಿಂದ ಉಂಟಾಗುವ ಜ್ವರ ಇತ್ಯಾದಿಗಳು. -ಜಣ್ಣ. -ಜನ್ನ. ಪು: [-ಯಜ್ಞ] ನಾಗಪೂಜೆ, ನಾಗದೇವತೆಯ ಉತ್ಸವ(ಣಾಯಾ), -ಜ್ಜುಣ. ಪು: [ನಾಗಾಜುನ] ಒಬ್ಬ ಖ್ಯಾತ ಜೈನಾಚಾರ್ಯ, -ದಂತ. ಪು: [-ದಂತ] ಆನೆಯ ಕೊಂಬು, ದಂತ(ಜೀವ). -ದತ್ತ. ಪು: [-ದತ್ತ] ಒಬ್ಬ ಪ್ರಖ್ಯಾತ ರಾಜ-ಪುತ್ರ(ಠಾ), ಒಬ್ಬ ಶ್ರೇಷ್ಠಿ-ಪುತ್ರ. -ಪಇ. ಪು: [-ಪತಿ] ನಾಗಕುಮಾರ ದೇವರುಗಳ ಅಧಿಪತಿ, ನಾಗೇಂದ್ರ(ಔಪ). -ಪುರ. ನ: [-ಪುರ] ಒಂದು ನಗರ. -ಬಾಣ. ಪು: [-ಬಾಣ] ಒಂದು ದಿವ್ಯಾಸ್ತ್ರ. -ಭದ್ದ. ಪು: [-ಭದ್ರ] ನಾಗದ್ವೀಪದ ಅಧಿಷ್ಠಾತೃ-ದೇವ. -ಭೂಯ. ನ: [-ಭೂತ] ಜೈನಮುನಿಗಳ ಒಂದು ಕುಲ(ಕಪ್ಪ). -ಮಹಾಭದ್ದ. ಪು: [-ಮಹಾಭದ್ರ] ನಾಗದ್ವೀಪದ ಅಧಿಷ್ಠಾತೃ ದೇವ. -ಮಹಾವರ. ಪು: [-ಮಹಾವರ] ನಾಗ-ಸಮುದ್ರದ ಅಧಿಪತಿದೇವ. -ಮಿತ್ತ. ಪು:[-ಮಿತ್ರ]ಆಯ ಮಹಾಗಿರಿಯ ಶಿಷ್ಯನಾಗಿದ್ದ ಖ್ಯಾತ ಜೈನ ಮುನಿ(ಕಪ್ಪ). -ರಾಯ. ಪು: [-ರಾಜ] ನಾಗಕುಮಾರ ದೇವರುಗಳ ಅಧಿಪತಿ-ಇಂದ್ರ (ಪಉಮ)-ರುಕ್ಖ. ಪು: [-ವೃಕ್ಷ] ನಾಗಕೇಸರ ವೃಕ್ಷ. -ಲಯಾ. ಸ್ತ್ರೀ: [-ಲತಾ] ವೀಳ್ಯದೆಲೆಯ ಬಳ್ಳಿ. -ವರ. ಪು: [-ವರ] ಶ್ರೇಷ್ಠ ಸರ್ಪ, ಶ್ರೇಷ್ಠ ಆನೆ(ಔಪ) -ಸಿರೀ. ಸ್ತ್ರೀ: [-ಶ್ರೀ] ದ್ರೌಪದಿಯ ಹಿಂದಿನ ಜನ್ಮದ ಹೆಸರು(ಉಪ). -ಸುಹುಮ. ನ: [-ಸೂಕ್ಷ್ಮ] ಒಂದು ಜೈನೇತರ ಶಾಸ್ತ್ರ. -ಸೇಣ. ಪು: [-ಸೇನ] ಒಬ್ಬ ಹೆಸರಾಂತ ಗೃಹಸ್ಥ. -ಹತ್ಥಿ. ಪು: [-ಹಸ್ತಿನ್] ಒಬ್ಬ ಪ್ರಾಚೀನ ಜೈನ ಋಷಿ.
ಣಾಗದತ್ತಾ. ಸ್ತ್ರೀ: [ನಾಗದತ್ತಾ] ೧೪ ನೇ ತೀರ್ಥಂಕರನ ದೀಕ್ಷಾ ಶಿಬಿಕೆ(=ಪಲ್ಲಕ್ಕಿ)
ಣಾಗಣಿಯ. ನ: [ನಾಗ್ನ್ಯ] ನಗ್ನತೆ, ಬೆತ್ತಲೆತನ (ಸೂಅ)
ಣಾಗಪರಿಯಾವಣಿಯಾ. ಸ್ತ್ರೀ: [ನಾಗಪರಿಯಾಪನಿಕಾ] ಒಂದು ಜೈನಶಾಸ್ತ್ರ
ಣಾಗರ. ವಿ: [ನಾಗರ] ನಾಗಕ್ಕೆ ಸಂಬಂಧಿಸಿದ, ನಗರದ ನಿವಾಸಿ, ನಾಗರಿಕ
ಣಾಗರಿಅ. ಪು: [ನಾಗರಿಕ] ನಗರದಲ್ಲಿ ವಾಸಿಸುವವನು (ರಂಭಾ)
ಣಾಗರಿಆ. ಸ್ತ್ರೀ: [ನಾಗರಿಕಾ] ನಗರದಲ್ಲಿ ವಾಸಿಸುವ ಮಹಿಳೆ.
ಣಾಗರೀ. ಸ್ತ್ರೀ: [ನಾಗರೀ] ನಗರದಲ್ಲಿ ವಾಸಿಸುವ ಮಹಿಳೆ, ನಾಗರಿ ಲಿಪಿ (ಸಂಸ್ಕೃತ, ಹಿಂದಿ, ಲಿಪಿ)
ಣಾಗಿಂದ. ಪು: [ನಾಗೇಂದ್ರ] ನಾಗ ದೇವತೆಗಳ ಇಂದ್ರ, ಆದಿಶೇಷ(ಸುಪಾ)
ಣಾಗಿಣೀ. ಸ್ತ್ರೀ: [ನಾಗೀ] ಹಾವು, ಒಬ್ಬ ವಣಿಕ್ ಪುತ್ರಿ
ಣಾಗಿಲ. 'ಣಾಇಲ' ಶಬ್ದವನ್ನು ನೋಡುವುದು.
ಣಾಗೀ. ಸ್ತ್ರೀ: [ನಾಗೀ] ನಾಗಿಣಿ, ಸರ್ಪಿಣಿ
ಣಾಗೇಂದ. 'ಣಾಗಿಂದ' ಶಬ್ದವನ್ನು ನೋಡುವುದು.
ಣಾಗೋದ. ಪು: [ನಾಗೋದ] ಒಂದು ಸಮುದ್ರ
ಣಾಡ. 'ಣಾಟ್ಟ=ನಾಟ್ಯ' ಶಬ್ದವನ್ನು ನೋಡುವುದು.
ಣಾಡಇಜ್ಜ. ವಿ: [ನಾಟಕೀಯ] ನಾಟಕಕ್ಕೆ ಸಂಬಂಧಿಸಿದ, ನಾಟಕದಲ್ಲಿ ಭಾಗವಹಿಸುವ ಪಾತ್ರ(ಣಾಯಾ)
ಣಾಡಇಣೀ. ಸ್ತ್ರೀ: [ನಾಟಕಿನೀ] ನರ್ತಕಿ, ನರ್ತಿಸುವ ಹೆಣ್ಣು(ಬೃಹ)
ಣಾಡಗ}. ನ: [ನಾಟಕ] ನಾಟಕ, ಅಭಿನಯ,
ಣಾಡಯ}. ನಾಟ್ಯಕ್ರಿಯೆ, ರಂಗ ಮಂದಿರದಲ್ಲಿ ಆಡಲು ಉಪಯುಕ್ತವಾದ ಕಾವ್ಯ.
ಣಾಡಾಲ. 'ಣಡಾಲ' ಶಬ್ದವನ್ನು ನೋಡುವುದು.
ಣಾಡಿ}. ಸ್ತ್ರೀ: [ನಾಡಿ] ರಜ್ಜು, ಹಗ್ಗ, ನಾಡಿ,
ಣಾಡೀ}. ಶರೀರದೊಳಗಿನ ಧಮನಿ.
ಣಾಡೀಅ. ಪು: [ನಾಡೀಕ] ಕೀರೆ ದಂಟು(ಭಗ)

ಣಾಣ. ನ: [ಜ್ಞಾನ] ಜ್ಞಾನ, ತಿಳಿವು, ಚೈತನ್ಯ, ಬುದ್ಧಿ(ಭಗ). **–ಧರ.** ವಿ: [–ಧರ] ಜ್ಞಾನಿ, ತಿಳಿದವನು, ವಿದ್ವಾಂಸ(ಸುಪಾ), **–ಪ್ಪವಾಯ.** ನ: [–ಪ್ರವಾದ] ಜೈನ ಗ್ರಂಥಾಂಶ–ವಿಶೇಷ, ಐದನೆಯದರ ಹಿಂದಿನದು. **–ಮಾಯಾರ.** '**ಣಾಣಾಯಾರ**' ಶಬ್ದವನ್ನು ನೋಡುವುದು. **–ವ, –ವಂತ.** ವಿ: [–ವತ್] ಜ್ಞಾನಿ, ವಿದ್ವಾಂಸ (ಆಚಾ). **ಣಾಣಾಯಾರ.** ಪು: [ಜ್ಞಾನಾಚಾರ] ಜ್ಞಾನದ ವಿಷಯಕ್ಕೆ ಸಂಬಂಧಿಸಿದ ಶಾಸ್ತ್ರೋಕ್ತ ವಿಧಿ. **ಣಾಣಾವರಣ.** ನ: [ಜ್ಞಾನಾವರಣ] ಜ್ಞಾನವನ್ನು ಮರೆಮಾಡುವ ಕರ್ಮ. **ಣಾಣಾವರಣಿಜ್ಜ.** ನ: [ಜ್ಞಾನಾವರಣೀಯ] ಅನಂತರ ಹೇಳಿದ ಅರ್ಥ

ಣಾಣಕ}. ನ: [ದೇ] ನಾಣ್ಯ, ಮುದ್ರೆ, ಮೊಹರು
ಣಾಣಗ}.

ಣಾಣತ}. ನ: [ನಾನಾತ್ವ] ಭೇದ, ಬಹು ಪ್ರಕಾರ
ಣಾಣತಾ.ಅನೇಕವಾಗಿ, ಅಂತರ ಸ್ತ್ರೀ: [ನಾನಾತಾ]

ಣಾಣಾ. ಅ: [ನಾನಾ] ಅನೇಕ, ಬೇರೆಬೇರೆ(ಉವಾ), **–ವಿಹ.** ವಿ: [–ವಿಧ] ಅನೇಕ ಪ್ರಕಾರದ, ಬಹು ವಿಧದ, ವಿವಿಧ

ಣಾಣಿ. ವಿ: [ಜ್ಞಾನಿನ್] ಜ್ಞಾನಿ, ಅರಿತವನು, ವಿದ್ವಾಂಸ

ಣಾದಿಯ. '**ಣಾಇಯ**' ಶಬ್ದವನ್ನು ನೋಡುವುದು

ಣಾಭಿ. ಪು: [ನಾಭಿ] ಒಬ್ಬ ಮುಖಂಡ ವ್ಯಕ್ತಿ, ಋಷದೇವನ ತಂದೆ, ಹೊಟ್ಟೆಯ ಮಧ್ಯಭಾಗ, ಗಾಡಿಯ ಒಂದು ಅಂಗ, ಸಂದಣ. ಪು: [–ನಂದಣ] ಋಷಭದೇವ.

ಣಾಮ. ಅ: [ನಾಮ] ಸಂಭಾವನಾ ಸೂಚಕ ಅವ್ಯಯ

ಣಾಮಿ. ಪು: [ನಾಮಿ] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಶ್ರೇಷ್ಠ, ಕುಲವಂತ. ಭಗವಾನ್ ವೃಷಭದೇವನ ತಂದೆ. ಹೊಟ್ಟೆಯ ಮಧ್ಯಭಾಗ, ಗಾಡಿಯ ಒಂದು ಅಂಗ, **–ನಂದಣ.** ಪು: [–ನಂದನ] ಭಗವಾನ್ ವೃಷಭದೇವ.

ಣಾಮ. ಸಕ: [ನಮಯ್] ಬಗ್ಗಿಸು, ತಲೆಬಾಗಿಸು, ಹಾಜರುಪಡಿಸು, ಅರ್ಪಿಸು

ಣಾಮ. ಪು: [ನಾಮ] ಪರಿಣಾಮ, ಭಾವ(ಭಗ), ನಮನ

ಣಾಮ. ಅ: [ನಾಮ] ಸಂಭಾವನೆ, ಸಂಬೋಧನೆ, ಪ್ರಸಿದ್ಧಿ, ಅನುಮತಿ, ಒಪ್ಪಿಗೆ, ಈ ಅರ್ಥಗಳಲ್ಲಿ ಬಳಕೆಯಾಗುತ್ತದೆ. ವಾಕ್ಯಾಲಂಕಾರ ಮತ್ತು ಪಾದ–ಪೂರ್ತಿಯಲ್ಲಿ ಇದರ ಬಳಕೆಯಾಗುತ್ತದೆ

ಣಾಮ. ನ: [ನಾಮನ್] ಹೆಸರು(ವಿಪಾ). **–ಕಮ್ಮ.** ನ:[–ಕರ್ಮನ್] ಕರ್ಮ ವಿಶೇಷ. "ಚಿತ್ರಪರಿಣಾಮದ ಕಾರಣ–ಭೂತವಾದ ಕರ್ಮ. **–ಧಿಜ್ಜ, –ಧೇಜ್ಜ, ಧೇಯ.** ನ: [–ಧೇಯ] ಹೆಸರು(ಪಉಮ). **–ಪುರ.** ನ: [–ಪುರ] ಒಂದು "ವಿದ್ಯಾಧರ ನಗರ. **–ಮುದ್ದಾ.** ಸ್ತ್ರೀ: [–ಮುದ್ರಾ] ಹೆಸರಿನಿಂದ ಅಂಕಿತವಾದ ಮೊಹರು**–ಸಚ್ಚ.** ವಿ: [–ಸತ್ಯ] ಹೆಸರಿನಿಂದ ಮಾತ್ರ ಸತ್ಯವಂತ, ನಾಮಧಾರಿ, **–ಹೇಅ.** '**–ಧೇಯ**' ಶಬ್ದವನ್ನು ನೋಡುವುದು.

ಣಾಮಣ. ನ: [ನಮನ] ಬಗ್ಗಿಸುವುದು, ತಲೆಬಾಗಿಸುವಂತೆ ಮಾಡುವುದು

ಣಾಮಮಂತಕ್ಖ. ಪು: [ದೇ] ಅಪರಾಧ, ತಪ್ಪು

ಣಾಮಗೋತ್ತ. ನ: [ನಾಮಗೋತ್ರ] ವಾಸ್ತವ ಹೆಸರು(ನಿಜನಾಮ), ಹೆಸರು ಮತ್ತು ಗೋತ್ರ

ಣಾಮಿವ. ವಿ: [ನಮಿತ] ನಮಸ್ಕಾರ ಮಾಡಿಸಲ್ಪಟ್ಟ, ಬಗ್ಗಿಸಲ್ಪಟ್ಟ

ಣಾಮಿಯ. ನ: [ನಾಮಿಕ] ವಾಚಕ ಶಬ್ದ, ಪದ

ಣಾಮುಕ್ಕಸಿಅ.}. ನ: [ದೇ] ಕಾರ್ಯ, ಕೆಲಸ
ಣಾಮೊಕ್ಕಸಿಅ.}.

ಣಾಯ. ವಿ: [ದೇ] ಅಭಿಮಾನಿ

ಣಾಯ. '**ಣಾಗ**' ಶಬ್ದವನ್ನು ನೋಡುವುದು.

ಣಾಯ. ಪು: [ನಾದ] ಶಬ್ದ, ಧ್ವನಿ(ಔಪ)

ಣಾಯ. ಪು: [ನ್ಯಾಯ] ಅಕ್ಷಪಾದರು ರಚಿಸಿದ ನ್ಯಾಯ–ಶಾಸ್ತ್ರ; ಸಾಮಯಿಕವೇ ಮೊದಲಾದ ಷಟ್ಕರ್ಮಗಳು

ಣಾಯ. ಪು: [ನಾದ] ಅನುನಾಸಿಕಾಕ್ಷರ, ಅರ್ಧ ಚಂದ್ರಾಕಾರದ ಅಕ್ಷರ

ಣಾಯ. ವಿ: [ನ್ಯಾಯ್ಯ] ನ್ಯಾಯದಿಂದ ಕೂಡಿದ

ಣಾಯ. ಪು: [ನ್ಯಾಯ] ನ್ಯಾಯ, ನೀತಿ(ಔಪ), ಪ್ರಮಾಣ, **–ಕಾರಿ,** ವಿ: [–ಕಾರಿನ್] ನ್ಯಾಯ ಕರ್ತೃ, **–ಗರ.** ವಿ: [–ಕರ] ನ್ಯಾಯ ಕರ್ತೃ, ನ್ಯಾಯಾಧೀಶ. **–ಣ್ಣ.** ವಿ: [–ಜ್ಞ] ನ್ಯಾಯವನ್ನು ತಿಳಿದವನು(ಉಪ)

ಣಾಯ. ಪು: [ನಾಕ] ಸ್ವರ್ಗ, ದೇವ ಲೋಕ(ಪಾಅ)
ಣಾಯ. ನ: [ಜ್ಞಾತ] ಭಗವಾನ್ ಮಹಾವೀರ, ವಿ: ಪ್ರಸಿದ್ಧನಾದ, ವಿ: ತಿಳಿದವನು, ಜ್ಞಾನಿ, ಬಲ್ಲವನು. ಜ್ಞಾತಿ–ಸಂಬಂಧಿ, ಒಂದು ಮನೆತನದ, ದಾಯಾದಿ, ವಂಶ–ವಿಶೇಷದಲ್ಲಿ ಹುಟ್ಟಿದ, ಪು: ವಂಶ–ವಿಶೇಷ, ಕತ್ತಿಯ. ನ: ಉದಾಹರಣೆ, ದೃಷ್ಟಾಂತ. **–ಕುಮಾರ.** ಪು: [–ಕುಮಾರ] ಜ್ಞಾತ ವಂಶಕ್ಕೆ ಸೇರಿದ ರಾಜಪುತ್ರ (ಣಾಯಾ), **–ಕುಲ.** ನ: [–ಕುಲ] ವಂಶ–ವಿಶೇಷ, **–ಕುಲಚಂದ.** ಪು: [–ಕುಲಚಂದ್ರ] ಭಗವಾನ್ ಶ್ರೀಮಹಾವೀರ. **–ಕುಲನಂದಣ.** ಪು: [–ಕುಲನಂದನ] ಭಗವಾನ್ ಶ್ರೀ ಮಹಾವೀರ(ಆಚಾ). **–ಪುತ್ತ.** [–ಪುತ್ರ] ಶ್ರೀ ಭಗವಾನ್ ಮಹಾವೀರ. **–ವಿಹಿ.** ಪುಂಸ್ತ್ರೀ: [–ವಿಧಿ] ತಾಯಿ ಅಥವಾ ತಂದೆಯ ಕಡೆಯಿಂದ ಸಂಬಂಧ, ಸಂಬಂಧಿ, ಸಂಬಂಧಿತನ. **–ಸಂಡ.** ನ: [–ಷಂಡ] ಮಹಾವೀರರು ದೀಕ್ಷೆ ಸ್ವೀಕರಿಸಿದ ಉದ್ಯಾನವನ. **–ಸುಯ.** ಪು: [–ಸುತ] ಶ್ರೀ ಭಗವಾನ್ ಮಹಾವೀರ. ಸುಯ. ನ: [–ಶ್ರುತ] ಜೂಜ್ಞಾತಾ ಧರ್ಮ ಕಥಾ ಎಂಬ ಜೈನ ಆಗಮ ಗ್ರಂಥ. **ಣಾಯಾಧಮ್ಮಕಹಾ.** ಸ್ತ್ರೀ: [–ಧರ್ಮಕಥಾ] ಜೂಜೈನ ಆಗಮ ಗ್ರಂಥ.
ಣಾಯಗ. ಪು: [ನಾಯಕ] **ಣಾಯಗ.** ಪು: [ನಾಯಕ] ಹಾರದ ಮಧ್ಯದ ಮಣಿ
ಣಾಯಗ. ಪು: [ನಾಯಕ] **ಮುಖಂಡ, ನೇತಾ**
ಣಾಯತ್ತ. ಪು: [ದೇ] **ಸಮುದ್ರ** ಮಾರ್ಗದ ಮೂಲಕ ವ್ಯಾಪಾರ ಮಾಡುವ ವ್ಯಾಪಾರಿ.
ಣಾಯರ. '**ಣಾಗರ**' ಶಬ್ದವನ್ನು ನೋಡುವುದು.
ಣಾಯರಿಯ. '**ಣಾಗರಿಯ**' ಶಬ್ದವನ್ನು ನೋಡುವುದು. ಸ್ತ್ರೀ: **–ಯಾ.**
ಣಾಯರೀ. '**ಣಾಗರೀ**' ಶಬ್ದವನ್ನು ನೋಡುವುದು.
ಣಾಯವ್ವ. '**ಣಾ=ಜ್ಞಾ**' ಶಬ್ದವನ್ನು ನೋಡುವುದು.
ಣಾರ. ಪು: [ನಾರ] ನಾಲ್ಕನೇ ನರಕ–ಪೃಥ್ವಿಯ ಒಂದು ಬಂಡೆ
ಣಾರಇಅ. ವಿ: [ನಾರಕಿಕ] ನರಕ–ಪೃಥ್ವಿಯಲ್ಲಿ ಹುಟ್ಟಿದ, ಪು: ನರಕ ಪೃಥ್ವಿಯ ಜೀವ.
ಣಾರಂಗ. ಪು: [ನಾರಂಗ] ಕಿತ್ತಲೆ ಗಿಡ, ನ: ಕಿತ್ತಲೆ ಹಣ್ಣು, ಕಮಲಾ, ನಿಂಬೆ
ಣಾರಗ. '**ಣಾರಯ=ನಾರಕ**' ಶಬ್ದವನ್ನು ನೋಡುವುದು.
ಣಾರದ. '**ಣಾರಯ**' ಶಬ್ದವನ್ನು ನೋಡುವುದು.
ಣಾರದೀಅ. ವಿ: [ನಾರದೀಯ] ನಾರದನಿಗೆ ಸಂಬಂಧಿಸಿದ
ಣಾರಯ. ಪು: [ನಾರದ] ದೇವ ಋಷಿ ನಾರದ, ಗಂಧರ್ವ ಸೈನ್ಯದ ಅಧಿಪತಿ ದೇವ
ಣಾರಯ. ವಿ: [ನಾರಕ] ನರಕದಲ್ಲಿ ಹುಟ್ಟಿದ, ನರಕಕ್ಕೆ ಸಂಬಂಧಿಸಿದ, ಪು: ನರಕದಲ್ಲಿ ಹುಟ್ಟಿದ ಜೀವ
ಣಾರಸಿಂಹ. ವಿ: [ನಾರಸಿಂಹ] ನರಸಿಂಹನಿಗೆ ಸಂಬಂಧಿಸಿದ(ಉಪ)
ಣಾರಾಯ. ಪು: [ನಾರಾಚ] ಸಣ್ಣ ತಕ್ಕಡಿ, ಮುಳ್ಳು,
ಣಾರಾಯ. '**ಣರಾಅ**' ಶಬ್ದವನ್ನು ನೋಡುವುದು. **–ವಜ್ಜ.** ನ: [–ವಜ್ರ] ದೇಹ–ವಿಶೇಷ
ಣಾರಾಯಣ. ಪು: [ನಾರಾಯಣ] ವಿಷ್ಣು, ಶ್ರೀಕೃಷ್ಣ, ಅರ್ಧ ಚಕ್ರವರ್ತಿ ರಾಜ(ಪಉಮ), ಒಬ್ಬ ಋಷಿ.
ಣಾರಾಯಣೀ. ಸ್ತ್ರೀ: [ನಾರಾಯಣೀ] ಗೌರಿ, ದುರ್ಗಾ ಮೊದಲಾದ ದೇವಿಯರು
ಣಾ–. '**ಣಾರೀ**' ಶಬ್ದವನ್ನು ನೋಡುವುದು. ▯ಕಂತಾ. ಸ್ತ್ರೀ: [–ಕಾಂತಾ] **ಒಂದು** ನದಿ
ಣಾರಿಏರ.}. ಪು: [ನಾಲಿಕೇರ] ತೆಂಗಿನ ಮರ, ತೆಂಗಿನ
ಣಾರಿಏಲ}. ಕಾಯಿ(ಅಭಿ), '**ಣಾಲಿಅರ**' ಶಬ್ದವನ್ನು ನೋಡುವುದು.
ಣಾರಿಂಗ. ನ: [ನಾರಿಂಗ] ಕಿತ್ತಳೆ ಹಣ್ಣು, ಸಿಹಿ ನಿಂಬೆ, ಹುಳಿನಿಂಬೆ(ಕಮಲಾ)
ಣಾರೀ. ಸ್ತ್ರೀ: [ನಾರೀ] ಸ್ತ್ರೀ, ಹೆಣ್ಣು, ಮಹಿಳೆ, ಒಂದು ನದಿ, **–ಕಂತಪ್ಪವಾಯ.** ಪು: [–ಕಾಂತಾಪ್ರಪಾತ] ದ್ರಹ– ವಿಶೇಷ, '**ಣಾರಿ–**' ಶಬ್ದವನ್ನು ನೋಡುವುದು.
ಣಾರುಟ್ಟ. ಪು: [ದೇ] ಹಳ್ಳದಂಥ ಪ್ರದೇಶ,
ಣಾರೊಟ್ಟ. ಪು: [ದೇ] ಹಾವು, ಚೇಳು ಇತ್ಯಾದಿಗಳು ವಾಸಿಸುವ ಬಿಲ, ಹಗೇವು, ರಂಧ್ರಾಕಾರದ ಸ್ಥಳ
ಣಾಲ. ನ: [ನಾಲ] ಕಮಲದ ದಂಟು, ಗರ್ಭದ ಆವರಣ(ಉಪ)
ಣಾಲಂದಇಜ್ಜ. ವಿ: [ನಾಲಂದೀಯ] ನಾಲಂದಕ್ಕೆ ಸಂಬಂಧಿಸಿದ, ನ: ನಾಲಂದದ ಸಮೀಪದಲ್ಲಿ ಪ್ರತಿಪಾದಿತವಾದ ಅಧ್ಯಯನ–ವಿಶೇಷ, '**ಸೂತ್ರ–ಕೃತಾಂಗ ಸೂತ್ರದ**' ಏಳನೇ ಅಧ್ಯಯನ(ಸೂಅ)

ಣಾಲಂದಾ. ಸ್ತ್ರೀ: [ನಾಲಂದಾ] ರಾಜಗೃಹ ನಗರದ ಒಂದು ಪೇಟೆ, ಒಂದು ಭಾಗ
ಣಾಲಂಪಿಅ. ನ: [ದೇ] ಆಕ್ರಂದನದ ಧ್ವನಿ, ಜೋರಾಗಿ ಅಳುವುದು
ಣಾಲಂಬಿ. ಪು: [ದೇ] ಕೂದಲು, ತಲೆಯ ಕೂದಲು
ಣಾಲಯ. ಪು: [ನಾಲಕ] ಒಂದು ಬಗೆಯ ಜೂಜು
ಣಾಲಾ}. ಸ್ತ್ರೀ: [ನಾಡಿ] ಶರೀರದೊಳಗಿನ ಧಮನಿ
ಣಾಲಿ}.
ಣಾಲಿ. ವಿ: [ದೇ] ಕೆಳಗೆ ಬಿದ್ದಿರುವ
ಣಾಲಿ. ಸ್ತ್ರೀ: [ನಾಲಿ] ಒಂದು ಅಳತೆ, ಬೊಗಸೆ
ಣಾಲಿಅ. ವಿ: [ದೇ] ಮೂಢ, ಮೂರ್ಖ, ಅಜ್ಞಾನಿ
ಣಾಲಿಅರ. '**ಣಾರಿಏರ**' ಶಬ್ದವನ್ನು ನೋಡುವುದು. **–ದೀವ.** ಪು: [–ದ್ವೀಪ] ಒಂದು ದ್ವೀಪ–ವಿಶೇಷ
ಣಾಲಿಆ. ಸ್ತ್ರೀ: [ನಾಲಿಕಾ] ತಾವರೆ ಹೂವಿನ ಕಾವು, ನಾಳ. ಕಾಲವನ್ನಳೆಯುವ ಘಟಿಕಾ ಯಂತ್ರ(ಪಾಅ) ತನ್ನ ಶರೀರದಿಂದ ನಾಲ್ಕು ಅಂಗುಲ ಉದ್ದವಾಗಿರುವ ಕೋಲು, ಅಳತೆಯ ದಂಡ, ಒಂದು ಬಗೆಯ ಜೂಜು, **–ಖೆಡ್ಡಾ.** ಸ್ತ್ರೀ: [–ಕ್ರೀಡಾ] ಒಂದು ಬಗೆಯ ಜೂಜಾಟ
ಣಾಲಿಆ}. ಸ್ತ್ರೀ: [ನಾಲಿಕಾ] ನಾಳ, ತಾವರೆಯ
ಣಾಲಿಗಾ}. ಕಾವು(=ದಂಡ), ಅಳತೆ, ದಂಡ, ಧನುಸ್ಸು, ಅರ್ಧ ಮುಹೂರ್ತದ ಕಾಲ, ನಲ್ಲಿ, ಕೊಳಾಯಿ, **–ಖೆಡ್ಡ.** ನ: [–ಖೇಲ] ಜೂಜು.
ಣಾಲಿಏರ. '**ಣಾರಿಏರ**' ಶಬ್ದವನ್ನು ನೋಡುವುದು. (ಣಾಯಾ)
ಣಾಲಿಏರೀ. ಸ್ತ್ರೀ: [ನಾಲಿಕೇರೀ] ತೆಂಗಿನ ಮರ
ಣಾಲೀ. ಸ್ತ್ರೀ: [ನಾಲೀ] ಒಂದು ಬಗೆಯ ದ್ಯೂತ, ಜೂಜು. ಮೂರು ಕೈ ಮತ್ತು ಹದಿನಾರು ಅಂಗುಲ ಉದ್ದವಿರುವ ಕೋಲು
ಣಾಲೀ. ಸ್ತ್ರೀ: [ನಾಲೀ] ಕಮಲ, ತಾವರೆಯ ದಂಟು, ಘಟಿಕಾ ಯಂತ್ರ
ಣಾಲೀ. ಸ್ತ್ರೀ: [ನಾಡೀ] ನಾಡಿ, ಶರೀರದ ದಮನಿ
ಣಾಲೀಯ. ವಿ: [ನಾಲೀಯ] ನಾಳಕ್ಕೆ ಸಂಬಂಧಿಸಿದ
ಣಾಲೀಯಾ. '**ಣಾಲಿಆ**' ಶಬ್ದವನ್ನು ನೋಡುವುದು.
ಣಾವಇ.(ಅಪ). 'ಇವ' ಶಬ್ದವನ್ನು ನೋಡುವುದು.
ಣಾವಣ. ನ: [ದೇ] ದಾನ, ವಿತರಣೆ,
ಣಾವಾ. ಸ್ತ್ರೀ: [ನೌ] ನೌಕೆ, ಹಡಗು(ಭಗ). **–ವಾಣಿಯ.** ಪು: [–ವಾಣಿಜ್ಜ] ಸಮುದ್ರ– ಮಾರ್ಗದ ಮೂಲಕ ವ್ಯಾಪಾರ ಮಾಡುವ ವ್ಯಾಪಾರಿ.
ಣಾವಾ. ಸ್ತ್ರೀ: [ದೇ] ಬೊಗಸೆ, ಒಂದು ಅಳತೆಯ ಸೂಚಕ
ಣಾವಾಪೂರಯ. ಪು: [ದೇ] ಬೊಗಸೆ,
ಣಾವಿಅ. ಪು: [ನಾಪಿತ] ಕ್ಷೌರಿಕ, **–ಸಾಲಾ.** ಸ್ತ್ರೀ: [–ಶಾಲಾ] ಕ್ಷೌರಿಕರ ಕಟ್ಟೆ
ಣಾವಿಅ. ಪು: [ನಾವಿಕ] ಹಡಗು ನಡೆಸುವವನು, ದೋಣಿ ನಡೆಸುವವನು(ಣಾಯಾ)
ಣಾಸ. '**ಣಸ್ಸ**' ಶಬ್ದವನ್ನು ನೋಡುವುದು.
ಣಾಸ. ಸಕ: [ನಾಶಯ್] ನಾಶಮಾಡು,
ಣಾಸ. ಪು: [ನಾಶ] ನಾಶ, ಧ್ವಂಸ(ಪಾಅ). **–ಯರ.** ವಿ: [–ಕರ] ನಾಶಕಾರಕ
ಣಾಸ. ಪು: [ನ್ಯಾಸ] ಸ್ಥಾಪನೆ ಮಾಡುವುದು, ಇರಿಸುವುದು. ಇಡಲು ಅರ್ಹವಾದ ಹಣ, ಒಡವೆ ಇತ್ಯಾದಿಗಳನ್ನು ಅಡವು ಮಾಡುವುದು (ಉಪ)
ಣಾಸಗ. ವಿ: [ನಾಶಕ] ನಾಶಮಾಡುವವನು, ನಾಶ ಮಾಡುವಂಥದು
ಣಾಸಣ. ನ: [ನಾಶನ] ಪಲಾಯನ, ಓಡಿ ಹೋಗುವುದು, ವಿ: ನಾಶ ಮಾಡುವವನು. ಸ್ತ್ರೀ: –ಣೀ.
ಣಾಸಣ. ನ: [ನ್ಯಾಸನ] ಇಡುವುದು, ಅಡವು ಮಾಡುವುದು
ಣಾಸಣಾ. ಸ್ತ್ರೀ: [ನಾಶನಾ] ವಿನಾಶ, ನಾಶವಾಗುವುದು (ವಿಸೇ)
ಣಾಸವ. ಸಕ: [ನಾಶಯ್] ನಾಶಮಾಡು
ಣಾಸವಿಯ. ವಿ: [ನಾಶಿತ] ನಾಶಪಡಿಸಲ್ಪಟ್ಟ, ಓಡಿಸಲಾದ(ಉಪ)
ಣಾಸಾ. ವಿ: [ನಾಸಾ] ಘ್ರಾಣೇಂದ್ರಿಯವಾದ ಮೂಗು
ಣಾಸಿ. ವಿ: [ನಾಶಿನ್] ನಾಶ ಹೊಂದುವ, ಅಳಿದು ಹೋಗುವ
ಣಾಸಿಕ್ಕ}. –ನ: [ನಾಸಿಕ್ಯ] ಈಗ 'ನಾಸಿಕ್' ಎಂದು
ಣಾಸಿಕ್ಕ}. ಕರೆಯಲಾಗುತ್ತಿರುವ ದಕ್ಷಿಣ ಭಾರತದ ಪ್ರಸಿದ್ಧ ನಗರ
ಣಾಸಿಗಾ. ಸ್ತ್ರೀ: [ನಾಸಿಕಾ] ಘ್ರಾಣೇಂದ್ರಿಯವಾದ ಮೂಗು

ಣಾಸಿಯ. ವಿ: [ನಾಶಿತೃ] ನಾಶಪಡಿಸಲಾದ, ನಾಶಪಡಿಸಲ್ಪಟ್ಟ

ಣಾಸಿಯವ್ವ. '**ಣಾಸ=ನಶ್**' ಶಬ್ದವನ್ನು ನೋಡುವುದು.

ಣಾಸಿರ. ವಿ: [ನಶಿತೃ] ನಾಶವಾಗುವ, ನಶ್ವರ(ಕುಮಾ)

ಣಾಸೀಕಯ. ವಿ: [ನ್ಯಾಸೀಕೃತ] ಅಡವಿನ ರೂಪದಲ್ಲಿ ಇಡಲಾಗಿರುವ

ಣಾಸೆಕ್ಕ. '**ಣಾಸಿಕ್ಕ**' ಶಬ್ದವನ್ನು ನೋಡುವುದು.

ಣಾಹ. ಪು: [ನಾಥ] ಸ್ವಾಮಿ, ಯಜಮಾನ, ಒಡೆಯ

ಣಾಹಡ. ಪು: [ನಾಹಟ] ಒಬ್ಬ ರಾಜನ ಹೆಸರು

ಣಾಹಲ. ಪು: [ಲಾಹಲ] ಮ್ಲೇಚ್ಛರ ಒಂದು ಜಾತಿ

ಣಾಹಿ. '**ಣಾಭಿ**' ಶಬ್ದವನ್ನು ನೋಡುವುದು. **ರುಹ.** ಪು: [–ರುಹ] ಚತುರ್ಮುಖ ಬ್ರಹ್ಮ

ಣಾಹಿಂ.(ಅಪ). ಅ: [ನಹಿ] ಇಲ್ಲ(ಕುಮಾ)

ಣಾಹಿಣಾಮ. ನ: [ದೇ] ಮಂಟಪದ ಮಧ್ಯದ ಹಗ್ಗ.

ಣಾಹಿಯ. ವಿ: [ನಾಸ್ತಿಕ] ಪರಲೋಕ ಇತ್ಯಾದಿಗಳನ್ನು ಒಪ್ಪದಿರುವವನು. ನಾಸ್ತಿಕ ಮತದ ಪ್ರವರ್ತಕ. **–ವಾಇ, –ವಾದಿ.** ವಿ: [–**ವಾದಿನ್**] ನಾಸ್ತಿಕ ಮತದ ಅನುಯಾಯಿ. **–ವಾಯ.** ಪು: [–**ವಾದ**] ನಾಸ್ತಿಕ ದರ್ಶನ.

ಣಾಹಿವಿಚ್ಛೇಅ}. ಪು: [ದೇ] – ಜಘನ,

ಣಾಹೀವಿ–ವಿಚ್ಛೇಯ}. ಸೊಂಟದ ಕೆಳಭಾಗ

ಣಿ. ಅ: [ನಿ] ನಿಶ್ಚಯ, ನಿಯತತೆ, ನಿಯಮ(ಠಾ) ಆಧಿಕ್ಯ, ಅತಿಶಯ, ಕೆಳಭಾಗ, ನಿತ್ಯತ್ವ, ಸಂಶಯ, ಆದರ, ವಿಶ್ರಾಂತಿ, ಅಂತರ್ಭಾವ(=ಒಳಗೆ ಸೇರುವುದು), ಸಮಾವೇಶ, ಸಮೀಪತೆ, ನಿಕಟತೆ, ನಿಂದೆ, ಬಂಧನ, ನಿಷೇಧ, ದಾನ, ರಾಶಿ, ಮುಕ್ತಿ, ಅಭಿಮುಖತೆ, ಸಂಮುಖವಾಗುವುದು, ಅಲ್ಪತ್ವ, ಲಘುತ್ವ(ಪಣ್ಣ) ಮುಂತಾದ ಅರ್ಥಗಳನ್ನು ಸೂಚಿಸುವ ಉಪಸರ್ಗಾವ್ಯಯ

ಣಿ. ಅ: [ನಿರ್] ನಿಶ್ಚಯ, ಆಧಿಕ್ಯ, ಅತಿಶಯ(ಉತ್ತ), ನಿಷೇಧ, ಬಹಿರ್ಭಾವ, ನಿರ್ಗಮನ(ಠಾ) ಮುಂತಾದ ಅರ್ಥಗಳನ್ನು ಸೂಚಿಸುವ ಉಪಸರ್ಗಾವ್ಯಯ.

ಣಿಅ. ಸಕ: [ದೃಶ್] ನೋಡು,

ಣಿಅ. ವಿ. [ನಿಜ] ತನ್ನ, ಸ್ವಕೀಯ(ಗಾ)

ಣಿಅ. ವಿ: [ನೀತ] ಕೊಂಡೊಯ್ಯಲಾದ, ಒಯ್ಯಲ್ಪಟ್ಟ

ಣಿಅ. ವಿ: [ನೀಚ] ಜಘನ್ಯ, ನಿಕೃಷ್ಟ, ಕೀಳಾದ,

ಣಿಅ. '**ಣಿವ**' ಶಬ್ದವನ್ನು ನೋಡುವುದು.

ಣಿಅಇ. ಸ್ತ್ರೀ: [ನಿಕೃತಿ] ಮೋಸ, ವಂಚನೆ, ಕಪಟ(ಪಣ್ಣ)

ಣಿಅಇ. ಸ್ತ್ರೀ: [ನಿಯತಿ] ನಿಯತತೆ, ನಿಯಮ, ನಿರ್ಬಂಧ. ಕಟ್ಟುಪಾಡು, ವಿಧಿ. **–ಪವ್ವಯ.** ಪು: [–**ಪರ್ವತ**] ಒಂದು ಪರ್ವತ, **–ವಾಇ.** ವಿ:[–**ವಾದಿನ್**] ದೈವವಾದಿ, ಅದೃಷ್ಟವಾದಿ

ಣಿಅಂಟಿಅ. ವಿ: [ನಿಯಂತ್ರಿತ] ನಿಯಮಿತ, ನ: ಸಂತುಷ್ಟ ಅಥವಾ ರೋಗಿಯು ಇಂಥ ದಿನ ಇಂಥ ತಪ ಮಾಡಬೇಕೆಂಬ ನಿಯಮ, ಕಟ್ಟಲ್ಪಟ್ಟ, ಬಿಗಿಯಲ್ಪಟ್ಟ

ಣಿಅಂಠ. ವಿ: [ನಿರ್ಗ್ರಂಥ] ಹಣವಿಲ್ಲದ, ನಿರ್ಧನ, ಜೈನಯತಿ, ಸಂಯಮಿ, ಯತಿ, ಜಿನದೇವ, ಪು: ಭಗವನ್ ಬುದ್ಧ

ಣಿಅಂಠಿ. '**ಣಿಗ್ಗಂಥೀ**' ಶಬ್ದವನ್ನು ನೋಡುವುದು. **–ಪುತ್ತ.** ಪು: [–**ಪುತ್ರ**] '**ಸತ್ಯಕಿ**' ಎಂಬ ಮತ್ತೊಂದು ಹೆಸರನ್ನು ಹೊಂದಿದ್ದ ಒಬ್ಬ ವಿದ್ಯಾಧರ ಪುತ್ರ. ಮಹಾವೀರನ ಶಿಷ್ಯಾಗಿದ್ದ ಒಬ್ಬ ಜೈನಮುನಿ.

ಣಿಅಂಠಿಅ. ವಿ: [ನೈರ್ಗ್ರಂಥಿಕ] ನಿರ್ಗ್ರಂಥಕ್ಕೆ ಸಂಬಂಧಿಸಿದ. ಜಿನದೇವನಿಗೆ ಸಂಬಂಧಿಸಿದ

ಣಿಅಂಠೀ. '**ಣಿಗ್ಗಂಥೀ**' ಶಬ್ದವನ್ನು ನೋಡುವುದು.

ಣಿಅಂತ. ವಿ: [ನಿಯತ] ಸ್ಥಿರ

ಣಿಅಂತ. ವಿ: [ನಿರ್ಯತ್] ಹೋಗುತ್ತಿರುವ, ಹೊರಡುತ್ತಿರುವ

ಣಿಅಂತಿಯ. ವಿ: [ನಿಯಂತ್ರಿತ] ತಡೆಯಲ್ಪಟ್ಟ, ಕಟ್ಟಲ್ಪಟ್ಟ, ಸಂಯಮಿತ(ಮಹಾ)

ಣಿಅಂಧಣ. ನ: [ದೇ] ವಸ್ತ್ರ, ಬಟ್ಟೆ

ಣಿಅಂಬ. ಪು: [ನಿತಂಬ] ಪರ್ವತದ ತಪ್ಪಲು ಪ್ರದೇಶ, ಸ್ತ್ರೀಯ ಕಟಿಯ ಹಿಂಭಾಗ, ಪಿರ್ರೆ, ಸೊಂಟ

ಣಿಅಂಬಿಣೀ. ಸ್ತ್ರೀ: [ನಿತಂಬಿನೀ] ಸುಂದರವಾದ ನಿತಂಬಗಳಿರುವ ಹೆಣ್ಣು(ಕಪ್ಪೂ)

ಣಿಅಂಸ. ಸಕ: [ನಿ+ವಸ್] ಧರಿಸು

ಣಿಅಂಸಣ. ನ: [ದೇ. ನಿವಸನ] ವಸ್ತ್ರ, ಬಟ್ಟೆ(ಸುಪಾ)

ಣಿಅಂಸಣೀ. ಸ್ತ್ರೀ: [ನಿವಸನೀ] ಬಟ್ಟೆ, ವಸ್ತ್ರ

ಣಿಅಕ್ಕ. ಸಕ: [ದೃಶ್] ನೋಡು

ಣಿಅಕ್ಕಲ. ವಿ: [ದೇ] ವರ್ತುಲ, ಗೋಳಾಕಾರದ ಪದಾರ್ಥ

ಣಿಅಗ್ಗ. ವಿ: [ನಿಜಕ] ತನ್ನ, ಸ್ವಕೀಯ(ಉವಾ)

ಣಿಅಚ್ಛ. ಸಕ: [ದೃಶ್] ನೋಡು
ಣಿಅಚ್ಛ. ಸಕ: [ನಿ+ಯಮ್] ನಿಯಮಿಸು, ನಿಯಂತ್ರಿಸು, ಹತೋಟಿಯಲ್ಲಿಡು ತಪ್ಪದೆ ದೊರಕಿಸಿಕೊಳ್ಳು, ಜೋಡಿಸು
ಣಿಅಚ್ಛ. ಅಕ: [ನಿ+ಗಮ್] ಸಂಗತವಾಗು, ಯುಕ್ತವೆನಿಸು, ಉಚಿತವಾಗು, ಸಕ: ಅವಶ್ಯಕವಾಗಿ ಪಡೆ,
ಣಿಅಚ್ಛಿಅ. ವಿ: [ದೃಷ್ಟ] ನೋಡಲಾದ(ಪಾಅ)
ಣಿಅಚ್ಛ. ಅಕ: [ನಿ+ಗಮ್] ಸಂಗತವಾಗು, ಯುಕ್ತವಾಗು
ಣಿಅಟ್ಟ. ಅಕ: [ನಿ+ವೃತ್] ನಿವೃತ್ತನಾಗು, ಹಿಂದೆ ಸರಿ, ನಿಲ್ಲು
ಣಿಅಟ್ಟ. ಸಕ: [ನಿರ್+ವೃತ್] ನಿರ್ಮಿಸು, ಕಟ್ಟು, ರಚಿಸು(ಔಪ)
ಣಿಅಟ್ಟ. ಸಕ: [ನಿ+ಅರ್ದ್] ಅನುಸರಿಸು,
ಣಿಅಟ್ಟ. ಪು: [ನಿವರ್ತ] ನಿವೃತ್ತಿ, ಹಿಂದೆ ಸರಿಯುವುದು
ಣಿಅಟ್ಟ. ವಿ: [ನಿವೃತ್ತ] ನಿವೃತ್ತನಾದ, ಹಿಂದೆ ಸರಿದ,
ಣಿಅಟ್ಟಿ. ಸ್ತ್ರೀ: [ನಿವೃತ್ತಿ] ಹಿಂತಿರುಗುವುದು, ಹಿಂದೆ ಸರಿಯುವುದು(ಆಚೂ), ನಿಶ್ಚಯ–ವಿಶೇಷ,ಮೋಹವಿಲ್ಲದ ಸ್ಥಿತಿ(ಸೂಅ). **–ಬಾಯರ.** ನ: [–ಬಾದರ] ಗುಣಸ್ಥಾನಕ–ವಿಶೇಷ, ಪು: ಗುಣಸ್ಥಾನಕ ವಿಶೇಷದಲ್ಲಿ ಇರುವ ಜೀವ
ಣಿಅಟ್ಟಿ. ವಿ: [ನಿವರ್ತಿನ್] ಹಿಂದಕ್ಕೆ ತಿರುಗಿದ
ಣಿಅಟ್ಟಿಯ. ವಿ: [ನಿರ್ವರ್ತಿತ] ಹಿಂದೆ ಸರಿಸಲ್ಪಟ್ಟ(ಔಪ)
ಣಿಅಟ್ಟಿಯ. ವಿ: [ನ್ಯರ್ದಿತ] ಅನುಸರಿಸಲ್ಪಟ್ಟ(ಔಪ)
ಣಿಅಡ. ನ: [ನಿಕಟ] ಹತ್ತಿರ, ಸಮೀಪ, ನಿಕಟ(ಗಾ). ವಿ: ಹತ್ತಿರದ, ಸಮೀಪದ(ಪಾಅ)
ಣಿಅಡಿ. ಸ್ತ್ರೀ: [ದೇ. ನಿಕೃತಿ] ಕಪಟ, ವಂಚನೆ, ಮೋಸ (ಭಗ)
ಣಿಅಡಿ. ವಿ: [ನಿಕೃತಿನ್] ಮಾಯಾವಿ, ಕಪಟಿ, ವಂಚಕ
ಣಿಅಡಿ. ಸ್ತ್ರೀ; [ನಿಕೃತಿ] ಮಾಡಿದ ವಂಚನೆಯನ್ನು ಮುಚ್ಚಿಹಾಕುವುದು
ಣಿಅಡಿಅ. ವಿ: [ನಿಗಡಿತ] ನಿಯಂತ್ರಿತ, ತಡೆಯಲ್ಪಟ್ಟ, ನಿರ್ಬಂಧಿಸಲ್ಪಟ್ಟ(ಸುಪಾ)
ಣಿಅಡಿಅ. ವಿ: [ನಿಕಟಿಕ] ಹತ್ತಿರದಲ್ಲಿರುವ, ಸಮೀಪದಲ್ಲಿರುವ
ಣಿಅಡಿಲ್ಲ. ವಿ: [ನಿಕೃತಿಮತ್] ಕಪಟಿ, ಮಾಯಾವಿ, ಮೋಸಗಾರ(ತಾ)
ಣಿಅಡ್ಢ. ಸಕ: [ನಿ+ಕೃಷ್] ಎಳೆ, ಸೆಳೆ
ಣಿಅಣ. ವಿ: [ನಗ್ನ] ಬೆತ್ತಲೆ
ಣಿಅತ್ತ. 'ಣಿಅಟ್ಟ= ನಿ+ವೃತ್' ಶಬ್ದವನ್ನು ನೋಡುವುದು.
ಣಿಅತ್ತ. 'ಣಿಅಟ್ಟ=ನಿವೃತ್ತ' ಶಬ್ದವನ್ನು ನೋಡುವುದು. (ಪಉಮ)
ಣಿಅತ್ತ. ವಿ: [ನಿಕೃತ] ಕತ್ತರಿಸಲ್ಪಟ್ಟ, ಸೀಳಲ್ಪಟ್ಟ
ಣಿಅತ್ತ. ವಿ: [ನಿತ್ಯ] ಶಾಶ್ವತ, ನಾಶವಾಗದ
ಣಿಅತ್ತಣ. ನ: [ನಿವರ್ತನ] ಭೂಮಿಯ ಒಂದು ಅಳತೆ(ಉವಾ), ನಿವೃತ್ತಿ, ಹಿಂದೆ ಸರಿಯುವುದು
ಣಿಅತ್ತಣಿಯ. ವಿ: [ನಿವರ್ತನಿಕ] ಹಿಂತಿರುಗಿಸಲ್ಪಡುವ ಹಿಂತಿರುಗಿಸಬೇಕಾದ ಪರಿಣಾಮವುಳ್ಳ
ಣಿಅತ್ತಿ. 'ಣಿಅಟ್ಟಿ' ಶಬ್ದವನ್ನು ನೋಡುವುದು.
ಣಿಅತ್ಥ. ವಿ: [ದೇ] ಧರಿಸಿರುವ, ವಸ್ತ್ರಾದಿಗಳನ್ನು ಧರಿಸಲಾಗಿರುವ
ಣಿಅದ. ಸಕ; [ನಿ+ಗದ] ಹೇಳು, ವ. ಕೃ– ಣಿಅದಂತ
ಣಿಅದ್ದಿಯ. 'ಣಿಅಟ್ಟಿಯ=ನ್ಯರ್ದಿತ' ಶಬ್ದವನ್ನು ನೋಡುವುದು.
ಣಿಅದ್ಧಣ. ನ: [ದೇ] ಉಡುವ ವಸ್ತ್ರ, ಧರಿಸುವ ಬಟ್ಟೆ
ಣಿಅಮ. ಸಕ: [ನಿ+ಯಮಯ್] ನಿಯಂತ್ರಿಸು, ನಿಯಮಿಸು, ತಡೆ, ಮಾತಿನಿಂದ ಮಾಡಿಸು, ಶರೀರದಿಂದ ಮಾಡಿಸು
ಣಿಅಮ. ಪು: [ನಿಯಮ] ನಿಶ್ಚಯ, ಕೈಗೊಂಡ ಪ್ರತಿಜ್ಞೆ, ವ್ರತ, ಪ್ರಾಯೋಪವೇಶನ; ಆಮರಣ ನಿರಶನ ವ್ರತ. **–ಸಾ.** ಅ:[–ಸಾತ್] ನಿಯಮಸಹಿತ, **–ಸೋ.** ಅ: [–ಶಸ್] ನಿಶ್ಚಯ ಪೂರ್ವಕವಾಗಿ
ಣಿಅಮಣ. ನ: [ನಿಯಮನ] ನಿಯಂತ್ರಣ, ಹತೋಟಿ, ಸಂಯಮ
ಣಿಅಮಿಯ. ವಿ: [ನಿಯಮಿತ] ನಿಯಂತ್ರಿತ, ಹತೋಟಿಯಲ್ಲಿಡಲ್ಪಟ್ಟ,
ಣಿಅಯ. ನ: [ದೇ] ಮೈಥುನ, ಹಾಸಿಗೆ, ಕೊಡ ವಿ: ನಿತ್ಯ, ಶಾಶ್ವತ
ಣಿಅಯ. ವಿ: [ನಿಜಕ] ತನ್ನ, ಸ್ವಕೀಯ(ಪಾಅ)
ಣಿಅಯ. ವಿ: [ನಿಯತ] ನಿಯಮಬದ್ಧ, ನಿಯಮಕ್ಕೆ ತಕ್ಕಂತೆ(ಉವಾ)
ಣಿಅಯಾ. ಸ್ತ್ರೀ: [ನಿಯತಾ] ಜಂಬೂ ವೃಕ್ಷ–ವಿಶೇಷ. ಇದರಿಂದಲೇ ಇದು ಜಂಬೂದ್ವೀಪವೆಂದು ಕರೆಯಲ್ಪಡುತ್ತದೆ.
ಣಿಅರ. ಪು: [ನಿಕರ] ರಾಶಿ, ಸಮೂಹ, ಗುಂಪು

ಣಿಅರಣ. ನ: [ದೇ] ಶಿಕ್ಷೆ, ದಂಡನೆ.
ಣಿಅರಿಅ. ವಿ: [ದೇ] ರಾಶಿ ರೂಪದಲ್ಲಿ ಇರುವ
ಣಿಅಲ. ನ: [ನಿಗಡ] ನೂಪುರ, ಕಾಲಂದಿಗೆ
ಣಿಅಲ. ಪು: [ನಿಗಡ] ಬೇಡಿ, ಸಂಕೋಲೆ, 'ಣಿಗಲ' ಶಬ್ದವನ್ನು ನೋಡುವುದು.
ಣಿಅಲಾಇಅ}. ವಿ: [ನಿಗಡಿತ] ಸರಪಳಿಯಿಂದ ಕಟ್ಟಲ್ಪಟ್ಟ,
ಣಿಅಲಾವಿಅ}. ಸಂಕೋಲೆಯಿಂದ ಬಂಧಿತ,
ಣಿಅಲಿಅ}. ಬೇಡಿಹಾಕಲಾದ (ಗಉಡ)
ಣಿಅಲ್ಲ. ಪು: [ದೇ. ನಿಯಲ್ಲ] ಗ್ರಹದ ಅಧಿಷ್ಠಾತೃ ದೇವ-ವಿಶೇಷ.
ಣಿಅಲ್ಲ. ವಿ: [ನಿಜ] ತನ್ನ ಸ್ವಕೀಯ
ಣಿಅಸ. 'ಣಿಅಂಸ' ಶಬ್ದವನ್ನು ನೋಡುವುದು.
ಣಿಅಸಣ. 'ಣಿಅಂಸಣ' ಶಬ್ದವನ್ನು ನೋಡುವುದು.
ಣಿಅಸಿಅ. ವಿ: [ನಿವಸಿತ] ಧರಿಸಿರುವ, ಉಟ್ಟಿರುವ (ಸುಪಾ)
ಣಿಅಹ. 'ಣಿವಹ' ಶಬ್ದವನ್ನು ನೋಡುವುದು.
ಣಿಆ. ಸ್ತ್ರೀ: [ನಿದಾ] ಪ್ರಾಣಿಹಿಂಸೆ
ಣಿಆ- 'ಣಿಅಯ=(ದೇ)' ಶಬ್ದವನ್ನು ನೋಡುವುದು. -ವಾಇ. ವಿ: [-ವಾದಿನ್] ಪದಾರ್ಥವನ್ನು ಶಾಶ್ವತವೆಂದು ಒಪ್ಪುವವನು
ಣಿಆಇಯ. 'ಣಿಕಾಇಯ' ಶಬ್ದವನ್ನು ನೋಡುವುದು
ಣಿಆಗ. ಪು: [ನಿಯಾಗ] ನಿಯತ ಯೋಗ, ನಿಶ್ಚಿತವಾದ ಪೂಜೆ, ಮೋಕ್ಷ(ಆಚಾ). ನ: ಆಹ್ವಾನಿಸಿ ಅಥವಾ ಕರೆದು ನೀಡಲಾಗುವ ಭಿಕ್ಷೆ
ಣಿಆಗ. 'ಣಾಯ=ನ್ಯಾಯ' ಶಬ್ದವನ್ನು ನೋಡುವುದು.
ಣಿಆಣ. ನ: [ನಿದಾನ] ಆರಂಭ, ದೋಷದಿಂದ ಕೂಡಿದ ವ್ಯಾಪಾರ, ರೋಗ-ಕಾರಣ, ಹೇತು, ರೋಗದ ಕಾರಣ, ರೋಗದ ಪತ್ತೆಹಚ್ಚುವುದು, ಯಾವುದಾದರೂ ವ್ರತಾನುಷ್ಠಾನದ ಫಲ ಲಭಿಸಬೇಕೆನ್ನುವ ಅಭಿಲಾಷೆ. ಸಂಕಲ್ಪ. ಮೂಲ ಕಾರಣ(ಆಚಾ), -ಕಡ. ವಿ: [-ಕೃತ್] ತನ್ನ ಮಂಗಳಕರವಾದ ಅನುಷ್ಠಾನದ ಫಲವನ್ನು ಬಯಸಿರುವವನು. -ಕಾರಿ. ವಿ: [-ಕಾರಿನ್] ಅದೇ ಆ ಮೇಲೆ ಹೇಳಿದ ಅರ್ಥ.
ಣಿಆಣ. ನ: [ನಿಪಾನ] ಬಾವಿ ಅಥವಾ ಕೆರೆಯ ಹತ್ತಿರ ಪಶುಗಳು ನೀರು ಕುಡಿಯಲೆಂದು ನಿರ್ಮಿಸಿರುವ ನೀರಿನ ನೀರಿನ ಕುಂಡ, ನೀರಿನ ತೊಟ್ಟಿ
ಣಿಆಣಿಆ. ಸ್ತ್ರೀ: [ದೇ] ಹಾಳಾದ ಹುಲ್ಲನ್ನು ಬುಡಸಹಿತ ಕಿತ್ತೆಸೆಯುವುದು
ಣಿಆಮ. 'ಣಿಅಮ=ನಿಯಮಯ್' ಶಬ್ದವನ್ನು ನೋಡುವುದು.
ಣಿಆಮ. 'ಣಿಕಾಮ' ಶಬ್ದವನ್ನು ನೋಡುವುದು.
ಣಿಆಮಗ}. ವಿ: [ನಿಯಾಮಕ] ನಿಯಮಗಳನ್ನು
ಣಿಆಮಯ}. ಮಾಡುವವನು, ಶಾಸನ ರಚಕ, ನಿಶ್ಚಯಿಸುವವನು,
ಣಿಆಮಿಅ. ವಿ: [ನಿಯಮಿತ] ನಿಯಮಕ್ಕೆ ಒಳಪಟ್ಟಿರುವ, ಮಿತಿಗೊಳಿಸಲ್ಪಟ್ಟ, ತಡೆಯಲ್ಪಟ್ಟ
ಣಿಆಯ. ಪು: [ನಿಯಾಗ] ಪ್ರಶಸ್ತವಾದ ಧರ್ಮ
ಣಿಆರ. ಸಕ: [ಕಾಣೇಕ್ಷಿತಕೃ] ಒಂದು ಕಣ್ಣಿನಿಂದ ನೋಡು
ಣಿಆರಿಅ. ವಿ: [ಕಾಣೇಕ್ಷಿತಾಕೃತ] ಒಕ್ಕಣ್ಣಿನ ನೋಟದಿಂದ ನೋಡಲಾದ, ಅರೆ ನೋಟದಿಂದ ನೋಡಲಾದ, ನ: ಅರೆ ನೋಟದಿಂದ ನೋಡುವುದು
ಣಿಆಹ. ಪು: [ನಿದಾಘ] ಗ್ರೀಷ್ಮ ಋತು, ಬೇಸಗೆ ಕಾಲ, ಉಷ್ಣತೆ, ಬಿಸಿ, ಕಾವು.
ಣಿಇಗ}. ವಿ: [ದೇ. ನಿತ್ಯ, ನೈತ್ಯಿಕ] ಶಾಶ್ವತ, ನಿತ್ಯ,
ಣಿಇಯ}. ನಾಶವಿಲ್ಲದ(ಪಣ್ಣ)
ಣಿಇಯ. ವಿ: [ನೈತ್ಯಿಕ] ನಿತ್ಯದ
ಣಿಇವ. ವಿ: [ನಿಷ್ಕೃಪ] ನಿರ್ದಯ,
ಣಿಉಅ. ವಿ: [ನಿವೃತ] ಸುತ್ತಲೂ ಆವರಿಸಲ್ಪಟ್ಟ, ಸುತ್ತುವರಿಯಲ್ಪಟ್ಟ
ಣಿಉಅ. ವಿ: [ನಿಯುತ] ಸುಸಂಗತ, ಚೆನ್ನಾಗಿ ಸೇರಿಕೊಂಡಿರುವ(ಣಾಯಾ)
ಣಿಉಂಚಿಅ. ವಿ: [ನಿಕುಂಚಿತ] ಸಂಕುಚಿತ, ಕುಗ್ಗಿದ, ಸ್ವಲ್ಪ ತಿರುಗಿದ
ಣಿಉಂಜ. ಸಕ: [ನಿ+ಯುಜ್] ಜೋಡಿಸು, ಸೇರಿಸು, ಕಾರ್ಯದಲ್ಲಿ ತೊಡಗು ವ.ಕೃ: 'ಣಿಉಂಜಮಾಣ'
ಣಿಉಂಜ. ಪು: [ನಿಕುಂಜ] ಲತಾಗೃಹ, ಬಳ್ಳಿಗಳ ಪೊದರು, ಗಹ್ವರ
ಣಿಉಂಭ. ಪು: [ನಿಕುಂಭ] ಕುಂಭಕರ್ಣನ ಒಬ್ಬ ಮಗ
ಣಿಉಂಭಿಲಾ. ಸ್ತ್ರೀ: [ನಿಕುಂಭಿಲಾ] ನಿಕುಂಭಿಲಾ ಯಾಗ ಮಾಡಿದ ಸ್ಥಳ
ಣಿಉಕ್ಕ. ವಿ: [ದೇ] ಮೌನವಾಗಿರುವವನು(ಪಾಅ)
ಣಿಉಕ್ಕಣ. ಪು: [ದೇ] ಕಾಗೆ, ವಾಯಸ, ವಿ: ಮಾತು ಬಾರದ ಮೂಕ

ಣಿಉಜ್ಜ. ನ: [ನ್ಯುಜ್ಜ] ಒಂದು ಬಗೆಯ ಆಸನ
ಣಿಉಜ್ಜಮ. ವಿ: [ನಿರುದ್ಯಮ] ಉದ್ಯೋಗವಿಲ್ಲದ, ಯಾವ ಪ್ರಯತ್ನವೂ ಇಲ್ಲದ, ಸೋಮಾರಿ
ಣಿಉಡ್ಡ. ಅಕ: [ಮಸ್ಜ್, ನಿ+ಬ್ರುಡ್] ಸ್ನಾನಮಾಡು, ಮುಳುಗು
ಣಿಉಡ್ಡ. ವಿ: [ಮಗ್ನ, ನಿವ್ರುಡಿತ] ಮುಳುಗಿದ, ನಿಮಗ್ನ
ಣಿಉಣ. ವಿ: [ನಿಪುಣ] ದಕ್ಷ, ಚತುರ, ಕುಶಲ, ಸೂಕ್ಷ್ಮ ಸಮರ್ಥ. ಸೂಕ್ಷ್ಮ ಬುದ್ಧಿಯುಳ್ಳ. ದಕ್ಷತೆಯಿಂದ, ಕುಶಲತೆಯಿಂದ, ಜಾಣತನದಿಂದ
ಣಿಉಣ. ವಿ: [ನಿಪುಣ] ನಿಯತ ಗುಣದಿಂದ ಕೂಡಿದ, ನಿಶ್ಚಿತವಾದ ಗುಣವುಳ್ಳ, ಸುನಿಶ್ಚಿತ
ಣಿಉಣಿಯ. ವಿ: [ನೈಪುಣಿಕ] ನಿಪುಣ, ದಕ್ಷ, ಚತುರ(ತಾ)
ಣಿಉತ್ತ. ವಿ: [ನಿಯುಕ್ತ] ಕಾರ್ಯದಲ್ಲಿ ತೊಡಗಿಸಲ್ಪಟ್ಟ, ಕಟ್ಟಲ್ಪಟ್ಟ,
ಣಿಉತ್ತ. ವಿ: [ನಿವೃತ್ತ] ವಿಶ್ರಾಂತಿ ಹೊಂದಿದ, ವಿರಕ್ತನಾದ, ಮೃತ
ಣಿಉತ್ತ. ವಿ: [ನಿರ್ವೃತ್ತ] ನಿಷ್ಪನ್ನವಾದ, ಸಿದ್ಧವಾದ, ಉಂಟಾದ, ನೆರವೇರಿಸಲ್ಪಟ್ಟ(ಉತ್ತರ)
ಣಿಉತ್ತಿ. ಸ್ತ್ರೀ: [ನಿವೃತ್ತಿ] ನಿರಾಮ, ವಿಶ್ರಾಂತಿ
ಣಿಉತ್ತವ್ವ. 'ಣಿಉಂಜ=ನಿ+ಯುಜ್' ಶಬ್ದವನ್ನು ನೋಡುವುದು.
ಣಿಉದ್ದ. ನ: [ನಿಯುದ್ಧ] ಬಾಹು ಯುದ್ಧ, ಕುಸ್ತಿ(ಉಪ)
ಣಿಉರ. ನ: [ನಿಕುರ] ಒಂದು ವೃಕ್ಷ
ಣಿಉರ. ನ: [ನೂಪುರ] ಕಾಲಂದುಗೆ
ಣಿಉರ. ವಿ: [ದೇ] ಕತ್ತರಿಸಲ್ಪಟ್ಟ, ತುಂಡರಿಸಲಾದ, ಹಳತಾದ(ಷಡ್)
ಣಿಉರಂಬ}. ನ: [ನಿಕುರುಂಬ] ಸಮೂಹ, ಗುಂಪು
ಣಿಉರುಂಬ}.
ಣಿಉಲ. ಪು: [ದೇ] ಗಂಟು,
ಣಿಊಢ. ವಿ: [ನಿಗೂಢ] ಗುಪ್ತ, ರಹಸ್ಯವಾದ, ಗುಟ್ಟಾದ,
ಣಿಏಅ. ವಿ: [ನಿಯತ] ನಿಯಮದಿಂದ ಕೂಡಿದ
ಣಿಏಲ್ಲ. 'ಣಿಅಲ್ಲ=ನಿಜ' ಶಬ್ದವನ್ನು ನೋಡುವುದು.
ಣಿಓಅ. ಸಕ: [ನಿ+ಯೋಜಂತ್] ಯಾವುದಾದರೊಂದು ಕಾರ್ಯದಲ್ಲಿ ತೊಡಗಿಸು
ಣಿಓಅ. 'ಣಿಓಗ' ಶಬ್ದವನ್ನು ನೋಡುವುದು. ಆಜ್ಞೆ, ಆದೇಶ, ಅಪ್ಪಣೆ.
ಣಿಓಇಅ. ವಿ: [ನಿಯೋಜಿತ] ನಿಯುಕ್ತ ಗೊಳಿಸಲ್ಪಟ್ಟ, ಕಾರ್ಯವೊಂದರಲ್ಲಿ ತೊಡಗಿಸಲ್ಪಟ್ಟಿರುವ
ಣಿಓಇಅ. ವಿ: [ನೈಯೋಗಿಕ] ನಿಯೋಗಕ್ಕೆ ಸಂಬಂಧಿಸಿದ
ಣಿಓಗ. ಪು: [ನಿಯೋಗ] ಮೋಕ್ಷ, ಮುಕ್ತಿ, ನಿಯಮ, ಅವಶ್ಯಕವಾದ ಕರ್ತವ್ಯ, ಸಂಬಂಧ, ಒಂದು ಕಾರ್ಯದ ನಿರ್ವಹಣೆಗೆ ಗೊತ್ತುಮಾಡುವುದು (ಬೃಹ). ಸೂತ್ರದ ವ್ಯಾಖ್ಯಾನ(ವಿಸೇ), ಆಜ್ಞೆ ಮಾಡುವ ರಾಜ, ಪ್ರಭು, ಕಾರ್ಯ, ಅಧಿಕಾರದ ಪ್ರೇರಣೆ, ಹಳ್ಳಿ, ಊರು, ಕ್ಷೇತ್ರ, ಭೂಮಿ, ಸಂಯಮ, ತ್ಯಾಗ. 'ಣಿಓಅ' ಶಬ್ದವನ್ನು ನೋಡುವುದು. –ಪುರ. ನ: [–ಪುರ] ರಾಜಧಾನಿ, ದೇಶ, ರಾಜ್ಯ
ಣಿಓಗಿ. ವಿ: [ನಿಯೋಗಿನ್] ನಿಯುಕ್ತ, ಆಜ್ಞೆ ಮಾಡಲ್ಪಟ್ಟ, ಅಧಿಕಾರದಲ್ಲಿ ನೇಮಿಸಲ್ಪಟ್ಟ
ಣಿಓಜ. 'ಣಿಓಅ' ಶಬ್ದವನ್ನು ನೋಡುವುದು.
ಣಿಂತ}. 'ಣೀ=ಗಮ್' ಶಬ್ದವನ್ನು ನೋಡುವುದು.
ಣಿಂತಣ}.
ಣಿಂತೂಣ},
ಣಿಂದ. ಸಕ: [ನಿಂದ್] ನಿಂದಿಸು, ಅಸಹ್ಯಪಡು. ವ. ಕೃ–'–ಣಿಂದಂತ'
ಣಿಂದ. ವಿ: [ನಿಂದ್ಯ] ನಿಂದೆಗೆ ಅರ್ಹವಾದ, ನಿಂದನೀಯವದ(ಆಚೂ)
ಣಿಂದ.(ಅಪ). ಸ್ತ್ರೀ: [ನಿದ್ರಾ] ನಿದ್ರೆ, ನಿದ್ದೆ(ಭವಿ)
ಣಿಂದಣ. ನ: [ನಿಂದನ] ನಿಂದೆ, ತಿರಸ್ಕಾರ, ಜುಗುಪ್ಸೆ(ಉಪ)
ಣಿಂದಣಯಾ. 'ಣಿಂದಣಾ' ಶಬ್ದವನ್ನು ನೋಡುವುದು.
ಣಿಂದಣಾ. ಸ್ತ್ರೀ: [ನಿಂದನಾ] ನಿಂದೆ, ಜುಗುಪ್ಸೆ(ಓಘ)
ಣಿಂದಯ. ವಿ: [ನಿಂದಕ] ನಿಂದಿಸುವವನು(ಪಉಮ), ಧಿಕ್ಕರಿಸುವವನು, ದೂಷಿಸುವವನು
ಣಿಂದಾ. ಸ್ತ್ರೀ: [ನಿಂದಾ] ತಿರಸ್ಕಾರ, ಜುಗುಪ್ಸೆ, ನಿಂದೆ
ಣಿಂದಿಅ. ವಿ: [ನಿಂದಿತ] ನಿಂದಿಸಲ್ಪಟ್ಟವನು(ಗಾ), ದೂಷಿಸಲ್ಪಟ್ಟವನು,
ಣಿಂದಿಣೀ. ಸ್ತ್ರೀ: [ದೇ] ತುಚ್ಛ ಅಥವಾ ಕ್ಷುದ್ರ ಹುಲ್ಲನ್ನು ಬುಡಸಮೇತ ಕಿತ್ತುಹಾಕುವುದು(ದೇ)
ಣಿಂದು. ಸ್ತ್ರೀ: [ನಿಂದು] ಮಕ್ಕಳು ತೀರಿ ಹೋಗಿರುವ ತಾಯಿ, ಮಕ್ಕಳನ್ನು ಕಳೆದುಕೊಂಡ ತಾಯಿ
ಣಿಂಬ. ಪು: [ನಿಂಬ] ಬೇವಿನ ಮರ

ಣಿಂಬೋಲಿಯಾ. ಸ್ತ್ರೀ: [ನಿಂಬಗುಲಿಕಾ] ಬೇವಿನ ಹಣ್ಣು (ಣಾಯಾ)

ಣಿಕರ. ಪು: [ನಿಕರ] ಸಮೂಹ, ಗುಂಪು, ರಾಶಿ(ಕಪ್ಪೂ)

ಣಿಕರಣ. ನ: [ನಿಕರಣ] ನಿಶ್ಚಯ, ನಿರ್ಣಯ, ತೊಂದರೆ ಕೊಡುವುದು, ದುಃಖ ಉಂಟು ಮಾಡುವುದು

ಣಿಕರಿಯ. ವಿ: [ನಿಕರಿತ] ಚೆನ್ನಾಗಿ ಶುದ್ಧೀಕರಿಸಲ್ಪಟ್ಟಿರುವ

ಣಿಕಸ. 'ಣಿಹಸ' ಶಬ್ದವನ್ನು ನೋಡುವುದು

ಣಿಕಾಇಯ. ವಿ: [ನಿಕಾಚಿತ] ನಿಯಮಿಸಲ್ಪಟ್ಟಿರುವ, ಅತ್ಯಂತ ದಟ್ಟವಾಗಿ ಕಟ್ಟಲ್ಪಟ್ಟಿರುವ, ನ: ಕರ್ಮಗಳು ನಿಬಿಡವಾಗಿ ಬಂಧಿತವಾಗಿರುವುದು

ಣಿಕಾಮ. ಸಕ: [ನಿ+ಕಾಮಯ್] ಇಚ್ಛಿಸು, ಇಷ್ಟಪಡು,

ಣಿಕಾಮ. ನ: [ನಿಕಾಮ] ನಿಶ್ಚಯ, ನಿರ್ಣಯ, ಅತ್ಯಂತ, ಅತಿಶಯ(ಸೂಅ), ಯಾವಾಗಲೂ ಅಳತೆಗಿಂತ ಹೆಚ್ಚಾಗಿ ಮಾಡುವ ಟ

ಣಿಕಾಮಮೀಣ. ವಿ: [ನಿಕಾಮಮೀಣ] ಬಹಳವಾಗಿ ಪ್ರಾರ್ಥಿಸುವವನು, ಕೋರುವವನು

ಣಿಕಾಯ. ಸಕ: [ನಿ+ಕಾಚಯ್] ನಿಯಮಿಸು, ಹತೋಟಿಯಲ್ಲಿಡು, ಬಹಳ ಕಟ್ಟುಮಸ್ತಾಗಿ ಕಟ್ಟು, ಆಹ್ವಾನಿಸು

ಣಿಕಾಯ. ಪು: [ನಿಕಾಯ] ಸಮೂಹ, ಗುಂಪು, ರಾಶಿ, ವರ್ಗ, ಮೋಕ್ಷ, ಅವಶ್ಯಕವಾಗಿ ಮಾಡಲರ್ಹವಾದ ಅನುಷ್ಠಾನಗಳು(ಅಣು), –ಕಾಯ. ಪು: [–ಕಾಯ] ಆರೂ ಪ್ರಕಾರಗಳ ಜೀವ– ಸಮೂಹ.

ಣಿಕಾಯ. ಪು: [ನಿಕಾಚ] ಆಹ್ವಾನ, ಆಮಂತ್ರಣ, ಕರೆ

ಣಿಕಾಯ. 'ಣಿಕಾಇಯ' ಶಬ್ದವನ್ನು ನೋಡುವುದು

ಣಿಕಾಯಣ. ನ: [ನಿಕಾಚನ] ನಿಮಂತ್ರಣ, ಆಹ್ವಾನ ಕೋರುವುದು, ಕರೆಯುವುದು

ಣಿಕಾಯಣಾ. ಸ್ತ್ರೀ: [ನಿಕಾಚನಾ] ಕರ್ಮಗಳ ಬಲವಾದ ಬಂಧನಕ್ಕೆ ಕಾರಣವಾದ ಇಂದ್ರಿಯ–ವಿಶೇಷ. ದಟ್ಟವಾದ, ಬಲವಾದ ಬಂಧನ, ಕೊಡಿಸುವುದು.

ಣಿಕಿಂತ. ಸಕ: [ನಿ+ಕೃತ್] ಕತ್ತರಿಸು, ತುಂಡುಮಾಡು (ಉವ)

ಣಿಕಿಂತಯು. ವಿ: [ನಿಕರ್ತಕ] ಕತ್ತರಿಸುವವನು, ತುಂಡರಿಸುವವನು(ಕಾಲ)

ಣಿಕುಟ್ಟ. ಸಕ: [ನಿ+ಕುಟ್ಟ್] ಕುಟ್ಟು, ಕತ್ತರಿಸು

ಣಿಕೂಣಿಯ. ವಿ: [ನಿಕೂಣಿತ] ವಕ್ರಗೊಳಿಸಲ್ಪಟ್ಟ, ಡೊಂಕುಗೊಳಿಸಲಾದ

ಣಿಕೇಯ. ಪು: [ನಿಕೇತ] ಮನೆ, ಆಶ್ರಯ, ನಿವಾಸ ಸ್ಥಾನ(ಣಾಯಾ)

ಣಿಕೇಯಣ. ನ: [ನಿಕೇತನ] ಮೇಲಿನ ಶಬ್ದವನ್ನು ನೋಡುವುದು.

ಣಿಕೋಯ. ಪು: [ನಿಕೋಚ] ಸಂಕೋಚ, ಚಿಕ್ಕದಾಗಿ ಮಾಡಿಕೊಳ್ಳುವುದು, ಕುಗ್ಗಿಕೊಳ್ಳುವುದು(ದೇ)

ಣಿಕ್ಕ. ವಿ: [ದೇ] ಶುಭ್ರವಾದ, ನಿರ್ಮಲವಾದ, ಕೊಳೆಯಿಲ್ಲದ(ಣಾಯಾ)

ಣಿಕ್ಕ. 'ಣಿಕ್ಖ=ನಿಷ್ಕ' ಶಬ್ದವನ್ನು ನೋಡುವುದು

ಣಿಕ್ಕಇಅವ. ವಿ: [ನಿಷ್ಕೈತವ] ಕಪಟವಿಲ್ಲದ, ಮೋಸವಿಲ್ಲದ, ನಿಷ್ಕಪಟ(ಗಾ)

ಣಿಕ್ಕಂಡ. ವಿ: [ನಿಷ್ಕಂಕಟ] ಆವರಣರಹಿತ, ಆಚ್ಛಾದನವಿಲ್ಲದ, ಮರೆಯಿಲ್ಲದ, ವಿನಾಶ ರಹಿತ, ಹೊಡೆತವಿಲ್ಲದ(ಔಪ)

ಣಿಕ್ಕಂಖಿ. ವಿ: [ನಿಷ್ಕಾಂಕ್ಷಿನ್] ಆಸೆಪಡದ, ಇಚ್ಛೆಇಲ್ಲದ

ಣಿಕ್ಕಂಖಿಯ. ನ: [ನಿಷ್ಕಾಂಕ್ಷಿತ] ಅಪೇಕ್ಷೆಯಿಲ್ಲದಿರುವುದು, ಆಸೆಯಿಲ್ಲದಿರುವುದು, ಬೇರೆಯದನ್ನು ನೋಡುವ ಅಪೇಕ್ಷೆಯಿಲ್ಲದಿರುವುದು(ಉತ್ತ)

ಣಿಕ್ಕಂಖಿಯ. ವಿ: [ನಿಷ್ಕಾಂಕ್ಷಿತ, ಕ] ಅಪೇಕ್ಷೆಯಿಲ್ಲದ, ಆಸೆಯಿಲ್ಲದ, ಬೇರೆಯುದನ್ನು ನೋಡುವ ಅಪೇಕ್ಷೆಯಿಲ್ಲದ(ಸೂಅ)

ಣಿಕ್ಕಂಚಣ. ವಿ: [ನಿಷ್ಕಾಂಚನ] ಚಿನ್ನವಿಲ್ಲದ, ನಿರ್ಧನ, ಹಣವಿಲ್ಲದ

ಣಿಕ್ಕಂಟಯ. ವಿ: [ನಿಷ್ಕಂಟಕ] ಮುಳ್ಳುಗಳಿಲ್ಲದ, ತೊಂದರೆಯಿಲ್ಲದ, ಶತ್ರುಗಳಿಲ್ಲದ(ಸುಪಾ)

ಣಿಕ್ಕಂಡ. ವಿ: [ನಿಷ್ಕಾಂಡ]ಕಾಂಡವಿಲ್ಲದ, ಸಮಯವಿಲ್ಲದ

ಣಿಕ್ಕಂತ. ವಿ: [ನಿಷ್ಕ್ರಾಂತ] ಹೊರಗೆ ಹೊರಟಿರುವ, ಗೃಹಸ್ಥಾಶ್ರಮದಿಂದ ಹೊರಬಂದು ದೀಕ್ಷೆ ತೆಗೆದುಕೊಂಡಿರುವವನು(ಆಚಾ)

ಣಿಕ್ಕಂತಾರ. ವಿ: [ನಿಷ್ಕಾಂತಾರ] ಕಾಡಿನಿಂದ ಹೊರಗೆ ಹೊರಟಿರುವ(ಠಾ)

ಣಿಕ್ಕಂತಿ. ಸ್ತ್ರೀ: [ನಿಷ್ಕ್ರಾಂತಿ] ಹೊರಗೆ ಹೊರಡುವುದು, ನಿರ್ಗಮನ

ಣಿಕ್ಕಂತು. ವಿ: [ನಿಷ್ಕ್ರಮಿತೃ] ಹೊರಗೆ ಹೊರಡುವವನು

ಣಿಕ್ಕಂದ. ಸಕ: [ನಿ+ಕಂಬ್] ಬೇರುಸಹಿತ ಕೀಳು

ಣಿಕ್ಕಂಪ. ವಿ: [ನಿಷ್ಕಂಪ] ಕಂಪನವಿಲ್ಲದ, ಚಲಿಸದಿರುವ, ಅಲ್ಲಾಡದಿರುವ, ಸ್ಥಿರವಾಗಿರುವ(ಅಭಿ)

ಣಿಕ್ಕಜ್ಜ. ವಿ: [ದೇ] ಚಂಚಲವಾಗಿರುವ, ಸ್ಥಿರವಾಗಿಲ್ಲದ (ದೇ)

ಣಿಕ್ಕಟ್ಟ. ವಿ: [ನಿಷ್ಕೃಷ್ಟ] ಕೃಶ, ದುರ್ಬಲ, ಕ್ಷೀಣ(ತಾ)

ಣಿಕ್ಕಡ. ವಿ: [ದೇ] ಕಠಿಣ, ಪು: ನಿಶ್ಚಯ, ನಿರ್ಣಯ (ಷಡ್)

ಣಿಕ್ಕಡ್ಡಿಯ. ವಿ: [ನಿಷ್ಕೃಷ್ಟ, ನಿಷ್ಕರ್ಷಿತ] ಹೊರಗೆ ಸೆಳೆಯಲ್ಪಟ್ಟ, ಹೊರಗೆ ಎಳೆಯಲ್ಪಟ್ಟ

ಣಿಕ್ಕಣ. ವಿ: [ನಿಷ್ಕಣ] ಧಾನ್ಯದ ಒಂದು ಕಣವೂ ಇಲ್ಲದ, ಕಡುಬಡವ(ವಿಪಾ)

ಣಿಕ್ಕಮ. ಅಕ: [ನಿರ್+ಕ್ರಮ್] ಮನೆಬಿಟ್ಟು ಹೊರಗೆ ಹೊರಡು, ಸಂನ್ಯಾಸದೀಕ್ಷೆ ತೆಗೆದುಕೊಳ್ಳು- 'ಣಿಕ್ಕಮಾಮಿ'

ಣಿಕ್ಕಮ. ಪು: [ನಿಷ್ಕ್ರಮ] ಕೆಳಗಿನ ಶಬ್ದವನ್ನು ನೋಡುವುದು.

ಣಿಕ್ಕಮಣ. ನ: [ನಿಷ್ಕ್ರಮಣ] ಹೊರಡುವುದು, ಮನೆಬಿಟ್ಟು ಹೊರಗೆ ಹೋಗುವುದು, ಸಂನ್ಯಾಸ ದೀಕ್ಷೆ(ಆಚಾ)

ಣಿಕ್ಕಮ್ಮ. ವಿ: [ನಿಷ್ಕರ್ಮನ್] ಕಾರ್ಯ–ರಹಿತ, ಕೆಲಸವಿಲ್ಲದ, ಮುಕ್ತನಾದ, ಆಲಸಿ, ನಿರುಪಯೋಗಿ, ಕರ್ಮಗಳ ನಿರೋಧ(ಆಚಾ)

ಣಿಕ್ಕಯ. ಪು: [ನಿಷ್ಕ್ರಯ] ವಿನಿಮಯ, ಬದಲಾಗಿ ಕೊಡುವ ವಸ್ತು, ಪ್ರತೀಕಾರ, ವೇತನ, ಕೂಲಿ

ಣಿಕ್ಕರಣ. ನ: [ನಿಕರಣ] ತಿರಸ್ಕಾರ, ಸೋಲು, ಅಪಮಾನ, ವಿನಾಸ

ಣಿಕ್ಕರುಣ. ವಿ: [ನಿಷ್ಕರುಣ] ಕರುಣೆಯಿಲ್ಲದ, ದಯೆಯಿಲ್ಲದ

ಣಿಕ್ಕಲ. ವಿ: [ನಿಷ್ಕಲ] ಕಲೆಯಿಲ್ಲದ(ಸುಪಾ)

ಣಿಕ್ಕಲ. ವಿ: [ದೇ] ಪೊಳ್ಳಿಲ್ಲದ, ಸತ್ವಪೂರ್ಣವಾದ, ಟೊಳ್ಳಿಲ್ಲದ(ಭಗ)

ಣಿಕ್ಕಲಂಕ. ವಿ: [ನಿಷ್ಕಲಂಕ] ಕಳಂಕವಿಲ್ಲದ, ದೋಷವಿಲ್ಲದೆ ಶುದ್ಧವಾದ(ಸುಪಾ)

ಣಿಕ್ಕಲುಣ. 'ಣಿಕ್ಕರುಣ' ಶಬ್ದವನ್ನು ನೋಡುವುದು.

ಣಿಕ್ಕಲುಸ. ವಿ: [ನಿಷ್ಕಲುಷ] ನಿರ್ದೋಷ, ನಿರ್ಮಲ, ನಿರುಪದ್ರವ, ತೊಂದರೆಯಿಲ್ಲದ

ಣಿಕ್ಕವಡ. ವಿ: [ನಿಷ್ಕಪಟ] ಕಪಟವಿಲ್ಲದ(ಉಪ)

ಣಿಕ್ಕವಯ. ವಿ: [ನಿಷ್ಕವಚ] ಕವಚವಿಲ್ಲದ

ಣಿಕ್ಕಸ. ಸಕ: [ನಿರ್+ಕಸ್] ಹೊರಗೆ ಹೊರಡು

ಣಿಕ್ಕಸಣ. ನ: [ನಿಷ್ಕಸನ] ನಿರ್ಗಮನ, ಹೊರಕ್ಕೆ ಹೊರಡುವುದು

ಣಿಕ್ಕಸಾಯ. ವಿ: [ನಿಷ್ಕಷಾಯ] ಕಾಮ, ಕ್ರೋಧವೇ ಮೊದಲಾದ ಕಷಾಯಗಳಿಲ್ಲದ, ಪು: ಭರತ–ಕ್ಷೇತ್ರದ ಒಬ್ಬ ಭಾವೀ ತೀರ್ಥಂಕರ

ಣಿಕ್ಕಾ. ಸ್ತ್ರೀ: [ನೀಕಾ] ಮೂಗಿನ ಎಡ ಹೊಳ್ಳೆ

ಣಿಕ್ಕಾಮ. ವಿ: [ನಿಷ್ಕಾಮ] ಯಾವ ಫಲದ ಉದ್ದೇಶವೂ ಇಲ್ಲದ, ಯಾವ ಆಸೆಯೂ ಇಲ್ಲದ(ಬೃಹ)

ಣಿಕ್ಕಾರಣ. ವಿ: [ನಿಷ್ಕಾರಣ] ಕಾರಣವಿಲ್ಲದ, ಅಹೇತುಕ, ನಿರುಪದ್ರವ, ಉಪದ್ರವವಿಲ್ಲದ, ಕ್ರಿ. ವಿ: ಕಾರಣವಿಲ್ಲದೆ(ಆವ)

ಣಿಕ್ಕಾರಣಿಯ. ವಿ: [ನಿಷ್ಕಾರಣಿಕ] ಕಾರಣ–ರಹಿತವಾದ,

ಣಿಕ್ಕಾಲ. ಸಕ: [ನಿರ್+ಕಾಸಯ್] ಹೊರಗೆ ಹಾಕು (ಸುಪಾ)

ಣಿಕ್ಕಾಲಿಅ. 'ಣಿಕ್ಕಾಸಿಯ' ಶಬ್ದವನ್ನು ನೋಡುವುದು

ಣಿಕ್ಕಾಸ. ಪು: [ನಿಷ್ಕಾಸ] ಹೊರಕ್ಕೆ ಹೊರಡುವುದು

ಣಿಕ್ಕಾಸಿಯ. ವಿ: [ನಿಷ್ಕಾಸಿತ] ಹೊರಗೆ ಹಾಕಲ್ಪಟ್ಟ

ಣಿಕ್ಕಿಂಚಣವಿ: [ನಿಷ್ಕಿಂಚನ] ಸ್ವಲ್ಪವೂ ಹಣವಿಲ್ಲದ, ಕಡುಬಡವ, ದರಿದ್ರ(ಆವಮ)

ಣಿಕ್ಕಿಟ್ಠ. ವಿ: [ನಿಕೃಷ್ಟ] ಅಧಮ, ನೀಚ, ಹೀನ, ಕೀಳಾದ (ಸುಪಾ)

ಣಿಕ್ಕಿಣ. ಸಕ: [ನಿರ್+ಕ್ರೀ] ಕೊಳ್ಳು(ಮೃಚ್ಛ)

ಣಿಕ್ಕಿತ್ತಿಮ. ವಿ: [ನಿಷ್ಕೃತ್ರಿಮ] ಕೃತ್ರಿಮವಲ್ಲದ, ಅಸಲಿ, ಸ್ವಾಭಾವಿಕವಾದ

ಣಿಕ್ಕಿಯ. ವಿ: [ನಿಷ್ಕ್ರಿಯ] ಕೆಲಸವಿಲ್ಲದ, ಯಾವ ಕೆಲಸವನ್ನೂ ಮಾಡದ(ಪಣ್ಣ)

ಣಿಕ್ಕಿವ. ವಿ: [ನಿಷ್ಕೃಪ] ಕೃಪಾರಹಿತ, ದಯೆಯಿಲ್ಲದ(ಗಾ)

ಣಿಕ್ಕೀಲಿಯ. ವಿ: [ನಿಷ್ಕ್ರೀಡಿತ] ನಡೆಯುವುದು, ಗಮಿಸುವುದು, ಚಲಿಸುವುದು

ಣಿಕ್ಕುಡ. ಪು: [ನಿಷ್ಕುಟ] ಬಿಸಿಮಾಡುವುದು, ಕಾಯಿಸುವುದು

ಣಿಕ್ಕೂಇಲ. ಸ್ತ್ರೀ: [ದೇ] ಸಂಪೂರ್ಣವಾಗಿ ಜಯಿಸಲ್ಪಟ್ಟ, (ದೇ)

ಣಿಕ್ಕೋಡಣ. ನ: [ನಿಷ್ಕೋಟನ] ಬಂಧನ–ವಿಶೇಷ (ಪಣ್ಣ)

ಣಿಕ್ಕೋರ. ಸಕ: [ನಿರ್+ಕೋರಯ್] ದೂರಮಾಡು, ಪಾತ್ರೆಯ ಬಾಯಿ ಮುಚ್ಚು, ಪಾತ್ರೆಯನ್ನು ಕತ್ತು

ಣಿಕ್ಕೋರಣ. ನ: [ನಿಷ್ಕೋರಣ] ಪಾತ್ರೆಯ ಬಾಯಿ ಮುಚ್ಚುವುದು, ಪಾತ್ರೆಯನ್ನು ಕೆತ್ತುವುದು

ಣಿಕ್ಕ. ಪು: [ದೇ] ಕಳ್ಳ, ಚಿನ್ನ, ಬಂಗಾರ

ಣಿಕ್ಕ. ಪುಂನ: [ನಿಷ್ಕ] ದೀನಾರ, ಒಂದು ಸುವರ್ಣದ ನಾಣ್ಯ, ಮೊಹರು, ಮುದ್ರೆ , ರೂಪಾಯಿ

ಣಿಕ್ಕಂತ. 'ಣಿಕ್ಕಂತ' ಶಬ್ದವನ್ನು ನೋಡುವುದು.

ಣಿಕ್ಕಂಧ. ವಿ: [ನಿಃಸ್ಕಂಧ] ಹೆಗಲಿಲ್ಲದ(ಗಾ), ಕೊಂಬೆಯಿಲ್ಲದ

ಣಿಕ್ಖಣಣ. ನ: [ನಿಖನನ] ಹೂಳುವುದು

ಣಿಕ್ಖತ್ತ. ವಿ: [ನಿಃಕ್ಷತ್ರ] ಕ್ಷತ್ರಿಯರಹಿತ, ಕ್ಷತ್ರಿಯರಿಲ್ಲದ

ಣಿಕ್ಖಮ. ಅಕ: [ನಿರ್+ಕ್ರಮ್] ಮನೆಬಿಟ್ಟು ಹೊರಡು, ಸಂನ್ಯಾಸ ದೀಕ್ಷೆ ತೆಗೆದುಕೊಳ್ಳು

ಣಿಕ್ಖಮ. ಪುಂನ: [ನಿಷ್ಕ್ರಮ] ಮನೆಯನ್ನು ಬಿಟ್ಟು ಹೊರಡುವುದು, ದೀಕ್ಷೆ ತೆಗೆದುಕೊಳ್ಳುವುದು(ತಾ)

ಣಿಕ್ಖಮಣ. ನ: [ನಿಷ್ಕ್ರಮಣ] ಮೇಲಿನ ಶಬ್ದವನ್ನು ನೋಡುವುದು.

ಣಿಕ್ಖಯ. ವಿ: [ದೇ. ನಿಕ್ಷತ] ಕೊಲ್ಲಲ್ಪಟ್ಟ(ಪಾಅ)

ಣಿಕ್ಖಯ. ವಿ: [ನಿಖಾತ] ಹೂಳಲ್ಪಟ್ಟ

ಣಿಕ್ಖವಿಅ. ವಿ: [ನಿಕ್ಷಪಿತ] ನಾಶಮಾಡಲ್ಪಟ್ಟ, ವಿನಾಶ ಮಾಡಲಾದ

ಣಿಕ್ಖಸರಿಅ. ವಿಳ: [ದೇ] ಲೂಟಿಮಾಡಲ್ಪಟ್ಟ, ಅಪಹರಿಸಲ್ಪಟ್ಟ

ಣಿಕ್ಖಾವಿಅ. ವಿ: [ದೇ] ಶಾಂತ, ಉಪಶಮನಗೊಂಡ

ಣಿಕ್ಖಿತ್ತ. ವಿ: [ನಿಕ್ಷಿಪ್ತ] ಇಡಲ್ಪಟ್ಟ, ಇರಿಸಲ್ಪಟ್ಟ, ಪರಿತ್ಯಜಿಸಲ್ಪಟ್ಟ, ಪ್ರತ್ಯೇಕಿಸಲ್ಪಟ್ಟ, ಅಡಿಗೆ ಪಾತ್ರೆಯಲ್ಲಿ ಇರುವ, –ಚರ. ವಿ: [–ಚರ] ಅಡಿಗೆ ಪಾತ್ರೆಯಲ್ಲಿ ಇರಿಸಿರುವ ವಸ್ತುವನ್ನು ಭಿಕ್ಷೆಗಾಗಿ ಹುಡುಕುವವನು

ಣಿಕ್ಖಿವ. ಸಕ: [ನಿ+ಕ್ಷಿಪ್] ಇಡು, ಸ್ವಸ್ಥಾನದಲ್ಲಿ ಇರಿಸು, ಪರಿತ್ಯಜಿಸು

ಣಿಕ್ಖಿವ. ಸಕ: [ನಿ+ಕ್ಷಿಪ್] ಹೆಸರಿನ ಭೇದದಿಂದ ವಸ್ತುವನ್ನು ನಿರೂಪಿಸು

ಣಿಕ್ಖಿವಿಅ. ಸಕ: [ನಿ+ಕ್ಷಿಪ್] ಹೆಸರಿನ ಭೇದದಿಂದ ವಸ್ತುವನ್ನು ನಿರೂಪಿಸು

ಣಿಕ್ಖಿವ. ಪು: [ನಿಕ್ಷೇಪ] ಇಡುವುದು. ನ್ಯಾಸವಾಗಿ ಇಡುವುದು, ಹಣ, ಒಡವೆ ಇತ್ಯಾದಿಗಳನ್ನು ಅಡವು ಮಾಡುವುದು.

ಣಿಕ್ಖಿವಣ. ವಿ: [ನಿಕ್ಷೇಪಣ] ಇರಿಸುವುದು, ಇಡುವುದು, ಹಾಕುವುದು

ಣಿಕ್ಖುಡ. ವಿ: [ದೇ] ಕಂಪಿಸದೆ ಇರುವುದು, ಅಲ್ಲಾಡದಿರುವುದು, ಸ್ಥಿರವಾಗಿರುವುದು

ಣಿಕ್ಖುಡ. ವಿ: [ನಿಷ್ಕುಟ] ಒಂದು ಪರ್ವತ

ಣಿಕ್ಖುಡ. ಪುಂನ: [ನಿಷ್ಕುಟ] ಪೊಟರೆ, ಬಿಲ, ಭೂಖಂಡ, ಮನೆಯ ಕೈತೋಟ

ಣಿಕ್ಖುತ್ತ. ನ: [ದೇ] ನಿಶ್ಚಿತ, ಅವಶ್ಯ

ಣಿಕ್ಖುರಿಅ. ವಿ: [ದೇ] ಅಸ್ಥಿರ, ದೃಢವಲ್ಲದ

ಣಿಕ್ಖೇಡ. ಪು: [ನಿಷ್ಕೇಟ] ಅಧಮತನ, ನೀಚತನ, ದುಷ್ಟತನ

ಣಿಕ್ಖೆತ್ತವ್ವ. 'ಣಿಕ್ಖಿವ=ನಿ+ಕ್ಷಿಪ್' ಶಬ್ದವನ್ನು ನೋಡುವುದು.

ಣಿಕ್ಖೇವ. ಪು: [ನಿಕ್ಷೇಪ] ಇಡುವುದು, ಇರಿಸುವುದು, ಒಬ್ಬನಲ್ಲಿ ನಂಬಿಕೆಯಿಂದ ವಸ್ತು ಅಥವಾ ಹಣವನ್ನು ಕೊಟ್ಟಿರುವುದು, ಒತ್ತೆಯಿಡುವುದು, ತ್ಯಜಿಸುವುದು, ವರ್ಜಿಸುವುದು

ಣಿಕ್ಖೇವಣ. ನ: [ನಿಕ್ಷೇಪಣ] ಇರಿಸುವುದು, ವ್ಯವಸ್ಥೆಗೊಳಿಸುವುದು, ಹತೋಟಿಯಲ್ಲಿಡುವುದು

ಣಿಕ್ಖೇವಣಯಾ}. ಸ್ತ್ರೀ: [ನಿಕ್ಷೇಪಣಾ] ಇರಿಸುವುದು,
ಣಿಕ್ಖೇವಣಾ}. ಭದ್ರವಾಗಿ ಒಬ್ಬನಲ್ಲಿ ಇರಿಸುವುದು

ಣಿಕ್ಖೇವಯ. ಪು: [ನಿಕ್ಷೇಪಕ] ನಿರ್ಣಯ, ಉಪಸಂಹಾರ

ಣಿಕ್ಖೇವಿಯ. ವಿ: [ನಿಕ್ಷೇಪಿತ] ಮೇಲಿನ ಶಬ್ದವನ್ನು ನೋಡುವುದು.

ಣಿಕ್ಖೋಭ.} ಪು: [ನಿಃಕ್ಷೋಭ] ಕ್ಷೋಭೆಯಿಲ್ಲದ,
ಣಿಕ್ಖೋಹ}. ಕಂಪನವಿಲ್ಲದ, ಅಲುಗಾಡದ

ಣಿಕ್ಖವ್ವ. ನ: [ನಿಖರ್ವ] ನೂರು ಖರ್ವಗಳು; ಒಂದು ಸಂಖ್ಯಾ–ವಿಶೇಷ

ಣಿಖಯ. 'ಣಿಕ್ಖಯ' ಶಬ್ದವನ್ನು ನೋಡುವುದು

ಣಿಖಿಲ. ವಿ: [ನಿಖಿಲ] ಎಲ್ಲವೂ, ಸಕಲವೂ(ಅಣು)

ಣಿಗಂಠ. 'ಣಿಅಂಠ' ಶಬ್ದವನ್ನು ನೋಡುವುದು.

ಣಿಗಡ. ಸಕ: [ನಿಗಡಯ್] ಸರಪಳಿಯಿಂದ ಕಟ್ಟಿಹಾಕು

ಣಿಗಡಿಯ. ವಿ: [ನಿಗಡಿತ] ಸರಪಳಿಯಿಂದ ಕಟ್ಟಿಹಾಕಲಪಟ್ಟ

ಣಿಗಘ. ಪು: [ದೇ] ಬೇಸಗೆ, ಕಾವು, ಉಷ್ಣತೆ

ಣಿಗಣ. ವಿ: [ನಗ್ನ] ಬೆತ್ತಲೆ, ಬೆತ್ತಲಿರುವ

ಣಿಗದ. ಸಕ: [ನಿ+ಗದ್] ಹೇಳು, ಓದು, ಅಭ್ಯಾಸ ಮಾಡು

ಣಿಗಮ. ಪು: [ನಿಗಮ] ಶ್ರೇಷ್ಠ ಜ್ಞಾನ, ತಿಳಿವು(ವಿಸೇ), ವ್ಯಾಪಾರ-ಪ್ರಧಾನ ಸ್ಥಳ, ವ್ಯಾಪಾರಿಗಳು ಅಧಿಕ ಸಂಖ್ಯೆಯಲ್ಲಿ ಇರುವ ನಗರ, ಊರು. ವ್ಯಾಪಾರಿಗಳ ಗುಂಪು

ಣಿಗಮಣ. ನ: [ನಿಗಮನ] ಅನುಮಾನಪ್ರಮಾಣದ (ನ್ಯಾಯದರ್ಶನ)ಐದು ಅವಯವಗಳಲ್ಲೊಂದು. ಉಪಸಂಹಾರ

ಣಿಗಮಿಅ. ವಿ: [ದೇ] ನೆಲೆಸಿರುವ, ವಾಸಮಾಡುತ್ತಿರುವ

ಣಿಗರ. ಪು: [ನಿಕರ] ಸಮೂಹ, ರಾಸಿ, ಗುಂಪು(ವಿಪಾ)

ಣಿಗರಣ. ನ: [ನಿಕರಣ] ಕಾರಣ, ಹೇತು(ಭಗ)

ಣಿಗರಿಯ. ವಿ: [ನಿಕರಿತ] ಸರ್ವಥಾ ಶುದ್ಧ ಮಾಡಲ್ಪಟ್ಟ, ತಿದ್ದಲ್ಪಟ್ಟ(ಪಣ್ಣ)

ಣಿಗಲ. 'ಣಿಅಲ.' ಶಬ್ದವನ್ನು ನೋಡುವುದು. ಬೇಡಿ ಆಕಾರದ ಚಿನ್ನದ ಒಡವೆ(ಔಪ)

ಣಿಗಲಿಯ. 'ಣಿಗರಿಯ' ಶಬ್ದವನ್ನು ನೋಡುವುದು.

ಣಿಗಾಮ. 'ಣಿಕಾಮ=ನಿಕಾಮ' ಶಬ್ದವನ್ನು ನೋಡುವುದು

ಣಿಗಾಮ. ನ: [ನಿಕಾಮ] ಯಥೇಷ್ಟ, ಅತಿಶಯ, ಬಹಳವಾಗಿ(ಠಾ)

ಣಿಗಾಸ. ಪು: [ನಿಕರ್ಷ] ಪರಸ್ಪರ ಜೋಡಿಸುವುದು, ಸೇರಿಸುವುದು(ಭಗ)

ಣಿಗಿಜ್ಝಿಯ. 'ಣಿಗಿಣ್ಹ' ಶಬ್ದವನ್ನು ನೋಡುವುದು.

ಣಿಗಿಟ್ಠ. 'ಣಿಕ್ಕಿಟ್ಠ' ಶಬ್ದವನ್ನು ನೋಡುವುದು.

ಣಿಗಿಣ. ವಿ: [ನಗ್ನ] ಬೆತ್ತಲೆಯ, ನಗ್ನ(ಆಚಾ)

ಣಿಗಿಣಿಣ. ನ: [ನಾಗ್ನ್ಯ] ಬೆತ್ತಲೆತನ, ಬೆತ್ತಲಾಗಿರುವಿಕೆ

ಣಿಗಿಣ್ಹ. ಸಕ: [ನಿ+ಗ್ರಹ್] ನಿಗ್ರಹಿಸು, ಶಿಕ್ಷಿಸು, ತಡೆಗಟ್ಟು, ಅಕ: ಕುಳಿತುಕೊಳ್ಳು

ಣಿಗುಂಜ. ಅಕ: [ನಿ+ಗುಂಜ್] ಪ್ರತಿಧ್ವನಿ ಶಬ್ದ ಮಾಡುವುದು, ಕೆಳಕ್ಕೆ ಭಾಗು

ಣಿಗುಂಜ. 'ಣಿಉಂಜ=ನಿಕುಂಜ' ಶಬ್ದವನ್ನು ನೋಡುವುದು.

ಣಿಗುಣ. ವಿ: [ನಿಗುಣ] ಗುಣವಿಲ್ಲದ(ಪಣ್ಣ)

ಣಿಗುರಂಬ. 'ಣಿಉರಂಬ' ಶಬ್ದವನ್ನು ನೋಡುವುದು

ಣಿಗೂಢ. ವಿ: [ನಿಗೂಢ] ರಹಸ್ಯ, ಗುಟ್ಟು, ಮೌನಿ

ಣಿಗೂಹ. ಸಕ: [ನಿ+ಗುಹ್] ಬಚ್ಚಿಡು, ರಹಸ್ಯವಾಗಿಡು

ಣಿಗೂಹಣ. ನ: [ನಿಗೂಹನ] ಬಚ್ಚಿಡುವುದು, ರಹಸ್ಯವಾಗಿಡುವುದು.

ಣಿಗೂಹಿಅ. ವಿ: [ನಿಗೂಹಿತ] ರಹಸ್ಯವಾಗಿಡಲಾದ, ಬಚ್ಚಿಡಲಾದ

ಣಿಗೋಅ. ಪು: [ನಿಗೋದ] ಅನಂತ ಜೀವಗಳ ಒಂದು ಸಾಧಾರಣ ಶರೀರ-ವಿಶೇಷ. **-ಜೀವ.** ಪು: [-ಜೀವ] ಅನಂತ ಜೀವಗಳ ಜೀವ

ಣಿಗ್ಗ. 'ಣಿಗ್ಗಮ=ನಿರ್+ಗಮ್' ಶಬ್ದವನ್ನುನೋಡುವುದು.

ಣಿಗ್ಗಂಠಿದ(ಶೌ). ವಿ: [ನಿಗ್ರಥಿತ] ಒಟ್ಟಿಗೆ ಸೇರಿಸಿ ಕಟ್ಟಲ್ಪಟ್ಟ ಹೂವಿನ ಮಾಲೆ ಇತ್ಯಾದಿ, ರಚಿಸಲ್ಪಟ್ಟ, ಜೋಡಿಸಲ್ಪಟ್ಟ

ಣಿಗ್ಗಂತು}. 'ಣಿಗ್ಗಮ=ನಿರ್+ಗಮ್' ಶಬ್ದವನ್ನು
ಣಿಗ್ಗಂತೂಣ}. ನೋಡುವುದು.

ಣಿಗ್ಗಂಥ. 'ಣಿಅಂತ' ಶಬ್ದವನ್ನು ನೋಡುವುದು.

ಣಿಗ್ಗಂಥ. ವಿ: [ನೈರ್ಗ್ರಂಥ] ನಿರ್ಗ್ರಂಥಕ್ಕೆ ಸಂಬಂಧಿಸಿದ

ಣಿಗ್ಗಂಥೀ. ಸ್ತ್ರೀ: [ನಿರ್ಗ್ರಂಥೀ] ಜೈನ ಸಾಧ್ವಿ(ಣಾಯಾ)

ಣಿಗ್ಗಚ್ಛ.}. ಅಕ: [ನಿರ್+ಗಮ್] ನಿರ್ಗಮಿಸು, ಹೊರಕ್ಕೆ
ಣಿಗ್ಗಮ}. ಹೋಗು. ವ. ಕೃ-ಣಿಗ್ಗಚ್ಛಂತ

ಣಿಗ್ಗಮ. ಪು: [ನಿರ್ಗಮ] ಹೊರಕ್ಕೆ ಹೋಗುವುದು, ಹುಟ್ಟುವುದು, ಉತ್ಪತ್ತಿ, ಹೊರಕ್ಕೆ ಹೋಗುವ ದಾರಿ ಪ್ರಯಾಣ(ಬೃಹ)

ಣಿಗ್ಗಮಣ. ನ: [ನಿರ್ಗಮನ] ಹೊರಕ್ಕೆ ಹೋಗುವುದು, ಪಲಾಯನ ಮಾಡುವುದು, ಓಡಿ ಹೋಗುವುದು,

ಣಿಗ್ಗಮಿಅ. ವಿ: [ನಿರ್ಗಮಿತ] ಹೊರಕ್ಕೆ ಹೋಗಿರುವ, ಪಸರಿಸಿದ, ಹರಡಿದ

ಣಿಗ್ಗಯ. ವಿ: [ನಿರ್ಗತ] ಹೊರಗೆ ಹೊರಟಿರುವ, **-ಜಸ್.** ವಿ: [-ಯಶಸ್] ಯಾರ ಕೀರ್ತಿ ಹೊರಗೆ ಹಬ್ಬಿದೆಯೋ ಅವನು(ಣಾಯಾ). **ಣಿಗ್ಗಯಾಮೋಅ.** ವಿ: [ನಿರ್ಗತಾಮೋದ] ಯಾವುದರ/ಯಾರ ಸುಗಂಧವು ಚೆನ್ನಾಗಿ ಹರಡಿದೆಯೋ ಅದು(ಪಾಅ)

ಣಿಗ್ಗಯ. ವಿ: [ನಿರ್ಗಜ] ಆನೆಯಿಲ್ಲದೆ

ಣಿಗ್ಗಹ. 'ಣಿಗಿಣ್ಹ' ಶಬ್ದವನ್ನು ನೋಡುವುದು.

ಣಿಗ್ಗಹ. ಪು: [ನಿಗ್ರಹ] ಶಿಕ್ಷೆ, ದಂಡನೆ, ತಡೆಗಟ್ಟುವುದು, ಅಡ್ಡಿಪಡಿಸುವುದು, ವಶಪಡಿಸಿಕೊಳ್ಳುವುದು, ನಿಯಮಿಸುವುದು, ಬಂಧಿಸುವುದು, **-ಟ್ಠಾಣ.** ನ: [-ಸ್ಥಾನ] ನ್ಯಾಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಪ್ರತಿಜ್ಞಾ ಹಾನಿಯೇ ಮೊದಲಾದ ಸೋಲಿನ ಸ್ಥಳಗಳು

ಣಿಗ್ಗಹಣ. ನ: [ನಿಗ್ರಹಣ] ನಿಗ್ರಹ, ಹತೋಟಿ, ಶಿಕ್ಷೆ, ದಮನ, ನಿಯಂತ್ರಣ.
ಣಿಗ್ಗಹಿಯ}. ವಿ: [ನಿಗೃಹೀತ] ನಿಗ್ರಹಿಸಲ್ಪಟ್ಟ,
ಣಿಗ್ಗಹೀಯ}. ಸೋಲಿಸಲ್ಪಟ್ಟ(ಆವಮ)
ಣಿಗ್ಗಾ. ಸ್ತ್ರೀ: [ದೇ] ಅರಿಶಿಣ, ಹರಿದ್ರ
ಣಿಗ್ಗಾಲ. ಪುಂನ: [ನಿರ್ಗಾಲ] ಹೊರಬಂದ ರಸ
ಣಿಗ್ಗಾಲಿಯ. ವಿ: [ನಿರ್ಗಾಲಿತ] ಕರಗಿಸಲ್ಪಟ್ಟ, ಹೊರಕ್ಕೆ ಸೋರಿ ಹೋದ.
ಣಿಗ್ಗಾಹಿ. ವಿ: [ನಿಗ್ರಾಹಿನ್] ನಿಗ್ರಹಿಸುವವನು(ಉತ್ತ)
ಣಿಗ್ಗಿಣ್ಣ. ವಿ: [ದೇ. ನಿರ್ಗೀರ್ಣ] ಹೊರಕ್ಕೆ ಹೋಗಿರುವ, ವಾಂತಿ ಮಾಡಲಾದ
ಣಿಗ್ಗಿಣ್ಣ. 'ಣಿಗಿಣ್ಣ' ಶಬ್ದವನ್ನು ನೋಡುವುದು.
ಣಿಗ್ಗಿಲಿಯ. ವಿ: [ನಿರ್ಗಲಿತ] ವಾಂತಿ ಮಾಡಲಾದ
ಣಿಗ್ಗುಂಡೀ. ಸ್ತ್ರೀ: [ನಿರ್ಗುಂಡೀ] ಔಷಧಿ ಸಸ್ಯವಾದ ಕರಿಯ ಲಕ್ಕೀ ಗಿಡ, ತಾವರೆಯ ಗೆಡ್ಡೆ(ಪಣ್ಣ)
ಣಿಗ್ಗುಣ. ವಿ: [ನಿರ್ಗುಣ] ಗುಣವಿಲ್ಲದ(ಗಾ)
ಣಿಗ್ಗುಣ್ಣ}. ನ: [ನೈರ್ಗುಣ್ಯ] ಗುಣಹೀನತೆ,
ಣಿಗ್ಗುನ್ನ}. ಗುಣವಿಲ್ಲದಿರುವಿಕೆ
ಣಿಗ್ಗೂಢ. ವಿ: [ನಿಗೂರ್ಢ] ಸ್ಥಿರ ರೂಪದಲ್ಲಿ ಸ್ಥಾಪಿತವಾದ(ಸೂಅ) ಬಹಳ ರಹಸ್ಯವಾದ
ಣಿಗ್ಗೋಹ. ಪು: [ನ್ಯಗ್ರೋಧ] ಆಲದ ಮರ, ವಟ ವೃಕ್ಷ(ಪಉಮ). **–ಪರಿಮಂಡಲ.** ನ: [–ಪರಿಮಂಡಲ] ಆಲದ ಮರದ ಆಕಾರದ ಶರೀರ
ಣಿಗ್ಘಂಟ}. 'ಣಿಘಂಟು' ಶಬ್ದವನ್ನು ನೋಡುವುದು.
ಣಿಗ್ಘಟು}.
ಣಿಗ್ಘಟ್ಟ. ವಿ: [ದೇ] ಕುಶಲ, ನಿಪುಣ, ಚತುರ, ಬುದ್ಧಿವಂತ(ದೇ)
ಣಿಗ್ಘಣ. 'ಣಿಗ್ಘಿಣ' ಶಬ್ದವನ್ನು ನೋಡುವುದು.
ಣಿಗ್ಘತ್ತಿಅ. ವಿ: [ದೇ] ಎಸೆಯಲ್ಪಟ್ಟ(ಪಾಅ)
ಣಿಗ್ಘಾಇಯ. ವಿ: [ನಿರ್ಘಾತಿತ] ಹೊಡೆಯಲ್ಪಟ್ಟ, ತುಳಿಯಲ್ಪಟ್ಟ, ತೊಂದರೆಗೆ ಈಡುಮಾಡಲ್ಪಟ್ಟ, ನಾಶಮಾಡಲ್ಪಟ್ಟ
ಣಿಗ್ಘಾಯ. ಪು: [ನಿರ್ಘಾತ] ಆಘಾತ, ಹೊಡೆತ, ಸಿಡಿಲು ಹೊಡೆಯುವುದು, ವ್ಯಂತರವು ಮಾಡಿದ ಗರ್ಜನೆ, ವಿನಾಶ(ಸೂಅ), ರಾಕ್ಷಸ ವಂಶದ ಒಬ್ಬ ರಾಜ
ಣಿಗ್ಘಾಯಣ. ನ: [ನಿರ್ಘಾತನ] ನಾಶ, ವಿನಾಶ
ಣಿಗ್ಘಿಣ. ವಿ: [ನಿರ್ಘೃಣ] ನಿರ್ದಯ, ಕನಿಕರವಿಲ್ಲದ, ಕರುಣೆಯಿಲ್ಲದ(ಪಣ್ಣ)
ಣಿಗ್ಘೋರ. ವಿ: [ದೇ] ನಿರ್ದಯ, ಕರುಣೆಯಿಲ್ಲದ
ಣಿಗ್ಘೋಸ. ಪು: [ನಿರ್ಘೋಷ] ಮಹಾನ್ ಅವ್ಯಕ್ತ ಶಬ್ದ
ಣಿಘಂಟು. ಪು: [ನಿಘಂಟು] ಶಬ್ದ ಕೋಶ, ನಿಘಂಟು(ಔಪ)
ಣಿಘಸ. ಪು: [ನಿಕಷ] ಒರೆಗಲ್ಲು(ಸುಪಾ)
ಣಿಚಯ. ಪು: [ನಿಚಯ] ಸಮೂಹ, ಸಂಗ್ರಹ, ರಾಶಿ, ಗುಂಪು, ಪುಷ್ಟಿ(ಓಘ)
ಣಿಚಿಅ. ವಿ: [ನಿಚಿತ] ವ್ಯಾಪಿಸಿದ, ತುಂಬಲ್ಪಟ್ಟ, ಒಟ್ಟುಗೂಡಿಸಲ್ಪಟ್ಟ ನಿಬಿಡ, ದಟ್ಟ, ಪುಷ್ಟ(ಭಗ)
ಣಿಚುಲ. ಪು: [ನಿಚುಲ] ನೀರುಹಲಸಿನ ಗಿಡ
ಣಿಚ್ಚ. ವಿ: [ನಿತ್ಯ] ಶಾಶ್ವತ, ಸ್ಥಿರವಾದ, ನ: ನಿರಂತರವಾದ, ಸದಾ, ಯಾವಾಗಲೂ, ಎಲ್ಲ ಕಾಲದಲ್ಲೂ. **–ಚ್ಛಣಿಯ.** ವಿ: [–ಕ್ಷಣಿಕ] ನಿರಂತರ ಉತ್ಸವವಿರುವ, **–ಮಂಡಿಯಾ.** ಸ್ತ್ರೀ: [–ಮಂಡಿತಾ] ಜಂಬೂ ವೃಕ್ಷ–ವಿಶೇಷ. **–ವಾಯ.** ಪು: [–ವಾದ] ಪದಾರ್ಥಗಳು ನಿತ್ಯವೆಂದು ಹೇಳುವ ಮತ. **–ಸೋ.** ಅ: [–ಶಸ್] ಸದಾ, ನಿರಂತರ. **ಣಿಚ್ಚಾಲೋಅ. ಣಿಚ್ಚಾಲೋಗ. ಣಿಚ್ಚಾಲೋವ.** ಪು: [ನಿತ್ಯಾಲೋಕ] ಒಬ್ಬ ವಿದ್ಯಾಧರ ರಾಜ(ಪಉಮ), ಗ್ರಹದ ಅಧಿಷ್ಠಾತೃ–ದೇವ(ಠಾ), ನ: ನಗರ–ವಿಶೇಷ. ವಿ: ಯಾವಾಗಲೂ ಪ್ರಕಾಶವುಳ್ಳ
ಣಿಚ್ಚ. 'ಣೀಯ=ನೀಚ' ಶಬ್ದವನ್ನು ನೋಡುವುದು.
ಣಿಚ್ಚಕ್ಖು. ವಿ: [ನಿಶ್ಚಕ್ಷುಸ್] ಕಣ್ಣಿಲ್ಲದ, ಅಂಧ, ಕುರುಡ (ಪಉಮ)
ಣಿಚ್ಚಟ್ಟ.(ಅಪ). ವಿ: [ಗಾಢ] ಗಾಡವಾದ, ನಿಬಿಡವಾದ, ಅತಿಶಯವಾದ, ದೃಢವಾಗಿ
ಣಿಚ್ಚಯ. 'ಣಿಚ್ಛಯ' ಶಬ್ದವನ್ನು ನೋಡುವುದು.
ಣಿಚ್ಚರ. 'ಣಿವ್ವರ' ಶಬ್ದವನ್ನು ನೋಡುವುದು.
ಣಿಚ್ಚಲ. ಸಕ: [ಕ್ಷರ್] ತೊಟ್ಟಿಕ್ಕು, ಜಿನುಗು, ಸೋರು
ಣಿಚ್ಚಲ. ಸಕ: [ಮುಚ್] ದುಃಖವನ್ನು ತ್ಯಜಿಸು,
ಣಿಚ್ಚಲ. ವಿ: [ನಿಶ್ಚಲ] ಚಲಿಸದಿರುವ, ಸ್ಥಿರವಾಗಿರುವ, ದೃಢವಾಗಿರುವ, ಅಚಲವಾಗಿರುವ(ಹೇ) **–ಪಯ.** ನ: [–ಪದ] ಮುಕ್ತಿ, ಮೋಕ್ಷ
ಣಿಚ್ಚಿಂತ. ವಿ: [ನಿಶ್ಚಿಂತ] ಚಿಂತೆಯಿಲ್ಲದ(ಸುಪಾ)

ಣಿಚ್ಚಿಟ್ಟ. ವಿ: [ನಿಶ್ಚೇಷ್ಟ] ಚಲನೆಯಿಲ್ಲದ, ಶರೀರ ವ್ಯಾಪಾರವಿಲ್ಲದ
ಣಿಚ್ಚಿದ. (ಶೌ). 'ಣಿಚ್ಛಿಯ' ಶಬ್ದವನ್ನು ನೋಡುವುದು.
ಣಿಚ್ಚುಜ್ಜೀವ}. ವಿ: [ನಿತ್ಯೋದ್ಯೋತ] ಸದಾ
ಣಿಚ್ಚುಜ್ಜೋಅ}. ಪ್ರಕಾಶದಿಂದ ಕೂಡಿದ, ಪು: ಗ್ರಹ-ವಿಶೇಷ, ಜ್ಯೋತಿಷ್ಕ ದೇವ-ವಿಶೇಷ(ಠಾ), ನ: ಒಂದು "ವಿದ್ಯಾಧರ ನಗರ
ಣಿಚ್ಚುಜ್ಜೋಅ. ಪು: [ನಿತ್ಯೋದ್ಯೋತ] ನಂದೀಶ್ವರ ದ್ವೀಪದ ಮಧ್ಯದ ದಕ್ಷಿಣ ದಿಕ್ಕಿನಲ್ಲಿರುವ ಒಂದು ಅಂಜನಗಿರಿ
ಣಿಚ್ಚುಡ್ಡ. ವಿ: [ದೇ] ಹೊರಗೆ ಹೋಗಿರುವ, ನಿರ್ದಯ, ಕರುಣೆಯಿಲ್ಲದ(ಷಡ್)
ಣಿಚ್ಚುವ್ವಿಗ್ಗ. ವಿ: [ನಿತ್ಯೋದ್ವಿಗ್ನ] ಯಾವಾಗಲೂ ಖಿನ್ನನಾಗಿರುವ, ಸದಾ ಚಿಂತಾಕ್ರಾಂತ
ಣಿಚ್ಚೆಟ್ಠ 'ಣಿಚ್ಚಿಟ್ಟ' ಶಬ್ದವನ್ನು ನೋಡುವುದು.
ಣಿಚ್ಚೇಯಣ. ವಿ: [ನಿಶ್ಚೇತನ] ಪ್ರಜ್ಞೆಯಿಲ್ಲದ
ಣಿಚ್ಚೋಉಯಾ. ಸ್ತ್ರೀ: [ನಿತ್ಯರ್ತುಕಾ] ಯಾವಾಗಲೂ ರಜಸ್ವಲೆಯಾಗಿರುವ ಹೆಣ್ಣು(ಠಾ)
ಣಿಚ್ಚೋಯ. ಸಕ: [ದೇ] ಹಿಂಡು, ಸಾರ ತೆಗೆ
ಣಿಚ್ಚೋರಿಕ್ಕ. ನ: [ನಿಶ್ಚೌರ್ಯ] ಕಳ್ಳತನವಿಲ್ಲದಿರುವುದು, ವಿ: ಕಳ್ಳತನವಿಲ್ಲದಿರುವುದು
ಣಿಚ್ಛಇಯ. ವಿ: [ನೈಶ್ಚಯಿಕ] ನಿಶ್ಚಯಕ್ಕೆ ಸಂಬಂಧಿಸಿದ, ಪು: ನಿಶ್ಚಯ ನಯ, ದ್ರವ್ಯಾರ್ಥಿಕ ನಯ, ಪರಿಣಾಮ-ವಾದ
ಣಿಚ್ಛಉಮ. ವಿ: [ನಿಶ್ಛದ್ಮನ್] ಕಪಟವಿಲ್ಲದ, ಮೋಸವಿಲ್ಲದ, ಕ್ರಿ. ವಿ: ಕಪಟ-ರಹಿತ, ವಂಚನೆಯಿಲ್ಲದ
ಣಿಚ್ಛಕ್ಕ. ವಿ: [ದೇ] ನಿರ್ಲಜ್ಜ, ನಾಚಿಕೆಯಿಲ್ಲದ, ಧೃಷ್ಟ, ಸಮಯವನ್ನರ್ಥಮಾಡಿಕೊಳ್ಳದವನು
ಣಿಚ್ಛಮ್ಮ. 'ಣಿಚ್ಛಉಮ' ಶಬ್ದವನ್ನು ನೋಡುವುದು.
ಣಿಚ್ಛಯ. ಸಕ: [ನಿರ್+ಚಿ] ನಿಶ್ಚಯಿಸು, ನಿರ್ಣಯಿಸು
ಣಿಚ್ಛಯ. ಪು: [ನಿಶ್ಚಯ] ನಿಶ್ಚಯ, ನಿರ್ಣಯ(ಭಗ), ನಿಯಮ, ಅವಿನಾಭಾವ, ಒಂದು ಇನ್ನೊಂದನ್ನು ಬಿಡದಿರುವುದು, ನಯ- ವಿಶೇಷ, ದ್ರವ್ಯಾರ್ಥಿಕ ನಯ, ವಾಸ್ತವಿಕ ಪದಾರ್ಥವನ್ನೇ ಒಪ್ಪುವ ಮತ, ಪರಿಣಾಮ-ವಾದ
ಣಿಚ್ಛಲ್ಲ. ಸಕ: [ಛಿದ್] ಕತ್ತರಿಸು, ತುಂಡು ಮಾಡು
ಣಿಚ್ಛಲ್ಲಿಅ. ವಿ: [ಛಿನ್ನ] ಕತ್ತರಿಸಲ್ಪಟ್ಟ, ತುಂಡರಿಸಲ್ಪಟ್ಟ (ಕುಮಾ)
ಣಿಚ್ಛಾಯ. ವಿ: [ನಿಶ್ಛಾಯ] ಕಾಂತಿಯಿಲ್ಲದ, ಶೋಭೆಯಿಲ್ಲದ
ಣಿಚ್ಛಾರಯ. ವಿ: [ನಿಸ್ಸಾರಕ] ಸಾರವಿಲ್ಲದ,
ಣಿಚ್ಛಿಡ್ಡ. ವಿ: [ನಿಶ್ಛಿದ್ರ] ಛಿದ್ರವಿಲ್ಲದ, ರಂಧ್ರವಿಲ್ಲದ (ಣಾಯಾ)
ಣಿಚ್ಛಿಣ್ಣ. ವಿ: [ನಿಚ್ಛಿನ್ನ] ಬೇರ್ಪಡಿಸಲ್ಪಟ್ಟ, ಬೇರೆಬೇರೆಮಾಡಲಾದ, ಕತ್ತರಿಸಲ್ಪಟ್ಟ
ಣಿಚ್ಛಿದ್ದ. 'ಣಿಚ್ಛಿಡ್ಡ' ಶಬ್ದವನ್ನು ನೋಡುವುದು.
ಣಿಚ್ಛಿನ್ನ. 'ಣಿಚ್ಛಿಣ್ಣ' ಶಬ್ದವನ್ನು ನೋಡುವುದು.
ಣಿಚ್ಛಿಯ. ವಿ: [ನಿಶ್ಚಿತ] ನಿಶ್ಚಯಿಸಲ್ಪಟ್ಟ, ನಿರ್ಣಯಿಸಲ್ಪಟ್ಟ, ಸಂದಿಗ್ಧವಿಲ್ಲದ(ಣಾಯಾ)
ಣಿಚ್ಛೀರ. ವಿ: [ನಿಃಕ್ಷೀರ] ಹಾಲಿಲ್ಲದ. ಕ್ಷೀರ-ರಹಿತ (ಪಣ್ಣ)
ಣಿಚ್ಛುಂಡ. ವಿ: [ದೇ] ನಿರ್ದಯ, ಕರುಣೆಯಿಲ್ಲದ(ದೇ)
ಣಿಚ್ಛುಟ್ಟ. ವಿ: [ನಿಶ್ಛುಟಿತ] ಬಿಡಿಸಲ್ಪಟ್ಟ, ಬಂಧನದಿಂದ ಬಿಡುಗಡೆಯಾದ, ಪರೆಬಿಟ್ಟ ಸರ್ಪ
ಣಿಚ್ಛುಭ. ಸಕ: [ನಿ+ಕ್ಷಿಪ್] ಹೊರಗೆ ಹಾಕು, ಎಸೆ
ಣಿಚ್ಛುಭ. ಪು: [ನಿಕ್ಷೇಪ] ಹೊರಹಾಕುವುದು
ಣಿಚ್ಛುಭಣ. ನ: [ನಿಕ್ಷೇಪಣ] ಹೊರಕ್ಕೆ ಕಳಿಸುವುದು, ಹೊರಕ್ಕೆ ಹಾಕು
ಣಿಚ್ಛುಭಾವಿಯ. ವಿ: [ನಿಕ್ಷೇಪಿತ] ಹೊರಗೆ ಕಳಿಸಲ್ಪಟ್ಟ, ಹೊರಹಾಕಲ್ಪಟ್ಟ(ಣಾಯಾ)
ಣಿಚ್ಛುಹ. ಸಕ: [ನಿ+ಕ್ಷಿಪ್] ಹಾಕು, ಇರಿಸು
ಣಿಚ್ಛುಹಣಾ. ಸ್ತ್ರೀ: [ನಿಕ್ಷೇಪಣಾ] ಹೊರಗೆ ಹೋಗಲು ಆದೇಶ, ತಿರಸ್ಕಾರ
ಣಿಚ್ಛೂಢ. ವಿ: [ನಿಕ್ಷಿಪ್ತ] ಹೊರಗೆ ಹೋದ, ಎಸೆಯಲ್ಪಟ್ಟ, ಇರಿಸಲ್ಪಟ್ಟ, ಹೊರಹಾಕಲ್ಪಟ್ಟ(ಣಾಯಾ)
ಣಿಚ್ಛೂಢ. ವಿ: [ನಿಷ್ಠ್ಯೂತ] ಉಗುಳು, ಗಾಢವಾದ ಕಫ(ವಿಸೇ)
ಣಿಚ್ಛೋಡ. ಸಕ: [ನಿರ್+ಛೋಟಯ್] ಹೊರಗೆ ಹೋಗಲು ಬೆದರಿಕೆ ಹಾಕು, ತಿರಸ್ಕರಿಸು, ಬಿಡಿಸು,
ಣಿಚ್ಛೋಡಗ. ನ: [ನಿಶ್ಛೋಟನ] ತಿರಸ್ಕರಿಸುವುದು, ಹೊರಗೆ ಹೋಗಲು ಬೆದರಿಕೆ ಹಾಕುವುದು
ಣಿಚ್ಛೋಡಣಾ. ಸ್ತ್ರೀ: [ನಿಶ್ಛೋಟನಾ] ಮೇಲಿನ ಶಬ್ದವನ್ನು ನೋಡುವುದು.

ಣಿಚ್ಚೋಡಿಅ. ವಿ: [ನಿಚ್ಚೋಟಿತ] ಸ್ವಚ್ಛಗೊಳಿಸಲ್ಪಟ್ಟ

ಣಿಚ್ಚೋಲ. ಸಕ: [ನಿರ್+ತಕ್ಷ್] ಸುಲಿ, ಸಿಪ್ಪೆ ತೆಗೆ

ಣಿಜಂತಿಯ. ವಿ: [ನಿಯಂತ್ರಿತ] ತಡೆಯಲ್ಪಟ್ಟ, ನಿರ್ಬಂಧಿಸಲ್ಪಟ್ಟ, ಅಂಕೆಯಲ್ಲಿಡಲ್ಪಟ್ಟ

ಣಿಜಿಣ್ಣ. 'ಣಿಜ್ಜಿಣ್ಣ' ಶಬ್ದವನ್ನು ನೋಡುವುದು.

ಣಿಜುಂಜ. 'ಣಿಉಂಜ=ನಿ+ಯುಜ್' ಶಬ್ದವನ್ನು ನೋಡುವುದು

ಣಿಜುದ್ಧ. 'ಣಿಉದ್ಧ' ಶಬ್ದವನ್ನು ನೋಡುವುದು.

ಣಿಜೋಜಣ. ನ: [ನಿಯೋಜನ] ಒಂದು ಕಾರ್ಯದ ನಿರ್ವಹಣೆಗೆ ಗೊತ್ತುಮಾಡುವುದು, ಒಂದು ಅಧಿಕಾರದಲ್ಲಿ ನೇಮಿಸುವುದು, ಕಾರ್ಯದ ಜವಾಬ್ದಾರಿ ಹೊರಿಸುವುದು

ಣಿಜೋಜಿಯ. 'ಣಿಓಇಯ' ಶಬ್ದವನ್ನು ನೋಡುವುದು.

ಣಿಜ್ಜ. ವಿ: [ದೇ] ನಿದ್ರಿಸಿರುವ,

ಣಿಜ್ಜಂತ. 'ಣೀ=ನೀ' ಶಬ್ದವನ್ನು ನೋಡುವುದು

ಣಿಜ್ಜಣ. ವಿ: [ನಿರ್ಜನ] ಮನುಷ್ಯರಿಲ್ಲದ, ಜನವಿಹೀನ, ನ: ಏಕಾಂತ ಸ್ಥಳ(ಗಲುಡ)

ಣಿಜ್ಜಪ್ಪ. ವಿ: [ನಿರ್ಯಾಪ್ಯ] ಕಾರ್ಯವನ್ನು ನೆರವೇರಿಸುವವನು, ನಿರ್ಬಲ, ಅಶಕ್ತ

ಣಿಜ್ಜರ. ಸಕ: [ನಿರ್+ ಜೄ] ನಾಶಗೊಳಿಸು, ಕರ್ಮ-ಪುದ್ಗಲಗಳನ್ನು ಆತ್ಮದಿಂದ ಬೇರ್ಪಡಿಸು

ಣಿಜ್ಜರಣ. ನ: [ನಿರ್ಜರಣ] ಕೆಳಗಿನ ಶಬ್ದವನ್ನು ನೋಡುವುದು.

ಣಿಜ್ಜರಣಾ. ಸ್ತ್ರೀ: [ನಿರ್ಜರಣಾ] ನಾಶ, ಕ್ಷಯ, ಕರ್ಮ-ಕ್ಷಯ, ಕರ್ಮಗಳನ್ನು ನಾಶಮಾಡುವಂಥ ತಪಸ್ಸು, (ನವ)

ಣಿಜ್ಜರಾ. ಸ್ತ್ರೀ: [ನಿರ್ಜರಾ] ಕರ್ಮ-ಕ್ಷಯ, ಕರ್ಮ,ನಾಶ

ಣಿಜ್ಜರಿಯ. ವಿ: [ನಿರ್ಜೀರ್ಣ] ವಿನಾಶವಾದ, ಕ್ಷೀಣಗೊಂಡ

ಣಿಜ್ಜವ. ವಿ: [ನಿರ್ಯಾಪ] ಕಾರ್ಯವನ್ನು ನೆರವೇರಿಸುವವನು, ಪಾಲಿಸುವವನು

ಣಿಜ್ಜವಗ. ವಿ: [ನಿರ್ಯಾಪಕ] ನಿರ್ವಹಿಸುವವನು, ಆರಾಧಕ, ಶಿಷ್ಯನ ಭಾರೀ ಪ್ರಾಯಶ್ಚಿತ್ತವನ್ನೂ ಅವನು ಅದರ ನಿರ್ವಾಹ ಮಾಡುವ ರೀತಿಯಲ್ಲಿ ವಿಭಾಗಿಸಿಕೊಡುವಂಥ ಜೈನ ಮುನಿ(ಠಾ)

ಣಿಜ್ಜವಣಾ. ಸ್ತ್ರೀ: [ನಿರ್ಯಾಪನಾ] ದರ್ಶಿತ ಅರ್ಥವನ್ನು ಪ್ರೀತಿಯಿಂದ ಉಚ್ಚರಿಸುವುದು, ಹಿಂಸೆ

ಣಿಜ್ಜವಯ. 'ಣಿಜ್ಜವಗ' ಶಬ್ದವನ್ನು ನೋಡುವುದು.

ಣಿಜ್ಜವಿಉ. ವಿ: [ನಿರ್ಯಾಪಿತೃ] ಮೇಲಿನ ಶಬ್ದವನ್ನು ನೋಡುವುದು

ಣಿಜ್ಜಾ. ಅಕ: [ನಿರ್+ಯಾ] ಹೊರಗೆ ಹಾಕು

ಣಿಜ್ಜಾಣ. ನ: [ನಿರ್ಯಾಣ] ಹೊರಗೆ ಹೊರಡುವುದು, ನಿರ್ಗಮನ, ಪುನರಾವರ್ತನೆ ಮಾಡದೆ ಹೊರಡುವುದು. ಮೋಕ್ಷ, ಮರಣ

ಣಿಜ್ಜಾಣಿಯ. ವಿ: [ನೈರ್ಯಾಣಿಕ] ನಿರ್ಯಾಣಕ್ಕೆ ಸಂಬಂಧಿಸಿದ, ನಿರ್ಗಮನಕ್ಕೆ ಸಂಬಂಧಿಸಿದ(ಭಗ)

ಣಿಜ್ಜಾಮಗ}. ಪು: [ನಿರ್ಯಾಮಕ] ನಾವಿಕ, ಅಂಬಿಗ,
ಣಿಜ್ಜಾಮಯ}. ಹಡಗು ಅಥವಾ ನೌಕೆಯ ಕರ್ಣಧಾರ

ಣಿಜ್ಜಾಮಣ. ನ: [ನಿರ್ಯಾಪನ] ಸೇಡು ತೀರಿಸಿಕೊಳ್ಳುವುದು, ಪ್ರತೀಕಾರ ಮಾಡುವುದು

ಣಿಜ್ಜಾಮಯ. ಪು: [ನಿರ್ಯಾಮಕ] ರೋಗಿಯ ಸೇವೆ ಶುಶ್ರೂಷೆ ಮಾಡುವ ಮುನಿ, ವಿ: ಆರಾಧನೆ ಮಾಡುವ

ಣಿಜ್ಜಾಮಿಯ. ವಿ: [ನಿರ್ಯಾಮಿತ] ದಡಕ್ಕೆ ತಲುಪಿಸಲ್ಪಟ್ಟ,

ಣಿಜ್ಜಾಯ. ಪು: [ದೇ] ಉಪಕಾರ

ಣಿಜ್ಜಾಯ. ವಿ: [ನಿರ್ಯಾತ] ಹೊರಟು ಹೋದ, ಹೊರಕ್ಕೆ ಹೋಗಿರುವ

ಣಿಜ್ಜಾಯಣ. ನ: [ನಿರ್ಯಾತನ] ಸೇಡು ತೀರಿಸಿಕೊಳ್ಳುವುದು, ದ್ವೇಷ ತೀರಿಸಿಕೊಳ್ಳುವುದು

ಣಿಜ್ಜಾಯಣಾ. ಸ್ತ್ರೀ: [ನಿರ್ಯಾತನಾ] ಮೇಲಿನ ಶಬ್ದವನ್ನು ನೋಡುವುದು.

ಣಿಜ್ಜಾವಯ. 'ಣಿಜ್ಜಮಯ' ಶಬ್ದವನ್ನು ನೋಡುವುದು.

ಣಿಜ್ಜಾಸ: ಪು: [ನಿರ್ಯಾಸ] ಮರದ ರಸ, ಮರದ ಹಾಲು, ಗೋಂದು

ಣಿಜ್ಜಿಅ. ವಿ: [ನಿರ್ಜಿತ] ಸೋಲಿಸಲ್ಪಟ್ಟ, ಗೆಲ್ಲಲ್ಪಟ್ಟ(ಓಘ)

ಣಿಜ್ಜಿಣ. ಸಕ: [ನಿರ್+ಜಿ] ಗೆಲ್ಲು, ಸೋಲಿಸು

ಣಿಜ್ಜಿಣಿಯ. 'ಣಿಜ್ಜಿಅ' ಶಬ್ದವನ್ನು ನೋಡುವುದು.

ಣಿಜ್ಜಿಣ್ಣ}. ವಿ: [ನಿರ್ಜೀರ್ಣ] ನಾಶ ಹೊಂದಿದ,
ಣಿಜ್ಜಿನ್ನ}. ಕ್ಷಯವಾದ(ಠಾ)

ಣಿಜ್ಜೀವ. ವಿ: [ನಿರ್ಜೀವ] ಜೀವವಿಲ್ಲದ, ಚೈತನ್ಯರಹಿತ

ಣಿಜ್ಜುಂಜ. ಸಕ: [ನಿರ್+ಯುಜ್] ಉಪಕಾರ ಮಾಡು

ಣಿಜ್ಜುತ್ತ. ವಿ: [ನಿರ್ಯುಕ್ತ] ಕೂಡಿಕೊಂಡಿರುವ, ಒಟ್ಟಿಗೆ ಸೇರಿರುವ, ಸೇರಿಕೊಂಡಿರುವ, ಪ್ರತಿಪಾದಿತವಾದ

ಣಿಜ್ಜುತ್ತಿ. ಸ್ತ್ರೀ: [ನಿರ್ಯುಕ್ತಿ] ವ್ಯಾಖ್ಯಾನ, ವಿವರಣೆ, ಟೀಕೆ(ಓಘ)
ಣಿಜ್ಜುದ್ಧ. 'ಣಿಉದ್ದ' ಶಬ್ದವನ್ನು ನೋಡುವುದು.
ಣಿಜ್ಜೂಢ. ವಿ: [ನಿರ್ಯೂಢ] ಹೊರಗೆ ಕಳಿಸಲ್ಪಟ್ಟ, ಮನೋಜ್ಞವಲ್ಲದ, ಸುಂದರವಲ್ಲದ, ಗ್ರಂಥದಿಂದ ಉದ್ಧರಿಸಲಾದ, ರಹಿತ, ಇಲ್ಲದ
ಣಿಜ್ಜೂಹ. ಸಕ: [ನಿರ್+ಯೂಹ್] ಪರಿತ್ಯಜಿಸು, ಬಿಟ್ಟುಬಿಡು, ನಿರ್ಮಿಸು, ರಚಿಸು
ಣಿಜ್ಜೂಹ. ಪು: [ದೇ. ನಿರ್ಯೂಹ] ಮನೆಯ ಸೂರು, ಮನೆಯ ಮಾಡು. ಗವಾಕ್ಷ, ಕಿಟಕಿ ಬಾಗಿಲುವಾಡ, ಬಾಗಿಲು
ಣಿಜ್ಜೂಹಗ. ವಿ: [ನಿರ್ಯೂಹಕ] ಬೇರೆ ಗ್ರಂಥದಿಂದ ಉದ್ಧರಿಸುವವನು
ಣಿಜ್ಜೂಹಣಯಾ}. ಸ್ತ್ರೀ: [ನಿರ್ಯೂಹಣಾ] ಹೊರಗೆ
ಣಿಜ್ಜೂಹಣಾ}. ಹಾಕುವುದು, ಪರಿತ್ಯಾಗ, ನಿರ್ಮಾಣ, ರಚನೆ
ಣಿಜ್ಜೂಹಿಅ ವಿ: [ನಿರ್ವ್ಯೂಹಿತ] ರಹಿತ, ಇಲ್ಲದ
ಣಿಜ್ಜೋಅ. ಪು: [ದೇ] ರಾಶಿ, ಸಮೂಹ, ಹೂವುಗಳ ರಜ, ಧೂಳು(ದೇ)
ಣಿಜ್ಜೋಅ}. ಪು: [ದೇ. ನಿರ್ಯೋಗ] ಪರಿಕರ,
ಣಿಜ್ಜೋಗ}. ಸಾಮಗ್ರಿ, ಸಲಕರಣೆ
ಣಿಜ್ಜೋಅ}. ಪು: [ನಿಯೋಗ] ಉಪಕರಣ, ಸಾಧನ,
ಣಿಜ್ಜೋಗ}. ಉಪಕಾರ
ಣಿಜ್ಜೋಮಿ. ಪು: [ದೇ] ಹಗ್ಗ, ದಾರ, ಹುರಿ
ಣಿಜ್ಝ. ಅಕ: [ಸ್ನಿಹ್] ಸ್ನೇಹಮಾಡು
ಣಿಜ್ಝರ. ಅಕ: [ಕ್ಷಿ] ಕ್ಷಯಿಸು, ಕ್ಷೀಣವಾಗು
ಣಿಜ್ಝರ. ವಿ: [ದೇ] ಹಳೆಯದಾದ, ಜೀರ್ಣವಾದ
ಣಿಜ್ಝರ. ಪು: [ನಿರ್ಝರ] ಝರಿ, ಬೆಟ್ಟದಲ್ಲಿ ಹುಟ್ಟಿ ಹರಿಯುವ ನೀರಿನ ಹರಿವು. ಗಿರಿನದಿ
ಣಿಜ್ಝರಣ. ನ: [ನಿರ್ಝರಣ] ಮೇಲಿನ ಶಬ್ದವನ್ನು ನೋಡುವುದು.
ಣಿಜ್ಝರಿಣೀ. ಸ್ತ್ರೀ: [ನಿರ್ಝರಿಣೀ] ನದಿ, ಹೊಳೆ
ಣಿಜ್ಝ. ಸಕ: [ನಿ+ಧ್ಯೈ] ನೋಡು, ನಿರೀಕ್ಷಿಸು
ಣಿಜ್ಝಾ. ಸಕ: [ನಿರ್+ಧ್ಯೈ] ವಿಶೇಷವಾಗಿ ಚಿಂತನ ಮಾಡು
ಣಿಜ್ಝಾಇ. ವಿ: [ನಿಧ್ಯಾಯಿನ್] ನೋಡುವವನು, ಜ್ಞಾನ ದೃಷ್ಟಿಯಿಂದ ನೋಡುವವನು(ಆಚಾ)
ಣಿಜ್ಝಾಇತ್ತು. ವಿ: [ನಿಧ್ಯಾತೃ] ಜ್ಞಾನ ದೃಷ್ಟಿಯಿಂದ ನೋಡುವವನು
ಣಿಜ್ಝಾಇತ್ತು. ವಿ: [ನಿರ್ಧ್ಯಾತೃ] ಅತಿಶಯವಾಗಿ ಚಿಂತನೆ ಮಾಡುವವನು(ಠಾ)
ಣಿಜ್ಝಾಇಯ. ವಿ: [ನಿಧ್ಯಾತ] ನೋಡಲ್ಪಟ್ಟ, ಚೆನ್ನಾಗಿ ಧ್ಯಾನ ಮಾಡಲ್ಪಟ್ಟ, ನ: ದರ್ಶನ, ನಿರೀಕ್ಷಣೆ
ಣಿಜ್ಝಾಡಿಯ. ವಿ: [ನಿರ್ಘಾಟಿತ] ನಾಶಮಾಡಲಾದ
ಣಿಜ್ಝಾಯ. ವಿ: [ದೇ] ನಿರ್ದಯ, ಕರುಣೆಯಿಲ್ಲದ
ಣಿಜ್ಝಾಯ. ವಿ: [ನಿಧ್ಯಾತ] ನೋಡಲ್ಪಟ್ಟ,
ಣಿಜ್ಝೂರ. ವಿ: [ದೇ] ಹಳೆಯ, ಜೀರ್ಣವಾದ
ಣಿಜ್ಝೋಡ. ಸಕ: [ಛಿದ್] ಕತ್ತರಿಸು, ತುಂಡರಿಸು
ಣಿಜ್ಝೋಡಣ. ನ: [ಛೇದನ] ಕತ್ತರಿಸುವುದು, ತುಂಡುಮಾಡುವುದು(ಕುಮಾ)
ಣಿಜ್ಝೋಸಇತ್ತು. ವಿ: [ನಿರ್ಘೋಷಯಿತೃ] ನಾಶಮಾಡುವ, ಕರ್ಮಗಳನ್ನು ನಾಶ ಮಾಡುವ
ಣಿಟ್ಟಂಕ. ವಿ: [ದೇ] ನಾಣ್ಯದ ತುಣುಕು, ವಿಷಮ, ಸಮಾನವಲ್ಲದ
ಣಿಟ್ಟಂಕಿಯ. ವಿ: [ನಿಷ್ಟಂಕಿತ] ನಿಶ್ಚಯಿಸಲ್ಪಟ್ಟ(ಸುಪಾ)
ಣಿಟ್ಟುಅ. ಅಕ: [ಕ್ಷರ್] ತೊಟ್ಟಿಕ್ಕು, ಸೋರು
ಣಿಟ್ಟುಇಅ. ವಿ: [ಕ್ಷರಿತ] ತೊಟ್ಟಿಕ್ಕಿದ, ಸೋರಿದ
ಣಿಟ್ಟುಹ. ಅಕ: [ವಿ+ಗಲ್] ನಾಶವಾಗು, ಕರಗಿ ಹೋಗು
ಣಿಟ್ಠ. 'ಣಿಟ್ಠಾ=ನಿ+ ಸ್ಥಾ' ಶಬ್ದವನ್ನು ನೋಡುವುದು.
ಣಿಟ್ಠಯ}. ಸಕ: [ನಿ+ಸ್ಥಾಪಯ್] ಪೂರ್ಣಗೊಳಿಸು,
ಣಿಟ್ಠವ}. ಮುಗಿಸು, ಸಮಾಪ್ತಿಗೊಳಿಸು, ವಿಶೇಷ ರೀತಿಯಲ್ಲಿ ಸ್ಥಿರಗೊಳಿಸು(ಭಗ)
ಣಿಟ್ಠವಣ. ನ: [ನಿಷ್ಠಾಪನ] ಕೊನೆಗೊಳಿಸುವುದು, ಮುಗಿಸು, ವಿ: ನಾಶಕಾರಕ, ಕೊನೆಗೊಳಿಸುವ ಅಂತ್ಯಗೊಳಿಸುವ
ಣಿಟ್ಠವಯ. ವಿ: [ನಿಷ್ಠಾಪಕ] ಸಮಾಪ್ತಿಗೊಳಿಸುವವ
ಣಿಟ್ಠಾವಿಅ. ವಿ: [ನಿಷ್ಠಾಪಿತ] ಅಂತ್ಯಗೊಳಿಸಲಾದ, ಸಮಾಪ್ತಿಗೊಳಿಸಲಾದ, ನಾಶಮಾಡಲ್ಪಟ್ಟ
ಣಿಟ್ಠಾ. ಸಕ: [ನಿ+ಸ್ಥಾ] ಅಂತ್ಯಗೊಳ್ಳುವಿಕೆ, ಸಮಾಪ್ತಿಗೊಳ್ಳುವುದು, ಮುಗಿಯುವುದು
ಣಿಟ್ಠಾ. ಸ್ತ್ರೀ: [ನಿಷ್ಠಾ] ಅಂತ್ಯ, ಅವಸಾನ, ಸಮಾಪ್ತಿ, ಸದ್ಭಾವ, -ಭಾಸಿ. ವಿ: [-ಭಾಷಿನ್] ನಿಷ್ಠಾಪೂರ್ವಕವಾಗಿ ಮಾತನಾಡುವವನು, ನಿಶ್ಚಯಪೂರ್ವಕವಾಗಿ ಹೇಳುವವನು

ಣಿಟ್ಠಾಣ. ನ: [ನಿಷ್ಠಾನ] ಮೊಸರು ಮುಂತಾದ ವ್ಯಂಜನಗಳು. ಸಕಲ ಗುಣದಿಂದ ಕೂಡಿದ ಭೋಜನ. **–ಕಹಾ.** ಸ್ತ್ರೀ: [–ಕಥಾ] ಭಕ್ತ ಕಥೆಗಳು, ಮೊಸರು ಮೊದಲಾದ ವ್ಯಂಜನಗಳನ್ನು ಕುರಿತ ಮಾತು–ಕತೆ

ಣಿಟ್ಠಾವಣ. 'ಣಿಟ್ಠವಣ' ಶಬ್ದವನ್ನು ನೋಡುವುದು.

ಣಿಟ್ಠಿಯ. ವಿ: [ನಿಷ್ಠಿತ] ಸಮಾಪ್ತ ಗೊಳಿಸಲಾದ, ಪೂರ್ಣಮಾಡಲಾದ, ನಾಶಗೊಳಿಸಲ್ಪಟ್ಟ, ಸ್ಥಿರ, ನಿಷ್ಪನ್ನ, ಸಿದ್ಧ(ಆಚಾ), ಪು: ಮೋಕ್ಷ, ಮುಕ್ತಿ. **–ಟ್ಠ.** ವಿ: [ನಿಷ್ಠಿತಾರ್ಥ] ಕೃತಕೃತ್ಯ(ಪಣ್ಣ). **–ಟ್ಠಿ** ವಿ: [ನಿಷ್ಠಿತಾರ್ಥಿನ್] ಮುಮುಕ್ಷು, ಮೋಕ್ಷಾಕಾಂಕ್ಷಿ

ಣಿಟ್ಠಿಯ. ವಿ: [ನೈಷ್ಠಿಕ] ನಿಷ್ಠೆಯಿಂದ ಕೂಡಿದ, ನಿಷ್ಠೆಯುಳ್ಳ(ಪಣ್ಣ)

ಣಿಟ್ಠೀವ. ಪು: [ನಿಷ್ಠೀವ] ಉಗುಳು

ಣಿಟ್ಠೀವಣ. ಸ್ತ್ರೀನ: [ನಿಷ್ಠೀವನ] ಉಗಳು, ಉಗುಳುವುದು

ಣಿಟ್ಠುಅ. ನ: [ನಿಷ್ಠ್ಯೂತ] ಉಗುಳು

ಣಿಟ್ಠುಭಯ. ವಿ: [ನಿಷ್ಠೀವಕ] ಉಗುಳುವವನು

ಣಿಟ್ಠುಯಣ. 'ನಿಟ್ಠೀವಣ' ಶಬ್ದವನ್ನು ನೋಡುವುದು.

ಣಿಟ್ಠುರ}. ವಿ: [ನಿಷ್ಠುರ] ಕಠಿಣವಾದ, ಪರುಷದಿಂದ

ಣಿಟ್ಠುಲ}. ಕೂಡಿದ, ಕರ್ಕಶವಾದ(ಪಾಅ)

ಣಿಟ್ಠುವಣ. ನ: [ನಿಷ್ಠೀವನ] ಉಗುಳು, ಕಫ. ವಿ: ಉಗುಳುವವನು(ತಾ)

ಣಿಟ್ಠುಹ. ಅಕ: [ನಿ+ಸ್ತಮ್ಭ್] ನಿಶ್ಚೇಷ್ಟಗೊಳ್ಳು, ಶರೀರ ವ್ಯಾಪಾರವಿಲ್ಲದಂತಾಗು, ಸ್ತಬ್ಧವಾಗು

ಣಿಟ್ಠುಹ. ವಿ: [ದೇ] ಸ್ತಬ್ಧ, ಚಲನೆಯಿಲ್ಲದ

ಣಿಟ್ಠುಹ. ಅಕ: [ನಿ+ಷ್ಠೀವ್] ಉಗುಳು

ಣಿಟ್ಠುಹಣ. ನ: [ದೇ. ನಿಷ್ಠೀವನ] ಉಗುಳು, ಕಫ

ಣಿಟ್ಠುಹಾವಣ. ವಿ: [ನಿಷ್ಟಂಭಕ] ನಿಶ್ಚೇಷ್ಟಗೊಳಿಸುವವನು, ಸ್ತಬ್ಧಗೊಳಿಸುವವನು

ಣಿಟ್ಠುಹಿಅ. ನ: [ದೇ] ಉಗುಳು, ಕಫ

ಣಿಡ. ಪು: [ದೇ] ಪಿಶಾಚ, ರಾಕ್ಷಸ

ಣಿಡಲ}. ನ: [ಲಲಾಟ] ಹಣೆ(ಸುಪಾ)

ಣಿಡಾಲ}.

ಣಿಡ್ಡ. ನ: [ನೀಡ] ಹಕ್ಕಿಯ ಗೂಡು(ಪಾಅ)

ಣಿಡ್ಡಹಣ. ನ: [ನಿರ್ದಹನ] ಸುಡುವುದು

ಣಿಡ್ಡುಹ. 'ಣಿಟ್ಟುಅ.' ಶಬ್ದವನ್ನು ನೋಡುವುದು.

ಣಿಣ್ಣಯ. ಪು: [ನಿನಾದ] ಶಬ್ದ, ಸದ್ದು, ಧ್ವನಿ(ಣಾಯಾ)

ಣಿಣ್ಣ. ವಿ: [ನಿಮ್ನ] ಕೆಳಗೆ, ತಗ್ಗಾಗಿರುವ, ಕ್ರಿವಿ: ಕೆಳಗಿನ

ಣಿಣ್ಣಕ್ಖು. ಕ್ರಿ: [ನಿಸ್ಸಾರಯತಿ] ಹೊರಹೋಗುತ್ತಾನೆ

ಣಿಣ್ಣಗಾ. ಸ್ತ್ರೀ: [ನಿಮ್ನಗಾ] ನದಿ, ಹೊಳೆ, ಕೆಳಮುಖವಾಗಿ ಹೋಗುವ(ಪಣ್ಣ)

ಣಿಣ್ಣಟ್ಠ. ವಿ: [ನಿರ್ನಷ್ಟ] ನಾಶ ಹೊಂದಿದ, ನಾಶವಾದ

ಣಿಣ್ಣಯ: ಪು: [ನಿರ್ಣಯ] ನಿಶ್ಚಯ, ನಿರ್ಣಯ

ಣಿಣ್ಣಯಾ. 'ಣಿಣ್ಣಗಾ' ಶಬ್ದವನ್ನು ನೋಡುವುದು.

ಣಿಣ್ಣಾರ. ವಿ: [ನಿರ್ನಗರ] ನಗರದಿಂದ ಹೊರಗೆ ಹೋದ

ಣಿಣ್ಣಾಲಾ. ಸ್ತ್ರೀ: [ದೇ] ಕೊಕ್ಕು

ಣಿಣ್ಣಾಸ. ಸಕ: [ನಿರ್+ನಾಶಯ್] ನಾಶಮಾಡು

ಣಿಣ್ಣಾಸ. ಪು: [ನಿರ್ನಾಶ] ವಿನಾಶ

ಣಿಣ್ಣಾಸಿಯ. ವಿ: [ನಿರ್ನಾಶಿತ] ನಾಶಮಾಡಲ್ಪಟ್ಟ

ಣಿಣ್ಣಿದ್ದ. ವಿ: [ನಿರ್ನಿದ್ರ] ನಿದ್ರೆಯಿಲ್ಲದ

ಣಿಣ್ಣಿಮೇಸ. ವಿ: [ನಿರ್ನಿಮೇಷ] ರೆಪ್ಪೆಮಿಟುಕಿಸದಿರುವ, ರೆಪ್ಪೆಯಾಡದಿರುವ, ಅನುಪಯೋಗಿ

ಣಿಣ್ಣೀ.. ಸಕ: [ನಿರ್+ಣೀ] ನಿಶ್ಚಯಿಸು

ಣಿಣ್ಣೀಅ. ವಿ: [ನಿರ್ಣೀತ] ನಿಶ್ಚಿತ, ನಿರ್ಣಯಿಸಲ್ಪಟ್ಟ, ತೀರ್ಮಾನಿಸಲ್ಪಟ್ಟ(ಶ್ರಾ)

ಣಿಣ್ಣುಣ್ಣಅ. ವಿ: [ನಿಮ್ನೋನ್ನತ] ಏರು–ತಗ್ಗು, ಹಳ್ಳ–ತಿಟ್ಟು, ವಿಷಮ ಪ್ರದೇಶ(ಅಭಿ)

ಣಿಣ್ಣೇಹ. ವಿ: [ನಿಸ್ನೇಹ] ಸ್ನೇಹ–ರಹಿತ, ಸ್ನೇಹವಿಲ್ಲದ, ಪ್ರೀತಿಯಿಲ್ಲದ

ಣಿಣ್ಹಇಯಾ. ಸ್ತ್ರೀ: [ನಿಹ್ನವಿಕಾ] ಒಂದು ಲಿಪಿ–ವಿಶೇಷ

ಣಿಣ್ಹಗ}. ಪು: [ನಿಹ್ನವ] ಅಪಲಾಪ, ವಾಸ್ತವವಾದ

ಣಿಣ್ಹಯ}. ವಿಷಯವನ್ನು ಅಲ್ಲವೆಂದು ಮರೆಸುವುದು,

ಣಿಣ್ಹವ}. ಮಿಥ್ಯಾವಾದಿ(ಓಘ), ಅವಿಶ್ವಾಸ

ಣಿಣ್ಹವ. ಸಕ: [ನಿ+ಹ್ನು] ಅಪಲಾಪಿಸು,

ಣಿಣ್ಹವಗ. ವಿ: [ನಿಹ್ನಾವಕ] ಅಪಲಾಪ ಮಾಡುವವನು (ಓಘ)

ಣಿಣ್ಹವಣ. ವಿ: [ನಿಹ್ನವನ] ಅಪಲಾಪ, ಮಿಥ್ಯಾವಾದ, ಅಪಲಾಪ ಮಾಡುವವನು

ಣಿಣ್ಹವಿದ. 'ಣಿಣ್ಹುವೇದ' ಶಬ್ದವನ್ನು ನೋಡುವುದು.

ಣಿಣ್ಹುಯ. ವಿ: [ನಿಹ್ನುತ] ಅಪಲಾಪ ಮಾಡಲ್ಪಟ್ಟ, ಮರೆಮಾಚಲ್ಪಟ್ಟ,

ಣಿಣ್ಹುವ. 'ಣಿಣ್ಹವ=ನಿ+ಹ್ನು' ಶಬ್ದವನ್ನು ನೋಡುವುದು.

ಣಿಣ್ಹುವಿದ(ಶೌ). ವಿ: [ನಿ+ಹ್ನುತ] ಅಪಲಾಪ ಮಾಡಲ್ಪಟ್ಟ

ಣಿತಿಯ. 'ಣಿಚ್ಚ' ಶಬ್ದವನ್ನು ನೋಡುವುದು.

ಣಿತುಡಿಅ. ವಿ: [ನಿತುಡಿತ] ಮುರಿದು ಹೋದ, ಕತ್ತರಿಸಲ್ಪಟ್ಟ(ಅಚ್ಚು)
ಣಿತ್ತ. **'ಣೆತ್ತ'** ಶಬ್ದವನ್ನು ನೋಡುವುದು.
ಣಿತ್ತಮ. ವಿ: [ನಿಸ್ತಮಸ್] ಕತ್ತಲೆಯಿಲ್ಲದ, ಅಂಧಕಾರ–ರಹಿತ, ಅಜ್ಞಾನ–ವಿಲ್ಲದ(ಅಜಿ)
ಣಿತ್ತಲ. ವಿ: [ದೇ] ಹಿಂತಿರುಗದ, ಹಿಂಜರಿಯದ, ತೊಡಗಿಕೊಂಡ, ತ್ಯಜಿಸದ
ಣಿತ್ತಿ(ಅಪ). **'ಣೀಇ'** ಶಬ್ದವನ್ನು ನೋಡುವುದು.
ಣಿತ್ತಿಂಸ. ವಿ: [ನಿಸ್ತ್ರಿಂಶ] ನಿರ್ದಯ, ಕರುಣೆಯಿಲ್ಲದ (ಸುಪಾ)
ಣಿತ್ತಿರಡಿ. ವಿ: [ದೇ] ನಿರಂತರ, ತಡೆಯಿಲ್ಲದೆ, ಒಂದೇ ಸಮನೆ
ಣಿತ್ತಿರಡಿಅ. ವಿ: [ದೇ] ತ್ರುಟಿತ, ಮುರಿದು ಹೋದ, ಹರಿಯಲ್ಪಟ್ಟ, ಸೀಳಲ್ಪಟ್ಟ
ಣಿತ್ತುಪ್ಪ. ವಿ: [ದೇ] ಜಿಡ್ಡಿಲ್ಲದ, ತುಪ್ಪ ಎಣ್ಣೆ ಇತ್ಯಾದಿ ರಹಿತ
ಣಿತ್ತುಲ. ವಿ: [ನಿಸ್ತುಲ] ನಿರುಪಮ, ಎಣೆಯಿಲ್ಲದ, ಅಸಮಾನ, ಕ್ರಿ. ವಿ: ಅಸಾಧಾರಣ ರೀತಿಯಲ್ಲಿ
ಣಿತ್ತುಸ. ವಿ: [ನಿಸ್ತುಷ] ಹೊಟ್ಟು ತೆಗೆಯಲ್ಪಟ್ಟ(ಧಾನ್ಯ ಇತ್ಯಾದಿ), ದೋಷವಿಲ್ಲದ, ವಿಶುದ್ಧ(ಪಣ್ಣ)
ಣಿತ್ತೇಯ. ವಿ: [ನಿಸ್ತೇಜಸ್] ತೇಜೋಹೀನ, ತೇಜಸ್ಸಿಲ್ಲದ, ಮಂಕಾಗಿರುವ(ಣಾಯಾ)
ಣಿತ್ಥಣಣ. ನ: [ನಿಸ್ತನನ] ವಿಜಯ ಸೂಚಕ ಧ್ವನಿ,
ಣಿತ್ಥರ. ಸಕ: [ನಿರ್+ತೃ] ದಾಟು, ಆಚೆ ದಡ ಮುಟ್ಟು,
ಣಿತ್ಥರಣ. ನ: [ನಿಸ್ತರಣ] ದಾಟುವುದು, ಆಚೆದಡ ಸೇರುವುದು, ಹೊಳೆ ಮೊದಲಾದುವನ್ನು ದಾಟುವುದು(ಉಪ)
ಣಿತ್ಥರಿಅ. **'ಣಿತ್ಥಿಣ್ಣ'** ಶಬ್ದವನ್ನು ನೋಡುವುದು.
ಣತ್ಥಾಣ. ವಿ: [ನಿಸ್ಥಾನ] ಸ್ಥಾನವಿಲ್ಲದ, ಸ್ಥಾನಭ್ರಷ್ಟ (ಣಾಯಾ)
ಣಿತ್ಥಾಮ. ವಿ: [ನಿಃಸ್ಥಾಮನ್] ನಿರ್ಬಲ, ಮಂದ(ಪಅ)
ಣಿತ್ಥಾರ. ಸಕ: [ನಿರ್+ತಾರಯ್] ದಾಟು, ಆಚೆ ದಡ ಮುಟ್ಟು, ಪಾರು ಮಾಡು, ರಕ್ಷಿಸು, ಬಿಡುಗಡೆ ಅಥವಾ ಮಕ್ತಿ ಕೊಡಿಸು, –'ಣಿತ್ಥಾರಸು'
ಣಿತ್ಥಾರ. ಪು: [ನಿಸ್ತಾರ] ಬಿಡುಗಡೆ, ಮುಕ್ತಿ, ವಿಮೋಚನೆ, ರಕ್ಷಣೆ, ಉದ್ಧಾರ ಣಾಯಾ)
ಣಿತ್ಥಾರಗ. ವಿ: [ನಿಸ್ತಾರಕ] ದಾಟಿಸುವವನು, ದಡವನ್ನು ಸೇರಿಸುವವನು, ವಿಮೋಚನೆ ಮಾಡುವವನು
ಣಿತ್ಥಾರಣಾ. ಸ್ತ್ರೀ: [ನಿಸ್ತಾರಣಾ] ದಾಟಿಸುವುದು, ಆಚೆದಡ ಮುಟ್ಟಿಸುವುದು, ಸಂಸಾರ ಬಂಧನದಿಂದ ಬಿಡುಗಡೆ ಮಾಡಿಸುವುದು.
ಣಿತ್ಥಾರಿಯ. ವಿ: [ನಿಸ್ತಾರಿತ] ರಕ್ಷಿಸಲ್ಪಟ್ಟವನು, ಉದ್ಧರಿಸಲ್ಪಟ್ಟವನು, ದಾಟಿಸಲ್ಪಟ್ಟವನು(ಭಗ) ಪಾರು ಮಾಡಲಾದವನು
ಣಿತ್ಥಿಣ್ಣ}. ವಿ: [ನಿಸ್ತೀರ್ಣ] ದಡ ಸೇರಿದ, ದಾಟಲ್ಪಟ್ಟ,
ಣಿತ್ಥಿನ್ನ}. ಪಾರು ಮಾಡಲಾದವನು
ಣಿದಂಸ. ಸಕ: [ನಿ+ದರ್ಶಯ್] ಉದಾಹರಿಸು, ದೃಷ್ಟಾಂತ ಹೇಳು, ತೋರಿಸು
ಣಿದಂಸಣ. ನ: [ನಿದರ್ಶನ] ಉದಾಹರಣೆ, ದೃಷ್ಟಾಂತ, ತೋರಿಸುವುದು(ಠಾ)
ಣಿದಂಸಿಅ. ವಿ:[ನಿದರ್ಶಿತ]ಪ್ರದರ್ಶಿಸಲ್ಪಟ್ಟ, ತೋರಿಸಲಾದ
ಣಿದರಿಸಣ. **'ಣಿದಂಸಣ'** ಶಬ್ದವನ್ನು ನೋಡುವುದು.
ಣಿದರಿಸಿವ. ವಿ: [ನಿದರ್ಶಿತ] ಹೇಳಲಾದ, ಪ್ರದರ್ಶಿಸಲ್ಪಟ್ಟ, ತೋರಿಸಲ್ಪಟ್ಟ
ಣಿದಾ. ಸ್ತ್ರೀ: [ದೇ] ತಿಳಿವಿನಿಂದ ಕೂಡಿದ ವೇದನೆ, ಗೊತ್ತಿದ್ದೂ ಮಾಡಲಾಗುವ ಪ್ರಾಣಿ ಹಿಂಸೆ.
ಣಿದಾಣ. **'ಣಿಆಣ'** ಶಬ್ದವನ್ನು ನೋಡುವುದು.
ಣಿದಾಯಾ. **'ಣಿದಾ'** ಶಬ್ದವನ್ನು ನೋಡುವುದು.
ಣಿದಾಹ. ಪು: [ನಿದಾಘ] ಬೇಸಿಗೆ ಕಾಲ, ಉಷ್ಣ, ಬಿಸಿ, ಕಾವು, ಗ್ರೀಷ್ಮ ಋತು, ಜೇಷ್ಠ ಮಾಸ, ಮೂರನೇ ನರಕದ ಒಂದು ನರಕ–ಸ್ಥಾನ
ಣಿದಾಹ. ಪು: [ನಿದಾಹ] ಅಸಾಧಾರಣವಾಗಿ ಸುಡುವಿಕೆ, ಜ್ವಲನ
ಣಿದೇಸ. ಪು: [ನಿದೇಶ] ಆಜ್ಞೆ, ಆದೇಶ
ಣಿದೇಸಿಅ. ವಿ: [ನಿದೇಶಿತ] ಪ್ರದರ್ಶಿಸಲ್ಪಟ್ಟ, ಹೇಳಲಾದ, ಕಥಿತ(ಪಉಮ)
ಣಿದೊಚ್ಚ. ನ: [ದೇ] ಭಯವಿಲ್ಲದಿರುವುದು, ಆರೋಗ್ಯ, ಸ್ವಾಸ್ಥ್ಯ
ಣಿದ್ದಂಝಾಣ. ನ: [ನಿದ್ರಾಧ್ಯಾನ] ನಿದ್ರೆಯಲ್ಲಿ ಆಗುವ ಧ್ಯಾನ
ಣಿದ್ದಂದ. ವಿ: [ನಿರ್ದ್ವಂದ್ವ] ದ್ವಂದ್ವವಿಲ್ಲದ, ಕ್ಲೇಶವಿಲ್ಲದ
ಣಿದ್ದಂಭ. ವಿ: [ನಿರ್ದಂಭ] ದಂಭವಿಲ್ಲದ, ಕಪಟವಿಲ್ಲದ, ವಂಚನೆಯಿಲ್ಲದ(ಸುಪಾ)
ಣಿದ್ದಡೀ. (ಅಪ). **'ಣಿದ್ದಾ=ನಿದ್ರಾ'** ಶಬ್ದವನ್ನು ನೋಡುವುದು.

ಣಿದ್ದಡ್ಢ. ವಿ: [ನಿರ್ದಗ್ಧ] ಸುಟ್ಟಿರುವ, ಚೆನ್ನಾಗಿ ಸುಡಲ್ಪಟ್ಟ, **ಪು:** ಒಬ್ಬ ನೃಪ. ರತ್ನಪ್ರಭಾ ಎಂಬ ಹೆಸರಿನ ನರಕ. **–ಮಜ್ಝ. ಪು:** [–ಮಧ್ಯ] ಒಂದು ನರಕದ ಪ್ರದೇಶ. **ಣಿದ್ದಡ್ಢಾವತ್ತ. ಪು:** [ನಿರ್ದಗ್ಧಾವರ್ತ] ಒಂದು ನರಕ ಲೋಕ. **ಣಿದ್ದಡ್ಢೋಸಿಟ್ಟ.** [ನಿರ್ದಗ್ಧಾವಶಿಷ್ಟ] ಒಂದು ನರಕ–ಪ್ರದೇಶ

ಣಿದ್ದಯ. ವಿ: [ನಿರ್ದಯ] ದಯೆಯಿಲ್ಲದ, ಕರುಣೆಯಿಲ್ಲದ, ನಿಷ್ಠುರ, ಒರಟು(ಪಣ್ಣ)

ಣಿದ್ದಲಣ. ನ: [ನಿರ್ದಲನ] ಸೀಳುವುದು, ತುಳಿಯುವುದು, ಹೋಳುಮಾಡುವುದು(ಆಚಾ). ವಿ: ಸೀಳುವವನು, ತುಳಿಯುವವನು

ಣಿದ್ದಲಿಅ. ವಿ: [ನಿರ್ದಲಿತ] ತುಳಿಯಲ್ಪಟ್ಟ, ಹೋಳುಮಾಡಲ್ಪಟ್ಟ(ಸುರ)

ಣಿದ್ದಹ. ಸಕ: [ನಿರ್+ದಹ್] ಸುಡು, ಬೆಂಕಿಹಚ್ಚು

ಣಿದ್ದಾ. ಅಕ: [ನಿ+ದ್ರಾ] ನಿದ್ರಿಸು

ಣಿದ್ದಾ. ಸ್ತ್ರೀ: [ನಿದ್ರಾ] ನಿದ್ರೆ, ಒಂದೆರಡು ಬಾರಿ ಕೂಗಿದ ಮೇಲೆಯೇ ಎಚ್ಚರಾಗುವಂಥ ನಿದ್ರೆ. **–ಅಂತ.** ವಿ: [–ವತ್] ನಿದ್ರೆಯಿಂದ ಕೂಡಿದ. **–ಕರೀ.** ಸ್ತ್ರೀ: [–ಕರೀ] ಒಂದು ಬಗೆಯ ಬಳ್ಳಿ. **–ಣಿದ್ದಾ.** ಸ್ತ್ರೀ: [–ನಿದ್ರಾ] ಬಹಳ ಕಷ್ಟದಿಂದ ಮನುಷ್ಯನನ್ನು ಎಬ್ಬಿಸ ಬಹುದಾದಂಥ ನಿದ್ರೆ. **–ಲ,–ಲು.** ವಿ: [–ವತ್] ನಿದ್ರೆ ಮಾಡುತ್ತಿರುವ ನಿದ್ರಾಸ್ವಬಾವದ. **–ವಅ.** ವಿ: [–ಪ್ರದ] ನಿದ್ರೆ ತರಿಸುವಂಥದು

ಣಿದ್ದಾಅ. ವಿ: [ನಿದ್ರಾತ] ನಿದ್ರೆಯಲ್ಲಿರುವವನು

ಣಿದ್ದಾಅ. ವಿ: [ನಿರ್ದಾವ] ಬೆಂಕಿಯಿರದ, ಅಗ್ನಿ–ರಹಿತ

ಣಿದ್ದಾಅ. ವಿ: [ನಿರ್ದಾಯ] ಪಿತ್ರಾರ್ಜಿತ ಆಸ್ತಿಯಿಲ್ಲದ, ಪಿತ್ರಾರ್ಜಿತ ಸಂಪತ್ತಿಲ್ಲದ

ಣಿದ್ದಾಇಅ. ವಿ: [ನಿದ್ರಿತ] ನಿದ್ರೆ ಮಾಡುತ್ತಿರುವ

ಣಿದ್ದಾಣೀ. ಸ್ತ್ರೀ: [ನಿದ್ರಾಣೀ] ವಿದ್ಯಾದೇವಿ–ವಿಶೇಷ

ಣಿದ್ದಾಯಾ. 'ಣಿದಾ' ಶಬ್ದವನ್ನು ನೋಡುವುದು.

ಣಿದ್ದಾರಿಅ. ವಿ:[ನಿರ್ದಾರಿತ] ಸೀಳಲ್ಪಟ್ಟ, ತುಂಡುಮಾಡಲ್ಪಟ್ಟ

ಣಿದ್ದಾವ. ವಿ: [ನಿರ್ದಾವ] ದಾವಾನಲವಿಲ್ಲದಿರುವ, ಕಾಡುಕಿಚ್ಚು ಇಲ್ಲದಿರುವ, ಕಾಡು ಇಲ್ಲದ

ಣಿದ್ದಿಟ್ಠ. ವಿ: [ನಿರ್ದಿಷ್ಟ] ತೋರಿಸಲ್ಪಟ್ಟ, ಹೇಳಲ್ಪಟ್ಟ(ಭಗ) ಪ್ರತಿಪಾದಿತ, ನಿರೂಪಿತ, ಸೂಚಿಸಲ್ಪಟ್ಟ

ಣಿದ್ದಿಟ್ಠು. ವಿ: [ನಿರ್ದೇಷ್ಟೃ] ನಿರ್ದೇಶಿಸುವವನು, ಸೂಚಿಸುವವನು

ಣಿದ್ದಿಸ. ಸಕ: [ನಿರ್+ದಿಶ್] ಉಚ್ಚರಿಸು, ಹೇಳು, ಪ್ರತಿಪಾದಿಸು, ನಿರೂಪಿಸು

ಣಿದ್ದುಕ್ಖ. ವಿ: [ನಿರ್ದುಃಖ] ದುಃಖವಿಲ್ಲದಿರುವ, ಸುಖಿ

ಣಿದ್ದುರ. ಪು: [ದೇ. ನೆತ್ತರ] ಒಂದು ದೇಶ–ವಿಶೇಷ

ಣಿದ್ದೂಸಣ. ವಿ: [ನಿರ್ದೂಷಣ] ನಿರ್ದೋಷ

ಣಿದ್ದೇಸ. ಪು: [ನಿರ್ದೇಶ] ಲಿಂಗ ಅಥವಾ ಅರ್ಥಮಾತ್ರವನ್ನು ಹೇಳುವುದು, ವಿಶೇಷದ ಹೆಸರು. ನಿಶ್ಚಯ ಪೂರ್ವಕವಾಗಿ ಹೇಳುವುದು. ಪ್ರತಿಪಾದನೆ, ನಿರೂಪಣೆ(ಉತ್ತ), ಆಜ್ಞೆ ವಿ: ದೇಶದಿಂದ ಹೊರಹಾಕಲ್ಪಟ್ಟವನು(ಪಉಮ)

ಣಿದ್ದೇಸಗ}. ವಿ: [ನಿರ್ದೇಶಕ] ನಿರ್ದೇಶಿಸುವವನು,

ಣಿದ್ದೇಸಯ}. ಆಜ್ಞೆ ಮಾಡುವವನು, ಸೂಚನೆ ನೀಡುವವನು

ಣಿದ್ದೊಹ್ಥ. ನ: [ನಿರ್ದೌಃಸ್ಥ್ಯ] ದಾರಿದ್ರ್ಯವಿಲ್ಲದಿರುವುದು, ವಿ: ಸುಸ್ಥಿತಿಯಲ್ಲಿರುವವನು, ಬಡತನ ವಿಲ್ಲದಿರುವವನು

ಣಿದ್ದೋಸ. ವಿ: [ನಿರ್ದೋಷ] ದೋಷವಿಲ್ಲದಿರುವುದು, ದೂಷಣವಿಲ್ಲದ, ಶುದ್ಧವಾಗಿರುವ(ಗಉಡ)

ಣಿದ್ಧ. ನ: [ಸ್ನಿಗ್ಧ] ಜಿಡ್ಡಿನಿಂದ ಕೂಡಿದ, ಮೃದುವಾದ, ಕೋಮಲವಾದ, ಕಾಂತಿಯಿಂದ ಕೂಡಿದ, ತೇಜಸ್ವಿ

ಣಿದ್ಧಂತ. ವಿ: [ನಿರ್ಧ್ಮಾತ] ಅಗ್ನಿ ಸಂಪರ್ಕದಿಂದ ಶುದ್ಧವಾಗಿರುವ, ಕಳಂಕ ರಹಿತ(ಪಣ್ಣ)

ಣಿದ್ಧಂಧಸ. ವಿ: [ದೇ] ನಿರ್ದಯ, ನಿಷ್ಠುರ, ಕರುಣೆಯಿಲ್ಲದ(ಓಘ), ನಾಚಿಕೆಯಿಲ್ಲದ, ನಿರ್ಲಜ್ಜ

ಣಿದ್ಧಣ ವಿ: [ನಿರ್ಧನ] ಹಣವಿಲ್ಲದ, ಬಡವ,

ಣಿದ್ಧಣ್ಣ. ವಿ: [ನಿರ್ಧಾನ್ಯ] ಧಾನ್ಯವಿಲ್ಲದ

ಣಿದ್ಧಮ. ವಿ: [ದೇ] ಒಂದೇ ಮನೆಯಲ್ಲಿ ವಾಸಿಸುವವನು

ಣಿದ್ಧಮಣ. ನ: [ದೇ] ಚರ್ಮ, ಹೊಲಸು ನೀರು ಹರಿದು ಹೋಗುವ ಮೋರಿ, ಚರಂಡಿ, ನೀರು ಹರಿದು ಹೋಗುವ ಕಾಲುವೆ

ಣಿದ್ಧಮಣ. ನ: [ನಿರ್ಧ್ಮಾನ] ತಿರಸ್ಕಾರ, ಅವಹೇಳನೆ(ಉಪ), **ಪು:** ಒಬ್ಬ ಯಕ್ಷ

ಣಿದ್ಧಮಾಯ. ವಿ: [ದೇ] ಒಂದೇ ಮನೆಯಲ್ಲಿ ವಾಸಿಸುವವನು

ಣಿದ್ಧಮ್ಮ. ವಿ: [ದೇ] ಒಂದೇ ಕಡೆಗೆ ಹೋಗುವವನು, ಏಕಮುಖ ಸಂಚಾರಿ

ಣಿದ್ಧಮ್ಮ. ವಿ: [ನಿರ್ಧರ್ಮನ್] ಧರ್ಮವಿಲ್ಲದವನು, ಅಧರ್ಮಿ(ಶ್ರಾ)
ಣಿದ್ಧಯ. ವಿ: [ದೇ] 'ಣಿದ್ಧಮ' ಶಬ್ದವನ್ನು ನೋಡುವುದು.
ಣಿದ್ಧಾಇಊಣ. 'ಣಿದ್ಧಾವ' ಶಬ್ದವನ್ನು ನೋಡುವುದು.
ಣಿದ್ಧಾಡ. ಸಕ: [ನಿರ್+ಧಾಟಯ್] ಹೊರದೂಡು, ಹೊರಹಾಕು
ಣಿದ್ಧಾಡಣ. ನ: [ನಿರ್ಧಾಟನ] ಹೊರಗೆ ಹಾಕುವುದು, ಹೊರಕ್ಕೆ ಅಟ್ಟುವುದು(ಪಣ್ಣ)
ಣಿದ್ಧಾಡಾವಿಯ. ವಿ: [ನಿರ್ಧಾಟಿತ] ಬೇರೆಯವರ ಕಡೆಯಿಂದ ಹೊರಕ್ಕೆ ಹಾಕಲ್ಪಟ್ಟ, ಬೇರೆಯವರ ಮೂಲಕ ಹೊರಕ್ಕೆ ದೂಡಲ್ಪಟ್ಟ
ಣಿದ್ಧಾಡಿಯ. ವಿ: [ನಿರ್ಧಾಟಿತ] ಮೇಲಿನದೇ ಅರ್ಥ (ಪಾಅ)
ಣಿದ್ಧಾರಣ. ನ: [ನಿರ್ಧಾರಣ] ನಿಶ್ಚಯಿಸುವುದು, ಗುಣ ಅಥವಾ ಜಾತಿಯ ಪರಿಗಣನೆಯಿಂದ ಗುಂಪಿನಿಂದ ಒಂದು ಭಾಗವನ್ನು ಬೇರ್ಪಡಿಸುವುದು
ಣಿದ್ಧಾವ. ಸಕ: [ನಿರ್+ಧಾವ] ಓಡು,
ಣಿದ್ಧಾವಿಯ. ವಿ: [ನಿರ್ಧಾವಿತ] ಓಡಿಸಲ್ಪಟ್ಟ
ಣಿದ್ಧುಣ. ಸಕ: [ನಿರ್+ಧೂ] ನಾಶಮಾಡು, ದೂರಮಾಡು(ಸೂಅ)
ಣಿದ್ಧುಣಿಯ}. ವಿ: [ನಿರ್ಧೂತ] ನಾಶ ಪಡಿಸಲಾದ,
ಣಿದ್ಧುಯ}. ದೂರಕ್ಕೆ ಒಯ್ಯಲ್ಪಟ್ಟ, ದೂರಕ್ಕೆ ಸಾಗಿಸಲ್ಪಟ್ಟ
ಣಿದ್ಧೂಮ. ವಿ: [ನಿರ್ಧೂಮ] ಹೊಗೆಯಿಲ್ಲದ, ಹೊಗೆ-ರಹಿತ, ಒಂದು ರೀತಿಯ ಅವಲಕ್ಷಣ
ಣಿದ್ಧೂಯ. 'ಣಿದ್ಧುಯ' ಶಬ್ದವನ್ನು ನೋಡುವುದು.
ಣಿದ್ಧೋಅ. ವಿ: [ನಿರ್ಧೌತ] ತೊಳೆಯಲ್ಪಟ್ಟ ಸ್ವಚ್ಛಗೊಳಿಸಲ್ಪಟ್ಟ(ಗಾ)
ಣಿದ್ಧೋಭಾಸ. ವಿ: [ಸ್ನಿಗ್ಧಾವಭಾಸ] ಸ್ನಿಗ್ಧತೆಯಿಂದ ಹೊಳೆಯುತ್ತಿರುವ, ಹೊಳೆಯುವ(ಣಾಯಾ)
ಣಿಧಣ. ನ: [ನಿಧನ] ಸಾವು, ಮೃತ್ಯು, ವಿನಾಶ
ಣಿಧತ್ತ. ವಿ: [ನಿಧತ್ತ] ನಿಶ್ಚಿತ
ಣಿಧತ್ತ. ನ: [ನಿಧತ್ತ] ನ: ಕರ್ಮಗಳ ಒಂದು ರೀತಿಯ ಸ್ಥಿತಿ. ನಮ್ಮನ್ನು ಬಂಧಿಸಿರುವ ಕರ್ಮಗಳ ತಪ್ತ ಸೂಚಿ ಸಮೂಹದ ಹಾಗೆ ಇರುವ ಸ್ಥಿತಿ, ವಿ: ದಟ್ಟವಾದ ಭಾವಗಳಿಗೆ ಲಭಿಸಿದ ಕರ್ಮ-ಪುದ್ಗಲ(ಶಾ) ವಿ: ನಿಶ್ಚಿತವಾದ
ಣಿಧತ್ತಿ. ಸ್ತ್ರೀ: [ನಿಧತ್ತಿ] ಕರ್ಮ-ಪುದ್ಗಲವನ್ನು ನಿಬಿಡವಾದ ರೂಪದಿಂದ ವ್ಯವಸ್ಥಾಪನೆಗೊಳಿಸುವ ಕರಣ-ವಿಶೇಷ
ಣಿಧಮ್ಮ. 'ಣಿದ್ಧಮ್ಮ= ನಿರ್ಧರ್ಮನ್' ಶಬ್ದವನ್ನು ನೋಡುವುದು.
ಣಿಧಾಣ. 'ಣಿಹಾಣ' ಶಬ್ದವನ್ನು ನೋಡುವುದು.
ಣಿಧೂಯ. 'ಣಿದ್ಧುಣ' ಶಬ್ದವನ್ನು ನೋಡುವುದು.
ಣಿನ್ನಾಮ. ಸಕ: [ನಿರ್+ನಾಮಯ್] ಬಗ್ಗಿಸು
ಣಿನ್ನೀಯ. 'ಣಿಣ್ಣೀಅ' ಶಬ್ದವನ್ನು ನೋಡುವುದು.
ಣಿಪಟ್ಟ. ನ: [ದೇ] ಗಾಢವಾದ
ಣಿಪಡಿಯ. ವಿ: [ನಿಪತಿತ] ಕೆಳಕ್ಕೆ ಬಿದ್ದ, ಕೆಳಕ್ಕೆ ಇಳಿದ
ಣಿಪಾ. ಸಕ: [ನಿ+ಪಾ] ಕುಡಿಸ
ಣಿಪಾಇ. ವಿ: [ನಿಪಾತಿನ್] ಕೆಳಗೆ ಬೀಳುತ್ತಿರುವ, ಕೆಳಕ್ಕೆ ಬಂದು ಸೇರುತ್ತಿರುವ, ಎದುರುಗಡೆ ಬೀಳುತ್ತಿರುವ
ಣಿಪೂರ. ಪು: [ನಿಪೂರ] ನಂದಿ ಮರ
ಣಿಪ್ಪಅಂಪ. 'ಣಿಪ್ಪಕಂಪ' ಶಬ್ದವನ್ನು ನೋಡುವುದು.
ಣಿಪ್ಪಏಸ. ವಿ: [ನಿಷ್ಪ್ರದೇಶ] ಪ್ರದೇಶವಿಲ್ಲದ, ಪು: ಪರಮಾಣು
ಣಿಪ್ಪಂಕ. ವಿ: [ನಿಷ್ಪಂಕ] ಕೆಸರಿಲ್ಲದ,
ಣಿಪ್ಪಂಕಿಯ. ವಿ: [ನಿಷ್ಪಂಕಿನ್] ಕೆಸರಿಲ್ಲದ(ಭವಿ)
ಣಿಪ್ಪಂಖ. ಸಕ: [ನಿರ್+ಪಕ್ಷಯ್] ರೆಕ್ಕೆಯಿಲ್ಲದಂತೆ ಮಾಡು, ರೆಕ್ಕೆ ಕತ್ತರಿಸು(ವಿಪಾ)
ಣಿಪ್ಪಂದ. ವಿ: [ನಿಷ್ಪಂದ] ಚಲನೆಯಿಲ್ಲದ, ಸ್ಪಂದನವಿಲ್ಲದ, ಸ್ಥಿರವಾದ
ಣಿಪ್ಪಕಂಪ. ವಿ: [ನಿಷ್ಪ್ರಕಂಪ] ಕಂಪನವಿಲ್ಲದ, ಅಲುಗಾಡದ, ಸ್ಥಿರವಾಗಿರುವ
ನಿಪ್ಪಕ್ಖ. ವಿ: [ನಿಷ್ಪಕ್ಷ] ರೆಕ್ಕೆಯಿಲ್ಲದ(ಗಉಡ)
ಣಿಪ್ಪಗಲ. ವಿ: [ನಿಷ್ಪ್ರಗಲ] ತೊಟ್ಟಿಕ್ಕುವ, ಸೋರುವ
ಣಿಪ್ಪಚ್ಚವಾಯ. ವಿ: [ನಿಷ್ಪ್ರತ್ಯವಾಯ] ನಿರ್ವಿಘ್ನವಾದ, ದೋಷವಿಲ್ಲದ, ವಿಶುದ್ಧವಾದ, ಪವಿತ್ರವಾದ
ಣಿಪ್ಪಚ್ಛಿಮ. ವಿ: [ನಿಷ್ಪಶ್ಚಿಮ] ಅಂತಿಮ, ಕೊನೆಯ, ವಿ: ಪರಿಶಿಷ್ಟ, ಬಾಕಿ ಉಳಿದಿರುವ(ಗಾ)
ಣಿಪ್ಪಟ್ಠ. ವಿ: [ದೇ] ಅಧಿಕ, ಹೆಚ್ಚಿನ
ಣಿಪ್ಪಟ್ಠ. ವಿ: [ನಿಃಸ್ಪಷ್ಟ] ಅಸ್ಪಷ್ಟ, ಸರಿಯಾಗಿ ಕಾಣಿಸದಿರುವ. -ಪಸಿಣವಾಗರಣ. ವಿ: [-ಪ್ರಶ್ನವ್ಯಾಕರಣ] ನಿರುತ್ತರಗೊಳಿಸಲಾದ(ಉವಾ)

ಣಿಪ್ಪಟ್ಠ. ನಿಃಸ್ಪೃಷ್ಟ] ಸ್ಪರ್ಶಿಸಲ್ಪಡದಿರುವ, ಮುಟ್ಟಲ್ಪಡದಿರುವ. –ಪಸಿಣವಾಗರಣ. ವಿ: [–ಪ್ರಶ್ನವ್ಯಾಕರಣ] ನಿರುತ್ತರಗೊಳಿಸಲಾದ(ಉವಾ).

ಣಿಪ್ಪಡಿಕಮ್ಮ. ವಿ: [ನಿಷ್ಪ್ರತಿಕರ್ಮನ್] ಸಂಸ್ಕಾರಗೊಳ್ಳದ, ಪರಿಷ್ಕರಣಗೊಳ್ಳದ, ಮಲಿನವಾದ (ಸುಪಾ)

ಣಿಪ್ಪಡಿಯಾರ. ವಿ: [ನಿಷ್ಪ್ರತಿಕಾರ] ನಿವಾರಣೋಪಾಯವಿಲ್ಲದ, ತಡೆಗಟ್ಟಲು ಸಾಧ್ಯವಿಲ್ಲದ, ವಾಸಿಮಾಡಲಾಗದ(ಪಣ್ಣ)

ಣಿಪ್ಪಣಿಅ.ವಿ:[ದೇ] ನೀರಿನಿಂದ ತೊಳೆಯಲ್ಪಟ್ಟ(ಷಡ್)

ಣಿಪ್ಪಣ್ಣ. 'ಣಿಪ್ಫಣ್ಣ' ಶಬ್ದವನ್ನು ನೋಡುವುದು.

ಣಿಪ್ಪಣ್ಣ. ವಿ: [ನಿಷ್ಪ್ರಜ್ಞ] ಪ್ರಜ್ಞೆಯಿಲ್ಲದ, ಬುದ್ಧಿಯಿಲ್ಲದ (ಉಪ)

ಣಿಪ್ಪತ್ತ. ವಿ: [ನಿಷ್ಪತ್ರ] ಎಲೆಗಳಿಲ್ಲದ, ಗರಿಗಳಿಲ್ಲದ

ಣಿಪ್ಪತ್ತಿ}. 'ಣಿಪ್ಫತ್ತಿ' ಶಬ್ದವನ್ನು ನೋಡುವುದು.

ಣಿಪ್ಪದ್ದಿ}.

ಣಿಪ್ಪನ್ನ. 'ಣಿಪ್ಪಣ್ಣ' ಶಬ್ದವನ್ನು ನೋಡುವುದು.

ಣಿಪ್ಪಭ. ವಿ: [ನಿಷ್ಪ್ರಭ] ನಿಸ್ತೇಜ, ಕಾಂತಿಯಿಲ್ಲದ, ಮಬ್ಬಾಗಿರುವ

ಣಿಪ್ಪರಿಗ್ಗಹ. ವಿ: [ನಿಷ್ಪರಿಗ್ರಹ] ಏನನ್ನೂ ಸ್ವೀಕರಿಸದ, ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿ

ಣಿಪ್ಪಲಿವಯಣ. ವಿ: [ನಿಷ್ಪ್ರತಿವಚನ] ಉತ್ತರಿಸಲು ಅಸಮರ್ಥ, ನಿರುತ್ತರ

ಣಿಪ್ಪಸರ. ವಿ: [ನಿಷ್ಪ್ರಸರ] ಪ್ರಸಾರವಿಲ್ಲದ, ಹರಡದಿರುವ

ಣಿಪ್ಪಹ.. 'ಣಿಪ್ಪಭ' ಶಬ್ದವನ್ನು ನೋಡುವುದು.

ಣಿಪ್ಪಾಇಯ. 'ಣಿಪ್ಫಾಇಯ' ಶಬ್ದವನ್ನು ನೋಡುವುದು.

ಣಿಪ್ಪಾಣ. ವಿ: [ನಿಷ್ಪ್ರಾಣ] ಪ್ರಾಣವಿಲ್ಲದ, ನಿರ್ಜೀವ

ಣಿಪ್ಪಾಲ. 'ಣೇಪಾಲ' ಶಬ್ದವನ್ನು ನೋಡುವುದು

ಣಿಪ್ಪಾವ. ಪು: [ನಿಷ್ಪಾಪ] ಒಂದು ದಿನದ ಉಪವಾಸ

ಣಿಪ್ಪಾವ. 'ಣಿಪ್ಫಾವ' ಶಬ್ದವನ್ನು ನೋಡುವುದು.

ಣಿಪ್ಪಿಚ್ಛ. ವಿ: [ದೇ] ಋಜು, ಸರಳ, ದೃಢವಾದ, ಬಲವಾದ

ಣಿಪ್ಪಿಟ್ಠ. ವಿ: [ನಿಷ್ಪಿಷ್ಟ] ಪುಡಿಯಾಗಿರುವ ಅರೆಯಲ್ಪಟ್ಟ, ಪುಡಿಯಾಗಿರುವ, ನ: ಅರೆಯುವುದರ ಮುಕ್ತಾಯ.

ಣಿಪ್ಪಿವಾಸ. ವಿ: [ನಿಷ್ಪಿಪಾಸ] ಬಾಯಾರಿಕೆಯಾಗದ, ಬಾಯಾರಿಕೆಯಿಲ್ಲದ, ನಿಃಸ್ಪೃಹ(ಪಣ್ಣ)

ಣಿಪ್ಪಿಹ. ವಿ: [ನಿಃಸ್ಪೃಹ] ಆಸೆಯಿಲ್ಲದವ, ಅಪೇಕ್ಷೆಯಿಲ್ಲದವ, ನಿರ್ಮಮ(ಉಪ)

ಣಿಪ್ಪೀಡಿಅ. ವಿ: [ನಿಷ್ಪೀಡಿತ] ಹಿಸುಕಲ್ಪಟ್ಟ, ಹಿಂಸಿಸಲ್ಪಟ್ಟ, ಪೀಡಿಸಲ್ಪಟ್ಟ

ಣಿಪ್ಪೀಲಣ. ನ: [ನಿಷ್ಪೀಡನ] ಪೀಡಿಸುವುದು, ಹಿಂಡುವುದು, ಹಿಸುಕುವುದು(ಆಚಾ)

ಣಿಪ್ಪೀಲಿಯ. 'ಣಿಪ್ಪೀಡಿಅ' ಶಬ್ದವನ್ನು ನೋಡುವುದು. ಹಿಂಡಲ್ಪಟ್ಟ, ಸಾರ ತೆಗೆಯಲ್ಪಟ್ಟ

ಣಿಪ್ಪುಂಸಣ. ನ: [ನಿಷ್ಪುಂಸನ] ಒರೆಸುವುದು, ಸ್ವಚ್ಛಗೊಳಿಸುವುದು, ಪುಡಿಮಾಡುವುದು, ನಾಶಪಡಿಸುವುದು

ಣಿಪ್ಪುನ್ನ. ವಿ: [ನಿಷ್ಪುಣ್ಯ] ಪುಣ್ಯವಿಲ್ಲದ, ಪುಣ್ಯ–ರಹಿತ

ಣೀಜೂಹ. 'ಣಿಜ್ಜೂಹ=ದೇ. ನಿರ್ಯೂಹ' ಶಬ್ದವನ್ನು ನೋಡುವುದು.
ಣೀಡ. 'ಣಿಡ್ಡ' ಶಬ್ದವನ್ನು ನೋಡುವುದು(ಗಾ)
ಣೀಣ. ಸಕ: [ಗಮ್] ಹೋಗು, ಗಮಿಸು
ಣೀಣ. ಸಕ: [ನೀ] ಕೊಂಡೊಯ್ಯು, ಹೊರಗೆ ಕೊಂಡೊಯ್ಯು, ಹೊರಹಾಕು
ಣೀಣಾವಿಯ. ವಿ: [ನಾಯಿತ] ಬೇರೆಯವರ ಮೂಲಕ ಒಯ್ಯಲ್ಪಟ್ಟ, ಅನ್ಯರ ಮೂಲಕ ತರಲ್ಪಟ್ಟ(ಉಪ)
ಣೀಣಿಅ. ವಿ: [ಗತ] ಹೊರಟು ಹೋದ(ಪಾಅ)
ಣೀಣಿಅ. ವಿ: [ನೀತ] ಕೊಂಡೊಯ್ಯಲ್ಪಟ್ಟ, ಹೊರಹಾಕಲ್ಪಟ್ಟ(ಣಾಯಾ)
ಣೀಣಿಆ. ಸ್ತ್ರೀ: [ನೀನಿಕಾ] ನಾಲ್ಕು ಇಂದ್ರಿಯಗಳ ಒದು ಪ್ರಾಣಿ ಜಾತಿ
ಣೀಮ. ಪು: [ನೀಪ] ಕದಂಬ ವೃಕ್ಷ(ಔಪ), ನ: ಫಲ
ಣೀಮಮ. ವಿ: [ನಿರ್ಮಮ] ಮಮಕಾರವಿಲ್ಲದ, ಪ್ರಪಂಚದ ಸಂಬಂಧ ತೊರೆದಿರುವ
ಣೀಮೀ. 'ಣೀವೀ' ಶಬ್ದವನ್ನು ನೋಡುವುದು.
ಣೀಯ. ವಿ: [ನೀಚ] ನೀಚ, ಅಧಮ, ಜಘನ್ಯ(ಉವಾ). ವಿ: ಕೆಳಗಿರುವ, ಕೆಳಭಾಗದಲ್ಲಿರುವ(ಸುಪಾ) **ಣೀಯಾಗೋಯ.** ನ: [-ಗೋತ್ರ] ಕ್ಷುದ್ರಗೋತ್ರ, ಕ್ಷುದ್ರ ಜಾತಿಯುಲ್ಲಿ ಜನಿಸಿದ ಕಾರಣಕ್ಕಾಗಿ ಉಂಟಾಗುವ ಕರ್ಮ-ವಿಶೇಷ. ನೀಚ ಗೋತ್ರದಲ್ಲಿ ಹುಟ್ಟಿದ(ಸೂಅ)
ಣೀಯ. ವಿ: [ನೀತ] ಕೊಂಡೊಯ್ಯಲ್ಪಟ್ಟ(ಆಚಾ)
ಣೀಯ. 'ಣಿಚ್ಚ=ನಿತ್ಯ' ಶಬ್ದವನ್ನು ನೋಡುವುದು.
ಣೀಯಂಗಮ. ವಿ: [ನೀಚಂಗಮ] ಕೆಳಕ್ಕೆ ಹೋಗುವವನು
ಣೀಯಂಗಮಾ. ಸ್ತ್ರೀ: [ನೀಚಂಗಮಾ] ನದಿ, ಹೊಳೆ
ಣೀರ. ನ: [ನೀರ] ನೀರು, ಜಲ, (ಕುಮಾ). **-ನಿಹಿ.** ಪು: [-ನಿಧಿ] ಸಮುದ್ರ, ಸಾಗರ(ಸುಪಾ) **-ರುಹ.** ನ: [-ರುಹ] ಕಮಲ. **□ವಾಹ.** ಪು: [-ವಾಹ] ಮೋಡ. **-ಹರ.** ಪು:[-ಗೃಹ] ಸಮುದ್ರ, ಸಾಗರ. **-ಹಿ.** ಪು: [-ಧಿ] ಸಮುದ್ರ, ಸಾಗರ. **□ಣೀರಾಕರ.** ಪು: [ನೀರಾಕರ] ಸಮುದ್ರ, ಸಾಗರ (ಉಪ)
ಣೀರಂಗೀ. ಸ್ತ್ರೀ: [ದೇ ನೀರಂಗೀ] ತಲೆಯ ಮೇಲೆ ಹೊದೆಯುವ ಮುಸುಕು, ಶಿರೋವಸ್ತ್ರ, ಮುಖ ಪರದೆ
ಣೀರಂಜ. ಸಕ: [ಭಂಜ್] ಮುರಿ
ಣೀರಂಜಿಅ. ವಿ: [ಭಗ್ನ] ಮುರಿದ, ಕತ್ತರಿಸಿದ
ಣೀರಂಧ. ವಿ: [ನೀರಂಧ್ರ] ರಂಧ್ರವಿಲ್ಲದ, ಛಿದ್ರವಿಲ್ಲದ
ಣೀರಣ. ನ: [ದೇ] ಹುಲ್ಲು, ಮೇವು
ಣೀರಯ. ವಿ: [ನೀರಜಸ್] ರಜವಿಲ್ಲದ, ದೂಳಿಲ್ಲದ, ನಿರ್ಮಲ, ಶುಭ್ರ(ಪಉಮ)
ಣೀರವ. ಸಕ: [ಆ+ಕ್ಷಿಪ್] ಆಕ್ಷೇಪಿಸು
ಣೀರವ. ಸಕ: [ಬುಭುಕ್ಷ್] ತಿನ್ನಲು ಇಚ್ಛಿಸು
ಣೀರವ. ವಿ: [ಆಕ್ಷೇಪಕ] ಆಕ್ಷೇಪಿಸುವವನು
ಣೀರಸ. ವಿ: [ನೀರಸ] ರಸವಿಲ್ಲದ, ಶುಷ್ಕ, ಒಣಗಿದ
ಣೀರಸಜಲ. ನ: [ನೀರಸಜಲ] ಆಯಂಬಿಲ ತಪಸ್ಸು
ಣೀರಾಗ}. ವಿ: [ನೀರಾಗ] ರಾಗರಹಿತ, ಆಸೆಯನ್ನು
ಣೀರಾಯ}. ತೊರೆದ, ಶಾಂತಚಿತ್ತ(ಕುಮಾ)
ಣೀರೇಣು. ವಿ: [ನೀರೇಣು] ದೂಳಿಲ್ಲದ(ಗಉಡ)
ಣೀರೋಗ. ವಿ: [ನೀರೋಗ] ರೋಗವಿಲ್ಲದ, ಆರೋಗ್ಯಪೂರ್ಣ
ಣೀಲ. ಅಕ: [ನಿರ್+ಸೃ] ಹೊರಕ್ಕೆ ಹೊರಡು
ಣೀಲ. ಪು: [ನೀಲ] ನೀಲಿ ಬಣ್ಣ(ತಾ), ಗ್ರಹದ ಅಧಿಷ್ಠಾತೃ ದೇವ, ರಾಮನ ಒಬ್ಬ ವಾನರ ಯೋದ, ಒಂದು ಛಂದಸ್ಸು, ಪರ್ವತ-ವಿಶೇಷ, ರತ್ನದ ಒಂದು ಜಾತಿ ಇಂದ್ರನೀಲಮಣಿ, ವಿ: ಹಸಿರು ಬಣ್ಣದ. **-ಕಂಠ.** ಪು: [-ಕಂಠ] ಶಕ್ರೇಂದ್ರನ ಮಹಿಷ ಸೈನ್ಯದ ಒಬ್ಬ ಸೇನಾಧಿಪತಿ, ನವಿಲು, ಶಿವ. **-ಕಣವೀರ.** ಪು: [-ಕರವೀರ] ಹಸಿರು ಬಣ್ಣದ

ಹೂಗಳಿಂದ ಕೂಡಿದ ಗನ್ನೇರಳೆ ಮರ. **–ಗುಫಾ.** **ಸ್ತ್ರೀ:** [**–ಗುಫಾ**] ಒಂದು ಉದ್ಯಾನ. **–ಮಣಿ.** **ಪುಂಸ್ತ್ರೀ:** [**–ಮಣಿ**] ನೀಲಮಣಿ, ಮರಕತ (ಕುಮಾ). **–ಲೇಸ.** ವಿ: [**–ಲೇಶ್ಯ**] ನೀಲಿ ತುಣುಕು ಉಳ್ಳ(ಪಣ್ಣ), **–ಲೇಸ್ಸ.** **'–ಲೇಸ'** ಶಬ್ದವನ್ನು ನೋಡುವುದು. ಲೇಸ್ಸಾ. **'ಲೇಸಾ'** ಶಬ್ದವನ್ನು ನೋಡುವುದು. **–ವಂತ.** **ಪು:**[**–ವತ್**] ಒಂದು ಪರ್ವತ–ವಿಶೇಷ, ಸರೋವರ–ವಿಶೇಷ(ಠಾ). **ನ:** ಒಂದು ಶಿಖರ(ಠಾ)

ಣೀಲ. ವಿ: [ನೀಲ] ಆರ್ದ್ರವಾದ, ಒದ್ದೆಯಾದ, ಹಸಿಯಾದ. **–ಕೇಸೀ.** **ಸ್ತ್ರೀ:** [**–ಕೇಶೀ**] ತರುಣಿ

ಣೀಲಕಂಠೀ. **ಸ್ತ್ರೀ:** [**ದೇ**] ಕರಿಯ ಹೂವಿನ ಗೋರಂಟಿ ಮರ.

ಣೀಲಾ. **ಸ್ತ್ರೀ:** [**ನೀಲಾ**] ಲೇಶಯಾ– ವಿಶೇಷ; ಒಂದು ಬಗೆಯ ಆತ್ಮದ ಅಶುಭ ಪರಿಣಾಮ(ಭಗ), ನೀಲಿ ಬಣ್ಣದ ಮಹಿಳೆ

ಣೀಲಿಅ. ವಿ: [ನಿಃಸೃತ] ಹೊರಟು ಹೋದ

ಣೀಲಿಅ. ವಿ: [ನೀಲಿತ] ನೀಲ ವರ್ಣದ

ಣೀಲಿಆ. **'ಣೀಲಾ'** ಶಬ್ದವನ್ನು ನೋಡುವುದು.

ಣೀಲಿಮ. **ಪುಂಸ್ತ್ರೀ:** [**ನೀಲಿಮನ್**] ನೀಲತ್ವ, ನೀಲಿತನ

ಣೀಲೀ. **ಸ್ತ್ರೀ:** [ನೀಲೀ] ನೀಲಿ ಗಿಡ(ಪಣ್ಣ), ನೀಲಿ ಬಣ್ಣದ ಮಹಿಳೆ, ಕಣ್ಣಿನ ರೋಗ

ಣೀಲುಂಛ. **ಸಕ:** [**ಕೃ**] ಹೊರಕ್ಕೆ ಹೊರಡು, ಬೆರಳಿನಿಂದ ಚುಟಿಕೆ ಹಾಕು

ಣೀಲುಕ್ಕ. **ಸಕ:** [**ಗಮ್**] ಹೋಗು, ಗಮಿಸು

ಣೀಲುಪ್ಪಲ. **ನ:** [**ನೀಲೋತ್ಪಲ**] ಕನ್ನೈದಿಲೆ ಹೂವು

ಣೀಲುಯ. **ಪು:** [**ದೇ**] ಕುದುರೆಯ ಒಂದು ಉತ್ತಮ ತಳಿ

ಣೀಲೋಭಾಸ. **ಪು:** [ನೀಲಾವಭಾಸ] ಗ್ರಹದ ಅಧಿಷ್ಠಾತೃ ದೇವ, ವಿ: ನೀಲಚ್ಛಾಯೆ, ನೀಲಿಯಾಗಿ ಕಾಣುವ

ಣೀವ. **ಪು:** [ನೀಪ] ಕದಂಬ ವೃಕ್ಷ(ಕಪ್ಪ)

ಣೀವಾರ. **ಪು:** [**ನೀವಾರ**] ಎಣ್ಣೆ ಬೀಜಗಳನ್ನು ಬಿಡುವ ಮರ, ನವಣೆ ಧಾನ್ಯ

ಣೀವೀ. **ಸ್ತ್ರೀ:** [ನೀವೀ] ಮೂಲಧನ, ಬಂಡವಾಳ, ಹೆಂಗಸರ ಸೀರೆಯ ಬಾಳೆಕಾಯಿ ಗಂಟು, ಲಾಡಿ

ಣೀಸಂಕ. **'ಣಿಸ್ಸಂಕ= ನಿಃಶಂಕ'** ಶಬ್ದವನ್ನು ನೋಡುವುದು.

ಣೀಸಂಕ. **ಪು:** [**ದೇ**] ಎತ್ತು

ಣೀಸಂಕಿಅ. **'ಣಿಸ್ಸಂಕಿಯ'** ಶಬ್ದವನ್ನು ನೋಡುವುದು.

ಣೀಸಂಖ. ವಿ: [ನಿಃಸಂಖ್ಯ] ಅಸಂಖ್ಯ(ಸುಪಾ)

ಣೀಸಂಚಾರ. **'ಣಿಸ್ಸಂಚಾರ'** ಶಬ್ದವನ್ನು ನೋಡುವುದು (ಪಉಮ)

ಣೀಸಂದ. **ಪು:** [ನಿಃಷ್ಯಂದ] ರಸದ ಸೋರುವಿಕೆ, ರಸ ತೊಟ್ಟಿಕ್ಕುವುದು(ಗಉಡ)

ಣೀಸಂದಿಅ. ವಿ: [ನಿಷ್ಯಂದಿತ] ತೊಟ್ಟಿಕ್ಕಿದ ಸೋರಿದ

ಣೀಸಂದಿರ. ವಿ: [ನಿಷ್ಯಂದಿತೃ] ತೊಟ್ಟಿಕ್ಕುವ, ಸೋರುವ

ಣೀಸಂಪಾಯ. ವಿ: [**ದೇ**] ಎಲ್ಲಿ ಜನಸಮುದಾಯ ಆಯಾಸಗೊಂಡಿದೆಯೋ ಆ ಸ್ಥಳ

ಣೀಸಟ್ಠ. ವಿ: [ನಿಃಸೃಷ್ಟ] ವಿಮುಕ್ತ, ಬಿಡುಗಡೆಗೊಂಡ, ಕೊಡಲ್ಪಟ್ಟ, ಕ್ರಿ.ವಿ: ಅತಿಶಯ

ಣೀಸಣ. **ಪು:** [ನಿಃಸ್ವನ] ಶಬ್ದ, ಧ್ವನಿ

ಣೀಸಣಿಆ}. **ಸ್ತ್ರೀ:** [**ದೇ**] ಮೆಟ್ಟಿಲು, ಏಣಿ

ಣೀಸಣಿ}.

ಣೀಸತ್ತ. ವಿ: [ನಿಃಸತ್ತ್ವ] ಸತ್ತ್ವಹೀನ, ಶಕ್ತಿಯಿಲ್ಲದ (ಪಉಮ)

ಣೀಸದ್ದ. ವಿ: [ನಿಃಶಬ್ದ] ಶಬ್ದವಿಲ್ಲದಿರುವುದು, ಸದ್ದಿಲ್ಲದಿರುವುದು

ಣೀಸರ. **ಅಕ:** [**ರಮ್**] ಕ್ರೀಡಿಸು, ಆನಂದಿಸು

ಣೀಸರ. **ಅಕ:** [ನಿರ್+ಸೃ] ಹೊರಕ್ಕೆ ಹೊರಡು

ಣೀಸರಣ. **ನ:** [ನಿಃಸರಣ] ನಿರ್ಗಮನ, ಜಾರಿಕೆ

ಣೀಸರಿಅ. ವಿ: [ನಿಃಸೃತ] ಹೊರಟು ಹೋದ

ಣೀಸಲ. ವಿ: [**ನಿಃಶಲ**] ನಿಶ್ಚಲ, ಸ್ಥಿರ, ವಕ್ರತೆಯಿಲ್ಲದ, ಸಮತಲದ

ಣೀಸಲ್ಲ. ವಿ: [ನಿಃಶಲ್ಯ] ಮುಳ್ಳುಗಳಿಲ್ಲದ, ಬಾಣವಿಲ್ಲದ,

ಣೀಸವ. **ಸಕ:** [ನಿ+**ಶ್ರಾವಯ್**] ನಾಶಗೊಳಿಸು,

ಣೀಸವಗ. **'ಣೀಸವಯ'** ಶಬ್ದವನ್ನು ನೋಡುವುದು.

ಣೀಸವತ್ತ. ವಿ: [ನಿಃಸಪತ್ನ] ಶತ್ರು–ರಹಿತ, ವಿರೋಧಿಗಳಿಲ್ಲದ, ಪ್ರತಿಸ್ಪರ್ಧಿಯಿಲ್ಲದ(ಮೃಚ್ಛ)

ಣೀಸವಯ. ವಿ: [ನಿಶ್ರಾವಕ] ಗಂದಿಗರ ದಿನಸು ಮಾಡುವವನು

ಣೀಸಸ. **ಅಕ:** [ನಿರ್+**ಶ್ವಸ್**] ನಿಟ್ಟುಸಿರು ಬಿಡುವುದು, ವ. ಕೃ–ಣೀಸಸಂತ

ಣೀಸಸಣ. **ನ:** [ನಿಃಶ್ವಸನ] ನಿಃಶ್ವಾಸ, ಉಸಿರನ್ನು ಹೊರಕ್ಕೆ ಬಿಡುವುದು

ಣೀಸಸಿಅ. ನ: [ನಿಶ್ವಸಿತ] ನಿಟ್ಟುಸಿರು
ಣೀಸಹ. ವಿ: [ನಿಃಸಹ] ಮಂದ, ಶಕ್ತಿಯಿಲ್ಲದ, ಅಸಮರ್ಥ
ಣೀಸಹ. ವಿ: [ನಿಃಶಾಖ] ಶಾಖವಿಲ್ಲದ
ಣೀಸಾ. ಸ್ತ್ರೀ: [ದೇ] ರುಬ್ಬುಗುಂಡು, ಅರೆಯುವ ಕಲ್ಲು
ಣೀಸಾ. 'ಣಿಸ್ಸಾ' ಶಬ್ದವನ್ನು ನೋಡುವುದು.
ಣೀಸಾಇ. ವಿ: [ನಿಃಸ್ವಾದಿನ್] ರುಚಿಯಿಲ್ಲದ, ಸ್ವಾದವಿಲ್ಲದ
ಣೀಸಾಮಣ್ಣ}. ವಿ: [ನಿಃಸಾಮಾನ್ಯ] ಅಸಾಧಾರಣ
ಣೀಸಾಮನ್ನ}. (ಗಉಡ), ಹಿರಿದಾದ
ಣೀಸಾಣ. 'ಣಿಸ್ಸಾಣ=ದೇ' ಶಬ್ದವನ್ನು ನೋಡುವುದು.
ಣೀಸಾರ. ಸಕ: [ನಿರ್+ಸಾರಯ್] ಹೊರಹಾಕು
ಣೀಸಾರ. ಪು: [ದೇ] ಮಂಟಪ
ಣೀಸಾರ. ಪು: [ನಿಃಸಾರ] ಸಾರವಿಲ್ಲದ, ತಿರುಳಿಲ್ಲದ
ಣೀಸಾರಣ. ನ: [ನಿಃಸಾರಣ] ಹೊರಗೆ ಹಾಕುವುದು
ಣೀಸಾರಯ. ವಿ: [ನಿಃಸಾರಕ] ಹೊರಗೆ ಹಾಕುವವನು
ಣೀಸಾರಿಯ. ವಿ: [ನಿಃಸಾರಿತ] ಹೊರಗೆ ಹಾಕಲ್ಪಟ್ಟ
ಣೀಸಾಸ. 'ಣಿಸ್ಸಾಸ' ಶಬ್ದವನ್ನು ನೋಡುವುದು.
ಣೀಸಾಸ}. ವಿ: [ನಿಃಶ್ವಾಸ, –ಕ] ನಿಟ್ಟುಸಿರು ಬಿಡುವವನು
ಣೀಸಾಸಯ}. (ವಸೇ)
ಣೀಸಾಹಾರ. 'ಣಿಸ್ಸಾಹಾರ' ಶಬ್ದವನ್ನು ನೋಡುವುದು.
ಣೀಸಿತ್ತ. ವಿ: [ನಿಷ್ಷಿಕ್ತ] ತುಂಬ ಒದ್ದೆಯಾದ
ಣೀಸೀಮಿಅ. ವಿ: [ದೇ] ದೇಶದಿಂದ ಹೊರಕ್ಕೆ ಕಳಿಸಲ್ಪಟ್ಟ, ಬಹಿಷ್ಕರಿಸಲ್ಪಟ್ಟ, ಓಡಿಸಲಾದ
ಣೀಸೇಯಸ. 'ಣಿಸ್ಸೇಯಸ' ಶಬ್ದವನ್ನು ನೋಡುವುದು.
ಣೀಸೇಣಿ. ಸ್ತ್ರೀ: [ನಿಃಶ್ರೇಣಿ] ಮೆಟ್ಟಿಲು, ಏಣಿ(ಸೂರ)
ಣೀಸೇಸ. 'ಣಿಸ್ಸೇಸ' ಶಬ್ದವನ್ನು ನೋಡುವುದು(ಗಉಡ)
ಣೀಹಟ್ಟು. ಅ: ಹೊರಹಾಕಿ(ಆಚಾ)
ಣೀಹಟ್ಟು. ಅ: [ನಿಃಸೃತ್ಯ] ಹೊರಹಾಕಿ
ಣೀಹಡ. ವಿ: [ನಿರ್ಹೃತ] ಹೊರಟು ಹೋದ(ಆಚಾ), ಹೊರಹಾಕಲ್ಪಟ್ಟ(ಬೃಹ)
ಣೀಹಡಿಯಾ. ಸ್ತ್ರೀ: [ನಿರ್ಹೃತಿಕಾ] ಬೇರೊಂದು ಸ್ಥಳದಲ್ಲಿ ಕೊಂಡೊಯ್ಯಲ್ಪಡುತ್ತಿರುವ ದ್ರವ್ಯ(ಬೃಹ)
ಣೀಹಮ್ಮ. ಅಕ: [ನಿರ್+ಹಮ್] ಹೊರಡು,
ಣೀಹಮ್ಮಿಅ. ವಿ: [ನಿರ್ಹಮ್ಮಿತ] ಹೊರಟು ಹೋದ
ಣೀಹರ. ಅಕ: [ನಿರ್+ಸೃ] ಹೊರಕ್ಕೆ ಹೊರಡು. ವ. ಕೃ: 'ನೀಹರಂತ'
ಣೀಹರ. ಅಕ: [ಆ+ಕ್ರಂದ್]ಗಟ್ಟಿಯಾಗಿ ಅಳು,ಚೀರಾಡು
ಣೀಹರ. ಅಕ: [ನಿರ್+ಹ್ರದ್] ಪ್ರತಿಧ್ವನಿ ಹೊರಡಿಸು
ಣೀಹರ. ಸಕ: [ನಿರ್+ಸಾರಯ್] ಹೊರಹಾಕು,
ಣೀಹರ. ಅಕ: [ನಿರ್+ಹೃ] ಕಕ್ಕಸ್ಸಿಗೆ ಹೋಗು
ಣೀಹರಣ. ನ: [ನಿಸ್ಸರಣ, ನಿರ್ಹರಣ] ನಿರ್ಗಮನ, ಹೊರಗೆ ಹೋಗುವುದು, ಹೊರ ಹಾಕುವುದು, ತ್ಯಜಿಸುವುದು, ಬಿಟ್ಟುಬಿಡುವುದು, ಬೇರೆಕಡೆಗೆ ಸಾಗಿಸುವುದು
ಣೀಹರಿಅ. 'ಣೀಹರ=ನಿರ್+ಸೃ' ಶಬ್ದವನ್ನು ನೋಡುವುದು.
ಣೀಹರಿಅ. ವಿ: [ನಿಃಸೃತ] ಹೊರಟು ಹೋದ
ಣೀಹರಿಅ. ನ: [ದೇ] ಶಬ್ದ, ಧ್ವನಿ
ಣೀಹರಿಅ. ವಿ: [ನಿರ್ಹ್ರದಿತ] ಪ್ರತಿಧ್ವನಿಸಲ್ಪಟ್ಟ
ಣೀಹರಿಅಂತ. 'ಣೀಹರ= ನಿರ್+ಹ್ರದ್' ಶಬ್ದವನ್ನು ನೋಡುವುದು.
ಣೀಹಾರ. ಪು: [ನೀಹಾರ] ಹಿಮ, ಮಂಜು, ಮಲ, ಅಥವಾ ಮೂತ್ರ
ಣೀಹಾರಣ. ನ: [ನಿಸ್ಸಾರಣ] ಹೊರಹಾಕುವುದು
ಣೀಹಾರಿ. ವಿ: [ನಿರ್ಹಾರಿನ್] ಹೊರಕ್ಕೆ ಹೊರಡುವ, ಹರಡುವವನು, ಪಸರಿಸುವ
ಣೀಹಾರಿ. ವಿ: [ನಿರ್ಹ್ರಾದಿನ್] ಸದ್ದು ಮಾಡುತ್ತಿರುವ, ಶಬ್ದದಿಂದ ಕೂಡಿದ, ಗುಂಜಾರವ ಮಾಡುತ್ತಿರುವ
ಣೀಹಾರಿಮ. 'ಣಿಹಾರಿಮ' ಶಬ್ದವನ್ನು ನೋಡುವುದು
ಣೀಹಾಸ. ವಿ: [ನಿರ್ಹಾಸ] ನಗೆಯಿಲ್ಲದ,ಹಾಸರಹಿತ
ಣೀಹೂಂಯು. ವಿ: [ದೇ] ಏನು ಮಾಡಲೂ ಸಮರ್ಥನಲ್ಲದ. 'ಣಿಹುಅ' ಶಬ್ದವನ್ನು ನೋಡುವುದು.
ಣು. ಅ: [ನು] ವ್ಯಂಗ್ಯ ಧ್ವನಿ, ವಿತರ್ಕ, ಪ್ರಶ್ನೆ, ವಿಕಲ್ಪ, ಅನುನಯ, ಹೇತು, ಕಾರಣ, ಪ್ರಯೋಜನ, ಅಪಮಾನ, ನಿಂದೆ, ವಿಶೇಷ, ಅನುತಾಪ, ನೆಪ, ಹೊಗಳಿಕೆ, ಸ್ತುತಿ, ಹೊಗಳಿಕೆ, ಅತೀತ ಈ ಮುಂತಾದ ಅರ್ಥಗಳನ್ನು ಸೂಚಿಸುವ ಅವ್ಯಯ
–ಣುಅ. ವಿ: [ಜ್ಞಕ] ತಿಳಿದವನು(ಗಾ)
ಣುಕ್ಕಾರ. ಪು: [ನುಕ್ಕಾರ] 'ನುಕ್' ಎನ್ನುವಂಥ ಶಬ್ದ
ಣುಜ್ಜಿಯ. ವಿ: [ದೇ] ಮುದ್ರೆ ಹಾಕಲ್ಪಟ್ಟ, ಮುಚ್ಚಲ್ಪಟ್ಟಿರುವ
ಣುತ್ತ. ವಿ: [ನೃತ್ತ] ಪ್ರೇರಿಸಲ್ಪಟ್ಟ, ಎಸೆಯಲ್ಪಟ್ಟ
ಣುಮ.. ಸಕ: [ನಿ+ಅಸ್] ಸ್ಥಾಪಿಸು, ಇರಿಸು, ಇಡು

ಣುಮ. ಸಕ: [ಛಾದಯ್] ಮುಚ್ಚು, ಆಚ್ಛಾದಿಸು, ಹೊದಿಸು,

ಣುಮಜ್ಜ. ಅಕ: [ನಿ+ಸದ್] ಕುಳಿತುಕೊಳ್ಳು

ಣುಮಜ್ಜ. ಅಕ: [ನಿ+ಮಸ್ಜ್] ಮುಳುಗು

ಣುಮಜ್ಜ. ಅಕ: [ಶೀ] ನಿದ್ರಿಸು

ಣುಮಜ್ಜನ. ನ: [ನಿಮಜ್ಜನ] ಮುಳುಗುವುದು

ಣುಮಣ್ಣ. ವಿ: [ನಿಷಣ್ಣ] ಕುಳಿತಿರುವ

ಣುಮಣ್ಣ}. ವಿ: [ನಿಮಗ್ನ] ಮುಳುಗಿರುವ,

ಣುಮನ್ನ}. ಲೀನನಾಗಿರುವ

ಣುಮಿಅ. ವಿ: [ನ್ಯಸ್ತ] ಸ್ಥಾಪಿತ, ಇಡಲ್ಪಟ್ಟ, ಇರಿಸಲ್ಪಟ್ಟ

ಣುಮಿಅ. ವಿ: [ಛಾದಿತ] ಮುಚ್ಚಲ್ಪಟ್ಟಿರುವ(ಕುಮಾ)

ಣುಲ್ಲ. **'ಣೊಲ್ಲ'** ಶಬ್ದವನ್ನು ನೋಡುವುದು.

ಣುವಣ್ಣ. ವಿ: [ದೇ] ನಿದ್ರಿಸುತ್ತಿರುವ

ಣುವಣ್ಣ. ವಿ: [ನಿಷಣ್ಣ] ಕುಳಿತಿರುವ(ಗಲುಡ)

ಣುವ್ವ. ಸಕ: [ಪ್ರ+ಕಾಶಂಯ್] ಬೆಳಗು, ಬೆಳಕನ್ನುಂಟುಮಾಡು

ಣುಸಾ. ಸ್ತ್ರೀ: [ಸ್ನುಷಾ] ಸೊಸೆ

ಣೂಉರ. **'ಣೆಉರ=ನೂಪುರ'** ಶಬ್ದವನ್ನು ನೋಡುವುದು.

ಣೂಣ. ವಿ: [ನ್ಯೂನ] ಕೊರತೆ, ಕಡಿಮೆ, ಊನ

ಣೂಣ}. ಅ: [ನೂನಮ್] ನಿಶ್ಚಯ, ಅವಧಾರಣೆ,

ಣೂಣಂ}. ತರ್ಕ, ಹೇತು, ಕಾರಣ, ಪ್ರಯೋಜನ, ಉಪಮಾನ, ಪ್ರಶ್ನೆ, ಊಹೆ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ

ಣೂತಣ. ವಿ: [ನೂತನ] ಹೊಸತು, ನವೀನ

ಣೂಪುರ. **'ಣೂಉರ'** ಶಬ್ದವನ್ನು ನೋಡುವುದು.

ಣೂಮ. ಸಕ: [ಛಾದಯ್] ಮುಚ್ಚು, ಮರೆಮಾಡು

ಣೂಮ. ನ: [ದೇ] ಕರ್ಮ, ಹಳ್ಳ. **□ಗಿಹ.** ನ: [–ಗೃಹ] ಭೂಮಿ–ಗೃಹ

ಣೂಮ. ನ: [ದೇ] ಹೊದಿಸುವುದು, ಮುಚ್ಚುವುದು, ಮರೆಮಾಡುವುದು, ಅಸತ್ಯ, ಸುಳ್ಳು(ಪಣ್ಹ), ಮೋಸ, ವಂಚನೆ, ಗುಹೆಯೇ ಮೊದಲಾದ ರಹಸ್ಯ ತಾಣಗಳು(ಭಗ), ದಟ್ಟ ಕತ್ತಲೆ,

ಣೂಮಿಅ. ವಿ: [ಛಾದಿತ] ಮುಚ್ಚಲ್ಪಟ್ಟಿರುವ, ಮರೆಮಾಡಲಾಗಿರುವ

ಣೂಮಿಅ. ವಿ: [ದೇ] ಟೊಳ್ಳು ಮಾಡಲಾಗಿರುವ

ಣೂಲಾ. ಸ್ತ್ರೀ: [ದೇ] ಕೊಂಬೆ, ರೆಂಬೆ

ಣೇ. ಅ: ಪಾದಪೂರ್ತಿಗಾಗಿ ಬಳಸಲಾಗುವ ಅವ್ಯಯ

ಣೇಅ. **'ಣಾ=ಜ್ಞಾ'** ಶಬ್ದವನ್ನು ನೋಡುವುದು.

ಣೇಅ. **'ಣೀ=ನೀ'** ಶಬ್ದವನ್ನು ನೋಡುವುದು.

ಣೇಅ. ವಿ: [ನೈಕ] ಅನೇಕ, ಹಲವು(ಪಉಮ). **–ವಿಹ.** ವಿ: [–ವಿಧ] ಅನೇಕ ವಿಧದ

ಣೇಅ. ಅ: [ನೈವ] ಇಲ್ಲವೇ ಅಲ್ಲ, ಎಂದಿಗೂ ಇಲ್ಲ(ಗಾ)

ಣೇಅವ್ವ. **'ಣೀ=ನೀ'** ಶಬ್ದವನ್ನು ನೋಡುವುದು.

ಣೇಆಇಅ}. ವಿ: [**ನೈಯಾಯಿಕ, ನ್ಯಾಯ್ಯ**] ನ್ಯಾಯ

ಣೇಆಉಅ}. ಶಾಸ್ತ್ರವನ್ನು ತಿಳಿದ, ನ್ಯಾಯ ಬಾಹಿರವಲ್ಲದ, ನ್ಯಾಯೋಚಿತವಾದ, ನ್ಯಾಯದಿಂದ ಕೂಡಿದ(ಔಪ)

ಣೇಆಉಯ}. ವಿ: [ನೇತೃ] ಕೊಂಡೊಯ್ಯುವವನು,

ಣೇಉ}. ರಚಿಸುವವನು, ರಚನಕಾರ

ಣೇಆವಣ. ನ: [ನಾಯನ] ಬೇರೆಯವರ ಮೂಲಕ ಕಳಿಸುವುದು, ತಲುಪಿಸುವುದು(ಉಪ) ಕಣ್ಣಿಗೆ ಸಂಬಂಧಿಸಿದ

ಣೇಆವಿಅ. ವಿ: [ನಾಯಿತ] ಬೇರೆಯವರ ಮೂಲಕ ಕೊಂಡೊಯ್ಯಲ್ಪಟ್ಟ, ತಲುಪಿಸಲ್ಪಟ್ಟ

ಣೇಉ. ವಿ: [ನೇತೃ] ನಾಯಕ, ಮುಖಂಡ, ನೇತಾ (ಪಉಮ)

ಣೇಉಆಣ}. **'ಣೀ=ನೀ'** ಶಬ್ದವನ್ನು ನೋಡುವುದು.

ಣೇಉಂ}.

ಣೇಉಡ್ಡ. ಪು: [ದೇ] ಸದ್ಭಾವ, ಶಿಷ್ಟತೆ

ಣೇಉಣ. ನ: [ನೈಪುಣ] ನಿಪುಣತೆ, ಚಾತುರ್ಯ, ಕೌಶಲ್ಯ(ಅಭಿ)

ಣೇಉಣಿಅ. ವಿ: [ನೈಪುಣಿಕ] ನಿಪುಣ, ಚತುರ, ಜಾಣ. ನ: ಅನುಪ್ರವಾದ ಎಂಬ ಹೆಸರಿನ ಪ್ರಾಚೀನ ಗ್ರಂಥದ ವಸ್ತು(ವಿಸೇ)

ಣೇಉಣಿಅ. **'ಣೇಉಣ್ಣ'** ಶಬ್ದವನ್ನು ನೋಡುವುದು.

ಣೇಉಣ್ಣ}. ನ: [ನೈಪುಣ್ಯ] ನಿಪುಣತೆ, ಚಾತುರ್ಯ,

ಣೇಉನ್ನ}. ಕೌಶಲ್ಯ(ಸುಪಾ)

ಣೇಉರ. ನ: [ನೂಪುರ] ಕಾಲಂದಿಗೆ(ಗಾ)

ಣೇಉರಿಲ್ಲ. ವಿ: [ನೂಪುರವತ್] ಕಾಲಂದಿಗೆಯನ್ನು ಹೊಂದಿರುವ

ಣೇಊಣ}. **'ಣೀ=ನೀ'** ಶಬ್ದವನ್ನು ನೋಡುವುದು.

ಣೆಂತ}.

ಣೆಂತ. **'ಣೀ=ಗಮ್'** ಶಬ್ದವನ್ನು ನೋಡುವುದು.

ಣೆಕ್ಕಂತ. 'ಣಿಕ್ಕಂತ'. ಶಬ್ದವನ್ನು ನೋಡುವುದು.
ಣೇಗ. 'ಣೇಅ=ನೈಕ' ಶಬ್ದವನ್ನು ನೋಡುವುದು
ಣೇಗಮ. ಪು: [ನೈಗಮ] ವಸ್ತುವಿನ ಒಂದು ಅಂಶವನ್ನು ಅಂಗೀಕರಿಸುವ ಪಕ್ಷ–ವಿಶೇಷ, ಒಂದು ನಯ–ವಿಶೇಷ, ಉಪನಿಷತ್ತು, ವೇದಾಂತ, ವ್ಯಾಪಾರಿ, ವರ್ತಕ, ವ್ಯಾಪಾರದ ಸ್ಥಳ(ಆಚಾ)
ಣೇಗುಣ್ಣ. ನ: [ನೈರ್ಗುಣ್ಯ] ನಿರ್ಗುಣತ್ವ, ನಿಸ್ಸಾರತೆ(ಭತ್ತ)
ಣೇಚಇಯ. ವಿ: [ನೈಚಯಿಕ] ಧಾನ್ಯದ ಸಗಟು ವ್ಯಾಪಾರಿ
ಣೆಚ್ಛಇಅ. ವಿ: [ನೈಶ್ಚಯಿಕ] ನಿಶ್ಚಯದ ನೀತಿಗೆ ಸಮ್ಮತವಾದ, ಶುದ್ಧ
ಣೆಚ್ಛಂತ. ವಿ: [ನೇಚ್ಛತ್] ಬಯಸದಿರುವ, ಇಷ್ಟಪಡದಿರುವ(ಹೇಕಾ)
ಣೆಚ್ಛಿಯ. ವಿ: [ನೈಚ್ಛಿತ] ಇಷ್ಟಪಡದಿರುವ, ಅಭಿಲಾಷೆ ಪಡದ
ಣೆಟ್ಠಿಅ. ವಿ: [ನೈಷ್ಠಿಕ] ಕೊನೆಯದಾದ, ಅಂತಿಮವಾದ, ನಿಷ್ಠೆಯಿಂದ ಆಚರಿಸಿದ
ಣೇಡ. 'ಣಿಡ್ಡ' ಶಬ್ದವನ್ನು ನೋಡುವುದು.
ಣೇಡಾಲೀ. ಸ್ತ್ರೀ: [ದೇ] ಶಿರೋಭೂಷಣ(ದೇ)
ಣೆಡ್ಡರಿಆ. ಸ್ತ್ರೀ: [ದೇ] ಭಾದ್ರಮಾಸದ ಶುಕ್ಲ ದಶಮಿಯ ಒಂದು ಹಬ್ಬ(ದೇ)
ಣೆತ್ತ. ಪುಂನ: [ನೇತ್ರ] ಕಣ್ಣು, ನಯನ, ನೇತ್ರ
ಣೆತ್ತ. ಪು: [ನೇತ್ರ] ಒಂದು ವೃಕ್ಷ
ಣೆದ್ದಾ. 'ಣಿದ್ದಾ' ಶಬ್ದವನ್ನು ನೋಡುವುದು.
ಣೇಪಾಲ. 'ಣೇವಾಲ' ಶಬ್ದವನ್ನು ನೋಡುವುದು (ಉಪ)
ಣೇಮ. ಸ: [ನೇಮ] ಅರ್ಧ, ನ: ಬೇರು(ಪಣ್ಣ)
ಣೇಮ. ನ: [ದೇ] ಕಾರ್ಯ, ಕೆಲಸ
ಣೇಮ. 'ಣೆಮ್ಮ=(ದೇ) ಶಬ್ದವನ್ನು ನೋಡುವುದು.
ಣೇಮಾಲ. ಪು.ಬ: [ನೇಪಾಲ] ನೇಪಾಳ ದೇಶ
ಣೇಮಿ. ಪು: [ನೇಮಿ] ಸುಪ್ರಸಿದ್ಧ ೨೨ನೇ ತೀರ್ಥಂಕರನಾದ ನೇಮಿನಾಥ, ರಥದ ಚಕ್ರದ ಅಂಚು, ಚಕ್ರದ ಪರಿಧಿ, ಆಚಾರ್ಯ ಹೇಮಚಂದ್ರನ ಸೋದರ ಮಾವನ ಹೆಸರು. –ಚಂದ. ಪು: [–ಚಂದ್ರ] ಒಬ್ಬ ಜೈನಾಚಾರ್ಯ
ಣೇಮಿತ್ತ. 'ಣಿಮಿತ್ತ' ಶಬ್ದವನ್ನು ನೋಡುವುದು.
ಣೇಮಿತ್ತಿ. ವಿ: [ನಿಮಿತ್ತಿನ್] ನಿಮಿತ್ತ ಶಾಸ್ತ್ರವನ್ನು ತಿಳಿದವನು(ಸುಪಾ)

ಣೇಮಿತ್ತಿಅ}. ವಿ: [ನೈಮಿತ್ತಿಕ] ನಿಮಿತ್ತ ಶಾಸ್ತ್ರಕ್ಕೆ
ಣೇಮಿತ್ತಿಗ}. ಸಂಬಂಧಿಸಿದವನು, ನಿಮಿತ್ತ ಶಾಸ್ತ್ರ ಬಲ್ಲವನು, ನಿಮಿತ್ತಶಾಸ್ತ್ರ, ನಿಮಿತ್ತದಿಂದಾಗುವ ಕಾರಣಿಕ, ಕಾರಣದಿಂದ ನಡೆಸಲಾಗುವ, ಒಂದು ಕಾರಣವನ್ನು ಆಶ್ರಯಿಸಿ ಬಂದ ಕರ್ಮ
ಣೇಮೀ. ಸ್ತ್ರೀ: [ನೇಮೀ] ಚಕ್ರದ ಅಂಚು, ಚಕ್ರದ ಪರಿಧಿ
ಣೆಮ್ಮ. ವಿ: [ದೇ. ನಿಭ] ಸದೃಶ, ಹೋಲುವ ಸಮಾನ (ಪಣ್ಣ)
ಣೆಮ್ಮ. 'ಣೇಮ=ನೇಮ' ಶಬ್ದವನ್ನು ನೋಡುವುದು.
ಣೇರಇಅ. ವಿ: [ನೈರಯಿಕ] ನರಕಕ್ಕೆ ಸಂಬಂಧಿಸಿದ, ನರಕದಲ್ಲಿ ಹುಟ್ಟಿದ, ನರಕದಲ್ಲಿ ಹುಟ್ಟಿದ ಪ್ರಾಣಿ, ನರಕ ಜೀವಿ(ವಿಪಾ)
ಣೇರಇಅ. ವಿ: [ನೈಋತಿಕ] ನೈರುತ್ಯ ಕೋನ
ಣೇರಈ. ಸ್ತ್ರೀ: [ನೈಋತೀ] ದಕ್ಷಿಣ ಮತ್ತು ಪಶ್ಚಿಮದ ಮಧ್ಯದ ನೈರುತ್ಯ ದಿಕ್ಕು(ಸುಪಾ)
ಣೇರುತ್ತ. ನ: [ನೈರುಕ್ತ] ವ್ಯುತ್ಪತ್ತಿಯ ಪ್ರಕಾರ ಅರ್ಥದ ವಾಚಕ ಶಬ್ದ, ನಿರುಕ್ತದಲ್ಲಿ ಬರುವ, ನಿರುಕ್ತದ ವ್ಯಾಖ್ಯಾನ ಗ್ರಂಥ, ವಿ: ನಿರುಕ್ತ ಶಾಸ್ತ್ರ ಬಲ್ಲವನು (ವಿಸೇ)
ಣೇರುತ್ತಿಯ. ವಿ: [ನೈರುಕ್ತಿಕ] ಪದಗಳ ನಿರುಕ್ತಿ(ವ್ಯುತ್ಪತ್ತಿ)ಯಿಂದ ಹುಟ್ಟಿದ, ಪದಗಳ ನಿರ್ವಚನವನ್ನು ತಿಳಿದ, ನಿರುಕ್ತ ಗ್ರಂಥವನ್ನು ಅಧ್ಯಯನ ಮಾಡುವವನು
ಣೇರುತ್ತೀ. ಸ್ತ್ರೀ: [ನೈರುಕ್ತೀ] ವ್ಯುತ್ಪತ್ತಿ(ವಿಸೇ)
ಣೇಲ. ವಿ: [ನೈಲ] ನೀಲಿಯಾಗಿರುವ(ಭಗ)
ಣೇಲಂಛಣ. 'ಣಿಲ್ಲಂಛಣ' ಶಬ್ದವನ್ನು ನೋಡುವುದು.
ಣೇಲಚ್ಛ. ಪು: [ದೇ] ನಪುಂಸಕ, ಷಂಡ(ದೇ), ಎತ್ತು, ವೃಷಭ
ಣೇಲಯ. ಪು: [ದೇ. ನೇಲನ] ರೂಪಾಯಿ
ಣೇಲಿಚ್ಛೀ. ಸ್ತ್ರೀ; [ದೇ] ರಾಟೆ
ಣೆಲ್ಲಚ್ಛ. 'ಣೇಲಚ್ಛ' ಶಬ್ದವನ್ನು ನೋಡುವುದು.
ಣೇವ. 'ಣೇಅ=ನೈವ' ಶಬ್ದವನ್ನು ನೋಡುವುದು
ಣೇವಚ್ಛ. 'ಣೇವತ್ಥ' ಶಬ್ದವನ್ನು ನೋಡುವುದು(ಔಪ)
ಣೇವಚ್ಛಣ. ನ: [ದೇ] ಕೆಳಕ್ಕೆ ಇಳಿಸುವುದು
ಣೇವಚ್ಛಿಯ. 'ಣೇವತ್ಥಿಯ' ಶಬ್ದವನ್ನು ನೋಡುವುದು
ಣೇವತ್ಥ. ನ: [ನೇಪಥ್ಯ] ವೇಷ ಹಾಕಿಕೊಳ್ಳುವುದು, ವಸ್ತ್ರವೇ ಮೊದಲಾದವನ್ನು ಅಳವಡಿಸುವುದು

(ಣಾಯಾ) ವೇಷ, ಅಲಂಕಾರ, ರಂಗಭೂಮಿಯ ಹಿಂಭಾಗ, ಪರದೆಯ ಹಿಂಭಾಗ

ಣೇವತ್ಥಣ. ನ: [ದೇ] ಪರಸ್ಪರ ವಸ್ತ್ರಗಳನ್ನು ಬದಲಾಯಿಸಿಕೊಳ್ಳುವುದು, ಉತ್ತರೀಯದ ಸೆರಗು, ತುದಿ

ಣೇವತ್ಥಿಯ. ವಿ: [**ನೇಪಥ್ಯಿತ**] ವೇಷಭೂಷಣಗಳನ್ನು ಮಾಡಿದವನು, (ಪ್ರಸಾಧನ ಮಾಡಿದವ)

ಣೇವಾಇಯ. ವಿ: [**ನೈಪಾತಿಕ**] ನಿಪಾತದಿಂದ ಹುಟ್ಟಿದ ಹೆಸರು, ಅವ್ಯಯವೇ ಮೊದಲಾದವು(ವಿಸೇ)

ಣೇವಾಲ. ಪು: [**ನೇಪಾಲ**] ನೇಪಾಳ ದೇಶ,ವಿ: ನೇಪಾಲ ದೇಶವಾಸಿ(ಪಉಮ)

ಣೇವಿಜ್ಜ}. ನ: [**ನೈವೇದ್ಯ**] ದೇವರಿಗೆ ನಿವೆದಿಸಲು

ಣೇವೆಜ್ಜ}. ಮುಂದೆ ಇಡಲಾದ ಅನ್ನ, ಹಣ್ಣು ಇತ್ಯಾದಿ ವಸ್ತುಗಳು

ಣೆವ್ವಾಣ. '**ಣಿವ್ವಾಣ=ನಿರ್ವಾಣ**' ಶಬ್ದವನ್ನು ನೋಡುವುದು(ಆಚಾ)

ಣೆವ್ವುಅ. '**ಣಿವ್ವುಅ**' ಶಬ್ದವನ್ನು ನೋಡುವುದು.

ಣೇವ್ವುಇ. '**ಣಿವ್ವುಇ**' ಶಬ್ದವನ್ನು ನೋಡುವುದು.

ಣೇಸಗ್ಗಿಯ. '**ಣಿಸಗ್ಗಿಯ**' ಶಬ್ದವನ್ನು ನೋಡುವುದು.

ಣೇಸಜ್ಜಿ. ವಿ: [**ನೈಷದ್ಯಿನ್**] ಆಸನ–ವಿಶೇಷದಲ್ಲಿ ಕುಳಿತಿರುವ

ಣೇಸಜ್ಜಿಅ. ವಿ: [**ನೈಷದ್ಯಿಕ**] ಮೇಲಿನ ಶಬ್ದವನ್ನು ನೋಡುವುದು.

ಣೇಸತ್ಥಿ. ಪು: [ದೇ] ವಾಣಿಜ್ಯ ಮಂತ್ರಿ, ವ್ಯಾಪಾರ ಪ್ರಧಾನ

ಣೇಸತ್ಥಿಯಾ}. ಸ್ತ್ರೀ: [**ನೈಸೃಷ್ಟಿಕೀ, ನೈಶಸ್ತ್ರಿಕೀ**]

ಣೇಸತ್ಥೀ}. ಅರ್ಪಿಸುವುದು, ಒಬ್ಬನಲ್ಲಿ ಅರ್ಪಿಸುವುದು, ಅರ್ಪಿಸುವುದರಿಂದ ಉಂಟಾಗುವ ಕರ್ಮಬಂಧ (ಠಾ)

ಣೇಸಪ್ಪ. ಪು: [**ನೈಸರ್ಪ**] ಚಕ್ರವರ್ತಿ ದೊರೆಯೊಬ್ಬನ–ದೇವರ ಅಧಿಷ್ಠಾನಕ್ಕೊಳಪಟ್ಟ ನಿಧಿ–ವಿಶೇಷ

ಣೇಸರ. ಪು: [ದೇ] ರವಿ, ಸೂರ್ಯ

ಣೇಸಾಯ. '**ಣಿಸಾಯ=ನಿಷಾದ**' ಶಬ್ದವನ್ನು ನೋಡುವುದು.

ಣೇಸು. ಪುಂನ: [ದೇ] ತುಟಿ, ಕಾಲು, ಚರಣ

ಣೇಹ. ಪು: [**ಸ್ನೇಹ**] ಅನುರಾಗ, ಸ್ನೇಹ, ಪ್ರೇಮ, ಜಿಡ್ಡು, ನುಣುಪು, ಸ್ನಿಗ್ಧ

ಣೇಹರ. '**ಣೇಹುರ**' ಶಬ್ದವನ್ನು ನೋಡುವುದು.

ಣೇಹಲ. ಪು: [**ಸ್ನೇಹಲ**] ಒಂದು ಛಂದಸ್ಸು, ವಿ: ಸ್ನೇಹದಿಂದ ಕೂಡಿದ, ಸ್ನೇಹಿ

ಣೇಹಾಲು. ವಿ: [**ಸ್ನೇಹವತ್**] ಸ್ನೇಹದಿಂದ ಕೂಡಿದ, ಸ್ನಿಗ್ಧ

ಣೇಹುರ. ಪು: [**ನೇಹುರ**] ಒಂದು ಅನಾರ್ಯದೇಶ, ಅದರಲ್ಲಿ ವಾಸಿಸುವ ಆರ್ಯೇತರ ಜಾತಿ,

ಣೋ. ಅ: [**ನೋ**] ನಿಷೇಧ, ಅಭಾವ, ಮಿಶ್ರಣ, ದೇಶ, ಭಾಗ ಅಂಶ, ಅವಧಾರಣೆ, ನಿಶ್ಚಯ –ಈ ಅರ್ಥಗಳನ್ನು ಸೂಚಿಸುವ ಅವ್ಯಯ. **–ಆಗಮ.** ಪು: [**–ಆಗಮ**]ಆಗಮವಿಲ್ಲದಿರುವುದು, ಆಗಮದೊಂದಿಗೆ ಮಿಶ್ರಣ, ಆಗಮದ ಒಂದು ಅಂಶ. ಪದಾರ್ಥದ ಪರಿಜ್ಞಾನವಿಲ್ಲದಿರುವುದು. **–ಇಂದಿಯ.** ನ: [**–ಇಂದ್ರಿಯ**], ಮನಸ್ಸು, ಅಂತಃಕರಣ, ಚಿತ್ತ(ಠಾ). **–ಕಸಾಯ.** ಪು: [**–ಕಷಾಯ**] ಕಷಾಯದ ಉದ್ದೀಪಕ ಹಾಸ್ಯ ಮೊದಲಾದವು: ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಪುಂವೇದ, ಸ್ತ್ರೀವೇದ ಮತ್ತು ನಪುಂಸಕವೇದ(ಕಮ್ಮ) **–ಕೇವಲಣಾಣ.** ನ: [**–ಕೇವಲಜ್ಞಾನ**] ಅವಧಿಜ್ಞಾನ ಮತ್ತು ಮನಃಪರ್ಯಾಯ ಜ್ಞಾನ(ಠಾ). **–ಗರ.** ಪು: [**–ಕಾರ**] '**ನೋ**' ಶಬ್ದ. **–ಗುಣ.** ವಿ: [**–ಗುಣ**] ಅವಾಸ್ತವಿಕ. **–ಜೀವ.** ಪು: [**–ಜೀವ**] ಜೀವ ಮತ್ತು ಅಜೀವಗಳಿಗಿಂತ ಭಿನ್ನವಾದ ಪದಾರ್ಥ. ಅವಸ್ತು. **–ತಹ.** ವಿ: [–ತಥ] ಹಾಗೆ ಇಲ್ಲದಿರುವುದು(ಠಾ)

ಣೋ. ಅ: [ದೇ] ಖೇದ, ಆಹ್ವಾನ, ಕರೆ, ವಿಚಿತ್ರತೆ, ವಿತರ್ಕ(ಊಹೆ, ಸಂದೇಹ), ಪ್ರಕೋಪ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ

ಣೋ–. ಪು: [**ನೃ**] ಪುರುಷ

ಣೊಕ್ಖ. ವಿ; [ದೇ] ಅಪೂರ್ವ

ಣೋಗೊಣ್ಣ. ವಿ: [**ನೋಗೌಣ**] ಯಥಾರ್ಥವಲ್ಲದ

ಣೋಜುಗ. ನ: [**ನೋಯುಗ**] ನ್ಯೂನ ಯುಗ

ಣೋದಿಅ. '**ಣೊಲ್ಲಿಅ**' ಶಬ್ದವನ್ನು ನೋಡುವುದು.

ಣೋಮಲ್ಲಿಆ. ಸ್ತ್ರೀ: [**ನವಮಲ್ಲಿಕಾ**] ವೀರಜಾಜಿ ಗಿಡ, ವೀರಜಾಜಿ ಹೂವು, ವಾಸಂತಿ

ಣೋಮಾಲಿಆ. ಸ್ತ್ರೀ: [**ನವಮಾಲಿಕಾ**] ಮೇಲಿನ ಶಬ್ದವನ್ನು ನೋಡುವುದು.

ಣೋಮಿ. ಪು: [ದೇ] ಹಗ್ಗ, ದಾರ
ಣೋಲಇಆ}. ಸ್ತ್ರೀ: [ದೇ] ಹಕ್ಕಿಯ ಕೊಕ್ಕು
ಣೋಲಚ್ಛಾ}.
ಣೊಲ್ಲ. ಸಕ: [ಕ್ಷಿಪ್, ನುದ್] ಎಸೆ, ಪ್ರೇರಿಸು,
ಣೊಲ್ಲಿಅ. ವಿ: [ನೋದಿತ] ಪ್ರೇರಿಸಲ್ಪಟ್ಟ(ಣಾಯಾ)
ಣೊವ್ವ. ಪು: [ದೇ] ಆಯುಕ್ತ, ಪ್ರಾಂತ, ರಾಜ-ಪ್ರತಿನಿಧಿ(ದೇ)
ಣೋಹಲ್ಲ. ಪು: [ಲೋಹಲ] ಅಸ್ಪಷ್ಟವಾದ ಮಾತಿನವ, ಅಸ್ಪಷ್ಟವಾದ ಮಾತು.
ಣೋಹಲಿಆ. ಸ್ತ್ರೀ: [ನವಫಲಿಕಾ] ಹೊಸದಾದ, ಹೊಸದಾಗಿ ಪುಷ್ಪವತಿಯಾದ ಹುಡುಗಿ, ಹೊಸ ಫಲ ಬಿಟ್ಟಿರುವುದು
ಣೋಹಾ. ಸ್ತ್ರೀ: [ಸ್ನುಷಾ] ಸೊಸೆ, ಮಗನ ಹೆಂಡತಿ
-ಣ್ಣಅ. ವಿ: [ಜ್ಞಕ] ತಿಳಿದವನು, ಬಲ್ಲವ(ಗಾ)
-ಣ್ಣಾಸ. 'ಣಾಸ=ನ್ಯಾಸ' ಶಬ್ದವನ್ನು ನೋಡುವುದು.
-ಣ್ಣುಅ. '-ಣ್ಣಅ' ಶಬ್ದವನ್ನು ನೋಡುವುದು.
ಣ್ಹಂ. ಅ: ವಾಕ್ಯಾಲಂಕಾರ ಮತ್ತು ಪಾದಪೂರ್ತಿಗಾಗಿ ಬಳಕೆಯಾಗುವ ಅವ್ಯಯ
ಣ್ಹವ. ಸಕ: [ಸ್ನಪಯ್] ಸ್ನಾನ ಮಾಡಿಸು
ಣ್ಹವಣ. ನ: [ಸ್ನಪನ] ಸ್ನಾನ ಮಾಡಿಸುವುದು
ಣ್ಹವಿಅ. ವಿ: [ಸ್ನಪಿತ] ಸ್ನಾನಮಾಡಿಸಲ್ಪಟ್ಟವನು
ಣ್ಹಾ}. ಅಕ: [ಸ್ನಾ] ಸ್ನಾನ ಮಾಡು. ವ. ಕೃ: **ಣ್ಹಾಣ}. ಣ್ಹಾಯಮಾಣ**
ಣ್ಹಾಣ. ನ: [ಸ್ನಾನ] ಸ್ನಾನ ಮಾಡು, ಸ್ನಾನ
ಣ್ಹಾಣಮಲ್ಲಿಯಾ. ಸ್ತ್ರೀ: [ಸ್ನಾನಮಲ್ಲಿಕಾ] ಸ್ನಾನಕ್ಕೆ ಯೋಗ್ಯವಾದ ಮಲ್ಲಿಗೆ ಹೂವು
ಣ್ಹಾಣಿಆ. ಸ್ತ್ರೀ; [ಸ್ನಾನಿಕಾ] ಸ್ನಾನ- ಕ್ರಿಯೆ(ಪಣ್ಣ)
ಣ್ಹಾಣಿಯ. ವಿ: [ಸ್ನಾನಿತ] ಸ್ನಾನ ಮಾಡಿದ
ಣ್ಹಾಯ. ವಿ: [ಸ್ನಾತ] ಸ್ನಾನ ಮಾಡಿದವನು, ಸ್ನಾನ ಮಾಡಿಸಲ್ಪಟ್ಟ(ಕಪ್ಪ)ವನು
ಣ್ಹಾರು. ನ: [ಸ್ನಾಯು] ರಕ್ತನಾಳ, ನಾಡಿ, ಸಿರೆ, ಸ್ನಾಯು ರಜ್ಜು
ಣ್ಹಾವ. 'ಣ್ಹವ' ಶಬ್ದವನ್ನು ನೋಡುವುದು.
ಣ್ಹಾವಿಅ. ವಿ: [ಸ್ನಪಿತ] ಸ್ನಾನ ಮಾಡಿಸಲ್ಪಟ್ಟವನು(ಭವಿ)
ಣ್ಹಾವಿಅ. ಪು: [ನಾಪಿತ] ಕ್ಷೌರಿಕ, -ಣಸೇವಯ. ಪು: [-ಪ್ರಸೇವಕ] ಕ್ಷೌರಿಕನ ಹಡಪದ ಚೀಲ
ಣ್ಹು. ಅ: [ದೇ] ನಿಶ್ಚಯವನ್ನು ಸೂಚಿಸುವ ಅವ್ಯಯ
ಣ್ಹುಸಾ. ಸ್ತ್ರೀ: [ಸ್ನುಷಾ] ಸೊಸೆ, ಮಗನ ಹೆಂಡತಿ
ಣ್ಹುಹಾ. 'ಣ್ಹುಸಾ' ಶಬ್ದವನ್ನು ನೋಡುವುದು.

ತ

ತ. ಪು: [ತ] 'ತ' ವರ್ಗದಲ್ಲಿ ಮೊದಲನೆಯ ಅಕ್ಷರ. ದಂತ್ಯ(ದಂತಸ್ಥಾನೀಯ) ಅಲ್ಪ ಪ್ರಾಣ, ಅಘೋಷ –ಸ್ಪರ್ಶ ವರ್ಣ.

ತ. ಸ: [ತತ್] ಅವನು(ಠಾ)

ತ –. ಸ: [ತ್ವತ್–] ನೀನು. **–ಕ್ಕಯ. ವಿ:** [–ಕೃತ] ನಿನ್ನಿಂದ ಮಾಡಲ್ಪಟ್ಟ

ತ –. 'ತಯಾ=ತ್ವಚ್' ಶಬ್ದವನ್ನು ನೋಡುವುದು **–ದ್ದೋಸಿ. ವಿ:** [–ದೋಷಿನ್] ಚರ್ಮರೋಗಿ, ಕುಷ್ಠರೋಗಿ

ತಅ. 'ತವ=ತಪಸ್' ಶಬ್ದವನ್ನು ನೋಡುವುದು

ತಇ. ವಿ: [ತತಿ] ಅಷ್ಟು

ತಇ.(ಅಪ). ಅ: [ತತ್ರ] ಅಲ್ಲಿ, ಅದರಲ್ಲಿ(ಷಡ್)

ತಇ. ಅ: [ತದಾ] ಆಗ, ಆ ಕಾಲದಲ್ಲಿ

ತಇಅ. ವಿ: [ತೃತೀಯ] ಮೂರನೆಯ(ಕುಮಾ)

ತಇಅ(ಅಪ). ವಿ: [ತ್ವದೀಯ] ನಿಮ್ಮ, ನಿಮ್ಮವ(ಭವಿ)

ತಇಅ. ಅ: [ತದಾ] ಆಗ, ಆ ಕಾಲದಲ್ಲಿ

ತಇಅಹಾ.(ಅಪ). : [ತದಾ] ಆಗ(ಭವಿ)

ತಇಆ. ಅ: [ತದಾ] ಆಗ, ಆ ಕಾಲದಲ್ಲಿ

ತಇಆ. ಸ್ತ್ರೀ: [ತೃತೀಯಾ] ತೃತೀಯಾ ತಿಥಿ, ತದಿಗೆ(ಸಮ), ತೃತೀಯಾ ವಿಭಕ್ತಿ

ತಇಲ. 'ತೆಲ್ಲ' ಶಬ್ದವನ್ನು ನೋಡುವುದು

ತಇಲೋಇ. ಸ್ತ್ರೀ: [ತ್ರಿಲೋಕೀ] ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳು(ಸುಪಾ)

ತಇಲೋಕ್ಕ}. ನ: [ತ್ರೈಲೋಕ್ಯ] **ಮೇಲಿನ** ಶಬ್ದವನ್ನು
ತಇಲೋಯ}. ನೋಡುವುದು(ಪಉಮ)

ತಇಸ.(ಅಪ). ವಿ: [ತಾದೃಶ] ಅಂತಹ, ಆ ವಿಧವಾದ, ಆ ರೀತಿಯ(ಷಡ್)

ತಈ. ಸ್ತ್ರೀ: [ತ್ರಯೀ] ಮೂರರ ಸಮುದಾಯ, ಮೂರರ ಗುಂಪು(ಸುಪಾ)

ತಈಅ. 'ತಇಅ=ತೃತೀಯ' ಶಬ್ದವನ್ನು ನೋಡುವುದು

ತಉ}. ನ: [ತ್ರಪು] ಸೀಸ ಲೋಹ, ತಗರ. **–ವಟ್ಟಿಆ.**
ತಉಅ}. ಸ್ತ್ರೀ: [–ಪಟ್ಟಿಕಾ] ಕರ್ಣಾಭರಣ

ತಉಸ. ನ: [ತ್ರಪುಷ] **'ತಉಸೀ'** ಶಬ್ದವನ್ನು ನೋಡುವುದು **–ಮಿಂಜಿಯಾ. ಸ್ತ್ರೀ:** [–ಮಿಂಜಿಕಾ] ಮೂರು ಇಂದ್ರಿಯಗಳ ಒಂದು ಕ್ಷುದ್ರ ಕೀಟ

ತಉಸ. ನ: [ತ್ರಪುಷ] ಸೌತೆಕಾಯಿ

ತಉಸೀ. ಸ್ತ್ರೀ: [ತ್ರಪುಷೀ] ಬೂರುಗದ ಮರ, ಮುಳ್ಳು ಸೌತೆ ಗಿಡ

ತಏ. ಅ: [ತತಸ್] ಅವನಿಂದ, ಅವಳಿಂದ, ಅದರಿಂದ, ಆ ಕಾರಣದಿಂದ, ಅನಂತರದಲ್ಲಿ, ಆಮೇಲೆ (ಉತ್ತ)

ತಏಯಾರಿಸ್. ವಿ: [ತ್ವಾದೃಶ್] ನಿನ್ನಂಥ, ನಿನಗೆ ಸಮಾನನಾದ, ನಿನ್ನ ಹಾಗೆ

ತಓ. 'ತಏ' ಶಬ್ದವನ್ನು ನೋಡುವುದು

ತಂ. ಅ: [ತತ್] ಕಾರಣ, ಹೇತು, ವಾಕ್ಯ –ಉಪನ್ಯಾಸ ಈ ಅರ್ಥಗಳನ್ನು ಸೂಚಿಸುವ ಅವ್ಯಯ. **–ಜಹಾ. ಅ:** [–ಯಥಾ] ಉದಾಹರಣೆಯನ್ನು ನಿರೂಪಿಸುವ ಅವ್ಯಯ(ಆಚಾ)

ತಂಅ.'ತಯಾ=ತದಾ' ಶಬ್ದವನ್ನು ನೋಡುವುದು (ಗಉಡ)

ತಂಟ. ನ: [ದೇ] ಬೆನ್ನು, ಹಿಂಭಾಗ

ತಂಡ. ನ: [ದೇ] ಲಗಾಮ್‌ನೊಂದಿಗೆ ಬೆರೆತಿರುವ ಜೊಲ್ಲು, ವಿ: ರುಂಡವಿಲ್ಲದ, ಶಿರಸ್ಸಿಲ್ಲದ, ಸ್ವರಕ್ಕಿಂತ ಹೆಚ್ಚಾದ

ತಂಡವ(ಅಪ). 'ತಡ್ಡವ' ಶಬ್ದವನ್ನು ನೋಡುವುದು

ತಂಡವ. ಅಕ:[ತಾಂಡವಯ್] ನೃತ್ಯ ಮಾಡುವುದು

ತಂಡವ. ನ: [ತಾಂಡವ] ತಾಂಡವ ನೃತ್ಯ, ರುದ್ರ ನರ್ತನ, ರೌದ್ರತೆ(ಸುಪಾ)

ತಂಡವಿಅ. ವಿ; [ತಾಂಡವಿತ] ಕುಣಿಯಲ್ಪಟ್ಟ, ನರ್ತಿಸಲ್ಪಟ್ಟ(ಗಉಡ)

ತಂಡವಿಅ. (ಅಪ).'ತಡ್ಡವಿಅ' ಶಬ್ದವನ್ನು ನೋಡುವುದು

ತಂಡುಲ. ಪು: [ತಂಡುಲ] ಅಕ್ಕಿ. **'ತಂದುಲ'** ಶಬ್ದವನ್ನು ನೋಡುವುದು

ತಂತ. ನ: [ತಂತ್ರ] ದೇಶ, ರಾಷ್ಟ್ರ(ಸುರ), ಶಾಸ್ತ್ರ, ಸಿದ್ಧಾಂತ, ದರ್ಶನ, ಮತ, ಸ್ವದೇಶ –ಚಿಂತನೆ, ವಿಷ –ಔಷಧ, ಸೂತ್ರ, ಗ್ರಂಥಾಂಶ –ವಿಶೇಷ, ತಂತ್ರ –ವಿದ್ಯೆ, **–ನ್ನು. ವಿ:** [–ಜ್ಞ] ತಂತ್ರವನ್ನು ತಿಳಿದವನು. **–ಟಾಇ. ಪು:** [–ವಾದಿನ್] ತಂತ್ರವೆಂಬ ವಿದ್ಯೆಯಿಂದ ರೋಗ ರುಜಿನಗಳನ್ನು ಹೋಗಲಾಡಿಸುವವನು.

ತಂತ. ವಿ: [ತಾಂತ] ಖಿನ್ನನಾಗಿರುವ, ಬಳಲಿದ, ಬಾಡಿಹೋಗಿರುವ, ಚಟುವಟಿಕೆಯಿಲ್ಲದ
ತಂತಡೀ. ಸ್ತ್ರೀ: [ದೇ] ಮೊಸರಿನಲ್ಲಿ ಕಲಸಿದ ಅನ್ನ
ತಂತವಗ}. ಪು: [ತಾಂತ್ರವಕ] ನಾಲ್ಕು ಇಂದ್ರಿಯಗಳ
ತಂತವಯ}. ಒಂದು ಜಾತಿ
ತಂತಿಯ. ಪು: [ತಾಂತ್ರಿಕ] ವೀಣೆ ನುಡಿಸುವವನು (ಅಣು)
ತಂತಿಸಮ. ನ: [ತಂತ್ರೀಸಮ] ತಂತ್ರೀ ಶಬ್ದದಂಥ, ಅಥವಾ ಅದರೊಂದಿಗೆ ಸೇರಿರುವ ಗೀತ, ಗೇಯ ಕಾವ್ಯದ ಒಂದು ಪ್ರಭೇದ
ತಂತೀ. ಸ್ತ್ರೀ: [ತಂತ್ರೀ] ವೀಣಾ ವಾದ್ಯ, ಚರ್ಮದ ದಾರ, ಸಾರಂಗಿಯ ತಂತಿ,
ತಂತು. ಪು: [ತಂತು] ದಾರ, ಸೂತ್ರ, **–ಅ. –ಗ. ಪು:** [–ಕ] ಜಲಜಂತು –ವಿಶೇಷ, **–ಜ. –ಯ.** ನ: [–ಜ] ನೂಲಿನಿಂದ ತಯಾರಿಸಿದ ಬಟ್ಟೆ. **–ವಾಯ. ಪು:** [–ವಾಯ]. ಬಟ್ಟೆ ನೇಯುವವನು, ನೇಕಾರ. **–ಸಾಲಾ.** ಸ್ತ್ರೀ: [–ಶಾಲಾ] ಬಟ್ಟೆ ನೇಯುವ ಮನೆ. ನೇಯ್ಗೆ ಮನೆ
ತಂತುಕ್ಖೋಡೀ. ಸ್ತ್ರೀ: [ದೇ] ನೇಕಾರನ ಒಂದು ಉಪಕರಣ
ತಂದುಲ. 'ತಂಡುಲ' ಶಬ್ದವನ್ನು ನೋಡುವುದು **ಒಂದು ಬಗೆಯ ಮೀನು, –ವೇಯಾಲಿಯ. ನ:[–ವೈಚಾರಿಕ] ಜೈನ ಗ್ರಂಥ –ವಿಶೇಷ**
ತಂದುಲೆಜ್ಜಗ. ಪು: [ತಂದುಲೀಯಕ] ಒಂದು ವನಸ್ಪತಿ –ವಿಶೇಷ
ತಂದೂಸಯ.'ತಿಂದೂಸಯ'ಶಬ್ದವನ್ನುನೋಡುವುದು
ತಂಬ. ಪು: [ಸ್ತಂಬ] ಹುಲ್ಲು ಮೊದಲಾದವುಗಳ ಕಂತೆ(ಕುಮಾ)
ತಂಬ. ನ: [ತಾಮ್ರ] ತಾಮ್ರ ಲೋಹ(ವಿಪಾ), **ಪು:** ಕೆಂಪು ಬಣ್ಣ. ವಿ: ಕೆಂಪು ಬಣ್ಣದವನು. **–ಚೂಲ. ಪು:** [–ಚೂಡ] ಕೋಳಿ, **–ವಣ್ಣೀ. ಸ್ತ್ರೀ:** [–ಪರ್ಣೀ] ಒಂದು ನದಿಯ ಹೆಸರು. **–ಸಿಹ. ಪು:** [–ಶಿಖ] ಕೋಳಿ, ಕುಕ್ಕುಟ.
ತಂಬಕರೋಡ. ಪುಂನ: [ದೇ] ತಾಮ್ರದ ಬಣ್ಣದ ಒಂದು ದ್ರವ್ಯ –ವಿಶೇಷ(ಪಣ್ಣ)
ತಂಬಕಿಮಿ. ಪು: [ದೇ] ಇಂದ್ರಗೋಪವೆಂಬ ಕೀಟ(ದೇ)
ತಂಬಕುಸುಮ. ಪುಂನ: [ದೇ] ಕೆಂಪು ಹೂವಿನ ದೊಡ್ಡ ಗೋರಂಟಿ ಮರ, ಹಳದಿ ಹೂವಿನ ಗೋರಂಟಿ ಮರ
ತಂಬಕ್ಕ. ನ: [ದೇ] ಒಂದು ವಾದ್ಯ –ವಿಶೇಷ
ತಂಬಚ್ಛಿವಾಡಿಯಾ. ಸ್ತ್ರೀ: [ದೇ] ತಾಮ್ರ ವರ್ಣದ ಒಂದು ದ್ರವ್ಯ –ವಿಶೇಷ(ಪಣ್ಣ)
ತಂಬಟಕ್ಕಾರೀ. ಸ್ತ್ರೀ: [ದೇ] ಶೇಫಾಲಿಕಾ : ಕರಿಯ ಲಕ್ಕೀ ಗಿಡ, ಪುಷ್ಪ ಪ್ರಧಾನ ಬಳ್ಳಿ
ತಂಬರತ್ತೀ. ಸ್ತ್ರೀ: [ದೇ] ಗೋಧಿಯಲ್ಲಿ ಕುಂಕುಮದ ಛಾಯೆ
ತಂಬಾ. ಸ್ತ್ರೀ: [ದೇ] ಹಸು, ಗೋವು(ಗಾ)
ತಂಬಾಯ. ಪು: [ತಾಮಾಕ] ಭಾರತದ ಒಂದು ಹಳ್ಳಿ
ತಂಬಿಮ. ಪುಂಸ್ತ್ರೀ: [ತಾಮ್ರತ್ವ] ಕೆಂಪು, ಸ್ವಲ್ಪ ಮಟ್ಟಿನ ರಕ್ತ ವರ್ಣತೆ(ಗಉಡ)
ತಂಬಿಯ. ನ: [ತಾಮ್ರಿಕ] ಪರಿವ್ರಾಜಕ ಸಂನ್ಯಾಸಿಯು ಧರಿಸುವ ಒಂದು ಉಪಕರಣ
ತಂಬಿರ. ವಿ: [ದೇ] ತಾಮ್ರದ ಬಣ್ಣದವನು
ತಂಬಿರಾ.(ದೇ). **'ತಂಬರತ್ತೀ'** ಶಬ್ದವನ್ನು ನೋಡುವುದು
ತಂಬುಕ್ಕ. ನ: [ದೇ] ಒಂದು ವಾದ್ಯ –ವಿಶೇಷ
ತಂಬೇರಮ. ಪು: [ಸ್ತಂಬೇರಮ] ಆನೆ
ತಂಬೇಹೀ. ಸ್ತ್ರೀ: [ದೇ] ಶೇಫಾಲಿಕಾ : ಕರಿಯ ಲಕ್ಕೀ ಗಿಡ, ಪುಷ್ಪ ಪ್ರಧಾನ ವೃಕ್ಷ
ತಂಬೋಲ. ನ: [ತಾಂಬೂಲ] ವೀಳ್ಯದೆಲೆ
ತಂಬೋಲಿಅ. ಪು: [ತಾಂಬೂಲಿಕ] ವೀಳ್ಯದೆಲೆ ಮಾರುವವನು
ತಂಬೋಲೀ. ಸ್ತ್ರೀ: [ತಾಂಬೂಲೀ] ವೀಳ್ಯದೆಲೆ ಬಳ್ಳಿ(ಷಡ್)
ತಂಭ. **'ಥಂಭ'** ಶಬ್ದವನ್ನು ನೋಡುವುದು
ತಂಸ. ಪು: [ತ್ರ್ಯಂಶ] ಮೂರನೇ ಭಾಗ
ತಂಸ. ವಿ: [ತ್ರ್ಯಸ್ರ] ತ್ರಿ–ಕೋಣ, ಮೂರು ಕೋನಗಳುಳ್ಳ(ಆಚಾ)
ತಕ್ಕ. ಸಕ: [ತರ್ಕ್] ತರ್ಕಮಾಡು, ಊಹಿಸು, ಕಾರಣ –ಪೂರ್ವಕವಾಗಿ ವಿಚಾರಮಾಡು
ತಕ್ಕ. ನ: [ತಕ್ರ] ಮಜ್ಜಿಗೆ(ಉಪ)
ತಕ್ಕ. ಪು: [ತರ್ಕ] ವಿಮರ್ಶೆ, ವಿಚಾರಮಾಡುವುದು, ಅನುಮಾನ, ತತ್ತ್ವವನ್ನು ತಿಳಿಯುವ ಸಲುವಾಗಿ ಕಾರಣ ಪೂರ್ವಕವಾಗಿ ಮಾಡುವ ಊಹೆ, ನ್ಯಾಯಶಾಸ್ತ್ರ

ತಕ್ಕಣಾ. ಸ್ತ್ರೀ: [ದೇ] ಇಚ್ಛೆ, ಅಭಿಲಾಷೆ(ದೇ)
ತಕ್ಕಯ. ವಿ: [ತರ್ಕಕ] ತರ್ಕ ಮಾಡುವವನು(ಪಣ್ಣ)
ತಕ್ಕರ. ಪು: [ತಸ್ಕರ] ಕಳ್ಳ, ಚೋರ(ಔಪ)
ತಕ್ಕಲಿ. ಸ್ತ್ರೀ: [ದೇ] ಬಾಳೆ ಗಿಡ
ತಕ್ಕಲಿ}. ಸ್ತ್ರೀ: [ದೇ] ವೃತ್ತಾಕಾರದಲ್ಲಿರುವ ವೃಕ್ಷ-
ತಕ್ಕಲೀ}. ವಿಶೇಷ
ತಕ್ಕಾ. ಸ್ತ್ರೀ: [ತರ್ಕ] 'ತಕ್ಕ=ತರ್ಕ' ಶಬ್ದವನ್ನು ನೋಡುವುದು(ಠಾ)
ತಕ್ಕಾಲ. ಕ್ರಿವಿ: [ತತ್ಕಾಲ] ಆ ಕಾಲ, ಆ ಸಮಯ, ಆ ಸಮಯದಲ್ಲಿ
ತಕ್ಕಿಅ. ವಿ: [ತಾರ್ಕಿಕ] ತರ್ಕಶಾಸ್ತ್ರವನ್ನು ಬಲ್ಲವನು
ತಕ್ಕಿಯಾಣಂ. 'ತಕ್ಕ=ತರ್ಕ' ಶಬ್ದವನ್ನು ನೋಡುವುದು,
ತಕ್ಕು. ಪು: [ತರ್ಕು] ನೂಲು ತೆಗೆಯುವ ಯಂತ್ರ, ತಕಲಿ, ಚರಕ
ತಕ್ಕುಯ. ಪು: [ದೇ] ಸ್ವಜನರು, ಸ್ವಜನ -ವರ್ಗ
ತಕ್ಖ. ಸಕ: [ತಕ್ಷ್] ಸೀಳು, ಕತ್ತರಿಸು
ತಕ್ಖ. ಪು: [ತಾರ್ಕ್ಷ್ಯ] ಗರುಡ ಪಕ್ಷಿ(ಪಾಅ)
ತಕ್ಖ. ಪು: [ತಕ್ಷನ್] ಬಡಗಿ, ಮರಗೆಲಸ ಮಾಡುವವನು, ವಿಶ್ವ ಕರ್ಮ, ದೇವಶಿಲ್ಪಿ, -ಸಿಲಾ. ಸ್ತ್ರೀ: [-ಶಿಲಾ] ಮೊದಲಿಗೆ ಬಾಹುಬಲಿಯ ರಾಜಧಾನಿಯಾಗಿದ್ದ ಪ್ರಾಚೀನ ಐತಿಹಾಸಿಕ ನಗರಿ ತಕ್ಷಶಿಲಾ. ಇದು ಪಂಜಾಬ್‌ನಲ್ಲಿದೆ.
ತಕ್ಖಗ. ಪು: [ತಕ್ಷಕ] ಮೇಲಿನ ಶಬ್ದವನ್ನು ನೋಡುವುದು ಖ್ಯಾತನಾದ ಸರ್ಪರಾಜ; ಕಶ್ಯಪ -ಕದ್ರುವಿನ ಮಗ. ವಾಸುಕಿಯ ತಮ್ಮ.
ತಕ್ಖಣ. ನ: [ತತ್‌ಕ್ಷಣ] ಅದೇ ಸಮಯ, ಅದೇ ಕಾಲ(ಠಾ). ಕ್ರಿ. ವಿ: ಕೂಡಲೆ, ಬೇಗನೆ, ಶೀಘ್ರವೆ
ತಕ್ಖಯ. 'ತಕ್ಖಗ' ಶಬ್ದವನ್ನು ನೋಡುವುದು
ತಕ್ಖಾಣ. 'ತಕ್ಖ= ತಕ್ಷನ್' ಶಬ್ದವನ್ನು ನೋಡುವುದು
ತಗರ. 'ಟಗರ' ಶಬ್ದವನ್ನು ನೋಡುವುದು(ಪಣ್ಣ)
ತಗರಾ. ಸ್ತ್ರೀ: [ತಗರಾ] ಸಂನಿವೇಶ - ವಿಶೇಷ
ತಗ್ಗ. ನ: [ದೇ] ಸೂತ್ರ ಕಂಕಣ, ದಾರದ ಕಂಕಣ (ಗಲುಡ)
ತಗ್ಗಂಧಿಯ. ವಿ: [ತದ್ಗಂಧಿಕ] ಅದರಂಥ ವಾಸನೆ ಉಳ್ಳ
ತಚ್ಚ. ವಿ: [ತೃತೀಯ] ಮೂರನೆಯ(ಉವಾ)
ತಚ್ಚ. ನ: [ತತ್ತ್ವ] ಸಾರ, ಪರಮಾರ್ಥ, ಪರಬ್ರಹ್ಮ. ತಚ್ಚಾವಾಯ. ಪು: [-ವಾದ] ತತ್ತ್ವ -ವಾದ, ಪರಮಾರ್ಥ ಚರ್ಚೆ, ದೃಷ್ಟಿವಾದ, ಜೈನ ಅಂಗ ಗ್ರಂಥ ವಿಶೇಷ.
ತಚ್ಚ. ನ: [ತಥ್ಯ] ಸತ್ಯ, ನಿಜ. ವಿ: ವಾಸ್ತವಿಕ ಸತ್ಯ(ಉತ್ತ). -ತ್ಥ. ಪು: [-ತಥ್ಯಾರ್ಥ] ನಿಜತ್ವ, ತಚ್ಚಾವಾಯ. ಪು: [-ವಾದ] ತತ್ತ್ವವಾದ, ಮೇಲಿನ 'ತಚ್ಚಾವಾಯ' ಶಬ್ದವನ್ನು ನೋಡುವುದು ಪರಮಾರ್ಥ ಚರ್ಚೆ,
ತಚ್ಚಂ. ಅ: [ತ್ರಿಃ] ಮೂರು ಬಾರಿ, ಮೂರು ಸಲ
ತಚ್ಚಿತ್ತ. ವಿ: [ತಚ್ಚಿತ್ತ] ಅದೊಂದರಲ್ಲೇ ಯಾರ ಮನಸ್ಸು ಲೀನವಾಗಿದೆಯೋ ಅವನು, ತಲ್ಲೀನ(ವಿಪಾ)
ತಚ್ಛ. ಸಕ: [ತಕ್ಷ್] ಕೆತ್ತು,, ಕೊಯ್ಯು, ಕತ್ತರಿಸು
ತಚ್ಛಣ. ಸ್ತ್ರೀನ: [ತಕ್ಷಣ] ಮರವನ್ನು ಕೆತ್ತುವುದು, ಕೊಯ್ಯುವುದು, ಕತ್ತರಿಸುವುದು(ಪಣ್ಣ)
ತಚ್ಛ}. ವಿ: [ತಷ್ಟ] ಕೆತ್ತಲ್ಪಟ್ಟ, ಸೀಳಲ್ಪಟ್ಟ
ತಚ್ಛಿಅ}.
ತಚ್ಛಿಂಡ. ವಿ: [ದೇ] ಕರಾಳ, ಭಯಂಕರ
ತಚ್ಛಿಜ್ಜಂತ. 'ತಚ್ಛ' ಶಬ್ದವನ್ನು ನೋಡುವುದು
ತಚ್ಛಿಲ. ವಿ: [ದೇ] ಕೆಲಸದಲ್ಲಿ ಆಸಕ್ತನಾದವನು, ಕಣ್ಣಿನ ರೆಪ್ಪೆಯಾಡುವ ಕಾಲದ ಮೂವತ್ತನೆಯ ಒಂದು ಭಾಗ(ಷಡ್)
ತಜಾ. 'ತಯಾ=ತ್ವಚ್' ಶಬ್ದವನ್ನು ನೋಡುವುದು
ತಜ್ಜ. ಸಕ: [ತರ್ಜಯ್] ಬೆರಳುಮಾಡಿ ತೋರಿಸು, ನಿಂದಿಸು, ಆಕ್ಷೇಪಿಸು, ಹೆದರಿಸು(ಭವಿ)
ತಜ್ಜ. ವಿ: [ತಜ್ಜ] ಅದರಿಂದ ಹುಟ್ಟಿದ, ಅದರಿಂದ ಉತ್ಪನ್ನವಾದ
ತಜ್ಜಣ. ನ: [ತರ್ಜನ್] ನಿಂದೆ, ಆಕ್ಷೇಪಣೆ, ದೂಷಣೆ, ಹೆದರಿಸುವುದು(ವಪ)
ತಜ್ಜಣಾ. ಸ್ತ್ರೀ:[ತರ್ಜನಾ] ಮೇಲಿನ ಶಬ್ದವನ್ನು ನೋಡುವುದು
ತಜ್ಜಣೀ. ಸ್ತ್ರೀ:[ತರ್ಜನೀ] ತೋರುಬೆರಳು
ತಜ್ಜಾಯ. ವಿ: ತಜ್ಜಾತ] ಅದರಿಂದ ಹುಟ್ಟಿದವನು, ಸಮಾನ ಜಾತಿಯವನು, ಸದೃಶ ಜಾತಿಯವನು
ತಜ್ಜಾವಿಅ}.ವಿ:[ತರ್ಜಿತ] ಹೆದರಿಸಲ್ಪಟ್ಟ, ಆಕ್ಷೇಪಿಸಲ್ಪಟ್ಟ,
ತಜ್ಜಿಅ}. ನಿಂದಿಸಲ್ಪಟ್ಟ, ದೂಷಿಸಲ್ಪಟ್ಟ(ಸುಪಾ)
ತಜ್ಜಿಂತ}. 'ತಜ್ಜ' ಶಬ್ದವನ್ನು ನೋಡುವುದು
ತಜ್ಜಿಜ್ಜಂತ}.
ತಜ್ಜಿಮಾಣ}.
ತಟ್ಟವಟ್ಟ. ನ: [ದೇ] ಆಭರಣ, ಒಡವೆ

ತಟ್ಟಿಗಾ. ಸ್ತ್ರೀ: [ದೇ. **ತಟ್ಟಿಕಾ**] ದಿಗಂಬರ ಜೈನ ಸಾಧುವಿನ ಒಂದು ಉಪಕರಣ

ತಟ್ಟೀ. ಸ್ತ್ರೀ: [ದೇ] ಸುತ್ತುಗಟ್ಟುವುದು, ಆವರಿಸುವುದು, ಬೇಲಿ

ತಟ್ಠ. ವಿ: [ತ್ರಸ್ತ] ಹೆದರಿದ, ಭೀತ, ಭಯಗೊಂಡ. ನ: ಒಂದು ಮುಹೂರ್ತ –ವಿಶೇಷ

ತಟ್ಟ. ವಿ; [ತಷ್ಟ] ಕೆತ್ತಲ್ಪಟ್ಟ, ಸೀಳಲ್ಪಟ್ಟ

ತಟ್ಠವ. ನ: [ತ್ರಸ್ತಪ] ಮುಹೂರ್ತ –ವಿಶೇಷ

ತಟ್ಠಿ. ವಿ: [ತಷ್ಟಿನ್] ಸಣ್ಣಗಿರುವ, ತೆಳ್ಳಗಿರುವ

ತಟ್ಠೃ}. ತಕ್ಷಕ, ವಿಶ್ವಕರ್ಮ(ಗಉಡ), ಚಿತ್ತಾ ನಕ್ಷತ್ರ,

ತಟ್ಠು}. ಅದರ ಅಧಿಷ್ಠಾಯಕ ದೇವತೆ

ತಟ್ಠು. ಪು: [ತ್ವಷ್ಟೃ] ಅಹೋರಾತ್ರದ ಹನ್ನೆರಡನೆಯ ಮುಹೂರ್ತ

ತಡ. ಸಕ: [ತನ್] ವಿಸ್ತರಿಸು, ಮಾಡು

ತಡ. ಪುಂನ; [ತಟ] ದಡ, ತಟ, ತೀರ(ಪಾಅ). **–ತ್ಥ.** ವಿ: [–ಸ್ಥ] ಮಧ್ಯಸ್ಥ, ಪಕ್ಷಪಾತವಿಲ್ಲದ, ಸಮೀಪದಲ್ಲಿ ಇರುವ(ಕುಮಾ)

ತಡಉಡಾ.(ದೇ).**'ತಡವಡಾ'** ಶಬ್ದವನ್ನು ನೋಡುವುದು

ತಡಕಡಿಅ. ವಿ: [ದೇ] ಚಂಚಲವಾಗಿರುವ, ಸ್ಥಿರವಾಗಿಲ್ಲದ, ನಿಲ್ಲಲು ಅಸಮರ್ಥ

ತಡಕ್ಕಾರ.ಪು: [ತಟತ್ಕಾರ] ಕಣ್ಣು ಕೋರೈಸುವ, ಬೆಳಕು

ತಡತಡಾ.ಅಕ: [ತಡತಡಾಯ್] **'ತಡತಡ'** ಎಂದು ಶಬ್ದಮಾಡು

ತಡತಡಾ. ಸ್ತ್ರೀ:[ತಡತಡಾ] ತಡತಡ ಶಬ್ದ

ತಡಪ್ಫಡ}. **ಅಕ:** [ದೇ] ವೇದನೆಯಿಂದ ಒದ್ದಾಡು,

ತಡಫಡ}. ಚಡಪಡಿಸು, ವ್ಯಾಕುಲಗೊಳ್ಳು

ತಡಫಡಿಅ. ವಿ: [ದೇ] ಒದ್ದಾಡಲ್ಪಟ್ಟ, ವ್ಯಾಕುಲ ಗೊಳಿಸಲ್ಪಟ್ಟ

ತಡಮಡ. ವಿ: [ದೇ] ಕ್ಷುಬ್ಧಗೊಂಡ, ಚಲಿಸಿದ ಕಲಕಲ್ಪಟ್ಟ, ಕೋಪಗೊಂಡ,

ತಡಯಡ. ವಿ: [ದೇ] ಕ್ರಿಯಾಶಿಲ, ಸದಾಚಾರದಿಂದ ಕೂಡಿದ

ತಡಯಡಂತ. **'ತಡತಡಾ'** ಶಬ್ದವನ್ನು ನೋಡುವುದು

ತಡವಡಾ. ಸ್ತ್ರೀ: [ದೇ] **'ಆಉಲೀ'** ವೃಕ್ಷ

ತಡಾಅ}. ನ: [ತಡಾಗ] ಕೆರೆ, ಸರೋವರ,

ತಡಾಗ}. ಜಲಾಶಯ(ಗಾ)

ತಡಿ. ಸ್ತ್ರೀ: [ತಡಿತ್] ಮಿಂಚು(ಪಾಅ), **–ಡಂಡ. ಪು:** [–ದಂಡ] ವಿದ್ಯುತ್ ದಂಡ=ಮಿಂಚಿನ ಕೋಲು, **–ಕೇಸ. ಪು:** [–ಕೇಶ] ಒಬ್ಬ ರಾಕ್ಷಸ ವಂಶೀಯ ರಾಜ, ಲಂಕಾಧಿಪತಿ. **–ವೇಅ. ಪು:** [–ವೇಗ] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ).

ತಡಿಅ. ವಿ: [ತತ] ವಿಸ್ತಾರವಾದ, ಹರಡಿದ, ವ್ಯಾಪ್ತವಾದ

ತಡಿಆ. ಸ್ತ್ರೀ: [ತಡಿತ್] ಮಿಂಚು

ತಡಿಣ. ವಿ: [ದೇ] ವಿರಳ, ಅತ್ಯಲ್ಪ

ತಡಿಣೀ. ಸ್ತ್ರೀ: [ತಟಿನೀ] ನದಿ, ಹೊಳೆ

ತಡಿಮ. ನ: [ತಡಿಮ] ಭಿತ್ತಿ, ಗೋಡೆ, ಸಣ್ಣ ಚಪ್ಪಡಿಗಳನ್ನು ಹದಿದು ಸಿದ್ಧಪಡಿಸಿದ ನೆಲ, ಗಾರೆ ಹಾಕಿದ ನೆಲ, ರತ್ನಖಚಿತ ಭೂಮಿ, ಬಾಗಿಲಿನ ಮೇಲುಭಾಗ

ತಡೀ. ಸ್ತ್ರೀ: [ತಟೀ] ದಡ, ತಟ, ತೀರ

ತಡ್ಡ}. **ಸಕ:** [ತನ್] ವಿಸ್ತಾರಗೊಳಿಸು, ಮಾಡು

ತಡ್ಡವ}.

ತಡ್ಡವಿಅ}. ವಿ: [ತತ] ವಿಸ್ತಾರವಾದ, ಹರಡಿದ

ತಡ್ಡಿಅ}.

ತಡ್ಡು. ಸ್ತ್ರೀ: [ತರ್ದು] ಮರದ ಸೌಟು

ತಣ. **ಸಕ:** [ತನ್] ವಿಸ್ತಾರಗೊಳಿಸು, ಅಗಲಗೊಳಿಸು, ಮಾಡು

ತಣ. ನ: [ತೃಣ] ಹುಲ್ಲು. **–ಇಲ್ಲ.** ವಿ: [–ವತ್] ಹುಲ್ಲನ್ನು ಉಳ್ಳ, ಹುಲ್ಲನ್ನು ಹೊಂದಿರುವ. **–ಜೀವಿ.** ವಿ: [–ಜೀವಿನ್] ಹುಲ್ಲು ತಿಂದು ಬದುಕುವ(ಸುಪಾ). **–ರಾಯ. ಪು:**[–ರಾಜ] ತಾಳೆಮರ(ಗಉಡ). **–ವಿಂಟಯ, –ವೇಂಟಯ. ಪು:** [–ವೃಂತಕ] ಮೂರು ಇಂದ್ರಿಯಗಳ ಒಂದು ಕ್ಷುದ್ರ ಜಂತು , [ದೇ] ಕಮಲ

ತಣಗ. ವಿ: [ತೃಣಕ] ಹುಲ್ಲಿನಿಂದ ಮಾಡಿದ

ತಣಯ. ಪು: [ತನಯ] ಮಗ, ಪುತ್ರ(ಸುಪಾ)

ತಣಯ. ವಿ: [ದೇ] ಸಂಬಂಧಿ

ತಣಯಮುದ್ದಿಆ. ಸ್ತ್ರೀ: [ದೇ] ಉಂಗುರ(ದೇ)

ತಣಯಾ. ಸ್ತ್ರೀ: [ತನಯಾ] ಮಗಳು(ಕುಮಾ)

ತಣರಾಸಿ}. ವಿ: [ದೇ] ಹರಡಿಸಲ್ಪಟ್ಟ,

ತಣರಾಸಿಅ}. ಪ್ರಸರಿಸಲ್ಪಟ್ಟ(ದೇ)

ತಣವರಂಡೀ. ಸ್ತ್ರೀ: [ದೇ] ತೆಪ್ಪ, ಹರಿಗೋಲು

ತಣಸೊಲ್ಲಿ}. ಸ್ತ್ರೀ: [ದೇ] ಮಲ್ಲಿಗೆ ಗಿಡ, ವಿ: ತೃಣವಿಲ್ಲದ.

ತನಸೊಲ್ಲಿಯಾ}.

ತಣಹಾರ}. **ಪು:** [**ತೃಣಹಾರ**] ಮೂರು ಇಂದ್ರಿಯಗಳ
ತಣಹಾರಯ}. ಪ್ರಾಣಿಯ ಒಂದು ಜಾತಿ, **ವಿ:** ಹುಲ್ಲನ್ನು ಕುಯ್ದು ಮಾರುವವನು
ತಣು. ವಿ: [**ತನು**] ಕೃಶವಾದ, ತೆಳ್ಳನೆಯ, ದುರ್ಬಲ, ಅಲ್ಪ, ಲಘುವಾದ, ಸಣ್ಣದಾದ, ಸೂಕ್ಷ್ಮವಾದ, **ಸ್ತ್ರೀ:** ದೇಹ. **–ತಣುಈ, ತಣೂ. ಸ್ತ್ರೀ:** [**–ತನ್ವೀ**] ಈಷತ್ ಪ್ರಾಗ್ಭರಾ –ಎಂಬ ಹೆಸರಿನ ಪೃಥ್ವಿ(ಠಾ), **–ಪಜ್ಜತಿ. ಸ್ತ್ರೀ:** [**–ಪರ್ಯಾಪ್ತಿ**] ಹುಟ್ಟುವ ಸಮಯದಲ್ಲಿ ಜೀವವು ಸ್ವೀಕರಿಸಿದ ಪುದ್ಗಲಗಳನ್ನು ಶರೀರ ರೂಪಕ್ಕೆ ಪರಿವರ್ತಿಸುವ ಶಕ್ತಿ(ಕಮ್ಮ). **–ಬ್ಭವ. ವಿ:** [**–ಉದ್ಭವ**] ಶರೀರದಿಂದ ಹುಟ್ಟಿದ , ಮಗ. **–ಬ್ಭವಾ. ಸ್ತ್ರೀ:** [**–ಉದ್‌ಭವಾ**] ಮಗಳು. **–ಭೂ. ಪುಂಸ್ತ್ರೀ:** [**–ಭೂ**] ಮಗ, ಮಗಳು. **–ಯ. ವಿ:** [**–ಜ**] **'ಬ್ಭವ'** ಶಬ್ದವನ್ನು ನೋಡುವುದು **–ರುಹ. ಪುಂನ:** [**–ರುಹ**]ಮೈ ಕೂದಲು(ರಂಭಾ) **ಪು:** ಮಗ, (ಭವಿ). **–ವಾಯ. ಪು:** [**–ವಾತ**] ವಾಯು –ವಿಶೇಷ.
ತಣುಅ. ಸಕ: [**ತನುಕ**] **ಮೇಲಿನ** ಶಬ್ದವನ್ನು ನೋಡುವುದು(**ಪಉಮ**)
ತಣುಅ. ಸಕ: [**ತನಯ್**] ತೆಳ್ಳಗೆ ಮಾಡು, ಕೃಶಗೊಳಿಸು
ತಣುಆ}. **ಅಕ:** [**ತನುಕಾಯ**] ದುರ್ಬಲವಾಗು
ತಣುಆಅ}.
ತಣುಆಅರಅ. ವಿ: [**ತನುತ್ವಕಾರಕ**] ಕೃಶತ್ವವನ್ನುಂಟು ಮಾಡುವ(ಗಾ)
ತಣುಇಅ. ವಿ: [**ತನೂಕೃತ**] ಕೃಶವಾಗಿ ಮಾಡಲ್ಪಟ್ಟ (ಪಾಅ)
ತಣುಈ. ಸ್ತ್ರೀ: [**ತನ್ವೀ**] ಪೃಥ್ವೀ –ವಿಶೇಷ, ಸಿದ್ಧಶಿಲೆ, ತೆಳ್ಳನೆಯ ಮೈಯವಳು, ಕೃಶಾಂಗಿ, ಸುಂದರಿ (ಷಡ್)
ತಣುಗ. 'ತಣುಅ' ಶಬ್ದವನ್ನು ನೋಡುವುದು
ತಣುಜಮ್ಮ. ಪು: [**ತನುಜನ್ಮನ್**] ಮಗ. ಪುತ್ರ
ತಣುಭವ. 'ತಣು –ಬ್ಭವ' ಶಬ್ದವನ್ನು ನೋಡುವುದು
ತಣುವೀ}. **'ತಣುಈ'** ಶಬ್ದವನ್ನು ನೋಡುವುದು
ತಣುವೀಆ}.
ತಣೂ. ಸ್ತ್ರೀ: [**ತನೂ**] ಶರೀರ, ದೇಹ(ಗಾ), ಈಷತ್ ಪ್ರಾಗ್ಭರಾ ಎಂಬ ಹೆಸರಿನ ಪೃಥ್ವಿ(ಸಮ), **–ಅ. ವಿ:** [**–ಜ**] ಶರೀರದಿಂದ ಹುಟ್ಟಿದ. **ಪು:** ಮಗ (ಉಪ), **–ಅತರಾ. ಸ್ತ್ರೀ:** [**–ಕತರಾ**] ಸಿದ್ಧಶಿಲೆ, ಎಲ್ಲ ಮುಕ್ತ ಜೀವಗಳು ಇರುವ. **–ರುಹ. ಪುಂನ:** [**–ರುಹ**] ಮೈಕೂದಲು. ಮೈ ರೋಮಗಳು.
ತಣೂಇಯ. 'ತಣುಇಅ'ಶಬ್ದವನ್ನು ನೋಡುವುದು
ತಣೇಣ(**ಅಪ**). **ಅ:** ಓಸ್ಕರ, ಸಲುವಾಗಿ
ತಣೇಸಿ. ಪು: [**ದೇ**] ತೃಣರಾಶಿ
ತಣ್ಣಯ. ಪು: [**ತರ್ಣಕ**] ಹಸುವಿನ ಕರು
ತಣ್ಣಾಯ. ವಿ: [**ದೇ**] ಒದ್ದೆಯಾದ, ಆರ್ದ್ರ(ಪಾಅ)
ತಣ್ಹಾ. ಸ್ತ್ರೀ: [**ತೃಷ್ಣಾ**] ಬಾಯಾರಿಕೆ(ಪಾಅ), ಆಸೆ, ಬಯಕೆ(ಠಾ). **–ಲು. –ಲುಅ. ವಿ:** [**–ವತ್**] ಬಾಯಾರಿದವನು(ಪಉಮ).
ತಣ್ಹಾಇಅ. ವಿ: [**ತೃಷ್ಣಿತ**] ಬಾಯಾರಿದವನು
ತತ. 'ತಯ=ತತ' ಶಬ್ದವನ್ನು ನೋಡುವುದು
ತತ್ತ. ನ: [**ತತ್ತ್ವ**] ತಥ್ಯ, ಸತ್ಯ ಸ್ವರೂಪ, .ಪರಮಾರ್ಥ, ಪರಬ್ರಹ್ಮ, **–ಓ. ಅ:** [**–ತಸ್**] ವಸ್ತುತಃ, **–ಣ್ಣು. ವಿ:** [**–ಜ್ಞ**] ತತ್ತ್ವವನ್ನು ತಿಳಿದವನು, ವಸ್ತುವಿನ ಸ್ವರೂಪ ತಿಳಿದವನು.ಬ್ರಹ್ಮ ಸ್ವರೂಪ ಅರಿತವನು ಕಾಯಿಸಲ್ಪಟ್ಟ, ಸುಡಲ್ಪಟ್ಟ, **–ಜಲಾ. ಸ್ತ್ರೀ:** [**–ಜಲಾ**] ಒಂದುನದಿ –ವಿಶೇಷ.
ತತ್ತ. ವಿ: [**ತಪ್ತ**] ಮೂರನೇ ನರಕಭೂಮಿಯ ಒಂದು ನರಕ –ಸ್ಥಾನ, ಪ್ರಥಮ ನರಕಭೂಮಿಯ ನರಕ ಸ್ಥಾನ
ತತ್ತ. ಅ: [**ತತ್ರ**] ಅಲ್ಲಿ, **–ಭವ. –ಹೋಂತ. ವಿ:** [**–ಭವತ್**] ಪೂಜ್ಯರಾದ, ಗೌರವಾರ್ಹ, ಇಂಥ ಇವರು.
ತತ್ತಟ್ಠಸುತ್ತ. ನ: [**ತತ್ತ್ವಾರ್ಥಸೂತ್ರ**] ಒಂದು ಪ್ರಸಿದ್ಧ ಜೈನದರ್ಶನ ಗ್ರಂಥ
ತತ್ತಡಿಅ. ನ: [**ದೇ**] ಬಣ್ಣ ಹಾಕಲ್ಪಟ್ಟ ಬಟ್ಟೆ,
ತತ್ತಿ. ಸ್ತ್ರೀ: [**ತೃಪ್ತಿ**] ಸಂತೋಷ,**–ಲ್ಲ.ವಿ:**[**–ಮತ್**]ತೃಪ್ತ
ತತ್ತಿ. ಸ್ತ್ರೀ: [**ದೇ**] ಆದೇಶ, ಆಜ್ಞೆ, ತತ್ಪರತೆ, ಚಿಂತನೆ, ವಿಚಾರ, ವಾರ್ತೆ, ಮಾತು(ಗಾ). ಕಾರ್ಯ, ಪ್ರಯೋಜನ(ಪಣ್ಣ)
ತತ್ತಿಯ. ವಿ: [**ತಾವತ್**] ಅಷ್ಟು ಪ್ರಮಾಣದ, ಅಷ್ಟು ಅಧಿಕವಾದ, ಅಳತೆ
ತತ್ತಿಲ}. **ವಿ:** [**ದೇ**] ಕೆಲಸದಲ್ಲಿ ಆಸಕ್ತನಾದ,
ತತ್ತಿಲ್ಲ}. ಮಗ್ನನಾದ
ತತ್ತು. (**ಅಪ**). **'ತತ್ಥ=ತತ್ರ'** ಶಬ್ದವನ್ನು ನೋಡುವುದು
ತತ್ತುಡಿಲ್ಲ. ನ: [**ದೇ**] ಸುರತ, ಸಂಭೋಗ

ತತ್ತುರಿಅ. ವಿ: [ದೇ] ರಂಜಿತ, ಬಣ್ಣ ಹಾಕಲ್ಪಟ್ಟ, ಸಂತೋಷಪಡಿಸಲ್ಪಟ್ಟ
ತತ್ತೋ. **'ತಟ'** ಶಬ್ದವನ್ನು ನೋಡುವುದು **–ಮುಹ.** ವಿ: [–ಮುಖ] ಯಾರ ಮುಖ ಆ ಕಡೆಗಿದೆಯೋ ಅವನು(ಸುರ)
ತತ್ತೋಹುತ್ತ. ನ: [ದೇ] ಅದರ ಎದುರುಗಡೆ, ಅದರ ಮುಂದೆ(ಸುರ)
ತತ್ಥ. ಅ: [ತತ್ರ] ಅಲ್ಲಿ, ಅದರಲ್ಲಿ. **–ಭವ.** ವಿ: [–ಭವತ್] ಪೂಜ್ಯನಾದ, ಗೌರವಕ್ಕೆ ಅರ್ಹನಾದ **–ಯ.** ವಿ: [–ತ್ಯ] ಅಲ್ಲಿಯೇ ವಾಸಮಡುತ್ತಿರುವ, ಅಲ್ಲಿಯೇ ಇರುವ(ಉಪ)
ತತ್ಥ. ವಿ: [ತ್ರಸ್ತ] ಹೆದರಿದ, ಕಳವಳಗೊಂಡ, ಭೀತ
ತತ್ಥ. **'ತಚ್ಚ=ತಥ್ಯ'** ಶಬ್ದವನ್ನು ನೋಡುವುದು
ತತ್ಥರಿ. ಪು: [ತ್ರಸ್ತರಿ] ನಯ –ವಿಶೇಷ,
ತದಾ. **'ತಯಾ= ತದಾ'** ಶಬ್ದವನ್ನು ನೋಡುವುದು
ತದೀಯ. ವಿ: [ತ್ವದೀಯ] ನಿನ್ನ, ನಿನ್ನ ಸಂಬಂಧವಾದ
ತದೋ. **'ತಟ'** ಶಬ್ದವನ್ನು ನೋಡುವುದು
ತದ್ದಿಅಚಯ. ನ: [ದೇ] ನೃತ್ಯ, ನಾಟ್ಯ(ದೇ)
ತದ್ದೋಸಿ. **'ತ –ದ್ದೋಸಿ=ತ್ವಗ್‌ದೋಷಿನ್'** ಶಬ್ದವನ್ನು ನೋಡುವುದು
ತದ್ದಿಅಸ}. ನ: [ದೇ] ಪ್ರತಿದಿನ, ಅನುದಿನ, ದಿನವೂ
ತದ್ದಿಅಸಿಅ}. (ಗಉಡ)
ತದ್ದಿಅಹ}.
ತದ್ಧಿಯ. ಪು: [ತದ್ಧಿತ] ವ್ಯಾಕರಣದಲ್ಲಿ ಪ್ರಸಿದ್ಧವಾದ ಪ್ರತ್ಯಯ: ಪ್ರಕೃತಿಯಿಂದ ಇನ್ನೊಂದು ಪ್ರಕೃತಿ ಯಾಗಲು ಸೇರುವ ಪ್ರತ್ಯಯ, ತದ್ಧಿತ ಪ್ರತ್ಯಯ ದೊರೆಯಲು ಕಾರಣಭೂತವಾದ ಅರ್ಥ
ತಧಾ. **'ತಹಾ'** ಶಬ್ದವನ್ನು ನೋಡುವುದು
ತನ್ನಯ. **'ತಣ್ಣಯ'** ಶಬ್ದವನ್ನು ನೋಡುವುದು
ತನ್ಹಾ. **'ತಣ್ಹಾ'** ಶಬ್ದವನ್ನು ನೋಡುವುದು
ತಪ. **'ತವ=ತಪಸ್'** ಶಬ್ದವನ್ನು ನೋಡುವುದು
ತಪ್ಪ. **ಸಕ:** [ತಪ್] ತಪಸ್ಸುಮಾಡು, **ಅಕ:** ಬಿಸಿಯಾಗು, ಕಾಯಿಸು, ಸುಡು
ತಪ್ಪ. **ಸಕ:** [ತರ್ಪಯ್] ತೃಪ್ತಿಪಡಿಸು,
ತಪ್ಪ. ನ: [ತಲ್ಪ] ಹಾಸಿಗೆ, ಶಯ್ಯೆ, **–ಅ.** ವಿ: [–ಗ] ಹಾಸಿಗೆಯ ಮೇಲೆ ಮಲಗುವವನು, ನಿದ್ರಿಸುವವನು(ಪಣ್ಹಾ).
ತಪ್ಪ. ಪುಂನ: [ತಪ್ರ] ತೆಪ್ಪ(ವಿಸೇ), ದೋಣಿ
ತಪ್ಪಕ್ಖಿಅ. ವಿ: [ತತ್ಪಾಕ್ಷಿಕ] ಆ ಪಕ್ಷದ
ತಪ್ಪಜ್ಜ. ನ: [ತಾತ್ಪರ್ಯ] ತಾತ್ಪರ್ಯ
ತಪ್ಪಣ. ನ: [ತರ್ಪಣ] ಹುರಿಹಿಟ್ಟು, **ಸ್ತ್ರೀನ:** ತೃಪ್ತಿ, ಸಂತೋಷಪಡಿಸುವುದು(ಸುಪಾ), ಸ್ನಿಗ್ಧ ವಸ್ತುವಿನಿಂದ ಮೈಯನ್ನು ಉಜ್ಜಿಕೊಳ್ಳುವುದು (ಣಾಂಯಾ), ಪರ್ವಕಾಲದಲ್ಲಿ ಪಿತೃಗಳ ಪ್ರೀತ್ಯರ್ಥವಾಗಿ ಮಾಡುವ ಜಲತರ್ಪಣ.
ತಪ್ಪಣಗ. ನ: [ದೇ] ಜೈನ ಸಾಧುವಿನ ಒಂದುಪಾತ್ರೆ
ತಪ್ಪಣಾಡುಆಲಿಆ. **ಸ್ತ್ರೀ:** [ದೇ] ಹುರಿಟ್ಟು ಮಿಶ್ರಿತ ಭೋಜನ –ವಿಶೇಷ
ತತಪ್ಪಭಿಇಂ. ಅ: [ತತ್‌ಪ್ರಭೃತಿ] ಅಲ್ಲಿಂದ, ಆಗಿನಿಂದ, ಆಗಿನಿಂದ ತೊಡಗಿ (ಕಪ್ಪ)
ತಪ್ಪಮಾಣ. **'ತಪ್ಪ=ತರ್ಪಯ್'** ಶಬ್ದವನ್ನು ನೋಡುವುದು
ತಪ್ಪರ. ವಿ: [ತತ್ಪರ] ಆಸಕ್ತನಾದವನು
ತಪ್ಪುರಿಸ. ಪು: [ತತ್ಪುರುಷ] ವ್ಯಾಕರಣದಲ್ಲಿ ಪ್ರಸಿದ್ಧವಾದ ತತ್ಪುರುಷ ಸಮಾಸ(ಅಣು)
ತಪ್ಪೇಯಚ್ಚ. **'ತಪ್ಪ=ತರ್ಪಯ್'** ಶಬ್ದವನ್ನು ನೋಡುವುದು
ತಬ್ಭತ್ತಿಯ. ವಿ: [ತದ್ಭಕ್ತಿಕ] ಅವನ ಸೇವಕ(ಭಗ)
ತಬ್ಭವ. ಪು: [ತದ್ಭವ] ಅದರಲ್ಲಿ ಹುಟ್ಟಿದ, ಅದರಿಂದ ಉಂಟಾದ, ಅದೇ ಜನ್ಮ, ಈ ಜನ್ಮಕ್ಕೆ ಸದೃಶವಾದ ಪರ –ಜನ್ಮ. **–ಮರಣ.** ನ: [–ಮರಣ] ಈ ಜನ್ಮಕ್ಕೆ ಸಮನಾದ ಜನ್ಮ ಪರಲೋಕದಲ್ಲೂ ಪ್ರಾಪ್ತವಾಗುವುದಷ್ಟೇ ಅಲ್ಲದೆ ಇಲ್ಲಿ ಮನುಷ್ಯನಾಗಿ ಹುಟ್ಟಿರುವ ಕಾರಣದಿಂದ ಮುಂದಿನ ಜನ್ಮದಲ್ಲೂ ಮನುಷ್ಯನಾಗಲು ಕಾರಣವಾಗುವಂಥ ಮರಣ (ಭಗ)
ತಬ್ಭಾರಿಯ. ಪು:[ತದ್‌ಭಾರ್ಯ] ದಾಸ, ಆಳು, ನೌಕರ
ತಬ್ಭಾರಿಯ. ಪು: [ತದ್‌ಭಾರಿಕ] ಮೇಲಿನ ಶಬ್ದವನ್ನು ನೋಡುವುದು
ತಬ್ಭೂಮ. ವಿ: [ತದ್‌ಭೌಮ] ಅದೇ ಭೂಮಿಯಲ್ಲಿ ಹುಟ್ಟಿದ(ಬೃಹ)
ತಭತ್ತಿ. ಅ: [ದೇ] ಬೇಗನೆ, ಕೂಡಲೆ, ಶೀಘ್ರವೇ
ತಮ. **ಅಕ:** [ತಮ್] ಶೋಕಿಸು, ಖೇದಪಡು. **ಸಕ:** ಬಯಸು, ಇಚ್ಛಿಸು

ತಮ. ಪು: [ದೇ] ಶೋಕ, ದುಃಖ(ದೇ)

ತಮ. ಪುಂನ: [**ತಮಸ್**] ಕತ್ತಲೆ, ಅಂಧಕಾರ, ಅಜ್ಞಾನ(ಔಪ). **–ತಮಪ್ಪಭಾ.** ಸ್ತ್ರೀ: [**–ತಮಪ್ರಭಾ**] ಏಳನೇ ನರಕ –ಭೂಮಿ(ಅಣು). **–ತಮಾ.** ಸ್ತ್ರೀ: [**–ತಮಾ**] ಏಳನೇ ನರಕ –ಭೂಮಿ. **–ತಿಮಿರ.** ನ: [**–ತಿಮಿರ**] ಕತ್ತಲೆ. ಅಜ್ಞಾನ, ಕತ್ತಲೆಯ ಸಮೂಹ(ಬೃಹ). **–ಪ್ಪಭಾ.** ಸ್ತ್ರೀ: [**–ಪ್ರಭಾ**] ಆರನೇ ನರಕ –ಭೂಮಿ(ಪಣ್ಣ)

ತಮಂಗ. ಪು: [**ತಮಂಗ**] ಮದಿಸಿದ ಆನೆ, ಮನೆಯ ಅಂಗಳ

ತಮಂಧಯಾರ. ಪು: [**ತಮೋಂಧಕಾರ**] ದಟ್ಟ ಕತ್ತಲೆ, ಗಾಢಾಂಧಕಾರ(ಪಉಮ)

ತಮಣ. ನ: [ದೇ] ಅಡುಗೆಯ ಒಲೆ

ತಮಣಿ. ಪುಂಸ್ತ್ರೀ: [ದೇ] ಭುಜ, ಕೈ, ಭೂರ್ಜ ವೃಕ್ಷದ ತೊಗಟೆ(ದೇ)

ತಮಯ. ಪು: [**ತಮಕ**] ನಾಲ್ಕನೇ ನರಕಭೂಮಿಯ ಒಂದು ನರಕ ಸ್ಥಾನ

ತಮಸ. ನ: [**ತಮಸ್**] ಕತ್ತಲೆ, ಅಂಧಕಾರ

ತಮಸ. ವಿ: [**ತಾಮಸ್**] ಕತ್ತಲೆಯಿಂದ ಕೂಡಿರುವ, ಕತ್ತಲೆಯಿರುವ

ತಮಸ. **'ತಮ=ತಮಸ್'** ಶಬ್ದವನ್ನು ನೋಡುವುದು

ತಮಸ್ಸಈ. ಸ್ತ್ರೀ: [**ತಮಸ್ವತೀ**] ಘೋರಾಂಧಕಾರದ ರಾತ್ರಿ, ದಟ್ಟ ಕತ್ತಲೆ ಕವಿದ ಇರುಳು

ತಮಾ. ಸ್ತ್ರೀ: [**ತಮಾ**] ಆರನೇ ನರಕ–ಭೂಮಿ, ಕೆಳಗಿನ ದಿಕ್ಕು

ತಮಾಡ. ಸಕ: [**ಭ್ರಮಯ್**] ತಿರುಗಿಸು, ಸುತ್ತಿಸು

ತಮಾಲ. ಪು: [**ತಮಾಲ**] ಹೊಂಗೆ ಮರ(ಉಪ) ನ: ಹೊಂಗೆ ಹೂವು

ತಮಿಸ. ನ: [**ತಮಿಸ್ರ**] ಕತ್ತಲೆ. **–ಗುಹಾ.** ಸ್ತ್ರೀ: [**–ಗುಹಾ**] ಒಂದು ಗುಹೆ

ತಮಿಸಂಧಯರ. ಪು: [**ತಮಿಸ್ರಾಂಧಕರ**] ದಟ್ಟ ಕತ್ತಲೆ, ಗಾಢಾಂಧಕಾರ(ಸೂಅ)

ತಮಿಸ್ಸ. **'ತಮಿಸ'** ಶಬ್ದವನ್ನು ನೋಡುವುದು

ತಮೀ. ಸ್ತ್ರೀ: [**ತಮೀ**] ರಾತ್ರಿ, ನಿಶೆ(ಗಉಡ)

ತಮುಕ್ಕಾಯ. ಪು: [**ತಮಸ್ಕಾಯ**] ಕತ್ತಲೆಯ ಸಮೂಹ

ತಮುಯ. ವಿ: [**ತಮಸ್**] ಹುಟ್ಟುಗುರುಡ, ಜಾತ್ಯಂಧ, ಅತ್ಯಂತ ಅಜ್ಞಾನಿ(ಸೂಅ)

ತಮೋಕಸಿಯ ವಿ: [**ತಮಃಕಾಷಿಕ**] ರಹಸ್ಯ ಕ್ರಿಯೆಗಳನ್ನು ಮಾಡಿದ(ಸೂಯ)

ತಮ್ಮ. ಅಕ: [**ತಮ್**] ಶೋಕಿಸು, ದುಃಖಿಸು(ಗಾ)

ತಮ್ಮ. **'ತಮ=ತಮ್'** ಶಬ್ದವನ್ನು ನೋಡುವುದು

ತಮ್ಮಣ. ವಿ: [**ತನ್ಮನಸ್**] ತಲ್ಲೀನನಾಗಿರುವ, ಅದರಲ್ಲೇ ಮುಳುಗಿರುವ(ವಿಪಾ)

ತಮ್ಮಯ. ವಿ: [**ತನ್ಮಯ**] ತಲ್ಲೀನ, ಅದರಲ್ಲಿ ಮುಳುಗಿರುವ, ಅದರಿಂದ ಮಾಡಲ್ಪಟ್ಟ

ತಮ್ಮಿ. ನ: [ದೇ] ಬಟ್ಟೆ, ವಸ್ತ್ರ(ಗಉಡ)

ತಮ್ಮಿರ. ವಿ: [**ತಮಿನ್**] ದುಃಖಿಸುವವನು, ಶೋಕಿಸುವವನು(ಗಾ)

ತಯ. ವಿ: [**ತತ**] ವಿಸ್ತಾರವಾದ, ನ: ವೀಣೆ ಮೊದಲಾದ ವಾದ್ಯ(ಠಾ)

ತಯ. ನ: [**ತ್ರಯ**] ಮೂರರ ಗುಂಪು, ಮೂರರ ಸಮೂಹ, ತ್ರಿಕ

ತಯ –. **'ತಯಾ=ತದಾ'** ಶಬ್ದವನ್ನು ನೋಡುವುದು **–ಪ್ಪಭಿಇ.** ಅ: [**–ಪ್ರಭೃತಿ**] **ಆಗಿನಿಂದ, ಅಲ್ಲಿಂದ**

ತಯ –. **'ತಯಾ=ತ್ವಚ್'** ಶಬ್ದವನ್ನು ನೋಡುವುದು **–ಕ್ಖಾಯ.** ವಿ: [**–ಖಾದ**] ಚರ್ಮವನ್ನು ತಿನ್ನುವ (ಠಾ)

ತಯಾ. ಅ: [**ತದಾ**] ಆಗ, ಆ ಕಾಲದಲ್ಲಿ(ಕುಮಾ)

ತಯಾ. ಸ್ತ್ರೀ: [**ತ್ವಚ್**] ಚರ್ಮ, ಮರದ ತೊಗಟೆ, ಸಿಪ್ಪೆ, ಮೃಗದ ಚರ್ಮ, ದಾಲ್ಚಿನ್ನಿ, **–ಮಂತ.** ವಿ: [**–ಮತ್**] ಚರ್ಮವನ್ನು ಹೊಂದಿರುವ, **–ವಿಸ.** ಪು: [**–ವಿಷ**] ಸರ್ಪದ ಒಂದು ಜಾತಿ(ಜೀವ)

ತಯಾಣಂತರ. ನ: [**ತದನಂತರ**] ಆಮೇಲೆ, ಅನಂತರ (ಔಪ)

ತಯಾಣಿ}. ಅ: [**ತದಾನೀಮ್**] ಆಗ, ಆ ಸಮಯದಲ್ಲಿ

ತಯಾಣಿಂ}.

ತಯಾಣುಗ. ವಿ: [**ತದನುಗ**] ಅವನನ್ನು ಅನುಸರಿಸುವವನು

ತರ. ಅಕ: [**ತೃ**] ಕ್ಷೇಮದಿಂದಿರು, ಸ್ವಸ್ಥವಾಗಿರು, ರೋಗರಹಿತನಾಗಿರು

ತರ. ಅಕ: [**ತ್ವರ್**] ಆತುರಪಡು, ವೇಗಗೊಳಿಸು, ಅವಸರಮಾಡು

ತರ. ಅಕ: [**ಶಕ್**] ಸಮರ್ಥನಾಗು, ವ. ಕೃ –**'ತರಂತ'**

ತರ. ಸಕ: [**ತೃ**] ಈಜು. ವ. ಕೃ –**ತರಮಾಣ**

ತರ. ನ: [ತರಸ್] ವೇಗ, ಬಲ, ಪರಾಕ್ರಮ, **–ಮಲ್ಲಿ.** ವಿ: [–ಮಲ್ಲಿ] ವೇಗವುಳ್ಳ, ಬಲವುಳ್ಳ. **–ಮಲ್ಲಿಹಾಯಣ.** ವಿ: [–ಮಲ್ಲಿಹಾಯನ] ತರುಣ, ಯುವಕ(ಔಪ)

ತರಂಗ. ಪು: [ತರಂಗ] ಅಲೆ, ವೀಚಿ(ಪಣ್ಣ) **–ಣಂದಣ.** ನ: [–ನಂದನ] ಒಬ್ಬ ದೊರೆ. **–ಮಾಲಿ.** ಪು: [–ಮಾಲಿನ್] ಸಮುದ್ರ, ಸಾಗರ. **–ವಈ.** ಸ್ತ್ರೀ: [ವತೀ] ಒಬ್ಬ ನಾಯಕಿ. ಒಂದು ಕಥಾ ಗ್ರಂಥ(ದಂಸ)

ತರಂಗಲೋಲಾ. ಸ್ತ್ರೀ: [ತರಂಗಲೋಲಾ] ಬಪ್ಪಭಟ್ಟಿ ಸೂರಿ ರಚಿಸಿದ ಅದ್ಭುತ ಪ್ರಾಕೃತ ಜೈನ ಗ್ರಂಥ

ತರಂಗಿ. ವಿ: [ತರಂಗಿನ್] ಅಲೆಗಳಿಂದ ಕೂಡಿದ, ತರಂಗಯುಕ್ತ(ಗಉಡ)

ತರಂಗಿಅ. ವಿ: [ತರಂಗಿತ] ಅಲೆಗಳಿಂದ ಕೂಡಿದ, ತರಂಗಯುಕ್ತ(ಗಉಡ). **–ಣಾಹ.** ಪು: [–ನಾಥ] ಸಮುದ್ರ, ಸಾಗರ

ತರಂಗಿಣೀ. ಸ್ತ್ರೀ: [ತರಂಗಿಣೀ] ನದಿ

ತರಂಗಿಣೀಣಾಹ. ಪು: [ತರಂಗಿಣೀನಾಥ] ಸಮುದ್ರ, ಸಾಗರ.

ತರಂಡ}. ಪುಂನ: [ತರಂಡ, ಕ] ತೆಪ್ಪ, ದೋಣಿ,
ತರಂಡಯ}. ಹಡಗು(ಸುಪಾ)

ತರಗ. ವಿ: [ತರ, –ಕ] ಈಜುಗಾರ(ತಾ)

ತರಚ್ಛ. ಪುಂಸ್ತ್ರೀ: [ತರಕ್ಷ] ಹುಲಿಯ ಜಾತಿಗೆ ಸೇರಿದ ಕಾಡು ಪ್ರಾಣಿಯಾದ ಕಿರುಬ(ಪಣ್ಣ). ಸ್ತ್ರೀ: **–ಚ್ಛೀ. –ಭಲ್ಲ.** ಪುಂಸ್ತ್ರೀ: [–ಭಲ್ಲ] ಒಂದು ಕಾಡು ಮೃಗ (ಪಉಮ)

ತರಟ್ಟ. ವಿ: [ದೇ] ಪ್ರತಿಭೆಯಿಂದ ಕೂಡಿದ, ನವನವವಾಗಿ ಬೆಳೆಯುವ ಬುದ್ಧಿಯ ಧೈರ್ಯಶಾಲಿ

ತರಟ್ಟಾ}. ಸ್ತ್ರೀ: [ದೇ] ಪ್ರಗಲ್ಭ ಸ್ತ್ರೀ, ಬುದ್ಧಿವಂತ
ತರಟ್ಟೀ}. ಹೆಣ್ಣು, ಧೈರ್ಯಶಾಲಿ ಹೆಣ್ಣು

ತರಣ. ನ: [ತರಣ] ಈಜುವುದು(ಸುಪಾ), ಹಡಗು, ದೋಣಿ

ತರಣಿ. ಪು: [ತರಣಿ] ಸೂರ್ಯ, ರವಿ(ಕುಮಾ), ಹಡಗು, ನೌಕೆ, ಸಣ್ಣ ಗೋರಂಟಿ ಗಿಡ, ಎಕ್ಕದಗಿಡ

ತರತಮ. ವಿ: [ತರತಮ] ಹೆಚ್ಚುಕಡಿಮೆ, ನ್ಯೂನಾಧಿಕ(ಕಪ್ಪ)

ತರಮಾಣ. 'ತರ=ತೃ' ಶಬ್ದವನ್ನು ನೋಡುವುದು

ತರಲ. ವಿ: [ತರಲ] ಚಂಚಲವಾದ, ಕಂಪಿಸುವ, ಚಪಲ

ತರಲ. ಸಕ: [ತರಲಯ್] ಚಂಚಲಗೊಳಿಸು, ಚಲನಗೊಳಿಸು

ತರಲಣ. ನ: [ತರಲನ] ಚಂಚಲಗೊಳಿಸುವುದು, ಅಲುಗಾಡಿಸುವುದು

ತರಲಾವಿಅ. ವಿ: [ತರಲಿತ] ಚಂಚಲಗೊಳಿಸಲ್ಪಟ್ಟ, ನಡೆಯುವಂತೆ ಮಾಡಲ್ಪಟ್ಟ(ಭವಿ)

ತರಲಿ. ವಿ: [ತರಲಿನ್] ಅಲುಗಾಡಿಸುವವನು

ತರಲಿಅ. ವಿ: [ತರಲಿತ] ಚಂಚಲಗೊಳಿಸಲ್ಪಟ್ಟ(ಗಾ)

ತರವಟ್ಟ. ಪು: [ದೇ] ಹಾಗಲಗಿಡ (ದೇ)

ತರಸ. ನ: [ದೇ] ಮಾಂಸ

ತರಸಾ. ಅ: [ತರಸಾ] ಶೀಘ್ರವಾಗಿ, ಬೇಗನೆ, ವೇಗದಿಂದ ಕೂಡಿದ(ಸುಪಾ)

ತರಾ. ಸ್ತ್ರೀ: [ತ್ವರಾ] ಬೇಗನೆ, ಶೀಘ್ರವಾಗಿ

ತರಿಅವ್ವ. ತೆಪ್ಪ, ಚಿಕ್ಕ ನೌಕೆ

ತರಿಉ. ವಿ:[ತರೀತೃ] ಈಜುವವನು, ಈಜುಗಾರ (ವಿಸೇ)

ತರಿಉಂ. 'ತರ –ತೃ' ಶಬ್ದವನ್ನು ನೋಡುವುದು

ತರಿಯಾ. ಸ್ತ್ರೀ: [ದೇ] ಹಾಲು ಮಂತಾದವುಗಳ ಸಾರ, ಕೆನೆ (ಪ್ರಭಾ)

ತರಿಹಿ. ಅ: [ತರ್ಹಿ] ಹಾಗಾದರೆ, ಅಂದ ಮೇಲೆ, ಆ ಪಕ್ಷದಲ್ಲಿ

ತರೀ. ಸ್ತ್ರೀ: [ತರೀ] ನೌಕೆ, ತೆಪ್ಪ(ಸುಪಾ)

ತರು. ಪು: [ತರು] ಮರ, ವೃಕ್ಷ

ತರುಣ. ವಿ: [ತರುಣ] ಯುವಕ, (ಪಉಮ)

ತರುಣಗ}. ವಿ: [ತರುಣಕ] ಬಾಲಕ, ಕಿಶೋರ,
ತರುಣಯ}. ಹುಡುಗ(ಸೂಅ), ಹೊಸತಾದ, ಸ್ತ್ರೀ: **–ಣಿಗಾ, –ಣಿಯಾ**

ತರುಣರಹಸ. ಪುಂನ: [ದೇ] ರೋಗ, ಕಾಯಿಲೆ (ಓಫ)

ತರುಣಿಮ. ಪುಂಸ್ತ್ರೀ: [ತರುಣಿಮನ್] ಯೌವನ, ತಾರುಣ್ಯ

ತರುಣೀ. ಸ್ತ್ರೀ: [ತರುಣೀ] ಯುವತಿ, ಪ್ರಾಯದ ಹೆಣ್ಣು

ತಲ. ಸಕ: [ತಲ್] ಎಣ್ಣೆಯಲ್ಲಿ ಕರಿ

ತಲ. ನ: [ದ] ಹಾಸಿಗೆ, ಶಯ್ಯೆ, ಪು: ಊರಿನ ಅಥವಾ ಹಳ್ಳಿಯ ಮುಖಂಡ(ದೇ)

ತಲ. ಪು: [ತಲ] ತಾಳೆಮರ, ಹನೆಮರ, ನ: ಸ್ವರೂಪ, ಭೂಮಿಕೆ, ಕೆಳಭಾಗ, ಕೆಳಗೆ, ಕೈಯ ಒಳಭಾಗ, ಅಂಗೈ, ಮಧ್ಯಭಾಗ, ನೀರಿನ ತಳಭಾಗ, ಅಂಗಾಲು(ಪಣ್ಣ). **–ತಾಲ.** ಪುಂನ: [–ತಲ] ಕೈ ಚಪ್ಪಾಳೆ, ಒಂದು ವಾದ್ಯ –ವಿಶೇಷ.

–ಪ್ಪಹಾರ. ಪು: [–ಪ್ರಹಾರ] ಕಪಾಳ ಮೋಕ್ಷ,
–ಭಂಗಯ. ನ: [–ಭಂಗಕ] ಕೈ ಆಭರಣ,
–ವಟ್ಟ. ನ: [–ಪಟ್ಟ] ಹಾಸಿಗೆಯ ಮೇಲಿನ ಚಾದರ.
–ವಟ್ಟ. ನ: [–ಪತ್ರ] ತಾಳೆಮರದ ಎಲೆ, ತಾಳಪತ್ರ
ತಲ. ಪುಂನ: [ತಲ] ವಾದ್ಯ –ವಿಶೇಷ, ಅಂಗೈ, ತಾಳೆ ಗರಿ. **–ವರ. ಪು:** [–ವರ] ರಾಜನು ರತ್ನ ಖಚಿತವಾದ ಚಿನ್ನದ ಸನ್ನದನ್ನು ಯಾರಿಗೆ ನೀಡಿದ್ದಾನೋ ಅವನು.
ತಲಅಂಟ. ಸಕ: [ಭ್ರಮ್] ಸುತ್ತಾಡು, ಸಂಚರಿಸು, ತಿರುಗಾಡು
ತಲಆಗತ್ತಿ. ಪು: [ದೇ] ಬಾವಿ
ತಲಓಡಾ. ಸ್ತ್ರೀ: [ದೇ] ಒಂದು ವನಸ್ಪತಿ –ವಿಶೇಷ(ಪಣ್ಣ)
ತಲಣ. ನ: [ತಲನ] ಹುರಿಯುವುದು, ಬಾಣಲೆ(ಪಣ್ಣ)
ತಲಪ್ಪ. ಅಕ: [ತಪ್] ಕಾಯು, ಬಿಸಿಯಾಗು, ಸುಡು
ತಲಪ್ಫಲ. ಪು: [ದೇ] ಬತ್ತ, ನೆಲ್ಲು
ತಲವತ್ತ. ಪು: [ದೇ] ಕಿವಿಯ ಆಭರಣ(ಪಾಅ), ಉತ್ತಮಾಂಗ, ಶಿರಸ್ಸು
ತಲವರ. ಪು: [ದೇ. ತಲವರ] ತಳವಾರ, ಕೊತವಾಲ, ನಗರ –ರಕ್ಷಕ(ಣಾಯಾ)
ತಲವಿಂಟ}. ನ: [ತಾಲವೃಂತ] ಬೀಸಣಿಗೆ, ವ್ಯಜನ
ತಲವೆಂಟ}.
ತಲವೊಂಟ}.
ತಲಸಾರಿಅ. ವಿ: [ದೇ] ಶೋಧಿಸಲ್ಪಟ್ಟ, ಕರಗಿಸಲ್ಪಟ್ಟ, ಮುಗ್ಧ, ಮೂರ್ಖ
ತಲಹಟ್ಟ. ಸಕ: [ಸಿಚ್] ಸಿಂಪಡಿಸು,
ತಲಹಟ್ಟಿಂಉಸಾ. ಸ್ತ್ರೀ:[ದೇ] ಬೆಟ್ಟದ ಬುಡ, ಪರ್ವತದಮೂಲ.
ತಲಾಈ. ಸ್ತ್ರೀ: [ತಡಾಗಿಕಾ] ಚಿಕ್ಕ ಕೆರೆ(ಕುಮಾ)
ತಲಾಗ}. ನ: [ತಡಾಗ] ಕೆರೆ, ಸರೋವರ, ಕೊಳ,
ತಲಾಯ}. ಜಲಾಶಯ(ಔಪ)
ತಲಾರ. ಪು: [ದೇ] ನಗರ ರಕ್ಷಕ, ಕೊತವಾಲ, ತಳವಾರ
ತಲಾರಕ್ಖ. ಪು: [ದೇ. ತಲಾರಕ್ಷ] ಮೇಲಿನ ಶಬ್ದವನ್ನು ನೋಡುವುದು
ತಲಾವ. 'ತಲಾಗ' ಶಬ್ದವನ್ನು ನೋಡುವುದು
ತಲಿಅ. ವಿ: [ತಲಿತ] ಹುರಿಯಲ್ಪಟ್ಟ, ಕರಿಯಲ್ಪಟ್ಟ(ವಿಪಾ)
ತಲಿಅ}. ನ: [ದೇ] ಚರ್ಮದ ಚಪ್ಪಲಿ(ಬೃಹ)
ತಲಿಗಾ}.
ತಲಿಣ. ವಿ: [ತಲಿನ] ಸೂಕ್ಷ್ಮವಾದ, ತೆಳ್ಳನೆಯ(ಪಣ್ಣ), ತುಚ್ಛ, ಕ್ಷುದ್ರ, ದುರ್ಬಲ
ತಲಿಮ. ಪುಂನ: [ದೇ] ಹಾಸಿಗೆ, ಶಯ್ಯೆ(ಗಉಡ), ನೆಲಗಟ್ಟು, ಚಪ್ಪಡಿ ಅಥವಾ ಬಿಲ್ಲೆಗಳನ್ನು ಹದ್ದಿ ನಿರ್ಮಿಸಿರುವ ಭೂಮಿ. ಮನೆಯ ಛಾವಣಿಯ ಭೂಮಿ, ಮಾಳಿಗೆ, ವಾಸಭವನ, ಮಲಗುವ ಮನೆ, ಹುರಿಯುವ ಬಾಣಲಿ
ತಲಿಮಾ. ಸ್ತ್ರೀ: [ತಲಿಮಾ] ಒಂದು ವಾದ್ಯವಿಶೇಷ
ತಲುಣ. 'ತರುಣ' ಶಬ್ದವನ್ನು ನೋಡುವುದು
ತಲೇರ. (ದೇ). 'ತಲಾರ' ಶಬ್ದವನ್ನು ನೋಡುವುದು
ತಲ್ಲ. ನ: [ದೇ] ಚಿಕ್ಕ ಕೊಳ, ಸರೋವರ, ಒಂದು ಬಗೆಯ ತೃಣ, ಹಾಸಿಗೆ
ತಲ್ಲಕ. ಪು: [ತಲ್ಲಕ] ಒಂದು ಬಗೆಯ ಮದ್ಯ
ತಲ್ಲಡ. ನ: [ದೇ] ಹಾಸಿಗೆ, ಶಯ್ಯೆ
ತಲ್ಲಿಚ್ಛ. ವಿ: [ದೇ] ಆಸಕ್ತನಾದ, ಮಗ್ನನಾದ, ಮುಳುಗಿರುವ(ಪಾಅ)
ತಲ್ಲೇಸ}. ವಿ: [ತಲ್ಲೇಶ್ಯ] ಯಾವುದರಲ್ಲಿ ದೃಢವಾದ
ತಲ್ಲೆಸ್ಸ}. ಮನಸ್ಸಿದೆಯೋ, ಅದರಲ್ಲೇ ಮುಳುಗಿದ, ಅದರಲ್ಲೇ ಆಸಕ್ತನಾದ(ವಿಪಾ)
ತಲ್ಲೋವಿಲ್ಲಿ. ಸ್ತ್ರೀ: [ದೇ] ವ್ಯಾಕುಲಗೊಳ್ಳುವುದು, ವೇದನೆಯಿಂದ ಒದ್ದಾಡುವುದು
ತವ. ಅಕ: [ತಪ್] ತಪಿಸು, ಬಿಸಿಯಾಗು. **ಸಕ:** ತಪಸ್ಸುಮಾಡು
ತವ. ಸಕ: [ತಾಪಯ್] ಕಾಯಿಸು, ಬಿಸಿಮಾಡು
ತವ. ಪುಂನ: [ತಪಸ್] ತಪಸ್ಸು, ತಪಶ್ಚರ್ಯೆ, **–ಗಚ್ಛ. ಪು:** [–ಗಚ್ಛ] ಜೈನ ಮುನಿಗಳ ಒಂದು ಶಾಖೆ, ಗಣ –ವಿಶೇಷ. **–ಗಣ. ಪು:** [–ಗಣ] ಅದೇ ಅರ್ಥ. **–ಚರಣ, –ಚ್ಚರಣ. ನ:** [–ಚರಣ] ತಪಶ್ಚರ್ಯೆ, ತಪಸ್ಸು ಮಾಡುವುದು (ಉಪ). ತಪಸ್ಸಿನ ಫಲ, ಸ್ವರ್ಗದ ಭೋಗ **–ಚರಣಿ. ವಿ:** [–ಚರಣಿನ್] ತಪಸ್ಸನ್ನು ಮಾಡುವವನು. **'ತವೋ'** ಶಬ್ದವನ್ನು ನೋಡುವುದು
ತವ. 'ಥವ' ಶಬ್ದವನ್ನು ನೋಡುವುದು
ತವ. 'ಥುಣ' ಶಬ್ದವನ್ನು ನೋಡುವುದು
ತವಗ್ಗ. ಪು: [ತವರ್ಗ] 'ತ' ಕಾರದಿಂದ ಹಿಡಿದು 'ನ' ಕಾರದವರೆಗೆ ಇರುವ ಐದು ಅಕ್ಷರಗಳು. **–ಪವಿಭತ್ತಿ. ನ:** [–ಪ್ರವಿಭಕ್ತಿ] ನಾಟ್ಯ –ವಿಶೇಷ.

ತವಣ. ಪು: [**ತಪನ**] ಮೂರನೇ ನರಕ–ಭೂಮಿಯ ಒಂದು ನರಕ ಸ್ಥಾನ. –**ತಣಯಾ. ಸ್ತ್ರೀ:** [–**ತನಯಾ**] ತಾಪೀ ನದಿ

ತವಣ. ಪು: [**ತಪನ**] ಸೂರ್ಯ, ರವಿ. ರಾವಣನ ಒಬ್ಬ ಪ್ರಧಾನ ಯೋಧ. **ನ:** ಒಂದು ಶಿಖರ

ತವಣಾ. ಸ್ತ್ರೀ: [**ತಪನಾ**] ತಾಪ ಉಂಟುಮಾಡುವುದು, ಶಾಖವುಂಟುಮಾಡುವುದು(ಸುಪಾ)

ತವಣಿಜ್ಜ. ನ: [**ತಪನೀಯ**] ಚಿನ್ನ, ಬಂಗಾರ ಮಾಡುವುದು

ತವಣಿಜ್ಜ. ಪುಂನ: [**ತಪನೀಯ**] ಒಂದು ದೇವ–ವಿಮಾನ

ತವಣೀ. ಸ್ತ್ರೀ: [**ದೇ**] ಭಕ್ಷ್ಯ, ತಿನ್ನಲು ಯೋಗ್ಯವಾದ ಧಾನ್ಯದ ಕಣವೇ ಮೊದಲಾದವು. ಧಾನ್ಯವನ್ನು ಹೊಲದಿಂದ ಕೊಯ್ದು ತಂದ ಮೇಲೆ ತಿನ್ನಲು ಯೋಗ್ಯವಾಗಿ ಮಾಡುವ ಕ್ರಿಯೆ(ಸುಪಾ) ಆಹಾರವನ್ನು ಬೇಯಿಸಲು ಬಳಸುವ ತವ, ತಪ್ಪಲೆ ಮೊದಲಾದ ಪಾತ್ರೆಗಳು

ತವಣೀಯ. '**ತವಣಿಜ್ಜ.** ಶಬ್ದವನ್ನು ನೋಡುವುದು

ತವಮಾಣ. '**ತವ=ತಪ್**' ಶಬ್ದವನ್ನು ನೋಡುವುದು

ತವಯ. ವಿ: [**ದೇ**] ಯಾವುದಾದರೊಂದು ಕಾರ್ಯದಲ್ಲಿ ತೊಡಗಿರುವ

ತವಯ. ಪು: [**ತಪಕ**] ಹುರಿಯಲು ಬಳಸುವ ಪಾತ್ರೆಯಾದ 'ತವ'(ವಿಪಾ)

ತವಸ್ಸಿ. ವಿ: [**ತಪಸ್ವಿನ್**] ತಪಸ್ಸು ಮಾಡುವವನು,

ತವಸ್ಸಿ. **ಪು:** ಸಾಧು, ಮುನಿ ಋಷಿ(ಸ್ವಪ್ನ)

ತವಿಅ. ವಿ: [**ತಪ್ತ**] ಕಾಯಿಸಲ್ಪಟ್ಟ, ಸುಡಲ್ಪಟ್ಟ

ತವಿಅ. ವಿ: [**ತಪಿತ**] ಬಿಸಿ ಮಾಡಲ್ಪಟ್ಟ, ದುಃಖಕ್ಕೀಡು ಮಾಡಲ್ಪಟ್ಟ

ತವಿಆ. ಸ್ತ್ರೀ: [**ತಾಪಿಕಾ**] ತವದ ಹಿಡಿಕೆ

ತವು. '**ತಉ**' ಶಬ್ದವನ್ನು ನೋಡುವುದು

ತವೋ. '**ತಓ**' ಶಬ್ದವನ್ನು ನೋಡುವುದು

ತವೋ–. '**ತವ=ತಪಸ್**' ಶಬ್ದವನ್ನು ನೋಡುವುದು –**ಕಮ್ಮ. ನ:** [–**ಕರ್ಮನ್**] ತಪಶ್ಚರ್ಯೆಯಲ್ಲಿ ರುವವನು. **ಧಣ. ಪು:** [–**ಧನ**] ಋಷಿ, ಮುನಿ. –**ಧರ. ಪು:** [–**ಧರ**] ತಪಸ್ವಿ, ಮುನಿ(ಪಉಮ). –**ವಣ. ನ:** [–**ವನ**] ಋಷ್ಯಾಶ್ರಮ(ಸ್ವಪ್ನ)

ತವ್ವಣಿಯ. ವಿ: [**ದೇ**] ಬೌದ್ಧ –ದರ್ಶನದ ಅನುಯಾಯಿ

ತವ್ವನ್ನಿಗ. ವಿ: [**ದೇ. ತೃತೀಯವರ್ಣಿಕ**] ಮೂರನೇ ಆಶ್ರಮದಲ್ಲಿ ನೆಲೆಗೊಂಡಿರುವವನು(ಉಪ)

ತವ್ವಿಹ. ವಿ: [**ತದ್ವಿಧ**] ಅದೇ ವಿಧದ, ಅದೇ ಪ್ರಕಾರದ(ಭಗ)

ತಸ. ಅಕ: [**ತ್ರಸ್**] ಹೆದರು ಭಯ ಪಡು

ತಸ. ಪು: [**ತ್ರಸ**] ಸ್ಪರ್ಶೇಂದ್ರಿಯಕ್ಕಿಂತ ಹೆಚ್ಚಿನ ಇಂದ್ರಿಯವುಳ್ಳ ಜೀವ. ಒಂದುಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಿ, ಬರುವ ಸಾಮರ್ಥ್ಯವುಳ್ಳ ಪ್ರಾಣಿ. –**ಕಾಇಯ. ಪು:** [–**ಕಾಯಿಕ**] ಜಂಗಮ ಪ್ರಾಣಿ, ಎರಡು ಇಂದ್ರಿಯಗಳುಳ್ಳ ಜೀವ(ಪಣ್ಣ) –**ಕಾಯ. ಪು:** [–**ಕಾಯ**] ಸಂಚರಿಸುವ ಜೀವಗಳು, ಜಂಗಮ ಪ್ರಾಣಿಗಳು. –**ಣಾಮ,** –**ನಾಮ. ನ:** [–**ನಾಮನ್**] ಜೀವು 'ತ್ರಸ'(=ಸಂಚರಿಸುವ) ಕಾಯದಲ್ಲಿ ಜನಿಸಲು ಕಾರಣವಾದ ಕರ್ಮ –ವಿಶೇಷ(ಕಮ್ಮ). –**ರೇಣು. ಪು:** [–**ರೇಣು**] ೩೨೭೬೮ ಪರಮಾಣುಗಳ ಒಂದು ಅಳತೆ, ಪರಿಮಾಣ. –**ಪಾಇಯಾ. ಸ್ತ್ರೀ:** [–**ಪಾದಿಕಾ**] ಮೂರು ಇಂದ್ರಿಯಗಳ ಒಂದು ಜಂತು–ವಿಶೇಷ.

ತಸಣ. ನ: [**ತ್ರಸನ**] ಸ್ಪಂದನ, ಚಲನೆ, ಅಲುಗಾಡುವಿಕೆ. ಪಲಾಯನ(ಸೂಅ)

ತಸನಾಡೀ. ಸ್ತ್ರೀ: [**ತ್ರಸನಾಡೀ**] ತ್ರಸ ಜೀವಗಳು ಇರುವ ಸ್ಥಳ. ಅದು ಮೇಲೆ ಕೆಳಗೆ ಸೇರಿ ಒಟ್ಟು –೪ ರಜ್ಜೂ ಪ್ರಮಾಣವಿದೆ.

ತಸರ. '**ಟಸರ**' ಶಬ್ದವನ್ನು ನೋಡುವುದು

ತಸಿಅ. ವಿ: [**ದೇ**] ಶುಷ್ಕ, ಒಣಗಿದ

ತಸಿಅ. ವಿ: [**ತೃಷಿತ**] ಬಾಯಾರಿದವನು, ತೃಷಿತ

ತಸಿಅ. ವಿ: [**ತ್ರಸ್ತ**] ಹೆದರಿದವನು, ಭೀತ, ಭಯಗೊಂಡವನು(ಜೀವ)

ತಸಿಯವ್ವ. '**ತಸ=ತ್ರಸ್**' ಶಬ್ದವನ್ನು ನೋಡುವುದು

ತಸೇಯರ. ವಿ: [**ತ್ರಸೇತರ**] ಒಂದು ಇಂದ್ರಿಯವುಳ್ಳ ಜೀವ, ಸ್ಥಾವರ ಪ್ರಾಣಿ

ತಹ. ಅ: [**ತಥಾ**] ಹಾಗೆಯೇ, ಆ ಪ್ರಕಾರವಾಗಿ(ಕುಮಾ), ಮತ್ತು, ಹಾಗೂ, ಪಾದಪೂರ್ತಿಗಾಗಿ ಬಳಕೆಯಾಗುವ ಅವ್ಯಯ. –**ಕಾರ. ಪು:** [–**ಕಾರ**] '**ತಥಾ**' ಶಬ್ದದ ಉಚ್ಚಾರಣೆ. –**ಣಾಣ. ವಿ:** [–**ಜ್ಞಾನ**] ಪ್ರಶ್ನೆಯ ಉತ್ತರವನ್ನು ತಿಳಿದವನು(ಠಾ). **ನ:** ಸತ್ಯ ಜ್ಞಾನ. –**ತ್ತಿ. ಅ:** [–**ಇತಿ**]ಅಂಗೀಕಾರ ಸೂಚಕ ಅವ್ಯಯ, ಹಾಗೆಯೇ. –**ಯ. ಅ:** [–

ಚ] ಹೇಳಿದ ಅರ್ಥದ ದೃಢತೆಯನ್ನು ಸೂಚಿಸುವ ಅವ್ಯಯ, ಸಮುಚಯ ಸೂಚಕ ಅವ್ಯಯ. **–ವಿ. ಅ:** [–ಪಿ] ಹಾಗಾದರೂ. **–ವಿಹ. ವಿ:** [–ವಿಧ] ಅದೇ ಬಗೆಯ(ಸುಪಾ). 'ತಹಾ' ಶಬ್ದವನ್ನು ನೋಡುವುದು

ತಹ. ವಿ: [ತಥ್ಯ] ಸತ್ಯ, ನಿಜ, ವಸ್ತು ಸಂಗತಿ(ಸೂಅ)

ತಹ. ಪು: [ತಥ] ಆಜ್ಞೆಯನ್ನು ಪಾಲಿಸುವವನು, ಆಳು, ನೌಕರ(ತಾ)

ತಹ}. ನ: [ತಥ್ಯ] ಸ್ವಭಾವ ಸ್ವರೂಪ, ಸತ್ಯ –ವಚನ

ತಹೀಯ}.

ತಹಂ. **'ತಹ=ತಥಾ'** ಶಬ್ದವನ್ನು ನೋಡುವುದು(ಔಪ)

ತಹರೀ. ಸ್ತ್ರೀ: [ದೇ] ಕೆಸರನ್ನೊಳಗೊಂಡಿರುವ ಮದ್ಯ(ದೇ)

ತಹಲ್ಲಿಆ. ಸ್ತ್ರೀ: [ದೇ] ದನಗಳ ಕೊಟ್ಟಿಗೆ, ದನಗಳಹಟ್ಟಿ

ತಹಾ. **'ತಹ=ತಥಾ'** ಶಬ್ದವನ್ನು ನೋಡುವುದು(ಆಚಾ). **–ಗಯ. ಪು:** [–ಗತ] ಮುಕ್ತಾತ್ಮ, ಸರ್ವಜ್ಞ **–ಭೂಯ. ವಿ:** [–ಭೂತ] **ಆ ರೀತಿಯ, ಆ ವಿಧದ,** **–ರೂವ. ವಿ:** [–ರೂಪ] ಆ ಬಗೆಯ, **–ವಿ: ವಿ:** [–ವಿತ್] ನಿಪುಣ, ಚತುರ, ಬುದ್ಧಿವಂತ, **ಪು: ಸರ್ವಜ್ಞ(ಸೂಅ)** **–ಹಿ. ಅ:** [–ಹಿ] ಹಾಗೆಯೇ ಸರಿ, ಆ ಇಂಥ

ತಹಿ. **'ತಹ=ತಥಾ'** ಶಬ್ದವನ್ನು ನೋಡುವುದು(ಗಾ)

ತಹಿ}. ಅ: [ತತ್ರ] ಅಲ್ಲಿ, ಅದರಲ್ಲಿ(ಗಾ)

ತಹಿಂ}.

ತಹಿಯ. ವಿ: [ತಥ್ಯ] ಸತ್ಯ, ನಿಜ, ವಾಸ್ತವಿಕ(ಣಾಯಾ)

ತಹಿಯಂ. ಅ: [ತತ್ರ] ಅಲ್ಲಿ, ಅದರಲ್ಲಿ(ವಿಸೇ)

ತಹೇಯ}. ಅ: [ತಥೈವ] ಹಾಗೆಯೇ, ಅದರಂತೆಯೇ

ತಹೇವ}. (ಕುಮಾ)

ತಾ. ಅ: [ತದ್] ಅದರಿಂದ, ಆ ಕಾರಣದಿಂದ(ಉವ)

ತಾ. **'ತಾವ=ತಾವತ್'** ಶಬ್ದವನ್ನು ನೋಡುವುದು

ತಾ. [ತದಾ] ಆಗ, ಆ ಕಾಲದಲ್ಲಿ(ರಂಭಾ)

ತಾ. ಅ: [ತರ್ಹಿ] ಹಾಗಾದರೆ, ಆ ಪಕ್ಷದಲ್ಲಿ, ಆಗ

ತಾ. ಸ್ತ್ರೀ: [ತಾ] ಲಕ್ಷ್ಮಿ

ತಾ–. ಸ: [ತದ್] ಅವನು, ಅವಳು, ಅದು. **–ಗಂಧ. ಪು:** [–ಗಂಧ] ಅದರ ವಾಸನೆ. ಅದರ ವಾಸನೆಯ ಥರದ ವಾಸನೆ. **–ಫಾಸ. ಪು:** [–ಸ್ಪರ್ಶ] ಅವನ/ಅವಳ ಸ್ಪರ್ಶ. ಅಂಥ ಸ್ಪರ್ಶ(ಪಣ್ಣ). **–ರಸ. ಪು:** [–ರಸ] ಆ ಸ್ಪರ್ಶ, ಅಂಥಾ ಸ್ಪರ್ಶ. **–ರೂವ. ನ:** [–ರೂಪ] ಆ ರೂಪ, ಅಂಥಾ ರೂಪ, ಅದರ ರೂಪವುಳ್ಳ(ಪಣ್ಣ)

ತಾಅ. **'ತಾವ=ತಾಪ' ಶಬ್ದವನ್ನು ನೋಡುವುದು**

ತಾಅ. ಪು: [ತಾತ] ತಂದೆ, ಅಪ್ಪ (ಉತ್ತ), ಪ್ರೀತಿಯಿಂದ ಮಗನನ್ನು ಕರೆಯುವ **'ಮಗೂ'**(ಸೂಅ)

ತಾಅ. ಸಕ: [ತ್ರೈ] ರಕ್ಷಿಸು

ತಾಅಪ್ಪ. ನ: [ತಾದಾತ್ಮ್ಯ] ಅದೇ ಆಗಿರುವುದು, ಅಭೇದ, ಅಭಿನ್ನತೆ

ತಾಇ. ವಿ: [ತ್ಯಾಗಿನ್] ತ್ಯಾಗ ಮಾಡುವವನು(ಗಾ)

ತಾಇ. ವಿ: [ತಾಇನ್] ರಕ್ಷಕ

ತಾಇ. ವಿ: [ತಾಪಿನ್] ತಾಪದಿಂದ ಕೂಡಿದ, ತಾಪವನ್ನುಂಟುಮಾಡುವವನು

ತಾಇ. ವಿ: [ತ್ರಾಯಿನ್] ರಕ್ಷಕ, ರಕ್ಷಣೆ ಮಾಡುವವನು. ಮುನಿ, ಸಾಧು

ತಾಇ. ವಿ: [ತಾಯಿನ್] ಉಪಕಾರಿ.

ತಾಇಅ. ವಿ: [ತ್ರಾತ] ರಕ್ಷಿಸಲ್ಪಟ್ಟವನು(ಉವ)

ತಾಉಂ(ಅಪ). –**'ತಾವ=ತಾವತ್'** ಶಬ್ದವನ್ನು ನೋಡುವುದು

ತಾಠಾ(ಚೂಪೈ). **'ದಾಢಾ'** ಶಬ್ದವನ್ನು ನೋಡುವುದು

ತಾಡ. ಸಕ: [ತಾಡಯ್] ಹೊಡೆ. ಆಘಾತವುಂಟು ಮಾಡು. ಗುಣಾಕಾರ ಮಾಡು

ತಾಡ. ಪು: [ತಾಲ] ತಾಳೆಮರ

ತಾಡಂಕ. ಪು: [ತಾಡಂಕ] ಕರ್ಣಾಭರಣ, ಕುಂಡಲ

ತಾಡಣ. ನ: [ತಾಡನ] ಹೊಡೆಯುವುದು(ಗಾ) ಪ್ರೇರಣೆ, ಆಘಾತ

ತಾಡವಿಯ. ವಿ: [ತಾಡಿತ] ಹೊಡೆಸಲ್ಪಟ್ಟ(ಸುಪಾ)

ತಾಡಿಅ. **'ತಾಡ=ತಾಡಯ್'** ಶಬ್ದವನ್ನು ನೋಡುವುದು

ತಾಡಿಅ. ವಿ: [ತಾಡಿತ] ಹೊಡೆಯಲ್ಪಟ್ಟವನು, ಗುಣಿಸಲ್ಪಟ್ಟದ್ದು

ತಾಡಿಅಯ. ನ: [ದೇ] ರೋದನ, ಅಳುವಿಕೆ(ದೇ)

ತಾಡಿಜ್ಜಮಾಣ. **'ತಾಡ=ತಡಯ್'** ಶಬ್ದವನ್ನು ನೋಡುವುದು

ತಾಡೀ. ಸ್ತ್ರೀ: [ತಾಡೀ] ತಾಳೆಮರ, ಹನೆ ಮರ(ಗಉಡ)

ತಾಡೀಅಂತ}. **'ತಾಡ=ತಾಡಯ್'** ಶಬ್ದವನ್ನು

ತಾಡೀಅಮಾಣ}. ನೋಡುವುದು

ತಾಣ. ನ: [ತ್ರಾಣ] ರಕ್ಷಣೆ, ಕಾಪಾಡುವುದು, ರಕ್ಷಕ, ಕಾಪಾಡುವವನು(ಸುಪಾ)

ತಾಣ. ಪು: [ತಾನ] ಗಾಯಕನ ಸ್ವರವನ್ನು ವಿಸ್ತಾರಗೊಳಿಸುವ ಸಂಗೀತದ ಒಂದು ಪ್ರಸಿದ್ಧ ಸ್ವರ

ತಾಣವ. ನ: [ತಾನವ] ಕೃಶತೆ, ಕೃಶವಾಗಿರುವುದು, ತೆಳ್ಳಗಿರುವುದು

ತಾಣಿಅ. ವಿ:[ತಾನಿತ]ವ್ಯಂಗ್ಯಮಾಡಲ್ಪಟ್ಟ, ವಿಡಂಬಿಸಲ್ಪಟ್ಟ

ತಾದ. **'ತಾಅ= ತಾತ'** ಶಬ್ದವನ್ನು ನೋಡುವುದು

ತಾದತ್ಥ. ನ: [ತಾದರ್ಥ್ಯ] ಅದೇ ಉದ್ದೇಶವಾಗಿರುವುದು, ಅದೇ ಪ್ರಯೋಜನವಾಗಿರುವುದು, ಅದಕ್ಕಾಗಿ

ತಾದವತ್ಥ. ನ: [ತಾದವಸ್ಥ್ಯ] ಅದೇ ಅವಸ್ಥೆಯಲ್ಲಿರುವುದು, ಅಭಿನ್ನತೆ

ತಾದಿಸ. **'ತಾರಿಸ'** ಶಬ್ದವನ್ನು ನೋಡುವುದು

ತಾಮ. **'ತಮ್ಮ=ತಮ್'** ಶಬ್ದವನ್ನು ನೋಡುವುದು

ತಾಮ(ಪ). **'ತಾವ=ತಾವತ್'** ಶಬ್ದವನ್ನು ನೋಡುವುದು

ತಾಮರ. ವಿ: [ದೇ] ರಮ್ಯ, ಸುಂದರ(ದೇ)

ತಾಮರಸ. ನ: [ತಾಮರಸ] ಕಮಲ, ತಾವರೆ(ಪಾಅ)

ತಾಮರಸ. ನ: [ದೇ] ನೀರಿನಲ್ಲಿ ಹುಟ್ಟುವ ಹೂವು

ತಾಮಲಿ. ಪು: [ತಾಮಲಿ] ಹೆಸರಾಂತ ತಪಸ್ವಿ

ತಾಮಲಿತ್ತಿ. ಸ್ತ್ರೀ: [ತಾಮ್ರಲಿಪ್ತಿ] ಒಂದು ಪ್ರಾಚೀನ ನಗರಿ, ವಂಗ ದೇಶದ ಪ್ರಾಚೀನ ರಾಜಧಾನಿ(ಉಪ)

ತಾಮಲಿತ್ತಿಯಾ. ಸ್ತ್ರೀ: [ತಾಮ್ರಲಿಪ್ತಿಕಾ] ಜೈನ ಮುನಿವಂಶದ ಒಂದು ಶಾಖೆ(ಕಪ್ಪ)

ತಾಮಸ. ನ: [ತಾಮಸ] ಅಂಧಕಾರ, ಕತ್ತಲೆ, ಕತ್ತಲೆಯ ಸಮೂಹ. ವಿ: ತಮೋ ಗುಣದಿಂದ ಕೂಡಿದ

ತಾಮಸ. ವಿ: [ತಾಮಸ] ತಮೋಗುಣದಿಂದ ಕೂಡಿರುವವನು(ಪಉಮ), **–ತ್ಥ.** ನ: [ತಾಮಸಾಸ್ತ್ರ] ಕಪ್ಪು ಬಣ್ಣದ ಅಸ್ತ್ರ –ವಿಶೇಷ(ಪಉಮ)

ತಾಮಹಿ}. (ಅಪ). **'ತಾವ= ತಾವತ್'** ಶಬ್ದವನ್ನು
ತಾಮಹಿಂ}. ನೋಡುವುದು

ತಾಯಣ. ನ: [ತ್ರಾಣ] ರಕ್ಷಣೆ

ತಾಯತ್ತೀಸಗ. ಪುಂ:[ತ್ರಾಯಸ್ತ್ರಿಂಶಕ] ಗುರು ಸ್ಥಾನದಲ್ಲಿರುವ ಒಂದು ದೇವ –ಜಾತಿ(ಠಾ)

ತಾಯತ್ತೀಸಾ. ಸ್ತ್ರೀ: [ತ್ರಯಸ್ತ್ರಿಂಶತ್] ಮೂವತ್ತಮೂರು (=೩೩)

ತಾಯವ್ವ. **'ತಾಅ=ತ್ರೈ ಶಬ್ದವನ್ನು ನೋಡುವುದು**

ತಾರ. ಪು: [ತಾರ] ನಾಲ್ಕನೇ ನರಕದ ಒಂದು ಸ್ಥಳ, ಶುದ್ಧವಾದ ಮುತ್ತು, ಓಂಕಾರ(=ಪ್ರಣವ). ಮಾಯಾ ಬೀಜ, **'ಹ್ರೀಂ'** ಅಕ್ಷರ. ಈಜು

ತಾರ. ವಿ: [ತಾರ] ನಿರ್ಮಲ, ಸ್ವಚ್ಛ, ಹೊಳೆಯುತ್ತಿರುವ, ಪ್ರಜ್ವಲಿಸುತ್ತಿರುವ(ಪಾಅ), ಅತಿ ಎತ್ತರ, ಅತಿ ಎತ್ತರದ ಸ್ವರ. ನ: ಬೆಳ್ಳಿ, ಪು: ವಾನರ –ವಿಶೇಷ. **–ವಈ.** ಸ್ತ್ರೀ: [–ವತೀ] ರಾಜ ಕುಮಾರಿ

ತಾರಂಗ. ನ: [ತಾರಂಗ] ತರಂಗಗಳ ಸಮೂಹ, ಅಲೆಗಳ ಗುಂಪು(ಸೇ)

ತಾರಂಗ. ವಿ: [ತಾರಕ] ದಾಟಿಸುವವನು, ದಡ ಸೇರಿಸುವವನು(ಉಪ). ಪು: ಎರಡನೇ ಪ್ರತಿವಾಸುದೇವ(ಪಉಮ), ಸೂರ್ಯನೇ ಮೊದಲಾದ ನವಗ್ರಹಗಳು. ತೆಪ್ಪ, ದೋಣಿ

ತಾರಗಾ. ಸ್ತ್ರೀ: [ತಾರಕಾ] ನಕ್ಷತ್ರ, ಪೂರ್ಣಭದ್ರನೆಂಬ ಇಂದ್ರನ ಪಟ್ಟದ ರಾಣಿ(ಠಾ), **'ತಾರಯಾ'** ಶಬ್ದವನ್ನು ನೋಡುವುದು

ತಾರಣ. ನ: [ತಾರಣ] ದಾಟಿಸುವುದು, ದಡ ಸೇರಿಸುವುದು(ಸುಪಾ), ವಿ: ದಾಟುವವನು (ಸುಪಾ)

ತಾರತ್ತರ. ಪು: [ದೇ] ಮುಹೂರ್ತ

ತಾರಯ. **'ತಾರಗ'** ಶಬ್ದವನ್ನು ನೋಡುವುದು. ನ: ಒಂದು ಛಂದಸ್ಸು

ತಾರಯಾ. **'ತಾರಗಾ'** ಶಬ್ದವನ್ನು ನೋಡುವುದು. ಕಣ್ಣಿನ ಪಾಪೆ(ಗಉಡ)

ತಾರಾ. ಸ್ತ್ರೀ: [ತಾರಾ] ಕಣ್ಣಿನ ಪಾಪೆ, ಕಣ್ಣಿನ ಬೊಂಬೆ(ಗಾ), ನಕ್ಷತ್ರ, ಸುಗ್ರೀವನ ಹೆಂಡತಿ, ಸುಭೂಮ ಚಕ್ರವರ್ತಿಯ ತಾಯಿ, ಒಂದು ನದಿ(ಠಾ). ಬೌದ್ಧರ ಶಾಸನ ದೇವಿ, **–ಉರ.** ನ: [ಪುರ] ತಾರಂಗಾ ಸ್ಥಾನ, **–ಚಂದ್ರ,** ಪು: [–ಚಂದ್ರ] ಒಬ್ಬ ರಾಜಕುಮರ. **–ತಣಯ.** ಪು; [–ತನಯ] ವಾನರ ಪ್ರಮುಖ ಅಂಗದ. **–ಪಹ.** ಪು: [ಪಥ] ಆಕಾಶ(ಅಣು). **–ಪಹು.** ಪು: [–ಪ್ರಭು] ಚಂದ್ರ(ಉಪ). **–ಮೆತ್ತೀ.** ಸ್ತ್ರೀ: [–ಮೈತ್ರೀ] ನಿಃಸ್ವಾರ್ಥ ಸ್ನೇಹ(ಕಪ್ಪೂ). **–ಯಣ.** ನ: [–ಯನ] ಕಣ್ಣಿನ ಪಾಪೆಯ ಚಲನೆ. **–ವಇ.** ಪು: [–ಪತಿ] ಚಂದ್ರ

ತಾರಿ. ವಿ: [ತಾರಿನ್] ದಾಟುವವನು, ರಕ್ಷಿಸುವವನು, ಕಷ್ಟದಿಂದ ಪಾರು ಮಾಡುವವನು

ತಾರಿಮ. ವಿ: [ತಾರಿಮ] ಈಸಲು ಯೋಗ್ಯವಾದ್ದು, ಈಸಬಹುದಾದ್ದು(ಭಾಸ)

ತಾರಿಯ. ವಿ: [ತಾರಿತ] ದಾಟಿಸಲ್ಪಟ್ಟ(ಭವಿ) ರಕ್ಷಿಸಲ್ಪಟ್ಟ
ತಾರಿಯಾ. ಸ್ತ್ರೀ: [ತಾರಿಕಾ] ನಕ್ಷತ್ರಾಕಾರದ ಒಡವೆ, ಕಿವಿಯ ಆಭರಣ
ತಾರಿಸ. ವಿ: [ತಾದೃಶ] ಅಂತಹ, ಆ ವಿಧವಾದ(ಕಪ್ಪ), ಸ್ತ್ರೀ: –ಸೀ
ತಾರೀ. ಸ್ತ್ರೀ: [ತಾರೀ] ರಕ್ಷಕ ಜಾತಿಯ ದೇವಿ
ತಾರುಅ. ವಿ: [ತಾರಕ] ಕಾಪಾಡುವವನು, ದಾಟಿಸುವವನು
ತಾರುಣ್ಣ}. ನ: [ತಾರುಣ್ಯ] ಯೌವನ
ತಾರುನ್ನ}.
ತಾಲ. **'ತಾಡ=ತಾಡಯ್' ಶಬ್ದವನ್ನು ನೋಡುವುದು. ವ. ಕೃ –ತಾಲೇಮಾಣ**
ತಾಲ. **ಪು:** [**ತಾಲ**] ತಾಳೆಮರ, ಹನೆಮರ, ಕಂಚಿನಿಂದ ತಯಾರಿಸಿದ ತಾಳವಾದ್ಯ. ಬೀಗದ ಕೈ, ಕೆನ್ನೆಗೆ ಅಂಗೈ ಏಟು, ವಾದ್ಯ –ಸಮೂಹ. ಆಜೀವಿಕ ಮತದ ಒಬ್ಬ ಅನುಯಯಿ, ನ: ಬಾಗಿಲಿಗೆ ಹಾಕುವ ಬೀಗ. ತಾಳೆಹಣ್ಣು. **–ಉಡ.** ನ: [–**ಪುಟ**] ಆ ಕೂಡಲೇ ಪ್ರಾಣ ತೆಗೆಯುವ ವಿಷ. **–ಜಂಘ.** **ಪು:** [**–ಜಂಘ**] ಒಬ್ಬ ದೊರೆ. ವಿ: ತಾಳೆಯ ಹಾಗೆ ಉದ್ದನೆಯ ತೊಡೆಗಳುಳ್ಳವನು (ಣಾಂಯಾ) **–ಜ್ಝಂಾ.** ಪು: [**–ಧ್ವಜ**] ಬಲದೇವ(ಆವಮ). ಒಬ್ಬ ದೊರೆ. ಶತ್ರುಂಜಯ ಪರ್ವತ. **–ಪಲಂಬ.** ಪು: [**–ಪ್ರಲಂಬ**] ಗೋಶಾಲಕನ ಒಬ್ಬ ಉಪಾಸಕ.(ಭಗ). **–ಪಿಸಾಯ.** **ಪು:** [**–ಪಿಶಾಚ**] ದೀರ್ಘಕಾಯ ರಾಕ್ಷಸ.(ಪಣ್ಣ) **–ಪುಡ. 'ಉಡ' ಶಬ್ದವನ್ನು ನೋಡುವುದು. –ಯರ.** ಪು: [**–ಚರ**]ಒಂದು ಮನುಷ್ಯ ಜಾತಿ, ಚಾರಣ. **–ವಿಂಟ, ವಿಂತ, –ವೇಂಟ, ವೋಂಟ.** ನ: [**–ವೃಂತ**] ಬೀಸಣಿಗೆ, ವ್ಯಜನ(ವೇಣೀ) **–ಸಂವುಡ.** **ಪು:** [**–ಸಂಪುಟ**] ತಾಳೆ ಎಲೆಗಳ ಸಂಪುಟ, ತಾಳೆ ಎಲೆಗಳ ಸಂಚಯ(ಸೂಅ). **–ಸಮ.** ವಿ: [**–ಸಮ**] ತಾಳಕ್ಕೆ ತಕ್ಕ ಸ್ವರ, ಸ್ವರ –ವಿಶೇಷ(ಠಾ)
ತಾಲಂಕ. **ಪು:** [ತಾಡಂಕ] ಕುಂಡಲ, ಕರ್ಣಾಭರಣ, ಒಂದು ಛಂದಸ್ಸು
ತಾಲಂಕಿ. **ಪುಂಸ್ತ್ರೀ:** [**ತಾಲಂಕಿನ್**] ಒಂದು ಛಂದಸ್ಸು. ಸ್ತ್ರೀ: **–ಣೀ**
ತಾಲಗ. ನ: [ತಾಲಕ] ಬಾಗಿಲಿಗೆ ಹಾಕುವ ಬೀಗ(ಉಪ)
ತಾಲಣ. **'ತಾಡಣ'** ಶಬ್ದವನ್ನು ನೋಡುವುದು(ಔಪ)
ತಾಲಣಾ. ಸ್ತ್ರೀ: [ತಾಡನಾ] ಏಟು, ಹೊಡೆತ, ಕೆನ್ನೆಗೆ ಹೊಡೆಯುವುದು
ತಾಲಪ್ಫಲೀ. ಸ್ತ್ರೀ: [ದೇ] ದಾಸಿ, ಹೆಣ್ಣಾಳು
ತಾಲಯ. 'ತಾಲಗ' ಶಬ್ದವನ್ನು ನೋಡುವುದು
ತಾಲಸಮ. ನ: [**ತಾಲಸಮ**] ಗೇಯ ಕಾವ್ಯದ ಒಂದು ಪ್ರಭೇದ
ತಾಲಹಲ. ಪು: [ದೇ] ಬತ್ತ
ತಾಲಾ. ಅ: [ತದಾ] ಆಗ, ಆ ಸಮಯದಲ್ಲಿ
ತಾಲಾ. ಸ್ತ್ರೀ: [ದೇ] ಬತ್ತದ ಅರಳು,
ತಾಲಾಚರ. ಪು: [ತಾಲಚರ] ತಾಳ ಬಾರಿಸುವವನು (ನಿಚೂ)
ತಾಲಾಚರ}. **ಪು:** [**ತಾಲಾಚರ**] ಪ್ರೇಕ್ಷಕ –ವಿಶೇಷ,
ತಾಲಯರ}. ತಾಳ ಹಕುವ ಪ್ರೇಕ್ಷಕ(ಣಾಯಾ), ನಟ, ನರ್ತಕ ಇತ್ಯಾದಿ ಮನುಷ್ಯಜಾತಿ
ತಾಲಿಅ. ವಿ: [ತಾಡಿತ] ಹೊಡೆಯಲ್ಪಟ್ಟವನು, ಆಘಾತಿಸಲ್ಪಟ್ಟವನು(ಣಾಯಾ)
ತಾಲಿಅಂಟ. **ಸಕ:** [**ಭ್ರಮಯ್**] ತಿರುಗಿಸು
ತಾಲಿಅಂಟ. ನ: [**ತಾಲವೃಂತ**] ಬೀಸಣಿಗೆ, ವ್ಯಜನ
ತಾಲಿಅಂಟಿರ. ವಿ: [**ಭ್ರಮಯಿತೃ**] ತಿರುಗಿಸುವವನು
ತಾಲಿಸ. **'ತಾರಿಸ'** ಶಬ್ದವನ್ನು ನೋಡುವುದು
ತಾಲಿಜ್ಜಂತ. 'ತಾಲ=ತಾಡಯ್' ಶಬ್ದವನ್ನು ನೋಡುವುದು
ತಾಲೀ. ಸ್ತ್ರೀ: [ತಾಲೀ] ತಾಲವೃಕ್ಷ, ಒಂದು ಛಂದಸ್ಸು. **–ಪತ್ತ.** ನ: [**ಪತ್ರ**] ತಾಳೆಮರದ ಎಲೆಗಳಿಂದ ಮಾಡಿದ ಬೀಸಣಿಗೆ(ಚಾರು)
ತಾಲು}. ನ: [ತಾಲು, ಕ] ಒಳ ಬಾಯಿಯ ಮೇಲ್ಭಾಗ,
ತಾಲುಅ}. ಬಾಯೊಳಗೆ ನಾಲಿಗೆ ಪ್ರಾರಂಭವಾಗುವ ಜಾಗ(ಣಾಯಾ)
ತಾಲುಗ್ಘಾಡಣೀ. ಸ್ತ್ರೀ: [**ತಾಲೋದ್ಘಾಟನೀ**] ಬೀಗ ತೆಗೆಯುವ ವಿದ್ಯೆ(ವಸು)
ತಾಲುರ. ಪು: [ದೇ] ನೊರೆ, ಬುರುಗು, ಬೇಲದ ಮರ, ನೀರಿನ ಸುಳಿ(ಗಾ), **ಪು:** ಹೂವಿನ ಸತ್ತ್ವ
ತಾಲೇವಿ. 'ತಾಲ=ತಾಲಯ್' ಶಬ್ದವನ್ನು ನೋಡುವುದು
ತಾವ. **ಸಕ:** [**ತಾಪಯ್**] ಕಾಯಿಸು, ಬಿಸಿಮಾಡು, ದುಃಖವುಂಟುಮಾಡು, ನೋವುಂಟು ಮಾಡುವುದು

ತಾವ. ಪು: [ತಾಪ] ಬಿಸುಪು, ನೋವು, ಕಷ್ಟ, ಸೂರ್ಯ, **–ದಿಸಾ. ಸ್ತ್ರೀ:** [–ದಿಶ್] ಸೂರ್ಯನಿಂದ ಬಿಸುಪಾದ ದಿಕ್ಕು

ತಾವ. ಅ: [ತಾವತ್] ಅಲ್ಲಿಯ ವರೆಗೂ, ಆ ಕಾಲದ ವರೆಗೂ, ಆಗ, ಆ ಕಾಲದಲ್ಲಿ, ಪ್ರಸ್ತುತವಾದ ಅರ್ಥ, ಅವಧಾರಣೆ, ಅವಧಿ, ಎಲ್ಲೆ, ಗಡಿ, ಪಕ್ಷಾಂತರ, ಹೊಗಳಿಕೆ, ವಾಕ್ಯ –ಭೂಷಾ, ಅಳತೆ, ಪರಿಮಾಣ, ಸಾಕಲ್ಯ, ಸಂಪೂರ್ಣತೆ, ಅಷ್ಟು ಪ್ರಮಾಣವುಳ್ಳ

ತಾವಅ. ವಿ: [ತಾವಕ] ನಿನ್ನ, ನಿನ್ನ ಸಂಬಂಧವಾದ, ನಿನ್ನದಾದ(ಅಚ್ಚು)

ತಾವಇಅ. ವಿ: [ತಾವತ್] ಅಷ್ಟು

ತಾವಂ.} (ಅಪ) **'ತಾವ=ತಾವತ್'** ಶಬ್ದವನ್ನು
ತಾವಂಹಿಂ}. ನೋಡುವುದು(ಕುಮಾ)

ತಾವಣ. ಪು: [ತಾಪನ] ನಾಲ್ಕನೇ ನರಕಭೂಮಿಯ ಒಂದು ನರಕಸ್ಥಾನ. **ವಿ:** ಕಾಯಿಸುವವನು

ತಾವಣ. ನ: [ತಾಪನ] ಬಿಸಿಮಾಡುವುದು, ಕಾಯಿಸುವುದು, ಸುಡುವುದು. **ಪು:** ಇಕ್ವಾಕು ವಂಶದ ಒಬ್ಬ ರಾಜ(ಪಉಮ)

ತಾವಣೆಜ್ಜ. 'ತಾವ=ತಾಪಯ್' ಶಬ್ದವನ್ನು ನೋಡುವುದು

ತಾವತ್ತೀಸ}. **'ತಾಯತ್ತೀಸಯ' ಶಬ್ದವನ್ನು**
ತಾವತ್ತೀಸಗ}. **ನೋಡುವುದು(ಔಪ)**
ತಾವತ್ತೀಸಯ}.

ತಾವತ್ತೀಸಾ. 'ತಾಯತ್ತೀಸಾ' ಶಬ್ದವನ್ನು ನೋಡುವುದು

ತಾವಸ. ಪು: [ತಾಪಸ] ತಪಸ್ವಿ, ಯೋಗಿ, ಸಂನ್ಯಾಸಿ, ಒಬ್ಬ ಜೈನಮುನಿ, **–ಗೇಹ. ನ:** [–ಗೇಹ] ತಪಸ್ವಿಗಳ ಮಠ(ಪಾಅ)

ತಾವಸಾ. ಸ್ತ್ರೀ: [ತಾಪಸಾ] ಜೈನಮುನಿಗಳ ಒಂದು ಶಾಖೆ(ಕಪ್ಪ)

ತಾವಸೀ. ಸ್ತ್ರೀ: [ತಾಪಸೀ] ತಪಸ್ವಿನೀ, ಯೋಗಿನೀ (ಗಉಡ)

ತಾವಿಅ. ವಿ: [ತಾಪಿತ] ಕಾಯಿಸಲ್ಪಟ್ಟ, ಬಿಸಿಮಾಡಲಾದ (ವಿಪಾ)

ತಾವಿಆ. ಸ್ತ್ರೀ: [ತಾಪಿಕಾ] ತವ, ತಪ್ಪಲೆ ಮೊದಲಾದ ಅಡುಗೆ ಬೇಯಿಸುವ ಪಾತ್ರೆಗಳು, ಸಣ್ಣ ಕಡಾಯಿ, ಹರವಿ

ತಾವಿಚ್ಛ. ಪುಂನ: [ತಾಪಿಚ್ಛ] ಹೊಂಗೆಮರ(ಕುಮಾ)

ತಾವೀ. ಸ್ತ್ರೀ: [ತಾಪೀ] ಯಮುನಾ ನದಿ(ಪಉಮ)

ತಾಸ. ಪು: [ತ್ರಾಸ] ಭಯ, ಹೆದರಿಕೆ, ಉದ್ವೇಗ, ಸಂತಾಪ

ತಾಸಣ. ವಿ: [ತ್ರಾಸನ] ತ್ರಾಸವುಂಟು ಮಾಡುವಂಥದು (ಪಣ)

ತಾಸಿ. ವಿ: [ತ್ರಾಸಿನ್] ತ್ರಾಸದಿಂದ ಕೂಡಿದ, ಕಳವಳದಿಂದ ಕೂಡಿದ, ಹೆದರಿದ, ತ್ರಾಸವುಂಟು ಮಾಡುವ

ತಾಸಿಅ. ವಿ: [ತ್ರಾಸಿತ] ತ್ರಾಸಗೊಳಿಸಲ್ಪಟ್ಟವನು

ತಾಹೇ. ಅ: [ತದಾ] ಆಗ, ಆ ಸಮಯದಲ್ಲಿ, ಆ ಕಾಲದಲ್ಲಿ

ತಿ. ಅ: [ತ್ರಿಃ] ಮೂರು ಸಲ, ಮೂರು ಬಾರಿ

ತಿ. 'ತಇಅ=ತೃತೀಯ' ಶಬ್ದವನ್ನು ನೋಡುವುದು. –ಭಾಗ, –ಭಾಯ, –ಹಾಅ. ಪು: [–ಭಾಗ] ಮೂರನೇ ಭಾಗ(ಕಮ್ಮ)

ತಿ. 'ಥೀ' ಶಬ್ದವನ್ನು ನೋಡುವುದು

ತಿ. ತ್ರಿ. ಬ: [ತ್ರಿ] ಮೂರು. **–ಅಣುಅ. ನ:** [–ಅಣುಕ] ಮೂರು ಪರಮಾಣುಗಳಿಂದ ಆದ ದ್ರವ್ಯ. **–ಉಣ. ವಿ:** [–ಗುಣ] ಮೂರು ಪಟ್ಟು, ಮೂರರಷ್ಟು. ಸತ್ವ, ರಜಸ್ಸು ಮತ್ತು ತಮೋ ಗುಣಗಳಿಂದ ಕೂಡಿದ. **–ಉಣಿಯ. ವಿ:** [–ಗುಣಿತ] ಮೂರರಷ್ಟು. **–ಉತ್ತರಸಯ. ವಿ:** [–ಉತ್ತರಶತತಮ] ನೂರಾ ಮೂರನೆಯ. **–ಉಲ. ವಿ:** –[–ತುಲ] ಮೂರನ್ನು ಗೆದ್ದವನು. ಮೂರನ್ನು ತೂಗುವವನು(ಣಾಯಾ) **–ಓಯ. ನ:** [–ಓಜಸ್]. –ವಿಷಮ ರಾಶಿ –ವಿಶೇಷ. **–ಕಂಡ, –ಕಂಡಗ. ವಿ:** [–ಕಾಂಡ, –ಕ] ಮೂರು ಕಾಂಡಗಳುಳ್ಳ, ಮೂರು ಭಾಗಗಳುಳ್ಳ. **–ಕಡುಅ. ನ:** [–ಕಟುಕ] ಶುಂಠಿ, ಹಿಪ್ಪಲಿ ಮತ್ತು ಮೆಣಸು(ಅಣು). **–ಕರಣ. 'ಗರಣ' ಶಬ್ದವನ್ನು ನೋಡುವುದು. –ಕಾಲ. ನ:** [–ಕಾಲ] ಭೂತ, ಭವಿಷ್ಯತ್ತು ಮತ್ತು ವರ್ತಮಾನ ಕಾಲಗಳು(ಭಗ). **–ಕ್ಕಾಲ. '–ಕಾಲ' ಶಬ್ದವನ್ನು ನೋಡುವುದು. –ಖಂಡ. ವಿ:** [–ಖಂಡ] ಮೂರು ಖಂಡಗಳುಳ್ಳ (ಉಪ).**–ಖಂಡಾಹಿವಇ. ಪು:** [–ಖಂಡಾಧಿಪತಿ] **ಅರ್ಧ ಚಕ್ರವರ್ತಿ ರಾಜ, ವಾಸುದೇವ. –ಗಡು, –ಗಡುಅ,. 'ಕಡುಅ' ಶಬ್ದವನ್ನು ನೋಡುವುದು. –ಗರಣ. ನ:** [–ಕರಣ] ಮನಸ್ಸು, ವಚನ ಮತ್ತು

ಕಾಂಯು. **–ಗುಣ.** ‘**–ಉಣ**’ **ಶಬ್ದವನ್ನು ನೋಡುವುದು.** **–ಗುತ್ತ.** ವಿ: [**–ಗುಪ್ತ**] ಮನೋಗುಪ್ತಿಯೇ ಮೊದಲಾದ ಮೂರು ಗುಪ್ತಿಗಳುಳ್ಳವನು, ಸಂಯಮಿ. **–ಗೋಣ.** ವಿ: [**–ಕೋಣ**] ಮೂರು ಕೋಣಗಳುಳ್ಳ. **–ಚತ್ತಾ.** ಸ್ತ್ರೀ: [**–ಚತ್ವಾರಿಂಶತ್**] ನಲವತ್ತ ಮೂರು. (ಕಮ್ಮ). **–ಜಯ.** ನ: [**–ಜಗತ್**] ಸ್ವರ್ಗ, ಮರ್ತ್ಯ ಮತ್ತು ಪಾತಾಳ ಲೋಕಗಳು. **–ಣಯಣ.** ಪು: [**–ನಯನ**] ಶಿವ, ಮಹಾದೇವ. (ಸುಪಾ). **–ತುಲ.** ‘**ಉಲ**’ **ಶಬ್ದವನ್ನು ನೋಡುವುದು.** **–ತ್ತಿಸ.**(ಅಪ). ‘**–ತ್ತೀಸ**’ **ಶಬ್ದವನ್ನು ನೋಡುವುದು.** **–ತ್ತೀಸ.** ಸ್ತ್ರೀನ: [**ತ್ರಯಸ್ತ್ರಿಂಶತ್**] ಮೂವತ್ತಮೂರು= ೩೩. –**ದಂಡ.** ನ: [**–ದಂಡ**] ಆಯುಧಗಳನ್ನು ಇಟ್ಟುಕೊಳ್ಳುವ ಉಪಕರಣ. ಮೂರು ದಂಡಗಳು (ಔಪ). **–ದಂಡಿ.** ಪು: [**–ದಂಡಿನ್**] ಸಾಂಖ್ಯಮತದ ಅನುಯಾಯಿ ಸಂನ್ಯಾಸಿ (ಸುಪಾ). **–ನವಇ.** ಸ್ತ್ರೀ: [**–ನವತಿ**] ತೊಂಬತ್ತಮೂರು=೯೩. ೯೩ ಸಂಖ್ಯೆಯುಳ್ಳ. **–ಪಂಚ** ತ್ರಿ. ಬ: [**–ಪಂಚನ್**] ಹದಿನೈದು(ಓಘ). **–ಪಂಚಾಸಇಮ.** ವಿ: [**–ಪಂಚಾಶ**] ಐವತ್ತಮೂರನೆಯ. **–ಪಹ.** ನ: [**–ಪಥ**] ಮೂರು ದಾರಿಗಳು ಕೂಡುವ ಜಾಗ. **–ಪಾಯಣ.** ನ: [**–ಪಾತನ**] ಶರೀರ, ಇಂದ್ರಿಯ ಮತ್ತು ಪ್ರಾಣ ಈ ಮೂರರ ನಾಶ, ಮನಸ್ಸು, ವಚನ ಮತ್ತು ಶರೀರ ಇವುಗಳ ನಾಶ. **–ಪುಂಡ.** ನ: [**–ಪುಂಡ್ರ**]. ಹಣೆಯಲ್ಲಿ ಹಾಕಿಕೊಳ್ಳುವ ಊರ್ಧ್ವ ಪುಂಡ್ರ; ನಾಮ, ತಿಲಕ. **–ಪುರ.** ಪು: [**–ಪುರ**] ದಾನವರು. **–ಪುರಾ.** ಸ್ತ್ರೀ: [**–ಪುರಾ**] ವಿದ್ಯಾ –ವಿಶೇಷ. **–ಬ್ಭಂಗೀ.** ಸ್ತ್ರೀ: [**–ಭಂಗೀ**] ಒಂದು ಛಂದಸ್ಸು. **–ಮಹುರ.** ನ: [**–ಮಧುರ**] ತುಪ್ಪ, ಸಕ್ಕರೆ ಮತ್ತು ಜೇನುತುಪ್ಪ (ಅಣು). **–ಮಾಸಿಆ.** ಸ್ತ್ರೀ: [**–ತ್ರೈಮಾಸಿಕೀ**] ಮೂರು ಮಾಸಗಳ ಅವಧಿಯ ಒಂದು ಪ್ರತಿಮೆ, ವ್ರತ –ವಿಶೇಷ. **–ಮುಹ.** ವಿ: [**–ಮುಖ**] ಮೂರು ಮೂಖಗಳುಳ್ಳ., ಪು: ಭಗವಾನ್‌ಸಂಭವನಾಥನ ಶಾಸನ –ದೇವ. **ರತ್ತ.** ನ: [**–ರಾತ್ರ**] ಮೂರು ರಾತ್ರಿಗಳು. –ರಾಸಿ. ನ: [**–ರಾಶಿ**] ಜೀವ, ಅಜೀವ ಮತ್ತು ನೋಜೀವ ರೂಪದ ಮೂರು ರಾಶಿಗಳು. **–ಲೋಅ.** ನ: [**–ಲೋಕೀ**] ಸ್ವರ್ಗ, ಮರ್ತ್ಯ ಮತ್ತು ಪಾತಾಳ ಲೋಕಗಳು. **–ಲೋಅಣ.** ಪು: [**–ಲೋಚನ**] ಶಿವ, ಮಹಾದೇವ(ಪಉಮ) **–ಲೋಅಪುಜ್ಜ.** ಪು: [**–ಲೋಕಪೂಜ್ಯ**] ಧಾತಕೀ ಷಂಡದ ವಿದೇಹದಲ್ಲಿ ಹುಟ್ಟಿದ ಒಬ್ಬ ಜಿನದೇವ (ಪಉಮ). **–ಲೋಈ.** ಸ್ತ್ರೀ: [**–ಲೋಕೀ**] ‘**–ಲೋಅ**’ **ಶಬ್ದವನ್ನು ನೋಡುವುದು.** **–ವಈ.** ಸ್ತ್ರೀ: [**–ಪದೀ**] ಮೂರು ಪದಗಳ ಸಮೂಹ. ಭೂಮಿಯಲ್ಲಿ ಮೂರು ಪಾದಗಳ ನ್ಯಾಸ. ಒಂದು ಬಗೆಯ ಗತಿ. **–ವಗ್ಗ.** ಪು: [**–ವರ್ಗ**] ಧರ್ಮ, ಅರ್ಥ, ಕಾಮ ಈ ಪುರುಷಾರ್ಥಗಳು(ಠಾ). ಲೋಕ, ವೇದ, ಮತ್ತು ಸಮಯ ಈ ಮೂರರ ಗುಂಪು. ಸೂತ್ರ, ಅರ್ಥ, ಮತ್ತು ಅವೆರಡರ ಸಮೂಹ(ಆಚೂ). **–ವಣ್ಣ.** ಪು: [**– ಪರ್ಣ**] ಮುತ್ತುಗದ ಮರ(ಕುಮಾ). –**ವರಿಸ.** ವಿ: [**–ವರ್ಷ**] ಮೂರು ವರ್ಷ ವಯಸ್ಸಿನವನು. –ವಲಿ. ಸ್ತ್ರೀ: ‘ **–ವಲಿ**’ **ಶಬ್ದವನ್ನು ನೋಡುವುದು.** **–ವಟ್ಟ.** ಪು: [**–ಪೃಷ್ಠ**] ಭರತ ಕ್ಷೇತ್ರದ ಭಾವೀ ಒಂಬತ್ತನೇ ವಾಸುದೇವ. **–ವಯ.** ನ: [**–ಪದ**] ಮೂರು ಪಾದಗಳುಳ್ಳ. **–ವಹಾ.** ಸ್ತ್ರೀ: [**–ಪಥಗಾ**] ಗಂಗಾನದಿ(ಅಚ್ಚು). **–ವಾಯಣಾ.** ಸ್ತ್ರೀ: [**–ಪಾತನಾ**] ‘**ಪಾಯಣ**’ **ಶಬ್ದವನ್ನು ನೋಡುವುದು.** –ವಿಟ್ಟ, –ವಿಟ್ಠು. ಪು: [**–ಪೃಷ್ಠ, –ವಿಷ್ಟು**] ಭರತ ಕ್ಷೇತ್ರದಲ್ಲಿ ಹುಟ್ಟಿದ ಅರ್ಧ ಚಕ್ರವರ್ತಿ ರಾಜನ ಹೆಸರು (ಸಮ). **–ವಿಹ.** ವಿ: [**–ವಿಧ.] ಮೂರು ಬಗೆಯ, (ನವ).** **–ವಿಹಾರ.** ಪು: [– **–ವಿಹಾರ**] ರಾಜಾ ಕುಮಾರಪಾಲನು ನಿರ್ಮಿಸಿದ ಪಾಟ್ನಾದ ಒಂದು ಜೈನ ದೇವಾಲಯ. **–ಸಂಕು.** ಪು: [**–ಶಂಕ**] ಸೂರ್ಯವಂಶದ ಒಬ್ಬ ದೊರೆ(ಅಭಿ). **–ಸಂಝ.** ನ: [**–ಸಂಧ್ಯ**] ಹಗಲು, ಮಧ್ಯಾಹ್ನ ಮತ್ತು ಸಾಯಂಕಾಲದ ಸಮಯ. **ಸಟ್ಠ.** ವಿ: [**–ಷಷ್ಟ**] ಅರುವತ್ತ ಮೂರನೆಯ. **–ಸಟ್ಠಿ.** ಸ್ತ್ರೀ: [**–ಷಷ್ಟಿ**] ಅರುವತ್ತಮೂರು. **–ಸತ್ತ.** ತ್ರಿ. ಬ: [**–ಸಪ್ತನ್**] ಇಪ್ಪತ್ತೊಂದು(=೨ –). **–ಸತ್ತಖುತ್ತೋ.** ಅ: [**ಸಪ್ತಕೃತ್ವಸ್**] ಇಪ್ಪತ್ತೊಂದು ಸಲ(ಣಾಯಾ). **–ಸಮಇಯ.** ವಿ: [**–ಸಾಮಯಿಕ**] ಮೂರು

ವೇಳೆಗಳಲ್ಲಿ ಹುಟ್ಟುವ. ಮೂರು ವೇಳೆಗಳ ಅವಧಿ ಉಳ್ಳ. **–ಸರಯ.** **ನ:** [**–ಸರಕ**] ಮೂರು ಎಳೆಗಳುಳ್ಳ ಹಾರ(ಔಪ). ಒಂದು ವಾದ್ಯ –ವಿಶೇಷ. **–ಸರ.** **ಸ್ತ್ರೀ:** [**–ಸರಾ**] ಮೀನು ಹಿಡಿಯುವ ಬಲೆ(ವಿಪಾ). **–ಸರಿಯ.** **ನ:** [**–ಸರಕ**] ಮೂರು ಎಳೆಗಳುಳ್ಳ ಹಾರ, ಒಂದು ವಾದ್ಯ(ಪಉಮ) **ವಿ:** ವಾದ್ಯ–ವಿಶೇಷಕ್ಕೆ ಸಂಬಂಧಿಸಿದ. **–ಸೀಸ.** **ಪು:** [**–ಶೀರ್ಷ**] ದೇವ –ವಿಶೇಷ. **–ಸೂಲ.** **ನ:** [**–ಶೂಲ**] ಶಸ್ತ್ರ(=ಆಯುಧ) –ವಿಶೇಷ, **–ಸೂಲಪಾಣಿ.** **ಪು:** [**–ಶೂಲಪಾಣಿ**] ಶಿವ, ಮಹಾದೇವ. ತ್ರಿಶೂಲವನ್ನು ಕೈಯಲ್ಲಿ ಹಿಡಿವ ಯೋಧ. **–ಸೂಲಿಯಾ.** **ಸ್ತ್ರೀ:** [**–ಶೂಲಿಕಾ**] ಸಣ್ಣ ತ್ರಿಶೂಲ(ಸೂಅ). **–ಹತ್ತರ.** **ವಿ:** [**–ಸಪ್ತತ**] ಎಪ್ಪತ್ತಮೂರನೆಯ. **–ಹಾ.** **ಅ:** [**–ಧಾ**] ಮೂರು ವಿಧದ(ಅಣು). **–ಹುಅಣ, –ಹುಣ, –ಹುವಣ.** **ನ:** [**–ಭುವನ**] ಮೂರು ಲೋಕಗಳಾದ ಸ್ವರ್ಗ, ಮರ್ತ್ಯ, ಪಾತಾಳಗಳು (ಪ್ರಾಸೂ). **ಪು.** ರಾಜ ಕುಮಾರಪಾಲನ ತಂದೆಯ ಹೆಸರು. **–ಹುಅಣಪಾಲ.** **ಪು:** [**–ಭುವನಪಾಲ**] ದೊರೆ ಕುಮಾರಪಾಲನ ತಂದೆ. **–ಹುಅಣಾಲಂಕಾರ.** **ಪು:** [**–ಭುವನಾಲಂಕರ**] ರಾವಣನ ಪಟ್ಟದಾನೆಯ ಹೆಸರು. **–ಹುಣವಿಹಾರ.** **ಪು:** [**–ಭುವನವಿಹಾರ**] ಗುಜರಾತ್ ನಲ್ಲಿ ರಾಜ ಕುಮಾರಪಾಲನು ಕಟ್ಟಿಸಿದ ಒಂದು ಜೈನ ದೇವಾಲಯ. '**ತೇ**' ಅನ್ನು ನೋಡುವುದು

–ತಿ. '**ಇಅ=ಇತಿ**' **ಶಬ್ದವನ್ನು ನೋಡುವುದು**

ತಿಅ(ಅಪ). **ಅಕ:** [**ತಿಮ್, ಸ್ತಿಮ್**] ಒದ್ದೆಯಾಗು, **ಸಕ:** ಒದ್ದೆಮಾಡು, ನೆನಸು,

ತಿಅ. **ನ:** [ತ್ರಿಕ] ಮೂರರ ಗುಂಪು, ಸಮುದಾಯ (ಉಪ). ಮೂರು ದಾರಿಗಳು ಕೂಡುವ ಜಾಗ **–ಸಂಜಅ.** **ಪು:** [**–ಸಂಯತ**] ಒಬ್ಬ ರಾಜರ್ಷಿ (ಪಉಮ) '**–ತಿಗ**' **ಶಬ್ದವನ್ನು ನೋಡುವುದು**

ತಿಅ. **ವಿ:** [ತ್ರಿಜ] ಮೂರರಿಂದ ಹುಟ್ಟುವ

ತಿಅಂಕರ. **ಪು:** [ತ್ರಿಕಂಕರ] ಹೆಸರಾಂತ ಜೈನಮುನಿ

ತಿಅಗ. **ನ:** [ತ್ರಿಕಕ] ಮೂರರ ಗುಂಪು(ವಿಸೇ)

ತಿಅಡಾ. **ಸ್ತ್ರೀ:** [ತ್ರಿಜಟಾ] ಖ್ಯಾತ ರಾಕ್ಷಸಿ, ವಿಭೀಷಣನ ಮಗಳು

ತಿಅಭಂಗೀ. **ಸ್ತ್ರೀ:** [**ತ್ರಿಭಂಗೀ**] ಒಂದು ಛಂದಸ್ಸು, ನಾಟ್ಯದ ಒಂದು ಭಂಗಿ

ತಿಅಯ. **ನ:** [**ತ್ರಿತಯ**] ಮೂರರ ಗುಂಪು

ತಿಅಲುಕ್ಕ}. **ನ:** [**ತ್ರೈಲೋಕ್ಯ**] ಸ್ವರ್ಗ, ಮರ್ತ್ಯ ಮತ್ತು

ತಿಅಲೋಯ}. ಪಾತಾಳವೆಂಬ ಮೂರು ಲೋಕಗಳು.

ತಿಅಸ. **ಪು:** [**ತ್ರಿದಶ**] ದೇವ, ದೇವತೆ(ಕುಮಾ), **–ಗಅ.** **ಪು:** [**–ಗಜ**] ಇಂದ್ರನ ಆನೆಯಾದ ಐರಾವತ **–ನಾಹ.** **ಪು:** [**–ನಾಥ**] ಇಂದ್ರ(ಉಪ). **–ಪಹು.** **ಪು:** [**–ಪ್ರಭು**] ದೇವರಾಜ ಇಂದ್ರ, **–ರಿಸಿ.** **ಪು:** [**–ಋಷಿ**] ನಾರದ ಮುನಿ. **–ಲೋಗ.** **ಪು:** [**–ಲೋಕ**] ಸ್ವರ್ಗ(ಉಪ). **–ವಿಲಯಾ.** **ಸ್ತ್ರೀ:** [**–ವನಿತಾ**] ಸ್ತ್ರೀ ದೇವತೆ(ಸುಪಾ). **–ಸರಿ.** **ಸ್ತ್ರೀ:** [**–ಸರಿತ್**] ಗಂಗಾನದಿ. **–ಸೇಲ.** **ಪು:** [**–ಶೈಲ**] ಮೇರು ಪರ್ವತ. **ತಿಅಸಾಲಯ.** **ಪುಂನ:** [**ತ್ರಿದಶಾಲಯ.**] ಸ್ವರ್ಗ. **ತಿಅಸಾಹಿವ.** **ಪು:** [**ತ್ರಿದಶಾಧಿಪ**] ಇಂದ್ರ, **ತಿಅಸಾಹಿವಇ.** **ಪು:** [**ತ್ರಿದಶಾಧಿಪತಿ**] ಇಂದ್ರ,

ತಿಅಸೂರಿ. **ಪು:** [**ತ್ರಿದಶಸೂರಿ**] ಬೃಹಸ್ಪತಿ.

ತಿಅಸಿಂದ}. **ಪು:** [**ತ್ರಿದಶೇಂದ್ರ**] ದೇವರಾಜ ಇಂದ್ರ

ತಿಅಸೇಂದ}.

ತಿಅಸೀಸ. **ಪು:** [**ತ್ರಿದಶೇಶ**] ಇಂದ್ರ, ದೇವ ನಾಯಕ

ತಿಆಮಾ. **ಸ್ತ್ರೀ:** [**ತ್ರಿಯಾಮಾ**] ರಾತ್ರಿ

ತಿಇಕ್ಖ. **ಸಕ:** [**ತಿತಿಕ್ಷ್**] ಸಹಿಸು, ಸಹನೆ ತೋರು

ತಿಇಕ್ಖಾ. **ಸ್ತ್ರೀ:** [**ತಿತಿಕ್ಷಾ**] ಕ್ಷಮೆ, ಸಹಿಷ್ಣುತೆ(ಆಚಾ)

ತಿಇಜ್ಜ}. **ವಿ:** [**ತೃತೀಯ**] ಮೂರನೆಯ

ತಿಇಯ}.

ತಿಉಕ್ಖರ. **ನ:** [**ತ್ರಿಪುಷ್ಕರ**] ಒಂದು ವಾದ್ಯ –ವಿಶೇಷ

ತಿಉಟ್ಟ. **ಅಕ:** [**ತ್ರುಟ್**] ಮುರಿ, ಬಿಡುಗಡೆಹೊಂದು

ತಿಉಟ್ಟ. **ಸಕ:** [**ತ್ರೋಟ್**] ಮುರಿ, ತ್ಯಜಿಸು, ಬಿಡು

ತಿಉಟ್ಟ. **ವಿ:** [**ತ್ರುಟ್ಟ, ತ್ರುಟಿತ**] ಹರಿಯಲ್ಪಟ್ಟ, ಸೀಳಲ್ಪಟ್ಟ ಮುರಿದುಹೋದ, ದೂರ ಹೋದ

ತಿಉಡ. **ಪು:** [**ದೇ**] ನವಿಲುಗರಿ(ಪಾಅ)

ತಿಉಡಗ. **ಪುಂನ:** [**ತ್ರಿಪುಟಕ**] ಒಂದ ಧಾನ್ಯ

ತಿಉಡಯ. **ನ:** [**ದೇ**] ಮಾಲವ ದೇಶದಲ್ಲಿನ ಪ್ರಸಿದ್ಧವಾದ ಧಾನ್ಯ –ವಿಶೇಷ

ತಿಉರ. **ನ:** [**ತ್ರಿಪುರ**] ಒಂದು ವಿದ್ಯಾಧರ ನಗರ. **ಪು:** ತ್ರಿಪುರರೆಂಬ ರಾಕ್ಷಸರು. **–ಣಾಹ.** **ಪು:** [**–ನಾಥ**] ಅದೇ

ತಿಉರೀ. ಸ್ತ್ರೀ: [ತ್ರಿಪುರೀ] ಚೇದಿ ದೇಶದ ರಾಜಧಾನಿ
ತಿಉಲ. ವಿ: [ದೇ] ಮನಸ್ಸು, ವಚನ ಮತ್ತು ಶರೀರಕ್ಕೆ ಯಾತನೆಯನ್ನುಂಟುಮಾಡುವ, ದುಃಖ ಹೇತು
ತಿಊಡ. 'ತಿಕೂಡ' ಶಬ್ದವನ್ನು ನೋಡುವುದು
ತಿಂಗಿಅ. ಸ್ತ್ರೀ: [ದೇ] ಕಮಲದ ರಜಸ್ಸು
ತಿಂಗಿಚ್ಛ. 'ತಿಗಿಚ್ಛ' ಶಬ್ದವನ್ನು ನೋಡುವುದು
ತಿಂಗಿಚ್ಛಾಯಣ. ನ: [ಚಿಕಿತ್ಸಾಯನ] ನಕ್ಷತ್ರ –ಗೋತ್ರ ವಿಶೇಷ
ತಿಂಗಿಚ್ಛಿ. ಸ್ತ್ರೀ: [ದೇ] ಕಮಲದ ರಜ, (ಗ ಉಡ)
ತಿಂತ. ವಿ: [ತೀಮಿತ] ನೆನೆಸಲ್ಪಟ್ಟಿರುವ, ಒದ್ದೆ ಮಾಡಲಾಗಿರುವ
ತಿಂತಿಣ}. ವಿ: [ದೇ] ಬಡಬಡಿಸುವವನು, ಬಯಸಿದ
ತಿಂತಿಣಿಯ}. ಲಾಭ ಬಾರದಿದ್ದಾಗ ಮನಸ್ಸಿಗೆ ಬಂದದ್ದನ್ನು ಆಡುವವನು(ಠಾ)
ತಿಂತಿಣೀ. ಸ್ತ್ರೀ: [ತಿಂತ್ರಿಣೀ] ಹುಣಿಸೆ ಮರ.
ತಿಂತಿಣೀ. ಸ್ತ್ರೀ: [ದೇ] ಬಡಬಡಿಸುವುದು
ತಿಂದುಇಣೀ. ಸ್ತ್ರೀ: [ತಿಂದುಕಿನೀ] ತುಂಬೆಗಿಡ
ತಿಂದುಗ}. ಪು: [ತಿಂದುಕ] ತುಂಬೆಗಿಡ ನ: ಹಣ್ಣು,
ತಿಂದುಯ}. ಶ್ರಾವಸ್ತಿ ನಗರದ ಒಂದು ಉದ್ಯಾನ, ಮೂರು ಇಂದ್ರಿಯಗಳ ಪ್ರಾಣಿ
ತಿಂದೂಸ}. ಪುಂನ: [ತಿಂದೂಸ, –ಕ] ಒಂದು ಬಗೆಯ
ತಿಂದೂಸಗ}. ಮರ. (ಪಣ್ಣ), ಚೆಂಡು(ಣಾಯಾ),
ತಿಂದೂಸಯ}. ಕ್ರೀಡಾ –ವಿಶೇಷ(ಆವಮ).
ತಿಕಲ್ಲ. ನ: [ತ್ರೈಕಾಲ್ಯ]ಮೂರೂಕಾಲಗಳ ವಿಷಯ.
ತಿಕೂಡ. ಪು: [ತ್ರಿಕೂಟ] ಲಂಕೆಯ ಹತ್ತಿರದ ಒಂದು ಪರ್ವತವಾದ ಸುವೇಲ ಪರ್ವತ. ಸೀತಾ ಮಹಾನದಿಯ ದಕ್ಷಿಣ ದಂಡೆಯ ಮೇಲೆ ಇರುವ ಪರ್ವತ – ವಿಶೇಷ(ಠಾ). –ಸಾಮಿಯ. ಪು: [–ಸ್ವಾಮಿನ್] ಸುವೇಲ ಪರ್ವತದ ಯಜಮಾನ ರಾವಣ.
ತಿಕ್ಖ. ವಿ: [ತೀಕ್ಷ್ಣ] ಹರಿತವಾದ, ಚುರುಕಾದ, ಸೂಕ್ಷ್ಮವಾದ, ಶುದ್ಧವಾದ, ಒರಟಾದ, ನಿಷ್ಠುರವಾದ(ಭಗ), ವೇಗದಿಂದ ಕೂಡಿದ, ಕ್ಷಿಪ್ರವಾದ, ಕೋಪಿಷ್ಠ, ಬಿಸಿಯಾದ, ಶೀಘ್ರಕೋಪದ, ಕಹಿಯಾದ, ಉತ್ಸಾಹಿ, ಸೋಂಬೇರಿತನವಿಲ್ಲದ, ಚತುರ, ದಕ್ಷ, ನ: ವಿಷ, ಕಬ್ಬಿಣ, ಯುದ್ಧ, ಶಸ್ತ್ರ, ಆಯುಧ, ಸಮುದ್ರದ ಉಪ್ಪು, ಪೆಟ್ಲುಪ್ಪು, ಬಿಳಿತೊನ್ನು, ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಆಶ್ಲೇಷ, ಆರಿದ್ರಾ, ಜ್ಯೇಷ್ಠಾ, ಮತ್ತು ಮೂಲಾ ನಕ್ಷತ್ರವೇ ಮೊದಲಾದ ನಕ್ಷತ್ರ ಗಣಗಳು
ತಿಕ್ಖ. ಸಕ: [ತೀಕ್ಷ್ಣಯ್] ತೀಕ್ಷ್ಣಗೊಳಿಸು, ಹರಿತಗೊಳಿಸು,
ತಿಕ್ಖಣ. ನ: [ತೀಕ್ಷ್ಣನ]ಹರಿತಗೊಳಿಸುವುದು, ಉತ್ತೇಜಿತ ಗೊಳಿಸುವುದು(ಕುಮಾ)
ತಿಕ್ಖಾಲ. ಸಕ: [ತೀಕ್ಷ್ಣಯ್] ತೀಕ್ಷ್ಣಗೊಳಿಸು
ತಿಕ್ಖಾಲಿಅ. ವಿ: [ದೇ] ತೀಕ್ಷ್ಣಗೊಳಿಸಲ್ಪಟ್ಟ(ದೇ)
ತಿಕ್ಖುತ್ತೋ. ಅ: [ತ್ರಿಸ್] ಮೂರು ಬಾರಿ, ಮೂರುಸಲ
ತಿಗ. 'ತಿಅ=ತ್ರಿಕ' ಶಬ್ದವನ್ನು ನೋಡುವುದು. –ವಸ್ಸಿ. ವಿ: [–ವಶಿನ್] ಮನಸ್ಸು, ವಚನ ಮತ್ತು ಶರೀರವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವವನು.
ತಿಗಸಂಪುಣ್ಣ. ನ: [ತ್ರಿಕಸಂಪೂರ್ಣ] ನಿರಂತರ ಮೂವತ್ತು ದಿನಗಳ ವರೆಗಿನ ಉಪವಾಸ
ತಿಗಿಂಛ. ಪು: [ತಿಗಿಚ್ಛ] ಸರೋವರ–ವಿಶೇಷ, ಮಡು.
ತಿಗಿಂಛಾಯಣ. ನ: [ತಿಗಿಚ್ಛಾಯನ] ಒಂದು ಗೋತ್ರ
ತಿಗಿಂಛಿ. ಪು: [ತಿಗಿಚ್ಛಿ] ಪರ್ವತ –ವಿಶೇಷ, ನಿಷಧ ಪರ್ವತದ ಮೇಲೆ ಇರುವ ಒಂದು ಮಡು
ತಿಗಿಚ್ಛ. ನ: [ಚೌಕಿತ್ಸ] ಚಿಕಿತ್ಸಾ ಶಾಸ್ತ್ರ
ತಿಗಿಚ್ಛ. ಸಕ: [ಚಿಕಿತ್ಸ] ಪ್ರತೀಕಾರ ಮಾಡು, ವ್ಯಾಧಿಯ ಚಿಕಿತ್ಸೆ ಮಾಡು
ತಿಗಿಚ್ಛ. ಪು: [ಚಿಕಿತ್ಸ] ವೈದ್ಯ(ವವ)
ತಿಗಿಚ್ಛ. ಪು: [ತಿಗಿಚ್ಛ] ನಿಷಧ ಪರ್ವತದ ಮೇಲೆ ಇರುವ ಒಂದು ನೀರಿನ ಮಡು, ನ: ದೇವ –ವಿಮಾನ –ವಿಶೇಷ
ತಿಗಿಚ್ಛಗ.} ವಿ: [ಚಿಕಿತ್ಸಕ] ಪ್ರತೀಕಾರ ಮಾಡುವವನು,
ತಿಗಿಚ್ಛಯ}. ಪು: ವೈದ್ಯ, ಹಕೀಮ
ತಿಗಿಚ್ಛಯ. ನ: [ಚೈಕಿತ್ಸ್ಯ] ಚಿಕಿತ್ಸಾ –ಕ್ರಿಯೆ(ಠಾ)
ತಿಗಿಚ್ಛಾ. ಸ್ತ್ರೀ: [ಚಿಕಿತ್ಸಾ] ಪ್ರತೀಕಾರ, ರೋಗದ ಚಿಕಿತ್ಸೆ. –ಸತ್ಥ. ನ: [–ಶಾಸ್ತ್ರ] ಆಯುರ್ವೇದ ವೈದ್ಯ ಶಾಸ್ತ್ರ
ತಿಗಿಚ್ಛಾಯಣ. ನ: [ತಿಗಿಚ್ಛಾಯನ] ಒಂದು ಗೋತ್ರ.
ತಿಗಿಚ್ಛಿ. 'ತಿಗಿಂಛಿ' ಶಬ್ದವನ್ನು ನೋಡುವುದು
ತಿಗಿಚ್ಛಿಯ. ಪು: [ಚೈಕಿತ್ಸಕ] ವೈದ್ಯ, ಚಿಕಿತ್ಸಕ(ಪಉಮ)
ತಿಗ್ಗ. ವಿ: [ತಿಗ್ಮ] ತೀಕ್ಷ್ಣ, ಹರಿತ
ತಿಗ್ಘ. ವಿ: [ತ್ರಿಘ್ನ] ಮೂರರಷ್ಟು, ಮೂರು ಪಟ್ಟು
ತಿಚೂಡ. ಪು: [ತ್ರಿಚೂಡ] ವಿದ್ಯಾಧರ –ವಂಶದ ಒಬ್ಬ ರಾಜ(ಪಉಮ)

ತಿಜಡ. ಪು: [ತ್ರಿಜಟ] ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು, ರಾಕ್ಷಸ ವಂಶದ ಒಬ್ಬ ರಾಜ
ತಿಜಾಮಾ.}. ಸ್ತ್ರೀ: [ತ್ರಿಯಾಮಾ] ರಾತ್ರಿ(ರಂಭಾ)
ತಿಜಾಮೀ}.
ತಿಜ್ಜ. ವಿ: [ತಾರ್ಯ] ಈಸಲು ಯೋಗ್ಯವಾದ್ದು(ಭಾಸ)
ತಿಡ್ಡ. ಪುಂಸ್ತ್ರೀ: [ದೇ] ಅನ್ನವನ್ನು ನಾಶ ಮಾಡುವ ಒಂದು ಕೀಟ. ಸ್ತ್ರೀ: –ಡ್ಡೀ
ತಿಡ್ಡವ. ಸಕ: [ತಾಡಯ್] ಹೊಡೆ, ಏಟುಕೊಡು
ತಿಣ. ನ: [ತೃಣ] ಹುಲ್ಲು,. **–ಸೂಯ.** ನ: [–ಶೂಕ] ಹುಲ್ಲಿನ ತುದಿ, ಅಗ್ರಭಾಗ. **–ಹತ್ಥಯ.** ಪು: [–ಹಸ್ತಕ] ಹುಲ್ಲಿನ ಚಿಕ್ಕ ಹೊರೆ(ಭಗ)
ತಿಣಿಸ. ಪು: [ತಿನಿಶ] ನೆಮ್ಮಿಗಿಡ, ಬೆತ್ತದ ಗಿಡ(ಶಾ)
ತಿಣಿಸ. ನ: [ದೇ] **ಜೇನುಹುಟ್ಟು**
ತಿಣಿಸ. ವಿ: [ತೈನಿಶ] ನೆಮ್ಮಿಗಿಡಕ್ಕೆ ಸಂಬಂಧಿಸಿದ, ಬೆತ್ತದ
ತಿಣೀಕಯ. ವಿ: [ತೃಣೀಕೃತ] ಹುಲ್ಲಿನ ಹಾಗೆ ಎಂದು ಭಾವಿಸಿರುವ
ತಿಣ್ಣ}. ಅಕ: [ತಿಮ್] ಒದೆಯಾಗು, ನೆನೆ. ಸಕ:
ತಿಣ್ಣಾಇಅ}. ಆರ್ದ್ರಗೊಳಿಸು.
ತಿಣ್ಣ. ವಿ: [ತೀರ್ಣ] ದಾಟಲ್ಪಟ್ಟ, ದಡಮುಟ್ಟಿದ(ಔಪ), ಶಕ್ತ, ಸಮರ್ಥ
ತಿಣ್ಣ. ನ: [ಸ್ತೈನ್ಯ] ಕಳ್ಳತನ
ತಿಣ್ಣ –. **'ತಿ=ತ್ರಿ' ಶಬ್ದವನ್ನು ನೋಡುವುದು. –ಭಂಗ.** ವಿ: [–ಭಂಗ] **ಮೂರು ಖಂಡಗಳುಳ್ಳ,** **–ವಿಹ.** ವಿ: [–ವಿಧ] ಮೂರು ಬಗೆಯ, ಮೂರು ವಿಧದ
ತಿಣ್ಣಿಅ. ಪು: [ತಿನ್ನಿಕ] **'ತಿತ್ತಿಯ=ತಿತ್ತಿಕ'** ಶಬ್ದವನ್ನು ನೋಡುವುದು
ತಿಣ್ಹ. **'ತಿಕ್ಖ'** ಶಬ್ದವನ್ನು ನೋಡುವುದು
ತಿಣ್ಹಾ. **'ತಣ್ಹಾ'** ಶಬ್ದವನ್ನು ನೋಡುವುದು
ತಿತಉ. ಪು: [ತಿತಉ] ಜರಡಿ, ಒಂದರಿ(ಪ್ರಾಮಾ)
ತಿತಿಕ್ಖಯಾ. **'ತಿತಿಕ್ಖಾ'** ಶಬ್ದವನ್ನು ನೋಡುವುದು.
ತಿತಯ. **'ತಿಅಯ'** ಶಬ್ದವನ್ನು ನೋಡುವುದು.
ತಿತಿಕ್ಖ **'ತಿಇಕ್ಖ'** ಶಬ್ದವನ್ನು ನೋಡುವುದು
ತಿತಿಕ್ಖಣ. ನ: [ತಿತಿಕ್ಷಣ] ಸಹಿಸುವುದು, (ಶಾ)
ತಿತಿಕ್ಖಾ. **'ತಿಇಕ್ಖಾ' ಶಬ್ದವನ್ನು ನೋಡುವುದು**
ತಿತ್ತ. ವಿ: [ತೃಪ್ತ] ತೃಪ್ತ, ಸಂತುಷ್ಟ(ವಿಸೇ)
ತಿತ್ತ. ವಿ: [ತಿಕ್ತ] ಕಹಿಯಾದ, ಪು: ಕಹಿರಸ(ಶಾ)

ತಿತ್ತಿ. **'ತತ್ತಿ=ದೇ'** ಶಬ್ದವನ್ನು ನೋಡುವುದು.
ತಿತ್ತಿ. ಸ್ತ್ರೀ: [ತೃಪ್ತಿ] ತೃಪ್ತಿ, ಸಂತೋಷ(ಉಪ)
ತಿತ್ತಿ.(ದೇ). ತಾತ್ಪರ್ಯ, ಸಾರ
ತಿತ್ತಿಅ. ವಿ: [ತಾವತ್] ಅಷ್ಟು, ಅಷ್ಟು ಪ್ರಮಾಣವುಳ್ಳ, ಅಷ್ಟು ಅಧಿಕವಾದ
ತಿತ್ತಿಅ. ಪು: [ತಿತ್ತಿಕ] ಮ್ಲೇಚ್ಛ ದೇಶ–ವಿಶೇಷ, ಆ ದೇಶದಲ್ಲಿ ವಾಸಿಸುವ ಅದರ ಜನರು(ಪಣ) **'ತಿಣ್ಣಿಅ' ಶಬ್ದವನ್ನು ನೋಡುವುದು**
ತಿತ್ತಿರ}. ಪು: [ತಿತ್ತಿರಿ] ತಿತ್ತಿರಿ ಹಕ್ಕಿ, ಕವುಜಗ ಹಕ್ಕಿ.
ತಿತ್ತಿರಿ}.
ತಿತ್ತಿರಿಅ. ವಿ: ದೇ] ಸ್ನಾನದಿಂದ ಒದ್ದೆಯಾದ
ತಿತ್ತಿಲ. ವಿ: [ತಾವತ್] ಅಷ್ಟು, ಅಷ್ಟು ಪ್ರಮಾಣವುಳ್ಳ, ಅಷ್ಟು ಅಧಿಕವಾದ(ಷಡ್)
ತಿತ್ತಿಲ್ಲ. ಪು: [ದೇ] ದ್ವಾರಪಾಲಕ, ಪ್ರತೀಹಾರಿ, ಬಾಗಿಲು ಕಾಯುವವನು (ಗಾ)
ತಿತ್ತುಅ. ವಿ: [ದೇ] ಭಾರವಾದ,
ತಿತ್ತುಲ.(ಅಪ). **'ತಿತ್ತಿಲ'** ಶಬ್ದವನ್ನು ನೋಡುವುದು
ತಿತ್ಥ. ಪು: [ತ್ರಿಸ್ಥ] ಸಾಧು, ಸಾಧ್ವಿ, ಶ್ರಾವಕ, ಮತ್ತು ಶ್ರಾವಕಿಯರ ಸಮುದಾಯ, ಜೈನಸಂಘ(ವಿಸೇ)
ತಿತ್ಥ. ಪು: [ತ್ರ್ಯರ್ಥ] **ಮೇಲಿನ ಶಬ್ದವನ್ನು ನೋಡುವುದು**
ತಿತ್ಥ. ನ: [ತೀರ್ಥ] ಪ್ರಥಮ ಗಣಧರ, ದರ್ಶನ, ಮತ, ಯಾತ್ರಾಸ್ಥಳ, ಪವಿತ್ರ ಸ್ಥಳ, ಪ್ರವಚನ, ಶಾಸನ, ಜಿನದೇವ ರಚಿಸಿದ ದ್ವಾದಶಾಂಗೀ(ಧರ್ಮ), **ಪುಂನ:** ನದಿ, ಕೆರೆ ಇತ್ಯಾದಿಗಳಲ್ಲಿ ಇಳಿಯುವ ಹಾದಿ, ಘಟ್ಟ, **–ಕರ. –ಗರ.'–ಯರ' ಶಬ್ದವನ್ನು ನೋಡುವುದು (ಪಉಮ), –ಜತ್ತಾ.** ಸ್ತ್ರೀ: [–ಯಾತ್ರಾ] ತೀರ್ಥಕ್ಕೆ ಹೋಗುವುದು. **–ಣಾಹ, –ನಾಹ.** ಪು: [–ನಾಥ] ಜಿನ –ದೇವ(ಉಪ) **–ಯರ,** ವಿ:[–ಕರ.] ತೀರ್ಥದ ಪ್ರವರ್ತಕ, ಪು:ಜಿನ –ದೇವ, ತೀರ್ಥಂಕರ. ಸ್ತ್ರೀ: –ರೀ. **–ಯರಣಾಮ.** ನ: [**–ಕರನಾಮನ್**] ಜೀವ ತೀರ್ಥಂಕರನಾಗಲು ಉದಿಸಬೇಕಾದ ಕರ್ಮ(ಶಾ). **–ಸಿದ್ಧ.** ಪು: [–ಸಿದ್ಧ] ತೀರ್ಥ ಪ್ರವೃತ್ತಿ ಉಂಟಾದ ಮೇಲೆ ಮುಕ್ತಿಯನ್ನು ಹೊಂದುವ ಜೀವ(ಶಾ). **ತಿತ್ಥಾಹಿನಾಯಗ.** ಪು: [ತೀರ್ಥಾಧಿನಾಯಕ] ಜಿನದೇವ(ಉಪ). **ತಿತ್ಥಾಹಿವಇ.** ಪು: [ತೀರ್ಥಾಧಿಪತಿ] ತೀರ್ಥಂಕರದೇವ

ತಿತ್ಥಂಕರ. ಪು: [ತೀರ್ಥಂಕರ] 'ತಿತ್ಥ –ಯರ' ಶಬ್ದವನ್ನು ನೋಡುವುದು
ತಿತ್ಥಿ. ವಿ: [ತೀರ್ಥನ್] ದಾರ್ಶನಿಕ, ದರ್ಶನ –ಶಾಸ್ತ್ರದ ವಿದ್ವಾಂಸ, ಯಾವುದೇ ದರ್ಶನದ ಅನುಯಾಯಿ.
ತಿತ್ಥಿಅ. ವಿ: [ತೀರ್ಥಕ] ಮೇಲಿನ ಶಬ್ದವನ್ನು ನೋಡುವುದು
ತಿತ್ಥೀಯು. [ತೀರ್ಥೀಯು] ಮೇಲಿನ ಶಬ್ದವನ್ನು ನೋಡುವುದು
ತಿತ್ಥೇಸರ. ಪು: [ತೀರ್ಥೇಶ್ವರ] ಜಿನ –ದೇವ.
ತಿದಸ. 'ತಿಅಸ' ಶಬ್ದವನ್ನು ನೋಡುವುದು
ತಿದಿವ. ನ: [ತ್ರಿದಿವ] ಸ್ವರ್ಗಲೋಕ, ದೇವಲೋಕ (ಸುಪಾ)
ತಿಧ.(ಅಪ). 'ತಹಾ' ಶಬ್ದವನ್ನು ನೋಡುವುದು
ತಿನ್ನ. 'ತಿಣ್ಣ' ಶಬ್ದವನ್ನು ನೋಡುವುದು
ತಿನ್ನ. ವಿ: [ದೇ] ಒದ್ದೆಯಾದ, ಆರ್ದ್ರವಾದ(ಣಾಯಾ)
ತಿಪನ್ನ. 'ತೇ –ವಣ್ಣ' ಶಬ್ದವನ್ನು ನೋಡುವುದು
ತಿಪ್ಪ. ಸಕ: [ತಿಪ್] ಕೊಡು, ನೀಡು
ತಿಪ್ಪ. ಸಕ: [ತೃಪ್] ತೃಪ್ತನಾಗು, ಸಂತಸಹೊಂದು
ತಿಪ್ಪ. ಸಕ: [ತರ್ಪಯ್] ತೃಪ್ತಿಪಡಿಸು, ಸಂತೋಷಪಡಿಸು
ತಿಪ್ಪ. ಅಕ: [ತಿಪ್] ಸೋರು, ತೊಟ್ಟಿಕ್ಕು, ದುಃಖಿಸು, ಶೋಕಿಸುಅಳು, **ಸಕ:** ಸುಖದಿಂದ ಚ್ಯುತಗೊಳಿಸು,
ತಿಪ್ಪ. ಪುಂನ: [ತ್ರೇಪ್] ಗುದವನ್ನು ತೊಳೆದುಕೊಳ್ಳುವ ಕ್ರಿಯೆ
ತಿಪ್ಪ. ವಿ: [ತೃಪ್ತ] ಸಂತುಷ್ಟ(ಹೇ)
ತಿಪ್ಪಣ. ನ: [ತೇಪನ] ಪೀಡಿಸುವುದು,
ತಿಪ್ಪಣಯಾ. ಸ್ತ್ರೀ: [ತೇಪನತಾ] ಕಣ್ಣೀರು ಸುರಿಸುವುದು, ಅಳುವುದು
ತಿಪ್ಪಾಯ. ನ: [ತ್ರಿಪಾದ] ಒಂದು ಬಗೆಯ ತಪಸ್ಸು, ನೀವಿ; ಹೆಂಗಸರು ಸೊಂಟದಲ್ಲಿ ಹಾಕಿಕೊಳ್ಳುವ ಸೀರೆಯ ಗಂಟು
ತಿಮ.(ಅಪ). 'ತಹಾ' ಶಬ್ದವನ್ನು ನೋಡುವುದು
ತಿಮಿ. ಪು: [ತಿಮಿ] ಮೀನಿನ ಒಂದು ಜಾತಿ(ಪಣ್ಣ)
ತಿಮಿಂಗಿಲ. ಪು: [ದೇ] ಮೀನು. **'ತಿಮಿ'**ಯನ್ನು ನುಂಗುವಂಥ ಮತ್ಸ್ಯ.
ತಿಮಿಂಗಿಲ. ಪು: [ತಿಮಿಂಗಿಲ] ಮೀನಿನ ಒಂದು ಜಾತಿ. **–ಗಿಲ. ಪು: [–ಗಿಲ]**ಒಂದು ಬಗೆಯ ಮಹಾ ಮತ್ಸ್ಯ
ತಿಮಿಂಗಿಲಿ. ಪು: [ತಿಮಿಂಗಿಲಿ] ಮೀನಿನ ಒಂದು ಜಾತಿ(ಪಉಮ)
ತಿಮಿಗಿಲ. 'ತಿಮಿಂಗಿಲ=ತಿಮಿಂಗಿಲ' ಶಬ್ದವನ್ನು ನೋಡುವುದು
ತಿಮಿಚ್ಛಯ}. ಪು; [ದೇ] ದಾರಿಹೋಕ, ಪಯಣಿಗ
ತಿಮಿಚ್ಛಾಹ}.
ತಿಮಿಣ. ನ: [ದೇ] ಹಸಿ ಸೌದೆ(ದೇ)
ತಿಮಿರ. ನ: [ತಿಮಿರ] ಅಂಧಕಾರ, ಕತ್ತಲೆ, ಅಲ್ಪ ಜ್ಞಾನ, ಅಜ್ಞಾನ, **ಪು:** ಒಂದು ಬಗೆಯ ಮರ.
ತಿಮಿರಿಚ್ಛ. ಪು: [ದೇ] ಒಂದು ಬಗೆಯ ವೃಕ್ಷ,
ತಿಮಿರಿಸ. ಪು: [ದೇ] ಒಂದು ವೃಕ್ಷ –ವಿಶೇಷ
ತಿಮಿಲ. ಸ್ತ್ರೀನ: [ತಿಮಿಲ] ಒಂದು ವಾದ್ಯ –ವಿಶೇಷ(ಪಉಮ), **ಸ್ತ್ರೀ: –ಲಾ.**
ತಿಮಿಸ. ಪು: [ತಿಮಿಷ] ಕುಂಬಳದ ಬಳ್ಳಿ, ಕುಂಬಳ ಕಾಯಿ
ತಿಮಿಸಾ.}. ಸ್ತ್ರೀ: [ತಿಮಿಸ್ರಾ] ವೈತಾಢ್ಯ ಪರ್ವತದ
ತಿಮಿಸ್ಸಾ.}. ಒಂದು ಗುಹೆ(ಠಾ)
ತಿಮ್ಮ. ಅಕ: [ಸ್ತೀಮ್] ನೆನೆ, ಒದ್ದೆಯಾಗು
ತಿಮ್ಮ. ಸಕ: [ತಿಮ್] ನೆನೆಸು, ಒದ್ದೆಮಾಡು, **ಅಕ:** ಒದ್ದೆಯಾಗು, ಹಸಿಯಾಗು
ತಿಮ್ಮ. 'ತಿಗ್ಗ' ಶಬ್ದವನ್ನು ನೋಡುವುದು
ತಿಮ್ಮಿಅ. ವಿ: [ಸ್ತಿಮಿತ] ನೆನೆಸಲ್ಪಟ್ಟ, ಒದ್ದೆಯಾಗಿರುವ
ತಿಯಾ. ಸ್ತ್ರೀ: [ಸ್ತ್ರಿಕಾ] ಸ್ತ್ರೀ, ಮಹಿಳೆ
ತಿಯಾಲ. 'ತೇ –ಆಲೀಸ' ಶಬ್ದವನ್ನು ನೋಡುವುದು
ತಿರಕ್ಕರ. ಸಕ: [ತಿರಸ್+ –ಕೃ] ತಿರಸ್ಕರಿಸು
ತಿರಕ್ಕಾರ. ಪು: [ತಿರಸ್ಕಾರ] ತಿರಸ್ಕಾರ, ಅಪಮಾನ, ಅವಹೇಳನ(ಸುಪಾ)
ತಿರಕ್ಕರಿಣೀ.}. ಸ್ತ್ರೀ: [ತಿರಸ್ಕರಿಣೀ] ಯವನಿಕೆ, ಪರದೆ,
ತಿರಕ್ಖರಿಣೀ}.
ತಿರಿ}. ಅ: [ತಿರ್ಯಕ್] ವಕ್ರ, ಡೊಂಕು
ತಿರಿಅಂ}.
ತಿರಿಅ. ವಿ: [ತೈರಶ್ಚ] ತಿರ್ಯಕ್ ಪ್ರಾಣಿಯ
ತಿರಿಅ}. ವಿ: [ತಿರ್ಯಚ್] ವಕ್ರ, ಡೊಂಕಾಗಿರುವ,
ತಿರಿಅಂಚ}. ಪು: ಪಶು, ಪಕ್ಷಿಗಳೇ ಮೊದಲಾದ
ತಿರಿಕ್ಖ}. ಪ್ರಾಣಿಗಳು, ದೇವ, ನಾರಕ, ಮನುಷ್ಯರಿಗಿಂತ
ತಿರಿಚ್ಛ}. ಭಿನ್ನವಾದ ಯೋನಿಯಲ್ಲಿ ಜನಿಸಿದ ಪ್ರಾಣಿಗಳು. ಮರ್ತ್ಯ ಲೋಕ, ಮಧ್ಯ ಲೋಕ(ಠಾ), **ನ:** ಮಧ್ಯ(ಅಣು). **–ಗಇ. ಸ್ತ್ರೀ: [–ಗತಿ]** ತಿರ್ಯಗ್ ಯೋನಿ, ವಕ್ರ ನಡಿಗೆ. **–ಜಂಭಗ. ಪು: [–ಜೃಂಭಕ]**

ದೇವತೆಗಳ ಒಂದು ಜಾತಿ. **–ಜೋಣಿ.** ಸ್ತ್ರೀ: [**–ಯೋನಿ**] ಪಶು, ಪಕ್ಷಿ, ಪ್ರಾಣಿ ಇತ್ಯಾದಿಗಳ ಉತ್ಪತ್ತಿ ಸ್ಥಾನ. **–ಜೋಣಿಅ.** ವಿ: [**–ಯೋನಿಕ**] ತಿರ್ಯಗ್ ಯೋನಿಯಲ್ಲಿ ಹುಟ್ಟಿದ(ಭಗ). **–ಜೋಣಿಣೀ.** ಸ್ತ್ರೀ: [**–ಯೋನಿಕಾ**] ತಿರ್ಯಗ್ ಯೋನಿಯಲ್ಲಿ ಹುಟ್ಟಿದ ಹೆಣ್ಣು ಪ್ರಾಣಿ(ಪಣ್ಣ). **–ದಿಸಾ, –ದಿಸಿ.** ಸ್ತ್ರೀ: [**–ದಿಶ್**] ಪೂರ್ವ, ಪಶ್ಚಿಮವೇ ಮೊದಲಾದ ದಿಕ್ಕುಗಳು(ಆವಮ). **–ಪವ್ವಯ.** ಪು; [**–ಪರ್ವತ**] ಮಧ್ಯದಲ್ಲಿ ಬರುವ ಪರ್ವತ. ಮಾರ್ಗಕ್ಕೆ ತಡೆಯಾಗಿರುವ ಪರ್ವತ. **–ಭಿತ್ತಿ.** ಸ್ತ್ರೀ: [**–ಭಿತ್ತಿ**] ಮಧ್ಯದ ಗೋಡೆ(ಆಚಾ). **ಲೋಗ.** ಪು; [**–ಲೋಕ**] ಮರ್ತ್ಯಲೋಕ, ಮಧ್ಯಲೋಕ. **–ವಸಇ.** ಸ್ತ್ರೀ: [**–ವಸತಿ**] ತಿರ್ಯಗ್ ಯೋನಿ.

ತಿರಿಚ್ಛ. ವಿ: [**ತಿರಶ್ಚೀನ**] ಅಡ್ಡವಾಗಿ ಹೋಗಿರುವ, ವಕ್ರವಾಗಿ ಸಾಗಿ ಹೋಗಿರುವ, ತಿರ್ಯಕ್ –ಸಂಬಂಧಿ(ಉತ್ತ)

ತಿರಿಚ್ಛಿ. '**ತಿರಿಅ**' ಶಬ್ದವನ್ನು ನೋಡುವುದು

ತಿರಿಚ್ಛಿಯ. '**ತೇರಿಚ್ಛಿಯ**' ಶಬ್ದವನ್ನು ನೋಡುವುದು

ತಿರಿಚ್ಛೀ. ಸ್ತ್ರೀ: [**ತಿರಶ್ಚೀ**] ಹೆಣ್ಣು –ತಿರ್ಯಕ್ ಪ್ರಾಣಿ

ತಿರಿಡ. ಪು: [**ದೇ**] ಒಂದು ಬಗೆಯ ವೃಕ್ಷ, **ತಿಮಿರವೃಕ್ಷ**

ತಿರಿಡಿಅ. ವಿ: [**ದೇ**] ಕತ್ತಲೆಯಿಂದ ಕೂಡಿದ, ಹುಡುಕಲ್ಪಟ್ಟ (ದೇ)

ತಿರಿಡ್ಡಿ. ಪು: [**ದೇ**] ಬಿಸಿಗಾಳಿ

ತಿರಿಶ್ಚಿ.(ಮಾ). '**ತಿರಿಚ್ಛಿ**' ಶಬ್ದವನ್ನು ನೋಡುವುದು

ತಿರೀಡ. ಪುಂನ: [**ಕಿರೀಟ**] ಮುಕುಟ, ಶಿರೋಭೂಷಣವಾದ ಕಿರೀಟ(ಪಣ್ಣ)

ತಿರೀಡ. ಪು: [**ತಿರೀಟ**] ಲೋಧ್ರ ವೃಕ್ಷ, **–ಪಟ್ಟಯ.** ನ: [**–ಪಟ್ಟಕ**] ಲೋಧ್ರದ ತೊಗಟೆಯಿಂದ ಮಾಡಲಾದ ಬಟ್ಟೆ

ತಿರೀಡ. ವಿ: [**ಕಿರೀಟಿನ್**] ಕಿರೀಟದಿಂದ ಅಲಂಕರಿಸಲ್ಪಟ್ಟಿರುವ(ಉತ್ತ)

ತಿರೋಭಾವ. ಪು: [**ತಿರೋಭಾವ**] ಅಂತರ್ಧಾನವಾಗುವುದು, ಮರೆಯಾಗುವುದು

ತಿರೋವಇ. ವಿ: [**ದೇ**] ಬೇಲಿಯಿಂದ ಮರೆಮಾಡಲ್ಪಟ್ಟಿರುವ

ತಿರೋಹಾ. ಸಕ: [**ತಿರಸ್+ –ಧಾ**] ಅದೃಶ್ಯಗೊಳಿಸು, ಅಂತರ್ಧಾನ ಮಾಡು

ತಿರೋಹಿಅ. ವಿ: [**ತಿರೋಹಿತ**] ಆಚ್ಛಾದಿತ, ಮರೆಮಾಡಲ್ಪಟ್ಟಿರುವ, ಮುಚ್ಚಲ್ಪಟ್ಟಿರುವ

ತಿಲ. ಪು: [**ತಿಲ**] ಪ್ರಸಿದ್ಧ ಧಾನ್ಯವಾದ ಎಳ್ಳು(ಣಾಯಾ). ಜ್ಯೋತಿಷ್ಕ ದೇವ –ವಿಶೇಷ, **–ಕುಟ್ಟೀ.** ಸ್ತ್ರೀ: [**–ಕುಟ್ಟೀ**] ಎಳ್ಳಿನಿಂದ ಮಾಡಿದ ಒಂದು ಭೋಜ್ಯ ವಸ್ತು. **–ಪ್ಪಡಿಯಾ.** ಸ್ತ್ರೀ: [**–ಪರ್ಪಟಿಕಾ**] ಎಳ್ಳಿನಿಂದ ಮಾಡಿದ ಒಂದು ಖಾದ್ಯ ಪದಾರ್ಥ. **–ಪುಪ್ಫವಣ್ಣ.** ಪು: [**–ಪುಷ್ಪವರ್ಣ**] ಜ್ಯೋತಿಷ್ಕ ದೇವ –ವಿಶೇಷ, ಒಂದು ಗ್ರಹ. **–ಮಲ್ಲೀ.** ಸ್ತ್ರೀ: [**–ಮಲ್ಲೀ**]ಒಂದು ಆಹಾರ ಪದಾರ್ಥ. **–ಸಂಗಲಿಯಾ.** ಸ್ತ್ರೀ: [**–ಸಂಗಲಿಕಾ**] ಎಳ್ಳಿನ ಸಿಪ್ಪೆಯು ಒಳಭಾಗ. **–ಸಕ್ಕುಲಿಯಾ.** ಸ್ತ್ರೀ: [**ಶಷ್ಕುಲಿಕಾ**] ಎಳ್ಳಿನಿಂದ ಮಾಡಿದ ಖಾದ್ಯ ಪದಾರ್ಥವಾದ ಚಕ್ಕುಲಿ.

ತಿಲಇಅ. ವಿ: [**ತಿಲಕಿತ**] ತಿಲಕದಿಂದ ಅಲಂಕರಿಸಲ್ಪಟ್ಟ

ತಿಲಂಗ. ಪು: [**ತಿಲಂಗ**] ಭಾರತದ ದಕ್ಷಿಣದಲ್ಲಿರುವ ಒಂದು ದೇಶ(ಕುಮಾ)

ತಿಲಗ}. ಪು: [**ತಿಲಕ**] ತಿಲಕ ವೃಕ್ಷ, ಭರತ ಕ್ಷೇತ್ರದಲ್ಲಿ

ತಿಲಯ}. ಹುಟ್ಟಿದ ಮೊದಲ ಪ್ರತಿವಾಸುದೇವ ರಾಜ. ದ್ವೀಪ –ವಿಶೇಷ, ಸಮುದ್ರ –ವಿಶೇಷ. ನ: ಪುಷ್ಪ –ವಿಶೇಷ, ಹಣೆಯ ಮೇಲೆ ಹಾಕಿಕೊಳ್ಳುವ ಚಂದನವೇ ಮೊದಲಾದವುಗಳ ತಿಲಕ ಚಿಹ್ನೆ. ಒಂದು ವಿದ್ಯಾಧರ ನಗರ.

ತಿಲಗಕರಣೀ. ಸ್ತ್ರೀ: [**ತಿಲಕಕರಣೀ**] ತಿಲಕ ಇಟ್ಟುಕೊಳ್ಳುವ ಕಡ್ಡಿ

ತಿಲವಟ್ಟೀ. ಸ್ತ್ರೀ: [**ತಿಲಪರ್ಪಟೀ**] ಎಳ್ಳಿನಿಂದ ಮಾಡಿದ ಒಂದು ಖಾದ್ಯ ಪದಾರ್ಥ

ತಿಲಿತಿಲಯ. ಪು: [**ದೇ**] ನೀರಿನಲ್ಲಿರುವ ಪ್ರಾಣಿ–ವಿಶೇಷ.

ತಿಲಿಮ. ಸ್ತ್ರೀನ: [**ದೇ**] ವಾದ್ಯ –ವಿಶೇಷ. ಸ್ತ್ರೀ: **–ಮಾ**

ತಿಲುಕ್ಕ. ನ: [**ತ್ರೈಲೋಕ್ಯ**] ಸ್ವರ್ಗ, ಮರ್ತ್ಯ ಮತ್ತು ಪಾತಾಳ ಲೋಕಗಳು

ತಿಲುತ್ತಮಾ. '**ತಿಲೋತ್ತಮಾ**' ಶಬ್ದವನ್ನು ನೋಡುವುದು

ತಿಲೆಲ್ಲ. ನ: [**ತಿಲತೈಲ**] ಎಳ್ಳೆಣ್ಣೆ(ಕುಮಾ)

ತಿಲೊಕ್ಕ. '**ತಿಲುಕ್ಕ**' ಶಬ್ದವನ್ನು ನೋಡುವುದು

ತಿಲೊತ್ತಮಾ. ಸ್ತ್ರೀ: [**ತಿಲೋತ್ತಮಾ**] ಸ್ವರ್ಗದ ಅಪ್ಸರೆ

ತಿಲೋದಗ}. ನ: [**ತಿಲೋದಕ**] ಎಳ್ಳು ನೀರು:

ತಿಲೋದಯ}. ಪಿತೃಗಳಿಗೆ ತರ್ಪಣ ನೀಡಲು ಬಳಸುವ ಎಳ್ಳು –ನೀರು(ಆಚಾ)

ತಿಲ್ಲ. ನ: [ತೈಲ] ಎಣ್ಣೆ
ತಿಲ್ಲ. ನ: [ತಿಲ್ಲ] ಒಂದು ಛಂದೋ – ವಿಶೇಷ
ತಿಲ್ಲಗ. ವಿ: [ತೈಲಕ] ಎಣ್ಣೆ ಮಾರುವವನು
ತಿಲ್ಲೋದಾ. ಸ್ತ್ರೀ: [ತೈಲೋದಾ] ಒಂದು ನದಿ
ತಿವಂ.(ಅಪ). 'ತಹಾ' ಶಬ್ದವನ್ನು ನೋಡುವುದು
ತಿವಣ್ಣೀ. ಸ್ತ್ರೀ: [ತ್ರಿವರ್ಣೀ] ಒಂದು ಮಹಾ ಔಷಧಿ
ತಿವಾಯ. ಸಕ: [ತ್ರಿ +ಪಾತಯ್] ಮನಸ್ಸು, ವಚನ ಮತ್ತು ಕಾಯದಿಂದ ನಾಶಮಾಡು, ಕೊಲ್ಲು
ತಿವಿಕ್ಕಮ. ಪು: [ತ್ರಿವಿಕ್ರಮ] ವಿಷ್ಣುಕುಮಾರ ಎಂಬ ಹೆಸರಿನ ಒಬ್ಬ ಪ್ರಸಿದ್ಧ ಜೈನ ಮುನಿ.
ತಿವಿಡಾ. ಸ್ತ್ರೀ: [ದೇ] ಸೂಜಿ
ತಿವಿಡೀ. ಸ್ತ್ರೀ: [ದೇ] ಸಣ್ಣ ಡಬ್ಬಿ
ತಿವ್ವ. ವಿ: [ತೀವ್ರ] ಪ್ರಬಲ, ಪ್ರಚಂಡ, ಉತ್ಕಟ, ಮಿತಿಮೀರಿದ ಬಹಳವಾದ, ಭಯಾನಕ, ಗಾಢವಾದ, ಆಳವಾದ, ಕಹಿ(ಭಗ), ಪ್ರಕರ್ಷವಾದ (ಣಾಯಾ), ತೀಕ್ಷ್ಣ
ತಿವ್ವ. ವಿ: [ದೇ. ತೀವ್ರ] ಸಹಿಲು ದುಸ್ಸಾಧ್ಯವಾದ್ದು, ಅತ್ಯಂತ ಹೆಚ್ಚಿನ,
ತಿಸಂಥ. ವಿ: [ತ್ರಿಸಂಸ್ಥ] ಮೂರು ಬಾರಿ ಕೇಳಿಸಿಕೊಂಡು ಚೆನ್ನಾಗಿ ನೆನಪಿಟ್ಟುಕೊಳ್ಳುವ ಶಕ್ತಿಯುಳ್ಳವ
ತಿಸಲಾ. ಸ್ತ್ರೀ: [ತ್ರಿಶಲಾ] ಮಹಾವೀರ ತೀರ್ಥಂಕರರ ತಾಯಿಯ ಹೆಸರು. –ಸುಅ. ಪು: [–ಸುತ] ಭಗವಾನ್ ಮಹಾವೀರರು(ಪಉಮ)
ತಿಸಾ. ಸ್ತ್ರೀ: [ತೃಷಾ] ಬಾಯಾರಿಕೆ
ತಿಸಾಯಿಯ}. ವಿ: [ತೃಷಿತ] ಬಾಯಾರಿದವನು(ಪಣ್ಣ)
ತಿಸಿಯ}.
ತಿಸಿರ. ಪು.ಬ: [ತ್ರಿಶಿರಸ್] ದೇಶ –ವಿಶೇಷ, ಪು: ನೃಪ –ವಿಶೇಷ(ಪಉಮ). ರಾವಣನ ಒಬ್ಬ ಮಗ.
ತಿಸ್ಸಗುತ್ತ. 'ತೀಸಗುತ್ತ' ಶಬ್ದವನ್ನು ನೋಡುವುದು
ತಿಹ(ಅಪ). 'ತಹಾ' ಶಬ್ದವನ್ನು ನೋಡುವುದು
ತಿಹಿ. ಪುಂಸ್ತ್ರೀ: [ತಿಥಿ] ಹದಿನೈದು ಚಂದ್ರ ಕಳೆಗಳಿಂದ ಕೂಡಿದ ಕಾಲ, ದಿನ, ತಾರೀಕು
ತೀಅ. ವಿ: [ತೃತೀಯ] ಮೂರನೆಯ(ಸಮ)
ತೀಅ. ವಿ: [ಅತೀತ] ಕಳೆದು ಹೋದ, ಗತ(ಸುಪಾ). ಪು: ಭೂತ ಕಾಲ
ತೀಇಲ. ಪು: [ತೈತಿಲ] ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಕರಣ –ವಿಶೇಷ.
ತೀಮಣ. ನ: [ತೀಮನ] ಕಡಲೆ ಹಿಟ್ಟಿನ ಪಳದ್ಯ, ಒಂದು ಖಾದ್ಯ ಪದಾರ್ಥ.
ತೀಮಿಅ. ವಿ: [ತೀಮಿತ] ಆರ್ದ್ರ, ಒದ್ದೆಯಾದ
ತೀಯ. ನ: [ತ್ರೇತ] ಮೂರು
ತೀರ. ಅಕ: [ಶಕ್] ಸಮರ್ಥನಾಗು
ತೀರ. ಸಕ: [ತೀರಯ್] ಸಮಾಪ್ತಿಗೊಳಿಸು, ಪೂರ್ಣಗೊಳಿಸು, ಮುಗಿಸು
ತೀರ. ಪುಂನ: [ತೀರ] ದಡ, ತಟ
ತೀರಂಗಮ. ವಿ: [ತೀರಂಗಮ] ಪಾರವನ್ನು ತಲುಪಿದವನು, ದಡ ಸೇರಿದವನು(ಆಚಾ)
ತೀರಟ್ಠ. ಪು: [ತೀರಸ್ಥ, ತೀರಾರ್ಥ] ಸಾಧು, ಮುನಿ, ಶ್ರಮಣ
ತೀರಿಯ. ವಿ: [ತೀರಿತ] ಸಮಾಪ್ತಗೊಂಡ, ಪೂರ್ಣಗೊಂಡ, ಮುಗಿದ
ತೀರಿಯಾ. ಸ್ತ್ರೀ: [ದೇ] ಬತ್ತಳಿಕೆ, ತೂಣೀರ, ಬಾಣಧಿ
ತೀಸ. ನ: [ತ್ರಿಂಶತ್] ಮೂವತ್ತು(=೩೦)
ತೀಸಆ}. ಸ್ತ್ರೀ: [ತ್ರಿಂಶತ್] ಮೇಲಿನ ಶಬ್ದವನ್ನು
ತೀಸಇ}. ನೋಡುವುದು. –ವರಿಸ. ವಿ: [–ವರ್ಷ] ಮೂವತ್ತು ವರ್ಷ ವಯಸ್ಸಿನ
ತೀಸಇಮ. ವಿ: [ತ್ರಿಂಶ] ಮೂವತ್ತನೆಯ, ನ: ನಿರಂತರ ಹದಿನಾಲ್ಕು ದಿನಗಳ ಉಪವಾಸ(ಣಾಯಾ)
ತೀಸಗ. ವಿ: [ತ್ರಿಶಂಕ] ಮೂವತ್ತು ವರ್ಷ ವಯಸ್ಸಿನ
ತೀಸಗುತ್ತ. ಪು: [ತಿಷ್ಯಗುಪ್ತ] ಅಂತಿಮ ಪ್ರದೇಶದಲ್ಲಿ ಜೀವದ ಸತ್ತೆಯ ಪಂಥವನ್ನು ಮುನ್ನಡೆಸಿದ್ದ ಒಬ್ಬ ಪ್ರಾಚೀನ ಆಚಾರ್ಯ(ಠಾ)
ತೀಸಭದ್ದ. ಪು: [ತಿಷ್ಯಭದ್ರ] ಒಬ್ಬ ಜೈನಮುನಿ
ತಿಸಮ. ವಿ: [ತ್ರಿಂಶ] ಮೂವತ್ತನೆಯ.
ತೀಸಾ. ಸ್ತ್ರೀ: 'ತೀಸ' ಶಬ್ದವನ್ನು ನೋಡುವುದು
ತೀಸಿಯಾ. ಸ್ತ್ರೀ: [ತ್ರಿಂಶಿಕಾ] ಮೂವತ್ತು ವರ್ಷದ ಮಹಿಳೆ
ತು. ಅ: [ತು] ಭಿನ್ನತೆ, ವ್ಯತ್ಯಾಸ, ವಿಶೇಷಣ, ಅವಧಾರಣೆ, ನಿಶ್ಚಯ, ಸಮುಚ್ಚಯ, ಹಾರಣ, ಈ ಅರ್ಥಗಳನ್ನು ಸೂಚಿಸುವ ಅವ್ಯಯ. ಪಾದಪೂರಕ ಅವ್ಯಯವೂ ಹೌದು(ವಿಸೇ)
ತುಅ. ಸಕ: [ತುದ್] ವ್ಯಥೆಪಡಿಸು, ನೋಯಿಸು,
ತುಅರ. ಪು: [ತುವರ] ತೊಗರಿ ಧಾನ್ಯ,
ತುಅರ. ಅಕ: [ತ್ವರ್] ಆತುರಗೊಳಿಸು, ಆತುರಪಡು, ಅವಸರಪಡು(ಗಾ)

ತುಂಗ. ವಿ: [ತುಂಗ] ಎತ್ತರ, ಉಚ್ಚ. ಪು: ಒಂದು ಛಂದ

ತುಂಗಾರ. ಪು: [ತುಂಗಾರ] ಅಗ್ನಿ ಮೂಲೆಯ ಗಾಳಿ

ತುಂಗಿಮ. ಪುಂಸ್ತ್ರೀ: [ತುಂಗಿಮನ್] ಔನ್ನತ್ಯ, ಎತ್ತರ, ಉಚ್ಚತ್ವ(ಸುಪಾ)

ತುಂಗಿಯ. ಪು: [ತುಂಗಿಕ] ಗ್ರಾಮ –ವಿಶೇಷ(ಆವಮ), ಪರ್ವತ –ವಿಶೇಷ, **ಪುಂಸ್ತ್ರೀ:** ಗೋತ್ರ –ವಿಶೇಷದಲ್ಲಿ ಹುಟ್ಟಿದ

ತುಂಗಿಯಾ. ಪು: [ತುಂಗಿಕಾ] ಒಂದು ನಗರಿ.

ತುಂಗಿಯಾಯಣ. ನ: [ತುಂಗಿಕಾಯನ] ಒಂದು ಗೋತ್ರದ ಹೆಸರು

ತುಂಗೀ. ಸ್ತ್ರೀ: [ದೇ] ರಾತ್ರಿ, ಆಯುಧ –ವಿಶೇಷ.

ತುಂಗೀಯ. ಪು: [ತುಂಗೀಯ] ಪರ್ವತ –ವಿಶೇಷ

ತುಂಡ. ಸ್ತ್ರೀನ: [ತುಂಡ] ಮುಖ, ಬಾಯಿ, ಅಗ್ರಭಾಗ, ತುದಿ, ಹಕ್ಕಿಗಳ ಕೊಕ್ಕು. ಸ್ತ್ರೀ: –ಡೀ

ತುಂಡೀರ. ನ: [ದೇ] ಸಿಹಿ ತೊಂಡೆ ಹಣ್ಣು

ತುಂಡೂಅ. ಪು: [ದೇ] ಹಳೆಯ ಗಡಿಗೆ, ಹಳೆಯ ಕೊಡ

ತುಂತುಕ್ಖುಡಿಅ. ವಿ: [ದೇ] ತ್ವರೆಯಿಂದ ಕೂಡಿದ, ಅವಸರದಿಂದ ಕೂಡಿದ

ತುಂದ. ನ: [ತುಂದ] ಹೊಟ್ಟೆ, ಉದರ(ದೇ)

ತುಂದಿಲ}. ವಿ: [ತುಂದಿಲ] ದೊಡ್ಡ ಹೊಟ್ಟೆಯವನು

ತುಂದಿಲ್ಲ}. (ಉತ್ತ)

ತುಂಬ. ನ: [ತುಂಬ] ಉದ್ದದ ಸೋರೆಕಾಯಿ(ಓಘ), ಗಾಡಿಯ ಗುಂಭ, **–ವಣ.** ನ: [–ವನ] ಸಂನಿವೇಶ –ವಿಶೇಷ, ಒಂದು ಊರಿನ ಹೆಸರು. **–ವೀಣ.** ವಿ: [ವೀಣ] ವೀಣೆ ನುಡಿಸುವವನು. **–ವೀಣೀಯ.** ವಿ: [–ವೀಣೀ] ಅದೇ ಅರ್ಥ(ಔಪ), ಜ್ಞಾತಾಧರ್ಮ ಕಥಾ ಸೂತ್ರದ ಒಂದು ಅಧ್ಯಯನ.

ತುಂಬರು. **'ತುಂಬುರು'** ಶಬ್ದವನ್ನು **ನೋಡುವುದು**

ತುಂಬಾ. ಸ್ತ್ರೀ: [ತುಂಬಾ] ಲೋಕ ರಕ್ಷಕ ದೇವರುಗಳ ಒಂದು ಒಳ ಸಮೂಹ(ಠಾ)

ತುಂಬಾಗ. ಪುಂನ: [ತುಂಬಕ] ಹಾಲುಗುಂಬಳ ಕಾಯಿ, ಸೋರೆಕಾಯಿ

ತುಂಬಿಣೀ. ಸ್ತ್ರೀ: [ತುಂಬಿನೀ] ಸೋರೆ ಬಳ್ಳಿ

ತುಂಬಿಲ್ಲೀ. ಸ್ತ್ರೀ: [ದೇ] ಜೇನುಹುಟ್ಟು, ಒರಳು

ತುಂಬೀ. ಸ್ತ್ರೀ: [ತುಂಬೀ] ಉದ್ದ ಸೋರೆಕಾಯಿ, ಜೈನ ಸಾಧುಗಳ ಒಂದು ಪಾತ್ರೆ, **ತರಪನೀ?** (ಸುಪಾ)

ತುಂಬುರು. ಪು: [ತುಂಬುರು] ಕಾಡು ಮಾವಿನಮರ, ಗಂಧರ್ವರ ಒಂದು ಜಾತಿ, ಭಗವಾನ್ ಸುಮತಿನಾಥನ ಶಾಸನದ ಅಧಿಷ್ಠಾತೃ ದೇವ, ಶಕ್ರೇಂದ್ರನ ಗಂಧರ್ವ ಸೇನೆಯ ಅಧಿಪತಿ

ತುಕ್ಖಾರ. ಪು: [ದೇ] ಒಂದು ಉತ್ತಮ ಜಾತಿಯ ಕುದುರೆ(ಭವಿ). **'ತೊಕ್ಖಾರ'** ಶಬ್ದವನ್ನು ನೋಡುವುದು

ತುಚ್ಛ. ಪುಂಸ್ತ್ರೀ: [ತುಚ್ಛಾ] ರಿಕ್ತಾ ತಿಥಿ, ಚತುರ್ಥೀ, ನವಮಿ ಮತ್ತು ಚತುರ್ದಶೀ ತಿಥಿ

ತುಚ್ಛ. ವಿ: [ದೇ] ಒಣಗಿಹೋಗಿರುವ(ದೇ)

ತುಚ್ಛ. ವಿ: [ತುಚ್ಛ] ಹಗುರವಾದ, ನಿಕೃಷ್ಟ, ಅಧಮ, ನೀಚ, ಹೀನ(ಣಾಯಾ), ಕಡಿಮೆ, ಸ್ವಲ್ಪ(ಭಗ), ಬರಿದಾದ, ಶೂನ್ಯ, ಸಾರವಿಲ್ಲದ ಅಪೂರ್ಣ

ತುಚ್ಛಇಅ}. ವಿ: [ದೇ] ಪ್ರೀತಿ ಪ್ರಾಪ್ತವಾಗಿರುವ,

ತುಚ್ಛಯ}. ಸಂತೋಷ ಪಡಿಸಲಾದ

ತುಚ್ಛಿಮ. ಪುಂಸ್ತ್ರೀ: [ತುಚ್ಛತ್ವ] ತುಚ್ಛತೆ, ನೀಚತೆ, ಹೀನತೆ

ತುಜ್ಜ. ನ: [ತೂರ್ಯ] ಒಂದು ಮಂಗಳ ವಾದ್ಯ.

ತುಟ್ಟ. ಅಕ: [ತ್ರುಟ್, ತುಡ್] ಮುರಿದುಹೋಗು, ಹರಿದುಹೋಗು, ಸೀಳಿಹೋಗು

ತುಟ್ಟ. ವಿ: [ತ್ರುಟಿತ] ಮುರಿದುಹೋದ, ಸೀಳಲ್ಪಟ್ಟ, ಹರಿದುಹೋದ

ತುಟ್ಟಣ. ನ: [ತ್ರೋಟನ] ಬೇರ್ಪಡಿಸುವುದು, ಅಗಲಿಸುವುದು, ಬೇರೆ ಮಾಡುವುದು

ತುಟ್ಟಿರ. ವಿ: [ತ್ರುಟಿತೃ] ಮುರಿಯುವವನು, ಹರಿಯುವವನು

ತುಟ್ಠ. ವಿ: [ತುಷ್ಟ] ಸಂತೋಷ ಹೊಂದಿದ, ಸಂತುಷ್ಟ,

ತುಟ್ಠಿ. ಸ್ತ್ರೀ: [ತುಷ್ಟಿ] ಸಂತಸ, ಆನಂದ, ಖುಶಿ(ಸುಪಾ), ಕೃಪೆ

ತುಡ. ಅಕ: [ತುಡ್] ಮುರಿದುಹೋಗು, ಬೇರ್ಪಡು

ತುಡಿ. ಸ್ತ್ರೀ: [ತ್ರುಟಿ] ಕೊರತೆ, ನ್ಯೂನತೆ, ದೋಷ, ಸಂದೇಹ

ತುಡಿಅ. ನ: [ತುಟಿಕ] ಅಂತಃಪುರ

ತುಡಿಅ. ವಿ: [ತ್ರುಟಿತ] ಮುರಿಯಲ್ಪಟ್ಟ, ಬೇರ್ಪಟ್ಟ, ಅಗಲಿದ(ಅಚ್ಚು)

ತುಡಿಅ. ನ: [ದೇ. **ತ್ರುಟಿತ**] ವಾದ್ಯ, ಕೈ ಆಭರಣ, ಬಾಹು ರಕ್ಷಕ(ಔಪ). ಸಂಖ್ಯಾ –ವಿಶೇಷವಾದ **'ತುಡಿಅಂಗ'**ವನ್ನು ೮೪ ಲಕ್ಷದಿಂದ ಗುಣಿಸಿದಾಗ

ಬರುವ ಸಂಖ್ಯೆ. ಹರಿದ ಬಟ್ಟೆಯಲ್ಲಿ ಹಾಕುವ ತೇಪೆ ಪಟ್ಟಿ(ನಿಚೂ)

ತುಡಿಅಂಗ. ನ: [ದೇ. **ತ್ರುಟಿತಾಂಗ**] ಸಂಖ್ಯಾ –ವಿಶೇಷ '**ಪೂರ್ವ**' ವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ.**ಪು:** ವಾದ್ಯವನ್ನು ನೀಡುವ ಕಲ್ಪ ವೃಕ್ಷ(ಠಾ)

ತುಡಿಆ. ಸ್ತ್ರೀ: [**ತುಡಿತಾ**] ಲೋಕ –ರಕ್ಷಕ ದೇವರುಗಳ ಅಗ್ರ –ಮಹಿಷಿಯರ ಮಧ್ಯಮ ಪರಿಷತ್ತು.

ತುಡಿಆ. ಸ್ತ್ರೀ: [ದೇ. **ತುಟಿಕಾ**] ಬಾಹು ರಕ್ಷಕಿ, ಕೈ ಆಭರಣ(ಪಣ್ಣ) –ವಿಶೇಷ

ತುಣಯ. **ಪು:** [ದೇ] ಒಂದು ವಾದ್ಯ –ವಿಶೇಷ.

ತುಣ್ಣಗ. 'ತುಣ್ಣಾಗ' ಶಬ್ದವನ್ನು ನೋಡುವುದು

ತುಣ್ಣಣ. ನ: [**ತುನ್ನನ**] ಹರಿದ ಬಟ್ಟೆಯನ್ನು ಹೊಲಿಯುವುದು(ಉಪ)

ತುಣ್ಣಾಗ}. ಪು: [**ತುನ್ನವಾಯ**] ಬಟ್ಟೆಯನ್ನು

ತುಣ್ಣಾಯ}. ಹೊಲಿಯುವವನು(ಣಂದಿ)

ತುಣ್ಣಿಯ. ವಿ: [**ತುನ್ನಿತ**] ಹೊಲಿಯಲ್ಪಟ್ಟ(ಬೃಹ)

ತುಣ್ಹಿ. ಅ: [**ತೂಷ್ಣೀಮ್**] ಮೌನ(ಭವಿ)

ತುಣ್ಹಿ. ಪು: [ದೇ] ಹಂದಿ.

ತುಣ್ಹಿಅ}. ವಿ: [**ತೂಷ್ಣೀಕ**] ಮೌನದಿಂದಿರುವ(ಗಾ)

ತುಣ್ಹಿಕ್ಕ}.

ತುಣ್ಹಿಕ್ಕ. ವಿ: [ದೇ] ಮೃದು –ನಿಶ್ಚಲ

ತುಣ್ಹೀಅ. 'ತುಣ್ಹಿಅ' ಶಬ್ದವನ್ನು ನೋಡುವುದು

ತುತ್ತ. 'ತೊತ್ತ' ಶಬ್ದವನ್ನು ನೋಡುವುದು(ಸುಪಾ)

ತುದ. 'ತುಅ' ಶಬ್ದವನ್ನು ನೋಡುವುದು

ತುದ. ಪು: [**ತೋದ**] ಬಡಿಗೆ, ಲಾಠಿ, ಚಾಟಿ, ಬಾರುಕೋಲು

ತುನ್ನಣ. ನ: [**ತುನ್ನನ**] ಹೊಲಿಯುವುದು

ತುನ್ನಾಯ. 'ತುಣ್ಣಾಯ' ಶಬ್ದವನ್ನು ನೋಡುವುದು

ತುನ್ನಾರ. ಪು: [**ತುನ್ನಕಾರ**] ಹೊಲಿಯುವವನು

ತುಪ್ಪ. ಪು [**ದೇ**] ಕೌತುಕ, ವಿವಾಹ, ಮದುವೆ, ಸಾಸಿವೆ, ಚರ್ಮದಿಂದ ಮಾಡಿದ ಎಣ್ಣೆ ಅಥವಾ ತುಪ್ಪ ತುಂಬುವ ಚೀಲ. ವಿ: ಎಣ್ಣೆ ಅಥವಾ ತುಪ್ಪದಿಂದ ಲೇಪಿತವಾದ.(ಗಾ) ಸ್ನಿಗ್ಧ, ಜಿಡ್ಡಿನಿಂದ ಕೂಡಿದ, **ನ:** ತುಪ್ಪ

ತುಪ್ಪ. ವಿ: [ದೇ] ಸುತ್ತುವರಿಯಲ್ಪಟ್ಟ, ಮುಚ್ಚಲ್ಪಟ್ಟ

ತುಪ್ಪಇಅ}. ವೀ; [ದೇ] ತುಪ್ಪದಿಂದ ಬಳಿಯಲ್ಪಟ್ಟ

ತುಪ್ಪಲಿಅ}. (ಗಾ)

ತುಪ್ಪವಿಅ}.

ತುಮಂತುಮ. ಪು: [ದೇ] ಸಿಟ್ಟಿನಿಂದಾದ ಮನೋವಿಕಾರ –ವಿಶೇಷ(ಠಾ), ನೀನು –ತಾನು ಎಂಬ ತಿರಸ್ಕಾರದ ಮಾತು, ಮಾತಿನ ಜಗಳ.

ತುಮುಲ. ಪು: [**ತುಮುಲ**] ಮೈ ನವಿರೇಳಿಸುವ ಯುದ್ಧ, ಘನಘೋರ ಯುದ್ಧ, **ನ:** ಗದ್ದಲ, ದೊಂಬಿಯ ಕಾಳಗ.

ತುಮ್ಹ. ಸ: [**ಯುಷ್ಮತ್**] ನೀನು, ನೀವು

ತುಮ್ಹಕೇರ. ವಿ: [**ತ್ವದೀಯ**] ನಿನ್ನ, ನಿನ್ನವ(ಕುಮಾ)

ತುಮ್ಹಕೇರ. ವಿ: [**ಯುಷ್ಮದೀಯ**] ನಿಮ್ಮವ, ನಿಮ್ಮ ಸಂಬಂಧವಾದ

ತುಮ್ಹಾರ.(ಅಪ). ಮೇಲಿನ **ಶಬ್ದವನ್ನು ನೋಡುವುದು**

ತುಮ್ಹಾರಿಸ್. ವಿ: [**ಯುಷ್ಮಾದೃಶ**] ನಿಮ್ಮಂಥ, ನಿಮ್ಮ, ನಿಮ್ಮ ಸಮಾನರಾದ(ಗಉಡ)

ತುಮ್ಹೇಚ್ಚಯ. ವಿ: [**ಯೌಷ್ಮಾಕ**] ನಿಮ್ಮ, ತಮ್ಮ(ಕುಮಾ)

ತುಯಟ್ಟ. ಅಕ: [**ತ್ವಗ್+ ವೃತ್**] ಪಕ್ಕಕ್ಕೆ ಹೊರಳು(ಕಪ್ಪ)

ತುಯಟ್ಟಣ. ನ: [**ತ್ವಗ್ವರ್ತನ**] ಪಾರ್ಶ್ವ ಬದಲಾಯಿಸುವುದು, ಪಕ್ಕಕ್ಕೆ ಹೊರಳುವುದು

ತುಯಟ್ಟಾವಣ. ನ: [**ತ್ವಗ್ವರ್ತನ**] ಮಗ್ಗುಲಾಗಿಸುವುದು, ಪಕ್ಕಕ್ಕೆ ಹೊರಳಿಸುವುದು

ತುಯಾವಣಿತ್ತಾ. 'ತುಅ' ಶಬ್ದವನ್ನು ನೋಡುವುದು

ತುರ. ಅಕ: [**ತ್ವರ**] ಅವಸರಪಡಿಸುವುದು, ತ್ವರೆಗೊಳಿಸು. ವ. ಕೃ –'**ತುರಂತ**'

ತುರ–}. ಸ್ತ್ರೀ: [**ತ್ವರಾ**] ಶೀಘ್ರತೆ, ವೇಗವಾಗಿ **–ವಂತ**

ತುರಾ}. ವಿ: [**–ವತ್**] ತ್ವರೆಯಿಂದ ಕೂಡಿದ

ತುರಂಗ. ಪು: [**ತುರಂಗ**] ಕುದುರೆ, ರಾಮಚಂದ್ರನ ಒಬ್ಬ ಯೋಧ(ಪಉಮ)

ತುರಂಗಮ. ಪು: [**ತುರಂಗಮ**] ಕುದುರೆ

ತುರಂಗಿಆ. ಸ್ತ್ರೀ: [**ತುರಂಗಿಕಾ**] ಹೆಣ್ಣು ಕುದುರೆ(ಪಾಅ)

ತುರಂತ. 'ತುರ' ಶಬ್ದವನ್ನು ನೋಡುವುದು

ತುರಕ್ಕ. ಪು: [ದೇ. **ತುರುಷ್ಕ**] ತುರ್ಕಿಸ್ತಾನ(ಟರ್ಕಿ). ಅನಾರ್ಯ ಜಾತಿವಿಶೇಷ, ತುರ್ಕ

ತುರಗ. 'ತುರಯ' ಶಬ್ದವನ್ನು ನೋಡುವುದು. –ಮುಹ. ಪು: [**–ಮುಖ**] ಅನಾರ್ಯ ದೇಶ ವಿಶೇಷ. **–ಮೇಢಗ. ಪು:** [**–ಮೇಢ್ರಕ**] ಅನಾರ್ಯ–ದೇಶ ವಿಶೇಷ

ತುರಮಣಿ. 'ತುರುಮಣೀ' ಶಬ್ದವನ್ನು ನೋಡುವುದು
ತುರಯ. ಪು: [ತುರಗ] ಕುದುರೆ(ಪಣ್ಣ), ಒಂದು ಛಂದಸ್ಸು.–ದೇಹಪಿಂಜರಣ. ನ: [–ದೇಹಪಿಂಜರಣ] ಕುದುರೆಯನ್ನು ಅಲಂಕರಿಸುವುದು (ಪಾಅ). 'ತುರಗ' ಶಬ್ದವನ್ನು ನೋಡುವುದು
ತುರಯಮುಹ. 'ತುರಗಮುಹ' ಶಬ್ದವನ್ನುನೋಡುವುದು
ತುರ}. ಸ್ತ್ರೀ: [ತ್ವರಾ] ಬೇಗನೆ, ಕೂಡಲೆ, ಶೀಘ್ರವಾಗಿ.
ತುರಾ}. –ವಂತ. ವಿ: [–ವತ್] ಅವಸರದಿಂದ ಕೂಡಿರುವ, ತ್ವರೆಪಡಿಸುವವನು
ತುರಿಅ. ವಿ: [ತ್ವರಿತ] ವೇಗವುಳ್ಳ, ಆತುರವುಳ್ಳ, ವೇಗ, ಆತುರ, ಶೀಘ್ರವಾಗಿ. –ಗಇ. ವಿ: [–ಗತಿ] ಶೀಘ್ರ ಗತಿ ಉಳ್ಳ, ಪು: ಅಮಿತಗತಿ ಎಂಬ ಹೆಸರಿನ ಇಂದ್ರನ ಒಬ್ಬ ಲೋಕಪಾಲ
ತುರಿಅ. ವಿ: [ತುರ್ಯ] ನಾಲ್ಕನೆಯ, –ನಿದ್ದಾ. ಸ್ತ್ರೀ: [–ನಿದ್ರಾ] ಮರಣಾವಸ್ಥೆ(ಉಪ)
ತುರಿಅ. ನ: [ತೂರ್ಯ] ವಾದ್ಯ,
ತುರಿಮಿಣೀ. 'ತುರುಮಣೀ' ಶಬ್ದವನ್ನು ನೋಡುವುದು
ತುರೀ. ಸ್ತ್ರೀ: [ದೇ] ಪೀನ, ಪುಷ್ಟ, ಸ್ಥೂಲ, ದಪ್ಪ
ತುರು. ನ: [ದೇ] ವಾದ್ಯ –ವಿಶೇಷ
ತುರುಕ್ಕ. ನ: [ತುರುಷ್ಕ] ಲೋಬಾನ, ಧೂಪಕ್ಕೆ ಹಾಕುವ ಒಂದು ಸುಗಂಧ ದ್ರವ್ಯ(ಔಪ), ಪು: ತುರ್ಕಿಸ್ತಾನ
ತುರುಕ್ಕೀ. ಸ್ತ್ರೀ: [ತುರುಷ್ಕೀ] ಒಂದು ಲಿಪಿ –ವಿಶೇಷ
ತುರುಮಣೀ. ಸ್ತ್ರೀ: [ದೇ] ಒಂದು ನಗರಿ
ತುರೇಂತ}. 'ತುರ' ಶಬ್ದವನ್ನು ನೋಡುವುದು
ತುರೇಮಾಣ}.
ತುಲ. ಸಕ: [ತೋಲಯ್] ತೂಕಮಾಡು. ಎತ್ತು, ಖಚಿತವಾಗಿ ಗೊತ್ತುಪಡಿಸು,
ತುಲ–. 'ತುಲಾ' ಶಬ್ದವನ್ನು ನೋಡುವುದು
ತುಲಂಗಾ. 'ತುಲಗ್ಗಾ' ಶಬ್ದವನ್ನು ನೋಡುವುದು
ತುಲಗ್ಗ. ನ: [ದೇ] ಕಾಕತಾಳೀಯ ನ್ಯಾಯ
ತುಲಗ್ಗಾ. ನ:[ದೇ] ಸ್ವೇಚ್ಛೆ, ತನ್ನ ಇಷ್ಟ, ತನ್ನ ಇಷ್ಟಾನುಸಾರ
ತುಲಣ. ನ: [ತುಲನ] ತೂಕವಾಡುವುದು, ತೂಗುವುದು, ಹೋಲಿಸುವುದು
ತುಲಣಾ. ಸ್ತ್ರೀ: [ತುಲನಾ] ತೂಕವಾಡುವುದು, ತೂಗುವುದು, ಹೋಲಿಸುವುದು
ತುಲಯ. ವಿ: [ತೋಲಕ] ತೂಕ ಮಾಡುವವನು (ಸುಪಾ), ಮೇಲಕ್ಕೆ ಎತ್ತುವವನು

ತುಲಸಿಆ. ಸ್ತ್ರೀ: [ತುಲಸಿಕಾ] ಕೆಳಗಿನ ಶಬ್ದವನ್ನು ನೋಡುವುದು
ತುಲಸೀ. ಸ್ತ್ರೀ: [ದೇ. ತುಲಸೀ] ತುಳಸೀ ಗಿಡ(ಪಣ್ಣ)
ತುಲಾ. ಸ್ತ್ರೀ: [ತುಲಾ] ಪ್ರಸಿದ್ಧವಾದ ತುಲಾ ರಾಶಿ, ತೂಕ ಮಾಡುವ ಸಾಧನವಾದ ತಕ್ಕಡಿ(ಸುಪಾ), ಹೋಲಿಕೆ, ಸಾದೃಶ್ಯ, ಸಾಮ್ಯ –ಸಮ. ವಿ: [–ಸಮ] ರಾಗ –ದ್ವೇಷರಹಿತ, ಮಧ್ಯಸ್ಥ. (ಬೃಹ) –೦೫ ಅಥವಾ ೫೦೦ ಪಲಗಳ ಅಳತೆ
ತುಲಿಅ. ವಿ: [ತುಲಿತ] ಮೇಲಕ್ಕೆ ಎತ್ತಿಹಿಡಿಯಲ್ಪಟ್ಟ, ಎತ್ತರಿಸಲಾದ, ತೂಕಮಾಡಲ್ಪಟ್ಟ, ತೂಗಲ್ಪಟ್ಟ ಗುಣಿಸಲ್ಪಟ್ಟ, ಹೋಲಿಸಲ್ಪಟ್ಟ,
ತುಲೇಅವ್ವ. 'ತುಲ' ಶಬ್ದವನ್ನು ನೋಡುವುದು
ತುಲ್ಲ. ವಿ: [ತುಲ್ಯ] ಸಮಾನ, ಸದೃಶ(ಭಗ)
ತುವಟ್ಟ. ಪು: [ತ್ವಗ್ವರ್ತ] ಮಲಗುವುದು.
ತುವರ. ಅಕ: [ತ್ವರ್] ತ್ವರೆಗೊಳಿಸು, ಅವಸರಪಡಿಸು
ತುವರ. ಪುಂನ: [ತುವರ] ಒಗಚು, ಕಷಾಯ ರಸ, ವಿ: ಕಷಾಯ ರಸವುಳ್ಳ
ತುವರಾ. 'ತುರಾ' ಶಬ್ದವನ್ನು ನೋಡುವುದು
ತುವರೀ. ಸ್ತ್ರೀ: [ತುವರೀ] ತೊಗರಿ ಬೇಳೆ, ತಿಗರಿ ಗಿಡ.
ತುಸ. ಪು: [ತುಷ] ಧಾನ್ಯದ ಮೇಲಿನ ಹೊಟ್ಟು, ಹಾರಕ ಧಾನ್ಯ
ತುಸಣೀಅ. ವಿ: [ತೂಷ್ಣೀಕ] ಮೌನಿ
ತುಸಲೀ. ಸ್ತ್ರೀ: [ದೇ] ಒಂದು ಬಗೆಯ ಧಾನ್ಯ
ತುಸಾರ. ನ: [ತುಷಾರ] ಹಿಮ, ಮಂಜು. –ಕರ. ಪು: [–ಕರ] ಚಂದ್ರ
ತುಸಾರಅರ. 'ತುಸಾರ –ಕರ' ತುರ್ಕಿಸ್ತಾನ
ತುಸಿಣ. ಮೌನಿ
ತುಸಿಣೆಯ.}. ವಿ: [ತುಷ್ಣೀಕ] ಮೌನಿ, ಮಾತಿಲ್ಲದ
ತುಸಿಣೀಯ}. ಮೌನಿ(ಣಾಯಾ)
ತುಸಿಣೀ. ಅ: [ತೂಷ್ಣೀಂ] ಮೌನ
ತುಸಿಯ. ಪು: [ತುಷಿತ] ಲೋಕಾಂತಿಕ ದೇವರುಗಳ ಒಂದು ಜಾತಿ(ಣಾಯಾ)
ತುಸೇಅಜಂಭ. ನ: [ದೇ] ಸೌದೆ, ಕಟ್ಟಿಗೆ , ಕಾಷ್ಠ(ದೇ)
ತುಸೋದಗ}. ನ: [ತುಷೋದಕ] ಹೊಟ್ಟಿನ ಗಂಜಿ,
ತುಸೋದಯ}. ಗಂಜಿ ಹೊಟ್ಟು ಸಮೇತ ಧಾನ್ಯವನ್ನು ಬೇಯಿಸಿದಾಗ ಬರುವ ಗಂಜಿ.
ತುಸ್ಸ. 'ತೂಸ=ತುಷ್' ಶಬ್ದವನ್ನು ನೋಡುವುದು

ತುಹ-. ಸ: [ತ್ವತ್] ನೀನು. **-ತಣಯ.** ವಿ: [-ಸಂಬಂಧಿನ್] ನಿನ್ನ, ನಿನಗೆ ಸಂಬಂಧಿಸಿರುವ
ತುಹಗ. ಪು; [ತುಹಕ] ಒಂದು ಜಾತಿಯ ಗೆಡ್ಡೆ
ತುಹಾರ(ಅಪ). ವಿ: [ತ್ವದೀಯ] ನಿನ್ನ
ತುಹಿಣ. ನ: [ತುಹಿನ] ಹಿಮ, ಮಂಜು(ಪಾಅ). **-ಇರಿ.** ಪು: [-ಗಿರಿ] ಹಿಮಾಲಯ ಪರ್ವತ (ಗಉಡ). **-ಕರ.** ಪು: [-ಕರ] ಚಂದ್ರ. **-ಗಿರಿ.** '-ಇರಿ' ಶಬ್ದವನ್ನು ನೋಡುವುದ**ತುಹಿಣಾಲಯ.** ಪು: [ತುಹಿನಾಲಯ] ಹಿಮಾಚಲ ಪರ್ವತ.
ತುಹಿಣಾಯಲ.ಪು: [ತುಹಿನಾಚಲ] ಹಿಮಾಲಯ ಪರ್ವತ
ತೂಅ. ಪು: [ದೇ] ಕಬ್ಬಿನ ಕೆಲಸ ಮಾಡುವವನು(ದೇ)
ತೂಣ. ಪುಂನ: [ತೂಣ] ಬತ್ತಳಿಕೆ, ಬಾಣದ ಚೀಲ
ತೂಣಇಲ್ಲ. ಪು: [ತೂಣಾವತ್] ತೂಣಾ ಎಂಬ ವಾದ್ಯವನ್ನು ಬಾರಿಸುವವನು
ತೂಣಯ. ಪು: [ತೂಣಕ] ಒಂದು ವಾದ್ಯ -ವಿಶೇಷ
ತೂಣಾ}. ಸ್ತ್ರೀ: [ತೂಣಾ] ಒಂದು ಬಗೆಯ ವಾದ್ಯ,
ತೂಣೆ-}. ಬತ್ತಳಿಕೆ
ತೂಯರೀ. ಸ್ತ್ರೀ: [ತೂವರೀ] ತೊಗರಿ ಬೇಳೆ
ತೂರ. 'ತುರವ' ಶಬ್ದವನ್ನು ನೋಡುವುದು
ತೂರ. ಪುಂನ: [ತೂರ್ಯ] ಒಂದು ಮಂಗಳ ವಾದ್ಯ, **-ವಇ.** ಪು: [-ಪತಿ] ನಟರ ಮುಖಂಡ
ತುರಂತ}. ''ತೂರ= ತುರವ' ಶಬ್ದವನ್ನು ನೋಡುವುದು
ತೂರಮಾಣ}.
ತೂರವಿಅ. ವಿ: [ತ್ವರಿತ] ಅವಸರಪಡಿಸಲ್ಪಟ್ಟವನು, ವೇಗವುಳ್ಳ, ತ್ವರೆಮಾಡಲ್ಪಟ್ಟವನು
ತೂರಿಂಯ. ಪು: [ತೌರ್ಯಿಕ] ವಾದ್ಯವನ್ನು ಬಾರಿಸುವವನು
ತೂರೀ. ಸ್ತ್ರೀ: [ದೇ] ಒಂದು ಬಗೆಯ ಮಣ್ಣು.
ತುರೆಂತ}. 'ತೂರ=ತುರವ' ಒಂದು ಬಗೆಯ ಮಣ್ಣು
ತೂರೇಮಾಣ}.
ತೂಲ. ನ: [ತೂಲ] ಹತ್ತಿ, ಬೀಜವಿಲ್ಲದ ಹತ್ತಿ(ಔಪ)
ತೂಲಿಅ. ನ. ಕೆಳಗಿನ ಶಬ್ದವನ್ನು ನೋಡುವುದು
ತೂಲಿಆ. ಸ್ತ್ರೀ: [ತೂಲಿಕಾ] ಹತ್ತಿ ತುಂಬಿರುವ ದಪ್ಪ ಹಾಸಿಗೆ, ಚಿತ್ರ ಬರೆವ ಕುಂಚ(ಣಾಯಾ)
ತೂಲಿಣೀ. ಸ್ತ್ರೀ: [ದೇ] ಶಾಲ್ಮಲಿ ವೃಕ್ಷ, ಬೂರುಗದ ಮರ
ತೂಲಿಲ್ಲ.ವಿ:[ತೂಲಿಕಾವತ್]ಕುಂಚವನ್ನುಹೊಂದಿರುವ
ತೂಲೀ. ಸ್ತ್ರೀ: [ತೂಲೀ] **'ತೂಲಿಆ'** ಶಬ್ದವನ್ನು ನೋಡುವುದು
ತೂವರ. 'ತುವರ' ಶಬ್ದವನ್ನು ನೋಡುವುದು
ತೂಸ. ಅಕ: [ತುಷ್] ಸಂತೋಷಿಸು,
ತೂಹ. 'ತಿತ್ಥ' ಶಬ್ದವನ್ನು ನೋಡುವುದು
ತೂಹಣ. ಪು: [ದೇ] ಮನುಷ್ಯ(ದೇ)
ತೇ – **'ತಿ=ತ್ರಿ' ಶಬ್ದವನ್ನು ನೋಡುವುದು. -ಆಲೀಸ.** ಸ್ತ್ರೀನ: [-ಚತ್ವಾರಿಂಶತ್] ನಲವತ್ತಮೂರು(=೪೩). **-ಆಲೀಸಇಮ.** ವಿ: [-ಚತ್ವಾರಿಂಶ] ನಲವತ್ತಮೂರನೆಯ(ಪಉಮ). **-ಆಸೀ.** ಸ್ತ್ರೀ: [-ಆಶೀತಿ] ಎಂಬತ್ತ ಮೂರು.ಎಂಬತ್ತ ಮೂರರ ಸಂಖ್ಯೆ ಉಳ್ಳ. **-ಆಸೀಇಮ.** ವಿ: [-ಆಶೀತಿತಮ] ಎಂಬತ್ತ ಮೂರನೆಯ. **-ಇಂದಿಯ.** ಪು: [-ಇಂದ್ರಿಯ]. ಸ್ಪರ್ಶ, ನಾಲಿಗೆ ಮತ್ತು ಮೂಗು ಈ ಮೂರು ಇಂದ್ರಿಯಗಳುಳ್ಳ ಪ್ರಾಣಿ(ಠಾ). **-ಓಯ.** ಪು: [-ಓಜಸ್] ವಿಷಮ ರಾಶಿ-ವಿಶೇಷ. **-ಣಉಇ.** ಸ್ತ್ರೀ: [-ನವತಿ] ತೊಂಬತ್ತಮೂರು. **-ಣಉಂಯ.** ವಿ: [-ನವತ] ತೊಂಬತ್ತ ಮೂರನೆಯ. **-ಣವಇ.** **'-ಣಉಇ. ತಿತ್ಥ'** ಶಬ್ದವನ್ನು ನೋಡುವುದು. **-ತೀಸ, -ತ್ತೀಸ.** ಸ್ತ್ರೀನ: [ತ್ರಯಸ್ತ್ರಿಂಶತ್] ಮೂವತ್ತಮೂರು(ಭಗ). **-ತ್ತೀಸಇಮ.** ವಿ: [-ತ್ರಯಸ್ತ್ರಿಂಶ] ಮೂವತ್ತ ಮೂರನೆಯ. **-ವಟ್ಠಿ.** ಸ್ತ್ರೀ: [-ಷಷ್ಟಿ] ಅರುವತ್ತಮೂರು. **-ವಣ್ಣ, -ವನ್ನ.**ಸ್ತ್ರೀನ: [-ಪಂಚಾಶತ್] ಐವತ್ತಮೂರು (ಷಡ್). **-ವತ್ತರಿ.** ಸ್ತ್ರೀ: [-ಸಪ್ತತಿ] ಎಪ್ಪತ್ತಮೂರು. **-ವೀಸ.** ಸ್ತ್ರೀನ: [-ತ್ರಯೋವಿಂಶತಿ] ಇಪ್ಪತ್ತಮೂರು. **-ವೀಸ, -ವೀಸಇಮ.** ವಿ: [-ತ್ರಯೋವಿಂಶ] ಇಪ್ಪತ್ತಮೂರನೆಯ. **-ಸಂಝ.** ನ: [-ಸಂಧ್ಯ] ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆಯ ಸಮಯ (ಪಉಮ). **-ಸಟ್ಠಿ.** ಸ್ತ್ರೀ: [-ಷಷ್ಟಿ] **'-ವಟ್ಠಿ'** ಶಬ್ದವನ್ನು ನೋಡುವುದು. **-ಸೀಇ.** ಸ್ತ್ರೀ: [-ಅಶೀತಿ] ಎಂಬತ್ತ ಮೂರು. **-ಸೀಇಮ.** ವಿ: [-ಅಶೀತ] ಎಂಬತ್ತ ಮೂರನೆಯ.
ತೇಅ. ಸಕ: [ತೇಜಯ್] ಹರಿತಗೊಳಿಸು, ತೀಕ್ಷ್ಣಮಾಡು
ತೇಅ. **'ತಇಅ.=ತೃತೀಯ' ತಿತ್ಥ'** ಶಬ್ದವನ್ನು ನೋಡುವುದು

ತೇಅ. ಪು: [**ತೇಜಸ್**] ಕಾಂತಿ, ಪ್ರಕಾಶ, ಪ್ರಭೆ, ದೀಪ್ತಿ, ಹೊಳಪು(ಉವಾ). ತಾಪ, ಬಿಸುಪು, ಕಾವು, ಪ್ರತಾಪ, ಬಲ, ಶಕ್ತಿ, ಮಾಹಾತ್ಮ್ಯ, ಪ್ರಭಾವ. **–ಮಂತ. ವಿ:** [**–ವಿನ್**] ತೇಜಸ್ಸುಳ್ಳವನು, ಪ್ರಭೆಯಿಂದ ಕೂಡಿದ. **–ವೀರಿಯ. ಪು:** [**–ವೀರ್ಯ**] ಆದರ್ಶ ಭವನದಲ್ಲಿ ಕೇವಲ ಜ್ಞಾನ ಪಡೆದಿದ್ದ ಭರತ ಚಕ್ರವರ್ತಿಯ ಮೊಮ್ಮಗ(ಠಾ)

ತೇಅ. ನ: [**ಸ್ತೇಯ**] ಕಳ್ಳತನ

ತೇಅ. '**ತೇಅಯ**' ಶಬ್ದವನ್ನು ನೋಡುವುದು

ತೇಅಂಸಿ. ವಿ: [**ತೇಜಸ್ವಿನ್**] ತೇಜಸ್ಸನ್ನು ಹೊಂದಿರುವ, ತೇಜೋವಂತ(ಔಪ)

ತೇಅಗ. '**ತೇಅಯ' ತಿತ್ಥ**' ಶಬ್ದವನ್ನು ನೋಡುವುದು

ತೇಅಣ. ನ: [**ತೇಜನ**] ಹರಿತವಾಡುವುದು, ತೀಕ್ಷ್ಣಗೊಳಿಸುವುದು, ಉತ್ತೇಜಿಸುವುದು, ಉತ್ತೇಜಿತ ಗೊಳಿಸುವವನು

ತೇಅಯ. ನ: [**ತೈಜಸ**] ಶರೀರದ ಸಹಚಾರಿಯಾದ ಸೂಕ್ಷ್ಮ ಶರೀರ –ವಿಶೇಷ(ಭಗ)

ತೇಅಲಿ. ಪು: [**ತೇತಲಿನ್**] ಮನುಷ್ಯ –ಜಾತಿವಿಶೇಷ, ಒಬ್ಬ ಮಂತ್ರಿಯ ತಂದೆಯ ಹೆಸರು. **–ಪುತ್ತ. ಪು:** [**–ಪುತ್ರ**] ರಾಜ ಕನಕರಥನ ಒಬ್ಬ ಮಂತ್ರಿ(ಆಚಾ). **–ಪುರ. ನ:** [**–ಪುರ**] ನಗರ –ವಿಶೇಷ. **–ಸುಯ. ಪು:** [**–ಸುತ**] '**ಪುತ್ತ**' ಶಬ್ದವನ್ನು ನೋಡುವುದು. '**ತೇತಲಿ**' ಶಬ್ದವನ್ನು ನೋಡುವುದು

ತೇಅವ. ಅಕ: [**ಪ್ರ+ದೀಪ್**] ಬೆಳಗು, ಉರಿ, ಪ್ರಕಾಶಪಡಿಸು

ತೇಅವಾಲ. '**ತೇಜಪಾಲ**' ಶಬ್ದವನ್ನು ನೋಡುವುದು

ತೇಅವಿಅ. ವಿ: [**ಪ್ರದೀಪ್ತ**] ಉರಿಯುವ, ಜ್ವಲಿಸುವ, ಪ್ರಕಾಶಿಸುವ, ಹೊಳೆಯುವ

ತೇಅವಿಅ. ವಿ: [**ತೇಜಿತ**] ಹರಿತವಾಡಲ್ಪಟ್ಟ, ಮಸೆಯಲ್ಪಟ್ಟ, ತೀಕ್ಷ್ಣಗೊಳಿಸಲ್ಪಟ್ಟ

ತೇಅಸ್ಸಿ. ಪು: [**ತೇಜಸ್ವಿನ್**] ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು.

ತೇಆ. ಸ್ತ್ರೀ: [**ತೇಜಾ**] ಪಕ್ಷದ ಮೂರನೇ ರಾತ್ರಿ

ತೇಆ. ಸ್ತ್ರೀ: [**ತೇಜಸ್**] ತ್ರಯೋದಶಿಯ ತಿಥಿ

ತೇಆ. ಸ್ತ್ರೀ: [**ತ್ರೇತಾ**] ಪ್ರಸಿದ್ಧ ಎರಡನೇ ಯುಗವಾದ ತ್ರೇತಾ ಯುಗ

ತೇಆ –. '**ತೇಅಯ**' ಶಬ್ದವನ್ನು ನೋಡುವುದು

ತೇಆಲಿ. ಪು: [**ದೇ**] ವೃಕ್ಷ –ವಿಶೇಷ(ಪಣ್ಣ)

ತೇಇಚ್ಛ. ನ: [**ಚೈಕಿತ್ಸ್ಯ**] ಚಿಕಿತ್ಸಾ ಕ್ರಿಯೆ, ರೋಗಕ್ಕೆ ತಕ್ಕ ಪ್ರತೀಕಾರ

ತೇಇಚ್ಛಿಯ. '**ತೇಗಿಚ್ಛಿಯ**' **ಶಬ್ದವನ್ನು ನೋಡುವುದು**

ತೇಇಚ್ಛೀ. ಸ್ತ್ರೀ: [**ಚಿಕಿತ್ಸಾ, ಚೈಕಿತ್ಸೀ**] ಪ್ರತೀಕಾರ, ರೋಗಕ್ಕೆ ಮಾಡುವ ಉಪಚಾರ, ಚಿಕಿತ್ಸೆ(ಕಪ್ಪ)

ತೇಇಜ್ಜಗ. ವಿ: [**ತಾರ್ತೀಯಕ**] ಮೂರನೆಯ, ಮೂರನೇ ದಿನ ಬರುವ ಜ್ವರ

ತೇಇಲ್ಲ. '**ತೇಅಂಸಿ**' ಶಬ್ದವನ್ನು ನೋಡುವುದು.

ತೇಉ. ಪು: [**ತೇಜಸ್**] ಬೆಂಕಿ, ತೇಜಸ್ಸಿನ ಅಂಶ(ಭಗ), ಅಗ್ನಿ ಶಿಲಾ ಎಂಬ ಇಂದ್ರನ ಲೋಕಪಾಲ. ಬಿಸುಪು, ಕಾವು, ಪ್ರಕಾಶ, ಬೆಳಕು. **–ಆಯ. –ಕಾಯ' ಶಬ್ದವನ್ನು ನೋಡುವುದು. –ಕಂತ. ಪು:** [**–ಕಾಂತ**] ಲೋಕಪಾಲ ದೇವ –ವಿಶೇಷ. **–ಕಾಇಯ. ಪು:** [**–ಕಾಯಿಕ**] ಅಗ್ನಿಯ ಜೀವ. **–ಕಾಯ. ಪು:** [**–ಕಾಯ**] ಅಗ್ನಿಯ ಜೀವ. **–ಕ್ಕಾಇಯ. '–ಕಾಇಯ' ಶಬ್ದವನ್ನು ನೋಡುವುದು. –ಪ್ಪಭ. ಪು:** [**–ಪ್ರಭ**] **ಅಗ್ನಿ –ಶಿಖ** ಎಂಬ ಇಂದ್ರನ ಒಬ್ಬ ಲೋಕಪಾಲ(ಠಾ). **–ಪ್ಫಾಸ. ಪು:** [**ಸ್ಪರ್ಶ**] **ಉಷ್ಣ ಸ್ಪರ್ಶ**(ಆಚಾ). **–ಲೇಸ. ವಿ:** [**–ಲೇಶ್ಯ**] ತೇಜಸ್ಸಿನ ಕಣವುಳ್ಳವನು. **–ಲೇಸಾ. ಸ್ತ್ರೀ:** [**–ಲೇಶ್ಯಾ**] ತಪಸ್ಸಿನ ಪ್ರಭಾವದಿಂದ ಉಂಟಾಗುವ ಶಕ್ತಿ –ವಿಶೇಷದಿಂದ ಉತ್ಪನ್ನವಾಗುವ ತೇಜಸ್ಸಿನ (=ಅಗ್ನಿಯ) ಜ್ವಾಲೆ(ಠಾ). '**ಲೆಸ್ಸ**. '**–ಲೇಸ**' ಶಬ್ದವನ್ನು ನೋಡುವುದು(ಪಣ್ಣ). **–ಲೆಸ್ಸಾ** '**–ಲೇಸಾ**' ಶಬ್ದವನ್ನು ನೋಡುವುದು. **–ಸಿಹ. ಪು:** [**–ಶಿಖ**] ಒಬ್ಬ ಲೋಕಪಾಲ(ಠಾ). **–ಸೋಯ. ನ:** [**–ಶೌಚ**] ಭಸ್ಮವೇ ಮೊದಲಾದವುಗಳಿಂದ ಮಡುವ ಶೌಚ ಕರ್ಮ.

ತೇಉ. '**ತೇಅಯ**' ಶಬ್ದವನ್ನು ನೋಡುವುದು

ತೆಂಡುಅ. ನ: [**ದೇ**] ಟೀಂಬರು ಮರ

ತೆಂದು}. ಪು: [**ತಿಂದುಕ**] ತುಂಬೆಗಿಡ(ಪಣ್ಣ), ಚೆಂಡು,
ತೆಂದುಅ}. ಕಂದುಕ(ಣಾಯಾ, ಪಉಮ)
ತೆಂದುಗ}.

ತೆಂದುಸಯ. ಪು: [**ದೇ**] ಚೆಂಡು

ತೆಂಬರು. ಪು: [**ದೇ**] ಮೂರು ಇಂದ್ರಿಯಗಳ ಒಂದು ಕ್ಷುದ್ರ ಕೀಟ

ತೇಗಿಚ್ಛ. **'ತೇಇಚ್ಛ' ಶಬ್ದವನ್ನು ನೋಡುವುದು**
ತೇಗಿಚ್ಛಗ. ವಿ: [**ಚಿಕಿತ್ಸಕ**] ಚಿಕಿತ್ಸೆ ಮಾಡುವವನು, **ಪು:** ವೈದ್ಯ(ಉಪ)
ತೇಗಿಚ್ಛಾ. **'ತೇಇಚ್ಛಾ' ಶಬ್ದವನ್ನು ನೋಡುವುದು**
ತೇಗಿಚ್ಛಾಯಣ. **'ತಿಂಗಿಚ್ಛಾಯಣ'** **ಶಬ್ದವನ್ನು ನೋಡುವುದು**
ತೇಗಿಚ್ಛಿ. **'ತಿಗಿಂಛಿ'** ಶಬ್ದವನ್ನು ನೋಡುವುದು
ತೇಗಿಚ್ಛಿಯ. ವಿ: [**ಚೈಕಿತ್ಸಕ**] ಚಿಕಿತ್ಸೆ ನಡೆಸುವವನು, **ಪು:** ವೈದ್ಯ, **ನ:** ಚಿಕಿತ್ಸಾ ಕ್ರಿಯೆ, ರೋಗ ಪ್ರತೀಕಾರ ಕ್ರಮ. **–ಸಾಲಾ. ಸ್ತ್ರೀ:** [**–ಶಾಲಾ**] ಅಸ್ಪತ್ರೆ, ಚಿಕಿತ್ಸಾಲಯ
ತೇಚತ್ತಾರೀಸ. **'ತೇ–ಆಲೀಸ'** ಶಬ್ದವನ್ನು ನೋಡುವುದು
ತೇಜ. **'ತೇಜ=ತೇಜಯ್'** ಶಬ್ದವನ್ನು ನೋಡುವುದು
ತೇಜಂಸಿ. **'ತೇಅಂಸಿ'** ಶಬ್ದವನ್ನು ನೋಡುವುದು
ತೇಜಪಾಲ. **ಪು:** [**ತೇಜಪಾಲ**] ಗುಜರಾತಿನ ರಾಜ ವೀರ ಧವಲನ ಒಬ್ಬ ಯಶಸ್ವಿ ಮಂತ್ರಿ
ತೇಜಲಪುರ. **ನ:** [**ತೇಜಲಪುರ**] ಗಿರನಾರ್ ಪರ್ವತದ ಬಳಿ ಮಂತ್ರಿ ತೇಜಪಾಲನು ಕಟ್ಟಿಸಿದ ಒಂದು ನಗರ
ತೇಜಸ್ಸಿ. **'ತೇಅಂಸಿ' ಶಬ್ದವನ್ನು ನೋಡುವುದು**
ತೆಜ್ಜ.(ಅಪ). **'ಚಯ= ತ್ಯಜ್' ಶಬ್ದವನ್ನು ನೋಡುವುದು**
ತೆಜ್ಜಿಅ.(ಅಪ). ವಿ: [**ತ್ಯಕ್ತ**] ಬಿಟ್ಟಿರುವ, ತ್ಯಜಿಸಿರುವ,
ತೇಡ. **ಸಕ:** [**ದೇ**] ಕರೆ
ತೆಡ್ಡ. **ಪು:** [**ದೇ**] ದೀಪದ ಹುಳು, ಪತಂಗ, ಪಿಶಾಚ, ರಾಕ್ಷಸ
ತೇಣ. **ಅ:** [**ತೇನ**] ಲಕ್ಷಣ ಸೂಚಕ ಅವ್ಯಯ. ಆಕಡೆ
ತೇಣ}. **ಪು:** [**ಸ್ತೇನ**] ಕಳ್ಳ(ಓಘ), **–ಪ್ಪಓಗ. ಪು:**
ತೇಣಗ}. [**ಪ್ರಯೋಗ**] ಕಳ್ಳನಿಗೆ ಕಳ್ಳತನ ಮಾಡಲು
ತೇಣಂಸು}. ಪ್ರೇರಿಸುವುದು. ಕಳ್ಳತನದ ಉಪಕರಣಗಳನ್ನು ದಾನ ಮಾಡುವುದು ಅಥವಾ ಮಾರುವುದು
ತೇಣಿಅ}. **ನ:** [**ಸ್ತೈನ್ಯ**] ಕಳ್ಳತನ, ಚೌರ್ಯ(ಪಣ್ಣ)
ತೇಣಿಕ್ಕ}.
ತೇಣಿಸ. ವಿ: [**ತ್ರೈನಿಶ**] ನೆಮ್ಮಿ ಗಿಡಕ್ಕೆ ಸಂಬಂಧಿಸಿದ, ಬೆತ್ತದ(ಭಗ)
ತೇಣೀ. **ಸ್ತ್ರೀ:** [**ಸ್ತೇನಾ**] ಕಳ್ಳಿ, ಕಳ್ಳತನ ಮಾಡುವವಳು
ತೆಣ್ಣ. **ನ:** [**ಸ್ತೈನ್ಯ**] ಕಳ್ಳತನ, ಕಳುವು, ಅಪಹರಣ(ನಿಚೂ)
ತೆಣ್ಹಾಇಅ. ವಿ: [**ತೃಷ್ಣಿತ**] ಬಾಯಾರಿದ
ತೇತಲಿ. **ಪು:** [**ತೇತಲಿನ್**] ಧರಣೇಂದ್ರನ ಗಂಧರ್ವ –ಸೇನೆಯ ನಾಯಕ. **'ತೇಅಲಿ'** **ಶಬ್ದವನ್ನು ನೋಡುವುದು(ಣಾಯಾ)**
ತೇತಿಲ್. **'ತೀಇಲ' ಶಬ್ದವನ್ನು ನೋಡುವುದು**
ತೆತ್ತಿಅ. ವಿ: [**ತಾವತ್**] ಅಷ್ಟು(ಗಉಡ)
ತೆತ್ತಿಕ(ಶೌ). **'ತೆತ್ತಿಅ'** ಶಬ್ದವನ್ನು ನೋಡುವುದು
ತೆತ್ತಿರ. **'ತಿತ್ತಿರ' ಶಬ್ದವನ್ನು ನೋಡುವುದು**
ತೆತ್ತಿಲ. ವಿ: [**ತಾವತ್**] ಅಷ್ಟು
ತೆತ್ತಿಲ. **ನ:** [**ತೈತಿಲ**] ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಕರಣ –ವಿಶೇಷ
ತೆತ್ತುಲ}.(ಅಪ). **ಮೇಲಿನ ಶಬ್ದವನ್ನು ನೋಡುವುದು**
ತೆತ್ತುಲ್ಲ}.
ತೆತ್ಥು.(ಅಪ). **'ತತ್ಥ=ತತ್ರ' ಶಬ್ದವನ್ನು ನೋಡುವುದು**
ತೆದ್ದಹ. **'ತೆತ್ತಿಲ' ಶಬ್ದವನ್ನು ನೋಡುವುದು**
ತೆನ್ನ. **'ತೆಣ್ಣ' ಶಬ್ದವನ್ನು ನೋಡುವುದು**
ತೇಮ(ಅಪ). **'ತಹ=ತಥಾ' ಶಬ್ದವನ್ನು ನೋಡುವುದು**
ತೇಮಾಸಿಅ. ವಿ: [**ತ್ರೈಮಾಸಿಕ**] ಮೂರು ತಿಂಗಳುಗಳಲ್ಲಿ ಆಗುವ, ಮೂರು ಮಾಸಕ್ಕೆ ಸಂಬಂಧಿಸಿದ(ಸುರ)
ತೆಮ್ವ. **'ತೇಮ' ಶಬ್ದವನ್ನು ನೋಡುವುದು**
ತೇರ. ವಿ: [**ತ್ರಯೋದಶ**] ಹದಿಮೂರನೆಯ
ತೇರ(ಅಪ). ವಿ: [**ತ್ವದೀಯ**] ನಿನ್ನ, ನಿಮ್ಮ
ತೇರ}. **ತ್ರಿ.ಬ:** [**ತ್ರಯೋದಶನ್**] ಹದಿಮೂರು
ತೇರಸ}.
ತೇರಚ್ಛ. 'ತಿರಿಚ್ಛ=ತಿರ್ಯಚ್' ಶಬ್ದವನ್ನು ನೋಡುವುದು
ತೇರಸ. **'ತೇರಸಮ'** ಶಬ್ದವನ್ನು ನೋಡುವುದು
ತೇರಸಮ}. ವಿ: [**ತ್ರಯೋದಶ**]
ತೇರಸ}. ಹದಿಮೂರನೆಯ(ಸಮ)
ತೇರಸಯಾ. **ಸ್ತ್ರೀ:** [**ದೇ**] ಜೈನಮುನಿಗಳ ಒಂದು ಶಾಖೆ
ತೇರಸೀ. **ಸ್ತ್ರೀ:** [**ತ್ರಯೋದಶೀ**] ಹದಿಮೂರನೆಯ, ಒಂದು ತಿಥಿ –ವಿಶೇಷ
ತೇರಸುತ್ತರಸಯ. ವಿ: [**ತ್ರಯೋದಶೋತ್ತರಶತತಮ**] ಒಂದು ನೂರಾ ಹದಿಮೂರನೆಯ(ಪಉಮ)
ತೇರಹ. **'ತೇರಸ'** ಶಬ್ದವನ್ನು ನೋಡುವುದು
ತೇರಾಸಿ. **ಪು:** [**ತ್ರೈರಾಶಿಕ**] ನಪುಂಸಕ
ತೇರಾಸಿಅ. ವಿ: [**ತ್ರೈರಾಶಿಕ**] ಒಂದು ಪಂಥದ ಅನುಯಾಯಿ, ತ್ರೈರಾಶಿಕ ಮತ(=ಪಂಥ):

ಜೀವ, ಅಜೀವ, ನೋಜೀವ ಈ ಮೂರನ್ನೂ ಒಪ್ಪುವ ಪಂಥ(ಔಪ). ನ: ಒಂದು ಮತ –ವಿಶೇಷ

ತೇರಿಚ್ಛ. 'ತಿರಿಚ್ಛ=ತಿರ್ರ್ಯಚ್' ಶಬ್ದವನ್ನು ನೋಡುವುದು

ತೇರಿಚ್ಛ. 'ತಿರಿಚ್ಛ=ತಿರಶ್ಚೀನ' ಶಬ್ದವನ್ನು ನೋಡುವುದು

ತೇರಿಚ್ಛ. ನ: [**ತಿರ್ಯಕ್ತ್ವ**] ತಿರ್ಯಕ್ತ್ವ; ಪಶು–ಪಕ್ಷಿಗಳ ಸ್ವಭಾವ(ಉಪ)

ತೇರಿಚ್ಛಿಅ. ವಿ: [**ತೈರಶ್ಚಿಕ**] ಪಶುಪಕ್ಷಿಗಳಿಗೆ ಸಂಬಂಧಿಸಿದ,ತಿರ್ಯಕ್‌ಸಂಬಂಧಿಯಾದ(ಭಗ)

ತೇಲ. ನ: [**ತೈಲ**] ಗೋತ್ರವಿಶೇಷ, ಮಾಂಡವ್ಯ ಗೋತ್ರದ ಒಂದು ಶಾಖೆ. ಎಳ್ಳಿನಿಂದ ಆದದ್ದು: ಎಣ್ಣೆ.

ತೇಲಂಗ. ಪು.ಬ: [**ತೈಲಂಗ**] ದೇಶ –ವಿಶೇಷ, ಪುಂಸ್ತ್ರೀ: ತೈಲಂಗ(ತೆಲಂಗಾಣ) ದೇಶದ ನಿವಾಸಿಗಳು

ತೇಲಾಡೀ. ಸ್ತ್ರೀ: [**ತೈಲಾಟೀ**] ಕಣಜದ ಹುಳು(ದೇ)

ತೇಲುಕ್ಕ}. ನ: [**ತ್ರೈಲೋಕ್ಯ**] ಮೂರು ಲೋಕಗಳಾದ

ತೇಲೋಅ}. ಸ್ವರ್ಗ, ಮರ್ತ್ಯ, ಮತ್ತು ಪಾತಾಳ

ತೇಲೊಕ್ಕ}. (ಪಉಮ). **–ದಂಸಿ.** ವಿ: [**–ದಶಿನ್**] ಸರ್ವಜ್ಞ, ಸರ್ವದಶಿ. **–ಣಾಹ.** ಪು: [**–ನಾಥ**] ಮೂರೂ ಲೋಕಗಳ ಒಡೆಯ(ಷಡ್). **–ಮಂಡಣ.** ನ: [**–ಮಂಡನ**] ಮೂರೂ ಲೋಕಗಳ ಆಭರಣ. ಪು: ರಾವಣನ ಪಟ್ಟದ ಆನೆ.

ತೆಲ್ಲ. ನ: [**ತೈಲ**] ಎಳ್ಳಿನಿಂದ ಅದ ಎಣ್ಣೆ, ಸ್ನಿಗ್ಧ ದ್ರವ್ಯ. **–ಕೇಲಾ.** ಸ್ತ್ರೀ: [**–ಕೇಲಾ**] ಮಣ್ಣಿನ ಪಾತ್ರೆ. **–ಪಲ್ಲ.** ನ: [**–ಪಲ್ಯ**] ಎಣ್ಣೆಯನ್ನು ಹಾಕಿಡುವ ಮಣ್ಣಿನ ಪಾತ್ರೆ. **–ಪಾಇಆ.** ಸ್ತ್ರೀ: [**–ಪಾಯಿಕಾ**] ಒಂದುಕ್ಷುದ್ರ –ಜಂತು(ಆವಮ)

ತೆಲ್ಲಗ. ನ: [**ತೈಲಕ**] ಒಂದು ಬಗೆಯ ಮದ್ಯ

ತೆಲ್ಲಿಅ. ಪು: [**ತೈಲಿಕ**] ಎಣ್ಣೆ ಮಾರುವವನು(ವವ)

ತೆಲ್ಲೋಅ}. 'ತೇಲುಕ್ಕ' ಶಬ್ದವನ್ನು ನೋಡುವುದು

ತೆಲ್ಲೊಕ್ಕ}.

ತೇವಂ}. (ಅಪ). '**ತಹ=ತಥಾ**' ಶಬ್ದವನ್ನು

ತೇವಂಇ}.ನೋಡುವುದು

ತೇವಟ್ಠ. ವಿ: [**ತ್ರೈಷಷ್ಟ**] ಅರುವತ್ತಮೂರರ ಸಂಖ್ಯೆ ಹೊಂದಿರುವ, ೬೩ ಹೆಚ್ಚಾಗಿರುವ ಸಂಖ್ಯೆ

ತೇವಡ. (ಅಪ). ವಿ: [**ತಾವತ್**] ಅಷ್ಟು, ಅಷ್ಟೊಂದು

ತೇವಣ್ಣಾಸಾ. ಸ್ತ್ರೀ: [**ತ್ರಿಪಂಚಾಶತ್**] ಐವತ್ತ ಮೂರು

ತೇವೀಸಇ. ಸ್ತ್ರೀ: [**ತ್ರಯೋವಿಂಶತಿ**] ಇಪ್ಪತ್ತಮೂರು

ತೇವುತ್ತರಿ. '**ತೇ –ವತ್ತರಿ**' ಶಬ್ದವನ್ನು ನೋಡುವುದು

ತೇಹ.(ಅಪ). ವಿ: [**ತಾದೃಶ್**] ಆ ತೆರನಾದ, ಆ ವಿಧವಾದ, ಅಂತಹ

ತೇಹಿಂ(ಅಪ). ಅ: ಸಲುವಾಗಿ, ಓಸ್ಕರ,

ತೇಹಿಯ. ವಿ: [**ತ್ರ್ಯಾದಿಕ**] ಮೂರು ದಿನದ

ತೋ. '**ತಟ**' ಶಬ್ದವನ್ನು ನೋಡುವುದು(ಆಚಾ)

ತೋ. ಅ: [**ತದಾ**] ಆಗ, ಆ ಸಮಯದಲ್ಲಿ, ಆ ಕಾಲದಲ್ಲಿ(ಕುಮಾ)

ತೋಅಯ. ಪು: [**ದೇ**] ಚಾತಕ ಪಕ್ಷಿ(ದೇ)

ತೇಹುತ್ತರಿ. '**ತೇವತ್ತರಿ**' ಶಬ್ದವನ್ನು ನೋಡುವುದು

ತೊಂಡ. '**ತುಂಡ**' ಶಬ್ದವನ್ನು ನೋಡುವುದು

ತೊಂತಡಿ. ಸ್ತ್ರೀ: [**ದೇ**] ಮೊಸರನ್ನದಿಂದ ಮಾಡಿದ ಒಂದು ಖಾದ್ಯ ಪದಾರ್ಥ(ದೇ)

ತೊಕ್ಕವ. ವಿ: [**ದೇ**] ಕಾರಣವಿಲ್ಲದೆ ತೊಡಗುವವನು

ತೊಕ್ಕಾರ. '**ತುಕ್ಕಾರ**' ಶಬ್ದವನ್ನು ನೋಡುವುದು

ತೋಟಅ. ನ: [**ತ್ರೋಟಕ**] ಒಂದು ಛಂದಸ್ಸು,

ತೋಡ. ಸಕ: [**ತುಡ್**] ಮುರಿ, ಒಡೆ, ಭೇದಿಸು, ಚೂರುಮಾಡು

ತೋಡ. ಪು: [**ತ್ರೋಟ**] ಕೊರತೆ, ನ್ಯೂನತೆ, ಹರಿಯುವುದು

ತೋಡಣ. ವಿ: [**ದೇ**] ಅಸಹನೆ, ಅಸಹಿಷ್ಣು

ತೋಡಣ. ನ: [**ತೋದನ**] ವ್ಯಥೆ, ನೋವು, ವೇದನೆಯನ್ನುಂಟುಮಾಡುವ ಸಾಧನ

ತೋಡರ. ನ:[**ದೇ**]ತೋಡರ ಜನಾಂಗ, ಹೂವಿನಮಾಲೆ

ತೋಡಹಿಆ. ಸ್ತ್ರೀ: [**ದೇ**] ಒಂದು ವಾದ್ಯ–ವಿಶೇಷ(ಆಚಾ)

ತೋಡಿಅ. ವಿ: [**ತ್ರೋಟಿತ**] ಮುರಿಯಲ್ಪಟ್ಟಿರುವ

ತೊಡ್ಡ. ಪು: [**ದೇ**] ನಾಲ್ಕು ಇಂದ್ರಿಯಗಳ ಒಂದು ಕ್ಷುದ್ರ ಕೀಟ.

ತೋಣ. ಪುಂನ: [**ತೂಣ**] ಬತ್ತಳಿಕೆ, ತೂಣೀರ(ಪಾಅ)

ತೋಣೀರ. ಪುಂನ: [**ತೂಣೀರ**] ಬತ್ತಳಿಕೆ

ತೊತ್ತ. ನ: [**ತೋತ್ರ**] ಕುದುರೆ ಎತ್ತು ಮೊದಲಾದವುಗಳನ್ನು ಚುರುಕು ಮಾಡುವ ಮೊನಚಾದ ಕವೆಗೋಲು. ಚುಚ್ಚುಗೋಲು

ತೊತ್ತಡಿ. (ದೇ). '**ತೋಂತಡಿ**' ಶಬ್ದವನ್ನು ನೋಡುವುದು

ತೋದಗ. ವಿ: [**ತೋದಕ**] ವ್ಯಥೆಯನ್ನುಂಟು ಮಾಡುವ, ನೋವನ್ನುಂಟುಮಾಡುವ, ನೋವಿನ ಸಾಧನವಾದ ಕವೆಗೋಲು(ಉತ್ತ)

ತೋಮರ. ಪು: [**ತೋಮರ**] ಒಂದು ಬಗೆಯ ಬಾಣ, ಈಟಿ, ನ: ಒಂದು ಛಂದಸ್ಸು

ತೋಮರ. ಪುಂನ: [ದೇ.**ತೋಮರ**] ಜೇನು ಹುಟ್ಟು, ಜೇನುಗೂಡು

ತೋಮರಿಅ. ಪು: [ದೇ] ಆಯುಧವನ್ನು ತೊಳೆಯುವವನು, ಶಸ್ತ್ರವನ್ನು ತೊಳೆಯುವುದು

ತೋಮರಿಗುಂಡಿ. ಸ್ತ್ರೀ: [ದೇ] ಒಂದು ಬಗೆಯ ಬಳ್ಳಿ

ತೋಮರೀ. ಸ್ತ್ರೀ: [ದೇ] ಬಳ್ಳಿ

ತೊಮ್ಹಾರ. (ಅಪ). **'ತುಮ್ಹಾರ'** ಶಬ್ದವನ್ನು ನೋಡುವುದು

ತೋಯ. ನ: [**ತೋಯ**] ನೀರು, ಜಲ, **-ಧರಾ, ಧಾರಾ.** ಸ್ತ್ರೀ: [**ಧಾರಾ**] ಒಬ್ಬ ದಿಕ್‌ಕುಮಾರಿ ದೇವಿ(ತಾ). **-ಪಟ್ಠ, ಪಿಟ್ಠ.** ನ: [**ಪೃಷ್ಠ**] ನೀರಿನ ಮೇಲ್ಭಾಗ

ತೋಯ.. ಪು: [**ತೋದ**] ವ್ಯಥೆ, ನೋವು

ತೋರಣ. ನ: [**ತೋರಣ**] ಹೊರಬಾಗಿಲು, ಹೊರಬಾಗಿಲಿಗೆ ಅಲಂಕಾರಕ್ಕಾಗಿ ಹಬ್ಬ, ಹುಣ್ಣಿವೆಗಳಂದು ಕಟ್ಟುವ ಮಾವಿನ ತಳಿರು, ಎಲೆಗಳ ಮಾಲೆ(ಔಪ). **-ಉರ.** ನ: [**-ಪುರ**] ನಗರ-ವಿಶೇಷ

ತೋರವಿಅ. ವಿ: [ದೇ] ಉತ್ತೇಜಿಸಲ್ಪಟ್ಟ(ಪಾಅ)

ತೋರಾಮದಾ. ಸ್ತ್ರೀ: [ದೇ] ನೇತ್ರ ರೋಗ, ಕಣ್ಣಿನ ಕಾಯಿಲೆ

ತೋಲ. **'ತುಲ=ತೋಲಯ್'** ಶಬ್ದವನ್ನು ನೋಡುವುದು

ತೋಲ. ಪುಂನ: [ದೇ] ಮಗಧ ದೇಶದ ಪ್ರಸಿದ್ಧವಾದ ಒಂದು ಅಳತೆ: ಒಂದು ತೂಕ(ತಂದು)

ತೋಲಣ. ಪು: [ದೇ] ಮನುಷ್ಯ,

ತೋಲಣ. ನ: [**ತೋಲನ**] ತೂಕ ಮಾಡುವುದು, ತೂಗುವುದು, ಅಳೆಯುವುದು

ತೋಲಿಯ. ವಿ: [**ತೋಲಿತ**] ತೂಕಮಾಡಲಾದ, ತೂಗಿದ(ಮಹಾ)

ತೊಲ್ಲ. ನ: [**ತೋಲ್ಯ, ತೌಲ**] ತೂಕ, ವಜನು, ತ್ರಾಸು, ತಕ್ಕಡಿ(ಕುಪ್ರ)

ತೋವಟ್ಟ. ಪು: [ದೇ] ಒಂದು ಕರ್ಣಾಭರಣ, ಕಿವಿಯ ಆಭರಣ,ಕಮಲದಕರ್ಣಿಕೆ(ಬೀಜಕೋಶ)(ದೇ)

ತೋಸ. ಸಕ: [**ತೋಷಯ್**] ಸಂತೋಷಪಡಿಸು, ಸಂತೃಪ್ತಿಗೊಳಿಸು(ಉವ)

ತೋಸ. ಪು: [**ತೋಷ**] ಸಂತಸ, ಆನಂದ, ಸಂತೋಷ(ಪಾಅ). **-ಯರ.** ವಿ: [**-ಕರ**] ಸಂತೋಷವುಂಟುಮಾಡುವ

ತೋಸ. ನ: [ದೇ] ಹಣ, ದೌಲತ್ತು

ತೋಸಲಿ. ಪು: [**ತೋಸಲಿನ್**] ಒಂದು ಗ್ರಾಮ-ವಿಶೇಷ, ದೇಶ -ವಿಶೇಷ, ಒಬ್ಬ ಜೈನ ಆಚಾರ್ಯ, **-ಪುತ್ತ.** ಪು: [**-ಪುತ್ರ**] ಪ್ರಸಿದ್ಧ ಜೈನಾಚಾರ್ಯ

ತೋಸಲಿಅ. ಪು: [**ತೋಸಲಿಕ**] ತೋಸಲಿ ಗ್ರಾಮದ ಒಡೆಯ, ಕ್ಷತ್ರಿಯ(ಆವಮ)

ತೋಸವಿಅ}. ವಿ: [**ತೋಷಿತ**] ಸಂತೋಷಪಡಿಸಲ್ಪಟ್ಟ,

ತೋಸಿಅ}. (ಪಉಮ)

ತೋಹಾರ.(ಅಪ). **'ತುಹಾರ'** ಶಬ್ದವನ್ನು ನೋಡುವುದು

-ತ್ತ. ವಿ: [**-ತ್ರ**] ರಕ್ಷಿಸುವವನು, ರಕ್ಷಕ.

-ತ್ತಣ. **'ತಣ'** ಶಬ್ದವನ್ನು ನೋಡುವುದು

-ತ್ತಿ. **'ಇಅ= ಇತಿ'** ಶಬ್ದವನ್ನು ನೋಡುವುದು

-ತ್ತಿ. ಅ: [**ಇತಿ**] ನಿಂದೆ, ವ್ಯಂಗ್ಯಗಳನ್ನು ಸೂಚಸುವ ಅವ್ಯಯ

-ತ್ಥ. **'ಎತ್ಥ'** ಶಬ್ದವನ್ನು ನೋಡುವುದು

-ತ್ಥ. ವಿ: [**-ಸ್ಥ**] ಸ್ಥಿತ, ಇದ್ದ, ಚಲಿಸದೆ ನಿಂತಿರುವ, ಸ್ಥಿರವಾಗಿರುವ

-ತ್ಥ. **'ಅತ್ಥ'** ಶಬ್ದವನ್ನು ನೋಡುವುದು(ವಾಅ)

-ತ್ಥಅ. **'ಥಯ=ಸ್ಥಗ'** ಶಬ್ದವನ್ನು ನೋಡುವುದು (ಸೇ)

-ತ್ಥಉಡ. **'ಥಉಡ'** ಶಬ್ದವನ್ನು ನೋಡುವುದು (ಗಉಡ)

-ತ್ಥಂಬ. **'ಥಂಬ'** ಶಬ್ದವನ್ನು ನೋಡುವುದು(ಕುಮಾ)

-ತ್ಥಂಭಣ. **'ಥಂಭಣ'** ಶಬ್ದವನ್ನು ನೋಡುವುದು(ವಾ)

-ತ್ಥರು. **'ಥರು'** ಶಬ್ದವನ್ನು ನೋಡುವುದು (ಪಿ)

-ತ್ಥಲ. **'ಥಲ'** ಶಬ್ದವನ್ನು ನೋಡುವುದು(ಕಾಪ್ರ)

-ತ್ಥಲೀ. **'ಥಲೀ'** ಶಬ್ದವನ್ನು ನೋಡುವುದು

-ತ್ಥವ. **'ಥವ=ಸ್ತು'** ಶಬ್ದವನ್ನು ನೋಡುವುದು(ನಾಟ)

-ತ್ಥವಅ. **'ಥವಯ'** ಶಬ್ದವನ್ನು ನೋಡುವುದು(ಸೇ)

-ತ್ಥಾಣ. **'ಥಾಣ'** ಶಬ್ದವನ್ನು ನೋಡುವುದು(ನಾಟ)

-ತ್ಥಾಲ. **'ಥಾಲ'** ಶಬ್ದವನ್ನು ನೋಡುವುದು (ಕುಮಾ)

-ತ್ಥಿಅ. **'ಥಿಅ'** ಶಬ್ದವನ್ನು ನೋಡುವುದು(ಗಾ)

-ತ್ಥಿರ. **'ಥಿರ'** ಶಬ್ದವನ್ನು ನೋಡುವುದು(ಕುಮಾ)

-ತ್ಥೋಅ. **'ಥೋಅ'** ಶಬ್ದವನ್ನು ನೋಡುವುದು (ವೇಣೀ)

ಥ

ಥ. ಪು: [ಥ] 'ತ' ವರ್ಗದ ವ್ಯಂಜನಗಳಲ್ಲಿ ಎರಡನೆಯದು. ದಂತ ಸ್ಥಾನೀಯ; ದಂತ್ಯ ವರ್ಣ. ಮಹಾಪ್ರಾಣ–ಅಘೋಷ –ಸ್ಪರ್ಶವರ್ಣ.
ಥ. ಅ: ವಾಕ್ಯಾಲಂಕಾರ ಮತ್ತು ಪಾದಪೂರ್ತಿಯಲ್ಲಿ ಬಳಕೆಯಾಗುವ ಅವ್ಯಯ. "ಕಿಂ ಥ ತಯಂ ಪಮ್ಹುಟ್ಠಮ ಜಂ ಥ ತಯ....."
–ಥ. **'ಎತ್ಥ' ಶಬ್ದವನ್ನು ನೋಡುವುದು**
ಥಇಅ. ವಿ: [ಸ್ಥಗಿತ] ಮುಚ್ಚಿಸಲ್ಪಟ್ಟಿರುವ, ಮರೆಮಾಡಲ್ಪಟ್ಟ ಆಚ್ಛಾದಿತ(ಸೇ)
ಥಇಅ–}. ಸ್ತ್ರೀ: [ಸ್ಥಗಿಕಾ] ವೀಳ್ಯದ ಡಬ್ಬಿ. –ಇತ್ತ. ಪು: [–ವತ್] ತಾಂಬೂಲದ ಕರಂಡಕ(ಡಬ್ಬಿ)
ಥಇಆ}. ವನ್ನು ಒಯ್ಯುವ ಆಳು, ದಾಸಿ. ತಾಂಬೂಲ ಕರಂಕವಾಹಿನಿ. –ಧರ. ಪು: [–ಧರ] ತಾಂಬೂಲದ ಕರಂಡಕ(ಡಬ್ಬಿ)ವನ್ನು ಒಯ್ಯುವ ಆಳು, –ವಾಹಗ. ಪು: [–ವಾಹಕ] ಅದೇ ಅರ್ಥ. 'ಥಗಿಯ' **ಶಬ್ದವನ್ನು ನೋಡುವುದು**
ಥಇಆ. ಸ್ತ್ರೀ: [ದೇ] ಕೈಚೀಲ, ಹಮ್ಮಿಣಿ
ಥಇಉಂ. 'ಥಯ=ಸ್ಥಗಯ್' ಶಬ್ದವನ್ನು ನೋಡುವುದು
ಥಉಡ. ನ: [ಸ್ಥಪುಟ] ಹಳ್ಳ ದಿಣ್ಣೆಯಿಂದ ಕೂಡಿದ ಪ್ರದೇಶ. ವಿ: ಎತ್ತರ, ತಗ್ಗುಗಳಿಂದ ಕೂಡಿದ ಪ್ರದೇಶ
ಥಉಡಿಮ. ವಿ: [ಸ್ಥಪುಟಿತ] **ಮೇಲಿನ ಶಬ್ದವನ್ನು ನೋಡುವುದು.** ಅದೇ ಅರ್ಥ(ಗಉಡ)
ಥಉಡ್ಡ. ನ: [ದೇ] ಗೇರು ಹಣ್ಣಿನ ಮರ, ಗೋಡಂಬಿ ಮರ
ಥಂಗ. ಸಕ: [ಉದ್+ನಾಮಯ್] ಉನ್ನತೀಕರಿಸು, ಎತ್ತರಗೊಳಿಸು, ಮೇಲೆಮಾಡು
ಥಂಡಿಲ. ನ: [ಸ್ಥಂಡಿಲ] ಯಾವುದೇ ಜಂತುಗಳಿಲ್ಲದ ಶುದ್ಧಭೂಮಿ. (ನಿಚೂ), ಸಿಟ್ಟು, ಕೋಪ (ಸೂಅ)
ಥಂಡಿಲ್ಲ}. ನ: [ಸ್ಥಂಡಿಲ] ಶುದ್ಧಭೂಮಿ(ಸುಪಾ),
ಥಂಡಿಲ್ಲ}. ಜಂತುಗಳಿಲ್ಲದ ಪ್ರದೇಶ, ಸಿಟ್ಟು
ಥಂಡಿಲ್ಲ. ಪು: [ಸ್ಥಂಡಿಲ] ಕ್ರೋಧ, ಕೋಪ
ಥಂಡಿಲ್ಲ. ನ: [ದೇ] ಮಂಡಲ, ವೃತ್ತ ಪ್ರದೇಶ(ದೇ)
ಥಂತ. **'ಥಾ" ಶಬ್ದವನ್ನು ನೋಡುವುದು**
ಥಂಬ. ವಿ: [ದೇ] ವಿಷಮ, ಅಸಮ(ದೇ)
ಥಂಬ. ಪು: [ಸ್ತಂಬ] ಹುಲ್ಲಿನ ಕಂತೆ(ದೇ)
ಥಂಭ. ಅಕ: [ಸ್ತಂಭ್] ನಿಲ್ಲು, ಸ್ತಬ್ಧವಾಗು, ಸ್ಥಿರವಾಗು, ಸಕ: ತಡೆ, ಅಡ್ಡಿಪಡಿಸು.
ಥಂಭ. ಪು: [ಸ್ತಂಭ] ಸುತ್ತು, ಪರಿಧಿ, ಕಂಬ(ಕುಮಾ), ಅಭಿಮಾನ, ಗರ್ವ, ಅಹಂಕಾರ. –ವಿಜ್ಜಾ. ಸ್ತ್ರೀ: [–ವಿದ್ಯಾ] ಸ್ತಬ್ಧಗೊಳಿಸುವ ವಿದ್ಯೆ(ಸುಪಾ). –ತಿತ್ಥ. ನ: [–ತೀರ್ಥ] ಒಂದು ಜೈನ ತೀರ್ಥ
ಥಂಭಣ. ನ: [ಸ್ತಂಭನ] ನಿಶ್ಚೇಷ್ಟಗೊಳಿಸುವುದು, ಸ್ತಬ್ಧಗೊಳಿಸುವ ಉಪಾಯ, ಈಗ **'ಖಂಭಾತ'** ಎಂದು ಕರೆಯಲಾಗುವ ಗುಜರಾತಿನ ಒಂದು ನಗರ. –ಪುರ. ನ: [–ಪುರ] ಖಂಭಾತ ನಗರ.
ಥಂಭಣಯಾ. ಸ್ತ್ರೀ :[ಸ್ತಂಭನಾ] ಸ್ತಬ್ಧಗೊಳಿಸುವುದು (ತಾ)
ಥಂಭಣಿಯಾ. ಸ್ತ್ರೀ: [ಸ್ತಂಭನಿಕಾ] ವಿದ್ಯಾ –ವಿಶೇಷ
ಥಂಭಣೀ. ಸ್ತ್ರೀ: [ಸ್ತಂಭನೀ] ಸ್ತಂಭನಗೊಳಿಸುವ ವಿದ್ಯೆ (ಣಾಯಾ)
ಥಂಭಯ. **'ಥಂಭ=ಸ್ತಂಭ' ಶಬ್ದವನ್ನು ನೋಡುವುದು**
ಥಂಭಿಯ. ವಿ: [ಸ್ತಂಭಿತ] ಸ್ತಬ್ಧಗೊಳಿಸಲ್ಪಟ್ಟ, ತಡೆಯಲ್ಪಟ್ಟ (ಔಪ), ಸ್ತಬ್ಧಗೊಂಡಿರುವಂಥದು
ಥಕ್ಕ. ಅಕ: [ಸ್ಥಾ] ಇರು, ಕುಳಿತುಕೊಳ್ಳು, ಸ್ಥಿರಗೊಳ್ಳು,
ಥಕ್ಕ. ಅಕ: [ಥಕ್ಕ್] ಕೆಳಗೆ ಹೋಗು,
ಥಕ್ಕ. ಅಕ: [ಶ್ರಮ್] ಆಯಾಸಗೊಳ್ಳು, ದಣಿ, ಬಳಲು, ದುಡಿ
ಥಕ್ಕ. ವಿ: [ಸ್ಥಿತ] ಇರುವ, ಚಲಿಸದೆ ನಿಂತಿರುವ, ಸ್ಥಿರವಾಗಿರುವ(ಸುಪಾ)
ಥಕ್ಕ. ಪು: [ದೇ] ಸಮಯ, ಸಂದರ್ಭ(ದೇ, ವವ), ವಿ: ಬಳಲಿದ, ಆಯಾಸಗೊಂಡ
ಥಕ್ಕವ. ಸಕ; [ಸ್ಥಾಪಯ್] ಸ್ಥಾಪಿಸು, ಇಡು.
ಥಕ್ಕಿಅ. ವಿ: [ಶ್ರಾಂತ] ಆಯಾಸಗೊಂಡಿರುವ, ಬಳಲಿದ, ದಣಿದ
ಥಗ. **'ಥಯ= ಸ್ಥಗಯ್' ಶಬ್ದವನ್ನು ನೋಡುವುದು**
ಥಗಣ. ನ: [ಸ್ಥಗನ] ಮರೆಮಾಡುವುದು, ಮುಚ್ಚುವುದು, ಆಚ್ಛಾದಿಸುವುದು(ತಾ)
ಥಗಥಗ. ಅಕ: [ಥಗಥಗಾಯ್] ನಡುಗು, ಹೆದರು, ಗಾಬರಿಗೊಳ್ಳು

ಥಗಿಯ. ವಿ: [ಸ್ಥಗಿತ] ಮರೆಮಾಡಲ್ಪಟ್ಟ, ಮುಚ್ಚಲ್ಪಟ್ಟ, ಆಚ್ಛಾದಿಸಲ್ಪಟ್ಟ
ಥಗಿಯ–. 'ಥಇಅ' ಶಬ್ದವನ್ನು ನೋಡುವುದು. –ಗ್ಗಾಹಿ. ಪು: [–ಗ್ರಾಹಿನ್] ತಾಂಬೂಲವನ್ನು ಕೊಂಡೊಯ್ಯುವ ಆಳು
ಥಗ್ಗಯಾ. ಸ್ತ್ರೀ: [ದೇ] ಹಕ್ಕಿಗಳ ಕೊಕ್ಕು
ಥಗ್ಗ. ಸಕ: [ಸ್ತಾಘ್] ನೀರಿನ ಆಳವನ್ನು ಅಳೆ
ಥಗ್ಘ. ಪು: [ದೇ] ಆಳ, ಕೆರೆ ಬಾವಿಗಳ ನೀರಿನ ತಳ(ದೇ)
ಥಗ್ಘಾ. ಸ್ತ್ರೀ: [ದೇ] ಮೇಲಿನ **ಶಬ್ದವನ್ನು ನೋಡುವುದು**
ಥಟ್ಟ. ಪುಂನ: [ದೇ] ಸಮೂಹ, ಗುಂಪು, ಸಮುದಾಯ. ಆಡಂಬರ, ವಿಜೃಂಭಣೆ, ಠೀವಿ(ಭವಿ)
ಥಟ್ಟಿ. ಸ್ತ್ರೀ: [ದೇ] ಪಶು, ಪ್ರಾಣಿ
ಥಡ. ಪುಂನ: [ದೇ] ಸಮೂಹ, ಗುಂಪು, ಸಮುದಾಯ.
ಥಡ್ಢ. ವಿ: [ಸ್ತಬ್ಧ] ನಿಶ್ಚಲ, ಅಲುಗಾಡದಿರುವ, ಅಭಿಮಾನಿ, ಗರ್ವಿಷ್ಠ(ಸುಪಾ)
ಥಡ್ಢಿಅ. ವಿ: [ಸ್ತಂಭಿತ] ಸ್ತಬ್ಧಗೊಳಿಸಲ್ಪಟ್ಟ, ತಡೆಗಟ್ಟಲಾದ, ನಿಶ್ಚಲ, ಬಾಗದೆ ಸೆಟೆದು ನಿಂತು ಗುರುವಿಗೆ ಮಾಡುವ ನಮಸ್ಕಾರ: ಒಂದು ದೋಷ
ಥಣ. ಅಕ: [ಸ್ತನ್] ಗರ್ಜಿಸು, ಆಕ್ರಂದಿಸು, ಚೀರಾಡು, ಕ್ರೋಧಗೊಳ್ಳು, ಜೋರಾಗಿ ನಿಟ್ಟುಸಿರುಬಿಡು
ಥಣ. ಪು: [ಸ್ತನ] ಕುಚ, ಮೊಲೆ, ಪಯೋಧರ(ಆಚಾ). **–ಜೀವಿ.** ವಿ: [–ಜೀವಿನ್] ಸ್ತನ್ಯಪಾನವನ್ನೇ ಆಧರಿಸಿರುವ ಬಾಲಕ. **–ವಈ.** ಸ್ತ್ರೀ: [–ವತೀ] ದೊಡ್ಡ ಮೊಲೆಗಳುಳ್ಳವಳು(ಗಉಡ). **–ವಿಸಾರಿ.** ವಿ:[–ವಿಸಾರಿನ್] ಸ್ತನದ ಮೇಲೆ ಹರಡುವ, ಹಬ್ಬುವ. **–ಸುತ್ತ.** ನ:[–ಸೂತ್ರ] ಎದೆಯ ಹಾರ: ಮುತ್ತಿನಹಾರ. **–ಹರ.** ಪು:[–ಭರ] ಮೊಲೆಗಳ ಭಾರ
ಥಣಂಧಯ. ಪು: [ಸ್ತನಂಧಯ] ಸ್ತನ್ಯಪಾನ ಮಾಡುವ ಮಗು, ತಾಯಿಯ ಮೊಲೆಹಾಲು ಕುಡಿಯುವ ಶಿಶು(ಅಚ್ಚು)
ಥಣಣ. ನ: [ಸ್ತನನ] ಗುಡುಗಿನ ಗರ್ಜನೆ, ಆಕ್ರಂದನ, ಚೀರಾಟ(ಸೂಅ) ನರಳಿಕೆ, ಆಕ್ರೋಶ, ಶಾಪ, ಶಬ್ದ ಮಾಡುತ್ತ ನಿಟ್ಟುಸಿರು ಬಿಡುವುದು.
ಥಣಯ. ಪು: [ಸ್ತನಕ] ಎರಡನೇ ನರಕಭೂಮಿಯ ಒಂದು ನರಕ –ಸ್ಥಾನ
ಥಣಲೋಲುಅ. ಪು: [ಸ್ತನಲೋಲುಪ] ಎರಡನೇ ನರಕಭೂಮಿಯ ಒಂದು ನರಕ –ಸ್ಥಾನ
ಥಣಿಯ. ನ: [ಸ್ತನಿತ] ಮೇಘದ ಗರ್ಜನೆ, ಆಕ್ರಂದನ, ಚೀರಾಟ, ಮನೆ ದೇವರುಗಳ ಒಂದು ಜಾತಿ (ಔಪ). **–ಕುಮಾರ.** ಪು: [–ಕುಮಾರ] ಭವನಪತಿ ದೇವರುಗಳ ಒಂದುಜಾತಿ
ಥಣಿಲ್ಲ. ಸಕ: [ಚೋರಯ್] ಕದಿ, ಕಳ್ಳತನ ಮಾಡು.
ಥಣಿಲ್ಲ. ವಿ: [ಸ್ತನವತ್] ಸ್ತನವುಳ್ಳ
ಥಣುಲ್ಲಅ. ಪು: [ಸ್ತನಕ] ಸಣ್ಣ ಮೊಲೆ(ಗಉಡ)
ಥಣ್ಣು. 'ಥಾಣು' ಶಬ್ದವನ್ನು ನೋಡುವುದು(ಗಾ)
ಥತ್ತಿಅ. ನ: [ದೇ] ವಿಶ್ರಾಂತಿ, ವಿರಾಮ, ಬಿಡುವು
ಥದ್ಧ. 'ಥಡ್ಢ' ಶಬ್ದವನ್ನು ನೋಡುವುದು
ಥನ್ನ. ನ: [ಸ್ತನ್ಯ] ಮೊಲೆಹಾಲು. **–ಜೀವಿ.** ವಿ: [–ಜೀವಿನ್] ಮೊಲೆಹಾಲು ಕುಡಿದು ಜೀವಿಸುವ ಶಿಶು.
ಥಪ್ಪ. ಸಕ: [ಸ್ಥಾಪಯ್] ಇಡು, ಸ್ಥಾಪಿಸು,
ಥಪ್ಪಣ. ನ: [ಸ್ಥಾಪನ] ಇಡುವುದು, ಇರಿಸುವುದು, ಸರಿಯಾಗಿ ನಿಲ್ಲಿಸುವುದು
ಥಪ್ಪಿಅ. ವಿ: [ಸ್ಥಾಪಿತ] ಇರಿಸಲ್ಪಟ್ಟ, ಇಡಲಾದ
ಥಬ್ಭ. ಅಕ: [ಸ್ತಭ್] ಅಹಂಕಾರ ಪಡು, ಗರ್ವಿಸು
ಥಬ್ಭರ. ಪು: [ದೇ] ಅಯೋಧ್ಯಾ ನಗರದ ಸಮೀಪದ ಒಂದು ಮಡು, ಆಳವಾದ ಜಲಾಶಯ.
ಥಮಿಅ. ವಿ: [ದೇ] ಮರೆಯಲ್ಪಟ್ಟ, ಮರೆಯಲಾದ
ಥಯ. ಸಕ: [ಸ್ಥಗಯ್] ಮರೆಮಾಡು, ಮುಚ್ಚು, ಹೊದಿಸು(ಭವಿ)
ಥಯ. ವಿ: [ಸ್ತೃತ] ವ್ಯಾಪಿಸಿದ, ಪೂರ್ಣಗೊಂಡ
ಥಯ. ಪು: [ಸ್ತವ] ಸ್ತುತಿ, ಸ್ತೋತ್ರ, ಪ್ರಶಂಸೆ, ಹೊಗಳಿಕೆ
ಥಯಣ. ನ: [ಸ್ತವನ] ಮೇಲಿನ **ಶಬ್ದವನ್ನು ನೋಡುವುದು**
ಥರ. ಪು: [ದೇ] ಮೊಸರಿನ ಕೆನೆ
ಥರತ್ಥರ}. ಅಕ: [ದೇ] ಥರಥರ ಕಂಪಿಸು, ನಡುಗು.
ಥರಥರ}. ವ. ಕೃ: **'ಥರಥರಂತ'**
ಥರಹರ}.
ಥರಹರಿಅ. ವಿ: [ದೇ] ನಡುಗಿಸಲ್ಪಟ್ಟ, ಅಲುಗಾಡಿಸಲ್ಪಟ್ಟ, ಕಂಪನ, ನಡುಕ(ಸುಪಾ)
ಥರು. ಪು: [ದೇ. ತ್ಸರು] ಖಡ್ಗ –ಮುಷ್ಟಿ
ಥರುಗಿಣ. ಪು: [ಥರುಕಿನ] ದೇಶ –ವಿಶೇಷ, ಅದರ ನಿವಾಸಿ. ಸ್ತ್ರೀ: **–ಗಿಣೆಯಾ**
ಥಲ. ನ: [ಸ್ಥಲ] ಭೂಮಿ, ಸ್ಥಳ, ಜಾಗ, ತೇವವಿಲ್ಲದ ಒಣಗಿದ ಬಾಯಿ. **–ಇಲ್ಲ.** ವಿ: [–ವತ್]

ಸ್ಥಳದಿಂದಕೂಡಿದ. **-ಕುಕ್ಕುಡಿಯಂಡ.** ನ: [-**ಕುಕ್ಕುಟ್ಯಂಡ**] ಅಡಕೆಲೆ ಉಗುಳುವ ಸಲುವಾಗಿ ತೆರೆದ ಬಾಯಿ. **-ಚಾರ.** ಪು: [-ಚಾರ] ನೆಲ ಅಥವಾ ಸ್ಥಳದಲ್ಲಿ ನಡೆಯುವುದು(ಆಚಾ) **-ನಲಿಣೀ.** ಸ್ತ್ರೀ: [-ನಲಿನೀ] ನೆಲದಲ್ಲಿ ಬೆಳೆಯುವ ಕಮಲದ ಗಿಡ. **-ಯ.** ವಿ: [-ಜ] ನೆಲದಲ್ಲಿ ಹುಟ್ಟುವ(ಪಣ್ಣ). **-ಯರ.** ವಿ: [-ಚರ] ನೆಲದ ಮೇಲೆ ನಡೆದಾಡುವ ಐದು ಇಂದ್ರಿಯಗಳ ತಿರ್ಯಗ್ ಜಂತು. ಸ್ತ್ರೀ: -ರೀ

ಥಲಯ. ಪು: [ದೇ] ಮಂಟಪ, ಹುಲ್ಲು, ಎಲೆ ಇತ್ಯಾದಿಗಳಿಂದ ನಿರ್ಮಿಸಿದ ಮನೆ, ಪರ್ಣಕುಟಿ (ದೇ)

ಥಲಹಿಗಾ}. ಸ್ತ್ರೀ: [ದೇ] ಶವವನ್ನು ಹೂಳಿ ಅದರ
ಥಲಹಿಯಾ}. ಮೇಲೆ ನಿರ್ಮಿಸುವ ಕಟ್ಟೆ, ಸತ್ತವರ ಸಮಾಧಿ

ಥಲೀ. ಸ್ತ್ರೀ: [ಸ್ಥಲೀ] ಎತ್ತರದ ಪ್ರದೇಶ, ಎತ್ತರದ ನೆಲ

ಥಲೀ. ಸ್ತ್ರೀ: [ಸ್ಥಲೀ] ನೀರಿಲ್ಲದ ನೆಲ. **-ಘೋಡಯ.** ಪು: [-ಘೋಟಕ] ಒಂದು ಬಗೆಯ ಪ್ರಾಣಿ

ಥಲ್ಲಿಯಾ. ಸ್ತ್ರೀ: [ದೇ. ಸ್ಥಾಲಿಕಾ] ಸಣ್ಣ ಊಟದ ತಟ್ಟೆ (ಪಉಮ)

ಥವ. ಸಕ: [ಸ್ತು] ಸ್ತುತಿಸು, ಪ್ರಶಂಸಿಸು

ಥವ. **'ಥಯ=ಸ್ತವ' ಶಬ್ದವನ್ನು ನೋಡುವುದು**

ಥವ. ಪು: [ದೇ] ಒಂದು ಪ್ರಾಣಿ

ಥವಇ. ಪು: [ಸ್ಥಪತಿ] ಶಿಲ್ಪಿ, ಬಡಗಿ

ಥವಇಯ. ವಿ: [ಸ್ತಬಕಿತ] ಗುಚ್ಛದಿಂದ ಕೂಡಿರುವ, ಗುಚ್ಛವನ್ನು ಹೊಂದಿರುವ(ಔಪ)

ಥವಇಲ್ಲ. ವಿ: [ದೇ] ತೊಡೆ ಚಾಚಿಕೊಂಡು ಕುಳಿತಿರುವವನು

ಥವಕ್ಕ. ಪು: [ದೇ] ಗುಂಪು, ಸಮೂಹ

ಥವಣ. **'ಥಯಣ' ಶಬ್ದವನ್ನು ನೋಡುವುದು**

ಥವಣಿಯಾ. ಸ್ತ್ರೀ: [ಸ್ಥಾಪನಿಕಾ] ನ್ಯಾಸ, ಕೇಳಿದಾಗ ಕೊಡಲು ಹೇಳಿ ಇಟ್ಟುಕೊಳ್ಳಲು ಕೊಟ್ಟಿರುವ ವಸ್ತು

ಥವಯ. ಪು: [ಸ್ತಬಕ] ಹೂವು ಇತ್ಯಾದಿಗಳ ಗುಚ್ಛ(ದೇ)

ಥವಿಆ. ಸ್ತ್ರೀ: [ದೇ] ವೀಣಾ ದಂಡದ ಕೆಳಗೆ ಶ್ರಾವ್ಯವಾದ ನಾದ ಹೊರಡಲು ಇಟ್ಟಿರುವ ಸಣ್ಣ ಬುರುಡೆ.

ಥವಿಯ. ವಿ: [ಸ್ಥಾಪಿತ] ಇರಿಸಲ್ಪಟ್ಟ, ಸ್ಥಾಪಿಸಲ್ಪಟ್ಟ

ಥವಿಯ. ವಿ: [ಸ್ತುತ] ಸ್ತುತಿಸಲ್ಪಟ್ಟ, ಪ್ರಶಂಸಿಸಲ್ಪಟ್ಟ (ಸುಪಾ)

ಥವಿರ. ವಿ: [ಸ್ಥವಿರ] ಮುದುಕ, ವೃದ್ಧ

ಥವೀ.(ದೇ). **'ಥವಿಆ' ಶಬ್ದವನ್ನು ನೋಡುವುದು**

ಥಸ}. ವಿ: [ದೇ] ವಿಸ್ತೀರ್ಣವಾದ, ಅಗಲವಾದ,
ಥಸಲ}. ವಿಶಾಲವಾದ(ದೇ)

ಥಹ. ಪು: [ದೇ] ನಿಲಯ, ಆಶ್ರಯ, ಸ್ಥಾನ.

ಥಾ. **'ಠಾ' ಶಬ್ದವನ್ನು ನೋಡುವುದು**

ಥಾಇ. ವಿ: [ಸ್ಥಾಯಿನ್] ಇರುವ, ಉಳಿದಿರುವ. **-ಣೀ.** ಸ್ತ್ರೀ: [-ನೀ] ಪ್ರತಿ ವರ್ಷ ಮರಿ ಹಾಕುವ ಹೆಣ್ಣು ಕುದುರೆ

ಥಾಗತ್ತ. ನ: [ದೇ] ಹಡಗಿನೊಳಕ್ಕೆ ನುಗ್ಗಿರುವ ನೀರು

ಥಾಣ. **'ಠಾಣ' ಶಬ್ದವನ್ನು ನೋಡುವುದು.**

ಥಾಣಯ. ನ: [ಸ್ಥಾನಕ] ಗಿಡದ ಅಥವಾ ಮರದ ಪಾತಿ

ಥಾಣಯ. ನ: [ದೇ] ಕಾವಲು, ಪಹರೆ. ಪು: ಕಾವಲು ಕೆಲಸ ಮಾಡುವವನು, ಕಾವಲುಗಾರ

ಥಾಣೆಜ್ಜ. ವಿ: [ದೇ] ಗೌರವಿಸಲ್ಪಟ್ಟವನು, ಸನ್ಮಾನಿಸಲ್ಪಟ್ಟ (ದೇ)

ಥಾಣೀಯ. ವಿ: [ಸ್ಥಾನೀಯ] ಯಾರದಾದರೂ ಗೈರುಹಾಜರಿಯಲ್ಲಿ ನೇಮಕ ಮಾಡಲ್ಪಟ್ಟ, ಇನ್ನೊಬ್ಬರ ಸ್ಥಾನವನ್ನು ಹಿಡಿದಿರುವ, ಒಂದು ಸ್ಥಾನಕ್ಕೆ ಸಂಬಂಧಿಸಿದ

ಥಾಣು. ಪು: [ಸ್ಥಾಣು] ಶಿವ, ಈಶ್ವರ, ಕೊಂಬೆ, ಎಲೆಗಳಿಲ್ಲದ ಮರ, ಗೂಟ, ಮೊಳೆ. ಕಂಬ, ಸ್ಥಿರವಾಗಿ ಇರುವ

ಥಾಣೇಸರ. ನ: [ಸ್ಥಾನೇಶ್ವರ] ಸಮುದ್ರದ ದಡದಲ್ಲಿರುವ ಒಂದು ನಗರ(ಉಪ)

ಥಾಮ. ವಿ: [ದೇ] ಅಗಲವಾದ, ವಿಸ್ತಾರವಾದ

ಥಾಮ. ನ: [ಸ್ಥಾಮನ್] ಬಲ, ವೀರ್ಯ, ಪರಾಕ್ರಮ, ಪುಂನ: ಪ್ರಾಣ, ವಿ: ಶಕ್ತಿಯುತ(ನಿಚೂ). **-ವ.** ವಿ; [-ವತ್] ಬಲಶಾಲಿ

ಥಾಮ. ನ: [ದೇ. ಸ್ಥಾನ] ಸ್ಥಳ, ಜಾಗ

ಥಾರ. ಪು: [ದೇ] ಮೋಡ(ದೇ)

ಥಾರುಣಯ. ವಿ: [ಥಾರುಕಿನ್] ದೇಶ -ವಿಶೇಷದಲ್ಲಿ ಹುಟ್ಟಿದ, ಸ್ತ್ರೀ: **-ಣಿಯಾ**

ಥಾಲ. ಪುಂನ; [ಸ್ಥಾಲ] ದೊಡ್ಡ ಊಟದ ತಟ್ಟೆ(ದೇ)

ಥಾಲಇ. ವಿ: [**ಸ್ಥಾಲಕಿನ್**] ದೊಡ್ಡ ತಟ್ಟೆಯನ್ನು ಹೊಂದಿರುವ. **ಪು:** ವಾನಪ್ರಸ್ಥದ ಒಂದು ಪ್ರಭೇದ

ಥಾಲಾ. **ಸ್ತ್ರೀ:** [**ದೇ**] ನೀರಿನ ಧಾರೆ(ಷಡ್). ದ್ರವ್ಯಗಳ ಹರಿವು, ಚಾಕು, ಕತ್ತಿ ಇತ್ಯಾದಿಗಳ ಹರಿತವಾದ ಅಲಗು.

ಥಾಲೀ. **ಸ್ತ್ರೀ:** [**ಸ್ಥಾಲೀ**] ಅಡುಗೆಯ ಪಾತ್ರೆ. **–ಪಾಗ.** ವಿ: [**–ಪಾಕ**] ಡಬರಿಯಲ್ಲಿ ಬೇಯಿಸಲಾದ

ಥಾವ. **ಸಕ:** [**ಸ್ಥಾಪಯ್**] ಸ್ಥಿರಗೊಳಿಸು, ಇಡು

ಥಾವಚ್ಚಾ. **ಸ್ತ್ರೀ:** [**ಸ್ಥಾಪತ್ಯಾ**] ದ್ವಾರಕೆಯಲ್ಲಿ ವಾಸಿಸುತ್ತಿದ್ದ ಒಬ್ಬ ಗೃಹಿಣಿ(ಣಾಯಾ), **–ಪುತ್ತ.** **ಪು:** [**–ಪುತ್ರ**] ಕಂಚುಕಿಯ ಮಗನಾದ ಒಬ್ಬ ಜೈನಮುನಿ (ಣಾಯಾ).

ಥಾವಣ. **ನ:** [**ಸ್ಥಾಪನ**] ಇರಿಸುವುದು, ಇನ್ನೊಬ್ಬರಲ್ಲಿ ನ್ಯಾಸವಾಗಿ ಇರಿಸುವುದು.

ಥಾವಚ್ಚಾ. **ಸ್ತ್ರೀ:** [**ಸ್ಥಾಪತ್ಯಾ**] ದ್ವಾರಕೆಯಲ್ಲಿ ವಾಸಿಸುತ್ತಿದ್ದ ಒಬ್ಬ ಗೃಹಿಣಿ, **–ಪುತ್ತ.** **ಪ:** [**ಪುತ್ರ**] ಆಳ ಮಗ, ಒಬ್ಬ ಜೈನಮುನಿ

ಥಾವಯ. **ಪು:** [**ಸ್ಥಾಪಕ**] ತನ್ನ ಪಕ್ಷವನ್ನು ಸಾಧಿಸುವುದಕ್ಕೆ ಕಾರಣಭೂತವಾದದ್ದು(ಠಾ), ಸಂಸ್ಥೆಯ ಸ್ಥಾಪಕ.

ಥಾವರ. ವಿ: [**ಸ್ಥಾವರ**] ಸ್ಥಿರವಾಗಿ ಒಂದೇಕಡೆ ಇರುವ, ಕೇವಲ ಸ್ಪರ್ಶೇಂದ್ರಿಯವನ್ನು ಹೊಂದಿರುವ ನೆಲ, ನೀರುಮತ್ತು ವನಸ್ಪತಿಯಲ್ಲಿಯ ಜೀವ. ಒಬ್ಬ ಆಳಿನ ಹೆಸರು. **–ಕಾಯ.** **ಪು:** [**–ಕಾಯ**] ಒಂದು ಇಂದ್ರಿಯವನ್ನು ಹೊಂದಿರುವ ಜೀವ(ಠಾ). **–ಣಾಮ, –ನಾಮ.** **ನ:** [**–ನಾಮನ್**] ಸ್ಥಾವರತ್ವ ಪ್ರಾಪ್ತವಾಗಲು ಕಾರಣಭೂತವಾದ ಕರ್ಮ –ವಿಶೇಷ(ಪಂಚ)

ಥಾಸಗ. [**ದೇ**] ಗುದ್ದಲಿ

ಥಾಸಗ}. **ಪು:** [**ಸ್ಥಾಸಕ**] ಕನ್ನಡಿ, ದರ್ಪಣ(ವಿಪಾ).

ಥಾಸಯ}. ಕನ್ನಡಿಯ ಆಕಾರದಲ್ಲಿರುವ ಪಾತ್ರೆ(ಔಪ). ಕುದುರೆಯ ಆಭರಣ –ವಿಶೇಷ.

ಥಾಹ. **ಪು:** [**ದೇ**] ಸ್ಥಳ, ಜಾಗ. ವಿ: ಗಂಭೀರ ಜಲವನ್ನು ಹೊಂದಿರುವ, ಅಗಲವಾದ. ಉದ್ದವಾಗಿರುವ.

ಥಾಹ. **ಪು:** [**ಸ್ತಾಘ**] ಕೆರೆ ಬಾವಿ ಮುಂತಾದವುಗಳ ತಳ, ಆಳದ ತಳಭಾಗ

ಥಾಹಿಅ. **ಪು:** [**ದೇ**] ಸ್ವರದ ಆಲಾಪ(ಸುಪಾ)

ಥಿಅ. ವಿ: [**ಸ್ಥಿತ**] ಇರುವ, ನಿಂತಿರುವ(ಭವಿ)

ಥಿಇ. **'ಠಿಇ' ಶಬ್ದವನ್ನು ನೋಡುವುದು.**

ಥಿಂದಿಣೀ. **ಸ್ತ್ರೀ:** [**ಥೇ**] ಛಂದೋ ವಿಶೇಷ

ಥಿಂಪ. **ಅಕ:** [**ತೃಪ್**] ತೃಪ್ತನಾಗು, ಸಂತುಷ್ಟನಾಗು

ಥಿಗ್ಗಲ. **ನ:** [**ದೇ**] ಗೋಡೆಯ ನಡುವೆ ನಿರ್ಮಿಸಿದ ಬಾಗಿಲು, ಹರಿದ ಬಟ್ಟೆಯಲ್ಲಿ ಹರಿದ ಜಾಗದಲ್ಲಿ ಮಾಡಿದ ಹೊಲಿಗೆ; ಹಾಕಿದ ತೇಪೆ(ಪಣ್ಣ). ಬಿದ್ದ ಮೇಲೆ ದುರಸ್ತಿಮಾಡಿದ ಮನೆಯ ಭಾಗ.

ಥಿಜ್ಜ. **'ಥೇಜ್ಜ=ಸ್ಥೈರ್ಯ' ಶಬ್ದವನ್ನು ನೋಡುವುದು**

ಥಿಣ್ಣ. ವಿ: [**ಸ್ತ್ಯಾನ**] ಕಠಿಣ, ದಟ್ಟವಾಗಿರುವಿಕೆ, ಸಾಂದ್ರತೆ, ರಾಶಿಹಾಕಿರುವ, ಒಟ್ಟುಗೂಡಿಸಿರುವ. **'ಥೀಣ' ಶಬ್ದವನ್ನು** ನೋಡುವುದು

ಥಿಣ್ಣ. ವಿ: [**ದೇ**] ಸ್ನೇಹ –ರಹಿತ ದಯೆಯುಳ್ಳವನು, ಅಭಿಮಾನಿ

ಥಿನ್ನ. ವಿ: [**ದೇ**] ಗರ್ವದಿಂದ ಕೂಡಿದ, ಅಭಿಮಾನಿ (ಪಾಅ)

ಥಿಪ್ಪ. **'ಥಿಂಪ'** ಶಬ್ದವನ್ನು ನೋಡುವುದು

ಥಿಪ್ಪ. **ಅಕ:** [**ವಿ+ ಗಲ್**] ಕರಗಿಹೋಗುವುದು

ಥಿಬುಕ. **ಪು:** [**ಸ್ತಿಬುಕ**] ಒಂದು ಬಗೆಯ ಗೆಡ್ಡೆ

ಥಿಮ. **ಸಕ:** [**ಸ್ತಿಮ್**] ಒದ್ದೆಯಾಗಿಸು, ನೆನೆಸು,

ಥಿಮಿಅ. ವಿ: [**ದೇ. ಸ್ತಿಮಿತ**] ಸ್ಥಿರವಾಗಿರುವುದು, ನಿಶ್ಚಲವಾಗಿರುವುದು(ಔಪ), ಮೆಲ್ಲಗೆ, ನಿಧಾನ

ಥಿಮಿಅ. **ಪು:** [**ಸ್ತಿಮಿತ**] ದೊರೆ ಅಂಧಕ ವೃಷಿಯ ಒಬ್ಬ ಮಗನ ಹೆಸರು.

ಥಿಮ್ಮ. **ಸಕ:** [**ಸ್ತಿಮ್**] ಒದ್ದೆಯಾಗಿಸು, ನೆನೆಸು. **ಅಕ:** ಒದ್ದೆಯಾಗು, ನೆನೆ, ತೋಯಿಸಿಕೊಳ್ಳು.

ಥಿರ. ವಿ: [**ಸ್ಥಿರ**] ನಿಶ್ಚಲ, ಅಲುಗಾಡದ, ಕಂಪಿಸದ, ಸಿದ್ಧವಾದ, ಉತ್ಪತ್ತಿಹೊಂದಿದ. **–ಣಾಮ, –ನಾಮ.** **ನ:** [**–ನಾಮನ್**] **ಒಂದು** ಕರ್ಮ –ವಿಶೇಷ, ಇದರ ಉದಯದೊಂದಿಗೆ ಹಲ್ಲು, ಮೂಳೆ, ಮೊದಲಾದ ಅಂಗಗಳು ಸ್ಥಿರಗೊಳ್ಳುತ್ತವೆ(ಕಮ್ಮ). **ಥಿರಾವಲಿಯಾ.** **ಸ್ತ್ರೀ:** [**–ಸ್ಥಿರಾವಲಿಕಾ**] ಸರ್ಪದ ಜಾತಿಗೆ ಸೇರಿದ ಪ್ರಾಣಿ.

ಥಿರಣಾಮ. ವಿ: [**ದೇ**] ಚಂಚಲ ಮನಸ್ಸಿನ

ಥಿರಣ್ಣೇಸ. ವಿ: [**ದೇ**] ಅಸ್ಥಿರ, ಚಂಚಲ(ಷಡ್)

ಥಿರಸೀಸ. ವಿ: [**ದೇ**] ಭಯಪಡದ, ಧೈರ್ಯವಂತ, ಹೆದರದ, ತಲೆಯ ಮೇಲೆ ಶಿರಸ್ತ್ರಾಣ ಧರಿಸಿರುವ, ಅವಲಂಬಿತ

ಥಿರಿಮ. ಪುಂಸ್ತ್ರೀ: [ಸ್ಥೈರ್ಯ] ಸ್ಥಿರತೆ
ಥಿರೀಕರಣ. ನ: [ಸ್ಥಿರೀಕರಣ] ಸ್ಥಿರಗೊಳಿಸುವುದು, ದೃಢಗೊಳಿಸುವುದು, ರಾಶಿಹಾಕುವುದು
ಥಿಲ್ಲ. ಸ್ತ್ರೀ: [ದೇ] ಪ್ರಯಾಣ –ವಿಶೇಷ, ಜೋಡು ಕುದುರೆ ಸಾರೋಟು, ಹೇಸರಗತ್ತೆಯ ಮೇಲೆ ಭಾರ ಹೊರಿಸಿ ಪ್ರಯಾಣಿಸುವುದು
ಥಿವಿಥಿವ. ಅಕ: [ಥಿವಥಿವಾಯ್]. 'ಥಿವಥಿವ' ಎಂದು ಶಬ್ದ ಮಾಡುವುದು.
ಥಿವುಗ}. ಪು: [ಸ್ತಿಬುಕ] ನೀರಿನ ಹನಿ. **–ಸಂಕಮ.** ಪು: [–ಸಂಕಮ] ಕರ್ಮ –ಪ್ರಕೃತಿಗಳು ತಮ್ಮ
ಥಿವುಯ}. ತಮ್ಮಲ್ಲಿ ಸಂಕ್ರಮಣವಾಗುವುದು
ಥೀಹು. ಪುಸ್ತ್ರೀ: ಒಂದು ಗೆಡ್ಡೆ
ಥಿಹು. ಸ್ತ್ರೀ: [ಸ್ತಿಭು] ಒಂದು ವನಸ್ಪತಿ –ವಿಶೇಷ
ಥೀ. ಸ್ತ್ರೀ: [ಸ್ತ್ರೀ] ಹೆಣ್ಣು, ಮಹಿಳೆ, ನಾರಿ(ಕುಮಾ)
ಥೀಣ. 'ಥಿಣ್ಣ' **ಶಬ್ದವನ್ನು ನೋಡುವುದು. –ಗಿದ್ಧಿ.** ಸ್ತ್ರೀ: [–ಗೃದ್ಧಿ] ನಿಕೃಷ್ಟ ನಿದ್ರೆ(ಠಾ). **–ದ್ಧಿ.** ಸ್ತ್ರೀ: [–ರ್ದ್ಧಿ] ಅಧಮ –ನಿದ್ರೆ, **–ದ್ಧಿಯ.** ವಿ: [–ರ್ದ್ಧಿಕ] ಆಲಸ್ಯದನಿದ್ರೆ ಉಳ್ಳವ(ವಿಸೇ)
ಥು. ಅ: ತಿರಸ್ಕಾರ ಸೂಚಕ ಅವ್ಯಯ
ಥುಅ. ವಿ: [ಸ್ತುತ] ಸ್ತುತಿಸಲ್ಪಟ್ಟ, ಪ್ರಶಂಸಿಸಲ್ಪಟ್ಟ,
ಥುಅ. 'ಥುಣ' ಶಬ್ದವನ್ನು ನೋಡುವುದು
ಥುಇ. ಸ್ತ್ರೀ: [ಸ್ತುತಿ] ಹೊಗಳಿಕೆ, ಗುಣ –ಕೀರ್ತನೆ
ಥುಇವಾಯ. ಪು: [ಸ್ತುತಿವಾದ] ಹೊಗಳಿಕೆಯ ಮಾತು
ಥುಕ್ಕ. ಅಕ: [ಥೂತ್+ ಕೃ] ಉಗುಳು, **ಸಕ:** ತಿರಸ್ಕಾರ ತೋರಿಸು, ಅನಾದರದೊಂದಿಗೆ ಥೂತ್ಕರಿಸು.
ಥುಕ್ಕ. ನ: [ಥೂತ್ಕೃತ] ಉಗುಳು, ಕಫ,
ಥುಕ್ಕಾರ. ಸಕ: [ಥೂತ್ಕಾರಯ್] ತಿರಸ್ಕಾರ ಮಾಡು, ಅಗೌರವ ಸೂಚಿಸು(ವುದು)
ಥುಕ್ಕಿಅ. ವಿ: [ದೇ] ಉನ್ನತವಾದ, ಎತ್ತರವಾದ(ದೇ)
ಥುಕ್ಕಿಅ. ವಿ: [ಥೂತ್ಕೃತ] ಉಗುಳಲ್ಪಟ್ಟ
ಥುಡ. ನ: [ದೇ. ಸ್ಥುಡ] ವೃಕ್ಷದ ಹೆಗಲು
ಥುಡಂಕಿಅಯ. ನ: [ದೇ] ರೋಷದಿಂದ ಕೂಡಿದ ಮಾತು
ಥುಡುಂಕಿಅ. ನ: [ದೇ] ಸ್ವಲ್ಪ ಕೋಪಗೊಂಡು ಮುಖ ಸಣ್ಣದು ಮಾಡಿಕೊಳ್ಳುವುದು, ಮೌನ
ಥುಡ್ಡಹೀರ. ನ: [ದೇ] ಚಾಮರ(ದೇ)
ಥುಣ. ಸಕ: [ಸ್ತು] ಸ್ತುತಿಸು, ಹೊಗಳು, ವ.ಕೃ–**ಥೂಣಂತ**
ಥುಣಣ. ನ: [ಸ್ತವನ] ಸ್ತುತಿ, ಪ್ರಶಂಸಿಸುವುದು, ಗುಣವನ್ನು ಹೊಗಳುವುದು(ಸುಪಾ)
ಥುಣಿರ. ವಿ: [ಸ್ತೋತೃ] ಸ್ತುತಿಸುವವನು, ಹೊಗಳುವವನು
ಥುಣ್ಣ. ವಿ: [ದೇ] ಅಹಂಕಾರದಿಂದ ಕೂಡಿದ, ಅಭಿಮಾನಿ, ಹೆಮ್ಮೆ ಉಳ್ಳ
ಥುತ್ತ. ನ: [ಸ್ತೋತ್ರ] ಸ್ತುತಿ, ಹೊಗಳುವುದು, ಶ್ಲಾಘನೆ
ಥುತ್ಥುಕ್ಕಾರಿಯ. ವಿ: [ಥುತ್ಥುಕ್ಕಾರಿತ] ತಿರಸ್ಕೃತ, ಅಪಮಾನಿತ, ಥೂತ್ಕರಿಸಲ್ಪಟ್ಟ(ಭವಿ)
ಥುಥೂಕಾರ. ಪು: [ಥುಥೂತ್ಕಾರ] ತಿರಸ್ಕಾರ
ಥುರುಣುಲ್ಲಣಯ. ನ: [ದೇ] ಹಾಸಿಗೆ, ಶಯ್ಯೆ(ದೇ)
ಥುಲಮ. ಪು: [ದೇ] ವಸ್ತ್ರದಿಂದ ನಿರ್ಮಿಸಿದ ಮನೆ, ಡೇರೆ, ಗುಡಾರ
ಥುಲ್ಲ. ವಿ: [ಸ್ಥೂಲ] ದಪ್ಪನಾಗಿರುವ(ಹೇ)
ಥುಲ್ಲ. ವಿ: [ದೇ] ಬದಲಾದ, ಪರಿವರ್ತಿತವಾದ
ಥುವಅ. ವಿ: [ಸ್ತಾವಕ] ಸ್ತುತಿಸುವವನು, ಹೊಗಳುವವನು
ಥುವಣ. ನ: [ಸ್ತವನ] ಹೊಗಳಿಕೆ, ಸ್ತುತಿ, ಪ್ರಶಂಸೆ
ಥುವ್ವ}. 'ಥುಣ' **ಶಬ್ದವನ್ನು ನೋಡುವುದು.**
ಥುವ್ವಂತ}.
ಥೂ. ಅ: ನಿಂದೆಯನ್ನು ಸೂಚಿಸುವ ಅವ್ಯಯ
ಥೂಣ. ಪು: [ದೇ] ಕುದುರೆ
ಥೂಣ. 'ತೇಣ= ಸ್ತೇನ' **ಶಬ್ದವನ್ನು ನೋಡುವುದು.**
ಥೂಣಾ. ಸ್ತ್ರೀ: [ಸ್ಥೂಣಾ] ಗೂಟ, ಮೊಳೆ, ಕಂಬ
ಥೂಣಾಗ. ಪು: [ಸ್ಥೂಣಾಕ] ಸನ್ನಿವೇಶ –ವಿಶೇಷ, ಒಂದು ಗ್ರಾಮ –ವಿಶೇಷ(ಆವಮ)
ಥೂಥೂ. ಅ: [ದೇ] ತಿರಸ್ಕಾರ ಸೂಚಕ ಅವ್ಯಯ
ಥೂಭ. ಪು: [ಸ್ತೂಪ] ಮಣ್ಣಿನ ದಿಬ್ಬ, ರಾಶಿ, ಬೌದ್ಧ ಸಾಧು ಸಂತರ ಸ್ಮಾರಕ ಸ್ತಂಭ(ವಿಸೇ)
ಥೂಭಿಯಾ}. ಸ್ತ್ರೀ: [ಸ್ತೂಪಿಕಾ] ಸಣ್ಣ ಸ್ತೂಪ(ಓಘ),
ಥೂಭಿಯಾಗ}. ಸಣ್ಣ ಶಿಖರ
ಥೂರೀ. ಸ್ತ್ರೀ: [ದೇ] ನೇಕಾರನ ಒಂದು ಉಪಕರಣ
ಥೂಲ. 'ಥುಲ್ಲ' **ಶಬ್ದವನ್ನು ನೋಡುವುದು. –ಭದ್ದ.** ಪು: [–ಭದ್ರ] ಒಬ್ಬ ಪ್ರಸಿದ್ಧ ಜೈನ ಮಹರ್ಷಿ.
ಥೂಲಘೋಣ. ಪು: [ದೇ] ಹಂದಿ
ಥೂವ}. 'ಥೂಭ' **ಶಬ್ದವನ್ನು ನೋಡುವುದು.**
ಥೂಹ}.
ಥೂಹ. ಪು: [ದೇ] ಉಪ್ಪರಿಗೆಯ ಶಿಖರ, ಚಾತಕ ಪಕ್ಷಿ, ಹುತ್ತ(ದೇ)

ಥೇಅ. ವಿ: [ಸ್ಥೇಯ] ಇರಲು(ವಾಸಿಸಲು) ಯೋಗ್ಯವಾದ, ವಾಸಿಸಬಲ್ಲವನು, ಪು: ನ್ಯಾಯವನ್ನು ನಿರ್ಣಯಿಸುವವನು, ನ್ಯಾಯಾಧೀಶ.

ಥೇಗ. ಪು: [ದೇ] ಒಂದು ವಿಧವಾದ ಗೆಡ್ಡೆ

ಥೆಜ್ಜ. ನ: [ಸ್ಥೈರ್ಯ] ಸ್ಥಿರತೆ(ವಿಸೇ)

ಥೆಜ್ಜ. 'ಥೇಅ' ಶಬ್ದವನ್ನು ನೋಡುವುದು.

ಥೇಣ. ಪು: [ಸ್ತೇನ] ಕಳ್ಳ, ಚೋರ

ಥೇಣಿಲ್ಲಿಅ. ವಿ: [ದೇ] ಅಪಹರಿಸಲ್ಪಟ್ಟ, ಕಸಿದುಕೊಳ್ಳಲ್ಪಟ್ಟ, ಹೆದರಿದ, ಭೀತ

ಥೆಪ್ಪ. 'ಥಿಪ್ಪ' ಶಬ್ದವನ್ನು ನೋಡುವುದು.

ಥೇರ. ವಿ: [ಸ್ಥವಿರ] ಮುದುಕ, ವೃದ್ಧ(ಭಗ) ಜೈನ ಸಾಧು(ಓಘ). –ಕಪ್ಪ. ಪು: [–ಕಲ್ಪ] ಗಚ್ಛದಲ್ಲಿ ಇರುವ ಜೈನ ಮುನಿಗಳ ಆಚಾರ, ಅನುಷ್ಠಾನ, ಆಚಾರ –ವಿಶೇಷವನ್ನು ಪ್ರತಿಪಾದಿಸುವ ಗ್ರಂಥ (ಠಾ). –ಕಪ್ಪಿಯ. ಪು: [–ಕಲ್ಪಿಕ] ಆಚಾರ –ವಿಶೇಷವನ್ನು ಆಶ್ರಯಿಸುವ, ಗಚ್ಛದಲ್ಲಿರುವ ಜೈನ ಮುನಿ(ಪವ). –ಭೂಮಿ. ಸ್ತ್ರೀ: [–ಭೂಮಿ] ಜೈನ ಸಾಧುವಿನ ಪದವಿ. ಥೇರಾವಲಿ. ಪು: [ಸ್ಥವಿರಾವಲಿ] ಜೈನಮುನಿಗಳ ಸಮೂಹ, ಕ್ರಮವಾಗಿ ಜೈನಮುನಿಗಣದ ಗುಣಗಳನ್ನು ಪ್ರತಿಪಾದಿಸುವ ಗ್ರಂಥ(ಣಂದಿ)

ಥೇರ. ಪು: [ದೇ. ಸ್ಥವಿರ] ಬ್ರಹ್ಮ, ವಿಧಾತ(ದೇ, ಪಾಅ)

ಥೇರಾಸಣ. ನ: [ದೇ, ಸ್ಥವಿರಾಸನ] ಪದ್ಮ, ಕಮಲ(ದೇ)

ಥೇರಿಅ. ನ: [ಸ್ಥೈರ್ಯ] ಸ್ಥಿರತೆ(ಕುಮಾ)

ಥೇರಿಯಾ}. ಸ್ತ್ರೀ: [ಸ್ಥವಿರಾ] ಮುದುಕಿ, ವೃದ್ಧೆ, ಜೈನ
ಥೇರೀ}. ಸಾಧ್ವಿ

ಥೇರೋಸಣ. ನ: [ದೇ] ಅಂಬುಜ, ಕಮಲ. ಪದ್ಮ

ಥೇವ. ಪು: [ದೇ] ಬಿಂದು, ಹನಿ

ಥೇವ. 'ಥೋವ' ಶಬ್ದವನ್ನು ನೋಡುವುದು. –ಕಾಲಿಯ. ವಿ: [–ಕಾಲಿಕ] ಅಲ್ಪ ಕಾಲದವರೆಗೆ ಇರುವವನು (ಸುಪಾ)

ಥೇವರಿಅ. ನ: [ದೇ] ಜನ್ಮ ಕಾಲದಲ್ಲಿ(ಹುಟ್ಟುವ ವೇಳೆ) ಬಾರಿಸುವ ವಾದ್ಯ

ಥೋಅ. 'ಥೋವ' ಶಬ್ದವನ್ನು ನೋಡುವುದು.

ಥೋಅ. ಪು: [ದೇ] ಅಗಸ, ಧೋಬಿ, ಮೂಲಂಗಿ ಗೆಡ್ಡೆ(ದೇ)

ಥೋಅವ್ವ}. 'ಥುಣ' ಶಬ್ದವನ್ನು ನೋಡುವುದು.
ಥೋಊಣ}.

ಥೋಕ}. 'ಥೋವ' ಶಬ್ದವನ್ನು ನೋಡುವುದು.
ಥೊಕ್ಕ}.
ಥೋಗ}.

ಥೋಡೇರುಯ. 'ಥಾಡೇರುಯ' ಶಬ್ದವನ್ನು ನೋಡುವುದು.

ಥೋಣ. 'ಥೂಣ' ಶಬ್ದವನ್ನು ನೋಡುವುದು.

ಥೊತ್ತ. ನ: [ಸ್ತೋತ್ರ] ಸ್ತುತಿ, ಪ್ರಶಂಸೆ, ಹೊಗಳಿಕೆ

ಥೊತ್ತುಂ. 'ಥುಣ' ಶಬ್ದವನ್ನು ನೋಡುವುದು.

ಥೋಭ}. ಪು: [ಸ್ತೋಭ, ಕ] 'ಚ', 'ವೈ' ಮೊದಲಾದ
ಥೋಭಯ}. ನಿರರ್ಥಕ ಅವ್ಯಯಗಳ ಪ್ರಯೋಗ.

ಥೋರ. 'ಥುಲ್ಲ' ಶಬ್ದವನ್ನು ನೋಡುವುದು(ಪಉಮ)

ಥೋರ. ವಿ: [ದೇ] ಕ್ರಮವಾಗಿ ಅಗಲವಾಗಿರುವ, ನಂತರ ಗುಂಡಾಗಿರುವ

ಥೋಲ. ಪು: [ದೇ] ಬಟ್ಟೆಗಳ ಒಂದು ದೇಶ

ಥೋವ}. ವಿ: [ಸ್ತೋಕ] ಅಲ್ಪ, ಸ್ವಲ್ಪ, ಪು: ಸಮಯದ
ಥೋವಗ}. ಒಂದು ಅಳತೆ(ಭಗ)

ಥೋಹ. ನ: [ದೇ] ಬಲ, ಪರಾಕ್ರಮ(ದೇ)

ಥೋಹರ. ಪುಂಸ್ತ್ರೀ: [ದೇ] ಕಳ್ಳಿಗಿಡ, ಸ್ತ್ರೀ: –ರೀ

ದ

ದ. ಪು: [ದೇ] 'ತ' ವರ್ಗದ ವ್ಯಂಜನಗಳಲ್ಲಿ ಮೂರನೆಯದು. ದಂತ್ಯ, ಘೋಷ, ಅಲ್ಪ ಪ್ರಾಣ, ಸ್ಪರ್ಶವರ್ಣ

ದಅಚ್ಚರ. ಪು: [ದೇ] ಗ್ರಾಮದ ಒಡೆಯ, ಗ್ರಾಮದ ಅಧಿಪತಿ

ದಅರೀ. ಸ್ತ್ರೀ: [ದೇ] ಸುರೆ, ಮದಿರೆ(ದೇ)

ದಇ. ಸ್ತ್ರೀ: [ದೃತಿ] ಚರ್ಮದ ಪಾತ್ರೆ, ನೀರು ತುಂಬುವ ತೊಗಲಿನ ಚೀಲ(ಓಘ)

ದಇಅ. ವಿ: [ದೇ] ರಕ್ಷಿಸಲ್ಪಟ್ಟ(ದೇ)

ದಇಅ. ಪುಂಸ್ತ್ರೀ: [ದೂತಿಕಾ] ನೀರು ತುಂಬುವ ಚರ್ಮದ ಚೀಲ

ದಇಅ. ವಿ: [ದಯಿತ] ಪ್ರಿಯ, ಪ್ರೇಮಕ್ಕೆ ಪಾತ್ರನಾದವನು. ಇಷ್ಟಪಟ್ಟದ್ದು, ಇಚ್ಛಿಸಿದ್ದು, ವಾಂಛಿತ. **ಪು:** ಗಂಡ. ಪತಿ(ಪಾಅ). **–ಯಮ.** ವಿ: [–ತಮ] ಅತ್ಯಂತ ಪ್ರಿಯನಾದವನು, **ಪು:** ಪತಿ, ಗಂಡ(ಪಉಮ)

ದಇಆ ಸ್ತ್ರೀ: [ದಯಿತಾ] ಪ್ರಿಯೆ, ಪತ್ನಿ(ಮಹಾ)

ದಇಚ್ಚ. ಪು: [ದೈತ್ಯ] ದಾನವ, ರಾಕ್ಷಸ(ಪಾಅ). **–ಗುರು.** ಪು: [–ಗುರು] ಶುಕ್ರಾಚಾರ್ಯ(ಪಾಅ)

ದಇನ್ನ. ನ: [ದೈನ್ಯ] ದೀನತೆ, ಬಡತನ

ದಇವ. ಪುಂನ: [ದೈವ] ಅದೃಷ್ಟ, ಭಾಗ್ಯ, ಪ್ರಾರಬ್ಧ, ಹಿಂದೆ ಮಾಡಿದ ಕರ್ಮ(ಕುಮಾ). **–ಜ್ಜ, –ಣ್ಣು.** ಪು: [–ಜ್ಞ] ಜ್ಯೋತಿಷಿ, ಜ್ಯೋತಿಃಶಾಸ್ತ್ರ ತಿಳಿದವನು. 'ದೇವ=ದೈವ' ಶಬ್ದವನ್ನು ನೋಡುವುದು.

ದಇವಯ. ನ: [ದೈವತ] ದೇವ, ದೇವತೆ(ಪಣ್ಣ)

ದಇವಿಗ. ವಿ: [ದೈವಿಕ] ದೇವಕ್ಕೆ ಸಂಬಂಧಿಸಿದ, ದಿವ್ಯ

ದಇವ್ವ. 'ದಇವ' ಶಬ್ದವನ್ನು ನೋಡುವುದು.

ದಉತ್ತಿ(ಶೌ). ಅ:[ದ್ರಾಗ್] ಬೇಗನೆ, ಶೀಘ್ರವಾಗಿ, ಕೂಡಲೆ

ದಉದರ}. ನ: [ದಕೋದರ] ಹೊಟ್ಟೆಯಲ್ಲಿ ನೀರು
ದಓದರ}. ತುಂಬಿಕೊಳ್ಳುವ ಜಲೋದರ ರೋಗ

ದಓಭಾಸ. ಪು: [ದಕಾವಭಾಸ] ಲವಣ ಸಮುದ್ರದಲ್ಲಿರುವ ವೇಲಂಧರ –ನಾಗರಾಜನು ವಾಸಿಸುವ ಒಂದು ಪರ್ವತ(ಇಕ)

ದಂತಾ. 'ದಾಢಾ' ಶಬ್ದವನ್ನು ನೋಡುವುದು.

ದಂಠಿ. ವಿ: [ದಂಷ್ಟ್ರಿನ್] ದೊಡ್ಡ ಹಲ್ಲುಗಳನ್ನು ಹೊಂದಿರುವ, ಹಿಂಸ್ರ ಪ್ರಾಣಿ

ದಂಡ. ಸಕ: [ದಂಡಯ್] ಶಿಕ್ಷೆ ವಿಧಿಸು, ದಂಡಿಸು

ದಂಡ. ಪು [ದಂಡ] ಜೀವ –ಹಿಂಸೆ, ಪ್ರಾಣನಾಶ, ಅಪರಾಧಿಗೆ ಅವನ ಅಪರಾಧಕ್ಕೆ ತಕ್ಕಂತೆ ಶಾರೀರಿಕವಾದ, ಅಥವಾ ಆರ್ಥಿಕವಾದ ದಂಡ, ಸಜೆಯನ್ನು ವಿಧಿಸುವುದು(ತಾ), ಕೋಲು, ದಂಡ(ಉಪ), ದುಃಖ, ವ್ಯಥೆಯುನ್ನುಂಟು ಮಾಡುವ(ಆಚಾ), ಮನಸ್ಸು, ಮಾತು ಮತ್ತು ಶರೀರದ ಅಶುಭ ವ್ಯಾಪಾರ. ಒಂದು ಛಂದಸ್ಸು. ಒಬ್ಬ ಜೈನ ಉಪಾಸಕನ ಹೆಸರು, **ಪುಂನ:** ಒಂದು ಅಳತೆ, ಬೆರಳಿನ(ಅಂಗುಲದ) ಒಂದು ಅಳತೆ, ಆಜ್ಞೆ, **ಪುಂನ:** ಸೈನ್ಯ(ಪಣ್ಣ), **–ಅಲ.** ಪು: [–ಕಲ] ಒಂದು ಛಂದಸ್ಸು. **–ಜುಜ್ಝ.** ನ: [–ಯುದ್ಧ] ದೊಣ್ಣೆಗಳಿಂದ ಮಾಡುವ ಯುದ್ಧ(ಆಚಾ). **–ಣಾಯಗ.** ಪು: [–ನಾಯಕ] ದಂಡ ವಿಧಿಸುವವನು, ಅಪರಾಧದ ವಿಚಾರಣೆ ನಡೆಸುವವನು. ಸೇನಾನಿ, ಸೇನಾಧಿಪತಿ, **–ಣೀಇ.** ಸ್ತ್ರೀ: [–ನೀತಿ] ನೀತಿ ವಿಶೇಷ, ರಾಜನೀತಿ, **–ಪಹ.** ಪು: [–ಪಥ] ನೇರ ಮಾರ್ಗ(ಸೂಅ). **–ಪಾಸಿ.** ಪು: [–ಪಾರ್ಶ್ವಿನ್, –ಪಾಶಿನ್] ದಂಡ ವಿಧಿಸುವವನು, ಕೊತವಾಲ. **–ಪುಂಛಣಯ.** ನ: [–ಪ್ರೋಂಛನಕ] ಕೋಲಿನ ಆಕಾರದಲ್ಲಿರುವ ಪೊರಕೆ. **–ಭೀ.** ವಿ: [–ಭೀ] ದಂಡಕ್ಕೆ ಹೆದರುವವನು. **–ಲತ್ತಿಯ.** ವಿ: [–ಲಾತ] ಶಿಕ್ಷೆಗೆ ಒಳಗಾಗುವವನು. **–ವಇ.** ಪು: [–ಪತಿ] ಸೇನಾಧಿಪತಿ, ಸೇನಾನಿ. **–ವಾಸಿಗ, –ವಾಸಿಯ.** ಪು: [ದಂಡಪಾಶಿಕ] ಕೊತವಾಲ, ನಗರ – ರಕ್ಷಕ(ಉಪ). **–ವೀರಿಯ.** ಪು: [–ವೀರ್ಯ] ಆದರ್ಶ–ಗೃಹದಲ್ಲಿ ಕೇವಲ ಜ್ಞಾನ ಪ್ರಾಪ್ತಿಯಾಗಿದ್ದ ದೊರೆ, ಭರತನ ವಂಶದ ಒಬ್ಬ ರಾಜ. **–ರಾಸ.** ಪು: [–ರಾಸ] ಒಂದು ಬಗೆಯ ದೋಣಿ.

ದಂಡಾಇಯ. ವಿ: [ದಂಡಾಯತಿಕ] ಕಾಲನ್ನು ದೊಣ್ಣೆಯ ಹಾಗೆ ಉದ್ದಕ್ಕೆ ವಿಸ್ತರಿಸಬಲ್ಲವನು

(ಔಪ). **ದಂಡಾರಕ್ಖಿಗ.** ಪು: [ದಂಡಾರಕ್ಷಿಕ] ದಂಡವನ್ನು ಹಿಡಿದಿರುವ ಪ್ರತೀಹಾರಿ; ಬಾಗಿಲು ಕಾಯುವವನು. **ದಂಡಾರಣ್ಣ.** ನ: [ದಂಡಾರಣ್ಯ] ದಕ್ಷಿಣ ಭಾರತದ ಪ್ರಸಿದ್ಧವಾದ ದಂಡಕಾರಣ್ಯ (ಪಉಮ). **ದಂಡಾಸಣಿಯ.** ವಿ: [ದಂಡಾಸನಿಕ] ದಂಡದ ಹಾಗೆ ಕಾಲನ್ನು ಚಾಚಿಕೊಂಡು ಕುಳಿತುಕೊಳ್ಳಬಲ್ಲವನು(ಕಸ). **'ದಂಡಗ' ಶಬ್ದವನ್ನು ನೋಡುವುದು.**

ದಂಡಗ}. ಪು: [ದಂಡಕ] ಕರ್ಣ –ಕುಂಡಲ ನಗರದ

ದಂಡಯ}. ಒಬ್ಬ ರಾಜ. ದಂಡಾಕಾರದ ವಾಕ್ಯ –ಪದ್ಧತಿ. ೨೬ಕ್ಕಿಂತ ಅಧಿಕಾಕ್ಷರ ಪದಗಳುಳ್ಳ ಒಂದು ಛಂದಸ್ಸು. ಭವನ–ಪತಿಯೇ ಮೊದಲಾದ ೨೪ ದಂಡಕಗಳು, ಪದ –ವಿಶೇಷ. ದಕ್ಷಿಣ ಭಾರತದ ಪ್ರಸಿದ್ಧವಾದ ದಂಡಕಾರಣ್ಯ. **–ಗಿರಿ.** ಪು: [–ಗಿರಿ] ಪರ್ವತ –ವಿಶೇಷ (ಪಉಮ). **'ದಂಡ'** ಶಬ್ದವನ್ನು ನೋಡುವುದು(ಪಉಮ).

ದಂಡಣ. ನ: [ದಂಡನ] ಶಿಕ್ಷೆ, ದಂಡಿಸುವುದು

ದಂಡಪಾಸಿಗ. ಪು: [ದಾಂಡಪಾಶಿಕ] ಕೊತವಾಲ, ನಗರ ರಕ್ಷಕ

ದಂಡಲಇ ವಿ: [ದಂಡಲಾತಿಕ] ಶಿಕ್ಷೆಯನ್ನು ಪಡೆಯುವವನು, ಶಿಕ್ಷಿಸಲ್ಪಡುವವನು

ದಂಡಾವಣ. ನ: [ದಂಡನ] ಸಜೆ ವಿಧಿಸುವುದು, ಶಿಕ್ಷೆ ವಿಧಿಸುವುದು

ದಂಡಾವಿಅ. ವಿ: [ದಂಡಿತ] ದಂಡಕ್ಕೆ ಗುರಿಯಾದವನು, ಶಿಕ್ಷೆಗೆ ಒಳಗಾದವನು(ಓಘ)

ದಂಡಿ. ವಿ: [ದಂಡಿನ್] ದಂಡ ಹೊಂದಿರುವವನು, ದಂಡ ಹಿಡಿದ ದ್ವಾರಪಾಲಕ(ಕುಮಾ), ಪ್ರಸಿದ್ಧ ಸಂಸ್ಕೃತ ಕವಿ.

ದಂಡಿ – 'ದಂಡೀ' ಶಬ್ದವನ್ನು ನೋಡುವುದು.

ದಂಡಿಅ. ಪು: [ದಂಡಿಕ] ಸಾಮಂತ ರಾಜ, ರಾಜವಂಶದಿಂದ ಬಂದಿರುವ ವ್ಯಕ್ತಿ, ನಗರ ರಕ್ಷಕ.

ದಂಡಿಅ. ವಿ: [ದಂಡಿತ] ದಂಡಕ್ಕೆ ಗುರಿಯಾದವನು, ಶಿಕ್ಷೆಗೆ ಒಳಗಾದವನು, ಕೈದಿ

ದಂಡಿಅ. ವಿ: [ದಂಡಿಕ] ದಂಡ ಹಿಡಿದವನು, **ಪು:** ದೊರೆ. ದಂಡ ವಿಧಿಸುವವನು, ಅಪರಾಧದ ವಿಚಾರಣೆ ಮಾಡುವವನು(ವವ). **– ಡಿಆ.** ಸ್ತ್ರೀ: [ದೇ] ಬರಹದ ಮೇಲೆ ಹಾಕುತ್ತಿದ್ದ ರಾಜಮುದ್ರೆ

ದಂಡಿಕ್ಕಿಅ. ವಿ: [ದೇ] ಅಪಮಾನಿತ, ಅವಮಾನಿಸಲ್ಪಟ್ಟವನು (ಉಪ)

ದಂಡಿಣೀ. ಸ್ತ್ರೀ: [ದೇ. ದಂಡಿನೀ] ರಾಜನ ಪತ್ನಿ

ದಂಡಿಮ. ವಿ: [ದಂಡಿಮ] ದಂಡದಿಂದ ಕೊನೆಗೊಂಡ, ನ: ದಂಡ ವಿಧಿಸಿ ವಸೂಲು ಮಾಡಿದ ಹಣ

ದಂಡೀ. ಸ್ತ್ರೀ: [ದೇ] ಬಂಗಾರದ ಎಳೆ, ಸೇರಿಸಿ ಹೊಲಿದ ಒಂದು ಜೋಡಿ ಬಟ್ಟೆ(ಪಣ), ಹೊಲಿದ ಹರಿದ ಹಳೆಯ ಬಟ್ಟೆ

ದಂತ. ವಿ: [ದದತ್] ದಾನ ಮಾಡುವವನು, ದಾನಿ

ದಂತ. ಪು: [ದಾಂತ] ಮಲ್ಲಿಗೆಯ ಹೂವು, ಎರಡು ಉಪವಾಸ.

ದಂತ. ಪು: [ದೇ] ಪರ್ವತದ ಒಂದು ದೇಶ

ದಂತ. ವಿ: [ದಾಂತ] ದಮನ ಮಾಡಲ್ಪಟ್ಟದ್ದು. ಹತೋಟಿಗೆ ತಂದುಕೊಂಡದ್ದು, ಜಿತೇಂದ್ರಿಯ (ಣಾಯಾ)

ದಂತ. ಪು: [ದಂತ] ಹಲ್ಲು, ದಂತ. **–ಕುಡೀ.** ಸ್ತ್ರೀ: [–ಕುಟೀ] ದವಡೆ(ತಂದು). **–ಚ್ಛಅ.** ಪು: [–ಚ್ಛದ] ತುಟಿ. **–ಧಾವಣ.** ನ: [–ಧಾವನ] ಹಲ್ಲನ್ನು ಉಜ್ಜಿ ತೊಳೆಯುವುದು, ಹಲ್ಲನ್ನು ಉಜ್ಜುವ ಕಡ್ಡಿ, ದಂತಮಂಜನ ಕಡ್ಡಿ(ನಿಚೂ). **–ಪಕ್ಖಾಲಣ.** ನ: [–ಪ್ರಕ್ಷಾಲನ] ಹಿಂದೆ ಹೇಳಿದ ಅದೇ ಅರ್ಥ. (ಸೂಅ). **–ಪಾಯ.** ನ: [–ಪಾತ್ರ] ದಂತದಿಂದ ಮಾಡಿದ ಪಾತ್ರೆ. **–ಪುರ.** ನ: [–ಪುರ]ಒಂದು ನಗರ –ವಿಶೇಷ. **–ಪಹೋಯಣ.** ನ: [–ಪ್ರಧಾವನ] 'ಧಾವಣ' **ಶಬ್ದವನ್ನು ನೋಡುವುದು. –ಮಾಲ.** ಪು: [–ಮಾಲ] ಒಂದು ಬಗೆಯ ಮರ. **–ವಕ್ಕ.** ಪು: [–ವಕ್ರ] ದಂತಪುರ ನಗರದ ದೊರೆ(ವವ). **–ವಲಹಿಯಾ.** ಸ್ತ್ರೀ: [–ವಲಭಿಕಾ] ಒಂದು ಉದ್ಯಾನ. **–ವಾಣಿಜ್ಜ.** ನ: [–ವಾಣಿಜ್ಯ] ಆನೆಯ ದಂತದ ವ್ಯಾಪಾರ. **ದಂತಾರ.** ಪು: [–ಕಾರ] ದಂತದ ಕೆಲಸ ಮಾಡುವ ಶಿಲ್ಪಿ(ಪಣ್ಣ)

ದಂತಕಾರ. ಪು: [ದಂತಕಾರ] ಹಲ್ಲನ್ನು ತಯಾರಿಸುವ ತಜ್ಞ

ದಂತಕುಂಡೀ. ಸ್ತ್ರೀ: [ದಂತಕುಂಡೀ] ದವಡೆಹಲ್ಲು, ದಾಡೆ

ದಂತವಕ್ಕ. ಪು: [ದಾಂತವಾಕ್ಯ] ಚಕ್ರವರ್ತಿ ರಾಜ

ದಂತವಣ. ನ: [ದೇ, ದಂತಪವನ] ದಂತ –ಶುದ್ಧಿ, ಹಲ್ಲನ್ನು ಉಜ್ಜುವ ಕಡ್ಡಿ(ಉವಾ).

ದಂತವಣ್ಣ. ಪಂನ: [ದೇ. ದಂತಪವನ] ಹಲ್ಲುಜ್ಜುವ ಕಡ್ಡಿ

ದಂತಸೋಹಣ. ನ: [ದಂತಶೋಧನ] ದಂತಮಂಜನ ಕಡ್ಡಿ, ಹಲ್ಲುಜ್ಜುವ ಕಡ್ಡಿ.

ದಂತಾಲ. ಪುಂಸ್ತ್ರೀ: [ದೇ] ಹುಲ್ಲು ಕೊಯ್ಯುವ ಉಪಕರಣ, ಕುಡುಗೋಲು(ಸುಪಾ). ಸ್ತ್ರೀ: –ಲೀ.

ದಂತಿ. ಪು: [ದಂತಿನ್] ಆನೆ(ಪಾಅ), ಒಂದುಪರ್ವತ

ದಂತಿಅ. ಪು: [ದೇ] ಮೊಲ(ದೇ)

ದಂತಿಂದಿಅ. ವಿ: [ದಾಂತೇಂದ್ರಿಯ] ಜಿತೇಂದ್ರಿಯ, ಇಂದ್ರಿಯ –ನಿಗ್ರಹಿ(ಓಘ).

ದಂತಿಕ್ಕ. ನ: [ದೇ] ಅಕ್ಕಿ ಹಿಟ್ಟು(ಬೃಹ)

ದಂತಿಕ್ಕಗ. ನ: [ದೇ] ಮಾಂಸ

ದಂತಿಯಾ. ಸ್ತ್ರೀ: [ದಂತಿಕಾ] ಶತಾವರಿ ಗಿಡ, ಜಾಪಾಳದ ಗಿಡ

ದಂತೀ. ಸ್ತ್ರೀ: [ದಂತೀ] ಹೆಸರಾಂತ ಗಿಡ, ಜಾಪಾಳದ ಗಿಡ

ದಂತುಕ್ಖಲಿಯ. ಪು: [ದಂತೋಲೂಖಲಿಕ] ಹಲ್ಲಿನಿಂದಲೇ ಬತ್ತದ ಸಿಪ್ಪೆ ತೆಗೆದು ಅಕ್ಕಿ ತಿನ್ನುವ ತಾಪಸರು

ದಂತುರ. ವಿ: [ದಂತುರ] ಉಬ್ಬಿದ ಹಲ್ಲುಗಳುಳ್ಳ, ಹಳ್ಳ ತಿಟ್ಟುಗಳಿಂದ ಕೂಡಿದ(ಸಮತಟ್ಟಲ್ಲದ) ಪ್ರದೇಶ, ಮುಂದೆ ಬಂದಿರುವ.

ದಂತುರಿಯ. ವಿ: [ದಂತುರಿತ] **ಮೇಲಿನ ಶಬ್ದವನ್ನು ನೋಡುವುದು.**

ದಂದ. ಪು: [ದ್ವಂದ್ವ] ವ್ಯಾಕರಣದಲ್ಲಿ ಪ್ರಸಿದ್ಧವಾದ ಉಭಯ –ಪದ ಪ್ರಧಾನ ದ್ವಂದ್ವ ಸಮಾಸ. ನ: ಪರಸ್ಪರ ವಿರುದ್ಧವಾದ ಶೀತ –ಉಷ್ಣ, ಸುಖ –ದುಃಖಗಳ ಜೋಡಿ, ಕಲಹ, ಕ್ಲೇಶ, ಯುದ್ಧ (ಸುಪಾ)

ದಂಪಇ. ಪುಂಬ. [ದಂಪತಿ] ದಂಪತಿ, ಗಂಡ –ಹೆಂಡತಿಯ ಜೋಡಿ

ದಂಭ. ಪು: [ದಂಭ] ಮೋಸ, ಕಪಟ, ವಂಚನೆ, ಗರ್ವ, ಒಂದು ಛಂದಸ್ಸು

ದಂಭಗ. ವಿ: [ದಂಭಕ] ವಂಚಕ, ಮೋಸಗಾರ

ದಂಭೋಲಿ. ಪು: [ದಂಭೋಲಿ] ವಜ್ರ.

ದಂಸ. ಸಕ: [ದರ್ಶಯ್] ತೋರಿಸು, ತಿಳಿಯ ಹೇಳು. ವ.ಕೃ: ದಂಸಂತ

ದಂಸ. ಪು: [ದಂಶ್] ಹಲ್ಲಿನಿಂದ ಕಚ್ಚು

ದಂಸ. ಪು: [ದಂಶ] ದೊಡ್ಡ ಸೊಳ್ಳೆ, ಸರ್ಪ ಅಥವಾ ಇನ್ನಾವುದಾದರೂ ವಿಷ ಜಂತು ಕಚ್ಚಿ ಆದ ಗಾಯ(ಹೇ)

ದಂಸ. ಪು; [ದರ್ಶ] ಸಂಯಕ್ತ್ವ, ತತ್ತ್ವ –ಶ್ರದ್ಧೆ

ದಂಸಗ. ವಿ: [ದರ್ಶಕ] ತೋರಿಸುವವನು

ದಂಸಣ. ಪುಂನ: [ದರ್ಶನ] ಅವಲೋಕನ, ನೋಡುವುದು, ನಿರೀಕ್ಷಣ. ಕಣ್ಣು, ನೇತ್ರ, ತತ್ತ್ವಶಾಸ್ತ್ರ, ಸಮ್ಯಕ್ತ್ವ, ತತ್ತ್ವ–ಶ್ರದ್ಧೆ, ಸಾಮಾನ್ಯ –ಜ್ಞಾನ, ಮತ. ಧರ್ಮ. **–ಮೋಹ.** ನ: [–**ಮೋಹ**] ತತ್ತ್ವ –ಶ್ರದ್ಧೆಯನ್ನು ಪ್ರತಿಬಂಧಿಸುವ ಕರ್ಮ –ವಿಶೇಷ(ಕಮ್ಮ) **–ಮೋಹಣಿಜ್ಜ.** ನ: [–**ಮೋಹನೀಯ**] ಕರ್ಮ–ವಿಶೇಷ. **ದಂಸಣಾವರಣ.** ನ: [ದರ್ಶನಾವರಣ] ಸಾಮಾನ್ಯ ಜ್ಞಾನವನ್ನು ಆವರಿಸಿರುವ ಕರ್ಮ–ವಿಶೇಷ.

ದಂಸಣಾವರಣಿಜ್ಜ. ನ: [ದರ್ಶನಾವರಣೀಯ] ಹಿಂದೆ ಹೇಳಿದ ಅರ್ಥವೇ. **'ದರಿಸಿಣ'**ಶಬ್ದವನ್ನು ನೋಡುವುದು.

ದಂಸಣ. ನ: [ದಂಶನ] ಹಲ್ಲಿನಿಂದ ಕಚ್ಚುವುದು(ಸೇ)

ದಂಸಣಿ. ವಿ: [ದರ್ಶನಿನ್] ಯಾವುದೇ ಧರ್ಮದ ಅನುಯಾಯಿ. ದಾರ್ಶನಿಕ, ದರ್ಶನ ಶಾಸ್ತ್ರ ತಿಳಿದವನು(ಔಪ),ತತ್ತ್ವ ಶ್ರದ್ಧೆ ಉಳ್ಳವನು.

ದಂಸಣಿಆ. ಸ್ತ್ರೀ: [ದರ್ಶನಿಕಾ] ದರ್ಶನ, ಅವಲೋಕನ, ನೋಡುವುದು(ಔಪ)

ದಂಸಣಿಜ್ಜ}. ವಿ: [ದರ್ಶನಿಯ] ನೋಡಲು

ದಂಸಣೀಅ}. ಅರ್ಹವಾದ(ಸೂಅ)

ದಂಸಾವ. ಸಕ; [ದರ್ಶಯ್] ತೋರಿಸು

ದಂಸಾವಣ. ನ: [ದರ್ಶನ] ತೋರಿಸುವುದು

ದಂಸಾವಿಅ. ವಿ: [ದರ್ಶಿತ] ತೋರಿಸಲಾದ, ತೋರಿಸಲ್ಪಟ್ಟ(ಸುಪಾ)

ದಂಸಿ. ವಿ: [ದರ್ಶಿನ್] ನೋಡುವವನು

ದಂಸಿಅ. ವಿ: [ದರ್ಶಿತ] ತೋರಿಸಲಾದ, ತೋರಿಸಲ್ಪಟ್ಟ (ಪಾಅ)

ದಂಸಿಅ}. **'ದಂಸ=ದರ್ಶಯ್'** ಶಬ್ದವನ್ನು

ದಂಸಿಂತ}. ನೋಡುವುದು.

ದಂಸಿಜ್ಜಂತ}.

ದಂಸಿಯವ್ವ}.

ದಕ್ಕ. ವಿ: [ದಷ್ಟ] ಹಲ್ಲಿನಿಂದ ಕಚ್ಚಲ್ಪಟ್ಟ(ಷಡ್)
ದಕ್ಖ. ಸಕ: [**ದೃಶ್**] ನೋಡು, ಅವಲೋಕಿಸು
ದಕ್ಖ. ಸಕ: [**ದರ್ಶಯ್**] ತೋರಿಸು, ನೋಡಿಸು
ದಕ್ಖ. ವಿ: [ದಕ್ಷ] ನಿಪುಣ, ಚತುರ(ಕಪ್ಪ), ಭೂತಾನಂದ ಎಂಬ ಹೆಸರಿನ ಇಂದ್ರನ ಪದಾತಿ ದಳದ ಮುಖ್ಯಸ್ಥ ದೇವತೆ, ಮುನಿಸುವ್ರತ ಜಿನನ ಒಬ್ಬ ಮೊಮ್ಮಗ (ಪಉಮ)
ದಕ್ಖ-. '**ದಕ್ಖಾ**' ಶಬ್ದವನ್ನು ನೋಡುವುದು.
ದಕ್ಖಜ್ಜ. ಪು: [**ದೇ**] ಹದ್ದು(=ಪಕ್ಷಿ)
ದಕ್ಖಣ. ನ: [**ದರ್ಶನ**] ಅವಲೋಕನ, ನೋಡುವುದು, ವಿ: ನೋಡುವವನು, ನಿರೀಕ್ಷಕ(ಕುಮಾ)
ದಕ್ಖವ. ಸಕ: [**ದರ್ಶಯ್**] ತೋರಿಸು, ತಿಳಿಯ ಹೇಳು
ದಕ್ಖವಿಅ. ವಿ: [**ದರ್ಶಿತ**] ತೋರಿಸಲ್ಪಟ್ಟ, ನೋಡಿಸಲ್ಪಟ್ಟ
ದಕ್ಖಾ. ಸ್ತ್ರೀ: [**ದ್ರಾಕ್ಷಾ**] ದ್ರಾಕ್ಷಿಯ ಬಳ್ಳಿ, ದ್ರಾಕ್ಷಿ ಹಣ್ಣು, (ಸುಪಾ)
ದಕ್ಖಾಯಣೀ. ಸ್ತ್ರೀ: [**ದಾಕ್ಷಾಯಣೀ**] ಗೌರಿ, ಪಾರ್ವತಿ, ಶಿವನಹೆಂಡತಿ
ದಕ್ಖಿಣ. ವಿ: [**ದಕ್ಷಿಣ**] ದಕ್ಷಿಣ ದಿಕ್ಕಿನಲ್ಲಿ ಇರುವ(ಗಉಡ), ನಿಪುಣ, ಚತುರ, ಹಿತಕರ, ಅನುಕೂಲ, ಎಡವಲ್ಲದ, ಬಲಭಾಗ. **-ಪಚ್ಛಿಮಾ. ಸ್ತ್ರೀ:** [-**ಪಶ್ಚಿಮಾ**] ದಕ್ಷಿಣ ಮತ್ತು ಪಶ್ಚಿಮದ ಮಧ್ಯದ ದಿಕ್ಕು; ನೈರುತ್ಯ ಮೂಲೆ, **-ಪುವ್ವಾ. ಸ್ತ್ರೀ:** [-**ಪೂರ್ವಾ**] ಅಗ್ನಿಮೂಲೆ. '**ದಾಹಿಣ**' ಶಬ್ದವನ್ನು ನೋಡುವುದು.
ದಕ್ಖಿಣತ್ತ. ವಿ: [**ದಾಕ್ಷಿಣಾತ್ಯ**] ದಕ್ಷಿಣ ದಿಕ್ಕಿನಲ್ಲಿ ಹುಟ್ಟಿದ, ದಕ್ಷಿಣದಲ್ಲಿರುವ
ದಕ್ಖಿಣಾ. ಸ್ತ್ರೀ: [**ದಕ್ಷಿಣಾ**] ದಕ್ಷಿಣ ದಿಕ್ಕು, ದಕ್ಷಿಣ ದೇಶ, ಧರ್ಮ-ಕರ್ಮದ ದಾನ, ಕಾಣಿಕೆ(ಸೂಅ). **-ಕಂಖಿ.** ವಿ: [-**ಕಾಂಕ್ಷಿನ್**] ದಕ್ಷಿಣೆ ತೆಗೆದುಕೊಳ್ಳುವ ಅಪೇಕ್ಷೆ ಉಳ್ಳವನು(ಪಉಮ). **-ಯಣ. ನ:** [-**ಯನ**] ಸೂರ್ಯನು ದಕ್ಷಿಣ ದಿಕ್ಕಿನಲ್ಲಿ ಸಂಚರಿಸುವುದು; ಕರ್ಕಾಟಕ ಸಂಕ್ರಾಂತಿಯಿಂದ ಧನ ಸಂಕ್ರಾಂತಿಯ ಆರು ತಿಂಗಳು. **-ವವ, -ವಹ. ಪು:** [-**ಪಥ**] ದಕ್ಷಿಣ ದೇಶ(ಕಪ್ಪೂ)
ದಕ್ಖಿಣಾಪುವ್ವ. '**ದಕ್ಖಿಣ-ಪುವ್ವ**' ಶಬ್ದವನ್ನು ನೋಡುವುದು.
ದಕ್ಖಿಣಿಲ್ಲ. ವಿ: [**ದಾಕ್ಷಿಣಾತ್ಯ**] ದಕ್ಷಿಣ ದಿಕ್ಕಿನಲ್ಲಿ ಹುಟ್ಟಿದ, ದಕ್ಷಿಣದಲ್ಲಿರುವ
ದಕ್ಖಿಣೇಯ. ವಿ: [**ದಾಕ್ಷಿಣೇಯ**] ಯಾರಿಗೆ ದಕ್ಷಿಣೆ ನೀಡಲಾಗುತ್ತದೋ ಅವನು(ವಿಸೇ)
ದಕ್ಖಿಣ್ಣ.}. **ನ:** [**ದಾಕ್ಷಿಣ್ಯ**] ದಾಕ್ಷಿಣ್ಯ, ಸಂಕೋಚ, ಸೌಜನ್ಯ
ದಕ್ಖಿನ್ನ}. ಔದಾರ್ಯ, ಸರಳತೆ, ಮೃದುತ್ವ, ಅನುಕೂಲತೆ
ದಕ್ಖಿಯ. ವಿ: [**ದರ್ಶಿತ**] ತೋರಿಸಲಾದ, ತೋರಿಸಲ್ಪಟ್ಟ (ಭವಿ)
ದಕ್ಖು. '**ದಕ್ಖ=ದಕ್ಷ**' ಶಬ್ದವನ್ನು ನೋಡುವುದು.
ದಕ್ಖು. '**ದಕ್ಖ=ದೃಶ್**' ಶಬ್ದವನ್ನು ನೋಡುವುದು.
ದಕ್ಖು. ವಿ: [**ಪಶ್ಯ, ದ್ರಷ್ಟ**] ನೋಡುವವನು, **ಪು:** ಸರ್ವಜ್ಞ, ಜಿನ -ದೇವ(ಸೂಅ)
ದಗ. ನ: [**ದಕ**] ನೀರು, ಜಲ, **ಪು:** ಗ್ರಹ -ವಿಶೇಷ, ಗ್ರಹದ ಅಧಿಷ್ಠಾಯಕ ದೇವ(ತಾ)ಲವಣ ಸಮುದ್ರದಲ್ಲಿ ಇರುವ ಒಂದು ವಾಸಸ್ಥಾನವಾದ ಪರ್ವತ. **-ಗಬ್ಭ.ಪು:** [-**ಗರ್ಭ**] ಮೋಡ, **-ತುಂಡ. ಪು:** [-**ತುಂಡ**] ಪಕ್ಷಿ -ವಿಶೇಷ **-ಪಂಚವನ್ನ. ಪು:** [-**ಪಂಚವರ್ಣ**] ಜ್ಯೋತಿಷ್ಕ ದೇವ, ಒಂದು ಗ್ರಹದ ಹೆಸರು. **-ಪಾಸಾಯ. ಪು:** [-**ಪ್ರಾಸಾದ**] ಸ್ಫಟಿಕ ರತ್ನದಿಂದ ಮಾಡಿದ ಉಪ್ಪರಿಗೆ ಮನೆ. **-ಪಿಪ್ಪಲೀ. ಸ್ತ್ರೀ:** [-**ಪಿಪ್ಪಲೀ**] ಒಂದು ವನಸ್ಪತಿ -ವಿಶೇಷ(ಪಣ್ಣ). **-ಭಾಸ. ಪು:** [-**ಭಾಸ**] ವೇಲಂಧರ ನಾಗರಾಜನು ವಾಸಿಸುವ ಪರ್ವತ. **-ಮಂಚಗ. ಪು:** [-**ಮಂಚಕ**] ಸ್ಫಟಿಕ ರತ್ನದ ಮಂಚ. **-ಮಂಡವ. ಪು:** [-**ಮಂಡಪ**] ನೀರು ತೊಟ್ಟಿಕ್ಕುವ ಮಂಡಪ; ಚಪ್ಪರ(ಪಣ್ಣ). ಸ್ಫಟಿಕ ರತ್ನದಿಂದ ಮಾಡಿದ ಮಂಟಪ. **-ಮಟ್ಟಿಯಾ, ಮಟ್ಟೀ. ಸ್ತ್ರೀ:** [-**ಮೃತ್ತಿಕಾ**] ನೀರಿರುವ ಮಣ್ಣು (ನೀರಮಣ್ಣು) **-ರಕ್ಖಸ. ಪು:** [-**ರಾಕ್ಷಸ**] ನೀರ -ಮನುಷ್ಯನ ಆಕಾರದ ಒಂದು ಪ್ರಾಣಿ -ವಿಶೇಷ. **-ರಯ. ಪುಂನ:** [-**ರಜಸ್**] ನೀರಿನ ಹನಿ. **-ವಣ್ಣ. ಪು:**[-**ವರ್ಣ**] ಜ್ಯೋತಿಷ್ಯದ ಗ್ರಹ -ವಿಶೇಷ. **-ವಾರಗ, -ವಾರಯ. ಪು:** [-**ವಾರಕ**] ನೀರಿನ ಸಣ್ಣ ಗಡಿಗೆ, ಸಣ್ಣ ಕೊಡ(ರಾಯ). **-ಸೀಮ. ಪು:** [-**ಸೀಮನ್**] ವೇಲಂಧರ ನಾಗರಾಜನು ವಾಸಿಸುವ ಒಂದು ಪರ್ವತ.
ದಗ. ನ: [**ದಕ**] ಸ್ಫಟಿಕ ರತ್ನ, **-ಸೋಯರಿಅ.** ವಿ: [-**ಶೌಕರಿಕ**]ಸಾಂಖ್ಯ ಮತವನ್ನು ಅನುಸರಿಸುವವನು.
ದಚ್ಚಾ. '**ದಾ**' **ಶಬ್ದವನ್ನು ನೋಡುವುದು.**

ದಚ್ಛ. 'ದಕ್ಖ=ದೃಶ್' ಶಬ್ದವನ್ನು ನೋಡುವುದು(ಉತ್ತ)

ದಚ್ಛ. 'ದಕ್ಖ= ದಕ್ಷ' ಶಬ್ದವನ್ನು ನೋಡುವುದು(ಪಣ್ಣ)

ದಚ್ಛ. ವಿ: [ದೇ] ಹರಿತದ, ತೀಕ್ಷ್ಣ(ದೇ)

ದಜ್ಝಂತ}. 'ದಹ=ದಹ್' ಶಬ್ದವನ್ನು ನೋಡುವುದು.

ದಜ್ಝಮಾಣ}.

ದಟ್ಠ. ವಿ: [ದಷ್ಟ] ಹಲ್ಲಿನಿಂದ ಕಚ್ಚಲ್ಪಟ್ಟವನು(ಷಡ್)

ದಟ್ಠ. ವಿ: [ದೃಷ್ಟ] ನೋಡಲಾದ, ನೋಡಲ್ಪಟ್ಟ

ದಟ್ಠಂತಿಯ. ವಿ: [ದಾರ್ಷ್ಟಾಂತಿಕ] ಯಾವುದರ ಬಗ್ಗೆ ದೃಷ್ಟಾಂತ ನೀಡಲಾಗಿದೆಯೋ ಆ ಅರ್ಥ.

ದಟ್ಠವ್ವ}. 'ದಕ್ಖ=ದೃಶ್' ಶಬ್ದವನ್ನು ನೋಡುವುದು.

ದಟ್ಠು}.

ದಟ್ಠು. ವಿ: [ದ್ರಷ್ಟೃ] ನೋಡುವವನು, ಪ್ರೇಕ್ಷಕ

ದಟ್ಠುಆಣ}. 'ದಕ್ಖ=ದೃಶ್' ಶಬ್ದವನ್ನು ನೋಡುವುದು.

ದಟ್ಠುಂ}.

ದಟ್ಠೂಣ}.

ದಟ್ಠೂಣಂ}.

ದಡವಡ. ಪು: [ದೇ] ಬೆಟ್ಟಗಳ ಇಳಿಜಾರು(ಭವಿ) ಕಂದರ, ಬೇಗನೆ, ಶೀಘ್ರ

ದಡಿ. ಸ್ತ್ರೀ: [ದೇ] ವಾದ್ಯ –ವಿಶೇಷ

ದಡ್ಢ. ವಿ: [ದಗ್ಧ] ಸುಟ್ಟುಹೋದ(ಹೇ)

ದಡ್ಢಾಲಿ. ಸ್ತ್ರೀ: [ದೇ] ದೇವ –ಮಾರ್ಗ(ಷಡ್)

ದಢ. ವಿ: [ದೃಢ] ಬಲವಾದ, ಗಟ್ಟಿಯಾದ, ಕಠಿಣವಾದ (ಔಪ), ನಿಶ್ಚಲ, ಸ್ಥಿರ, ಸಮರ್ಥ(ಸೂಅ), ತುಂಬ ದಟ್ಟವಾದ, ಕ್ರಿ. ವಿ: ಅತಿಶಯವಾದ, ಅಧಿಕ (ಪಂಚಾ) **–ಕೇಉ.** ಪು: [–ಕೇತು] ಐರಾವತ ಕ್ಷೇತ್ರದ ಭಾವೀ ಜಿನನ ಹೆಸರು. **–ಣೇಮಿ.** '–ನೇಮಿ' ಶಬ್ದವನ್ನು ನೋಡುವುದು(ರಾಜ). **–ಧಣು.** ಪು: [–ಧನುಷ್] ಐರಾವತ ಕ್ಷೇತ್ರದ ಒಬ್ಬ ಭಾವೀ ಮುಖಂಡನ ಹೆಸರು, ಭರತ ಕ್ಷೇತ್ರದ ಒಬ್ಬ ಭಾವೀ ಮುಖಂಡನ ಹೆಸರು. **–ಧಮ್ಮ.** ವಿ: [–ಧರ್ಮನ್] ಧರ್ಮದಲ್ಲಿ ದೃಢವಾಗಿ ಇರುವವನು. ಒಬ್ಬ ದೇವನ ಹೆಸರು. **–ಧಿಇಯ.** ವಿ: [–ಧೃತಿಕ] ಅತಿ ಧೈರ್ಯಶಾಲಿ (ಪಉಮ). **–ನೇಮಿ.** ಪು: [–ನೇಮಿ] ಭಗವಾನ್ ನೇಮಿನಾಥನಿಂದ ದೀಕ್ಷೆ ಪಡೆದು ಸಿದ್ಧಾಚಲ ಪರ್ವತದ ಮೇಲೆ ಮುಕ್ತಿ ಪಡೆದಿದ್ದ ರಾಜಾ ಸಮುದ್ರವಿಜಯನ ಒಬ್ಬ ಮಗ. **–ಪಇಣ್ಣ.** ವಿ:[–ಪ್ರತಿಜ್ಞ] ಸ್ಥಿರ ಪ್ರತಿಜ್ಞನಾದ, ದೃಢ ಪ್ರತಿಜ್ಞನಾದ. ಪು: ಸೂರ್ಯಾಭ ದೇವನ ಮುಂದಿನ ಜನ್ಮದಲ್ಲಿಯ ಹೆಸರು. **–ಪ್ಪಹಾರಿ.** ವಿ: [–ಪ್ರಹಾರಿನ್] ಭಾರೀ ಪಹರೆ ನಡೆಸುವವನು. ಪು: ಮೊದಲಿಗೆ ಕಳ್ಳರ ನಾಯಕನಾಗಿದ್ದು ಅನಂತರ ದೀಕ್ಷೆ ತೆಗೆದುಕೊಂಡು ಮುಕ್ತನಾದ ಒಬ್ಬ ಜೈನ ಮುನಿ. **–ಭೂಮಿ.** ಸ್ತ್ರೀ: [–ಭೂಮಿ] ಒಂದು ಊರಿನ ಹೆಸರು. **–ಮೂಢ.** ವಿ: [–ಮೂಢ] ಶಾಶ್ವತ ಮೂರ್ಖ. **–ರಹ.** ಪು: [–ರಥ] ಒಬ್ಬ ಕುಲಶ್ರೇಷ್ಠನ ಹೆಸರು. ಭಗವಾನ್ ಶೀತಲನಾಥನ ತಂದೆಯ ಹೆಸರು. **–ರಹಾ.** ಸ್ತ್ರೀ: [–ರಥಾ] ಲೋಕಪಾಲನೇ ಮೊದಲಾದ ದೇವರುಗಳ ಪಟ್ಟದ ರಾಣಿಯರ ಬಾಹ್ಯ ಪರಿಷತ್ತು. **ದಢಾಉ.** ಪು: [ದೃಢಾಯುಷ್] ಭಗವಾನ್ ಮಹಾವೀರರ ಕಾಲದಲ್ಲಿ ತೀರ್ಥಂಕರ ಎಂಬ ಹೆಸರನ್ನು ಸಂಪಾದಿಸಿದ ಒಬ್ಬ ಮನುಷ್ಯ, ಭರತ ಕ್ಷೇತ್ರದ ಒಬ್ಬ ಭಾವೀ ಮುಖಂಡನ ಹೆಸರು.

ದಢಗಾಲಿ. ಸ್ತ್ರೀ: [ದೇ] ಒಗೆದು ಶುಭ್ರಗೊಳಿಸಿರುವ ವಸ್ತ್ರ. **'ದಾಢಗಾಲಿ'** ಶಬ್ದವನ್ನು ನೋಡುವುದು.

ದಢಿಅ. ವಿ: [ದೃಢಿತ] ದೃಢಪಡಿಸಲಾದ,

ದಣು}. ಪು: [ದನುಜ] ದೈತ್ಯ, ರಾಕ್ಷಸ. –ಇಂದ,

ದಣುಅ}. –ಏಂದ. ಪು: [–ಇಂದ್ರ] ರಾಕ್ಷಸರ ಒಡೆಯ, ಅಧಿಪತಿ(ಗಉಡ). ಲಂಕೇಶ್ವರ ರಾವಣ(ಪಉಮ). **–ವಇ.** ಪು: [–ಪತಿ] **'–ಇಂದ'** ಶಬ್ದವನ್ನು ನೋಡುವುದು.

ದತ್ತ. ವಿ: [ದತ್ತ] ಕೊಡಲ್ಪಟ್ಟ, ದಾನ ಮಾಡಲ್ಪಟ್ಟ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಶ್ರೇಷ್ಠಿ –ಪುತ್ರ(ಉಪ). ಭರತವರ್ಷದ ಒಬ್ಬ ಭಾವೀ ಕುಲಶ್ರೇಷ್ಠ. ನಾಲ್ಕನೇ ಬಲದೇವನ ಹಿಂದಿನ ಜನ್ಮದ ಹೆಸರು. ಭರತ ಕ್ಷೇತ್ರದಲ್ಲಿ ಹುಟ್ಟಿದ ಒಬ್ಬ ಅರ್ಧ ಚಕ್ರವರ್ತಿ ರಾಜ, ಒಬ್ಬ ವಾಸುದೇವ. ಭರತ ಕ್ಷೇತ್ರದಲ್ಲಿ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಿದ ಒಬ್ಬ ಜಿನದೇವ. ಒಬ್ಬ ಜೈನಮುನಿ. ಒಬ್ಬ ದೊರೆ(ವಿಪಾ). ಒಬ್ಬ ಜೈನ ಆಚಾರ್ಯ. ನ: ದನ, ಉತ್ಸರ್ಗ(ಉತ್ತ)

ದತ್ತ. ನ: [ದಾತ್ರ] ಕುಡುಗೋಲು(ದೇ)

ದತ್ತಿ. ಸ್ತ್ರೀ: [ದತ್ತಿ] ಒಂದು ಸಲಕ್ಕೆ ಎಷ್ಟು ದಾನ ಮಾಡಬಹುದೋ ಅದು. ತಡೆಯಿಲ್ಲದೆ ಒಂದು ಸಲಕ್ಕೆ ನೀಡಬಹುದಾದ ಭಿಕ್ಷೆ(ಠಾ)
ದತ್ತಿಯ. ಪುಂಸ್ತ್ರೀ: [ದತ್ತಿಕಾ] ಮೇಲಿನ ಶಬ್ದವನ್ನು ನೋಡುವುದು.
ದತ್ತಿಯ. ಪುಂಸ್ತ್ರೀ: [ದತ್ರಿಕ] ಗಾಳಿ ತುಂಬಿದ ಚರ್ಮ
ದತ್ತಿಯಾ. ಸ್ತ್ರೀ: [ದಾತ್ರಿಕಾ] ಸಣ್ಣ ಕುಡುಗೋಲು, ದಾನ ಕೊಡುವ ಮಹಿಳೆ(ಚಾರು)
ದತ್ಥರ. ಪು: [ದೇ] ಕರವಸ್ತ್ರ(ದೇ)
ದದಂತ. 'ದಾ' ಶಬ್ದವನ್ನು ನೋಡುವುದು.
ದದ್ದರ. ವಿ: [ದೇ. ದರ್ದರ] ಎಣ್ಣೆಯ ಅಥವಾ ತುಪ್ಪದ ಚೀಲಕ್ಕೆ ಕಟ್ಟುವ ಬಟ್ಟೆ, ವಿ: ಬಹಳವಾದ, ಅಧಿಕವಾದ, ಪು: ಅಂಗೈನ ಹೊಡೆತ(ಔಪ), ಹೊಡೆತ, ಏಟು. ಮಾತಿನ ಆಡಂಬರ(ಪಣ್ಣ), ಮೆಟ್ಟಿಲ ಮಾರ್ಗ, ಮೆಟ್ಟಿಲು, ವಾದ್ಯ–ವಿಶೇಷ.
ದದ್ದರಿಯಾ}. ಸ್ತ್ರೀ: [ದೇ. ದರ್ದರಿಕಾ] ಹೊಡೆತ, ಏಟು,
ದದ್ದರಿಗಾ}. ಆಘಾತ(ಣಾಯಾ), ವಾದ್ಯ –ವಿಶೇಷ
ದದ್ದ. ಪು: [ದದ್ರು] ನವೆಯನ್ನುಂಟುಮಾಡುವ ದದ್ದು, ಕ್ಷುದ್ರ ಕುಷ್ಠ ರೋಗ
ದದ್ದುರ. ಪು: [ದರ್ದುರ] ಹೊಡೆತ, ಏಟು, ಕಪ್ಪೆ, ಚರ್ಮದಿಂದ ಕಟ್ಟಲ್ಪಟ್ಟ ಬಾಯಿಯ ಕೊಡ, ಕಲಶ(ಪಣ್ಣ). ದೇವ –ವಿಶೇಷ, ರಾಹು –ಗ್ರಹ ಒಂದು ಪರ್ವತ, ವಾದ್ಯ –ವಿಶೇಷ, ನ: ದರ್ದರ ದೇವನ ಸಿಂಹಾಸನ. –ವಡಿಂಸಯ. ನ: [ದರ್ದುರಾವತಂಸಕ] ಸೌಧರ್ಮ ದೇವಲೋಕದ ಒಂದು ವಿಮಾನ –ವಿಶೇಷ.
ದದ್ದುರೀ. ಸ್ತ್ರೀ: [ದರ್ದುರೀ] ಹೆಣ್ಣು ಕಪ್ಪೆ(ಣಾಯಾ)
ದದ್ದುಲ. ವಿ: [ದದ್ರುಮತ್] ದದ್ದು ರೋಗವುಳ್ಳವನು
ದಧಿ. 'ದಹಿ' ಶಬ್ದವನ್ನು ನೋಡುವುದು.
ದದ್ಧ. 'ದಡ್ಢ' ಶಬ್ದವನ್ನು ನೋಡುವುದು.
ದಪ್ಪ. ಪು: [ದರ್ಪ] ಅಹಂಕಾರ, ಗರ್ವ(ಪ್ರಾಸೂ), ಧಾರ್ಷ್ಟ್ಯ, ಕೆಚ್ಚು, ಧೈರ್ಯ, ಇಷ್ಟವಿಲ್ಲದೆ ಕೆಲಸವನ್ನು ಮಾಡುವುದು(ನಿಚೂ)
ದಪ್ಪಣ. ಪು: [ದರ್ಪಣ] ಕನ್ನಡಿ, ವಿ: ದರ್ಪಕ್ಕೆ ಕಾರಣನಾದವನು(ಪಣ್ಣ)
ದಪ್ಪಣಿಜ್ಜ. ವಿ: [ದರ್ಪಣೀಯ] ಶಕ್ತಿಯನ್ನುಂಟು ಮಾಡುವಂಥದು, ಪುಷ್ಟಿಕಾರಕ(ಔಪ)
ದಪ್ಪಿ. ವಿ: [ದರ್ಪಿನ್] ಗರ್ವಿಷ್ಠ, ಅಹಂಕಾರಿ
ದಪ್ಪಿಅ. ವಿ: [ದರ್ಪಿಕ] ಅಹಂಕಾರದಿಂದ ಉಂಟಾದ
ದಪ್ಪಿಅ. ವಿ: [ದರ್ಪಿತ] ಅಹಂಕಾರವುಂಟಾಗಿರುವ, ಕೊಬ್ಬಿರುವ, ಗರ್ವಿಷ್ಠ
ದಪ್ಪಿಟ್ಠ. ವಿ: [ದರ್ಪಿಷ್ಠ] ಅತ್ಯಂತ ಅಹಂಕಾರಿ(ಸುಪಾ)
ದಪ್ಪುಲ್ಲ. ವಿ: [ದರ್ಪವತ್] ಅಹಂಕಾರದಿಂದ ಕೂಡಿದ
ದಬ್ಭ. ಪು: [ದರ್ಭ] ದರ್ಭೆಹುಲ್ಲು, ಕುಶ. –ಪುಪ್ಫ. ಪು: [ಪುಷ್ಪ] ಒಂದು ಜಾತಿಯ ಹಾವು(ಪಣ್ಣ)
ದಬ್ಭಾಯಣ}. ನ: [ದಾರ್ಭಾಯನ, ದಾರ್ಭ್ಯಾಯನ]
ದಬ್ಭಿಯಾಯಣ}. – ಚಿತ್ರಾ ನಕ್ಷತ್ರದ ಗೋತ್ರ(ಸುಜ್ಜ)
ದಬ್ಭಿಯ. ನ: [ದಾರ್ಭಿಕ] ಗೋತ್ರ –ವಿಶೇಷ.
ದಮ. ಸಕ: [ದಮುಂರ್] ನಿಗ್ರಹಿಸು, ಹತೋಟಿಯಲ್ಲಿಟ್ಟುಕೊಳ್ಳು, ದಮನಮಾಡು
ದಮ. ಪು: [ದಮ] ದಮನ, ನಿಗ್ರಹ, ಇಂದ್ರಿಯ –ನಿಗ್ರಹ, ಹತೋಟಿಯಲ್ಲಿಟ್ಟುಕೊಳ್ಳುವುದು. –ಘೋಸ. ಪು: [–ಘೋಷ] ಚೇದಿ ದೇಶದ ರಾಜನ ಹೆಸರು(ಣಾಯಾ). –ದಂತ. ಪು: [–ದಂತ] ಹಸ್ತಿ –ಶೀರ್ಷಕವೆಂಬ ಹೆಸರಿನ ರಾಜನ ಹೆಸರು(ಉಪ), ಒಬ್ಬ ಜೈನ ಮುನಿ. –ಧರ. ಪು: [–ಧರ] ಒಬ್ಬ ಜೈನ ಮುನಿಯ ಹೆಸರು(ಪಉಮ)
ದಮಗ. 'ದಮಯ' ಶಬ್ದವನ್ನು ನೋಡುವುದು.
ದಮಗ. ವಿ: [ದಮಕ] ದಮನ ಮಾಡುವವನು (ನಿಚೂ)
ದಮಣ. ನ: [ದಮನ] ನಿಗ್ರಹ, ಹತೋಟಿ, ವಶದಲ್ಲಿಟ್ಟುಕೊಳ್ಳುವುದು, ನೋವು, ಬೇನೆ, ಪಶುಗಳಿಗೆ ನೀಡಲಾಗುವ ಶಿಕ್ಷೆ
ದಮಣಕ}. ಪುಂನ: [ದಮನಕ] ಸುವಾಸನೆಯ
ದಮಣಗ}. ಎಲೆಗಳುಳ್ಳ ವನಸ್ಪತಿ –ವಿಶೇಷ(ಪಣ್ಣ),
ದಮಣಯ}. ಒಂದು ಛಂದಸ್ಸು, ಗಂಧ–ದ್ರವ್ಯ–ವಿಶೇಷ
ದಮದಮಾ. ಅಕ: [ದಮದಮಾಯ್] ಆಡಂಬರ ಮಾಡು,
ದಮಯ. ವಿ: [ದೇ. ದ್ರಮಕ] ಬಡವ, ದರಿದ್ರ
ದಮಯಂತೀ. ಸ್ತ್ರೀ: [ದಮಯಂತೀ] ನಳಮಹಾರಾಜನ ಹೆಂಡತಿಯ ಹೆಸರು
ದಮಿ. ವಿ: [ದಮಿನ್] ಜಿತೇಂದ್ರಿಯ(ಉತ್ತ)
ದಮಿಅ. ವಿ: [ದಮಿತ] ಅಡಗಿಸಲ್ಪಟ್ಟ, ನಿಗ್ರಹಿಸಲ್ಪಟ್ಟ(ಗಾ)

ದಮಿಲ. ಪು: [ದ್ರವಿಡ] ಪ್ರಸಿದ್ಧ ದ್ರಾವಿಡ ದೇಶ (ತಮಿಳುನಾಡು), ಪುಂಸ್ತ್ರೀ: ಅದರ ನಿವಾಸಿಗಳು. ಸ್ತ್ರೀ: –ಲೀ.
ದಮೇಯವ್ವ} 'ದಮ=ದಮಯ್' ಶಬ್ದವನ್ನು
ದಮ್ಮ}. ನೋಡುವುದು.
ದಮ್ಮ. ಪು: [ದ್ರಮ್ಮ] ಚಿನ್ನದ ನಾಣ್ಯ(ಉಪ), ಚಿನ್ನದ ಮೊಹರು
ದಯ. ಸಕ: [ದಯ್] ರಕ್ಷಿಸು, ಕರುಣೆ ತೋರು, ಇಷ್ಟಪಡು. ಕೊಡು
ದಯ. ನ: [ದೇ. ದಕ] ನೀರು, ಜಲ(ಬೃಹ), –ಸೀಮ. ಪು: [–ಸೀಮನ್] ಲವಣ ಸಮುದ್ರದಲ್ಲಿರುವ ಒಂದು ವಾಸಸ್ಥಾನವಾದ ಪರ್ವತ.
ದಯ. ನ: [ದೇ] ಶೋಕ, ದುಃಖ(ದೇ)
ದಯ. 'ದವ=ದವ' ಶಬ್ದವನ್ನು ನೋಡುವುದು.
–ದಯ. ವಿ: [–ದಯ] ಕೊಡುವವನು(ಕಪ್ಪ)
ದಯಾ. ಸ್ತ್ರೀ: [ದಯಾ] ಕರುಣೆ, ಅನುಕಂಪೆ, ಕೃಪೆ –ವರ.ವಿ:[–ಪರ]ದಯಾಳು, ಕರುಣಾಳು(ಪಉಮ)
ದಯಾವಣ}. ವಿ: ದೇ] ದೀನ, ದರಿದ್ರ, ಬಡವ(ಭವಿ)
ದಯಾವನ್ನ}.
ದರ. ಸಕ: [ದೃ] ಆದರಿಸು, ಗೌರವಿಸು
ದರ. ಪುಂನ: [ದರ] ಕಂದರ, ಗುಹೆ, ಹಳ್ಳ,
ದರ. ಪುಂನ: [ದರ]ಭಯ,ಹೆದರಿಕೆ,ಅ:ಸ್ವಲ್ಪ,ಅಲ್ಪ.
ದರ. ನ: [ದೇ] ಅರ್ಧ,
ದರಂದರ. ಪು: [ದೇ] ಉಲ್ಲಾಸ(ದೇ)
ದರಮತ್ತಾ. ಸ್ತ್ರೀ: [ದೇ] ಬಲಾತ್ಕಾರ, ಬಲವಂತ
ದರಮಲ. ಸಕ: [ಮರ್ದಯ್] ಮರ್ದಿಸು, ಪುಡಿಮಾಡು, ಸೀಳು, ಹಿಂಸಿಸು, ಹೊಡೆ
ದರಮಲಿಯ. ವಿ: [ಮರ್ದಿತ] ಪುಡಿಮಾಡಲ್ಪಟ್ಟ, ಚೂರ್ಣವಾಡಲ್ಪಟ್ಟ, ಗಾಯಗೊಳಿಸಲ್ಪಟ್ಟ, ಆಘಾತಿಸಲ್ಪಟ್ಟ
ದರವಲಿಯ. ವಿ: [ದೇ] ಉಪಭೋಗಿಸಲ್ಪಟ್ಟ, ಅನುಭವಿಸಲ್ಪಟ್ಟ(ಕುಮಾ)
ದರವಲ್ಲ. ಪು: [ದೇ] ಊರಿನ ಮುಖಂಡ, ಗ್ರಾಮದ ಒಡೆಯ(ದೇ), ಣಿಹೇಲ್ಲಣ. ನ: [ದೇ] ಖಾಲಿ ಮನೆ, –ವಲ್ಲಹ. ಪು: [ದೇ] ಪ್ರಿಯನಾದ, ಇಷ್ಟವಾದ, ಪುಕ್ಕಲ, ಹೆದರಿದ. –ವಿಂದರ. ವಿ: [–ದೇ] ದೀರ್ಘವಾದ, ಉದ್ದವಾದ, ವಿರಳವಾದ

ದರಸ.(ಶೌ). 'ದರಿಸ' ಶಬ್ದವನ್ನು ನೋಡುವುದು.
ದರಿ. ನ: [ದರಿ] ಕಂದರ, ಗುಹೆ
ದರಿ–. 'ದರೀ' ಶಬ್ದವನ್ನು ನೋಡುವುದು. –ಅರ. ಪು: [–ಚರ] ಕಿನ್ನರ(ಕಿಂನರ)
ದರಿಅ. ವಿ: [ದೃಪ್ತ] ಗರ್ವಿಷ್ಠ, ಅಹಂಕಾರಿ
ದರಿಅ. ವಿ: [ದೀರ್ಣ] ಹೆದರಿದ, ಭೀತ, ಸೀಳಲ್ಪಟ್ಟ, ಒಡೆಯಲ್ಪಟ್ಟ
ದರಿಅ(ಅಪ). ಪು: [ದರಿದ್ರ] ಒಂದು ಛಂದಸ್ಸು
ದರಿಆ. ಸ್ತ್ರೀ: [ದರಿಕಾ] ಕಂದರ, ಗುಹೆ,
ದರಿದ್ದ. ವಿ: [ದರಿದ್ರ] ಬಡವ, ಹಣವಿಲ್ಲದವನು, ದರಿದ್ರ
ದರಿದ್ದಿ.} ವಿ: [ದರಿದ್ರಿನ್, –ಕ] ಮೇಲಿನ ಶಬ್ದವನ್ನು
ದರಿದ್ದಿಯ}. ನೋಡುವುದು(ಮಹಾ)
ದರಿದ್ದೀಹೂಂಯ. ವಿ: [ದರಿದ್ರೀಭೂತ] ಬಡವನಾಗಿರುವವನು(ಠಾ)
ದರಿಸ. ಸಕ: [ದರ್ಶಯ್] ತೋರಿಸು, ತಿಳಿಯಪಡಿಸು
ದರಿಸಣ. 'ದಂಸಣ=ದರ್ಶನ' ಶಬ್ದವನ್ನು ನೋಡುವುದು. –ಪುರ. ನ: [–ಪುರ] ನಗರ –ವಿಶೇಷ, –ಆವರಣೀ. ಸ್ತ್ರೀ: [ದರ್ಶನಾವರಣೀ] ಒಂದು ವಿದ್ಯಾ–ವಿಶೇಷ.
ದರಿಸಣಿಜ್ಜ. ನ: [ದರ್ಶನೀಯ] ಸುಂದರವಾದ ಮನೋಹರವಾದ ಆಕಾರ, ರೂಪು. ನೋಡುವುದು
ದರಿಸಣಿಜ್ಜ}. 'ದರಿಸ' ಶಬ್ದವನ್ನು ನೋಡುವುದು.
ದರಿಸನೀಯ}. ನ: ಕಾಣಿಕೆ, ಕೊಡುಗೆ,
ದರಿಸಾವ. 'ದರಿಸ' ಶಬ್ದವನ್ನು ನೋಡುವುದು.
ದರಿಸಾವ. ಪು: [ದರ್ಶನ] ನೋಡುವುದು(ಉಪ)
ದರಿಸಾವಣ. ನ: [ದರ್ಶನ] ಕಣ್ಣಾರೆ ನೋಡುವುದು. ವಿ: ತೋರಿಸುವವನು, ನೋಡಿಸುವವನು(ಭವಿ)
ದರಿಸಿ. ವಿ: [ದರ್ಶಿನ್] ನೋಡುವವನು
ದರಿಸಿಅ. ವಿ: [ದರ್ಶಿತ] ತೋರಿಸಲ್ಪಟ್ಟ, ನೋಡಿಸಲ್ಪಟ್ಟ,
ದರೀ. ಸ್ತ್ರೀ: [ದರೀ] ಗುಹೆ(ಉಪ)
ದರುಮ್ಮಿಲ್ಲ. ವಿ: [ದೇ] ದಟ್ಟ, ನಿಬಿಡ(ದೇ)
ದಲ. ಸಕ: [ದಾ] ಕೊಡು, ದಾನಮಾಡು, ಅರ್ಪಿಸು
ದಲ. ಅಕ: [ದಲ್] ಅರಳು, ವಿಕಸಿಸು, ಒಡೆ, ಎರಡಾಗುವ. ಕೃ –'ದಲಂತ(ಸೇ)
ದಲ. ಸಕ: [ದಲಯ್] ಪುಡಿಮಾಡು, ಚೂರುಚೂರು ಮಾಡು, ಸೀಳು

ದಲ. ನ: [ದಲ] ಸೈನ್ಯ, ಎಲೆ, ಹೂವಿನ ದಳ, ಧನ, ಸಂಪತ್ತು, ಸಮೂಹ, ಗುಂಪು, ಖಂಡ, ಭಾಗ, ಒಂದು ಅಂಶ(ಸೇ)
ದಲಣ. ನ: [ದಲನ] ಬೀಸುವುದು, ಪುಡಿಮಾಡುವುದು, ಸೀಳುವುದು ವಿ: ಪುಡಿಮಾಡುವವನು(ಸುಪಾ)
ದಲಮಾಣ. 'ದಲ=ದಾ' ಶಬ್ದವನ್ನು ನೋಡುವುದು.
ದಲವಾಣ. 'ದಲ=ದಲಂತ್' ಶಬ್ದವನ್ನು ನೋಡುವುದು.
ದಲಮಲ. 'ದರಮಲ' ಶಬ್ದವನ್ನು ನೋಡುವುದು.
ದಲಯ. 'ದಲ=ದಾ' ಶಬ್ದವನ್ನು ನೋಡುವುದು.
ದಲಯ. ಸಕ: [ದಾಪಯ್] ಕೊಡಿಸು
ದಲವಟ್ಟ. 'ದರಮಲ' ಶಬ್ದವನ್ನು ನೋಡುವುದು.
ದಲವಟ್ಟಿಯ. 'ದಲಮಲಿಯ'ಶಬ್ದವನ್ನು ನೋಡುವುದು
ದಲಾವ. ಸಕ: [ದಾಪಯ್] ಕೊಡಿಸು
ದಲಿಅ. ವಿ: [ದಲಿತ] ವಿಕಸಿತ, ಬೀಸಲಾದ, ಹಿಟ್ಟುಮಾಡಲ್ಪಟ್ಟ, ಸೀಳಲ್ಪಟ್ಟ, ತುಂಡುಮಾಡಲ್ಪಟ್ಟ
ದಲಿಅ. ನ: [ದಲಿಕ] ವಸ್ತು, ದ್ರವ್ಯ(ಓಘ)
ದಲಿಅ. ವಿ: [ದೇ] ವಕ್ರ ದೃಷ್ಟಿ ಬೀರಿದವನು, ನ: ಬೆರಳು, ಕಟ್ಟಿಗೆ, ಸೌದೆ(ದೇ)
ದಲಿದ್ದ. 'ದರಿದ್ದ' ಶಬ್ದವನ್ನು ನೋಡುವುದು.
ದಲಿದ್ದಾ. ಅಕ: [ದರಿದ್ರಾ] ಬಡವನಾಗು, ದರಿದ್ರನಾಗು
ದಲಿಲ್ಲ. ವಿ: [ದಲವತ್] ದಳದಿಂದ ಕೂಡಿದ, ದಳವನ್ನು ಹೊಂದಿರುವ
ದಲೇಮಾಣ. 'ದಲ=ದಾ' ಶಬ್ದವನ್ನು ನೋಡುವುದು.
ದವ. ಸಕ: [ದ್ರು] ವೇಗವಾಗಿ ಚಲಿಸು, ಓಡು, ಬಿಟ್ಟುಬಿಡು(ವಿಸೇ)
ದವ. ಪು: [ದವ] ಅರಣ್ಯ, ಕಾಡು, ಅರಣ್ಯಭೂಮಿ, ಕಾಡುಗಿಚ್ಚು, **–ಗ್ಗಿ.** ಪು: [ದವಾಗ್ನಿ] ಕಾಡಿನ ಬೆಂಕಿ
ದವ. ಪು: [ದ್ರವ] ಪರಿಹಾಸ, ತಮಾಷೆ, ನೀರು, ನೀರಿನಂಥ ವಸ್ತು, ಪ್ರವಹಿಸುವ ಸ್ವಭಾವದ ವಸ್ತು, ವೇಗ, ಸಂಯಮ, ವೈರಾಗ್ಯ(ಆಚಾ), **–ಕರ.** ವಿ: [–ಕರ] ಪರಿಹಾಸ ಮಾಡುವವನು, ಹಾಸ್ಯಗಾರ (ಭಗ). **–ಕಾರೀ, –ಗಾರೀ.** ಸ್ತ್ರೀ:[–ಕಾರೀ] ಕಾಮ ಪರಿಹಾಸದ ಮಾತುಗಳನ್ನಾಡಿ ಮನಸ್ಸಂತೋಷ ವುಂಟುಮಾಡುವ ಒಂದು ತೆರನ ದಾಸಿ(ಭಗ)
ದವಣ. ನ: [ದವನ] ವಾಹನ, ಆನೆ, ಕುದುರೆ ಮೊದಲಾದ ಸಂಚರಿಸುವ ವಾಹನಗಳು
ದವಣಯ. 'ದಮಣಯ' ಶಬ್ದವನ್ನು ನೋಡುವುದು.
ದವದವ}. ಅ: [ದ್ರವದ್ರವಂ] ಬೇಗನೆ, ಶೀಘ್ರವೇ,
ದವದವಸ್ಸ}. ಕೂಡಲೇ
ದವದವಾ. ಸ್ತ್ರೀ: [ದ್ರವದ್ರವಾ] ವೇಗದ ನಡಿಗೆ(ಪಉಮ)
ದವರ. ಪು: [ದೇ] ದಾರ, ಸೂತ್ರ, ಹಗ್ಗ
ದವರಿಯಾ. ಸ್ತ್ರೀ: [ದೇ] ಸಣ್ಣ ಹಗ್ಗ
ದವಹುತ್ತ. ನ: [ದೇ] ಗ್ರೀಷ್ಮ ಕಾಲದ ಪ್ರಾರಂಭ, ಬೇಸಿಗೆಯ ಆರಂಭ(ದೇ)
ದವಾವ. ಸಕ: [ದಾಪಯ್] ಕೊಡಿಸು,
ದವಾವಣ. ನ: [ದಾಪನ] ಕೊಡಿಸುವುದು(ನಿಚೂ)
ದವಾವಿಅ. ವಿ: [ದಾಪಿತ] ಕೊಡಿಸಲ್ಪಟ್ಟ (ಸುಪಾ)
ದವಿಅ. ಪುಂನ: [ದ್ರವ್ಯ] ಜೀವವೇ ಮೊದಲಾದ ಮೌಲಿಕ ಪದಾರ್ಥಗಳು, ವಸ್ತು, ಗುಣಾಧಾರ ಪದಾರ್ಥ (ಓಘ), ವಿ: ಭವ್ಯ, ಮುಕ್ತಿಗೆ ಯೋಗ್ಯನಾದವನು. ಸುಂದರ, ಭವ್ಯ, ವೀತರಾಗ, ರಾಗ ದ್ವೇಷವಿಲ್ಲದವನು(ಸೂಅ). **ದವಿಆಣುಓಗ.** ಪು: [ದ್ರವ್ಯಾನುಯೋಗ] ಪದಾರ್ಥ –ವಿಚಾರ, ವಸ್ತು –ಮೀಮಾಂಸೆ. **'ದವ್ವ' ಶಬ್ದವನ್ನು ನೋಡುವುದು.**
ದವಿಅ. ವಿ: [ದ್ರವಿಕ] ಸಂಯಮವುಳ್ಳವನು(ಆಚಾ)
ದವಿಅ. ವಿ: [ದ್ರವಿತ] ದ್ರವದಿಂದ ಕೂಡಿದ, ನೀರಿನಂಥ ವಸ್ತು(ಓಘ).
ದವಿಡ. 'ದವಿಲ' ಶಬ್ದವನ್ನು ನೋಡುವುದು.
ದವಿಡೀ. ಸ್ತ್ರೀ: [ದ್ರಾವಿಡೀ] ಲಿಪಿ–ವಿಶೇಷ
ದವಿಣ. ನ: [ದ್ರವಿಣ] ಹಣ, ಸಂಪತ್ತು(ಪಾಅ)
ದವಿಯ. ನ: [ದ್ರವ್ಯ] ಹುಲ್ಲಿನ ಕಾಡು, ಹುಲ್ಲು ಬೆಳೆಸಲು ಸರ್ಕಾರ ಮೀಸಲಿಟ್ಟ ಭೂಮಿ, ತೃಣ
ದವಿಲ. ಪು: [ದ್ರವಿಡ] ದಕ್ಷಿಣದಲ್ಲಿರುವ ದ್ರಾವಿಡ ದೇಶ [=ಈಗಿನ ತಮಿಳು ನಾಡು), ಅದರ ನಿವಾಸಿಗಳು
ದವ್ವ 'ದವಿಅ=ದ್ರವ್ಯ' ಶಬ್ದವನ್ನು ನೋಡುವುದು (ವಿಸೇ), ಹಣ, ಸಂಪತ್ತು' ಭೂತ ಅಥವಾ ಭವಿಷ್ಯದ ಪದಾರ್ಥಕ್ಕೆ ಕಾರಣವಾದ್ದು(ವಿಸೇ), ಗೌಣ, ಅಮುಖ್ಯ, ಬಾಹ್ಯ, ತಥ್ಯವಲ್ಲದ, **–ಟ್ಠಿಯ.** ಪು: [ದ್ರವ್ಯಾರ್ಥಿಕ, +ದ್ರವ್ಯಸ್ಥಿತ, ದ್ರವ್ಯಾಸ್ತಿಕ] ದ್ರವ್ಯವನ್ನೇ ಪ್ರಧಾನವೆಂದು ಮಾನ್ಯಮಾಡುವ ವರ್ಗ. ನಯ –ವಿಶೇಷ. **–ಲಿಂಗ.** ನ: [–ಲಿಂಗ] ಬಾಹ್ಯ ವೇಷ, **–ಲಿಂಗಿ.** ವಿ: [–ಲಿಂಗಿನ್] ವೇಷಧಾರಿ ಸಂನ್ಯಾಸಿ

(ಗು). -ಲೆಸ್ಸಾ. ಸ್ತ್ರೀ: [-ಲೇಶ್ಯಾ] ಶರೀರವೇ ಮೊದಲಾದ ಪದ್ಗಲ ಸಂಬಂಧಿ ವಸ್ತುವಿನ ಬಣ್ಣ. -ವೇಯ. ಪು: [-ವೇದ] ಪುರುಷನ ಬಾಹ್ಯಾಕಾರ. ದವ್ವಾಯರಿಯ. [ದ್ರವ್ಯಾಚಾರ್ಯ] ಆಚಾರ್ಯನ ಗುಣವಿಲ್ಲದ ಆಚಾರ್ಯ.

ದವ್ವ. ನ: [ದ್ರವ್ಯ] ಯೋಗ್ಯತೆ

ದವ್ವಹಲಿಯಾ. ಸ್ತ್ರೀ: [ದ್ರವ್ಯಹಲಿಕಾ] ಒಂದು ಬಗೆಯ ವನಸ್ಪತಿ.

ದವ್ವಿ-. 'ದವ್ವೀ' ಶಬ್ದವನ್ನು ನೋಡುವುದು.

ದವ್ವಿಂದಿಅ. ನ: [ದ್ರವ್ಯೇಂದ್ರಿಯ] ಸ್ಥೂಲ ಇಂದ್ರಿಯ.

ದವ್ವೀ. ಸ್ತ್ರೀ: [ದರ್ವಿ] ದೊಡ್ಡ ಸೌಟು(ಪಾಅ). ಹಾವಿನ ಹೆಡೆ. -ಅರ, -ಕರ. ಪು: [-ಕರ]ಸರ್ಪ, ಹಾವು.

ದವ್ವೀ. ಸ್ತ್ರೀ: [ದೇ] ಒಂದು ಬಗೆಯ ವನಸ್ಪತಿ

ದಸ. ತ್ರಿ .ಬ [ದಶನ್] ಹತ್ತು. -ಉರ. ನ: [-ಪುರ] ಒಂದು ನಗರ -ವಿಶೇಷ. -ಕಂಠ. ಪು:[-ಕಂಠ] ಲಂಕಾಧಿಪತಿ ರಾವಣ. -ಕಂಧರ. ಪು: [-ಕಂಧರ] ರಾಜಾ ರಾವಣ. -ಕಾಲಯ. ನ: [-ಕಾಲಿಕ] ಒಂದು ಜೈನ ಆಗಮ ಗ್ರಂಥ. -ಗ. ನ: [-ಕ] ಹತ್ತರ ಸಮೂಹ, -ಗುಣ. ವಿ: [-ಗುಣ] ಹತ್ತುಪಟ್ಟು. -ಗುಣಿಅ. ವಿ: [-ಗುಣಿತ] ಹತ್ತುಪಟ್ಟು. -ಗ್ಗೀವ. ಪು:[-ಗ್ರೀವ] ರಾವಣ. ದಸಮಿಯಾ. ಸ್ತ್ರೀ: [-ದಶಮಿಕಾ] ಜೈನ ಸಾಧುವಿನ ಒಂದು ಧಾರ್ಮಿಕ ಅನುಷ್ಠಾನ, ಪ್ರತಿಮಾ -ವಿಶೇಷ. -ದಿವಸಿಯ. ವಿ: [-ದಿವಸಿಕ] ಹತ್ತುದಿನದ(ಣಾಯಾ). -ದ್ಧ. ಪುಂನ: [-ಶಾರ್ಧ] ಐದು. -ಧಣು. ಪು: [-ಧನುಷ್] ಐರಾವತ ಕ್ಷೇತ್ರದ ಒಬ್ಬ ಭಾವಿ ಕುಲಶ್ರೇಷ್ಠ. -ಪಿಏಸಿಸಿಯ. ವಿ: [-ಪ್ರದೇಶಿಕ] ಹತ್ತು ಅವಯುವಗಳನ್ನುಳ್ಳ(ಠಾ). -ಪುರ. '-ಉರ' ಶಬ್ದವನ್ನು ನೋಡುವುದು. -ಪುವ್ವಿ. ವಿ: [-ಪೂರ್ವಿನ್] ಪೂರ್ವದ ಹತ್ತು ಗ್ರಂಥಗಳ ಅಭ್ಯಾಸಿ(ಓಘ). -ಬಲ. ಪು: [-ಬಲ] ಭಗವಾನ್ ಬುದ್ಧ(ಪಾಅ). -ಮ. ವಿ: [-ಮ] ಹತ್ತನೆಯ, ನಾಲ್ಕು ದಿನಗಳ ನಿರಂತರ ಉಪವಾಸ(ಆಚಾ). -ಮಭತ್ತಿಯ. ವಿ: [-ಮಭಕ್ತಿಕ] ಹತ್ತು ದಿನಗಳ ಕಾಲ ನಿರಂತರ ಉಪವಾಸ ಮಾಡುವವನು (ಪಣ್ಣ). -ಮಾಸಿಅ. ವಿ: [-ಮಾಷಿಕ] ಹತ್ತು ಮಾಶೆಗಳ(ಒಂದು ಮಾಷ= ಎಂಟು ಗುಲಗಂಜಿ ತೂಕ) ತೂಕವುಳ್ಳ, ಹತ್ತು ಮಾಶೆಗಳ ಅಳತೆ ಉಳ್ಳ(ಕಪ್ಪೂ). -ಮೀ. ಸ್ತ್ರೀ: [-ಮೀ] ಹತ್ತನೆಯ. ದಶಮಿ ತಿಥಿ. -ಮುದ್ದಿಯಾಣಂತಗ. ನ: [-ಮುದ್ರಿಕಾನಂತಕ] ಹತ್ತು ಕೈ ಬೆರಳುಗಳ ಉಂಗುರಗಳು(ಔಪ). -ಮುಹ. ಪು: [-ಮುಖ] ರಾವಣ. -ಮುಹಸುಅ. ಪು: [-ಮುಖಸುತ] ರಾವಣನ ಪುತ್ರ ಇಂದ್ರಜಿತು ಮುಂತಾದವರು. -ಯ. '-ಗ' ವನ್ನು ನೋಡುವುದು. -ರತ್ತ. ನ: [-ರಾತ್ರ] ಹತ್ತು ರಾತ್ರಿಗಳು. -ರಹ. ಪು: [-ರಥ] ರಾಮಚಂದ್ರನ ತಂದೆಯ ಹೆಸರು(ಪಉಮ) ಹಿಂದಿನ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ್ದ ಒಬ್ಬ ಕುಲಶ್ರೇಷ್ಠ(ಠಾ). -ರಹಸುಯ. ಪು: [-ರಥಸುತ] ದಶರಥನ ಮಕ್ಕಳಾದ ರಾಮ, ಲಕ್ಷ್ಮಣ ಮೊದಲಾದವರು. -ವಅಣ. ಪು: [-ವದನ] ರಾಜಾ ರಾವಣ. -ವಲ. '-ಬಲ' ಶಬ್ದವನ್ನು ನೋಡುವುದು. -ವಿಹ. ವಿ: [-ವಿಧ] ಹತ್ತು ಬಗೆಯ. -ವೇಆಲಿಯ. ನ: [-ವೈಕಾಲಿಕ] ಜೈನ ಆಗಮ-ಗ್ರಂಥ-ವಿಶೇಷ. -ಹಾ. ಅ: [-ಧಾ] ಹತ್ತು ವಿಧದ. -ದಸಾಣಣ. ಪು: [-ದಶಾನನ] ರಾಕ್ಷಸ ರಾಜ ರಾವಣ. -ದಸಾಹಿಯಾ. ಸ್ತ್ರೀ: [-ದಶಾಹಿಕಾ] ಮಗು ಹುಟ್ಟಿದ ಪ್ರಯುಕ್ತ ಮಾಡಲಾಗುವ ಹತ್ತು ದಿನಗಳ ಒಂದು ಉತ್ಸವ(ಕಪ್ಪ)

ದಸಗ. ವಿ: [ದಶಕ] ಹತ್ತು ವರ್ಷ ವಯಸ್ಸಿನ

ದಸಣ. ಪು: [ದಶನ] ಹಲ್ಲು, ದಂತ(ಭಗ) ನ: ಕಚ್ಚುವುದು. -ಚ್ಛಯ. ಪು: [-ಚ್ಛದ]ತುಟಿ

ದಸಣ್ಣ. ಪು: [ದಶಾರ್ಣ] ಒಂದು ದೇಶ(ಉಪ). -ಕೂಡ. ನ: [-ಕೂಟ] ಶಿಖರ -ವಿಶೇಷ (ಆವಮ). -ಪುರ. ನ: [-ಪುರ] ನಗರ-ವಿಶೇಷ(ಠಾ). -ಭದ್ದ. ಪು: [-ಭದ್ರ] ಮಹಾವೀರ ತೀರ್ಥಂಕರನಿಗೆ ಅತಿ ಆಡಂಬರದಿಂದ ನಮಸ್ಕರಿಸಲು ಹೋಗಿದ್ದ ಮತ್ತು ಅವನಿಂದ ದೀಕ್ಷೆ ತೆಗೆದುಕೊಂಡಿದ್ದ ದಶಾರ್ಣಪುರದ ಒಬ್ಬ ವಿಖ್ಯಾತ ದೊರೆ. -ವಇ. ಪು: [-ಪತಿ] ದಶಾರ್ಣದೇಶದ ದೊರೆ.

ದಸತೀಣ. ನ: [ದೇ] ಒಂದು ಬಗೆಯ ಧಾನ್ಯ(ಪಣ್ಣ)

ದಸನ್ನ. 'ದಸಣ್ಣ' ಶಬ್ದವನ್ನು ನೋಡುವುದು.

ದಸಾ. ಸ್ತ್ರೀ: [ದಶಾ] ಸ್ಥಿತಿ, ಪರಿಸ್ಥಿತಿ(ಗಾ) ಒಂದು ನೂರು ವರ್ಷದ ಪ್ರಾಣಿಯು ಹತ್ತು ಹತ್ತು ವರ್ಷದ ಸ್ಥಿತಿ. ಹತ್ತಿ ಅಥವಾ ಉಣ್ಣೆಯ ಚಿಕ್ಕ ಮತ್ತು ತೆಳ್ಳನೆಯ ದಾರ.ನ: ಜೈನ ಆಗಮ ಗ್ರಂಥ –ವಿಶೇಷ.

ದಸಾರ. ಪು: [ದಶಾರ್ಹ] ಸಮುದ್ರವಿಜಯನೇ ಮೊದಲಾದ ಹತ್ತುಜನ ಯಾದವರು, ವಾಸುದೇವ ಕೃಷ್ಣ, ಬಲದೇವ, ವಾಸುದೇವನ ಸಂತತಿ. –ಣೇಉ. ಪು: [–ನೇತೃ] –ನಾಹ. ಪು: [–ನಾಥ] ಶ್ರೀಕೃಷ್ಣ(ಪಾಅ). –ವಇ. ಪು: [–ಪತಿ] ಶ್ರೀಕೃಷ್ಣ.

ದಸಿಯಾ. 'ದಸಾ' ಶಬ್ದವನ್ನು ನೋಡುವುದು(ಸುಪಾ).

ದಸು. ಪು: [ದೇ] ಶೋಕ, ಖಿನ್ನತೆ(ದೇ)

ದಸುತ್ತರಸಯ. ನ: [ದಶೋತ್ತರಶತ] ಒಂದು ನೂರಾ ಹತ್ತು. ವಿ: ಒಂದುನೂರಾ ಹತ್ತನೆಯ.

ದಸೇರ. ಪು: [ದೇ] ಚಿನ್ನದ ದಾರ

ದಸುಯ. ಪು: [ದಸ್ಯು] ಕಳ್ಳ, ಚೋರ

ದಸ್ಸ. 'ದಂಸ=ದರ್ಶಯ್' ಶಬ್ದವನ್ನು ನೋಡುವುದು.

ದಸ್ಸಣ. 'ದಂಸಣ' ಶಬ್ದವನ್ನು ನೋಡುವುದು.

ದಸ್ಸು. ಪು: [ದಸ್ಯು] ಕಳ್ಳ, ಚೋರ

ದಹ. ಸಕ: [ದಹ್] ಸುಡು, ದಹಿಸು. ವ. ಕೃ: 'ದಹಂತ'

ದಹ. ಪು: [ದ್ರಹ] ನೀರಿನ ಮಡು, ಆಳವಾದ ಜಲಾಶಯ. ಸರೋವರ. –ಘುಲ್ಲಿಯಾ. ಸ್ತ್ರೀ: [–ಘುಲ್ಲಿಕಾ] ಒಂದು ಬಗೆಯ ಬಳ್ಳಿ(ಪಣ್ಣ). –ವಈ, ದಹಾವಈ. ಸ್ತ್ರೀ:[–ವತೀ] ಒಂದು ನದಿ(ಠಾ)

ದಹ. 'ದಸ' ಶಬ್ದವನ್ನು ನೋಡುವುದು.

ದಹಣ. ನ: [ದಹನ] ಸುಡುವುದು, ದಹಿಸುವುದು, ಪು: ಬೆಂಕಿ, ಟಗ್ನಿ(ಪಣ್ಣ).

ದಹಣೀ. ಸ್ತ್ರೀ: [ದಹನೀ] ವಿದ್ಯಾ –ವಿಶೇಷ.

ದಹಬೊಲ್ಲೀ. ಸ್ತ್ರೀ: [ದೇ] ಅಡಿಗೆಯ ಪಾತ್ರೆ

ದಹಾವಣ. ವಿ: [ದಾಹಕ] ಸುಡುವ, ದಹಿಸುವ, ಬೆಂಕಿ

ದಹಿ. ನ: [ದಧಿ] ಮೊಸರು(ಠಾ). –ಧಣ. ಪು: [–ಧನ] ಮೊಸರಿನ ರಾಶಿ, ಬಹಳವಾಗಿ ಒಟ್ಟುಗೂಡಿಸಿರುವ ಮೊಸರು(ಪಣ್ಣ) –ಮುಹ. ಪು: [–ಮುಖ] ಒಂದು ದ್ವೀಪ ವಿಶೇಷ, ಒಂದು ನಗರ(ಪಉಮ). –ವಣ್ಣ, –ವನ್ನ. ಪು: [–ಪರ್ಣ] ಒಬ್ಬ ದೊರೆ, ಒಂದು ವೃಕ್ಷ. –ವಾಸುಯಾ. ಸ್ತ್ರೀ: [–ವಾಸುಕಾ] ವನಸ್ಪತಿ –ವಿಶೇಷ. –ವಾಹಣ. ಪು: [–ವಾಹನ] ಒಬ್ಬ ನೃಪ. –ಸರ. ಪು: [–ಸರ] ಬೆಣ್ಣೆ(ದೇ)

ದಹಿ. ವಿ: [ದಧಿ] ಮೊಸರು, ನಿರಂತರ ಮೂರು ದಿನಗಳ ವರೆಗಿನ ಉಪವಾಸ.

ದಹಿಉಪ್ಪ. ನ: [ದೇ] ಬೆಣ್ಣೆ(ದೇ)

ದಹಿಟ್ಟ. ಪು: [ದೇ] ಬೇಲದ ಮರ(ದೇ)

ದಹಿಣ. 'ದಾಹಿಣ' ಶಬ್ದವನ್ನು ನೋಡುವುದು.

ದಹಿತ್ಥರ}. ಪು: [ದೇ] ಬೆಣ್ಣೆ

ದಹಿತ್ಥಾರ}.

ದಹಿಮುಹ. ಪು: [ದೇ] ಕಪಿ, ವಾನರ(ದೇ)

ದಹಿಯ. ಪು: [ದೇ] ಒಂದು ಪಕ್ಷಿ–ವಿಶೇಷ.

ದಾ. ಸಕ: [ದಾ] ಕೊಡು, ದಾನ, ಕೊಡುಗೆ, ವ. ಕೃ: ದದಂತ

ದಾ. 'ತಾ=ತಾವತ್' ಶಬ್ದವನ್ನು ನೋಡುವುದು.

ದಾ–. 'ದಗ' ಶಬ್ದವನ್ನು ನೋಡುವುದು. –ಥಾಲಗ. ನ: [–ಸ್ಥಾಲಕ] ನೀರಿನಿಂದ ಒದ್ದೆಯಾದ ತಟ್ಟೆ. –ಕಲಸ. ಪು: [–ಕಲಶ] ನೀರಿನ ಸಣ್ಣ ಕೊಡ. –ಕುಂಭ. ಪು: [–ಕುಂಭ] ನೀರಿನ ಕೊಡ. –ವಾರಗ. ಪು: [–ವಾರಕ] ನೀರಿನ ಪಾತ್ರೆ.

ದಾಅ. 'ದಾವ=ದರ್ಶಯ್' ಶಬ್ದವನ್ನು ನೋಡುವುದು.

ದಾಅ. ಪು: [ದೇ] ಜಾಮೀನುದಾರ, ಹೊಣೆಗಾರ(ದೇ)

ದಾಅ. ಪು: [ದಾಯ] ದಾನ(ಣಾಯಾ)

ದಾಇ. ವಿ: [ದಾಇನ್] ದಾತ್ರ, ಕೊಡುವವನು, ದಾನಿ

ದಾಇಅ. ವಿ: [ದರ್ಶಿತ] ತೋರಿಸಲ್ಪಟ್ಟ(ವಿಸೇ)

ದಾಇಅ. ಪು: [ದಾಇಕ] ದಾಯಾದಿ, ಪಿತ್ರಾರ್ಜಿತ ಆಸ್ತಿಯ ಪಾಲುದಾರ, ಸಮಾನ ಗೋತ್ರದವನು

ದಾಇಜ್ಜಮಾಣ. 'ದಾಅ=ದರ್ಶಯ್' ಶಬ್ದವನ್ನು ನೋಡುವುದು.

ದಾಇಜ್ಜಯ. ನ: [ದೇಯಕ] ಪಾಣಿಗ್ರಹಣ ಕಾಲದಲ್ಲಿ ವಧೂ–ವರರಿಗೆ ನೀಡಲಾಗುವ ದ್ರವ್ಯ

ದಾಉ. ವಿ: [ದಾತೃ] ದಾತ, ಕೊಡುವವನು, ದಾನಿ

ದಾಉಂ. 'ದಾ=ದಾ' ಶಬ್ದವನ್ನು ನೋಡುವುದು.

ದಾಓಯರಿಯ. ವಿ: [ದಾಕೋದರಿಕ] ಜಲೋದರ ರೋಗವುಳ್ಳವನು(ವಿಪಾ)

ದಾಘ. 'ದಾಹ' ಶಬ್ದವನ್ನು ನೋಡುವುದು.

ದಾಡಿಮ. ನ: [ದಾಡಿಮ] ದಾಳಿಂಬೆ ಹಣ್ಣು

ದಾಡಿಮೀ. ಸ್ತ್ರೀ: [ದಾಡಿಮೀ] ದಾಳಿಂಬೆ ಮರ.
ದಾಢಗಾಲಿ. 'ದಢಗಾಲಿ' ಶಬ್ದವನ್ನು ನೋಡುವುದು.
ದಾಢಾ. ಸ್ತ್ರೀ: [ದಂಷ್ಟ್ರಾ] ದವಡೆಯ ಹಲ್ಲು, ಕೋರೆ ಹಲ್ಲು(ಗಉಡ)
ದಾಢಿ. ವಿ: [ದಂಷ್ಟ್ರಿನ್]ದವಡೆಯ ಹಲ್ಲನ್ನು ಹೊಂದಿರುವ, ಪು:ಕ್ರೂರ ಮೃಗ. ಹಂದಿ (ಪಉಮ)
ದಾಢಿಆ. ಸ್ತ್ರೀ: [ದೇ] ಗಡ್ಡ, ಮೀಸೆ
ದಾಢಿಆಲಿ}. ಸ್ತ್ರೀ: [ದಂಷ್ಟ್ರಿಕಾವಲಿ] ದವಡೆಯ ಸಾಲು,
ದಾಢಿಗಾಲಿ}. ವಸ್ತ್ರ-ವಿಶೇಷ(ಬೃಹ)
ದಾಣ. ಪುಂನ: [ದಾನ] ಕೊಡುವುದು, ತ್ಯಾಗ, ದಾನ(ಕಪ್ಪ), ಆನೆಯ ಮದ(ಗಉಡ), ಕೊಟ್ಟದ್ದು. -ವಿರಯ. ಪು: [-ವಿರತ] ಒಬ್ಬ ರಾಜ. -ಸಾಲಾ. ಸ್ತ್ರೀ: [-ಶಾಲಾ] ದಾನಛತ್ರ.
ದಾಣಂತರಾಯ. ನ: [ದಾನಾಂತರಾಯ] ಒಂದು ಬಗೆಯ ಕರ್ಮ -ವಿಶೇಷ; ಇದು ಹುಟ್ಟಿದ ಪರಿಣಾಮವಾಗಿ ದಾನ ಕೊಡುವ ಇಚ್ಛೆ ಉಂಟಾಗುವುದಿಲ್ಲ.
ದಾಣಪಾರಮಿಯಾ. ಸ್ತ್ರೀ: [ದಾನಪಾರಮಿತಾ] ದಾನ, ಸಮರ್ಪಣೆ
ದಾಣವ. ಪು: [ದಾನವ] ದೈತ್ಯ, ರಾಕ್ಷಸ, ಅಸುರ(ಅಚ್ಚು)
ದಾಣವಿಂದ. ಪು: [ದಾನವೇಂದ್ರ] ದೈತ್ಯರ ಒಡೆಯ
ದಾಣಿ. ಸ್ತ್ರೀ: [ದೇ] ಶುಲ್ಕ, ತೆರಿಗೆ(ಸುಪಾ)
ದಾಣಿ}. ಅ: [ಇದಾನೀಮ್] ಈಗ, ಈ
ದಾಣಿಂ}. ಕಾಲದಲ್ಲಿ(ಸ್ವಪ್ನ)
ದಾಣೀಂ}.
ದಾಥ. ವಿ: [ದ್ವಾಃಸ್ಥ] ದ್ವಾರದ ಮೇಲೆ ನಿಂತವನು, ಪು: ಪ್ರತೀಹಾರಿ, ಬಾಗಿಲು ಕಾಯುವವನು, ದ್ವಾರ ಪಾಲಕ. ಆಳು
ದಾದಲಿಆ. ಸ್ತ್ರೀ: [ದೇ] ಬೆರಳು(ದೇ)
ದಾಪಣ. ನ: [ದಾಪನ] ಕೊಡಿಸುವುದು
ದಾಮ. ನ: [ದಾಮನ್] ಹೂವಿನ ಹಾರ(ಪಣ್ಣ), ಹಗ್ಗ, ಪು: ವೇಲಂಧರ ನಾಗರಾಜನು ವಾಸಿಸುವ ಒಂದು ಪರ್ವತ. -ವಂತ. ವಿ: [-ವತ್] ಹಾರವನ್ನು ಧರಿಸಿರುವವನು
ದಾಮಟ್ಠಿ. ಪು: [ದಾಮಸ್ಥಿ] ಸೌಧರ್ಮ ದೇವಲೋಕದ ಇಂದ್ರನ ವೃಷಭ ಸೈನ್ಯದ ಅಧಿಪತಿ ದೇವ.
ದಾಮಡ್ಢಿ. ಪು: [ದಾಮರ್ದ್ಧಿ] ಮೇಲಿನ ಶಬ್ದವನ್ನು ನೋಡುವುದು.
ದಾಮಣ. ನ: [ದಾಮನ] ಹಸುವನ್ನು ಕಟ್ಟುವ ಹಗ್ಗ
ದಾಮಣೀ. ಸ್ತ್ರೀ: [ದಾಮನೀ] ಹಸುಗಳನ್ನು ಕಟ್ಟುವ ಹಗ್ಗ(ಭಗ), ಭಗವಾನ್ ಕುಂಭನಾಥನ ಮುಖ್ಯ ಶಿಷ್ಯೆ, ಸ್ತ್ರೀ ಮತ್ತು ಪುರುಷರ ಆಕಾರವುಳ್ಳ ಒಂದು ಶುಭ ಲಕ್ಷಣ(ಪಣ್ಣ)
ದಾಮಣೀ. ಸ್ತ್ರೀ: [ದೇ] ಪ್ರಸವ, ಹೆರಿಗೆ, ಕಣ್ಣು
ದಾಮಿಯ. ವಿ:[ದಾಮಿತ] ನಿಯಂತ್ರಣಕ್ಕೊಳಪಟ್ಟಿರುವ, ಬಂಧನಕ್ಕೊಳಗಾದ, ಸಂಯಮಿತ
ದಾಮಿಲೀ. ಸ್ತ್ರೀ: [ದ್ರಾವಿಡೀ] ದ್ರಮಿಡ(ತಮಿಳು) ಲಿಪಿಯಲ್ಲಿ ನಿಬದ್ಧವಾದ ಒಂದು ಮಂತ್ರವಿದ್ಯೆ (ಸೂಅ)
ದಾಮೀ. ಸ್ತ್ರೀ: [ದಾಮೀ] ಲಿಪಿ -ವಿಶೇಷ.
ದಾಮೋಅರ. ಪು: [ದಾಮೋದರ] ಶ್ರೀಕೃಷ್ಣ -ವಾಸುದೇವ. ಕಳೆದ ಅವಸರ್ಪಿಣೀ ಕಾಲದಲ್ಲಿ ಭರತ ಕ್ಷೇತ್ರದಲ್ಲಿ ಹುಟ್ಟಿದ ಒಂಬತ್ತನೇ ಜಿನದೇವ.
ದಾಯಗ.ವಿ:[ದಾಯಕ] ದಾತ,ಕೊಡುವವನು (ಉಪ).
ದಾಯಣ. ನ: [ದಾನ] ಕೊಡುವುದು, ದಾನ
ದಾಯಣಾ. ಸ್ತ್ರೀ:[ದಾಪನಾ]ಕೇಳಿದ ಅರ್ಥದ ವ್ಯಾಖ್ಯಾನ
ದಾಯಯ. 'ದಾಯಗ' ಶಬ್ದವನ್ನು ನೋಡುವುದು.
ದಾಯವ್ವ. 'ದಾ=ದಾ' ಶಬ್ದವನ್ನು ನೋಡುವುದು.
ದಾಯಾದ. ವಿ: [ದಾಯಾದ] ತಂದೆಯ ಸಂಪತ್ತಿಯಲ್ಲಿ ಪಾಲು ಹೊಂದಿರುವವನು(ಆಚಾ)
ದಾಯಾರ. ವಿ: [ದಾಯಾರ] ಯಾಚಕ, ಭಿಕ್ಷುಕ(ಕಪ್ಪ)
ದಾರ. ಸಕ: [ದಾರಯ್] ಸೀಳು, ಒಡೆ, ಚೂರುಮಾಡು, ಮುರಿ(ಕುಮಾ)
ದಾರ. ಪು: [ದೇ] ಡಾಬು, ಒಡ್ಯಾಣ(ದೇ)
ದಾರ. ಪುಂನ: [ದಾರ] ಹೆಂಡತಿ, ಹೆಣ್ಣು(ಸುಪಾ)
ದಾರ. ನ: [ದ್ವಾರ] ಬಾಗಿಲು(ಔಪ). -ಗ್ಗಲಾ. ಸ್ತ್ರೀ: [ದ್ವಾರಾರ್ಗಲಾ] ಬಾಗಿಲಿನ ಅಗಳಿ, ಚಿಲಕ. -ಟ್ಠ, -ತ್ಥ. ವಿ: [-ಸ್ಥ] ಬಾಗಿಲ ಬಳಿ ನಿಂತಿರುವವನು. ಪು: ಬಾಗಿಲು ಕಾಯುವವನು, ಪ್ರತೀಹಾರಿ. -ಪಾಲ. -ವಾಲ. ಪು: [-ಪಾಲ] ಬಾಗಿಲು ಕಾಯುವವನು, ದ್ವಾರ ರಕ್ಷಕ(ಉಪ). -ವಾಲಯ, -ವಾಲಿಯ. ಪು: [-ಪಾಲಕ, -ಪಾಲಿಕ] ಬಾಗಿಲು ಕಾಯುವವನು, ದ್ವಾರ ರಕ್ಷಕ(ಪಉಮ).

ದಾರ}. ಪು: [ದಾರಕ] ಬಾಲಕ, ಹುಡುಗ. **'ದಾರಯ'**
ದಾರಗ}. ಶಬ್ದವನ್ನು ನೋಡುವುದು.

ದಾರದ್ಧಂತಾ. ಸ್ತ್ರೀ: [ದೇ] ಪೆಟ್ಟಿಗೆ

ದಾರಯ. ವಿ: [**ದಾರಕ**] ಸೀಳುವವನು, ಒಡೆಯುವವನು, ವಿಧ್ವಂಸಕ. **'ದಾರಗ' ಶಬ್ದವನ್ನು ನೋಡುವುದು**(ಕಪ್ಪ)

ದಾರಿಅ.ವಿ: [**ದಾರಿತ**] ಸೀಳಲ್ಪಟ್ಟ,ಒಡೆಯಲ್ಪಟ್ಟ (ಪಾಅ)

ದಾರಿಆ. ಸ್ತ್ರೀ: [**ದಾರಿಕಾ**] ಹುಡುಗಿ(ಸ್ವಪ್ನ)

ದಾರಿಆ. ಸ್ತ್ರೀ: [**ದೇ**] ವೇಶ್ಯೆ, ಸೂಳೆ(ದೇ)

ದಾರಿದ್ದ. ನ: [**ದಾರಿದ್ರ್ಯ**] ಬಡತನ, ದೀನತೆ, ಆಲಸ್ಯ

ದಾರಿದ್ದಿಯ. ವಿ: [**ದಾರಿದ್ರಿತ**] ಬಡತನ ಬಂದಿರುವನು, ಬಡವ(ಪಉಮ)

ದಾರು. ನ: [**ದಾರು**] ಸೌದೆ, ಕಟ್ಟಿಗೆ, **–ಗ್ಗಾಮ. ಪು:** [**–ಗ್ರಾಮ**] ಗ್ರಾಮ –ವಿಶೇಷ(ಪಉಮ)**–ದಂಡಯ. ಪುಂನ:** [**–ದಂಡಕ**] ಕಟ್ಟಿಗೆಯ ಕೋಲು, ದಂಡ. **–ಪವ್ವಯ. ಪು:** [**–ಪರ್ವತ**]ಒಂದುಪರ್ವತ –ವಿಶೇಷ. **–ಪಾಯ. ನ:** [**–ಪಾತ್ರ**] ಮರದಿಂದ ಮಾಡಿದ ಪಾತ್ರೆ(ಠಾ). **–ಪುತ್ತಯ. ಪು:** [**–ಪುತ್ರಕ**] ಮರದ ಬೊಂಬೆ, **–ಮಡ. ಪು:** [**–ಮಡ**] ಭರತ –ಕ್ಷೇತ್ರದ ಒಬ್ಬ ಭಾವಿ ಜಿನದೇವನ ಪೂರ್ವ ಜನ್ಮದ ಹೆಸರು. **–ಸಂಕಮ. ಪು:** [**–ಸಂಕ್ರಮ**] ಕಟ್ಟಿಗೆಯಿಂದ ನಿರ್ಮಿಸಿದ ಸೇತುವೆ(ಆಚಾ).

ದಾರುಅ. ಪು: [**ದಾರುಕ**] ನೇಮಿನಾಥ ತೀರ್ಥಂಕರರಿಂದ ದೀಕ್ಷೆ ತೆಗೆದುಕೊಂಡು ಉತ್ತಮ ಗತಿಯನ್ನು ಪಡೆದುಕೊಂಡಿದ್ದ ಶ್ರೀಕೃಷ್ಣ ವಾಸುದೇವನ ಒಬ್ಬ ಪುತ್ರ., ಶ್ರೀಕೃಷ್ಣನ ಒಬ್ಬ ಸಾರಥಿ(ಣಾಯಾ), **ನ:** ದೇವದಾರು ಕಟ್ಟಿಗೆ, ಸೌದೆ(ಪಉಮ).

ದಾರುಇಜ್ಜ. ವಿ: [**ದಾರುಕೀಯ**] ಮರದಿಂದ(ಕಟ್ಟಿಗೆ) ನಿರ್ಮಿಸಲ್ಪಟ್ಟ. **–ಪವ್ವಯ. ಪು:** [**–ಪರ್ವತ**] ಮರದಿಂದ ನಿರ್ಮಿತವಾದಂತೆ ಕಾಣುತ್ತಿರುವ ಪರ್ವತ.

ದಾರುಣ. ವಿ: [**ದಾರುಣ**] ವಿಷಮ, ಭಯಂಕರ, ಭೀಷಣ(ಪಾಅ). ಕೋಪದಿಂದ ಕೂಡಿದ, ರೌದ್ರ, ಭಯಂಕರ, ಕ್ರೂರ. **ನ:** ಕಷ್ಟ, ದುಃಖ, ದುರ್ಭಿಕ್ಷ, ಕ್ಷಾಮ(ಉಪ)

ದಾರುಣೀ. ಸ್ತ್ರೀ: [**ದಾರುಣೀ**] ವಿದ್ಯಾದೇವಿ ವಿಶೇಷ (ಪಉಮ)

ದಾಲಣ. ಸ್ತ್ರೀ: [**ದಾರಣ**] ಸೀಳುವುದು, ಮುರಿಯುವುದು, ಒಡೆಯುವುದು(ಪಣ್ಣ)

ದಾಲಿ. ಸ್ತ್ರೀ: [**ದೇ. ದಾಲಿ**] ಬೇಳೆ, ಪುಡಿಮಾಡಿದ ಕಡಲೆ, ತೊಗರಿ, ಶೇಂಗಾ ಇತ್ಯಾದಿ ಧಾನ್ಯಗಳು, ಪಂಕ್ತಿ, ಸಾಲು, ಗೆರೆ(ಓಘ)

ದಾಲಿಅ. ನ: [**ದೇ**] ಕಣ್ಣು, ನೇತ್ರ(ದೇ)

ದಾಲಿದ್ದ. 'ದಾರಿದ್ದ' ಶಬ್ದವನ್ನು ನೋಡುವುದು.

ದಾಲಿದ್ದಿಯ. 'ದಾರಿದ್ದಿಯ' ಶಬ್ದವನ್ನು ನೋಡುವುದು.

ದಾಲಿಮ. 'ದಾಡಿಮ' ಶಬ್ದವನ್ನು ನೋಡುವುದು.

–ದಾಲಿಯಂಬ. ನ: [**ದಾಲಿಕಾವ್ಲ**] ತೊಗರಿ ಬೇಳೆಯಿಂದ ಮಾಡಿದ ಖಾದ್ಯ –ವಿಶೇಷ.

ದಾಲಿಯಾ. ಸ್ತ್ರೀ: [**ದಾಲಿಕಾ**] **'ದಾಲಿ' ಶಬ್ದವನ್ನು ನೋಡುವುದು.**

ದಾಲೀ. 'ದಾಲಿ' ಶಬ್ದವನ್ನು ನೋಡುವುದು(ಓಘ)

ದಾವ. ಸಕ: [**ದರ್ಶಯ್**] ತೋರಿಸು, ತಿಳಿಸಿ ಹೇಳು. **ವ. ಕೃ – ದಾವಂತ.**

ದಾವ. ಸಕ: [**ದಾಪಯ್**] ಕೊಡಿಸುವುದು, ದಾನ ಕೊಡಿಸುವುದು

ದಾವ. 'ತಾವ=ತಾವತ್' ಶಬ್ದವನ್ನು ನೋಡುವುದು.

ದಾವ. ಪು: [**ದಾವ**] ಕಾಡು, ಅರಣ್ಯ, ದೇವತೆ, ಕಾಡುಕಿಚ್ಚು, **–ಗ್ಗಿ. ಪು:** [**ದಾವಾಗ್ನಿ**] ಅರಣ್ಯದ ಬೆಂಕಿ, ದಾವಾಣಲ, ದಾವಾನಲ. **ಪು:** [**ದಾವಾನಲ**] ಕಾಡುಕಿಚ್ಚು(ಸುಪಾ)

ದಾವಣ. ನ: [**ದಾಮನ**] ಹಸುಗಳ(ಪ್ರಾಣಿಗಳ) ಕಾಲಿಗೆ ಕಟ್ಟುವ ಹಗ್ಗ

ದಾವಣ. ನ: [**ದಾಪನ**] ಕೊಡಿಸುವುದು

ದಾವದ್ದವ. ಪು: [**ದಾವದ್ರವ**] ವೃಕ್ಷ –ವಿಶೇಷ

ದಾವರ. ಪು: [**ದ್ವಾಪರ**] ಮೂರನೇ ಯುಗವಾದ ದ್ವಾಪರ ಯುಗ. **–ಜುಮ್ಮ. ಪು:** [**–ಯುಗ್ಮ**] ರಾಶಿ –ವಿಶೇಷ(ಠಾ)

ದಾವಾವ. ಸಕ: [**ದಾಪಯ್**] ಕೊಡಿಸು

ದಾವಿಅ. ವಿ: [**ದರ್ಶಿತ**] ತೋರಿಸಲ್ಪಟ್ಟ, ನೋಡಿಸಲ್ಪಟ್ಟ

ದಾವಿಅ. ವಿ: [**ದಾಪಿತ**] ಕೊಡಿಸಲ್ಪಟ್ಟ(ಸುಪಾ)

ದಾವಿಅ. ವಿ: [**ದ್ರಾವಿತ**] ಸೋರಿಸಲ್ಪಟ್ಟ, ತೊಟ್ಟಿಕ್ಕಿಸಲ್ಪಟ್ಟ, ಮೃದುಗೊಳಿಸಲ್ಪಟ್ಟ, ಕರಗಿಸಲ್ಪಟ್ಟ

ದಾವೆಂತ. 'ದಾವ=ದಾಪಂಯ್' ಶಬ್ದವನ್ನು ನೋಡುವುದು

ದಾಸ. ಪು: [ದರ್ಶ] ದರ್ಶನ, ನೋಡುವುದು, ಅವಲೋಕಿಸುವುದು(ಷಡ್)
ದಾಸ. ಪು: [ದಾಸ] ಆಳು, ಸೇವಕ, ಬೆಸ್ತರವನು. **–ಚೇಡ, ಚೇಟಗ.** ಪು: [–ಚೇಟ] ಚಿಕ್ಕ ವಯಸ್ಸಿನ ಆಳು. ಸೇವಕನ ಮಗ(ಮಹಾ). **–ಸಚ್ಚ.** ಪು: [–ಸತ್ಯ] ಶ್ರೀಕೃಷ್ಣ.
ದಾಸರಹಿ. ಪು: [ದಾಶರಥಿ] ದಶರಥನ ಮಗ ಶ್ರೀ ರಾಮಚಂದ್ರ
ದಾಸೀ. ಸ್ತ್ರೀ: [ದಾಸೀ] ಸೇವಕಿ(ಔಪ)
ದಾಸೀಖಬ್ಬಡಿಂಸಾ. ಸ್ತ್ರೀ: [ದಾಸೀಕರ್ಬಟಿಕಾ] ಜೈನಮುನಿಗಳ ಒಂದು ಶಾಖೆ(ಕಪ್ಪ)
ದಾಹ. ಪು: [ದಾಹ] ತಾಪ, ಸುಡುವುದು, ಉರಿತ, ರೋಗ –ವಿಶೇಷ(ವಿಪಾ), **–ಜ್ಜರ.** ಪು: [–ಜ್ವರ] ಮೈಯಲ್ಲಿ ಉರಿತವನ್ನು ಉಂಟುಮಾಡುವ ಒಂದು ಬಗೆಯ ಜ್ವರ(ಸುಪಾ). **–ವಕ್ಕಂತಿಯ.** ವಿ: [–ವ್ಯುತ್ಕ್ರಾಂತಿಕ] ದಾಹ ಉಂಟಾಗಿರುವವನು (ಣಾಯಾ)
ದಾಹಂ. 'ದಾ=ದಾ' ಶಬ್ದವನ್ನು ನೋಡುವುದು.
ದಾಹಗ. ವಿ: [ದಾಹಕ] ಸುಡುವಂಥದು, ಬೆಂಕಿ
ದಾಹಣ. ನ: [ದಾಹನ] ಸುಡಿಸುವುದು(ಪಉಮ)
ದಾಹವಿಯ. ವಿ: [ದಾಹಿತ] ಸುಡಿಸಲ್ಪಟ್ಟ, ಬೆಂಕಿ ಹಾಕಲ್ಪಟ್ಟ
ದಾಹಿಣ. 'ದಕ್ಷಿಣ' ಶಬ್ದವನ್ನು ನೋಡುವುದು. **–ದಾರಿಯ.** ವಿ: [–ದ್ವಾರಿಕ] ದಕ್ಷಿಣ ದಿಕ್ಕಿನಲ್ಲಿ ಬಾಗಿಲನ್ನು ಹೊಂದಿರುವ, ನ: ಅಶ್ವಿನಿಯೇ ಮೊದಲಾದ ಏಳು ನಕ್ಷತ್ರಗಳು(ಠಾ). **ಪಚ್ಚತ್ಥಿಮ.** ವಿ: [–ಪಶ್ಚಿಮೀಯ] ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳ ನಡುವಿನ ದಿಕ್ಕು; ನೈರುತ್ಯ ದಿಕ್ಕು. **–ಪಹ.** ಪು: [–ಪಥ] ದಕ್ಷಿಣ ದೇಶದ ಕಡೆಗಿನ ಹಾದಿ, ದಕ್ಷಿಣ ದೇಶ. **–ಪುರತ್ಥಿಮ.** ವಿ: [ಪೂರ್ವೀಯ] ದಕ್ಷಿಣ ಮತ್ತು ಪೂರ್ವ ದಿಕ್ಕುಗಳ ನಡುವಣ ಭಾಗ; ಅಗ್ನಿಮೂಲೆ.
ದಾಹಿಣಾವತ್ತ. ವಿ:[ದಕ್ಷಿಣಾವರ್ತ] ದಕ್ಷಿಣದಲ್ಲಿ ಆವರ್ತವುಳ್ಳ (ಶಂಖವೇ ಮೊದಲಾದವು)(ಠಾ).
ದಾಹಿಣಾ. 'ದಕ್ಷಿಣಾ' ಶಬ್ದವನ್ನು ನೋಡುವುದು.
ದಾಹಿಣಲ್ಲ. 'ದಕ್ಷಿಣಲ್ಲ' ಶಬ್ದವನ್ನು ನೋಡುವುದು.
ದಾಹಿಣೇ. ಸ್ತ್ರೀ: [ದಕ್ಷಿಣಾ] ದಕ್ಷಿಣ ದಿಕ್ಕು(ಕುಮಾ)
ದಿ. ವಿ: [ದ್ವಿ] ಎರಡು, ಎರಡರ ಸಂಖ್ಯೆಯುಳ್ಳ
ದಿ –. 'ದಿಸಾ' ಶಬ್ದವನ್ನು ನೋಡುವುದು. **–ಕ್ಕರಿ.** ಪು: [–ಕರಿನ್] ದಿಗ್ಗಜ. **–ಗ್ಗಇಂದ.** ಪು: [–ಗಜೇಂದ್ರ] ದಿಗ್ಗಜ. **–ಗ್ಗಯ.** ಪು: [–ಗಜ] ದಿಗ್ಗಜ. **–ಚಕ್ಕಸಾರ.** ನ: [–ಚಕ್ರಸಾರ] ವಿದ್ಯಾಧರರ ಒಂದು ನಗರ. **–ಮ್ಮೋಹ.** ಪು: [–ಮೋಹ] ದಿಕ್ಕಿನ ವ್ಯಾಮೋಹ (ಗಾ). 'ದಿಸಾ' ಶಬ್ದವನ್ನು ನೋಡುವುದು.
ದಿಅ. ಪುಂನ: [ದೇ] [ದೇ] ದಿವಸ, ದಿನ, ಹಗಲು
ದಿಅ. ಪು: [ದ್ವಿಜ] ಬ್ರಾಹ್ಮಣ, ವಿಪ್ರ(ಕುಮಾ). ಹಲ್ಲು, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವೇ ಮೊದಲಾದ ಮೂರು ವರ್ಣಗಳು. ಮೊಟ್ಟೆಯಿಂದ ಹುಟ್ಟುವ 'ಅಂಡಜ' ಪ್ರಾಣಿ, ಪಕ್ಷಿ, ಒಂದು ವೃಕ್ಷ; ಚೌಬೀನೆ ಮರ. **–ರಾಯ.** ಪು: [–ರಾಜ] ಉತ್ತಮ ದ್ವಿಜ, ಚಂದ್ರ
ದಿಅ. ಪು: [ದ್ವಿಕ] ಕಾಗೆ
ದಿಅ. ಪು: [ದ್ವಿಪ] ಆನೆ
ದಿಅ. ನ: [ದಿವ] ಸ್ವರ್ಗ, ದೇವಲೋಕ. **–ಲೋಅ, –ಲೋಗ.** ಪು: [–ಲೋಕ] ಸ್ವರ್ಗ, ದೇವಲೋಕ
ದಿಅ. ವಿ: [ದಿತ] ಕತ್ತರಿಸಲ್ಪಟ್ಟ
ದಿಅ. ವಿ: [ದೃತ] ಕೊಲ್ಲಲ್ಪಟ್ಟ, ಹತ
ದಿಅಂತ. ಪು: [ದಿಗಂತ] ದಿಕ್ಕಿನ ಕೊನೆ, ದಿಗಂತ (ಮಹಾ)
ದಿಅಂಬರ. ನ: [ದಿಗಂಬರ] ನಗ್ನ, ಬೆತ್ತಲೆ. ಪು: ಒಂದು ಜೈನ ಸಂಪ್ರದಾಯ(ಭವಿ)
ದಿಅಜ್ಞ. ಪು: [ದೇ] ಸ್ವರ್ಣಕಾರ, ಚಿನಿವಾರ, ಅಕ್ಕಸಾಲಿ
ದಿಅಧುತ್ತ. ಪು: [ದೇ] ಕಾಗೆ
ದಿಅರ. ಪು: [ದೇವರ] ಮೈದುನ, ಗಂಡನ ತಮ್ಮ(ಗಾ)
ದಿಅಲಿಅ. ವಿ: [ದೇ] ಮೂರ್ಖ, ಅಜ್ಞಾನಿ(ದೇ)
ದಿಆಲೀ. ಸ್ತ್ರೀ: [ದೇ] ಗೂಟ, ಮೊಳೆ
ದಿಅಸ. ಪುಂನ: [ದಿವಸ] ಹಗಲು(ಗಉಡ). **–ಕರ.** ಪು: [–ಕರ] ಸೂರ್ಯ, **–ನಾಹ.** ಪು: [–ನಾಥ] ಸೂರ್ಯ(ಪಉಮ), **–ಯರ.** '–ಕರ' ಶಬ್ದವನ್ನು ನೋಡುವುದು.
ದಿಅಸಿಅ. ನ: [ದೇ] ಸದಾ ಭೋಜನ, ಪ್ರತಿ ದಿನ, ದಿನವೂ(ಪಾಅ)
ದಿಅಹ. 'ದಿಅಸ' ಶಬ್ದವನ್ನು ನೋಡುವುದು
ದಿಅಹುತ್ತ. ನ: [ದೇ] ಪೂರ್ವಾಹ್ನದ ಭೋಜನ, ಮಧ್ಯಾಹ್ನದ ಊಟ(ದೇ)

ದಿಆ. ಅ: [ದಿವಾ] ಹಗಲು(ಪಾಅ). –ಣಿಸ. ನ: [–ನಿಶ] ಹಗಲು–ರಾತ್ರಿ, ಯಾವಾಗಲೂ –ರಾಅ. ನ: [–ರಾತ್ರ] ಹಗಲು–ರಾತ್ರಿ, ಸದಾ. 'ದಿವಾ' ಶಬ್ದವನ್ನು ನೋಡುವುದು

ದಿಆಹಮ. ಪು: [ದೇ] ಹದ್ದು

ದಿಆಇ. 'ದುಆಇ' ಶಬ್ದವನ್ನು ನೋಡುವುದು

ದಿಇ. ಸ್ತ್ರೀ: [ದೃತಿ] ನೀರು ತುಂಬುವ ಚರ್ಮದ ಚೀಲ

ದಿಉಣ. ವಿ: [ದ್ವಿಗುಣ] ಎರಡರಷ್ಟು, 'ದಾ=ದಾ' ಶಬ್ದವನ್ನು ನೋಡುವುದು

ದಿಕ್ಕಾಣ. ಪು: [ದ್ರೇಷ್ಕಾಣ] ಮೇಷವೇ ಮೊದಲಾದ ಲಗ್ನಗಳ ಹತ್ತನೇ ಭಾಗ

ದಿಕ್ಖ. ಸಕ: [ದೀಕ್ಷ್] ದೀಕ್ಷೆ ನೀಡು, ಸಂನ್ಯಾಸ ದೀಕ್ಷೆ ಕೊಡು, ಶಿಷ್ಯ ದೀಕ್ಷೆ ನೀಡುವುದು.

ದಿಕ್ಖ. 'ದೇಕ್ಖ' ಶಬ್ದವನ್ನು ನೋಡುವುದು

ದಿಕ್ಖಾ. ಸ್ತ್ರೀ: [ದೀಕ್ಷಾ] ದೀಕ್ಷೆ ನೀಡುವುದು, ಸಂನ್ಯಾಸ ದೀಕ್ಷೆ ಕೊಡುವುದು.

ದಿಕ್ಖಿಅ. ವಿ: [ದೀಕ್ಷಿತ] ಸಂನ್ಯಾಸ ದೀಕ್ಷೆ ನೀಡಲ್ಪಟ್ಟವನು,

ದಿಗಂಛಾ. 'ದಿಗಿಂಛಾ' ಶಬ್ದವನ್ನು ನೋಡುವುದು

ದಿಗಂಬರ. 'ದಿಅಂಬರ' ಶಬ್ದವನ್ನು ನೋಡುವುದು

ದಿಗಿಂಛಾ. ಸ್ತ್ರೀ: [ಜಿಘತ್ಸಾ] ಹಸಿವು(ಉತ್ತ)

ದಿಗಿಚ್ಛ. ಸಕ: ತಿನ್ನಬೇಕೆಂದು ಇಚ್ಛಿಸು, ತಿನ್ನಬೇಕೆಂದು ಬಯಸು(ಆಚಾ)

ದಿಗು. ಪು: [ದ್ವಿಗು] ಪ್ರಖ್ಯಾತವಾದ ದ್ವಿಗು ಸಮಾಸ

ದಿಗ್ಗು. 'ದಿಗು' ಶಬ್ದವನ್ನು ನೋಡುವುದು.

ದಿಗ್ಘ. 'ದೀಹ' ಶಬ್ದವನ್ನು ನೋಡುವುದು. –ಣಂಗೂಲ, –ಲಂಗೂಲ. ವಿ: [–ಲಾಂಗೂಲ] ಉದ್ದವಾದ ಬಾಲವುಳ್ಳ, ಪು: ವಾನರ, ಕಪಿ

ದಿಗ್ಘಿಆ. ಸ್ತ್ರೀ: [ದೀರ್ಘಿಕಾ] ಬಾವಿ, ಮೆಟ್ಟಿಲುಗಳುಳ್ಳ ಬಾವಿ(ವಿಕ್ರ)

ದಿಚ್ಛಾ. ಸ್ತ್ರೀ: [ದಿತ್ಸಾ] ಕೊಡುವ ಇಚ್ಛೆ.

ದಿಜ. 'ದಿಅ=ದ್ವಿಜ ಶಬ್ದವನ್ನು ನೋಡುವುದು (ಕುಮಾ)

ದಿಜ್ಜ. ವಿ: [ದೇಯ] ಕೊಡಲು ಯೋಗ್ಯವಾದ, ಕೊಡಬಹುದಾದ್ದು, ಪುಂನ: ತೆರಿಗೆ(ವಿಪಾ)

ದಿಜ್ಜಂತ}. 'ದಾ=ದಾ' ಶಬ್ದವನ್ನು ನೋಡುವುದು

ದಿಜ್ಜಮಾಣ}.

ದಿಟ್ಠ. ವಿ: [ದಿಷ್ಟ] ಹೇಳಲ್ಪಟ್ಟ, ಪ್ರತಿಪಾದಿತ

ದಿಟ್ಠ. ವಿ: [ದೃಷ್ಟ] ನೋಡಲ್ಪಟ್ಟ, ವೀಕ್ಷಿಸಲ್ಪಟ್ಟ(ಸ್ವಪ್ನ) ಅಭಿಪ್ರಾಯ, ತಿಳಿಯಲ್ಪಟ್ಟ, ನ: ನೋಟ –ಪಾಢಿ. ವಿ: [–ಪಾಠಿನ] ಚರಕ ಸುಶ್ರುತಾದಿಗಳನ್ನು ತಿಳಿದವನು. –ಲಾಭಿಯ. ಪು: [–ಲಾಭಿಕ] ನೋಡಿದ ವಸ್ತುವನ್ನೇ ಸ್ವೀಕರಿಸುವ ಜೈನ ಸಾಧು (ಪಣ್ಣ)

ದಿಟ್ಠ. ನ: [ದೃಷ್ಟ] ಪ್ರತ್ಯಕ್ಷ ಅಥವಾ ಅನುಮಾನ ಪ್ರಮಾಣದಿಂದ ತಿಳಿಯಲರ್ಹವಾದ ವಸ್ತು. –ಸಾಹಮ್ಮವ. ನ: [–ಸಾಧರ್ಮ್ಯವತ್] ಅನುಮಾನದ ಒಂದು ಪ್ರಭೇದ.

ದಿಟ್ಠಂತ. ಪು: [ದೃಷ್ಟಾಂತ] ಉದಾಹರಣೆ, ನಿದರ್ಶನ

ದಿಟ್ಠಂತಿಅ. ವಿ: [ದಾರ್ಷ್ಟಾಂತಿಕ] ಯಾವುದರ ಬಗ್ಗೆ ಉದಾಹರಣೆ ನೀಡಲಾಗಿದೆಯೋ ಅದು(ವಿಸೇ). ನ: ಅಭಿನಯ –ವಿಶೇಷ.

ದಿಟ್ಠವ್ವ. 'ದಕ್ಖ=ದೃಶ್' ಶಬ್ದವನ್ನು ನೋಡುವುದು

ದಿಟ್ಠಿ. ಸ್ತ್ರೀ: [ದೃಷ್ಟಿ] ಕಣ್ಣು, ನೇತ್ರ(ಕುಮಾ), ದರ್ಶನ, ಮತ, ಬುದ್ಧಿ, ವಿವೇಕ, ವಿಚಾರ(ಸೂಅ), –ಕೀವ. ಪು: [–ಕ್ಲೀಬ] ನಪುಂಸಕ–ವಿಶೇಷ. –ಜುದ್ಧ. ನ: [–ಯುದ್ಧ] ಪರಸ್ಪರ ಕಣ್ಣಿನಿಂದ ದೃಷ್ಟಿಸಿ ಕಣ್ಣಿನ ಸ್ಥಿರತೆ ಬಗೆಗಿನ ಯುದ್ಧ(ಪಉಮ). ಬಂಧ. ಪು: [–ಬಂಧ] ನೋಟದಬಂಧ. ಮೂಗಿನ ತುದಿ, –ಮ, –ಮಂತ. ವಿ: [–ಮತ್] ಸಮ್ಯಕ್ ದೃಷ್ಟಿ ಉಳ್ಳವ(ಸೂಅ). –ರಾಯ. ಪು: [–ರಾಗ] ತನ್ನ ಧರ್ಮದ ಮೇಲಿನ ಪ್ರೀತಿ, ನೋಟದ ಪ್ರೀತಿ. –ಲ್ಲ. ವಿ: [–ಮತ್] ಪ್ರಶಸ್ತ ನೋಟವನ್ನು ಹೊಂದಿರುವ(ಪಉಮ). –ವಾಯ. ಪು: [–ಪಾತ] ದೃಷ್ಟಿಬೀರುವುದು. ಹನ್ನೆರಡನೇ ಜೈನ ಅಂಗ – ಗ್ರಂಥ(ಠಾ) –ವಿಪರಿಆಸಿಆ. ಸ್ತ್ರೀ: [–ವಿಪರ್ಯಾಸಿಕಾ, –ಸಿತಾ] ಬುದ್ಧಿಭ್ರಮೆ. –ವಿಸ. ಪು: [–ವಿಷ] ದೃಷ್ಟಿಯಲ್ಲಿ ವಿಷವನ್ನು ಹೊಂದಿರುವ ಸರ್ಪ(ಸೇ). –ಸೂಲ. ನ: [–ಶೂಲ] ನೇತ್ರರೋಗ–ವಿಶೇಷ(ಣಾಯಾ)

ದಿಟ್ಠಿ. ಸ್ತ್ರೀ: [ದೃಷ್ಟಿ] ತಾರಾ, ಮಿತ್ರ ಇವೇ ಮೊದಲಾದ ಯೋಗದೃಷ್ಟಿ.

ದಿಟ್ಠಿಆ. ಅ: [ದಿಷ್ಟ್ಯಾ] ಮಂಗಳ, ಹರ್ಷ, ಆನಂದ, ಭಾಗ್ಯದಿಂದ –ಎಂಬ ಅರ್ಥಗಳನ್ನು ಸೂಚಿಸುವ ಅವ್ಯಯ

ದಿಟ್ಠಿಆ. ಸ್ತ್ರೀ: [ದೃಷ್ಟಿಕಾ, –ಜಾ] ಕ್ರಿಯಾ–ವಿಶೇಷ, ದರ್ಶನಕ್ಕಾಗಿ ಹೊರಡುವುದು. ದರ್ಶನದಿಂದ ಕರ್ಮ ಉದಿಸುವುದು.

ದಿಟ್ಠೀಆ. ಸ್ತ್ರೀ: [ದೃಷ್ಟೀಯಾ] **ಮೇಲಿನ ಶಬ್ದವನ್ನು ನೋಡುವುದು**

ದಿಟ್ಠೀವಾಓವಏಸಿಆ. ಸ್ತ್ರೀ: [ದೃಷ್ಟಿವಾದೋಪದೇಶಿಕಾ] ಒಂದು ಸಂಜ್ಞೆ

ದಿಟ್ಠಿಲ್ಲಯ. ವಿ: [ದೃಷ್ಟ] ನೋಡಲ್ಪಟ್ಟ

ದಿಢ}. **'ದಢ' ಶಬ್ದವನ್ನು ನೋಡುವುದು(ಸ್ವಪ್ನ)**

ದಿಢ}.

ದಿಣ. **ಪುಂನ:** [ದಿನ] ಹಗಲು, ದಿನ. **–ಇಂದ ಪು:** [–ಇಂದ್ರ] ಸೂರ್ಯ. **–ಕಯ. ಪು:** [–ಕೃತ] ರವಿ. **–ಕರ. ಪು:** [–ಕರ] ಸೂರ್ಯ. **ನಾಹ. ಪು:** [–ನಾಥ] ಸೂರ್ಯ. **–ಬಂಧು. ಪು:** [–ಬಂಧು] ರವಿ. **–ಮಣಿ. ಪು:** [–ಮಣಿ] ಸೂರ್ಯ. ದಿವಾಕರ(ಪಾಅ). **–ಮುಹ. ನ:** [–ಮುಖ] ಬೆಳಗಿನ ಹೊತ್ತು, ಪ್ರಾತಃಕಾಲ. **–ಯರ. '–ಕರ' ಶಬ್ದವನ್ನು ನೋಡುವುದು(ಗಲುಡ). –ರಯಣಿಕಾರೀ.** ಸ್ತ್ರೀ: [–ರಜನಿಕಾರೀ] ವಿದ್ಯಾ –ವಿಶೇಷ. **–ವಇ. ಪು:** [–ಪತಿ] ಸೂರ್ಯ.

ದಿಣಿಂದ. ಪು: [ದಿನೇಂದ್ರ] ರವಿ, ಸೂರ್ಯ

ದಿಣೇಸ. ಪು: [ದಿನೇಶ] ಸೂರ್ಯ, ರವಿ. ಹನ್ನೆರಡರ ಸಂಖ್ಯೆ(–೨)

ದಿಣ್ಣ. ವಿ: [ದತ್ತ] ಕೊಡಲ್ಪಟ್ಟಿರುವ, ಸ್ಥಾಪಿಸಲ್ಪಟ್ಟ, ಭಗವಾನ್ ಪಾರ್ಶ್ವನಾಥನ ಮೊದಲ ಗಣಧರ, ಭಗವಾನ್ ಶ್ರೇಯಾಂಸನಾಥನ ಹಿಂದಿನ ಜನ್ಮದ ಹೆಸರು(ಸಮ). ಭಗವಾನ್ ಚಂದ್ರಪ್ರಭನ ಮೊದಲ ಗಣಧರ. ಭಗವಾನ್ ನೇಮಿನಾಥನಿಗೆ ಭಿಕ್ಷೆ ನೀಡಿದ ಒಬ್ಬ ಗೃಹಸ್ಥ. **'ದಿನ್ನ' ಶಬ್ದವನ್ನು ನೋಡುವುದು**

ದಿಣ್ಣಿಲ್ಲಯ. ವಿ: [ದತ್ತ] ಕೊಡಲ್ಪಟ್ಟ(ಓಘ)

ದಿತ್ತ. ವಿ: [ದೀಪ್ತ] ಪ್ರಕಾಶ ಮಾನವಾದ, ಹೊಳೆಯುವ, ಕಾಂತಿಯುಕ್ತ, ತೇಜಸ್ವಿ, ಹರಿತವಾದ, ಜ್ವಲಿಸುವ, ಉಜ್ವಲ, ಪುಷ್ಟಗೊಂಡ(ಉತ್ತ), ಪ್ರಸಿದ್ಧವಾದ, ಹೊಡೆಯುವ, **–ಚಿತ್ತ.** ವಿ: [–ಚಿತ್ತ] ಹರ್ಷದ ಅತಿರೇಕದಿಂದ ಚಿತ್ತಭ್ರಮೆ ಉಂಟಾದವನು.

ದಿತ್ತ. ವಿ: [ದೃಪ್ತ] ಗರ್ವಿತ, ಅಹಂಕಾರಿ, ಹೊಡೆಯುವವನು, ಹಾನಿಕಾರಕ. **–ಇತ್ತ.** ವಿ: **[–ಚಿತ್ತ]** ಮನಸ್ಸಿನಲ್ಲಿ ಗರ್ವ ತುಂಬಿದವನು, ಹರ್ಷಾತಿರೇಕದಿಂದ ಹುಚ್ಚಾದವನು

ದಿತ್ತಿ. ಸ್ತ್ರೀ: [ದೀಪ್ತಿ] ಕಾಂತಿ, ತೇಜಸ್ಸು, ಪ್ರಕಾಶ(ಸುಪಾ). **–ಮ.** ವಿ: [– **–ಮತ್**] ಕಾಂತಿಯಿಂದ ಕೂಡಿದ

ದಿತ್ತಿ. ಸ್ತ್ರೀ: [ದೀಪ್ತಿ] ಪ್ರಕಾಶಗೊಳಿಸುವುದು. **–ಲ್ಲ.** ವಿ: **[–ಮತ್]** ಪ್ರಕಾಶದಿಂದ ಕೂಡಿದ.

ದಿದಿಕ್ಖಾ}. ಸ್ತ್ರೀ: [ದಿದೃಕ್ಷಾ] ನೋಡಬೇಕೆಂಬ ಇಚ್ಛೆ

ದಿದಿಚ್ಛಾ}.

ದಿದ್ಧ. ವಿ: [ದಿಗ್ಧ] ಬಳಿಯಲ್ಪಟ್ಟ, ಲೇಪ ಮಾಡಲ್ಪಟ್ಟ (ನಿಚೂ) ವಿಷ ಬಳಿಯಲ್ಪಟ್ಟ

ದಿನ್ನ. 'ದಿಣ್ಣ' ಶಬ್ದವನ್ನು ನೋಡುವುದು. ಶ್ರೀ ಗೌತಮ ಸ್ವಾಮಿಯ ಬಳಿ ೫೦೦ ಜನ ತಪಸ್ವಿಗಳೊಂದಿಗೆ ಜೈನ ದೀಕ್ಷೆ ತೆಗೆದುಕೊಂಡ ಒಬ್ಬ ತಾಪಸ(ಉಪ) ಒಬ್ಬ ಜೈನಾಚಾರ್ಯ(ಕಪ್ಪ)

ದಿನ್ನಯ. ಪು: [ದತ್ತಕ] ದತ್ತು ಪುತ್ರ.

ದಿಪ್ಪ. ಅಕ: [ದೀಪ್] ಹೊಳೆ, ಪ್ರಕಾಶಿಸು, ಜ್ವಲಿಸು, ಉರಿ. ವ. ಕೃ: –**'ದಿಪ್ಪಮಾಣ'**

ದಿಪ್ಪ. ಅಕ: [ತೃಪ್] ತೃಪ್ತಿಹೊಂದು(ವುದು), ಸಂತಸ ತಾಳು

ದಿಪ್ಪ. ವಿ: [ದೀಪ್ರ] ಹೊಳೆಯುವ, ಪ್ರಕಾಶಿಸುವ, ಜ್ವಲಿಸುವ(ಸೇ)

ದಿಪ್ಪ.(ಅಪ). ಪು: [ದೀಪ] ದೀವಿಗೆ, ಒಂದು ಛಂದಸ್ಸು

ದಿಪ್ಪಂತ. ಪು: [ದೇ] ಅನರ್ಥ(ದೇ)

ದಿಪ್ಪಂತ}. 'ದಿಪ್ಪ=ದೀಪ್' ಶಬ್ದವನ್ನು ನೋಡುವುದು.

ದಿಪ್ಪಮಾಣ}.

ದಿಪ್ಪಿರ. 'ದಿಪ್ಪ=ದೀಪ್ರ' ಶಬ್ದವನ್ನು ನೋಡುವುದು **(ಕುಮಾ)**

ದಿಯಾವ. ಸಕ: [ದಾ] ಕೊಡು, ನೀಡು

ದಿರಯ. ಪು: [ದ್ವಿರದ] ಆನೆ(ಹೇ)

ದಿಲಂದಿಲಿಅ.(ದೇ). **'ದಿಲ್ಲಿಂದಿಲಿಅ' ಶಬ್ದವನ್ನು ನೋಡುವುದು.**

ದಿಲಿದಿಲ. ಅಕ: [ದಿಲಿದಿಲಾಯ್] **'ದಿಲ್ ದಿಲ್'** ಎಂದು ಶಬ್ದಮಾಡುವುದು.

ದಿಲಿವೇಢಯ. ಪು: [ದಿಲಿವೇಷ್ಟಕ] ಒಂದು ಬಗೆಯ ಮೊಸಳೆ. ಜಲಚರ ಪ್ರಾಣಿಯ ಒಂದು ಜಾತಿ

ದಿಲ್ಲಿಂದಿಲಿಅ. ಪು; [ದೇ] ಬಾಲಕ. ಸ್ತ್ರೀ: **–ಆ;** ಬಾಲಕಿ

ದಿವ. ಉಭ: [ದಿವ್] ಆಟವಾಡು, ಗೆಲ್ಲಲು ಬಯಸು, ಕೊಡು –ಕೊಳೆ ವ್ಯವಹಾರ ಮಾಡುವುದು. ಇಚ್ಛಿಸು, ಬಯಸು
ದಿವ. ನ: [ದಿವ್] ಸ್ವರ್ಗ, ದೇವಲೋಕ(ಭವಿ)
ದಿವಡ್ಢ. ವಿ: [ದ್ವಯಪಾರ್ಧ] ಒಂದೂವರೆ(ವಿಸೇ)
ದಿವಸ.}. 'ದಿಅಸ' ಶಬ್ದವನ್ನು ನೋಡುವುದು.
ದಿವಹ}. –ಪುಹುತ್ತ.ನ: [–ಪೃಥಕ್ತ್ವ] ಎರಡರಿಂದ ಒಂಬತ್ತು ದಿನಗಳ ವರೆಗಿನ ಕಾಲ(ಭಗ)
ದಿವಾ. 'ದಿಅ' ಶಬ್ದವನ್ನು ನೋಡುವುದು(ಣಾಯಾ), **–ಇತ್ತಿ. ಪು:** [–ಕೀರ್ತಿ] ಚಾಂಡಾಲ, ಭಂಗಿ(ದೇ). **–ಕರ. ಪು:** [–ಕರ] ಸೂರ್ಯ. **–ಕಿತ್ತಿ. ಪು:** [–ಕೀರ್ತಿ] ಕ್ಷೌರಿಕ. **–ಗ್ಗರ. 'ಕರ' ಶಬ್ದವನ್ನು ನೋಡುವುದು. –ಮುಹ. ನ:** [–ಮುಖ] ಬೆಳಿಗ್ಗೆ, ಪ್ರಾತಃಕಾಲ. **–ಯರ. '–ಕರ' ಶಬ್ದವನ್ನು ನೋಡುವುದು(ಸುಪಾ). –ಯರತ್ಥ. ನ:** [–ಕರಾಸ್ತ್ರ] ಪ್ರಕಾಶಮಾನವಾದ ಒಂದು ಅಸ್ತ್ರ(ಪಉಮ)
ದಿವಾಯರ. ಪು: [ದಿವಾಕರ] ಸಿದ್ಧಸೇನ ಎಂಬ ಖ್ಯಾತ ಜೈನಕವಿ ಮತ್ತು ತಾರ್ಕಿಕ, ಪೂರ್ವಧರ ಮುನಿ
ದಿವಿ. 'ದೇವ' ಶಬ್ದವನ್ನು ನೋಡುವುದು.
ದಿವಿಅ. ಪು: [ದ್ವಿವಿದ] ಒಂದು ವಾನರ–ವಿಶೇಷ
ದಿವಿಜ. ವಿ: [ದಿವಿಜ] ಸ್ವರ್ಗದಲ್ಲಿ ಹುಟ್ಟಿದ. **ಪು:** ದೇವತೆ
ದಿವಿಟ್ಠ. 'ದುವಿಟ್ಠ' ಶಬ್ದವನ್ನು ನೋಡುವುದು.
ದಿವೇ(ಅಪ). 'ದಿವಾ' ಶಬ್ದವನ್ನು ನೋಡುವುದು.
ದಿವ್ವ. ವಿ: [ದಿವ್ಯ] **'ದಿವ'** ಅಂದರೆ ಸ್ವರ್ಗಕ್ಕೆ ಸಂಬಂಧಿಸಿದ, ಉತ್ತಮ, ಸುಂದರ, ಮನೋಹರ(ಪಉಮ) ಪ್ರಧಾನ, ದೇವ –ಸಂಬಂಧಿಯಾದ(ಠಾ). **ನ:** ಶಪಥ. ಆರೋಪದ ಶುದ್ಧಿಗಾಗಿ ಮಾಡಲಾಗುತ್ತಿದ್ದ ಅಗ್ನಿಪರೀಕ್ಷೆಯೇ ಮೊದಲಾದ ಕಠಿಣ ಪರೀಕ್ಷೆ; ಕಾಸಿದ ಕುಳವನ್ನು ಕೈಯಲ್ಲಿ ಹಿಡಿದು ಪ್ರಮಾಣ ಮಾಡುವುದು. ಪ್ರಾಚೀನ ಕಾಲದಲ್ಲಿ ಗಂಡು ಮಕ್ಕಳಿಲ್ಲದ ರಾಜನು ತೀರಿಕೊಂಡ ಮೇಲೆ ಸಿಂಹಾಸನಕ್ಕೆ ಇಂಥವನು ಉತ್ತರಾಧಿಕಾರಿ ಎಂದು ಘೋಷಣೆ ಮಾಡಲು ಕೇಳಿಬರುತ್ತಿದ್ದ ಆನೆಯಘೀಳಿಡುವಿಕೆ ಅಥವಾ ಕುದುರೆಯ ಹೇಷಾರವದಂಥ ಚಮತ್ಕಾರದ ಘಟನೆ. **–ಮಾಣುಸ. ನ:** [–ಮಾನುಷ] ದೈವ ಅಥವಾ ಮನುಷ್ಯರಿಗೆ ಸಂಬಂಧಿಸಿದ ಘಟನೆಗಳ ವರ್ಣನೆ ಇರುವ ಕಥಾವಸ್ತು.
ದಿವ್ವ. ನ: [ದಿವ್ಯ] ನಿರಂತರ ಮೂರು ದಿನಗಳವರೆಗಿನ ಉಪವಾಸ ವ್ರತ. **ವಿ:** ದೇವಕ್ಕೆ ಸಂಬಂಧಿಸಿದ
ದಿವ್ವ. 'ದಇವ' ಶಬ್ದವನ್ನು ನೋಡುವುದು(ಸುಪಾ)
ದಿವ್ವ. 'ದೇವ' ಶಬ್ದವನ್ನು ನೋಡುವುದು.
ದಿವ್ವಾಗ. ಪು: [ದಿವ್ಯಾಕ] ಸರ್ಪದ ಒಂದು ಜಾತಿ(ಪಣ್ಣ)
ದಿವ್ವಾಸಾ. ಸ್ತ್ರೀ: [ದೇ] ಚಾಮುಂಡಿ ದೇವಿ(ದೇ)
ದಿಸ. ಸಕ: [ದಿಶ್] ಹೇಳು, ಸೂಚಿಸು ಪ್ರತಿಪಾದಿಸು
ದಿಸ. ವಿ: [ದಿಶ್ಯ] – ದಿಕ್ಕಿನಲ್ಲಿ ಜನಿಸಿದ
ದಿಸಅ. ಸ್ತ್ರೀ: [ದೃಷದ್] ಕಲ್ಲು, ಶಿಲೆ
ದಿಸಾ.} ಸ್ತ್ರೀ: [ದಿಶ್] ಪೂರ್ವ, ಪಶ್ಚಿಮವೇ
ದಿಸಿ.} ಮೊದಲಾದ ದಿಕ್ಕುಗಳು(ಮಹಾ), ಪ್ರೌಢ
ದಿಸೀ–.} ಮಹಿಳೆ. **–ಅಕ್ಕ. ನ:** [–ಚಕ್ರ] ದಿಕ್ಕುಗಳ ಸಮೂಹ. **–ಕುಮಾರೀ: ಸ್ತ್ರೀ:** [–ಕಮಾರೀ] ದಿಗ್ದೇವಿ –ವಿಶೇಷ. **–ಕುಮಾರ. ಪು:** [–ಕುಮಾರ] ಭವನ –ಪತಿ ದೇವರುಗಳ ಒಂದು ಜಾತಿ. **–ಕುಮಾರೀ. 'ಕುಮರೀ' ಶಬ್ದವನ್ನು ನೋಡುವುದು. –ಗಅ. ಪು:** [–ಗಜ] ದಿಗ್ಗಜ. **–ಗಇಂದ. ಪು:** [–ಗಜೇಂದ್ರ] ದಿಗ್ಗಜ. **–ಚಕ್ಕ. '–ಅಕ್ಕ' ಶಬ್ದವನ್ನು ನೋಡುವುದು. –ಚಕ್ಕವಾಲ. ನ:** [–ಚಕ್ರವಾಲ] ದಿಕ್ಕುಗಳ ಸಮೂಹ. **ಒಂದು** ಬಗೆಯ ತಪಸ್ಸು. **–ಚರ. ಪು:** [–ಚರ] ದೇಶಾಟನೆ ಮಾಡುವ ಭಕ್ತ(ಭಗ). **–ಜತ್ತಾ. '–ಯತ್ತಾ' ಶಬ್ದವನ್ನು ನೋಡುವುದು(ಉಪ). –ಜತ್ತಿಯ. '–ಯತ್ತಿಯ'** ಶಬ್ದವನ್ನು ನೋಡುವುದು. **–ಡಾಹ. ಪು:** [–ದಾಹ] ಕೆಳಗೆ ಕತ್ತಲೆ ಇದ್ದು ಮೇಲೆ ಬೆಳಕು ಕಂಡುಬಂದು ಮುಂದೆ ಆಗುವ ಉಪದ್ರವವನ್ನು ಸೂಚಿಸುವಂಥ, ದಿಕ್ಕುಗಳಲ್ಲಿ ಉಂಟಾಗುವ ಒಂದು ಬಗೆಯ ಪ್ರಕಾಶ(ಭಗ). **–ಣ್ಣುವಾಯ. ಪು:** [–ಅನುಪಾತ] ದಿಕ್ಕಿನ ಅನುಸರಣೆ(ಪಣ್ಣ). **–ದಂತಿ. ಪು:** [–ದಂತಿನ್] ದಿಗ್ಗಜ. **–ದಾಹ. '–ಡಾಹ' ಶಬ್ದವನ್ನು ನೋಡುವುದು. –ದಿ. ಪು:** [–ಆದಿ] **ಮೇರು ಪರ್ವತ. –ದೇವಯಾ. ಸ್ತ್ರೀ:** [–ದೇವತಾ]ದಿಕ್ಕಿನ ಅಧಿಷ್ಠಾತ್ರಿ ದೇವಿ. **–ಪೋಕ್ಖಿ. ಪು:** [–ಪ್ರೋಕ್ಷಿನ್] ಒಂದು ಬಗೆಯ ವಾನಪ್ರಸ್ಥ (ಔಪ). **–ಭಾಅ. ಪು:** [–**ಭಾಗ**] ದಿಗ್ಭಾಗ. **–ಮತ್ತ. ನ:** [–**ಮಾತ್ರ**] ಅತ್ಯಲ್ಪ,

ಸಂಕ್ಷಿಪ್ತ(ಉಪ). –ಮೋಹ. ಪು: [–ಮೋಹ] ದಿಕ್ಕಿನ ಭ್ರಮೆ. –ಯತ್ತಾ. ಸ್ತ್ರೀ: [–ಯಾತ್ರಾ] ದೇಶಾಟನೆ, ಸಂಚಾರ. –ಯತ್ತಿಯ. –ವಿ: [–ಯಾತ್ರಿಕ] ದಿಕ್ಕುಗಳಲ್ಲಿ ಸಂಚರಿಸುವವನು (ಉವಾ). –ಲೋಯ. ಪು: [–ಆಲೋಕ] ದಿಕ್ಕಿನ ಪ್ರಕಾಶ(ವಿಪಾ) –ವಹ. ಪು: [–ಪಥ] ದಿಕ್‌ರೂಪಿ ಮಾರ್ಗ(ಪಉಮ). –ವಾಲ. ಪು: [–ಪಾಲ] ದಿಕ್ಕಿನ ಅಧಿಪತಿ, ದಿಕ್ಪಾಲಕ. –ವೇರಮಾಣ. ನ: [–ವಿರಮಣ] ಜೈನ ಗೃಹಸ್ಥನು ಪಾಲಿಸುವ ಒಂದು ನಿಯಮ; ದಿಕ್ಕಿನಲ್ಲಿ ಸಂಚರಿಸುವ ಅಳತೆ (ಪರಿಮಾಣ) ಮಾಡುವುದು. –ವ್ವಯ. ನ: [–ವ್ರತ] '–ವೇರಮಾಣ' ಶಬ್ದವನ್ನು ನೋಡುವುದು. ಶಬ್ದವನ್ನು ನೋಡುವುದು(ಔಪ). –ಸೊತ್ಥಿಯ. ಪು: [–ಸ್ವಸ್ತಿಕ] ಸ್ವಸ್ತಿಕ –ವಿಶೇಷ(ಔಪ). –ಸೋವತ್ಥಿಯ. ಪು: [–ಸೌವಸ್ತಿಕ] ದಕ್ಷಿಣಾವರ್ತ ಸ್ವಸ್ತಿಕ(ಪಣ್ಣ), ನ: ಒಂದು ದೇವ –ವಿಮಾನ, ರುಚಕ ಪರ್ವತದ ಒಂದು ಶಿಖರ(ಠಾ). –ಹತ್ಥಿ. ಪು: [–ಹಸ್ತಿನ್] ದಿಕ್ಕುಗಳಲ್ಲಿ ನೆಲೆಸಿರುವ ಐರಾವತವೇ ಮೊದಲಾದ ಎಂಟು ದಿಗ್ಗಜಗಳು. –ಹತ್ಥಿಕೂಡ. [–ಹಸ್ತಿಕೂಟ] ದಿಕ್ಕುಗಳಲ್ಲಿ ಇರುವ ಆನೆಯ ಆಕೃತಿಯ –ಪದ್ಮೋತ್ತರ, ನೀಲವಂತ, ಸುಹಸ್ತಿ, ಅಂಜನಗಿರಿ, ಕುಮುದ, ಪಲಾಶ, ಅವತಂಸ ಮತ್ತು ರತ್ನಗಿರಿಯೇ ಮೊದಲಾದ ಎಂಟು ಶಿಖರಗಳು.

ದಿಸೇಭ. ಪು: [ದಿಗಿಭ] ದಿಗ್ಗಜ(ಗಾ)

ದಿಸ್ಸ}. 'ದಕ್ಖ'=ದೃಶ್' ಶಬ್ದವನ್ನು ನೋಡುವುದು.

ದಿಸ್ಸಂ}.

ದಿಸ್ಸಮಾಣ}.

ದಿಸ್ಸ. ವಿ: [ದೃಶ್ಯ] ನೋಡಲು ಯೋಗ್ಯವಾದ, ಪ್ರತ್ಯಕ್ಷ ಜ್ಞಾನದ ವಿಷಯ.

ದಿಸ್ಸಾ. 'ದಕ್ಖ=ದೃಶ್' ಶಬ್ದವನ್ನು ನೋಡುವುದು.

ದಿಹಾ. ಅ: [ದ್ವಿಧಾ] ಎರಡು ಬಗೆಯ

ದಿಹಿ. ಸ್ತ್ರೀ: [ಧೃತಿ] ಧೈರ್ಯ, –ಮ. ವಿ: [–ಮತ್] ಧೈರ್ಯಶಾಲಿ, ಧೀರ

ದೀಅ. 'ದೀವ=ದೀಪ' ಶಬ್ದವನ್ನು ನೋಡುವುದು.

ದೀಅಅ. 'ದೀವಯ' ಶಬ್ದವನ್ನು ನೋಡುವುದು(ಗಾ)

ದೀಅಮಾಣ. 'ದಾ=ದಾ' ಶಬ್ದವನ್ನು ನೋಡುವುದು.

ದೀಣ.ವಿ:[ದೀನ] ಬಡವ, ದುಃಖಿತ, ಶೋಕಗ್ರಸ್ತ(ವಿಪಾ)

ದೀಣಾರ. ಪು: [ದೀನಾರ] ಬಂಗಾರದ ಒಂದು ನಾಣ್ಯ

ದೀಪಕ}. (ಅಪ). ಪುಂನ: [ದೀಪಕ] ಒಂದು ಛಂದಸ್ಸು,

ದೀಪಕ್ಕ}. ಅಲಂಕಾರ

ದೀವ. 'ದಿವ=ದಿವ್' ಶಬ್ದವನ್ನು ನೋಡುವುದು.

ದೀವ. ಸಕ: [ದೀಪಯ್] ಉರಿಸು, ಪ್ರಕಾಶಗೊಳಿಸು, ತೀಕ್ಷ್ಣಗೊಳಿಸು, ಪ್ರಕಟಗೊಳಿಸು, ನಿವೇದಿಸು(ಓಘ)

ದೀವ. ಪು: [ದೀಪ] ದೀಪ, ದೀವಿಗೆ, ಬೆಳಕು(ಚಾರು), ಪ್ರಕಾಶ ಬೀರುವ ಕೆಲಸ ಮಾಡುವ ಕಲ್ಪವೃಕ್ಷದ ಒಂದು ಜಾತಿ. –ಚಂಪಯ. ನ: [–ಚಂಪಕ] ದೀಪವನ್ನು ಮುಚ್ಚುವುದು(ಭಗ). ದೀವಾಲೀ. ಸ್ತ್ರೀ: [ದೀಪಾಲೀ] ದೀಪಗಳ ಪಂಕ್ತಿ, ಸಾಲು, ಕಾರ್ತಿಕ ಮಾಸದಲ್ಲಿ ಬರುವ ದೀಪಾವಳಿ ಹಬ್ಬ. ದೀವಾವಲೀ. ಸ್ತ್ರೀ: [ದೀಪಾವಲೀ] ಅದೇ ಅರ್ಥ.

ದೀವ. ಪು: [ದ್ವೀಪ] ಸುತ್ತಲೂ ನೀರಿರುವ ಭೂಭಾಗ. ದ್ವೀಪಕುಮಾರ ದೇವ ಎಂಬ ಭವನಪತಿ ದೇವತೆಗಳ ಒಂದು ಜಾತಿ(ಪಣ್ಣ). –ಕುಮಾರ. ಪು: [–ಕುಮಾರ] ಒಂದು ದೇವಜಾತಿ. –ಣ್ಣು. ವಿ: [–ಜ್ಞಾ] ದ್ವೀಪದ ಹಾದಿಯನ್ನು ಬಲ್ಲವನು. –ಸಾಗರಪನ್ನತ್ತಿ. ಸ್ತ್ರೀ: [–ಸಾಗರಪ್ರಜ್ಞಪ್ತಿ] ದ್ವೀಪ ಮತ್ತು ಸಮುದ್ರದ ವರ್ಣನೆಗಳಿರುವ ಒಂದು ಜೈನ ಗ್ರಂಥ –ವಿಶೇಷ(ಠಾ)

ದೀವ. ಪು: [ದ್ವೀಪ] ಸೌರಾಷ್ಟ್ರದ ಒಂದು ನಗರ, ದೀವ.

ದೀವಅ. ಪು: [ದೇ] ಓತಿಕೇತ

ದೀವಅ. ಪು: [ದೀಪಕ] ದೀಪ, ದೀವಿಗೆ, ಬೆಳಕು, ಬೆಳಗುವ, ಪ್ರಕಾಶವನ್ನುಂಟುಮಾಡುವ(ಕುಮಾ). ನ: ಛಂದಸ್ಸು, ಅಲಂಕಾರ

ದೀವಂಗ. ಪು: [ದೀಪಾಂಗ] ದೀಪದ ಹಾಗೆ ಬೆಳಕು ಬೀರುವ ಕೆಲಸವನ್ನು ಮಾಡುವ ಕಲ್ಪವೃಕ್ಷದ ಒಂದು ಜಾತಿ(ಠಾ)

ದೀವಗ. 'ದೀವಅ=ದೀಪಕ' ಶಬ್ದವನ್ನು ನೋಡುವುದು.

ದೀವಡ. ಪು: [ದೇ] ಒಂದು ಜಲಚರ ಪ್ರಾಣಿ

ದೀವಣ. ನ: [ದೀಪನ] ಪ್ರಕಾಶನ, ಬೆಳಗುವುದು, ಉರಿಸುವುದು.

ದೀವಣಾ. ಸ್ತ್ರೀ: [ದೀಪನಾ] ಪ್ರಕಾಶ, ಬೆಳಕು, ಬೆಳಗುವುದು

ದೀವಣಿಜ್ಜ. ವಿ: [ದೀಪನೀಯ] ಜಠರಾಗ್ನಿಯನ್ನು ಹೆಚ್ಚಿಸುವ, ದೇದೀಪ್ಯಮಾನವಾದ, ಉರಿಸಲು ಅರ್ಹವಾದ(ಪಣ್ಣ)

ದೀವಯಂ. 'ದೀವ=ದಿವ್ ಶಬ್ದವನ್ನು ನೋಡುವುದು.
ದೀವಯುಂತ. ದೀವ=ದೀಪಂಯ್' ಶಬ್ದವನ್ನು ನೋಡುವುದು.
ದೀವಾಯಣ. ಪು: [ದ್ವೀಪಾಯನ, ದ್ವೈಪಾಯನ] ಮುಂದೆ ಬರುವ ಉತ್ಸರ್ಪಿಣೀ ಕಾಲದಲ್ಲಿ ಭರತ ಕ್ಷೇತ್ರದಲ್ಲಿ ತೀರ್ಥಂಕರನಾದ ಒಬ್ಬ ಋಷಿ(ಕುಪ್ರ)
ದೀವಿ}. ಪು: [ದ್ವೀಪಿನ್] ಹುಲಿಯ ಜಾತಿಗೆ ಸೇರಿದ
ದೀವಿಅ}. ಚಿರತೆ(ಗಾ)
ದೀವಿಅ. ವಿ: [ದೀಪಿತ] ಬೆಂಕಿ ಹೊತ್ತಿಸಲ್ಪಟ್ಟ, ಪ್ರಕಾಶಗೊಳಿಸಲ್ಪಟ್ಟ (ಪಉಮ) ಬೆಳಗಲ್ಪಟ್ಟ (ಓಘ)
ದೀವಿಅಂಗ. ಪು: [ದೀಪಿಕಾಂಗ] ಕತ್ತಲೆಯನ್ನು ಹೋಗಲಾಡಿಸುವ ಕಲ್ಪವೃಕ್ಷದ ಒಂದು ಪ್ರಭೇದ
ದೀವಿಆ. ಸ್ತ್ರೀ: [ದೇ] ಗೆದ್ದಲುಹುಳ, ಬೇಟೆಗಾರನು ಇತರೆ ಗಂಡು ಜಿಂಕೆಗಳನ್ನು ಆಕರ್ಷಿಸಲು ಒಡ್ಡಿದ ಹೆಣ್ಣು ಜಿಂಕೆ. ಬೇಟೆಗಾರನು ಪಂಜರದಲ್ಲಿ ಬಂಧಿಸಿಟ್ಟ ತಿತ್ತಿರಿ ಹಕ್ಕಿ
ದೀವಿಆ. ಸ್ತ್ರೀ: [ದೀಪಿಕಾ] ಚಿಕ್ಕ ದೀಪ
ದೀವಿಚ್ಚಗ. ವಿ: [ದ್ವೈಪ್ಯ] ದ್ವೀಪದಲ್ಲಿ ಹುಟ್ಟಿದ(ಣಾಯಾ)
ದೀವೀ(ಅಪ). 'ದೇವೀ' ಶಬ್ದವನ್ನು ನೋಡುವುದು.
ದೀವೀ. ಸ್ತ್ರೀ: [ದೀಪಿಕಾ] ಸಣ್ಣ ದೀಪ
ದೀವೂಸವ. ಪು: [ದೀಪೋತ್ಸವ] ಕಾರ್ತೀಕದ ಅಮಾವಾಸ್ಯೆಯ ದಿನ, ದೀಪಾವಳಿ
ದೀಸಂತ}. 'ದಕ್ಖ=ದೃಶ್' ಶಬ್ದವನ್ನು ನೋಡುವುದು.
ದೀಸಮಾಣ}.
ದೀಹ. ವಿ: [ದೀರ್ಘ] ಉದ್ದವಾದ, ಲಂಬವಾದ(ಠಾ), ಪು: ಎರಡು ಮಾತ್ರೆಗಳುಳ್ಳ ಸ್ವರಾಕ್ಷರ, ಕೋಸಲ ದೇಶದ ಒಬ್ಬ ರಾಜ. **–ಕಾಲಿಗೀ.** ಸ್ತ್ರೀ: [–ಕಾಲಿಕೀ] ಒಂದು ಸಂಜ್ಞಾ–ವಿಶೇಷ. ಇದರಿಂದ ತುಂಬ ಹಿಂದಿನ ಭೂತಕಾಲದ ವಾತುಗಳನ್ನು ನೆನಪಿಟ್ಟುಕೊಳ್ಳಲು ಮತ್ತು ಸುದೀರ್ಘ ಭವಿಷ್ಯತ್ ಕಾಲದ ಬಗ್ಗೆ ವಿಚಾರಮಾಡಲು ಸಾಧ್ಯವಾಗುತ್ತದೆ. **–ಕಾಲಿಯ.** ವಿ: [–ಕಾಲಿಕ] ದೀರ್ಘ ಕಾಲದಲ್ಲಿ ಉದಿಸಿದ, ಚಿರಂತನವಾದ. ದೀರ್ಘಕಾಲಕ್ಕೆ ಸಂಬಂಧಿಸಿದ. **–ಜತ್ತಾ.** ಸ್ತ್ರೀ: [–ಯಾತ್ರಾ] ದೀರ್ಘ ಪ್ರಯಾಣ, ಮೃತ್ಯು. **–ಡಕ್ಕ.** ವಿ: [–ದಷ್ಟ] ಹಾವು ಕಚ್ಚಿದವನು–ಣಿದ್ದಾ. ಸ್ತ್ರೀ: [–ನಿದ್ರಾ] ಮರಣ, ಸಾವು. **–ದಂತ.** ಪು: [ದಂತ] ಭರತವರ್ಷದ ಒಬ್ಬ ಭಾವೀ ಚಕ್ರವರ್ತಿ, ಒಬ್ಬ ಜೈನಮುನಿ. **–ದಂಸಿ.** ವಿ: [–ದರ್ಶಿನ್] ದೂರದರ್ಶಿ. **–ದಸಾ.** ವಿ: [–ದಶಾ] ಒಂದು ಜೈನ ಗ್ರಂಥ ವಿಶೇಷ. **–ದಿಟ್ಠಿ.** ವಿ: [–ದೃಷ್ಟಿ] ದೂರದರ್ಶಿ, ಸ್ತ್ರೀ: ದೀರ್ಘ ದೃಷ್ಟಿಇರುವಿಕೆ. **–ಪಟ್ಠ.** ಪು: [–ಪೃಷ್ಠ] ಸರ್ಪ(ಉಪ) ಯಮರಾಜನ ಒಬ್ಬ ಮಂತ್ರಿ. **–ಪಾಸ.** ಪು: [–ಪಾರ್ಶ್ವ] ಐರಾವತ ಕ್ಷೇತ್ರದ ಹದಿನಾರನೇ ಭಾವೀ ಜಿನ –ದೇವ. **–ಪೇಹಿ.** ವಿ: [–ಪ್ರೇಕ್ಷಿನ್] ದೂರದರ್ಶಿ(ಪಉಮ) **–ಬಾಹು.** ಪು: [–ಬಾಹು] ಭರತಕ್ಷೇತ್ರದಲ್ಲಿ ಹುಟ್ಟಲಿರುವ ಮೂರನೇ ವಾಸುದೇವ. ಭಗವಾನ್ ಚಂದ್ರಪ್ರಭನ ಪೂರ್ವ ಜನ್ಮದ ಹೆಸರು. **–ಭದ್ದ.** ಪು: [ಭದ್ರ] ಒಬ್ಬ ಜೈನ ಮುನಿ. **–ಮದ್ಧ.** ವಿ: [ದೀರ್ಘಾಧ್ವ] ಬಹಳ ಉದ್ದವಾದ ರಸ್ತೆಯುಳ್ಳ(ಣಾಯಾ). **–ಮದ್ಧ.** ವಿ:[ದೀರ್ಘಾದ್ಧ] ಬಹಳ ಹಿಂದಿನಿಂದಲೂ ಹೊಂದಲು ಯೋಗ್ಯವಾದ್ದು(ಠಾ). **–ಮಾಉ.** ನ: [ದೀರ್ಘಾಯುಷ] ಬಹಳ ದೀರ್ಘವಾದ ಆಯುಷ್ಯ. **–ರತ್ತ, –ರಾಯ.** ಪುಂನ: [–ರಾತ್ರ] ದೀರ್ಘವಾದ ರಾತ್ರಿ. ಬಹು ರಾತ್ರಿಗಳನ್ನುಳ್ಳ ಚಿರಕಾಲ. **–ರಾಯ.** ಪು: [–ರಾಜ] ಒಬ್ಬರಾಜ. **–ಲೋಗ.** ಪು: [–ಲೋಕ] ವನಸ್ಪತಿಯ ಜೀವ (ಆಚಾ). **–ಲೋಗಸತ್ಥ.** ನ: [–ಲೋಕಶಸ್ತ್ರ] ಅಗ್ನಿ **–ವೇಯಡ್ಢ.** ಪು: [–ವೈತಾಢ್ಯ] ತನ್ನ ಹೆಸರಿನಿಂದ ಖ್ಯಾತವಾದ ಪರ್ವತ(ಠಾ). **–ಸುತ್ತ.** ನ:[–ಸೂತ್ರ] ಉದ್ದವಾದ ದಾರ(ನಿಚೂ), ಆಲಸ್ಯ. **–ಸೇಣ.** ಪು: [–ಸೇನ] ಅನುತ್ತರ ದೇವಲೋಕ ಗಾಮಿಯಾದ ಮುನಿ. ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ಐರಾವತ ಕ್ಷೇತ್ರದ ಎಂಟನೇ ಜಿನದೇವ.
ದೀಹಾಉ, ದೀಹಾಉಯ. ವಿ: [ದೀರ್ಘಾಯುಷ್, ದೀರ್ಘಾಯುಷ್ಕ] ದೀರ್ಘವಾದ ಆಯುಸ್ಸುಳ
ದೀಹ. 'ದಿಆಹ' ಶಬ್ದವನ್ನು ನೋಡುವುದು.
ದೀಹಂಧ. ವಿ: [ದಿವಸಾಂಧ] ಹಗಲನ್ನು ಕಣ್ಣಿನಿಂದ ನೋಡಲು ಅಸಮರ್ಥನಾದವನು(ಪ್ರಾಸೂ)
ದೀಹಜೀಹ. ಪು: [ದೇ] ಶಂಖ
ದೀಹರ. 'ದೀಹ=ದೀರ್ಘ' ಶಬ್ದವನ್ನು ನೋಡುವುದು. **–ಚ್ಛ.** ವಿ: [–ದೀರ್ಘಾಕ್ಷ] ಬಹಳ ಉದ್ದವಾದ ಕಣ್ಣುಗಳುಳ್ಳವನು(ಸುಪಾ)

ದೀಹರಿಯ. ವಿ: [ದೀರ್ಘಿತ] ಉದ್ದವಾಗಿ ಮಾಡಲ್ಪಟ್ಟ
ದೀಹಿಯಾ. ಸ್ತ್ರೀ: [ದೀರ್ಘಿಕಾ] ಬಾವಿ, ಜಲಾಶಯ, ಸರೋವರ
ದೀಹೀಕರ. ಸಕ: [ದೀರ್ಘೀ+ಕೃ] ಉದ್ದಗೊಳಿಸು(ಉದು)
ದು. 'ತು' ಅನ್ನು ನೋಡುವುದು
ದು. ದವ=ದ್ರು, ಶಬ್ದವನ್ನು ನೋಡುವುದು.
ದು. ವಿ.ಬ: [ದ್ವಿ] ಎರಡು, ಸಂಖ್ಯಾವಿಶೇಷವುಳ್ಳದ್ದು.
ದು. ಪು: [ದ್ರು] ವೃಕ್ಷ, ಮರ
ದು. ಅ: [ದ್ವಿಸ್] ಎರಡುಬಾರಿ, ಎರಡು ಸಲ
ದು. ಅ: [ದುರ್] ಅಭಾವ, ದುಷ್ಟತನ, ಕೆಟ್ಟ, ಕಷ್ಟ, ಕಠಿಣವಾದ, ನಿಂದೆ ಈ ಮುಂತಾದ ಅರ್ಥಗಳನ್ನು ಸೂಚಿಸುವ ಅವ್ಯಯ (ಪ್ರಾಸೂ)
ದುಅ. ನ: [ದ್ವಿಕ] ಜೋಡಿ, ಜೊತೆ, ಯುಗಳ
ದುಅ. ನ: [ದ್ರುತ] ಅಭಿನಯ ವಿಶೇಷ, ವಿ: ಪೀಡಿಸಲ್ಪಟ್ಟ, ನೋಯಿಸಲ್ಪಟ್ಟ, ವೇಗದಿಂದ ಕೂಡಿದ, ಕ್ರಿ. ವಿ: ಶೀಘ್ರ, ಬೇಗನೆ, –ವಿಲಂಬಿಅ. ನ: [–ವಿಲಂಬಿತ] ಒಂದು ಛಂದಸ್ಸು
ದುಅಕ್ಖರ. ಪು: [ದೇ] ಷಂಡ, ನಪುಂಸಕ(ದೇ)
ದುಅಕ್ಖರ. ವಿ: [ದ್ವ್ಯಕ್ಷರ] ಅಜ್ಞಾನ, ಮೂರ್ಖ, ಅಲ್ಪಜ್ಞ, ಪುಂಸ್ತ್ರೀ: ಆಳು, ಸೇವಕ. ಸ್ತ್ರೀ: –ರಿಯಾ
ದುಅಣುಅ. ಪು: [ದ್ವ್ಯಣುಕ] ಎರಡು ಪರಮಾಣುಗಳ ಹೆಗಲು
ದುಅರ. ವಿ: [ದುಷ್ಕರ] ಕಷ್ಟದ, ಕಷ್ಟದಿಂದ ಮಾಡಬಹುದಾದ
ದುಅಲ್ಲ. ನ: [ದುಕೂಲ] ಬಟ್ಟೆ, ವಸ್ತ್ರ, ಸೂಕ್ಷ್ಮ ವಸ್ತ್ರ. 'ದುಕೂಲ' ಶಬ್ದವನ್ನು ನೋಡುವುದು.
ದುಆಇ. ಪು: [ದ್ವಿಜಾತಿ] ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳು
ದುಆಇಕ್ಖ. ವಿ: [ದುರಾಖ್ಯೇಯ] ದುಃಖದಿಂದ ಹೇಳಬಹುದಾದ
ದುಆರ. ನ: [ದ್ವಾರ] ಬಾಗಿಲು
ದುಆರಾಹ. ವಿ: [ದುರಾರಾಧ] ಯಾರ ಆರಾಧನೆ ಕಷ್ಟವಾಗಿದೆಯೋ ಅವನು
ದುಆರಿಆ. ಸ್ತ್ರೀ: [ದ್ವಾರಿಕಾ] ಸಣ್ಣ ಬಾಗಿಲು, ರಹಸ್ಯ ದ್ವಾರ. ಕಳ್ಳಬಾಗಿಲು(ಣಾಯಾ)
ದುಆವತ್ತ. ನ: [ದ್ವಾವರ್ತ] ದೃಷ್ಟಿವಾದದ ಒಂದು ಸೂತ್ರ

ದುಇಅ}. ವಿ: [ದ್ವಿತೀಯ] ಎರಡನೆಯ
ದುಇಜ್ಜ}.
ದುಈಅ}.
ದುಉಂಛ}. ಸಕ: [ಜುಗುಪ್ಸ್] ನಿಂದಿಸು, ತಿರಸ್ಕಾರ
ದುಉಚ್ಛ}. ತೋರು, ಅಸಹ್ಯ ತೋರು
ದುಇಲ್ಲ(ಅಪ). ವಿ: [ದ್ವಿಚತುರ] ಎರಡು –ನಾಲ್ಕು, ಎರಡು ಅಥವಾ ನಾಲ್ಕು
ದುಉಣ. ವಿ:[ದ್ವಿಗುಣ] ಎರಡರಷ್ಟು, ಎರಡುಪಟ್ಟು (ದೇ). –ಅರ. ವಿ:[–ತರ] ಎರಡರಷ್ಟಕ್ಕಿಂತ ಹೆಚ್ಚಿನ
ದುಉಣಿಅ. ವಿ: [ದ್ವಿಗುಣಿತ] ಮೇಲಿನ ಶಬ್ದವನ್ನು ನೋಡುವುದು.
ದುಊಲ. 'ದುಅಲ್ಲ' ಶಬ್ದವನ್ನು ನೋಡುವುದು.
ದುಂಡುಹ}. ಪು: [ದುಂದುಭ] ಸರ್ಪದ ಒಂದು
ದುಂದುಭ}. ಜಾತಿ, ಜ್ಯೋತಿಷ್ಕ ವಿಶೇಷವಾದ ಒಂದು ಮಹಾ ಗ್ರಹ.
ದುಂದುಭಿ. 'ದುಂದುಹಿ' ಶಬ್ದವನ್ನು ನೋಡುವುದು (ಭಗ)
ದುಂದುಮಿಅ. ನ: [ದೇ] ಕಂಠಧ್ವನಿ
ದುಂದುಮಿಣೀ. ಸ್ತ್ರೀ: [ದೇ] ರೂಪವಂತಳಾದ ಹೆಣ್ಣು, ಸ್ಫುರದ್ರೂಪಿಣಿ(ದೇ)
ದುಂದುಹಿ. ಪುಂಸ್ತ್ರೀ: [ದುಂದುಭಿ] ಭೇರಿ, ನಗಾರಿ(ಗಉಡ)
ದುಂಬವತೀ. ಸ್ತ್ರೀ: [ದೇ] ನದಿ(ದೇ)
ದುಕಡ. 'ದುಕ್ಕಡ' ಶಬ್ದವನ್ನು ನೋಡುವುದು.
ದುಕಪ್ಪ. 'ದುಕ್ಕಪ್ಪ' ಶಬ್ದವನ್ನು ನೋಡುವುದು.
ದುಕಮ್ಮ. ನ: [ದುಷ್ಕರ್ಮನ್] ಪಾಪ, ನಿಂದಿತವಾದ ಕಾರ್ಯ(ಭವಿ)
ದುಕಾಲ. ಪು: [ದುಷ್ಕಾಲ] ಕ್ಷಾಮ, ಬರಗಾಲ
ದುಕಿಯ. 'ದುಕ್ಕಯ' ಶಬ್ದವನ್ನು ನೋಡುವುದು(ಭವಿ)
ದುಕೂಲ. ಪು: [ದುಕೂಲ] ವೃಕ್ಷ–ವಿಶೇಷ, ವಿ: ದುಕೂಲ ವೃಕ್ಷದ ತೊಗಟೆಯಿಂದ ಮಾಡಿದ ವಸ್ತ್ರ(ಣಾಯಾ)
ದುಕ್ಕಂದಿರ. ವಿ: [ದುಷ್ಕ್ರಂದಿನ್] ಬಹಳವಾಗಿ ಅಳುವವನು, ಆಕ್ರಂದನ ಮಾಡುವವ(ಭವಿ)
ದುಕ್ಕಡ. ನ: [ದುಷ್ಕೃತ] ಪಾಪ ಕರ್ಮ, ನಿಂದನೀಯ ನಡಳಿಕೆ
ದುಕ್ಕಡಿ}. ವಿ: [ದುಷ್ಕೃತಿನ್, –ಕ] ಕೆಟ್ಟಕೆಲಸವನ್ನು
ದುಕ್ಕಡಿಯ}. ಮಾಡುವವನು, ಪಾಪಿ(ಸೂಅ)
ದುಕ್ಕಪ್ಪ. ಪು: [ದುಷ್ಕಲ್ಪ] ಪತಿತ ಸಾಧುವಿನ ಆಚಾರ, ಶಿಥಿಲ ಸಾಧುವಿನ ಆಚರಣೆ.

ದುಕ್ಕಮ್ಮ. ನ: [**ದುಷ್ಕರ್ಮನ್**] ಕೆಟ್ಟಕೆಲಸ(ಸುಪಾ) ವಿ: ಪಾಪ ಕೆಲಸವನ್ನು ಮಾಡುವವನು.

ದುಕ್ಕಯ. ನ: [**ದುಷ್ಕೃತ**] ಪಾಪ ಕೆಲಸ(ಪಣ್ಣ)

ದುಕ್ಕರ. ವಿ: [**ದುಷ್ಕರ**] ಬಹಳ ಕಷ್ಟದಿಂದ ಮಾಡುವ ಕೆಲಸ. ಕಷ್ಟಸಾಧ್ಯವಾದ. **-ಆರಅ. ವಿ:** [**-ಕಾರಕ**] ಕಷ್ಟವಾದ ಕೆಲಸವನ್ನು ಮಾಡುವವನು(ಗಾ), ಕಠಿಣವಾದ ಕೆಲಸ ಮಾಡುವುದು. **-ಕಾರಿ. ವಿ:** [**-ಕಾರಿನ್**] **' -ಆರಅ' ಶಬ್ದವನ್ನು ನೋಡುವುದು.**

ದುಕ್ಕರ. ನ: [**ದೇ**] ಮಾಘ ಮಾಸದಲ್ಲಿ ರಾತ್ರಿಯ ನಾಲ್ಕೂ ಪ್ರಹರಗಳಲ್ಲಿ ಮಾಡುವ ಸ್ನಾನ.

ದುಕ್ಕರಕರಣ. ನ: [**ದುಷ್ಕರಕರಣ**] ಐದು ದಿನಗಳವರೆಗಿನ ನಿರಂತರ ಉಪವಾಸ

ದುಕ್ಕಹ. ವಿ: [**ದೇ**] ಅರೋಚಕಿ; ಯಾವುದರಲ್ಲೂ ರುಚಿಯನ್ನು ಕಾಣದವನು.

ದುಕ್ಕಾಲ. ಪು: [**ದುಷ್ಕಾಲ**] ಅಕಾಲ, ದುರ್ಭಿಕ್ಷ, ಕ್ಷಾಮ.

ದುಕ್ಕಿಯ. 'ದುಕ್ಕಯ' ಶಬ್ದವನ್ನು ನೋಡುವುದು.

ದುಕ್ಕುಕ್ಕಣಿಆ. ಸ್ತ್ರೀ: [**ದೇ**] ಪೀಕದಾನಿ, ಉಗುಳುವ ಪಾತ್ರೆ

ದುಕ್ಕುಲ. ನ: [**ದುಷ್ಕುಲ**] ನಿಂದಿತ ಕುಲ, ಕೆಟ್ಟ ಕುಲ

ದುಕ್ಕುಹ. ವಿ: [**ದೇ**] ಅಸಹನೆ, ಅಸಹಿಷ್ಣು, ರುಚಿಯಿಲ್ಲದ

ದುಕ್ಖ. ಪುಂನ: [**ದುಃಖ**] ಅಸುಖ, ಕಷ್ಟ, ಶೋಕ, ಕ್ಲೇಶ, ನೋವು, ಮನಸ್ಸಿನ ಕ್ಷೋಭೆ(ಆಚಾ). **ಕ್ರಿವಿ:** ಕಷ್ಟದಿಂದ, ತೊಂದರೆಯಿಂದ, ವಿ: ದುಃಖವುಳ್ಳ, ಶೋಕದಿಂದ ಕೂಡಿದ, ದುಃಖಿತ. **ಸ್ತ್ರೀ: -ಕ್ಖಾ** (**ಭಗ**). **-ಕರ. ವಿ:** [**-ಕರ**] ದುಃಖವುಂಟುಮಡುವ, **-ತ್ತ. ವಿ:** [**ದುಃಖಾರ್ತ**] **ದುಃಖದಿಂದ** ಪೀಡಿತನಾದ(ಸುಪಾ). **-ತ್ತಗವೇಸಣ. ನ:** [**ದುಃಖಾರ್ತಗವೇಷಣ**] ದುಃಖದಿಂದ ಪೀಡಿತರಾದವರ ಸೇವೆ, ಶುಶ್ರೂಷೆ. **-ಮಜ್ಜಿಯ. ವಿ:** [**ಅರ್ಜಿತದುಃಖ**] ದುಃಖವನ್ನು ಸಂಪಾದಿಸಿದವನು(ಉತ್ತ). **ದುಕ್ಖಾರಾಹ. ವಿ:** [**ದುಃಖಾರಾಧ್ಯ**] ದುಃಖದಿಂದಾಗಿ ಆರಾಧನೆಗೆ ಅರ್ಹನಾದವನು **ದುಕ್ಖಾವಹ. ವಿ:** [**ದುಃಖಾವಹ**] ದುಃಖವನ್ನು ತಂದುಕೊಡುವ (ಪಉಮ) **ದುಕ್ಖಾಸಿಯಾ. ಸ್ತ್ರೀ:** [**ದುಃಖಾಸಿಕಾ**] ವೇದನೆ, ನೋವು, **'ದುಹ=ದುಃಖ' ಶಬ್ದವನ್ನು ನೋಡುವುದು.**

ದುಕ್ಖ. ನ: [**ದೇ**] ಜಘನ, ಹೆಣ್ಣಿನ ಸೊಂಟದ ಹಿಂಭಾಗ, ಕಟಿಪ್ರದೇಶ, ನಿತಂಬ

ದುಕ್ಖ. ಅಕ: [**ದುಃಖಾಯ್**] ನೋವುಂಟುಮಾಡು, **ಸಕ:** ದುಃಖಿಯನ್ನಾಗಿ ಮಾಡು **ಪ್ರ:** ದುಕ್ಖಾಮಿ, ದುಕ್ಖಂತಿ

ದುಕ್ಖಡ. 'ದುಕ್ಕರ' ಶಬ್ದವನ್ನು ನೋಡುವುದು(ಚಾರು)

ದುಕ್ಖಣ. ನ: [**ದುಃಖನ**] ದುಃಖವುಂಟಾಗುವುದು, ನೋವಾಗುವುದು(ಉಪ)

ದುಕ್ಖಮ. ವಿ: [**ದುಃಕ್ಷಮ**] ಅಸಮರ್ಥ, ಅಶಕ್ಯ(ಉತ್ತ)

ದುಕ್ಖರ. 'ದುಕ್ಕರ' ಶಬ್ದವನ್ನು ನೋಡುವುದು(ಸ್ವಪ್ನ)

ದುಕ್ಖರಿಯ. ಪು: [**ದುಷ್ಕರಿಕ**] ಆಳು, ಸೇವಕ(ನಿಚೂ)

ದುಕ್ಖರಿಯಾ. ಸ್ತ್ರೀ: [**ದುಷ್ಕರಿಕಾ**] ಸೇವಕಿ, ದಾಸಿ, ವೇಶ್ಯೆ

ದುಕ್ಖಲ್ಲಿಯ(ಅಪ). ವಿ: [**ದುಃಖಿತ**] ದುಃಖದಿಂದ ಕೂಡಿದ(ಭವಿ)

ದುಕ್ಖವಿಅ. ವಿ: [**ದುಃಖಿತ**] ದುಃಖಿಯಾಗಿಸಲಾದ (ಉಪ)

ದುಕ್ಖಾವ. ಸಕ: [**ದುಃಖಯ್**] ದುಃಖವನ್ನುಂಟು ಮಾಡುವುದು, ದುಃಖಿಯನ್ನಾಗಿಸುವುದು

ದುಕ್ಖಾವಣಯಾ. ಸ್ತ್ರೀ: [**ದುಃಖನಾ**] ದುಃಖಿಯನ್ನಾಗಿ ಸುವುದು, ನೋವುಂಟುಮಾಡುವುದು(ಭಗ)

ದುಕ್ಖಿ. ವಿ: [**ದುಃಖಿನ್**] ದುಃಖಿ, ದುಃಖದಿಂದ ಕೂಡಿದ(ಆಚಾ)

ದುಕ್ಖಿಅ. ವಿ: [**ದುಃಖಿತ**] ದುಃಖಿ, ದುಃಖದಿಂದ ಕೂಡಿದ

ದುಕ್ಖುತ್ತರ. ವಿ: [**ದುಃಖೋತ್ತಾರ**] ದುಃಖದಿಂದ ಪಾರುಮಾಡಲ್ಪಟ್ಟವನು, ದುಃಖದಿಂದ ಪಾರುಮಾಡಲು ಕಷ್ಟವಾದವನು(ಪಣ್ಣ)

ದುಕ್ಖುತ್ತೋ. ಅ: [**ದ್ವಿಸ್**] ಎರಡು ಬಾರಿ, ಎರಡು ಸಲ

ದುಕ್ಖುರ. 'ದುಖುರ' ಶಬ್ದವನ್ನು ನೋಡುವುದು

ದುಕ್ಖುಲ. 'ದುಕ್ಕುಲ' ಶಬ್ದವನ್ನು ನೋಡುವುದು

ದುಕ್ಖೋಹ. ಪು: [**ದುಕ್ಖೌಘ**] ದುಃಖರಾಶಿ(ಪಉಮ)

ದುಕ್ಖೋಹ. ವಿ: [**ದುಃಕ್ಷೋಭ**] ಸುಸ್ಥಿರ(ಸುಪಾ)

ದುಖಂಡ. ವಿ: [**ದ್ವಿಖಂಡ**] ಎರಡು ಎರಡು ತುಣುಕುಗಳುಳ್ಳ, ಎರಡು ಭಾಗಗಳುಳ್ಳ(ಉಪ)

ದುಖುತ್ತೋ. 'ದುಕ್ಖುತ್ತೋ' ಶಬ್ದವನ್ನು ನೋಡುವುದು

ದುಖುರ. ಪು: [**ದ್ವಿಖುರ**] ಎರಡು ಗೊರಸುಗಳುಳ್ಳ ಪ್ರಾಣಿ, ಹಸು, ಎಮ್ಮೆ ಇತ್ಯಾದಿ(ಪಣ್ಣ)

ದುಗ. ನ: [**ದ್ವಿಕ**] ಎರಡು, ಜೊತೆ, ಜೋಡಿ, ಯುಗಲ

ದುಗಂಛ. 'ದುಗುಂಛ' ಶಬ್ದವನ್ನು ನೋಡುವುದು

ದುಗಂಛಣಾ. ಸ್ತ್ರೀ: [**ಜುಗುಪ್ಸನಾ**] ತಿರಸ್ಕಾರ, ನಿಂದೆ, ಅಸಹ್ಯ(ಪಉಮ)

ದುಗಂಛಾ. ಸ್ತ್ರೀ: [ಜುಗುಪ್ಸಾ] ಮೇಲಿನ ಶಬ್ದವನ್ನು ನೋಡುವುದು

ದುಗಂಧ. 'ದುಗ್ಗಂಧ' ಶಬ್ದವನ್ನು ನೋಡುವುದು

ದುಗಚ್ಛ}. ಸಕ: [ಜುಗುಪ್ಸ್] ತಿರಸ್ಕರಿಸು. ನಿಂದಿಸು,

ದುಗುಂಛ}. ಅಸಹ್ಯಿಸು

ದುಗಸಂಪುಣ್ಣ. ನ: [ದ್ವಿಕಸಂಪೂರ್ಣ] ಇಪ್ಪತ್ತು ದಿನಗಳವರೆಗಿನ ನಿರಂತರ ಉಪವಾಸ

ದುಗುಂಛಗ. ವಿ: [ಜುಗುಪ್ಸಕ] ತಿರಸ್ಕಾರ ತೋರುವವನು (ಆವ), ನಿಂದಿಸುವವನು

ದುಗುಂಛಣ. ನ: [ಜುಗುಪ್ಸನ] ತಿರಸ್ಕಾರ, ನಿಂದೆ, ಅಸಹ್ಯ

ದುಗುಂಛಣಾ 'ದುಗಂಛಣಾ' ಶಬ್ದವನ್ನು ನೋಡುವುದು

ದುಗುಂಛಾ. 'ದುಗಂಛಾ' ಶಬ್ದವನ್ನು ನೋಡುವುದು(ಭಗ), **–ಕಮ್ಮ.** ನ: [–ಕರ್ಮನ್] ಹಿಂದಿನ ಅರ್ಥವನ್ನು ನೋಡುವುದು(ಠಾ). **–ಮೋಹಣೀಯ]** ನ:[–ಮೋಹನೀಯ] ಕರ್ಮ –ವಿಶೇಷ; ಇದು ಹುಟ್ಟುವುದರಿಂದ ಜೀವಕ್ಕೆ ಅಶುಭ ವಸ್ತುವಿನ ಮೇಲೆ ತಿರಸ್ಕಾರವುಂಟಾಗುತ್ತದೆ(ಕಮ)

ದುಗುಂಛಿ. ವಿ: [ಜುಗುಪ್ಸಿನ್] ತಿರಸ್ಕಾರ ಮಾಡುವವನು, ಅಸಹ್ಯ ತೋರುವವನು

ದುಗುಂಛಿಯ. ವಿ: [ಜುಗುಪ್ಸಿತ] ತಿರಸ್ಕಾರಕ್ಕೊಳಗಾದ, ನಿಂದೆಗೊಳಗಾದ, ಅಸಹ್ಯಕ್ಕೊಳಗಾದ

ದುಗುಂದುಗ. ಪು: [ದೌಗುಂದುಕ] ಒಬ್ಬ ಸಮೃದ್ಧಶಾಲಿ –ದೇವ

ದುಗುಚ್ಛ. 'ದುಗುಂಛ' ಶಬ್ದವನ್ನು ನೋಡುವುದು

ದುಗುಣ. 'ದುಉಣ' ಶಬ್ದವನ್ನು ನೋಡುವುದು(ಠಾ)

ದುಗುಣ. ಸಕ: [ದ್ವಿಗುಣಯ್] ಎರಡರಷ್ಟು ಮಾಡು,

ದುಗುಣಿಅ. 'ದುಉಣಿಅ' ಶಬ್ದವನ್ನು ನೋಡುವುದು

ದುಗುಲ್ಲ}. 'ದುಅಲ್ಲ' ಶಬ್ದವನ್ನು ನೋಡುವುದು

ದುಗೂಲ}.

ದುಗೋತ್ತಾ. ಸ್ತ್ರೀ: [ದ್ವಿಗೋತ್ರಾ] ಒಂದು ಬಳ್ಳಿ.

ದುಗ್ಗ. ನ: [ದೇ] ದುಃಖ, ಕಷ್ಟ(ದೇ), ಕಟಿ, ಯುದ್ಧ, ಸಂಗ್ರಾಮ

ದುಗ್ಗ. ವಿ: [ದುರ್ಗ] ದುಃಖದಿಂದ ಪ್ರವೇಶಿಸಲು ಸಾಧ್ಯವಾಗುವಂಥ ದುರ್ಗಮ ಸ್ಥಾನ, ಪ್ರವೇಶಿಸಲು ಅಸಾಧ್ಯವಾದ್ದುಅಥವಾ ಕಷ್ಟದಿಂದ ಪ್ರವೇಶಿಸಲು ಸಾಧ್ಯವಾದ್ದು, ಪುಂನ: ಕೋಟೆ, ಕೊತ್ತಲು. **–ನಾಯಗ.** ಪು: –ನಾಯಕ ಕೋಟೆಯ ಒಡೆಯ, ಯಜಮಾನ

ದುಗ್ಗಇ. ಸ್ತ್ರೀ: [ದುರ್ಗತಿ] ನರಕವೇ ಮೊದಲಾದ ಕುತ್ಸಿತ ಯೋನಿ, ಕೆಟ್ಟ ಗತಿ(ಉತ್ತ), ವಿಪತ್ತು, ದುಃಖ. ದುರ್ದೆಶೆ, ಕಂಗಾಲುತನ, ದಾರಿದ್ರ್ಯ(ಪಣ್ಣ)

ದುಗ್ಗಂಠಿ. ಸ್ತ್ರೀ: [ದುರ್ಗ್ರಂಥಿ] ಕೆಟ್ಟ ಗ್ರಂಥಿ, ದುಷ್ಟ ಗ್ರಂಥಿ

ದುಗ್ಗಂಧ. ಪು: [ದುರ್ಗಂಧ] ಕೆಟ್ಟ ವಾಸನೆ. ವಿ: ದುರ್ವಾಸನೆಯುಳ್ಳ, ದುರ್ಗಂಧಿ(ಠಾ)

ದುಗ್ಗಂಧಿ. ವಿ: [ದುರ್ಗಂಧಿನ್] ದುರ್ವಾಸನೆ ಉಳ್ಳ

ದುಗ್ಗಮ. ವಿ: [ದುರ್ಗಮ] ಬಹಳ ಕಷ್ಟದಿಂದ ಹೋಗಲು ಸಾಧ್ಯವಾದ್ದು

ದುಗ್ಗಮ}. ವಿ: [ದುರ್ಗಮ] ಕಷ್ಟದಿಂದ ಪ್ರವೇಶಿಸಲು

ದುಗ್ಗಮ್ಮ}. ಸಾಧ್ಯವಾದ್ದು(ಓಘ) ಸಂಚರಿಸಲು ಅಶಕ್ಯವಾದ ನ: ಕಷ್ಟ

ದುಗ್ಗಯ. ವಿ: [ದುರ್ಗತ] ಬಡವ, ದರಿದ್ರ, ದುಃಖಿ, ವಿಪತ್ತಿನಲ್ಲಿರುವವನು(ಪಾಅ). ನ: ದಾರಿದ್ರ್ಯ, ದುಃಖ

ದುಗ್ಗಹ. ವಿ: [ದುರ್ಗ್ರಹ] ಕಷ್ಟದಿಂದ ಗ್ರಹಿಸಲು ಸಾಧ್ಯವಾದದ್ದು, ಹಿಡಿಯಲು ಕಷ್ಟವಾದ್ದು(ಉಪ)

ದುಗ್ಗಾ. ಸ್ತ್ರೀ: [ದುರ್ಗಾ] ಪಾರ್ವತಿ, ಗೌರಿ(ಪಾಅ), ಕಾಳಿಕಾದೇವಿ, ಪಕ್ಷಿ –ವಿಶೇಷ

ದುಗ್ಗಾಈ.}. ಸ್ತ್ರೀ: [ದುರ್ಗಾದೇವೀ] ಪಾರ್ವತಿ, ಗೌರಿ,

ದುಗಾವಿವೀ}. ಕಾಳಿ(ಷಡ್), **–ರಮಣ.** ಪು: [–ರಮಣ]

ದುಗ್ಗಾದೇಈ}. ಮಹಾದೇವ, ಶಿವ

ದುಗ್ಗಾವೀ}. ದೇವೀ ವಿಶೇಷ

ದುಗ್ಗಾಸ. ನ: [ದುರ್ಗ್ರಾಸ] ದುರ್ಭಿಕ್ಷ, ಕ್ಷಾಮ, ಬರಗಾಲ

ದುಗ್ಗಿಜ್ಝ. ವಿ: [ದುರ್ಗ್ರಾಹ್ಯ, ದುರ್ಗ್ರಹ] ಅತ್ಯಂತ ಕಷ್ಟದಿಂದ ಗ್ರಹಿಸಲು ಸಾಧ್ಯವಾದ್ದು(ಸುಪಾ)

ದುಗ್ಗೂಢ. ವಿ: [ದುರ್ಗೂಢ] ಅತ್ಯಂತ ರಹಸ್ಯವಾದ, ಅತ್ಯಂತ ಗೂಢವಾದ(ವವ)

ದುಗ್ಗೆಜ್ಝ. 'ದುಗ್ಗಿಜ್ಝ' ಶಬ್ದವನ್ನು ನೋಡುವುದು

ದುಗ್ಘಟ್ಟ. ವಿ: [ದುರ್ಘಟ್ಟ] ಯಾವುದನ್ನು ಕಷ್ಟಪಟ್ಟು ಮುಚ್ಚಲು ಸಾಧ್ಯವೋ ಅದು,

ದುಗ್ಘಡ. ವಿ: [ದುರ್ಘಟ] ಹೊಂದಿಸಲು ಕಷ್ಟವಾದ, ಸೇರಿಸಲು ಅಶಕ್ಯವಾದ, ಅಸಂಗತ.

ದುಗ್ಘಡಿಅ. ವಿ: [ದುರ್ಘಟಿತ] ಕಷ್ಟದಿಂದ ಕೂಡಿಸಬಹುದಾದ್ದು, ಕೆಟ್ಟ ರೀತಿಯಲ್ಲಿ ಮಾಡಲಾಗಿರುವ, ಆಗಿರುವ(ಗಾ)

ದುಗ್ಘರ. ನ: [ದುರ್ಗೃಹ] ಕೆಟ್ಟ ಮನೆ
ದುಗ್ಘಾಸ. ಪು: [ದುರ್ಗ್ರಾಸ] ಕ್ಷಾಮ. ದುರ್ಭಿಕ್ಷ
ದುಗ್ಘುಟ್ಟ}. ಪು: [ದೇ] ಆನೆ(ಭವಿ)
ದುಗ್ಘೊಟ್ಟ}.
ದುಘಣ. ಪು:[ದುಘಣ] ಒಂದು ಬಗೆಯ ಗದೆ, ಕೈಸುತ್ತಿಗೆ
ದುಚಕ್ಕ. ನ: [ದ್ವಿಚಕ್ರ] ಗಾಡಿ, **–ವಇ.** ಪು: [–ಪತಿ] ಗಾಡಿಯ ಯಜಮಾನ(ಓಘ)
ದುಚಿಣ್ಣ. **'ದುಚ್ಚಿಣ್ಣ' ಶಬ್ದವನ್ನು ನೋಡುವುದು**
ದುಚ್ಚ. ನ: [ದೌತ್ಯ] ದೂತ–ಕಾರ್ಯ, ಸಮಾಚಾರವನ್ನು ಮುಟ್ಟಿಸುವ ಕೆಲಸ(ಪಾಅ)
ದುಚ್ಚ. **ದೊಚ್ಚ='ದ್ವಿತೀಯ, ದ್ವಿಸ್'** ಶಬ್ದವನ್ನು ನೋಡುವುದು
ದುಚ್ಚಂಡಿಅ.ವಿ:[ದೇ] ದುರ್ವ್ಯಾಪಾರ, ಮೊಂಡು, ಹಠಮಾರಿ, ಮೂರ್ಖ, ಅಹಂಕಾರದಿಂದ ಕೊಬ್ಬಿರುವ (ದೇ)
ದುಚ್ಚಂಬಾಲ. ವಿ: [ದೇ] ಜಗಳದಲ್ಲಿ ನಿರತನಾದವನು, ಜಗಳಗಂಟ, ದುಷ್ಟ ನಡವಳಿಕೆ ಉಳ್ಳವನು, ಕಠಿಣವಾದ ಮಾತಾಡುವವನು, ಒರಟ
ದುಚ್ಚಜ್ಜ}. ವಿ: [ದುಸ್ತ್ಯಜ] ದುಃಖದಿಂದಾಗಿ ತ್ಯಜಿಸಲು
ದುಚ್ಚಯ}. ಅರ್ಹವಾದ್ದು(ಕುಮಾ)
ದುಚ್ಚರ}. ವಿ: [ದುಶ್ಚರ] ಆಚರಿಸಲು ಅಶಕ್ಯವಾದ,
ದುಚ್ಚರಿಅ}. ಯಾವುದನ್ನು ದುಃಖದಿಂದ ಪ್ರವೇಶಿಸಬಹುದೋ ಅದು. **–ಲಾಢ.** ಪು: [–ಲಾಢ] ದುಃಖದಿಂದ ಅಥವಾ ಕಷ್ಟದಿಂದ ಹೋಗಬಹುದಾದ ಗ್ರಾಮ ಅಥವಾ ದೇಶ
ದುಚ್ಚರಿಅ. ನ: [ದುಶ್ಚರಿತ] ದುಷ್ಟ ವರ್ತನೆ, ಕೆಟ್ಟ ನಡವಳಿಕೆ(ಪಉಮ), ವಿ: ದುರಾಚಾರಿ(ದೇ)
ದುಚ್ಚಾರ.ವಿ:[ದುಶ್ಚಾರ]ದುರಾಚಾರದ, ಕೆಟ್ಟನಡವಳಿಕೆಯ
ದುಚ್ಚಾರಿ. ವಿ: [ದುಶ್ಚಾರಿನ್] ದುರಾಚಾರಿ, ಕೆಟ್ಟ ನಡವಳಿಕೆಯುಳ್ಳವನು. ಸ್ತ್ರೀ: **–ಣೀ.**
ದುಚ್ಚಿಂತಿಯ. ವಿ: [ದುಶ್ಚಿಂತಿತ] ಕೆಟ್ಟ ರೀತಿಯಲ್ಲಿ ಚಿಂತಿಸಲ್ಪಟ್ಟದ್ದು(ಪಉಮ). ನ: ಕೆಟ್ಟ ಚಿಂತನೆ.
ದುಚ್ಚಿಗಿಚ್ಛ. ವಿ: [ದುಶ್ಚಿಕಿತ್ಸ] ಯಾವುದರ ಚಿಕಿತ್ಸೆ ಕಷ್ಟವಾಗುತ್ತಿದೆಯೋ ಅದು.
ದುಚ್ಚಿಣ್ಣ. ನ: [ದುಶ್ಚೀರ್ಣ] ದುಷ್ಟ ಆಚರಣೆ, ದುಷ್ಟ ನಡವಳಿಕೆ, ಹಿಂಸೆ ಇತ್ಯಾದಿ ಕೆಟ್ಟ ಕೆಲಸ. ವಿ: ಒಟ್ಟುಗೂಡಿಸಿದ ದುಷ್ಟ ವಸ್ತು(ವಿಪಾ)
ದುಚ್ಚೆಟ್ಟಿಯ. ನ: [ದುಶ್ಚೇಷ್ಟಿತ] ಕೆಟ್ಟ ಕೆಲಸ, ಶಾರೀರಿಕವಾದ ದುಷ್ಟ ಆಚರಣೆ.
ದುಛಕ್ಕ. ವಿ: [ದ್ವಿಷಟ್ಕ] ಹನ್ನೆರಡು ವಿಧದ, ಹನ್ನೆರಡು ಬಗೆಯ
ದುಚ್ಛಡ್ಡ. ವಿ: [ದುಶ್ಛರ್ದ] ಬಿಡಲು ದುಸ್ಸಾಧ್ಯವಾದ್ದು, ತ್ಯಜಿಸಲು ಕಷ್ಟವಾದ್ದು
ದುಚ್ಛೆಜ್ಜ. ವಿ: [ದುಶ್ಛೇದ] ಕಷ್ಟದಿಂದ ಛೇದಿಸಬಹುದಾದಂಥದು, ಕಷ್ಟದಿಂದ ಕತ್ತರಿಸಬಹುದಾದಂಥದು(ಪಉಮ)
ದುಛಕ್ಕ. **'ದುಚ್ಛಕ್ಕ' ಶಬ್ದವನ್ನು ನೋಡುವುದು**
ದುಜಡಿ. ಪು: [ದ್ವಿಜಟಿನ್] ಜ್ಯೋತಿಷ್ಕ ದೇವ,ಒಂದುಮಹಾಗ್ರಹ(ಠಾ)
ದುಜಯ. **'ದುಜ್ಜಯ' ಶಬ್ದವನ್ನು ನೋಡುವುದು**
ದುಜೀಹ. ಪು: [ದ್ವಿಜಿಹ್ವ] ಸರ್ಪ, ಹಾವು, ದುರ್ಜನ, ಕೆಟ್ಟ ಮನುಷ್ಯ(ಕುಮಾ)
ದುಜ್ಜಂತ. **'ದುಜ್ಜಿಂತ' ಶಬ್ದವನ್ನು ನೋಡುವುದು**
ದುಜ್ಜಣ. ಪು: [ದುರ್ಜನ] ಖಳ, ದುಷ್ಟ ಮನುಷ್ಯ
ದುಜ್ಜಯ. ವಿ: [ದುರ್ಜಯ] ಜಯಿಸಲು ದುಸ್ಸಾಧ್ಯನಾದವನು(ಉಪ)
ದುಜ್ಜಾಯ. ನ: [ದೇ] ವ್ಯಸನ, ಕಷ್ಟ, ದುಃಖ, ತೊಂದರೆ(ದೇ)
ದುಜ್ಜಾಯ. ವಿ: [ದುರ್ಜಾತ] ಕಷ್ಟದಿಂದ ಹೊರಡಲು ಸಾಧ್ಯವಾದದ್ದು
ದುಜ್ಜಾಯ. ವಿ: [ದುರ್ಯಾತ] ಕಷ್ಟದಿಂದ ನಡೆಯಬೇಕಾದ್ದು
ದುಜ್ಜಿಂತ. ಪು: [ದುರ್ಯಂತ] ಒಬ್ಬ ಪ್ರಾಚೀನ ಜೈನಮುನಿ
ದುಜ್ಜೀವ. ನ: [ದುರ್ಜೀವ] ಹೊಟ್ಟೆಪಾಡಿನ ಭಯ, ಜೀವನ ನಿರ್ವಹಣೆಯ ಹೆದರಿಕೆ(ವಿಸೇ)
ದುಜ್ಜೀಹ. **'ದುಜೀಹ' ಶಬ್ದವನ್ನು ನೋಡುವುದು**
ದುಜ್ಜೇಅ. ವಿ: [ದುರ್ಜೇಯ] ಜಯಿಸಲು ದುಸ್ಸಾಧ್ಯನಾದ(ಸುಪಾ)
ದುಜ್ಜೋಹಣ. ಪು: [ದುರ್ಯೋಧನ] ಧೃತರಾಷ್ಟ್ರನ ಜೇಷ್ಠ ಪುತ್ರ
ದುಜ್ಝ. ವಿ: [ದೋಹ್ಯ] ಹಾಲುಕರೆಯಲ್ಪಡಲು ಯೋಗ್ಯವಾದ(ದೇ)
ದುಜ್ಝಾಣ. ನ: [ದುರ್ಧ್ಯಾನ] ದುಷ್ಟ ಚಿಂತನೆ

ದುಜ್ಝಾಯ. ವಿ: [ದುರ್ಧ್ಯಾತ] ಯಾರ ವಿಷಯದಲ್ಲಿ ದುಷ್ಟ ಚಿಂತನೆ ಮಾಡಲಾಗಿದೆಯೋ ಅವನು
ದುಜ್ಝೋಸಯ. ವಿ: [ದುರ್ಜೋಷ] ಯಾರ ಸೇವೆ ಕಷ್ಟದಿಂದ ಸಾಧ್ಯವೋ ಅವನು(ಆಚಾ)
ದುಜ್ಝೋಸಯ. ವಿ: [ದುಃಕ್ಷಪ] ನಾಶ ಮಾಡಲು ದುಸ್ಸಾಧ್ಯವಾದವನು(ಆಚಾ)
ದುಜ್ಝೋಸಿಅ. ವಿ: [ದುರ್ಜೋಷಿತ] ಕಷ್ಟದಿಂದ ಸೇವೆಮಾಡಲ್ಪಟ್ಟವನು
ದುಜ್ಝೋಸಿಅ. ವಿ: [ದುಃಕ್ಷಪಿತ] ಕಷ್ಟದಿಂದ ನಾಶಮಾಡಲ್ಪಟ್ಟವನು
ದುಟ್ಠ. ವಿ: [ದುಷ್ಟ] ದೋಷದಿಂದ ಕೂಡಿದ, ದೂಷಿತ. **–ಪ್ಪ.** ಪು: [ದುಷ್ಟಾತ್ಮನ್] ದುಷ್ಟ ಜೀವ, ಪಾಪಿ(ಪಉಮ)
ದುಟ್ಠ. ವಿ: [ದೇ. ದ್ವಿಷ್ಟ] ದ್ವೇಷದಿಂದ ಕೂಡಿದ(ಓಘ)
ದುಟ್ಠಾಣ. ನ: [ದುಃಸ್ಥಾನ] ದುಷ್ಟ ಜಾಗ, ಕೆಟ್ಟ ಜಾಗ(ಭಗ)
ದುಟ್ಠು. ಅ: [ದುಷ್ಠು] ಕೆಟ್ಟದು, ಸುಂದರವಲ್ಲದ್ದು, ಕೆಟ್ಟ ಸ್ಥಿತಿಯಲ್ಲಿರುವ
ದುಣ್ಣಯ. 'ದುನ್ನಯ' ಶಬ್ದವನ್ನು ನೋಡುವುದು
ದುಣ್ಣಾಮ. ನ: [ದುರ್ನಾಮನ್] ಅಪಕೀರ್ತಿ, ಕೆಟ್ಟ ಹೆಸರು, ಕುಖ್ಯಾತ, ಒಂದು ಬಗೆಯ ಗರ್ವ.
ದುಣ್ಣಿಅ. ವಿ: [ದೂನ] ಪೀಡಿತ, ದುಃಖಿತ, ಯಾತನೆಗೆ ಗುರಿಮಾಡಲ್ಪಟ್ಟ(ಗಾ)
ದುಣ್ಣಿಅ. 'ದುನ್ನಿಅ' ಶಬ್ದವನ್ನು ನೋಡುವುದು.
ದುಣ್ಣಿಅತ್ಥ. ನ: [ದೇ] ತೊಡೆಯ ಮೇಲೆ ಇರುವ ವಸ್ತ್ರ. ಜಘನ, ಹೆಣ್ಣಿನ ಕಟಿ ಪ್ರದೇಶ
ದುಣ್ಣಿಕ್ಕ. ವಿ: [ದೇ] ಕೆಟ್ಟ ನಡವಳಿಕೆಯ, ದುರಾಚಾರಿ
ದುಣ್ಣಿಕ್ಕಮ. ವಿ: [ದುರ್ನಿಷ್ಕ್ರಮ] ಹೊರಡುವುದು ಕಷ್ಟಸಾಧ್ಯವಾದ ಸ್ಥಳ
ದುಣ್ಣಿಕ್ಖಿತ್ತ. ವಿ: [ದೇ] ದುರಾಚಾರಿ, ನೋಡಲು ದುಸ್ಸಾಧ್ಯವಾದ್ದು.
ದುಣ್ಣಿಕ್ಖೇವ. ವಿ: [ದುರ್ನಿಕ್ಷೇಪ] ಕಷ್ಟದಿಂದ ಸ್ಥಾಪಿಸಲು ಸಾಧ್ಯವಾದದ್ದು(ಗಾ)
ದುಣ್ಣಿವೋಹ. 'ದುನ್ನಿಬೋಹ' ಶಬ್ದವನ್ನು ನೋಡುವುದು
ದುಣ್ಣಿಮಿಅ. ವಿ: [ದುರ್ನಿಯೋಜಿತ] ಸೇರಿಸಲು ಅಥವಾ ಯೋಜಿಸಲು ದುಸ್ಸಾಧ್ಯವಾದದ್ದು
ದುಣ್ಣಿಮಿತ್ತ. ನ: [ದುರ್ನಿಮಿತ್ತ] ಕೆಟ್ಟ ಶಕುನ, ಅಪಶಕುನ
ದುಣ್ಣಿವಿಟ್ಠ. ವಿ: [ದುರ್ನಿವಿಷ್ಟ] ದುರಾಗ್ರಹಿ
ದುಣ್ಣಿಸೀಹಿಯಾ. ಸ್ತ್ರೀ: [ದುರ್ನಿಷದ್ಯಾ] ಕಷ್ಟವನ್ನುಂಟುಮಾಡುವ, ಸ್ವಾಧ್ಯಾಯ ಪ್ರದೇಶ
ದುಣ್ಣೇಂಯು. ವಿ: [ದುರ್ಜ್ಞೇಯು] ತಿಳಿಯಲು ದುಸ್ಸಾಧ್ಯವಾದ (ಉಪ)
ದುತಿತಿಕ್ಖ. ವಿ: [ದುಸ್ತಿತಿಕ್ಷ] ಸಹಿಸಲು ದುಸ್ಸಾಧ್ಯವಾದ್ದು
ದುತ್ತರ. ವಿ: [ದುಸ್ತರ] ದಾಟಲು ಅಶಕ್ಯವಾದ(ಸುಪಾ)
ದುತ್ತಡೀ. ಸ್ತ್ರೀ: [ದುಸ್ತಟೀ] ಕೆಟ್ಟ ದಡ.
ದುತ್ತವ. ವಿ: [ದುಸ್ತಪ] ಅಶಕ್ಯವಾದ ತಪಸ್ಸು
ದುತ್ತಾರ. ವಿ: [ದುಸ್ತಾರ] ದಾಟಲು ದುಸ್ಸಾಧ್ಯವಾದ
ದುತ್ತಿ. ಅ: [ದೇ] ಬೇಗನೆ, ಶೀಘ್ರವೆ(ದೇ)
ದುತ್ತಿಇಕ್ಖ}. 'ದುತಿತಿಕ್ಖ' ಶಬ್ದವನ್ನು ನೋಡುವುದು(ಆಚಾ)
ದುತ್ತಿತಿಕ್ಖ}.
ದುತ್ತುಂಡ ಪು: [ದುಸ್ತುಂಡ] ದುರ್ಜನ, ಕೆಟ್ಟ ಮನುಷ್ಯ, ನೀಚ ಮನುಷ್ಯ
ದುತ್ತೋಸ. ವಿ: [ದುಸ್ತೋಷ] ಸಂತೋಷಪಡಿಸಲು ದುಸ್ಸಾಧ್ಯನಾದವನು(ದಸ)
ದುತ್ಥ. ನ: [ದೇ] ಜಘನ, ಸ್ತ್ರೀಯರ ಸೊಂಟದ ಕೆಳಗಿನ ಭಾಗ, ಕಟಿ ಪ್ರದೇಶ(ದೇ)
ದುತ್ಥ. ವಿ: [ದುಃಸ್ಥ] ಬಡವ, ದರಿದ್ರ
ದುತ್ಥ. ನ: [ದೌಸ್ಥ್ಯ] ದುರ್ಗತಿ, ದುಃಸ್ಥಿತಿ
ದುತ್ಥಿಅ. ವಿ: [ದುಸ್ಥಿತ] ವಿಪತ್ತಿಗೆ ಸಿಲುಕಿದ, ದುಃಸ್ಥಿತಿಗೆ ಸಿಲುಕಿರುವ(ಭವಿ). ಬಡವ, ದರಿದ್ರ
ದುತ್ಥುರುಹಂಡ. ಪುಂಸ್ತ್ರೀ: [ದೇ] ಜಗಳಗಂಟ, ಸ್ತ್ರೀ: **–ಡಾ.** (ದೇ)
ದುತ್ಥೋಅ. ಪು: [ದೇ] ದುರದೃಷ್ಟವಂತ, ದೌರ್ಭಾಗ್ಯಶಾಲಿ(ದೇ)
ದುದ್ದಂತ. ವಿ: [ದುರ್ದಾಂತ] ದಮನಮಾಡಲು ಅಸಾಧ್ಯನಾದ, ಉದ್ಧಟ(ಸುಪಾ)
ದುದ್ದಂಸ. ವಿ: [ದುರ್ದರ್ಶ] ನೋಡಲು ದುಸ್ಸಾಧ್ಯವಾದ, (ಉತ್ತರ)
ದುದ್ದಂಸಣ. ವಿ: [ದುರ್ದರ್ಶನ] ಯಾರ ದರ್ಶನ ದುಸ್ಸಾಧ್ಯವಾದ್ದೋ ಅವನು(ಗಾ)
ದುದ್ದಮ. ವಿ: [ದುರ್ದಮ] ಹತೋಟಿಗೆ ತರಲು ಕಷ್ಟನಾದ, ಹತೋಟಿಯಲ್ಲಿಡಲು ಅಶಕ್ಯ. **ಪು:** ರಾಜಾ ಅಶ್ವ ಗ್ರೀವನ ಒಬ್ಬ ದೂತ.
ದುದ್ದಮ. ಪು: [ದೇ] ಮೈದುನ, ಗಂಡನ ತಮ್ಮ(ದೇ)

ದುದ್ದಿಟ್ಠ. ವಿ: [**ದುರ್ದೃಷ್ಟ**] ಕೆಟ್ಟ ರೀತಿಯಲ್ಲಿ ನೋಡಲ್ಪಡುವ, ವಿ: ನೋಡಲು ಭಯಂಕರವಾದ

ದುದ್ದಿಣ. ನ: [**ದುರ್ದಿನ**] ಮೋಡ ಕವಿದ ದಿನ(ಓಘ), ಕೆಟ್ಟ ದಿವಸ

ದುದ್ದೇಯ. ವಿ: [**ದುರ್ದೇಯ**] ಕಷ್ಟದಿಂದ ಕೊಡಬಹುದಾದ, ಕೊಡಲು ದುಸ್ಸಾಧ್ಯವಾದ(ಉಪ)

ದುದ್ದೋಲನಾ. ಸ್ತ್ರೀ: [**ದೇ**] ಹಸು

ದುದ್ದೋಲೀ. ಸ್ತ್ರೀ: [**ದೇ**] ಮರಗಳ ಸಾಲು(ಪಾಅ)

ದುದ್ಧ. ನ: [**ದುಗ್ಧ**] ಹಾಲು. **–ಜಾಇ.** ಸ್ತ್ರೀ: [**–ಜಾತಿ**] ಹಾಲಿನಂಥ ರುಚಿ ಉಳ್ಳ ಮದಿರೆ. **–ಸಮುದ್ದ.** ಪು: [**–ಸಮುದ್ರ**] ಹಾಲಿನಂಥ ರುಚಿಯ ನೀರಿರುವ ಕ್ಷೀರ ಸಾಗರ(ಗಾ)

ದುದ್ಧಂಸ. ವಿ: [**ದುರ್ಧ್ವಂಸ**] ನಾಶ ಮಾಡಲು ದುಸ್ಸಾಧ್ಯವಾದ

ದುದ್ಧಗಂಧಿಅಮುಹ. ಪು: [**ದೇ**] ಶಿಶು, ಎಳೆಯ ಬಾಲಕ

ದುದ್ಧಗಂಧಿಅಮುಹೀ. ಸ್ತ್ರೀ: [**ದೇ**] ಹೆಣ್ಣು ಶಿಶು, ಚಿಕ್ಕ ಬಾಲಕಿ(ಪಾಅ)

ದುದ್ಧಟ್ಟೀ}. ಸ್ತ್ರೀ: [**ದೇ**] ಕರು ಹಾಕಿದ ನಂತರದ

ದುದ್ಧಟ್ಠೀ}.ಮೂರು ದಿನಗಳವರೆಗಿನ ಹಸುವಿನ ಹಾಲು. ಹುಳಿ ಮಜ್ಜಿಗೆಯೊಂದಿಗೆ ಸೇರಿದ ಹಾಲು.

ದುದ್ಧರ. ವಿ: [**ದುರ್ಧರ**] ಎದುರಿಸಲು ಕಷ್ಟವಾದ, ತಡೆಯಲಾಗದ(ಪಣ್ಣ), ಗಹನ, ವಿಷಮ(ಠಾ) ಜಯಿಸಲು ದುಸ್ಸಾಧ್ಯನಾದ. **ಪು:** ರಾವಣನ ಒಬ್ಬ ಯೋಧ(ಪಉಮ)

ದುದ್ಧರಿಸ. ವಿ: [**ದುರ್ಧರ್ಷ**] ಎದುರಿಸಲು ಕಷ್ಟವಾದ, ಜಯಿಸಲು ದುಸ್ಸಾಧ್ಯನಾದ(ಪಣ್ಣ)

ದುದ್ಧವಲೇಹೀ. ಸ್ತ್ರೀ: [**ದೇ**] ಅಕ್ಕಿಹಿಟ್ಟಿನೊಂದಿಗೆ ಸೇರಿಸಿ ಬೇಯಿಸಲಾಗುವ ಹಾಲು

ದುದ್ಧಸಾಡೀ. ಸ್ತ್ರೀ: [**ದೇ**] ದ್ರಾಕ್ಷಿಯೊಂದಿಗೆ ಸೇರಿಸಿ ಕುದಿಸಲಾಗುವ ಹಾಲು

ದುದ್ಧಿಅ. ನ:[**ದೇ**] ಹಾಲುಗುಂಬಳಕಾಯಿ, ಸೋರೆಕಾಯಿ

ದುದ್ಧಿಣಿಆ}. ಸ್ತ್ರೀ: [**ದೇ**] ಎಣ್ಣೆ ತುಪ್ಪ

ದುದ್ಧಿಣೀ}. ಮೊದಲಾದವುಗಳನ್ನು ಇಡುವ ಪಾತ್ರೆ, ಉದ್ದದ ಸೋರೆಕಾಯಿ(ದೇ)

ದುದ್ಧೋಅಹಿ.}. ಪು: [**ದುಗ್ಧೋದಧಿ**] ಕ್ಷೀರ ಸಾಗರ,

ದುದ್ಧೋದಹಿ}. ಅದರ ನೀರು ಹಾಲಿನ ಸ್ವಾದದಿಂದ ಕೂಡಿರುತ್ತದೆ(ಗಾ)

ದುದ್ಧೋಲಣೀ. ಸ್ತ್ರೀ: [**ದೇ**] ಒಂದು ಸಲ ಹಾಲು ಕರೆದುಕೊಂಡ ನಂತರದಲ್ಲೂ ಮತ್ತೆ ಹಾಲು ಕರೆಯಲು ಸಾಧ್ಯವಾದ ಹಸು. ಕಾಮಧೇನು(ದೇ)

ದುಧಾ. **'ದುಹಾ' ಶಬ್ದವನ್ನು ನೋಡುವುದು**

ದುನಿಮಿತ್ತ. **'ದುಣ್ಣಿಮಿತ್ತ' ಶಬ್ದವನ್ನು ನೋಡುವುದು**

ದುನ್ನಯ. ಪು: [**ದುರ್ನಯ**] ದುಷ್ಟ ನೀತಿ, ಕುನೀತಿ, ಕೆಟ್ಟ ನಡತೆ, ಅನೇಕ ಧರ್ಮಗಳ ವಸ್ತುವಿನಲ್ಲಿ ಒಂದೇ ಒಂದು ಧರ್ಮವನ್ನು ಒಪ್ಪಿ ಇತರೆ ಧರ್ಮಗಳನ್ನು ಖಂಡಿಸುವ ಪಕ್ಷ. ವಿ: ದುಷ್ಟ ನೀತಿ, ಅನ್ಯಾಯಕಾರಿ, **–ಕಾರಿ.** ವಿ: [**–ಕಾರಿನ್**] ಅನ್ಯಾಯ ಮಾಡುವವನು

ದುನ್ನಿಕಮ. **'ದೋನಿಕ್ಕಮ' ಶಬ್ದವನ್ನು ನೋಡುವುದು**

ದುನ್ನಿಗ್ಗಹ. ವಿ: [**ದುರ್ನಿಗ್ರಹ**] ನಿಗ್ರಹಿಸಲು ದುಸ್ಸಾಧ್ಯವಾದ್ದು, ಅನಿವಾರ್ಯ(ಸೂಅ)

ದುನ್ನಿಬೋಹ. ವಿ: [**ದುರ್ನಿಬೋಧ**] ತಿಳಿದುಕೊಳ್ಳಲು ದುಸ್ಸಾಧ್ಯವಾದದ್ದು ಅಥವಾ ಕಷ್ಟಸಾಧ್ಯವಾದ್ದು.

ದುನ್ನಿಮಿತ್ತ. **'ದುಣ್ಣಿಮಿತ್ತ' ಶಬ್ದವನ್ನು ನೋಡುವುದು**

ದುನ್ನಿಯ. ನ: [**ದುರ್ನೀತ**] ಕೆಟ್ಟ ಕೆಲಸ(ಸುಅ)

ದುನ್ನಿಯತ್ಥ. ವಿ: [**ದೇ**] ವಿಟನ ವೇಷ ಧರಿಸಿದವನು, ತೊಡೆಯ ಮೇಲೆ ಮಾತ್ರ ಬಟ್ಟೆ ಧರಿಸಿದವನು

ದುನ್ನಿರಿಕ್ಖ. ವಿ: [**ದುರ್ನಿರಿಕ್ಷ್ಯ**] ನೋಡಲು ದುಸ್ಸಾಧ್ಯವಾದ್ದು(ಕಪ್ಪ)

ದುನ್ನಿವಾರ. ವಿ: [**ದುರ್ನಿವಾರ**] ತಡೆಯಲು ಅಶಕ್ಯವಾದ, ನಿವಾರಿಸಲು ದುಸ್ಸಾಧ್ಯವಾದ್ದು(ಸುಪಾ)

ದುನ್ನಿವಾರಣೀಅ. ವಿ: [**ದುರ್ನಿವಾರಣೀಯ, ದುರ್ನಿವಾರ**] ಮೇಲಿನ **ಶಬ್ದವನ್ನು ನೋಡುವುದು**

ದುನ್ನಿಸಣ್ಣ. ವಿ: [**ದುರ್ನಿಷಣ್ಣ**] ಕೆಟ್ಟ ರೀತಿಯಲ್ಲಿ ಕುಳಿತಿರುವವನು(ಠಾ)

ದುಪ. **'ದಿಅ=ದ್ವಿಪ' ಶಬ್ದವನ್ನು ನೋಡುವುದು**

ದುಪಏಸ. ವಿ: [**ದ್ವಿಪ್ರದೇಶ**] ಎರಡು ಅವಯವಗಳುಳ್ಳ, ವಿ: ದ್ವಯಣುಕ?

ದುಪಏಸಿಯ. ವಿ: [**ದ್ವಿಪ್ರದೇಶಿಕ**] ಎರಡು ಪ್ರದೇಶಗಳುಳ್ಳ

ದುಪಕ್ಖ. ಪು: [**ದುಷ್ಪಕ್ಷ**] ದುಷ್ಟ ಪಕ್ಷ(ಸೂಅ)

ದುಪಕ್ಖ. ನ: [**ದ್ವಿಪಕ್ಷ**] ಎರಡು ಪಕ್ಷ, ಎರಡು ಪಕ್ಷಗಳುಳ್ಳ=ತಿಂಗಳು, ಎರಡು ರೆಕ್ಕೆ ಉಳ್ಳ=ಹಕ್ಕಿ

ದುಪಡಿಗ್ಗಹ. ನ: [**ದ್ವಿಪ್ರತಿಗ್ರಹ**] ದೃಷ್ಟಿವಾದದ ಒಂದು ಸೂತ್ರ.

ದುಪಡೋಆರ. ವಿ: [ದ್ವಿಪದಾವತಾರ] ಎರಡು ಜಾಗಗಳಲ್ಲಿ ಯಾವುದು ಬಂದು ಸೇರುತ್ತದೋ ಅದು (ತಾ)

ದುಪಡೋಆರ. ವಿ: [ದ್ವಿಪ್ರತ್ಯವತಾರ] ಮೇಲಿನ ಶಬ್ದವನ್ನು ನೋಡುವುದು

ದುಪಮಜ್ಜಿಯ. 'ದುಪ್ಪಮಜ್ಜಿಯ' ಶಬ್ದವನ್ನು ನೋಡುವುದು

ದುಪಯ. ವಿ: [ದ್ವಿಪದ] ಎರಡು ಕಾಲುಗಳುಳ್ಳ, ಪು: ಮನುಷ್ಯ(ಣಾಯಾ), ನ: ಗಾಡಿ(ಓಘ)

ದುಪಯ. ಪು: [ದ್ರುಪದ] ಕಾಂಪಿಲ್ಯಪುರದ ಒಬ್ಬ ರಾಜ.

ದುಪರಿಚ್ಚಯ. ವಿ: [ದುಷ್ಪರಿತ್ಯಜ] ಬಿಡಲು ದುಸ್ಸಾಧ್ಯವಾದದ್ದು(ಉಪ)

ದುಪರಿಚ್ಚಯಣೀಯ. ವಿ: [ದುಷ್ಪರಿತ್ಯಜನೀಯ, ದುಷ್ಪರಿತ್ಯಜ] ಮೇಲಿನ ಶಬ್ದವನ್ನು ನೋಡುವುದು

ದುಪಸ್ಸ. 'ದುಷ್ಪಸ್ಸ' ಶಬ್ದವನ್ನು ನೋಡುವುದು(ತಾ)

ದುಪುತ್ತ. ಪು: [ದುಷ್ಪುತ್ರ] ಕೆಟ್ಟ ಮಗ(ಪಉಮ)

ದುಪೆಚ್ಛ. ವಿ: [ದುಷ್ಪ್ರೇಕ್ಷ] ನೋಡಲು ಕಷ್ಟವಾದ, ನೋಡಲಶಕ್ಯವಾದ

ದುಪ್ಪಇ. ಪು: [ದುಷ್ಪತಿ] ದುಷ್ಟ ಯಜಮಾನ(ಭವಿ)

ದುಪ್ಪಉತ್ತ. ವಿ: [ದುಷ್ಪ್ರಯುಕ್ತ] ದುರುಪಯೋಗ ಮಾಡುವವನು, ಯಾವುದರ ದುರುಪಯೋಗವಾಗಿದೆಯೋ ಅದು(ಭಗ)

ದುಪ್ಪಉಲಿಯ}. ವಿ: [ದುಷ್ಪ್ರಜ್ವಲಿತ] ಚೆನ್ನಾಗಿ

ದುಪ್ಪಉಲ್ಲ}. ಬೇಯಿಸಲ್ಪಡದ, ಅರೆಬೆಂದ(ಪಂಚಾ)

ದುಪ್ಪಓಗ. ಪು: [ದುಷ್ಪ್ರಯೋಗ] ದುರುಪಯೋಗ.

ದುಪ್ಪಓಗಿ. ವಿ: [ದುಷ್ಪ್ರಯೋಗಿನ್] ದುರುಪಯೋಗ ಮಾಡುವವನು(ಪಣ್ಣ)

ದುಪ್ಪಕ್ಕ. ವಿ: [ದುಷ್ಪಕ್ವ] 'ದುಪ್ಪಉಲ್ಲ' ಶಬ್ದವನ್ನು ನೋಡುವುದು

ದುಪ್ಪಕ್ಖಾಲ. ವಿ: [ದುಷ್ಪ್ರಕ್ಷಾಲ] ತೊಳೆಯಲು ದುಸ್ಸಾಧ್ಯವಾದ(ಸುಪಾ)

ದುಪ್ಪಚ್ಚುಪೆಕ್ಖಿಯ. ವಿ: [ದುಷ್ಪ್ರತ್ಯುತ್ಪ್ರೇಕ್ಷಿತ] ಸರಿಯಾಗಿ ನೋಡಲಶಕ್ಯವಾದ(ಪವ)

ದುಪ್ಪಜೀವಿ. ವಿ: [ದುಷ್ಪ್ರಜೀವಿನ್] ಕಷ್ಟದಿಂದ ಜೀವಿಸುತ್ತಿರುವ, ಜೀವಿಸಲು ಕಷ್ಟವಾದವನು

ದುಪ್ಪಡಿಕ್ಕಂತ. ವಿ: [ದುಷ್ಪ್ರತಿಕಾಂತ] ಯಾವುದರ ಪ್ರಾಯಶ್ಚಿತ್ತವನ್ನು ಸರಿಯಾಗಿ ಮಾಡಿಕೊಳ್ಳಲಾಗಿಲ್ಲವೋ ಅದು.

ದುಪ್ಪಡಿಗರ. ವಿ: [ದುಷ್ಪ್ರತಿಕರ] ಪ್ರತೀಕಾರ ಮಾಡಲು ದುಸ್ಸಾಧ್ಯವಾದ(ಬೃಹ)

ದುಪ್ಪಡಿಪೂರ. ವಿ: [ದುಷ್ಪ್ರತಿಪೂರ] ತುಂಬಿಸಲು ಅಸಾಧ್ಯವಾದ, ಸಫಲಗೊಳಿಸಲು ಅಶಕ್ಯವಾದ (ತಂದು)

ದುಪ್ಪಡಿಯಾಣಂದ. ವಿ: [ದುಷ್ಪ್ರತ್ಯಾನಂದ] ಸಂತೋಷಪಡಿಸಲು ದುಸ್ಸಾಧ್ಯನಾದ(ತಾ)

ದುಪ್ಪಡಿಯಾರ.ವಿ: [ದುಷ್ಪ್ರತಿಕಾರ] ಪ್ರತೀಕಾರಮಾಡಲು ದುಸ್ಸಾಧ್ಯವಾದ

ದುಪ್ಪಡಿಲೇಹ. ವಿ: [ದುಷ್ಪ್ರತಿಲೇಖ] ಸರಿಯಾಗಿ ನೋಡಲು ಅಶಕ್ಯವಾದ

ದುಪ್ಪಡಿವೂಹ. ವಿ: [ದುಷ್ಪ್ರತಿಬೃಂಹ] ಹೆಚ್ಚಿಸಲು ಅಶಕ್ಯವಾದ, ರಕ್ಷಿಸಲು ಅಸಾಧ್ಯವಾದ, ಸಾಕಲು ಅಶಕ್ಯವಾದ(ಆಚಾ)

ದುಪ್ಪಡಿವೂಹಣ. ವಿ: [ದುಷ್ಪ್ರತಿಬೃಂಹಣ] ಮೇಲಿನ ಶಬ್ದವನ್ನು ನೋಡುವುದು

ದುಪ್ಪಣಿಹಾಣ. ನ: [ದುಷ್ಪ್ರಣಿಧಾನ] ದುಷ್ಟ ಪ್ರಯೋಗ, ಅಶುಭ ಪ್ರಯೋಗ, ದುರುಪಯೋಗ

ದುಪ್ಪಣಿಹಿಯ. ವಿ: [ದುಷ್ಪ್ರಣಿಹಿತ] ದುರುಪಯೋಗ ಮಾಡಲ್ಪಟ್ಟ(ಸುಪಾ)

ದುಪ್ಪಣೀಹಾಣ.'ದುಪ್ಪಣಿಹಾಣ' ಶಬ್ದವನ್ನು ನೋಡುವುದು

ದುಪ್ಪಣೊಲ್ಲಿಯ. ವಿ: [ದುಷ್ಪ್ರಣೋದ್ಯ] ತ್ಯಜಿಸಲು ಕಷ್ಟವಾದ, ಮುಂದಕ್ಕೆ ಅಟ್ಟಲು ದುಸ್ಸಾಧ್ಯವಾದ

ದುಪ್ಪಣ್ಣವಣಿಜ್ಜ. ವಿ: [ದುಷ್ಪ್ರಜ್ಞಾಪನೀಯ] ಬೋಧಿಸಲು ದುಸ್ಸಾಧ್ಯವಾದ(ಆಚಾ)

ದುಪ್ಪತರ. ವಿ: [ದುಷ್ಪ್ರತರ] ದಾಟಲು ಅಶಕ್ಯವಾದ

ದುಪ್ಪಧಂಸ. ವಿ: [ದುಷ್ಪ್ರಧರ್ಷ] ಜಯಿಸಲು ದುಸ್ಸಾಧ್ಯನಾದ, ಎದುರಿಸಲು ದುಸ್ಸಾಧ್ಯನಾದ

ದುಪ್ಪಮಜ್ಜಣ. ನ: [ದುಷ್ಪ್ರಮಾರ್ಜನ] ತೊಳೆಯಲು ಕಷ್ಟಸಾಧ್ಯವಾದ, ಶುದ್ಧೀಕರಿಸಲು ಕಷ್ಟಸಾಧ್ಯವಾದ

ದುಪ್ಪಮಜ್ಜಿಯ. ವಿ: [ದುಷ್ಪ್ರಮಾರ್ಜಿತ] ಕಷ್ಟಸಾಧ್ಯವಾದ ರೀತಿಯಲ್ಲಿ ತೊಳೆಯಲ್ಪಟ್ಟ, ಕಷ್ಟಸಾಧ್ಯ ರೀತಿಯಲ್ಲಿ ಶುದ್ಧೀಕರಿಸಲ್ಪಟ್ಟ

ದುಪ್ಪಯ. 'ದುಪಯ=ದ್ವಿಪದ' ಶಬ್ದವನ್ನು ನೋಡುವುದು

ದುಪ್ಪಯಾರ. ವಿ: [ದುಷ್ಪ್ರಚಾರ] ಪ್ರಚಾರಮಾಡಲು ದುಸ್ಸಾಧ್ಯವಾದ, ಅನ್ಯಾಯದಿಂದ ಕೂಡಿದ ಪ್ರಚಾರ.

ದುಪ್ಪರಕ್ಕಂತ. ವಿ: [ದುಷ್ಪರಾಕ್ರಾಂತ] ಕೆಟ್ಟ ರೀತಿಯಲ್ಲಿ ಬೇರೆಯವರಿಂದ ಆಕ್ರಮಿಸಲ್ಪಟ್ಟ(ಆಚಾ)

ದುಪ್ಪರಿಅಲ್ಲ. ವಿ: [ದೇ] ಅಶಕ್ಯ(ಪಾಅ), ದ್ವಿಗುಣ, ಎರಡರಷ್ಟು, ಅಭ್ಯಾಸವಿಲ್ಲದ

ದುಪ್ಪರಿಇಅ. ವಿ: [ದುಷ್ಪರಿಚಿತ] ಅಪರಿಚಿತ

ದುಪ್ಪರಿಚ್ಚಯ. 'ದುಪರಿಚ್ಚಯ' ಶಬ್ದವನ್ನು ನೋಡುವುದು

ದುಪ್ಪರಿಣಾಮ. ವಿ: [ದುಷ್ಪರಿಣಾಮ] ಕೆಟ್ಟ ರೀತಿಯ ಪರಿಣಾಮವುಳ್ಳ(ಭವಿ)

ದುಪ್ಪರಿಮಾಸ. ವಿ: [ದುಷ್ಪರಿಮರ್ಷ] ಕಷ್ಟ ಸಾಧ್ಯವಾದ ಸ್ಪರ್ಶವುಳ್ಳ(ಸೇ)

ದುಪ್ಪರಿಯತ್ತಣ. 'ದುಪ್ಪರಿವತ್ತಣ' ಶಬ್ದವನ್ನು ನೋಡುವುದು

ದುಪ್ಪರಿಲ್ಲ. ವಿ: [ದೇ] ಆಕರ್ಷಿಸಲು ದುಸ್ಸಾಧ್ಯವಾದ.

ದುಪ್ಪರಿವತ್ತಣ. ವಿ: [ದುಷ್ಪರಿವರ್ತನ] ಪರಿವರ್ತಿಸಲು ದುಸ್ಸಾಧ್ಯವಾದ, **ನ:** ಕಷ್ಟದಿಂದ ಹಿಂತಿರುಗುವುದು (ತಂದು)

ದುಪ್ಪವಂಚ. ಪು: [ದುಷ್ಪ್ರಪಂಚ] ದುಷ್ಟ ಜಗತ್ತು(ಭವಿ)

ದುಪ್ಪವಣ. ಪು: [ದುಷ್ಪವನ] ಕೆಟ್ಟ ಗಾಳಿ(ಭವಿ)

ದುಪ್ಪವೇಸ. ವಿ: [ದುಷ್ಪ್ರವೇಶ] ಪ್ರವೇಶಿಸಲು ದುಸ್ಸಾಧ್ಯವಾದ(ಣಾಯಾ). **–ತರ.** ವಿ: [–ತರ] ಪ್ರವೇಶಿಸಲು ಅಶಕ್ಯವಾದ

ದುಪ್ಪಸಹ. ಪು: [ದುಷ್ಪ್ರಸಹ] ಐದನೇ **'ಆರೆ'**ಯ ಕೊನೆಯಲ್ಲಿ ಉದಿಸಲಿರುವ ಒಬ್ಬ ಜೈನಾಚಾರ್ಯ, ಒಬ್ಬ ಭಾವೀ ಜೈನ ವಿದ್ವಾಂಸ (ಉಪ)

ದುಪ್ಪಸ್ಸ. ವಿ: [ದುರ್ದರ್ಶ] ತೋರಿಸಲು ದುಸ್ಸಾಧ್ಯವಾದ ಅಥವಾ ಕಷ್ಟವಾದ, ನೋಡಲು ಅಶಕ್ಯವಾದ

ದುಪ್ಪಹ. ವಿ: [ದುಷ್ಪ್ರಭ] ಬಹಳ ಕಷ್ಟದಿಂದ ಹೊಳೆಯುವಂಥ, ದುರ್ಗಮ

ದುಪ್ಪಹಂಸ. ವಿ: [ದುಷ್ಪ್ರಧ್ವಂಸ್ಯ] ನಾಶಮಾಡಲು ದುಸ್ಸಾಧ್ಯವಾದ(ಣಾಯಾ)

ದುಪ್ಪಹಂಸ. ವಿ: [ದುಷ್ಪ್ರಧೃಷ್ಯ] ಅಜೇಯ, ಜಯಿಸಲು ಅಶಕ್ಯನಾದವನು

ದುಪ್ಪಾಯ. ನ: [ದುಷ್ಪ್ರಾಪ] ಒಂದು ಬಗೆಯ ತಪಸ್ಸು

ದುಪ್ಪಿಉ. ಪು: [ದುಷ್ಪಿತೃ] ದುಷ್ಟ ತಂದೆ(ಸುಪಾ)

ದುಪ್ಪಿಚ್ಛ. 'ದುಪೆಚ್ಛ' ಶಬ್ದವನ್ನು ನೋಡುವುದು

ದುಪ್ಪಿಯ. ವಿ: [ದುಷ್ಪ್ರಿಯ] ಅಪ್ರಿಯ. **–ಬ್ಭಾಸಿ.** ವಿ: [–ಭಾಷಿನ್] ಅಪ್ರಿಯವಾದದ್ದನ್ನು ಹೇಳುವವನು (ಸುಪಾ)

ದುಪ್ಪುತ್ತ. 'ದುಪುತ್ತ' ಶಬ್ದವನ್ನು ನೋಡುವುದು (ಪಉಮ)

ದುಪ್ಪೂರ. ವಿ: [ದುಷ್ಪೂರ] ಬಹಳ ಕಷ್ಟದಿಂದ ಪೂರೈಸಲು ಸಾಧ್ಯವಾದದ್ದು

ದುಪ್ಪೆಕ್ಖ. 'ದುಪೆಚ್ಛ' ಶಬ್ದವನ್ನು ನೋಡುವುದು

ದುಪ್ಪೆಕ್ಖಣಿಜ್ಜ. ವಿ: [ದುಷ್ಪ್ರೇಕ್ಷಣೀಯ] ನೋಡಲು ದುಸ್ಸಾಧ್ಯವಾದ್ದು, ಕಷ್ಟದಿಂದ ನೋಡಬಹುದಾದ್ದು (ವೇಣೀ)

ದುಪ್ಪೆಚ್ಛ. 'ದುಪೆಚ್ಛ' ಶಬ್ದವನ್ನು ನೋಡುವುದು

ದುಪ್ಪೋಲಿಯ. 'ದುಪ್ಪಉಲಿಯ' ಶಬ್ದವನ್ನು ನೋಡುವುದು

ದುಪ್ಫಡ. ವಿ: [ದುಷ್ಪಟ] ಕಷ್ಟದಿಂದ ಸಿಡಿಯಬಹುದಾದ

ದುಪ್ಫರಿಸ}. ವಿ: [ದುಃಸ್ಪರ್ಶ] ಸ್ಪರ್ಶವು

ದುಪ್ಫಾಸ.}. ಕೆಟ್ಟದಾಗಿರುವಂಥದು(ಪಉಮ).

ದುಫಾಸ}.

ದುಫಾಸ. ವಿ: [ದ್ವಿಸ್ಪರ್ಶ] ಸ್ನಿಗ್ಧ ಹಾಗೂ ಶೀತಲ ಮೊದಲಾದ ಎರಡು ಪರಸ್ಪರ ವಿರುದ್ಧವಲ್ಲದ ಸ್ಪರ್ಶಗಳಿಂದ ಕೂಡಿದ(ಬಗ)

ದುಬ್ಬದ್ಧ. ವಿ: [ದುರ್ಬದ್ಧ] ಕೆಟ್ಟ ರೀತಿಯಲ್ಲಿ ಬಂಧಿಸಲ್ಪಟ್ಟರುವ(ಆಚಾ)

ದುಬ್ಬಲ. ವಿ: [ದುರ್ಬಲ] ಬಲಹೀನ, ಅಶಕ್ತ(ವಿಪಾ). **–ಪಚ್ಚವಮಿತ್ತ. ಪುಂನ:** [**–ಪ್ರತ್ಯವಮಿತ್ರ**] ದುರ್ಬಲರಿಗೆ ನೆರವು ನೀಡುವವನು(ತಾ)

ದುಬ್ಬಲಿಯ. ವಿ: [ದುರ್ಬಲಿಕ] ದುರ್ಬಲ, ನಿರ್ಬಲ (ಭಗ). **ದುಬ್ಬಲಿಯಾ ಪೂಸಮಿತ್ತ. ಪು:** [**–ಪುಷ್ಯಮಿತ್ರ**] ಒಬ್ಬ ಜೈನ ಆಚಾರ್ಯ

ದುಬ್ಬಲಿಅ. ನ: [ದೌರ್ಬಲ್ಯ] ಶ್ರಮ, ದಣಿವು, ಆಯಾಸ

ದುಬ್ಬುದ್ಧಿ. ವಿ: [ದುರ್ಬುದ್ಧಿ] ದುಷ್ಟ ಬುದ್ಧಿ ಉಳ್ಳವನು, ಕೆಟ್ಟ ನಿಯತ್ತಿನವನು(ಉಪ). **ಸ್ತ್ರೀ:** ಕೆಟ್ಟ ಬುದ್ಧಿಯ. ಕೆಟ್ಟ ನಿಯತ್ತಿನ

ದುಬ್ಬೊಲ್ಲ. ಪು: [ದೇ] ನಿಂದೆ, ಬಯ್ಗುಳು(ದೇ)

ದುಬ್ಬ. ವಿ: [ದುಗ್ಧ] ಹಾಲು ಕರೆಯಲ್ಪಟ್ಟ, **ನ:** ಹಾಲು ಕರೆಯುವುದು

ದುಬ–. 'ದುಹ=ದುಹ್' ಶಬ್ದವನ್ನು ನೋಡುವುದು

ದುಬ್ಭಗ. ವಿ: [ದುರ್ಭಗ] ದುರದೃಷ್ಟವಂತ, ಅದೃಷ್ಟಹೀನ, ಅಪ್ರಿಯ, ಅನಿಷ್ಟ(ಪಣ್ಣ), **–ಣಾಮ, –ನಾಮ.** ನ: [–ನಾಮನ್] ಒಂದು ಕರ್ಮ–ವಿಶೇಷ. ಇದು ಉದಿಸಿದಾಗ ಉಪಕಾರ ಮಾಡುವವನೂ ಜನಗಳಿಗೆ ಅಪ್ರಿಯನಾಗುತ್ತಾನೆ. **–ದುಬ್ಭಗಾಕರಾ.**

ಸ್ತ್ರೀ: [ದುರ್ಭಗಾಕರಾ] ದುರದೃಷ್ಟವಂತನನ್ನಾಗಿ ಮಾಡುವ ಒಂದು ವಿದ್ಯೆ.
ದುಬ್ಭಗ್ಗ. ನ: [ದೌರ್ಭಾಗ್ಯ] ದೌರ್ಭಾಗ್ಯ, ಲೋಕದಲ್ಲಿ ಅಪ್ರಿಯತೆ
ದುಬ್ಭರಣಿ. ಸ್ತ್ರೀ: [ದುರ್ಭರಣಿ] ಕಷ್ಟದಿಂದ ನಿರ್ವಹಿಸಲ್ಪಡುವ, ನಿರ್ವಹಿಸಲು ದುಸ್ಸಾಧ್ಯವಾದ
ದುಬ್ಭಾವ. ಪು: [ದುರ್ಭಾವ] ಹೇಯ ಪದಾರ್ಥ (ಪಉಮ), ಅಸದ್ ಭಾವ, ಕೆಟ್ಟ ಪರಿಣಾಮ
ದುಬ್ಭಾವ. ಪು: [ದ್ವಿಭಾವ] ಭಾಗ, ಪಾಲು, ವಿಂಗಡಣೆ.
ದುಬ್ಭಾವ. ಪು: [ದ್ವಿರ್ಭಾವ] ದ್ವಿತ್ವ, ಎರಡರ ಭಾವ
ದುಬ್ಭಾಸಿಯ. ನ: [ದುರ್ಭಾಷಿತ] ಕೆಟ್ಟ ಮಾತು(ಪಉಮ)
ದುಬ್ಭಿ. ಪುಂನ: [ದುರಭಿ] ಕೆಟ್ಟ ವಾಸನೆ, ದುರ್ವಾಸನೆ, ವಿ: ಅಶುಭ', ಸುಂದರವಲ್ಲದ(ಠಾ), ವಿ: ದುರ್ವಾಸನೆಯುಳ್ಳ, **–ಗಂಧ. [–ಗಂಧ]** ಹಿಂದೆ ಹೇಳಿದ ಅರ್ಥವೇ. **–ಸದ್ದ. ಪುಂನ: [–ಶಬ್ದ]** ಕೆಟ್ಟ ಶಬ್ದ(ಣಾಯಾ)
ದುಬ್ಭಿಕ್ಖ. ಪುಂನ: [ದುರ್ಭಿಕ್ಷ] ಬರಗಾಲ, ಕ್ಷಾಮ, ಮಳೆಯ ಅಭಾವ(ಸುಪಾ), ಭಿಕ್ಷೆಯ ಅಭಾವ, ಭಿಕ್ಷೆ ಸಿಕ್ಕದಿರುವ ದೇಶವೇ ಮೊದಲಾದವು.
ದುಬ್ಭಿಜ್ಜ. 'ದುಬ್ಭೆಜ್ಜ' ಶಬ್ದವನ್ನು ನೋಡುವುದು
ದುಬ್ಭೂಇ. – ಸ್ತ್ರೀ: [ದುರ್ಭೂತಿ] ಅಮಂಗಳ, ಅಶಿವ, (ಬೃಹ)
ದುಬ್ಭೂಯ. ಪುಂನ: [ದುರ್ಭೂತ] ಹಾನಿ ಉಂಟುಮಾಡುವ ಪ್ರಾಣಿ. **ನ:** ಅಮಂಗಳ, ಅಶಿವ
ದುಬ್ಭೂಯ. ವಿ: [ದುರ್ಭೂತ] ದುರಾಚಾರಿ, ಕೆಟ್ಟ ನಡವಳಿಕೆಯ, ಕೆಟ್ಟ ಆಚರಣೆಯ
ದುಬ್ಭೆಜ್ಜ. ವಿ: [ದುರ್ಭೇದ್ಯ] ಭೇದಿಸಲು ದುಸ್ಸಾಧ್ಯವಾದ, ಸೀಳಲು ಅಶಕ್ಯವಾದ, ಬೇರೆ ಮಾಡಲು ದುಸ್ಸಾಧ್ಯವಾದ(ಪಿ)
ದುಬ್ಭೇಯ. ವಿ: [ದುರ್ಭೇದ] ಮೇಲಿನ ಶಬ್ದವನ್ನು ನೋಡುವುದು
ದುಭಗ. 'ದುಬ್ಭಗ' ಶಬ್ದವನ್ನು ನೋಡುವುದು
ದುಭವ. ನ: [ದ್ವಿಭವ] ಈಗಿನ ಮತ್ತು ಮುಂದೆ ಬರಲಿರುವ ಜನ್ಮ(ಶ್ರಾ)
ದುಭಾಗ. ಪು: [ದ್ವಿಭಾಗ] ಅರ್ಧ
ದುಮ. ಸಕ: [ಧವಲಯ್] ಬೆಳ್ಳಗೆ ಮಾಡು, ಸುಣ್ಣವೇ ಮೊದಲಾದವುಗಳಿಂದ ಬಳಿಯುವುದು,
ದುಮ. ಪು: [ದ್ರುಮ] ಮರ, ವೃಕ್ಷ(ಕುವಾ). ಚಮರೇಂದ್ರನ ಪದಾತಿ ಸೈನ್ಯದ ಒಬ್ಬ ಅಧಿಪತಿ. ಶ್ರೇಣಿಕ ಮಹಾರಾಜನ ಒಬ್ಬ ಪುತ್ರ, ಭಗವಾನ್ ಮಹಾವೀರನಿಂದ ದೀಕ್ಷೆ ತೆಗೆದುಕೊಂಡು ಮೇಲಿನ ದೇವಲೋಕದ ಗತಿಯನ್ನು ಪಡೆದುಕೊಂಡನು. **ನ:** ಒಂದು ದೇವ –ವಿಮಾನ. **–ಕಂತ. ನ: [–ಕಾಂತ]** ಒಂದು ವಿದ್ಯಾಧರ ನಗರ. **–ಪತ್ತ. ನ: [–ಪತ್ರ]** ಮರದ ಎಲೆ, ಉತ್ತರಾಧ್ಯಯನ ಸೂತ್ರದ ಒಂದು ಅಧ್ಯಯನ. **–ಪುಪ್ಫಿಯಾ. ಸ್ತ್ರೀ: [–ಪುಷ್ಪಿಕಾ]** 'ದಶ ವೈಕಾಲಿಕ ಸೂತ್ರದ ಮೊದಲ ಅಧ್ಯಯನ'. **–ರಾಯ. ಪು: [–ರಾಜ]** ಉತ್ತಮವಾದ ವೃಕ್ಷ. **–ಸೇಣ. ಪು: [–ಸೇನ]** ಶ್ರೇಣಿಕ ಮಹಾರಾಜನ ಒಬ್ಬ ಪುತ್ರ, ಭಗವಾನ್ ಮಹಾವೀರನಿಂದ ದೀಕ್ಷೆ ತೆಗೆದುಕೊಂಡು ಮೇಲಿನ ದೇವಲೋಕದ ಗತಿಯನ್ನು ಪಡೆದುಕೊಂಡನು. ಒಂಬತ್ತನೆಯ ಬಲದೇವ ಮತ್ತು ವಾಸುದೇವನ ಹಿಂದಿನ ಜನ್ಮದ ಧರ್ಮಗುರು(ಪಉಮ)
ದುಮಂತಯ. ಪು: [ದೇ] ಕೇಶರಾಶಿ, ಮುಡಿ, ಧಮ್ಮಿಲ್ಲ
ದುಮಣ. ನ: [ಧವಲನ] ಸುಣ್ಣವೇ ಮೊದಲಾದವುಗಳಿಂದ ಬಳಿಯುವುದು, ಬಿಳಿದು ಮಾಡುವುದು.
ದುಮಣೀ. ಸ್ತ್ರೀ: [ದೇ] ಮನೆ, ಕಟ್ಟಡಗಳನ್ನು ಬಳಿಯಲು ಬಳಸುವ ದ್ರವ್ಯವಾದ ಸುಣ್ಣ(ದೇ)
ದುಮತ್ತ. ವಿ: [ದ್ವಿಮಾತ್ರ] ಎರಡು ಮಾತ್ರೆಗಳ ಸ್ವರ ವರ್ಣ
ದುಮಾಸಿಯ. ವಿ: [ದ್ವೈಮಾಸಿಕ] ಎರಡು ಮಾಸದ, ಎರಡು ಮಾಸಗಳಿಗೆ ಸಂಬಂಧಿಸಿದ
ದುಮಿಅ. ವಿ: [ಧ್ವಲಿತ[ಸುಣ್ಣದಿಂದ ಬಳಿಯಲ್ಪಟ್ಟ(ಗಾ)
ದುಮಿಲ. 'ದುಮ್ಮಿಲ' ಶಬ್ದವನ್ನು ನೋಡುವುದು
ದುಮುಹ. ಪು: [ದ್ವಿಮುಖ] ಒಬ್ಬ ರಾಜರ್ಷಿ.
ದುಮುಹ. 'ದುಮ್ಮುಹ=ದುರ್ಮುಖ' ಶಬ್ದವನ್ನು ನೋಡುವುದು
ದುಮುಹುತ್ತ. ಪುಂನ: [ದುರ್ಮುಹೂರ್ತ] ಕೆಟ್ಟ ಮುಹೂರ್ತ, ಕೆಟ್ಟ ವೇಳೆ(ಸುಪಾ)
ದುಮೊಕ್ಖ. ವಿ: [ದುರ್ಮೋಕ್ಷ] ಬಿಟ್ಟುಕೊಡಲು ಕಷ್ಟಸಾಧ್ಯವಾದದ್ದು
ದುಮ್ಮ. 'ದೂಮ=ದಾವಯ್' ಶಬ್ದವನ್ನು ನೋಡುವುದು

ದುಮ್ಮಇ. ವಿ: [ದುರ್ಮತಿ] ದುರ್ಬುದ್ಧಿ, ಕೆಟ್ಟ ಬುದ್ಧಿ ಉಳ್ಳವನು(ಶ್ರಾ)
ದುಮ್ಮಇಣೀ. ಸ್ತ್ರೀ: [ದೇ] ಜಗಳಗಂಟಿ ಹೆಂಗಸು(ದೇ)
ದುಮ್ಮಣ. ವಿ: [ದುರ್ಮನಸ್] ಕೆಟ್ಟ ಮನಸ್ಸಿನ, ಖಿನ್ನ ಮನಸ್ಸಿನ, ದುಃಖಗೊಂಡ ಮನಸ್ಸುಳ್ಳ(ವಿಪಾ) ಉದ್ವಿಗ್ನ ಚಿತ್ತವುಳ್ಳ. ದೀನ, ದೈನ್ಯದಿಂದ ಕೂಡಿದ, ದ್ವೇಷದಿಂದ ಕೂಡಿದ(ತಾ)
ದುಮ್ಮಣ. ಅಕ: [ದುರ್ಮನಾಯ್] ಉದ್ವಿಗ್ನಗೊಳ್ಳು, ದುಃಖಿತನಾಗು
ದುಮ್ಮಣಿಅ. ನ: [ದೌರ್ಮನಸ್ಯ] ದುಃಖಗೊಂಡ ಮನಸ್ಸಿನಿಂದ ಕೂಡಿರುವುದು. ಉದ್ವಿಗ್ನನಾಗಿರುವುದು
ದುಮ್ಮಣಿಅ. ನ: [ದೌರ್ಮನಸ್ಯ] ದುಷ್ಟ ಮನೋಭಾವ, ಮನಸ್ಸಿನ ದುಷ್ಟ ವಿಕಾರ
ದುಮ್ಮಯ. ಪು: [ದ್ರಮಕ] ಭಿಕಾರಿ, ಭಿಕ್ಷುಕ,
ದುಮ್ಮಹಿಲಾ: ಸ್ತ್ರೀ: [ದುರ್ಮಹಿಲಾ] ದುಷ್ಟ ಹೆಂಗಸು
ದುಮ್ಮಾಣ. ಪು: [ದುರ್ಮಾನ] ಹುಸಿ ಅಹಂಕಾರ, ಪೊಳ್ಳು ಗರ್ವ, ಪೊಳ್ಳು ಅಭಿಮಾನ(ಅಚ್ಚು)
ದುಮ್ಮಾರ. ಪು:[ದುರ್ಮಾರ]ಭಯಂಕರವಾದ ಹೊಡೆತ
ದುಮ್ಮಾರಿ. ಸ್ತ್ರೀ: [ದುರ್ಮಾರಿ] ಉತ್ಕಟವಾದ ಮಾರಿ ಬೇನೆ
ದುಮ್ಮಾರುಯ. ಪು: [ದುರ್ಮಾರುತ] ಕೆಟ್ಟ ಗಾಳಿ(ಭವಿ)
ದುಮ್ಮಿಅ. ವಿ: [ದೂನ] ಹಿಂಸಿಸಲ್ಪಟ್ಟ, ಪೀಡಿಸಲ್ಪಟ್ಟ(ಗಾ)
ದುಮ್ಮಿಲ. ಸ್ತ್ರೀನ: [ದುರ್ಮಿಲ] ಒಂದು ಬಗೆಯ ಛಂದಸ್ಸು. ಸ್ತ್ರೀ: –ಲಾ
ದುಮ್ಮುಹ. 'ದುಮುಹ=ದ್ವಿಮುಖ' ಶಬ್ದವನ್ನು ನೋಡುವುದು
ದುಮ್ಮುಹ. ಪು: [ದುರ್ಮುಖ] ಧಾರಿಣೀ ದೇವಿಯಲ್ಲಿ ಬಲದೇವನಿಗೆ ಹುಟ್ಟಿದ ಒಬ್ಬ ಮಗ. ಅವನು ಭಗವಾನ್ ನೇಮಿನಾಥನಿಂದ ದೀಕ್ಷೆ ತೆಗೆದು ಕೊಂಡು ಮುಕ್ತಿ ಹೊಂದಿದ.
ದುಮ್ಮುಹ. ಪು: [ದೇ] ಕಪಿ. ಕೋತಿ
ದುಮ್ಮೇಹ. ವಿ: [ದುರ್ಮೇಧಸ್] ದುರ್ಬುದ್ಧಿ, ಕೆಟ್ಟ ಬುದ್ಧಿಯುಳ್ಳವ, ದಡ್ಡ(ಪಣ್ಣ)
ದುಮ್ಮೋಅ. ವಿ: [ದುರ್ಮೋಕ] ಬಿಡಲು ಕಷ್ಟ ಸಾಧ್ಯವಾದದ್ದು, ತ್ಯಜಿಸಲು ದುಸ್ಸಾಧ್ಯವಾದ್ದು (ಅಭಿ)
ದುಯಣು. 'ದುಅಣುಅ' ಶಬ್ದವನ್ನು ನೋಡುವುದು
ದುರಇಕ್ಕಮ. ವಿ: [ದುರತಿಕ್ರಮ] ಉಲ್ಲಂಘಿಸಲು ದುಸ್ಸಾಧ್ಯವಾದ, ಮೀರಲು ಕಷ್ಟವಾದ, ದುರ್ಲಂಘ್ಯ(ಆಚಾ)
ದುರಇಕ್ಕಮಣಿಜ್ಜ. ವಿ: [ದುರತಿಕ್ರಮಣೀಯ] ಮೇಲಿನ ಶಬ್ದವನ್ನು ನೋಡುವುದು
ದುರಂತ. ವಿ: [ದುರಂತ] ಕೆಟ್ಟ ಪರಿಣಾಮವುಳ್ಳ, ಕಡೆಯಲ್ಲಿ ಕೆಟ್ಟದಾಗಿರುವ(ಪಣ್ಣ). ನಾಶ ಪಡಿಸಲು ದುಸ್ಸಾಧ್ಯವಾದ(ತಂದು)
ದುರಂದರ. ವಿ: [ದೇ] ದಾಟಲು ಕಷ್ಟಸಾಧ್ಯವಾದದ್ದು
ದುರಕ್ಖ. ವಿ: [ದುರಕ್ಷ] ರಕಿಸುವುದು ಕಷ್ಟಸಾಧ್ಯವಾದ
ದುರಕ್ಖರ. ವಿ: [ದುರಕ್ಷರ] ಕಠೋರವಾದ(ಮಾತು), ಪರುಷವಾದ, ಬಿರುಸಾದ
ದುರಗ್ಗಹ. ಪು: [ದುರಾಗ್ರಹ] ಛಲ, ಹಟಮಾರಿತನ, ಹಟ(ಕುಪ್ರ)
ದುರಜ್ಝವಸಿಯ. ನ: [ದುರಧ್ಯವಸಿತ] ದುಷ್ಟ ಚಿಂತನೆ, ಕೆಟ್ಟ ಚಿಂತನೆ(ಸುಪಾ)
ದುರಣುಚರ. ವಿ: [ದುರನುಚರ] ಆಚರಿಸಲು ಕಷ್ಟಸಾಧ್ಯವಾದ
ದುರಣುಪಾಲ. ವಿ: [ದುರನುಪಾಲ] ಪಾಲಿಸುವುದು ಕಷ್ಟಸಾಧ್ಯವಾದ, ರಕ್ಷಿಸುವುದು ದುಸ್ಸಾಧ್ಯವಾದ (ಉತ್ತ)
ದುರಪ್ಪ. ಪು: [ದುರಾತ್ಮನ್] ದುಷ್ಟಾತ್ಮ, ಕೆಟ್ಟ ವ್ಯಕ್ತಿ(ಉವ)
ದುರಬ್ಭಾಸ. ಪು: [ದುರಭ್ಯಾಸ] ಕೆಟ್ಟ ಅಭ್ಯಾಸ (ಸುಪಾ)
ದುರಭಿ. 'ದುಬ್ಭಿ' ಶಬ್ದವನ್ನು ನೋಡುವುದು
ದುರಭಿಗಮ. ವಿ; [ದುರಭಿಗಮ] ಎದುರಾಗಿ ಹೋಗುವುದು ಕಷ್ಟಸಾಧ್ಯವಾದ(ತಾ), ತಿಳಿಯಲು ಕಷ್ಟಸಾಧ್ಯವಾದ
ದುರಮಚ್ಚ. ಪು: [ದುರಮಾತ್ಯ] ಕೆಟ್ಟ ಮಂತ್ರಿ, ದುಷ್ಟಸಚಿವ
ದುರವಗಮ}. ವಿ: [ದುರವಗಮ] ತಿಳಿಯಲು
ದುರವಗಮ್ಮ}. ಕಷ್ಟಸಾಧ್ಯವಾದ(ಕುಪ್ರ)
ದುರವಗಾಹ. ವಿ: [ದುರವಗಾಹ] ಕಷ್ಟದಿಂದ ಪ್ರವೇಶಿಸಬಹುದಾದ,ಕಷ್ಟದಿಂದಇಳಿಯಬಹುದಾದ
ದುರಸ. ವಿ: [ದೂರಸ] ಕೆಟ್ಟ ರುಚಿ ಉಳ್ಳ(ಭಗ)
ದುರಸಣ. ಪು: [ದ್ವಿರಸನ] ಹಾವು, ಸರ್ಪ, ದುರ್ಜನ, ಕೆಟ್ಟ ಮನುಷ್ಯ(ಸುಪಾ)
ದುರಹಿ. 'ದುರಭಿ' ಶಬ್ದವನ್ನು ನೋಡುವುದು

ದುರಹಿಗಮ. 'ದುರಭಿಗಮ' ಶಬ್ದವನ್ನು ನೋಡುವುದು
ದುರಹಿಗಮ್ಮ. ವಿ: [ದುರಭಿಗಮ್ಯ] ಕಷ್ಟದಿಂದ ತಿಳಿಯಬಹುದಾದ್ದು, ತಿಳಿಯಲು ಕಷ್ಟಸಾಧ್ಯವಾದ್ದು
ದುರಹಿಯಾಸ. ವಿ: [ದುರಧ್ಯಾಸ, ದುರಧಿಸಹ] ಸಹಿಸಲು ದುಸ್ಸಾಧ್ಯವಾದದ್ದು(ಆಚಾ)
ದುರಾಣಣ. ಪು: [ದುರಾನನ] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ)
ದುರಾಣುವತ್ತ. ವಿ: [ದುರನುವರ್ತ] ಅನುಸರಿಸುವುದು ಕಷ್ಟಸಾಧ್ಯವಾದ(ವವ)
ದುರಾಯ. ನ: [ದ್ವಿರಾತ್ರ] ಎರಡು ರಾತ್ರಿ(ಠಾ)
ದುರಾಯಾರ. ವಿ: [ದುರಾಚಾರ] ದುರಾಚಾರಿ, ಕೆಟ್ಟ ನಡವಳಿಕೆ ಉಳ್ಳವನು, **ಪು:** ಕೆಟ್ಟ ನಡವಳಿಕೆ, ಕೆಟ್ಟ ಚಾಳಿ(ಭವಿ)
ದುರಾಯಾರಿ. ವಿ: [ದುರಾಚಾರಿನ್] **ಮೇಲಿನ ಶಬ್ದವನ್ನು ನೋಡುವುದು**
ದುರಾರಾಹ. ವಿ: [ದುರಾರಾಧ] ಕಷ್ಟ ಸಾಧ್ಯವಾದ ಆರಾಧನೆ(ಕಪ್ಪ)
ದುರಾರೋಹ. ವಿ: [ದುರಾರೋಹ] ಕಷ್ಟದಿಂದ ಮೇಲಕ್ಕೆ ಹತ್ತಬಹುದಾದ್ದು(ಉತ್ತ), ಹತ್ತಲು ಕಷ್ಟವಾದದ್ದು
ದುರಾಲೋಅ. ಪು: [ದೇ] ಕತ್ತಲೆ, ಅಂಧಕಾರ(ದೇ)
ದುರಾಲೋಅ. ವಿ: [ದುರಾಲೋಕ] ನೋಡಲು ಕಷ್ಟಸಾಧ್ಯವಾದದ್ದು, ನೋಡಲು ಅಶಕ್ಯವಾದದ್ದು
ದುರಾಲೋಯಣ. ವಿ: [ದುರಾಲೋಕನ] ಮೇಲಿನ **ಶಬ್ದವನ್ನು ನೋಡುವುದು**
ದುರಾವಹ. ವಿ: [ದುರಾವಹ] ತಡೆಯಲಾಗದ, ಎದುರಿಸಲಾಗದ, ಹೊರಲಾಗದ(ಪಉಮ)
ದುರಾಸ. ವಿ; [ದುರಾಶ] ಕೆಟ್ಟ ಆಸೆಯುಳ್ಳ, ಅಳಿಯಾಸೆಯ(ಭವಿ), ಕೆಟ್ಟ ಆಸೆ
ದುರಾಸಯ. ವಿ: [ದುರಾಶಯ] ಕೆಟ್ಟ ಅಭಿಪ್ರಾಯವುಳ್ಳ, ಕೆಟ್ಟ ಮನೋಭಾವವುಳ್ಳ(ಸುಪಾ) **ಪು:** ಕೆಟ್ಟ ಅಭಿಪ್ರಾಯ
ದುರಾಸಯ. ವಿ: [ದುರಾಶ್ರಯ] ಕಷ್ಟದಿಂದ ಆಶ್ರಯ ನೀಡಲು ಸಾಧ್ಯವಾದ, ಆಶ್ರಯ ನೀಡಲು ಅಶಕ್ಯವಾದ
ದುರಾಸಯ. ವಿ: [ದುರಾಸದ] ಪಡೆಯಲು ಅಶಕ್ಯವಾದ, ಹೊಂದಲು ಕಷ್ಟವಾದ, ಜಯಿಸಲು ಕಷ್ಟಸಾಧ್ಯವಾದ, ಸಹಿಸಲು ಕಷ್ಟಸಾಧ್ಯವಾದ(ದಸ)

ದುರಿಅ. ನ: [ದುರಿತ] ಪಾಪ
ದುರಿಅ. ನ: [ದೇ] ಬೇಗನೆ, ಶೀಘ್ರವಾಗಿ, ವೇಗವಾಗಿ (ಷಡ್)
ದುರಿಆರಿ. ಸ್ತ್ರೀ: [ದುರಿತಾರಿ] ಭಗವಾನ್ ಸಂಭವನಾಥನ ಶಾಸನ –ದೇವಿ(ಸಂತಿ)
ದುರಿಕ್ಖ. ವಿ: [ದುರೀಕ್ಷ] ನೋಡಲು ಅಶಕ್ಯವಾದ್ದು
ದುರಿಟ್ಠ. ನ: [ದುರಿಷ್ಟ] ಕೆಟ್ಟ ನಕ್ಷತ್ರ, ಕೆಟ್ಟ ಯಾಗ
ದುರುಕ್ಕ. ವಿ: [ದೇ] ಸ್ವಲ್ಪಮಟ್ಟಿಗೆ ಬೀಸಲ್ಪಟ್ಟ, ಸರಿಯಾಗಿ ಬೀಸಲ್ಪಡದ(ಆಚಾ)
ದುರುಢುಲ್ಲ. **ಸಕ:** [ಭ್ರಮ್] ತಿರುಗು, ಸಂಚರಿಸು, ಕಳೆದುಹೋದ ವಸ್ತುವಿನ ಹುಡುಕಾಟದಲ್ಲಿ ಸುತ್ತಾಡು
ದುರುತ್ತ. ನ: [ದುರುಕ್ತ] ನಿಂದೆ, ಕೆಟ್ಟ ಮಾತು, ಬೈಗಳು(ಸಾರ್ಧ)
ದುರುತ್ತ. ವಿ: [ದ್ವಿರುಕ್ತ] ಎರಡು ಬಾರಿ ಹೇಳಲ್ಪಟ್ಟ, ಪುನರುಕ್ತ, ಎರಡು ಸಲ ಹೇಳಲರ್ಹವಾದ
ದುರುತ್ತರ. ವಿ: [ದುರುತ್ತರ] ದಾಟಲು ಕಷ್ಟವಾದ, ದಾಟುವುದು ಅಶಕ್ಯವಾದ, **ನ:** ಕೆಟ್ಟ ಉತ್ತರ, ಅಯೋಗ್ಯ ಉತ್ತರ.
ದುರುತ್ತರ. ವಿ: [ದ್ವಿ +ಉತ್ತರ] ಎರಡಕ್ಕಿಂತ ಹೆಚ್ಚು. **–ಸಯ.** ವಿ: [–ಶತತಮ] ಒಂದು ನೂರಾ ಎರಡನೆಯ(ಪಉಮ)
ದುರುತ್ತಾರ. ವಿ: [ದುರುತ್ತಾರ] ಕಷ್ಟದಿಂದ ದಾಟಬಹುದಾದ, ಪಾರಾಗಲು ಅಶಕ್ಯವಾದ
ದುರುದ್ಧರ. ವಿ: [ದುರುದ್ಧರ] ಉದ್ಧರಿಸಲು ಕಷ್ಟವಾದ (ಸೂಅ)
ದುರುವಣೀಯ. ವಿ: [ದುರುಪನೀತ] ಕಷ್ಟದಿಂದ ಹತ್ತಿರಕ್ಕೆ ತರಲಾದ
ದುರುವಯಾರ. ವಿ: [ದುರುಪಚಾರ] ಸೇವೆ ಮಾಡುವುದು ಕಷ್ಟಸಾಧ್ಯವಾದ, ಶುಶ್ರೂಷೆ ಕಷ್ಟಸಾಧ್ಯವಾದ (ತಂದು)
ದುರುವ್ವಾ. ಸ್ತ್ರೀ: [ದೂರ್ವಾ] ಗರಿಕೆ ಹುಲ್ಲು, ದೂರ್ವೆ
ದುರುಹ. **ಸಕ:** [ಆ+ರುಹ್] ಮೇಲಕ್ಕೆ ಹತ್ತು. ವ. ಕೃ – **ದುರುಹಮಾಣ**
ದುರೂಢ. ವಿ: [ಆರೂಢ] ಮೇಲಕ್ಕೆ ಹತ್ತಿದ, ಏರಿದ
ದುರೂವ. ವಿ: [ದುರೂಪ] ಕುರೂಪವುಳ್ಳ, ಕುರೂಪಿ (ಠಾ), ಅಶುಚಿಯೇ ಮೊದಲಾದ ಕೆಟ್ಟ ವಸ್ತು

ದುರೂಹ. 'ದುರುಹ' ಶಬ್ದವನ್ನು ನೋಡುವುದು
ದುರೂಹಣ. ನ: [ಆರೋಹಣ] ಮೇಲೆ ಹತ್ತಿ ಕುಳಿತುಕೊಳ್ಳುವುದು.
ದುರೇಹ. ಪು: [ದ್ವಿರೇಫ] ಭ್ರಮರ, ದುಂಬಿ(ಪಾಅ)
ದುರೋಅರ. ನ: [ದುರೋದರ] ಜೂಜು, ದ್ಯೂತ
ದುಲಂಘ. 'ದುಲ್ಲಂಘ' ಶಬ್ದವನ್ನು ನೋಡುವುದು(ಭವಿ)
ದುಲಂಭ. 'ದುಲ್ಲಂಭ' ಶಬ್ದವನ್ನು ನೋಡುವುದು
ದುಲಹ. ವಿ: [ದುರ್ಲಭ] ಯಾವುದು ಪ್ರಾಪ್ತವಾಗುವುದು ದುಸ್ಸಾಧ್ಯವೋ ಅದು(ಗಉಡ), ಒಬ್ಬ ವ್ಯಾಪಾರಿಯ ಮಗ(ಸುಪಾ). 'ದುಲ್ಲಹ' ಶಬ್ದವನ್ನು ನೋಡುವುದು
ದುಲಿ. ಪುಂಸ್ತ್ರೀ: [ದೇ] ಆಮೆ (ದೇ)
ದುಲ್ಲ. ಪುಂಸ್ತ್ರೀ: [ದೇ] ಬಟ್ಟೆ, ವಸ್ತ್ರ
ದುಲ್ಲಂಘ. ವಿ: [ದುರ್ಲಂಘ] ಉಲ್ಲಂಘಿಸುವುದು ಕಷ್ಟವಾದ, ಮೀರುವುದು ದುಸ್ಸಾಧ್ಯವಾದ
ದುಲ್ಲಂಭ. ವಿ: [ದುರ್ಲಭ] ಯಾವುದು ಪ್ರಾಪ್ತವಾಗುವುದು ದುಸ್ಸಾಧ್ಯವೋ ಅದು (ಉಪ)
ದುಲ್ಲಕ್ಖ. ವಿ: [ದುರ್ಲಕ್ಷ] ತಿಳಿಯಲು ಕಷ್ಟವಾದ, ಕಷ್ಟದಿಂದ ತಿಳಿಯಬಹುದಾದ, ನೋಡಲು ಕಷ್ಟವಾದ(ಕಪ್ಪೂ)
ದುಲ್ಲಗ್ಗ. ವಿ: [ದೇ] ಅಯೋಗ್ಯವಾದ, ಅನುಚಿತವಾದ, ನಡೆಯಬಾರದ(ದೇ)
ದುಲ್ಲಗ್ಗ. ನ: [ದುರ್ಲಗ್ನ] ಕೆಟ್ಟ ಲಗ್ನ, ಕೆಟ್ಟ ಮುಹೂರ್ತ (ಮುದ್ರಾ)
ದುಲ್ಲಬ್ಭ}. 'ದುಲ್ಲಹ' ಶಬ್ದವನ್ನು ನೋಡುವುದು(ನಿಚೂ)
ದುಲ್ಲಭ}.
ದುಲ್ಲಲಿಅ. ವಿ: [ದುರ್ಲಲಿತ] ಕೆಟ್ಟ ಅಭ್ಯಾಸವುಳ್ಳವನು, ದುಷ್ಟ ಇಚ್ಛೆ ಉಳ್ಳವನು(ಸುಪಾ), ಮದ್ಯ, ಬೇಟೆ ಮೊದಲಾದ ಚಟವುಳ್ಳವನು
ದುಲ್ಲಸಿಆ. ಸ್ತ್ರೀ: [ದೇ] ದಾಸಿ, ಸೇವಕಳು(ದೇ)
ದುಲ್ಲಹ. ವಿ: [ದುರ್ಲಭ] ಯಾವುದು ಪ್ರಾಪ್ತವಾಗುವುದು ದುಸ್ಸಾಧ್ಯವೋ ಅದು, ಕಷ್ಟಸಾಧ್ಯವಾಗಿ ಲಭಿಸುವಂಥದು(ಸ್ವಪ್ನ). ಗುಜರಾತಿನ ಒಬ್ಬ ಪ್ರಸಿದ್ಧ ದೊರೆ. –ರಾಯ. ಪು: [–ರಾಜ] ಅದೇ ಅರ್ಥ. –ಲಂಭ. ವಿ: [ಲಂಭ] ಕಷ್ಟಸಾಧ್ಯವಾಗಿ ಲಭಿಸುವಂಥದ(ಸುರ)
ದುವಈ. ಸ್ತ್ರೀ: [ದ್ರುಪದೀ] ಒಂದು ಛಂದಸ್ಸು.
ದುವಣ. ನ: [ದಾವನ] ನೋಯಿಸುವುದು, ಪೀಡಿಸುವುದು(ಪಣ್ಣ)
ದುವಣ್ಣ}. ವಿ: [ದುರ್ವರ್ಣ] ಕೆಟ್ಟ ರೂಪವುಳ್ಳ,
ದುವನ್ನ}. ಕುರೂಪಿ(ಭಗ)
ದುವಯ. ಪು: [ದ್ರುಪದ] ದ್ರೌಪದಿಯ ತಂದೆಯಾದ ದ್ರುಪದರಾಜ(ಉಪ), –ಸುಯಾ. ಸ್ತ್ರೀ: [–ಸುತಾ] ದ್ರೌಪದಿ
ದುವಯಂಗಯಾ}. ಸ್ತ್ರೀ: [ದ್ರುಪದಾಂಗಜಾ] ಸ್ತ್ರೀ:
ದುವಯುಂಗರುಹಾ}. [ದ್ರುಪದಾಂಗರುಹಾ] ದ್ರುಪದರಾಜನ ಮಗಳಾದ ದ್ರೌಪದಿ, ಪಾಂಡವರ ಹೆಂಡತಿ
ದುವಯಣ. ನ: [ದುರ್ವಚನ] ಕೆಟ್ಟ ಮಾತು, ನಿಂದೆ, ಬೈಗಳು(ಪಉಮ)
ದುವಯಣ. ನ: [ದ್ವಿವಚನ] ಎರಡು ಎಂಬ ಅರ್ಥದ ವ್ಯಾಕರಣ ಪ್ರಸಿದ್ಧ ದ್ವಿವಚನ.
ದುವಾರ}. 'ದುಆರ' ಶಬ್ದವನ್ನು ನೋಡುವುದು.
ದುವಾರಯ}. –ಪಾಲ. ಪು: [–ಪಾಲ] ದ್ವಾರ ಪಾಲಕ, ಬಾಗಿಲು ಕಾಯುವವನು. –ವಾಹಾ. ಸ್ತ್ರೀ: [–ಬಾಹಾ] ಬಾಗಿಲಿರುವ ಭಾಗ
ದುವಾರಿ ವಿ: [ದ್ವಾರಿನ್] ದ್ವಾರಪಾಲಕ, ಪು: ಪ್ರತೀಹಾರ
ದುವಾರಿಅ. ಪು: [ದೌವಾರಿಕ] ದ್ವಾರಪಾಲಕ, ಪ್ರತೀಹಾರ
ದುವಾಲಸ. ತ್ರಿಬ: [ದ್ವಾದಶನ್] ಹನ್ನೆರಡು. –ಮುಹುತ್ತಿಅ. ವಿ: [–ಮುಹೂರ್ತಿಕ] ಹನ್ನೆರಡು ಮುಹೂರ್ತಗಳ ಪರಿಮಾಣವುಳ್ಳ. –ವಿಹ. ವಿ: [–ವಿಧ] ಹನ್ನೆರಡು ಬಗೆಯ. –ಹಾ. ಅ: [–ಧಾ] ಹನ್ನೆರಡು ವಿಧದ. ದುವಾಲಸಾವತ್ತ. ನ:[ದ್ವಾದಶಾವರ್ತ] ಹನ್ನೆರಡು ಸಲ ಪುನರಾವರ್ತನೆಯುಳ್ಳ ನಮಸ್ಕಾರ.
ದುವಾಲಸಂಗ. ಸ್ತ್ರೀನ: [ದ್ವಾದಶಾಂಗೀ] ಹನ್ನೆರಡು ಜೈನ ಆಗಮ ಗ್ರಂಥಗಳು, ಆಚಾರಾಂಗವೇ ಮೊದಲಾದ –ಸೂತ್ರ – ಗ್ರಂಥಗಳು(ಸಮ). ಸ್ತ್ರೀ: –ಗೀ.
ದುವಾಲಸಂಗಿ. ವಿ: [ದ್ವಾದಸಾಂಗಿನ್] ಹನ್ನೆರಡು ಅಂಗ ಗ್ರಂಥಗಳನ್ನು ತಿಳಿದವನು(ಕಪ್ಪ)
ದುವಾಲಸಮ. ವಿ: [ದ್ವಾದಶ] ಹನ್ನೆರಡನೆಯ, ನ: ನಿರಂತರ ಐದು ದಿವಸಗಳ ಉಪವಾಸ(ಆಚಾ). ಸ್ತ್ರೀ: ಮೀ
ದುವಿಟ್ಠ}. ಪು: [ದ್ವಿಪೃಷ್ಠ, ದ್ವಿವಿಷ್ಟಪ] ಭರತ ಕ್ಷೇತ್ರದಲ್ಲಿ
ದುವಿಟ್ಟು}. ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ

ಎರಡನೇ ಅರ್ಧ-ಚಕ್ರಿ, ಭರತ ಕ್ಷೇತ್ರದಲ್ಲಿ ಹುಟ್ಟಲಿರುವ ಎಂಟನೇ ಅರ್ಧ-ಚಕ್ರಿ, ಒಬ್ಬ ವಾಸುದೇವ(ಸಮ)

ದುವಿಭಜ್ಜ. ವಿ: [ದುರ್ವಿಭಜ] ವಿಭಾಗಿಸಲು ಕಷ್ಟ ಸಾಧ್ಯವಾದ

ದುವಿಭವ್ವ. 'ದುವ್ವಿಭವ್ವ' ಶಬ್ದವನ್ನು ನೋಡುವುದು

ದುವಿಯಡ್ಢ. ವಿ: [ದುರ್ವಿದಗ್ಧ] ವ್ಯರ್ಥವಾಗಿ ಅಹಂಕಾರ ಪಡುವ, ಮೂರ್ಖ, ಅವಿವೇಕಿ, ಕೆಟ್ಟ ರೀತಿಯಲ್ಲಿ ಶಿಕ್ಷಿತನಾದವನು(ಉಪ)

ದುವಿಯಪ್ಪ. ಪು: [ದುರ್ವಿಕಲ್ಪ] ದುಷ್ಟ ಊಹೆ, ಕೆಟ್ಟ ಸಂಶಯ ಜ್ಞಾನ

ದುವಿಲಯ. ಪು: [ದುರ್ವಿಲಕ] ಒಂದು ಅನಾರ್ಯ ದೇಶ

ದುವಿಹ. ವಿ: [ದ್ವಿವಿಧ] ಎರಡು ಬಗೆಯ

ದುವೀಸ. ಸ್ತ್ರೀನ: [ದ್ವಾವಿಶಂತಿ] ಇಪ್ಪತ್ತೆರಡು

ದುವ್ವಣ್ಣ}. 'ದುವಣ್ಣ' ಶಬ್ದವನ್ನು
ದುವ್ವನ್ನ}. ನೋಡುವುದು(ಪಉಮ)

ದುವ್ವಯ. ನ: [ದುರ್ವ್ರತ] ದುಷ್ಟ ನಿಯಮ, ವಿ: ದುಷ್ಟ ವ್ರತವನ್ನಾಚರಿಸುವವನು, ವ್ರತ -ರಹಿತ, ನಿಯಮ ಬಿಟ್ಟವನು.

ದುವ್ವಯಣ. ನ: [ದುರ್ವಚನ] ದುಷ್ಟ ಮಾತು, ಕೆಟ್ಟ ಮಾತು ನಿಂದೆ, ಬೈಗಳು

ದುವ್ವಲ. 'ದುಬ್ಬಲ' ಶಬ್ದವನ್ನು ನೋಡುವುದು

ದುವ್ವಸಣ. ನ: [ದುರ್ವ್ಯಸನ] ಕೆಟ್ಟ ಅಭ್ಯಾಸ(ಭವಿ)

ದುವ್ವಸು. ವಿ: [ದುರ್ವಸು] ಅಭವ್ಯ, ಕೆಟ್ಟ ಸಂಪತ್ತು(ಆಚಾ), **-ಮುಣಿ.** ಪು:[-ಮುನಿ] ಮುಕ್ತಿಗೆ ಅನರ್ಹನಾದ ಸಾಧು

ದುವ್ವಹ. ವಿ: [ದುರ್ವಹ] ಹೊರಲಾಗದ, ಹೊರಲು ದುಸ್ಸಾಧ್ಯವಾದ

ದುವ್ವಾ. 'ದುರುವ್ವಾ' ಶಬ್ದವನ್ನು ನೋಡುವುದು

ದುವ್ವಾಹ. ವಿ: [ದುರ್ವಾದಿನ್] ಅಪ್ರಿಯವಾದ ಮಾತಾಡುವವನು, ಕೆಟ್ಟ ಮಾತುಗಳನ್ನಾಡುವವನು, ಅಸಂಬದ್ಧವಾಗಿ ಮಾತಾಡುವವನು

ದುವ್ವಾಯ. ಪು: [ದುರ್ವಾಕ್] ಕೆಟ್ಟ ಮಾತು, ದುಷ್ಟ ಮಾತು(ಪಉಮ)

ದುವ್ವಾಯ. ಪು: [ದುರ್ವಾತ] ಕೆಟ್ಟ ಗಾಳಿ

ದುವ್ವಾರ. ವಿ: [ದುರ್ವಾರ] ತಡೆಯಲು ಅಶಕ್ಯವಾದ, ತಡೆಯಲಾಗದ(ಅಭಿ)

ದುವ್ವಾರಿಅ. ದುವಾರಿಅ=ದೌವಾರಿಕ' ಶಬ್ದವನ್ನು ನೋಡುವುದು

ದುವ್ವಾಲೀ. ಸ್ತ್ರೀ: [ದೇ] ಮರಗಳ ಸಾಲು

ದುವ್ವಾಸ. ಪು: [ದುರ್ವಾಸಸ್] ದುರ್ವಾಸ ಮಹರ್ಷಿ

ದುವ್ವಿಅಡ. ವಿ: [ದುರ್ವಿವೃತ] ಬೆತ್ತಲೆ, ನಗ್ನ

ದುವ್ವಿಅಡ್ಢ}. ವಿ: [ದುರ್ವಿದಗ್ಧ] ತಿಳಿದಿದೆಯೆಂದು
ದುವ್ವಿಅದ್ಧ}.ಸುಳ್ಳೇ ಅಹಂಕಾರ ಪಡುವವನು, ಮೂರ್ಖ, ಅವಿವೇಕಿ, ವ್ಯರ್ಥವಾಗಿ ಅಹಂಕಾರ ಪಡುವವನು

ದುವ್ವಿಜಾಣಯ. ವಿ: [ದುರ್ವಿಜ್ಞೇಯ] ತಿಳಿಯಲು ಅಶಕ್ಯವಾದ, ತಿಳಿಯಲು ದುಸ್ಸಾಧ್ಯವಾದ (ಪಣ್ಣ)

ದುವ್ವಿಢಪ್ಪ. ವಿ: [ದುರರ್ಜ] ಸಂಪಾದಿಸಲು ಕಷ್ಟಸಾಧ್ಯವಾದ(ಕುಪ್ರ)

ದುವ್ವಿಣೀಅ. ವಿ: [ದುರ್ವಿನೀತ] ಅವಿಧೇಯ, ವಿನೀತನಲ್ಲದ, ಉದ್ಧಟ(ಪಉಮ)

ದುವ್ವಿಣ್ಣಾಯ. ವಿ: [ದುರ್ವಿಜ್ಞಾತ] ಅಸತ್ಯವಾದ ರೀತಿಯಲ್ಲಿ ತಿಳಿದುಬಂದ

ದುವ್ವಿಭಜ. 'ದುವಿಭಜ್ಜ.' ಶಬ್ದವನ್ನು ನೋಡುವುದು

ದುವ್ವಿಭವ್ವ. ವಿ: [ದುರ್ವಿಭಾವ್ಯ] ಯೋಚಿಸಲೂ ಸಾಧ್ಯವಿಲ್ಲದ, ಊಹಿಸಲೂ ಅಶಕ್ಯವಾದ

ದುವ್ವಿಭಾವ. ವಿ: [ದುರ್ವಿಭಾವ] ಮೇಲಿನ ಶಬ್ದವನ್ನು ನೋಡುವುದು.

ದುವ್ವಿಲಸಿಯ. ನ: [ದುರ್ವಿಲಸಿತ] ನಿಕೃಷ್ಟ ಕಾರ್ಯ, ದುಷ್ಟತನ, ಪುಂಡತನ(ಉಪ)

ದುವ್ವಿಸಹ. ವಿ: [ದುರ್ವಿಷಹ] ಸಹಿಸಲು ಕಷ್ಟವಾದ, ದುಃಸಹ(ಗಾ)

ದುವ್ವಿಸೊಜ್ಝ. ವಿ: [ದುರ್ವಿಶೋಧ್ಯ] ಶುದ್ಧಪಡಿಸಲು ಅಶಕ್ಯವಾದ

ದುವ್ವಿಹಿಯ. ನ: [ದುರ್ವಿಹಿತ] ಕೆಟ್ಟ ಅನುಷ್ಠಾನ, ವಿ: ಕೆಟ್ಟ ರೀತಿಯಲ್ಲಿ ಮಾಡಲ್ಪಟ್ಟ, ಯಶಸ್ವಿಯಲ್ಲದ (ಆವ)

ದುವ್ವೊಜ್ಝ. ವಿ: [ದುರ್ವಾಹ್ಯ] ಕಷ್ಟದಿಂದ ಹೊರಲು ಸಾಧ್ಯವಾದ, ಹೊರಲಾಗದ

ದುವ್ವೊಜ್ಝ. ವಿ: [ದೇ] ಕಷ್ಟದಿಂದ ಕೊಲ್ಲಲು ಸಾಧ್ಯವಾದ

ದುಸಂಕಡ. ನ: [ದುಃಸಂಕಟ] ವಿಷಮವಾದ ವಿಪತ್ತು

ದುಸಂಚರ. 'ದುಸ್ಸಂಚರ' ಶಬ್ದವನ್ನು ನೋಡುವುದು (ಭವಿ)

ದುಸಂಥ. ವಿ: [ದ್ವಿಸಂಸ್ಥ] ಎರಡು ಬಾರಿ ಕೇಳಿಸಿಕೊಂಡ ಮಾತ್ರಕ್ಕೇ ಅದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಲು ಶಕ್ತನಾದ

ದುಸನ್ನಪ್ಪ. ವಿ: [ದುಃಸಂಜ್ಞಾಪ್ಯ] ತಿಳಿಯಲು ಅಶಕ್ಯವಾದ

ದುಸಮದುಸಮಾ. 'ದುಸ್ಸಮದುಸ್ಸಮಾ' ಶಬ್ದವನ್ನು ನೋಡುವುದು

ದುಸಮಸುಸಮಾ. 'ದುಸ್ಸಮಸುಸಮಾ' ಶಬ್ದವನ್ನು ನೋಡುವುದು

ದುಸಮಾ. 'ದುಸ್ಸಮಾ' ಶಬ್ದವನ್ನು ನೋಡುವುದು(ಭಗ)

ದುಸಹ. 'ದುಸ್ಸಹ' ಶಬ್ದವನ್ನು ನೋಡುವುದು

ದುಸಾಹ. ವಿ: [ದುಃಸಾಧ] ದುಸ್ಸಾಧ್ಯವಾದ, ಕಷ್ಟಸಾಧ್ಯವಾದ (ಪಉಮ)

ದುಸಿಕ್ಖಿಅ. ವಿ: [ದುಃಶಿಕ್ಷಿತ] ಕೆಟ್ಟ ರೀತಿಯಲ್ಲಿ ಶಿಕ್ಷಿತನಾದವನು, ಗೊತ್ತಿದೆಯೆಂದು ಸುಳ್ಳೇ ಅಹಂಕಾರ ಪಡುವ, ಮೂರ್ಖ, ಅವಿವೇಕಿ

ದುಸುಮಿಣ. 'ದುಸ್ಸುಮಿಣ' ಶಬ್ದವನ್ನು ನೋಡುವುದು

ದುಸುರುಲ್ಲಯ. ನ: [ದೇ] ಒಂದು ಕಂಠಾಭರಣ

ದುಸ್ಸ. ಸಕ: [ದ್ವಿಷ್] ದ್ವೇಷಿಸು, ಹಗೆತನ ಸಾಧಿಸು

ದುಸ್ಸಉಣ. ನ: [ದುಃಶಕುನ] ಕೆಟ್ಟ ಶಕುನ, ಅಪಶಕುನ

ದುಸ್ಸಂಚರ. ವಿ: [ದುಸ್ಸಂಚರ] ಹೋಗಲು ಕಷ್ಟಸಾಧ್ಯವಾದ, ಸಂಚರಿಸಲು ದುಸ್ಸಾಧ್ಯವಾದ, ದುರ್ಗಮ

ದುಸ್ಸಂಚಾರ. ಮೇಲಿನ ಶಬ್ದವನ್ನು ನೋಡುವುದು

ದುಸ್ಸಂತ. ಪು: [ದುಷ್ಯಂತ] ಶಕುಂತಲೆಯ ಪತಿ, ಚಂದ್ರವಂಶದ ದೊರೆ(ಪಿ)

ದುಸ್ಸಂಬೋಹ. ವಿ: [ದುಸ್ಸಂಬೋಧ] ತಿಳಿಯಲು ಕಷ್ಟವಾದ(ಆಚಾ)

ದುಸ್ಸಜ್ಝ. ವಿ: [ದುಸ್ಸಾಧ್ಯ] ಮಾಡಲು ಅಶಕ್ಯವಾದ, ಕಷ್ಟದಿಂದ ಮಾಡಬಹುದಾದ, ದುಷ್ಕರ(ಸುಪಾ)

ದುಸ್ಸಣ್ಣಪ್ಪ. 'ದುಸನ್ನಪ್ಪ' ಶಬ್ದವನ್ನು ನೋಡುವುದು(ಬೃಹ)

ದುಸ್ಸತ್ತ. ವಿ: [ದುಃಸತ್ತ್ವ] ದುಷ್ಟ ಜೀವ, ದುರಾತ್ಮ, ಕೆಟ್ಟವನು(ಪಉಮ)

ದುಸ್ಸನ್ನಪ್ಪ. ತಿಳಿಯಲು ಅಶಕ್ಯವಾದ

ದುಸ್ಸಮದುಸ್ಸಮಾ. ಸ್ತ್ರೀ: [ದುಷ್ಷಮದುಷ್ಷಮಾ] ಕಾಲ –ವಿಶೇಷ, ಎಲ್ಲಕ್ಕಿಂತ ಅಧಮ ಕಾಲ, ಅವಸರ್ಪಿಣೀ ಕಾಲದ ಆರನೆಯ ಮತ್ತು ಉತ್ಸರ್ಪಿಣೀ ಕಾಲದ ಮೊದಲ ಹಂತ. ಈ ಅವಧಿಯಲ್ಲಿ ಎಲ್ಲ ಪದಾರ್ಥಗಳ ಗುಣಗಳ ತೀವ್ರ ಹಾನಿ ಉಂಟಾಗುತ್ತದೆ. ಇದರ ಅವಧಿ ೨ –ಸಾವಿರ ವರ್ಷಗಳು(ತಾ)

ದುಸ್ಸಮಸುಸಮಾ. ಸ್ತ್ರೀ: [ದುಷ್ಷಮಸುಷಮಾ] ೪೨ ಸಾವಿರ ಕಮ್ಮಿ ಒಂದು ಕೋಟಾ ಕೋಟಿ ಸಾಗರೋಪಮ ಅವಧಿಯಕಾಲ –ವಿಶೇಷ. ಇದು ಅವಸರ್ಪಿಣೀ ಕಾಲದ ನಾಲ್ಕನೆಯ ಮತ್ತು ಉತ್ಸರ್ಪಿಣೀ ಕಾಲದ ಮೂರನೆಯ ಹಂತ(ಕಪ್ಪ)

ದುಸ್ಸಮಾ. ಸ್ತ್ರೀ: [ದುಷ್ಷಮಾ] ದುಷ್ಟ ಕಾಲ. ೨ –ಸಾವಿರ ವರ್ಷಗಳ ಅವಧಿಯ ಕಾಲ–ವಿಶೇಷ. ಅವಸರ್ಪಿಣೀ ಕಾಲದ ಐದನೆಯ ಮತ್ತು ಉತ್ಸರ್ಪಿಣೀ ಕಾಲದ ಎರಡನೆಯ ಹಂತ(ಉಪ)

ದುಸ್ಸರ. ಪು: [ದುಃಸ್ವರ] ಕೆಟ್ಟ ಕಂಠ, ಕೆಟ್ಟ ದನಿ. ಕರ್ಮ ವಿಶೇಷದ ಕಾರಣದಿಂದಾಗಿ ಸ್ವರ ಕರ್ಣ ಕಠೋರವಾಗುತ್ತದೆ(ಕಮ್ಮ). **–ಣಾಮ, –ನಾಮ.** [**–ನಾಮನ್**] ಕೆಟ್ಟ ಕಂಠಕ್ಕೆ ಕಾರಣಭೂತವಾದ ಕರ್ಮ.

ದುಸ್ಸಲ. ವಿ: [ದುಃಶಲ] ವಿನಯವಿಲ್ಲದವನು, ಅವಿಧೇಯ, ಉದ್ಧಟ(ಬೃಹ)

ದುಸ್ಸಹ. ವಿ: [ದುಸ್ಸಹ] ಸಹಿಸಲು ಕಷ್ಟಸಾಧ್ಯವಾದ್ದು (ಸ್ವಪ್ನ)

ದುಸ್ಸಹಿಯ. ವಿ: [ದುಸ್ಸಹ] ಕಷ್ಟದಿಂದ ಸಹಿಸಲ್ಪಟ್ಟ(ಸೂಅ)

ದುಸ್ಸಾಸಣ. ಪು: [ದುಃಶಾಸನ] ದುರ್ಯೋಧನನ ತಮ್ಮ

ದುಸ್ಸಾಹಡ. ವಿ: [ದುಸ್ಸಂಹೃತ] ಕಷ್ಟದಿಂದ ಒಟ್ಟುಗೂಡಿಸಲ್ಪಟ್ಟ

ದುಸ್ಸಾಹಿಅ. ವಿ: [ದೌಃಸಾಧಿಕ] ದುಸ್ಸಾಧ್ಯವಾದ ಕಾರ್ಯವನ್ನು ಮಾಡುವವನು

ದುಸ್ಸಿಕ್ಖ. ವಿ: [ದುಃಶಿಕ್ಷ] ದುಷ್ಟ ಶಿಕ್ಷಣ ಪಡೆದವನು, ಗೊತ್ತಿದೆಯೆಂದು ಸುಳ್ಳೇ ಅಹಂಕಾರ ಪಡುವವನು, ಮೂರ್ಖ, ಅವಿವೇಕಿ(ಉಪ)

ದುಸ್ಸಿಕ್ಖಿಅ. ವಿ: [ದುಃಶಿಕ್ಷಿತ] ಮೇಲಿನ ಶಬ್ದವನ್ನು ನೋಡುವುದು

ದುಸ್ಸಿಜ್ಜಾ. ಸ್ತ್ರೀ: [ದುಃಶಯ್ಯಾ] ಕೆಟ್ಟ ಹಾಸಿಗೆ

ದುಸ್ಸಿಲಿಟ್ಠ. ವಿ: [ದುಃಶ್ಲಿಷ್ಟ] ಕುತ್ಸಿತವಾದ ಆಲಿಂಗನ ಹೊಂದಿದವನು

ದುಸ್ಸೀಲ. ವಿ: [ದುಃಶೀಲ] ದುಷ್ಟಸ್ವಭಾವದ, ವ್ಯಭಿಚಾರಿ (ಪಣ್ಹ), ಸ್ತ್ರೀ: –ಲಾ

ದುಸ್ಸುಮಿಣ. ಪುಂನ: [ದುಃಸ್ವಪ್ನ] ಕೆಟ್ಟ ಕನಸು

ದುಸ್ಸುಯ. ನ: [ದುಃಶ್ರುತ] ಕೆಟ್ಟ ಶಾಸ್ತ್ರ, ವಿ: ಕೇಳಲು ಕರ್ಕಶವಾದ, ಕಟುವಾದ(ಪಣ್ಣ)
ದುಸ್ಸೆಜ್ಜಾ. 'ದುಸ್ಸಿಜ್ಜಾ' ಶಬ್ದವನ್ನು ನೋಡುವುದು
ದುಹ. ಸಕ: [ದುಹ್] ಹಾಲುಕರೆ, ಹಾಲುಹಿಂಡು
ದುಹ. ಸಕ: [ದ್ರೋಹ್] ದ್ರೋಹ ಮಾಡು
ದುಹ. 'ದೋಹ=ದೋಹ' ಶಬ್ದವನ್ನು ನೋಡುವುದು
ದುಹ. 'ದುಕ್ಖ=ದುಃಖ' ಶಬ್ದವನ್ನು ನೋಡುವುದು. –ಅ. ವಿ: [–ದ] ದುಃಖವನ್ನುಂಟುಮಾಡುವ, ದುಃಖ ಕೊಡುವ. –ಟ್ಟ. ವಿ: [ದುಃಖಾರ್ತ] ದುಃಖದಿಂದ ನೊಂದ(ವಿಪಾ). –ಟ್ಟಿಯ. ವಿ: [ದುಃಖಾರ್ತಿತ] ದುಃಖದಿಂದ ಪೀಡಿತನಾದ (ಔಪ). –ಟ್ಟ. ಪು:[–ದುಃಖಾರ್ಥ] ನರಕ ಸ್ಥಾನ(ಸೂಅ). –ತ್ತ. '–ಟ್ಟ' ವನ್ನು ನೋಡುವುದು. (ಉಪ). –ಫಾಸ. ಪು: [–ಸ್ಪರ್ಶ](ಣಾಯಾ) ದುಃಖವುಂಟುಮಾಡುವ ಸ್ಪರ್ಶ. –ಭಾಗಿ. ಇ: [–ಭಾಗಿನ್] ದುಃಖದಲ್ಲಿ ಪಾಲುದಾರ (ಸುಪಾ). –ಮಚ್ಚು. ಪು: [–ಮೃತ್ಯು] ಅಪಮೃತ್ಯು, ಅಕಾಲ ಮರಣ(ಸುರ). –ವಿವಾಗ. ಪು: [–ವಿಪಾಕ] ದುಃಖ ರೂಪದ ಕರ್ಮಫಲ (ವಿಪಾ). –ಸಿಜ್ಜಾ, –ಸೆಜ್ಜಾ. ಸ್ತ್ರೀ: [–ಶಂಯ್ಯಾ] ದುಃಖವುಂಟುಮಾಡುವ ಹಾಸಿಗೆ(ಠಾ). ದುಹಾವಹ. ವಿ: [ದುಃಖಾವಹ] ದುಃಖವುಂಟು ಮಾಡುವಂಥದು(ಪಉಮ)
ದುಹ–. 'ದುಹಾ' ಶಬ್ದವನ್ನು ನೋಡುವುದು(ಭಗ)
ದುಹಅ. ವಿ: [ದೇ] ಪುಡಿಮಾಡಲ್ಪಟ್ಟ, ಚೂರುಚೂರಾಗಿ ಮಾಡಲ್ಪಟ್ಟ(ದೇ)
ದುಹಅ. ವಿ: [ದುರ್ಹತ] ಕೆಟ್ಟ ರೀತಿಯಲ್ಲಿ ಕೊಲ್ಲಲ್ಪಟ್ಟ
ದುಹಅ. ವಿ: [ದ್ವಿಹತ] ಇಬ್ಬರ ಕೈಯಿಂದ ಸಾಯಿಸಲ್ಪಟ್ಟ
ದುಹಅ. 'ದುಬ್ಭಗ' ಶಬ್ದವನ್ನು ನೋಡುವುದು
ದುಹಓ. ಅ: [ದ್ವಿಧಾತಸ್] ಎರಡೂ ಕಡೆಯಿಂದ, ಎರಡೂ ವಿಧದಿಂದ(ಆಚಾ)
ದುಹಂಡ. ವಿ: [ದ್ವಿಖಂಡ] ಎರಡು ಭಾಗಗಳುಳ್ಳ, ಎರಡು ತುಂಡುಗಳುಳ್ಳ
ದುಹಗ. 'ದುಬ್ಭಗ' ಶಬ್ದವನ್ನು ನೋಡುವುದು
ದುಹಟ್ಟ. ವಿ: [ದುರ್ಘಟ್ಟ] ತಡೆಯಲು ಅಶಕ್ಯವಾದ, ಕಷ್ಟದಿಂದ ನಿವಾರಿಸಬಹುದಾದ(ಣಾಯಾ)
ದುಹಣ. 'ದುಘಣ' ಶಬ್ದವನ್ನು ನೋಡುವುದು

ದುಹಣ. ಪು: [ದ್ರುಹಣ] ಏಟು, ಹೊಡೆತ(ಪಣ್ಣ)
ದುಹಣ. ನ: [ದೋಹನ] ಹಾಲು ಕರೆದುಕೊಳ್ಳುವುದು, ಹಾಲು ಹಿಂಡುವುದು(ಪಣ್ಣ)
ದುಹದುಹಗ. ಪು: [ದುಹದುಹಕ] 'ದುಹ್ ದುಹ್' ಎಂಬ ಶಬ್ದ
ದುಹವ. 'ದೂಹವ' ಶಬ್ದವನ್ನು ನೋಡುವುದು. ಸ್ತ್ರೀ: –ವೀ
ದುಹಾ. ಅ: [ದ್ವಿಧಾ] ಎರಡು ವಿಧವಾಗಿ, ಎರಡು ಕಡೆ, ಎರಡು ಬಗೆಯಾಗಿಯೂ. –ಇಅ.ವಿ: [–ಕೃತ] ಎರಡು ಭಾಗಗಳಾಗಿ ಮಾಡಲ್ಪಟ್ಟದ್ದು (ಕುಮಾ)
ದುಹಾಕರ. ಸಕ: [ದ್ವಿಧಾ +ಕೃ] ಎರಡು ಭಾಗ ಮಾಡುವುದು.
ದುಹಾವ. ಸಕ: [ಭಿದ್] ಭೇದಿಸುವುದು, ಕತ್ತರಿಸು, ಸೀಳು
ದುಹಾವ. ಸಕ: [ದುಃಖಯ್] ದುಃಖಿಯನ್ನಾಗಿ ಮಾಡು, ನೋಯಿಸು(ಪ್ರಾಮಾ)
ದುಹಾವಣ. ವಿ: [ದುಃಖನ] ದುಃಖಿಯನ್ನಾಗಿ ಮಾಡಿದ, ನೋಯಿಸುವವನು
ದುಹಾವಿಅ. ವಿ: [ಭಿನ್ನ] ಕತ್ತರಿಸಿದ, ತುಂಡರಿಸಲ್ಪಟ್ಟ
ದುಹಾವಿಅ. ವಿ: [ದುಃಖಿತ] ದುಃಖಿಯಾಗಿ ಮಾಡಲ್ಪಟ್ಟ
ದುಹಿ. ವಿ: [ದುಃಖಿನ್] ದುಃಖಿ, ವ್ಯಥೆಗೀಡಾದವನು, ಪೀಡಿಸಲ್ಪಟ್ಟವನು(ಉಪ). ಸ್ತ್ರೀ: –ಣೀ
ದುಹಿಅ. ವಿ: [ದುಃಖಿತ] ಪೀಡಿಸಲ್ಪಟ್ಟ, ದುಃಖದಿಂದ ಕೂಡಿದ(ಕುಮಾ)
ದುಹಿಅ. ವಿ: [ದುಗ್ಧ] ಹಾಲು ಕರೆಯಲ್ಪಟ್ಟದ್ದು (=ಹಸು), –ದುಜ್ಝ. ವಿ: [–ದೋಹ್ಯಾ] ಒಮ್ಮೆ ಹಾಲು ಕರೆದುಕೊಂಡ ಮೇಲೆ ಮತ್ತೆಯೂ ಹಾಲು ಕರೆಯಲು ಯೋಗ್ಯವಾದ, ಮತ್ತೆ ಮತ್ತೆ ಹಾಲು ಕರೆಯಲು ಯೋಗ್ಯವಾದ(ದೇ)
ದುಹಿಆ. ಸ್ತ್ರೀ: [ದುಹಿತೃ] ಮಗಳು, ಪುತ್ರಿ(ಸುಪಾ), –ದಇಅ. ಪು: [–ದಯಿತ] ಅಳಿಯ
ದುಹಿಣ. ಪು: [ದ್ರುಹಿಣ] ಚತುರ್ಮುಖ ಬ್ರಹ್ಮ(ಅಚ್ಚು)
ದುಹಿತ್ತ. ಪು: [ದೌಹಿತ್ರ] ಮಗಳ ಮಗ(=ಮೊಮ್ಮಗ)
ದುಹಿತ್ತೀ. ಸ್ತ್ರೀ: [ದೌಹಿತ್ರೀ] ಸ್ತ್ರೀ: ಮಗಳ ಮಗಳು
ದುಹಿತ್ತಿಯಾ. ಸ್ತ್ರೀ: [ದೌಹಿತ್ರಿಕಾ] ಮೊಮ್ಮಗಳು
ಮಹಿದಿಆ.(ಶೌ). ಸ್ತ್ರೀ: [ದುಹಿತೃ] ಮಗಳು
ದುಹಿಲ. ವಿ: [ದ್ರುಹಿಲ] ದ್ರೋಹಿ, ದ್ರೋಹ ಮಾಡುವವನು(ವಿಸೇ)

ದೂ. ಸಕ: [ದೂ] ನೋವುಂಟುಮಾಡು, ಬಿಸಿಮಾಡು, ಕತ್ತರಿಸು

ದೂಅ. ಪು: [ದೂತ] ದೂತ, ಸಂದೇಶವನ್ನು ಕೊಂಡೊಯ್ಯುವವನು(ಪಾಅ)

ದೂಆ. 'ಧೂಆ' ಶಬ್ದವನ್ನು ನೋಡುವುದು

ದೂಇ–. 'ದೂಈ' ಶಬ್ದವನ್ನು ನೋಡುವುದು. **–ಪಲಾಸಯ.** ನ: [–ಪಲಾಶಕ] ಒಂದು ಬೌದ್ಧ ಅಥವಾ ಜೈನ ದೇವಾಲಯ

ದೂಇಜ್ಜ. ಸಕ: [ದ್ರು] ಗಮಿಸು, ವಿಹರಿಸು, ಹೋಗು

ದೂಇತ್ತ. ನ: [ದೂತೀತ್ವ] ದೂತಿಯ ಕಾರ್ಯ, ದೂತಿತನ

ದೂಈ. ಸ್ತ್ರೀ: [ದೂತೀ] ದೂತಿಯು ಕೆಲಸಕ್ಕೆ ನೇಮಿಸಲ್ಪಟ್ಟ ಮಹಿಳೆ, ಸಂದೇಶವನ್ನು ಒಯ್ಯುವವಳು. ಜೈನ ಸಾಧುಗಳಿಗೆ ಭಿಕ್ಷೆ ನೀಡುವಲ್ಲಿನ ಒಂದು ದೋಷ(ತಾ). **–ಪಿಂಡ.** ಪು: [–ಪಿಂಡ] ಸಮಾಚಾರವನ್ನು ಮುಟ್ಟಿಸಿದ ಸಲುವಾಗಿ ದೊರೆತ ಭಿಕ್ಷೆ(ಆಚಾ). 'ದೂಇ' ಶಬ್ದವನ್ನು ನೋಡುವುದು

ದೂಣ. ವಿ: [ದೂನ] ಹಿಂಸಿಸಲ್ಪಟ್ಟ, ಸಂತಾಪ ಗೊಳಿಸಲ್ಪಟ್ಟ

ದೂಣ. ಪು: [ದೇ] ಆನೆ(ದೇ)

ದೂಣ(ಅಪ) 'ದುಉಣ' ಶಬ್ದವನ್ನು ನೋಡುವುದು

ದೂಣವೇಢ. ವಿ: [ದೇ] ಅಶಕ್ಯ, ಸರೋವರ, ಕೆರೆ(ದೇ)

ದೂಭ. ಅಕ: [ದುಃಖಯ್] ದುಃಖಿತನಾಗು

ದೂಭಗ. 'ದುಬ್ಭಗ'ಶಬ್ದವನ್ನು ನೋಡುವುದು (ಣಾಯಾ)

ದೂಭಗ್ಗ. ನ: [ದೌರ್ಭಾಗ್ಯ] ದುರದೃಷ್ಟ, ಅದೃಷ್ಟಹೀನತೆ

ದೂಮ. ಸಕ: [ದೂ, ದಾವಯ್] ಸಂತಾಪ ಪಡು, ಪರಿತಪಿಸು(ಸುಪಾ)

ದೂಮ. 'ದುಮ=ಧವಲಯ್' ಶಬ್ದವನ್ನು ನೋಡುವುದು

ದೂಮಕ}. ವಿ: [ದಾವಕ] ನೋವುಂಟುಮಾಡುವ,

ದೂಮಗ}. ವೇದನೆ ಉಂಟುಮಾಡುವ(ಪಣ್ಣ)

ದೂಮಣ. ವಿ: [ದಾವಕ] ಹಿಂಸಿಸುವ, ನೋವುಂಟು ಮಾಡುವ

ದೂಮಣ. ನ: [ದವನ, ದಾವನ] ಪೀಡಿಸುವುದು, ಹಿಂಸಿಸುವುದು(ಪಣ್ಣ)

ದೂಮಣ. ನ: [ಧವಲನ] ಬೆಳ್ಳಗೆ ಮಾಡುವುದು, ಸ್ವಚ್ಛಗೊಳಿಸುವುದು

ದೂಮಣ. 'ದುಮ್ಮಣ=ದುರ್ಮನಸ್' ಶಬ್ದವನ್ನು ನೋಡುವುದು

ದೂಮಣಾಇಅ. ವಿ: [ದುರ್ಮನಾಯಿತ] ದುಃಖಿಗೊಂಡವನು, ವ್ಯಾಕುಲಗೊಂಡವನು

ದೂಮಿಅ. ವಿ: [ದೂನ, ದಾವಿತ] ಪೀಡಿಸಲ್ಪಟ್ಟ, ನೋಯಿಸಲ್ಪಟ್ಟ, ಸಂತಪ್ತಗೊಳಿಸಲಾದ(ಸುಪಾ)

ದೂಮಿಅ. ವಿ: [ಧವಲಿತ] ಬೆಳ್ಳಗೆ ಮಾಡಲ್ಪಟ್ಟ, ಸ್ವಚ್ಛಗೊಳಿಸಲ್ಪಟ್ಟ

ದೂಯಾಕಾರ. ನ: [ದೇ] ಕಲಾ–ವಿಶೇಷ

ದೂರ. ನ: [ದೂರ] ಸಮೀಪವಲ್ಲದ, ಹೆಚ್ಚಿನ ಅಂತರ. ಅತಿಶಯ, ಬಹಳವಾಗಿ(ಕುವಾ). ವಿ: ದೂರದಲ್ಲಿರುವ, ಅಂತರವುಳ್ಳ(ಗಉಡ), **–ಗ.** ವಿ: [–ಗ] ದೂರದಲ್ಲಿರುವ(ಉಪ). **–ಗಇ, –ಗಇಅ.** ವಿ: [–ಗತಿಕ] ದೂರ ಹೋಗುವವನು, ಸೌಧರ್ಮವೇ ಮೊದಲಾದ ದೇವಲೋಕದಲ್ಲಿ ಹುಟ್ಟುವವನು. **–ತರಾಗ.** ವಿ: [–ತರ] ಅತ್ಯಂತ ದೂರ(ಪಣ್ಣ). **–ತ್ಥ.** ವಿ: [–ಸ್ಥ] ದೂರದಲ್ಲಿರುವ. **–ಭವಿಯ.** ಪು: [–ಭವ್ಯ] ದೀರ್ಘ ಕಾಲದಲ್ಲಿ ಮುಕ್ತಿಯನ್ನು ಪಡೆದುಕೊಳ್ಳಲು ಅರ್ಹನಾದ ಜೀವ(ಉಪ). **–ವತ್ತಿ.** ವಿ:[–ವರ್ತಿನ್] ದೂರದಲ್ಲಿರುವವನು. **ದೂರಾಲಇಯ.** ವಿ: [ದೂರಾಲಯಿಕ] ಮುಕ್ತಿ –ಗಾಮಿ(ಆಚಾ). **ದೂರಾಲಯ.** ಪು: [ದೂರಾಲಯ] ದೂರದಲ್ಲಿರುವ ಆಶ್ರಯ, ನೆಲೆ, ಮೋಕ್ಷ, ಮುಕ್ತಿಯ ಮಾರ್ಗ.

ದೂರಂಗಇಅ. 'ದೂರ–ಗಇಅ' ಶಬ್ದವನ್ನು ನೋಡುವುದು(ಓಪ)

ದೂರಚರ. ವಿ: [ದೂರಚರ] ದೂರದಲ್ಲಿ ಇರುವವನು

ದೂರಂತರಿಅ. ವಿ: [ದೂರಾಂತರಿತ] ವಸ್ತು ಅಥವಾ ಕಾಲಗಳಿಂದ ತೀರ ಮರೆಯಾಗಿರುವ(ಗಾ)

ದೂರಾಯ. ಸಕ: [ದೂರಾಯ್] ದೂರವಿದ್ದಂತೆ ತಿಳಿದುಬರುವುದು, ದೂರದಲ್ಲಿದ್ದಂತೆ ಅನಿಸುವುದು

ದೂರೀಕಯ. ವಿ: [ದೂರೀಕೃತ] ದೂರಗೊಳಿಸಲ್ಪಟ್ಟ, ಬೇರ್ಪಡಿಸಲ್ಪಟ್ಟ

ದೂರೀಹೂಅ. ವಿ: [ದೂರೀಭೂತ] ದೂರವಾದವನು

ದೂರುಲ್ಲ. ವಿ: [ದೂರವತ್] ದೂರದಲ್ಲಿರುವ(ಆವ)

ದೂಲಹ. 'ದುಲ್ಲಹ' ಶಬ್ದವನ್ನು ನೋಡುವುದು

ದೂಸ. ಸಕ: [**ದೂಷಯ್**] ದೂಷಿಸು, ನಿಂದಿಸು(ಭವಿ)
ದೂಸ. ಅಕ: [**ದುಷ್**] ದೂಷಿತನಾಗು, ವಿಕೃತನಾಗು
ದೂಸ. ನ: [**ದೂಷ್ಯ**] ವಸ್ತ್ರ, ಬಟ್ಟೆ(ಕಪ್ಪ). ಡೇರೆ, ಶಿಬಿರ. **–ಗಣಿ.** ಪು: [**–ಗಣಿನ್**] ಒಬ್ಬ ಜೈನ ಆಚಾರ್ಯ. **–ಮಿತ್ತ.** ಪು: [**–ಮಿತ್ರ**] ಮೌರ್ಯವಂಶ ನಾಶವಾದ ನಂತರದಲ್ಲಿ ಪಾಟಲಿಪುತ್ರದಲ್ಲಿ ಅಭಿಷಿಕ್ತನಾದ ಒಬ್ಬ ದೊರೆ. **–ಹರ.** ನ: [**–ಗೃಹ**] ಬಟ್ಟೆಯಿಂದ ತಯಾರಿಸಿದ ಮನೆ, ಡೇರೆ.
ದೂಸಅ. ವಿ: [**ದೂಷಕ**] ದೋಷವನ್ನು ಪ್ರಕಟಿಸುವವನು, ನಿಂದಿಸುವವನು
ದೂಸಗ. ವಿ: [**ದೂಷಕ**] ನಿಂದಕ, ದುರ್ಜನ(ಸುಪಾ)
ದೂಸಣ. ನ: [**ದೂಷಣ**] ದೋಷ, ಅಪರಾಧ, ಕಳಂಕ, ನಿಂದಿಸುವುದು. ಪು: ರಾವಣನ ಚಿಕ್ಕಮ್ಮನ ಮಗ (ಪಉಮ). ವಿ: ನಿಂದಿಸುವವನು, ದೂಷಿಸುವವನು
ದೂಸಮ. ವಿ: [**ದುಃಷಮ**] ಕೆಟ್ಟ, ದುಷ್ಟ. ಪು: ಅವಸರ್ಪಿಣಿ ಉತ್ಸರ್ಪಿಣಿಗಳ ಒಂದು ಭಾಗ **–ದೂಸಮಾ.** **''ದುಸ್ಸಮದುಸ್ಸಮಾ'** **ಶಬ್ದವನ್ನು ನೋಡುವುದು. –ಸುಸಮಾ. 'ದುಸ್ಸಮಸುಸಮಾ' ಶಬ್ದವನ್ನು ನೋಡುವುದು(ತಾ)**
ದೂಸಮಾ. ''ದುಸ್ಸಮಾ' ಶಬ್ದವನ್ನು ನೋಡುವುದು
ದೂಸರ. 'ದುಸ್ಸರ' ಶಬ್ದವನ್ನು ನೋಡುವುದು
ದೂಸಲ. ವಿ: [ದೇ] ದುರದೃಷ್ಟವಂತ, ಅದೃಷ್ಟಹೀನ(ದೇ)
ದೂಸಹ. 'ದುಸ್ಸಹ' ಶಬ್ದವನ್ನು ನೋಡುವುದು
ದೂಸಹಣೀಅ. ವಿ: [**ದುಸ್ಸಹನೀಯ**] ಸಹಿಸಲಾಗದ,
ದೂಸಾಸಣ. 'ದುಸ್ಸಾಸಣ' **ಶಬ್ದವನ್ನು ನೋಡುವುದು**
ದೂಸಾಹಿಅ. ವಿ: [**ದೌಃಸಾಧಿಕ**] ಕೆಟ್ಟ ಜಾತಿಯಲ್ಲಿ ಹುಟ್ಟಿರುವ
ದೂಸಿ. ಪು: [**ದೂಷಿನ್**] ನಪುಂಸಕರಲ್ಲಿನ ಒಂದು ಪ್ರಭೇದ
ದೂಸಿಅ. ವಿ: [**ದೂಷಿತ**] ಅಶುದ್ಧಗೊಳಿಸಲ್ಪಟ್ಟ, ದೂಷಣದಿಂದ ಕೂಡಿದ. ಪು: ಒಂದು ಬಗೆಯ ನಪುಂಸಕ
ದೂಸಿಆ. ಸ್ತ್ರೀ: [**ದೂಷಿಕಾ**] ಕಣ್ಣಿನೊಳಗಿನ ಕೊಳೆ
ದೂಸುಮಿಣ. **'ದುಸ್ಸುಮಿಣ'** ಶಬ್ದವನ್ನು ನೋಡುವುದು
ದೂಹಅ. ವಿ: [**ದುಃಖಕ**] ದುಃಖವುಂಟುಮಾಡುವ
ದೂಹಟ್ಟ. ವಿ: [**ದೇ**] ಲಜ್ಜೆಯಿಂದ ಚಿಂತಿತನಾದ
ದೂಹಯ. 'ದೋಥಅ' ಶಬ್ದವನ್ನು ನೋಡುವುದು
ದೂಹಲ. ವಿ: [**ದೇ**] ಅದೃಷ್ಟಹೀನ(ದೇ)
ದೂಹವ. ಸಕ: [**ದುಃಖಯ್**] ದುಖವನ್ನುಂಟು ಮಾಡು, ದುಃಖಿಯನ್ನಾಗಿ ಮಾಡು
ದೂಹವ. 'ದುಬ್ಭಗ' ಶಬ್ದವನ್ನು ನೋಡುವುದು
ದೂಹವಿಅ. ವಿ: [**ದುಃಖಿತ**] ನೋಯಿಸಲ್ಪಟ್ಟ, ದುಃಖಿಯಾಗಿ ಮಾಡಲ್ಪಟ್ಟ(ಕುಮ್ಮಾ)
ದೂಹಿಅ. ವಿ: ದುಃಖದಿಂದ ಕೂಡಿದ
ದೇ. ಅ: ಎದುರಾಗುವುದು, ಸಖಿಯನ್ನು ಕರೆಯುವುದು ಎಂಬ ಅರ್ಥಗಳನ್ನು ಸೂಚಿಸುವ ಅವ್ಯಯ, ಪಾದ ಪೂರಣದಲ್ಲಿ ಕೂಡ ಬಳಕೆಯಾಗುತ್ತದೆ.
ದೇಅ. 'ದೇವ' ಶಬ್ದವನ್ನು ನೋಡುವುದು
ದೇಅರ. 'ದಿಅರ' ಶಬ್ದವನ್ನು ನೋಡುವುದು
ದೇಅರಾಣೀ. ಸ್ತ್ರೀ: [**ದೇವರಪತ್ನೀ**] ಮೈದುನನ (=ಗಂಡನ ತಮ್ಮ)ಹೆಂಡತಿ
ದೇಈ. 'ದೇವೀ' ಶಬ್ದವನ್ನು ನೋಡುವುದು(ಉತ್ತ)
ದೇಉಲ. ನ: [**ದೇವಕುಲ**] ದೇವಸ್ಥಾನ. **–ಣಾಹ.** ಪು: [**–ನಾಥ**] ದೇವಸ್ಥಾನದ ಸ್ವಾಮಿ. **–ವಾಡಯ.** ಪುಂನ: [**–ಪಾಟಕ**] ಮೇವಾಡದ ಒಂದು ಹಳ್ಳಿ
ದೇಉಲಿಅ. ವಿ: [**ದೈವಕುಲಿಕ**] ದೇವಸ್ಥಾನದ ರಕ್ಷಕ (ಓಘ)
ದೇಉಲಿಯಾ. ಸ್ತ್ರೀ: [**ದೇವಕುಲಿಕಾ**] ಚಿಕ್ಕ ದೇವಾಲಯ
ದೆಂತ. 'ದಾ=ದಾ' **ಶಬ್ದವನ್ನು ನೋಡುವುದು**
ದೆಕ್ಖ. ಸಕ: [**ದೃಶ್**] ನೋಡು, ಅವಲೋಕಿಸು
ದೆಕ್ಖಾಲಿಅ. ವಿ: [**ದರ್ಶಿತ**] ತೋರಿಸಲ್ಪಟ್ಟ, ವಿವರಿಸಲ್ಪಟ್ಟ
ದೇಖ(ಅಪ). 'ದೆಕ್ಖ' ಶಬ್ದವನ್ನು ನೋಡುವುದು
ದೆಟ್ಠ. 'ದಿಟ್ಠ' ಶಬ್ದವನ್ನು ನೋಡುವುದು
ದೆಣ್ಣ. 'ದಇಣ್ಣ' ಶಬ್ದವನ್ನು ನೋಡುವುದು
ದೇಪಾಲ. ಪು: [**ದೇವಪಾಲ**] ಒಬ್ಬ ಮಂತ್ರಿಯ ಹೆಸರು.
ದೆಪ್ಪ. 'ದಿಪ್ಪ=ದೀಪ್' ಶಬ್ದವನ್ನು ನೋಡುವುದು
ದೇಯ}. 'ದಾ=ದಾ' ಶಬ್ದವನ್ನು ನೋಡುವುದು
ದೇಯಮಾಣ}.
ದೇರ. 'ದಾರ=ದ್ವಾರ' ಶಬ್ದವನ್ನು ನೋಡುವುದು
ದೇವ. ಉಭ. [**ದಿವ್**] ಗೆಲ್ಲಲು ಆಶಿಸುವುದು, ಪ್ರತಿಜ್ಞೆ ಮಾಡುವುದು, ವ್ಯವಹಾರ ಮಾಡುವುದು, ಇಚ್ಛಿಸುವುದು, ಆಜ್ಞೆ ಮಾಡುವುದು. ಅವ್ಯಕ್ತ ಸದ್ದು ಮಾಡುವುದು, ಹಿಂಸಿಸುವುದು

ದೇವ. ಪುಂನ: [ದೇವ] ಸುರ, ದೇವತೆ, ಅಮರ, ಮೋಡ, ಆಕಾಶ, ದೊರೆ(ಭಾಸ). ಪು: ಪರಮೇಶ್ವರ, ದೇವಾಧಿ ದೇವ(ಭಗ), ಸಾಧು, ಮುನಿ, ಋಷಿ. ಒಂದು ದ್ವೀಪ. ಸಮುದ್ರ –ವಿಶೇಷ, ಯಜಮಾನ, ಒಡೆಯ(ಆಚಾ). ಪೂಜ್ಯ. **–ಉತ್ತ.** ವಿ: [**–ಉಪ್ತ**] ದೇವನಿಂದ ಬಿತ್ತಲ್ಪಟ್ಟ; ದೇವ –ನಿರ್ಮಿತ. **–ಉತ್ತ.** ವಿ: [–**ಗುಪ್ತ**] ದೇವನಿಂದ ರಕ್ಷಿಸಲ್ಪಟ್ಟ(ಸೂಅ). ಐರಾವತ ಕ್ಷೇತ್ರದ ಒಬ್ಬ ಭಾವೀ ಜಿನ –ದೇವ. **–ಉತ್ತ. ಪು:** [**–ಪುತ್ರ**] ದೇವಪುತ್ರ. **–ಉಲ. ನ:**[**–ಕುಲ**] ದೇವಸ್ಥಾನ. **–ಉಲಿಯಾ. ಸ್ತ್ರೀ:** [**–ಕುಲಿಕಾ**] ಚಿಕ್ಕ ದೇವಸ್ಥಾನ **–ಕನ್ನಾ. ಸ್ತ್ರೀ:** [**–ಕನ್ಯಾ**] ದೇವ –ಪುತ್ರಿ(ಣಾಯಾ). **–ಕಹಕಹಯ. ಪು:**[**–ಕಹಕಹಕ**] ದೇವತೆಗಳ ಕೋಲಾಹಲ. **–ಕಿಬ್ಬಿಸ. ಪು:** [–**ಕಿಲ್ಬಿಷ**] ಚಾಂಡಾಲ ಸ್ಥಾನದ ದೇವ –ಜಾತಿ(ಠಾ). **–ಕಿಬ್ಬಿಸಿಯ ಪು:** [**–ಕಿಲ್ಬಿಷಿಕ**] ಒಂದು ಅಧಮ –ದೇವಜಾತಿ(ಭಗ). **–ಕಿಬ್ಬಿಸೀಯಾ. ಸ್ತ್ರೀ:** [–**ಕಿಲ್ಬಿಷೀಯಾ**] **'ದೇವಕಿಬ್ಬಿಸೀಯಾ' ಶಬ್ದವನ್ನು ನೋಡುವುದು**(ಬೃಹ). **–ಕುರಾ. ಸ್ತ್ರೀ:** [**–ಕುರಾ**] ಕ್ಷೇತ್ರ –ವಿಶೇಷ, ವರ್ಷ –ವಿಶೇಷ. **–ಕುರು. ಪು:** [**–ಕುರು**] ಅದೇ ಅರ್ಥ(ಪಣ್ಣ). **–ಕುಲ. '–ಉಲ' ಶಬ್ದವನ್ನು ನೋಡುವುದು. –ಕುಲಿಯ. ಪು:** [–**ಕುಲಿಕ**] ಪೂಜಾರಿ(ಆವಮ). **–ಕುಲಿಯಾ. '–ಉಲಿಆ' ಶಬ್ದವನ್ನು ನೋಡುವುದು. –ಗಇ. ಸ್ತ್ರೀ:** [**–ಗತಿ**] ದೇವ –ಯೋನಿ(ಠಾ). **–ಗಣಿಯಾ. ಸ್ತ್ರೀ:** [**–ಗಣಿಕಾ**] ದೇವ – ವೇಶ್ಯೆ, ಅಪ್ಸರೆ. **–ಗಿಹ. ನ:** [**–ಗೃಹ**] ದೇವಸ್ಥಾನ **–ಗುತ್ತ. ನ:** [**–ಗುಪ್ತ**] ಒಬ್ಬ ಸಂನ್ಯಾಸಿಯ ಹೆಸರು(ಔಪ). ಒಬ್ಬ ಭಾವೀ ಜಿನದೇವ. **–ಚಂದ. ಪು:** [**–ಚಂದ್ರ**] ಒಬ್ಬ ಜೈನ ಉಪಾಸಕನ ಹೆಸರು, ಸುಪ್ರಸಿದ್ಧ ಕಾವ್ಯಮೀಮಾಂಸಕ ಹೇಮಚಂದ್ರಾಚಾರ್ಯನ ಗುರುವಿನ ಹೆಸರು(ಕುಪ್ರ). **–ಚ್ಚಯ. ವಿ:** [**ದೇವಾರ್ಚಕ**] ದೇವರ ಪೂಜೆ ಮಾಡುವವನು. **ಪು:** ದೇವಸ್ಥಾನದ ಪೂಜಾರಿ. **–ಚ್ಛಂದಗ. ನ:** [**–ಚ್ಛಂದಕ**] ಜಿನದೇವನ ಆಸನ(ಜೀವ). **–ಜಸ. ಪು:** [**–ಯಶಸ್**] ಒಬ್ಬ ಜೈನ ಮುನಿ(ಸುಪಾ). **–ಜಾಣ. ನ:** [**–ಯಾನ**] ದೇವನ ವಾಹನ. –**ಜಿಣ. ಪು:** [**–ಜಿನ**] ಒಬ್ಬ ಭಾವೀ ಜಿನದೇವನ ಹೆಸರು. **–ಡ್ಢಿ. 'ಧೇವಿಡ್ಢಿ' ಶಬ್ದವನ್ನು ನೋಡುವುದು. –ಣಾಅಅ. ಪು:** [**–ನಾಯಕ**] ಕೆಳಗೆ ನೋಡಿ(ಅಚ್ಚು). **–ಣಾಹ. ಪು:** [**–ನಾಥ**] ಇಂದ್ರ, ಪರಮಾತ್ಮ. **–ತಮ. ನ:** [**–ತಮಸ್**] ಒಂದು ಬಗೆಯ ಕತ್ತಲೆ. **–ತ್ಥುಇ, –ಥುಇ. ಸ್ತ್ರೀ:** [**–ಸ್ತುತಿ**] ದೇವನ ಗುಣ ಸಂಕೀರ್ತನೆ(ಪ್ರಾಪ್ರ) **–ದತ್ತ. ಪು:** [**–ದತ್ತ**] ವ್ಯಕ್ತಿ ವಾಚಕ ಹೆಸರು(ಉತ್ತ). **–ದತ್ತಾ. ಸ್ತ್ರೀ:** [**–ದತ್ತಾ**] ವ್ಯಕ್ತಿ –ವಾಚಕ ಹೆಸರು. **–ದವ್ವ. ನ:** [**–ದ್ರವ್ಯ**] ದೇವರಿಗೆ ಸಂಬಂಧಿಸಿದ ದ್ರವ್ಯ. –**ದಾರ. ನ:** [**–ದ್ವಾರ**] ದೇವರ ಮನೆಯ ಪೂರ್ವದಿಕ್ಕಿನ ದ್ವಾರ, ಸಿದ್ಧಾಯತನದ ಒಂದು ಬಾಗಿಲು. **–ದಾರು. ಪು:** [**–ದಾರು**] ದೇವದಾರು ವೃಕ್ಷ(ಪಉಮ) **–ದಾಲೀ. ಸ್ತ್ರೀ:** [**–ದಾಲೀ**] ಕಗ್ಗಲಿ ಮರ(ವನಸ್ಪತಿ). **–ದಿಣ್ಣ, –ದಿನ್ನ. ಪು:** [**–ದತ್ತ**] ವ್ಯಕ್ತಿವಾಚಕ ಹೆಸರು; ಒಬ್ಬ ಸಾರ್ಥವಾಹನ ಮಗ(ರಾಜ). **–ದೀವ. ಪು:** [**–ದ್ವೀಪ**] ಒಂದು ದ್ವೀಪ –ವಿಶೇಷ. **–ದೂಸ. ನ:** [**–ದೂಷ್ಯ**] ದಿವ್ಯ ವಸ್ತ್ರ. **–ದೇವ. ಪು:** [**–ದೇವ**] ಪರಮೇಶ್ವರ, ಪರಮಾತ್ಮ, ದೇವರಾಜನಾದ ಇಂದ್ರ, **–ನಟ್ಟಿಆ. ಸ್ತ್ರೀ:** [**–ನರ್ತಿಕಾ**] ನರ್ತಿಸುವ ದೇವಿ, ದೇವನಟಿ. **–ನಯರೀ. ಸ್ತ್ರೀ:** [**–ನಗರೀ**] ಅಮರಾವತಿ (ಪಉಮ). **–ಪಡಿಕ್ಖೋಭ. ಪು:** [**–ಪ್ರತಿಕ್ಷೋಭ**] ಅಂಧಕಾರ(ಭಗ). **–ಪಲಿಕ್ಖೋಭ ಪು:** [**ಪರಿಕ್ಷೋಭ**] **ಕೃಷ್ಣರಾಜಿ. –ಪವ್ವಯ. ಪು:** [**–ಪರ್ವತ**] ಒಂದು ಪರ್ವತ(ಠಾ). **–ಪ್ಪಸಾಯ. ಪು:** [**–ಪ್ರಸಾದ**] ರಾಜಾ ಕುಮಾರಪಾಲನ ತಂದೆಯ ಹೆಸರು. **–ಫಲಿಹ. ಪು:** [**–ಪರಿಘ**] ಅಂಧಕಾರ, ಕತ್ತಲೆ. **–ಭದ್ದ. ಪು:** [**–ಭದ್ರ**] ದೇವ –ದ್ವೀಪದ ಅಧಿಷ್ಠಾತೃ –ದೇವ. ಒಬ್ಬ ಪ್ರಸಿದ್ಧ ಜೈನಾಚಾರ್ಯ. **–ಭೂಮಿ. ಸ್ತ್ರೀ:** [**–ಭೂಮಿ**] ಸ್ವರ್ಗ, ದೇವಲೋಕ, ಮರಣ(ಸುಪಾ). **–ಮಹಾಭದ್ದ. ಪು:** [**–ಮಹಾಭದ್ರ**] **ದೇವ** –ದ್ವೀಪದ ಅಧಿಷ್ಠಾಯಕ ದೇವ. **–ರಇ. ಪು:** [**–ರತಿ**] ಒಬ್ಬ **ರಾಜ(ಭತ್ತ). –ರಕ್ಖ. ಪು:** [**–ರಕ್ಷ**] ರಾಕ್ಷಸ ವಂಶದ ಒಬ್ಬ ರಾಜಕುಮಾರ(ಪಉಮ). **–ರಣ್ಣ. ನ:** [**ದೇವಾರಣ್ಯ**] ಕತ್ತಲೆ(ಠಾ). **–ರಮಣ. ನ:** [–**ರಮಣ**] ಸೌಭಾಂಜನೀ ನಗರದ ಒಂದು ಉದ್ಯಾನ

(ವಿಪಾ), ರಾವಣನ ಒಂದು ಉದ್ಯಾನ(ಪಉಮ). **–ರಾಯ. ಪು:** [–ರಾಜ] ಇಂದ್ರ. **–ರಿಸಿ. ಪು:** [–ಋಷಿ] ನಾರದ ಮುನಿ. **–ಲೋಅ, –ಲೋಗ. ಪು:** [–ಲೋಕ] ಸ್ವರ್ಗ, ದೇವಲೋಕ. ದೇವಜಾತಿ(ಭಗ). **–ಲೋಗಗಮಣ. ನ:** [–ಲೋಕಗಮನ] ಸ್ವರ್ಗದಲ್ಲಿ ಹುಟ್ಟುವುದು. **–ವರ. ಪು:** [–ವರ] ದೇವ ಎಂಬ ಹೆಸರಿನ ಸಮುದ್ರದ ಪ್ರಧಾನ ದೇವ. **–ವಹೂ. ಸ್ತ್ರೀ:** [–ವಧೂ] ದೇವನ ಹೆಂಡತಿ, ದೇವಿ. **–ಸಂಣತ್ತಿ. ಸ್ತ್ರೀ:** [–ಸಂಜ್ಞಪ್ತಿ] ದೇವನು ಮಾಡಿದ ಉಪದೇಶ. ದೇವತೆಯ ಉಪದೇಶದಿಂದಾಗಿ ತೆಗೆದುಕೊಂಡ ದೀಕ್ಷೆ(ಠಾ). **–ಸಂಣಿವಾಯ. ಪು:** [–ಸನ್ನಿಪಾತ] ದೇವ –ಸಮಾಗಮ, ದೇವ –ಸಮೂಹ(ಠಾ). **–ಸಮ್ಮ. ಪು:** [–ಶರ್ಮನ್] ಈ ಹೆಸರಿನ ಒಬ್ಬ ಬ್ರಾಹ್ಮಣ. ಐರಾವತ ಕ್ಷೇತ್ರದಲ್ಲಿ ಹುಟ್ಟಿದ ಒಬ್ಬ ಜಿನದೇವ. **–ಸಾಲ. ನ:** [–ಶಾಲ] ಒಂದು ನಗರದ ಹೆಸರು. **–ಸುಂದರೀ. ಸ್ತ್ರೀ:** [–ಸುಂದರೀ] ದೇವತಾಸ್ತ್ರೀ, ದೇವಿ **–ಸುಯ.** '**–ಸ್ಸುಯ**' ಶಬ್ದವನ್ನು ನೋಡುವುದು. **–ಸೇಣ. ಪು:** [–ಸೇನ] ಮಹಾಪದ್ಮ ಎಂಬ ಹೆಸರಿನ ಶತದ್ವಾರ ನಗರದ ಒಬ್ಬ ರಾಜ. ಐರಾವತ ಕ್ಷೇತ್ರದ ಒಬ್ಬ ಜಿನದೇವ. ಭರತ ಕ್ಷೇತ್ರದ ಒಬ್ಬ ಭಾವೀ ಜಿನದೇವನ ಹಿಂದಿನ ಜನ್ಮದ ಹೆಸರು. ಭಗವಾನ್ ನೇಮಿನಾಥನ ಒಬ್ಬ ಶಿಷ್ಯ, ಒಬ್ಬ ಕೊನೆಗಾಣಿಸುವ ಮುನಿ. **–ಸ್ಸ. ನ:** [–ಸ್ವ] ಬಸದಿಯ ಹಣ, ಸಂಪತ್ತು **–ಸ್ಸುಯ. ಪು:** [–ಶ್ರುತ] ಭರತ ಕ್ಷೇತ್ರದ ಆರನೇ ಭಾವೀ ಜಿನದೇವ. **–ಹರ. ನ:** [–ಗೃಹ] ದೇವಸ್ಥಾನ. ದೇವಾದಿ ದೇವ. **ಪು:** [ದೇವಾತಿದೇವ] ತೀರ್ಥಂಕರಸ್ವಾಮಿ, ಜಿನದೇವ(ಭಗ).

ದೇವಾಣಂದ. ಪು: [ದೇವಾನಂದ] ಐರಾವತ ಕ್ಷೇತ್ರದಲ್ಲಿ ಮುಂಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಜನಿಸಲಿರುವ ೨೪ನೇ ಜಿನದೇವ.

ದೇವಾಣಂದಾ. ಸ್ತ್ರೀ: [ದೇವಾನಂದಾ] ಭಗವಾನ್ ಮಹಾವೀರರ ಮೊದಲ ಮಾತೆ (ಆಚಾ). ಪಕ್ಷದ ಹದಿನೈದನೇ ರಾತ್ರಿಯ ಹೆಸರು. **ದೇವಾಣುಪ್ಪಿಯ. ಪು:** [ದೇವಾನುಪ್ರಿಯ] ಮಹಾಶಯ, ಮಹಾನುಭಾವ, ಸರಳ ಪ್ರಕೃತಿ (ಔಪ). **ದೇವಾರಿಅ. ಪು:** [ದೇವಾಚಾರ್ಯ] ಒಬ್ಬ ಸುಪ್ರಸಿದ್ಧ ಜೈನಾಚಾರ್ಯ. ದೇವಾರನ್ನ. '**–ರಣ್ಣ**' ಶಬ್ದವನ್ನು ನೋಡುವುದು(ಭಗ). ದೇವತೆಗಳ ಕ್ರೀಡಾಸ್ಥಳ. **ದೇವಾಲಯ. ಪುಂನ:** [ದೇವಾಲಯ] ಸ್ವರ್ಗ. **ದೇವಾಹಿದೇವ. ಪು:** [ದೇವಾಧಿದೇವ] ಪರಮೇಶ್ವರ, ಜಿನದೇವ(ಸವ). **ದೇವಾಹಿವಇ. ಪು:** [ದೇವಾಧಿಪತಿ] ದೇವರಾಜನಾದ ಇಂದ್ರ.

ದೇವ. ಪುಂನ: [ದೇವ] ಒಂದು ದೇವ –ವಿಮಾನ. **–ಕುರು. ಸ್ತ್ರೀ:** [–ಕುರು] ಮುನಿಸುವ್ರತ ಜಿನನ ದೀಕ್ಷಾ ಶಿಬಿಕೆ, **–ಚ್ಛಂದಯ. ಪುಂನ:** [–ಚ್ಛಂದಕ] ಕಮಾನು ಹೊಂದಿರುವ ಪರದೆ ಉಳ್ಳ ಆಸನ. **–ತಮಿಸ್ಸ. ಪುಂನ:** [–ತಮಿಸ್ರ] ಕತ್ತಲೆಯ ರಾಶಿ. **–ದಿನ್ನಾ. ಸ್ತ್ರೀ:** [–ದತ್ತಾ] ಭಗವಾನ್ ವಾಸುಪೂಜ್ಯರ ದೀಕ್ಷಾ –ಶಿಬಿಕೆ. **–ಪಲಿಕ್ಖೋಭ. ಪು:** [–ಪರಿಕ್ಷೋಭ] ಕಪ್ಪು ಬಣ್ಣದ ಪುದ್ಗಲಗಳ ರೇಖೆ. **–ರಮಣ. ಪು:** [–ರಮಣ] ನಂದೀಶ್ವರ ದ್ವೀಪದ ಮಧ್ಯದಲ್ಲಿ ಪೂರ್ವ ದಿಕ್ಕಿನಲ್ಲಿರುವ ಒಂದು ಅಂಜನಗಿರಿ. **–ವೂಹ. ಪು:** [–ವ್ಯೂಹ] ಕತ್ತಲೆಯ ರಾಶಿ

ದೇವ. '**ದಇವ**' ಶಬ್ದವನ್ನು ನೋಡುವುದು(ಉಪ). **–ನ್ನು. ವಿ:** [–ಜ್ಞ] ಜ್ಯೋತಿಶ್ಶಾಸ್ತ್ರಜ್ಞ. **–ಪರ. ವಿ:** [–ಪರ] ಅದೃಷ್ಟದ ಮೇಲೆ ಮಾತ್ರ ಶ್ರದ್ಧೆ ಇರುವವನು.

ದೇವಇ. ಸ್ತ್ರೀ: [ದೇವಕೀ] ಶ್ರೀಕೃಷ್ಣನ ತಾಯಿ. ಮುಂದೆ ಬರಲಿರುವ ಉತ್ಸರ್ಪಿಣಿ ಕಾಲದಲ್ಲಿ ಆಗಲಿರುವ ಒಬ್ಬ ತೀರ್ಥಂಕರದೇವನ ಹಿಂದಿನ ಜನ್ಮ

ದೇವಉಪ್ಫ. ನ: [ದೇ] ಪಕ್ವವಾದ ಹೂವು(ದೇ)

ದೇವಂ. '**ದಾ=ದಾ**' ಶಬ್ದವನ್ನು ನೋಡುವುದು.

ದೇವಂಗ. ನ: [ದೇ. ದಿವ್ಯಾಂಗ] ದೇವ–ದೂಷ್ಯ ವಸ್ತ್ರ.

ದೇವಂಗಣ. ನ: [ದೇವಾಂಗಣ] ಸ್ವರ್ಗ

ದೇವಂಧಕಾರ}. ಪು: [ದೇವಾಂಧಕಾರ] ಕತ್ತಲೆಯ
ದೇವಂಧಗಾರ}. ಸಮೂಹ

ದೇವಕಿಬ್ಬಿಸ. ಪು: [ದೇವಕಿಲ್ಬಿಷ] ಒಂದು ಅಧಮ ದೇವ –ಜಾತಿ(ಠಾ)

ದೇವಕಿಬ್ಬಿಸಿಯಾ. ಸ್ತ್ರೀ: [ದೈವಕಿಲ್ಬಿಷಿಕೀ] ಅಧಮ ದೇವ –ಯೋನಿಯಲ್ಲಿ ಹುಟ್ಟಿಗೆ ಕಾರಣವಾದ ಒಂದು ಭಾವನಾ –ವಿಶೇಷ.

ದೇವಕೀ. '**ದೇವಇ**' ಶಬ್ದವನ್ನು ನೋಡುವುದು. **–ಣಂದಣ. ಪು:** [–ನಂದನ] ಶ್ರೀಕೃಷ್ಣ.

ದೇವಯ. ವಿ: [ದೈವ್ಯ] ದೇವನಿಗೆ ಸಂಬಂಧಿಸಿದ
ದೇವಯ. ನ: [ದೈವತ] ದೇವ, ದೇವತೆ(ಸುಪಾ)
ದೇವಯ. 'ದೇವ=ದೇವ' ಶಬ್ದವನ್ನು ನೋಡುವುದು.
ದೇವಯಾ. ಸ್ತ್ರೀ: [ದೇವತಾ] ದೇವ. ಅಮರ, ಪರಮಾತ್ಮ.
ದೇವರ. 'ದಿಅರ' ಶಬ್ದವನ್ನು ನೋಡುವುದು.
ದೇವರಾಣೀ. 'ದೇಅರಾಣೀ' ಶಬ್ದವನ್ನು ನೋಡುವುದು.
ದೇವಸಿಅ. ವಿ: [ದೈವಸಿಕ] ದಿವಸಕ್ಕೆ ಸಂಬಂಧಿಸಿ
ದೇವಸಿಆ. ಸ್ತ್ರೀ: [ದೇವಸಿಕಾ] ದೇವಸೇನಾ ಎಂಬ ಇನ್ನೊಂದು ಹೆಸರಿದ್ದ ಒಬ್ಬ ಪತಿವ್ರತಾ ಸ್ತ್ರೀ.
ದೇವಿಂದ. ಪು: [ದೇವೇಂದ್ರ] ದೇವತೆಗಳ ಒಡೆಯ, ಇಂದ್ರ. ಒಬ್ಬ ಪ್ರಸಿದ್ಧ ಜೈನಾಚಾರ್ಯ ಮತ್ತು ಗ್ರಂಥಕಾರ. –ಸೂರಿ. ಪು: [–ಸೂರಿ] ಒಬ್ಬ ಪ್ರಸಿದ್ಧ ಜೈನಾಚಾರ್ಯ ಮತ್ತು ಗ್ರಂಥಕಾರ(ಕಮ್ಮ)
ದೇವಿಂದಯ. ಪು: [ದೇವೇಂದ್ರಕ] ದೇವ–ವಿಮಾನ ವಿಶೇಷ
ದೇವಿಡ್ಢಿ. ಸ್ತ್ರೀ: [ದೇವರ್ಧಿ] ದೇವನ ವೈಭವ. ಪು: ಒಬ್ಬ ಪ್ರಸಿದ್ಧ ಜೈನಾಚಾರ್ಯ ಮತ್ತು ಗ್ರಂಥಕಾರ
ದೇವಿಯ. ವಿ: [ದೈವಿಕ] ದೇವತೆಗೆ ಸಂಬಂಧಿಸಿದ,
ದೇವಿಲ. ಪು: [ದೇವಿಲ] ಒಬ್ಬ ಪ್ರಾಚೀನ ಋಷಿ
ದೇವೀ. ಸ್ತ್ರೀ: [ದೇವೀ] ದೇವತಾ ಸ್ತ್ರೀ, ರಾಣಿ, ದುರ್ಗಾ, ಪಾರ್ವತಿ(ಕಪ್ಪೂ). ಎಂಟನೇ ಚಕ್ರವರ್ತಿ ಮತ್ತು ಹದಿನೆಂಟನೇ ಜಿನ –ದೇವನ ತಾಯಿ. ಹತ್ತನೇ ಚಕ್ರವರ್ತಿಯ ಪಟ್ಟದ ರಾಣಿ, ಒಬ್ಬ ವಿದ್ಯಾಧರ ಕನ್ಯೆ(ಪಉಮ)
ದೇವೀಕಯ. ವಿ: [ದೇವೀಕೃತ] ದೇವಿಯು ನಿರ್ಮಿಸಿದ
ದೇವುಕ್ಕಲಿಆ. ಸ್ತ್ರೀ: [ದೇವೋತ್ಕಲಿಕಾ] ದೇವತೆಗಳ ಗುಂಪು
ದೇವೇಸರ. ಪು: [ದೇವೇಶ್ವರ] ದೇವರಾಜನಾದ ಇಂದ್ರ
ದೇವೋದ. ಪು: [ದೇವೋದ] ಸಮುದ್ರ –ವಿಶೇಷ.
ದೇವೋವವಾಯ. ಪು: [ದೇವೋಪಪಾತ] ಭರತಕ್ಷೇತ್ರದಲ್ಲಿ ಮುಂಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಆಗಲಿರುವ ೨೩ನೇ ಜಿನದೇವ.
ದೆವ್ವ. 'ದಿವ್ವ=ದಿವ್ಯ' ಶಬ್ದವನ್ನು ನೋಡುವುದು.
ದೆವ್ವ. 'ದಇವ' ಶಬ್ದವನ್ನು ನೋಡುವುದು(ಗಾ). –ಜ್ಜ, –ಣ್ಣ, –ಣ್ಣು. ವಿ: [–ಜ್ಞ] ಜ್ಯೋತಿಶ್ಶಾಸ್ತ್ರವನ್ನು ಬಲ್ಲವನು(ಷಡ್)

ದೇಸ. ಪು: [ದೇಶ] ನೂರು ಕೈ ಗಳ ಅಳತೆಗೆ ಸೀಮಿತವಾದ ಪ್ರದೇಶ. –ದೇಸ. ಪು: [–ದೇಶ] ನೂರು ಹಸ್ತಗಳಿಗಿಂತ ಕಡಿಮೆ ಪ್ರದೇಶ. –ರಾಗ. ಪು: [–ರಾಗ] ದೇಶ –ವಿಶೇಷ.
ದೇಸ. ಸಕ: [ದೇಶಯ್] ಹೇಳು, ಉಪದೇಶಿಸು, ತಿಳಿಯ ಹೇಳುವುದು.
ದೇಸ. ಪು: [ದೇಶ] ಅಂಶ, ಭಾಗ(ಠಾ). ದೇಶ, ಜನಪದ(ಠಾ), ಸಮಯ, ಅವಕಾಶ. ಸ್ಥಳ, ಜಾಗ(ಠಾ). –ಕಹಾ. ಸ್ತ್ರೀ: [–ಕಥಾ] ಜನಪದ ವಾರ್ತೆ(ಠಾ). –ಕಾಲ.' –ಯಾಲ' ಶಬ್ದವನ್ನು ನೋಡುವುದು. –ಜಇ. ಪು: [–ಯತಿ] ಶ್ರಾವಕ, ಜೈನ ಗೃಹಸ್ಥ. –ಣ್ಣು. ವಿ: [–ಜ್ಞ] ದೇಶದ ಸ್ಥಿತಿಗತಿಯನ್ನು ಬಲ್ಲವನು(ಉಪ). –ಭಾಸಾ. ಸ್ತ್ರೀ: [–ಭಾಷಾ] ದೇಶದ ಆಡುನುಡಿ. –ಭೂಸಣ. ಪು: [–ಭೂಷಣ] ಒಬ್ಬ ಕೇವಲಜ್ಞಾನಿಯಾದ ಮಹರ್ಷಿ(ಪಉಮ). –ಯಾಲ. ಪು: [–ಕಾಲ] ಪ್ರಸಂಗ, ಸಂದರ್ಭ, ಯೋಗ್ಯಕಾಲ. –ರಾಯ. ವಿ: [–ರಾಜ] ದೇಶದ ದೊರೆ(ಸುಪಾ). –ವಗಾಸಿಯ. 'ದೇಸಾವಗಾಸಿಯ' ಶಬ್ದವನ್ನು ನೋಡುವುದು. –ವಿರಇ. ಸ್ತ್ರೀ: [–ವಿರತಿ] ಶ್ರಾವಕ ಧರ್ಮ, ಜೈನ ಗೃಹಸ್ಥನು ಆಚರಿಸುವ ಹಿಂಸೆಯೇ ಮೊದಲಾದವುಗಳನ್ನು ಭಾಗಶಃ ತ್ಯಜಿಸುವ ಅಣುವ್ರತ(ಪಂಚಾ). –ವಿರಯ. ವಿ: [–ವಿರತ] ಶ್ರಾವಕ, ಉಪಾಸಕ, ನ: ಐದನೆಯ ಗುಣಸ್ಥಾನಕ. –ವಿರಾಹಯ. ವಿ: [–ವಿರಾಧಕ] ವ್ರತವೇ ಮೊದಲಾದವುಗಳಲ್ಲಿ ಆಂಶಿಕವಾಗಿ ದೋಷವನ್ನು ಹತ್ತಿಸುವವನು(ಭಗ) –ವಿರಾಹಿ. ವಿ: [–ವಿರಾಧಿನ್] ಅದೇ ಅರ್ಥ(ಣಾಯಾ). ದೇಸಾವಗಾಸ.ನ: [ದೇಶಾವಕಾಶ] ಶ್ರಾವಕನ ಒಂದುವ್ರತ. ದೇಸಾವಗಾಸಿಯ. ನ: [ದೇಶಾವಕಾಶಿಕ] ಅದೇ ಅರ್ಥ(ಔಪ). ದೇಸಾಹಿವ. ಪು: [ದೇಶಾಧಿಪ] ದೊರೆ(ಪಉಮ). ದೇಸಾಹಿವಇ. ಪು: [ದೇಶಾಧಿಪತಿ] ದೊರೆ.
ದೇಸ. 'ವೇಸ=ದ್ವೇಷ' ಶಬ್ದವನ್ನು ನೋಡುವುದು.
ದೇಸಂತರಿಅ. ವಿ: [ದೇಶಾಂತರಿಕ] ಬೇರೆ ದೇಶದವನು, ವಿದೇಶಿ(ಉಪ)
ದೇಸಗ. 'ದೇಸಯ' ಶಬ್ದವನ್ನು ನೋಡುವುದು.

ದೇಸಣ. ನ: [ದೇಶನ] ಕಥನ, ಉಪದೇಶ, ಆಜ್ಞೆ (ಪ್ರರೂಪಣ?) ವಿ: ಉಪದೇಶಕ, ಆದೇಶ ಮಾಡುವವನು. ಸ್ತ್ರೀ: **–ಣೀ.**
ದೇಸಣಾ. ಸ್ತ್ರೀ: [ದೇಶನಾ] ಉಪದೇಶ, ಪ್ರರೂಪಣ.
ದೇಸಯ. ವಿ: [ದೇಶಕ] ಉಪದೇಶಕ, ಪ್ರರೂಪಕ, ತೋರಿಸುವವನು, ತಿಳಿಯ ಹೇಳುವವನು
ದೇಸರಾಗ. ವಿ: [ದೈಶರಾಗ] ದೇಶರಾಗ–ದೇಶದಲ್ಲಿ ಮಾಡಿರುವ
ದೇಸಿ}. ವಿ: [ದೇಶಿನ್] ಆಂಶಿಕ,ಭಾಗವನ್ನುಳ್ಳದ್ದು
ದೇಸಿಅ}.ತೋರಿಸುವವನು, ಉಪದೇಶಕ(ವಿಸೇ)
ದೇಸಿಅ. ವಿ: [ದೇಶಿಕ] ಬೃಹತ್ ಕ್ಷೇತ್ರವನ್ನು ವ್ಯಾಪಿಸಿರುವ, ವಿಸ್ತಾರವಾದ,
ದೇಸಿಅ. ವಿ: [ದೇಶ್ಯ, ದೈಶಿಕ] ದೇಶದಲ್ಲಿ ಹುಟ್ಟಿದ, ದೇಶ –ಸಂಬಂಧಿ(ಉಪ), **–ಸದ್ದ.** ಪು: [–ಶಬ್ದ] ದೇಶೀ ಭಾಷೆಯ ಶಬ್ದ.
ದೇಸಿಅ. ವಿ: [ದೇಶಿತ] ಹೇಳಿದ, ಉಪದೇಶಿಸಲ್ಪಟ್ಟ, ತೋರಿಸಲ್ಪಟ್ಟ(ಭವಿ).
ದೇಸಿಅ. ವಿ: [ದೇಶಿಕ] ಯಾತ್ರಿಕ, ಪಥಿಕ(ಪಉಮ), ಉಪದೇಶ ನೀಡುವವನು, ಗುರು, ಪ್ರವಾಸ ಹೋದವನು. **–ಸಹಾ.** ಸ್ತ್ರೀ: [–ಸಭಾ] ಧರ್ಮಶಾಲೆ
ದೇಸಿಅ. **'ದೇವಸಿಅ'** ಶಬ್ದವನ್ನು ನೋಡುವುದು.
ದೇಸಿಅವ. ವಿ: [ದೇಶಿತವತ್] ಉಪದೇಶ ನೀಡಿದವನು
ದೇಸಿಲ್ಲಗ. **'ದೇಸಿಅ=ದೇಶ್ಯ' ಶಬ್ದವನ್ನು ನೋಡುವುದು**
ದೇಸೀ. ಸ್ತ್ರೀ: [ದೇಶೀ] ಅತ್ಯಂತ ಪ್ರಾಚೀನ ಪ್ರಾಕೃತ ಭಾಷೆಯ ಒಂದು ಪ್ರಭೇದ. **–ಭಾಸಾ.** ಸ್ತ್ರೀ: [–ಭಾಷಾ] ಅದೇ ಅರ್ಥ.
ದೇಸೂಣ. ವಿ: [ದೇಶೀನ] ಸ್ವಲ್ಪ ಕಡಿಮೆ
ದೆಸ್ಸ. ವಿ: [ದೃಶ್ಯ] ನೋಡಲರ್ಹವಾದ, ನೋಡಲು ಶಕ್ಯವಾದ
ದೇಹ. **'ದೆಕ್ಖ' ಶಬ್ದವನ್ನು ನೋಡುವುದು.**
ದೇಹ. ಪುಂನ: [ದೇಹ] ಶರೀರ, ಪು: ಪಿಶಾಚ–ವಿಶೇಷ. **–ರಯ.** ನ: [–ರತ] ಮೈಥುನ
ದೇಹಂಬಲಿಯಾ. ಸ್ತ್ರೀ: [ದೇಹಬಲಿಕಾ] ಭಿಕ್ಷಾ ವೃತ್ತಿ(ಣಾಯಾ)
ದೇಹಣೀ. ಸ್ತ್ರೀ: [ದೇ] ಕೆಸರು, ಪಂಕ
ದೇಹರಯ(ಅಪ). ನ: [ದೇವಗೃಹಕ] ದೇವಸ್ಥಾನ
ದೇಹಲೀ. ಸ್ತ್ರೀ: [ದೇಹಲೀ] ಹೊಸ್ತಿಲು, ಹೊಸಿಲು(ಗಾ)
ದೇಹಿ. ಪು: [ದೇಹಿನ್] ದೇಹಧಾರಿಯಾದ ಜೀವ, ಮನುಷ್ಯ
ದೇಹುರ.(ಅಪ). ನ: [ದೇವಕುಲ] ದೇವಸ್ಥಾನ, ದೇವಾಲಯ.
ದೋ. ಅ: [ದ್ವಿಧಾ] ಎರಡು ಬಗೆಯ, ಎರಡು ರೀತಿ
ದೋ. ತ್ರಿಬ: [ದ್ವಿ] ಎರಡು, ಉಭಯ, ಒಂದುಜೊತೆ
ದೋ. ಪು: [ದೋಸ್] ಭುಜ, ತೋಳು(ವಿಕ್ರ)
ದೋಅಈ. ಸ್ತ್ರೀ: [ದಿಪದೀ] ಒಂದು ಛಂದಸ್ಸು(ಪಿಂಗ)
ದೋಆಲ. ಪು: [ದೇ] ಎತ್ತು
ದೋಇ. **'ದೋ=ದ್ವಿಧಾ' ಶಬ್ದವನ್ನು ನೋಡುವುದು(ಬೃಹ)**
ದೊಂಬುರ.(ದೇ). **'ದೋಬುರ' ಶಬ್ದವನ್ನು ನೋಡುವುದು (ಷಡ್)**
ದೋಕಿರಿಯ. ವಿ: [ದ್ವಿಕ್ರಿಯ] ಏಕ ಕಾಲದಲ್ಲಿ ಎರಡು ಕ್ರಿಯೆಗಳ ಅನುಭವವನ್ನು ಒಪ್ಪುವವನು.
ದೊಕ್ಕರ. **'ದುಕ್ಕರ' ಶಬ್ದವನ್ನು ನೋಡುವುದು.**
ದೊಕ್ಖರ. ಪು: [ದ್ವಿ –ಅಕ್ಷರ] ಷಂಡ, ನಪುಂಸಕ(ಬೃಹ)
ದೋಖಂಡ. **'ದುಖಂಡ' ಶಬ್ದವನ್ನು ನೋಡುವುದು.**
ದೋಖಂಡಿಅ. ವಿ: [ದ್ವಿಖಂಡಿತ] ಎರಡು ಭಾಗ ಮಾಡಲ್ಪಟ್ಟಿರುವಂಥದು(ಭವಿ)
ದೋಗಂಛಿ. ವಿ: [ಜುಗುಪ್ಸಿನ್] ತಿರಸ್ಕಾರ ತೋರುವವನು, ಅಸಹ್ಯ ಪಡುವವನು
ದೋಗಚ್ಚ. ನ: [ದೌರ್ಗತ್ಯ] ದುರ್ಗತಿ, ದುರ್ದೆಶೆ, ದಾರಿದ್ರ್ಯ, ಬಡತನ(ಸುಪಾ)
ದೋಗುಂದುಯ. ಪು: [ದೌಗುಂದುಕ] ಉತ್ತಮ ಜಾತಿಯ ದೇವ(ಸುಪಾ)
ದೊಗ್ಗ. ನ: [ದೇ] ಜೋಡಿ, ಜೊತೆ, ಯುಗಳ(ದೇ)
ದೊಗ್ಗಇ. **'ದುಗ್ಗಇ' ಶಬ್ದವನ್ನು ನೋಡುವುದು.** **–ಕರ.** ವಿ: [–ಕರ] ದುರ್ಗತಿಗೆ ಕಾರಣವಾದ (ಪಉಮ)
ದೊಗ್ಗಚ್ಚ. **'ದೋಗಚ್ಚ' ಶಬ್ದವನ್ನು ನೋಡುವುದು.**
ದೊಗ್ಗಚ್ಚ. ನ: [ದೌರ್ಗತ್ಯ] ದುರ್ದೆಶೆ, ದಾರಿದ್ರ್ಯ
ದೊಗ್ಘಟ್ಟ}. ಪು: [ದೇ] ಆನೆ(ಪಾಅ)
ದೊಗ್ಘೊಟ್ಟ}.
ದೋಘಟ್ಟ}
ದೋಚೂಡ. ಪು: [ದ್ವಿಚೂಡ] ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು(ಪಉಮ)

ದೊಚ್ಚ. ವಿ: [ದ್ವಿತೀಯ] ಎರಡನೆಯವನು
ದೊಚ್ಚ. ನ: [ದೌತ್ಯ] ದೂತನ ಕೆಲಸ, ರಾಯಭಾರ
ದೊಚ್ಚ. ಅ: [ದ್ವಿಸ್] ಎರಡು ಬಾರಿ, ಎರಡು ಸಲ
ದೊಚ್ಚಂಗ. ನ: [ದ್ವಿತೀಯಾಂಗ] ಎರಡನೇ ಅಂಗ, ಬೇಯಿಸಿದ ತರಕಾರಿ(ಬೃಹ). ಪಳದ್ಯ, ಕಡಲೆ ಹಿಟ್ಟಿನ ಪದಾರ್ಥ.
ದೋಜೀಹ. ಪು: [ದ್ವಿಜಿಹ್ವ] ದುರ್ಜನ, ಹಾವು(ಸುರ)
ದೊಜ್ಝ. ವಿ: [ದೋಹ್ಯ] ಹಾಲು ಕರೆಯಲು ಯೋಗ್ಯವಾದ, ಹಾಲು ಕರೆಯಲ್ಪಡುವ(=ಹಸು, ಎಮ್ಮೆ ಇತ್ಯಾದಿ)(ಆಚಾ)
ದೋಣ. ಪು: [ದ್ರೋಣ] ಬಿಲ್ವಿದ್ಯೆಯ ಸುಪ್ರಸಿದ್ಧ ಆಚಾರ್ಯ(ವೇಣೀ), ಒಂದು ಬಗೆಯ ಅಳತೆ, ಕೊಳಗ, **–ಮುಹ.** ನ: [–ಮುಖ] **ಜಲಮಾರ್ಗ ಮತ್ತು ಭೂಮಾರ್ಗವುಳ್ಳ ನಗರ**(ಔಪ). **–ಮೇಹ.** ಪು: [–ಮೇಘ] ಕುಂಭದ್ರೋಣ ಮಳೆಯನ್ನು ಕರೆಯುವ ಮೇಘ ಅಥವಾ ಮೋಡ. **–ಸುಯಾ.** ಸ್ತ್ರೀ: [–ಸುತಾ] ಲಕ್ಷ್ಮಣನ ಹೆಂಡತಿಯ ಹೆಸರು, ವಿಶಲ್ಯಾ(ಪಉಮ)
ದೋಣಅ. ಪು: [ದೇ] ಆಯುಕ್ತ, ಹಳ್ಳಿಯ ಮುಖಂಡ, ಬೇರೆಯವರ ಹೊಲದಲ್ಲಿ ಗೆಯ್ಮೆ ಮಾಡುವವನು
ದೋಣಕ್ಕಾ. ಸ್ತ್ರೀ: [ದೇ] ಜೇನ್ನೊಣ, ಜೇನುಹುಳು
ದೋಣೀ. ಸ್ತ್ರೀ: [ದ್ರೋಣೀ] ಮರದ ದೋಣಿ, ಹರಿಗೋಲು(ಪಣ್ಣ), ನೀರನ್ನು ತುಂಬಿಡುವ ಮರದ ಪಾತ್ರೆ(ಅಣು)
ದೊತ್ತಡೀ. ಸ್ತ್ರೀ: [ದುಸ್ತಟೀ] ದುಷ್ಟ ನದಿ(ಉಪ)
ದೊತ್ಥ. ನ: [ದೌಃಸ್ಥ್ಯ] ದುಸ್ಥಿತಿ, ದುರ್ದೆಶೆ, ದುರ್ಗತಿ
ದೋಹಾಣ. ವಿ: [ದುರ್ದಾನ] ಕೊಡಲು ದುಸ್ಸಾಧ್ಯವಾದ, ಕೊಡಲು ಅಶಕ್ಯವಾದ
ದೊದ್ದಿಅ. ಪು: [ದೇ] ಚರ್ಮದ ಚೀಲ.
ದೊದ್ಧು. ವಿ: [ದೋಗ್ಧೃ] ಹಾಲು ಕರೆಯುವವನು
ದೋಧಅ}. ನ: [ದೋಧಕ] ಒಂದು ಛಂದಸ್ಸು
ದೋಧಕ}.
ದೋಧಾರ. ಪು:[ದ್ವಿಧಾಕಾರ]ಎರಡುಭಾಗ ಮಾಡುವುದು
ದೋನಿಕ್ಕಮ. ವಿ; [ದುರ್ನಿಕ್ರಮ] ತೀರಾ ಕಷ್ಟದಿಂದ ನಡೆಯಲು ಸಾಧ್ಯವಾದ
ದೋಬುರ. ಪು: [ದೇ] ದೇವ ಲೋಕದ ಗಾಯಕನಾದ ತುಂಬುರು(ಷಡ್)
ದೊಬ್ಬಲಿಯ. 'ದುಬ್ಬಲಿಯ' ಶಬ್ದವನ್ನು ನೋಡುವುದು.
ದೊಬ್ಬಲ್ಲ. ನ: [ದೌರ್ಬಲ್ಯ] ದುರ್ಬಲತೆ
ದೋಭಾಯ. ವಿ: [ದ್ವಿಭಾಗ] ಎರಡು ಭಾಗವುಳ್ಳ(ಉಪ)
ದೋಮಣಂಸಿಯ. ವಿ: [ದೌರ್ಮನಸ್ಯಿಕ] ದುಃಖದಿಂದ ಕೂಡಿದ, ಖಿನ್ನ, ಶೋಕ –ಗ್ರಸ್ತ(ತಾ)
ದೋಮಣಸ್ಸ. ನ: [ದೌರ್ಮನಸ್ಯ] ವೈಮನಸ್ಯ, ದ್ವೇಷ, ಹಿತವಾದ ಮನಸ್ಸಿಲ್ಲದಿರುವುದು.
ದೋಮಾಸಿಅ. ವಿ: [ದ್ವೈಮಾಸಿಕ] ಎರಡು ತಿಂಗಳಿನ (ಭಗ), ಸ್ತ್ರೀ: –ಆ.
ದೋಮಿಅ(ಅಪ). **'ದೂಮಿಅ=ದಾವಿತ' ಶಬ್ದವನ್ನು ನೋಡುವುದು.**
ದೋಮಿಲೀ. ಸ್ತ್ರೀ: [ದೋಮಿಲೀ] ಒಂದು ಲಿಪಿ–ವಿಶೇಷ
ದೋಮುಹ. ವಿ: [ದ್ವಿಮುಖ] ಎರಡು ಮುಖವುಳ್ಳ. ಪು: ಒಬ್ಬ ದೊರೆ, ದುರ್ಜನ(ಗಾ)
ದೋರ. ಪು: [ದೇ] ದಾರ, ಚಿಕ್ಕ ಹಗ್ಗ(ಓಘ), ಕಟೀ –ಸೂತ್ರ=ಉಡಿದಾರ(ದೇ)
ದೋರಿಯಾ}. ಸ್ತ್ರೀ: [ದೇ] ಸಣ್ಣ ದಾರ
ದೋರೀ}.
ದೋಲ. ಅಕ: [ದೋಲಯ್] ಅಲ್ಲಾಡು, ಅಲುಗಾಡು, ತೂಗಾಡು. **'ದೋಲಂತಿ'**
ದೋಲಣಯ. ನ: [ದೋಲನಕ] ಉಯ್ಯಾಲೆ,
ದೋಲಯಾ}. ಸ್ತ್ರೀ: [ದೋಲಾ] ಯಾಲೆ,
ದೋಲಾ}. ತೂಗುಮಂಚ, ಪಲ್ಲಕ್ಕಿ(ಕುಮಾ)
ದೋಲಾಇಯ.ವಿ:[ದೋಲಾಯಿತ] ಅಲುಗಾಡಿಸಲ್ಪಟ್ಟ, ಹೊಯ್ದಾಡಿಸಲ್ಪಟ್ಟ, ಸಂಶಯಿತ
ದೋಲಾಯಮಾಣ. ವಿ: [ದೋಲಾಯಮಾನ] ಹೊಯ್ದಾಡುತ್ತಿರುವ, ತೂಗಾಡುತ್ತಿರುವ, ಸಂದೇಹಪಡುತ್ತಿರುವ, ಅಸ್ಥಿರ(ಸುಪಾ)
ದೋಲಿಯಾ. 'ದೋಲಾ' **ಶಬ್ದವನ್ನು ನೋಡುವುದು.**
ದೋಲಿರ.ವಿ: [ದೋಲಯಿತೃ] ತೂಗಾಡುತ್ತಿರುವವನು, ಹೊಯ್ದಾಡುತ್ತಿರುವವನು(ಕುಮಾ)
ದೋವ. ಪು: [ದೋವ] ಒಂದು ಅನಾರ್ಯ ಜಾತಿ
ದೋವಈ. ಸ್ತ್ರೀ: [ದ್ರೌಪದೀ] ದ್ರುಪದ ಪುತ್ರಿ ಮತ್ತು ಪಾಂಡವರ ಹೆಂಡತಿ(ಉಪ)
ದೋವಯಣ. 'ದುವಯಣ=ದ್ವಿವಚನ' ಶಬ್ದವನ್ನು **ನೋಡುವುದು.**
ದೋವಾರ(ಅಪ). 'ದುವಾರ' ಶಬ್ದವನ್ನು ನೋಡುವುದು.

ದೋವಾರಿಜ್ಜ}. ಪು: [ದೌವಾರಿಕ] ದ್ವಾರಪಾಲಕ,
ದೋವಾರಿಯ}. ಬಾಗಿಲು ಕಾಯುವವನು, ಪ್ರತೀಹಾರ
ದೋವೇಲೀ. ಸ್ತ್ರೀ: [ದೇ] ಸಾಯಂಕಾಲದ ಭೋಜನ
ದೋವಿಹ. 'ದುವಿಹ' ಶಬ್ದವನ್ನು ನೋಡುವುದು(ಉತ್ತ)
ದೊವ್ವಲ. 'ದೊಬ್ಬಲ' ಶಬ್ದವನ್ನು ನೋಡುವುದು.
ದೋಸ. 'ದೋಸ=ದೂಷ್ಯ' ಶಬ್ದವನ್ನು ನೋಡುವುದು.
ದೋಸ. ಪು: [ದೋಷ] ತಪ್ಪು, ಅಪರಾಧ, ದುರ್ಗುಣ (ಔಪ). **–ನ್ನು. ವಿ:** [–ಜ್ಞ] ದೋಷವನ್ನು ತಿಳಿದವನು. ವಿದ್ವಾಂಸ. **–ಹ. ವಿ:** [–ಘ್ನ] ದೋಷ –ನಾಶಕ(ಸುಪಾ)
ದೋಸ. ಪು: [ದೇ] ಅರ್ಧ, ಕೋಪ, ದ್ವೇಷ, ದ್ರೋಹ
ದೋಸ. ಪು: [ದೋಸ್] ಬಾಹು, ತೋಳು
ದೋಸಣಿಜ್ಜಂತ. ಪು: [ದೇ] ಚಂದ್ರ,
ದೋಸಾ. ಸ್ತ್ರೀ: [ದೋಷಾ] ರಾತ್ರಿ(ಸುರ)
ದೋಸಾಕರಣ. ನ: [ದೇ] ಕೋಪ, ಕ್ರೋಧ, ಸಿಟ್ಟು(ದೇ)
ದೋಸಾಣಿಅ. ವಿ: [ದೇ] ಸ್ವಚ್ಛಗೊಳಿಸಲ್ಪಟ್ಟ(ದೇ)
ದೋಸಾಯರ. ಪು: [ದೋಷಾಕರ] ಚಂದ್ರ(ಉಪ). ದೋಷಗಳ ಗಣಿ, ದುಷ್ಟ(ಸುಪಾ)
ದೋಸಾರಅಣ. ಪು: [ದೇ. ದೋಷಾರತ್ನ] ಚಂದ್ರ (ಷಡ್)
ದೋಸಾಸಂಯ. ಪು: [ದೋಷಾಶ್ರಯ] ದುರ್ಗುಣಗಳಿಂದ ಕುಡಿದ, ದುಷ್ಟ(ಪಉಮ)
ದೋಸಿ. ವಿ: [ದೋಷಿನ್] ದೋಷಗಳಿರುವವನು, ದುರ್ಗುಣಿ
ದೋಸಿಅ. ಪು: [ದೌಷ್ಯಿಕ] ಬಟ್ಟೆ ವ್ಯಾಪಾರಿ(ಶ್ರಾ)
ದೋಸಿಣ(ದೇ). 'ದೋಸಿಣಾ' ಶಬ್ದವನ್ನು ನೋಡುವುದು.
ದೋಸಿಣಾ(ದೇ) ಕೆಳಗಿನ ಶಬ್ದವನ್ನು ನೋಡುವುದು. **–ಭಾ. ಸ್ತ್ರೀ:** [–ಭಾ] ಚಂದ್ರನ ಒಬ್ಬ ಪಟ್ಟದ ರಾಣಿ
ದೋಸಿಣೀ. ಸ್ತ್ರೀ: [ದೇ. ದೋಷಿಣೀ] ಬೆಳುದಿಂಗಳು
ದೋಸಿಯಣ್ಣ. ನ: [ದೋಷಿಕಾನ್ನ] ಹಳಸಿದ ಅನ್ನ
ದೋಸಿಲ್ಲ. ವಿ: [ದೋಷವತ್] ದೋಷದಿಂದ ಕೂಡಿದ
ದೋಸಿಲ್ಲ. ವಿ: [ದೇ] ದ್ವೇಷದಿಂದ ಕೂಡಿದ, ದ್ವೇಷಿ
ದೋಸೀಣ. ನ: [ದೇ] ರಾತ್ರಿಯ ಹಳಸಿದ ಅನ್ನ(ಪಣ್ಣ)
ದೋಸೀಲ. ವಿ: [ದುಶ್ಶೀಲ] ದುಷ್ಟ ಸ್ವಭಾವದವನು
ದೋಸೋಲಹ. ತ್ರಿಬ: [ದ್ವಿಷೋಡಷನ್] ಮೂವತ್ತೆರಡು
ದೋಹ. ಸಕ: [ದ್ರುಹ್] ದ್ರೋಹ ಮಾಡು.
ದೋಹ. ಪು: [ದೋಹ] ಹಾಲು ಕರೆಯುವುದು (ಭಾಸ)
ದೋಹ. ವಿ: [ದೋಹ್ಯ] ಹಾಲು ಕರೆಯಲು ಯೋಗ್ಯವಾದ, ಹಾಲು ಕರೆಯಲ್ಪಡುವ
ದೋಹ. ಪು: [ದ್ರೋಹ] ಅಸೂಯೆ, ದ್ವೇಷ, ಕೆಡುಕು
ದೋಹಗ್ಗ. ನ: [ದೌರ್ಭಾಗ್ಯ] ದುರದೃಷ್ಟ, ಅದೃಷ್ಟಹೀನತೆ
ದೋಹಗ್ಗಿ. ವಿ: [ದೌರ್ಭಾಗಿನ್] ದುರದೃಷ್ಟವಂತ, ಅದೃಷ್ಟಹೀನ
ದೋಹಣ. ನ: [ದೋಹನ] ಹಾಲು ಕರೆಯುವುದು. **–ವಾಡಣ. ನ:** [–ಪಾಟನ] ಹಾಲು ಕರೆಯುವ ಸ್ಥಳ(ನಿಚೂ)
ದೋಹಣಹಾರೀ. ಸ್ತ್ರೀ: [ದೇ] ಹಾಲು ಕರೆಯುವ ಹೆಂಗಸು(ದೇ). ನೀರು ತುಂಬುವ ಮಹಿಳೆ(ದೇ)
ದೋಹಣೀ. ಸ್ತ್ರೀ: [ದೇ] ಕೆಸರು. ಪಂಕ(ದೇ)
ದೋಹಯ. ವಿ: [ದೋಹಕ] ಹಾಲು ಕರೆಯುವವನು, ಗೌಳಿಗ(ಗಾ)
ದೋಹಯ.ವಿ: [ದ್ರೋಹಕ] ದ್ರೋಹ ಮಾಡುವವನು, ಕೇಡಿಗ, ಹೊಟ್ಟೆಕಿಚ್ಚಿನವನು (ಉಪ)
ದೋಹಲ. ಪು: [ದೋಹದ] ಗಿಡ, ಬಳ್ಳಿಗಳಿಗೆ ಸ್ತ್ರೀಯರ ಪಾದಾಘಾತದ ಬಯಕೆ, ಗರ್ಭಿಣಿಯ ಬಯಕೆ
ದೋಹಾ. ಅ: [ದ್ವಿಧಾ] ಎರಡು ವಿಧ
ದೋಹಾಇಅ. ವಿ: [ದ್ವಿಧಾಕೃತ] ಇಬ್ಭಾಗ ಮಾಡಲ್ಪಟ್ಟ
ದೋಹಾಸಲ.ನ: [ದೇ] ಸೊಂಟ, ನಡು, ಟೊಂಕ, ಕಟಿ
ದೋಹಿ.ವಿ:[ದೋಹಿನ್] ಸೋರುವ,ತೊಟ್ಟಿಕ್ಕುವ (ಗಾ)
ದೋಹಿ. ವಿ: [ದ್ರೋಹಿನ್] ದ್ರೋಹ ಮಾಡುವವನು
ದೋಹಿಣ್ಣ. ವಿ: [ದ್ವಿಭಿನ್ನ] ಎರಡು ಭಾಗ, ಎರಡು ತುಂಡು ಮಾಡಲ್ಪಟ್ಟಿರುವ
ದೋಹಿತ್ತ. ಪು: [ದೌಹಿತ್ರ] ಮಗಳ ಮಗ; ಮೊಮ್ಮಗ
ದೋಹಿತ್ತೀ. ಸ್ತ್ರೀ: [ದೌಹಿತ್ರೀ] ಮಗಳ ಮಗಳು; ಮೊಮ್ಮಗಳು(ಮಹಾ)
ದೋಹೂಅ. ಪು: [ದೇ] ಶವ, ಹೆಣ(ದೇ).
–ದ್ದೋಸ. 'ದೋಸ=(ದೇ)' ಶಬ್ದವನ್ನು ನೋಡುವುದು.
ದ್ರವಕ್ಕ.(ಅಪ). ನ: [ದೇ. ಭಯ] ಭಯ, ಭೀತಿ, ಹೆದರಿಕೆ, ಅಂಜಿಕೆ(ಹೇ)
ದ್ರಹ. ಪು: [ಹ್ರದ] ದೊಡ್ಡ ಜಲಾಶಯ, ಸರೋವರ
ದ್ರೇಹಿ(ಅಪ). ಸ್ತ್ರೀ: [ದೃಷ್ಟಿ] ದೃಷ್ಟಿ, ನೋಟ(ಹೇ)
ದ್ರೋಹ. 'ದೋಹ=ದ್ರೋಹ' ಶಬ್ದವನ್ನು ನೋಡುವುದು.

ಧ

ಧ. ಪು: [ಧ] **'ತ'** ವರ್ಗದಲ್ಲಿ ನಾಲ್ಕನೆಯ ವರ್ಣ. ದಂತ್ಯ –ಘೋಷ, ಮಹಾಪ್ರಾಣ –ಸ್ಪರ್ಶ ವರ್ಣ

ಧಅ. 'ಧವ' ಶಬ್ದವನ್ನು ನೋಡುವುದು(ಗಾ)

ಧಂಖ. ಪು: [ಧ್ವಾಂಕ್ಷ] ಕಾಗೆ(ಉಪ)

ಧಂಗ. ಪು: [ದೇ] ಭ್ರಮರ, ದುಂಬಿ(ದೇ)

ಧಂತ. ನ: [ಧ್ವಾಂತ] ಕತ್ತಲೆ(ಸುರ), ಅಜ್ಞಾನ,

ಧಂತ. ನ: [ದೇ] ಅತಿ, ಅತಿಶಯ, ಅತ್ಯಂತ(ಬೃಹ)

ಧಂತ. ವಿ: [ಧ್ಮಾತ] ಬೆಂಕಿಯಲ್ಲಿ ಕಾಯಿಸಲ್ಪಟ್ಟ(ಪಣ್ಣ), ಶಬ್ದದಿಂದ ಕೂಡಿದ,

ಧಂಧಾ. ಸ್ತ್ರೀ: [ದೇ] ನಾಚಿಕೆ, ಲಜ್ಜೆ(ದೇ)

ಧಂಧುಕ್ಕಯ. ನ: [ಧಂಧುಕ್ಕಯ] ಈಗ **'ಧಂಧೂಕಾ'** ಎಂದು ಹೆಸರಾಗಿರುವ ಗುಜರಾತಿನ ಒಂದು ನಗರ(ಸುಪಾ)

ಧಂಧೋಲಿಯ.(ಅಪ). **ವಿ:** [ಭ್ರಮಿತ] ತಿರುಗಿಸಲ್ಪಟ್ಟ

ಧಂಸ. ಅಕ: [ಧ್ವಂಸ್] ನಾಶಮಾಡು

ಧಂಸ್. ಸಕ: [ಧ್ವಂಸಯ್] ನಾಶಮಾಡು, ದೂರಮಾಡು

ಧಂಸಾಡ. ಸಕ: [ಮುಚ್] ಬಿಡು, ತ್ಯಜಿಸು

ಧಂಸಾಡಿಅ. ವಿ: [ಮುಕ್ತ] ಬಿಡಲ್ಪಟ್ಟ, ಬಿಡುಗಡೆ ಹೊಂದಿದ

ಧಂಸಾಡಿಅ. ವಿ: [ದೇ] ನಾಶವಾದ, ಕಳೆದುಹೋದ(ದೇ)

ಧಗಧಗ. ಅಕ: [ಧಗಧಗಾಯ್] **'ಧಗಧಗ'** ಎಂದು ಶಬ್ದಮಾಡು, ಉರಿ, ಜೋರಾಗಿ ಉರಿ. **ವ. ಕೃ: 'ಧಗಧಗಂತ'**(ಪಉಮ)

ಧಗಧಗಾಇಅ. ವಿ: [ಧಗಧಗಾಯಿತ] **'ಧಗಧಗ'** ಎಂಬ ಶಬ್ದದಿಂದ ಕೂಡಿದ

ಧಗಧಗ್ಗ. 'ಧಗಧಗ' **ಶಬ್ದವನ್ನು ನೋಡುವುದು.**

ಧಗ್ಗೀಕಯ. ವಿ: [ದೇ] ಪ್ರಜ್ವಲವಾಗಿ ಉರಿಸಲ್ಪಟ್ಟ

ಧಜ. 'ಧಯ=ಧ್ವಜ' ಶಬ್ದವನ್ನು ನೋಡುವುದು.

ಧಟ್ಠ. 'ಧಿಟ್ಠ' **ಶಬ್ದವನ್ನು ನೋಡುವುದು.**

ಧಟ್ಠಜ್ಜುಣ}. **ಪು:** [ಧೃಷ್ಟದ್ಯುಮ್ನ] ದ್ರುಪದ ರಾಜನ

ಧಟ್ಠಜ್ಜುಣ್ಣ}. ಒಬ್ಬ ಮಗ(ಣಾಯಾ)

ಧಡ. ನ: [ದೇ] ಮುಂಡ(ಸುಪಾ)

ಧಡಹಡಿಯ. ನ: [ದೇ] ಗರ್ಜನೆ(ಸುಪಾ)

ಧಣ. ನ: [ಧನ] ಸಂಪತ್ತು, ಸ್ಥಾವರ –ಜಂಗಮ ಸಂಪತ್ತು(ಉತ್ತ), ಎಣಿಕೆ ಮತ್ತು ಅಳತೆಯ ರೂಪದಲ್ಲಿ ಕೊಳ್ಳಲು –ಮಾರಲು ಅರ್ಹವಾದ ಪದಾರ್ಥ(ಕಪ್ಪ). **ಪು:** ಕುಬೇರ, ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ಶ್ರೇಷ್ಠಿ, ಧನ್ಯ ಸಾರ್ಥವಾಹನ ಒಬ್ಬ ಮಗ. **–ಇತ್ತ, –ಇಲ್ಲ. ವಿ:** [**–ವತ್**] ಹಣವಂತ, ಶ್ರೀಮಂತ(ಕುಪ್ರ). **–ಗಿರಿ. ಪು:** [–ಗಿರಿ] ವಜ್ರಸ್ವಾಮಿಯ ತಂದೆಯಾದ ಒಬ್ಬ ಜೈನ ಮಹರ್ಷಿ(ಉಪ). **–ಗುತ್ತ. ಪು:** [**–ಗುಪ್ತ**] ಒಬ್ಬ ಜೈನಮುನಿ(ಆವಮ). **–ಗೋವ. ಪು:** [**–ಗೋಪ**] ಧನ್ಯ ಸಾರ್ಥವಾಹನ ಒಬ್ಬ ಮಗ. **–ಡ್ಢ. ಪು:** [**ಧನಾಢ್ಯ**] ಒಬ್ಬ ಜೈನ ಮುನಿ. **–ಣಂದಿ. ಪುಂಸ್ತ್ರೀ:** [–ನಂದಿ] ಎರಡು ಪಟ್ಟು ದೇವ –ದ್ರವ್ಯ. **–ಣಿಹಿ.ಪು:** [–ನಿಧಿ] ಭಂಡಾರ, ಖಜಾನೆ. **–ತ್ಥಿ. ವಿ:** [**ಧನಾರ್ಥಿನ್**] ಧನವನ್ನು ಅಪೇಕ್ಷಿಸುವವನು. **–ದತ್ತ. ಪು:** [**–ದತ್ತ**] ಒಬ್ಬ ಸಾರ್ಥವಾಹ.ಮೂರನೇ ವಾಸುದೇವನ ಪೂರ್ವ ಜನ್ಮದ ಹೆಸರು(ಆವಮ). **–ದೇವ.ಪು:** [**–ದೇವ**] ಒಬ್ಬ ಸಾರ್ಥವಾಹ. ಮಂಡಿಕ ಗಣಧರನ ತಂದೆ(ಆವಮ). ಧನ್ಯ ಸಾರ್ಥವಾಹನ ಒಬ್ಬ ಮಗ(ಣಾಯಾ). **–ಪಇ. 'ವಇ'ಶಬ್ದವನ್ನು ನೋಡುವುದು. –ಪವರ. ಪು:** [**–ಪ್ರವರ**] ಒಬ್ಬ ಶ್ರೇಷ್ಠಿ. **–ಪಾಲ. ಪು:** [**–ಪಾಲ**] ಧನ್ಯಸಾರ್ಥವಾಹನ ಒಬ್ಬ ಮಗ(ಣಾಯಾ) **'–ವಾಲ' ಶಬ್ದವನ್ನು ನೋಡುವುದು. –ಪ್ಪಭಾ. ಸ್ತ್ರೀ:** [**–ಪ್ರಭಾ**] ಕುಂಡಲವರ ದ್ವೀಪದ ರಾಜಧಾನಿ. **–ಮಂತ, –ಮಣ. ವಿ:** [**–ವತ್**] ಹಣವಂತ, ಶ್ರೀವಂತ. **–ಮಿತ್ತ. ಪು:** [**–ಮಿತ್ರ**] ಒಬ್ಬ ಜೈನಮುನಿ(ಪಉಮ). **–ಯ. ಪು:** [**–ದ**] ಒಬ್ಬ ಸಾರ್ಥವಾಹ. ದೊರೆ, ರಾವಣನ ಚಿಕ್ಕಮ್ಮನ ಮಗನಾದ ಒಬ್ಬ ವಿದ್ಯಾಧರ ರಾಜ(ಪಉಮ), ಕುಬೇರ, **ವಿ:** ಹಣ ನೀಡುವವನು. **–ರಕ್ಖಿಯ. ಪು:** [**–ರಕ್ಷಿತ**] ಧನ್ಯ ಸಾರ್ಥವಾಹನ ಒಬ್ಬ ಮಗ(ಣಾಯಾ). **–ವಇ. ಪು:** [**–ಪತಿ**] ಕುಬೇರ. (ಣಾಯಾ). ಒಬ್ಬ ರಾಜಕುಮಾರ. **–ವಈ. ಸ್ತ್ರೀ:** [**–ವತೀ**] ಒಬ್ಬ ಸಾರ್ಥವಾಹ –ಪುತ್ರಿ **–ವಂತ, –ವತ್ತ. '–ಮಂತ' ಶಬ್ದವನ್ನು ನೋಡುವುದು. –ವಹ. ಪು:** [**–ವಹ**] ಒಬ್ಬ ಶ್ರೇಷ್ಠಿ. ಒಬ್ಬ ದೊರೆ. **–ವಾಲ. '–ಪಾಲ' ಶಬ್ದವನ್ನು ನೋಡುವುದು.**

ಭೋಜರಾಜನ ಸಮಕಾಲೀನ ಜೈನ ಮಹಾಕವಿ. **–ಸಂಚಯಾ.** ಸ್ತ್ರೀ: [–ಸಂಚಯಾ] ಒಬ್ಬ ವ್ಯಾಪಾರೀ ಮಹಿಳೆ. **–ಸಮ್ಮ.** ಪು: [–ಶರ್ಮನ್] ಒಬ್ಬ ವ್ಯಾಪಾರಿ. **–ಸಿರೀ.** ಸ್ತ್ರೀ: [–ಶ್ರೀ] ಒಬ್ಬ ವ್ಯಾಪಾರಿ ಮಹಿಳೆ. **–ಸೇಣ.** ಪ: [–ಸೇನ] ಒಬ್ಬ ದೊರೆ.

ಧನಾಲ. ವಿ:[–ವತ್] ಹಣವಂತ, ಶ್ರೀಮಂತ.

ಧಣಾವಹ. ವಿ: [ಧನಾವಹ] ಹಣವನ್ನು ಧರಿಸುವ ಶ್ರೀಮಂತ. ಪು: ಒಬ್ಬ ಶ್ರೇಷ್ಠಿ. ಒಬ್ಬ ದೊರೆ(ವಿಪಾ)

ಧಣಂಜಯ. ಪು: [ಧನಂಜಯ] ಮಧ್ಯಮ ಪಾಂಡವನಾದ ಅರ್ಜುನ, ಬೆಂಕಿ, ಅಗ್ನಿ. ಸರ್ಪ –ವಿಶೇಷ. ಶರೀರ ವ್ಯಾಪಿಯಾದ ವಾಯು. ವೃಕ್ಷ –ವಿಶೇಷ, ಉತ್ತರಾಭಾದ್ರ ನಕ್ಷತ್ರದ ಗೋತ್ರ., ಪಕ್ಷದ ಒಂಬತ್ತನೆಯ ದಿನ. ಒಬ್ಬ ಶ್ರೇಷ್ಠಿ, ಒಬ್ಬ ದೊರೆ(ಆವಮ)

ಧಣಿ. ಪು: [ಧ್ವನಿ] ಶಬ್ದ, ಸದ್ದು(ವಿಸೇ)

ಧಣಿ. ಸ್ತ್ರೀ: [ಧ್ರಾಣಿ] ತೃಪ್ತಿ, ಸಂತಪ(ಔಪ). ಅತೃಪ್ತಿಯನ್ನುಂಟುಮಾಡುವ ಶಕ್ತಿ(ವಿಸೇ)

ಧಣಿಅ. ಪು: [ಧನಿಕ] ಯವನ ಮತದ ಪ್ರವರ್ತಕ

ಧಣಿಅ. ವಿ: [ಧನಿಕ] ಹಣವಂತ, ಶ್ರೀಮಂತ(ದೇ). ಪು: ಒಡೆಯ, ಸ್ವಾಮಿ.

ಧಣಿಅ. ನ: [ದೇ] ಅತ್ಯಂತ, ಅತಿಶಯ, ಗಾಢ(ದೇ, ಭಗ)

ಧಣಿಅ. ವಿ: [ಧನ್ಯ] ಧನ್ಯವಾದಕ್ಕೆ ಅರ್ಹನಾದವನು, ಪ್ರಶಂಸೆಗೆ ಪಾತ್ರ(ಅಚ್ಚು)

ಧಣಿಆ. ಸ್ತ್ರೀ: [ದೇ] ಪ್ರಿಯೆ, ಹೆಂಡತಿ(ಗಾ), ಧನ್ಯಳು, ಪ್ರಶಂಸಾರ್ಹಳಾದ ಮಹಿಳೆ(ಷಡ್)

ಧಣಿಟ್ಠಾ. ಸ್ತ್ರೀ: [ಧನಿಷ್ಠಾ] ಧನಿಷ್ಠಾ ನಕ್ಷತ್ರ

ಧಣೀ. ಸ್ತ್ರೀ: [ದೇ] ಭಾರ್ಯೆ, ಹೆಂಡತಿ, ಸಮೃದ್ಧಿ, ತೃಪ್ತಿ. ಬಂಧಿಸಲ್ಪಟ್ಟಿದ್ದರೂ ಭಯರಹಿತನಾಗಿರುವವನು(ದೇ)

ಧಣು. ಪುಂನ: [ಧನುಷ್] ಧನುಸ್ಸು, ಬಿಲ್ಲು, ಚಾಪ (ಷಡ್), ನಾಲ್ಕು ಕೈಗಳ ಅಳತೆ, ಪು: ಪರಮ ಅಧಾರ್ಮಿಕ ದೇವರುಗಳ ಒಂದು ಜಾತಿ(ಸಮ) **–ಕುಡಿಲ.** ನ: [ಕುಟಿಲಧನುಷ್] ಡೊಂಕಾದ ಬಿಲ್ಲು. **–ಗ್ಗಹ.** ಪು: [–ಗ್ರಹ] ವಾಯು –ವಿಶೇಷ. **–ದ್ಧಯ.** ಪು: [–ಧ್ವಜ] ನೃಪ –ವಿಶೇಷ(ತಾ). **–ಪಿಟ್ಠ.** ನ: [–ಪೃಷ್ಠ] ಧನುಷ್ಸಿನ ಪೃಷ್ಠಭಾಗ, ಬಿಲ್ಲಿನ ಬೆನ್ನಿನ ಆಕಾರದ ಭಾಗ. **–ಪುಹತ್ತಿಯಾ.** ಸ್ತ್ರೀ: [ಪೃಥಕ್ತ್ವಿಕಾ] ಎರಡು ಕ್ರೋಶಗಳ ದೂರ, ಒಂದು ಗಾವುದ(ಪಣ್ಣ). **–ವೇಅ, –ವ್ವೇಅ.** ಪು: [–ವೇದ] ಧನುರ್ವಿದ್ಯೆಯನ್ನು ತಿಳಿಸುವ ಶಾಸ್ತ್ರ(ಉಪ). **–ಹರ.** **'–ಧರ' ಶಬ್ದವನ್ನು ನೋಡುವುದು**(ಭವಿ)

ಧಣು. ಪುಂನ: [ಧನುಸ್] ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಧನು ರಾಶಿ. **–ಧಲ್ಲ.** ವಿ: [–ಮತ್] ಧನುಸ್ಸನ್ನು ಹೊಂದಿರುವವನು

ಧಣುಕ್ಕ}. ಮೇಲಿನ ಶಬ್ದವನ್ನು ನೋಡುವುದು.
ಧಣುಹ}.

ಧಣುಹೀ. ಸ್ತ್ರೀ: [ಧನುಷ್] ಬಿಲ್ಲು, ಚಾಪ(ಕುಪ್ರ)

ಧಣೇಸರ. ಪು: [ಧನೇಶ್ವರ] ಒಬ್ಬ ಪ್ರಸಿದ್ಧ ಜೈನಮುನಿ ಮತ್ತು ಗ್ರಂಥಕಾರ(ಸುರ)

ಧಣ್ಣ. ಪು: [ಧನ್ಯ] ಒಬ್ಬ ಜೈನ ಮುನಿ, **'ಅನುತ್ತರೋಪಪಾತಿಕದಸಾ'** ಸೂತ್ರದ ಒಂದು ಅಧ್ಯಯನ. ಯಕ್ಷ –ವಿಶೇಷ. ವಿ: ಕೃತಾರ್ಥ, ಪುಣ್ಯಶಾಲಿ, ಹಣ –ಲಾಭ ಹೊಂದಲು ಯೋಗ್ಯನಾದವನು, ಪ್ರಶಂಸೆಗೆ ಪಾತ್ರನಾದವನು. ಭಾಗ್ಯಶಾಲಿ(ಕಪ್ಪ)

ಧಣ್ಣ. **'ಧನ್ನ= ಧಾನ್ಯ'** ಶಬ್ದವನ್ನು ನೋಡುವುದು.

ಧಣ್ಣಂತರಿ. ಪು: [ಧನ್ವಂತರಿ] ರಾಜಾ ಕನಕರಥನ ಒಬ್ಬ ಹೆಸರಾಂತ ವೈದ್ಯ, ದೇವ –ವೈದ್ಯ(ಜಯ)

ಧಣ್ಣಾಉಸ. ವಿ: [ದೇ] ಆಶೀರ್ವದಿಸಲ್ಪಟ್ಟವನು, ಪು: ಆಶೀರ್ವಾದ(ದೇ)

ಧತ್ತ. ವಿ: [ದೇ] ಇಡಲ್ಪಟ್ಟ, ಇರಿಸಲ್ಪಟ್ಟ, ಸ್ಥಾಪಿಸಲ್ಪಟ್ಟ (ಆವಮ) ಪು: ಒಂದು ಬಗೆಯ ವನಸ್ಪತಿ

ಧತ್ತರಟ್ಠಗ. ಪು: [ಧಾರ್ತರಾಷ್ಟ್ರಕ] ಮುಖ ಮತ್ತು ಕಾಲು ಕಪ್ಪಗಿರುವ ಹಂಸದ ಒಂದು ಜಾತಿಯ ಪಕ್ಷಿ(ಪಣ್ಣ)

ಧತ್ತೀ. ಸ್ತ್ರೀ: [ಧಾತ್ರೀ] ತಾಯಿ, ಸಾಕುತಾಯಿ(ಸ್ವಪ್ನ), ದಾದಿ, ಭೂಮಿ, ಆಮಲಕದ ಮರ (=ಬೆಟ್ಟನೆಲ್ಲಿಮರ] **'ಧಾಈ' ಶಬ್ದವನ್ನು ನೋಡುವುದು.**

ಧತ್ತೂರ. ಪು: [ಧತ್ತೂರ] ಧತ್ತೂರಿ ಕಂಟಿ; ವಿಷಕಾರಿ ಕಾಯಿ ಬಿಡುವ ಒಂದು ಗಿಡ. ನ: ದತ್ತೂರೀ ಹೂವು(ಸುಪಾ)

ಧತ್ತೂರಿಅ. ವಿ: [ಧಾತ್ತೂರಿಕ] ಧತ್ತೂರಿಯ ನಶೆ ತಯಾರಿಸಿದವನು(ಸುಪಾ)

ಧತ್ಥ. ವಿ: [**ಧ್ವಸ್ತ**] ಧ್ವಂಸವಾದ, ನಾಶಗೊಂಡ(ಹೇ)
ಧನ್ನ. '**ಧಣ್ಣ=ಧನ್ಯ**' **ಶಬ್ದವನ್ನು ನೋಡುವುದು**(ಕುಮಾ)
ಧನ್ನ. ನ: [**ಧಾನ್ಯ**] ಧಾನ್ಯ, ಕಾಳು, ಧಾನ್ಯ –ವಿಶೇಷ, ಧನಿಯ, **–ಕೀಡ.** **ಪು:** [**–ಕೀಟ**] ಧಾನ್ಯ ಅಥವಾ ಕಾಳಿನಲ್ಲಿ ಇರುವ ಹುಳು. **–ಣಿಹಿ.** **ಪುಂಸ್ತ್ರೀ:** [**–ನಿಧಿ**] ಧಾನ್ಯವನ್ನು ಸಂಗ್ರಹಿಸಿಡುವ ಕಣಜ. **–ಪತ್ಥಯ.** **ಪು:** [**–ಪ್ರಸ್ಥಕ**] ಧಾನ್ಯದ ಒಂದು ಅಳತೆ (ವವ). **–ಪಿಡಗ.** ನ: [**–ಪಿಟಕ**] ಧಾನ್ಯದ ಒಂದು ಅಳತೆ. **–ಪುಂಜಿಯ.** ನ: [**–ಪುಂಜಿತ**] ಧಾನ್ಯದ ರಾಶಿ. **–ವಿಕ್ಖಿತ್ತ.** ನ: [**ವಿಕ್ಷಿಪ್ತ ಧಾನ್ಯ**] ಹರಡಿದ ಧಾನ್ಯ, **–ವಿರಲ್ಲಿಯ.** ನ: [**ವಿರಲ್ಲಿತಧಾನ್ಯ**] ಗಾಳಿಗೆ ತೂರಿದ್ದರಿಂದ ರಾಶಿಗೂಡಿದ ಧಾನ್ಯ. **–ಸಂಕಡ್ಢಿಯ.** ನ: [**ಸಂಕರ್ಷಿತಧಾನ್ಯ**] ಹೊಲದಲ್ಲಿ ಕೊಯ್ದು ಕಣಕ್ಕೆ ತರಲಾದ ಧಾನ್ಯದ ತೆನೆ ಇತ್ಯಾದಿ(ಠಾ). **ಧನ್ನಾಗಾರ.** ನ: [**ಧಾನ್ಯಾಗಾರ**] ಧಾನ್ಯವನ್ನು ಸಂಗ್ರಹಿಸಿಡುವ ಕಣಜ(ನಿಚೂ).
ಧನ್ನಾ. ಸ್ತ್ರೀ: [**ಧಾನ್ಯ**] ಧಾನ್ಯ, ಕಾಳು(ಉಪ)
ಧನ್ನಾ. ಸ್ತ್ರೀ: [**ಧನ್ಯಾ**] ಒಬ್ಬ ಮಹಿಳೆಯ ಹೆಸರು(ಉಪಾ)
ಧಮ. ಸಕ: [**ಧ್ಮಾ**] ಬೆಂಕಿಯಲ್ಲಿ ಕಾಯಿಸು, ಸದ್ದು ಮಾಡು, ಗಾಳಿಯನ್ನು ತುಂಬು(ಮಹಾ)
ಧಮಗ. ವಿ: [**ಧ್ಮಾಯಕ**] ಗಾಳಿ ತುಂಬುವವನು(ಔಪ)
ಧಮಣ. ನ: [**ಧಮನ**] ಬೆಂಕಿಯಲ್ಲಿ ಕಾಯಿಸುವುದು, ಗಾಳಿಯನ್ನು ತುಂಬುವುದು(ಪಣ್ಣ), ವಿ: ತಿದಿ
ಧಮಣಿ}. ಸ್ತ್ರೀ: [**ಧಮನಿ, ನೀ**] ತಿದಿ, ನಾಡಿ, ನರ(ವಿಪಾ)
ಧಮಣೀ}.
ಧಮಧಮ. ಅಕ: [**ಧಮಧಮಾಯ್**] '**ಧಮಧಮ**' ಎಂದು ಶಬ್ದಮಾಡು. ವ. ಕೃ: '**ಧಮಧಮಂತ**'
ಧಮಾಸ. ಪು: [**ಧಮಾಸ**] ಒಂದು ಬಗೆಯ ವೃಕ್ಷ
ಧಮಿಅ. ವಿ: [**ಧ್ಮಾತ**] ಗಾಳಿಯನ್ನು ತುಂಬಿಸಲಾಗಿರುವ, ಊದಲ್ಪಟ್ಟಿರುವ, ಬೆಂಕಿಯಲ್ಲಿ ಕಾಯಿಸಲ್ಪಟ್ಟ.
ಧಮ್ಮ. ಪು: [**ಧರ್ಮ**] ಒಂದು ದೇವ –ವಿಮಾನ, ಒಂದು ದಿನದ ಉಪವಾಸ. **ಪುಂನ:** ಒಳ್ಳೆಯ ಕೆಲಸ, ಸದಾಚಾರ(ಆಚಾ), ಪುಣ್ಯ, ಸುಕೃತ(ಆವ), ಸ್ವಭಾವ, ಪ್ರಕೃತಿ(ನಿಚೂ), ಗುಣ, ಪರ್ಯಾಯ. ಜೀವಕ್ಕೆ ಗತಿ –ಕ್ರಿಯೆಯಲ್ಲಿ ನೆರವು ನೀಡುವ ಒಂದು ರೂಪರಹಿತ ಪದಾರ್ಥ. ಈಗಿನ ಅವಸರ್ಪಿಣಿ ಕಾಲದಲ್ಲಿ ಜನಿಸಿದ ಹದಿನೈದನೇ ಜಿನದೇವ. ಒಬ್ಬ ವ್ಯಾಪಾರಿ. ಸ್ಥಿತಿ, ಮರ್ಯಾದೆ (ಆಚೂ). ಧನುಸ್ಸು, ಬಿಲ್ಲು. ಒಬ್ಬ ಜೈನ ಮುನಿ. 'ಸೂತ್ರಕೃತಾಂಗ ಸೂತ್ರ'ದ ಒಂದು ಅಧ್ಯಯನ. ಆಚಾರ, ರೀತಿ, ವ್ಯವಹಾರ. **–ಉತ್ತ.** **ಪು:** [**–ಪುತ್ರ**] ಶಿಷ್ಯ. ಮಹಾಭಾರತದ ಧರ್ಮರಾಯ. **–ಉರ.** ನ: [**–ಪುರ**] ಒಂದು ನಗರ. **–ಕಂಖಿಅ.** ವಿ: [**ಕಾಂಕ್ಷಿತ**] ಧರ್ಮದ ಬಯಕೆ ಉಳ್ಳವನು (ಭಗ). **–ಕಹಾ.** ಸ್ತ್ರೀ: [**–ಕತಾ**] ಧರ್ಮಸಂಬಂಧದ ವಿಚಾರ. **–ಕಹಿ.** ವಿ: [**–ಕಥಿನ್**] ಧರ್ಮ –ಕಥೆಯನ್ನು ಹೇಳುವವನು. ಧರ್ಮೋಪದೇಶಕ. (**ಓಘ**). **–ಕಮಯ.** ವಿ: [**–ಕಾಮಕ**] ಧರ್ಮವನ್ನು ಬಯಸುವವನು. **–ಕಾಯ.** **ಪು:** [**–ಕಾಯ**] ಧರ್ಮದ ಸಾಧನಭೂತವಾದ ಶರೀರ. **–ಕ್ಖಾಇ.** ವಿ: [**ಧರ್ಮಾಖ್ಯಾಯಿನ್**] ಧರ್ಮ –ಪ್ರತಿಪಾದಕ (ಔಪ). **–ಕ್ಖಾಇ.** ವಿ: [**–ಖ್ಯಾತಿ**] ಧರ್ಮದಿಂದ ಕೀರ್ತಿ ಗಳಿಸಿದವನು, ಧರ್ಮಾತ್ಮ. **–ಗುರು.** **ಪು:** [**–ಗುರು**] ಧರ್ಮವನ್ನು ತೋರಿಸುವ ಗುರು, ಧರ್ಮಾಚಾರ್ಯ. **–ಗುವ.** ವಿ: [**–ಗುಪ್**] ಧರ್ಮ –ರಕ್ಷಕ. **–ಘೋಸ.** **ಪು:** [**–ಘೋಷ**] ಒಬ್ಬ ಜೈನ ಮುನಿ ಮತ್ತು ಆಚಾರ್ಯನ ಹೆಸರು(ಆಚೂ). **–ಚಕ್ಕ.** ನ: [**–ಚಕ್ರ**] ತೀರ್ಥಂಕರನ ಧರ್ಮ –ಪ್ರಕಾಶಕ ಚಕ್ರ(ಪವ). **–ಚಕ್ಕವಟ್ಟಿ.** **ಪು:** [**–ಚಕ್ರವರ್ತಿನ್**] ಜಿನ –ದೇವ. **–ಚಕ್ಕಿ.** **ಪು:** **–ಚಕ್ರಿನ್**] ತೀರ್ಥಂಕರ –ಭಗವಾನ್. **–ಜಣಣೀ.** ಸ್ತ್ರೀ: [**–ಜನನೀ**] ಧರ್ಮದ ಪ್ರಾಪ್ತಿಯನ್ನುಂಟು ಮಾಡುವ ಮಹಿಳೆ, ಧರ್ಮೋಪದೇಶಕಿ(ಪಂಚಾ). **–ಜಸ.** **ಪು:** [**–ಯಶಸ್**] ಒಬ್ಬ ಜೈನ ಮುನಿಯ ಹೆಸರು. **–ಜಾಗರಿಯಾ.** ಸ್ತ್ರೀ: [**–ಜಾಗರ್ಯಾ**] ಧರ್ಮಚಿಂತನದ ಸಲುವಾಗಿ ಮಾಡಲಾಗುವ ಧರ್ಮಜಾಗರಣೆ(ಸಮ), ಹುಟ್ಟಿದ ೬ನೇ ದಿನ ಮಾಡುವ ಒಂದುಹಬ್ಬ. **–ಜ್ಝಯ.** **ಪು:** [**–ಧ್ವಜ**] ಧರ್ಮದ ದ್ಯೋತಕವಾದ ಧ್ವಜ, ಇಂದ್ರ –ಧ್ವಜ. ಐರಾವತ ಕ್ಷೇತ್ರದ ಐದನೇ ಭಾವೀ ಜಿನ –ದೇವ. **–ಜ್ಝಾಣ.** ನ: [**–ಧ್ಯಾನ**] ಧರ್ಮ –ಚಿಂತನೆ, ಶುಭ –ಧ್ಯಾನ ವಿಶೇಷ. **–ಜ್ಝಾಣಿ.** ವಿ: [**–ಧ್ಯಾನಿನ್**] ಧರ್ಮಧ್ಯಾನದಿಂದ ಕೂಡಿದ. **–ಟ್ಠಿ.** ವಿ: [**ಧರ್ಮಾರ್ಥಿನ್**] ಧರ್ಮದ ಅಭಿಲಾಷೆ

ಉಳ್ಳವನು(ಸೂಅ). **–ಣಾಯಗ.** ವಿ: [**–ನಾಯಕ**] ಧರ್ಮದ ನೇತಾರ. **–ಣ್ಣು.** ವಿ: [**–ಜ್ಞ**] ಧರ್ಮವನ್ನು ತಿಳಿದವನು. **–ತಿತ್ಥಯರ.** ಪು: [**–ತೀರ್ಥಕರ**] ಜಿನದೇವ(ಉತ್ತ). **–ತ್ಥ.** ನ: [**–ಧರ್ಮಾಸ್ತ್ರ**] ಒಂದು ಬಗೆಯ ಅಸ್ತ್ರ(ಪಉಮ). **–ತ್ಥಿ.** ' **–ಟ್ಠಿ**' **ಶಬ್ದವನ್ನು ನೋಡುವುದು.** **–ತ್ಥಿಕಾಯ.** ಪು: [**–ಧರ್ಮಾಸ್ತಿಕಾಯ**] ಗತಿ –ಕ್ರಿಯೆಯಲ್ಲಿ ನೆರವು ನೀಡುವ ಒಂದು ರೂಪರಹಿತ ಪದಾರ್ಥ (ಭಗ). **–ದಯ.** ವಿ: [**–ದಯ**] ಧರ್ಮದ ಪ್ರಾಪ್ತಿಯನ್ನು ತಂದುಕೊಡುವ ಧರ್ಮೋಪದೇಶಕ. **–ದಾರ.** ನ: [**–ದ್ವಾರ**] ಧರ್ಮದ ಉಪಾಯ. **–ದಾರ.** ಪು.ಬ: [**–ದಾರ**] ಧರ್ಮ –ಪತ್ನಿ. **–ದಾಸ.** ಪು: [**–ದಾಸ**] ಭಗವಾನ್ ಮಹಾವೀರನ ಒಬ್ಬ ಶಿಷ್ಯ ಮತ್ತು 'ಉಪದೇಶಮಾಲಾ' ದ ಕರ್ತೃ(ಉವ). **–ದೇವ.** ಪು: [**–ದೇವ**] ಒಬ್ಬ ಪ್ರಸಿದ್ಧ ಜೈನಾಚಾರ್ಯ. **–ದೇಸಗ, –ದೇಸಯ.** ವಿ: [**–ದೇಶಕ**] ಧರ್ಮೋಪದೇಶ ಮಾಡುವವನು. **–ಧುರಾ.** ಸ್ತ್ರೀ: [**–ಧುರಾ**] ಧರ್ಮವೆಂಬ ಅಕ್ಷ(ಅಚ್ಚು). **–ನಾಯಗ.** **'–ಣಾಯಗ' ಶಬ್ದವನ್ನು ನೋಡುವುದು.** **–ಪಡಿಮಾ.** ಸ್ತ್ರೀ: [**–ಪ್ರತಿಮಾ**] ಧರ್ಮದ ಪ್ರತಿಜ್ಞೆ, ಧರ್ಮದ ಸಾಧನ –ಭೂತವಾದ ಶರೀರ(ತಾ). **–ಪಣ್ಣತ್ತಿ.** ಸ್ತ್ರೀ: [**–ಪ್ರಜ್ಞಪ್ತಿ**] ಧರ್ಮದ ವ್ಯಾಖ್ಯಾನ(ಉವಾ). **–ಪದಿಣೀ**(ಶೌ). ಸ್ತ್ರೀ: [**–ಪತ್ನೀ**] ಧರ್ಮಪತ್ನಿ. **–ಪಿಬಾಸಯ.** ವಿ: [**–ಪಿಪಾಸಕ**] ಧರ್ಮದ ಸಲುವಾದ ಬಾಯಾರಿಕೆ (ಭಗ). **–ಪಿಬಾಸಿಯ.** ವಿ: [**–ಪಿಪಾಸಿತ**] ಧರ್ಮದ ಬಾಯಾರಿಕೆ ಉಳ್ಳವನು. **–ಪುರಿಸ.** ಪು: [**–ಪುರುಷ**] ಧರ್ಮಪ್ರವರ್ತಕ ಪುರುಷ, **ಪಲಜ್ಜಣ.** ವಿ: [**–ಪ್ರರಂಜನ**] ಧರ್ಮದಲ್ಲಿ ಆಸಕ್ತನಾದವನು. **–ಪಪವಾಇ.**ವಿ: [**–ಪ್ರವಾದಿನ್**] ಧರ್ಮೋಪದೇಶಕ. **–ಪ್ಪಹ.** ಪು: [**–ಪ್ರಭ**] ಒಬ್ಬ ಜೈನಾಚಾರ್ಯ. **–ಪ್ಪಾವಾಉಯ.** ವಿ: [**–ಪ್ರಾವಾದುಕ**] ಧರ್ಮಪ್ರವಾದಿ, ಧರ್ಮೋಪದೇಶಕ (ಆಚಾನಿ). **–ಬುದ್ಧಿ.** ವಿ: [**–ಬುದ್ಧಿ**] ಧಾರ್ಮಿಕ, ಧರ್ಮಬುದ್ಧಿ ಉಳ್ಳವನು, ಪು: ಒಬ್ಬ ರಾಜನ ಹೆಸರು. **–ಮಿತ್ತ.** ಪು: [**–ಮಿತ್ರ**] ಭಗವಾನ್ ಪದ್ಮಪ್ರಭನ ಪೂರ್ವ ಜನ್ಮದ ಹೆಸರು. **–ಯ.** ವಿ: [**–ದ**] ಧರ್ಮೋಪದೇಶಕ. **–ರುಇ.** ಸ್ತ್ರೀ: [**–ರುಚಿ**] ಧರ್ಮದ ಬಗೆಗಿನ ಪ್ರೀತಿ, ಧರ್ಮದಲ್ಲಿ ಪ್ರೀತಿ ಉಳ್ಳವನು(ತಾ), ಪು: ಒಬ್ಬಜೈನ ಮುನಿ. (ವಿಪಾ), ವಾರಣಾಸಿಯ ಒಬ್ಬ ದೊರೆ(ಆವಮ). **–ಲಾಭ.**ಪು: [**–ಲಾಭ**] ಧರ್ಮದ ಪ್ರಾಪ್ತಿ, ಜೈನ ಸಾಧು ನೀಡುವ ಆಶೀರ್ವಾದ. **–ಲಾಭಿಅ.** ವಿ: [**–ಲಾಭಿತ**] 'ಧರ್ಮಲಾಭ'ದ ಆಶೀರ್ವಾದ ನೀಡಲ್ಪಟ್ಟವನು. **–ಲಾಹ.** **' –ಲಾಭ' ಶಬ್ದವನ್ನು ನೋಡುವುದು.** **–ಲಾಹಣ.** ನ: [**–ಲಾಭನ**] ಧರ್ಮ –ಲಾಭ'ವೆಂಬ ಆಶೀರ್ವಾದ ನೀಡುವುದು. **–ಲಾಹಿಅ.** **' –ಲಾಭಿಅ'** ಶಬ್ದವನ್ನು ನೋಡುವುದು. **–ವಂತ.** ವಿ: [**–ವತ್**] ಧರ್ಮವನ್ನು ಹೊಂದಿರುವವನು(ಆಚಾ). **–ವಯ.** ಪು: [**–ವ್ಯಯ**] ಧರ್ಮದ ಸಲುವಾದ ದಾನ. **–ವಿ, –ವಿಉ.** ವಿ: [**–ವಿತ್**] ಧರ್ಮವನ್ನು ತಿಳಿದವನು(ಆಚಾ). **–ವಿಜ್ಜ.** ಪು: [**–ವೈದ್ಯ**] ಧರ್ಮಾಚಾರ್ಯ. **–ವ್ವಯ.** **' –ವಯ' ಶಬ್ದವನ್ನು ನೋಡುವುದು.** **–ಸದ್ಧಾ.** ಸ್ತ್ರೀ: [**–ಶ್ರದ್ಧಾ**] ಧರ್ಮದಲ್ಲಿ ನಂಬಿಕೆ(ಉತ್ತ). **–ಸಣ್ಣಾ,** **'–ಸನ್ನಾ' ಶಬ್ದವನ್ನು ನೋಡುವುದು**(ಭಗ). **–ಸತ್ಥ.** ನ: [**–ಶಾಸ್ತ್ರ**] ಧರ್ಮವನ್ನುಪ್ರತಿಪಾದಿಸುವ ಶಾಸ್ತ್ರ. **–ಸನ್ನಾ.** ಸ್ತ್ರೀ: [**–ಸಂಜ್ಞಾ**] ಧರ್ಮದ ಬಗೆಗಿನ ನಂಬಿಕೆ, ಧರ್ಮ –ಬುದ್ಧಿ(ಪಣ್ಣ). **–ಸಾರಹಿ.** ಪು: [**–ಸಾರಥಿ**] ಧರ್ಮರಥದ ಪ್ರವರ್ತಕ, ಧರ್ಮೋಪದೇಶಕ. **–ಸಾಲಾ.** ಸ್ತ್ರೀ: [**–ಸಾಲಾ**] ಧರ್ಮದ ಪ್ರದೇಶ. **–ಸೀಲ.** ವಿ: [**–ಶೀಲ**] ಧಾರ್ಮಿಕ. **–ಸೀಹ.** ಪು: [**–ಸಿಂಹ**] ಭಗವಾನ್ ಅಭಿನಂದನನ ಹಿಂದಿನ ಜನ್ಮದ ಹೆಸರು. ಒಬ್ಬ ಜೈನ ಮುನಿ(ಸಂಥಾ). **–ಸೇಣ.** ಪು: [**–ಸೇನ**] ಒಬ್ಬ ಬಲದೇವನ ಹಿಂದಿನ ಜನ್ಮದ ಹೆಸರು. **ಧಮ್ಮಾಇಗರ.** ವಿ: [**ಧರ್ಮಾದಿಕರ**] ಧರ್ಮದ ಮೊದಲ ಪ್ರವರ್ತಕ, ಪು: ಜಿನದೇವ. **ಧಮ್ಮಾಣುಟ್ಠಾಣ.** ನ: [**ಧರ್ಮಾನುಷ್ಠಾನ**] ಧರ್ಮದ ಆಚರಣೆ(ಧರ್ಮ). **ಧಮ್ಮಾಣುಣ್ಣ.** ವಿ: [**ಧರ್ಮಾನುಜ್ಞ**] ಧರ್ಮವನ್ನು ಅನುಮೋದಿಸುವವನು (ಸೂಅ). **–ಣುಯ.**ವಿ:

[ಧರ್ಮಾನುಗ] ಧರ್ಮವನ್ನು ಅನುಸರಿಸುವವನು (ಔಪ). **ಧಮ್ಮಾಯರಿಯ. ಪು: [ಧರ್ಮಾಚಾರ್ಯ]** ಧರ್ಮದಾತನಾದ ಗುರು. **ಧಮ್ಮಾವಾಯ. ಪು: [ಧರ್ಮವಾದ]** ಧರ್ಮಚರ್ಚೆ; –೨ನೇ ಜೈನ ಅಂಗ ಗ್ರಂಥವಾದ ದೃಷ್ಟಿವಾದ(ಠಾ). **ಧಮ್ಮಾಹಿಗರಣಿಯ. ಪು: [ಧರ್ಮಾಧಿಕರಣಿಕ]** ನ್ಯಾಯಾಧೀಶ(ಸುಪಾ). **ಧಮ್ಮಾಹಿಗಾರಿ. ವಿ: [ಧರ್ಮಾಧಿಕಾರಿನ್]** ಧರ್ಮವನ್ನು ಸ್ವೀಕರಿಸಲು ಅರ್ಹನಾದವನು(ಧರ್ಮ).

ಧಮ್ಮ. ವಿ: [ಧರ್ಮ್ಯ] ಧರ್ಮದಿಂದ ಕೂಡಿರುವ, ಧರ್ಮ –ಸಂಗತವಾದ(ಮಹಾನಿ)

ಧಮ್ಮಣ. ಪು: [ದೇ] ಒಂದು ವೃಕ್ಷ –ವಿಶೇಷ(ಉಪ)

ಧಮ್ಮಣ. 'ಧಮ' ಶಬ್ದವನ್ನು ನೋಡುವುದು.

ಧಮ್ಮಯ. ಪು: [ದೇ] ನಾಲ್ಕು ಅಂಗುಲದಷ್ಟು ಕೈಗಾಯ, ಚಂಡೀ ದೇವಿಯ ನರ –ಬಲಿ(ದೇ)

ಧಮ್ಮಿ. ವಿ: [ಧರ್ಮಿನ್] ಧರ್ಮದಿಂದ ಕೂಡಿದ, ದ್ರವ್ಯ, ಪದಾರ್ಥ, ಧರ್ಮ ಕಾರ್ಯವನ್ನು ಆಚರಿಸುವ, ಧಾರ್ಮಿಕ(ಸುಪಾ)

ಧಮ್ಮಿ. ಪು: [ಧರ್ಮಿನ್] ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಪಕ್ಷ, ಗುಂಪು

ಧಮ್ಮಿಅ}. ವಿ: [ಧಾರ್ಮಿಕ] ಧರ್ಮ ಪರಾಯಣ,

ಧಮ್ಮಿಗ}. ಧರ್ಮವನ್ನು ಆಚರಿಸುವ, ಧರ್ಮ –ಸಂಬಂಧಿಯಾದ ಧಾರ್ಮಿಕ–ಸಂಬಂಧಿಯಾದ

ಧಮ್ಮಿಟ್ಠ. ವಿ: [ಧರ್ಮಿಷ್ಠ] ಧರ್ಮಾತ್ಮ, ಅತಿಹೆಚ್ಚು ಧರ್ಮಸ್ವಭಾವದ(ಔಪ)

ಧಮ್ಮಿಟ್ಠ. ವಿ: [ಧರ್ಮೇಷ್ಟ] ಧರ್ಮ –ಪರಾಯಣ(ಔಪ)

ಧಮ್ಮಿಟ್ಠ. ವಿ: [ಧರ್ಮೇಷ್ಟ] ಧಾರ್ಮಿಕ ಜನರಿಗೆ ಹೆಚ್ಚು ಪ್ರಿಯನಾದವನು.(ಔಪ)

ಧಮ್ಮಿಲ್ಲ.} ಪುಂನ: [ಧಮ್ಮಿಲ್ಲ] ಒಟ್ಟು ಗೂಡಿಸಿದ

ಧಮ್ಮೆಲ್ಲ}. ಕೂದಲು, ಮುಡಿ, ಕಟ್ಟಿದ ಕೇಶ. **ಪು:** ಒಬ್ಬ ಜೈನ ಮುನಿ

ಧಮ್ಮೀಸರ. ಪು: [ಧರ್ಮೇಶ್ವರ] ಕಳೆದುಹೋದ ಉತ್ಸರ್ಪಿಣೀ ಕಾಲದಲ್ಲಿ ಭರತ ವರ್ಷದಲ್ಲಿ ಹುಟ್ಟಿದ ಒಬ್ಬ ಜಿನ –ದೇವ(ಪವ)

ಧಮ್ಮುತ್ತರ. ವಿ: [ಧರ್ಮೋತ್ತರ] ಗುಣಗಳಿಂದ ಶ್ರೇಷ್ಠನಾದವನು, ಗುಣವಂತ, **ನ:** ಧರ್ಮದ ಪ್ರಾಧಾನ್ಯ

ಧಮ್ಮೋವಏಸಗ}. ವಿ: [ಧರ್ಮೋಪದೇಶಕ]

ಧಮ್ಮೋವಏಸಯ}. ಧರ್ಮವನ್ನು ಉಪದೇಶಿಸುವವನು (ಸುಪಾ)

ಧಯ. ಸಕ: [ಧೇ] ಕುಡಿ, ಸ್ತನ –ಪಾನ ಮಾಡು

ಧಯ. ಪುಂಸ್ತ್ರೀ: [ಧ್ವಜ] ಬಾವುಟ, ಪತಾಕೆ(ಣಾಯಾ). **–ವಡ. ಪು: [–ಪಟ]** ಬಾವುಟದ ಬಟ್ಟೆ.

ಧಯ. ಪು: [ದೇ] ಗಂಡಸು, ಪುರುಷ(ದೇ)

ಧಯಣ. ನ: [ದೇ] ಮನೆ, ಗೃಹ

ಧಯರಟ್ಠ. ಪು: [ಧೃತರಾಷ್ಟ್ರ] ಹಂಸ ಪಕ್ಷಿ(ಪಾಅ)

ಧರ. ಸಕ: [ಧೃ] ಧರಿಸು, ಹಿಡಿದುಕೊಳ್ಳು, **ವ.ಕೃ –'ಧರಂತ, ಧರಮಾಣ**

ಧರ. ಸಕ: [ಧರಯ್] ಭೂಮಿಯನ್ನು ಪಾಲಿಸು(ಸುರ)

ಧರ. ನ: [ದೇ] ಹತ್ತಿ(ದೇ)

ಧರ. ಪು: [ಧರ] ಭಗವಾನ್ ಪದ್ಮಪ್ರಭನ ತಂದೆ. ಮಥುರಾ ನಗರಿಯ ಒಬ್ಬ ರಾಜ(ಣಾಯಾ), ಪರ್ವತ, ಬೆಟ್ಟ

–ಧರ. ವಿ: [–ಧರ] ಧಾರಣ ಮಾಡುವವನು, ಧರಿಸುವವನು

ಧರಗ್ಗ. ಪು: [ದೇ] ಹತ್ತಿ

ಧರಣ. ಪು: [ಧರಣ] ನಾಗಕುಮಾರ ದೇವತೆಗಳ ದಕ್ಷಿಣ ದಿಕ್ಕಿನ ಇಂದ್ರ(ಠಾ), ಯದುವಂಶದ ದೊರೆ ಅಂಧಕವೃಷ್ಣಿಯ ಒಬ್ಬ ಮಗ(ಅಂತ). ಒಬ್ಬ ಶ್ರೇಷ್ಠಿ,(ಉಪ). **ನ:** ಧಾರಣ ಮಾಡುವುದು, ಧರಿಸುವುದು. –೬ ತೊಲಗಳ ಒಂದು ಅಳತೆ (ಜೋ). ಉಪವಾಸ ಪೂರ್ವಕವಾಗಿ ಧರಣಿ ಕುಳಿತುಕೊಳ್ಳುವುದು, ತೂಕಮಾಡುವ ಸಾಧನ, **ವಿ:** ಧಾರಣ ಮಾಡುವವನು, ಧರಿಸುವವನು. **–ಪ್ಪಭ. ಪು: [–ಪ್ರಭ]** ಧರಣೀಂದ್ರನ ಉತ್ಪಾತಕ್ಕೆ ಕಾರಣವಾದ ಪರ್ವತ.

ಧರಣಾ. ಸ್ತ್ರೀ: [ಧರಣಾ] 'ಧಾರಣಾ' ಶಬ್ದವನ್ನು ನೋಡುವುದು.

ಧರಣಿ. ಸ್ತ್ರೀ: [ಧರಣೀ] ಭೂಮಿ, ಪೃಥ್ವಿ(ಕುಮಾ), ಭಗವಾನ್ ಅರನಾಥನ ಶಾಸನ ದೇವಿ. ಭಗವಾನ್ ವಾಸುಪೂಜ್ಯರ ಪ್ರಥಮ ಶಿಷ್ಯೆ(ಪವ), **–ಖೀಲ. ಪು: [–ಕೀಲ]** ಮೇರು ಪರ್ವತ, **–ಚರ. ಪು: [–ಚರ]** ಮನುಷ್ಯ(ಪಉಮ) **–ಧರ. ಪು: [–ಧರ]** ಪರ್ವತ, ಬೆಟ್ಟ, ಅಯೋಧ್ಯಾ ನಗರದ ಒಬ್ಬ

ಸೂರ್ಯವಂಶೀಯ ರಾಜ. **-ಧರಪ್ಪವರ. ಪು:** [**-ಧರಪ್ರವರ**] ಮೇರು -ಪರ್ವತ. **-ಧರವಇ. ಪು:** [**-ಧರಪತಿ**] ಮೇರುಪರ್ವತ. **-ಧರಾ. ಸ್ತ್ರೀ:**[**-ಧರಾ**] ಭಗವಾನ್ ವಿಮಲನಾಥನ ಪ್ರಥಮ ಶಿಷ್ಯೆ. **-ಯಲ. ನ:** [**-ತಲ**] ಭೂತಲ(ಣಾಯಾ). **-ವಇ. ಪು:** [**-ಪತಿ**] ಭೂಪತಿ, ದೊರೆ. **-ವಟ್ಟ. ನ:** [**-ಪೃಷ್ಠ**] ಭೂ -ಪೀಠ, ಭೂತಲ. **-ಹರ. '-ಧರ' ಶಬ್ದವನ್ನು ನೋಡುವುದು.**

ಧರಣೆಂದ. ಪು: [**ಧರಣೇಂದ್ರ**] ನಾಗಕುಮಾರರ ದಕ್ಷಿಣ ದಿಕ್ಕಿನ ಇಂದ್ರ(ಪಉಮ).

ಧರಣಿಸಿಂಗ. ಪು: [**ಧರಣಿಶೃಂಗ**] ಮೇರು ಪರ್ವತ

ಧರಣೀ. 'ಧರಣಿ' ಶಬ್ದವನ್ನು ನೋಡುವುದು.

ಧರಾ. ಸ್ತ್ರೀ: [**ಧರಾ**] ಭೂಮಿ, ಪೃಥ್ವಿ(ಗಉಡ). **-ಧರ, ಹರ. ಪು:** [**-ಧರ**] ಪರ್ವತ, ಬೆಟ್ಟ

ಧರಾಧೀಸ. ಪು: [**ಧರಾಧೀಶ**] ರಾಜ

ಧರಾವಿಅ. ವಿ: [**ಧಾರಿತ**] ಹಿಡಿಯಲ್ಪಟ್ಟ, ಸ್ಥಾಪಿಸಲ್ಪಟ್ಟ, ಇರಿಸಲ್ಪಟ್ಟ

ಧರಿಅ. ವಿ: [**ಧೃತ**] ಧರಿಸಲ್ಪಟ್ಟ, ತಡೆಯಲ್ಪಟ್ಟ

ಧರಿಜ್ಜಂತ}. 'ಧರ=ಧೃ' ಶಬ್ದವನ್ನು ನೋಡುವುದು.

ಧರಿಜ್ಜಮಾಣ}.

ಧರಿಣೀ. ಸ್ತ್ರೀ: [**ಧಾರಿಣೀ**] ಪೃಥ್ವಿ, ಭೂಮಿ(ಪಾಅ)

ಧರಿತ್ತೀ. ಸ್ತ್ರೀ: [**ಧರಿತ್ರೀ**] ಪೃಥ್ವಿ, ಭೂಮಿ.

ಧರಿಮ. ನ: [**ಧರಿಮ**] ತಕ್ಕಡಿಯಲ್ಲಿ ತೂಕಮಾಡಿ ಮಾರಬಹುದಾದ್ದು, ಸಾಲ(ಣಾಯಾ), ಒಂದು ಬಗೆಯ ಅಳತೆ, ತೂಕ(ಜೋ)

ಧರಿಯವ್ವ. 'ಧರ=ಧೃ' ಶಬ್ದವನ್ನು ನೋಡುವುದು.

ಧರಿಸ. ಅಕ: [**ಧೃಷ್**] ಒಟ್ಟುಗೂಡು, ದಿಟ್ಟತನ ತೋರು, ಧೈರ್ಯ, ಸಾಹಸ ತೋರು, ಸೇರು, ಜೊತೆಗೂಡು. **ಸಕ:** ಹಿಂಸಿಸು, ಅಸಹನೆ ತೋರು

ಧರಿಸ. ಸಕ: [**ಧರ್ಷಂಯ್**] ಕ್ಷುಬ್ಧಗೊಳಿಸು, ವಿಚಲಿತಗೊಳಿಸು, ಕಲಕು

ಧರಿಸಣ. ನ: [**ಧರ್ಷಣ**] ಅವಮಾನ, ಸಮೂಹ, ಗುಂಪು, ಅಸಹನೆ, ಕೋಪ, ಹಿಂಸೆ, ಕಟ್ಟುವುದು, ಧಾರ್ಷ್ಟ್ಯ, ದಿಟ್ಟತನ(ಔಪ)

ಧರಂತ. 'ಧರ=ಧೃ' ಶಬ್ದವನ್ನು ನೋಡುವುದು.

ಧವ. ಪು: [**ಧವ**] ಪತಿ, ಯಜಮಾನ(ವವ), ಒಂದು ವೃಕ್ಷ(ಪಣ್ಣ)

ಧವಕ್ಕ. ಅಕ: [**ದೇ**] ಹೆದರು, ಗಾಬರಿಗೊಳ್ಳು, ಭಯದಿಂದ ಚಿಂತಿತನಾಗು, ಡವಗುಟ್ಟು

ಧವಕ್ಕಿಯ. ವಿ: [**ದೇ**] ಹೆದರಿದ, ಭಯದಿಂದ ವ್ಯಗ್ರನಾದ

ಧವಣ. ನ: [**ಧಾವನ**] ತೊಳೆಯುವುದು, ಶುದ್ಧಮಾಡುವುದು, ಅಕ್ಕಿತೊಳೆದ ನೀರು; ಕಲಗಚ್ಚು

ಧವಲ. ಪು: [**ದೇ**] ಸ್ವಜಾತಿಯಲ್ಲಿ ಉತ್ತಮ(ದೇ)

ಧವಲ. ನ: [**ಧವಲ**] ನಿರಂತರ ಹದಿನಾರು ದಿನಗಳ ಉಪವಾಸ

ಧವಲ. ವಿ: [**ಧವಲ**] ಬಿಳಿಯ, ಬಿಳುಪಾದ, ಶ್ವೇತ, **ಪು:** ದೊಡ್ಡ ಎತ್ತು, **ಪುಂನ:** ಒಂದು ಛಂದಸ್ಸು. **-ಗಿರಿ. ಪು:** [**-ಗಿರಿ**] ಕೈಲಾಸ ಪರ್ವತ. **-ಗೇಹ. ನ:** [**-ಗೇಹ**] ಉಪ್ಪರಿಗೆಯ ಮಹಲು. **-ಚಂದ. ಪು:** [**-ಚಂದ್ರ**] ಒಬ್ಬ ಜೈನ ಮುನಿ. **-ರವ. ಪು:** [**-ರವ**] ಮಂಗಳ ಗೀತೆ(ಸುಪಾ). **-ಹರ. ನ:** [**-ಗೃಹ**] ಉಪ್ಪರಿಗೆಯ ಮನೆ.

ಧವಲ. ಸಕ: [**ಧವಲಯ್**] ಸ್ವಚ್ಛಗೊಳಿಸು, ಶುಭ್ರಗೊಳಿಸು, ಬೆಳ್ಳಗೆ ಮಾಡು

ಧವಲಕ್ಕ. ನ: [**ಧವಲಾರ್ಕ**] ಈಗ **ಧೋಲಕಾ'** ಎಂದು ಕರೆಯಲ್ಪಡುವ ಗುಜರಾತಿನ ಒಂದು ಗ್ರಾಮ.

ಧವಲಣ. ನ: [**ಧವಲನ**] ಬೆಳ್ಳಗೆ ಮಾಡುವುದು (ಕುಮಾ)

ಧವಲಸಉಣ. ಪು: [**ದೇ**] ಹಂಸ.

ಧವಲಾ. ಸ್ತ್ರೀ: [**ಧವಲಾ**] ಹಸು

ಧವಲಾಅ. ಅಕ: [**ಧವಲಾಯ್**] ಬಿಳಿದಾಗು, ಬೆಳ್ಳಗಾಗು

ಧವಲಾಇಅ. ವಿ: [**ಧವಲಾಯಿತ**] ಶ್ರೇಷ್ಠ(ದೊಡ್ಡ) ಎತ್ತಿನ ಹಾಗೆ ದುಡಿದವನು. **ನ:** ಶ್ರೇಷ್ಠ ಎತ್ತಿನ ಹಾಗೆ ನಡೆದುಕೊಳ್ಳುವುದು.

ಧವಲಿಮ. ಪುಂಸ್ತ್ರೀ: [**ಧವಲಿಮನ್**] ಬಿಳುಪು, ಶುಕ್ಲಗುಣ (ಸುಪಾ)

ಧವಲಿಅ. ವಿ: [**ಧವಲಿತ**] ಬಿಳಿದಾಗಿಸಲ್ಪಟ್ಟ(ಭವಿ)

ಧವಲೀ. ಸ್ತ್ರೀ: [**ಧವಲೀ**] ಶ್ರೇಷ್ಠ ಹಸು, ಬಿಳಿಯ ಹಸು(ಗಉಡ)

ಧವ್ವ. ಪು: [**ದೇ**] ವೇಗ(ದೇ)

ಧಸ. ಅಕ: [**ಧಸ್**] ಕೆಳಕ್ಕೆ ಸರಿ, ಪ್ರವೇಶಿಸು, ಹೋಗು

ಧಸ. ಪು: [**ಧಸ್**] **'ಧಸ್'** ಎಂಬ ಶಬ್ದ, ಸದ್ದು. ಬೀಳುವ ಸದ್ದು

ಧಸಕ್ಕ. ಪು: [ದೇ] ಎದೆಯ **'ಡವಡವ'** ಶಬ್ದ. ಗಾಬರಿಯಿಂದ ಹೃದಯ ಹೊಡೆದುಕೊಳ್ಳುವ ಶಬ್ದ.
ಧಸಕ್ಕಿಅ. ವಿ: [ದೇ] ಪೂರ್ತಿ ಗಾಬರಿಗೊಂಡಿರುವ, ಹೆದರಿಬಿಟ್ಟಿರುವ
ಧಸಲ. ವಿ: [ದೇ] ವಿಸ್ತೀರ್ಣವಾದ, ಅಗಲವಾದ
ಧಸಿಅ. ವಿ: [ಧಸಿತ] ಕುಸಿದ, ಕೆಳಕ್ಕೆ ಸೇರಿಹೋದ
ಧಾ. ಸಕ: [**ಧಾ**] ಧಾರಣ ಮಾಡುವುದು, ಧರಿಸುವುದು.
ಧಾ. ಸಕ: [**ಧ್ಯೈ**] ಧ್ಯಾನಿಸು, ಚಿಂತಿಸು
ಧಾ. ಸಕ: [**ಧಾವ್**] ಓಡು, ಶುದ್ಧ ಮಾಡು, ತೊಳೆ, ಬಟ್ಟೆ ಒಗೆ
ಧಾಇಅ. ವಿ: [**ಧಾವಿತ**] ಓಡಿಸಲ್ಪಟ್ಟ(ಭವಿ), ತೊಳೆಯಿಸಲ್ಪಟ್ಟ
ಧಾಈ. 'ಧತ್ತೀ' ಶಬ್ದವನ್ನು ನೋಡುವುದು. ದಾದಿಯ ಕೆಲಸ ಮಾಡುವ ಮೂಲಕ ದೊರಕಿಸಿದ ಭಿಕ್ಷೆ. ಒಂದು ಛಂದಸ್ಸು. **–ಪಿಂಡ. ಪು:** [**ಪಿಂಡ**]ದಾದಿಯ ಕೆಲಸ ಮಾಡುವ ಮೂಲಕ ದೊರಕಿಸಿದ ಭಿಕ್ಷೆ.
ಧಾಈ. 'ಧಾಯಈ' ಶಬ್ದವನ್ನು ನೋಡುವುದು
ಧಾಉ. ಪು: [**ಧಾತು**] ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ, ಸತು ಮತ್ತು ತವರ ಈ ಏಳು ವಸ್ತುಗಳು. ಕಪ್ಪು ಮಣ್ಣು, 'ಮನಸಿಲ್'? ಮೊದಲಾದ ಪದಾರ್ಥಗಳು. ವಾತ, ಪಿತ್ಥ, ಕಫ, ರಸ, ರಕ್ತ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜೆ, ಮತ್ತು ಶುಕ್ರವೇ ಮೊದಲಾದ ಶರೀರ ಧಾರಕ ವಸ್ತುಗಳು(ವಪ). ಭೂಮಿ, ನೀರು, ಬೆಂಕಿ, ಮತ್ತು ಗಾಳಿ ಈ ನಾಲ್ಕು ಮಹಾಭೂತಗಳು, ವ್ಯಾಕರಣದಲ್ಲಿ ಪ್ರಸಿದ್ಧವಾದ ಅರ್ಥಾತ್ 'ಮ' 'ಪಚ್' ಇತ್ಯಾದಿ ಶಬ್ದಗಳು. ಸ್ವಭಾವ, ನಾಟ್ಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಆಲಕ್ತಿಕೆ (ಕುಮಾ). **–ಯ. ವಿ:** [**–ಜ**] ಧಾತುವಿನಿಂದ ಉತ್ಪನ್ನವಾದ, ವಸ್ತು –ವಿಶೇಷ, ನಾಮ, ಶಬ್ದ (ಅಣು). **–ವಾಇಅ. ವಿ:** [**–ವಾದಿಕ**] ಓಷಧಿ ಮೊದಲಾದವನ್ನು ಸೇರಿಸಿ ತಾಮ್ರವೇ ಮೊದಲಾದ ಲೋಹಗಳನ್ನು ಚಿನ್ನ, ಬೆಳ್ಳಿಯಾಗಿ ಮಾರ್ಪಡಿಸುವವನು ಕಿಮಿಯಾಗಾರ
ಧಾಉ. ಪು: [**ಧಾತೃ**] **'ಪಣಪಿನ್ನ'** ಎಂಬ ವ್ಯಂತರ ದೇವತೆಗಳ ಒಬ್ಬ ಇಂದ್ರ(ತಾ)
ಧಾಉಸೋಸಣ. ನ: [**ಧಾತುಶೋಷಣ**] ಆಯಂಬಿಲ ತಪಸ್ಸು

ಧಾಡ. ಅಕ: [**ನಿರ್ +ಸೃ**] ಹೊರಕ್ಕೆ ಹೊರಡು
ಧಾಡ. ಸಕ: [**ನಿರ್ +ಸಾರಯ್**] ಹೊರಹಾಕು
ಧಾಡ. ಸಕ: [**ಧ್ರಾಟ್**] ಪ್ರೇರಿಸು, ನಾಶ ಮಾಡು
ಧಾಡಣ. ನ: [**ಧ್ರಾಟನ**] ಪ್ರೇರಣೆ, ನಾಶ(ಔಪ), ಹೊರಗೆ ಹಾಕುವುದು, ಹೊರತೆಗೆ
ಧಾಡಯ. ವಿ: [**ದೇ. ಧ್ರಾಟಕ**] ಕನ್ನ ಹಾಕುವವನು, ದರೋಡೆ ಮಾಡಿದ
ಧಾಡಾವಿಅ. ವಿ: [**ನಿಸ್ಸಾರಿತ**] ಹೊರಹಾಕಲ್ಪಟ್ಟ, ದೇಶದಿಂದ ಹೊರ ಹಾಕಲ್ಪಟ್ಟ(ಪಉಮ)
ಧಾಡಿ. ವಿ: [**ದೇ**] ನಿರಾಕರಿಸಲ್ಪಟ್ಟ, ಹೊರದೂಡಲ್ಪಟ್ಟ (ದೇ), ತಿರಸ್ಕರಿಸಲ್ಪಟ್ಟ
ಧಾಡಿಅ. ವಿ: [**ನಿಃಸೃತ**] ಹೊರದೂಡಲ್ಪಟ್ಟವನು, ಹೊರಹಾಕಲ್ಪಟ್ಟವನು(ಕುಮಾ)
ಧಾಡಿಅ. ಪು: [**ದೇ**] ತೋಟ, ಉದ್ಯಾನ(ದೇ)
ಧಾಡಿಅ. ವಿ: [**ನಿಸ್ಸಾರಿತ**] ಹೊರಹಾಕಲ್ಪಟ್ಟ, ದೇಶದಿಂದ ಹೊರ ಹಾಕಲ್ಪಟ್ಟ(ಪಉಮ)
ಧಾಡೀ. ಸ್ತ್ರೀ: [**ಧಾಟೀ**] ಕಳ್ಳರ ಗುಂಪು, ಆಕ್ರಮಣ, ಮುತ್ತಿಗೆ(ಕಪ್ಪೂ)
ಧಾಣ. 'ಧಣ್ಣ=ಧನ್ಯ' ಶಬ್ದವನ್ನು ನೋಡುವುದು
ಧಾಣಾ. ಸ್ತ್ರೀ: [**ಧಾನಾ**] ಧನಿಯ, ಕೊತ್ತಂಬರಿ ಬೀಜ(ದೇ)
ಧಾಣುಕ್ಕ. ವಿ: [**ಧಾನುಷ್ಕ**] ಬಿಲ್ಗಾರ, ಧನುರ್ವಿದ್ಯೆಯಲ್ಲಿ ನಿಪುಣ(ವೇಣೀ)
ಧಾಣೂರಿಅ. ನ: [**ದೇ**] ಫಲ –ಭೇದ
ಧಾಮ. ಪುಂನ: [**ಧಾಮನ್**] ಅಹಂಕಾರ, ಗರ್ವ, ರಸದಲ್ಲಿ ಅತಿ ಪ್ರೀತಿ ಇರುವುದು, **ವಿ:** ಗರ್ವಿ, ರಸ ಲಂಪಟ
ಧಾಮ. ನ: [**ಧಾಮನ್**] ಬಲ, ಪರಾಕ್ರಮ(ಆರಾ)
ಧಾಯ. ವಿ: [**ಧ್ರಾತ**] ತೃಪ್ತ, ಸಂತುಷ್ಟ(ಓಘ) **ನ:** ಸುಭಿಕ್ಷ, ಒಳ್ಳೆಯ ಕಾಲ(ಬೃಹ)
ಧಾಯಇ–.}. ಸ್ತ್ರೀ: [**ಧಾತಕೀ**] ಮರಾಟಿ ಮೊಗ್ಗು
ಧಾಯಈ}.(ಪಣ್ಣ), **–ಖಂಡ. ಪು:** [**–ಖಂಡ**] ತನ್ನ ಹೆಸರಿನಿಂದ ಖ್ಯಾತವಾದ ಒಂದು ದ್ವೀಪ. **–ಸಂಡ. ಪು:** [**–ಷಂಡ**] ಒಂದು ಹೆಸರಾಂತ ದ್ವೀಪ
ಧಾರ. ಸಕ: [**ಧಾರಯ್**] ಧರಿಸು, ಧಾರಣ ಮಾಡು. ಸಾಲವನ್ನು ಇಟ್ಟುಕೊಳ್ಳು. **ವ. ಕೃ: 'ಧಾರಂತ', 'ಧಾರಅಂತ'**

ಧಾರ. ನ: [ಧಾರ] ಧಾರೆಗೆ(ಪ್ರವಾಹ, ಹರಿವು) ಸಂಬಂಧಿಸಿದ ನೀರು, ವಿ: ಧಾರಣ ಮಾಡುವವನು, ಧರಿಸುವವನು

ಧಾರ. ವಿ: [ದೇ] ಸಣ್ಣ, ಚಿಕ್ಕ(ದೇ)

ಧಾರಗ. ವಿ: [ಧಾರಕ] ಧರಿಸುವವನು, ಧಾರಣ ಮಾಡುವವನು(ಉಪ)

ಧಾರಣ. ನ: [ಧಾರಣ] ಧರಿಸುವ ಸ್ಥಿತಿ; ಹಂತ, ಸ್ವೀಕರಿಸುವುದು, ರಕ್ಷಿಸುವುದು, ರಕ್ಷಣೆ., ವಸ್ತ್ರ ಧರಿಸುವುದು. ಆಶ್ರಯ, ಆಧಾರ(ಔಪ).

ಧಾರಣಾ. ಸ್ತ್ರೀ: [ಧಾರಣಾ] ಮರ್ಯಾದೆ, ಸ್ಥಿತಿ, ವಿಷಯವನ್ನು ಗ್ರಹಿಸುವ ಬುದ್ಧಿ(ಠಾ), ವಿಷಯವನ್ನು ಗ್ರಹಿಸಿ ನೆನಪಿಟ್ಟುಕೊಳ್ಳವುದು, ಅವಧಾರಣೆ, ನಿಶ್ಚಯ(ಆವಮ), ಮನಸ್ಸಿನ ಸ್ಥಿರತೆ, ಮನೆಯ ಕಂಬ, **–ವವಹಾರ.** ಪು: [–ವ್ಯವಹಾರ]ವ್ಯವಹಾರ –ವಿಶೇಷ(ಠಾ)

ಧಾರಣಿಜ್ಜ. 'ಧರ=ಧಾರಯ್' ಶಬ್ದವನ್ನು ನೋಡುವುದು

ಧಾರಣೀ. ಸ್ತ್ರೀ: [ಧಾರಣೀ] ಧಾರಣೆ ಮಾಡುವವಳು (ಔಪ), –೧೧–ನೇ ಜಿನದೇವನ ಮೊದಲ ಶಿಷ್ಯೆ, ವಸುದೇವನೇ ಮೊದಲಾದ ಅನೇಕ ರಾಜರುಗಳ ರಾಣಿಯರ ಹೆಸರು(ಆಚಾ)

ಧಾರಣೀಯ. 'ಧಾರ=ಧಾರಯ್' ಶಬ್ದವನ್ನು ನೋಡುವುದು

ಧಾರಯ. 'ಧಾರಗ' ಶಬ್ದವನ್ನು ನೋಡುವುದು (ಓಘ)

ಧಾರಾ. ಸ್ತ್ರೀ: [ದೇ] ರಣ ಭೂಮಿಯ ಮುಂಭಾಗ(ದೇ), ಮಾಲವ ದೇಶದ ಒಂದು ನಗರ.

ಧಾರಾ. ಸ್ತ್ರೀ: [ಧಾರಾ] ಚಾಕು, ಕತ್ತಿ ಇತ್ಯಾದಿ ಆಯುಧಗಳ ಹರಿತವಾದ ಅಲಗು(ಗಉಡ), ಪ್ರವಾಹ, ಕುದುರೆಯ ವೇಗವಾದ ನಡಿಗೆ(ಕುಮಾ), ನೀರಿನ ಧಾರೆ, ದ್ರವ ವಸ್ತುಗಳ ಹರಿವು, ಮಳೆ, ಒಬ್ಬ ರಾಜನಹೆಂಡತಿ(ಆವಮ). **–ಕಯಂಬ.** ಪು: [–ಕದಂಬ] ಮಳೆಯಿಂದ ಪುಷ್ಟವಾಗಿ ಬೆಳೆದು ಫಲಬಿಡುವ ಕದಂಬ ವೃಕ್ಷದ ಒಂದು ಭೇದ. **–ಧರ.** ಪು: [–ಧರ] ಮೇಘ, ಮೋಡ. **–ವಾರಿ.** ನ: [–ವಾರಿ] ಧಾರೆಯಿಂದ ಬೀಳುವ ನೀರು(ಭಗ). **–ವಾರಿಯ.** ವಿ: [–ವಾರಿಕ] ಧಾರೆಯಿಂದ ನೀರು ಬೀಳುವ ಸ್ಥಳ. **–ಹಯ.** ವಿ: [–ಹತ] ಮಳೆಯಿಂದ ತೊಯ್ದ, **–ಹರ. '–ಧರ' ಶಬ್ದವನ್ನು ನೋಡುವುದು**

ಧಾರಾವಾಸ. ಪು: [ದೇ] ಕಪ್ಪೆ(ದೇ), ಮೋಡ

ಧಾರಿ. ವಿ: [ಧಾರಿನ್] ಧಾರಣ ಮಾಡುವವನು, ಧರಿಸುವವನು(ಕಪ್ಪ)

ದಾರಿಟ್ಠ. ನ: [ಧಾರ್ಷ್ಟ್ಯ] ದಿಟ್ಟತನ, ಉದ್ದಂಡತನ, ಗರ್ವ, ಸಾಹಸ.

ಧಾರಿತ. 'ಧಾರ=ಧಾರಯ್' ಶಬ್ದವನ್ನು ನೋಡುವುದು

ಧಾರಿಣೀ. 'ಧಾರಣೀ' ಶಬ್ದವನ್ನು ನೋಡುವುದು(ಔಪ)

ಧಾರಿತ್ತಏ. 'ಧರ=ಧಾರಯ್' ಶಬ್ದವನ್ನು ನೋಡುವುದು

ದಾರಿಯ. ವಿ: [ಧಾರಿತ] ಧಾರಣೆ ಮಾಡಲ್ಪಟ್ಟ(ಭವಿ)

ಧಾರೀ. 'ಧತ್ತೀ' ಶಬ್ದವನ್ನು ನೋಡುವುದು

ಧಾರೀ. 'ಧಾರಾ' ಶಬ್ದವನ್ನು ನೋಡುವುದು

ಧಾರೆತ್ತಏ.} 'ಧಾರ=ಧಾರಯ್' ಶಬ್ದವನ್ನು
ಧಾರೇಯವ್ವ}. ನೋಡುವುದು

ಧಾವ. ಸಕ: [ಧಾವ್] ಓಡು, ತೊಳೆ, ಸ್ವಚ್ಛಗೊಳಿಸು

ಧಾವಣ. ನ: [ಧಾವನ] ಓಡುವುದು(ಸೂಅ), ತೊಳೆಯುವುದು

ಧಾವಣಯ. ಪು: [ಧಾವನಕ] ಓಡುತ್ತ ಸುದ್ದಿಯನ್ನು ತಲುಪಿಸುವ ಕೆಲಸಮಾಡುವವನು, ಹರಿಕಾರ (ಸುಪಾ)

ಧಾವಣಯಾ. ಸ್ತ್ರೀ: [ಧಾನ] ಸ್ತನ –ಪಾನ ಮಾಡುವುದು, ಮೊಲೆಹಾಲು ಕುಡಿಯುವುದು

ಧಾವಿಅ. ವಿ: [ಧಾವಿತ] ಓಡಿಸಲ್ಪಟ್ಟ, ಶುದ್ಧಿ ಮಾಡಿಸಲ್ಪಟ್ಟ

ಧಾವಿರ. ವಿ: [ಧಾವಿತೃ] ಓಡುವವನು(ಸುಪಾ)

ಧಾವೀ. 'ಧಾಈ=ಧಾತ್ರೀ' ಶಬ್ದವನ್ನು ನೋಡುವುದು

ಧಾಹಾ. ಸ್ತ್ರೀ: [ದೇ] ಚೀರುವಿಕೆ, ಕೂಗಾಟ, ಚೀರಾಟ (ಪಉಮ)

ಧಾಹಾವಿಅ. ನ: [ದೇ] **ಮೇಲಿನ ಶಬ್ದವನ್ನು ನೋಡುವುದು**

ಧಾಹಿಯ. ವಿ: [ದೇ] ಓಡಿಹೋದವನು(ಧಮ್ಮ)

ಧಿ. ಅ: [ಧಿಕ್] ಧಿಕ್ಕಾರ, ಛೀಕಾರ

ಧಿಇ. ಸ್ತ್ರೀ: [ಧೃತಿ] ಧೈರ್ಯ, ಧರಿಸುವುದು, ತಿಳಿದಿರುವ ವಿಷಯವನ್ನು ನೆನಪಿಟ್ಟುಕೊಳ್ಳುವುದು ಸ್ಥಿತಿ, ಅಹಿಂಸೆ(ಪಣ್ಣ), ಧೈರ್ಯಕ್ಕೆ ಆಶ್ರಯವಾದ ದೇವಿ, ದೇವಿಯ ಪ್ರತಿಮಾ –ವಿಶೇಷ(ಣಾಯಾ), ತಿಗಿಚ್ಛಿ ಸರೋವರದ ಸ್ಥಾಪಕ ದೇವಿ(ಠಾ) **–ಕೂಡ.** ನ: [–ಕೂಟ] **'ಧೃತಿ'** ಎಂಬ ದೇವಿ ವಾಸಿಸುವ ಶಿಖರ,

–ಧರ. ಪು: [–ಧರ] ಒಬ್ಬ ಅಂತ್ಯಕಾರಕ ಋಷಿ. 'ಅಂತಗಡ –ದಸಾ' ಸೂತ್ರದ ಒಂದು ಅಧ್ಯಯನ. –ಮ, –ಮಂತ. ವಿ: [–ಮತ್] ಧೈರ್ಯಶಾಲಿ (ತಾ)

ಧಿಇ. ಸ್ತ್ರೀ: [ಧೃತಿ] ನಿರಂತರ ಮೂರು ದಿನಗಳ ಉಪವಾಸ

ಧಿಕ್ಕಯ. ವಿ: [ಧಿಕ್ಕೃತ] ಧಿಕ್ಕರಿಸಲ್ಪಟ್ಟ, ನ: ಧಿಕ್ಕಾರ, ತಿರಸ್ಕಾರ(ಬೃಹ)

ಧಿಕ್ಕರಣ. ನ: [ಧಿಕ್ಕರಣ] ಧಿಕ್ಕಾರ, ತಿರಸ್ಕಾರ

–ಧಿಕ್ಕರಿಅ. ವಿ: [ಧಿಕ್ಕೃತ] ಧಿಕ್ಕರಿಸಲ್ಪಟ್ಟವನು(ಕುಪ್ರ)

ಧಿಕ್ಕಾರ. ಪು: [ಧಿಕ್ಕಾರ] ಧಿಕ್ಕಾರ, ತಿರಸ್ಕಾರ(ಪಣ್ಣ), ಯುಗಲಿಕ ಮನುಷ್ಯರ ಕಾಲದ(ತಾ) ಒಂದು ದಂಡ –ನೀತಿ(?)

ಧಿಕ್ಕಾರ. ಸಕ: [ಧಿಕ್ +ಕಾರಯ್] ಧಿಕ್ಕರಿಸು, ತಿರಸ್ಕರಿಸು

ಧಿಜ್ಜ. ನ: [ಧೈರ್ಯ] ಧೈರ್ಯ, ಧೃತಿ

ಧಿಜ್ಜ.ವಿ: [ಧೇಯ] ಧರಿಸಲು ಯೋಗ್ಯವಾದ(ಣಾಯಾ)

ಧಿಜ್ಜ. ವಿ: [ಧ್ಯೇಯ] ಧ್ಯಾನಿಸಲು ಅರ್ಹವಾದ, ಚಿಂತನೀಯವಾದ(ಣಾಯಾ)

ಧಿಜ್ಜಾಇ. ಪುಂಸ್ತ್ರೀ: [ದ್ವಿಜಾತಿ,ಧಿಗ್ಜಾತಿ] ಬ್ರಾಹ್ಮಣ, ವಿಪ್ರ

ಧಿಜ್ಜಾಇಯ}. ಪುಂಸ್ತ್ರೀ: [ದ್ವಿಜಾತಿಕ, ಧಿಗ್ಜಾತೀಯ]

ಧಿಜ್ಜಾಈಯ}. ಮೇಲಿನ ಶಬ್ದವನ್ನು ನೋಡುವುದು

ಧಿಜ್ಜೀವಿಯ. ನ: [ಧಿಗ್ಜೀವಿತ] ನಿಂದನೀಯವಾದ ಜೀವನ(ಸೂಅ)

ಧಿಟ್ಠ. ವಿ: [ಧೃಷ್ಟ] ಧೈರ್ಯಶಾಲಿ, ನಿರ್ಲಜ್ಜ(ಗಾ)

ಧಿಟ್ಠಜ್ಜುಣ್ಣ. 'ಧಟುಜ್ಜುಣ್ಣ' ಶಬ್ದವನ್ನು ನೋಡುವುದು

ಧಿಟ್ಠಿಮ. ಪುಂಸ್ತ್ರೀ: [ಧೃಷ್ಟತ್ವ] ದಿಟ್ಟತನ, ಧೈರ್ಯವಂತಿಕೆ (ಸುಪಾ)

ಧಿದ್ಧೀ}. ಅ: [ಧಿಕ್ ಧಿಕ್] ಛೀ ಛೀ

ಧಿಧೀ}.

ಧಿಪ್ಪ. ಅಕ: [ದೀಪ್] ಉರಿಸು,ಪ್ರಕಾಶಗೊಳಿಸು, ಬೆಳಗು

ಧಿಪ್ಪಿರ. ವಿ: [ದೀಪ್ರ] ಬಹಳವಾಗಿ ಪ್ರಕಾಶಿಸುತ್ತಿರುವ (ಕುಮಾ)

ಧಿಯ. ಅ: [ಧಿಕ್] ಧಿಕ್ಕಾರ, ಛೀ(ಉಪ)

ಧಿರತ್ಥು. ಅ: [ಧಿಗಸ್ತು] ಧಿಕ್ಕರವಿರಲಿ(ಮಹಾ)

ಧಿಸಣ. ಪು. [ಧಿಷಣ] ಬೃಹಸ್ಪತಿ, ದೇವಗುರು

ಧಿಸಿ. ಅ: [ಧಿಕ್] ಧಿಕ್ಕಾರ, ಛೀ(ಸುಪಾ)

ಧೀ. 'ಧಿಆ' ಶಬ್ದವನ್ನು ನೋಡುವುದು

ಧೀ. ಸ್ತ್ರೀ: [ಧೀ] ಬುದ್ಧಿ, ಮತಿ(ಪಾಅ). –ಧಣ. ವಿ: [–ಧನ] ಬುದ್ಧಿವಂತ, ವಿದ್ವಾಂಸ. ಧೀಮಂತ, ಪು: ಒಬ್ಬ ಮಂತ್ರಿಯ ಹೆಸರು. –ಮ, –ಮಂತ. ವಿ: [–ಮತ್] ಬುದ್ಧಿವಂತ, ವಿದ್ವಾಂಸ(ಉಪ)

ಧೀ. ಅ: [ಧಿಕ್] ಧಿಕ್ಕಾರ, ಛೀ(ಉವ)

ಧೀಆ. ಸ್ತ್ರೀ: [ದುಹಿತೃ] ಮಗಳು(ಮೃಚ್ಛ)

ಧೀಉಲ್ಲಿಯಾ. ಸ್ತ್ರೀ: [ದೇ] ಬೊಂಬೆ, ಗೊಂಬೆ.

ಧೀಮಲ. ನ: [ಧಿಙ್ಮಲ] ನಿಂದನೀಯವಾದ ಕೊಳೆ,ಮಲ

ಧೀರ. ಅಕ: [ಧೀರಯ್] ಧೈರ್ಯ ತಾಳು, ಸಕ: ಧೈರ್ಯ ಹೇಳು, ಧೈರ್ಯ ತುಂಬು(ಗಉಡ)

ಧೀರ.ವಿ: [ಧೀರ] ಧೈರ್ಯಶಾಲಿ, ಸ್ಥಿರವಾಗಿರುವವನು, ಅಚಲವಾಗಿರುವವನು, ಬುದ್ಧಿವಂತ, ಪಂಡಿತ, ವಿದ್ವಾಂಸ, ವಿವೇಕಿ, ಸಹಿಷ್ಣು(ಸೂಅ), ಪು. ಪರಮೇಶ್ವರ, ಪರಮಾತ್ಮ, ಜಿನದೇವ, ಗಣಧರ –ದೇವ(ಆಚಾ)

ಧೀರ. ನ: [ಧೈರ್ಯ] ಕೆಚ್ಚು, ಧೀರತನ(ಕುಮಾ)

ಧೀರವ. ಸಕ: [ಧೀರಯ್] ಧೈರ್ಯ ತುಂಬು ಆಶ್ವಾಸನೆ ಕೊಡು

ಧೀರವಣ. ನ: [ಧೀರಣ] ಧೈರ್ಯ ತುಂಬು ಆಶ್ವಾಸನೆ ಕೊಡು

ಧೀರವಿಯ. ವಿ: [ಧೀರಿತ] ಆಶ್ವಾಸನೆ ನೀಡಲ್ಪಟ್ಟವನು, ಧೈರ್ಯ ಹೇಳಲಾದವನು

ಧೀರಾಅ. ಅಕ: [ಧೀರಾಯ್] ಧೀರನಾಗು, ಧೈರ್ಯತಾಳು

ಧೀರಾವಿಅ. 'ಧೀರವಿಯ' ಶಬ್ದವನ್ನು ನೋಡುವುದು

ಧೀರಿಅ. 'ಧೀರ=ಧೈರ್ಯ' ಶಬ್ದವನ್ನು ನೋಡುವುದು

ಧೀರಿಅ. 'ಧೀರವಿಅ' ಶಬ್ದವನ್ನು ನೋಡುವುದು

ಧೀರಿಮ. ಪುಂಸ್ತ್ರೀ: [ಧೀರತ್ವ] ಧೈರ್ಯ,

ಧೀವರ. ಪು: [ಧೀವರ] ಬೆಸ್ತರವನು, ಮೀನು ಹಿಡಿಯುವವನು(ಕುವಾ), ವಿ: ಉತ್ತಮ ಬುದ್ಧಿಯುಳ್ಳವನು(ಉಪ)

ಧುಅ. 'ಧುವ=ಧಾವ್' ಶಬ್ದವನ್ನು ನೋಡುವುದು

ಧುಅ. ಸಕ: [ಧು] ಅಲ್ಲಾಡಿಸು, ಎಸೆ, ತ್ಯಜಿಸು

ಧುಅ. 'ಧುವ= ಧ್ರುವ' ಶಬ್ದವನ್ನು ನೋಡುವುದು. ಒಂದು ಛಂದಸ್ಸು.

ಧುಅ. ವಿ: [ಧೂತ] ಅಲುಗಾಡಿಸಲ್ಪಟ್ಟ, ನಡುಗಿಸಲ್ಪಟ್ಟ ನ: ನಡುಕ

ಧುಅ. ವಿ: [ಧುತ] ಅಲುಗಾಡಿಸಲ್ಪಟ್ಟ, ನಡುಗಿಸಲ್ಪಟ್ಟ, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ, ಹೊರಡಿಸಲ್ಪಟ್ಟ ನ: ಕರ್ಮ, ಮೋಕ್ಷ, ಮುಕ್ತಿ(ಸೂಅ), ತ್ಯಾಗ, ಸಂಗವನ್ನು ಬಿಡುವುದು, ಸಂಯಮ(ಆಚಾ), **–ವಾಯ.** ಪು: [–ವಾದ] ಕರ್ಮನಾಶದ ಉಪದೇಶ.

ಧುಅಗಾಯ. ಪು: [ದೇ] ಭ್ರಮರ, ದುಂಬಿ(ದೇ)

ಧುಅರಾಯ. ಪು: [ದೇ] ಮೇಲಿನ ಶಬ್ದವನ್ನು ನೋಡುವುದು

ಧುಂಧುಮಾರ. ಪು: [ಧುಂಧುಮಾರ] ಒಬ್ಬ ರಾಜ

ಧುಂಧುಮಾರಾ. ಸ್ತ್ರೀ: [ದೇ] ಶಚೀ ದೇವಿ, ಇಂದ್ರಾಣಿ.

ಧುಕ್ಕಾಧುಕ್ಕ. ಅಕ: [ಕಂಪ್] ನಡುಗು, ಅಲ್ಲಾಡು ಎದೆ ಡವಗುಟ್ಟು(ಗಾ)

ಧುಕ್ಕ. ಅಕ: [ಕ್ಷುಧ್] ಹಸಿವಾಗು

ಧುಕ್ಕುದುಧುಅ.}. ವಿ: [ದೇ] ಸಂತೋಷಗೊಂಡ,
ಧುಕ್ಕುದುಧುಗಿಅ}. ಹೊಳೆಯುವ, ಉಲ್ಲಾಸದಿಂದಿರುವ

ಧುಕ್ಕುಧುಅ. 'ಧುಕ್ಕಾಧುಕ್ಕ' ಶಬ್ದವನ್ನು ನೋಡುವುದು

ಧುಕ್ಕೋಡಿಅ. ನ: [ದೇ] ಸಂಶಯ, ಸಂದೇಹ

ಧುಗುಧುಗ. ಅಕ: [ಧುಗುಧುಗಾಯ್] 'ಧುಗ್ಧುಗ್' ಎಂದು ಶಬ್ದ ಮಾಡು

ಧುಟ್ಟುಅ. 'ಧುದ್ಧುಅ' ಶಬ್ದವನ್ನು ನೋಡುವುದು

ಧುಣ. ಸಕ: [ಧೂ] ಅಲುಗಾಡಿಸು, ಅಲ್ಲಾಡಿಸು, ದೂರ ಮಾಡುನಾಶಗೊಳಿಸು

ಧುಣಣ. ನ: (ಧೂನನ) ಬೇರೆಡೆಗೆ ಒಯ್ಯು, ಬಿಟ್ಟುಬಿಡು, ತೊರೆದುಬಿಡು

ಧುಣಣಾ. ಸ್ತ್ರೀ: [ಧೂನನಾ] ಕಂಪನ, ನಡುಗುವಿಕೆ, ಅಲ್ಲಾಡುವುದು(ಓಘ)

ಧುಣಾವ. ಸಕ: (ಧೂನಯ್] ಅಲುಗಾಡಿಸು, ಅಲ್ಲಾಡಿಸು,

ಧುಣಾವಿಅ. ವಿ: [ಧೂನಿತ] ಅಲುಗಾಡಿಸಲ್ಪಟ್ಟ(ಉಪ)

ಧುಣಿ. 'ಝುಣಿ' ಶಬ್ದವನ್ನು ನೋಡುವುದು

ಧುಣಿಊಣ}. 'ಧುಣ' ಶಬ್ದವನ್ನು ನೋಡುವುದು
ಧುಣಿತ್ತಏ}.

ಧುಣಿಯ. ವಿ: [ಧೂತ] ಅಲುಗಾಡಿಸಲ್ಪಟ್ಟ, ಅಲ್ಲಾಡಿಸಲ್ಪಟ್ಟ(ಸುಪಾ)

ಧುಣಿಯಾ}. 'ಧುಣ' ಶಬ್ದವನ್ನು ನೋಡುವುದು
ಧುಣಿಜ್ಜ}.

ಧುಣ್ಣ. ವಿ: [ಧಾವ್ಯ] ದೂರೀಕರಿಸಲು ಅರ್ಹವಾದ, ನ: ಪಾಪ, ಕರ್ಮ(ದಸ)

ಧುತ್ತ. ವಿ: [ಧೂರ್ತ] ವಂಚಕ, ಮೋಸಗಾರ, ಠಕ್ಕ, ಜೂಜಾಡುವವನು, ಪು: ಧತ್ತೂರಿ(=ಉಮ್ಮತ್ತಿ) ಗಿಡ, ಕಬ್ಬಿಣದ ಮಂಚ, ಖಂಡಲವಣ, ಕೆಂಪು ಗಂಧದ ಮರ

ಧುತ್ತ. ವಿ: [ದೇ] ವಿಸ್ತೀರ್ಣ, ಅಗಲವಾದ, ಆಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ

ಧುತ್ತ}. ಸಕ: [ಧೂರ್ತಯ್] ವಂಚಿಸು(ಸುಪಾ)
ಧುತ್ತಾರ}.

ಧುತ್ತಾರಿಅ. ವಿ: [ಧೂರ್ತಿತ] ವಂಚಿಸಲ್ಪಟ್ಟ, ಮೋಸಕ್ಕೊಳಗಾದ(ಉಪ)

ಧುತ್ತಿ. ಸ್ತ್ರೀ: [ಧೂರ್ತಿ] ವೃದ್ಧಾಪ್ಯ, ಮುಪ್ಪು

ಧುತ್ತಿಅ. ವಿ: [ಧೂರ್ತಿತ] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ

ಧುತ್ತಿಮ. ಪುಂಸ್ತ್ರೀ: [ಧೂರ್ತತ್ವ] ಧೂರ್ತತನ, ಮೋಸ, ವಂಚನೆ(ಹೇ)

ಧುತ್ತೀ. ಸ್ತ್ರೀ: [ಧೂರ್ತಾ] ಧೂರ್ತ ಮಹಿಳೆ

ಧುತ್ತೀರಯ. ನ: [ಧತ್ತೂರಕ] ಧತ್ತೂರಿ ಹೂವು

ಧುದ್ಧುಅ.(ಅಪ). ಅಕ: [ಶಬ್ದಾಯ್] ಸದ್ದು ಮಾಡು

ಧುಪ್ಪ. 'ಧಿಪ್ಪ' ಶಬ್ದವನ್ನು ನೋಡುವುದು

ಧುಮ್ಮ. ಪು: [ಧೂಮ್ರ] ಹೊಗೆ, ಪಾರಿವಾಳದ ಬಣ್ಣ (ಬೂದು ಬಣ್ಣ). ವಿ: ಬೂದುಬಣ್ಣದವನು. **–ಕ್ಖ.** ಪು: [ಧೂಮ್ರಾಕ್ಷ] ಒಬ್ಬ ರಾಕ್ಷಸ.

ಧುರ. ನ: 'ಧುರಾ' ಶಬ್ದವನ್ನು ನೋಡುವುದು

ಧುರ. ಪು: [ಧುರ] ಒಂದು ಗ್ರಹ –ವಿಶೇಷ(ತಾ), ಸಾಲಗಾರ(ಸುಪಾ)

ಧುರಂಧರ. ವಿ: [ಧುರಂಧರ] ಭಾರವನ್ನು ಹೊರುವುದರಲ್ಲಿ ಸಮರ್ಥ, ಯಾವುದೇ ಕಾರ್ಯವನ್ನು ಕೊನೆಮುಟ್ಟಿಸುವಲ್ಲಿ ಸಮರ್ಥನಾದ, ಭಾರ ಹೊರುವವನು, ಮುಂದಾಳು, ಯಜಮಾನ, ನೇತಾರ, ಪು: ಗಾಡಿ, ನೇಗಿಲು ಇವನ್ನು ಎಳೆಯುವ ಎತ್ತು.

ಧುರಾ. ಸ್ತ್ರೀ: [ಧುರ್] ಗಾಡಿಯ ಮುಂಭಾಗ, ಗಾಡಿಯ ಅಚ್ಚು, ಭಾರ, ಚಿಂತೆ. **–ಧಾರ.** ವಿ: [–ಧಾರ] ಭಾರವನ್ನು ಹೊರುವ, ಮುಂದಾಳು, ಧುರಂಧರ

ಧುರೀ. ಸ್ತ್ರೀ: [ಧುರೀ] ಅಕ್ಷ, ಗಾಡಿಯ ಅಚ್ಚು(ಅಣು)

ಧುರೀಣ. ವಿ: [ಧುರೀಣ] ಧುರಂಧರ, ಮುಖಂಡ, ನೇತಾರ

ಧುವ. ಸಕ: [**ಧಾವ್**] ತೊಳೆ, ಶುದ್ಧಗೊಳಿಸು, ಸ್ವಚ್ಛಗೊಳಿಸು

ಧುವ. ಸಕ: [**ಧೂ**] ಅಲುಗಾಡಿಸು, ಅಲ್ಲಾಡಿಸು.

ಧುವ. ವಿ; [**ಧ್ರುವ**] ನಿಶ್ಚಲ, ಸ್ಥಿರ, ಶಾಶ್ವತ, ಚಿರಸ್ಥಾಯಿ, ನಿಸ್ಸಂದೇಹ(ಸೂಅ), ನಿಶ್ಚಿತವಾಗಿ, **ಪು:** ಕುದುರೆಯ ದೇಹದ ಮೇಲಿರುವ ರೋಮದ ಸುಳಿ, ಮೋಕ್ಷ,ಮುಕ್ತಿ, ಇಂದ್ರಿಯ ನಿಗ್ರಹ, ಸಂಯಮ(ಸೂಅ), ಪ್ರಪಂಚ, **ನ:** ಮುಕ್ತಿಯ ಕಾರಣ, ಮೋಕ್ಷಮಾರ್ಗ(ಆಚಾ), ಅತ್ಯಂತ, ಅತಿಶಯ. ಸುನೀತಿಯ ಮಗನಾದ ಧ್ರುವ, ಧ್ರುವ ನಕ್ಷತ್ರ. **–ಕಮ್ಮಿಯ. ಪು:** [**–ಕರ್ಮಿಕ**] ಕಮ್ಮಾರನೇ ಮೊದಲಾದ ಶಿಲ್ಪಿ(ವವ), **–ಚಾರಿ. ವಿ:** [**–ಚಾರಿನ್**] ಮೋಕ್ಷವನ್ನು ಬಯಸುವವ, ಮುಮುಕ್ಷು.**–ಣಿಗ್ಗಹ. ಪು:** [**–ನಿಗ್ರಹ**] ಆವಶ್ಯಕವಾದ, ನಿಶ್ಚಯವಾಗಿಯೂ ಆಚರಿಸಲು ಯೋಗ್ಯವಾದ ಅನುಷ್ಠಾನ –ವಿಶೇಷ(ಅಣು). **–ಮಗ್ಗ. ಪು:** [**–ಮಾರ್ಗ**] ಮೋಕ್ಷ –ಮಾರ್ಗ. **–ರಾಹು. ಪು:** [**–ರಾಹು**] ರಾಹು –ವಿಶೇಷ. **–ಬಣ್ಣ. ಪು:**[**–ವರ್ಣ**] ಸಂಯಮ, ಮೋಕ್ಷ, ಶಾಶ್ವತ ಕೀರ್ತಿ(ಆಚಾ). **'ಧುಅ=ಧ್ರುವ' ಶಬ್ದವನ್ನು ನೋಡುವುದು**

ಧುವಣ. ಪುಂನ: [**ಧೂಪನ**] ಧೂಪ ಹಾಕುವುದು, ದೂಮಪಾನ

ಧುವಣ. ನ: [**ಧಾವನ**] ತೊಳೆಯುವುದು, ಸ್ವಚ್ಛಗೊಳಿಸುವುದು(ಓಘ). **ವಿ:** ಅಲುಗಾಡಿಸುವ, ಅಲ್ಲಾಡಿಸುವ. **ಸ್ತ್ರೀ: –ಣೀ**

ಧುವಿಯಾ. ಸ್ತ್ರೀ: [**ಧ್ರುವಿತಾ**] ಧ್ರು –ಬಂಧಿನೀ ಕರ್ಮ –ಪ್ರಕೃತಿ

ಧುವ್ವ. 'ಧುಅ=ಧಾವ್' ಶಬ್ದವನ್ನು ನೋಡುವುದು

ಧುವ್ವಂತ}. 'ಧುವ=ಧಾವ್' ಶಬ್ದವನ್ನು ನೋಡುವುದು

ಧುವ್ವಮಾಣ}.

ಧುಹಅ. ಪಿ: [**ದೇ**] ಮುಂಭಾಗದಲ್ಲಿ ಮಾಡಲ್ಪಟ್ಟ, ಮುಂಭಾಗದಲ್ಲಿ ಇಡಲ್ಪಟ್ಟ(ಷಡ್)

ಧೂಅ. ವಿ: [**ಧೂತ**] **'ಧುಅ=ಧುತ' ಶಬ್ದವನ್ನು ನೋಡುವುದು**(ಆಚಾ)

ಧೂಅ. 'ಧೂವ=ಧೂಪ' ಶಬ್ದವನ್ನು ನೋಡುವುದು

ಧೂಅ. ನ: [**ಧೂತ**] ಹಿಂದೆ ಮಾಡಿದ ಕರ್ಮ, ಪೂರ್ವ ಕರ್ಮ.

ಧೂಆ. ಸ್ತ್ರೀ: [**ದುಹಿತೃ**] ಮಗಳು(ಪ್ರಾಸೂ)

ಧೂಣ. ಪು: [**ದೇ**] ಆನೆ(ದೇ)

ಧೂಣಿಯ. ವಿ: [**ಧೂನಿತ**] ಅಲುಗಾಡಿಸಲ್ಪಟ್ಟ, ಅಲ್ಲಾಡಿಸಲ್ಪಟ್ಟ

ಧೂಮ. ಪು: [**ಧೂಮ**] ಹಿಂಗು ಇತ್ಯಾದಿಗಳ ಒಗ್ಗರಣೆ, ಹೊಗೆ(ಗಲುಡ), ದ್ವೇಷ(ಪಣ್ಣ), **–ಇಂಗಾಲ. ಪು.ಬ:** [**ಧೂಮಾಂಗಾರ**] ದ್ವೇಷ ಮತ್ತು ಪ್ರೀತಿ(ಓಘ), **–ಕೇಉ. ಪು:** [**–ಕೇತು**] ಹೊಗೆಯಂತೆ ಕಾಣುವ ಒಂದು ನಕ್ಷತ್ರ(ಠಾ), ಬೆಂಕಿ, ಅಗ್ನಿ(ಉತ್ತ). ಅಶುಭ ಉತ್ಪಾತವನ್ನು ಸೂಚಿಸುವ ನಕ್ಷತ್ರ –ಪುಂಜ (ಗಲುಡ). **–ಚಾರಣ. ಪು:** [**–ಚಾರಣ**] ಹೊಗೆಯನ್ನವಲಂಬಿಸಿ ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯವುಳ್ಳ ಮುನಿ –ವಿಶೇಷ.(ಗಚ್ಛ). **–ಜೋಣಿ. ಪು:** [**–ಯೋನಿ**] ಮೋಡ(ಪಾಅ). **–ಜ್ಝಯ. '–ಧ್ವಯ' ಶಬ್ದವನ್ನು ನೋಡುವುದು** **–ದೋಸ. ಪು:** [**–ದೋಷ**] ದ್ವೇಷದಿಂದ ಊಟ ಮಾಡುವುದು; ಭಿಕ್ಷೆಯ ಒಂದು ದೋಷ(**ಆಚಾ**). **–ಧ್ವಯ. ಪು:** [**–ಧ್ವಜ**] **ಬೆಂಕಿ(ಪಾಅ). –ಪ್ಪಭಾ, –ಪ್ಪಹಾ. ಸ್ತ್ರೀ:** [**–ಪ್ರಭಾ**]ಐದನೇ ನರಕ –ಭೂಮಿ(ಠಾ). **–ಲ. ವಿ:** [**–ಲ**] ಹೊಗೆಯಿಂದ ಕೂಡಿರುವ, ಬೂದಿ ಬಣ್ಣ(ಉಪ). **–ವಡಲ. ಪುಂನ:** [**–ಪಟಲ**] ಹೊಗೆಯ ಸಮೂಹ. **–ವಣ್ಣ. ವಿ:** [**–ವರ್ಣ**] ಬಿಳುಪು ಮತ್ತು ಹಳದಿ ಬೆರೆತ ಮಿಶ್ರ ವರ್ಣ, ಬಿಳಿಯ ಬಣ್ಣ(ಣಾಯಾ). **–ಸ್ಸಿಹಾ. ಸ್ತ್ರೀ:** [**–ಶಿಕಾ**] ಹೊಗೆಯ ಮೇಲ್ಭಾಗ

ಧೂಮಂಗ. ಪು: [**ದೇ**] ದುಂಬಿ, ಭ್ರಮರ(ದೇ)

ಧೂಮಣ. ನ: [**ಧೂಮನ**] ಧೂಮಪಾನ. ಹೊಗೆ ಕುಡಿಯುವುದು(ಸೂಅ)

ಧೂಮದ್ದಾರ. ನ: [**ದೇ**] ಗವಾಕ್ಷ, ಬೆಳಕಿಂಡಿ(ದೇ)

ಧೂಮದ್ಧಯ. ಪು: [**ದೇ**] ಕೆರೆ, ಜಲಾಶಯ, ಎಮ್ಮೆ(ದೇ)

ಧೂಮದ್ಧಯಮಹಿಸೀ. ಸ್ತ್ರೀಬ: [**ದೇ**] ಕೃತ್ತಿಕಾ ನಕ್ಷತ್ರ

ಧೂಮಪಲಿಯಾಮ. ವಿ: [**ದೇ**] ಹಳ್ಳದಲ್ಲಿ ಹಾಕಿ ಬೆಂಕಿ ಹಚ್ಚಿದರೂ ಏನು ಉಳಿದಿರುತ್ತೋ ಅದು(ನಿಚೂ)

ಧೂಮಮಹಿಸೀ. ಸ್ತ್ರೀ: [**ದೇ**] ಹಿಮ, ಮಂಜು, ಇಬ್ಬನಿ(ದೇ)

ಧೂಮಸಿಹಾ}. ಸ್ತ್ರೀ: [**ದೇ**] ಮೇಲಿನ **ಶಬ್ದವನ್ನು**

ಧೂಮಾ}. ನೋಡುವುದು

ಧೂಮಾಅ. ಅಕ: [ಧೂಮಾಯ್] ಹೊಗೆ ಉಂಟುಮಾಡು, ಸುಡು, ಹೊಗೆ ಹಬ್ಬಿಸು

ಧೂಮಾಭಾ. ಸ್ತ್ರೀ: [ಧೂಮಾಭಾ] ಐದನೇ ನರಕ –ಭೂಮಿ(ಪಉಮ)

ಧೂಮಿಅ. ವಿ: [ಧೂಮಿತ] ಹೊಗೆಯಿಂದ ಕೂಡಿದ, ಹೊಗೆಯಾಡುತ್ತಿರುವ

ಧೂಮಿಆ. ಸ್ತ್ರೀ: [ದೇ] ಹಿಮ, ಮಂಜು(ದೇ)

ಧೂಯರಾ. 'ಧೂಆ' ಶಬ್ದವನ್ನು ನೋಡುವುದು

ಧೂರಿಅ. ವಿ: [ದೇ] ದೀರ್ಘವಾದ, ಉದ್ದವಾದ.

ಧೂರಿಅವಟ್ಟ. ಪು: [ದೇ] ಕುದುರೆ(ದೇ)

ಧೂಲಡಿಆ. (ಅಪ). 'ಧೂಲಿ' ಶಬ್ದವನ್ನು ನೋಡುವುದು

ಧೂಲಿ}. ಸ್ತ್ರೀ: [ಧೂಲಿ, ಲೀ] ದೂಳು, ರಜ,
ಧೂಲೀ}. ರೇಣು(ಗಉಡ). **–ಕಂಬ, ಕಲಂಬ.** ಪು: [–ಕದಂಬ]ಗ್ರೀಷ್ಮ ಋತುವಿನಲ್ಲಿ ಅರಳುವ ಕದಂಬ ವೃಕ್ಷ (ಕುಮಾ). **–ಜಂಘ.** ವಿ: [–ಜಂಘ] ಕಾಲಿನಲ್ಲಿ ಧೂಳು ಹತ್ತಿರುವವನು(ವವ). **–ಧೂಸರ.** ವಿ: [–ಧೂಸರ] ಧೂಳು ಅಂಟಿರುವ, ಧೂಳಿನಿಂದ ಲೇಪಿತವಾದ. **–ಧೋಉ.** ವಿ: [–ಧೋತೃ] ಧೂಳನ್ನು ತೊಳೆಯುವವನು. **–ಪಂಥ.** ಪು: [–ಪಂಥ] ಧೂಳಿನಿಂದ ತುಂಬಿದ ಹಾದಿ. **–ವರಿಸ.** ಪು: [–ವರ್ಷ] ಧೂಳಿನ ಮಳೆ(ಆವಮ) **–ಹರ.** ನ: [–ಗೃಹ] ವರ್ಷಋತುವಿನಲ್ಲಿ ಹುಡುಗರು ಮಾಡಿದ ಧೂಳಿನ ಮನೆ

ಧೂಲಿಹಡೀ. ಸ್ತ್ರೀ: [ದೇ] ಹೋಳಿ ಹಬ್ಬ

ಧೂಲೀವಟ್ಟ. ಪು: [ದೇ] ಕುದುರೆ(ದೇ)

ಧೂವ. ಸಕ: [ಧೂಪಯ್] ಧೂಪ ಹಾಕು

ಧೂವ. ಪು: [ಧೂಪ] ಸಾಂಬ್ರಾಣಿ, ಅಗರು ಮೊದಲಾದ ಸುಗಂಧ ದ್ರವ್ಯಗಳಿಂದ ಹೊರಡುವ ಹೊಗೆ. ದೇವರ ಪೂಜೆಯ ಸಂದರ್ಭದಲ್ಲಿ ಹೊತ್ತಿಸಲಾಗುವ ಸುಗಂಧ ದ್ರವ್ಯ –ವಿಶೇಷ (ಸುರ). **–ಘಡೀ.** ಸ್ತ್ರೀ; [–ಘಟೀ] ಧೂಪ–ಪಾತ್ರೆ; ಧೂಪದಿಂದ ತುಂಬಿರುವ ಕಲಶ. **–ಜಂತ.** ನ: [–ಯಂತ್ರ] ಧೂಪದ ಪಾತ್ರೆ(ದೇ)

ಧೂವಣ. ನ: [ಧೂಪನ] ಧೂಪ ಹಾಕುವುದು, ರೋಗದ ನಿರ್ಮೂಲನಕ್ಕಾಗಿ ಮಾಡಲಾಗುವ ಧೂಪ –ಪಾನ. **–ವಟ್ಟಿ.** ಸ್ತ್ರೀ: [–ವರ್ತಿ] ಧೂಪದಿಂದ ಮಾಡಲಾದ ಬತ್ತಿ; ಅಗರುಬತ್ತಿ(ಕಪ್ಪೂ)

ಧೂವಿಅ. ವಿ: [ಧೂಪಿತ] ಬಿಸಿಮಾಡಲ್ಪಟ್ಟ, ಕಾಯಿಸಲ್ಪಟ್ಟ, ಹಿಂಗು ಇತ್ಯಾದಿಗಳಿಂದ ಒಗ್ಗರಣೆ ಹಾಕಲ್ಪಟ್ಟ (ಚಾರು). ಧೂಪ ಹಾಕಲಾದ(ಔಪ)

ಧೂಸರ. ಪು: [ಧೂಸರ] ಹಗುರಾದ ಬಿಳಿ ಬಣ್ಣ, ಬಿಳುಪು ಹಳದಿ ಬೆರೆತ ಬಣ್ಣ, ಬೂದು ಬಣ್ಣದ, ವಿ: ಕಿಂಚಿತ್ ಬಿಳುಪು ಬಣ್ಣದವನು(ಗಾ).

ಧೂಸರಿಯ. ವಿ: [ಧೂಸರಿತ] ಎಳೆಯ ಬಿಳುಪು ಬಣ್ಣದಿಂದ ಕೂಡಿದವನು

ಧೇ. ಸಕ: [ಧಾ] ಧಾರಣ ಮಾಡು, ಧರಿಸು

ಧೇಅ}. ವಿ: [ಧ್ಯೇಯ] ಧ್ಯಾನಿಸಲು ಯೋಗ್ಯವಾದ
ಧೇಜ್ಜ}. (ಣಾಯಾ)

ಧೇಉಲ್ಲಿಂಯಾ. 'ಧೀಉಲ್ಲಿಂಯಾ' ಶಬ್ದವನ್ನು ನೋಡುವುದು

ಧೇಜ್ಜ. ವಿ: [ಧೇಯ] ಧರಿಸಲು ಯೋಗ್ಯವಾದ (ಣಾಯಾ)

ಧೇಜ್ಜ. ನ: [ಧೈರ್ಯ] ಧೈರ್ಯ, ಧೀರತನ(ಪಣ್ಹ)

ಧೇಣು. ಸ್ತ್ರೀ: [ಧೇನು] ಆಗ ತಾನೆ ಕರು ಹಾಕಿದ ಹಸು, ಕರು ಸಮೇತವಾದ ಹಸು, ಹಾಲು ಕೊಡುವ ಹಸು.

ಧೇರ. 'ಧೀರ=ಧೈರ್ಯ' ಶಬ್ದವನ್ನು ನೋಡುವುದು

ಧೇವಯ. ಪು: [ಧೈವತ] ಸಂಗೀತದ ಸಪ್ತ ಸ್ವರಗಳಲ್ಲಿ ಇದು ಆರನೆಯದು. ಈ ಸ್ವರವು ಕುದುರೆಯ ಕೆನೆತದಂತಿರುವುದು(ಠಾ)

ಧೋಅ. ಸಕ: [ಧಾವ್] ತೊಳೆ, ಸ್ವಚ್ಛಗೊಳಿಸು. ವ. ಕೃ –ಧೋಯಂತ

ಧೋಅ. ವಿ: [ಧೌತ] ತೊಳೆಯಲ್ಪಟ್ಟ, ಶುದ್ಧ ಮಾಡಲ್ಪಟ್ಟ (ಸೇ)

ಧೋಅಗ. ವಿ: [ಧಾವಕ] ತೊಳೆಯುವವನು, ಶುದ್ಧಿಮಾಡುವವನು, ಪು: ಅಗಸ

ಧೋಅಣ. ವಿ: [ಧಾವನ] ತೊಳೆಯುವುದು, ಶುದ್ಧಮಾಡುವುದು, ಬಟ್ಟೆಯನ್ನು ಒಗೆಯುವುದು (ಣಾಯಾ)

ಧೋಇಅ. 'ಧೋಅ=ಧೌತ(ಗಾ)' ಶಬ್ದವನ್ನು ನೋಡುವುದು

ಧೊಜ್ಜ. ವಿ: [ಧುರ್ಯ] ಭಾರವನ್ನು ಹೊರುವ ಎತ್ತು, ಕುದುರೆ ಮೊದಲಾದವು. ಮುಖಂಡ, ಮುಂದಾಳು, ಯಜಮಾನ, ನೇತಾ(ವವ)

ಧೋರಣ. ನ: [ದೇ] ನಡಿಗೆಯ ಚಾತುರ್ಯ(ಔಪ)
ಧೋರಣಿ}. ಸ್ತ್ರೀ: [ಧೋರಣಿ, ಣೀ] ಪಂಕ್ತಿ, ಸಾಲು
ಧೋರಣೀ}. (ಸುಪಾ)
ಧೋರಿಯ. 'ಧೊಜ್ಜ' ಶಬ್ದವನ್ನು ನೋಡುವುದು (ಸುಪಾ)
ಧೋರುಗಿಣೀ. ಸ್ತ್ರೀ: [ಧೋರುಕಿನಿಕಾ] ದೇಶ –ವಿದೇಶಗಳಲ್ಲಿ ಹುಟ್ಟುವ ಹೆಣ್ಣು(ಣಾಯಾ)
ಧೋರೇಯ. ವಿ: [ಧೌರೇಯ] 'ಧೊಜ್ಜ' ಶಬ್ದವನ್ನು ನೋಡುವುದು
ಧೋವ. ಧೋಅ=ಧಾವ್' ಶಬ್ದವನ್ನು ನೋಡುವುದು
ಧೋವಯ. 'ಧೋಅಗ' ಶಬ್ದವನ್ನು ನೋಡುವುದು
ಧ್ರುವು.(ಅಪ). ಅ: [ಧ್ರುವಮ್] ಸ್ಥಿರ, ಅಚಲ.

ಪ್ರಾಕೃತ ಭಾಷೆಯಲ್ಲಿ 'ನ'ಕಾರಾದಿಯಾದ ಶಬ್ದಗಳೆಲ್ಲವೂ 'ಣ'ಕಾರಾದಿಯಾಗುತ್ತವೆ. ಅಂದರೆ ಪ್ರಾರಂಭದ 'ನ'ಕಾರದ ಜಾಗದಲ್ಲಿ ನಿಯತವಾಗಿ ಇಲ್ಲವೆ ಬದಲಿಗೆ 'ಣ' ಬರುವುದು ವ್ಯಾಕರಣಗಳಲ್ಲಿ ಒಂದು ಸರ್ವ ಸಾಮಾನ್ಯವಾದ ನಿಯಮ. ಮತ್ತು ಪ್ರಾಕೃತ –ಸಾಹಿತ್ಯ ಗ್ರಂಥಗಳಲ್ಲಿ ಎರಡೂ ರೀತಿಯ ಪ್ರಯೋಗಗಳು ಕಂಡುಬರುತ್ತವೆ. ಆದ್ದರಿಂದ ಇಂಥ ಶಬ್ದಗಳು ಈಗಾಗಲೇ 'ಣ' ಕಾರದ ಅಡಿಯಲ್ಲಿ ಬಂದಿರುವುದರಿಂದ ಇಲ್ಲಿ ಪುನರಾವೃತ್ತಿ ಮಾಡಿ ಪುಟಗಳನ್ನು ಹೆಚ್ಚಿಸುವುದು ಉಚಿತವಲ್ಲವೆಂದು ತಿಳಿಯಲಾಗಿದೆ. ಓದುಗರು 'ಣ' ಶಬ್ದಗಳ ಪ್ರಕರಣದಲ್ಲಿ ಪ್ರಾರಂಭದ 'ಣ' ದ ಜಾಗದಲ್ಲಿ ಎಲ್ಲ ಕಡೆಯಯೂ 'ನ' ಎಂದು ತಿಳಿಯಬಹುದಾಗಿದೆ.

ಪ

ಪ. ಪು: [ಪ] ವರ್ಣಮಾಲೆಯ **'ಪ'** ವರ್ಗದಲ್ಲಿ ಮೊದಲನೆಯ ವರ್ಣ. ಓಷ್ಠ್ಯ –ಸ್ಥಾನೀಯ. ಅಘೋಷ –ಸ್ಪರ್ಶ –ಅಲ್ಪಪ್ರಾಣ, ಪಾಪವನ್ನು ಬಿಡುವುದು.

ಪ. ಅ: [ಪ್ರ] ಪ್ರಕರ್ಷ(=ಅತಿಶಯ, ಹೇರಳ), ಪ್ರಾರಂಭ (ಭಗ), ಹುಟ್ಟು, ಖ್ಯಾತಿ, ವ್ಯವಹಾರ, ನಾಲ್ಕೂ ಕಡೆಯಿಂದ(ನಿಚೂ), ಸೋರುವಿಕೆ, ಮೂತ್ರ (ವಿಸೇ), ಕಳೆದುಹೋದ, ಗತಿಸಿದ ಈ ಮುಂತಾದ ಅರ್ಥಗಳನ್ನು ಸೂಚಿಸುವ ಅವ್ಯಯ

ಪ–. ವಿ: [ಪ್ರಾಚ್] ಪೂರ್ವದ ಕಡೆ ಇರುವ(ಭವಿ)

ಪಅಂಗಮ. ಪು: [ಪ್ಲವಂಗಮ] ಒಂದು ಛಂದಸ್ಸು

ಪಅಂಘ ಪು: [ಪ್ರಜಂಘ] ರಾಕ್ಷಸ –ವಿಶೇಷ

ಪಅಬ್ಭ. **'ಪಗಬ್ಭ'** ಶಬ್ದವನ್ನು ನೋಡುವುದು

ಪಇ. ಅ: [ಪ್ರತಿ] ಅಪೇಕ್ಷೆಯನ್ನು ಸೂಚಿಸುವ ಅವ್ಯಯ, ಲಕ್ಷ್ಯ, ಗಮನ

ಪಇ. ಪು: [ಪತಿ] ಗಂಡ, ಭರ್ತೃ(ಪಾಅ), ಒಡೆಯ, ಯಜಮಾನ, ರಕ್ಷಕ(ಸುಪಾ), ಶ್ರೇಷ್ಠ, **–ಘರ. ನ:** [–ಗೃಹ] ಮಾವನ ಮನೆ, **–ವಯಾ, –ವ್ವಯಾ. ಸ್ತ್ರೀ:** [ವ್ರತಾ] ಪತಿವ್ರತೆಯಾದ ಹೆಣ್ಣು, ಪತಿ–ಸೇವಾ ಪರಾಯಣಳು

ಪಇ. 'ಪಡಿ' ಶಬ್ದವನ್ನು ನೋಡುವುದು(ತಾ)

ಪಇಅ. ವಿ: [ದೇ] ತಿರಸ್ಕೃತ, **ನ:** ರಥದ ಚಕ್ರ, ಗಾಲಿ

ಪಇಇ. **'ಪಗಇ=ಪ್ರಕೃತಿ'**ಶಬ್ದವನ್ನು ನೋಡುವುದು (ಸೇ)

ಪಇಉಂ. **''ಪಯ=ಪಚ್' ಶಬ್ದವನ್ನು ನೋಡುವುದು**

ಪಇಉವಚರಣ. ನ: [ಪ್ರತ್ಯುಪಚರಣ] ಪ್ರತ್ಯುಪಚಾರ, ತಾನು ಪಡೆದ ಸೇವೆ, ಉಪಚಾರಕ್ಕೆ ಪ್ರತಿಯಾಗಿ ಸೇವೆ ಅಥವಾ ಉಪಚಾರ ಮಾಡುವುದು(ರಂಭಾ)

ಪಇಊಲ. **'ಪಡಿಕೂಲ'** ಶಬ್ದವನ್ನು ನೋಡುವುದು

ಪಇಂವಯಾ. **'ಪಇವಯಾ'** ಶಬ್ದವನ್ನು ನೋಡುವುದು

ಪಇಕ(ಅಪ). **'ಪಾಇಕ್ಕ'** ಶಬ್ದವನ್ನು ನೋಡುವುದು

ಪಇಕಿದಿ. **'ಪಡಿಕಿದಿ'** ಶಬ್ದವನ್ನು ನೋಡುವುದು

ಪಇಕ್ಕ. 'ಪಾಇಕ್ಕ' ಶಬ್ದವನ್ನು ನೋಡುವುದು

ಪಇಗಿಹ. **'ಪಡಿಕಿದಿ'** ಶಬ್ದವನ್ನು **ನೋಡುವುದು**

ಪಇಚ್ಛನ್ನ. ಪು: [ಪ್ರತಿಚ್ಛನ್ನ] ಭೂತ –ವಿಶೇಷ

ಪಇಜ್ಜ.(ಅಪ). ವಿ: [ಪತಿತ] ಕೆಳಕ್ಕೆ ಬಿದ್ದ

ಪಇಜ್ಜ(ಅಪ) ವಿ: [ಪ್ರಾಪ್ತ] ದೊರಕಿರುವ, ಸಿಕ್ಕಿರುವ, ಲಬ್ಧ(ಪಿಂಗ)

ಪಇಜ್ಜಾ. 'ಪಇಣ್ಣಾ' ಶಬ್ದವನ್ನು ನೋಡುವುದು

ಪಇಟ್ಠ. ವಿ: [ದೇ] ರಸವನ್ನು ತಿಳಿದವನು, ವಿರಳ, **ಪು:** ಮಾರ್ಗ, ಹಾದಿ, ದಾರಿ

ಪಇಟ್ಠ. **'ಪಗಿಟ್ಠ'** ಶಬ್ದವನ್ನು ನೋಡುವುದು

ಪಇಟ್ಠ. ಪು: [ಪ್ರತಿಷ್ಠ] ಸುಪಾರ್ಶ್ವನಾಥ ತೀರ್ಥಂಕರನ ತಂದೆ

ಪಇಟ್ಠ. ವಿ: [ಪವಿಷ್ಟ] ಪ್ರವೇಶಿಸಿದವನು, ಒಳಕ್ಕೆ ಬಂದವನು(ಸ)

ಪಇಟ್ಠವ. ಸಕ: [ಪ್ರತಿಸ್ಥಾಪಯ್] ಮೂರ್ತಿಯನ್ನು ವಿಧಿ ಪೂರ್ವಕವಾಗಿ ಪ್ರತಿಷ್ಠಾಪಿಸು

ಪಇಟ್ಠವಣ. 'ಪಇಟ್ಠಾವಣ' ಶಬ್ದವನ್ನು ನೋಡುವುದು

ಪಇಟ್ಠಾ. ಸ್ತ್ರೀ: [ಪ್ರತಿಷ್ಠಾ] ಆದರ, ಗೌರವ, ಕೀರ್ತಿ, ಖ್ಯಾತಿ, ವ್ಯವಸ್ಥೆ(ಹೇ), ಸ್ಥಿತಿ, ಇರುವಿಕೆ. ಸ್ಥಾಪಿಸುವುದು, ವಿಗ್ರಹವನ್ನು ಶಾಸ್ತ್ರೋಕ್ತವಾಗಿ ಸ್ಥಾಪಿಸುವುದು, ಮೂರ್ತಿಯಲ್ಲಿ ದೇವರ ಗುಣಗಳನ್ನು ಆರೋಪಿಸುವುದು, ಆಶ್ರಯ, ಆಧಾರ(ಔಪ)

ಪಇಟ್ಠಾ. ಸ್ತ್ರೀ: [ಪ್ರತಿಷ್ಠಾ] ಧಾರಣೆ, ಮನಸ್ಸಿನಲ್ಲಿ ಗ್ರಹಿಸಿ ನೆನಪಿನಲ್ಲಿಡುವುದು, ಸಮಾಧಾನ, ಶಂಕೆಯನ್ನು ಕಳೆಯುವ ಮೂಲಕ ತನ್ನ ಪಕ್ಷವನ್ನು ಸ್ಥಾಪಿಸುವುದು

ಪಇಟ್ಠಾಣ. ನ: [ಪ್ರತಿಷ್ಠಾನ] ಸ್ಥಿತಿ, ಇರುವಿಕೆ, ಆಧಾರ, ಆಶ್ರಯ(ಭಗ), ಅರಮನೆ ದೊಡ್ಡ ಕಟ್ಟಡ ಇತ್ಯಾದಿಗಳ ತಳಹದಿ(ಪವ), ಗಂಗಾನದಿಯ ಉತ್ತರತೀರದಲ್ಲಿರುವ ಒಂದು ನಗರ.

ಪಇಟ್ಠಾಣ. ಪು: [ಪ್ರತಿಷ್ಠಾನ] ಮೂಲ ಪ್ರದೇಶ

ಪ ಇಟ್ಠಾಣ. ನ: [ದೇ] ನಗರ, ಪಟ್ಟಣ(ದೇ)

ಪಇಟ್ಠಾವಕ}. 'ಪಇಟ್ಠಾವಯ' ಶಬ್ದವನ್ನು
ಪಇಟ್ಠಾವಗ}. ನೋಡುವುದು

ಪಇಟ್ಠಾವಣ. ನ: [ಪ್ರತಿಷ್ಠಾಪನ] ಸ್ಥಿರವಾಗಿ ಇಡುವುದು, ದೇವರ ವಿಗ್ರಹವನ್ನು ವಿಧ್ಯುಕ್ತವಾಗಿ ಪ್ರತಿಷ್ಠೆ ಮಾಡಿಸುವುದು, ಸಿದ್ಧಪಡಿಸುವುದು, ಏರ್ಪಡಿಸುವುದು(ಪಂಚಾ)

ಪಇಟ್ಠಾವಂಯ. ವಿ: [ಪ್ರತಿಷ್ಠಾಪಕ] ಪ್ರತಿಷ್ಠೆ ಮಾಡಿಸುವವನು, ಸ್ಥಾಪನೆ ಮಾಡಿಸುವವನು (ಔಪ)

ಪಇಟ್ಠಾವಿಯ. ವಿ: [ಪ್ರತಿಷ್ಠಾಪಿತ] ಪ್ರತಿಷ್ಠಾಪಿಸಲ್ಪಟ್ಟ, ಸ್ಥಾಪಿಸಲ್ಪಟ್ಟ

ಪಇಟ್ಠಿಯ. ವಿ: [ಪ್ರತಿಷ್ಠಿತ] ಇರಿಸಲ್ಪಟ್ಟ, ಇಡಲ್ಪಟ್ಟ, ಸ್ಥಾಪಿತ(ಉವಾ), ಆಶ್ರಯ ಪಡೆದ, ಮೊರೆಹೊಕ್ಕ, ವ್ಯವಸ್ಥೆ ಮಾಡಲ್ಪಟ್ಟ, ಗೌರವಾನ್ವಿತ(ಹೇ), ತಡೆದಿರುವ, ನಿಂತಿರುವ

ಪಇಣ್ಣ. ವಿ: [ದೇ] ವಿಪುಲವಾದ, ಅಧಿಕವಾದ, ವಿಸ್ತಾರವಾದ

ಪಇಣ್ಣ}. ವಿ: [ಪ್ರಕೀರ್ಣ, ಕ] ಎಸೆಯಲ್ಪಟ್ಟ,
ಪಇಣ್ಣಗ}. ಹರಡಲ್ಪಟ್ಟ, ಮಿಶ್ರಿತ, ಅನೇಕ ಪ್ರಕಾರದವುಗಳಿಂದ ಬೆರೆಸಲ್ಪಟ್ಟ, ಚೆದರಿರುವ(ಠಾ), ನ: ತೀರ್ಥಂಕರನ ಸಾಮಾನ್ಯ ಶಿಷ್ಯನು ರಚಿಸಿದ ಗ್ರಂಥ –ವಿಶೇಷ, **–ಕಹಾ.** ಸ್ತ್ರೀ: [–ಕಥಾ] ಸಾಮಾನ್ಯ ನಿಯಮ, ಉತ್ಸರ್ಗ. **–ತವ.** ಪು: [ತಪಸ್] ತಪಶ್ಚರ್ಯೆ (ಪಂಚಾ)

ಪಇಣ್ಣಾ. ಸ್ತ್ರೀ: [ಪ್ರತಿಜ್ಞಾ] ವಚನ ಕೊಟ್ಟ ಮಾತು, ಪಣ, ಶಪಥ, ನಿಯಮ(ಔಪ), ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಅನುಪ್ರಮಾಣ ಎಂಬ ಒಂದು ಅಂಗ, ಸಾಧ್ಯವಾದ ಮಾತಿನ ಸೂಚನೆ,

ಪಇಣ್ಣಾದ(ಶೌ). ವಿ: [ಪ್ರತಿಜ್ಞಾತ] ಯಾವುದರ ಬಗ್ಗೆ ಶಪಥ ಅಥವಾ ಪ್ರತಿಜ್ಞೆ ಮಾಡಲಾಗಿದೆಯೋ ಅದು

ಪಇಣಿಯಯ. ವಿ: [ಪ್ರತಿನಿಯತ] ನಿಯಮ ಸಂಗತವಾಗಿರುವ, ನಿಯಮಿತ

ಪಇಣ್ಣಿ. ವಿ; [ಪ್ರತಿಜ್ಞಾವತ್] ಪ್ರತಿಜ್ಞೆ ಹೊಂದಿರುವ

ಪಇತ್ತ. 'ಪಉತ್ತ=ಪ್ರವೃತ್ತ' ಶಬ್ದವನ್ನು ನೋಡುವುದು(ಭವಿ)

ಪಇತ್ತ. ವಿ: [ಪ್ರದೀಪ್ತ] ಉರಿಯುವ, ಜ್ವಲಿಸುವ, ಪ್ರಕಾಶಿಸುವ

ಪಇತ್ತ. 'ಪವಿತ್ತ= ಪವಿತ್ರ' ಶಬ್ದವನ್ನು ನೋಡುವುದು

ಪಇದಿ(ಶೌ). 'ಪಗಇ' ಶಬ್ದವನ್ನು ನೋಡುವುದು

ಪಇದಿಣ. ನ: [ಪ್ರತಿದಿನ] ದಿನವೂ, ನಿತ್ಯವೂ

ಪಇದ್ಧಿಯ ವಿ: [ಪ್ರದಿಗ್ಧ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ, ಮಲಿನಮಾಡಲ್ಪಟ್ಟ

ಪಇದಿಯಹ. ನ: [ಪ್ರತಿದಿವಸ] ದಿನವೂ, ನಿತ್ಯವೂ

ಪಇನಿಯಯ. ವಿ: [ಪ್ರತಿನಿಯತ] ನೇಮಿಸಲ್ಪಟ್ಟ, ನಿಯುಕ್ತಿ ಮಾಡಲ್ಪಟ್ಟ(ಆವಮ)

ಪಇನ್ನ}. 'ಪಇಣ್ಣ' ಶಬ್ದವನ್ನು ನೋಡುವುದು
ಪಇನ್ನಗ}.

ಪಇನ್ನಾ. 'ಪಇಣ್ಣಾ' ಶಬ್ದವನ್ನು ನೋಡುವುದು

ಪಇಪ್ಪ. 'ಪಲಿಪ್ಪ' ಶಬ್ದವನ್ನು ನೋಡುವುದು

ಪಇಪ್ಪಇಯ. ನ: [ಪ್ರತಿಪ್ರತೀಕ] ಪ್ರತಿಯೊಂದು ಅಂಗ (ರಂಭಾ)

ಪಇಭಯ. ವಿ: [ಪ್ರತಿಭಯ] ಪ್ರತಿಯೊಂದು ಪ್ರಾಣಿಗೂ ಭಯವನ್ನುಂಟುಮಾಡುವ(ಣಾಯಾ)

ಪಇಭಾ. ಸ್ತ್ರೀ: [ಪ್ರತಿಭಾ] ಪ್ರತ್ಯುತ್ಪನ್ನ ಮತಿತ್ವ, ಬುದ್ಧಿಶಕ್ತಿ, ಹೊಸಹೊಸದಾಗಿ ವಿಷಯ ಹೊಳೆಯುವ ಬುದ್ಧಿ(ಪುಷ್ಪ)

ಪಇಭಾಣಾಣ. ನ: [ಪ್ರತಿಭಾಜ್ಞಾನ] ಪ್ರತಿಭೆಯಿಂದ ಹುಟ್ಟುವ ಜ್ಞಾನ, ತಿಳಿವು.

ಪಇಮುಹ. ವಿ: [ಪ್ರತಿಮುಖ] ಎದುರಾಗಿ, ಸಂಮುಖವಾಗಿ, ಅಭಿಮುಖವಾಗಿ(ಉಪ)

ಪಇರ. ಸಕ: [ವಪ್] ಬೀಜವನ್ನು ಬಿತ್ತು,

ಪಇರಿಕ್ಕ. ವಿ: [ದೇ. ಪ್ರತಿರಿಕ್ತ] ಶೂನ್ಯ, ಏನೂ ಇಲ್ಲದ(ದೇ), ವಿಶಾಲವಾದ(ದೇ), ತುಚ್ಛ, ಕ್ಷುದ್ರ, ವಿಪುಲವಾದ, ಹೆಚ್ಚಾದ, ಬಹಳವಾದ(ಕಪ್ಪ), ನ: ಏಕಾಂತ ಸ್ಥಳ, ನಿರ್ಜನ ಪ್ರದೇಶ(ಗಾ)

ಪಇಲ.(ಅಪ). 'ಪಢಮ' ಶಬ್ದವನ್ನು ನೋಡುವುದು

ಪಇಲಾಇಯಾ. ಸ್ತ್ರೀ: [ಪ್ರತಿಲಾದಿಕಾ] ಕೈಯ ಬಲದಿಂದ ಮುಂದೆ ಸಾಗುವ ಹಾವಿನ ಒಂದು ಜಾತಿ

ಪಇಲ್ಲ. ಪು: [ದೇ. ಪದಿಕ] ಒಂದು ಗ್ರಹ –ವಿಶೇಷ, ಗ್ರಹದ ಅಧಿಷ್ಠಾತೃ ದೇವ(ಠಾ), ಆನೆಕಾಲು ರೋಗ (ಪಣ್ಣ)

ಪಇವ. ಪು: [ಪ್ರತಿವ] ಒಬ್ಬ ಯಾದವನ ಹೆಸರು

ಪಇವರಿಸ. ನ: [ಪ್ರತಿವರ್ಷ] ಪ್ರತಿವರ್ಷ

ಪಇವಾಇ. ವಿ: [ಪ್ರತಿವಾದಿನ್] ವಾದಿಗೆ ವಿರುದ್ಧವಾಗಿ ಮಾತಾಡುವವನು, ಎದುರು ಪಕ್ಷದವನು(ರಾಜ)

ಪಇವಿಸಿಟ್ಠ. ವಿ: [ಪ್ರತಿವಿಶಿಷ್ಟ] ವಿಶೇಷದಿಂದ ಕೂಡಿದ, ವಿಶಿಷ್ಟ(ಉವಾ)

ಪಇವಿಸೇಸ. ಪು: [ಪ್ರತಿವಿಶೇಷ] ವಿಶೇಷ, ಭೇದ, ಭಿನ್ನತೆ(ವಿಸೇ)

ಪಇಸ. 'ಪವಿಸ' ಶಬ್ದವನ್ನು ನೋಡುವುದು

ಪಇಸಮಯ. ನ: [**ಪ್ರತಿಸಮಯ**] ಪ್ರತಿ ಕ್ಷಣ, ಎಲ್ಲ ಸಮಯದಲ್ಲೂ
ಪಇಸರ. 'ಪವಿಸ' ಶಬ್ದವನ್ನು ನೋಡುವುದು
ಪಇಸಾರ. ಸಕ: [**ಪ್ರ+ವೇಶಯ್**]ಪ್ರವೇಶಿಸು,ಒಳಕ್ಕೆ ಬರು
ಪಇಸಾರಿಯ. ವಿ: [**ಪ್ರವೇಶಿತ**] ಒಳಕ್ಕೆ ಪ್ರವೇಶಿಸಲ್ಪಟ್ಟವನು
ಪಇಹಂತ ಪು: [**ದೇ**] ಇಂದ್ರನ ಮಗನಾದ ಜಯಂತ
ಪಇಹಾ. ಸಕ: [**ಪ್ರತಿ+ಹಾ**] ತ್ಯಜಿಸು, ಬಿಡು(ಉವ)
ಪಈ–. 'ಪಇ=ಪತಿ' ಶಬ್ದವನ್ನು ನೋಡುವುದು
ಪಈಅ. ವಿ: [**ಪ್ರತೀತ**] ತಿಳಿದಿರುವ, ನಂಬಿರುವ, ವಿಶ್ವಸ್ತ, ಪ್ರಸಿದ್ಧ, ಖ್ಯಾತ(ವಿಸೇ)
ಪಈಆ. ನ: [**ಪ್ರತೀಕ**] ಅಂಗ, ಅವಯವ(ರಂಭಾ)
ಪಈಇ. ಸ್ತ್ರೀ: [**ಪ್ರತೀತಿ**] ವಿಶ್ವಾಸ, ನಂಬಿಕೆ, ಪ್ರಸಿದ್ಧಿ, ಪ್ರಖ್ಯಾತಿ(ರಾಜ)
ಪಈವ. 'ಕ್ಲೀವ' ಶಬ್ದವನ್ನು ನೋಡುವುದು
ಪಈವ. ಪು: [**ಪ್ರದೀಪ**] ದೀಪ, ಬೆಳಗುವ ವಸ್ತು(ಪಾಅ)
ಪಈವ. ವಿ: [**ಪ್ರತೀಪ**] ವಿರುದ್ಧವಾದ, ಪ್ರತಿಕೂಲವಾದ (ಹೇ), ಪು: ಶತ್ರು(ಉಪ)
ಪಈಸ(ಅಪ). 'ಪಇಸ' ಶಬ್ದವನ್ನು ನೋಡುವುದು
ಪಉ(ಅಪ). ವಿ: [**ಪತಿತ**] ಕೆಳಕ್ಕೆ ಬಿದ್ದಿರುವ
ಪಉಅ. 'ಪಾಗಯ=ಪ್ರಾಕೃತ' ಶಬ್ದವನ್ನು ನೋಡುವುದು
ಪಉಅ. ಪು: [**ದೇ**] ದಿನ, ದಿವಸ(ದೇ)
ಪಉಅ. ನ: [**ಪ್ರಯುತ**] ಸಂಖ್ಯಾ –ವಿಶೇಷ, **'ಪ್ರಯುತಾಂಗ'**ವನ್ನು ಲಳ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ತಾ)
ಪಉಅಂಗ. ನ: [**ಪ್ರಯುತಾಂಗ**] ಸಂಖ್ಯಾ –ವಿಶೇಷ. **'ಅಯುತ'** ವನ್ನು ಲಳ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ(ತಾ)
ಪಉಂಜ. ಸಕ: [**ಪ್ರ +ಯುಜ್**] ಜೋಡಿಸು(ಉದು), ಕೂಡಿಸು, ಉಚ್ಚರಿಸು, ತೊಡಗಿಸು, ಪ್ರೇರಿಸು, ವ್ಯವಹರಿಸು, ಮಾಡು, ಪ್ರಯೋಗಿಸು
ಪಉಂಜಗ. ವಿ: [**ಪ್ರಯೋಜಕ**] ಪ್ರೇರಕ, ಪ್ರೇರಿಸುವವನು(ಪಂಚವ)
ಪಉಂಜಣ. ವಿ: [**ಪ್ರಯೋಜನ**] ಪ್ರಯೋಗ ಮಾಡುವವನು(ಪಉಮ). **'ಪಓಅಣ' ಶಬ್ದವನ್ನು ನೋಡುವುದು**
ಪಉಂಜಣಯಾ}. ಸ್ತ್ರೀ: [**ಪ್ರಯೋಜನಾ**] ಪ್ರಯೋಗ
ಪಉಂಜಣಾ}. (ಓಘ)
ಪಉಂಜಿಅ. ವಿ: [**ಪ್ರಯುಕ್ತ**] ಪ್ರಯೋಗಿಸಲ್ಪಟ್ಟ(ಸುಪಾ)
ಪಉಂಜಿತ್ತು. ವಿ: [**ಪ್ರಯೋಕ್ತೃ**] ತೊಡಗುವವನು, ಪ್ರಾರಂಭಿಸುವವನು
ಪಉಂಜಿತ್ತು. ವಿ: [**ಪ್ರಯೋಜಯಿತೃ**] ಪ್ರಾರಂಭ ಮಾಡಿಸುವವನು, ತೊಡಗಿಸುವವನು
ಪಉಜ್ಜ}. 'ಪಉಂಜ' ಶಬ್ದವನ್ನು ನೋಡುವುದು
ಪಉಜ್ಜಮಾಣ}.
ಪಉಟ್ಟ ಅ: [**ಪರಿವೃತ್ಯ**] ಸಾಯಿಸಿ, –**ಪರಿಹಾರ.** ಪು: [**–ಪರಿಹಾರ**] ಸತ್ತು ಮತ್ತೆ ಅದೇ ಶರೀರದಲ್ಲಿ ಜನ್ಮತಾಳಿ ಆ ಶರೀರದಿಂದ ಸಂತೋಷಾನುಭವ ಹೊಂದುವುದು, ಲೈಂಗಿಕ ಸುಖ ಹೊಂದುವುದು
ಪಉಟ್ಟ. ವಿ: [**ಪರಿವರ್ತ**] ಸತ್ತು ಅದೇ ಶರೀರದಲ್ಲಿ ಹುಟ್ಟಿಬರುವುದು, ಪರಿವರ್ತ –ವಾದ(ಭಗ)
ಪಉಟ್ಠ. ವಿ: [**ಪ್ರವೃಷ್ಟ**] ಮಳೆಯಾದ(ಹೇ)
ಪಉಟ್ಠ. ಪು: [**ಪ್ರಕೋಷ್ಠ**] ಮೊಳ ಕೈ(ಪಣ್ಣ)
ಪಉಟ್ಠ. ವಿ: [**ಪ್ರಜುಷ್ಟ**] ವಿಶೇಷವಾಗಿ ಸೇವಿಸಲ್ಪಟ್ಟ, ನ: ತೀರ ಹಳಸಿದ, ಅತಿಹಳೆಯದಾದ
ಪಉಟ್ಠ. ವಿ: [**ಪ್ರದ್ವಿಷ್ಟ**] ದೋಷದಿಂದ ಕೂಡಿದ
ಪಉಢ. ನ: [**ದೇ**] ಮನೆ, ಪು: ಮನೆಯ ಪಶ್ಚಿಮ ಭಾಗ(ದೇ)
ಪಉಣ. ಸಕ: [**ಪ್ರಗುಣಯ್**] ಆರೋಗ್ಯವಂತನಾಗು, ರೋಗರಹಿತನಾಗು
ಪಉಣ. ಪು: [**ದೇ**] ಗಾಯ ಅಥವಾ ಹುಣ್ಣು ಬೆಳೆಯುವುದು, ಒಂದು ನಿಯಮ –ವಿಶೇಷ
ಪಉಣ. ವಿ: [**ಪ್ರಗುಣ**] ಪಟು, ಚತುರ, ಸಮರ್ಥ, ದೋಷ –ರಹಿತ, ಸಿದ್ಧನಾಗಿರುವ
ಪಉಣಾಡ. ಪು: [**ಪ್ರಪುನಾಟ**] ಚಕ್ರಮರ್ದ ವೃಕ್ಷ, ತಗಚೆ ಗಿಡ
ಪಉತ್ತ. ಅಕ: [**ಪ್ರ +ವೃತ್**] ತೊಡಗು, ಪ್ರಾರಂಭಿಸು
ಪಉತ್ತ. ವಿ: [**ಪ್ರಯುಕ್ತ**] ಪ್ರಯೋಗಿಸಲ್ಪಟ್ಟದ್ದು(ಭವಿ), ನ: ಪ್ರಯೋಗ(ಣಾಯಾ)
ಪಉತ್ತ. ಪು: [**ಪೌತ್ರ**] ಮಗನ ಮಗ, ಮೊಮ್ಮಗ
ಪಉತ್ತ. ನ: [**ಪ್ರತೋತ್ರ**] ಅಂಕುಶ
ಪಉತ್ತ. ವಿ: [**ಪ್ರವೃತ್ತ**] ಒಂದು ಕಾರ್ಯದಲ್ಲಿ ತೊಡಗಿರುವವನು, ಪ್ರಾರಂಭವಾದ
ಪಉತ್ತಿ. ಸ್ತ್ರೀ: [**ಪ್ರವೃತ್ತಿ**] ತೊಡಗುವುದು, (ಭಗ), ವಾರ್ತೆ, ಸಮಾಚಾರ, ಸುದ್ದಿ(ಪಾಅ), ಕಾರ್ಯ, ಕೆಲಸ.

–ವಾವುಯ. ವಿ: [–ವ್ಯಾಪೃತ] ಕೆಲಸದಲ್ಲಿ ತೊಡಗಿಕೊಂಡಿರುವ(ಔಪ)

ಪಉತ್ತಿ. ಸ್ತ್ರೀ: [ಪ್ರಯುಕ್ತಿ] ವಿಷಯ, ತಥ್ಯ, ನಿಜತ್ವ(ಉಪ)

ಪಉತ್ತಿದವ್ವ. **'ಪಉತ್ತ= ಪ +ವೃತ್' ಶಬ್ದವನ್ನು ನೋಡುವುದು**

ಪಉತ್ತು.(ಪ್ರಯೋಕ್ತೃ] ಪ್ರಯೋಗ ಮಾಡುವವನು, ಪ್ರೇರಣೆ ಮಾಡುವವನು, ಕತೃ, ನಿರ್ಮಾತೃ. ಸ್ತ್ರೀ: –ತ್ತೀ.

ಪಉತ್ಥ.ನ: [ದೇ] ಮನೆ(ದೇ), ಪ್ರವಾಸದಲ್ಲಿರುವ(ಗಾ), **–ವಇಯಾ.** ಸ್ತ್ರೀ: [–ಪತಿಕಾ] ದೇಶಾಂತರ ಹೋಗಿರುವವನಹೆಂಡತಿ(ಓಘ)

ಪಉದ್ದವ್ವ. **'ಪಉಂಜ' ಶಬ್ದವನ್ನು ನೋಡುವುದು**

ಪಉಪ್ಪಯ. **'ಪಓಪ್ಪಯ' ಶಬ್ದವನ್ನು ನೋಡುವುದು**

ಪಉಮ. ನ: [ಪದ್ಮ] ಕಮಲ, ತಾವರೆ(ಪಣ್ಣ), ದೇವ –ವಿಮಾನ –ವಿಶೇಷ, ಒಂದು ಸಂಖ್ಯಾ ವಿಶೇಷ. **'ಪದ್ಮಾಂಗ'** ವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ. ಗಂಧ ದ್ರವ್ಯ –ವಿಶೇಷ. ಸುಧರ್ಮಾ ಸಭೆಯ ಒಂದು ಸಿಂಹಾಸನ (ಣಾಯಾ). ಹಗಲಿನ ಒಂಬತ್ತನೇ ಮುಹೂರ್ತ. ದಕ್ಷಿಣ ರುಚಕ ಪರ್ವತದ ಒಂದು ಶಿಖರ(ಠಾ). **ಪು.** ಸೀತಾಪತಿಯಾದ ರಾಜಾ ರಾಮಚಂದ್ರ(ಪಉಮ). ಶ್ರೀಕೃಷ್ಣನ ಅಣ್ಣನಾದ ಎಂಟನೇ ಬಲದೇವ. ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ೯ನೇ ಚಕ್ರವರ್ತಿ ರಾಜಾ, ರಾಜಾ ಪದ್ಮಾಂತರನ ಪುತ್ರ(ಪಉಮ). ಒಬ್ಬ ದೊರೆಯ ಹೆಸರು. ಮಾಲ್ಯವ ಎಂಬ ಹೆಸರಿನ ಪರ್ವತದ ಅಧಿಷ್ಠಾತೃ ದೇವ. ಭರತ ಕ್ಷೇತ್ರದಲ್ಲಿ ಮುಂದಿನ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಲಿರುವ ಎಂಟನೇ ಚಕ್ರವರ್ತಿ. ಭರತ ಕ್ಷೇತ್ರದ ಭಾವೀ ಎಂಟನೇ ಬಲದೇವ (ಸಮ). ರೋಗ ನಾಶ ಮಾಡುವ ಸುಂದರ ವಸ್ತ್ರಗಳನ್ನು ಪೂರೈಸುವ ಚಕ್ರವರ್ತಿ ದೊರೆಯ ನಿಧಿ(ಉಪ). ಶ್ರೇಣಿಕ ಮಹಾರಾಜನ ಒಬ್ಬ ಮೊಮ್ಮಗ. ಒಬ್ಬ ಜೈನ ಮುನಿಯ ಹೆಸರು(ಕಪ್ಪ). ಒಂದು ಸರೋವರ(ಕಪ್ಪ). ಪದ್ಮ ವೃಕ್ಷದ ಅಧಿಷ್ಠಾತೃ ದೇವ. ಮಹಾಪದ್ಮನೆಂಬ ಹೆಸರಿನ ಜಿನದೇವನ ಬಳಿ ದೀಕ್ಷೆ ತೆಗೆದುಕೊಳ್ಳಲಿರುವ ಒಬ್ಬ ದೊರೆ, ಭಾವೀ ರಾಜರ್ಷಿ(ಠಾ). **–ಗುಮ್ಮ.** ನ: [–ಗುಲ್ಮ] ಎಂಟನೇ ದೇವ ಲೋಕದಲ್ಲಿ ಇರುವ ಒಂದು ದೇವ –ವಿಮಾನದ ಹೆಸರು(ಸಮ). ಪ್ರಥಮ ದೇವ –ಲೋಕದಲ್ಲಿ ಇರುವ ಒಂದು ದೇವ –ವಿಮಾನದ ಹೆಸರು(ಮಹಾ). **ಪು:** ಶ್ರೇಣಿಕ ಮಹಾರಾಜನ ಒಬ್ಬ ಮೊಮ್ಮಗ. ಮಹಾ ಪದ್ಮನೆಂಬ ಜಿನದೇವನಿಂದ ದೀಕ್ಷೆ ತೆಗೆದುಕೊಳ್ಳಲಿರುವ ಒಬ್ಬ ಭಾವೀ ರಾಜರ್ಷಿ(ಠಾ). **–ಚ್ಚರಿಯ.** ನ: [–ಚರಿತ] ರಾಜಾ ರಾಮಚಂದ್ರನ ಜೀವನ –ಚರಿತೆ, ಪ್ರಾಕೃತ ಭಾಷೆಯ ಒಂದು ಪ್ರಾಚೀನ ಗ್ರಂಥ, ಜೈನ ರಾಮಾಯಣ(ಪಉಮ). **–ಣಾಭ.** ಪು: [–ನಾಭ] ವಾಸುದೇವ, ವಿಷ್ಣು (ಪಉಮ). ಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಭರತ ಕ್ಷೇತ್ರದಲ್ಲಿ ಜನಿಸಲಿರುವ ಪ್ರಥಮ –ಜಿನದೇವನ ಹೆಸರು. ಕಪಿಲ –ವಾಸುದೇವನ ಒಬ್ಬ ಮಾಂಡಲಿಕ ರಾಜನ ಹೆಸರು(ಣಾಯಾ). **–ದಲ.** ನ: [–ದಲ] ಕಮಲದ ಎಲೆ. **–ದ್ದಹ.** ಪು: [–ದ್ರಹ] ನಾನಾ ಬಗೆಯ ಕಮಲಗಳಿಂದ ತುಂಬಿರುವ ಒಂದು ದೊಡ್ಡ ಸರೋವರದ ಹೆಸರು(ಪ್ಪ). **–ದ್ಧಯ.** ಪು: [–ಧ್ವಜ] ಮಹಾ ಪದ್ಮನೆಂಬ ಜಿನದೇವನ ಬಳಿ ದೀಕ್ಷೆ ತೆಗೆದುಕೊಳ್ಳಲಿರುವ ಒಬ್ಬ ರಾಜರ್ಷಿ(ಠಾ). **–ನಾಹ.** **'–ಣಾಭ' ಶಬ್ದವನ್ನು ನೋಡುವುದು.** **–ಪುರ.** ನ: [–ಪುರ] ಈಗ 'ನಾಸಿಕ' ಎಂದು ಹೆಸರಾಗಿರುವ ಒಂದು ದಾಕ್ಷಿಣಾತ್ಯ ನಗರ. **–ಪ್ಪಭ.** ಪು: [–ಪ್ರಭ] ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ಆರನೇ ಜಿನದೇವನ ಹೆಸರು. **–ಪ್ಪಭಾ.** ಸ್ತ್ರೀ: [–ಪ್ರಭಾ]ಒಂದುಪುಷ್ಕರಿಣಿಯ ಹೆಸರು. **–ಪ್ಪಹ.** **'–ಪ್ಪಭ' ಶಬ್ದವನ್ನು ನೋಡುವುದು(ಠಾ).** **–ಭದ್ದ.** ಪು: [–ಭದ್ರ] ಶ್ರೇಣಿಕ ಮಹಾರಾಜನ ಒಬ್ಬ ಮೊಮ್ಮಗ. **–ಮಾಲಿ.** ಪು: [–ಮಾಲಿನ್] ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು (ಪಉಮ). **–ಮುಹ.** **'–ಪಉಮಾಣಣ' ಶಬ್ದವನ್ನು ನೋಡುವುದು** **–ರಹ.** ಪು: [–ರಥ] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). ಮಥುರಾ ನಗರದ ರಾಜ ಜಯಸೇನನ ಮಗ(ಮಹಾ). **–ರಾಯ.** ಪು: [–ರಾಗ] ಕೆಂಪು ಬಣ್ಣದ ಒಂದು ಮಣಿ –ವಿಶೇಷ. **–ರಾಯ.**

ಪು: [-ರಾಜ] ದ್ರೌಪದಿಯನ್ನು ಅಪಹರಣ ಮಾಡಿದ್ದ ಧಾತಕೀ ಷಂಡದ ಅಮರ ಕಂಕಾ ನಗರದ ಒಬ್ಬ ರಾಜ (ಠಾ). **-ರುಕ್ಖ. ಪು: [-ವೃಕ್ಷ]** ಉತ್ತರ ಕುರು -ಕ್ಷೇತ್ರದಲ್ಲಿ ಇರುವ ಒಂದು ಮರ(ಠಾ). ವೃಕ್ಷದಂಥ ಬೃಹದಾಕಾರದ ಕಮಲ.(ಜೀವ). **-ಲಯಾ. ಸ್ತ್ರೀ: [-ಲತಾ]** ಕಮಲಿನಿ, ತಾವರೆ. ಕಮಲದ ಆಕಾರದ ಬಳ್ಳಿ(ಣಾಯಾ). **-ವಡಿಂಸಯ, ವಡೇಸಯ. ನ: [ಪದ್ಮಾವತಂಸಕ]** ಸೌಧ'ರ್ಮವೆಂಬ ದೇವಲೋಕದಲ್ಲಿ ಇರುವ ಪದ್ಮಾವತಿಯ ಒಂದು ವಿಮಾನ(ಣಾಯಾ). **-ವರವೇಇಯಾ. ಸ್ತ್ರೀ: [-ವರವೇದಿಕಾ]** ಕಮಲಗಳ ಉತ್ಕೃಷ್ಟವಾದ ವೇದಿಕೆ(ಭಗ). ಜಂಬೂ ದ್ವೀಪದ ಭೂಮಿಯ ಮೇಲೆ ಇರುವ ದೇವತೆಗಳ ಒಂದು ಭೋಗ -ಭೂಮಿ. **-ವೂಹ. ಪು: [-ವ್ಯೂಹ]** ಸೈನ್ಯವನ್ನು ಪದ್ಮಾಕಾರದಲ್ಲಿ ರಚಿಸುವುದು.(ಪಣ್ಹ). **-ಸರ. ಪು: [-ಸರಸ್]** ಕಮಲಗಳಿಂದ ಕೂಡಿದ ಸರೋವರ(ಣಾಯಾ). **-ಸಿರೀ. ಸ್ತ್ರೀ: [-ಶ್ರೀ]** ಅಷ್ಟಮ ಚಕ್ರವರ್ತಿ ಸುಭೂಮ ರಾಜನ ಪಟ್ಟದ ರಾಣಿ. ಒಬ್ಬ ಮಹಿಳೆಯ ಹೆಸರು. **-ಸೇಣ. ಪು: [-ಸೇನ]** ಶ್ರೇಣಿಕ ಮಹಾರಾಜನ ಒಬ್ಬ ಮೊಮ್ಮಗ. ಅವನು ಮಹಾವೀರ ತೀರ್ಥಂಕರರ ಬಳಿ ದೀಕ್ಷೆ ತೆಗೆದುಕೊಂಡಿದ್ದನು. ನಾಗ -ಕುಮಾರ ಜಾತಿಯ ಒಬ್ಬ ದೇವನ ಹೆಸರು(ದೀವ). **-ಸೇಹರ. ಪು: [-ಶೇಖರ]** ಪೃಥ್ವೀಪುರ ನಗರದ ಒಬ್ಬ ದೊರೆಯ ಹೆಸರು. **ಪಉಮಾಗರ. ಪು: [ಪದ್ಮಾಕರ]** ಕಮಲಗಳ ಸಮೂಹ; ಸರೋವರ(ಉಪ). **ಪಉಮಾಸಣ. ನ: [ಪದ್ಮಾಸನ]** ಪದ್ಮಗಳಿಂದ ಸಿದ್ಧಪಡಿಸಲಾದ ಆಸನ.

ಪಉಮಗ. ಪುಂನ: [ಪದ್ಮಕ] ಕೇಸರ

ಪಉಮಪ್ಪಹ. ಪು: [ಪದ್ಮಪ್ರಭ] ವಿಕ್ರಮ ಶಕೆ ೧೩ನೇ ಶತಮಾನದ ಒಬ್ಬ ಜೈನ ಆಚಾರ್ಯ.

ಪಉಮಾ. ಸ್ತ್ರೀ: [ಪದ್ಮಾ] ಲಕ್ಷ್ಮೀ, ದೇವಿ -ವಿಶೇಷ. ಲವಂಗ, ಕುಸುಂಭ ಪುಷ್ಪ. ೨೦ನೇ ತೀರ್ಥಂಕರ ಶ್ರೀಮುನಿ ಸುವ್ರತ ಸ್ವಾಮಿಯ ತಾಯಿಯ ಹೆಸರು. ಸೌಧರ್ಮ ದೇವಲೋಕದ ಇಂದ್ರನ ಪಟ್ಟದ ರಾಣಿಯ ಹೆಸರು(ಠಾ). ಭೀಮನೆಂಬ ರಾಕ್ಷಸೇಂದ್ರನ ಪಟ್ಟದ ರಾಣಿಯ ಹೆಸರು. ಒಬ್ಬ ವಿದ್ಯಾಧರ ಕನ್ಯೆಯ ಹೆಸರು(ಪಉಮ). ರಾವಣ ಒಬ್ಬಹೆಂಡತಿ, ಲಕ್ಷ್ಮೀ, ಒಂದು ವನಸ್ಪತಿ-ವಿಶೇಷ. -೬ನೇ ತೀರ್ಥಂಕರ ಶ್ರೀ ಅನಂತನಾಥನ ಮುಖ್ಯ ಶಿಷ್ಯೆಯ ಹೆಸರು. ಸುದರ್ಶನಾ ಜಂಬೂ ದ್ವೀಪದ ಉತ್ತರ ದಿಕ್ಕಿನಲ್ಲಿರುವ ಒಂದು ಪುಷ್ಕರಿಣಿ, ಎರಡನೇ ಬಲದೇವ ಮತ್ತು ವಾಸುದೇವನ ತಾಯಿಯ ಹೆಸರು (ಅಣು).

ಪಉಮಾಡ. ಪು: [ದೇ] ಒಂದು ಬಗೆಯ ವೃಕ್ಷ(ದೇ)

ಪಉಮಾಣಣ. ಪು: [ಪದ್ಮಾನನ] ಒಬ್ಬ ದೊರೆಯ ಹೆಸರು

ಪಉಮಾಭ. ಪು: [ಪದ್ಮಾಭ] ಆರನೇ ತೀರ್ಥಂಕರನ ಹೆಸರು(ಪಉಮ) ಯ

ಪಉಮಾರ. 'ಪಉಮಾಡ' ಶಬ್ದವನ್ನು ನೋಡುವುದು

ಪಉಮಾವಈ. ಸ್ತ್ರೀ: [ಪದ್ಮಾವತೀ] ಜಂಬೂ ದ್ವೀಪದ ಸುಮೇರು ಪರ್ವತದ ಪೂರ್ವದ ಕಡೆಗೆ ಇರುವ ರುಚಕ ಪರ್ವತದ ಮೇಲೆ ವಾಸಿಸುವ ಒಬ್ಬ ದಿಕ್ಕುಮಾರಿ-ದೇವಿ(ಠಾ) ನಾಗರಾಜ ಧರ್ಮೇಂದ್ರನ ಪಟ್ಟದ ರಾಣಿ ಮತ್ತು ಭಗವಾನ್ ಪಾರ್ಶ್ವನಾಥನ ಶಾಸನ ದೇವಿ. ಶ್ರೀಕೃಷ್ಣನ ಒಬ್ಬಳು ಹೆಂಡತಿಯ ಹೆಸರು(ಅಂತ), ಭೀಮನೆಂಬ ರಾಕ್ಷಸೇಂದ್ರನ ಪಟ್ಟದ ರಾಣಿ(ಭಗ). ಶಕ್ರೇಂದ್ರನ ಒಬ್ಬ ಪಟ್ಟದ ರಾಣಿ. ಚಂಪೇಶ್ವರ ದಧಿವಾಹನನ ಒಬ್ಬಹೆಂಡತಿಯ ಹೆಸರು. ರಾಜಾ ಕೂಣಿಕನ ಒಬ್ಬಳು ಹೆಂಡತಿ. ಅಯೋಧ್ಯೆ ರಾಜ ಹರಿಸಿಂಹನ ಒಬ್ಬ ಹೆಂಡತಿ(ಧಮ್ಮ). ತೆತಲೀಪುರದ ರಾಜ ಕನಕ -ಕೇತುವಿನಹೆಂಡತಿ. ಕೌಶಾಂಬಿ ನಗರದ ರಾಜ ಶತಾನೀಕನ ಮಗ ಉದಯನನ ಹೆಂಡತಿ ಶೈಲಕ ಪುರದ ರಾಜ ಶೈಲಕನ ಹೆಂಡತಿ(ಣಾಯಾ), ರಾಜಾ ಕೂಣಿಕನ ಮಗ ಕಾಲಕುಮಾರನ ಹೆಂಡತಿಯ ಹೆಸರು. ದೊರೆ ಮಹಾಬಲನ ಹೆಂಡತಿಯ ಹೆಸರು. ೨೦ನೇ ತೀರ್ಥಂಕರ ಮುನಿಸುವ್ರತ ಸ್ವಾಮಿಯ ತಾಯಿಯ ಹೆಸರು. ಪುಂಡರೀಕಿಣೀ ನಗರದ ರಾಜ ಮಹಾಪದ್ಮನ ಪಟ್ಟದ ರಾಣಿ(ಆಚೂ), ರಮ್ಯವೆಂಬ ಹೆಸರಿನ ವಿಜಯದ ರಾಜಧಾನಿ.

ಪಉಮಾವತ್ತೀ(ಅಪ). ಸ್ತ್ರೀ: [ಪದ್ಮಾವತೀ] ಒಂದು ಛಂದಸ್ಸು.

ಪಉಮಿಣೀ. ಸ್ತ್ರೀ: [ಪದ್ಮಿನೀ] ಕಮಲ, ಕಮಲದ ಬಳ್ಳಿ(ಸುಪಾ), ಒಬ್ಬ ಶ್ರೇಷ್ಠಿಯ ಹೆಸರು(ಉಪ)

ಪಉಮುತ್ತರ. ಪು: [ಪದ್ಮೋತ್ತರ] ಒಂಬತ್ತನೇ ಚಕ್ರವರ್ತಿ ಶ್ರೀ ಮಹಾಪದ್ಮರಾಜನ ತಂದೆಯ ಹೆಸರು. ಮಂದರ ಪರ್ವತದ ಭದ್ರಶಾಲ ವನದ ಒಂದು ದಿಗ್ಗಜ ಪರ್ವತ

ಪಉಮತ್ತರಾ. ಸ್ತ್ರೀ: [ಪದ್ಮೋತ್ತರಾ] ಒಂದು ಬಗೆಯ ಸಕ್ಕರೆ(ಣಾಯಾ)

ಪಉರ. ವಿ: [ಪ್ರಚುರ] ಬಹಳ, ಅಧಿಕ, ವಿಪುಲ

ಪಉರ. ವಿ: [ಪೌರ] ಪುರಕ್ಕೆ ಸಂಬಂಧಿಸಿದ, ನಗರಕ್ಕೆ ಸಂಬಂಧಿಸಿದ. ನಗರದಲ್ಲಿ ವಾಸಿಸುವವನು(ಹೇ)

ಪಉರವ. ಪು: [ಪೌರವ] ಪುರು ಎಂಬ ಚಂದ್ರವಂಶದ ರಾಜನ ಮಗ.

ಪಉರಾಣ(ಅಪ).'ಪುರಾಣ' ಶಬ್ದವನ್ನು ನೋಡುವುದು

ಪಉರಿಸ. ವಿ: [ಪೌರುಷೇಯ] ಪುರುಷನಿಂದ ಮಾಡಲ್ಪಟ್ಟ,

ಪಉರಿಸ.}. ಪುಂನ: [ಪೌರುಷ] ಪುರುಷತ್ವ,

ಪಉರುಸ}. ಗಂಡಸುತನ, ವೀರತ್ವ(ಹೇ) ಶಕ್ತಿ, ವೀರ್ಯ

ಪಉರಿಸ. ವಿ: [ಪೌರುಷೇಯ] ಪುರುಷನು ಮಾಡಿದ, ಪುರುಷ ನಿರ್ಮಿತ

ಪಉಲ. ಸಕ: [ಪಚ್] ಅಡುಗೆ ಮಾಡು, ಬೇಯಿಸು

ಪಉಲಣ. ನ: [ಪಚನ] ಅಡುಗೆ ಮಾಡುವುದು, ಬೇಯಿಸುವುದು, ಅಡುಗೆ(ಪಣ್ಹಾ)

ಪಉಲಿಅ. ವಿ: [ಪಕ್ವ] ಬೇಯಿಸಲ್ಪಟ್ಟ, ಪಾಕ ಮಾಡಲ್ಪಟ್ಟ, (ಪಾಅ), ಪರಿಣತವಾದ, ಹಣ್ಣಾದ

ಪಉಲಿಅ. ವಿ: [ಪ್ರಜ್ವಲಿತ] ಚೆನ್ನಾಗಿ ಉರಿಸಲ್ಪಟ್ಟ, ದಗ್ಧ(ಉವಾ), ಪ್ರಕಾಶಗೊಳಿಸಲ್ಪಟ್ಟ

ಪಉಲ್ಲ. 'ಪಉಲ' ಶಬ್ದವನ್ನು ನೋಡುವುದು

ಪಉಲ್ಲ. ವಿ: [ಪಕ್ವ] ಬೇಯಿಸಲ್ಪಟ್ಟ, ಪಾಕ ಮಾಡಲ್ಪಟ್ಟ (ಪಾಅ)

ಪಉವಿಯ. ವಿ: [ಪ್ರಕುಪಿತ] ಬಹಳವಾಗಿ ಕೋಪಗೊಂಡ, ಕ್ರುದ್ಧ(ಮಹಾ)

ಪಉಸ. ಸಕ: [ಪ್ರ +ದ್ವಿಷ್] ದ್ವೇಷಿಸು(ಓಘ)

ಪಉಸಯ. ವಿ: [ದೇ] ದೇಶ –ವಿಶೇಷದಲ್ಲಿ ಜನಿಸಿದವ. ಸ್ತ್ರೀ: –ಸಿಯಾ

ಪಉಸ್ಸ. 'ಪಉಸ' ಶಬ್ದವನ್ನು ನೋಡುವುದು

ಪಉಹಣ.(ಅಪ). 'ಪವಹಣ' ಶಬ್ದವನ್ನು ನೋಡುವುದು

ಪಊಢ. ನ: [ದೇ] ಮನೆ, ಗೃಹ.

ಪಏ. ಅ: [ಪ್ರಗೇ] ಮೊದಲಿಗೆ, ಹಿಂದೆ, ಪೂರ್ವದಲ್ಲಿ

ಪಏಣಿಯಾರ. ಪು: [ಪ್ರೈಣೀಚಾರ] ಗಂಡು ಜಿಂಕೆಗಳನ್ನು ಹಿಡಿಯುವ ಸಲುವಾಗಿ ಹೆಣ್ಣು ಜಿಂಕೆಗಳನ್ನು ಮೇಯಿಸಿ, ಪೋಷಿಸುವ ವ್ಯಾಧರ ಒಂದು ಜಾತಿ

ಪಏರ. ಪು: [ದೇ] ಬೇಲಿಯಲ್ಲಿನ ಬಿರುಕು, ದಾರಿ, ಹಾದಿ. **'ಕಂಠದೀನಾರ'** ಎಂಬ ಹೆಸರಿನ ಆಭರಣ. ಗಂಟಲು ಒಡೆದಿರುವುದು, ದೀನ ಶಬ್ದ, ಆರ್ತಸ್ವರ, ವಿ: ದುರ್ನಡತೆಯುವನು,ಕೆಟ್ಟ ನಡತೆಯವನು

ಪಏಸ. ಪು: [ದೇ] ನೆರೆಯವನು

ಪಏಸ. ಪು: [ಪ್ರದೇಶ] ವಿಭಜನೆ ಮಾಡಲು ಸಾಧ್ಯವಿಲ್ಲದಂಥ ಸೂಕ್ಷ್ಮ ಅಂಗ(ಠಾ), ಕರ್ಮ –ದಳದ ಸಂಚಯ, ಸ್ಥಳ, ಜಾಗ(ಕುಮಾ), ದೇಶದ ಒಂದು ಭಾಗ, ಪ್ರಾಂತ(ಕುಮಾ), ಒಂದು ಅಳತೆ, ಅಂಶವಿಲ್ಲದ ಪರಿಮಿತ ಅಳತೆ., ಸಣ್ಣ ಭಾಗ, ಪರಮಾಣು, ಎರಡು ಅಣುಗಳ, ಮೂರು ಅಣುಗಳ ಸಮೂಹ. **–ಕಮ್ಮ.** ನ: [–ಕರ್ಮನ್] ಪ್ರದೇಶ ರೂಪದ ಕರ್ಮ(ಭಗ). **–ಗ್ಗ.** ನ: [ಪ್ರದೇಶಾಗ್ರ] ಕರ್ಮದ ದಳಗಳ ಅಳತೆ. **–ಘಣ.** ವಿ: [–ಘನ] ನಿಬಿಡ(=ದಟ್ಟ) ಪ್ರದೇಶ(ಔಪ). **–ಣಾಮ.** ನ: [–ನಾಮನ್] ಕರ್ಮ –ವಿಶೇಷ(ಠಾ). **–ಣಾಮ.** ಪು: [–ನಾಮ] ಕರ್ಮ –ದ್ರವ್ಯಗಳ ಪರಿಣಾಮ. **–ಬಂಧ.** ಪು: [–ಬಂಧ] ಆತ್ಮ ಪ್ರದೇಶಗಳೊಂದಿಗೆ ಕರ್ಮದಳಗಳ ಸಂಬಂಧ. **–ಸಂಕಮ.** ಪು: [–ಸಂಕ್ರಮ] ಕರ್ಮ –ದ್ರವ್ಯಗಳನ್ನು ಬಿನ್ನ ಸ್ವಭಾವದ ಕರ್ಮಗಳ ರೂಪಕ್ಕೆ ಪಕ್ವಗೊಳಿಸುವುದು

ಪಏಸಣ. ನ: [ಪ್ರದೇಶನ] ಉಪದೇಶ.

ಪಏಸಯ. ವಿ: [ಪ್ರದೇಶಕ] ಉಪದೇಶ ಮಾಡುವವನು, ಪ್ರದರ್ಶಕ

ಪಏಸಿ. ಪು: [ಪ್ರದೇಶಿನ್] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ದೊರೆ. ಇವನು ಭಗವಾನ್ ಪಾರ್ಶ್ವನಾಥನ ಕೇಶಿ ಎಂಬ ಗಣಧರನಿಂದ ಪ್ರಬುದ್ಧನಾದನು (ಕುಪ್ರ)

ಪಏಸಿಣೀ. ಸ್ತ್ರೀ: [ದೇ] ನೆರೆಯಲ್ಲಿ ವಾಸಿಸುವ ಮಹಿಳೆ (ದೇ)
ಪಏಸಿಣೀ. ಸ್ತ್ರೀ: [**ಪ್ರದೇಶಿನೀ**] ಹೆಬ್ಬೆರಳಿನ ಪಕ್ಕದ ಬೆರಳು; ತೋರುಬೆರಳು(ತರ್ಜನಿ)(ಓಘ)
ಪಏಸಿಯ. 'ಪದೇಸಿಯ' ಶಬ್ದವನ್ನು ನೋಡುವುದು
ಪಓಅ. 'ಪಓಗ' ಶಬ್ದವನ್ನು ನೋಡುವುದು
ಪಓಅ. ಪು: [**ಪಯೋದ**] **ಮೋಡ**
ಪಓಅಣ. ನ: [**ಪ್ರಯೋಜನ**] ಹೇತು, ನಿಮಿತ್ತ, ಕಾರಣ, ಕೆಲಸ, ಉದ್ದೇಶ, ಉಪಯೋಗ(ಸ್ವಪ್ನ)
ಪಓಇದ.(ಶೌ). ವಿ: [**ಪ್ರಯೋಜಿತ**] ಪ್ರಯೋಗಿಸಲ್ಪಟ್ಟದ್ದು (ನಾಟ)
ಪಓಗ. ಪು: [**ಪ್ರಯೋಗ**] ಶಬ್ದ –ಯೋಜನೆ. ಜೀವದ ವ್ಯಾಪಾರ, ಚೇತನದ ಪ್ರಯತ್ನ(ಸಮ), ಪ್ರೇರಣೆ, ಉಪಾಯ(ಆಚೂ), ಜೀವದ ಪ್ರಯತ್ನದಲ್ಲಿ ಕಾರಣಭೂತವಾದ ಮನ ಇತ್ಯಾದಿ(ತಾ), ವಾದ –ವಿವಾದ, ಶಾಸ್ತ್ರಾರ್ಥ(ದಸಾ). ಪ್ರಯೋಜನ, **–ಕಮ್ಮ.** ನ: [**–ಕರ್ಮನ್**] ಮನಸ್ಸಿನ ಪ್ರಯತ್ನದಿಂದ ಆತ್ಮ –ಪ್ರದೇಶಗಳೊಂದಿಗೆ ಕಟ್ಟಿಹಾಕುವ ಕರ್ಮ(ರಾಜ). **–ಕರಣ.** ನ: [**–ಕರಣ**] ಜೀವ –ವ್ಯಾಪಾರದ ಮೂಲಕ ಆಗುವ ಯಾವುದಾದರೂ ವಸ್ತುವಿನ ನಿರ್ಮಾಣ(ವಿಸೇ). **–ಕಿರಿಯಾ.** ಸ್ತ್ರೀ: [**–ಕ್ರಿಯಾ**] ಮನಸ್ಸು ಇತ್ಯಾದಿಗಳ ಪ್ರಯತ್ನ(ತಾ). **–ಫಡ್ಡಯ.** ನ: [**–ಸ್ಪರ್ಧಕ**] ಮನವೇ ಮೊದಲಾದವುಗಳ ವ್ಯಾಪಾರ –ಸ್ಥಾನಗಳ ವೃದ್ಧಿಯ ಮೂಲಕ ಕರ್ಮ –ಪರಮಾಣುಗಳಲ್ಲಿ ವೃದ್ಧಿಯಾಗುವ ರಸ.(ಕಮ್ಮಪ). **–ಬಂಧ.** ಪು: [**–ಬಂಧ**] ಜೀವ –ಪ್ರಯತ್ನದ ಮೂಲಕ ಉಂಟಾಗುವ ಬಂಧನ(ಭಗ). **–ಮಇ.** ಸ್ತ್ರೀ: [**–ಮತಿ**] ವಾದ –ವಿಷಯಕವಾದ ಪರಿಜ್ಞಾನ. **–ಸಂಪಯಾ.** ಸ್ತ್ರೀ: [**–ಸಂಪತ್**] ಆಚಾರ್ಯನ ವಾದ –ವಿಷಯಕವಾದ ಸಾಮರ್ಥ್ಯ. **–ಸಾ.** ಅ: [**ಪ್ರಯೋಗೇಣ**] ಜೀವ –ಪ್ರಯತ್ನದಿಂದ.
ಪಓಜ. 'ಪಉಂಜ=ಪ್ರ+ಯುಜ್' ಶಬ್ದವನ್ನು ನೋಡುವುದು
ಪಓಜಗ. ವಿ: [**ಪ್ರಯೋಜಕ**] ನಿರ್ಣಾಯಕ, ಗಮಕ, ಚೆನ್ನಾಗಿ ತಿಳಿಸುವ
ಪಓಟ್ಠ. 'ಪಉಟ್ಠ=ಪ್ರಕೋಷ್ಠ' ಶಬ್ದವನ್ನು ನೋಡುವುದು

ಪಓತ್ತ. ನ: [**ಪ್ರತೋತ್ರ**] ಅಂಕುಶ, **–ಧರ.** ಪು: [**–ಧರ**] ಎತ್ತಿನ ಗಾಡಿ ಓಡಿಸುವವನು(ಣಾಯಾ)
ಪಓದ. ಪು: [**ಪ್ರತೋದ**] **ಮೇಲಿನ ಶಬ್ದವನ್ನು ನೋಡುವುದು(ಔಪ)**
ಪಓಪ್ಪಯ. ಪು: [**ಪ್ರಪೌತ್ರಕ**] ಮೊಮ್ಮಗನ ಮಗ, ಮರಿಮಗ, ಪ್ರಶಿಷ್ಯನ ಶಿಷ್ಯ
ಪಓಪ್ಪಿಯ. ಪು: [ದೇ. **ಪ್ರಪೌತ್ರಿಕ**] ವಂಶ –ಪರಂಪರೆ, ಶಿಷ್ಯ –ಸಂತಾನ(ಭಗ)
ಪಓರಾಸಿ. ಪು: [**ಪಯೋರಾಶಿ**] ಸಮುದ್ರ
ಪಓಲ. ಪು: [**ಪಟೋಲ**] ಕಹಿ ಪಡವಲ ಗಿಡ(ಪಣ್ಣ)
ಪಓಲೀ. ಸ್ತ್ರೀ: [**ಪ್ರತೋಲೀ**] ನಗರದ ಒಳಗಿನ ರಸ್ತೆ, ನಗರದ ಬಾಗಿಲು(ಪಾಅ)
ಪಓವಟ್ಟಾವ. 'ಪಜ್ಜವತ್ಥಾವ' ಶಬ್ದವನ್ನು ನೋಡುವುದು
ಪಓವಾಹ. ಪು: [**ಪಯೋವಾಹ**] ಮೋಡ, (ಪಉಮ)
ಪಓಸ. ಪು: [ದೇ. **ಪ್ರದ್ವೇಷ**] ಅತಿಯಾದ ದ್ವೇಷ(ತಾ)
ಪಓಸ. ಸಕ: [**ಪ್ರ+ದ್ವಿಷ್**] ದ್ವೇಷಿಸು,
ಪಓಸ. ಪುಂನ: [**ಪ್ರದೋಷ**] ಸಂಧ್ಯಾಕಾಲ, ಹಗಲು ಮತ್ತು ರಾತ್ರಿಗಳು ಸಂಧಿಸುವ ಸಮಯ, ವಿ: ಹೆಚ್ಚು ದೋಷದಿಂದ ಕೂಡಿದ(ಸೇ)
ಪಓಹಣ(ಅಪ). 'ಪವಹಣ' ಶಬ್ದವನ್ನು ನೋಡುವುದು
ಪಓಹರ. ಪು: [**ಪಯೋಧರ**] ಸ್ತನ, ಮೊಲೆ(ಗಉಡ), ಮೋಡ, ಒಂದು ಛಂದಸ್ಸು
ಪಂಕ. ಪುಂನ: [**ಪಂಕ**] ಕೆಸರು, ಪಾಪ, ಇಂದ್ರಿಯಾದಿಗಳನಿಗ್ರಹವಿಲ್ಲದಿರುವುದು(=ಅಸಂಯಮ). **–ಆವಲಿಆ.** ಸ್ತ್ರೀ: [**ಪಂಕಾವಲಿಕಾ**] ಒಂದು ಬಗೆಯ ಛಂದಸ್ಸು. **–ಪ್ಪಭಾ.** ಸ್ತ್ರೀ: [**–ಪ್ರಭಾ**] ನಾಲ್ಕನೆಯ ನರಕ –ಭೂಮಿ(ತಾ). **–ಬಹುಲ.** ವಿ: [**–ಬಹುಲ**] ಬಹಳವಾದ ಕೆಸರಿನಿಂದ ಕೂಡಿರುವುದು. **ಪುಂನ:** ಅತಿ ಪಾಪ ಭರಿತ. **ಪುಂನ:** ರತ್ನ –ಪ್ರಭಾ ಎಂಬ ನರಕ ಭೂಮಿಯ ಮೊದಲ ಕಾಂಡ. **–ಯ.** ನ: [**–ಜ**] ಕಮಲ, **–ವಈ.** ಸ್ತ್ರೀ: [**–ವತೀ**] ಒಂದು ನದಿ(ತಾ)
ಪಂಕಜ. 'ಪಂಕ –ಯ' ಶಬ್ದವನ್ನು ನೋಡುವುದು
ಪಂಕಾ. ಸ್ತ್ರೀ: [**ಪಂಕಾ**] ನಾಲ್ಕನೆಯ ನರಕ –ಭೂಮಿ.
ಪಂಕಾಭಾ. ಸ್ತ್ರೀ: [**ಪಂಕಾಭಾ**] ನಾಲ್ಕನೇ ನರಕ–ಭೂಮಿ
ಪಂಕಾವಈ. ಸ್ತ್ರೀ: [**ಪಂಕಾವತೀ**] ಪುಷ್ಕಲ ಎಂಬ ವಿಜಯದ ಪಶ್ಚಿಮದ ಕಡೆಯ ಒಂದು ನದಿ.

ಪಂಕಿಯ. ವಿ: [ಪಂಕಿತ] ಕೆಸರಿನಿಂದ ಕೂಡಿದ(ಭಗ)
ಪಂಕಿಲ. ವಿ: [ಪಂಕಿಲ] ಕೆಸರಿರುವ, ಕೆಸರಿನಿಂದ ಕೂಡಿದ(ಕಪ್ಪೂ)
ಪಂಕೇರುಹ. ನ: [ಪಂಕೇರುಹ] ಕಮಲ, ತಾವರೆ
ಪಂಖ. ಪುಂಸ್ತ್ರೀ: [ಪಕ್ಷ] ರೆಕ್ಕೆ, ಹದಿನೈದು ದಿನ, **ಪಂಖಾಸಣ.** ನ: [ಪಕ್ಷಾಸನ] ಆಸನ-ವಿಶೇಷ
ಪಂಖಿ. ಪುಂಸ್ತ್ರೀ: [ಪಕ್ಷಿನ್] ಹಕ್ಕಿ, ಪಕ್ಷಿ. ಸ್ತ್ರೀ: -ಣೀ.
ಪಂಖುಡಿಆ.}. ಸ್ತ್ರೀ: [ದೇ] ಎಲೆ, ಹೂವಿನ ದಳ
ಪಂಖುಡೀ}.
ಪಂಗ. ಸಕ: [ಗ್ರಹ್] ಸ್ವೀಕರಿಸು
ಪಂಗಣ. ನ: [ಪ್ರಾಂಗಣ] ಅಂಗಳ(ಕುಪ್ರ)
ಪಂಗು. ವಿ: [ಪಂಗು] ಹೆಳವ, ಕುಂಟ(ಪಾಅ)
ಪಂಗುರ. ಸಕ: [ಪ್ರಾ+ವೃ] ಮುಚ್ಚು, ಮರೆಮಾಡು, ಆಚ್ಛಾದಿಸು(ಭವಿ)
ಪಂಗುರಣ. ನ: [ಪ್ರಾವರಣ] ವಸ್ತ್ರ, ಬಟ್ಟೆ
ಪಂಗುಲ. ವಿ: [ಪಂಗುಲ] **'ಪಂಗು' ಶಬ್ದವನ್ನು ನೋಡುವುದು**
ಪಂಚ. ತ್ರಿ.ಬ: [ಪಂಚನ್] ಐದು. **-ಉಲ.** ನ: [-ಕುಲ] ಪಂಚಾಯುತಿ. **-ಉಲಿಯ.** ಪು: [-ಕುಲಿಕ] ಪಂಚಾಯತಿಯಲ್ಲಿ ಕುಳಿತುಕೊಂಡು ವಿಚಾರಣೆ ನಡೆಸುವವನು. **-ಕತ್ತಿಯ.** ಪು:[-ಕೃತ್ತಿಕ] ಐದೂ ಕಲ್ಯಾಣಗಳು ಕೃತ್ತಿಕಾ ನಕ್ಷತ್ರದಲ್ಲಿ ಆಗಿದ್ದ ಕುಂಥುನಾಥ ತೀರ್ಥಂಕರನದು(ತಾ). **-ಕಪ್ಪ.** ಪು: [-ಕಲ್ಪ] ಶ್ರೀ ಭದ್ರಬಾಹು ಸ್ವಾಮಿ ರಚಿಸಿದ ಒಂದು ಪ್ರಾಚೀನ ಗ್ರಂಥದ ಹೆಸರು. **-ಕಲ್ಲಾಣಯ.** ನ: [-ಕಲ್ಯಾಣಕ] ತೀರ್ಥಂಕರನ ಗರ್ಭ, ಜನ್ಮ, ದೀಕ್ಷಾ, ಕೇವಲ ಜ್ಞಾನ ಮತ್ತು ನಿರ್ವಾಣ ಕಲ್ಯಾಣಗಳು. -೩ನೇ ತೀರ್ಥಂಕರ ಶ್ರೀ ವಿಮಲನಾಥನ ಐದೂ ಕಲ್ಯಾಣಗಳು ನಡೆದಿದ್ದ ಕಾಂಪಿಲ್ಯಪುರ ಪಟ್ಟಣ(ತೋ), ತಪೋ - ವಿಶೇಷ. **-ಕೊಟ್ಠಗ.** ವಿ: [-ಕೋಷ್ಠಕ] ಐದು ಕೊಠಡಿಗಳಿಂದ ಕೂಡಿದ. ಪು: ಪುರುಷ. **-ಗವ್ವ.** ನ: [-ಗವ್ಯ] ಗೋವಿನ ಐದು ಪದಾರ್ಥಗಳಾದ ಹಾಲು, ಮೊಸರು, ತುಪ್ಪ, ಸಗಣಿ(ಗೋಮಯ) ಮತ್ತು ಗೋಮೂತ್ರ (ಪಂಚಗವ್ಯ). **-ಗಾಹ.** ನ: [-ಗಾಥ] ಗಾಥಾ ಛಂದಸ್ಸಿನ ಐದು ಪದ್ಯಗಳು. **-ಗುಣ.** ವಿ: [-ಗುಣ] ಐದು ಗುಣಗಳು(ತಾ). **-ಚಿತ್ತ.** ಪು: [-ಚಿತ್ರ] ಐದೂ ಕಲ್ಯಾಣಗಳು ಚಿತ್ರಾ ನಕ್ಷತ್ರದಲ್ಲೇ ಆಗಿದ್ದ ಆರನೇ ತೀರ್ಥಂಕರ ಶ್ರೀಪದ್ಮಪ್ರಭ(ತಾ). **-ಜಾಮ.** ನ: [-ಯಾಮ] ಐದು ಮಹಾ ವ್ರತಗಳಾದ ಅಹಿಂಸೆ, ಸತ್ಯ, ಅಚೌರ್ಯ(ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ ಮತ್ತು ತ್ಯಾಗ. ವಿ: ಈ ಐದು ವ್ರತಗಳ ನಿರೂಪಣೆ ಎಲ್ಲಿದೆಯೋ ಅದು. ಣಉಇ. ಸ್ತ್ರೀ: [-ನವತಿ] ತೊಂಬತ್ತೈದು. **-ಣಉಯ.** ವಿ: [-ನವತ] ತೊಂಬತ್ತೈದನೆಯ. **-ತಾಲೀಸ**(ಅಪ). ಸ್ತ್ರೀನ: [ಚತ್ವಾರಿಂಶತ್] ನಲವತ್ತೈದು. **-ತಿತ್ಥೀ.** ಸ್ತ್ರೀ: [-ತೀರ್ಥೀ] ಐದು ತೀರ್ಥಗಳ ಸಮುದಾಯ(ಧರ್ಮ). **-ತೀಸಇಮ.** ವಿ: [-ತ್ರಿಂಶತ್ತಮ] ಮೂವತ್ತೈದನೆಯ(ಪಣ್ಣ). **-ದಸ.** ತ್ರಿ.ಬ: [-ದಶನ್] ಹದಿನೈದನೆಯ, ಹುಣ್ಣಿಮೆ, ಅಮಾವಾಸ್ಯೆ. **-ದಸುತ್ತರಸಯ.** ವಿ: [-ದಶೋತ್ತರಶತತಮ] ನೂರ ಹದಿನೈದನೆಯ (ಪಉಮ). **-ನಉಇ.** **'-ಣಉಇ' ಶಬ್ದವನ್ನು ನೋಡುವುದು.** **-ನಾಣಿ.** ವಿ: [-ಜ್ಞಾನಿನ್] ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲ ಈ ಐದೂ ಜ್ಞಾನಗಳಿರುವವನು, ಸರ್ವಜ್ಞ(ಸಮ್ಮ). **-ಪವ್ವೀ.** ಸ್ತ್ರೀ: [-ಪರ್ವೀ] ತಿಂಗಳಿನ ಎರಡು ಅಷ್ಟಮಿ, ಎರಡು ಚತುರ್ದಶಿ, ಮತ್ತು ಶುಕ್ಲ ಪಂಚಮಿ ಈ ಐದು ತಿಥಿಗಳು. **-ಪುವ್ವಾಸಾಢ.** ಪು: [-ಪೂರ್ವಾಷಾಢ] ಹತ್ತನೇ ತೀರ್ಥಂಕರ ಶ್ರೀ ಶೀತಲನಾಥನ ಐದೂ ಕಲ್ಯಾಣಗಳು ಪೂರ್ವಾಷಾಢ ನಕ್ಷತ್ರದಲ್ಲಿ ಆಗಿದ್ದುವು(ತಾ). **-ಪೂಸ.** ಪು: [-ಪುಷ್ಯ] ಹದಿನೈದನೇ ತೀರ್ಥಂಕರ ಶ್ರೀ ಧರ್ಮನಾಥ(ತಾ). **-ಬಾಣ.** ಪು: [-ಬಾಣ] ಕಾಮದೇವ. **-ಭೂಯ.** ನ: [-ಭೂತ] ಪೃಥ್ವಿ, ನೀರು, ಬೆಂಕಿ, ವಾಯು ಮತ್ತು ಆಕಾಶ ಈ ಐದು ಪದಾರ್ಥಗಳು. **-ಭೂಯವಾಇ.** ವಿ: [-ಭೂತವಾದಿನ್] ಆತ್ಮವನ್ನು ಒಪ್ಪದೆ ಕೇವಲ ಪಂಚಭೂತಗಳನ್ನಷ್ಟೇ ಒಪ್ಪುವವನು; ನಾಸ್ತಿಕ. **-ಮಹವ್ವಇಯ.** ವಿ: [-ಮಹಾವ್ರತಿಕ] ಐದು ಮಹಾ ವ್ರತಗಳನ್ನು ಆಚರಿಸುವವನು(ಸೂಅ). **-ಮಹವ್ವಯ.** ನ: [-ಮಹಾವ್ರತ] ಹಿಂಸೆ, ಅಸತ್ಯ, ಕಳ್ಳತನ, ಮೈಥುನ ಮತ್ತು ಪರಿಗ್ರಹಗಳನ್ನು

ಪೂರ್ತಿಯಾಗಿ ತ್ಯಜಿಸುವುದು(ಪಣ್ಣ). **–ಮುಟ್ಠಿಯ. ವಿ: [–ಮುಷ್ಟಿಕ]** ಐದು ಮುಷ್ಟಿಗಳನ್ನು ಐದು ಮುಷ್ಟಿಗಳಿಂದಪೂರ್ಣಗೊಳಿಸಲಾಗುತ್ತದೆ (ಲೋಚ). **–ಮುಹ. ಪು: [–ಮುಖ]** ಸಿಂಹ, ಪಂಚಾನನ (ಉಪ). **–ಯಸೀ.** ‘ **–ದಸೀ**’ **ಶಬ್ದವನ್ನು ನೋಡುವುದು. –ರತ್ತ, ರಾಯ. ಪು: [–ರಾತ್ರ]** ಐದು ರಾತ್ರಿಗಳು(ಪಣ್ಣ). **–ರಾಸಿಯ. ನ: [–ರಾಶಿಕ]** ಗಣಿತ –ವಿಶೇಷ(ಠಾ). **–ರೂವಿಯ. ವಿ: [–ರೂಪಿಕ]** ಐದು ಬಗೆಯ ಬಣ್ಣಗಳುಳ್ಳ(ಠಾ). **–ವತ್ಥುಗ. ನ: [–ವಸ್ತುಕ]** ಆಚಾರ್ಯ ಹರಿಭದ್ರಸೂರಿ ವಿರಚಿತ ಗ್ರಂಥ –ವಿಶೇಷ. **–ವರಿಸ. ವಿ: [–ವರ್ಷ]** ಐದು ವರ್ಷ ವಯಸ್ಸಿನ. **–ವಿಹ. ವಿ: [–ವಿಧ]** ಐದು ಬಗೆಯ(ಅಣು). **–ವೀಸಇವ. ವಿ: [–ವಿಂಶತಿತಮ]** ಇಪ್ಪತ್ತೈದನೆಯ(ಪಉಮ). **–ಸಂಗಹ. ಪು: [–ಸಂಗ್ರಹ]** ಆಚಾರ್ಯ ಹರಿಭದ್ರಸೂರಿ ರಚಿಸಿದ ಒಂದು ಜೈನ ಗ್ರಂಥ. **–ಸಂವಚ್ಛರಿಯ. ವಿ: [–ಸಾಂವತ್ಸರಿಕ]** ಐದು ವರ್ಷಗಳ ಆಯುಸ್ಸುಳ್ಳ. ಐದು ವರ್ಷಗಳ ಪರಿಣಾಮದ. **–ಸಟ್ಠ. ವಿ: [–ಷಷ್ಟ]** ಅರುವತ್ತೈದನೆಯ. **–ಸಟ್ಠಿ. ಸ್ತ್ರೀ: [–ಷಷ್ಟಿ]** ಅರುವತ್ತೈದು. **–ಸಮಿಯ. ವಿ: [–ಸಮಿತ]** ಐದು ಸಮಿತಿಗಳನ್ನು ಪಾಲನೆ ಮಾಡುವ. **–ಸರ. ಪು: [–ಶರ]** ಮನ್ಮಥ(ಪಾಅ). **–ಸೀಸ. ಪು: [–ಶೀರ್ಷ]** ದೇವ –ವಿಶೇಷ. **–ಸುಣ್ಣ. ನ: [–ಶೂನ್ಯ]** ಐದು ಪ್ರಾಣಿಗಳನ್ನು ವಧಿಸುವ ಸ್ಥಳ(ಸೂಅ). **–ಸುತ್ತಗ. ನ: [–ಸೂತ್ರಕ]** ಆಚಾರ್ಯ ಹರಿಭದ್ರ ಸೂರಿ ವಿರಚಿತ ಜೈನ ಗ್ರಂಥ. **–ಸೇಲ, –ಸೇಲಗ, –ಸೇಲಯ. ಪು: [–ಶೈಲ, –ಕ]** ಲವಣ ಸಾಗರದಲ್ಲಿರುವ ಮತ್ತು ಐದು ಪರ್ವತಗಳಿಂದ ಅಲಂಕೃತವಾದ ಒಂದು ಸಣ್ಣ ದ್ವೀಪ(ಮಹಾ). **–ಸೋಗಂಧಿಅ. ವಿ: [–ಸೌಗಂಧಿಕ]** ಏಲಕ್ಕಿ, ಲವಂಗ, ಕರ್ಪೂರ, ಮತ್ತು ಜಾತಿಫಲ –ಈ ಐದು ಸುಗಂಧಿತ ವಸ್ತುಗಳಿಂದ ಸಂಸ್ಕಾರಗೊಂಡ (ಉವಾ). **–ಹತ್ತರ. ವಿ: [–ಸಪ್ತತ]** ಎಪ್ಪತ್ತೈದನೆಯ (ಪಉಮ). **–ಹತ್ತರಿ. ಸ್ತ್ರೀ: [–ಸಪ್ತತಿ]** ಎಪ್ಪತ್ತೈದು. ಯಾರ ಸಂಖ್ಯೆ ಎಪ್ಪತ್ತೈದೋ ಅವರು(ಕಪ್ಪ). **–ಹತ್ಥುತ್ತರ. ಪು: [–ಹಸ್ತೋತ್ತರ]** ಐದೂ ಕಲ್ಯಾಣಗಳನ್ನು ಉತ್ತರ ಫಲ್ಗುಣೀ ನಕ್ಷತ್ರದಲ್ಲಿ ಭಗವಾನ್ ಮಹಾವೀರನಿಗೆ ನಡೆಸಲಾಗಿತ್ತು. ತೀರ್ಥಂಕರ(ಕಪ್ಪ). **–ಪಂಚಾವುಹ. ಪು: [–ಪಂಚಾಯುಧ]** ಕಾಮದೇವ. **ಪಂಚಾಣಉಇ. ಸ್ತ್ರೀ: [–ನವತಿ]** ತೊಂಬತ್ತೈದು. ಯಾರ ಸಂಖ್ಯೆ ತೊಂಬತ್ತೈದೋ ಅವರು (ಪಉಮ). **ಪಂಚಾಣಉಯ. ವಿ: [–ನವತ]** ತೊಂಬತ್ತೈದನೆಯ. **–ಪಂಚಾಣಣ. ಪು: [ಪಂಚಾನನ]** ಸಿಂಹ, ಆನೆ(ಸುಪಾ). **ಪಂಚಾಣುವ್ವಇಯ. ವಿ: [ಪಂಚಾಣುವ್ರತಿಕ]** ಹಿಂಸೆ, ಅಸತ್ಯ, ಕಳ್ಳತನ, ಮೈಥುನ, ಮತ್ತು ಪರಿಗ್ರಹ (=ಸ್ವೀಕರಿಸುವುದು) ಇವುಗಳನ್ನು ಆಂಶಿಕವಾಗಿ ತ್ಯಜಿಸಿದವನು (ಔಪ). ಪಂಚಾಯಾಮ. **‘–ಜಾಮ’** ಶಬ್ದವನ್ನು ನೋಡುವುದು. **ಪಂಚಾಸ. ಸ್ತ್ರೀನ: [ಪಂಚಾಶತ]** ಐವತ್ತು, ಯಾರ ಸಂಖ್ಯೆ ಐವತ್ತೋ ಅವರು. **ಪಂಚಾಸಗ. ನ: [ಪಂಚಾಶಕ]** ಆಚಾರ್ಯ ಹರಿಭದ್ರ ಸೂರಿ ರಚಿತ ಒಂದು ಜೈನ ಗ್ರಂಥ. **ಪಂಚಾಸೀಇ. ಸ್ತ್ರೀ: [ಪಂಚಾಶೀತಿ]** ಎಂಬತ್ತೈದು, ಯಾರ ಸಂಖ್ಯೆ ಎಂಬತ್ತೈದೋ ಅವರು. **ಪಂಚಾಸೀಇಮ. ವಿ: [ಪಂಚಾಶೀತಿತಿಮ]** ಎಂಬತ್ತೈದನೆಯ(ಕಪ್ಪ)

ಪಂಚಅಣ್ಣ. ‘ಪಂಚಜಣ್ಣ’ ಶಬ್ದವನ್ನು ನೋಡುವುದು

ಪಂಚಂಗ. ನ: [ಪಂಚಾಂಗ] ಎರಡು ಕೈಗಳು, ಎರಡು ತೊಡೆಗಳು, ಮತ್ತು ತಲೆ; ಶರೀರದ ಈ ಐದು ಅಂಗಗಳು. ವಿ: ಈ ಐದು ಅಂಗಗಳುಳ್ಳ (ಪ್ರಣಾಮವೇ ಮೊದಲಾದ).

ಪಂಚಂಗುಲಿ. ಪು: [ದೇ] ಹರಳು ಗಿಡ(ದೇ)

ಪಂಚಂಗುಲಿ. ಪು: [ಪಂಚಾಂಗುಲಿ] ಕೈ, ಐದು ಬೆರಳುಗಳುಳ್ಳ ಹಸ್ತ(ಣಾಯಾ)

ಪಂಚಂಗುಲಿಆ. ಸ್ತ್ರೀ: [ಪಂಚಾಂಗುಲಿಕಾ] ಒಂದು ಬಗೆಯ ಬಳ್ಳಿ(ಪಣ್ಣ)

ಪಂಚಗ. ನ: [ಪಂಚಕ] ಐದರ ಗುಂಪು(ಆಚಾ)

ಪಂಚಗ. ವಿ: [ಪಂಚಕ] ಐದರ ಬೆಲೆ ಹೊಂದಿರುವ

ಪಂಚಜಣ್ಣ. ಪು: [ಪಾಂಚಜನ್ಯ] ಶ್ರೀಕೃಷ್ಣನ ಶಂಖ(ಗಾ)

ಪಂಚತ್ತ}. ನ: [ಪಂಚತ್ವ] ಐದರತನ, ಪಂಚ ರೂಪತ್ವ

ಪಂಚತ್ತಣ}. ಮರಣ

ಪಂಚಪುಂಡ. ವಿ: [**ಪಂಚಪುಂಡ್ರ**] ಐದು ಸ್ಥಳಗಳಲ್ಲಿ ಪುಂಡ್ರ ಚಿಹ್ನೆಯುಳ್ಳ(ಊರ್ಧ್ವಮುಖ ಅಥವಾ ಅಡ್ಡ ನಾಮವುಳ್ಳ)

ಪಂಚಪುಲ. **ಪುಂನ:** [**ದೇ**] ಮೀನನ್ನು ಹಿಡಿಯುವ ಬಲೆ(ವಿಪಾ)

ಪಂಚಮ. ವಿ: [**ಪಂಚಮ**] ಐದನೆಯ(ಉವಾ), **ಪು:** ಪಂಚಮ ಸ್ವರ(ತಾ), **–ಧಾರಾ.** **ಸ್ತ್ರೀ:** [**–ಧಾರಾ**] ಕುದುರೆಯ ಒಂದು ವಿಧದ ನಡಿಗೆ

ಪಂಚಮಹಬ್ಭೂಇಅ. ವಿ: [**ಪಾಂಚಮಹಾಭೂತಿಕ**] ಪಂಚ ಮಹಾಭೂತಗಳನ್ನು ಮಾನ್ಯಮಾಡುವ, ಸಾಂಖ್ಯದರ್ಶನದ ಅನುಯಾಯಿ

ಪಂಚಮಾಸಿಅ. ವಿ: [**ಪಾಂಚಮಾಸಿಕ**] ಐದು ತಿಂಗಳ ವಯಸ್ಸಿನ, ಐದು ತಿಂಗಳಲ್ಲಿ ಪೂರ್ಣಗೊಳ್ಳುವ (ಅಭಿಗ್ರಹ ಇತ್ಯಾದಿ)ಸ್ತ್ರೀ: **–ಆ**

ಪಂಚಮಿಯ. ವಿ: [**ಪಾಂಚಮಿಕ**] ಐದನೆಯ, ಪಂಚಮ

ಪಂಚಮೀ. **ಸ್ತ್ರೀ:** [**ಪಂಚಮೀ**] ಐದನೆಯ, ತಿಥಿ–ವಿಶೇಷ (ಪಂಚಮೀ ತಿಥಿ), ವ್ಯಾಕರಣದಲ್ಲಿ ಪ್ರಸಿದ್ಧವಾದ ಆಪಾದಾನ ವಿಭಕ್ತಿ(ಪಂಚಮೀ ವಿಭಕ್ತಿ)

ಪಂಚಯನ್ನ. '**ಪಂಚಜಣ್ಣ**' ಶಬ್ದವನ್ನು ನೋಡುವುದು

ಪಂಚಲೋಇಅರ್‍ರಾ. **ಸ್ತ್ರೀ** [**ಪಂಚಲೌಕಿಕಾ**] ಭುಜ(ತೋಳು)ದಿಂದ ಚಲಿಸುವ ಸರ್ಪ ಜಾತಿಯ ಒಂದು ಪ್ರಾಣಿ(ಜೀವ)

ಪಂಚವಡೀ. **ಸ್ತ್ರೀ:** [**ಪಂಚವಟೀ**] ಐದು ವಟವೃಕ್ಷಗಳಿದ್ದ ಒಂದು ಪ್ರದೇಶ; ಶ್ರೀ ರಾಮನು ವನವಾಸ ಸಮಯದಲ್ಲಿ ಇಲ್ಲಿ ವಾಸಿಸಿದ್ದ. ಕೆಲವರು ಇದು ನಾಸಿಕದ ಹತ್ತಿರದ ಗೋದಾವರೀ ತೀರವೆಂದರೆ ಇನ್ನು ಕೆಲವರು ರಾಜವಾಡೆಯ ದಕ್ಷಿಣದ ತುದಿಯ ಗೋದಾವರೀ ತೀರವೆನ್ನುತ್ತಾರೆ (ಉತ್ತರ)

ಪಂಚವಯಣ. **ಪು:** [**ಪಂಚವದನ**] ಸಿಂಹ

ಪಂಚಾಮಯ. **ನ:** [**ಪಂಚಾಮೃತ**] ಮೊಸರು, ಹಾಲು, ತುಪ್ಪ, ಜೇನುತುಪ್ಪ ಮತ್ತು ಸಕ್ಕರೆ ಈ ಐದು ವಸ್ತುಗಳು

ಪಂಚಾಲ. **ಪು.ಬ:** [**ಪಂಚಾಲ, ಪಾಂಚಾಲ**] ಪಂಜಾಬ ದೇಶ. **ಪು:** ಪಂಜಾಬಿನ ರಾಜ. ಒಂದು ಛಂದಸ್ಸು.

ಪಂಚಾಲ. **ಪು:** [**ಪಾಂಚಾಲ**] ಕಾಮಶಾಸ್ತ್ರದ ಕರ್ತೃವೆನಿಸಿದ ಒಬ್ಬ ಋಷಿ

ಪಂಚಾಲಿಆ. **ಸ್ತ್ರೀ:** [**ಪಂಚಾಲಿಕಾ**] ಕರದಿಂದ ನಿರ್ಮಿಸಿದ ಸಣ್ಣ ಬೊಂಬೆ(ಕಪ್ಪೂ)

ಪಂಚಾಲಿಆ. **ಸ್ತ್ರೀ:** [**ಪಾಂಚಾಲಿಕಾ**] ದ್ರುಪದ ರಾಜನ ಮಗಳು ದ್ರೌಪದಿ, ಗಾನದ ಒಂದು ಪ್ರಭೇದ.

ಪಂಚಾವಣ್ಣ}. **ಸ್ತ್ರೀನ:** [**ದೇ. ಪಂಚಪಂಚಾಶತ್**]
ಪಂಚಾವನ್ನ}. ಐವತ್ತೈದು(=೫೫). ಯಾರ ಸಂಖ್ಯೆ ಐವತ್ತೈದೋ ಅವರು.

ಪಂಚಾವನ್ನ. ವಿ: [**ಪಂಚಪಂಚಾಶ**] ಐವತ್ತೈದನೆಯ (ಪಉಮ)

ಪಂಚಿಂದಿಯ}. ವಿ: [**ಪಂಚೇಂದ್ರಿಯ**] ಚರ್ಮ, ನಾಲಿಗೆ,
ಪಂಚಿಂದ್ರಿಯ}. ಮೂಗು, ಕಣ್ಣು ಮತ್ತು ಕಿವಿ ಈ ಐದೂ ಇಂದ್ರಿಯಗಳನ್ನುಳ್ಳಜೀವ. **ನ:** ಕಣ್ಣು, ಕಿವಿ ನಾಲಿಗೆ ಮೊದಲಾದ ಐದು ಇಂದ್ರಿಯಗಳು (ಧರ್ಮ)

ಪಂಚಿಯಾ. **ಸ್ತ್ರೀ:** [**ಪಂಚಿಕಾ**] ಐದರ ಸಂಖ್ಯೆಯ, ಐದು ದಿನಗಳ

ಪಂಚುಂಬರ. **ಸ್ತ್ರೀನ:** [**ಪಂಚೋದುಂಬರ**] ಆಲ, ಅರಳಿ, ಅತ್ತಿ, ಬಸರಿ, ಮತ್ತು ಕಲ್ಹತ್ತಿ ಇವುಗಳ ಫಲ(ಭವಿ), **ಸ್ತ್ರೀ:** **–ರೀ**

ಪಂಚುತ್ತರಸಯ. ವಿ: [**ಪಂಚೋತ್ತರಶತತಮ**] ಒಂದು ನೂರಾ ಐದನೆಯ(ಪಉಮ)

ಪಂಚೇಡಿಯ. ವಿ: [**ದೇ**] ನಾಶಪಡಿಸಲಾದ(ಭವಿ)

ಪಂಚೇಸು. **ಪು:** [**ಪಂಚೇಷು**] ಕಾಮದೇವ, ಮನ್ಮಥ

ಪಂಖಿ. **ಪು:** [**ಪಕ್ಷಿನ್**] ಪಕ್ಷಿ, ಹಕ್ಕಿ

ಪಂಜರ. **ನ:** [**ಪಂಜರ**] ಪಂಜರ(ಗಉಡ)

ಪಂಜರ. **ಪುಂನ:** [**ಪಂಜರ**] ಆಚಾರ್ಯ, ಉಪಾಧ್ಯಾಯ, ಪ್ರವರ್ತಕರೇ ಮೊದಲಾದ ಮುನಿಗಣ, ಸನ್ಮಾರ್ಗ ಪ್ರವರ್ತನೆ, ಅಪಮಾರ್ಗದ ನಿಷೇಧ

ಪಂಜರಿಯ. ವಿ: [**ಪಂಜರಿತ**] ಪಂಜರದಲ್ಲಿ ಬಂಧಿಸಲ್ಪಟ್ಟಿರುವ(ಗಉಡ)

ಪಂಜರಿಅ. **ಪು:** [**ದೇ**] ಹಡಗಿನ ಕೆಲಸಗಾರ

ಪಂಜಲ. ವಿ: [**ಪ್ರಾಂಜಲ**] ಸರಳ, ನೇರ, ಋಜು(ಸುಪಾ)

ಪಂಜಲಿ. **ಪುಂಸ್ತ್ರೀ:** [**ಪ್ರಾಂಜಲಿ**] ನಮಸ್ಕರಿಸಲು ಜೋಡಿಸಿರುವ ಕರಸಂಪುಟ (ಎರಡೂ ಅಂಗೈಗಳು). **–ಉಡ.** **ಪು:** [**–ಪುಟ**] ಕೈಗಳ ಸಂಪುಟ.**–ಉಡ,–ಕಡ.** ವಿ: [**ಕೃತಾಂಜಲಿ**]

ನಮಸ್ಕರಿಸುವ ಸಲುವಾಗಿ ಕೈಜೋಡಿಸಿರುವವನು (ಭಗ)
ಪಂಜಿಅ. ನ: [ದೇ] ಯಥೇಚ್ಛವಾಗಿ ದಾನ ಕೊಡುವುದು, ಕೇಳಿದಷ್ಟು ದಾನ
ಪಂಡ. ವಿ: [ಪಾಂಡ್ಯ] ದೇಶ –ವಿಶೇಷದಲ್ಲಿ ಹುಟ್ಟಿದವ. ಸ್ತ್ರೀ: –ಡೀ
ಪಂಡ}. ಪು: [ಪಂಡ, –ಕ] ನಪುಂಸಕ(ಓಘ). ನ:
ಪಂಡಗ}. ಮೇರು ಪರ್ವತದ ಒಂದು ಕಾಡು(ತಾ)
ಪಂಡಯ}.
ಪಂಡಯ. 'ಪಂಡವ' ಶಬ್ದವನ್ನು ನೋಡುವುದು
ಪಂಡರ. ಪು: [ಪಾಂಡರ] 'ಕ್ಷೀರವರ' ಎಂಬ ದ್ವೀಪದ ಅಧಿಷ್ಠಾತೃ ದೇವ. ಬಿಳಿ ಬಣ್ಣ. ವಿ: ಬಿಳಿಯ ಬಣ್ಣವುಳ್ಳ(ಕಪ್ಪ). **–ಭಿಕ್ಖು.** ಪು: [–ಭಿಕ್ಷು] ಶ್ವೇತಾಂಬರ ಜೈನ ಸಮಪ್ರದಾಯದ ಮುನಿ
ಪಂಡರ. 'ಪಂಡುರ' ಶಬ್ದವನ್ನು ನೋಡುವುದು
ಪಂಡರಂಗ. ಪು: [ದೇ] ಶಿವ, ಮಹಾದೇವ(ದೇ)
ಪಂಡರಂಗು. ಪು: [ದೇ] ಗ್ರಾಮದ ಮುಖಂಡ, ಯಜಮಾನ(ಷಡ್)
ಪಂಡರಿಯ. 'ಪಂಡುರಿಅ' ಶಬ್ದವನ್ನು ನೋಡುವುದು
ಪಂಡವ. ಪು: [ದೇ] ಅಶ್ವ ರಕ್ಷಕ, ಕುದುರೆಗಳ ಪಾಲಕ
ಪಂಡವ. ಪು: [ಪಾಂಡವ] ಪಾಂಡು ರಾಜನ ಮಕ್ಕಳಾದ, ಯುಧಿಷ್ಠಿರ, ಭೀಮ, ಅರ್ಜುನ, ನಕುಲ ಮತ್ತು ಸಹದೇವ(ಣಾಯಾ)
ಪಂಡವಿಅ. ವಿ: [ದೇ] ನೀರಿನಿಂದ ಒದ್ದೆಯಾಗಿರುವ, ನೀರಿನಿಂದ ತೊಯ್ಯಲ್ಪಟ್ಟಿರು(ದೇ)
ಪಂಡಿಅ. ವಿ: [ಪಂಡಿತ] ವಿದ್ವಾಂಸ, ಶಾಸ್ತ್ರಗಳ ಮರ್ಮವನ್ನು ತಿಳಿದವನು, ಬುದ್ಧಿವಂತ(ವಿಪಾ). ಸಂಯಮಿ, ಸಾಧು. (ಸೂಅ) **–ಮರಣ.** ನ: [–ಮರಣ] ಸಾಧುವಿನ ಸಾವು. ಶುಭ–ಮರಣ(ಭಗ). **–ಮಾಣ.** ವಿ: [–ಮ್ಮನ್ಯ] ವಿದ್ಯಾಭಿಮಾನಿ, ತಾನು ಪಂಡಿತ ಎಂದು ಅಹಂಕಾರ ಪಡುವವನು, ಗರ್ವದಿಂದ ಕೊಬ್ಬಿರುವವನು (ಓಘ). **–ಮಾಣಿ.** ವಿ: [–ಮಾನಿನ್] ಆಗಲೆ ಹೇಳಿದ ಅರ್ಥವೇ. **–ವೀರಿಅ.** ನ: [–ವೀರ್ಯ] ಸಂಯಮಿಯ ಆತ್ಮಬಲ
ಪಂಡಿಚ್ಚ}. ನ: [ಪಾಂಡಿತ್ಯ] ವಿದ್ವತ್ತು, ವೈದುಷ್ಯ,
ಪಂಡಿತ್ತ}. ಪ್ರಾವೀಣ್ಯ, ತಿಳಿವು(ರಂಭಾ)
ಪಂಡಿಚ್ಚಮಾಣಿ. ವಿ: [ಪಾಂಡಿತ್ಯಮಾನಿನ್] ಪಾಂಡಿತ್ಯದ ಬಗ್ಗೆ ಅಭಿಮಾನ ಪಡುವವನು
ಪಂಡೀ. 'ಪಂಡ=ಪಾಂಡ್ಯ' ಶಬ್ದವನ್ನು ನೋಡುವುದು
ಪಂಡೀಲ(ಅಪ). 'ಪಂಡಿಅ' ಶಬ್ದವನ್ನು ನೋಡುವುದು
ಪಂಡು. ಪು: [ಪಾಂಡು] ಪಾಂಡವರ ತಂದೆಯಾದ ಪಾಂಡು ಮಹಾರಾಜ(ಉಪ). ಪಾಂಡುರೋಗ, ಬಿಳಿ ಮತ್ತು ಹಳದಿ ಬಣ್ಣ, ಬಿಳಿಬಣ್ಣ. ವಿ: ಬಿಳಿ ಬಣ್ಣದವನು(ಕಪ್ಪೂ), ಪಾಂಡು ಕಂಬಲಾ ಎಂಬ ಹೆಸರಿನ ಒಂದು ಜಾತಿಯ ಶಿಲೆ. **–ಕಂಬಲಸಿಲಾ.** ಸ್ತ್ರೀ: [–ಕಂಬಲಶಿಲಾ] ಮೇರು ಪರ್ವತದ ಪಾಂಡಕ ವನದ ದಕ್ಷಿಣದ ತುದಿಯಲ್ಲಿರುವ ಒಂದು ಶಿಲೆ; ಅದರ ಮೇಲೆ ಜಿನ – ದೇವತೆಗಳ ಜನ್ಮಾಭಿಷೇಕ ಮಾಡಲಾಗುತ್ತದೆ. **–ಕಂಬಲಾ.** ಸ್ತ್ರೀ: [–ಕಂಬಲಾ] ಅದೇ ಹಿಂದೆ ಹೇಳಿದ ಅರ್ಥವೇ (ತಾ). **–ತಣಯ.** ಪು: [–ತನಯ] ಪಾಂಡುರಾಜನ ಮಗ, ಪಾಂಡವ(ಗಉಡ). **–ಭದ್ದ.** ಪು: [–ಭದ್ರ] ಆರ್ಯ ಸಂಭೂತಿವಿಜಯನ ಶಿಷ್ಯನಾದ ಒಬ್ಬ ಜೈನಮುನಿ. **–ಮಟ್ಟಿಯಾ, –ಮತ್ತಿಯಾ.** ಸ್ತ್ರೀ: [–ಮೃತ್ತಿಕಾ] ಒಂದು ಬಗೆಯ ಬಿಳಿಯ ಮಣ್ಣು(ಜೀವ). **–ಮಹುರಾ.** ಸ್ತ್ರೀ: [–ಮಥುರಾ] ಪಾಂಡವರು ನಿರ್ಮಿಸಿದ ಭರತಖಂಡದ ದಕ್ಷಿಣದ ಕಡೆಗಿರುವ ಒಂದು ಹೆಸರಾಂತ ನಗರ(ತಮಿಳುನಾಡಿನ ಮದುರೈ). **–ರಾಯ.** ಪು: [–ರಾಜ] ಪಾಂಡವರ ತಂದೆಯಾದ ಪಾಂಡುರಾಜ (ಣಾಯಾ). **–ಸುಯ.** ಪು: [–ಸುತ] ಪಾಂಡವ. **–ಸೇಣ.** ಪು: [–ಸೇನ] ಪಾಂಡವರಿಗೆ ದ್ರೌಪದಿಯಲ್ಲಿ ಜನಿಸಿದ ಒಬ್ಬ ಮಗ(ಣಾಯಾ).
ಪಂಡುಇಯ. ವಿ: [ಪಾಂಡುಕಿತ] ಬಿಳಿಯ ಬಣ್ಣದ್ದಾಗಿ ಮಾಡಲ್ಪಟ್ಟ
ಪಂಡುಗ}. ಪು: [ಪಾಂಡುಕ] ಚಕ್ರವರ್ತಿಗೆ
ಪಂಡುಯ}. ಬೇಕಾಗಿರುವ ಧಾನ್ಯಗಳನ್ನು ಪೂರೈಸುವ ಒಂದು ನಿಧಿ(ತಾ). ಸರ್ಪದ ಒಂದು ಪ್ರಭೇದ, ನ: ಮೇರುಪರ್ವತದ ಮೇಲಿರುವ ಪಾಂಡುಕ ವನ.
ಪಂಡುರ. ಪು: [ಪಾಂಡುರ] ಬಿಳಿಯ ಬಣ್ಣ. ಹಳದಿ ಮಿಶ್ರಿತ ಬಿಳಿಯ ಬಣ್ಣ, ವಿ: ಬಿಳಿಯ ಬಣ್ಣದವನು. **–ಜ್ಜಾ.** ಸ್ತ್ರೀ: [–ಪಾಂಡುರಾರ್ಯಾ] ಒಬ್ಬ ಜೈನ

ಸಾಧ್ವಿಯ ಹೆಸರು(ಆವಮ). **–ತ್ಥಿಯ. ಪು** **[ಪಾಂಡುರಾಸ್ಥಿಕ]** ಒಂದು ಹಳ್ಳಿಯ ಹೆಸರು (ಆಚೂ)

ಪಂಡುರಂಗ. ಪು: [ಪಾಂಡುರಾಂಗ] ಸಂನ್ಯಾಸಿಗಳ ಒಂದು ಜಾತಿ, ಭಸ್ಮವನ್ನು ಹಚ್ಚಿಕೊಳ್ಳುವ ಸಂನ್ಯಾಸಿ

ಪಂಡುರಗ}. ಪು: [ಪಾಂಡುರಕ] ಶಿವಭಕ್ತ

ಪಂಡುರಯ}. ಸಂನ್ಯಾಸಿಗಳಒಂದು ಜಾತಿ(ಣಾಯಾ). **'ಪಂಡುರ' ಶಬ್ದವನ್ನು ನೋಡುವುದು.**

ಪಂಡುರಿಅ.}. ವಿ: [ಪಾಂಡುರಿತ] ಬಿಳಿಯ

ಪಂಡುಲ್ಲಇಯ}. ಬಣ್ಣದವನಾಗಿಬಿಟ್ಟಿರುವ(ವಿಪಾ)

ಪಂತ. ವಿ: [ಪ್ರಾಂತ] ಅಂತಿಮ(ಭಗ), ಅಸುಂದರ, ಇಂದ್ರಿಯಗಳಿಗೆ ವಿರುದ್ಧವಾಗಿರುವ(ಪಣ್ಣ), ಅಸಭ್ಯ, ಅಶಿಷ್ಟ(ಓವ), ನೀಚ, ದುಷ್ಟ(ಣಾಯಾ), ಬಡವ, ದರಿದ್ರ, ಹರಿದಿರುವ, ನಾಶವಾಗಿರುವ(ಬೃಹ). ನೀರಸ, ಒಣಗಿದ, ತಿಂದುಳಿದ, ಹಳಸಿದ, **–ಕುಲ. ನ: [–ಕುಲ]** ನೀಚ ಕುಲ, ನೀಚ ಜಾತಿ. **–ಚರ. ವಿ: [–ಚರ]** ನೀರಸ ಆಹಾರವನ್ನು ಹುಡುಕಿಕೊಂಡು ಹೋಗುವ ತಪಸ್ವಿ. **–ಜೀವಿ. ವಿ: [–ಜೀವಿನ್]** ನೀರಸ ಆಹಾರದಿಂದ ಶರೀರ ನಿರ್ವಹಣೆ ಮಾಡುವವನು(ಠಾ). **ಪಂತಾಹಾರ. ವಿ: [ಪ್ರಾಂತಾಹಾರ]** ಒಣಗಿದ ಆಹಾರ ಸೇವಿಸುವವನು.

ಪಂತಾವ. ಸಕ: [ದೇ] ಹೊಡೆ, ಏಟುಕೊಡು

ಪಂತಿ. ಸ್ತ್ರೀ: [ಪಂಕ್ತಿ] ಸಾಲು(ಕುಮಾ). ಒಂದು ಆನೆ, ಒಂದು ರಥ, ಮೂರು ಕುದುರೆ ಮತ್ತು ಐವರು ಪದಾತಿಗಳನ್ನೊಳಗೊಂಡ ಸೇನಾ –ವಿಶೇಷ(ಪಉಮ)

ಪಂತಿ. ಸ್ತ್ರೀ: [ದೇ] ಜಡೆ(ದೇ)

ಪಂತಿಯ. ಸ್ತ್ರೀನ: [ಪಂಕ್ತಿ] ಸಾಲು(ಅಣು)

ಪಂಥ.ಪು:[ಪಂಥ,ಪಥಿನ್] ದಾರಿ, ಮಾರ್ಗ (ಸುಪಾ)

ಪಂಥ. ಪು: [ಪಾಂಥ] ದಾರಿಹೋಕ, ಪಥಿಕ, ದಾರಿಗ, ಪಯಣಿಗ(ಅಚ್ಚು). **–ಕುಟ್ಟಣ. ನ: [–ಕುಟ್ಟನ]** ಹೊಡೆದು ಬಡಿದು ಪಯಣಿಗರನ್ನು ಲೂಟಿ ಮಾಡುವುದು(ಣಾಯಾ). **–ಕೊಟ್ಟ. ಪು: [–ಕುಟ್ಟ]** ಅದೇ ಅರ್ಥ. **–ಕೊಟ್ಟಿ. ಸ್ತ್ರೀ: [–ಕುಟ್ಟಿ]** ಅದೇ ಅರ್ಥ(ಣಾಯಾ)

ಪಂಥಗ. ಪು: [ಪಾಂಥಕ] ಒಬ್ಬ ಜೈನ–ಮುನಿ(ಣಾಯಾ)

ಪಂಥಾಣ. 'ಪಂಥ= ಪಂಥ, ಪಥಿನ್' ಶಬ್ದವನ್ನು ನೋಡುವುದು

ಪಂಥಿಅ. ಪು: [ಪಂಥಿಕ, ಪಥಿಕ] ದಾರಿಗ, ಪಯಣಿಗ

ಪಂಥುಚ್ಚುಹಣೀ. ಸ್ತ್ರೀ: [ದೇ] ಮಾವನ ಮನೆಯಿಂದ ಮೊದಲ ಬಾರಿಗೆ ಕರೆದುಕೊಂಡುಬಂದ ಹೆಣ್ಣು(ದೇ)

ಪಂಪುಅ. ವಿ: [ದೇ] ದೀರ್ಘವಾದ, ಉದ್ದವಾದ(ದೇ)

ಪಂಫುಲ್ಲ. ವಿ: [ಪ್ರಫುಲ್ಲ] ಚೆನ್ನಾಗಿ ಅರಳಿದ

ಪಂಫುಲ್ಲಿಅ. ವಿ: [ದೇ] ಹುಡುಕಲ್ಪಟ್ಟ

ಪಂಸ. ಅಕ: [ಪಾಂಸಯ್] ಮಲಿನಗೊಳಿಸು, ಕೊಳೆಮಾಡು

ಪಂಸಣ. ವಿ: [ಪಾಂಸನ] ಕಲಂಕಿತಗೊಳಿಸುವವನು, ದೋಷ ಹೊರಿಸುವವನು

ಪಂಸು. ಪು: [ಪಾಂಸು, ಪಾಂಶು] ದೂಳು, ರಜ. **–ಕೀಲಿಯ, –ಕ್ಕೀಲಿಯ. ವಿ: [–ಕ್ರೀಡಿತ]** ಬಾಲ್ಯದಲ್ಲಿ ಯಾರ ಜೊತೆ ದೂಳಾಟವಾಡಿರುತ್ತೇವೆಯೋ ಅವನು, ಬಾಲ್ಯ ಸ್ನೇಹಿತ(ಮಹಾ), **–ಪಿಸಾಯ. ಪುಂಸ್ತ್ರೀ: [–ಪಿಶಾಚ]** ದೂಳು ಹತ್ತಿರುವ ಕಾರಣದಿಂದಾಗಿ ಪಿಶಾಚಿಯು ಹಾಗೆ ಕಾಣುತ್ತಿರುವವನು(ಉತ್ತ). **–ಮೂಲಿಯ. ಪು: [–ಮೂಲಿಕ]** ವಿದ್ಯಾಧರ, ಮನುಷ್ಯ–ವಿಶೇಷ.

ಪಂಸು. ಪು: [ಪರ್ಶು] ಕೊಡಲಿ(ಹೇ)

ಪಂಸು. 'ಪಸು' ಶಬ್ದವನ್ನು ನೋಡುವುದು(ಷಡ್)

ಪಂಸುಲ. ಪು: [ದೇ] ಕೋಗಿಲೆ, ಜಾರ, ಉಪಪತಿ, ವಿ: ತಡೆಯಲ್ಪಟ್ಟ(ಷಡ್)

ಪಂಸುಲ. ಪು: [ಪಾಂಸುಲ] ಪರಸ್ತ್ರೀ ಲಂಪಟ, ಪುಂಶ್ಚಲ(ಗಾ). ವಿ: ದೂಳಿನಿಂದ ಕೂಡಿದ (ಗಉಡ)

ಪಂಸುಲಾ. ಸ್ತ್ರೀ: [ಪಾಂಸುಲಾ] ಕುಲಟೆ, ವ್ಯಭಿಚಾರಿಣಿ.

ಪಂಸುಲಿಅ. ವಿ: [ಪಾಂಸುಲಿತ] ದೂಳ್ಮುಸುಕಿದಂತೆ ಮಾಡಲ್ಪಟ್ಟ

ಪಂಸುಲಿಆ. ಸ್ತ್ರೀ: [ದೇ. ಪಾಂಶುಲಿಕಾ] ಪಕ್ಕೆ ಮೂಳೆ

ಪಂಸುಲೀ. ಸ್ತ್ರೀ: [ಪಾಂಸುಲೀ] ಕುಲಟೆ, ವ್ಯಭಿಚಾರಿಣಿ

ಪಕಂಥ. 'ಪಗಂಥ' ಶಬ್ದವನ್ನು ನೋಡುವುದು(ಆಚಾ)

ಪಕಂಥಗ. ಪು: [ಪು. ಪ್ರಕಂಥಕ] ಒಂದು ಜಾತಿಯ ಕುದುರೆ(ಠಾ)

ಪಕಂಪ. ಪು: [ಪ್ರಕಂಪ] ನಡುಕ, ಕಂಪನ(ಆವ)

ಪಕಂಪಣ. ನ: [ಪ್ರಕಂಪನ] **ಮೇಲಿನ** ಶಬ್ದವನ್ನು ನೋಡುವುದು

ಪಕಂಪಿಅ. ವಿ: [ಪ್ರಕಂಪಿತ] ನಡುಗಿಸಲ್ಪಟ್ಟ, ಅಲುಗಾಡಿಸಲ್ಪಟ್ಟ(ಆವ)

ಪಕಂಪಿರ. ವಿ: [ಪ್ರಕಂಪಿತೃ] ನಡುಗುವವನು(ಉಪ)

ಪಕಡ. ವಿ: [ಪ್ರಕೃತ] ಪ್ರಸ್ತುತವಾದ, ಅಸಲಿ, ನಿಜವಾದ, ನಿರ್ಮಿಸಲ್ಪಟ್ಟ

ಪಕಡ. **'ಪಗಡ=ಪ್ರಕಟ'** ಶಬ್ದವನ್ನು ನೋಡುವುದು

ಪಕಡ್ಢ. **'ಪಗಡ್ಢ'** ಶಬ್ದವನ್ನು ನೋಡುವುದು

ಪಕಡ್ಢ. ವಿ: [ಪ್ರಕೃಷ್ಟ] ಅಧಿಕವಾದ, ಹೆಚ್ಚಾದ, ಶ್ರೇಷ್ಠವಾದ, ಚೆನ್ನಾಗಿ ಎಳೆಯಲ್ಪಟ್ಟ(ಔಪ)

ಪಕಡ್ಢಣ. ನ: [ಪ್ರಕರ್ಷಣ] ಆಕರ್ಷಣೆ, ಚೆನ್ನಾಗಿ ಎಳೆಯುವುದು(ಎಳೆತ)(ನಿಚೂ)

ಪಕತ್ಥ. ಸಕ: [ಪ್ರ +ಕತ್ಥ್] ಪ್ರಶಂಸಿಸು, ಹೊಗಳು. **–'ಪಕತ್ಥಇ'**

ಪಕಪ್ಪ. **ಅಕ:** [ಪ್ರ +ಕ್ಲುಪ್] ಉಪಯೋಗಕ್ಕೆ ಬರು, ಕತ್ತರಿಸು, ಸೀಳು

ಪಕಪ್ಪ. **ಸಕ:** [ಪ್ರ +ಕಲ್ಪಯ್] ಮಾಡು, ನಿರ್ಮಿಸು. ಸಂಕಲ್ಪಮಾಡು(ಸೂಅ)

ಪಕಪ್ಪ. **ಪು:** [ಪ್ರಕಲ್ಪ] ಉತ್ತಮ ಆಚರಣೆ(ತಾ), ಅಪವಾದ(ನಿಯಮಕ್ಕೆ ಬಾಧಕ), ಆಚಾರಾಂಗ ಸೂತ್ರದ ಒಂದು ಅಧ್ಯಯನ, ವ್ಯವಸ್ಥೆಗೊಳಿಸುವುದು, ಕಲ್ಪನೆ, ಪ್ರರೂಪಣೆ, ಕತ್ತರಿಸುವುದು (ನಿಚೂ), ಜೈನ ಸಾಧುಗಳ ಒಂದು ಬಗೆಯ ಆಚಾರ; ಸ್ಥವಿರ –ಕಲ್ಪ(ಪಂಚಭಾ), ಒಂದು ಮಹಾಗ್ರಹ, **–ಗಂಥ. ಪು:** [**–ಗ್ರಂಥ**] ಒಂದು ಜೈನ ಪ್ರಾಚೀನ ಗ್ರಂಥ – **'ನಿಶೀಥಸೂತ್ರ'. –ಜಇ. ಪು:** [**–ಯತಿ**] ನಿಶೀಥ ಅಧ್ಯಯನವನ್ನು ಬಲ್ಲ ಸಾಧು. **–ಧರ.** ವಿ: [**–ಧರ**] ನಿಶೀಥ ಅಧ್ಯಯನ ಬಲ್ಲವನು(ನಿಚೂ). **'–ಪಗಪ್ಪ=ಪ್ರಕಲ್ಪ'** ಶಬ್ದವನ್ನು **ನೋಡುವುದು**

ಪಕಪ್ಪಣಾ. ಸ್ತ್ರೀ: [ಪ್ರಕಲ್ಪನಾ] ವ್ಯಾಖ್ಯಾನ(ನಿಚೂ), ಕಲ್ಪನೆ, ನಿರ್ಮಾಣ

ಪಕಪ್ಪಧಾರಿ. ವಿ: [ಪ್ರಕಲ್ಪಧಾರಿನ್] ನಿಶೀಥ ಸೂತ್ರವನ್ನು ಅರಿತವನು

ಪಕಪ್ಪಿ. ವಿ; [ಪ್ರಕಲ್ಪಿನ್] **ಮೇಲಿನ** ಶಬ್ದವನ್ನು ನೋಡುವುದು

ಪಕಪ್ಪಿಅ. ವಿ: [ಪ್ರಕಲ್ಪಿತ] ಸಂಕಲ್ಪ ಮಾಡಲಾದ, ನಿರ್ಮಿಸಲ್ಪಟ್ಟ, **ನ:** ಹಿಂದೆ ಸಂಪಾದಿಸಿದ ದ್ರವ್ಯ, ಕತ್ತರಿಸಲ್ಪಟ್ಟ **'ಪಗಪ್ಪಿಅ'** ಶಬ್ದವನ್ನು ನೋಡುವುದು

ಪಕಯ. ವಿ: [ಪ್ರಕೃತ] ಕೆಲಸದಲ್ಲಿ ತೊಡಗಿರುವ (ಉಪ)

ಪಕರ. ಸಕ: [ಪ್ರ+ಕೃ] ಮಾಡಬೇಕಾದ್ದನ್ನು ಪ್ರಾರಂಭಿಸು, ಅಧಿಕವಾಗಿ ಮಾಡು, ಮಾಡು,

ಪಕರ. **'ಪಯರ=ಪ್ರಕರ'** ಶಬ್ದವನ್ನು ನೋಡುವುದು

ಪಕರಣಯಾ. ಸ್ತ್ರೀ: [ಪ್ರಕರಣತಾ] ಕರಣ, ಕೃತಿ(ಭಗ)

ಪಕಹಿಅ. ವಿ: [ಪ್ರಕಥಿತ] ಹೇಳುವುದನ್ನು ಆರಂಭಿಸಿರುವವನು(ಉಪ)

ಪಕಾಮ. ನ: [ಪ್ರಕಾಮ] ಅತಿಶಯವಾಗಿ, ಹೆಚ್ಚಾಗಿ (ಣಾಯಾ), **ಪು:** ಅತಿ ಹೆಚ್ಚಾದ ಅಭಿಲಾಷೆ(ಭಗ)

ಪಕಾವ(ಅಪ). **ಸಕ:** [**ಪಚ್**] ಬೇಯಿಸು, ಅಡುಗೆ ಮಾಡು

ಪಕಾಸ. **'ಪಯಾಸ=ಪ್ರಕಾಶ' ಶಬ್ದವನ್ನು ನೋಡುವುದು**

ಪಕಿಟ್ಟ. **'ಪಗಿಟ್ಟ'** ಶಬ್ದವನ್ನು ನೋಡುವುದು

ಪಕಿಣ್ಣ. ವಿ: [ಪ್ರಕೀರ್ಣ] ಬಿತ್ತಲ್ಪಟ್ಟ, ಬಿತ್ತನೆ ಮಾಡಲ್ಪಟ್ಟ, ಹರಡಲ್ಪಟ್ಟ. **'ಪಇಣ್ಣ=ಪ್ರಕೀರ್ಣ'** ಶಬ್ದವನ್ನು **ನೋಡುವುದು**

ಪಕಿತ್ತಿಅ. ವಿ; [ಪ್ರಕೀರ್ತಿತ] ಹೊಗಳಲ್ಪಟ್ಟ, ವರ್ಣಿಸಲ್ಪಟ್ಟ

ಪಕಿದಿ. **'ಪಗಇ= ಪ್ರಕೃತಿ'** ಶಬ್ದವನ್ನು ನೋಡುವುದು

ಪಕಿದಿ(ಶೌ). **'ಪಇಇ=ಪ್ರಕೃತಿ'** ಶಬ್ದವನ್ನು **ನೋಡುವುದು(ಸ್ವಪ್ನ)**

ಪಕಿನ್ನ. **'ಪಕಿಣ್ಣ'** ಶಬ್ದವನ್ನು ನೋಡುವುದು

ಪಕಿರಣ. ನ: [ಪ್ರಕಿರಣ] ಕೊಡುವ ಉದ್ದೇಶದಿಂದ ಎಸೆಯುವುದು

ಪಕುಪ್ಪ. **ಅಕ:** [ಪ್ರ +ಕುಪ್] ಸಿಟ್ಟಿಗೇಳು, ಕೋಪಿಸಿಕೊಳ್ಳು

ಪಕುಪ್ಪಿತ. (**ಚೂಪೈ**). ವಿ: [ಪ್ರಕುಪಿತ] ಕೋಪಗೊಂಡ, ಕೆರಳಿದ(ಹೇ)

ಪಕುವಿಅ. ಮೇಲಿನ **ಶಬ್ದವನ್ನು ನೋಡುವುದು**

ಪಕುವ್ವ. ಸಕ: [ಪ್ರ +ಕೃ, ಪ್ರ +ಕುರ್ವ್] ಮಾಡಬೇಕಾದ್ದನ್ನು ಆರಂಭಿಸು, ಅಧಿಕವಾಗಿ ಮಾಡು, ಮಾಡು. **ವ. ಕೃ –ಪಕುವ್ವಮಾಣ**

ಪಕುವ್ವಿ. ವಿ: [ಪ್ರಕಾರಿನ್, ಪ್ರಕುರ್ವಿನ್] ಮಾಡುವವನು, ಕರ್ತ, **ಪು:** ಪ್ರಾಯಶ್ಚಿತ್ತ ಕೊಡಿಸಿ ಶುದ್ಧಿಮಾಡಿಸುವಲ್ಲಿ ಸಮರ್ಥನಾದ ಗುರು(ತಾ)

ಪಕೂವಿಲ. ವಿ: [ಪ್ರಕೂಜಿತ] ಎತ್ತರದ ಸ್ವರದಲ್ಲಿ ಚೀರಾಡಿದ, ಗಟ್ಟಿ ದನಿಯಲ್ಲಿ ಶಬ್ದಮಾಡಿದ

ಪಕೊಟ್ಟ. 'ಪಟಿಟ್ಟ' ಶಬ್ದವನ್ನು ನೋಡುವುದು

ಪಕೋವ. ಪು: [ಪ್ರಕೋಪ] ಸಿಟ್ಟು, ಕೋಪ

ಪಕ್ಕ. ವಿ: [ಪಕ್ವ] ಪಕ್ವವಾದ, ಮಾಗಿದ, ಹಣ್ಣಾದ(ಪಾಅ)

ಪಕ್ಕ. ವಿ: [ದೇ] ಕೊಬ್ಬಿದ, ಅಹಂಕಾರದಿಂದ ಕೂಡಿದ. ಸಮರ್ಥ, ಪಕ್ವ, ಪ್ರೌಢ

ಪಕ್ಕಂತ. ವಿ: [ಪ್ರಕ್ರಾಂತ] ಪ್ರಕೃತ, ಪ್ರಸ್ತುತ(ಕುಮಾ), ಮುಂದೆ ಸಾಗಿದ

ಪಕ್ಕಗ್ಗಾಹ. ಪು: [ದೇ] ಮೊಸಳೆ, ನೀರಿನಲ್ಲಿ ವಾಸಿಸುವ ಸಿಂಹದ ಆಕಾರದ ಜಲಚರ ಪ್ರಾಣಿ(ಸೇ)

ಪಕ್ಕಣ. ವಿ: [ದೇ] ಅಸಹಿಷ್ಣು, ಸಮರ್ಥ, ಶಕ್ತ(ದೇ) **ಪು:** ಚಾಂಡಾಲ. ಒಂದು ಅನಾರ್ಯ ದೇಶ, **ಪುಂಸ್ತ್ರೀ:** ಅನಾರ್ಯ ದೇಶದಲ್ಲಿ ವಾಸಿಸುವ ಮನುಷ್ಯರು. **ಸ್ತ್ರೀ: –ಣೀ. –ಉಲ. ನ: [–ಕುಲ]** ಚಾಂಡಾಲನ ಮನೆ(ಬೃಹ). ನಿಂದನೆಗೆ ಒಳಗಾದ ಒಂದು ಕುಲ.

ಪಕ್ಕಣಿ. ವಿ: [ದೇ] ಅತ್ಯಂತ ಶೋಭಾಯಮಾನ ವಾಗಿರುವ, ಅತ್ಯಂತ ಮನೋಹರವಾಗಿರುವ, ಒಡೆಯಲ್ಪಟ್ಟ. ಮುರಿಯಲ್ಪಟ್ಟ, ಪ್ರಿಯವಾದ ಮಾತುಗಳನ್ನಾಡುವ

ಪಕ್ಕಣಿಯ. **ಪುಂಸ್ತ್ರೀ:** [ದೇ] ಒಂದು ಅನಾರ್ಯ ದೇಶದಲ್ಲಿ ವಾಸಿಸುವ ಮನುಷ್ಯ ಜಾತಿ(ಪಣ್ಣ)

ಪಕ್ಕನ್ನ. ನ: [ಪಕ್ವಾನ್ನ] ಕೇವಲ ತುಪ್ಪದಲ್ಲಿ ಮಾಡಿದ ವಸ್ತು, ಮಿಠಾಯಿ ಇತ್ಯಾದಿ

ಪಕ್ಕಮ. **ಸಕ: [ಪ್ರ+ಕ್ರಮ್]** ಅತಿ ಹೆಚ್ಚಳದಿಂದ ಸಮರ್ಥವಾಗುವುದು(ಭಗ), ಕಾರ್ಯ ಪ್ರಾರಂಭಿಸು

ಪಕ್ಕಮ. ಸಕ: **[ಪ್ರ +ಕ್ರಮ್]** ಅತಿ ಹೆಚ್ಚಳದಿಂದ ಹೋಗು, ಹೊರಟುಹೋಗು, ಮುಂದೆ ಸಾಗು. **ಅಕ:** ಪ್ರಯತ್ನವಮಾಡು,ತೊಡಗು. **ಕ್ರಿಯಾ ರೂಪ: 'ಪಕ್ಕಮಇ'**

ಪಕ್ಕಮ. ಪು: [ಪ್ರಕ್ರಮ] ಕೆಲಸದ ಆರಂಭ, ಕ್ರಮ, ರೀತಿ

ಪಕ್ಕಮಣೀ. ಸ್ತ್ರೀ: [ಪ್ರಕ್ರಮಣೀ] ಒಂದು ವಿದ್ಯಾವಿಶೇಷ

ಪಕ್ಕಲ. ವಿ: [ದೇ] ಸಮರ್ಥ, ಶಕ್ತ(ಪಾಅ), ದರ್ಪದಿಂದ ಕೂಡಿದ, ಕೊಬ್ಬಿದ, ಪ್ರೌಢ(ಗಾ)

ಪಕ್ಕಸ. 'ವಕ್ಕಸ' ಶಬ್ದವನ್ನು ನೋಡುವುದು

ಪಕ್ಕಸಾವಅ. ಪು: [ದೇ] ಶರಭ(ಎರಡು ಮುಖ, ಎಂಟು ಕಾಲುಗಳುಳ್ಳ ಒಂದು ಕಾಲ್ಪನಿಕ ಪ್ರಾಣಿ) ಹುಲಿ

ಪಕ್ಕಾಇಯ. ವಿ: [ಪಕ್ವೀಕೃತ] ಬೇಯಿಸಲ್ಪಟ್ಟ

ಪಕ್ಕಿರ. ಸಕ: [ಪ್ರ +ಕೃ] ಎಸೆ(ಣಾಯಾ)

ಪಕ್ಕೀಲಿಯ. ವಿ: [ಪ್ರಕ್ರೀಡಿತ] ಆಟವನ್ನು ಆರಂಭಿಸಿದವನು(ಣಾಯಾ)

ಪಕ್ಕೆಲ್ಲಯ. ವಿ: [ಪಕ್ವ] ಚೆನ್ನಾಗಿ ಬೇಯಿಸಲ್ಪಟ್ಟ(ಉವಾ), ಹಣ್ಣಾದ

ಪಕ್ಖ. ಪು: [ಪಕ್ಷ] ವೇದಿಕೆಯ ಒಂದುಭಾಗ, ಹದಿನೈದು ದಿನ(=ಪಕ್ಷ), ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷ (ಜೀವ), ಪಕ್ಕೆ, ಪಕ್ಷಿಗಳ ಅವಯುವವಾದ ರೆಕ್ಕೆ(ಕುಮಾ), ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ಅನುಮಾನ ಪ್ರಮಾಣದ ಒಂದು ಅಂಗ; ಸಾಧ್ಯತೆ ಇರುವ ವಸ್ತು. ಕಡೆಗೆ, ಅತ್ತ, ಗುಂಪು, ದಳ, ಮಂಡಳಿ, ಸ್ನೇಹಿತ, ಮಿತ್ರ, ಶರೀರದ ಅರ್ಧಭಾಗ, ಪಕ್ಷಪಾತಿ, ಸಮರ್ಥಕ, ಬಾಣದ ಗರಿ, ಪಕ್ಷಪಾತ(ವವ), **–ಗ.** ವಿ: [–ಗ] ಪಕ್ಷದ ಪೂರ್ತಿ ಸ್ಥಾಯಿಯಾಗಿರುವುದು(ಕಮ್ಮ). **–ಪಿಂಡ. ಪುಂನ:** **[–ಪಿಂಡ]** ತೊಡೆ ಮತ್ತು ಸೊಂಟದ ಮೇಲೆ ಬಟ್ಟೆಯನ್ನು ಸುತ್ತಿಕೊಂಡು ಕುಳಿತುಕೊಳ್ಳುವುದು. ಎರಡೂ ಕೈಗಳಿಂದ ಶರೀರವನ್ನು ಕಟ್ಟಿಕೊಂಡು ಕುಳಿತುಕೊಳ್ಳುವುದು(ಉತ್ತ). **–ಬಾಹಾ.** ಸ್ತ್ರೀ: **[–ಬಾಹಾ]** ವೇದಿಕೆಯ ಒಂದು ಭಾಗ. **–ಯ. ಪು:** [–ಕ] ಬೀಸಣಿಗೆ(ಕಪ್ಪ). **–ವಂತ.** ವಿ: [–ವತ್] ಪಕ್ಷವನ್ನು ವಹಿಸಿಕೊಂಡು ಬರುವವನು. **–ವಾಇಲ್ಲ.** ವಿ: **[–ಪಾತಿನ್]** ಪಕ್ಷಪಾತ ಮಾಡುವವನು(ಉಪ). **–ವಾದ. ಪು:** [–ಪಾತ] ಪಕ್ಷಪಾತ(ಸ್ವಪ್ನ). –ವಾದಿ(ಶೌ). **'–ವಾಇಲ್ಲ' ಶಬ್ದವನ್ನು ನೋಡುವುದು. –ವಾಆಯ. ಪು: '–ವಾದ' ಶಬ್ದವನ್ನು ನೋಡುವುದು.** ಪಕ್ಷಕ್ಕೆ ಸಂಬಂಧಿಸಿದ ವಿವಾದ(ಉಪ). **–ವಾಹ. ಪು:** [–ವಾಹ] ವೇದಿಕೆಯ ಒಂದುಸ್ಥಳ. **–ಪಕ್ಖಾವಡಿಅ.** ವಿ: [–ಪಕ್ಷಾಪತಿತ] ಪಕ್ಷಪಾತಿ. **ಪಕ್ಖಾವಾಇಯಾ.** ಸ್ತ್ರೀ: [ಪಕ್ಷಾವಾಪಿಕಾ] **ಹೋಮ –ವಿಶೇಷ**

ಪಕ್ಖಂತ. ನ: [ಪಕ್ಷಾಂತ] ಬೇರೆ ರೀತಿಯಾದ ಇಂದ್ರಿಯ ಜಾತಿ

ಪಕ್ಷಂತರ. ನ: [ಪಕ್ಷಾಂತರ] ಬೇರೆ ಪಕ್ಷ, ಇನ್ನೊಂದು ಪಕ್ಷ

ಪಕ್ಷಂದ. ಸಕ: [ಪ್ರ +ಸ್ಕಂದ್] ಆಕ್ರಮಣ ಮಾಡು, ಓಡುತ್ತ ಜಾರಿ ಬೀಳು, ನಿಶ್ಚಯ ಮಾಡು, ನಿರ್ಧಾರ ಮಾಡು, ದೃಢ ಮನಸ್ಸು ಮಾಡು.

ಪಕ್ಖಂದನ. ನ: [ಪ್ರಸ್ಕಂದನ] ಆಕ್ರಮಣ, ನಿರ್ಧಾರ ಮಾಡುವುದು, ನಿಶ್ಚಯಿಸು, ಓಡಿ ಬೀಳುವುದು.

ಪಕ್ಖಂದೋಲಗ. ಪು: [ಪಕ್ಷ್ಯಂದೋಲಕ] ಪಕ್ಷಿಯ ಜೋಕಾಲಿ

ಪಕ್ಖಜ್ಜಮಾಣ. ವಿ: [ಪ್ರಖಾದ್ಯಮಾನ] ತಿನ್ನಲಾಗುವ ವಸ್ತು(ಸೂಅ)

ಪಕ್ಖಡಿಅ. ವಿ: [ದೇ] ಚಲಿಸುವುದು, ಹೊರಳಾಡುವುದು, ಅದುರುವುದು, ವಿಕಾಸ ಹೊಂದಿದ, ಆಕಳಿಕೆ, ಹುಟ್ಟಿದ, ಉದ್ಭವಿಸಿದ

ಪಕ್ಖರ. ಸಕ: [ಸಂ +ನಾಹ್ಯ] ಕುದುರೆಯುನ್ನು ಜೀನು(ಕವಚ) ಹಾಕಿ ಸಜ್ಜುಗೊಳಿಸು

ಪಕ್ಖರ. ಪು: [ಪ್ರಕ್ಷರ] ತೊಟ್ಟಿಕ್ಕುವುದು, ಸೋರುವುದು

ಪಕ್ಖರ. ಪು: [ದೇ] ಹಡಗಿನ ರಕ್ಷಣೆಗೆ ಬಳಸುವ ಒಂದು ಉಪಕರಣ

ಪಕ್ಖರ. ನ: [ದೇ] ಕುದುರೆಗಳಿಗೆ ತೊಡಿಸುವ ಕವಚ(ಕುಪ್ರ)

ಪಕ್ಖರಾ. ಸ್ತ್ರೀ: [ದೇ] ಕುದುರೆಯ ಕವಚ(ದೇ)

ಪಕ್ಖರಿಅ. ವಿ: [ಸಂನದ್ಧ] ಕವಚ ತೊಡಿಸಿ ಸಜ್ಜುಗೊಳಿಸುವುದು(ಸುಪಾ)

ಪಕ್ಖಲ. ಅಕ: [ಪ್ರ +ಸ್ಖಲ್] ಬೀಳು, ಮುಗ್ಗರಿಸಿ ಬೀಳು, ಎಡವಿ ಬೀಳು (ಬೃಹ)

ಪಕ್ಖಾಉಜ್ಜ. ನ: [ಪಕ್ಷಾತೋದ್ಯ] ಮೃದಂಗಕ್ಕಿಂತ ಚಿಕ್ಕದಾದ ಒಂದು ವಾದ್ಯ(ಕಪ್ಪೂ)

ಪಕ್ಖಾಯ. ವಿ: [ಪ್ರಖ್ಯಾತ] ಪ್ರಸಿದ್ಧ, ವಿಖ್ಯಾತ, ಹೆಸರಾಂತ

ಪಕ್ಖಾರಿಣ. ಪು: [ಪ್ರಕ್ಷಾರಿಣ]ಒಂದು ಅನಾರ್ಯ ದೇಶ, ಪುಂಸ್ತ್ರೀ: ಆ ದೇಶದ ನಿವಾಸಿಗಳು. ಸ್ತ್ರೀ:–ಣೀ

ಪಕ್ಖಾಲ. ಸಕ: [ಪ್ರ +ಕ್ಷಾಲಯ್] ತೊಳೆ, ಶುಭ್ರಮಾಡು (ಔಪ)

ಪಕ್ಖಾಲಣ. ನ: [ಪ್ರಕ್ಷಾಲನ] ತೊಳೆಯುವುದು, ಶುಭ್ರಮಾಡುವುದು

ಪಕ್ಖಾಲಿಅ. ವಿ: [ಪ್ರಕ್ಷಾಲಿತ] ತೊಳೆಯಲ್ಪಟ್ಟ, ಶುಭ್ರಮಾಡಲ್ಪಟ್ಟ(ಭವಿ)

ಪಕ್ಖಾಸಣ. ನ: [ಪಕ್ಷ್ಯಾಸನ] ಕೆಳಗಡೆ ಹಲವು ಬಗೆಯ ಹಕ್ಕಿಗಳ ಚಿತ್ರವಿರುವ ಒಂದು ಬಗೆಯ ಆಸನ (ಜೀವ)

ಪಕ್ಖಿ. ಪುಂಸ್ತ್ರೀ: [ಪಕ್ಷಿನ್] ಪಕ್ಷಿ, ಹಕ್ಕಿ(ಠಾ). ಸ್ತ್ರೀ: –ಣೀ. –ಬಿರಾಲ. ಪುಂಸ್ತ್ರೀ: [–ಬಿರಾಲ] ಒಂದು ಜಾತಿಯ ಪಕ್ಷಿ. ಸ್ತ್ರೀ: –ಲೀ. –ರಾಯ. ಪು: [–ರಾಜ] ಗರುಡ. ಕೆಳಗಿನ ಶಬ್ದವನ್ನು ನೋಡುವುದು

ಪಕ್ಖಿಅ. ಪುಂಸ್ತ್ರೀ: [ಪಕ್ಷಿಕ] ಮೇಲಿನ ಶಬ್ದವನ್ನು ನೋಡುವುದು. ವಿ: ಪಕ್ಷಪಾತಿ, ಒಂದು ಪಕ್ಷವನ್ನು ಸಮರ್ಥನೆ ಮಾಡುವವನು

ಪಕ್ಖಿಅ. ವಿ: [ಪಾಕ್ಷಿಕ] ಸ್ವಜನರ,ಒಂದು ಪಕ್ಷದಲ್ಲಿ ಆಗುವ, ಪಕ್ಷಕ್ಕೆ ಸಂಬಂಧಿಸಿದ, ಅರ್ಧ ಮಾಸಕ್ಕೆ ಸಂಬಂಧಿಸಿದ. ನ: ಚತುರ್ದಶಿಯ ಪರ್ವ,

ಪಕ್ಖಿಆಪಕ್ಖಿಅ. ಪು: [ಪಕ್ಷಿಕಾಪಕ್ಷಿಕ] ಒಂದು ಪಕ್ಷದಲ್ಲಿ ತೀವ್ರ ವಿಷಯಾಭಿಲಾಷೆ ಇದ್ದು ಇನ್ನೊಂದು ಪಕ್ಷದಲ್ಲಿ ಕಡಿಮೆ ವಿಷಯಾಭಿಲಾಷೆ ಹೊಂದಿರುವಂಥ ನಪುಂಸಕ –ವಿಶೇಷ.

ಪಕ್ಖಿಕಾಯಣ. ನ: [ಪಾಕ್ಷಿಕಾಯನ] ಕೌಶಿಕ ಗೋತ್ರದ ಒಂದು ಶಾಖಾ ಗೋತ್ರ(ಠಾ)

ಪಕ್ಖಿಣ. 'ಪಕ್ಖಿ' ಶಬ್ದವನ್ನು ನೋಡುವುದು

ಪಕ್ಖಿತ್ತ. ವಿ: [ಪ್ರಕ್ಷಿಪ್ತ] ಎಸೆಯಲ್ಪಟ್ಟ, ಹೊಸದಾಗಿ ಸೇರಿಸಲಾದ

ಪಕ್ಖಿನಾಹ. ಪು: [ಪಕ್ಷಿನಾಥ] ಪಕ್ಷಿರಾಜ ಗರುಡ

ಪಕ್ಖಿಅ. ವಿ: [ಪಾಕ್ಷಿಕ] ಸ್ವಜನ, ತನ್ನವರು, ಬಂಧು

ಪಕ್ಖಿಪ್ಪ}. 'ಪಕ್ಖಿವ'ಶಬ್ದವನ್ನು ನೋಡುವುದು

ಪಕ್ಖಿಪ್ಪಮಾಣ}.

ಪಕ್ಖಿವ. ಸಕ: [ಪ್ರ +ಕ್ಷಿಪ್] ಎಸೆ, ಬಿಟ್ಟುಬಿಡು, ಹಾಕು, ಇಡು.ಕ. ವಕೃ: ಪಕ್ಖಿಪ್ಪಮಾಣ

ಪಕ್ಖೀಣ. ವಿ: [ಪ್ರಕ್ಷೀಣ] ಅತ್ಯಂತ ಕ್ಷೀಣ, ತೀರ ಕಡಿಮೆಯಾದ, ಅವನತಿಹೊಂದಿದ

ಪಕ್ಖುಡಿಅ. ವಿ: [ಪ್ರಖಂಡಿತ] ತುಂಡರಿಸಲ್ಪಟ್ಟ, ಅಸಂಪೂರ್ಣ(ಸುಪಾ)

ಪಕ್ಖುಬ್ಭ. ಅಕ: [ಪ್ರ +ಕ್ಷುಭ್] ಕ್ಷೋಭೆ ಉಂಟಾಗು, ವೃದ್ಧಿಯಾಗು

ಪಕ್ಖುಭಿಯ. ವಿ: [ಪ್ರಕ್ಷುಭಿತ] ಕ್ಷೋಭೆಗೊಂಡಿರುವ, ಕಲಕಲ್ಪಟ್ಟಿರುವ, ಕೆರಳಿರುವ(ಔಪ)

ಪಕ್ಖೇವ. ಪು: [ಪ್ರಕ್ಷೇಪ] ಶಾಸ್ತ್ರದಲ್ಲಿ ಅನಂತರದಲ್ಲಿ ಯಾರಾದರೂ ಸೇರಿಸಿರುವ ವಾಕ್ಯ. **ಪಕ್ಖೇವಾಹಾರ.** ಪು: [ಪ್ರಕ್ಷೇಪಾಹಾರ] ತುತ್ತಿನ ಆಹಾರ, ತುತ್ತಿನ ರೂಪದ ಆಹಾರ

ಪಕ್ಖೇವ}. ಪು: [ಪ್ರಕ್ಷೇಪ, –ಕ] ಎಸೆಯುವುದು,

ಪಕ್ಖೇವಗ}. ಭರ್ತಿಮಾಡುವ ವಸ್ತು, ಪೂರ್ತಿ ಮಾಡುವ ಸಲುವಾಗಿ ಅನಂತರದಲ್ಲಿ ಸೇರಿಸಲಾಗುವ ವಸ್ತು

ಪಕ್ಖೇವಣ. ನ: [ಪ್ರಕ್ಷೇಪಣ] ಎಸೆಯುವುದು, ಇಡುವುದು, ಹೊಸದಾಗಿ ಸೇರಿಸುವುದು(ಔಪ)

ಪಕ್ಖೇವಯ. 'ಪಕ್ಖೇವಗ' ಶಬ್ದವನ್ನು ನೋಡುವುದು

ಪಕ್ಖೋಡ. ಸಕ: [ವಿ +ಕೋಶಯ್] ತೆರೆ, ಹರಡು,

ಪಕ್ಖೋಡ. ಸಕ: [ಶದ್] ಅಲುಗಾಡಿಸು, ಕೊಡವಿ ಬೀಳಿಸು(ಉಪ)

ಪಕ್ಖೋಡ ಸಕ: [ಪ್ರ +ಛಾದಯ್] ಮುಚ್ಚು, ಹೊದಿಸು (ಉಪ)

ಪಕ್ಖೋಡ. ಸಕ: [ಪ್ರ +ಸ್ಫೋಟಯ್] ಚೆನ್ನಾಗಿ ಗುಡಿಸು, ಮತ್ತೆ ಮತ್ತೆ ಕಸ ಗುಡಿಸು

ಪಕ್ಖೋಡ. ಪು: [ಪ್ರಸ್ಫೋಟ] ಚೆನ್ನಾಗಿ ತೊಳೆಯುವುದು

ಪಕ್ಖೋಡಣ. ನ: [ಶದನ] ಅಲ್ಲಾಡಿಸುವುದು, ಅಲುಗಾಡಿಸುವುದು(ಕುಮಾ)

ಪಕ್ಖೋಡಿಅ. ವಿ: [ಶದಿತ] ಕೊಡವಿ ಬೀಳಿಸಲ್ಪಟ್ಟ(ದೇ)

ಪಕ್ಖೋಡಿಯ. 'ಪಕ್ಖೋಡ=ಶದ, ಪ್ರ+ಛಾದಯ್' ಶಬ್ದವನ್ನು ನೋಡುವುದು

ಪಕ್ಖೋಭ. ಸಕ: [ಪ್ರ +ಕ್ಷೋಭಯ್] ಕ್ಷುಬ್ಧಗೊಳಿಸು, ಕಲಕು, ಕೆರಳಿಸು

ಪಕ್ಖೋಲಣ. ನ: [ಶದನ] ಜಾರುವ, ಮುಗ್ಗರಿಸುವ, ಎಡವುವ, ವಿ: ಕೋಪಗೊಳ್ಳುವ

ಪಖುಮ.(ಪೈ). 'ಪಮ್ಹ=ಪಕ್ಷ್ಮನ್' ಶಬ್ದವನ್ನು ನೋಡುವುದು

ಪಖಲ. ವಿ: [ಪ್ರಖರ] ತೀವ್ರ, ಪ್ರಚಂಡ, ತೀಕ್ಷ್ಣ, ಬಿಸಿಯಾದ

ಪಖೋಡ. 'ಪಕ್ಖೋಡ=ಪ್ರಸ್ಫೋಟ' ಶಬ್ದವನ್ನು ನೋಡುವುದು

ಪಗಇ. ಸ್ತ್ರೀ: [ಪ್ರಕೃತಿ] ಸ್ವಭಾವ, ಹುಟ್ಟುಗುಣ(ಬಗ), ಪ್ರಸ್ತುತ ಅರ್ಥ, ಸಾಧಾರಣ ಜನ ಸಮುದಾಯ, ಕುಂಬಾರನೇ ಮೊದಲಾದ –೧೮ ಮನುಷ್ಯ ಜಾತಿಗಳು, ಕರ್ಮಗಳ ಪ್ರಭೇದ, ಸತ್ವ, ರಜಸ್ಸು ಮತ್ತು ತಮೋ ಎಂಬ ಮೂರು ಗುಣಗಳ ಸಾಮ್ಯಾವಸ್ಥೆ, ಬಲದೇವನ ಒಬ್ಬ ಮಗನ ಹೆಸರು, **–ಬಂಧ.** ಪು: [–ಬಂಧ] ಕರ್ಮ –ಪುದ್ಗಲಗಳಲ್ಲಿ ನಾನಾ ಶಕ್ತಿಗಳು ಉದಯಿಸುವುದು(ಕಮ್ಮ). **'ಪಗಡಿ' ಶಬ್ದವನ್ನು ನೋಡುವುದು**

ಪಗಂಠ. ಪು: [ಪ್ರಕಂಠ] ಒಂದು ಪೀಠ–ವಿಶೇಷ, ಕೊನೆಯ ಬಾಗಿದ ಸ್ಥಳ

ಪಗಂಥ. ಸಕ: [ಪ್ರ +ಕಥಯ್] ನಿಂದಿಸು(ಆಚಾ)

ಪಗಡ. ವಿ: [ಪ್ರಕಟ] ವ್ಯಕ್ತವಾದ, ಸ್ಪಷ್ಟವಾದ

ಪಗಡ. ವಿ: [ಪ್ರಕೃತ] ಚೆನ್ನಾಗಿ ಮಾಡಲ್ಪಟ್ಟ, ಚೆನ್ನಾಗಿ ನಿರ್ಮಿಸಲ್ಪಟ್ಟ

ಪಗಡ. ಪು: [ಪ್ರಗರ್ತ] ದೊಡ್ಡ ಹಳ್ಳ

ಪಗಡಣ. ನ: [ಪ್ರಕಟನ] ಪ್ರಕಾಶಪಡಿಸುವುದು, ಪ್ರತ್ಯಕ್ಷವಾಗಿ ತೋರಿಸುವುದು(ಣಂದಿ)

ಪಗಡಿ. ಸ್ತ್ರೀ: [ಪ್ರಕೃತಿ] ಭೇದ, ಪ್ರಕಾರ(ಭಗ). **'ಪಗಇ' ಶಬ್ದವನ್ನು ನೋಡುವುದು**

ಪಗಡೀಕಯ. ವಿ: [ಪ್ರಕಟೀಕೃತ] ಪ್ರತ್ಯಕ್ಷವಾಗಿ ತೋರಿಸಲ್ಪಟ್ಟ, ವ್ಯಕ್ತಗೊಳಿಸಲ್ಪಟ್ಟ(ಸುಪಾ)

ಪಗಡ್ಢ. ಸಕ: [ಪ್ರ +ಕೃಷ್] ಚೆನ್ನಾಗಿ ಎಳೆ, ಚೆನ್ನಾಗಿ ಉಳು(ವಿಪಾ)

ಪಗಪ್ಪ. 'ಪಕಪ್ಪ=ಪ್ರ +ಕಲ್ಪಯ್'(ಸೂಅ) ಶಬ್ದವನ್ನು ನೋಡುವುದು

ಪಗಪ್ಪ. 'ಪಕಪ್ಪ=ಪ್ರ +ಕ್ಲುಪ್' ಶಬ್ದವನ್ನು ನೋಡುವುದು

ಪಗಪ್ಪ. ಪು: [ಪ್ರಕಲ್ಪ] ಹುಟ್ಟಲಿರುವ, ಕಾಣಿಸಿಕೊಳ್ಳಲಿರುವ (ಸೂಅ), **'ಪಕಪ್ಪ= ಪ್ರಕಲ್ಪ' ಶಬ್ದವನ್ನು ನೋಡುವುದು**

ಪಗಪ್ಪಿಅ. ವಿ: [ಪ್ರಕಲ್ಪಿತ] ರಚಿಸಲ್ಪಟ್ಟ, ತಯಾರಿಸಲ್ಪಟ್ಟ, ಹೇಳಲ್ಪಟ್ಟ(ಸೂಅ) **'ಪಕಪ್ಪಿಅ' ಶಬ್ದವನ್ನು ನೋಡುವುದು**

ಪಗಪ್ಪಿತ್ತು. ವಿ: [ಪ್ರಕಲ್ಪಯಿತೃ, ಪ್ರಕರ್ತಯಿತೃ] ಕೊಯ್ಯುವವನು, ಕತ್ತರಿಸುವನು(ಸೂಅ)

ಪಗಬ್ಭ. ಅಕ: [ಪ್ರ +ಗಲ್ಭ್] ದಿಟ್ಟನಾಗು, ಧೀರನಾಗು, ಕೆಚ್ಚು ತೋರು(ಆಚಾ) ಸಮರ್ಥನಾಗು ಶಬ್ದವನ್ನು ನೋಡುವುದು

ಪಗಬ್ಭ. ವಿ: [ಪ್ರಗಲ್ಭ] ದಿಟ್ಟ, ಧೀರ(ಪಉಮ) ಸಮರ್ಥ, ಪ್ರತಿಭಾವಂತ(ಉಪ)

ಪಗಬ್ಭ. ನ: [ಪ್ರಾಗಲ್ಭ್ಯ] ಧೈರ್ಯ, ಕೆಚ್ಚು, ಬುದ್ಧಿಂತಿಕೆ(ಸೂಅ)

ಪಗಬ್ಭಣಾ. ಸ್ತ್ರೀ: [ಪ್ರಗಲ್ಭನಾ] ಧೈರ್ಯ, ಕೆಚ್ಚು, ಬುದ್ಧಿವಂತಿಕೆ, ಚತುರತೆ

ಪಗಬ್ಭಾ. ಸ್ತ್ರೀ: [ಪ್ರಗಲ್ಭಾ] ಭಗವಾನ್ ಪಾರ್ಶ್ವನಾಥರ ಒಬ್ಬ ಶಿಷ್ಯೆ(ಆವಮ)

ಪಗಬ್ಭಿಅ. ವಿ: [ಪ್ರಗಲ್ಭಿತ] ಕೆಚ್ಚಿನಿಂದ ಕೂಡಿದ, ಧೈರ್ಯದಿಂದಿರುವ

ಪಗಬ್ಭಿತ್ತು. ವಿ: [ಪ್ರಗಲ್ಭಿತೃ] ಕತ್ತರಿಸುವವನು

ಪಗಯ. ನ: [ಪ್ರಕೃತ] ಪ್ರಸ್ತಾವ, ಪ್ರಸಂಗ. ಪು: ಗ್ರಾಮದ ಅಧಿಕಾರಿ

ಪಗಯ. ವಿ: [ಪ್ರಗತ] ಸಂಗತವಾದ,

ಪಗಯ. ವಿ: [ಪ್ರಕೃತ] ಪ್ರಸ್ತುತ, ಪ್ರಕರಣಕ್ಕೆ ಸಂಬಂಧಿಸಿದ, ಅಧಿಕೃತ(ವಿಸೇ)

ಪಗಯ. ವಿ: [ಪ್ರಗತ] ಪ್ರಾಪ್ತ, ದೊರೆತಿರುವ, ಮುಂದೆ ಸಾಗಿರುವ(ಸುಪಾ)

ಪಗಯು. ನ: [ದೇ] ಹೆಜ್ಜೆ, ಪಾದ, ಕಾಲು, ಚರಣ(ಮಹಾ)

ಪಗರ. ಪು: [ಪ್ರಕರ] ಸಮೂಹ, ರಾಶಿ(ಸುಪಾ)

ಪಗರಣ. ನ: [ಪ್ರಕರಣ] ವಿಷಯ, ಪೀಠಿಕೆ, ಗ್ರಂಥದ ಒಂದು ಅಧ್ಯಾಯ, ಭಾಗ(ವಿಸೇ) ವಿಷಯವೊಂದರ ಬಗ್ಗೆ ಬರೆದ ಸಣ್ಣ ಪುಸ್ತಕ (ಉವ)

ಪಗರಿಅ. ವಿ: [ಪ್ರಗಲಿತ] ಗಂಟಲಲ್ಲಿ ಕುಷ್ಠರೋಗ ಪೀಡಿತ

ಪಗರಿಸ. ಪು: [ಪ್ರಕರ್ಷ] ಉತ್ಕರ್ಷ, ಶ್ರೇಷ್ಠತೆ(ಸುಪಾ), ಆಧಿಕ್ಯ, ಹೆಚ್ಚಳ, ಅತಿಶಯ(ಸುರ)

ಪಗರಿಸಣ. ನ: [ಪ್ರಕರ್ಷಣ] **ಮೇಲಿನ ಶಬ್ದವನ್ನು ನೋಡುವುದು**

ಪಗಲ. ಅಕ: [ಪ್ರ+ಗಲ್] ಸೋರು, ತೊಟ್ಟಿಕ್ಕು(ವಿಪಾ)

ಪಗಹಿಯ ವಿ: [ಪ್ರಗೃಹೀತ] ಸ್ವೀಕರಿಸಲ್ಪಟ್ಟ (ಸುರ)

ಪಗಾಇಯ. ವಿ: [ಪ್ರಗೀತ] ಹಾಡುವುದನ್ನು ಆರಂಭಿಸಿರುವವ, ಉತ್ತಮವಾಗಿ ಹಾಡಲ್ಪಟ್ಟ

ಪಗಾಢ. ವಿ: [ಪ್ರಗಾಢ] ಅತ್ಯಂತ ಗಾಢವಾದ, ಅತಿಶಯವಾದ, ದೃಢವಾದ, ಬಲವಾದ(ವಿಪಾ)

ಪಗಾಮ. 'ಪಕಾಮ' ಶಬ್ದವನ್ನು ನೋಡುವುದು(ಆಚಾ)

ಪಗಾಮಸೋ. ಅ: [ಪ್ರಕಾಮಮ್] ಅತ್ಯಂತ, ಅತಿಶಯ

ಪಗಾರ. ಪು: [ಪ್ರಕಾರ] ಭೇದ, ರೀತಿ, ತೆರ, ವಿಧ, ಇತ್ಯಾದಿ, ವಗೈರೆ(ಸೂಅ)

ಪಗಾಸ. ಪು: [ಪ್ರಕಾಶ] ಬೆಳಕು, ಕಾಂತಿ, ದೀಪ್ತಿ, ಹೊಳಪು(ಣಾಯಾ), ಪ್ರಸಿದ್ಧಿ, ಖ್ಯಾತಿ, ಆವಿರ್ಭಾವ, ಕಾಣಿಸಿಕೊಳ್ಳುವುದು, ಬಿಸಿಲು, ಕೋಪ, ಸಿಟ್ಟು, ವಿ: ಪ್ರಕಟ, ಸುಸ್ಪಷ್ಟ, ಸುವ್ಯಕ್ತ

ಪಗಾಸಗ. 'ಪಗಾಸಯ' ಶಬ್ದವನ್ನು ನೋಡುವುದು

ಪಗಾಸಣ. 'ಪಯಾಸಣ' ಶಬ್ದವನ್ನು ನೋಡುವುದು (ಔಪ)

ಪಗಾಸಣಾ. ಸ್ತ್ರೀ: [ಪ್ರಕಾಶನಾ] **ಪ್ರಕಟಪಡಿಸುವುದು, ಪ್ರಕಾಶಪಡಿಸುವುದು**

ಪಗಾಸಣಯಾ. ಸ್ತ್ರೀ: [ಪ್ರಕಾಶನತಾ] ಪ್ರಕಾಶ, ಬೆಳಕು(ಓಘ)

ಪಗಾಸಯ. ವಿ: [ಪ್ರಕಾಶಕ] ಬೆಳಕನ್ನು ಉಂಟುಮಾಡುವ, (ವಿಸೇ)ಸೂಚಿಸುವ,

ಪಗಾಸಿಯ. ವಿ: [ಪ್ರಕಾಶಿತ] ಪ್ರಕಾಶಮಾನವಾದ, ಹೊಳೆಯುವ, ದೀಪ್ತ, ಪ್ರಕಟಿಸಲ್ಪಟ್ಟ

ಪಗಿಇ. ವಿ: 'ಪಗಇ' ಶಬ್ದವನ್ನು ನೋಡುವುದು

ಪಗಿಜ್ಝ. ಅಕ: [ಪ್ರ+ಗೃಧ್] ಆಸಕ್ತಿಯನ್ನು ತೋರಿಸಲಾರಂಭಿಸು

ಪಗಿಜ್ಝಿಯ. 'ಪಗಿಣ್ಹ' ಶಬ್ದವನ್ನು ನೋಡುವುದು

ಪಗಿಟ್ಠ. ವಿ: [ಪ್ರಕೃಷ್ಟ] ಪ್ರಧಾನ, ಮುಖ್ಯ, ಉತ್ತಮ, ಶ್ರೇಷ್ಠ(ಸುಪಾ)

ಪಗಿಣ್ಹ. ಸಕ: [ಪ್ರ+ಗ್ರಹ್] ಸ್ವೀಕರಿಸು. ಹಿಡಿದುಕೊಳ್ಳು, ಎತ್ತು, ಧಾರಣ ಮಾಡು, ಮಾಡು

ಪಗೀಯ. ವಿ: [ಪ್ರಗೀತ] ಹಾಡಲು ಪ್ರಾರಂಭಿಸಿರುವವನು

ಪಗೀಅ. ವಿ: [ಪ್ರಗೀತ] ಹಾಡಲಾದ(ಪ ಉಮ), ಯಾರ ಗೀತವನ್ನು ಹಾಡಲಾಗಿದೆಯೋ ಅವನು(ಉಪ)

ಪಗುಣ. 'ಪಉಣ' ಶಬ್ದವನ್ನು ನೋಡುವುದು(ಸೂಅ)

ಪಗುಣೀಕರ. ಸಕ: [ಪ್ರಗುಣೀ+ಕೃ] ಸಜ್ಜುಗೊಳಿಸು, ತಯ್ಯಾರು ಮಾಡು

ಪಗೇ. ಅ: [ಪ್ರಗೇ] ಬೆಳಿಗ್ಗೆ, ಪ್ರಾತಃಕಾಲ(ಸುರ)

ಪಗ್ಗ. ಸಕ: [ಗ್ರಹ್] ಹಿಡಿ, ಸ್ವೀಕರಿಸು(ಷಡ್)

ಪಗ್ಗಲ. ವಿ: [ದೇ] ಹುಚ್ಚ, ಉನ್ಮತ್ತ

ಪಗ್ಗಹ. ಪು: [ಪ್ರಗ್ರಹ] ಊಟ ಮಾಡುವ ಸಲುವಾಗಿ ಕೈಗೆತ್ತಿಕೊಂಡಿರುವ ಆಹಾರ, ಉಪಕರಣ, ಲಗಾಮು, ಮೂಗುದಾರ, ಹಸುಗಳನ್ನು ಕಟ್ಟುವ ಹಗ್ಗ(ಣಾಯಾ), ನಾಯಕ, ಮುಖಂಡ(ಠಾ), ಸ್ವೀಕರಿಸುವುದು, ಜೋಡಿಸುವುದು(ಭಗ)

ಪಗ್ಗಹಿಅ. ವಿ: [ಪ್ರಗೃಹೀತ] ಸರಿಯಾಗಿ ಸ್ವೀಕರಿಸಲ್ಪಟ್ಟ, ಚೆನ್ನಾಗಿ ಹಿಡಿಯಲ್ಪಟ್ಟ, ಎತ್ತಿಕೊಳ್ಳಲ್ಪಟ್ಟ(ಧರ್ಮ)

ಪಗ್ಗಹಿಯ. ವಿ: [ಪ್ರಗ್ರಹಿಕ] ಮೇಲಿನ ಶಬ್ದವನ್ನು ನೋಡುವುದು

ಪಗ್ಗಿಮ}. (ಅಪ). ಅ: [ಪ್ರಾಯಸ್] ಬಹುಶಃ,

ಪಗ್ಗಿಮ್ವ}. ಪ್ರಾಯಶಃ, ಬಹುಮಟ್ಟಿಗೆ(ಷಡ್)

ಪಗ್ಗೆಜ್ಜ. ಪು: [ದೇ] ಸಮೂಹ, ನಿಕರ, ಗುಂಪು

ಪಘಂಸ. ಸಕ: [ಪ್ರ +ಘೃಷ್] ಮತ್ತೆ ಮತ್ತೆ ತಿಕ್ಕು, ಅರೆ, ಮತ್ತೆ ಮತ್ತೆ ಸವೆ

ಪಘಂಸಣ. ನ: [ಪ್ರಘರ್ಷಣ] ಮತ್ತೆ ಮತ್ತೆ ತಿಕ್ಕುವುದು, ಮತ್ತೆ ಮತ್ತೆ ಅರೆಯುವುದು, ಪುಡಿಮಾಡುವುದು,

ಪಘೋಲ. ಅಕ: [ಪ್ರ +ಘೂರ್ಣಯ್] ಸೇರು, ತಿರುಗಾಡು

ಪಘೋಸ. ಪು: [ಪ್ರಘೋಷ] ಉಚ್ಚ ಕಂಠದಲ್ಲಿ ಸಾರುವುದು, ಉಚ್ಚ ದನಿಯಲ್ಲಿ ಪ್ರಚುರಪಡಿಸುವುದು

ಪಘೋಸಿಯ. ವಿ: [ಪ್ರಘೋಷಿತ] ಘೋಷಿಸಲ್ಪಟ್ಟ, ಉಚ್ಚ ಸ್ವರದಲ್ಲಿ ಸಾರಲ್ಪಟ್ಟ(ಭವಿ)

ಪಚ. ಸಕ: [ಪಚ್] ಬೇಯಿಸು, – 'ಪಚಂತಿ'

ಪಚ.(ಅಪ). 'ಪಂಚ' ಶಬ್ದವನ್ನು ನೋಡುವುದು. **–ಆಲೀಸ, –ತಾಲೀಸ.** ಸ್ತ್ರೀನ: [–ಚತ್ವಾರಿಂಶತ್] ನಲವತ್ತೈದು, ನಲತ್ತೈದರ ಸಂಖ್ಯೆ ಯಾರದೋ ಅವರು

ಪಚಂಕಮಣಗ. ನ: [ಪ್ರಚಂಕ್ರಮಣ, –ಕ] ಕಾಲ್ನಡಿಗೆ

ಪಚಂಕಮಾವಣ. ನ: [ಪ್ರಚಂಕ್ರಮಣ] ಕಾಲ್ನಡಿಗೆಯಿಂದ ಸಂಚರಿಸುವುದು, ನಡೆದಾಟ, ಓಡಾಟ

ಪಚಂಡ. 'ಪಯಂಡ' ಶಬ್ದವನ್ನು ನೋಡುವುದು(ವವ)

ಪಚಲಿಯ. 'ಪಯಲಿಯ=ಪ್ರಚಲಿತ' ಶಬ್ದವನ್ನು ನೋಡುವುದು(ಔಪ)

ಪಚಾರ. ಸಕ: [ಪ್ರ +ಚಾರಯ್] ನಡೆಸು

ಪಚಾರ. ಪು: [ಪ್ರಚಾರ] ಹರಡುವಿಕೆ, ವಿಸ್ತರಿಸುವುದು. 'ಪಯಾರ=ಪ್ರಚಾರ' ಶಬ್ದವನ್ನು ನೋಡುವುದು

ಪಚಾಲ. ಸಕ: [ಪ್ರ +ಚಾಲಯ್] ಅತಿಶಯವಾಗಿ ಅಲುಗಾಡಿಸು, ಚೆನ್ನಾಗಿ ಕದಲಿಸು

ಪಚಿಯ. ವಿ: [ಪ್ರಚಿತ] ಸಮೃದ್ಧ(ಸ್ವಪ್ನ)

ಪಚ್ಚೀಸ(ಅಪ). ಸ್ತ್ರೀನ: [ಪಂಚವಿಂಶತಿ] ಇಪ್ಪತ್ತೈದು, ಇಪ್ಪತ್ತೈದು ಯಾರದೋ ಅವರು

ಪಚುಣ್ಣಿಯ. ವಿ: [ಪ್ರಚೂರ್ಣಿತ] ಚೆನ್ನಾಗಿ ಪುಡಿಮಾಡಲ್ಪಟ್ಟ

ಪಚೇಲಿಮ. ವಿ: [ಪಚೇಲಿಮ] ಬೇಯಿಸಲ್ಪಟ್ಟ, ಬೆಂದ

ಪಚೋಇಅ. ವಿ: [ಪ್ರಚೋದಿತ] ಪ್ರೇರಿಸಲ್ಪಟ್ಟ, ಪ್ರೋತ್ಸಾಹಿಸಲ್ಪಟ್ಟ(ಸೂಅ)

ಪಚ್ಚಇಗ. **'ಪಚ್ಚಇಯ=ಪ್ರತ್ಯಯಿಕ'**

ಪಚ್ಚಇಯ. ವಿ: [ಪ್ರತ್ಯಯಿಕ] ವಿಶ್ವಾಸಿ, ವಿಶ್ವಾಸವುಳ್ಳವನು, ವಿಶ್ವಸ್ತ(ಮಹಾ)

ಪಚ್ಚಿಯ. ವಿ: [ಪ್ರಾತ್ಯಯಿಕ] ಪ್ರತ್ಯಯದಿಂದ ಹುಟ್ಟಿದ, ಅರಿವಿನಿಂದ ಹುಟ್ಟಿದ, ವಿಶ್ವಾಸದಿಂದ ಹುಟ್ಟಿದ

ಪಚ್ಚಂಗ. ನ: [ಪ್ರತ್ಯಂಗ] ಪ್ರತಿಯೊಂದು ಅಂಗ.

ಪಂಚಂಗಿರಾ. ಸ್ತ್ರೀ: [ಪ್ರತ್ಯಂಗಿರಾ] ವಿದ್ಯಾದೇವಿ –ವಿಶೇಷ (ಸುಪಾ)

ಪಚ್ಚಂತ. ಪು: [ಪ್ರತ್ಯಂತ] ಅನಾರ್ಯ ದೇಶ, ವಿ: ಸಮೀಪದಲ್ಲಿರುವ ದೇಶ, ಹತ್ತಿರದಲ್ಲಿರುವ ಪ್ರಾಂತಭಾಗ.

ಪಚ್ಚಂತಿಗ. **'ಪಚ್ಚಂತಿಯ=ಪ್ರತ್ಯಂತಿಕ'** ಶಬ್ದವನ್ನು ನೋಡುವುದು

ಪಚ್ಚಂತಿಯ. ವಿ: [ಪ್ರತ್ಯಂತಿಕ] ಹತ್ತಿರದ ದೇಶದಲ್ಲಿ ಇರುವ

ಪಚ್ಚಂತಿಯ. ವಿ: [ಪ್ರಾತ್ಯಂತಿಕ] ಹತ್ತಿರದ ದೇಶದಿಂದ ಬಂದವನು(ಧಮ್ಮ)

ಪಚ್ಚಕ್ಖ. ನ: [ಪ್ರತ್ಯಕ್ಷ] ಇಂದ್ರಿಯಾದಿಗಳ ನೆರವಿಲ್ಲದೆ ಉಂಟಾಗುವ ಜ್ಞಾನ(ವಿಸೇ), ಇಂದ್ರಿಯಗಳಿಂದ ಹುಟ್ಟುವ ಜ್ಞಾನ(ಠಾ), ವಿ: ಪ್ರತ್ಯಕ್ಷ ಜ್ಞಾನದ ವಿಷಯ

ಪಚ್ಚಕ್ಖ}. ಸಕ: [ಪ್ರತ್ಯಾ+ಖ್ಯಾ] ತ್ಯಜಿಸು, ತ್ಯಜಿಸುವ

ಪಚ್ಚಕ್ಖಾ}. ನಿಯಮ ಮಾಡು

ಪಚ್ಚಕ್ಖಾಣ. ನ: [ಪ್ರತ್ಯಾಖ್ಯಾನ] ತ್ಯಾಗಮಾಡುವ ಪ್ರತಿಜ್ಞೆ ಮಾಡುವುದು(ಭಗ), ಜೈನ ಗ್ರಂಥಾಂಗ –ವಿಶೇಷ, ಒಂಬತ್ತನೇ ಪೂರ್ವ ಗ್ರಂಥ, ನಿಂದ್ಯ ಕರ್ಮಗಳಿಂದ ನಿವೃತ್ತಿ. **ಪಚ್ಚಕ್ಖಾಣಾವರಣ.** ಪು: [ಪ್ರತ್ಯಾಖ್ಯಾನಾವರಣ] ಸಾವದ್ಯ ವಿರತಿಯ ತಡೆಗಳಾದ ಕ್ರೋಧ'ವೇ ಮೊದಲಾದ ಕಷಾಯಗಳು(ಕಮ್ಮ)

ಪಚ್ಚಕ್ಖಾಣಿ. ವಿ: [ಪ್ರತ್ಯಾಖ್ಯಾನಿನ್] ತ್ಯಾಗದ ಪ್ರತಿಜ್ಞೆ ಮಾಡುವವನು(ಭಗ)

ಪಚ್ಚಕ್ಖಾಣೀ. ಸ್ತ್ರೀ: [ಪ್ರತ್ಯಾಖ್ಯಾನೀ] ನಿಷೇಧದ ಮಾತು; ಭಾಷಾ –ವಿಶೇಷ

ಪಚ್ಚಕ್ಖಾಯ. ವಿ: [ಪ್ರತ್ಯಾಖ್ಯಾತ] ತ್ಯಜಿಸಲ್ಪಟ್ಟ, ಬಿಡಲ್ಪಟ್ಟ
ಪಚ್ಚಕ್ಖಾಯಯ. ವಿ: [ಪ್ರತ್ಯಾಖ್ಯಾಯಕ] ತ್ಯಾಗ ಮಾಡುವವನು(ಭಗ)
ಪಚ್ಚಕ್ಖಾವ. ಸಕ: [ಪ್ರತ್ಯಾ +ಖ್ಯಾಪಯ್] ತ್ಯಾಗ ಮಾಡಿಸು, ಯಾವುದಾದರೂ ವಿಷಯವನ್ನು ತ್ಯಜಿಸುವ ಪ್ರತಿಜ್ಞೆ ಮಾಡಿಸು
ಪಚ್ಚಕ್ಖಿ. ವಿ: [ಪ್ರತ್ಯಕ್ಷಿನ್] ಪ್ರತ್ಯಕ್ಷ ಜ್ಞಾನವುಳ್ಳವನು(ವವ), ಕಣ್ಣಿನಿಂದ ಸಾಕ್ಷಾತ್ತಾಗಿ ನೋಡುವ
ಪಚ್ಚಕ್ಖಿಯ. 'ಪಚ್ಚಕ್ಖಾಯ' ಶಬ್ದವನ್ನು ನೋಡುವುದು.
ಪಚ್ಚಕ್ಖೀಕರ. ಸಕ: [ಪ್ರತ್ಯಕ್ಷೀ +ಕೃ] ಪ್ರತ್ಯಕ್ಷ ಮಾಡಿಕೊಳ್ಳು, ಕಣ್ಣೆದುರು ತಂದುಕೊಳ್ಳು
ಪಚ್ಚಕ್ಖೀಕಿದ(ಶೌ). ವಿ: [ಪ್ರತ್ಯಕ್ಷೀಕೃತ] ಪ್ರತ್ಯಕ್ಷ ಮಾಡಿಕೊಂಡ, ಸಾಕ್ಷಾತ್ತಾಗಿ ಅರಿತ(ಪಿ), ಕಣ್ಣೆದುರು ತಂದುಕೊಂಡ
ಪಚ್ಚಕ್ಖೀಭೂ. ಅಕ: [ಪ್ರತ್ಯಕ್ಷೀ+ಭೂ] ಪ್ರತ್ಯಕ್ಷವಾಗು, ಸಾಕ್ಷಾತ್ತಾಗು
ಪಚ್ಚಕ್ಖೇಯ. 'ಪಚ್ಚಕ್ಖಾ' ಶಬ್ದವನ್ನು ನೋಡುವುದು.
ಪಚ್ಚಗ್ಗ. ವಿ: [ಪ್ರತ್ಯಗ್ರ] ಪ್ರಧನ, ಮುಖ್ಯ, ಶ್ರೇಷ್ಠ, ಸುಂದರ, ಹೊಸತಾದ(ಪಾಅ)
ಪಚ್ಚಚ್ಛಿಮ. 'ಪಚ್ಚತ್ಥಿಮ' ಶಬ್ದವನ್ನು ನೋಡುವುದು.
ಪಚ್ಚಚ್ಛಿಮಾ. 'ಪಚ್ಚತ್ಥಿಮಾ' ಶಬ್ದವನ್ನು ನೋಡುವುದು.
ಪಚ್ಚಚ್ಛಿಮಿಲ್ಲ. ವಿ: [ಪಾಶ್ಚಾತ್ಯ] ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ, ಪಶ್ಚಿಮ ದಿಕ್ಕಿಗೆ ಸಂಬಂಧಿಸಿದ(ಸಮ)
ಪಚ್ಚಚ್ಛಿಮುತ್ತರಾ. 'ಪಚ್ಚತ್ಥಿಮುತ್ತರಾ' ಶಬ್ದವನ್ನು ನೋಡುವುದು
ಪಚ್ಚಡ. ಅಕ: [ಕ್ಷರ್] ಸೋರು, ತೊಟ್ಟಿಕ್ಕು. ಸ್ರವಿಸು ವ. ಕೃ: 'ಪಚ್ಚಡಮಾಣ'(ಕುಮಾ)
ಪಚ್ಚಡ್ಡ. ಸಕ: [ಗಮ್] ಹೋಗು, ನಡೆ
ಪಚ್ಚಡ್ಡಿಅ. ವಿ: [ಕ್ಷರಿತ] ಸೋರಿದ, ತೊಟ್ಟಿಕ್ಕಿದ, ಸ್ರವಿಸಿದ
ಪಚ್ಚಡ್ಡಿಯಾ. ಸ್ತ್ರೀ: [ದೇ. ಪ್ರತ್ಯಡ್ಡಿಕಾ] ಜಟ್ಟಿಗಳ ಒಂದು ಉಪಕರಣ(ವಿಸೇ)
ಪಚ್ಚಣೀಯ. ವಿ: [ಪ್ರತ್ಯನೀಕ] ವಿರೋಧಿ, ಶತ್ರು, ವೈರಿ (ಉಪ)
ಪಚ್ಚಣುಭವ. ಸಕ: [ಪ್ರತ್ಯನು +ಭೂ] ಅನುಭವಕ್ಕೆ ತಂದುಕೊಳ್ಳು, ಅನುಭವಿಸು(ಣಾಯಾ)
ಪಚ್ಚತ್ತ. ವಿ: [ಪ್ರತ್ಯಕ್ತ] ಯಾವುದನ್ನು ತ್ಯಜಿಸಲು ಆರಂಭಿಸಲಾಗಿದೆಯೋ ಅದು(ಉಪ)
ಪಚ್ಚತ್ತರ. ನ: [ದೇ] ಪ್ರಿಯವಾದ ಮಾತು, ಸಂತೋಷಪಡಿಸಲು ಆಡುವ ಸುಳ್ಳು ಹೊಗಳಿಕೆಯ ಮಾತು.
ಪಚ್ಚತ್ಥರಣ. ನ: [ಪ್ರತ್ಯಾಸ್ತರಣ] ಹಾಸಿಗೆ. 'ಪಲ್ಹತ್ಥರಣ' ಶಬ್ದವನ್ನು ನೋಡುವುದು
ಪಚ್ಚತ್ಥಿ. ವಿ: [ಪ್ರತ್ಯರ್ಥಿನ್] ವೈರಿ, ಶತ್ರು, ವಿರೋಧಿ(ಉಪ)
ಪಚ್ಚತ್ಥಿಮ. ವಿ: [ಪಾಶ್ಚಾತ್ಯ, ಪಶ್ಚಿಮ] ಪಶ್ಚಿಮ ದಿಕ್ಕಿನ ಕಡೆಯ, ನ: ಪಶ್ಚಿಮ ದಿಕ್ಕು(ಭಗ)
ಪಚ್ಚತ್ಥಿಮಾ. ಸ್ತ್ರೀ: [ಪಶ್ಚಿಮಾ] ಪಶ್ಚಿಮ ದಿಕ್ಕು(ಠಾ)
ಪಚ್ಚತ್ಥಿಮುತ್ತರಾ. ಸ್ತ್ರೀ: [ಪಶ್ಚಿಮೋತ್ತರಾ] ಪಶ್ಚಿಮೋತ್ತರ ದಿಕ್ಕು, ವಾಯವ್ಯದ ಮೂಲೆ
ಪಚ್ಚತ್ಥುಯ. ವಿ; [ಪ್ರತ್ಯಾಸ್ತೃತ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, ಆಚ್ಛಾದಿಸಲ್ಪಟ್ಟ, ಹಾಸಿದ, ಹರಡಿದ(ಉಪ)
ಪಚ್ಚದ್ಧ. ನ: [ಪಶ್ಚಾರ್ಧ] ಹಿಂದಿನ ಅರ್ಧಭಾಗ, ಉತ್ತರಾರ್ಧ(ಗಉಡ)
ಪಚ್ಚದ್ಧಚಕ್ಕವಟ್ಟಿ. ನ: [ಪ್ರತ್ಯರ್ಧಚಕ್ರವರ್ತಿನ್] ವಾಸುದೇವನ ಶತ್ರು ರಾಜ, ಪ್ರತಿವಾಸುದೇವ(ತೀ)
ಪಚ್ಚಪ್ಪಣ. ನ: [ಪ್ರತ್ಯರ್ಪಣ] ಹಿಂತಿರುಗಿಸುವುದು
ಪಚ್ಚಪ್ಪಿಣ. ಸಕ: [ಪ್ರತಿ +ಅರ್ಪಯ್] ಹಿಂತಿರುಗಿಸು, ಒಪ್ಪಿಸಿದ ಕಾರ್ಯವನ್ನು ಮಾಡಿ ಮುಗಿಸಿ ನಿವೇದಿಸು
ಪಚ್ಚವಲೊಕ್ಕ. ವಿ: [ದೇ] ಆಸಕ್ತ ಚಿತ್ತ, ತಲ್ಲೀನ ಮನಸ್ಕ(ದೇ)
ಪಚ್ಚಬ್ಭಾಸ. ಪು: [ಪ್ರತ್ಯಾಭಾಸ] ಉಪಸಂಹಾರ, ನಿರ್ಣಯ,
ಪಚ್ಚಭಿಆಣ. 'ಪಚ್ಚಭಿಜಾಣ' ಶಬ್ದವನ್ನು ನೋಡುವುದು
ಪಚ್ಚಭಿಆಣಿದ(ಶೌ). 'ಪಚ್ಚಭಿಜಾಣಿಅ' ಶಬ್ದವನ್ನು ನೋಡುವುದು
ಪಚ್ಚಭಿಜಾಣ. ಸಕ: [ಪ್ರತ್ಯಭಿ +ಜ್ಞಾ] ಗುರುತಿಸು, ಗುರುತಿನ ವಸ್ತುವಿನಿಂದ ಉಂಟಾಗುವ ಪೂರ್ವಸ್ಮರಣೆ
ಪಚ್ಚಭಿಜಾಣಿಅ. ವಿ: [ಪ್ರತ್ಯಭಿಜ್ಞಾತ] ಗುರುತಿಸಲ್ಪಟ್ಟವ, ಗುರುತಿನಿಂದ ಕಂಡುಹಿಡಿಯಲ್ಪಟ್ಟ
ಪಚ್ಚಭಿಣಾಣ. ನ: [ಪ್ರತ್ಯಭಿಜ್ಞಾನ] ಗುರುತು, ಗುರುತಿನ ವಸ್ತುವಿನಿಂದ ಉಂಟಾಗುವ ಪೂರ್ವಸ್ಮರಣೆ
ಪಚ್ಚಭಿನ್ನಾಯ. 'ಪಚ್ಚಭಿಜಾಣಿಅ' ಶಬ್ದವನ್ನು ನೋಡುವುದು

ಪಚ್ಚಮಾಣ. 'ಪಚ=ಪಚ್' ಶಬ್ದವನ್ನು ನೋಡುವುದು

ಪಚ್ಚಯ. ಪು: [ಪ್ರತ್ಯಯ] ಪ್ರತೀತಿ, ಜ್ಞಾನ, ಅರಿವು(ಉವ), ನಿರ್ಣಯ, ನಿಶ್ಚಯ, ಹೇತು, ಕಾರಣ(ತಾ), ಶಪಥ, ಪ್ರತಿಜ್ಞೆ, ನಂಬಿಕೆ ಉಂಟುಮಾಡಲು ಮಾಡಲಾಗುತ್ತಿದ್ದ ಹುರಿದ ಉದ್ದಿನ ಕಾಳನ್ನು ಅಗಿಯುವುದು. ಜ್ಞಾನದ ಕಾರಣ, ಜ್ಞಾನದ ವಿಷಯ: ಜ್ಞೇಯ ಪದಾರ್ಥ, ಪ್ರತ್ಯಯವನ್ನು ಉಂಟುಮಾಡುವಂಥದು, ವಿಶ್ವಾಸ, ನಂಬಿಕೆ, ಶಬ್ದ, ರಂಧ್ರ, ತೂತು, ಆಧಾರ, ಆಶ್ರಯ, ವ್ಯಾಕರಣದಲ್ಲಿ ಪ್ರಸಿದ್ಧವಾದ ಪ್ರಕೃತಿಗೆ ಸೇರಿಸುವ ಪ್ರತ್ಯಯ.

ಪಚ್ಚಲ. ವಿ: [ದೇ] ಪಕ್ವ, ಸಿದ್ಧ, ಸಮರ್ಥ(ಸುಪಾ), ಅಸಹಿಷ್ಣು(ದೇ)

ಪಚ್ಚಲಿಉ}. (ಅಪ). ಅ: [ಪ್ರತ್ಯುತ] ವೈಪರೀತ್ಯ,
ಪಚ್ಚಲ್ಲಿಉ}. ವಿರುದ್ಧವಾದ, ಹೇಳಿದ ಮಾತಿಗೆ ಬದಲಾಗಿ, ಸ್ವಭಾವಕ್ಕೆ ವಿರುದ್ಧವಾದ

ಪಚ್ಚವಣದ(ಶೌ). ವಿ: [ಪ್ರತ್ಯವನತ] ಬಾಗಿದ, ನಮಸ್ಕರಿಸಿದ

ಪಚ್ಚವತ್ಥಯ. ವಿ: [ಪ್ರತ್ಯವಸ್ತೃತ] ಹಾಸಲಾದ, ಹರಡಿಸಲಾದ, ಮುಚ್ಚಲ್ಪಟ್ಟ, ಆಚ್ಛಾದಿಸಲಾದ (ಆವಮ)

ಪಚ್ಚವತ್ಥಾಣ. ನ: [ಪ್ರತ್ಯವಸ್ಥಾನ] ಸಂದೇಹ ಪರಿಹಾರ, ಸಮಾಧಾನ, ಖಂಡನೆ, ವಿರುದ್ಧವಾದ ಮಾತು(ಬೃಹ)

ಪಚ್ಚವರ. ನ: [ದೇ] ಒನಕೆ(ದೇ)

ಪಚ್ಚವಾಯ. ಪು: [ಪ್ರತ್ಯವಾಯ] ಅಡ್ಡಿ, ಅಡಚಣೆ, ವಿಘ್ನ(ಣಾಯಾ), ದುರಾಚಾರದಿಂದ ಬರುವ ದೋಷ(ಪಉಮ), ಪಾಪ, ದುಃಖ, ನೋವು, ನಾಶಕ್ಕೆ ಕಾರಣವಾದ, ತೊಂದರೆಗೆ ಕಾರಣವಾದ, ಅನರ್ಥ

ಪಚ್ಚವೆಕ್ಖಿದ(ಶೌ). ವಿ: [ಪ್ರತ್ಯವೇಕ್ಷಿತ] ಚೆನ್ನಾಗಿ ನೋಡಲ್ಪಟ್ಟ, ಚೆನ್ನಾಗಿ ಪರಿಶೀಲಿಸಲ್ಪಟ್ಟ

ಪಚ್ಚಹ. ನ: [ಪ್ರತ್ಯಹ] ಪ್ರತಿ ದಿನ, ದಿನವೂ.(ಅಭಿ)

ಪಚ್ಚಹಿಜಾಣ}. 'ಪಚ್ಚಭಿಜಾಣ' ಶಬ್ದವನ್ನು
ಪಚ್ಚಹಿಯಾಣ}. ನೋಡುವುದು

ಪಚ್ಚಾ. ಸ್ತ್ರೀ: [ದೇ] ಕರಡಿ ಹುಲ್ಲು; ಒಂದು ಬಗೆಯ ಹುಲ್ಲು(ತಾ). **–ಪಿಚ್ಚಿಯಯ.** ನ: [ದೇ] ಕರಡಿ ಹುಲ್ಲನ್ನು ಕುಟ್ಟಿ ಅದರ ನಾರಿನಿಂದ ಮಾಡಿದ ರಜೋಹರಣ –ಜೈನ ಸಾಧುವಿನ ಒಂದು ಉಪಕರಣ(ತಾ)

ಪಚ್ಚಾ. 'ಪಚ್ಛಾ' ಶಬ್ದವನ್ನು ನೋಡುವುದು

ಪಚ್ಚಾಅಚ್ಛ. ಸಕ: [ಪ್ರತ್ಯಾ +ಗಮ್] ಹಿಂತಿರುಗು, ವಾಪಸ್ ಹೋಗು(ಷಡ್)

ಪಚ್ಚಾಅದ(ಶೌ). 'ಪಚ್ಚಾಗಯ' ಶಬ್ದವನ್ನು ನೋಡುವುದು

ಪಚ್ಚಾಇಕ್ಖ. 'ಪಚ್ಚಕ್ಖ=ಪ್ರತ್ಯಾ +ಖ್ಯಾ' ಶಬ್ದವನ್ನು ನೋಡುವುದು

ಪಚ್ಚಾಉಟ್ಟಣಂಯಾ. ಸ್ತ್ರೀ: [ಪ್ರತ್ಯಾವರ್ತನತಾ] ನಿಶ್ಚಯಾತ್ಮಕವಾದ ಬುದ್ಧಿ

ಪಚ್ಚಾಏಸ. ಪುಂನ: [ಪ್ರತ್ಯಾದೇಶ] ದೃಷ್ಟಾಂತ, ನಿದರ್ಶನ, ಉದಾಹರಣೆ. **'ಪಚ್ಚಾದೇಸ' ಶಬ್ದವನ್ನು ನೋಡುವುದು**

ಪಚ್ಚಾಗಂಯ. ವಿ: [ಪ್ರತ್ಯಾಗತ] ಹಿಂತಿರುಗಿ ಬಂದವನು(ಗಾ), ನ: ಹಿಂತಿರುಗಿ ಬರುವುದು

ಪಚ್ಚಾಚಕ್ಖ. ಸಕ: [ಪ್ರತ್ಯಾ +ಚಕ್ಷ್] ಪರಿತ್ಯಜಿಸು, ಬಿಟ್ಟುಬಿಡು

ಪಚ್ಚಾಣಯಣ. ನ: [ಪ್ರತ್ಯಾನಯನ] ಹಿಂದಕ್ಕೆ ತರುವುದು, ವಾಪಸ್ ತರುವುದು(ಮುದ್ರಾ)

ಪಚ್ಚಾಣಿ–}. ಸಕ: [ಪ್ರತ್ಯಾ +ಣೀ] ಹಿಂದಕ್ಕೆ ಕರೆತರು,
ಪಚ್ಚಾಣೇ}. ಹಿಂದಕ್ಕೆ ತರು

ಪಚ್ಚಾಣೀದ(ಶೌ). ವಿ: [ಪ್ರತ್ಯಾನೀತ] ಹಿಂದಕ್ಕೆ ಕರೆತರಲಾದ

ಪಚ್ಚಾಥರಣ. ನ: [ಪ್ರತ್ಯಾಸ್ತರಣ] ಅಭಿಮುಖವಾಗಿ ನಿಂತು ಯುದ್ಧ ಮಾಡುವುದು, ಮುಂದೆ ನಿಂತು ಸೆಣಸುವುದು.

ಪಚ್ಚಾದಿಟ್ಠ. ವಿ: [ಪ್ರತ್ಯಾದಿಷ್ಟ] ನಿರಾಕರಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ, ಹಿಂದಕ್ಕೆ ತಳ್ಳಲ್ಪಟ್ಟ(ಮೃಚ್ಛ)

ಪಚ್ಚಾದೇಸ. ಪು: [ಪ್ರತ್ಯಾದೇಶ] ನಿರಾಕರಣೆ, ತಿರಸ್ಕಾರ(ಅಭಿ)

ಪಚ್ಚಾಪಡ. ಅಕ: [ಪ್ರತ್ಯಾ +ಪತ್] ಹಿಂತಿರುಗು, ವಾಪಸ್ ಬಂದುಬಿಡು

ಪಚ್ಚಾಮಿತ್ತ. ಪುಂನ: [ಪ್ರತ್ಯಾಮಿತ್ರ] ಶತ್ರು, ವೈರಿ (ಣಾಯಾ)

ಪಚ್ಚಾಯ. ಸಕ: [ಪ್ರತಿ +ಆಯುಯ್] ನಂಬಿಕೆ ಉಂಟುಮಾಡಿಸು, ತಿಳಿವು ಉಂಟುಮಾಡು

ಪಚ್ಚಾಯ–. 'ಪಚ್ಚಾಯಾ' ಶಬ್ದವನ್ನು ನೋಡುವುದು
ಪಚ್ಚಾಯಣ. ನ: [ಪ್ರತ್ಯಾಯನ] ಬೋಧಿಸುವುದು, ತಿಳಿಸುವುದು, ನಂಬಿಕೆ ಹುಟ್ಟಿಸುವುದು(ವಿಸೇ)
ಪಚ್ಚಾಯಿಕ. ವಿ: [ಪ್ರತ್ಯಾಯಿಕ] ನಂಬಿಕೆ ಹುಟ್ಟಿಸುವವನು, ನಿರ್ಣಯ ಉಂಟು ಮಾಡುವವನು(ವಿಕ್ರ)
ಪಚ್ಚಾಯಾ. ಅಕ: [ಪ್ರತ್ಯಾ +ಯಾ] ಮೇಲಿನ ಶಬ್ದವನ್ನು ನೋಡುವುದು
ಪಚ್ಚಾಯಾಇ. ಸ್ತ್ರೀ: [ಪ್ರತ್ಯಾಜಾತಿ, ಪ್ರತ್ಯಾಯಾತಿ] ಹುಟ್ಟುವುದು, ಜನಿಸುವುದು(ತಾ)
ಪಚ್ಚಾಯಾ. ಅಕ: [ಪ್ರತ್ಯಾ+ಜನ್] ಹುಟ್ಟು, ಜನಿಸು.
ಪಚ್ಚಾಯಾಯ. ವಿ: [ಪ್ರತ್ಯಾಯಾತ] ಹುಟ್ಟಿದ, ಜನಿಸಿದ (ಭಗ)
ಪಚ್ಚಾರ. ಸಕ: [ಉಪಾ+ಲಂಭ್] ನಿಂದಿಸು, ದೂರು, ಬಯ್ಯು
ಪಚ್ಚಾರಣ. ನ: [ಉಪಾಲಂಭನ] ನಿಂದೆ, ಬೈಗಳು(ಪಾಅ)
ಪಚ್ಚಾರಿಅ. ವಿ: [ಪ್ರಚಾರಿತ] ಚಲಿಸಲ್ಪಟ್ಟ, ಸಂಚಾರ ಮಾಡಿಸಲಾದ
ಪಚ್ಚಾರಿಯ. ವಿ: [ಉಪಾಲಬ್ಧ] ನಿಂದಿಸಲ್ಪಟ್ಟವನು, ದೂರಲ್ಪಟ್ಟವನು(ಭವಿ)
ಪಚ್ಚಾಲಿಯ. ವಿ: [ದೇ. ಪ್ರತ್ಯಾರ್ದಿತ] ನೆನೆಸಲ್ಪಟ್ಟ, ಒದ್ದೆಮಾಡಲ್ಪಟ್ಟ, ತೋಯಿಸಲ್ಪಟ್ಟ
ಪಚ್ಚಾಲೀಢ. ನ: [ಪ್ರತ್ಯಾಲೀಡ] ಬಿಲ್ಲುಗಾರನು ಎಡಗಾಲನ್ನು ಹಿಂದೆ ಸರಿಸಿ ಬಲಗಾಲನ್ನು ಮುಂದೆ ಇಟ್ಟುಕೊಂಡು ನಿಲ್ಲುವ ಒಂದು ಸ್ಥಿತಿ(ವವ)
ಪಚ್ಚಾವಡ. ಪು: [ಪ್ರತ್ಯಾವರ್ತ] ನೀರಿನ ಸುಳಿಯ ಮುಂದಿನ ಸುಳಿ
ಪಚ್ಚಾವರಣ್ಣ. ಪು: [ಪ್ರತ್ಯಾಪರಾಹ್ನ] ಮಧ್ಯಾಹ್ನದ ನಂತರದ ವೇಳೆ; ದಿನದ ಮೂರನೇ ಪ್ರಹರ (ವಿಪಾ)
ಪಚ್ಚಾಸಣ್ಣ. ವಿ: [ಪ್ರತ್ಯಾಸನ್ನ] ಹತ್ತಿರದಲ್ಲಿ ಇರುವ, ಸಮೀಪದಲ್ಲಿ ಇರುವ(ವಿಸೇ)
ಪಚ್ಚಾಸತ್ತಿ. ಸ್ತ್ರೀ: [ಪ್ರತ್ಯಾಸತ್ತಿ] ಸಾಮೀಪ್ಯ, ನಿಕಟತೆ
ಪಚ್ಚಾಸನ್ನ. 'ಪಚ್ಚಾಸಣ್ಣ' ಶಬ್ದವನ್ನು ನೋಡುವುದು
ಪಚ್ಚಾಸಾ. ಸ್ತ್ರೀ: [ಪ್ರತ್ಯಾಶಾ] ಆಸೆ, ಆಕಾಂಕ್ಷೆ, ಅಭಿಲಾಷೆ, ಇಚ್ಛೆ, ವಾಂಛೆ

ಪಚ್ಚಾಸಿ. ವಿ: [ಪ್ರತ್ಯಾಶಿನ್] ವಾಂತಿ ಮಾಡಿದ (ಹೊರ ಹಾಕಿದ) ವಸ್ತುವನ್ನು ಭಕ್ಷಿಸುವವನು (ಆಚಾ)
ಪಚ್ಚಾಹ. ಸಕ: [ಪ್ರತಿ +ಬ್ರೂ] ಉತ್ತರ ಕೊಡು
ಪಚ್ಚಾಹರ. ಸಕ: [ಪ್ರತ್ಯಾ +ಹೃ] ಉಪದೇಶ ನೀಡು
ಪಚ್ಚಾಹುತ್ತ. ಕ್ರಿ ವಿ: [ಪಶ್ಚಾನ್ಮುಖ] ಹಿಂದ ಹಿಂದಕ್ಕೆ, ಹಿಂದಿನ ಕಡೆಗೆ
ಪಚ್ಚಿಮ. 'ಪಚ್ಛಿಮ' ಶಬ್ದವನ್ನು ನೋಡುವುದು
ಪಚ್ಚುಅ.(ದೇ). 'ಪಚ್ಚುಹಿಅ' ಶಬ್ದವನ್ನು ನೋಡುವುದು
ಪಚ್ಚುಅಆರ. 'ಪಚ್ಚುವಯಾರ' ಶಬ್ದವನ್ನು ನೋಡುವುದು
ಪಚ್ಚುಗ್ಗಚ್ಛಣಯಾ. ಸ್ತ್ರೀ; [ಪ್ರತ್ಯುದ್ಗಮನತಾ] ಎದುರಾಗಿ ನಡೆಯುವುದು(ಭಗ), ಅಭಿಮುಖವಾಗಿ ಹೋಗುವುದು(ಭಗ)
ಪಚ್ಚುಚ್ಚಾರ. ಪು: [ಪ್ರತ್ಯುಚ್ಚಾರ] ಹೇಳಿದ ವಿಷಯವನ್ನು ಮತ್ತೆ ಹೇಳುವುದು, ಒಬ್ಬರು ಮಾತನಾಡಿದ ನಂತರ ಮಾತಾಡುವುದು.
ಪಚ್ಚುಚ್ಛುಹಣೀ. ಸ್ತ್ರೀ: [ದೇ] ಹೊಸ ಮದ್ಯ(ದೇ)
ಪಚ್ಚುಜ್ಜೀವಿಅ. ವಿ: [ಪ್ರತ್ಯುಜ್ಜೀವಿತ] ಮತ್ತೆ ಜೀವಿತನಾದ, ಬದುಕಿನ ಕಷ್ಟ ನಿವಾರಣೆಯಾಗಿ ಮತ್ತೆ ಹಿಂದಿನ ಸ್ಥಿತಿಗೆ ಬಂದಿರುವ
ಪಚ್ಚುಟ್ಠಿಅ. ವಿ: [ಪ್ರತ್ಯುತ್ಥಿತ] ಎದುರುಗಡೆ ನಿಂತಿರುವವನು(ಸುರ), ಎದುರುಗೊಂಡು ಮೇಲೆ ಎದ್ದುನಿಂತಿರುವ.
ಪಚ್ಚುಣ್ಣಮ. ಅಕ: [ಪ್ರತ್ಯುದ್ +ನಮ್] ಸ್ವಲ್ಪ ಎತ್ತರವಾಗು
ಪಚ್ಚುತ್ತ. ವಿ: [ಪ್ರತ್ಯುಪ್ತ] ಮತ್ತೆ ಬಿತ್ತಲಾಗಿರುವ(ದೇ)
ಪಚ್ಚುತ್ತರ. ಸಕ: [ಪ್ರತ್ಯವ +ತೃ] ಕೆಳಕ್ಕೆ ಇಳಿ, ಕೆಳಗೆ ಬರುವುದು.
ಪಚ್ಚುತ್ತರ. ನ: [ಪ್ರತ್ಯುತ್ತರ] ಪ್ರತಿಯಾಗಿ ಉತ್ತರ ಕೊಡುವುದು, ಉತ್ತರಕೊಡುವುದು
ಪಚ್ಚುತ್ಥ. ವಿ: [ದೇ] ಮತ್ತೆ ಬಿತ್ತಲ್ಪಟ್ಟ(ದೇ)
ಪಚ್ಚುತ್ಥಯ}. ವಿ: [ಪ್ರತ್ಯವಸ್ತೃತ] ಮುಚ್ಚಲ್ಪಟ್ಟ,
ಪಚ್ಚುತ್ಥುಯ}. ಹೊದಿಸಲ್ಪಟ್ಟ, ಆಚ್ಛಾದಿಸಲ್ಪಟ್ಟ(ಣಾಯಾ)
ಪಚ್ಚುದ್ಧರಿಅ. ವಿ: [ದೇ] ಎದುರಿನಲ್ಲಿ ಬಂದವನು, ಎದುರುಗಡೆ ಬಂದವನು(ದೇ)
ಪಚ್ಚುದ್ಧಾರ. ಪು: [ದೇ] ಎದುರಿನಲ್ಲಿ ಬರುವುದು(ದೇ)
ಪಚ್ಚುಪ್ಪಣ್ಣ}. ವಿ: [ಪ್ರತ್ಯುತ್ಪನ್ನ] ತತ್ ಕ್ಷಣ ಉದ್ಭವಿಸಿದ,
ಪಚ್ಚುಪ್ಪನ್ನ}. ವರ್ತಮಾನ(=ಈಗಿನ)ಕಾಲಕ್ಕೆ ಸಂಬಂಧಿಸಿದ(ಭಗ), ವರ್ತಮಾನಕಾಲ, **–ನಯ.**

ಪು: [–ನಯ] ವರ್ತಮಾನದ(ತತ್ ಸಮಯದ) ವಸ್ತುವನ್ನಷ್ಟೇ ಸತ್ಯವೆಂದು ಒಪ್ಪುವ, ನಿಶ್ಚಯ ನಯ(ವಿಸೇ)

ಪಚ್ಚುಪ್ಫಲಿಅ. ವಿ: [ಪ್ರತ್ಯುತ್ಫಲಿತ] ಹಿಂತಿರುಗಿ ಬಂದವನು

ಪಚ್ಚುಬ್ಭಡ. ವಿ: [ಪ್ರತ್ಯುದ್ಭಟ] ಅತ್ಯಂತ ಪ್ರಬಲವಾದ

ಪಚ್ಚುರಸ. ನ: [ಪ್ರತ್ಯುರಸ] ಹೃದಯದ ಎದುರಿನಲ್ಲಿ, ಹೃದಯದ ಮುಂದೆ

ಪಚ್ಚುಲ್ಲಂ. ಅ: [ದೇ. ಪ್ರತ್ಯುತ] ವಿರುದ್ಧವಾದ

ಪಚ್ಚುವಕಾರ. 'ಪಚ್ಚುವಾರ' ಶಬ್ದವನ್ನು ನೋಡುವುದು

ಪಚ್ಚುವಗಚ್ಛ. ಸಕ: [ಪ್ರತ್ಯುಪ +ಗಪ್] ಎದುರಿನಲ್ಲಿ ಹೋಗುವುದು, ಎದುರುಗಡೆ ಹೋಗುವುದು

ಪಚ್ಚುವಗಾರ.} ಪು: [ಪ್ರತ್ಯುಪಕಾರ] ಉಪಕಾರದ

ಪಚ್ಚುವಯಾರ}. ಬದಲಿಗೆ ಉಪಕಾರ ಮಾಡುವುದು

ಪಚ್ಚುವಯಾರಿ. ವಿ: [ಪ್ರತ್ಯುಪಕಾರಿನ್] ಪ್ರತ್ಯುಪಕಾರ ಮಾಡುವವನು(ಸುಪಾ)

ಪಚ್ಚುವೆಕ್ಖ. ಸಕ: [ಪ್ರತ್ಯುಪ +ಈಕ್ಷ್] ಚೆನ್ನಾಗಿ ನೋಡು, ಗಮನಿಸಿ ನೋಡು(ಔಪ)

ಪಚ್ಚುವೆಕ್ಖಿಯ. ವಿ: [ಪ್ರತ್ಯುಪೇಕ್ಷಿತ] ಚೆನ್ನಾಗಿ ನೋಡಲ್ಪಟ್ಟ, ಗಮನಿಸಿ ನೋಡಲಾದ

ಪಚ್ಚುಹಿಅ. ವಿ: [ದೇ] ಸೋರುತ್ತಿರುವ, ತೊಟ್ಟಿಕ್ಕುತ್ತಿರುವ

ಪಚ್ಚೂಢ. ನ: [ದೇ] ದೊಡ್ಡ ತಟ್ಟೆ, ಗಂಗಳ, ಊಟ ಮಾಡುವ ಪಾತ್ರೆ

ಪಚ್ಚೂಸ(ದೇ). 'ಪಚ್ಚೂಹ= [ದೇ]' ಶಬ್ದವನ್ನು ನೋಡುವುದು

ಪಚ್ಚೂಸ}. ಪು: [ಪ್ರತ್ಯೂಷ] ಬೆಳಿಗ್ಗೆ, ಪ್ರಾತಃಕಾಲ

ಪಚ್ಚೂಹ}. (ಣಾಯಾ)

ಪಚ್ಚೂಹ. ಪುಂನ: [ಪ್ರತ್ಯೂಹ] ವಿಘ್ನ, ಅಡ್ಡಿ, ಅಡಚಣೆ

ಪಚ್ಚೂಹ. ಪು: [ದೇ] ಸೂರ್ಯ, ರವಿ

ಪಚ್ಚೇಅ. ನ: [ಪ್ರತ್ಯೇಕ] ಒಬ್ಬೊಬ್ಬರನ್ನೂ, ಬೇರೆ ಬೇರೆಯಾಗಿ

ಪಚ್ಚೇಡ. ನ: [ದೇ] ಒನಕೆ(ದೇ)

ಪಚ್ಚೆಲ್ಲಿಉ.(ಅಪ). 'ಪಚ್ಚಲ್ಲಿಉ' ಶಬ್ದವನ್ನು ನೋಡುವುದು

ಪಚ್ಚೋಗಿಲ. ಸಕ: [ಪ್ರತ್ಯವ +ಗಿಲ್] ಆಸ್ವಾದಿಸು

ಪಚ್ಚೋಣಾಮಿಣೀ. ಸ್ತ್ರೀ: [ಪ್ರತ್ಯವನಾಮಿನೀ] ಒಂದು ವಿದ್ಯಾ ವಿಶೇಷ; ಇದರ ಪ್ರಭಾವದಿಂದ ಮರಗಳು ಫಲವನ್ನು ನೀಡುವ ಸಲುವಾಗಿ ತಾವೇ ಕೆಳಕ್ಕೆ ಬಾಗುತ್ತವೆ (ಉಪ)

ಪಚ್ಚೋಣಿಯತ್ತ. ವಿ: [ಪ್ರತ್ಯವನಿವೃತ್ತ] ಎತ್ತರಕ್ಕೆ ಜಿಗಿದು ಕೆಳಕ್ಕೆ ಬಿದ್ದ(ಪಣ್ಣ)

ಪಚ್ಚೋಣಿವಯ. ಅಕ: [ಪ್ರತ್ಯವನಿ +ಪತ್] ಜಿಗಿದು ಕೆಳಕ್ಕೆ ಬೀಳುವುದು

ಪಚ್ಚೋಣೀ(ದೇ). 'ಪಚ್ಚೋವಣೀ' ಶಬ್ದವನ್ನು ನೋಡುವುದು

ಪಚ್ಚೋಯಡ. ನ: [ದೇ] ದಡದ ಸಮೀಪವಿರುವ ಎತ್ತರದ ಪ್ರದೇಶ ವಿ: ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ

ಪಚ್ಚೋಯರ. ಸಕ: [ಪ್ರತವ + ತೃ] ಕೆಳಕ್ಕೆ ಇಳಿ(ಆಚಾ)

ಪಚ್ಚೋರುಭ}. ಸಕ: [ಪ್ರತ್ಯವ +ರುಹ್] ಕೆಳಕ್ಕೆ ಇಳಿ

ಪಚ್ಚೋರುಹ}.

ಪಚ್ಚೋವಣಿಅ. ವಿ: [ದೇ] ಎದುರಿನಲ್ಲಿ ಬಂದವ(ದೇ)

ಪಚ್ಚೋವಣೀ. ಸ್ತ್ರೀ: [ದೇ] ಎದುರುಗಡೆ ಬರುವುದು.

ಪಚ್ಚೋಸಕ್ಕ. ಅಕ: [ಪ್ರತ್ಯವ + ಷ್ವಷ್ಕ್] ಕೆಳಕ್ಕೆ ಇಳಿ, ಹಿಂದಕ್ಕೆ ಸರಿ, ಹಿಮ್ಮೆಟ್ಟು(ಭಗ)

ಪಚ್ಛ. ಸಕ: [ಪ್ರ +ಅರ್ಥಯ್] ಪ್ರಾರ್ಥಿಸು,

ಪಚ್ಛ. ವಿ: [ಪಥ್ಯ] ರೋಗಿಗೆ ಹಿತಕರವಾದ ಆಹಾರ(ಸುಪಾ), ಹಿತಕಾರಕ, ಹಿತಕಾರಿಯಾದ

ಪಚ್ಛ. ನ: [ಪಶ್ಚಾತ್] ಅನಂತರದಲ್ಲಿ, ಉಳಿದ, ಹಿಂಭಾಗ, ಪಶ್ಚಿಮ ದಿಕ್ಕು(ವಜ್ಜಾ). **–ಓ.** ಅ: [–ತಸ್] ಹಿಂದೆ, ಹಿಂದುಗಡೆ. **–ಕಮ್ಮ.** ನ: [–ಕರ್ಮನ್] ಅನಂತರದ ಕ್ರಿಯೆ, ಯತಿಗಳಿಗೆ ನೀಡುವ ಭಿಕ್ಷೆಯಲ್ಲಿನ ಒಂದು ದೋಷ, ದಾನ ಮಾಡಿದ ನಂತರದಲ್ಲಿ ಪಾತ್ರೆಯನ್ನು ಸ್ವಚ್ಛಗೊಳಿಸುವ ಕ್ರಿಯೆ(ಆವ). **–ತ್ತಾಅ.** ಪು: [–ತಾಪ] ಅನುತಾಪ; ಅನಂತರದಲ್ಲಿ ಮಾಡಿದ ತಪ್ಪಿಗೆ ವಿಷಾದಿಸುವುದು. **–ದ್ಧ.** ನ: [–ಅರ್ಧ] ಹಿಂದಿನ ಅರ್ಧ, ಉತ್ತರಾರ್ಧ (ಗಉಡ), **–ವತ್ಥುಕ್ಕ.** ನ: [–ವಾಸ್ತುಕ] ಮನೆಯ ಹಿಂದಿನ ಭಾಗ(ಪಣ್ಣ). **–ಯಾವ.** ಪು: [–ತಾಪ] ಪಶ್ಚಾತ್ತಾಪ: ಮಾಡಿದ ತಪ್ಪಿಗೆ ಅನಂತರದಲ್ಲಿ ವಿಷಾದಿಸುವುದು. 'ಪಚ್ಛಾ=ಪಶ್ಚಾತ್' ಶಬ್ದವನ್ನು ನೋಡುವುದು

ಪಚ್ಛಇ}. (ಅಪ). ಅ: [ಪಶ್ಚಾತ್] ಮೇಲಿನ ಶಬ್ದವನ್ನು

ಪಚ್ಛಏ}. ನೋಡುವುದು. **–ತಾವ.** ಪು: [–ತಾಪ] ಮಾಡಿದ ತಪ್ಪಿಗೆ ವ್ಯಥೆ ಪಡುವುದು(ಕುಮಾ)

ಪಚ್ಛಂದ. ಸಕ: [ಗಮ್] ಗಮಿಸು, ನಡೆ

ಪಚ್ಛಂದಿ. ವಿ: [ಗಂತೃ]ಗಮಿಸುವವನು, ನಡೆಯುವವನು

ಪಚ್ಛಂಭಾಗ. ಪು: [ಪಶ್ಚಾದ್‌ಭಾಗ] ಹಗಲಿನ ಉತ್ತರಾರ್ಧ. ಪುಂನ: ಚಂದ್ರನು ಪುಷ್ಟಿ ನೀಡಿ ಭೋಗಿಸುವ ನಕ್ಷತ್ರ

ಪಚ್ಛಣ. ಸ್ತ್ರೀನ: [ಪ್ರತಕ್ಷಣ] ಚಾಕು ಇತ್ಯಾದಿಗಳಿಂದ ತೆಳ್ಳನೆಯ ಸೂಕ್ಷ್ಮ ಚರ್ಮವನ್ನು ಸೀಳಿ ತೆಗೆಯುವುದು

ಪಚ್ಛಣ್ಣ. ವಿ: [ಪ್ರಚ್ಛನ್ನ] ಗುಪ್ತ, ರಹಸ್ಯವಾದ, ಗುಟ್ಟಾದ (ಗಾ), **–ಪಇ.** [–ಪತಿ] ಜಾರ, ಉಪಪತಿ(ಸೂಅ)

ಪಚ್ಛದ. **'ಪಚ್ಛಯ' ಶಬ್ದವನ್ನು ನೋಡುವುದು**

ಪಚ್ಛದಣ. ನ: [ಪ್ರಚ್ಛದನ] ಮೇಲು ಹಾಸು, ಮೇಲುಹೊದಿಕೆ(ಸ್ವಪ್ನ)

ಪಚ್ಛನ್ನ. **'ಪಚ್ಛಣ್ಣ' ಶಬ್ದವನ್ನು ನೋಡುವುದು**

ಪಚ್ಛಯು. ಪು: [ಪ್ರಚ್ಛದ] ಮೇಲು ಹೊದಿಕೆ, ಮೇಲುಹಾಸು, ಚಾದರ

ಪಚ್ಛಯಣ **'ಪತ್ಥಯಣ'** ಶಬ್ದವನ್ನು ನೋಡುವುದು

ಪಚ್ಛಲಿಲು(ಅಪ). **'ಪಚ್ಚಲಿಲು' ಶಬ್ದವನ್ನು ನೋಡುವುದು**

ಪಚ್ಛಾ. ಅ: [ಪಶ್ಚಾತ್] ಅನಂತರ, ಆಮೇಲೆ, ಪರಲೋಕ, ಇನ್ನೊಂದು ಜನ್ಮ, ಹಿಂಭಾಗ, ಪಶ್ಚಿಮ ದಿಕ್ಕು. **–ಉತ್ತ.** ವಿ: [–ಆಯುಕ್ತ] ಯಾರನ್ನು ಅನಂತರದಲ್ಲಿ ಆಯೋಜಿಸಲಾಗುತ್ತದೋ ಅವನು(ಕಪ್ಪ). **–ಕಡ.** ಪು: [–ಕೃತ] ಸಾಧುತ್ವವನ್ನು ತ್ಯಜಿಸಿ ಮತ್ತೆ ಗೃಹಸ್ಥನಾದವನು(ಬೃಹ). **–ಕಮ್ಮ.** **'–ಪಚ್ಛ –ಕಮ್ಮ' ಶಬ್ದವನ್ನು ನೋಡುವುದು.** **–ಣಿವಾಇ.** **'–ನಿವಾಇ' ಶಬ್ದವನ್ನು ನೋಡುವುದು.** **–ಣುತಾವ.** ಪು: [–ಅನುತಾಪ] ಪಶ್ಚಾತ್ತಾಪ(ಆವಮ). **–ಣುಪುವ್ವೀ.** ಸ್ತ್ರೀ: [–ಆನುಪೂರ್ವೀ] ವಿರುದ್ಧ ಕ್ರಮ(ಅಣು). **–ತಾವ.** ಪು: [–ತಾಪ] ಪಶ್ಚಾತ್ತಾಪ(ಆವ). **–ತಾವಿಯು.** ವಿ: [–ತಾಪಿಕ] ಪಶ್ಚಾತ್ತಾಪ ಹೊಂದಿದವನು. **–ನಿವಾಇ.** ವಿ: [–ನಿಪಾತಿನ್] ಅನಂತರದಲ್ಲಿ ಬಿದ್ದುಹೋಗುವವನು; ಹಿಂದಿನಿಂದ ಬಿದ್ದುಹೋಗುವವನು. ಗುಣವನ್ನು ಸ್ವೀಕರಿಸಿ ಅನಂತರದಲ್ಲಿ ಅದರಿಂದ ಚ್ಯುತಿ ಹೊಂದುವವನು(ಆಚಾ). **–ಭಾಗ.** ಪು: [–ಭಾಗ] ಹಿಂದಿನ ಭಾಗ, ಉತ್ತರಾರ್ಧ(ಣಾಯಾ), **ಮುಹ.** ವಿ: [–ಮುಖ] ಮುಖವನ್ನು ಹಿಂದಕ್ಕೆ ತಿರುಗಿಸಿಕೊಂಡವನು. **–ಯುವ, –ಯಾವ.** **'–ತಾವ' ಶಬ್ದವನ್ನು ನೋಡುವುದು** **–ಯಾವಿ.** ವಿ: [–ತಾಪಿನ್] ಪಶ್ಚಾತ್ತಾಪ ಪಡುವವನು(ಉಪ). **–ವಾಯ.** ಪು: [–ವಾತ] ಪಶ್ಚಿಮ ದಿಕ್ಕಿನ ಗಾಳಿ. **–ಸಂಖಡಿ.** ಸ್ತ್ರೀ: [ದೇ. ಸಂಸ್ಕೃತಿ] ಹಿಂದಿನ ಸಂಸ್ಕಾರ, ಮರಣದ ಕಾರಣದಿಂದಾಗಿ ಜ್ಞಾತಿಗಳು ಮೊದಲಾದವರಿಗೆ ಬೇಯಿಸಲಾಗುವ ಅಡುಗೆ(ಆಚಾ). **–ಸಂಥವ.** ಪು: [–ಸಂಸ್ತವ] ಹಿಂದಿನ ಸಂಬಂಧ, ಹೆಂಡತಿ, ಮಕ್ಕಳು ಮೊದಲಾದವರ ಸಂಬಂಧ. ಜೈನ ಮುನಿಗಳ ಭಿಕ್ಷೆಯಲ್ಲಿನ ಒಂದು ದೋಷ; ಶ್ವಶುರವೇ ಮೊದಲಾದ ಪಕ್ಷದಲ್ಲಿ ಒಳ್ಳೆಯ ಭಿಕ್ಷೆ ಸಿಗುತ್ತದೆಂಬ ದುರಾಸೆಯಿಂದ ಮೊದಲು ಭಿಕ್ಷೆಗೆ ಹೋಗುವುದು(ಠಾ). **–ಸಂಥುಯ.** ವಿ: [–ಸಂಸ್ತುತ] ಹಿಂದಿನ ಸಂಬಂಧದೊಂದಿಗೆ ಪರಿಚಿತ(ಆಚಾ), **–ಹುತ್ತ.** ವಿ: [–ದೇ] ಹಿಂದಿನ ಕಡೆಯ.

ಪಚ್ಛಾ. ಸ್ತ್ರೀ: [ಪಥ್ಯಾ] ಅಳಲೆಕಾಯಿ ಗಿಡ

ಪಚ್ಛಾಅ. ಸಕ: [ಪ್ರ +ಛಾದಯ್] ಮುಚ್ಚು, ಮರೆಮಾಡು

ಪಚ್ಛಾಅ. ವಿ: [ಪ್ರಚ್ಛಾಯ] ದಟ್ಟ ನೆರಳಿರುವ(ಅಭಿ)

ಪಚ್ಛಾಇಯ. ವಿ: [ಪ್ರಚ್ಛಾದಿತ] ಮುಚ್ಚಲ್ಪಟ್ಟಿರುವ, ಮರೆಮಾಡಲ್ಪಟ್ಟಿರುವ, ಅಡಗಿಸಿಡಲಾದ(ಪಾಅ)

ಪಚ್ಛಾಇಜ್ಜ. **'ಪಚ್ಛಾಅ=ಪ್ರ +ಛಾದಯ್' ಶಬ್ದವನ್ನು ನೋಡುವುದು**

ಪಚ್ಛಾಗ. ಪು: [ಪ್ರಚ್ಛಾದಕ] ಪಾತ್ರೆಗೆ ಕಟ್ಟುವ ಬಟ್ಟೆ(ಓಘ)

ಪಚ್ಛಾಡಿದ(ಶೌ). ವಿ: [ಪ್ರಕ್ಷಾಲಿತ] ತೊಳೆಯಲ್ಪಟ್ಟ (=ತೊಳೆದ), ಶುದ್ಧಿ ಮಾಡಲ್ಪಟ್ಟ

ಪಚ್ಛಾಣುತಾವಿಅ. ವಿ: [ಪಶ್ಚಾದನುತಾಪಿಕಾ] ಪಶ್ಚಾತ್ತಾಪದಿಂದ ಕೂಡಿದ

ಪಚ್ಛಾಣೆಅ. (ದೇ). **'ಪಚ್ಚೋವಣೆಅ' ಶಬ್ದವನ್ನು ನೋಡುವುದು**

ಪಚ್ಛಾದೋ(ಶೌ). **'ಪಚ್ಛಾ=ಪಶ್ಚಾತ್' ಶಬ್ದವನ್ನು ನೋಡುವುದು**

ಪಚ್ಛಾಯಣ. ನ: [ಪಥ್ಯದನ] ಬುತ್ತಿ

ಪಚ್ಛಾಯಣ. ನ: [ಪ್ರಚ್ಛಾದನ] ಮುಚ್ಚುವುದು ಆಚ್ಛಾದನೆ. ವಿ: ಮುಚ್ಚಳ, ಮುಚ್ಚುವಂಥದು **–ಯಾ.** ಸ್ತ್ರೀ: [–ತಾ], ಬಟ್ಟೆ

ಪಚ್ಛಾಲ. **'ಪಕ್ಖಾಲ' ಶಬ್ದವನ್ನು ನೋಡುವುದು**

ಪಚ್ಛಿ. ಸ್ತ್ರೀ: [ದೇ] ಚಿಕ್ಕ ಪೆಟ್ಟಿಗೆ, ಬೆತ್ತದಿಂದ ಮಾಡಿದ ಪೆಟ್ಟಿಗೆ. **–ಪಿಡಯ.** ನ: [–ಪಿಟಕ] ಹಕ್ಕಿಯ

ಆಕೃತಿಯ ಸಣ್ಣ ಬಿದಿರಿನ ಅಥವಾ ಬೆತ್ತದ ಪೆಟ್ಟಿಗೆ (ಭಗ)

ಪಚ್ಛಿ(ಅಪ). 'ಪಚ್ಛಇ. ಶಬ್ದವನ್ನು ನೋಡುವುದು

ಪಚ್ಛಿತ್ತ. ನ: [ಪ್ರಾಯಶ್ಚಿತ್ತ] ಪಾಪವನ್ನು ಶುದ್ಧಿ ಮಾಡುವ ಕರ್ಮ, ಪಾಪವನ್ನು ನಾಶಮಾಡುವ ಕರ್ಮ (ಉವ). ಮನಸ್ಸನ್ನು ಶುದ್ಧಗೊಳಿಸುವ ಕರ್ಮ.

ಪಚ್ಛಿತ್ತಿ. ವಿ: [ಪ್ರಾಯಶ್ಚಿತ್ತಿನ್] ಪ್ರಾಯಶ್ಚಿತ್ತದಲ್ಲಿ ಪಾಲ್ಗೊಳ್ಳುವವನು, ದೋಷಿ(ಉಪ)

ಪಚ್ಛಿಮ. ನ: [ಪಶ್ಚಿಮ] ಪಶ್ಚಿಮ ದಿಕ್ಕು(ಉವಾ), ವಿ: ಪಶ್ಚಿಮ ದಿಕ್ಕಿನ, ಪಾಶ್ಚಾತ್ಯ(ಮಹಾ), ಅನಂತರದ, ಅಂತಿಮ, ಕೊನೆಯ. **–ದ್ಧ.** ನ: [ಪಶ್ಚಿಮಾರ್ಧ] ಉತ್ತರಾರ್ಧ. **–ಸೇಲ.** ಪು: [–ಶೈಲ] ಅಸ್ತಾದ್ರಿ (ಗಲುಡ)

ಪಚ್ಛಿಮಾ. ಸ್ತ್ರೀ: [ಪಶ್ಚಿಮಾ] ಪಶ್ಚಿಮ ದಿಕ್ಕು

ಪಚ್ಛಿಯಾಪಿಡಯ. 'ಪಚ್ಛಿ –ಪಿಡಯ' ಶಬ್ದವನ್ನು ನೋಡುವುದು

ಪಚ್ಛಿಮಿಲ್ಲ. ವಿ: [ಪಾಶ್ಚಾತ್ಯ] ಹಿಂಭಾಗದಲ್ಲಿರುವ, ಪಶ್ಚಿಮದಲ್ಲಿ ಹುಟ್ಟಿದ, ಅನಂತರ ಉಂಟಾದ (ವಿಸೇ)

ಪಚ್ಛಿಲ(ಅಪ). 'ಪಚ್ಛಿಮ' ಶಬ್ದವನ್ನು ನೋಡುವುದು

ಪಚ್ಛಿಲ್ಲ}. ವಿ: [ಪಶ್ಚಿಮ, ಪಾಶ್ಚಾತ್ಯ] ಪಶ್ಚಿಮ ದಿಕ್ಕಿನ,
ಪಚ್ಛಿಲ್ಲಯ}. ಹಿಂಭಾಗದಲ್ಲಿರುವ

ಪಚ್ಛುತ್ತಾವ. ಪು: [ಪಶ್ಚಾದುತ್ತಾಪ] ಪಶ್ಚಾತ್ತಾಪ

ಪಚ್ಛುತ್ತಾವಿಅ. (ಅಪ). ವಿ: [ಪಶ್ಚಾತ್ತಾಪಿತ] ಪಶ್ಚಾತ್ತಾಪ ಪಟ್ಟವನು(ಭವಿ)

ಪಚ್ಛೇಕಮ್ಮ. 'ಪಚ್ಛ –ಕಮ್ಮ' ಶಬ್ದವನ್ನು ನೋಡುವುದು

ಪಚ್ಛೇಣಯ. ನ: [ದೇ] ಬುತ್ತಿ; ದಾರಿಯಲ್ಲಿ ತಿನ್ನುವುದಕ್ಕಾಗಿ ಕಟ್ಟಿಕೊಡುವ ಆಹಾರ(ದೇ)

ಪಚ್ಛೋವವಣ್ಣಗ}. ವಿ: [ಪಶ್ಚಾದುಪಪನ್ನ] ಅನಂತರ
ಪಚ್ಛೋವವನ್ನಕ}. ಹುಟ್ಟಿದ(ಭಗ)

ಪಜಂಪ. ಸಕ: [ಪ್ರ+ಜಲ್ಪ್] ಹೇಳು, ಮಾತನಾಡು

ಪಜಂಪಾವಣ. ನ: [ಪ್ರಜಲ್ಪನ] ಮಾತನಾಡಿಸುವುದು, ಹೇಳಿಸುವುದು(ಔಪ)

ಪಜಂಪಿಅ. ವಿ: [ಪಜಲ್ಪಿತ] ಹೇಳಿದ, ಆಡಿದ(ಗಾ), ಮಾತು, ಹರಟೆ

ಪಜಣಣ. ವಿ: [ಪ್ರಜನನ] ಉತ್ಪಾದಕ, ಹುಟ್ಟಿಸುವ, ನ: ಪುರುಷರ ಮತ್ತು ಸ್ತ್ರೀಯರ ಜನನೇಂದ್ರಿಯ

ಪಜಲ. ಅಕ: [ಪ್ರ +ಜ್ವಲ್] ಬಹಳವಾಗಿ ಉರಿ, ಅತಿಶಯವಾಗಿ ಉರಿದುಹೋಗು, ಹೊಳೆ, ಪ್ರಕಾಶಿಸು

ಪಜಲಿರ. ವಿ: [ಪ್ರಜ್ವಲಿತೃ] ಅತಿಶಯವಾಗಿ ಉರಿಯುವ (ಸುಪಾ)

ಪಜಹ. ಸಕ: [ಪ್ರ +ಹಾ] ತ್ಯಜಿಸು, ಬಿಟ್ಟುಬಿಡು –**'ಪಜಹಾಮಿ'**

ಪಜಾಲಾ. ಸ್ತ್ರೀ: [ಪ್ರಜ್ವಾಲಾ] ಬೆಂಕಿಯ ಜ್ವಾಲೆ,

ಪಜೀವಣ. ನ: [ಪ್ರಜೀವನ] ಹೊಟ್ಟೆಪಾಡು, ಕಸಬು

ಪಜುತ್ತ. 'ಪಉತ್ತ=ಪ್ರಯುಕ್ತ' ಶಬ್ದವನ್ನು ನೋಡುವುದು

ಪಜೂಹಿಅ. ವಿ: [ಪ್ರತ್ಯೂಥಿಕ] ಯಾಚಕ ಗಣಕ್ಕೆ ಅರ್ಪಿಸಲಾದ

ಪಜೇಮಣ. ನ: [ಪ್ರಜೇಮನ] ಭೋಜನವನ್ನು ಸ್ವೀಕರಿಸುವುದು

ಪಜ್ಜ. ಸಕ: [ಪಾಯಯ್] ಕುಡಿಸು

ಪಜ್ಜ. ನ: [ಪದ್ಯ] ಛಂದೋಬದ್ಧ ರಚನೆಯಾದ ಪದ್ಯ) (ಠಾ)

ಪಜ್ಜ. ನ: [ಪಾದ್ಯ] ಪಾದತೊಳೆದ ನೀರು(ಣಾಯಾ)

ಪಜ್ಜ. 'ಪಜ್ಜತ್ತ' ಶಬ್ದವನ್ನು ನೋಡುವುದು

ಪಜ್ಜಂತ. ಪು: [ಪರ್ಯಂತ] ಅಂಚು, ಕೊನೆ, ಗಡಿಭಾಗ, ಎಲ್ಲೆ

ಪಜ್ಜಣ. ನ: [ದೇ] ಪಾನ, ಕುಡಿಯುವುದು(ದೇ)

ಪಜ್ಜಣ. ನ: [ಪಾಯನ] ಕುಡಿಸುವುದು

ಪಜ್ಜಣುಓಗ}. ಪು: [ಪರ್ಯನುಯೋಗ] ಪ್ರಶ್ನೆ
ಪಜ್ಜಣುಜೋಗ}.

ಪಜ್ಜಣಣ. 'ಪಜಣಣ' ಶಬ್ದವನ್ನು ನೋಡುವುದು

ಪಜ್ಜಣ್ಣ. ಪು: [ಪರ್ಜನ್ಯ] ಮೋಡ, ಮೇಘ(ಭಗ). **'ಪಜ್ಜನ್ನ'** ಶಬ್ದವನ್ನು ನೋಡುವುದು

ಪಜ್ಜತರ. ವಿ: [ದೇ] ಸೀಳಲ್ಪಟ್ಟ, ತುಂಡುಮಾಡಲ್ಪಟ್ಟ

ಪಜ್ಜತ್ತ. ವಿ: [ಪರ್ಯಾಪ್ತ] ಸಾಕಾಗುವಷ್ಟರಿಂದ ಕೂಡಿದ(ಠಾ), ಸಾಕಾಗುವ, ಸಮರ್ಥ, ದಕ್ಷ, ಪ್ರಾಪ್ತ ದೊರೆತ, ಯಥೇಷ್ಟ, ಸಾಕಾಗುವಷ್ಟು, ನ: ತೃಪ್ತಿ, ಸಾಮರ್ಥ್ಯ, ನಿವಾರಣೆ, ಯೋಗ್ಯತೆ (ಹೇ), ಕರ್ಮ –ವಿಶೇಷ, ಇದರ ಉದಯದಿಂದ ಜೀವವು ತನ್ನ ತನ್ನ ಪರ್ಯಾಪ್ತಿಗಳಿಂದ ಯುಕ್ತವಾಗುತ್ತದೆ (ಕಮ್ಮ), **–ಣಾಮ, –ನಾಮ.** ನ: [–ನಾಮನ್] ಅನಂತರ ಹೇಳಿದ ಕರ್ಮ–ವಿಶೇಷ.

ಪಜ್ಜತ್ತ. ನ: [**ಪರ್ಯಾಪ್ತ**] ನಿರಂತರ ೩೪ ದಿನಗಳ ವರೆಗಿನ ಉಪವಾಸ

ಪಜ್ಜತ್ತರ(ದೇ). **'ಪಜ್ಜತರ' ಶಬ್ದವನ್ನು ನೋಡುವುದು**

ಪಜ್ಜತ್ತಿ. ಸ್ತ್ರೀ: [**ಪರ್ಯಾಪ್ತಿ**] ಶಕ್ತಿ, ಸಾಮರ್ಥ್ಯ(ಸೂಅ). ಪುದ್ಗಲಗಳನ್ನು ಸ್ವೀಕರಿಸುವ ಮತ್ತು ಅವುಗಳನ್ನು ಆಹಾರ, ಶರೀರ ಮೊದಲಾದವುಗಳ ರೂಪಕ್ಕೆ ಪರಿವರ್ತಿಸುವ ಜೀವದ ಆ ಶಕ್ತಿ, ಸಾಮರ್ಥ್ಯ (ಭಗ), ಪೂರ್ಣ ಪ್ರಾಪ್ತಿ. ತೃಪ್ತಿ(ಉಪ)

ಪಜ್ಜನ್ನ. ಪು: [**ಪರ್ಜನ್ಯ**] ಮೇಘ –ವಿಶೇಷ, ಈ ಮೋಡ ಒಮ್ಮೆ ಮಳೆ ಸುರಿಸಿದರೆ ಒಂದು ಸಾವಿರ ವರ್ಷಗಳವರೆಗೆ ಭೂಮಿಯಲ್ಲಿ ತೇವ ಉಳಿದಿರುತ್ತದೆ(ಠಾ)

ಪಜ್ಜಯ. ಪು: [**ದೇ. ಪ್ರಾರ್ಯಕ**] ಮುತ್ತಾತ, ತಾತನ ತಂದೆ

ಪಜ್ಜಯ. ಪು: [**ಪರ್ಯಯ**] ಶ್ರುತ ಜ್ಞಾನದಒಂದು ಪ್ರಭೇದ; ಇದು ಹುಟ್ಟಿದ ಪ್ರಥಮ ಸಮಯದಲ್ಲಿ ಸೂಕ್ಷ್ಮ ನಿಗೋದದ ಲಬ್ಧಿ –ಪರ್ಯಾಪ್ತ ಜೀವದ ಮನಸ್ಸು ಕುಶ್ರುತದ ಅಂಶವಾಗುತ್ತದೆ. ಅದರಿಂದ ಎರಡನೇ ಸಮಯದಲ್ಲಿ ಜ್ಞಾನದ ಯಾವ ಅಂಶ ವೃದ್ಧಿಯಾಗುತ್ತದೋ ಅದು ಶ್ರುತ ಜ್ಞಾನ(ಕಮ್ಮ). **'ಪಜ್ಜಾಯ' ಶಬ್ದವನ್ನು ನೋಡುವುದು. –ಸಮಾಸ.** ಪು: [**–ಸಮಾಸ**] ಶ್ರುತ ಜ್ಞಾನದ ಒಂದು ಪ್ರಭೇದ. ಅನಂತರ ಮೇಲೆ ಹೇಳಿದ ಪರ್ಯಯ ಶ್ರುತದ ಸಮುದಾಯ

ಪಜ್ಜಯಣ. ನ: [**ಪರ್ಯಯನ**] ನಿಶ್ಚಯ, ಅವಧಾರಣೆ,

ಪಜ್ಜರ. ಸಕ: [**ಕಥಯ್**] ಹೇಳು,

ಪಜ್ಜರಯ. ಪು: [**ಪ್ರಜರಕ**] ರತ್ನಪ್ರಭಾ ಎಂಬ ಹೆಸರಿನ ನರಕ –ಭೂಮಿಯ ಒಂದು ನರಕಾವಾಸ(ಠಾ). **–ಮಜ್ಝ.** ಪು: [**–ಮಧ್ಯ**] ಒಂದು ನರಕಾವಾಸ –ವಿಶೇಷ(ಠಾ). **ಪಜ್ಜರಯಾವಸಿಟ್ಠ.** ಪು: [**ಪ್ರಜರಕಾವಶಿಷ್ಟ**] ಒಂದು ನರಕಾವಾಸ, ನರಕ ಸ್ಥಾನ –ವಿಶೇಷ(ಠಾ)

ಪಜ್ಜಲ. **'ಪಜಲ'** ಶಬ್ದವನ್ನು ನೋಡುವುದು

ಪಜ್ಜಲಣ. ವಿ: [**ಪ್ರಜ್ವಲನ**] ಚೆನ್ನಾಗಿ ಉರಿಸುವ(ಠಾ),

ಪಜ್ಜಲಿಅ. ಪು: [**ಪ್ರಜ್ಜ್ವಲಿತ**] ಮೂರನೇ ನರಕಭಮಿಯ ಒಂದು ನರಕಸ್ಥಾನ

ಪಜ್ಜಲಿಯ. ವಿ: [**ಪ್ರಜ್ವಲಿತ**] ಚೆನ್ನಾಗಿ ಉರಿಸಲ್ಪಟ್ಟ, ಪ್ರಕಾಶಗೊಳಿಸಲ್ಪಟ್ಟ, ಚೆನ್ನಾಗಿ ಹೊಳೆಯುವ(ಗಚ್ಛ)

ಪಜ್ಜಲಿರ. ವಿ: [**ಪ್ರಜ್ವಲಿತೃ**] ಚೆನ್ನಾಗಿ ಉರಿಯುವ, ಚೆನ್ನಾಗಿ ಹೊಳೆಯುವ(ಸುಪಾ)

ಪಜ್ಜವ. ಪು: [**ಪರ್ಯವ**] ನಿರ್ಣಯ, ನಿರ್ಧಾರ(ವಿಸೇ), **'ಪಜ್ಜಾಯ' ಶಬ್ದವನ್ನು ನೋಡುವುದು. –ಕಸಿಣ.** ನ: [**–ಕೃತ್ಸ್ನ**] ಚತುರ್ದಶ –ಪೂರ್ವ ಗ್ರಂಥದ ವರೆಗಿನ ಜ್ಞಾನ, ಶ್ರುತ –ಜ್ಞಾನ –ವಿಶೇಷ. **–ಜಾಯ.** ವಿ: [**–ಜಾತ**] ಭಿನ್ನ ಅವಸ್ಥೆಯನ್ನು ಹೊಂದಿದ(ಪಣ್ಣ). ಜ್ಞಾನವೇ ಮೊದಲಾದ ಗುಣಗಳುಳ್ಳ(ಠಾ), ವಿಷಯೋಪಭೋಗದ ಅನುಷ್ಠಾನ(ಆಚಾ). **–ಜಾಯ.** ವಿ: [**–ಯಾತ**] ಜ್ಞಾನ ಪ್ರಾಪ್ತಿಯಾದ, **–ಟ್ಠಿಯ.** ಪು: [**–ಸ್ಥಿತ, ಕೃತ್ಸ್ನಾರ್ಥಿಕ, ಕೃತ್ಸ್ನಾಸ್ತಿಕ**] ಒಂದು ನಯ –ವಿಶೇಷ, ದ್ರವ್ಯವನ್ನು ಬಿಟ್ಟು ಕೇವಲ ಪರ್ಯಾಯಗಳನ್ನೇ ಮುಖ್ಯವೆಂದು ಒಪ್ಪುವ ಪಕ್ಷ. **–ಣಯ, –ನಯ.** ಪು: [**–ನಯ**] ಅದೇ ಆ ಮೇಲೆ ಹೇಳಿದ ಅರ್ಥ.

ಪಜ್ಜವಣ. ನ: [**ಪರ್ಯವನ**] ನಿರ್ಣಯ, ನಿಶ್ಚಯ(ವಿಸೇ).

ಪಜ್ಜವತ್ಥಾವ. ಸಕ: [**ಪರ್ಯವ +ಸ್ಥಾಪಯ್**] ಒಳ್ಳೆಯ ಸ್ಥಿತಿಯಲ್ಲಿ ಇಡು, ವಿರೋಧಿಸು, ಪ್ರತಿಪಕ್ಷದೊಂದಿಗೆ ವಾದಿಸುವುದು

ಪಜ್ಜವಲೀಢ. ವಿ: [**ಪರ್ಯವಲೀಢ**] ತಿನ್ನಲ್ಪಟ್ಟ, ಭಕ್ಷಿಸಲಾದ

ಪಜ್ಜವಸಾಣ. ನ: [**ಪರ್ಯವಸಾನ**] ಅಂತ, ಅವಸಾನ (ಭಗ)

ಪಜ್ಜವಸಿಅ. ನ: [**ಪರ್ಯವಸಿತ**] ಅಂತವನ್ನು ಮುಟ್ಟಿದ, ಕೊನೆಯ ಮಟ್ಟವನ್ನು ಮುಟ್ಟಿದ

ಪಜ್ಜಾ. **'ಪಣ್ಣಾ' ಶಬ್ದವನ್ನು ನೋಡುವುದು**

ಪಜ್ಜಾ. ಸ್ತ್ರೀ: [**ಪದ್ಯಾ**] ದಾರಿ, ಮಾರ್ಗ, ಹಾದಿ

ಪಜ್ಜಾ. ಸ್ತ್ರೀ: [**ದೇ**] ಮೆಟ್ಟಿಲು(ದೇ)

ಪಜ್ಜಾ. ಸ್ತ್ರೀ: [**ಪರ್ಯಾಯ**] ಅಧಿಕಾರ, ವ್ಯವಸ್ಥೆಯಲ್ಲಿನ ಪ್ರಭೇದ, ಒಂದಾದ ಮೇಲೆ ಮತ್ತೊಂದು ಬರುವುದು.

ಪಜ್ಜಾ. **'ಪಯಾ' ಶಬ್ದವನ್ನು ನೋಡುವುದು**

ಪಜ್ಜಾಅರ. ಪು: [**ಪ್ರಜಾಗರ**] ಜಾಗರಣೆ, ನಿದ್ರೆಯಿಲ್ಲದಿರುವುದು

ಪಜ್ಜಾಉಲ. ವಿ: [**ಪರ್ಯಾಕುಲ**] ವ್ಯಾಕುಲ ಗೊಂಡಿರುವ, ಅತಿಯಾಗಿ ಗಾಬರಿ ಗೊಂಡಿರುವ

ಪಜ್ಜಾಭಾಯ. ಸಕ: [**ಪರ್ಯಾಭಾಜಯ್**] ಭಾಗಮಾಡು

ಪಜ್ಜಾಯ. ಪು: [**ಪರ್ಯಾಯ**] ಸಮಾನ ಅರ್ಥವನ್ನು ಸೂಚಿಸುವ ಶಬ್ದ, ಪೂರ್ಣಪ್ರಾಪ್ತಿ(ವಿಸೇ), ಪಥಾರ್ಥ –ಧರ್ಮ, ವಸ್ತು –ಗುಣ, ಪದಾರ್ಥದ ಸೂಕ್ಷ್ಮ ಅಥವಾ ಸ್ಥೂಲ ರೂಪಾಂತರ, ಕ್ರಮ, ಒಂದಾದ ಮೇಲೊಂದು ಬರುವುದು (ಣಾಯಾ), ಪ್ರಕಾರ, ಭೇದ(ಆವಮ), ತಾತ್ಪರ್ಯ, ಭಾವಾರ್ಥ, ರಹಸ್ಯ, ಅವಕಾಶ, ಸಮಯ, ನಿರ್ಮಾಣ. **'ಪಜ್ಜಯ'** ಮತ್ತು **'ಪಜ್ಜವ'** ಶಬ್ದಗಳನ್ನು **ನೋಡುವುದು**

ಪಜ್ಜಾಲ. ಸಕ: [**ಪ್ರ +ಜ್ವಾಲಯ್**] ಉರಿಸು, ಹೊತ್ತಿಸು

ಪಜ್ಜಾಲಣ. ನ: [**ಪ್ರಜ್ವಾಲನ**] ಹೊತ್ತಿಸುವುದು(ಉಪ)

ಪಜ್ಜಾಲಿಅ. ವಿ: [**ಪ್ರಜ್ವಾಲಿತ**] ಹೊತ್ತಿಸಲ್ಪಟ್ಟ, ಉರಿಮಾಡಲ್ಪಟ್ಟ(ಸುಪಾ)

ಪಜ್ಜಿಆ. ಸ್ತ್ರೀ: [**ದೇ. ಪ್ರಾರ್ಯಿಕಾ**] ಮುತ್ತಜ್ಜಿ; ತಾಯಿಯ ಅಜ್ಜಿ, ತಂದೆಯ ಅಜ್ಜಿ

ಪಜ್ಜಿಜ್ಜಮಾಣ. 'ಪಜ್ಜ=ಪಾಯಯ್' ಶಬ್ದವನ್ನು ನೋಡುವುದು

ಪಜ್ಜುಟ್ಠ. ವಿ: [**ಪರ್ಯುಷ್ಟ**] ಅಲ್ಲಾಡಿಸಲ್ಪಟ್ಟ, ಹಾರಿಸಲ್ಪಟ್ಟ

ಪಜ್ಜುಚ್ಛುಅ. ವಿ: [**ಪರ್ಯುತ್ಸುಕ**] ಅತಿ ಉತ್ಸುಕ, ಅತಿ ಆಸಕ್ತಿ ಉಳ್ಳ

ಪಜ್ಜುಣಸರ. ನ: [**ದೇ**] ಕಬ್ಬಿನ ಹಾಗಿರುವ ಒಂದು ಬಗೆಯ ಹುಲ್ಲು

ಪಜ್ಜುಣ್ಣ. ಪು: [**ಪ್ರದ್ಯುಮ್ನ**] ಶ್ರೀ ಕೃಷ್ಣನ ಒಬ್ಬ ಮಗನ ಹೆಸರು, ಕಾಮದೇವ, ವೈಷ್ಣವ ಶಾಸ್ತ್ರದಲ್ಲಿ ಪ್ರತಿಪಾದಿತವಾಗಿರುವ ಚತುರ್‌ವ್ಯೂಹ ರೂಪದ ವಿಷ್ಣುವಿನ ಒಂದು ಅಂಶ(ಹೇ) ಒಬ್ಬ ಜೈನ ಮುನಿ(ನಿಚೂ), **'ಪಜ್ಜುನ್ನ' ಶಬ್ದವನ್ನು ನೋಡುವುದು**

ಪಜ್ಜುತ್ತ. ವಿ: [**ಪ್ರಯುಕ್ತ**] ಸೇರಿಸಲ್ಪಟ್ಟಿರುವ(ಭವಿ), **'ಪಜ್ಜುತ್ತ' ಶಬ್ದವನ್ನು ನೋಡುವುದು**

ಪಜ್ಜುದಾಸ. ಪು: [**ಪರ್ಯುದಾಸ**] ನಿಷೇಧ, ನಿವಾರಣೆ

ಪಜ್ಜುನ್ನ. 'ಪಜ್ಜುಣ್ಣ' ಶಬ್ದವನ್ನು ನೋಡುವುದು. ವಿ: ಶ್ರೀಮಂತ, ಹಣವಂತ, ತುಂಬ ಹಣವಿರುವವನು.

ಪಜ್ಜುವಟ್ಠಾ. ಸಕ: [**ಪರ್ಯುಪ +ಸ್ಥಾ**] ಹಾಜರಿರು, ಹತ್ತಿರಕ್ಕೆ ಬಂದಿರು, ತಲುಪಿರು

ಪಜ್ಜುವಟ್ಠಿಯ. ವಿ: [**ಪರ್ಯುಪಸ್ಥಿತ**] ಹಾಜರಿರುವುದು, ಹತ್ತಿರಕ್ಕೆ ಬಂದಿರುವುದು, ಕೆಲಸದಲ್ಲಿ ಆಸಕ್ತನಾಗಿರುವುದು(ಉತ್ತ)

ಪಜ್ಜುವಾಸ. ಸಕ: [**ಪರ್ಯುಪ +ಆಸ್**] ಸೇವೆ ಮಾಡು, ಶುಶ್ರೂಷೆಮಾಡು, ಪೂಜೆ ಸಲ್ಲಿಸು, ಭಕ್ತಿ ಮಾಡು

ಪಜ್ಜುವಾಸಣ. ನ: [**ಪರ್ಯುಪಾಸನ**] ಸೇವೆ, ಭಕ್ತಿ, ಉಪಾಸನೆ, ಪೂಜೆ(ಭಗ)

ಪಜ್ಜುವಾಸಣಯಾ}. **ಸ್ತ್ರೀ:** [**ಪರ್ಯುಪಾಸನಾ**] ಮೇಲಿನ
ಪಜ್ಜುವಾಸಣಾ}. **ಶಬ್ದವನ್ನು ನೋಡುವುದು**

ಪಜ್ಜುವಾಸಯ. ವಿ: [**ಪರ್ಯುಪಾಸಕ**] ಆರಾಧಕ, ಸೇವಕ, ಸೇವೆ ಮಾಡುವವನು(ಕಾಲ)

ಪಜ್ಜುಸಣಾ. ಸ್ತ್ರೀ: [**ಪರ್ಯುಷಣಾ**] **ಪಜ್ಜೋಸವಣಾ' ಶಬ್ದವನ್ನು ನೋಡುವುದು**

ಪಜ್ಜುಸಣ}. **ನ: 'ಪಜ್ಜುಸಣಾ'** ಶಬ್ದವನ್ನು
ಪಜ್ಜುಸವಣ}.ನೋಡುವುದು
ಪಜ್ಜುಸ್ಸವಣ}.
ಪಜ್ಜೂಸಣ}.

ಪಜ್ಜುಸ್ಸುಅ}. **ವಿ:** [**ಪರ್ಯುತ್ಸುಕ**] ಅತಿಯಾದ ಆಸಕ್ತಿ
ಪಜ್ಜೂಸುಅ}. ಹೊಂದಿರುವ, ಹೆಚ್ಚು ಉತ್ಸುಕನಾಗಿರುವ (ಅಭಿ)

ಪಜ್ಜೋಅ. ಪು: [**ಪ್ರದ್ಯೋತ**] ಪ್ರಕಾಶ, ಬೆಳಗುವುದು, ಉಜ್ಜಯಿನಿ ನಗರದ ಒಬ್ಬ ರಾಜ(ಉವ), **–ಗರ. ವಿ:** [**–ಕರ**] ಪ್ರಕಾಶವನ್ನುಂಟುಮಾಡುವ, ಬೆಳಗುವ(ಔಪ)

ಪಜ್ಜೋಇಯ. ವಿ: [**ಪ್ರದ್ಯೋತಿತ**] ಪ್ರಕಾಶಿಸಲ್ಪಟ್ಟ, ಬೆಳಗಲ್ಪಟ್ಟ(ಉಪ)

ಪಜ್ಜೋಯ. ಸಕ: [**ಪ್ರ +ದ್ಯೋತಯ್**] ಬೆಳಕುಮಾಡು, ಬೆಳಗಿಸು.

ಪಜ್ಜೋಯಣ. ಪು: [**ಪ್ರದೋತನ**] ಒಬ್ಬ ಜೈನ ಆಚಾರ್ಯ(ರಾಜ)

ಪಜ್ಜೋಸವ. ಅಕ: [**ಪರಿ +ವಸ್**] ವಾಸಿಸು, ಇರು, ಜೈನಾಗಮದಲ್ಲಿ ಹೇಳಿರುವ **'ಪರ್ಯುಷಣಾಪರ್ವ'** ವನ್ನು ಆಚರಿಸು(ಕಪ್ಪ)

ಪಜ್ಜೋಸವಣಾ. ಸ್ತ್ರೀ: [**ಪರ್ಯುಷಣಾ**] ಒಂದೇ ಸ್ಥಳದಲ್ಲಿ ಮಳೆಗಾಲವನ್ನು ಕಳೆಯುವುದು, ಮಳೆಗಾಲ, ಭಾದ್ರಪದದಲ್ಲಿ ಬರುವ ಎಂಟು ದಿನಗಳ ಒಂದು ಪ್ರಸಿದ್ಧ ಜೈನ ಹಬ್ಬ. **–ಕಪ್ಪ. ಪು:** [**–ಕಲ್ಪ**] ಪರ್ಯುಷಣಾ ಪರ್ವದಲ್ಲಿ ಮಾಡಲರ್ಹವಾದ ಶಾಸ್ತ್ರ –ವಿಹಿತ ಆಚಾರ, ವರ್ಷಾ –ಕಲ್ಪ(ಠಾ).

ಪಜ್ಜೋಸೇವಣಾ. ಸ್ತ್ರೀ: [ಪರ್ಯೋರ್ಸವನಾ, ಪರ್ಯುಪಶಮನಾ] ಮೇಲಿನ ಶಬ್ದವನ್ನು ನೋಡುವುದು.

ಪಜ್ಜೋಸವಿಯ. ವಿ: [ಪರ್ಯುಷಿತ] ಸ್ಥಿರವಾಗಿ ಇರುವ, ಇದ್ದಿರುವ(ಕಪ್ಪ), ಇಟ್ಟಿರುವ(=ಹಳಸಿದ)

ಪಜ್ಝಂಝ. ಅಕ: [ಪ್ರ +ಝುಂಕ್] ಶಬ್ದ ಮಾಡು, ಸದ್ದುಮಾಡು

ಪಜ್ಝಟ್ಟಿಆ. ಸ್ತ್ರೀ: [ಪಜ್ಝಟ್ಟಿಕಾ] ಒಂದು ಛಂದಸ್ಸು

ಪಜ್ಝರ. ಅಕ: [ಕ್ಷರ್, ಪ್ರ +ಕ್ಷರ್] ಸೋರು, ತೊಟ್ಟಿಕ್ಕು, ಜಿನುಗು(ಹೇ)

ಪಜ್ಝರ. ಪು: [ಪ್ರಕ್ಷರ] ಪ್ರವಾಹ –ವಿಶೇಷ(ಪಣ್ಣ)

ಪಜ್ಝರಣ. ನ: [ಪ್ರಕ್ಷರಣ] ತೊಟ್ಟಿಕ್ಕುವುದು, ಹನಿಹನಿಯಾಗಿ ಬೀಳು

ಪಜ್ಝರಿಅ. ವಿ: [ಪ್ರಕ್ಷರಿತ] ತೊಟ್ಟಿಕ್ಕಿದ, ಸೋರಿದ(ಪಾಅ)

ಪಜ್ಝಲ. **'ಪಜ್ಝರ=ಕ್ಷರ್' ಶಬ್ದವನ್ನು ನೋಡುವುದು**

ಪಜ್ಝಲಿಆ. **'ಪಜ್ಝಟ್ಟಿಆ.' ಶಬ್ದವನ್ನು ನೋಡುವುದು**

ಪಜ್ಝಾಯ. ವಿ: [ಪ್ರಧ್ಯಾತ] ಚಿಂತಿತ(ಅಣು)

ಪಜ್ಝಾಯ. ನ: [ಪ್ರಧ್ಯಾತ] ಅತಿಶಯವಾದ ಚಿಂತನೆ

ಪಜ್ಝುತ್ತ. ವಿ: [ದೇ] ಸೇರಿದ, ಕೂಡಿಸಿದ(ಪಾಅ)

ಪಟಉಡೀ. ಸ್ತ್ರೀ: [ಪಟಕುಟೀ] ಡೇರೆ, ಶಿಬಿರ, ವಸ್ತ್ರ ನಿರ್ಮಿತ ಗೃಹ

ಪಟಲ. **'ಪಡಲ=ಪಟಲ' ಶಬ್ದವನ್ನು ನೋಡುವುದು (ಕುಮಾ)**

ಪಟಹ. **'ಪಡಹ' ಶಬ್ದವನ್ನು ನೋಡುವುದು**

ಪಣಿದ್ಧ. ವಿ: [ಪ್ರಸ್ನಿಗ್ಧ] ವಿಶೇಷವಾಗಿ ಸ್ನಿಗ್ಧವಾದ, ಹೆಚ್ಚು ನುಣುಪಾದ, ಹೆಚ್ಚು ಪ್ರೀತಿಯುಳ್ಳ
ಪಣಿಧಾಣ. 'ಪಡಿಹಾಣ' ಶಬ್ದವನ್ನು ನೋಡುವುದು.
ಪಣಿಧಿ. ಪುಂಸ್ತ್ರೀ: [ಪ್ರಣಿಧಿ] ಮಾಯೆ, ಮೋಸ. 'ಪಣಿಹಿ' ಶಬ್ದವನ್ನು ನೋಡುವುದು.
ಪಣಿಯತ್ಥ. ವಿ: [ಪ್ರಣಿವಸಿತ] ಧರಿಸಿರುವ, ತೊಟ್ಟಿರುವ (ಔಪ)
ಪಣಿಲಿಅ. ವಿ: [ದೇ] ಕೊಲ್ಲಲ್ಪಟ್ಟ(ಷಡ್)
ಪಣಿವಇಅ. ವಿ: [ಪ್ರಣಿಪತಿತ] ನಮಸ್ಕರಿಸಿದ, ತಲೆ ಬಾಗಿದ(ಣಾಯಾ)
ಪಣಿವಯ. ಸಕ: [ಪ್ರಣಿ+ಪತ್] ನಮಿಸು, ವಂದಿಸು(ಸಾರ್ಧ)
ಪಣಿವಾಯ. ಪು: [ಪ್ರಣಿಪಾತ] ನಮಸ್ಕಾರ, ವಂದನೆ(ಸುಪಾ)
ಪಣಿಹಾ. ಸಕ: [ಪ್ರಣಿ +ಧಾ] ಏಕಾಗ್ರ ಚಿತ್ತದಿಂದ ಧ್ಯಾನಿಸು, ಅಪೇಕ್ಷಿಸು, ಅಭಿಲಾಷಿಸು, ಪ್ರಯತ್ನಿಸು
ಪಣಿಹಾಣ. ನ: [ಪ್ರಣಿಧಾನ] ಏಕಾಗ್ರ ಚಿತ್ತದಿಂದ ಧ್ಯಾನಿಸುವುದು, ಅವಧಾನ, ಮನೋನಿಯೋಗ (ಉತ್ತ), ಪ್ರಯೋಗ, ಪ್ರಯತ್ನ, ಅಭಿಲಾಷೆ, ಇಚ್ಛೆ (ಉತ್ತ)
ಪಣಿಹಾಯ. 'ಪಣಿಹಾ' ಶಬ್ದವನ್ನು ನೋಡುವುದು.
ಪಣಿಹಿ. ಪುಂಸ್ತ್ರೀ: [ಪ್ರಣಿಧಿ] ಏಕಾಗ್ರತೆ, ಅವಧಾನ, ಇಚ್ಛೆ, ಅಭಿಲಾಷೆ, ಪು: ಚರ, ದೂತ, ಪ್ರಯತ್ನ, ಮಾಯೆ, ಮೋಸ, ಸಿದ್ಧಪಡಿಸು, ಭಾರಿ ನಿಧಿ
ಪಣಿಹಿಯ. ವಿ: [ಪ್ರಣಿಹಿತ] ಪ್ರಯೋಗಿಸಲ್ಪಟ್ಟ, ವ್ಯಾಪ್ತವಾದ, ಸಿದ್ಧಪಡಿಸಲಾದ(ಆವ)
ಪಣೀಯ. ವಿ: [ಪ್ರಣೀತ] ನಿರ್ಮಿಸಲ್ಪಟ್ಟ, ರಚಿಸಲ್ಪಟ್ಟ, ಮಾಡಲ್ಪಟ್ಟ(ವಿಸೇ), ಎಣ್ಣೆ, ತುಪ್ಪ ಮೊದಲಾದವುಗಳ ಜಿಡ್ಡಿನಿಂದ ಕೂಡಿದ(ಓಘ), ನಿರೂಪಿಸಲ್ಪಟ್ಟ ಹೇಳಲ್ಪಟ್ಟ, ಮನೋಜ್ಞವಾದ, ಸುಂದರವಾದ(ಭಗ), ಚೆನ್ನಾಗಿ ಆಚರಿಸಲ್ಪಟ್ಟ (ಸೂಅ)
ಪಣುಲ್ಲ. 'ಪಣೊಲ್ಲ' ಶಬ್ದವನ್ನು ನೋಡುವುದು.
ಪಣುಲ್ಲಿಅ. 'ಪಣೊಲ್ಲಿಅ' ಶಬ್ದವನ್ನು ನೋಡುವುದು.
ಪಣುವೀಸ. ಸ್ತ್ರೀನ: [ಪಂಚವಿಂಶತಿ] ಇಪ್ಪತ್ತೈದು, ಯಾರ ಸಂಖ್ಯೆ ಇಪ್ಪತ್ತೈದೋ ಅವರು/ಅದು
ಪಣುವೀಸಇಮ. ವಿ: [ಪಂಚವಿಂಶತಿತಮ] ಇಪ್ಪತ್ತೈದನೆಯ
ಪಣೊಲ್ಲ. ಸಕ: [ಪ್ರ +ಣುದ್] ಪ್ರೇರಿಸು, ಎಸೆ, ನಾಶಮಾಡು(ಉತ್ತ)
ಪಣೊಲ್ಲಣ. ನ: [ಪ್ರಣೋದನ] ಪ್ರೇರಣೆ(ತಾ)
ಪಣೊಲ್ಲಯ. ವಿ: [ಪ್ರಣೋದಕ] ಪ್ರೇರಕ(ಆಚಾ)
ಪಣೊಲ್ಲಿ. ವಿ: [ಪ್ರಣೋದಿನ್] ಪ್ರೇರಣೆ ಮಾಡುವವನು, ಪ್ರೇರಕ, ಪು: ಎತ್ತು, ಎಮ್ಮೆ ಮುಂತಾದುವನ್ನು ಮುಂದೆ ಹೋಗುವಂತೆ ಮಾಡಲು ಹೊಡೆಯುವ ಕೋಲು(ಪಣ್ಣ)
ಪಣೊಲ್ಲಿಅ. ವಿ: [ಪ್ರಣೋದಿತ] ಪ್ರೇರಿಸಲ್ಪಟ್ಟ(ಔಪ)
ಪಣ್ಣ. ವಿ: [ಪ್ರಜ್ಞ] ತಿಳಿದವನು, ದಕ್ಷ, ನಿಪುಣ(ಉತ್ತ)
ಪಣ್ಣ. ವಿ: [ಪ್ರಾಜ್ಞ] ಪ್ರಜ್ಞೆ ಉಳ್ಳವನು, ಬುದ್ಧಿವಂತ, ದಕ್ಷ, ವಿ: ಪ್ರಾಜ್ಞಕ್ಕೆ ಸಂಬಂಧಿಸಿದ(ಸೂಅ)
ಪಣ್ಣ. ನ: [ಪರ್ಣ] ಎಲೆ
ಪಣ್ಣ. 'ಪಣಿಅ=ಪಣ್ಯ' ಶಬ್ದವನ್ನು ನೋಡುವುದು.
ಪಣ್ಣ. ಸ್ತ್ರೀನ: [ದೇ] ಐವತ್ತು, ಸ್ತ್ರೀ: –ಣ್ಣಾ.
ಪಣ್ಣ. 'ಪಂಚ','ಪಣ' ಶಬ್ದವನ್ನು ನೋಡುವುದು. –ರಸ. ತ್ರಿ.ಬ: [–ದಶನ್] ಹದಿನೈದು, –ರಸಮ. ವಿ: [–ದಶ] ಹದಿನೈದನೆಯ(ಉವಾ). –ರಸೀ. ಸ್ತ್ರೀ: [–ದಶೀ] ಹದಿನೈದನೆಯ. ತಿಥಿ ವಿಶೇಷ. –ರಹ. '–ರಸ' ಶಬ್ದವನ್ನು ನೋಡುವುದು. –ರಹ. ವಿ: [–ದಶ] ಹದಿನೈದನೆಯ. 'ಪನ್ನ=ಪಂಚ' ಶಬ್ದವನ್ನು ನೋಡುವುದು.
ಪಣ್ಣ. ವಿ: [ಪಾರ್ಣ] ಪರ್ಣಕ್ಕೆ(=ಎಲೆಗೆ) ಸಂಬಂಧಿಸಿದ,
ಪಣ್ಣ–. 'ಪಣ್ಣಾ–' ಶಬ್ದವನ್ನು ನೋಡುವುದು. –ವ. ವಿ: [–ವತ್] ಪ್ರಜ್ಞೆ ಉಳ್ಳವನು, ಪ್ರಾಜ್ಞ

ಪಣ್ಣಇ. ಸ್ತ್ರೀ: [ಪನ್ನಗಾ] ಭಗವಾನ್ ಧರ್ಮನಾಥನ ಶಾಸನ –ದೇವಿ(ಪವ)
ಪಣ್ಣಗ. ಪು: [ಪನ್ನಗ] ಹಾವು, ಸರ್ಪ(ಉಪ) **ಪಣ್ಣಗಾಸನ.** ಪು: [ಪನ್ನಗಾಶನ] ಗರುಡ. **'ಪನ್ನಯ'**ಶಬ್ದವನ್ನು ನೋಡುವುದು.
ಪಣ್ಣಗ. ವಿ: [ದೇ. ಪನ್ನಕ] ದುರ್ಗಂಧಿ. **ಪಣ್ಣಗಾತಿಲ.** ಪು: ದುರ್ವಾಸನೆಯ ಎಳ್ಳು
ಪಣ್ಣಟ್ಠಿ. ಸ್ತ್ರೀ: [ಪಂಚಷಷ್ಟಿ] ಅರುವತ್ತೈದು
ಪಣ್ಣತ್ತ. ವಿ: [ಪ್ರಜ್ಞಪ್ತ] ನಿರೂಪಿಸಲ್ಪಟ್ಟ, ಹೇಳಲ್ಪಟ್ಟ(ಔಪ). ರಚಿಸಲ್ಪಟ್ಟ(ಆವಮ)
ಪಣ್ಣತ್ತಿ. ಸ್ತ್ರೀ: [ಪ್ರಜ್ಞಪ್ತಿ] ವಿದ್ಯಾದೇವಿ –ವಿಶೇಷ, ಜೈನಾಗಮ ಗ್ರಂಥ ಸೂರ್ಯ –ಪ್ರಜ್ಞಪ್ತಿಯೇ ಮೊದಲಾದ ಉಪಾಂಗ – ಗ್ರಂಥ(ಶಾ) ವಿದ್ಯಾ –ವಿಶೇಷ. ಪ್ರತಿಪಾದನೆ. **–ಖೇವಣೀ.** ಸ್ತ್ರೀ: [–ಕ್ಷೇಪಣೀ] ಕಥೆಯ ಒಂದು ಪ್ರಭೇದ. **–ಪಕ್ಖೇವಣೀ.** ಸ್ತ್ರೀ: [–ಪ್ರಕ್ಷೇಪಣೀ] ಕಥೆಯ ಒಂದು ಪ್ರಭೇದ
ಪಣ್ಣಪಣ್ಣಿಯ. ಪು: [ಪಣ್ಣಪರ್ಣಿ] ವ್ಯಂತರ ದೇವತೆಗಳ ಒಂದು ಜಾತಿ
ಪಣ್ಣಯ. **'ಪಣ್ಣಗ'** ಶಬ್ದವನ್ನು ನೋಡುವುದು.
ಪಣ್ಣವ. ಸಕ: [ಪ್ರ +ಜ್ಞಾಪಯ್] ಉಪದೇಶಿಸು, ಪ್ರತಿಪಾದಿಸು(ಭಗ)
ಪಣ್ಣವಗ. ವಿ: [ಪ್ರಜ್ಞಾಪಕ] ತಿಳಿಸುವವನು, ಬೋಧಿಸುವವನು
ಪಣ್ಣವಣ. ನ: [ಪ್ರಜ್ಞಾಪನ] ನಿರೂಪಿಸುವುದು, ತಿಳಿಸುವುದು, ಬೋಧಿಸುವುದು, ಶಾಸ್ತ್ರ, ಸಿದ್ಧಾಂತ (ವಿಸೇ)
ಪಣ್ಣವಣಾ. ಸ್ತ್ರೀ: [ಪ್ರಜ್ಞಾಪನಾ] ತಿಳಿಸುವುದು, ನಿರೂಪಿಸುವುದು, ಬೋಧಿಸುವುದು(ಉವಾ), ಪ್ರಜ್ಞಾಪನ–ಸೂತ್ರ ಎಂಬ ಜೈನಾಗಮ ಗ್ರಂಥ (ಭಗ)
ಪಣ್ಣವಣಿಜ್ಜ. **'ಪಣ್ಣವ'** ಶಬ್ದವನ್ನು ನೋಡುವುದು.
ಪಣ್ಣವಣೀ. ಸ್ತ್ರೀ: [ಪ್ರಜ್ಞಾಪನೀ] ಅರ್ಥವನ್ನು ಬೋಧಿಸುವ ಭಾಷಾ –ವಿಶೇಷ(ಭಗ)
ಪಣ್ಣವಣ್ಣ. ಸ್ತ್ರೀನ: [ದೇ. ಪಂಚಪಂಚಾಶತ್] ಐವತ್ತೈದು(ದೇ)
ಪಣ್ಣವಯ. **'ಪಣ್ಣವಗ'** ಶಬ್ದವನ್ನು ನೋಡುವುದು.
ಪಣ್ಣವಯಂತ. **'ಪಣ್ಣವ'** ಶಬ್ದವನ್ನು ನೋಡುವುದು.
ಪಣ್ಣವಿಯ. ವಿ: [ಪ್ರಜ್ಞಾಪಿತ] ತಿಳಿಸಲ್ಪಟ್ಟ, ಬೋಧಿಸಲ್ಪಟ್ಟ(ಅಣು), ನಿರೂಪಿಸಲಾದ
ಪಣ್ಣವೆತ್ತು. ವಿ: [ಪ್ರಜ್ಞಾಪಯಿತೃ] ನಿರೂಪಿಸುವವನು, ತಿಳಿಸುವವನು, ಬೋಧಿಸುವವನು
ಪಣ್ಣಾ. ಸಕ: [ಪ್ರ +ಜ್ಞಾ] ಅತ್ಯಧಿಕವಾಗಿ ತಿಳಿದುಕೊಳ್ಳು, ಚೆನ್ನಾಗಿ ತಿಳಿದುಕೊಳ್ಳು
ಪಣ್ಣಾ. **'ಪಣ್ಣ' ಶಬ್ದವನ್ನು ನೋಡುವುದು.**(ದೇ)
ಪಣ್ಣಾ. ಸ್ತ್ರೀ: [ಪ್ರಜ್ಞಾ] ಬುದ್ಧಿ, ಮತಿ(ಉಪ). ಜ್ಞಾನ, **–ಪರಿಸಹ, –ಪರೀಸಹ.** ಪು: [**–ಪರಿಷಹ, ಪರೀಷಹ**]ಬುದ್ಧಿ ಹೊಂದಿರುವ ಬಗ್ಗೆ ಅಹಂಕಾರ ಪಡದಿರುವುದು, ಬುದ್ಧಿ ಇಲ್ಲದೆ ಇರುವುದಕ್ಕೆ ದುಃಖ ಪಡದಿರುವುದು(ಭಗ). **–ಮಯ.** ಪು: [**–ಮದ**] ಬುದ್ಧಿಯ ಬಗೆಗಿನ ಅಹಂಕಾರ, ಗರ್ವ. **–ವಂತ.** ವಿ: [**–ವತ್**] ಜ್ಞಾನವನ್ನು ಹೊಂದಿರುವವನು, ಜ್ಞಾನಿ.
ಪಣ್ಣಾಗ. ವಿ: [ಪ್ರಜ್ಞ] ವಿದ್ವಾಂಸ
ಪಣ್ಣಾಡ. **'ಪನ್ನಾಡ' ಶಬ್ದವನ್ನು ನೋಡುವುದು.**
ಪಣ್ಣಾಣ. ನ: [ಪ್ರಜ್ಞಾನ] ಮನುಷ್ಯನ ಹತ್ತು ಅವಸ್ಥೆಗಳಲ್ಲಿ ಐದನೆಯದು. ಅಧಿಕವಾದ ಜ್ಞಾನ, ವಿಚಾರ ಮಾಡುವ ಶಕ್ತಿ, ಸಮ್ಯಕ್ ಜ್ಞಾನ, ಆಗಮ, ಶಾಸ್ತ್ರ(ಆಚಾ) **–ವ.** ವಿ: [**–ವತ್**] ಜ್ಞಾನವಂತ, ಜ್ಞಾನಿ. ಶಾಸ್ತ್ರಜ್ಞ
ಪಣ್ಣಾರಾಹ(ಅಪ). ತ್ರಿ.ಬ: [ಪಂಚದಶನ್] ಹದಿನೈದು
ಪಣ್ಣಾವೀಸಾ. ಸ್ತ್ರೀ: [ಪಂಚವಿಂಶತಿ] ಇಪ್ಪತ್ತೈದು
ಪಣ್ಣಾಸ. ಸ್ತ್ರೀನ: [ದೇ. ಪಂಚಾಶತ್] ಐವತ್ತು(ದೇ). **'ಪನ್ನಾಸ' ಶಬ್ದವನ್ನು ನೋಡುವುದು.**
ಪಣ್ಣಾಸಗ. ವಿ: [ಪಂಚಾಶಕ] ಐವತ್ತು ವರ್ಷ ವಯಸ್ಸಿನ
ಪಣ್ಣುವೀಸ. **'ಪಣ್ಣುವೀಸ' ಶಬ್ದವನ್ನು ನೋಡುವುದು.**
ಪಣ್ಹ. ಪುಂಸ್ತ್ರೀ: [ಪ್ರಶ್ನ] ಪ್ರಶ್ನೆ, ಸ್ತ್ರೀ: **–ಣ್ಹಾ. –ವಾಹಣ.** ನ: [**–ವಾಹನ**] ಜೈನ ಮುನಿಗಣದ ಒಂದು ಸಮೂಹ(ಠೀ). **ಪಣ್ಹಾವಾಗರಣ.** ನ: [–ವ್ಯಾಕರಣ] ಹನ್ನೊಂದನೆಯ ಜೈನ ಆಗಮ ಗ್ರಂಥ
ಪಣ್ಹಅ. ಅಕ: [ಪ್ರ +ಸ್ನು] ಸೋರು, ಸ್ರವಿಸು, ತೊಟ್ಟಿಕ್ಕು, ಜಿನುಗು(ಗಾ)
ಪಣ್ಹಅ}. ಪು: [ದೇ. ಪ್ರಸ್ನವ] ಮೊಲೆಯಿಂದ ಹಾಲು
ಪಣ್ಹವ}. ಸೋರುವುದು, ಸ್ರವಿಸುವುದು, ತೊಟ್ಟಿಕ್ಕುವುದು, ಜಿನುಗುವುದು

ಪಣ್ಣವ. ಪು: [ಪಹ್ನವ] ಅನಾರ್ಯದೇಶ –ವಿಶೇಷ, ವಿ: ಆ ದೇಶದ ನಿವಾಸಿಗಳು(ಪಣ್ಣ)
ಪಣ್ಣವಣ. ನ: [ಪ್ರಸ್ನವನ] ಸ್ರವಿಸುವುದು, ಸೋರುವುದು, ಹರಿಯುವುದು
ಪಣ್ಣವಿಅ. 'ಪಣ್ಣುಅ' ಶಬ್ದವನ್ನು ನೋಡುವುದು.
ಪಣ್ಣಾ. 'ಪಣ್ಣಿ' ಶಬ್ದವನ್ನು ನೋಡುವುದು.
ಪಣ್ಹಿ. ಪುಂಸ್ತ್ರೀ: [ಪಾರ್ಷ್ಣಿ] ಮೀನಖಂಡದ ಕೆಳಭಾಗ, ಹಿಮ್ಮಡಿ(ಪಣ್ಣ)
ಪಣ್ಹಿಯಾ. ಸ್ತ್ರೀ: [ಪ್ರಶ್ನಿಕಾ] ಹದಡ, ಹಿಮ್ಮಡಿ
ಪಣ್ಹುಅ. ವಿ: [ಪ್ರಸ್ನುತ] ಸೋರಿದ, ಜಿನುಗಿದ, ಸ್ರವಿಸಿದ, ಸೋರುತ್ತಿರುವ, ಸೋರಲು ಪ್ರಾರಂಭಿಸಿರುವ
ಪಣ್ಹುಇರ. ವಿ: [ಪ್ರಸ್ನೋತೃ] ಸೋರುತ್ತಿರುವ
ಪಣ್ಹೊತ್ತರ. ನ: [ಪ್ರಶ್ನೋತ್ತರ] ಪ್ರಶ್ನೆ –ಉತ್ತರ
ಪತಣು. 'ಪಯಣು' ಶಬ್ದವನ್ನು ನೋಡುವುದು.
ಪತಾರ. ಸಕ: [ಪ್ರ+ತಾರಯ್] ಮೋಸಮಾಡು, ವಂಚಿಸು
ಪತಾರಗ. ವಿ: [ಪ್ರತಾರಕ] ವಂಚಕ, ಮೋಸಗಾರ
ಪತಿಣ್ಣ}. ವಿ: [ಪ್ರತೀರ್ಣ] ದಡ ಸೇರಿದ, ದಾಟಲ್ಪಟ್ಟ
ಪತಿನ್ನ}.
ಪತುಣ್ಣ}. ನ: [ಪ್ರತುನ್ನ] ತೊಗಟೆಯಿಂದ ಮಾಡಿದ
ಪತುನ್ನ}. ವಸ್ತ್ರ, ನಾರುಮಡಿ, ವಲ್ಕಲ
ಪತೇರಸ.} ವಿ: [ಪ್ರತ್ರಯೋದಶ] ಅಧಿಕ
ಪತೇಲಸ}. ಹದಿಮೂರನೆಯ ದಿನ. **–ವಾಸ.** ನ: [–ವರ್ಷ] ಅಧಿಕ ಹದಿಮೂರನೇ ವರ್ಷ, ಪ್ರಕೃತ ಹದಿಮೂರನೇ ವರ್ಷ. ಮುಂದೆ ಸಾಗಿದ ಹದಿಮೂರನೇ ವರ್ಷ(ಆಚಾ)
ಪತ್ತ. ವಿ: [ಪ್ರಾಪ್ತ] ದೊರಕಿದ, ಪಡೆದ. **–ಕಾಲ, –ಯಾಲ.** ನ: [–ಕಾಲ] ಚೈತ್ಯ –ವಿಶೇಷ, ಸಮಯೋಚಿತ, ಕಾಲೋಚಿತ
ಪತ್ತ. ನ: [ಪತ್ರ] ಎಲೆ(ಕಪ್ಪ), ರೆಕ್ಕೆ(ಣಾಯಾ), ಬರೆಯುವ ವಸ್ತು, ಕಾಗದ, ಹಾಳೆ. **–ಚ್ಛೇಜ್ಜ.** ನ: [–ಚ್ಛೇದ್ಯ] ಕಲಾ –ವಿಶೇಷ. **–ಮಂತ.** ವಿ: [–ವತ್] ಪತ್ರವುಳ್ಳವನು. **–ರಹ.** ಪು: [–ರಥ] ಪಕ್ಷಿ. **–ಲೇಹಾ.** ಸ್ತ್ರೀ: [–ಲೇಖಾ] ಸ್ತ್ರೀಯರ ಅಂಗಗಳ ಮೇಲೆ ಚಂದನಾದಿಗಳಿಂದ ಬರೆಯಲಾಗುವ ಚಿತ್ರ. **–ವಲ್ಲೀ.** ಸ್ತ್ರೀ: [–ವಲ್ಲೀ] ಎಲೆಗಳಿರುವ ಬಳ್ಳಿ, ಮುಖದ ಮೇಲೆ ಚಂದನಾದಿಗಳಿಂದ ಮಾಡಿಕೊಳ್ಳುವ, ಎಲೆಯನ್ನು ಹೋಲುವ ತಿಲಕದ ಅಲಂಕಾರ. **–ವಿಂಟ.** ನ: [–ವೃಂತ] ಎಲೆಯ ಬಂಧನ. **–ವಿಂಟಿಯ.** [–ವೃಂತಕ, –ವೃಂತೀಯ] ಮೂರು ಇಂದ್ರಿಯಗಳ ಒಂದು ಪ್ರಾಣಿ(ಪಣ್ಣ). **–ವಿಚ್ಛುಯ.** ಪು: [–ವೃಶ್ಚಿಕ] ಒಂದು ಬಗೆಯ ಚೇಳು; ನಾಲ್ಕು ಇಂದ್ರಿಯಗಳ ಜೀವದ ಒಂದು ಜಾತಿ. **–ವೆಂಟ. '–ವಿಂಟ' ಶಬ್ದವನ್ನು ನೋಡುವುದು. –ಸಗಡಿಆ.** ಸ್ತ್ರೀ: [–ಶಕಟಿಕಾ] ಎಲೆಗಳು ತುಂಬಿದ ಗಾಡಿ. **–ಸಮಿದ್ಧ.** ವಿ: [–ಸಮೃದ್ಧ] ಅತ್ಯಧಿಕವಾಗಿ ಎಲೆಗಳಿರುವ(ಪಾಅ). **–ಹಾರ.** ಪು: [–ಹಾರ] ಮೂರು ಇಂದ್ರಿಯಗಳ ಒಂದು ಪ್ರಾಣಿ(ಪಣ್ಣ). **ಪತ್ತಾಹಾರ.** ಪು: [ಪತ್ರಾಹಾರ] ಎಲೆಗಳನ್ನು ತಿಂದು ಬದುಕುವ ವಾನಪ್ರಸ್ಥರು(ಔಪ)
ಪತ್ತ. ನ: [ಪಾತ್ರ] ಪಾತ್ರೆ(ಕುಮಾ), ದಾನ ಕೊಡಲು ಅರ್ಹರಾದ ಗುಣವಂತರು(ಉಪ), ನಿರಂತರ ಮೂವತ್ತೆರಡು ಉಪವಾಸ. **ಪತ್ತಾಬಂಧ.** ಪು: [–ಬಂಧ] ಪಾತ್ರೆಗಳನ್ನು ಕಟ್ಟುವ ಬಟ್ಟೆ(ಓಘ). **'ಪಾಯ=ಪತ್ರ' ಶಬ್ದವನ್ನು ನೋಡುವುದು.**
ಪತ್ತ. ವಿ: [ಪ್ರಾತ್ತ] ಪ್ರಸಾರಿತ, ಹರಡಲ್ಪಟ್ಟ, ವಿಸ್ತರಿಸಲ್ಪಟ್ಟ
ಪತ್ತಇಅ. ವಿ: [ಪ್ರತ್ಯಯಿತ] ನಂಬಿಕೆ ಹೊಂದಿರುವ, ನಂಬಿರುವ, ವಿಶ್ವಸ್ತ(ಭಗ)
ಪತ್ತಇಅ. ವಿ: [ಪತ್ರಕಿತ] ಕಡಿಮೆ ಎಲೆಗಳಿಂದ ಕೂಡಿರುವ, ನಿಂದಿತವಾದ ಪತ್ರಗಳುಳ್ಳ ಣಾಯಾ)
ಪತ್ತಉರ. ಪು: [ದೇ] ಒಂದು ಬಗೆಯ ಗಿಡ, ವನಸ್ಪತಿ –ವಿಶೇಷ
ಪತ್ತಚ್ಛೇಜ್ಜ. ನ: [ಪತ್ರಚ್ಛೇದ್ಯ] ಬಾಣದಿಂದ ಎಲೆಯನ್ನು ಭೇದಿಸುವ(ಸೀಳುವ) ಕಲೆ, ಕಲ್ಲುಗಳ ಮೇಲೆ ಕೊರೆಯುವ ಕೆಲಸ
ಪತ್ತಟ್ಠ. ವಿ: [ದೇ. **ಪ್ರಾಪ್ತಾರ್ಥ**] ಬಹವಾಗಿ ಓದಿಕೊಂಡ, ವಿದ್ವಾಂಸ, ಅತಿ ಕುಶಲ(ಸುಪಾ), ಸಮರ್ಥ
ಪತ್ತಟ್ಠ. ವಿ: [ದೇ] ಸುಂದರ, ಮನೋಹರ(ದೇ)
ಪತ್ತಣ. 'ಪಟ್ಟಣ' ಶಬ್ದವನ್ನು ನೋಡುವುದು.
ಪತ್ತಣ. ನ: [ದೇ. **ಪತ್ರಣ**] ಬಾಣದ ತುದಿ, ಬಾಣದ ಫಲಕ, ಪುಂಖ, ಬಾಣದ ಮೂಲಭಾಗ(ದೇ)
ಪತ್ತಣಾ. ಸ್ತ್ರೀ: [ದೇ.ಪತ್ರಣಾ] ಮೇಲಿನ **ಶಬ್ದವನ್ನು ನೋಡುವುದು. ಬಾಣದ ಮೂಲದಲ್ಲಿ(=ಪುಂಖ) ಮಾಡಲಾಗುವ ರಚನಾ –ವಿಶೇಷ**

ಪತ್ತಣಾ. ಸ್ತ್ರೀ: [ಪ್ರಾಪಣಾ] ಲಾಭ ಸಂಪಾದನೆ, ಹೊಂದುವುದು, ಪಡೆಯಬೇಕಾದ್ದು
ಪತ್ತಪಸಾಇಆ. ಸ್ತ್ರೀ: [ದೇ] ಕಾಡುಜನರು ಧರಿಸುವ ಎಲೆಗಳ ಒಂದು ಬಗೆಯ ಪೇಟ, ಶಿರೋಭೂಷಣ
ಪತ್ತಪಿಸಾಲಸ. ನ: [ದೇ] ಮೇಲಿನ ಶಬ್ದವನ್ನು ನೋಡುವುದು.
ಪತ್ತಯ. ನ: [ಪತ್ರಕ] ಒಂದು ಬಗೆಯ ಹಾಡು
ಪತ್ತಯ. 'ಪತ್ತ' ಶಬ್ದವನ್ನು ನೋಡುವುದು.
ಪತ್ತರಕ. ನ: [ದೇ. ಪ್ರತರಕ] ಒಂದು ಬಗೆಯ ಒಡವೆ (ಪಣ್ಣ)
ಪತ್ತಲ. ವಿ: [ದೇ] ತೀಕ್ಷ್ಣ, ಚುರುಕಾದ, ತೆಳುವಾದ, ಕೃಶವಾದ
ಪತ್ತಲ. ವಿ: [ಪತ್ರಲ] ತುಂಬ ಎಲೆಗಳುಳ್ಳ, ಎಲೆಗಳಿಂದ ಸಮೃದ್ಧವಾದ, ರೆಪ್ಪೆ ಉಳ್ಳ(ಔಪ)
ಪತ್ತಲ. ನ: [ಪತ್ರ] ಎಲೆ
ಪತ್ತಲಣ. ನ: [ಪತ್ರಲನ] ಎಲೆಗಳಿಂದ ಸಮೃದ್ಧವಾದ
ಪತ್ತಲೀ. ಸ್ತ್ರೀ: [ದೇ] ಒಂದು ಬಗೆಯ ತೆರಿಗೆ
ಪತ್ತಹಾರಯ. ವಿ: [ಪತ್ರಹಾರಕ] ಎಲೆಗಳನ್ನು ಮಾರುವ ಉದ್ಯೋಗ ಮಾಡುವವನು
ಪತ್ತಾಣ. ಸಕ: [ದೇ] ನಾಶಮಾಡು, ಅಳಿಸು
ಪತ್ತಾಮೋಡ. ಪುಂನ: [ಆಮೋಟಪತ್ರ] ಹರಿದ ಎಲೆ, ಕಿತ್ತ ಎಲೆ
ಪತ್ತಿ. ಸ್ತ್ರೀ: [ಪ್ರಾಪ್ತಿ] ಲಾಭ, ಹೊಂದುವುದು
ಪತ್ತಿ. ಪು: [ಪತ್ತಿ] ಒಂದು ರಥ, ಒಂದು ಆನೆ, ಮೂರು ಕುದುರೆ ಮತ್ತು ಐವರು ಪದಾತಿಗಳಿರುವ ಒಂದು ವಿಶೇಷ ಸೇನೆ. ಕಾಲ್ನಡಿಗೆಯಿಂದ ನಡೆಯುವ ಸೈನ್ಯ (ಉಪ)
ಪತ್ತಿ}. ಸಕ: [ಪ್ರತಿ +ಇ] ತಿಳಿದುಕೊಳ್ಳು, ನಂಬು,
ಪತ್ತಿಅ}. ಆಶ್ರಯಿಸು. –'ಪತ್ತಿಯಂತಿ'
ಪತ್ತಿಅ. ವಿ: [ಪತ್ರಿತ] ಎಲೆಗಳು ಮೂಡಿರುವ, ಯಾವುದರಲ್ಲಿ ಎಲೆಗಳು ಮೂಡಿವೆಯೋ ಅದು
ಪತ್ತಿಅ. ವಿ: [ಪ್ರತೀತಿ, ಪ್ರತ್ಯಯಿತ] ನಂಬಿಕೆ ಉಳ್ಳ, ವಿಶ್ವಾಸವುಳ್ಳ, ಅರಿವುಳ್ಳ
ಪತ್ತಿಅ. ನ: [ಪ್ರೀತಿಕ] ಪ್ರೀತಿ, ಸ್ನೇಹ(ಠಾ)
ಪತ್ತಿಅ. ಪುಂನ: [ಪ್ರತ್ಯಯ] ವಿಶ್ವಾಸ, ನಂಬಿಕೆ(ಠಾ)
ಪತ್ತಿಅ. ನ: [ಪತ್ರಿಕ] ಪಚ್ಚೆಯ ಪತ್ರ(ಕಪ್ಪ)
ಪತ್ತಿಆ. ಸ್ತ್ರೀ: [ಪತ್ರಿಕಾ] ಎಲೆ
ಪತ್ತಿಆಅ. 'ಪತ್ತಿಅ=ಪ್ರತಿ +ಇ' ಶಬ್ದವನ್ನು ನೋಡುವುದು.
ಪತ್ತಿಆವ. ಸಕ: [ಪ್ರತಿ +ಆಯುಯ್] ನಂಬಿಕೆ ಉಂಟುಮಾಡಿಸು
ಪತ್ತಿಗ. ''ಪತ್ತಿಅ=ಪ್ರೀತಿಕ' ಶಬ್ದವನ್ನು ನೋಡುವುದು.
ಪತ್ತಿಜ್ಜ. 'ಪತ್ತಿಅ=ಪ್ರತಿ+ಇ' ಶಬ್ದವನ್ನು ನೋಡುವುದು.
ಪತ್ತಿಜ್ಜಾವ. 'ಪತ್ತಿಆವ' ಶಬ್ದವನ್ನು ನೋಡುವುದು.
ಪತ್ತಿಸಮಿದ್ಧ. ವಿ: [ದೇ] ತೀಕ್ಷ್ಣ, ಹರಿತ, ಚುರುಕು
ಪತ್ತೀ. ಸ್ತ್ರೀ: [ದೇ] ಕಾಡಿನ ಜನರಾದ ಭೀಲರು ತಲೆಗೆ ಧರಿಸುವ ಎಲೆಗಳಿಂದಾದ ಒಂದು ಬಗೆಯ ಪೇಟ
ಪತ್ತೀ. ಸ್ತ್ರೀ: [ಪತ್ನೀ] ಹೆಂಡತಿ(ಉಪ)
ಪತ್ತೀ. ಸ್ತ್ರೀ: [ಪಾತ್ರೀ] ಪಾತ್ರೆ
ಪತ್ತುಂ. 'ಪಾವ=ಪ್ರ –ಆಪ್' ಶಬ್ದವನ್ನು ನೋಡುವುದು.
ಪತ್ತುವಗದ.(ಶೌ). ವಿ: [ಪ್ರತ್ಯುಪಗತ] ಎದುರುಗಡೆ ಹೋದ, ಹಿಂತಿರುಗಿ ಹೋಗಿರುವ(ನಾಟ)
ಪತ್ತೇಅ}. ನ: [ಪ್ರತ್ಯೇಕ] ಪ್ರತಿಯೊಬ್ಬನೂ, ಒಬ್ಬೊಬ್ಬನೂ
ಪತ್ತೇಗ}. (ಕುಮಾ), ಬೇರೆಬೇರೆಯಾದ, ಒಬ್ಬನ ಕಡೆಗೆ, ಒಬ್ಬನ ಮುಂದೆ. ನ: ಕರ್ಮ–ವಿಶೇಷ; ಇದು ಹುಟ್ಟುವುದರಿಂದ ಒಂದು ಜೀವಕ್ಕೆ ಬೇರೆ ಶರೀರ ಉಂಟಾಗುತ್ತದೆ. ಪು: ಬೇರೆ ಶರೀರ ಹೊಂದಿರುವ ಜೀವ, ಒಂದು ಸ್ವತಂತ್ರ ಶರೀರವುಳ್ಳ ಜೀವ. –ಣಾಮ. ನ: [–ನಾಮನ್] ಕರ್ಮ–ವಿಶೇಷ; ಇದು ಹುಟ್ಟುವುದರಿಂದ ಒಂದು ಜೀವಕ್ಕೆ ಬೇರೆ ಶರೀರ ಉಂಟಾಗುತ್ತದೆ. –ನಿಗೋಯಯು. ಪು: [–ನಿಗೋದಕ] ಜೀವ –ವಿಶೇಷ. –ಬುದ್ಧ. ಪು: [–ಬುದ್ಧ] ಅನಿತ್ಯವೇ ವೊದಲಾದ ಭಾವನೆಗಳಿಗೆ ಕಾರಣಭೂತವಾದ ಯಾವುದೊಂದು ವಸ್ತುವಿನಿಂದ ಪರಮಾರ್ಥದ ಜ್ಞಾನ ಯಾರಿಗೆ ಉದಿಸುತ್ತದೋ ಅಂಥ ಜೈನ ಮುನಿ(ಮಹಾ). –ಬುದ್ಧಸಿದ್ಧ. ಪು: [–ಬುದ್ಧಸಿದ್ಧ] ಬೇರೊಬ್ಬ ಬುದ್ಧನಾಗಿ ಮುಕ್ತಿಯುನ್ನು ಪಡೆದ ಜೀವ. –ರಸ. ವಿ: [–ರಸ] ವಿಭಿನ್ನರಸವುಳ್ಳ (ಠಾ), ನ: ಕರ್ಮ –ವಿಶೇಷ; ಇದರ ಉದಯದಿಂದ ಒಂದು ಜೀವಕ್ಕೆ ಬೇರೆಯದೇ ಆದ ಶರೀರ ಲಭಿಸುತ್ತದೆ.(ಪಣ್ಣ). –ಸರೀರನಾಮ. ನ: [–ಶರೀರನಾಮನ್] ಅದೇ ಹಿಂದೆ ಹೇಳಿದ ಅರ್ಥ.

ಪತ್ತೇಯ. ವಿ: [ಪ್ರತ್ಯೇಕ] ಬಾಹ್ಯ ಕಾರಣ, ಹೊರಗಿನ ಕಾರಣ
ಪತ್ಥ. ಸಕ: [ಪ್ರ +ಅರ್ಥಯ್] ಪ್ರಾರ್ಥಿಸು , ಕೋರು, ಇಚ್ಛಿಸು, ಬೇಡು, ತಡೆ, ವ. ಕೃ: **'ಪತ್ಥಂತ'**
ಪತ್ಥ. ಪು: [ಪಾರ್ಥ] ಅರ್ಜುನ, ಕುಂತೀಸುತ, ಪಾಂಚಾಲ ದೇಶದ ಒಬ್ಬ ರಾಜನ ಹೆಸರು. ಭದ್ದಿಲಪುರ ಎಂಬ ನಗರದ ದೊರೆ.
ಪತ್ಥ. ಪು: [ಪ್ರಾರ್ಥ] ಪ್ರಾರ್ಥನೆ, ನಿವೇದನೆ, ಎರಡು ದಿನಗಳ ಉಪವಾಸ
ಪತ್ಥ. 'ಪಚ್ಛ=ಪಥ್ಯ' ಶಬ್ದವನ್ನು ನೋಡುವುದು.
ಪತ್ಥ. 'ಪತ್ಥ=ಪ್ರ +ಅರ್ಥಯ್' ಶಬ್ದವನ್ನು ನೋಡುವುದು.
ಪತ್ಥ. ಪು: [ಪ್ರಸ್ಥ] ಅಚ್ಚೇರಿನ ನಾಲ್ಕನೇ ಒಂದು ಭಾಗದ(ಕುಡ್ತೆ) ಅಳತೆ, ಸೇತಿಕಾ: ಒಂದು ಕುಡ್ತೆಯ ಅಳತೆ
ಪತ್ಥಂತ. 'ಪತ್ಥ=ಪ್ರ +ಅರ್ಥಯ್' ಶಬ್ದವನ್ನು ನೋಡುವುದು.
ಪತ್ಥಂತ 'ಪತ್ಥಾ' ಶಬ್ದವನ್ನು ನೋಡುವುದು.
ಪತ್ಥಗ 'ಪತ್ಥಯ' ಶಬ್ದವನ್ನು ನೋಡುವುದು.
ಪತ್ಥಡ. ಪು: [ಪ್ರಸ್ತರ] ರಚನಾ ವಿಶೇಷವನ್ನು ಹೊಂದಿರುವ ಸಮೂಹ(ಠಾ), ಮನೆಗಳ(ಕಟ್ಟಡ) ಮಧ್ಯದ ಒಳಭಾಗ(ಪಣ್ಣ)
ಪತ್ಥಡ. ವಿ: [ಪ್ರಸ್ತೃತ] ಹಾಸಲ್ಪಟ್ಟಿರುವ ಹರಡಿರುವ(ಭಗ)
ಪತ್ಥಣ. ನ: [ಪ್ರಾರ್ಥನ] ಪ್ರಾರ್ಥನೆ, ವಿನಂತಿ
ಪತ್ಥಣಯಾ}. ಸ್ತ್ರೀ: [ಪ್ರಾರ್ಥನಾ] ಅಭಿಲಾಷೆ, ಇಚ್ಛೆ,
ಪತ್ಥಣಾ}. ಬೇಡುವುದು, ಯಾಚನೆ, ನಿವೇದನೆ, ವಿನಂತಿ(ಸುಪಾ)
ಪತ್ಥಯ. 'ಪತ್ಥ=ಪಥ್ಯ' ಶಬ್ದವನ್ನು ನೋಡುವುದು.
ಪತ್ಥಯ. ವಿ: [ಪ್ರಾರ್ಥಕ] ಅಭಿಲಾಷಿಸುವವನು, ಇಚ್ಛಿಸುವವನು(ಸೂಅ)
ಪತ್ಥಯ. 'ಪತ್ಥ=ಪ್ರಸ್ಥ' ಶಬ್ದವನ್ನು ನೋಡುವುದು.
ಪತ್ಥಯಣ. ನ: [ಪಥ್ಯದನ] ಬುತ್ತಿ, ಪಾಥೇಯ (ಣಾಯಾ)
ಪತ್ಥರ. ಸಕ: [ಪ್ರ +ಸ್ತೃ] ಹಾಸು, ಹರಡು
ಪತ್ಥರ. ಪು: [ಪ್ರಸ್ತರ] ಕಲ್ಲು, ಶಿಲೆ(ಔಪ)
ಪತ್ಥರ. ನ: [ದೇ] ಕಾಲಿನಿಂದ ಒದೆಯುವುದು,
ಪತ್ಥರ. 'ಪತ್ಥಾರ' ಶಬ್ದವನ್ನು ನೋಡುವುದು.
ಪತ್ಥರಣ. ನ: [ಪ್ರಸ್ತರಣ] ಹಾಸಿಗೆ
ಪತ್ಥರಭಲ್ಲಿಅ. ನ: [ದೇ] ಕೋಲಾಹಲವುಂಟು ಮಾಡುವುದು(ದೇ)
ಪತ್ಥರಾ. ಸ್ತ್ರೀ: [ದೇ] ಕಾಲಿನ ಒದೆತ
ಪತ್ಥರಿಅ. ಪು: [ದೇ] ಪಲ್ಲವ, ಚಿಗುರು
ಪತ್ಥರಿಅ. ವಿ: [ಪ್ರಸ್ತೃತ] ಹಾಸಲ್ಪಟ್ಟಿರುವ(ಪಾಅ)
ಪತ್ಥವ. 'ಪತ್ಥಾವ' ಶಬ್ದವನ್ನು ನೋಡುವುದು.
ಪತ್ಥಾ. ಅಕ: [ಪ್ರ+ಸ್ಥಾ] ಪ್ರಯಾಣ ಹೊರಡು, ಸಂಚಾರಮಾಡು. ವ. ಕೃ **–ಪತ್ಥಂತ**
ಪತ್ಥಾಣ. ನ: [ಪ್ರಸ್ಥಾನ] ಪ್ರಯಾಣ, ಸಂಚಾರ, ಹೊರಡುವುದು(ಅಭಿ)
ಪತ್ಥಾರ. ಪು: [ಪ್ರಸ್ತಾರ] ವಿಸ್ತಾರ, ಹರಡುವುದು, ಹುಲ್ಲಿನ ವನ, ಹೂವು, ಚಿಗುರು ಲತಾದಿಗಳಿಂದ ರಚಿಸಿದ ಹಾಸಿಗೆ, ಛಂದಃಶಾಸ್ತ್ರದಲ್ಲಿ ಗುರು –ಲಘು ಗುರುತಿಸಿ, ವೃತ್ತಗಳ ಭೇದಗಳನ್ನು ತಿಳಿಸುವ ಒಂದು ವಿಧಾನ, ಪ್ರಾಯಶ್ಚಿತ್ತದ ರಚನಾ –ವಿಶೇಷ(ಠಾ), ವಿನಾಶ
ಪತ್ಥಾರೀ. ಸ್ತ್ರೀ: [ದೇ] ನಿಕರ, ಸಮೂಹ, ಗುಂಪು, ಹಾಸಿಗೆ(ದೇ)
ಪತ್ಥಾವ. ಸಕ:[ಪ್ರ+ಸ್ತಾವಯ್]ಪ್ರಾರಂಭಿಸು, ಪೀಠಿಕೆಹಾಕು
ಪತ್ಥಾವ. ಪು: [ಪ್ರಸ್ತಾವ] ಅವಕಾಶ, ಸಂದರ್ಭ, ಪೀಠಿಕೆ, ಪ್ರಸಂಗ, ಪ್ರಕರಣ(ಕುಮಾ)
ಪತ್ಥಿಅ. ವಿ: [ಪ್ರಸ್ಥಿತ] ಪ್ರಯಾಣ ಮಾಡಿದವನು, ಹೊರಟಿರುವ(ಸುರ), ನ: ಹೊರಡುವುದು, ಪ್ರಯಾಣ, ಗಮನ, ಸಂಚಾರ(ಅಜ)
ಪತ್ಥಿಅ. ವಿ: [ಪ್ರಾರ್ಥಿತ] ಪ್ರಾರ್ಥಿಸಲ್ಪಟ್ಟವನು, ಪ್ರಾರ್ಥಿಸಲ್ಪಟ್ಟದ್ದು(ಭಗ)
ಪತ್ಥಿಅ. ವಿ: [ದೇ] ಶೀಘ್ರ, ತ್ವರೆ ಪಡಿಸುವವನು, ಅವಸರ ಪಡಿಸುವವನು(ದೇ)
ಪತ್ಥಿಅ. ವಿ: [ಪ್ರಾರ್ಥಿಕ] ಪ್ರಾರ್ಥಿಸುವವನು,
ಪತ್ಥಿಅ. ವಿ: [ಪ್ರಾಸ್ಥಿತ] ವಿಶೇಷ ಆಸಕ್ತಿ ಉಳ್ಳವನು, ಬಹಳವಾದ ಶ್ರದ್ಧೆಯುಳ್ಳವನು(ಉವ)
ಪತ್ಥಿಅ –}. ಸ್ತ್ರೀ: [ದೇ] ಬಿದಿರಿನಿಂದ ಮಾಡಿದ ವಿಶೇಷ
ಪತ್ಥಿಆ}. ಪಾತ್ರೆ (ಬುಟ್ಟಿ ಇತ್ಯಾದಿ) ಓಘ), **–ಪಿಡಗ, ಪಿಡಯ.** ನ:[–ಪಿಟಕ] ಬಿದಿರಿನಿಂದ ಮಾಡಿದ ವಿಶೇಷ ಪಾತ್ರೆ(ವಿಪಾ)
ಪತ್ಥಿದ. 'ಪತ್ಥಿಅ=ಪ್ರಸ್ಥಿತ, ಪ್ರಾರ್ಥಿತ' ಶಬ್ದವನ್ನು ನೋಡುವುದು.

ಪತ್ಥಿವ. ಪು: [ಪಾರ್ಥಿವ] ರಾಜ, ನೃಪ, ದೊರೆ. ವಿ: ಪೃಥ್ವಿಯಿಂದ(ಭೂಮಿಯಿಂದ) ಆದ, ಭೂಮಿಗೆ ಸಂಬಂಧಿಸಿದ

ಪತ್ಥೀ. ಸ್ತ್ರೀ: [ದೇ. ಪಾತ್ರೀ] ಪಾತ್ರೆ

ಪತ್ಥೀಣ. ನ: [ದೇ] ದಪ್ಪನಾದ ಬಟ್ಟೆ, ವಿ: ಸ್ಥೂಲವಾದ, ದಪ್ಪನಾದ(ದೇ)

ಪತ್ಥುಯ. ವಿ: [ಪ್ರಸ್ತುತ] ಸಂದರ್ಭದಿಂದ ಒದಗಿದ, ಸಾಂದರ್ಭಿಕ, ಈಗಿನ, ಪ್ರಾಪ್ತವಾದ, ದೊರಕಿದ

ಪತ್ಥುರ. 'ಪತ್ಥರ=ಪ್ರ +ಸ್ತೃ' ಶಬ್ದವನ್ನು ನೋಡುವುದು.

ಪತ್ಥೇಅಮಾಣ}. 'ಪತ್ಥ=ಪ್ರಾ –ಅರ್ಥಯ್' ಶಬ್ದವನ್ನು

ಪತ್ಥೆಂತ}. ನೋಡುವುದು.

ಪತ್ಥೇಮಾಣ}.

ಪತ್ಥೇಯವ್ವ}.

ಪತ್ಥೋಉ. ವಿ: [ಪ್ರಸ್ತೋತೃ] ಪ್ರಸ್ತಾವ ಮಾಡುವವನು, ಪ್ರಾರಂಭ ಮಾಡುವವನು, ಪ್ರವರ್ತಕ. ಸ್ತ್ರೀ: –ತ್ಥೋಈ(ಪಣ್ಣ)

ಪಥಮ(ಪೈ). 'ಪಢಮ' ಶಬ್ದವನ್ನು ನೋಡುವುದು.

ಪದ. 'ಪಯ=ಪದ' ಶಬ್ದವನ್ನು ನೋಡುವುದು(ಸ್ವಪ್ನ)

ಪದಅ. ಸಕ: [ಗಮ್] ಹೋಗು, ನಡೆ, ಚಲಿಸು. ಕ್ರಿಯಾ ರೂಪ: 'ಪದಅಂತಿ'

ಪದಂಸಿಅ. ವಿ: [ಪ್ರದರ್ಶಿತ] ತೋರಿಸಲಾದ, ತಿಳಿಯಪಡಿಸಲಾಗಿರುವ

ಪದಕ್ಖಿಣ. ವಿ: [ಪ್ರದಕ್ಷಿಣ] ಎಡಗಡೆಯಿಂದ ಬಲಗಡೆಗೆ ಸುತ್ತು ಬಂದವನು, ನ: ಎಡಗಡೆಯಿಂದ ಬಲಗಡೆಗೆ ಸುತ್ತು ಬರುವುದು. 'ಪದಾಹಿಣ' ಶಬ್ದವನ್ನು ನೋಡುವುದು.

ಪದಕ್ಖಿಣ. ಸಕ: [ಪ್ರದಕ್ಷಿಣಯ್] ಪ್ರದಕ್ಷಿಣೆ ಮಾಡು, ಬಲಪಾರ್ಶ್ವದಿಂದ ಮಂಡಲಾಕಾರವಾಗಿ ಸುತ್ತುವುದು

ಪದಕ್ಖಿಣಾ. ಸ್ತ್ರೀ: [ಪ್ರದಕ್ಷಿಣಾ] ಮೇಲಿನದೇ ಅರ್ಥ

ಪದಣ. ನ: [ಪದನ] ನಂಬಿಕೆಯನ್ನು ಹುಟ್ಟಿಸುವುದು, ತಿಳಿಸುವುದು

ಪದಣ(ಶೌ). ನ: [ಪತನ] ಕೆಳಗೆ ಬೀಳುವುದು

ಪದಮ(ಶೌ). 'ಪಉಮ' ಶಬ್ದವನ್ನು ನೋಡುವುದು.

ಪದಯ. 'ಪಪಯ=ಪದಗ', ಪದಕ, ಪತಂಗ' ಶಬ್ದವನ್ನು ನೋಡುವುದು.

ಪದರಿಸಿಅ. 'ಪದಂಸಿಅ' ಶಬ್ದವನ್ನು ನೋಡುವುದು

ಪದಹಣ. ನ: [ಪ್ರದಹನ] ಬೇಗೆ, ಬಿಸಿ, ಕಾವು, ಉಷ್ಣತೆ (ಕುಮಾ)

ಪದಾಇ. ವಿ: [ಪ್ರದಾಯಿನ್] ಕೊಡುವವನು, ನೀಡುವವನು

ಪದಾಣ. ನ: [ಪ್ರದಾನ] ಚೆನ್ನಾಗಿ ದಾನ ಮಾಡುವುದು, ಕೊಡುವುದು(ಅಭಿ)

ಪದಾದಿ(ಶೌ). ಪು: [ಪದಾತಿ] ಕಾಲಾಳು, ಕಾಲ್ನಡಿಗೆಯಲ್ಲಿ ಸಾಗುವ ಸೈನಿಕ(ವೇಣೀ)

ಪದಾಯಗ. ವಿ: [ಪ್ರದಾಯಕ] ಕೊಡುವವನು, ನೀಡುವವನು(ವಿಸೇ)

ಪದಾವ. 'ಪಯಾವ' ಶಬ್ದವನ್ನು ನೋಡುವುದು.

ಪದಾಹಿಣ. ವಿ: [ಪ್ರದಕ್ಷಿಣ] ಬಹಳವಾಗಿ ದಕ್ಷಿಣ ದಿಕ್ಕಿನಲ್ಲಿ ಸ್ಥಿರವಾಗಿ ನಿಂತಿರುವ. 'ಪದಕ್ಖಿಣ' ಶಬ್ದವನ್ನು ನೋಡುವುದು.

ಪದಿಕಿದಿ(ಶೌ). 'ಪಡಿಕಿದಿ' ಶಬ್ದವನ್ನು ನೋಡುವುದು.

ಪದಿತ್ತ. 'ಪಲಿತ್ತ' ಶಬ್ದವನ್ನು ನೋಡುವುದು.

ಪದಿಸ–. ಸ್ತ್ರೀ: [ಪ್ರದಿಶ್] ಎರಡು ದಿಕ್ಕುಗಳ ಮಧ್ಯದ ದಿಕ್ಕು; ಈಶಾನ್ಯವೇ ಮೊದಲಾದ ಮೂಲೆಗಳು

ಪದಿಸ್ಸಾ. 'ಪದೆಕ್ಖ' ಶಬ್ದವನ್ನು ನೋಡುವುದು.

ಪದೀವ. ಸಕ: [ಪ್ರ +ದೀಪಯ್] ಹೊತ್ತಿಸು, ಉರಿಸು, ಬೆಳಗು. ವ. ಕೃ: 'ಪದೀವೇಂತ

ಪದೀವ. ಪಈವ=ಪ್ರದೀಪ' ಶಬ್ದವನ್ನು ನೋಡುವುದು.

ಪದೀವಿಆ. ಸ್ತ್ರೀ: [ಪ್ರದೀಪಿಕಾ] ಸಣ್ಣ ದೀಪ, ಕೈದೀಪ

ಪದುಗ್ಗ. ಪುಂನ: [ಪ್ರದುರ್ಗ] ಕೋಟೆ

ಪದುಟ್ಠ. ವಿ: [ಪ್ರದ್ವಿಷ್ಟ, ಪ್ರದುಷ್ಟ] ವಿಶೇಷ ದ್ವೇಷವನ್ನು ಹೊಂದಿರುವ, ದುರುಳ, ದುಷ್ಟ

ಪದುಭ್ಭೇಇಯ. ನ: [ಪದೋದ್ಭೇದಕ] ಪದವಿಭಾಗ ಮತ್ತು ಶಬ್ದಾರ್ಥವಷ್ಟರಲ್ಲಿ ಮಾತ್ರ ಪರಾಯಣನಾದ

ಪದೂಮಿಯ. ವಿ: [ಪ್ರದಾವಿತ, ಪ್ರದೂನ] ಅತ್ಯಂತ ಪೀಡಿಸಲ್ಪಟ್ಟ, (ಬೃಹ)

ಪದೂಸ. ಸಕ: [ಪ್ರ +ದ್ವಿಷ್] ದ್ವೇಷಿಸು

ಪದೂಸಣಯಾ. ಸ್ತ್ರೀ: [ಪ್ರದ್ವೇಷಣಾ,ಪ್ರದೂಷಣಾ] ದ್ವೇಷ, ಮಾತ್ಸರ್ಯ

ಪದೆಕ್ಖ. ಸಕ: [ಪ್ರ +ದೃಶ್] ಚೆನ್ನಾಗಿ ನೋಡು(ಭವಿ)

ಪದೇಸ. ಪು: [ಪ್ರದ್ವೇಷ] ಅತಿಯಾದ ದ್ವೇಷ

ಪದೇಸಿಅ. ವಿ: [ಪ್ರದೇಶಿತ] ನಿರೂಪಿಸಲ್ಪಟ್ಟ, ತಿಳಿಸಲ್ಪಟ್ಟ (ಆಚಾ)

ಪದೋಸ.'ಪಓಸ=ದೇ.ಪ್ರದ್ವೇಷ' ಶಬ್ದವನ್ನು ನೋಡುವುದು.
ಪದೋಸ. 'ಪಓಸ=ದೇ. ಪ್ರದೋಷ' ಶಬ್ದವನ್ನು ನೋಡುವುದು.
ಪದ್ದ. ನ: [ದೇ] ಹಳ್ಳಿಯ ಪ್ರದೇಶ, ಸಣ್ಣ ಹಳ್ಳಿ(ಪಾಅ)
ಪದ್ದ. ನ: [ಪದ್ಯ] ಶ್ಲೋಕ, ವೃತ್ತ, ಕಾವ್ಯ
ಪದ್ದೇಸ. 'ಪದೇಸ=ಪ್ರದ್ವೇಷ' ಶಬ್ದವನ್ನು ನೋಡುವುದು.
ಪದ್ಧಇ. ಸ್ತ್ರೀ: [ಪದ್ಧತಿ] ಮಾರ್ಗ, ದಾರಿ(ಸುಪಾ), ಸಾಲು, ಪಂಕ್ತಿ(ಠಾ), ಪರಿಪಾಟಿ, ಕ್ರಮ, ಪ್ರಕ್ರಿಯೆ
ಪದ್ಧಂಸ. ಪು: [ಪ್ರಧ್ವಂಸ] ನಾಶ, **ಪದ್ಧಂಸಾಭಾವ.** ಪು: [ಪ್ರಧ್ವಂಸಾಭಾವ] ವಸ್ತು ನಾಶವಾಗಿ ಹೋದಮೇಲೆ ಉಂಟಾಗುವ ಅದರ ಅಭಾವ
ಪದ್ಧರ. ವಿ: [ದೇ] ಋಜು, ನೇರ, ಸರಳ(ದೇ)
ಪದ್ಧಲ. ವಿ: [ದೇ] ಎರಡೂ ಪಾರ್ಶ್ವಗಳಲ್ಲಿ ಪ್ರವೃತ್ತವಾಗದಿರುವುದು, ಜಡತೆ(ಷಡ್)
ಪದ್ಧಾರ. ವಿ: [ದೇ] ಬಾಲ ಕತ್ತರಿಸಲ್ಪಟ್ಟ
ಪಧಾಇಯ. 'ಪಧಾವಿಯ' ಶಬ್ದವನ್ನು ನೋಡುವುದು.
ಪಧಾಣ. 'ಪಹಾಣ' ಶಬ್ದವನ್ನು ನೋಡುವುದು.
ಪಧಾರ. 'ಪಹಾರ=ಪ್ರ+ಧಾರಯ್' ಶಬ್ದವನ್ನು ನೋಡುವುದು.
ಪಧಾವ. ಸಕ: [ಪ್ರ +ಧಾವ್] ಓಡು,
ಪಧಾವಣ. ನ: [ಪ್ರಧಾವನ] ಓಡುವುದು, ಓಟ, ಕಾರ್ಯ ಬೇಗನೆ ಸಿದ್ಧಿಸುವುದು, ತೊಳೆಯುವುದು, ಶುಭ್ರಮಾಡುವುದು
ಪಧಾವಿಅ. ವಿ: [ಪ್ರಧಾವಿತ] ಓಡಿದ, ಚಲನೆಯಿಲ್ಲದ
ಪಧಾವಿರ. ವಿ: [ಪ್ರಧಾವಿತೃ] ಓಡುವವನು
ಪಧೂವಣ. ನ: [ಪ್ರಧೂಪನ] ಧೂಪ ಕೊಡುವುದು, ಧೂಪ ಹಾಕುವುದು, ಒಂದು ಬಗೆಯ ಲೇಪನ ದ್ರವ್ಯ (ಕಸ)
ಪ್ರಧೂವಿಯ. ವಿ: [ಪ್ರಧೂಪಿತ] ಧೂಪ ಹಾಕಲಾದ, ಸುವಾಸನೆ ತುಂಬಿಸಲ್ಪಟ್ಟ
ಪಧೋಅ. ಸಕ: [ಪ್ರ +ಧಾವ್] ತೊಳೆ
ಪ್ರಧೋಅ. ವಿ: [ಪ್ರಧೌತ] ತೊಳೆಯಲ್ಪಟ್ಟ(ಔಪ)
ಪಧೋವ. ಸಕ: [ಪ್ರ +ಧಾವ್] ತೊಳೆ
ಪನ. 'ಪಂಚ' ಶಬ್ದವನ್ನು ನೋಡುವುದು. **–ರ, –ರಸ.** ತ್ರಿಬ: [–ದಶನ್] ಹದಿನೈದು
ಪನಯ. (ಪೈ. ಚೂಪೈ). 'ಪಣಯ=ಪ್ರಣಯ' ಶಬ್ದವನ್ನು ನೋಡುವುದು.

ಪನ್ನ. 'ಪ=ಪರ್ಣ' ಶಬ್ದವನ್ನು ನೋಡುವುದು(ಸುಪಾ)
ಪನ್ನ. 'ಪಣ್ಣ=ದೇ' ಶಬ್ದವನ್ನು ನೋಡುವುದು(ಭಗ)
ಪನ್ನ. 'ಪಣ್ಣ=ಪ್ರಜ್ಞ' ಶಬ್ದವನ್ನು ನೋಡುವುದು(ಆಚಾ)
ಪನ್ನ. ವಿ: [ಪ್ರಾಜ್ಞ] ಪಂಡಿತ, ವಿದ್ವಾಂಸ, ತಿಳಿದವನು. ವಿ: ಪ್ರಜ್ಞಕ್ಕೆ ಸಂಬಂಧಿಸಿದ(ಸೂಅ)
ಪನ್ನ. 'ಪಂಚ' ಶಬ್ದವನ್ನು ನೋಡುವುದು. **–ರ, –ರಸ.** ತ್ರಿಬ: [–ದಶನ್] ಹದಿನೈದು. **–ರಸ, –ರಸಮ.** ವಿ: [–ದಶಾ] ಹದಿನೈದನೆಯ(ಪಉಮ) **–ರಸೀ.** ಸ್ತ್ರೀ: [ದಶೀ]ಹದಿನೈದನೆಯ, ಹದಿನೈದನೆಯ ತಿಥಿ.
ಪನ್ನ. 'ಪಣಿಅ=ಪಣಯ' ಶಬ್ದವನ್ನು ನೋಡುವುದು.
ಪನ್ನಂಗಣಾ. ಸ್ತ್ರೀ: [ಪಣ್ಯಾಂಗನಾ] ವೇಶ್ಯೆ, ವಾರಾಂಗನೆ
ಪನ್ನಗ. 'ಪಣ್ಣಗ=ಪನ್ನಗ' ಶಬ್ದವನ್ನು ನೋಡುವುದು.
ಪನ್ನಟ್ಠಿ. 'ಪಣ್ಣಟ್ಠಿ' ಶಬ್ದವನ್ನು ನೋಡುವುದು.
ಪನ್ನತ್ತ. 'ಪಣ್ಣತ್ತ' ಶಬ್ದವನ್ನು ನೋಡುವುದು.
ಪನ್ನತ್ತರಿ. ಸ್ತ್ರೀ: [ಪಂಚಸಪ್ತತಿ] ಎಪ್ಪತ್ತೈದು
ಪನ್ನತ್ತಿ. 'ಪಣ್ಣತ್ತಿ' ಶಬ್ದವನ್ನು ನೋಡುವುದು. ಹೆಚ್ಚಿನ ಜ್ಞಾನ, ತಿಳಿವಳಿಕೆ, ನಿರೂಪಕ, ವಿವರಿಸಿ ಹೇಳುವವನು(ತಂದು), ಐದನೇ ಅಂಗ ಗ್ರಂಥವಾದ ಭಗವತೀ ಸೂತ್ರ(ಶ್ರಾವಕ)
ಪನ್ನತ್ತು. ವಿ: [ಪ್ರಜ್ಞಾಪಯಿತೃ] ಹೇಳುವವನು, ನಿರೂಪಕ, ಪ್ರತಿಪಾದಕ
ಪನ್ನಪತ್ತಿಯಾ. ಸ್ತ್ರೀ: [ಪ್ರಜ್ಞಪ್ರತ್ಯಯಾ] 'ಪುನ್ನಪತ್ತಿಯಾ' ಶಬ್ದವನ್ನು ನೋಡುವುದು.
ಪನ್ನಪನ್ನಇಮ. 'ಪಣಪನ್ನಇಮ' ಶಬ್ದವನ್ನು ನೋಡುವುದು.
ಪನ್ನಯ. 'ಪಣ್ಣಗ' ಶಬ್ದವನ್ನು ನೋಡುವುದು. **–ರಿಉ.** ಪು: [–ರಿಪು] ಗರುಡ.
ಪನ್ನಯಾ. ಸ್ತ್ರೀ: [ಪನ್ನಗಾ] ಭಗವಾನ್ ಧರ್ಮನಾಥನ ಶಾಸನದೇವಿ
ಪನ್ನವ. 'ಪಣ್ಣವ' ಶಬ್ದವನ್ನು ನೋಡುವುದು.
ಪನ್ನವಗ. ವಿ: [ಪ್ರಜ್ಞಾಪಕ] ಹೇಳುವವನು, ನಿರೂಪಕ, ಪ್ರತಿಪಾದಕ(ಕಮ್ಮ)
ಪನ್ನವಣ. 'ಪಣ್ಣವಣ' ಶಬ್ದವನ್ನು ನೋಡುವುದು.
ಪನ್ನವಣಾ. 'ಪಣ್ಣವಣಾ' ಶಬ್ದವನ್ನು ನೋಡುವುದು.
ಪನ್ನವಯ. 'ಪಣ್ಣವಗ' ಶಬ್ದವನ್ನು ನೋಡುವುದು.
ಪನ್ನಾ. ಪಣ್ಣ=ಪ್ರಜ್ಞಾ ಶಬ್ದವನ್ನು ನೋಡುವುದು.
ಪನ್ನಾ. 'ಪಣ್ಣಾ=ದೇ' ಶಬ್ದವನ್ನು ನೋಡುವುದು.

ಪನ್ನಾಡ. **ಸಕ:** [ಮೃದ್] ಪುಡಿಮಾಡು, ಉಜ್ಜು, ತಿಕ್ಕು, ನಾಶಪಡಿಸು
ಪನ್ನಾಡಿಅ. ವಿ: [ಮೃದಿತ] ಪುಡಿಮಾಡಲ್ಪಟ್ಟ, ಉಜ್ಜಲ್ಪಟ್ಟ
ಪನ್ನಾಣ. **'ಪಣ್ಣಾಣ' ಶಬ್ದವನ್ನು ನೋಡುವುದು.**
ಪನ್ನಾರಸ.(ಅಪ). **ತ್ರಿ.ಬ:** [ಪಂಚದಶನ್] ಹದಿನೈದು
ಪನ್ನಾಸ. **'ಪಣ್ಣಾಸ' ಶಬ್ದವನ್ನು ನೋಡುವುದು. ಸ್ತ್ರೀ:** –ಸಾ. –ಇಮ. ವಿ: [–ತಮ] ಐವತ್ತನೆಯ
ಪನ್ಹ. **'ಪಣ್ಹ' ಶಬ್ದವನ್ನು ನೋಡುವುದು.**
ಪನ್ಹು(ಅಪ). **'ಪಣ್ಹಅ=ದೇ. ಪ್ರಸ್ನವ' ಶಬ್ದವನ್ನು ನೋಡುವುದು.**
ಪಪಂಚ. **'ಪವಂಚ' ಶಬ್ದವನ್ನು ನೋಡುವುದು.**
ಪಪಲೀಣ. ವಿ: [ಪ್ರಪಲಾಯಿತ] ಓಡಿಹೋದ, ಪಲಾಯನ ಮಾಡಿದ(ಪಿ)
ಪಪಿಆಮಹ. **ಪು:** [ಪ್ರಪಿತಾಮಹ] ಬ್ರಹ್ಮ, ವಿಧಾತ, ತಾತನ ತಂದೆ(=ಮುತ್ತಾತ)(ಧರ್ಮಸಂ)
ಪಪುತ್ತ. **ಪು:** [ಪ್ರಪುತ್ರ] ಪೌತ್ರ, ಮಗನ ಮಗ, ಮೊಮ್ಮಗ
ಪಪುತ್ತ}. **ಪು:** [ಪ್ರಪೌತ್ರ] ಮೊಮ್ಮಗನ ಮಗ
ಪಪೊತ್ತ}. (=ಮರಿಮಗ)
ಪಪ್ಪ. **ಸಕ:** [ಪ್ರ +ಆಪ್] ಪಡೆದುಕೊಳ್ಳುವುದು,
ಪಪ್ಪಗ. **ನ:** [ದೇ. ಪರ್ಪಕ] ಒಂದು ವನಸ್ಪತಿ –ವಿಶೇಷ(ಸೂಅ)
ಪಪ್ಪಡ}. **ಪುಂಸ್ತ್ರೀ:** [ಪರ್ಪಟ] ಹಪ್ಪಳ, ಹಪ್ಪಳದ
ಪಪ್ಪಡಗ}. ಆಕೃತಿಯ ಒಣಗಿದ ಮಣ್ಣಿನ ತುಣುಕು (ನಿಚೂ). **–ಪಾಯಯ. ಪು:**[–ಪಾಚಕ] ಒಂದು ನರಕಾವಾಸ. **–ಮೋದಯ. ಪು:** [–ಮೋದಕ] ಒಂದು ಬಗೆಯ ಸಿಹಿ ಪದಾರ್ಥ(ಪಣ್ಣ)
ಪಪ್ಪಡಿಯಾ. **ಸ್ತ್ರೀ:** [ಪರ್ಪಟಿಕಾ] ಎಳ್ಳು ಇತ್ಯಾದಿಗಳಿಂದ ತಯಾರಿಸಲ್ಪಟ್ಟ ಒಂದು ಬಗೆಯ ಖಾದ್ಯ ಪಧಾರ್ಥ
ಪಪ್ಪಲ. **'ಪಪ್ಪಡ' ಶಬ್ದವನ್ನು ನೋಡುವುದು.**
ಪಪ್ಪೀಅ. **ಪು:** [ದೇ] ಚಾತಕ ಪಕ್ಷಿ(ದೇ)
ಪಪ್ಪುಅ. ವಿ: [ಪ್ರಪ್ಲುತ] ನೀರಿನಿಂದ ತೊಯ್ದಿರುವ (ಣಾಯಾ), ವ್ಯಾಪ್ತ, ಹರಡಿರುವ, ನ: ಹಾರುವುದು, ದಾಟುವುದು (ಗಲುಡ)
ಪಪ್ಫುಸಿಯ. **ನ:** [ಪ್ರಸ್ಪೃಷ್ಟ] ಚೆನ್ನಾಗಿ ಸ್ಪರ್ಶಿಸಲ್ಪಟ್ಟದ್ದು
ಪಪ್ಪೊಇ}. **'ಪಪ್ಪ' ಶಬ್ದವನ್ನು ನೋಡುವುದು.**
ಪಪ್ಪೊತ್ತಿ}.
ಪಪ್ಫಂದಣ. **ನ:** [ಪ್ರಸ್ಪಂದನ] ಅದುರುವುದು, ಕಂಪಿಸುವುದು, ಅಲ್ಲಾಡುವುದು
ಪಪ್ಫಾಡ. **ಪು:** [ದೇ] ಅಗ್ನಿವಿಶೇಷ
ಪಪ್ಫಿಡಿಅ. ವಿ: [ದೇ] ಪ್ರತಿಫಲಿಸಲ್ಪಟ್ಟ, ಪ್ರತಿಬಿಂಬಿಸಲ್ಪಟ
ಪಪ್ಫುಅ. ವಿ: [ದೇ] ದೀರ್ಘವಾದ, ಉದ್ದವಾದ, ಹಾರಾಡುತ್ತಿರುವ
ಪಪ್ಫುಟ್ಟ. **ಅಕ:** [ಪ್ರ +ಸ್ಫುಟ್] ಅರಳು, ವಿಕಸಿತವಾಗು, ಒಡೆ
ಪಪ್ಫುಡಿಅ. **ಪು:** [ಪ್ರಸ್ಫುಟಿತ] ನರಕಾವಾಸ –ವಿಶೇಷ
ಪಪ್ಫುಯ. **'ಪಪ್ಪುಅ' ಶಬ್ದವನ್ನು ನೋಡುವುದು.**
ಪಪ್ಫುರ **ಅಕ:** [ಪ್ರ +ಸ್ಫುರ್] ಅದುರು, ಅಲುಗಾಡು, ನಡುಗು. **–'ಪಪ್ಫುರಇ'**
ಪಪ್ಫುರಿಅ. ವಿ: [ಪ್ರಸ್ಫುರಿತ] ಅದುರಿದ, ಚಲಿಸಿದ, ಅಲುಗಾಡಿದ, ನಡುಗಿದ
ಪಪ್ಫುಲ್ಲ. **ಅಕ:** [ಪ್ರ +ಫುಲ್ಲ್] ಅರಳು, ವಿಕಸಿಸು
ಪಪ್ಫುಲ್ಲ. ವಿ: [ಪ್ರಫುಲ್ಲ] ಅರಳಿದ, ವಿಕಾಸಹೊಂದಿದ (ಣಾಯಾ, ಪಉಮ)
ಪಪ್ಫುಲ್ಲಿಅ. ವಿ: [ಪ್ರಫುಲ್ಲಿತ] ಚೆನ್ನಾಗಿ ಅರಳಿದ, ವಿಕಸಿತವಾದ
ಪಪ್ಫುಲ್ಲಿಆ. **ಸ್ತ್ರೀ:** [ಪ್ರಫುಲ್ಲಿಕಾ] **'ಉಪ್ಫುಲ್ಲಿಆ' ಶಬ್ದವನ್ನು ನೋಡುವುದು.**
ಪಪ್ಫೋಡ. **'ಪಪ್ಫುಟ್ಟ' ಶಬ್ದವನ್ನು ನೋಡುವುದು.**
ಪಪ್ಫೋಡ. **ಸಕ:** [ಪ್ರ +ಸ್ಫೋಟಯ್] ಕೊಡವುವುದು, ಕೊಡವಿ ಬೀಳಿಸು, ಹೊಡೆ, ತಟ್ಟು, ಎಸೆ, ಬಿರಿ
ಪಪ್ಫೋಡಣ. **ನ:** [ಪ್ರಸ್ಫೋಟನ] ಕೊಡವುವುದು, ಬಹಳವಾಗಿ ನಡುಗಿಸುವುದು(ಓಘ), ಸಿಡಿಯುವುದು, ಒಡೆಯವುದು(ಪಣ್ಹ)
ಪಪ್ಫೋಡಣಾ. **ಸ್ತ್ರೀ:** [ಪ್ರಸ್ಫೋಟನಾ] ಮೇಲಿನ **ಶಬ್ದವನ್ನು ನೋಡುವುದು.**
ಪಪ್ಫೋಡಿಅ. ವಿ: [ದೇ. ಪ್ರಸ್ಫೋಟಿತ] ಕೊಡವಿ ಬೀಳಿಸಲ್ಪಟ್ಟ, ಒಡೆಯಲ್ಪಟ್ಟ, ಮುರಿಯಲಾದ,
ಪಪ್ಫೋಡೇಮಾಣ. **'ಪಪ್ಫೋಡ=ಪ್ರ +ಸ್ಫೋಟಯ್' ಶಬ್ದವನ್ನು ನೋಡುವುದು.**
ಪಫುಲ್ಲ. **'ಪಪ್ಫುಲ್ಲ' ಶಬ್ದವನ್ನು ನೋಡುವುದು.**
ಪಫುಲ್ಲಿಅ. **'ಪಪ್ಫುಲ್ಲಿಅ' ಶಬ್ದವನ್ನು ನೋಡುವುದು.**
ಪಬಂಧ. **ಸಕ:** [ಪ್ರ +ಬಂಧ್] ಪ್ರಬಂಧ ರೂಪದಲ್ಲಿ ಹೇಳು, ವಿಸ್ತಾರವಾಗಿ ನಿರೂಪಿಸು

ಪಬಂಧ. ಪು: [ಪ್ರಬಂಧ] ಸಂದರ್ಭ, ಗ್ರಂಥ, ಕಾವ್ಯಾದಿ ರಚನೆ, ಪರಸ್ಪರ ಸಂಬಂಧವುಳ್ಳ ವಾಕ್ಯಗಳ ಸಮೂಹ, ನಿರಂತರತೆ, ಸಾತತ್ಯ

ಪಬಂಧಣ. ನ: [ಪ್ರಬಂಧನ] ಪ್ರಬಂಧ, ಸಂದರ್ಭ, ಪರಸ್ಪರ ಸಂಬಂಧವುಳ್ಳ ವಾಕ್ಯಗಳ ಸಮೂಹ,

ಪಬಲ. ವಿ: [ಪ್ರಬಲ] ಹೆಚ್ಚು ಬಲಶಾಲಿಯಾದ, ಪ್ರಚಂಡ, ಅಧಿಕವಾದ, ಹೆಚ್ಚಾದ, ಪ್ರಖರ(ಕುಮಾ)

ಪಬಾಹಾ. ಸ್ತ್ರೀ: [ಪ್ರಬಾಧಾ] ಹೆಚ್ಚು ತೊಂದರೆ ಪಡಿಸುವುದು, ಹೆಚ್ಚು ಪೀಡನೆ(ಣಾಯಾ)

ಪಬುದ್ಧ. ವಿ: [ಪ್ರಬುದ್ಧ] ಪ್ರವೀಣ, ಬುದ್ಧಿವಂತ, ನಿಪುಣ, ಎಚ್ಚರಗೊಂಡ, ಒಳ್ಳೆಯ ತಿಳಿವಳಿಕೆ ಉಳ್ಳವನು

ಪಬೋಧ. ಸಕ: [ಪ್ರಬೋಧಯ್] ಎಚ್ಚರಗೊಳಿಸು, ಬೋಧಿಸು, ತಿಳಿಸು

ಪಬೋಧಣ. ನ: [ಪ್ರಬೋಧನ] ಚೆನ್ನಾಗಿ ಬೋಧಿಸುವುದು, ಚೆನ್ನಾಗಿ ತಿಳಿಸುವುದು

ಪಬೋಹ. 'ಪಬೋಧ' ಶಬ್ದವನ್ನು ನೋಡುವುದು.

ಪಬೋಹ. ಪು: [ಪ್ರಬೋಧ] ಎಚ್ಚರಿಕೆ, ನಿದ್ರೆಯಿಂದ ಎಚ್ಚರಗೊಳ್ಳುವುದು, ಜ್ಞಾನ, ತಿಳಿವಳಿಕೆ(ಚಾರು)

ಪಬೋಹಣ. 'ಪಬೋಧಣ' – ಶಬ್ದವನ್ನು ನೋಡುವುದು.

ಪಬೋಹಯ. ವಿ: [ಪ್ರಬೋಧಕ] ನಿದ್ರೆಯಿಂದ ಎಚ್ಚರಗೊಳಿಸುವವನು, ಬೋಧಿಸುವವನು

ಪಬೋಹಿಅ. ವಿ: [ಪ್ರಬೋಧಿತ] ಎಚ್ಚರಗೊಳಿಸಲ್ಪಟ್ಟ, ಬೋಧಿಸಲ್ಪಟ್ಟ(ಸುಪಾ)

ಪಬ್ಬಲ. 'ಪಬಲ' ಶಬ್ದವನ್ನು ನೋಡುವುದು.

ಪಬ್ಬಾಲ. 'ಪವ್ವಾಲ=ಛಾದಯ್' ಶಬ್ದವನ್ನು ನೋಡುವುದು.

ಪಬ್ಬಾಲ. 'ಪವ್ವಾಲ=ಪ್ಲಾವಯ್' ಶಬ್ದವನ್ನು ನೋಡುವುದು.

ಪಬ್ಬುದ್ಧ. 'ಪಬುದ್ಧ' ಶಬ್ದವನ್ನು ನೋಡುವುದು.

ಪಬ್ಭ.ವಿ:[ಪ್ರಹ್ವ] ನಮ್ರ, ವಿಧೇಯತೆಯಿಂದಿರುವ(ಔಪ)

ಪಬ್ಭಟ್ಠ}. ವಿ: [ಪ್ರಭ್ರಷ್ಟ] ಎಡವಿ ಬಿದ್ದ, ಮುಗ್ಗರಿಸಿ

ಪಬ್ಭಸಿಅ}. ಬಿದ್ದ(ಅಭಿ), ಮರೆಯಲ್ಪಟ್ಟ, ಪು: ನರಕಾವಾಸ –ವಿಶೇಷ

ಪಬ್ಭಾರ. ಪು: [ದೇ. ಪ್ರಾಗ್ಭಾರ] ಸಮೂಹ, ಗುಂಪು

ಪಬ್ಭಾರ. ಪು: [ದೇ] ಬೆಟ್ಟದ ಗುಹೆ, ಪರ್ವತದ ಕಂದರ

ಪಬ್ಭಾರ. ಪು: [ಪ್ರಾಗ್ಭಾರ] ಅತಿಹೆಚ್ಚಿನ ಭಾರ, ಮೇಲುಭಾಗ(ಸೇ), ಸ್ವಲ್ಪ ಬಾಗಿರುವ ಪರ್ವತದ ಭಾಗ, ಒಂದು ಭಾಗ, ಉತ್ಕರ್ಷ(ಗಉಡ), ಪುಂನ: ಪರ್ವತದ ಮೇಲಿನ ಭಾಗ. ಕಿಂಚಿತ್ ಬಾಗಿರುವ

ಪಬ್ಭಾರಾ. ಸ್ತ್ರೀ: [ಪ್ರಾಗ್ಭಾರಾ] ಪುರುಷನ ಎಪ್ಪತ್ತರಿಂದ ಎಂಬತ್ತನೇ ವಯಸ್ಸಿನ ವರೆಗಿನ ಹಂತ(ಠಾ)

ಪಬ್ಭೂಅ. ವಿ: [ಪ್ರಭೂತ] ಉತ್ಪನ್ನವಾದ, ಹುಟ್ಟಿರುವ

ಪಬ್ಭೋಅ. ಪು: [ಪ್ರಭೋಗ] ಭೋಗ, ವಿಲಾಸ

ಪಭ. ಪು: [ಪ್ರಭ] ಹರಿಕಾಂತನೆಂಬ ಇಂದ್ರನ ಒಬ್ಬ ಲೋಕಪಾಲ(ಠಾ). ದ್ವೀಪ –ವಿಶೇಷ ಮತ್ತು ಸಮುದ್ರ –ವಿಶೇಷದ ಅಧಿಪತಿ ದೇವ(ರಾಜ)

–ಪಭ. ವಿ: [ಪ್ರಭ] ಸದೃಶ, ಹೋಲುವ, ಸಮಾನ

–ಪಭಇ. 'ಪಭಿಇ' ಶಬ್ದವನ್ನು ನೋಡುವುದು.

ಪಭಂಕರ. ವಿ: [ಪ್ರಭಂಕರ] ಗ್ರಹ –ವಿಶೇಷ, ಜ್ಯೋತಿಷ –ದೇವ –ವಿಶೇಷ(ಠಾ), ಪುಂನ: ದೇವ –ವಿಮಾನ –ವಿಶೇಷ

ಪಭಂಕರ. ವಿ: [ಪ್ರಭಾಕರ] ಪ್ರಕಾಶಕ, ಬೆಳಕನ್ನು ಉಂಟುಮಾಡುವ(ಉತ್ತ), ಸೂರ್ಯ

ಪಭಂಕರಾ. ಸ್ತ್ರೀ: [ಪ್ರಭಂಕರಾ] ವಿದೇಹ –ವರ್ಷದ ಒಂದು ನಗರಿಯ ಹೆಸರು(ಠಾ), ಚಂದ್ರನ ಹಿರಿಯ ಹೆಂಡತಿಯ ಹೆಸರು, ಸೂರ್ಯನ ಹಿರಿಯ ಹೆಂಡತಿಯ ಹೆಸರು.

ಪಭಂಕರಾವಈ. ಸ್ತ್ರೀ: [ಪ್ರಭಂಕರಾವತೀ] ವಿದೇಹ –ವರ್ಷದ ಒಂದು ನಗರಿ(ಆಚಾ)

ಪಭಂಗುರ. ವಿ: [ಪ್ರಭಂಕರ] ಅತಿ ನಶ್ವರ, ನಾಶವಾಗಿ ಹೋಗುವಂಥ(ಆಚಾ)

ಪಭಂಜಣ. ಪು: [ಪ್ರಭಂಜನ] ವಾಯು –ಕುಮಾರ –ನಿಕಾಯದ ಉತ್ತರ ದಿಕ್ಕಿನ ಇಂದ್ರ, ಲವಣ –ಸಮುದ್ರದದ ಒಂದು ಪಾತಾಳ ಕಲಶದ ಅಧಿಷ್ಠಾತೃ ದೇವ(ಠಾ), ಗಾಳಿ, ಪವನ, ಮಾನುಷೋತ್ತರ ಪರ್ವತದ ಒಂದು ಶಿಖರದ ಅಧಿಪತಿ ದೇವ. **–ತಣಅ.** ಪು: [–ತನಯ] ಹನುಮಂತ

ಪಭಂಸಣ. ನ: [ಪ್ರಭ್ರಂಶನ] ಜಾರುವುದು, ಎಡವುವುದು, ಮುಗ್ಗರಿಸುವುದು

ಪಭಕಂತ. ಪು: [ಪ್ರಭಕಾಂತ] ವಿದ್ಯುತ್ ಕುಮಾರ ದೇವತೆಗಳಾದ ಹರಿಕಾಂತ ಮತ್ತು ಹರಿಸ್ಸಹ ಎಂಬ ಇಬ್ಬರೂ ಇಂದ್ರರ ಲೋಕಪಾಲರ ಹೆಸರು(ಠಾ)

ಪಭಣ. ಸಕ: [ಪ್ರ +**ಭಣ್**] ಹೇಳು, ಮಾತಾಡು – **'ಪಭಣಇ'**
ಪಭಣಿಯ. ವಿ: [ಪ್ರಭಣಿತ] ಹೇಳಲ್ಪಟ್ಟ
ಪಭಮ. ಅಕ: [ಪ್ರ +**ಭ್ರಮ್**] ಸಂಚರಿಸು, ತಿರುಗಾಡು
ಪಭವ. ಅಕ: [ಪ್ರ +**ಭೂ**] ಸಮರ್ಥನಾಗು, ಶಕ್ತನಾಗು, ಆಗು, ಜನಿಸು. –**'ಪಭವಇ.'**
ಪಭವ. ಪು: [ಪ್ರಭವ] ಉತ್ಪತ್ತಿ, ಹುಟ್ಟು, ಉತ್ಪತ್ತಿಗೆ ಹೇತು, ಜನನಕ್ಕೆ ಕಾರಣ, ಜಂಬು ಸ್ವಾಮಿಯ ಶಿಷ್ಯನಾದ ಒಬ್ಬ ಜೈನ ಮುನಿ(ಕಪ್ಪ)
ಪಭವಾ. ಸ್ತ್ರೀ: [ಪ್ರಭವಾ] ಮೂರನೇ ವಾಸುದೇವನ ಪಟ್ಟದ ರಾಣಿ(ಪಉಮ)
ಪಭಾ. ಸ್ತ್ರೀ: [ಪ್ರಭಾ] ಕಾಂತಿ, ತೇಜಸ್ಸು, ಪ್ರಕಾಶ, ಪ್ರಭಾವ
ಪಭಾಇಅ.} **ಪುಂನ:** [ಪ್ರಭಾತ] **ಪಭಾವ.** ಬೆಳಿಗ್ಗೆ,
ಪಭಾಯ}. ಪ್ರಾತಃಕಾಲ(ಪಉಮ), **ವಿ:** ಪ್ರಕಾಶಗೊಳಿಸಲ್ಪಟ್ಟ, **–ತಣಯ. ವಿ:** [–**ಸಂಬಂಧಿನ್**] ಪ್ರಾತಃಕಾಲಕ್ಕೆ ಸಂಬಂಧಿಸಿದ
ಪಭಾರ. ಪು: [ಪ್ರಭಾರ] ಹೆಚ್ಚಿನ ಭಾರ, ಹೆಚ್ಚಿನ ಭಾರ
ಪಭಾವ. 'ಪಹಾವ=ಪ್ರ +ಭಾವಯ್' ಶಬ್ದವನ್ನು ನೋಡುವುದು.
ಪಭಾವಈ. ಸ್ತ್ರೀ: [ಪ್ರಭಾವತೀ] ಹತ್ತೊಂಬತ್ತನೇ ತೀರ್ಥಂಕರನ ತಾಯಿಯ ಹೆಸರು. ರಾವಣನ ಒಬ್ಬ ಹೆಂಡತಿಯ ಹೆಸರು(ಪಉಮ). ಉದಯನ ರಾಜರ್ಷಿಯ ಪಟ್ಟದ ರಾಣಿ ಮತ್ತು ಚೇಡಾ ರಾಜನ ಮಗಳ ಹೆಸರು. ಬಲದೇವನ ಮಗ ನಿಷಧನ ಹೆಂಡತಿ(ಆಚೂ), ರಾಜ ಬಲನ ಹೆಂಡತಿ (ಭಗ)
ಪಭಾವಗ. ವಿ: [ಪ್ರಭಾವಕ] ಪ್ರಭಾವವನ್ನು ಹೆಚ್ಚಿಸುವ, ಶೋಭೆಯನ್ನು ಹೆಚ್ಚಿಸುವ, ಉನ್ನತಿಗೆ ಕಾರಣವಾದ, ಗೌರವವನ್ನು ಹುಟ್ಟಿಸುವ(ಕುಪ್ರ)
ಪಭಾವಣ. ನ: [ಪ್ರಭಾವನ] ಮುಂದಿನ ಶಬ್ದವನ್ನು ನೋಡುವುದು
ಪಭಾವಣಾ. ನ: [ಪ್ರಭಾವನಾ] ಮಾಹಾತ್ಮ್ಯ, ಗೌರವ, ಪ್ರಸಿದ್ಧಿ
ಪಭಾವಯ. ವಿ: [ಪ್ರಭಾವಕ] ಗೌರವವನ್ನು ಹೆಚ್ಚಿಸುವ
ಪಭಾವಾಲ. ಪು: [ಪ್ರಭಾವಾಲ] ಒಂದು ಬಗೆಯ ವೃಕ್ಷ.
ಪಭಾವಿಂತ. 'ಪಭಾವ=ಪ್ರ +ಭಾವಯ್' ಶಬ್ದವನ್ನು ನೋಡುವುದು.
ಪಭಾಸ. ಸಕ: [ಪ್ರ +**ಭಾಷ್**] ಚೆನ್ನಾಗಿ ಮಾತಾಡು, **ವ. ಕೃ: ಪಭಾಸಮಾಣ**(ಪಉಮ)
ಪಭಾಸ. ಅಕ: [ಪ್ರ +**ಭಾಸ್**] ಬೆಳಗು, ಹೊಳೆ
ಪಭಾಸ. ಸಕ: [ಪ್ರ +**ಭಾಸ್**] ಪ್ರಕಾಶಪಡಿಸು, ಬೆಳಗುವಂತೆ ಮಾಡು. –**'ಪಭಾಸಂತಿ'**
ಪಭಾಸ. ಪು: [ಪ್ರಭಾಸ] ಭಗವಾನ್ ಮಹಾವೀರರ ಒಬ್ಬ ಗಣಧರನ ಹೆಸರು ಒಂದು ವಿಕಟಾಪಾತಿ (ಭಯಂಕರ)ಪರ್ವತದ ಅಧಿಷ್ಠಾತೃ ದೇವ. ಒಬ್ಬ ಜೈನಮುನಿಯ ಹೆಸರು. ಒಬ್ಬ ಚಿತ್ರಕಾರನ ಹೆಸರು. **ನ:** ತೀರ್ಥ –ವಿಶೇಷ. **–ತಿತ್ಥ. ನ:** [**–ತೀರ್ಥ**] ಭರತವರ್ಷದ ಪಶ್ಚಿಮ ದಿಕ್ಕಿನಲ್ಲಿರುವ ಒಂದು ತೀರ್ಥ
ಪಭಾಸಾ. ಸ್ತ್ರೀ: [ಪ್ರಭಾಸಾ] ಅಹಿಂಸೆ, ದಯೆ(ಪಣ್ಹ)
ಪಭಾಸಿಯ. ವಿ: [ಪ್ರಭಾಷಿತ] **'ಪಭಾಸ=ಪ್ರ +ಭಾಸಯ್' ಶಬ್ದವನ್ನು ನೋಡುವುದು**
ಪಭಿಇ. 'ಪಭಿಇಂ' ಶಬ್ದವನ್ನು ನೋಡುವುದು.
.**–ಪಭಿಇ. ವಿ. ವ:** [ಪ್ರಭೃತಿ] ಇತ್ಯಾದಿ, ಇವರೇ ಮೊದಲಾದ(ಭಗ)
ಪಭಿಇಂ.} **ಅ:** [ಪ್ರಭೃತಿ] ಪ್ರಾರಂಭ ಮಾಡಿ, ತೊಡಗಿ,
ಪಭಿಈ}. ಅದು ಮೊದಲುಗೊಂಡು
ಪಭೀಇ}.
ಪಭೀಇಂ}.
ಪಭೀಯ. ವಿ: [ಪ್ರಭೀತ] ತುಂಬ ಭಯಗೊಂಡ, ಬಹಳ ಹೆದರಿದ(ಉತ್ತ)
ಪಭು. ಪು: [ಪ್ರಭು] ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು, ಯಜಮಾನ(ಪಉಮ), ರಾಜ, **ವಿ:** ಸಮರ್ಥ, ಶಕ್ತ, ಯೋಗ್ಯ, ಅರ್ಹ(ನಿಚೂ)
ಪಭುಂಜ. ಸಕ: [ಪ್ರ +**ಭುಜ್**] ಭೋಗಿಸು, ಅನುಭವಿಸು
ಪಭುತಿ.(ಪೈ). 'ಪಭಿಇಂ' ಶಬ್ದವನ್ನು ನೋಡುವುದು
ಪಭುತ್ತ. ವಿ: [ಪ್ರಭುಕ್ತ] ಉಣ್ಣಲು ಆರಂಭಿಸಿದವನು, ಊಟಮಾಡಿದವನು
ಪಭೂಇ}. **'ಪಭಿಇಂ' ಶಬ್ದವನ್ನು ನೋಡುವುದು**
ಪಭೂಇಂ}.
ಪಭೂಯ. ವಿ: [ಪ್ರಭೂತ] ಬಹಳ. ಹೇರಳ, ಪ್ರಚುರ (ಭಗ)
ಪಭೋಯ. (ಅಪ). **'ಉವಭೋಗ' ಶಬ್ದವನ್ನು ನೋಡುವುದು**

ಪಮಇಲ. ವಿ: [ಪ್ರಮಿಲನ] ಅತಿಯಾದ ಮಿಲನ, ಹೆಚ್ಚಾಗಿ ಬೆರೆಯುವುದು(ಣಾಯಾ)

ಪಮಕ್ಖಣ. ನ: [ಪ್ರಮ್ರಕ್ಷಣ] ಅಭ್ಯಂಜನ, ತೈಲ ವೊದಲಾದುವನ್ನು ಮೈಗೆ ಬಳಿಯುವುದು, ವಿವಾಹ ಸಮಯದಲ್ಲಿ ಮಾಡಲಾಗುವ ಒಂದು ಬಗೆಯ ಅಂಗಲೇಪ(ಸಮ)

ಪಮಕ್ಖಿಅ. ವಿ: [ಪ್ರಮ್ರಕ್ಷಿತ] ಲೇಪಿಸಲ್ಪಟ್ಟ, ವಿವಾಹ ಸಮಯದಲ್ಲಿ ಅಂಗಲೇಪ ಮಾಡಲ್ಪಟ್ಟವನು

ಪಮಜ್ಜ. ಸಕ: [ಪ್ರ +ಮೃಜ್, ಮಾರ್ಜ್] ತೊಳೆ, ಸ್ವಚ್ಛಗೊಳಿಸು, ಪೊರಕೆಯಿಂದ ದೂಳು, ದುಮ್ಮು ಹೋಗಲಾಡಿಸು

ಪಮಜ್ಜಣ. ನ: [ಪ್ರವರ್ಮಾಜನ] ಚೆನ್ನಾಗಿ ತೊಳೆಯುವುದು, ಶುದ್ಧಮಾಡುವುದು, ನೆಲವನ್ನು ಸ್ವಚ್ಛಗೊಳಿಸುವುದು

ಪಮಜ್ಜಣಿಯಾ}. ಸ್ತ್ರೀ: [ಪ್ರಮಾರ್ಜನೀ] ಪೊರಕೆ,
ಪಮಜ್ಜಣೀ}. ನೆಲವನ್ನು ಗುಡಿಸುವಸಾಧನ(ಣಾಯಾ)
ಪಮಜ್ಜಯ}.

ಪಮಜ್ಜಯ. ವಿ: [ಪ್ರಮಾರ್ಜಕ] ತೊಳೆಯುವವನು, ಶುದ್ಧಮಾಡುವವನು

ಪಮಜ್ಜಿಯ. ವಿ: [ಪ್ರಸೃಷ್ಟ, ಪ್ರಮಾರ್ಜಿತ] ಶುದ್ಧ ಮಾಡಲ್ಪಟ್ಟ, ತೊಳೆಯಲ್ಪಟ್ಟ(ಉವಾ)

ಪಮತ್ತ. ವಿ: [ಪ್ರಮತ್ತ] ಪ್ರಮಾದದಿಂದ ಕೂಡಿದ, ಎಚ್ಚರತಪ್ಪಿದ, ವಿವೇಕರಹಿತ, ನ: ಆರನೇ ಗುಣ –ಸ್ಥಾನಕ, ಪ್ರಮಾದ. **–ಜೋಗ. ಪು: [–ಯೋಗ]** ಪ್ರಮಾದದಿಂದ ಕೂಡಿದ, ಪ್ರಯತ್ನ. **–ಸಂಜಯ. ಪು: [–ಸಂಯತ]** ಪ್ರಮಾದದಿಂದ ಕೂಡಿದ ಸಾಧು, ಮುನಿ(ಭಗ)

ಪಮದ. – **'ಪಮಯ' ಶಬ್ದವನ್ನು ನೋಡುವುದು**

ಪಮದಾ. **'ಪಮಯಾ' ಶಬ್ದವನ್ನು ನೋಡುವುದು**

ಪಮದ್ದ. ಸಕ: [ಪ್ರ +ಮೃದ್] ಮರ್ದಿಸು, ನಾಶಪಡಿಸು, ಪುಡಿಮಾಡು(ವುದೂ), ಒತ್ತು, ಹಿಸುಕು, ಹತ್ತಿಯನ್ನು ಹಿಂಜು

ಪಮದ್ದ. ಪು: [ಪ್ರಮರ್ದ] ಜ್ಯೋತಿಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಯೋಗ, ಸಂಮರ್ದನ, ಮರ್ದನ ಮಾಡುವವನು, ವಿನಾಶಕ,

ಪಮದ್ದಯ. ವಿ: [ಪ್ರಮರ್ದಕ] ಮರ್ದಿಸುವವನು, ಪುಡಿಮಾಡುವವನು, ನಾಶಪಡಿಸುವವನು

ಪಮಹಣ. ನ: [ಪ್ರಮರ್ದನ] ಪುಡಿ ಮಾಡುವುದು, ನಾಶಮಾಡುವುದು, ಕುಗ್ಗಿಸುವುದು, ಹತ್ತಿಯನ್ನು ಹಿಂಜುವುದು(ಪೂಣೀ)? **ನಾಶಗೊಳಿಸುವವನು**

ಪಮದ್ದಿ. ವಿ: [ಪ್ರಮರ್ದಿನ್] ಪ್ರಮರ್ದನ ಮಾಡಿದ (ಔಪ)

ಪಮಯ. ಪು: [ಪ್ರಮದ] ಆನಂದ, ಸಂತಸ, ನ: ಧತ್ತೂರಿ ಗಿಡ, ಅದರ ಕಾಯಿ. **–ಚ್ಛೀ. –ಸ್ತ್ರೀ: [–ಪ್ರಮದಾಕ್ಷೀ]** ಮಹಿಳೆ, **–ವಣ. ನ: [–ವನ]** ರಾಜನ ಅಂತಃಪುರದಲ್ಲಿರುವ ವನ(ಣಾಯಾ)

ಪಮಯಾ. ಸ್ತ್ರೀ: [ಪ್ರಮದಾ] ಉತ್ತಮ ಸ್ತ್ರೀ, ಶ್ರೇಷ್ಠ ಗುಣವುಳ್ಳ ಹೆಂಗಸು(ಬೃಹ)

ಪಮಹ. ಪು: [ಪ್ರಮಥ] ಶಿವನ ಸೇವಕ, **–ಣಾಹ. ಪು: [–ನಾಥ]** ಮಹಾದೇವ, ಶಿವ. **ಪಮಹಾಹಿವ. ಪು: [ಪ್ರಮಥಾಧಿಪ]** ಶಿವ, ಪರಮೇಶ್ವರ

ಪಮಾ. ಸಕ: [ಪ್ರ +ಮಾ] ಯಥಾರ್ಥ ಜ್ಞಾನ ಉಂಟುಮಾಡು

ಪಮಾ. ಸ್ತ್ರೀ: [ಪ್ರಮಾ] ಪ್ರಮಾಣ, ಅಳತೆ, ನ್ಯಾಯ,

ಪಮಾ–. **'ಪಮಾಯ=ಪ್ರಮಾದ' ಶಬ್ದವನ್ನು ನೋಡುವುದು**

ಪಮಾಇ. ವಿ: [ಪ್ರಮಾದಿನ್] ಎಚ್ಚರತಪ್ಪಿದವನು, ಗಮನವಿಲ್ಲದವನು(ಸುಪಾ)

ಪಮಾಇಅವ್ವ. **'ಪಮಾಯ' ಶಬ್ದವನ್ನು ನೋಡುವುದು**

ಪಮಾಣ. ಸಕ: [ಪ್ರ +ಮಾನಯ್] ವಿಶೇಷ ರೀತಿಯಿಂದ ಅಳೆ, ಆದರಿಸು

ಪಮಾಣ. ನ: [ಪ್ರಮಾಣ] ಯಥಾರ್ಥ ಜ್ಞಾನ, ವಾಸ್ತವ ಜ್ಞಾನ, ಯಾವುದರಲ್ಲಿ ವಸ್ತುವಿನ ಸತ್ಯವಾದ ಜ್ಞಾನವಿದೆಯೋ ಅದು, ಯಥಾರ್ಥಾನುಭವದ ಸಾಧನ, ಯಾವುದರಿಂದ ಅಳೆಯಲಾಗುತ್ತದೋ ಅದು, ಅಳತೆ, ಪರಿಮಾಣ(ವಿಪಾ),ಪ್ರಮಾಣಶಾಸ್ತ್ರ, ನ್ಯಾಯಶಾಸ್ತ್ರ, ತರ್ಕಶಾಸ್ತ್ರ, **ಪುಂನ:** ಸತ್ಯ ರೂಪದಿಂದ ಯಾವುದನ್ನು ಸ್ವೀಕರಿಸಲಾಗುತ್ತದೋ ಅದು, ಆದರಣೀಯ, ಮಾನನೀಯ, ಸತ್ಯವಾದ್ದು, ಸರಿಯಾದ್ದು. **–ವಾಯ. ಪು: [–ವಾದ]** ನ್ಯಾಯಶಾಸ್ತ್ರ, ತರ್ಕಶಾಸ್ತ್ರ, **–ಸಂವಚ್ಛರ. ಪು: [–ಸಂವತ್ಸರ].** ವರ್ಷ–ವಿಶೇಷ.

ಪಮಾಣ. ಸಕ: [ಪ್ರಮಾಣಯ್] ಪ್ರಮಾಣ ರೂಪದಿಂದ ಸ್ವೀಕರಿಸುವುದು.

ಪಮಾಣಿಅ. ವಿ: [ಪ್ರಮಾಣಿತ] ಪ್ರಮಾಣ ರೂಪದಿಂದ ಸ್ವೀಕರಿಸಲ್ಪಟ್ಟ, (ಸುಪಾ)

ಪಮಾಣಿಆ}. ಸ್ತ್ರೀ: [**ಪ್ರಮಾಣಿಕಾ, ಪ್ರಮಾಣೀ**] ಒಂದು
ಪಮಾಣೀ}. ಬಗೆಯ ಛಂದಸ್ಸು

ಪಮಾಣೀಕರ. ಸಕ: [ಪ್ರಮಾಣೀ +ಕೃ] ಪ್ರಮಾಣ ಮಾಡು, ಸತ್ಯ ರೂಪದಿಂದ ಸ್ವೀಕರಿಸು,

ಪಮಾದ. '**ಪಮಾಯ=ಪ್ರ +ಮದ್**' ಶಬ್ದವನ್ನು ನೋಡುವುದು

ಪಮಾದ. '**ಪಮಾಯ=ಪ್ರಮಾದ**' ಶಬ್ದವನ್ನು ನೋಡುವುದು

ಪಮಾಯ. ಅಕ: [ಪ್ರ +ಮದ್] ಎಚ್ಚರ ತಪ್ಪು, ಪ್ರಮಾದ ಮಾಡು, ತಪ್ಪುಮಾಡು(ಉವ)

ಪಮಾಯ. ಪು: [ಪ್ರಮಾದ] ಕರ್ತವ್ಯದಲ್ಲಿ ಅಲಕ್ಷ್ಯ ತೋರುವುದು ಮತ್ತು ಅಕರ್ತವ್ಯದಲ್ಲಿ ತೊಡಗುವುದು, ದುಃಖ, ಕಷ್ಟ(ಮತ್ತ)

ಪಮಾರ. ಪು: [ಪ್ರಮಾರ] ಮರಣದ ಪ್ರಾರಂಭ(ಭಗ), ಕೆಟ್ಟ ರೀತಿಯಲ್ಲಿ ಹೊಡೆಯುವುದು

ಪಮಾರಣಾ. ಸ್ತ್ರೀ: [ಪ್ರಮಾರಣಾ] ಕೆಟ್ಟ ರೀತಿಯಲ್ಲಿ ಹೊಡೆಯುವುದು

ಪಮಿಯ. ವಿ: [ಪ್ರಮಿತ] ಅಳೆಯಲ್ಪಟ್ಟ

ಪಮಿಲಾಣ. ವಿ: [ಪ್ರಮ್ಲಾನ] ಬಹಳವಾಗಿ ಬಾಡಿದ, ಅತಿಶಯವಾಗಿ ಕಮರಿದ

ಪಮಿಲಾಯ್. ಅಕ: [ಪ್ರ +ಮ್ಲೈ] ಅತಿಶಯವಾಗಿ ಬಾಡು

ಪಮಿಲ್ಲ. ಅಕ: [ಪ್ರ+ಮೀಲ್] ವಿಶೇಷವಾಗಿ ಸಂಕುಚಿತಗೊಳ್ಳು, ಅತಿಶಯವಾಗಿ ಸಂಕೋಚಗೊಳ್ಳು

ಪಮೀಯ–. '**ಪಮಾ=ಪ್ರ +ಮಾ**' ಶಬ್ದವನ್ನು ನೋಡುವುದು

ಪಮೀಲ. '**ಪಮಿಲ್ಲ**' ಶಬ್ದವನ್ನು ನೋಡುವುದು

ಪಮುಇಅ. ವಿ: [ಪ್ರಮುದಿತ] ಸಂತಸಗೊಂಡ, ಹರ್ಷಗೊಂಡ(ಔಪ)

ಪಮುಂಚ. ಸಕ: [ಪ್ರ +ಮುಚ್] ಬಿಡು, ತ್ಯಜಿಸು

ಪಮುಕ್ಕ. ವಿ: [ಪ್ರಮುಕ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ

–ಪಮುಕ್ಖ. '**–ಪಮುಹ**' ಶಬ್ದವನ್ನು ನೋಡುವುದು

ಪಮುಚ್ಛಿಅ. ಪು: [ಪ್ರಮೂರ್ಛಿತ] ನರಕಾವಾಸ ವಿಶೇಷ

ಪಮುತ್ತ. '**ಪಮುಕ್ಕ**' ಶಬ್ದವನ್ನು ನೋಡುವುದು

ಪಮುದಿಯ. '**ಪಮುಇಅ**' ಶಬ್ದವನ್ನು ನೋಡುವುದು

ಪಮುದ್ಧ. ವಿ: [ಪ್ರಮುಗ್ಧ] ಅತ್ಯಂತ ಮುಗ್ಧ.

ಪಮುಹ. ವಿ: [ಪ್ರಮುಖ] ತಲ್ಲೀನ ದೃಷ್ಟಿಯುಳ್ಳ (ಆಚಾ), ಪು: ಗ್ರಹ –ವಿಶೇಷ, ಜ್ಯೋತಿಷ್ಕ –ದೇವ –ವಿಶೇಷ(ಠಾ) ನ: ಪ್ರಪ್ರಥಮ, ಮೊದಲ ಆರಂಭ, ಉಪಕ್ರಮ(ಪಾಅ)

–ಪಮುಹ. ವಿ.ಬ: [–ಪ್ರಮುಖ] ಇತ್ಯಾದಿ, ಇವೇ ಮೊದಲಾದ, ಪ್ರಧಾನ, ಶ್ರೇಷ್ಠ, ಮುಖ್ಯ

ಪಮುಹರ. ವಿ: [ಪ್ರಮುಖರ] ವಾಚಾಳ, ಹರಟೆಗಾರ, ಹೆಚ್ಚು ಮಾತಾಡುವವನು

ಪಮೇಇಲ. ವಿ: [ಪ್ರಮೇದಸ್ವಿನ್] ಯಾರ ಶರೀರದಲ್ಲಿ ಕೊಬ್ಬು ಜಾಸ್ತಿ ಇದೆಯೋ ಅವನು

ಪಮೇಯ. ವಿ: [ಪ್ರಮೇಯ] ಪ್ರಮಾಣ –ವಿಷಯ, ಯಥಾರ್ಥ ಜ್ಞಾನಕ್ಕೆ ವಿಷಯವಾದ್ದು ಪ್ರಮೇಯ, ಸತ್ಯ ಪದಾರ್ಥ

ಪಮೇಹ. ಪು: [ಪ್ರಮೇಹ] ಮೇಹ ರೋಗ, ಬಹುಮೂತ್ರ ವ್ಯಾಧಿ(ನಿಚೂ)

ಪಮೋಅ. ಪು: [ಪ್ರಮೋದ] ಆನಂದ, ಹರ್ಷ, ಸಂತಸ(ಸುರ), ರಾಕ್ಷಸ ವಂಶದ ಒಬ್ಬ ರಾಜನ ಹೆಸರು, ಒಬ್ಬ ಲಂಕಾಧಿಪತಿ

ಪಮೋಕ್ಖ–. '**ಪಮುಂಚ**' ಶಬ್ದವನ್ನು ನೋಡುವುದು

ಪಮೋಕ್ಖ. ಪುಂನ: [ಪ್ರಮೋಕ್ಷ] ಮುಕ್ತಿ, ನಿರ್ವಾಣ (ಸೂಅ), ಪ್ರತ್ಯುತ್ತರ

ಪಮೊಕ್ಖಣ. ನ: [ಪ್ರಮೋಚನ] ಸಂಪೂರ್ಣವಾಗಿ ಬಿಡುಗಡೆ ಮಾಡುವುದು, ಪರಿತ್ಯಾಗ(ಣಾಯಾ)

ಪಮೋಯಣಾ. ಸ್ತ್ರೀ: [ಪ್ರಮೋದನಾ] ಆಹ್ಲಾದ ಸಂತೋಷ, ಹರ್ಷ

ಪಮ್ಮಲಾಅ. ಅಕ: [ಪ್ರ +ಮ್ಲೈ] ಹೆಚ್ಚಾಗಿ ಬಾಡು, ಕಳೆಗುಂದು

ಪಮ್ಮಾಅ}. ವಿ: [ಪ್ರಮ್ಲಾನ] ಹೆಚ್ಚಾಗಿ ಬಾಡಿದ,
ಪಮ್ಮಾಇಅ}. ಅಧಿಕವಾಗಿ ಸೊರಗಿದ, ಕಳೆಗುಂದಿದ, ಬಹಳವಾಗಿ ಒಣಗಿದ

ಪಮ್ಮಾಣ. ವಿ: [ಪ್ರಮ್ಲಾನ] ನಿಸ್ತೇಜ, ಕಾಂತಿಹೀನ, ಬಾಡಿಹೋದ, ಕಳೆಗುಂದಿದ. ನ: ಕಳೆಗುಂದುವುದು, ಬಾಡುವುದು

ಪಮ್ಮಿ. ಪು: [ದೇ] ಕೈ, ಹಸ್ತ, ಕರ(ಷಡ್)

ಪಮ್ಮುಕ್ಕ. '**ಪಮುಕ್ಕ**' ಶಬ್ದವನ್ನು ನೋಡುವುದು

ಪಮ್ಮುಹ. ವಿ: [ಪ್ರಾಙ್ಮುಖ] ಪೂರ್ವಕ್ಕೆ ಮುಖವಿರುವ

ಪಮ್ಹ. ಪುಂನ: [ಪಕ್ಷ್ಮನ್] ರೆಪ್ಪೆ, ಪದ್ಮ ಮೊದಲಾದವುಗಳ ಕೇಸರ(ಉವಾ), ದಾರದ ತೆಳುವಾದ ಭಾಗ, ಹಕ್ಕಿಗಳ ರೆಕ್ಕೆ, ತುದಿಯ ಭಾಗ, ಮುಂಭಾಗ(ಸೇ), ಮಹಾ ವಿದೇಹ ವರ್ಷದ ವಿಜಯ –ಪ್ರದೇಶ, ನ: ಒಂದುದೇವ –ವಿಮಾನ. **–ಕಂತ. ನ:** [–ಕಾಂತ] ಒಂದುದೇವ –ವಿಮಾನ ಹೆಸರು. **–ಕೂಡ. ಪು:** [–ಕೂಟ] ಪರ್ವತ –ವಿಶೇಷ, ನ: ಬ್ರಹ್ಮಲೋಕವೆಂಬ ದೇವಲೋಕದ ಒಂದು ದೇವ –ವಿಮಾನ. ಪರ್ವತದ ಶಿಖರ(ಠಾ). **–ಜ್ಝಯ. ನ:** [–ಧ್ವಜ] ದೇವ–ವಿಮಾನ–ವಿಶೇಷ. **–ಪ್ಪಭ. ನ:** [–ಪ್ರಭ] ಬ್ರಹ್ಮ –ಲೋಕದ ಒಂದು ದೇವ –ವಿಮಾನ. **–ಲೇಸ, –ಲೆಸ್ಸ. ನ:** [–ಲೇಶ್ಯ] ಬ್ರಹ್ಮ –ಲೋಕದಲ್ಲಿರುವ ಒಂದು ದೇವ=ವಿಮಾನ. **–ವಣ್ಣ. ನ:** [–ವರ್ಣ] ಅದೇ ಹಿಂದೆ ಹೇಳಿದ ಅರ್ಥ. **–ಸಿಂಗ. ನ:** [–ಶೃಂಗ] ಅದೇ ಅರ್ಥ. **=ಸಿಟ್ಠ. ನ:** [=ಸೃಷ್ಟ] ಅದೇ ಹಿಂದೆ ಹೇಳಿದ ಅರ್ಥ.**ಪಮ್ಹಾವತ್ತ. ನ:** [ಪಕ್ಷ್ಮನಾವರ್ತ]ಅದೇ .

ಪಮ್ಹ. 'ಪಉಮ' ಶಬ್ದವನ್ನು ನೋಡುವುದು(ಪಣ್ಣ). –ಗಂಧ. ವಿ: [–ಗಂಧ] ಕಮಲದ ಸೌರಭ. ವಿ: ಕಮಲಕ್ಕೆ ಸಮನಾದ ಸುವಾಸನೆ ಉಳ್ಳ **–ಲೇಸ. ವಿ: [–ಲೇಶ್ಯ]** ಪದ್ಮ ಎಂಬ ಹೆಸರಿನ ಲೇಶ್ಯವುಳ್ಳ, ಐದನೆಯ ಲೇಶ್ಯ, ಆತ್ಮದ ಶುಭತರವಾದ ಪರಿಣಾಮ ವಿಶೇಷ(ಸಮ). **–ಲೆಸ್ಸ' –ಲೇಸ' ಶಬ್ದವನ್ನು ನೋಡುವುದು**

ಪಮ್ಹಅ. ಸಕ: [ಪ್ರ +ಸ್ಮೃ] ಮರೆತುಬಿಡು,

ಪಮ್ಹಗಾವಈ. ಸ್ತ್ರೀ: [ಪಕ್ಷ್ಮಕಾವತೀ] ಮಹಾ –ವಿದೇಹ –ವರ್ಷದ ಒಂದು ವಿಜಯದ ಪ್ರದೇಶ(ಠಾ)

ಪಮ್ಹಟ್ಠ. ವಿ: [ಪ್ರಸ್ಮೃತ] ವಿಸ್ಮೃತ, ಮರೆತುಹೋದ, ಮರೆಯಲ್ಪಟ್ಟ, ಮರೆವು ಉಂಟಾಗಿರುವವನು

ಪಮ್ಹಟ್ಠ. ವಿ: [ದೇ] ಕಳಚಿಹೋದ, ಕೆಳಗೆ ಬಿದ್ದಿರುವ(ವವ)

ಪಮ್ಹಯ. ವಿ: [ಪಕ್ಷ್ಮಜ] ರೆಪ್ಪೆಯಿಂದ ಹುಟ್ಟಿದ, ನ: ಒಂದು ಬಗೆಯ ದಾರ(ಪಂಚಭಾ)

ಪಮ್ಹರ. ಪು: [ದೇ] ಅಪಮೃತ್ಯು, ಅಕಾಲ ಮರಣ(ದೇ)

ಪಮ್ಹಲ. ವಿ: [ಪಕ್ಷ್ಮಲ] ಸುಂದರವಾದ ರೆಪ್ಪೆಯ ಕೂದಲಿನಿಂದ ಕೂಡಿದ(ಕುಮಾ)

ಪಮ್ಹಲ. ಪು: [ದೇ] ಪದ್ಮ ಪುಷ್ಪದ ಕೇಸರ(ದೇ)

ಪಮ್ಹಲಿಯ. ವಿ: [ದೇ. ಪಕ್ಷ್ಮಲಿತ] ಬಿಳಿದಾಗಿ ಮಾಡಲ್ಪಟ್ಟ ಧವಳಿತ

ಪಮ್ಹಸ. ಸಕ: [ವಿ +ಸ್ಮೃ] ಮರೆತುಬಿಡು

ಪಮ್ಹಸಾವಿ. ವಿ: [ವಿಸ್ಮಾರಿತ] ಮರೆಯುವಂತೆ ಮಾಡಲ್ಪಟ್ಟ(ಸುಖ)

ಪಮ್ಹಾ. ಸ್ತ್ರೀ: [ಪದ್ಮಾ] ಪದ್ಮ +ಲೇಶ್ಯ; ಆತ್ಮದ ಶುಭತರ ಪರಿಣಾಮ. ವಿಜಯ –ಕ್ಷೇತ್ರ

ಪಮ್ಹಾರ. ಪು: [ದೇ] ಅಪಮೃತ್ಯು, ಅಕಾಲ ಮರಣ

ಪಮ್ಹಾವಈ. ಸ್ತ್ರೀ: [ಪಕ್ಷ್ಮಾವತೀ] ವಿಜಯ –ವಿಶೇಷದ ಒಂದು ನಗರಿ, ಪರ್ವತ –ವಿಶೇಷ,

ಪಮ್ಹುತ್ತರವಡಿಂಸ ಗ. ನ: [ಪಕ್ಷ್ಮ+ಉತ್ತರಾವತಂಸಕ] ಬ್ರಹ್ಮ ಲೋಕದಲ್ಲಿ ಇರುವ ಒಂದು ದೇವ –ವಿಮಾನ(ಸಮ)

ಪಮ್ಹುಸ. ಸಕ: [ವಿ +ಸ್ಮೃ] ಮರೆತುಬಿಡು

ಪಮ್ಹುಸ. ಸಕ: [ಪ್ರ +ಮೃಶ್] ಸ್ಪರ್ಶಿಸು, ಮುಟ್ಟು –**'ಪಮ್ಹುಸಇ'**

ಪಮ್ಹುಸ. ಸಕ: [ಪ್ರ +ಮುಷ್] ಕಳುವು ಮಾಡು, ಕಳ್ಳತನಮಾಡು(ಉಮಾ)

ಪಮ್ಹುಸಣ. ನ: [ವಿಸ್ಮರಣ] ಮರೆವು, ವಿಸ್ಮೃತಿ

ಪಮ್ಹುಸಿಅ. ವ: [ವಿಸ್ಮೃತ] ಮರೆಯಲ್ಪಟ್ಟ(ಕಮಾ)

ಪಮ್ಹುಇ. ಸಕ: [ಸ್ಮೃ] ನೆನಪಿಸಿಕೊಳ್ಳು

ಪಮ್ಹುಹಣ. ವಿ: [ಸ್ಮರ್ತೃ] ಸ್ಮರಿಸುವವನು, ನೆನಪಿಸಿಕೊಳ್ಳುವವನು

ಪಯ. ಸಕ: [ಪಚ್] ಬೇಯಿಸು, ಅಡುಗೆ ಮಾಡು. ವ.ಕೃ: **'ಪಯಂತ'**

ಪಯ. ಸಕ: [ಪದ್] ಹೋಗು, ತಿಳಿದುಕೊಳ್ಳು, ವಿಚಾರ ಮಾಡು

ಪಯ. ಪುಂನ: [ಪಯಸ್] ಹಾಲು, ನೀರು. **–ಹರ. 'ಪಓಹರ' ಶಬ್ದವನ್ನು ನೋಡುವುದು**

ಪಯ. ಪು: [ಪ್ರಜ್] ಪ್ರಾಣಿ(ಆಚಾ)

ಪಯ. ಪುಂನ: [ಪದ] ಪ್ರಕೃತಿಯೊಂದಿಗೆ ವಿಭಕ್ತಿ ಪ್ರತ್ಯಯ ಜೊತೆಗೂಡಿರುವ ಶಬ್ದ(ವಿಸೇ), ಶಬ್ದ ಸಮೂಹ, ವಾಕ್ಯ. ಕಾಲು, ಪಾದ, ಹೆಜ್ಜೆ(ಸುಪಾ), ಪಾದದ ಗುರುತು, ಶ್ಲೋಕದ ನಾಲ್ಕನೇ ಒಂದು ಭಾಗವಾದ ಒಂದು ಪಾದ(ಅಣು), ನಿಮಿತ್ತ, ಕಾರಣ, ಸ್ಥಾನ, ಜಾಗ, ಅಧಿಕಾರ ಸ್ಥಾನ, ಪದವಿ, ತ್ರಾಣ, ರಕ್ಷಣೆ, ಪ್ರದೇಶ, ವ್ಯವಸಾಯ, ಉದ್ಯೋಗ, ಕೂಟ,

ಜಾಲ(ಸೂಅ). –ಖೇಮ. ನ: [–ಕ್ಷೇಮ] ಮಂಗಳ, ಕಲ್ಯಾಣ, –ತ್ಥ. ಪು: [–ಸ್ಥ] ಪದಾತಿ, ಕಾಲಾಳು. –ಪಾಸ. ಪು: [–ಪಾಶ] ಮೃಗಗಳನ್ನು ಹಿಡಿಯುವ ಬಲೆ(ಸೂಅ). –ರಕ್ಖ. ಪು: [–ರಕ್ಷ] ಪದಾತಿ, ಕಾಲಾಳು. –ವಿಗ್ಗಹ. ಪು: [–ವಿಗ್ರಹ] ಪದದ ವಿಚ್ಛೇದ; ಪದವನ್ನು ಅರ್ಥಕ್ಕನುಸಾರವಾಗಿ ಬಿಡಿಸುವುದು(ವಿಸೇ). –ವಿಭಾಗ. ಪು: [–ವಿಭಾಗ] ಉತ್ಸರ್ಗ ಮತ್ತು ಅಪವಾದದ ಯಥಾ ಸ್ಥಾನ ನಿವೇಶ. –ವೀಢ. '– ಪಾಯ –ವೀಢ' ಶಬ್ದವನ್ನು ನೋಡುವುದು. –ಸಮಾಸ. ಪು: [–ಸಮಾಸ] ಪದಗಳ ಸಮುದಾಯ. ಪಯಾಣುಸಾರಿ. ವಿ: [–ಪದಾನುಸಾರಿನ್] ಒಂದು ಪದದಿಂದ ಅನೇಕ ಅನುಕ್ತ ಪದಗಳನ್ನು ಕಂಡುಹಿಡಿಯುವ ಸಾಮರ್ಥ್ಯವುಳ್ಳವನು(ಔಪ). ಪಯಾಣುಸಾರಿಣೀ. ಸ್ತ್ರೀ: [–ಪದಾನುಸಾರಿಣೀ] ಒಂದು ಪದವನ್ನು ಕೇಳಿಸಿಕೊಂಡು ಕೇಳಿರದ ಇನ್ನಿತರೆ ಶಬ್ದಗಳನ್ನು ಪತ್ತೆಹಚ್ಚಬಲ್ಲ ಬುದ್ಧಿ –ವಿಶೇಷ

ಪಯ(ಅಪ). 'ಪತ್ತ=ಪ್ರಾಪ್ತ' ಶಬ್ದವನ್ನು ನೋಡುವುದು

ಪಯ–. 'ಪಯ=ಪ್ರಜಾ' ಶಬ್ದವನ್ನು ನೋಡುವುದು. –ಪಾಲ. ವಿ: [–ಪಾಲ] ಪ್ರಜೆಗಳ ಪಾಲಕ ಪು:ದೊರೆ

–ಪಯ. ವಿ: [–ಪ್ರದ] ಕೊಡುವವನು, ನೀಡುವವನು

ಪಯಇ. ಸ್ತ್ರೀ: [ಪ್ರಕೃತಿ] ಸಂಧಿಕಾರ್ಯ ನಡೆಯದ ಸಂದರ್ಭ, ಸಂಧಿಯ ಅಭಾವ

ಪಯಇ. 'ಪಗಇ' ಶಬ್ದವನ್ನು ನೋಡುವುದು(ಗಾ)

ಪಯಇಂದ. ಪು: [ಪತಗೇಂದ್ರ, ಪದಕೇಂದ್ರ] ವಾನವ್ಯಾಂತರ ಜಾತಿಯ ದೇವತೆಗಳ ಇಂದ್ರ

ಪಯಈ. 'ಪಯವೀ' ಶಬ್ದವನ್ನು ನೋಡುವುದು

ಪಯಂಗ. ಪು: [ಪತಂಗ] ಸೂರ್ಯ, ರವಿ(ಉಪ), ಒಂದು ಬಗೆಯ ರಂಜನ ದ್ರವ್ಯ –ವಿಶೇಷ, ಶಲಭ, ದೀಪದ ಹುಳು, ಗಾಳಿಪಟ(ಣಾಯಾ), 'ಪಯಯ=ಪತಗ, ಪದಕ' ಶಬ್ದವನ್ನು ನೋಡುವುದು –ವೀಹಿಯಾ. ಸ್ತ್ರೀ: [–ವೀಥಿಕಾ] ಪತಂಗದ ಹಾರಾಟ. ಭಿಕ್ಷೆಗಾಗಿ ಪತಂಗದ ಹಾಗೆ ಚಲಿಸುವುದು(ಉತ್ತ). –ವೀಹಿ. ಸ್ತ್ರೀ: [–ವೀಥೀ] ಅದೇ ಹಿಂದಿನ ಅರ್ಥ(ಉತ್ತ)

ಪಯಂಚುಲ. ಪುಂನ: [ಪ್ರಪಂಚುಲ] ಮೀನುಗಳನ್ನು ಹಿಡಿಯುವ ಬಲೆ(ವಿಪಾ)

ಪಯಂಡ. ವಿ: [ಪ್ರಚಂಡ] ಅತ್ಯಂತ ಉಗ್ರವಾದ, ತೀವ್ರ, ಬಹಳ ತೀಕ್ಷ್ಣವಾದ, ಪ್ರಖರವಾದ, ಭಯಂಕರವಾದ(ಪಣ್ಣ)

ಪಯಂಡ. ವಿ: [ಪ್ರಕಾಂಡ] ಉತ್ಕಟವಾದ, ಶ್ರೇಷ್ಠವಾದ

ಪಯಂತ. 'ಪಯ=ಪಚ್' ಶಬ್ದವನ್ನು ನೋಡುವುದು

ಪಯಂಪ. ಅಕ: [ಪ್ರ+ಕಂಪ್] ಹೆಚ್ಚಾಗಿ ನಡುಗು, ಬಹಳವಾಗಿ ಕಂಪಿಸು

ಪಯಂಪ. ಸಕ: [ಪ್ರ +ಜಲ್ಪ್] ಹೇಳು, ಮಾತಾಡು, ಹರಟು

ಪಯಂಪಣ. ನ: [ಪ್ರಜಲ್ಪನ] ಹೇಳುವುದು, ಮಾತು, ಹರಟೆ, ತಿರುಳಿಲ್ಲದ ಮಾತು(ಉಪ)

ಪಯಂಪಿಯ. ವಿ: [ಪ್ರಕಂಪಿತ] ಅತಿಯಾಗಿ ನಡುಗಿದ, ಹೆಚ್ಚಾಗಿ ಅಲುಗಾಡಿಸಲ್ಪಟ್ಟ

ಪಯಂಪಿಯ. ವಿ: [ಪ್ರಜಲ್ಪಿತ] ಹೇಳಲಾದ, ಉಕ್ತಿ, ಮಾತು, ಹರಟೆ, ವ್ಯರ್ಥವಾದ ಮಾತು(ವಿಪಾ)

ಪಯಂಪಿರ. ವಿ: [ಪ್ರಜಲ್ಪಿತೃ] ಹೇಳುವವನು, ಮಾತಾಡುವವನು,ವಾಚಾಳಿ,ಹರಟೆಗಾರ (ಸುರ)

ಪಯಂಸ. ಸಕ: [ಪ್ರ +ದರ್ಶಯ್] ತೋರಿಸು, ಕಾಣಿಸು, ಪ್ರದರ್ಶಿಸು(ವಿಸೇ)

ಪಯಂಸಣ. ನ: [ಪ್ರದರ್ಶನ] ತೋರಿಸುವುದು, ಪ್ರದರ್ಶಿಸುವುದು

ಪಯಂಸಿಅ. ವಿ: [ಪ್ರದರ್ಶಿತ] ತೋರಿಸಲ್ಪಟ್ಟ,

ಪಯಕ್ಖ. ಸಕ: [ಪ್ರತ್ಯಾ+ಖ್ಯಾ] ಪ್ರತಿಜ್ಞೆಮಾಡು, ತಿರಸ್ಕರಿಸು

ಪಯಕ್ಖಿಣ. 'ಪದಕ್ಖಿಣ–ಪ್ರದಕ್ಷಿಣ' ಶಬ್ದವನ್ನುನೋಡುವುದು

ಪಯಕ್ಖಿಣ. 'ಪದಕ್ಖಿಣ=ಪ್ರದಕ್ಷಿಣಯ್'

ಪಯಕ್ಖಿಣಾ. 'ಪದಕ್ಖಿಣಾ' ಶಬ್ದವನ್ನು ನೋಡುವುದು

ಪಯಗ. 'ಪಯಯ=ಪತಗ, ಪದಕ, ಪದಗ' ಶಬ್ದವನ್ನು ನೋಡುವುದು(ಪವ)

ಪಯಚ್ಛ. ಸಕ: [ಪ್ರ+ಯಮ್] ಕೊಡು, ಅರ್ಪಿಸು, 'ಪಯಚ್ಛಇ'

ಪಯಚ್ಛಣ. ನ: [ಪ್ರದಾನ] ಕೊಡುವುದು, ಅರ್ಪಿಸುವುದು. ವಿ: ಕೊಡುವವನು(ಸಣ)

ಪಯಟ್ಟ. ಅಕ: [ಪ್ರ +ವೃತ್] ಕಾರ್ಯದಲ್ಲಿ ತೊಡಗು,

ಪಯಟ್ಟ. ವಿ: [ಪ್ರವೃತ್ತ] ಕಾರ್ಯದಲ್ಲಿ ತೊಡಗಿದವನು, ಮುಂದೆ ಹೋದ(ಪಾಅ)

ಪಯಟ್ಟಯ. ವಿ: [ಪ್ರವರ್ತಕ] ಕಾರ್ಯದಲ್ಲಿ ತೊಡಗಿದವನು(ಪಣ್ಣ)

ಪಯಟ್ಟಾವಅ. ವಿ: [**ಪ್ರವರ್ತಕ**] ಕಾರ್ಯದಲ್ಲಿ ತೊಡಗಿಸುವವನು, ಪ್ರೇರಿಸುವವನು, ಕಾರ್ಯವನ್ನು ಮುಂದುವರೆಸುವವನು(ಕಪ್ಪೂ)
ಪಯಟ್ಟಾವಿಅ. ವಿ: [**ಪ್ರವರ್ತಿತ**] ಕಾರ್ಯದಲ್ಲಿ ತೊಡಗಿಸಲ್ಪಟ್ಟವನು, ಪ್ರವೃತ್ತಿ ಮಾಡಿಸಲ್ಪಟ್ಟವನು (ಮಹಾ)
ಪಯಟ್ಟಿಅ. ವಿ: [**ದೇ. ಪ್ರವರ್ತಿತ**] **ಮೇಲಿನ ಶಬ್ದವನ್ನು ನೋಡುವುದು**
ಪಯಟ್ಟಿಅ. ವಿ: [**ಪ್ರವೃತ್ತ**] ಕಾರ್ಯದಲ್ಲಿ ತೊಡಗಿರುವ, ಪ್ರಾರಂಭವಾದ(ಉತ್ತ)
ಪಯಟ್ಟಾಣ. **'ಪಇಟ್ಟಾಣ'** ಶಬ್ದವನ್ನು ನೋಡುವುದು
ಪಯಡ. **ಸಕ:** [**ಪ್ರ +ಕಟಯ್**] ಪ್ರಕಟಿಸು, ವ್ಯಕ್ತಪಡಿಸು. **ವ. ಕೃ: ಪಯಡಂತ**
ಪಯಡ. ವಿ: [**ಪ್ರಕಟ**] ಸ್ಪಷ್ಟವಾದ, ವ್ಯಕ್ತವಾದ, ಸ್ಫುಟವಾದ, ಖ್ಯಾತ, ಹೆಸರಾಂತ, ಪ್ರಸಿದ್ಧ(ಪಾಅ)
ಪಯಡಣ. ನ: [**ಪ್ರಕಟನ**] ವ್ಯಕ್ತಪಡಿಸುವುದು, ಪ್ರಕಾಶಪಡಿಸುವುದು, ಪ್ರಕಟಪಡಿಸುವವನು, ವ್ಯಕ್ತಪಡಿಸುವವನು(ಧರ್ಮವಿ)
ಪಯಡಾವಣ. ನ: [**ಪ್ರಕಟನ**] ವ್ಯಕ್ತಪಡಿಸುವಂತೆ ಮಾಡುವುದು, ಪ್ರಕಟವಾಗುವಂತೆ ಮಾಡುವುದು (ಭವಿ)
ಪಯಡಾವಿಅ. ವಿ: [**ಪ್ರಕಟಿತ**] ವ್ಯಕ್ತಪಡಿಸಲ್ಪಟ್ಟ, ಪ್ರಕಟ ಪಡಿಸಲಾದ
ಪಯಡಿ. **'ಪಗಇ'**, ಶಬ್ದವನ್ನು ನೋಡುವುದು
ಪಯಡಿ. **ಸ್ತ್ರೀ:** [**ದೇ**] ಹಾದಿ, ಮಾರ್ಗ, ದಾರಿ
ಪಯುಡಿಂಯು. ವಿ: [**ಪ್ರಕಟಿತ**] ಪ್ರಕಟಿಸಲ್ಪಟ್ಟ, ವ್ಯಕ್ತಪಡಿಸಲಾದ(ಸುರ)
ಪಯಡಿಯ. ವಿ: [**ಪ್ರಪತಿತ**] ಕೆಳಗೆ ಬಿದ್ದಿರುವ(ಣಾಯಾ)
ಪಯಡೀಕಯ. ವಿ: [**ಪ್ರಕಟೀಕೃತ**] ಪ್ರಕಟಿಸಲ್ಪಟ್ಟ, ವ್ಯಕ್ತಪಡಿಸಲಾದ
ಪಯಡೀಕರ. **ಸಕ:** [**ಪ್ರಕಟೀ +ಕೃ**] ಪ್ರಕಟಿಸು, ವ್ಯಕ್ತಪಡಿಸು
ಪಯಡೀಭೂಅ}.ವಿ:[**ಪ್ರಕಟೀಭೂತ**] ವ್ಯಕ್ತಗೊಂಡಿರುವ
ಪಡೀಹೂಅ.} (ಮಹಾ), ಪ್ರಕಟವಾಗಿರುವ,
ಪಯಢ್ಢಣೀ. **ಸ್ತ್ರೀ:** [**ದೇ**] ಪ್ರತೀಹಾರಿ, ಗಾರುಡಿಗ, ಯಕ್ಷಿಣೀ ಮಾಡುವವನು, ಆಕರ್ಷಿಸುವವನು, ಎಳೆತ, ಆಕರ್ಷಣ ಎಳೆಯುವಿಕೆ, ಸೆಳೆಯುವಿಕೆ,
ಪಯಣ. **'ಪವಣ'** ಶಬ್ದವನ್ನು ನೋಡುವುದು
ಪಯಣ. **'ಪಡಣ'** ಶಬ್ದವನ್ನು ನೋಡುವುದು(ವಿಸೇ)
ಪಯಣ}. ನ: [**ಪಚನ, -ಕ**] ಅಡುಗೆ, ಅಡಗೆ
ಪಯಣಗ}. ಮಾಡುವುದು, ಬೇಯಿಸುವುದು(ಔಪ), ಅಡುಗೆ ಮಾಡುವ ಪಾತ್ರೆ(ಸೂಅ) **-ಸಾಲಾ. ಸ್ತ್ರೀ:** [**-ಶಾಲಾ**] ಅಡುಗೆಮನೆ(ಬೃಹ)
ಪಯಣು}. ವಿ: [**ಪ್ರತನು**] ಬಹಳ ಸಣ್ಣದಾಗಿರುವ,
ಪಯುಣುಅ}. ತೆಳ್ಳನೆಯ, ಸೂಕ್ಷವಾದ, ಅಲ್ಪ ಪ್ರಮಾಣದ, ಕೊಂಚ(ಪಉಮ)
ಪಯಣ್ಣಯ. **'ಪಇಣ್ಣಗ'** ಶಬ್ದವನ್ನು ನೋಡುವುದು
ಪಯತ್ತ. **ಅಕ:** [**ಪ್ರ+ಯತ್**] ಪ್ರಯತ್ನಿಸು, ಫಲ ಪ್ರಾಪ್ತಿಗಾಗಿ ನಡೆಸುವ ಕಾರ್ಯ
ಪಯತ್ತ.'ಪಯಟ್ಟ=ಪ್ರ+ವೃತ್' ಶಬ್ದವನ್ನು ನೋಡುವುದು.
ಪಯತ್ತ. **ಪು:** [**ಪ್ರಯತ್ನ**] ಶ್ರಮವಹಿಸಿ ಕಾರ್ಯ ಮಾಡುವುದು, ಪ್ರಯತ್ನ, ಉದ್ಯೋಗ(ಸುಪಾ)
ಪಯತ್ತ. ವಿ: [**ಪ್ರದತ್ತ, ಪ್ರತ್ತ**] ಕೊಡಲ್ಪಟ್ಟ, ದಾನ ಮಾಡಲ್ಪಟ್ಟ, ಅನುಮತಿಸಲ್ಪಟ್ಟ, ಸಮ್ಮತಿಸಲ್ಪಟ್ಟ
ಪಯತ್ತ. **'ಪಯಟ್ಟ=ಪ್ರವೃತ್ತ'** ಶಬ್ದವನ್ನು ನೋಡುವುದು
ಪಯತ್ತಾವಿಅ. ವಿ: [**ಪ್ರವರ್ತಿತ**] ಪ್ರಾರಂಭಿಸಲ್ಪಟ್ಟ, ತೊಡಗಿಸಲಾದ,
ಪಯತ್ಥ. **ಪು:** [**ಪದಾರ್ಥ**] ಶಬ್ದದ ಪ್ರತಿಪಾದ್ಯ ಅರ್ಥ, ಪದದ ಅರ್ಥ, ಶಬ್ದದಿಂದ ಹೇಳಲ್ಪಡುವ ವಸ್ತು, ವಿಷಯ, ತತ್ತ್ವ(ಸುಪಾ)
ಪಯುನ್ನ. **'ಪಇಣ್ಣ=ಪ್ರಕೀರ್ಣ'** ಶಬ್ದವನ್ನು ನೋಡುವುದು.
ಪಯನ್ನಾ. **'ಪಇಣ್ಣಾ'** ಶಬ್ದವನ್ನು ನೋಡುವುದು
ಪಯಪ್ಪಣ. ನ: [**ಪ್ರಕಲ್ಪನ**] ಕಲ್ಪನೆ, ವಿಚಾರ
ಪಯಯ. **'ಪಾಯಯ= ಪ್ರಾಕೃತ'** ಶಬ್ದವನ್ನು ನೋಡುವುದು
ಪಯಯ. ವಿ: [**ಪ್ರಯತ**] ಪ್ರಯತ್ನಶೀಲ, ಸತತ ಪ್ರಯತ್ನ ಮಾಡುವವನು(ಔಪ, ಪಉಮ)
ಪಯಯ. **ಪು:** [**ಪತಗ, ಪದಕ, ಪದಗ**] ವಾನವ್ಯಂತರ ದೇವತೆಗಳ ಒಂದು ಜಾತಿ(ಪಣ್ಣ), ಪಕ್ಷಿ ದೇವತೆಗಳ ಉತ್ತರ ದಿಕ್ಕಿನ ಇಂದ್ರ, **-ವಇ. ಪು:** [**-ಪತಿ**] ಪಕ್ಷಿ ದೇವತೆಗಳ ಉತ್ತರ ದಿಕ್ಕಿನ ಇಂದ್ರ(ಠಾ)
ಪಯಯ. ನ: [**ದೇ**] ನಿರಂತರ, ಸದಾ, ಸತತ(ದೇ)
ಪಯರ. **ಸಕ:** [**ಸ್ಮೃ**] ನೆನಪಿಸಿಕೊಳ್ಳು, ಸ್ಮರಿಸಿಕೊಳ್ಳು, **ವ. ಕೃ: 'ಪಯರಂತ'**

ಪಯರ. ಅಕ: [ಪ್ರ+ಚರ್] ಹರಡು, ವ್ಯಾಪಿಸು, ಪ್ರಸಾರಗೊಳ್ಳು, ಕೆಲಸದಲ್ಲಿ ತೊಡಗು. ಕ್ರಿಯಾ ರೂಪ: 'ಪಯರಇ'
ಪಯರ. ಪು: [ಪ್ರಕರ] ಸಮೂಹ, ಗುಂಪು
ಪಯರ. ಪು: [ಪ್ರದರ] ಸ್ತ್ರೀಯರ ಜನನೇಂದ್ರಿಯದ ಒಂದು ರೋಗ, ಯೋನಿಯಿಂದಾಗುವ ರಕ್ತ ಸ್ರಾವ, ಭಂಗ, ಮುರಿಯುವುದು, ಬಾಣ
ಪಯರ. 'ಪಇರ=ವಪ್' ಶಬ್ದವನ್ನು ನೋಡುವುದು
ಪಯರ. 'ಪಯಾರ=ಪ್ರಕಾರ' ಶಬ್ದವನ್ನು ನೋಡುವುದು
ಪಯರ. 'ಪಯಾರ= ಪ್ರಚಾರ' ಶಬ್ದವನ್ನು ನೋಡುವುದು
ಪಯರ. ಪುನ: [ಪ್ರತರ] ಎಲೆ, ದುಂಡನೆಯ ಎಲೆಯ ಆಕೃತಿಯ ಒಡವೆ, ಗಣಿತ –ವಿಶೇಷ, ಪಟ್ಟಿಯಿಂದ ಗುಣಿತವಾದ ಪಟ್ಟಿ, ಬಿದಿರು ಬೆತ್ತ ಮೊದಲಾದ ಪದಾರ್ಥಗಳ ವಿಭಿನ್ನತೆ. –ತವ. ಪುನ: [–ತಪಸ್] ಒಂದು ಬಗೆಯ ತಪಸ್ಸು. –ವಟ್ಟ. ನ: [–ವೃತ್ತ] ಒಂದು ಚೌಕ ವಿಶೇಷ
ಪಯರ. ನ: [ಪ್ರತರ] ಶ್ರೇಣಿಯಿಂದ ಶ್ರೇಣಿಯನ್ನು ಗುಣಿಸುವುದು, ಒಂದು ಗಣಿತ
ಪಯರಣ. ನ: [ಪ್ರಕರಣ] ಪ್ರಸ್ತಾವ, ಪ್ರಸಂಗ, ಒಂದು ಸಂದರ್ಭ, ಏಕಾರ್ಥ ಪ್ರತಿಪಾದಿಸುವ ಗ್ರಂಥ, ಗ್ರಂಥದ ಒಂದು ಅಧ್ಯಾಯ, ಒಂದು ಭಾಗ
ಪಯರಣ. ನ: [ಪ್ರತರಣ] ಮೊದಲು ನೀಡುವ ಭಿಕ್ಷೆ
ಪಯರಿಸ. 'ಪಯಂಸ' ಶಬ್ದವನ್ನು ನೋಡುವುದು
ಪಯರಿಸ. 'ಪಗರಿಸ' ಶಬ್ದವನ್ನು ನೋಡುವುದು
ಪಯಲ. ಅಕ: [ಪ್ರ +ಚಲ್] ಚಲಿಸು, ಮುಂದೆ ಹೊರಡು, ಸೋರು(ಆಚಾ)
ಪಯಲ. 'ಪಯಡ=ಪ್ರ +ಕಟಯ್' ಶಬ್ದವನ್ನು ನೋಡುವುದು
ಪಯಲ. 'ಪಯಡ=ಪ್ರಕಟ' ಶಬ್ದವನ್ನು ನೋಡುವುದು
ಪಯಲ(ಅಪ). ಸಕ: [ಪ್ರ+ಚಾಲಯ್] ನಡೆಸು, ಬೀಳಿಸು
ಪಯಲ. ವಿ: [ಪ್ರಚಲ] ಚೆನ್ನಾಗಿ ನಡೆಯುವ, ಬಳಕೆಯಲ್ಲಿರುವ(ಪಉಮ)
ಪಯಲ. ಪು: [ದೇ] ಹಕ್ಕಿಯ ಗೂಡು, ನೀಡ(ದೇ)
ಪಯಲ –}. ಸ್ತ್ರೀ: [ದೇ. ಪ್ರಚಲಾ] ನಿದ್ದೆ, ನಿಂತು
ಪಯಲಾ}. ನಿಂತಿದ್ದಹಾಗೇ, ಕುಳಿತಿರುವಂತೆಯೇ ಬರುವ ನಿದ್ದೆ, ಒಂದು ಬಗೆಯ ಕರ್ಮ; ಇದು ಹುಟ್ಟುವುದರಿಂದ ಕುಳಿತಿರುವಂತೆಯೇ ಮತ್ತು ನಿಂತಿರುವಂತೆಯೇ ನಿದ್ದೆ ಬರುತ್ತದೆ. –ಪಯಲಾ. ಸ್ತ್ರೀ: [ದೇ. ಪ್ರಚಲಾ] ನಡೆಯುತ್ತ ನಡೆಯುತ್ತ ನಿದ್ದೆ ಬರುವುದಕ್ಕೆ ಕಾರಣವಾದ ಕರ್ಮ –ವಿಶೇಷ(ಠಾ)
ಪಯಲಾ. ಅಕ: [ಪ್ರಚಲಾಯ್] ನಿದ್ರಿಸು
ಪಯಲಾಇಅ. ನ: [ಪ್ರಚಲಾಯಿತ] ನಿದ್ರೆ; ತಲೆ ಆಡಿಸುತ್ತ ತೂಕಡಿಸು(ಸೇ)
ಪಯಲಾಇಯಾ. ಸ್ತ್ರೀ: [ದೇ] ಕೈಯಿಂದ ಮುಂದೆ ಚಲಿಸುವ ಪ್ರಾಣಿಗಳ ಒಂದು ಜಾತಿ(ಸೂಅ)
ಪಯಲಾಯ. 'ಪಯಲಾ= ಪ್ರಚಲಾಯ್' ತಲೆ ಆಡಿಸುತ್ತ ತೂಕಡಿಸು(ಸೇ)
ಪಯಲಾಯ. ಪು: [ದೇ] ಹರ, ಪರಶಿವ, ಸರ್ಪ(ದೇ)
ಪಯಲಾಯಣ. ನ: [ಪ್ರಚಲಾಯನ] 'ಪಯಲಾಇಅ' ಶಬ್ದವನ್ನು ನೋಡುವುದು
ಪಯಲಾಯಭತ್ತ. ಪು: [ದೇ] ನವಿಲು(ದೇ)
ಪಯಲಿಅ. 'ಪಯಡಿಅ' ಶಬ್ದವನ್ನು ನೋಡುವುದು
ಪಯಲಿಯ. ವಿ: [ಪ್ರಚಲಿತ] ಕೆಳಗೆ ಬಿದ್ದ, ಮುಗ್ಗರಿಸಿದ, ಅಲುಗಾಡಿದ, ಕ್ಷೋಭೆಗೊಂಡ(ಔಪ)
ಪಯಲಿಯ. ವಿ: [ಪ್ರದಲಿತ] ಮುರಿಯಲ್ಪಟ್ಟ, ಭಂಗಿಸಲ್ಪಟ್ಟ (ಕಪ್ಪ)
ಪಯಲೇ. ಸಕ: [ಪ್ರ +ಚಾಲಯ್] ಚಾಲನೆಗೊಳಿಸು, ಚಲಿಸುವಂತೆ ಮಾಡು, ಅಸ್ಥಿರಗೊಳಿಸು, ಕದಲಿಸು
ಪಯಲ್ಲ. ಅಕ: [ಪ್ರ +ಸೃ] ಹರಡು, ಪಸರಿಸು.–'ಪಯಲ್ಲಇ'
ಪಯಲ್ಲ. ಅಕ: [ಕೃ] ಸಡಿಲಗೊಳಿಸು, ಸಡಿಲವಾಗು, ನೇತಾಡು, ತೂಗಾಡು
ಪಯಲ್ಲ. ವಿ: [ಪ್ರಸೃತ] ಹರಡಲ್ಪಟ್ಟ,
ಪಯಲ್ಲ. ಪು: [ಪ್ರಕಲ್ಯ] ಮಹಾ ಗ್ರಹ –ವಿಶೇಷ
ಪಯಲ್ಲಿರ. ವಿ: [ಪ್ರಸೃಮರ] ಹರಡುವವನು
ಪಯಲ್ಲಿರ. ವಿ: [ಶೈಥಿಲ್ಯಕೃತ್] ಸಡಿಲವಾಗುವ (ಕುಮಾ)
ಪಯುಲ್ಲಿರ. ವಿ: [ಲಂಬನಕೃತ್] ನೇತಾಡುವ, ತೂಗಾಡುವ(ಕುಮಾ)
ಪಯವ. ಸಕ: [ಪ್ರ +ತಪ್, +ತಾಪಯ್] ಕಾಯಿಸು, ಬಿಸಿಮಾಡು
ಪಯವ. ಸಕ: [ಪಾ] ಕುಡಿ(ಸೇ)
ಪಯವಈ. ಸ್ತ್ರೀ: [ದೇ] ಸೈನ್ಯ(ದೇ)
ಪಯವಿ. ಸ್ತ್ರೀ: [ಪದವಿ] 'ಪಯವೀ', ಶಬ್ದವನ್ನು ನೋಡುವುದು

ಪಯವಿಅ. ವಿ: [ಪ್ರತಪ್ತ, ಪ್ರತಾಪಿತ] ಕಾಯಿಸಲ್ಪಟ್ಟ, ಬಿಸಿಮಾಡಲಾದ(ಗಾ)

ಪಯವೀ. ಸ್ತ್ರೀ: [ಪದವೀ] ಮಾರ್ಗ, ಹಾದಿ, ದಾರಿ, ಅಧಿಕಾರಸ್ಥಾನ, ಪದವಿ

ಪಯಹ. ಸಕ: [ಪ್ರ +ಹಾ] ತ್ಯಜಿಸು, ಬಿಡು

ಪಯಹಿಣ. 'ಪದಕ್ಖಿಣ=ಪ್ರದಕ್ಷಿಣ', ಶಬ್ದವನ್ನು ನೋಡುವುದು

ಪಯಾ. ಸಕ: [ಪ್ರ +ಜನಯ್] ಜನ್ಮ ನೀಡು(ವುದ), ಹೆರು, 'ಪಯಾಮಿ'

ಪಯಾ. ಸಕ: [ಪ್ರ +ಯಾ] ಪ್ರಯಾಣಿಸು, ಹೊರಡು

ಪಯಾ. ಸ್ತ್ರೀ: [ದೇ] ಒಲೆ

ಪಯಾ. ಸ್ತ್ರೀ.ಬ: [ಪ್ರಜಾ] ಮನುಷ್ಯ, ಪ್ರಜೆ(ವಿಪಾ), ಜನ ಸಮೂಹ, ಲೋಕ, ಪ್ರಾಣಿ –ಸಮೂಹ, ಸಂತಾನವುಳ್ಳ ಮಹಿಳೆ, ಸಂತಾನ, ಮಕ್ಕಳು, **–ಣಂದ.** ಪು: [–ನಂದ] ಒಬ್ಬ ಕುಲಶ್ರೇಷ್ಠ ಪುರುಷನ ಹೆಸರು(ಉಮ), **–ನಾಹ.** ಪು: [–ನಾಥ] ರಾಜ, ದೊರೆ. **–ಪಾಲ.** ಪು: [–ಪಾಲ] ಐದನೇ ಬಲದೇವನ ಗುರುವಾಗಿದ್ದ ಒಬ್ಬ ಜೈನ ಮುನಿ. **–ವಇ.** ಪು: [–ಪತಿ] ಬ್ರಹ್ಮ, ವಿಧಾತ. ಮೊದಲನೇ ವಾಸುದೇವನ ತಂದೆಯ ಹೆಸರು. ನಕ್ಷತ್ರ –ದೇವ –ವಿಶೇಷ(ಠಾ), ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ದಕ್ಷ, ಕಶ್ಯಪ, ಮರೀಚಿಯೇ ಮೊದಲಾದ ಋಷಿಗಳು, ರಾಜ, ಸೂರ್ಯ, ಅಗ್ನಿ, ತ್ವಷ್ಟಾ, ತಂದೆ, ಒಂದು ಕೀಟ, ಅಳಿಯ. ಅಹೋರಾತ್ರದ ಹತ್ತೊಂಬತ್ತನೇ ಮುಹೂರ್ತ

ಪಯಾಇ. ಪು: [ಪದಾತಿ] ಕಾಲಾಳು(ಷಡ್)

ಪಯಾಗ. ಪುಂನ: [ಪ್ರಯಾಗ] ಗಂಗಾ ಯಮುನಾ, ಸರಸ್ವತಿ ಮೊದಲಾದ ನದಿಗಳ ಸಂಗಮ ಸ್ಥಾನವಾದ ತೀರ್ಥರಾಜ(ಪಉಮ)

ಪಯಾಣ. ನ: [ಪ್ರದಾನ] ಚೆನ್ನಾಗಿ ದಾನ ಮಾಡುವುದು, ಕೊಡುವುದು,

ಪಯಾಣ. ನ: [ಪ್ರತಾನ] ವಿಸ್ತಾರ(ಭಗ)

ಪಯಾಣ. ನ: [ಪ್ರಯಾಣ] ಹೊರಡುವುದು, ಯಾತ್ರೆ (ಣಾಯಾ)

ಪಯಾಮ. 'ಪಕಾಮ', ಶಬ್ದವನ್ನು ನೋಡುವುದು

ಪಯಾಮ. ನ: [ದೇ] ಕ್ರಮಾನುಸಾರವಾಗಿ(ದೇ)

ಪಯಾಯ. ವಿ: [ಪ್ರಯಾತ] ಪ್ರಯಾಣ ಮಾಡಿದವನು

ಪಯಾಯ. ವಿ: [ಪ್ರಜಾತ] ಜನಿಸಿದ, ಹುಟ್ಟಿದ

ಪಯಾಯ. ವಿ: [ಪ್ರಜಾತ, ಪ್ರಜನಿತ] ಜನ್ಮ ನೀಡಿದವನು, ಪ್ರಜೆಗಳ ಉತ್ಪತ್ತಿ(ವಿಪಾ)

ಪಯಾಯು. 'ಪಯಾಯು=ಪ್ರತಾಪ' ಶಬ್ದವನ್ನು ನೋಡುವುದು

ಪಯಾರ. ಸಕ: [ಪ್ರ +ಚಾರಯ್] ಪ್ರಚಾರ ಮಾಡು

ಪಯಾರ. ಸಕ: [ಪ್ರ +ತಾರಯ್] ಮೋಸಗೊಳಿಸು, ವಂಚಿಸು

ಪಯಾರ. ಪು: [ಪ್ರಕಾರ] ಪ್ರಭೇದ, ವಿಧ, ರೀತಿ, ತರಹೆ (ಕುಮಾ)

ಪಯಾರ. ಪು: [ಪ್ರಾಕಾರ] ದುರ್ಗ, ಕೋಟೆ, ಸುತ್ತುಗೋಡೆ

ಪಯಾರ. ಪು: [ಪ್ರಚಾರ] ಸಂಚಾರ(ಸುಪಾ) ಉತ್ಕರ್ಷತೆ,ಅತಿಶಯತೆ ಉಂಟಾಗುವುದು, ಆಚರಣೆ, ನಡವಳಿಕೆ, ಹರಡುವಿಕೆ,ಪ್ರಸಾರ

ಪಯಾರಣ. ನ: [ಪ್ರತಾರಣ] ವಂಚನೆ, ಮೋಸ(ಸುರ)

ಪಯಾರಿಅ. ವಿ: [ಪ್ರತಾರಿತ] ವಂಚಿಸಲ್ಪಟ್ಟ, ಮೋಸಕ್ಕೊಳಗಾದ

ಪಯಾಲ. ಪು: [ಪಾತಾಲ] ಅನಂತನಾಥ ತೀರ್ಥಂಕರನ ಶಾಸನ–ಯಕ್ಷ

ಪಯಾವ. ಸಕ: [ಪ್ರ +ತಾಪಯ್] ಕಾಯಿಸು, ಬಿಸಿಮಾಡು

ಪಯಾವ. ಪು: [ಪ್ರತಾಪ] ತೇಜಸ್ಸು, ಪ್ರಖರತೆ, ಪ್ರಭಾವ, ಅತಿಯಾದ ಕಾವು, ಅತಿಯಾದ ಬಿಸಿ(ಪವ)

ಪಯಾವಣ. ನ: [ಪಾಚನ] ಬೇಯಿಸುವಂತೆ ಮಾಡುವುದು, ಅಡುಗೆ ಮಾಡಿಸುವುದು

ಪಯಾವಣ. ನ: [ಪ್ರತಾಪನ] ಬಿಸಿಮಾಡುವುದು, ಕಾಯಿಸುವುದು, ಬೆಂಕಿ

ಪಯಾವಿ. ವಿ: [ಪ್ರತಾಪಿನ್] ಪ್ರತಾಪಶಾಲಿ, ಪು: ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು.

ಪಯಾಸ. ಸಕ: [ಪ್ರ +ಕಾಶಯ್] ಪ್ರಕಟಪಡಿಸು, ಬೆಳಗು, ಹೊಳೆಯಿಸು, ಪ್ರಸಿದ್ಧಪಡಿಸು

ಪಯಾಸ. 'ಪಗಾಸ=ಪ್ರಕಾಶ' ಶಬ್ದವನ್ನು ನೋಡುವುದು

ಪಯಾಸ. ಪು: [ಪ್ರಯಾಸ] ಪ್ರಯತ್ನ,

ಪಯಾಸ(ಅಪ). ಮುಂದಿನ ಶಬ್ದವನ್ನು ನೋಡುವುದು

ಪಯಾಸಗ. ವಿ. [ಪ್ರಕಾಶಕ] ಬೆಳಕನ್ನು ಉಂಟು ಮಾಡುವವನು, ಬೆಳಗುವವನು

ಪಯಾಸಣ. ನ: [**ಪ್ರಕಾಶನ**] ಪ್ರಕಾಶಪಡಿಸುವುದು, (ಆಚಾ), ವಿ: ಪ್ರಕಾಶವನ್ನುಂಟುಮಾಡುವವನು.
ಪಯಾಸಯ. **'ಪಯಾಸಗ' ಶಬ್ದವನ್ನು ನೋಡುವುದು**
ಪಂಯಾಸಿ. ವಿ: [**ಪ್ರಕಾಶಿನ್**] ಬೆಳಕನ್ನು ಉಂಟುಮಾಡುವವನು(ಭವಿ)
ಪಯಾಸೆಂತ. **ಪಯಾಸ=ಪ್ರ +ಕಾಶಯ್' ಶಬ್ದವನ್ನು ನೋಡುವುದು**
ಪಯಾಹಿಣ. **'ಪದಕ್ಖಿಣ=ಪ್ರದಕ್ಷಿಣಯ್' ಶಬ್ದವನ್ನು ನೋಡುವುದು**
ಪಯಾಹಿಣಾ. **'ಪದಕ್ಖಿಣಾ' ಶಬ್ದವನ್ನು ನೋಡುವುದು**
ಪಯ್ಯವತ್ಥಾಣ.(ಶೌ). ನ: [**ಪರ್ಯವಸ್ಥಾನ**] ಪ್ರಕೃತಿಯಲ್ಲಿ ಇರುವುದು, ನೆಲೆಸುವುದು
ಪರ. ಸಕ: [**ಭ್ರಮ್**] ತಿರುಗಾಡು, ಸಂಚರಿಸು. –**'ಪರಇ'**
ಪರ. **'ಪ=ಪ್ರ' ಶಬ್ದವನ್ನು ನೋಡುವುದು**
ಪರ. ವಿ: [**ಪರ**] ಅನ್ಯ, ಬೇರೆಯವನು, ಇತರ(ಗಾ), ತತ್ಪರ, ತಲ್ಲೀನ, ಶ್ರೇಷ್ಠ, ಉತ್ತಮ(ಆಚಾ), ಹೆಚ್ಚಿನ, ಬಹಳ, ಮಿಗಿಲಾದ, ಅನಂತರದ, ದೂರ ಇರುವ(ಸೂಅ). ತಮ್ಮವನಲ್ಲದ, **ಪು:** ಶತ್ರು, ವೈರಿ, ಕೇವಲ, ಮಾತ್ರ(ಭವಿ). **–ಉಟ್ಠ.** ವಿ: [–**ಪುಷ್ಟ**] ಅನ್ಯರಿಂದ ಪೋಷಿಸಲ್ಪಟ್ಟ, **ಪು:** ಕೋಗಿಲೆ. **–ಉತ್ಥಿಯ.** ವಿ: [–**ತೀರ್ಥಿಕ**] ಭಿನ್ನ ತತ್ತ್ವ, ದರ್ಶನವುಳ್ಳ. **–ಏಸ.** **ಪು:** [–**ದೇಶ**] ವಿದೇಶ, ಅನ್ಯ ದೇಶ, ಭಿನ್ನ ದೇಶ(ಭವಿ). **–ಓ.** **ಅ:** [–**ತಸ್**] ಅನಂತರದಲ್ಲಿ, ಬೇರೆಯದರಲ್ಲಿ (ಕುಮಾ). **–ಗಣಿಚ್ಚಯ.** ವಿ: [–**ಗಣೀಯ**] ಭಿನ್ನ ಗಣದೊಂದಿಗೆ ಸಂಬಂಧ ಹೊಂದಿರುವ, **ಸ್ತ್ರೀ: –ಚ್ಚಿಯಾ**(ನಿಚೂ). **–ಗರಿಹಜ್ಝಾಣ.** ನ: [–**ಗರ್ಹಾಧ್ಯಾನ**] ಇತರರ ನಿಂದೆಯ ವಿಚಾರ. **–ಘಾಯ.** **ಪು:** [**ಪರಾಘಾತ**] ಬೇರೆಯವರಿಗೆ ಆಘಾತವುಂಟುಮಾಡುವುದು. **ಪುಂನ:** ಕರ್ಮ –ವಿಶೇಷ. ಇದು ಉದಿಸುವುದರಿಂದ ಜೀವವು ಇನ್ನಿತರೆ ಬಲಶಾಲಿಗಳ ದೃಷ್ಟಿಯಲ್ಲಿಯೂ ಅಜೇಯವೆಂದು ತಿಳಿಯಲಾಗುತ್ತದೆ(ಕಮ್ಮ). **–ಚಿತ್ತಣ್ಣು.** ವಿ: [–**ಚಿತ್ತಜ್ಞ**] ಇನ್ನೊಬ್ಬರ ಮನಸ್ಸಿನ ಭಾವವನ್ನು ತಿಳಿದುಕೊಳ್ಳುವವನು(ಉಪ). **–ಚ್ಛಂದ, –ಛಂದ.** **ಪು:** [**–ಚ್ಛಂದ**] ಇನ್ನೊಬ್ಬನ ಅಭಿಪ್ರಾಯ(ಶಾ) ಪರಾಧೀನ. **–ಜಾಣುಅ.** ವಿ: [–**ಜ್ಞ**] ಪರವನ್ನು/ ಅನ್ಯವನ್ನು ತಿಳಿದವನು, ಬಹಳವಾಗಿ ಅರಿತವನು. **–ಟ್ಠ.** **ಪು:** [**ಪರಾರ್ಥ**] ಪರೋಪಕಾರ. **–ಟ್ಠಾ.** **ಸ್ತ್ರೀ:** [**ಪರಾರ್ಥ**] ಇನ್ನೊಬ್ಬರ ಸಲುವಾಗಿ. **–ಣಿಂದಜ್ಝಾಣ.** ನ: [–**ನಿಂದಾಧ್ಯಾನ**] ಅನ್ಯರ ನಿಂದೆಯ ಚಿಂತನೆ. **–ಣ್ಣುಅ.** **'–ಜಾಣುಅ'** ಶಬ್ದವನ್ನು ನೋಡುವುದು. **–ತಂತ.** ವಿ: [–**ತಂತ್ರ**] ಪರಾಧೀನ. **–ತಿತ್ಥಿಅ.** **'–ಉತ್ಥಿಯ'** ಶಬ್ದವನ್ನು ನೋಡುವುದು **(ಭಗ)**. **–ತೀರ.** ನ: [–**ತೀರ**] ಎದುರುಗಡೆಯಿರುವ ದಡ(**ಪಾಅ**). **–ತ್ತ.** ನ: [–**ತ್ವ**] ಭಿನ್ನತ್ವ, ಬೇರೆಯಾಗಿರುವಿಕೆ, ಪ್ರತ್ಯೇಕವಾಗಿರುವುದು. ವೈಶೇಷಿಕ ದರ್ಶನದಲ್ಲಿ ಪ್ರಸಿದ್ಧವಾದ ಗುಣ –ವಿಶೇಷ. **–ತ್ತ.** **ಅ:** [–**ತ್ರ**] ಜನ್ಮಾಂತರದಲ್ಲಿ, ಪರಲೋಕದಲ್ಲಿ(**ಸುಪಾ**). **ನ:** ಜನ್ಮಾಂತರ. **–ತ್ಥ.** **ಅ:** [–**ತ್ರ**] ಜನ್ಮಾಂತರದಲ್ಲಿ. **–ತ್ಥ.** **'–ಟ್ಠ'** ಶಬ್ದವನ್ನು ನೋಡುವುದು. **–ಥೀ.** **ಸ್ತ್ರೀ:** [–**ಸ್ತ್ರೀ**] ಪರಕೀಯ ಮಹಿಳೆ. **–ದಾರ.** **ಪುಂನ:** [–**ದಾರ**] ಪರಕೀಯ ಸ್ತ್ರೀ(**ಪಡಿ**). **–ದಾರಿ.** ವಿ: [–**ದಾರಿನ್**] ಪರಸ್ತ್ರೀ ಲಂಪಟ. **–ಪಕ್ಖ.** ವಿ: [–**ಪಕ್ಷ**] ಭಿನ್ನ ಧರ್ಮದ ಅನುಯಾಯಿ. **–ಪರಿವಾಇಯ.** ವಿ: [–**ಪರಿವಾದಿಕ**] ಇತರರ ದೋಷಗಳನ್ನು ಹೇಳುವವನು, ಪರನಿಂದಕ (ಔಪ). **–ಪರಿವಾಯ.** **ಪು:** [–**ಪರಿವಾದ**] ಪರರ ಗುಣ ದೋಷಗಳ ಕುರಿತ ಅಸಂಬದ್ಧವಾದ ಮಾತು(ಔಪ). ಪರನಿಂದೆ. ಅನ್ಯರ ಸದ್ಗುಣಗಳನ್ನು ಅಲ್ಲಗಳೆಯುವುದು. **–ಪರಿವಾಯ.** **ಪು:** [–**ಪರಿಪಾತ**] ದೋಷೋದ್ಘಾಟನೆಯ ಮೂಲಕ ಇತರರನ್ನು ಬೀಳಿಸುವುದು. **–ಪುಟ್ಠ.** **'–ಉಟ್ಠ'** ಶಬ್ದವನ್ನು ನೋಡುವುದು.**(ಪಣ್ಣ)**. **–ಭವ.** **ಪು:** [–**ಭವ**] ಮುಂದಿನ ಜನ್ಮ. **–ಭವಿಅ.** ವಿ: [–**ಭವಿಕ**] ಬರಲಿರುವ ಜನ್ಮದೊಂದಿಗೆ ಸಂಬಂಧವಿಟ್ಟು ಕೊಂಡಿರುವವ(ಭಗ). **–ಭಾಗ.** **ಪು:** [–**ಭಾಗ**] ಶ್ರೇಷ್ಠ ಅಂಶ. ಶ್ರೇಷ್ಠ ಅಂಶ, ಅನ್ಯರ ಪಾಲು. ಅತ್ಯಂತ ಶ್ರೇಷ್ಠ(ಉಪ). **–ಮಹೇಲಾ.** **ಸ್ತ್ರೀ:** [–**ಮಹೇಲಾ**] ಉತ್ತಮ ಸ್ತ್ರೀ, ಪರಕೀಯ ಸ್ತ್ರೀ(ಪಾಅ) **–ಯತ್ತ.** **'ಪರಾಯತ್ತ'** ಶಬ್ದವನ್ನು ನೋಡುವುದು. **–ಲೋಅ, –ಲೋಗ.** **ಪು:** [–

ಲೋಕ] ಪರರು, ಸ್ವಜನರಲ್ಲದವರು. –ವಸ. ವಿ: [–ವಶ] ಪರಾಧೀನ, ಅಸ್ವತಂತ್ರ. –ವಾಇ. ಪು: [–ವಾದಿನ್] ಇತರೆ ದಾರ್ಶನಿಕ. –ವಾಯ. ಪು: [–ವಾದ] ಭಿನ್ನ ದರ್ಶನ, ಭಿನ್ನ ಮತ(ಔಪ), ಶ್ರೇಷ್ಠ ವಾದಿ. –ವಾಯ. ಪು: [–ವಾಚ್] ಸಜ್ಜನ, ಒಳ್ಳೆಯ ವ್ಯಕ್ತಿ. ವಿ: ಶ್ರೇಷ್ಠ ಮಾತಿನ, –ವಾಯ. ವಿ: [–ವಾಜ] ಶ್ರೇಷ್ಠ ನಡಿಗೆಯ, ಶ್ರೇಷ್ಠ ಗತಿಯ, ಶ್ರೇಷ್ಠ ಕುದುರೆ. –ವಾಯ. ವಿ: [ಪರಾವಾಯ] ಜ್ಞಾನಿ. ತಿಳಿದವನು. –ವಾಯ. ವಿ: [–ಪಾಕ] ಒಳ್ಳೆಯ ಅಡಿಗೆ ಮಾಡುವವನು, ಪು: ಅಡಿಗೆಯವನು. –ವಾಯ. ಪು: [–ಪಾತ] ಜೂಜುಗಾರ, ಅಶುಭ ಸಮಯ. –ವಾಯ. ಪು: [–ವ್ಯಾದ] ಬ್ರಾಹ್ಮಣ. –ವಾಯ. ಪು: [ಪರಾವಾಯ] ಶ್ರೀಮಂತ ನೇಯ್ಗೆಯವನು, ಹಣವಂತ ನೇಕಾರ. –ವಾಯ. ವಿ: [–ವ್ರಾತ] ಬಹಳಷ್ಟು ಗುಂಪುಗಳುಳ್ಳ. ನ: ಸುಭಿಕ್ಷ ಸಮಯದ ಧಾನ್ಯ. –ವಾಯ. ಪು: [–ವಾತ] ಬೇಸಿಗೆ ಕಾಲದ ಸಮುದ್ರ –ತೀರ. –ವಾಯ. ಪು: [–ವ್ಯಾಚ] ಧೂರ್ತ, ವಂಚಕ. –ವಾಯ. ವಿ: [ಪರಾಪಾಯ] ಅನೀತಿವಂತ. –ವಾಯ. ವಿ: [–ವಾಕ] ವೇದಜ್ಞ, ವೇದ ವಿದ್ವಾಂಸ. –ವಾಯ. ವಿ: [–ಪಾತೃ] ದಯಾಳು, ಚೆನ್ನಾಗಿ ತಾಂಬೂಲ ತಯಾರಿಸುವವನು, ಚೆನ್ನಾಗಿ ಒಣಗುವ ಪು: ಮಳೆಗಾಲದ ತೀಟಕಸಂಧಿ ಎಂಬ ವೃಕ್ಷ. ಮದ್ಯ ವ್ಯಸನಿ, –ವಾಯ. ವಿ: [–ವಾದ] ಸುಸ್ಥಿರ. –ವ್ಯಾಯ. ವಿ: [–ವ್ಯಾತೃ] ಶ್ರೇಷ್ಠ ಆಚ್ಛಾದಕ, ಚೆನ್ನಾಗಿ ಮರೆಮಾಡುವಂಥ. ವಸ್ತ್ರ, ಬಟ್ಟೆ. –ವಾಯ. ವಿ: [–ವಾತೃ] ಬಹಳವಾಗಿ ಹೊರುವ. ಶ್ರೇಷ್ಠ ನೇಕಾರ. ಮಹಾನ್ ವಾಯು, –ವಾಯ. ವಿ: [–ವ್ಯಾಗಸ್] ಗುರುತರ ಅಪರಾಧಿ(ಶ್ರಾ). –ವಾಯ. ವಿ: [–ವ್ಯಾಪ] ಬಹಳ ವಿಸ್ತಾರವಾದ. –ವಾಯ. ವಿ: [–ವಾಕ] ಬಹಳಷ್ಟು ಬಕ –ಸಮೂಹಗಳಿರುವ ಸ್ಥಳ. ನ: ಮೀನುಗಳಿಂದ ತುಂಬಿ ತಳುಕುವ ಸರೋವರ(ಶ್ರಾ]. –ವಾಯ ವಿ: [–ವ್ಯಾಯ] ಶ್ರೇಷ್ಠ ಗಾಳಿ ಇರುವ, ಬಹಳಷ್ಟು ಪಕ್ಷಿಗಳು ಬರುವ ಸ್ಥಳ. ಪು: ಅನುಕೂಲಕರವಾದ ಗಾಳಿಯಿಂದ ಸಾಗುತ್ತಿರುವ ಹಡಗು, ಸುಂದರವಾದ ಮನೆ. ಕಾಡು ಪ್ರದೇಶ. –ವಾಯ. ವಿ: [ಪರಾವಾಯ] ನೀರು ಬಹಳವಾಗಿ ಬರುವ ಸ್ಥಳ, ನ: ಸಮುದ್ರದ ಮುಖಜ ಭೂಮಿ, ಪು: ಮಹಾ ಸಾಗರ. –ವಾಯ. ವಿ: [–ವ್ಯಾಜ] ಬೇರೆಯವರ ಹತ್ತಿರ ವಿಶೇಷವಾಗಿ ಹೋಗುವ; ಪ್ರಾರ್ಥನಾ ಪರಾಯಣ(ಶ್ರಾ). –ವಾಯ. ವಿ: [ಪರಾಪಾಯ] ಅತ್ಯಂತ ಭಾಗ್ಯಹೀನ, ನಿತ್ಯ ದರಿದ್ರ(ಶ್ರಾ). –ವಾಯ. ವಿ: [–ವಾಪ] ಬಹಳಷ್ಟು ತಲೆಬೋಳಿಸಿ ಕೊಂಡಿರುವವನು, ಪು: ರೈತ(ಶ್ರಾ), –ವಾಯ. ವಿ: [–ವಾಪ] ಮಹಾ ಪಾಪಿ, ಕೊಲೆಗಾರ. –ವಾಯ. ಪು: [ಪರಾಪಾಕ] ಕುಂಬಾರ, ಮುಕ್ತ ಜೀವ, ಮೊದಲ ಮೂರು ನರಕ–ಲೋಕಗಳು(ಶ್ರಾ). –ವಾಯ. ವಿ: [ಪರಾಪಾಗ] ಮರಗಳಿಲ್ಲದಿರುವ, ವೃಕ್ಷ –ರಹಿತ. –ವಾಯ. ವಿ: [–ವಾಜ್] ಶತ್ರು –ನಾಶಕ(ಶ್ರಾ). –ವಾಯ. ಪು: [–ಪಾದ] ಮಹಾ ವೃಕ್ಷ, ದೊಡ್ಡ ಮರ. –ವಾಯ. ವಿ: [–ಪಾತ್] ಬಹಳಷ್ಟು ಪಾದಗಳುಳ್ಳ, –ವಾಯ. ವಿ: [–ವಾಚ್] ಕೊಯ್ಲಿಗೆ ಬಂದಿರುವ ಬತ್ತ. –ವಾಯ. ವಿ: [ಪರಾವಾಪ] ವಿಶೇಷ ಭಾವದಿಂದ ಶತ್ರುವಿನ ಬಗ್ಗೆ ಚಿಂತಿಸುವವನು. ಪು: ಮಂತ್ರಿ, ಯೋಧ(ಶ್ರಾ). –ವಾಯ. ವಿ: [–ಪರಾಪಾತ] ಮೇಲುನೋಟಕ್ಕೇ ಸುಂದರವಾಗಿರುವ. –ವಾಯ. ವಿ: [–ವ್ರಾಯ] ಶ್ರೇಷ್ಠ ವಿವಾಹವುಳ್ಳ. –ವಾಯ. ವಿ: [–ಪಾಯ] ಬಹಳ ಒಳ್ಳೆಯ ರಕ್ಷಣೆಯ ವ್ಯವಸ್ಥೆಯುಳ್ಳ, ಬಹಳವಾಗಿ ಬಾಯಾರಿದ, ಪು:ರಾಜ. –ವಾಯ. ವಿ: [–ವ್ಯಾತ] ಬೇರೆಯವರ ಸಮೀಪಕ್ಕೆ ವಿಶೇಷವಾಗಿ ಹೋಗುವ, ಭಿಕ್ಷುಕ, ಯಾಚಕ. –ವಾಯ. ವಿ: [–ಪಯಸ್] ಬೇರೆಯವರ ರಕ್ಷಣೆಯ ಸಲುವಾಗಿ ಆಯುಧವನ್ನು ಇಟ್ಟುಕೊಳ್ಳುವವನು. ಪು: ಯೋಧ, ಸುಭಟ. –ವಾಯಾ. ಸ್ತ್ರೀ: [–ವ್ಯಾಜಾ] ವೇಶ್ಯೆ, ವಾರಾಂಗನೆ. –ವಾಯಾ. ಸ್ತ್ರೀ: [–ವ್ಯಾಗಸ್] ಕುಲಟೆ, ಜಾರಿಣಿ, –ವಾಯಾ. ಸ್ತ್ರೀ: [–ವ್ಯಾಪಾ] ಅಂತಿಮ ಸಾಗರದ ಸ್ಥಿತಿ. –ವಾಯಾ. ಸ್ತ್ರೀ: [ಪರಾಪಾತ] ಧೂರ್ತ ಸ್ನೇಹ. –ವಾಯಾ. ಸ್ತ್ರೀ: [–ವ್ರಾಯಾ] ಅರಸನ ಮಗಳು. –ವಾಯಾ. ಸ್ತ್ರೀ: [ಪರಾಪಗಾ]ಮರುಭೂಮಿ(ಶ್ರಾ), –ವಾಯಾ. ಸ್ತ್ರೀ: [–ವಾಚ್] ಕಾಶ್ಮೀರ

–ಭೂಮಿ(ಶ್ರಾ), [–ವಾಯಾ] ಸ್ತ್ರೀ: [–ವಾಜ್] ರಾಜತ್ವ, ಅರಸುತನ. –ವಾಯಾ. ಸ್ತ್ರೀ: [–ಪಾತ] ಶತಪದಿ, ಒಂದು ಹುಳು. –ವಾಯಾ. ಸ್ತ್ರೀ: [–ವ್ಯಾವಾ] ಭೇರಿ; ವಾದ್ಯ –ವಿಶೇಷ. [–ವಿಐಸ]. ಪು: [–ವಿದೇಶ] ಪರದೇಶ, ಅನ್ಯದೇಶ(ಪಉಮ). –ವ್ವಸ. '–ವಸ' ಶಬ್ದವನ್ನು ನೋಡುವುದು. –ಸಂತಿಗ. ವಿ: [–ಸತ್ಕ] ಪರಕೀಯ(ಪಣ್ಣ). –ಸಮಯ. ವಿ: ಬೇರೆಯವರಿಂದ ಪೋಷಿಸಲ್ಪಟ್ಟ, ಪುಂಸ್ತ್ರೀ: ಕೋಗಿಲೆ. ಸ್ತ್ರೀ: ಆ. ಪರಾಛಾಯ

'–ಛಾಯ' ಶಬ್ದವನ್ನು ನೋಡುವುದು. **ಪರಾಧೀಣ.** 'ಪರಾಹೀಣ'ಶಬ್ದವನ್ನು ನೋಡುವುದು. **ಪರಾಯತ್ತ.** ವಿ: [ಪರಾಯತ್ತ] ಪರಾಧೀನ, ಪರತಂತ್ರ, ದಾಸ್ಯ(ಉಪ)**ಪರಾಹೀಣ.** ವಿ: [ಪರಾಧೀನ] ಪರತಂತ್ರ, ಇನ್ನೊಬ್ಬನ ಅಧೀನದಲ್ಲಿರುವುದು.

ಪರಂ – 'ಪರಾ=ಅ(ಶ್ರಾ) ಶಬ್ದವನ್ನು ನೋಡುವುದು

ಪರಂ. ಅ: [ಪರಮ್] ಆದರೆ, ಅನಂತರ(ಕಸ), ಕೇವಲ

ಪರಂ. ಅ: [ಪರುತ್] ಮುಂದೆ ಬರಲಿರುವ ವರ್ಷ

ಪರಂಗ. ಸಕ: [ಪರಿ +ಅಂಗ್] ಚಲಿಸು, ನಡೆ,

ಪರಂಗಮಣ. ನ: [ಪರ್ಯಂಗನ] ಕಾಲ್ನಡಿಗೆ, ಚಂಕ್ರಮಣ

ಪರಂಗಾಮಣ. ನ: [ಪರ್ಯಂಗನ] ಕಾಲಿನಿಂದ ನಡೆಸುವುದು, ಕಾಲ್ನಡಿಗೆ ಮಾಡಿಸುವುದು(ಭಗ)

ಪರಂತಮ. ವಿ: [ಪರತಮ] ಬೇರೆಯುವರನ್ನು ಚಕಿತಗೊಳಿಸುವವನು, ಬೇರೆಯುವರನ್ನು ವ್ಯಗ್ರಗೊಳಿಸುವವನು.

ಪರಂತಮ. ವಿ: [ಪರತಮಸ್] ಬೇರೆಯವರ ಮೇಲೆ ಸಿಟ್ಟಿಗೇಳುವವನು, ಅನ್ಯ ವಿಷಯಕ್ಕೆ ಸಂಬಂಧಿಸಿದಂತೆ ಅಜ್ಞಾನ ಹೊಂದಿರುವವನು

ಪರಂತು. ಅ: [ಪರಂತು] ಆದರೆ(ಸುಪಾ)

ಪರಂದಮ. ವಿ: [ಪರಂದಮ] ಬೇರೆಯವರನ್ನು ಪೀಡಿಸುವವನು(ಉತ್ತ), ಬೇರೆಯುವರನ್ನು ಶಾಂತಗೊಳಿಸುವವನು, ಕುದುರೆಗಳನ್ನು ತರಬೇತುಗೊಳಿಸುವವನು(ಶಾ)

ಪರಂಪರ}. ವಿ: [ಪರಂಪರ] ಬೇರೆ ಬೇರೆ, ವಸ್ತು

ಪರಂಪರಗ}. ಅಥವಾ ಕಾಲ ಇವುಗಳಿಂದ

ಪರಂಪರಯು}. ಮರೆಯಾಗಿರುವ. **ಪುಂನ:** ನಿರಂತರ ಪ್ರವಾಹ, ಒಂದಾದ ಮೇಲೊಂದು ಬರುವುದು

ಪರಂಪರಾ. ಸ್ತ್ರೀ: [ಪರಂಪರಾ] ಅನುಕ್ರಮ, ಪರಂಪರೆ, ತಡೆಯಿಲ್ಲದೆ ನಿರಂತರವಾಗಿ ಸಾಗುವ ಪ್ರವಾಹ, ನಿರಂತರತೆ, ವ್ಯವಧಾನವಿಲ್ಲದಿರುವುದು. ಅಂತರ, ವ್ಯವಧಾನವಿರುವುದು(ಭಗ)

ಪರಂಭರಿ. ವಿ: [ಪರಂಭರಿ] ಇನ್ನೊಬ್ಬರ ಹೊಟ್ಟೆ ತುಂಬಿಸುವವನು(ಶಾ)

ಪರಂಮುಹ. ವಿ: [ಪರಾಙ್ಮುಖ] ಮುಖ ತಿರುಗಿಸಿರುವ, ವಿಮುಖ(ಪಿ)

ಪರಕೀಅ.}. ವಿ: [ಪರಕೀಯ] ಇತರರಿಗೆ

ಪರಕೇರ}. ಸಂಬಂಧಿಸಿದ, ಇನ್ನೊಬ್ಬನ

ಪರಕ್ಕ}.

ಪರಕ್ಕ. ನ: [ದೇ] ಸಣ್ಣ ಪ್ರವಾಹ(ದೇ)

ಪರಕ್ಕಂತ. ವಿ: [ಪರಾಕ್ರಾಂತ] ಪರಾಕ್ರಮ ತೋರಿದವನು, ಅನ್ಯರಿಂದ ಆಕ್ರಮಿಸಲ್ಪಟ್ಟ, ಅನ್ಯರಿಂದ ಮುತ್ತಿಗೆ ಹಾಕಲ್ಪಟ್ಟ, ನ:ಪರಾಕ್ರಮ, ಬಲ, ಪ್ರಯತ್ನ, ಅನುಷ್ಠಾನ(ಸೂಅ)

ಪರಕ್ಕಮ. ಅಕ: [ಪರಾ +ಕ್ರಮ್] ಅನ್ಯರ ಮೇಲೆ ಮುತ್ತಿಗೆ ಹಾಕು, ಆಕ್ರಮಣ ಮಾಡು. ಹೋಗು, ಸೇವೆಮಾಡು, **ಅಕ:** ತೊಡಗು,

ಪರಕ್ಕಮ. ಪುಂನ: [ಪರಾಕ್ರಮ] ಹಳ್ಳ, ತಗ್ಗುಗಳಿಂದ ಬೇರೆಯಾದ ಮಾರ್ಗ, ವೀರ್ಯ, ಬಲ, ಶಕ್ತಿ, ಸಾಮರ್ಥ್ಯ(ವಿಸೇ), ಉತ್ಸಾಹ, ಪ್ರಯತ್ನ, ಶತ್ರುವನ್ನು ನಾಶಮಾಡುವ ಶಕ್ತಿ, ಪರರ ಮೇಲಿನ ಆಕ್ರಮಣ, ಬೇರೆಯವರಸೋಲು, ನಡಿಗೆ.

ಪರಕ್ಕಮಿ. ವಿ: [ಪರಾಕ್ರಮಿನ್] ಪರಾಕ್ರಮಶಾಲಿ (ಧರ್ಮವಿ).

ಪರಗ. ನ: [ದೇ. ಪರಕ] ಹೂವುಗಳನ್ನು ಪೋಣಿಸುವ ಒಂದು ಬಗೆಯ ಹುಲ್ಲು(ಆಚಾ). ಧಾನ್ಯ–ವಿಶೇಷ

ಪರಗ. ವಿ: [ಪಾರಗ] 'ಪರಗ' ತೃಣದಿಂದ ಮಾಡಲ್ಪಟ್ಟ

ಪರಗ್ಘ. ವಿ: [ಪರಾರ್ಘ] ಅತ್ಯಂತ ಬೆಲೆಬಾಳುವ, ದುಬಾರಿಯ, ತುಟ್ಟಿಯ

ಪರಗಾಸಯ. ವಿ: [ಪ್ರಕಾಶಕ] ಪ್ರಕಾಶವನ್ನು ಉಂಟುಮಾಡುವವನು(ತಂದು)

ಪರಜ್ಜ.(ಅಪ). ಸಕ: [ಪರಾ +ಜಿ] ಸೋಲಿಸು(ಭವಿ)

ಪರಜ್ಜಿಯ.(ಅಪ).ವಿ: [ಪರಾಜಿತ] ಸೋಲಿಸಲ್ಪಟ್ಟವನು, ಸೋತವನು(ಭವಿ)

ಪರಜ್ಝ. ವಿ: [ದೇ] ಬೇರೆಯವರ ವಶದಲ್ಲಿರುವ, ಪರಾಧೀನ, ಪರತಂತ್ರ(ಬೃಹ), **ಪುಂನ:**ಪರಾಧೀನತೆ
ಪರಟ್ಟ. **'ಪರಿಅಟ್ಟ=ಪರಿವರ್ತ' ಶಬ್ದವನ್ನು ನೋಡುವುದು**
ಪರಡಾ. **ಸ್ತ್ರೀ:** [ದೇ] ಸರ್ಪ –ವಿಶೇಷ(ಸುಪಾ)
ಪರದಾರಿಅ. **ಪು:** [ಪರದಾರಿಕ] ಪರಸ್ತ್ರೀ ಲಂಪಟ (ಪಉಮ)
ಪರದ್ಧ. ವಿ: [ದೇ] ಪೀಡಿಸಲ್ಪಟ್ಟ, ದುಃಖಿತ(ದೇ), ಪತಿತ, ಹೆದರುವ, ಅಂಜುಕುಳಿ, ವ್ಯಾಪಿಸಲ್ಪಟ್ಟ
ಪರಪ್ಪರ. **'ಪರೊಪ್ಪರ' ಶಬ್ದವನ್ನು ನೋಡುವುದು**
ಪರಬ್ಭವಮಾಣ. **'ಪರಾಭವ' ಶಬ್ದವನ್ನು ನೋಡುವುದು**
ಪರಭತ್ತ. ವಿ: [ದೇ] ಭೀರು, ಭಯಸ್ವಭಾವದ, ಅಂಜುಕುಳಿ
ಪರಭಾಅ. **ಪು:** [ದೇ] ಸುರತ, ಮೈಥುನ(ದೇ)
ಪರಮ. ವಿ: [ಪರಮ] ಉತ್ಕೃಷ್ಟ, ಶ್ರೇಷ್ಠ, ಸರ್ವೋತ್ತಮ (ಕುಮಾ), ಅತ್ಯಂತ, ಪ್ರಧಾನ, ಮುಖ್ಯ, **ಪು:** ಮೋಕ್ಷ, ಮುಕ್ತಿ, ಸಂಯಮ, ಚಾರಿತ್ರ(ಆಚಾ), ನಿರಂತರ ಐದು ದಿನಗಳ ಉಪವಾಸ. **–ಟ್ಠ. ಪು:** [ಪರಮಾರ್ಥ] ವಾಸ್ತವಿಕ ಪದಾರ್ಥ, ಮೋಕ್ಷ, ಮುಕ್ತಿ(ಉತ್ತ), ಸಂಯಮ, ಚಾರಿತ್ರ (ಸೂಅ). **ಪುಂನ: 'ತ್ಥ=ಪರಮಾರ್ಥ'** ಶಬ್ದವನ್ನು ನೋಡುವುದು. **–ಣ್ಣ. '–ನ್ನ' ಶಬ್ದವನ್ನು ನೋಡುವುದು. ತ್ಥ. ಪುಂನ:** [ಪರಮಾರ್ಥ] ತತ್ತ್ವ, ಸತ್ಯ, **–ತ್ಥ. ನ:** [ಪರಮಾಸ್ತ್ರ] ಅಮೋಘ ಅಸ್ತ್ರ, ಅತ್ಯುತ್ತಮ ಆಯುಧ. **–ದಂಸಿ.** ವಿ: [–ದರ್ಶಿನ್] ಮೋಕ್ಷವನ್ನು ದರ್ಶಿಸುವವನು, ಮೋಕ್ಷ ಮಾರ್ಗವನ್ನು ಬಲ್ಲವನು. **–ನ್ನ. ನ:** [–ನ್ನ] ಪಾಯಸ, ಖೀರು, ಮೃಷ್ಟಾನ್ನ ಒಂದು ದಿನದ ಉಪವಾಸ(ಸಂಬೋಧ). **–ಪಯ. ನ:** [–ಪದ] ಮೋಕ್ಷ, ನಿರ್ವಾಣ(ಪಾಅ). **–ಪ್ಪ. ಪು:** [ಪರಮಾತ್ಮನ್] ಸರ್ವೋತ್ತಮ ಆತ್ಮ, **ಪರಮೇಶ್ವರ.** (ಸುಪಾ). **–ಪ್ಪಯ. '–ಪಯ'** ಶಬ್ದವನ್ನು ನೋಡುವುದು. **–ಪ್ಪಯ. '–ಪ್ಪ'**ಶಬ್ದವನ್ನು ನೋಡುವುದು. **–ಪ್ಪಯಾ. ಸ್ತ್ರೀ:** [–ಪರಮಾತ್ಮತಾ] ಮುಕ್ತಿ, ಮೋಕ್ಷ(ಸುಪಾ) **–ಬೋಧಿಸತ್ತ. ಪು:** [–**ಬೋಧಿಸತ್ತ್ವ**] ಪರಮ ಅರ್ಹಂತ, ಅರ್ಹನ್ ದೇವನ ಪರಮ ಭಕ್ತ. **–ಸಂಖಿಜ್ಜ. ನ:** [–**ಸಂಖ್ಯೇಯ**] ಸಂಖ್ಯಾ ವಿಶೇಷ. **–ಸೋಮಣಸ್ಸಿಯ.** ವಿ:[–ಸೌಮನಸ್ಯಿತ] ಸರ್ವೋತ್ತಮ ಮನಸ್ಸುಳ್ಳ, ಸಂತುಷ್ಟ ಮನಸ್ಸಿನ(ಔಪ). **–ಸೋಮಣಸ್ಸಿಯ.** ವಿ: [–ಸೌಮನಸ್ಯಿಕ] ಅದೇ ಅರ್ಥ. **–ಹೇಲಾ. ಸ್ತ್ರೀ:** [–ಹೇಲಾ] ಭಾರೀ ತಿರಸ್ಕಾರ, **ಪರಮಾಉ. ನ:** [ಪರಮಾಯುಸ್] ದೀರ್ಘ ಆಯುಷ್ಯ (ಪಉಮ), ಜೀವಿತ ಕಾಲ, ವಯಸ್ಸು. **ಪರಮಾಣು. ಪು:** [ಪರಮಾಣು] ಸರ್ವ ಸೂಕ್ಷ್ಮ ವಸ್ತು (ಭಗ). **ಪರಮಾಹಮ್ಮಿಂಯ. ಪು:** [ಪರಮಾಧಾರ್ಮಿಕ] ನಾರಕ ಜೀವಿಗಳಿಗೆ ದುಃಖವನ್ನುಂಟು ಮಾಡುವ ದೇವತೆಗಳ ಒಂದು ವರ್ಗವಾದ ಅಸುರರು. **ಪರಮಾಹೋಹಿಅ.** ವಿ: [ಪರಮಾಧೋವಧಿಕ] ಅವಧಿ ಜ್ಞಾನವನ್ನು ಹೊಂದಿರುವ
ಪರಮಾಹಮ್ಮಿಯ.ವಿ: [ಪರಮಧಾರ್ಮಿಕ] ಸುಖವನ್ನು ಇಚ್ಛಿಸುವವ, ಸುಖದ ಅಭಿಲಾಷಿ
ಪರಮಿಟ್ಠಿ. **ಪು:** [ಪರಮೇಷ್ಠಿನ್] ಬ್ರಹ್ಮ, ಅರ್ಹನ್, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಮುನಿ(ಪಾಅ)
ಪರಮುಕ್ಕ. ವಿ: [ಪರಾಮುಕ್ತ] ಪರಿತ್ಯಕ್ತ, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ(ಪಉಮ)
ಪರಮುವಗಾರಿ}. ವಿ:[ಪರಮೋಪಕಾರಿನ್]ಬಹಳವಾಗಿ
ಪರಮುವಯಾರಿ}.ಉಪಕಾರ ಮಾಡುವವನು(ಸುರ)
ಪರಮುಹ. **'ಪರಮ್ಮುಹ' ಶಬ್ದವನ್ನು ನೋಡುವುದು**
ಪರಮೆಟ್ಠಿ. **'ಪರಮಿಟ್ಠಿ' ಶಬ್ದವನ್ನು ನೋಡುವುದು**
ಪರಮೇಸರ. **ಪು:** [ಪರಮೇಶ್ವರ] ಸರ್ವೈಶ್ವರ್ಯ ಸಂಪನ್ನ, ಪರಮೇಶ್ವರ(ಭವಿ)
ಪರಮ್ಮುಹ. ವಿ: [ಪರಾಙ್ಮುಖ] ವಿಮುಖ, ಮುಖ ತಿರುಗಿಸಿರುವ(ಣಾಯಾ)
ಪರಯ. **ನ:** [ಪರಕ] ಆಧಿಕ್ಯ, ಅತಿಶಯ(ಉತ್ತ)
ಪರಲೋಇಅ. ವಿ: [ಪಾರಲೌಕಿಕ] ಜನ್ಮಾಂತರಕ್ಕೆ ಸಂಬಂಧಿಸಿದ(ಆಚಾ), ಪರಲೋಕಕ್ಕೆ ಸಂಬಂಧಿಸಿದ
ಪರವಾಯ. ವಿ: [ಪ್ರರವಾಜ] **'ಪ್ರಕೃಷ್ಟ'** ಶಬ್ದದಿಂದ ಪ್ರೇರಣೆ ಹೊಂದಿರುವ, **ಪು:** ರಥವನ್ನು ಮುನ್ನಡೆಸುವ ಸಾರಥಿ
ಪರವಾಯ. ವಿ: [ಪ್ರಾರವಾಯ] ಉತ್ಕೃಷ್ಟವಾದ ಹಾಡನ್ನು ಹಾಡುವವನು, ಶ್ರೇಷ್ಠ ಸಂಗೀತಗಾರ.

ಪರವಾಯ. ಪು: [ಪ್ರಪಾಜ] ಕಾಳು ಕಡಿಗಳನ್ನು ತುಂಬುವ ಕಣಜ(ಶ್ರಾ)

ಪರವಾಯಾ.ಸ್ತ್ರೀ: [ಪ್ರವಾಯ್]ಬೆಟದ್ದ ಮೇಲಿನ ನದಿ

ಪರಸ(ಅಪ). 'ಫಾಸ=ಸ್ಪರ್ಶ' ಶಬ್ದವನ್ನು ನೋಡುವುದು. –ಮಣಿ. ಪು: [–ಮಣಿ] ಸ್ಪರ್ಶಿಸಿದ ಲೋಹವೆಲ್ಲವನ್ನೂ ಚಿನ್ನವಾಗಿ ಪರಿವರ್ತಿಸುವ ರತ್ನ–ವಿಶೇಷ(ಪಿಂಗ)

ಪರಸಣ್ಣ(ಅಪ). 'ಪಸಣ್ಣ' ಶಬ್ದವನ್ನು ನೋಡುವುದು

ಪರಸು. ಪು: [ಪರಶು] ಒಂದು ಆಯುಧ, ಕೊಡಲಿ. –ರಾಮ. ಪು: [–ರಾಮ] ಜಮದಗ್ನಿ ಋಷಿಯ ಮಗನಾದ ಪರಶುರಾಮ. ೨೧–ಸಲ ಭೂಮಿಯನ್ನು ಕ್ಷತ್ರಿಯ–ರಹಿತವಾಗಿ ಮಾಡಿದವನು

ಪರಸುಹತ್ತ. ಪು: [ದೇ] ಗಿಡ, ಮರ(ದೇ)

ಪರಸ್ಸರ. ಪುಂಸ್ತ್ರೀ: [ದೇ. ಪರಾಶರ] ಕಬ್ಬಿನ ಗೆಣ್ಣು, ಒಂದು ಬಗೆಯ ಪಶು. ಸ್ತ್ರೀ: –ರೀ.

ಪರಹುತ್ತ. ವಿ: [ಪರಾಭೂತ] ಸೋಲಿಸಲ್ಪಟ್ಟ (ಪಉಮ), ಸೋತವನು

ಪರಾ. ಅ: [ಪರಾ] ಸಮ್ಮುಖತೆ, ಎದುರಾಗಿರುವುದು, ತ್ಯಾಗ, ಘರ್ಷಣೆ, ಪ್ರಾಧಾನ್ಯ, ಪರಾಕ್ರಮ, ನಡಿಗೆ, ಚಲನೆ, ಅಪಮಾನ, ಅನಾದರ, ತಿರಸ್ಕಾರ, ಹಿಂತಿರುಗುವುದು, ಹಿಂದಕ್ಕೆ ಬರುವುದು, ಅಧಿಕ, ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ.

ಪರಾ. ಸ್ತ್ರೀ: [ದೇ.ಪರಾ.]ಒಂದು ಬಗೆಯ ಹುಲ್ಲು(ತೃಣ) (ಪಣ್ಣ)

ಪರಾಇ. ಸಕ: [ಪರಾ +ಜಿ] ಸೋಲಿಸು,

ಪರಾಇಅ. ವಿ: [ಪರಾಜಿತ] ಸೋಲಿಸಲ್ಪಟ್ಟವನು, ಸೋತವನು(ಪಉಮ)

ಪರಾಇಅ.(ಅಪ). ವಿ: [ಪರಾಗತ] ಹೊರಟುಹೋದ

ಪರಾಇಣ. 'ಪರಾಜಿಣ' ಶಬ್ದವನ್ನು ನೋಡುವುದು

ಪರಾಈ. ಸ್ತ್ರೀ: [ಪರಕೀಯಾ] ಇತರರಿಗೆ ಸಂಬಂಧಿಸಿದವಳು, ಇನ್ನೊಬ್ಬನವಳು. 'ಪರಾಯ=ಪರಕೀಯ' ಶಬ್ದವನ್ನು ನೋಡುವುದು

ಪರಾಕಮ. 'ಪರಕ್ಕಮ' ಶಬ್ದವನ್ನು ನೋಡುವುದು

ಪರಾಕಯ. ವಿ: [ಪರಾಕೃತ] ನಿರಾಕರಿಸಲ್ಪಟ್ಟ, ಹೊರದೂಡಲ್ಪಟ್ಟ(ಅಜ್ಝ)

ಪರಾಕರ. ಸಕ: [ಪರಾ +ಕೃ] ನಿರಾಕರಿಸು –'ಪರಾಕರೋದಿ'(ಶೌ)

ಪರಾಜಯ. ಪು: [ಪರಾಜಯ] ಸೋಲು

ಪರಾಜಯ}. ಸಕ: [ಪರಾ +ಜಿ] ಸೋಲಿಸು
ಪರಾಜಿಣ}.

ಪರಾಜಿಣಿಅ}. 'ಪರಾಇಅ=ಪರಾಜಿತ' ಶಬ್ದವನ್ನು
ಪರಾಜಿಯ}. ನೋಡುವುದು(ಉ)

ಪರಾಣ. 'ಪ್ರಾಣ=ಪ್ರಾಣ' ಶಬ್ದವನ್ನು ನೋಡುವುದು

ಪರಾಣಗ. ವಿ: [ಪರಕೀಯ] ಅನ್ಯನ, ಬೇರೆಯವನ

ಪರಾಣಿಯ. ವಿ: [ಪರಾಣೀತ] ತಲುಪಿರುವ,

ಪರಾಣೀ. ಸಕ: [ಪರಾ +ಣೀ] ತಲುಪಿಸು ಕ್ರಿಯಾ ರೂಪ:–'ಪರಾಣೇಮಿ'

ಪರಾನಯಣ. ನ: [ಪರಾಣಯನ] ತಲುಪಿಸುವುದು

ಪರಾಭವ. ಸಕ: [ಪರಾ +ಭೂ] ಸೋಲಿಸು

ಪರಾಭವ. ಪು: [ಪರಾಭವ] ಸೋಲು

ಪರಾಭವಿಅ. ವಿ: [ಪರಾಭೂತ] ಸೋಲಿಸಲ್ಪಟ್ಟ

ಪರಾಮಟ್ಠ. 'ಪರಾಮುಟ್ಠ' ಶಬ್ದವನ್ನು ನೋಡುವುದು

ಪರಾಮರಿಸ. ಸಕ: [ಪರಾ +ಮೃಶ್] ವಿಚಾರಮಾಡು, ವಿವೇಚಿಸು, ಸ್ಪರ್ಶಿಸು, ಆಚ್ಛಾದನೆ ಮಾಡು, ಒರೆಸು, ಲೋಪಮಾಡು –'ಪರಾಮರಿಸಇ'

ಪರಾಮರಿಸ. ಪು: [ಪರಾಮರ್ಶ] ವಿವೇಚನೆ, ವಿಚಾರ(ಪ್ರಾಮಾ). ಯುಕ್ತಿ, ಉಪಾಯ, ಸ್ಪರ್ಶ, ನ್ಯಾಯಶಾಸ್ತ್ರೋಕ್ತ ವ್ಯಾಪ್ತಿವಿಶಿಷ್ಟ ರೂಪದಿಂದ ಪಕ್ಷದ ತಿಳಿವಳಿಕೆ(ಹೇ)

ಪರಾಮಿಟ್ಠ}. ವಿ: [ಪರಾಮೃಷ್ಟ] ವಿಚಾರ ಮಾಡಲ್ಪಟ್ಟ,
ಪರಾಮುಟ್ಠ}. ವಿವೇಚಿಸಲ್ಪಟ್ಟ, ಸ್ಪರ್ಶಿಸಲ್ಪಟ್ಟ,

ಪರಾಮುಸ. 'ಪರಾಮರಿಸ' ಶಬ್ದವನ್ನು ನೋಡುವುದು

ಪರಾಮುಸಿಯ. 'ಪರಾಮುಟ್ಠ' ಶಬ್ದವನ್ನು ನೋಡುವುದು

ಪರಾಯ. ಪು: [ಪರಾಗ] ಧೂಳು, ರೇಣು, ರಜ, ಹೂವಿನ –ರಜ(ಗಉಡ)

ಪರಾಯ}. ವಿ: [ಪರಕೀಯ] ಇತರರಿಗೆ
ಪರಾಯಗ}. ಸಂಬಂಧಿಸಿದ, ಬೇರೆಯವನ(ಭಗ)

ಪರಾಯಣ. ವಿ: [ಪರಾಯಣ] ತತ್ಪರ, ಆಸಕ್ತನಾದ, ಹೆಚ್ಚು ಶ್ರದ್ಧೆಯುಳ್ಳ(ಕಮ್ಮ)

ಪರಾರಿಂ. ಅ: [ಪರಾರಿ] ಮುಂದಿನ ಮೂರನೆಯ ವರ್ಷ(ಪ್ರಾಸೂ)

ಪರಾಲ. 'ಪಲಾಲ' ಶಬ್ದವನ್ನು ನೋಡುವುದು

ಪರಾವ.(ಅಪ). ಸಕ: [ಪ್ರ +ಆಪ್] ಪಡೆದುಕೊಳ್ಳು
ಪರಾವತ್ತ. ಸಕ: [ಪರಾ +ವೃತ್] ಬದಲಿಸು, ಹಿಂತಿರುಗು
ಪರಾವತ್ತ. ಸಕ: [ಪರಾ +ವರ್ತಯ್] ತಿರುಗಿಸು, ವಿನಿಮಯ ಮಾಡು, ಹಿಂತಿರುಗು–**'ಪರಾವತ್ತಂತಿ'**
ಪರಾವತ್ತ. ಪು: [ಪರಾವರ್ತ] ಬದಲಾವಣೆ, ತಿರುವಿಹಾಕು
ಪರಾವತ್ತಿ. ವಿ: [ಪರಾವರ್ತಿನ್] ಪರಿವರ್ತಿಸುವವನು, ಬದಲಾವಣೆ ಮಾಡುವವನು
ಪರಾವತ್ತಿ. ಸ್ತ್ರೀ: [ಪರಾವೃತ್ತಿ] ಬದಲಿಸು, ಹಿಂತಿರುಗು **ಶಬ್ದವನ್ನು ನೋಡುವುದು**
ಪರಾವತ್ತಿಯ. ವಿ: [ಪರಾವರ್ತಿತ] ಬದಲಾದ, ಪರಿವರ್ತಿತವಾದ(ಮಹಾ)
ಪರಾಸರ. ಪು: [ಪರಾಶರ] ಪಶು–ವಿಶೇಷ, ವ್ಯಾಸ ಮಹರ್ಷಿಯ ತಂದೆ, ಪರಾಶರ ಸ್ಮೃತಿಯ ಕರ್ತೃ(ಔಪ)
ಪರಾಸು. ವಿ: [ಪರಾಸು] ಪ್ರಾಣವಿಲ್ಲದ, ಮರಣಿಸಿದ, ಸತ್ತ(ಶ್ರಾ)
ಪರಾಹವ. **'ಪರಾಭವ=ಪರಾಭವ'** (ಗುಣ)
ಪರಾಹುತ್ತ. ವಿ: [ಪರಾಙ್ಮುಖ] ವಿಮುಖ, ಮುಖ ತಿರುಗಿಸಿದ(ಓಘ)
ಪರಾಹುತ್ತ}. ವಿ: [ಪರಾಭೂತ] ಸೋಲಿಸಲ್ಪಟ್ಟ(ಉಪ)
ಪರಾಹೂಅ}.
ಪರಿ. ಅ: [ಪರಿ] ಸುತ್ತಲೂ, ಎಲ್ಲ ಕಡೆಯಲ್ಲೂ(ಗಾ), ಪರಿಪಾಟಿ, ಕ್ರಮ, ರೀತಿ, ಮತ್ತೆ ಮತ್ತೆ, ಪುನಃಪುನಃ(ಪಣ್ಣ), ಸಾಮೀಪ್ಯ, ವಿನಿಮಯ, ಬದಲಿ, ಅತಿಶಯ, ವಿಶೇಷ, ಸಂಪೂರ್ಣತೆ ಹೊರಗಿನ ಭಾವ, ಮೇಲೆ, ಉಳಿದ, ಪೂಜೆ, ವ್ಯಾಪಕತೆ, ನಿವೃತ್ತಿ, ಶೋಕ, ಯಾವುದೇ ವಿಧದಲ್ಲಿ ಲಭಿಸುವಿಕೆ, ಆಖ್ಯಾನ, ಸಂತಸದ ಮಾತು, ಅಲಂಕಾರ, ಒಡವೆ, ಆಲಿಂಗನ, ನಿಯಮ, ನಿಷೇಧ, ನಿರರ್ಥಕ –ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ಪರಿ. **'ಪಡಿ=ಪ್ರತಿ' ಶಬ್ದವನ್ನು ನೋಡುವುದು**(ತಾ)
ಪರಿ. ಸ್ತ್ರೀ: [ದೇ] ಗೀತ
ಪರಿ. ಸಕ: [ಕ್ಷಿಪ್] ಎಸೆ(ಷಡ್)
ಪರಿಅಂಜ. ಸಕ: [ಪರಿ +ಭಂಜ್] ಮುರಿ
ಪರಿಅಂತ. ಸಕ: [ಶ್ಲಿಷ್] ಆಲಿಂಗಿಸು, ಒಟ್ಟಿಗೆ ಸೇರು,
ಪರಿಅಂತ. **'ಪಜ್ಜಂತ'ಶಬ್ದವನ್ನು ನೋಡುವುದು** (ಸೂಅ)
ಪರಿಅಂತಣಾ. ಸ್ತ್ರೀ: [ಪರಿಯಂತ್ರಣಾ] ಅತಿಯಾದ ನಿರ್ಬಂಧ, ಬಹಳವಾದ ಹತೋಟಿ
ಪರಿಅಂಭಿಅ.ವಿ:[ಪರಿಜೃಂಭಿತ]ಚೆನ್ನಾಗಿ ಅರಳಿದ (ಸೇ)
ಪರಿಅಟ್ಟ. ಅಕ: [ಪರಿ+ವೃತ್] ಬದಲು ಮಾಡು, ತಿರುವಿಹಾಕು
ಪರಿಅಟ್ಟ. ಸಕ: [ಪರಿ +ವರ್ತಯ್] ಬದಲಾಗುವಂತೆ ಮಾಡು, ತಿರುವಿಹಾಕಿಸು, ಪಾಠವನ್ನು ಗಟ್ಟಿಮಾಡು, ನೆನಪಿಟ್ಟುಕೊಳ್ಳು, ತಿರುಗಿಸು(ಭವಿ)
ಪರಿಅಟ್ಟ. ಸಕ: [ಪರಿ+ಅಟ್] ತಿರುಗು, ಸಂಚರಿಸು(ವುದು). –**ಪರಿಅಟ್ಟಇ'**
ಪರಿಅಟ್ಟ. ಪು: [ದೇ] ಅಗಸ, ರಜಕ(ದೇ)
ಪರಿಅಟ್ಟ. ಪು: [ಪರಿವರ್ತ] ತಿರುಗಿಸುವಿಕೆ, ಬದಲಿಸುವುದು, ಸಮಯದ ಅಳತೆಯ ವಿಶೇಷ. ಅನಂತ ಉತ್ಸರ್ಪಿಣೀ –ಅವಸರ್ಪಿಣೀ ಕಾಲ.
ಪರಿಅಟ್ಟಗ. ವಿ: [ಪರಿವರ್ತಕ] ಬದಲಾವಣೆ ಮಾಡುವವನು(ನಿಚೂ)
ಪರಿಅಟ್ಟಣ. ನ: [ಪರಿವರ್ತನ] ಬದಲಾವಣೆ, ಬದಲಾಯಿಸುವಿಕೆ, ದ್ವಿಗುಣ, ತ್ರಿಗುಣ ಮೊದಲಾದ ಉಪಕರಣಗಳು(ಆಚಾ)
ಪರಿಅಟ್ಟಣಾ. ಸ್ತ್ರೀ: [ಪರಿವರ್ತನಾ] ಮತ್ತೆ ಮತ್ತೆ ಆಗುವುದು, ಪುನರಾವೃತ್ತಿ, ಗಟ್ಟಿಮಾಡಿ ಪಾಠ ನೆನಪಿಟ್ಟುಕೊಳ್ಳುವುದು(ಉತ್ತ) ಬದಲಾವಣೆ, ವಿನಿಮಯ, ದ್ವಿಗುಣಾದಿ ಉಪಕರಣಗಳು
ಪರಿಅಟ್ಟಯ. ವಿ: [ಪರ್ಯಟಕ] ಸಂಚರಿಸುವವನು, ತಿರುಗಾಡುವವನು
ಪರಿಅಟ್ಟಲಿಅ. ವಿ: [ದೇ] ನಿರ್ಣಯಿಸಲ್ಪಟ್ಟ, ಇಷ್ಟೇ ಎಂದು ಅಳೆಯಲ್ಪಟ್ಟ(ದೇ)
ಪರಿಅಟ್ಟವಿಅ. ವಿ: [ದೇ] ಮೇಲಿನ **ಶಬ್ದವನ್ನು ನೋಡುವುದು**
ಪರಿಅಟ್ಟಿಯ. ವಿ: [ಪರಿವರ್ತಿತ] ಬದಲಾಯಿಸಲ್ಪಟ್ಟ, ವಿನಿಮಯ ಮಾಡಲ್ಪಟ್ಟ, **'ಪರಿಅತ್ತಿಅ' ಶಬ್ದವನ್ನು ನೋಡುವುದು**
ಪರಿಅಡ. ಸಕ: [ಪರಿ+ಅಟ್] ಸಂಚಾರಮಾಡು, ಸುತ್ತಾಡು, ಅಲೆದಾಡು
ಪರಿಅಡಣ. ನ: [ಪರ್ಯಟನ] ಸುತ್ತಾಡುವುದು, ಎಲ್ಲಕಡೆ ಸಂಚರಿಸುವುದು

ಪರಿಅಡಿ. ಸ್ತ್ರೀ: [ದೇ] ಬೇಲಿ, ಸುತ್ತುಗಟ್ಟುವುದು, ವಿ: ಮೂರ್ಖ

ಪರಿಅಡಿಅ.ವಿ: [ಪರ್ಯಟಿತ]ತಿರುಗಾಡಿದ, ಸುತ್ತಾಡಿದ (ಸಿಕ್ಕಾ)

ಪರಿಅಡ್ಡಿಅ. ವಿ: [ದೇ] ಪ್ರಕಟಿತ, ವ್ಯಕ್ತಪಡಿಸಲಾದ

ಪರಿಅಡ್ಢ. ಅಕ: [ಪರಿ+ವೃಧ್] ಅಧಿಕವಾಗು, ಹೆಚ್ಚು, ವೃದ್ಧಿಸು

ಪರಿಅಡ್ಢ. ಸಕ: [ಪರಿ+ವರ್ಧಯ್] ಅಧಿಕಮಾಡು, ಹೆಚ್ಚಿಸು, ವೃದ್ಧಿಪಡಿಸು(ಹೇ)

ಪರಿಅಡ್ಢಿ. ಸ್ತ್ರೀ: [ಪರಿವೃದ್ಧಿ] ವಿಶೇಷ ವೃದ್ಧಿ, ಬೆಳವಣಿಗೆ, ವೃದ್ಧಿಹೊಂದುವುದು(ಪ್ರಾಕೃ)

ಪರಿಅಡ್ಢಿಅ. ವಿ: [ಪರಿವರ್ಧಿನ್, –ಕ] ದೊಡ್ಡದಾಗಿ ಬೆಳೆಸುವವನು, ಹೆಚ್ಚಿಸುವವನು, ಅಧಿಕಗೊಳಿಸುವವನು(ಔಪ)

ಪರಿಅಡ್ಢಿಯ. ವಿ: [ಪರ್ಯಾಢ್ಯಕ] ಪರಿಪೂರ್ಣ(ಔಪ)

ಪರಿಅಡ್ಢಿಅ. ವಿ: [ಪರಿಕರ್ಷಿನ್, ಕ] ಎಳೆಯುವವನು, ಸೆಳೆಯುವವನು(ಔಪ)

ಪರಿಅಡ್ಢಿಅ. ವಿ: [ಪರಿಕೃಷ್ಟ] ಎಳೆಯಲ್ಪಟ್ಟ, ಆಕರ್ಷಿಸಲ್ಪಟ್ಟ(ಸುಪಾ)

ಪರಿಅಣ. ಪು: [ಪರಿಜನ] ಪರಿವಾರ, ಕುಟುಂಬ, ಹೆಂಡತಿ, ಮಕ್ಕಳು ಆದಿ ಪಾಲಿಸಬೇಕಾದ ಗುಂಪು, ಅನುಚರ, ಸೇವಕ, ಅನುಯಾಯಿ(ಗಲುಡ)

ಪರಿಅತ್ತ. 'ಪರಿಅಂತ=ಶ್ಲಿಷ್' ಶಬ್ದವನ್ನು ನೋಡುವುದು

ಪರಿಅತ್ತ. 'ಪರಿಅಟ್ಟ=ಪರಿ+ವೃತ್' ಶಬ್ದವನ್ನು ನೋಡುವುದು

ಪರಿಅತ್ತ. 'ಪರಿಅಟ್ಟ=ಪರಿ+ವರ್ತಯ್' ಶಬ್ದವನ್ನು ನೋಡುವುದು

ಪರಿಅತ್ತ. 'ಪರಿಅಟ್ಟ=ಪರಿವರ್ತ' ಶಬ್ದವನ್ನು ನೋಡುವುದು(ಔಪ)

ಪರಿಅತ್ತ. ವಿ: [ದೇ] ಹರಡಿರುವ

ಪರಿಅತ್ತ. ವಿ: [ಪರಿವೃತ್ತ] ಹಿಂದಕ್ಕೆ ತಿರುಗಿದ, ಹಿಮ್ಮುಖವಾದ(ಭವಿ)

ಪರಿಅತ್ತಣ. 'ಪರಿಅಟ್ಟಣ' ಶಬ್ದವನ್ನು ನೋಡುವುದು (ಗಲುಡ)

ಪರಿಅತ್ತಣಾ. 'ಪರಿಅಟ್ಟಣಾ' ಶಬ್ದವನ್ನು ನೋಡುವುದು

ಪರಿಅತ್ತಮಾಣ. 'ಪರಿಅತ್ತ' ಶಬ್ದವನ್ನು ನೋಡುವುದು

ಪರಿಅತ್ತಮಾಣೀ. ಸ್ತ್ರೀ: [ಪರಿವರ್ತಮಾನಾ] ಬೇರೊಂದು ಪ್ರಕೃತಿಯ ಬಂಧ ಅಥವಾ ಉದಯವನ್ನು ತಡೆದು ಸ್ವತಃ ತಾನೇ ಬಂಧ ಅಥವ ಉದಯವನ್ನು ಹೊಂದುವಂಥ ಕರ್ಮ ಪ್ರಕೃತಿ(ಪಂಚ)

ಪರಿಅತ್ತಾ. ಸ್ತ್ರೀ: [ಪರಿವರ್ತಾ] ಮೇಲಿನ ಶಬ್ದವನ್ನು ನೋಡುವುದು

ಪರಿಅತ್ತಿಅ. ವಿ: [ಪರಿವರ್ತಿತ] ಹಿಮ್ಮುಖವಾಗಿ ತಿರುಗಿಸಲ್ಪಟ್ಟ, ಬದಲಾಯಿಸಲ್ಪಟ್ಟ, **'ಪರಿಅಟ್ಟಿಯ'** **ಶಬ್ದವನ್ನು ನೋಡುವುದು**

ಪರಿಅರ. ಸಕ: [ಪರಿ+ಚರ್] ಸೇವೆಮಾಡು. ವ. ಕೃ –**'ಪರಿಅರಂತ'**

ಪರಿಅರ. ವಿ: [ದೇ] ಲೀನನಾದ, ಮುಳುಗಿದ(ದೇ), ನಿಮಗ್ನ

ಪರಿಅರ. ಪು: [ಪರಿಕರ] ನಡುಕಟ್ಟು, ಪರಿವಾರ

ಪರಿಅರ. ಪು: [ಪರಿಚರ] ಸೇವಕ, ಆಳು(ಗಲುಡ)

ಪರಿಅರಣ. ನ: [ಪರಿಚರಣ] ಸೇವೆ.

ಪರಿಅರಣಾ. ಸ್ತ್ರೀ: [ಪರಿಚರಣಾ] ಸೇವೆ

ಪರಿಅರಿಯ. ವಿ: [ಪರಿಕರಿತ, ಪರಿವೃತ] ಪರಿವಾರದಿಂದ ಕೂಡಿದ, (ಭವಿ), ಸುತ್ತಲೂ ಆವರಿಸಲ್ಪಟ್ಟ,

ಪರಿಅಲ}. ಸಕ: [ಗಮ್] ಹೋಗು, ಗಮಿಸು, ನಡೆ

ಪರಿಅಲ}. ಪುಂಸ್ತ್ರೀ: [ದೇ] ಊಟದ ತಟ್ಟೆ(ಭವಿ)

ಪರಿಅಲ}.

ಪರಿಅಲಿಅ. ವಿ: [ಗತ] ಹೊರಟುಹೋದ, ತಲುಪಿರುವ

ಪರಿಅಲ್ಲ. 'ಪರಿಅಲ' ಶಬ್ದವನ್ನು ನೋಡುವುದು

ಪರಿಅರಅ. ವಿ: [ಪರಿಚಾರಕ] ಸೇವಕ, ಆಳು. ಸ್ತ್ರೀ: –ರಿಆ.

ಪರಿಆಲ. ಸಕ: [ವೇಷ್ಟಯ್] ಸುತ್ತು, ಸುತ್ತುಗಟ್ಟು

ಪರಿಆಲ. ವಿ: [ದೇ] ಸುತ್ತಲೂ ಆವರಿಸಲ್ಪಟ್ಟ, ಸುತ್ತುವರಿಯಲ್ಪಟ್ಟ(ಗಲುಡ)

ಪರಿಆಲ. 'ಪರಿವಾರ' ಶಬ್ದವನ್ನು ನೋಡುವುದು

ಪರಿಆಲಿಅ. ವಿ: [ವೇಷ್ಟಿತ] ಸುತ್ತುವರಿಯಲ್ಪಟ್ಟ, ಸುತ್ತುಗಟ್ಟಲ್ಪಟ್ಟ, ಹೊದಿಸಲ್ಪಟ್ಟ

ಪರಿಆವ. 'ಪರಿತಾವ' ಶಬ್ದವನ್ನು ನೋಡುವುದು

ಪರಿಆವಿಅ. ಸಕ: [ಪರ್ಯಾ +ಪಾ] ಕುಡಿ

ಪರಿಆಸಮಂತ.(ಅಪ). ಅ: [ಪರ್ಯಾಸಮಂತಾತ್] ನಾಲ್ಕೂ ಕಡೆಯಿಂದ

ಪರಿಇ. ಸಕ: [ಪರಿ +ಇ] ಸಂಚರಿಸು, ತಿರುಗಾಡು
ಪರಿಇಣ್ಣ. ವಿ: [ಪರಿಕೀರ್ಣ] ವ್ಯಾಪಿಸಲ್ಪಟ್ಟ
ಪರಿಇದ.(ಶೌ). ವಿ: [ಪರಿಚಿತ] ಹಿಂದಿನಿಂದ ಚೆನ್ನಾಗಿ ತಿಳಿದಿರುವ, ಗುರುತಿಸಲಾಗಿರುವ(ಅಭಿ)
ಪರಿಉಂಬ. ಸಕ: [ಪರಿ+ಚುಂಬ್] ಮುತ್ತುಕೊಡು, ಮುದ್ದಾಡು
ಪರಿಉಂಬಣ. ನ: [ಪರಿಚುಂಬನ] ಚೆನ್ನಾಗಿ ಮುದ್ದಿಸುವುದು, ಪ್ರೀತಿಯ ಮುತ್ತು ಕೊಡುವುದು
ಪರಿಉಂಬಣಾ. ಸ್ತ್ರೀ: [ಪರಿಚುಂಬನಾ] ಮೇಲಿನ ಶಬ್ದವನ್ನು ನೋಡುವುದು
ಪರಿಉಜ್ಝಿಯ. ವಿ: [ಪರ್ಯುಜ್ಝಿತ] ಪೂರ್ಣವಾಗಿ ತ್ಯಜಿಸಲ್ಪಟ್ಟ
ಪರಿಉಟ್ಠ. ವಿ: [ಪರಿತುಷ್ಟ] ಚೆನ್ನಾಗಿ ತೃಪ್ತಿಹೊಂದಿದ, ಚೆನ್ನಾಗಿ ಸಂತಸ ಹೊಂದಿದ
ಪರಿಉತ್ಥ. ವಿ: [ದೇ] ಪ್ರವಾಸವನ್ನು ಕೈಕೊಂಡಿರುವ, ಪ್ರವಾಸದಲ್ಲಿರುವ, ಹೊರಟುಹೋಗಿರುವ
ಪರಿಉಸಿಅ. ವಿ: [ಪರ್ಯುಷಿತ] ಹಳೆಯದಾದ, ಹಳಸಿದ
ಪರಿಊಢ. ವಿ: [ದೇ. ಪರಿಗೂಢ] ಕೃಶವಾದ, ತೆಳುವಾದ
ಪರಿಊರಣ. ನ: [ಪರಿಪೂರಣ] ತುಂಬಿರುವಿಕೆ, ಭರ್ತಿಯಾಗಿರುವುದು
ಪರಿಏಸ. 'ಪರಿವೇಸ=ಪರಿ+ವಿಷ್' ಶಬ್ದವನ್ನು ನೋಡುವುದು
ಪರಿಏಸ. 'ಪರಿವೇಸಪರಿವಂಶ'=ಶಬ್ದವನ್ನು ನೋಡುವುದು
ಪರಿಓಸ. ಸಕ: [ಪರಿ+ತೋಷಯ್] ಸಂತುಷ್ಟಗೊಳಿಸು,
ಪರಿಓಸ. ಪು: [ಪರಿತೋಷ] ಆನಂದ, ಸಂತೋಷ, ಹರ್ಷ(ಗಾ)
ಪರಿಓಸ. ಪು: [ದೇ. ಪರಿದ್ವೇಷ] ವಿಶೇಷ ದ್ವೇಷ(ಭವಿ)
ಪರಿಓಸಿಯ. ವಿ:[ಪರಿತೋಷಿತ] ಸಂತೋಷಪಡಿಸಲ್ಪಟ್ಟ, ಹರ್ಷಉಂಟುಮಾಡಲಾದ (ಶೇ)
ಪರಿಂತ. 'ಪರೀ=ಪರಿ +ಇ'ಯ ವ. ಕೃ. ಅನ್ನು ನೋಡುವುದು
ಪರಿಕಂಖ. ಸಕ: [ಪರಿ +ಕಾಂಕ್ಷ್] ವಿಶೇಷವಾಗಿ ಅಪೇಕ್ಷೆ ಪಡು, ಇಚ್ಛಿಸು, ನಿರೀಕ್ಷಿಸು
ಪರಿಕಂದ. ಪು: [ಪರಿಕ್ರಂದ] ಜೋರಾಗಿ ಧ್ವನಿತೆಗೆದು ಅಳುವುದು, ಚೀರಾಡುವುದು(ಉತ್ತ)
ಪರಿಕಂಪಿ. ವಿ: [ಪರಿಕಂಪಿನ್] ಬಹಳವಾಗಿ ನಡುಗಿಸುವ, ವಿಶೇಷವಾಗಿ ಅಲುಗಾಡಿಸುವ (ಗಉಡ)

ಪರಿಕಂಪಿರ. ವಿ: [ಪರಿಕಂಪಿತ] ಬಹಳವಾಗಿ ನಡುಗುವ
ಪರಿಕಚ್ಛಿಯ. ವಿ: [ಪರಿಕಕ್ಷಿತ] ಸ್ವೀಕರಿಸಲ್ಪಟ್ಟ, ತೆಗೆದುಕೊಳ್ಳಲಾದ, ಹಿಡಿಯಲ್ಪಟ್ಟ(ರಾಯ)
ಪರಿಕಟ್ಟಲಿಅ. ವಿ: [ದೇ] ಒಂದೆಡೆ ರಾಶಿಹಾಕಲ್ಪಟ್ಟ
ಪರಿಕಡ್ಢ. ಸಕ: [ಪರಿ +ಕೃಷ್] ಪಾರ್ಶ್ವಭಾಗದಲ್ಲಿ ಎಳೆ. ಪ್ರಾರಂಭಿಸು
ಪರಿಕಢಿಣ. ವಿ: [ಪರಿಕಠಿನ] ಅತ್ಯಂತ ಕಠಿಣ(ಗಉಡ)
ಪರಿಕಪ್ಪ. ಸಕ: [ಪರಿ+ಕಲ್ಪಯ್] ಸೃಷ್ಟಿಸು, ಕಲ್ಪಿಸು
ಪರಿಕಪ್ಪಿಯ. ವಿ: [ಪರಿಕಲ್ಪಿತ] ಕತ್ತರಿಸಲ್ಪಟ್ಟ, ಕೊಯ್ಯಲ್ಪಟ್ಟ(ಪಣ್ಣ). 'ಪರಿಗಪ್ಪಿಯ' ಶಬ್ದವನ್ನು ನೋಡುವುದು
ಪರಿಕಬ್ಬುರ. ವಿ: [ಪರಿಕರ್ಬುರ] ನಾನಾ ವರ್ಣದ,
ಪರಿಕಮ್ಮ}. ನ: [ಪರಿಕರ್ಮನ್] ಗುಣ –ವಿಶೇಷವನ್ನು
ಪರಿಕಮ್ಮಣ}. ಪ್ರತಿಷ್ಠಾಪಿಸುವುದು, ಸಂಸ್ಕಾರಕ್ಕೆ ಕಾರಣಭೂತವಾದ ಶಾಸ್ತ್ರ, ಗಣಿತ–ವಿಶೇಷ, ಸಂಖ್ಯಾ –ವಿಶೇಷ, ಒಂದು ಬಗೆಯ ಎಣಿಕೆ (ಠಾ), ಉತ್ಪತ್ತಿ ಮಾಡುವುದು, ಸೃಷ್ಟಿಸುವುದು
ಪರಿಕಮ್ಮ. ಪುಂನ: [ಪರಿಕರ್ಮನ್] ಯೋಗ್ಯತೆಯನ್ನು (ಅರ್ಹತೆ) ಸಂಪಾದಿಸುವುದು
ಪರಿಕಮ್ಮಣಾ. ಸ್ತ್ರೀ: ಮೇಲಿನ ಶಬ್ದವನ್ನು ನೋಡುವುದು
ಪರಿಕಮ್ಮಿಯ. ವಿ: [ಪರಿಕರ್ಮಿತ] ಪರಿ–ಕರ್ಮ–ವಿಶಿಷ್ಟ, ಸಂಸ್ಕಾರಿತವಾದ
ಪರಿಕರ. 'ಪರಿಅರ=ಪರಿಕರ' ಶಬ್ದವನ್ನು ನೋಡುವುದು
ಪರಿಕಲಣ. ನ:[ಪರಿಕಲನ] ಉಪಭೋಗ, ವಿಷಯ,ಸುಖ
ಪರಿಕಲಿಅ. ವಿ: [ಪರಿಕಲಿತ] ಯುಕ್ತ, ಕೂಡಿಕೊಂಡಿರುವ, ವ್ಯಾಪಿಸಲ್ಪಟ್ಟ, ದೊರಕಿದ
ಪರಿಕವಲಣಾ. ಸ್ತ್ರೀ: [ಪರಿಕವಲನಾ] ಭಕ್ಷಣ, ತಿನ್ನುವುದು
ಪರಿಕಪಿಲ. ವಿ: [ಪರಿಕಪಿಲ] ಪೂರ್ತಿಯಾಗಿ ಕಪಿಲ(ಕೆಂಪುಬೆರೆತ ಹಳದಿಬಣ್ಣ) ವರ್ಣದಿಂದ ಕೂಡಿರುವ
ಪರಿಕಪಿಸ. ವಿ: [ಪರಿಕಪಿಶ] ಬಹಳವಾಗಿ ಕಪ್ಪು ಬೆರೆತ ಹಳದಿ ಬಣ್ಣದಿಂದ ಕೂಡಿದ(ಗಉಡ)
ಪರಿಕಸಣ. ನ: [ಪರಿಕರ್ಷಣ] ಎಳೆತ, ಸೆಳೆತ, ಸೆಳೆಯುವುದು
ಪರಿಕಹ. ಸಕ: [ಪರಿ+ಕಥಯ್] ನಿರೂಪಿಸು, ಹೇಳು
ಪರಿಕಹಣ. ನ: [ಪರಿಕಥನ] ಆಖ್ಯಾನ, ನಿರೂಪಣೆ ಹೇಳುವುದು(ಸುಪಾ)

ಪರಿಕಹಣಾ. ಸ್ತ್ರೀ: [ಪರಿಕಥನಾ] ಮೇಲಿನ ಶಬ್ದವನ್ನು ನೋಡುವುದು

ಪರಿಕಹಾ. ಸ್ತ್ರೀ: [ಪರಿಕಥಾ] ಮಾತುಕತೆ, ವರ್ಣನೆ, ಕಲ್ಪಿತ ಕಥೆ

ಪರಿಕಹಿಯ. ವಿ: [ಪರಿಕಥಿತ] ನಿರೂಪಿಸಲ್ಪಟ್ಟ, ಹೇಳಲ್ಪಟ್ಟ

ಪರಿಕಿಣ್ಣ. 'ಪರಿಕಿನ್ನ' ಶಬ್ದವನ್ನು ನೋಡುವುದು

ಪರಿಕಿತ್ತಿಅ. ವಿ: [ಪರಿಕೀರ್ತಿತ] ವರ್ಣಿಸಲ್ಪಟ್ಟ, ಹೇಳಲ್ಪಟ್ಟ, ಶ್ಲಾಘಿಸಲ್ಪಟ್ಟ

ಪರಿಕಿನ್ನ. ವಿ: [ಪರಿಕೀರ್ಣ] ಸುತ್ತಲೂ ಆವರಿಸಲ್ಪಟ್ಟಿರುವ, ಸುತ್ತೂ ಹರಡಿರುವ, ಎಲ್ಲೆಡೆಯೂ ವ್ಯಾಪಿಸಲ್ಪಟ್ಟಿರುವ

ಪರಿಕಲಂತ. ವಿ: [ಪರಿಕ್ಲಾಂತ] ಬಹಳವಾಗಿ ದುಃಖಿತನಾಗಿರುವ,

ಪರಿಕಿಲೇಸ. ಸಕ: [ಪರಿಕ್ಲೇಶಯ್] ದುಃಖಿತಗೊಳಿಸು, ವ್ಯಗ್ರಗೊಳಿಸು, ತೊಂದರೆಪಡಿಸು

ಪರಿಕಿಲೇಸ. ಪು: [ಪರಿಕ್ಲೇಶ] ದುಃಖ, ತೊಂದರೆ, ಅಡ್ಡಿ, ವ್ಯಗ್ರತೆ(ಸೂಅ)

ಪರಿಕೀಲಿರ. ವಿ: [ಪರಿಕ್ರೀಡಿತೃ] ಬಹಳವಾಗಿ ಕ್ರೀಡಿಸುವ, ಬಹಳವಾಗಿ ಆಟ ಆಡುವ

ಪರಿಕುಂಠಿಯ. ವಿ: [ಪರಿಕುಂಠಿತ] ಬಹಳ ಶಕ್ತಿಗುಂದಿದ, ಕೆಲಸಕ್ಕೆ ಅಸಮರ್ಥನಾದ

ಪರಿಕುಡಿಲ. ವಿ: [ಪರಿಕುಟಿಲ] ಬಹಳ ಕೊಂಕಾಗಿರುವ, ತುಂಬಾ ವಕ್ರವಾಗಿರುವ, ಸೊಟ್ಟವಾಗಿರುವ(ಸುರ)

ಪರಿಕುದ್ಧ. ವಿ: [ಪರಿಕ್ರುದ್ಧ] ಅತ್ಯಂತ ಕೋಪಗೊಂಡ

ಪರಿಕುವಿಯ. ವಿ: [ಪರಿಕುಪಿತ] ಹೆಚ್ಚು ಕೋಪಗೊಂಡ

ಪರಿಕೋಮಲ. ವಿ: [ಪರಿಕೋಮಲ] ಅತ್ಯಂತ ಕೋಮಲವಾದ

ಪರಿಕ್ಕಂತ. ವಿ: [ಪರಾಕ್ರಾಂತ] ಪರಾಕ್ರಮದಿಂದ ಕೂಡಿದ(ಸೂಅ)

ಪರಿಕ್ಕಮ. ಸಕ: [ಪರಿ+ಕ್ರಮ್] ಕಾಲಿನಿಂದ ನಡೆ, ಹತ್ತಿರಕ್ಕೆ ಹೋಗು, ಸೋಲಿಸು, ಅಕ: ಸಾಮರ್ಥ್ಯ ತೋರು, ಶಕ್ತಿ ತೋರು. ವ. ಕೃ: 'ಪರಿಕ್ಕಂತ'

ಪರಿಕ್ಕಮ. 'ಪರಕ್ಕಮ=ಪರಾಕ್ರಮ' ಶಬ್ದವನ್ನು ನೋಡುವುದು(ಣಾಯಾ)

ಪರಿಕ್ಕಹಿಅ. 'ಪರಿಕಹಿಅ' ಶಬ್ದವನ್ನು ನೋಡುವುದು

ಪರಿಕ್ಕಾಮ. ಪರಿಕ್ಕಮ=ಪರಿ+ಕಮ್ ಶಬ್ದವನ್ನು ನೋಡುವುದು

ಪರಿಕ್ಖಅ. ಸಕ: [ಪರಿ +ಈಕ್ಷ್] ಪರೀಕ್ಷಿಸು

ಪರಿಕ್ಖಅ. ವಿ: [ಪರೀಕ್ಷಕ] ಪರೀಕ್ಷಿಸುವವನು(ಸುಪಾ)

ಪರಿಕ್ಖಅ. ಪು: [ಪರಿಕ್ಷತ] ಗಾಯಗೊಳಿಸಲ್ಪಟ್ಟ(ಸೇ)

ಪರಿಕ್ಖಅ. ಪು: [ಪರಿಕ್ಷಯ] ಕ್ರಮವಾಗಿ ಹಾನಿಯಾಗುವುದು, ನಾಶಹೊಂದುವುದು

ಪರಿಕ್ಖಣ. ನ: [ಪರೀಕ್ಷಣ] ಪರೀಕ್ಷೆ(ಸುಪಾ)

ಪರಿಕ್ಖಣಾ. ಸ್ತ್ರೀ: [ಪರೀಕ್ಷಣಾ] ಪರೀಕ್ಷೆ(ಪಉಮ)

ಪರಿಕ್ಖಲ. ಅಕ: [ಪರಿ+ಸ್ಖಲ್] ಮುಗ್ಗರಿಸು, ಸೋರು, ಜಿನುಗು

ಪರಿಕ್ಖಲಿಅ. ವಿ: [ಪರಿಸ್ಖಲಿತ] ಮುಗ್ಗರಿಸಿದ, ಸೋರಿದ, ಜಿನುಗಿದ

ಪರಿಕ್ಖಾ. ಸ್ತ್ರೀ: [ಪರೀಕ್ಷಾ] ಪರೀಕ್ಷೆ

ಪರಿಕ್ಖಾಇಅಅ. ವಿ: [ದೇ] ಕ್ಷಯಹೊಂದಿದ, ಎಲ್ಲವನ್ನೂ ನೀಗಿಕೊಂಡು ಬಡವನಾದ

ಪರಿಕ್ಖಾಮ. ವಿ: [ಪರಿಕ್ಷಾಮ] ಬಹಳವಾಗಿ ಕೃಶನಾದ, ತುಂಬಾ ಒಣಗಿಹೋಗಿರುವ(ಉತ್ತರ)

ಪರಿಕ್ಖಿ. ವಿ: [ಪರೀಕ್ಷಿತ್] ಪರೀಕ್ಷಿಸುವವನು, ಪರೀಕ್ಷಕ

ಪರಿಕ್ಖಿತ್ತ. ವಿ: [ಪರಿಕ್ಷಿಪ್ತ] ಸುತ್ತುವರಿಯಲ್ಪಟ್ಟ, ಸುತ್ತಲೂ ಎಸೆಯಲ್ಪಟ್ಟ(ಆವಮ), ನಾಲ್ಕೂ ಕಡೆಯಿಂದ ವ್ಯಾಪಿಸಲ್ಪಟ್ಟ

ಪರಿಕ್ಖಿವ. ವಿ: [ಪರೀಕ್ಷಿತ] ಪರೀಕ್ಷಿಸಲ್ಪಟ್ಟವನು(ಪ್ರಾಸೂ)

ಪರಿಕ್ಖಿವ. ಸಕ: [ಪರಿ +ಕ್ಷಿಪ್] ಸುತ್ತುವರಿ, ತಿರಸ್ಕರಿಸು, ವ್ಯಾಪಿಸು, ಎಸೆ

ಪರಿಕ್ಖಿವಿಯ. ವಿ: [ಪರಿಕ್ಷಿಪ್ತ] ಎಸೆಯಲ್ಪಟ್ಟ(ಹಮ್ಮೀರ)

ಪರಿಕ್ಖೇವ. ಪು: [ಪರಿಕ್ಷೇಪ] ಸುತ್ತು, ಪರಿಧಿ, ವರ್ತುಲಾಕಾರವಾಗಿಸುತ್ತುವರಿಯುವುದು (ಭಗ)

ಪರಿಕ್ಖೇವಿ. ವಿ: [ಪರಿಕ್ಷೇಪಿನ್] ತಿರಸ್ಕರಿಸುವವನು

ಪರಿಖಂಧ. ಪು: [ದೇ] ನೀರು ತುಂಬುವ ಆಳು(ಉತ್ರ), ನೀರು ತುಂಬುವ ಜಾತಿಯ

ಪರಿಖಜ್ಜ. ಸಕ: [ಪರಿ+ಖರ್ಜ್] ತುರಿಸು(ಉಪ)

ಪರಿಖಣ. ನ: [ಪರೀಕ್ಷಣ] ಗುಣದೋಷಗಳನ್ನು ಪರೀಕ್ಷಿಸಿ ನೋಡುವುದು

ಪರಿಖವಿಯ. ವಿ: [ಪರಿಕ್ಷಪಿತ] ಕ್ಷಯಹೊಂದಿದ, ಎಲ್ಲವನ್ನೂ ನೀಗಿಕೊಂಡು ಬಡವನಾದ

ಪರಿಖಾಮ. ವಿ: [ಪರಿಕ್ಷಾಮ] ಅತ್ಯಂತ ದುರ್ಬಲ, ಬಹಳವಾಗಿ ಒಣಗಿರುವ, ತುಂಬ ಕೃಶವಾಗಿರುವ

ಪರಿಖಿತ್ತ. 'ಪರಿಕ್ಖಿತ್ತ' ಶಬ್ದವನ್ನು ನೋಡುವುದು

ಪರಿಖಿವ. 'ಪರಿಕ್ಷಿವ' **ಶಬ್ದವನ್ನು ನೋಡುವುದು**
ಪರಿಕ್ಷಿವಿಯ. 'ಪರಿಖಿತ್ತ' **ಶಬ್ದವನ್ನು ನೋಡುವುದು**
ಪರಿಖುಹಿಯ. ವಿ: [ಪರಿಕ್ಷುಬ್ಧ] ಅತಿಯಾಗಿ ಕಲಕಲ್ಪಟ್ಟ, ಬಹಳವಾಗಿ ಕ್ಷೋಭೆಗೊಂಡ(ಭವಿ)
ಪರಿಖೇಇಯ. ವಿ: [ಪರಿಖೇದಿತ] ಬಹಳವಾಗಿ ಪೀಡಿಸಲ್ಪಟ್ಟ, ವಿಶೇಷವಾಗಿ ವ್ಯಗ್ರಗೊಳಿಸಲ್ಪಟ್ಟ,
ಪರಿಖೇದ(ಶೌ). ಪು: [ಪರಿಖೇದ] ಅತಿಯಾದ ದುಃಖ, ಅತಿಯಾದ ನೋವು
ಪರಿಖೇಯ. ಸಕ: [ಪರಿ+ಖೇದಯ್] ಅತಿಯಾಗಿ ದುಃಖಿಸು
ಪರಿಖೇವಿಯ(ಅಪ). 'ಪರಿಖಿವಿಯ' **ಶಬ್ದವನ್ನು ನೋಡುವುದು**
ಪರಿಗಣ. ಸಕ: [ಪರಿ+ಗಣಯ್] ಚೆನ್ನಾಗಿ ಎಣಿಸು, ಚಿಂತನೆ ಮಾಡುವುದು, ಚೆನ್ನಾಗಿ ವಿಚಾರಮಾಡು
ಪರಿಗಪ್ಪಣ. ನ: [ಪರಿಕಲ್ಪನ] ಕಲ್ಪನೆ, ಸೃಷ್ಟಿಸುವುದು
ಪರಿಗಪ್ಪಣಾ. ಸ್ತ್ರೀ: [ಪರಿಕಲ್ಪನಾ] ಮೇಲಿನ **ಶಬ್ದವನ್ನು ನೋಡುವುದು**
ಪರಿಗಪ್ಪಿಯ. ವಿ: [ಪರಿಕಲ್ಪಿತ] ಯಾವುದರ ಕಲ್ಪನೆ ಮಾಡಲಾಗಿದೆಯೋ ಅದು, ಕಲ್ಪಿಸಿ ಹೇಳಲ್ಪಟ್ಟ
ಪರಿಗಮ. ಸಕ: [ಪರಿ+ಗಮ್] ಹೋಗು, ಸರಿಯಾಗಿ ಸಾಗು, ನಾಲ್ಕೂ ಕಡೆಯಿಂದ ಸುತ್ತುವರಿ (ಯವುದು), ವ್ಯಾಪಿಸು
ಪರಿಗಮಣ. ನ: [ಪರಿಗಮನ] ಗುಣ, ಪರ್ಯಾಯ, ಒಂದಾದ ಮೇಲೊಂದರಂತೆ ಬರುವುದು, ಸರಿಯಾಗಿ ಸಾಗುವುದು(ನಿಚೂ)
ಪರಿಗಮಿರ. ವಿ: [ಪರಿಗಂತೃ] ಹೋಗುವವನು
ಪರಿಗಯ. ವಿ: [ಪರಿಗತ] ಸುತ್ತುವರಿಯಲ್ಪಟ್ಟ, ವ್ಯಾಪ್ತವಾದ(ಉವಾ), ಸುತ್ತಲೂ ಹರಡಿರುವ
ಪರಿಗರ. ಪು: [ಪರಿಕರ] ಪರಿವಾರ, ಸಮೂಹ
ಪರಿಗರಿಯ. ವಿ: [ಪರಿಕರಿತ] 'ಪರಿಅರಿಯ' **ಶಬ್ದವನ್ನು ನೋಡುವುದು**
ಪರಿಗಲ. ಅಕ: [ಪರಿ+ಗಲ್] ಚೆನ್ನಾಗಿ ಕರಗಿಹೋಗು, ಕ್ಷೀಣವಾಗು, ಸೋರು, ತೊಟ್ಟಿಕ್ಕು
ಪರಿಗಲಿಯ. ವಿ: [ಪರಿಗಲಿತ] ಕರಗಿಹೋದ, ಬಹುವಾಗಿ ಕ್ಷೀಣಿಸಿದ
ಪರಿಗಲಿರ. ವಿ: [ಪರಿಗಲಿತೃ] ಚೆನ್ನಾಗಿ ಕರಗಿಹೋಗುವ, ಬಹುವಾಗಿ ಕ್ಷೀಣಿಸುವ

ಪರಿಗಹ. 'ಘರಿಗೇಣ್ಹ' **ಶಬ್ದವನ್ನು ನೋಡುವುದು**
ಪರಿಗಹ. 'ಪರಿಗ್ಗಹ' **ಶಬ್ದವನ್ನು ನೋಡುವುದು**
ಪರಿಗಹಿಯ 'ಪರಿಗ್ಗಹಿಯ' **ಶಬ್ದವನ್ನು ನೋಡುವುದು**
ಪರಿಗಾ. ಸಕ: [ಪರಿ+ಗೈ] ಹಾಡುವುದು, ಗಾನಮಾಡು
ಪರಿಗಾಲಣ. ನ: [ಪರಿಗಾಲನ] ಕರಗಿಸುವುದು, ಹರಿಯಿಸುವುದು, ಶೋಧಿಸುವುದು
ಪರಿಗಿಜ್ಜಮಾಣ. 'ಪರಿಗಾ' **ಶಬ್ದವನ್ನು ನೋಡುವುದು**
ಪರಿಗಿಜ್ಝ}. 'ಪರಿಗೇಣ್ಹ' **ಶಬ್ದವನ್ನು ನೋಡುವುದು**
ಪರಿಗಿಜ್ಝಿಯ}.
ಪರಿಗಿಣ್ಹ. 'ಪರಿಗೇಣ್ಹ' **ಶಬ್ದವನ್ನು ನೋಡುವುದು**
ಪರಿಗಿಲಾ. ಅಕ: [ಪರಿ+ಗ್ಲೈ] ಚೆನ್ನಾಗಿ ಒಣಗಿಹೋಗು, ಬಾಡಿಹೋಗು
ಪರಿಗುಣ. ಸಕ: [ಪರಿ+ಗುಣಂಯ್] ಚೆನ್ನಾಗಿ ಎಣಿಕೆಮಾಡು, ಚೆನ್ನಾಗಿ ಗುಣಿಸು
ಪರಿಗುಣಣ. ನ: [ಪರಿಗುಣನ] ಸ್ವಾಧ್ಯಾಯ(ಓಘ)
ಪರಿಗುವ. ಅಕ: [ಪರಿಗುಪ್] ವ್ಯಾಕುಲಗೊಳ್ಳು, **ಸಕ:** ಸತತವಾಗಿ ಸಂಚರಿಸು, ಸತತವಾಗಿ ತಿರುಗಾಡು
ಪರಿಗುವ. ಸಕ: [ಪರಿ+ಗು] ಶಬ್ದಮಾಡು
ಪರಿಗುವ್ವ. ಅಕ: [ಪರಿ+ಗುಪ್] ವ್ಯಾಕುಲಗೊಳ್ಳು, ದುಃಖಿತನಾಗು ಸಕ: ನಿರಂತರವಾಗಿ ಸಂಚರಿಸು, ತಿರುಗು
ಪರಿಗೂ. ಸಕ: [ಪರಿ +ಗೂ] ಶಬ್ದಮಾಡು
ಪರಿಗೇಣ್ಹ}. ಸಕ: [ಪರಿ +ಗ್ರಹ್] ಚೆನ್ನಾಗಿ ಸ್ವೀಕರಿಸು,
ಪರಿಗ್ಗಹ}. ತೆಗೆದುಕೊಳ್ಳು, ಚೆನ್ನಾಗಿ ಹಿಡಿ
ಪರಿಗ್ಗಹ. ಪು: [ಪರಿಗ್ರಹ] ಸ್ವೀಕಾರ, ಹಣ ಇತ್ಯಾದಿಗಳನ್ನು ಸ್ವೀಕರಿಸಿ ಸಂಗ್ರಹಿಸುವುದು. ಮಮಕಾರ ಪೂರ್ವಕವಾಗಿ ಸ್ವೀಕರಿಸಿದ್ದು (ಆಚಾ). **–ವೇರಮಣ.** ನ: [–ವಿರಮಣ] ಸ್ವೀಕಾರ ಮಾಡುವುದನ್ನು ನಿಲ್ಲಿಸುವುದು. **ಪರಿಗ್ಗಹಾವಂತ.** ವಿ: [–ವತ್] ಪರಿಗ್ರಹದಿಂದ(ಸ್ವೀಕಾರ) ಕೂಡಿದ
ಪರಿಗ್ಗಹಿ. ವಿ: [ಪರಿಗ್ರಹಿನ್] ಪರಿಗ್ರಹದಿಂದ ಕೂಡಿದ
ಪರಿಗ್ಗಹಿಯ. ವಿ: [ಪರಿಗೃಹೀತ] ಸ್ವೀಕರಿಸಲ್ಪಟ್ಟ(ಔಪ)
ಪರಿಗ್ಗಹಿಯಾ. ಸ್ತ್ರೀ: [ಪರಿಗ್ರಹಿಕೀ] ಸ್ವೀಕರಣಕ್ಕೆ ಸಂಬಂಧಿಸಿದ ಕ್ರಿಯೆ
ಪರಿಘಗ್ಘರ. ವಿ: [ಪರಿಘರ್ಘರ] ಕೂತುಹೋಗಿರುವ ದನಿ
ಪರಿಘಟ್ಟ. ಸಕ: [ಪರಿ+ಘಟ್ಟ್] ಸುತ್ತಲೂ ಹೊಡೆತ ಕೊಡು, ಏಟುಕೊಡು

ಪರಿಘಟ್ಟಣ. ನ: [ಪರಿಘಟ್ಟನ] ಆಘಾತ, ಏಟು, ಹೊಡೆತ, ಗಾಯ
ಪರಿಘಟ್ಟಣ. ನ: [ಪರಿಘಟನ] ನಿರ್ಮಾಣ, ರಚನೆ
ಪರಿಘಟ್ಟಿಯ. ವಿ: [ಪರಿಘಟ್ಟಿತ] ಪೀಡಿಸಲ್ಪಟ್ಟ, ಹೊಡೆಯಲ್ಪಟ್ಟ(ಜೀವ)
ಪರಿಘಟ್ಠ. ವಿ: [ಪರಿಘೃಷ್ಟ] ಚೆನ್ನಾಗಿ ಉಜ್ಜಲ್ಪಟ್ಟ, ಚೆನ್ನಾಗಿ ತಿಕ್ಕಲ್ಪಟ್ಟ ಅರೆಯಲ್ಪಟ್ಟ
ಪರಿಘಾಯ. 'ಪರೀಘಾಯ' ಶಬ್ದವನ್ನು ನೋಡುವುದು
ಪರಿಘಾಸ. ಸಕ: [ಪರಿ+ಘಾಸಯ್] ಊಟಮಾಡಿಸು
ಪರಿಘಾಸಿಯ. ವಿ: [ಪರಿಘರ್ಷಿತ] ಉಜ್ಜಲ್ಪಟ್ಟ, ತಿಕ್ಕಲ್ಪಟ್ಟ,
ಪರಿಘುಮ್ಮಿರ. ವಿ: [ಪರಿಘೂರ್ಣಿತೃ] ಮೆಲ್ಲಮೆಲ್ಲಗೆ ಕಂಪಿಸುತ್ತಿರುವ, ಅಲುಗಾಡುತ್ತ-ಹೊಯ್ದಾಡುತ್ತ
ಪರಿಘೇತವ್ವ}. 'ಪರಿಗೆಣ್ಣ' ಶಬ್ದವನ್ನು ನೋಡುವುದು
ಪರಿಘೇತವ್ಯ}.
ಪರಿಘೆತ್ತುಂ}.
ಪರಿಘೆತ್ತೂಣ}.
ಪರಿಘೋಲ. ಸಕ: [ಪರಿ +ಘೂರ್ಣ] ಅಲ್ಲಾಡು, ತಿರುಗು, ಸುತ್ತು(ಔಪ)
ಪರಿಘೋಲಣ. ನ: [ದೇ. ಪರಿಘೋಲನ] ವಿಚಾರ(ತಾ)
ಪರಿಘೋಲಿರ. ವಿ: [ಪರಿಘೂರ್ಣಿತೃ] ಅಲ್ಲಾಡುವ, ತಿರುಗುವ, ಸುತ್ತುವ
ಪರಿಚಅ. 'ಪರಿಯಯ=ಪರಿಚಯ' ಶಬ್ದವನ್ನು ನೋಡುವುದು
ಪರಿಚಅ. 'ಪರಿಚ್ಚಅ' ಶಬ್ದವನ್ನು ನೋಡುವುದು
ಪರಿಚಂಚಲ. ವಿ: [ಪರಿಚಂಚಲ] ಬಹಳವಾಗಿ ಚಲಿಸುವ, ತುಂಬ ಚಂಚಲವಾದ, ಅತ್ಯಂತ ಅಸ್ಥಿರ
ಪರಿಚತ್ತ. 'ಪರಿಚ್ಚತ್ತ' ಶಬ್ದವನ್ನು ನೋಡುವುದು
ಪರಿಚರಣಾ. ಸ್ತ್ರೀ: [ಪರಿಚರಣಾ] ಸೇವೆ, ಭಕ್ತಿ(ಸುಪಾ)
ಪರಿಚಲ. ಸಕ: [ಪರಿಚಲ್] ಬಹಳವಾಗಿ ಚಲಿಸು,
ಪರಿಚಲಿಅ. ವಿ: [ಪರಿಚಲಿತ] ಮುಂದೆ ಚಲಿಸಿರುವ, ಮುಂದೆ ಸಾಗಿರುವ
ಪರಿಚಾರಅ. ವಿ: [ಪರಿಚಾರಕ] ಸೇವೆ ಮಾಡುವವನು, ಸೇವಕ(ಮಾಲವಿ), ಸ್ತ್ರೀ: -ರಿಆ.
ಪರಿಚಾರಣಾ. ಸ್ತ್ರೀ: [ಪರಿಚಾರಣಾ] ಮೈಥುನ-ಪ್ರವೃತ್ತಿ(ತಾ), ಸ್ತ್ರೀ-ಪುರುಷರ ಸಮಾಗಮ-ಪ್ರವೃತ್ತಿ
ಪರಿಚಿಂತ. ಸಕ: [ಪರಿ+ಚಿಂತಯ್] ಚಿಂತನ ಮಾಡು, ಚಿಂತಿಸು, ವಿಚಾರಮಾಡು. **'ಪರಿಚಿಂತಇ'**
ಪರಿಚಿಂತಿಯ. ವಿ: [ಪರಿಚಿಂತಿತ] ಚಿಂತನ ಮಾಡಲಾದದ್ದು(ಸಣ)
ಪರಿಚಿಂತಿರ. ವಿ: [ಪರಿಚಿಂತಯಿತೃ] ಚಿಂತನೆ ಮಾಡುವವನು, ಚಿಂತಕ
ಪರಿಚಿಟ್ಠ. ಅಕ: [ಪರಿ +ಸ್ಥಾ] ಇರು, ಸ್ಥಿರವಾಗಿರು
ಪರಿಚಿಯ. ವಿ: [ಪರಿಚಿತ] ಗೊತ್ತಿರುವ, ತಿಳಿದಿರುವ(ಔಪ)
ಪರಿಚುಂಬ. 'ಪರಿಉಂಬ' ಶಬ್ದವನ್ನು ನೋಡುವುದು
ಪರಿಚುಂಬಣ. 'ಪರಿಉಂಬಣ' ಶಬ್ದವನ್ನು ನೋಡುವುದು
ಪರಿಚುಂಬಿಯ. ವಿ: [ಪರಿಚುಂಬಿತ] ಚೆನ್ನಾಗಿ ಚುಂಬಿಸಲ್ಪಟ್ಟ
ಪರಿಚ್ಚಅ. ಸಕ: [ಪರಿ+ತ್ಯಜ್] ತ್ಯಜಿಸು, ಬಿಡು. **'ಪರಿಚ್ಚಯಇ.'**
ಪರಿಚ್ಚತ್ತ. ವಿ: [ಪರಿತ್ಯಕ್ತ] ತ್ಯಜಿಸಲ್ಪಟ್ಟ(ಸೇ)
ಪರಿಚ್ಚಯಣ. ನ: [ಪರಿತ್ಯಜನ] ಪರಿತ್ಯಾಗ, ತ್ಯಜಿಸುವುದು
ಪರಿಚ್ಚಾಇ. ವಿ: [ಪರಿತ್ಯಾಗಿನ್] ಪರಿತ್ಯಾಗ ಮಾಡುವವನು(ಔಪ)
ಪರಿಚ್ಚಾಗ}. ಪು: [ಪರಿತ್ಯಾಗ] ತ್ಯಾಗ, ತ್ಯಜಿಸುವುದು,
ಪರಿಚ್ಚಾಯ}. ಬಿಡುವುದು(ಉಪ)
ಪರಿಚ್ಚಾಯ. ವಿ: [ಪರಿತ್ಯಾಜ್ಯ] ತ್ಯಜಿಸಲು ಯೋಗ್ಯವಾದದ್ದು(ಸಂಬೋಧ)
ಪರಿಚ್ಚಿಅ. ವಿ: [ದೇ] ಮೇಲಕ್ಕೆ ಎಸೆಯಲ್ಪಟ್ಟ(ಷಡ್)
ಪರಿಚ್ಚಿಅ. 'ಪರಿಚಿಯ' ಶಬ್ದವನ್ನು ನೋಡುವುದು (ಉಪ)
ಪರಿಚ್ಛ. 'ಪರಿಕ್ಖ' ಶಬ್ದವನ್ನು ನೋಡುವುದು
ಪರಿಚ್ಛಗ. ವಿ: [ಪರೀಕ್ಷಕ] ಪರೀಕ್ಷೆ ಮಾಡುವವನು, ಗುಣದೋಷಗಳನ್ನು ಪರೀಕ್ಷಿಸುವ
ಪರಿಚ್ಛಣ್ಣ}. ವಿ: [ಪರಿಚ್ಛನ್ನ] ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ,
ಪರಿಚ್ಛನ್ನ}. ವಸ್ತ್ರ, ಒಡವೆ ಮುಂತಾದವುಗಳಿಂದ ಕೂಡಿದ, ಪರಿವಾರದಿಂದ ಕೂಡಿದ(ವವ)
ಪರಿಚ್ಛಪ. ವಿ: [ಪರೀಕ್ಷಕ] ಪರೀಕ್ಷೆ ಮಾಡುವವನು, ಗುಣದೋಷಗಳನ್ನು ಪರೀಕ್ಷಿಸುವ
ಪರಿಚ್ಛಾ. ಸ್ತ್ರೀ: [ಪರೀಕ್ಷಾ] ಪರೀಕ್ಷೆ, ವಿಮರ್ಶಿಸಿ ನೋಡುವುದು(ಓಘ)
ಪರಿಚ್ಛಿಅ. 'ಪರಿಕ್ಖಿಯ' ಪರೀಕ್ಷೆ ಮಾಡುವವನು, ಗುಣದೋಷಗಳನ್ನು ಪರೀಕ್ಷಿಸುವ
ಪರಿಚ್ಛಿಂದ. ಸಕ: [ಪರಿ+ಛಿದ್] ನಿಶ್ಚಯಿಸು, ನಿರ್ಣಯಿಸು, ನಿರ್ಧರಿಸು, ಕತ್ತರಿಸು

ಪರಿಚ್ಛಿಣ್ಣ. ವಿ: [ಪರಿಚ್ಛಿನ್ನ] ಕತ್ತರಿಸಲ್ಪಟ್ಟ, ನಿರ್ಣಯಿಸಲ್ಪಟ್ಟ, ನಿಶ್ಚಯಿಸಲ್ಪಟ್ಟ(ಆವ)

ಪರಿಚ್ಛಿತ್ತಿ. ಸ್ತ್ರೀ: [ಪರಿಚ್ಛಿತ್ತಿ] ನಿರ್ಣಯ, ನಿಶ್ಚಯ, ಪರೀಕ್ಷೆ(ಉಪ)

ಪರಿಚ್ಛಿನ್ನ. 'ಪರಿಚ್ಛಿಣ್ಣ' ಶಬ್ದವನ್ನು ನೋಡುವುದು

ಪರಿಚ್ಛೂಢ. ವಿ: [ದೇ.ಪರಿಕ್ಷಿಪ್ತ] ಮೇಲಕ್ಕೆ ಎಸೆಯಲ್ಪಟ್ಟ, ಪರಿತ್ಯಕ್ತ, ಬಿಡಲ್ಪಟ್ಟ

ಪರಿಚ್ಛೇಅ. ಪು: [ಪರಿಚ್ಛೇದ] ನಿರ್ಣಯ, ನಿಶ್ಚಯ, ನಿರ್ಧಾರ, (ವಿಸೇ)

ಪರಿಚ್ಛೇಅ. ವಿ: [ಪರಿಚ್ಛೇಕ] ಸಣ್ಣ, ಲಘುವಾದ(ಔಪ)

ಪರಿಚ್ಛೇಅಗ. ವಿ: [ಪರಿಚ್ಛೇದಕ] ನಿಶ್ಚಯಿಸುವವನು, ನಿರ್ಣಯಿಸುವವನು

ಪರಿಚ್ಛೇಜ್ಜ. ವಿ: [ಪರಿಚ್ಛೇದ್ಯ] ಯಾವ ವಸ್ತುವಿನ ಕ್ರಯ -ವಿಕ್ರಯವು ನಿಶ್ಚಯವನ್ನು ಅವಲಂಬಿಸಿರುತ್ತದೋ ಅಂಥ ವಸ್ತು; ರತ್ನ, ವಸ್ತ್ರ ಇತ್ಯಾದಿ ವಸ್ತುಗಳು(ಶ್ರಾ)

ಪರಿಚ್ಛೇದ. 'ಪರಿಚ್ಛೇಅ=ಪರಿಚ್ಛೇದ' ಶಬ್ದವನ್ನು ನೋಡುವುದು

ಪರಿಚ್ಛೇದಗ. 'ಪರಿಚ್ಛೇಅಗ' ಶಬ್ದವನ್ನು ನೋಡುವುದು

ಪರಿಚ್ಛೋಯ. ವಿ: [ಪರಿಸ್ತೋಕ] ಅಲ್ಪ, ಕಡಿಮೆ

ಪರಿಛೇಜ್ಜ. 'ಪರಿಚ್ಛೇಜ್ಜ' ಶಬ್ದವನ್ನು ನೋಡುವುದು

ಪರಿಜಂಪಿಯ. ವಿ: [ಪರಿಜಲ್ಪಿತ] ಉಕ್ತ, ಹೇಳಲ್ಪಟ್ಟ, ಕಥಿತ(ಸುಪಾ)

ಪರಿಜ್ಜರ. ವಿ: [ಪರಿಜರ್ಜರ] ಅತ್ಯಂತ ಜೀರ್ಣವಾದ

ಪರಿಜಡಿಲ. ವಿ: [ಪರಿಜಟಿಲ] ಬಹಳ ತೊಡಕಾದ (ಗಲುಡ), ಬಹಳ ಜಟೆಗಳಿಂದ ಕೂಡಿದ

ಪರಿಜಣ. 'ಪರಿಅಣ' ಶಬ್ದವನ್ನು ನೋಡುವುದು

ಪರಿಜವ. ಸಕ: [ಪರಿ+ವಿಚ್] ಬೇರ್ಪಡಿಸು, ಬೇರೆ ಬೇರೆ ಮಾಡು

ಪರಿಜವ. ಸಕ: [ಪರಿ+ಜಪ್] ಜಪ ಮಾಡು. ಬಹಳ ಮಾತಾಡು, ಹರಟೆಹೊಡೆ

ಪರಿಜವಣ. ನ: [ಪರಿಜಪನ] ಜಪ, ಮಂತ್ರವನ್ನು ಮತ್ತೆ ಮತ್ತೆ ಉಚ್ಚರಿಸುವುದು(ಮಂತ್ರ ಪುರಶ್ಚರಣೆ)

ಪರಿಜಾಇಯ. ವಿ: [ಪರಿಯಾಚಿತ] ಯಾಚಿಸಲಾದ, ಬೇಡಲ್ಪಟ್ಟ

ಪರಿಜಾಣ. ಸಕ: [ಪರಿ +ಜ್ಞಾ] ಚೆನ್ನಾಗಿ ತಿಳಿದುಕೊಳ್ಳು. ವ.ಕೃ –'ಪರಿಜಾಣಮಾಣ'

ಪರಿಜಿಅ. ವಿ: [ಪರಿಜಿತ] ಸಂಪೂರ್ಣವಾಗಿ ಜಯಸಾಧಿಸಿದ, ಗೆದ್ದ, ಪೂರ್ಣವಾಗಿ ವಶಪಡಿಸಿಕೊಳ್ಳಲಾಗಿರುವ

ಪರಿಜುಣ್ಣ. ವಿ: [ಪರಿಜೀರ್ಣ] ಹರಿದುಹೋಗಿರುವ, ಅತ್ಯಂತ ಜೀರ್ಣ–ಶೀರ್ಣವಾದ(ಆಚ), ದುರ್ಬಲ, ದರಿದ್ರ, ಬಡವ

ಪರಿಜುಣ್ಣಾ. 'ಪರಿಜುನ್ನಾ' ಶಬ್ದವನ್ನು ನೋಡುವುದು

ಪರಿಜುತ್ತ. ವಿ: [ಪರಿಯುಕ್ತ] ಕೂಡಿಕೊಂಡಿರುವ, ಸಹಿತ

ಪರಿಜುನ್ನ. 'ಪರಿಜುಣ್ಣ' ಶಬ್ದವನ್ನು ನೋಡುವುದು

ಪರಿಜುನ್ನಾ. ಸ್ತ್ರೀ: [ಪರಿಜೀರ್ಣಾ,ಪರಿದ್ಯೂನಾ] ಒಂದು ಬಗೆಯ ಸಂನ್ಯಾಸ, ಬಡತನದ ಕಾರಣದಿಂದಾಗಿ ತೆಗೆದುಕೊಂಡ ಸಂನ್ಯಾಸ ದೀಕ್ಷೆ

ಪರಿಜುಸಿಯ. 'ಪರಿಝುಸಿಯ' ಶಬ್ದವನ್ನು ನೋಡುವುದು

ಪರಿಜುಸಿಯ. ನ: [ಪರ್ಯುಷಿತ] ರಾತ್ರಿಯ, ಹಳಸಿದ

ಪರಿಜೂರ. ಅಕ: [ಪರಿ+ಜೄ] ಪೂರ್ತಿಯಾಗಿ ಜೀರ್ಣವಾಗಿರುವ, ತುಂಬ ಹಳೆಯದಾದ

ಪರಿಜೂರಿಯ. ವಿ: [ಪರಿಜೀರ್ಣ] ಅತ್ಯಂತ ಜೀರ್ಣವಾದ, ತೀರಾ ಹರಿದ, ಅತ್ಯಂತ ಹಳೆಯದಾದ

ಪರಿಜ್ಜಯ. ಪು: [ದೇ] ಕೃಷ್ಣ ಪುದ್ಗಲ–ವಿಶೇಷ

ಪರಿಜ್ಝಾಮಿಯ. ವಿ: [ಪರಿಧ್ಯಾಮಿತ] ಕಪ್ಪಗೆ ಮಾಡಲ್ಪಟ್ಟ

ಪರಿಜ್ಝುಸಿಯ}. ವಿ: [ಪರಿಜುಷ್ಟ] ಸೇವಿಸಲ್ಪಟ್ಟ

ಪರಿಝುಸಿಯ}. ಸಂತುಷ್ಟನಾದ

ಪರಿಝೂಸಿಯ}.

ಪರಿಟ್ಠವ. ಸಕ: [ಪರಿ+ಸ್ಥಾಪಯ್] ಸಂಸ್ಥಾಪಿಸು, ಸರಿಯಾಗಿ ಇಡಲ್ಪಟ್ಟ, ಸರಿಯಾಗಿ ವ್ಯವಸ್ಥೆ ಮಾಡಲ್ಪಟ್ಟ, ಪರಿತ್ಯಾಗಮಾಡು(ಆಚಾ)

ಪರಿಟ್ಠವಣ. ನ: [ಪ್ರತಿಷ್ಠಾಪನ] ಪ್ರತಿಷ್ಠೆ ಮಾಡಿಸುವುದು, ದೇವರ ವಿಗ್ರಹವನ್ನು ವಿಧ್ಯುಕ್ತವಾಗಿ ಪ್ರತಿಷ್ಠೆ ಮಾಡಿಸು

ಪರಿಟ್ಠವಣ. ನ: [ಪರಿಷ್ಠಾಪನ] ಪರಿತ್ಯಾಗ, ಸಂಪೂರ್ಣವಾಗಿ ತ್ಯಜಿಸುವುದು(ಉವ)

ಪರಿಟ್ಠವಿಯ. ಸ್ತ್ರೀ: [ಪ್ರತಿಷ್ಠಾಪಿತ] ಪ್ರತಿಷ್ಠೆ ಮಾಡಿಸಲ್ಪಟ್ಟ

ಪರಿಟ್ಠಾ. 'ಪಇಟ್ಠಾ' ಶಬ್ದವನ್ನು ನೋಡುವುದು

ಪರಿಟ್ಠಾಇ. ವಿ: [ಪರಿಷ್ಠಾಪಿನ್] ಪರಿತ್ಯಾಗ ಮಾಡಿದವನು, ಪರಿತ್ಯಾಗಿ

ಪರಿಟ್ಠಾಣ. ನ: [ಪರಿಸ್ಥಾನ] ಪರಿತ್ಯಾಗ, ಸಂಪೂರ್ಣ ತ್ಯಾಗ
ಪರಿಟ್ಠಾವ. 'ಪರಿಟ್ಠವ' ಶಬ್ದವನ್ನು ನೋಡುವುದು
ಪರಿಟ್ಠಾವಅ. ವಿ: [ಪರಿಸ್ಥಾಪಕ] ಪರಿತ್ಯಾಗ ಮಾಡುವವನು, ಪೂರ್ಣ ತ್ಯಾಗಿ
ಪರಿಟ್ಠಿಅ. ವಿ: [ಪರಿಸ್ಥಿತ] ಪೂರ್ಣ ರೀತಿಯಲ್ಲಿ ಸ್ಥಿರವಾಗಿ ನಿಂತಿರುವ, ನೆಲೆಮಾಡಿಕೊಂಡಿರುವ
ಪರಿಟ್ಠಿಅ. 'ಪಇಟ್ಠಿಯ' ಶಬ್ದವನ್ನು ನೋಡುವುದು
ಪರಿಠವ. 'ಪರಿಟ್ಠವ' ಶಬ್ದವನ್ನು ನೋಡುವುದು
ಪರಿಠವಣ. 'ಪರಿಟ್ಠವಣ=ಪ್ರತಿಷ್ಠಾಪನ' ಶಬ್ದವನ್ನು ನೋಡುವುದು
ಪರಿಣ. 'ಪರಿಣೀ' ಶಬ್ದವನ್ನು ನೋಡುವುದು. ವ. ಕೃ: 'ಪರಿಣಂತ' ಶಬ್ದವನ್ನು ನೋಡುವುದು
ಪರಿಣಇ. ಸ್ತ್ರೀ: [ಪರಿಣತಿ] ಪರಿಣಾಮ
ಪರಿಣಂತು. ವಿ: [ಪರಿಣಂತು] ಪರಿಣಾಮವನ್ನು ಹೊಂದಲಿರುವವನು,ಪರಿಣತನಾಗಲಿರುವವನು
ಪರಿಣಂದ. ಸಕ: [ಪರಿ+ನಂದ್] ವರ್ಣಿಸು, ಪ್ರಶಂಸಿಸು
ಪರಿಣದ್ಧ. ವಿ: [ಪರಿಣದ್ಧ] ಸುತ್ತುವರಿಯಲ್ಪಟ್ಟ, ನ: ಸುತ್ತುಗೋಡೆ, ಸುತ್ತುವರಿಯುವುದು
ಪರಿಣಮ. ಸಕ: [ಪರಿ +ಣಮ್] ಪಡೆದುಕೊಳ್ಳು, ಹೊಂದು, **ಅಕ:** ರೂಪಾಂತರ ಹೊಂದು ಪೂರ್ಣವಾಗು, ಪೂರ್ಣಗೊಳ್ಳು, ಪರಿಪಕ್ವವಾಗು
ಪರಿಣಮಣ. ನ: [ಪರಿಣಮನ] ಪರಿಪೂರ್ಣತೆ ಪಡೆಯುವುದು, ಸಿದ್ಧಿಯಾಗುವುದು(ಉಪ)
ಪರಿಣಮಿಅ}. ವಿ: [ಪರಿಣತ] ಪರಿಪಕ್ವವಾಗಿರುವ,
ಪರಿಣಯ}. ಅಭಿವೃದ್ಧಿ ಹೊಂದಿರುವ, ಅವಸ್ಥಾಂತರ ಹೊಂದಿರುವ, ಬದಲಾವಣೆ ಹೊಂದಿದ(ತಾ), **–ವ.**ವಿ: [–**ವಯಸ್**] ವೃದ್ಧ, ಮುದುಕ(ಣಾಯಾ)
ಪರಿಣಯಣ. ನ: [ಪರಿಣಯನ] ವಿವಾಹ, ಮದುವೆ
ಪರಿಣಯಣಾ. ಮೇಲಿನ ಶಬ್ದವನ್ನು ನೋಡುವುದು
ಪರಿಣವ. 'ಪರಿಣಮ' ಶಬ್ದವನ್ನು ನೋಡುವುದು
ಪರಿಣಾಇ. ಪು: [ಪರಿಜ್ಞಾತಿ] ಚೆನ್ನಾಗಿ ತಿಳಿದಿರುವಿಕೆ, ಕೂಲಂಕಷ ತಿಳಿವಳಿಕೆ
ಪರಿಣಾಮ. ಸಕ: [ಪರಿ+ಣಮಯ್] ಪಕ್ವಗೊಳಿಸು, ಚೆನ್ನಾಗಿ ವಿಕಾಸಹೊಂದು, ನಿಷ್ಣಾತಗೊಳಿಸು
ಪರಿಣಾಮ. ಪು: [ಪರಿಣಾಮ] ಅವಸ್ಥಾಂತರ ಹೊಂದುವುದು, ರೂಪಾಂತರ ಹೊಂದುವುದು, ದೀರ್ಘಕಾಲದ ಅನುಭವದಿಂದ ಉದಿಸುವ ಆತ್ಮ –ಧರ್ಮ ವಿಶೇಷ(ತಾ), ಸ್ವಭಾವ, ಧರ್ಮ, ನಿಶ್ಚಯ, ಮನೋಭಾವ(ನಿಚೂ), ವಿ: ಪರಿಣತಿಗೊಳಿಸುತ್ತಿರುವ
ಪರಿಣಾಮಣಯಾ}. ಸ್ತ್ರೀ: [ಪರಿಣಾಮನಾ]
ಪರಿಣಾಮಣಾ.}. ರೂಪಾಂತರಗೊಳಿಸುವಿಕೆ(ಪಣ್ಣ)
ಪರಿಣಾಮಯ.ವಿ:[ಪರಿಣಾಮಕ] ಪರಣತಗೊಳಿಸುವ,
ಪರಿಣಾಮಿ. ವಿ: [ಪರಿಣಾಮಿನ್] ಪರಿಣಾಮ ಹೊಂದುವ, ರೂಪಾಂತರ ಹೊಂದುವ(ದೇ). **–ಕಾರಣ.** ನ: [–ಕಾರಣ] ಕಾರ್ಯ ರೂಪದಲ್ಲಿ ಪರಿಣತಿ ಹೊಂದುವ ಕಾರಣ, ಪರಿಣಾಮ ಹೊಂದುವುದಕ್ಕೆ(=ಉಪಾದಾನ) ಕಾರಣವಾದ್ದು.
ಪರಿಣಾಮಿಅ. ವಿ:[ಪಾರಿಣಾಮಿಕ] ಪರಿಣಾಮದಿಂದ ಹುಟ್ಟಿದ, ಪರಿಣಾಮಕ್ಕೆ ಸಂಬಂಧಿಸಿದ, **ಪು:** ಪರಿಣಾಮ, ಭಾವ ವಿಶೇಷ(ವಿಸೇ)
ಪರಿಣಾಮಿಅ. ವಿ: [ಪರಿಣಮಿತ] ಸಿದ್ಧಿಹೊಂದಿದ, ಪಕ್ವವಾದ, ಅಭಿವೃದ್ಧಿಹೊಂದಿದ
ಪರಿಣಾಮಿಆ. ಸ್ತ್ರೀ: [ಪಾರಿಣಾಮಿಕೀ] ದೀರ್ಘಕಾಲದ ಅನುಭವದಿಂದ ಹುಟ್ಟುವ ಬುದ್ಧಿ –ವಿಶೇಷ(ತಾ)
ಪರಿಣಾಯ. ವಿ: [ಪರಿಜ್ಞಾತ] ಚೆನ್ನಾಗಿ ತಿಳಿಯಲ್ಪಟ್ಟ, ಚಿರ ಪರಿಚಿತ(ಪಉಮ)
ಪರಿಣಾವ. ಸಕ:[ಪರಿ+ಣಾಯಯ್]ಮದುವೆ ಮಾಡಿಸು
ಪರಿಣಾವಣ. ನ: [ಪರಿಣಾಯನ] ಮದುವೆ ಮಾಡಿಸುವುದು(ಸುಪಾ)
ಪರಿಣಾವಿಅ. ವಿ: [ಪರಿಣಾಯಿತ] ಮದುವೆ ಮಾಡಿಸಲಾದವನು
ಪರಿಣಾಹ. ಪು: [ಪರಿಣಾಹ] ವಿಸ್ತಾರ, ಉದ್ದ, ಅಗಲವಾದ, ಪರಿಧಿ, ಸುತ್ತುಗೋಡೆ
ಪರಿಣೆಂತ. 'ಪರಿಣೀ=ಪರಿ+ಗಮ್' ಶಬ್ದವನ್ನು ನೋಡುವುದು
ಪರಿಣೆಜ್ಜಂತ. 'ಪರಿಣೀ=ಪರಿ+ಣೀ' ಶಬ್ದವನ್ನು ನೋಡುವುದು
ಪರಿಣೆಜ್ಜರಾ. ಸ್ತ್ರೀ: [ಪರಿನಿರ್ಜರಾ] ವಿನಾಶ, ಕ್ಷಯ
ಪರಿಣೆಜ್ಜಿಯ. ವಿ: [ಪರಿನಿರ್ಜಿತ] ಸೋಲಿಸಲ್ಪಟ್ಟ
ಪರಿಣೆಟ್ಠಾ. ಸ್ತ್ರೀ: [ಪರಿನಿಷ್ಠಾ] ಸಂಪೂರ್ಣತೆ, ಸಮಾಪ್ತಿ,
ಪರಿಣೆಟ್ಠಾಣ. ನ: [ಪರಿನಿಷ್ಠಾನ] ಅವಸಾನ, ಅಂತ, ಕಡೆ(ವಿಸೇ)

ಪರಿಣಿಟ್ಠಿಯ. ವಿ: [ಪರಿನಿಷ್ಠಿತ] ಪೂರ್ಣಗೊಳಿಸಲ್ಪಟ್ಟ, ಸಮಾಪ್ತಿಗೊಳಿಸಲ್ಪಟ್ಟ, ದಡ ಸೇರಿದ(ಣಾಯಾ), ಚೆನ್ನಾಗಿ ತಿಳಿಯಲ್ಪಟ್ಟ(ವವ)

ಪರಿಣಿಟ್ಠಿಯಾ. ಸ್ತ್ರೀ: [ಪರಿನಿಷ್ಠಿತಾ.] ಎರಡು ಅಥವಾ ಮೂರುಬಾರಿ ತೃಣದ ಶೋಧನೆ ಮಾಡಲಾಗುವಂಥ ಕೃಷಿ. ಒಂದು ಬಗೆಯ ದೀಕ್ಷೆ; ಇದರಲ್ಲಿ ಮತ್ತೆ ಮತ್ತೆ ನಿಯಮ ಮೀರಿದ ನಡವಳಿಕೆಗಳನ್ನು ವಿಮರ್ಶಿಸಲಾಗುತ್ತದೆ.

ಪರಿಣಿಯ. ವಿ: [ಪರಿಣೀತ] ಮದುವೆಯಾಗಿರುವವನು, ವಿವಾಹಿತ(ಸಣ)

ಪರಿಣಿವ್ವವ. ಸಕ: [ಪರಿನಿರ್+ವಾಪಯ್] ಎಲ್ಲ ವಿಧದಿಂದಲೂ ಅತಿಶಯವಾಗಿ ಪರಿಣತಗೊಳಿಸು, ಪಕ್ವಗೊಳಿಸು

ಪರಿಣಿವ್ವಾ. ಸಕ: [ಪರಿನಿರ್+ವಾ] ಶಾಂತವಾಗು, ಮುಕ್ತಿ ಪಡೆ, ಮೋಕ್ಷಹೊಂದು(ಭಗ)

ಪರಿಣಿವ್ವಾಣ. ನ: [ಪರಿನಿರ್ವಾಣ] ಮುಕ್ತಿ, ಮೋಕ್ಷ

ಪರಿಣಿವ್ವುಇ. ಸ್ತ್ರೀ: [ಪರಿನಿರ್ವೃತಿ] ಮೇಲಿನ **ಶಬ್ದವನ್ನು ನೋಡುವುದು**

ಪರಿಣಿವ್ವುಯ. **'ಪರಿನಿವ್ವುಅ' ಶಬ್ದವನ್ನು ನೋಡುವುದು**

ಪರಿಣೀ. ಸಕ: [ಪರಿ+ಣೀ] ವಿವಾಹವಾಗು, ತೆಗೆದುಕೊಂಡು ಹೋಗು(ಕುಪ್ರ)

ಪರಿಣೀ. ಅಕ: [ಪರಿ+ಗಮ್] ಹೊರಹೋಗು –ಪರಿಣಿಂತ

ಪರಿಣೀಅ. ವಿ: [ಪರಿಣೀತ] ವಿವಾಹಿತ(ಮಹಾ)

ಪರಿಣೀಲ. ವಿ: [ಪರಿನೀಲ] ಪೂರ್ತಿ ಹಸಿರು ಬಣ್ಣದ

ಪರಿಣೇ. **'ಪರಿಣೀ' ಶಬ್ದವನ್ನು ನೋಡುವುದು**

ಪರಿಣೇವಿಯ.(ಅಪ). ವಿ: [ಪರಿಣಾಯಿತ] ವಿವಾಹ ಮಾಡಿಸಲ್ಪಟ್ಟವನು

ಪರಿಣೇವ್ವುಯ. 'ಪರಿನಿವ್ವುಅ' ಶಬ್ದವನ್ನು ನೋಡುವುದು

ಪರಿಣ್ಣ. ವಿ: [ಪರಿಜ್ಞ] ತಿಳಿದವನು, ಜ್ಞಾನಿ(ಆಚಾ)

ಪರಿಣ್ಣ– **'ಪರಿಣ್ಣಾ–' ಶಬ್ದವನ್ನು ನೋಡುವುದು**

ಪರಿಣ್ಣಾ. ಸಕ: [ಪರಿ+ಜ್ಞಾ] ತಿಳಿದುಕೊಳ್ಳು

ಪರಿಣ್ಣಾ. ಸ್ತ್ರೀ: [ಪರಿಜ್ಞಾ] ತಿಳಿವು, ಜ್ಞಾನ(ಧರ್ಮಸಂ), ವಿವೇಕ, ಪರ್ಯಾಲೋಚನೆ, ವಿಚಾರ, ಜ್ಞಾನ ಪೂರ್ವಕವಾಗಿ ತಿರಸ್ಕರಿಸುವುದು, ನಿರಾಕರಿಸುವುದು

ಪರಿಣ್ಣಾಣ. ವಿ: [ಪರಿಜ್ಞಾನ] ಜ್ಞಾನ, ತಿಳಿವಳಿಕೆ

ಪರಿಣ್ಣಾಯ. **'ಪರಿಣ್ಣಾ=ಪರಿ+ಜ್ಞಾ' ಶಬ್ದವನ್ನು ನೋಡುವುದು**

ಪರಿಣ್ಣಾಯ. ವಿ:[ಪರಿಜ್ಞಾತ] ಚೆನ್ನಾಗಿ ತಿಳಿಯಲ್ಪಟ್ಟ, ವಿದಿತ

ಪರಿಣ್ಣಿ. ವಿ: [ಪರಿಜ್ಞಿನ್] ತಿಳಿವಳಿಕೆಯಿಂದ ಕೂಡಿದ, ಜ್ಞಾನಿ

ಪರಿತಂತ. ವಿ: [ಪರಿತಾಂತ] ಬಹಳ ದುಃಖಿ, ಅತಿಖೇದಗೊಂಡ(ಣಾಯಾ)

ಪರಿತಂಬಿರ. ವಿ: [ಪರಿತಾಮ್ರ] ವಿಶೇಷ ತಾಮ್ರ, ಕೆಂಪು ಬಣ್ಣದ(ಗಉಡ)

ಪರಿತಜ್ಜ. ಸಕ: [ಪರಿತರ್ಜಯ್] ಪೂರ್ತಿಯಾಗಿ ತಿರಸ್ಕರಿಸು. ವ. ಕೃ –**'ಪರಿತಜ್ಜಯಂತ'**

ಪರಿತಡ್ಡವಿಯ. ವಿ: [ಪರಿತತ] ಚೆನ್ನಾಗಿ ಹರಡಲ್ಪಟ್ಟ,

ಪರಿತಣು. ವಿ: [ಪರಿತನು] ಅತ್ಯಂತ ತೆಳು(ಸುಪಾ)

ಪರಿತಪ್ಪ. ಅಕ: [ಪರಿ+ತಪ್] ಬಿಸಿಯಾಗು, ಕಾವುಂಟಾಗು, ಸಂತಾಪಗೊಳ್ಳು, ದುಃಖಿತನಾಗು, ಪಶ್ಚಾತ್ತಾಪಪಡು, –**'ಪರಿತಪ್ಪಇ'**

ಪರಿತಪ್ಪ. ಸಕ: [ಪರಿ+ತಾಪಯ್] ಪರಿತಾಪವುಂಟು ಮಾಡು

ಪರಿತಪ್ಪಣ. ನ: [ಪರಿತಪನ] ಪರಿತಪಿಸುವುದು, ದುಃಖಿಸುವುದು, ಹೆಚ್ಚು ತಾಪವುಂಟಾಗುವುದು

ಪರಿತಪ್ಪಣ. ನ: [ಪರಿತಾಪನ] ಹೆಚ್ಚು ತಾಪವುಂಟು ಮಾಡುವುದು, ಹೆಚ್ಚು ದುಃಖವುಂಟು ಮಾಡುವುದು(ಸೂಅ)

ಪರಿತಲಿಅ. ವಿ: [ಪರಿತಲಿತ] ಚೆನ್ನಾಗಿ ಕರಿಯಲ್ಪಟ್ಟ(ಓಘ)

ಪರಿತವಿಯ. ವಿ: [ಪರಿತಪ್ತ] ಕಾಯಿಸಲ್ಪಟ್ಟ, ಬಿಸಿಯಾಗಿ ಮಾಡಲ್ಪಟ್ಟ, ದುಃಖಗೊಂಡ

ಪರಿತಾಣ. ನ: [ಪರಿತ್ರಾಣ] ರಕ್ಷಣೆ, ಕಷ್ಟದಿಂದ ಪಾರುಮಾಡುವುದು, ಮೃಗಗಳನ್ನು ಹಿಡಿಯುವ ಬಲೆ(ಸೂಅ)

ಪರಿತಾವ. 'ಪರಿತಪ್ಪ=ಪರಿ+ತಾಪಯ್' ಶಬ್ದವನ್ನು **ನೋಡುವುದು**

ಪರಿತಾವ. ಪು: [ಪರಿತಾಪ] ಸಂತಾಪ, ಬಿಸಿ, ಕಾವು, ದುಃಖ, ಪಶ್ಚಾತ್ತಾಪ(ಔಪ). –ಯರ. ವಿ: [–ಕರ] ದುಃಖವುಂಟುಮಾಡುವ(ಪಉಮ)

ಪರಿತಾವಣ. **'ಪರಿತಾಪಣ=ಪರಿತಾಪನ' ಶಬ್ದವನ್ನು ನೋಡುವುದು(ಔಪ)**

ಪರಿತಾವಿಅ. ವಿ: [ಪರಿತಾಪಿತ] ಸಂತಾಪಗೊಂಡ, ದುಃಖಿತನಾದ, ಚೆನ್ನಾಗಿ ಕಾಯಿಸಲ್ಪಟ್ಟ, ಕರಿಯಲ್ಪಟ್ಟ(ಓಘ)

ಪರಿತಾಸ. ಪು: [ಪರಿತ್ರಾಸ] ಅಕಸ್ಮಾತ್ತಾಗಿ ಉಂಟಾಗುವ ಭಯ(ಣಾಯಾ)
ಪರಿತುಟ್ಟಿರ. ವಿ: [ಪರಿತ್ರುಟಿತೃ] ಮುರಿದುಹೋಗುವ
ಪರಿತುಟ್ಠ. ವಿ: [ಪರಿತುಷ್ಟ] ತೃಪ್ತಿಹೊಂದಿದ, ಹರ್ಷಗೊಂಡ(ಉವ)
ಪರಿತುಲಿಯ. ವಿ: [ಪರಿತುಲಿತ] ತೂಕಮಾಡಲ್ಪಟ್ಟ,
ಪರಿತೆಜ್ಜಿ. 'ಪರಿತ್ತಜ' ಶಬ್ದವನ್ನು ನೋಡುವುದು
ಪರಿತೋಲ. ಸಕ: [ಪರಿ+ತೋಲಯ್] ಮೇಲೆತ್ತು
ಪರಿತೋಸ. ಸಕ: [ಪರಿ+ತೋಷಂಯ್] ಸಂತೋಷಪಡಿಸು, ತೃಪ್ತಿಪಡಿಸು(ಕರ್ಪೂರ)
ಪರಿತೋಸ. ಪು:[ಪರಿತೋಷ] ಆನಂದ, ಸಂತಸ, ಹರ್ಷ
ಪರಿತೋಸಿಂಯ. ವಿ: [ಪರಿತೋಷಿತ] ಸಂತೃಪ್ತಿಪಡಿಸಲಾದ, ಆನಂದವುಂಟುಮಾಡಲ್ಪಟ್ಟ
ಪರಿತ್ತ. ವಿ: [ಪರೀತ] ವ್ಯಾಪ್ತವಾದ, ಕೆಳಗೆ ಬಿದ್ದಿರುವ, ಎಣಿಸಬಹುದಾದ, ನಿಯತವಾದ ಅಳತೆ ಉಳ್ಳ, ಚಿಕ್ಕದಾದ, ಸಣ್ಣ, ಹಗುರವಾದ(ಉಪ), ಅಸಂಖ್ಯ ಜೀವಿಗಳಿಗೆ ಆಶ್ರಯ, ಅಸಂಖ್ಯಾತ ಜೀವಗಳನ್ನೊಳಗೊಂಡಿರುವ(ಓಘ), ಒಂದು ಜೀವವನ್ನು ಹೊಂದಿರುವ. –ಕರಣ. ನ: [–ಕರಣ] ಸಣ್ಣದಾಗಿಸುವುದು. –ಜೀವ. ಪು: [–ಜೀವ] ಒಂದು ಶರೀರದಲ್ಲಿ ಏಕಾಂಗಿಯಾಗಿ ಇರುವ ಜೀವ (ಪಣ್ಣ). –ಣಂತ. ನ: [ಪರೀತಾನಂತ] ಒಂದು ಸಂಖ್ಯಾ–ವಿಶೇಷ. –ಸಂಸಾರಿಅ. ವಿ: [ಸಂಸಾರಿಕ] ಪರಿಮಿತವಾದ ಸಂಸಾರ ಹೊಂದಿರುವ. ಪರಿತ್ತಾಸಂಖ. ನ: [ಪರೀತಾಸಂಖ್ಯಾತ] ಸಂಖ್ಯಾ–ವಿಶೇಷ.
ಪರಿತ್ತಜ. 'ಪರಿಚ್ಚಾಯ' ಶಬ್ದವನ್ನು ನೋಡುವುದು
ಪರಿತ್ತಾ}. ಸಕ: [ಪರಿ +ತ್ರೈ] ರಕ್ಷಣೆಮಾಡು, –ಪರಿತ್ತಾಅ}. 'ಪರಿತ್ತಾಇ'
ಪರಿತ್ತಾಇ. ವಿ: [ಪರಿತ್ರಾಯಿನ್] ರಕ್ಷಿಸುವವನು (ಸುಪಾ)
ಪರಿತ್ತಾಣ. ನ: [ಪರಿತ್ರಾಣ] ರಕ್ಷಣೆ, ಕಷ್ಟದಿಂದ ಪಾರುಮಾಡುವುದು
ಪರಿತ್ತಾಣಂತಯ. ಪುಂನ: [ಪರಿತ್ತಾನಂತಕ] ಒಂದು ಸಂಖ್ಯಾ –ವಿಶೇಷ
ಪರಿತ್ತಾಸ. 'ಪರಿತಾಸ' ಶಬ್ದವನ್ನು ನೋಡುವುದು
ಪರಿತ್ತಾಸಂಖೆಜ್ಜಯ. ಪುಂನ: [ಪರಿತಾಸಂಖ್ಯೇಯಕ] ಒಂದು ಸಂಖ್ಯಾವಿಶೇಷ.

ಪರಿತ್ತೀಕಯ. ವಿ: [ಪರೀತೀಕೃತ] ಸಂಕ್ಷಿಪ್ತಗೊಳಿಸಲಾದ, ಚಿಕ್ಕದಾಗಿ ಮಾಡಲಾದ(ಣಾಯಾ)
ಪರಿತ್ತೀಕರ. ಸಕ: [ಪರೀತೀ+ಕೃ] ಸಣ್ಣದಾಗಿಸು, ಚಿಕ್ಕದುಮಾಡು
ಪರಿತ್ಥೋಮ. ನ: [ಪರಿಸ್ತೋಮ] ತಲೆ, ಶಿರಸ್ಸು. ವಿ: ವಕ್ರ, ಡೊಂಕಾದ
ಪರಿಥಂಭಿಅ. ವಿ: [ಪರಿಸ್ತಂಭಿತ] ಸ್ತಬ್ಧಗೊಳಿಸಲ್ಪಟ್ಟ, ನಿಶ್ಚಲಗೊಳಿಸಲ್ಪಟ್ಟ
ಪರಿಥು. ಸಕ: [ಪರಿ +ಸ್ತು] ಸ್ತುತಿಸು, ಪ್ರಶಂಸಿಸು,
ಪರಿಥೂರ}. ವಿ: [ಪರಿಸ್ಥೂರ] ಬಹಳ ದಪ್ಪಗಿರುವ,
ಪರಿಥೂಲ}. ತುಂಬ ಸ್ಥೂಲವಾಗಿರುವ
ಪರಿದಾ. ಸಕ: [ಪರಿ+ದಾ] ಕೊಡು, ನೀಡು
ಪರಿದಾಹ. ಪು: [ಪರಿದಾಹ] ಸಂತಾಪ, ಬೇಗೆ, ಬಿಸಿ, ದುಃಖ (ಉತ್ತ)
ಪರಿದಿಣ್ಣ. ವಿ: [ಪರಿತ್ತ] ಕೊಡಲ್ಪಟ್ಟ(ಅಭಿ)
ಪರಿದಿದ್ಧ. ವಿ: [ಪರಿದಿಗ್ಧ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ
ಪರಿದಿನ್ನ. 'ಪರಿದಿಣ್ಣ' ಶಬ್ದವನ್ನು ನೋಡುವುದು
ಪರಿದೇವ. ಸಕ: [ಪರಿ+ದೇವ್] ಅಳು, ರೋದಿಸು. ವ.ಕೃ –'ಪರಿದೇವಂತ'
ಪರಿದೇವಣ. ನ: [ಪರಿದೇವನ] ಅಳು, ರೋದನ
ಪರಿದೇವಣಯಾ. ಸ್ತ್ರೀ: [ಪರಿದೇವನಾ] ಮೇಲಿನ ಶಬ್ದವನ್ನು ನೋಡುವುದು
ಪರಿದೇವಿ. ವಿ: [ಪರಿದೇವಿನ್] ಅಳುವವನು
ಪರಿದೇವಿಅ. ನ: [ಪರಿದೇಯಿತ] ವಿಲಾಪ, ಅಳುವುದು
ಪರಿದೋ. ಅ: [ಪರಿತಸ್] ನಾಲ್ಕೂ ಕಡೆಯಿಂದ(ಗಾ)
ಪರಿಧಮ್ಮ. ಪು: [ಪರಿಧರ್ಮ] ಒಂದು ಛಂದಸ್ಸು
ಪರಿಧವಲಿಯ. ವಿ: [ಪರಿಧವಲಿತ] ಚೆನ್ನಾಗಿ ಬೆಳ್ಳಗೆ ಮಾಡಲ್ಪಟ್ಟ
ಪರಿಧಾಮ. ಪುಂನ: [ಪರಿಧಾಮನ್] ಸ್ಥಳ, ಪ್ರದೇಶ
ಪರಿಧಾವಿಅ. ವಿ: [ಪರಿಧಾವಿತ] ಓಡಿಸಲ್ಪಟ್ಟ
ಪರಿಧಾವಿರ. ವಿ: [ಪರಿಧಾವಿತೃ] ಓಡುವವನು(ಸಣ)
ಪರಿಧೂಣಿಯ. ವಿ: [ಪರಿಧೂನಿತ] ಬಹಳವಾಗಿ ನಡುಗಿಸಲ್ಪಟ್ಟ, ಬಹಳವಾಗಿ ಅಲುಗಾಡಿಸಲ್ಪಟ್ಟ
ಪರಿಧೂಸರ. ವಿ: [ಪರಿಧೂಸರ] ಬೂದಿಬಣ್ಣದ (ಗಉಡ)
ಪರಿನಟ್ಠ. ವಿ: [ಪರಿನಷ್ಟ] ನಾಶವಾದ, ಹಾಳಾದ
ಪರಿನಿಕ್ಖಮ. 'ಪಡಿನಿಕ್ಖಮ' ಶಬ್ದವನ್ನು ನೋಡುವುದು

ಪರಿನಿಟ್ಠಿಯ. 'ಪರಿಣಿಟ್ಠಿಅ' ಶಬ್ದವನ್ನು ನೋಡುವುದು
ಪರಿನಿಯ. ಸಕ: [ಪರಿ+ದೃಶ್] ನೋಡು, ಅವಲೋಕಿಸು
ಪರಿನಿವಿಟ್ಠ. ವಿ: [ಪರಿನಿವಿಷ್ಟ] ಮೇಲೆ ಕುಳಿತಿರುವ
ಪರಿನಿವಿಡ. ವಿ: [ಪರಿನಿಬಿಡ] ಬಹಳ ದಟ್ಟವಾದ, ತುಂಬ ಸಾಂದ್ರವಾದ(ಮಹಾ)
ಪರಿನಿವ್ವಾ. 'ಪರಿಣಿವ್ವಾ' ಶಬ್ದವನ್ನು ನೋಡುವುದು
ಪರಿನಿವ್ವಾಣ. 'ಪರಿಣಿವ್ವಾಣ.' ಶಬ್ದವನ್ನು ನೋಡುವುದು
ಪರಿನಿವ್ವುಅ}. ವಿ: [ಪರಿನಿರ್ವೃತ] ಮುಕ್ತನಾದ,
ಪರಿನಿವ್ವುಡ}. ಮೋಕ್ಷವನ್ನು ಹೊಂದಿದ(ಪ), ಶಾಂತ, ತಣ್ಣಗಿರುವ
ಪರಿನ್ನ. 'ಪರಿಣ್ಣ' ಶಬ್ದವನ್ನು ನೋಡುವುದು
ಪರಿನ್ನಾಣ. 'ಪರಿಣ್ಣಾಣ' ಶಬ್ದವನ್ನು ನೋಡುವುದು
ಪರಿನ್ನಾಯ. 'ಪರಿಣ್ಣಾಯ=ಪರಿಜ್ಞಾತ' ಶಬ್ದವನ್ನು ನೋಡುವುದು
ಪರಿನ್ನಾಯ. ವಿ: [ಪ್ರತಿಜ್ಞಾತ] ಪ್ರತಿಜ್ಞೆಮಾಡಿಸಲ್ಪಟ್ಟವನು
ಪರಿಪಂಡುರ}. ವಿ: [ಪರಿಪಾಂಡುರ] ವಿಶೇಷ ಬಿಳಿಯ
ಪರಿಪಂಡುಲ}. ಬಣ್ಣದ, ಬೂದಿಬಣ್ಣದ(ಕಪ್ಪೂ)
ಪರಿಪಂಥಗ. ವಿ: [ಪ್ರತಿಪಂಥಕ] ಶತ್ರು, ವಿರೋಧಿ, ಪ್ರತಿಕೂಲ
ಪರಿಪಂಥಿಅ}. ವಿ: [ಪರಿಪಂಥಿಕ] ಮೇಲಿನ ಶಬ್ದವನ್ನು
ಪರಿಪಂಥಿಗ}. ನೋಡುವುದು
ಪರಿಪಕ್ಕ. ವಿ: [ಪರಿಪಕ್ವ] ಪಕ್ವವಾದ, ಚೆನ್ನಾಗಿ ಮಾಗಿರುವ, ಚೆನ್ನಾಗಿ ಬೇಯಿಸಲ್ಪಟ್ಟ, ಹಣ್ಣಾಗಿರುವ
ಪರಿಪಲಿಅ.(ಅಪ). ವಿ: [ಪರಿಪತಿತ] ಕೆಳಗೆ ಬಿದ್ದಿರುವ
ಪರಿಪಾಗ. ಪು: [ಪರಿಪಾಕ] ಚೆನ್ನಾಗಿ ಹಣ್ಣಾದ, ಫಲಕೊಡುವ ಕಾಲ(ಆಚಾ)
ಪರಿಪಾಡಲ. ವಿ: [ಪರಿಪಾಟಲ] ಮಾಸಲು ಕೆಂಪುಬಣ್ಣದ, ಗುಲಾಬಿ ಬಣ್ಣದ
ಪರಿಪಾಡಿಅ. ವಿ: [ಪರಿಪಾಟಿತ] ಸೀಳಲ್ಪಟ್ಟ, ತುಂಡುಮಾಡಲ್ಪಟ್ಟ(ದೇ)
ಪರಿಪಾಲ. ಸಕ: [ಪರಿ+ಪಾಲಯ್] ರಕ್ಷಿಸು
ಪರಿಪಾಲಣ. ನ: [ಪರಿಪಾಲನ] ರಕ್ಷಣೆ
ಪರಿಪಾಲಿಅ. ವಿ: [ಪರಿಪಾಲಿತ] ರಕ್ಷಿಸಲ್ಪಟ್ಟ(ಭವಿ)
ಪರಿಪಾಸಯ.(ದೇ). 'ಪರಿವಾಸ' ಶಬ್ದವನ್ನು ನೋಡುವುದು
ಪರಿಪಿಅ. ಸಕ: [ಪರಿ+ಪಾ] ಕುಡಿ,
ಪರಿಪಿಂಜರ. ವಿ: [ಪರಿಪಿಂಜರ] ದಟ್ಟ ಹಳದಿ–ರಕ್ತ ವರ್ಣದ
ಪರಿಪಿಂಡಿಯ. ವಿ: [ಪರಿಪಿಂಡಿತ] ಒಂದೆಡೆ ರಾಶಿಹಾಕಲ್ಪಟ್ಟ, ಒಟ್ಟುಗೂಡಿಸಲ್ಪಟ್ಟ, ನ: ಗುರು ವಂದನೆಯಲ್ಲಿಯ ಒಂದು ದೋಷ(ಧರ್ಮ)
ಪರಿಪಿಕ್ಕ. 'ಪರಿಪಕ್ಕ' ಶಬ್ದವನ್ನು ನೋಡುವುದು
ಪರಿಪಿಜ್ಜಂತ. 'ಪರಿಪಿಅ' ಶಬ್ದವನ್ನು ನೋಡುವುದು
ಪರಿಪಿಟ್ಟಣ. ನ: [ಪರಿಪಿಟ್ಟನ] ಕುಟ್ಟುವುದು, ಹೊಡೆಯುವುದು.
ಪರಿಪಿರಿಯಾ. ಸ್ತ್ರೀ: [ದೇ] ವಾದ್ಯ –ವಿಶೇಷ
ಪರಿಪಿಲ್ಲ. ಸಕ: [ಪರಿಪ್ರ+ಈರಯ್] ಪ್ರೇರಿಸು
ಪರಿಪಿಹಾ. ಸಕ: [ಪರಿಪಿ+ಧಾ] ಮುಚ್ಚು, ಹೊದಿಸು, ಆಚ್ಛಾದಿಸು
ಪರಿಪೀಡಿಯ. ವಿ: [ಪರಿಪೀಡಿತ] ಬಹಳವಾಗಿ ಪೀಡಿಸಲ್ಪಟ್ಟವನು, ವಿಶೇಷವಾಗಿ ನೋಯಿಸಲ್ಪಟ್ಟವನು (ಭವಿ)
ಪರಿಪೀಲ. ಸಕ: [ಪರಿ +ಪೀಡಯ್] ಬಹಳವಾಗಿ ಪೀಡಿಸು, ಬಹಳವಾಗಿ ಹತ್ತಿಕ್ಕು
ಪರಿಪೀಲಿಅ. 'ಪರಿಪೀಡಿಅ' ಶಬ್ದವನ್ನು ನೋಡುವುದು
ಪರಿಪುಂಗಲ. ವಿ: [ದೇ] ಶ್ರೇಷ್ಠ, ಉತ್ತಮ(ಭವಿ)
ಪರಿಪುಚ್ಛ. ಸಕ: [ಪರಿಪ್ರಚ್ಛ್] ಪ್ರಶ್ನಿಸು –'ಪಿಪುಚ್ಛಇ'
ಪರಿಪುಚ್ಛಣ. ನ: [ಪರಿಪ್ರಚ್ಛನ] ಪ್ರಶ್ನೆ
ಪರಿಪುಚ್ಛಿಅ}. ವಿ: [ಪರಿಪೃಷ್ಟ] ಚೆನ್ನಾಗಿ ಪ್ರಶ್ನಿಸಲ್ಪಟ್ಟ,
ಪರಿಪುಟ್ಠ}. ಕೇಳಲ್ಪಟ್ಟ
ಪರಿಪುಣ್ಣ}. ವಿ: [ಪರಿಪೂರ್ಣ] ಭರ್ತಿಯಾಗಿರುವ,
ಪರಿಪುನ್ನ}. ಚೆನ್ನಾಗಿ ತುಂಬಲ್ಪಟ್ಟ, ತುಂಬಿರುವ (ಭಗ)
ಪರಿಪುಸ. ಸಕ: [ಪರಿಸ್ಪೃಶ್] ಚೆನ್ನಾಗಿ ಸ್ಪರ್ಶಿಸು, ಮುಟ್ಟು
ಪರಿಪೂಜ. ಸಕ: [ಪರಿಪೂಜಯ್] ಚೆನ್ನಾಗಿ ಪೂಜಿಸು
ಪರಿಪೂಣಗ. ಪು: [ದೇ. ಪರಿಪೂರ್ಣಕ] 'ಸುಘರಿ' ಎಂಬ ಹಕ್ಕಿಯ ಗೂಡು, ಹಾಲು ತುಪ್ಪವನ್ನು ಶೋಧಿಸುವ ಬಟ್ಟೆ
ಪರಿಪೂಯ. ವಿ: [ಪರಿಪೂತ] ಶುದ್ಧಿ ಮಾಡಲ್ಪಟ್ಟ, ಸೋಸಲ್ಪಟ್ಟ(ಕಪ್ಪ)
ಪರಿಪೂರ. ಸಕ: [ಪರಿ +ಪೂರಯ್] ಪೂರ್ಣಗೊಳಿಸು, ತುಂಬು, ಭರ್ತಿಮಾಡು
ಪರಿಪೂರಿಯ. ವಿ: [ಪರಿಪೂರಿತ] ಪೂರ್ತಿ ತುಂಬಿರುವ, ಭರ್ತಿಯಾಗಿರುವ, ವ್ಯಾಪಿಸಲ್ಪಟ್ಟ
ಪರಿಪೆಚ್ಛ. ಸಕ: [ಪರಿಪ್ರ+ಈಕ್ಷ್] ಚೆನ್ನಾಗಿ ನೋಡು, ವ. ಕೃ – ಪರಿಪೆಚ್ಛಂತ'

ಪರಿಪೇರಂತ. ಪು: [ಪರಿಪರ್ಯಂತ] ಗಡಿಭಾಗ, ಪರ್ವತ, ಸಮುದ್ರ ಮೊದಲಾದವುಗಳ ಎಲ್ಲೆ

ಪರಿಪೇರಿಯ. ವಿ:[ಪರಿಪ್ರೇರಿತ] ಚೆನ್ನಾಗಿ ಪ್ರೇರಿಸಲ್ಪಟ್ಟವನು

ಪರಿಪೇಲವ. ವಿ: [ಪರಿಪೇಲವ] ಸುಲಭವಾದ, ಬಹಳ ಕೋಮಲವಾದ, ದೃಢವಲ್ಲದ, ನಿಸ್ಸಾರವಾದ, ಬಹಳ ಕಷ್ಟ ಸ್ಥಿತಿಯಲ್ಲಿರುವ. ದೀನ

ಪರಿಪೆಲ್ಲಿಅ. 'ಪರಿಪೇರಿಯ' ಶಬ್ದವನ್ನು ನೋಡುವುದು

ಪರಿಪೇಸ. ಸಕ: [ಪರಿಪ್ರ +ಇಷ್] ಕಳಿಸು. –'ಪರಿಪೇಸಇ'

ಪರಿಪೇಸಣ. ನ: [ಪರಿಪ್ರೇಷಣ] ಕಳುಹಿಸುವುದು

ಪರಿಪೇಸಲ. ವಿ: [ಪರಿಪೇಶಲ] ಸುಂದರವಾದ, ಮನೋಹರವಾದ

ಪರಿಪೇಸಿಯ. ವಿ: [ಪರಿಪ್ರೇಷಿತ] ಕಳುಹಿಸಿಕೊಡಲಾದ

ಪರಿಪೋಸ. ಸಕ: [ಪರಿ +ಪೋಷಯ್] ಪುಷ್ಟಗೊಳಿಸು

ಪರಿಪ್ಪಮಾಣ. ನ: [ಪರಿಪ್ರಮಾಣ] ಅಳತೆ

ಪರಿಪ್ಪವ. ಸಕ: [ಪರಿ+ಪ್ಲು] ಈಜು, ತೇಲು, ಮುಳುಗುಹಾಕು. ವ. ಕೃ – 'ಪರಿಪ್ಪವಂತ'

ಪರಿಪ್ಪುಯ. ವಿ: [ಪರಿಪ್ಲುತ] ವ್ಯಾಪಿಸಲ್ಪಟ್ಟ,

ಪರಿಪ್ಪುಯಾ. ಸ್ತ್ರೀ: [ಪರಿಪ್ಲುತಾ] ಒಂದು ಬಗೆಯದೀಕ್ಷೆ

ಪರಿಪ್ಫಂದ. ಪು: [ಪರಿಸ್ಪಂದ] ರಚನಾ–ವಿಶೇಷ, ಸುತ್ತಲೂ ಚಲನೆ, ಸುತ್ತಲೂ ಸ್ವಲ್ಪ ಅಲುಗಾಡುವುದು, ಪ್ರಯತ್ನ

ಪರಿಪ್ಫುಡ. ವಿ: [ಪರಿಸ್ಫುಟ] ಅತ್ಯಂತ ಸ್ಪಷ್ಟ(ಸೇ)

ಪರಿಪ್ಫುಡ. ಪು: [ಪರಿಸ್ಫೋಟ] ಒಡೆಯುವುದು, ಸೀಳುವುದು, ವಿ: ಒಡೆಯುವ(ಕಪ್ಪ)

ಪರಿಪ್ಫುರ. ಸಕ: [ಪರಿ +ಸ್ಫುರ್] ಚಲಿಸು, ಚಿಮ್ಮು

ಪರಿಪ್ಫುರಣ. ನ: [ಪರಿಸ್ಫುರಣ] ಚಲನೆ, ಅಲುಗಾಡುವುದು, ಚಿಮ್ಮುವಿಕೆ

ಪರಿಪ್ಫುರಿಅ. ವಿ: [ಪರಿಸ್ಫುರಿತ] ಮೇಲಕ್ಕೆ ಚಿಮ್ಮಿದ, ಪ್ರಕಾಶಿಸಿದ, ಸ್ಫೂರ್ತಿಯುಕ್ತ, ಹೊಳಪಿನಿಂದ ಕೂಡಿದ

ಪರಿಪ್ಫಂಸ. ಪು: [ಪರಿಸ್ಪರ್ಶ] ಮುಟ್ಟುವುದು, ಸ್ಪರ್ಶ

ಪರಿಫಂಸಣ. ನ: [ಪರಿಸ್ಪರ್ಶನ] ಮೇಲಿನ ಶಬ್ದವನ್ನು ನೋಡುವುದು(ಉಪ)

ಪರಿಫಗ್ಗು. ವಿ: [ಪರಿಫಲ್ಗು] ನಿಸ್ಸಾರ, ಸಾರ –ರಹಿತ

ಪರಿಫಾಸಿಯ. ವಿ: [ಪರಿಸ್ಪೃಷ್ಟ] ವ್ಯಾಪ್ತ

ಪರಿಪ್ಫುಡ. 'ಪರಿಪ್ಫುಡ=ಪರಿಸ್ಫುಟ' ಶಬ್ದವನ್ನು ನೋಡುವುದು(ಪ)

ಪರಿಪ್ಫುಡಿಯ. ವಿ: [ಪರಿಸ್ಫುಟಿತ] ಚೆನ್ನಾಗಿ ಅರಳಿರುವ, ಚೆನ್ನಾಗಿ ಒಡೆದಿರುವ, ಸೀಳಿರುವ

ಪರಿಫುರ. 'ಪರಿಪ್ಫುರ' ಶಬ್ದವನ್ನು ನೋಡುವುದು

ಪರಿಫುರಿಅ. 'ಪರಿಪ್ಫುರಿಯ' ಶಬ್ದವನ್ನು ನೋಡುವುದು

ಪರಿಪ್ಫುಲಿಅ. ವಿ: [ಪರಿಫುಲ್ಲಿತ] ಚೆನ್ನಾಗಿ ಅರಳಿರುವ

ಪರಿಫುಸ. ಸಕ: [ಪರಿ +ಸ್ಪೃಶ್] ಸ್ಪರ್ಶಿಸು. ಮುಟ್ಟು. ವ. ಕೃ –'ಪರಿಫುಸಂತ'

ಪರಿಫುಸಿಯ. ವಿ: [ಪರಿಪ್ರೋಚ್ಛಿತ] ಒರೆಸಲ್ಪಟ್ಟ(ಪ)

ಪರಿಫೋಸಿಯ. ವಿ: [ಪರಿಸ್ಪೃಷ್ಟ] ಚೆನ್ನಾಗಿ ಸ್ಪರ್ಶಿಸಲ್ಪಟ್ಟ

ಪರಿಬೂಹಣ. ನ: [ಪರಿಬೃಂಹಣ] ಚೆನ್ನಾಗಿ ವೃದ್ಧಿಹೊಂದುವುದು, ಬೆಳವಣಿಗೆ ಹೊಂದುವುದು

ಪರಿಬ್ಭಂತ. ವಿ: [ದೇ] ನಿಷಿದ್ಧ, ಭಯ ಸ್ವಭಾವದ, ಅಂಜುಕುಳಿ(ದೇ)

ಪರಿಬ್ಭಂಸಿದ(ಶೌ). ಮುಂದಿನ ಶಬ್ದವನ್ನು ನೋಡುವುದು

ಪರಿಬ್ಭಟ್ಠ. ವಿ: [ಪರಿಭ್ರಷ್ಟ] ಕೆಳಗೆ ಬಿದ್ದ, ಜಾರಿದ, ಕಳಚಿಹೋದ(ಣಾಯಾ)

ಪರಿಬ್ಭಮ. ಸಕ: [ಪರಿ +ಭ್ರಮ್] ಸಂಚರಿಸು, ತಿರುಗಾಡು –'ಪರಿಬ್ಭಮಇ'

ಪರಿಬ್ಭಮಣ. ನ: [ಪರಿಭ್ರಮಣ] ಸಂಚಾರ, ಪರ್ಯಟನೆ, ತಿರುಗಾಟ

ಪರಿಬ್ಭಮಿಅ. ವಿ: [ಪರಿಭ್ರಾಂತ] ಸಂಚರಿಸಿದ, ತಿರುಗಾಡಿದ

ಪರಿಬ್ಭೀಅ. ವಿ: [ಪರಿಭೀತ] ಭಯಗೊಂಡ, ಹೆದರಿದ

ಪರಿಬ್ಭೂಅ. ವಿ: [ಪರಿಭೂತ] ಸೋಲಿಸಲ್ಪಟ್ಟ, ಅವಮಾನಿತ(ಸುಪಾ)

ಪರಿಭಗ್ಗ. ವಿ: [ಪರಿಭಗ್ನ] ಮುರಿದುಹೋದ,

ಪರಿಭಟ್ಠ. 'ಪರಿಬ್ಭಟ್ಠ' ಶಬ್ದವನ್ನು ನೋಡುವುದು

ಪರಿಭಣಿರ. ವಿ: [ಪರಿಭಣಿತೃ] ಚೆನ್ನಾಗಿ ಹೇಳುವವನು

ಪರಿಭಮ. 'ಪರಿಬ್ಭಮ' ಶಬ್ದವನ್ನು ನೋಡುವುದು. ವ. ಕೃ – 'ಪರಿಬ್ಭಮಂತ'

ಪರಿಭಮಿಅ. 'ಪರಿಬ್ಭಮಿಅ' ಶಬ್ದವನ್ನು ನೋಡುವುದು

ಪರಿಭಮಿರ. ವಿ: [ಪರಿಭ್ರಮಿತೃ] ಸಂಚಾರ ಮಾಡುವವನು(ಸುಪಾ)

ಪರಿಭವ. ಸಕ: [ಪರಿ +ಭೂ] ಸೋಲಿಸು, ತಿರಸ್ಕಾರ ಮಾಡು, ಅಪಮಾನಿಸು

ಪರಿಭವ.ಪು:[ಪರಿಭವ] ಸೋಲು, ತಿರಸ್ಕಾರ, ಅಪಮಾನ

ಪರಿಭವಣ. ನ: [ಪರಿಭವನ] ಮೇಲಿನ ಶಬ್ದವನ್ನು ನೋಡುವುದು

ಪರಿಭವಂತ. ಪು: [ಪರಿಭವತ್] ಶಿಥಿಲವಾದ ಆಚರಣೆಯ ಸಂನ್ಯಾಸಿ
ಪರಿಭವಿಅ. ವಿ: [ಪರಿಭೂತ] ಸೋಲಿಸಲ್ಪಟ್ಟ, ತಿರಸ್ಕರಿಸಲ್ಪಟ್ಟ, ಅಪಮಾನಿಸಲ್ಪಟ್ಟ(ಧರ್ಮವಿ)
ಪರಿಭಾಅ. ಸಕ: [ಪರಿ +ಭಾಜಯ್] ಹಂಚು, ಭಾಗಮಾಡು, ಪಾಲುಮಾಡು
ಪರಿಭಾಇಯ. ವಿ: [ಪರಿಭಾಜಿತ]ಭಾಗಮಾಡಲ್ಪಟ್ಟ, ಪಾಲುಮಾಡಲ್ಪಟ್ಟ
ಪರಿಭಾಯಂತ. 'ಪರಿಭಾಅ' ಶಬ್ದವನ್ನು ನೋಡುವುದು
ಪರಿಭಾಯಣ. ನ: [ಪರಿಭಾಜನ]ಹಂಚುವುದು, ಭಾಗಮಾಡುವುದು, ಪಾಲುಮಾಡುವುದು
ಪರಿಭಾವ. ಸಕ: [ಪರಿ+ಭಾವಯ್] ಪರ್ಯಾಲೋಚಿಸು, ಉನ್ನತಗೊಳಿಸು, –**'ಪರಿಭಾವಇ'**
ಪರಿಭಾವಇತ್ತು. ವಿ: [ಪರಿಭಾವಯಿತೃ] ಪರ್ಯಾಲೋಚಿಸುವವನು, ಉನ್ನತಿಗೊಳಿಸುವವನು.
ಪರಿಭಾವಿ. ವಿ: [ಪರಿಭಾವಿನ್]ಅವಮಾನಗೊಳಿಸುವ, ತಿರಸ್ಕರಿಸುವ
ಪರಿಭಾಸ. ಸಕ: [ಪರಿ+ಭಾಷ್] ಪ್ರತಿಪಾದಿಸು, ಹೇಳು, ನಿಂದಿಸು. ವ. ಕೃ –**ಪರಿಭಾಸಮಾಣ**
ಪರಿಭಾಸಾ. ಸ್ತ್ರೀ: [ಪರಿಭಾಷಾ] ಸಂಕೇತ, ತಿರಸ್ಕಾರ, ಟೀಕೆ, ಪತಂಜಲಿಯ ಮಹಾಭಾಷ್ಯ, ಮಾತು, ಭಾಷಣ
ಪರಿಭಾಸಿ. ವಿ: [ಪರಿಭಾಷಿನ್] ಅಪಮಾನವುಂಟು ಮಾಡುವವನು, ಸೋಲುಂಟುಮಾಡುವವನು.
ಪರಿಭಾಸಿಯ. ವಿ: [ಪರಿಭಾಷಿತ] ಪ್ರತಿಪಾದಿತ
ಪರಿಭಿಂದ. ಸಕ: [ಪರಿ+ಭಿದ್] ಭೇದಿಸು, ಸೀಳು, ಬೇರೆಮಾಡು, ರಹಸ್ಯ ಬಹಿರಂಗಪಡಿಸು
ಪರಿಭೀಯ. ಯ: [ಪರಿಭೀತ] ಹೆದರಿರುವ (ಉವ)
ಪರಿಭುಂಜ್. ಸಕ: [ಪರಿ+ಭುಂಜ್] ಊಟ, ಊಟಮಾಡು, ಸೇವೆ ಮಾಡು, ಮತ್ತೆ ಮತ್ತೆ ಉಪಭೋಗ ಮಾಡು
ಪರಿಭುಂಜಣ. ನ: [ಪರಿಭೋಜನ] ಸುಖ–ಸಂತೋಷಾನುಭವ ಹೊಂದುವುದು,
ಪರಿಭುಂಜಣಯಾ. ಸ್ತ್ರೀ: [ಪರಿಭೋಜನಾ] **ಮೇಲಿನ ಶಬ್ದವನ್ನು ನೋಡುವುದು**
ಪರಿಭುತ್ತ. ವಿ: [ಪರಿಭುಕ್ತ] ಅನುಭವಿಸಲ್ಪಟ್ಟ, ಉಪಯೋಗಿಸಲ್ಪಟ್ಟ
ಪರಿಭುತ್ತ}. ವಿ: [ಪರಿವೃತ] ಸುತ್ತುವರಿಯಲ್ಪಟ್ಟ,
ಪರಿಭುಯ}. ಮುಚ್ಚಲ್ಪಟ್ಟ
ಪರಿಭೂಅ. ವಿ: [ಪರಿಭೂತ] ತಿರಸ್ಕರಿಸಲ್ಪಟ್ಟ, ಅವಮಾನಗೊಳಿಸಲ್ಪಟ್ಟ(ಸೂಅ)
ಪರಿಭೋಅ. 'ಪರಿಭೋಗ' ಶಬ್ದವನ್ನು ನೋಡುವುದು
ಪರಿಭೋಇ. ವಿ: [ಪರಿಭೋಗಿನ್] ಸುಖ–ಸಂತೋಷಾನುಭವ ಹೊಂದುವವನು
ಪರಿಭೋಗ. ಪು: [ಪರಿಭೋಗ] ಮತ್ತೆ ಮತ್ತೆ ಸುಖ–ಸಂತೋಷಾನುಭವ, ವಿಷಯಸುಖಾನುಭವ (ಠಾ), ಮತ್ತೆ ಮತ್ತೆ ಅನುಭವಿಸುವ ವಸ್ತ್ರ, ಒಡವೆ ಇತ್ಯಾದಿ(ಔಪ), ಒಂದೇ ಬಾರಿ ಉಪಭೋಗಿಸಲಾಗುವ ಆಹಾರ, ಪಾನೀಯ ಇತ್ಯಾದಿ. ಬಾಹ್ಯ ವಸ್ತುಗಳ ಭೋಗಾನುಭವ (ಆವ), ನಿರಂತರವಾದಸೇವೆ(ಪಣ್ಣ)
ಪರಿಭೊತ್ತು. 'ಪರಿಭುಂಜ' ಶಬ್ದವನ್ನು ನೋಡುವುದು
ಪರಿಮಇಲ. ಸಕ: [ಪರಿ +ಮೃಜ್] ತೊಳೆ, ಶುದ್ಧಮಾಡು, ಉಜ್ಜು
ಪರಿಮಉಅ. ವಿ: [ಪರಿಮೃದುಕ] ಬಹಳ ಕೋಮಲವಾದ, ಅತ್ಯಂತ ಸುಲಭವಾದ, ಅತ್ಯಂತ ಸುಕುಮಾರವಾದ. ಸ್ತ್ರೀ: –**ಉಈ**
ಪರಿಮಉಲಿಅ. ವಿ: [ಪರಿಮುಕುಲಿತ] ಸುತ್ತಲೂ ಕುಗ್ಗಿರುವ, ಪೂರ್ತಿ ಮೊಗ್ಗಾಗಿರುವ
ಪರಿಮಂಡಣ. ನ: [ಪರಿಮಂಡನ] ಆಭರಣ, ಒಡವೆ, ಅಲಂಕರಣ(ಉತ್ತ)
ಪರಿಮಂಡಲ. ವಿ: [ಪರಿಮಂಡಲ] ವೃತ್ತ, ಗೋಳಾಕಾರ
ಪರಿಮಂಡಿಯ. ವಿ: [ಪರಿಮಂಡಿತ] ಅಲಂಕರಿಸಲ್ಪಟ್ಟ, ಶೃಂಗರಿಸಲ್ಪಟ್ಟ(ಕಪ್ಪ)
ಪರಿಮಂಥರ. ವಿ: [ಪರಿಮಂಥರ] ಬಹಳ ನಿಧಾನವಾದ
ಪರಿಮಂಥಿಅ. ವಿ: [ಪರಿಮಥಿತ] ಚೆನ್ನಾಗಿ ಕಡೆಯಲ್ಪಟ್ಟ, ಚೆನ್ನಾಗಿ ಕಲಕಲ್ಪಟ್ಟ
ಪರಿಮಂದ. ವಿ: [ಪರಿಮಂದ] ಬಹಳ ಮಂದವಾದ, ಬಹಳ ನಿಧಾನವಾಗಿ, ಬಹಳ ತೆಳುವಾದ,
ಪರಿಮಗ್ಗ. ಸಕ: [ಪರಿ +ಮಾರ್ಗಯ್] ಹುಡುಕು, ಅನ್ವೇಷಿಸು, ಕೋರು, ಯಾಚಿಸು
ಪರಿಮಗ್ಗಿ. ವಿ: [ಪರಿಮಾರ್ಗಿನ್] ಅನ್ವೇಷಿಸುವವನು, ಹುಡುಕುವವನು(ಗಾ)
ಪರಿಮಜ್ಜಿರ. ವಿ:[ಪರಿಮಜ್ಜಿತೃ] ಮುಳುಗುವವನು(ಸುಪಾ)

ಪರಿಮಟ್ಟ. ವಿ: [ಪರಿಮೃಷ್ಟ] ತಿಕ್ಕಲ್ಪಟ್ಟ, ಉಜ್ಜಲ್ಪಟ್ಟ, ಹೊಡೆಯಲ್ಪಟ್ಟ, ತೊಳೆಯಲ್ಪಟ್ಟ, ಶುದ್ಧಮಾಡಲ್ಪಟ್ಟಸ(ಕಪ್ಪ)

ಪರಿಮದ್ದ. ಸಕ: [ಪರಿ +ಮರ್ದಯ್] ತಿಕ್ಕು, ಒತ್ತು, ಪುಡಿಮಾಡು

ಪರಿಮದ್ದಣ. ನ: [ಪರಿಮರ್ದನ] ತಿಕ್ಕುವುದು, ಒತ್ತುವುದು(ಕಾಲು, ಕೈ) ಅರೆಯುವುದು(ಔಪ)

ಪರಿಮದ್ದಾ. ಸ್ತ್ರೀ: [ಪರಿಮರ್ದಾ]ಮೇಲಿನ ಶಬ್ದವನ್ನು ನೋಡುವುದು

ಪರಿಮನ್ನ. ಸಕ: [ಪರಿಮನ್] ಆದರಿಸು,ಗೌರವಿಸು (ಭವಿ)

ಪರಿಮಲ. ಸಕ: [ಪರಿ +ಮಲ್, ಮೃದ್] ತಿಕ್ಕು, ಮರ್ದನಮಾಡು, ಒತ್ತು

ಪರಿಮಲ. ಪು: [ಪರಿಮಲ] ಕುಂಕುಮ ಚಂದನಾದಿಗಳ ಮರ್ದನ ಮಾಡುವುದು ಸುಗಂಧ, ಸುವಾಸನೆ

ಪರಿಮಲಣ. ನ: [ಪರಿಮಲನ] ಉಜ್ಜುವುದು, ತಿಕ್ಕುವುದು, ಅರೆಯುವುದು, ವಿಚಾರ(ಗಾ)

ಪರಿಮಲಿಅ. ವಿ: [ಪರಿಮಲಿತ, ಪರಿಮೃದಿತ] ಮರ್ದನ ಮಾಡಲಾದ, ಉಜ್ಜಲ್ಪಟ್ಟ(ಮಹಾ)

ಪರಿಮಹಿಯ. ವಿ: [ಪರಿಮಹಿತ] ಪೂಜಿಸಲ್ಪಟ್ಟ (ಪಉಮ)

ಪರಿಮಾ(ಅಪ).'ಪಡಿಮಾ' ಶಬ್ದವನ್ನು ನೋಡುವುದು

ಪರಿಮಾಇ. ಸ್ತ್ರೀ: [ಪರಿಮಾತಿ] ಅಳತೆ, ಪರಿಮಾಣ

ಪರಿಮಾಣ. ನ: [ಪರಿಮಾಣ] ಅಳತೆ, ಸಂಖ್ಯೆ, ತೂಕ, ಬೆಲೆ ಇತ್ಯಾದಿ ಕಾಲದ, ಪ್ರದೇಶದ, ವಸ್ತುವಿನ ಶಕ್ತಿಯ ಅಳತೆ(ಸ್ವಪ್ನ)

ಪರಿಮಾಸ. ಪು: [ದೇ] ದೋಣಿಯನ್ನು ತಯಾರಿಸುವ ಮರ(ಣಾಯಾ)

ಪರಿಮಾಸ. ಪು: [ಪರಿಮರ್ಶ] ಸ್ಪರ್ಶ

ಪರಿಮಾಸಿ. ವಿ: [ಪರಿಮರ್ಶಿನ್] ಸ್ಪರ್ಶಿಸುವವನು

ಪರಿಮಿಜ್ಜ. ಮುಂದಿನ ಶಬ್ದವನ್ನು ನೋಡುವುದು

ಪರಿಮಿಣ. ಸಕ: [ಪರಿ +ಮಾ] ಅಳೆ, ತೂಗು,

ಪರಿಮಿಅ. ವಿ: [ಪರಿಮಿತ] ಅಳೆಯಲ್ಪಟ್ಟ, ತೂಗಲ್ಪಟ್ಟ, ಅಳತೆಯಿಂದ ಕೂಡಿದ(ಪಣ್ಣ) ಮಿತವಾದ

ಪರಿಮಿಅ. ವಿ: [ಪರಿವೃತ] ಸುತ್ತಲ್ಪಟ್ಟ, ಆವರಿಸಲ್ಪಟ್ಟ, ವ್ಯಾಪ್ತವಾದ

ಪರಿಮಿಲಾ. ಅಕ: [ಪರಿ +ಮ್ಲೈ] ಬಾಡು, ಕಳೆಗುಂದು(ಹೂವು ಇತ್ಯಾದಿ)

ಪರಿಮಿಲಾಣ. ವಿ: [ಪರಿಮ್ಲಾನ] ಬಾಡಿರುವ, ಕಳೆಗುಂದಿರುವ, ಸೊರಗಿರುವ(ಮಹಾ)

ಪರಿಮಿಲ್ಲಿರ. ವಿ: [ಪರಿಮೋಕ್ತೃ] ಸಂಪೂರ್ಣವಾಗಿ ತ್ಯಜಿಸುವವನು,ಪರಿತ್ಯಾಗ ಮಾಡುವವನು (ಸಣ)

ಪರಿಮುಅ. ಸಕ: [ಪರಿ +ಮುಚ್] ಸಂಪೂರ್ಣವಾಗಿ ತ್ಯಜಿಸು, ಪರಿತ್ಯಜಿಸು

ಪರಿಮುಕ್ಕ. ವಿ: [ಪರಿಮುಕ್ತ] ಪರಿತ್ಯಕ್ತ, ತ್ಯಜಿಸಲ್ಪಟ್ಟ, ಬಿಡಲ್ಪಟ್ಟ(ಸುಪಾ)

ಪರಿಮುಟ್ಟ. ವಿ: [ಪರಿಮೃಷ್ಟ] ಸ್ಪರ್ಶಿಸಲ್ಪಟ್ಟ, ಮುಟ್ಟಲಾದ(ಮಾ)

ಪರಿಮುಣ. ಸಕ: [ಪರಿ +ಜ್ಞಾ] ತಿಳಿದುಕೊಳ್ಳು

ಪರಿಮುಣಿಅ. ವಿ: [ಪರಿಜ್ಞಾತ] ತಿಳಿದುಬಂದ, ಚೆನ್ನಾಗಿ ತಿಳಿಯಲ್ಪಟ್ಟ(ಪಉಮ)

ಪರಿಮುಸ. ಸಕ: [ಪರಿ +ಮುಷ್] ಕಳ್ಳತನಮಾಡು,ಕದಿ. **ವ.ಕೃ 'ಪರಿಮುಸಚಿತ'**

ಪರಿಮುಸ. ಸಕ: [ಪರಿ +ಮೃಶ್] ಸ್ಪರ್ಶಿಸು, ಮುಟ್ಟು (ಭವಿ)

ಪರಿಮುಸಣ. ನ: [ಪರಿಮೋಷಣ] ಕಳ್ಳತನ, ವಂಚನೆ, ಮೋಸ(ಗಾ)

ಪರಿಮುಸಿಅ. ವಿ: [ಪರಿಮೃಷ್ಟ] ಸ್ಪರ್ಶಿಸಲ್ಪಟ್ಟ, ಮುಟ್ಟಲ್ಪಟ್ಟ

ಪರಿಮೂಸಣ. **'ಪರಿಮುಸಣ' ಶಬ್ದವನ್ನು ನೋಡುವುದು**

ಪರಿಮೇಯ. **'ಪರಿಮಿಣ' ಶಬ್ದವನ್ನು ನೋಡುವುದು**

ಪರಿಮೊಕ್ಕಲ. ವಿ: [ದೇ.ಪರಿಮುಕ್ತ] ತನ್ನ ಇಷ್ಟಾನುಸಾರ ನಡೆಯುವ, ಸ್ವಾತಂತ್ರ್ಯದಿಂದ ನಡೆಯುವ

ಪರಿಮೊಕ್ಖ. ಪು: [ಪರಿಮೋಕ್ಷ] ಮೋಕ್ಷ, ಮುಕ್ತಿ(ಆಚಾ), ತೆಗೆದುಬಿಡುವುದು

ಪರಿಮೋಯ. ಸಕ: [ಪರಿ+ಮೋಚಯ್] ಬಿಟ್ಟುಬಿಡು, ಬಿಡುಗಡೆಮಾಡು

ಪರಿಮೋಯಣ. ನ: [ಪರಿಮೋಚನ] ಮೋಕ್ಷ, ಮುಕ್ತಿ, ಬಿಡುಗಡೆ(ಸುರ)

ಪರಿಮೋಸ. ಪು: [ಪರಿಮೋಷ] ಕಳ್ಳತನ, ಕದಿಯುವುದು

ಪರಿಯಂಚ. ಸಕ: [ಪರಿ +ಅಂಚ್] ಹತ್ತಿರಕ್ಕೆ ಹೋಗು, ಸ್ಪರ್ಶಿಸು, ಅಲಂಕರಿಸು

ಪರಿಯಂಚ. ಸಕ: [ಪರಿ +ಅರ್ಚ್] ಪೂಜಿಸು(ಭವಿ)

ಪರಿಯಂಚಣ. ನ: [ಪರ್ಯಂಚನ] ಸ್ಪರ್ಶಿಸುವುದು, ಮುಟ್ಟುವುದು(ಸುಖ). **'ಪಲಿಯಂಚಣ' ಶಬ್ದವನ್ನು ನೋಡುವುದು**

ಪರಿಯುಂಚಿಅ. ವಿ: [ಪರ್ಯುಂಚಿತ] ಚೆನ್ನಾಗಿ ಅಲಂಕರಿಸಲ್ಪಟ್ಟ(ಭವಿ)

ಪರಿಯುಂಚಿಅ. ವಿ: [ಪರ್ಯರ್ಚಿತ] ಚೆನ್ನಾಗಿ ಪೂಜಿಸಲ್ಪಟ್ಟ

ಪರಿಯಂದ. ಸಕ: [ಪರಿ +ವಂದ್] ವಂದಿಸು, ಸ್ತುತಿಸು

ಪರಿಯಂದಣ. ನ: [ಪರಿವಂದನ] ವಂದನೆ, ನಮಸ್ಕಾರ, ಹೊಗಳಿಕೆ, ಸ್ತುತಿ(ಆಚಾ)

ಪರಿಯಚ್ಛ. ಸಕ: [ದೃಶ್] ನೋಡು, ತಿಳಿ, –'ಪರಿಯಚ್ಛಇ'

ಪರಿಯಚ್ಛಿಅ. 'ಪರಿಕಚ್ಛಿಯ' ಶಬ್ದವನ್ನು ನೋಡುವುದು

ಪರಿಯತ್ಥಿ. ಸ್ತ್ರೀ: [ಪರ್ಯಸ್ತಿ] 'ಪಲ್ಹತ್ಥಿಯಾ' ಶಬ್ದವನ್ನು ನೋಡುವುದು

ಪರಿಯಪ್ಪ. ಸಕ: [ಪರಿ +ಕಲ್ಪಯ್] ಕಲ್ಪಿಸು, ಸೃಷ್ಟಿಸು, ಚಿಂತಿಸು

ಪರಿಯಪ್ಪಣ. ನ: [ಪರಿಕಲ್ಪನ] ಕಲ್ಪನೆ, ಸೃಷ್ಟಿಸು (ಧರ್ಮಸಂ)

ಪರಿಯಯ. ಪು: [ಪರಿಚಯ] ಗೊತ್ತಿರುವ, ಹೆಚ್ಚು ತಿಳಿದಿರುವ, ಗುರುತಿರುವ(ಗಉಡ)

ಪರಿಯಯ. ವಿ: [ಪರಿಗತ] ಕೂಡಿಕೊಂಡಿರುವ, ಹೊಂದಲ್ಪಟ್ಟ, ವ್ಯಾಪ್ತವಾದ,

ಪರಿಯಾಇ. ಸಕ: [ಪರ್ಯಾ+ದಾ] ಎಲ್ಲ ಕಡೆಯಿಂದಲೂ ಗ್ರಹಿಸು, ವಿಭಾಗದಿಂದ ಸ್ವೀಕರಿಸು

ಪರಿಯಾಇಅ. ವಿ: [ಪರ್ಯಾತ್ತ] ಪೂರ್ಣರೂಪದಲ್ಲಿ ಸ್ವೀಕರಿಸಲ್ಪಟ್ಟ(ತಾ)

ಪರಿಯಾಇಅ. 'ಪರಿಯಾಈಯ' ಶಬ್ದವನ್ನು ನೋಡುವುದು

ಪರಿಯಾಇಣಯಾ. ಸ್ತ್ರೀ: [ಪರ್ಯಾದಾನ] ಎಲ್ಲ ಕಡೆಯಿಂದಲೂ ಸ್ವೀಕರಿಸುವುದು

ಪರಿಯಾಇತ್ತ. ವಿ: [ಪರ್ಯಾಪ್ತ] ಸಾಕಷ್ಟು

ಪರಿಯಾಈಯ. ವಿ: [ಪರ್ಯಾಯಾತೀತ] ಪರ್ಯಾಯವನ್ನು ಮೀರಿದ, ಕ್ರಮವನ್ನು ಮೀರಿದ

ಪರಿಯಾಗ. 'ಪಜ್ಜಾಯ' ಶಬ್ದವನ್ನು ನೋಡುವುದು(ಔಪ)

ಪರಿಯಾಗಯ. ವಿ: [ಪರ್ಯಾಗತ] ಕ್ರಮವಾಗಿ ಬಂದಿರುವ, ಎಲ್ಲ ರೀತಿಯಲ್ಲಿಯೂ ಉತ್ಪತ್ತಿಹೊಂದಿದ, ಹುಟ್ಟಿದ(ಣಾಯಾ)

ಪರಿಯಾಣ. ಸಕ: [ಪರಿ+ಜ್ಞಾ] ತಿಳಿದುಕೊಳ್ಳು, ಅರಿ

ಪರಿಯಾಣ. ನ: [ಪರಿತ್ರಾಣ] ರಕ್ಷಣೆ

ಪರಿಯಾಣ. ನ: [ಪರಿದಾನ] ವಿನಿಮಯ, ಒಂದು ವಸ್ತುವನ್ನು ಕೊಟ್ಟು ಬೇರೊಂದನ್ನು ಪಡೆದುಕೊಳ್ಳುವುದು, ಕೊಡು –ಕೊಳೆ ವ್ಯವಹಾರ. ಎಲ್ಲ ಕಡೆಯಿಂದಲೂ ದಾನ(ಭವಿ)

ಪರಿಯಾಣ. ನ: [ಪರಿಯಾನ] ನಡಿಗೆ, ಸಂಚಾರ, ವಾಹನ, ಪ್ರಯಾಣ, ಕೆಳಗಿಳಿಯುವುದು

ಪರಿಯಾಯಣ. ನ: [ಪರಿಜ್ಞಾನ] ತಿಳಿವಳಿಕೆ

ಪರಿಯಾಣಿಅ. ವಿ: [ಪರಿತ್ರಾಣಿತ] ರಕ್ಷಣೆ ಹೊಂದಿರುವ(ಸೂಅ)

ಪರಿಯಾಣಿಅ. ವಿ: [ಪರಿಜ್ಞಾತ] ತಿಳಿದುಬಂದಿರುವ, ಗೊತ್ತಾಗಿರುವ, ವಿದಿತ(ಪಉಮ)

ಪರಿಯಾಣಿಅ. ಪುಂನ: [ಪರಿಯಾನಿಕ] ವಾಹನ, ವಿಮಾನ–ವಿಶೇಷ

ಪರಿಯಾದಿ. 'ಪರಿಯಾಇ' ಶಬ್ದವನ್ನು ನೋಡುವುದು

ಪರಿಯಾಯ. 'ಪಜ್ಜಾಯ' ಶಬ್ದವನ್ನು ನೋಡುವುದು (ಸುಪಾ), ಅಭಿಪ್ರಾಯ, ಮತ, ದೀಕ್ಷೆ(ತಾ), ಬ್ರಹ್ಮಚರ್ಯೆ, ತೀರ್ಥಂಕರನಿಗೆ ಕೇವಲ –ಜ್ಞಾನ ಉದಿಸುವ ಸಮಯ(ಣಾಯಾ), **–ಥೇರ.** ಪು: [–ಸ್ಥವಿರ] ದೀಕ್ಷೆಯ ಬಯಕೆಯಿಂದ ವೃದ್ಧನಾದವನು

ಪರಿಯಾಯಂತಕರಭೂಮಿ. ಸ್ತ್ರೀ: [ಪರ್ಯಾಯಂತಕೃದ್ ಭೂಮಿ] ತೀರ್ಥಂಕರನಿಗೆ ಕೇವಲ ಜ್ಞಾನವುಂಟಾದ ಸಮಯದಿಂದ ಸರ್ವಪ್ರಥಮವಾಗಿ ಮುಕ್ತಿ ಹೊಂದುವವರೆಗಿನ ಮಧ್ಯದ ಸಮಯ(ಣಾಯಾ)

ಪರಿಯಾರ. ಸಕ: [ಪರಿ +ಚಾರಯ್] ಸೇವೆ –ಶುಶ್ರೂಷೆ ಮಾಡು, ಸಂಭೋಗಿಸು, –'ಪರಿಯಾರೇಇ'

ಪರಿಯಾರ. ಪು: [ಪರಿಚಾರ] ಮೈಥುನ, ಸಂಭೋಗ(ಪಣ್ಣ)

ಪರಿಯಾರಗ. ವಿ: [ಪರಿಚಾರಕ] ಮೈಥುನ ನಡೆಸುವವನು, ಸೇವೆ ಮಾಡುವವನು(ವಿಪಾ)

ಪರಿಯಾರಣ. ನ: [ಪರಿಚಾರಣ] ಸೇವೆ –ಶುಶ್ರೂಷೆ, ಕಾಮ –ಭೋಗ.

ಪರಿಯಾರಣಯಾ}. ಸ್ತ್ರೀ: [ಪರಿಚಾರಣಾ] ಮೇಲಿನ
ಪರಿಯಾರಣಾ}. ಶಬ್ದವನ್ನು ನೋಡುವುದು. **–ಸದ್ದ.** ಪು: [–ಶಬ್ದ] ಸಂಭೋಗ ಸಮಯದಲ್ಲಿನ ಹೆಣ್ಣಿನ ಶಬ್ದ.

ಪರಿಯಾಲ 'ಪರಿವಾರ' ಶಬ್ದವನ್ನು ನೋಡುವುದು

ಪರಿಯಾಲೋಯಣ. ನ: [ಪರ್ಯಾಲೋಚನ] ವಿಚಾರ, ಚಿಂತನೆ(ಆಚಾ)

ಪರಿಯಾವ. 'ಪರಿತಾವ=ಪರಿತಾಪ'ನೋಡುವುದು

ಪರಿಯಾವಜ್ಜ. ಅಕ: [ಪರ್ಯಾ+ಪದ್] ಪೀಡಿಸಲ್ಪಡು, ರೂಪಾಂತರ ಹೊಂದುವಲ್ಲಿ ಪರಿಣತನಾಗು. ಸಕ: ಸೇವೆ ಮಾಡು.

ಪರಿಯಾವಜ್ಜಣ. ನ: [ಪರ್ಯಾಪಾದನ] ರೂಪಾಂತರ ಹೊಂದುವುದು

ಪರಿಯಾವಜ್ಜಣಾ. ಸ್ತ್ರೀ: [ಪರ್ಯಾಪಾದನಾ] ನಿರಂತರವಾದ ಸೇವೆ(ಠಾ)

ಪರಿಯಾವಣ. 'ಪರಿತಾವಣ' ಶಬ್ದವನ್ನು ನೋಡುವುದು

ಪರಿಯಾವಣಾ. ಸ್ತ್ರೀ: [ಪರಿತಾಪನಾ] ಬಿಸಿ, ಕಾವು, ನೋವು, ದುಃಖ(ಔಪ)

ಪರಿಯಾವಣಿಯಾ. ಸ್ತ್ರೀ: [ಪರಿಯಾಪನಿಕಾ] ಕಾಲಾಂತರದ ವರೆಗೆ ಇರುವಿಕೆ, ಸ್ಥಿತಿ(ಣಾಯಾ)

ಪರಿಯಾವಣ್ಣ}. ವಿ: [ಪರ್ಯಾಪನ್ನ] ಸ್ಥಿತ, ಸ್ಥಿರವಾಗಿ

ಪರಿಯಾವನ್ನ}. ಇರುವ, ಪ್ರಾಪ್ತವಾದ, ದೊರಕಿದ

ಪರಿಯಾವಸ. ಸಕ: [ಪರ್ಯಾ +ವಾಸಯ್] ವಾಸಿಸು (ಉತ್ತ)

ಪರಿಯಾವಸಹ. ಪು: [ಪರ್ಯಾವಸಥ] ಮಠ, ಸಂನ್ಯಾಸಿಯ ವಾಸಸ್ಥಾನ(ಆಚಾ)

ಪರಿಯಾವಿಯ.. ವಿ: [ಪರಿತಾಪಿತ] ಹೆಚ್ಚು ಸಂತಾಪಕ್ಕೊಳಗಾದ, ಪೀಡಿಸಲ್ಪಟ್ಟ

ಪರಿಯಾಸಿಯ. ವಿ: [ಪರಿವಾಸಿತ] ತಂಗುಳಾಗಿಡಲ್ಪಟ್ಟ

ಪರಿರಂಜ. ಸಕ: [ಭಂಜ್] ಮುರಿ

ಪರಿರಂಭ. ಸಕ: [ಪರಿ +ರಭ್] ಆಲಿಂಗಿಸು

ಪರಿರಂಭಣ. ನ: [ಪರಿರಂಭನ] ಆಲಿಂಗನ(ಪಾಅ)

ಪರಿರಕ್ಖ. ಸಕ: [ಪರಿ+ರಕ್ಷ್] ರಕ್ಷಣೆಮಾಡು, ಪರಿಪಾಲಿಸು

ಪರಿರಕ್ಖಣ. ನ: [ಪರಿರಕ್ಷಣ] ಕಾಪಾಡುವುದು

ಪರಿರಕ್ಖಾ. ಸ್ತ್ರೀ: [ಪರಿರಕ್ಷಾ] ಮೇಲಿನ ಶಬ್ದವನ್ನು ನೋಡುವುದು

ಪರಿರಕ್ಖಿಯ. ವಿ: [ಪರಿರಕ್ಷಿತ] ರಕ್ಷಿಸಲ್ಪಟ್ಟ(ಭವಿ)

ಪರಿರದ್ಧ. ವಿ: [ಪರಿರಬ್ಧ] ಆಲಿಂಗಿಸಲ್ಪಟ್ಟ(ಗಾ)

ಪರಿರಯ. ಪು: [ಪರಿರಯ] ಪರಿಧಿ, ಮಂಡಲ, ವರ್ತುಲಾಕಾರವಾಗಿ ಸುತ್ತುವರಿಯುವುದು. ಪರ್ಯಾಯ, ಸಮಾನಾರ್ಥಕ ಶಬ್ದ, ಸುತ್ತಾಡುವುದು, ಸಂಚರಿಸುವುದು,

ಪರಿರಾಯ. ಸಕ: [ಪರಿ +ರಾಜ್] ಶೋಭಿಸು. ವ. ಕೃ –'ಪರಿರಾಯಮಾಣ'

ಪರಿರಿಂಖ. ಸಕ: [ಪರಿ+ರಿಂಖ್] ಚಲಿಸು, ಅಲ್ಲಾಡು, ಅಲುಗಾಡು

ಪರಿರುಂಭ. ಸಕ: [ಪರಿ +ರುಧ್]ತಡೆ, ಅಡ್ಡಿಪಡಿಸು,

ಪರಿಲಂಘಿ. ವಿ: [ಪರಿಲಂಘಿನ್] ಹಾರುವವನು, ದಾಟುವವನು(ಗಉಡ)

ಪರಿಲಂಬಿ. ವಿ: [ಪರಿಲಂಬಿನ್] ನೇತಾಡುವ, ಜೋತಾಡುವ(ಗಉಡ)

ಪರಿಲಂಭಿಅ. ವಿ: [ಪರಿಲಂಭಿತ] ಪ್ರಾಪ್ತವಾಗುವಂತೆ ಮಾಡಲ್ಪಟ್ಟ, ಲಭಿಸುವಂತೆ ಮಾಡಲಾದ

ಪರಿಲಗ್ಗ. ವಿ: [ಪರಿಲಗ್ನ] ಸೇರಿಕೊಂಡಿರುವ, ಸಂಬಂಧ ಹೊಂದಿರುವ(ಉಪ)

ಪರಿಲಿಅ. ವಿ: [ದೇ] ಲೀನ, ತನ್ಮಯ(ದೇ)

ಪರಿಲೀ. ಅಕ: [ಪರಿ +ಲೀ] ಲೀನವಾಗು, ಸುತ್ತಲೂ ಸೇರಿಕೊಂಡಿರುವ

ಪರಿಲೀ. ಸ್ತ್ರೀ: [ದೇ] ಒಂದು ತರಹದ ವಾದ್ಯ

ಪರಿಲೀಣ. ವಿ: [ಪರಿಲೀನ] ಪೂರ್ತಿಯಾಗಿ ಸೇರಿರುವ, ಇನ್ನೊಂದರಲ್ಲಿ ಸಂಪೂರ್ಣವಾಗಿ ಸೇರಿ ಹೋಗಿರುವ

ಪರಿಲುಂಪ. ಸಕ: [ಪರಿ +ಲುಪ್] ಲೋಪಗೊಳಿಸು, ಕೊರತೆಮಾಡು, ಇಲ್ಲದಂತೆ ಮಾಡು(ಮಹಾ)

ಪರಿಲೆಂತ. 'ಪರಿಲೀ=ಪರಿ +ಲೀ' ಶಬ್ದವನ್ನು ನೋಡುವುದು

ಪರಿಲೋಯಣ. ನ: [ಪರಿಲೋಚನ, ಪರಿಲೋಕನ] ಅವಲೋಕನ, ನೋಡುವುದು, ನಿರೀಕ್ಷಿಸುವುದು. ವಿ: ನೋಡುವವನು(ಉವಾ)

ಪರಿಲ್ಲ. 'ಪರ=ಪರ' ಶಬ್ದವನ್ನು ನೋಡುವುದು

ಪರಿಲ್ಲವಾಸ. ವಿ: [ದೇ] ಗೊತ್ತಿಲ್ಲದ ನಡಿಗೆ, ಗೊತ್ತಿಲ್ಲದ ಗಮನ, ಸಂಚಾರ

ಪರಿಲ್ಲೀ. 'ಪರಿಲೀ=ದೇ' ಶಬ್ದವನ್ನು ನೋಡುವುದು

ಪರಿಲ್ಹಸ. ಅಕ: [ಪರಿ +ಸ್ರಂಸ್] ಜಾರಿಹೋಗು, ಜಾರಿ ಕೆಳಗೆ ಬೀಳು

ಪರಿವಇತ್ತು. ವಿ: [ಪರಿವ್ರಜಿತೃ] ಸಂಚರಿಸುವುದರಲ್ಲಿ ಸಮರ್ಥನಾದ, ಸಂಚರಿಸುವವನು, ತಿರುಗಾಡುವವನು

ಪರಿವಂಕಡ(ಅಪ). ವಿ: [ಪರಿವಕ್ರ] ಪೂರ್ತಿ ಡೊಂಕಾಗಿರುವ, ಪೂರ್ತಿ ಸೊಟ್ಟಗಿರುವ(ಭವಿ)

ಪರಿವಂಚ. ಸಕ: [ಪರಿ+ವಂಚಯ್] ವಂಚಿಸು, ಮೋಸಮಾಡು

ಪರಿವಂಚಿಅ. ವಿ: [ಪರಿವಂಚಿತ] ವಂಚಿಸಲ್ಪಟ್ಟವನು, ಮೋಸಕೊಳಗಾದವನು(ದೇ)

ಪರಿವಂಥಿ. ವಿ: [ಪರಿಪಂಥಿನ್] ಶತ್ರು, ವಿರೋಧಿ

ಪರಿವಂದಣ. ನ: [ಪರಿವಂದನ] ನಮಸ್ಕಾರ, ಸ್ತುತಿ, ಹೊಗಳಿಕೆ(ಆಚಾ)

ಪರಿವಕ್ಖಿಯ. 'ಪರಿಕಚ್ಛಿಯ' ಶಬ್ದವನ್ನು ನೋಡುವುದು

ಪರಿವಗ್ಗ. ಪು: [ಪರಿವರ್ಗ] ಪರಿಜನವರ್ಗ, ಸೇವಕವರ್ಗ (ಪಉಮ)

ಪರಿವಚ್ಛ. ನ: [ದೇ] ಅವಧಾರಣೆ, ನಿಶ್ಚಯ, ನಿರ್ಧಾರ

ಪರಿವಚ್ಛಿಯ. ಪರಿಕಚ್ಛಿಯ=ಪರಿಗೃಹೀತ=ಸ್ವೀಕರಿಸಲ್ಪಟ್ಟ

ಪರಿವಜ್ಜ. ಸಕ: [ಪ್ರತಿ +ಪದ್] ಸ್ವೀಕರಿಸು

ಪರಿವಜ್ಜ. ಸಕ: [ಪರಿ +ವರ್ಜಯ್] ಸಂಹರಿಸು, ತ್ಯಜಿಸು, ಬಿಟ್ಟುಬಿಡು(ಆಚಾ). –'ಪರಿವಜ್ಜಇ'

ಪರಿವಜ್ಜಣ. ನ: [ಪರಿವರ್ಜನ] ಸಂಹರಿಸುವುದು, ತ್ಯಜಿಸುವುದು, ಬಿಟ್ಟುಬಿಡುವುದು. ಸ್ತ್ರೀ: –ಣಾ

ಪರಿವಜ್ಜಿಯ. ವಿ: [ಪರಿವರ್ಜಿತ] ತ್ಯಜಿಸಲ್ಪಟ್ಟ, ಬಿಡಲ್ಪಟ್ಟ

ಪರಿವಟ್ಟ. 'ಪರಿವತ್ತ='ಪರಿ+ವರ್ತಯ್' ಶಬ್ದವನ್ನು ನೋಡುವುದು

ಪರಿವಟ್ಟಣ. ನ: [ಪರಿವರ್ತನ] ಆವರ್ತನ, ಪನಃ ಪುನಃ ಮಾಡುವುದು, ಸುತ್ತುವುದು(ಸಂಬೋಧ)

ಪರಿವಟ್ಟಿ. 'ಪರಿವತ್ತಿ' ಶಬ್ದವನ್ನು ನೋಡುವುದು

ಪರಿವಟ್ಟಿಯ. 'ಪರಿವತ್ತಿಯ' ಶಬ್ದವನ್ನು ನೋಡುವುದು

ಪರಿವಟ್ಟುಲ. ವಿ: [ಪರಿವರ್ತುಲ] ಗೋಳಾಕಾರ, ಗುಂಡಾಗಿರುವುದು

ಪರಿವಡ. ಅಕ: [ಪರಿ +ಪತ್] ಕೆಳಗೆ ಬೀಳು, ಸುತ್ತಲೂ ಹಾರಾಡು

ಪರಿವಡಿಅ. ವಿ: [ಪರಿಪತಿತ] ಬಿದ್ದಿರುವ(ಸುಪಾ)

ಪರಿವಡ್ಢ. ಅಕ: [ಪರಿ +ವೃಧ್] ಅಧಿಕವಾಗು, ಹೆಚ್ಚಿಸು

ಪರಿವಡ್ಢಣ. ನ: [ಪರಿವರ್ಧನ] ದೊಡ್ಡದಾಗಿ ಬೆಳೆಯುವುದು, ಹೆಚ್ಚಿಸುವುದು(ಗಉಡ)

ಪರಿವಡ್ಢಿ. ಸ್ತ್ರೀ: [ಪರಿವೃಧಿ] ಮೇಲಿನ ಶಬ್ದವನ್ನು ನೋಡುವುದು

ಪರಿವಡ್ಢಿಯ. 'ಪರಿಅಡ್ಢಿಯ=ಪರಿವರ್ಧಿನ್' ಶಬ್ದವನ್ನು ನೋಡುವುದು(ಔಪ)

ಪರಿವಡ್ಢಿಅ. ವಿ: [ಪರಿವರ್ಧಿತ] ವೃದ್ಧಿಹೊಂದಿದ, ಅಧಿಕವಾದ (ಗಾ)

ಪರಿವಣ್ಣ. ಸಕ: [ಪರಿ +ವರ್ಣಯ್] ಚೆನ್ನಾಗಿ ವರ್ಣಿಸು

ಪರಿವಣ್ಣಿಯ. ವಿ: [ಪರಿವರ್ಣಿತ] ಚೆನ್ನಾಗಿ ವರ್ಣಿಸಲ್ಪಟ್ಟ

ಪರಿವತ್ತ. 'ಪರಿಅಟ್ಟ=ಪರಿ +ವೃತ್' ಶಬ್ದವನ್ನು ನೋಡುವುದು. ವ.ಕೃ –'ಪರಿವರ್ತಂತ'

ಪರಿವತ್ತ. 'ಪರಿಅಟ್ಟ=ಪರಿವರ್ತ, ಶಬ್ದವನ್ನು ನೋಡುವುದು. ಸಂಚಾರ, ತಿರುಗಾಟ

ಪರಿವತ್ತ. 'ಪರಿಅತ್ತ=ಪರಿವೃತ್ತ' ಶಬ್ದವನ್ನು ನೋಡುವುದು

ಪರಿವತ್ತಣ. 'ಪಡಿಅತ್ತಣ' ಶಬ್ದವನ್ನು ನೋಡುವುದು

ಪರಿವತ್ತರ(ಅಪ). ವಿ: [ಪರಿಪಕ್ತ್ರಿಮ] ಬೇಯಿಸಲ್ಪಟ್ಟ, ಬಿಸಿಮಾಡಲ್ಪಟ್ಟ

ಪರಿವತ್ತಿ. ವಿ: [ಪರಿವರ್ತಿನ್] ಬದಲಾವಣೆ ಹೊಂದುತ್ತಿರುವ, ಬದಲಾವಣೆ ಮಾಡುತ್ತಿರುವ, ವಿನಿಮಯ ಮಾಡುತ್ತಿರುವ

ಪರಿವತ್ತಿಯ. 'ಪರಿಅಟ್ಟಿಯ' ಶಬ್ದವನ್ನು ನೋಡುವುದು

ಪರಿವತ್ಥ. ನ: [ಪರಿವಸ್ತ್ರ] ವಸ್ತ್ರ, ಬಟ್ಟೆ

ಪರಿವತ್ಥಿಯ ವಿ: [ಪರಿವಸ್ತ್ರಿತ] ಆಚ್ಛಾದಿತ, ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ, 'ಪರಿಕಚ್ಛಿಯ' ಶಬ್ದವನ್ನು ನೋಡುವುದು

ಪರಿವದ್ಧ. 'ಪರಿವಡ್ಢ' ಶಬ್ದವನ್ನು ನೋಡುವುದು

ಪರಿವನ್ನ. 'ಪಡಿವನ್ನ' ಶಬ್ದವನ್ನು ನೋಡುವುದು

ಪರಿವಯ. ಅಕ: [ಪರಿ+ವತ್] ಅಡ್ಡವಾಗಿ ಬೀಳು, ಸೊಟ್ಟಾಗಿ ಬೀಳು

ಪರಿವಯ. ಸಕ: [ಪರಿ+ವದ್] ನಿಂದಿಸು, ವ. ಕೃ – 'ಪರಿವಯಂತ'

ಪರಿವರಿಅ. ವಿ: [ಪರಿವೃತ] ಸುತ್ತಲ್ಪಟ್ಟ, ಆವರಿಸಲ್ಪಟ್ಟ, ವ್ಯಾಪ್ತವಾದ

ಪರಿವಲಇಅ. ವಿ: [ಪರಿವಲಯಿತ] ಸುತ್ತುವರಿಯಲ್ಪಟ್ಟ, ಹೊದಿಸಲ್ಪಟ್ಟ

ಪರಿವಸ. ಅಕ: [ಪರಿ+ವಸ್] ಇರು, ವಾಸಿಸು. –'ಪರಿವಸಇ'(ಭಗ)

ಪರಿವಸಣ. ನ: [ಪರಿವಸನ] ಮನೆ, ವಸತಿ

ಪರಿವಸಣಾ. ಸ್ತ್ರೀ: [ಪರಿವಸನಾ]ಪರ್ಯುಷಣಾ–ಪರ್ವ

ಪರಿವಸಿಅ. ವಿ: [ಪರ್ಯುಷಿತ] ಇದ್ದ, ವಾಸಮಾಡಿದ, ಹಳಸಿದ(ಒಂದು ದಿನ ಇರಿಸಿದ)

ಪರಿವಹ. ಸಕ: [ಪರಿ+ವಹ್] ಹೊರು. ಅಕ: ಚಾಲ್ತಿಯಲ್ಲಿರು

ಪರಿವಹಣ. ನ: [ಪರಿವಹನ] ಹೊರುವುದು
ಪರಿವಾ. ಅಕ: [ಪರಿ +ವಾ] ಒಣಗು. –'**ಪರಿವಾಯಇ**'
ಪರಿವಾಇ. ವಿ:[ಪರಿವಾದಿನ್] ನಿಂದಿಸುವವನು (ಉವ)
ಪರಿವಾಇಯ. ವಿ: [ಪರಿವಾಚಿತ]ಒದಿದ, ಓದಲ್ಪಟ್ಟ
ಪರಿವಾಈ. ಸ್ತ್ರೀ: [ಪರಿವಾದ] ಕಳಂಕ, ನಿಂದೆ, ದೂಷಣೆ,
ಪರಿವಾಡ. ಸಕ: [ಘಟಯ್] ಕಡಿಮೆಮಾಡು, ಗಾಯಕರೊಂದಿಗೆ ವಾದ್ಯ ಬಾರಿಸು, ರಚಿಸು ನಿರ್ಮಿಸು
ಪರಿವಾಡಲ. 'ಪರಿಪಾಡಲ' ಶಬ್ದವನ್ನು ನೋಡುವುದು
ಪರಿವಾಡಿ. ಸ್ತ್ರೀ: [ಪರಿಪಾಟಿ] ಪದ್ಧತಿ, ರೀತಿ, ಪಂಕ್ತಿ, ಸಾಲು(ಉತ್ತ), ಕ್ರಮ, ಸೂತ್ರಾರ್ಥದ ವಾಚನ, ಅಧ್ಯಾಪನ(ಧರ್ಮವಿ)
ಪರಿವಾಡಿಅ. ವಿ: [ಘಟಿತ] ರಚಿಸಲ್ಪಟ್ಟ
ಪರಿವಾಡೀ. 'ಪರಿವಾಡಿ' ಶಬ್ದವನ್ನು ನೋಡುವುದು
ಪರಿವಾದ. ಪು: [ಪರಿವಾದ] ನಿಂದೆ, ದೋಷಾರೋಪ, ಕಳಂಕ, ಅಪಕೀರ್ತಿ
ಪರಿವಾದಿಣೀ. ಸ್ತ್ರೀ: [ಪರಿವಾದಿನೀ] ಏಳು ತಂತಿಗಳುಳ್ಳ ವೀಣೆ
ಪರಿವಾಯ. 'ಪರಿವಾದ' ಶಬ್ದವನ್ನು ನೋಡುವುದು
ಪರಿವಾಯಗ}. ಪು: [ಪರಿವ್ರಾಜಕ] ಸಂನ್ಯಾಸಿ
ಪರಿವಾಯಯ}.
ಪರಿವಾಯಣೀ. ಸ್ತ್ರೀ: [ಪರಿವಾದನೀ] ಏಳು ತಂತಿಗಳಿರುವ ವೀಣೆ
ಪರಿವಾರ. ಸಕ: [ಪರಿ +ವಾರಯ್] ಸುತ್ತು, ಸುತ್ತುವರಿ, ಸುತ್ತಲೂ ಕಟ್ಟು, ಸಂಸಾರ ನಡೆಸು
ಪರಿವಾರ. ಪು: [ಪರಿವಾರ] ಕುಟುಂಬ, ಮನೆಯಲ್ಲಿನ ವ್ಯಕ್ತಿಗಳು(ಔಪ). ನ: ಕತ್ತಿಯ ಒರೆ
ಪರಿವಾರಣ. ನ: [ಪರಿವಾರಣ] ನಿರಾಕರಣೆ, ಮುಚ್ಚುವುದು, ಮರೆಮಾಡುವುದು, ಹೊದಿಸುವುದು
ಪರಿವಾರಿಅ. ವಿ: [ದೇ] ರಚಿಸಲ್ಪಟ್ಟ, ಆದದ್ದು, ರಚನೆ
ಪರಿವಾರಿಅ. ವಿ: [ಪರಿವಾರಿತ] ಸುತ್ತಲ್ಪಟ್ಟ, ಸುತ್ತುಗಟ್ಟಲ್ಪಟ್ಟ, ಕುಟುಂಬದಿಂದ ಕೂಡಿದ (ಉತ್ತ)
ಪರಿವಾಲ. 'ಪರಿಆಲ' ಶಬ್ದವನ್ನು ನೋಡುವುದು
ಪರಿವಾಲ. ಸಕ: [ಪರಿ +ಪಾಲಯ್] ರಕ್ಷಿಸು, ಪಾಲಿಸು, ಪೋಷಿಸು
ಪರಿವಾಲ. 'ಪರಿವಾರ=ಪರಿವಾರ' ಶಬ್ದವನ್ನು ನೋಡುವುದು
ಪರಿವಾವಿಯ. ವಿ: [ಪರಿವಾಪಿತ] ಕಿತ್ತು ಮತ್ತೆ ನಾಟಿಮಾಡಿದ, ಕಿತ್ತು ಪುನಃ ಬಿತ್ತಲಾದ(ಠಾ)
ಪರಿವಾವಿಯಾ. ಸ್ತ್ರೀ: [ಪರಿವಾಪಿತಾ] ದೀಕ್ಷಾ –ವಿಶೇಷ, ಪುನಃ ಮಹಾವ್ರತಗಳನ್ನು ಹಿಡಿಯುವುದು(ಠಾ)
ಪರಿವಾಸ. ಪು: [ಪರಿವಾಸಸ್] ಬಟ್ಟೆ, ವಸ್ತ್ರ
ಪರಿವಾಸಿ. ವಿ: [ಪರಿವಾಸಿನ್] ವಾಸಿಸುವವನು
ಪರಿವಾಸಿಯ. ವಿ: [ಪರಿವಾಸಿತ] ಸುವಾಸನೆಯಿಂದ ಕೂಡಿದ(ಭವಿ)
ಪರಿವಾಹ. ಸಕ: [ಪರಿ+ವಾಹಯ್] ಹೊರಿಸುವುದು, ಕುದುರೆಯನ್ನು ಆಟವಾಡಿಸು, ಕುದುರೆ ಸವಾರಿ ನಡೆಸು
ಪರಿವಾಹ. ಪು: [ಪರಿವಾಹ] ನೀರು ಉಕ್ಕಿ ಹರಿಯುವುದು, ನೀರಿನ ಪ್ರವಾಹ, ಕೆರೆಯ ಕೋಡಿ
ಪರಿವಾಹ. ಪು: [ದೇ]ಅವಿನಯ, ಉದ್ಧಟತನ,
ಪರಿವಾಹಣ. ನ: [ಪರಿವಾಹನ] ಕುದುರೆಯನ್ನು ಕ್ರೀಡೆಯಾಡಿಸುವುದು, ಕುದುರೆ ಸವಾರಿ
ಪರಿವಿಆಲ. ಸಕ: [ಪರಿ+ವಿಶ್] ಆವರಿಸು, ಸುತ್ತುಗಟ್ಟು, ಸುತ್ತು
ಪರಿವಿಚಿಟ್ಠ. ಅಕ: [ಪರಿವಿ+ಸ್ಥಾ] ಹುಟ್ಟು, ಉತ್ಪನ್ನವಾಗು, ಇರು (ಆಚಾ)
ಪರಿವಿಚ್ಛಯ. ವಿ: [ಪರಿವಿಕ್ಷತ] ಬಹಳವಾಗಿ ಗಾಯಗೊಳಿಸಲ್ಪಟ್ಟ, ಪೂರ್ತಿ ಆಹತಗೊಳಿಸಲ್ಪಟ್ಟ
ಪರಿವಿಟ್ಠ. ವಿ: [ಪರಿವಿಷ್ಟ] ಬಡಿಸಲ್ಪಟ್ಟ(ಸುಪಾ)
ಪರಿವಿತ್ತಿಸ. ಅಕ: [ಪರಿವಿ+ತ್ರಸ್] ಹೆದರು, ಭೀತಿಗೊಳ್ಳು
ಪರಿವಿತ್ತಿ. ಸ್ತ್ರೀ: [ಪರಿವೃತ್ತಿ] ವಿನಿಮಯ, ಬದಲಾವಣೆ, ಸುತ್ತುವುದು(ಸುಪಾ)
ಪರಿವಿದ್ಧ. ವಿ: [ಪರಿವಿದ್ಧ] ಭೇದಿಸಲ್ಪಟ್ಟ, ರಂಧ್ರಮಾಡಲ್ಪಟ್ಟ
ಪರಿವಿದ್ಧಂಸ. ಸಕ: [ಪರಿವಿ +ಧ್ವಂಸಯ್] ನಾಶಗೊಳಿಸು, ದುಃಖವನ್ನುಂಟುಮಾಡು, ನೋಯಿಸು
ಪರಿವಿದ್ಧತ್ಥ. ವಿ: [ಪರಿವಿಧ್ವಸ್ತ] ನಾಶಮಾಡಲ್ಪಟ್ಟ, ನೋಯಿಸಲ್ಪಟ್ಟ(ಸೂಅ)
ಪರಿವಿಪ್ಫುರಿಯ. ವಿ: [ಪರಿವಿಸ್ಫುರಿತ] ಸ್ಫೂರ್ತಿಯಿಂದ ಕೂಡಿದ
ಪರಿವಿಯಲಿಯ. ವಿ: [ಪರಿವಿಗಲಿತ] ಜಿನುಗಿದ, ತೊಟ್ಟಿಕ್ಕಿದ, ಜಾರಿದ

ಪರಿವಿಯಲಿರ. ವಿ: [ಪರಿವಿಗಲಿತೃ] ತೊಟ್ಟಿಕ್ಕುವ, ಸೋರುವ, ಜಿನುಗುವ

ಪರಿವಿರಲ. ವಿ: [ಪರಿವಿರಲ] ವಿಶೇಷವಾಗಿ ವಿರಳವಾದ, ಅಲ್ಪವಾದ, ತುಂಬ ಅಪೂರ್ವವಾದ

ಪರಿವಿಲಸಿರ. ವಿ: [ಪರಿವಿಲಸಿತೃ] ವಿಲಾಸಿ

ಪರಿವಿಸ. ಸಕ: [ಪರಿ +ವಿಶ್] ಸುತ್ತು, ಸುತ್ತುವರಿ,

ಪರಿವಿಸ. ಸಕ: [ಪರಿ +ವಿಷ್] ಊಟ ಬಡಿಸು

ಪರಿವಿಸಾಯ. ಪು: [ಪರಿವಿಷಾದ] ಬಹಳವಾದ ಖೇದ, ಬಹಳವಾದ ದುಃಖ

ಪರಿವಿಹುರಿಯ. ವಿ: [ಪರಿವಿಧುರಿತ] ಅತ್ಯಂತ ನೋಯಿಸಲ್ಪಟ್ಟ, ಬಹಳವಾಗಿ ಪೀಡಿಸಲ್ಪಟ್ಟ

ಪರಿವೀಅ. ಸಕ: [ಪರಿ +ವೀಜಯ್] ಬೀಸಣಿಗೆ ಬೀಸು, ಗಾಳಿಬೀಸು

ಪರಿವೀಇಅ. ವಿ: [ಪರಿವೀಜಿತ] ಗಾಳಿ ಬೀಸಲ್ಪಟ್ಟವನು

ಪರಿವೀಢ. ನ: [ಪರಿಪೀಠ] ಒಂದು ಬಗೆಯ ಆಸನ

ಪರಿವೀಲ. ಸಕ: [ಪರಿ +ಪೀಡಯ್] ಹತ್ತಿಕ್ಕು, ಒತ್ತು

ಪರಿವುಡ. ವಿ:[ಪರಿವೃತ] ಸುತ್ತುವರಿಯಲ್ಪಟ್ಟ, ಆವರಿಸಲ್ಪಟ್ಟ

ಪರಿವುತ್ಥ. ವಿ: [ಪರ್ಯುಷಿತ] ಇರಿಸಲ್ಪಟ್ಟಿದ್ದ, ಸ್ಥಿರವಾಗಿ ಇದ್ದ, ಹಳೆಯದಾದ, ಹಳಸಿದ. **'ಪರಿವುಸಿಅ' ಶಬ್ದವನ್ನು ನೋಡುವುದು**

ಪರಿವುದ. **'ಪರಿವುಡ' ಶಬ್ದವನ್ನು ನೋಡುವುದು**

ಪರಿವುದಿ. ಸ್ತ್ರೀ: [ಪರಿವೃತಿ] ಸುತ್ತುಗಟ್ಟುವುದು, ಸುತ್ತವರಿಯುವುದು

ಪರಿವುಸಿಅ. ವಿ: [ಪರ್ಯುಷಿತ] ಇರಿಸಲ್ಪಟ್ಟಿದ್ದ, ಸ್ಥಿರವಾಗಿ ಇದ್ದ, ಹಳೆಯದಾದ, ಹಳಸಿದ. ಕಳೆದುಹೋದ, ಹೋದ.

ಪರಿವೂಢ. ವಿ: [ಪರಿವೃಢ] ಸಮರ್ಥನಾದ(ಉತ್ತ)

ಪರಿವೂಢ. ವಿ: [ಪರಿವೃದ್ಧ] ಸ್ಥೂಲವಾದ, ದೊಡ್ಡದಾಗಿರುವ, ಬಲಷ್ಠ, ಪುಷ್ಟ

ಪರಿವೂಢ. ವಿ: [ಪರಿವ್ಯೂಢ] ಹೊರಿಸಲ್ಪಟ್ಟಿರುವ

ಪರಿವೂಢ. ವಿ: [ಪರಿವೃದ್ಧ] ಬಲಿಷ್ಠನಾದ, ಮಾಂಸಲವಾದ, ಪುಷ್ಟವಾದ, ಸಮರ್ಥ

ಪರಿವೂಹಣ. **'ಪರಿಬೂಹಣ' ಶಬ್ದವನ್ನು ನೋಡುವುದು**

ಪರಿವೇಡ. ಸಕ: [ಪರಿ+ವೇಷ್ಟ್] ಆವರಿಸು, ಸುತ್ತುಗಟ್ಟು, ಸುತ್ತು –**'ಪರಿವೇಢಇ'**

ಪರಿವೇಢ. ಪು: [ಪರಿವೇಷ್ಟ್] ಆವರಿಸುವುದು, ಸುತ್ತುಗಟ್ಟುವುದು, ಸುತ್ತುವುದು

ಪರಿವೇಢಿಯ. ವಿ: [ಪರಿವೇಷ್ಟಿತ] ಸುತ್ತುಗಟ್ಟಲ್ಪಟ್ಟ, ಆವರಿಸಲ್ಪಟ್ಟ, ಸುತ್ತಲ್ಪಟ್ಟ(ಉಪ)

ಪರಿವೇಯ. ಅಕ: [ಪರಿ +ವೇಪ್] ನಡುಗು

ಪರಿವೇಲ್ಲಿರ. ವಿ: [ಪರಿವೆಲ್ಲಿತೃ] ಕಂಪನಶೀಲ(ಗಉಡ)

ಪರಿವೇಯ. ಅಕ: [ಪರಿ +ವೇಪ್] ನಡುಗು, ಕಂಪಿಸು

ಪರಿವೇಸ. ಸಕ: [ಪರಿ +ವಿಷ್] ಬಡಿಸು. ವ.ಕೃ –**'ಪರಿವೇಸಂತ'**

–**ಪರಿವೇಸ.** ಪು: [ಪರಿವೇಶ, –ಷ] ಸುತ್ತುವುದು, ಆವರಿಸುವುದು, ಸುತ್ತುಗಟ್ಟುವುದು(ಪಉಮ). ಮೋಡವು ಸೂರ್ಯ–ಚಂದ್ರಾದಿಗಳನ್ನು ಸುತ್ತುವರಿಯುವ ಮಂಡಲವಾಗುವುದು. ಸ್ತ್ರೀ: –ಣಾ.

ಪರಿವೇಸಣ. ನ: [ಪರಿವೇಷಣ] ಬಡಿಸುವುದು.

ಪರಿವೇಸಿ. [ಪರಿವೇಶಿನ್] ಹತ್ತಿರದಲ್ಲಿ ವಾಸಿಸುವವನು, ಸಮೀಪದಲ್ಲಿ ಇರುವವನು (ಗಉಡ)

ಪರಿವ್ವಅ. ಸಕ: [ಪರಿ +ವ್ರಜ್] ಚೆನ್ನಾಗಿ ಸಂಚರಿಸು, ಓಡಾಡು, ದೀಕ್ಷೆ ತೆಗೆದುಕೊಳ್ಳು.

ಪರಿವ್ವಅ. ವಿ: [ಪರಿವೃತ] ಸುತ್ತಲ್ಪಟ್ಟ, ಆವರಿಸಲ್ಪಟ್ಟ, ವ್ಯಾಪ್ತವಾದ

ಪರಿವ್ವಅ. ವಿ: [ಪರಿವ್ಯಂಯ] ಬಹಳವಾಗಿ ವ್ಯಯಮಾಡುವುದು, ಖರ್ಚುಮಾಡುವುದು

ಪರಿವ್ವಯ. ಪು: [ಪರಿವ್ಯಯ] ಖರ್ಚಮಾಡುವ ಹಣ, ಖರ್ಚು

ಪರಿವ್ವಹ. ಸಕ: [ಪರಿ +ವಹ್] ಹೊರು, ಧರಿಸು

ಪರಿವ್ವಾಇಯಾ. ಸ್ತ್ರೀ: [ಪರಿವ್ರಾಜಿಕಾ] ಸಂನ್ಯಾಸಿನಿ

ಪರಿವ್ವಾಜ.(ಶೌ). ಪು: [ಪರಿ +ವ್ರಾಜ್] ಸಂನ್ಯಾಸಿ

ಪರಿವ್ವಾಜಅ.(ಶೌ).ಪು:[ಪರಿವ್ರಾಜಕ]ಸಂನ್ಯಾಸಿ (ಚಾರು)

ಪರಿವ್ವಾಜಿಆ(ಶೌ). **'ಪರಿವ್ವಾಇಯಾ' ಶಬ್ದವನ್ನು ನೋಡುವುದು**

ಪರಿವ್ವಾಯ. **'ಪರಿವ್ವಾಜ' ಶಬ್ದವನ್ನು ನೋಡುವುದು**

ಪರಿವ್ವಾಯಗ}. ಪು: [ಪರಿವ್ರಾಜಕ] ಸಂನ್ಯಾಸಿ, ಸಾಧು

ಪರಿವ್ವಾಯಯ}. (ಭಗ)

ಪರಿವ್ವಾಯಯ. ವಿ: [ಪರಿವ್ರಾಜಕ] ಪರಿವ್ರಾಜಕನಿಗೆ ಸಂಬಂಧಿಸಿದ

ಪರಿಸ. **'ಫರಿಸ=ಸ್ಪರ್ಶ' ಶಬ್ದವನ್ನು ನೋಡುವುದು**

ಪರಿಸಂಕ. ಅಕ: [ಪರಿ+ಶಂಕ್] ಭಯಪಡು, ಹೆದರು. ವ. ಕೃ –**'ಪರಿಸಂಕಮಾಣ**

ಪರಿಸಂಕಿಯ. ವಿ: [ಪರಿಶಂಕಿತ] ಭೀತ, ಹೆದರಿದ(ಪಣ್ಣ)
ಪರಿಸಂಖಾ. ಸಕ: [ಪರಿಸಂಖ್ಯಾ] ಸಂಖ್ಯೆ, ಎಣಿಕೆ
ಪರಿಸಂಗ. ಪು: [ಪರಿಷಂಗ] ಸಂಗ, ಸಹವಾಸ
ಪರಿಸಂಗ. ಪು: [ಪರಿಷ್ವಂಗ] ಆಲಿಂಗನ
ಪರಿಸಂಗಯ. ವಿ: [ಪರಿಸಂಗತ] ಕೂಡಿಕೊಂಡಿರುವ, ಸೇರಿಕೊಂಡಿರುವ, ಸಹಿತ(ಧರ್ಮವಿ)
ಪರಿಸಂಠವ. ಸಕ: [ಪರಿಸಂ, +ಸ್ಥಾಪಯ್] ಸಂಸ್ಥಾಪಿಸು, ಸ್ಥಿರವಾಗಿರುವಂತೆ ಮಾಡುವುದು
ಪರಿಸಂಠವಿಯ.ವಿ:[ಪರಿಸಂಸ್ಥಾಪಿತ]ಚೆನ್ನಾಗಿ ಸ್ಥಾಪಿಸಲ್ಪಟ್ಟ
ಪರಿಸಂಠಿಯ. ವಿ: [ಪರಿಸಂಸ್ಥಿತ] ಇರುವ, ಸ್ಥಿರವಾಗಿ ನಿಂತಿರುವ
ಪರಿಸಂತ. ವಿ: [ಪರಿಶ್ರಾಂತ] ಬಳಲಿದ, ಆಯಾಸಗೊಂಡ
ಪರಿಸಂಥವಿಯ. ವಿ: [ಪರಿಸಂಸ್ಥಾಪಿತ] ಸಮಾಧಾನ ಮಾಡಲ್ಪಟ್ಟ
ಪರಿಸಕ್ಕ. ಸಕ: [ಪರಿ+ಷ್ವಷ್ಕ್] ಚಲಿಸು, ನಡೆ, ಅತ್ತ ಇತ್ತ ತಿರುಗಾಡುವುದು. –**'ಪರಿಸಕ್ಕಇ'**
ಪರಿಸಕ್ಕಣ. ನ: [ಪರಿಷ್ವಷ್ಕಣ] ಸಂಚಾರ, ಪರಿಭ್ರಮಣ, ತಿರುಗಾಟ
ಪರಿಸಕ್ಕಿಅ. ವಿ: [ಪರಿಷ್ವಷ್ಕಿತ] ಹೊರಟುಹೋದ, ಗಮನ, ನಡಿಗೆ, ನ: ತಿರುಗಾಟ, ಸಂಚಾರ
ಪಾಉಕಾಮ. ವಿ: [ಪಾತುಕಾಮ]ಕುಡಿಯ ಬೇಕೆಂಬ ಇಚ್ಛೆ ಉಳ್ಳವನು(ಣಾಯಾ)
ಪಾಉಕ್ಕ. ವಿ: [ದೇ] ಹುಡುಕಲ್ಪಟ್ಟ, ಬೇಡಲ್ಪಟ್ಟ
ಪಾಉಕ್ಕರಣ. 'ಪಾಉಕರಣ' ಶಬ್ದವನ್ನು ನೋಡುವುದು.
ಪಾಉಕ್ಖಾಲಯ. ನ: [ಪಾಯುಕ್ಷಾಲಕ] ಪಾಯಿಖಾನೆ, ಅಮೇಧ್ಯ, ಮಲವಿಸರ್ಜನೆಯ ಕ್ರಿಯೆ,
ಪಾಉಗ್ಗ. ವಿ: [ದೇ] ಸಭ್ಯ, ಸಭಾಸದ, ಸಭಿಕ
ಪಾಉಗ್ಗ. ವಿ: [ಪ್ರಾಯೋಗ್ಯ] ಉಚಿತ, ಯೋಗ್ಯ
ಪಾಉಗ್ಗಹ. ಪು: [ಪತದ್‌ಗ್ರಹ] ಪಾತ್ರೆ
ಪಾಉಗ್ಗಿಅ. ವಿ: [ದೇ] ಜೂಜಾಡುವವನು, ಜೂಜುಕೋರ, ಸಹಿಸಲ್ಪಟ್ಟ
ಪಾಉಡ. 'ಪಾಗಯ' ಶಬ್ದವನ್ನು ನೋಡುವುದು.
ಪಾಉಡ. ವಿ: [ಪ್ರಾವೃತ] ಆಚ್ಛಾದಿತ, ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ(ಸೂಅ), ನ: ಬಟ್ಟೆ, ವಸ್ತ್ರ
ಪಾಉಣ. ಸಕ: [ಪ್ರಾ +ವೃ] ಆಚ್ಛಾದಿಸು, ಹೊದಿಸು, ಮರೆಮಾಡು
ಪಾಉಣ. ಸಕ: [ಪ್ರ +ಆಪ್] ಪಡೆದುಕೊಳ್ಳು. –'ಪಾಉಣಇ'
ಪಾಉಣ(ಅಪ). 'ಪಾವಣ=ಪಾವನ' ಶಬ್ದವನ್ನು ನೋಡುವುದು.
ಪಾಉತ್ತ. 'ಪಉತ್ತ=ಪ್ರಯುಕ್ತ' ಶಬ್ದವನ್ನು ನೋಡುವುದು(ಔಪ)
ಪಾಉಪ್ಪಭಾಯ. ವಿ: [ಪ್ರಾದುಷ್ಪ್ರಭಾತ] ಕಾಂತಿಯಿಂದ ಕೂಡಿದ, ಪ್ರಕಾಶದಿಂದ ಕೂಡಿದ(ಭಗ)
ಪಾಉಬ್ಭವ. ಅಕ: [ಪ್ರಾದುಸ್+ಭೂ] ಪ್ರಕಟವಾಗು, ಕಾಣಿಸಿಕೊಳ್ಳು. **ವ.ಕೃ:** –'ಪಾಉಬ್ಭವಂತ'
ಪಾಉಬ್ಭವ. ವಿ: [ಪಾಪೋದ್ಭವ] ಪಾಪದಿಂದ ಜನಿಸಿದ, ಪಾಪದಿಂದ ಉತ್ಪನ್ನವಾದ(ಉಪ)
ಪಾಉಬ್ಭವಣಾ. ಸ್ತ್ರೀ: [ಪ್ರಾದುರ್ಭವನ] ಕಾಣಿಸಿಕೊಳ್ಳುವುದು, ಹುಟ್ಟುವುದು(ಭಗ)
ಪಾಉಬ್ಭೂಯ}. ವಿ: [ಪ್ರಾದುರ್ಭೂತ] ಹುಟ್ಟಿದ,
ಪಾಉಬ್ಭೂಯ}. ಉತ್ಪತ್ತಿಯಾದ, ಕಾಣಿಸಿಕೊಂಡ, ಪ್ರಕಟವಾದ(ವಿಪಾ)
ಪಾಉರಣ. ನ: [ಪ್ರಾವರಣ] ವಸ್ತ್ರ, ಬಟ್ಟೆ
ಪಾಉರಣ. ನ: [ದೇ] ಕವಚ

ಪಾಉರಣೀ. ಸ್ತ್ರೀ: [ದೇ] ಕವಚ, (ದೇ)
ಪಾಉರಿಅ. **'ಪಾಉಡ=ಪ್ರಾವೃತ'** ಶಬ್ದವನ್ನು ನೋಡುವುದು.
ಪಾಉಲ. ವಿ: [ಪಾಪಕುಲ] ನೀಚ ಕುಲದಲ್ಲಿ ಹುಟ್ಟಿದ,
ಪಾಉಲ್ಲ. ನ: **'ಪಾಉಳ'** ಶಬ್ದವನ್ನು ನೋಡುವುದು
ಪಾಉವ. ನ: [ಪಾದೋದ] ಕಾಲು ತೊಳೆದ ನೀರು(ಣಾಯಾ)
ಪಾಉಸ. ಪು: [ಪ್ರಾವೃಷ್] ವರ್ಷ ಋತು, ಮಳೆಗಾಲ. **–ಕೀಡ.** ಪು: [–ಕೀಟ] ಮಳೆಗಾಲದಲ್ಲಿ ಹುಟ್ಟುವ ಒಂದು ಕೀಟ(ದೇ), **ಪಾಉಸಾಗಮ.** ಪು: [ಪ್ರಾವೃಷಾಗಮ] ಮಳೆಗಾಲದ ಆರಂಭ(ಪಾಅ)
ಪಾಉಸಿಅ. ವಿ: [ಪ್ರಾವೃಷಿಕ] ಮಳೆಗಾಲಕ್ಕೆ ಸಂಬಂಧಿಸಿದ,
ಪಾಉಸಿಅ. ವಿ: [ಪ್ರೋಷಿತ, ಪ್ರವಾಸಿನ್] ಪ್ರವಾಸ ಹೋಗಿರುವ,
ಪಾಉಸಿಆ. ಸ್ತ್ರೀ: [ಪ್ರಾದ್ವೇಷಿಕೀ] ದ್ವೇಷ, ಮತ್ಸರದಿಂದ ಉಂಟಾಗುವ ಕರ್ಮ ಬಂಧನ(ಸಮ, ಠಾ)
ಪಾಉಹಾರೀ. ಸ್ತ್ರೀ: [ಪಾಕಹಾರೀ] ಅನ್ನ ನೀರು ತಂದು ಕೊಡುವವಳು(ಗಾ)
ಪಾಏ. ಅ: [ದೇ] ಪ್ರಾರಂಭಿಸಿ, ಪ್ರಾರಂಭ ಮಾಡಿ(ಓಘ)
ಪಾಏ. ಸಕ: [ಪಾಯಯ್] ಕುಡಿಸು. **–'ಪಾಏಇ'**
ಪಾಏ. ಸಕ: [ಪಾದಯ್] ನಡೆ, ಗಮಿಸು
ಪಾಏ. ಸಕ: [ಪಾಚಯ್] ಬೇಯಿಸಿಸು. – **'ಪಾಏಇ'**
ಪಾಏಣ.}. ಅ: [ಪ್ರಾಯೇಣ] ಬಹುಶಃ, ಪ್ರಾಯಶಃ
ಪಾಏಣಮ್}. (ವಿಸೇ)
ಪಾಓ. ಅ: [ಪ್ರಾಯುಸ್] ಮೇಲಿನ ಶಬ್ದವನ್ನು ನೋಡುವುದು.
ಪಾಓ. ಅ: [ಪ್ರಾತಸ್] ಪ್ರಾತಃಕಾಲ, ಬೆಳಿಗ್ಗೆ
ಪಾಓಕರಣ. ಪಾಉಕರಣ(ಪಿಂಡ)
ಪಾಓಗ. **'ಪಾಉಗ್ಗ'** ಶಬ್ದವನ್ನು ನೋಡುವುದು.
ಪಾಓಗಿಯ. ವಿ: [ಪ್ರಾಯೋಗಿಕ] ಪ್ರಯತ್ನದಿಂದ ಹುಟ್ಟಿದ, ಅಸ್ವಾಭಾವಿಕ ಪ್ರಯೋಗಕ್ಕೆ ಅರ್ಹವಾದ
ಪಾಓಗ್ಗ. **'ಪಾಉಗ್ಗ'** ಶಬ್ದವನ್ನು ನೋಡುವುದು
ಪಾಓಪಗಮ. ನ: [ಪಾದಪೋಪಗಮ] **ಪಾಓವಗಮಣ'** ಶಬ್ದವನ್ನು ನೋಡುವುದು.
ಪಾಓಯರ. ಪು: [ಪ್ರಾದುಷ್ಕಾರ] **'ಪಾಉಕರಣ'** ಶಬ್ದವನ್ನು ನೋಡುವುದು.

ಪಾಓವಗಮಣ. ನ: [ಪಾದಪೋಪಗಮನ] ಅನಶನ –ವಿಶೇಷ, ಉಪವಾಸ, ಊಟವಿಲ್ಲದಿರುವುದು. ಮರಣ(ಸಲ್ಲೇಖನ)(ಔಪ)
ಪಾಓವಗಯ. ವಿ: [ಪಾದಪೋಪಗತ] ಉಪವಾಸದಿಂದ ಮೃತನಾದ(ಔಪ)
ಪಾಓಸ. ಪು: [ದೇ. ಪ್ರದ್ವೇಷ] ದ್ವೇಷ, ಮತ್ಸರ(ಠಾ)
ಪಾಓಸಿಯ. **'ಪಾದೋಸಿಯ'** ಶಬ್ದವನ್ನು ನೋಡುವುದು.
ಪಾಓಸಿಯಾ. **'ಪಾಉಸಿಆ'** ಶಬ್ದವನ್ನು ನೋಡುವುದು.
ಪಾಂಡವಿಅ. ವಿ: [ದೇ] ನೀರಿನಿಂದ ಒದ್ದೆಯಾದ, ನೆನೆದ(ದೇ)
ಪಾಂಡು. **'ಪಂಡು'** ಶಬ್ದವನ್ನು ನೋಡುವುದು. **–ಸುಅ.** ಪು[–ಸುತ] ಅಭಿನಯದ ಒಂದು ಪ್ರಕಾರ(ಠಾ)
ಪಾಕ. **'ಪಾಗ'** ಶಬ್ದವನ್ನು ನೋಡುವುದು.
ಪಾಕಮ್ಮ. ನ: [ಪ್ರಾಕಾಮ್ಯ] ಯೋಗದ ಎಂಟು ಸಿದ್ಧಿಗಳಲ್ಲಿ ಒಂದು ಸಿದ್ಧಿ.
ಪಾಕಾರ. ಪು: [ಪ್ರಾಕಾರ] ಕೋಟೆ, ದುರ್ಗ(ಉಪ)
ಪಾಕಿದ.(ಶೌ). **'ಪಾಗಯ'** ಶಬ್ದವನ್ನು ನೋಡುವುದು.
ಪಾಖಂಡ. **'ಪಾಸಂಡ'** ಶಬ್ದವನ್ನು ನೋಡುವುದು.
ಪಾಗ. ಪು: [ಪಾಕ] ಬೇಯಿಸುವ ಕ್ರಿಯೆ(ಔಪ), ಆಹಾರ ಜೀರ್ಣವಾಗುವ ಕ್ರಿಯೆ, ಇಂದ್ರನಿಂದ ಹತನಾದ ಒಬ್ಬ ದೈತ್ಯ(ಗಉಡ), ಪರಿಣಾಮ, ಬಲಿಷ್ಠ ಶತ್ರು(ಆವಮ). **–ಸಾಸಣ.** ಪು: [–ಶಾಸನ]ದೇವ ರಾಜ ಇಂದ್ರ, **–ಸಾಸಣೀ.** ಸ್ತ್ರೀ: [–ಶಾಸನೀ] ಇಂದ್ರಜಾಲ ವಿದೆ(ಸೂಅ)
ಪಾಗಇಅ. ವಿ: [ಪ್ರಾಕೃತಿಕ] ಸ್ವಾಭಾವಿಕ, ಪು: ಸಾಧಾರಣ ಮನುಷ್ಯ, ಸಾಮಾನ್ಯ ಲೋಕ(ಪವ)
ಪಾಗಡ. ಸಕ: [ಪ್ರ +ಕಾಟಯ್] ಪ್ರಕಟಿಸು, ತೆರೆ, ವ್ಯಕ್ತಪಡಿಸು(ವುದು)
ಪಾಗಡ. ವಿ: [ಪ್ರಕಟ]ವ್ಯಕ್ತವಾದ, ಸ್ಪಷ್ಟವಾದ (ಉತ್ತ)
ಪಾಗಡಣ. ನ: [ಪ್ರಕಟನ] ಪ್ರಕಟಪಡಿಸುವುದು, ವ್ಯಕ್ತಪಡಿಸುವುದು. ವಿ: ಪ್ರಕಟ ಪಡಿಸುವವನು
ಪಾಗಡಿಅ. ವಿ: [ಪ್ರಕಟಿತ] ವ್ಯಕ್ತಪಡಿಸಲಾದ, ಪ್ರಕಟಪಡಿಸಲ್ಪಟ್ಟ(ಔಪ)
ಪಾಗಡ್ಡಿ}. ವಿ: [ಪ್ರಾಕರ್ಷಿನ್, –ಕ] ಮುಂದೆ
ಪಾಗಡ್ಡಿಕ}. ಹೋಗುವ, ಮುಂದೆ ನಡೆವ, ಪ್ರವರ್ತಕ, ಪ್ರಾರಂಭಿಸುವವನು, ಕಾರ್ಯದಲ್ಲಿ ತೊಡಗುವಂತೆ ಮಾಡುವವನು(ಪಣ್ಣ)

ಪಾಗಬ್ಭ. ನ: [ಪ್ರಾಗಲ್ಭ್ಯ] ದಿಟ್ಟತನ, ಧೈರ್ಯ(ಊಅ) ಪ್ರಾವೀಣ್ಯ
ಪಾಗಬ್ಭಿ}. ವಿ: [ಪ್ರಾಗಲ್ಭಿನ್, ಕ] ಧೈರ್ಯವುಳ್ಳ,
ಪಾಗಬ್ಭಿಯ}. ದಿಟ್ಟತನವುಳ್ಳ(ಸೂಅ)
ಪಾಗಯ. ವಿ: [ಪ್ರಾಕೃತ] ಸ್ವಾಭಾವಿಕ, ಸ್ವಭಾವ –ಸಿದ್ಧ, ಆರ್ಯಾವರ್ತದ ಪ್ರಾಚೀನ ಜನ–ಭಾಷೆ(ವಿಸೇ), ಸಾಧಾರಣ ಬುದ್ಧಿ ಸಾಮಾನ್ಯ ಮನುಷ್ಯ, ಸಾಮಾನ್ಯ ವ್ಯಕ್ತಿ. **–ಭಾಸಾ.** ಸ್ತ್ರೀ: [–ಭಾಷಾ] ಪ್ರಾಕೃತ ಭಾಷೆ. **–ವಾಗರಣ.** ನ: [–ವ್ಯಾಕರಣ] ಪ್ರಾಕೃತ ಭಾಷೆಯ ವ್ಯಾಕರಣ.
ಪಾಗಾರ. ಪು: [ಪ್ರಾಕಾರ] ಕೋಟೆ, ದುರ್ಗ
ಪಾಜಾವಚ್ಚ. ಪು: [ಪ್ರಾಜಾಪತ್ಯ] ವನಸ್ಪತಿಯ ಒಬ್ಬ ಅಧಿಷ್ಠಾತೃ –ದೇವ, ವನಸ್ಪತಿ(ಠಾ)
ಪಾಟಪ(ಚೂಪೈ). 'ವಾಡವ' ಶಬ್ದವನ್ನು ನೋಡುವುದು.
ಪಾಠೀಣ. **'ಪಾಢೀಣ'** ಶಬ್ದವನ್ನು ನೋಡುವುದು.
ಪಾಡ. **'ಫಾಡ=ಪಾಟ್ಯ'** ಶಬ್ದವನ್ನು ನೋಡುವುದು.
ಪಾಡ. ಸಕ: [ಪಾತಯ್] ಬೀಳಿಸು. **–ಕ್ರಿಯಾ ರೂಪ:** **'ಪಾಡೇಇ'**
ಪಾಡ. **'ಪಾಡಯ=ಪಾಟಕ'** ಶಬ್ದವನ್ನು ನೋಡುವುದು.
ಪಾಡಚ್ಚರ. ಪು: [ಪಾಟಚ್ಚರ] ಕಳ್ಳ, ಚೋರ(ಪಾಅ)
ಪಾಡಣ. ನ: [ಪಾಟನ] ಕತ್ತರಿಸು, ಸೀಳು, ಎರಡು ಹೋಳು ಮಾಡು(ಆವ)
ಪಾಡಣ. ನ: [ಪಾತನ] ಬೀಳಿಸುವುದು, ಸುತ್ತಾಡುವುದು, ಅತ್ತ–ಇತ್ತ ಸುತ್ತುವುದು (ಕುಮಾ)
ಪಾಡಣಾ. ಸ್ತ್ರೀ: [ಪಾತನಾ] ಮೇಲಿನ ಶಬ್ದವನ್ನು ನೋಡುವುದು.
ಪಾಡಯ. ಪು: [ಪಾಟಕ] ಮುಖ್ಯ ರಸ್ತೆ, ಹೆದ್ದಾರಿ, ಊರಿನ ಒಂದು ಭಾಗ(ಧರ್ಮವಿ)
ಪಾಡಯ. ವಿ: [ಪಾತಕ] ಬೀಳಿಸುವವನು, ಸ್ತ್ರೀ:–ಡಿಆ
ಪಾಡಲ. ಪು: [ಪಾಟಲ] ಬಿಳಿ ಮತ್ತು ಕೆಂಪು ವರ್ಣದ ಮಿಶ್ರಣ, ಗುಲಾಬಿ ಬಣ್ಣ. ವಿ: ಕೆಂಪು–ಬಿಳಿ ಮಿಶ್ರ ವರ್ಣದವ(ಪಾಅ), ಹಸಿರು ಪಾದರಿ ಹೂವು, ಗುಲಾಬಿ ಹೂವು(ಗಾ)
ಪಾಡಲ. ಪು: [ದೇ] ಹಂಸ ಪಕ್ಷಿ, ಎತ್ತು, ಕಮಲ(ದೇ)
ಪಾಡಲಸಉಣ. ಪು: [ದೇ] ಹಂಸ ಪಕ್ಷಿ(ದೇ)
ಪಾಡಲಾ. ಸ್ತ್ರೀ: [ಪಾಟಲಾ] ಪಾದರಿ ಮರ(ಗಾ) (ಪಉಮ)
ಪಾಡಲಿ. ಸ್ತ್ರೀ: [ಪಾಟಲಿ] ಮೇಲಿನ ಶಬ್ದವನ್ನು ನೋಡುವುದು. **–ಉತ್ತ, –ಪುತ್ತ.** ನ: [–ಪುತ್ರ] ಈಗ 'ಪಾಟ್ನಾ'ಎಂದು ಕರೆಯಲಾಗುವ ಬಿಹಾರದ ರಾಜಧಾನಿ. **–ಪುತ್ತ.** ವಿ: [–ಪುತ್ರ] ಪಾಟಲಿ ಪುತ್ರಕ್ಕೆ ಸಂಬಂಧಿಸಿದ, ಪಟನಾದ. **–ಸಂಡ.** ನ: [–ಷಂಡ] ನಗರ –ವಿಶೇಷ. **'ಪಾಡಲೀ'** ಶಬ್ದವನ್ನು ನೋಡುವುದು.
ಪಾಡಲಿಯ. ವಿ: [ಪಾಟಲಿತ] ಕೆಂಪು–ಬಿಳಿ ಬಣ್ಣದ್ದಾಗಿ ಮಾಡಲ್ಪಟ್ಟ(ಗಉಡ)
ಪಾಡಲೀ. **'ಪಾಡಲಿ'** ಶಬ್ದವನ್ನು ನೋಡುವುದು. **–ಪುರ.** ನ: [–ಪುರ] **'ಪಾಟ್ನಾ'** ನಗರ. **–ವುತ್ತ.** ನ: [–ಪುತ್ರ] ಪಟನಾ ನಗರ(ಷಡ್)
ಪಾಡವ. ನ: [ಪಾಟವ] ಪಟುತ್ವ, ನೈಪುಣ್ಯ, ಜಾಣತನ
ಪಾಡವಣ. ನ: [ದೇ] ಕಾಲಿಗೆ ಬೀಳುವುದು, ನಮಸ್ಕರಿಸುವ ರೀತಿ
ಪಾಡಹಿಗ}. ವಿ: [ಪಾಟಹಿಕ] ಢೋಲು
ಪಾಡಹಿಯ}.ಬಾರಿಸುವವನು
ಪಾಡಹುಕ. ವಿ: [ದೇ] ಜಾಮೀನು ನೀಡುವವನು, ಹೊಣೆಗಾರ(ಷಡ್)
ಪಾಡಿಅ. ವಿ: [ಪಾಟಿತ] ಸೀಳಲ್ಪಟ್ಟ, ಕತ್ತರಿಸಲ್ಪಟ್ಟ
ಪಾಡಿಅ. ವಿ: [ಪಾತಿತ] ಬೀಳಿಸಲ್ಪಟ್ಟವನು, ಕೆಡವಲ್ಪಟ್ಟವನು(ಪಾಅ)
ಪಾಡಿಅಗ್ಗ. ಪು: [ದೇ]ವಿಶ್ರಾಂತಿ, ಬಿಡುವು
ಪಾಡಿಅಜ್ಝ. ಪು: [ದೇ] ತೌರು ಮನೆಯಿಂದ ವಧುವನ್ನು ಆಕೆಯ ಗಂಡನ ಮನೆಗೆ ಕರೆದೊಯ್ಯುವವನು
ಪಾಡಿಆ.. **'ಪಾಡಯ=ಪಾತಕ'** ಶಬ್ದವನ್ನು ನೋಡುವುದು.
ಪಾಡಿಎಕ್ಕ}. ನ: [ಪ್ರತ್ಯೇಕ] ಪ್ರತಿಯೊಂದು, ಪ್ರತಿಯೊಬ್ಬ
ಪಾಡಿಕ್ಕ}. (ಕಪ್ಪ, ಪಾಅ)
ಪಾಡಿಂತಿಯ. ನ: [ಪ್ರಾತ್ಯಂತಿಕ] ಅಭಿನಯ–ವಿಶೇಷ
ಪಾಡಿಚ್ಚರಣ. ನ: [ಪ್ರತಿಚರಣ] ಸೇವೆ, ಆರಾಧನೆ
ಪಾಡಿಚ್ಛಯ. ವಿ: [ಪ್ರತೀಪ್ಸಕ] ಸ್ವೀಕರಿಸುವವನು(ಸುಖ)
ಪಾಡಿಜ್ಜಂತ. **'ಪಾಡ=ಪಾತಯ್'** ಶಬ್ದವನ್ನು ನೋಡುವುದು.
ಪಾಡಿಪಹ. ನ: [ಪ್ರತಿಪಥ]ಎದುರುಗಡೆ.ಅಭಿಮುಖ
ಪಾಡಿಪಹಿಅ.'**ಪಡಿಪಹಿಅ'** ಶಬ್ದವನ್ನು ನೋಡುವುದು
ಪಾಡಿಪಿದ್ಧಿ. ಸ್ತ್ರೀ: [ದೇ] ಪ್ರತಿಸ್ಪರ್ಧೆ

ಪಾಡಿಪ್ಪವಗ. ಪು: [ಪಾರಿಪ್ಲವಕ]ನೀರಿನ ಮೇಲೆ ಸಂಚರಿಸುವ ಹಕ್ಕಿ(ಪಉಮ)

ಪಾಡಿಪ್ಪದ್ಧಿ. ವಿ: [ಪ್ರತಿಸ್ಪರ್ಧಿನ್] ಪ್ರತಿಯಾಗಿ ಸ್ಪರ್ಧಿಸುವವನು.

ಪಾಡಿಯಂತಿಯ. ನ: [ಪ್ರಾತ್ಯಂತಿಕ] ಅಭಿನಯ ವಿಶೇಷ

ಪಾಡಿಯಕ್ಕ. 'ಪಾಡಿಎಕ್ಕ' ಶಬ್ದವನ್ನು ನೋಡುವುದು.

ಪಾಡಿವಯ. ವಿ: [ಪ್ರಾತಿಪದ] ಪ್ರತಿಪದೆ ಅರ್ಥಾತ್ ಪಾಡ್ಯಕ್ಕೆ ಸಂಬಂಧಿಸಿದ, ಪಾಡ್ಯದ. ಪು: ಒಬ್ಬ ಭಾವೀ ಜೈನ ಆಚಾರ್ಯ

ಪಾಡಿವಯಾ. ಸ್ತ್ರೀ: [ಪ್ರತಿಪತ್] ಪಕ್ಷದ ಮೊದಲ ತಿಥಿಯಾದ ಪಾಡ್ಯ(ಣಾಯಾ)

ಪಾಡಿವೇಸಿಯ. ವಿ: [ಪ್ರಾತಿವೇಶ್ಮಿಕ] ನೆರೆಯವನು. ಸ್ತ್ರೀ: –ಯಾ

ಪಾಡಿಸಾರ. ಪು: [ದೇ] ಪಟುತ್ವ, ನೈಪುಣ್ಯ. ವಿ: ಪಟು, ನಿಪುಣ(ದೇ)

ಪಾಡಿಸಿದ್ಧಿ. 'ಪಡಿಸಿದ್ಧಿ=ಪ್ರತಿಸಿದ್ಧಿ' ಶಬ್ದವನ್ನು ನೋಡುವುದು.

ಪಾಡಿಸಿದ್ಧಿ. ಸ್ತ್ರೀ: [ದೇ] ಸ್ಪರ್ಧೆ, ಸತ್ಸಂಪ್ರದಾಯದ ನಡವಳಿಕೆ, ವಿ: ಸದೃಶ, ಹೋಲುವ, (ದೇ

ಪಾಡಿಸಿರಾ. ಸ್ತ್ರೀ: [ದೇ] ಕುದುರೆಯ ಕಡಿವಾಣ, ಲಗಾಮಿನಿಂದ ಕೂಡಿದ

ಪಾಡಿಸ್ಸುಇಯ. ನ: [ಪ್ರಾತಿಶ್ರುತಿಕ] ಅಭಿನಯದ ಒಂದು ಪ್ರಭೇದ

ಪಾಡಿಹಚ್ಚೀ}. ಸ್ತ್ರೀ: [ದೇ] ಹಣೆಯ ಮೇಲೆ ತಲೆಯ

ಪಾಡಿಹತ್ಥೀ}. ಸುತ್ತ ಕಟ್ಟಿಕೊಳ್ಳುತ್ತಿದ್ದ ಹೂವಿನ ಮಾಲೆ

ಪಾಡಿಹಾರಿಯ. ವಿ: [ಪ್ರಾತಿಹಾರಿಕ] ಹಿಂತಿರುಗಿಸಲು ಅರ್ಹವಾದ ವಸ್ತು(ವಿಸೇ)

ಪಾಡಿಹೇರ. ನ: [ಪ್ರಾತಿಹಾರ್ಯ] ದೇವತೆ ಮಾಡಿದ ಪೂಜಾ –ವಿಶೇಷ(ಔಪ), ದೇವ ಸಾನ್ನಿಧ್ಯ

ಪಾಡೀ. ಸ್ತ್ರೀ: [ದೇ] ಎಮ್ಮೆ ಕರು

ಪಾಡುಂಕೀ. ಸ್ತ್ರೀ: [ದೇ] ಗಾಯಗೊಂಡವನ ಪಲ್ಲಕ್ಕಿ, ಡೋಲಿ

ಪಾಡುಂಗೋರಿ. ವಿ: [ದೇ] ಗುಣವಿಲ್ಲದ, ಮದ್ಯದಲ್ಲಿ ಆಸಕ್ತನಾದ, ಸ್ತ್ರೀ: ಬಹಳ ಬಲವಾದ ಆವರಣವುಳ್ಳ ಬೇಲಿ, ಸುತ್ತುಗೋಡೆ.

ಪಾಡುಕ್ಕ. ಪು: [ದೇ] ಶ್ರೀಗಂಧವೇ ಮೊದಲಾದುವನ್ನು ದೇಹಕ್ಕೆ ಲೇಪಿಸಿಕೊಳ್ಳುವುದು. ವಿ: ಪಟು, ನಿಪುಣ, ಜಾಣ(ದೇ)

ಪಾಡುಚ್ಚಿಯ. ವಿ: [ಪ್ರಾತೀತಿಕ] ಯಾರದ್ದಾದರೂ ಆಶ್ರಯದಿಂದ ಆಗುವಂಥ, ಅಪೇಕ್ಷೆಯಂತೆ ಲಭಿಸಿದ, ಪ್ರಾಪ್ತವಾದಸ್ತ್ರೀ: –ಯಾ

ಪಾಡುಚ್ಚೀ. ಸ್ತ್ರೀ: [ದೇ] ಕುದುರೆಯನ್ನು ಸಿಂಗರಿಸುವುದು, ಸಜ್ಜುಗೊಳಿಸುವುದು(ದೇ)

ಪಾಡುಹುಅ. ವಿ: [ದೇ] ಜಾಮೀನುದಾರ

ಪಾಡೆಕ್ಕ. 'ಪಾಡಿಕ್ಕ' ಶಬ್ದವನ್ನು ನೋಡುವುದು

ಪಾಡೋಸ. ಪು: [ದೇ] ನೆರೆಹೊರೆಯ, ಪಕ್ಕದ ಮನೆಯ

ಪಾಡೋಸಿಅ. ವಿ: [ದೇ] ನೆರೆಯವನು, ಅಕ್ಕಪಕ್ಕದ(ಸಿರಿ)

ಪಾಢ. ಸಕ: [ಪಾಠಯ್] ಓದಿಸು, ಕಲಿಸು, ಅಧ್ಯಯನ ಮಾಡಿಸು – ಕ್ರಿಯಾ ರೂಪ:'ಪಾಢಇ'

ಪಾಢ. ಪು: [ಪಾಠ] ಅಧ್ಯಯನ, ಪಠನ, ಓದುವಿಕೆ, ಶಾಸ್ತ್ರ, ಆಗಮ, ಶಾಸ್ತ್ರದ ಉಲ್ಲೇಖ, ಅಧ್ಯಾಪನ, ಬೋಧನೆ

ಪಾಢ. 'ಪಾಡಯ=ಪಾಟಕ' ಶಬ್ದವನ್ನು ನೋಡುವುದು

ಪಾಢಂತರ. ನ: [ಪಾಠಾಂತರ] ಭಿನ್ನ ಪಾಠ (ಶ್ರಾವಕ)

ಪಾಢಗ. ವಿ: [ಪಾಠಕ] ಉಚ್ಚರಿಸುವವನು, ಅಭ್ಯಾಸಿ, ಅಧ್ಯಯನ ಮಾಡುವವನು, ಅಧ್ಯಾಪಕ(ಕಪ್ಪ)

ಪಾಢಣ. ನ: [ಪಾಠನ] ಅಧ್ಯಾಪನ(ಉಪ)

ಪಾಢಣಯಾ. ಸ್ತ್ರೀ: [ಪಾಠನಾ] ಮೇಲಿನ ಶಬ್ದವನ್ನು ನೋಡುವುದು

ಪಾಢಯ. 'ಪಾಢಗ' ಶಬ್ದವನ್ನು ನೋಡುವುದು(ಕಪ್ಪ)

ಪಾಢವ. ವಿ: [ಪಾರ್ಥಿವ] ಪೃಥ್ವಿಯಿಂದ ಆದಂಥ, ಮಣ್ಣಿನಿಂದ ಆದಂಥ(ಉತ್ತ)

ಪಾಢಾ. ಸ್ತ್ರೀ: [ಪಾಠಾ] ಅಗುರು ಶುಂಠಿ, ಅಗುರು ಶುಂಠಿಗಿಡ

ಪಾಢಾವ. ಸಕ: [ಪಾಠಯ್] ಓದಿಸು, ಕಲಿಸು, ಅಧ್ಯಯನ ಮಾಡಿಸು. –'ಪಾಢಾವೇಇ'

ಪಾಢಾವಅ. ವಿ: [ಪಾಠಕ] ಅಧ್ಯಾಪಕ, ಓದುವವನು

ಪಾಢಾವಣ. ನ: [ಪಾಠನ] ಅಧ್ಯಾಪನ, ಕಲಿಸುವುದು

ಪಾಢಾವಿಅ. ವಿ: [ಪಾಠಿತ] ಕಲಿಸಲ್ಪಟ್ಟ, ಪ್ರವಚನ ಮಾಡಲ್ಪಟ್ಟ(ಪ್ರಾಕೃ)

ಪಾಢಾವಿಅವಂತ. [ಪಾಠಿತವತ್] ಕಲಿಸಿದವನು, ಅಧ್ಯಾಪಕ(ಪ್ರಾಕೃ)

ಪಾಢಾವಿಉ}. ವಿ: [ಪಾಠಯಿತೃ] ಕಲಿಸುವವನು,

ಪಾಢಾವಿರ}. ಅಧ್ಯಾಪಕ(ಪ್ರಾಕೃ)

ಪಾಢಿಅ. ವಿ: [**ಪಾಠಿತ**] ಕಲಿಸಿದವನು, ಅಧ್ಯಾಪಕ
ಪಾಢಿಅವಂತ. '**ಪಾಢಾವಿಅವಂತ**' ಶಬ್ದವನ್ನು ನೋಡುವುದು
ಪಾಢಿಆ. ಸ್ತ್ರೀ: [**ಪಾಠಿಕಾ**] ಓದುವವಳು, ಅಧ್ಯಯನ ಮಾಡುವವಳು, ಅಧ್ಯಾಪಕಿ
ಪಾಢಿಉ}. ವಿ: [**ಪಾಠಯಿತೃ**] ಅಧ್ಯಾಪಕ,ಕಲಿಸುವವನು
ಪಾಢಿರ}.
ಪಾಢೀಣ. ಪು: [**ಪಾಠೀನ**] ಒಂದು ಜಾತಿಯ ಮೀನು
ಪಾಢೋಆಮಾಸ. ಪು: [**ಪೃಥಗಾಮರ್ಶ**] ಹನ್ನೆರಡನೇ ಅಂಗ ಗ್ರಂಥದ ಒಂದು ಭಾಗ
ಪಾಣ. ಸಕ: [**ಪ್ರಾ+ಆನಯ್**] ಬದುಕಿಸು. ವ. ಕೃ: '**ಪಾಣಅಂತ**
ಪಾಣ. ಪುಂಸ್ತ್ರೀ: [**ದೇ**] ಶ್ವಪಚ, ಚಾಂಡಾಲ, ಸ್ತ್ರೀ: -ಣೀ. **-ಉಡೀ.** ಸ್ತ್ರೀ: [**-ಕುಟೀ**] ಚಾಂಡಾಲನ ಗುಡಿಸಿಲು. **-ವಿಲಯಾ.** ಸ್ತ್ರೀ: [**-ವನಿತಾ**] ಚಾಂಡಾಲೀ. **ಪಾಣಾಡಂಬರ.ಪು:** [**ಪಾಣಾಡಂಬರ**] ಯಕ್ಷ-ವಿಶೇಷ.**ಪಾಣಾಹಿವಇ. ಪು:**[**ಪಾಣಾಧಿಪತಿ**] ಚಾಂಡಾಲರ ನಾಯಕ (ಮಹಾ)
ಪಾಣ. ನ: [**ಪಾನ**] ಕುಡಿಯುವುದು, ಕುಡಿಯುವ ಕ್ರಿಯೆ(ಸುರ). ಕುಡಿಯುವ ವಸ್ತುವಾದ ನೀರು ಇತ್ಯಾದಿ.ಪು: ಗೊಂಚಲು, ಹೂಗೊಂಚಲು. **-ಪತ್ತ.** ನ: [**-ಪಾತ್ರ**] ಕುಡಿಯುವ ಪಾತ್ರೆ; ಬಟ್ಟಲು, ಲೋಟ. **ಪಾಣಾಗಾರ.** ನ: [**ಪಾನಾಗಾರ**] ಪಡಖಾನೆ, ಮದ್ಯದಂಗಡಿ. **ಪಾಣಾಹಾರ. ಪು:** [**ಪಾನಾಹಾರ**] ಒಂದು ಊಟದ ತಪಸ್ಸು
ಪಾಣ. ಪುಂನ: [**ಪ್ರಾಣ**] ಜೀವನಕ್ಕೆ ಆಧಾರಭೂತವಾದ ಈ ಹತ್ತು ಪದಾರ್ಥಗಳು: ಐದು ಇಂದ್ರಿಯಗಳು, ಮನಸ್ಸು, ವಚನ ಮತ್ತು ಶರೀರದ ಬಲ, ಉಚ್ಛ್ವಾಸ ಮತ್ತು ನಿಃಶ್ವಾಸ(ಪಣ್ಣ). ಸಮಯದ ಅಳತೆ: ಉಚ್ಛ್ವಾಸ, ನಿಃಶ್ವಾಸದ ಪರಿಮಿತ ಕಾಲ, ಪ್ರಾಣಿ, ಜೀವ(ಸೂಅ), ಜೀವಿತ, ಜೀವನ(ಸುಪಾ). **-ಇತ್ತ.** ವಿ: [**-ವತ್**] ಪ್ರಾಣವುಳ್ಳವನು, ಪ್ರಾಣಿ. **-ಚ್ಚಂಯ.** ಪು: [**ಪ್ರಾಣಾತ್ಯಂಯ**] ಪ್ರಾಣ ನಾಶ(ಸುಪಾ). **-ಚ್ಚಾಯ. ಪು:** [**-ತ್ಯಾಗ**] ಮರಣ, ಸಾವು. **-ಜಾಇಯ.** ವಿ: [**-ಜಾತಿಕ**] ಪ್ರಾಣಿ, ಜೀವ. **-ನಾಹ. ಪು:** [**-ನಾಥ**] ಪತಿ, ಸ್ವಾಮಿ, ಪ್ರಾಣನಾಥ (ಋಂಭಾ), **-ಪ್ಪಿಯಾ.** ಸ್ತ್ರೀ: [**-ಪ್ರಿಯಾ**] ಹೆಂಡತಿ, ಪತ್ನಿ. **-ವಹ. ಪು:**[**-ವಧ**] ಹಿಂಸೆ. **-ವಿತ್ತಿ.** ಸ್ತ್ರೀ: [**-ವೃತ್ತಿ**] ಜೀವನ-ನಿರ್ವಾಹ, ಜೀವನೋಪಾಯ (ಮಹಾ). **-ಸಮ. ಪು:** [**-ಸಮ**] ಪತಿ, ಒಡೆಯ. **-ಸುಹುಮ.** ನ: [**-ಸೂಕ್ಷ್ಮ**] ಸೂಕ್ಷ್ಮ ಜಂತು. **-ಹಿಯ.** ವಿ: [**-ಹೃತ್**] ಪ್ರಾಣ -ನಾಶಕ. **ಪಾಣಾಇಂತ.** ವಿ: [**-ವತ್**] ಪ್ರಾಣವುಳ್ಳವ, ಪ್ರಾಣಿ(ಪ್ರಾಪ್ರ). **ಪಾಣಾಇವಾಇಯಾ.** ಸ್ತ್ರೀ: [**ಪ್ರಾಣಾತಿಪಾತಿಕೀ**] ಹಿಂಸೆಯಿಂದ ಉಂಟಾಗುವ ಕರ್ಮ-ಬಂಧನ (ನವ). **ಪಾಣಾಇವಾಯ. ಪು:** [**ಪ್ರಾಣಾತಿಪಾತ**] ಹಿಂಸೆ(ಉವಾ). **ಪಾಣಾಉ. ಪುಂನ:** [**ಪ್ರಾಣಾಯುಸ್**] ಗ್ರಂಥಾಂಶ -ವಿಶೇಷ, ಹನ್ನರಡನೆಯದರ ಹಿಂದಿನದು(ಸಮ). **ಪಾಣಾಪಾಣ, ಪಾಣಾಪಾಣು. ಪುಂನ:** [**ಪ್ರಾಣಾಪಾನ**] ಉಚ್ಛ್ವಾಸ ಮತ್ತು ನಿಃಶ್ವಾಸಗಳು. **ಪಾಣಾಯಾಮ. ಪು:** [**ಪ್ರಾಣಾಯಾಮ**] ಪೂರಕ, ರೇಚಕ, ಮತ್ತು ಕುಂಭಕಗಳೆಂಬಉಸಿರಾಟವನ್ನು ನಿಯಂತ್ರಿಸುವ ಉಪಾಯಗಳು.
ಪಾಣಂತಕರ. ವಿ: [**ಪ್ರಾಣಾಂತಕರ**] ಪ್ರಾಣ-ನಾಶಕ (ಸುಪಾ)
ಪಾಣಂತಿಯ. ವಿ: [**ಪ್ರಾಣಾಂತಿಕ**] ಪ್ರಾಣ ನಾಶಕಾರಿಯಾದ
ಪಾಣಗ. ಪುಂನ: [**ಪಾನಕ**] ಒಂದು ಪೇಯ, ನೀರಿಗೆ ನಿಂಬೆರಸ, ಸಕ್ಕರೆ ಇತ್ಯಾದಿ ಸೇರಿಸಿ ತಯಾರಿಸಿದ ಕುಡಿಯುವ ಒಂದು ದ್ರವ್ಯ. ವಿ: ಕುಡಿಯುವವನು.
ಪಾಣದ್ಧಿ. ಸ್ತ್ರೀ: [**ದೇ**] ಹೆದ್ದಾರಿ, ಮೊಹಲ್ಲಾ
ಪಾಣಮ. ಅಕ: [**ಪ್ರ +ಅಣ್**] ನಿಃಶ್ವಾಸ ತೆಗೆದುಕೊಳ್ಳು, ಉಸಿರುಬಿಡು
ಪಾಣಯ. ಪು: [**ಪ್ರಾಣತ**] ಹತ್ತನೇ ದೇವಲೋಕ; ಸ್ವರ್ಗಲೋಕ, ಒಂದು ದೇವ -ವಿಮಾನ - ವಿಮಾನೇಂದ್ರಕ, ಪ್ರಾಣತ ಸ್ವರ್ಗದ ಇಂದ್ರ(ಠಾ). ಪ್ರಾಣತ ದೇವಲೋಕದಲ್ಲಿ ಇರುವ ದೇವ(ಅಣು)
ಪಾಣಹಾ. ಸ್ತ್ರೀ: [**ಉಪಾನಹ್**] ಚಪ್ಪಲಿ, ಪಾದ ರಕ್ಷೆ
ಪಾಣಾಅಅ. ಪು: [**ದೇ**] ಶ್ವಪಚ, ಚಾಂಡಾಳ(ದೇ)
ಪಾಣಾಮ. ಪು: [**ಪ್ರಾಣ**] ನಿಃಶ್ವಾಸ(ಭಗ)
ಪಾಣಾಮಾ. ಸ್ತ್ರೀ: [**ಪ್ರಾಣಾಮಿ**] ದೀಕ್ಷಾ -ವಿಶೇಷ(ಭಗ)
ಪಾಣಾಲೀ. ಸ್ತ್ರೀ: [**ದೇ**] ಎರಡು ಕೈಗಳ ಹೊಡೆತ(ದೇ)
ಪ್ರಾಣಿ. ಪು: [**ಪ್ರಾಣಿನ್**] ಜೀವ, ಚೇತನ, ಆತ್ಮ(ಆಚಾ)

ಪಾಣಿ. ಪು: [ಪಾಣಿ] ಕೈ, ಹಸ್ತ(ಕುಮಾ). **–ಗಹಣ.** 'ಗ್ಗಹಣ' ಶಬ್ದವನ್ನು ನೋಡುವುದು. **–ಗ್ಗಹ.** ಪು: [–ಗ್ರಹ] ವಿವಾಹ. **–ಗ್ಗಹಣ.** ನ: [–ಗ್ರಹಣ] ಮದುವೆ, ವಿವಾಹ(ವಿಪಾ).

ಪಾಣಿಅ. ನ: [ಪಾನೀಯ] ನೀರು, ಜಲ, **ಧರಿಯಾ.** ಸ್ತ್ರೀ: [–ಧರಿಕಾ] ನೀರು ತುಂಬುವವಳು (ಣಾಯಾ). **–ಹಾರೀ.** ಸ್ತ್ರೀ: [–ಹಾರೀ] ನೀರು ತುಂಬುವವಳು. **'ಪಾಣೀಅ'** ಶಬ್ದವನ್ನು ನೋಡುವುದು

ಪಾಣಿಣಿ. ಪು: [ಪಾಣಿನಿ] ಪ್ರಸಿದ್ಧ ಸಂಸ್ಕೃತ ವ್ಯಾಕರಣಕಾರನಾದ ಋಷಿ

ಪಾಣಿಣೀಅ. ವಿ: [ಪಾಣಿನೀಯ] ಪಾಣಿನಿಗೆ ಸಂಬಂಧಿಸಿದ, ಪಾಣಿನಿಯ

ಪಾಣೀ. ಸ್ತ್ರೀ: [ಪಾನೀ] ಒಂದು ಬಗೆಯ ಬಳ್ಳಿ(ಪಣ್ಣ)

ಪಾಣೀಅ. **'ಪಾಣಿಅ'** ಶಬ್ದವನ್ನು ನೋಡುವುದು. **–ಧರೀ.** ಸ್ತ್ರೀ: [–ಧರೀ] ನೀರು ತುಂಬುವವಳು

ಪಾಣು. ಪುಂನ: [ಪ್ರಾಣ] ಪ್ರಾಣವಾಯು, ಶ್ವಾಸೋಚ್ಛ್ವಾಸ, ಸಮಯದ ಅಳತೆ

ಪಾತ}. **'ಪಾಯ=ಪಾತ್ರ'** ಶಬ್ದವನ್ನು ನೋಡುವುದು.

ಪಾದ}. **–ಬಂಧಣ.** ನ: [–ಬಂಧನ] ಪಾತ್ರೆಯನ್ನು ಕಟ್ಟುವ ಬಟ್ಟೆಯ ತುಣುಕು. ಜೈನ ಮುನಿಯ ಒಂದು ಉಪಕರಣ(ಪಣ್ಣ)

ಪಾದ. **'ಪಾಯ=ಪಾದ'** ಶಬ್ದವನ್ನು ನೋಡುವುದು. **–ಸಮ.** ವಿ: [–ಸಮ] ಗೇಯ –ವಿಶೇಷ(ಠಾ). **ಪಾದೋಟ್ಠಪಯ.** ನ: [ಪಾದೌಷ್ಠಪದ] ದೃಷ್ಟಿವಾದ ಎಂಬ ಹೆಸರಿನ ಹನ್ನೆರಡನೇ ಜೈನ ಆಗಮ ಗ್ರಂಥದ ಒಂದು ಪ್ರತಿಪಾದ್ಯ –ವಿಷಯ(ಸಮ)

ಪಾದು –. **'ಪಾಉಂ=ಪ್ರಾದುಸ್'** ಶಬ್ದವನ್ನು ನೋಡುವುದು

ಪಾದೋ. **'ಪಾಓ=ಪ್ರಾತಸ್'**ಶಬ್ದವನ್ನು ನೋಡುವುದು

ಪಾದೋಸಿಯ. ವಿ: [ಪ್ರಾದೋಷಿಕ] ಪ್ರದೋಷ ಕಾಲಕ್ಕೆ(ರಾತ್ರಿ ಮೊದಲ ಭಾಗ) ಸಂಬಂಧಿಸಿದ, ಪ್ರದೋಷ ಕಾಲದ(ಓಘ)

ಪಾದವ. **'ಪಾಯವ'** ಶಬ್ದವನ್ನು ನೋಡುವುದು

ಪಾಧನ್ನ. **'ಪಾಹನ್ನ'** ಶಬ್ದವನ್ನು ನೋಡುವುದು

ಪಾಧಾರ. ಸಕ: [ಸ್ವಾ +ಗಮ್, ಪಾದ+ ಧಾರಯ್] ಆಗಮಿಸು, ಬರು

ಪಾಬದ್ಧ. ವಿ: [ಪ್ರಾಬದ್ಧ] ವಿಶೇಷ ರೀತಿಯಲ್ಲಿ ಕಟ್ಟಲ್ಪಟ್ಟ, (ನಿಚೂ)

ಪಾಭಾಇಯ}. ವಿ:[ಪ್ರಾಭಾತಿಕ] ಪ್ರಭಾತಕ್ಕೆ

ಪಾಭಾತಿಯ}.ಸಂಬಂಧಿಸಿದ, ಉಷಃಕಾಲಕ್ಕೆ ಸಂಬಂಧಿಸಿದ

ಪಾವು. ಸಕ: [ಪ್ರ+ಆಪ್] ಪಡೆದುಕೊಳ್ಳು, ದೊರಕಿಸಿಕೊಳ್ಳು

ಪಾಮಣ್ಣ. ನ: [ಪ್ರಾಮಾಣ್ಯ] ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಅಗತ್ಯವಾದ ಸಾಕ್ಷ್ಯ, ರುಜುವಾತು

ಪಾಮದ್ದಾ. ಸ್ತ್ರೀ: [ದೇ] ಎರಡೂ ಕಾಲುಗಳಿಂದ ಧಾನ್ಯವನ್ನು ಮರ್ದಿಸುವುದು, ಉಜ್ಜುವುದು, ತುಳಿಯುವುದು(ದೇ)

ಪಾಮನ್ನ. **'ಪಾಮಣ್ಣ'** ಶಬ್ದವನ್ನು ನೋಡುವುದು

ಪಾಮರ. ಪು: [ಪಾಮರ] ಕೃಷಿಕ, ರೈತ(ಗಉಡ) ಕೆಳ ಜಾತಿಯ ಮನುಷ್ಯ, ಮೂರ್ಖ, ಅಜ್ಞ(ಗಾ)

ಪಾಮಾ. ಸ್ತ್ರೀ: [ಪಾಮಾ] ಕಜ್ಜಿ, ಚರ್ಮರೋಗ(ಸುಪಾ)

ಪಾಮಾಡ. ಪು: [ಪದ್ಮಾಟ] ತಗಟೆ ಗಿಡ

ಪಾಮಿಚ್ಚ. ನ: [ದೇ.ಅಪಮಿತ್ಯ] ಧರಿಸುವುದು, ಹಿಂತಿರುಗಿಸುವುದಾಗಿ ಮಾತುಕೊಟ್ಟು ಸ್ವೀಕರಿಸುವುದು, ಧರಿಸುವಂಥದು(ಆಚಾ)

ಪಾಮಿಚ್ಚ.ಸಕ: [ದೇ] ಧರಿಸು, ಧಾರಣಮಾಡು, ಗ್ರಹಿಸು

ಪಾಮಿಚ್ಚಿಯ. ವಿ: [ದೇ] ಧಾರಣ ಮಾಡಲ್ಪಟ್ಟ

ಪಾಮುಕ್ಕ.ವಿ: [ಪ್ರಮುಕ್ತ] ತ್ಯಜಿಸಲ್ಪಟ್ಟ, ಬಿಡಲ್ಪಟ್ಟ(ಪಾಅ)

ಪಾಮೂಲ. ನ: [ಪಾದಮೂಲ] ಪಾದದ ಮೂಲಭಾಗ, ಕಾಲಿನ ಅಡಿಯಾದ ಅಂಗಾಲು(ಪಉಮ).**'ಪಾಯಮೂಲ=ಪಾದಮೂಲ'** ಶಬ್ದವನ್ನು ನೋಡುವುದು

ಪಾಮೊಕ್ಖ. **'ಪಮುಹ=ಪ್ರಮುಖ'** ಶಬ್ದವನ್ನು ನೋಡುವುದು

ಪಾಮೊಕ್ಖ. ಪು: [ಪ್ರಮೋಕ್ಷ] ಮುಕ್ತಿ, ಬಿಡುಗಡೆ(ಉಪ)

ಪಾಯ. ಪು: [ದೇ] ರಥದ ಚಕ್ರ(ದೇ), ಸರ್ಪ, ಹಾವು(ಷಡ್)

ಪಾಯ. ಪು: [ಪಾಕ] ಬೇಯಿಸುವ ಕಾರ್ಯ, ಅಡುಗೆ, ಜೀರ್ಣ –ಕ್ರಿಯೆ(ಉಪ)

ಪಾಯ. ವಿ: [ಪಾಕ್ಯ] ಬೇಯಿಸಬೇಕಾದ, ಬೇಯಿಸಲ್ಪಡುವ

ಪಾಯ. 'ಪಾವ' ಶಬ್ದವನ್ನು ನೋಡುವುದು

ಪಾಯ. ಪು: [ಪಾತ] ಪತನ, ಕೆಳಗೆ ಬೀಳುವುದು, ಸಂಬಂಧ

ಪಾಯ. ಪು: [ಪಾಯ] ಪಾನ, ಕುಡಿಯುವುದು

ಪಾಯ. ಪು: [ಪಾದ] ಚರಣ, ಕಾಲು, ಗಮಿಸುವಿಕೆ, ನಡೆಯುವುದು, ಪದ್ಯದ ನಾಲ್ಕನೆಯ ಒಂದು ಭಾಗ(ಹೇ), ಕಿರಣ(ಪಾಅ), ಪರ್ವತದ ತಪ್ಪಲು, ಸಾನು ಪ್ರದೇಶ, ಒಂದು ಊಟದ ತಪಸ್ಸು,ಆರು ಅಂಗುಲದ ಒಂದು ಅಳತೆ, **-ಕಂಚಣಿಯಾ.** ಸ್ತ್ರೀ: [-ಕಾಂಚನಿಕಾ] ಕಾಲು ತೊಳೆಯಲು ಬಳಸುವ ಒಂದು ಬಂಗಾರದ ಪಾತ್ರೆ, **-ಕಂಬಲ.** ಪುಂನ: [-ಕಂಬಲ] ಕಾಲು ಒರೆಸುವ ಬಟ್ಟೆಯ ತುಣುಕು(ಉತ್ತ), **-ಕುಕ್ಕುಡ.** ಪುಂನ: [-ಕುಕ್ಕುಟ] ವಿಶೇಷ ಜಾತಿಯ ಕೋಳಿ(ಣಾಯಾ). **-ಘಾಯ.** ಪು: [-ಘಾತ] ಕಾಲಿನಿಂದ ಒದೆಯುವುದು. **-ಚಾರ.** ಪು: [-ಚಾರ] ಕಾಲು ನಡಿಗೆ(ಣಾಯಾ), **-ಚಾರಿ.** ವಿ: [-ಚಾರಿನ್] ಕಾಲ್ನಡಿಗೆಯ ಸಂಚಾರ ಮಾಡುವವನು(ಪಉಮ). **-ಜಾಲ, -ಜಾಲಗ.** ನ: [-ಜಾಲ, -ಕ] ಕಾಲಿನ ಆಭರಣ -ವಿಶೇಷ (ಔಪ). **-ತ್ತಾಣ.** ನ: [-ತ್ರಾಣ] ಚಪ್ಪಲಿ, ಪಾದ ರಕ್ಷೆ. **-ಪಲಂಬ.** ಪು: [-ಪ್ರಲಂಬ] ಕಾಲಿನ ವರೆಗೂ ನೇತಾಡುವ ಒಂದು ಆಭರಣ. **-ಪೀಢ.** '-ವೀಢ' ಶಬ್ದವನ್ನು, ನೋಡುವುದು (ಮಹಾ). **-ಪುಂಛಣ.** ನ: [-ಪೋಂಛನ] ರಜೋಹರಣ: ಜೈನ ಸಾಧುವಿನ ಒಂದು ಉಪಕರಣ(ಉವಾ). **-ಪ್ಪಡಣ.** ನ: [-ಪತನ] ಕಾಲಿಗೆ ಬೀಳುವುದು, ನಮಸ್ಕಾರದ ಒಂದು ಕ್ರಮ. **-ಮೂಲ.** ನ: [-ಮೂಲ]' -ಪಾಮೂಲ' ಶಬ್ದವನ್ನು ನೋಡುವುದು. ಮನುಷ್ಯರ ಒಂದು ಸಾಧಾರಣ ಜಾತಿ. ನರ್ತಕರ ಒಂದು ಜಾತಿ. **-ಲೇಹಣಿಆ.** ಸ್ತ್ರೀ: [-ಲೇಖನಿಕಾ] ಪಾದಗಳನ್ನು ಒರೆಸಿಕೊಳ್ಳುವ ಸಲುವಾಗಿ ಜೈನ ಸಾಧುಗಳು ಬಳಸುವ ಒಂದು ಮರದ ಉಪಕರಣ(ಓಘ). **-ವಂದಯ.** ವಿ: [-ವಂದಕ] ಕಾಲ ಮೇಲೆ ಬಿದ್ದು ನಮಸ್ಕರಿಸುವವನು (ಣಾಯಾ). **-ವಡಣ.** ನ: [-ಪತನ] ಕಾಲಿಗೆ ಬಿದ್ದು ನಮಸ್ಕರಿಸುವುದು. **-ವಡಿಯಾ.** ಸ್ತ್ರೀ: [ವೃತ್ತಿ] ಪಾದ ಸ್ಪರ್ಶಿಸುವುದು, ಕಾಲಿಗೆ ಬೀಳುವುದು. **-ವಿಹಾರ.** ಪು: [-ವಿಹಾರ] ಕಾಲ್ನಡಿಗೆ. **ವೀಢ.** ನ: [-ಪೀಠ] ಪಾದಗಳನ್ನು ಇರಿಸುವ ಆಸನ. **-ಸೀಸಗ.** ನ: [-ಶೀರ್ಷಕ] ಪಾದದ ಮೇಲ್ಭಾಗ. ಪಾಯಾಉಲಅ. ನ: [ಪಾದಾಕುಲಕ] ಒಂದು ಛಂದಸ್ಸು.

ಪಾಯ. 'ಪತ್ತ=ಪಾತ್ರ' ಶಬ್ದವನ್ನು ನೋಡುವುದು (ಆಚಾ). **-ಕೇಸರಿಆ.** ಸ್ತ್ರೀ: [-ಕೇಸರಿಕಾ] ಜೈನ ಸಾಧುಗಳು ಪಾತ್ರೆಯನ್ನು ಒರೆಸಲು ಬಳಸುವ ಬಟ್ಟೆ(ಓಘ). **-ಟ್ಠವಣ, -ಠವಣ.** ನ: [-ಸ್ಥಾಪನ] ಪಾತ್ರೆಯನ್ನು ಇಟ್ಟುಕೊಳ್ಳಲು ಜೈನ ಮುನಿಗಳು ಬಳಸುವ ಉಪಕರಣವಾದ ಬಟ್ಟೆಯ ತುಣುಕು(ವಿಸೇ). **-ಣಿಜ್ಜೋಗ, -ನಿಜ್ಜೋಗ.** ಪು: [-ನಿರ್ಯೋಗ] ಪಾತ್ರೆ, ಪಾತ್ರೆಗಳ -ಬಂಧ, ಪಾತ್ರೆಯ ಕಾಷಾಯ ವಸ್ತ್ರ, ರಜಸ್ತ್ರಾಣ ಮತ್ತು ಗೊಂಚಲು ಎಂಬ ಜೈನ ಸಾಧುಗಳ ಉಪಕರಣ -ಸಮೂಹ(ಪಿಂಡ). **-ಪಡಿಮಾ.** ಸ್ತ್ರೀ: [-ಪ್ರತಿಮಾ] ಪಾತ್ರೆಗೆ ಸಂಬಂಧಿಸಿದ ಒಂದು ಪ್ರತಿಜ್ಞಾ ವಿಶೇಷ. **'ಪಾದ=ಪಾತ್ರ'** ಶಬ್ದವನ್ನು ನೋಡುವುದು

ಪಾಯ(ಅಪ). **'ಪತ್ತ=ಪ್ರಾಪ್ತ'** ಶಬ್ದವನ್ನು ನೋಡುವುದು

ಪಾಯ-. ಅ: [ಪ್ರಾಯಸ್] ಪ್ರಾಯಶಃ,ಬಹುಮಟ್ಟಿಗೆ

-ಪಾಯ. ಪು.ಬ: [-ಪಾದ] ಪೂಜ್ಯ

ಪಾಯಏ. **'ಪಾ=ಪಾ'** ಶಬ್ದವನ್ನು ನೋಡುವುದು

ಪಾಯಂ. **'ಪಾಯ -'** ಶಬ್ದವನ್ನು ನೋಡುವುದು

ಪಾಯಂ. ಅ: [ಪ್ರಾತಸ್] ಬೆಳಿಗ್ಗೆ,ಪ್ರಾತಃಕಾಲ(ಸೂಅ)

ಪಾಯಂಗುಟ್ಠ. ಪು: [ಪಾದಾಂಗುಷ್ಠ] ಕಾಲುಂಗುರ

ಪಾಯಂಜಲಿ. ಪು: [ಪಾತಂಜಲ] ಪತಂಜಲಿ ರಚಿಸಿದ ಶಾಸ್ತ್ರವಾದ **'ಯೋಗ -ಸೂತ್ರ'**

ಪಾಯಂತ. ನ: [ಪಾದಾಂತ] ಗೀತದ ಒಂದು ಪ್ರಭೇದ, ಪಾದ-ವೃದ್ಧ ಗೀತೆ

ಪಾಯಂದುಯ. ಪು: [ಪಾದಾಂದುಕ] ಕಾಲುಗಳನ್ನು ಕಟ್ಟಿಹಾಕುವ ಮರದ ಉಪಕರಣ.

ಪಾಯಕ. **'ಪಾಯುಂಯು=ಪಾತಕ'** ಶಬ್ದವನ್ನು ನೋಡುವುದು

ಪಾಯಕ್ಕ. **'ಪಾಇಕ್ಕ'** ಶಬ್ದವನ್ನು ನೋಡುವುದು

ಪಾಯಕ್ಖಿಣ್ಣ. ನ: [ಪ್ರಾದಕ್ಷಿಣ್ಯ] ಪ್ರದಕ್ಷಿಣೆ

ಪಾಯಗ. ನ: [ಪಾತಕ] ಪಾಪ.

ಪಾಯಚ್ಛಿತ್ತ. ಪುಂನ: [ಪ್ರಾಯಶ್ಚಿತ್ತ] ಪಾಪ ಪರಿಹಾರಕ್ಕಾಗಿ ಮಡುವ ಕರ್ಮ(ಉವಾ)
ಪಾಯಡ. '**ಪಾಗಡ=ಪ್ರ +ಕಟಯ್**' ಶಬ್ದವನ್ನು ನೋಡುವುದು. ವ. ಕೃ – '**ಪಾಯಡಂತ**]
ಪಾಯಡ. ನ: [ದೇ] ಅಂಗಳ
ಪಾಯಡ. '**ಪಾಗಡ=ಪ್ರಕಟ**' ಶಬ್ದವನ್ನು ನೋಡುವುದು
ಪಾಯಡ. '**ಪಾಗಡ=ಪ್ರಾಕೃತ**' ಶಬ್ದವನ್ನು ನೋಡುವುದು
ಪಾಯಡ. ವಿ: [ಪ್ರಾವೃತ] ಆವರಿಸಲ್ಪಟ್ಟ, ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ(ವಿಸೇ)
ಪಾಯಡಿಅ. ವಿ: [ಪ್ರಕಟಿತ] ವ್ಯಕ್ತಪಡಿಸಲಾದ,
ಪಾಯಡಿಲ್ಲ. ವಿ: [ಪ್ರಕಟ] ತೆರೆದ(ವಜ್ಜಾ)
ಪಾಯಣ. ನ: [ಪಾಯನ] ಕುಡಿಸುವುದು,
ಪಾಯತ್ತ. ನ: [ಪಾದಾತ] ಪದಾತಿ –ಸಮೂಹ, ಕಾಲ್ದಳ. **ಪಾಯತ್ತಾಣಿಯ.** ನ: [ಪಾದಾತಾನೀಕ] ಪದಾತಿ ಸೈನ್ಯ.
ಪಾಯಪುಂಛಣ. ನ: [ಪಾದಪುಂಛನ] ಮಣ್ಣಿನ ಪಾತ್ರೆ
ಪಾಯಪ್ಪಹಣ. ಪು: [ದೇ] ಕೋಳಿ, ಕುಕ್ಕುಟ(ದೇ)
ಪಾಯಯ. ನ: [ಪಾತಕ] ಪಾಪ
ಪಾಯಯ. '**ಪಾವ=ಪಾಪ**' ಶಬ್ದವನ್ನು ನೋಡುವುದು
ಪಾಯಯ. '**ಪಾಗಯ**' ಶಬ್ದವನ್ನು ನೋಡುವುದು(ಹೇ)
ಪಾಯಯ. '**ಪಾಯವ**' ಶಬ್ದವನ್ನು ನೋಡುವುದು
ಪಾಯವ. '**ಪಾಯುವ=ಪಾವಕ**' ಶಬ್ದವನ್ನು ನೋಡುವುದು(ಅಭಿ)
ಪಾಯಯ. '**ಪಾಯ=ಪಾದ**' ಶಬ್ದವನ್ನು ನೋಡುವುದು
ಪಾಯರಾಸ. ಪು: [ಪ್ರಾತರಾಶ] ಪ್ರಾತಃಕಾಲದ ಭೋಜನ, ನೀರು ಕುಡಿಯುವುದು, ಜಲಪಾನ
ಪಾಯಲ. ನ: [ದೇ] ಕಣ್ಣು
ಪಾಯವ. ಪು: [ಪಾದಪ] ಮರ, ವೃಕ್ಷ(ಪಾಅ)
ಪಾಯವ್ವ. '**ಪಾ –ಪಾ**' ಶಬ್ದವನ್ನು ನೋಡುವುದು
ಪಾಯಸ. ಪುಂನ: [ಪಾಯಸ] ಖೀರು, ಪಾಯಸ.
ಪಾಯುಸೋ. ಅ: [ಪ್ರಾಯುಶಸ್] ಪ್ರಾಯುಶಃ, ಬಹುಶ:(ಉಪ)
ಪಾಯರ. ಪು: [ಪ್ರಾಕಾರ] ಕೋಟೆ, ದುರ್ಗ(ಪಾಅ)
ಪಾಯಾಲ. ನ: [ಪಾತಾಲ] ಅಧೋಲೋಕ, ಕೆಳಗಿನ ಲೋಕ, ರಸಾತಳ. **–ಕಲಶ.** ಪು: [–ಕಲಶ] ಸಮುದ್ರದ ಮಧ್ಯದಲ್ಲಿರುವ ಕಲಶಾಕಾರದ ವಸ್ತು(ಅಣು). **–ಪುರ.** ನ: [–ಪುರ] ನಗರ – ವಿಶೇಷ, **–ಮಂದಿರ.** ನ: [–ಮಂದಿರ] ಪಾತಾಳದಲ್ಲಿರುವ ಮನೆ. **–ಹರ.** ನ: [ಗೃಹ] ಅದೇ ಅರ್ಥ.
ಪಾಯಾಲ. ನ: [ಪಾದದಲ] ಪದಾತಿಸೈನ್ಯ,ಕಾಲಾಳು
ಪಾಯಾಲಂಕಾಪುರ. ನ: [ಪಾತಾಲಲಂಕಾಪುರ] ರಾವಣನ ರಾಜಧಾನಿಯದ ಪಾತಾಳ ಲಂಕೆ (ಪಉಮ)
ಪಾಯಾವಚ್ಚ. ನ: [ಪ್ರಾಜಾಪತ್ಯ] ಅಹೋರಾತ್ರದ ಹದಿನಾಲ್ಕನೇ ಮುಹೂರ್ತ(ಸಮ)
ಪಾಯಾವಿಯ. ವಿ: [ಪಾಯಿತ] ಕುಡಿಸಲ್ಪಟ್ಟ(ಪಉಮ)
ಪಾಯಾಹಿಣ. ನ: [ಪ್ರಾದಕ್ಷಿಣ್ಯ] ಸುತ್ತುವರಿಯುವುದು, ಆವರಣ, ದಕ್ಷಿಣದ ಕಡೆಗೆ
ಪಾಯಾಹಿಣಾ. '**ಪಯಾಹಿಣಾ**' ಶಬ್ದವನ್ನು ನೋಡುವುದು(ಉತ್ತ)
ಪಾರ. ಅಕ: [ಶಕ್] ಸಮರ್ಥನಾಗು. ವ. ಕೃ –'**ಪಾರಂತ**'
ಪಾರ. ಸಕ: [ಪಾರಯ್] ದಡ ಮುಟ್ಟು, ಪೂರ್ಣಗೊಳಿಸು. – '**ಪಾರೇಇ**'
ಪಾರ. ಪುಂನ: [ಪಾರ] ದಡ, ತಟ(ಆಚಾ), ಪರಲೋಕ, ಮುಂದಿನ ಜನ್ಮ, ಮನುಷ್ಯ ಲೋಕಕ್ಕಿಂತ ಭಿನ್ನವಾದ ನರಕವೇ ಮೊದಲಾದವು(ಸೂಅ), ಮೋಕ್ಷ, ಮುಕ್ತಿ, ನಿರ್ವಾಣ. **–ಗ.** ವಿ: [–ಗ] ದಡವನ್ನು ಸೇರುವವನು(ಔಪ). **–ಗಯ.** ವಿ: [–ಗತ] ದಡ ತಲುಪಿದ. ಪು: ತೀರ್ಥಂಕರ, ಜಿನ. **–ಗಾಮಿ.** ವಿ: [–ಗಾಮಿನ್] ದಡ ಸೇರುವವನು(ಆಚಾ). **–ಪಾಣಗ.** ನ: [–ಪಾನಕ] ಕುಡಿಯಬಹುದಾದ ದ್ರವ್ಯ –ವಿಶೇಷ, **–ವಿಉ.** ವಿ: [–ವಿದ] ದಡವನ್ನು ಬಲ್ಲವನು(ಸೂಅ). **ಪಾರಾಭೋಯ.** ವಿ: [ಪಾರಾಭೋಗ] ಪಾರವನ್ನು ತಲುಪಿದವನು (ಕಪ್ಪ)
ಪಾರ. '**ಪಾಯಾರ**' ಶಬ್ದವನ್ನು ನೋಡುವುದು
ಪಾರಂಕ. ನ: [ದೇ] ಮದ್ಯವನ್ನಳೆಯುವ ಪಾತ್ರೆ.
ಪಾರಂಗಮ. ವಿ: [ಪಾರಗಮ] ದಡದತ್ತ ಹೋಗುವವನು, ಪಾರದತ್ತ ನಡಿಗೆ
ಪಾರಂಗಯ. ವಿ; [ಪಾರಂಗತ] ದಡ ಮುಟ್ಟಿದವನು
ಪಾರಂಚಿ.} ವಿ: [ಪಾರಾಂಚಿ] ಸರ್ವೋತ್ಕೃಷ್ಟವಾದ
ಪಾರಂಚಿಯ}. ನ: [ಪಾರಾಂಚಿಕ] ಪ್ರಾಯಶ್ಚಿತ್ತ, ವಿಶೇಷ

ತಪಸ್ಸಿನಿಂದ ನಿಯುಮೋಲ್ಲಂಘನೆಯಿಂದ ಪಾರಾಗುವುದು(ತಾ). ವಿ: ಸರ್ವೋತ್ಕೃಷ್ಟ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು
ಪಾರಂಪಜ್ಜ}. ನ: [ಪಾರಂಪರ್ಯ] ಪರಂಪರೆ
ಪಾರಂಪರ}.(ರಂಭಾ)
ಪಾರಂಪರ. ಪು: [ದೇ] ರಾಕ್ಷಸ(ದೇ)
ಪಾರಂಪರಿಯ. ವಿ: [ಪಾರಂಪರಿಕ] ಪರಂಪರೆಯಿಂದ ನಡೆದುಕೊಂಡು ಬಂದಿರುವ(ಉಪ)
ಪಾರಂಭ. ಸಕ: [ಪ್ರಾ +ರಭ್] ಪ್ರಾರಂಭಿಸು, ಹಿಂಸಿಸು, ಹೊಡೆ, ಪೀಡಿಸು
ಪಾರಂಭ. ಪು: [ಪ್ರಾರಂಭ] ಶುರು, ಆರಂಬ(ವಿಸೇ)
ಪಾರಂಭಿಯ. ವಿ: [ಪ್ರಾರಬ್ಧ] ಆರಂಭವಾದ, ಶುರುವಾದ (ಧರ್ಮವಿ)
ಪಾರಕ್ಕಿಅ. **'ಪಾರಕ್ಕ'** ಶಬ್ದವನ್ನು ನೋಡುವುದು
ಪಾರಕೇರ}. ವಿ: [ಪರಕೀಯ] ಪರರ,
ಪಾರಕ್ಕ}. ಬೇರೊಬ್ಬರ(ಹೇ)
ಪಾರಜ್ಝಮಾಣ. **'ಪಾರಂಭ=ಪ್ರಾ +ರಭ್'** ಶಬ್ದವನ್ನು ನೋಡುವುದು
ಪಾರಣ.} ನ: [ಪಾರಣ, –ಕ] ವ್ರತದ ಎರಡನೇ
ಪಾರಣಗ}. ದಿನದ ಭೋಜನ, ತಪಸ್ಸು ಮುಗಿದ
ಪಾರಣಯ}.ಮೇಲಿನ ನಂತರದ ಭೋಜನ(ಉವಾ)
ಪಾರಣಾ. ಸ್ತ್ರೀ: [ಪಾರಣಾ] ಮೇಲಿನ ಶಬ್ದವನ್ನು ನೋಡುವುದು. –ಇತ್ತ. ವಿ: [–ವತ್] ಪಾರಣೆ ಮಾಡಬೇಕಿರುವವನು
ಪಾರತಂತ. ನ: [ಪಾರತಂತ್ರ್ಯ] ಪರತಂತ್ರತೆ, ಇನ್ನೊಬ್ಬರ ಅಧೀನದಲ್ಲಿರುವುದು(ಉಪ)
ಪಾರತ್ತ. ಅ: [ಪರತ್ರ] ಪರಲೋಕದಲ್ಲಿ, ಮುಂದಿನ ಜನ್ಮದಲ್ಲಿ
ಪಾರತ್ತ. ಅ: [ಪಾರತ್ರ, ಪಾರತ್ರಿಕ] ಪಾರಲೌಕಿಕ, ಪರಲೋಕಕ್ಕೆ ಸಂಬಂಧಿಸಿದ
ಪಾರತ್ತಿ. ಸ್ತ್ರೀ: [ದೇ] ಒಂದು ಬಗೆಯ ಹೂವು
ಪಾರತ್ತಿಯ. ವಿ: [ಪಾರತ್ರಿಕ] **'ಪಾರತ್ತ=ಪಾರತ್ರ'** ಶಬ್ದವನ್ನು ನೋಡುವುದು
ಪಾರದಾರಿಯ. ವಿ: [ಪಾರದಾರಿಕ] ಪರಸ್ತ್ರೀ ಲಂಪಟ (ಣಾಯಾ)
ಪಾರದ್ಧ. ವಿ: [ಪ್ರಾರಬ್ಧ] ಆಗಲೇ ಆರಂಭಿಸಲ್ಪಟ್ಟ, ಪ್ರಾರಂಭವಾಗಿರುವ
ಪಾರದ್ಧ. ನ: [ದೇ] ಹಿಂದೆ ಮಾಡಿದ ಕರ್ಮದ ಪರಿಣಾಮ, ಪ್ರಾರಬ್ಧ, ವಿ: ಬೇಟೆಗಾರ, ಬೇಟೆ, ಪೀಡಿಸಲ್ಪಟ್ಟ
ಪಾರದ್ಧಿ. ಸ್ತ್ರೀ: [ಪಾಪರ್ದ್ಧಿ] ಬೇಟೆ, ಪಾಪವು ಹೆಚ್ಚುವಿಕೆ.
ಪಾರದ್ಧಿಅ. ವಿ: [ಪಾಪರ್ದ್ಧಿಕ] ಬೇಟೆಗಾರ(ಸುಪಾ)
ಪಾರಮಿಯಾ. ಸ್ತ್ರೀ: [ಪಾರಮಿತಾ] ಬೌದ್ಧಶಾಸ್ತ್ರದಲ್ಲಿ ಹೇಳಿರುವ ಪ್ರಾಣಾತಿಪಾತ–ವಿರಮಣವೇ ಮೊದಲಾದ ಶಿಕ್ಷಾ ವ್ರತಗಳು, ಅಹಿಂಸೆಯೇ ಮೊದಲಾದ ವ್ರತ
ಪಾರಮ್ಮ. ನ: [ಪಾರಮ್ಯ] ಉತ್ಕೃಷ್ಟತೆ, ಶ್ರೇಷ್ಠತೆ
ಪಾರಯ. ವಿ: [ಪಾರಗ] ಸಮರ್ಥ
ಪಾರಯ. ಸಮರ್ಥ, **'ಪಾರಗ'** ಶಬ್ದವನ್ನುನೋಡುವುದು
ಪಾರಯ. ಪು: [ಪಾರದ] ಪಾದರಸ, ರಸಧಾತು. **–ಮದ್ದಣ.** ನ: [–ಮರ್ದನ] ಆಯುರ್ವೇದದಲ್ಲಿ ಹೇಳಿರುವಂತೆ ಪಾದರಸವನ್ನು ಮರ್ದಿಸುವುದು, ಒಂದು ರಸಾಯನ–ವಿಶೇಷ. ವಿ: ದಡವನ್ನು ತಲುಪಿದವನು
ಪಾರಯ. ನ: [ದೇ] ಹೆಂಡದ ಪಾತ್ರೆ(ದೇ)
ಪಾರಯ. **'ಪಾರ–ಗ'** ಶಬ್ದವನ್ನು ನೋಡುವುದು
ಪಾರಯ. ಪು: [ಪ್ರಾವಾರಕ] ಬಟ್ಟೆ, ವಸ್ತ್ರ. ವಿ: ಹೊದಿಸುವ, ಮರೆಮಾಡುವ
ಪಾರಲೋಇಅ. ವಿ: [ಪಾರಲೌಕಿಕ] ಪರಲೋಕಕ್ಕೆ ಸಂಬಂಧಿಸಿದ, ಮುಂದಿನ ಜನ್ಮಕ್ಕೆ ಸಂಬಂಧಿಸಿದ (ಪಣ್ಣ)
ಪಾರವಸ್ಸ. ನ: [ಪಾರವಶ್ಯ] ಪರಾಧೀನತೆ, ಪರತಂತ್ರತೆ
ಪಾರಸ. ಪು: [ಪಾರಸ] ಒಂದು ಅನಾರ್ಯ ದೇಶ, ಪರ್ಶಿಯು, ಇರಾನ್ ದೇಶ. ಸ್ಪರ್ಶದಿಂದ ಲೋಹವನ್ನು ಚಿನ್ನದ್ದನ್ನಾಗಿ ಮಾಡುವ ಸ್ಪರ್ಶಮಣಿ, ಪರ್ಶಿಯಾ ದೇಶದಲ್ಲಿ ವಾಸಿಸುವ ಮನುಷ್ಯ ಜಾತಿ. **–ಉಲ.** ನ: [**–ಕುಲ**] ಇರಾನ್ ದೇಶ, ಇರಾನಿನ ನಿವಾಸಿ(ಪಉಮ). **–ಕೂಲ.** ನ: [**–ಕೂಲ**] ಇರಾನಿನ ದಡ. ಇರಾನಿನ ಎಲ್ಲೆ.
ಪಾರಸಿಯ. ವಿ: [ಪಾರಸಿಕ] ಪರ್ಶಿಯಾ ದೇಶದ
ಪಾರಸೀ. ಸ್ತ್ರೀ: [ಪಾರಸೀ] ಪರ್ಶಿಯಾ ದೇಶದ ಮಹಿಳೆ(ಔಪ). ಫಾರ್ಸಿ ಲಿಪಿ.(ವಿಸೇ)
ಪಾರಸೀಅ. ವಿ: [ಪಾರಸೀಕ] ಪರ್ಶಿಯಾ ದೇಶದ ನಿವಾಸಿ(ಗಉಡ)

ಪಾರಾಈ. ಸ್ತ್ರೀ: [ದೇ] ಕಬ್ಬಿಣದ ದಂಡಾಕಾರದ ಚಿಕ್ಕ ವಸ್ತು(ಪಣ್ಣ)
ಪಾರಾಯ. 'ಪಾರಾವಯ' ಶಬ್ದವನ್ನು ನೋಡುವುದು
ಪಾರಾಯಣ. ನ: [ಪಾರಾಯಣ] ದಡವನ್ನು ತಲುಪುವುದು, ಪುರಾಣ –ವಾಚನ(ಸುಖ)
ಪಾರಾವಯ. 'ಪಾರೇವಯ' ಶಬ್ದವನ್ನು ನೋಡುವುದು
ಪಾರಾವರ. ಪು: [ದೇ] ಗವಾಕ್ಷ, ಕಿಟಕಿ(ದೇ)
ಪಾರಾವಾರ. ಪು: [ಪಾರಾವಾರ] ಸಮುದ್ರ, ಸಾಗರ
ಪಾರಾವಿಅ. ವಿ: [ಪಾರಿತ] ಯಾವುದನ್ನು ಸಮಾಪ್ತಗೊಳಿಸಲಾಗಿದೆಯೋ ಅದು, ಪಾರಣೆ ಮಾಡಲಾಗಿರುವ.
ಪಾರಾಸರ. ಪು: [ಪಾರಾಶರ] ಪರಾಶರ ಮಹರ್ಷಿಯ ಪುತ್ರ ವೇದವ್ಯಾಸ, ನ: ವಶಿಷ್ಠ ಗೋತ್ರದ ಒಂದು ಶಾಖೆಯಾದ ಪರಾಶರ ಗೋತ್ರ, ಆ ಗೋತ್ರದಲ್ಲಿ ಹುಟ್ಟಿದ(ತಾ). ಪು: ಭಿಕ್ಷುಕ, ಕರ್ಮ ತ್ಯಾಗ ಮಾಡಿದ ಸಂನ್ಯಾಸಿ(ಸುಖ)
ಪಾರಿಓಸಿಯ. ವಿ: [ಪಾರಿತೋಷಿಕ] ಸಂತೋಷ –ಸೂಚಕವಾದ ದಾನ, ಪುರಸ್ಕಾರ, ಸಂತಸವುಂಟು ಮಾಡುವಂಥ ದಾನ(ಸುರ)
ಪಾರಿಚ್ಛಾ. 'ಪರಿಚ್ಛಾ'ಶಬ್ದವನ್ನುನೋಡುವುದು (ಉಪ)
ಪಾರಿಚ್ಛೆಜ್ಜ. 'ಪರಿಚ್ಛೆಜ್ಜ' ಶಬ್ದವನ್ನು ನೋಡುವುದು
ಪಾರಿಜಾಯ. 'ಪಾರಿಯ=ಪಾರಿಜಾತ' ಶಬ್ದವನ್ನು ನೋಡುವುದು
ಪಾರಿಟ್ಠಾವಣಿಯಾ. ಸ್ತ್ರೀ: [ಪಾರಿಷ್ಠಾಪನಿಕೀ] ಸಮಿತಿ –ವಿಶೇಷ, ಮಲಾದಿಗಳ ಉತ್ಸರ್ಗದಲ್ಲಿ ಸಮ್ಯಕ್ ಪ್ರವೃತ್ತಿ(ಔಪ)
ಪಾರಿಡಿ. ಸ್ತ್ರೀ: [ಪ್ರಾವೃತಿ] ವಸ್ತ್ರ, ಬಟ್ಟೆ(ಗಾ)
ಪಾರಿಣಾಮಿಅ. 'ಪರಿಣಾಮಿಅ=ಪಾರಿಣಾಮಿಕ' ಶಬ್ದವನ್ನು ನೋಡುವುದು(ಅಣು)
ಪಾರಿಣಾಮಿಅ}. 'ಪರಿಣಾಮಿಆ' ಶಬ್ದವನ್ನು
ಪಾರಿಣಾಮಿಗೀ}. ನೋಡುವುದು(ಆವ)
ಪಾರಿತಾವಣಿಯಾ. ಸ್ತ್ರೀ: [ಪಾರಿತಾಪನಿಕೀ] ಬೇರೆಯವರಿಗೆ ದುಃಖ(=ಪರಿತಾಪ) ವನ್ನುಂಟುಮಾಡುವುದರಿಂದ ಉಂಟಾಗುವ ಕರ್ಮಬಂಧ
ಪಾರಿತಾವಣೀ. ಸ್ತ್ರೀ: [ಪಾರಿತಾಪನೀ] ಮೇಲಿನ ಶಬ್ದವನ್ನು ನೋಡುವುದು

ಪಾರಿತೋಸಿಅ. 'ಪಾರಿಓಸಿಯ' ಶಬ್ದವನ್ನು ನೋಡುವುದು
ಪಾರಿತ್ತ. 'ಪಾರತ್ತ=ಪರತ್ರ' ಶಬ್ದವನ್ನು ನೋಡುವುದು
ಪಾರಿಪ್ಪವ. ಪು: [ಪಾರಿಪ್ಲವ] ನೀರಿನ ಮೇಲೆ ಸಂಚರಿಸುವ ಹಕ್ಕಿ(ಪಣ್ಣ)
ಪಾರಿಭದ್ದ. ಪು: [ಪಾರಿಭದ್ರ] ಪಾರಿಜಾತ(=ಮಂದಾರ) ವೃಕ್ಷ, ದೇವದಾರು ವೃಕ್ಷ
ಪಾರಿಯ. ವಿ: [ಪಾರಿತ]ಪೂರ್ಣಗೊಳಿಸಲಾದ (ರಯಣ)
ಪಾರಿಯ. ಪು: [ಪಾರಿಜಾತ] ದೇವ ತರು, ಮಂದಾರ ವೃಕ್ಷ, ಕಲ್ಪ –ತರು, ಮರ, ಕೆಂಪು ಬಣ್ಣದ ಅದರ ಅತ್ಯಂತ ಸುಂದರ ಹೂವು(ಭವಿ)
ಪಾರಿಯತ್ತ. ಪು: [ಪಾರಿಯಾತ್ರ] ದೇಶ –ವಿಶೇಷ
ಪಾರಿಯಲ್ಲ. ನ: [ದೇ. ಪರಿವರ್ತ] ಚಕ್ರದ ಹಿಂಭಾಗದ ಬಾಹ್ಯ ಪರಿಧಿ
ಪಾರಿಯಾಯ. 'ಪಾರಿಯ=ಪಾರಿಜಾತ' ಶಬ್ದವನ್ನು ನೋಡುವುದು(ಸುಪಾ)
ಪಾರಿಯಾವಣಿಯಾ. 'ಪಾರಿತಾವಣಿಯಾ' ಶಬ್ದವನ್ನು ನೋಡುವುದು(ತಾ)
ಪಾರಿಯಾವಣಿಯಾ. 'ಪರಿಯಾವಣಿಯಾ' ಶಬ್ದವನ್ನು ನೋಡುವುದು
ಪಾರಿಯಾಸಿಯ. ವಿ: [ಪಾರಿವಾಸಿತ] ಹಳಸುವಂತೆ ಇಟ್ಟಿರುವ
ಪಾರಿವ್ವಜ್ಜ. ನ: [ಪಾರಿವ್ರಾಜ್ಯ] ಸಂನ್ಯಾಸ
ಪಾರಿವ್ವಾಈ. ಸ್ತ್ರೀ: [ಪಾರಿವ್ರಾಜೀ, ಪರಿವ್ರಾಜಿಕಾ] ಸಂನ್ಯಾಸಿನಿ.
ಪಾರಿಸಜ್ಜ.ವಿ:[ಪಾರಿಷದ್ಯ] ಸಭ್ಯ, ಸಭಾಸದ(ಧರ್ಮವಿ)
ಪಾರಿಸಾಡಣಿಯಾ. ಸ್ತ್ರೀ: [ಪಾರಿಶಾಟನಿಕೀ] ಪರಿತ್ಯಾಗದಿಂದ ಉಂಟಾಗುವ ಕರ್ಮ ಬಂಧ
ಪಾರಿಹಚ್ಛೀ. ಸ್ತ್ರೀ: [ದೇ] ಹಾರ, ಮಾಲೆ(ದೇ)
ಪಾರಿಹಟ್ಟೀ. ಸ್ತ್ರೀ: [ದೇ] ಪ್ರತೀಹಾರಿ, ಬಾಗಿಲು ಕಾಯುವವಳು, ಆಕರ್ಷಣೆ, ಬಹಳ ಕಾಲದ ನಂತರ ಈದ(ಕರುಹಾಕಿದ) ಎಮ್ಮೆ.
ಪಾರಿಹತ್ಥಿಪ. ವಿ: [ಪಾರಿಹಸ್ತಿಕ] ಸ್ವಭಾವದಿಂದ ಬುದ್ಧಿವಂತನಾದ, ನಿಪುಣನಾದ(ತಾ)
ಪಾರಿಹಾರಿಯ. ವಿ: [ಪಾರಿಹಾರಿಕ] ಪರಿಹಾರವೆಂಬ ವ್ರತ ಆಚರಿಸುವ ತಪಸ್ವಿ –ವಿಶೇಷ

ಪಾರಿಹಾಸಯ. ನ: [ಪಾರಿಹಾಸಕ] ಜೈನ ಮುನಿಗಳಲ್ಲಿ ಒಂದು ಕುಲದ ಹೆಸರು.
ಪಾರೀ. ಸ್ತ್ರೀ: [ದೇ] ಹಾಲು ಕರೆಯುವ ಪಾತ್ರೆ (ಗಲುಡ)
ಪಾರೀಣ. ವಿ: [ಪಾರೀಣ] ದಡವನ್ನು ಮುಟ್ಟುವ, ಕೊನೆಮುಟ್ಟುವ
ಪಾರುಅಗ್ಗ. ಪು: [ದೇ] ವಿಶ್ರಾಂತಿ, ವಿರಾಮ(ದೇ)
ಪಾರುಅಲ್ಲ. ಪು: [ದೇ] ಅವಲಕ್ಕಿ(ದೇ)
ಪಾರುಸಿಯ. **'ಫಾರುಸಿಯ'** ಶಬ್ದವನ್ನು ನೋಡುವುದು (ಆಚಾ)
ಪಾರುಹಲ್ಲ. ವಿ: [ದೇ] ಸಾಲಾಗಿ ಜೋಡಿಸಲಾದ
ಪಾರೇವಈ. ಸ್ತ್ರೀ: [ಪಾರಾಪತೀ] ಹೆಣ್ಣು ಪಾರಿವಾಳ (ವಿಪಾ)
ಪಾರೇವಯ. ಪು: [ಪಾರಾಪತ] ಪಾರಿವಾಳ ಪಕ್ಷಿ (ಕುಮಾ). ವೃಕ್ಷ –ವಿಶೇಷ, ನ: ಫಲ –ವಿಶೇಷ
ಪಾರೊಕ್ಖ. ವಿ: [ಪಾರೋಕ್ಷ] ಪರೋಕ್ಷ ವಿಷಯಕ್ಕೆ ಸಂಬಂಧಿಸಿದ
ಪಾರೋಹ. **'ಪರೋಹ'** ಶಬ್ದವನ್ನು ನೋಡುವುದು
ಪಾರೋಹಿ. ವಿ: [ಪ್ರರೋಹಿನ್] ಮೊಳಕೆ ಬಂದಿರುವ (ಗಲುಡ)
ಪಾಲ. ಸಕ: [ಪಾಲಯ್] ಪಾಲಿಸು, ರಕ್ಷಿಸು. ವ. ಕೃ: **'ಪಾಲಯಂತ'**
ಪಾಲ. **'ಪಾರ=ಪಾರಯ್'** ಶಬ್ದವನ್ನು ನೋಡುವುದು
ಪಾಲ. ಪು: [ದೇ] ಹೆಂಡ ಮಾರುವವನು. ವಿ: ಹರಿದು ಹೋಗಿರುವ
ಪಾಲ. ಪುಂನ: [ಪಾಲ] ಒಂದು ಒಡವೆ. ವಿ: ರಕ್ಷಕ, ಕಾಪಾಡುವವನು. ಸ್ತ್ರೀ: –ಲಾ.
ಪಾಲಂಕ. ನ: [ಪಾಲಂಕ್ಯ] ಒಂದು ತರಕಾರಿ, ಪಾಲಕ ಸೊಪ್ಪು(ಬೃಹ)
ಪಾಲಂಗಾ. ಸ್ತ್ರೀ: [ಪಾಲಂಕ್ಯಾ] ಮೇಲಿನ ಶಬ್ದವನ್ನು ನೋಡುವುದು
ಪಾಲಂತ. **'ಪಾಲ=ಪಾಲಯ್'** ಶಬ್ದವನ್ನು ನೋಡುವುದು
ಪಾಲಂಬ. ಪು: [ಪ್ರಾಲಂಬ] ಅವಲಂಬನೆ, ಆಧಾರ. ಕಂಠದಿಂದ ಎದೆಯ ಮೇಲೆ ಜೋತಾಡುವ ಮುತ್ತಿನ ಹಾರ. ಉದ್ದವಾದ(ಔಪ). **ಪುಂನ:** ಧ್ವಜದ ಕೆಳಗೆ ನೇತಾಡುತ್ತಿರುವ ಬಟ್ಟೆಯ ತುದಿ (ಪಾಅ)
ಪಾಲಕ್ಕಾ. ಸ್ತ್ರೀ: [ಪಾಲಕ್ಯಾ] **'ಪಾಲಂಗಾ'** ಶಬ್ದವನ್ನು ನೋಡುವುದು
ಪಾಲಗ. **'ಪಾಲಯ'** ಶಬ್ದವನ್ನು ನೋಡುವುದು
ಪಾಲಣ. ನ: [ಪಾಲನ] ರಕ್ಷಣೆ(ಮಹಾ). ವಿ: ರಕ್ಷಕ
ಪಾಲದ್ದುಹ. ಪು: [ದೇ] ಒಂದು ವೃಕ್ಷ–ವಿಶೇಷ (ಉಪ)
ಪಾಲಪ್ಪ. ಪು; [ದೇ] ವಿರುದ್ಧ ದಿಕ್ಕಿನಲ್ಲಿ ಹೋಗುವ. ವಿ: ಗಾಬರಿಗೊಂಡ, ತೇಲಿಹೋದ
ಪಾಲಯ. ವಿ: [ಪಾಲಕ] ರಕ್ಷಕ, ಪು: ಸೌಧರ್ಮೇಂದ್ರನ ಒಬ್ಬ ದಾಳಿ ಮಾಡುವ ದೇವ. ಶ್ರೀಕೃಷ್ಣನ ಒಬ್ಬ ಮಗ. ಭಗವಾನ್ ಮಹಾವೀರರ ನಿರ್ವಾಣದ ದಿನ ಪಟ್ಟಾಭಿಷಿಕ್ತನಾದ ಒಬ್ಬರಾಜ. ಒಂದು ದೇವ –ವಿಮಾನ ವಿಶೇಷ
ಪಾಲಾಸ. ಪು: [ಪಾಲಾಶ] ಮುತ್ತುಗದ ಮರಕ್ಕೆ ಸಂಬಂಧಿಸಿದ, ಮುತ್ತುಗದ ಮರದ ಕಾಯಿ, ಎಲೆ ಇತ್ಯಾದಿ
ಪಾಲಿ. ಸ್ತ್ರೀ: [ಪಾಲಿ] ಕೆರೆಯ ಏರಿ, ಕಟ್ಟೆ, ಅಂಚು, ತುದಿ, ಗಡಿಯ ಪ್ರದೇಶ(ಗಾ). **'ಪಾಲೀ=ಪಾಲೀ** ಶಬ್ದವನ್ನು ನೋಡುವುದು.
ಪಾಲಿ. ಸ್ತ್ರೀ: [ದೇ] ಧಾನ್ಯವನ್ನಳೆಯುವ ಅಳತೆ. ಕಾಲದ ಒಂದು ಸುದೀರ್ಘ ಅಳತೆ(=ಪಲ್ಯ)(ಉತ್ತ)
ಪಾಲಿಆ. ಸ್ತ್ರೀ: [ದೇ] ಖಡ್ಗದ ಹಿಡಿ, ಕತ್ತಿಯ ಹಿಡಿಕೆ
ಪಾಲಿಆ. **'ಪಾಲೀ=ಪಾಲೀ'**ಶಬ್ದವನ್ನು ನೋಡುವುದು
ಪಾಲಿತ್ತ. ಪು: [ಪಾದಲಿಪ್ತ] ಒಬ್ಬ ಪ್ರಸಿದ್ಧ ಜೈನಾಚಾರ್ಯ (ಕುಪ್ರ)
ಪಾಲಿತ್ತಾಣ. ನ: [ಪಾದಲಿಪ್ತೀಯ] ಈಗಲೂ **'ಪಾಲಿತ್ತಾಣ'** ಎಂಬ ಹೆಸರಿನಿಂದ ಕರೆಯಲ್ಪಡುವ ಸೌರಾಷ್ಟ್ರದ ಒಂದು ಪ್ರಾಚೀನ ನಗರ.
ಪಾಲಿತ್ತಿಆ. ಸ್ತ್ರೀ: [ದೇ] ರಾಜಧಾನಿ, ವರ್ತಕರ ಮೂಲ ಬಂಡವಾಳ, ಭಂಡಾರ, ನಿಧಿ, ಭಂಗಿ, ಪ್ರಕಾರ
ಪಾಲಿಯ. ವಿ: [ಪಾಲಿತ] ರಕ್ಷಿಸಲ್ಪಟ್ಟ (ಠಾ)
ಪಾಲಿಯಾಯ. **'ಪಾರಿಯ=ಪಾರಿಜಾತ'** ಶಬ್ದವನ್ನು ನೋಡುವುದು
ಪಾಲೀ. ಸ್ತ್ರೀ: [ಪಾಲೀ] ಸಾಲು, ಪಂಕ್ತಿ(ಗ ಉಡ). **'ಪಾಲಿ'** ಶಬ್ದವನ್ನು ನೋಡುವುದು
ಪಾಲೀ. ಸ್ತ್ರೀ: [ದೇ] ದಿಕ್ಕು(ದೇ)
ಪಾಲೀಬಂಧ. ಪು: [ದೇ] ಕೆರೆ, ಜಲಾಶಯ
ಪಾಲೀಹಮ್ಮ. ನ: [ದೇ] ಬೇಲಿ, ಸುತ್ತುಗಟ್ಟುವುದು

ಪಾಲೇವ. ಪು: [ಪಾದಲೇಪ] ಕಾಲಿಗೆ(ಪಾದಕ್ಕೆ) ಹಚ್ಚಿದ ಲೇಪ

ಪಾವ. ಸಕ: [ಪ್ರ +ಆಪ್] ಪಡೆದುಕೊಳ್ಳು. 'ಪಾವಇ'

ಪಾವ. 'ಪವ್ವಾಲ=ಪ್ಲಾವಯ್' ಶಬ್ದವನ್ನು ನೋಡುವುದು

ಪಾವ. ಪುಂನ: [ಪಾಪ] ಅಶುಭ –ಕರ್ಮ ಪುದ್ಗಲ, ಕುಕರ್ಮ(ಆಚಾ), ಪಾಪಿ, ಅಧರ್ಮಿ, ಕಕರ್ಮಿ (ಕುಮಾ), **–ಕಮ್ಮ.**ನ: [–ಕರ್ಮನ್] ಅಶುಭ ಕರ್ಮ, **–ಕಮ್ಮಿ.**ವಿ: [–ಕರ್ಮಿನ್] ಕೆಟ್ಟ ಕೆಲಸ ಮಾಡುವವನು, ಕುಕರ್ಮಿ. **–ದಂಡ.** ಪು: [–ದಂಡ] ಒಂದು ನರಕವಾಸ. **–ಪಗಇ.**ಸ್ತ್ರೀ: [–ಪ್ರಕೃತಿ]. **–ಯಾರಿ.** ವಿ: [–ಕಾರಿನ್] ದುರಾಚಾರಿ (ಪಉಮ). **–ಸಮಣ.** ಪು:[–ಶ್ರಮಣ] ದುಷ್ಟ ಸಂನ್ಯಾಸಿ(ಉತ್ತ). **–ಸುಮಿಣ.** ಪುಂನ: [–ಸ್ವಪ್ನ] ದುಷ್ಟ ಸ್ವಪ್ನ. **–ಸುಯ.** ನ: [–ಶ್ರುತ] ದುಷ್ಟ ಶಾಸ್ತ್ರ.

ಪಾವ. ಪು: [ದೇ] ಸರ್ಪ, ಹಾವು(ದೇ)

ಪಾವ(ಅಪ) 'ಪತ್ತ=ಪ್ರಾಪ್ತ' ಶಬ್ದವನ್ನು ನೋಡುವುದು

ಪಾವಂಸ. ವಿ: [ಪಾಪೀಯಸ್] ಪಾಪಿ, ಕುಕರ್ಮಿ

ಪಾವಕ್ಖಾಲಯ. ನ: [ದೇ. ಪಾಪಕ್ಷಾಲಕ] 'ಪಾಉಕ್ಖಾಲಯ' ಶಬ್ದವನ್ನು ನೋಡುವುದು

ಪಾವಗ. ವಿ: [ಪಾವಕ] ಪವಿತ್ರಗೊಳಿಸುವವನು(ರಾಜ), ಪು: ಅಗ್ನಿ, ಬೆಂಕಿ(ಸುಪಾ)

ಪಾವಗ. ವಿ: [ಪ್ರಾಪಕ] ತಲುಪಿಸುವವನು(ಸುಪಾ)

ಪಾವಗ. 'ಪಾವ=ಪಾಪ' ಶಬ್ದವನ್ನು ನೋಡುವುದು

ಪಾವಜ್ಜಾ.(ಅಪ). 'ಪವ್ವಜ್ಜಾ' ಶಬ್ದವನ್ನು ನೋಡುವುದು

ಪಾವಡಣ.'ಪಾಯ–ವಡಣ=ಪಾದ –ಪತನ' ಶಬ್ದವನ್ನು ನೋಡುವುದು

ಪಾವಡ್ಢಿ. 'ಪಾರದ್ಧಿ' ಶಬ್ದವನ್ನು ನೋಡುವುದು

ಪಾವಣ. ವಿ: [ಪಾವನ] ಪವಿತ್ರಗೊಳಿಸುವವನು

ಪಾವಣ. ನ: [ಪ್ಲಾವನ] ನೀರಿನ ಪ್ರವಾಹ, ನೆನೆಸುವುದು, ತೋಯಿಸುವುದು

ಪಾವಣ. ನ: [ಪ್ರಾಪಣ] ಪ್ರಾಪ್ತಿ, ಹೊಂದುವುದು, ಲಾಭ. ಯೋಗದ ಒಂದು ಸಿದ್ಧಿ(ಕುಪ್ರ)

ಪಾವದ್ಧಿ. 'ಪಾರದ್ಧಿ' ಶಬ್ದವನ್ನು ನೋಡುವುದು

ಪಾವಯ. 'ಪಾವ=ಪಾಪ' ಶಬ್ದವನ್ನು ನೋಡುವುದು

ಪಾವಯ. ವಿ: [ಪ್ರಾವೃತ] ಆಚ್ಛಾದಿತ, ಮುಚ್ಚಲ್ಪಟ್ಟ

ಪಾವಯ. ಪುಂನ: [ದೇ] ಒಂದು ವಾದ್ಯ –ವಿಶೇಷ

ಪಾವಯ. 'ಪಾವಗ=ಪಾವಕ' ಶಬ್ದವನ್ನು ನೋಡುವುದು

ಪಾವಯಣ. 'ಪವಯಣ' ಶಬ್ದವನ್ನು ನೋಡುವುದು (ಉವಾ)

ಪಾವಯಣಿ. ವಿ: [ಪ್ರವಚನಿನ್] ಸಿದ್ಧಾಂತವನ್ನು ತಿಳಿದವನು, ಸೈದ್ಧಾಂತಿಕ

ಪಾವಯಣಿಯ. ವಿ: [ಪ್ರಾವಚನಿಕ] ಮೇಲಿನ ಶಬ್ದವನ್ನು ನೋಡುವುದು

ಪಾವರಅ. 'ಪಾವಾರಯ' ಶಬ್ದವನ್ನು ನೋಡುವುದು (ಸ್ವಪ್ನ)

ಪಾವರಣ. ಪು: [ಪ್ರಾವರಣ] ಒಂದು ಮ್ಲೇಚ್ಛ ಜಾತಿ

ಪಾವರಣ. ನ: [ಪ್ರಾವರಣ] ವಸ್ತ್ರ, ಬಟ್ಟೆ

ಪಾವರಿಯ. ವಿ: [ಪ್ರಾವೃತ] ಹೊದಿಸಲ್ಪಟ್ಟ, ಸುತ್ತಲೂ ಆವರಿಸಲ್ಪಟ್ಟ(ಕುಪ್ರ)

ಪಾವಸ. 'ಪಾಉಸ' ಶಬ್ದವನ್ನು ನೋಡುವುದು

ಪಾವಾ. ಸ್ತ್ರೀ: [ಪಾಪಾ] 'ಪಾವಾಪುರಿ' ಎಂದು ಕರೆಯಲ್ಪಡುವ, ಇಂದಿಗೂ ಬಿಹಾರದ ಸಮೀಪದಲ್ಲಿರುವ ನಗರ

ಪಾವಾಇ. ವಿ: [ಪ್ರವಾದಿನ್] ವಾಚಾಳಿ, ದಾರ್ಶನಿಕ

ಪಾವಾಇಅ. ವಿ: [ಪ್ರಾವ್ರಾಜಿಕ] ಸಂನ್ಯಾಸಿ

ಪಾವಾಇಅ. ವಿ: [ಪ್ರಾವಾದಿಕ] 'ಪಾವಾಇ' ಇಂದಿಗೂ ಬಿಹಾರದ ಸಮೀಪದಲ್ಲಿರುವ ನಗರ

ಪಾವಾಇಅ}. ವಿ: [ಪ್ರಾವಾದುಕ]ವಾಚಾಳಿ,ಹೆಚ್ಚು

ಪಾವಾದುಯ}. ಮಾತಾಡುವವನು, ದಾರ್ಶನಿಕ

ಪಾವಾರ. ಪು: [ಪ್ರಾವಾರ] ಉತ್ತರೀಯ, ದಪ್ಪ ಕಂಬಳಿ

ಪಾವಾರಯ. 'ಪಾರಯ=ಪ್ರಾವಾರಕ' ಶಬ್ದವನ್ನು ನೋಡುವುದು

ಪಾವಾಲಿಆ. ಸ್ತ್ರೀ: [ಪ್ರಪಾಪಾಲಿಕಾ] ಯಾತ್ರಾರ್ಥಿಗಳಿಗೆ ನೀರು ಕೊಡುವ 'ಅರವಟ್ಟಿಗೆ'ಯಲ್ಲಿ ನಿಯುಕ್ತಳಾದ ಮಹಿಳೆ(ಗಾ)

ಪಾವಾಸು}. ವಿ: [ಪ್ರವಾಸಿನ್, –ಕ] ಪ್ರವಾಸ

ಪಾವಾಸುಅ}. ಮಾಡುವವನು (ಕುಮಾ)

ಪಾವಿಅ. ವಿ: [ಪ್ರಾಪ್ತ]ಬಂದು ಸೇರಿದ, ದೊರಕಿದ, ಒದಗಿದ(ಸುರ)

ಪಾವಿಅ. ವಿ: [ಪ್ರಾಪಿತ] ಪ್ರಾಪ್ತ ಮಾಡಿಸಿಕೊಳ್ಳಲಾದ, ಹೊಂದಿಸಲ್ಪಟ್ಟ

ಪಾವಿಅ. ವಿ: [ಪ್ಲಾವಿತ] ಚೆನ್ನಾಗಿ ತೋಯಿಸಲ್ಪಟ್ಟ, ಅದ್ದಲ್ಪಟ್ಟ(ಕುಮಾ)

ಪಾವಿಟ್ಠ. ವಿ: [**ಪಾಪಿಷ್ಠ**] ಅತ್ಯಂತ ಪಾಪಿ, ಮಹಾಪಾಪಿ

ಪಾವೀಢ. '**ಪಾಯ–ವೀಢ**' ಶಬ್ದವನ್ನು ನೋಡುವುದು

ಪಾವೀಯಂಸ. '**ಪಾವಂಸ**' ಶಬ್ದವನ್ನು ನೋಡುವುದು

ಪಾವುಅ. ವಿ: [**ಪ್ರಾವೃತ**] ಹೊದಿಸಲ್ಪಟ್ಟ, ಆಚ್ಛಾದಿಸಲ್ಪಟ್ಟ, ಸುತ್ತಲೂ ಆವರಿಸಲ್ಪಟ್ಟ

ಪಾವೆಜ್ಜಮಾಣ. '**ಪಾವ=ಪ್ರ –ಆಪ್**' ಶಬ್ದವನ್ನು ನೋಡುವುದು

ಪಾವೇಸ. ವಿ: [**ಪ್ರಾವೇಶ್ಯ**] ಪ್ರವೇಶಿಸಲು ಯೋಗ್ಯನಾದ(ಔಪ)

ಪಾವೇಸ. **ಪು:** [**ಪ್ರಾವೇಶ**] ಬಟ್ಟೆಯ ಎರಡೂ ಕಡೆ ನೇತಾಡುತ್ತಿರುವ ಕುಚ್ಚು(ಣಾಯಾ)

ಪಾಸ. **ಸಕ:** [**ದೃಶ್**]ನೋಡು,ತಿಳಿ,**ಕ್ರಿಯಾರೂಪ:** '**ಪಾಸಇ**'.

ಪಾಸ. **ಪು:** [**ಪಾರ್ಶ್ವ**] ಈಗಿನ ಅವಸರ್ಪಿಣೀ ಕಾಲದಲ್ಲಿ ೨೩ನೇ ತೀರ್ಥಂಕರ. ಭಗವಾನ್ ಪಾರ್ಶ್ವನಾಥನ ಅಧಿಷ್ಠಾತೃ ಯಕ್ಷ. ದೇಹದ ಎರಡು ಪಕ್ಕೆಗಳು (ಹೆಗಲಿನ ಕೆಳಭಾಗ), ಹತ್ತಿರ, ಸಮೀಪ. **ಪಾಸಾವಚ್ಚಿಜ್ಜ.** ವಿ: [**ಪಾರ್ಶ್ವಾಪತ್ಯೀಯ**] ಭಗವಾನ್ ಪಾರ್ಶ್ವನಾಥನ ಪರಂಪರೆಯಲ್ಲಿ ಹುಟ್ಟಿದ(ಭಗ)

ಪಾಸ. **ಪು:** [**ಪಾಶ**] ಹಗ್ಗ, ಕಟ್ಟುವ ಹಗ್ಗ(ಔಪ)

ಪಾಸ. ನ: [**ದೇ**] ಕಣ್ಣು, ಹಲ್ಲು, ಭರ್ಜಿ (ಕುಂತವೆಂಬ ಆಯುಧ), ಕುರೂಪ(ದೇ), **ಪುಂನ:** ಅನ್ಯ ವಸ್ತುಗಳ ಅಲ್ಪ ಮಿಶ್ರಣ(ಭಾವ)

–ಪಾಸ. ವಿ: [**–ಪಾಶ**] ನಿಕೃಷ್ಟ, ಕುತ್ಸಿತ, ನೀಚ, ಕೆಳಮಟ್ಟದ

ಪಾಸಂಗಿಅ. ವಿ: [**ಪ್ರಾಸಂಗಿಕ**] ಪ್ರಸಂಗಕ್ಕೆ ಸಂಬಂಧಿಸಿದ, ಪ್ರಸಂಗದಿಂದ ಪ್ರಾಪ್ತವಾದ, ಆನುಷಂಗಿಕ (ಕುಮ್ಮಾ)

ಪಾಸಂಡ. ನ: [**ಪಾಸಂಡ**] ನಾಸ್ತಿಕ, ಅಸತ್ಯ ಧರ್ಮ, ಧರ್ಮದ ಡೋಂಗಿತನ(ಆವ) ವ್ರತ

ಪಾಸಂಡಿ}. ವಿ: [**ಪಾಸಂಡಿನ್, –ಕ**] ನಾಸ್ತಿಕ,

ಪಾಸಂಡಿಯ}. ಧರ್ಮಲಂಡ, ಸಮಾಜದಲ್ಲಿ ಗೌರವ ಪಡೆಯಲು ಧರ್ಮದ ನಟನೆ ಮಾಡಿದ(ಸುಪಾ). **ಪು:** ಸಾಧು, ಮುನಿ

ಪಾಸಂದಣ. ನ: [**ಪ್ರಸ್ಯಂದನ**] ತೊಟ್ಟಿಕ್ಕುವುದು, ಸೋರುವುದು(ಬೃಹ)

ಪಾಸಗ. ವಿ: [**ದರ್ಶಕ**] ನೋಡುವವನು(ಆಚಾ)

ಪಾಸಗ. **ಪು:** [**ಪಾಶಕ**] ಹಗ್ಗ. ಕಟ್ಟುವ ಹಗ್ಗ. ಜೂಜಾಡಲು ಬಳಸುವ ಉಪಕರಣಗಳಾದ ದಾಳ, ಪಗಡೆ ಕಾಯಿ ಮೊದಲಾದವು

ಪಾಸಗ. ನ: [**ಪ್ರಾಶಕ**] ಕಲಾ–ವಿಶೇಷ (ಔಪ)

ಪಾಸಣ. ನ: [**ದರ್ಶನ**] ನೋಡುವುದು, ಅವಲೋಕನ(ಓಘ)

ಪಾಸಣಯಾ. **ಸ್ತ್ರೀ:** ಮೇಲಿನ ಶಬ್ದವನ್ನು ನೋಡುವುದು

ಪಾಸಣಿಅ. ವಿ: [**ದೇ**] ಸಾಕ್ಷಿ

ಪಾಸಣಿಅ.ವಿ: [**ಪ್ರಾಶ್ನಿಕ**] ಪ್ರಶ್ನೆ ಮಾಡುವವನು(ಸೂಅ)

ಪಾಸತ್ಥ. ವಿ: [**ಪಾರ್ಶ್ವಸ್ಥ**] ಪಕ್ಕದಲ್ಲಿ ಇರುವ, ಸಮೀಪದಲ್ಲಿ ಇರುವ(ಪಉಮ) ಸಡಿಲವಾದ ಆಚಾರವುಳ್ಳ ಸಂನ್ಯಾಸಿ

ಪಾಸತ್ಥ. ವಿ: [**ಪಾಶಸ್ಥ**] ಪಾಶದಲ್ಲಿ ಸಿಲುಕಿಕೊಂಡಿರುವ (ಸೂಅ)

ಪಾಸಲ್ಲ. ನ: [**ದೇ**] ಬಾಗಿಲು, ವಿ: ಅಡ್ಡವಾಗಿ, ವಕ್ರವಾಗಿ (ಗಉಡ)

ಪಾಸಲ್ಲ. '**ಪಾಸ=ಪಾರ್ಶ್ವ**' ಶಬ್ದವನ್ನು ನೋಡುವುದು.

ಪಾಸಲ್ಲ. **ಅಕ:** [**ತಿರ್ಯಂಚ್, ಪಾರ್ಶ್ವಯ್**] ಡೊಂಕಾಗು, ವಕ್ರವಾಗು, ಪಕ್ಕಕ್ಕೆ ತಿರುಗಿಸು

ಪಾಸಲ್ಲಇಅ. '**ಪಾಸಲ್ಲಿಅ**' ಶಬ್ದವನ್ನು ನೋಡುವುದು

ಪಾಸಲ್ಲಿ. ವಿ: [**ಪಾರ್ಶ್ವಿನ್**] ಪಕ್ಕಕ್ಕೆ ಮಲಗಿರುವ

ಪಾಸಲ್ಲಿಅ. ವಿ: [**ಪಾರ್ಶ್ವಿತ, ತಿರ್ಯಕ್ತ**] ಪಕ್ಕಕ್ಕೆ ತಿರುಗಿಸಿದ,ವಕ್ರಗೊಳಿಸಲಾದ, ತಿರುಚಲಾದ (ಗಉಡ)

ಪಾಸವಣ. ನ: [**ಪ್ರಸ್ರವಣ**] ಮೂತ್ರ, (ಸಮ)

ಪಾಸಾಈಂಯ. '**ಪಾಸಾದೀಂಯ**' ಶಬ್ದವನ್ನು ನೋಡುವುದು

ಪಾಸಾಕುಸುಮ. ನ: [**ಪಾಶಾಕುಸುಮ**] ಒಂದು ಬಗೆಯ ಹೂವು(ಗಾ)

ಪಾಸಾಣ. **ಪು:** [**ಪಾಷಾಣ**] ಶಿಲೆ, ಕಲ್ಲು

ಪಾಸಾಣಿಅ. ವಿ: [**ದೇ**] ಸಾಕ್ಷಿ(ದೇ)

ಪಾಸಾದ. '**ಪಾಸಾಯ**' ಶಬ್ದವನ್ನು ನೋಡುವುದು (ಔಪ)

ಪಾಸಾದಿಯ. ವಿ: [**ಪ್ರಸಾದಿತ**] ಸಂತುಷ್ಟ ಗೊಳಿಸಲ್ಪಟ್ಟ, ನ: ಸಂತುಷ್ಟಗೊಳಿಸುವುದು(ಣಾಯಾ)

ಪಾಸಾದೀಯ. ವಿ: [**ಪ್ರಾಸಾದೀಯ**] ಸಂತೋಷ ಜನಕವಾದ(ಉವಾ)

ಪಾಸಾದೀಯ. ವಿ: [ಪ್ರಾಸಾದಿತ]ಅರಮನೆ ಹೊಂದಿರುವ, ಉಪ್ಪರಿಗೆಯಿಂದ ಕೂಡಿದ

ಪಾಸಾಯ. ಪುಂನ: [ಪ್ರಾಸಾದ] ಉಪ್ಪರಿಗೆಯ ಮನೆ (ಪಾಅ). **–ವಡಿಂಸಯ.** ಪು:[–ಪ್ರಾಸಾದಾವತಂಸಕ] ಉತ್ಕೃಷ್ಟವಾದ ಅರಮನೆ (ಭಗ)

ಪಾಸಾಯವಡೆಂಸಗ. ಪು: [ಪ್ರಾಸಾದಾವತಂಸಕ] ಉತ್ಕೃಷ್ಟವಾದ ಅರಮನೆ

ಪಾಸಾಸಾ. ಸ್ತ್ರೀ: [ದೇ] ಚಿಕ್ಕ ಭರ್ಜಿ

ಪಾಸಾವ}. ಪು: [ದೇ] ಕಿಟಕಿ, ವಾತಾಯನ(ಷಡ್)

ಪಾಸಾವಯ}.

ಪಾಸಿ. ವಿ: [ಪಾರ್ಶ್ವಿನ್] ಪಕ್ಕದಲ್ಲಿ ಇರುವ, ಸಡಿಲ ಆಚಾರದ ಸಂನ್ಯಾಸಿ

ಪಾಸಿದ್ಧಿ. **'ಪಸಿದ್ಧಿ'** ಶಬ್ದವನ್ನು ನೋಡುವುದು

ಪಾಸಿಮ. ವಿ: [ದೃಶ್ಯ] ನೋಡಬಹುದಾದ, ನೋಡಲು ಯೋಗ್ಯವಾದ(ಆಚಾ)

ಪಾಸಿಮಂ. **'ಪಾಸ=ದೃಶ್'** ಶಬ್ದವನ್ನು ನೋಡುವುದು

ಪಾಸಿಯ. ವಿ: [ಪಾಶಿಕ] ಬಲೆಯಲ್ಲಿ ಬಂಧಿಸುವ, ಪಾಶದಲ್ಲಿ ಕಟ್ಟಿಹಾಕುವಂಥ(ಪಣ್ಣ)

ಪಾಸಿಯ. ವಿ: [ಸ್ಪೃಷ್ಟ] ಮುಟ್ಟಲ್ಪಟ್ಟ, ಸ್ಪರ್ಶಿಸಲ್ಪಟ್ಟ (ಆಚಾ)

ಪಾಸಿಯ. ವಿ: [ಪಾಶಿತ] ಪಾಶದಿಂದ ಕೂಡಿದ

ಪಾಸಿಯಾ. ಸ್ತ್ರೀ: [ಪಾಶಿಕಾ] ಸಣ್ಣ ಪಾಶ

ಪಾಸಿಯಾ. **'ಪಾಸ=ದೃಶ್'** ಶಬ್ದವನ್ನು ನೋಡುವುದು

ಪಾಸಿಲ್ಲ. ವಿ: [ಪಾರ್ಶ್ವಿಕ] ಪಕ್ಕದಲ್ಲಿರುವ, ಪಕ್ಕಕ್ಕೆ ಮಲಗಿರುವ(ಪವ)

ಪಾಸೀ. ಸ್ತ್ರೀ: [ದೇ] ಶಿಖೆ, ಜುಟ್ಟು

ಪಾಸು. **'ಪಂಸು'** ಶಬ್ದವನ್ನು ನೋಡುವುದು

ಪಾಸುತ್ತ. **'ಪಸುತ್ತ'** ಶಬ್ದವನ್ನು ನೋಡುವುದು

ಪಾಸೇಇಯ. ವಿ: [ಪ್ರಸ್ವೇದಿತ] ಚೆನ್ನಾಗಿ ಬೆವತಿರುವ (ಭವಿ)

ಪಾಸೆಲ್ಲಿಯ. ವಿ: [ಪಾರ್ಶ್ವವತ್] ಪಕ್ಕಕ್ಕೆ ಮಲಗಿರುವ

ಪಾಸೋಅಲ್ಲ. **ಪಾಸಲ್ಲ=ತಿರ್ಯಂಚ್'** ಶಬ್ದವನ್ನು ನೋಡುವುದು

ಪಾಹ.(ಅಪ). ಸಕ: [ಪ್ರ+ಅರ್ಥಯ್] ಪ್ರಾರ್ಥಿಸು

ಪಾಹಂಡ. **'ಪಾಸಂಡ'** ಶಬ್ದವನ್ನು ನೋಡುವುದು

ಪಾಹಣ. **'ಪಾಹಾಣ.'** ಶಬ್ದವನ್ನು ನೋಡುವುದು

ಪಾಹಣಾ. **'ಪಾಣಹಾ'** ಶಬ್ದವನ್ನು ನೋಡುವುದು

ಪಾಹಣ್ಣ}. ನ: [ಪ್ರಾಧಾನ್ಯ] ಪ್ರಧಾನತೆ,

ಪಾಹನ್ನ}. ಮುಖ್ಯವಾಗಿರುವಿಕೆ(ಪ್ರಾಸೂ)

ಪಾಹರ. ಸಕ: [ಪ್ರಾ +ಹೃ] ಅತಿ ಹೆಚ್ಚು ತೆಗೆದುಕೊಂಡು ಬರು

ಪಾಹರಿಯ. ವಿ: [ಪ್ರಾಹರಿಕ] ಕಾವಲುಗಾರ, ಪಹರೆಯವನು

ಪಾಹಾಉಯ. **'ಪಾಬಾಇಯ'** ಶಬ್ದವನ್ನು ನೋಡುವುದು(ಸುಪಾ)

ಪಾಹಾಣ. ಪು: [ಪಾಷಾಣ] ಕಲ್ಲು, ಶಿಲೆ

ಪಾಹಿಜ್ಜ. **'ಪಾಹೆಜ್ಜ'** ಶಬ್ದವನ್ನು ನೋಡುವುದು (ಪಾಅ)

ಪಾಹುಡ. ನ: [ಪ್ರಾಭೃತ] ಕಾಣಿಕೆ, ಕೊಡುಗೆ(ಹೇ), ಜೈನ ಗ್ರಂಥಾಂಶ –ವಿಶೇಷ, ಪರಿಚ್ಛೇದ, ಅಧ್ಯಯನ. ಕೊಡುಗೆಯ ತಿಳಿವಳಿಕೆ, **–ಪಾಹುಡ.** ನ: [–ಪ್ರಾಭೃತ] ಗ್ರಂಥಾಂಶ –ವಿಶೇಷ, ಪ್ರಾಭೃತದ್ದೂ ಒಂದು ಅಂಶ. ಪ್ರಾಭೃತ –ಪ್ರಾಭೃತದ ಜ್ಞಾನ, **–ಪಾಹುಡಸಮಾಸ.** ಪುಂನ: [–ಪ್ರಾಭೃತಸಮಾಸ] ಅನೇಕ ಪ್ರಾಭೃತಗಳ ಪರಿಜ್ಞಾನ(ಕಮ್ಮ)

ಪಾಹುಡ. ನ: [ಪ್ರಾಭೃತ] ಕ್ಲೇಶ, ಕಲಹ, ದೃಷ್ಟಿವಾದ ಪ್ರಾಚೀನರ ಅಧ್ಯಾಯ. ಸಾವದ್ಯ –ಕರ್ಮವಾದ ಪಾಪಕ್ರಿಯೆ. **–ಛೇಯ.** ಪು: [–ಚ್ಛೇದ]

ಪಾಹುಡಿಆ. ಸ್ತ್ರೀ: [ಪ್ರಾಭೃತಿಕಾ] ದೃಷ್ಟಿವಾದದ ಸಣ್ಣ ಅಧ್ಯಾಯ, ವಿಲೇಪನಾದಿಗಳು.

ಪಾಹುಡಿಆ. ಸ್ತ್ರೀ: [ಪ್ರಾಭೃತಿಕಾ] ಕಾಣಿಕೆ, ಕೊಡುಗೆ. ಜೈನ ಮುನಿಯ ಭಿಕ್ಷೆಯಲ್ಲಿನ ಒಂದು ದೋಷ, ಕೊಡುಗೆಯ ರೂಪದಲ್ಲಿ ನೀಡಿದ ಭಿಕ್ಷೆಯಲ್ಲಿ ಹೇಳಿದ ಸಮಯಕ್ಕೆ ಮುಂಚೆಯೇ ಮನಸ್ಸಿನಲ್ಲಿ ಭಿಕ್ಷೆಯ ಸಂಕಲ್ಪ ಮಾಡುವುದು(ಠಾ) ಹನ್ನೆರಡನೇ ಅಂಗ ಗ್ರಂಥ ಪೂರ್ವರ ಪ್ರಕರಣ –ವಿಶೇಷ. ದೃಷ್ಟಿವಾದದ ಪ್ರಕರಣ –ವಿಶೇಷ

ಪಾಹುಣ. ವಿ: [ದೇ] ಮಾರುವ ವಸ್ತು(ದೇ)

ಪಾಹುಣ}. ಪು: [ಪ್ರಾಘುಣ,–ಕ]ಅತಿಥಿ,(ಔಪ,ಸುಪಾ)

ಪಾಹುಣಗ}

ಪಾಹುಣಯ}.

ಪಾಹುಣಿಅ. ಪು: [ಪ್ರಾಘುಣಿಕ] ಅತಿಥಿ

ಪಾಹುಣಿಅ. ಪು: [ಪ್ರಾಘುನಿಕ] ಒಂದು ಗ್ರಹ, ಗ್ರಹದ ಅಧಿಷ್ಠಾಯಕ ದೇವತೆ(ಠಾ)

ಪಾಹುಣೆಜ್ಜ. ವಿ: [**ಪ್ರಾಹವನೀಯ**] ದಾನ ಪಡೆದುಕೊಳ್ಳಲಾಗುವ ವ್ಯಕ್ತಿ(ಣಾಯಾ)
ಪಾಹುಣ್ಣ}. ನ: [**ಪ್ರಾಘುಣ್ಯ, –ಕ**] ಆತಿಥ್ಯ, ಅತಿಥಿ
ಪಾಹುಣ್ಣಗ}. ಸತ್ಕಾರ(ಉಪ)
ಪಾಹುಣ್ಣಯ}.
ಪಾಹೇಅ. ನ: [**ಪಾಥೇಯ**] ಬುತ್ತಿ(ಉತ್ತ), ದಾರಿಯಲ್ಲಿ ತಿನ್ನಲು ನೀಡಲಾಗುವ ಊಟ(ಉತ್ತ)
ಪಾಹೆಜ್ಜ. ನ: [ದೇ. **ಪಾಥೇಯ**] ಮೆಲಿನ ಶಬ್ದವನ್ನು ನೋಡುವುದು
ಪಾಹೇಣಗ. (ದೇ). '**ಪಹೇಣಗ**' ಶಬ್ದವನ್ನು ನೋಡುವುದು
ಪಿ. '**ಅವಿ**' ಶಬ್ದವನ್ನು ನೋಡುವುದು
ಪಿಅ. **ಸಕ:** [ಪಾ] ಕುಡಿ. ವ. ಕೃ: –'**ಪಿಅಂತ**'
ಪಿಅ. **ಪು:** [**ಪ್ರಿಯ**] ಪತಿ, ಯಜಮಾನ, ವಿ: ಇಷ್ಟನಾದ, ಇಷ್ಟವಾದ, ಪ್ರೀತಿಪಾತ್ರನಾದ/ಪಾತ್ರವಾದ. **–ಅಮ. ಪು:**[**–ತಮ**] ಪತಿ, ಗಂಡ ಅತಿಪ್ರೀತಿಯ, **–ಅಮಾ. ಸ್ತ್ರೀ:** [**–ತಮಾ**]ಹೆಂಡತಿ. **–ಅರ.** ವಿ: [**–ಕರ**] ಪ್ರೀತಿ ಉಂಟು ಮಾಡುವ. **–ಕಾರಿಣೀ. ಸ್ತ್ರೀ:** [**–ಕಾರಿಣೀ**] ಭಗವಾನ್ ಮಹಾವೀರರ ತಾಯಿಯ ಹೆಸರು, ತ್ರಿಶಲಾ ದೇವಿ. **–ಗಂಥ. ಪು:** [**–ಗ್ರಂಥ**] ಒಬ್ಬ ಪ್ರಾಚೀನ ಜೈನ ಮುನಿ. ಆಚಾರ್ಯ ಸುಸ್ಥಿತ ಮತ್ತು ಸುಪ್ರತಿಬದ್ಧನ ಒಬ್ಬ ಶಿಷ್ಯ. **–ಜಾಅ.** ವಿ: [**–ಜಾಯ**] ಯಾರಿಗೆ ಪತ್ನಿ ಪ್ರಿಯಳೋ ಅವನು(ಗಾ). **–ಜಾಆ. ಸ್ತ್ರೀ:** [**–ಜಾಯಾ**] ಪ್ರೇಮ ಪಾತ್ರಳಾದ ಪತ್ನಿ(ಗಾ). **–ದಂಸಣ.** ವಿ: [**–ದರ್ಶನ**] ಯಾರ ದರ್ಶನವು ಪ್ರಿಯಕರವೋ ಅವನು (ಣಾಯಾ). **ಪು:** ದೇವ–ವಿಶೇಷ(ಠಾ). **–ದಂಸಣಾ. ಸ್ತ್ರೀ:** [**–ದರ್ಶನಾ**] ಭಗವಾನ್ ಮಹಾವೀರರ ಪುತ್ರಿಯ ಹೆಸರು. **–ಧಮ್ಮ.** ವಿ: [**–ಧರ್ಮನ್**] ಧರ್ಮದಲ್ಲಿ ಶ್ರದ್ಧೆಯುಳ್ಳವನು, ರಾಮಚಂದ್ರನೊಂದಿಗೆ ಜೈನ ದೀಕ್ಷೆಯನ್ನು ತಗೆದುಕೊಂಡ ಒಬ್ಬ ದೊರೆ. **–ಭಾಉಗ. ಪು:** [**–ಭ್ರಾತೃ**] ಪತಿ ಸೋದರ(ಉಪ). **–ಭಾಸಿ.** ವಿ: [**–ಭಾಷಿನ್**] ಪ್ರಿಯವಾಗಿ ಮಾತನಾಡುವವ (ಮಹಾ). **–ಮಿತ್ತ. ಪು:** [**–ಮಿತ್ರ**] ಹಿಂದಿನ ಜನ್ಮದಲ್ಲಿ ಐದನೇ ವಾಸುದೇವನಾಗಿದ್ದ ಒಬ್ಬ ಜೈನ ಮುನಿ(ಪಉಮ) **–ಮೇಲಯ.** ವಿ: [**–ಮೇಲಕ**] ಪ್ರಿಯನ ಮಿಲನ ಮಾಡಿಸುವವನು. ನ: ಒಂದುತೀರ್ಥ. **ಪಿಆಉಯ.** ವಿ: [**ಪ್ರಿಯಾಯುಷ್ಕ**] ಜೀವನ – ಪಿಯ. **ಪಿಆಯಗ.** ವಿ: [**ಪ್ರಿಯಾಯತ, ಪ್ರಿಯಾತ್ಮಕ**] ಆತ್ಮಕ್ಕೆ ಪ್ರಿಯನಾದವನು.
ಪಿಅ. '**ಪೀಅ**' ಶಬ್ದವನ್ನು ನೋಡುವುದು
ಪಿಅ–. '**ಪಿಉ**' ಶಬ್ದವನ್ನು ನೋಡುವುದು. **–ಹರ.** ನ: [**–ಗೃಹ**] ತಂದೆಯ ಮನೆ, ತೌರುಮನೆ
ಪಿಅಆ. '**ಪಿಆ**' ಶಬ್ದವನ್ನು ನೋಡುವುದು
ಪಿಅಇಉ.(**ಅಪ**)ವಿ:[**ಪ್ರೀಣಯಿತೃ**] ಸಂತೋಷ ವುಂಟುಮಾಡುವವ, ಸಂತಸಪಡಿಸುವವನು (ಭವಿ)
ಪಿಅಉಲ್ಲಿಯ(**ಅಪ**). '**ಪಿಆ**' ಶಬ್ದವನ್ನು ನೋಡುವುದು
ಪಿಅಂಕರ. ವಿ: [**ಪ್ರಿಯಂಕರ**] ಹಿತವನ್ನುಂಟು ಮಾಡಿದ, ಪ್ರಿಯವನ್ನಂಟುಮಾಡುವವನು(ಉತ್ತ). ಒಬ್ಬ ಚಕ್ರವರ್ತಿ ರಾಜ(ಉಪ). ರಾಮಚಂದ್ರನ ಮಗ ಲವನ ಹಿಂದಿನ ಜನ್ಮದ ಹೆಸರು(ಪಉಮ)
ಪಿಅಂಗು. ಪು: [**ಪ್ರಿಯಂಗು**] ಪ್ರೇಂಕಣ ಗಿಡ, ಒಂದುಬಗೆಯ ಬಳ್ಳಿ, ಹಿಪ್ಪಲಿ. **ಸ್ತ್ರೀ:** ಒಬ್ಬ ಹೆಣ್ಣಿನ ಹೆಸರು. **–ಲಇಯಾ. ಸ್ತ್ರೀ:** [**–ಲತಿಕಾ**] ಒಬ್ಬ ಮಹಿಳೆಯ ಹೆಸರು
ಪಿಅಂವಯ}. ವಿ: [**ಪ್ರಿಯಂವದ**] ಪ್ರಿಯವಾಗಿ
ಪಿಅಂವಾಇ}. ವಿ: [**ಪ್ರಿಯವಾದಿನ್**] ಮಾತನಾಡುವ. ಪ್ರೀತಿಯ ಮಾತಾಡುವ, ಹಿತವಾಗಿ ಮಾತಾಡುವ(ಉತ್ತ)
ಪಿಅಣ. ನ: [**ದೇ**] ಹಾಲು.
ಪಿಅಣ. ನ: [**ಪಾನ**] ಕುಡಿಯುವುದು
ಪಿಅಣಾ. ಸ್ತ್ರೀ: [**ಪೃತನಾ**] ೨೪೩ ಆನೆಗಳು, ೨೪೩ ರಥಗಳು, ೭೨೯ ಕುದುರೆಗಳು, ಮತ್ತು ೬೨೯೪ ಪದಾತಿಗಳು ಇರುವ ಒಂದು ಸೈನ್ಯ.
ಪಿಅಮಾ. ಸ್ತ್ರೀ: [**ದೇ**] ಪ್ರಿಯಂಗು ವೃಕ್ಷ(ದೇ)
ಪಿಅಮಾಹವೀ. ಸ್ತ್ರೀ: [**ದೇ**] ಹೆಣ್ಣು ಕೋಗಿಲೆ ಹಕ್ಕಿ
ಪಿಅಯ. ಪು: [**ಪ್ರಿಯಕ**] ಒಂದು ಬಗೆಯ ವೃಕ್ಷ, ವಿಜಯಸಾರ ವೃಕ್ಷ(ಔಪ)
ಪಿಅರ. ಪುಂನ: [**ಪಿತೃ**] ಪಿತೃ ದೇವತೆಗಳು: ತಂದೆ – ತಾಯಿಗಳು, ತಂದೆ
ಪಿಅರಂಜ. ಸಕ: [**ಭಂಜ್**] ಮುರಿ, ಭಂಗಿಸು(ಪ್ರಾಕೃ)

ಪಿಅಲ(ಅಪ). '**ಪಿಅ=ಪ್ರಿಯ**' ಶಬ್ದವನ್ನು ನೋಡುವುದು

ಪಿಆ. **ಸ್ತ್ರೀ:** [**ಪ್ರಿಯಾ**] ಪ್ರಿಯೆ,ಪತ್ನಿ,ಹೆಂಡತಿ (ಕುಮಾ)

ಪಿಆಮಹ. **ಪು:** [**ಪಿತಾಮಹ**] ಚತುರ್ಮುಖ ಬ್ರಹ್ಮ, ತಂದೆಯ ತಂದೆ(ತಾತ)(ಉವ). **–ತಣಅ.** **ಪು:** [**–ತನಯ**] ಜಾಂಬವಂತ. **–ತ್ಥ.** **ನ:** [**ಪ್ರಿಯಾಸ್ತ್ರ**] ಬ್ರಹ್ಮಾಸ್ತ್ರ.

ಪಿಆಮಹೀ. **ಸ್ತ್ರೀ:** [**ಪಿತಾಮಹೀ**] ತಂದೆಯ ತಾಯಿ: ಅಜ್ಜಿ(ಸುಪಾ)

ಪಿಆರ(ಅಪ). **ವಿ:** [**ಪ್ರಿಯತರ**] ಹೆಚ್ಚು ಇಷ್ಟವಾದ,

ಪಿಆರೀ(ಅಪ). **ಸ್ತ್ರೀ:** [**ಪ್ರಿಯತರಾ**] ಹೆಚ್ಚು ಪ್ರಿಯಳಾದ, ಪ್ರಿಯೆ, ಹೆಂಡತಿ

ಪಿಆಲ. **ಪು:** [**ಪ್ರಿಯಾಲ**] ಮೆರಟಿ ಗಿಡ

ಪಿಆಲು. **ಪು:** [**ಪ್ರಿಯಾಲು**] ಒಂದು ಬಗೆಯ ಗಿಡ, ಮೆರಟಿ ಗಿಡ

ಪಿಆಸಾ. '**ಪಿವಾಸಾ**' ಶಬ್ದವನ್ನು ನೋಡುವುದು

ಪಿಇ. '**ಪೀಇ**' ಶಬ್ದವನ್ನು ನೋಡುವುದು

ಪಿಇ. **ಪು:** [**ಪಿತೃ**] ತಂದೆ, ಮಘಾ ನಕ್ಷತ್ರದ ಅಧಿಷ್ಠಾಯಕ ದೇವತೆ, **–ಮೇಹ.** **ಪು:** [**–ಮೇಘ**] ತಂದೆಯ ಹೋಮ ಮಾಡಲಾಗುವ ಯಜ್ಞ (ಪಉಮ). **–ವಣ.** **ನ:** [**–ವನ**] ಶ್ಮಶಾನ, **–ಹರ.** **ನ:** [**–ಗೃಹ**] ತಂದೆಯ ಮನೆ, ತೌರು ಮನೆ. '**ಪಿಡ**' ಶಬ್ದವನ್ನು ನೋಡುವುದು

ಪಿಇಜ್ಜ. **ಪು:** [**ಪಿತೃವ್ಯ**] ಚಿಕ್ಕಪ್ಪ, ತಂದೆಯ ಕಿರಿಯ ಸೋದರ.

ಪಿಇಯ. **ವಿ:** [**ಪೈತೃಕ**] ತಂದೆಯ, ತಂದೆಗೆ ಸಂಬಂಧಿಸಿದ (ಭಗ)

ಪಿಉ}. **ಪು:** [**ಪಿತೃ**] ತಂದೆ. **ಪುಂನ:** ತಂದೆ–ತಾಯಿ.

ಪಿಉಅ.} **–ಕಮ.** **ಪು:** [**–ಕ್ರಮ**] ಪಿತೃ –ವಂಶ, **–ಕುಲ.** **ನ:** [**–ಕುಲ**] ತಂದೆಯ ವಂಶ. **–ಘರ.** **ನ:** [**–ಗೃಹ**] ತಂದೆಯ ಮನೆ, ತೌರುಮನೆ. **–ಚ್ಛಾ, –ಚ್ಛೀ.** **ಸ್ತ್ರೀ:** [**–ಷ್ವಸೃ**] ತಂದೆಯ ಸೋದರಿ(ಗಾ). **–ಪಿಂಡ.** **ಪು:** [**–ಪಿಂಡ**] ಪಿತೃಗಳಿಗೆ ಶ್ರಾದ್ಧದಲ್ಲಿ ಇಡುವ ಅನ್ನದ ಉಂಡೆ. **–ಭಗಿಣೀ.** **ಸ್ತ್ರೀ:** [**–ಭಗಿನೀ**] ತಂದೆಯ ಸೋದರಿ. **–ವಇ.** **ಪು:** [**–ಪತಿ**] ಯಮರಾಜ. **–ವಣ.** **ನ:** [**–ವನ**] ಶ್ಮಶಾನ. **–ಸಿಆ.** **ಸ್ತ್ರೀ:** [**–ಷ್ವಸೃ**] ತಂದೆಯ ಸೋದರಿ(ಕುಮಾ). **–ಸೇಣಕಣ್ಹಾ.** **ಸ್ತ್ರೀ:** [**–ಸೇನಕೃಷ್ಣಾ**] ಶ್ರೇಣಿಕ ಮಹಾರಾಜನ ಒಬ್ಬ ಪತ್ನಿ. **–ಸ್ಸಿಯಾ.** '**–ಸಿಆ**' ಶಬ್ದವನ್ನು ನೋಡುವುದು. **–ಹರ.** '**–ಘರ**' ಶಬ್ದವನ್ನು ನೋಡುವುದು(ಭವಿ)

ಪಿಉಅ. '**ಪಿಇಅ**' ಶಬ್ದವನ್ನು ನೋಡುವುದು

ಪಿಉಚ್ಛಾ. **ಸ್ತ್ರೀ:** [**ದೇ. ಪಿತೃಷ್ವಸೃ**]ತಂದೆಯ ಸೋದರಿ

ಪಿಉಚ್ಛಾ}. **ಸ್ತ್ರೀ:** [**ದೇ**] ಗೆಳತಿ, ಸಖಿ(ಷಡ್)

ಪಿಉಚ್ಛಾ}.

ಪಿಉಲೀ. **ಸ್ತ್ರೀ:** [**ದೇ**] ಹತ್ತಿಯ ಗಿಡ.

ಪಿಉಲ್ಲ. '**ಪಿಉ**' ಶಬ್ದವನ್ನು ನೋಡುವುದು

ಪಿಂಕಾರ. **ಪು:** [**ಅಪಿಕಾರ**] '**ಅಪಿ**'ಶಬ್ದ, '**ಅಪಿ**' ಶಬ್ದದ ವ್ಯಾಖ್ಯಾನ(ತಾ)

ಪಿಂಖಾ. **ಸ್ತ್ರೀ:** [**ಪ್ರೇಂಖಾ**]ಡೋಲಿ,ಉಯ್ಯಾಲೆ(ಪಾಅ)

ಪಿಂಖೋಲ. **ಸಕ:** [**ಪ್ರೇಂಖೋಲಯ್**] ಉಯ್ಯಾಲೆ ತೂಗು,

ಪಿಂಗ. '**ಪಂಗ=ಗ್ರಹ್**' ಶಬ್ದವನ್ನು ನೋಡುವುದು

ಪಿಂಗ. **ಪು:** [**ಪಿಂಗ**] ಕಂದು ಹಳದಿ ಬಣ್ಣ, **ವಿ:** ಹಳದಿ ಬಣ್ಣದ(ಪಾಅ). **ಪುಂಸ್ತ್ರೀ:** ತಿತ್ತಿರಿ ಪಕ್ಷಿ, ಚಾತಕ ಪಕ್ಷಿ **ಸ್ತ್ರೀ:** **–ಗಾ.**

ಪಿಂಗಗ. **ಪು:** [**ದೇ**] ಕಪಿ, ಕೋತಿ

ಪಿಂಗಲ. **ಪು:** [**ಪಿಂಗಲ**] ನೀಲಿ –ಹಳದಿ ಬಣ್ಣ, **ವಿ:** ನೀಲಿ ಮಿಶ್ರಿತ ಹಳದಿ ಬಣ್ಣ. **ಪು:** ಗ್ರಹ –ವಿಶೇಷ(ತಾ). ಒಬ್ಬ ಯಕ್ಷ, ಒಡವೆಗಳನ್ನು ಪೂರಾ ಮಾಡುವ ರಾಜನ ಒಂದುನಿಧಿ(ತಾ). ಕೃಷ್ಣ –ಪುದ್ಗಲ ವಿಶೇಷ. ಪ್ರಾಕೃತ –ಪಿಂಗಲದ ಕರ್ತೃ ವಾದ ಒಬ್ಬ ಕವಿ. ಒಬ್ಬ ಜೈನ ಉಪಾಸಕ. **ನ:** ಪ್ರಾಕೃತದ ಒಂದು ಛಂದೋ ಗ್ರಂಥ. **–ಕುಮಾರ.** **ಪು:** [**–ಕುಮಾರ**] ಭಗವಾನ್ ಸುಪಾರ್ಶ್ವನಾಥನಿಂದ ದೀಕ್ಷೆ ತೆಗೆದುಕೊಂಡ ಒಬ್ಬ ರಾಜಕುಮಾರ. **–ಕ್ಖ.** **ವಿ:** [**ಪಿಂಗಾಕ್ಷ**] ಕಂದು–ಹಳದಿ ಬಣ್ಣದಿಂದ ಕೂಡಿದ ಕಣ್ಣುಳ್ಳವ, **ಪು:** ಒಂದುಬಗೆಯ ಪಕ್ಷಿ(ಪಣ್ಣ)

ಪಿಂಗಲಾಯಣ. **ನ:** [**ಪಿಂಗಲಾಯನ**] ಕೌತ್ಸ ಗೋತ್ರದ ಒಂದುಶಾಖೆ. **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದವನು

ಪಿಂಗಲಿಅ. **ವಿ:** [**ಪಿಂಗಲಿತ**] ಕಂದು ಹಳದಿ ಮಾಡಲ್ಪಟ್ಟ(ಸೇ)

ಪಿಂಗಲಿಅ. **ವಿ:** [**ಪೈಂಗಲಿಕ**] ಪಿಂಗಲಕ್ಕೆ ಸಂಬಂಧಿಸಿದ

ಪಿಂಗಾ. **'ಪಿಂಗ'** ಶಬ್ದವನ್ನು ನೋಡುವುದು
ಪಿಂಗಾಯಣ. **ನ:** **[ಪಿಂಗಾಯನ]** ಮಘಾ ನಕ್ಷತ್ರದ ಗೋತ್ರ
ಪಿಂಗಿಅ. **ವಿ:** **[ಗೃಹೀತ]** ಸ್ವೀಕರಿಸಲ್ಪಟ್ಟ
ಪಿಂಗಿಮ. **ಪುಂಸ್ತ್ರೀ:** **[ಪಿಂಗಿಮನ್]** ಹಳದಿತನ, ಹಳದಿ (ಗಉಡ)
ಪಿಂಗೀಕಯ. **ವಿ:** **[ಪಿಂಗೀಕೃತ]** ಹಳದಿ ಮಾಡಲ್ಪಟ್ಟ,
ಪಿಂಗುಲ. **ಪು:** **[ಪಿಂಗುಲ]** ಒಂದು ಬಗೆಯ ಪಕ್ಷಿ(ಪಣ್ಣ)
ಪಿಂಚು. **ಪುಂಸ್ತ್ರೀ:** **[ದೇ]** ಪಕ್ವವಾದ ಬರಲು ಮರ.(ದೇ)
ಪಿಂಛ.}. **'ಪಿಚ್ಛ'** ಶಬ್ದವನ್ನು ನೋಡುವುದು
ಪಿಂಛಡ}.
ಪಿಂಛೀ. **ಸ್ತ್ರೀ:** **[ಪಿಚ್ಛೀ]** ಸಂನ್ಯಾಸಿಯ ಒಂದು ಉಪಕರಣವಾದ ನವಿಲುಗರಿ
ಪಿಂಛೋಲೀ. **ಸ್ತ್ರೀ:** **[ದೇ]** ಬಾಯಿಯ ಉಸಿರಿನಿಂದ ಬಾರಿಸಲಾಗುವ ಒಂದು ಹುಲ್ಲಿನ ವಾದ್ಯ; ಪೀಪಿ
ಪಿಂಜ. **ಸಕ:** **[ಪಿಂಜ್]** ಹತ್ತಿಯನ್ನು ಹಿಂಜು, ಬಿಡಿಸಿ ಸ್ವಚ್ಛ ಮಾಡುವುದು
ಪಿಂಜಣ. **ನ:** **[ಪಿಂಜನ]** ಹತ್ತಿಯನ್ನು ಯಂತ್ರದ ಸಹಾಯದಿಂದ ಬಿಡಿಸುವುದು
ಪಿಂಜರ. **ಪು:** **[ಪಿಂಜರ]** ಹಳದಿ –ಕೆಂಪು ಮಿಶ್ರ ಬಣ್ಣ. ವಿ: ರಕ್ತ –ಹಳದಿ ಮಿಶ್ರಿತ ಬಣ್ಣದ, **ವ.ಕೃ –'ಪಿಂಜರಯಂತ'**
ಪಿಂಜರ. **ಸಕ:** **[ಪಿಂಜರಯ್]** ಕೆಂಪು –ಹಳದಿ ಮಿಶ್ರ ಬಣ್ಣದ್ದಾಗಿ ಮಾಡು **– ವ.ಕೃ –'ಪಿಂಜರಯಂತ'**
ಪಿಂಜರಣ. **ನ:** **[ಪಿಂಜರಣ]** ಕೆಂಪು –ಹಳದಿ ಮಿಶ್ರ ಬಣ್ಣದ್ದಾಗಿ ಮಾಡುವುದು(ಸಣ)
ಪಿಂಜರಿಅ. **ವಿ:** **[ಪಿಂಜರಿತ]** ಹಳದಿ –ಕೆಂಪು ಬಣ್ಣದ್ದಾಗಿ ಮಾಡಲಾದ(ಗಉಡ)
ಪಿಂಜರುಡ. **ಪು:** **[ದೇ]** ಗಂಡ –ಬೇರುಂಡ ಪಕ್ಷಿ
ಪಿಂಜಿಅ. **ವಿ:** **[ಪಿಂಜಿತ]** ಹಿಂಜಲ್ಪಟ್ಟ; ಸ್ವಚ್ಛಮಾಡಲ್ಪಟ್ಟ
ಪಿಂಜಿಅ. **ವಿ:** **[ದೇ]** ಅಲ್ಲಾಡುವುದು,ಅಲುಗಾಡುವುದು
ಪಿಂಡ. **ಸಕ:** **[ಪಿಂಡಯ್]** ರಾಶಿಹಾಕು, ಗುಡ್ಡೆ ಮಾಡು.. **ಅಕ:** ಒಟ್ಟಾಗು, ಒಟ್ಟು ಸೇರು
ಪಿಂಡ. **ಪು:** **[ಪಿಂಡ]** ಕಠಿಣವಾದ ಕಬ್ಬಿಣವೇ ಮೊದಲಾದ ದ್ರವ್ಯಗಳ ಸೇರುವಿಕೆ. ರಾಶಿ. ಗುಂಪು. ಬೆಲ್ಲವೇ ಮೊದಲಾದವುಗಳಿಂದಾದ ಗೋಳಾಕಾರದ ವಸ್ತು. ಭಿಕ್ಷೆಯಲ್ಲಿ ದೊರೆಯುವ ಆಹಾರ(ಉವ). ದೇಹದ ಒಂದು ಅಂಗ. ದೇಹ. ಮನೆಯ ಒಂದು ಭಾಗ, ಶ್ರಾದ್ಧದಲ್ಲಿ ಇಡುವ ಅನ್ನದ ಉಂಡೆ. ಗಂಧ ದ್ರವ್ಯವಾದ ಲೋಭಾನ, ದಾಸವಾಳದ ಹೂವು, ಕಬಳ: ಅನ್ನದ ತುತ್ತು. ಆನೆಯ ಕುಂಭಸ್ಥಳ, ಅಶೋಕ ವೃಕ್ಷ. **ನ:** ಜೀವನೋಪಾಯ, ಕಬ್ಬಿಣ. ಸಾಂದ್ರವಾದ, ದಟ್ಟವಾದ, ಒಡಗೂಡಿರುವ, ಕಲೆತಿರುವ. **–ಕಪ್ಪಿಅ.** **ವಿ:** **[–ಕಲ್ಪಿಕ]** ಎಲ್ಲ ರೀತಿಯಲ್ಲೂ ದೋಷರಹಿತವಾದ ಭಿಕ್ಷೆಯನ್ನು ಸ್ವೀಕರಿಸುವವನು. **–ಗುಲಾ.** **ಸ್ತ್ರೀ:** **[–ಗುಲಾ]**. ಬೆಲ್ಲ (ಪಿಂಡ). **–ಘರ.** **ನ:** **[–ಗೃಹ]** ಕೆಸರಿನಿಂದ(ಹಸಿ ಮಣ್ಣಿನಿಂದ) ಕಟ್ಟಿದ ಮನೆ. **ತ್ಥ.** **ಪು:** **[–ಸ್ಥ]** ತೀರ್ಥಂಕರನ ಒಂದು ಅವಸ್ಥೆ. **–ತ್ಥ.** **ಪು:** **[ಪಿಂಢಾರ್ಥ]** ಸಮುದಾಯದ ಸಲುವಾಗಿ. **–ದಾಣ.** **ನ:** **[–ದಾನ]** ಪಿಂಡ ದಾನ ಕ್ರಿಯೆ. ಶ್ರಾದ್ಧ. **–ಪಯಡಿ.** **ಸ್ತ್ರೀ:** **[–ಪ್ರಕೃತಿ]** ಒಳಭೇದಗಳನ್ನೊಳಗೊಂಡ ಪ್ರಕೃತಿ. **–ವದ್ಧಣ.** **ನ:** **[–ವರ್ಧನ]** ಆಹಾರ ವೃದ್ಧಿ, ಅನ್ನ ಪ್ರಾಶನ. **–ವದ್ಧಾವಣ.** **ನ:** **[–ವರ್ಧನ]** ಆಹಾರವನ್ನು ಹೆಚ್ಚಿಸುವುದು(ಔಪ). **ವಾಯ.** **ಪು:** **[–ಪಾತ]** ಭಿಕ್ಷಾಲಾಭ(ಠಾ). **–ವಾಸ.** **ಪು:** **[–ವಾಸ]** ಸ್ನೇಹಿತರು, **–ವಿಸುದ್ಧಿ, –ವಿಸೋಹಿ.** **ಸ್ತ್ರೀ:** **[–ವಿಶುದ್ಧಿ]** ಭಿಕ್ಷೆಯಲ್ಲಿ ದೋಷವಿಲ್ಲದಿರುವಿಕೆ.
ಪಿಂಡಗ. **ಪು:** **[ಪಿಂಡಕ]** ಮೇಲಿನ ಶಬ್ದವನ್ನು ನೋಡುವುದು
ಪಿಂಡಣ. **ನ:** **[ಪಿಂಡನ]** ದ್ರವ್ಯಗಳನ್ನು ಒಂದೆಡೆ ಸೇರಿಸುವುದು. ಜ್ಞಾನಾವರಣೀಯುವೇ ಮೊದಲಾದ ಕರ್ಮಗಳು(ಪಿಂಡ)
ಪಿಂಡಣಾ. **ಸ್ತ್ರೀ:** **[ಪಿಂಡನಾ]** ಸಮೂಹ, ದ್ರವ್ಯಗಳ ಪರಸ್ಪರ ಸಂಯೋಜನೆ.
ಪಿಂಡಯ. **'ಪಿಂಡ'** ಶಬ್ದವನ್ನು ನೋಡುವುದು
ಪಿಂಡರಯ. **ನ:** **[ದೇ]** ದಾಳಿಂಬೆ
ಪಿಂಡಲಇಯ. **ವಿ:** **[ದೇ]** ಪಿಂಡಾಕಾರವಾಗಿ ಮಾಡಲ್ಪಟ್ಟ(ಪಅ)
ಪಿಂಡಲಗ. **ನ:** **[ದೇ]** ಪುಷ್ಪಪಾತ್ರೆ(ಠಾ)
ಪಿಂಡವಾಇಅ.ವಿ: **[ಪಿಂಡಪಾತಿಕ, ಪೈಂಡಪಾತಿಕ]** ಭಿಕ್ಷೆಯಲ್ಲಿ ಆಹಾರ ದೊರಕಿದವನು(ಠಾ)

ಪಿಂಡಾರ. ಪು: [ಪಿಂಡಾರ] ಗೊಲ್ಲ, ಗೌಳಿಗ
ಪಿಂಡಾಲ. ಪು: [ಪಿಂಡಾಲು] ಆಲೂಗೆಡ್ಡೆ, ಪಿಂಡಾಕಾರದ ಒಂದು ಗೆಡ್ಡೆ
ಪಿಂಡಿ-. 'ಪಿಂಡೀ' ಶಬ್ದವನ್ನು ನೋಡುವುದು
ಪಿಂಡಿಮ. ವಿ: [ಪಿಂಡಿಮ] ಪಿಂಡದಲ್ಲಿ ತಯಾರಿಸಲಾದ, ಎತ್ತಿನಗಾಡಿ(ಪಣ್ಣ), ಪುದ್ಗಲ -ಸಮೂಹ, ಗುಂಪಾಗಿ ಕೂಡಿಕೊಂಡಿರುವುದು
ಪಿಂಡಿಯ. ವಿ: [ಪಿಂಡಿತ] ಒಟ್ಟುಗೂಡಿಸಲ್ಪಟ್ಟ, ರಾಶಿಮಾಡಿದ, ಗುಣಿಸಲ್ಪಟ್ಟ, ದೊಡ್ಡದಾಗಿ ಮಾಡಲ್ಪಟ್ಟ(ಔಪ)
ಪಿಂಡಿಯಾ. ಸ್ತ್ರೀ: [ಪಿಂಡಿಕಾ] ಮಂಡಿಯ ಕೆಳಭಾಗದ ಮಾಂಸಲವಾದ ಭಾಗ, ವರ್ತುಲಾಕಾರದ ವಸ್ತು(ಔಪ). 'ಪಿಂಡೀ' ಶಬ್ದವನ್ನು ನೋಡುವುದು
ಪಿಂಡೀ. ಸ್ತ್ರೀ: [ಪಿಂಡೀ] ಗುಚ್ಛ, ಮನೆಯ ಆಧಾರಭೂತವಾದ ಮರದ ವಸ್ತು, ಮಣೆ, ಗೋಳಾಕಾರದ ವಸ್ತು(ಸೂಅ), ಖರ್ಜೂರ -ವಿಶೇಷ. 'ಪಿಂಡಿಯಾ' ಶಬ್ದವನ್ನು ನೋಡುವುದು
ಪಿಂಡೀ. ಸ್ತ್ರೀ: [ದೇ] ಹೂಗೊಂಚಲು(ದೇ)
ಪಿಂಡೀರ. ನ: [ದೇ. ಪಿಂಡೀರ] ದಾಳಿಂಬೆ
ಪಿಂಡೇಸಣಾ. ಸ್ತ್ರೀ: [ಪಿಂಡೈಷಣಾ] ಭಿಕ್ಷೆಯನ್ನು ಸ್ವೀಕರಿಸುವ ರೀತಿ(ತಾ)
ಪಿಂಡೇಸಿಯ. ವಿ: [ಪಿಂಡೈಷಿಕ] ಭಿಕ್ಷೆಯನ್ನು ಹುಡುಕುವವನು
ಪಿಂಡೋಲಗ.}. ವಿ: [ಪಿಂಡಾವಲಗಕ] ಭಿಕ್ಷೆಯಿಂದ
ಪಿಂಡೋಲಗಯ}. ಜೀವನ ನಿರ್ವಹಣೆ
ಪಿಂಡೋಲಯ}. ಮಾಡುವವನು, ಭಿಕ್ಷು(ಆಚಾ)
ಪಿಂಧ.(ಅಪ). ಸಕ: [ಪಿ +ಧಾ] ಮುಚ್ಚು, -'ಪಿಂಧಉ'
ಪಿಂಧಣ.(ಅಪ). ನ: [ಪಿಧಾನ] ಮುಚ್ಚುವುದು(ಪಿಂಗ)
ಪಿಂಸುಲೀ. ಸ್ತ್ರೀ: [ದೇ] ಬಾಯಿಯಲ್ಲಿ ಗಾಳಿ ತುಂಬಿಕೊಂಡು ಊದುವ ಒಂದು ತೃಣ -ವಾದ್ಯ, ಪೀಪಿ.
ಪಿಕ. ಪುಂಸ್ತ್ರೀ: [ಪಿಕ]ಕೋಗಿಲೆ ಹಕ್ಕಿ. ಸ್ತ್ರೀ: -ಕೀ
ಪಿಕ್ಕ. 'ಪಕ್ಕ=ಪಕ್ವ' ಶಬ್ದವನ್ನು ನೋಡುವುದು
ಪಿಕ್ಖ. ಸಕ: [ಪ್ರ +ಈಕ್ಷ್] ನೋಡು. -'ಪಿಕ್ಖಇ'(ಭವಿ)
ಪಿಕ್ಖಗ. ವಿ: [ಪ್ರೇಕ್ಷಕ] ನೋಡುವವನು
ಪಿಕ್ಖಣ. ನ: [ಪ್ರೇಕ್ಷಣ] ನಿರೀಕ್ಷಣೆ, ನೋಡುವುದು
ಪಿಕ್ಖಿಯ. ವಿ: [ಪ್ರೇಕ್ಷಿತ] ನೋಡಲ್ಪಟ್ಟ

ಪಿಗ. 'ಪಿಕ' ಶಬ್ದವನ್ನು ನೋಡುವುದು
ಪಿಚು. ಪು: [ಪಿಚು] ಹತ್ತಿ(ದೇ). -ಲಯಾ. ಸ್ತ್ರೀ: [-ಲತಾ] ಹತ್ತಿಯ ಗಿಡ
ಪಿಚುಮಂದ. ಪು: [ಪಿಚುಮಂದ]ಬೇವಿನ ಮರ.
ಪಿಚ್ಚ}. ಅ: [ಪ್ರೇತ್ಯ] ಪರಲೋಕ, ಲೋಕಾಂತರ,
ಪಿಚ್ಚಾ}. ಮುಂದಿನ ಜನ್ಮ(ಸುಪಾ)
ಪಿಚ್ಚಾ. 'ಪಿಅ=ಪಾ' ಶಬ್ದವನ್ನು ನೋಡುವುದು
ಪಿಚ್ಚಿಯ. ವಿ: [ದೇ. ಪಿಚ್ಚಿತ] ಚೆನ್ನಾಗಿ ಬಡಿಯಲ್ಪಟ್ಟ ತೊಗಟೆ, ಹದಮಾಡಿದ ತೊಗಟೆ
ಪಿಚ್ಛ. ಸಕ: [ದೃಶ್, ಪ್ರ +ಈಕ್ಷ್] ನೋಡು. ವ. ಕೃ - 'ಪಿಚ್ಛಂತ'
ಪಿಚ್ಛ. ನ: [ಪಿಚ್ಛ] ಪುಕ್ಕ, ನವಿಲುಗರಿ(ಣಾಯಾ), ರೆಕ್ಕೆ, ಬಾಲ(ಗಲುಡ)
ಪಿಚ್ಛಣ. ನ: [ಪ್ರೇಕ್ಷಣ] ನೋಡುವುದು, ಅವಲೋಕನ
ಪಿಚ್ಛಣ}. ನ: [ಪ್ರೇಕ್ಷಣ, -ಕ] ತಮಾಶೆ, ಆಟ, ನಾಟಕ
ಪಿಚ್ಛಣಯ}.
ಪಿಚ್ಛಲ. ವಿ: [ಪಿಚ್ಛಲ] ಸ್ನಿಗ್ಧ, ಜಿಡ್ಡಿನಿಂದ ಕೂಡಿದ, ನುಣುಪಾಗಿರುವ,
ಪಿಚ್ಛಾ. ಸ್ತ್ರೀ: [ಪ್ರೇಕ್ಷಾ] ನೋಡುವುದು, -ಭೂಮಿ. ಸ್ತ್ರೀ: [-ಭೂಮಿ] ರಂಗಭೂಮಿ, ರಂಗ ಮಂಟಪ.
ಪಿಚ್ಛಿ. ವಿ: [ಪಿಚ್ಛಿನ್] ಗರಿ ಉಳ್ಳ(ಔಪ)
ಪಿಚ್ಛಿರ. ವಿ: [ಪ್ರೇಕ್ಷಿತೃ] ಪ್ರೇಕ್ಷಕ, ನೋಡುವವನು (ಸುಪಾ)
ಪಿಚ್ಛಿಲ. ವಿ: [ಪಿಚ್ಛಿಲ] ಸ್ನಿಗ್ಧ, ಜಿಡ್ಡಿನಿಂದ ಕೂಡಿದ, ನುಣುಪಾದ
ಪಿಚ್ಛಿಲೀ. ಸ್ತ್ರೀ: [ದೇ] ನಾಚಿಕೆ, ಲಜ್ಜೆ(ದೇ)
ಪಿಚ್ಛೀ. ಸ್ತ್ರೀ: [ದೇ] ಶಿಖೆ, ಜುಟ್ಟು
ಪಿಚ್ಛೀ. ಸ್ತ್ರೀ: [ಪಿಚ್ಛಿಕಾ] ಗರಿ(ಗಾ)
ಪಿಚ್ಛೀ. ಸ್ತ್ರೀ: [ಪೃಥ್ವೀ] ಭೂಮಿ, ಧರಿತ್ರಿ(ಕುಮಾ), ದೊಡ್ಡ ಏಲಕ್ಕಿ, ಪುನರ್ನವ, ಕಪ್ಪು ಜೀರಿಗೆ, ಇಂಗುದೀ ವೃಕ್ಷ.
ಪಿಜ್ಜ. ಸಕ: [ಪಾ] ಕುಡಿ
ಪಿಜ್ಜ. ಪುಂನ: [ಪ್ರೇಮನ್] ಪ್ರೇಮ,ಅನುರಾಗ (ಸೂಅ).
ಪಿಜ್ಜ}. 'ಪಾ=ಪಾ' ಶಬ್ದವನ್ನು ನೋಡುವುದು
ಪಿಜ್ಜಂತ}.
ಪಿಜ್ಜಾ. ಸ್ತ್ರೀ: [ಪೇಯಾ] ಅಕ್ಕಿಯ ಗಂಜಿ, ಅನ್ನದ ಮೇಲಿನ ಅಂಬಲಿ.

ಪಿಜ್ಜಾವಿಅ. ವಿ: [**ಪಾಯಿತ**] ಕಡಿಸಲ್ಪಟ್ಟವ(ಸುಖ).
ಪಿಟ್ಟ. **ಸಕ:** [**ಪೀಡಯ್**] ಪೀಡಿಸು, ನೋಯಿಸು. –'**ಪಿಟ್ಟಂತಿ**'
ಪಿಟ್ಟ. **ಸಕ:** [**ಭ್ರಂಶ್**] ಕೆಳಕ್ಕೆ ಕಳಚಿಬೀಳು, '**ಪಿಟ್ಟಇ**'
ಪಿಟ್ಟ. **ಸಕ:** [**ಪಿಟ್ಟಯ್**] ಹೊಡೆ(ಆಚಾ)
ಪಿಟ್ಟ. ನ: [ದೇ] ಹೊಟ್ಟೆ, ಉದರ(ಸುಪಾ)
ಪಿಟ್ಟಣ. ನ: [**ಪಿಟ್ಟನ**] ಆಘಾತ, ಹೊಡೆತ, ಏಟು(ಸೂಅ)
ಪಿಟ್ಟಣ. ನ: [**ಪೀಡನ**] ಮರ್ದನ, ಹಿಂಸಿಸುವುದು, ಕ್ಲೇಶ(ಸೂಅ)
ಪಿಟ್ಟಣಾ. ಸ್ತ್ರೀ: [**ಪಿಟ್ಟನಾ**] ಹೊಡೆತ, ಏಟು(ಓಘ)
ಪಿಟ್ಟಾವಣಯಾ. ಸ್ತ್ರೀ: [**ಪಿಟ್ಟನಾ**] ಏಟು ಕೊಡಿಸುವುದು, ಹೊಡೆಸುವುದು(ಭಗ)
ಪಿಟ್ಟಿಯ. ವಿ: [**ಪಿಟ್ಟಿತ**] ಹೊಡೆಯಲ್ಪಟ್ಟ, ಆಘಾತಿಸಲ್ಪಟ್ಟ
ಪಿಟ್ಠ. ನ: [**ಪಿಷ್ಟ**] ಅಕ್ಕಿ, ಗೋಧಿ ಮೊದಲಾದವುಗಳ ಹಿಟ್ಟು(ಆಯಾ)
ಪಿಟ್ಠ. ನ: [**ಪೃಷ್ಠ**] ದೇಹದ ಹಿಂಭಾಗ, ಬೆನ್ನು(ಔಪ), –ಓ. ಅ; [**–ತಸ್**] ಹಿಂದಿನಿಂದ, ಬೆನ್ನಿನ ಕಡೆಯಿಂದ. **–ಕರಂಡಗ.** ನ: [**–ಕರಂಡಕ**] ಬೆನ್ನುಮೂಳೆ. **–ಚರ.** ವಿ: [**–ಚರ**] ಹಿಂಬಾಲಕ, ಅನುಯಾಯಿ. '**ಪಿಟ್ಠಿ**' ಶಬ್ದವನ್ನು ನೋಡುವುದು
ಪಿಟ್ಠ. ವಿ: [**ಸ್ಪೃಷ್ಟ**] ಮುಟ್ಟಲ್ಪಟ್ಟ, ಸ್ಪರ್ಶಿಸಲ್ಪಟ್ಟ, ನ: ಸ್ಪರ್ಶ
ಪಿಟ್ಠ. ವಿ: [**ಪೃಷ್ಟ**] ಕೇಳಲ್ಪಟ್ಟ, ಪ್ರಶ್ನಿಸಲ್ಪಟ್ಟ, ನ: ಪ್ರಶ್ನೆ(ಗಾ)
ಪಿಟ್ಠಂತ. ನ: [**ದೇ. ಪೃಷ್ಠಾಂತ**] ಗುದ(ದೇ)
ಪಿಟ್ಠಖಉರಾ. ಸ್ತ್ರೀ: [ದೇ] ಕಲುಷಿತಗೊಂಡಿರುವ ಮದಿರೆ,
ಪಿಟ್ಠಖಉರಿಆ. ಸ್ತ್ರೀ: [ದೇ] ಮದಿರೆ, ಹೆಂಡ(ಪಾಅ)
ಪಿಟ್ಠವ್ವ. ವಿ: [**ಪ್ರಷ್ಟವ್ಯ**] ಕೇಳಲು ಯೋಗ್ಯವಾದ, ಪ್ರಶ್ನಿಸಲರ್ಹವಾದ(ರಂಭಾ)
ಪಿಟ್ಠಾಯಯ. ಪುಂನ: [**ಪಿಷ್ಟಾತಕ**] ಕೇಸರವೇ ಮೊದಲಾದ ಸುಗಂಧ ದ್ರವ್ಯಗಳು.
ಪಿಟ್ಠಿ. ಸ್ತ್ರೀ: [**ಪೃಷ್ಠ**] ಬೆನ್ನು, ದೇಹದ ಹಿಂಭಾಗ, (ಣಾಯಾ), **–ಗ.** ವಿ: [**–ಗ**] ಹಿಂದಕ್ಕೆ ನಡೆಯುವವನು. **–ಚಂಪಾ.** ಸ್ತ್ರೀ: [**–ಚಂಪಾ**]. ಚಂಪಾ ನಗರದ ಸಮೀಪದಲ್ಲಿರುವ ನಗರಿ. **–ಮಂಸ.** ನ: [**–ಮಾಂಸ**] ಪರೋಕ್ಷವಾಗಿ ಇನ್ನೊಬ್ಬರ ದೋಷವನ್ನು ಹಾಡಿಹೊಗಳುವುದು. **–ಮಂಸಿಯ.**ವಿ: [**–ಮಾಂಸಿಕ**] ಪರೋಕ್ಷವಾಗಿ ದೋಷಗಳನ್ನು ಹೇಳುವವನು, ಹಿಂದೆ ನಿಂದಿಸುವವನು. **–ಮಾಇಯಾ.** ಸ್ತ್ರೀ: [**–ಮಾತೃಕಾ**] ಒಬ್ಬ ಅನುತ್ತರ –ಗಾಮಿನಿ ಹೆಣ್ಣು. '**ಪಿಟ್ಠ=ಪೃಷ್ಠ**' ಶಬ್ದವನ್ನು ನೋಡುವುದು
ಪಿಟ್ಠೀ. ಸ್ತ್ರೀ: [**ಪೈಷ್ಟೀ**] ಹಿಟ್ಟಿನಿಂದ ತಯಾರಿಸಲಾದ ಹೆಂಡ(ಬೃಹ)
ಪಿಡ. ಪು: [**ಪಿಟ**] ಬಿದಿರಿನಿಂದ ಮಾಡಿದ ಪಾತ್ರೆ, ಬುಟ್ಟಿ, ವಶಕ್ಕೆ ತೆಗೆದುಕೊಳ್ಳುವುದು(ಸುಪಾ)
ಪಿಡಗ. '**ಪಿಡಯ=ಪಿಟಕ**' ಶಬ್ದವನ್ನು ನೋಡುವುದು (ಉವಾ).
ಪಿಡಚ್ಛಾ. ಸ್ತ್ರೀ: [ದೇ] ಗೆಳತಿ
ಪಿಡಯ. ನ: [**ಪಿಟಕ**] ಬಿದಿರಿನಿಂದ ಮಾಡಿದ ಬುಟ್ಟಿ ಇಬ್ಬರು ಚಂದ್ರರು ಮತ್ತು ಇಬ್ಬರು ಸೂರ್ಯರ ಸಮೂಹ.
ಪಿಡಯ. ವಿ: [ದೇ] ರಂಧ್ರ ಮಾಡಿದ
ಪಿಡವ. **ಸಕ:** [**ಅರ್ಜ್**] ಸಂಪಾದಿಸು, ಉತ್ಪಾದಿಸು,
ಪಿಡಿಆ. ಸ್ತ್ರೀ: [**ಪಿಟಿಕಾ**] ಬಿದಿರಿನಿಂದ ತಯಾರಿಸಲಾದ ಪಾತ್ರೆ, ಬುಟ್ಟಿ, ಚಿಕ್ಕ ಪೆಟ್ಟಿಗೆಯಂಥದು(ಉಪ)
ಪಿಡ್ಡ. **ಸಕ:** [**ಪೀಡಯ್**] ಪೀಡಿಸು, ನೋಯಿಸು
ಪಿಡ್ಡ. **ಅಕ:** [**ಭ್ರಂಶ್**] ಕೆಳಗೆ ಬೀಳು
ಪಿಡ್ಡಇಅ. ವಿ: [ದೇ] ಪ್ರಶಾಂತ
ಪಿಢಂ. ಅ: [**ಪೃಥಕ್**] ಬೇರೆಯಾದ, ಭಿನ್ನವಾದ, ಪ್ರತ್ಯೇಕವಾಗಿ
ಪಿಢರ. ಪುಂನ: [**ಪಿಠರ**] ಮಡಕೆ, ಅನ್ನ ಬೇಯಿಸುವ ಪಾತ್ರೆ(ಆಚಾ). ಗೃಹ –ವಿಶೇಷ, ಕೊನ್ನಾರಿ ಗೆಡ್ಡೆ, ಕಡೆಗೋಲು
ಪಿಣದ್ಧ. **ಸಕ:** [**ಪಿ +ನಹ್, ಪಿನಿ +ಧಾ**] ಮುಚ್ಚು, ಉಡಿಸು, ತೊಡಿಸು, ಕಟ್ಟು, –'**ಪಿಣದ್ಧಇ**'
ಪಿಣದ್ಧ. ವಿ: [**ಪಿನದ್ಧ**] ಧರಿಸಿದ(ಪಾಅ), ಕಟ್ಟಲ್ಪಟ್ಟ, ತೊಡಿಸಲ್ಪಟ್ಟ, ಉಡಿಸಲ್ಪಟ್ಟ,
ಪಿಣದ್ಧಾವಿದ(ಶೌ). ವಿ: [**ಪಿನಿಧಾಪಿತ**] ಉಡಿಸಲ್ಪಟ್ಟ, ತೊಡಿಸಲ್ಪಟ್ಟ(ಸುಪಾ)
ಪಿಣಾಇ, ಪು: [**ಪಿನಾಕಿನ್**] ಪಿನಾಕವೆಂಬ ಧನುಸ್ಸು ಹಿಡಿದ ಶಿವ, ಈಶ್ವರ(ಪಾಅ)
ಪಿಣಾಈ. ಸ್ತ್ರೀ: [ದೇ] ಆಜ್ಞೆ, ಆದೇಶ(ದೇ)
ಪಿಣಾಗ. ಪುಂಸ. [**ಪಿನಾಕ**] ಶಿವ ಧನುಸ್ಸು, ಶಿವನ ತ್ರಿಶೂಲ(ಧರ್ಮವಿ)

ಪಿಣಾಗಿ. 'ಪಿಣಾಇ' ಶಬ್ದವನ್ನು ನೋಡುವುದು
ಪಿಣಾಯ. 'ಪಿಣಾಗ' ಶಬ್ದವನ್ನು ನೋಡುವುದು
ಪಿಣಾಯ. ಪು: [ದೇ] ಬಲಾತ್ಕಾರ
ಪಿಣಿದ್ಧ. ವಿ: [ಪಿನದ್ಧ, ಪಿನಿಹಿತ] 'ಪಿಣದ್ಧ= ಪಿನದ್ಧ' ಶಬ್ದವನ್ನು ನೋಡುವುದು
ಪಿಣಿಧಾ. ಸಕ: [ಪಿನಿ+ಧಾ] 'ಪಿಣದ್ಧ=ಪಿ +ನಹ್' ಶಬ್ದವನ್ನು ನೋಡುವುದು
ಪಿಣ್ಣಾಗ. 'ಪಿನ್ನಾಗ' ಶಬ್ದವನ್ನು ನೋಡುವುದು
ಪಿಣ್ಣಿಯಾ. ಸ್ತ್ರೀ: [ದೇ. ಪಿಣ್ಯಿಕಾ] ಛ'ತ್ರಾ್ರಕಾರ'ದ', ಒಂದು ಜಾತಿಯ ಸುವಾಸನೆಯ ಹುಲ್ಲು
ಪಿಣ್ಣಿ. ಸ್ತ್ರೀ: [ದೇ] ಕೃಶಳಾಗಿರುವ ಹೆಂಗಸು(ದೇ)
ಪಿತ್ತ. ಪುಂನ: [ಪಿತ್ತ] ದೇಹದೊಳಗಿನ ಒಂದು ಧಾತು, ಕಹಿರಸ(ಭಗ). **–ಜ್ಜರ.** ಪು: [–ಜ್ವರ] ಪಿತ್ತದಿಂದ ಉಂಟಾಗುವ ಜ್ವರ. **–ಮುಚ್ಛಾ.** ಸ್ತ್ರೀ: [–ಮೂರ್ಚ್ಛಾ] ಪಿತ್ತ ಉದ್ರೇಕಗೊಂಡದ್ದರಿಂದಾಗಿಪ್ರಜ್ಞೆ ತಪ್ಪುವುದು.
ಪಿತ್ತಲ. ನ: [ಪಿತ್ತಲ] ಹಿತ್ತಾಳೆ ಲೋಹ(ಕುಪ್ರ)
ಪಿತ್ತಿಜ್ಜ}. ಪು: [ಪಿತೃವ್ಯ] ಚಿಕ್ಕಪ್ಪ/ದೊಡ್ಡಪ್ಪ. ತಂದೆಯ
ಪಿತ್ತಿಯ}. ಸೋದರ
ಪಿತ್ತಿಯ. ವಿ: [ಪೈತ್ತಿಕ] ಪಿತ್ತದ, ಪಿತ್ತ ಸಂಬಂಧವಾದ (ತಂದು)
ಪಿಧಂ. ಅ: [ಪೃಥಕ್] ಬೇರೆಯಾದ, ಭಿನ್ನವಾದ, ಪ್ರತ್ಯೇಕವಾಗಿ
ಪಿಧಾಣ. 'ಪಿಹಾಣ' ಶಬ್ದವನ್ನು ನೋಡುವುದು
ಪಿನ್ನಾಗ}. ಪು: [ಪಿಣ್ಯಾಕ] ಎಣ್ಣೆ ತೆಗೆದ ಮೇಲೆ
ಪಿನ್ನಾಯ}. ಉಳಿಯುವ ಹಿಂಡಿ, ಹೊಟ್ಟು(ಸೂಅ)
ಪಿಪೀಲಿಅ. ಪು: [ಪಿಪೀಲಕ] ಇರುವೆ
ಪಿಪೀಲಿಆ}. ಸ್ತ್ರೀ: [ಪಿಪೀಲಿಕಾ] ಹೆಣ್ಣ ಇರುವೆ(ಪಣ್ಹಾ)
ಪಿಪೀಲಿಕಾ}.
ಪಿಪ್ಪಡ. ಸಕ: [ದೇ] ಬಡಬಡಿಸು, ಮನಸ್ಸಿಗೆ ಬಂದದ್ದನ್ನು ಗಳಹು –'ಪಿಪ್ಪಡಇ'
ಪಿಪ್ಪಡಾ. ಸ್ತ್ರೀ: [ದೇ] ಕುರಿ, ಮೇಕೆ ಮುಂತಾದ ಪಶುಗಳಿಗೆ ಹತ್ತುವ ಉಣ್ಣೆ
ಪಿಪ್ಪಡಿಅ. ವಿ: [ದೇ] ಬಡಬಡಿಸಿದವನು, ಮನಸ್ಸಿಗೆ ಬಂದದ್ದು ಹರಟಿದವನು. ನ: ಬಡಬಡಿಸುವುದು, ಹರಟೆ
ಪಿಪ್ಪಯ. ಪು: [ದೇ] ಸೊಳ್ಳೆ(ದೇ), ಪಿಶಾಚ, ಭೂತ(ಪಾಅ), ವಿ: ಹುಚ್ಚುಹಿಡಿದವನು(ದೇ)
ಪಿಪ್ಪರ. ಪು: [ದೇ] ಹಂಸ, ಎತ್ತು(ದೇ)
ಪಿಪ್ಪರೀ. ಸ್ತ್ರೀ: [ಪಿಪ್ಪಲೀ] ಹಿಪ್ಪಲಿ ಗಿಡ(ಪಣ್ಣ)
ಪಿಪ್ಪಲ. ಪುಂನ: [ಪಿಪ್ಪಲ] ಅಶ್ವತ್ಥ ವೃಕ್ಷ, ಅರಳಿ ಮರ(ಉಪ), ಸಣ್ಣ ಕತ್ತಿ, ಕ್ಷೌರಿಕನ ಕತ್ತಿ(ವಿಪಾ)
ಪಿಪ್ಪಲಗ. ವಿ: [ಪೈಪ್ಪಲಕ] ಅರಳಿಯ ಎಲೆಯಿಂದ ಮಾಡಲ್ಪಟ್ಟ
ಪಿಪ್ಪಲಿ}. ಸ್ತ್ರೀ: [ಪಿಪ್ಪಲಿ, ಲೀ] ಹಿಪ್ಪಲಿ, ಔಷಧೀಯ
ಪಿಪ್ಪಲೀ}. ಸಸ್ಯ
ಪಿಪ್ಪಿಡಿಅ. 'ಪಿಪ್ಪಡಿಅ' ಶಬ್ದವನ್ನು ನೋಡುವುದು
ಪಿಪ್ಪಿಯಾ. ಸ್ತ್ರೀ: [ದೇ]ಹಲ್ಲಿನ ಕೊಳೆ
ಪಿವ. 'ಪಿಅ=ಪಾ' ಶಬ್ದವನ್ನು ನೋಡುವುದು
ಪಿಬ್ಬ. ನ: [ದೇ] ನೀರು, ಜಲ
ಪಿಮ್ಮ. ಪುಂನ: [ಪ್ರೇಮನ್] ಪ್ರೇಮ, ಪ್ರೀತಿ, ಅನುರಾಗ (ಪಾಅ)
ಪಿಯಾಲ. ಪು: [ಪ್ರಿಯಾಲ] ಮೆರಟೆ ಗಿಡ, ನ: ಮೆರಟೆ ಕಾಯಿ
ಪಿಯಾಸ(ಅಪ). ಸ್ತ್ರೀ: [ಪಿಪಾಸಾ] ಬಾಯಾರಿಕೆ (ಭವಿ)
ಪಿರಿಡೀ. ಸ್ತ್ರೀ: [ದೇ] ಶಕುನದ ಹಕ್ಕಿ(ದೇ)
ಪಿರಿಪಿರಿಂಯಾ. 'ಪರಿಪಿರಿಂಯಾ' ಶಬ್ದವನ್ನು ನೋಡುವುದು
ಪಿರಿಲೀ. ಸ್ತ್ರೀ: [ಪಿರಿಲೀ] ಗುಚ್ಛ, ವನಸ್ಪತಿ –ವಿಶೇಷ, ವಾದ್ಯ –ವಿಶೇಷ(ರಾಜ)
ಪಿಲ. 'ಪೀಲ' ಶಬ್ದವನ್ನು ನೋಡುವುದು
ಪಿಲಂಖು}. ಪು: [ಪ್ಲಕ್ಷ] ಬಸರಿ ಮರ(ಓಘ) ಅರಳಿ
ಪಿಲಕ್ಖು}. ಮರ, ಜುಲ್ಲಿ ಗಿಡ(ನಿಚೂ)
ಪಿಲಣ. ನ: [ದೇ] ನುಣುಪಾದ ಪ್ರದೇಶ, ಸ್ನಿಗ್ಧ ಅಥವಾ ಜಿಡ್ಡಿನಿಂದ ಕೂಡಿದ ಜಾಗ
ಪಿಲಾ. 'ಪೀಲಾ' ಶಬ್ದವನ್ನು ನೋಡುವುದು
ಪಿಲಾಗ. ನ: [ಪಿಟಕ] ಹೊಪ್ಪೆ, ಹೊಪ್ಪಳೆ, ಕುರು, ವ್ರಣ (ಸೂಅ)
ಪಿಲಿಂಖು. 'ಪಿಲಂಖು' ಶಬ್ದವನ್ನು ನೋಡುವುದು
ಪಿಲಿಹಾ. ಸ್ತ್ರೀ: [ಪ್ಲೀಹಾ] ಗುಲ್ಮ ರೋಗ(ತಂದು) ಅಂಗವಿಶೇಷ
ಪಿಲುಅ. ನ: [ದೇ] ಸೀನು.
ಪಿಲುಂಕ}. 'ಪಿಲಂಖು' ಶಬ್ದವನ್ನು ನೋಡುವುದು
ಪಿಲುಕ್ಕ}.
ಪಿಲುಂಖು. 'ಪಿಲಂಖು' ಶಬ್ದವನ್ನು ನೋಡುವುದು

ಪಿಲುಟ್ಠ. ವಿ: [ಪ್ಲುಷ್ಟ] ಸುಡಲ್ಪಟ್ಟ, ದಹಿಸಲ್ಪಟ್ಟ(ಹೇ)
ಪಿಲೋಸ. ಪು: [ಪ್ಲೋಷ] ದಹಿಸುವುದು, ಸುಡುವುದು
ಪಿಲ್ಲ. 'ಪೆಲ್ಲ=ಕ್ಷಿಪ್' ಶಬ್ದವನ್ನು ನೋಡುವುದು
ಪಿಲ್ಲ. ಸಕ: [ಪ್ರ +ಈರಯ್] ಪ್ರೇರಿಸು, ಉತ್ತೇಜಿಸು, ತೊಡಗಿಸು
ಪಿಲ್ಲಗ. ನ: [ದೇ] ಹಕ್ಕಿಯ ಮರಿ
ಪಿಲ್ಲಣ. ನ: [ಪ್ರೇರಣ] ಪ್ರೇರಣೆ. ಸ್ತ್ರೀ: **–ಣಾ**
ಪಿಲ್ಲಿ. ಸ್ತ್ರೀ: [ದೇ] ಒಂದು ಬಗೆಯ ವಾಹನ, ಪ್ರಯಾಣ
ಪಿಲ್ಲಿಅ. ವಿ: [ಕ್ಷಿಪ್ತ] ಎಸೆಯಲ್ಪಟ್ಟ(ಪಾಅ)
ಪಿಲ್ಲಿಅ. ವಿ: [ಪ್ರೇರಿತ] ಪ್ರೇರಿಸಲ್ಪಟ್ಟವ(ಸುಪಾ)
ಪಿಲ್ಲಿರೀ. ಸ್ತ್ರೀ: [ದೇ] ಒಂದು ಬಗೆಯ ತೃಣ, ಜೀರುಂಡೆ, ಜೀಂ ಎನ್ನುವ ಕೀಟ, ಬೆವರು
ಪಿಲ್ಲುಗ.(ದೇ), 'ಪಿಲುಅ' ಶಬ್ದವನ್ನು ನೋಡುವುದು
ಪಿಲ್ಹ. ನ: [ದೇ] ಚಿಕ್ಕ ಪಕ್ಷಿಯಂಥ(ದೇ)
ಪಿವ. 'ಇವ' ಶಬ್ದವನ್ನು ನೋಡುವುದು
ಪಿವ. ಸಕ: [ಪಾ] ಕುಡಿ. –'**ಪಿವಇ**'
ಪಿವಣ. 'ಪಿಅಣ= (ದೇ)' ಶಬ್ದವನ್ನು ನೋಡುವುದು
ಪಿವಾಸಯ. ವಿ: [ಪಿಪಾಸಕ] ಬಾಯಾರಿದವನು, ಕುಡಿಯುವ ಇಚ್ಛೆ ಉಳ್ಳವನು(ಭಗ)
ಪಿವಾಸಾ. ಸ್ತ್ರೀ: [ಪಿಪಾಸಾ] ಬಾಯಾರಿಕೆ (ಭಗ)
ಪಿವಾಸಿಯ. ವಿ: [ಪಿಪಾಸಿತ] ಬಾಯಾರಿದವನು(ಉವಾ)
ಪಿವೀಲಿಆ.'ಪಿಪೀಲಿಆ' ಶಬ್ದವನ್ನು ನೋಡುವುದು
ಪಿವ್ವ. 'ಪಿಬ್ಬ' ಶಬ್ದವನ್ನು ನೋಡುವುದು
ಪಿಸ. ಸಕ: [ಪಿಷ್] ಬೀಸು, ಹಿಟ್ಟುಮಾಡು
ಪಿಸಂಗ. ಪು: [ಪಿಶಂಗ] ಹಳದಿ ಬಣ್ಣ, ವಿ: ಹಳದಿ ಬಣ್ಣದವನು
ಪಿಸಂಡಿ(ದೇ). 'ಪಸಂಡಿ' ಶಬ್ದವನ್ನು ನೋಡುವುದು
ಪಿಸಲ್ಲ. ಪು: [ಪಿಶಾಚ] ಪಿಶಾಚಿ, ವ್ಯಂತರ **–ಯೋನಿ** ದೇವತೆಗಳ ಒಂದು ಜಾತಿ
ಪಿಸಾಜಿ. ವಿ: [ಪಿಶಾಚಿನ್] ಭೂತ ಹಿಡಿದವನು
ಪಿಸಾಯ. 'ಪಿಸಲ್ಲ' ಶಬ್ದವನ್ನು ನೋಡುವುದು
ಪಿಸಿಅ. ನ: [ಪಿಶಿತ] ಮಾಂಸ(ಮಾಅ)
ಪಿಸುಅ. ಪುಂಸ್ತ್ರೀ: [ಪಿಶುಕ] ಕ್ಷುದ್ರ ಕೀಟ –ವಿಶೇಷ, ಸ್ತ್ರೀ: **–ಯಾ.**
ಪಿಸುಣ. ಸಕ: [ಕಥಯ್] ಹೇಳು. – '**ಪಿಸುಣಇ**'
ಪಿಸುಣ. ಪು: [ಪಿಶುನ] ದುಷ್ಟ, ದುರ್ಜನ, ನೀಚ, ಪರನಿಂದಕ, ಚಾಡಿಕೋರ(ಗಾ)
ಪಿಸುಣಿಅ. ವಿ: [ಕಥಿತ] ಹೇಳಲ್ಪಟ್ಟ, ಸೂಚಿಸಲ್ಪಟ್ಟ (ಪಾಅ)
ಪಿಸುಮಯ(ಪೈ). ಪು: [ವಿಸ್ಮಯ] ಆಶ್ಚರ್ಯ
ಪಿಹ. ಸಕ: [ಸ್ಪೃಹ್] ಆಸೆಪಡು, ಇಚ್ಛಿಸು, ಬಯಸು. –'**ಪಿಹಾಇ**'
ಪಿಹ. ವಿ: [ಪೃಥಕ್] ಬೇರೆಯಾದ, ಭಿನ್ನವಾದ, ಪ್ರತ್ಯೇಕವಾದ
ಪಿಹಂ. ಅ: [ಪೃಥಕ್] ಬೇರೆ, ಭಿನ್ನ
ಪಿಹಂಡ. ಪು: [ದೇ] ಒಂದು ಬಗೆಯ ವಾದ್ಯ, ವಿ: ವಿವರ್ಣ, ಬಣ್ಣವಿಲ್ಲದ, ಕಾಂತಿಗುಂದಿದ(ದೇ)
ಪಿಹಡ. 'ಪಿಢರ' ಶಬ್ದವನ್ನು ನೋಡುವುದು
ಪಿಹಣ. ನ: [ಪಿಧಾನ] ಮುಚ್ಚಳ, ಮುಚ್ಚು, ಆಚ್ಛಾದಿಸು, ಹೊದಿಸು
ಪಿಹಯ. 'ಪಿಹ=ಪೃಥಕ್' ಶಬ್ದವನ್ನು ನೋಡುವುದು
ಪಿಹಾ. ಸಕ: [ಪಿ +ಧಾ] ಮುಚ್ಚು, ಆಚ್ಛಾದಿಸು
ಪಿಹಾಣ. 'ಪಿಹಣ' ಶಬ್ದವನ್ನು ನೋಡುವುದು
ಪಿಹಾಣಿಆ. ಸ್ತ್ರೀ: [ಪಿಧಾನಿಕಾ] ಮುಚ್ಚಳ(ಪಾಅ)
ಪಿಹಾಣೀ. ಸ್ತ್ರೀ: [ಪಿಧಾನೀ] ಮೇಲಿನ ಶಬ್ದವನ್ನು ನೋಡುವುದು
ಪಿಹಿಅ. ವಿ: [ಪಿಹಿತ] ಮುಚ್ಚಲ್ಪಟ್ಟ, ಮರೆಮಾಡಲ್ಪಟ್ಟ, **ಪಿಹಿಆಸವ.** ವಿ: [ಪಿಹಿತಾಸ್ರವ] ಕಷ್ಟವನ್ನು ತಡೆದವನು, ಕ್ಲೇಶವನ್ನು ತಡೆದವನು, ಒಬ್ಬ ಜೈನ ಮುನಿಯ ಹೆಸರು
ಪಿಹಿಣ. 'ಪಿಹಣ' ಶಬ್ದವನ್ನು ನೋಡುವುದು
ಪಿಹಿಮಿ(ಅಪ). ಸ್ತ್ರೀ: [ಪೃಥಿವೀ] ಭೂಮಿ, ಧರೆ. **–ಪಾಲ.** ಪು: [–ಪಾಲ] ರಾಜ(ಭವಿ)
ಪಿಹೀಕಯ. ವಿ: [ಪೃಥಕ್ಕೃತ] ಬೇರೆಮಾಡಲ್ಪಟ್ಟ, ಅಗಲಿಸಲ್ಪಟ್ಟ(ಪಿಂಡ)
ಪಿಹು. ವಿ: [ಪೃಥು] ವಿಸ್ತಾರವಾದ, ಅಗಲವಾದ, ಪು: ಒಬ್ಬ ರಾಜನ ಹೆಸರು. **–ರೋಮ.** ಪು: [–ರೋಮ]ಮೀನು
ಪಿಹು. 'ಪಿಹ=ಪೃಥಕ್' ಶಬ್ದವನ್ನು ನೋಡುವುದು
ಪಿಹು–. 'ಪಿಹುಯ' ಶಬ್ದವನ್ನು ನೋಡುವುದು
ಪಿಹುಂಡ. ನ: [ಪಿಹುಂಡ] ನಗರ –ವಿಶೇಷ.(ಉತ್ತ)
ಪಿಹುಣ.(ದೇ). 'ಪೆಹುಣ' ಶಬ್ದವನ್ನು ನೋಡುವುದು. **–ಹತ್ಥ.** ಪು: [–ಹಸ್ತ] ನವಿಲುಗರಿಯಿಂದ ಮಾಡಿದ ಬೀಸಣಿಗೆ

ಪಿಹುತ್ತ. 'ಪುಹುತ್ತ' ಶಬ್ದವನ್ನು ನೋಡುವುದು
ಪಿಹುಯ. ಪುಂನ: [ಪೃಥುಕ] ಅವಲಕ್ಕಿ
ಪಿಹುಲ. ವಿ: [ಪೃಥುಲ] ವಿಸ್ತಾರವಾದ, ಅಗಲವಾದ (ಪಣ್ಣ)
ಪಿಹುಲ. ನ: [ದೇ] ಬಾಯಿನ ಗಾಳಿಯಿಂದ ಊದಲಾಗುವ ತೃಣ ವಾದ್ಯ(ದೇ)
ಪಿಹೇ. 'ಪಿಹಾ' ಶಬ್ದವನ್ನು ನೋಡುವುದು
ಪಿಹೋ. ಅ: [ಪೃಥಕ್] ಬೇರೆಯಾದ, ಭಿನ್ನವಾದ,
ಪಿಹೋಅರ. ವಿ: [ದೇ] ಕೃಶ, ತೆಳ್ಳನೆಯ, ದುರ್ಬಲ
ಪೀ. ಸಕ: [ಪೀ] ಕುಡಿ
ಪೀಅ. ಪು: [ಪೀತ] ಹಳದಿ ಬಣ್ಣ, ವಿ: ಹಳದಿ ಬಣ್ಣದ, ಯಾರಿಗೆ ಕುಡಿಸಲ್ಪಟ್ಟಿದೆಯೋ ಅವನು, ಕುಡಿದವನು(ಪ್ರಾಪ್ರ)
ಪೀಅ. ವಿ: [ಪ್ರೀತ] ಸಂತುಷ್ಟನಾದ, ಸಂತಸ ಹೊಂದಿದ, ಪ್ರೀತಿಯಿಂದ ಕೂಡಿದ(ಔಪ)
ಪೀಅರ.(ಅಪ). ಮುಂದಿನ ಶಬ್ದವನ್ನು ನೋಡುವುದು.
ಪೀಅಲ. 'ಪೀಅ=ಪೀತ' ಶಬ್ದವನ್ನು ನೋಡುವುದು.
ಪೀಅಸಿ. ಸ್ತ್ರೀ: [ಪ್ರೇಯುಸೀ] ಪ್ರೇಮಪಾತ್ರಳಾದ ಹೆಣ್ಣು(ಕುಮಾ)
ಪೀಇ. ಪು: [ದೇ] ಕುದುರೆ(ದೇ)
ಪೀಇ}. ಸ್ತ್ರೀ: [ಪ್ರೀತಿ] ಪ್ರೇಮ, ಅನುರಾಗ(ಕಪ್ಪ),
ಪೀಈ}. ರಾವಣನ ಒಬ್ಬ ಹೆಂಡತಿ ಹೆಸರು(ಪಉಮ). **–ಕರ.** ಪುಂನ: [–ಕರ] ಎಂಟನೇ ಗ್ರೈವೇಯಕ –ವಿಮಾನ. **–ಗಂಮ.** ನ: [–ಗಮ] ಮಹಾ –ಶುಕ್ರ ದೇವೇಂದ್ರನ ಒಂದು ಪ್ರಯಾಣ –ವಿಮಾನ.**–ದಾಣ.**ನ:[–ದಾನ]ಸಂತೋಷವಾದ ಕಾರಣಕ್ಕಾಗಿ ನೀಡಲಾಗುತ್ತಿರುವ ದಾನ, ಕೊಡುಗೆ(ಔಪ). **–ಧಮ್ಮಿಯ.** ನ: [–ಧಾರ್ಮಿಕ] ಜೈನ ಮುನಿಗಳ ಒಂದು ಕುಲ. (ಕಪ್ಪ). **–ಮಣ.** ವಿ: [–ಮನಸ್] ಪ್ರೀತಿಯಿಂದ ಕೂಡಿದ ಮನಸ್ಸುಳ್ಳವನು(ಭಗ). ಮಹಾ ಶುಕ್ರ ದೇವಲೋಕದ ಒಂದು ಪ್ರಯಾಣ –ವಿಮಾನ (ಠಾ). **–ವದ್ಧಣ.** ಪು: [–ವರ್ಧನ] ಕಾರ್ತಿಕ ಮಾಸದ ಲೋಕೋತ್ತರ ಹೆಸರು(ಕಪ್ಪ).
ಪೀಈಯ. ಪು: [ದೇ] ಒಂದು ಬಗೆಯ ವೃಕ್ಷ, ಮಧ್ಯದ ದೂಲವಿಲ್ಲದ ವೃಕ್ಷದ ಒಂದು ಪ್ರಭೇದ(ಪಣ್ಣ)
ಪೀಊಸ. ನ: [ಪೀಯೂಷ] ಅಮೃತ, ಸುಧೆ(ಪಾಅ)

ಪೀಡ. ಸಕ: [ಪೀಡಯ್] ಸತಾಯಿಸು, ಪೀಡಿಸು, ಹತ್ತಿಕ್ಕು. –'ಪೀಡಇ'
ಪೀಡ. 'ಪೀಡಾ' ಶಬ್ದವನ್ನು ನೋಡುವುದು. **–ಯರ.** ವಿ: [–ಕರ] ಪೀಡೆಯನ್ನುಂಟುಮಾಡುವ
ಪೀಡರಇ. ಸ್ತ್ರೀ: [ದೇ]ಕಳ್ಳನ ಹೆಂಡತಿ (ದೇ)
ಪೀಡಾ. ಸ್ತ್ರೀ: [ಪೀಡಾ] ಹಿಂಸೆ, ತೊಂದರೆ, ನೋವು (ಪಾಅ), **–ಕರ.** ವಿ: [–ಕರ] ಪೀಡೆಯನ್ನುಂಟು ಮಾಡುವ
ಪೀಡಿಅ. ವಿ: [ಪೀಡಿತ] ಪೀಡಿಸಲ್ಪಟ್ಟ, ದುಃಖಿತ, ಹತ್ತಿಕ್ಕಲ್ಪಟ್ಟ, ನೋಯಿಸಲ್ಪಟ್ಟ,
ಪೀಢ. ಪುಂನ: [ಪೀಠ] ಆಸನ, ಪೀಠ, ವ್ರತ ಹಿಡಿದವನ ಆಸನ, ತಳ, ಪು: ಒಬ್ಬ ಜೈನ ಮಹರ್ಷಿ, **–ಬಂಧ.** ಪು: [–ಬಂಧ] ಗ್ರಂಥದ ಪೀಠಿಕಾ ಭಾಗ (ಪಉಮ). **–ಮದ್. ಮದ್ದಅ.** ಪುಂಸ್ತ್ರೀ: [–ಮರ್ದಕ] ಕಾಮವೆಂಬ ಪುರುಷಾರ್ಥದಲ್ಲಿ ಸಹಾಯಕ, ನಾಯಕನ ಸಮೀಪದಲ್ಲಿರುವ ಪುರುಷ, ರಾಜರೇ ಮೊದಲಾದವರ ಸ್ನೇಹಿತ. ಸ್ತ್ರೀ: **–ಮದ್ದಿಆ**
–ಸಪ್ಪಿ. ವಿ: [–ಸರ್ಪಿನ್] ಒಬ್ಬ ಕುಂಟ
ಪೀಢ. ನ: [ದೇ] ಕಬ್ಬನ್ನು ಹಿಂಡುವ ಯಂತ್ರ, ಸಮೂಹ, ಗುಂಪು. ಬೆನ್ನು
ಪೀಢಗ}. ನ: [ಪೀಠಕ] 'ಪೀಢ= ಪೀಠ' ಶಬ್ದವನ್ನು
ಪೀಢಯ}. ನೋಡುವುದು.
ಪೀಢರಖಂಡ. ನ: [ಪೀಠರಖಂಡ] ನರ್ಮದಾ ನದೀ ತೀರದಲ್ಲಿರುವ ಒಂದು ಪ್ರಾಚೀನ ಜೈನ ತೀರ್ಥ ಕ್ಷೇತ್ರ.
ಪೀಢಾಣಿಯ. ನ: [ಪೀಠಾನೀಕ] ಕುದುರೆಯ ಸೈನ್ಯ(ಠಾ)
ಪೀಢಿಆ. ಸ್ತ್ರೀ: [ಪೀಠಿಕಾ] ಆಸನ –ವಿಶೇಷವಾದ ಮಂಚ(ಪಾಅ). **'ಪೇಢಿಯಾ'** ಶಬ್ದವನ್ನು ನೋಡುವುದು.
ಪೀಢೀ. ಸ್ತ್ರೀ: [ದೇ. ಪೀಠಿಕಾ] ಚೌಬೀನೆ ಮರ, ಮನೆಯ ಆಧಾರವಾದಂಥ ಮರ
ಪೀಣ. ಸಕ: [ಪ್ರೀಣಯ್] ಸಂತೋಷ ಪಡಿಸು, ತೃಪ್ತಿಪಡಿಸು
ಪೀಣ. ವಿ: [ದೇ] ನಾಲ್ಕು ಕೋಣಗಳುಳ್ಳ(ದೇ)
ಪೀಣ. ವಿ: [ಪೀನ] ಪುಷ್ಟವಾದ, ಮಾಂಸಲವಾದ, ದಪ್ಪನಾದ

ಪೀಣ. ಸಕ: [ಪೀನಯ್] ಪುಷ್ಟಗೊಳಿಸು,
ಪೀಣಣ. ನ: [ಪ್ರೀಣನ] ಸಂತುಷ್ಟಗೊಳಿಸುವುದು, ತೃಪ್ತಿಪಡಿಸುವುದು(ಧರ್ಮವಿ)
ಪೀಣಣಿಜ್ಜ. ವೀ: [ಪ್ರೀಣನೀಯ] ಪ್ರೀತಿಯನ್ನುಂಟುಮಾಡುವ(ಔಪ)
ಪೀಣಾಇಯ. ವಿ: [ದೇ. ಪೈನಾಯಿಕ] ಗರ್ವದಿಂದ ಮಾಡಿದ(ಣಾಯಾ)
ಪೀಣಾಯಾ. ಸ್ತ್ರೀ: [ದೇ. ಪೀನಾಯಾ] ಗರ್ವ, ಅಹಂಕಾರ(ಣಾಯಾ)
ಪೀಣಿಅ. ವಿ: [ಪ್ರೀಣಿತ] ಸಂತೋಷಪಡಿಸಲ್ಪಟ್ಟ, ತೃಪ್ತಿಪಡಿಸಲ್ಪಟ್ಟ, ಪುಷ್ಕಳವಾದ, ಅಭಿವೃದ್ಧಿ ಹೊಂದಿದ, **ಪು:** ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಯೋಗ; ಮೊದಲು ಸೂರ್ಯ ಅಥವಾ ಚಂದ್ರನು ಯಾವುದಾದರೂ ಗ್ರಹದ ಜೊತೆಯಲ್ಲಿದ್ದು ನಂತರದಲ್ಲಿ ಸೂರ್ಯನೇ ಮೊದಲಾದವರೊಂದಿಗೆ ವೃದ್ಧಿಯನ್ನು ಹೊಂದಿದರೆ ಆ ಯೋಗ.
ಪೀಣಿಮ. ಪುಂಸ್ತ್ರೀ: [ಪೀನತಾ] ಪುಷ್ಟತೆ, ಮಾಂಸಲವಾಗಿರುವುದು, ದಪ್ಪಗಿರುವುದು
ಪೀಯಮಾಣ. 'ಪಾ=ಪಾ' ಶಬ್ದವನ್ನು ನೋಡುವುದು.
ಪೀರಿಪೀರಿಯಾ. ಸ್ತ್ರೀ: [ದೇ] **ಒಂದು ವಾದ್ಯ –ವಿಶೇಷ**
ಪೀಲ. ಸಕ: [ಪೀಡಯ್] ಪೀಡಿಸು, ಹತ್ತಿಕ್ಕು, ನೋಯಿಸು. –**'ಪೀಲಇ'**
ಪೀಲಣ. ನ: [ಪೀಲನ] ಹತ್ತಿಕ್ಕುವುದು. ಹಿಂಸಿಸುವುದು,
ಪೀಲಾ. 'ಪೀಡಾ' ಶಬ್ದವನ್ನು ನೋಡುವುದು.
ಪೀಲಾವಯ. ವಿ: [ಪೀಡಕ] ಹಿಂಸಕ, ಎಣ್ಣೆತೆಗೆಯುವ ಗಾಣದಿಂದ ಎಣ್ಣೆ ತೆಗೆಯುವವನು
ಪೀಲಿಅ. ವಿ: [ಪೀಡಿತ] ಪೀಡಿಸಲ್ಪಟ್ಟ ಕಿವುಚಲ್ಪಟ್ಟ(ಔಪ)
ಪೀಲಿಮ. ವಿ: [ಪೀಡಾವತ್] ಭಾರವುಳ್ಳ, ಒತ್ತಾಯವುಳ್ಳ, ಒತ್ತಾಯದಿಂದ ಮಾಡಿದ
ಪೀಲು. ಪು: [ಪೀಲು]ಗೋನು ಮರ, ಆನೆ, ಹಾಲು
ಪೀಲುಅ. ಪು: [ದೇ. ಪೀಲುಕ] ಮರಿ, (ಗಾ)
ಪೀಲುಟ್ಠ. ವಿ: [ದೇ. ಪ್ಲುಷ್ಟ] **'ಪಿಲುಟ್ಠ'** ಶಬ್ದವನ್ನು ನೋಡುವುದು.
ಪೀವರ. ವಿ: [ಪೀವರ] ಪುಷ್ಟವಾದ, ದಪ್ಪನಾದ (ಣಾಯಾ), **–ಗಬ್ಭಾ.** ಸ್ತ್ರೀ: [–ಗರ್ಭಾ] ಕೆಲವೇ ದಿನಗಳಲ್ಲಿ ಹೆರಲಿರುವ ಹೆಣ್ಣು
ಪೀವಲ. 'ಪೀಅ=ಪೀತ' ಶಬ್ದವನ್ನು ನೋಡುವುದು.
ಪೀಸ. ಸಕ: [ಪಿಷ್] ಬೀಸು, –**'ಪೀಸಇ'**
ಪೀಸಣ. ನ: [ಪೇಷಣ] ಬೀಸುವುದು, ಪುಡಿಮಾಡು. ವಿ: ಬೀಸುವವನು(ಸೂಅ)
ಪೀಸಯ. ವಿ: [ಪೇಷಕ] ಬೀಸುವವನು, ಪುಡಿಮಾಡುವವನು
ಪೀಹ. ಸಕ: [ಸ್ಪೃಹ್, ಪ್ರ +ಈಹ್] ಆಸೆಪಡು, ಬಯಸು, ಇಚ್ಛೆಪಡು
ಪೀಹಗ. ಪು: [ಪೀತಕ] ಆಗ ತಾನೆ ಹುಟ್ಟಿದ ಮಗುವಿಗೆ ಕುಡಿಸಲಾಗುವ ಒಂದು ವಸ್ತು(ಉಪ)
–ಪು. ಸ್ತ್ರೀ: [ಪುರ್] ಶರೀರ(ವಿಸೇ)
ಪುಅ. ನ: [ಪ್ಲುತ] ವಕ್ರವಾಗಿ ನಡೆಯುವುದು (=ತಿರ್ಯಕ್ ಗತಿ), ಅಡ್ಡಲಾಗಿ ಸಂಚರಿಸುವುದು, ಮುಚ್ಚುವುದು, ಹೊದಿಸುವುದು. **–ಜುದ್ಧ.** ನ: [–ಯುದ್ಧ] ಅಧಮ ಯುದ್ಧದ ಒಂದು ಪ್ರಕಾರ
ಪುಅಂಡ. ಪು: [ದೇ]ತರುಣ, ಯುವಕ(ದೇ), ಉನ್ಮತ್ತ, ಹುಚ್ಚುಹಿಡಿದವನು, ಪಿಶಾಚ(ಪಾಅ).
ಪುಆಇ. ವಿ: [ದೇ] ತರುಣ, ಯುವಕ, ಉನ್ಮತ್ತ, ಹುಚ್ಚು ಹಿಡಿದವನು, **ಪು:** ಪಿಶಾಚ(ಪಾಅ).
ಪುಆಇಣೀ. ಸ್ತ್ರೀ: [ದೇ] ಪಿಶಾಚಿ ಹಿಡಿದ ಹೆಣ್ಣು, ಭೂತ ಹೊಕ್ಕ ಮಹಿಳೆ, ಹುಚ್ಚುಹಿಡಿದ ಹೆಣ್ಣು, ಕುಲಟೆ, ವ್ಯಭಿಚಾರಿಣಿ(ದೇ)
ಪುಆವ. ಸಕ: [ಪ್ಲಾವಯ್] ಕೊಂಡೊಯ್ಯು(ತಾ)
ಪು–. ಪು: [ಪುಂಸ]ಪುರುಷ, ಗಂಡಸು(ಪಿ). **'ಪುಂಗವ' ಪುಂನಾಗ, ಪುಂವಲು'** ಮೊದಲಾದ ಶಬ್ದಗಳನ್ನು ನೋಡುವುದು
ಪುಂಖ. ಪು: [ಪುಂಖ] ಬಾಣದ ಮೂಲಭಾಗ, ದೇವ ವಿಮಾನ –ವಿಶೇಷ.
ಪುಂಖಣಗ. ನ: [ದೇ. ಪ್ರೋಂಖಣಕ] ಬೇರೆಯವರ ಕಡೆಯಿಂದ ಮುತ್ತು ಕೊಡಿಸುವುದು, ವಿವಾಹದ ಒಂದು ರೀತಿ
ಪುಂಖಿಅ. ವಿ: [ಪುಂಖಿತ] ಪುಂಖದಿಂದ ಕೂಡಿರುವಂತೆ ಮಾಡಲ್ಪಟ್ಟ
ಪುಂಗಲ. ಪು: [ದೇ] ಶ್ರೇಷ್ಠ, ಉತ್ತಮ(ಭವಿ)
ಪುಂಗವ. ವಿ: [ಪುಂಗವ] ಶ್ರೇಷ್ಠ, ಉತ್ತಮ(ಸುಪಾ), ವೃಷಭ, ಎತ್ತು
ಪುಂಛ. ಸಕ: [ಪ್ರ +ಉಚ್ಛ್] ಒರೆಸು, ಶುದ್ಧಗೊಳಿಸು

ಪುಂಛ. ಪುಂನ: [ಪುಚ್ಛ] ಬಾಲ(ಪ್ರಾಕೃ)
ಪುಂಛಣ. ನ: [ಪ್ರೋಂಛನ] ತೊಳೆಯುವುದು(ಕಪ್ಪ), ರಜೋಹರಣ; ಜೈನ ಮುನಿಯ ಒಂದು ಉಪಕರಣ(ಬೃಹ)
ಪುಂಛಣೀ. ಸ್ತ್ರೀ: [ಪ್ರೋಂಛನೀ] ಒರೆಸುವ ಒಂದು ಹುಲ್ಲಿನ ಉಪಕರಣ
ಪುಂಛಿಅ. ವಿ: [ಪ್ರೋಂಛಿತ] ಒರೆಸಲ್ಪಟ್ಟ, ಜಾಡಿಸಲಾದ
ಪುಂಜ. ಸಕ: [ಪುಂಜ್, ಪುಂಜಯ್] ರಾಶಿ ಮಾಡು, ಒಟ್ಟುಗೂಡಿಸು. ಹರಡು –'**ಪುಂಜಇ**'
ಪುಂಜ. ಪುಂನ: [ಪುಂಜ] ರಾಶಿ ಗುಡ್ಡೆ, (ಸಿರಿ)
ಪುಂಜಇಅ. ವಿ: [ಪುಂಜಿತ] ಒಟ್ಟುಗೂಡಿಸಲಾದ, ರಾಶಿಹಾಕಲ್ಪಟ್ಟ(ಪಉಮ), ಹಬ್ಬಿದ, ತುಂಬಲ್ಪಟ್ಟ
ಪುಂಜಇಜ್ಜಮಾಣ. ಪುಂಜ=ಪುಂಜ್' ಶಬ್ದವನ್ನು ನೋಡುವುದು.
ಪುಂಜಕ}. ವಿ: [ಪುಂಜಕ] ರಾಶಿಯ ರೂಪದಲ್ಲಿರುವ,
ಪುಂಜಯು}. '**ಪುಂಜ=ಪುಂಜ**' ಶಬ್ದವನ್ನು ನೋಡುವುದು.
ಪುಂಜಯ. ಪುಂನ: [ದೇ] ಕಸ.
ಪುಂಜಾಯ. ವಿ: [ದೇ] ಪಿಂಡಾಕಾರವಾಗಿ ಮಾಡಲ್ಪಟ್ಟ (ಪಾಅ)
ಪುಂಜಾವಿಯ. ವಿ: [ಪುಂಜಿತ] ರಾಶಿಹಾಕಲ್ಪಟ್ಟ, ಒಟ್ಟುಗೂಡಿಸಲ್ಪಟ್ಟ(ಕಾಲ)
ಪುಂಜಿಅ. ವಿ: [ಪುಂಜಿತ] ರಾಶಿ ಹಾಕಲಾದ, ಒಟ್ಟುಗೂಡಿಸಿದ(ಕುಮಾ)
ಪುಂಡ. ಪು: [ಪುಂಡ್ರ] ವಿಂಧ್ಯ ಪರ್ವತದ ಸಮೀಪದಲ್ಲಿರುವ ಭೂಭಾಗ, ಕೆಂಪು ಹಳದಿ ಪಟ್ಟೆಗಳಿರುವ ಉದ್ದನೆಯ ಕಬ್ಬು(ಪಉಮ). **ವಿ:** ಪುಂಡ್ರ ದೇಶದವನು. ಧವಳ, ಬೆಳ್ಳನೆಯ (ಣಾಯಾ), **ಪುಂನ:** ತಿಲಕ, ದೇವ –ವಿಮಾನ –ವಿಶೇಷ. **–ವದ್ಧಣ. ನ:** [–ವರ್ಧನ] ನಗರ –ವಿಶೇಷ. '**ಪೊಂಡ**' ಶಬ್ದವನ್ನು ನೋಡುವುದು.
ಪುಂಡಇಅ. ವಿ: [ದೇ] ಪಿಂಡಾಕಾರವಾಗಿ ಮಾಡಲ್ಪಟ್ಟ (ದೇ)
ಪುಂಡರಿಕ. '**ಪುಂಡರೀಅ**' ಶಬ್ದವನ್ನು ನೋಡುವುದು.
ಪುಂಡರಿಕಿ. ವಿ: [ಪುಂಡರೀಕಿನ್] ಬೆಳ್ದಾವರೆಯನ್ನು ಹೊಂದಿರುವ, ಶ್ವೇತಛತ್ರವನ್ನು ಹೊಂದಿರುವ (ಸೂಪ)
ಪುಂಡರಿಗಿಣೀ. ಸ್ತ್ರೀ: [ಪುಂಡರೀಕಿಣೀ] ಪುಷ್ಪಕಲಾವತೀ ವಿಜಯದ ಒಂದು ನಗರಿ(ಣಾಯಾ.
ಪುಂಡರಿಯ. '**ಪುಂಡರೀಅ=ಪುಂಡರೀಕ, ಪೌಂಡರೀಕ**' ಶಬ್ದವನ್ನು ನೋಡುವುದು(ಉವ)
ಪುಂಡರೀಅ. ಪು: [ಪುಂಡರೀಕ] ಹನ್ನೊಂದು ಜನ ರುದ್ರರಲ್ಲಿ ಏಳನೆಯ ರುದ್ರ, ಮಹಾಪದ್ಮ ರಾಜನ ಪುತ್ರನೂ ರಾಜನೂ ಆದವನು. ಹುಲಿ(ಪಾಅ), **ಪುಂನ.** ಒಂದು ಬಗೆಯ ತಪಸ್ಸು. ಬಿಳಿಯ ಕಮಲ, ದೇವ –ವಿಮಾನ ವಿಶೇಷ, **ವಿ:** ಬಿಳುಪು, ಶ್ವೇತ ವರ್ಣ. **–ಗುಮ್ಮ. ನ:** [**–ಗುಲ್ಮ**] ಒಂದು ದೇವ –ವಿಮಾನ –ವಿಶೇಷ. **–ದಹ, –ದ್ದಹ. ಪು:** [–ದ್ರಹ] ಪರ್ವತ –ಶಿಖರದ ಮೇಲಿರುವ ಒಂದು ಮಹಾ ಸರೋವರ(ಠಾ)
ಪುಂಡರೀಅ. ವಿ: [ಪೌಂಡರೀಕ] ಬಿಳಿಯ ತಾವರೆ, ಬಿಳಿಯ ಕಮಲಕ್ಕೆ ಸಂಬಂಧಿಸಿದ, ಪ್ರಧಾನ, ಮುಖ್ಯ, ಶ್ರೇಷ್ಠ, ಉತ್ತಮ.ಸೂತ್ರ ಕೃತಾಂಗ ಸೂತ್ರದ ಎರಡನೇ ಶ್ರುತ ಸ್ಕಂಧದ ಮೊದಲ ಅಧ್ಯಯನ. '**ಪೊಂಡರೀಗ**'ಶಬ್ದವನ್ನು ನೋಡುವುದು.
ಪುಂಡರೀಯಾ. ಸ್ತ್ರೀ: [ಪುಂಡರೀಕಾ] '**ಪೊಂಡರೀ**' ಶಬ್ದವನ್ನು ನೋಡುವುದು.
ಪುಂಡೇ. ಅ: [ದೇ] ಹೋಗು(ದೇ)
ಪುಂಢ. '**ಪುಂಡ**' ಶಬ್ದವನ್ನು ನೋಡುವುದು(ಉಪ)
ಪುಂಢ. ಪು: [ದೇ] ತಗ್ಗು, ಹಳ್ಳ (ದೇ)
ಪುಂನಾಗ. ಪು: [ಪುನ್ನಾಗ] ಸುರಗಿ ಮರ, ಪುಷ್ಪ ಪ್ರಧಾನವಾದ ಮರ. ಜಾಯಿಕಾಯಿ, ಪಾದರಿ ಮರ(ಉಪ), ಶ್ರೇಷ್ಠ ಪುರುಷ(ಧಮ್ಮ). '**ಪುನ್ನಾಮ**' ಶಬ್ದವನ್ನು ನೋಡುವುದು.
ಪುಂಪುಅ. ಪು: [ದೇ]ಸಂಗಮ(ದೇ)
ಪುಂಭ. ಪುಂನ: [ದೇ] ನೀರಸ, ದಾಳಿಂಬೆಯ ಸಿಪ್ಪೆ
ಪುಂವಉ. ಪುಂನ: [ಪುಂವಚಸ್] ವ್ಯಾಕರಣದಲ್ಲಿ ಹೇಳಿರುವ ಸಂಸ್ಕಾರಯುಕ್ತ ಶಬ್ದ –ವಿಶೇಷ, ಪುಲ್ಲಿಂಗ ಶಬ್ದ(ಪಣ್ಣ)
ಪುಂವೇಯ. ಪು: [ಪುಂವೇದ] ಪುರುಷನಿಗೆ ಹೆಣ್ಣಿನ ಸ್ಪರ್ಶ ಮಾಡಬೇಕೆಂಬ ಆಸೆ, ಅದಕ್ಕೆ ಕಾರಣಭೂತವಾದ ಕರ್ಮ.
ಪುಂಸ. ಸಕ: [ಪುಂಸ್, ಮೃಜ್] ಸ್ವಚ್ಛಮಾಡು, ಒರೆಸು. –'**ಪುಂಸಇ**'

ಪುಂಸ -. **'ಪುಂ-'** ಅನ್ನು ನೋಡುವುದು. **-ಕೋಇಲ, ಕೋಇಲಗ. ಪು: [-ಕೋಕಿಲ]** ಗಂಡುಕೋಗಿಲೆ, ಪಿಕ(ತಾ)
ಪುಂಸಣ. ನ: [ಪುಂಸನ] ಸ್ವಚ್ಛಗೊಳಿಸುವುದು(ಕುಮಾ)
ಪುಂಸದ್ದ. ಪು: [ಪುಂಶಬ್ದ] 'ಪುರುಷ' ಎಂಬ ಅರ್ಥ ಕೊಡುವ ಶಬ್ದ
ಪುಂಸಲೀ. ಸ್ತ್ರೀ: [ಪುಂಶ್ಚಲೀ] ಕುಲಟೆ, ವ್ಯಭಿಚಾರಿಣಿ
ಪುಂಸಿಅ. ವಿ: [ಪುಂಸಿತ]ಒರೆಸಿದ,ಸ್ವಚ್ಛಗೊಳಿಸಿದ(ದೇ)
ಪುಕ್ಕ}. ಸಕ: [ಪೂತ್ +ಕೃ] ಕರೆ, ಆಹ್ವಾನಿಸು
ಪುಕ್ಕರ}. -'ಪುಕ್ಕರೇಇ'
ಪುಕ್ಕರಿಯ. ವಿ: [ಪೂತ್ಕೃತ] ಕರೆಯಲ್ಪಟ್ಟ, ಆಹ್ವಾನಿಸಲ್ಪಟ್ಟ (ಸುಪಾ)
ಪುಕ್ಕಲ. 'ಪುಕ್ಖಲ' ಶಬ್ದವನ್ನು ನೋಡುವುದು(ಪಣ್ಣ)
ಪುಕ್ಕಾ. ಸ್ತ್ರೀ: 'ಪುಕ್ಕಾರ=ಪೂತ್ಕಾರ' ಶಬ್ದವನ್ನು ನೋಡುವುದು.
ಪುಕ್ಕಾರ. 'ಪುಕ್ಕರ' ಶಬ್ದವನ್ನು ನೋಡುವುದು. **ಪುಕ್ಕಾರೇಂತಿ**
ಪುಕ್ಕಾರ.ಪು:[ಪೂತ್ಕಾರ]ಕರೆ, ಡಂಗೂರ,ಆಹ್ವಾನ(ಸುಪಾ)
ಪುಕ್ಖರ. 'ಪೋಕ್ಖರ=ಪುಷ್ಕರ' ಶಬ್ದವನ್ನು ನೋಡುವುದು. **-ಕಣ್ಣಿಯಾ. ಸ್ತ್ರೀ: [-ಕರ್ಣಿಕಾ]** ಕಮಲದ ಬೀಜಕೋಶ, ಕಮಲದ ಮಧ್ಯಭಾಗ(ಔಪ). **-ಕ್ಖ. ಪು: [ಪುಷ್ಕರಾಕ್ಷ]** ವಿಷ್ಣು. ಕಾಶ್ಮೀರದ ಒಬ್ಬ ರಾಜನ ಹೆಸರು. **-ಗಯ. ನ: [-ಗತ]** ವಾದ್ಯ -ವಿಶೇಷದ ಹೆಸರು. **-ದ್ಧ. ನ: [ಪುಷ್ಕರಾರ್ಧ]** ಪುಷ್ಕರ -ವರ ಎಂಬ ದ್ವೀಪದ ಅರ್ಧಭಾಗ. **-ವರ. ಪು: [-ವರ]** ದ್ವೀಪ -ವಿಶೇಷ. **-ಸಂವಟ್ಟಗ. 'ಪುಕ್ಖಲ -ಸಂವಟ್ಟಯ'** ಶಬ್ದವನ್ನು ನೋಡುವುದು. **ಪುಕ್ಖರಾವತ್ತ. 'ಪುಕ್ಖಲಾವಟ್ಟಯ'** ಶಬ್ದವನ್ನು ನೋಡುವುದು.
ಪುಕ್ಖರಿಣೀ. 'ಪೋಕ್ಖರಿಣೀ' ಶಬ್ದವನ್ನು ನೋಡುವುದು (ಸೂಅ)
ಪುಕ್ಖರೋಅ}. ಪು: [ಪುಷ್ಕರೋದ] ಸಮದ್ರ -ವಿಶೇಷ
ಪುಕ್ಖರೋದ}.
ಪುಕ್ಖಲ. ಪು: [ಪುಷ್ಕರ] ಒಂದು ವಿಜಯ, ಒಂದು ಪ್ರಾಂತ. ಅದರ ಮುಖ್ಯ ನಗರಿಯ ಹೆಸರು **'ಓಷಧಿ'**, ಕಮಲ, ಕಮಲದ ಕೇಸರ(ಆಚಾ), **-ವಿಭಂಗ. ನ: [-ವಿಭಂಗ]** ಕಮಲದ ಗೆಡ್ಡೆ (ಆಚಾ). **-ಸಂವಟ್ಟ, -ಸಂವಟ್ಟಯ. ಪು: [-ಸಂವರ್ತ, -ಕ]** ಒಂದು ಮೇಘ -ವಿಶೇಷ, ಇದು ಮಳೆಗರೆದರೆ ಆ ಮಳೆಯು ಹತ್ತು ಸಾವಿರ ವರ್ಷಗಳ ವರೆಗೂ ಪೃಥ್ವಿಯನ್ನು ಸುವಾಸನಾಯುಕ್ತವಾಗಿ ಇಟ್ಟಿರ ಬಲ್ಲುದು(ಉರ). **'ಪುಕ್ಖರ'** ಶಬ್ದವನ್ನು ನೋಡುವುದು.
ಪುಕ್ಖಲ. ಪು: [ಪುಷ್ಕಲ] ಒಂದು ವಿಜಯ, ಪ್ರದೇಶ-ವಿಶೇಷ(ತಾ). ಅನಾರ್ಯ ದೇಶ-ವಿಶೇಷ, **ಪುಂಸ್ತ್ರೀ:** ಆ ದೇಶದಲ್ಲಿ ಹುಟ್ಟಿದ, ಆ ದೇಶದ ನಿವಾಸಿ(ಭಗ). ಅತ್ಯಧಿಕವಾಗಿ, ಹೇರಳವಾಗಿ, **ವಿ:** ಸಂಪೂರ್ಣ, ಪರಿಪೂರ್ಣ
ಪುಕ್ಖಲಚ್ಛಿಭಗ}. ಪುಂನ: [ದೇ] ನೀರಿನಲ್ಲಿ ಹುಟ್ಟುವ
ಪುಕ್ಖಲಚ್ಛಿಭಯ}. ವನಸ್ಪತಿ-ವಿಶೇಷ(ಸೂಅ). **'ಪೋಕ್ಖಲಚ್ಛಿಲಯ'** ಶಬ್ದವನ್ನು ನೋಡುವುದು.
ಪುಕ್ಖಲಾವಈ. ಸ್ತ್ರೀ: [ಪುಷ್ಕರಾವತೀ, ಪುಷ್ಕಲಾವತೀ] ಮಹಾ ವಿದೇಹ -ವರ್ಷದ ವಿಜಯ -ಪ್ರಾಂತ -ವಿಶೇಷ(ತಾ). **-ಕೂಡ. ಪುಂನ: [-ಕೂಟ]** ಏಕಶಿಲಾ ಪರ್ವತದ ಒಂದು ಶಿಖರ.
ಪುಕ್ಖಲಾವಟ್ಟಯ. ಪು: [ಪುಷ್ಕರಾವರ್ತಕ, ಪುಷ್ಕಲಾವರ್ತಕ] ಒಂದು ಮೇಘ -ವಿಶೇಷ(ತಾ)
ಪುಕ್ಖಲಾವತ್ತ. ಪು: [ಪುಷ್ಕರಾವರ್ತ, ಪುಷ್ಕಲಾವರ್ತ] ಮಹಾ ವಿದೇಹ ವರ್ಷದ ಒಂದು ವಿಜಯ -ಪ್ರಾಂತ. **-ಕೂಡ. ಪು: [-ಕೂಟ]** ಏಕಶಿಲಾ ಪರ್ವತದ ಒಂದು ಶಿಖರ(ಇಂಕ)
ಪುಗ್ಗ. ಪುಂನ: [ದೇ] ವಾದ್ಯ -ವಿಶೇಷ(ಕುಪ್ರ)
ಪುಗ್ಗಲ. ಪು: [ಪುದ್ಗಲ] ಒಂದು ಬಗೆಯ ವೃಕ್ಷ, **ನ:** ಫಲ, ಮಾಂಸ
ಪುಗ್ಗಲ. 'ಪೋಗ್ಗಲ' ಶಬ್ದವನ್ನು ನೋಡುವುದು. **-ಪರಟ್ಟ, ಪರವತ್ತ. ಪು: [ಪರವರ್ತ] 'ಪೋಗ್ಗಲ -ಪರಿಅಟ್ಟ'** ಶಬ್ದವನ್ನು ನೋಡುವುದು.
ಪುಚ್ಚಡ. 'ಮೊಚ್ಚಡ' ಶಬ್ದವನ್ನು ನೋಡುವುದು.
ಪುಚ್ಛ. ಸಕ: [ಪ್ರಚ್ಛ್] ಕೇಳು, ಪ್ರಶ್ನಿಸು. **-'ಪುಚ್ಛಇ'. ವ. ಕೃ: 'ಪುಚ್ಛಂತ'**
ಪುಚ್ಛ. ಪುಂಭ=ಪ್ರ +ಉಚ್ಛ್' ಶಬ್ದವನ್ನು ನೋಡುವುದು.
ಪುಚ್ಛ. 'ಪುಂಛ=ಪುಚ್ಛ' ಶಬ್ದವನ್ನು ನೋಡುವುದು.
ಪುಚ್ಛ}. ವಿ: [ಪ್ರಚ್ಛಕ] ಪ್ರಶ್ನಿಸುವವನು, ಕೇಳುವವನು
ಪುಚ್ಛಗ}. (ಓಘಮಾ)

ಪುಚ್ಛಣ. ನ: [ಪ್ರಚ್ಛನ, ಪ್ರಶ್ನ] ಕೇಳುವುದು, ಪ್ರಶ್ನಿಸುವುದು, ಪ್ರಶ್ನೆ(ಸೂಅನಿ)
ಪುಚ್ಛಣಯಾ}. ಸ್ತ್ರೀ: [ಪ್ರಚ್ಛನಾ] ಮೇಲಿನ ಶಬ್ದವನ್ನು
ಪುಚ್ಛಣಾ}. ನೋಡುವುದು.
ಪುಚ್ಛಣೀ. ಸ್ತ್ರೀ: [ಪ್ರಚ್ಛನೀ] ಪ್ರಶ್ನೆಯ ಭಾಷೆ(ತಾ)
ಪುಚ್ಛಲ(ಅಪ). 'ಪುಟ್ಠ=ಪೃಷ್ಟ' ಶಬ್ದವನ್ನು ನೋಡುವುದು.
ಪುಚ್ಛಾ. ಸ್ತ್ರೀ: [ಪೃಚ್ಛಾ] ಪ್ರಶ್ನೆ(ಉವಾ)
ಪುಚ್ಛಿಅ. ವಿ: [ಪೃಷ್ಟ] ಕೇಳಲ್ಪಟ್ಟ
ಪುಚ್ಛಿರ. ವಿ: [ಪ್ರಷ್ಟೃ] ಪ್ರಶ್ನಿಸುವವನು(ಗಾ)
ಪುಛಲ. 'ಪುಚ್ಛಲ' ಶಬ್ದವನ್ನು ನೋಡುವುದು.
ಪುಜ್ಜ. ಸಕ: [ಪೂಜಯ್] ಪೂಜಿಸು, ಆದರಿಸು. -'ಪುಜ್ಜಇ'. ವ. ಕೃ -'ಪುಜ್ಜಂತ'
ಪುಜ್ಜ. 'ಪೂಜ=ಪೂಜಯ್' ಶಬ್ದವನ್ನು ನೋಡುವುದು.
ಪುಜ್ಜಂತ. 'ಪುಜ್ಜ=ಪೂಜಯ್' ಶಬ್ದವನ್ನು ನೋಡುವುದು.
ಪುಜ್ಜಂತ. 'ಪೂರ=ಪೂರ್' ಶಬ್ದವನ್ನು ನೋಡುವುದು.
ಪುಜ್ಜಣ. ನ: [ಪೂಜನ] ಪೂಜೆ, ಅರ್ಚನೆ(ಕುಪ್ರ)
ಪುಜ್ಜಮಾಣ. 'ಪೂರ=ಪೂರಯ್' ಶಬ್ದವನ್ನು ನೋಡುವುದು.
ಪುಜ್ಜಾ. ಸ್ತ್ರೀ: [ಪೂಜಾ] ಪೂಜೆ, ಅರ್ಚನೆ(ಉಪ)
ಪುಜ್ಜಿಯ. ವಿ: [ಪೂಜಿತ] ಪೂಜಿಸಲ್ಪಟ್ಟ, ಅರ್ಚಿಸಲ್ಪಟ್ಟ
ಪುಟ್ಟ. ಸಕ: [ಪ್ರ +ಉಚ್ಛ್] ಒರೆಸು
ಪುಟ್ಟ. ನ: [ದೇ] ಹೊಟ್ಟೆ, ಉದರ
ಪುಟ್ಟಲ}. ಪುಂ.ನ: [ದೇ] ಗಂಟು, ಗ್ರಂಥಿ
ಪುಟ್ಟಲಯ}.
ಪುಟ್ಟಲಿಯಾ, ಸ್ತ್ರೀ: [ದೇ] ಸಣ್ಣ ಗಂಟು(ಸುಪಾ)
ಪುಟ್ಟಿಲ. ಪು: [ಪೋಟ್ಟಿಲ] ಭಗವಾನ್ ಮಹಾವೀರನ ಒಬ್ಬ ಶಿಷ್ಯ; ಮುಂದೆ ತೀರ್ಥಂಕರ ನಾಗಲಿರುವವನು, ಅನುತ್ತರ -ದೇವಲೋಕಕ್ಕೆ ಹೋಗಲಿರುವ ಒಬ್ಬ ಜೈನ ಮಹರ್ಷಿ(ಅನು)
ಪುಟ್ಠ. ವಿ: [ಸ್ಪೃಷ್ಟ] ಮುಟ್ಟಲ್ಪಟ್ಟ(ಭಗ), ನ: ಸ್ಪರ್ಶ(ತಾ)
ಪುಟ್ಠ. ವಿ: [ಪೃಷ್ಟ] ಕೇಳಲ್ಪಟ್ಟ, ಪ್ರಶ್ನಿಸಲ್ಪಟ್ಟ(ಔಪ), ನ: ಪ್ರಶ್ನೆ. -ಲಾಭಿಯ. ವಿ: [-ಲಾಭಿಕ] ಗೌರವವುಳ್ಳವನು. -ಸೇಣಿಯಾಪರಿಕಮ್ಮ. ಪುಂನ: [-ಶ್ರೇಣಿಕಾಪರಿಕರ್ಮನ್] ದೃಷ್ಟಿವಾದದ ಒಂದು ಪ್ರತಿಪಾದ್ಯ -ವಿಷಯ.
ಪುಟ್ಟ. ವಿ: [ಪುಷ್ಟ] ಪುಷ್ಟಿಗೊಂಡಿರುವ, ಚೆನ್ನಾಗಿ ಬೆಳೆದಿರುವ, ಪುಷ್ಕಳವಾದ(ಣಾಯಾ)
ಪುಟ್ಠ. 'ಪಿಟ್ಠ=ಪೃಷ್ಠ' ಶಬ್ದವನ್ನು ನೋಡುವುದು.
ಪುಟ್ಠವ. ವಿ: [ಸ್ಪೃಷ್ಟವತ್] ಸ್ಪರ್ಶಮಾಡಿದವನು (ಆಚಾ)
ಪುಟ್ಠವಈ. 'ಪೊಟ್ಠವಈ' ಶಬ್ದವನ್ನು ನೋಡುವುದು.
ಪುಟ್ಠವಯಾ. ಸ್ತ್ರೀ: [ಪ್ರೋಷ್ಠಪದಾ] ನಕ್ಷತ್ರ -ವಿಶೇಷ
ಪುಟ್ಠಿ ಸ್ತ್ರೀ: [ಪುಷ್ಟಿ] ಪೋಷಣೆ, ಬೆಳವಣಿಗೆ, ಅಹಿಂಸೆ, ದಯೆ(ಪಣ್ಹ), -ಮ. ವಿ: [-ಮತ್] ಪುಷ್ಟಿಹೊಂದಿರುವ. ಪು: ಭಗವಾನ್ ಮಹಾವೀರರ ಒಬ್ಬ ಶಿಷ್ಯ(ಅನೂ)
ಪುಟ್ಠಿ. 'ಪಿಟ್ಠಿ=ಪೃಷ್ಠ' ಶಬ್ದವನ್ನು ನೋಡುವುದು.
ಪುಟ್ಠಿ. ಸ್ತ್ರೀ: [ಪೃಷ್ಟಿ] ಪ್ರಶ್ನೆ, -ಯ. ವಿ: [-ಜ] ಪ್ರಶ್ನೆಯಿಂದ ಹುಟ್ಟಿದ(ತಾ)
ಪುಟ್ಠಿ. ಸ್ತ್ರೀ: [ಸ್ಪೃಷ್ಟಿ] ಸ್ಪರ್ಶ, -ಯ. ವಿ: [-ಜ] ಸ್ಪರ್ಶದಿಂದ ಹುಟ್ಟಿದ.
ಪುಟ್ಠಿಯಾ. ಸ್ತ್ರೀ: [ಪುಷ್ಟಿಕಾ] ಪ್ರಶ್ನೆಯಿಂದ ಉಂಟಾಗುವ ಕ್ರಿಯೆ - ಕರ್ಮ -ಬಂಧ
ಪುಟ್ಠಿಯಾ. ಸ್ತ್ರೀ: [ಸ್ಪೃಷ್ಟಿಕಾ] ಸ್ಪರ್ಶದಿಂದ ಉಂಟಾಗುವ ಕ್ರಿಯೆ -ಕರ್ಮ -ಬಂಧ(ತಾ)
ಪುಟ್ಠಿಲ. 'ಪೊಟ್ಠಿಲ' ಶಬ್ದವನ್ನು ನೋಡುವುದು.
ಪುಟ್ಠೀಯಾ. ಸ್ತ್ರೀ: [ಸ್ಪೃಷ್ಟೀಯಾ] 'ಪುಟ್ಠಿಯಾ=ಸ್ಪೃಷ್ಟಿಕಾ' ಶಬ್ದವನ್ನು ನೋಡುವುದು.
ಪುಟ್ಠೀಯಾ. ಸ್ತ್ರೀ: [ಪೃಷ್ಟೀಯಾ] ಸ್ಪರ್ಶದಿಂದ ಉಂಟಾಗುವ ಕ್ರಿಯೆ -ಕರ್ಮಬಂಧ(ನವ)
ಪುಡ. ಪುಂನ: [ಪುಟ] ಪರಸ್ಪರ ಜೋಡಣೆ, ಸಂಯೋಗ, ಬೆರೆಯುವುದು, ಢೋಲು, ತಮಟೆ ಮುಂತಾದವುಗಳ ಚರ್ಮ, ಸೇರಿಕೊಂಡಿರುವ ಎರಡು ಗುಂಪುಗಳು(ಉವಾ), ಔಷಧಿಯನ್ನು ಕಾಯಿಸುವ ಪಾತ್ರೆ(ಣಾಯಾ), ಎಲೆಗಳಿಂದ ತಯಾರಿಸಿದ ಪಾತ್ರೆ; ದೊನ್ನೆ(ರಂಭಾ), ಮುಚ್ಚಳ(ಉವಾ), ಕಮಲ. -ಭೇಯಣ. ನ: [-ಭೇದನ] ನಗರ, ಪಟ್ಟಣ. -ಪಾಯ. ಪು: [-ಪಕ] ಎಲೆಗಳ ಪಾತ್ರೆಯಲ್ಲಿ ತಯಾರಿಸಿಟ್ಟ ಔಷಧಿಯ ಪಾಕ -ವಿಶೇಷ, ಪಾಕದಿಂದ ತಯರಿಸಲಾದ ಔಷಧ -ವಿಶೇಷ.
ಪುಡ. ಪು: [ಪುಟ] ಒಂದು ಅಳತೆ, ಪುಟಕ್ಕೆ(ಅಂಗೈಯ ಕುಳಿ) ಪರಿಮಿತವಾದ ವಸ್ತು

ಪುಡ(ಶೌ). 'ಪುತ್ತ= ಪುತ್ರ' ಶಬ್ದವನ್ನು ನೋಡುವುದು.
ಪುಡಇಅ. ವಿ: [ದೇ] ರಾಶಿಹಾಕಲ್ಪಟ್ಟ ಒಟ್ಟುಗೂಡಿಸಲಾದ(ದೇ)
ಪುಡಇಣೀ. ಸ್ತ್ರೀ: [ದೇ.ಪುಟಕಿನೀ] ಕಮಲದ ಹೂವು (ದೇ)
ಪುಡಗ. ಪುಂನ: [ಪುಟಕ] 'ಪುಟ=ಪುಟ' ಶಬ್ದವನ್ನು ನೋಡುವುದು.
ಪುಡಪುಡೀ. ಸ್ತ್ರೀ: [ದೇ] ಬಾಯಿಂದ ಶಿಳ್ಳೆ ಹಾಕುವುದು, ಒಂದು ರೀತಿಯ ಅವ್ಯಕ್ತ ಶಬ್ದ
ಪುಡಮ. 'ಪುಢಮ' ಶಬ್ದವನ್ನು ನೋಡುವುದು.
ಪುಡಯ. 'ಪುಡಗ' ಶಬ್ದವನ್ನು ನೋಡುವುದು.
ಪುಡಿಂಗ. ನ: [ದೇ] ಬಾಯಿ, ಮುಖ, ಬಿಂದು(ದೇ)
ಪುಡಿಯಾ. ಸ್ತ್ರೀ: [ಪುಟಿಕಾ] ಪುಡಿಕೆ, ಡಬ್ಬಿ(ದೇ)
ಪುಡ್ಡ(ಶೌ). 'ಪುತ್ತ=ಪುತ್ರ' ಶಬ್ದವನ್ನು ನೋಡುವುದು.
ಪುಢಂ. 'ಪಿಹಂ' ಶಬ್ದವನ್ನು ನೋಡುವುದು.
ಪುಢಮ. ವಿ: [ಪ್ರಥಮ] ಮೊದಲನೆಯ(ಕುಮಾ),
ಪುಢವಿ–. 'ಪುಢವೀ' ಶಬ್ದವನ್ನು ನೋಡುವುದು(ಭಗ), **–ಕಾಇಯ, ಕ್ಕಾಇಯ.** ವಿ: [–ಕಾಯಿಕ]ಪಾರ್ಥಿವ ಶರೀರವುಳ್ಳ, ಮಣ್ಣಿನ ದೇಹದ(ಪಣ್ಣ), **–ಕ್ಕಾಯ.** 'ಪುಢವೀ –ಕಾಯ' ಶಬ್ದವನ್ನು ನೋಡುವುದು
ಪುಢವೀ. ಸ್ತ್ರೀ: [ಪೃಥಿವೀ] ಪೃಥ್ವಿ, ಭೂಮಿ(ತಾ), ಕಾಠಿಣ್ಯಾದಿ ಗುಣಗಳನ್ನು ಹೊಂದಿರುವ ಪದಾರ್ಥ, ಮಣ್ಣು, ಕಲ್ಲು ಧಾತು ಮೊದಲಾದವು. ಪೃಥ್ವಿಯ ಮೇಲಿನ ಜೀವಗಳು(ಜೀ), ಈಶಾನೇಂದ್ರನ ಒಬ್ಬ ಲೋಕಪಾಲನ ಪಟ್ಟದ ರಾಣಿ(ತಾ) , ಒಬ್ಬ ದಿಕ್ಕುಮಾರಿ ದೇವಿ, ಭಗವಾನ್ ಸುಪಾರ್ಶ್ವನಾಥನ ತಾಯಿಯ ಹೆಸರು. **–ಕಾಇಯ.** 'ಪುಢವಿ –ಕಾಇಯ' ಶಬ್ದವನ್ನು ನೋಡುವುದು. **–ಕಾಯ.** ವಿ: [–ಕಾಯ] ಪೃಥ್ವಿಯ ಶರೀರವುಳ್ಳ. **–ವಇ.** ಪು: [–ಪತಿ] ರಾಜ(ತಾ), **–ಸತ್ಥ.** ನ: [–ಶಸ್ತ್ರ] ಭೂಮಿಯ ರೂಪದ ಶಸ್ತ್ರ ನೇಗಿಲು, ಗುದ್ದಲಿ ಮೊದಲಾದ ಪೃಥ್ವಿಯ ಶಸ್ತ್ರಗಳು(ಆಚಾ), 'ಪುಹಈ, ಪುಹವೀ' ಶಬ್ದವನ್ನು ನೋಡುವುದು.
ಪುಢೀಭೂಯ.ವಿ: [ಪೃಥಗ್‌ಭೂತ] ಬೇರೆಯಾದವನು, (ಸುಪಾ)
ಪುಢುಮ. ವಿ: [ಪ್ರಥಮ] ಮೊದಲ(ಕುಮಾ)
ಪುಢೋ. ಅ: [ಪೃಥಗ್] ಬೇರೆಯಾದ, ಭಿನ್ನವಾದ (ಸುಪಾ), **–ಛಂದ.** ವಿ: [–ಛಂದ] ಬೇರೆ ಅಭಿಪ್ರಾಯ ಹೊಂದಿರುವ(ಆಚಾ), **–ಜಣ.** ಪು: [–ಜನ] ಸಾಧಾರಣವಾದ ಮನುಷ್ಯ. **–ಜಿಯ.ಪು:** [–ಜೀವ] ವಿಭಿನ್ನ ಪ್ರಾಣಿ(ಸೂಅ). **ವೇಮಾಯ.** ವಿ: [–ವಿಮಾತ್ರ] ಅನೇಕ ಬಗೆಯ, ಬಹುವಿಧದ
ಪುಢೋಜಗ. ವಿ: [ದೇ. ಪೃಥಗ್ಜಕ] ಬೇರೆಯಾದವನು
ಪುಢೋವಮ. ವಿ: [ಪೃಥಿವ್ಯುಪಮ] ಭೂಮಿಯ ಹಾಗೆ ಎಲ್ಲವನ್ನೂ ಸಹಿಸುವ(ಸೂಅ)
ಪುಢೋಸಿಯ. ವಿ: [ಪೃಥಿವೀಶ್ರಿತ] ಭೂಮಿಯ ಆಶ್ರಯದಲ್ಲಿದ್ದ(ಆಚಾ)
ಪುಣ. ಸಕ: [ಪೂ] ಪವಿತ್ರಗೊಳಿಸು, ಧಾನ್ಯಾದಿಗಳ ಹೊಟ್ಟು ತೆಗೆ, ಸ್ವಚ್ಛಗೊಳಿಸು
ಪುಣ. ಅ: [ಪುನರ್] ಭೇದ, ವ್ಯತ್ಯಾಸ, ಅವಧಾರಣೆ, ನಿಶ್ಚಯ, ಅಧಿಕಾರ, ಎರಡನೇ ಬಾರಿ, ಮತ್ತೆ, ತಿರುಗಿ, ಆದರೆ, ಪಕ್ಷಾಂತರದಲ್ಲಿ, ಸಮುಚ್ಚಯ ಇವೇ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ. ಪಾದಪೂರ್ತಿಗಾಗಿಯೂ ಇದರ ಬಳಕೆಯಾಗುತ್ತದೆ. **–ಕರಣ.** ನ: [–ಕರಣ]ಮತ್ತೆ ಮಾಡುವುದು, ವಿ: ಮತ್ತೊಮ್ಮೆ ನಿರ್ಮಾಣ ಮಾಡಲಾದದ್ದು(ಉವ), **–ಣ್ಣವ.** ವಿ: [–ನವ] ಹೊಸದು ಮಾಡಲಾದ, ತಾಜಾ(ಉಪ). **–ಪುಣ.** ಅ: [–ಪುನರ್] ಮತ್ತೆ ಮತ್ತೆ, **–ಪುಣಕ್ಕರಣ.** ನ: [–ಪುನಃಕರಣ] ಮತ್ತೆ ಮತ್ತೆ ಮಾಡುವುದು(ದೇ). **–ಬ್ಭವ.** ಪು: [–ಭವ] ಮತ್ತೆ ಹುಟ್ಟುವುದು, ಪುನರ್ ಜನ್ಮ ತಾಳುವುದು(ಔಪ). **–ಬ್ಭೂ.** ಸ್ತ್ರೀ: [–ಭೂ] ಮತ್ತೆ ಮದುವೆಯಾದ ಮಹಿಳೆ, ಪುನರ್ವಿವಾಹವಾದವಳು. **–ರವಿ. –ರಾವಿ.** ಅ: [–ಅಪಿ] ಆದಾಗ್ಯೂ, ಆದರೂ ಸಹ(ಉವಾ). **–ರಾವಿತ್ತಿ.** ಸ್ತ್ರೀ: [–ಆವೃತ್ತಿ] ಪುನರಾವರ್ತನೆ ಮಾಡುವುದು, **–ರುತ್ತ.** ವಿ: [–ಉಕ್ತ] ತಿರುಗಿ ಹೇಳಿದ, ಮತ್ತೆ ಹೇಳಿದ. ನ: ಪುನರುಕ್ತಿ **–ವಿ.** ಅ: [–ಅಪಿ] ಆದರೂ ಕೂಡ. **–ವ್ವಸು.** ಪು: [–ವಸು] ಪುನರ್ವಸು ನಕ್ಷತ್ರ. ಎಂಟನೇ ವಾಸುದೇವನ ಹಿಂದಿನ ಜನ್ಮದ ಹೆಸರು (ಪಉಮ)

ಪುಣ(ಅಪ). **'ಪುಣ್ಣ=ಪುಣ್ಯ'** ಶಬ್ದವನ್ನು ನೋಡುವುದು. **-ಮಂತ.** ವಿ: [**-ಮತ್**] ಪುಣ್ಯಶಾಲಿ.

ಪುಣಅ. **ಸಕ:** [**ದೃಶ್**] ನೋಡು,

ಪುಣಇ. **ಪು:** [**ದೇ**] ಶ್ವಪಚ, ಚಾಂಡಾಲ(ದೇ)

ಪುಣ್ಣ. ವಿ: [**ಪವನ**] ಪವಿತ್ರಗೊಳಿಸುವವನು. **ಸ್ತ್ರೀ:** -ಣೀ(ಕುಮಾ)

ಪುಣರುತ್ತ}. ಅ: ಮತ್ತೆ ಮತ್ತೆ, ತಿರು ತಿರುಗಿ(ಗಾ)

ಪುಣರುತ್ತಂ}.

ಪುಣಾ}. ಅ.**'ಪುಣ=ಪುನರ್'** ಶಬ್ದವನ್ನು

ಪುಣಾಇ}. ನೋಡುವುದು.(ಪಉಮ)

ಪುಣಾಇಂ}.

ಪುಣು.(ಅಪ). **'ಪುಣ=ಪುನರ್'** ಶಬ್ದವನ್ನು ನೋಡುವುದು.

ಪುಣೋ. **'ಪುಣ=ಪುನರ್'** ಶಬ್ದವನ್ನು ನೋಡುವುದು.

ಪುಣೊತ್ತ.'**ಪುಣ-ರುತ್ತ, ಪುಣರುತ್ತ**' ಶಬ್ದವನ್ನು ನೋಡುವುದು.

ಪುಣೊಲ್ಲ. **ಸಕ:** [**ಪ್ರ +ನೋದಯ್**] ಪ್ರೇರಿಸು, ಪೂರ್ತಿ ದೂರಮಾಡಿಬಿಡು

ಪುಣ್ಣ. **ಪುಂನ:** [**ಪುಣ್ಯ**] ಪುಣ್ಯ, ಶುಭ ಕರ್ಮ(ಔಪ), ಎರಡು ಉಪವಾಸ, ವಿ: ಪವಿತ್ರ. **-ಕಲಸಾ.** **ಸ್ತ್ರೀ:** [**-ಕಲಶಾ**] ಲಾಟ ದೇಶದ ಒಂದು ಹಳ್ಳಿಯ ಹೆಸರು. **-ಘಣ.** **ಪು:** [**-ಘನ**] ವಿದ್ಯಾಧರರಲ್ಲಿ ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ. **-ಮಂತ.** **-ಮತ್ತ.** ವಿ: [**-ವತ್**] ಪುಣ್ಯವಂತ, ಅದೃಷ್ಟವಂತ

ಪುಣ್ಣ. ವಿ: [**ಪೂರ್ಣ**] ಸಂಪೂರ್ಣವಾದ, ತುಂಬಿದ (ಔಪ). **ಪು:** ದ್ವೀಪ -ಕುಮಾರ ದೇವರುಗಳ ದಾಕ್ಷಿಣಾತ್ಯ ಇಂದ್ರ. ಇಕ್ಷು ಸಮುದ್ರದ ಅಧಿಷ್ಠಾಯಕ ದೇವ. ಪಕ್ಷದ ಐದನೆಯ, ಹತ್ತನೆಯ ಮತ್ತು ಹದಿನೈದನೆಯ ತಿಥಿ, ದಿನ. **ಪುಂನ:** ಶಿಖರ -ವಿಶೇಷ. **-ಕಲಸ.** **ಪು:** [**-ಕಲಶ**] ತುಂಬಿದ ಕೊಡ. **-ಘೋಸ.** **ಪು:** [**-ಘೋಷ**] ಐರಾವತ ವರ್ಷದ ಒಬ್ಬ ಭಾವೀ ಜಿನದೇವ. **-ಚಂದ.** **ಪು:** [**-ಚಂದ್ರ**] ಪೂರ್ಣ ಚಂದ್ರ, ವಿದ್ಯಾಧರ ವಂಶದ ಒಬ್ಬ ರಾಜನ ಹೆಸರು. **-ಪ್ಪಭ.** **ಪು:** [**-ಪ್ರಭ**] ಕಬ್ಬಿನ ಸಾಗರದ ದ್ವೀಪದ ಅಧಿಪತಿ ದೇವ. **-ಭದ್ದ.** **ಪು:** [**-ಭದ್ರ**] ಮಹಾವೀರನ ಬಳಿ ದೀಕ್ಷೆ ತೆಗೆದುಕೊಂಡು ಮೋಕ್ಷಹೊಂದಿದ ಒಬ್ಬ ಹೆಸರಾಂತ ಗೃಹ-ಪತಿ (ಅಂತ). ಯಕ್ಷ -ನಿಕಾಯದ ಒಬ್ಬ ಇಂದ್ರ(ಠಾ). **ಪುಂನ:** ಅನೇಕಗಿರಿ ಶಿಖರಗಳ ಹಸರು. ಯಕ್ಷನ ಚೈತ್ಯ. **-ಮಾಸೀ.** **ಸ್ತ್ರೀ:** [**-ಮಾಸೀ**] ಹುಣ್ಣಿಮೆಯ ತಿಥಿ. **-ಸೇಣ** **ಪು:** [**-ಸೇನ**] ಶ್ರೇಣಿಕ ಮಹಾರಾಜನ ಮಗ. ಇವನು ಮಹಾವೀರನ ಬಳಿ ದೀಕ್ಷೆ ತಗೆದುಕೊಂಡಿದ್ದನು. **'ಪುನ್ನ=ಪೂರ್ಣ'** ಶಬ್ದವನ್ನು ನೋಡುವುದು.

ಪುಣ್ಣಮಾಸಿಣೀ. **ಸ್ತ್ರೀ:** [**ಪೌರ್ಣಮಾಸೀ**] ಹುಣ್ಣಿಮೆಯ ತಿಥಿ(ಭಗ)

ಪುಣ್ಣವತ್ತ. **ನ:** [**ದೇ**] ಆನಂದದಿಂದ ಒಯ್ಯಲ್ಪಟ್ಟ ವಸ್ತ್ರ(ಪಾಅ)

ಪುಣ್ಣಾ. **ಸ್ತ್ರೀ:** [**ಪೂರ್ಣಾ**] ಪಕ್ಷದ ೫, ೧೦ ಮತ್ತು ೧೫ನೇ ತಿಥಿ. ಪೂರ್ಣಭದ್ರ ಮತ್ತು ಮಣಿಭದ್ರ ಇಂದ್ರನ ಒಬ್ಬ ಪಟ್ಟದ ರಾಣಿ(ಣಾಯಾ).

ಪುಣ್ಣಾಗ}. **'ಪುನ್ನಾಗ'** ಶಬ್ದವನ್ನು ನೋಡುವುದು.

ಪುಣ್ಣಾಮ}. (ಪಉಮ)

ಪುಣ್ಣಾಲೀ. **ಸ್ತ್ರೀ:** [**ದೇ**] ಕುಲಟೆ, ಜಾರಿಣಿ(ದೇ)

ಪುಣ್ಣಾಹ. **ಪುಂನ:** [**ಪುಣ್ಯಾಹ**] ಪುಣ್ಯ ದಿನ, ಶುಭ ದಿನ(ಗಾ), ವಾದ್ಯ -ವಿಶೇಷ

ಪುಣ್ಣಿಮಸೀ. **ಸ್ತ್ರೀ:** [**ಪೂರ್ಣಮಾಸೀ**] ಹುಣ್ಣಿಮೆ.

ಪುಣ್ಣಿಮಾ. **ಸ್ತ್ರೀ:** [**ಪೂರ್ಣಿಮಾ**] ಹುಣ್ಣಿಮೆಯ ತಿಥಿ. **-ಯಂದ.** **ಪು:** [**-ಚಂದ್ರ**] ಹುಣ್ಣಿಮೆಯ ಚಂದ್ರ

ಪುಣ್ಣಿಮಾಸಿಣೀ. **'ಪುಣ್ಣಮಾಸಿಣೀ'** ಶಬ್ದವನ್ನು ನೋಡುವುದು.

ಪುತ್ತ. **ಪು:** [**ಪುತ್ರ**] ಮಗ(ಠಾ). **-ವಈ.** **ಸ್ತ್ರೀ:** [**-ವತೀ**] ಮಗನನ್ನು ಹೊಂದಿರುವ ಮಹಿಳೆ(ಸುಪಾ)

ಪುತ್ತಂಜೀವಯ. **ಪು:** [**ಪುತ್ರಂಜೀವಕ**] ಗರ್ಭವನ್ನು ಕಾಪಾಡುವ ಒಂದು ವೃಕ್ಷ.

ಪುತ್ತಯ. **ಪು:** [**ಪುತ್ರಕ**] **'ಪುತ್ತ'** ಶಬ್ದವನ್ನು ನೋಡುವುದು.

ಪುತ್ತರೇ. **ಪುಂಸ್ತ್ರೀ:** [**ದೇ**] ಯೋನಿ, ಸ್ತ್ರೀ ಜನನೇಂದ್ರಿಯ

ಪುತ್ತಲಯ. **ಪು:** [**ಪುತ್ರಕ**] ಮಗ, ಬೊಂಬೆ(ಸಿರಿ)

ಪುತ್ತಲಿಯಾ}. **ಸ್ತ್ರೀ:** [**ಪುತ್ರಿಕಾ**] ಬೊಂಬೆ(ಸುಪಾ)

ಪುತ್ತಲೀ}.

ಪುತ್ತಹ. 'ಪುತ್ತ' ಶಬ್ದವನ್ನು ನೋಡುವುದು.
ಪುತ್ತಾಣುಪುತ್ತಿಯ. ವಿ: [**ಪೌತ್ರಾನುಪುತ್ರಿಕ**] ಪುತ್ರ-ಪೌತ್ರಾದಿಗಳಿಗೆ ಯೋಗ್ಯರು(ಣಾಯಾ)
ಪುತ್ತಿಆ. ಸ್ತ್ರೀ: [**ಪುತ್ರಿಕಾ**] ಮಗಳು, ಪುತ್ರಿ(ಅಭಿ), ಬೊಂಬೆ
ಪುತ್ತಿಲ್ಲ. 'ಪುತ್ತ' ಶಬ್ದವನ್ನು ನೋಡುವುದು.
ಪುತ್ತೀ. ಸ್ತ್ರೀ: [**ಪುತ್ರೀ**] ಮಗಳು.
ಪುತ್ತೀ. ಸ್ತ್ರೀ: [**ಪೋತೀ**] ಬಟ್ಟೆಯ ತುಣುಕು, ಮುಖದ ವಸ್ತ್ರ, ಸೀರೆ, ಸೊಂಟದ ವಸ್ತ್ರ(ಧರ್ಮವಿ). **'ಪೊತ್ತೀ'** ಶಬ್ದವನ್ನು ನೋಡುವುದು.
ಪುತ್ತುಲ್ಲ. ಪು: [**ಪುತ್ರ**] ಪುತ್ರ, ಮಗ(ಪ್ರಾಕೃ)
ಪುತ್ಥ. ವಿ: [**ದೇ**] ಮೃದುವಾದ, ಕೋಮಲವಾದ
ಪುತ್ಥ}. **ಪುಂನ:** [**ಪುಸ್ತ, -ಕ**] ಬಳಿಯುವುದೇ
ಪುತ್ಥಯ}. ಮೊದಲಾದ ಕೆಲಸ, ಲೇಪನ. ಪುಸ್ತಕ, ಗ್ರಂಥ. **'ಪೊತ್ಥ'** ಶಬ್ದವನ್ನು ನೋಡುವುದು.
ಪುಥವೀ. **'ಪುಢವೀ'** ಶಬ್ದವನ್ನು ನೋಡುವುದು.
ಪುಥುಣೀ}.(**ಪೈ**).**'ಪುಢವೀ'**ಶಬ್ದವನ್ನುನೋಡುವುದು
ಪುಥುವೀ}. .**-ನಾಥ.**(**ಪೈ**). **ಪು:** [**-ನಾಥ**] ದೊರೆ.
ಪುಧ. 'ಪಿಧಂ=ಪೃಥಕ್' ಶಬ್ದವನ್ನು ನೋಡುವುದು.
ಪುಧಂ. 'ಪಿಧಂ' ಶಬ್ದವನ್ನು ನೋಡುವುದು.
ಪುಧಮ}. (**ಪೈ**). **'ಪುಢಮ, ಪುಢುಮ'** ಶಬ್ದವನ್ನು
ಪುಧುಮ}. ನೋಡುವುದು.
ಪುನ್ನ. **'ಪುಣ್ಣ=ಪುಣ್ಯ'** ಶಬ್ದವನ್ನು ನೋಡುವುದು. **-ಕಂಖಿಅ.** ವಿ: [**ಕಾಂಕ್ಷಿತ, ಕಾಂಕ್ಷಿನ್**] ಪಣ್ಯದ ಇಚ್ಛೆ ಉಳ್ಳವನು. **-ಕಲಸ.** **ಪು:** [**-ಕಲಶ**] ಒಬ್ಬ ರಾಜನ ಹೆಸರು. **-ಜಸಾ.** ಸ್ತ್ರೀ: [**-ಯಶಸ್**] ಒಬ್ಬ ಮಹಿಳೆಯ ಹೆಸರು. **-ಪತ್ತಿಯಾ.** ಸ್ತ್ರೀ: [**-ಪ್ರತ್ಯಯಾ**] ಒಬ್ಬ ಜೈನ ಮುನಿಯ ಶಾಖೆ(ಕಪ್ಪ). **-ಪಿವಾಸಯ.** ವಿ: [**-ಪಿಪಾಸಕ**] ಪುಣ್ಯದ ಬಾಯಾರಿಕೆ ಉಳ್ಳವನು, ಪುಣ್ಯದ ಬಯಕೆ ಉಳ್ಳವನು. **-ಭಾಗಿ.** ವಿ: [**-ಭಾಗಿನ್**] ಪುಣ್ಯದಲ್ಲಿ ಭಾಗಿ, ಪುಣ್ಯಶಾಲಿ (ಸುಪಾ). **-ಸಮ್ಮ.** **ಪು:** [**-ಶರ್ಮನ್**] ಒಬ್ಬ ಬ್ರಾಹ್ಮಣನ ಹೆಸರು(ಉಪ). **-ಸಾರ.** **ಪು:** [**-ಸಾರ**] ತನ್ನ ಹೆಸರಿನಿಂದ ಖ್ಯಾತನಾದ ಶ್ರೇಷ್ಠಿ.
ಪುನ್ನ. **'ಪುಣ್ಣ= ಪೂರ್ಣ'** ಶಬ್ದವನ್ನು ನೋಡುವುದು. **-ತಲ್ಲ.** **ಪು:** [**-ತಲ**] ಒಂದು ಜೈನಮುನಿ -ಗಚ್ಛ (ಕುಪ್ರ). **-ಪಾಯ.** ವಿ: [**-ಪ್ರಾಯ**] ಹತ್ತಿರ ಹತ್ತಿರ ಪೂರ್ಣವಾಗಿರುವುದು. **-ಭದ್ದ.** **ಪು:** [**-ಭದ್ರ**] ಯಕ್ಷ -ವಿಶೇಷ. ಯಕ್ಷ ನಿಕಾಯದ ಒಬ್ಬ ಇಂದ್ರ(ಠಾ). ಒಬ್ಬ ಅಂತಕೃತ ಮುನಿ(ಅಂತ). ಆರ್ಯ ಶ್ರೀ ಸಮಂತವಿಜಯನ ಶಿಷ್ಯನಾದ ಒಬ್ಬ ಜೈನಮುನಿ.
ಪುನ್ನಯಣ. **ಪು:** [**ಪುಣ್ಯಜನ**] ಯಕ್ಷ, ಒಂದುದೇವ -ಜಾತಿ(ಪಾಅ)
ಪುನ್ನಾಗ}. **'ಪುಂನಾಗ'** ಶಬ್ದವನ್ನು ನೋಡುವುದು.
ಪುನ್ನಾಮ}. **ನ:** ಸುರಗಿಯ ಹೂವು(ಕುಮಾ)
ಪುನ್ನಾಯ}.
ಪುನ್ನಾಲಿಯಾ.}. (**ದೇ**). **'ಪುಣ್ಣಾಲೀ'** ಶಬ್ದವನ್ನು
ಪುನ್ನಾಲೀ}. ನೋಡುವುದು.
ಪುನ್ನಿಮಾ.'ಪುಣ್ಣಿಮಾ' ಶಬ್ದವನ್ನು ನೋಡುವುದು.
ಪುಪ್ಪುಅ. ವಿ: [**ದೇ**] ದಪ್ಪನಾದ, ಪುಷ್ಟವಾದ
ಪುಪ್ಫ. **ನ:** [**ಪುಷ್ಪ**] ಹೂವು, ಒಂದುದೇವ -ವಿಮಾನ ವಿಶೇಷ. ಸ್ತ್ರೀಯರ ರಜ. ವಿಕಾಸ. ಕಣ್ಣಿನ ಒಂದು ರೋಗ. ಕುಬೇರನ ವಿಮಾನ. **-ಇರಿ.** **ಪು:** [**-ಗಿರಿ**] ಒಂದು ಪರ್ವತದ ಹೆಸರು(ಪಉಮ) **-ಕಂತ.** **ನ:** [**-ಕಾಂತ**] ದೇವ -ವಿಮಾನ. **-ಕರಂಡಯ.** **ಪು:** [**-ಕರಂಡಕ**] ಹಸ್ತಿ ಶೀರ್ಷ ನಗರದ ಒಂದು ಉದ್ಯಾನ. **-ಕೇಉ.** **ಪು:** [**-ಕೇತು**] ಐರಾವತ ಕ್ಷೇತ್ರದ ಏಳನೇ ಭಾವೀ ತೀರ್ಥಂಕರ. ಗ್ರಹ ವಿಶೇಷ, ಗ್ರಹದ ಅಧಿಷ್ಠಾಯಕ ದೇವ(ಠಾ). **-ಗ.** **ನ:** [**-ಕ**] ಮೂಲಭಾಗ, ಹೂವು (ಕಪ್ಪ). **-ಯ.** ಅಡಿಯಲ್ಲಿ ನೋಡುವುದು(ಔಪ). **-ಚೂಲಾ.** ಸ್ತ್ರೀ: [**-ಚೂಲಾ**] ಭಗವಾನ್ ಪಾರ್ಶ್ವನಾಥರ ಮುಖ್ಯ ಶಿಷ್ಯೆಯ ಹೆಸರು. ಅನ್ನಿಕಾಚಾರ್ಯನ ಸುಯೋಗ್ಯ ಶಿಷ್ಯಳಾದ ಒಬ್ಬ ಮಹಾಸತಿ. ಸುಬಾಹು ಕುಮಾರನ ಪ್ರಧಾನ ಪತ್ನಿಯ ಹೆಸರು. **-ಚೂಲಿಯಾ.** ಸ್ತ್ರೀ: [**-ಚೂಲಿಕಾ**] ಒಂದು ಜೈನ ಗ್ರಂಥ. **-ಚ್ಚಣಿಯಾ.** ಸ್ತ್ರೀ: [**ಪುಷ್ಪಾರ್ಚನಿಕಾ**] ಹೂವುಗಳಿಂದ ಪೂಜೆ ಮಾಡುವುದು. **-ಚ್ಚಿಣಿಯಾ.** ಸ್ತ್ರೀ: [**-ಚಾಯಿನೀ**] ಹೂವನ್ನು ಪೋಣಿಸುವವಳು. **-ಛಜ್ಜಿಯಾ.** ಸ್ತ್ರೀ: [**-ಛದಿಕಾ**] ಪುಷ್ಪ -ಪಾತ್ರ -ವಿಶೇಷ. **-ಜ್ಝಯ.** **ನ:** [**-ಧ್ವಜ**] ಒಂದು ದೇವ-ವಿಮಾನ. **-ಣಂದಿ.** **ಪು:** [**-ನಂದಿನ್**] ಒಬ್ಬ ರಾಜನ ಹೆಸರು(ಠಾ).

–ಣಾಲಿಯಾ. '–ನಾಲಿಯಾ' ಶಬ್ದವನ್ನು ನೋಡುವುದು. –ದಂತ. ಪು: [–ದಂತ] ೯ನೇ ಜಿನದೇವನಾದ ಸುವಿಧಿನಾಥ, ಈಶಾನೇಂದ್ರನ ಹಸ್ತಿ ಸೈನ್ಯದ ಅಧಿಪತಿ ದೇವ(ಠಾ) ದೇವ–ವಿಶೇಷ. –ದಂತೀ.ಸ್ತ್ರೀ: [–ದಂತೀ] ಒಬ್ಬ ರಾಣಿ; ದಮಯಂತಿಯ ತಾಯಿಯ ಹೆಸರು (ಕುಪ್ರ). –ನಾಲಿಯಾ. ಸ್ತ್ರೀ: [–ನಾಲಿಕಾ] ಹೂವಿನ ದಂಟು, ನಾಳ. –ನಿಜ್ಜಾಸ. ಪು: [–ನಿರ್ಯಾಸ] ಪುಷ್ಪ–ರಸ. –ಪುರ. ನ: [–ಪುರ] ಪಾಟಲಿಪುತ್ರ. –ಪೂರಯ. ಪು: [–ಪೂರಕ] ಹೂವಿನ ರಚನಾ ವಿಶೇಷ(ಣಾಯಾ). –ಪ್ಪಭ. ನ: [–ಪ್ರಭ]ಒಂದು ದೇವ–ವಿಮಾನ. –ವಲಿ. ಪು: [–ಬಲಿ] ಪುಷ್ಪ –ಪೂಜೆ. –ಬಾಣ. ಪು: [–ಬಾಣ] ಮನ್ಮಥ. –ಭದ್ದ. ಸ್ತ್ರೀನ: [–ಭದ್ರ] ಪಾಟ್ನಾ ನಗರ. –ಮಂತ. ವಿ: [–ವತ್] ಹೂವನ್ನು ಹೊಂದಿರುವವನು. –ಮಾಲಾ. ನ: [–ಮಾಲಾ] ಹೂವಿನ ಹಾರ. ಊರ್ಧ್ವಲೋಕದಲ್ಲಿರುವ ಒಬ್ಬ ದಿಕ್ಕುಮಾರಿ ದೇವಿ(ಠಾ). –ಯ. ಪು: [–ಕ] ನೊರೆ, ಬುದ್ಬುದ, ಈಶಾನೇಂದ್ರನ ಒಂದು ಪಾರಿಯಾನಿಕ ವಿಮಾನ, ದೇವ–ವಿಮಾನ(ಠಾ). ಹೂವು, ಹಣೆಯ ಮೇಲೆ ಧರಿಸುವ ಹೂವಿನಾಕಾರದ ಒಂದು ಆಭರಣ. ಮೇಲೆ –ಗ' ಅನ್ನು ನೋಡುವುದು. –ಲಾಈ, –ಲಾವೀ. ಸ್ತ್ರೀ: [–ಲಾವೀ] ಹೂವನ್ನು ಪೋಣಿಸುವವಳು. –ವಈ.ಸ್ತ್ರೀ: [–ವತೀ] ಋತುಮತಿಯಾದ ಹೆಣ್ಣು(ದೇ). ಸತ್ಪುರುಷನೆಂಬ ಹೆಸರಿನ ಕಿಂಪುರುಷೇಂದ್ರನ ಪಟ್ಟದ ರಾಣಿ(ಠಾ). ಇಪ್ಪತ್ತನೇ ಜಿನ ದೇವನ ಪ್ರವರ್ತಿನಿ ಪ್ರಮುಖ ಸಾಧ್ವಿಯ ಹೆಸರು. ಒಂದು ಚೈತ್ಯ–ವಿಶೇಷ. –ವಣ್ಣ. ನ: [–ವರ್ಣ] ಒಂದು ದೇವ–ವಿಮಾನ. –ಸಿಂಗ. ನ: [–ಶೃಂಗ] ಒಂದು ದೇವ–ವಿಮಾನ. –ಸಿದ್ಧ. ನ: [– ಸಸಿದ್ಧ] ದೇವ–ವಿಮಾನ ವಿಶೇಷ. –ಸುಯ. ಪು: [–ಶುಕ] ವ್ಯಕ್ತಿ ವಾಚಕ ಹೆಸರು. ಪುಷ್ಪಾವತ್ತ. ನ: [ಪುಷ್ಪಾವರ್ತ] ಒಂದು ದೇವ–ವಿಮಾನ.

ಪುಪ್ಫಸ. ನ: [ದೇ] ಶ್ವಾಸಕೋಶ, ಶರೀರದೊಳಗಿನ ಒಂದು ಅಂಗ(ಪಉಮ)

ಪುಪ್ಫಾ. ಸ್ತ್ರೀ: [ದೇ] ಸೋದರತ್ತೆ, ತಂದೆಯ ಸೋದರಿ

ಪುಪ್ಫಿಅ. ವಿ: [ಪುಷ್ಪಿತ] ಅರಳಿದ, ಹೂಬಿಟ್ಟಿರುವ

ಪುಪ್ಫಿಆ.(ದೇ). 'ಪುಪ್ಫಾ' ಶಬ್ದವನ್ನು ನೋಡುವುದು.

ಪುಪ್ಫಿಆ. ಸ್ತ್ರೀ: [ಪುಷ್ಪಿತಾ] ಒಂದು ಜೈನ ಆಗಮ–ಗ್ರಂಥ(ನಿರ)

ಪುಪ್ಫಿಮ. ಪುಂಸ್ತ್ರೀ: [ಪುಷ್ಪತ್ವ] ಹೂತೋಟ.

ಪುಪ್ಫೀ(ದೇ). 'ಪುಪ್ಫಾ' ಶಬ್ದವನ್ನು ನೋಡುವುದು.

ಪುಪ್ಫುಆ. ಸ್ತ್ರೀ: [ದೇ] ಒಣ ಸಗಣಿಯ(=ಬೆರಣಿಯ) ಬೆಂಕಿ(ಗಾ)

ಪುಪ್ಫುತ್ತರ. ನ: [ಪುಷ್ಪೋತ್ತರ] ಒಂದು ವಿಮಾನ(ಕಪ್ಪ), –ವಡಿಂಸಗ. ನ: [ಪುಷ್ಪೋತ್ತರಾವತಂಸಕ] ಒಂದು ದೇವ –ವಿಮಾನ

ಪುಪ್ಫುತ್ತರಾ}. ಸ್ತ್ರೀ: [ಪುಷ್ಪೋತ್ತರಾ] ಸಕ್ಕರೆಯ ಒಂದು
ಪುಪ್ಫೊತ್ತರಾ}. ವಿಧ(ಣಾಯಾ)

ಪುಪ್ಫೋದಯ. ನ: [ಪುಷ್ಪೋದಕ] ಪುಷ್ಪ ರಸಮಿಶ್ರಿತವಾದ ನೀರು(ಣಾಯಾ)

ಪುಪ್ಫೋವಯ}. ವಿ: [ಪುಷ್ಪೋಪಗ] ಹೂವನ್ನು
ಪುಪ್ಫೋವಾ–}. ಹೊಂದುವ, ಅರಳುವ(=ಮರ)

ಪುಮ. ಪು: [ಪುಂಸ್] ಪುರುಷ, ಗಂಡಸು(ಉತ್ತ), ಪುರುಷ–ವೇದ, –ಆಣಮಣೀ. ಸ್ತ್ರೀ: [–ಆಜ್ಞಾಪನೀ] ಪುರುಷನಿಗೆ ಆಜ್ಞೆ ಮಾಡುವ ಭಾಷೆ, ಭಾಷಾ –ವಿಶೇಷ(ಪಣ್ಣ). –ಪನ್ನಾವಾಣೀ. ಸ್ತ್ರೀ: [–ಪ್ರಜ್ಞಾಪನೀ] ಪುರುಷನ ಲಕ್ಷಣಗಳನ್ನು ಪ್ರತಿಪಾದಿಸುವ ಭಾಷೆ, –ವಯಣ. ನ: [–ವಚನ] ಪುಲ್ಲಿಂಗ ಶಬ್ದದ ಉಚ್ಚಾರಣೆ(ಪಣ್ಣ)

ಪುಮ್ಮ(ಅಪ). ಸಕ: [ದೃಶ್] ನೋಡು

ಪುಯಲೀ. ಸ್ತ್ರೀ [ದೇ]ಸೊಂಟದ ಕೆಳಗಿನ ಭಾಗ.

ಪುಯಾವಇತ್ತಾ. 'ಪುಆವ' ಶಬ್ದವನ್ನು ನೋಡುವುದು.

ಪುರ(ಅಪ). 'ಪೂರ= ಪೂರಯ್' ಶಬ್ದವನ್ನು ನೋಡುವುದು. ಕ್ರಿಯಾ ರೂಪ: 'ಪುರಇ'

ಪುರ. ನ: [ಪುರ] ನಗರ, ಪಟ್ಟಣ(ಕುಮಾ), ಶರೀರ. –ಚಂದ. ಪು: [–ಚಂದ್ರ] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). –ಭೇಯಣ. ವಿ: [–ಭೇದನ] ನಗರವನ್ನು ಭೇದಿಸುವವನು. ಸ್ತ್ರೀ: –ಣೀ. –ವಇ. ಪು: [–ಪತಿ] ನಗರದ ಅಧಿಪತಿ. –ವರ. ನ: [–ವರ] ಶ್ರೇಷ್ಠ ನಗರ. –ವರೀ. ಸ್ತ್ರೀ: [–ವರಾ] ಶ್ರೇಷ್ಠ ನಗರಿ. –ವಾಲ. ಪು: [–ಪಾಲ] ನಗರದ ರಕ್ಷಕ, ರಾಜ.

ಪುರ. 'ಪುರಂ' ಶಬ್ದವನ್ನು ನೋಡುವುದು.
ಪುರಏಅ}. 'ಪುರದೇವ' ಶಬ್ದವನ್ನು ನೋಡುವುದು.
ಪುರಏವ}. (ಭವಿ)
ಪುರಓ. ಅ: [ಪುರತಸ್] ಮುಂದೆ, ಮುಂಭಾಗದಲ್ಲಿ, ಮುಂದುಗಡೆ(ಔಪ) ಮೊದಲು,
ಪುರಂ. ಅ: [ಪುರಸ್] ಮೊದಲು, ಪೂರ್ವದಲ್ಲಿ, ಮುಂಭಾಗದಲ್ಲಿ, ಮುಂದುಗಡೆ, ಎದುರಿನಲ್ಲಿ (ಠಾ). **–ಗವು.** ವಿ:[–ಗವು] ವಮುಂದೆ ಹೋಗುವವನು, ಅಗ್ರೇಸರ, **'ಪುರೇ, ಪುರೋ'** ಶಬ್ದಗಳನ್ನು ನೋಡುವುದು.
ಪುರಂಜಯ. ಪು: [ಪುರಂಜಯ] ವಿದ್ಯಾಧರ ರಾಜ, **–ಪುರ.** ನ [–ಪುರ] ಒಂದು ವಿದ್ಯಾಧರ –ನಗರ.
ಪುರಂದರ. ಪು: [ಪುರಂದರ] ದೇವರಾಜ ಇಂದ್ರ, ಗಂಧ ದ್ರವ್ಯ –ವಿಶೇಷ, ಗಜ ಹಿಪ್ಪಲಿ ಗಿಡ(ಉಪ). ಒಬ್ಬ ರಾಜರ್ಷಿ, ಮಂದರಕುಂಜ ನಗರದ ಒಬ್ಬ ವಿದ್ಯಾಧರ ರಾಜ(ಪಉಮ). **–ಜಸಾ.** ಸ್ತ್ರೀ: [–ಯಶಸ್] ಒಬ್ಬ ರಾಜಪುತ್ರಿಯ ಹೆಸರು(ಉಪ). **–ದಿಸಿ.** ಸ್ತ್ರೀ: [–ದಿಶ್] ಪೂರ್ವದಿಕ್ಕು(ಉಪ)
ಪುರಂಧಿ}. ಸ್ತ್ರೀ: [ಪುರಂಧ್ರೀ] ಬಹು ಕುಟುಂಬವನ್ನು
ಪುರಂಧೀ}. ಹೊಂದಿರುವ ಹೆಣ್ಣು. ಪತಿ, ಪುತ್ರರನ್ನು ಹೊಂದಿರುವ ಸ್ತ್ರೀ. ಬಹಳ ಹಿಂದೆಯೇ ಮದುವೆಯಾದವಳು(ಕಪ್ಪ)
ಪುರಕ್ಕಡ. 'ಪುರಕ್ಖಡ' ಶಬ್ದವನ್ನು ನೋಡುವುದು.
ಪುರಕ್ಕಾರ. ಪು: [ಪುರಸ್ಕಾರ] ಮುಂಭಾಗದಲ್ಲಿ ಇಡುವುದು. ಗೌರವಿಸುವುದು, ಸನ್ಮಾನಿಸುವುದು (ಸಮ).
ಪುರಕ್ಖಡ. ವಿ: [ಪುರಸ್ಕೃತ] ಮುಂಭಾಗದಲ್ಲಿ ಇಡಲ್ಪಟ್ಟ, ಮುಂದೆ ಮಾಡಲ್ಪಟ್ಟ, ಮುಂದೆ ಇರುವವನು, ಗೌರವಿಸಲ್ಪಟ್ಟ(ಭಗ)
ಪುರಚ್ಛಾ. 'ಪುರತ್ಥಾ' ಶಬ್ದವನ್ನು ನೋಡುವುದು.
ಪುರಚ್ಛಿಮ. 'ಪುರತ್ಥಿಮ' ಶಬ್ದವನ್ನು ನೋಡುವುದು (ಠಾ). **–ದಾಹಿಣಾ.** ಸ್ತ್ರೀ: [–ದಕ್ಷಿಣಾ] ಪೂರ್ವ–ದಕ್ಷಿಣ ದಿಕ್ಕು; ಅಗ್ನಿಮೂಲೆ(ಠಾ)
ಪುರಚ್ಛಿಮಾ. 'ಪುರತ್ಥಿಮಾ' ಶಬ್ದವನ್ನು ನೋಡುವುದು.
ಪುರಚ್ಛಿಮಿಲ್ಲ. 'ಪುರತ್ಥಿಮಿಲ್ಲ' ಶಬ್ದವನ್ನು ನೋಡುವುದು.
ಪುರತ್ಥ. ವಿ: [ಪುರಃಸ್ಥ] ಮುಂದೆ ಇರುವ(ಉಪ)
ಪುರತ್ಥ}. ಅ: [ಪುರಸ್ತಾತ್] ಮೊದಲು, ಪೂರ್ವ
ಪುರತ್ಥಓ}. ಕಾಲದಲ್ಲಿ, ಪ್ರಾರಂಭದಲ್ಲಿ. ಕಾಲ,
ಪುರತ್ಥಾ}. ದೇಶಗಳಿಗಿಂತ ಮುಂದೆ. ಪೂರ್ವ ದಿಕ್ಕು, ಪೂರ್ವದಿಕ್ಕಿನಲ್ಲಿ, ಪೂರ್ವದಿಕ್ಕಿನಿಂದ(ಉತ್ತ)
ಪುರತ್ಥಿಮ. ವಿ: [ಪೌರಸ್ತ್ಯ, ಪೂರ್ವ] ಪೂರ್ವದ ಕಡೆಗೆ, ನ: ಪೂರ್ವದಿಕ್ಕು
ಪುರತ್ಥಿಮಾ. ಸ್ತ್ರೀ: [ಪೂರ್ವಾ] ಪೂರ್ವ ದಿಕ್ಕು(ಆಚಾ)
ಪುರತ್ಥಿಮಿಲ್ಲ. ವಿ: [ಪೌರಸ್ತ್ಯ] ಪೂರ್ವದಿಕ್ಕಿನ, ಪೂರ್ವದಿಕ್ಕಿನಲ್ಲಿರುವ(ವಿಪಾ) ಪೂರ್ವದೇಶದಲ್ಲಿ ಹುಟ್ಟಿದ
ಪುರದೇವ. ಪು: [ಪುರಾದೇವ] ಭಗವಾನ್ ಆದಿನಾಥ (ಪಉಮ)
ಪುರವ. 'ಪುವ್ವ' ಶಬ್ದವನ್ನು ನೋಡುವುದು.
ಪುರಸ್ಸರ. ವಿ: [ಪುರಸ್ಸರ] ಮುಂದೆ ಹೋಗುವ, ಮುಂದೆ ನಡೆಯುವ
ಪುರಾ. ಸ್ತ್ರೀ: [ಪುರ್] ನಗರ, ಪಟ್ಟಣ
ಪುರಾ. 'ಪುರಿಲ್ಲಾ=ಪುರಾ' ಶಬ್ದವನ್ನು ನೋಡುವುದು. **–ಇಯ, –ಕಯ.** ವಿ: [–ಕೃತ] ಹಿಂದೆ ಮಾಡಿದ, ಪೂರ್ವಕಾಲದಲ್ಲಿ ಮಾಡಿದ(ಭವಿ). **–ಭವ.** ಪು: [–ಭವ] ಪೂರ್ವ ಜನ್ಮ
ಪುರಾಅಣ. ವಿ: [ಪುರಾತನ] ಹಳೆಯ, ಪ್ರಾಚೀನ, ಹಿಂದಿನ. ಸ್ತ್ರೀ: **–ಣೀ**
ಪುರಾಕರ. ಸಕ: [ಪುರಾ+ಕೃ] ಮುಂದೆ ಮಾಡು (ಸೂಅ)
ಪುರಾಣ. ವಿ: [ಪುರಾಣ] ಪುರಾತನವಾದ, ಹಳೆಯದಾದ (ಗಉಡ), ವ್ಯಾಸಾದಿಗಳು ರಚಿಸಿದ ಗ್ರಂಥ–ವಿಶೇಷ, ಪ್ರಾಚೀನ ಇತಿಹಾಸದ ಮೂಲಕ ಧರ್ಮ, ತತ್ವಗಳನ್ನು ಸರ್ಗ, ಪ್ರತಿಸರ್ಗ, ವಂಶ ವಂಶಾನುಚರಿತೆ, ಮನ್ವಂತರವೇ ಮೊದಲಾದ ಐದು ಲಕ್ಷಣಗಳೊಡಗೂಡಿರುವಂತೆ ರಚಿತವಾದವು (ಭವಿ). **–ಪುರಿಸ.** ಪು: [–ಪುರುಷ] ಶ್ರೀಕೃಷ್ಣ
ಪುರಿಕೋಬೇರ. ಪು.ಬ: [ಪುರಿಕೌಬೇರ] ಒಂದು ದೇಶ –ವಿಶೇಷ(ಪಉಮ)
ಪುರಿತ್ಥಿಮಾ. 'ಪುರತ್ಥಿಮಾ' ಶಬ್ದವನ್ನು ನೋಡುವುದು.
ಪುರಿಮ. 'ಪುವ್ವ=ಪೂರ್ವ' ಶಬ್ದವನ್ನು ನೋಡುವುದು (ಕುಮಾ). **–ಡ್ಢ.** ಪುಂನ: [–ಪೂರ್ವಾರ್ಧ]

ಪೂರ್ವಾರ್ಧ. ನಿರಾಕರಣೆ(=ಪ್ರತ್ಯಾಖ್ಯಾನ)ೀಷ. **'ನಿರ್ವಿಕೃತಿಕ'** ಎಂಬ ತಪಸ್ಸು. **-ಡ್ಢಿಯ.ವಿ:** **[ಪೂರ್ವಾರ್ಧಿಕ]** **'ಪುರಿಮಡ್ಢ'** ಪ್ರತ್ಯಾಖ್ಯಾನ ಮಾಡುವವನು(ಪಣ್ಣ)

ಪುರಿಮ. ವಿ: **[ಪೌರಸ್ತ್ಯ]** ಅಣ್ಣ, ಮುಂದಿರುವವ, ಮುಂಭಾಗದಲ್ಲಿರುವ,

ಪುರಿಮ. ಪು: **[ದೇ]** ಅರಳುವುದು, ಬಿರಿಯುವುದು, ಪ್ರತಿ-ಲೇಖನದ ಕ್ರಿಯಾ -ವಿಶೇಷ.

ಪುರಿಮತಾಲ. ನ: **[ಪುರಿಮತಾಲ]** ಒಂದು ನಗರ -ವಿಶೇಷ(ವಿಪಾ)

ಪುರಿಮಿಲ್ಲ. ವಿ: **[ಪೂರ್ವೀಯ]** ಮೊದಲಿನ, ಪುರಾತನ, ಪ್ರಾಚೀನ

ಪುರಿಲ. ಪು: **[ದೇ]** ದೈತ್ಯ, ದಾನವ(ಷಡ್)

ಪುರಿಲ್ಲ. ವಿ: **[ಪುರಾತನ]** ಹಿಂದೆ ಹುಟ್ಟಿದ, ಮೊದಲಿನ, ಹಿಂದೆ ಇದ್ದ(ವಿಸೇ)

ಪುರಿಲ್ಲ. ವಿ: **[ಪೌರಸ್ತ್ಯ]** ಅಣ್ಣ, ಮುಂದಿರುವವ, ಮುಂಭಾಗದಲ್ಲಿರುವ,

ಪುರಿಲ್ಲ. ವಿ: **[ಪೌರ]** ಪುರದಲ್ಲಿ ಹುಟ್ಟಿದವನು, ನಾಗರಿಕ

ಪುರಿಲ್ಲ. ವಿ: **[ದೇ]** ಶ್ರೇಷ್ಠ

ಪುರಿಲ್ಲ. 'ಪುರಿಲ್ಲಾ=ಪುರಾ, ಪುರಸ್' ಶಬ್ದವನ್ನು ನೋಡುವುದು.

ಪುರಿಲ್ಲದೇವ. ಪು: **[ದೇ]** ಅಸುರ, ರಾಕ್ಷಸ, ದಾನವ

ಪುರಿಲ್ಲಪಹಾಣಾ. ಸ್ತ್ರೀ: **[ದೇ]** ಹಾವಿನ ದವಡೆ ಹಲ್ಲು.

ಪುರಿಲ್ಲಾ. ಅ: **[ಪುರಾ]** ನಿರಂತರವಾಗಿ ಕೆಲಸ ಮಾಡುವುದು, ಪ್ರಾಚೀನ, ಹಿಂದಿನ ಕಾಲದಲ್ಲಿ, ಪ್ರಾರಂಭದಲ್ಲಿ, ಮುಂದಿನ, ಭವಿಷ್ಯದಲ್ಲಿ, ಸಮೀಪದಲ್ಲಿ, ಇತಿಹಾಸ

ಪುರಿಲ್ಲಾ. ಅ: **[ಪುರಸ್]** ಮುಂದೆ, ಮುಂಭಾಗದಲ್ಲಿ

ಪುರಿಸ. ಪುಂನ: **[ಪುರುಷ]** ಗಂಡಸು, ಮನುಷ್ಯ(ಭಗ), ಜೀವ, ಜೀವಾತ್ಮ, ಪರಮೇಶ್ವರ(ಸೂಅ), ನೆರಳನ್ನು ಅಳೆಯುವ ಮರದಿಂದ ಮಾಡಿದ ಗೂಟ, ಪುರುಷ -ಶರೀರ. **-ಕಾರ, -ಕ್ಕಾರ, -ಗಾರ. ಪು:** **[-ಕಾರ]** ಪುರುಷತ್ವ, ಪುರುಷ -ಪ್ರಯತ್ನ (ಉವಾ). ಪುರುಷತ್ವದ ಅಭಿಮಾನ(ಔಪ). **-ಜಾಯ. ಪು:** **[-ಜಾತ]** ಪುರುಷ, ಪುರುಷ ಜಾತಿಯ(ಸೂಅ), **-ಜುಗ. ನ:** **[-ಯುಗ]** ಕ್ರಮದಲ್ಲಿರುವ ಪುರುಷ, **-ಜೇಟ್ಠ. ಪು:** **[-ಜ್ಯೇಷ್ಠ]** ಪ್ರಶಸ್ತನಾದ ಪುರುಷ. **-ತ್ತ, -ತ್ತಣ. ನ:** **[-ತ್ವ]** ಪೌರುಷ, ಪುರುಷತ್ವ **-ತ್ಥ. ಪು:** **[ಪುರುಷಾರ್ಥ]** ಧರ್ಮ, ಅರ್ಥ, ಕಾಮ,ಮತ್ತು ಮೋಕ್ಷವೆಂಬ ಪುರುಷಾರ್ಥಗಳು. **-ಪುಂಡರೀಅ. ಪು:** **-ಪುಂಡರೀಕ]** ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ಆರನೇ ವಾಸುದೇವ. **-ಪ್ಪಣೀಯ. ವಿ:** **[-ಪ್ರಣೀತ]** ಪರಮೇಶ್ವರ ನಿರ್ಮಿತ, ಜೀವ-ರಚಿತ. **-ಮೇಹ. ಪು:** **[-ಮೇಘ]** ಪುರುಷನನ್ನು ಹೋಮ ಮಾಡಲಾಗುವ ಯಜ್ಞ, **-ಯಾರ. '-ಕಾರ'** ಶಬ್ದವನ್ನು ನೋಡುವುದು. **-ಲಕ್ಖಣ. ನ:** **[-ಲಕ್ಷಣ]** ಪುರುಷನ ಶುಭಾಶುಭ ಚಿಹ್ನೆಗಳನ್ನು ಗುರುತಿಸಬಲ್ಲ ಒಂದು ಸಾಮುದ್ರಿಕ ಕಲೆ. **-ಲಿಂಗ. ನ:** **[-ಲಿಂಗ]** ಪುರುಷ ಚಿಹ್ನೆ. **-ಲಿಂಗಸಿದ್ಧ. ಪು:** **[-ಲಿಂಗಸಿದ್ಧ]** ಪುರುಷ ಶರೀರದಿಂದ ಮುಕ್ತನಾದವನು(ಣಂದಿ). **-ವಯಣ. ನ:** **[-ವಚನ]** ಪುಲ್ಲಿಂಗ ಶಬ್ದ(ಆಚಾ). **-ವರ. ಪು:** **[-ವರ]** ಶ್ರೇಷ್ಠ ಪುರುಷ(ಔಪ). **-ವರಗಂಧಹತ್ಥಿ. ಪು:** **[-ವರಗಂಧಹಸ್ತಿನ್]** ಪುರುಷರಲ್ಲಿ ಶ್ರೇಷ್ಠ ಗಂಧಹಸ್ತಿಯನ್ನು ಹೋಲುವವನು, ಜಿನದೇವ (ಭಗ). **-ವರಪುಂಡರೀಯ. ಪು:** **[-ವರಪಂಡರೀಕ]** ಪುರುಷರಲ್ಲಿ ಶ್ರೇಷ್ಠ ಪದ್ಮಕ್ಕೆ ಸಮನಾದವನು, ಜಿನದೇವ. **-ವಿಜಯ. ಪು:** **[-ವಿಚಯ, -ವಿಜಯ]** ಪುರುಷನಿಗೆ ಸ್ತ್ರೀ ಸಂಭೋಗದ ಇಚ್ಛೆಯನ್ನುಂಟು ಮಾಡುವ ಕರ್ಮ-ವಿಶೇಷ. ಪುರುಷನಿಗೆ ಸ್ತ್ರೀ ಭೋಗದ ಅಭಿಲಾಷೆ(ಪಣ್ಣ). **-ವೇಯ.ಪು:** **[-ವೇದ]** ಕರ್ಮ -ವಿಶೇಷ, ಇದು ಉದಯಯಿಸುವುದರಿಂದ ಪುರುಷನಿಗೆ ಸ್ತ್ರೀ ಸಂಭೋಗದ ಇಚ್ಛೆ ಉಂಟಾಗುತ್ತದೆ. ಪುರುಷನಿಗೆ ಸ್ತ್ರೀ -ಭೋಗಾಭಿಲಾಷೆ(ಪಣ್ಣ). **-ಸಿಂಹ. -ಸೀಹ. ಪು:** **[-ಸಿಂಹ]** ಪುರುಷರಲ್ಲಿ ಸಿಂಹ ಸದೃಶನಾದವನು. **ಪು:** ಜಿನದೇವ(ಭಗ). ಭಗವಾನ್ ಧರ್ಮನಾಥನ ಮೊದಲ ಶ್ರಾವಕನ ಹೆಸರು. ಈ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ಐದನೆಯ ವಾಸುದೇವ(ಪಉಮ). **-ಸೇಣ. ಪು:** **[-ಸೇನ]** ಭಗವಾನ್ ನೇಮಿನಾಥನ ಹತ್ತಿರ ದೀಕ್ಷೆ ತೆಗೆದುಕೊಂಡು ಮೋಕ್ಷಕ್ಕೆ ಹೋಗಲಿರುವ ಒಬ್ಬ

ಅಂತಕೃದ್ ಮಹರ್ಷಿ. ಅವನು ವಸುದೇವನ ಇನ್ನೊಬ್ಬ ಮಗ. ಭಗವಾನ್ ಮಹಾವೀರನಿಂದ ದೀಕ್ಷೆ ತೆಗೆದುಕೊಂಡು ಅನುತ್ತರ ವಿಮಾನದಲ್ಲಿ ಹುಟ್ಟುವ, ಶ್ರೇಣಿಕ ಮಹಾರಾಜನ ಒಬ್ಬ ಮಗ. **ಪುರಿಸಾದಾಣಿಅ, ಪುರಿಸಾದಾಣೀಯ. ಪು:** [**ಪುರುಷಾದಾನೀಯ**] ಉಪಾದೇಯ ಪುರುಷ, ಆಪ್ತ ಪುರುಷ(ಕಪ್ಪ).

ಪುರಿಸಕಾರಿಆ. ಸ್ತ್ರೀ: [**ಪುರುಷಕಾರಿಕಾ, –ತಾ**] ಪುರುಷಾರ್ಥ, ಪ್ರಯತ್ನ

ಪುರಿಸಾಅ. ಅಕ: [**ಪುರುಷಾಯ್**] ವಿರುದ್ಧ ಮೈಥುನ ಮಾಡು(ದೇ)

ಪುರಿಸಾಇರ. ವಿ: [**ಪುರುಷಾಯಿತೃ**] ವಿರುದ್ಧ ರತಿ ಮಾಡುವವನು(ಗಾ)

ಪುರಿಸುತ್ತಮ.}. ಪು: [**ಪುರುಷೋತ್ತಮ**] ಶ್ರೇಷ್ಠ

ಪುರಿಸೋತ್ತಮ}.ಪುರುಷ,ಜಿನ –ದೇವ, ತೀರ್ಥಂಕರ. ನಾಲ್ಕನೆಯ ತ್ರಿಖಂಡಾಧಿಪತಿ, ನಾಲ್ಕನೇ ವಾಸುದೇವ(ಪಉವ). ಭಗವಾನ್ ಅನಂತನಾಥನ ಪ್ರಥಮ ಶ್ರಾವಕ, ಶ್ರೀಕೃಷ್ಣ.

ಪುರೀ. ಸ್ತ್ರೀ: [**ಪುರೀ**] ನಗರ, ಪಟ್ಟಣ. **–ನಾಹ. ಪು:** [**–ನಾಥ**] ನಗರದ ಅಧಿಪತಿ. ದೊರೆ(ಉಪ)

ಪುರೀಸ. ಪುಂನ: [**ಪುರೀಷ**] ಮಲ(ಉಪ)

ಪುರು. ಪು: [**ಪುರು**] ತನ್ನ ಹೆಸರಿನಿಂದ ಖ್ಯಾತನಾದ ಒಬ್ಬ ರಾಜ(ಅಭಿ) ವಿ: ಬಹಳ, ಅತ್ಯಧಿಕ. ಸ್ತ್ರೀ: –ಈ.

ಪುರುಪುರಿಆ. ಸ್ತ್ರೀ: [**ದೇ**] ಉತ್ಕಂಠತೆ, ಉತ್ಸುಕತೆ(ದೇ)

ಪುರುಮಿಲ್ಲ. 'ಪುರಿಮಿಲ್ಲ' ಶಬ್ದವನ್ನು ನೋಡುವುದು (ಗಉಡ)

ಪುರುಮ. 'ಪುರಿಮ' ಶಬ್ದವನ್ನು ನೋಡುವುದು.

ಪುರುವ}. 'ಪುವ್ವ=ಪೂರ್ವ' ಶಬ್ದವನ್ನು
ಪುರುವ್ವ}.ನೋಡುವುದು.

ಪುರುಸ(ಶೌ). 'ಪುರಿಸ' ಶಬ್ದವನ್ನು ನೋಡುವುದು.

ಪುರುಸೊತ್ತಮ(ಶೌ). 'ಪುರಿಸೊತ್ತಮ' ಶಬ್ದವನ್ನು ನೋಡುವುದು.

ಪುರುಹೂಅ. ಪು: [**ದೇ**] ಗೂಬೆ(ದೇ)

ಪುರುಹೂಅ. ಪು: [**ಪುರುಹೂತ**] ದೇವ –ರಾಜ ಇಂದ್ರ

ಪುರೂರವ. ಪು: [**ಪುರೂರವಸ್**] ಚಂದ್ರವಂಶದ ಒಬ್ಬ ರಾಜ.

ಪುರೇ. 'ಪುರಂ' ಶಬ್ದವನ್ನು ನೋಡುವುದು. **–ಕಡ. ವಿ:** [**–ಕೃತ**] ಮುಂದೆ ಮಾಡಿದ, ಹಿಂದೆ ಮಾಡಿದ(ಔಪ). **–ಕಮ್ಮ. ನ:** [**–ಕರ್ಮನ್**] ಪೂರ್ವದಲ್ಲಿ ಮಾಡುತ್ತಿದ್ದ ಕ್ರಿಯೆ. **–ಕ್ಕಾರ. ಪು;** [**–ಕಾರ**] ಗೌರವ, ಆದರ(ಉತ್ತ). **–ಕ್ಖಡ. '–ಕಡ'** ಶಬ್ದವನ್ನು ನೋಡುವುದು. **–ವಾಯ. ಪು:** [**–ವಾತ**] ಸ್ನೇಹದಿಂದ ಕೂಡಿದ ಗಾಳಿ, ಪೂರ್ವದಿಕ್ಕಿನ ಗಾಳಿ(ಣಾಯಾ). **–ಸಖಂಡಿ. ಸ್ತ್ರೀ:** [**ದೇ. ಸಂಸ್ಕೃತಿ**] ಮೊದಲೇ ಮಾಡುವ ಭೋಜನೋತ್ಸವ(ಆಚಾ). **–ಸಂಥುಯ. ವಿ:** [**–ಸಂಸ್ತುತ**] ಮುಂಚೆಯೇ ಪರಿಚಿತನಾದ, ಪೂರ್ವ ಪರಿಚಿತ. ತನ್ನ ಕಡೆಯ ಬಂಧು(ಆಚಾ)

ಪುರೇಸ. ಪು: [**ಪುರೇಶ**] ನಗರದ ಅಧಿಪತಿ(ಭವಿ)

ಪುರೋ. 'ಪುರಂ' ಶಬ್ದವನ್ನು ನೋಡುವುದು. **–ಅ, –ಗ. ವಿ:** [**–ಗಮ**] ಅದೇ ಅರ್ಥ. **–ಭಾಇ. ವಿ:** [**–ಭಾಗಿನ್**] ದೋಷವನ್ನು ಬಿಟ್ಟು ಗುಣವನ್ನು ಮಾತ್ರ ಸ್ವೀಕರಿಸುವವನು

ಪುರೋಕರ. ಸಕ: [**ಪುರಸ್+ಕೃ**] ಎದುರಿನಲ್ಲಿ ಮಾಡು. ಸ್ವೀಕರಿಸು. ಗೌರವಿಸು.

ಪುರೊತ್ತಮಪುರ. ನ: [**ಪುರೋತ್ತಮಪುರ**] ಒಂದು ವಿದ್ಯಾಧರ ನಗರದ ಹೆಸರು.

ಪುರೋವಗ. ಪು: [**ಪುರೋಪಕ**] ಒಂದು ಬಗೆಯ ವೃಕ್ಷ(ಔಪ)

ಪುರೋಹ. ಪು: [**ಪುರೋಧಸ್**] ಪುರೋಹಿತ

ಪುರೋಹಡ. ವಿ: [**ದೇ**] ವಿಷಮ, ಸಮಾನವಲ್ಲದ, ಬೆಸ, **ಪುಂನ:** ಅವರಿಸಿರುವ ಭೂಮಿಯ ವಾಸ್ತು(ದೇ). ಬಾಗಿಲಿನ ಅಗ್ರಭಾಗ(ಓಘ). ದನಗಳ ಹಟ್ಟಿ, ದನದ ಕೊಟ್ಟಿಗೆ(ಸುಪಾ)

ಪುರೋಹಿಅ. ಪು: [**ಪುರೋಹಿತ**] ಯಾಜಕ, ಹೋಮಾದಿಗಳಿಂದ ಶಾಂತಿ –ಕರ್ಮಗಳನ್ನು ಮಾಡಿಸುವ ಬ್ರಾಹ್ಮಣ.

ಪುಲ. ಪು: [**ದೇ, ಪುಲ**] ಸಣ್ಣ ಕುರು, ಗುಳ್ಳೆ

ಪುಲ. ಅಕ: [**ಪುಲ್**] ಎತ್ತರವಾಗು, ಉನ್ನತವಾಗು

ಪುಲ. ವಿ: [**ಪುಲ**] ಉನ್ನತವಾದ, ಎತ್ತರವಾದ, ಮಹತ್ತಾದ, ವಿಸ್ತಾರವಾದ

ಪುಲ.}. ಸಕ: [**ದೃಶ್**] ನೋಡು. **–'ಪುಲಇ'.** ವ. ಕೃ
ಪುಲಅ}. –'ಪುಲಂತ'

ಪುಲಅ. ಪು: [ಪುಲಕ] ರೋಮಾಂಚ. ರತ್ನ –ವಿಶೇಷ, ಒಂದು ಜಾತಿಯ ಮಣಿ. ಒಂದು ಬಗೆಯ ಜಲಚರ ಪ್ರಾಣಿ. ಮೊಸಳೆಯ ಒಂದು ಪ್ರಭೇದ. **–ಕಂಡ. ಪುಂನ:** [–ಕಾಂಡ] ರತ್ನ –ಪ್ರಭಾ ಎಂಬ ನರಕ –ಭೂಮಿಯ ಒಂದು ಭಾಗ(ತಾ)

ಪುಲಅಣ. ವಿ: [ದರ್ಶನ] ನೋಡುವವನು, ಪ್ರೇಕ್ಷಕ (ಕುಮಾ)

ಪುಲಅಣ. ನ: [ಪುಲಕನ್] ಪುಲಕಿತಗೊಳ್ಳುವುದು, ರೋಮಾಂಚನಗೊಳ್ಳುವುದು

ಪುಲಆಅ. ಅಕ: [ಉತ್+ಲಸ್] ಉಲ್ಲಾಸಗೊಳ್ಳು, ಹರ್ಷಗೊಳ್ಳು

ಪುಲಇಅ. ವಿ: [ಪುಲಕಿತ] ರೋಮಾಂಚಿತಗೊಂಡ (ಪಾಅ).

ಪುಲಇಜ್ಜ.ಅಕ: [ಪುಲಕಾಯ್]ರೋಮಾಂಚನಗೊಳ್ಳು. ವ.ಕೃ –**'ಪುಲಇಜ್ಜಂತ'**

ಪುಲಇಲ್ಲ.ವಿ: [ಪುಲಕಿನ್] ರೋಮಾಂಚಿತನಾದವನು

ಪುಲಏಂತ. **'ಪುಲಅ=ದೃಶ್'** ಶಬ್ದವನ್ನು ನೋಡುವುದು.

ಪುಲಂಧಅ. ಪು: [ದೇ] ಭ್ರಮರ, ಜೇನುಹುಳ

ಪುಲಂಪುಲ. ನ: [ದೇ] ನಿರಂತರ, ಎಡೆಬಿಡದೆ, ಒಂದೇ ಸಮನೆ(ಪಣ್ಣ)

ಪುಲಕ}. **'ಪುಲಅ=ಪುಲಕ'** ಶಬ್ದವನ್ನು ನೋಡುವುದು

ಪುಲಗ}.

ಪುಲಯ. ಪುಂನ: [ಪುಲಕ] ಒಂದು ಜಾತಿಯ ಕೀಟ

ಪುಲಾಗ}. ಪುಂನ; [ಪುಲಾಕ] ಅನ್ನದ ಅಗುಳು,

ಪುಲಾಯ}. ಕಡಲೆ ಮೊದಲಾದ ಶುಷ್ಕ ಅನ್ನ. ಜಳ್ಳು ಧಾನ್ಯ. ಬೆಳ್ಳುಳ್ಳಿಯೇ ಮೊದಲಾದ ದುರ್ಗಂಧ ದ್ರವ್ಯ. ದುಷ್ಟ ರಸ ಹೊಂದಿರುವವ ದ್ರವ್ಯ. **ಪು:** ತಮ್ಮ ಸಂಯಮವನ್ನು ನೀಗಿಕೊಳ್ಳುವ, ಸಡಿಲು ನಡತೆಯ ಸಂನ್ಯಾಸಿಗಳ ಒಂದು ವರ್ಗ(ತಾ)

ಪುಲಾಸಿಅ. ಪು: [ದೇ] ಬೆಂಕಿಯ ಕಣ, ಬೆಂಕಿಯ ಕಿಡಿ(ದೇ).

ಪುಲಿಂದ. ಪು: [ಪುಲಿಂದ] ಒಂದು ಅನಾರ್ಯ– ದೇಶ –ವಿಶೇಷ. **ಪುಂಸ್ತ್ರೀ:** ಆ ದೇಶದಲ್ಲಿ ವಾಸಿಸುವವನು(ಔಪ)ಸ್ತ್ರೀ: –ದೀ

ಪುಲಿಣ. ನ: [ಪುಲಿನ] ದಡ, ತಟ. ಮರಳು. ನದಿಯ ತಟಪ್ರದೇಶ. ನಿರಂತರ ೨೨ ದಿನಗಳವರೆಗಿನ ಉಪವಾಸ

ಪುಲಿಯ. ನ: [ಪುಲಿತ] ಒಂದು ಗತಿ –ವಿಶೇಷ(ಔಪ).

ಪುಲುಟ್ಠ. ವಿ: [ಪ್ಲುಷ್ಟ] ಸುಟ್ಟುಹೋದ, ದಹಿಸಲ್ಪಟ್ಟ

ಪುಲೋಅ. ಸಕ: [ದೃಶ್, ಪ್ರ +ಲೋಕ್] ನೋಡು. –**'ಪುಲೋಏಇ'**

ಪುಲೋಅಣ. ನ: [ದರ್ಶನ, ಪ್ರಲೋಕನ] ನೋಡುವುದು, ಅವಲೋಕಿಸುವುದು

ಪುಲೋಇಅ. ವಿ: [ದೃಷ್ಟ, ಪ್ರಲೋಕಿತ] ನೋಡಲ್ಪಟ್ಟ (ಸುರ), **ನ:** ಅವಲೋಕನ, ನೋಟ, ದೃಷ್ಟಿ

ಪುಲೋಏಂತ. **'ಪುಲೋಅ'** ಶಬ್ದವನ್ನು ನೋಡುವುದು.

ಪುಲೋಮ. ಪು: [ಪುಲೋಮನ್] ಒಬ್ಬ ದೈತ್ಯ, **–ತಣಯಾ. ಸ್ತ್ರೀ:** [–ತನಯಾ] ಪುಲೋಮನ ಮಗಳಾದ ಶಚೀದೇವಿ, ಇಂದ್ರಾಣಿ

ಪುಲೋಮೀ. ಸ್ತ್ರೀ: [ಪೌಲೋಮೀ] ಇಂದ್ರಾಣಿ(ಪ್ರಾಕೃ)

ಪುಲೋವ. **'ಪುಲೋಅ'** ಶಬ್ದವನ್ನು ನೋಡುವುದು. –**'ಪುಲೋವೇದಿ'**

ಪುಲೋಸ. ಪು: [ಪ್ಲೋಷ] ಸುಡುವುದು, ದಹನ

ಪುಲ್ಲ(ದೇ). **'ಪೊಲ್ಲ'** ಶಬ್ದವನ್ನು ನೋಡುವುದು.

ಪುಲ್ಲಿ. ಪುಂಸ್ತ್ರೀ: [ದೇ]ಹುಲಿ,ಸಿಂಹ,ಪಂಚಾನನ (ದೇ).

ಪುವ}. ಸಕ: [ಪ್ಲು] ನಡೆ, ಚಲಿಸು 'ಪುವಂತಿ',

ಪುವ್ವ}.'ಪುವ್ವಂತಿ'

ಪುವ್ವ–. **'ಪುಣ=ಪೂ'** ಶಬ್ದವನ್ನು ನೋಡುವುದು.

ಪುವ್ವ. ವಿ: [ಪೂರ್ವ] ದಿಕ್ಕು, ದೇಶ ಮತ್ತು ಕಾಲಕ್ಕಿಂತ ಹಿಂದಿನದು, ಪ್ರಾಚೀನ ಕಾಲ, ಆದ್ಯ, ಪ್ರಾರಂಭ ಕಾಲ, ಮುಂಚಿನ ಕಾಲ(ತಾ). ಸಕಲ, ಸಮಸ್ತ, ಹಿರಿಯಣ್ಣ(ಷಡ್). **ಪುಂನ:** ೮೪ ಲಕ್ಷವನ್ನು ೮೪ಲಕ್ಷದಿಂದ ಗುಣಿಸಿದಾಗ ಎಷ್ಟು ಬರುತ್ತದೋ ಅಷ್ಟು ವರ್ಷಗಳು ಎಂಬ ಕಾಲಮಾನ. ಜೈನ ಗ್ರಂಥಾಂಶ –ವಿಶೇಷ, ಹನ್ನೆರಡನೇ ಆಗಮ ಗ್ರಂಥದ ಒಂದು ದೊಡ್ಡ ವಿಭಾಗ, ಅಧ್ಯಯನ, ಪರಿಚ್ಛೇದ. ವಧೂ–ವರ ಇತ್ಯಾದಿ ಜೋಡಿ, ಜೊತೆ(ಆಚಾ). ಪೂರ್ವ–ಗ್ರಂಥದ ಜ್ಞಾನ. ಕಾರಣ, ಹೇತು(ಣಂದಿ). **–ಕಾಲಿಯ. ವಿ:** [–ಕಾಲಿಕ] ಹಿಂದಿನ ಕಾಲದ, ಹಿಂದಿನ ಕಾಲಕ್ಕೆ ಸಂಬಂಧಿಸಿದ. **–ಗಯ. ನ:** [–ಗತ] ಜೈನ ಶಾಸ್ತ್ರಾಂಶ –ವಿಶೇಷ: –೨ನೇ ಅಂಗದ ವಿಭಾಗ(ತಾ). **ಪುವ್ವಣ್ಹ. ಪು:** [ಪೂರ್ವಾಹ್ಣ] ಬೆಳಗಿನ ಎರಡು ಪ್ರಹರದ ವರೆಗಿನ ಸಮಯ, **'ಪುರಿಮಡ್ಢ'**

ಎಂಬ ಒಂದು ಬಗೆಯ ತಪಸ್ಸು. **–ತವ. ಪುಂನ:** [**–ತಪಸ್**] ವೀತರಾಗ ಅವಸ್ಥೆಗಿಂತ ಮೊದಲಿನ ಸರಾಗ ಅವಸ್ಥೆಯ ತಪಸ್ಸು. **–ದಾರಿಅ.** ವಿ: [**–ದ್ವಾರಿಕ**] ಪೂರ್ವದಿಕ್ಕಿನಲ್ಲಿ ನಡೆದರೆ ಮಂಗಳಕಾರಿ (ನಕ್ಷತ್ರ). **–ದ್ಧ. ಪುಂನ:** [**ಪೂರ್ವಾರ್ಧ**] ಮೊದಲ ಅರ್ಧಭಾಗ. **–ಧರ.** ವಿ: [**–ಧರ**] ಪೂರ್ವ ಗ್ರಂಥದ ಜ್ಞಾನವುಳ್ಳವನು(ಪಣ್ಣ). **–ಪಯ.** ನ: [**–ಪದ**] ಉತ್ಸರ್ಗ ಸ್ಥಾನ(ನಿಚೂ). **–ಪುಟ್ಠವಯಾ. ಸ್ತ್ರೀ:** [**–ಪ್ರೋಷ್ಠಪದಾ**] ನಕ್ಷತ್ರ–ವಿಶೇಷ. **–ಪುರಿಸ. ಪು:** [**–ಪುರುಷ**] ಪೂರ್ವಜ. **–ಪ್ಪಓಗ. ಪು:** [**–ಪ್ರಯೋಗ**] ಹಿಂದಿನ ಕ್ರಿಯೆ, ಹಿಂದಿನ ಕಾಲದ ಪ್ರಯತ್ನ(ಭಗ). **–ಫಗ್ಗುಣೀ. ಸ್ತ್ರೀ:** [**–ಫಾಲ್ಗುನೀ**] ನಕ್ಷತ್ರ –ವಿಶೇಷ. **–ಭದ್ದವಯಾ. ಸ್ತ್ರೀ:** [**–ಭಾದ್ರಪದಾ**] ನಕ್ಷತ್ರ –ವಿಶೇಷ. **–ಭವ. ಪು:** [**–ಭವ**] ಹಿಂದಿನ ಜನ್ಮ(ಣಾಯಾ). **–ಭವಿಯ.** ವಿ: [**–ಭವಿಕ**] ಪೂರ್ವ ಜನ್ಮದ ಸಂಬಂಧಿ(ಭವಿ). **–ಯ. ಪು:** [**–ಜ**] ಪೂರ್ವಜ. **–ರತ್ತ. ಪು:** [**–ರಾತ್ರ**] ರಾತ್ರಿಯ ಪೂರ್ವಭಾಗ. **–ವ.** ನ: [**–ವತ್**] ಅನುಮಾನ ಪ್ರಮಾಣದ ಒಂದು ಪ್ರಭೇದ. **–ವಿದೇಹ. ಪು:** [**–ವಿದೇಹ**] ಮಹಾ ವಿದೇಹ ವರ್ಷದ ಪೂರ್ವ ಭಾಗ(ಠಾ). **–ಸಮಾಸ. ಪುಂನ:** [**–ಸಮಾಸ**] ಒಂದಕ್ಕಿಂತ ಹೆಚ್ಚು ಪೂರ್ವಶಾಸ್ತ್ರಗಳ ಜ್ಞಾನ. **–ಸುಯ.** ನ: [**–ಶ್ರುತ**] ಪೂರ್ವದ ಜ್ಞಾನ. **–ಸೂರಿ. ಪು:** [**–ಸೂರಿ**] ಪ್ರಾಚೀನ ವಿದ್ವಾಂಸರು, ಆಚಾರ್ಯರು(ಜೀವ). **–ಹರ.** '**–ಧರ**' ಶಬ್ದವನ್ನು ನೋಡುವುದು(ಪಉಮ). **ಪುವ್ವಾಣುಪುವ್ವೀ. ಸ್ತ್ರೀ:** [**ಪೂರ್ವಾನುಪೂರ್ವೀ**] ಕ್ರಮ, ಪರಿಪಾಟಿ–ಣಹ. '**–ಣ್ಹಿ**'ವನ್ನು ನೋಡುವುದು. **–ಪುವ್ವಾಫಗ್ಗುಣೀ.** '**–ಫಗ್ಗುಣೀ**' ಶಬ್ದವನ್ನು ನೋಡುವುದು. **–ಪುವ್ವಾಭದ್ದವಯಾ.** '**–ಭದ್ದವಯಾ**' ಶಬ್ದವನ್ನು ನೋಡುವುದು. **ಪುವ್ವಾಸಾಢಾ. ಸ್ತ್ರೀ:** [**ಪೂರ್ವಾಷಾಢಾ**] ಒಂದು ನಕ್ಷತ್ರ (ಸಮ).

ಪುವ್ವಂಗ. ಪುಂನ: [**ಪೂರ್ವಾಂಗ**] ೮೪ ಸಾವಿರ ವರ್ಷ; ಒಂದು ಕಾಲದ ಅಳತೆ(ಠಾ). ಪಕ್ಷದ ಮೊದಲ ದಿನದ ಹೆಸರು, ಪ್ರತಿಪದೆ.

ಪುವ್ವಂಗ. ವಿ: [**ದೇ**] ಪೂರ್ತಿಯಾಗಿ ಕ್ಷೌರ ಮಾಡಲ್ಪಟ್ಟವನು. ತಲೆಬೋಳು ಮಾಡಲ್ಪಟ್ಟವನು

ಪುವ್ವಾ. ಸ್ತ್ರೀ: [**ಪೂರ್ವಾ**] ಪೂರ್ವದಿಕ್ಕು

ಪುವ್ವಾಡ. ವಿ: [**ದೇ**] ದಪ್ಪನಾದ, ಮಾಂಸಲವಾದ, ಪುಷ್ಟವಾದ(ದೇ)

ಪುವ್ವಾಮೇವ. ಅ: [**ಪೂರ್ವಮೇವ**] ಮೊದಲೇ, ಮುಂಚೆಯೇ, ಹಿಂದೆಯೇ

ಪುವ್ವಾವಈಣಯ. ನ: [**ಪೂರ್ವಾವಕೀರ್ಣಕ**] ಒಂದು ನಗರ.

ಪುವ್ವಿ. ವಿ:[**ಪೂರ್ವಿನ್**] ಪೂರ್ವಶಾಸ್ತ್ರವನ್ನು ತಿಳಿದವನು

ಪುವ್ವಿ}. ಕ್ರಿ ವಿ: [**ಪೂರ್ವಮ್**] ಮೊದಲಿಗೆ,

ಪುವ್ವಿಂ}. ಪೂರ್ವದಲ್ಲಿ(ಉವಾ). **–ಸಂಥವ. ಪು:** [**–ಸಂಸ್ತವ**] ಹಿಂದೆ ಮಾಡುತ್ತಿದ್ದ ಪ್ರಶಂಸೆ, ಜೈನ ಮುನಿಯ ಭಿಕ್ಷೆಯಲ್ಲಿನ ಒಂದು ದೋಷ; ಭಿಕ್ಷೆ ಪಡೆಯುವ ಮುನ್ನವೇ ಭಿಕ್ಷೆನೀಡುವವನನ್ನು ಹೊಗಳುವುದು(ಠಾ).

ಪುವ್ವಿಮ. ಪುಂಸ್ತ್ರೀ: [**ಪೂರ್ವತ್ವ**] ಪ್ರಾಚೀನತೆ, ಹಳತನ. ಮೊದಲತನ(ಷಡ್)

ಪುವ್ವಿಲ್ಲ. ವಿ: [**ಪೂರ್ವ, ಪೂರ್ವೀಯ**] ಮೊದಲಿನ, ಪೂರ್ವದ, ಹಿಂದಿನ(ಸುಪಾ)

ಪುವ್ವುತ್ತ. ವಿ: [**ಪೂರ್ವೋಕ್ತ**] ಹಿಂದೆ ಹೇಳಲಾದ, ಮೊದಲು ಹೇಳಲಾದ

ಪುವ್ವುತ್ತರಾ. ಸ್ತ್ರೀ: [**ಪೂರ್ವೋತ್ತರಾ**] ಈಶಾನ್ಯದ ಮೂಲೆ

ಪುಸ. ಸಕ: [**ಪ್ರ +ಉಚ್ಛ್, +ಮೃಜ್**] ಸ್ವಚ್ಛಗೊಳಿಸು, ಶುದ್ಧಗೊಳಿಸು, ಒರೆಸು. –'**ಪುಸಇ**'

ಪುಸ. '**ಪುಸ್ಸ**' ಶಬ್ದವನ್ನು ನೋಡುವುದು.

ಪುಸ. ಪು: [**ಪೌಷ**] ಪುಷ್ಯ ಮಾಸ

ಪುಸಿಅ. ವಿ: [**ಪ್ರೋಚ್ಛಿತ, ಮೃಷ್ಟ**] ಒರೆಸಲ್ಪಟ್ಟ, ಸ್ವಚ್ಛಗೊಳಿಸಲ್ಪಟ್ಟ(ಗಉಡ)

ಪುಸಿಅ. ಪು: [**ಪೃಷತ**] ಮೈಮೇಲೆ ಬಿಳಿ ಚುಕ್ಕೆಗಳಿರುವ ಜಿಂಕೆ(ಗಾ)

ಪುಸ್ಸ. ಪು: [**ಪುಷ್ಯ**] ಪುಷ್ಯಾ ನಕ್ಷತ್ರ, ಕೃತ್ತಿಕೆಯಿಂದ ಎಂಟನೆಯ ನಕ್ಷತ್ರ(ಪ್ರಾಪ್ರ). ರೇವತಿ ನಕ್ಷತ್ರದ ಅಧಿಪತಿ –ದೇವ. ಒಬ್ಬ ಋಷಿ. **–ಮಾಣಅ, ಮಾಣವ. ಪು:** [**–ಮಾನವ**] ವಂದಿ ಮಾಗಧ, ಸ್ತುತಿಪಾಠಕ(ಣಾಯಾ). '**ಪೂಸ=ಪುಷ್ಯ**' ಶಬ್ದವನ್ನು ನೋಡುವುದು.

ಪುಸ್ಸದೇವಯಾ. ನ: [**ಪುಷ್ಪದೈವತ**] ಜೈನೇತರ ಶಾಸ್ತ್ರ –ವಿಶೇಷ

ಪುಸ್ಸಾಯಣ. ನ: [ಪುಷ್ಯಾಯಣ] ಒಂದು ಗೋತ್ರ.
ಪುಹ}. **'ಪಿಹ=ಪೃಥಕ್'** ಶಬ್ದವನ್ನು ನೋಡುವುದು.
ಪುಹಂ}. **-ಬ್ಭೂಯ.**ವಿ: [-ಭೂತ] ಬೇರೆಯಾದ, ಅಗಲಿದ, ಭಿನ್ನವಾದ.
ಪುಹಇಂ}. ಸ್ತ್ರೀ: [ಪೃಥಿವೀ] ಮೂರನೇ ವಾಸುದೇವನ
ಪುಹಇ}. ತಾಯಿಯ ಹೆಸರು(ಪಉಮ) ಒಂದು ನಗರದ ಹೆಸರು. ಭಗವಾನ್ ಸುಪಾರ್ಶ್ವನಾಥನ ತಾಯಿಯ ಹೆಸರು. **'ಪುಢವೀ, ಪುಹವೀ'** ಶಬ್ದಗಳನ್ನು ನೋಡುವುದು. **-ಧರ. ಪು:** [-ಧರ] ರಾಜ. **-ನಾಹ. ಪು:** [-ನಾಥ] ದೊರೆ. **-ಪಹು. ಪು:** [-ಪ್ರಭು] ರಾಜ. **-ಪಾಲ. ಪು:** [-ಪಾಲ] ರಾಜ. **-ರಾಯ. ಪು:** [-ರಾಜ] ವಿಕ್ರಮ ಶಕೆ -೨ನೇ ಶತಮಾನದ ಶಾಂಭರಿ ದೇಶದ ಒಬ್ಬ ರಾಜ. **-ವಇ. ಪು:** [-ಪತಿ] ರಾಜ. **-ವಾಲ. '-ಪಾಲ'** ಶಬ್ದವನ್ನು ನೋಡುವುದು.
ಪುಹಈಸರ. ಪು: [ಪೃಥಿವೀಶ್ವರ] ರಾಜ, ದೊರೆ
ಪುಹತ್ತ. ನ: [ಪೃಥಕ್ತ್ವ] ಬೇರೆಯಾಗಿರುವಿಕೆ, ಪ್ರತ್ಯೇಕವಾಗಿರುವುದ(ಅಣು), ವಿಸ್ತಾರ, ಬಹುತ್ವ(ಭಗ). ವಿ: ಭಿನ್ನವಾದ, ಬೇರೆಯಾದ. **-ವಿಯಕ್ಕ.** ನ: [-ವಿತರ್ಕ] ಶುಕ್ಲ ಧ್ಯಾನದ ಒಂದು ಪ್ರಭೇದ. **'ಪುಹುತ್ತ, ಪೋಹತ್ತ'** ಶಬ್ದಗಳನ್ನು ನೋಡುವುದು.
ಪುಹತ್ತಿಯ. 'ಪೋಹತ್ತಿಯ' ಶಬ್ದವನ್ನು ನೋಡುವುದು.
ಪುಹಯ. 'ಪಿಹ=ಪೃಥಕ್', ಶಬ್ದವನ್ನು ನೋಡುವುದು.
ಪುಹವಿ-}. **'ಪುಢವೀ, ಪುಹಈ'** ಶಬ್ದಗಳನ್ನು
ಪುಹವೀ}. ನೋಡುವುದು. ಭಗವಾನ್ ಶ್ರೇಯಾಂಸನಾಥನ ದೀಕ್ಷಾ -ಶಿಬಿಕೆ(ವಿಚಾರ). **-ಚಂದ. ಪು:** [-ಚಂದ್ರ] ಒಬ್ಬ ರಾಜ. **-ಪಾಲ. ಪು:** [-ಪಾಲ] ಒಂದು ಛಂದಸ್ಸಿನ ಹೆಸರು. **-ಚಂದ. ಪು:** [-ಚಂದ್ರ] ಒಬ್ಬ ರಾಜ. **-ಪಾಲ. ಪು:** [-ಪಾಲ] ಒಬ್ಬ ರಾಜಕುಮಾರ(ಉಪ). **'ಪುಹಈ -ಪಾಲ'** ಶಬ್ದವನ್ನು ನೋಡುವುದು. **-ಪುರ.** ನ: [-ಪುರ] ಒಂದು ನಗರದ ಹೆಸರು.
ಪುಹವೀಸ. ಪು: [ಪೃಥಿವೀಶ] ದೊರೆ.
ಪುಹು. ವಿ: [ಪೃಥು]ವಿಶಾಲವಾದ,ಅಗಲವಾದ. ಸ್ತ್ರೀ:-ಈ'.

ಪುಹುತ್ತ. ನ: [ಪೃಥಕ್ತ್ವ] ಎರಡರಿಂದ ೯ರವರೆಗಿನ ಸಂಖ್ಯೆಗಳು. **'ಪುಹುತ್ತ'** ಶಬ್ದವನ್ನು ನೋಡುವುದು.
ಪುಹುವೀ. 'ಪಹು -ಈ' ಶಬ್ದವನ್ನು ನೋಡುವುದು.
ಪೂ-. ಪುಂ - ಅನ್ನು ನೋಡುವುದು. **-ಸುಅ. ಪು:** [-ಶುಕ] ಗಿಳಿ
ಪೂಅ. ಸಕ: [ಪೂಜಯ್] ಪೂಜಿಸು
ಪೂಅ. ನ: [ದೇ] ಮೊಸರು.
ಪೂಅ. ಪು: [ಪೂಗ]ಅಡಕೆಮರ(ಗಉಡ). ನ: ಅಡಕೆ. **'ಪೂಗ'** ಶಬ್ದವನ್ನು ನೋಡುವುದು. **-ಫಲೀ, -ಫಲೀ.** ಸ್ತ್ರೀ: [-ಫಲೀ] ಅಡಕೆ ಮರ (ಪಉಮ)
ಪೂಅ. ನ: [ಪೂರ್ತ] ಕೆರೆ, ಬಾವಿ ಮೊದಲಾದವುಗಳನ್ನು ತೋಡಿಸುವುದು, ಅನ್ನ ದಾನ ಮಾಡುವುದು, ದೇವಸ್ಥಾನ ನಿರ್ಮಿಸುವುದೇ ಮೊದಲಾದ ಜನ ಸಮುದಾಯದ ಕಾರ್ಯಗಳು.
ಪೂಅ. ವಿ: [ಪೂತ] ಪವಿತ್ರ, ಶುದ್ಧ(ಣಾಯಾ), ನಿರಂತರ ಆರು ದಿನಗಳ ಉಪವಾಸ. ವಿ: ಮೊರದಿಂದ ಹೊಟ್ಟನ್ನು ಕೇರಿ ಸ್ವಚ್ಛಗೊಳಿಸಲ್ಪಟ್ಟ ಧಾನ್ಯ, ಕಾಳು.
ಪೂಅ. ನ: [ಪೂಯ] ಗಾಯದಿಂದ ಹೊರಬಂದ ದುರ್ವಾಸನೆಯ ಕೀವು(ಪಣ್ಣ).
ಪೂಅಣ. ನ: [ಪೂಜನ] ಪೂಜೆ, ಸೇವೆ, (ಸುಪಾ)
ಪೂಅಣಾ. ಸ್ತ್ರೀ: [ಪೂಜನಾ] ಮೇಲಿನ ಶಬ್ದವನ್ನು ನೋಡುವುದು. ಕಾಮದ ಆಭರಣ.
ಪೂಅಣಾ}. ಸ್ತ್ರೀ: [ಪೂತನಾ] ದುಷ್ಟ ವ್ಯಂತರಿ,
ಪೂಅಣೀ}. ರಾಕ್ಷಸಿ, ಕುರಿ(ಸೂಅ)
ಪೂಅಯ. ವಿ: [ಪೂಜಕ] ಪೂಜೆ ಮಾಡಿದ(ಸುರ)
ಪೂಅರ. 'ಪೋರ=ಪೂತರ' ಶಬ್ದವನ್ನುನೋಡುವುದು.
ಪೂಅಲ}. **ಪು:** [ಪೂಪ] ಹಿಟ್ಟಿನಿಂದ ತಯಾರಿಸಿದ
ಪೂಅಲಿಯಾ}.ಸ್ತ್ರೀ:[ಪೂಪಿಕಾ] ರೊಟ್ಟಿಯೇ ಮೊದಲಾದ ಭಕ್ಷ್ಯ.
ಪೂಆ. ಸ್ತ್ರೀ: [ದೇ] ಪಿಶಾಚಿ ಹಿಡಿದವಳು, ಭೂತ ಹೊಕ್ಕವಳು.
ಪೂಆ. ಸ್ತ್ರೀ: [ಪೂಜಾ]. ಪೂಜೆ, ಅರ್ಚನೆ, ಸೇವೆ(ಕುಮಾ) **-ಭತ್ತ.** ನ: [-ಭಕ್ತ] ಪೂಜ್ಯರಿಗಾಗಿ ಸಿದ್ಧಪಡಿಸಿದ ಭೋಜನ. **-ಮಹ. ಪು:** [-ಮಹ] ಪೂಜೋತ್ಸವ] **-ರಹ. ಪು:** [-ರಥ] ರಾಕ್ಷಸ

ವಂಶದಲ್ಲಿ ಹುಟ್ಟಿದ ಒಬ್ಬ ರಾಜನ ಹೆಸರು. ಒಬ್ಬ ಲಂಕಾಧಿಪತಿ(ಪಉಮ). **–ರಿಹ, –ರುಹ.** ವಿ: [–ರ್ಹ] ಪೂಜೆಗೆ ಯೋಗ್ಯನಾದ, ಅರ್ಹನಾದ

ಪೂಆಹಿಜ್ಜ. ವಿ: [**ಪೂಜಾಹಾರ್ಯ**] ಪೂಜಿಸಲ್ಪಟ್ಟ ಪೂಜಕ

ಪೂಇ. ವಿ: [**ಪೂತಿ**] ಕೆಟ್ಟವಾಸನೆಯ. ಅಪವಿತ್ರ. ಸ್ತ್ರೀ: ದುರ್ಗಂಧ, ಅಪವಿತ್ರತೆ, ಭಿಕ್ಷೆಯಲ್ಲಿನ ಒಂದು ದೋಷ; ಪೂತಿ –ಕರ್ಮ. ಮೂಗಿನ ಒಂದು ರೋಗ(ವಿಸೇ). ಕೀವು, ಏಕಾಸ್ಥಿಕ ವೃಕ್ಷದ ಒಂದು ಬಗೆಯ ಜಾತಿ. **–ಕಮ್ಮ.** ನ: [**–ಕರ್ಮನ್**] ಮುನಿ –ಭಿಕ್ಷೆಯುಲ್ಲಿನ ಒಂದು ದೋಷ: ಪವಿತ್ರ ವಸ್ತುವಿನಲ್ಲಿ ಅಪವಿತ್ರವಾದ ವಸ್ತುವನ್ನು ಸೇರಿಸಿ ಕೊಡುವ ಭಿಕ್ಷೆಯನ್ನು ಸ್ವೀಕರಿಸುವುದು(ಔಪ). **–ಮ.** ವಿ: [**–ಮತ್**] ದುರ್ಗಂದದಿಂದ ಕೂಡಿರುವ, ಅಪವಿತ್ರ.

ಪೂಇ.} ವಿ: [**ಪೂತಿ**] ಕೊಳೆತುಹೋದ, **–ಪಿನ್ನಾಗ.**
ಪೂಇಅ}. ಪುಂನ: [**–ಪಿಣ್ಯಾಕ**] ಸಾಸಿವೆ ಹಿಂಡಿ

ಪೂಇಆಲುಗ. ನ: [**ದೇ. ಪೂತ್ಯಾಲುಕ**] ನೀರಿನಲ್ಲಿ ಬೆಳೆಉುವ ವನಸ್ಪತಿ –ವಿಶೇಷ.

ಪೂಇಜ್ಜಂತ. '**ಪೂಅ=ಪೂಜಯ್**' ಶಬ್ದವನ್ನು ನೋಡುವುದು.

ಪೂಇಮ. ವಿ: [**ಪೂಜ್ಯ**] **ಪೂಜಿಸಲು ಅರ್ಹವಾದ, ಮಾನನೀಯ, ಗೌರವಾರ್ಹ**

ಪೂಯ. ವಿ: [**ಪೂಜಿತ**] ಪೂಜಿಸಲ್ಪಟ್ಟ, ಅರ್ಚಿಸಲ್ಪಟ್ಟ (ಉವ)

ಪೂಇಯ. ವಿ: [**ಪೂತಿಕ**] ಅಪವಿತ್ರ, ಅಶುದ್ಧ, ದೂಷಿತ(ಪಣ್ಣ). ಕೆಟ್ಟ ವಾಸನೆ ಉಳ್ಳ. ಪೂತಿ ಎಂಬ ಭಿಕ್ಷಾ ದೋಷವುಳ್ಳ

ಪೂಇಯು. '**ಪೋಇಯು=(ದೇ)**' ಶಬ್ದವನ್ನು ನೋಡುವುದು.

ಪೂಂಡರಿಅ. ನ: [ದೇ] ಕಾರ್ಯ, ಕೆಲಸ, ಪ್ರಯೋಜನ

ಪೂಗ. ಪು: [**ಪೂಗ**]ಸಮೂಹ, ಗುಂಪು(ಮೋಹ). '**ಪೂಅ=ಪೂಗ**' ಶಬ್ದವನ್ನು ನೋಡುವುದು.

ಪೂಗೀ. ಸ್ತ್ರೀ: [**ಪೂಗೀ**] ಅಡಕೆ ಮರ. **–ಫಲ.** ನ: [**–ಫಲ**] ಅಡಕೆ

ಪೂಜ. '**ಪೂಅ=ಪೂಜಂಸ್**' ಶಬ್ದವನ್ನು ನೋಡುವುದು. ವ.ಕೃ –'**ಪೂಜಯಂತ**'

ಪೂಜಗ. '**ಪೂಅಯ**' ಶಬ್ದವನ್ನು ನೋಡುವುದು.

ಪೂಜಣ. '**ಪೂಅಣ**' ಶಬ್ದವನ್ನು ನೋಡುವುದು.

ಪೂಜಾ. '**ಪೂಆ=ಪೂಜಾ**' ಶಬ್ದವನ್ನು ನೋಡುವುದು.

ಪೂಜಿಅ. '**ಪೂಇಯು=ಪೂಜಿತ**' ಶಬ್ದವನ್ನು ನೋಡುವುದು.

ಪೂಣ. ಪು: [ದೇ] ಆನೆ

ಪೂಣಿಆ}. ಸ್ತ್ರೀ: [ದೇ] ಹತ್ತಿಯ ಮಡಿಕೆ, ಹತ್ತಿಯ
ಪೂಣೀ}. ಪದರು(ದೇ)

ಪೂಪ. '**ಪೂಅಲ**' ಶಬ್ದವನ್ನು ನೋಡುವುದು.

ಪೂಯುಂತ. '**ಪೂಅ=ಪೂಜಯ್**' ಶಬ್ದವನ್ನು ನೋಡುವುದು.

ಪೂಯಇ. ಪು: [**ಪೂಪಕಿನ್**] **ಮಿಠಾಯಿ ವ್ಯಾಪಾರಿ**

ಪೂಯಲೀ. ಸ್ತ್ರೀ: [ದೇ] **ರೊಟ್ಟಿ**

ಪೂಯಾವಣಾ. ಸ್ತ್ರೀ: [**ಪೂಜನಾ**] ಪೂಜಿಸುವುದು

ಪೂರ. ಸಕ: [**ಪೂರಯ್**] ತುಂಬು, ಭರ್ತಿಮಾಡು, '**ಪೂರಇ**'. ವ.ಕೃ: '**ಪೂರಂತ**'

ಪೂರ. ಪು: [**ಪೂರ**] ನೀರಿನ ಪ್ರವಾಹ, ಜಲಧಾರೆ, ರೊಟ್ಟಿ, ದೋಸೆಯೇ ಮೊದಲಾದ ಖಾದ್ಯ ವಸ್ತುಗಳು. ವಿ: ಪೂರ್ತಿ, ಪೂರ್ಣ

ಪೂರಇತ್ತಅ.(ಶೌ). ವಿ: [**ಪೂರಯಿತೃ**] ಪೂರ್ಣ ಮಾಡುವವನು, ತುಂಬುವವನು, ಪೂರ್ತಿ ಮಾಡುವವನು(ಔಪ)

ಪೂರಂತಿಯಾ. ಸ್ತ್ರೀ: [**ಪೂರಯಂತಿಕಾ**] ರಾಜನ ಒಂದು ಪರಿಷತ್ತು; ಪರಿವಾರ.

ಪೂರಗ. ವಿ: [**ಪೂರಕ**] ಪೂರ್ಣಗೊಳಿಸುವವನು (ವಪ)

ಪೂರಣ. ನ: [**ಪೂರಣ**] ಧಾನ್ಯವನ್ನು ಕೇರುವ ಮೊರ (ದೇ)

ಪೂರಣ. ನ: [**ಪೂರಣ**] ಪೂರ್ತಿ, ಮುಕ್ತಾಯ. ಪು: ಯದುವಂಶದ ರಾಜ ಅಂಧಕ ವೃಷ್ಣಿಯ ಒಬ್ಬ ಮಗ.

ಪೂರವಾಣ. '**ಪೂರ=ಪೂರಯ್**' ಶಬ್ದವನ್ನು ನೋಡುವುದು.

ಪೂರಯ.'**ಪೂರಗ**' ಶಬ್ದವನ್ನು ನೋಡುವುದು.

ಪೂರಯಂತ}. '**ಪೂರ=ಪೂರಯ್**' ಶಬ್ದವನ್ನು
ಪೂರಿಅವ್ವ}. ನೋಡುವುದು.

ಪೂರಿಗಾ. ಸ್ತ್ರೀ: [**ಪೂರಿಕ**] ದಪ್ಪನೆಯ ಬಟ್ಟೆ

ಪೂರಿಮ. ವಿ: [**ಪೂರಿಮ**] ತುಂಬುವುದರಿಂದ ಆಗುವ (ಣಾಯಾ)

ಪೂರಿಮಾ. ಸ್ತ್ರೀ: [**ಪೂರಿಮಾ**] ಗಾಂಧಾರ ಸ್ವರ ಸಮೂಹದ ಏಳನೇ ಒಂದು ಭಾಗ.ಸ(ಠಾ).

ಪೂರಿಯ. ವಿ: [**ಪೂರಿತ**] ತುಂಬಲ್ಪಟ್ಟ, ಭರ್ತಿಮಾಡಲಾದ, ಪೂರ್ತಿಗೊಳಿಸಲ್ಪಟ್ಟ

ಪೂರೀ. ಸ್ತ್ರೀ: [**ಪೂರೀ**] ನೇಕಾರನ ಒಂದು ಉಪಕರಣ (ದೇ)

ಪೂರೆಂತ. '**ಪೂರ=ಪೂರಯತ್**' ಶಬ್ದವನ್ನು ನೋಡುವುದು.

ಪೂರೊಟ್ಟೀ. ಸ್ತ್ರೀ: [ದೇ] ಕಸ

ಪೂಲ. ಪುಂನ; [**ಪೂಲ**] ಹುಲ್ಲಿನ ಹೊರೆ, ಹುಲ್ಲಿನಕಂತೆ

ಪೂವ}. '**ಪೂಅಲ**' ಶಬ್ದವನ್ನು ನೋಡುವುದು.
ಪೂವಲ}.

ಪೂವಲಿಆ.}'**ಪೂಅಲಿಯಾ**' ಶಬ್ದವನ್ನು
ಪೂವಿಗಾ}.ನೋಡುವುದು.

ಪೂಸ. ಅಕ: [**ಪುಷ್**] ಪುಷ್ಟವಾಗು, ಪೋಷಿಸು. ಕ್ರಿಯಾ ರೂಪ: –'**ಪೂಸಇ**'

ಪೂಸ. 'ಪುಸ್ಸ=ಪುಷ್ಯ' ಶಬ್ದವನ್ನು ನೋಡುವುದು. **–ಗಿರಿ. ಪು:** [**–ಗಿರಿ**] ಒಬ್ಬ ಜೈನಮುನಿ. **–ಫಲೀ.** ಸ್ತ್ರೀ: [**–ಫಲೀ**] ಒಂದು ಬಗೆಯ ಬಳ್ಳಿ(ಪಣ್ಣ), **–ಮಾಣ, –ಮಾಣಗ. ಪು:** [**–ಮಾಣ, ಮಾನವ**] ವಂದಿ ಮಾಗಧ, ಸ್ತುತಿ –ಪಾಠಕ. **–ಮಾಣಗ. ಪು:** [**–ಮಾನಕ**]ಜೋತಿರ್ದೇವತೆ, ಗ್ರಹದ ಅಧಿಷ್ಠಾತೃ ದೇವ. **–ಮಾಣಯ. '–ಮಾಣ'** ಶಬ್ದವನ್ನು ನೋಡುವುದು. **–ಮಿತ್ತ. ಪು:** [**–ಮಿತ್ರ**] ತನ್ನ ಹೆಸರಿನಿಂದ ಖ್ಯಾತರಾದ ಮೂವರು ಜೈನಮುನಿಗಳು: ೧)ಘೃತ ಪುಷ್ಯಮಿತ್ರ, ೨) ವಸ್ತ್ರ ಪುಷ್ಯಮಿತ್ರ ೩) ದುರ್ವಲಿಕಾ ಪುಷ್ಯಮಿತ್ರ. ಇವರುಗಳು ಆರ್ಯ ರಕ್ಷಿತಸೂರಿಶಿಷ್ಯರಾಗಿದ್ದರು (ವಿಸೇ). ಒಬ್ಬರಾಜ, **–ಮಿತ್ತಿಯ. ನ:** [**–ಮಿತ್ರೀಯ**] ಒಂದು ಜೈನಮುನಿ ಕುಲ(ಕಪ್ಪ)

ಪೂಸ. ಪು: [ದೇ] ರಾಜಾ ಶಾತವಾಹನ, ಗಿಳಿ(ದೇ)

ಪೂಸ. ಪು: [**ಪೂಷನ್**] ಸೂರ್ಯ, ರವಿ. ಒಂದು ಬಗೆಯ ಮಣಿ(ಪಉಮ)

ಪೂಸಾ. ಸ್ತ್ರೀ: [**ಪುಷ್ಯಾ**] ವ್ಯಕ್ತಿ –ವಾಚಕ ಹೆಸರು, ಕುಂಡಕೋಲಿಕ ಎಂಬ ಶ್ರಾವಕನ ಪತ್ನಿ(ಉವಾ)

ಪೂಸಾಣ. '**ಪೂಸಾ=ಪೂಷನ್**' ಶಬ್ದವನ್ನು ನೋಡುವುದು.

–ಪೂಹ. ಪು: [**ಅಪೋಹ**] ವಿಚಾರ, ಮೀಮಾಂಸೆ. '**ಅಪೋಹ=ಅಪೋಹ**' ಶಬ್ದವನ್ನು ನೋಡುವುದು.

ಪೃಥುಮ(ಪೈ). '**ಪಢಮ**' ಶಬ್ದವನ್ನು ನೋಡುವುದು.

ಪೇಅ. ಪು: [**ಪ್ರೇತ**] ವ್ಯಂತರ –ಭೇದ, ಒಂದು ದೇವ ಜಾತಿ, ಭೂತ, ಪಿಶಾಚಿ(ಸುಪಾ). ಸತ್ತವನು, **–ಕಮ್ಮ. ನ:** [**–ಕರ್ಮನ್**] ಸತ್ತವನ ದಹನವೇ ಮೊದಲಾದ ಅಂತ್ಯ ಕ್ರಿಯೆಗಳು. **–ಕರಣಿಜ್ಜ. ನ:**[**–ಕರಣೀಯ**] ಅಂತ್ಯೇಷ್ಟಿ ಕ್ರಿಯೆ(ಪಉಮ). **–ಕಾಇಯ. ವಿ:** [**–ಕಾಯಿಕ**] ಪ್ರೇತ–ಯೋನಿಯಲ್ಲಿ ಹುಟ್ಟಿದ, ವ್ಯಂತರ. **–ದೇವಯಕಾಇಯ. ವಿ:** [**–ದೇವತಾಕಾಯಿಕ**] ಪ್ರೇತದೇವತೆಯ, ಪ್ರೇತ–ಸಂಬಂಧವಾದ (ಭಗ). **–ನಾಹ. ಪು:** [**–ನಾಥ**] ಯಮರಾಜ. **–ಭೂಮಿ, –ಭೂಮೀ. ಸ್ತ್ರೀ:** [**–ಭೂಮಿ, –ಭೂಮೀ**] ಶ್ಮಶಾನ(ಸುಪಾ). **–ವಇ. ಪು:** [**–ಪತಿ**] ಯಮ.**–ವಣ.ನ:** [**–ವನ**] ಶ್ಮಶಾನ(ಪಾಅ). **ಪೇಆಹಿವ. ಪು:** [**ಪ್ರೇತಾಧಿಪ**] ಯಮರಾಜ

ಪೇಅ. ವಿ: [**ಪ್ರೇಯಸ್**] ಅತಿ ಪ್ರಿಯವಾದ, ಬಹಳ ಪ್ರೀತಿಕರವಾದ, ಪ್ರಿಯ. **ಸ್ತ್ರೀ: –ಸೀ.**

ಪೇಅ}. '**ಪಾ=ಪಾ**' ಶಬ್ದವನ್ನು ನೋಡುವುದು.
ಪೇಅವ್ವ}.

ಪೇಆ. ಸ್ತ್ರೀ: [**ಪೇಯಾ**] ಒಂದು ಪೇಯವಾದ ಅನ್ನದ ಮೇಲಿನ ಅಂಬಲಿ, ಗಂಜಿ(ಹೇ)

ಪೇಆಲ. ನ: [ದೇ] ಪ್ರಮಾಣ(ದೇ), ವಿಚಾರ, ಸಾರ, ರಹಸ್ಯ, ಪ್ರಧಾನ, ಮುಖ್ಯ(ಉವಾ)

ಪೇಆಲಣಾ. ಸ್ತ್ರೀ: [ದೇ] ಪ್ರಮಾಣ –ಕರಣ.

ಪೇಆಲಿಯ. ವಿ: [ದೇ] ವಿಚಾರ ಮಾಡಲ್ಪಟ್ಟ, ವಿಮರ್ಶೆ ಮಾಡಲ್ಪಟ್ಟ(ವಿಸೇ)

ಪೇಇಅ. ವಿ: [**ಪೈತೃಕ**] ತಂದೆಯಿಂದ ಬಂದ, ತಂದೆಯ ಸಂಬಂಧವಾದ. **ನ:** ಹೆಣ್ಣಿನ ತವರು ಮನೆ(ಸುಪಾ)

ಪೇಈಹರ. ನ: [**ಪಿತೃಗೃಹ, ಪೈತೃಕಗೃಹ**] ಹೆಣ್ಣಿನ ತವರು ಮನೆ(ಸುಪಾ)

ಪೇಊಸ. ನ: [**ಪೀಯೂಷ**] ಅಮೃತ, ಸುಧೆ(ಪಾ). **ಪೇಊಸಾಸಣ. ಪು:** [**ಪೀಯೂಷಾಶನ**] ದೇವತೆ, ಸುರ(ಕುಮಾ)

ಪೆಂಖಿಅ. ವಿ: [ಪ್ರೇಂಖಿತ] ಅಲ್ಲಾಡಿಸಲ್ಪಟ್ಟ, ಅಲುಗಾಡಿಸಲ್ಪಟ್ಟ, ನಡುಗಿಸಲ್ಪಟ್ಟ(ಕಪ್ಪೂ)

ಪೆಂಖೋಲ. ಅಕ: [**ಪ್ರೇಂಖೋಲಯ್**] ತೂಗಾಡಿಸು, ಜೋಲಾಡಿಸು. **ವ.ಕೃ – 'ಪೇಂಖೋಲಮಾಣ'**

ಪೆಂಡ. 'ಪಿಂಡ=ಪಿಂಡ' ಶಬ್ದವನ್ನು ನೋಡುವುದು.

ಪೆಂಡ. ನ: [ದೇ] ಭಾಗ, ತುಂಡು, ವಲಯ, ಮಂಡಲ

ಪೆಂಡಧವ. ಪು: [ದೇ] ಖಡ್ಗ, ಕತ್ತಿ

ಪೆಂಡಬಾಲ. ವಿ: [ದೇ] **'ಪೆಂಡಲಿಅ'** ಶಬ್ದವನ್ನು ನೋಡುವುದು.

ಪೆಂಡಯ. ಪು: [ದೇ]ತರುಣ, ಯುವಕ, ನಪುಂಸಕ, ಷಂಡ(ದೇ)

ಪೆಂಡಲ. ಪು: [ದೇ] ರಸ(ದೇ)

ಪೆಂಡಲಿಅ. ವಿ: [ದೇ] ಪಿಂಡಾಕಾರವಾಗಿ ಮಾಡಲ್ಪಟ್ಟ, ಗುಂಡಾಗಿ ಮಾಡಲಾದ

ಪೆಂಡವ. ಸಕ: [**ಪ್ರ +ಸ್ಥಾಪಯ್**] ಇಡು, ಇರಿಸು, ಸ್ಥಾಪಿಸು. ಹೊರಡಿಸು **–'ಪೇಂಡವಇ'**

ಪೆಂಡವಿರ. ವಿ: [**ಪ್ರಸ್ಥಾಪಯಿತೃ**] ಇಡುವವನು, ಇರಿಸುವವನು, ಹೊರಡಿಸುವವನು(ಕುಮಾ)

ಪೆಂಡಾರ. ಪು: [ದೇ]ಗೋಪ, ದನ ಕಾಯುವವನು, ಎಮ್ಮೆ ಕಾಯುವವನು

ಪೆಂಡೋಲೀ. ಸ್ತ್ರೀ: [ದೇ] ಕ್ರೀಡೆ, ಆಟ(ದೇ)

ಪೆಂಢಾ. ಸ್ತ್ರೀ: [ದೇ] ಕಲುಷಗೊಂಡ ಹೆಂಡ, ಬಗ್ಗಡವಾದ ಮದ್ಯ.

ಪೆಂತ. 'ಪಾ=ಪಾ' ಶಬ್ದವನ್ನು ನೋಡುವುದು.

ಪೆಕ್ಖ. ಸಕ: [**ಪ್ರ +ಈಕ್ಷ್**] ನೋಡು, ಅವಲೋಕಿಸು. **ವ. ಕೃ: –ಪೇಕ್ಖಂತ'**

ಪೆಕ್ಖಅ}. ವಿ: [**ಪ್ರೇಕ್ಷಕ**] ನೋಡುವವನು,

ಪೆಕ್ಖಗ}. ಪ್ರೇಕ್ಷಕ(ಸುರ)

ಪೆಕ್ಖಣಗ}. ನ: [**ಪ್ರೇಕ್ಷಣಕ**] ಆಟ, ನಾಟಕ, ಪ್ರದರ್ಶನ,

ಪೆಕ್ಖಣಯ}. ದೃಶ್ಯ(ಸುರ)

ಪೆಕ್ಖಣಾ. ಸ್ತ್ರೀ: [**ಪ್ರೇಕ್ಷಣಾ**] ನಿರೀಕ್ಷಣೆ, ನೋಡುವುದು (ಓಘ)

ಪೆಕ್ಖಾ. ಸ್ತ್ರೀ: [**ಪ್ರೇಕ್ಷಾ**] ಮೇಲಿನ ಶಬ್ದವನ್ನು ನೋಡುವುದು. **'ಪೇಚ್ಛಾ'** ಶಬ್ದವನ್ನು ನೋಡುವುದು.

ಪೆಕ್ಖಿಯ. 'ಪೆಚ್ಛಿಯ' ಶಬ್ದವನ್ನು ನೋಡುವುದು.

ಪೇಖಿಅ(ಅಪ). ವಿ: [**ಪ್ರೇಕ್ಷಿತ**] ನೋಡಲ್ಪಟ್ಟ, ವೀಕ್ಷಿಸಲ್ಪಟ್ಟ

ಪೆಚ್ಚ}. ಅ: [**ಪ್ರೇತ್ಯ**] ಪರಲೋಕ. ಮುಂದಿನ

ಪೆಚ್ಚಾ}. ಜನ್ಮ(ಭಗ). **–ಭವ. ಪು:** [**–ಭವ**] ಮುಂದಿನ ಜನ್ಮ, ಪರಲೋಕ(ಔಪ). **–ಭಾವಿಅ.** ವಿ: [**–ಭಾವಿಕ**] ಜನ್ಮಾಂತರ ಸಂಬಂಧಿಯಾದ

ಪೆಚ್ಚಾ. 'ಪಿಅ=ಪಾ' ಶಬ್ದವನ್ನು ನೋಡುವುದು.

ಪೆಚ್ಛ. ಸಕ: [**ದೃಶ್, ಪ್ರ +ಈಕ್ಷ್**] ನೋಡು. **– 'ಪೇಚಛಇ'**

ಪೆಚ್ಛ. ವಿ: [**ಪ್ರೇಕ್ಷ**] ನೋಡುವವನು, ದರ್ಶಕ

ಪೆಚ್ಛಗ. 'ಪೆಕ್ಖಗ' ಶಬ್ದವನ್ನು ನೋಡುವುದು.

ಪೆಚ್ಛಣ. ಪೇಕ್ಖಣ' ಶಬ್ದವನ್ನು ನೋಡುವುದು.

ಪೆಚ್ಛಣಗ}. **'ಪೆಕ್ಖಣಗ'** ಶಬ್ದವನ್ನು ನೋಡುವುದು.

ಪೆಚ್ಛಣಯ}.

ಪೆಚ್ಛಯ. ವಿ: [**ಪ್ರೇಕ್ಷಕ**] ನೋಡುವವನು, ಅವಲೋಕಿಸುವವನು(ಪಉಮ)

ಪೆಚ್ಛುಯ. ವಿ: [ದೇ] ಯಾವುದನ್ನು ನೋಡುತ್ತಾನೋ ಅದನ್ನೇ ಬಯಸುವವನು. ನೋಡಿದ್ದನ್ನೇ ಇಚ್ಛಿಸುವವನು(ದೇ)

ಪೆಚ್ಛಾ. ಸ್ತ್ರೀ: [**ಪ್ರೇಕ್ಷಾ**] ಪ್ರದರ್ಶನ, ದೃಶ್ಯ, ಆಟ, ನಾಟಕ. **'ಪೆಕ್ಖಾ'** ಶಬ್ದವನ್ನು ನೋಡುವುದು. **–ಘರ. ನ:** [**–ಗೃಹ**]' **–ಹರ'** ಶಬ್ದವನ್ನು ನೋಡುವುದು(ಠಾ). **–ಮಂಡವ. ಪು:** [**–ಮಂಡಪ**] ನಾಟಕ–ಗೃಹ, ರಂಗಮಂದಿರ. **–ಹರ. ನ:** [**–ಗೃಹ**] ರಂಗ ಮಂದಿರ(ಪಉಮ)

ಪೆಚ್ಛಿ. ವಿ:[**ಪ್ರೇಕ್ಷಿನ್**] ಪ್ರೇಕ್ಷಕ, ನೋಡುವವನು(ಚೇಇಯ)

ಪೆಚ್ಛಿಅ. ವಿ: [**ಪ್ರೇಕ್ಷಿತ**] ನೋಡಲ್ಪಟ್ಟ. ನ: ನೋಡುವುದು, ಅವಲೋಕನ(ಸುರ)

ಪೆಚ್ಛಿರ. ವಿ: [**ಪ್ರೇಕ್ಷಿತೃ**] ಪ್ರೇಕ್ಷಕ, ನೋಡುವವನು(ಗಾ)

ಪೆಜ್ಜ. 'ಪಾ=ಪಾ' ಶಬ್ದವನ್ನು ನೋಡುವುದು.

ಪೆಜ್ಜ. ಪುಂನ: [**ಪ್ರೇಮನ್**] ಪ್ರೇಮ, ಅನುರಾಗ(ಸೂಅ). **–ದಂಸಿ.** ವಿ: [**–ದರ್ಶಿನ್**] ಅನುರಾಗಿ, ಪ್ರೇಮಿ (ಆಚಾ)

ಪೆಜ್ಜ. ವಿ: [**ಪ್ರೇಯಸ್**] ಅತಿ ಪ್ರಿಯವಾದ, ಬಹಳ ಪ್ರೀತಿಕರವಾದ(ಔಪ).

ಪೆಜ್ಜ. ವಿ: [**ಪ್ರೇಜ್ಯ**] ಪೂಜ್ಯ, ಪೂಜನೀಯ

ಪೆಜ್ಜ. 'ಪೇರ=ಪ್ರ +ಈರಯ್' ಶಬ್ದವನ್ನು ನೋಡುವುದು.

ಪೆಜ್ಜಲ. ನ: [ದೇ] ಪ್ರಮಾಣ. ಅಳತೆ

ಪೆಜ್ಜಲಿಅ. ವಿ: [ದೇ] ಸಂಘಟಿತ, ಒಟ್ಟುಗೂಡಿಸಲ್ಪಟ್ಟ (ಷಡ್)

ಪೆಜ್ಞಾ. **'ಪೇಆ'** ಶಬ್ದವನ್ನು ನೋಡುವುದು(ಓಘ)
ಪೆಜ್ಜಾಲ. ವಿ: [ದೇ]ವಿಪುಲವಾದ, ವಿಸ್ತಾರವಾದ
ಪೆಟ}. ನ: [ದೇ] ಹೊಟ್ಟೆ, ಉದರ(ಪಿಂಗ)
ಪೆಟ್ಟ}.
ಪೆಟ್ಠ. **'ಪಿಟ್ಠ=ಪಿಷ್ಟ'** ಶಬ್ದವನ್ನು ನೋಡುವುದು.
ಪೇಡ. **'ಪೇಡಯ'** ಶಬ್ದವನ್ನು ನೋಡುವುದು.
ಪೇಡಇಅ.ಪು: [ದೇ] ಧಾನ್ಯವೇ ಮೊದಲಾದವುಗಳನ್ನು ಮಾರಾಟ ಮಾಡುವ ವ್ಯಾಪಾರಿ
ಪೇಡಕ}. ನ: [ಪೇಟಕ] ಸಮೂಹ, ಗುಂಪು(ಸುಪಾ)
ಪೇಡಯ}.
ಪೇಡಾ. ಸ್ತ್ರೀ: [ಪೇಟಾ] ಪೆಟ್ಟಿಗೆ, ಪೆಟ್ಟಿಗೆಯ ಆಕಾರದ ನಾಲ್ಕು ಕೋಣಗಳ ಮನೆಗಳ ಸಾಲಿನಲ್ಲಿ ಭಿಕ್ಷೆಯ ಸಲುವಾಗಿ ಸಂಚಾರ ಮಾಡುವುದು(ಉತ್ತ)
ಪೇಡಾಲ. ಪು: [ದೇ. **ಪೇಟಾಲ**] ದೊಡ್ಡ ಪೆಟ್ಟಿಗೆ
ಪೇಡಾವಇ. ಪು: [**ಪೇಟಕಪತಿ**] ಗುಂಪಿನ ನಾಯಕ (ಸುಪಾ)
ಪೇಡಿಆ. ಸ್ತ್ರೀ: [**ಪೇಟಿಕಾ**] ಪೆಟ್ಟಿಗೆ(ಮುದ್ರಾ)
ಪೆಡ್ಡ. ಪು: [ದೇ] ಕೋಣ(ದೇ)
ಪೆಡ್ಡಾ. ಸ್ತ್ರೀ: [ದೇ] ಗೋಡೆ, ಬಾಗಿಲು, ಎಮ್ಮೆ
ಪೇಢ. **'ಪೀಢ=ಪೀಠ'** ಶಬ್ದವನ್ನು ನೋಡುವುದು.
ಪೇಢಾಲ. ವಿ: [ದೇ] ವಿಪುಲವಾದ, ವಿಶಾಲವಾದ, ಗೋಳಾಕಾರ(ದೇ).
ಪೇಢಾಲ. ವಿ: [**ಪೀಠವತ್**] ಪೀಠದಿಂದ ಕೂಡಿದ (ಗಲುಡ)
ಪೇಢಾಲ. ಪು: [**ಪೇಢಾಲ** ಭರತ ವರ್ಷದ ಎಂಟನೇ ಭಾವೀ ಜಿನ –ದೇವ. –೧೧ಜನ ರುದ್ರರಲ್ಲಿ ಹತ್ತನೆಯವನು, ಮಹಾವೀರನು ಸಂಚಾರ ಮಾಡಿದ್ದ ಒಂದು ಗ್ರಾಮ. ನ: ಒಂದು ಉದ್ಯಾನ, **–ಪುತ್ತ. ಪು:**[**–ಪುತ್ರ**] ಭಾರತ –ವರ್ಷದ ಎಂಟನೇ ಭಾವೀ ಜಿನದೇವ. ಭಗವಾನ್ ಪಾರ್ಶ್ವನಾಥನ ಸಂತತಿಯಲ್ಲಿ ಹುಟ್ಟಿದ ಒಬ್ಬ ಜೈನ ಮುನಿ (ಸೂಅ). ಮಹಾವೀರನ ಬಳಿ ದೀಕ್ಷೆ ತೆಗೆದುಕೊಂಡು ಅನುತ್ತರ–ವಿಮಾನದಲ್ಲಿ ಹುಟ್ಟಿದ ಒಬ್ಬ ಜೈನ ಮುನಿ(ಅನು)
ಪೇಢಿಯಾ. **'ಪೀಢಿಆ'** ಶಬ್ದವನ್ನು ನೋಡುವುದು. ಗ್ರಂಥದ ಭೂಮಿಕೆ, ಪ್ರಸ್ತಾವನೆ
ಪೇಢೀ. **'ಪೀಢೀ'** ಶಬ್ದವನ್ನು ನೋಡುವುದು.
ಪೇಣೀ. ಸ್ತ್ರೀ: [**ಪ್ರೈಣೀ**] ಹೆಣ್ಣು ಜಿಂಕೆಯಲ್ಲಿನ ಒಂದು ಪ್ರಭೇದ
ಪೇದಂಡ. ವಿ: [ದೇ] ಜೂಜಿನಲ್ಲಿ ಸೋತವನು, ಹೂಡಿದ ಪಣ ನೀಗಿಕೊಂಡವನು.(ಮೃಚ್ಛ)
ಪೇಮ. ಪುಂನ: [**ಪ್ರೇಮನ್**] ಪ್ರೇಮ, ಅನುರಾಗ, ಪ್ರೀತಿ, ಸ್ನೇಹ(ಔಪ)
ಪೇಮಾಲುಅ.ವಿ:[**ಪ್ರೇಮಿನ್**] ಪ್ರೇಮಿ, ಅನುರಾಗಿ(ಉಪ)
ಪೆಮ್ಮ. **'ಪೇಮ'** ಶಬ್ದವನ್ನು ನೋಡುವುದು.
ಪೆಮ್ಮಾ. ಸ್ತ್ರೀ: [**ಪ್ರೇಮಾ**] ಒಂದು ಛಂದಸ್ಸು.
ಪೇಯಾ. ಸ್ತ್ರೀ: [**ಪೇಯಾ**] ಒಂದು ವಾದ್ಯ
ಪೇರ. ಸಕ: [**ಪ್ರ +ಈರಯ್**] ಕಳುಹಿಸು, ಆಘಾತವುಂಟುಮಾಡು, ಡಿಕ್ಕಿಹೊಡೆ, ಆದೇಶಿಸು, ಕಾರ್ಯದಲ್ಲಿ ತೊಡಗಿಸು, ಪ್ರೇರಿಸು, ಪ್ರಶ್ನಿಸು, ಸಿದ್ಧಾಂತವನ್ನು ವಿರೋಧಿಸು, ಕೆಳಕ್ಕೆ ಬೀಳಿಸು **– ಕ್ರಿಯಾ ರೂಪ 'ಪೇರಇ'**
ಪೇರಂತ. **'ಪಜ್ಜಂತ'** ಶಬ್ದವನ್ನು ನೋಡುವುದು. **–ಚಕ್ಕವಾಲ.** ನ: [**–ಚಕ್ರವಾಲ**] ಬಾಹ್ಯ ಪರಿಧಿ, ಹೊರ ಸುತ್ತು(ಪಣ್ಣ). **–ವಚ್ಚ.** ನ: [**–ವರ್ಚಸ್**] ಮಂಟಪ, ಹುಲ್ಲಿನಿಂದ ನಿರ್ಮಿಸಿದ ಮನೆ.
ಪೇರಗ. ವಿ: [**ಪ್ರೇರಕ**] ಪ್ರೇರಿಸುವವನು, ಒಂದು ಕಾರ್ಯದಲ್ಲಿ ತೊಡಗಲು ಪ್ರಚೋದಿಸುವವನು, ಪೂರ್ವಪಕ್ಷದವನು.
ಪೇರಣ. ನ: [ದೇ] ಮೇಲಿನ ಸ್ಥಾನ, ಎತ್ತರದ ಪ್ರದೇಶ
ಪೇರಣ. ನ: [**ಪ್ರೇರಣ**] ಒಂದು ಕಾರ್ಯದಲ್ಲಿ ತೊಡಗುವಂತೆ ಮಾಡುವುದು.
ಪೇರಣಾ. ಸ್ತ್ರೀ: [**ಪ್ರೇರಣಾ**] ಮೇಲಿನ ಶಬ್ದವನ್ನು ನೋಡುವುದು.
ಪೇರಿಅ. ವಿ: [**ಪ್ರೇರಿತ**] ಪ್ರೇರಿಸಲ್ಪಟ್ಟವನು, ಹುರಿದುಂಬಿಸಲ್ಪಟ್ಟವನು(ಭವಿ)
ಪೇರಿಜ್ಜ. ನ: [ದೇ] ಸಹಾಯ, ನೆರವು(ದೇ)
ಪೇರಿಜ್ಜಂತ. **'ಪೇರ=ಪ್ರ +ಈರಯ್'** ಶಬ್ದವನ್ನು ನೋಡುವುದು.
ಪೇರುಲ್ಲಿ. ವಿ: [ದೇ] ಪಿಂಡಾಕಾರವಾಗಿ ಮಾಡಲ್ಪಟ್ಟ, ಗೋಳಾಕಾರವಾಗಿ ಮಾಡಲ್ಪಟ್ಟ.
ಪೇಲವ. ವಿ: [**ಪೇಲವ**] ಸುಕೋಮಲ, ಮೃದುವಾದ (ಪಾಅ), ತೆಳ್ಳನೆಯ, ಕೃಶವಾದ, ಸೂಕ್ಷ್ಮವಾದ, ಹಗುರವಾದ

ಪೇಲು. ಸ್ತ್ರೀ: [ಪೇಲು] ಹತ್ತಿಯ ಮಡಿಕೆ. **–ಕರಣ.** ನ: [–ಕರಣ] ಹತ್ತಿಯ ಮಡಿಕೆ ಮಾಡಲು ಬಳಸುವ ಉಪಕರಣ, ಸಲಾಕೆ ಇತ್ಯಾದಿ
ಪೆಲ್ಲಸಕ: [ಕ್ಷಿಪ್] ಎಸೆ. –**'ಪೇಲ್ಲಇ'**
ಪೆಲ್ಲ. **'ಪೇರ=ಪ್ರ +ಈರಯ್'** ಶಬ್ದವನ್ನು ನೋಡುವುದು.
ಪೆಲ್ಲ. **ಸಕ:** [**ಪೀಡಯ್**] ಪೀಡಿಸು, ಮರ್ದಿಸು, ಬಲವಾಗಿ ಒತ್ತು **ಕ್ರಿಯಾರೂಪ:** **–ಪೇಲ್ಲೇಸಿ**
ಪೆಲ್ಲ. **ಸಕ:** [**ಪೂರಯ್**] ತುಂಬು, ಭರ್ತಿಮಾಡು, ಪೂರ್ಣವಾಡು
ಪೆಲ್ಲ}. **ಪುಂನ:** [ದೇ] ಬಾಲಕ, ಶಿಶು(ಉಪ)
ಪೆಲ್ಲಗ}.
ಪೆಲ್ಲಗ. **'ಪೇರಗ'** ಶಬ್ದವನ್ನು ನೋಡುವುದು.
ಪೆಲ್ಲಣ. **'ಪೇರಣ'** ಶಬ್ದವನ್ನು ನೋಡುವುದು.
ಪೆಲ್ಲಣ. ನ: [**ಕ್ಷೇಪಣ**] ಎಸೆಯುವುದು
ಪೆಲ್ಲಯ(ದೇ) **'ಪೆಲ್ಲ=(ದೇ)'** ಶಬ್ದವನ್ನು ನೋಡುವುದು.
ಪೆಲ್ಲಯ. **'ಪೇರಗ'** ಶಬ್ದವನ್ನು ನೋಡುವುದು(ಬೃಹ)
ಪೆಲ್ಲಯ. **ಪು:** [ಪೇಲ್ಲಕ] ಭಗವಾನ್ ಮಹಾವೀರರ ಬಳಿ ದೀಕ್ಷೆ ತೆಗೆದುಕೊಂಡು ಅನುತ್ತರ ವಿಮಾನದಲ್ಲಿ ಹುಟ್ಟಿದ ಒಬ್ಬ ಜೈನ ಮುನಿ.
ಪೆಲ್ಲವ}. **'ಪೇರ'** ಶಬ್ದವನ್ನು ನೋಡುವುದು.
ಪೆಲ್ಲಾವ}. **ಕ್ರಿಯಾರೂಪ:** **–'ಪೆಲ್ಲವಇ', 'ಪೆಲ್ಲಾವಇ'**
ಪೆಲ್ಲಿಅ. ವಿ: [ದೇ. ಪೀಡಿತ] ಪೀಡಿಸಲ್ಪಟ್ಟ
ಪೆಲ್ಲೇಯುವ್ವ. **'ಪೆಲ್ಲ=ಪ್ರ–ಈರಯ್'** ಶಬ್ದವನ್ನು ನೋಡುವುದು.
ಪೆವ್ವೇ. ಆಮಂತ್ರಣವನ್ನು ಸೂಚಿಸುವ ಅವ್ಯಂ
ಪೇಸ. **ಸಕ:** [**ಪ್ರ +ಏಷಯ್**] ಕಳುಹಿಸು, **–'ಪೇಸಇ'**
ಪೇಸ. **'ಪೀಸ'** ಶಬ್ದವನ್ನು ನೋಡುವುದು.
ಪೇಸ. **ಪುಂಸ್ತ್ರೀ:** [ಪ್ರೇಷ್ಯ] ಸೇವಕ, ಆಳು, ದೂತ. ಕಳುಹಿಸಲು ಅರ್ಹವಾದ.
ಪೇಸ. **ಪು:** [ದೇ. **ಪೇಶ**] ಸಿಂಧ ದೇಶದಲ್ಲಿ ಹುಟ್ಟುವ ಒಂದು ಪಶು ಜಾತಿ
ಪೇಸ. ವಿ: [ದೇ. ಪೈಶ] **'ಪೇಶ'** ಎಂಬ ಹೆಸರಿನ ಪ್ರಾಣಿಯ ಚರ್ಮದಿಂದ ಮಾಡಿದ ವಸ್ತ್ರ(ಆಚಾ)
ಪೇಸಣ. ನ: [ದೇ] ಕಾರ್ಯ, ಪ್ರಯೋಜನ(ದೇ)
ಪೇಸಣ. ನ: [ಪ್ರೇಷಣ] ಕಳುಹಿಸುವುದು, ನಿಯೋಜನೆ(ಕುಮಾ) ಆಜ್ಞೆ, ಆದೇಶ

ಪೇಸಣಆರಿ}. ಸ್ತ್ರೀ: [ದೇ] ದೂತಿ, ದೂತನ ಕೆಲಸವನ್ನು
ಪೇಸಣಆಲಿ}. ಮಾಡುವವಳು
ಪೇಸಣಾ. ಸ್ತ್ರೀ: [ಪೇಷಣ] ಬೀಸುವುದು, ಹಿಟ್ಟುಮಾಡುವುದು
ಪೇಸಲ. ವಿ: [**ಪೇಶಲ**] ಸುಂದರವಾದ, ಮನೋಜ್ಞವಾದ, ಮಧುರವಾದ, ಕೋಮಲವಾದ (ಗಉಡ)
ಪೇಸಲ}. ನ: [ದೇ] ಸಿಂಧ ದೇಶದ **'ಪೇಶ'** ಎಂಬ
ಪೇಸಲೇಸ}. ಹೆಸರಿನ ಪಶುವಿನ ಚರ್ಮದ ಸೂಕ್ಷ್ಮ ಭಾಗದಿಂದ ಮಾಡಿದ ಬಟ್ಟೆ
ಪೇಸವ. **ಸಕ:** [**ಪ್ರ +ಏಷಯ್**] ಕಳುಹಿಸಿಸು, ಬೇರೆಯವರ ಕಡೆಯಿಂದ ಕಳುಹಿಸು
ಪೇಸವಣ. ನ: [**ಪ್ರೇಷಣ**] ಕಳುಹಿಸಿಸುವುದು, ಬೇರೆಯವರ ಕಡೆಯಿಂದ ಕಳುಹಿಸುವುದು.
ಪೇಸವಿಅ. ವಿ: [**ಪ್ರೇಷಿತ**] ಬೇರೆಯವರ ಕಡೆಯಿಂದ ಕಳುಹಿಸಲ್ಪಟ್ಟ(ಪಾಅ)
ಪೇಸಾಯ. ವಿ: [**ಪೈಶಾಚ**] ಪಿಶಾಚಕ್ಕೆ ಸಂಬಂಧಿಸಿದ (ಬೃಹ)
ಪೇಸಿ. ಸ್ತ್ರೀ: [**ಪೇಶಿ**] **'ಪೇಸೀ'** ಶಬ್ದವನ್ನು ನೋಡುವುದು.
ಪೇಸಿಅ. ವಿ: [**ಪ್ರೇಷಿತ**] ಕಳುಹಿಸಲ್ಪಟ್ಟ(ಗಾ), ಕಳುಹಿಸುವುದು
ಪೇಸಿಆ. ಸ್ತ್ರೀ: [**ಪೇಶಿಕಾ**] ಭಾಗ, ತುಂಡು(ಆಚಾ).
ಪೇಸಿಆರ. **ಪು:** [**ಪ್ರೇಷಿತಕಾರ**] ನೌಕರ, ಆಳು
ಪೇಸಿದವಂತ(ಶೌ). ವಿ: [**ಪ್ರೇಷಿತವತ್**] ಕಳುಹಿಸಿದವನು
ಪೇಸೀ. ಸ್ತ್ರೀ: [**ಪೇಶೀ**] ಮಾಂಸದ ತುಂಡು, ಮಾಂಸದ ಮುದ್ದೆ
ಪೇಸುಣ್ಣ}. ನ: [**ಪೈಶುನ್ಯ**] ಚಾಡಿಕೋರತನ(ಔಪ)
ಪೇಸುನ್ನ}.
ಪೇಸೇಯುವ್ವ. **'ಪೇಸ=ಪ್ರ+ಏಷಯ್'** ಶಬ್ದವನ್ನು ನೋಡುವುದು.
ಪೆಸ್ಸಿದವಂತ. **'ಪೇಸಿದವಂತ'** ಶಬ್ದವನ್ನು ನೋಡುವುದು.
ಪೇಹ. **ಸಕ:** [ಪ್ರ+ಈಕ್ಷ್] ನೋಡು, ಧ್ಯಾನಪೂರ್ವಕವಾಗಿ ನೋಡು, ಚಿಂತನ ಮಾಡು **ಕ್ರಿಯಾ ರೂಪ:** **'ಪೇಹಇ'**.
ಪೇಹ. **ಸಕ:** [**ಪ್ರ +ಈಹ್**] ಇಚ್ಛಿಸು, ಬಯಸು, ಆಸೆಪಡು, ಪ್ರಾರ್ಥಿಸು, ಕೋರು
ಪೇಹಣ. ನ: [**ಪ್ರೇಕ್ಷಣ**] ನೋಡುವುದು,

ಪೇಹಾ. ಸ್ತ್ರೀ: [ಪ್ರೇಕ್ಷಣ] ನೋಡುವುದು(ಉವ), ಕಾಯೋತ್ಸರ್ಗದಲ್ಲಿನ ಒಂದು ದೋಷ: ಕಾಯೋತ್ಸರ್ಗದಲ್ಲಿ ಕಪಿಯ ಹಾಗೆ ತುಟಿಗಳನ್ನು ಅಲುಗಿಸುತ್ತಿರುವುದು. ಪರ್ಯಾಲೋಚನೆ, ಚಿಂತನೆ, ಬುದ್ಧಿ, ಮತಿ(ಉತ್ತ).

ಪೇಹಾವಿಯ. ವಿ: [ಪ್ರೇಕ್ಷಿತ] ನೋಡಲ್ಪಟ್ಟ, ನೋಡಿಸಲ್ಪಟ್ಟ

ಪೇಹಿ. ವಿ: [ಪ್ರೇಕ್ಷಿನ್] ನೋಡುವವನು, ನಿರೀಕ್ಷಕ (ಆಚಾ). ಸ್ತ್ರೀ: –ಣೀ.

ಪೇಹಿಯ. ವಿ: [ಪ್ರೇಕ್ಷಿತ] ನೋಡಲ್ಪಟ್ಟ

ಪೇಹುಣ. ನ: [ದೇ] ಗರಿ, ರೆಕ್ಕೆ, ನವಿಲುಗರಿ(ಪಣ್ಣ) 'ಪಿಹುಣ' ಶಬ್ದವನ್ನು ನೋಡುವುದು.

ಪೋಅ. ಸಕ: [ಪ್ರ +ವೇ] ಪೋಣಿಸು, ಹೆಣೆ. ವ.ಕೃ: **'ಪೋಯಮಾಣ'**

ಪೋಅ. ವಿ: [ಪ್ರೋತ] ಪೋಣಿಸಲ್ಪಟ್ಟ, ಹೆಣೆಯಲ್ಪಟ್ಟ, ಹೊಲಿಯಲ್ಪಟ್ಟ

ಪೋಅ. ಪು: [ಪೋತ] ನೌಕೆ, ಚಿಕ್ಕ ಜಹಜು(ಪಾಅ), ಮಗು, ಶಿಶು. ನ: ಬಟ್ಟೆ(ತಾ)

ಪೋಅ. ಪು: [ದೇ] ಒಂದು ಬಗೆಯ ವೃಕ್ಷ, ಸಣ್ಣ ಹಾವು(ದೇ)

ಪೋಅಇಯಾ. ಸ್ತ್ರೀ: [ದೇ] ಒಂದು ಬಗೆಯ ಬಳ್ಳಿ, ಲತೆ(ದೇ)

ಪೋಅಂಡ. ವಿ: [ದೇ] ನಿರ್ಭಯ, ನಪುಂಸಕ, ಷಂಡ.

ಭಿಲಿಂಜ. ಪು: [ದೇ] ಮೈಗೆ ಎಣ್ಣೆ ಲೇಪಿಸಿ ಮಾಲಿಶ್ ಮಾಡುವುದು.
ಬಿಲುಂಗ. ಪು: [**ಭಿಲುಂಕ**] ಹಿಂಸಕ ಪಕ್ಷಿ
ಭಿಲುಗಾ. ಸ್ತ್ರೀ: [ದೇ] ಸೀಳಿರುವ ಭೂಮಿ, ಗೆರೆ ಎಳೆದಿರುವುದು(ಆಚಾ)
ಭಿಲ್ಲ. ಪು: [**ಭಿಲ್ಲ**]ಅನಾರ್ಯ ದೇಶ, ಅನಾರ್ಯ–ಜಾತಿ
ಭಿಲ್ಲಮಾಲ. ಪು: [**ಭಿಲ್ಲಮಾಲ**] ಒಂದು ಹೆಸರಾಂತ ಕ್ಷತ್ರಿಯ ವಂಶ
ಭಿಲ್ಲಾಯಉಈ. ಸ್ತ್ರೀ: [**ಭಲ್ಲಾತಕೀ**] ಗೇರುಮರ, ಗೋಡಂಬಿ ಮರ(ಉಪ)
ಭಿಲ್ಲಿಅ. ವಿ: [**ಭಿಲಿತ**] ಮುರಿಯಲ್ಪಟ್ಟ, ತುಂಡರಿಸಲ್ಪಟ್ಟ
ಭಿಸ. '**ಭಾಸ=ಭಾಸ್**' ಶಬ್ದವನ್ನು ನೋಡುವುದು.
ಭಿಸ. ಸಕ: [**ಪ್ಲುಷ್**] ಸುಡು
ಭಿಸ. ಸಕ: [**ಭಾಯಯ್**] ಹೆದರಿಸು, –'**ಭಿಸಇ**'
ಭಿಸ. ನ: [**ಭೃಶ**] ಅತ್ಯಂತ, ಅತಿಶಯ, ಹೇರಳ
ಭಿಸ. '**ಬಿಸ**' ಶಬ್ದವನ್ನು ನೋಡುವುದು. **–ಕಂದಯ.** ಪು: [**–ಕಂದಕ**] ಒಂದು ಬಗೆಯ ಸಿಹಿ ಖಾದ್ಯ ವಸ್ತು. **–ಮುಣಾಲೀ.** ಸ್ತ್ರೀ: [**–ಮೃಣಾಲೀ**] ಕಮಲದ ಹೂವು
ಭಿಸಅ. ಪು: [**ಭಿಷಜ್**] ವೈದ್ಯ, ಚಿಕಿತ್ಸಕ, ಭಗವಾನ್ ಮಲ್ಲಿನಾಥನ ಪ್ರಥಮ ಗಣಧರ
ಭಿಸಂತ. '**ಭಿಸ=ಭಾಸ್**' ಶಬ್ದವನ್ನು ನೋಡುವುದು.
ಭಿಸಂತ. ನ: [ದೇ] ಅನರ್ಥ
ಭಿಸಗ. '**ಭಿಸಅ**' ಶಬ್ದವನ್ನು ನೋಡುವುದು
ಭಿಸಣ. ಸಕ: [ದೇ] ಎಸೆ, ಹಾಕು. –'**ಭಿಸಣೇಮಿ**'
ಭಿಸರಾ. ಸ್ತ್ರೀ: [ದೇ] ಮೀನು ಹಿಡಿಯುವ ಬಲೆ.(ವಿಪಾ)
ಭಿಸಾವ. ಸಕ: [**ಭಾಯಯ್**] ಹೆದರಿಸು. –'**ಭಿಸಾವೇಇ**'
ಭಿಸಿಆ}. ಸ್ತ್ರೀ: [**ದೇ. ಬೃಷಿಕಾ**] ಋಷಿಯ ಆಸನ(ಔಪ)
ಭಿಸಿಗಾ}.
ಭಿಸಿಣ. '**ಭಿಸಣ**' ಶಬ್ದವನ್ನು ನೋಡುವುದು.
ಭಿಸಿಣೀ. ಸ್ತ್ರೀ: [**ಬಿಸಿನೀ**] ಕಮಲಿನಿ, ಪದ್ಮಿನಿ(ಕುಮಾ)
ಭಿಸೀ. ಸ್ತ್ರೀ: [**ಬೃಷೀ**] '**ಭಿಸಿಆ**' ಶಬ್ದವನ್ನು ನೋಡುವುದು.
ಭಿಸೋಲ. ನ: [ದೇ] ಒಂದು ಬಗೆಯ ನೃತ್ಯ
ಭಿಹ}. ಅಕ: [**ಭೀ**] ಹೆದರು
ಭೀ}.
ಭೀ. ಸ್ತ್ರೀ: [**ಭೀ**] ಭಯ, ವಿ: ಹೆದರುವವನು, ಭೀರು
ಭೀಅ. ಅ; [**ಭೀತ**] ಹೆದರಿದ(ಪಾಅ), **–ಭೀಯ.** ವಿ: [**–ಭೀತ**] ಅತ್ಯಂತ ಹೆದರಿದ
ಭೀಇ. ಸ್ತ್ರೀ: [**ಭೀತಿ**] ಭಯ, ಹೆದರಿಕೆ(ಸುರ)
ಭೀಇಅ. ವಿ: [**ಭೀತ**] ಹೆದರಿದ(ಉಪ)
ಭೀಇರ. ವಿ: [**ಭೇತೃ**] ಹೆದರುವವನು
ಭೀಡ(ದೇ). **ಭಿಡ**' ಶಬ್ದವನ್ನು ನೋಡುವುದು.
ಭೀಡಿಅ(ದೇ). '**ಭಿಡಿಅ**' ಶಬ್ದವನ್ನು ನೋಡುವುದು.
ಭೀತರ(ದೇ). '**ಭಿತ್ತರ**' ಶಬ್ದವನ್ನು ನೋಡುವುದು.
ಭೀಮ. ವಿ: [**ಭೀಮ**] ಭಯಂಕರ, ಭೀಷಣ(ಪಾಅ), ಪು: ಪಾಂಡವ ಮಧ್ಯಮನಾದ ಭೀಮಸೇನ(ಗಾ), ರಾಕ್ಷಸ –ನಿಕಾಯದ ದಕ್ಷಿಣ ದಿಕ್ಕಿನ ಇಂದ್ರ(ಠಾ),

ಭಾರತ ವರ್ಷದ ಭಾವೀ ಏಳನೇ ಪ್ರತಿ ವಾಸುದೇವ. ರಾಕ್ಷಸ ವಂಶದ ರಾಜ, ಒಬ್ಬ ಲಂಕಾಧಿಪತಿ. ಸಗರ ಚಕ್ರವರ್ತಿಯ ಒಬ್ಬ ಮಗ, ಪು: ಶಿವ. ದಮಯಂತಿಯ ಮಗ, ಒಬ್ಬ ಕುಲಪುತ್ರ, ಗುಜರಾತಿನ ಚಾಲುಕ್ಯ ವಂಶದ ಒಬ್ಬ ರಾಜ, ಹಸ್ತಿನಾಪುರ ನಗರದ ಒಬ್ಬ ಕೂಟಗ್ರಾಹ –ರಾಜಪುರುಷ. **–ಏವ.ಪು:** [–ದೇವ] ಗುಜರಾತಿನ ಒಬ್ಬ ಚಾಲುಕ್ಯ ರಾಜ. **–ಕುಮಾರ. ಪು:** [–ಕುಮಾರ] ಒಬ್ಬ ರಾಜಪುತ್ರ. **–ಪ್ಪಭ. ಪು:** [–ಪ್ರಭ] ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ (ಪಉಮ). **–ರಹ. ಪು:** [–ರಥ] ದಮಯಂತಿಯ ತಂದೆ, ದೊರೆ. **–ಸೇಣ. ಪು:** [–ಸೇನ] ಪಾಂಡವ ಮಧ್ಯಮನಾದ ಭೀಮಸೇನ. ಒಬ್ಬ ಮುಖಂಡ. **ಭೀಮಾವಲಿ. ಪು:** [ಭೀಮಾವಲಿ] ಅಂಗವಿದ್ಯೆ ಬಲ್ಲ ಮೊದಲ ರುದ್ರ –ಪುರುಷ. **ಭೀಮಾಸುರ. ನ:** [ಭೀಮಾಸುರ] ಒಂದು ಶಾಸ್ತ್ರ

ಭೀಮಾಸುರುಕ್ಕ. ನ: [ಭೀಮಾಸುರೋಕ್ತ, –ರೀಯ] ಒಂದು ಜೈನೇತರ ಪ್ರಾಚೀನ ಶಾಸ್ತ್ರ

ಭೀರು}. ವಿ: [ಭೀರು, –ಕ] ಹೇಡಿ, ಅಂಜುಕುಳಿ,
ಭೀರುಅ}. ಪುಕ್ಕಲ(ಉತ್ತ)

ಭೀಸ. ಸಕ: [ಭೀಷಯ್] ಹೆದರಿಸು. **–'ಭೀಸಇ'**

ಭೀಸಣ. ವಿ: [ಭೀಷಣ] ಭಯಂಕರ, ಭಯವುಂಟು ಮಾಡುವ(ಪಾಅ)

ಭೀಸಯ. 'ಭೇಸಗ' ಶಬ್ದವನ್ನು ನೋಡುವುದು.

ಭೀಸಾವ 'ಭೀಸ' ಶಬ್ದವನ್ನು ನೋಡುವುದು.

ಭೀಸಿದ(ಶೌ). ವಿ: [ಭೀಷಿತ] ಹೆದರಿಸಲ್ಪಟ್ಟ, ಭಯಭೀತಗೊಳಿಸಲ್ಪಟ್ಟ

ಭೀಹ. ಅಕ: [ಭೀ] ಹೆದರು. **–'ಭೀಹಇ'**

ಭುಅ. 'ಭುಂಜ' ಶಬ್ದವನ್ನು ನೋಡುವುದು.

ಭುಅ. ನ: [ದೇ] ಭೂರ್ಜ ಪತ್ರ, ಭೂರ್ಜ ವೃಕ್ಷದ ತೊಗಟೆ. **–ರುಕ್ಖ. ಪು:** [–ವೃಕ್ಷ] ಭೂರ್ಜ ವೃಕ್ಷ(ಪಣ್ಣ. **–ವತ್ತ. ನ:** [–ಪತ್ರ] ಭೋಜ ಪತ್ರ(ಗಉಡ)

ಭುಅ. ಪುಂಸ್ತ್ರೀ: [ಭುಜ] ಬಾಹು, ತೋಳು, ಕೈ, ಗಣಿತದಲ್ಲಿ ಪ್ರಸಿದ್ಧವಾದ ಒಂದು ರೇಖೆ. ಸ್ತ್ರೀ: –ಆ(ಗಉಡ). **–ಪರಿಸಪ್ಪ. ಪುಂಸ್ತ್ರೀ:** [–ಪರಿಸರ್ಪ] ಭುಜದಿಂದ ಚಲಿಸುವ ಸರ್ಪ –ಜಾತಿ(ಪಣ್ಣ). ಪ್ರಾಣಿ. ಸ್ತ್ರೀ: –ಪ್ಪಿಣೀ. **–ಮೂಲ. ನ:** [–ಮೂಲ] ಕಂಕುಳು **–ಮೋಯಗ. ಪು ಮೋಚಕ]** ರತ್ನದ ಒಂದು ಜಾತಿ(ಭಗ). **–ಸಪ್ಪ. ಪು:** [–ಸರ್ಪ] **'ಪರಿಸಪ್ಪ'** ಶಬ್ದವನ್ನು ನೋಡುವುದು. **ಭುಆಲ. ವಿ:** [–ವತ್] ಬಲವಾದ ತೋಳುಗಳುಳ್ಳ(ಸಿರಿ)

ಭುಅಅ. 'ಭುಅಗ' ಶಬ್ದವನ್ನು ನೋಡುವುದು.

ಭುಅಇಂದ. ಪು: [ಭುಜಗೇಂದ್ರ] ಶ್ರೇಷ್ಠ ಸರ್ಪ. ಆದಿಶೇಷ, ವಾಸುಕಿ. **–ವುರೇಸ. ಪು:** [–ಪುರೇಶ] ಶ್ರೀಕೃಷ್ಣ.

ಭುಅಈಸರ.}. ಪು: [ಭುಜಗೇಶ್ವರ] ಮೇಲಿನ ಶಬ್ದವನ್ನು
ಭುಅವಿಸರ}. ನೋಡುವುದು. **–ಣಅರಣಾಹ. ಪು:** [–ನಗರನಾಥ] ಶ್ರೀಕೃಷ್ಣ

ಭುಅಂಗ. ಪು: [ಭುಜಂಗ] ಸರ್ಪ, ಹಾವು, ವಿಟ, ವೇಶ್ಯಾಗಾಮಿ, ಜಾರ, ಉಪಪತಿ, ಜೂಜುಕೋರ, ಜೂದಾಳಿ, ಕಳ್ಳಚೋರ. ವಂಚಕ, ಮೋಸಗಾರ. **–ಕಿತ್ತೀ. ಸ್ತ್ರೀ:** [–ಕೃತ್ತಿ] ಕಂಚುಕ, ಕವಚ. **'–ಪಆತ (ಅಪ). '–ಪ್ಪಜಾಯ'** ಶಬ್ದವನ್ನು ನೋಡುವುದು. **–ಪ್ಪಜಾಯ. ನ:** [–ಪ್ರಯಾತ].ಸರ್ಪಗತಿ, ಹಾವಿನ ಚಲನೆ. ಒಂದು ಛಂದಸ್ಸು. **–ರಾಅ. ಪು:** [–ರಾಜ] ಆದಿಶೇಷ, **–ವಇ. ಪು:** [–ಪತಿ] ವಾಸುಕಿ (ಗಉಡ). **ಭುಅಂಗಾಪಆಅ(ಅಪ). '–ಪ್ಪಜಾಯ'** ಶಬ್ದವನ್ನು ನೋಡುವುದು.

ಭುಅಂಗಮ. ಪು: [ಭುಜಂಗಮ] ಸರ್ಪ, ಹಾವು, ಖ್ಯಾತನಾದ ಒಬ್ಬ ಚಾರ.

ಭುಅಂಗಿಣೀ}. ಸ್ತ್ರೀ: [ಭುಜಂಗೀ] ಒಂದು ಬಗೆಯ
ಭುಅಂಗೀ}. ವಿದ್ಯೆ(ಪಉಮ), ಹೆಣ್ಣು ಸರ್ಪ(ಸುಪಾ)

ಭುಅಗ. ಪು: [ಭುಜಗ] ಸರ್ಪ, ಹಾವು, ಒಂದು ದೇವ ಜಾತಿ, ನಾಗಕುಮಾರದೇವ, ವಾನವ್ಯಂತರ ದೇವರುಗಳ ಒಂದು ವರ್ಗ, ಮಹೋರಗ, ವಿಟಪುರುಷ, ವಿ: ಭೋಗಿ, ಇಲಾಸಿ(ಣಾಯಾ). **–ಪರಿರಿಂಗಿಅ. ನ:** [–ಪರಿರಿಂಗಿತ] ಒಂದು ಛಂದಸ್ಸು. **–ವಈ. ಸ್ತ್ರೀ:** [–ವತೀ] ಒಬ್ಬ ಇಂದ್ರಾಣಿ, ಅತಿಕಾಯ ಎಂಬ ಮಹಾ ಉರಗೇಂದ್ರನ ಒಬ್ಬ ಅಗ್ರಮಹಿಷಿ. **–ವರ.ಪು:** [–ಚರ] ಒಂದು ದ್ವೀಪ

ಭುಅಗ. ವಿ: [ಭೋಜಕ] ಪೂಜಿಸುವವನು, ಸೇವೆ ಮಾಡುವವನು(ಔಪ).

ಭುಅಗಾ. ಸ್ತ್ರೀ: [ಭುಜಗಾ] ಒಬ್ಬ ಇಂದ್ರಾಣಿ, ಅತಿಕಾಯ ಎಂಬ ಮಹಾ ಉರಗೇಂದ್ರನ ಒಬ್ಬ ಅಗ್ರಮಹಿಷಿ.

ಭುಅಗೀಸರ. 'ಭುಅಈಸರ' ಶಬ್ದವನ್ನು ನೋಡುವುದು.
ಭುಅಣ. 'ಭುವಣ' ಶಬ್ದವನ್ನು ನೋಡುವುದು.
ಭುಅಪ್ಪಇ}. 'ಬಹಸ್ಸಇ' ಶಬ್ದವನ್ನು ನೋಡುವುದು.
ಭುಅಪ್ಫಇ}.
ಭುಅಸ್ಸಇ}.
ಭುಆ. 'ಭುಅ=ಭುಜ' ಶಬ್ದವನ್ನು ನೋಡುವುದು.
ಭುಇ. ಸ್ತ್ರೀ: [ಭೃತಿ] ಪೋಷಣೆ, ಸಾಕುವುದು, ವೇತನ, ಸಂಬಳ, ಬೆಲೆ, ಮೂಲ್ಯ(ಷಡ್)
ಭುಉಡಿ. 'ಭಿಉಡಿ' ಶಬ್ದವನ್ನು ನೋಡುವುದು.
ಭುಂಗಲ. ನ: [ದೇ] ಒಂದು ವಾದ್ಯ-ವಿಶೇಷ
ಭುಂಜ. ಸಕ: [ಭುಜ್] ಭೋಜನಮಾಡು, ರಕ್ಷಿಸು, ಭೋಗಿಸು, ಅನುಭವಿಸು, **'ಭುಂಜಇ'.** ವ.ಕೃ: **'ಭುಂಜಂತ.**
ಭುಂಜಗ}. ವಿ: [ಭೋಜಕ] ಭೋಜನ ಮಾಡುವವನು
ಭುಂಜಯ}.
ಭುಂಜಣ. 'ಭುಂಜ=ಭುಜ್'ಶಬ್ದವನ್ನು ನೋಡುವುದು.
ಭುಂಜಣ. ನ: [ಭೋಜನ] ಭೋಜನ, ಊಟ
ಭುಂಜಣಾ. ಸ್ತ್ರೀ: ಮೇಲಿನ ಶಬ್ದವನ್ನು ನೋಡುವುದು.
ಭುಂಜಯ. 'ಭುಂಜಗ' ಶಬ್ದವನ್ನು ನೋಡುವುದು.
ಭುಂಜಾವ. ಸಕ: [ಭೋಜಯ್] ಭೋಜನ ಮಾಡಿಸು, ರಕ್ಷಣೆ ಮಾಡಿಸು, ಭೋಗ ಮಾಡಿಸು- **'ಭುಂಜಾವೇಇ'.**
ಭುಂಜಾವಯ. ವಿ: [ಭೋಜಕ] ಭೋಜನ ಮಾಡಿಸುವವನು
ಭುಂಜಾವಿಅ. ವಿ: [ಭೋಜಿತ] ಭೋಜನ(ಊಟ) ಮಾಡಿಸಲ್ಪಟ್ಟವನು(ಕುಪ್ರ)
ಭುಂಜಿಅ. 'ಭುಂಜ್=ಭುಜ್' ಶಬ್ದವನ್ನು ನೋಡುವುದು.
ಭುಂಜಿಅ. 'ಭುತ್ತ' ಶಬ್ದವನ್ನು ನೋಡುವುದು
ಭುಂಜಿರ. ವಿ; [ಭೋಕ್ತೃ] ಊಟ ಮಾಡುವವನು, ಅನುಭವಿಸುವವನು(ಸುಪಾ)
ಭುಂಡ.}. ಪುಂಸ್ತ್ರೀ: [ದೇ] ಹಂದಿ. ಸ್ತ್ರೀ: **-ಡೀ, ಡಿಣೀ.**
ಭುಂಡೀರ}.
ಭುಂಭಲ. ನ: [ದೇ] ಮದ್ಯದ ಪಾತ್ರೆ
ಭುಂಹಡಿ.(ಅಪ). 'ಭೂಮಿ' ಶಬ್ದವನ್ನು ನೋಡುವುದು.
ಭುಕ್ಕ. ಅಕ: [ಬುಕ್ಕ್] ಬೊಗಳು. **'ಭುಕ್ಕಇ'**
ಭುಕ್ಕಣ. ಪು: [ದೇ] ನಾಯಿ. ಮದ್ಯದ ಒಂದು ಅಳತೆ
ಭುಕ್ಕಿಅ. ನ [ಬುಕ್ಕಿತ]ನಾಯಿಯ ಬೊಗಳುವಿಕೆ (ಪಾಅ)
ಭುಕ್ಕಿರ. ವಿ: [ಬುಕ್ಕಿತೃ] ಬೊಗಳುವ(ಕುಮಾ)
ಭುಕ್ಖಾ. ಸ್ತ್ರೀ: [ದೇ. ಬುಭುಕ್ಷಾ] ಹಸಿವು(ದೇ). **-ಲು.** ವಿ: [**-ವತ್**] ಹಸಿದವನು
ಭುಕ್ಖಿಅ. ವಿ: [ದೇ. ಬುಭುಕ್ಷಿತ] ಹಸಿದವನು, ತಿನ್ನುವ ಕಾತರವುಳ್ಳವನು(ಪಾಅ)
ಭುಗುಭುಗ. ಅಕ: [ಭುಗಭುಗಾಯ್] **'ಭುಗ್ ಭುಗ್'** ಎಂದು ಶಬ್ದ ಮಾಡು. ವ. ಕೃ: **'ಭುಗುಭುಗೇಂತ'**
ಭುಗ್ಗ. ವಿ: [ಭುಗ್ನ] ಬಗ್ಗಿರುವ, ಡೊಂಕಾದ, ವಕ್ರವಾಗಿರುವ. ವಿ: ಮುರಿದುಹೋದ, ಸುಡಲ್ಪಟ್ಟಿರುವ, ಹುರಿಯಲ್ಪಟ್ಟಿರುವ(ಕುಪ್ರ)
ಭುಜ. (ಅಪ). 'ಭುಂಜ' ಶಬ್ದವನ್ನು ನೋಡುವುದು.
ಭುಜಂಗ. 'ಭುಅಂಗ' ಶಬ್ದವನ್ನು ನೋಡುವುದು.
ಭುಜಗ. 'ಭುಅಗ=ಭುಜಗ' ಶಬ್ದವನ್ನು ನೋಡುವುದು.
ಭುಜ್ಜ. 'ಭುಂಜ' ಶಬ್ದವನ್ನು ನೋಡುವುದು.
ಭುಜ್ಜ. ಪು: [ಭೂರ್ಜ] ಭೂರ್ಜ ವೃಕ್ಷ, ಅದರ ತೊಗಟೆ. **-ಪತ್ತ, -ವತ್ತ.** ನ: [**-ಪತ್ರ**] ಅದೇ ಅರ್ಥ.
ಭುಜ್. ವಿ: [ಭೂಯಸ್] ಅಧಿಕ, ಹೇರಳ, ಬಹಳ
ಭುಜ್ಜಿಅ. ವಿ: [ದೇ. ಭುಗ್ನ] ಹುರಿಯಲ್ಪಟ್ಟ ಧಾನ್ಯ. ಪು: ಹುರಿದ ಜವೆಗೋಧಿ(ಪಣ್ಣ)
ಭುಜ್ಜೋ. ಅಕ: [ಭೂಯಸ್] ಮತ್ತೆ, ಪುನಃ(ಉವಾ)
ಭುಣ್ಣ. ಪು: [ಭ್ರೂಣ]ಸ್ತ್ರೀಯ ಗರ್ಭ, ಗರ್ಭಸ್ಥ ಶಿಶು, ಶಿಶು
ಭುತ್ತ. ವಿ: [ಭುಕ್ತ] ತಿನ್ನಲ್ಪಟ್ಟ, ಅನುಭವಿಸಲ್ಪಟ್ಟ(ಉವಾ), ಭೋಜನ ಮಾಡಿದವನು, ಸೇವಿಸಲ್ಪಟ್ಟ(ಉತ್ತ) ನ: ಭೋಜನ, ವಿಷ(ಠಾ), **-ಭೋಗಿ.** ವಿ: [**-ಭೋಗಿನ್**] ಭೋಗಗಳನ್ನು ಸೇವಿಸಿದವನು.
ಭುತ್ತವಂತ. ವಿ: [ಭುಕ್ತವತ್] ಊಟಮಾಡಿದವನು, ಭೋಜನ ಮಾಡಿದವನು
ಭುತ್ತವ್ವ. 'ಭುಂಜ' ಶಬ್ದವನ್ನು ನೋಡುವುದು.
ಭುತ್ತಿ. ಸ್ತ್ರೀ: [ಭುಕ್ತಿ] ಭೋಜನ, ಊಟ(ಅಚ್ಚು), ಭೋಗ, ಜೀವನ ನಿರ್ವಹಣೆಗಾಗಿ ನೀಡಲಾಗುವ ಹಳ್ಳಿ, ಹೊಲ, ಗದ್ದೆ ಮೊದಲಾದ 'ಗ್ರಾಸ'. **-ವಾಲ.** ಪು: [**-ಪಾಲ**] ಗ್ರಾಸ ಪಡೆದವನು
ಭುತ್ತು. ವಿ: [ಭೋಕ್ತೃ] ಭೋಗಿಸುವವನು, ಅನುಭವಿಸುವವನು
ಭುತ್ತೂಣ. ಪು: [ದೇ] ಭೃತ್ಯ, ಆಳು, ಸೇವಕ(ದೇ)
ಭುತ್ಥಲ್ಲ. ಪು: [ದೇ] ಬೆಕ್ಕಿಗೆ ತಿನ್ನಲು ಎಸೆಯಲಾಗುವ ಆಹಾರ(ಕಪ್ಪೂ)

ಭುಮ. 'ಭಮ=ಭ್ರಮ್' ಶಬ್ದವನ್ನು ನೋಡುವುದು.
ಭುಮ-}. ಸ್ತ್ರೀ: [ಭ್ರೂ] ಹುಬ್ಬು
ಭುಮಗಾ}.
ಭುಮಯಾ}.
ಭುಮಾ}.
ಭುಮಿಅ. 'ಭಮಿಅ=ಭ್ರಾಂತ' ಶಬ್ದವನ್ನುನೋಡುವುದು.
ಭುಮ್ಮಿ(ಅಪ). 'ಭೂಮಿ' ಶಬ್ದವನ್ನು ನೋಡುವುದು.
ಭುರುಂಡಿಆ. ಸ್ತ್ರೀ: [ದೇ] ಹೆಣ್ಣು ನರಿ(ದೇ)
ಭುರುಂಡಿಯ}. ವಿ: [ದೇ] ದೂಳಿನಿಂದ ಆವೃತವಾದ,
ಭುರುಕುಂಡಿಅ}. ದೂಳಿನಿಂದ ಲೇಪಿಸಲ್ಪಟ್ಟ
ಭುರುಹುಂಡಿಅ}.
ಭುಲ್ಲ. ಅಕ: [ಭ್ರಂಶ್] ಜಾರಿಬೀಳು, ಕೆಳಗೆ ಬೀಳು,ಮರೆ
ಭುಲ್ಲ. ವಿ: [ಭ್ರಷ್ಟ] ಮರೆಯಲ್ಪಟ್ಟಿರುವ, ಕೆಳಗೆ ಬಿದ್ದಿರುವ,
ಭುಲ್ಲವಿಅ. ವಿ: [ಭ್ರಂಶಿತ] ಕೆಳಗೆ ಬೀಳಿಸಲ್ಪಟ್ಟ(ಕುಮಾ)
ಭುಲ್ಲಿರ. ವಿ: [ಭ್ರಂಶಿನ್] ಮರೆಯುವವನು(ಸುಪಾ)
ಭುಲ್ಲುಂಕೀ(ದೇ). 'ಭಲ್ಲುಂಕೀ' ಶಬ್ದವನ್ನು ನೋಡುವುದು.
ಭುವ. 'ಹುವ=ಭೂ' ಶಬ್ದವನ್ನು ನೋಡುವುದು.
ಭುವ. 'ಭುಅ=ಭುಜ' ಶಬ್ದವನ್ನು ನೋಡುವುದು.
ಭುವಇಂದ. 'ಭುಅಇಂದ' ಶಬ್ದವನ್ನು ನೋಡುವುದು.
ಭುವಣ. ನ: [ಭುವನ] ಪ್ರಪಂಚ, ಜಗತ್ತು. ಲೋಕ (ಸುಪಾ). ಜೀವ, ಪ್ರಾಣಿ, ಆಕಾಶ. -ಕ್ಖೋಹಣೀ. ಸ್ತ್ರೀ: [-ಕ್ಷೋಭನೀ] ವಿದ್ಯಾ -ವಿಶೇಷ. -ಗುರು. ಪು: [-ಗುರು] ಜಗತ್‌ಗುರು. -ನಾಹ. ಪು: [-ನಾಥ] ಜಗತ್ತನ್ನು ರಕ್ಷಿಸುವವನು(ಉಪ). -ಪಾಲ. ಪು: [-ಪಾಲ] ವಿಕ್ರಮಶಕೆಯ -೧೨ನೇ ಶತಮಾನದ ಗೋಪಗಿರಿಯ ಒಬ್ಬರಾಜ. -ಬಂಧು. ಪು; [-ಬಂಧು] ಜಗತ್ತಿನ ಬಂಧು. ಜಿನದೇವ. -ಸೋಹ. ಪು; [-ಶೋಭ] ಏಳನೇ ಬಲದೇವನಿಗೆ ದೀಕ್ಷೆ ನೀಡಿದ ಒಬ್ಬ ಜೈನ ಮುನಿ(ಪಉಮ). ಭುವಣಾಲಂಕಾರ. ಪು: [ಭುವನಾಲಂಕಾರ] ರಾವಣನ ಪಟ್ಟದಾನೆ. (ಪಉಮ)
ಭುವಣಾ. ಸ್ತ್ರೀ: [ಭುವನಾ] ವಿದ್ಯಾ -ವಿಶೇಷ(ಪಉಮ)
ಭುಶ್ಕಾ.(ಗಾ). 'ಭುಕ್ಖಾ' ಶಬ್ದವನ್ನು ನೋಡುವುದು.
ಭುಸ. 'ಬುಸ' ಶಬ್ದವನ್ನು ನೋಡುವುದು.
ಭುಸುಂಢಿ. ಸ್ತ್ರೀ: [ದೇ. ಭುಶುಂಡಿ] ಒಂದು ಶಸ್ತ್ರ, ಆಯುಧ
ಭೂ. 'ಭುವ=ಭೂ' ಶಬ್ದವನ್ನು ನೋಡುವುದು.
ಭೂ. ಸ್ತ್ರೀ: [ಭ್ರೂ] ಹುಬ್ಬು

ಭೂ. ಸ್ತ್ರೀ: [ಭೂ] ಭೂಮಿ, ಪೃಥ್ವಿ(ಕುವಾ). ಪೃಥ್ವೀಕಾಯ, ಪಾರ್ಥಿವ ಶರೀರವುಳ್ಳ ಜೀವ (ಕಮ್ಮ). -ಆರ. ಪು: [-ದಾರ] ಹಂದಿ. ಭೂಪತಿ, ದೊರೆ. -ಕಂತ. ಪು: [-ಕಾಂತ] ರಾಜ. ದೊರೆ. -ಗೋಲ. ಪು: [-ಗೋಲ] ಗೋಳಾಕಾರ, ಭೂಮಂಡಲ, -ಚಂದ. ಪು: [-ಚಂದ್ರ] ಭೂಮಿಯ ಚಂದ್ರ. -ಚರ. ವಿ: [-ಚರ] ಭೂಮಿಯ ಮೇಲೆ ಚಲಿಸುವ ಮನುಷ್ಯನೇ ಮೊದಲಾದವರು. -ಚ್ಛತ್ತ. ಪುಂನ: [-ಛತ್ರ] ಒಂದು ವನಸ್ಪತಿ. -ತಣಗ. '-ಯಣಯ' ಶಬ್ದವನ್ನು ನೋಡುವುದು. -ಧಣ. ಪು: [-ಧನ] ರಾಜ. -ಧರ. ಪು: [-ಧರ] ಪ್ರಭು, ದೊರೆ, ಪರ್ವತ. -ನಾಹ. ಪು: [-ನಾಥ] ರಾಜ(ಉಪ). -ಮಹ. ಪು: [-ಮಹ] ಅಹೋರಾತ್ರದ ೨೭ನೇ ಮುಹೂರ್ತ. -ಯಣಯ. ಪುಂನ: [-ತೃಣಕ] ವನಸ್ಪತಿ -ಶೇಷ. -ರುಹ. ಪು: [-ರುಹ] ಮರ, ವೃಕ್ಷ(ಗಉಡ). -ವ. ಪು: [-ಪ] ರಾಜ. -ವಇ. ಪು: [-ಪತಿ] ದೊರೆ. -ವಾಲ. ಪು: [-ಪಾಲ] ಪ್ರಭು, ವ್ಯಕ್ತಿ -ವಾಚಕ ಹೆಸರು. -ವಿತ್ತ. ಪು: [-ವಿತ್ತ] ದೊರೆ. -ವೀಢ. ನ: [-ಪೀಠ] ಭೂತಳ. -ಹರ. '-ಧರ' ಶಬ್ದವನ್ನು ನೋಡುವುದು.
ಭೂ-}. ಪು: [ಭೂಯಸ್] ಕರ್ಮಬಂಧದ ಒಂದು
ಭೂಅ}. ಪ್ರಕಾರ(ಕಮ್ಮ),-ಗಾರ. ಪು: [-ಕಾರ] ಅದೇಅರ್ಥ.'ಭೂಓಗಾರ' ಶಬ್ದವನ್ನು ನೋಡುವುದು.
ಭೂಅ. ಪು: [ದೇ] ಯಂತ್ರವನ್ನು ಹೊರುವವನು(ದೇ)
ಭೂಅ. ವಿ: [ಭೂತ] ಉತ್ಪನ್ನವಾದ, ಘಟಿಸಿದ, ಕಳೆದುಹೋದ, ಆಗಿಹೋದ, ಲಭ್ಯವಾದ, ದೊರೆತ(ಣಾಯಾ), ಸಮನ, ಸದೃಶ, ವಾಸ್ತವಿಕ, ಸತ್ಯ, ವಿದ್ಯಮಾನ, ಉಪಮೆ(ಠಾ), ಅದೇ ಅರ್ಥದ, ಅದೇ ಉದ್ದೇಶದ, ನ: ಪ್ರಕೃತ್ಯರ್ಥ, ಪು: ಒಂದು ದೇವಜಾತಿ, ಪಿಶಾಚ(ಪಾಅ), ಸಮುದ್ರ -ವಿಶೇಷ, ಒಂದು ದ್ವೀಪ -ವಿಶೇಷ, ಪುಂನ: ಜಂತು, ಪ್ರಾಣಿ. ಪೃಥ್ವಿಯೇ ಮೊದಲಾದ ಪಂಚ ಭೂತಗಳು. ವೃಕ್ಷ, -ಇಂದ. ಪು: [-ಇಂದ್ರ] ಭೂತ ದೇವತೆಗಳ ಒಡೆಯ. -ಗ್ಗಹ. ಪು: [-ಗ್ರಹ] ಭೂತದ ಆವೇಶ. -ಗ್ಗಾಮ. ಪು:

[-ಗ್ರಾಮ] ಜೀವ -ಸಮೂಹ(ಸಮ). -ತ್ಥ. ವಿ: [ಭೂತಾರ್ಥ] ತಾರ್ಥ, ವಾಸ್ತವಿಕ(ಗಳುಡ). -ದಿಣ್ಣಾ. '-ದಿನ್ನಾ ಶಬ್ದವನ್ನು ನೋಡುವುದು. -ದಿನ್ನ. ಪು: [-ದಿನ್ನ] ಒಬ್ಬ ಜೈನಾಚಾರ್ಯ. ಒಬ್ಬ ಚಾಂಡಾಲ ನಾಯಕ. -ದಿನ್ನಾ. ಸ್ತ್ರೀ: [-ದಿನ್ನಾ] ಒಬ್ಬ ನಾಶಕಾರಕ ಮಹಿಳೆ, ಒಬ್ಬ ಜೈನ ಸಾಧ್ವಿ, ಮಹರ್ಷಿ ಸ್ಥೂಲಭದ್ರನ ಒಬ್ಬ ಸೋದರಿ. -ಮಂಡಲಪವಿಭತ್ತಿ. ನ: [-ಮಂಡಲಪ್ರವಿಭಕ್ತಿ] ನಾಟ್ಯವಿಧಿಯ ಒಂದು ಪ್ರಭೇದ. -ಲಿವಿ. ಸ್ತ್ರೀ: [-ಲಿಪಿ]ಒಂದು ಲಿಪಿ -ವಿಶೇಷ. -ವಡಿಂಸಾ. ಸ್ತ್ರೀ: [ಭೂತಾವತಂಸಾ]. ಒಬ್ಬ ಇಂದ್ರಾಣಿ, ಒಂದು ರಾಜಧಾನಿ. -ವಾಇ, -ವಾಇಯ, -ವಾದಿಯ. ಪು: [-ವಾದಿನ್, -ವಾದಿಕ] ಒಂದು ದೇವ-ಜಾತಿ(ಪಣ್ಣ), ವಿ: ಭೂತೋಚ್ಚಾಟನೆ ಮಾಡಬಲ್ಲ ಮಂತ್ರವಾದಿ(ಸುಖ), -ವಾಯ. ಪು: [-ವಾದ] ಯಥಾರ್ಥವಾದ, ದೃಷ್ಟಿವಾದ ಎಂಬ -೧೨ನೇ ಜೈನ ಅಂಗ ಗ್ರಂಥ(ಠಾ). -ವಿಜ್ಜಾ, -ವೆಜ್ಜಾ. ಸ್ತ್ರೀ: [-ವಿದ್ಯಾ] ಆಯುರ್ವೇದದ ಒಂದು ಪ್ರಭೇದವಾದ ಭೂತನಿಗ್ರಹ ವಿದ್ಯೆ(ವಿಪಾ). ಭೂತಾಣಂದ. ಪು: [ಭೂತಾನಂದ] ನಾಗ -ಕುಮಾರ ದೇವತೆಗಳ ದಕ್ಷಿಣ ದಿಕ್ಕಿನ ಪ್ರಭು. ರಾಜಾ ಕೂಣಿಕನ ಪಟ್ಟದಾನೆ. ಭೂತಾಣಂದಪ್ಪಹ. ಪು: [ಭೂತಾನಂದಪ್ರಭ] ಭೂತಾನಂದ ಇಂದ್ರನ ಒಂದು ವಿಪತ್ತಿನ ಪರ್ವತ. ಭೂತಾವಾಂಸು. '-ವಾಂಸು' ಶಬ್ದವನ್ನು ನೋಡುವುದು(ವಿಸೇ)

ಭೂಅಣ್ಣ. ಪು: [ದೇ] ಉಳುಮೆ ಮಾಡಿದ ಗಟ್ಟಿ ಭೂಮಿಯಲ್ಲಿ ಮಾಡಲಾಗುವ ಯಜ್ಞ(ದೇ)

ಭೂಆ. ಸ್ತ್ರೀ: [ಭೂತಾ] ಒಬ್ಬ ಜೈನಸಾಧ್ವಿ, ಮಹರ್ಷಿ ಸ್ಥೂಲ ಭದ್ರನ ಒಬ್ಬ ಸೋದರಿ. ಇಂದ್ರಾಣಿಯ ಒಂದು ರಾಜಧಾನಿ(ಜೀವ)

ಭೂಇ. ಸ್ತ್ರೀ: [ಭೂತಿ] ಸಂಪತ್ತು, ಹಣ(ಸುಪಾ), ಬೂದಿ(ಗಾ), ಶಿವನ ಶರೀರದ ಭಸ್ಮ, ವೃದ್ಧಿ, ಹೆಚ್ಚಳ. ಜೀವ -ರಕ್ಷೆ. -ಕಮ್ಮ. ಪುಂನ: [-ಕರ್ಮನ್] ಶರೀರಾದಿಗಳ ರಕ್ಷಣೆಗಾಗಿ ಮಾಡಿಕೊಳ್ಳುವ ಭಸ್ಮ -ಲೇಪನ, ಸೂತ್ರಬಂಧನ ಮೊದಲಾದವು. ಪಣ್ಣ, -ಪನ್ನ. ವಿ: [-ಪ್ರಜ್ಞ] ಜೀವ -ರಕ್ಷಣೆಯ ವೃದ್ಧಿಯುಳ್ಳ, ಅನಂತಜ್ಞಾನಿ. '-ಭೂಇ' ಶಬ್ದವನ್ನು ನೋಡುವುದು.

ಭೂಇಂದ. ಪು: [ಭೂತೇಂದ್ರ] ಭೂತಗಳ ಒಡೆಯ

ಭೂಇಟ್ಠ. ವಿ: [ಭೂಯಿಷ್ಠ] ಬಹಳ, ಅತ್ಯಧಿಕ, ಹೇರಳ

ಭೂಇಟ್ಠಾ. ಸ್ತ್ರೀ: [ಭೂತೇಷ್ಟಾ] ಚತುರ್ದಶಿಯ ದಿನ.

ಭೂಈ-. 'ಭೂಇ' ಶಬ್ದವನ್ನು ನೋಡುವುದು. -ಕಮ್ಮಿಯ. ವಿ: [-ಕರ್ಮಿಕ] ಭೂತಿ-ಕರ್ಮವನ್ನು ಮಾಡುವವನು

ಭೂಓ. ಅ: [ಭೂಯಸ್] ಮತ್ತೆ, ಪುನಃ(ಪಉಮ). ಮತ್ತೆ ಮತ್ತೆ, ಪುನಃ ಪುನಃ. -ಗಾರ. ಪು: [-ಕಾರ] ಕರ್ಮ -ಬಂಧದ ಒಂದು ಪ್ರಕಾರ. ಸ್ವಲ್ಪ ಕರ್ಮಬಂಧದ ನಂತರದಲ್ಲಿ ಉಂಟಾಗುವ ಅಧಿಕ ಕರ್ಮ -ಬಂಧ.

ಭೂಓದ. ಪು: [ಭೂತೋದ] ಸಮುದ್ರ -ವಿಶೇಷ

ಭೂಓವಘಾಇಯ. ವಿ: [ಭೂತೋಪಘಾತಿನ್,-ಕ] ಜೀವಗಳನ್ನು ಹಿಂಸಿಸುವವನು(ಔಪ)

ಭೂಹಂಡೀ(ಅಪ). 'ಭೂಮಿ' ಶಬ್ದವನ್ನು ನೋಡುವುದು.

ಭೂಣ. 'ಭುಣ್ಣ' ಶಬ್ದವನ್ನು ನೋಡುವುದು.

ಭೂಪ. 'ಭೂ-ವ' ಶಬ್ದವನ್ನು ನೋಡುವುದು.

ಭೂಜ. 'ಭುಜ್ಜ=ಭೂರ್ಜ' ಶಬ್ದವನ್ನು ನೋಡುವುದು.

ಭೂಮ ಆ. 'ಭುಮಯಾ' ಶಬ್ದವನ್ನು ನೋಡುವುದು.

ಭೂಮಣಯಾ. ಸ್ತ್ರೀ: [ದೇ] ಮರೆಮಾಡುವಿಕೆ, ಬಟ್ಟೆ, ಮುಚ್ಚಳ

ಭೂಮಿ. ಸ್ತ್ರೀ: [ಭೂಮಿ] ಪೃಥ್ವಿ, ನೆಲ(ಪಉಮ), ಕ್ಷೇತ್ರ, ಸ್ಥಳ, ಜಮೀನು, ಜಾಗ, ಕಾಲ, ಸಮಯ(ಕಪ್ಪ), ಉನ್ನತವಾದ ಪ್ರದೇಶ, -ಕಂಪ. ಪು: [ಕಂಪ] ಭೂಕಂಪ(ಪಉಮ). -ಗಿಹ, -ಘರ. ನ: [-ಗೃಹ] ಕೆಳಗಿನ ಮನೆ, -ಗೋಯರಿಯ. ವಿ: [-ಗೋಚರಿಕ] ನೆಲದ ಮೇಲೆ ಸಂಚರಿಸುವ ಮನುಷ್ಯಾದಿ ಪ್ರಾಣಿಗಳು(ಪಉಮ). ಸ್ತ್ರೀ: -ರೀ. -ಚ್ಛತ್ತ. ನ: [-ಚ್ಛತ್ರ] ಒಂದು ವನಸ್ಪತಿ. -ತಲ. ನ: [-ತಲ] ಭೂತಳ, ಭೂಮಿ. -ದೇವ. ಪು: [-ದೇವ]ಬ್ರಾಹ್ಮಣ. -ಫೋಡ. ಪು: [-ಸ್ಫೋಟ] ಒಂದು ಬಗೆಯ ವಿಷಕಾರಿ ಪ್ರಾಣಿ. -ಭಾಗ ಭೂಮಿಯ ಪ್ರದೇಶ. -ರುಹ. ಪುಂನ: [-ರುಹ] ಮರ. -ವಇ. ಪು: [-ಪತಿ] ರಾಜ. -ವಾಲ. ಪು: [-ಪಾಲ] ದೊರೆ. -ಸುಅ. ಪು: [-ಸುತ]

ಮಂಗಳಗ್ರಹ(ಮೃಚ್ಛ). **–ಹರ.** '**–ಘರ**' ಶಬ್ದವನ್ನು ನೋಡುವುದು. '**ಭೂಮಿ**' ಶಬ್ದವನ್ನು ನೋಡುವುದು.

ಭೂಮಿಳ. ಸ್ತ್ರೀ: [**ಭೂಮಿಕಾ**] ಸ್ಥಳ, ಜಾಗ, ಉಪ್ಪರಿಗೆ, ನಾಟಕದಲ್ಲಿ ಪಾತ್ರಗಳ ವೇಷಾಂತರ ಮಾಡುವುದು, ಅಲಂಕಾರ, ವೇಷ ರಚನೆ, ನಟನ ಪಾತ್ರ

ಭೂಮಿಂದ. ಪು: [**ಭೂಮೀಂದ್ರ**] ಪ್ರಭು, ರಾಜ.

ಭೂಮೀ. '**ಭೂಮಿ**'ಶಬ್ದವನ್ನು ನೋಡುವುದು. **–ತುಡಯಕೂಡ.** ನ: [**–ತುಡಗಕೂಟ**] ಒಂದು ವಿದ್ಯಾಧರ ನಗರ. **–ಭುಯಂಗ.** ಪು: [**–ಭುಜಂಗ**] ರಾಜ.

ಭೂಮಿಪಿಸಾಯ. ಪು: [**ಭೂಮಿಪಿಶಾಚ**] ತಾಳೆ ಮರ

ಭೂಮೀಸ. ಪು: [**ಭೂಮೀಶ**] ರಾಜ, ಪ್ರಭು.

ಭೂಮೀಸರ. ಪು: [**ಭೂಮೀಶ್ವರ**] ರಾಜ(ಸುಪಾ)

ಭೂಯಿಟ್ಠ. '**ಭೂಇಟ್ಠ**' ಶಬ್ದವನ್ನು ನೋಡುವುದು.

ಭೂರಿ. ವಿ: [**ಭೂರಿ**] ಬಹಳ, ಅತ್ಯಧಿಕ, ಹೇರಳ(ಕುಮಾ). ನ: ಚಿನ್ನ, ಬಂಗಾರ. ಹಣ, ಸಂಪತ್ತು. **–ಸ್ಸಯ.ಪು:** [**–ಶ್ರವಸ್**] ಚಂದ್ರವಂಶದ ರಾಜ ಭೂರಿಶ್ರವಸು.

ಭೂಸ. ಸಕ: [**ಭೂಷಯ್**] ಅಲಂಕರಿಸು, ಸಂಗರಿಸು. **–'ಭೂಸೇಇ'.** ವ. ಕೃ: **ಭೂಸಯಂತ.**

ಭೂಸಣ. ನ: [**ಭೂಷಣ**] ಅಲಂಕಾರ, ಒಡವೆ. ಅಲಂಕರಿಸುವಿಕೆ(ಪಣ್ಣ)

ಭೂಸಾ. ಸ್ತ್ರೀ: [**ಭೂಷಾ**] ಮೇಲಿನ ಶಬ್ದವನ್ನು ನೋಡುವುದು(ದೇ)

ಭೂಸಿಅ. ವಿ: [**ಭೂಷಿತ**] ಅಲಂಕೃತ, ಅಲಂಕರಿಸಲ್ಪಟ್ಟ

ಭೂಹರೀ. ಸ್ತ್ರೀ: [ದೇ] ಒಂದು ಬಗೆಯ ತಿಲಕ.

ಭೇ. ಅ: [**ಭೋಸ್**] ಕರೆ, ಮತ್ತು ಹಿರಿಯರನ್ನು ನಮಸ್ಕರಿಸುವಾಗ ಬಳಸಲಾಗುವ ಸಂಬೋಧನ ಸೂಚಕ ಅವ್ಯಯ

ಭೇಅ. ಪುಂನ: [**ಭೇದ**] ಪ್ರಕಾರ, ವಿಧ. ವಿಶೇಷ, ಬೇರೆಮಾಡುವಿಕೆ, ವ್ಯತ್ಯಾಸ, ಒಂದು ರಾಜನೀತಿ, ಆಘಾತ, ಹೊಡೆತ, ಮಂಡಳದ ಮಧ್ಯಭಾಗ, ವಿಚ್ಛೇದ, ತುಂಡುಮಾಡುವುದು, ಸೀಳುವುದು, **–ಕರ.**ವಿ: [**–ಕರ**] ವಿಚ್ಛೇದ ಮಾಡುವವನು. ಸೀಳುವವನು. **–ಘಾಯ.** ಪು: [**–ಘಾತ**] ಮಂಡಳದ ಮಧ್ಯಕ್ಕೆ ಚಲಿಸುವುದು. **–ಸಮಾವನ್ನ.** ವಿ: [**–ಸಮಾಪನ್ನ**] ಭೇದ ಪ್ರಾಪ್ತವಾಗಿರುವ.

ಭೇಅಗ. ವಿ: [**ಭೇದಕ**] ಭೇದ ಉಂಟುಮಾಡುವ

ಭೇಅಣ. ನ: [**ಭೇದನ**] ಸೀಳುವುದು, ತುಂಡರಿಸುವುದು), ಇಬ್ಬರಲ್ಲಿ ದ್ವೇಷ ಹುಟ್ಟುಹಾಕುವುದು, ವಿನಾಶ

ಭೇಅಯ. **ಭೇಅಗ**' ಶಬ್ದವನ್ನು ನೋಡುವುದು.

ಭೇಅವ್ವ. '**ಭಿಂದ**' ಶಬ್ದವನ್ನು ನೋಡುವುದು.

ಭೇಅವ್ವ '**ಭೀ=ಭೀ**' ಶಬ್ದವನ್ನು ನೋಡುವುದು.

ಭೇಇಲ್ಲ. ವಿ: [**ಭೇದವತ್**] ಭೇದವುಳ್ಳ.

ಭೇಉರ. '**ಭಿಉರ**' ಶಬ್ದವನ್ನು ನೋಡುವುದು.

ಭೇಂಡೀ. ಸ್ತ್ರೀ: [**ಭಿಂಡಾ, ಭಿಂಡೀ**] ಒಂದು ಬಗೆಯ ಸಸ್ಯ,

ಭೆಂಭಲ. '**ಭಿಂಭಲ**' ಶಬ್ದವನ್ನು ನೋಡುವುದು.

ಭೆಂಭಲಿದ(ಶೌ). '**ಭಿಂಭಲಿಅ**' ಶಬ್ದವನ್ನು ನೋಡುವುದು.

ಭೇಕ. '**ಭೇಗ**' ಶಬ್ದವನ್ನು ನೋಡುವುದು.

ಭೆಕ್ಖಸ. ಪು: [ದೇ] ರಾಕ್ಷಸನ ಶತ್ರು

ಭೇಗ. ಪು: [**ಭೇಕ**] ಕಪ್ಪೆ(ದೇ)

ಭೆಚ್ಛ–. '**ಭಿಂದ**' ಶಬ್ದವನ್ನು ನೋಡುವುದು.

ಭೆಜ್ಜ. '**ಭಿಜ್ಜ**' ಶಬ್ದವನ್ನು ನೋಡುವುದು.

ಭೆಜ್ಜ}. ವಿ: [ದೇ] ಹೇಡಿ, ಅಂಜುಬುರುಕ, ಹೆದರು

ಭೆಜ್ಜಲಯ}. ಪುಕ್ಕಲ(ದೇ)

ಭೆಜ್ಜಲ್ಲ}.

ಭೇಡ. ವಿ: [ದೇ. **ಭೇರ**] ಭಯಸ್ವಭಾವದ, ಹೆದರಿದ

ಭೇಡಕ. '**ಭೇಲಯ**' ಶಬ್ದವನ್ನು ನೋಡುವುದು.

ಭೆತ್ತು. ವಿ: [**ಭೇತ್ತೃ**] ಭೇದಿಸುವವನು, ಒಡೆಯುವವನು, ರಹಸ್ಯ ಭೇದಕ(ಆಚಾ)

ಭೆತ್ತುಆಣ}. '**ಭಿಂದ**' ಶಬ್ದವನ್ನು ನೋಡುವುದು.

ಭೆತ್ತುಂ}.

ಭೆತ್ತೂಣ}.

ಭೇದ. '**ಭಿಂದ**' ಶಬ್ದವನ್ನು ನೋಡುವುದು.

ಭೇದ. '**ಭೇಅ**' ಶಬ್ದವನ್ನು ನೋಡುವುದು.

ಭೇದಅ.'**ಭೇಅಯ**' ಶಬ್ದವನ್ನು ನೋಡುವುದು

ಭೇದಣಯಾ. '**ಭೇಅಣ**' ಶಬ್ದವನ್ನು ನೋಡುವುದು.

ಭೇದಿಅ. '**ಭೇದ=ಭಿಂದ**' ಶಬ್ದವನ್ನು ನೋಡುವುದು.

ಭೇದಿಅ. ವಿ: [**ಭೇದಿತ**] ತುಂಡು ಮಾಡಲ್ಪಟ್ಟ, ಸೀಳಲ್ಪಟ್ಟ

ಭೇರಂಡ. ಪು: [**ಭೇರಂಡ**] ದೇಶ –ವಿಶೇಷ

ಭೇರವ. ನ: [**ಭೈರವ**] ಭಯ, ಹೆದರಿಕೆ, **ಪು:** ರಾಕ್ಷಸನೇ ಮೊದಲಾದ ಭಯಂಕರ ಪ್ರಾಣಿಗಳು. '**ಭಇರವ**' ಶಬ್ದವನ್ನು ನೋಡುವುದು(ಪಉಮ).

ಭೇರವಾಣಂದ. ಪು: [ಭೈರವಾನಂದ] ಒಬ್ಬ ಯೋಗಿಯ ಹೆಸರು.
ಭೇರಿ}. ಸ್ತ್ರೀ: [ಭೇರೀ, ರೀ] ವಾದ್ಯ, ಭೇರಿ, ನಗಾರಿ
ಭೇರೀ}.
ಭೇರುಂಡ. ಪು: [ಭೇರುಂಡ] ಒಂದೇ ದೇಹ, ಎರಡು ಮುಖ ಹೊಂದಿರುವ ಗಂಡಬೇರುಂಡ ಪಕ್ಷಿ(ದೇ)
ಭೇರುಂಡ. ಪು: [ದೇ]ಹುಲಿ, ಚಿರತೆ, ಕಿರುಬ(ದೇ), ವಿಷರಹಿತ ಸರ್ಪ
ಭೇರುತಾಲ. ಪು: [ಭೇರುತಾಲ] ಒಂದು ಬಗೆಯ ವೃಕ್ಷ
ಭೇಲ. ಸಕ: [ಭೇಲಯ್] ಮಿಶ್ರಣ ಮಾಡು, ಸೇರಿಸು
ಭೇಲಯ. ಪು: [ದೇ. ಭೇಲಕ] ತೆಪ್ಪ, ಹರಿಗೋಲು
ಭೇಲವಿಅ. ವಿ: [ಭೇಲಿತ] ಸೇರಿಸಲಾದ, ಮಿಶ್ರಮಾಡಲ್ಪಟ್ಟ
ಭೇಲೀ. ಸ್ತ್ರೀ: [ದೇ] ಆಜ್ಞೆ, ಆದೇಶ, ತೆಪ್ಪ, ದಾಸಿ(ದೇ)
ಭೇಸ. ಸಕ: [ಭೇಷಯ್] ಹೆದರಿಸು, **'ಭೇಸಇ'**, **'ಭೇಸೇಇ'. ವ. ಕೃ: 'ಭೇಸಂತ'**
ಭೇಸಗ. ಪು: [ಭೀಷ್ಮಕ] ರುಕ್ಮಿಣಿಯ ತಂದೆ, ಕೌಂಡಿಣ್ಯ ನಗರದ ರಾಜ(ಉಪ)
ಭೇಸಜ}. ನ: [ಭೈಷಜ] ಔಷಧ, ಮದ್ದು(ಪಉಮ)
ಭೇಸಜ್ಜ}. ನ: [ಭೈಷಜ್ಯ]
ಭೇಸಣ. 'ಭೀಸಣ' ಶಬ್ದವನ್ನು ನೋಡುವುದು.
ಭೇಸಣ. ನ: [ಭೀಷಣ] ಹೆದರಿಸು, ಭಯಪಡಿಸು
ಭೇಸಣಾ. ಸ್ತ್ರೀ: [ಭೀಷಣಾ] ಮೇಲಿನ ಶಬ್ದವನ್ನು ನೋಡುವುದು.
ಭೇಸಾವ. 'ಭೇಸ' ಶಬ್ದವನ್ನು ನೋಡುವುದು.
ಭೇಸಾವಿಯ}. ವಿ: [ಭೀಷಿತ] ಹೆದರಿಸಲ್ಪಟ್ಟ(ಪಉಮ)
ಭೇಸಿಅ}.
ಭೋ. 'ಭುಂಜ' ಶಬ್ದವನ್ನು ನೋಡುವುದು.
ಭೋ. ಅ: [ಭೋಸ್] ಹಿರಿಯರನ್ನು, ಪೂಜ್ಯರನ್ನು ಕರೆಯುವ, ಸಂಬೋಧಿಸುವ ಅವ್ಯಯ,
ಭೋ– ಸ: [ಭವತ್] ತಾವು, ಸ್ತ್ರೀ: **ಭೋಈ**
ಭೋಅ. ಸಕ: [ಭೋಜಯ್] ಊಟ ಮಾಡಿಸು, ತಿನ್ನಿಸು. – **'ಭೋಯಇ'.**
ಭೋಅ. ಪು: [ದೇ. ಭೋಗ] ಬಾಡಿಗೆ(ದೇ)
ಭೋಅ. 'ಭೋಗ' ಶಬ್ದವನ್ನು ನೋಡುವುದು.
ಭೋಅ. ಪು: [ಭೋಜ] ಉಜ್ಜೈನಿ ನಗರದ ಹೆಸರಾಂತ ಭೋಜರಾಜ. **–ರಾಯ. ಪು:** [–ರಾಜ] ಅದೇ ಅರ್ಥ.
ಭೋಅ. ವಿ: [ಭೌತ] ಬೂದಿ ಬಳಿಯಲ್ಪಟ್ಟಿರುವ
ಭೋಅಗ. ವಿ: [ಭೋಜಕ] ತಿನ್ನುವವನು, ಊಟ ಮಾಡುವವನು, ಪಾಲನೆ ಮಾಡಿದ, ರಕ್ಷಿಸುವವನು (ಬೃಹ)
ಭೋಅಡಾ. ಸ್ತ್ರೀ: [ದೇ] ಲಂಗೋಟಿ, ಪಂಚೆಯ ಕಚ್ಚೆ
ಭೋಅಣ. ನ: [ಭೋಜನ] ಊಟ, ಅನ್ನವೇ ಮೊದಲಾದ ಖಾದ್ಯ ವಸ್ತು(ಆಚಾ), ನಿರಂತರ –೭ ದಿನಗಳ ಉಪವಾಸ, ಉಪಭೋಗ. **–ರುಕ್ಖ. ಪು:** [–ವೃಕ್ಷ] ಭೋಜನವನ್ನು ನೀಡುವ ಕಲ್ಪ ವೃಕ್ಷದ ಒಂದು ಪ್ರಭೇದ(ಪಉಮ)
ಭೋಅಲ(ಅಪ). ಪು: [ದೇ. ಭೋಲ] ಒಂದು ಛಂದಸ್ಸು
ಭೋಇ. ವಿ: [ಭೋಜಿನ್] ಭೋಜನ ಮಾಡುವವನು
ಭೋಇ. 'ಭೋಗಿ' ಶಬ್ದವನ್ನು ನೋಡುವುದು.
ಭೋಇ}. ಪು: [ದೇ. ಭೋಗಿನ್, –ಕ] ಗ್ರಾಮದ
ಭೋಇಅ}. ಮುಖ್ಯಸ್ಥ, ಗ್ರಾಮ ಮುಖಂಡ, ಗೌಡ (ಉತ್ತ), ಮಹೇಶ(ಷಡ್)
ಭೋಇಅ. ವಿ: [ಭೋಗಿಕ] ಭೋಗದಿಂದ ಕೂಡಿದ, ಭೋಗಾಸಕ್ತ, ವಿಲಾಸಿ, ಭೋಗ ವಂಶದಲ್ಲಿ ಹುಟ್ಟಿದ(ಉತ್ತ)
ಭೋಇಅ. ವಿ: [ಭೋಜಿತ] ಊಟಮಾಡಿಸಲ್ಪಟ್ಟವನು,
ಭೋಇಣೀ. ಸ್ತ್ರೀ: [ದೆ. ಭೋಗಿನೀ] ಗ್ರಾಮಾಧ್ಯಕ್ಷನ ಹೆಂಡತಿ(ಗಾ)
ಭೋಇಯಾ}. ಸ್ತ್ರೀ: [ಭೋಗ್ಯಾ] ಹೆಂಡತಿ, ಪತ್ನಿ(ಬೃಹ),
ಭೋಈ}. ವೇಶ್ಯೆ
ಭೋಈ. 'ಭೋ–=ಭವತ್' ಶಬ್ದವನ್ನು ನೋಡುವುದು.
ಭೊಂಡ. 'ಭುಂಡ' ಶಬ್ದವನ್ನು ನೋಡುವುದು.
ಭೊಕ್ಖ.–. 'ಭುಂಜ' ಶಬ್ದವನ್ನು ನೋಡುವುದು.
ಭೋಗ. ಪುಂನ: [ಭೋಗ] ಸ್ಪರ್ಶ, ರಸವೇ ಮೊದಲಾದ ವಿಷಯ ಸುಖಗಳು, ಉಪಭೋಗ ಪದಾರ್ಥ, ವಿಷಯ ಸುಖಾನುಭವ, ಕಾಮಚೇಷ್ಟೆ(ಸೂಅ), ವಿಷಯಾಭಿಲಾಷೆ, ವಿಷಯ ಸುಖ(ಉತ್ತ). ಭೋಜನ, ಆಹಾರ. ಗುರುಸ್ಥಾನದಲ್ಲಿರುವ ಜಾತಿ –ವಿಶೇಷ, ಒಂದು ಕ್ಷತ್ರಿಯ ಕುಲ(ಕಪ್ಪ) ಅಮಾತ್ಯನೇ ಮೊದಲಾದ ಗುರುಸ್ಥಾನೀಯ ಜನವರ್ಗ. ಗುರುವಂಶದಲ್ಲಿ ಹುಟ್ಟಿದ. ಶರೀರ, ಸರ್ಪದ ಹೆಡೆ, ಸರ್ಪದ ದೇಹ(ದೇ). **–ಕರಾ. 'ಭೋಗಂಕರಾ'** ಶಬ್ದವನ್ನು ನೋಡುವುದು.

–ಕುಲ. ನ: [–ಕುಲ] ಪೂಜ್ಯಸ್ಥಾನೀಯ ಕುಲ.–ಪುರ. ನ: [–ಪುರ] ಒಂದುನಗರ. –ಪುರಿಸ. ಪು: [–ಪುರುಷ] ಭೋಗದಲ್ಲಿ ತತ್ಪರನಾದ ವ್ಯಕ್ತಿ(ಠಾ). –ಭಾಗಿ. ವಿ: [–ಭಾರ್ಗಿನ್] ಭೋಗಶಾಲಿ. –ಭೂಮ. ವಿ: [–ಭೂಮ] ಭೋಗ ಭೂಮಿಯಲ್ಲಿ ಹುಟ್ಟಿದ(ಪಉಮ). –ಭೂಮಿ. ಸ್ತ್ರೀ: [–ಭೂಮಿ] ದೇವ –ಕುರುವೇ ಮೊದಲಾದ ಕರ್ಮಭೂಮಿ. –ಭೋಗ. ಪುಂನ: [–ಭೋಗ]ಭೋಗಾರ್ಹವಾದ ಶಬ್ದವೇ ಮೊದಲಾದ ವಿಷಯಗಳು, ಮನೋಜ್ಞ ಶಬ್ದಾದಿಗಳು(ಭಗ). –ಮಾಲಿಣೀ. ಸ್ತ್ರೀ: [–ಮಾಲಿನೀ] ಅಧೋಲೋಕದಲ್ಲಿ ವಾಸಿಸುವ ಒಬ್ಬ ದಿಕ್ಕುಮಾರಿ ದೇವಿ(ಠಾ). –ರಾಯ. ಪು: [–ರಾಜ] ಭೋಗ ಕುಲದ ರಾಜ. –ವಇಯಾ. ಸ್ತ್ರೀ: [–ವತಿಕಾ] ಲಿಪಿ –ವಿಶೇಷ(ಪಣ್ಣ). –ವಈ. ಸ್ತ್ರೀ: [–ವತೀ] ಅಧೋಲೋಕದಲ್ಲಿ ವಾಸಿಸುವ ಒಬ್ಬ ದಿಕ್ಕುಮಾರಿ ದೇವಿ(ಠಾ), ಪಕ್ಷದ ಎರಡನೇ, ಏಳನೇ ಮತ್ತು ಹನ್ನೆರಡನೇ ರಾತ್ರಿ. –ವಿಸ. ಪು: [–ವಿಷ] ಸರ್ಪದ ಒಂದು ಜಾತಿ(ಪಣ್ಣ).

ಭೋಗಂಕರಾ. ಸ್ತ್ರೀ:[ಭೋಗಂಕರಾ] ಅಧೋಲೋಕದಲ್ಲಿ ವಾಸಿಸುವ ಒಬ್ಬ ದಿಕ್ಕುಮಾರಿ ದೇವಿ(ಠಾ)

ಭೋಗಾ. ಸ್ತ್ರೀ: [ಭೋಗಾ] ದೇವೀ –ವಿಶೇಷ.

ಭೋಗಿ. ಪು: [ಭೋಗಿನ್] ಸರ್ಪ. ಪುಂನ: ಶರೀರ, ದೇಹ. ವಿ: ಭೋಗದಿಂದ ಕೂಡಿದ, ಭೋಗಾಸಕ್ತ, ವಿಲಾಸಿ.

ಭೊಗ್ಗ. 'ಭುಂಜ' ಶಬ್ದದ ಕೃದಂತ

ಭೊಚ್ಚಾ. 'ಭುಂಜ'ದ ಸಂ. ಕೃ.

ಭೊಚ್ಛ. 'ಭುಂಜ' ದ ಭವಿ.

ಭೊಜ್ಜ. 'ಭುಂಜ' ದ ಕೃದಂತ ರೂಪ.

ಭೊಟ್ಟಂತ. ಪು: [ಭೋಟಾಂತ] ನೇಪಾಳದ ಸಮೀಪದಲ್ಲಿರುವ ಒಂದು ಭಾರತೀಯ ದೇಶವಾದ ಭೋಟಾನ, ಭೋಟಾನದಲ್ಲಿ ವಾಸಿಸುವ.

ಭೋಣ. 'ಭೋಅಣ' ಶಬ್ದವನ್ನು ನೋಡುವುದು.

ಭೊತ್ತ. 'ಭುತ್ತ' ಶಬ್ದವನ್ನು ನೋಡುವುದು.

ಭೊತ್ತವಿ}. 'ಭುಂಜ' ಶಬ್ದವನ್ನು ನೋಡುವುದು.

ಭೊತ್ತವ್ವ}.

ಭೊತ್ತಾ. 'ಭೂ=ಭುವ=ಭೂ' ಶಬ್ದವನ್ನು ನೋಡುವುದು.

ಭೊತ್ತು. ವಿ: [ಭೋಕ್ತೃ] ಭೋಗಿಸುವವನು.(ವಿಸೇ)

ಭೊತ್ತುಂ}. 'ಭುಂಜ' ಶಬ್ದವನ್ನು ನೋಡುವುದು.

ಭೊತ್ತೂಣ}.

ಭೊತ್ತೂಣ. 'ಭುತ್ತೂಣ'ಶಬ್ದವನ್ನು ನೋಡುವುದು (ದೇ)

ಭೋದೂಣ. 'ಭೂ=ಭುವ=ಭೂ' ನ.ಸಂ.ಕೃ. ರೂಪ

ಭೋಮ. ವಿ: [ಭೌಮ] ಭೂಮಿಗೆ ಸಂಬಂಧಿಸಿದ (ಸೂಅ). ಭೂಮಿಯಲ್ಲಿ ಹುಟ್ಟಿದ(ಓಘ). ಭೂಮಿಯ ಪರಿವರ್ತನೆ, ಪು: ಮಂಗಳ ಗ್ರಹ(ಪಾಅ). ಪುಂನ: ನಗರಾಕಾರದ ವಿಶಿಷ್ಟ ಸ್ಥಾನ. ನಗರ, ಭೂಮಿಕಂಪನವೇ ಮೊದಲಾದವುಗಳಿಂದ ಶುಭಾಶುಭ ಫಲವನ್ನು ಹೇಳುವ ನಿಮಿತ್ತ ಶಾಸ್ತ್ರ, ಅಹೋರಾತ್ರದ ೨೭ನೇ ಮುಹೂರ್ತ.

ಭೋಮಾಲಿಯ. ನ: [ಭೌಮಾಲೀಕ]ಭೂಮಿ ಸಂಬಂಧವಾದ ಮಿಥ್ಯಾವಾದ(ಪಣ್ಣ)

ಭೋಮಿಜ್ಜ. 'ಭೋಮೆಜ್ಜ' ಶಬ್ದವನ್ನು ನೋಡುವುದು.

ಭೋಮಿರ. 'ಭೂಮಿರ' ಶಬ್ದವನ್ನು ನೋಡುವುದು.

ಭೋಮೆಜ್ಜ}. ವಿ: [ಭೌಮೇಯ] ಭೂಮಿಯಿಂದ ಆದ,

ಭೋಮೇಯಗ}. ಪಾರ್ಥಿವ. ಪು: ಭವನಪತಿ ಎಂಬ ಹೆಸರಿನ ಒಂದು ದೇವ –ಜಾತಿ.

ಭೋರುಡ. ಪು: [ದೇ] ಗಂಡ ಬೇರುಂಡ ಪಕ್ಷಿ,

ಭೋಲ. ಸಕ: [ದೇ] ವಂಚಿಸು, ಮೋಸ ಮಾಡು

ಭೋಲ. ವಿ: [ದೇ] ಸರಳ ಮನಸ್ಸಿನ, ಸಾಧುವಾದ, ಭದ್ರ, ಸ್ತ್ರೀ: –ಲಾ, –ಲಿಯಾ(ಸುಪಾ)

ಭೋಲಗ. ಪು: [ಭೋಲಕ] ಒಬ್ಬ ಯಕ್ಷ.

ಭೋಲವ. ಸಕ: [ದೇ] ವಂಚಿಸು, ಮೋಸಮಾಡು

ಭೋಲವಣ. ನ: [ದೇ] ವಂಚನೆ, ಮೋಸ,

ಭೋಲವಿಅ.}. ವಿ: [ದೇ] ವಂಚಿಸಲ್ಪಟ್ಟ, ಮೋಸ

ಭೋಲಿಅ}. ಗೊಳಿಸಲ್ಪಟ್ಟ(ಕುಪ್ರ)

ಭೊಲ್ಲಯ. ನ: [ದೇ] ಸದಾ ಜೊತೆಗಿರುವ ಬುತ್ತಿ, ಪಾಥೇಯ

ಭೋವಾಲ.(ಅಪ). 'ಭೂ–ವಾಲ' ಶಬ್ದವನ್ನು ನೋಡುವುದು(ಭವಿ).

ಭೋಹಾ(ಅಪ). 'ಭೂ=ಭ್ರೂ' ಶಬ್ದವನ್ನು ನೋಡುವುದು.

ಭ್ರಂತ್ರಿ(ಅಪ). 'ಭಂತಿ=ಭ್ರಾಂತಿ' ಶಬ್ದವನ್ನು ನೋಡುವುದು.

ಮ

ಮ. ಪು: [ಮ] 'ಪ' ವರ್ಗದಲ್ಲಿ ಐದನೆಯ ಮತ್ತು ಕೊನೆಯ ವರ್ಣ. ಓಷ್ಠ ಸ್ಥಾನೀಯ ಅನುನಾಸಿಕ ವರ್ಣ.

ಮ. ಅ: [ಮಾ] ಬೇಡ, ಇಲ್ಲ, ತಡೆ, ಅಡ್ಡಿ(ಕುಮಾ)

ಮಅಆ. ಸ್ತ್ರೀ: [ಮೃಗಯಾ] ಬೇಟೆ(ಅಭಿ)

ಮಇ. ಸ್ತ್ರೀ: [ಮೃತಿ] ಮರಣ, ಸಾವು.

ಮಇ. ಸ್ತ್ರೀ: [ಮತಿ] ಬುದ್ಧಿ, ಪ್ರಜ್ಞೆ, ಇಚ್ಛೆ, ಅಪೇಕ್ಷೆ(ಪಾಅ), ಇಂದ್ರಿಯ ಮತ್ತು ಮನಸ್ಸಿನಿಂದ ಹುಟ್ಟುವ (ಣಂದಿ), ಜ್ಞಾನ, **–ಅಣ್ಣಾಣ.** ನ: [–ಅಜ್ಞಾನ] ವಿರುದ್ಧ ಮತಿ –ಜ್ಞಾನ, ಮಿಥ್ಯಾ ದರ್ಶನದಿಂದ ಕೂಡಿದ ಮತಿಜ್ಞಾನ(ಭಗ). **–ಣಾಣ, –ಣ್ಣಾಣ, –ನಾಣ.** ನ: [–ಜ್ಞಾನ] ಜ್ಞಾನ –ವಿಶೇಷ. **–ನಾಣಾವರಣ.** ನ: [–ಜ್ಞಾನಾವರಣ] ಮತಿಜ್ಞಾನವನ್ನು ಆವರಿಸಿಕೊಂಡಿರುವ ಕರ್ಮ. **–ನಾಣಿ.** ವಿ: [–ಜ್ಞಾನಿನ್] ಮತಿಜ್ಞಾನವುಳ್ಳವ. **–ಪತ್ತಿಂಅಾ.** ಸ್ತ್ರೀ: [–ಪಾತ್ರಿಕಾ] ಒಂದು ಜೈನಮುನಿಗಳ ಶಾಖೆ(ಕಪ್ಪ). **–ಬ್ಭಂಸ.** ಪು: [–ಭ್ರಂಶ] ಬುದ್ಧಿನಾಶ(ಭಗ). **–ಮ, –ಮಂತ, –ವಂತ.** ವಿ: [–ಮತ್]ಬುದ್ಧಿವಂತ, ಬುದ್ಧಿ ಉಳ್ಳ

ಮಇ– 'ಮಈ=ಮೃಗೀ' ಶಬ್ದವನ್ನು ನೋಡುವುದು.

ಮ ಇಅ. ವಿ: [ಮತ್ತ] ಮದದಿಂದ ಕೂಡಿದ, ಅಮಲೇರಿದ(ಗಾ)

ಮಇಅ. 'ಮಾ=ಮಾ' ಶಬ್ದವನ್ನು ನೋಡುವುದು.

ಮಇಅ. ವಿ: [ದೇ. ಮತಿಕ] ತಿರಸ್ಕರಿಸಲ್ಪಟ್ಟ(ದೇ). ನ: ಬಿತ್ತನೆ ಮಾಡಲಾದ ಬೀಜಗಳನ್ನು ಆಚ್ಛಾದಿಸುವ ಸಲುವಾಗಿ ಬಳಕೆಯಾಗುತ್ತಿದ್ದ ಒಂದು ಮರದ ವಸ್ತು, ವ್ಯವಸಾಯದ ಒಂದು ಸಲಕರಣೆ(ದಸ). **–ಮಇಅ.** ವಿ: [–ಮಯ] ವ್ಯಾಕರಣದಲ್ಲಿ ಪ್ರಸಿದ್ಧವಾದ ಒಂದು ತದ್ಧಿತ ಪ್ರತ್ಯಯ, ನಿವೃತ್ತ, ಮಾಡಲಾದ, ನಿರ್ಮಿಸಲಾದ

ಮಇಆ. ಸ್ತ್ರೀ: [ಮೃಗಯಾ] ಬೇಟೆ(ಸಿರಿ)

ಮಇಂದ. ಪು: [ಮೈಂದ] ರಾಮನ ಒಬ್ಬ ಸೈನಿಕ, ವಾನರ

ಮಇಂದ. ಪು: [ಮೃಗೇಂದ್ರ] ಸಿಂಹ, ಛಂದಸ್ಸಿನ ಒಂದು ಪ್ರಭೇದ

ಮಇಜ್ಜ. 'ಮಈಅ=ಮದೀಯ' ಶಬ್ದವನ್ನು ನೋಡುವುದು.

ಮಇಮ್ಮೋಹಿಣೀ. ಸ್ತ್ರೀ: [ದೇ. ಮತಿಮೋಹನೀ] ಸುರೆ, ಹೆಂಡ, ಮದ್ಯ(ದೇ)

ಮಇರಾ}. ಸ್ತ್ರೀ: [ಮದಿರಾ] ನ: [ಮೈರೇಯ] ಮದಿರೆ
ಮಇರೇಯ}.

ಮಇಲ. ವಿ: [ಮಲಿನ] ಕೊಳೆಯಾದ, ಮಲದಿಂದ ಕೂಡಿದ, ಮಾಸಿದ(ಪಾಅ)

ಮಇಲ. ಪು: [ದೇ] ಕಲಕಲ, ಕೋಲಾಹಲ(ದೇ)

ಮಇಲ. ವಿ: [ದೇ. ಮಲಿನ] ಕಾಂತಿಹೀನ, ಮಸುಕಾದ,

ಮಇಲ. ಸಕ: [ಮಲಿನಯ್] ಕೊಳಕುಮಾಡು, ಮಲಿನಗೊಳಿಸು. –'ಮಇಲಇ'. ವ. ಕೃ: 'ಮಇಲಂತ'

ಮಇಲ. ಅಕ: [ದೇ.ಮಲಿನಾಯ್]ಕಾಂತಿಹೀನಗೊಳ್ಳು, ಮಂಕಾಗಿ ಕಾಣು

ಮಇಲಣ. ನ: [ಮಲಿನನ] ಮಲಿನಗೊಳಿಸು, ಕೊಳೆಮಾಡು(ಗಉಡ)

ಮಇಲಣಾ. ಸ್ತ್ರೀ: [ಮಲಿನನಾ] ಮೇಲಿನ ಶಬ್ದವನ್ನು ನೋಡುವುದು(ಓಘ). ಮಾಲಿನ್ಯ, ಮಲಿನತೆ, ಕಳಂಕ.

ಮಇಲಪುತ್ತೀ. ಸ್ತ್ರೀ: [ದೇ] ಪುಷ್ಪವತಿ, ರಜಸ್ವಲೆಯಾದ ಮಹಿಳೆ

ಮಇಲಿಅ. ವಿ: [ಮಲಿನಿತ] ಮಲಿನಗೊಳಿಸಲ್ಪಟ್ಟ, ಕೊಳಕು ಮಾಡಲಾದ(ಭವಿ)

ಮಇಲ್ಲ. ವಿ: [ಮೃತ] ಸತ್ತಿರುವ, ಗತಿಸಿದ. ಸ್ತ್ರೀ:–ಲ್ಲಿಯಾ

ಮಇಹರ. ಪು: [ದೇ] ಗ್ರಾಮದ ಮುಖಂಡ(ದೇ). 'ಮಯಹರ' ಶಬ್ದವನ್ನು ನೋಡುವುದು.

ಮಈ. ಸ್ತ್ರೀ: [ದೇ] ಮದ್ಯ, ಹೆಂಡ(ದೇ)

ಮಈ. ಸ್ತ್ರೀ: [ಮೃಗೀ] ಹೆಣ್ಣು ಜಿಂಕೆ, ಹರಿಣಿ(ಗಾ).

ಮಈ–. 'ಮಇ=ಮತಿ' ಶಬ್ದವನ್ನು ನೋಡುವುದು. **–ಮ, –ವ.** ವಿ: [–ಮತ್] ಬುದ್ಧಿಯುಳ್ಳ.

ಮಈಅ. ವಿ: [ಮದೀಯ] ನನ್ನ(ಕುಮಾ)

ಮಉ. ಪು: [ದೇ] ಪರ್ವತ, ಬೆಟ್ಟ(ದೇ)

ಮಉ}. ವಿ: [ಮೃದು, –ಕ] ಕೋಮಲವಾದ, ಮೆದು
ಮಉಅ}. ವಾದ,ಮೃದುವಾದ(ಕುಮಾ). ಸ್ತ್ರೀ:–ಉಈ.

ಮಉಅ. ವಿ: [ದೇ] ದೀನ, ಬಡವ, ದರಿದ್ರ(ದೇ)
ಮಉಇಅ. ವಿ: [ಮೃದುಕಿತ] ಮೆದುಗೊಳಿಸಲ್ಪಟ್ಟ, ಮೃದು ಮಾಡಲಾದ(ಗಉಡ)
ಮಉಈ. 'ಮಉ=ಮೃದು'ಶಬ್ದವನ್ನು ನೋಡುವುದು.
ಮಉಂದ. ಪು: [ಮುಕುಂದ] ಮೋಕ್ಷವನ್ನು ಕೊಡುವವನು, ವಿಷ್ಣು, ಶ್ರೀಕೃಷ್ಣ, ಒಂದು ವಾದ್ಯ ವಿಶೇಷ(ಸುರ)
ಮಉಕ್ಕ. 'ಮಾಉಕ್ಕ=ಮೃದುತ್ವ' ಶಬ್ದವನ್ನು ನೋಡುವುದು.
ಮಉಡ. ಪುಂನ: [ಮುಕುಟ] ಕಿರೀಟ(ಔಪ)
ಮಉಡ}. ಪು: [ದೇ] ಮುಡಿ, ಒಟ್ಟುಗೂಡಿಸಿದ
ಮಉಡಿ}. ಕೂದಲು, ಹೆರಳು(ಪಾಅ)
ಮಉಣ. 'ಮೋಣ' ಶಬ್ದವನ್ನು ನೋಡುವುದು.
ಮಉರ. ಪುಂನ: [ಮುಕುರ] ಅರಳುತ್ತಿರುವ ಮೊಗ್ಗು, ಕನ್ನಡಿ, ಕುಂಬಾರನ ಕೋಲು, ಬಕುಳದ ಮರ. ಮಲ್ಲಿಗೆ ಗಿಡ. ಎಲಚಿ ಮರ, ಮಾಚಿಪತ್ರೆ, ಗ್ರಂಥಿಪರ್ಣ
ಮಉರ}. ಪು: [ದೇ] ಉತ್ತರಾಣಿ ಗಿಡ
ಮಉರಂದ}.
ಮಉಲ.'ಮಉಡ=ಮುಕುಟ'ಶಬ್ದವನ್ನು ನೋಡುವುದು.
ಮಉಲ. ಪುಂನ: [ಮುಕುಲ] ಕಿಂಚಿತ್ ಅರಳುತ್ತಿರುವ ಮೊಗ್ಗು, ಶರೀರ, ಆತ್ಮ(ಪ್ರಾಪ್ರ)
ಮಉಲ. ಅಕ: [ಮುಕುಲಯ್] ಮುದುಡಿಕೊಳ್ಳು, ಸಂಕುಚಿತಗೊಳ್ಳು(ಗಾ). ವ. ಕೃ: 'ಮಉಲಂತ'
ಮಉಲಣ. ನ: [ಮುಕುಲನ] ಮುದುಡಿಕೊಳ್ಳುವಿಕೆ, ಸಂಕುಚಿತಗೊಳ್ಳುವುದು
ಮಉಲಾಅ. ಅಕ: [ಮುಕುಲಯ್] ಮುದುಡಿಕೊಳ್ಳು, ಸಂಕುಚಿತಗೊಳ್ಳು, ಸಕ: ಮುದುಡಿಸು, ಸಂಕುಚಿತಗೊಳಿಸು. ವ. ಕೃ: 'ಮಉಲಾಅಂತ'
ಮಉಲಾಇಯ. ವಿ: [ಮುಕುಲಿತ] ಮುದುಡಿಕೊಂಡ, ಸಂಕುಚಿತಗೊಂಡ, ಅರ್ಧ ಮೊಗ್ಗಾಗಿರುವ, ಅರ್ಧ ಅರಳಿರುವ
ಮಉಲಾಅ. 'ಮಉಲಾಅ'ಶಬ್ದವನ್ನು ನೋಡುವುದು.
ಮಉಲಾವಅ. ವಿ: [ಮುಕುಲಾಂಶುಕ] ಮುದುಡಿಸುವವನು, ಸಂಕುಚಿತಗೊಳಿಸುವವನು
ಮಉಲಾವಿಅ. 'ಮಉಲಾಇಯ' ಶಬ್ದವನ್ನು ನೋಡುವುದು.

ಮಉಲಿ. ಪುಂಸ್ತ್ರೀ: [ದೇ] ಹೃದಯ ರಸ ಉಕ್ಕೇರುವುದು
ಮಉಲಿ. ಪು: [ಮುಕುಲಿನ್] ಒಂದು ಸರ್ಪ(ಪಣ್ಣ)
ಮಉಲಿ. ಪುಂಸ್ತ್ರೀ: [ಮೌಲಿ] ಕಿರೀಟ, ತಲೆ, ಶಿರ(ಕುಮಾ), ಒಂದುಬಗೆಯ ಪೇಟ. ಪರ್ವತ ಶಿಖರದ ತುದಿ, ಜುಟ್ಟು, ಘುಡಿಗಂಟು, ಒಟ್ಟುಗೂಡಿಸಿದ ತಲೆಗೂದಲು, ಅಶೋಕ ವೃಕ್ಷ, ಸ್ತ್ರೀ: ಭೂಮಿ
ಮಉಲಿಅ. [ಮುಕುಲಿತ] ಮುದುಡಿಕೊಂಡ, ಕುಗ್ಗಿರುವ, ಮೊಗ್ಗಿನಾಕಾರ ಮಾಡಲಾಗಿರುವ, ಅರ್ಧ ಅರಳಿರುವ, ಒಟ್ಟುಗೂಡಿಸಲ್ಪಟ್ಟಿರುವ, ಮೊಗ್ಗಿನಿಂದ ಕೂಡಿರುವ
ಮಉವೀ. 'ಮಉಈ' ಶಬ್ದವನ್ನು ನೋಡುವುದು.
ಮಊರ. ಪುಂಸ್ತ್ರೀ: [ಮಯೂರ] ನವಿಲು. ಸ್ತ್ರೀ:–ರೀ (ವಿಪಾ). –ಮಾಲ. ನ: [–ಮಾಲ] ಒಂದು ನಗರ
ಮಊರಾ. ಸ್ತ್ರೀ: [ಮಯೂರಾ] ಮಹಾಪದ್ಮ ಚಕ್ರವರ್ತಿಯ ತಾಯಿ, ಒಬ್ಬ ರಾಣಿ(ಪಉಮ)
ಮಊಹ. ಪು: [ಮಯೂಖ] ಕಿರಣ, ರಶ್ಮಿ, ಕಾಂತಿ, ತೇಜಸ್ಸು, ಜ್ವಾಲೆ, ಶೋಭೆ, ರಾಕ್ಷಸ ವಂಶದ ಒಬ್ಬ ರಾಜನ ಹೆಸರು, ಲಂಕೆಯ ಒಬ್ಬ ಅರಸು.
ಮಏ. ಸಕ: [ಮದಯ್] ಉನ್ಮತ್ತಗೊಳಿಸು, ಮದವೇರಿಸು, ವ. ಕೃ: 'ಮಏಂತ'
ಮಏಜಾರಿಸ್. ವಿ: [ಮಾದೃಶ] ನನ್ನ ಹಾಗೆ, ನನ್ನಂತೆ
ಮಂ.(ಅಪ). 'ಮ=ಮಾ' ಶಬ್ದವನ್ನು ನೋಡುವುದು. –ಕಾರ. ಪು: [–ಕಾರ] 'ಮಾ' ಅವ್ಯಯ.
ಮಂಕಡ. 'ಮಕ್ಕಡ' ಶಬ್ದವನ್ನು ನೋಡುವುದು (ಆಚಾ)
ಮಂಕಣ. ಪು: [ಮತ್ಕುಣ] ತಿಗಣೆ, ಗಡ್ಡ ಬೆಳೆಯದ ಪುರುಷ,
ಮಂಕಣ. ಪುಂಸ್ತ್ರೀ: [ದೇ. ಮರ್ಕಟ] ಕಪಿ, ಕೋತಿ. ಸ್ತ್ರೀ:–ಣೀ
ಮಂಕಾಇ. ಪು: [ಮಂಕಾತಿ] ಒಬ್ಬ ನಾಶಕಾರಿ ಮಹರ್ಷಿ
ಮಂಕಾರ. ಪು: [ಮಕಾರ] 'ಮ' ಅಕ್ಷರ
ಮಂಕಿಅ. ನ: [ಮಂಕಿತ] ಜಿಗಿದು ಹೋಗುವುದು, ಹಾರಿ ಹೋಗುವುದು.
ಮಂಕುಣ. 'ಮಂಕಣ=ಮತ್ಕುಣ' ಶಬ್ದವನ್ನು ನೋಡುವುದು. –ಹತ್ಥಿ. ಪು: [–ಹಸ್ತಿನ್] ಕೆಸರಿನಲ್ಲಿರುವ ಎರುಬು ಹುಳು.
ಮಂಕುಸ (ದೇ). 'ಮಂಗುಸ' ಶಬ್ದವನ್ನು ನೋಡುವುದು

ಮಂಖ. 'ಮಕ್ಷ= ಮ್ರಕ್ಷ್' ಶಬ್ದವನ್ನು ನೋಡುವುದು. ವ. ಕೃ: 'ಮಂಖಂತ'

ಮಂಖ. ಪು: [ದೇ] ಅಂಡ, ವೃಷಣ, ಬೀಜ

ಮಂಖ. ಪು: [ಮಂಖ] ಚಿತ್ರಪಟವನ್ನು ತೋರಿಸಿ ಜೀವನ ನಿರ್ವಹಣೆ ಮಾಡುವ ಒಂದು ಭಿಕ್ಷುಕ ವರ್ಗ(ಣಾಯಾ). **–ಫಲಯ.** ನ: [–ಫಲಕ] ಚಿತ್ರಪಟದ ಹಲಗೆ, ಜೀವನ ನಿರ್ವಾಹಕ್ಕೆ ಕಾರಣವಾದ ದೇವಾಲಯ.

ಮಂಖಣ. ನ: [ಮ್ರಕ್ಷಣ] ಬೆಣ್ಣೆ, ಅಭ್ಯಂಗ, ಎಣ್ಣೆ ಹಚ್ಚುವುದು, ಮಾಲೀಶು ಮಾಡುವುದು(ಉಪ)

ಮಂಖಲಿ. ಪು: [ಮಂಖಲಿ] ಗೋಶಾಲಕನ ತಂದೆಯಾದ ಚಿತ್ರಪಟದಿಂದ ಜೀವಿಸುವ ಒಬ್ಬ ಭಿಕ್ಷುಕ. **–ಪುತ್ತ.** ಪು: [–ಪುತ್ರ] ಆಜೀವಕ ಮತದ ಪ್ರವರ್ತಕನಾದ ಒಬ್ಬ ಭಿಕ್ಷು. ಇವನು ಮೊದಲಿಗೆ ಮಹಾವೀರನ ಶಿಷ್ಯನಾಗಿದ್ದ(ಠಾ)

ಮಂಗ. ಸಕ: [ಮಂಗ್] ಹೋಗು, ಸಾಧಿಸು, ತಿಳಿ

ಮಂಗ. ಪು: [ಮಂಗ] ಬೆವರು, ಬಿಸಿ, ಕಾವು, ಬಣ್ಣದ ಕೆಲಸದಲ್ಲಿ ಉಪಯೋಗಕ್ಕೆ ಬರುವ ಒಂದು ರಂಜನ ದ್ರವ್ಯ

ಮಂಗಇಯ. 'ಮಗಇಯ' ಶಬ್ದವನ್ನು ನೋಡುವುದು.

ಮಂಗರಿಯಾ. ಸ್ತ್ರೀ: [ದೇ] ವಾದ್ಯ –ವಿಶೇಷ

ಮಂಗಲ. ಪು: [ಮಂಗಲ] ಮಂಗಳ ಗ್ರಹ, ಅಂಗಾರಕ, ನ: ಶುಭ, ಕ್ಷೇಮ, ಮಂಗಳ. ಮದುವೆಯ ಮಂಗಳ ಸೂತ್ರ(ಸ್ವಪ್ನ). ವಿಘ್ನ–ನಾಶನ(ಠಾ). ವಿಘ್ನ ನಿವಾರಣೆಗಾಗಿ ಮಾಡಲಾಗುವ ಇಷ್ಟ ದೈವದ ಪೂಜೆ, ನಮಸ್ಕಾರವೇ ಮೊದಲಾದ ಶುಭ ಕಾರ್ಯಗಳು. ವಿಘ್ನ –ಕ್ಷಯದ ಕಾರಣ, ಪಾಪ –ನಾಶದ ನಿಮಿತ್ತ(ವಿಸೇ). ಶುಭ ಕೋರುವುದು (ಸೂಅ) ಪ್ರಶಂಸೆಯ ಮಾತು. ಇಷ್ಟಾರ್ಥ– ಸಿದ್ಧಿ, ಬಯಸಿದ್ದರ ಪ್ರಾಪ್ತಿ, 'ಆಯಂಬಿಲ' ಎಂಬ ತಪಸ್ಸು, ನಿರಂತರ ಎಂಟು ದಿನಗಳ ಉಪವಾಸ. ವಿ: ಇಷ್ಟಾರ್ಥ –ಸಾಧಕ, ಮಂಗಳಕಾರಕ(ಆವ). **–ಜ್ಝಯ.** ಪು: [–ಧ್ವಜ] ಮಂಗಳದ ಧ್ವಜ. **–ತೂರ.** ನ: [–ತೂರ್ಯ] ಮಂಗಳವಾದ್ಯ. **–ದೀವ.** ಪು: [–ದೀಪ] ದೇವಸ್ಥಾನದಲ್ಲಿ ಆರತಿಯ ನಂತರದಲ್ಲಿ ಬೆಳಗಲಾಗುವ ದೀಪ; ಮಂಗಳ ದೀಪ. **–ಪಾಢಯ.** ಪು: [–ಪಾಠಕ] ಸ್ತುತಿಪಾಠಕ(ಪಾಅ). **–ಪಾಢಿಯಾ.** ಪು: [–ಪಾಠಿಕಾ] ದೇವರ ಎದುರಿನಲ್ಲಿ ಬೆಳಿಗ್ಗೆ ಮತ್ತು ಸಂಜೆ ನುಡಿಸಲಾಗುವ ವೀಣೆ.

ಮಂಗಲ. ವಿ: [ದೇ] ಸದೃಶ, ಸಮಾನ, ಹೋಲುವ (ದೇ). ನ: ಬೆಂಕಿ, ಅಗ್ನಿ, ದಾರವನ್ನು ನೇಯುವ ಸಾಧನ, ಬಂಧನ, ಮಾಲೆ(ವಿಸೇ)

ಮಂಗಲಗ. ಪುನ: [ಮಂಗಲಕ] ಸ್ವಸ್ತಿಕವೇ ಮೊದಲಾದ ಎಂಟು ಮಂಗಳ ಪದಾರ್ಥಗಳು.

ಮಂಗಲಸಜ್ಝ. ನ: [ದೇ] ಬೀಜವನ್ನು ಬಿತ್ತುವುದು ಬಾಕಿ ಉಳಿದಿರುವ ಹೊಲ, ಗದ್ದೆ(ದೇ)

ಮಂಗಲಾ. ಸ್ತ್ರೀ: [ಮಂಗಲಾ] ಸುಮತಿ ತೀರ್ಥಂಕರನ ತಾಯಿಯ ಹೆಸರು(ಸಮ)

ಮಂಗಲಾಲಯಾ. ಸ್ತ್ರೀ: [ಮಂಗಲಾಲಯಾ] ಒಂದು ನಗರಿಯ ಹೆಸರು(ಆಚಾ)

ಮಂಗಲಾವಇ. ಸ್ತ್ರೀ: [ಮಂಗಲಾಪಾತಿನ್] ಸೌಮನಸ ಪರ್ವತದ ಒಂದು ಶಿಖರ

ಮಂಗಲಾವಈ. ಸ್ತ್ರೀ: [ಮಂಗಲಾವತೀ] ಮಹಾವಿದೇಹ ವರ್ಷದ ಒಂದು ವಿಜಯ. ಪ್ರಾಂತ –ವಿಶೇಷ. ದೇವ –ವಿಶೇಷ. ನ: ಒಂದು ದೇವ –ವಿಮಾನ. ಒಂದು ಪರ್ವತದ ಶಿಖರ

ಮಂಗಲಿಅ}. ವಿ: [ಮಾಂಗಲಿಕ] ಮಂಗಳವನ್ನುಂಟು

ಮಂಗಲೀಅ}. ಮಾಡುವ, ಸ್ತುತಿ –ಪಾಠಕ.

ಮಂಗಲ್ಲ. ವಿ: [ಮಂಗಲ್ಯ, ಮಾಂಗಲ್ಯ] ಮಂಗಳವನ್ನುಂಟು ಮಾಡುವ, ಮಂಗಳಕಾರಕ (ಸುಪಾ).

ಮಂಗೀ. ಸ್ತ್ರೀ: [ಮಂಗೀ] ಷಡ್ಜ ಗ್ರಾಮದ ಒಂದು ಸ್ವರಗಳ ಬೆಳವಣಿಗೆ(ಠಾ)

ಮಂಗು. ಪು; [ಮಂಗು] ಆರ್ಯ ಗಂಗು ಎಂಬ ಒಬ್ಬ ಸುಪ್ರಸಿದ್ಧ ಜೈನಾಚಾರ್ಯ(ಣಂದಿ)

ಮಂಗುಲ. ನ: [ದೇ] ಅನಿಷ್ಟ, ಪಾಪ(ದೇ), ಪು: ಕಳ್ಳ, ಚೋರ. ವಿ: ಕುರೂಪಿ(ಪಾಅ). ಸ್ತ್ರೀ: **–ಲೀ**

ಮಂಗುಸ. ಪು: [ದೇ]ಮುಂಗುಸಿ(ದೇ)

ಮಂಚ. ಪು: [ದೇ] ಬಂಧ(ದೇ)

ಮಂಚ. ಪು: [ಮಂಚ] ಉಚ್ಚಾಸನ, ಮಂಚ(ಗಉಡ). ಗಣಿತಶಾಸ್ತ್ರದ ಮೂರನೇ ಯೋಗ; ಇದರಲ್ಲಿ ಚಂದ್ರಾದಿಗ್ರಹಗಳು ಮಂಚಾಕಾರದಲ್ಲಿರುತ್ತವೆ. **–ಮಂಚಾಇಮಂಚ.** ಪು: [ಮಂಚಾತಿಮಂಚ]

ಉಚ್ಚಾಸನದ ಮೇಲೆ ಇರಿಸಲಾಗಿರುವ ಮಂಚ. ಎಲ್ಲಕ್ಕಿಂತ ಮೇಲೆ ಇಟ್ಟಿರುವ ಉಚ್ಚಾಸನ(ಜೈಪ). ಗಣಿತದಲ್ಲಿ ಪ್ರಸಿದ್ಧವಾದ ಒಂದು ಯೋಗ. ಇದರಲ್ಲಿ ಚಂದ್ರ, ಸೂರ್ಯಾದಿ ನಕ್ಷತ್ರಗಳು ಒಂದರ ಮೇಲೊಂದು ಇಡಲಾಗಿರುವ ಉಚ್ಚಾಸನದ ರೀತಿಯಲ್ಲಿ ಇರುತ್ತವೆ.

ಮಂಚೀ. ಸ್ತ್ರೀ: [ಮಂಚಾ] ಮಂಚ.

ಮಂಛುಡು(ಅಪ). ಅ: [ಮಂಕ್ಷು] ಶೀಘ್ರವಾಗಿ, ಕೂಡಲೇ, ಬೇಗನೆ.

ಮಂಜರ. ಪು: [ಮಾರ್ಜಾರ] ಬೆಕ್ಕು(ಹೇ), 'ಮಜ್ಜರ, ಮಜ್ಜಾರ' ಶಬ್ದಗಳನ್ನು ನೋಡುವುದು.

ಮಂಜರಿ. ಸ್ತ್ರೀ: [ಮಂಜರಿ] 'ಮಂಜರೀ' ಶಬ್ದವನ್ನು ನೋಡುವುದು.

ಮಂಜರಿಅ. ವಿ: [ಮಂಜರಿತ] ಮಂಜರಿಯಿಂದ ಕೂಡಿದ, ಗೋಚಲಿನಿಂದ ಕೂಡಿದ.

ಮಂಜರಿಆ.} ಸ್ತ್ರೀ: [ಮಂಜರಿಕಾ, ರೀ] ಹೊಸದಾಗಿ
ಮಂಜರೀ}. ಹೊರಟಿರುವ ಚಿಗುರು, ಚಿಗುರಿನಾಕಾರದ ಬಳ್ಳಿ. **–ಗುಂಡೀ.** ಸ್ತ್ರೀ:[ಗುಂಡೀ] ಒಂದು ಬಗೆಯ ಬಳ್ಳಿ.

ಮಂಜಾರ. 'ಮಂಜರ' ಶಬ್ದವನ್ನು ನೋಡುವುದು.

ಮಂಜಿಆ. ಸ್ತ್ರೀ: [ದೇ] ತುಳಸಿ.

ಮಂಜಿಟ್ಠ. ವಿ: [ಮಾಂಜಿಷ್ಠ] ಮಂಜಿಷ್ಠದ (ಕೆಂಪು ಬಣ್ಣ ಹೊರಡುವ ಒಂದು ಬಳ್ಳಿ) ಬಣ್ಣವುಳ್ಳ, ಕೆಂಪು.

ಮಂಜಿಟ್ಠಾ. ಸ್ತ್ರೀ: [ಮಂಜಿಷ್ಠಾ] ಕೆಂಪು ಬಣ್ಣದ ಒಂದು ಬಳ್ಳಿ, ಮಂಜಿಷ್ಠ(ಕಪ್ಪೂ).

ಮಂಜೀರ. ನ: [ಮಂಜೀರ] ನೂಪುರ, ಕಾಲಂದಿಗೆ, ಒಂದು ಛಂದಸ್ಸು.

ಮಂಜೀರ. ನ: [ದೇ] ಸರಪಳಿ.

ಮಂಜು. ವಿ: [ಮಂಜು] ಸುಂದರ, ಮನೋಹರ (ಪಾಅ), ಕೋಮಲ, ಸುಕುಮಾರ(ಜೈಪ), ಪ್ರಿಯವಾದ, ಇಷ್ಟವಾದ.

ಮಂಜುಆ. ಸ್ತ್ರೀ: [ದೇ] ತುಳಸಿ.

ಮಂಜುಲ. ವಿ: [ಮಂಜುಲ] ಸುಂದರ, ರಮಣೀಯ, ಮಧುರ, ಕೋಮಲ(ಕಪ್ಪ).

ಮಂಜುಸಾ}. ಸ್ತ್ರೀ: [ಮಂಜೂಷಾ] ವಿದೇಹ ವರ್ಷದ
ಮಂಜೂಸಾ}. ಒಂದು ನಗರಿ, ಸಣ್ಣ ಪೆಟ್ಟಿಗೆ(ಸುಪಾ)

ಮಂಠ. ವಿ: [ದೇ] ಶಠ, ದುಷ್ಟ, ದುರಾಚಾರಿ, ಲುಚ್ಚ. ಪು: ಬಂಧ.

ಮಂಡ. ಸಕ: [ಮಂಡ್] ಅಲಂಕರಿಸು, –'ಮಂಡಇ'

ಮಂಡ. ಸಕ: [ದೇ] ಮುಂದೆ ಇಡು, ಮುಂದೆ ಹಿಡಿ. ಪ್ರಾರಂಭಮಾಡು.

ಮಂಡ. ಪುಂನ: [ಮಂಡ] ರಸ, ಅನ್ನದ ಮೇಲಿನ ಗಂಜಿ, ಮೊಸರಿನ ಮೇಲಿನ ಕೆನೆ.

ಮಂಡಅ. 'ಮಂಡವ= ಮಂಡಪ' ಶಬ್ದವನ್ನು ನೋಡುವುದು.

ಮಂಡಅ.}. ಪು: [ಮಂಡಕ] ಗೋಧಿ ಹಿಟ್ಟಿನಿಂದ
ಮಂಡಗ}. ತಯಾರಿಸಿದ ಒಂದು ಬಗೆಯ ಭಕ್ಷ್ಯ, ಮಂಡಿಗೆ.

ಮಂಡಗ. ವಿ: [ಮಂಡಕ] ಸೌಂದರ್ಯವನ್ನು ಹೆಚ್ಚಿಸುವ, ಅಲಂಕಾರ, ಒಡವೆ.

ಮಂಡಣ. ನ: [ಮಂಡನ] ಒಡವೆ, ಭೂಷಣ(ಗಉಡ), ವಿ: ಶೋಭೆಯನ್ನು ಹೆಚ್ಚಿಸುವ, ವಿಭೂಷಕ. ಸ್ತ್ರೀ: **–ಣೀ. –ಧಾಈ.** ಸ್ತ್ರೀ: [–ಧಾತ್ರೀ] ಒಡವೆಯನ್ನು ತೊಡಿಸುವ ದಾಸಿ(ಣಾಯಾ).

ಮಂಡಲ. ಪು: [ದೇ. ಮಂಡಲ] ನಾಯಿ, ಶುನಕ(ಪಾಅ)

ಮಂಡಲ. ನ: [ಮಂಡಲ] ಗುಂಪು, ಸಮೂಹ(ಕುಮಾ). ದೇಶ(ಉಪ), ಗೋಳ, ವೃತ್ತಾಕಾರದ ವಸ್ತು, ದುಂಡಾದ ಆಕಾರದಿಂದ ಸುತ್ತುವರಿಯುವುದು. ಚಂದ್ರ, ಸೂರ್ಯಾದಿಗಳ ನಾಲ್ಕು ಕ್ಷೇತ್ರಗಳು (ಗಉಡ), ಜಗತ್ತು, ಪ್ರಪಂಚ(ಉತ್ತ). ಒಂದು ಬಗೆಯ ಕುಷ್ಠ ರೋಗ. ವೃತ್ತಾಕಾರದ ದದ್ದು. ಬಿಂಬ, ಯೋಧರ ಸ್ಥಳ, ಮಂಡಲಾಕಾರವಾಗಿ ಸುತ್ತುವುದು. ಇಂಗಿತ ಕ್ಷೇತ್ರ(ಠಾ). ಪು: ನರಕಾವಾಸ. **–ವ.** ವಿ: [–ವತ್] ಮಂಡಲದಲ್ಲಿ ಸುತ್ತುವವನು. **–ಮಂಡಲಾಹಿವ.** ಪು: [ಮಂಡಲಾಧಿಪ] ಮಂಡಲಾಧೀಶ. (ಭವಿ). **ಮಂಡಲಾಹಿವಇ.** ಪು: [ಮಂಡಲಾಧಿಪತಿ] ಅದೇ ಅರ್ಥ.

ಮಂಡಲ. ಪುಂನ: [ಮಂಡಲ] ಯೋಧನ ಯುದ್ಧ ಕಾಲದ ಒಂದು ಬಗ್ಗೆಯ ಆಸನ. **–ಪವೇಸ.** ಪು: [–ಪ್ರವೇಶ] ಒಂದು ಪ್ರಾಚೀನ ಜೈನಶಾಸ್ತ್ರ.

ಮಂಡಲಗ್ಗ. ಪುಂನ: [ಮಂಡಲಾಗ್ರ] ಖಡ್ಗ(ಭವಿ)

ಮಂಡಲಯ. ಪು: [ಮಂಡಲಕ] ಹನ್ನೆರಡು ಕರ್ಮ– ಮಾಷಕಗಳ ಒಂದು ಹುಂಚಿಕೆ, ಒಂದು ಅಳತೆ

ಮಂಡಲಿ. ಪು: [ಮಂಡಲಿನ್] ಮಂಡಲಾಕಾರವಾಗಿ ಚಲಿಸುವ ಗಾಳಿ. ಮಾಂಡಲಿಕ ದೊರೆ, ಮಂಡಲದ ಹಾವು; ಒಂದು ಹಾವಿನ ಜಾತಿ(ಪಣ್ಣ). ನ: ಕೌತ್ಸಗೋತ್ರದ ಒಂದು ಶಾಖೆಯಾದ ಗೋತ್ರ –ವಿಶೇಷ. ಪುಂಸ್ತ್ರೀ: ಆ ಗೋತ್ರದಲ್ಲಿ ಹುಟ್ಟಿದ (ತಾ). –ಪುರೀ. ಸ್ತ್ರೀ: [–ಪುರೀ] ಈಗ 'ಮಂಡಲ' ಎಂದು ಹೆಸರಾಗಿರುವ ಗುಜರಾತಿನ ಒಂದು ನಗರ.

ಮಂಡಲಿಅ. ವಿ: [ಮಂಡಲಿತ] ಮಂಡಲಾಕಾರವಾಗಿ ಮಾಡಲಾಗಿರುವ(ಸುಪಾ)

ಮಂಡಲಿಅ. ವಿ: [ಮಂಡಲಿಕ, ಮಾಂಡಲಿಕ] ಮಂಡಲಾಕಾರವುಳ್ಳ, ಪು: ಮಂಡಲದ ಆಕಾರದಲ್ಲಿರುವಪರ್ವತ(ತಾ). ಮಂಡಲಾಧೀಶ, ಒಬ್ಬ ಸಾಮಾನ್ಯ ರಾಜ.

ಮಂಡಲೀ. ಸ್ತ್ರೀ: [ಮಂಡಲೀ] ಪಂಕ್ತಿ, ಶ್ರೇಣಿ, ಸಮೂಹ, ಕುದುರೆಯ ಒಂದು ಬಗೆಯ ನಡಿಗೆ. ವೃತ್ತಾಕಾರದ ಮಂಡಲ –ಸಮೂಹ(ಉವ)

ಮಂಡಲೀಅ. 'ಮಂಡಲಿಅ=ಮಂಡಲಿಕ' ಶಬ್ದವನ್ನು ನೋಡುವುದು.

ಮಂಡವ. ಪು: [ಮಂಡಪ] ವಿಶ್ರಾಂತಿ ಸ್ಥಾನ, ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಸ್ಥಳ(ಜೀವ), ಸ್ನಾನ ಗೃಹ, ಬಚ್ಚಲುಮನೆ(ಔಪ).

ಮಂಡವ. ನ: [ಮಾಂಡವ್ಯ] ಒಂದು ಗೋತ್ರ, ಪುಂಸ್ತ್ರೀ: ಆ ಗೋತ್ರದಲ್ಲಿ ಹುಟ್ಟಿದವ

ಮಂಡವಿಆ. ಸ್ತ್ರೀ: [ಮಂಡಪಿಕಾ] ಸಣ್ಣ ಮಂಟಪ

ಮಂಡವ್ವಾಯಣ. ನ: [ಮಾಂಡವ್ಯಾಯನ] ಗೋತ್ರ –ವಿಶೇಷ.

ಮಂಡಾವಣ. ನ: [ಮಂಡನ] ಸಿಂಗರಿಸುವುದು, ಅಲಂಕರಿಸುವುದು, –ಧಾಈ. ಸ್ತ್ರೀ: [–ಧಾತ್ರೀ] ಅಲಂಕರಿಸುವ ದಾಸಿ.

ಮಂಡಾವಯ. ವಿ: [ಮಂಡಕ] ಸಿಂಗರಿಸುವವನು

ಮಂಡಿ –}. ವಿ: [ಮಂಡಿತ] ಅಲಂಕರಿಸಲ್ಪಟ್ಟ(ಕುಮಾ),

ಮಂಡಿಅ}. ಪು: ಭಗವಾನ್ ಮಹಾವೀರರ ಆರನೇ ಗಣಧರನ ಹೆಸರು. ಒಬ್ಬ ಕಳ್ಳನ ಹೆಸರು. –ಕುಚ್ಛಿ. ಪುಂನ: [–ಕುಕ್ಷಿ] ಒಂದು ದೇವಾಲಯ. –ಪುತ್ತ. ಪು: [–ಪುತ್ರ] ಭಗವಾನ್ ಮಹಾವೀರನ ಆರನೇ ಗಣಧರ.

ಮಂಡಿಅ. ವಿ: [ದೇ] ರಚಿಸಲ್ಪಟ್ಟ, ನಿರ್ಮಿಸಲಾದ, ಹರಡಿಸಲ್ಪಟ್ಟ, ಹಾಸಿಸಲ್ಪಟ್ಟ, ಮುಂದೆ ಇಡಲಾದ, ಆರಂಭಿಸಲ್ಪಟ್ಟ(ಭವಿ)

ಮಂಡಿಲ್ಲ. ಪು: [ದೇ] ಹಿಟ್ಟಿನಿಂದ ಮಾಡಿದ ರೊಟ್ಟಿ, ದೋಸೆ, ಹೋಳಿಗೆ ಮೊದಲಾದವು(ದೇ)

ಮಂಡೀ. ಸ್ತ್ರೀ: [ದೇ] ಮುಚ್ಚಳ, ತಟ್ಟೆ, ಅನ್ನದ ಮೇಲೆ ಬರುವ ರಸ, ಅನ್ನದ ಗಂಜಿ, ಗಂಜಿ(ಆವ). –ಪಾಹುಡಿಯಾ. ಸ್ತ್ರೀ: [–ಪ್ರಾಭೃತಿಕಾ] ಭಿಕ್ಷೆಯಲ್ಲಿನ ಒಂದು ದೋಷ, ಅನ್ನದ ಗಂಜಿಯನ್ನು ಬೇರೆ ಪಾತ್ರೆಯಲ್ಲಿಟ್ಟು ಕೊಡುವ ಭಿಕ್ಷೆಯನ್ನು ಸ್ವೀಕರಿಸುವುದು(ಆವ)

ಮಂಡುಕ}. 'ಮಂಡೂಅ' ಶಬ್ದವನ್ನು ನೋಡುವುದು.

ಮಂಡುಕ್ಕ}.

ಮಂಡುಕ್ಕಲಿಯಾ}. ಸ್ತ್ರೀ: [ಮಂಡೂಕಿಕಾ, –ಕೀ] ಹೆಣ್ಣು

ಮಂಡುಕ್ಕಿಯಾ}. ಕಪ್ಪೆ, ಹೊನ್ನಗೊನೆ ಗಿಡ, ಒಂದು

ಮಂಡುಕ್ಕೀ}. ವನಸ್ಪತಿ

ಮಂಡುಗ}. ಪು: [ಮಂಡೂಕ] ಕಪ್ಪೆ, ತಿಗಡೆ ಮರ.

ಮಂಡೂಅ}. ಒಂದು ಸುರತ ಬಂಧ, ಒಂದು

ಮಂಡೂಕ}. ಛಂದಸ್ಸು, –ಪ್ಪುಅ. ನ: [–ಪ್ಲುತ]

ಮಂಡೂರ}. ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಒಂದು ಯೋಗ; ಆಮೆಯ ಚಲನೆಯನ್ನು ಹೊಂದಿರುವ ಯೋಗ.

ಮಂಡೋವರ. ನ: [ಮಂಡೋವರ] ಒಂದು ನಗರ.

ಮಂತ. ಸಕ: [ಮಂತ್ರಯ್] ರಹಸ್ಯ ಸಮಾಲೋಚನೆ ಮಾಡು, ಕರೆ, ಆಹ್ವಾನಿಸು, 'ಮಂತಇ'. ವ. ಕೃ: 'ಮಂತಂತ'

ಮಂತ. ಪುಂನ: [ಮಂತ್ರ] ರಹಸ್ಯ ಮಾತು, ಗುಟ್ಟಾದ ಮಾತು –ಕತೆ, ವೇದಗಳ ಒಂದು ಭಾಗವಾದ ಮಂತ್ರ, ಜಪ ಮಾಡಲು ಅರ್ಹವಾದ ಓಂಕಾರವೇ ಮೊದಲಾದ ಅಕ್ಷರಗಳು (ಣಾಯಾ). –ಜಂಭಗ. ಪು: [–ಜೃಂಭಕ] ಒಂದು ದೇವಜಾತಿ(ಭಗ). ದೇವಯಾ. ಸ್ತ್ರೀ: [–ದೇವತಾ] ಮಂತ್ರದ ಅಧಿಷ್ಠಾಯಕ ದೇವ. –ನ್ನು. ವಿ: [–ಜ್ಞ] ಮಂತ್ರವನ್ನು ತಿಳಿದವನು(ಸುಪಾ). –ವಾಇ. ವಿ: [–ವಾದಿನ್] ಮಂತ್ರವನ್ನೇ ಶ್ರೇಷ್ಠವೆಂದು ಒಪ್ಪುವ ಮಾಂತ್ರಿಕ. –ಸಿದ್ಧ. ವಿ: [–ಸಿದ್ಧ] ಸಕಲ ಮಂತ್ರಗಳನ್ನೂ ಸ್ವಾಧೀನಪಡಿಸಿಕೊಂಡವನು,

ಬಹುಮಂತ್ರ, ಪ್ರಧಾನ ಮಂತ್ರವನ್ನು ಹೊಂದಿರುವ(ಆವ)
ಮಂತ. ವಿ: [ಮಾಂತ್ರ] ಮಂತ್ರಕ್ಕೆ ಸಂಬಂಧಿಸಿದ, ಮಾಂತ್ರಿಕ
ಮಂತ. 'ಮಾ=ಮಾ' ಶಬ್ದವನ್ನು ನೋಡುವುದು.
ಮಂತಕ್ಕ. ನ: [ದೇ] ಲಜ್ಜೆ, ನಾಚಿಕೆ, ದುಃಖ(ದೇ), ಅಪರಾಧ(ಗಲುಡ)
ಮಂತಣ. ನ: [ಮಂತ್ರಣ] ರಹಸ್ಯ ಮಾತುಕತೆ, ಮಂತ್ರಾಲೋಚನೆ, ಗುಟ್ಟಾದ ಮಾತು, ಪರಾಮರ್ಶೆ, ಸಲಹೆ
ಮಂತರ. 'ವಂತರ' ಶಬ್ದವನ್ನು ನೋಡುವುದು.
ಮಂತಾ. ಅ: [ಮತ್ವಾ] ತಿಳಿದುಕೊಂಡು(ಆಚಾ)
ಮಂತಿ. ಪು: [ಮಂತ್ರಿನ್] ಮಂತ್ರಿ, ಅಮಾತ್ಯ, ಸಚಿವ(ಔಪ). ವಿ: ಮಂತ್ರಗಳನ್ನು ತಿಳಿದವನು.
ಮಂತಿ. ಪು: [ದೇ] ವಿವಾಹದ ಗುಣಾಕಾರ ಹಾಕುವ ಜ್ಯೋತಿಷಿ, ಜ್ಯೋತಿರ್ವಿದ್ವಾನ್
ಮಂತಿಅ. ವಿ: [ಮಂತ್ರಿತ] ಗುಪ್ತ ರೀತಿಯಲ್ಲಿ ಸಮಾಲೋಚನೆ ಮಾಡಲಾದ.
ಮಂತಿಅ. 'ಮಂತ=ಮಂತ್ರಯ್' ಶಬ್ದವನ್ನು ನೋಡುವುದು.
ಮಂತಿಅ. ವಿ: [ಮಾಂತ್ರಿಕ] ಮಂತ್ರವನ್ನು ತಿಳಿದವನು.
ಮಂತಿಣ. 'ಮಂತಿ=ಮಂತ್ರಿನ್' ಶಬ್ದವನ್ನು ನೋಡುವುದು
ಮಂತು. ವಿ: [ಮಂತೃ] ತಿಳಿಯುವವನು, ಅರಿಯುವವನು. ಪು: ಜೀವ, ಪ್ರಾಣಿ.
ಮಂತು. 'ಮಣ್ಣು' ಶಬ್ದವನ್ನು ನೋಡುವುದು. –ಮ. ವಿ: [–ಮತ್] ಕೋಪದಿಂದ ಕೂಡಿದ, ಸಿಟ್ಟಾದ. ಸ್ತ್ರೀ: –ಮಈ'
ಮಂತು. ಪುಂನ: [–ಮಂತು] ಅಪರಾಧ(ಪಾಅ)
ಮಂತುಆ. ಸ್ತ್ರೀ: [ದೇ] ನಾಚಿಕೆ, ಲಜ್ಜೆ(ದೇ)
ಮಂಥ. ಸಕ: [ಮಂಥ್] ಕಡೆ, ಕಲಕು, ಮಥನ ಮಾಡು, ಹಿಂಸಿಸು, ಹೊಡೆ. ಅಕ: ದುಃಖ ಹೊಂದು, ದುಃಖಿತನಾಗು.'ಮಂಥಇ'
ಮಂಥ. ಪು: [ಮಂಥ] ಕಡೆಗೋಲು, ಮಂಥಾನ(ವಿಸೇ). ಕೇವಲಿ–ಸಮುದ್ಘಾತ ಸ ಕಾಲದಲ್ಲಿ ಕಡೆಗೋಲಾಕಾರ ಮಾಡಲಾಗುವ ಜೀವ –ಪ್ರದೇಶ –ಸಮೂಹ(ಠಾ)
ಮಂಥ(ಅಪ). 'ಮತ್ಥ=ಮಸ್ತ' ಶಬ್ದವನ್ನು ನೋಡುವುದು.

ಮಂಥಣ. ನ: [ಮಂಥನ] ಕಡೆಯುವುದು, ಕಡೆಯುವ ಕ್ರಿಯೆ, ಮಥಿಸುವ ಕ್ರಿಯೆ(ಗಾ), ಘರ್ಷಣೆ. ಪುಂನ: ಕಡೆಗೋಲು
ಮಂಥಣಿಆ. ಸ್ತ್ರೀ: [ಮಂಥನಿಕಾ] ಮೊಸರು ಕಡೆಯುವ ಸಣ್ಣ ಕಡೆಗೋಲು, ಮೊಸರನ್ನು ಕಡೆಯುವ ದೊಡ್ಡ ಪಾತ್ರೆ
ಮಂಥಣೀ. ಸ್ತ್ರೀ: [ಮಂಥನೀ] ಮೇಲಿನ ಶಬ್ದವನ್ನು ನೋಡುವುದು.
ಮಂಥರ. ವಿ: [ಮಂಥರ] ಮಂದ ಗಮನ, ಮೆಲ್ಲಗೆ ನಡೆಯುವ, ತಡವಾಗಿ ಆಗುವ, ಪು: ಕಡೆಗೋಲು
ಮಂಥರ. ವಿ: [ದೇ. ಮಂಥರ] ಕುಟಿಲ, ವಕ್ರ, ಕೊಂಕಾದ, ಡೊಂಕಾದ, ಸ್ತ್ರೀನ: ಕುಸುಬೆ ಗಿಡ, ಸ್ತ್ರೀ: –ರಾ.
ಮಂಥರ. ವಿ: [ದೇ] ಬಹಳ, ಹೇರಳ, ಅಧಿಕ(ಭವಿ).
ಮಂಥರಿಯ. ವಿ: [ಮಂಥರಿತ] ವಕ್ರಗೊಳಿಸಲ್ಪಟ್ಟ, ಡೊಂಕಾಗಿ ಮಾಡಲಾದ(ಗಲುಡ)
ಮಂಥಾಣ. ಪು: [ಮಂಥಾನ] ಕಡೆಗೋಲು, ಒಂದು ಛಂದಸ್ಸು
ಮಂಥಿಅ. ವಿ: [ಮಥಿತ] ಕಡೆಯಲ್ಪಟ್ಟ(ದೇ)
ಮಂಥು. ಪುಂನ: [ದೇ] ಹತ್ತಿಯ ಕಾಯಿಯ ಪುಡಿ (ಪಣ್ಣ). ಪುಡಿ, ಮಜ್ಜಿಗೆ ಮತ್ತು ಬೆಣ್ಣೆಗಳ ನಡುವಂತರದಸ್ಥಿತಿಯ ಪದಾರ್ಥ
ಮಂದ. ಪು: [ಮಂದ] ಶನಿಗ್ರಹ, ಒಂದು ಜಾತಿಯ ಆನೆ. ವಿ: ನಿಧಾನ, ಮೆಲ್ಲಗೆ, ಮೃದುವಾಗಿ, ಅಲ್ಪ, ಚಿಕ್ಕದಾದ, ಮೂರ್ಖ, ಜಡ, ಅಜ್ಞಾನಿ(ಸೂಅ) ನೀಚ, ಖಳ. ರೋಗಿ(ಉತ್ತ). –ಉಣ್ಣಿಯಾ. ಸ್ತ್ರೀ: [–ಪುಣ್ಯಿಕಾ] ದೇವೀ –ವಿಶೇಷ. –ಭಗ್ಗ. ವಿ: [–ಭಾಗ್ಯ] ಕಡಿಮೆ ಅದೃಷ್ಟಶಾಲಿ(ಸುಪಾ). –ಭಾಅ. ವಿ: [–ಭಾಗ, –ಭಾಗ್ಯ]ಅದೇ ಅರ್ಥ(ಸ್ವಪ್ನ). –ಭಾಇ. ವಿ: [–ಭಾಗಿನ್] ಅದೇ ಅರ್ಥ. –ಭಾಗ. '–ಭಾಅ' ಶಬ್ದವನ್ನು ನೋಡುವುದು.
ಮಂದ. ನ: [ಮಾಂದ್ಯ] ರೋಗ(ಸುಪಾ). ಮೂರ್ಖತನ
ಮಂದಕ್ಕ. ನ: [ಮಂದಾಕ್ಷ] ನಾಚಿಕೆ, ಲಜ್ಜೆ
ಮಂದಗ.} ನ: [ಮಂದಕ] ಒಂದು ಬಗೆಯ ಗಾನ
ಮಂದಯ} (ಠಾ)
ಮಂದರ. ಪು: [ಮಂದರ] ಮೇರು ಪರ್ವತ, ಭಗವಾನ್ ವಿಮಲನಾಥನ ಪ್ರಥಮ ಗಣಧರ(ಸಮು). ವಾನರ ದ್ವೀಪದ ಒಬ್ಬ ರಾಜ; ಮರುಯ ಕುಮಾರನ

ಮಗ(ಪಲುಮ). ಛಂದಸ್ಸಿನ ಒಂದು ಪ್ರಭೇದ. ಮಂದರ ಪರ್ವತದ ಅಧಿಷ್ಠಾತೃ ದೇವ. –ಪುರ. ನ: [–ಪುರ] ಒಂದು ನಗರ.
ಮಂದಾ. ಸ್ತ್ರೀ: [ಮಂದಾ] ಮೆಲ್ಲಗೆ ನಡೆಯುವ ಮಹಿಳೆ. ಮನುಷ್ಯನ ಹತ್ತು ಅವಸ್ಥೆಗಳಲ್ಲಿ ಮೂರನೇ ಅವಸ್ಥೆ.
ಮಂದಾಇಣೀ. ಸ್ತ್ರೀ: [ಮಂದಾಕಿನೀ] ಗಂಗಾನದಿ, ಭಾಗೀರಥಿ. ಶ್ರೀರಾಮನ ಮಗ ಲವನ ಹೆಂಡತಿಯ ಹೆಸರು(ಪಲುಮ)
ಮಂದಾಯ. ಕ್ರಿವಿ: [ಮಂದ] ಮೆಲ್ಲಗೆ, ನಿಧಾನವಾಗಿ
ಮಂದಾಯ. ನ: [ಮಂದಾಯ] ಒಂದು ಹಾಡು
ಮಂದಾರ. ಪು: [ಮಂದಾರ] ಕಲ್ಪ–ವೃಕ್ಷ(ಸುಪಾ), ಪಾರಿಜಾತದ ಮರ, ನ: ಮಂದಾರ ವೃಕ್ಷದ ಹೂವು
ಮಂದಿಅ. ವಿ: [ಮಂದಿಕ] ಮಂದತ್ವವುಳ್ಳ, ನಿಧಾನ ನಡಿಗೆಯ
ಮಂದಿರ. ನ: [ಮಂದಿರ] ಮನೆ, ಗೃಹ(ಗಲುಡ). ಒಂದು ನಗರ
ಮಂದಿರ. ವಿ: [ಮಾಂದಿರ] ಮಂದಿರ ನಗರದ
ಮಂದೀರ. ನ: [ದೇ] ಸರಪಳಿ, ಶೃಂಖಲೆ, ಕಡೆಗೋಲು
ಮಂದುಯ. ಪು: [ದೇ. ಮಂದುಕ] ಒಂದು ಜಲಚರ ಪ್ರಾಣಿ
ಮಂದುರಾ. ಸ್ತ್ರೀ: [ಮಂದುರಾ] ಅಶ್ವಶಾಲೆ, ಕುದುರೆ ಲಾಯ(ಸುಪಾ)
ಮಂದೋದರೀ}. ಸ್ತ್ರೀ: [ಮಂದೋದರೀ] ರಾವಣನ
ಮಂದೋಯರೀ} ಹೆಂಡತಿ, ಒಬ್ಬ ವ್ಯಾಪಾರಿಯ ಹೆಂಡತಿ(ಉಪ)
ಮಂದೋಶಣ.(ಮಾ). ವಿ: [ಮಂದೋಷ್ಣ] ಸ್ವಲ್ಪ ಬಿಸಿ,
ಮಂಧಾಉ. ಪು: [ಮಾಂಧಾತೃ] ಹರಿವಂಶದ ಒಬ್ಬರಾಜ
ಮಂಧಾದಣ. ಪು: [ಮಂದಾದನ] ಟಗರು, ಗಂಡುಕುರಿ
ಮಂಧಾಯ. ಪು; [ದೇ] ಶ್ರೀಮಂತ, ಐಶ್ವರ್ಯವಂತ
ಮಂಭೀಸ. (ಅಪ). ಸಕ: [ಮಾ+ಭೀ] ಹೆದರಬೇಡ, ಹೆದರದಿರು
ಮಂಸ. ಪುಂನ: [ಮಾಂಸ] ಮಾಂಸ, –ಇತ್ತ. ವಿ: [–ವತ್] ಮಾಂಸ ಲೋಲುಪ. –ಖಲ. ನ: [–ಖಲ] ಮಾಂಸವನ್ನು ಒಣಗಿಸುವ ಜಾಗ(ಆಚಾ). –ಚಕ್ಖು. ಪುಂನ: [–ಚಕ್ಷು] ಮಾಂಸಮಯವಾದ ಕಣ್ಣು, ಮಾಂಸದ ಕಣ್ಣುಳ್ಳ, ಜ್ಞಾನದ ಕಣ್ಣಿರದ.
ಮಂಸಾಸಣ. ವಿ:[ಮಾಂಸಾಶನ] ಮಾಂಸ ಭಕ್ಷಕ(ಕುಮಾ). ಮಂಸಾಸಿ, ಮಂಸಾಸಿಣ. ವಿ: [ಮಾಂಸಾಶಿನ್] ಅದೇ ಅರ್ಥ(ಪಲುಮ).
ಮಂಸ. ನ: [ಮಾಂಸ] ಫಲದ ಗರ್ಭ, ಫಲದ ಒಳಭಾಗ
ಮಂಸಲ. ವಿ: [ಮಾಂಸಲ] ಪುಷ್ಟವಾದ, ದಪ್ಪನಾದ, ಬಲಶಾಲಿ, ಮಾಂಸಪುಷ್ಟಿಯುಳ್ಳ(ಪಾಅ)
ಮಂಸೀ. ಸ್ತ್ರೀ: [ಮಾಂಸೀ] ಜಟಾಮಾಂಸ್ತಿ, ಸುಗಂಧಮಸ್ತೆ (=ಗಿಡಮೂಲಿಕೆ)(ಪಣ್ಣ)
ಮಂಸು. ಪುಂನ: [ಶ್ಮಶ್ರು] ಗಡ್ಡ–ಮೀಸೆ(ಔಪ)
ಮಂಸು. 'ಮಂಸ' ಶಬ್ದವನ್ನು ನೋಡುವುದು.
ಮಂಸುಡಗ. ನ: [ದೇ. ಮಾಂಸೋಂದುಕ] ಮಾಂಸಖಂಡ
ಮಂಸುಲ್ಲ. ವಿ: [ಮಾಂಸವತ್] ಮಾಂಸವುಳ್ಳ(ಹೇ)
ಮಕ್ಕಂಡೇಅ. ಪು: [ಮಾರ್ಕಂಡೇಯ] ಋಷಿ–ವಿಶೇಷ
ಮಕ್ಕಡ. ಪು: [ಮರ್ಕಟ] ಕಪಿ(ಗಾ), ಜೇಡ(ಆಚಾ), ಛಂದಸ್ಸಿನ ಒಂದು ಪ್ರಭೇದ. –ಬಂಧ. ಪು: [–ಬಂಧ] ನಾರಾಚ–ಬಂಧ ಎಂಬ ಒಂದು ಬಂಧ(ಕಮ್ಮ). ಮಕ್ಕಡಾಸಂತಾಣ. ಪು: [–ಸಂತಾನ] ಜೇಡರ ಬಲೆ.
ಮಕ್ಕಡಬಂಧ. ನ: [ದೇ] ಸರಪಳಿ ಆಕೃತಿಯ ಕಂಠಾಭರಣ(ದೇ)
ಮಕ್ಕಡೀ. ಸ್ತ್ರೀ: [ಮರ್ಕಟೀ] ಹೆಣ್ಣು ಕೋತಿ(ಕುಪ್ರ)
ಮಕ್ಕಲ(ಅಪ). 'ಮಕ್ಕಡ' ಶಬ್ದವನ್ನು ನೋಡುವುದು.
ಮಕ್ಕಾರ. ಪು: [ಮಾಕಾರ] 'ಮ' ವರ್ಣ, 'ಮಾ'(=ಬೇಡ, ನಿಷೇಧಾರ್ಥ) ಎಂಬ ಪ್ರಯೋಗವುಳ್ಳ ಒಂದು ಪ್ರಾಚೀನ ದಂಡನೀತಿ(ಠಾ).
ಮಕ್ಕುಣ. 'ಮಂಕುಣ' ಶಬ್ದವನ್ನು ನೋಡುವುದು.
ಮಕ್ಕೋಡ. ಪು: [ದೇ] ಯಂತ್ರವನ್ನು ಜೋಡಿಸುವ ಅಥವಾ ರಚಿಸುವ ಸಲುವಾಗಿ ಮಾಡಲಾಗುವ ರಾಶಿ. ಪುಂಸ್ತ್ರೀ: ಇರುವೆಗಳು(ನಿಚೂ), ಸ್ತ್ರೀ:–ಡಾ
ಮಕ್ಖ. ಸಕ: [ಮ್ರಕ್ಷ್] ಬಳಿ, ಲೇಪಿಸು, ಎಣ್ಣೆ, ತುಪ್ಪ ಇತ್ಯಾದಿಗಳನ್ನು ಲೇಪಿಸಿ ಉಜ್ಜು.
ಮಕ್ಖಣ. ನ: [ಮ್ರಕ್ಷಣ] ಬೆಣ್ಣೆ, ಎಣ್ಣೆಯನ್ನು ಮೈಗೆ ಲೇಪಿಸು(ನಿಚೂ)
ಮಕ್ಖರ. ಪು: [ಮಸ್ಕರ] ಚಲನೆ, ಜ್ಞಾನ, ಬಿದಿರು, ಒಳಗೆ ಪೊಟರೆಯಾಗಿರುವ ಬಿದಿರು.
ಮಕ್ಖಿಅ. ವಿ: [ಮ್ರಕ್ಷಿತ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ
ಮಕ್ಖಿಅ. ನ: [ಮಾಕ್ಷಿಕ] ಜೇನ್ನೊಣಗಳಿಂದ ಸಂಚಯಿಸಲ್ಪಟ್ಟ ಜೇನುತುಪ್ಪ.

ಮಕ್ಖಿಆ. ಸ್ತ್ರೀ: [ಮಕ್ಷಿಕಾ] ನೊಣ(ದೇ)

ಮಗಳಿಅ. ವಿ: [ದೇ] ಕೈಯಲ್ಲಿ ಕಟ್ಟಲಾಗಿರುವ(ವಿಪಾ)

ಮಗಣ. ಪು: [ಮಗಣ] ಛಂದಶ್ಶಾಸ್ತ್ರದಲ್ಲಿ ಪ್ರಸಿದ್ಧವಾದ ಮೂರು ಗುರ್ವಕ್ಷರಗಳ ('ಮಗಣ') ಸಂಜ್ಞೆ.

ಮಗದಂತಿಆ. ಸ್ತ್ರೀ: [ದೇ] ಜಾಜಿಹೂವು, ಮಲ್ಲಿಗೆಹೂವು

ಮಗಧಂತಿಆ. ಸ್ತ್ರೀ: [ದೇ. ಮಗದಂತಿಕಾ] ಮೆಹಂದಿ ಗಿಡ, ಮೆಹಂದಿ ಎಲೆ

ಮಗರ. ಪು: [ಮಕರ] ಮೊಸಳೆ(ಉವ), ರಾಹು. 'ಮಕರ' ರಾಶಿ, 'ಮಯರ' ಶಬ್ದವನ್ನು ನೋಡುವುದು.

ಮಗರಿಯಾ. ಸ್ತ್ರೀ: [ಮಕರಿಕಾ] ಒಂದು ವಾದ್ಯ

ಮಗಸಿರ. ಸ್ತ್ರೀನ: [ಮೃಗಶಿರಸ್] ನಕ್ಷತ್ರ–ವಿಶೇಷ. ಸ್ತ್ರೀ: –ರಾ.

ಮಗಹ. 'ಮಾಗಹ' ಶಬ್ದವನ್ನು ನೋಡುವುದು. –ತಿತ್ಥ. ನ: [–ತೀರ್ಥ] ಒಂದು ತೀರ್ಥ –ವಿಶೇಷ

ಮಗಹ}. ಪುಬ: [ಮಗಧ] ಮಗಧ ದೇಶ, –ವರಚ್ಚ.
ಮಗಹಗ}. [–ವರಾಕ್ಷ] ಆಭರಣ –ವಿಶೇಷ, ಮಗಹಾಪುರ. ನ: [–ಪುರ] ನಗರ –ವಿಶೇಷ. 'ಮಯಹ' ಶಬ್ದವನ್ನು ನೋಡುವುದು.

ಮಗಾ. ಅ: [ದೇ] ಹಿಂದೆ, ಹಿಂದುಗಡೆ(ದೇ)

ಮಗುಂದ. 'ಮಉಂದ=ಮುಕುಂದ' ಶಬ್ದವನ್ನು ನೋಡುವುದು.

ಮಗ್ಗ. ಸಕ: [ಮಾರ್ಗಯ್] ಬೇಡು, ಅನ್ವೇಷಿಸು, ಹುಡುಕು. ಕ್ರಿರೂ: 'ಮಗ್ಗಇ'. ವ.ಕೃ: 'ಮಗ್ಗಂತ'

ಮಗ್ಗ. ಅಕ: [ಮಗ್] ನಡೆ, ಚಲಿಸು.

ಮಗ್ಗ. ಪು: [ಮಾರ್ಗ] ದಾರಿ, ಹಾದಿ(ಓಘ), ಅನ್ವೇಷಣೆ, ಹುಡುಕುವುದು, –ಓ. ಅ: [–ತಸ್] ದಾರಿಯಿಂದ. –ಣ್ಣು. ವಿ: [–ಜ್ಞ] ಮಾರ್ಗವನ್ನು ತಿಳಿದವನು. –ತ್ಥ. ವಿ: [–ಸ್ಥ] ದಾರಿಯಲ್ಲಿ ಇರುವವನು, ಹದಿನಾರು ವರ್ಷಕ್ಕಿಂತ ಹೆಚ್ಚು ವಯಸ್ಸಿನವನು (ಸೂಅ). –ದಯ. ವಿ: [–ದಯ] ಮಾರ್ಗದರ್ಶಕ. –ವಿಊ. ವಿ: [–ವಿತ್] ಹಾದಿಯನ್ನು ಅರಿತವನು (ಓಘ). –ಹ. ವಿ: [–ಘ್] ಹಾದಿಯನ್ನು ನಾಶಮಾಡುವವನು, ಮಾರ್ಗನಾಶಕ. ಮಗ್ಗಾಣುಸಾರಿ. [ಮಾರ್ಗಾನುಸಾರಿನ್] ಮಾರ್ಗವನ್ನು ಅನುಸರಿಸುವವನು(ಧರ್ಮ).

ಮಗ್ಗ. ಪು: [ಮಾರ್ಗ] ಆಕಾಶ, ಆವಶ್ಯಕ ಕರ್ಮ, ಸಾಮಯಿಕವೇ ಮೊದಲಾದ ಆರು ಕರ್ಮಗಳು

ಮಗ್ಗ}. ಪು: [ದೇ] ಹಿಂದೆ, ಹಿಂದುಗಡೆ,
ಮಗ್ಗಅ}. ಹಿಂಭಾಗದಿಂದ(ದೇ) ಅನಂತರ

ಮಗ್ಗಅ. ವಿ: [ಮಾರ್ಗಕ] ಬೇಡುವವನು(ಪಉಮ)

ಮಗ್ಗಣ. ಪು: [ಮಾರ್ಗಣ] ಯಾಚಕ, ಬೇಡುವವನು (ಸುಪಾ), ಬಾಣ, ಶರ, ಅನ್ವೇಷಣೆ, ಹುಡುಕುವುದು. (ವಿಸೇ)ವಿಚಾರಣೆ, ಪರ್ಯಾಲೋಚನೆ

ಮಗ್ಗಣಯಾ. ಸ್ತ್ರೀ: [ಮಾರ್ಗಣಾ] ಊಹಾಪೋಹ

ಮಗ್ಗಣ–.} ಸ್ತ್ರೀ: [ಮಾರ್ಗಣಾ] ಅನ್ವೇಷಣೆ,
ಮಗ್ಗಣಯಾ}. ಹುಡುಕಾಟ (ಉಪ), ಅನ್ವಯಧರ್ಮದ
ಮಗ್ಗಣಾ} ಪರ್ಯಾಲೋಚನೆಯ ಮೂಲಕ ಅನ್ವೇಷಣೆ, ವಿಚಾರಣೆ, ಪರ್ಯಾಲೋಚನೆ (ಕಮ್ಮ)

ಮಗ್ಗಣ್ಣಿರ. ವಿ: [ದೇ] ಹಿಂಬಾಲಿಸಿ ಹೋಗುವ ಅಭ್ಯಾಸವುಳ್ಳವನು(ದೇ)

ಮಗ್ಗಸಿರ. ಪು: [ಮಾರ್ಗಶಿರ] ಮಾರ್ಗಶಿರಮಾಸ, ಅಗ್ರಹಾಯಣ ಮಾಸ

ಮಗ್ಗಸಿರೀ. ಸ್ತ್ರೀ: [ಮಾರ್ಗಶಿರೀ] ಮಾರ್ಗಶಿರ ಮಾಸದ ಹುಣ್ಣಿಮೆ, ಮಾರ್ಗಶಿರಮಾಸದ ಅಮಾವಾಸ್ಯೆ

ಮಗ್ಗಿಅ. ವಿ: [ಮಾರ್ಗಿತ] ಅನ್ವೇಷಣೆ ಮಾಡಲಾದ, ಹುಡುಕಲ್ಪಟ್ಟ, ಬೇಡಲ್ಪಟ್ಟ, ಯಾಚಿತ

ಮಗ್ಗಿರ. ವಿ: [ಮಾರ್ಗಯಿತೃ] ಹುಡುಕುವವನು

ಮಗ್ಗಿಲ್ಲ. ವಿ: [ದೇ] ಹಿಂಭಾಗದಲ್ಲಿರುವ, ಹಿಂದಿನ(ವಿಸೇ)

ಮಗ್ಗು. ಪು: [ಮದ್ಗು] ನೀರು–ಕಾಗೆ, ನೀರಿನಲ್ಲಿ ಮುಳುಗಿ ಮೀನು ಹಿಡಿದು ತಿನ್ನುವ ಹಕ್ಕಿ(ಸೂಅ)

ಮಘ. ಪು: [ಮಘ] ಮೇಘ, ಮೋಡ(ಭಗ)

ಮಘಮಘ. ಅಕ: [ಪ್ರ+ಸೃ] ಹರಡುವುದು, ವಾಸನೆಯನ್ನು ಪ್ರಸರಿಸುವುದು, ವ. ಕೃ: 'ಮಘಮಘಂತ'

ಮಘವ. ಪು: [ಮಘವನ್] ಇಂದ್ರ, ದೇವರಾಜ. ಮೂರನೇ ಚಕ್ರವರ್ತಿ ರಾಜ,

ಮಘವಾ. ಸ್ತ್ರೀ: [ಮಘವಾ] ಆರನೇ ನರಕಭೂಮಿ

ಮಘಾ. ಸ್ತ್ರೀ: [ಮಘಾ] ಮೇಲಿನ ಶಬ್ದವನ್ನು ನೋಡುವುದು. 'ಮಹಾ=ಮಘಾ' ಶಬ್ದವನ್ನು ನೋಡುವುದು.

ಮಘೋಣ. ಪು: [ದೇ. ಮಘವನ್] 'ಮಘವ' ಶಬ್ದವನ್ನು ನೋಡುವುದು.

ಮಚ್ಚ. ಅಕ: [ಮದ್] ಅಹಂಕಾರ ಪಡು, ಗರ್ವಿಸು. –'ಮಚ್ಚಇ'

ಮಚ್ಚ(ಅಪ). 'ಮಂಚ' ಶಬ್ದವನ್ನು ನೋಡುವುದು.
ಮಚ್ಚ. ನ: [ದೇ] ಕೊಳೆ, ಮಲ
ಮಚ್ಚ}. ಪು: [ಮರ್ತ್ಯ] ಮನುಷ್ಯ, ಮಾನವ
ಮಚ್ಚಅ}. ಜಾತಿಯವನು, ಮಾನುಷ. –ಲೋಅ. ಪು: [–ಲೋಕ] ಮನುಷ್ಯ –ಲೋಕ, –ಲೋಇಯ. ವಿ: [–ಲೋಕೀಯ] ಮನುಷ್ಯ ಲೋಕದೊಂದಿಗೆ ಸಂಬಂಧ ಇಟ್ಟುಕೊಂಡಿರುವ (ಸುಪಾ).
ಮಚ್ಚಿಅ. ವಿ: [ದೇ] ಮಲದಿಂದ ಕೂಡಿದ, ಮಲಯುಕ್ತ
ಮಚ್ಚಿರ. ವಿ: [ಮದಿತೃ] ಗರ್ವಿಸುವವನು, ಅಹಂಕಾರ ಪಡುವವನು(ಕುಮಾ)
ಮಚ್ಚು. ಪು: [ಮೃತ್ಯು] ಮರಣ, ಸಾವು(ಆಚಾ), ಯಮ, ರಾವಣನ ಒಬ್ಬ ಸೈನಿಕ(ಪಉಮ)
ಮಚ್ಛ. ಪು: [ಮತ್ಸ್ಯ] ಮೀನು(ಣಾಯಾ), ರಾಹು, ಒಂದು ದೇಶ –ವಿಶೇಷ, ಛಂದಸ್ಸಿನ ಒಂದು ಪ್ರಭೇದ, –ಖಲ. ನ: [–ಖಲ] ಮೀನುಗಳನ್ನು ಒಣಗಿಸುವ ಸ್ಥಳ(ಆಚಾ). –ಬಂಧ. ಪು: [–ಬಂಧ] ಬೆಸ್ತರವನು, ಮೀಂಗುಲಿಗ(ಪಣ್ಣ)
ಮಚ್ಛ. ಪುಂನ: [ಮತ್ಸ್ಯ] ಮೀನಿನ ಆಕೃತಿಯ ಒಂದು ವನಸ್ಪತಿ
ಮಚ್ಛಂಡಿಆ. ಸ್ತ್ರೀ: [ಮತ್ಸ್ಯಂಡಿಕಾ] ಕಾಕಂಬಿ, ಕಚ್ಚಾ ಸಕ್ಕರೆಯ ಪಾಕ, ಖಂಡಸಾರಿ(ಪಣ್ಣ)
ಮಚ್ಛಂಡೀ. ಸ್ತ್ರೀ: [ಮತ್ಸ್ಯಂಡೀ] ಸಕ್ಕರೆ.
ಮಚ್ಛಂತ. 'ಮಂಥ=ಮಂಥ್' ಶಬ್ದವನ್ನು ನೋಡುವುದು.
ಮಚ್ಛಂಧ. 'ಮಚ್ಛ–ಬಂಧ' ಶಬ್ದವನ್ನು ನೋಡುವುದು.
ಮಚ್ಛರ. ಪು: [ಮತ್ಸರ] ಅಸೂಯೆ, ಈರ್ಷ್ಯೆ, ದ್ವೇಷ, ಅಸಹಿಷ್ಣುತೆ(ಉವ), ಕೋಪ, ಸಿಟ್ಟು. ವಿ: ಅಸೂಯಾಪರ, ದ್ವೇಷಿ, ಕೋಪಿಷ್ಟ, ಕೃಪಣ,
ಮಚ್ಛರ. ನ: [ಮಾತ್ಸರ್ಯ] ಅಸೂಯೆ, ಹೊಟ್ಟೆಹಿಚ್ಚು, ದ್ವೇಷ(ಸೇ)
ಮಚ್ಛರಿ. ವಿ: [ಮತ್ಸರಿನ್] ಅಸೂಯೆಪಡುವವನು, ಹೊಟ್ಟೆಕಿಚ್ಚುಪಡುವವನು(ಉವಾ). ಸ್ತ್ರೀ:–ಣೀ
ಮಚ್ಛರಿಅ. ವಿ: [ಮತ್ಸರಿತ, ಮತ್ಸರಿಕ] ಮೇಲಿನ ಶಬ್ದವನ್ನು ನೋಡುವುದು(ಪಉಮ)
ಮಚ್ಛಲ. 'ಮಚ್ಛರ=ಮತ್ಸರ' ಶಬ್ದವನ್ನು ನೋಡುವುದು.
ಮಚ್ಛಿಅ. 'ಮಕ್ಖಿಅ=ಮಾಕ್ಷಿಕ' ಶಬ್ದವನ್ನು ನೋಡುವುದು.
ಮಚ್ಛಿಅ. ವಿ: [ಮಾತ್ಸ್ಯಿಕ] ಬೆಸ್ತರವನು, ಮೀಂಗುಲಿಗ
ಮಚ್ಛಿಕಾ(ಮಾ). 'ಮಾಉ=ಮಾತೃ' ಶಬ್ದವನ್ನು ನೋಡುವುದು.
ಮಚ್ಛಿಗಾ. 'ಮಚ್ಛಿಯಾ' ಶಬ್ದವನ್ನು ನೋಡುವುದು.
ಮಚ್ಛಿಯಾ}. ಸ್ತ್ರೀ: [ಮಕ್ಷಿಕಾ] ನೊಣ(ಉತ್ತ)
ಮಚ್ಛೀ}.
ಮಜ್ಜ. ಸಕ: [ಮದ್] ಅಭಿಮಾನಪಡು, ಗರ್ವಪಡು. 'ಮಜ್ಜಇ'
ಮಜ್ಜ. ಅಕ: [ಮಸ್ಜ್] ಸ್ನಾನಮಾಡು, ಮುಳುಗು. ವ. ಕೃ: 'ಮಜ್ಜಮಾಣ'
ಮಜ್ಜ. ಸಕ:[ಮೃಜ್]ಸ್ವಚ್ಛಗೊಳಿಸು, ತೊಳೆ, ಶುದ್ಧಮಾಡು
ಮಜ್ಜ. ನ: [ಮದ್ಯ] ಹೆಂಡ, ಮದಿರೆ(ಔಪ). –ಇತ್ತ. ವಿ: [–ವತ್] ಮದ್ಯ –ಲೋಲುಪ. –ವ. ವಿ: [–ಪ] ಮದ್ಯಪಾನ ಮಾಡುವವನು(ಪಾಅ). ಮಜ್ಜಾವೀಅ. ವಿ: [–ಪೀತ] ಮದ್ಯಪಾನ ಮಾಡಿದವನು.
ಮಜ್ಜಗ. ವಿ: [ಮಾದ್ಯಕ] ಮದ್ಯಕ್ಕೆ ಸಂಬಂಧಿಸಿದ
ಮಜ್ಜಣ. ನ: [ಮಜ್ಜನ] ಸ್ನಾನ, ಮುಳುಗುವುದು, –ಘರ. ನ: [–ಗೃಹ] ಸ್ನಾನ –ಗೃಹ. ಬಚ್ಚಲುಮನೆ. –ಧಾಈ. ಸ್ತ್ರೀ: [–ಧಾತ್ರೀ] ಸ್ನಾನ ಮಾಡಿಸುವ ದಾಸಿ, ಆಳು(ಣಾಯಾ). –ಪಾಲೀ. ಸ್ತ್ರೀ: [–ಪಾಲೀ] ಅದೇ ಅರ್ಥ
ಮಜ್ಜಣ. ನ: [ಮಾರ್ಜನ] ಸ್ವಚ್ಛಗೊಳಿಸು, ತೊಳೆ. ವಿ: ಸ್ವಚ್ಛಗೊಳಿಸುವವನು(ಕುಮಾ). –ಘರ. ನ: [–ಗೃಹ] ಸ್ವಚ್ಛಗೊಳಿಸುವ ಮನೆ, ಶುದ್ಧಿಗೃಹ
ಮಜ್ಜರ. 'ಮಂಜರ' ಶಬ್ದವನ್ನು ನೋಡುವುದು. ಸ್ತ್ರೀ: '–ರೀ'
ಮಜ್ಜಾವಿಅ. ವಿ: [ಮಜ್ಜಿತ] ಸ್ನಾನಮಾಡಿಸಲ್ಪಟ್ಟ
ಮಜ್ಜಾ. ಸ್ತ್ರೀ: [ದೇ. ಮರ್ಯಾ] ಪ್ರತಿಷ್ಠೆ, ನ್ಯಾಯಮಾರ್ಗ, ಸೀಮೆ, ಗಡಿ, ಎಲ್ಲೆ
ಮಜ್ಜಾ. ಸ್ತ್ರೀ: [ಮಜ್ಜಾ] ಮಜ್ಜೆ, ಮೂಳೆಯ ಒಳಗಿನ ತಿರುಳು, ಚರ್ಬಿ
ಮಜ್ಜಾಇಲ್ಲ. ವಿ: [ಮರ್ಯಾದಿನ್] ಮರ್ಯಾದೆ ಉಳ್ಳ, ಸೀಮೆ ಉಳ್ಳ
ಮಜ್ಜಾಯಾ. ಸ್ತ್ರೀ: [ಮರ್ಯಾದಾ] ನ್ಯಾಯಮಾರ್ಗದ ಸ್ಥಿತಿ, ವ್ಯವಸ್ಥೆ, ಸೀಮೆ, ಎಲ್ಲೆ, ಗಡಿ, ಅವಧಿ, ದಡ, ತೀರ

ಮಜ್ಜಾರ. ಪು: [ಮಾರ್ಜಾರ] ವಾಯು–ವಿಶೇಷ

ಮಜ್ಜಾರ. ಪುಂಸ್ತ್ರೀ: [ಮಾರ್ಜಾರ] ದೊಡ್ಡ ಬೆಕ್ಕು(ಭವಿ). ಕಾಡುಬೆಕ್ಕು, ವನಸ್ಪತಿ –ವಿಶೇಷ. ಸ್ತ್ರೀ: –ರಿಆ,–

ಮಜ್ಜಾವಿಅ. ವಿ: [ಮಜ್ಜಿತ] ಸ್ನಾನ ಮಾಡಿಸಲ್ಪಟ್ಟ

ಮಜ್ಜಿಅ. ವಿ: [ದೇ] ನೋಡಲ್ಪಟ್ಟ, ಈಕ್ಷಿಸಲ್ಪಟ್ಟ, ಕುಡಿಯಲ್ಪಟ್ಟ(ದೇ)

ಮಜ್ಜಿಅ. ವಿ: [ಮಜ್ಜಿತ] ಸ್ನಾನ ಮಾಡಿದವನು

ಮಜ್ಜಿಅ. ವಿ: [ಮಾರ್ಜಿತ] ಸ್ವಚ್ಛಗೊಳಿಸಲ್ಪಟ್ಟ, (ಪಉಮ)

ಮಜ್ಜಿಆ. ಸ್ತ್ರೀ: [ಮಾರ್ಜಿತಾ] ಬೆಲ್ಲ, ಹಸಿ ಶುಂಠಿ ಮತ್ತು ಜೀರಿಗೆ ಇವುಗಳನ್ನು ಬೆರೆಸಿದ ಹಸಿ ಮೊಸರ – ಒಂದು ಬಗೆಯ ಖಾದ್ಯ.

ಮಜ್ಜಿರ. ವಿ: [ಮಜ್ಜಿತೃ] ಸ್ನಾನ ಮಾಡುವ ರೂಢಿ ಉಳ್ಳವನು(ಗಾ)

ಮಜ್ಜೊಕ್ಕ. ವಿ: [ದೇ] ಹೊಸದಾದ, ನೂತನ(ದೇ)

ಮಜ್ಝ. ನ: [ಮಧ್ಯ] ಮಧ್ಯೆ, ಶರೀರದ ಮಧ್ಯಭಾಗ, ಕೊನೆಯ ಮತ್ತು ಎರಡನೇ ಅರ್ಧದ ಮಧ್ಯದ ಸಂಖ್ಯೆ,ವಿ: ಮಧ್ಯವರ್ತಿ, **–ಏಸ.** ಪು: [–ದೇಶ] ಗಂಗಾ ಯಮುನಾ ನದಿಗಳ ಮಧ್ಯದ ಪ್ರದೇಶ, ಮಧ್ಯಪ್ರಾಂತ(ಗಉಡ). **–ಗಯ.** ವಿ: [–ಗತ] ಮಧ್ಯದಲ್ಲಿರುವ, ಪು: ಅವಧಿ ಜ್ಞಾನದ ಒಂದು ಪ್ರಭೇದ. **–ಗೇವೇಜ್ಜಯ.** ನ: [–ಗ್ರೈವೇಯಕ] ದೇವಲೋಕ –ವಿಶೇಷ. **–ಟ್ಠಿಅ.** ವಿ: [–ಸ್ಥಿತ] ತಟಸ್ಥ, ಮಧ್ಯಸ್ಥ. **–ಣ್ಣ, –ಣ್ಹ.** ಪು: [ಮಧ್ಯಾಹ್ನ] ಹಗಲಿನ ಮಧ್ಯಭಾಗ, ಮಧ್ಯಾಹ್ನ. ನ: ತಪ –ವಿಶೇಷ, ಪೂರ್ವಾರ್ಧ. **–ಣ್ಹತರು.** ಪು: [ಮಧ್ಯಾಹ್ನತರು.] ಮಧ್ಯಾಹ್ನದ ಹೊತ್ತಿನಲ್ಲಿ ಹೆಚ್ಚು ಹೂಬಿಡುವ, ಕೆಂಪು ಬಣ್ಣದ ಹೂವಿನ ಮರ. **–ತ್ಥ.** ವಿ: [–ಸ್ಥ] ತಟಸ್ಥ, ಮಧ್ಯದಲ್ಲಿ ಇರುವ. –ದೇಸ. **'–ಏಸ'** ಶಬ್ದವನ್ನು ನೋಡುವುದು. –ನ್ನ. '–ಣ್ಣ' ವನ್ನು ನೋಡುವುದು. **–ಮ.** ವಿ: [–ಮ] ಮಧ್ಯದ, ನಡುವಿನ(ಭಗ). **–ರತ್ತ.** ಪು: [–ರಾತ್ರ] ಮಧ್ಯರಾತ್ರಿ, ನಡು ರಾತ್ರಿ, **–ರಯಣಿ.** ಸ್ತ್ರೀ: [–ರಜನಿ] ಮಧ್ಯರಾತ್ರಿ. **–ಲೋಗ.** ಪು: [–ಲೋಕ] ಮೇರು ಪರ್ವತ. –ವತ್ತಿ. ವಿ: [–ವರ್ತಿನ್] ಅಂತರ್ಗತ, ಒಳಗಡೆ ಇರುವ. **ಮಜಾವಲಿಅ.** ವಿ: [–ಮಧ್ಯಾವಲಿತ] ಮಧ್ಯದಲ್ಲಿ ತಿರುಗಿಕೊಂಡಿರುವ, ಮನಸ್ಸಿನಲ್ಲಿ ಕುಟಿಲ, ವಕ್ರ.

ಮಜ್ಝಅ. ಪು: [ದೇ] ಕ್ಷೌರಿಕ, ನಾಪಿತ

ಮಜ್ಝಆರ. ನ: [ದೇ] ಮಧ್ಯ, ಅಂತರಾಳ.

ಮಜ್ಝಂತಿಅ. ನ; [ದೇ] ಮಧ್ಯಾಹ್ನ, ಹಗಲಿನ ಮಧ್ಯಭಾಗ.

ಮಜ್ಝಂದಿಣ. ನ: [ಮಧ್ಯಂದಿನ] ಮಧ್ಯಾಹ್ನ(ದೇ)

ಮಜ್ಝಂಮಜ್ಝ. ನ: [ಮಧ್ಯಮಧ್ಯ]ಸರಿಯಾಗಿ ಮಧ್ಯೆ

ಮಜ್ಝಗಾರ. 'ಮಜ್ಝಆರ' ಶಬ್ದವನ್ನು ನೋಡುವುದು.

ಮಜ್ಝಣ್ಹಿಯ. ವಿ: [ಮಾಧ್ಯಾಹ್ನಿಕ] ಮಧ್ಯಾಹ್ನಕ್ಕೆ ಸಂಬಂಧಿಸಿದ.

ಮಜ್ಝತ್ಥ. ನ: [ಮಾಧ್ಯಸ್ಥ] ತಟಸ್ಥ, ಮಧ್ಯಸ್ಥ

ಮಜ್ಝಿಮ. ವಿ: [ಮಧ್ಯಮ] ಮಧ್ಯವರ್ತಿ, ಮಧ್ಯದ. ಪು: ಸ್ವರ–ವಿಶೇಷ. **–ರತ್ತ.** ಪು: [–ರಾತ್ರ] ಮಧ್ಯ ರಾತ್ರಿ

ಮಜ್ಝಿಮಗಂಡ. ನ: [ದೇ] ಉದರ, ಹೊಟ್ಟೆ

ಮಜ್ಝಿಮಾ. ಸ್ತ್ರೀ: [ಮಧ್ಯಮಾ] ಮಧ್ಯದ ಬೆರಳು(ಓಘ), ಒಂದು ಜೈನ ಮುನಿ ಶಾಖೆ.

ಮಜ್ಝಿಮಿಲ್ಲ. ವಿ: [ಮಧ್ಯಮ] ಮಧ್ಯವರ್ತಿ, ಮಧ್ಯದ

ಮಜ್ಝಿಮಿಲ್ಲಾ. 'ಮಜ್ಝಿಮಾ' ಶಬ್ದವನ್ನು ನೋಡುವುದು.

ಮಜ್ಝಿಲ್ಲ. ವಿ: [ಮಾಧ್ಯಿಕ, ಮಧ್ಯಮ] ನಡುವಲ, ಮಧ್ಯದ

ಮಟ್ಟ. ವಿ: [ದೇ] ಶಿಖರವಿಲ್ಲದ, ಕೊಂಬಿಲ್ಲದ

ಮಟ್ಟಿಆ}. ಸ್ತ್ರೀ: [ಮೃತ್ತಿಕಾ] ಮಣ್ಣು(ಣಾಯಾ)

ಮಟ್ಟೀ}. ಸ್ತ್ರೀ: [ಮೃತ, ಮೃತ್ತಿಕಾ] ಮೇಲಿನ ಶಬ್ದವನ್ನು ನೋಡುವುದು

ಮಟ್ಟುಹಿಅ. ನ: [ದೇ] ಮದುವೆಯಾದ ಹೆಣ್ಣಿನ ಕೋಪ, ವಿ: ಕೊಳೆ,ಕೆಸರು.ಅಶುಚಿ,ಸ್ವಚ್ಛವಲ್ಲದ (ದೇ)

ಮಟ್ಠ. ವಿ: [ದೇ] ಸೋಮಾರಿ, ಮಂದ, ಜಡ(ದೇ)

ಮಟ್ಠ. ವಿ: [ಮೃಷ್ಟ] ತೊಳೆಯಲ್ಪಟ್ಟ, ಸ್ವಚ್ಛಗೊಳಿಸಲ್ಪಟ್ಟ, ನುಣುಪಾದ, ಸ್ನಿಗ್ಧವಾದ, ಉಜ್ವಲ್ಪಟ್ಟ(ವಪ), ನ: ಮೆಣಸು

ಮಡ. ವಿ: [ದೇ. ಮೃತ] ಮರಣಹೊಂದಿದ, ಸತ್ತುಹೋಗಿರುವ(ದೇ), **ಮಡಾಇ.** ವಿ: [ಮೃತಾದಿನ್] ನಿರ್ಜೀವ ವಸ್ತುವನ್ನು ತಿನ್ನುವವನು (ಭಗ). **ಮಡಾಸಯ.** ಪು: ಮೃತಾಶ್ರಯ] ಶ್ಮಶಾನ

ಮಡ. ಪು: [ದೇ] ಕಂಠ, ಗಂಟಲು

ಮಡಂಬ. ಪುಂನ: [ದೇ. ಮಡಂಬ] ಸುತ್ತಲೂ ಒಂದು ಯೋಜನದ ವರೆಗೆ ಬೇರೆ ಯಾವುದೇ ಹಳ್ಳಿಗಳು ಇರದ ಊರು(ಔಪ)

ಮಡಕ್ಕ. ಪು:[ದೇ] ಗರ್ವ, ಅಭಿಮಾನ, ಮಡಕೆ, ಗಡಿಗೆ

ಮಡಕ್ಕಿಯಾ. ಸ್ತ್ರೀ: [ದೇ] ಸಣ್ಣ ಗಡಿಗೆ(ಕುಪ್ರ)

ಮಡಪ್ಪ}. ಪ: [ದೇ] ಗರ್ವ, ಅಭಿಮಾನ, ಅಹಂಕಾರ
ಮಡಪ್ಫರ}. (ಸುಪಾ)
ಮಡಪ್ಫರ}.

ಮಡಭ. ವಿ: [ಮಡಭ] ಕುಬ್ಜ, ಕುಳ್ಳ, ಗಿಡ್ಡ

ಮಡಮಡ}. ಅಕ: [ಮಡಮಡಾಯ್] ಮಡಮಡ ಎಂದು
ಮಡಮಡಮಡ}. ಸದ್ದು ಮಾಡು, **'ಮಡಮಡ'** ಎಂಬ ಶಬ್ದ ಬರುವಂತೆ ಬಡಿಯುವುದು.

ಮಡಮಡಾಇಅ. ವಿ: [ಮಡಮಡಾಯಿತ] ಮಡಮಡ ಎಂದು ಶಬ್ದ ಬರುವ ಹಾಗೆ ಹೊಡೆಯಲ್ಪಟ್ಟ

ಮಡಯ. ನ: [ಮೃತಕ] ಶವ, ತೀರಿಕೊಂಡ(ಪಾಅ), **–ಗಿಹ.** ನ: [ಗೃಹ] ಸಮಾಧಿ. **–ಚೇಇಅ.** ನ: [–ಚೈತ್ಯ] ಸತ್ತವನ ದಹನ ಸಂಸ್ಕಾರದ ಅಥವಾ ಹೂಳಿದ ನಂತರದಲ್ಲಿ ನಿರ್ಮಿಸಲಾಗುವ ಸ್ಮಾರಕ ಭವನ. **–ಡಾಹ.** ಪು:[–ದಾಹ] ಹೆಣವನ್ನುಸುಡುವ ಚಿತೆ. **–ಥೂಮಿಯಾ.** ಸ್ತ್ರೀ: [–ಸ್ತೂಪಿಕಾ] ಮೃತ ವ್ಯಕ್ತಿಯ ಸ್ಥಳದಲ್ಲಿ ನಿರ್ಮಿಸಲಾಗುವ ಸಣ್ಣ ಸ್ತೂಪ.

ಮಡಯ. ಪು: [ದೇ] ತೋಟ

ಮಡವೊಜ್ಝಾ. ಸ್ತ್ರೀ: [ದೇ] ಶಿಬಿಕೆ, ಪಲ್ಲಕ್ಕಿ(ದೇ)

ಮಡಹ. ವಿ: [ದೇ] ಚಿಕ್ಕದು, ಸಣ್ಣದು(ದೇ), ಸ್ವಲ್ಪ(ಗಾ)

ಮಡಹರ. ಪು: [ದೇ]ಗರ್ವ, ಅಹಂಕಾರ ಅಭಿಮಾನ.

ಮಡಹಿಂಯ. ವಿ: [ದೇ] ಕಡಿಮೆಮಾಡಲ್ಪಟ್ಟ, ನ್ಯೂನಗೊಳಿಸಲ್ಪಟ್ಟ

ಮಡಿಆ. ಸ್ತ್ರೀ: [ದೇ] ಹೊಡೆಯಲ್ಪಟ್ಟ ಮಹಿಳೆ, ಪೆಟ್ಟುತಿಂದ ಮಹಿಳೆ

ಮಡುವಇಅ. ವಿ: [ದೇ]ನಾಶಗೊಳಿಸಲ್ಪಟ್ಟ, ತೀಕ್ಷ್ಣ, ಹರಿತವಾದ

ಮಡ್ಡ. ಸಕ: [ಮೃದ್]ಮರ್ದಿಸು, ಹಿಂಸಿಸು, ನಾಶಪಡಿಸು

ಮಡ್ಡಯ. ಪು: [ದೇ. ಮಡ್ಡಕ] ಒಂದು ವಾದ್ಯ–ವಿಶೇಷ

ಮಡ್ಡಾ. ಸ್ತ್ರೀ: [ದೇ] ಬಲಾತ್ಕಾರ, ಹಠ(ದೇ), ಆಜ್ಞೆ, ಆದೇಶ (ಸುಪಾ)

ಮಡ್ಡಿಅ. ವಿ: [ಮರ್ದಿತ] ಪುಡಿಮಾಡಲ್ಪಟ್ಟ, ನಾಶಪಡಿಸಲ್ಪಟ್ಟ, ಉಜ್ಜಲ್ಪಟ್ಟ(ಷಡ್)

ಮಡ್ಡುಅ. **'ಮದ್ದುಅ'** ಶಬ್ದವನ್ನು ನೋಡುವುದು.

ಮಢ. **'ಮಡ್ಡ'** ಶಬ್ದವನ್ನು ನೋಡುವುದು.

ಮಢ. ಪುಂನ: [ಮಠ] ಸಂನ್ಯಾಸಿಗಳ ವಾಸಸ್ಥಾನ, ವ್ರತಿಗಳ ಆಶ್ರಯ ಸ್ಥಾನ(ಸುಪಾ)

ಮಢಿಅ. **'ಮಡ್ಡಿಅ'** ಶಬ್ದವನ್ನು ನೋಡುವುದು.

ಮಢಿಅ. ವಿ: [ದೇ] ಖಚಿತ, ಸುತ್ತುವರಿಯಲ್ಪಟ್ಟ, ಆವರಿಸಲ್ಪಟ್ಟ

ಮಢೀ. ಸ್ತ್ರೀ: [ಮಠಿಕಾ] ಚಿಕ್ಕ ಮಠ(ಸುಪಾ)

ಮಣ. ಸಕ: [ಮನ್] ಒಪ್ಪು, ತಿಳಿ, ಚಿಂತನೆಮಾಡು, ಧ್ಯಾನಿಸು, ಊಹಿಸು, –**'ಮಣಇ'**

ಮಣ. ಪುಂನ: [ಮನಸ್] ಮನಸ್ಸು, ಅಂತಃಕರಣ, ಚಿತ್ತ(ಭಗ). **–ಅಗುತ್ತಿ.** ಸ್ತ್ರೀ: [–ಅಗುಪ್ತಿ] ಮನಸ್ಸಿನ ಅಸಂಯಮ. **–ಕರಣ.** ನ: [–ಕರಣ] ಚಿಂತನೆ, ಪರ್ಯಾಲೋಚನೆ. **–ಗುತ್ತ.** ವಿ: [–ಗುಪ್ತ] ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವವನು, ಸಂಯಮಿ. **–ಗುತ್ತಿ.** ಸ್ತ್ರೀ: [–ಗುಪ್ತಿ] ಮನಸ್ಸಿನ ಸಂಯಮ(ಉತ್ತ). **–ಜಾಣುಅ.** ವಿ: [–ಜ್ಞ] ಮನಸ್ಸನ್ನು ತಿಳಿದವನು, ಸುಂದರ, ಮನೋಹರ. **–ಜೀವಿಅ.** ವಿ: [–ಜೀವಿಕ] ಮನಸ್ಸನ್ನು ಆತ್ಮವೆಂದು ಒಪ್ಪುವವನು. **–ಜೋಅ.** ಪು: [–ಯೋಗ] ಮನಸ್ಸಿನ ವ್ಯಾಪಾರ(ಭಗ). **–ಜ್ಜ, –ಣ್ಣು, –ಣ್ಣುಅ.** **'–ಜಾಣುಅ'** ಶಬ್ದವನ್ನು ನೋಡುವುದು. **–ಥಂಭಣೀ.** ಸ್ತ್ರೀ: [ಸ್ತಂಭನೀ]ಮನಸ್ಸನ್ನು ಸ್ತಬ್ಧಗೊಳಿಸುವ ದಿವ್ಯಶಕ್ತಿ(ಪಉಮ). **–ನಾಣ.** ನ: [–ಜ್ಞಾನ] ಮನಸ್ಸನ್ನು ದರ್ಶಿಸುವುದು: ಮನಃಪರ್ಯಾಯ ಜ್ಞಾನ(ಕಮ್ಮ). **–ನಾಣಿ.** ವಿ: [–ಜ್ಞಾನಿನ್] ಮನಃಪರ್ಯಾಯ ಜ್ಞಾನವುಳ್ಳವನು. **–ಪಜ್ಜತ್ತಿ.** ಸ್ತ್ರೀ: [–ಪರ್ಯಾಪ್ತಿ] ಪುದ್ಗಲಗಳನ್ನು ಮನಸ್ಸಿನ ರೂಪಕ್ಕೆ ಪರಿವರ್ತಿಸುವ ಶಕ್ತಿ(ಭಗ). **–ಪಜ್ಜವ.** ಪು: [–ಪರ್ಯವ] ಇನ್ನೊಬ್ಬರ ಮನಸ್ಸಿನ ಸ್ಥಿತಿಯನ್ನು ಅರಿಯುವ ಶಕ್ತಿ(ಭಗ). **–ಪಜ್ಜವಿನ್.** ವಿ: [–ಪರ್ಯವಿನ್] ಮನಃಪರ್ಯಾಯ ಜ್ಞಾನವುಳ್ಳವನು. **–ಪಸಿಣವಿಜ್ಜಾ.** ಸ್ತ್ರೀ: [–ಪ್ರಶ್ನವಿದ್ಯಾ] ಮನಸ್ಸಿನ ಪ್ರಶ್ನೆಗಳಿಗೆ ಉತ್ತರ ನೀಡುವ ವಿದ್ಯೆ(ಸಮ). **–ವಲ್ಲಿಅ.** ವಿ: [–ವಲಿನ್, ಕ] ಮನೋಬಲ ಹೊಂದಿರುವವನು, ದೃಢ ಮನಸ್ಸುಳ್ಳವವನು(ಪಣ್ಣ). **–ಮೋಹಣ.** ವಿ: [–ಮೋಹನ] ಮನಸ್ಸನ್ನು ಆಕರ್ಷಿಸುವ, ಚಿತ್ತಾಕರ್ಷಕ(ಗಾ). **–ಯೋಗಿ.** ವಿ: [–ಯೋಗಿನ್] ಮನೋವ್ಯಾಪಾರವುಳ್ಳವನು. **–ವಗ್ಗಣಾ.** ಸ್ತ್ರೀ: [–ವರ್ಗಣಾ] ಮನಸ್ಸಿನ ರೂಪಕ್ಕೆ ಪರಿಣತಗೊಳ್ಳುವ ಪುದ್ಗಲ –ಸಮೂಹ. **–ವಜ್ಜ.** ನ: [–ವಜ್ರ] ಒಂದು

ವಿದ್ಯಾಧರ ನಗರ. **–ಸಮಿಇ. ಸ್ತ್ರೀ:** [**–ಸಮಿತಿ**] ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಳ್ಳುವವನು (ಭಗ). **–ಹಂಸ. ಪು:** [**–ಹಂಸ**] ಒಂದು ಛಂದಸ್ಸು. **–ಹರ. ವಿ:** [**–ಹರ**] ಮನೋಹರ, ಸುಂದರ, ಚಿತ್ತಾಕರ್ಷಕ(ಕುಮಾ). **–ಹರಣ. ಪುಂನ:** [**–ಹರಣ**] ಪಿಂಗಳನ ಪ್ರಸಿದ್ಧವಾದಒಂದು ಮಾತ್ರಾ ಪದ್ಧತಿ. **ಮಣಾಭಿರಾಮ, ಮಣಾಭೀರಾಮೇಲ್ಲ.** ವಿ: [**ಮನೋಭಿರಾಮ**] ಮನೋಹರವಾದ(ಔಪ). **ಮಣಾಮ. ವಿ:** [**–ಆಪ**] ಸುಂದರ, ಮನೋಹರ (ವಿಪಾ). **'ಮಣೋ–'** ಶಬ್ದವನ್ನು ನೋಡುವುದು.

ಮಣಂ. **'ಮಣಯಂ'** ಶಬ್ದವನ್ನು ನೋಡುವುದು.

ಮಣಂಸಿ. ವಿ: [**ಮನಸ್ವಿನ್**] ಒಳ್ಳೆಯ ಮನಸ್ಸುಳ್ಳವನು, ಧೀರ. **ಸ್ತ್ರೀ: –ಣೀ.**

ಮಣಂಸಿಲ.–}. **ಸ್ತ್ರೀ:** [**ಮನಃಶಿಲಾ**] ಕೆಂಪು ಬಣ್ಣದ
ಮಣಂಸಿಲಾ}. ಒಂದು ಧಾತು; ಮಣಸಿಲೆ(ಕುಮಾ).

ಮಣಗ. ಪು: [**ಮನಕ**] ಒಬ್ಬ ಜೈನ ಬಾಲ – ಮುನಿ, ಶಯ್ಯಂಭವಸೂರಿಯ ಮಗ ಮತ್ತು ಬಾಲ–ಶಿಷ್ಯ(ಕಪ್ಪ). **'ಮಣಯ'** ಶಬ್ದವನ್ನು ನೋಡುವುದು.

ಮಣಗುಲಿಯಾ. ಸ್ತ್ರೀ: [**ದೇ**] ಮೂರ್ತಿಯ ಆಧಾರ, ಮಣೆ

ಮಣಣ. ನ: [**ಮನನ**] ಜ್ಞಾನ, ತಿಳಿದುಕೊಳ್ಳುವುದು, ಧ್ಯಾನ, ಚಿಂತನ

ಮಣಯ. ಪು: [**ಮನಕ**] ದ್ವಿತೀಯ ನರಕ –ಭೂಮಿಯ ಮೂರನೇ ನರ –ಕೇಂದ್ರ, ಒಂದು ನರಕಾವಾಸ. **'ಮಣಗ'** ಶಬ್ದವನ್ನು ನೋಡುವುದು.

ಮಣಯಂ. ಅ: [**ಮನಾಗ್**] ತೀರ ಸ್ವಲ್ಪ(ಪಾಅ)

ಮಣಸ. **'ಮಣ=ಮನಸ್'**ಶಬ್ದವನ್ನು ನೋಡುವುದು.

ಮಣಸಿಲ–}.**'ಮಣಂಸಿಲಾ'**ಶಬ್ದವನ್ನು ನೋಡುವುದು.
ಮಣಸಿಲಾ}.

ಮಣಸೀಕಯ. ವಿ: [**ಮನಸೀಕೃತ**] ಚಿಂತಿಸಲ್ಪಟ್ಟ(ಪಣ್ಣ)

ಮಣಸೀಕರ. ಸಕ: [**ಮನಸಿ+ಕೃ**] ಚಿಂತನೆಮಾಡು, ಮನಸ್ಸಿನಲ್ಲಿ ಇಟ್ಟುಕೊಳ್ಳು

ಮಣಸ್ಸಿ. **'ಮಣಂಸಿ'** ಶಬ್ದವನ್ನು ನೋಡುವುದು.

ಮಣಾ}. **'ಮಣಯಂ'** ಶಬ್ದವನ್ನು ನೋಡುವುದು.
ಮಣಾಉ}.
ಮಣಾಉಂ}.
ಮಣಾಗಂ}.

ಮಣಾಲ. **'ಮುಣಾಲ'** ಶಬ್ದವನ್ನು ನೋಡುವುದು.

ಮಣಾಲಿಯಾ. ಸ್ತ್ರೀ: [**ಮೃಣಾಲಿಕಾ**] ತಾವರೆ ದಂಟಿನ ನಾರು, ಬಿಸತಂತು. **'ಮುಣಾಲಿಯಾ'** ಶಬ್ದವನ್ನು ನೋಡುವುದು.

ಮಣಾಸಿಲಾ. **'ಮಣಂಸಿಲಾ'** ಶಬ್ದವನ್ನು ನೋಡುವುದು.

ಮಣಿ. ಪುಂಸ್ತ್ರೀ: [**ಮಣಿ**] ಮತ್ತು, ರತ್ನ ಮೊದಲಾದ ಪ್ರಶಸ್ತ ಮಣಿಗಳು(ಕಪ್ಪ). **–ಅಂಗ. ಪು:** [**–ಅಂಗ**] ಒಡವೆಗಳನ್ನು ನೀಡುವ ಕಲ್ಪ ವೃಕ್ಷದ ಒಂದು ಜಾತಿ. **–ಆರ. ಪು:** [**–ಕಾರ**] ರತ್ನದ ಒಡವೆಗಳ ವ್ಯಾಪಾರಿ(ಮುದ್ರಾ). **–ಕಂಚಣ. ನ:** [**–ಕಾಂಚನ**] ರುಕ್ಮಿ ಪರ್ವತದ ಒಂದು ಶಿಖರ. **–ಖಇಅ. ವಿ:** [**–ಖಚಿತ**] ರತ್ನವನ್ನು ಒಳಗೆ ಸೇರಿಸಿರುವ. **–ಚಇಯಾ. ಸ್ತ್ರೀ:** [**–ಚಯಿತಾ**] ಒಂದು ನಗರಿ. **–ಚೂಡ. ಪು:** [**–ಚೂಡ**] ಒಬ್ಬ ವಿದ್ಯಾಧರ ರಾಜ. **–ಜಾಲ. ನ:** [**–ಜಾಲ**] ಮಣಿಗಳ ಮಾಲೆ(ಔಪ). **–ತೋರಣ. ನ:** [**–ತೋರಣ**] ಒಂದು ನಗರ. **–ಪ.** **'–ವ'** ಶಬ್ದವನ್ನು ನೋಡುವುದು. **–ಪೇಢಿಯಾ. ಸ್ತ್ರೀ:** [**–ಪೀಠಿಕಾ**] ಮಣಿಯಯವಾದ ಪೀಠ, ಮಣೆ.**–ಪ್ಪಭ. ಪು:** [**–ಪ್ರಭ**] ಒಬ್ಬ ವಿದ್ಯಾಧರ. **–ಭದ್ದ. ಪು:** [**–ಭದ್ರ**] ಒಬ್ಬ ಜೈನಮುನಿ(ಕಪ್ಪ). **–ಭೂಮಿ. ಸ್ತ್ರೀ:** [**–ಭೂಮಿ**] ಮಣಿಖಚಿತವಾದ ನೆಲ(ಸ್ವಪ್ನ). **–ಮಇಯ, ಮಯ. ವಿ:** [**–ಮಯ**] ಮಣಿಮಯವಾದ, ರತ್ನದಿಂದ ಸಿದ್ಧವಾದ. **–ರಹ. ಪು:** [**–ರಥ**] ಒಬ್ಬ ರಾಜನ ಹೆಸರು. **–ವ. ಪು:** [**–ಪ**] ಯಕ್ಷ, ಸರ್ಪ, ಸಮುದ್ರ(ಸೇ). **–ವಈ. ಸ್ತ್ರೀ:** [**–ಮತೀ**] ನಗರಿ. **–ಬಂಧ. ಪು:** [**–ಬಂಧ**] ಕೈ ಮತ್ತು ಮೊಳಕೈನ ಮಧ್ಯದ ಭಾಗ, ಮಣಿಕಟ್ಟು. **–ವಾಲಯ. ಪು:** [**–ಪಾಲಕ, –ವಾಲಕ**] ಸಮುದ್ರ. **–ಸಲಾಗಾ. ಸ್ತ್ರೀ:**[**–ಶಲಾಕಾ**] ಮದ್ಯ –ವಿಶೇಷ. **–ಹಿಯಯ. ಪು:**[**–ಹೃದಯ**] ಒಬ್ಬದೇವ.

ಮಣಿಅ. ನ: [**ಮಣಿತ**] ಸಂಭೋಗ ಸಮಯದಲ್ಲಿನ ಸ್ತ್ರೀಯರ ಅವ್ಯಕ್ತ ಶಬ್ದ(ಗಾ)

ಮಣಿಅಂ. **'ಮಣಯಂ'** ಶಬ್ದವನ್ನು ನೋಡುವುದು.

ಮಣಿಅಡ(ಅಪ). ಪು: [**ಮಣಿ**] ಮಾಲೆಯ(ಸರದ) ಕಾಂತಿ, ಹೊಳಪು.

ಮಣಿಚ್ಛಿಅ. ವಿ: [**ಮನಈಪ್ಸಿತ**] ಮನಸ್ಸಿಗೆ ಇಷ್ಟವಾದ, ಮನಸ್ಸು ಬಯಸಿದ(ಸುಪಾ)

ಮಣಿಟ್ಠ. ವಿ: [ಮನಇಷ್ಟ] ಮನಸ್ಸಿಗೆ ಇಷ್ಟವಾದ, ಪ್ರಿಯವಾದ

ಮಣಿಣಾಯಹರ. ನ: [ದೇ. ಮಣಿನಾಗ ಗೃಹ] ಸಮುದ್ರ, ಸಾಗರ.

ಮಣಿರಇಆ. ಸ್ತ್ರೀ: [ದೇ] ಕಟೀಸೂತ್ರ, ನೂಲಿನ ಅಥವಾ ಬೆಳ್ಳಿ ಉಡಿದಾರ(ದೇ)

ಮಣೀಸಾ. ಸ್ತ್ರೀ: [ಮನೀಷಾ] ಬುದ್ಧಿ, ಮೇಧಾ, ಪ್ರಜ್ಞೆ

ಮಣೀಸಿ. ವಿ: [ಮನೀಷಿನ್] ಬುದ್ಧಿವಂತ, ಪಂಡಿತ, ವಿದ್ವಾಂಸ(ಕಪ್ಪೂ)

ಮಣೀಸಿದ. ವಿ: [ಮನೀಷಿತ] ಇಚ್ಛಿಸಿದ, ಬಯಸಿದ, ಆಸೆಪಟ್ಟ(ಮೃಚ್ಛ)

ಮಣು. ಪು: [ಮನು] ಸ್ಮೃತಿಕಾರನಾದ ಮನು ಮಹರ್ಷಿ, ಪ್ರಜಾಪತಿ –ವಿಶೇಷ, ಮನುಷ್ಯ, ಮನುಜ. ಒಂದು ದೇವ –ವಿಮಾನ.

ಮಣುಅ. ಪು: [ಮನುಜ] ಮನುಷ್ಯ, ಮಾನವ(ಉವಾ). ಭಗವಾನ್ ಶ್ರೇಯಾಂಸನಾಥನ ಶಾಸನ –ಯಕ್ಷ. ವಿ: ಮನುಷ್ಯನಿಗೆ ಸಂಬಂಧಿಸಿದ(ಸೂಅ)

ಮಣುಇಂದ. ಪು: [ಮನುಜೇಂದ್ರ] ರಾಜ, ಪ್ರಭು

ಮಣುಈ. ಸ್ತ್ರೀ: [ಮನುಜೀ] ನಾರಿ, ಹೆಣ್ಣು, ಮಹಿಳೆ

ಮಣುಏಸರ. ಪು: [ಮನುಜೇಶ್ವರ] ಮೇಲಿನ ಶಬ್ದವನ್ನು ನೋಡುವುದು.

ಮಣುಜ್ಜ}. ವಿ: [ಮನೋಜ್ಞ] ಸುಂದರ, ಮನೋಹರ

ಮಣುಣ್ಣ}.

ಮಣುಸ}. **ಪುಂಸ್ತ್ರೀ:** [**ಮನುಷ್ಯ**] ಮಾನವ, ಮರ್ತ್ಯ

ಮಣುಸ್ಸ}. (ಆಚಾ), ಸ್ತ್ರೀ: –ಸ್ಸೀ(ಭಗ). **–ಖೆತ್ತ.** ನ: [–ಕ್ಷೇತ್ರ] ಮನುಷ್ಯಲೋಕ **–ಸೇಣಿಯಾಪರಿಕಮ್ಮ.** ಪು: [–ಶ್ರೇಣುಕಾಪರಿಕರ್ಮನ್] ದೃಷ್ಟಿವಾದದ ಒಂದು ಸೂತ್ರ

ಮಣುಸ್ಸ. ವಿ: [ಮಾನುಷ್ಯ] ಮನುಷ್ಯ –ಸಂಬಂಧಿಯಾದ

ಮಣುಸ್ಸಿಂದ. ಪು: [ಮನುಷ್ಯೇಂದ್ರ] ರಾಜ, ದೊರೆ(ಉತ್ತ)

ಮಣೂಸ. 'ಮಣುಸ್ಸ' ಶಬ್ದವನ್ನು ನೋಡುವುದು.

ಮಣೇ. ಅ: [ಮನ್ಯೇ] ವಿಮರ್ಶ ಸೂಚಕ ಅವ್ಯಯ

ಮಣೋ–. 'ಮಣ=ಮನಸ್' ಶಬ್ದವನ್ನು ನೋಡುವುದು. **–ಗಮ.** ನ: [–ಗಮ] ದೇವ –ವಿಮಾನ –ವಿಶೇಷ. **–ಜ್ಜ.** ವಿ; [–ಜ್ಞ] ಸುಂದರ, ಮನೋಹರ(ಉಪ). ಪು: ಬಳ್ಳಿಗಳ ಮಂಟಪ. **–ಣ್ಣ., –ನ್ನ.** ವಿ: [–ಜ್ಞ] ಸುಂದರ, ಮನೋಹರ. **–ಭವ.** ಪು; [–ಭವ] ಮನ್ಮಥ, ಕಾಮ(ಸುಪಾ). **–ಭಿರಮಣಿಜ್ಜ.** ವಿ; [–ಭಿರಮಣೀಯ] ಸುಂದರ, ಚಿತ್ತಾಕರ್ಷಕ. **–ಭೂ.** ಪು: [–ಭೂ] ಮನ್ಮಥ, ಕಾಮ. **–ಮಯ.** ವಿ: [–ಮಯ] ಮಾನಸಿಕ. **–ಮಾಣಸಿಯ.** ವಿ: [–ಮಾನಸಿಕ] ಮನಸ್ಸಿನಲ್ಲೇ ಇರುವ, ಮಾತಿನಲ್ಲಿ ವ್ಯಕ್ತವಾಗದ ಮನಸ್ಸಿನ ದುಃಖವೇ ಮೊದಲಾದವು(ಣಾಯಾ). **–ರಮ.** ವಿ: [–ರಮ] ಸುಂದರ, ರಮಣೀಯ. ಪು: ಒಂದು ದೇವ –ವಿಮಾನ. ಮೇರು –ಪರ್ವತ. ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ. ಕಿನ್ನರ ದೇವತೆಗಳ ಒಂದು ಜಾತಿ. ರುಚಕ ದ್ವೀಪದ ಅಧಿಷ್ಠಾತೃ ದೇವ, ಮೂರನೇ ಗ್ರೈವೇಯಕ ವಿಮಾನ. ಎಂಟನೇ ದೇವ –ಲೋಕದ ಇಂದ್ರನ ಸಂಚರಿಸಲು ಯೋಗ್ಯವಾದ ವಿಮಾನ. ಮಿಥಿಲೆಯ ಒಂದು ದೇವಾಲಯ(ಉತ್ತ). ಒಂದು ಉಪವನ(ಉಪ). **–ರಮಾ.** ಸ್ತ್ರೀ: [–ರಮಾ] ನಾಲ್ಕನೇ ವಾಸುದೇವನ ಪಟ್ಟದ ರಾಣಿಯ ಹೆಸರು(ಪಉಮ). ಭಗವಾನ್ ಸುಪಾರ್ಶ್ವನಾಥನ ದೀಕ್ಷೆಯ ಪಲ್ಲಕ್ಕಿ(ಸುಪಾ). ಶಕ್ರೇಂದ್ರನ ಅಂಜುಕಾ ಎಂಬ ಹೆಸರಿನ ಇಂದ್ರಾಣಿಯ ಒಂದು ರಾಜಧಾನಿ. **–ರಹ.** ಪು: [–ರಥ] ಮನಸ್ಸಿನ ಅಭಿಲಾಷೆ, ಇಚ್ಛೆ(ಔಪ). ಪಕ್ಷದ ಮೂರನೇ ದಿನ. **–ಹಂಸ.** ಪು: [–ಹಂಸ] ಒಂದು ಛಂದಸ್ಸು. **–ಹರ.** ಪು: [–ಹರ] ಪಕ್ಷದ ಮೂರನೇ ದಿನ, ಒಂದು ಛಂದಸ್ಸು. ವಿ: ರಮಣೀಯ, ಸುಂದರ(ಸ್ವಪ್ನ). **–ಹರಾ.** ಸ್ತ್ರೀ: [–ಹರಾ] ಭಗವಾನ್ ಪದ್ಮಪ್ರಭನ ದೀಕ್ಷೆಯ ಪಲ್ಲಕ್ಕಿ. **–ಹವ.** '**–ಭವ**' ಶಬ್ದವನ್ನು ನೋಡುವುದು. **–ಹಿರಾಮ** ವಿ: [–ಭಿರಾಮ] ಸುಂದರವಾದ, ಮನೋಹರವಾದ(ಭವಿ).

ಮಣೋಸಿಲಾ. 'ಮಣಂಸಿಲಾ' ಶಬ್ದವನ್ನು ನೋಡುವುದು.

ಮಣ್ಣ. 'ಮಣ=ಮನ್' ಶಬ್ದವನ್ನು ನೋಡುವುದು. 'ಮಣ್ಣಇ'. ವ. ಕೃ: 'ಮಣ್ಣಮಾಣ'

ಮಣಣ. ನ: [ಮಾನನ] ಮಾನ್ಯಮಾಡುವುದು, ಆದರಿಸುವುದು, ಗೌರವಿಸುವುದು

ಮಣ್ಣಾ. 'ಮನ್ನಾ' ಶಬ್ದವನ್ನು ನೋಡುವುದು(ಉಪ)

ಮಣ್ಣಿಯ. 'ಮನ್ನಿಯ' ಶಬ್ದವನ್ನು ನೋಡುವುದು.

ಮಣ್ಣು. 'ಮನ್ನು' ಶಬ್ದವನ್ನು ನೋಡುವುದು(ಗಾ)
ಮಣ್ಣೇ. 'ಮಣೇ' ಶಬ್ದವನ್ನು ನೋಡುವುದು.
ಮತ್ತ. ವಿ: [ಮತ್ತ] ಮದದಿಂದ ಕೂಡಿದ, ಮತ್ತೇರಿದ (ಉವಾ). ನ: ಮದ್ಯ, ಹೆಂಡ. ಮದ, ನಶೆ. **–ಜಲಾ.**ಸ್ತ್ರೀ: [–ಜಲಾ] ಒಂದು ನದಿ(ಠಾ).
ಮತ್ತ. 'ಮೇತ್ತ=ಮಾತ್ರ' ಶಬ್ದವನ್ನು ನೋಡುವುದು.
ಮತ್ತ. ನ: [ಅಮತ್ರ, ಮಾತ್ರ] ಪಾತ್ರೆ(ಆಚಾ). 'ಮತ್ತಯ' ಶಬ್ದವನ್ನು ನೋಡುವುದು.
ಮತ್ತ.(ಅಪ). 'ಮಚ್ಚ=ಮರ್ತ್ಯ' ಶಬ್ದವನ್ನು ನೋಡುವುದು.
ಮತ್ತಂಗಯ. ಪು: [ಮತ್ತಾಂಗಕ, –ದ] ಕಲ್ಪವೃಕ್ಷದ ಒಂದು ಜಾತಿ, ಮದ್ಯವನ್ನು ನೀಡುವ ಕಲ್ಪವೃಕ್ಷ
ಮತ್ತಂಡ. ಪು: [ಮಾರ್ತಂಡ] ಸೂರ್ಯ
ಮತ್ತಗ. ನ: [ದೇ] ಮೂತ್ರ
ಮತ್ತಗ}. ಪುಂನ: [ಅಮತ್ರ, ಮಾತ್ರಕ] ಪಾತ್ರೆ, ಸಣ್ಣಪಾತ್ರೆ.
ಮತ್ತಯ}.
ಮಾಹಪ್ಪಯಾ}. ಸ್ತ್ರೀ: ಗೌರವ, ಮಹಿಮೆ, ಪ್ರಭಾವ(ಕುಮಾ)
ಮಾಹಯ. ಪು: [ದೇ] ನಾಲ್ಕು ಇಂದ್ರಿಯಗಳ ಒಂದು ಕೀಟ(ಉತ್ತ)
ಮಾಹವ. ಪು: [ಮಾಧವ] ಶ್ರೀಕೃಷ್ಣ, ವಿಷ್ಣು, ವಸಂತ ಋತು, ವೈಶಾಖ ಮಾಸ(ಗಾ), **–ಪಣಯಿಣೀ. ಸ್ತ್ರೀ:** [–ಪ್ರಣಯಿನೀ] ಲಕ್ಷ್ಮಿ
ಮಾಹವಿಆ}. ಸ್ತ್ರೀ: [ಮಾಧವಿಕಾ]ಕಾಡ ಇರುವಂತಿಗೆ
ಮಾಹವೀ}. ಸ್ತ್ರೀ: [ಮಾಧವೀ] ಬಳ್ಳಿ(ಗಾ), ಒಬ್ಬ ರಾಜನ ಹೆಂಡತಿ(ಪಉಮ)
ಮಾಹಾರಯಣ. ನ: [ದೇ] ವಸ್ತ್ರ, ಬಟ್ಟೆ
ಮಾಹಿಂದ. ಪು: [ಮಾಹೇಂದ್ರ] ಒಂದು ದೇವಲೋಕ. ಮಾಹೇಂದ್ರ ಲೋಕದ ಒಡೆಯನಾದ ಇಂದ್ರ, ಒಂದು ಬಗೆಯ ಜ್ವರ. ದಿನದ ಒಂದು ಮುಹೂರ್ತ, **ವಿ:** ಮಹೇಂದ್ರನಿಗೆ ಸಂಬಂಧಿಸಿದ (ಪಉಮ) ಇಂದ್ರಕೀಲ ಪರ್ವತ
ಮಾಹಿಂದಫಲ. ನ: [ಮಾಹೇಂದ್ರಫಲ] ಇಂದ್ರಯವ (=ಜವೆಗೋಧಿ)
ಮಾಹಿಲ. ಪು: [ದೇ] ಎಮ್ಮೆ ಕಾಯುವವನು(ದೇ)
ಮಾಹಿವಾಯ. ಪು: [ದೇ] ಶಿಶಿರ ಋತುವಿನ ಗಾಳಿ, ಮಾಘ ಮಾಸದ ಗಾಳಿ
ಮಾಹಿಸ. 'ಮಹಿಸೀ' ಶಬ್ದವನ್ನು ನೋಡುವುದು.
ಮಾಹೀ. ಸ್ತ್ರೀ: [ಮಾಘೀ] ಮಾಘಮಾಸದ ಹುಣ್ಣಿಮೆ, ಮಾಘ ಮಾಸದ ಅಮಾವಾಸ್ಯೆ
ಮಾಹುರ. ವಿ: [ಮಾಥುರ] ಮಥುರೆಯ(ಭತ್ತ)
ಮಾಹುರ. ನ: [ದೇ] ತರಕಾರಿ
ಮಾಹುರ}. ವಿ: [ಮಾಧುರ, –ಕ] ಮಧುರ ರಸವುಳ್ಳ,
ಮಾಹುರಯ}. ಆಮ್ಲ ರಸಕ್ಕಿಂತ ಭಿನ್ನವಾದ ರಸವುಳ್ಳ
ಮಾಹುರಿಅ. ನ: [ಮಾಧುರ್ಯ] ಮಧುರತೆ
ಮಾಹುಲಿಂಗ. ಪು: [ಮಾತುಲಿಂಗ] ಮಾದಳದ ಗಿಡ, **ನ:** ಮಾದಳದ ಹಣ್ಣು
ಮಾಹೇಸರ. ವಿ: [ಮಾಹೇಶ್ವರ] ಮಹೇಶ್ವರನ ಭಕ್ತ, **ನ:** ನಗರ –ವಿಶೇಷ.
ಮಾಹೇಸರೀ. ಸ್ತ್ರೀ: [ಮಾಹೇಶ್ವರೀ] ಒಂದು ಬಗೆಯ ಲಿಪಿ, ಒಂದು ನಗರಿ(ಪಉಮ), ಪಾರ್ವತಿ, ದುರ್ಗಿ

ಮಿ(ಅಪ). 'ಅವಿ=ಅಪಿ' ಶಬ್ದವನ್ನು ನೋಡುವುದು.
ಮಿ–. ಸ್ತ್ರೀ: [ಮೃತ್] ಮಣ್ಣು, **–ಪ್ಪಿಂಡ. ಪು:** [–ಪಿಂಡ] ಮಣ್ಣಿನ ಉಂಡೆ(ಅಭಿ). **–ಮ್ಮಯ. ವಿ:** [–ಮಯ] ಮಣ್ಣಿನಿಂದ ಮಾಡಲ್ಪಟ್ಟ, ಮಣ್ಣಿನಿಂದ ಅದ(ಉಪ)
ಮಿಅ. 'ಮಯ= ಮೃಗ' ಶಬ್ದವನ್ನು ನೋಡುವುದು. **–ಚಕ್ಕ. ನ:** [–ಚಕ್ರ] ಹಳ್ಳಿಗೆ ಪ್ರವೇಶಮಾಡುವ ಮುನ್ನ ಮೃಗಗಳ ದರ್ಶನದಿಂದ ಶುಭಾಶುಭ ಫಲಗಳನ್ನು ತಿಳಿದುಕೊಳ್ಳುವ ವಿದ್ಯೆ(ಸೂಅ). **–ಣಅಣೀ, –ನಯಣಾ. ಸ್ತ್ರೀ:** [–ನಯನಾ] 'ಮಯ –ಚ್ಛೀ' ಶಬ್ದವನ್ನು ನೋಡುವುದು(ನಾಟ). **–ಮಯ. ಪು:** [–ಮದ] ಕಸ್ತೂರಿ. **–ರಿಉ. ಪು:** [–ರಿಪು] ಸಿಂಹ(ಸುಪಾ). **–ವಾಹಣ. ಪು:** [–ವಾಹನ] ಭರತ ಕ್ಷೇತ್ರದ ಒಬ್ಬ ಭಾವೀ ತೀರ್ಥಂಕರ.
ಮಿಅ. ಪು: [ಮೃಗ] ಜಿಂಕೆಗಿಂತ ಚಿಕ್ಕದಾದ ಮತ್ತು ಉದ್ದವಾದ ಬಾಲವಿರುವ ಜಿಂಕೆಯ ಆಕಾರದ ಒಂದು ಪ್ರಾಣಿ. **–ಲೋಮಿಅ. ವಿ:** [–ಲೋಮಿಕ] ಅದರ ಕೂದಲುಗಳಿಂದ ಮಾಡಿದ
ಮಿಅ. 'ಮಿತ್ತ=ಮಿತ್ರ' ಶಬ್ದವನ್ನು ನೋಡುವುದು.
ಮಿಅ. ವಿ: [ದೇ] ಅಲಂಕರಿಸಲ್ಪಟ್ಟ
ಮಿಅ. ವಿ: [ಮಿತ] ಪರಿಮಿತ, ಮಿತವಾದ(ಉತ್ತ), ಸ್ವಲ್ಪ, **–ವಾಇ. ಪು:** [–ವಾದಿನ್] ಆತ್ಮವೇ ಮೊದಲಾದ ಪದಾರ್ಥಗಳು ಪರಿಮಿತವೆಂದು ಒಪ್ಪುವವನು(ಠಾ)
ಮಿಅ. 'ಮಿವ=ಇವ' ಶಬ್ದವನ್ನು ನೋಡುವುದು.
ಮಿಅ–. 'ಮಿಆ' ಶಬ್ದವನ್ನು ನೋಡುವುದು. **–ಗ್ಗಾಮ. ಪು:** [–ಗ್ರಾಮ] ಒಂದು ಗ್ರಾಮ
ಮಿಅಆ. ಸ್ತ್ರೀ: [ಮೃಗಯಾ] ಬೇಟೆ
ಮಿಅಂಕ. ಪು: [ಮೃಗಾಂಕ] ಚಂದ್ರ(ಕುಮಾ), ಚಂದ್ರನ ವಿಮಾನ, ಇಕ್ಷ್ವಾಕು ವಂಶದ ಒಬ್ಬ ರಾಜ. **–ಮಣಿ. ಪು:** [–ಮಣಿ] ಚಂದ್ರಕಾಂತ ಮಣಿ
ಮಿಅಂಗ. 'ಮುಯಂಗ=ಮೃದಂಗ' ಶಬ್ದವನ್ನು ನೋಡುವುದು.
ಮಿಅಸಿರ. 'ಮಗಸಿರ' ಶಬ್ದವನ್ನು ನೋಡುವುದು.
ಮಿಆ. ಸ್ತ್ರೀ: [ಮೃಗಾ] ದೊರೆ ವಿಜಯನ ಹೆಂಡತಿ (ವಿಪಾ), ರಾಜ ಬಲಭದ್ರನ ಹೆಂಡತಿ. **–ಉತ್ತ, –ಪುತ್ತ. ಪು:** [–ಪುತ್ರ] ದೊರೆ ವಿಜಯನ ಒಬ್ಬ ಪುತ್ರ, ದೊರೆ ಬಲಭದ್ರನ ಒಬ್ಬ ಮಗ. ಅವನ

ಇನ್ನೊಂದು ಹೆಸರು ಬಲಶ್ರೀ. **-ವಈ.** ಸ್ತ್ರೀ: [-ವತೀ] ಪ್ರಥಮ ವಾಸುದೇವನ ತಾಯಿಯ ಹೆಸರು. ರಾಜಾ ಶತಾನೀಕನ ಪಟ್ಟದ ರಾಣಿಯ ಹೆಸರು.

ಮಿಇ. ಸ್ತ್ರೀ: [ಮಿತಿ] ಅಳತೆ, ಪರಿಮಾಣ, ಗಡಿ,ಅವಧಿ.

ಮಿಇ. **'ಮಿಉ=ಮೃತ್'** ಶಬ್ದವನ್ನು ನೋಡುವುದು.

ಮಿಇಂಗ. **'ಮಯುಂಗ=ಮೃದಂಗ'** ಶಬ್ದವನ್ನು ನೋಡುವುದು.

ಮಿಇಂದ. **'ಮಇಂದ=ಮೃಗೇಂದ್ರ'** ಶಬ್ದವನ್ನು ನೋಡುವುದು.

ಮಿಉ. ಸ್ತ್ರೀ: [ಮೃದ್] ಮಣ್ಣು, ಮೃತ್ತಿಕೆ

ಮಿಉ. ವಿ: [ಮೃದು] ಕೋಮಲವಾದ, ಮೆತ್ತಗಿರುವ, ಸುಕುಮಾರವಾದ(ಔಪ), ಸುಂದರವಾದ

ಮಿಂಚಣ. ನ: [ದೇ] ನಿಮೀಲನ, ಮುಚ್ಚಿಕೊಳ್ಳುವುದು

ಮಿಂಜ -.} ಸ್ತ್ರೀ: [ಮಜ್ಜಾ] ಶರೀರದಲ್ಲಿರುವ ಧಾತು
ಮಿಂಜಾ}. -ವಿಶೇಷ, ಮೂಳೆಯ ಮಧ್ಯದಲ್ಲಿರುವ
ಮಿಂಜಿಯ}. ತಿರುಳು, ದೇಹಸಾರ

ಮಿಂಠ}. ಪು: [ದೇ] ಆನೆಯ ಮಾವತಿಗ(ಉಪ),
ಮಿಂಠಿಲ}. **'ಮೆಂಠ'** ಶಬ್ದವನ್ನು ನೋಡುವುದು.

ಮಿಂಢ.} ಪುಂಸ್ತ್ರೀ: [ಮೇಢ್ರ] ಟಗರು, ಸ್ತ್ರೀ: **-ಢಿಯಾ.**
ಮಿಂಢಯ}. ನ: ಪುರುಷನ ಜನನೇಂದ್ರಿಯ. **-ಮುಹ.** ಪು:[-ಮುಖ] ಅನಾರ್ಯ-ದೇಶ ವಿಶೇಷ, ಒಂದು ನಗರ. **'ಮೇಂಢ'** ಶಬ್ದವನ್ನು ನೋಡುವುದು.

ಮಿಂಢಿಯ. ಪು: [ಮೇಂಢಿಕ] ಒಂದು ಗ್ರಾಮ.

ಮಿಗ. **'ಮಯ=ಮೃಗ'** ಶಬ್ದವನ್ನು ನೋಡುವುದು. **-ಗಂಧ.** ಪು: [-ಗಂಧ] ಜೋಡಿ(ಯುಗಳ) ಮನುಷ್ಯನ ಒಂದುಜಾತಿ. **-ನಾಹ.** ಪು:[-ನಾಥ] ಸಿಂಹ(ಸುಪಾ). **-ವಇ.** ಪು: [-ಪತಿ] ಸಿಂಹ. **-ವಾಲುಂಕೀ.** ಸ್ತ್ರೀ: [-ವಾಲುಂಕೀ] ಒಂದು ಬಗೆಯ ವನಸ್ಪತಿ. **ಮಿಗಾರಿ.** ಪು: [ಮೃಗಾರಿ] ಸಿಂಹ(ಉವ). **-ಮಿಗಾಹಿವ.** ಪು: [ಮೃಗಾಧಿಪ] ಸಿಂಹ.

ಮಿಗಯಾ}. ಸ್ತ್ರೀ: [ಮೃಗಯಾ] ಬೇಟೆ(ಸುಪಾ).
ಮಿಗವ್ವ}. ನ: [ಮೃಗವ್ಯ]

ಮಿಗಸಿರ. **'ಮಗಸಿರ'** ಶಬ್ದವನ್ನು ನೋಡುವುದು.

ಮಿಗಾವಈ. **'ಮಿಅ-ವಈ'** ಶಬ್ದವನ್ನು ನೋಡುವುದು

ಮಿಗೀ. ಸ್ತ್ರೀ: [ಮೃಗೀ] ಹೆಣ್ಣು ಜಿಂಕೆ, ಹರಿಣಿ. ವಿದ್ಯಾ -ವಿಶೇಷ. **-ಪದ.** ನ: [-ಪದ] ಯೋನಿ.

ಮಿಚ್ಚು. **'ಮಚ್ಚು'** ಶಬ್ದವನ್ನು ನೋಡುವುದು.

ಮಿಚ್ಛ.(ಅಪ). **'ಇಚ್ಛ=ಇಷ್'** ಶಬ್ದವನ್ನು ನೋಡುವುದು.

ಮಿಚ್ಛ. ಪು: [ಮ್ಲೇಚ್ಛ] ವನ, ಆರ್ಯನಲ್ಲದ ವ್ಯಕ್ತಿ. **-ಪಹು.** ಪು: [-ಪ್ರಭು] ಮ್ಲೇಚ್ಛರ ರಾಜ. **-ಪಿಯ.** ನ: [-ಪ್ರಿಯ] ಈರುಳ್ಳಿ, ಬೆಳ್ಳುಳ್ಳಿ, **ಮಿಚ್ಛಾಹಿವ.** ಪು: [ಮ್ಲೇಚ್ಛಾಧಿಪ] ಯವನರ ದೊರೆ.

ಮಿಚ್ಛ. ನ: [ಮಿಥ್ಯ] ಸುಳ್ಳು, ಅಸತ್ಯ, ವಿ: ಸುಳ್ಳು ಹೇಳುವವನು, ಸುಳ್ಳುಗಾರ. ಸತ್ಯದ ಮೇಲೆ ನಂಬಿಕೆಯಿಲ್ಲದವ, ಮಿಥ್ಯಾ ದೃಷ್ಟಿಯುಳ್ಳವನು.

ಮಿಚ್ಛ-. **'ಮಿಚ್ಛಾ'** ಶಬ್ದವನ್ನು ನೋಡುವುದು. **-ಕಾರ.** ಪು: [-ಕಾರ] ಸುಳ್ಳು ಕರಣ. **-ತ್ತ.** ನ: [-ತ್ವ] ಸತ್, ಧರ್ಮದಲ್ಲಿ ಅಪನಂಬಿಕೆ (ಆಚೂ). **-ತ್ತಿ.** ವಿ: [-ತ್ವಿನ್] ಸತ್ಯ, ಧರ್ಮದಲ್ಲಿ ನಂಬಿಕೆ ಇಲ್ಲದವನು, ಪರಮಾರ್ಥದಲ್ಲಿ ಶ್ರದ್ಧೆಇಲ್ಲದವನು. **-ದಿಟ್ಠಿ, -ದಿಟ್ಠೀಯ, -ದ್ದಿಟ್ಠಿ, -ದ್ದಿಟ್ಠಿಯ.** ವಿ: [-ದೃಷ್ಟಿ, -ಕ] ಸತ್ಯ, ಧರ್ಮಗಳ ಮೇಲೆ ಶ್ರದ್ಧೆಯಿರದವನು, ಜಿನಧರ್ಮಕ್ಕಿಂತ ಬೇರೆಯಾದ ಧರ್ಮವನ್ನು ಒಪ್ಪುವವನು.

ಮಿಚ್ಛಾ. ಅ: [ಮಿಥ್ಯಾ] ಅಸತ್ಯ, ಸುಳ್ಳು. ಮಿಥ್ಯಾತ್ವವನ್ನು ಮೋಹಗೊಳಿಸಲು ಶಕ್ಯವಾದ ಕರ್ಮ. ಪ್ರಥಮ -ಗುಣಸ್ಥಾನಕ(ಕಮ್ಮ). **-ದಂಸಣ.** ನ: [-ದರ್ಶನ] ಸತ್ಯ ತತ್ವದ ಮೇಲೆ ಶ್ರದ್ಧೆಯಿಲ್ಲದಿರುವುದು. ಅಸತ್ಯವಾದ ಧರ್ಮ, **-ನಾಣ.** ನ: [-ಜ್ಞಾನ] ಅಸತ್ಯ ಜ್ಞಾನ, ಅಜ್ಞಾನ(ಭಗ). **-ಸುಅ.** ನ: [-ಶ್ರುತ] ಅಸತ್ಯ-ಶಾಸ್ತ್ರ, ಮಿಥ್ಯಾ ದೃಷ್ಟಿಯವರು ರಚಿಸಿದ ಶಾಸ್ತ್ರ(ಣಂದಿ)

ಮಿಜ್ಜ. ಅಕ: [ಮೃ] ಸಾಯು, ಮೃತಿಹೊಂದು, -**'ಮಿಜ್ಜಂತಿ.** ವ.ಕೃ: **'ಮಿಜ್ಜಂತ'**

ಮಿಜ್ಝ. ವಿ: [ಮೇಧ್ಯ] ಶುಚಿ, ಪವಿತ್ರ

ಮಿಟ. ಸಕ: [ದೇ] ಅಳಿಸಿಹಾಕು. ನಾಶಮಾಡು

ಮಿಟ್ಠ. ವಿ: [ಮಿಷ್ಟ, ಮೃಷ್ಟ] ಸಿಹಿಯಾದ, ಮಧುರವಾದ

ಮಿಣ. ಸಕ: [ಮಾ, ಮೀ] ಅಳತೆಮಾಡು, ಅಳೆ, ತೂಕಮಾಡು

ಮಿಣಾಯ. ನ: [ದೇ] ಅಳತೆ, ಪರಿಮಾಣ(ಉಪ)

ಮಿಣಾಯ. ನ: [ದೇ] ಬಲಾತ್ಕಾರ, ಬಲವಂತ

ಮಿಣಾಲ. 'ಮುಣಾಲ' ಶಬ್ದವನ್ನು ನೋಡುವುದು.
ಮಿತ್ತ. ಪು: [ಮಿತ್ರ] ಸೂರ್ಯ, ರವಿ(ಸುಪಾ), ಅನುರಾಧ ನಕ್ಷತ್ರದ ಅಧಿಷ್ಠಾಯಕ ದೇವ(ಠಾ). ಅಹೋರಾತ್ರದ ಮೂರನೇ ಮುಹೂರ್ತ. ಒಬ್ಬ ದೊರೆಯ ಹೆಸರು. ಪುಂನ: ಸ್ನೇಹಿತ, ಗೆಳೆಯ. –ಕೇಸೀ. ಸ್ತ್ರೀ: [–ಕೇಶೀ] ರುಚಕ ಪರ್ವತದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ(ಠಾ). –ಗಾ. ಸ್ತ್ರೀ: [–ಗಾ] ವೈರೋಚನ ಬಲೀಂದ್ರನ ಅಗ್ರ ಮಹಿಷಿ, ಒಬ್ಬ ಇಂದ್ರಾಣಿ. ಣಂದಿ. ಪು: [–ನಂದಿನ್] ಒಬ್ಬ ರಾಜನ ಹೆಸರು. –ದಾಮ. ಪು: [–ದಾಮ] ಒಬ್ಬ ಕುಲವಂತ ಪುರುಷನ ಹೆಸರು. –ದೇವಾ. ಸ್ತ್ರೀ: [–ದೇವಾ] ಅನುರಾಧಾ ನಕ್ಷತ್ರ. –ವ. ವ: [–ವತ್] ಸ್ನೇಹಿತನನ್ನು ಹೊಂದಿರುವ (ಉತ್ತ). –ಸೇಣ. ಪು: [–ಸೇನ] ಒಬ್ಬ ಪುರೋಹಿತನ ಮಗ.
ಮಿತ್ತ. 'ಮೆತ್ತ=ಮಾತ್ರ' ಶಬ್ದವನ್ನು ನೋಡುವುದು.
ಮಿತ್ತಲ. ಪು: [ದೇ] ಮನ್ಮಥ, ಕಾಮ(ದೇ)
ಮಿತ್ತಿ. ಸ್ತ್ರೀ: [ಮಿತಿ] ಅಳತೆ ಪರಿಮಾಣ, ಸಾಪೇಕ್ಷತೆ
ಮಿತ್ತಿಆ. ಸ್ತ್ರೀ: [ಮೃತ್ತಿಕಾ] ಮಣ್ಣು(ಅಭಿ). –ವಈ. ಸ್ತ್ರೀ: [–ವತೀ] ದಶಾರ್ಣ ದೇಶದ ಪ್ರಾಚೀನ ರಾಜಧಾನಿ
ಮಿತ್ತಿಜ್ಜ. ಅಕ: [ಮಿತ್ರೀಯ] ಸ್ನೇಹಿತನನ್ನು ಇಷ್ಟಪಡು,
ಮಿತ್ತಿಯ. ನ: [ಮೈತ್ರೇಯ] ವತ್ಸ ಗೋತ್ರದ ಒಂದು ಶಾಖೆ, ಪುಂಸ್ತ್ರೀ: ಆ ಗೋತ್ರಲ್ಲಿ ಹುಟ್ಟಿದ(ಠಾ)
ಮಿತ್ತಿವಯ. ಪು: [ದೇ] ಗಂಡನ ಅಣ್ಣ, ಜೇಷ್ಠ(ದೇ)
ಮಿತ್ತೀ. ಸ್ತ್ರೀ: [ಮೈತ್ರೀ] ಸ್ನೇಹ, ಮಿತ್ರತ್ವ (ಸೂಅ)
ಮಿಥುಣ. 'ಮಿಹುಣ' ಶಬ್ದವನ್ನು ನೋಡುವುದು.
ಮಿದು. 'ಮಿಉ' ಶಬ್ದವನ್ನು ನೋಡುವುದು(ಅಭಿ)
ಮಿರಿಅ. ಪುಂನ: [ಮಿರಿಚ] ಮೆಣಸಿನ ಕಾಯಿ ಗಿಡ, ಮೆಣಸಿನ ಕಾಯಿ(ಪಣ್ಣ)
ಮಿರಿಆ. ಸ್ತ್ರೀ: [ದೇ] ಕುಟೀರ, ಗುಡಿಸಿಲು
ಮಿರಿಇ}. ಸ್ತ್ರೀ: [ಮರೀಚಿ] ಕಿರಣ, ಕಾಂತಿ, ತೇಜಸ್ಸು
ಮಿರೀ}. (ಔಪ)
ಮಿರೀಇ}.
ಮಿರೀಯ}.
ಮಿಲ. ಅಕ: [ಮಿಲ್] ಒಟ್ಟಿಗೆ ಸೇರು, ಒಟ್ಟುಗೂಡು, ಭೇಟಿಯಾಗು. –'ಮಿಲಇ'.

ಮಿಲಕ್ಖು. ಪುಂನ: 'ಮಿಚ್ಛ=ಮ್ಲೇಚ್ಛ' ಶಬ್ದವನ್ನು ನೋಡುವುದು(ಓಘ)
ಮಿಲಣ. ನ: [ಮಿಲನ] ಒಟ್ಟುಗೂಡುವುದು, ಸೇರುವುದು (ಉಪ). ಸ್ತ್ರೀ: –ಣಾ.
ಮಿಲಾ.}. ಅಕ: [ಮ್ಲೈ] ಮ್ಲಾನವಾಗು, ಬಾಡು,
ಮಿಲಾಅ}.ಸೊರಗು, ಕಳೆಗುಂದು(ಣಾಯಾ).
ಮಿಲಾಅ.} ವಿ: [ಮ್ಲಾನ] ಮ್ಲಾನವಾಗುವುದು,
ಮಿಲಾಣ. ಬಾಡುವುದು, ಸೊರಗುವುದು, ಕಳೆಗುಂದುವುದು(ಣಾಯಾ)
ಮಿಲಾಣ. ನ: [ದೇ] ಕುದುರೆಯ ಬೆನ್ನಿನ ಮೇಲೆ ಹಾಕುವ ಜೀನು.
ಮಿಲಾನಿ. ಸ್ತ್ರೀ: [ವಮ್ಲಾನಿ] ಕಳೆಗುಂದುವಿಕೆ, ತೇಜೋಹೀನತೆ(ಉಪ)
ಮಿಲಿಅ. ವಿ: [ಮಿಲಿತ] ಒಟ್ಟಿಗೆ ಸೇರಿದ, ಬೆರೆತಿರುವ (ಗಾ)
ಮಿಲಿಅ.ವಿ:[ಮೇಲಿತ] ಸೇರಿಸಲ್ಪಟ್ಟ, ಒಟ್ಟುಗೂಡಿಸಲ್ಪಟ್ಟ
ಮಿಲಿಚ್ಛ. 'ಮಿಚ್ಛ= ಮ್ಲೇಚ್ಛ' ಶಬ್ದವನ್ನು ನೋಡುವುದು.
ಮಿಲಿಟ್ಠ. ವಿ: [ಮ್ಲಿಷ್ಟ] ಅಸ್ಪಷ್ಟವಾದ ಮಾತು, ಅಸ್ಪಷ್ಟವಾಗಿ ಮಾತಾಡುವವ, ನ: ಅಸ್ಪಷ್ಟ ಮಾತು
ಮಿಲಿಮಿಲಿಮಿಲ. ಅಕ: [ದೇ] ಮಿನುಗು, ಹೊಳೆ
ಮಿಲೀಣ. 'ಮಿಲಿಅ' ಶಬ್ದವನ್ನು ನೋಡುವುದು.
ಮಿಲ್ಲ. ಸಕ: [ಮುಚ್] ಬಿಡು, ತ್ಯಜಿಸು. 'ಮಿಲ್ಲಇ', ವ. ಕೃ: ಮಿಲ್ಲಂತ
ಮಿಲ್ಲಾವಿಅ. ವಿ: [ಮೋಚಿತ] ಬಿಡುಗಡೆ ಮಾಡಲ್ಪಟ್ಟ
ಮಿಲ್ಲಿಅ(ಅಪ). 'ಮಿಲಿಅ' ಶಬ್ದವನ್ನು ನೋಡುವುದು.
ಮಿಲ್ಲಿರ. ವಿ: [ಮೋಕ್ತೃ] ಬಿಟ್ಟುಬಿಡುವವನು, ತ್ಯಜಿಸುವವನು.
ಮಿಲ್ಹ. 'ಮಿಲ್ಲ' ಶಬ್ದವನ್ನು ನೋಡುವುದು. 'ಮಿಲ್ಲಇ'
ಮಿಲ್ಹಿಯ. ವಿ: [ಮುಕ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ
ಮಿವ. 'ಇವ' ಶಬ್ದವನ್ನು ನೋಡುವುದು.
ಮಿಸ. ನ: [ಮಿಷ] ನೆಪ, ವ್ಯಾಜ(ಚೇಇ)
ಮಿಸಮಿಸ}. ಅಕ: [ದೇ] ಅತ್ಯಧಿಕವಾಗಿ ಹೊಳೆ,
ಮಿಸಿಮಿಸ} ಚೆನ್ನಾಗಿ ಉರಿ
ಮಿಸಲ(ಅಪ). ಸಕ: [ಮಿಶ್ರಯ್] ಮಿಶ್ರಣಮಾಡು, ಸೇರಿಸು
ಮಿಸಲ(ಅಪ). 'ಮೀಸ, ಮೀಸಾಲಿಅ' ಶಬ್ದಗಳನ್ನು ನೋಡುವುದು.

ಮಿಸಿಮಿಸಿಯ. ವಿ: [ದೇ] ಪ್ರಕಾಶವಮಾನವಾದ, ಹೊಳೆಯುವ, ಹುರಿದುಂಬಿಸಲ್ಪಟ್ಟ
ಮಿಸ್ಸ. ಸಕ: [ಮಿಶ್ರಯ್] ಮಿಶ್ರಣ ಮಾಡುವುದು, ಸೇರಿಸು
ಮಿಸ್ಸ. 'ಮೀಸ=ಮಿಶ್ರ' ಶಬ್ದವನ್ನು ನೋಡುವುದು.
–ಮಿಸ್ಸ. ಪು: [–ಮಿಶ್ರ] ಪೂಜ್ಯ, ಪೂಜನೀಯ.
ಮಿಸ್ಸಾಕೂರ. ಪುಂನ: [ಮಿಶ್ರಾಕೂರ] ಒಂದು ಖಾದ್ಯ ವಿಶೇಷ.
ಮಿಹ. ಅಕ: [ಮಿಥ್] ಸ್ನೆಹ ಬೆಳೆಸು
ಮಿಹ. 'ಮಿಸ=ಮಿಷ' ಶಬ್ದವನ್ನು ನೋಡುವುದು.
ಮಿಹ. 'ಮಿಹೋ' ಶಬ್ದವನ್ನು ನೋಡುವುದು.
ಮಿಹಿಆ. ಸ್ತ್ರೀ: [ದೇ] ಮೇಘ–ಸಮೂಹ, ಮೋಡದ ಗುಂಪು
ಮಿಹಿಆ. ಸ್ತ್ರೀ:[ಮೇಧಿಕಾ] ಕಡಿಮೆ ಮೋಡ, ಸ್ವಲ್ಪ ಮೋಡ
ಮಿಹಿರ. ಪು: [ಮಿಹಿರ] ಸೂರ್ಯ, ರವಿ(ಉಪ)
ಮಿಹಿಲಾ. ಸ್ತ್ರೀ: [ಮಿಥಿಲಾ] ಒಂದು ಪ್ರಸಿದ್ಧ ನಗರಿ(ತಾ)
ಮಿಹು}. 'ಮಿಹೋ' ಶಬ್ದವನ್ನು ನೋಡುವುದು.
ಮಿಹುಂ}.
ಮಿಹುಣ. ನ: [ಮಿಥುನ] ದಂಪತಿಗಳ ಜೋಡಿ, ಯುಗ್ಮ(ಪಾಅ), ಪ್ರಸಿದ್ಧವಾದ ಮಿಥುನ ರಾಶಿ
ಮಿಹೋ. ಅ: [ಮಿಥಸ್] ಪರಸ್ಪರ, ತಮ್ಮ ತಮ್ಮಲ್ಲಿ(ಉಪ)
ಮೀಅ. ನ: [ದೇ] ಅದೇ ಕಾಲದಲ್ಲಿ, ಅದೇ ಸಮಯದಲ್ಲಿ
ಮೀಣ. ಪುಂ: [ಮೀನ] ಮೀನು(ಗಲುಡ), ಪ್ರಸಿದ್ಧವಾದ ಮೀನರಾಶಿ
ಮೀತ. 'ಮಿತ್ತ=ಮಿತ್ರ' ಶಬ್ದವನ್ನು ನೋಡುವುದು.
ಮೀಮಂಸ. ಸಕ: [ಮೀಮಾಂಸ್] ವಿಚಾರಮಾಡು, ವಿಮರ್ಶೆಮಾಡು
ಮೀಮಾಂಸಾ. ಸ್ತ್ರೀ: [ಮೀಮಾಂಸಾ] ಪೂರ್ವ ಮೀಮಾಂಸಾ ದರ್ಶನ, ಜೈಮಿನೀಯ ದರ್ಶನ
ಮೀಮಾಂಸಿಯ. ವಿ:[ಮೀಮಾಂಸಿತ] ವಿಚಾರಮಾಡಲ್ಪಟ್ಟ
ಮೀರಾ. ಸ್ತ್ರೀ: [ದೇ] ದೊಡ್ಡ ಒಲೆ
ಮೀಲ. ಅಕ: [ಮೀಲ್] ಮುಚ್ಚಿಕೊಳ್ಳುವ ಕ್ರಿಯೆ, ಕಣ್ಣು ಮುಚ್ಚಿಕೊಳ್ಳು
ಮೀಲ. 'ಮಿಲ' ಶಬ್ದವನ್ನು ನೋಡುವುದು.
ಮೀಲಚ್ಛೀಕಾರ. ಪು: [ಮೀಲಚ್ಛೀಕಾರ] ಯವನ ದೇಶ, ಒಬ್ಬ ಯವನ ರಾಜ
ಮೀಲಣ. ನ: [ಮೀಲನ] ಸಂಕೋಚ, ಕಣ್ಣು ಮುಚ್ಚಿಕೊಳ್ಳುವುದು
ಮೀಲಣ. 'ಮಿಲಣ' ಶಬ್ದವನ್ನು ನೋಡುವುದು.
ಮೀಲಿಅ 'ಮಿಲಿಅ=ಮಿಲಿತ' ಶಬ್ದವನ್ನು ನೋಡುವುದು.
ಮೀಸ. ಸಕ: [ಮಿಶ್ರಯ್] ಸೇರಿಸು, ಮಿಶ್ರಮಾಡು,
ಮೀಸ. ವಿ: [ಮಿಶ್ರ] ಸೇರಿಕೊಂಡ, ಮಿಶ್ರವಾದ, ಬೆರಕೆಗೊಂಡ(ಕುಮಾ), ನಿರಂತರ ಮೂರು ದಿನಗಳ ಉಪವಾಸ.
ಮೀಸಾಲಿಅ. ವಿ: [ಮಿಶ್ರ] ಸೇರಿಕೊಂಡ, ಮಿಶ್ರವಾದ, ಬೆರಕೆಗೊಂಡ
ಮೀಸಿಯ. ವಿ: [ಮಿಶ್ರಿತ] ಸೇರಿಕೊಂಡ, ಮಿಶ್ರಗೊಂಡ, ಬೆರೆತಿರುವ
ಮುಅ. ಸಕ: [ಮೋದಯ್] ಸಂತೋಷಪಡಿಸು
ಮುಅ. ಸಕ: [ಮುಚ್] ಬಿಡು, –'**ಮುಅಇ**' ವ.ಕೃ: '**ಮುಅಂತ**'
ಮುಅ. ವಿ: [ಮೃತ] ತೀರಿಕೊಂಡ, ಮರಣಹೊಂದಿದ (ಗಾ), **–ವಹಣ.** ನ: [–ವಹನ] ಶವವನ್ನು ಕೊಂಡೊಯ್ಯುವ ವಾಹನ.
ಮುಅ. ವಿ: [ಸ್ಮೃತ] ನೆನಪಿಸಿಕೊಂಡ(ಆಚಾ)
ಮುಅಂಕ. 'ಮಿಅಂಕ' ಶಬ್ದವನ್ನು ನೋಡುವುದು.
ಮುಅಂಗ. 'ಮಿಅಂಗ' ಶಬ್ದವನ್ನು ನೋಡುವುದು.
ಮುಅಗ್ಗ. ಪು: [ದೇ] ಆತ್ಮವು ಬಾಹ್ಯ ಮತ್ತು ಆಂತರಿಕ ಪುದ್ಗಲಗಳಿಂದ ಆಗಿದೆ ಎಂಬಂಥ ಮಿಥ್ಯಾಜ್ಞಾನ
ಮಅಣ. ನ:[ಮೋಚನ] ಬಿಡುಗಡೆ, ಮುಕ್ತಿ, ಬಿಡಿಸುವುದು
ಮುಅಲ(ಅಪ). 'ಮುಅ=ಮೃತ' ಶಬ್ದವನ್ನು ನೋಡುವುದು.
ಮುಆ. ಸ್ತ್ರೀ: [ಮೃತ್] ಮಣ್ಣು
ಮುಆ. ಸ್ತ್ರೀ: [ಮುದ್] ಹರ್ಷ, ಖುಶಿ, ಆನಂದ, ಸಂತೋಷ
ಮುಆಇಣೀ. ಸ್ತ್ರೀ: [ದೇ] ಚಾಂಡಾಲಿನಿ(ದೇ)
ಮುಆವಿಅ. ವಿ: [ಮೋಚಿತ] ಬಿಡುಗಡೆ ಮಾಡಿಸಲ್ಪಟ್ಟ, ಬಿಡಿಸಲ್ಪಟ್ಟ
ಮುಇ. ವಿ: [ಮೋಚಿನ್] ಬಿಡುವವನು, ಬಿಡುಗಡೆ ಮಾಡುವವನು
ಮುಇಅ. ವಿ: [ಮುದಿತ] ಹರ್ಷಗೊಂಡ, ಸಂತೋಷಗೊಂಡ. ಪು: ರಾವಣನ ಒಬ್ಬ ಯೋಧ
ಮುಇಅ. ವಿ: [ದೇ] ಯೋನಿ–ಶುದ್ಧ, ಪವಿತ್ರಳಾದ ತಾಯಿಗೆ ಹುಟ್ಟಿದ

ಮುಇಅಂಗಾ. 'ಮುಅಂಗೀ' ಶಬ್ದವನ್ನು ನೋಡುವುದು.
ಮುಇಂಗ. 'ಮಿಅಂಗ' ಶಬ್ದವನ್ನು ನೋಡುವುದು. **–ಪುಕ್ಖರ. ಪಂನ:** [–ಪುಷ್ಕರ]
ಮುಇಂಗಲಿಯಾ}. ಸ್ತ್ರೀ: [ದೇ] ಇರುವೆ(ಉಪ)
ಮುಇಂಗಾ}.
ಮುಇಂಗಿ.ವಿ:[ಮೃದಂಗಿನ್] ಮೃದಂಗ ಬಾರಿಸುವವನು.
ಮುಇಂದ. 'ಮುಇಂದ=ಮೃಗೇಂದ್ರ' ಶಬ್ದವನ್ನು ನೋಡುವುದು.
ಮುಇಜ್ಜಂತ 'ಮುಅ=ಮೋದಯ್' ಶಬ್ದವನ್ನು ನೋಡುವುದು.
ಮುಇರ. ವಿ: [ಮೋಕ್ತೃ] ಬಿಡುಗಡೆ ಮಾಡುವವನು
ಮುಅ. 'ಮಿಉ' ಶಬ್ದವನ್ನು ನೋಡುವುದು.
ಮುಉಉಂದ. ಪು: [ಮುಚುಕುಂದ] ಸೂರ್ಯ ವಂಶದ ಒಬ್ಬ ದೊರೆ, ಒಂದು ಹೂಬಿಡುವ ಮರ, ಒಬ್ಬ ಮುನಿ
ಮುಉಂದ. ಪು: [ಮುಕುಂದ] ವಿಷ್ಣು, ನಾರಾಯಣ
ಮುಉರ. 'ಮಉರ=ಮುಕುರ' ಶಬ್ದವನ್ನು ನೋಡುವುದು.
ಮುಉಲ. 'ಮಉಲ=ಮುಕುಲ' ಶಬ್ದವನ್ನು ನೋಡುವುದು.
ಮುಂಗಾಯಣ. ನ: [ಮೃಂಗಾಯಣ] ವಿಶಾಖಾ ನಕ್ಷತ್ರದ ಗೋತ್ರ
ಮುಂಚ. 'ಮುಅ=ಮುಚ್' ಶಬ್ದವನ್ನು ನೋಡುವುದು. **–'ಮುಂಚಇ', ಮುಂಚಏ'. ವ.ಕೃ: ಮುಂಚಂತ'**
ಮುಂಜ. ಪುಂನ: [ಮುಂಜ] ಹಗ್ಗವನ್ನು ಮಾಡಲು ಬಳಸುವ ಒಂದು ಬಗೆಯ ಹುಲ್ಲು(ತೃಣ). ಬ್ರಹ್ಮಚಾರಿ ನಡುವಿಗೆ ಕಟ್ಟಿಕೊಳ್ಳುವ ಮೌಂಜಿ ಇದರಿಂದಲೇ ಆಗುವುದು. **–ಮೇಹಲಾ. ಸ್ತ್ರೀ:** [–ಮೇಖಲಾ] ಮೂಂಜದ ಉಡಿದಾರ(ಣಾಯಾ)
ಮುಂಜಇ. ನ: [ಮೌಂಜಕಿನ್] ಗೋತ್ರ –ವಿಶೇಷ, **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದವ
ಮುಂಜಕಾರ. ಪು: [ಮುಂಜಕಾರ] ಮುಂಜದ ಹುಲ್ಲಿನಿಂದ ಹಗ್ಗ ಮಾಡುವವನು
ಮುಂಜಾಯಣ. ಪು: [ಮೌಂಜಾಯನ] ಒಬ್ಬ ಋಷಿ
ಮುಂಟ. ವಿ: [ದೇ] ಹೀನ ಶರೀರವುಳ್ಳ.
ಮುಂಡ. ಸಕ: [ಮುಂಡಯ್] ತಲೆಬೋಳಿಸು, ಸಂನ್ಯಾಸ ದೀಕ್ಷೆ ತಗೆದುಕೊಳ್ಳು,

ಮುಂಡ. ಪುಂನ: [ಮುಂಡ] ಮಸ್ತಕ, ಶಿರ, ತಲೆ. **ವಿ:** ತಲೆ ಬೋಳಿಸಿಕೊಂಡ, ಸಂನ್ಯಾಸ ದೀಕ್ಷೆ ತೆಗೆದುಕೊಂಡ(ಉವಾ). **–ಪರಸು. ಪು:** [–ಪರಶು] ಹರಿತವಾದ ಕೊಡಲಿ.
ಮುಂಡಣ. ನ: [ಮುಂಡನ] ತಲೆಯ ಕೂದಲನ್ನು ಬೋಳಿಸಿಕೊಳ್ಳುವುದು
ಮುಂಡಾ. ಸ್ತ್ರೀ: [ದೇ] ಹರಿಣಿ, ಹೆಣ್ಣು ಜಿಂಕೆ
ಮುಂಡಾವಿಅ}. ವಿ: [ಮುಂಡಿತ]
ಮುಂಡಿಅ}. ತಲೆಬೋಳಿಸಿಕೊಂಡ (ಭಗ)
ಮುಂಡಿ. ವಿ: [ಮುಂಡಿನ್] ತಲೆ ಬೋಳಿಸುವವನು
ಮುಂಡೀ. ಸ್ತ್ರೀ: [ದೇ] ತಲೆಗೆ ಸುತ್ತಿಕೊಳ್ಳುವ ವಸ್ತ್ರ
ಮುಂಢ}. ಪು: [ಮೂರ್ಧನ್] ಶಿರಸ್ಸು, ತಲೆ, ಮಸ್ತಕ.
ಮುಂಢಾಣ}. 'ಮುದ್ಧ=ಮೂರ್ಧನ್' ಶಬ್ದವನ್ನು ನೋಡುವುದು.
ಮುಕಲಾವ. ಸಕ: [ದೇ] ಕಳುಹಿಸಿಸು
ಮುಕುರ. ಪು: [ಮುಕುರ] ಕನ್ನಡಿ, ದರ್ಪಣ
ಮುಕ್ಕ. ವಿ: [ಮೂಕ] ಮೂಗ
ಮುಕ್ಕ.(ಅಪ). ಸಕ: [ಮುಚ್] ಬಿಡು. **'ಮುಕ್ಕಇ'**
ಮುಕ್ಕ. ವಿ: [ಮುಕ್ತ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ, ಮುಕ್ತನಾದ, ಮೋಕ್ಷ ಹೊಂದಿದ, ನಿರಂತರ ಐದು ದಿನಗಳವರೆಗೆ ಉಪವಾಸ. 'ಮುಕ್ತ' ಶಬ್ದವನ್ನು ನೋಡುವುದು.
ಮುಕ್ಕಯ. ನ: [ದೇ] ವಧುವನ್ನು ಹೊರತು ಪಡಿಸಿ ಇತರೆ ಆಹ್ವಾನಿತ ಕನ್ಯೆಯರ ವಿವಾಹ(ದೇ)
ಮುಕ್ಕಲ. ವಿ: [ದೇ] ಉಚಿತ, ಯೋಗ್ಯ, ಸ್ವತಂತ್ರ, ಬಂಧನದಿಂದ ಮುಕ್ತನಾದ.
ಮುಕ್ಕಲಿಅ.ವಿ: [ದೇ]ಬಂಧನದಿಂದ ಬಿಡುಗಡೆಮಾಡಲ್ಪಟ್ಟ
ಮುಕ್ಕುಂಡೀ. ಸ್ತ್ರೀ: [ದೇ] ಜಟೆಯ ಗಂಟು, ತುರುಬು, ನಾರು
ಮುಕ್ಕುರುಡ. ಪು: [ದೇ] ರಾಶಿ
ಮುಕ್ಕೆಲ್ಲಯ. 'ಮುಕ್ಕ=ಮುಕ್ತ' ಶಬ್ದವನ್ನು ನೋಡುವುದು.
ಮುಕ್ಖ. ಪು: [ಮೋಕ್ಷ] ಮುಕ್ತಿ, ನಿರ್ವಾಣ, ಬಿಡುಗಡೆ
ಮುಕ್ಖ. ವಿ: [ಮೂರ್ಖ] ಅಜ್ಞಾನಿ, ಮೂರ್ಖ, ದಡ್ಡ
ಮುಕ್ಖ. ವಿ: [ಮುಖ್ಯ] ಪ್ರಧಾನ, ಮುಖ್ಯ
ಮುಕ್ಖ. ಪುಂನ: [ಮುಷ್ಕ] ಅಂಡಕೋಶ, ಬೀಜ, ಮೊಕ್ಕೆ ಮರ, ಕಳ್ಳ, ಚೋರ, **ವಿ:** ಪುಷ್ಟವಾಗಿರುವ, ಮಾಂಸಲವಾದ
ಮುಕ್ಖಣ. 'ಮೊಕ್ಖಣ' ಶಬ್ದವನ್ನು ನೋಡುವುದು.

ಮುಕ್ಖಣೀ. **ಸ್ತ್ರೀ:** [**ಮೋಕ್ಷಣೀ**] ನಿಶ್ಚೇಷ್ಟಗೊಳಿಸುವುದರಿಂದ ಬಿಡುಗಡೆ ಮಾಡುವ ವಿದ್ಯೆ
ಮುಖ. **'ಮುಹ=ಮುಖ'** ಶಬ್ದವನ್ನು ನೋಡುವುದು.
ಮುಖ. **ಪು:** [**ಮುಖ**] ಒಂದು ಮ್ಲೇಚ್ಛ ಜಾತಿ, ಗಾಡಿಯ ಮೇಲ್ಭಾಗದ ಮುಚ್ಚಳ, ಛಾವಣಿ
ಮುಗ. **'ಮುಗ್ಗ'** ಶಬ್ದವನ್ನು ನೋಡುವುದು.
ಮುಗುಂದ. **'ಮಉಂದ=ಮುಕುಂದ'** ಶಬ್ದವನ್ನು ನೋಡುವುದು.
ಮುಗುಂಸ. **ಪುಂಸ್ತ್ರೀ:**[**ದೇ**] ಭುಜದಿಂದ ಮುಂದೆ ಚಲಿಸುವ ಪ್ರಾಣಿಯ ಒಂದು ಜಾತಿ(ಪಣ್ಣ). **ಸ್ತ್ರೀ:** **–ಸಾ**
ಮುಗ್ಗ. **ಪು:** [**ಮುದ್ಗ**] ಹೆಸರು ಕಾಳು, ಒಂದು ಬಗೆಯ ರೋಗ, ನೀರು –ಕಾಗೆ. **–ಪಣ್ಣೀ.** **ಸ್ತ್ರೀ:** [**–ಪರ್ಣೀ**] ಕಾಡು ಹೆಸರುಗಿಡ(ಪಣ್ಣ). **–ಸೇಲ.** **ಪು:** [**–ಶೈಲ**] ಎಂದೂ ನೆನೆಯದ ಪರ್ವತ
ಮುಗ್ಗಡ **ಪು:** [**ದೇ**] ಮೊಗಲರೆಂಬ ಮ್ಲೇಚ್ಛ ಜಾತಿ. ವ್ಯಂತರ, **'ಮೊಗ್ಗಡ'** ಶಬ್ದವನ್ನು ನೋಡುವುದು.
ಮುಗ್ಗರ. **ನ:** [**ಮುದ್ಗರ**] ಮೊಗ್ಗು, ಗದೆ, ಚಮ್ಮಟಿಗೆ, ಕೊಡಲಿ. **'ಮೊಗ್ಗರ'** ಶಬ್ದವನ್ನು ನೋಡುವುದು.
ಮುಗ್ಗರಯ. **ನ:** [**ದೇ, ಮುಗ್ಧಾರತ**] ಮುಗ್ಧೆಯೊಂದಿಗೆ ರಮಿಸುವಿಕೆ
ಮುಗ್ಗಲ. **'ಮುಗ್ಗಡ'** ಶಬ್ದವನ್ನು ನೋಡುವುದು.
ಮುಗ್ಗಸ. **ಪು:** [**ದೇ**] ಮುಂಗುಸಿ
ಮುಗ್ಗಾಹ. **ಅಕ:** [**ಪ್ರ –ಸೃ**] ಹರಡು, ಪಸರಿಸು
ಮುಗ್ಗಿಲ}. **ಪು:** [**ದೇ**] ಒಂದು ಪರ್ವತ.
ಮುಗ್ಗಿಲ್ಲ}.
ಮುಗ್ಗುಸು. **'ಮುಗ್ಗಸ'** ಶಬ್ದವನ್ನು ನೋಡುವುದು.
ಮುಗ್ಘಡ. **'ಮುಗ್ಗಡ'** ಶಬ್ದವನ್ನು ನೋಡುವುದು.
ಮುಗ್ಘುರುಡ. **'ಮುಕ್ಕುರುಡ'** ಶಬ್ದವನ್ನು ನೋಡುವುದು.
ಮುಚಕುಂದ}. **'ಮುಉಉಂದ'** ಶಬ್ದವನ್ನು
ಮುಚುಕುಂದ}. ನೋಡುವುದು.
ಮುಚ್ಛ. **ಅಕ:** [**ಮೂರ್ಚ್ಛ್**] ಮೂರ್ಛೆಹೋಗು, ಆಸಕ್ತನಾಗು, ವೃದ್ಧಿಹೊಂದು. **'ಮುಚ್ಛಇ'**
ಮುಚ್ಛಣಾ. **ಸ್ತ್ರೀ:** [**ಮೂರ್ಚ್ಛನಾ**] ಗಾನದ ಒಂದು ಅಂಗ, ಸ್ವರಗಳ ಆರೋಹಣ ಮತ್ತು ಅವರೋಹಣ; ಸ್ವರವು ವಿಕಾಸಗೊಂಡು ರಾಗವಾಗಿ ಪರಿಣಮಿಸುವುದು. ಮೂರ್ಛೆರೋಗ

ಮುಚ್ಛಾ. **ಸ್ತ್ರೀ:** [**ಮೂರ್ಚ್ಛಾ**] ಮೋಹ(ತಾ), ಮೂರ್ಛೆ ಹೋಗುವುದು, ಆಸಕ್ತಿ, ಸ್ವರದ ಬೆಳವಣಿಗೆ. ಗೀತದ ಒಂದು ಅಂಗ(ತಾ)
ಮುಚ್ಛಾವಿಅ}. **ವಿ:** [**ಮೂರ್ಚ್ಛಿತ**] ಮೂರ್ಛೆ
ಮುಚ್ಛಿಅ}. ಹೋಗಿರುವ, ಒಂದು ನರಕಾವಾಸ
ಮುಚ್ಛಿಮ. **ಪು:** [**ಮೂರ್ಚ್ಛಿಮ**] ಒಂದು ಬಗೆಯ ಮೀನು
ಮುಚ್ಛಿರ. **ವಿ:** [**ಮೂರ್ಚ್ಛಿತೃ**] ವೃದ್ಧಿಹೊಂದುವವನು, ಮೂರ್ಛೆಹೋದವನು
ಮುಜ್ಝ. **ಅಕ:** [**ಮುಹ್**] ಮೋಹಗೊಳ್ಳು, ಗಾಬರಿಗೊಳ್ಳು (ಭವಿ). **'ಮುಜ್ಝಇ'**
ಮುಟ್ಟಿಮ. **ಪುಂಸ್ತ್ರೀ:** [**ದೇ**] ಗರ್ವ, ಅಹಂಕಾರ. **'ಮೊಟ್ಟಿಮ'** ಶಬ್ದವನ್ನು ನೋಡುವುದು.
ಮುಟ್ಠ. **ವಿ:** [**ಮುಷ್ಟ, ಮುಷಿತ**] ಕಳುವು ಮಾಡಲ್ಪಟ್ಟವನು
ಮುಟ್ಠಿ. **ಪುಂಸ್ತ್ರೀ:** [**ಮುಷ್ಟಿ**] ತುಂಬಿದ ಒಂದು ಹಿಡಿ, ಮುಚ್ಚಿದ ಕೈ, ಬಿಗಿಹಿಡಿದ ಹಸ್ತ. **–ಜುಜ್ಝ.** **ನ:** [**–ಯುದ್ಧ**] ಮುಷ್ಟಿಯುದ್ಧ. **–ಪುತ್ಥಯ.** **ನ:** [**–ಪುಸ್ತಕ**] ನಾಲ್ಕು ಅಂಗುಲ ಉದ್ದ ವೃತ್ತಾಕಾರದ ಅಥವಾ ಚತುಷ್ಕೋಣಾಕಾರದ ಪುಸ್ತಕ.
ಮುಟ್ಠಿಅ. **ಪು:** [**ಮೌಷ್ಟಿಕ**] ಅನಾರ್ಯ –ದೇಶ, ಒಂದು ಅನಾರ್ಯ ಮನುಷ್ಯ ಜಾತಿ, ಮುಷ್ಟಿಯುದ್ಧ ಮಾಡುವ ಜಟ್ಟಿ(ಪಣ್ಣ). ವಿ:ಮುಷ್ಟಿಗೆ ಸಂಬಂಧಿಸಿದ.
ಮುಟ್ಠಿಅ. **ಪು:** [**ಮುಷ್ಟಿಕ**] ಶ್ರೀ ಬಲರಾಮನೊಂದಿಗೆ ಮುಷ್ಟಿಯುದ್ಧ ಮಾಡಿ ಅವನಿಂದ ಹತನಾದವನು (ಪಣ್ಣ), ಅನಾರ್ಯ ದೇಶ, ಒಂದು ಅನಾರ್ಯ ಮನುಷ್ಯ ಜಾತಿ
ಮುಟ್ಠಿಕ್ಕಾ. **ಸ್ತ್ರೀ:** [**ದೇ**] ಬಿಕ್ಕಳಿಕೆ
ಮುಡ್ಢ. **'ಮುಂಢ'** ಶಬ್ದವನ್ನು ನೋಡುವುದು.
ಮುಡ್ಢ. **ವಿ:** [**ಮುಗ್ಧ, ಮೂಢ**] ಮೂರ್ಖ, ಅಜ್ಞ
ಮುಣ. **ಸಕ:** [**ಜ್ಞಾ, ಮುಣ್**] ತಿಳಿದುಕೊಳ್ಳು, ಅರಿ. –**'ಮುಣಇ'** . ವ. ಕೃ: **'ಮುಣಂತ'**
ಮುಣಣ. **ನ:** [**ಜ್ಞಾನ, ಮುಣನ**] ಜ್ಞಾನ, ತಿಳಿವು(ಕುಪ್ರ)
ಮುಣಮುಣ. **ಸಕ:** [**ಮುಣಮುಣಾಯ್**] ಅವ್ಯಕ್ತವಾದ ಶಬ್ದ ಮಾಡು, ಬಡಬಡಿಸು
ಮುಣಾಲ. **ಪುಂನ:** [**ಮೃಣಾಲ**] ತಾವರೆಯ ದಂಟು, ದಿಂಡು, ತಾವರೆಯ ದಂಟಿನ ನಾರು, ಎಳೆ (ಪಾಅ), ಲಾಮಂಚದ ಬೇರು, ಕಮಲ

ಮುಣಾಲಿ. ಪು: [ಮೃಣಾಲಿನ್] ತಾವರೆಗಳ ಸಮೂಹ, ತಾವರೆಗಳು ತುಂಬಿರುವ ಸ್ಥಳ(ಸುಪಾ)
ಮುಣಾಲಿಆ}. ಸ್ತ್ರೀ: [ಮೃಣಾಲಿಕಾ, –ಲೀ]
ಮುಣಾಲೀ}. ಕಮಲನಾಳದ ತಂತು, ಎಳೆ, ಕಮಲದ ದಿಂಡಿನ ಅಂಕುರ, ಕಮಲಿನಿ, **'ಮಣಾಲಿಯಾ'** ಶಬ್ದವನ್ನು ನೋಡುವುದು.
ಮುಣಿ. ಪು: [ಮುನಿ] ರಾಗ ದ್ವೇಷಾದಿಗಳಿಲ್ಲದ ಸಂತ ಮನುಷ್ಯ, ಸಾಧು, ಸಂನ್ಯಾಸಿ. ಯತಿ, ಅಗಸ್ತ್ಯ ಮುನಿ. ಏಳರ ಸಂಖ್ಯೆ, ಒಂದು ಛಂದಸ್ಸು. **–ಚಂದ.** ಪು: [–ಚಂದ್ರ] ದೇವಸೂರಿಯ ಗುರುವಾಗಿದ್ದ ಒಬ್ಬ ಪ್ರಸಿದ್ಧ ಜೈನ ಆಚಾರ್ಯ ಮತ್ತು ಗ್ರಂಥಕಾರ. ಒಬ್ಬ ದೊರೆ. **–ನಾಹ.ಪು:** [–ನಾಥ] ಸಾಧುಗಳ ಮುಖಂಡ. **–ಪುಂಗವ.** ಪು: [ಪುಂಗವ] ಮುನಿಶ್ರೇಷ್ಠ. **–ರಾಯ.** ಪು: [–ರಾಜ] ಮುನಿಗಳ ನಾಯಕ(ಸುಪಾ). **–ವಇ.** ಪು: [–ಪತಿ]ಅದೇ ಅರ್ಥ, **–ವರ.** ಪು: [–ವರ] ಮುನಿಶ್ರೇಷ್ಠ. **–ವೇಜಯಂತ.** ಪು: [–ವೈಜಯಂತ] ಮುನಿ ಪ್ರಧಾನ. **–ಸೀಹ.** ಪು: [–ಸಿಂಹ] ಶ್ರೇಷ್ಠ ಮುನಿ. **–ಸುವ್ವಯ.ಪು:** [–ಸುವ್ರತ] ವರ್ತಮಾನ ಕಾಲದಲ್ಲಿ ಜನಿಸಿದ ಭರತವರ್ಷದ ೨೦ನೇ ತೀರ್ಥಂಕರ. ಭಾರತವರ್ಷದ ಒಬ್ಬ ಭಾವೀ ತೀರ್ಥಂಕರ.
ಮುಣಿ. ಪು: [ದೇ. ಮುನಿ] ಒಬ್ಬ ಯಕ್ಷ, ಹೆಮ್ಮರ, ತಿಗಡು ಮರ(ಕುಮಾ)
ಮುಣಿಅ. ವಿ: [ದೇ. ಮುಣಿಕ] ಗ್ರಹ ಹಿಡಿದ, ಹುಚ್ಚ
ಮುಣಿಂದ. ಪು: [ಮುನೀಂದ್ರ] ಮುನಿಶ್ರೇಷ್ಠ(ಭಗ)
ಮುಣಿರ. ವಿ: [ಜ್ಞಾತೃ, ಮುಣಿತೃ] ತಿಳಿದುಕೊಳ್ಳುವವನು
ಮುಣೀಸ}. ಪು: [ಮುನೀಶ] ಮುನಿಗಳ ಮುಖಂಡ
ಮುಣೀಸರ}. [ಮನೀಶ್ವರ]
[**ಮುಣೀಸಿಮ**]. ಪುಂನ: [ಮನುಷ್ಯತ್ವ] ಮನುಷ್ಯತ್ವ, ಪುರುಷಾರ್ಥ.
ಮುತ್ತ.ಸಕ:[ಮೂತ್ರಯ್]ಮೂತ್ರವಿಸರ್ಜಿಸು. **'ಮುತ್ತಂತಿ'**
ಮುತ್ತ. ನ: [ಮೂತ್ರ] ಮೂತ್ರ, ಉಚ್ಚೆ (ಸುಪಾ)
ಮುತ್ತ. **'ಮುಕ್ಕ= ಮುಕ್ತ'** ಶಬ್ದವನ್ನು ನೋಡುವುದು. **ಮುತ್ತಾಲಯ.** ಪುಂಸ್ತ್ರೀ: [ಮುಕ್ತಾಲಯ]ಮುಕ್ತ ಜೀವರ ಸ್ಥಳ, ಈಷತ್ಪ್ರಾಗ್ಭರಾ ಎಂಬ ಪೃಥ್ವಿ, ಸ್ತ್ರೀ: **–ಯಾ.**
ಮುತ್ತ. ವಿ:[ಮೂರ್ತ್] ಆಕಾರವುಳ್ಳ, ರೂಪವುಳ್ಳ, ಕಠಿಣ, ಮೂಢ, ಮೂರ್ಚೆ ಹೋಗಿರುವ, ಪು: ಒಂದು ದಿನದ ಉಪವಾಸ. ಒಂದು ಪ್ರಾಣದ ಹೆಸರು
ಮುತ್ತ –. **'ಮುತ್ತಾ'** ಶಬ್ದವನ್ನು ನೋಡುವುದು(ಔಪ)
ಮುತ್ತವ್ವ. **'ಮುಂಚ'** ಶಬ್ದವನ್ನು ನೋಡುವುದು.
ಮುತ್ತಾ. ಸ್ತ್ರೀ: [ಮುಕ್ತಾ] ಮುತ್ತು. **–ಜಾಲ.** ನ: [–ಜಾಲ] ಮುತ್ತಿನ ಸಮೂಹ, ಮುತ್ತಿನ ಹಾರ(ಔಪ). **–ದಾಮ.** ನ: [–ದಾಮನ್] ಮುತ್ತಿನ ಹಾರ. **–ವಲಿ, –ವಲೀ.** ಸ್ತ್ರೀ: [–ವಲಿ, –ಲೀ] ಮುತ್ತಿನ ಹಾರ(ಪಾಅ). ಒಂದು ಬಗೆಯ ತಪಸ್ಸು. ಒಂದುದ್ವೀಪ, ಒಂದು ಸಮುದ್ರ. **–ಸುತ್ತಿ.** ಸ್ತ್ರೀ: [–ಶುಕ್ತಿ] ಕಪ್ಪೆ ಚಿಪ್ಪು. ಒಂದು ಮುದ್ರಾ –ವಿಶೇಷ. **–ಹಲ.** ನ: [–ಫಲ] ಮುತ್ತು, **–ಹಲಿಲ್ಲ.** ವಿ: [–ಫಲವತ್] ಮುತ್ತುಗಳನ್ನುಳ್ಳವ. (ಕಪ್ಪೂ)
ಮುತ್ತಿ. ಸ್ತ್ರೀ: [ಮುಕ್ತಿ] ಮೋಕ್ಷ, ನಿರ್ವಾಣ(ಆಚಾ), ಲೋಭವಿಲ್ಲದಿರುವುದು, ಸಂತೋಷ, ಮುಕ್ತ ಜೀವರ ಸ್ಥಾನವಾದ ಈಷತ್ ಪ್ರಾಗ್ಭರಾ ಪೃಥ್ವಿ, ನಿಸ್ಸಂಗತ್ವ(ಆಚಾ), ಬಿಡುಗಡೆ, ವಿಮೋಚನೆ
ಮುತ್ತಿ. ವಿ: [ಮೂತ್ರಿನ್] ಬಹುಮೂತ್ರ ರೋಗವುಳ್ಳವನು
ಮುತ್ತಿ. ವಿ: [ಮೌಕ್ತಿನ್, ಮೌಕ್ತಿಕ] ಮುತ್ತನ್ನು ಪೋಣಿಸುವವನು, ಮುಕ್ತಾಫಲ(ಉಪ).
ಮುತ್ತಿಅ. ನ: [ಮೌಕ್ತಿಕ] ಮುತ್ತು. **'ಮೋತ್ತಿಅ'** ಶಬ್ದವನ್ನು ನೋಡುವುದು.
ಮುತ್ತೋಲೀ. ಸ್ತ್ರೀ: [ದೇ] ಮೂತ್ರಾಶಯ, ಮೇಲೆ ಮತ್ತು ಕೆಳಗೆ ಸಂಕೀರ್ಣವಾಗಿದ್ದು, ಮಧ್ಯದಲ್ಲಿ ವಿಶಾಲವಾಗಿರುವ ಚಿಕ್ಕ ಕೋಣೆ.
ಮುತ್ಥ. ತ್ರಿ: [ಮುಸ್ತ] ಒಂದು ವಿಧದ ವಿಷ, ಸ್ತ್ರೀ:–ತ್ಥಾ.
ಮುದಗ್ಗ. **'ಮುಅಗ್ಗ'** ಶಬ್ದವನ್ನು ನೋಡುವುದು.
ಮುದಾ. ಸ್ತ್ರೀ: [ಮುದ್] ಹರ್ಷ, ಸಂತಸ, **–ಗರ.** ವಿ: [–ಕರ] ಸಂತೋಷ ಜನಕ
ಮುದುಗ. ಪು: [ದೇ] ಒಂದು ಬಗೆಯ ಮೊಸಳೆ, ಒಂದು ಜಾತಿಯ ಜಲಚರ ಪ್ರಾಣಿ(ಜೀವ)
ಮುದ್ದ. ಸಕ: [ಮುದ್ರಯ್] ಮುದ್ರೆ ಹಾಕು, ಮೊಹರು ಹಾಕು, ಮುಚ್ಚು, ಬೆಲೆಕಟ್ಟು, ಎಣಿಕೆಮಾಡು
ಮುದ್ದಂಗ. ಪು: [ದೇ] ಉತ್ಸವ, ಸನ್ಮಾನ
ಮುದ್ದಗ}. ಪು: [ಮುದ್ರಿಕಾ] ಉಂಗುರ(ಉವಾ),
ಮುದ್ದ}. (ಪಉಮ)

ಮುದ್ದಾ. ಸ್ತ್ರೀ: [ಮುದ್ರಾ] ಮೊಹರು, ಮುದ್ರೆ(ಸುಪಾ), ಉಂಗುರ, ಅಂಗ –ವಿನ್ಯಾಸ

ಮುದ್ದಿಅ. ವಿ: [ಮುದ್ರಿತ] ಮುದ್ರೆ ಹಾಕಲ್ಪಟ್ಟಿರುವ, ಮಚ್ಚಲಾಗಿರುವ(ಣಾಯಾ)

ಮುದ್ದಿಅ–.}. ಸ್ತ್ರೀ: [ಮುದ್ರಿಕಾ] ಉಂಗುರ(ಪಣ್ಣ).

ಮುದ್ದಿಆ}. –ಬಂಧ. ಪು: [ಬಂಧ] ಗಂಟನ್ನು ಕಟ್ಟುವುದು, ಒಂದು ಬಗೆಯ ಬಂಧ(ಓಘ)

ಮುದ್ದಿಆ. ಸ್ತ್ರೀ: [ಮೃದ್ವೀಕಾ] ದ್ರಾಕ್ಷಿಯ ಬಳ್ಳಿ(ಪಣ್ಣ), ದ್ರಾಕ್ಷಿಯ ಹಣ್ಣು(ಉತ್ತ)

ಮುದ್ದೀ. ಸ್ತ್ರೀ: [ದೇ] ಚುಂಬನ, ಮುದ್ದು

ಮುದ್ದುಯ. 'ಮುದುಗ' ಶಬ್ದವನ್ನು ನೋಡುವುದು.

ಮುದ್ಧ. 'ಮುಂಢ' ಶಬ್ದವನ್ನು ನೋಡುವುದು. **–ನ್ನ.** ವಿ: [–ನ್ಯ] ಮಸ್ತಕದಲ್ಲಿ ಹುಟ್ಟಿದ, ಮಸ್ತಕದಲ್ಲಿ ಇರುವ, 'ರ' ಕಾರವೇ ಮೊದಲಾದ ಮೂರ್ಧ ಸ್ಥಾನೀಯ ವರ್ಣಗಳು. **–ಯ.** ಪು: [–ಜ] ಕೇಶ, ಕೂದಲು. **–ಸೂಲ.** ನ: [–ಶೂಲ] ತಲೆ ನೋವು

ಮುದ್ಧ. ವಿ: [ಮುಗ್ಧ] ಮೂಢ, ಮೋಹದಿಂದ ಕೂಡಿದ, ಸುಂದರ, ಮನೋಹರ, ಚೆಲುವಾದ, ಮೋಹವುಂಟುಮಾಡುವ(ಕುಮಾ)

ಮುದ್ಧಾ. ಸ್ತ್ರೀ: [ಮುಗ್ಧಾ] ಮುಗ್ಧ ಹೆಣ್ಣು, ನಾಯಿಕೆಯ ಒಂದು ಪ್ರಭೇದ

ಮುದ್ಧಾ(ಅಪ), 'ಮುಹಾ' ಶಬ್ದವನ್ನು ನೋಡುವುದು.

ಮುದ್ಧಾಣ. 'ಮುಂಢ' ಶಬ್ದವನ್ನು ನೋಡುವುದು

ಮುಬ್ಭ. ಪು: [ದೇ] ಮನೆಯ ಮೇಲಣ ಅಡ್ಡ ಮರ(ತೀರು, ತೊಲೆ)

ಮುಮುಕ್ಖು. ವಿ: [ಮುಮುಕ್ಷು] ಮುಕ್ತಗೊಳ್ಳಬೇಕೆಂಬ ಬಯಕೆ ಉಳ್ಳವನು.

ಮುಮ್ಮಇ.} ವಿ: [ಮೂಕಮೂಕ] ಅತ್ಯಂತ ಮೂಕ,

ಮುಮ್ಮಯ}. ವ್ಯಕ್ತವಾಗದ ಮೂಕ ಭಾಷೆ ಆಡುವ

ಮುಮ್ಮುರ. ಸಕ: [ಚೂರ್ಣಯ್] ಪುಡಿಮಾಡು,

ಮುಮ್ಮುರ. ಪು: [ದೇ. ಮುರ್ಮುರ] ಬೆರಣಿಯ ಬೆಂಕಿ, ತುಷಾಗ್ನಿ(=ಹೊಟ್ಟಿನ ಬೆಂಕಿ), ಬೂದಿ ಮುಚ್ಚಿದ ಕೆಂಡ(ಉಪ)

ಮುಮ್ಮುಹೀ. ಸ್ತ್ರೀ: [ಮುನ್ಮುಖೀ] ಮನುಷ್ಯನ ಹತ್ತು ಅವಸ್ಥೆಗಳಲ್ಲಿ ಒಂಬತ್ತನೆಯದು –೮೦ರಿಂದ ೯೦ರ ಅವಧಿಯ ಹಂತ

ಮುರ. ಅಕ: [ಲಡ್] ಹಾವಭಾವ ತೋರು, ಭೋಗಾನುಭವ ಹೊಂದು. ಸಕ: ಪೀಡಿಸು, ನಾಲಿಗೆ ಆಡಿಸು, ಎಸೆ, ಹರಡು, ಹೇಳು, ಮತಾಡು, ಎಸೆ. –'ಮುರಇ'

ಮುರ. ಅಕ: [ಸ್ಫುಟ್] ಅರಳು. 'ಮುರಇ'

ಮುರ. ಪು: [ಮುರ] ಒಬ್ಬ ದೈತ್ಯ, **–ರಿಉ.** ಪು: [–ರಿಪು] ಶ್ರೀಕೃಷ್ಣ. **–ವೇರಿಯ.** ಪು: [ವೈರಿನ್] ಅದೇ ಅರ್ಥ. **ಮುರಾರಿ.** ಪು: [ಮುರಾರಿ] ಅದೇ ಅರ್ಥ

ಮುರಈ. ಸ್ತ್ರೀ: [ದೇ] ಕುಲಟೆ, ವ್ಯಭಿಚಾರಿಣಿ(ದೇ),

ಮುರಜ}. ಪು: [ಮುರಜ] ಮೃದಂಗ ವಾದ್ಯ(ಗಾ),

ಮುರಯ}. 'ಮುರವ' ಶಬ್ದವನ್ನು ನೋಡುವುದು.

ಮುರಲ. ಪು.ಬ: [ಮುರಲ] ಕೇರಳ ರಾಜ್ಯ(ಗಾ)

ಮುರವ. 'ಮುರಯ' ಶಬ್ದವನ್ನು ನೋಡುವುದು. ಗಳದ ಗಂಟು

ಮುರವಿ. ಸ್ತ್ರೀ: [ದೇ. ಮುರಜಿನ್] ಆಭರಣವಿಶೇಷ

ಮುರಿಅ. ವಿ: [ದೇ] ಮುರಿದುಹೋದ, ಭಂಗವಾದ, ಸೊಟ್ಟಗಾಗಿರುವ, ಡೊಂಕಾಗಿರುವ

ಮುರಿಅ. ಪು: [ಮೌರ್ಯ] ಒಂದು ಪ್ರಸಿದ್ಧ ಕ್ಷತ್ರಿಯ ವಂಶ, ಮೌರ್ಯ ವಂಶದಲ್ಲಿ ಹುಟ್ಟಿದ,

ಮುರುಂಡ. ಪು: [ಮುರುಂಡ] ಅನಾರ್ಯ ದೇಶ, ಪಾದಲಿಪ್ತ ಸೂರಿಯ ಕಾಲದ ಒಬ್ಬ ರಾಜ, **ಪುಂಸ್ತ್ರೀ:**ಮುರುಂಡ ದೇಶದನಿವಾಸಿ.ಸ್ತ್ರೀ: **–ಡೀ.**

ಮುರುಕ್ಕಿ. ಸ್ತ್ರೀ: [ದೇ] ಒಂದು ಬಗೆಯ ಪಕ್ವಾನ್ನ

ಮುರುಕ್ಖ. 'ಮುಕ್ಖ=ಮೂರ್ಖ' ಶಬ್ದವನ್ನು ನೋಡುವುದು.

ಮುರುಮುಂಡ. ಪು: [ದೇ] ಜುಟ್ಟು, ಕೂದಲ ಜಟೆ

ಮುರುಮುರಿಅ. ನ: [ದೇ]ಉತ್ಸುಕತೆ, ಹಂಬಲ

ಮುರುಹ. 'ಮುರುಕ್ಖ.' ಶಬ್ದವನ್ನು ನೋಡುವುದು.

ಮುಲಾಸಿಅ. ಪು: [ದೇ] ಕೆಂಡ, ಕಿಡಿ.

ಮುಲ್ಲ(ಅಪ). 'ಮುಂಚ' ಶಬ್ದವನ್ನು ನೋಡುವುದು. 'ಮುಲ್ಲಇ'

ಮುಲ್ಲ}. ಪುಂನ: [ಮೂಲ್ಯ] ಬೆಲೆ

ಮುಲ್ಲಿಅ}.

ಮುವ(ಅಪ). 'ಮುಅ=ಮುಚ್' ಶಬ್ದವನ್ನು ನೋಡುವುದು

ಮುವ್ವಹ. 'ಉವ್ವಹ=ಉದ್–ವಹ್' ಶಬ್ದವನ್ನು ನೋಡುವುದು

ಮುಸ. ಸಕ: [**ಮುಷ್**] ಕಳ್ಳತನ ಮಾಡು, ಕದಿ. –'**ಮುಸಇ**'. ವ. ಕೃ: '**ಮುಸಂತ**'
ಮುಸಂಢಿ. '**ಮುಸುಂಢಿ**' ಶಬ್ದವನ್ನು ನೋಡುವುದು
ಮುಸಣ. ನ: [**ಮೋಷಣ**] ಕಳ್ಳತನ
ಮುಸಲ. ಪುಂನ: [**ಮುಸಲ**] ಒನಕೆ(ಔಪ), ಗದೆ, ಒಂದು ಆಳತೆ, –**ಧರ.** ಪು: [–**ಧರ**] ಬಲರಾಮ (ಕುಮಾ), **ಮುಸಲಾಉಹ.** ಪು: [**ಮುಸಲಾಯುಧ**] ಬಲರಾಮ
ಮುಸಲ. ವಿ: [ದೇ] ಮಾಂಸಲವಾದ ಪುಷ್ಟವಾದ
ಮುಸಲಿ. ಪು: [**ಮುಸಲಿನ್**] ಬಲರಾಮ(ದೇ)
ಮುಸಲೀ. '**ಮೋಸಲೀ**' ಶಬ್ದವನ್ನು ನೋಡುವುದು.
ಮುಸಹ. ನ: [ದೇ] ಮನಸ್ಸಿನ ಆಕುಲತೆ(ದೇ)
ಮುಸಾ. ಅ. ಸ್ತ್ರೀ: [**ಮೃಷಾ**] ಮಿಥ್ಯೆ, ಸುಳ್ಳು, ಅಸತ್ಯ, ಸುಳ್ಳು ಮಾತು. –**ವಾದ.** '**–ವಾಯ**' ಶಬ್ದವನ್ನು ನೋಡುವುದು. –**ವಾದಿ.** ವಿ: [–**ವಾದಿನ್**] ಸುಳ್ಳು ಹೇಳುವವನು(ಆಚಾ). –**ವಾಯ.** ಪು: [–**ವಾದ**]
ಮುಸಾವಿಅ. ವಿ: [**ಮೋಷಿತ**] ಕಳುವು ಮಾಡಿಸಲ್ಪಟ್ಟ
ಮುಸಿಅ. ವಿ: [**ಮುಷಿತ**] ಕದಿಯಲ್ಪಟ್ಟ(ಸುಪಾ)
ಮುಸುಂಢಿ. ಪುಂಸ್ತ್ರೀ: [ದೇ] ಗಾಯ, ಒಂದು ಬಗೆಯ ಆಯುಧ(ವಪ). ಒಂದುವನಸ್ಪತಿ, ಮರ.
ಮುಸುಮೂರ. ಸಕ: [**ಭಂಜ್**] ಮುರಿ
ಮುಸುಮೂರಣ. ನ: [**ಭಂಜನ**] ಮುರಿಯುವುದು.
ಮುಸುಮೂರಾವಿಅ. ವಿ: [**ಭಂಜಿತ**] ಮುರಿಸಲ್ಪಟ್ಟ, ಒಡೆಸಲ್ಪಟ್ಟ
ಮುಸುಮೂರಿಅ. ವಿ: [**ಭಗ್ನ**] ಒಡೆಯಲ್ಪಟ್ಟ, ಮುರಿಯಲ್ಪಟ್ಟ(ಪಾಅ)
ಮುಹ. '**ಮುಂಖ**' ಶಬ್ದವನ್ನು ನೋಡುವುದು
ಮುಹ. ನ: [**ಮುಖ**] ಮುಖ, ವದನ, ಬಾಣದ ಅಗ್ರಭಾಗ, ಉಪಾಯ(ಉತ್ತ), ಬಾಯಿ, ಬಾಗಿಲು, ಪ್ರಾರಂಭ, ನಾಟಕದ ಐದು ಸಂಧಿಗಳಲ್ಲಿ ಮೊದಲನೆಯದು. ನಾಟಕದ ಶಬ್ದ, ಮೊದಲನೆಯ, ಪ್ರಧಾನ, ಮುಖ್ಯ, ಶಬ್ದ, ದನಿ, ನಾಟಕ, ವೇದ –ಶಾಸ್ತ್ರ, ಪ್ರವೇಶ(ನಿಚೂ), ಒಂದು ಬಗೆಯ ವೃಕ್ಷ. –**ಣಂತಗ, ಣಂತಯ.** ನ: [**ಮುಖಾನಂತಕ**] ಬಾಯಿಗೆ ಕಟ್ಟಿಕೊಳ್ಳುವ ವಸ್ತ್ರ. –**ತೂರಯ.** ನ: [–**ತೂರ್ಯ**] ಬಾಯಿಂದ ಬಾರಿಸುವ ವಾದ್ಯ. –**ಧೋವಣಿಯಾ.** ಸ್ತ್ರೀ: [–**ಧಾವನಿಕಾ**] ಬಾಯಿ ತೊಳೆದುಕೊಳ್ಳಲು ಬಳಸುವ ಮಂಜನವೇ ಮೊದಲಾದ ಸಲಕರಣೆ, –**ಪತ್ತೀ.** ಸ್ತ್ರೀ: [–**ಪತ್ರೀ**] ಬಾಯಿ –ಬಟ್ಟೆ(ಉವಾ). –**ಪುತ್ತಿಯಾ,** –**ಪೋತ್ತಿಯಾ,** –**ಪೋತ್ತೀ.** [–**ಪೋತಿಕಾ**] ಮಾತಾಡುವಾಗ ಬಾಯಿಗೆ ಅಡ್ಡಲಾಗಿ ಇಟ್ಟುಕೊಳ್ಳುವ ಬಟ್ಟೆ –**ಫುಲ್ಲ.** ನ: [–**ಫುಲ್ಲ**] ಒಂದು ವೃಕ್ಷದ ಹೂವು. ಚಿತ್ರಾ ನಕ್ಷತ್ರದ ಆಕಾರ. **ಭಂಡಗ.** ನ: [–**ಭಾಂಡಕ**] ಮುಖಾಭರಣ. –**ಮಂಗಲಿಯ,** –**ಮಂಗಲೀಅ.** ವಿ: [–**ಮಾಂಗಲಿಕ**] ಪರರನ್ನು ಮುಖಸ್ತುತಿ ಮಾಡುವವನು(ಸೂಅ). –**ಮಕ್ಕಡಾ.** –**ಮಕ್ಕಡಿಯಾ.** ಸ್ತ್ರೀ: [–**ಮರ್ಕಟಾ,** –**ಟಿಕಾ**] ಕುತ್ತಿಗೆ ಹಿಡಿದು ಮುಖವನ್ನು ತಿರುಗಿಸುವುದು(ಣಾಯಾ). –**ವಂತ.** ವಿ: [–**ವತ್**] ಬಾಯುಳ್ಳವನು. –**ವಡ.** ಪು: [–**ಪಟ**] ಬಾಯಿಯ ಮುಂದೆ ಅಡ್ಡಲಾಗಿ ಇಟ್ಟುಕೊಳ್ಳುವ ಬಟ್ಟೆ. –**ವಡಣ.** ನ: [–**ಪತನ**] ಬಾಯಿಂದ ಬೀಳುವುದು(ದೇ). –**ವಣಣ.** ಪು: [–**ವರ್ಣ**] ಪ್ರಶಂಸೆ, ಹೊಗಳಿಕೆ. –**ವಾಸ.** ಪು:[–**ವಾಸ**] ಊಟದ ನಂತರ ಹಾಕಿಕೊಳ್ಳುವ ತಾಂಬೂಲ. ಬಾಯನ್ನು ಸುವಾಸನೆಗೊಳಿಸುವ ಪುಡಿ ಇತ್ಯಾದಿ(ಉವಾ). –**ವೀಣಿಯಾ.** ಸ್ತ್ರೀ: [–**ವೀಣಿಕಾ**] ಬಾಯಿಂದ ವಿಕೃತ ಶಬ್ದ ಹೊರಡಿಸುವುದು, ಬಾಯಿಂದ ವಾದ್ಯದ ಶಬ್ದ ಹೊರಡಿಸುವುದು. **ಮುಹಡ.** '**ಮುಹಲ**' ಶಬ್ದವನ್ನು ನೋಡುವುದು. **ಮುಹಡಾಸಯ.** ನ: [**ಮುಹಡಾಶಯ**] ಒಂದು ನಗರ.
ಮುಹತ್ಥಡೀ. ಸ್ತ್ರೀ [ದೇ] ಬಾಯಿಂದ ಬೀಳುವುದು
ಮುಹರ. '**ಮುಹಲ=ಮುಖರ**' ಶಬ್ದವನ್ನು ನೋಡುವುದು.(ಸುಪಾ)
ಮುಹರಿಯ. ವಿ: [**ಮುಖರಿತ**] ಶಬ್ದದಿಂದ ಕೂಡಿದ, ಶಬ್ದಹೊರಡಿಸುತ್ತ
ಮುಹರೋಮರಾಇ. ಸ್ತ್ರೀ: [ದೇ] ಹುಬ್ಬು(ದೇ).
ಮುಹಲ. ನ: [ದೇ] ಮುಖ
ಮುಹಲ. ವಿ: [**ಮುಖರ**] ಹರಟೆಗಾರ, ವಾಚಾಳಿ(ಗಾ), ಮುಖಂಡ, **ಪು:** ಕಾಗೆ, ಶಂಖ, –**ರವ.** ಪು: [–**ರವ**] ತುಮುಲ, ಕೋಲಾಹಲ.
ಮುಹಾ. ಅ. ಸ್ತ್ರೀ: [**ಮುಧಾ**] ವ್ಯರ್ಥ, ನಿರರ್ಥಕ(ಪಾಅ). –**ಜೀವಿ.** ವಿ: [–**ಜೀವಿನ್**] ಭಿಕ್ಷೆಯಿಂದ ಜೀವನ ನಿರ್ವಹಣೆ ಮಾಡುವವನು.

ಮುಹಿಅ.} ನ: [ದೇ] ಸ್ತ್ರೀ: [ದೇ. ಮುಧಿಕಾ] ಬಿಟ್ಟಿ,
ಮುಹಿಆ}. ಯಾವುದೇ ದುಡ್ಡು ಕೊಡದೆ ಇರುವುದು, ಪುಕ್ಕಟೆ
ಮುಹ}. ಅ: [ಮುಹುಸ್] ಮತ್ತೆ ಮತ್ತೆ, ಪುನಃ
ಮುಹುಂ}.ಪುನಃ.
ಮುಹುತ್ತ}. ಪುಂನ: [ಮುಹೂರ್ತ] ಎರಡು ಘಳಿಗೆಗಳ
ಮುಹುತ್ತಾಗ}. ಕಾಲ, ನಲವತ್ತೆಂಟು ನಿಮಿಷಗಳ ಕಾಲ
ಮುಹುಮುಹು **'ಮುಹುಮುಹ'** ಶಬ್ದವನ್ನು ನೋಡುವುದು.
ಮುಹುಲ. **'ಮುಹಲ=ಮುಖರ'** ಶಬ್ದವನ್ನು ನೋಡುವುದು.
ಮುಹುಲ್ಲ. **'ಮುಹ=ಮುಖ'** ಶಬ್ದವನ್ನು ನೋಡುವುದು.
ಮೂಅ. **'ಮುಕ್ಕ=ಮೂಕ'** ಶಬ್ದವನ್ನು ನೋಡುವುದು.
ಮೂಅ. **'ಮುಅ=ಮೃತ'** ಶಬ್ದವನ್ನು ನೋಡುವುದು.
ಮೂಅಲ}. ವಿ: [ದೇ. ಮೂಕ] ಮೂಕ, ಮಾತಾಡುವ
ಮೂಅಲ್ಲ}. ಸಾಮರ್ಥ್ಯವಿಲ್ಲದ
ಮೂಅಲ್ಲಇಅ.} ವಿ: [ದೇ. ಮೂಕಾಯಿತ]
ಮೂಅಲ್ಲಿಅ}. ಮೂಕನಾಗಿ ಮಾಡಲ್ಪಟ್ಟ.
ಮೂಇಂಗಲಿಯಾ} **'ಮುಇಂಗಲಿಯಾ'** ಶಬ್ದವನ್ನು
ಮೂಇಂಗಾ}. ನೋಡುವುದು.
ಮೂಇಲ್ಲಅ}. ವಿ: [ಮೃತ] ಮರಣಿಸಿದ, ಸತ್ತಿರುವ
ಮೂಯಲ್ಲಿಅ}.
ಮೂಡ}. ಪು: [ದೇ] ಅನ್ನದ ಒಂದು ದೊಡ್ಡ ಅಳತೆ.
ಮೂಢ}.
ಮೂಢ. ವಿ: [ಮೂಢ] ಮೂರ್ಖ, ಅಜ್ಞ, ಪೆದ್ದ, ದಡ್ಡ. **–ನಇಯ.** ನ: [–ನಯಿಕ] ಶಾಸ್ತ್ರ –ವಿಶೇಷ, **–ವಿಸೂಇಯಾ.** ಸ್ತ್ರೀ: [–ವಿಸೂಚಿಕ] ಒಂದು ಬಗೆಯ ರೋಗ
ಮೂಣ. ನ: [ಮೌನ] ಸುಮ್ಮನಿರುವುದು, ಮಾತಾಡದೆ ಇರುವುದು, ಮೌನ
ಮೂಯಗ. ಪು: [ದೇ. ಮೂಯಕ] ಮೇವಾಡ ದೇಶದಲ್ಲಿ ಪ್ರಸಿದ್ಧವಾದ ಒಂದು ಬಗೆಯ ತೃಣ(=ಹುಲ್ಲು)
ಮೂರ. ಸಕ: [ಭಂಜ್] ಮುರಿ, ಒಡೆ
ಮೂರಗ. ವಿ: [ಭಂಜಕ] ಮುರಿಯುವವನು, ಒಡೆಯುವವನು(ಪಣ್ಣ)
ಮೂಲ. ನ: [ಮೂಲ] ಬೇರು(ಠಾ), ಕರಣ, ಪ್ರಾರಂಭ, ಆದ್ಯ ಕಾರಣ, ಸಮೀಪ, ಹತ್ತಿರ(ಓಘ), ಪ್ರಸಿದ್ಧವಾದ ಮೂಲಾ ನಕ್ಷತ್ರ. ವ್ರತಗಳ ಪುನಃ ಸ್ಥಾಪನೆ(ಔಪ). ಹಿಪ್ಪಲಿ ಬೇರು. ವಶೀಕರಣವೇ ಮೊದಲಾದುವಕ್ಕೆ ಮಾಡಲಾಗುವ ಔಷಧಿ –ಪ್ರಯೋಗ. ಮೊದಲನೆಯ ಪ್ರಾರಂಭದ, ಮುಖ್ಯ, ಮೂಲಧನ, ಬಂಡವಾಳ(ಉತ್ತ). ಪಾದ, ಸುವರ್ಣಗೆಡ್ಡೆ, ಟೀಕೆಯಿಂದ ವ್ಯಾಖ್ಯಾನಿಸಬೇಕಾದ ಗ್ರಂಥ. ಪ್ರಾಯಶ್ಚಿತ್ತ–ವಿಶೇಷ. **–ಛೇಜ್ಜ.** ವಿ: [–ಛೇದ್ಯ] ಮೂಲವೆಂಬ ಪ್ರಾಯಶ್ಚಿತ್ತದಿಂದ ನಾಶಪಡಿಸಲು ಯೋಗ್ಯವಾದ್ದು. **–ದತ್ತಾ.** ಸ್ತ್ರೀ: [–ದತ್ತಾ]ಶ್ರೀಕೃಷ್ಣನ ಮಗನಾದ ಸಾಂಬನ ಒಬ್ಬ ಹೆಂಡತಿ. **–ದೇವ.** ಪು: [–ದೇವ] ವ್ಯಕ್ತಿವಾಚಕ ಹೆಸರು. **–ದೇವೀ.** ಸ್ತ್ರೀ: [–ದೇವೀ] ಒಂದು ಬಗೆಯ ಲಿಪಿ. **–ನಾಯಗ.** ಪು: [–ನಾಯಕ] ದೇವಾಲಯದ ಅನೇಕ ಪ್ರತಿಮೆಗಳಲ್ಲಿ ಮುಖ್ಯವಾದ ಪ್ರತಿಮೆ. **–ಪ್ಪಾಡಿ.** ವಿ:[–ಉತ್ಪಾಟಿನ್] ಬೇರನ್ನು ಕೀಳುವವನು. **–ಬಿಂಬ.** ನ: [–ಬಿಂಬ] ಮುಖ್ಯ ಪ್ರತಿಮೆ. **–ರಾಯ.** ಪು: [ರಾಜ] ಗುಜರಾತಿನ ಚಾಲುಕ್ಯ ವಂಶೀಯನಾದ ಒಬ್ಬ ಪ್ರಸಿದ್ಧ ದೊರೆ. **–ವಂತ.** ವಿ: [–ವತ್] ಮೂಲವುಳ್ಳ. **–ಸಿರಿ.** ಸ್ತ್ರೀ: [–ಶ್ರೀ] ಶಾಂಬನ ಮಗನ ಒಬ್ಬ ಹೆಂಡತಿ
ಮೂಲಗ}. ನ: [ಮೂಲಕ] ಮೂಲಂಗಿ ಗೆಡ್ಡೆ
ಮೂಲಯ}.
ಮೂಲಗತ್ತಿಆ. ಸ್ತ್ರೀ: [ಮೂಲಗತಿಕಾ] ಮೂಲಂಗಿಯ ತೆಳ್ಳನೆಯ ತುಣುಕು
ಮೂಲವೇಲಿ. ಸ್ತ್ರೀ: [ಮೂಲವೇಲಿ] ಮನೆಯ ಮೇಲ್ಛಾವಣಿಯ ಆಧಾರಭೂತ ಸ್ತಂಬ.
ಮೂಲಿಗಾ. ಸ್ತ್ರೀ: [ಮೂಲಿಕಾ] ಗಿಡಮೂಲಿಕೆ, ಔಷಧಿ
ಮೂಲಿಯ. ನ: [ಮೌಲಿಕ] ಮೂಲಧನ, ಬಂಡವಾಳ
ಮೂಲಿಲ್ಲ. ವಿ: [ಮೂಲ, ಮೌಲಿಕ] ಪ್ರಧಾನ, ಮುಖ್ಯ, ಮೂಲಕ್ಕೆ ಸಂಬಂಧಿಸಿದ್ದು, ಬೇರಿಗೆ ಸಂಬಂಧಿಸಿದ್ದು
ಮೂಲಿಲ್ಲ. ವಿ: [ಮೂಲವತ್] ಮೂಲ ಧನವುಳ್ಳವನು, ಬಂಡವಾಳಗಾರ.
ಮೂಲೀ. ಸ್ತ್ರೀ: [ಮೂಲೀ] ವಶೀಕರಣವೇ ಮೊದಲಾದವುಗಳಲ್ಲಿ ಬಳಸುವ ಔಷಧಿ –ವಿಶೇಷ
ಮೂಸ. **'ಮುಸ=ಮುಷ'** ಶಬ್ದವನ್ನು ನೋಡುವುದು.

ಮೂಸಗ}. **ಪು:** [**ಮೂಷಕ, ಮೂಷಿಕ**] ಇಲಿ
ಮೂಸಯ}.
ಮೂಸರಿ. ವಿ: [ದೇ] ಭಗ್ನ, ಮುರಿಯಲ್ಪಟ್ಟ, ಒಡೆಯಲ್ಪಟ್ಟ
ಮೂಸಲ. ವಿ: [ದೇ] ಪುಷ್ಟಗೊಂಡ
ಮೂಸಲ. '**ಮುಸಲ=ಮುಸಲ**' ಶಬ್ದವನ್ನು ನೋಡುವುದು.
ಮೂಸಾ.'**ಮುಸಾ**' ಶಬ್ದವನ್ನು ನೋಡುವುದು.
ಮೂಸಾ. ಸ್ತ್ರೀ: [**ಮೂಷಾ**] ಲೋಹವನ್ನು ಕರಗಿಸುವ ಮೂಸೆ
ಮೂಸಾ}. ಸ್ತ್ರೀ: [ದೇ] ನ: ಚಿಕ್ಕ ಬಾಗಿಲು
ಮೂಸಾಅ}.
ಮೂಸಿಯ. '**ಮೂಸಯ**' ಶಬ್ದವನ್ನು ನೋಡುವುದು (ಆಚಾ). **ಮೂಸಿಆರಿ. ಪು:** [**ಮೂಷಕಾರಿ**] ಬೆಕ್ಕು, ಮಾರ್ಜಾಲ
ಮೇ. ಅ: [**ಮೇ**] ನನ್ನ, ನನ್ನಿಂದ(ಸ್ವಪ್ನ)
ಮೇಅ. ಪು: [**ಮೇದ**] ಒಂದು ಅನಾರ್ಯ ದೇಶ, ಒಂದು ಅನಾರ್ಯ ಮನುಷ್ಯ ಜಾತಿ(ಪಣ್ಣ), **ಪುಂಸ್ತ್ರೀ: ಚಾಂಡಾಲ. ಸ್ತ್ರೀ: –ಮೇಈ**
ಮೇಅ. ವಿ: [**ಮೇಯ**] ತಿಳಿದುಕೊಳ್ಳಲು ಅರ್ಹವಾದ್ದು, ಅಳೆಯಲ್ಪಡುವ, ಅಳೆಯಲು ಯೋಗ್ಯವಾದವಸ್ತು. **–ನ್ನ.** ವಿ:[**–ಜ್ಞ**] ಪದಾರ್ಥವನ್ನು ಅರಿತವನು(ಉತ್ತ)
ಮೇಅ. ಪುಂನ: [**ಮೇದಸ್**] ಶರೀರದಲ್ಲಿರುವ ಧಾತು –ವಿಶೇಷ, ಚರ್ಬಿ, ಕೊಬ್ಬು.
ಮೇಅಜ್ಜ. ನ: [ದೇ] ಧಾನ್ಯ, ಅಕ್ಕಿ
ಮೇಅಜ್ಜ. ಪು: [**ಮೇದಾರ್ಯ**] ಮೇದಾರ್ಯ ಗೋತ್ರದಲ್ಲಿ ಹುಟ್ಟಿದ(ಸೂಅ)
ಮೇಅಜ್ಜ. ಪು: [**ಮೇತಾರ್ಯ**]ಭಗವಾನ್ ಮಹಾವೀರನ ಹತ್ತನೇ ಗಣಧರ, ಒಬ್ಬ ಜೈನ ಮಹರ್ಷಿ(ಉಪ)
ಮೇಅಯ. ವಿ: [**ಮೇಚಕ**] ಕಪ್ಪು ಬಣ್ಣ(ಗಲುಡ), ಕತ್ತಲೆ
ಮೇಅರ. ವಿ: [ದೇ] ಅಸಹನೆ, ಅಸಹಿಷ್ಣು(ದೇ)
ಮೇಢಲ. ಪು: [**ಮೇಕಲ**] ಒಂದು ಪರ್ವತ, **–ಕನ್ನಾ.** ಸ್ತ್ರೀ: [**–ಕನ್ಯಾ**] ನರ್ಮದಾ ನದಿ
ಮೇಅವಾಡಯ. ಪುಂನ: [**ಮೇದಪಾಟಕ**] ಈಗಿನ ಮೇವಾಡ,
ಮೇಇಣೀ–}. ಸ್ತ್ರೀ: [**ಮೇದಿನೀ**] ಭೂಮಿ, ಪೃಥ್ವಿ(ಸುಪಾ),
ಮೇಇಣೀ}. ಚಾಂಡಾಲಿನಿ, **–ನಾಹ. ಪು:** [**–ನಾಥ**] ದೊರೆ(ಉಪ). **–ಪಇ. ಪು:** [**–ಪತಿ**] ರಾಜ, ನೃಪ, ಚಾಂಡಾಲ. **–ಸಾಮಿ. ಪು:** [**ಸ್ವಾಮಿನ್**] ದೊರೆ.
ಮೇಇಣೀಸರ. ಪು: [**ಮೇದಿನೀಶ್ವರ**] ನೃಪ, ದೊರೆ
ಮೆಂಠ. ಪು: [ದೇ] ಆನೆಯ ಮಾವತಿಗ. '**ಮಿಂಠ**' ಶಬ್ದವನ್ನು ನೋಡುವುದು.
ಮೇಮಟಿ ಸ್ತ್ರೀ: [ದೇ] ಹೆಣ್ಣು ಕುರಿ
ಮೆಂಢ. ಪುಂಸ್ತ್ರೀ: [**ಮೇಂಢ್ರ**] ಟಗರು, ಮೇಷ(ಠಾ) ಸ್ತ್ರೀ: **–ಢೀ. –ಮುಹ. ಪು:** [**–ಮುಖ**] ಒಂದು ಅಂತರ್‌ದ್ವೀಪ, ಅಂತರ್ ದ್ವೀಪದಲ್ಲಿ ವಾಸಿಸುವ ಮನುಷ್ಯ ಜಾತಿ. **–ವಿಸಾಣಾ.** ಸ್ತ್ರೀ [**–ವಿಷಾಣಾ**] ಒಂದು ವವನಸ್ಪತಿ. '**ಮಿಂಢ**' ಶಬ್ದವನ್ನು ನೋಡುವುದು.
ಮೇಖಲಾ. '**ಮೇಹಲಾ**' ಶಬ್ದವನ್ನು ನೋಡುವುದು.
ಮೇಘ. '**ಮೇಹ**' ಶಬ್ದವನ್ನು ನೋಡುವುದು. **–ಮಾಲಿಣೀ.** ಸ್ತ್ರೀ: [**–ಮಾಲಿನೀ**] ನಂದನವನದ ಶಿಖರದ ಮೇಲಿರುವ ಒಬ್ಬ ದಿಕ್ಕುಮಾರಿ ದೇವಿ. **–ವಈ.** ಸ್ತ್ರೀ: [**–ವತೀ**] ಒಬ್ಬ ದಿಕ್ಕುಮಾರಿ ದೇವಿ. **–ವಾಹಣ. ಪು:** [**–ವಾಹನ**] ಒಬ್ಬ ವಿದ್ಯಾಧರ ರಾಜಕುಮಾರ(ಪಉಮ)
ಮೇಘಂಕರಾ. ಸ್ತ್ರೀ: [**ಮೇಘಂಕರಾ**] ಒಬ್ಬ ದಿಕ್ಕುಮಾರಿ ದೇವಿ(ಠಾ)
ಮೆಚ್ಛ. '**ಮಿಚ್ಛ=ಮ್ಲೇಚ್ಛ**' ಶಬ್ದವನ್ನು ನೋಡುವುದು.
ಮೆಜ್ಜ. ನ: [**ಮೇಯ**] ಅಳತೆಯ ಸಾಧನವಾದ ತೂಕದ ಬಟ್ಟು
ಮೆಜ್ಜ. '**ಮೇಅ=ಮೇಯ**' ಶಬ್ದವನ್ನು ನೋಡುವುದು.
ಮೆಜ್ಝ. '**ಮಿಜ್ಝ**' ಶಬ್ದವನ್ನು ನೋಡುವುದು.
ಮೇಟ. '**ಮಿಟ**' ಶಬ್ದವನ್ನು ನೋಡುವುದು.
ಮೇಡಂಭ. ಪು: [ದೇ] ಜಿಂಕೆಯ ಚರ್ಮದ ದಾರ
ಮೇಡಯ. ಚರ್ಮದ ಪಟ್ಟಿ, ಅಟ್ಟೆ(ಸುಪಾ)
ಮೆಢ. '**ಮೇಂಢ**'ಶಬ್ದವನ್ನು ನೋಡುವುದು.
ಮೇಢ. ಪು: [ದೇ] ವ್ಯಾಪಾರಿಗೆ ನೆರವು ಮಾಡುವ
ಮೇಡಕ. ಪು: [ದೇ] ಮರದ ಸಣ್ಣ ಬಡಿಗೆ, ಕೋಲು
ಮೇಢಿ. ಪು: [**ಮೇಥಿ**] ಮೇಟಿ ಕಂಬ, ಕಣದಲ್ಲಿ ಧಾನ್ಯವನ್ನು ತುಳಿಯಲು ಎತ್ತುಗಳನ್ನು ಕಟ್ಟುವ ಕಂಬ(ಗಚ್ಛ), ಆಧಾರ ಸ್ತಂಭ, **–ಭೂಅ.** ವಿ: [**–ಭೂತ**] ಆಧಾರಭೂತವಾದ, ಮಧ್ಯದಲ್ಲಿ ಇರುವುದು, ನಾಭಿ –ಭೂತ

ಮೇಣಾ}. **ಸ್ತ್ರೀ**: [**ಮೇನಕಾ**] ಹಿಮಾಲಯನ
ಮೇಣಕ್ಕಾ}. (=ಹಿಮವಂತ) ಹೆಂಡತಿ, ಸ್ವರ್ಗದ ಅಪ್ಸರೆ
ಮೆತ್ತ. ನ:[**ಮಾತ್ರ**] ಸಾಕಲ್ಯ, ಸಂಪೂರ್ಣತೆ, ಅವಧಾರಣೆ
ಮೆತ್ತಲ. (ದೇ). '**ಮಿತ್ತಲ**' ಶಬ್ದವನ್ನು ನೋಡುವುದು.
ಮೆತ್ತೀ. ಸ್ತ್ರೀ: [**ಮೈತ್ರೀ**]ಸ್ನೇಹ, ಮಿತ್ರತ್ವ(ಗಾ)
ಮೇಘುಣಿಯಾ. '**ಮೇಹುಣಿಆ**' ಶಬ್ದವನ್ನು ನೋಡುವುದು.
ಮೇರ(ಅಪ). ವಿ: [**ಮದೀಯ**] ನನ್ನ(ಭವಿ)
ಮೇರಗ. ಪು: [**ಮೇರಕ, ಮೈರೇಯಕ**] ದೊರೆಯಾಗಿದ್ದ ಮೂರನೇ ಪ್ರತಿವಾಸುದೇವ, **ಪುಂನ**: ಒಂದು ಬಗೆಯ ಮದ್ಯ, ತೊಗಟೆಯಿಲ್ಲದ ಮರದ ತುಣುಕು
ಮೇರಾ. ಸ್ತ್ರೀ: [**ದೇ. ಮಿರಾ**] ಮರ್ಯಾದೆ, ನ್ಯಾಯ ಮಾರ್ಗ, ಎಲ್ಲೆ, ಗಡಿ(ಪಾಅ)
ಮೇರಾ. ಸ್ತ್ರೀ: [**ಮೇರಾ**] ಮುಂಜ ಎಂಬ ತೃಣದ ಕಡ್ಡಿ(ಪಣ್ಣ), ಹತ್ತನೇ ಚಕ್ರವರ್ತಿಯ ತಾಯಿ
ಮೇರು. ಪು: [**ಮೇರು**] ಮೇರು ಪರ್ವತ(ಉವ), ಒಂದು ಛಂದಸ್ಸು.
ಮೇರೇಅ. ನ: [**ಮೈರೇಯ**] ಒಂದು ಬಗೆಯ ಮದ್ಯ
ಮೇಲ. ಸಕ: [**ಮೇಲಯ್**] ಸೇರಿಸು, ಬೆರೆಸು, ಮಿಶ್ರಮಾಡು, ಒಟ್ಟುಗೂಡಿಸು. –'**ಮೇಲಇ**'
ಮೇಲ. ಪು: [**ಮೇಲ**] ಮೇಳ, ಒಟ್ಟಿಗೆ ಸೇರುವುದು, ಸಮ್ಮಿಲನ, ಸಂಗಮ
ಮೇಲಯ. ಪು: [**ಮೇಲಕ**] ಸಂಬಂಧ, ಸಂಯೋಗ, ಜನಸಮೂಹ ಟ್ಟುಗೂಡುವುದು
ಮೇಲವ. ಸಕ: [**ಮೇಲಯ್, ಮಿಶ್ರಯ್**] ಸೇರಿಸು, ಬೆರೆಸು, ಮಿಶ್ರಮಾಡು. –'**ಮೇಲವಇ**'
ಮೇಲಾಯ. ಅಕ: [**ಮಿಲ್**] ಒಟ್ಟುಗೂಡು, ಒಟ್ಟುಸೇರು
ಮೇಲಾವ. '**ಮೇಲವ**' ಶಬ್ದವನ್ನು ನೋಡುವುದು.
ಮೇಲಾವ. ಪುಂನ: [**ಮೇಲ**] ಮಿಲನ, ಸಂಗಮ, ಒಟ್ಟು ಸೇರುವುದು(ಸುಪಾ).
ಮೇಲಾವಗ. '**ಮೇಲಯ**' ಶಬ್ದವನ್ನು ನೋಡುವುದು.
ಮೇಲಾವಡ.(ಅಪ). '**ಮೇಲಯ**' ಶಬ್ದವನ್ನು ನೋಡುವುದು.
ಮೇಲಾವಯ.'**ಮೇಲವಯ**'ಶಬ್ದವನ್ನು ನೋಡುವುದು.
ಮೇಲಾವಿಅ. ವಿ: [**ಮೇಲಿತ**] ಸೇರಿಸಲ್ಪಟ್ಟ, ಬೆರೆಸಲ್ಪಟ್ಟ, ಒಟ್ಟುಗೂಡಿಸಲಾದ.
ಮೇಲಿಅ. ವಿ: [**ಮಿಲಿತ**] ಸೇರಿರುವ, ಬೆರೆತಿರುವ, ಮಿಶ್ರವಾಗಿರುವ(ಠಾ)
ಮೇಲೀ. ಸ್ತ್ರೀ: [**ದೇ**] ಜನಸಮುದಾಯ ಒಟ್ಟುಗೂಡುವುದು, ಮೇಳ(ದೇ)
ಮೇಲೀಣ.'**ಮಿಲೀಣ**' ಶಬ್ದವನ್ನು ನೋಡುವುದು.
ಮೆಲ್ಲ. '**ಮಿಲ್ಲ**' ಶಬ್ದವನ್ನು ನೋಡುವುದು. '**ಮೆಲ್ಲಇ**'
ಮೆಲ್ಲಣ. ನ: [**ಮೋಚನ**] ಬಿಡುವುದು, ಬಿಡುಗಡೆ, ಪರಿತ್ಯಾಗ, ಬಿಡಿಸುವುದು
ಮೆಲ್ಲಾವಿಯ. ವಿ: [**ಮೋಚಿತ**] ಬಿಡಿಸಲ್ಪಟ್ಟ, ಬಿಡುಗಡೆ ಮಾಡಿಸಲ್ಪಟ್ಟ
ಮೇವ. '**ಏವ**' ಶಬ್ದವನ್ನು ನೋಡುವುದು.
ಮೇವಾಡ}. '**ಮೇಅವಾಡಯ**' ಶಬ್ದವನ್ನು
ಮೇವಾಢ}. ನೋಡುವುದು.
ಮೇಸ. ಪು: [**ಮೇಷ**] ಟಗರು, ಗಂಡುಕುರಿ, ಮೇಷರಾಶಿ
ಮೇಹ. ಪು: [**ಮೇಘ**] ಮೋಡ, ಜಲದ(ಔಪ). ಅಗುರು ಚಂದನ, ಕಪ್ಪು ಜಾತಿಯ ಶ್ರೀಗಂಧ. ಭಗವಾನ್ ಸುಮತಿನಾಥನ ತಂದೆ. ಶ್ರೇಣಿಕ ಮಹಾರಾಜನ ಒಬ್ಬ ಮಗ. ಒಂದು ದೇವ –ವಿಮಾನ. ಒಂದು ಛಂದಸ್ಸು, ಒಬ್ಬ ವ್ಯಾಪಾರಿ ಪುತ್ರ, ಒಬ್ಬ ಜೈನಮುನಿ, ಒಬ್ಬ ದೇವ. ಕೊನ್ನಾರಿ ಗೆಡ್ಡೆಯ ಒಂದು ಪ್ರಭೇದವಾದ ಮುಸ್ತಕ, ಒಬ್ಬ ರಾಕ್ಷಸ, ಒಂದು ರಾಗ. ಒಂದು ವಿದ್ಯಾಧರ ನಗರ. –**ಕುಮಾರ. ಪು**: [–**ಕುಮಾರ**] ಶ್ರೇಣಿಕ ಮಹಾರಾಜನ ಒಬ್ಬ ಪುತ್ರ. –**ಜ್ಝಾಣ.ಪು**: [–**ಧ್ಯಾನ**] ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ. –**ಣಾಅ. ಪು**: [–**ನಾದ**] ರಾವಣನ ಒಬ್ಬ ಪುತ್ರನಾದ ಇಂದ್ರಜಿತು. –**ಪುರ. ನ**: [–**ಪುರ**] ವೈತಾಢ್ಯ ಪರ್ವತದ ದಕ್ಷಿಣ ಶ್ರೇಣಿಯ ಒಂದುನಗರ. –**ಮುಹ. ಪು**: [–**ಮುಖ**] ಒಬ್ಬ ದೇವ, ಒಂದು ಅಂತರ್ ದ್ವೀಪ, ಆ ಅಂತರ್ ದ್ವೀಪದ ನಿವಾಸಿ ಮನುಷ್ಯ(ಠಾ). –**ರವ. ನ**: [–**ರವ**] ವಿಂಧ್ಯಸ್ಥಲಿಯ ಒಂದು ಜೈನ ತೀರ್ಥ. –**ವಹಣ. ಪು**: [–**ವಾಹನ**] ಲಂಕೆಯ ರಾಜನಾಗಿದ್ದ ರಾಕ್ಷಸ ವಂಶದ ಆದಿಪುರುಷ. ರಾವಣನ ಒಬ್ಬ ಮಗ(ಪಉಮ). –**ಸೀಹ.ಪು**: [–**ಸಿಂಹ**] ವಿದ್ಯಾಧರ ವಂಶದ ಒಬ್ಬ ದೊರೆ. '**ಮೇಘ**' ಶಬ್ದವನ್ನು ನೋಡುವುದು.

ಮೇಹ. ಪು: [ಮೇಹ] ಸಿಂಪಡಿಸುವುದು, ಸುರಿಯುವುದು(ಸೂಅ), ಮೇಹ(ಮೂತ್ರ) ರೋಗ

ಮೇಹಂಕರಾ. '**ಮೇಘಂಕರಾ**' ಶಬ್ದವನ್ನು ನೋಡುವುದು.

ಮೇಹಚ್ಚೀರ. ನ: [ದೇ] ನೀರು, ಜಲ

ಮೇಹಣ. ನ: [ಮೇಹನ] ತೊಟ್ಟಿಕ್ಕುವುದು, ಸೋರುವುದು, ಸ್ರವಿಸುವುದು, ಮೂತ್ರ(ಆಚಾ) ಪುರುಷನ ಜನನೇಂದ್ರಿಯ

ಮೇಹಣಿ. ವಿ: [ಮೇಹನಿನ್] ಹನಿಹನಿಯಾಗಿ ಮೇಲಿನಿಂದ ತೊಟ್ಟಿಕ್ಕುವ(ಆಚಾ)

ಮೇಹರ. ಪು: [ದೇ] ಗ್ರಾಮದ ಮುಖಂಡ(ದೇ)

ಮೇಹರಿ. ಪುಂಸ್ತ್ರೀ: [ದೇ] ಮರ ಕೊರೆಯುವ ಹುಳು

ಮೇಹರಿಯಾ}. ಸ್ತ್ರೀ: [ದೇ] ಹಾಡುವ ಮಹಿಳೆ(ಸುಪಾ)
ಮೇಹರೀ}.

ಮೇಹಲಯ. ಪು.ಬ:[ಮೇಖಲಕ] ಒಂದು ದೇಶ–ವಿಶೇಷ

ಮೇಹಲಾ. ಸ್ತ್ರೀ: [ಮೇಖಲಾ] ಡಾಬು, ಒಡ್ಯಾಣ, ಉಡಿದಾರ(ಪಾಅ)

ಮೇಹಲಿಜ್ಜಿಯಾ. ಸ್ತ್ರೀ: [ಮೇಖಲಿಯಾ] ಒಂದು ಜೈನ –ಮುನಿ ಶಾಖೆ

ಮೇಹಾ. ಸ್ತ್ರೀ: [ಮೇಘಾ] ಚಮರೇಂದ್ರನ ಅಗ್ರಮಹಿಷಿಯಾದ ಒಬ್ಬ ಇಂದ್ರಾಣಿ(ಠಾ)

ಮೇಹಾ. ಸ್ತ್ರೀ: [ಮೇಧಾ] ಬುದ್ಧಿ, ಪ್ರಜ್ಞೆ, ಗ್ರಹಣ ಶಕ್ತಿಯುಳ್ಳ ಬುದ್ಧಿ. **–ಅರ.** ವಿ: [–ಕರ] ಬುದ್ಧಿಯನ್ನು ಹೆಚ್ಚಿಸುವಂಥ, ಬುದ್ಧಿ ವರ್ಧಕ, ಒಂದು ಛಂದಸ್ಸು, ತಪ್ಪು ತಿಳಿವಳಿಕೆ

ಮೇಹಾವಈ. '**ಮೇಘ–ವಈ**' ಶಬ್ದವನ್ನು ನೋಡುವುದು.

ಮೇಹಾವಣ್ಣ. ನ: [ಮೇಘಾವರ್ಣ] ಒಂದು ವಿದ್ಯಾಧರ ನಗರ.

ಮೇಹಾವಿ. ವಿ: [ಮೇಧಾವಿನ್] ಬುದ್ಧಿವಂತ, ಪ್ರಾಜ್ಞ(ಠಾ), ಸ್ತ್ರೀ: –ಣೀ

ಮೇಹಿ. '**ಮೇಢಿ**' ಶಬ್ದವನ್ನು ನೋಡುವುದು.

ಮೇಹಿ. ವಿ: [ಮೇಹಿನ್] ಸೋರುತಿರುವ(ಆಚಾ),

ಮೇಹಿಯ. ನ:[ಮೇಧಿಕ] ಒಂದು ಜೈನಮುನಿಕುಲ(ಕಪ್ಪ)

ಮೇಹಿಲ. ಪು: [ಮೇಧಿಲ] ಭಗವಾನ್ ಪಾರ್ಶ್ವನಾಥನ ವಂಶದ ಒಬ್ಬ ಜೈನ ಮುನಿ

ಮೇಹುಣ}. ನ: [ಮೈಥುನ] ರತಿಕ್ರಿಯೆ,
ಮೇಹುಣಯ}.ಸಂಭೋಗ(ಔಪ)

ಮೇಹುಣಯ. ಪು: [ದೇ] ಸೋದರತ್ತೆಯ ಮಗ(ದೇ)

ಮೇಹುಣಿಅ. ಪು: [ದೇ] ಸೋದರ ಮಾವನ ಮಗ

ಮೇಹುಣಿಯಾ. ಸ್ತ್ರೀ: [ದೇ] ಸೋದರಮಾವನ ಮಗಳು, ಹೆಂಡತಿಯ ಸೋದರಿ(ನಾದಿನಿ)

ಮೇಹುನ್ನ. '**ಮೇಹುಣ**' ಶಬ್ದವನ್ನು ನೋಡುವುದು.

ಮೋ. ಅ: ಅವಧಾರಣೆ, ನಿಶ್ಚಯ, ಪಾದಪೂರ್ತಿ ಇತ್ಯಾದಿಗಳನ್ನು ಸೂಚಿಸುವ ಅವ್ಯಯ.

ಮೋಅ. ಸಕ: [ಮುಚ್] ಬಿಡು, ತ್ಯಜಿಸು, –'**ಮೋಅಇ**' . ವ. ಕೃ: '**ಮೋಅಂತ**'

ಮೋಅ. ಪು: [ಮೋದ] ಹರ್ಷ, ಸಂತಸ(ಭವಿ)

ಮೋಅ. ವಿ: [ದೇ] ಗಳಿಸಲ್ಪಟ್ಟ, ಸಂಪಾದಿಸಲ್ಪಟ್ಟ, **ಪು:** ಸೌತೆ ಕಾಯಿಯ ಬೀಜ ಕೋಶ, ಮೂತ್ರ, –**ಪಡಿಮಾ.**ಸ್ತ್ರೀ: [–**ಪ್ರತಿಮಾ**] ಜಿನುಗುವ/ಸೋರುವ ವಿಷಯಕ್ಕೆ ಸಂಬಂಧಿಸಿದ ನಿಯಮ –ವಿಶೇಷ

ಮೋಅಇ. ಪು: [ಮೋಚಕಿ] ನುಗ್ಗೆ ಮರ

ಮೋಅಗ. ವಿ: [ಮೋಚಕ] ಮುಕ್ತಗೊಳಿಸುವವ, ಬಿಡುಗಡೆ ಮಾಡಿಸುವವನು, ವಿರಕ್ತ

ಮೋಅಗ. ಪು: [ಮೋದಕ] ಕಡುಬು, ಸಿಹಿ ಭಕ್ಷ್ಯ, '**ಮೋದಅ**' ಶಬ್ದವನ್ನು ನೋಡುವುದು.

ಮೋಅಣಾ. ಸ್ತ್ರೀ: [ಮೋಚನಾ] ಬಿಡುವುದು, ತ್ಯಜಿಸುವುದು, ಮುಕ್ತಿ, ಬಿಡುಗಡೆ ಹೊಂದುವುದು (ಸೂಅ), ಬಿಡುಗಡೆಗೊಳಿಸುವುದು(ಉಪ)

ಮೋಅಯ. '**ಮೋಅಗ**' ಶಬ್ದವನ್ನು ನೋಡುವುದು.

ಮೋಆ. ಸ್ತ್ರೀ: [ಮೋಚಾ] ಬಾಳೆಗಿಡ

ಮೋಆವ. ಸಕ: [ಮೋಚಯ್] ಬಿಡುಗಡೆಗೊಳಿಸು, ಮುಕ್ತಗೊಳಿಸು

ಮೋಆವಿಅ}. ವಿ: [ಮೋಚಿತ] ಮುಕ್ತಗೊಳಿಸಲ್ಪಟ್ಟ,
ಮೋಇಅ}. ಬಿಡುಗಡೆಗೊಳಿಸಲ್ಪಟ್ಟ

ಮೋಇಲ. ಪು: [ದೇ] ಒಂದು ಬಗೆಯ ಮೀನು

ಮೊಂಡ. '**ಮುಂಡ=ಮುಂಡ**' ಶಬ್ದವನ್ನು ನೋಡುವುದು.

ಮೋಕಲ್ಲ. ಸಕ: [ದೇ] ಕಳಿಸು, –'**ಮೋಕಲ್ಲಇ**'

ಮೊಕ್ಕ. '**ಮುಕ್ಕ=ಮುಕ್ತ**' ಶಬ್ದವನ್ನು ನೋಡುವುದು.

ಮೊಕ್ಕಣಿಆ}. ಸ್ತ್ರೀ: [ದೇ] ತಾವರೆಯ ಕಪ್ಪನೆಯ
ಮೊಕ್ಕಣೀ}. ಬೀಜಕೋಶ(ದೇ)

ಮೊಕ್ಕಲ. '**ಮೋಕಲ್ಲ**' ಶಬ್ದವನ್ನು ನೋಡುವುದು.

ಮೊಕ್ಕಲ. '**ಮುಕ್ಕಲ**' ಶಬ್ದವನ್ನು ನೋಡುವುದು.

ಮೊಕ್ಕಲಿಯ. ವಿ: [ದೇ] ಕಳುಹಿಸಲ್ಪಟ್ಟ(ಸುಪಾ)
ಮೊಕ್ಖ. **'ಮುಕ್ಖ=ಮೋಕ್ಷ'** ಶಬ್ದವನ್ನು ನೋಡುವುದು.
ಮೊಕ್ಖ. **ಮುಕ್ಖ=ಮೂರ್ಖ'** ಶಬ್ದವನ್ನು ನೋಡುವುದು.
ಮೊಕ್ಖ. ನ: [ದೇ] ಒಂದು ವನಸ್ಪತಿ(ಮರ)
ಮೊಕ್ಖಣ. ನ: [**ಮೋಕ್ಷಣ**] ಮುಕ್ತಿ, ಬಿಡುಗಡೆ
ಮೊಗ್ಗಡ. ಪು: [ದೇ] ವ್ಯಂತರ –ವಿಶೇಷ. **'ಮುಗ್ಗಡ'** ಶಬ್ದವನ್ನು ನೋಡುವುದು.
ಮೊಗ್ಗರ. ಪು: [ದೇ] ಮೊಗ್ಗು(ದೇ)
ಮೊಗ್ಗರ. ಪು: [ಮುದ್ಗರ] ಗದೆ, ಕೊಡಲಿ, ಮಲ್ಲಿಗೆ ಗಿಡ, ಮೊಗ್ಗು. **'ಮುಗ್ಗರ'** ಶಬ್ದವನ್ನುನೋಡುವುದು. **–ಪಾಣಿ.** ಪು: [**–ಪಾಣಿ**] ಒಬ್ಬ ಜೈನ ಮಹರ್ಷಿ
ಮೊಗ್ಗರಿಅ. ವಿ: [ದೇ] ಅರ್ಧ ಅರಳಿರುವ, ಅರ್ಧ ಮುಚ್ಚಿಕೊಂಡಿರುವ, ಮೊಗ್ಗುಬಿಟ್ಟಿರುವ(ದೇ)
ಮೊಗ್ಗಲಾಯಣ}. ನ: [**ಮೌದ್ಗಲಾಯನ,–ಲ್ಯ**].
ಮೊಗ್ಗಲ್ಲಾಯಣ}. ಗೋತ್ರ–ವಿಶೇಷ. **ಪುಂಸ್ತ್ರೀ:** ಆ ಗೋತ್ರದಲ್ಲಿ ಜನಿಸಿದ(ಠಾ)
ಮೊಗ್ಗಾಹ.'ಮುಗ್ಗಾಹ' ಶಬ್ದವನ್ನು ನೋಡುವುದು.
ಮೋಘ.'ಮೋಹ=ಮೋಘ' ಶಬ್ದವನ್ನು ನೋಡುವುದು.
ಮೋಚ. **ಮೋಅ=ಮೋಚಯ್'** ಶಬ್ದವನ್ನು ನೋಡುವುದು.
ಮೋಚ. ನ: [ದೇ] ಅರ್ಧಜಂಘೀ, ಒಂದು ರೀತಿಯ ಪಾದರಕ್ಷೆ, ಚಪ್ಪಲಿ
ಮೋಚ. **'ಮೋಅ=(ದೇ)'** ಶಬ್ದವನ್ನು ನೋಡುವುದು.
ಮೋಚಗ. **'ಮೋಅಗ=ಮೋಚಕ'** ಶಬ್ದವನ್ನು ನೋಡುವುದು.
ಮೊಟ್ಟಾಯ. ಅಕ: [**ರಮ್**] ಕ್ರೀಡಿಸು, ಆನಂದಿಸು
ಮೊಟ್ಟಾಇಅ. ನ: [ರತ] ರತಿಕ್ರೀಡೆ, ಮೈಥುನ(ಕುಮಾ)
ಮೊಟ್ಟಾಇಅ. ನ: [**ಮೋಟ್ಟಾಯಿತ**] ಪ್ರಿಯನ ವಿರಹದ ಸಂದರ್ಭದಲ್ಲಿ ಅವನ ವಿಷಯ ನೆನೆಸಿಕೊಂಡು ವೇದನೆಪಡುವುದು.
ಮೊಟ್ಟಿಮ. ನ: [ದೇ] ಬಲಾತ್ಕಾರ, **'ಮುಟ್ಟಿಮ'** ಶಬ್ದವನ್ನು ನೋಡುವುದು.
ಮೋಡ. ಸಕ: [**ಮೋಟಯ್**] ತಿರುಗಿಸು, ಡೊಂಕಾಗಿಸು, ವಕ್ರಗೊಳಿಸು, ಒಡೆ **'ಮೋಡಸಿ'**, **ವ.ಕೃ: ಮೋಡಂತ**
ಮೋಡ. ಪು: [ದೇ] ಗಂಟುಹಾಕಿದ ಜಟೆಗಳ ಸಮೂಹ,
ಮೋಡಗ. ವಿ: [**ಮೋಟಕ**] ತಿರುಗಿಸುವವನು, ವಕ್ರಗೊಳಿಸುವವನು(ಪಣ್ಣ). **ಸ್ತ್ರೀ: –ಣಾ**

ಮೋಡಿಅ. ವಿ: [**ಮೋಟಿತ**] ಒಡೆದುಹಾಕಲ್ಪಟ್ಟ, ಭಂಗಗೊಳಿಸಲ್ಪಟ್ಟ, ಮುರಿಯಲ್ಪಟ್ಟ(ಗಾ)
ಮೋಢ. ಪು: [**ಮೋಢ**] ಒಂದು ವ್ಯಾಪಾರಿ –ಕುಲ
ಮೋಢೇರಯ. ನ: [**ಮೋಢೇರಕ**] ಒಂದು ನಗರ
ಮೋಣ. ನ: [**ಮೌನ**] ಮಾತನಾಡದಿರುವುದು, ಮೌನವಹಿಸುವುದು(ಔಪ). **–ಚರ.** ವಿ: [**–ಚರ**] ಮೌನವ್ರತಧಾರಿ, ಮಾತಿನ ಸಂಯಮವುಳ್ಳವನು. **–ಪಯ.** ನ: [**–ಪದ**] ಸಂಯಮ, ಚಾರಿತ್ರ
ಮೋಣಾವಣಾ. ಸ್ತ್ರೀ: [ದೇ] ಮೊದಲ ಹೆರಿಗೆಯ ಸಂದರ್ಭದಲ್ಲಿ ತಂದೆಯ ಕಡೆಯಿಂದ ನಡೆಸಲಾಗುವ ಹಬ್ಬದ ಆಹ್ವಾನ(ಉಪ)
ಮೋಣಿ. ವಿ: [**ಮೌನಿನ್**] ಮೌನಿ, ಮಾತಾಡದ ವ್ರತಧಾರಿ(ಸುಪಾ)
ಮೊತ್ತ. **'ಮುತ್ತ=ಮುಕ್ತ'** ಶಬ್ದವನ್ನು ನೋಡುವುದು.
ಮೊತ್ತವ್ವ. **'ಮುಂಚ'** ಶಬ್ದವನ್ನು ನೋಡುವುದು.
ಮೊತ್ತಾ. **'ಮುತ್ತಾ'** ಶಬ್ದವನ್ನು ನೋಡುವುದು.
ಮೊತ್ತಿ. **'ಮುತ್ತಿ=ಮುಕ್ತಿ'** ಶಬ್ದವನ್ನು ನೋಡುವುದು.
ಮೊತ್ತಿಅ. **'ಮುತ್ತಿಅ'** ಶಬ್ದವನ್ನು ನೋಡುವುದು(ಗಾ) **–ದಾಮ.** ನ: [**–ದಾಮ**] ಒಂದು ಛಂದಸ್ಸು.
ಮೊತ್ತುಆಣ}. **'ಮುಂಚ=ಮುಂಚ್'** ಶಬ್ದವನ್ನು
ಮೊತ್ತುಂ}. ನೋಡುವುದು.
ಮೊತ್ತೂಣ}.
ಮೊತ್ಥ. **'ಮುತ್ಥ'** ಶಬ್ದವನ್ನು ನೋಡುವುದು.
ಮೋದಅ.'ಮೋಅಗ=ಮೋದಕ' ಶಬ್ದವನ್ನು ನೋಡುವುದು.
ಮೊಬ್ಭ. ಪು: [ದೇ] **'ಮುಬ್ಭ'** ಶಬ್ದವನ್ನು ನೋಡುವುದು.
ಮೋರ. ಪು: [ದೇ] ಶ್ವಪಚ, ಚಾಂಡಾಲ
ಮೋರ. ಪು: [**ಮೋರ**] ನವಿಲು(ಕುಮಾ), ಒಂದು ಛಂದಸ್ಸು, **–ಬಂಧ.** ಪು: [**–ಬಂಧ**] ಒಂದು ಬಗೆಯ ಬಂಧನ. **–ಸಿಹಾ.** ಸ್ತ್ರೀ: [**ಶಿಖಾ**] ಒಂದು ಮಹಾ ಔಷಧಿ, ನವಿಲಿನ ಜುಟ್ಟು
ಮೋರಉಲ್ಲಾ.} ಅ: ವ್ಯರ್ಥ, ನಿರರ್ಥಕ
ಮೋರಕುಲ್ಲಾ}.
ಮೋರಂಡ. ಪು: [ದೇ] ಎಳ್ಳಿನ ಮೋದಕ, ಒಂದು ಖಾದ್ಯ ಪದಾರ್ಥ.
ಮೋರಗ. ವಿ: [**ಮಾಯೂರಕ**] ನವಿಲು ಗರಿಯಿಂದ ಮಾಡಲಾದ

ಮೋರತ್ತಯ. ಪು: [ದೇ] ಶ್ವಪಚ, ಚಾಂಡಾಲ.
ಮೋರಿಯ. ಪು: [ಮೌರ್ಯ] ಒಂದು ಕ್ಷತ್ರಿಯ ವಂಶ, ಮೌರ್ಯವಂಶದಲ್ಲಿ ಹುಟ್ಟಿದ, **-ಪುತ್ತ.** ಪು: [-ಪುತ್ರ] ಭಗವಾನ್ ಮಹಾವೀರನ ಒಬ್ಬ ಗಣಧರ -ಪ್ರಧಾನ ಶಿಷ್ಯ.
ಮೋರೀ. ಸ್ತ್ರೀ: [ಮೋರೀ] ಹೆಣ್ಣು ನವಿಲು, ಒಂದುವಿದ್ಯೆ
ಮೋಲಗ. ಪು: [ದೇ. ಮೌಲಕ] ಪಶುಗಳನ್ನು ಕಟ್ಟಲು ಹೂತಿರುವ ಗೂಟ(ಉವ)
ಮೋಲಿ. **'ಮಉಲಿ'** ಶಬ್ದವನ್ನು ನೋಡುವುದು.
ಮೊಲ್ಲ. **'ಮುಲ್ಲ'** ಶಬ್ದವನ್ನು ನೋಡುವುದು.
ಮೋಸ. ಪು: [ಮೋಷ] ಕಳ್ಳತನ(ಸುಪಾ) ಕದ್ದಮಾಲು
ಮೋಸ. ಪುಂನ: [ಮೃಷಾ] ಸುಳ್ಳು, ಸುಳ್ಳುಮಾತು, ಅಸತ್ಯ
ಮೋಸಣ. ವಿ: [ಮೋಷಣ] ಕಳ್ಳತನ ಮಾಡುವವನು, ಕಳ್ಳ
ಮೋಸಲಿ}. ಸ್ತ್ರೀ: [ದೇ. ಮುಶಲೀ, ಮೌಶಲೀ] ವಸ್ತ್ರವೇ
ಮೋಸಲೀ}. ಮೊದಲಾದವುಗಳ ನಕಲು ತೆಗೆಯುವಾಗ ಕಳ್ಳನ ಹಾಗೆ ಮೇಲಿನ ಅಥವಾ ಕೆಳಗಿನ ಗೋಡೆಯ ಸ್ಪರ್ಶಮಾಡುವುದು, ನಕಲಿನ ಒಂದುದೋಷ(ಉತ್ತ)
ಮೋಸಾ. **'ಮುಸಾ'** ಶಬ್ದವನ್ನು ನೋಡುವುದು.
ಮೋಹ. ಸಕ: [ಮೋಹಯ್] ಭ್ರಮೆಯಲ್ಲಿಡುವುದು, ಮೋಹಗೊಳಿಸುವುದು, ವ. ಕೃ: **'ಮೋಹಂತ'**
ಮೋಹ. **'ಮಊಹ'** ಶಬ್ದವನ್ನು ನೋಡುವುದು.
ಮೋಹ. ವಿ: [ಮೋಘ] ನಿಷ್ಫಲ, ನಿರರ್ಥಕ, ವ್ಯರ್ಥ, ಅಸತ್ಯ, ಸುಳ್ಳು(ಪಾಅ)
ಮೋಹ. ಪು: [ಮೋಹ] ಮೌಢ್ಯ, ಅಜ್ಞತೆ, ಅಜ್ಞಾನ(ಆಚಾ) ವಿರುದ್ಧಾರ್ಥದ ಜ್ಞಾನ, ಮನಸ್ಸಿನ ವ್ಯಾಕುಲತೆ, ಪ್ರೇಮ, ಕಾಮ -ಕ್ರೀಡೆ, ಮೂರ್ಛೆ, ಮೋಹಗೊಳಿಸಲು ಸಮರ್ಥವಾದ ಕರ್ಮ, ಒಂದು ಛಂದಸ್ಸು.
ಮೋಹಣ. ನ: [ಮೋಹನ] ಮೋಹಗೊಳಿಸುವುದು, ಮಂತ್ರವೇ ಮೊದಲಾದವುಗಳಿಂದ ವಶಪಡಿಸಿಕೊಳ್ಳುವುದು, ಮೂರ್ಛೆ, ವಶೀಕರಣ ಗೊಳಿಸುವ ಮಂತ್ರಾದಿ -ಕರ್ಮ, ಕಾಮನ ಒಂದು ಬಾಣ, ಮೋಹಕ, ಮೋಹ ಗೊಳಿಸುವವನು, ವಿ: ವ್ಯಾಕುಲಗೊಳಿಸುವವನು
ಮೋಹಣಿಜ್ಜ. ವಿ: [ಮೋಹನೀಯ] ಮೋಹವನ್ನುಂಟುಮಾಡುವ, ಮೋಹಕ್ಕೆ ಕಾರಣಭೂತವಾದ ಕರ್ಮ (ಔಪ)
ಮೋಹಣೀ.ಸ್ತ್ರೀ: [ಮೋಹನೀ] ಒಂದು ಮಹಾ ಔಷಧಿ
ಮೋಹರ. ನ: [ಮೌಖರ್ಯ] ವಾಚಾಳತನ, ಹರಟೆ ಕೊಚ್ಚುವುದು(ಪಣ್ಣ)
ಮೋಹರ.} ವಿ: [ಮೌಖರ] ಹರಟೆಗಾರ,
ಮೋಹರಿಅ}. [ಮೌಖರಿಕ] ವಾಚಾಳಿ
ಮೋಹರಿಅ. ನ: [ಮೌಖರ್ಯ] ವಾಚಾಳತನ, ಹರಟೆಕೊಚ್ಚುವಿಕೆ
ಮೋಹಿಣೀ. ಸ್ತ್ರೀ: [ಮೋಹಿನೀ] ಒಂದು ಛಂದಸ್ಸು
ಮೋಹಿಯ. ವಿ: [ಮೋಹಿತ] ಮಂಕುಹಿಡಿಸಲ್ಪಟ್ಟ, ಮೋಹವುಂಟುಮಾಡಲ್ಪಟ್ಟ, ನ: ಮೈಥುನ, ರತಿ -ಕ್ರೀಡೆ(ಣಾಯಾ)
ಮೋಹುತ್ತಿಯ. ವಿ: [ಮೌಹೂರ್ತಿಕ] ಜ್ಯೋತಿಷ್ಯಜ್ಞ, ಜೋಯಿಸ.
ಮೌಲಿಅ. **'ಮೋರಿಯ'** ಶಬ್ದವನ್ನು ನೋಡುವುದು.
ಮ್ಮಿ. ಅ: ಪಾದಪೂರ್ತಿಗಾಗಿ ಬಳಸಲಾಗುವ ಅವ್ಯಯ
ಮ್ಮಿವ. **'ಇವ'** ಶಬ್ದವನ್ನು ನೋಡುವುದು.
ಮ್ಹಸ. **'ಭಂಸ=ಭ್ರಂಶ್'** ಶಬ್ದವನ್ನು ನೋಡುವುದು.

ಯ

ಯ. ಪು: [ಯ] ತಾಲು ಸ್ಥಾನೀಯ ವ್ಯಂಜನ ವರ್ಣ, ಅಂತಸ್ಥ 'ಯ' ಕಾರ
ಯ. ಅ. [ಚ] ಹೇತು–ಸೂಚಕ ಅವ್ಯಯ. **'ಚ=ಅ'** ಅನ್ನು ನೋಡುವುದು(ಆಚಾ)
–ಯ. **'–ಜ'** ವನ್ನು ನೋಡುವುದು.
–ಯ. ವಿ: [–ದ] ಕೊಡುವವನು.
ಯಲುಣಾ. ಜಂಲುಣಾ.
–ಯಂಚ. ಸಕ: [**ಅಂಚ್**] ಚಲಿಸು, ಗಮಿಸು, ನಡೆ, ಪೂಜಿಸು, ಸಂಕೃ: 'ಯಂಚಿಯ'
–ಯಂತ. ವಿ; [ಯತ] ಪ್ರಯತ್ನಶೀಲ, ಯತ್ನಿಸುತ್ತಿರುವ, ಉದ್ಯೋಗಶೀಲ
–ಯಂದ. **'ಚಂದ'** ಶಬ್ದವನ್ನು ನೋಡುವುದು.
–ಯಕ್ಕ. **'ಚಕ್ಕ'** ಶಬ್ದವನ್ನು ನೋಡುವುದು.
–ಯಢ. **'ತಡ=ತಟ'** ಶಬ್ದವನ್ನು ನೋಡುವುದು
–ಯಣ. **'ಜಣ=ಜನ'** ಶಬ್ದವನ್ನು ನೋಡುವುದು.
–ಯಣದ್ದಣ.(ಅಪ). **'ಜಣದ್ದಣ'** ಶಬ್ದವನ್ನು ನೋಡುವುದು.
–ಯಣ್ಣ. **'ಕಣ್ಣ=ಕರ್ಣ'** ಶಬ್ದವನ್ನು ನೋಡುವುದು.
–ಯತ್ತಿಅ. ವಿ: [**ಯಾತ್ರಿಕ**] ಯಾತ್ರೆ ಮಾಡುವವನು, ಸಂಚರಿಸುವವನು(ಉವಾ)
ಯದಾವಿ. ಅ: [ಯದ್ಯಪಿ] ಅಂಗೀಕಾರ ಅರ್ಥವನ್ನು ಸೂಚಿಸುವ ಅವ್ಯಯ, ಸ್ವೀಕಾರ ಸೂಚಕ ನಿಪಾತ, ಆದರೂ, ಹಾಗಾದರೂ,
ಯನ್ನೋವಣಇಯ. **'ಜಣ್ಣೋವಕಈಯ'** ಶಬ್ದವನ್ನು ನೋಡುವುದು.
ಯಮ. **'ಜಮ=ಯಮ'** ಶಬ್ದವನ್ನು ನೋಡುವುದು.
–ಯರ. **'ಕರ=ಕರ'** ಶಬ್ದವನ್ನು ನೋಡುವುದು.
–ಯಲ. **'ತಲ=ತಲ'** ಶಬ್ದವನ್ನು ನೋಡುವುದು.
ಯಾ. **'ಜಾ=ಯಾ(ಕುಮಾ)** ಶಬ್ದವನ್ನು ನೋಡುವುದು.
ಯಾಣ. ಸಕ: [**ಜ್ಞಾ**] ತಿಳಿದುಕೊಳ್ಳು, ಅರಿತುಕೊಳ್ಳ (ಉದು). –**'ಯಾಣಇ'**(ಉವ)
ಯಾಣ. **'ಜಾಣ=ಯಾನ'** ಶಬ್ದವನ್ನು ನೋಡುವುದು.
–ಯಾಲ. **'ಕಾಲ'** ಶಬ್ದವನ್ನು ನೋಡುವುದು(ಪಉಮ)
ಯಾವ(ಅಪ). **'ಜಾವ=ಯಾವತ್'** ಶಬ್ದವನ್ನು ನೋಡುವುದು.
–ಯಾವದಟ್ಠ. ವಿ: [**ಯಾವದರ್ಥ**] ಯಥೇಷ್ಟವಾದ, ತನಗೆ ಎಷ್ಟು ಬೇಕೋ ಅಷ್ಟು
–ಯುತ್ತ. **'ಜುತ್ತ=ಯುಕ್ತ'** ಶಬ್ದವನ್ನು ನೋಡುವುದು.
ಯೇವ}. (ಪೈ.ಮಾ). **'ಏವ'** ಶಬ್ದವನ್ನು ನೋಡುವುದು.
ಯೆವ್ವ}.
ಯೂಚಿಶ(ಮಾ)}. **'ಚಿಟ್ಠ=ಸ್ಥಾ'** ಶಬ್ದವನ್ನು
ಯೂಚಿಶ್ತ(ಪೈ)}. ನೋಡುವುದು.
ಯ್ಯೇವ(ಶೌ). 'ಏವ

ರ

ರ. **ಪು:** [ರ] ಮೂರ್ಧ ಸ್ಥಾನೀಯ ವ್ಯಂಜನ ವರ್ಣ. **–ಗಣ.** **ಪು:** [**–ಗಣ**] ಛಂದಃಶಾಸ್ತ್ರದಲ್ಲಿ ಪ್ರಸಿದ್ಧವಾದ ಮಧ್ಯ ಲಘುವುಳ್ಳ ಮೂರು ಅಕ್ಷರಗಳ ಗಣ

ರ. **ಅ:** ಪಾದ ಪೂರ್ತಿಗಾಗಿ ಬರುವ ಅವ್ಯಯ

ರ. **ಅ:** [ದೇ] 'ನಿಶ್ಚಯ' ನ್ನು ಸೂಚಿಸುವ ಅವ್ಯಯ

ರಇ. **ಸ್ತ್ರೀ:** [ರತಿ] ಕಾಮಕ್ರೀಡೆ, ಸುರತ, ಮೈಥುನ (ಕುಮಾ), ಮನ್ಮಥನ ಹೆಂಡತಿ, ಪ್ರೀತಿ, ಪ್ರೇಮ, ಅನುರಾಗ(ಸುಪಾ), ಕರ್ಮ–ವಿಶೇಷ, ಭಗವಾನ್ ಪದ್ಮಪ್ರಭನ ಮುಖ್ಯ ಶಿಷ್ಯೆ, **ಪು:** ಭೂತಾನಂದ ಎಂಬ ಇಂದ್ರನ ಒಬ್ಬ ಸೇನಾಧಿಪತಿ. **–ಅರ, –ಕರ.** **ವಿ:** [**–ಕರ**] ರತಿ–ಜನಕ, **ಪು:** ಒಂದು ಪರ್ವತ(ಪಣ್ಣ). **–ಕೀಲಾ.** **ಸ್ತ್ರೀ:** [**–ಕ್ರೀಡಾ**] ಕಾಮ–ಕ್ರೀಡೆ. **–ಕೇಲಿ.** **ಸ್ತ್ರೀ:** [**–ಕೇಲಿ**] ಅದೇ ಅರ್ಥ. **–ಘರ.** **ನ:** [**–ಗೃಹ**] ಸುರತ ಗೃಹ, ವಿಲಾಸ ಗೃಹ. **–ಣಾಹ, ನಾಹ.** **ಪು:** [**–ನಾಥ**] ಮನ್ಮಥ, ಕಾಮ. **–ಪಹು.** **ಪು:** [**–ಪ್ರಭು**] ಅದೇ ಅರ್ಥ(ಕುಮಾ). **–ಪ್ಪಭಾ.** **ಸ್ತ್ರೀ:** [**–ಪ್ರಭಾ**] ಕಿನ್ನರ ಎಂಬ ಹೆಸರಿನ ಇಂದ್ರನ ಒಬ್ಬ ಅಗ್ರಮಹಿಷಿ(ಠಾ). **–ಪ್ಪಿಯ.** **ಪು:** [**–ಪ್ರಿಯ**] ಕಂದರ್ಪ, ಒಬ್ಬ ಇಂದ್ರ, ಕಿನ್ನರ ದೇವತೆಗಳ ಒಂದು ಜಾತಿ. **–ಪ್ಪಿಯಾ.** **ಸ್ತ್ರೀ:** [**–ಪ್ರಿಯಾ**] ವಾನವ್ಯಂತರ ದೇವತೆಗಳ ಇಂದ್ರನೊಬ್ಬನ ಒಬ್ಬ ಅಗ್ರ–ಮಹಿಷಿ(ಣಾಯಾ). **–ಭವಣ.** **ನ:** [**–ಭವನ**] ಕಾಮಕ್ರೀಡೆಯ ಗೃಹ. **–ಮಂತ.** **ವಿ:** [**–ಮತ್**] ರಾಗ ವುಂಟುಮಾಡುವ, **ಪು:** ಕಾಮದೇವ. **–ಮಂದಿರ.** **ನ:** [**–ಮಂದಿರ**] ಶಯನಗೃಹ. **–ರಮಣ.** **ಪು;** [**–ರಮಣ**] ಮನ್ಮಥ. **–ಲಂಭ.** **ಪು:** [**–ಲಂಭ**] ಸುರತ ಪ್ರಾಪ್ತವಾಗುವುದು. ಕಂದರ್ಪ. **–ವಇ.** **ಪು:** [**–ಪತಿ**] ಮನ್ಮಥ. **–ವಿದ್ಧಿ.** **ಸ್ತ್ರೀ:** [**–ವೃದ್ಧಿ**] ವಿದ್ಯಾ–ವಿಶೇಷ(ಪಉವ). **–ಸುಂದರೀ.** **ಸ್ತ್ರೀ:** [**–ಸುಂದರೀ**] ಒಬ್ಬ ರಾಜಪುತ್ರಿ (ಉಪ). **–ಸುಹವ.** **ಪು:** [**–ಸುಭಗ**] ಕಾಮದೇವ. **–ಸೇಣಾ.** **ಸ್ತ್ರೀ:** [**–ಸೇನಾ**] ಕಿನ್ನರೇಂದ್ರನ ಒಬ್ಬ ಅಗ್ರ–ಮಹಿಷಿ(ಠಾ). **–ಹರ.** **ನ:** [**–ಗೃಹ**] ಸುರತದ ಕೋಣೆ.

ರಇಅ. **ವಿ:** [**ರಚಿತ**] ನಿರ್ಮಿಸಲಾದ, ರಚಿಸಲ್ಪಟ್ಟ

ರಇಅ. **ವಿ:** [**ರಚಿತ**] ಅರಮನೆ ಅಥವಾ ದೊಡ್ಡ ಭವನಗಳ ತಳಹದಿಯ ಗೋಡೆ

ರಇಅವ. **ಸಕ:** [**ರಚಯ್**] ರಚಿಸು, ನಿರ್ಮಿಸು

ರಇಗೆಲ್ಲ. **ವಿ:** [ದೇ] ಇಷ್ಟಪಟ್ಟ, ಅಪೇಕ್ಷಿಸಲಾದ(ದೇ)

ರಇಗೆಲ್ಲೀ. **ಸ್ತ್ರೀ:** [ದೇ] ರತಿಯ ಬಯಕೆ, ಕಾಮತೃಷೆ

ರಇಜ್ಜಂತ. **'ರಂಯ=ರಚಂಯ್'** ಶಬ್ದವನ್ನು ನೋಡುವುದು.

ರಇಲಕ್ಖ. **ನ:** [ದೇ] ಜಘನ, ನಿತಂಬ, ಕಟಿಪ್ರದೇಶ

ರಇಲಕ್ಖ. **ನ:** [ದೇ. **ರತಿಲಕ್ಷ**] ಮೈಥುನ, ಸಂಭೋಗ (ದೇ)

ರಇಲ್ಲಿಯ. **ವಿ:** [**ರಜಸ್ವಲ**] ರಜದಿಂದ ಕೂಡಿದ, ರಜೋಗುಣದಿಂದ ಕೂಡಿದ, ಧೂಳಿನಿಂದ ಕೂಡಿದ. **ಸ್ತ್ರೀ:–ಯಾ.** ಋತುಮತಿಯಾದ ಸ್ತ್ರೀ.

ರಇವಾಡಿಯಾ. **'ರಾಯು–ವಾಡಿಆ'** ಶಬ್ದವನ್ನು ನೋಡುವುದು.

ರಈಸರ. **ಪು:** [**ರತೀಶ್ವರ**] ಮನ್ಮಥ, ಕಾಮದೇವ

ರಉತಾಣಿಯಾ. **ಸ್ತ್ರೀ:** [ದೇ] ಕಜ್ಜಿ ರೋಗ

ರಉದ್ದ. **'ರೊದ್ದ=ರೌದ್ರ'** ಶಬ್ದವನ್ನು ನೋಡುವುದು.

ರಉರವ. **ವಿ:** [**ರೌರವ**] ಭಯಂಕರ, ಘೋರ. **–ಕಾಲ.** **ಪು:** [**–ಕಾಲ**] ತಾಯಿಯ ಗರ್ಭದಲ್ಲಿ ಹರಡಿಕೊಂಡಿರುವ ಸಮಯ(ಭಪಿ), ಒಂದು ನರಕ

ರಉಸ್ಸಲ. **ವಿ:** [**ರಜಸ್ವಲ**] ಧೂಳಿನಿಂದ ಕೂಡಿರುವ, ರಜೋಗುಣದಿಂದ ಕೂಡಿರುವ

ರಂ. **'ರ=ರಜಸ್'** ಶಬ್ದವನ್ನು ನೋಡುವುದು.

ರಂಕ. **ವಿ:** [**ರಂಕ**] ಬಡವ, ದರಿದ್ರ

ರಂಖೋಲ. **ಅಕ:** [**ದೋಲಯ್**] ತೂಗಾಡು, ಅಲುಗಾಡು, ನಡುಗು

ರಂಖೋಲಿಯ. **ವಿ:** [**ದೋಲಿತ**] ಅಲುಗಾಡಿಸಲ್ಪಟ್ಟ, ತೂಗಾಡಿಸಲ್ಪಟ್ಟ(ಗಉಡ)

ರಂಖೋಲಿರ. **ವಿ:** [**ದೋಲಿತೃ**] ತೂಗಾಡುವವನು

ರಂಗ. **ಅಕ:** [**ರಂಗ್**] ಅತ್ತ ಇತ್ತ ಚಲಿಸು. **ವ.ಕೃ:** **'ರಂಗಂತ'**

ರಂಗ. ಸಕ: [ರಂಗಯ್] ಬಣ್ಣ ಬಳಿ, ಬಣ್ಣ ಕೊಡು
ರಂಗ. ವಿ: [ರಾಂಗ] ಬಣ್ಣ ಬಳಿಯಲ್ಪಟ್ಟ, ಬಣ್ಣ ಬಳಿದು ಮಾಡಿದ
ರಂಗ. ನ: [ದೇ] ಸೀಸ, ತವರ ಬಿಳಿಯ ಬಣ್ಣದ ಮೃದು ಲೋಹ
ರಂಗ. ಪು: [ರಂಗ] ರಾಗ, ಪ್ರೇಮ, ನಾಟ್ಯಶಾಲೆ, ರಂಗಭೂಮಿ, ಅಭಿನಯ ಸ್ಥಳ, ಯುದ್ಧ ಭೂಮಿ. ಸಂಗ್ರಾಮ, ಕೆಂಪು ಬಣ್ಣ, ಬಣ್ಣ, ಬಣ್ಣ ಹಚ್ಚುವುದು (ಗಲುಡ). **–ಅ. ವಿ:** [–ದ] ಕುತೂಹಲ–ಜನಕ, ಕುತೂಹಲವನ್ನುಂಟು ಮಾಡುವ, **ರಂಗಾವಲಿ. ಸ್ತ್ರೀ:** [ರಂಗಾವಲಿ] ರಂಗೋಲಿ
ರಂಗಣ. ನ: [ರಂಗನ] ಬಣ್ಣ, ಬಣ್ಣ ಬಳಿಯುವುದು, **ಪು:** ಜೀವ, ಆತ್ಮ
ರಂಗಿರ. ವಿ: [ರಂಗಿತೃ] ಚಲಿಸುವವನು(ಸುಪಾ)
ರಂಗಿಲ್ಲ. ವಿ: [ರಂಗವತ್] ಬಣ್ಣವುಳ್ಳ(ಉರ)
ರಂಜ. ಸಕ: [ರಂಜಯ್] ಬಣ್ಣ ಬಳಿ, ಬಣ್ಣ ಹಚ್ಚು, ಸಂತಸಪಡು. ವ.ಕೃ: **'ರಂಜಂತ'**
ರಂಜಗ. ವಿ: [ರಂಜಕ] ಬಣ್ಣ ಬಳಿಯುವವನು,
ರಂಜಣ. ನ: [ರಂಜನ] ಬಣ್ಣ ಬಳಿಯುವುದು, ಸಂತಸ ಉಂಟುಮಾಡುವುದು(ಉಪ). **ಪು:** ಒಂದು ಛಂದಸ್ಸು. ವಿ: ಸಂತೋಷ ಉಂಟುಮಾಡುವವನು.
ರಂಜಣ. ಪು: [ಧೆ] ಗಡಿಗೆ, ಬಿಂದಿಗೆ, ಕುಂಭ. ಕುಂಡ, ಹರಿವೆ(ಪಾತ್ರೆ)
ರಂಜವಿಯ}. ವಿ: [ರಂಜಿತ] ಬಣ್ಣ ಹಾಕಲ್ಪಟ್ಟ(ಗಲುಡ)
ರಂಜಿಅ.}.
ರಂಡಾ. ಸ್ತ್ರೀ: [ರಂಡಾ] ವಿಧವೆ, ರಂಡೆ(ಉಪ)
ರಂಥುಲಿ. ನ: [ದೆ] ಹಗ್ಗ
ರಂಧ. ಸಕ: [**ರಧ್, ರಾಧಯ್**] ಬೇಯಿಸು(ಗಾ), **–ಘರ. ನ:** [ಗೃಹ] ಅಡುಗೆ ಮನೆ
ರಂಧ. ನ: [ರಂಧ್ರ] ಛಿದ್ರ, ತೂತು(ಗಾ)
ರಂಧಣ. ನ: [ರಂಧನ, ರಾಧನ] ಅಡಿಗೆ ಬೇಯಿಸುವುದು(ಸುಪಾ), **–ಘರ. ನ:** [–ಗೃಹ] ಅಡುಗೆ ಮನೆ
ರಂಪ. ಸಕ: [**ತಕ್ಷ್**] ತೆಳುವಾಗಿಸು, ಕೆತ್ತು, **'–ರಂಪಇ'**
ರಂಪಣ. ನ: [ತಕ್ಷಣ] ಕೃಶವಾಗಿಸುವುದು, ತೆಳುವಾಗಿಸುವುದು, ಮರವನ್ನು ಕೆತ್ತುವುದು
ರಂಫ. 'ರಂಪ' ಶಬ್ದವನ್ನು ನೋಡುವುದು.
ರಂಫಣ. 'ರಂಪಣ' ಶಬ್ದವನ್ನು ನೋಡುವುದು.
ರಂಭ. ಸಕ: [ಗಮ್] ಹೋಗು, ನಡೆ, ಚಲಿಸು. **–'ರಂಭಇ'**
ರಂಭ. 'ರಂಫ' ಶಬ್ದವನ್ನು ನೋಡುವುದು.
ರಂಭ. ಸಕ: [ಆ+ರಭ್] ಪ್ರಾರಂಭಿಸು
ರಂಭ. ಪು: [ದೇ] ಉಯ್ಯಾಲೆ, ಉಯ್ಯಾಲೆ ಮಣೆ(ದೇ)
ರಂಭಾ. ಸ್ತ್ರೀ: [ರಂಭಾ] ಬಾಳೆ, ಬಾಳೆ ಗಿಡ(ಸುಪಾ), ಒಬ್ಬ ಅಪ್ಸರೆ, ವೈರೋಚನನೆಂಬ ಬಲೀಂದ್ರನ ಒಬ್ಬ ಅಗ್ರ–ಮಹಿಷಿ(ಉತ್ತ), ರಾವಣನ ಒಬ್ಬ ಹೆಂಡತಿ(ಪಉಮ)
ರಕ್ಖ. ಸಕ: [ರಕ್ಷ್] ರಕ್ಷಿಸು, ಕಾಪಾಡು, ವ.ಕೃ: **ರಕ್ಖಂತ**
ರಕ್ಖ. ಪುಂನ: [ರಕ್ಷಸ್] ರಾಕ್ಷಸ(ಪಾಅ), ದೈತ್ಯ
ರಕ್ಖ. ವಿ: [ರಕ್ಷ] ರಕ್ಷಕ, ರಕ್ಷಣೆ ಮಾಡುವವನು, **ಪು:** ಒಬ್ಬ ಜೈನ ಮುನಿ
ರಕ್ಖಅ.}. ವಿ: [ರಕ್ಷಕ] ರಕ್ಷಣೆ ಮಾಡುವವನು
ರಕ್ಖಗ}.
ರಕ್ಖಣಿಯಾ. ಸ್ತ್ರೀ: [ದೇ] ಇಟ್ಟುಕೊಂಡವಳು
ರಕ್ಖವಾಲ. ವಿ: [ದೇ] ರಕ್ಷಣೆ ಮಾಡುವವನು, ರಕ್ಷಕ.
ರಕ್ಖಸ. ಪು: [ರಾಕ್ಷಸ] ದೇವತೆಗಳ ಒಂದು ಜಾತಿ(ಪಣ್ಣ), ವಿದ್ಯಾಧರರ ಒಂದು ವಂಶ, ವಂಶ–ವಿಶೇಷದಲ್ಲಿ ಹುಟ್ಟಿದ ವ್ಯಕ್ತಿ, ವಿದ್ಯಾಧರ ಜಾತಿಗೆ ಸೇರಿದವನು. ನಿಶಾಚರ, ಅಹೋರಾತ್ರದ ಮೂವತ್ತನೇ ಮುಹೂರ್ತ. **–ಉರೀ. ಸ್ತ್ರೀ:** [**–ಪುರೀ**] ಲಂಕಾನಗರಿ. **–ಣಅರೀ. ಸ್ತ್ರೀ:** [**–ನಗರೀ**] ಅದೇ ಅರ್ಥ. **–ಣಾಹ. ಪು:** [**–ನಾಥ**] ರಾಕ್ಷಸರ ರಾಜ. **–ತ್ಥ. ನ:** [**ರಾಕ್ಷಸಾಸ್ತ್ರ**] ಒಂದು ಬಗೆಯ ಅಸ್ತ್ರ (ಪಉಮ). **–ದೀವ. ಪು:** [**–ದ್ವೀಪ**] ಸಿಂಹಳ ದ್ವೀಪ. **–ನಾಹ. '–ಣಾಹ'** ಶಬ್ದವನ್ನು ನೋಡುವುದು. **–ವಇ. ಪು:** [**–ಪತಿ**] ರಾಕ್ಷಸರ ಮುಖಂಡ. **ರಕ್ಖಸಾಹಿವ. ಪು:** [**ರಾಕ್ಷಸಾಧಿಪ**] ಅದೇ ಅರ್ಥ.
ರಕ್ಖಸಿಂದ. ಪು: [ರಾಕ್ಷಸೇಂದ್ರ] ರಾಕ್ಷಸರ ರಾಜ
ರಕ್ಖಸೀ. ಸ್ತ್ರೀ: [ರಾಕ್ಷಸೀ] ರಾಕ್ಷಸನ ಹೆಂಡತಿ, ಒಂದು ಬಗೆಯ ಲಿಪಿ(ವಿಸೇ)
ರಕ್ಖಸೆಂದ. 'ರಕ್ಖಸಿಂದ' ಶಬ್ದವನ್ನು ನೋಡುವುದು.
ರಕ್ಖಾ. ಸ್ತ್ರೀ: [ರಕ್ಷಾ] ರಕ್ಷಣೆ, ಪಾಲಿಸುವುದು, ಕಾಪಾಡುವುದು.(ಸುಪಾ), ಬೂದಿ, ಭಸ್ಮ

ರಕ್ಖಿಅ. ವಿ: [ರಕ್ಷಿತ] ರಕ್ಷಿಸಲ್ಪಟ್ಟ, ಕಾಪಾಡಲ್ಪಟ್ಟ(ಗಲುಡ). **ಪು:** ಒಬ್ಬ ಪ್ರಸಿದ್ಧ ಜೈನ ಮಹರ್ಷಿ.
ರಕ್ಖಿಆ. **'ರಕ್ಖಸೀ'** ಶಬ್ದವನ್ನು ನೋಡುವುದು.
ರಕ್ಖೀ. **ಸ್ತ್ರೀ:** [ರಕ್ಷೀ] ಭಗವಾನ್ ಅರನಾಥನ ಮುಖ್ಯ ಸಾಧ್ವಿ
ರಕ್ಖೋವಗ. ವಿ: [ರಕ್ಷೋಪಗ] ರಕ್ಷಣೆ ಮಾಡುವುದರಲ್ಲಿ ನಿರತನಾದ
ರಗಿಲ್ಲ.(ದೇ). **'ರಇಗೆಲ್ಲ'** ಶಬ್ದವನ್ನು ನೋಡುವುದು.
ರಗ್ಗ. **'ರತ್ತ=ರಕ್ತ'** ಶಬ್ದವನ್ನು ನೋಡುವುದು.
ರಗ್ಗಯ. ನ: [ದೇ] ಕುಂಕುಮಕೇಸರಿ ಬಣ್ಣದ ಬಟ್ಟೆ
ರಘುಸ. **ಪು:** [ರಘುಷ] ಹರಿವಂಶದ ಒಬ್ಬ ರಾಜ
ರಚ್ಚ. **ಅಕ:** [ದೇ. ರಂಜ್] ಆಸಕ್ತಿ ತಾಳುವುದು, ಪ್ರೀತಿಸುವುದು
ರಚ್ಚಣ. ನ: [ದೇ. ರಂಜನ] ಅನುರಾಗ, ಪ್ರೀತಿ. ವಿ: ಪ್ರೀತಿಸುವವನು, ಪ್ರೇಮಿಸುವವನು
ರಚ್ಚಿರ. ವಿ: [ದೇ. ರಂಜಿತೃ] ಪ್ರೇಮಿಸುವವನು, ಪ್ರೀತಿಸುವವನು, ಪ್ರೇಮಿ
ರಚ್ಛಾ. **'ರಕ್ಖಾ'** ಶಬ್ದವನ್ನು ನೋಡುವುದು.
ರಚ್ಛಾ. **ಸ್ತ್ರೀ:** [ರಥ್ಯಾ] ನಗರದ ಭಾಗ, ಓಣಿ, ಬೀದಿ(ಗಾ)
ರಚ್ಛಾಮಯ. **ಪು:** [ದೇ. ರಥ್ಯಾಮೃಗ] ನಾಯಿ(ದೇ)
ರಜ. **'ರಯ=ರಜಸ್'** ಶಬ್ದವನ್ನು ನೋಡುವುದು.
ರಜಕ}. **ಪುಂಸ್ತ್ರೀ:** [ರಜಕ] ಅಗಸ, ಮಡಿವಾಳ.
ರಜಗ}. **ಸ್ತ್ರೀ:–ಕೀ**
ರಜಯ. **'ರಯಯ=ರಜತ'** ಶಬ್ದವನ್ನು ನೋಡುವುದು.
ರಜ್ಜ. **ಅಕ:** [ರಂಜ್] ಪ್ರೀತಿಸು, ಆಸಕ್ತನಾಗು, ಬಣ್ಣ ಕೊಡಿಸು, ಬಣ್ಣ ಹಾಕಿಸು, ಬಣ್ಣದಿಂದ ಕೂಡಿರು. **'ರಜ್ಜಇ'(ಆಚಾ).** ವ.ಕೃ: **ರಜ್ಜಂತ.**
ರಜ್ಜ. ನ: [ರಾಜ್ಯ] ರಾಜನ ಅಧಿಕೃತ ದೇಶ, ರಾಜ್ಯ, ಶಾಸನ, ಅಧಿಕಾರ(ಕುಮಾ). **–ಪಾಲಿಯಾ.ಸ್ತ್ರೀ:** [–ಪಾಲಿಕಾ] ಒಂದು ಜೈನಮುನಿ–ಶಾಖೆ, **–ವಇ. ಪು:** [–ಪತಿ] ರಾಜ,**–ಸಿರೀ. ಸ್ತ್ರೀ:** [–ಶ್ರೀ] ರಾಜ್ಯ ಲಕ್ಷ್ಮೀ. **ರಜ್ಜಾಹಿಸೇಯ. ಪು:** [ರಾಜ್ಯಾಭಿಷೇಕ]. ರಾಜನನ್ನು ಸಿಂಹಾಸನದ ಮೇಲೆ ಪ್ರತಿಷ್ಠಾಪಿಸುವ ಉತ್ಸವ(ಪಉಮ)
ರಜ್ಜವ. **ಪುಂನ:** **'ಮುಂದಿನ** ಶಬ್ದವನ್ನು ನೋಡುವುದು.
ರಜ್ಜು. **ಸ್ತ್ರೀ:**[ರಜ್ಜು] ಹಗ್ಗ(ಉಪಾ). ಒಂದು ಬಗೆಯ ಅಳತೆ
ರಜ್ಜು. ವಿ: [ದೇ] ಲೇಖಕ, ಬರವಣಿಗೆಯ ಕೆಲಸ ಮಾಡುವವನು. **–ಸಭಾ. ಸ್ತ್ರೀ:** [–ಸಭಾ] ಲೇಖಕನ ಮನೆ. ಶುಲ್ಕ–ಭವನ.
ರಜ್ಝಿಯ. **'ರಹಿಅ=ರಹಿತ'** ಶಬ್ದವನ್ನು ನೋಡುವುದು.
ರಟ್ಠ. ನ: [ರಾಷ್ಟ್ರ] ದೇಶ, ಜನಪದ(ಸುಪಾ). **–ಉಡ, –ಕೂಡ. ಪು:** [–ಕೂಟ] ರಾಜನಿಂದ ನಿಯುಕ್ತನಾದ ಪ್ರತಿನಿಧಿ, ಸುಬೇದಾರ(ವಿಪಾ)
ರಟ್ಠಿಅ. ವಿ: [ರಾಷ್ಟ್ರೀಯ] ದೇಶಕ್ಕೆ ಸಂಬಂಧಿಸಿದ, **ಪು:** ನಾಟಕದ ಭಾಷೆಯಲ್ಲಿ ರಾಜನ ಭಾವಮೈದುನ
ರಟ್ಠಿಅ. **ಪು:** [ರಾಷ್ಟ್ರಿಕ] ದೇಶದ ಬಗ್ಗೆ ಚಿಂತಿಸುವ ಸಲುವಾಗಿ ನಿಯುಕ್ತನಾದ ರಾಜ–ಪ್ರತಿನಿಧಿ, ಸುಬೇದಾರ(ಪಣ್ಣ)
ರಡ. **ಅಕ:** [ರಟ್] ಅಳು, ಚೀರಾಡು, ಕ್ರಿಯಾರೂಪ:– **'ರಡಇ'** . ವ. ಕೃ: **'ರಡಂತ'**
ರಡಣ. ನ: [ರಟನ] ಅರಚುವುದು, ಚೀರುವುದು.
ರಡಿಯ. ನ: [ರಟಿತ] ಅಳುವುದು, ಅರಚುವುದು (ಪಣ್ಣ), ಕರ್ಕಶವಾಗಿ ಕೂಗಾಡುವುದು, ವಿ: ಜಗಳಗಂಟ
ರಡರಡಿಯ. ನ: [ರಟರಟಿತ] ವಾದ್ಯದ ಶಬ್ದ.
ರಡ್ಡ. ವಿ: [ದೇ] ಜಾರಿ ಬಿದ್ದ,
ರಡ್ಡಾ. **ಸ್ತ್ರೀ:** [ರಡ್ಡಾ] ಒಂದು ಛಂದಸ್ಸು
ರಣ. **ಪುಂನ:** [ರಣ] ಯುದ್ಧ, ಸಂಗ್ರಾಮ, **ಪು:** ಶಬ್ದ(ಪಾಅ). **–ಖಂಭಉರ. ನ:** [–ಸ್ತಂಭಪುರ] ಅಜ್ಮೀರ್ ಹತ್ತಿರ ಇರುವ ಒಂದು ಪ್ರಾಚೀನ ನಗರ.
ರಣಕ್ಕಾರ. **ಪು:** [ರಣತ್ಕಾರ] **'ರಣರಣ'** ಎಂದು ಶಬ್ದಮಾಡುವುದು, ಶಬ್ದ.
ರಣಝುಣ. **ಅಕ:** [ರಣಝುಣಾಯ್] **'ರಣ್ ಝುಣ್'** ಎಂದು ಶಬ್ದಮಾಡು
ರಣಝುಣಿರ. ವಿ: [ರಣಝುಣಾಯಿತೃ] **'ರಣಝುಣ'** ಎಂದು ಶಬ್ದ ಮಾಡುವವ
ರಣರಣ}. **ಪು:** [ರಣರಣಕ] ನಿಃಶ್ವಾಸ, ಉದ್ವೇಗ,
ರಣರಣಾಯ್}. ಉತ್ಕಂಠತೆ, ಔತ್ಸುಕ್ಯ, ಚಿಂತೆ, ನೋವು, ಅಧೈರ್ಯ(ಪಾಅ)
ರಣರಣಾಯ. **'ರಣರಣ=ರಣರಣಾಯ್'** ಶಬ್ದವನ್ನು ನೋಡುವುದು.
ರಣಿಅ. ನ: [ರಣಿತ] ಶಬ್ದ, ಶಬ್ದ ಮಾಡಿದ

ರಣಿರ. ವಿ: [ರಣಿತೃ] ಶಬ್ದ ಮಾಡುವವನು(ಸುಪಾ)
ರಣ್ಣ. ನ: [ಅರಣ್ಯ] ಕಾಡು, ವನ, ಅಡವಿ(ಹೇ)
ರತ್ತ. ಪು: [ರಕ್ತ] ಕೆಂಪು ಬಣ್ಣ, ಕುಂಕುಮ ಕೇಸರಿ, ನೀರುಹಲಸಿನ ಮರ, ನ: ಕುಂಕುಮ, ತಾಮ್ರ, ಸಿಂದೂರ, ಕೆಂಪು ಬಣ್ಣದ ರಸಗಂಧಕ, ರಕ್ತ, ಪ್ರೀತಿ, ವಿ: ಬಣ್ಣದಲ್ಲಿ ಅದ್ದಲ್ಪಟ್ಟ, ಕೆಂಪು ಬಣ್ಣದ(ಪಾಅ), ಅನುರಾಗದಿಂದ ಕೂಡಿದ (ಓಘ). **–ಕಂಬಲಾ.** ಸ್ತ್ರೀ: [–ಕಂಬಲಾ] ಮೇರು ಪರ್ವತದ ಪಂಡಕ ವನದಲ್ಲಿರುವ ಒಂದು ಶಿಲೆ, ಅದರ ಮೇಲೆ ತೀರ್ಥಂಕರರ ಅಭಿಷೇಕ ಮಾಡಲಾಗುತ್ತದೆ(ಠಾ). **–ಕೂಡ.** ನ: [–ಕೂಟ] ಒಂದು ಶಿಖರ. **–ಕೋರಂಟಿಯ.** ಪು: [–ಕುರಂಟಕ] ಗೋರಂಟಿಗಿಡ. **–ಕ್ಖ, –ಚ್ಛ.** ವಿ: [ರಕ್ತಾಕ್ಷ] ಕೆಂಪು ಕಣ್ಣುಳ್ಳವನು. ಸ್ತ್ರೀ: **–ಚ್ಛೀ.** ಪು: **ಕೋಣ.** **–ಟ್ಠ.**ಪು: [ರಕ್ತಾರ್ಥ] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). **–ಧಾಉ.** ಪು:[–ಧಾತು] ಕುಂಡಲ ಪರ್ವತದ ಒಂದು ಶಿಖರ. **–ಪಡ.**ಪು: [–ಪಟ] ಪರಿವ್ರಾಜಕ, ಸಂನ್ಯಾಸಿ(ಣಾಯಾ). **–ಪ್ಪವಾಯ.** ಪು: [–ಪ್ರಪಾತ] ಒಂದು ಸರೋವರ (ಠಾ). **–ಪ್ಪಹ.** ಪು: [–ಪ್ರಭ] ಕುಂಡಲ ಪರ್ವತದ ಒಂದು ಶಿಖರ. **–ರಯಣ.** ನ: [–ರತ್ನ] ರತ್ನದ ಒಂದು ಜಾತಿ, ಪದ್ಮರಾಗ ಮಣಿ. **–ವಈ.** ಸ್ತ್ರೀ: [–ವತೀ] ಒಂದು ನದಿ. **–ವಡ.** '**–ಪಡ**' ಶಬ್ದವನ್ನು ನೋಡುವುದು. **–ಸುಭದ್ದಾ.** ಸ್ತ್ರೀ: [–ಸುಭದ್ರಾ] ಶ್ರೀಕೃಷ್ಣನ ಒಬ್ಬ ಸೋದರಿ. **–ರಕ್ತಾಸೋಗ, ರಕ್ತಾಸೋಯ.** ಪು: [–ರಕ್ತಾಶೋಕ] ಕೆಂಪು ಅಶೋಕ ವೃಕ್ಷ.
–ರತ್ತ. ಪು: [–ರಾತ್ರ] ರಾತ್ರಿ, ನಿಶೆ
ರತ್ತಗ. '**ರತ್ತ= ರಕ್ತ**' ಶಬ್ದವನ್ನು ನೋಡುವುದು.
ರತ್ತಂದಣ. ನ: [ರಕ್ತಚಂದನ] ಕೆಂಪು ಶ್ರೀಗಂಧ(ಸುಪಾ)
ರತ್ತಖರ. ನ: [ದೇ] ಮದ್ಯ, ಕದಂಬ ವೃಕ್ಷದ ಹೆಂಡ
ರತ್ತಚ್ಛ. ಪು: [ದೇ] ಹಂಸ, ವ್ಯಾಘ್ರ.
ರತ್ತಡಿ. (ಅಪ). ರತ್ತಿ=ರಾತ್ರಿ
ರತ್ತಯ. ನ: [ದೇ. ರಕ್ತಕ] ಬಂಧೂಕ ವೃಕ್ಷದ ಹೂವು.
ರತ್ತಾ. ಸ್ತ್ರೀ: [ರಕ್ತಾ] ಒಂದು ನದಿ(ಸಮ). **–ವಇಪ್ಪವಾಯ.** ಪು: –[ವತೀಪ್ರಪಾತ] ಒಂದು ಜಲಾಶಯ, ಸರೋವರ.
ರತ್ತಿ. ಸ್ತ್ರೀ: [ದೇ] ಆಜ್ಞೆ, ಆದೇಶ(ದೇ)
ರತ್ತಿ. ಸ್ತ್ರೀ: [ರಾತ್ರಿ] ರಾತ್ರಿ, ನಿಶೆ. **–ಅಂಧಯ.** ವಿ: [–ಅಂಧಕ] ರಾತ್ರಿಯಲ್ಲಿ ನೋಡಲು ಸಮರ್ಥನಲ್ಲದ (ಗಾ). **–ಅರ.** ವಿ: [–ಚರ] ರಾತ್ರಿಯಲ್ಲಿ ವಿಹರಿಸುವವನು, ಪು: ರಾಕ್ಷಸ. **–ದಿವಹ.** ನ: [–ದಿವಸ] ಹಗಲು ಮತ್ತು ರಾತ್ರಿ, ಅಹರ್ನಿಶ. '**ರಾಇ=ರಾತ್ರಿ**' ಶಬ್ದವನ್ನು ನೋಡುವುದು.
ರತ್ತಿಂಚರ. '**ರತ್ತಿ=ಅರ**' ಶಬ್ದವನ್ನು ನೋಡುವುದು.
ರತ್ತಿಂದಿಅಹ}. ನ: [ರಾತ್ರಿ ದಿವಸ] ಹಗಲು–ರಾತ್ರಿ,
ರತ್ತಿಂದಿಯ}. [ರಾತ್ರಿಂದಿವ] ಅಹರ್ನಿಶ, ನಿರಂತರ
ರತ್ತಿಂದಿವ}.
ರತ್ತಿಂಧ. ವಿ: [ರಾತ್ರ್ಯಂಧ] ರಾತ್ರಿಯ ಸಮಯದಲ್ಲಿ ಕಣ್ಣು ಕಾಣಿಸದಿದ್ದವನು
ರತ್ತೀಅ. ಪು: [ದೇ] ನಾಪಿತ, ಕ್ಷೌರಿಕ
ರತ್ತುಪ್ಪಲ. ನ: [ರಕ್ತೋತ್ಪಲ] ಕೆಂಪು ಕಮಲ (ಪಣ್ಣ)
ರತ್ತೋಆ. ಸ್ತ್ರೀ: [ರಕ್ತೋದಾ] ಒಂದು ನದಿ
ರತ್ತೊಪ್ಪಲ. '**ರತ್ತುಪ್ಪಲ**' ಶಬ್ದವನ್ನು ನೋಡುವುದು.
ರತ್ಥಾ. '**ರಚ್ಛಾ**' ಶಬ್ದವನ್ನು ನೋಡುವುದು.
ರದ್ಧ. ವಿ: [ರದ್ಧ, ರಾದ್ಧ] ಸಿದ್ಧವಾದ, ಪಕ್ವವಾದ(ಸುಪಾ)
ರದ್ಧಿ. ವಿ: [ದೇ] ಪ್ರಧಾನ, ಶ್ರೇಷ್ಠ
ರನ್ನ. '**ರಣ್ಣ**' ಶಬ್ದವನ್ನು ನೋಡುವುದು.
ರಪ್ಪ. ಸಕ: [ಆ+ಕ್ರಮ್] ಆಕ್ರಮಿಸು, '**ರಪ್ಪಇ**'
ರಪ್ಫ. ಪು: [ದೇ] ಹುತ್ತ, ಒಂದು ರೋಗ
ರಪ್ಫಡಿಆ. ಸ್ತ್ರೀ: [ದೇ] ನೀರುಡ, ದೊಡ್ಡ ಜಾತಿಯ ಹಲ್ಲಿ, ಓತಿಕ್ಯಾತ
ರಬ್ಬಾ.ವಿ:[ದೇ] ಅಕ್ಕಿಯಗಂಜಿ, ಅನ್ನದ ಮೇಲಿನ ಗಂಜಿ.
ರಭಸ. '**ರಹಸ=ರಭಸ**' ಶಬ್ದವನ್ನು ನೋಡುವುದು.
ರಮ. ಅಕ: [ರಮ್] ಕ್ರೀಡಿಸು, ಸಂಭೋಗಿಸು, '**ರಮಇ**', ವ. ಕೃ: '**ರಮಂತ**'
ರಮಣ. ನ: [ರಮಣ] ಕ್ರೀಡೆ, ಆಟ, ಸುರತ, ಸಂಭೋಗ, ಮೈಥುನ(ಪವ), ಯೋನಿ, ಪು: ಜಘನ, ಹೆಣ್ಣಿನ ಸೊಂಟದ ಮುಂಭಾಗ, ಪತಿ, ಗಂಡ(ಪಉಮ), ಒಂದು ಛಂದಸ್ಸು.
ರಮಣಿಜ್ಜ. ವಿ: [ರಮಣೀಯ] ಸುಂದರ, ಮನೋಹರ, ರಮ್ಯ(ಪಾಅ), ಒಂದು ದೇವ–ವಿಮಾನ, ಪು: ನಂದೀಶ್ವರ ದ್ವೀಪದ ಮಧ್ಯದಲ್ಲಿ ಉತ್ತರ ದಿಕ್ಕಿನೆಡೆಗೆ ಇರುವ ಒಂದು ಅಂಜನ–ಗಿರಿ.

ರಮಣೀ. ಸ್ತ್ರೀ: [ರಮಣೀ] ಹೆಂಗಸು, ಸ್ತ್ರೀ(ಪಾಅ), ಒಂದು ಪುಷ್ಕರಿಣೀ

ರಮಣೀಅ. ವಿ: [ರಮಣೀಯ] ರಮ್ಯವಾದ, ಮನೋಹರವಾದ, ಸುಂದರವಾದ(ಸ್ವಪ್ನ)

ರಮಾ. ಸ್ತ್ರೀ: [ರಮಾ] ಲಕ್ಷ್ಮಿ, ಶ್ರೀ

ರಮಿಅ. 'ರಮ' ಶಬ್ದವನ್ನು ನೋಡುವುದು.

ರಮಿಅ. ವಿ: [ರತ] ಕ್ರೀಡಿಸಿದವನು, ಗಂಡು-ಹೆಣ್ಣಿನ ಸಂಗಮ, ನ: ಕ್ರೀಡೆ(ಸುಪಾ)

ರಮಿಅ. ವಿ: [ರಮಿತ] ಕ್ರೀಡಿಸಲ್ಪಟ್ಟವನು, (ಕುಮಾ)

ರಮಿರ. ವಿ: [ರಂತೃ] ಕ್ರೀಡಿಸುವವನು

ರಮ್ಮ. ವಿ:[ರಮ್ಯ]ಮನೋಹರವಾದ, ಆನಂದಕರವಾದ, ಸುಂದರವಾದ(ಪಾಅ). **ಪು:** ಒಂದು ವಿಜಯದ ಪ್ರಾಂತ, ಸಂಪಿಗೆ ಮರ, ಒಂದು ದೇವ-ವಿಮಾನ.

ರಮ್ಮಗ}. **ಪು:** [ರಮ್ಯಕ] ಒಂದು ವಿಜಯದ ಪ್ರಾಂತ,

ರಮ್ಮಯ}. ಒಂದು ಜೋಡಿ ಕ್ಷೇತ್ರ, ಜಂಬೂ ದ್ವೀಪದ ವರ್ಷ-ವಿಶೇಷ(ತಾ), **ನ:** ಒಂದು ದೇವ-ವಿಮಾನ, ಒಂದು ಪರ್ವತ ಶಿಖರ.

ರಮ್ಹ. **'ರಂಫ'** ಶಬ್ದವನ್ನು ನೋಡುವುದು.

ರಯ. **ಸಕ:** [ರಜ್] ಬಣ್ಣ ಹಚ್ಚು(ಆಚಾ)

ರಯ. **ಸಕ:** [ರಚಯ್] ನಿರ್ಮಿಸು, ರಚಿಸು,-**'ರಯಇ'**

ರಯ. **ಪುಂನ:** [ರಜಸ್] ರೇಣು, ಧೂಳು(ಔಪ). ಪರಾಗ, ಹೂವಿನ ಧೂಳು, ಸಾಂಖ್ಯ ದರ್ಶನದಲ್ಲಿ ಹೇಳಿರುವ ಪ್ರಕೃತಿಯ ಒಂದು ಗುಣವಾದ ರಜೋಗುಣ. ವಧೆಯ ಕರ್ಮ, ಸ್ತ್ರೀಯರ ರಜಸ್ಸು, **-ತ್ತಾಣ.** ನ: [-**ತ್ರಾಣ**] ಜೈನ ಮುನಿಯ ಒಂದು ಉಪಕರಣ(ಓಘ), -**ಸ್ಸಲಾ.** ಸ್ತ್ರೀ: [-**ಸ್ವಲಾ**] ಋತುಮತಿಯಾದ ಹೆಣ್ಣು. **-ಹರ.** **ಪುಂನ:** [-**ಹರ**] ಜೈನ ಮುನಿಯ ಒಂದು ಉಪಕರಣ, **-ಹರಣ.** ನ: [-**ಹರಣ**] ಅದೇ ಅರ್ಥ(ಣಾಯಾ)

ರಯ. ವಿ: [ರತ] ಅನುರಕ್ತನಾದವನು, ಆಸಕ್ತನಾದವನು (ಔಪ), ಸ್ಥಿತ, **ನ:** ಮೈಥುನ, ರತಿಕ್ರಿಯೆ(ಸುಪಾ).

ರಯ. **ಪು:** [ರಯ] ವೇಗ

ರಯ. **'ರವ'** ಶಬ್ದವನ್ನು ನೋಡುವುದು(ಪಉಮ)

ರಯಗ. **'ರಯಯ=ರಜಕ'** ಶಬ್ದವನ್ನು ನೋಡುವುದು.

ರಯಣ. ನ: [ರಜನ] ಬಣ್ಣ ಕೊಡುವುದು, ಬಣ್ಣ ಹಚ್ಚುಹುದು(ಸೂಅ)

ರಯಣ. ವಿ: [ರಚನ]ನಿರ್ಮಿಸುವವನು, ಮಾಡುವವನು

ರಯಣ. **ಪು:** [ರದನ] ಹಲ್ಲು(ಉಪ) ಮಾಡುವುದು

ರಯಣ. **ಪುಂನ:** [ರತ್ನ] ಮಾಣಿಕ್ಯವೇ ಮೊದಲಾದ ಪ್ರಶಸ್ತ ಹರಳುಗಳು, ಮಣಿ(ಣಾಯಾ), ಶ್ರೇಷ್ಠ, ಸ್ವಜಾತಿಯಲ್ಲಿ ಉತ್ತಮ, ಒಂದು ಛಂದಸ್ಸು, ಒಂದು ದ್ವೀಪ, ಒಂದು ಪರ್ವತ ಶಿಖರ(ತಾ), **ಪು.ಬ:** ರತ್ನ-ದ್ವೀಪದ ನಿವಾಸಿ, **-ಉರ.** ನ: [-**ಪುರ**] ಒಂದು ನಗರ. **-ಚಿತ್ತ.** **ಪು:** [-**ಚಿತ್ರ**] ವಿದ್ಯಾಧರ ವಂಶದ ಒಬ್ಬ ರಾಜ. **-ದೀವ.** **ಪು:** [-**ದ್ವೀಪ**] ಒಂದು ದ್ವೀಪ-ವಿಶೇಷ(ಣಾಯಾ). **-ನಿಹಿ.** **ಪು:** [-**ನಿಧಿ**] **ಸಾಗರ.** **-ಪುಢವೀ.** ಸ್ತ್ರೀ: [-**ಪೃಥಿವೀ**] ರತ್ನ-ಪ್ರಭಾ ಎಂಬ ಮೊದಲನೆಯ ನರಕ-ಭೂಮಿ. **-ಪುರ.** **'-ಉರ'** ಶಬ್ದವನ್ನು ನೋಡುವುದು. **-ಪ್ಪಭಾ, -ಪ್ಪಹಾ.** ಸ್ತ್ರೀ: [-**ಪ್ರಭಾ**] ಮೊದಲನೆಯ ನರಕಭೂಮಿ. ಭೀಮ ಎಂಬ ಒಬ್ಬ ರಾಕ್ಷಸೇಂದ್ರನ ಪಟ್ಟದ ರಾಣಿ, ರತ್ನದ ಕಾಂತಿ. **-ಮಯ.** ವಿ: [-**ಮಯ**] ರತ್ನಗಳಿಂದ ಮಾಡಿದ. **-ಮಾಲಾ.** ಸ್ತ್ರೀ: [-**ಮಾಲಾ**] ಒಂದು ಛಂದಸ್ಸು. **-ಮಾಲಿ.** **ಪು:** [-**ಮಾಲಿನ್**] ವಿದ್ಯಾಧರ ವಂಶದಲ್ಲಿ ಹುಟ್ಟಿದ ನಮಿ ಎಂಬ ರಾಜನ ಒಬ್ಬ ಮಗ(ಪಉಮ).**-ಮುಸ.** ವಿ: [-**ಮುಷ್**] ರತ್ನಗಳನ್ನು ಕದಿಯುವವನು. **-ರಹ.** **ಪು:** [-**ರಥ**] ವಿದ್ಯಾಧರ ವಂಶದ ಒಬ್ಬ ರಾಜ. **-ರಾಸಿ.** **ಪು:** [-**ರಾಶಿ**] ಸಮುದ್ರ. **-ವಇ.** **ಪು:** [-**ಪತಿ**] ರತ್ನಗಳ ಒಡೆಯ, ಒಬ್ಬ ಶ್ರೀಮಂತ. **-ವಈ.** ಸ್ತ್ರೀ: [-**ವತೀ**] **ಒಬ್ಬ ರಾಣಿ.** **-ವಜ್ಜ.** **ಪು:** [-**ವಜ್ರ**] ವಿದ್ಯಾಧರ ವಂಶದ ಒಬ್ಬ ರಾಜ. **-ವಹ.** ವಿ: [-**ವಹ**] ರತ್ನವನ್ನು ಧರಿಸುವವನು(ಗಉಡ). **-ಸಂಚಯ.** ನ: [-**ಸಂಚಯ**] ರುಚಕ ಪರ್ವತದ ಒಂದು ಶಿಖರ, ಒಂದು ನಗರ. ಸಂಚಯಾ. ಸ್ತ್ರೀ: [-**ಸಂಚಯಾ**] ಮಂಗಳಾವತಿ ಎಂಬ ವಿಜಯದ ರಾಜಧಾನಿ. ಈಶಾನೇಂದ್ರನ ವಸುಂಧರಾ ಎಂಬ ಹೆಸರಿನ ರಾಜಧಾನಿ. **-ಸಮಯಾ.** ಶ್ರೀ: [-**ಸಮಯಾ**] ಮಂಗಲಾವತಿ ಎಂಬ ವಿಜಯದ ರಾಜಧಾನಿ. **-ಸಾರ.** **ಪು:** [**ಸಾರ**] ಒಬ್ಬ ರಾಜ, ಒಬ್ಬ ಶೇಠನ ಹೆಸರು. **-ಸಿಹ.** **ಪು:** [-**ಶಿಖ**] ಒಬ್ಬ ರಾಜ.

–ಸೇಹರ. ಪು: [–ಶೇಖರ] ಒಬ್ಬ ರಾಜ. ವಿಕ್ರಮ ಶಕೆ ೧೫ನೇ ಶತಮಾನದಲ್ಲಿದ್ದ ಒಬ್ಬ ಜೈನ ಆಚಾರ್ಯ ಮತ್ತು ಗ್ರಂಥಕಾರ. **ರಯಣಾಅರ, ರಯಣಾಗರ.** ಪು: [ರತ್ನಾಕರ] ರತ್ನದ ಗಣಿ, ಸಮುದ್ರ(ಪಾಅ). **ರಯಣಾಭಾ.** ಸ್ತ್ರೀ: [ರತ್ನಾಭಾ] '–ಪ್ಪಭಾ' ಶಬ್ದವನ್ನು ನೋಡುವುದು. **ರಯಣಾಮಯ.** '–ಮಯ' ಶಬ್ದವನ್ನು ನೋಡುವುದು(ಔಪ). **ರಯಣಾಯರಸುಅ.** ಪು: [ರತ್ನಾಕರಸುತ] ಚಂದ್ರ, ಒಬ್ಬ ವ್ಯಾಪಾರಿಯ ಪುತ್ರ. **ರಯಣಾವಲಿ, ರಯಣಾಬಲಿ.** ಸ್ತ್ರೀ: [ರತ್ನಾವಲಿ, ರತ್ನಾಬಲಿ] ರತ್ನಗಳ ಹಾರ. ಒಂದು ಬಗೆಯ ತಪಸ್ಸು, ಒಂದು ಗ್ರಂಥ. ಒಬ್ಬ ವಿದ್ಯಾಧರ ರಾಜಪುತ್ರಿ(ಪಉವ). **ರಯಣಾವಹ.** ನ: [ರತ್ನಾವಹ] ಒಂದು ನಗರ. **ರಯಣಾಸವ.** ಪು: [ರತ್ನಾಸ್ರವ] ರಾವಣನ ತಂದೆ. **ರಣಾಸವಸುಅ.** ಪು: [ರತ್ನಾಸ್ರವಸುತ] ರಾವಣ. **ರಯಣಾಹಿಯ.** ವಿ: [ರತ್ನಾಧಿಕ] ಜ್ಯೇಷ್ಠ, ವಯಸ್ಸಿನಲ್ಲಿ ಹಿರಿಯ.

ರಯಣಪ್ಪಭಿಯ. ವಿ: [ರತ್ನಪ್ರಭಿಕ] ರತ್ನಪ್ರಭೆಗೆ ಸಂಬಂಧಿಸಿದ

ರಯಣಾ. ಸ್ತ್ರೀ: [ರಚನಾ] ಕೃತಿ, ನಿರ್ಮಾಣ(ಉತ್ತ)

ರಯಣಾ. ಸ್ತ್ರೀ: [ರಚನಾ] ರತ್ನಪ್ರಭಾ ಎಂಬ ಹೆಸರಿನ ನರಕ ಭೂಮಿ.

ರಯಣಿ. ಪುಂಸ್ತ್ರೀ: [ರತ್ನಿ] ಒಂದು ಕೈ ಅಳತೆ, ಒಂದು ಗುದ್ದು ಮೊಳ, ಮುಷ್ಟಿ ಕಟ್ಟಿಕೊಂಡು ಹಾಕುವ ಮೊಳ.

ರಯಣಿ. ಸ್ತ್ರೀ: [ರಜನಿ] 'ರಯಣೀ= ರಜನೀ' ಶಬ್ದವನ್ನು ನೋಡುವುದು. –**ಅರ.** ಪು: [–ಚರ] ರಾಕ್ಷಸ,–**ಅರ, ಕರ.** ಪು: [–ಕರ] ಚಂದ್ರ. –**ಣಾಹ.** ಪು: [–ನಾಥ] ಚಂದ್ರ. –**ಭತ್ತ.** ನ: [–ಭಕ್ತ] ರಾತ್ರಿ ಹೊತ್ತು ತಿನ್ನುವುದು. –**ರಮಣ.** ಪು: [–ರಮಣ] ಚಂದ್ರ.–**ವಲ್ಲಹ.** ಪು: [–ವಲ್ಲಭ] ಚಂದ್ರ. –**ವಿರಾಮ.** ಪು: [–ವಿರಾಮ] ಬೆಳಿಗ್ಗೆ, ಪ್ರಾತಃಕಾಲ.

ರಯಣಿಂದ. ಪು: [ರಜನೀಂದ್ರ] ಚಂದ್ರ

ರಯಣಿದ್ಧಯ. ನ: [ದೇ] ಕುಮುದ,

ರಯಣೀ. ಸ್ತ್ರೀ: [ರತ್ನೀ] 'ರಯಣಿ=ರತ್ನಿ' ಶಬ್ದವನ್ನು ನೋಡುವುದು(ಠಾ)

ರಯಣೀ. ಸ್ತ್ರೀ: [ರಜನೀ] ರಾತ್ರಿ, (ಪಾಅ). ಈಶಾನೇಂದ್ರದ ಲೋಕಪಾಲನ ಪಟ್ಟದ ರಾಣಿ, ಚಮರೇಂದ್ರನ ಒಬ್ಬ ಅಗ್ರ ಮಹಿಷಿ(ಠಾ), ಮಧ್ಯಮ ಗ್ರಾಮದ ಒಂದು ಮೂರ್ಛನಾ, ಷಡ್ಜ ಗ್ರಾಮದ ಒಂದು ಮೂರ್ಛನಾ (ಸ್ವರವು ಬೆಳೆದು ರಾಗವಾಗುವುದು). –**ಭೋಅಣ.** ನ: [–ಭೋಜನ] ರಾತ್ರಿಯ ಊಟ. –**ಸಾರ.** ನ: [–ಸಾರ] ಸುರತ, ಮೈಥುನ. 'ರಯಣಿ=ರಜನಿ' ಶಬ್ದವನ್ನು ನೋಡುವುದು.

ರಯಣೀ. ಸ್ತ್ರೀ: [ರಜನೀ] ಓಷಧಿ–ವಿಶೇಷ, ಅರಿಶಿನ, ಕೆಂಪು ಅರಗು

ರಯಣುಚ್ಚಯ}. ಪು: [ರತ್ನೋಚ್ಚಯ] ಮೇರು ಪರ್ವತ,
ರಯಣೊಚ್ಚಯ}. ಒಂದು ಶಿಖರ

ರಯಣೊಚ್ಚಯಾ. ಸ್ತ್ರೀ: [ರತ್ನೋಚ್ಚಯಾ] ವಸುಗುಪ್ತಾ ಎಂಬ ಹೆಸರಿನ ಇಂದ್ರಾಣಿಯ ಒಂದು ರಾಜಧಾನಿ

ರಯತ}. ನ: [ರಜತ] ಬೆಳ್ಳಿ, (ಪಾಅ), ಒಂದು ದೇವ–
ರಯದ}. ವಿಮಾನ, ಆನೆಯ ದಂತ, ಹಾರ, ಚಿನ್ನ,
ರಯಯ}. ರಕ್ತ, ಪರ್ವತ, ಬಿಳಿಯಬಣ್ಣ, ಒಂದು ಶಿಖರ. ವಿ: ಬಿಳಿಯ ಬಣ್ಣದ, ಶ್ವೇತ. –**ಗಿರಿ.** ಪು: [–ಗಿರಿ] ಪರ್ವತ, ಹಿಮಾಲಯ. –**ವತ್ತ.** ನ: [–ಪಾತ್ರ] ಬೆಳ್ಳಿಯ ಪಾತ್ರೆ. **ರಯತಾಮಯ.** ವಿ: [ರಜತಮಯ] ಬೆಳ್ಳಿಯಿಂದ ನಿರ್ಮಿಸಲಾದ

ರಯಯ. ಪು: [ರಜಕ] ಅಗಸ, ಮಡಿವಾಳ

ರಯವಲೀ. ಸ್ತ್ರೀ: [ದೇ] ಬಾಲ್ಯ, ಶೈಶವ(ದೇ)

ರಯವಾಡೀ. 'ರಾಯ–ವಾಡಿಆ' ಶಬ್ದವನ್ನು ನೋಡುವುದು.

ರಯಾವ. ಸಕ: [ರಚಯ್] ನಿರ್ಮಿಸು, ರಚಿಸು. 'ರಯಾವೇಇ'

ರಲ್ಲಾ. ಸ್ತ್ರೀ: [ದೇ] ಪ್ರಿಯಂಗು, ಪ್ರೇಂಕಣ ಗಿಡ

ರಲ್ಲಿ. ಪುಂಸ್ತ್ರೀ: [ದೇ] ದೀರ್ಘವಾದ ಮಧುರ ಶಬ್ದ

ರವ. ಸಕ: [ರು] ಹೇಳು, ಮಾತಾಡು, ವಧಿಸು, ಚಲಿಸು, ನಡೆ, ಅಕ: ಅಳು, ಶಬ್ದಮಾಡು, 'ರವಇ'(ಔಪ)

ರವ. ಸಕ: [ರಾವಯ್] ಕರೆಯಿಸು, ಆಹ್ವಾನಿಸು. ವ.ಕೃ: 'ರವೇಂತ'

ರವ. ಸಕ: [ದೇ] ಒದ್ದೆಮಾಡು, ನೆನೆಸು

ರವ. ಪು: [ರವ] ಶಬ್ದ, ದನಿ, ವಿ: ಮಧುರ ದನಿ ಉಳ್ಳವನು(ಪಾಅ)

ರವ.(ಅಪ). 'ರಯ=ರಜಸ್' ಶಬ್ದವನ್ನು ನೋಡುವುದು.

ರವಂಣ}. (ಅಪ). 'ರಮಣ' ಶಬ್ದವನ್ನು ನೋಡುವುದು.
ರವಣ}.

ರವಣ. ನ: [ರವಣ] ಶಬ್ದ ಮಾಡು,

ರವಣ್ಣ} (ಅಪ). 'ರಮ್ಮ=ರಮ್ಯ' ಶಬ್ದವನ್ನು
ರವನ್ನ}. ನೋಡುವುದು.

ರವಣ್ಣ}.(ಅಪ). 'ರಮಣ' ಶಬ್ದವನ್ನು ನೋಡುವುದು.
ರವಣ}.

ರವಯ. ಪು: [ದೇ] ಕಡೆಗೋಲು

ರವರವ. ಅಕ: [ರೋರುಯ್] ಜೋರಾಗಿ ಶಬ್ದ ಮಾಡು, ಮತ್ತೆ ಮತ್ತೆ ಶಬ್ದಮಾಡು. **ವ.ಕೃ: 'ರವರ ವಂತ'**

ರವಿ. ವಿ: [ರವಿನ್] ಶಬ್ದ ಮಾಡುವವನು, ಗಲಾಟೆ ಮಾಡುವವನು.

ರವಿ. ನ: [ರವಿ] ಸೂರ್ಯ, ರಾಕ್ಷಸ ವಂಶದ ಒಬ್ಬ ರಾಜ, ಎಕ್ಕದ ಗಿಡ, **–ತೇಅ. ಪು: [–ತೇಜಸ್]** ಇಕ್ಷ್ವಾಕು ವಂಶದ ಒಬ್ಬ ರಾಜ(ಪಉಮ). ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ. **–ತೇಯಾ. ಸ್ತ್ರೀ: [–ತೇಜಾ]** ಒಂದು ವಿದ್ಯೆ. **–ನಂದಣ. ಪು: [–ನಂದನ] ಶನಿಗ್ರಹ. –ಪ್ಪಭ. ಪು: [–ಪ್ರಭ]** ವಾನರ ದ್ವೀಪದ ರಾಜ(ಪಉಮ) **–ಭತ್ತಾ. ಸ್ತ್ರೀ: [–ಭಕ್ತಾ]** ಒಂದು ಮಹಾ ಔಷಧಿ. **–ಭಾಸ. ಪು: [–ಭಾಸ]** ಸೂರ್ಯಹಾಸ ಎಂಬ ಖಡ್ಗ. **–ವಾರ. ಪು: [–ವಾರ]** ಭಾನುವಾರ. **–ಸುಅ.ಪು: [–ಸುತ] ಶನಿಗ್ರಹ.** ರಾಮಚಂದ್ರನ ಒಬ್ಬ ಸೇನಾಧಿಪತಿಯಾದ ಸುಗ್ರೀವ. **–ಹಾಸ. ಪು: [–ಹಾಸ]** ಸೂರ್ಯಹಾಸ ಖಡ್ಗ.

ರವಿಗಯ. ನ: [ರವಿಗತ] ಯಾವುದರ ಮೇಲೆ ಸೂರ್ಯನಿದ್ದಾನೋ ಆ ನಕ್ಷತ್ರ

ರವಿಯ. ವಿ: [ದೇ] ಒದ್ದೆಮಾಡಲ್ಪಟ್ಟ, ನೆನೆಸಲಾದ

ರವ್ವಾರಿಅ. ಪು: [ದೇ] ಸಂದೇಶವನ್ನು ಒಯ್ಯುವವನು, ದೂತ(ಸುಪಾ)

ರಸ. ಸಕ: [ರಸ್] ಚೀರು, ಕಿರಿಚಾಡು–**'ರಸಇ'. ವ. ಕೃ: 'ರಸಚಿತ'**

ರಸ. ಪುಂನ: [ರಸ] ನಾಲಿಗೆಯ ವಿಷಯ, ಮಧುರ, ಒಗಚು, ಕಹಿ ಇತಾದಿ ಷಡ್ರಸಗಳು. ಸ್ವಭಾವ, ಪ್ರಕೃತಿ, ಕಾವ್ಯ ಮೀಮಾಂಸೆಯಲ್ಲಿ ಪ್ರಸಿದ್ಧವಾದ ಶೃಂಗಾರಾದಿ ನವರಸಗಳು. ನೀರು, ಸುಖ, ಆಸಕ್ತಿ, ಅನುರಾಗ, ಪ್ರೇಮ, ಮದ್ಯವೇ ಮೊದಲಾದ ದ್ರವ ಪದಾರ್ಥಗಳು, ಪಾದರಸ, ತಿಂದ ಅನ್ನದ ಮೊದಲ ಪರಿಣಾಮ, ಶರೀರದಲ್ಲಿ ಇರುವ ಧಾತು–ವಿಶೇಷ. ಕರ್ಮ–ವಿಶೇಷ, ಛಂದಃಶಾಸ್ತ್ರದಲ್ಲಿ ಪ್ರಸಿದ್ಧವಾದ ಪ್ರಸ್ತಾರ–ವಿಶೇಷ. ಮಾಧುರ್ಯದಿಂದ ಕೂಡಿದ ಪದಾರ್ಥ. **–ನಾಮ. ನ: [–ನಾಮನ್]** ಒಂದು ಬಗೆಯ ಕರ್ಮ. **–ನ್ನ. ವಿ: [–ಜ್ಞ]** ರಸವನ್ನು ಬಲ್ಲವನು. **–ಭೇಇ. ವಿ: [–ಭೇದಿನ್]** ರಸವುಳ್ಳ ವಸ್ತುಗಳನ್ನು ಬೇರ್ಪಡಿಸುವವನು. **–ಮಂತ. ವಿ: [–ವತ್]** ರಸದಿಂದ ಕೂಡಿದ, **–ವಈ. ಸ್ತ್ರೀ: [–ವತೀ]** ಅಡುಗೆ, **ರಸಾಲ, ರಸಾಲು. ವಿ: [–ವತ್]** ರಸವುಳ್ಳವ, ರಸಾವಣ. **ಪು: [ರಸಾಪಣ]** ಮದ್ಯದ ಅಂಗಡಿ.

ರಸ. ಪುಂನ: [ರಸ] ಹಿಂಡುವುದರಿಂದ ಹೊರಡುವ ರಸ, ಸಾರ

ರಸಣ. ನ: [ರಸನ] ನಾಲಿಗೆ(ಪಣ್ಹ)

ರಸಣಾ. ಸ್ತ್ರೀ: [ರಸನಾ] ಒಡ್ಯಾಣ, ಡಾಬು, ಮೇಖಲಾ(ಪಾಅ). ನಾಲಿಗೆ, **–ಲ. ವಿ: [–ವತ್]** ನಾಲಿಗೆಯುಳ್ಳ, ಒಡ್ಯಾಣವುಳ್ಳ(ಸುಪಾ)

ರಸದ್ದ. ನ: [ದೇ] ಒಲೆಯ ಮೂಲಭಾಗ.

ರಸಾ. ಸ್ತ್ರೀ: [ರಸಾ] ಭೂಮಿ, ಪೃಥ್ವಿ, ಧರೆ(ಹೇ)

ರಸಾಉ.} ಪು: [ರಸಾಯುಷ್] ಭ್ರಮರ, ದುಂಬಿ
ರಸಾಯ}.

ರಸಾಯಣ. ನ: [ರಸಾಯನ] ವೈದ್ಯದಲ್ಲಿ ಪ್ರಸಿದ್ಧವಾದ ಔಷಧ–ವಿಶೇಷ(ಭವಿ)

ರಸಾಲ. ಪು: [ರಸಾಲ] ಮಾವಿನಮರ.

ರಸಾಲಾ. ಸ್ತ್ರೀ: [ದೇ] ಮೊಸರಿನಲ್ಲಿ ಕಲಸಿದ ಕಡಲೆ ಹಿಟ್ಟಿನ ಪೇಯ

ರಸಾಲು. ಪು: [ದೇ. ರಸಾಲು] ರಾಜ ಯೋಗ್ಯವಾದ ಪೇಯ: ಎರಡು ಅಳತೆ ತುಪ್ಪ, ಒಂದು ಅಳತೆ ಜೇನುತುಪ್ಪ, ಅರ್ಧ ಅಳತೆ ಮೊಸರು, ಸ್ವಲ್ಪ ಮೆಣಸಿನ ಕಾಯಿ, ಹತ್ತು ಅಳತೆ ಸಕ್ಕರೆ ಅಥವಾ ಬೆಲ್ಲ ಎಲ್ಲ ಸೇರಿಸಿ ತಯಾರಿಸಲಾಗುವ ಒಂದು ಪಾಕ.

ರಸಿ. 'ರಸ್ಸಿ' ಶಬ್ದವನ್ನು ನೋಡುವುದು.

ರಸಿಅ. ವಿ: [ರಸಿಕ] ರಸಜ್ಞ, ಭೋಜನ ರಸ ಮತ್ತು ಶೃಂಗಾರಾದಿ ರಸಗಳ ಸವಿ ತಿಳಿದವನು, ರಸದಿಂದ ಕೂಡಿದ(ಸುಪಾ)
ರಸಿಅ. ವಿ: [ರಸಿತ] ರಸಯುಕ್ತ, ರಸವುಳ್ಳ. ನ: ಶಬ್ದ
ರಸಿಆ. ಸ್ತ್ರೀ: [ದೇ. ರಸಿಕಾ] ಗಾಯದಿಂದ ಹೊರಡುವ ಕೀವು. (ಪಣ್ಣ), ಒಂದು ಛಂದಸ್ಸು.
ರಸಿಂದ. ಪು: [ರಸೇಂದ್ರ] ಪಾದರಸ
ರಸಿಗ. **'ರಸಿಅ=ರಸಿಕ'** ಶಬ್ದವನ್ನು ನೋಡುವುದು.
ರಸಿರ. ವಿ: [ರಸಿತೃ] ಶಬ್ದ ಮಾಡುವವನು
ರಸೋಇ(ಅಪ). **'ರಸ-ವಈ'** ಶಬ್ದವನ್ನು ನೋಡುವುದು.
ರಸ್ಸಿ. **ಪುಂಸ್ತ್ರೀ:** [ರಶ್ಮಿ] ಕಿರಣ, (ಪಉಮ), ಹಗ್ಗ
ರಹ. **ಅಕ:** [ದೇ] ಇರು, **-'ರಹಇ', 'ರಹೇಇ'**
ರಹ. **ಸಕ:** [ರಹ್] ತ್ಯಜಿಸು, ಬಿಡು
ರಹ. ಪು: [ರಭಸ] ಉತ್ಸಾಹ, ವೇಗ, **'ರಹಸ= ರಭಸ'** ಶಬ್ದವನ್ನು ನೋಡುವುದು.
ರಹ. **ಪಂನ:** [ರಹಸ್] ಏಕಾಂತ ಪ್ರದೇಶ, ನಿರ್ಜನ ಪ್ರದೇಶ, ರಹಸ್ಯ, ಗುಟ್ಟಾಗಿ(ಠಾ)
ರಹ. **ಪುಂನ:** [ರಥ] ವಾಹನ, ತೇರು, ಬಂಡಿ. **ಪು:** ಒಬ್ಬ ಜೈನ ಮಹರ್ಷಿ, **-ಕಾರ. ಪು:** [-ಕಾರ] ರಥವನ್ನು ಮಾಡುವವನು, **-ಚರಿಯಾ. ಸ್ತ್ರೀ:** [-ಚರ್ಯಾ] ರಥವನ್ನು ಮುನ್ನಡೆಸುವುದು, **-ಜತ್ತಾ. ಸ್ತ್ರೀ:** [-ಯಾತ್ರಾ] ಉತ್ಸವ(ಸುಪಾ). **-ಣೇಉರ.** ನ: [-ನೂಪುರ] ಒಂದು ನಗರ, **-ಣೇಉರಚಕ್ಕವಾಲ.** ನ: [-ನೂಪುರಚಕ್ರವಾಲ] ವೇತಾಢ್ಯ ಪರ್ವತದ ಮೇಲಿರುವ ಒಂದು ನಗರ(ಪಉಮ) **-ನೇಮಿ. ಪು:** [-ನೇಮಿ] ಭಗವಾನ್ ನೇಮಿನಾಥನ ಸೋದರ(ಉತ್ತ). **-ನೇಮಿಜ್ಜ.** ನ: [-ನೇಮೀಯ] ಉತ್ತರಾಧ್ಯಯನ ಸೂತ್ರದ ೨೨ನೇ ಅಧ್ಯಯುನ. **-ಮುಸಲ. ಪು:** [-ಮುಸಲ] ಭರತಖಂಡದ ಒಂದು ಪ್ರಾಚೀನ ಯುದ್ಧ, ರಾಜಾ ಕೌಶಿಕ ಮತ್ತು ರಾಜಾ ಚೇಟಕರ ನಡುವಿನ ಯುದ್ಧ. **-ರೇಣು. ಪು:** [-ರೇಣು] ಎಂಟು ದೂಳಿನ ಕಣಗಳ (=ತ್ರಸರೇಣು) ಒಂದು ಅಳತೆ. **-ವೀರಉರ, -ವೀರಪುರ.** ನ: [-ವೀರಪುರ] ಒಂದು ನಗರ.
ರಹಇಂ. ಅ: [ರಭಸಾ] ವೇಗದಿಂದ
ರಹಂಗ. **ಪುಂಸ್ತ್ರೀ:** [ರಥಾಂಗ] ಚಕ್ರವಾಕ ಪಕ್ಷಿ(ಪಾಅ), **ಸ್ತ್ರೀ:** -ಗೀ, ನ: ಚಕ್ರ
ರಹಟ್ಟ. **'ಅರಹಟ್ಟ'** ಶಬ್ದವನ್ನು ನೋಡುವುದು.
ರಹಣ. ನ: [ದೇ] ಇರುವುದು, ವಾಸಿಸುವುದು
ರಹಣ. ನ: [ರಹನ] ತ್ಯಾಗ, ಬಿಡುವುದು, ವಿಶ್ರಾಂತಿ, ನಿವೃತ್ತಿ
ರಹಮಾಣ. ಪು: [ದೇ] ಯವನ ಮತದ ಒಬ್ಬ ತತ್ವಜ್ಞ, ಅಲ್ಲಾಹು, ದೇವರು
ರಹಸ ಪು: [ರಭಸ] ಔತ್ಸುಕ್ಯ, ಉತ್ಕಂಠತೆ, ವೇಗ, ಹರ್ಷ, ಸಂತಸ, ಪೂರ್ವಾಪರ ವಿಚಾರ ಮಾಡದಿರುವುದು, ದುಡುಕು(ಗಉಡ)
ರಹಸ. **'ರಹಸ್ಸ=ರಹಸ್ಯ'** ಶಬ್ದವನ್ನು ನೋಡುವುದು.
ರಹಸಾ. ಅ: [ರಭಸಾ] ವೇಗದಿಂದ(ಗಉಡ)
ರಹಸ್ಸ. ವಿ: [ರಹಸ್ಯ] ಗುಹ್ಯವಾದ್ದು, ಗುಟ್ಟಾಗಿ ಇರಿಸಬೇಕಾದದ್ದು, ಏಕಾಂತದಲ್ಲಿ ಹುಟ್ಟಿದ, ಏಕಾಂತದ, ನ: ತತ್ತ್ವ, ತಾತ್ಪರ್ಯ, ಭಾವಾರ್ಥ
ರಹಸ್ಸ. ವಿ: [ಹ್ರಸ್ವ] ಮೋಟಕಾದ, ಲಘುವಾದ, ಚಿಕ್ಕದಾದ, ಒಂದು ಮಾತ್ರಾ ಕಾಲದ ಸ್ವರ(ಉತ್ತ)
ರಹಸ್ಸ. ನ: [ಹ್ರಾಸ್ವ] ಲಘುತ್ವ, ಲಘುತೆ, **-ಮಂತ.** ವಿ: [-ವತ್] ಲಘುವಾದ, ಚಿಕ್ಕದಾದ
ರಹಸ್ಸಿಯ. ವಿ: [ರಾಹಸಿಕ] ಪ್ರಚ್ಛನ್ನ, ಗುಪ್ತ, ಗುಟ್ಟಾದ, ರಹಸ್ಯವಾದ
ರಹಾವಿಅ. ವಿ: [ದೇ] ಸ್ಥಾಪಿಸಲ್ಪಟ್ಟ, ಇರಿಸಿಕೊಳ್ಳಲಾದ.
ರಹಿ}. ವಿ: [ರಥಿನ್] ರಥವೇರಿ ಯುದ್ಧ ಮಾಡುವ
ರಹಿಅ}. [ರಥಿಕ] ಯೋಧ, ರಥವನ್ನು ನಡೆಸುವವನು
ರಹಿಅ. ವಿ: [ರಹಿತ] ಏಕಾಂಗಿ, ಒಂಟಿ
ರಹಿಅ. ವಿ: [ರಹಿತ] ತ್ಯಜಿಸಲ್ಪಟ್ಟ, ವರ್ಜಿಸಲ್ಪಟ್ಟ, ಇಲ್ಲದಿರುವುದು(ಉವಾ)
ರಹಿಅ. ವಿ: [ದೇ] ಸ್ಥಿತ. ಇರುವ
ರಹು. **ಪು:** [ರಘು] ಸೂರ್ಯವಂಶದ ಒಬ್ಬ ಖ್ಯಾತ ದೊರೆ, **ಪು.ಬ:** ರಘು ವಂಶದಲ್ಲಿ ಹುಟ್ಟಿದ ಕ್ಷತ್ರಿಯ, **ಪು:** ಶ್ರೀ ರಾಮಚಂದ್ರ, ಕಾಳಿದಾಸನ ರಘುವಂಶ ಕಾವ್ಯದ ನಾಯಕ. **-ಆರ. ಪು:** [-ಕಾರ] ರಘುವಂಶದ ಕರ್ತೃ ಕಾಳಿದಾಸ. **-ಣಾಹ. ಪು:** [-ನಾಥ] ಶ್ರೀ ರಾಮಚಂದ್ರ, ಲಕ್ಷ್ಮಣ, **-ತಣಯ. ಪು:** [-ತನಯ] ಅದೇ ಅರ್ಥ.**-ತಿಲಯ. ಪು:** [-ತಿಲಕ] ಶ್ರೀ ರಾಮಚಂದ್ರ, **-ತ್ತಮ. ಪು:** [-

ಉತ್ತಮ] ಅದೇ ಅರ್ಥ. -ಪುಂಗವ. ಪು: [-ಪುಂಗವ] ಅದೇ ಅರ್ಥ. -ಸುಅ. ಪು: [-ಸುತ] ಅದೇ ಅರ್ಥ.

ರಹೋ-. 'ರಹ=ರಹಸ್' ಶಬ್ದವನ್ನು ನೋಡುವುದು. -ಕಮ್ಮ. ನ: [ಕರ್ಮನ್] ಏಕಾಂತದ ವ್ಯಾಪಾರ

ರಾ. ಸಕ: [ರಾ] ದಾನಮಾಡು, ಕೊಡು. 'ರಾಇ'

ರಾ. ಅಕ: [ರೈ] ಶಬ್ದಮಾಡು

ರಾ. ಅಕ: [ಲೀ] ಅಂಟಿಕೊಳ್ಳು, ಆಲಿಂಗಿಸಿಕೊಳ್ಳು, ಅಪ್ಪಿಕೊಳ್ಳು

ರಾಅಲಾ. ಸ್ತ್ರೀ: [ದೇ] ಪ್ರಿಯಂಗು, ಪ್ರೇಂಕಣ ಗಿಡ

ರಾಇ. 'ರತ್ತಿ' ಶಬ್ದವನ್ನು ನೋಡುವುದು. ಚಮರೇಂದ್ರನ ಒಬ್ಬ ಅಗ್ರ ಮಹಿಷಿ(ಠಾ), ಈಶಾನೇಂದ್ರನ ಸೋಮ ಲೋಕಪಾಲನ ಒಬ್ಬ ಪಟ್ಟದ ರಾಣಿ. -ಭತ್ತ. ನ: [-ಭಕ್ತ] ರಾತ್ರಿಯ ಊಟ. -ಭೋಅಣ. ನ: [-ಭೋಜನ] ರಾತ್ರಿಯ ಊಟ. 'ರಾಇ=ರಾತ್ರಿ' ಶಬ್ದವನ್ನು ನೋಡುವುದು.

ರಾಇ. ಸ್ತ್ರೀ: [ರಾಜಿ] ಪಂಕ್ತಿ, ಸಾಲು(ಪಾಅ), ಗೆರೆ, ರೇಖೆ, ಸಾಸಿವೆ ಕಾಳು(ದೇ)

ರಾಇ. ವಿ: [ರಾಗಿನ್] ರಾಗದಿಂದ ಕೂಡಿದ, ಅನುರಾಗವುಳ್ಳವನು, ಕಾಮುಕ, ಬಣ್ಣ ಹಾಕುವನು

ರಾಇ. ವಿ: [ರಾಜಿನ್] ಶೋಭಿಸುವ, ಹೊಳೆಯುವ

ರಾಇ-. 'ರಾಯ=ರಾಜನ್' ಶಬ್ದವನ್ನು ನೋಡುವುದು.

ರಾಇಅ. ವಿ: [ರಾಜಿತ] ಶೋಭಿತ, ಸುಂದರವಾದ, ಅಲಂಕರಿಸಲ್ಪಟ್ಟ(ಕುಮಾ)

ರಾಇಅ. ವಿ: [ರಾತ್ರಿಕ] ರಾತ್ರಿಗೆ ಸಂಬಂಧಿಸಿದ

ರಾಇಆ. ಸ್ತ್ರೀ: [ರಾಜಿಕಾ] ಸಾಸಿವೆ ಗಿಡ, 'ರಾಇಗಾ' ಶಬ್ದವನ್ನು ನೋಡುವುದು.

ರಾಇಂದ. ಪು: [ರಾಜೇಂದ್ರ] ದೊಡ್ಡ ರಾಜ(ಕುಮಾ)

ರಾಇಂದಿಅ. ಪು: [ರಾತ್ರಿಂದಿವ] ರಾತ್ರಿ-ಹಗಲು, ಅಹೋರಾತ್ರಿ(ಭಗ)

ರಾಇಕ್ಕ. ವಿ: [ರಾಜಕೀಯ] ರಾಜನಿಗೆ ಸಂಬಂಧಿಸಿದ, ಸರ್ಕಾರಕ್ಕೆ ಸಂಬಂಧಿಸಿದ

ರಾಇಗಾ. ಸ್ತ್ರೀ: [ರಾಜಿಕಾ] ಸಾಸಿವೆ, ರಾಜ-ಸಾಸಿವೆ.

ರಾಇಣಿಅ. ವಿ: [ರಾತ್ನಿಕ] ಚಾರಿತ್ರ್ಯ ವಂತ, ಸಂಯಮಿ, ಸಂನ್ಯಾಸ ಸ್ವೀಕರಿಸುವ ಹಂತಕ್ಕಿಂತ ಹಿರಿಯನಾದವನು(ಕಪ್ಪ).

ರಾಇಣಿಅ. ವಿ: [ರಾಜಕಲ್ಪ] ರಾಜನಿಗೆ ಸಮನಾದ ವೈಭವವುಳ್ಳ, ಶ್ರೀಮಂತ

ರಾಇಣ್ಣ}. ಪು: [ರಾಜನ್ಯ] ರಾಜವಂಶೀಯ, ಕ್ಷತ್ರಿಯ.

ರಾಇನ್ನ}. (ಔಪ)

ರಾಇಲ್ಲ. ವಿ: [ರಾಗಿನ್] ರಾಗದಿಂದ ಕೂಡಿದ, ಅನುರಾಗವುಳ್ಳವನು, ಕಾಮುಕ, ಬಣ್ಣ ಹಾಕುವವನು

ರಾಈ. ಸ್ತ್ರೀ: [ರಾಜೀ] 'ರಾಇ=ರಾತ್ರಿ' ಶಬ್ದವನ್ನು ನೋಡುವುದು.

ರಾಈ. ಸ್ತ್ರೀ: [ರಾತ್ರಿ] 'ರಾಇ=ರಾತ್ರಿ' ಶಬ್ದವನ್ನು ನೋಡುವುದು. -ದಿವಸ. ನ: [-ದಿವಸ] ರಾತ್ರಿ-ಹಗಲು, ಅಹರ್ನಿಶ(ಸುಪಾ)

ರಾಈಮಈ. ಸ್ತ್ರೀ: [ರಾಜೀಮತೀ] ರಾಜ ಉಗ್ರಸೇನನ ಮಗಳು ಮತ್ತು ಭಗವಾನ್ ನೇಮಿನಾಥನ ಹೆಂಡತಿ.

ರಾಈವ. ನ: [ರಾಜೀವ] ಕಮಲ, ತಾವರೆ(ಪಾಅ)

ರಾಈಸರ. ಪು: [ರಾಜೇಶ್ವರ] ರಾಜರ ಒಡೆಯ, ಮಹಾರಾಜ, ಯುವರಾಜ

ರಾಉತ್ತ. ಪು: [ರಾಜಪುತ್ರ] ರಜಪೂತ, ಕ್ಷತ್ರಿಯ

ರಾಉಲ. ಪು: [ರಾಜಕುಲ] ರಾಜರ ಸಮೂಹ, ರಾಜನ ವಂಶ, ರಾಜಗೃಹ, ದರ್ಬಾರು. 'ರಾಓಲ' ಶಬ್ದವನ್ನು ನೋಡುವುದು.

ರಾಉಲಿಯು. ವಿ: [ರಾಜಕುಲಿಕ] ರಾಜಕುಲಕ್ಕೆ ಸಂಬಂಧಿಸಿದ

ರಾಉಲ್ಲ. 'ರಾಇಕ್ಕ' ಶಬ್ದವನ್ನು ನೋಡುವುದು.

ರಾಏಸಿ. ಪು: [ರಾಜರ್ಷಿ] ಋಷಿ ಸದೃಶನಾದ ರಾಜ, ಸಂಯಮಿಯಾದ ರಾಜ, ಶ್ರೇಷ್ಠ ರಾಜ(ಅಭಿ)

ರಾಓ. ಅ: [ರಾತ್ರೌ] ರಾತ್ರಿಯಲ್ಲಿ(ಸುಪಾ)

ರಾಓಲ. 'ರಾಉಲ' ಶಬ್ದವನ್ನು ನೋಡುವುದು.

ರಾಗ. 'ರಾಯ=ರಾಗ' ಶಬ್ದವನ್ನು ನೋಡುವುದು.

ರಾಗಿ. 'ರಾಇ=ರಾಗಿನ್' ಶಬ್ದವನ್ನು ನೋಡುವುದು.

ರಾಘವ. 'ರಾಹವ' ಶಬ್ದವನ್ನು ನೋಡುವುದು. -ಧಾರಿಣೀ. ಸ್ತ್ರೀ: [-ಗೃಹಿಣೀ] ಸೀತೆ, ಜಾನಕಿ

ರಾಚ}. (ಚೂಪೈ. ಪೈ). 'ರಾಯ=ರಾಜನ್' ಶಬ್ದವನ್ನು

ರಾಚಿ-}. ನೋಡುವುದು.

ರಾಜ. 'ರಾಯ=ರಾಜನ್' ಶಬ್ದವನ್ನು ನೋಡುವುದು.

ರಾಜಸ. ವಿ: [ರಾಜಸ] ರಜೋಗುಣ ಪ್ರಧಾನ

ರಾಡಿ. **ಸ್ತ್ರೀ:** [ರಾಟಿ] ಗಲಾಟೆ, ಗುಲ್ಲು, ಕೋಲಾಹಲ,
ರಾಡಿ. **ಸ್ತ್ರೀ:** [ದೇ. ರಾಟಿ] ಯುದ್ಧ, ಸಂಗ್ರಾಮ
ರಾಢಾ. **ಸ್ತ್ರೀ:** [ರಾಢಾ] ಒಡವೆ, ಭವ್ಯತೆ, ಶೋಭೆ, ಬಂಗಾಳದ ಒಂದು ಪ್ರಾಂತ. ಬಂಗಾಳದ ಒಂದು ನಗರಿ. **–ಇತ್ತ.** ವಿ: [–ವತ್] ಭವ್ಯಆತ್ಮ, **–ಮಣಿ.** **ಪು:** [–ಮಣಿ] ಗಾಜಿನ ಮಣಿ.(ಉತ್ತ).
ರಾಣ. **ಸಕ:** [ವಿ+ನಮ್] ವಿಶೇಷವಾಗಿ ಬಾಗು, ವಿಶೇಷವಾಗಿ ನಮಿಸುವುದು.
ರಾಣ. **ಪು:** [ರಾಜನ್] ರಾಜ, ದೊರೆ
ರಾಣಯ. **ಪು:** [ರಾಜಕ] ರಾಜ, ದೊರೆ, ಸಣ್ಣ ದೊರೆ,
ರಾಣಿಆ.} **ಸ್ತ್ರೀ:** [ರಾಜ್ಞಿಕಾ, –ಜ್ಞೀ] ರಾಣಿ, ರಾಜ–ಪತ್ನಿ
ರಾಣೀ}. (ಕುಮ್ಮಾ)
ರಾಮ. **ಸಕ:** [ರಮಯ್] ರಮಿಸು, ಆನಂದಿಸು, ಸಂತೋಷಪಡು, ಕ್ರೀಡಿಸು
ರಾಮ. **ಪು:** [ರಾಮ] ಶ್ರೀ ರಾಮಚಂದ್ರ, ಪರಶುರಾಮ, ಕ್ಷತ್ರಿಯ– ಪರಿವ್ರಾಜಕ–ವಿಶೇಷ(ಔಪ), ಬಲದೇವ, ವಾಸುದೇವನ ಅಣ್ಣ, ವಿ: ರಮಿಸುವವನು (ಉಪ).**–ಕಣ್ಹ.** **ಪು:** [–ಕೃಷ್ಣ], ಶ್ರೇಣಿಕ ಮಹಾರಾಜನ ಒಬ್ಬ ಮಗ, **–ಕಣ್ಹಾ** **ಸ್ತ್ರೀ:** [–ಕೃಷ್ಣಾ] ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ. **–ಗಿರಿ.** **ಪು:** [–ಗಿರಿ] ಒಂದು ಪರ್ವತ. **–ಗುತ್ತ.** **ಪು:** [–ಗುಪ್ತ] ಒಬ್ಬ ರಾಜರ್ಷಿ, **–ದೇವ.** **ಪು:** [–ದೇವ] ಶ್ರೀ ರಾಮಚಂದ್ರ(ಪಉಮ). **–ಪುತ್ತ.** **ಪು:** [–ಪುತ್ರ] ಒಬ್ಬ ಜೈನ ಮುನಿ. **–ಪುರೀ.** **ಸ್ತ್ರೀ:** [–ಪುರೀ] ಅಯೋಧ್ಯಾನಗರಿ. **–ರಕ್ಖಿಆ.** **ಸ್ತ್ರೀ:** [ರಕ್ಷಿತಾ] ಈಶಾನೇಂದ್ರನ ಒಬ್ಬ ಪಟ್ಟದ ರಾಣಿ.
ರಾಮಣಿಜ್ಜಅ. **ನ:** [ರಾಮಣೀಯಕ] ರಮಣೀಯತೆ, ಸೌಂದರ್ಯ
ರಾಮಾ. **ಸ್ತ್ರೀ:** [ರಾಮಾ] ಹೆಂಗಸು, ಮಹಿಳೆ(ಕುಮಾ), ಒಂಬತ್ತನೇ ತೀರ್ಥಂಕರನ ತಾಯಿ, ಈಶಾನೇಂದ್ರನ ಒಬ್ಬ ಪಟ್ಟದ ರಾಣಿ, ಒಂದು ಛಂದಸ್ಸು.
ರಾಮಾಯಣ. **ನ:** [ರಾಮಾಯಣ] ಕವಿ ವಾಲ್ಮೀಕಿ ರಚಿಸಿದ ಸಂಸ್ಕೃತದ ಆದಿ ಮಹಾಕಾವ್ಯ. ರಾಮ ಮತ್ತು ರಾವಣರ ಯುದ್ಧ(ಪಉಮ)
ರಾಮಿಅ. **ವಿ:** [ರಮಿತ] ರಮಿಸಲ್ಪಟ್ಟ(ಗಾ)
ರಾಮೇಸರ. **ಪು:** [ರಾಮೇಶ್ವರ] ಪ್ರಸಿದ್ಧ ತೀರ್ಥವಾದ ರಾಮೇಶ್ವರ
ರಾಯ. **ಅಕ:** [ರಾಜ್] ಹೊಳೆ, ಶೋಭಿಸು
ರಾಯ. **'ರಾ=ರೈ'** ಶಬ್ದವನ್ನು ನೋಡುವುದು.
ರಾಯ. **ಪು:** [ರಾಗ] ಪ್ರೇಮ, ಪ್ರೀತಿ, ಮತ್ಸರ, ದ್ವೇಷ, ಬಣ್ಣ ಬಳಿಯುವುದು, ವರ್ಣನೆ, ಅನುರಾಗ, ದೊರೆ, ಚಂದ್ರ, ಕೆಂಪು ಬಣ್ಣ, ಕೆಂಪು ಬಣ್ಣದ ವಸ್ತು, ವಸಂತ, ಸಂಗೀತದ ಹೆಸರಾಂತ ರಾಗಗಳು
ರಾಯ. **ಪು:** [ರಾಜನ್] ದೊರೆ, ರಾಜ(ಆಚಾ), ಚಂದ್ರ, ಒಂದು ಮಹಾ ಗ್ರಹ, ಇಂದ್ರ, ಕ್ಷತ್ರಿಯ, ಯಕ್ಷ, ಶುಚಿ, ಪವಿತ್ರ, ಶ್ರೇಷ್ಠ, ಇಚ್ಛೆ, ಅಭಿಲಾಷೆ, ಒಂದು ಛಂದಸ್ಸು. **–ಈಅ.** **ವಿ:** [–ಕೀಯ] ರಾಜ್ಯಕ್ಕೆ ಸಂಬಂಧಿಸಿದ. **–ಉತ್ತ.** **ಪು:** [–ಪುತ್ರ] ರಾಜಕುಮಾರ. **–ಉಲ.** **'ರಾಉಲ'** ಶಬ್ದವನ್ನು ನೋಡುವುದು(ಕುವಾ), **–ಕೀಅ.** **'–ಈಅ'** ಶಬ್ದವನ್ನು ನೋಡುವುದು. **–ಕೇರ, –ಕ್ಕ.** **ವಿ:** [–ಕೀಯ] ರಾಜ್ಯಕ್ಕೆ ಸಂಬಂಧಿಸಿದ. **–ಗಿಹ.** **ನ:** [–ಗೃಹ] ಈಗ **'ರಾಜಗೃಹ'** ಎಂದು ಕರೆಯಲ್ಪಡುವ ಮಗಧ ದೇಶದ ಪ್ರಾಚೀನ ರಾಜಧಾನಿ. **–ಗಿಹೀ.** **ಸ್ತ್ರೀ:** [–ಗೃಹೀ] ಅದೇ ಅರ್ಥ. **–ಚಂಪಯ.** **ಪು:** [–ಚಂಪಕ] ಶ್ರೇಷ್ಠವಾದ ಸಂಪಿಗೆ ಮರ. **–ಧಮ್ಮ.** **ಪು:** [–ಧರ್ಮ] ರಾಜನ ಕರ್ತವ್ಯ, **–ಧಾಣೀ.** **ಸ್ತ್ರೀ:** [–ಧಾನೀ] ರಾಜಧಾನಿ, ರಾಜನು ವಾಸಿಸುವ ರಾಜ್ಯದ ಮುಖ್ಯ ನಗರ. **–ಪತ್ತೀ.** **ಸ್ತ್ರೀ:** [–ಪತ್ನೀ] ರಾಣಿ. **–ಪಸೇಣೀಯ.** **ವಿ:** [–ಪ್ರಶ್ನೀಯ] ಒಂದು ಜೈನ ಆಗಮಗ್ರಂಥ. **–ಪಹ.** **ಪು:** [–ಪಥ] ರಾಜಮಾರ್ಗ. **–ಪಿಂಡ.** **ಪು:** [–ಪಿಂಡ] ರಾಜನ ಮನೆ ಭಿಕ್ಷೆ–ಆಹಾರ. **–ಪುತ್ತ.** **'–ಉತ್ತ'** ಶಬ್ದವನ್ನು ನೋಡುವುದು. **–ಪುರ.** **ನ:** [–ಪುರ] ಒಂದು ನಗರ(ಪಉಮ). **–ಪುರಿಸ.** **ಪು:** [–ಪುರುಷ] ರಾಜನ ಕಡೆಯ ವ್ಯಕ್ತಿ.**–ಮಗ್ಗ.** **ಪು:** [–ಮಾರ್ಗ] ರಾಜಮಾರ್ಗ. **–ಮಾಸ.** **ಪು:** [–ಮಾಷ] ಅಲಸಂದೆ ಕಾಳು. **–ರಾಯ.** **ಪು:** [–ರಾಜ] ರಾಜರ ರಾಜ, ರಾಜೇಶ್ವರ. **–ರಿಸಿ.** **'ರಾಏಸಿ'** ಶಬ್ದವನ್ನು ನೋಡುವುದು. **–ರುಕ್ಖ.** **ಪು:** [–ವೃಕ್ಷ] ಒಂದು ಬಗೆಯ ವೃಕ್ಷ.

–ಲಚ್ಛೀ. ಸ್ತ್ರೀ: [–ಲಕ್ಷ್ಮೀ] ರಾಜ ವೈಭವ. ರಾಜನ ಸಂಪತ್ತಿನ ಅಧಿಷ್ಠಾತೃ ದೇವತೆ. **–ಲಲಿಯ.** ಪು: [–ಲಲಿತ] ಎಂಟನೇ ಬಲದೇವನ ಹಿಂದಿನ ಜನ್ಮದ ಹೆಸರು. **–ವಟ್ಟಯ.** ನ: [–ವಾರ್ತಕ] ರಾಜನಿಗೆ ಸಂಬಂಧಿಸಿದ ವಾರ್ತಾ ಸಮೂಹ. **–ವಲ್ಲೀ.** ಸ್ತ್ರೀ: [–ವಲ್ಲೀ] ಒಂದು ಬಗೆಯ ಬಳ್ಳಿ. **–ವಾಡಿಆ, ವಾಡೀ.** ಸ್ತ್ರೀ: [–ಪಾಟಿಕಾ, –ಪಾಟೀ] ರಾಜನು ಚತುರಂಗ ಸೇನೆಯೊಂದಿಗೆ ಹೊರಡುವುದು (ಕುಮಾ). **–ಸದ್ದೂಲ.** ಪು: [–ಶಾರ್ದೂಲ] ಚಕ್ರವರ್ತಿ ರಾಜ, ಶ್ರೇಷ್ಠ ರಾಜ. **–ಸಿಟ್ಠಿ.** ಪು: [–ಶ್ರೇಷ್ಠಿನ್] ನಗರ ಶ್ರೇಷ್ಠಿ. **–ಸಿರೀ.** ಸ್ತ್ರೀ: [–ಶ್ರೀ] ರಾಜಲಕ್ಷ್ಮೀ. **–ಸುಅ.** ಪು: [–ಸುತ] ರಾಜಕುಮಾರ. **–ಸುಅ.** ಪು: [–ಶುಕ] ರಾಜಕೀರ, ಶ್ರೇಷ್ಠ ಗಿಳಿ. **–ಸುಅ.** ಪು: [–ಸೂಯ] ರಾಜಸೂಯ ಯಾಗ(ಪಉಮ). **–ಸೇಣ.** ಪು: [–ಸೇನ] ಒಂದು ಛಂದಸ್ಸು. **–ಸೇಹರ.** ಪು: [–ಶೇಖರ] ಶಿವ, ಒಬ್ಬರಾಜ, ಪ್ರಸಿದ್ಧ ಮೀಮಾಂಸಕ. **–ಹಂಸ.** ಪುಂಸ್ತ್ರೀ: [–ಹಂಸ] ಶ್ರೇಷ್ಠ ಹಂಸ ಪಕ್ಷಿ, ಶ್ರೇಷ್ಠ ರಾಜ(ಗಉಡ). ಸ್ತ್ರೀ: –ಸೀ. **–ಹರ.** ನ: [–ಗೃಹ] ರಾಜನರಮನೆ. **–ಹಾಣೀ.** '–ಧಾಣೀ' ಶಬ್ದವನ್ನು ನೋಡುವುದು. **–ಹಿರಾಯ, –ರಾಯಾಹಿರಾಯ.** ಪು: [–ಅಧಿರಾಜ] ರಾಜರ ರಾಜ, ಚಕ್ರವರ್ತಿ ರಾಯಾಹಿವ. ಪು: [ರಾಜಾಧಿಪ] ಅದೇ ಅರ್ಥ.

ರಾಯ. 'ರಾವ=ರಾವ' ಶಬ್ದವನ್ನು ನೋಡುವುದು.

ರಾಯ. ಪು: [ದೇ] ಗುಬ್ಬಚ್ಚಿ ಹಕ್ಕಿ(ದೇ)

ರಾಯ. ಪು: [ರಾತ್ರ] ರಾತ್ರಿ.(ಆಚಾ)

ರಾಯ–. 'ರಾಯ=ರಾಜ್' ಶಬ್ದವನ್ನು ನೋಡುವುದು.

ರಾಯಂಘುಅ}. ಪುಂನ: [ದೇ] ಜೊಂಡು, ಹಬ್ಬೆ

ರಾಯಂಬು}. ಗಿಡ(ಪಾಅ), ಪು: ಶರಭ

ರಾಯಂಸ. ಪು: [ರಾಜಾಂಸ] ಕ್ಷಯ ರೋಗ(ಆಚಾ).

ರಾಯಂಸಿ. ವಿ: [ರಾಜಾಂಸಿನ್] ಕ್ಷಯರೋಗಿ(ಆಚಾ)

ರಾಯಗಇ. ಸ್ತ್ರೀ: [ದೇ] ಜಿಗಣೆ

ರಾಯಗ್ಗಲ. ಪು:[ರಾಜಾರ್ಗಲ]ಒಂದು ಗ್ರಹ(ಜೋತಿಷ್ಕ)

ರಾಯಣಿಅ. 'ರಾಇಣಿಅ=ರಾತ್ನಿಕ' ಶಬ್ದವನ್ನು ನೋಡುವುದು.

ರಾಯಣೀ. ಸ್ತ್ರೀ: [ರಾಜಾದನೀ] ಮೊರಟೆ ಗಿಡ, ಮುತ್ತುಗದ ಮರ, ಹಾಲೆ ಗಿಡ

ರಾಯಣ್ಣ. 'ರಾಇಣ್ಣ' ಶಬ್ದವನ್ನು ನೋಡುವುದು.

ರಾಯನೀಇ. ಸ್ತ್ರೀ: [ರಾಜನೀತಿ] ರಾಜನು ಆಳ್ವಿಕೆ ನಡೆಸುವ ರೀತಿ, ಆಡಳಿತ ನಡೆಸಲು ಅನುಸರಿಸಬೇಕಾದ ತಂತ್ರ

ರಾಯಮಇಯಾ. ಸ್ತ್ರೀ: [ರಾಜೀಮತಿಕಾ] 'ರಾಈಮಈ' ಶಬ್ದವನ್ನು ನೋಡುವುದು.

ರಾಯಸ. 'ರಾಜಸ' ಶಬ್ದವನ್ನು ನೋಡುವುದು.

ರಾಯಾಣ. 'ರಾಯ=ರಾಜನ್' ಶಬ್ದವನ್ನು ನೋಡುವುದು.

ರಾಲ}. ಪುಂನ: [ರಾಲ, –ಕ] ನವಣೆಯ ರೀತಿಯ

ರಾಲಗ}. ಧಾನ್ಯ

ರಾಲಯ}.

ರಾಲಾ. ಸ್ತ್ರೀ: [ದೇ] ಪ್ರಿಯಂಗು, ಪ್ರೇಂಕಣ ಗಿಡ,

ರಾವ. ಸಕ: [ದೇ] ಒದ್ದೆಮಾಡು, ನೆನೆಸು

ರಾವ. ಸಕ: [ರಾವಯ್] ಕರೆ, –'ರಾವೇಇ' ವ.ಕೃ: 'ರಾವೇಂತ'

ರಾವ. 'ರಂಜ=ರಂಜಯ್' ಶಬ್ದವನ್ನು ನೋಡುವುದು.

ರಾವ. ಪು: [ರಾವ] ಶಬ್ದ, ಕೋಲಾಹಲ ಧ್ವನಿ, ದೊಡ್ಡ ದನಿಯಿಂದ ಕರೆಯುವುದು

ರಾವಣ. ಪು: [ರಾವಣ] ಹೆಸರಾಂತ ಲಂಕಾಧಿಪತಿ, ಬಳ್ಳಿಗಳ ಪೊದರು(ಪಣ್ಣ)

ರಾವಿಅ. ವಿ: [ರಂಜಿತ] ಬಣ್ಣ ಹಾಕಲ್ಪಟ್ಟ(ದೇ)

ರಾವಿಅ. ವಿ: [ದೇ] ಆಸ್ವಾದಿಸಲ್ಪಟ್ಟ

ರಾಸ}. ಪು: [ರಾಸ, –ಕ] ಒಬ್ಬರು ಇನ್ನೊಬ್ಬರ

ರಾಸಗ}. ಕೈಹಿಡಿದುಕೊಂಡು ಹಾಡುತ್ತ ನೃತ್ಯಮಾಡುತ್ತ ಮಂಡಲಾಕಾರದಲ್ಲಿ ಸುತ್ತುವ ಒಂದು ಬಗೆಯ ನೃತ್ಯ(ದೇ)

ರಾಸಭ. 'ರಾಸಹ' ಶಬ್ದವನ್ನು ನೋಡುವುದು.

ರಾಸಯ. 'ರಾಸಗ' ಶಬ್ದವನ್ನು ನೋಡುವುದು.

ರಾಸಹ. ಪುಂಸ್ತ್ರೀ: [ರಾಸಭ] ಕತ್ತೆ, ಗಾರ್ದಭ(ಪಾಅ). ಸ್ತ್ರೀ: –ಹೀ.

ರಾಸಾಣಂದಿಅಯ. ನ: [ರಾಸಾನಂದಿತಕ] ಛಂದಸ್ಸು

ರಾಸಾಲುದ್ಧಯ. ಪು: [ರಾಸಾಲುಬ್ಧಕ] ಒಂದು ಛಂದಸ್ಸು

ರಾಸಿ. 'ರಸ್ಸಿ' ಶಬ್ದವನ್ನು ನೋಡುವುದು.

ರಾಸಿ. ಪುಂಸ್ತ್ರೀ: [ರಾಶಿ] ಸಮೂಹ, ರಾಶಿ, ಗುಡ್ಡೆ, ಜ್ಯೋತಿಷ್ಯದಲ್ಲಿ ಹೆಸರಾದ ದ್ವಾದಶ ರಾಶಿಗಳು, ಗಣಿತ–ವಿಶೇಷ.

ರಾಹ. ಪು: [**ರಾಧ**] ವೈಶಾಖ ಮಾಸ, ವಸಂತ ಋತು, ಒಬ್ಬ ಜೈನ ಆಚಾರ್ಯ(ಉಪ).

ರಾಹ. ಪು: [**ದೇ**] ಪ್ರಿಯ, ಇಷ್ಟವಾದವನು, **ವಿ:** ನಿರಂತರ, ಶೋಭಿತವಾದ, ಸನಾಥ, ನರೆ ಕೂದಲುಳ್ಳವ, ರುಚಿರ, ಸುಂದರವಾದ(ಪಾಅ)

ರಾಹಅ.} **ಪು:** [**ರಾಘವ**] ರಘು ವಂಶದಲ್ಲಿ ಹುಟ್ಟಿದ,
ರಾಹವ}. ಶ್ರೀ ರಾಮಚಂದ್ರ,

ರಾಹಾ. ಸ್ತ್ರೀ: [**ರಾಧಾ**] ವೃಂದಾವನದ ಒಬ್ಬ ಪ್ರಧಾನ ಗೋಪಿ, ಶ್ರೀಕೃಷ್ಣನ ಪತ್ನಿ, ರಾಧಾವೇಧದಲ್ಲಿ ಇಡಲಾಗುವ ಒಂದು ಬೊಂಬೆ, ಪುತ್ಥಳಿ. ಶಕ್ತಿ–ವಿಶೇಷ, ಕರ್ಣನನ್ನು ಸಾಕಿ ಬೆಳೆಸಿದ ತಾಯಿ. **–ಮಂಡವ. ಪು:** [**–ಮಂಟಪ**] ಈ ಮಂಟಪದಲ್ಲಿ ರಾಧಾವೇಧ'ವನ್ನು ನಡೆಸಲಾಗುತ್ತದೆ. ಒಂದು ಬಗೆಯ ವೇಧ–ಕ್ರಿಯೆ(ತೂತು ಕೊರೆಯುವುದು). **–ವೇಹ. ಪು:** [**–ವೇಧ**] ಚಕ್ರಾಕಾರದಲ್ಲಿ ಸುತ್ತುತ್ತಿರುವ ಬೊಂಬೆಯ ಎಡಗಣ್ಣನ್ನು ಚುಚ್ಚಲಾಗುವ ಒಂದು ಬಗೆಯ ವೇಧ ಕ್ರಿಯೆ.

ರಾಹಿಆ}. **ಸ್ತ್ರೀ:** [**ರಾಧಿಕಾ**] ಮೇಲಿನ ಶಬ್ದವನ್ನು
ರಾಹೀ}. ನೋಡುವುದು.

ರಾಹು. ಪು: [**ರಾಹು**] ಒಂದು ಗ್ರಹ. ಕೃಷ್ಣ–ಪುದ್ಗಲ–ವಿಶೇಷ, ವಿಕ್ರಮ ಶಕೆ ಒಂದನೇ ಶತಮಾನದಲ್ಲಿದ್ದ ಒಬ್ಬ ಜೈನಾಚಾರ್ಯ.

ರಾಹುಹಯ. ನ: [**ರಾಹುಹತ**] ಯಾವುದರಲ್ಲಿ ಸೂರ್ಯ ಅಥವಾ ಚಂದ್ರಗ್ರಹಣವಾಗುತ್ತದೋ ಆ ನಕ್ಷತ್ರ

ರಾಹೇಅ. ಪು: [**ರಾಧೇಯ**] ರಾಧೆಯ ಮಗನಾದ ಕರ್ಣ(ಗಲುಡ)

ರಿ. ಅ: [**ರೇ**] ಸಂಭಾಷಣ–ಸೂಚಕ ಅವ್ಯಯ

ರಿ. ಸಕ: [**ಋ**] ಹೋಗು, ನಡೆ, ಗಮಿಸು

ರಿಅ. ಸಕ: [**ರೀ**] ಹೋಗು, ನಡೆ, ಗಮಿಸು. **– 'ರಿಯಇ', 'ರಿಯಂತಿ'(ಸೂಅ), ವ. ಕೃ: 'ರಿಯಂತ'**

ರಿಅ. ಸಕ: [**ಪ್ರ+ವಿಶ್**] ಪ್ರವೇಶಿಸು

ರಿಅ. ನ: [**ಋತ**] ಗಮನ, ಹೋಗುವುದು, ಚಲಿಸುವುದು

ರಿಅ. ವಿ: [**ದೇ**] ಕತ್ತರಿಸಿದ

ರಿಅ. 'ಉಉ' ಶಬ್ದವನ್ನು ನೋಡುವುದು.

ರಿಉ. ವಿ: [**ಋಜು**] ಸರಳ, ನೇರ(ಸುಪಾ), **ನ:** ವಿಶೇಷ ಪದಾರ್ಥ, ಸಾಮಾನ್ಯವಾದ ಭಿನ್ನ ವಸ್ತು ಕಪಟವಿಲ್ಲದ. **–ಸುತ್ತ. ಪು:** [**–ಸೂತ್ರ**] ನಯ–ವಿಶೇಷ. **'ಉಜ್ಜು'** ಶಬ್ದವನ್ನು ನೋಡುವುದು.

ರಿಉ. ಪು: [**ರಿಪು**] ಶತ್ರು, ವೈರಿ, ಹಗೆ. **–ಮಹಣ. ಪು:** [**–ಮಥನ**] ರಾಕ್ಷಸ ವಂಶದ ಒಬ್ಬ ರಾಜ(ಪಉಮ)

ರಿಉ. ಸ್ತ್ರೀ: [**ಋಚ್**] ವೇದದ ನಿಯತ ಅಕ್ಷರ–ಪಾದವುಳ್ಳ ಅಂಶ. **–ವ್ವೇಯ. ಪು:** [**–ವೇದ**] ವೇದಗ್ರಂಥವಾದ ಋಗ್ವೇದ(ಣಾಯಾ)

ರಿಂಖ. ಅಕ: [**ರಿಂಖ**] ಹರಿದಾಡು, ಚಲಿಸು

ರಿಂಖಣ. ನ: [**ರಿಂಗಣ**] ತೆವಳುವುದು, ಹರಿದಾಡುವುದು, ಚಲಿಸುವುದು(ಪಉಮ)

ರಿಂಗ. 'ರಿಗ' ಶಬ್ದವನ್ನು ನೋಡುವುದು.

ರಿಂಗಣೀ. ಸ್ತ್ರೀ: [**ದೇ**] ಹೆಗ್ಗುಳದ ಬಳ್ಳಿ(ದೇ)

ರಿಂಗಿಅ. ನ: [**ದೇ**] ತಿರುಗಾಟ, ಸಂಚಾರ

ರಿಂಗಿಅ. ನ: [**ರಿಂಗಿತ**] ಆಮೆಯ ಹಾಗೆ ಮುಂದೆ ಸರಿಯುವುದು. ಗುರುವಂದನದಲ್ಲಿನ ಒಂದು ದೋಷ.

ರಿಂಗಿಸಿಯಾ. ಸ್ತ್ರೀ: [**ದೇ**] ವಾದ್ಯ–ವಿಶೇಷ.

ರಿಂಛ(ಅಪ). 'ರಿಚ್ಛ=ಋಕ್ಷ' ಶಬ್ದವನ್ನು ನೋಡುವುದು.

ರಿಂಛೋಲೀ. ಸ್ತ್ರೀ: [**ದೇ**] ಪಂಕ್ತಿ, ಸಾಲು(ಪಾಅ)

ರಿಂಡೀ. ಸ್ತ್ರೀ: [**ದೇ**] ಹರಿದ ಬಟ್ಟೆಯಂಥ ಹರಕು ಮುರುಕಾದ ಹೊದೆಯುವ ವಸ್ತ್ರ

ರಿಕ್ಕ. ವಿ: [**ದೇ**] ಸ್ವಲ್ಪ, ಕಡಿಮೆ

ರಿಕ್ಕ. 'ರಿತ್ತ=ರಿಕ್ತ' ಶಬ್ದವನ್ನು ನೋಡುವುದು(ಆಚಾ)

ರಿಕ್ಕಿಅ. ವಿ: [**ದೇ**] ಕೊಳೆತಿರುವ

ರಿಕ್ಖ. ಅಕ: [**ರಿಕ್ಖ್**] ಚಲಿಸು

ರಿಕ್ಖ. ವಿ: [**ದೇ**] ಮುದುಕ, ವೃದ್ಧ, **ಪು:** ವಯಸ್ಸಿನಿಂದಾಗಿ ಬರುವ ಮುದಿತನ

ರಿಕ್ಖ. ಪು: [**ಋಕ್ಷ**] ಕರಡಿ(ಹೇ), **ನ:** ನಕ್ಷತ್ರ, **–ಪಹ. ಪು:** [**–ಪಥ**] ಆಕಾಶ. **–ರಾಯ. ಪು:** [**–ರಾಜ**] ವಾನರ ವಂಶದ ಒಬ್ಬ ರಾಜ(ಪಉಮ).

ರಿಕ್ಖಣ. ನ: [**ದೇ**] ಪ್ರಾಪ್ತಿ, ಪಡೆಯುವುದು, ಕಥನ

ರಿಕ್ಖಾ. 'ರೇಹಾ= ರೇಖಾ' ಶಬ್ದವನ್ನು ನೋಡುವುದು.

ರಿಗ}. **ಅಕ:** [**ರಿಂಗ್**] ನಡೆ, ಚಲಿಸು. **'ರಿಗಇ',**
ರಿಗ್ಗ}.

ರಿಗ್ಗ. ಪು: [**ದೇ**] ಪ್ರವೇಶ(ದೇ)

ರಿಚ. ಸ್ತ್ರೀನ: 'ರಿಉ=ಋಚ್' ಶಬ್ದವನ್ನು ನೋಡುವುದು. ಸ್ತ್ರೀ: –ಚ

ರಿಚ್ಛ. ವಿ: [ದೇ] ವೃದ್ಧ, ಮುದುಕ

ರಿಚ್ಛ. 'ರಿಕ್ಷ=ಋಕ್ಷ' ಶಬ್ದವನ್ನು ನೋಡುವುದು. –ರಿಚ್ಛಾಹಿವ. ಪು: [ಋಕ್ಷಾಧಿಪ] ರಾಮನ ಒಬ್ಬ ಸೇನಾಧಿಪತಿಯಾದ ಜಾಂಬವಂತ.

ರಿಚ್ಛಭಲ್ಲ. ಪು: [ದೇ] ಕರಡಿ

ರಿಜು. 'ರಿಉ=ಋಚ್' ಶಬ್ದವನ್ನು ನೋಡುವುದು.

ರಿಜು. 'ರಿಉ=ಋಜು' ಶಬ್ದವನ್ನು ನೋಡುವುದು.

ರಿಜ್ಜ. 'ರಿಅ=ರೀ' ಶಬ್ದವನ್ನು ನೋಡುವುದು.

ರಿಜ್ಜು. 'ರಿಉ= ಋಜು' ಶಬ್ದವನ್ನು ನೋಡುವುದು.

ರಿಜ್ಝ. ಅಕ: [ಋಧ್] ವೃದ್ಧಿಸು, ಅಭಿವೃದ್ಧಿಯಾಗು, ಸಂತಸ ತಾಳು. 'ರಿಜ್ಝಇ.'

ರಿಟ್ಠ. ಪು: [ದೇ. ಅರಿಷ್ಟ] ಅರಿಷ್ಟ, ದುರಿತ, ಪಾಪ., ಒಬ್ಬ ದೈತ್ಯ, ಕಾಗೆ(ಪಾಅ). –ನೇಮಿ. ಪು: [–ನೇಮಿ] ೨೨ನೇ ತೀರ್ಥಂಕರ.

ರಿಟ್ಠ. ಪು: [ರಿಷ್ಟ] ರಿಷ್ಟ ಎಂಬ ವಿಮಾನದಲ್ಲಿ ವಾಸಿಸುವ ದೇವ. ವೇಲಂಬ ಮತ್ತು ಪ್ರಭಂಜನ ಎಂಬ ಹೆಸರಿನ ಇಂದ್ರರ ಲೋಕಪಾಲ. ಶ್ರೀ ಕೃಷ್ಣನು ಕೊಂದು ಹಾಕಿದ ಒಂದು ಕೊಬ್ಬಿದ ಗೂಳಿ(ಪಣ್ಹ). ಒಂದು ಪಕ್ಷಿ, ನ: ಒಂದು ರತ್ನ, ಒಂದು ದೇವ–ವಿಮಾನ. ಪುಂನ: ಅಂಟುವಾಳದ ಕಾಯಿ. –ಪುರೀ: ಸ್ತ್ರೀ: [ಪುರೀ] ಕಚ್ಛಾವತೀ ವಿಜಯದ ರಾಜಧಾನಿ(ತಾ). –ಮಣಿ. ಪು; [–ಮಣಿ] ಒಂದು ಶ್ಯಾಮಲ ರತ್ನ

ರಿಟ್ಠಾ. ಸ್ತ್ರೀ: [ರಿಷ್ಟಾ] ಮಹಾಕಚ್ಛ–ವಿಜಯದ ರಾಜಧಾನಿ(ತಾ), ಐದನೆಯ ನರಕ–ಭೂಮಿ, ಮದ್ಯ

ರಿಟ್ಠಾಭ. ನ: [ರಿಷ್ಟಾಭ] ಒಂದು ದೇವ–ವಿಮಾನ,

ರಿಟ್ಠಿ. ಸ್ತ್ರೀ: [ರಿಷ್ಟಿ] ಖಡ್ಗ, ಕತ್ತಿ, ಅಶುಭ, ಪು: ರಂಧ್ರ, ತೂತು

ರಿಡ. ಸಕ: [ಮಂಡಯ್] ಅಲಂಕರಿಸು,

ರಿಣ. ನ: [ಋಣ] ಸಾಲ(ಗಾ), ನೀರು, ಕೋಟೆ, ದುರ್ಗ, ದುರ್ಗದ ಭೂಮಿ, ಕರ್ತವ್ಯ, ಕರ್ಮ, 'ಅಣ=ಋಣ' ಶಬ್ದವನ್ನು ನೋಡುವುದು.

ರಿಣಿಅ. ವಿ: [ಋಣಿತ] ಸಾಲಗಾರ

ರಿತೇ. ಅ: [ಋತೇ] ಹೊರತು, ವಿನಾ

ರಿತ್ತ. ವಿ: [ರಿಕ್ತ] ಖಾಲಿ, ಶೂನ್ಯ, ಬರಿದು(ಗಾ), ನ: ಅಭಾವ, ಇಲ್ಲದಿರುವುದು

ರಿತ್ತೂಡಿಅ. ವಿ: [ದೇ] ನಾಶಪಡಿಸಲ್ಪಟ್ಟ, ಕತ್ತರಿಸಲ್ಪಟ್ಟ

ರಿತ್ಥ. ನ: [ರಿಕ್ಥ] ಹಣ, ದ್ರವ್ಯ(ಉಪ)

ರಿದ್ಧ. ವಿ: [ಋದ್ಧ] ಸಂಪತ್ತಿನಿಂದ ಕೂಡಿದ(ವಾ)

ರಿದ್ಧ. ವಿ: [ದೇ] ಪಕ್ವ, ಸಿದ್ಧವಾದ(ದೇ)

ರಿದ್ಧಿ. ಪುಂಸ್ತ್ರೀ: [ದೇ] ಸಮೂಹ, ರಾಶಿ,

ರಿದ್ಧಿ. ಸ್ತ್ರೀ: [ಋದ್ಧಿ] ಸಂಪತ್ತು, ಸಮೃದ್ಧಿ, ವೈಭವ(ಪಾಅ), ವೃದ್ಧಿ, ದೇವ–ವಿಶೇಷ, ಓಷಧಿ–ವಿಶೇಷ, ಒಂದು ಛಂದಸ್ಸು. –ಮ, –ಲ್ಲ. ವಿ: [–ಮತ್] ಸಮೃದ್ಧವಾದ, ಋದ್ಧಿಯಿಂದ ಕೂಡಿದ(ಓಘ), –ಸುಂದರೀ. ಸ್ತ್ರೀ: [–ಸುಂದರೀ] ಒಬ್ಬ ವ್ಯಾಪಾರಿಯ ಮಗಳು.

ರಿಪು. 'ರಿವು' ಶಬ್ದವನ್ನು ನೋಡುವುದು.

ರಿಪ್ಪ. ನ: [ದೇ] ಮೈಯ ಹಿಂಭಾಗ, ಬೆನ್ನು(ದೇ)

ರಿಭಿಯ. ನ: [ರಿಭಿತ] ಒಂದು ಬಗೆಯ ನಾಟ್ಯ(ತಾ), ಸ್ವರದ ಕುಣಿತ

ರಿಮಿಣ. ವಿ: [ದೇ] ಅಳುವ ಅಭ್ಯಾಸವುಳ್ಳ

ರಿರಂಸಾ. ಸ್ತ್ರೀ: [ರಿರಂಸಾ] ಮೈಥುನದ ಇಚ್ಛೆ, ಆಟವಾಡುವ ಅಪೇಕ್ಷೆ

ರಿರಿಅ. ವಿ: [ದೇ] ಲೀನ, ಸೇರಿಕೊಂಡಿರುವ, ಐಕ್ಯವಾಗಿರುವ

ರಿಲ್ಲ. ಅಕ: [ದೇ] ಶೋಭಿಸು, ಹೊಳೆ. ವ.ಕೃ: 'ರಿಲ್ಲಂತ'

ರಿವು. 'ರಿಉ=ರಿಪು' ಶಬ್ದವನ್ನು ನೋಡುವುದು.

ರಿಸಭ}. ಪು: [ಋಷಭ] ಸಂಗೀತದ ಸಪ್ತ ಸ್ವರಗಳಲ್ಲೊಂದು,

ರಿಸಹ}. ಅಹೋರಾತ್ರದ ೨೬ನೇ ಮುಹೂರ್ತ, ಒಟ್ಟುಗೂಡಿರುವ ಎರಡು ಮೂಳೆಗಳ ಮೇಲೆ ವೃತ್ತಾಕಾರದಲ್ಲಿರುವ ಒಂದು ವೇಷ್ಟನ ಪಟ್ಟಿ. 'ಉಸಭ' ಶಬ್ದವನ್ನು ನೋಡುವುದು.

–ರಿಸಹ. ಪು: [–ಋಷಭ] ಶ್ರೇಷ್ಠ, ಉತ್ತಮ(ಕವಿ–ಋಷಭ ಇತ್ಯಾದಿ)

ರಿಸಿ. ಪು: [ಋಷಿ] ಮುನಿ, ಸಂತ, ಋಷಿ(ಔಪ). –ಘಾಯ. ಪು: [–ಘಾತ] ಮುನಿಯ ಹತ್ಯೆ

ರಿಹ. ಸಕ: [ಪ್ರ+ವಿಶ್] ಪ್ರವೇಶಿಸು

ರೀ} ಅಕ: [ರೌ] ಹೋಗು, ಚಲಿಸು, ಗಮಿಸು

ರೀಅ}.

ರೀಇ. ಸ್ತ್ರೀ: [ರೀತಿ] ಪ್ರಕಾರ, ಬಗೆ, ವಿಧ, ಪದ್ಧತಿ

ರೀಡ. ಸಕ: [**ಮಂಡಯ್**] ಅಲಂಕರಿಸು
ರೀಡಣ. ನ: [**ಮಂಡನ**] ಅಲಂಕರಣ
ರೀಢ. ಸ್ತ್ರೀನ: [ದೇ] ಕಡೆಗಣಿಸುವುದು, ಅನಾದರ, ಅವಮಾನ. ಸ್ತ್ರೀನ: **–ಢಾ.**(ಪಾಅ)
ರೀಣ. ವಿ: [ರೀಣ] ಸೋರಿಹೋಗಿರುವ, ಸುರಿದುಹೋಗಿರುವ, ಪೀಡಿಸಲ್ಪಟ್ಟ
ರೀರ. ಅಕ: [**ರಾಜ್**] ಶೋಭಿಸು, ಹೊಳೆ, ಬೆಳಗು
ರೀರಿಅ. ವಿ: [**ರಾಜಿತ**] ಶೋಭಿಸಲ್ಪಟ್ಟ(ಕುಮಾ)
ರೀರೀ. ಸ್ತ್ರೀ: [ರೀರೀ] ಹಿತ್ತಾಳೆ ಲೋಹ(ಸುಪಾ)
ರು. ಸ್ತ್ರೀ: [**ರುಜ್**] ರೋಗ
ರುಅ. ಅಕ: [**ರುದ್**] ಅಳು,– **'ರುಅಇ', ವ. ಕೃ: 'ರುಅಂತ'**
ರುಅ. ನ: [**ರುತ**] ಶಬ್ದ, ದನಿ(ಣಾಯಾ)
ರುಅ. 'ರುಅ=ರೂಪ' ಶಬ್ದವನ್ನು ನೋಡುವುದು.
ರುಅ. 'ರುಅ=(ದೇ) ಶಬ್ದವನ್ನು ನೋಡುವುದು.
ರುಅಂತೀ. ಸ್ತ್ರೀ: [**ರುದತೀ**] ಒಂದು ಬಗೆಯ ಬಳ್ಳಿ.
ರುಅಂಸ. 'ರೂಅಂಸ' ಶಬ್ದವನ್ನು ನೋಡುವುದು.
ರುಅಗ. ಪು: [**ರುಚಕ**] ಕಾಂತಿ, ತೇಜಸ್ಸು, ಒಂದು ಖ್ಯಾತ ಪರ್ವತ, ಒಂದು ದ್ವೀಪ. ಒಂದು ಸಮುದ್ರ, ಒಂದು ದೇವ–ವಿಮಾನ. ಇಂದ್ರರುಗಳ ಒಂದು ಆಭಾವ್ಯ ವಿಮಾನ, ಒಂದು ರತ್ನ–ವಿಶೇಷ(ಉತ್ತ). ರುಚಕ ಪರ್ವತದ ಐದನೆಯ ಶಿಖರ. ನಿಷಧ ಪರ್ವತದ ಎಂಟನೆಯ ಶಿಖರ. **–ವರ. ಪು:** [**–ವರ**] ಒಂದು ದ್ವೀಪ. ಒಂದು ಪರ್ವತ, ಸಮುದ್ರ–ವಿಶೇಷ, **'ರುಚಕ'** ಸಮುದ್ರದ ಒಬ್ಬ ಅಧಿಷ್ಠಾತೃ ದೇವ. **–ವರಭದ್ದ.ಪು:** [**–ವರಭದ್ರ**] ರುಚಕ ದ್ವೀಪದ ಅಧಿಷ್ಠಾತೃ ದೇವ. **–ವರಮಹಾಭದ್ದ. ಪು:** [**–ವರಮಹಾಭದ್ರ**] ಅದೇ ಅರ್ಥ. **–ವರಮಹಾವರ. ಪು:** [**–ವರಮಹಾವರ**] ರುಚಕ ಸಮುದ್ರದ ಅಧಿಷ್ಠಾತೃ ದೇವ. **–ವರಾವಭಾಸ. ಪು:** [**–ವರಾವಭಾಸ**] ಒಂದು ದ್ವೀಪ–ವಿಶೇಷ, ಒಂದು ಸಮುದ್ರ–ವಿಶೇಷ, **–ವರಾವಭಾಸಭದ್ದ. ಪು:** [**–ವರಾವಭಾಸಭದ್ರ**] ರುಚರಿವರಾವಭಾಸ ದ್ವೀಪದ ಒಬ್ಬ ಅಧಿಷ್ಠಾತೃ ದೇವ. **–ವರಾವಭಾಸಮುಹಾಭದ್ದ. ಪು:** [**–ವರಾವಭಾಸಮುಹಾಭದ್ರ**] ಅದೇ ಅರ್ಥ. **–ವರಾವಭಾಸಮುಹಾವರ. ಪು:** [**–ವರಾವಭಾಸಮಹಾವರ**] ರುಚಕವರಾವಭಾಸೆಂಬ ಹೆಸರಿನ ಸಮುದ್ರದ ಒಬ್ಬ ಅಧಿಷ್ಠಾತೃ ದೇವ. **–ವರಾವಭಾಸವರ. ಪು:** [**–ವರಾವಭಾಸವರ**] ಅದೇ ಅರ್ಥ. **–ವರೋದ. ಪು:** [**–ವರೋದ**] ಸಮುದ್ರ–ವಿಶೇಷ. **–ವರೋಭಾಸ. '–ವರಾವಭಾಸ'** ಶಬ್ದವನ್ನು ನೋಡುವುದು. **ರುಅಗಾವಈ.** ಸ್ತ್ರೀ: [**ರುಚಕಾವತೀ**] ಒಬ್ಬ ಇಂದ್ರಾಣಿ. **ರುಅಗೋದ. ಪು:** [**ರುಚಕೋದ**] ಸಮುದ್ರ–ವಿಶೇಷ.
ರುಅಗಿಂದ. ಪ: [**ರುಚಕೇಂದ್ರ**] ಪರ್ವತ–ವಿಶೇಷ.
ರುಅಗುತ್ತಮ. ನ: [**ರುಚಕೋತ್ತಮ**] ಒಂದು ಶಿಖರ–ವಿಶೇಷ.
ರುಅಣ. ನ: [**ರೋದನ**] ಅಳು, ಅಳುವುದು
ರುಅಯ. 'ರುಅಗ' ಶಬ್ದವನ್ನು ನೋಡುವುದು.
ರುಅರುಇಆ. ಸ್ತ್ರೀ: [ದೇ] ಉತ್ಕಂಠತೆ, ಉತ್ಸುಕತೆ,
ರುಆ. ಸ್ತ್ರೀ: [**ರುಜ್**] ರೋಗ, ಕಾಯಿಲೆ
ರುಆವಿಅ. ವಿ: [**ರೋದಿತ**] ಅಳಿಸಲ್ಪಟ್ಟ, ಅಳುವಂತೆ ಮಾಡಲ್ಪಟ್ಟ
ರುಇ. ಸ್ತ್ರೀ: [**ರುಚಿ**] ಕಾಂತಿ, ಪ್ರಭೆ, ತೇಜಸ್ಸು (ಕುಮಾ). ಅನುರಾಗ, ಪ್ರೇಮ, ಆಸಕ್ತಿ, ಅಭಿರುಚಿ, ಅಭಿಲಾಷೆ, ಶೋಭೆ, ತಿನ್ನಬೇಕೆಂಬ ಆಸೆ, ಗೋರೋಚನ.
ರುಇಅ. 'ರುಣ್ಣ=ರುದಿತ' ಶಬ್ದವನ್ನು ನೋಡುವುದು.
ರುಇರ. ವಿ: [**ರುಚಿರ**] ಸುಂದರವಾದ, ಮನೋಹರವಾದ, ಕಾಂತಿಯುಕ್ತವಾದ, **ಪುಂನ:** ಒಂದುದೇವ–ವಿಮಾನ.
ರುಇರ. ವಿ: [**ರೋದಿತೃ**] ಅಳುವವನು. ಸ್ತ್ರೀ: **–ರೀ**
ರುಇಲ. ವಿ: [**ರುಚಿರ, –ಲ**] ಸುಂದರವಾದ, ಮನೋಹರವಾದ(ಔಪ). ಹೊಳೆಯುವ, ಒಂದು ದೇವ–ವಿಮಾನ
ರುಇಲ್ಲ. ನ: [**ರುಚಿರ, ರುಚಿಮತ್**] ಒಂದು ದೇವ–ವಿಮಾನ, **–ಕಂತ. ನ:** [**–ಕಾಂತ**], **–ಕೂಡ. ನ:** [**–ಕೂಟ**] **–ಜ್ಝಿವ. ನ:** [**–ಧ್ವಜ**], **–ಪ್ಪಭ. ನ:** [**–ಪ್ರಭ**], **–ಲೇಸ. ನ:** [**–ಲೇಶ್ಯ**], **–ವಣ್ಣ. ನ:** [**–ವರ್ಣ**], **–ಸಿಂಗ. ನ:** [**ಶೃಂಗ**], **–ಸಿಟ್ಠ. ನ:** [**–ಸೃಷ್ಟ**], **ರುಇಲ್ಲಾವತ್ತ. ನ:** [**–ರುಚಿರಾವರ್ತ**] ಇವೆಲ್ಲವೂ ದೇವ–ವಿಮಾನಗಳ ಹೆಸರುಗಳು.
ರುಇಲ್ಲುತ್ತರವಡಿಂಸಗ. ನ: [**ರುಚಿರೋತ್ತರಾ ವಸಂತಕ**] ಒಂದು ದೇವ–ವಿಮಾನ

ರುಂಚ. ಸಕ: [ರುಂಚ್] ಹತ್ತಿಯಿಂದ ಅದರ ಬೀಜ ತೆಗೆಯುವ ಕೆಲಸಮಾಡು. ವ. ಕೃ: **'ರುಂಚಂತ'**
ರುಂಚಣ. ನ: [ರುಂಚನ] ಹತ್ತಿಯಿಂದ ಹತ್ತಿಯ ಗಿಡವನ್ನು ಬೇರೆ ಮಾಡುವುದು
ರುಂಚಣೀ. ಸ್ತ್ರೀ: [ದೇ] ಬೀಸುವ ಕಲ್ಲು
ರುಂಜ. ಅಕ: [ರು] ಶಬ್ದಮಾಡು
ರುಂಜಗ. ಪು: [ದೇ. ರುಂಜಕ] ವೃಕ್ಷ, ಮರ
ರುಂಜಿಯ. ನ: [ರವಣ] ಶಬ್ದ, ಸದ್ದು, ಗರ್ಜನೆ
ರುಂಟ. 'ರುಂಜ' ಶಬ್ದವನ್ನು ನೋಡುವುದು. ವ. ಕೃ: **'ರುಂಟಂತ'**
ರುಂಟಣಯಾ. ಸ್ತ್ರೀ: [ದೇ] ಅಲಕ್ಷ್ಯ, ಅನಾದರ, ಕಡೆಗಣಿಸುವುದು
ರುಂಟಣಿಯಾ. ಸ್ತ್ರೀ: [ದೇ. ರವಣಿಕಾ] ಅಳುವ ಕ್ರಿಯೆ
ರುಂಟಿಅ. ನ: [ರುತ] ಪಶು, ಪಕ್ಷಿಗಳ ಕೂಗು, ಶಬ್ದ
ರುಂಡ. ಪುಂನ: [ರುಂಡ] ರುಂಡವಿಲ್ಲದ ಮುಂಡ, ಕಬಂಧ(ಗಉಡ)
ರುಂಢ. ಪು: [ದೇ] ಜೂಜುಕೋರ
ರುಂಢಿಅ. ವಿ: [ದೇ] ಸಫಲ(ದೇ)
ರುಂದ. ವಿ: [ದೇ] ವಿಪುಲ, ಬಹಳ, ವಿಶಾಲವಾದ ಅಗಲವಾದ(ಔಪ), ದಪ್ಪ, ಸ್ಥೂಲ, ವಾಚಾಳಿ, ಹರಟೆಹೊಡೆಯುವವನು.
ರುಂದೀ. ಸ್ತ್ರೀ: [ದೇ] ವಿಸ್ತೀರ್ಣತೆ, ವಿಶಾಲವಾಗಿರುವಿಕೆ
ರುಂಧ. ಸಕ: [ರುಧ್] ತಡೆ, ವ. ಕೃ: **'ರುಂಧಂತ'**
ರುಂಧಿಅ. ವಿ: [ರುದ್ಧ] ತಡೆಯಲ್ಪಟ್ಟ, ತಡೆಯಲಾದ
ರುಂಪ. ಪುಂನ: [ದೇ] ತ್ವಚೆ, ತೊಗಟೆ, ಉಜ್ಜುವುದು, ತಿಕ್ಕುವುದು, ಕೆತ್ತುವುದು
ರುಂಪಣ. ನ: [ರೋಪಣ] ಕ್ಷೌರಮಾಡಿಸುವುದು, ತಲೆ ಬೋಳಿಸುವುದು
ರುಂಫ. 'ರುಂಪ' ಶಬ್ದವನ್ನು ನೋಡುವುದು.
ರುಂಭ. 'ರುಂಧ' ಶಬ್ದವನ್ನು ನೋಡುವುದು. ವ. ಕೃ: **'ರುಂಭಂತ'**
ರುಂಭಣ. ನ: [ರೋಧನ] ತಡೆಯುವುದು, ಅಡ್ಡಿಪಡಿಸುವುದು(ಪಣ್ಣ)
ರುಂಭಯು. ವಿ: [ರೋಧಕ] ತಡೆಯುವವನು, ಅಡ್ಡಿಪಡಿಸುವವನು
ರುಂಭಾವಿಅ. ವಿ: [ರೋಧಿತ] ತಡೆಮಾಡಿಸಲ್ಪಟ್ಟ, ಅಡ್ಡಿಮಾಡಿಸಲ್ಪಟ್ಟ
ರುಂಭಿಅ. ವಿ: [ರುದ್ಧ] ತಡೆಯಲ್ಪಟ್ಟ, ಅಡ್ಡಿಪಡಿಸಲಾದ
ರುಕ್ಕ. ನ: [ದೇ] ಎತ್ತಿನ ಹಾಗೆ ಅರಚುವುದು, ಶಬ್ದಮಾಡುವುದು
ರುಕ್ಕಿಣೀ. 'ರುಪ್ಪಿಣೀ' ಶಬ್ದವನ್ನು ನೋಡುವುದು.
ರುಕ್ಖ. ಪುಂನ: [ವೃಕ್ಷ] ಮರ, ಸಂಯಮ, **–ಮೂಲ.** ನ: [–ಮೂಲ] ಮರದ ಬೇರು. **–ಮೂಲಿಯ.** ಪು: [–ಮೂಲಿಕ] ಮರದ ಬುಡದಲ್ಲಿ ವಾಸಿಸುವ ವಾನಪ್ರಸ್ಥ(ಔಪ). **–ಸತ್ಥ.** ನ: [–ಶಾಸ್ತ್ರ] ವನಸ್ಪತಿ ಶಾಸ್ತ್ರ. **ರುಕ್ಖಾಉವೇದ.** ಪು: [ವೃಕ್ಷಾಯುರ್ವೇದ] ವೃಕ್ಷಗಳನ್ನು ಕುರಿತಾದ ಶಾಸ್ತ್ರ
ರುಕ್ಖಲ್ಲ. ಮೇಲಿನ ಶಬ್ದವನ್ನು ನೋಡುವುದು.
ರುಕ್ಖಿಮ. ಪುಂಸ್ತ್ರೀ: [ವೃಕ್ಷತ್ವ] ಮರದತನ
ರುಗ್ಗ. ವಿ: [ರುಗ್ಣ] ಮುರಿಯಲ್ಪಟ್ಟ, ಒಡಯಲ್ಪಟ್ಟ
ರುಚ}. ಸಕ: [ದೇ] ಹಿಟ್ಟುಮಾಡು, ಬೀಸು
ರುಚ್ಚ}.
ರುಚಿರ. 'ರುಇರ' ಶಬ್ದವನ್ನು ನೋಡುವುದು.
ರುಚ್ಚ. ಅಕ: [ರುಚ್] ರುಚಿಸು, ಇಷ್ಟವಾಗು, ಒಪ್ಪಿಗೆಯಾಗು. **–'ರುಚಇ'**
ರುಚ್ಚ. ಸಕ: [ದೇ] ಯಂತ್ರದ ಮೂಲಕ ಬತ್ತದ ಹೊಟ್ಟು ತೆಗೆ. ವ. ಕೃ: **'ರುಚ್ಚಂತ'**
ರುಚ್ಚಿ. **'ರುಇ=ರುಚಿ'** ಶಬ್ದವನ್ನು ನೋಡುವುದು.
ರುಚ್ಛ. **'ರುಕ್ಖ'** ಶಬ್ದವನ್ನು ನೋಡುವುದು.
ರುಚ್ಮಿ. **'ರುಪ್ಪಿ'** ಶಬ್ದವನ್ನು ನೋಡುವುದು.
ರುಜ್ಜ. ನ: [ರೋದನ] **ಅಳು,** ಅಳುವುದು(ಗಾ).
ರುಜ್ಝ. **'ರುಂಧ'** ಶಬ್ದವನ್ನು ನೋಡುವುದು.
ರುಜ್ಝ–. ರುಹ=ರುಹ್' ಶಬ್ದವನ್ನು ನೋಡುವುದು.
ರುಜ್ಝಿಅ. ವಿ: [ರುದ್ಧ] ತಡೆಯಲ್ಪಟ್ಟ, ಅಡ್ಡಿಪಡಿಸಲ್ಪಟ್ಟ
ರುಟ್ಟಿಯಾ. ಸ್ತ್ರೀ: [ದೇ] ರೊಟ್ಟಿ,
ರುಟ್ಠ. ವಿ: [ರುಷ್ಟ] ಸಿಟ್ಟಿಗೆದ್ದ, **ಕೋಪಗೊಂಡ**(ಉವಾ), ಪು: ಒಂದು ನರಕಾವಾಸ
ರುಣರುಣ}. ಅಕ: [ದೇ] ಕರುಣಾಕ್ರಂದನ(ಭವಿ), ಕನಿಕರ
ರುಣುರುಣ}. ಹುಟ್ಟಿಸುವಂಥ ಅಳು, ಅಳುವುದು
ರುಣುರುಣಿಯ. ವಿ: [ದೇ] ಕರುಣೆ ಹುಟ್ಟಿಸುವಂತೆ ಅಳುತ್ತಿರುವವ(ಪಉಮ)
ರುಣ್ಣ. ನ: [ರುದಿತ] ಅಳು, ರೋದನ, ಅಳುವುದು.
ರುತೇ. 'ರಿತೇ' ಶಬ್ದವನ್ನು ನೋಡುವುದು.
ರುಪ್ಪಿಣೀ. 'ರುಪ್ಪಿಣೀ' ಶಬ್ದವನ್ನು ನೋಡುವುದು.

ರುದಿಅ. **'ರುಣ್ಣ'** ಶಬ್ದವನ್ನು ನೋಡುವುದು.
ರುದ್ದ. ಪು: [**ರುದ್ರ**] ಶಿವ, ಮಹಾದೇವ, ಶಿವಮೂರ್ತಿ, ಜಿನದೇವ, ತೀರ್ಥಂಕರ(ಪಉಮ). ಪರಮ ಅಧಾರ್ಮಿಕ ದೇವರುಗಳ ಒಂದು ಜಾತಿ. ಒಬ್ಬ ವಾಸುದೇವನ ತಂದೆಯಾದ ರಾಜ. ಜ್ಯೋತಿಷ್ಕ-ದೇವ, ಅಂಗವಿದ್ಯೆಯನ್ನು ಅರಿತ ವ್ಯಕ್ತಿ. ವಿ: ಭಯಂಕರ. **'ರೋದ್ದ=ರುದ್ರ'** ಶಬ್ದವನ್ನು ನೋಡುವುದು.
ರುದ್ದ. **'ರೊದ್ದ= ರೌದ್ರ'** ಶಬ್ದವನ್ನು ನೋಡುವುದು.
ರುದ್ದಕ್ಖ. ಪು: [ರುದ್ರಾಕ್ಷ] ರುದ್ರಾಕ್ಷಿ ಮರ(ಪಉಮ)
ರುದ್ದಾಣೀ.ಸ್ತ್ರೀ: [ರುದ್ರಾಣೀ] ಶಿವನ ಪತ್ನಿಯಾದ ಪಾರ್ವತಿ
ರುದ್ಧ. ವಿ: [ರುದ್ಧ] ತಡೆಯಲ್ಪಟ್ಟ(ಕುಮಾ)
ರುದ್ರ. **'ರುದ್ದ'** ಶಬ್ದವನ್ನು ನೋಡುವುದು.
ರತ್ನ. **'ರುಣ್ಣ'** ಶಬ್ದವನ್ನು ನೋಡುವುದು.
ರುಪ್ಪ. ಸಕ: [**ರೋಪಯ್**] ನೆಟ್ಟು ಬೆಳೆಸು, ಬಿತ್ತು,
ರುಪ್ಪ. ನ: [ರುಕ್ಮ] ಚಿನ್ನ, ಸವರ್ಣ, ಕಬ್ಬಿಣ, ದತ್ತೂರಿ ಗಿಡ, ನಾಗ ಕೇಸರ, ಬೆಳ್ಳಿ.
ರುಪ್ಪ. ನ: [**ರೂಪ್ಯ**] ಬೆಳ್ಳಿ(ಔಪ), **-ಕೂಡ. ಪು:** [**-ಕೂಟ**] ರುಕ್ಮಿ ಪರ್ವತದ ಶಿಖರ. **-ಕೂಲಪ್ಪವಾಯ. ಪು:** [**-ಕೂಲಪ್ರಪಾತ**] ಒಂದು ಜಲಾಶಯ. **-ಕೂಲಾ.ಸ್ತ್ರೀ:** [**-ಕೂಲಾ**] ಒಂದು ಮಹಾನದಿ(ಠಾ), ಒಬ್ಬ ದೇವಿ, ರುಕ್ಮಿ ಪರ್ವತದ ಒಂದು ಶಿಖರ. **-ಮಯ. ವಿ:** [**-ಮಯ**] ಬೆಳ್ಳಿಯಿಂದ ಮಾಡಲ್ಪಟ್ಟ (ಕುಮಾ). **ರುಪ್ಪಾಭಾಸ. ಪು:** [**ರೂಪ್ಯಾಭಾಸ**] ಜ್ಯೋತಿಷ್ಯದ ಒಂದು ಮಹಾಗ್ರಹ.
ರುಪ್ಪ. ವಿ: [ರೌಪ್ಯ] ಬೆಳ್ಳಿಯ(ಣಾಯಾ)
ರುಪ್ಪಯ. ರುಪ್ಪ= ರೂಪ್ಯ ಶಬ್ದವನ್ನು ನೋಡುವುದು.
ರುಪ್ಪಿ. ಪು: [**ರುಕ್ಮಿನ್**] ಕೌಂಡಿಣ್ಯ ನಗರದ ಒಬ್ಬ ರಾಜ, ರುಕ್ಮಿಯ ಸೋದರ(ಕುಮಾ). ಕುಣಾಲ ದೇಶದ ಒಬ್ಬ ರಾಜ. ಒಂದು ವರ್ಷಧರ ಪರ್ವತ, ಒಂದು ಜ್ಯೋತಿಷ್ಕ ಮಹಾಗ್ರಹ(ಠಾ). ದೇವ-ವಿಶೇಷ. ರುಕ್ಮಿ ಪರ್ವತದ ಒಂದು ಶಿಖರ. ವಿ: ಚಿನ್ನವನ್ನು ಹೊಂದಿರುವವ, ಬೆಳ್ಳಿಯನ್ನು ಹೊಂದಿರುವವ. **-ಕೂಡ. ಪುಂನ:**[**-ಕೂಟ**] ರುಕ್ಮಿ ಪರ್ವತದ ಒಂದು ಶಿಖರ.
ರುಪ್ಪಿಣೀ. ಸ್ತ್ರೀ: [ರುಕ್ಮಿಣೀ] ಎರಡನೇ ವಾಸುದೇವನ ಪಟ್ಟದ ರಾಣಿ, ಶ್ರೀ ಕೃಷ್ಣ ವಾಸುದೇವನ ಒಬ್ಬ ಅಗ್ರ ಮಹಿಷಿ. ಒಬ್ಬ ಶ್ರೇಷ್ಠಿಯ ಪತ್ನಿ(ಸುಪಾ)
ರುಪ್ಪೋಭಾಸ. ಪು: [**ರೂಪ್ಯಾವಭಾಸ**] ಒಂದು ಮಹಾ ಗ್ರಹ, ವಿ: ಬೆಳ್ಳಿಯ ಹಾಗೆ ಹೊಳೆಯುವ
ರುಬ್ಭಂತ}. **'ರುಂಧ'** ಶಬ್ದವನ್ನು ನೋಡುವುದು.
ರುಬ್ಭಮಾಣ}.
ರುಮ್ಮಿಣೀ. ರುಪ್ಪಿಣೀ ಶಬ್ದವನ್ನು ನೋಡುವುದು.
ರುಮ್ಹ. ಸಕ: [**ಮ್ಲಾಪಯ್**] ಕೊಳೆ ಮಾಡು, ಮಲಿನಗೊಳಿಸು
ರುರು. ಪು: [ರುರು] ಜಿಂಕೆಯ ಒಂದು ಪ್ರಭೇದ (ಪಉಮ), ಸರ್ಪಕ್ಕಿಂತ ಕ್ರೂರವಾದ ಒಂದು ಪ್ರಾಣಿ, ವನಸ್ಪತಿ, ಒಂದು ಅನಾರ್ಯ ದೇಶ, ಒಂದು ಅನಾರ್ಯ ಮನುಷ್ಯ ಜನಾಂಗ(ಪಣ್ಣ)
ರುರುವ. ಅಕ: [**ರೋರುಯ್**] ಜೋರಾಗಿ ಶಬ್ದಮಾಡು, ಬಾರಿಬಾರಿಗೆ ಚೀರಾಡು
ರುಲ. ಅಕ: [ಲುಠ್] ಮಲಗು, ಅಡ್ಡಾಗು. **ವ.ಕೃ:** **'ರುಲಂತ'**
ರುಲುಘುಲ. ಅಕ: [ದೇ] ನಿಟ್ಟುಸಿರು ಬಿಡು,
ರುವ. **'ರುಅ=ರುದ್'** ಶಬ್ದವನ್ನು ನೋಡುವುದು.
ರುವಣ.}. **ನ:** [**ರೋದನ**]**ಸ್ತ್ರೀ:** ಅಳು,
ರುವಣಾ}.ಅಳುವುದು(ಉಪ)
ರುವಣಾ. ಸ್ತ್ರೀ: [**ರೋವಣಾ**] ಆರೋಪಣೆ, ಪ್ರಾಯಶ್ಚಿತ್ತದ ಒಂದು ಪ್ರಭೇದ
ರುವಿಲ **'ರುಇಲ'** ಶಬ್ದವನ್ನು ನೋಡುವುದು.
ರುಸ್ಸಾ. ಸ್ತ್ರೀ: [**ರೋಷ**] ಕೋಪ, ಸಿಟ್ಟು(ಕುಮಾ)
ರುಸಿಅ. **'ರೂಸಿಅ'** ಶಬ್ದವನ್ನು ನೋಡುವುದು.
ರುಹ. ಅಕ: [**ರುಹ್**] ಹುಟ್ಟು, ಬೆಳೆ. **ಸಕ:** ಗಾಯವನ್ನು ಒಣಗಿಸು
ರುಹ. ವಿ: [ರುಹ] ಹುಟ್ಟುವ, ಬೆಳೆಯುವ(ಆಚಾ)
ರುಹಣ. ನ: [**ರೋಧನ**] ಅಡ್ಡಿಪಡಿಸುವುದು, ತಡೆಯುವುದು.
ರುಹರುಹ. ಅಕ: [ದೇ] ನಿಧನಿಧಾನವಾಗಿ ಸಾಗು
ರುಹುರುಹಯ. ಪು: [ದೇ] ಉತ್ಕಂಠೆ, ತವಕ, ಆತುರ
ರೂಅ. ನ: [**ದೇ. ರೂತ**] ಹತ್ತಿ(ಭಗ)
ರೂಅ. ಪು: [**ರೂಪ**] ಪೂರ್ಣಭದ್ರ ಮತ್ತು ವಿಶಿಷ್ಟ ಎಂಬ ಹೆಸರಿನ ಇಂದ್ರನ ಒಬ್ಬ ಲೋಕಪಾಲ(ಠಾ)

ಆಕಾರ, ಆಕೃತಿ(ಗಾ), ವಿ: ಹೋಲುವ, ಸದೃಶ(ದೇ), **–ಕಂತ. ಪು:** [–ಕಾಂತ]ಪೂರ್ಣಭದ್ರ ಮತ್ತು ವಿಶಿಷ್ಟ ಎಂಬ ಹೆಸರಿನ ಒಬ್ಬ ಲೋಕಪಾಲ. **–ಕಂತಾ.** ಸ್ತ್ರೀ: [–ಕಾಂತಾ] ಭೂತಾನಂದ ಎಂಬ ಹೆಸರಿನ ಇಂದ್ರನ ಒಬ್ಬ ಅಗ್ರ ಮಹಿಷಿ. ಒಬ್ಬ ದಿಕ್ಕುಮಾರಿ ಮಹತ್ತರಿಕೆ. **–ಪ್ಪಭ. ಪು: [–ಪ್ರಭ]** ಪೂರ್ಣಭದ್ರ ಮತ್ತು ವಿಶಿಷ್ಟ ಎಂಬ ಹೆಸರಿನ ಇಂದ್ರನ ಒಬ್ಬ ಲೋಕಪಾಲ. **ರೂಅಭಾ. ಸ್ತ್ರೀ: [–ಪ್ರಭಾ]** ಭೂತಾನಂದ ಎಂಬ ಇಂದ್ರನ ಒಬ್ಬ ಅಗ್ರ ಮಹಿಷಿ. ಒಬ್ಬ ದಿಕ್ಕುಮಾರಿ ದೇವಿ(ತಾ). **'ರೂವ=ರೂಪ'** ಶಬ್ದವನ್ನು ನೋಡುವುದು.

ರೂಅಂಸ. ಪು: [ರೂಪಾಂಶ] ಪೂರ್ಣಭದ್ರ ಮತ್ತು ವಿಶಿಷ್ಟ ಎಂಬ ಹೆಸರಿನ ಇಂದ್ರನ ಒಬ್ಬ ಲೋಕಪಾಲ.

ರೂಅಂಸಾ. ಸ್ತ್ರೀ: **[ರೂಪಾಂಶಾ]** ಭೂತಾನಂದ ಇಂದ್ರನ ಒಬ್ಬ ಅಗ್ರ ಮಹಿಷಿ, ಒಬ್ಬ ದಿಕ್ಕುಮಾರಿ ದೇವಿ(ತಾ).

ರೂಅಗ}. ಪುಂನ: [ರೂಪಕ] ರೂಪಾಯಿ ನಾಣ್ಯ,

ರೂಅಯ}. ಪು: ಒಬ್ಬ ಗೃಹಸ್ಥ(ಣಾಯಾ), ರೂಪಾ ದೇವಿಯ ಸಿಂಹಾಸನ. **–ವಡಿಂಸಯ. ನ: [ರೂಪಕಾವತಂಸಕ]** ರೂಪಾ ದೇವಿಯ ಭವನ. **–ಸಿರೀ.** ಸ್ತ್ರೀ: [–ಶ್ರೀ] ಒಬ್ಬ ಗೃಹಿಣಿ. **ರೂಅಗಾವಈ.** ಸ್ತ್ರೀ: [–ವತೀ] ಭೂತಾನಂದ ಎಂಬ ಹೆಸರಿನ ಇಂದ್ರನ ಒಬ್ಬ ಅಗ್ರ ಮಹಿಷಿ. **'ರೂವಯ=ರೂಪಕ'** ಶಬ್ದವನ್ನು ನೋಡುವುದು.

ರೂಅರೂಇಅ.(ದೇ). **'ರುಅರೂಇಅ'** ಶಬ್ದವನ್ನು ನೋಡುವುದು.

ರೂಅ. ಸ್ತ್ರೀ: [ರೂಪಾ] ಭೂತಾನಂದ ಎಂಬ ಹೆಸರಿನ ಇಂದ್ರನ ಒಬ್ಬ ಅಗ್ರ ಮಹಿಷಿ. ಒಬ್ಬ ದಿಕ್ಕುಮಾರಿ ದೇವಿ(ತಾ)

ರೂಅಮಾಲಾ. ಸ್ತ್ರೀ: **[ರೂಪಮಾಲಾ]** ಒಂದು ಛಂದಸ್ಸು

ರೂಅರ. ವಿ: **[ರೂಪಕಾರ]** ಮೂರ್ತಿಯನ್ನು ಮಾಡುವವನು

ರೂಅವಈ. ಸ್ತ್ರೀ: **[ರೂಪವತೀ]** ಒಬ್ಬ ದಿಕ್ಕುಮಾರಿ ದೇವಿ.

ರೂಢ. ವಿ: **[ರೂಢ]** ಪರಂಪರಾಗತವಾದ, ರೂಢಿಯಿಂದ ಸಿದ್ಧವಾದ, ಪ್ರಸಿದ್ಧ(ಉಪ).

ರೂಢ. ವಿ: **[ರೂಢ]** ಬೆಳೆದಿರುವ, ಹುಟ್ಟಿರುವ

ರೂಢಿ. ಸ್ತ್ರೀ: **[ರೂಢಿ]** ಪರಂಪರೆಯಿಂದ ನಡೆದುಕೊಂಡು ಬಂದ ಪ್ರಸಿದ್ಧ ಪದ್ಧತಿ

ರೂಪ. ಪು: [ರೂಪ] ಪಶು, ಪ್ರಾಣಿ(ಮೃಚ್ಛ) ಆಕಾರ. **'ರೂಅ=ರೂಪ'** ಶಬ್ದವನ್ನು ನೋಡುವುದು.

ರೂಪಿ. ಪು: [ರೂಪಿನ್] ಕಟುಕ, ಮಾಂಸ ಮಾರಾಟಗಾರ(ಮೃಚ್ಛ), ರೂಪವನ್ನು ಹೊಂದಿದ, ಸುಂದರವಾದ.

ರೂರುಇಯ. ನ: [ದೇ] ಉತ್ಸುಕತೆ,

ರೂವ. ಪುಂನ: [ರೂಪ] ಆಕೃತಿ, ಆಕಾರ(ಪಾಅ), ಸೌಂದರ್ಯ, ಬಿಳಿದು, ಕೆಂಪು ಮೊದಲಾದ ಬಣ್ಣಗಳು. ಮೂರ್ತಿ, ಸ್ವಭಾವ(ತಾ), ಶಬ್ದ, ಹೆಸರು, ಶ್ಲೋಕ, ನಾಟಕ ಮೊದಲಾದ ರೂಪಕ. ಒಂದು ಎಂಬ ಸಂಖ್ಯೆ. ರೂಪವುಳ್ಳ, ವರ್ಣವುಳ್ಳ, **'ರೂಅ, ರೂಪ=ರೂಪ'** ಎಂಬ ಶಬ್ದವನ್ನು ನೋಡುವುದು. **–ಕಂತಾ. '–ಕಂತಾ. 'ರೂಅ–ಕಂತಾ'** ಶಬ್ದವನ್ನು ನೋಡುವುದು. **–ಧಾರ.** ವಿ: **[–ಧಾರ]** ರೂಪಧಾರಿ. **–ಪ್ಪಭಾ. 'ರೂಅ–ಪ್ಪಭಾ'** ಶಬ್ದವನ್ನು ನೋಡುವುದು. **–ಮಂತ. '– ವಂತ'** ಶಬ್ದವನ್ನು ನೋಡುವುದು(ಪಉಮ). **–ವಈ.** ಸ್ತ್ರೀ: [–ವತೀ] ಭೂತಾನಂದ ಎಂಬ ಹೆಸರಿನ ಇಂದ್ರನ ಒಬ್ಬ ಅಗ್ರ ಮಹಿಷಿ(ತಾ). ಸುರೂಪ ಎಂಬ ಹೆಸರಿನ ಭೂತೇಂದ್ರನ ಒಬ್ಬ ಅಗ್ರ–ಮಹಿಷಿ. ಒಬ್ಬ ದಿಕ್ಕುಮಾರಿ ಮಹತ್ತರಿಕಾ ದೇವಿ. **– ವಂತ, –ಸ್ಸಿ.** ವಿ: **[–ವತ್]** ರೂಪವುಳ್ಳ, ಸುರೂಪಿ.

ರೂವಗ. ಪುಂನ: [ರೂಪಕ] ರೂಪಾಯಿ ನಾಣ್ಯ (ಉಪ). ಸಾಹಿತ್ಯದಲ್ಲಿ ಪ್ರಸಿದ್ಧವಾದ ಒಂದು ಅಲಂಕಾರ. **'ರೂಅಗ=ರೂಪಕ'** ಶಬ್ದವನ್ನು ನೋಡುವುದು.

ರೂವಮಿಣೀ. ಸ್ತ್ರೀ: [ದೇ] ರೂಪವತಿಯಾದ ಹೆಣ್ಣು

ರೂವಯ. 'ರೂವಗ' ಶಬ್ದವನ್ನು ನೋಡುವುದು.

ರೂವಸಿಣೀ. 'ರೂವಮಿಣೀ' ಶಬ್ದವನ್ನು ನೋಡುವುದು.

ರೂವಾ. 'ರೂಅ' ಶಬ್ದವನ್ನು ನೋಡುವುದು.

ರೂವಿ. ವಿ: **[ರೂಪಿನ್]** ರೂಪವುಳ್ಳವನು

ರೂವಿ. ಪುಂಸ್ತ್ರೀ: [ದೇ] ಎಕ್ಕದ ಗಿಡ,(ಪಣ್ಣ)

ರೂಸ. ಅಕ: **[ರುಷ್]** ಕೋಪಿಸಿಕೊಳ್ಳು, ಸಿಟ್ಟಿಗೇಳು. **–'ರೂಸಇ'**

ರೂಸಣ. ನ: [ರೋಷಣ] ರೋಷ, ಕೋಪ(ಗಾ), ವಿ: ಕೋಪಮಾಡಿಕೊಳ್ಳುವವನು, ಕೋಪಿಷ್ಠ
ರೂಸಿಅ. ವಿ: [ರುಷ್ಟ] ರೋಷದಿಂದ ಕೂಡಿದ(ಸುಖ),
ರೇ. ಅ: [ರೇ] ಪರಿಹಾಸ, ನಿಂದೆ, ಸಂಭಾಷಣೆ, ಆಕ್ಷೇಪ, ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ರೇಅ. ಪು: [ರೇತಸ್] ವೀರ್ಯ, ಶುಕ್ರ
ರೇಅವ. ಸಕ: [ಮುಚ್] ತ್ಯಜಿಸು, ಬಿಡು
ರೇಆವಿಅ. ವಿ: [ದೇ. ರೇಚಿತ] ಶೂನ್ಯಗೊಳಿಸಲ್ಪಟ್ಟ, ಇಲ್ಲವಾಗಿಸಲಾದ(ದೇ), ಖಾಲಿಮಾಡಲ್ಪಟ್ಟ
ರೇಆ. ಸ್ತ್ರೀ: [ರೈ] ಧನ, ಸಂಪತ್ತು, ಚಿನ್ನ, ಹೊನ್ನು
ರೇಇಅ. ವಿ: [ದೇ] ಖಾಲಿ ಮಾಡಿಸಲ್ಪಟ್ಟ, ಇಲ್ಲವಾಗಿಸಲ್ಪಟ್ಟ
ರೆಂಕಿಅ. ವಿ: [ದೇ] ಆಕ್ಷೇಪಿಸಲ್ಪಟ್ಟ, ತಡೆಹಿಡಿಯಲ್ಪಟ್ಟ, ಲೀನ, ಸೇರಿಕೊಂಡಿರುವ, ನಾಚಿದ(ದೇ)
ರೇಕಾರ. ಪು: [ರೇಕಾರ] 'ರೇ' ಎನ್ನುವ ಶಬ್ದ
ರೆಟ್ಟ. 'ರಿಟ್ಟ' ಶಬ್ದವನ್ನು ನೋಡುವುದು.
ರೇಣಾ. ಸ್ತ್ರೀ: [ರೇಣಾ] ಮಹರ್ಷಿ ಸ್ಥೂಲಭದ್ರನ ಒಬ್ಬ ಸೋದರಿ. ಒಬ್ಬ ಜೈನ ಸಾಧ್ವಿ
ರೇಣಿ. ಪುಂಸ್ತ್ರೀ: [ದೇ] ಕೆಸರು, ಪಂಕ
ರೇಣು. ಪುಂಸ್ತ್ರೀ: [ರೇಣು] ಧೂಳು, ರಜ, ಪರಾಗ(ಸ್ವಪ್ನ)
ರೇಣುಯಾ. ಸ್ತ್ರೀ: [ರೇಣುಕಾ] ಒಂದು ಸುಗಂಧ ದ್ರವ್ಯ, ಪರಶುರಾಮನ ತಾಯಿ ಮತ್ತು ಜಮದಗ್ನಿ ಮಹರ್ಷಿಯ ಹೆಂಡತಿ
ರೇಭ. ಪು: [ರೇಫ] 'ರ' ಅಕ್ಷರ, ವಿ: ದುಷ್ಟ, ಅಧಮ, ನೀಚ, ಕ್ರೂರಿ, ನಿರ್ದಯಿ, ಜಿಪುಣ, ಬಡವ
ರೇರಿಜ್ಜ. ಅಕ: [ರಾರಾಜ್ಯ] ಅತಿಶಯವಾಗಿ ಶೋಭಿಸು, ಅತಿಯಾಗಿ ಹೊಳೆ
ರೆಲ್ಲ. ಸಕ: [ಪ್ಲಾವಯ್] ನೀರಿನಲ್ಲಿ ತೋಯಿಸು, ಸ್ನಾನಮಾಡಿಸು, ಸಿಂಪಡಿಸು
ರೆಲ್ಲಿ. ಸ್ತ್ರೀ: [ದೇ] ಪ್ರವಾಹ, ಸ್ರೋತ,
ರೇವಇನಕ್ಖತ್ತ. ಪು: [ರೇವತೀನಕ್ಷತ್ರ] ಆರ್ಯ ನಾಗಹಸ್ತಿಯ ಶಿಷ್ಯ ಮತ್ತು ಜೈನಮುನಿ
ರೇವಇಯ. ಪು: [ರೈವತಿಕ] ರೈವತ ಸ್ವರ
ರೇವಇಯ. ನ: [ರೇವತಿಕ] ಒಂದು ಉದ್ಯಾನವನದ ಹೆಸರು.
ರೇವಇಆ. ಸ್ತ್ರೀ: [ರೇವತಿಕಾ] ಒಂದು ಭೂತ–ಗ್ರಹವಿಶೇಷ
ರೇವಈ. ಸ್ತ್ರೀ: [ರೇವತೀ] ಬಲರಾಮನ ಹೆಂಡತಿ, ಒಬ್ಬ ಶ್ರಾವಿಕೆಯ ಹೆಸರು(ಠಾ), ಒಂದು ನಕ್ಷತ್ರ.
ರೇವಈ. ಸ್ತ್ರೀ: [ದೇ. ರೇವತೀ] ಮಾತೃಕೆ, ದೇವಿ(ದೇ)
ರೇವಂತ. ಪು: [ರೇವಂತ] ಸೂರ್ಯನ ಒಬ್ಬ ಮಗ, ಒಬ್ಬ ದೇವ(ಸುಪಾ)
ರೇವಜ್ಜಿಅ. ವಿ: [ದೇ] ನಿಂದಿಸಲ್ಪಟ್ಟ
ರೇವಣ. ಪು: [ರೇವಣ] ವ್ಯಕ್ತಿ–ವಾಚಕ ಹೆಸರು, ಒಂದು ಕಾವ್ಯದ ಕರ್ತೃ
ರೇವಯ. ನ: [ದೇ] ನಮಸ್ಕಾರ, ವಂದನೆ
ರೇವಯ. ಪು: [ರೈವತ] ಗಿರನಾರ ಪರ್ವತ(ಣಾಯಾ),
ರೇವಲಿಆ. ಸ್ತ್ರೀ: [ದೇ] ಧೂಳಿನ ಸುಳಿ, ಮರಳಿನ ಸುಳಿ
ರೇವಾ. ಸ್ತ್ರೀ: [ರೇವಾ] ನರ್ಮದಾ ನದಿ(ಪಾಅ)
ರೇಸಣಿಆ}. ಸ್ತ್ರೀ: [ದೇ] ಒಂದು ಬಗೆಯ ಕಂಚಿನ
ರೇಸಣೀ}. ಪಾತ್ರೆ, ಕಣ್ಣನ್ನು ಕಿರಿದಾಗಿಸುವುದು,
ರೇಸಮ್ಮಿ. 'ರೇಸಿಮ್ಮಿ' ಶಬ್ದವನ್ನು ನೋಡುವುದು.
ರೇಸಿ(ಅಪ). 'ರೇಸಿಂ' ಶಬ್ದವನ್ನು ನೋಡುವುದು.
ರೇಸಿಅ. ವಿ: [ದೇ] ಕತ್ತರಿಸಲ್ಪಟ್ಟ, ಸೀಳಲ್ಪಟ್ಟ,
ರೇಸಿಂ}.(ಅಪ).ಅ: [ದೇ] ಸಲುವಾಗಿ, ಓಸ್ಕರ, –ಗಾಗಿ
ರೇಸಿಮ್ಮಿ}.
ರೇಹ. ಅಕ: [ರಾಜ್] ಹೊಳೆ, ಪ್ರಕಾಶಿಸು, ಬೆಳಗು. –'ರೇಹಇ'.
ರೇಹಾ. ಸ್ತ್ರೀ: [ರೇಖಾ] ಗೆರೆ, ರೇಖೆ(ಓಘ). ಸಾಲು, ಪಂಕ್ತಿ, ಒಂದು ಛಂದಸ್ಸು
ರೇಹಿಅ. ನ: [ದೇ] ಕತ್ತರಿಸಿದ ಬಾಲ.
ರೇಹಿಅ. ವಿ: [ರಾಜಿತ] ಶೋಭಿತ
ರೇಹಿರ. ವಿ: [ರೇಖಾವತ್] ಗೆರೆ ಉಳ್ಳ, ರೇಖೆಯಿಂದ ಕೂಡಿದ
ರೇಹಿರ}. ವಿ: [ರಾಜಿತೃ] ಶೋಭಿಸುವ, ಹೊಳೆಯುವ
ರೇಹಿಲ್ಲ}.
ರೇಹಿಲ್ಲ. 'ರೇಹಿರ=ರೇಖಾವತ್' ಶಬ್ದವನ್ನು ನೋಡುವುದು.
ರೋಅ. 'ರುಅ=ರುದ್' ಶಬ್ದವನ್ನು ನೋಡುವುದು. 'ರೋಅಇ' ವ. ಕೃ: 'ರೋಅಂತ'
ರೋಅ. 'ರುಚ್ಚ=ರುಚ್' ಶಬ್ದವನ್ನು ನೋಡುವುದು.
ರೋಅ. ಸಕ: [ರೋಚಯ್] ರುಚಿಸು, ಇಷ್ಟಪಡು, ಬಯಸು, ನಿರ್ಣಯಿಸು
ರೋಅ. ಪು: [ರೋಚ್] ರುಚಿ

ರೋಅ. ಪು: [ರೋಗ] ಕಾಯಿಲೆ(ಪಾಅ)
ರೋಅಗ.ವಿ: [ರೋಚಕ] ರುಚಿಯನ್ನುಂಟು ಮಾಡುವ, ಸಂಯಕ್ತ್ವದ ಒಂದು ಭೇದ
ರೋಅಣ. ನ: [ರೋದನ] ಅಳು, ಅಳುವುದು
ರೋಅಣ. ಪು: [ರೋಚನ] ಒಂದು ದಿಗ್ಗಜಗಳ ಗುಂಪು. ನ: ಗೋರೋಚನ(ಗಉಡ)
ರೋಅಣಿಆ. ಸ್ತ್ರೀ: [ದೇ] ಡಾಕಿನಿ, ಸ್ತ್ರೀ–ಭೂತ
ರೋಅತ್ತಅ.'ರೋಅ=ರುದ್' ಶಬ್ದವನ್ನು ನೋಡುವುದು.
ರೋಆವಿಅ. ವಿ: [ರೋದಿತ] ಅಳಿಸಲ್ಪಟ್ಟ, ಅಳುವಂತೆ ಮಾಡಲ್ಪಟ್ಟ(ಗಾ)
ರೋಇ. ವಿ: [ರೋಗಿನ್] ರೋಗವುಳ್ಳವನು, ಕಾಯಿಲೆಯವನು
ರೋಇ. 'ರುಇ=ರುಚ್' ಶಬ್ದವನ್ನು ನೋಡುವುದು.
ರೋಇಅ. ವಿ: [ರೋಚಿತ] ಇಷ್ಟ ಪಟ್ಟ, ಮಾಡಲು ಇಚ್ಛಿಸಿದ(ಭಗ, ತಾ)
ರೋಇರ. ವಿ: [ರೋದಿತೃ] ಅಳುವವನು(ಗಾ)
ರೊಂಕಣ. ವಿ: [ದೇ] ಬಡವ, ದರಿದ್ರ(ದೇ)
ರೊಂಚ. ಸಕ: [ಪಿಷ್] ಬೀಸು
ರೊಕ್ಕಅ. ವಿ: [ದೇ] ಸೇಚನೆ ಮಾಡಲ್ಪಟ್ಟ, ಸಿಂಪಡಿಸಲ್ಪಟ್ಟ
ರೊಕ್ಕಣಿ}. ವಿ: [ದೇ] ಕೊಂಬುಳ್ಳ, ಕೊಂಬನ್ನು
ರೊಕ್ಕಣಿಅ.}. ಹೊಂದಿರುವ, ನಿರ್ದಯಿ, ನಿಷ್ಕರುಣಿ, ಕ್ರೂರಿ(ದೇ)
ರೋಗ. ಪು: [ರೋಗ] ಕಾಯಿಲೆ, ವ್ಯಾಧಿ(ಉವಾ), ಒಬ್ಬ ಬ್ರಾಹ್ಮಣ ಜಾತಿಯ ಶ್ರಾವಕ
ರೋಗಿ. ವಿ: [ರೋಗಿನ್] ರೋಗಿ, ಕಾಯಿಲೆ ಮನುಷ್ಯ
ರೋಗಿಅ. ವಿ: [ರೋಗಿಕ, –ತ] ಮೇಲಿನ ಶಬ್ದವನ್ನು ನೋಡುವುದು.
ರೋಗಿಣಿಆ. ಸ್ತ್ರೀ: [ರೋಗಿಣಿಕಾ] ರೋಗದ ಕಾರಣದಿಂದಾಗಿ ತೆಗೆದುಕೊಳ್ಳಲಾಗುವ ದೀಕ್ಷೆ
ರೋಗಿಲ್ಲ. 'ರೋಗಿ' ಶಬ್ದವನ್ನು ನೋಡುವುದು.
ರೋಘಸ. ವಿ: [ದೇ] ಬಡವ, ದರಿದ್ರ.
ರೊಚ್ಚ. 'ರೊಂಚ' ಶಬ್ದವನ್ನು ನೋಡುವುದು.
ರೊಜ್ಝ. ಪು: [ದೇ] 'ಋಷ್ಯ' ಎಂಬ ಒಂದು ಪಶು–ವಿಶೇಷ(ದೇ)
ರೊಟ್ಟ. ಪುಂನ: [ದೇ] ಅಕ್ಕಿ, ಜೋಳ ಮುಂತಾದವುಗಳ ಹಿಟ್ಟು(ಪಿಫ)
ರೊಟ್ಟಗ. ಪು; [ದೇ] ರೊಟ್ಟಿ
ರೋಡ. ಸಕ: [ದೇ] ತಡೆ, ಅಡ್ಡಿಪಡಿಸು, ಅವಮಾನಿಸು, ವ್ಯಗ್ರಗೊಳಿಸು(ಉಪ)
ರೋಡ. ನ: [ದೇ] ಮನೆಯ ಪ್ರಮಾಣ, ಮನೆಯ ಮಾನದಂಡ, ಮನೆಯ ಮರ್ಯಾದೆ
ರೋಡೀ. ಸ್ತ್ರೀ: [ದೇ] ಇಚ್ಛೆ, ಅಭಿಲಾಷೆ, ಗಾಯಾಳುವಿನ ಪಲ್ಲಕ್ಕಿ, ಶಿಬಿಕೆ(ದೇ)
ರೊತ್ತವ್ವ. 'ರುಅ=ರುದ್' ಶಬ್ದವನ್ನು ನೋಡುವುದು.
ರೊದ್ದ. ಪು: [ರೌದ್ರ] ಅಹೋರಾತ್ರದ ಮೊದಲ ಮುಹೂರ್ತ, ಮೂರನೇ ಬಲದೇವ ಮತ್ತು ವಾಸುದೇವನ ತಂದೆಯಾದ ಒಬ್ಬ ದೊರೆ (ತಾ), ನವರಸಗಳಲ್ಲಿ ಒಂದಾದ ರೌದ್ರ. ವಿ: ದಾರುಣ, ಭಯಕರ(ತಾ). **ನ:** ಹಿಂಸೆಯೇ ಮೊದಲಾದ ಕ್ರೂರ ಕರ್ಮಗಳ ಬಗೆಗಿನ ಆಲೋಚನೆ (ಔಪ).
ರೊದ್ದ. ಪುಂ: [ರುದ್ರ] ಅಹೋರಾತ್ರದ ಮೊದಲ ಮುಹೂರ್ತ. **'ರುದ್ದ=ರುದ್ರ'** ಶಬ್ದವನ್ನು ನೋಡುವುದು.
ರೊದ್ಧ. ವಿ: [ದೇ] ಗಿಡುಗ, **ನ:** ಮಲ.
ರೋಮ. ಪುಂನ: [ರೋಮನ್] ಕೂದಲು(ಔಪ). **–ಕೂವ. ಪು:** [–ಕೂಪ] ಕೂದಲು ಹುಟ್ಟುವ ಗುಳಿ (ಣಾಯಾ), ರೋಮ ರಂಧ್ರ ಒಂದು
ರೋಮ. ನ: [ರೋಮ] ಊಟದಲ್ಲಿಯ ಉಪ್ಪು
ರೋಮಂಚ. ಪು: [ರೋಮಾಂಚ] ಭಯ ಇಲ್ಲವೆ ಹರ್ಷದಿಂದ ರೋಮಗಳು ನಿಮಿರಿ ನಿಲ್ಲುವುದು (ಕುಮಾ)
ರೋಮಂಚಇಅ}. ವಿ: [ರೋಮಾಂಚಿತ] ಪುಲಕಿತ,
ರೋಮಂಚಿಅ}. ರೋಮಗಳು ನಿಮಿರಿನಿಂತವನು
ರೋಮಂಥ. ಪು: [ರೋಮಂಥ] ಮೆಲುಕು ಹಾಕುವುದು
ರೋಮಂಥ} ಅಕ: [ರೋಮಂಥಯ್] ಮೆಲುಕುಹಾಕು.
ರೋಮಂಥಾಅ}. **'ರೋಮಂಥಇ'. ವ.ಕೃ:** **ರೋಮಂಥಮಾಣ**
ರೋಮಗ}. ಪು: [ರೋಮಕ] ಅನಾರ್ಯ ದೇಶವಾದ
ರೋಮ}. ರೋಮ್ ದೇಶ. ರೋಮ್‌ನಲ್ಲಿ ವಾಸಿಸುವವರು
ರೋಮಯ. ಪು: [ರೋಮಜ] ಕೂದಲಿನ ರೆಕ್ಕೆಯುಳ್ಳ ಹಕ್ಕಿ
ರೋಮರಾಇ. ಸ್ತ್ರೀ: [ದೇ] ಜಘನ, ಕಟಿಪ್ರದೇಶ

ರೋಮಲಯಾಸಯ. ನ: [ದೇ] ಹೊಟ್ಟೆ, ಉದರ
ರೋಮಸ. ವಿ: [**ರೋಮಶ**] ಮೈಯಲ್ಲಿ ಹೆಚ್ಚು ರೋಮವುಳ್ಳ, **ಪು:** ಟಗರು
ರೋಮೂಸಲ. ನ: [ದೇ] ಜಘನ, ಕಟಿಪ್ರದೇಶ
ರೋರ. **ಪು:** [**ರೋರ**] ನಾಲ್ಕನೆಯ ನರಕ-ಭೂಮಿಯ ಒಂದು ನರಕಾವಾಸ(ಠಾ).
ರೋರ. ವಿ: [ದೇ] ಬಡವ, ದರಿದ್ರ(ಪಾಅ)
ರೋರು. **ಪು:** [**ರೋರು**] ಏಳನೇ ನರಕ-ಭೂಮಿಯ ಒಂದು ನರಕಾವಾಸ
ರೋರುಅ. **ಪು:** [**ರೋರುಕ, ರೌರವ**] ರತ್ನ-ಪ್ರಭಾ ಎಂಬ ನರಕದ ಎರಡನೇ ನರಕಾವಾಸ. ರತ್ನ-ಪ್ರಭಾದ ೧೩ನೇ ನರಕೇಂದ್ರಕ, ಏಳನೇ ನರಕ-ಭೂಮಿಯ ಒಂದು ನರಕಾವಾಸ. ನಾಲ್ಕನೇ ನರಕ-ಭೂಮಿಯ ಒಂದು ನರಕಾವಾಸ.
ರೋಲ. **ಪು:** [ದೇ] ಕಲಹ, ಜಗಳ. ಶಬ್ದ, ಕೋಲಾಹಲದ ಶಬ್ದ(ಸುಪಾ)
ರೋಲಂಬ. **ಪು:** [ದೇ. **ರೋಲಂಬ**] ಭ್ರಮರ, ದುಂಬಿ. ಒಂದು
ರೋಲಾ. ಸ್ತ್ರೀ: [**ರೋಲಾ**] ಒಂದು ಛಂದಸ್ಸು
ರೋವ. '**ರುಅ=ರುದ್**' ಶಬ್ದವನ್ನು ನೋಡುವುದು. –'**ರೋವಇಯ**', ವ. ಕೃ: '**ರೋ ವಂತ**
ರೋವ. **ಪು;** [ದೇ. **ರೋಪ**] ಗಿಡ, ಕಂಟಿ
ರೋವಣ. ನ: [**ರೋಪಣ**] ಬೀಜ ಬಿತ್ತುವುದು,
ರೋವಣ. ನ: [**ರೋದನ**] ಅಳುವುದು, ಅಳು.
ರೋವಾವಿಅ. '**ರೋಆವಿಅ**' ಶಬ್ದವನ್ನು ನೋಡುವುದು.
ರೋವಿಅ. ವಿ: [**ರೋಪಿತ**] ನೆಡಲ್ಪಟ್ಟ, ನಾಟಿಮಾಡಲ್ಪಟ್ಟ, ಬಿತ್ತಲಾದ. ಸ್ಥಾಪಿಸಲ್ಪಟ್ಟ, ಇರಿಸಲ್ಪಟ್ಟ
ರೋವಿಂದಯ. ನ: [ದೇ] ಒಂದು ಬಗೆಯ ಗಾನ(ಠಾ)
ರೋವಿರ. '**ರೋಇರ**' ಶಬ್ದವನ್ನು ನೋಡುವುದು.
ರೋವಿರ. ವಿ: [**ರೋಪಯಿತೃ**] ಬಿತ್ತುವವನು, ನೆಡುವವನು
ರೋಸ. **ಪು:** [**ರೋಷ**] ಕೋಪ, ಸಿಟ್ಟು(ಹೇ). –**ಇತ್ತ, ರೋಸಾಇಂತ.** ವಿ: [–**ವತ್**] ರೋಷವುಳ್ಳವನು
ರೋಸಣ. ವಿ: [**ರೋಷಣ**] ಕೋಪಗೊಳ್ಳುವವನು, ಸಿಟ್ಟಿಗೇಳುವವನು(ಉಪ).
ರೋಸವಿಅ. ವಿ: [**ರೋಷಿತ**] ಕೋಪಬರಿಸಲ್ಪಟ್ಟ, ಕುಪಿತಗೊಳಿಸಲಾದ(ಪಉಮ)
ರೋಸಾಣ. ಸಕ: [**ಮೃಜ್**] ತೊಳೆ, ಸ್ವಚ್ಛಗೊಳಿಸು. '**ರೋಸಾಣಇ**'
ರೋಸಾಣಿಅ. ವಿ: [**ಮೃಷ್ಟ**] ಸ್ವಚ್ಛಗೊಳಿಸಲ್ಪಟ್ಟ, ತೊಳೆಲ್ಪಟ್ಟ
ರೋಸಿಅ. '**ರೋಸವಿಅ**' ಶಬ್ದವನ್ನು ನೋಡುವುದು.
ರೋಹ. **ಅಕ:** [**ರುಹ್**] ಹುಟ್ಟು, ಬೆಳೆ
ರೋಹ. '**ರುಂಧ**' ಶಬ್ದವನ್ನು ನೋಡುವುದು.
ರೋಹ. **ಪು:** [**ರೋಧ**] ಸೇನೆಯು ನಗರವನ್ನು ಸುತ್ತುವರಿಯುವುದು, ಮುತ್ತಿಗೆ, ಆವರಿಸುವುದು, ಅಡ್ಡಿಪಡಿಸು, ತಡೆ, ಬಂಧನ
ರೋಹ. **ಪು:** [**ರೋಧಸ್**] ದಡ, ತಟ(ಪಾಅ)
ರೋಹ. **ಪು:** [**ರೋಹ**] ಒಬ್ಬ ಜೈನ ಮುನಿ, ಗಾಯದ ಒಣಗುವಿಕೆ, ವಿ: ಬೆಳೆಯುವವನು, ಬೆಳೆ ತೆಗೆಯುವವನು
ರೋಹ. **ಪು:** [ದೇ] ಪ್ರಮಾಣ, ರುಜುವಾತು, ಅಳತೆ, ನಮಸ್ಕರಿಸುವುದು, ಬಗ್ಗುವುದು, ಬಾಣ(ದೇ)
ರೋಹಗ. ವಿ: [**ರೋಧಕ**] ಮುತ್ತಿಗೆ ಹಾಕುವವನು, ಅಡ್ಡಿಪಡಿಸುವವನು
ರೋಹಗ. '**ರೋಹ= ರೋಧ**' ಶಬ್ದವನ್ನು ನೋಡುವುದು.
ರೋಹಗ. **ಪು:** [**ರೋಹಕ**] ಒಬ್ಬ ನಟನ ಮಗ(ಪ)
ರೋಹಗುತ್ತ. **ಪು:** [**ರೋಹಗುಪ್ತ**] ಒಬ್ಬ ಜೈನಮುನಿ, ತ್ರೈರಾಶಿಕ ಮತದ ಪ್ರವರ್ತಕ ಆಚಾರ್ಯ(ವಿಶೇ)
ರೋಹಣ. ನ: [**ರೋಧನ**] ತಡೆ, ಅಡ್ಡಿ, ವಿ: ತಡೆಯುವವನು
ರೋಹಣ. ನ: [**ರೋಹಣ**] ಹತ್ತುವುದು(ಸುಪಾ), ಬೆಳೆಯುವುದು, ಹುಟ್ಟುವುದು, **ಪು:** ಒಂದು ಪರ್ವತ ಒಂದು ದಿಗ್ಗಜ.
ರೋಹಿಅ.(ದೇ). '**ರೋಜ್ಝ**' ಶಬ್ದವನ್ನು ನೋಡುವುದು.
ರೋಹಿಅ. ವಿ: [**ರೋಧಿತ**] ಮುತ್ತಿಗೆ ಹಾಕಲ್ಪಟ್ಟ, ಅಡ್ಡಿಪಡಿಸಲ್ಪಟ್ಟ
ರೋಹಿಅ. ವಿ: [**ರೋಹಿತ**] ಒಣಗಿಸಲ್ಪಟ್ಟ(ಉಪ). **ಪು:** ಒಂದು ದ್ವೀಪ, **ಪು:** ಮೀನು, ನ: ಒಂದು ಬಗೆಯ ತೃಣ(ಹಲ್ಲು). ಒಂದು ಶಿಖರ(ಠಾ).
ರೋಹಿಅಂಸ. **ಪು:** [**ರೋಹಿತಾಂಶ**] ಒಂದು ದ್ವೀಪ.
ರೋಹಿಅಂಸ–.} ಸ್ತ್ರೀ: [**ರೋಹಿತಾಂಶಾ**] ಒಂದು ನದಿ.
ರೋಹಿಅಂಸಾ}. –**ಪವಾಯ.** **ಪು:** [–**ಪ್ರಪಾತ**] ಒಂದು ಜಲಾಶಯ

ರೋಹಿಅಪ್ಪವಾಯ. ಪು: [**ರೋಹಿತಾಪ್ರಪಾತ**] ಒಂದು ಜಲಾಶಯ, ಸರೋವರ

ರೋಹಿಆ. ಸ್ತ್ರೀ: [**ರೋಹಿತ್, ರೋಹಿತಾ**] ಒಂದು ನದಿ.

ರೋಹಿಂಸಾ. ಪು: [**ರೋಹಿದಂಶಾ**] ಒಂದು ನದಿ

ರೋಹಿಣೆಅ. ಪು: [**ರೌಹಿಣೇಯ**] ಒಬ್ಬ ಕುಖ್ಯಾತ ಕಳ್ಳನ ಹೆಸರು, ಬಲರಾಮ

ರೋಹಿಣೀ. ಸ್ತ್ರೀ: [**ರೋಹಿಣೀ**] ಒಂದು ನಕ್ಷತ್ರ, ಕಟುಕ-ರೋಹಿಣಿ(ಒಂದು ಔಷಧ ಸಸ್ಯ), ಭವಿಷ್ಯದಲ್ಲಿ ಭಾರತವರ್ಷದಲ್ಲಿ ಹುಟ್ಟಲಿರುವ ತೀರ್ಥಂಕರನಾಗಲಿರುವ ಒಬ್ಬ ಶ್ರಾವಿಕೆ, ೯ನೇ ಬಲದೇವನ ತಾಯಿಯ ಹೆಸರು, ಒಬ್ಬ ವಿದ್ಯಾದೇವಿ, ಶಕ್ರೇಂದ್ರನ ಪಟ್ಟದ ರಾಣಿ, ಸತ್ಪುರುಷನೆಂಬ ಕಿಂಪುರುಷೇಂದ್ರನ ಒಬ್ಬ ಅಗ್ರಮಹಿಷಿ, ಶಕ್ರೇಂದ್ರನ ಲೋಕಪಾಲನ ಒಬ್ಬ ಪಟ್ಟದ ರಾಣಿ, ಒಂದು ಬಗೆಯ ತಪಸ್ಸು, ಹಸು, **-ರಮಣ.** ಪು: [**-ರಮಣ**] ಚಂದ್ರ(ಪಾಅ).

ರೋಹೀಡಗ. ನ: [**ರೋಹೀತಕ**] ಒಂದು ನಗರ-ವಿಶೇಷ.

ಲ

ಲ. ಪು: [ಲ] ಅವರ್ಗೀಯ ವ್ಯಂಜನಗಳಲ್ಲಿ ಮೂರನೆಯ ವರ್ಣ. ಮೂರ್ಧ–ಸ್ಥಾನೀಯ ವ್ಯಂಜನ ವರ್ಣ
ಲಇ. ಅ: [ಲೇ] ಒಳ್ಳೇದು, ಸರಿ(ಭವಿ)
ಲಇ. 'ಲಯ=ಲಾ' ಶಬ್ದವನ್ನು ನೋಡುವುದು.
ಲಇಅ. ವಿ: [**ದೇ. ಲಗಿತ**] ಧರಿಸಿದ, ತೊಟ್ಟುಕೊಂಡಿರುವ
ಲಇಅಲ್ಲ. ಪು: [ದೇ] ಎತ್ತು, ವೃಷಭ(ದೇ)
ಲಇಆ. ಸ್ತ್ರೀ: [**ಲತಿಕಾ, ಲತಾ**] **'ಲಯಾ'** ಶಬ್ದವನ್ನು ನೋಡುವುದು(ಗಲುಡ)
ಲಇಣಾ}. ಸ್ತ್ರೀ: [ದೇ] ಲತೆ, ಬಳ್ಳಿ
ಲಇಣೀ}.
ಲಉಅ. ಪು: [**ಲಕುಚ**] ಗಜ ನಿಂಬೆ ಗಿಡ(ಔಪ)
ಲಉಡ.}. ಪು: [**ಲಕುಟ**] ಕಡ್ಡಿ, ದಂಡ, ಕೋಲು(ದೇ)
ಲಉಲ}
ಲಉಸ}. ಪು: [**ಲಕುಶ**] ಅನಾರ್ಯ ದೇಶ, **ಪುಂಸ್ತ್ರೀ:**
ಲಉಸಯ}. ಅನಾರ್ಯ ದೇಶದಲ್ಲಿ ವಾಸಿಸುವ ಮನುಷ್ಯ, **ಸ್ತ್ರೀ: –ಸಿಯಾ,**
ಲಂಕಾ. ಸ್ತ್ರೀ: [**ಲಂಕಾ**] ಪ್ರಸಿದ್ಧ ಲಂಕಾ ನಗರಿ, ಸಿಂಹಳದ ರಾಜದಾನಿ. **–ಲಯ. ವಿ:** [**–ಲಯ**] ಲಂಕೆಯ ನಿವಾಸಿ. **–ಸುಂದರೀ. ಸ್ತ್ರೀ:** [**–ಸುಂದರೀ**] ಹನುಮಂತನ ಒಬ್ಬ ಹೆಂಡತಿ(ಪಉಮ). **–ಸೋಗ. ಪು:** [**–ಶೋಕ**] ರಾಕ್ಷಸ ವಂಶದ ಒಬ್ಬ ರಾಜ. **–ಹಿವ. ಪು:** [**–ಧಿಪ**] ಲಂಕೆಯ ದೊರೆ. **–ಹಿವಇ. ಪು:** [**–ಧಿಪತಿ**] ಅದೇ ಅರ್ಥ.
ಲಂಕಾ. ಸ್ತ್ರೀ: [ದೇ] ಕೊಂಬೆ. ರೆಂಬೆ
ಲಂಖ}. ಪುಂಸ್ತ್ರೀ: [**ಲಂಖ**] ದೊಡ್ಡ ಬಿದಿರಿನ ಮೇಲೆ
ಲಂಖಗ}. ಆಟವಾಡುವ ಒಂದು ನಟ–ಜಾತಿ (ಣಾಯಾ). **ಸ್ತ್ರೀ:** –ಖಿಗಾ.
ಲಂಗಲ. ನ: [**ಲಾಂಗಲ**] ನೇಗಿಲು
ಲಂಗಲಿ. ಪು: [**ಲಾಂಗಲಿನ್**] ಬಲರಾಮ(ಕುಮಾ)
ಲಂಗಲಿ–.} ಸ್ತ್ರೀ: [**ಲಾಂಗಲೀ**] ನೀರು ಹಿಪ್ಪಲಿ ಬಳ್ಳಿ,
ಲಂಗಲೀ}. ಕೋಳಿ ಕುಟುಕನ ಗಿಡ
ಲಂಗಿಮ.ಪುಂಸ್ತ್ರೀ:[**ದೇ**] ಯೌವನ, ಹೊಸತನ,ಹಸನಾದ
ಲಂಗೂಲ. ನ: [**ಲಾಂಗೂಲ**] ಬಾಲ (ಪಾಅ)
ಲಂಗೂಲಿ. ವಿ: [**ಲಾಂಗೂಲಿನ್**] ಬಾಲವುಳ್ಳ, ಪಶು
ಲಂಗೋಲ. 'ಲಂಗೂಲ' ಶಬ್ದವನ್ನು ನೋಡುವುದು.
ಲಂಘ. ಸಕ: [**ಲಂಘ್, ಲಂಘಯ್**] ದಾಟು, ಹಾರು, ಅತಿಕ್ರಮಿಸು, ಉಪವಾಸಮಾಡು **'ಲಂಘಇ'. ವ. ಕೃ: 'ಲಂಘಂತ'**
ಲಂಘಣ. ನ: [**ಲಂಘನ**] ದಾಟುವಿಕೆ, ಮೀರುವುದು, ಅತಿಕ್ರಮಿಸುವುದು, ಉಪವಾಸ.
ಲಂಘಿ. ವಿ: [**ಲಂಘಿನ್**] ದಾಟುವವನು, ಮೀರುವವನು, ಉಪವಾಸ ಮಾಡುವವನು
ಲಂಘಿಅ. ವಿ: [**ಲಂಘಿತ**] ದಾಟಲ್ಪಟ್ಟ, ಮೀರಲ್ಪಟ್ಟ, ಅತಿಕ್ರಮಿಸಲ್ಪಟ್ಟ, ಹಾರಲ್ಪಟ್ಟ(ಗಲುಡ)
ಲಂಚ. ಪು: [ದೇ] ಕೋಳಿ(ದೇ)
ಲಂಚಾ. ಸ್ತ್ರೀ: [**ಲಂಚಾ**] ಲಂಚ, ರುಷುವತ್ತು(ಪಾಅ)
ಲಂಚಿಲ್ಲ. ವಿ: [**ಲಾಂಚಿಕ**] ಲಂಚ ತೆಗೆದುಕೊಳ್ಳುವವನು, ಲಂಚಕೋರ
ಲಂಛ. ಸಕ: [**ಲಂಛ್**] ಮುರಿ, ಒಡೆ, ಕಲಂಕಿತಗೊಳಿಸು
ಲಂಛ. ಪು: [**ಲಂಛ**] ಕಳ್ಳರ ಒಂದು ವರ್ಗ.
ಲಂಛಣ. ನ: [**ಲಾಂಛನ**] ಚಿಹ್ನೆ, ಗುರುತು(ಪಾಅ), ಹೆಸರು, ಗುರುತು ಹಾಕುವುದು, ಅಂಕಿಸುವುದು
ಲಂಛಿಅ. ವಿ: [**ಲಾಂಛಿತ**] ಗುರುತು ಮಾಡಲ್ಪಟ್ಟ, (ಪವ)
ಲಂಡುಅ. ವಿ: [**ದೇ. ಲಂಡಿತ**] ಮೇಲಕ್ಕೆ ಎಸೆಯಲ್ಪಟ್ಟ, ಮೇಲಕ್ಕೆ ಹಾರಿಸಲ್ಪಟ್ಟ(ಚಾರು)
ಲಂತಕ}. ಪು: [**ಲಾಂತಕ**] ಆರನೇ ದೇವಲೋಕ,
ಲಂತಗ}. ಒಂದು ದೇವ ವಿಮಾನ, ಆರನೇ
ಲಂತಯ}. ದೇವಲೋಕದ ನಿವಾಸಿ, ಆರನೇ ದೇವಲೋಕದ ಇಂದ್ರ
ಲಂದ. ಪುಂನ: [**ಲಂದ**] ಸಮಯ, ಕಾಲ
ಲಂದಯ. ಪುಂನ: [ದೇ] ಹಸುಗಳಿಗೆ ಮೇವನ್ನು ಹಾಕುವ ಪಾತ್ರೆ, ಬಾನಿ
ಲಂಪಡ. ವಿ: [**ಲಂಪಟ**] ಲೋಲುಪ, ಪರಸ್ತ್ರೀ ಲೋಲ, ಕಾಮುಕ, ದುರಾಸೆಯವನು(ಸುಪಾ)
ಲಂಪಾಗ. ಪು: [**ಲಂಪಾಕ**] ಒಂದು ದೇಶ(ಪಉಮ)
ಲಂಪಿಕ್ಖ. ಪು: [ದೇ] ಕಳ್ಳ, ಚೋರ
ಲಂಬ. ಸಕ: [**ಲಂಬ್**] ಆಶ್ರಯಿಸು, ಆಧರಿಸು, ನೆರವು ತೆಗೆದುಕೊಳ್ಳು, ಜೋತುಬೀಳು

ಲಂಬ. ವಿ: [**ಲಂಬ**] ಉದ್ದವಾದ, ದೀರ್ಘವಾದ

ಲಂಬ. ಪು: [**ದೇ**] ದನದ ಕೊಟ್ಟಿಗೆ

ಲಂಬಅ. ನ: [**ಲಂಬಕ**] ಹೊಕ್ಕುಳಿನವರೆಗೂ ಜೋತಾಡುತ್ತಿರುವ ಮಾಲೆ, ಸರ(ಸ್ವಪ್ನ)

ಲಂಬಣಾ. ಸ್ತ್ರೀ: [**ಲಂಬನಾ**] ಹಗ್ಗ

ಲಂಬಾ. ಸ್ತ್ರೀ: [**ದೇ**] ಬಳ್ಳಿ, ಲತೆ, ಕೂದಲು

ಲಂಬಾಲೀ. ಸ್ತ್ರೀ: [**ದೇ**] ಒಂದು ಬಗೆಯ ಹೂವು

ಲಂಬಿ. ವಿ: [**ಲಂಬಿನ್**] ನೇತಾಡುತ್ತಿರುವ, ತೂಗಾಡುತ್ತಿರುವ

ಲಂಬಿಅ}. ವಿ: [**ಲಂಬಿತ**] ನೇತಾಡುವ, ಜೋತಾಡುವ

ಲಂಬಿಅಯ}. (ಗಾ), ತೂಗುಹಾಕಲ್ಪಟ್ಟ, **ಪು:** ವಾನಪ್ರಸ್ಥದ ಒಂದು ಪ್ರಭೇದ(ಔಪ)

ಲಂಬಿರ. ವಿ: [**ಲಂಬಿತೃ**] ನೇತಾಡುವ, ಜೋಲಾಡುವ

ಲಂಬುಅ. ವಿ: [**ಲಂಬುಕ**] ಉದ್ದನೆಯ ಕೋಲಿನ ಕೊನೆಯಲ್ಲಿ ಕಟ್ಟಲ್ಪಟ್ಟಿರುವ ಮಣ್ಣಿನ ಹೆಂಟೆ, ಗೋಡೆಯಲ್ಲಿ ಸೇರಿರುವ ಇಟ್ಟಿಗೆಗಳ ಸಮೂಹ (ಮೃಚ್ಛ)

ಲಂಬುತ್ತರ. ಪುಂನ: [**ಲಂಬೋತ್ತರ**] ಕಾಯೋತ್ಸರ್ಗದ ಒಂದು ದೋಷ; ವಸ್ತ್ರವನ್ನು ನಾಭಿಯ ಮೇಲುಭಾಗದಲ್ಲಿ ಇಟ್ಟುಕೊಂಡು ಮತ್ತು ಮಂಡಿಯನ್ನು ವಸ್ತ್ರದ ಕೆಳಗಡೆ ಇಟ್ಟುಕೊಂಡು ಕಾಯೋತ್ಸರ್ಗ ಮಾಡುವುದು.

ಲಂಬೂಸ. ಪುಂನ: [**ದೇ. ಲಂಬೂಷ**] ಚೆಂಡಿನ ಆಕೃತಿಯ ಒಂದು ಆಭರಣ(ಪಉಮ)

ಲಂಬೋದರ}. ವಿ: [**ಲಂಬೋದರ**] ದೊಡ್ಡ ಹೊಟ್ಟೆ

ಲಂಬೋಯರ}. ಉಳ್ಳವನು(ಉವಾ), **ಪು:** ಗಣಪತಿ

ಲಂಭ. ಸಕ: [**ಲಭ್**] ಪಡೆದುಕೊಳ್ಳು, ಹೊಂದು

ಲಂಭ. ಸಕ: [**ಲಂಭಯ್**] ಪಡೆದುಕೊಳ್ಳುವಂತೆ ಮಾಡು,

ಲಂಭ. ಪು: [**ಲಾಭ**] ಪ್ರಾಪ್ತಿ, ಸಂಪಾದನೆ (ಪಉಮ), ಖರ್ಚು ಹೋಗಿ ಉಳಿದ ಆದಾಯ. **'ಲಾಹ=ಲಾಭ'** ಶಬ್ದವನ್ನು ನೋಡುವುದು.

ಲಂಭಣ. ಪು: [**ಲಂಭನ**] ಮೀನಿನ ಒಂದು ಜಾತಿ

ಲಂಭಿಅ. **'ಲಂಭ=ಲಭ್, ಲಂಭಯ್'** ಶಬ್ದವನ್ನು ನೋಡುವುದು.

ಲಂಭಿಅ. ವಿ: [**ಲಬ್ಧ**] ಪ್ರಾಪ್ತವಾದದ್ದು, ಪಡೆಯಲಾದ, ಹೊಂದಲಾದ

ಲಂಭಿಅ. ವಿ: [**ಲಂಭಿತ**] ಪ್ರಾಪ್ತವಾಗುವಂತೆ ಮಾಡಲಾದ, ಹೊಂದಿಸಲ್ಪಟ್ಟ(ಅಚ್ಚು)

ಲಕ್ಕುಡ. ನ: [**ದೇ. ಲಕುಟ**] ದಂಡ, ಕೋಲು, ಕಡ್ಡಿ

ಲಕ್ಖ. ಸಕ: [**ಲಕ್ಷಯ್**] ಲಕ್ಷಿಸು, ನೋಡು, ತಿಳಿ, ಗುರುತಿಸು. **'ಲಕ್ಖಇ'. 'ಲಕ್ಖ=ಲಕ್ಷ್ಯ'** ಶಬ್ದವನ್ನು ನೋಡುವುದು.

ಲಕ್ಖ. ಪುಂನ: [**ದೇ**] ದೇಹ, ಶರೀರ(ದೇ)

ಲಕ್ಖ. ಪುಂನ: [**ಲಕ್ಷ**] ಲಕ್ಷ(ಸಂಖ್ಯೆ), **–ಪಾಗ.** ಪು: [**–ಪಾಕ**] ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮಾಡಲಾಗುವ ಒಂದು ಬಗೆಯ ಅಡುಗೆ(ಠಾ)

ಲಕ್ಖ. ವಿ: [**ಲಕ್ಷ್ಯ**] ಗುರುತಿಸಲು ಅರ್ಹವಾದ (ಪಉಮ), ಯಾವುದರಿಂದ ತಿಳಿಯ ಬಹುದೋ ಅದು, ಲಕ್ಷಣ, ನೋಡಬಹುದಾದ, ತಿಳಿಯಲ್ಪಡುವ, ಗುರಿ, ಉದ್ದೇಶ

ಲಕ್ಖ–. **'ಲಕ್ಖಾ'** ಶಬ್ದವನ್ನು ನೋಡುವುದು.

ಲಕ್ಖಗ. ವಿ: [**ಲಕ್ಷಕ**] ಗುರುತಿಸುವವನು(ಪಉಮ)

ಲಕ್ಖಣ. ಪುಂನ: [**ಲಕ್ಷಣ**] ಇತರೆಯುದರಿಂದ ಭಿನ್ನವೆಂಬುದನ್ನು ಸೂಚಿಸುವ ಚಿಹ್ನೆ, ವಸ್ತು ಸ್ವರೂಪ(ಠಾ), ಚಿಹ್ನ, ವ್ಯಾಕರಣ–ಶಾಸ್ತ್ರ, ವ್ಯಾಕರಣವೇ ಮೊದಲಾದವುಗಳ ಸೂತ್ರ, ಪ್ರತಿಪಾದ್ಯ ವಿಷಯ, ಲಕ್ಷ್ಮಣ, ಸಾರಸ ಪಕ್ಷಿ, **–ಸಂವಚ್ಛರ.** ಪು: [**–ಸಂವತ್ಸರ**] ಒಂದು ಸಂವತ್ಸರ.

ಲಕ್ಖಣ. ಪು: [**ಲಕ್ಷ್ಮಣ**] ಶ್ರೀರಾಮನ ತಮ್ಮ ಮತ್ತು ಸುಮಿತ್ರೆ ಮಗ. **'ಲಖಮಣ'** ಶಬ್ದವನ್ನು ನೋಡುವುದು.

ಲಕ್ಖಣ. ನ: [**ಲಕ್ಷಣ**] ಕಾರಣ, ಹೇತು

ಲಕ್ಖಣಾ. ಸ್ತ್ರೀ: [**ಲಕ್ಷಣಾ**] ಶಬ್ದದ ಮೂರು ವೃತ್ತಿಗಳಲ್ಲಿ ಒಂದು: ಒಂದು ವಾಕ್ಯದಲ್ಲಿ ಬಳಸಲಾದ ಪದದ ಮುಖ್ಯಾರ್ಥಕ್ಕೆ ಬಾಧೆ ಉಂಟಾದಾಗ, ಮುಖ್ಯಾರ್ಥಕ್ಕೆ ಸಂಬಂಧಿಸಿದ ಬೇರೊಂದು ಅರ್ಥವನ್ನು ಕೊಡುವ ಶಬ್ದದ ವೃತ್ತಿ. ಒಂದು ಮಹಾ ಔಷಧಿ.

ಲಕ್ಖಣಾ. ಸ್ತ್ರೀ: [**ಲಕ್ಷ್ಮಣಾ**] ಎಂಟನೇ ತೀರ್ಥಂಕರನ ತಾಯಿ. ಅದೇ ಜನ್ಮದಲ್ಲಿ ಮುಕ್ತಿ ಹೊಂದಲಿರುವ ಶ್ರೀಕೃಷ್ಣನ ಒಬ್ಬ ಹೆಂಡತಿ, ಒಬ್ಬ ಅಮಾತ್ಯನ ಹೆಂಡತಿ.

ಲಕ್ಖಣೆಯ. ವಿ: [**ಲಾಕ್ಷಣಿಕ, ಲಾಕ್ಷಣ್ಯ**] ಲಕ್ಷಣಗಳನ್ನು ಬಲ್ಲವನು, ಲಕ್ಷಣದಿಂದ ಕೂಡಿದ

ಲಕ್ಖಮಣ}. **ಪು:** [**ಲಕ್ಷ್ಮಣ**] ವಿಕ್ರಮ ಶಕೆ ೧೨ನೇ
ಲಖಮಣ}. ಶತಮಾನದ ಒಬ್ಬ ಜೈನ ಮುನಿ ಮತ್ತು ಗ್ರಂಥಕಾರ(ಸುಪಾ).

ಲಕ್ಖಾ. **ಸ್ತ್ರೀ:** [**ಲಾಕ್ಷಾ**] ಅರಗು, **–ರುಣಿಯ.** **ವಿ:** [**–ರುಣಿತ**] ಅರಗಿನ ಬಣ್ಣ ಬಳಿಯಲ್ಪಟ್ಟ

ಲಕ್ಖಿಅ. **ವಿ:** [**ಲಕ್ಷಿತ**] ತಿಳಿಸಲ್ಪಟ್ಟ, ನೋಡಲ್ಪಟ್ಟ, ಗುರುತಿಸಲ್ಪಟ್ಟ(ಗಉಡ)

ಲಗ. **ನ:** [**ದೇ**] ಹತ್ತಿರ, ನಿಕಟ

ಲಗಂಡ. **ನ:** [**ಲಗಂಡ**] ಡೊಂಕಾದ ಮರದ ಕೊರಡು, **–ಸಾಇ.** **ವಿ:** [**–ಶಾಯಿನ್**] ಮರದ ಕೊರಡಿನ ಹಾಗೆ ನಿದ್ರಿಸುವವನು. **ಲಗಂಡಾಸಣ.** **ನ:** [**ಲಗಂಡಾಸನ**] ಒಂದು ಬಗೆಯ ಆಸನ.

ಲಗುಡ. **'ಲಉಡ'** ಶಬ್ದವನ್ನು ನೋಡುವುದು.

ಲಗ್ಗ. **ಸಕ:** [**ಲಗ್**] ಸೇರು, ಸಂಬಂಧ ಹೊಂದು, **ವ. ಕೃ:** **'ಲಗ್ಗಂತ'**

ಲಗ್ಗ. **ನ:** [**ದೇ**] ಚಿಹ್ನ, **ವಿ:** ಅಸಂಬದ್ಧ, ಪ್ರಕೃತಕ್ಕೆ ಸಂಬಂಧವಿಲ್ಲದ

ಲಗ್ಗ. **ನ:** [**ಲಗ್ನ**] ಮೇಷವೇ ಮೊದಲಾದ ರಾಶಿಗಳ ಉದಯ, **ವಿ:** ಸಂಬಂಧ ಹೊಂದಿರುವ, ಸೇರಿಕೊಂಡಿರುವ(ಪಾಅ) **ಪು:** ಹೊಗಳುಭಟ್ಟ, ಸ್ತುತಿಪಾಠಕ,

ಲಗ್ಗಣ. **ನ:** [**ಲಗನ**] ಸಂಗ, ಸಂಬಂಧ

ಲಗ್ಗಣಯ. **ಪು:** [**ಲಗ್ನಕ**] ಜಾಮೀನುದಾರ

ಲಗ್ಗೂಣ. **'ಲಗ್ಗ=ಲಗ್'** ಶಬ್ದವನ್ನು ನೋಡುವುದು.

ಲಘಿಮ. **ಪುಂಸ್ತ್ರೀ:** [**ಲಘಿಮನ್**] ಲಘುತ್ವ, ಲಾಘವ, ಅಣಿಮಾದಿ ಅಷ್ಟ ಸಿದ್ಧಿಗಳಲ್ಲಿ ಒಂದಾದ 'ಲಘಿಮಾ' ಶಕ್ತಿ. ಒಂದು ವಿದ್ಯಾ–ವಿಶೇಷ.

ಲಚಯ. **ನ:** [**ದೇ**] ತೃಣ–ವಿಶೇಷ,

ಲಚ್ಛ. **'ಲಕ್ಖ=ಲಕ್ಷ್ಯ'** ಶಬ್ದವನ್ನು ನೋಡುವುದು.

ಲಚ್ಛ–. **'ಲಭ'** ಶಬ್ದವನ್ನು ನೋಡುವುದು.

ಲಚ್ಛಣ. **'ಲಕ್ಖಣ=ಲಕ್ಷಣ'** ಶಬ್ದವನ್ನು ನೋಡುವುದು

ಲಚ್ಛಿ–}. **ಸ್ತ್ರೀ:** [**ಲಕ್ಷ್ಮೀ**] ಸಂಪತ್ತು, ವೈಭವ, ಹಣ,
ಲಚ್ಛೀ}. ಕಾಂತಿ, ಸೌಂದರ್ಯ, ಋದ್ಧಿಯೆಂಬ ಔಷಧ–ವಿಶೇಷ, ಕರಿಗಜ್ಜುಗದ ಗಿಡ, ಪ್ರೇಂಕಣ ಗಿಡ, ನೆಲದಾವರೆ, ಅರಿಶಿನ, ಮುತ್ತು, ಕಚೋರ ಎನ್ನುವ ಔಷಧ ದ್ರವ್ಯ. ಶೋಭೆ, ವಿಷ್ಣುವಿನ ಪತ್ನಿ(ಪಾಅ), ರಾವಣನ ಒಬ್ಬ ಹೆಂಡತಿಯ ಹೆಸರು(ಪಉಮ). ವಾಸುದೇವನ ತಾಯಿ, ಪುಂಡರೀಕವೆಂಬ ಸರೋವರದ ಅಧಿಷ್ಠಾತೃ ದೇವಿ(ಠಾ), ದೇವ–ಪ್ರತಿಮೆ, ಒಂದು ಛಂದಸ್ಸು. ಒಬ್ಬ ವ್ಯಾಪಾರಿಯ ಹೆಂಡತಿ. ಶಿಖರೀ ಪರ್ವತದ ಒಂದು ಶಿಖರ. **–ನಿಲಯ.** **ಪು:**[**–ನಿಲಯ**] ವಾಸುದೇವ. **–ಮಈ.** **ಸ್ತ್ರೀ:** [**–ಮತೀ**] ಆರನೇ ವಾಸುದೇವನತಾಯಿ. ೧೧ನೇ ಚಕ್ರವರ್ತಿಯ ಸ್ತ್ರೀ ರತ್ನ. **–ಮಂದಿರ.** **ನ:** [**–ಮಂದಿರ**] ಒಂದು ನಗರ. **–ವಇ.** **ಪು:** [**–ಪತಿ**] ಲಕ್ಷ್ಮೀಯ ಪತಿಯಾದ ನಾರಾಯಣ, **–ವಈ.** **ಸ್ತ್ರೀ:** [**–ವತೀ**] ದಕ್ಷಿಣ ರುಚಕದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ. **–ಹರ.** **ಪು:** [**–ಘರ**] ವಾಸುದೇವ. ಒಂದು ಛಂದಸ್ಸು. **ನ:** ಒಂದು ನಗರ

ಲಜುಕ(ಅಶೋ). **'ರಜ್ಜು=(ದೇ)'** ಶಬ್ದವನ್ನು ನೋಡುವುದು.

ಲಜ್ಜ. **ಅಕ:** [**ಲಜ್ಜ್**] ನಾಚಿಕೊಳ್ಳು, **–'ಲಜ್ಜಇ'**, **ವ ಕೃ:** **'ಲಜ್ಜಂತ'**

ಲಜ್ಜಣ}. **ನ:** [**ಲಜ್ಜನ**] ನಾಚಿಕೆ, ಲಜ್ಜೆ, **ವಿ:** ನಾಚಿಕೆ
ಲಜ್ಜಣಯ}. ಉಂಟುಮಾಡುವ, ಲಜ್ಜಾಕಾರಕ (ಸುಪಾ)

ಲಜ್ಜಾ. **ಸ್ತ್ರೀ:** [**ಲಜ್ಜಾ**] ನಾಚಿಕೆ, ಲಜ್ಜೆ, ಒಂದು ಛಂದಸ್ಸು, ಸಂಯಮ(ಔಪ)

ಲಜ್ಜಾಪಇತ್ತಅ(ಶೌ). **ವಿ:** [**ಲಜ್ಜಯಿತೃ**] ನಾಚುವವನು

ಲಜ್ಜಾಲು. **ವಿ:** [**ಲಜ್ಜಾಲು**] ನಾಚಿದವನು

ಲಜ್ಜಾಲು}. **ಸ್ತ್ರೀ:** [**ಲಜ್ಜಾಲು**] ಮುಟ್ಟಿದರೆ ಮುನಿ
ಲಜ್ಜಾಲುಆ}. ಎಂಬ ಬಳ್ಳಿ, ನಾಚುವ ಹೆಣ್ಣು
ಲಜ್ಜಾಲುಇಣೀ}.

ಲಜ್ಜಾಲುಇಣೀ. **ಸ್ತ್ರೀ:** [**ದೇ**] ಜಗಳಗಂಟಿ ಹೆಣ್ಣು

ಲಜ್ಜಾಲುಇರ}. **ವಿ:** ಲಜ್ಜೆಯ ಸ್ವಭಾವದವನು,
ಲಜ್ಜಾಲುರ}. ನಾಚುವವ, **ಸ್ತ್ರೀ:** –ರೀ

ಲಜ್ಜಾವ. **ಸಕ:** [**ಲಜ್ಜಯ್**] ನಾಚಿಸು, ನಾಚಿಕೆ ಉಂಟುಮಾಡು(ಶೌ)

ಲಜ್ಜಾವಣ. **ವಿ:** [**ಲಜ್ಜನ**] ನಾಚಿಸುವನು, ನಾಚುವಂತೆ ಮಾಡುವವನು(ಪಣ್ಣ)

ಲಜ್ಜಾವಿಯ. **ವಿ:** [**ಲಜ್ಜಿತ**] ನಾಚಿಕೊಂಡವನು(ಪಣ್ಣ)

ಲಜ್ಜಿಅ. **ವಿ:** [**ಲಜ್ಜಿತ**] ಲಜ್ಜೆಯಿಂದ ಕೂಡಿದ, **ನ:** ಲಜ್ಜೆ, ನಾಚಿಕೆ

ಲಜ್ಜಿರ. **ವಿ:**[**ಲಜ್ಜಿತೃ**] ಲಜ್ಜೆಯ ಸ್ವಭಾವದವನು, **ಸ್ತ್ರೀ:**–ರೀ

ಲಜ್ಜು. ಸ್ತ್ರೀ: [ರಜ್ಜು] ಹಗ್ಗ, ವಿ: ಹಗ್ಗದ ಹಾಗೆ ನೇರವಾದ, ಸರಳವಾದ
ಲಜ್ಜು. ವಿ: [ಲಜ್ಜಾವತ್] ಲಜ್ಜೆಯಿಂದ ಕೂಡಿದ, ಲಜ್ಜೆಯುಳ್ಳ(ಉತ್ತ)
ಲಜ್ಜು. '**ರಿಜ್ಜು=ರುಜು**' ಶಬ್ದವನ್ನು ನೋಡುವುದು.
ಲಜ್ಝ–. '**ಲಭ**' ಶಬ್ದವನ್ನು ನೋಡುವುದು.
ಲಟ್ಟಾ}. ನ: [ದೇ] ಖಸಖಸಿಯ ಎಣ್ಣೆ, ಕುಂಕುಮ
ಲಟ್ಟಯ}. ಕೇಸರಿ
ಲಟ್ವಾ. ಸ್ತ್ರೀ: [ಲಟ್ವಾ] ಹೊಂಗೆಮರ, ಕುಂಕುಮ ಕೇಸರಿ, ಗುಬ್ಬಚ್ಚಿ ಹಕ್ಕಿ, ದುಂಬಿ, ವಾದ್ಯ–ವಿಶೇಷ.
ಲಟ್ಠ. ವಿ: [ದೇ] ಅನ್ಯಾಸಕ್ತ, ಸುಂದರವಾದ, ರಮ್ಯವಾದ(ಪಾಅ), ಪ್ರಿಯವಾಗಿ ಮಾತನಾಡುವ, ಪ್ರಧನ, ಮುಖ್ಯ, **–ದಂತ. ಪು: [–ದಂತ]** ಒಬ್ಬ ಜೈನಮುನಿ, ಒಂದು ಅಂತರ್ ದ್ವೀಪ, ಆ ಅಂತರ್ ದ್ವೀಪದಲ್ಲಿ ಇರುವ ಮನುಷ್ಯ(ತಾ)
ಲಟ್ಠರೀ. ಸ್ತ್ರೀ: [ದೇ] ಸುಂದರ, ರಮಣೀಯ
ಲಟ್ಠೀ. ಸ್ತ್ರೀ: [ಯಷ್ಟಿ] ಕೋಲು, ದೊಣ್ಣೆ, ದಂಡ(ಔಪ)
ಲಟ್ಠಿಅ. ನ: [ದೇ] ಒಂದು ಖಾದ್ಯ–ವಿಶೇಷ
ಲಡಹ. ವಿ: [ದೇ] ರಮ್ಯವಾದ, ಸುಂದರವಾದ(ಗಉಡ), ಸುಕುಮಾರವಾದ, ಕೋಮಲವಾದ, ವಿದಗ್ಧ, ಚತುರ, ಪ್ರಧಾನ, ಮುಖ್ಯ(ಕುಮಾ)
ಲಡಹಕ್ಖಮಿಅ. ವಿ: [ದೇ] ಬೇರ್ಪಡಿಸಲ್ಪಟ್ಟ, ಒಡೆಯಲ್ಪಟ್ಟ
ಲಡಹಾ. ಸ್ತ್ರೀ: [ದೇ] ವಿಲಾಸವತಿ, ಬೆಡಗು, ಬಿನ್ನಾಣಗಳಿಂದ ಕೂಡಿದ ಅನುರಕ್ತೆ
ಲಡಾಲ. '**ಣಡಾಲ**' ಶಬ್ದವನ್ನು ನೋಡುವುದು.
ಲಡ್ಡಿಯ. ನ: [ದೇ] ಪ್ರೀತಿ(ಭವಿ)
ಲಡ್ಡುಅ}. ಪು: [ಲಡ್ಡುಕ] ಲಾಡು, ಮೋದಕ(ಗಾ)
ಲಡ್ಡುಗ}.
ಲಡ್ಡುಯಾರ. ವಿ: [ಲಡ್ಡುಕಕಾರ] ಲಾಡು ಮಾಡುವವನು
ಲಢ. ಸಕ: [ಸ್ಮೃ] ನೆನಪಿಸಿಕೊಳ್ಳು, ಸ್ಮರಿಸು, –'**ಲಢಇ.**' ವ. ಕೃ: '**ಲಢಂತ**'
ಲಢಿಅ. ವಿ: [ಸ್ಮೃತ] ನೆನಪಿಸಿಕೊಂಡ(ಪಾಅ)
ಲಣ್ಹ. ವಿ: [ಶ್ಲಕ್ಷ್ಣ] ನುಣುಪಾದ, ಸ್ನಿಗ್ಧವಾದ(ಸಮ), ಸ್ವಲ್ಪ, ನ: ಕಬ್ಬಿಣ
ಲತ್ತ. ವಿ: [ಲಪ್ತ, ಲಪಿತ] ಹೇಳಲ್ಪಟ್ಟ, ಕಥಿತ
ಲತ್ತಾ}. ಸ್ತ್ರೀ: [ದೇ] ಏಟು, ಹೊಡೆತ, ಸಂಗೀತ ವಾದ್ಯ
ಲತ್ತಿಆ}. (ತಾ)

ಲದಣ}.(ಮಾ). '**ರಯಣ=ರತ್ನ**' ಶಬ್ದವನ್ನು
ಲದನ}. ನೋಡುವುದು.
ಲದ್ದ್. ಸಕ: [ದೇ] ಭಾರ ಹೇರುವುದು
ಲದ್ದಣ. ನ: [ದೇ] ಭಾರವನ್ನು ಎಸೆಯುವುದು
ಲದ್ದೀ. ಸ್ತ್ರೀ: [ದೇ] ಆನೆ, ಕುದುರೆ ಮುಂತಾದವುಗಳ ಮಲ(ಸುಪಾ)
ಲದ್ಧ. ವಿ: [ಲಬ್ಧ] ಪ್ರಾಪ್ತ, ದೊರಕಿದ(ಭಗ)
ಲದ್ಧಿ. ಸ್ತ್ರೀ: [ಲಬ್ಧಿ] ಜ್ಞಾನವೇ ಮೊದಲಾದವುಗಳ ಆವಾರಕ ಕರ್ಮಗಳ ವಿನಾಶ ಮತ್ತು ಉಪಶಾಂತಿ(ವಿಸೇ), ಯೋಗದಿಂದ ಪ್ರಾಪ್ತವಾಗು ವಿಶಿಷ್ಟ ಶಕ್ತಿ ಹಿಂಸೆ, ಪ್ರಾಪ್ತಿ, ಲಾಭ, ಇಂದ್ರಿಯಗಳು ಮತ್ತು ಮನಸ್ಸಿನಿಂದ ಆಗುವ ವಿಜ್ಞಾನ, ಶೃತ ಜ್ಞಾನಗಳ ಉಪಯೋಗ. ಯೋಗ್ಯತೆ, **–ಪುಲಾಅ. ಪು: [–ಪುಲಾಕ]** ಪ್ರಾಪ್ತಿ–ವಿಶೇಷದಿಂದಕೂಡಿದ ಮುನಿ
ಲದ್ಧಿಅ. ವಿ: [ಲಬ್ಧ] ಪ್ರಾಪ್ತ, ದೊರೆತ
ಲದ್ಧಿಲ್ಲ. ವಿ: [ಲಬ್ಧಿಮತ್] ಲಬ್ಧಿ ಅಥವಾ ಪ್ರಾಪ್ತಿಯಿಂದ ಕೂಡಿದ
ಲದ್ಧುಂ}. ಇವೆರಡೂ '**ಲಭ**' ಶಬ್ದದ ಸಂ.ಕೃ.ರೂಪಗಳು
ಲದ್ಧೂಣ}.
ಲಪ್ಪಸಿಯಾ. ಸ್ತ್ರೀ: [ದೇ] ಕಡಿಮೆ ತುಪ್ಪದ ಸಿಹಿ ಸಜ್ಜಿಗೆ, ಹಲ್ವ
ಲಬ್ಭ. '**ಲಭ**' ಶಬ್ದದ ಕೃದಂತ ರೂಪ
ಲಭ. ಸಕ: [ಲಭ್] ಪಡೆದುಕೊಳ್ಳು, ದೊರಕಿಸಿಕೊಳ್ಳು,
ಲಯ. ಸಕ: [ಲಾ] ಸ್ವೀಕರಿಸು, –'**ಲಯಂತಿ**'. ವ.ಕೃ: '**ಲಯಂತ**'
ಲಯ. ನ: [ದೇ] ನವ ದಂಪತಿಗಳು ಪರಸ್ಪರರು ಒಬ್ಬರ ಹೆಸರನ್ನು ಇನ್ನೊಬ್ಬರು ಹೇಳುವ ಹಬ್ಬ.
ಲಯ. '**ಲವ=ಲವ**' ಶಬ್ದವನ್ನು ನೋಡುವುದು
ಲಯು. ಪು: [ಲಯು] ಸೇರಿಕೊಂಡಿರುವಿಕೆ, ಮನಸ್ಸಿನ ಸಾಮ್ಯಾವಸ್ಥೆ, ತಲ್ಲೀನತೆ, ಮಗ್ನತೆ, ಮರೆಯಾಗುವುದು, ವಿನಾಶ, ಜಗತ್ತಿನ ನಾಶಕಾಲ, ನೃತ್ಯ, ಗೀತ, ವಾದ್ಯ ಇವುಗಳ ಏಕತಾನ ರೂಪದ ಸಾಮರಸ್ಯ, ಛಂದಸ್ಸಿನಲ್ಲಿ ಸಮಾನವಾದ ಕಾಲದ ಅಂತರದಲ್ಲಿ ತಾಳಗಳು ಬೀಳುವುದು.

ಲಯ. ಪು: [**ಲಯ**] ತಂತಿಯ ಸ್ವನ, ಶಬ್ದ, **–ಸಮ. ನ:** [**–ಸಮ**] ಗೇಯ ಕಾವ್ಯದ ಒಂದು ಪ್ರಭೇದ.

ಲಯ–. '**ಲಯಾ**' ಶಬ್ದವನ್ನು ನೋಡುವುದು. **–ಹರಯ. ನ:** [**–ಗೃಹಕ**] ಲತಾಗೃಹ, ಲತಾಮಂಟಪ

ಲಯಂಗ. ನ: [**ಲತಾಂಗ**] ಒಂದು ಸಂಖ್ಯೆ: ೮೪ ಲಕ್ಷ ಪೂರ್ವ

ಲಯಣ. ವಿ: [**ದೇ**] ಕೃಶ, ತೆಳ್ಳನೆಯ, ಮೃದುವಾದ, ಕೋಮಲವಾದ, **ನ:** ಬಳ್ಳಿ, ಲತೆ

ಲಯಣ. ನ: [**ಲಯನ**] ಮರೆಯಾಗುವುದು, ಅಡಗಿಕೊಳ್ಳುವುದು(ವಿಸೇ), ಸ್ಥಿತಿ, ಇರುವಿಕೆ, '**ಲೇಣ**' ಶಬ್ದವನ್ನು ನೋಡುವುದು.

ಲಯಣೀ. ಸ್ತ್ರೀ: [**ದೇ**] ಲತೆ, ಬಳ್ಳಿ

ಲಯಾ. ಸ್ತ್ರೀ: [**ಲತಾ**] ಲತೆ, ಬಳ್ಳಿ(ಪಣ್ಣ), ಪ್ರಕಾರ, ಭೇದ, ಒಂದು ಬಗೆಯ ತಪಸ್ಸು, ಒಂದು ಸಂಖ್ಯಾವಿಶೇಷ: ೮೪ ಲಕ್ಷ ಲತಾಂಗಕ್ಕೆ ಪರಿಮಿತವಾದ ಸಂಖ್ಯೆ. ಕೋಲು, ದಂಡ, ಛಡಿ ಏಟು. **–ಜುದ್ಧ. ನ:** [**–ಉದ್ಧ**] ಒಂದು ಬಗೆಯ ಯುದ್ಧ. ಒಂದು ಬಗೆಯ ಯುದ್ಧಕಲೆ(ಔಪ).

ಲಯಾಪುರಿಸ. ಪು: [**ದೇ**] ಪದ್ಮಹಸ್ತವುಳ್ಳ ಹೆಣ್ಣಿನ ಚಿತ್ರಣ ಮಾಡುವ ಸ್ಥಳ.

ಲಲ. ಅಕ: [**ಲಲ್, ಲಡ್**] ಭೋಗ ವಿಲಾಸ ನಡೆಸು, ಮೋಜುಮಾಡು, ತೂಗಾಡು,ಜೋಕಾಲಿಯಾಡು, **–**'**ಲಲಇ**'. **ವ.ಕೃ:** '**ಲಲಂತ**'

ಲಲಣ. ಸ್ತ್ರೀ: [**ಲಲನಾ**] ಮಹಿಳೆ, ನಾರಿ, ಹೆಣ್ಣು (ಸುಪಾ)

ಲಲಾಡ. '**ಣಡಾಲ**' ಶಬ್ದವನ್ನು ನೋಡುವುದು.

ಲಲಾಮ. ನ: [**ಲಲಾಮನ್**] ಶ್ರೇಷ್ಠ, ಪ್ರಧಾನ, ಮುಖಂಡ(ಅಭಿ), ಆಭರಣ

ಲಲಿಅ. ನ: [**ಲಲಿತ**] ವಿಲಾಸ, ಲೀಲೆ(ಪಾಅ), ಶೃಂಗಾರಭಾವಕ್ಕೆ ಅನುಗುಣವಾದ ಅಂಗವಿನ್ಯಾಸ, ಪ್ರಸನ್ನತೆ, **ವಿ:** ಆಟದಲ್ಲಿ ಮಗ್ನನಾದ, ಸುಂದರವಾದ, ಮನೋಹರವಾದ, ಮಧುರವಾದ (ಔಪ), ಸುಕುಮಾರವಾದ, ಅಪೇಕ್ಷಿಸಲ್ಪಟ್ಟ, ಇಚ್ಛಿಸಿದ(ಣಾಯಾ), **–ಮಿತ್ತ. ಪು:** [**–ಮಿತ್ರ**] ಏಳನೇ ವಾಸುದೇವನ ಪೂರ್ವ ಜನ್ಮದ ಹೆಸರು (ಪಉಮ). **–ವಿತ್ಥರಾ. ಸ್ತ್ರೀ:** [**–ವಿಸ್ತರಾ**] ಆಚಾರ್ಯ ಹರಿಭದ್ರ ಸೂರಿ ರಚಿಸಿದ ಒಂದು ಜೈನ ಗ್ರಂಥ.

ಲಲಿಅಂಗ. ಪು: [**ಲಲಿತಾಂಗ**] ಒಬ್ಬ ರಾಜಕುಮಾರ

ಲಲಿಅಯ. ನ: [**ಲಲಿತಕ**] ಒಂದು ಛಂದಸ್ಸು

ಲಲಿಆ. ಸ್ತ್ರೀ: [**ಲಲಿತಾ**] ಒಬ್ಬ ಪುರೋಹಿತ ಮಹಿಳೆ

ಲಲ್ಲ. ವಿ: [**ದೇ**] ಆಸೆಉಳ್ಳವನು, ಅಪೇಕ್ಷೆ ಉಳ್ಳವನು, ಕೊರತೆಯಿಂದ ಕೂಡಿದ, ಅರೆಬರೆ

ಲಲ್ಲ. ವಿ: [**ಲಲ್ಲ**] ಅವ್ಯಕ್ತ ಶಬ್ದವುಳ್ಳ

ಲಲ್ಲಕ್ಕ. ವಿ: [**ಲಲ್ಲಕ್ಕ**] ಆರನೇ ನರಕ–ಭೂಮಿಯ ಒಂದು ನರಕ–ಸ್ಥಾನ.

ಲಲ್ಲಕ್ಕ. ವಿ: [**ದೇ**] ಭೀಮ, ಭಯಂಕರ(ದೇ), **ಪು:** ಯುದ್ಧ, ಸ್ಪರ್ಧೆ ಮೊದಲಾದವಕ್ಕೆ ಆಹ್ವಾನಿಸುವುದು(ಉಪ)

ಲಲ್ಲಿ. ಸ್ತ್ರೀ: [**ದೇ**] ಸುಳ್ಳು ಪ್ರಶಂಸೆ, ಭಟ್ಟಂಗಿತನ

ಲಲ್ಲಿರಿ. ಸ್ತ್ರೀ: [**ದೇ**] ಮೀನಿನ ಬಲೆ

ಲವ. ಸಕ: [**ಲೂ**] ಕತ್ತರಿಸು

ಲವ. ಸಕ: [**ಲಪ್**] ಹೇಳು, ಮಾತಾಡು. '**ಲವಇ**', **ವ. ಕೃ:** '**ಲ ವಂತ**'

ಲವ. ಸಕ: [**ಪ್ರ+ವರ್ತಯ್**] ತೊಡಗು, ಆರಂಭಿಸು

ಲವ. ವಿ: [**ಲಪ**] ವಾಚಾಳಿ, ಹರಟೆಗಾರ(ಸೂಅ)

ಲವ. ಪು: [**ಲವ**] ಸಮಯದ ಒಂದು ಸೂಕ್ಷ್ಮ ಲೆಕ್ಕಾಚಾರ, ಮುಹೂರ್ತದ ೧೭ನೇ ಅಂಶ, ತೀರ ಸ್ವಲ್ಪ(ಪಾಅ), **ನ:** ಕರ್ಮ. **–ಸತ್ತಮ. ಪು:**[**–ಸಪ್ತಮ**] ಅನುತ್ತರ ವಿಮಾನದಲ್ಲಿ ವಾಸಿಸುವ ದೇವ, ದೇವಜಾತಿಯಲ್ಲಿ ಸರ್ವೋತ್ತಮವಾದ್ದು

ಲವಅ. ಪು: [**ದೇ. ಲವಕ**] ಗೋಂದು, ಅಂಟು, ಮರದ ರಸ

ಲವಇಅ. ವಿ: [**ದೇ. ಲವಕಿತ**] ಚಿಗುರಿದ, ಪಲ್ಲವಿತ

ಲವಂಗ. ಪಂನ: [**ಲವಂಗ**] ಲವಂಗದ ಗಿಡ(ಪಣ್ಣ) ಲವಂಗ, ಲವಂಗದ ಹೂವು

ಲವಣ. ನ: [**ಲವನ**] ಕತ್ತರಿಸುವುದು, ಕೊಯ್ಯುವುದು

ಲವಣ. ನ: [**ಲವಣ**] ಉಪ್ಪು, **ಪು:** ಲವಣ ರಸ, ಕ್ಷಾರ ರಸ. ಲವಣ ಸಮುದ್ರ(ಪಉಮ), ಸೀತೆಯ ಮಗ, ಮಧುರಜನ ಒಬ್ಬ ಮಗ, **–ಜಲ. ಪು:** [**–ಜಲ**] ಲವಣ ಸಮುದ್ರ **ಲವಣೋಯ. ಪ:** [**ಲವಣೋದ**] ಲವಣ ಸಮುದ್ರ. '**ಲೋಣ**' ಶಬ್ದವನ್ನು ನೋಡುವುದು.

ಲವಣಿಮ. **ಪುಂಸ್ತ್ರೀ:** [**ಲವಣಿಮನ್**] ಲಾವಣ್ಯ, ದೇಹ ಸೌಂದರ್ಯ

ಲವಲ. ನ: [**ಲವಲ**] ಒಂದು ಹೂವು

ಲವಲೀ. ಸ್ತ್ರೀ: [**ಲವಲೀ**] ಲವಲೀ ಬಳ್ಳಿ

ಲವವ. ವಿ: [**ದೆ**] ನಿದ್ರೆಮಾಡುತ್ತಿರುವ, ಮಲಗಿರುವ

ಲವಿಅ. ವಿ: [**ಲಪಿತ**] ಹೇಳಲ್ಪಟ್ಟ, ಕಥಿತ

ಲವಿತ್ತ. ನ: [**ಲವಿತ್ರ**] ಹುಲ್ಲು ಕೊಯ್ಯುವ ಕುಡುಗೋಲು

ಲವಿರ. ವಿ: [**ಲಪಿತೃ**] ಹೇಳುವವನು, ಮಾತಾಡುವವನು. ಸ್ತ್ರೀ: –ರಾ.

ಲಸ. **ಅಕ:** [**ಲಸ್**] ಆಲಿಂಗಿಸು, ಹೊಳೆ, ಕ್ರೀಡಿಸು. **ವ. ಕೃ: ಲಸಂತ**

ಲಸಇ. **ಪು:** [**ದೇ**] ಕಾಮ, ಮನ್ಮಥ

ಲಸಕ. ನ: [**ದೇ**] ಮರದ ಹಾಲು

ಲಸಣ. '**ಲಸುಣ**' ಶಬ್ದವನ್ನು ನೋಡುವುದು.

ಲಸಿರ. ವಿ: [**ಲಸಿತೃ**] ಸೇರಿಕೊಳ್ಳುವ, ಆಲಿಂಗಿಸಿಕೊಳ್ಳುವ, ಹೊಳೆಯುವ, ಪ್ರಕಾಶಿಸುವ

ಲಸುಅ. ನ: [**ದೇ**] ಎಣ್ಣೆ, ತೈಲ

ಲಸುಣ. ನ: [**ಲಶುನ**] ಬೆಳ್ಳುಳ್ಳಿ

ಲಹ. '**ಲಭ**' ಶಬ್ದವನ್ನು ನೋಡುವುದು.

ಲಹಗ. **ಪು:** [**ದೇ**] ಹಳಸಿದ ಅನ್ನದಲ್ಲಿ ಹುಟ್ಟಿಕೊಳ್ಳುವ ಎರಡು ಇಂದ್ರಿಯಗಳ ಕೀಟ

ಲಹಣ. ನ: [**ಲಭನ**] ಲಾಭ, ಪ್ರಾಪ್ತಿ, ಸ್ವೀಕರಿಸುವುದು

ಲಹರ. **ಪು:** [**ಲಹರ**] ಒಬ್ಬ ವ್ಯಾಪರಿಯ ಮಗ.

ಲಹರಿ}. ಸ್ತ್ರೀ: [**ಲಹರಿ, ರೀ**] ಅಲೆ, ತರಂಗ(ಕುಮಾ)
ಲಹರೀ}.

ಲಹಾವಿಅ.ವಿ:[**ಲಂಭಿತ**]ಪಡೆಯುವಂತೆ ಮಾಡಲಾದ, ಹೊಂದಿಸಲ್ಪಟ್ಟ

ಲಹಿಅ. '**ಲದ್ಧ**' ಶಬ್ದವನ್ನು ನೋಡುವುದು.

ಲಹಿಮ. '**ಲಘಿಮ**' ಶಬ್ದವನ್ನು ನೋಡುವುದು.

ಲಹು.} ವಿ: [**ಲಘು**] ಚಿಕ್ಕ, ಸಣ್ಣ, ಹಗುರವಾದ,
ಲಹುಅ.} ಸುಲಭವಾದ, ತುಚ್ಛವಾದ, ಕೆಳ ಮಟ್ಟದ, ಶ್ಲಾಘನೀಯ, ಪ್ರಶಂಸನೀಯವಾದ, ಸ್ವಲ್ಪ (ಸುಪಾ), ಸುಂದರ, ಮನೋಹರ, **ಸ್ತ್ರೀ: –ಈ, –ವೀ,** ಕಪ್ಪು ಅಗರು, ಕೃಷ್ಣಾಗರು, ಲಾಮಂಚದ ಬೇರು, ಶೀಘ್ರ, ಬೇಗನೆ(ಪಣ್ಣ), ಸ್ಪರ್ಶ, ಲಘು–ಸ್ಪರ್ಶ ಎಂಬೊಂದು ಕರ್ಮದ ಪ್ರಕಾರ, **ಪು:** ಒಂದು ಮಾತ್ರಾ ಕಾಲದ ಅಕ್ಷರ, **–ಕಮ್ಮ.** ವಿ: [**–ಕರ್ಮನ್**] ಸ್ವಲ್ಪ ಕರ್ಮ ಮಾತ್ರ ಬಾಕಿ ಉಳಿದಿರುವವನು, ಶೀಘ್ರ ಮೋಕ್ಷಗಾಮಿ (ಸುಪಾ), **–ಕರಣ.** ನ: [**–ಕರಣ**] ದಕ್ಷತೆ, ಚಾತುರ್ಯ. **–ಪರಕ್ಕಮ.** **ಪು:** [**–ಪರಾಕ್ರಮ**] ಈಶಾನೇಂದ್ರನ ಪದಾತಿ ಸೈನ್ಯದ ಒಬ್ಬ ಅಧಿಪತಿ. **–ಸಂಖಿಜ್ಜ.** ನ: [**ಸಂಖ್ಯೇಯ**] ತೀರಾ ಕಡಿಮೆ ಸಂಖ್ಯೆಯ.

ಲಹುಅ. **ಸಕ:** [**ಲಘಯ್, ಲಘು+ಕೃ**] ಚಿಕ್ಕದು ಮಾಡು, ಲಘುಗೊಳಿಸು, ಹಗುರಗೊಳಿಸು '**ಲಹುಅಂತಿ**' **ವ. ಕೃ:** 'ಲಹುಅಂತ'

ಲಹುಅವಡ. **ಪು:** [**ದೇ**] ಆಲದ ಮರ(ದೇ)

ಲಹುಆಇಅ}. ವಿ: [**ಲಘೂಕೃತ**] ಲಘುಗೊಳಿಸಲ್ಪಟ್ಟ,
ಲಹುಇಅ}. ಹಗುರಗೊಳಿಸಲ್ಪಟ್ಟ(ಗಉಡ)

ಲಹುಈ}. '**ಲಹು**' ಶಬ್ದವನ್ನು ನೋಡುವುದು.

ಲಾಇಅ. ವಿ: [**ಲಾಗಿತ**] ತೊಡಗಿಸಲ್ಪಟ್ಟ, ಕೂಡಿಸಲ್ಪಟ್ಟ, ಖರ್ಚುಮಾಡಲಾದ

ಲಾಇಅ. ವಿ: [**ದೇ**] ಸ್ವೀಕರಿಸಲ್ಪಟ್ಟ, ಉಜ್ಜಲ್ಪಟ್ಟ, ತಿಕ್ಕಲ್ಪಟ್ಟ, ನ: ಅಲಂಕಾರ, ಆಭರಣ, ಸಗಣಿಯಿಂದ ನೆಲವನ್ನು ಸಾರಿಸುವುದು ಅಥವಾ ಬಿಳಿ ಮಣ್ಣಿನಿಂದ ಗೋಡೆಯನ್ನು ಬಳಿಯುವುದು. (ಔಪ), ಚರ್ಮದ ಅರ್ಧಭಾಗ

ಲಾಇಅವ್ವ. '**ಲಾಯು=ಲಾವಯ್**' ಶಬ್ದವನ್ನು ನೋಡುವುದು.

ಲಾಇಮ. ವಿ: [**ಲವ್ಯ**] ಕತ್ತರಿಸಲು ಯೋಗ್ಯವಾದ

ಲಾಇಮ. ವಿ: [**ದೇ**] ಕೊಯ್ಯಲು ಅಥವಾ ಕತ್ತರಿಸಲು ಯೋಗ್ಯವಾದ, ನೆಡಲು ಅಥವಾ ಬಿತ್ತಲು ಅರ್ಹವಾದ(ಆಚಾ)

ಲಾಇಲ್ಲ. **ಪು:** [**ದೇ**] ಎತ್ತು

ಲಾಉ. '**ಅಲಾಉ**' ಶಬ್ದವನ್ನು ನೋಡುವುದು.

ಲಾಊ. '**ಅಲಾಊ**' ಶಬ್ದವನ್ನು ನೋಡುವುದು.

ಲಾಉಲ್ಲೋಇಯ. ನ: [**ದೇ**] ಸಗಣಿಯಿಂದ ನೆಲ ಸಾರಿಸುವುದು, ಬಿಳಿ ಮಣ್ಣಿನಿಂದ ಗೋಡೆಯನ್ನು ಬಳಿಯುವುದು

ಲಾಖ(ಅಪ). '**ಲಕ್ಖ=ಲಕ್ಷ**' ಶಬ್ದವನ್ನು ನೋಡುವುದು.

ಲಾಗ. **ಪು:** [**ದೇ**] ಒಂದು ಬಗೆಯ ಸರ್ಕಾರಿ ತೆರಿಗೆ

ಲಾಘವ. ನ: [**ಲಾಘವ**] ಲಘುತ್ವ, ಹಗುರತೆ(ಭಗ), ಅವಮರ್ಯಾದೆ, ಸಣ್ಣತನ

ಲಾಘವಿ. ವಿ: [ಲಾಘವಿನ್] ಲಘುತ್ವದಿಂದ ಕೂಡಿದ
ಲಾಘವಿಅ. ನ: [ಲಾಘವಿಕ] ಲಘುತ್ವ, ಲಾಘವ, ಹಗುರತೆ, ಅವಮರ್ಯಾದೆ, ಸಣ್ಣತನ
ಲಾಜ. 'ಲಾಯ=ಲಾಜ' ಶಬ್ದವನ್ನು ನೋಡುವುದು.
ಲಾಡ. ಪು: [ಲಾಟ] ದೇಶ–ವಿಶೇಷ(ಸುಪಾ)
ಲಾಡೀ. ಸ್ತ್ರೀ: [ಲಾಟೀ] ಒಂದು ಬಗೆಯ ಲಿಪಿ(ವಿಸೇ)
ಲಾಢ. ಪು: [ಲಾಢ] ಒಂದು ಆರ್ಯದೇಶ
ಲಾಢ. ವಿ: [ದೇ] ದೋಷರಹಿತ ಆಹಾರದಿಂದ ಆತ್ಮ(ಜೀವ) ನಿರ್ವಾಹ ಮಾಡುವವನು, ಸಂಯಮಿ, ಆತ್ಮ ನಿಗ್ರಹಿ. ಸುಖ, ಪ್ರಧಾನ, ಮುಖ್ಯ. **ಪು:** ಒಬ್ಬ ಜೈನ ಆಚಾರ್ಯ.
ಲಾಢ. ವಿ: [ದೇ] ಶ್ರೇಷ್ಠವಾದ
ಲಾಣ. ನ: [ಲಾನ] ಸ್ವೀಕರಿಸುವುದು
ಲಾಬೂ. 'ಲಾಊ' ಶಬ್ದವನ್ನು ನೋಡುವುದು.
ಲಾಭ. ಪು: [ಲಾಭ] ಸಂಪಾದನೆ, ನಫೆ, ಖರ್ಚು ಹೋಗಿ ಉಳಿದದ್ದು, ಆದಾಯ, ಪ್ರಾಪ್ತಿ, ಬಡ್ಡಿ
ಲಾಭಂತರಾಇಯ. ನ: [ಲಾಭಾಂತರಾಯಿಕ] ಲಾಭವನ್ನು ತಡೆಹಿಡಿಯುವ ಕೆಲಸ.
ಲಾಭಿಯ}. ವಿ: [ಲಾಭಿಕ] ಲಾಭದಿಂದ ಕೂಡಿದ,
ಲಾಭಿಲ್ಲ}. ಲಾಭವುಳ್ಳ(ಔಪ)
ಲಾಮ. ವಿ: [ದೇ] ರಮ್ಯವಾದ, ಮನೋಹರವಾದ, ಸುಂದರವಾದ
ಲಾಮಂಜಯ. ನ: [ದೇ] ಉಶೀರ, ಲಾಮಂಚವೆಂಬ ತೃಣ
ಲಾಮಾ. ಸ್ತ್ರೀ: [ದೇ] ಡಾಕಿನಿ, ಹೆಣ್ಣು ಪಿಶಾಚಿ, ಸ್ತ್ರೀ–ಭೂತ
ಲಾಯ. ಸಕ: [ಲಾಗಯ್] ಸೇರಿಸು, ಜೋಡಿಸು. – 'ಲಾಏಸಿ'. ವ. ಕೃ: **'ಲಾಯಂತ'**
ಲಾಯ. ಸಕ: [ಲಾವಯ್] ಕತ್ತರಿಸಿಸು, ಕತ್ತರಿಸು, ಸೀಳು
ಲಾಯ. 'ಲಾಇಅ=(ದೇ)' ಶಬ್ದವನ್ನು ನೋಡುವುದು.
ಲಾಯ. ವಿ: [ಲಾತ] ಸ್ವೀಕರಿಸಲ್ಪಟ್ಟ, ಬೇರೆಯವರಲ್ಲಿ ಇಡಲಾದ(ಔಪ), ನ: ಲಗ್ನದ ಒಂದು ದೋಷ,
ಲಾಯ. ಪುಂಸ್ತ್ರೀ: [ಲಾಜ] ಒದ್ದೆಯಾದ ಅಕ್ಕಿ, ಹುರಿದ ಅಕ್ಕಿ ಪುರಿ, ಬತ್ತದ ಅರಳು
ಲಾಯಣ. ನ: [ಲಾಗನ] ತೊಡಗಿಸು, ಸೇರಿಸು(ಗಾ)
ಲಾಯಣ್ಣ. ನ: [ಲಾವಣ್ಯ] ಶರೀರದ ಸೌಂದರ್ಯ, ಶರೀರ ಕಾಂತಿ(ಪಾಅ), ಕ್ಷಾರತ್ವ

ಲಾಲ. ಸಕ: [ಲಾಲಯ್] ಸ್ನೇಹ ಪೂರ್ವಕವಾಗಿ ಪಾಲಿಸುವುದು, ರಕ್ಷಿಸುವುದು. **'ಲಾಲಂತಿ'**
ಲಾಲಂಪ. ಅಕ: [ವಿ+ಲಪ್] ವಿಲಪಿಸು, ಅಳು, ರೋದಿಸು
ಲಾಲಂಪಿಅ. ನ: [ದೇ] ಹವಳ, ಚಿಗುರು, ಲಗಾಮು, ಅಳುವಂತೆ ಮಾಡಲ್ಪಟ್ಟ, ಅಳಿಸಲ್ಪಟ್ಟ
ಲಾಲಂಭ. 'ಲಾಲಂಪ' ಶಬ್ದವನ್ನು ನೋಡುವುದು.
ಲಾಲಣ. ನ: [ಲಾಲನ] ಸ್ನೇಹಪೂರ್ವಕವಾಗಿ ಕಾಪಾಡುವುದು, ಸಾಕುವುದು(ಪಉಮ)
ಲಾಲಪ್ಪ. ಸಕ: [ಲಾಲಪ್ಯ್] ಚೆನ್ನಾಗಿ ಬಡಬಡಿಸು, ಮತ್ತೆಮತ್ತೆ ಮಾತಾಡು, ದೋಷಣೆಯ, ನಿಂದನೆಯ ಮಾತಾಡು
ಲಾಲಪ್ಪಣ. ನ: [ಲಾಲಪನ] ದೂಷಣೆಯ ಮಾತು, ನಿಂದನೆಯ ಮಾತು(ಪಣ್ಣ)
ಲಾಲಬ್ಬ}. 'ಲಾಲಂಪ' ಶಬ್ದವನ್ನು ನೋಡುವುದು.
ಲಾಲಪ್ಪ}.
ಲಾಲಯ. ನ: [ಲಾಲಕ] ಲಾಲಿಸುವವನು, ಮುದ್ದಾಡುವವನು(ದೇ)
ಲಾಲಸ. ವಿ: [ದೇ] ಮೃದು, ಕೋಮಲ, ಇಚ್ಛೆ, ಅಪೇಕ್ಷೆ
ಲಾಲಸ. ವಿ: [ಲಾಲಸ] ಲೋಲುಪ, ಹೆಚ್ಚು ಆಸೆ, ಔತ್ಸುಕ್ಯ, ಸ್ತ್ರೀನ: ಬಯಕೆ
ಲಾಲಾ. ಸ್ತ್ರೀ: [ಲಾಲಾ] ಲಾಲಾ ರಸ, ಜೊಲ್ಲು(ಔಪ)
ಲಾಲಿಅ. 'ಲಲಿಅ' ಶಬ್ದವನ್ನು ನೋಡುವುದು.
ಲಾಲಿಅ. ವಿ; [ಲಾಲಿತ] ಪೋಷಿಸಲ್ಪಟ್ಟ, ಸ್ನೇಹ ಪೂರ್ವಕವಾಗಿ ಪಾಲಿಸಲ್ಪಟ್ಟ(ಭವಿ)
ಲಾಲಿಚ(ಅಪ). ಪು: [ನಾಲಿಚ] ಒಂದು ಬಗೆಯ ವೃಕ್ಷ,
ಲಾಲಿಲ್ಲ. ವಿ: [ಲಾಲವತ್] ಜೊಲ್ಲನ್ನು ಹೊಂದಿರುವ
ಲಾವ. ಸಕ: [ಲಾಪಯ್] ಹೇಳಿಕಳಿಸಿ ಕರೆಸಿಕೊಳ್ಳುವುದು,
ಲಾವ. 'ಲಾವಗ' ಶಬ್ದವನ್ನು ನೋಡುವುದು.
ಲಾವಂಜ. ನ: [ದೇ] ಲಾಮಂಚದ ಬೇರು, ಉಶೀರ ತೃಣ
ಲಾವಕ.} ಪು: [ಲಾವಕ] ಲಾವಕ್ಕಿ, ವಿ: ಕತ್ತರಿಸುವವನು
ಲಾವಗ}.
ಲಾವಣಿಅ. ವಿ: [ಲಾವಣಿಕ] ಲವಣದಿಂದ ಸಂಸ್ಕರಿಸಲ್ಪಟ್ಟ (ವಿಪಾ), ಉಪ್ಪು ಮಾರುವವನು
ಲಾವಣ್ಣ}. 'ಲಾವಣ್ಣ' ಶಬ್ದವನ್ನು ನೋಡುವುದು.
ಲಾವನ್ನ}.

ಲಾವಯ. 'ಲಾವಗ' ಶಬ್ದವನ್ನು ನೋಡುವುದು.
ಲಾವಿಅ(ಅಪ). ವಿ: [ಲಾತ] ತರಲ್ಪಟ್ಟ(ಭವಿ)
ಲಾವಿಂಸಾ. ಸ್ತ್ರೀ: [ದೇ] ಆಸೆ ತೋರಿಸಿ ಮರುಳುಗೊಳಿಸುವುದು(ಸೂಅ)
ಲಾವಿರ. ವಿ: [ಲಾವಿತೃ] ಕತ್ತರಿಸುವವನು(ಗಾ)
ಲಾಸ. ಸಕ: [ಲಾಸಯ್] ನಾಟ್ಯಮಾಡು, ನೃತ್ಯ ಮಾಡು
ಲಾಸ. ನ: [ಲಾಸ್ಯ] ನಾಟ್ಯಶಾಸ್ತ್ರದಲ್ಲಿ ಪ್ರಸಿದ್ಧವಾದ ಗೇಯಪದವೇ ಮೊದಲಾದವು, ಸಂಗೀತ ಮತ್ತು ವಾದ್ಯಗಳಿಂದ ಕೂಡಿದ ನರ್ತನ. ಹೆಣ್ಣಿನ ನೃತ್ಯ
ಲಾಸಕ.} ಪು: [ಲಾಸಕ] ನೃತ್ಯದ ಹಾಡು ಹಾಡುವವನು,
ಲಾಸಗ}. 'ಜಯ' ಶಬ್ದವನ್ನು ಹೇಳುವವನು(ಔಪ)
ಲಾಸಯ. ಪು: [ಲಾಸಕ, ಹ್ಲಾಸಕ] ಒಂದು ಅನಾರ್ಯ ದೇಶ, **ಪುಂಸ್ತ್ರೀ:** ಅನಾರ್ಯ ದೇಶದ ನಿವಾಸಿ, ಸ್ತ್ರೀ: –ಸಿಯಾ(ಣಾಯಾ)
ಲಾಸವಿಹಯ. ಪು: [ಲಾಸಕವಿಹಗ] ನವಿಲು, ಮಯೂರ
ಲಾಹ. ಸಕ: [ಶ್ಲಾಘ್] ಹೊಗಳು, ಪ್ರಶಂಸಿಸು
ಲಾಹ. 'ಲಾಭ' ಶಬ್ದವನ್ನು ನೋಡುವುದು.
ಲಾಹಣ. ನ: [ದೇ] ತಿನ್ನುವ ಪದಾರ್ಥವನ್ನು ಕಾಣಿಕೆಯಾಗಿ ಕೊಡುವುದು
ಲಾಹಲ. '**ಣಾಹಲ**' ಶಬ್ದವನ್ನು ನೋಡುವುದು.
ಲಾಹವ. 'ಲಾಘವ' ಶಬ್ದವನ್ನು ನೋಡುವುದು.
ಲಿಅ. ಸಕ: [ಲಿಪ್] ಲೇಪಿಸು, ಬಳಿ.
ಲಿಅ. ವಿ: [ಲಿಪ್ತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ(ಗಾ), ನ: ಬಳಿಯುವುದು
ಲಿಆರ. ಪು: [ಲೃಕಾರ] 'ಲೃ' ವರ್ಣ
ಲಿಂಕ. ಪು: [ದೇ] ಹುಡುಗ, ಬಾಲಕ
ಲಿಂಕಿಅ. ವಿ: [ದೇ] ಎಸೆಯಲ್ಪಟ್ಟ, ತಡೆಯಲ್ಪಟ್ಟ, ಲೀನ, ಸೇರಿಹೋದ
ಲಿಂಖಯ. 'ಲಂಖ' ಶಬ್ದವನ್ನು ನೋಡುವುದು.
ಲಿಂಗ. ಸಕ: [ಲಿಂಗ್] ತಿಳಿದುಕೊಳ್ಳು, ಅರಿತುಕೊಳ್ಳು, ನಡೆ, ಗಮಿಸು, ಆಲಿಂಗಿಸಿಕೊಳ್ಳು
ಲಿಂಗ. ನ: [ಲಿಂಗ] ಚಿಹ್ನೆ, ಗುರುತು, ದಾರ್ಶನಿಕರ ವೇಷಧಾರಣೆ, ಸಂನ್ಯಾಸಿಗಳು ತಮ್ಮ ಧರ್ಮಕ್ಕನುಸಾರವಾಗಿ ವೇಷ ಧರಿಸುವುದು, ಅನುಮಾನವನ್ನು ಪ್ರಮಾಣೀಕರಿಸುವ ಸಾಧನ ಹೇತು, ಪುರುಷ ಚಿಹ್ನೆ, ಶಬ್ದದ ಧರ್ಮ ಸೂಚಕವಾದ ಪುಲ್ಲಿಂಗ, ಸ್ತ್ರೀ ಲಿಂಗವೇ ಮೊದಲಾದ ಶಬ್ದಗಳು, **–ದ್ಧಯ.** ಪು: [–ಧ್ವಜ] ವೇಷಧಾರಿ ಸಂನ್ಯಾಸಿ, **ಲಿಂಗಾಜೀವ.** ಪು: [ಲಿಂಗಾಜೀವ] ಅದೇ ಅರ್ಥ.
ಲಿಂಗಿ. ವಿ: [ಲಿಂಗಿನ್] ಹೇತುವಿನಿಂದ ತಿಳಿಯಲ್ಪಡುವ ಲಿಂಗ ಸಂಬಂಧವನ್ನು ಹೊಂದಿರುವ ಸಾಧ್ಯ, ಜೀವನಕ್ಕಾಗಿ ವೇಷ ಹಾಕುವ ಸಾಧು, ಸಂನ್ಯಾಸಿ (ಪಉಮ), ಸ್ತ್ರೀ: –ಣೀ.
ಲಿಂಗಿಯ. ವಿ: [ಲೈಂಗಿಕ] ಅನುಮಾನ ಪ್ರಮಾಣ, ಲಿಂಗ ದರ್ಶನದಿಂದ ಉಂಟಾಗುವ ಲಿಂಗಿ ಜ್ಞಾನ, ಲಿಂಗ ಸಂಬಂಧವಾದ
ಲಿಂಥ. ನ: [ದೇ] ಒಲೆಯಿರುವ ಜಾಗ, ಅಗ್ನಿ–ವಿಶೇಷ, 'ಲಿಚ್ಛ' ಶಬ್ದವನ್ನು ನೋಡುವುದು.
ಲಿಂಡ. ನ: [ದೇ] ಆನೆಯ ಮಲ, ಪಾಚಿಯಿಲ್ಲದ ಹಳೆಯ ನೀರು(ಪಣ್ಣ)
ಲಿಂಡಿಯಾ. ಸ್ತ್ರೀ: [ದೇ] ಮೇಕೆಯ ಮಲ,
ಲಿಂತ. 'ಲೇ=ಲಾ' ಶಬ್ದವನ್ನು ನೋಡುವುದು.
ಲಿಂಪ. ಸಕ: [ಲಿಪ್] ಬಳಿ, ಲೇಪಿಸು, –'**ಲಿಂಪಇ**', ವ. ಕೃ: **ಲಿಂಪಂತ**
ಲಿಂಪಣ. ನ: [ಲೇಪನ] ಬಳಿಯುವುದು, ಲೇಪನ
ಲಿಂಪಾವಿಯ. ವಿ: [ಲೇಪಿತ] ಬಳಿಸಲ್ಪಟ್ಟ,
ಲಿಂಪಿಯ. ವಿ: [ಲಿಪ್ತ]ಬಳಿಯಲ್ಪಟ್ಟ, ಲೇಪನ ಮಾಡಲ್ಪಟ್ಟ
ಲಿಂಬ. ಪು: [ನಿಂಬ] ಬೇವಿನ ಮರ
ಲಿಂಬ. ವಿ: [ದೇ] ಕೋಮಲವಾದ, ನಮ್ರವಾದ
ಲಿಂಬ. ಪು: [ದೇ.ಲಿಂಬ] ಚಾಪೆ, ಮಂದಲಿಗೆ, ಮೊದಲಾದವು
ಲಿಂಬಡ.(ಅಪ).'ಲಿಂಬ=ನಿಂಬ'ಶಬ್ದವನ್ನುನೋಡುವುದು.
ಲಿಂಬೋಹಲೀ. ಸ್ತ್ರೀ: [ದೇ] ಬೇವಿನ ಕಾಯಿ
ಲಿಕಾರ. 'ಲಿಆರ' ಶಬ್ದವನ್ನು ನೋಡುವುದು.
ಲಿಕ್ಕ. ಅಕ: [ನಿ+ಲೀ] ಅಡಗಿಕೊಳ್ಳು,
ಲಿಕ್ಖ. ನ: [ಲೇಖ್ಯ] ಲೆಕ್ಕ, ಬರೆಯಲ್ಪಟ್ಟ ಕಾಗದ. '**ಲೆಕ್ಖ**' ಶಬ್ದವನ್ನು ನೋಡುವುದು.
ಲಿಕ್ಖ. ಸ್ತ್ರೀನ: [ದೇ] ಸಣ್ಣ ಝುರಿ
ಲಿಕ್ಖ. ಸ್ತ್ರೀನ: [ಲಿಕ್ಷಾ] ಹೇನಿನ ಮೊಟ್ಟೆ, ಒಂದು ಅಳತೆ: ಎಂಟು ತ್ರಸ–ರೇಣುಗಳಿಗೆ ಒಂದು ಲೆಕ್ಖ
ಲಿಖಾಪ.(ಅಶೋ). ಸಕ: [ಲೇಖಿತ] ಬರೆಸಲ್ಪಟ್ಟ
ಲಿಚ್ಛ. ಸಕ: [ಲಿಪ್ಸ್] ಪಡೆದುಕೊಳ್ಳಬೇಕೆಂದು ಇಚ್ಛಿಸು. ಹೊಂದಲು ಬಯಸು

ಲಿಚ್ಛ. 'ಲಿಂಛ' ಶಬ್ದವನ್ನು ನೋಡುವುದು.
ಲಿಚ್ಛವಿ. 'ಲೇಚ್ಛಇ=ಲೇಚ್ಛಕಿ' ಶಬ್ದವನ್ನು ನೋಡುವುದು.
ಲಿಚ್ಛಾ. ಸ್ತ್ರೀ: [ಲಿಪ್ಸಾ] ಲಾಭದ ಬಯಕೆ(ಉಪ)
ಲಿಚ್ಛು. ವಿ: [ಲಿಪ್ಸು] ಲಾಭದ ಬಯಕೆ ಉಳ್ಳವನು, ಪಡೆಯಲು ಅಪೇಕ್ಷಿಸುವವನು(ಸುಖ)
ಲಿಜ್ಜಿಅ.(ಅಪ). ವಿ: [ಲಾತ] ಸ್ವೀಕರಿಸಲ್ಪಟ್ಟ
ಲಿಟ್ಟಿಅ. ನ: [ದೇ] ಪ್ರಿಯವಾದ ಮಾತು, ಪ್ರಶಂಸೆಯ ಮಾತು, ವಿ: ಅತಿ ಅಶೆ ಉಳ್ಳವನು, ಪರಸ್ತ್ರೀ ಲೋಲ(ಸುಪಾ)
ಲಿಟ್ಟು. 'ಲೇಟ್ಟು' ಶಬ್ದವನ್ನು ನೋಡುವುದು.
ಲಿತ್ತ. ವಿ: [ಲಿಪ್ತ] ಲೇಪನ ಮಾಡಲ್ಪಟ್ಟ, ಬಳಿಯಲ್ಪಟ್ಟ, ಪೂರ್ತಿ ಹೊದಿಸಲ್ಪಟ್ಟ, ಸರಿಯಾಗಿ ಸುತ್ತುವರಿಯಲ್ಪಟ್ಟ (ಸೂಅ)
ಲಿತ್ತಿ. ಪುಂಸ್ತ್ರೀ: [ದೇ] ಖಡ್ಗದ ದೋಷ(ದೇ)
ಲಿಪ್ಪ.. 'ಲಿತ್ತ' ಶಬ್ದವನ್ನು ನೋಡುವುದು.
ಲಿಪ್ಪ. 'ಲೆಪ್ಪ' ಶಬ್ದವನ್ನು ನೋಡುವುದು.
ಲಿಪ್ಪಾಸಣ. ನ: [ಲಿಪ್ಯಾಸನ] ಮಸಿ ಪಾತ್ರೆ
ಲಿಬ್ಭಂತ. 'ಲಿಹ=ಲಿಹ್' ಶಬ್ದವನ್ನು ನೋಡುವುದು.
ಲಿಲ್ಲಿರ. ವಿ: [ದೇ] ಹಸಿರು, ಹಸಿರು ಬಣ್ಣದ
ಲಿವಿ.} ಸ್ತ್ರೀ: [ಲಿಪಿ, –ಪೀ] ಅಕ್ಷರ, ವರ್ಣ
ಲಿವೀ}.
ಲಿಸ. ಸಕ: [ಸ್ವಪ್] ಮಲಗು, ನಿದ್ರಿಸು. 'ಲಿಸಇ'
ಲಿಸ. ಸಕ: [ಶ್ಲಿಷ್] ಆಲಿಂಗಿಸು(ಸೂಅ)
ಲಿಸಯ. ವಿ: [ದೇ] ಕೃಶವಾಗಿರುವ, ತೆಳುವಾಗಿರುವ
ಲಿಸ್ಸ. 'ಲಿಸ=ಶ್ಲಿಷ್' ಶಬ್ದವನ್ನು ನೋಡುವುದು. 'ಲಿಸ್ಸಂತಿ'
ಲಿಹ. ಸಕ: [ಲಿಖ್] ಬರೆ, ಗೆರೆ ಎಳೆ
ಲಿಹ್. ಸಕ: [ಲಿಹ್] ನೆಕ್ಕು. 'ಲಿಹಇ'. ವ.ಕೃ: 'ಲಿಹಚಿತ'
ಲಿಹಣ. ನ: [ಲೇಹನ] ನೆಕ್ಕುವಿಕೆ
ಲಿಹಣ. ನ: [ಲೇಖನ] ಬರೆಯುವುದು, ಬರವಣಿಗೆ, ಗೆರೆ ಎಳೆಯುವುದು, ಬರೆಯಿಸುವುದು
ಲಿಹಾ. ಸ್ತ್ರೀ: [ಲೇಖಾ] 'ರೇಹಾ=ಲೇಖಾ' ಶಬ್ದವನ್ನು ನೋಡುವುದು.
ಲಿಹಾವಣ. ನ: [ಲೇಖನ] ಬರೆಸುವುವುದು
ಲಿಹಾವಿಯ. ವಿ: [ಲೇಖಿತ] ಬರೆಯಿಸಲ್ಪಟ್ಟ
ಲಿಹಿಅ. ವಿ: [ಲಿಖಿತ] ಬರೆಯಲ್ಪಟ್ಟ, ಬರೆದ, ಬರವಣಿಗೆ, ಮೇಲೆ ಬರೆಯುಲ್ಪಟ್ಟ, ಗೆರೆ ಎಳೆಯುಲ್ಪಟ್ಟ, ಚಿತ್ರಿಸಲ್ಪಟ್ಟ, ಚಿತ್ರ ಕೊರೆಯಲ್ಪಟ್ಟ(ಕುಮಾ)
ಲಿಹ್ವ(ಅಪ). ವಿ: [ಲಾತ] ತೆಗೆದುಕೊಳ್ಳಲಾದ, ಸ್ವೀಕರಿಸಲ್ಪಟ್ಟ
ಲೀಢ. ವಿ: [ಲೀಢ] ನೆಕ್ಕಲ್ಪಟ್ಟ, ಆಸ್ವಾದಿಸಲ್ಪಟ್ಟ, ರುಚಿ ನೋಡಲ್ಪಟ್ಟ(ಕುಪ್ರ)
ಲೀಣ. ವಿ: [ಲೀನ] ಐಕ್ಯವಾದ, ಸೇರಿಕೊಂಡಿರುವ
ಲೀಲ. ಪು: [ದೇ] ಯಜ್ಞ
ಲೀಲಾ. ಸ್ತ್ರೀ: [ಲೀಲಾ] ವಿಲಾಸ, ಮೋಜು, ಕ್ರೀಡೆ, ಒಂದು ಛಂದಸ್ಸು, **–ವಈ.** ಸ್ತ್ರೀ: [–ವತೀ]ವಿಲಾಸವತಿ ಹೆಣ್ಣು, ಒಂದು ಛಂದಸ್ಸು, **–ವಹ.** ವಿ: [–ವಹ] ವಿಲಾಸದಿಂದ ಕೂಡಿದ
ಲೀಲಾಇಅ. ನ: [ಲೀಲಾಯಿತ] ಕ್ರೀಡೆ, ಆಟ, ಪ್ರಭಾವ
ಲೀಲಾಯ. ಸಕ: [ಲೀಲಾಯ್] ಲೀಲೆ ನಡೆಸು, ವಿಲಾಸ ಮಾಡು, ಕ್ರೀಡೆಯಾಡು
ಲೀವ. ಪು: [ದೇ] ಬಾಲಕ, ಹುಡುಗ(ದೇ)
ಲೀಹಾ. 'ಲಿಹಾ' ಶಬ್ದವನ್ನು ನೋಡುವುದು(ಸುಪಾ)
ಲುಅ. ಸಕ: [ಲೂ] ಕತ್ತರಿಸು, ಸೀಳು
ಲುಅ. 'ಲುಂಪ' ಶಬ್ದವನ್ನು ನೋಡುವುದು.
ಲುಅ. ವಿ: [ಲೂನ] ಕತ್ತರಿಸಲ್ಪಟ್ಟ, ಕೀಳಲ್ಪಟ್ಟ
ಲುಅ. ವಿ: [ಲುಪ್ತ] ನಷ್ಟವಾದ, ಕಳೆದುಹೋಗಿರುವ, ನ: ಲೋಪ, ಕಳೆದುಹೋಗುವುದು
ಲುಅಂತ. ವಿ: [ಲೂನವತ್] ಕತ್ತರಿಸಿದವನು
ಲುಂಕ. ವಿ: [ದೇ] ನಿದ್ರಿಸಿರುವ,
ಲುಂಕಣೀ. ಸ್ತ್ರೀ: [ದೇ] ಅಡಗಿಕೊಳ್ಳುವುದು, ಮರೆಯಾಗುವುದು
ಲುಂಖ. ಪು: [ದೇ] ನಿಯಮ(ದೇ)
ಲುಂಖಾಯ. ಪು: [ದೇ] ನಿರ್ಣಯ
ಲುಂಖಿಅ. ವಿ: [ದೇ] ಮಲಿನವಾದ, ಕಲುಷಗೊಂಡ, ಕೊಳೆಯಾದ
ಲುಂಚ. ಸಕ: [ಲುಂಛ್] ಕೂದಲನ್ನು ಕೀಳು, ದೂರಮಾಡು, 'ಲುಂಚಇ'
ಲುಂಚಿಅ. ವಿ: [ಲುಂಚಿತ] ಕೂದಲು ಕಿತ್ತುಹಾಕಲ್ಪಟ್ಟ, ಬೋಳು ಮಾಡಲ್ಪಟ್ಟ
ಲುಂಛ. ಸಕ: [ಮೃಜ್, ಪ್ರ+ಉಚ್ಛ್] ಸ್ವಚ್ಛಗೊಳಿಸು, ಒರೆಸು
ಲುಂಟ. ಸಕ: [ಲುಂಟ್] ಕದಿ, ಲೂಟಿಮಾಡು. 'ಲುಚಿಟಂತಿ'. ವ. ಕೃ: 'ಲುಚಿಟಂತ'
ಲುಂಟಣ. ನ: [ಲುಂಟನ] ಕದಿಯುವುದು, ಲೂಟಿಮಾಡುವುದು

ಲುಂಟಾಕ. ವಿ: [ಲುಂಟಾಕ] ಕದಿಯುವವನು, ಲೂಟಿಮಾಡುವವನು, ಕಳ್ಳ

ಲುಂಠಗ. ವಿ: [ಲುಂಠಕ] ಖಳ, ದುಷ್ಟ, ದುರ್ಜನ

ಲುಂಠಿಅ. ವಿ: [ಲುಂಠಿತ] ಬಲವಂತವಾಗಿ ಕಸಿದುಕೊಳ್ಳಲಾದ, ಕದಿಯಲ್ಪಟ್ಟ

ಲುಂಪ. ಸಕ: [ಲುಪ್] ನಾಶಗೊಳಿಸು, ಪೀಡಿಸು, ಕ್ಷಣದಂತೆ ಮಾಡು

ಲುಂಪಇತ್ತು. ವಿ:[ಲೋಪಯಿತೃ] ನಾಶಗೊಳಿಸುವವನು, ಇಲ್ಲವಾಗಿಸುವವನು

ಲುಂಪಣಾ. ಸ್ತ್ರೀ: [ಲೋಪನಾ] ಇಲ್ಲವಾಗಿಸುವುದು, ವಿನಾಶ

ಲುಂಪಿತ್ತು. ವಿ: [ಲೋಪ್ತೃ] ನಾಶಗೊಳಿಸುವವನು, ಇಲ್ಲವಾಗಿಸುವವನು(ಆಚಾ)

ಲುಂಬೀ. ಸ್ತ್ರೀ: [ದೇ. ಲುಂಬೀ] ಹೂ ಗುಚ್ಛ(ದೇ), ಬಳ್ಳಿ, ಲತೆ

ಲುಕ್ಕ. ಅಕ: [ನಿ+ಲೀ] ಅಡಗು, ಮರೆಯಾಗು

ಲುಕ್ಕ. ಅಕ: [ತುಡ್] ಮುರಿ, ಒಡೆ

ಲುಕ್ಕ. ವಿ: [ದೇ] ಮಲಗಿರುವ, ನಿದ್ರೆ ಮಾಡುತ್ತಿರುವ

ಲುಕ್ಕ. ವಿ: [ನಿಲೀನ] ಅಡಗಿಕೊಂಡಿರುವ, ಸಂಪೂರ್ಣವಾಗಿ ಇನ್ನೊಂದು ವಸ್ತುವಿನಲ್ಲಿ ಸೇರಿಹೋಗಿರುವ

ಲುಕ್ಕ. ವಿ: [ರುಗ್ಣ] ರೋಗಿ, ಮುರಿಯಲ್ಪಟ್ಟ, ಒಡೆಯಲ್ಪಟ್ಟ

ಲುಕ್ಕ. ವಿ: [ಲುಂಚಿತ] ಕೂದಲುಗಳನ್ನು ಕಿತ್ತಿರುವ, ಕೂದಲು ಕಿತ್ತುಹಾಕಲ್ಪಟ್ಟ

ಲುಕ್ಕಿಅ. ವಿ: [ತುಡಿತ] ಮುರಿಯಲ್ಪಟ್ಟ, ಒಡೆಯಲ್ಪಟ್ಟ

ಲುಕ್ಕಿಅ. ವಿ: [ನಿಲೀನ] ಸೇರಿಕೊಂಡಿರುವ, ಅಡಗಿಕೊಂಡಿರುವ

ಲುಕ್ಖ. ಪು: [ರೂಕ್ಷ] ಕಠಿಣವಾದ, ಮೃದುವಾಗಿಲ್ಲದ, ಒರಟಾದ, ವಿ: ಒರಟು ಸ್ಪರ್ಶಹೊಂದಿರುವ, ಸ್ನಿಗ್ಧವಲ್ಲದ, **'ಲೂಹ=ರೂಕ್ಷ'** ಶಬ್ದವನ್ನು ನೋಡುವುದು.

ಲುಗ್ಗ. ವಿ: [ದೇ. ರುಗ್ಣ] ಮುರಿಯಲ್ಪಟ್ಟ, ಒಡೆಯಲ್ಪಟ್ಟ, ರೋಗಿ

ಲುಚ್ಛ. **'ಲುಂಛ=ಮೃಜ್'** ಶಬ್ದವನ್ನು ನೋಡುವುದು.

ಲುಟ್ಟ. ಸಕ: [ಲುಂಟ್] ಲೂಟಿಮಾಡು, ಕದಿ(ಷಡ್)

ಲುಟ್ಟ. **'ಲೊಟ್ಟ=ಸ್ವಪ್'** ಶಬ್ದವನ್ನು ನೋಡುವುದು.

ಲುಟ್ಟ. ವಿ:[ಲುಂಟಿತ] ಲೂಟಿ ಮಾಡಲ್ಪಟ್ಟ, ಕದಿಯಲ್ಪಟ್ಟ

ಲುಟ್ಠು. ಪು: [ಲೋಷ್ಟ] ಕಲ್ಲು, ಇಟ್ಟಿಗೆ ಮೊದಲಾದವುಗಳ ಚೂರು, ತುಂಡು(ದೇ)

ಲುಡ್ಡ. **'ಲುದ್ಧ'** ಶಬ್ದವನ್ನು ನೋಡುವುದು.

ಲುಢ. ಅಕ: [ಲುಠ್] ಉರುಳು, ಮಲಗು, ಅಡ್ಡಾಗು

ಲುಢಿಅ. ವಿ: [ಲುಠಿತ] ಮಲಗಿರುವ

ಲುಣಿಅ. ವಿ: [ಲೂನ] ಕತ್ತರಿಸಲ್ಪಟ್ಟ, ಕೀಳಲ್ಪಟ್ಟ

ಲುತ್ತ. ವಿ: [ಲುಪ್ತ] ನಷ್ಟವಾದ, ಕಳೆದುಹೋದ, ಲೋಪವಾದ

ಲುತ್ತ. ನ: [ಲೋಪ್ತ್ರ] ಕಳ್ಳ ಮಾಲು, ಕದ್ದುತಂದ ವಸ್ತು

ಲುದ್ಧ. ಪು: [ಲುಬ್ಧ] ವ್ಯಾಧ, ಬೇಡರವನು, ಅತಿಯಾದ ಆಸೆ ಉಳ್ಳವನು, ಲೋಲುಪ, ಕಾಮುಕ, ನ: ಲೋಭ, ಆಸೆ(ಬೃಹ)

ಲುದ್ಧ. ನ: [ಲೋಧ್ರ] ಸಾಂಬ್ರಾಣಿ, ಸಾಂಬ್ರಾಣಿ ಗಿಡ. **'ಲೋದ್ಧ=ಲೋಧ್ರ'** ಶಬ್ದವನ್ನು ನೋಡುವುದು.

ಲುದ್ಧ. ಪುಂನ: [ಲೋಧ್ರ] ಕ್ಷಾರ–ವಿಶೇಷ

ಲುಬ್ಭ}. ಅಕ: [ಲುಭ್] ಆಸೆಪಡು, **'ಲುಬ್ಭಇ'**, **ಲುಭ}**.

ಲುಭ. **'ಲುಹ್=ಮೃಜ್'** ಶಬ್ದವನ್ನು ನೋಡುವುದು.

ಲುರಣೀ. ಸ್ತ್ರೀ: [ದೇ] ವಾದ್ಯ–ವಿಶೇಷ

ಲುಲ. **'ಲುಢ'** ಶಬ್ದವನ್ನು ನೋಡುವುದು.

ಲುಲಿಅ. ವಿ: [ಲುಠಿತ] ಮಲಗಿರುವ(ಸುರ)

ಲುಲಿಅ. ವಿ: [ಲುಲಿತ] ಕಲಕಲ್ಪಟ್ಟ, ಕ್ಷುಬ್ಧಗೊಳಿಸಲ್ಪಟ್ಟ

ಲುವ. **'ಲುವ=ಲೂ'** ಶಬ್ದವನ್ನು ನೋಡುವುದು.

ಲುಹ. ಸಕ: [ಮೃಜ್] ಸ್ವಚ್ಛಗೊಳಿಸು, ತೊಳೆ

ಲುಹಣ. ನ: [ಮಾರ್ಜನ] ತೊಳೆಯುವುದು, ಶುದ್ಧಮಾಡುವುದು, ಉಜ್ಜುವುದು

ಲೂಅ. **'ಲುಅ=ಲೂನ'** ಶಬ್ದವನ್ನು ನೋಡುವುದು.

ಲೂಆ. ಸ್ತ್ರೀ: [ದೇ] ಮರೀಚಿಕೆ, ಬಿಸಿಲುಗುದುರೆ

ಲೂಆ. ಸ್ತ್ರೀ: [ಲೂತಾ] ವಾತದೋಷದಿಂದ ಕೂಡಿದ ವ್ಯಾಧಿ, ಜೇಡರ ಹುಳು(ಓಘ)

ಲೂಡ. ಸಕ: [ಲುಂಟ್] ಲೂಟಿಮಾಡು, ಕಳುವುಮಾಡು

ಲೂಡ. ವಿ: [ಲುಂಟ] ಕಳ್ಳ, ಚೋರ, ಲೂಟಿಕೋರ

ಲೂಡಣ. ನ: [ಲುಂಟನ] ಕಳ್ಳತನ, ಲೂಟಿ

ಲೂಡಿಅ.ವಿ:[ಲುಂಟಿತ]ಕಳುವು ಮಾಡಲ್ಪಟ್ಟ, ಕದಿಯಲ್ಪಟ್ಟ

ಲೂಣ. **'ಲೂಅ=ಲೂನ'** ಶಬ್ದವನ್ನು ನೋಡುವುದು.

ಲೂಣ. ನ: [ಲವಣ] ಉಪ್ಪು, **ಪುಂನ:** ಒಂದು ವನಸ್ಪತಿ. **'ಲವಣ'** ಶಬ್ದವನ್ನು ನೋಡುವುದು.

ಲೂಣ. ನ: [ಲವಣ] ಲಾವಣ್ಯ, ಸೌಂದರ್ಯ, ದೇಹದ ಕಾಂತಿ

ಲೂರ. ಸಕ: [ಛಿದ್] ಕತ್ತರಿಸು

ಲೂರಿಅ. ವಿ: [ಛಿನ್ನ] ಕತ್ತರಿಸಲ್ಪಟ್ಟ(ಕುಮಾ)

ಲೂಸ. ಸಕ: [ಲೂಷಯ್] ವಧಿಸು, ಕೊಲ್ಲು, ಹಿಂಸಿಸು, ಪೀಡಿಸು, ಕದಿ, ನಾಶಪಡಿಸು, ಅಗೌರವಿಸು, ಅವಮಾನಿಸು, ನಿಂದಿಸು, ಮುರಿ, ಚಿಕ್ಕದನ್ನು ದೊಡ್ಡದಾಗಿ ಮತ್ತು ದೊಡ್ಡದನ್ನು ಚಿಕ್ಕದಾಗಿ ಮಾಡು. 'ಲೂಸಂತಿ'

ಲೂಸಅ}. ವಿ: [ಲೂಷಕ] ಹಿಂಸಕ, ಹಿಂಸಿಸುವವನು,
ಲೂಸಗ}. ನಾಶಪಡಿಸುವವನು, ನಿರ್ದಯಿ, ಕ್ರೂರಿ, ಭಕ್ಷಕ, ನಿಂದಿಸುವವನು, ವಿರೋಧಿಸುವವನು, ಆಜ್ಞೆಯನ್ನು ಪಾಲಿಸದಿರುವವನು(ಸೂಅ), ಹೇತು–ವಿಶೇಷ

ಲೂಸಣ. ವಿ: [ಲೂಷಣ] ಮೇಲಿನ ಶಬ್ದವನ್ನು ನೋಡುವುದು.

ಲೂಸಯ. ವಿ: [ಲೂಷಕ] ದುಃಖಿಸುವವನು, ವ್ಯಥೆಪಡುವವನು, ಕಳ್ಳ, ಚೋರ

ಲೂಸಿಅ. ವಿ: [ಲೂಷಿತ] ಕಳುವು ಮಾಡಲ್ಪಟ್ಟ, ಪೀಡಿಸಲ್ಪಟ್ಟ, ಹಿಂಸಿಸಲ್ಪಟ್ಟ, ನಾಶಗೊಳಿಸಲ್ಪಟ್ಟ,

ಲೂಹ. ಸಕ: [ಮೃಜ್, ರೂಕ್ಷಯ್] ಸ್ವಚ್ಛಗೊಳಿಸು, ಒರೆಸು, ಉಜ್ಜು

ಲೂಹ. ಪು: [ರೂಕ್ಷ] ಮುನಿ, ಸಾಧು, ಸಂನಾಸಿ, ಶ್ರಮಣ

ಲೂಹ. ವಿ: [ರೂಕ್ಷ] ಒರಟಾದ, ಕಠಿಣವಾದ, ಸ್ನಿಗ್ಧವಲ್ಲದ, ಒಣಗಿದ, ರಸವಿಲ್ಲದ, **ಪು:** ಸಂಯಮ, ವಿಶ್ರಾಂತಿ, ಚಾರಿತ್ರ(ಸೂಅ), ತಪಸ್ಸು, ನಿರ್ವಿಕಲ್ಪ ತಪಸ್ಸು. **'ಲುಕ್ಖ'** ಶಬ್ದವನ್ನು ನೋಡುವುದು.

ಲೂಹಿಯ. ವಿ: [ರೂಕ್ಷಿತ] ಒರೆಸಲ್ಪಟ್ಟ, ಸ್ವಚ್ಛಗೊಳಿಸಲ್ಪಟ್ಟ

ಲೇ. ಸಕ: [ಲಾ] ತೆಗೆದುಕೊಳ್ಳು, ಸ್ವೀಕರಿಸು, –**'ಲೇಇ'**, ವ. ಕೃ: **'ಲಿಂತ'**

ಲೆಕ್ಖ. ನ: [ಲೇಖ್ಯ] ವ್ಯವಹಾರ, ವ್ಯಾಪಾರ(ಸುಪಾ), ಲೆಕ್ಕ

ಲೆಕ್ಖಾ. **'ಲಿಹಾ'** ಶಬ್ದವನ್ನು ನೋಡುವುದು.

ಲೇಖ. **'ಲೇಹ=ಲೇಖ'** ಶಬ್ದವನ್ನು ನೋಡುವುದು.

ಲೆಚ್ಛಇ. ಪು: [ಲೇಚ್ಛಕಿ] ಕ್ಷತ್ರಿಯ, ಒಂದು ಪ್ರಸಿದ್ಧ ರಾಜ–ವಂಶ(ಭಗ)

ಲೆಚ್ಛ ಇ. ಪು: [ಲಿಪ್ಸುಕ, ಲೇಚ್ಛಕಿ] ವ್ಯಾಪಾರಿ, ವೈಶ್ಯ, ಒಂದು ವ್ಯಾಪಾರೀ ವರ್ಗ

ಲೆಚ್ಛಾರಿಯ. ವಿ: [ದೇ] ಲೇಪಿಸಲ್ಪಟ್ಟ, ಬಳಿಯಲ್ಪಟ್ಟ

ಲೆಜ್ಝ. **'ಲಿಹ=ಲಿಹ್'** ಶಬ್ದವನ್ನು ನೋಡುವುದು.

ಲೆಟ್ಠು}. ಪುಂನ: [ದೇ. ಲೇಷ್ಟು] ಕಲ್ಲು, ಇಟ್ಟಿಗೆ
ಲೇಡು}. ಇವುಗಳ ಚೂರು, ತುಂಡು(ಔಪ)
ಲೇಡುಅ}.

ಲೇಡುಕ್ಕ. ಪು: [ದೇ] ಕಲ್ಲಿನ ತುಣುಕು, ಮಣ್ಣಿನ ಹೆಂಟೆ. ವಿ: ಲಂಪಟ, ಕಾಮುಕ

ಲೇಢಿಅ. ನ: [ದೇ] ನೆನಪು, ಸ್ಮೃತಿ(ದೇ)

ಲೇಣ. ನ: [ಲಯನ] ಬೆಟ್ಟದ ಸಮೀಪ ಇರುವ ಕಲ್ಲಿನ ಮನೆ(ಣಾಯಾ), ಬಿಲ, –ವಿಹಿ. ಪುಂಸ್ತ್ರೀ: [–ವಿಧಿ] ಕಲಾ–ವಿಶೇಷ. **'ಲಯಣ=ಲಯನ'** ಶಬ್ದವನ್ನು ನೋಡುವುದು.

ಲೆಪ್ಪ. ನ: [ಲೇಪ್ಯ] ಲೇಪಿಸಲ್ಪಡಬೇಕಾದ ಗೋಡೆ,

ಲೆಪ್ಪಕಾರ. ಪು: [ಲೇಪ್ಯಕಾರ] ಶಿಲ್ಪಿ, ಕಟ್ಟಡದ ಕೆಲಸಮಾಡುವ ಉಪ್ಪಾರ

ಲೆಪ್ಪಾ. ಸ್ತ್ರೀ: [ಲೇಪ್ಯಾ] ಬಳಿಯುವ ಕ್ರಿಯೆ, ಲೇಪನ ಕ್ರಿಯೆ

ಲೇಲು. **'ಲೇಡು'** ಶಬ್ದವನ್ನು ನೋಡುವುದು.

ಲೇವ. ಪು: [ಲೇಪ] ಲೇಪನ, ಬಳಿಯುವುದು, ಹೊಕ್ಕುಳ ವರೆಗಿನ ಆಳತೆಯ ನೀರು, **ಪು:** ಭಗವಾನ್ ಮಹಾವೀರನ ಕಾಲದಲ್ಲಿ ನಳಂದಾದ ನಿವಾಸಿಯಾಗಿದ್ದ ಒಬ್ಬ ಗೃಹಸ್ಥ. **–ಕಡ, ಲೇವಾಡ.** ವಿ: [–ಕೃತ] ಬಣ್ಣ ಅಥವಾ ಸುಣ್ಣ ಬಳಿದ, ಲೇಪದಿಂದ ಮಿಶ್ರಿತವಾದ

ಲೇವಣ. ನ: [ಲೇಪನ] ಸುಣ್ಣ ಬಳಿಯುವುದು, ಲೇಪದ ಸಾಧನವಾದ ಸುಣ್ಣ ಅಥವಾ ಬಣ್ಣ

ಲೇವಾಡ. ವಿ: [ಲೇಪಕೃತ್] ಬಣ್ಣ ಬಳಿಯುವವನು

ಲೇಸ. ಪು: [ಲೇಶ] ಅಲ್ಪ, ಸ್ವಲ್ಪ(ಪಾಅ), ಸಂಕ್ಷೇಪ

ಲೇಸ. ವಿ: [ದೇ] ಬರೆಯಲ್ಪಟ್ಟ, ಬರವಣಿಗೆ, ಧೈರ್ಯ ಹೇಳಲ್ಪಟ್ಟ, ಭರವಸೆ ನೀಡಲ್ಪಟ್ಟ, ಸಮಾಧಾನಿಸಲ್ಪಟ್ಟ, ನಿಃಶಬ್ದ, **ಪು:** ನಿದ್ರೆ

ಲೇಸ. ಪು: [ಶ್ಲೇಷ] ಸೇರುವುದು, ಒಂದಕ್ಕೊಂದು ಅಂಟಿಕೊಳ್ಳುವುದು, ಸಂಬಂಧ

ಲೇಸಣಯಾ}. ಸ್ತ್ರೀ: [ಶ್ಲೇಷಣಾ] ಮೇಲಿನ ಶಬ್ದವನ್ನು
ಲೇಸಣಾ}. ನೋಡುವುದು.

ಲೇಸಣೀ. ಸ್ತ್ರೀ: [ಶ್ಲೇಷಣೀ] ಒಂದು ಬಗೆಯ ವಿದ್ಯೆ
ಲೇಸಾ. ಸ್ತ್ರೀ: [ಲೇಶ್ಯಾ] ತೇಜಸ್ಸು, ಪ್ರಕಾಶ, ಕಾಂತಿ, ಮಂಡಲ, ಬಿಂಬ, ಕಿರಣ, ದೇಹ–ಸೌಂದರ್ಯ, ಆತ್ಮದ ಪರಿಣಾಮ–ವಿಶೇಷ. ಕೃಷ್ಣವೇ ಮೊದಲಾದ ದ್ರವ್ಯಗಳಿಂದ ಹುಟ್ಟುವ ಆತ್ಮದ ಶುಭ ಅಥವಾ ಅಶುಭ ಪರಿಣಾಮ. ಆತ್ಮದ ಶುಭ ಅಥವಾ ಅಶುಭ ಪರಿಣಾಮಗಳು ಉಂಟಾಗುವಲ್ಲಿ ಕಾರಣಭೂತವಾದ ಕೃಷ್ಣಾದಿ ದ್ರವ್ಯಗಳು(ಭಗ)
ಲೇಸಿಯ. ವಿ: [ಶ್ಲೇಷಿತ] ಸೇರಿಕೊಂಡ, ಅಂಟಿಕೊಂಡ
ಲೇಸ್ಸಾ. 'ಲೇಸಾ' ಶಬ್ದವನ್ನು ನೋಡುವುದು.
ಲೇಹ. ಲಿಹ=ಲಿಹ್' ಶಬ್ದವನ್ನು ನೋಡುವುದು.
ಲೇಹ(ಅಪ). 'ಲಹ್=ಲಭ್' ಶಬ್ದವನ್ನು ನೋಡುವುದು.
ಲೇಹ. ಪು: [ಲೇಹ] ಆಸ್ವಾದನೆ, ನೆಕ್ಕುವುದು, ರುಚಿನೋಡುವುದು(ಪಉಮ)
ಲೇಹ. ಪು: [ಲೇಖ] ಬರೆಯುವುದು, ಬರಹ, ಅಕ್ಷರ–ವಿನ್ಯಾಸ. ಪತ್ರ, ದೇವತೆ, ಲಿಪಿ, ವಿ: ಯಾವುದನ್ನು ಬರೆಯಲಾಗುತ್ತದೋ ಅದು– ಲೇಖಕ, ಬರೆಯುವವನು. –ವಾಹ. ವಿ; [ವಾಹ]ಪತ್ರವನ್ನು ಕೊಂಡೊಯ್ಯುವವನು. –ವಾಹಗ, –ವಾಹಯ. ವಿ: [–ವಾಹಕ]ಅದೇ ಅರ್ಥ. –ಸಾಲಾ. ಸ್ತ್ರೀ: [–ಶಾಲಾ] ಪಾಠಶಾಲೆ, ಲೇಹಾರಿಯ. ಪು: [ಲೇಖಾಚಾರ್ಯ] ಉಪಾಧ್ಯಾಯ, ಶಿಕ್ಷಕ
ಲೇಹಡ. ವಿ: [ದೇ] ಲಂಪಟ, ಅತಿಆಸೆ ಉಳ್ಳವನು
ಲೇಹಣ. ನ: [ಲೇಹನ] ಆಸ್ವಾದನ, ನಾಲಿಗೆಯಿಂದ ನೆಕ್ಕುವುದು, ರುಚಿನೋಡುವುದು
ಲೇಹಣೀ. ಸ್ತ್ರೀ: [ಲೇಖನೀ] ಲೇಖಣಿ, ಬರವಣಿಗೆಯ ಸಾಧನ
ಲೇಹಲ. 'ಲಹಡ' ಶಬ್ದವನ್ನು ನೋಡುವುದು.
ಲೇಹಾ. 'ಲಿಹಾ' ಶಬ್ದವನ್ನು ನೋಡುವುದು(ಔಪ)
ಲೇಹಿಯ. ವಿ: [ಲೇಖಿತ] ಬರೆಯಿಸಲ್ಪಟ್ಟ
ಲೇಹುಡ. ಪು: [ದೇ] ಕಲ್ಲಿನ ತುಣುಕು, ಮಣ್ಣಿನ ಹೆಂಟೆ(ದೇ)
ಲೋಅ. 'ರೋಅ=ರೋಚಯ್' ಶಬ್ದವನ್ನು ನೋಡುವುದು.
ಲೋಅ. ಸಕ: [ಲೋಕ್, ಲೋಕಯ್] ನೋಡು
ಲೋಅ. ಪು: [ಲೋಕ] ಧರ್ಮಾಸ್ತಿ ಕಾಯವೇ ಮೊದಲಾದ ಆಧಾರಭೂತ ಆಕಾಶ–ಕ್ಷೇತ್ರ, ಜಗತ್ತು, ಪ್ರಪಂಚ, ಜೀವ ಅಜೀವವೇ ಮೊದಲಾದ ದ್ರವ್ಯಗಳು, ಆವಲಿಕಾ ಮೊದಲಾದ ಕಾಲಗಳು, ಗುಣ, ಪರ್ಯಾಯ, ಧರ್ಮ, ಮನುಷ್ಯನೇ ಮೊದಲಾದ ಪ್ರಾಣಿವರ್ಗ(ಠಾ), ಪ್ರಕಾಶ, ಬೆಳಕು. –ಗ್ಗ. ನ: [ಲೋಕಾಗ್ರ] ಈಷತ್ ಪ್ರಾಗ್ಭರಾ ಎಂಬ ಪೃಥ್ವಿಯಿಂದ ಮುಕ್ತವಾದ ಸ್ಥಳ(ಣಾಯಾ), ಮುಕ್ತಿ, ಮೋಕ್ಷ, ನಿರ್ವಾಣ –ಗ್ಗಥೂಮಿಆ. ಸ್ತ್ರೀ: [ಲೋಕಾಗ್ರಸ್ತೂಪಿಕಾ] ಈಷತ್ ಪ್ರಾಗ್ಭರಾ ಪೃಥ್ವಿ. –ಗ್ಗಪಡಿವುಜ್ಝವಾಣಾ. ಸ್ತ್ರೀ: [ಲೋಕಾಗ್ರಪ್ರತಿಬೋಧನಾ] ಅದೇ ಅರ್ಥ. –ಣಾಮಿ. ಪು: [–ನಾಭಿ] ಮೇರು ಪರ್ವತ. –ಪ್ಪವಾಯ. ಪು: [–ಪ್ರವಾದ] ಜನಶ್ರುತಿ ಜನರು ಆಡಿಕೊಳ್ಳುವ ಮಾತು, ಗಾದೆಮಾತು. –ಮಜ್ಝ. ಪು: [–ಮಧ್ಯ] ಮೇರು ಪರ್ವತ. –ವಾಯ. ಪು: [–ವಾದ] ಲೋಕೋಕ್ತಿ, ಗಾದೆ ಮಾತು. ಲೋಆಗಾಸ. ಪು: [ಲೋಆಕಾಶ] ಲೋಕ–ಕ್ಷೇತ್ರ, ಆಲೋಕ–ಭಿನ್ನವಾದ ಆಕಾಶ. ಲೋಆಹಾಣಯ. ನ: [ಲೋಆಭಾಣಕ] ಲೋಕೋಕ್ತಿ, ಗಾದೆ ಮಾತು. 'ಲೋಗ' ಶಬ್ದವನ್ನು ನೋಡುವುದು.
ಲೋಅ. ಪು: [ಲೋಚ] ಲುಂಛನ, ಕೂದಲುಗಳನ್ನು ಬುಡಸಮೇತ ಕೀಳುವುದು(ಸುಪಾ)
ಲೋಅ. ಪುಉ: [ಲೋಪ] ಇಲ್ಲವಾಗುವುದು, ಅಭಾವ, ನಾಶವಾಗುವುದು
ಲೋಅಂತಿಯ. ಪು: [ಲೋಕಾಂತಿಕ] ಒಂದು ದೇವ–ಜಾತಿ(ಕಪ್ಪ)
ಲೋಅಗ. ನ: [ದೇ. ಲೋಚಕ] ಹಾಳಾದ ಅನ್ನ, ಹಳಸಿದ ಅನ್ನ
ಲೋಅಡೀ.(ಅಪ). ಸ್ತ್ರೀ: [ಲೋಮಪಟೀ] ಕಂಬಳಿ
ಲೋಅಣ. ಪುಂನ: [ಲೋಚನ] ಕಣ್ಣು, ನೇತ್ರ(ಪಾಅ), –ವತ್ತ. ನ: [–ಪತ್ರ] ರೆಪ್ಪೆ
ಲೋಅಣಿಲ್ಲ. ವಿ: [ಲೋಚನವತ್] ಕಣ್ಣುಳ್ಳವನು(ಸುಪಾ)
ಲೋಅಣೀ. ಸ್ತ್ರೀ: [ದೇ] ಒಂದು ವನಸ್ಪತಿ, ಮರ
ಲೋಇಅ. ವಿ: [ಲೋಕಿತ] ನೋಡಲ್ಪಟ್ಟ
ಲೋಇಯ. ವಿ: [ಲೌಕಿಕ] ಲೋಕಕ್ಕೆ ಸಂಬಂಧಿಸಿದ, ಸಾಂಸಾರಿಕ
ಲೋಉತ್ತರ}. ವಿ: [ಲೋಕೋತ್ತರ]
ಲೋಉತ್ತರಿಯ}. ವಿ:[ಲೋಕೋತ್ತರಿಕ] ಲೋಕ–

ಪ್ರಧಾನವಾದ. **'ಲೋಗುತ್ತರ'** ಶಬ್ದವನ್ನು ನೋಡುವುದು.

ಲೊಂಕ. ವಿ: [ದೇ] ನಿದ್ರಿಸಿರುವ

ಲೋಗ. 'ಲೋಅ=ಲೋಕ' ಶಬ್ದವನ್ನು ನೋಡುವುದು (ಕುಮಾ), **–ಕಂತ.** ನ: [–**ಕಾಂತ**] ಒಂದು ದೇವ-ವಿಮಾನ. **–ಕೂಡ.** ನ: [–**ಕೂಟ**] ಒಂದು ದೇವ-ವಿಮಾನ. **–ಗ್ಗಚೂಲಿಆ.** ಸ್ತ್ರೀ: [**ಲೋಕಾಗ್ರಚೂಲಿಕಾ**] ಮುಕ್ತ-ಸ್ಥಾನ, ಸಿದ್ಧಿ-ಶಿಲೆ. **–ಜತ್ತಾ.** ಸ್ತ್ರೀ: [–**ಯಾತ್ರಾ**] ಲೋಕವ್ಯವಹಾರ (ಣಾಯಾ). **–ಟ್ಠಿಇ.** ಸ್ತ್ರೀ: [–**ಸ್ಥಿತಿ**] ಲೋಕದ ವ್ಯವಸ್ಥೆ(ಠಾ). **–ದ್ದವ್ವ.** ನ: [–**ದ್ರವ್ಯ**] ಜೀವ ಅಜೀವವೇ ಮೊದಲಾದ ಪದಾರ್ಥ ಸಮೂಹ. **–ನಾಭಿ.** ಪು: [–**ನಾಭಿ**] ಮೇರು-ಪರ್ವತ. **–ನಾಹ.** ಪು: [–**ನಾಥ**] ಲೋಕದ ಸ್ವಾಮಿ, ಪರಮೇಶ್ವರ. **–ಪರಿಪೂರಣಾ.** ಸ್ತ್ರೀ: [–**ಪರಿಪೂರಣಾ**] ಮುಕ್ತ ಸ್ಥಾನವಾದ ಈಷತ್ ಪ್ರಾಗ್ಭರಾ ಪೃಥ್ವಿ. **–ಪಾಲ** ಪು: [–**ಪಾಲ**] ಇಂದ್ರರುಗಳ ದಿಕ್ಪಾಲಕ(ಔಪ). **–ಬಿಂದುಸಾರ.** ಪುಂನ: [–**ಬಿಂದುಸಾರ**] ಹದಿನಾಲ್ಕನೆಯ ಪೂರ್ವಗ್ರಂಥ. **–ಮಜ್ಝಾವಸಿಅ.** ಪುಂನ: [–**ಮಧ್ಯಾವಸಿತ**] ಅಭಿನಯ-ವಿಶೇಷ. **–ಮಜ್ಝಾವಸಾಣಿಅ.** ಪುಂನ: [–**ಮಧ್ಯಾವಸಾನಿಕ**] ಅದೇ ಅರ್ಥ. **–ರೂವ.** ನ: [–**ರೂಪ**]. ಒಂದು ದೇವ-ವಿಮಾನ. **–ಲೇಸ.** ನ: [–**ಲೇಶ್ಯ**] ಒಂದು ದೇವ-ವಿಮಾನ. **–ವಣ್ಣ.** ನ: [–**ವರ್ಣ**] ಒಂದು ದೇವ-ವಿಮಾನ. **–ವಾಲ.** **'–ಪಾಲ'** ಶಬ್ದವನ್ನು ನೋಡುವುದು. **–ವೀರ.** ಪು: [–**ವೀರ**] ಭಗವಾನ್ ಮಹಾವೀರ. **–ಸಿಂಗ.** ನ: [–**ಶೃಂಗ**] ಒಂದು ದೇವ-ವಿಮಾನ. **–ಸಿಟ್ಠ.** ನ: [–**ಸೃಷ್ಟ**] ಒಂದು ದೇವ-ವಿಮಾನ. **–ಹಿಅ.** ನ: [–**ಹಿತ**] ಒಂದು ದೇವ-ವಿಮಾನ. **ಲೋಗಾಯಯ.** ನ: [**ಲೋಕಾಯತ**] ನಾಸ್ತಿಕನು ರಚಿಸಿದ ಶಾಸ್ತ್ರ, ಚಾರ್ವಾಕ ದರ್ಶನ. **ಲೋಗಾಲೋಗ.** ಪುಂನ: [**ಲೋಕಾಲೋಕ**] ಸಂಪೂರ್ಣ ಆಕಾಶ ಕ್ಷೇತ್ರ, ಸಮಸ್ತ ಜಗತ್ತು (ಉವ). **ಲೋಗಾವತ್ತ.** ನ: [**ಲೋಕಾವರ್ತ**] ಒಂದು ದೇವ ವಿಮಾನ. **ಲೋಗಾಹಾಣ.** ನ: [**ಲೋಕಾಖ್ಯಾನ**] ಲೋಕೋಕ್ತಿ, ಜನಶ್ರುತಿ.

ಲೋಗಂತಿಯ. **'ಲೋಅಂತಿಯ'** ಶಬ್ದವನ್ನು ನೋಡುವುದು.

ಲೋಗಿಗ. **'ಲೋಇಅ=ಲೌಕಿಕ'** ಶಬ್ದವನ್ನು ನೋಡುವುದು.

ಲೋಗುತ್ತರ. **'ಲೋಉತ್ತರ'** ಶಬ್ದವನ್ನು ನೋಡುವುದು. **–ವಡಿಂಸಯ.** ನ: [**ಲೋಕೋತ್ತರಾವತಂಸಕ**] ಒಂದು ದೇವ ವಿಮಾನ.

ಲೋಗುತ್ತರ. ಪು: [**ಲೋಕೋತ್ತರ**] ಮುನಿ, ನ: ಜಿನಶಾಸನ, ಜೈನ ಸಿದ್ಧಾಂತ

ಲೋಗುತ್ತರಿಅ. ವಿ: [**ಲೋಕೋತ್ತರಿಕ**] ಸಾಧುವಿನ, ಜಿನಶಾಸನದ

ಲೊಟ್ಟ. ಅಕ: [**ಸ್ವಪ್**] ಉರುಳಾಡು, ನಿದ್ರಿಸು. **'ಲೊಟ್ಟಇ'**. ವ.ಕೃ: **'ಲೋಟ್ಟಯ–'**

ಲೊಟ್ಟ. ಅಕ: [**ಲುಠ್**] ಮಲಗು, ಕಾರ್ಯದಲ್ಲಿ ತೊಡಗು. **'ಲೊಟ್ಟಇ'** ವ. ಕೃ: **'ಲೋಟ್ಟಂತ'**

ಲೊಟ್ಟ}. ಪು: [ದೇ] ಸರಿಯಾಗಿ ಬೇಯಿಸದ ಅಕ್ಕಿ.

ಲೊಟ್ಟಯ}. ಪುಂಸ್ತ್ರೀ : ಮರಿ ಆನೆ(ಣಾಯಾ). ಸ್ತ್ರೀ: **ಟ್ಟಿಯಾ.**

ಲೊಟ್ಟಅ. ವಿ: [ದೇ] ಕುಳಿತುಕೊಂಡಿರುವ

ಲೊಟ್ಟ. ವಿ: [**ಸ್ಮೃತ**] ನೆನಪಿಸಿಕೊಂಡ

ಲೊಟ್ಟ. ಪು: [**ಲೋಷ್ಟ**] ಕಲ್ಲಿನ ಚೂರು, ಮಣ್ಣಿನಹೆಂಟೆ

ಲೋಡಾವಿಅ. ವಿ: [**ಲೋಟಿತ**] ತಿರುಗಿಸಲ್ಪಟ್ಟ

ಲೋಢ. ಸಕ: [ದೇ] ಹತ್ತಿಹಿಂಜು. ವ.ಕೃ: **'ಲೋಢಯಂತ'**

ಲೋಢ. ಪು: [ದೇ] ರುಬ್ಬುಗುಂಡು(ಉವಾ), ತಾವರೆಯ ಗೆಡ್ಡೆ, ವಿ: ನೆನಪಿಸಿಕೊಂಡ, ಮಲಗಿರುವ.

ಲೋಢಯ. ಪು: [ದೇ. **ಲೋಠಕ**] ಹತ್ತಿಯ ಬೀಜವನ್ನು ತೆಗೆಯುವ ಯಂತ್ರ(ಗಉಡ)

ಲೋಢಿಅ. ವಿ:[**ಲೋಠಿತ**] ಮಲಗಿಸಲ್ಪಟ್ಟ, ಮಲಗಿಸಲಾದ

ಲೋಣ. ನ: [**ಲವಣ**] ಉಪ್ಪು, ಲಾವಣ್ಯ, ದೇಹದ ಕಾಂತಿ(ಗಾ), ಒಂದು ವೃಕ್ಷ, **'ಲವಣ'** ಶಬ್ದವನ್ನು ನೋಡುವುದು.

ಲೋಣಿಯ. ವಿ: [**ಲಾವಣಿಕ**] ಲವಣಕ್ಕೆ ಸಂಬಂಧಿಸಿದ, ಲವಣದಿಂದ ಕೂಡಿದ(ಓಘ)

ಲೊಣ್ಣ. ನ: [**ಲಾವಣ್ಯ**] ಶರೀರದ ಕಾಂತಿ.

ಲೊತ್ತ. ನ: [**ಲೋಪ್ತ್ರ**] ಕದ್ದ ವಸ್ತು, ಕಳ್ಳ ಮಾಲು.

ಲೊದ್ಧ. ಪು: [**ಲೋಧ್ರ**] ಸಾಂಬ್ರಾಣಿ ಗಿಡ(ಪಣ್ಣ), **'ಲುದ್ಧ=ಲೋಧ್ರ'** ಶಬ್ದವನ್ನು ನೋಡುವುದು.

ಲೊದ್ಧ. **'ಲುದ್ಧ=ಲುಬ್ಧ'** ಶಬ್ದವನ್ನು ನೋಡುವುದು.

ಲೊಪ್ಪ. 'ಲುಂಪ' ಶಬ್ದವನ್ನು ನೋಡುವುದು.
ಲೋಭ. ಸಕ: [ಲೋಭಯ್] ಆಸೆ ತೋರಿಸಿ ಮರುಳುಮಾಡು.
ಲೋಭ. ಪು: [ಲೋಭ] ಅತಿ ಆಸೆ, ಅಪೇಕ್ಷೆ(ಆಚಾ), ವಿ: ಅತ್ಯಾಸೆವುಳ್ಳ,
ಲೋಭಣಯ. ವಿ: [ಲೋಭನಕ] ಲೋಭಿ,
ಲೋಭಿ}. ಪು: [ಲೋಭಿನ್] ಅತಿ ಆಸೆ ಉಳ್ಳವನು
ಲೋಭಿಲ್ಲ}.
ಲೋಮ. ಪುಂನ: [ಲೋಮ] ಮೈ ಕೂದಲು, ರೋಮ, **–ಪಕ್ಖಿ. ಪು: [–ಪಕ್ಷಿನ್]** ಕೂದಲಗಳ ರೆಕ್ಕೆ ಹೊಂದಿರುವ ಪಕ್ಷಿ. **–ಸ.ವಿ: [–ಶ]** ರೋಮವುಳ್ಳ. **–ಹತ್ಥ. ಪು: [–ಹಸ್ತ]** ಕೂದಲುಗಳಿಂದ ಮಾಡಿದ ಪೊರಕೆ(ವಿಪಾ), **–ಹರಿಸ. ಪು: [–ಹರ್ಷ]** ಒಂದು ನರಕಾವಾಸ, ಹರ್ಷದಿಂದ ರೋಮಾಂಚನ ವಾಗುವುದು. **–ಹಾರ. ಪು: [–ಹಾರ]** ಹೊಡೆದು ಹಣವನನ್ನು ದೋಚುವ ಕಳ್ಳ. **ಲೋಮಾಹಾರ. ಪು: [ಲೋಮಾಹಾರ]** ರೋಮಗಳಿಂದ ತೆಗೆದುಕೊಳ್ಳಲಾಗುವ ಆಹಾರ, ಚರ್ಮದಿಂದ ತೆಗೆದುಕೊಳ್ಳುವ ಆಹಾರ(ಭಗ).
ಲೋಮಂಥಿಅ. ಪು: [ದೇ] ನಟ
ಲೋಮಸೀ. ಸ್ತ್ರೀ: [ದೇ] ಸೌತೆಕಾಯಿ, ಸೌತೆ ಬಳ್ಳಿ
ಲೋಯ. ನ: [ದೇ] ಒಳ್ಳೆಯ ಮೃಷ್ಟಾನ್ನ ಭೋಜನ
ಲೋರ. ಪುಂನ: [ದೇ] ಕಣ್ಣು, ಕಣ್ಣೀರು,
ಲೋಲ. ಅಕ: [ಲುಠ್] ಮಲಗು, **ಸಕ:** ಕಲಕು, ಕ್ಷೋಭೆ ಉಂಟುಮಾಡು. **ಲೋಲಇ, ವ. ಕೃ: 'ಲೋಲಂತ'**
ಲೋಲ. ಸಕ: [ಲೋಠಯ್] ಮಲಗಿಸು
ಲೋಲ. ವಿ: [ಲೋಲ] ಅಪೇಕ್ಷೆ ಉಳ್ಳ, ಆಸಕ್ತಿ ಹೊಂದಿರುವ(ಣಾಯಾ), ರತ್ನ–ಪ್ರಭಾ ನರಕದ ಒಂದು ನರಕಾವಾಸ, ಶರ್ಕರಾ ಪ್ರಭ ಎಂಬ ಹೆಸರಿನ ಎರಡನೇ ನರಕ–ಭೂಮಿಯ ೯ನೇ ನರಕ–ಸ್ಥಾನ. **–ಮಜ್ಝ. ಪು: [–ಮಧ್ಯ]** ಒಂದು ನರಕಾವಾಸ(ಠಾ). **–ಸಿಟ್ಠ. ಪು: [–ಶಿಷ್ಟ]** ಒಂದು ನರಕಾವಾಸ. ಲೋಲಾವತ್ತ. **ಪು: [ಲೋಲಾವರ್ತ]** ಒಂದು ನರಕಾವಾಸ–ವಿಶೇಷ.
ಲೋಲಂಠಿಅ. ನ: [ದೇ] ಮಿಥ್ಯಾ ಪ್ರಶಂಸೆ(ದೇ)
ಲೋಲಣ. ನ: [ಲೋಠನ] ಮಲಗುವುದು(ಸೂಅ), ಮಲಗಿಸು
ಲೋಲಪಚ್ಛ. ಪು: [ಲೋಲಪಾಕ್ಷ] ನರಕ ಸ್ಥಾನ
ಲೋಲಿಕ್ಕ}. ನ: [ಲೌಲ್ಯ] ಅತಿ ಆಸೆಯಿಂದ
ಲೋಲಿಮ}. ಪುಂಸ್ತ್ರೀ: [ಲೋಲತ್ವ] ಕೂಡಿರುವುದು, ಲೋಲುಪತೆ (ಪಣ್ಣ)
ಲೋಲುಅ. ವಿ: [ಲೋಲುಪ] ಅತಿ ಆಸೆ ಉಳ್ಳ, ಲಂಪಟ(ಪಉಮ). **ಪು:** ರತ್ನಪ್ರಭಾ ನರಕದ ಒಂದು ನರಕಾವಾಸ. **–ಚ್ಚುಅ. ಪು: [–ಚ್ಯುತ]** ರತ್ನಪ್ರಭಾ ನರಕದ ಒಂದು ನರಕ ಸ್ಥಾನ(ಉವಾ).
ಲೋಲುಂಚಾವಿಅ. ವಿ: [ದೇ] ಅತಿ ಆಸೆ ಪಟ್ಟವನು,
ಲೋಲುವ. 'ಲೋಲುಅ' ಶಬ್ದವನ್ನು ನೋಡುವುದು.
ಲೋವ. ಸಕ: [ಲೋಪಯ್] ನಾಶ ಮಾಡು, ಲೋಪಗೊಳಿಸು
ಲೋವ. ಪುಂನ: [ಲೋಪ] ವಿನಾಶ, ಧ್ವಂಸ, ಚ್ಯುತಿ, ವರ್ಣಗಳು ಇಲ್ಲವಾಗುವುದು(ಕುಪ್ರ)
ಲೋಹ. 'ಲೋಭ= ಲೋಭ' ಶಬ್ದವನ್ನುನೋಡುವುದು.
ಲೋಹ. ಪುಂನ: [ಲೋಹ] ಕಬ್ಬಿಣ(ವಿಪಾ), ಯಾವುದೇ ಲೋಹ, **–ಕಾರ. ಪು: [–ಕಾರ]** ಕಮ್ಮಾರ, **–ಜಂಘ. ಪು: [–ಜಂಘ]** ಭಾರತದಲ್ಲಿ ಹುಟ್ಟಿದ ಎರಡನೇ ಪ್ರತಿವಾಸುದೇವ ದೊರೆ. ರಾಜಾ ಚಂಡ ಪ್ರದ್ಯೋತನ ಒಬ್ಬ ದೂತ. **–ಜಂಘವಣ. ನ: [–ಜಂಘವನ]** ಮಥುರೆಯ ಹತ್ತಿರವಿರುವ ಒಂದು ಕಾಡು.
ಲೋಹ. ವಿ: [ಲೌಹ] ಕಬ್ಬಿಣದಿಂದ ತಯಾರಿಸಿದ, ಲೋಹದಿಂದ ನಿರ್ಮಿತವಾದ.
ಲೋಹಂಗಿಣೀ. ಸ್ತ್ರೀ: [ಲೋಹಾಂಗಿನೀ] ಒಂದು ಛಂದಸ್ಸು,
ಲೋಹಲ. ಪು: [ಲೋಹಲ] ಅಸ್ಪಷ್ಟವಾದ ಶಬ್ದ, ಅಸ್ಪಷ್ಟ ಮಾತು
ಲೋಹಾರ. ಪು: [ಲೋಹಕಾರ] ಕಮ್ಮಾರ, ಕಬ್ಬಿಣದ ಕೆಲಸ ಮಾಡುವವನು
ಲೋಹಿ–}. 'ಲೋಹೀ' ಶಬ್ದವನ್ನು ನೋಡುವುದು.
ಲೋಹಿಅ–}.
ಲೋಹಿಅ. ಪು: [ಲೋಹಿತ] ಕೆಂಪು ಬಣ್ಣ. **ವಿ:** ಕೆಂಪು ಬಣ್ಣದ(ಉವಾ). ರಕ್ತ(ಪಉಮ), ಕೌಶಿಕ ಗೋತ್ರದ ಒಂದು ಶಾಖೆ.
ಲೋಹಿಅಂಕ. ಪು: [ಲೋಹಿತ್ಯಕ, ಲೋಹಿತಾಂಕ] ೮೮ ಮಹಾಗ್ರಹಗಳಲ್ಲಿ ಮೂರನೆಯ ಮಹಾಗ್ರಹ.

ಲೋಹಿಅಕ್ಖ. ಪು: [ಲೋಹಿತಾಕ್ಷ] ಒಂದು ಮಹಾ ಗ್ರಹ(ಠಾ), ಚಮರೇಂದ್ರನ ಮಹಿಷ ಸೈನ್ಯದ ಅಧಿಪತಿ, ರತ್ನದ ಒಂದು ಪ್ರಭೇದ, ಒಂದು ದೇವ–ವಿಮಾನ. ರತ್ನಪ್ರಭ ಪೃಥ್ವಿಯ ಒಂದು ಕಾಂಡ, ಒಂದು ಪರ್ವತ ಶಿಖರ,

ಲೋಹಿಅ}. **ಅಕ: [ಲೋಹಿತಾಯ್]**
ಲೋಹಿಆಅ}. ಕೆಂಪಗಾಗುವುದು

ಲೋಹಿಆಮುಹ. ಪು: [ಲೋಹಿತಾಮುಖ] ರತ್ನಪ್ರಭಾ ಎಂಬ ಒಂದು ನರಕಾವಾಸ

ಲೋಹಿಚ್ಚ. ಪು: [ಲೋಹಿತ್ಯ] ಆಚಾರ್ಯ ಭೂತದಿನ್ನನ ಶಿಷ್ಯ, ಒಬ್ಬ ಜೈನ ಮುನಿ

ಲೋಹಿಚ್ಚ.} **ನ: [ಲೌಹಿತ್ಯಾಯನ]** ಒಂದು ಗೋತ್ರ.
ಲೋಹಿಚ್ಚಾಯಣ}.

ಲೋಹಿಣೀ.} **ಸ್ತ್ರೀ: [ದೇ]** ಒಂದು ಗಡ್ಡೆ, ಒಂದು
ಲೋಹಿಣೀಹೂ}. ವನಸ್ಪತಿ

ಲೋಹಿಲ್ಲ. ವಿ: [ಲೋಭಿನ್] ಅತಿ ಆಸೆ ಉಳ್ಳವನು, ಮೋಹಗೊಳಿಸಿ ಮರುಳು ಮಾಡುವವನು

ಲೋಹೀ. ಸ್ತ್ರೀ: [ಲೌಹೀ] ಲೋಹದಿಂದ ಮಾಡಲಾದ ಒಂದು ಪಾತ್ರೆ(ಉಪ)

ಲ್ಹಸ. 'ಲಸ=ಲಸ್' ಶಬ್ದವನ್ನು ನೋಡುವುದು.

ಲ್ಹಸ. ಅಕ: [ಸ್ರಂಸ್] ಜಾರು, ಸರಿ, ಬೀಳು

ಲ್ಹಸಣ. ನ: [ಸ್ರಂಸನ] ಜಾರುವುದು, ಸರಿಯುವುದು, ಬೀಳುವುದು

ಲ್ಹಸಾವ. ಸಕ: [ಸ್ರಂಸಯ್] ಜಾರಿಸು, ಬೀಳಿಸು

ಲ್ಹಸಿಅ. ವಿ: [ಸ್ರಸ್ತ] ಜಾರಿ ಕೆಳಗೆ ಬಿದ್ದ

ಲ್ಹಸಿಅ. ವಿ: [ದೇ] ಸಂತಸಗೊಂಡ, ಹರ್ಷಿತನಾದ

ಲ್ಹಸುಣ. 'ಲಸುಣ' ಶಬ್ದವನ್ನು ನೋಡುವುದು.

ಲ್ಹಾದಿ}. **ಸ್ತ್ರೀ: [ಹ್ಲಾದಿ]** ಆಹ್ಲಾದ, ಸಂತಸ, ಹರ್ಷ
ಲ್ಹಾಯ}. **ಪು: [ಹ್ಲಾದ]**

ಲ್ಹಾಸಿಯ. ಪು: [ಲ್ಹಾಸಿಕ] ಒಂದು ಅನಾರ್ಯ ಮನುಷ್ಯ ಜಾತಿ(ಪಣ್ಣ)

ಲ್ಹಿಕ್ಕ. ಅಕ: [ನಿ+ಲೀ] ಅಡಗಿಕೊಳ್ಳು, **'ಹ್ಲಿಕ್ಕಇ'**, **ವ. ಕೃ: 'ಹ್ಲಿಕ್ಕಂತ'**

ಲ್ಹಿಕ್ಕ. ವಿ: [ದೇ] ನಾಶವಾದ, ಹೊರಟುಹೋದ, ಕಳೆದುಹೋದ.

ವ

ವ. **ಪು:** [ವ] ಅಂತಸ್ಥ ಅವರ್ಗೀಯ ವ್ಯಂಜನ. ದಂತ್ಯೋಷ್ಠ್ಯ. **ಪುಂನ:** ವರುಣ(ಸೇ)

ವ. **ಅ:** [ವ] 'ಇವ' ಶಬ್ದವನ್ನು ನೋಡುವುದು (ಕುಮಾ)

ವ. **'ವಾ=ಅ'** ವನ್ನು ನೋಡುವುದು

ವ–. **'ವಾಯಾ=ವಾಚ್'** ಶಬ್ದವನ್ನು ನೋಡುವುದು. **–ಕ್ಖೇವ.** ವಿ: [ಕ್ಷೇಪಕ] ವಚನದ ನಿರಾಕರಣೆ, ತಿರಸ್ಕಾರ. **–ಪ್ಪಇರಾಯ. ಪು: [ಪತಿರಾಜ]** ಒಬ್ಬ ಪ್ರಾಚೀನ ಕವಿ. 'ಗಉಡವಹೋ'ದ ಕರ್ತೃ.

ವಅಣೀಆ. ಸ್ತ್ರೀ: [ದೇ] ಉನ್ಮತ್ತ ಮಹಿಳೆ, ಕೆಟ್ಟ ಸ್ವಭಾವದ ಹೆಣ್ಣು

ವಅಲ. ಸಕ: [ಪ್ರ+ಸೃ] ಹರಡು, ಪ್ರಸಾರಮಾಡು

ವಆಡ. 'ವಾಂಉಾಡ=ವಾಚಾಟ' ಶಬ್ದವನ್ನು ನೋಡುವುದು.

ವಇ. ಅ: [ವೈ] ನಿಶ್ಚಯ, ಅನುನಯ, ಸಂಬೋಧನೆ ಮೊದಲಾದ ಅರ್ಥಗಳನ್ನು ಸೂಚಿಸುವ ಮತ್ತು ಪಾದಪೂರಣದ ಅವ್ಯಯ

ವಇ. ಅ: [ದೇ] ಕೃಷ್ಣ ಪಕ್ಷ(ಸುಪಾ).

ವಇ. ವಿ: [**ವ್ರತಿನ್**] ವ್ರತವುಳ್ಳವನು, ಸಂಯಮಿ, ವ್ರತಿ. ಸ್ತ್ರೀ: –ಣೀ

ವಇ. ಸ್ತ್ರೀ: [**ವಾಚ್**] ಮಾತು, ವಾಣಿ(ಸಮ). **–ಗುತ್ತ.** ವಿ: [**–ಗುಪ್ತ**] ಮಾತಿನ ಮೇಲೆ ಹತೋಟಿ ಉಳ್ಳವನು. **–ಗುತ್ತಿ.** ಸ್ತ್ರೀ: [**–ಗುಪ್ತಿ**] ಮಾತಿನ ಸಂಯಮ(ಆಚಾ). **–ಜೋಅ, ಜೋಗ. ಪು:** [**–ಯೋಗ**] ವಚನ–ವ್ಯಾಪಾರ, ಮಾತಿನ ಬಳಕೆ. **–ಜೋಗಿ.** ವಿ: [**–ಯೋಗಿನ್**] ಮಾತಿನ ಬಳಕೆ ಉಳ್ಳವನು. **–ಮಂತ.** ವಿ: [**–ಮತ್**] ವಚನವುಳ್ಳವನು. **–ಮೇತ್ತ. ನ:** [**–ಮಾತ್ರ**] ನಿರ್ಥಕವಾದ ಮಾತು. **'ವಈ'** ನೋಡುವುದು.

ವಇ. ಸ್ತ್ರೀ: [ವೃತಿ] ಮುಳ್ಳು, ಬೇಲಿ ಇತ್ಯಾದಿಗಳಿಂದ ಆವರಣದ ಸುತ್ತುಗಟ್ಟುವುದು(ಗಉಡ)

–ವಇ. **'ಪಇ=ಪತಿ'** ಶಬ್ದವನ್ನು ನೋಡುವುದು.

ವಇ–. **'ವಯ=ವದ್'** ಶಬ್ದವನ್ನು ನೋಡುವುದು.

ವಇ–. **'ವಯ=ವ್ರಜ್'** ಶಬ್ದವನ್ನು ನೋಡುವುದು.

ವಇಅ. ವಿ: [ದೇ] ಕುಡಿಯಲ್ಪಟ್ಟದ್ದು, ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ,

ವಇಅ. ವಿ: [ವ್ಯಯಿತ] ವ್ಯಯವಾದ, ಖರ್ಚಾದ

ವಇಅಬ್ಭ. ಪು: [**ವೈದರ್ಭ**] ವಿದರ್ಭ ದೇಶದ ದೊರೆ. ವಿ: ವಿದರ್ಭ ದೇಶದಲ್ಲಿ ಹುಟ್ಟಿದ

ವಇಅರ. ಪು: [**ವ್ಯತಿಕರ**] ಪ್ರಸಂಗ, ಪ್ರಸ್ತಾವ, ಸಂಬಂಧ

ವಇಅವ್ವ. 'ವಯ=ವ್ರಜ' ಶಬ್ದವನ್ನು ನೋಡುವುದು.

ವಇಆ. ಸ್ತ್ರೀ: [**ವ್ರಜಿಕಾ**] ದನಗಳ ಸಣ್ಣ ಕೊಟ್ಟಿಗೆ, ಗೋವುಗಳ ಸಣ್ಣ ಮಂದೆ(ಓಘ)

ವಇಆಲಿಅ. ವಿ: [**ವೈತಾಲಿಕ**] ಸ್ತುತಿಪಾಠಕ, ಬೆಳಿಗ್ಗೆ ಮಂಗಳ ವಾದ್ಯ, ಹಾಡುಗಳಿಂದ ರಾಜನನ್ನು ಎಚ್ಚರಿಸುವವನು(ಹೇ)

ವಇಆಲೀಅ. ಪುಂನ: [**ವೈತಾಲೀಯ**] ಒಂದು ಛಂದಸ್ಸು.

ವಇಏಸ. ವಿ: [**ವೈದೇಶ**] ವಿದೇಶಕ್ಕೆ ಸಂಬಂಧಿಸಿದ, ವಿದೇಶಿ(ಪಉಮ)

ವಇಏಹ. ಪು: [**ವೈದೇಹ**] ವೈಶ್ಯ, ವ್ಯಾಪಾರಿ, ಶೂದ್ರ ಪುರುಷ ಮತ್ತು ವೈಶ್ಯ ಸ್ತ್ರೀಯಿಂದ ಹುಟ್ಟಿದ ಒಂದು ಜಾತಿ–ವಿಶೇಷ.

ವಇಂಗಣ. ನ: [ದೇ] ಬದನೆ ಗಿಡ(ಉವಾ)

ವಇಕಚ್ಛ. ಪು: [**ವೈಕಕ್ಷ**] ಉತ್ತರೀಯ(ಔಪ)

ವಇಕಲಿಅ. ನ: [**ವೈಕಲ್ಯ**] ವಿಕಲತೆ, ದೋಷ, ನ್ಯೂನತೆ, ಅಂಗಹೀನತೆ(ಪಾಅ)

ವಇಕುಂಠ. ಪು: [**ವೈಕುಂಠ**] ವಿಷ್ಣು, ಉಪೇಂದ್ರ, ವಿಷ್ಣುವಿನ ನೆಲೆಯಾದ ವೈಕುಂಠ ಲೋಕ(ಉಪ)

ವಇಕ್ಕಂತ. ವಿ: [**ವ್ಯತಿಕ್ರಾಂತ**] ಕಳೆದುಹೋದ (ಪಉಮ)

ವಇಕ್ಕಮ. ಪು: [**ವ್ಯತಿಕ್ರಮ**] ಕ್ರಮವು ವ್ಯತ್ಯಾಸವಾಗುವುದು, ಉಲ್ಲಂಘಿಸುವುದು, ನಿಯಮ ಮೀರುವುದು(ತಾ)

ವಇಗರಣಿಅ. ಪು: [**ವೈಕರಣಿಕ**] ರಾಜನಿಂದ ನಿಯುಕ್ತನಾದ ಅಧಿಕಾರಿ, ರಾಜ ಕರ್ಮಚಾರಿ

ವಇಗಾ. 'ವಇಆ' ಶಬ್ದವನ್ನು ನೋಡುವುದು.

ವಇಗುಣ್ಣ. ನ: [**ವೈಗುಣ್ಯ**] ವಿಕಲತೆ, ಅಪರಿಪೂರ್ಣತೆ, ವಿರುದ್ಧತೆ, ದೋಷ

ವಇಚಿತ್ತ. ನ: [**ವೈಚಿತ್ರ್ಯ**] ವಿಚಿತ್ರತೆ, ಆಶ್ಚರ್ಯ, ಮನಸ್ಸಿನ ಅಸ್ಥಿರತೆ(ವಿಸೇ)

ವಇಜವಣ. ವಿ: [**ವೈಜವನ**] ವೈಜವನ ಗೋತ್ರದಲ್ಲಿ ಹುಟ್ಟಿದ

ವಇಣೀ. **'ವಇ=ವ್ರತಿನ್'** ಶಬ್ದವನ್ನು ನೋಡುವುದು.

ವಇತುಲಿಅ. ವಿ: [**ವೈತುಲಿಕ**] ತುಲನೆಯಿಲ್ಲದ, ಹೋಲಿಕೆಯಿಲ್ಲದ(ನಿಚೂ)

ವಇತ್ತಏ.} **'ವಯ=ವದ್'** ಶಬ್ದವನ್ನು ನೋಡುವುದು.
ವಇತ್ತಾ}.

ವಇತ್ತಾ. **'ವಯ=ವಚ್'** ಶಬ್ದವನ್ನು ನೋಡುವುದು.

ವಇತ್ತು. ವಿ: [ವದಿತೃ] ಮಾತನಾಡುವವನು, ಹೇಳುವವನು(ಠಾ)

ವಇದಬ್ಭ. **'ವಇಅಬ್ಬ'** ಶಬ್ದವನ್ನು ನೋಡುವುದು.

ವಇದಿಸ. **ಪು:** [**ವೈದಿಶ್**] ಅವಂತಿ ದೇಶ, ಮಾಲವ ದೇಶ, ವಿ: 'ವಿದಿಶ' ಕ್ಕೆ ಸಂಬಂಧಿಸಿದ

ವಇದೇಸ. **'ವಇಏಸ'** ಶಬ್ದವನ್ನು ನೋಡುವುದು.

ವಇದೇಸಿಅ. ವಿ: [**ವೈದೇಶಿಕ**] ವಿದೇಶೀಯ, ಬೇರೆ ದೇಶದಲ್ಲಿ ಹುಟ್ಟಿದವನು

ವಇದೇಹ. **'ವಇಏಹ'** ಶಬ್ದವನ್ನು ನೋಡುವುದು.

ವಇದೇಹೀ. **ಸ್ತ್ರೀ:** [**ವೈದೇಹೀ**] ಜನಕ ಮಹಾರಾಜನ ಮಗಳಾದ ಜಾನಕಿ, ಜನಕ ರಾಜನ ಹೆಂಡತಿ, ಅರಿಶಿನ, ಹಿಪ್ಪಲಿ, ವ್ಯಾಪಾರಿಯ ಹೆಂಡತಿ

ವಇಧಮ್ಮ. ನ: [**ವೈಧರ್ಮ್ಯ**] ವಿರುದ್ಧ ಧರ್ಮತ್ವ, ವಿರುದ್ಧವಾಗಿರುವಿಕೆ, ವ್ಯತ್ಯಾಸವಾಗಿರುವುದು, ಹೋಲಿಕೆ ಇಲ್ಲದಿರುವುದು

ವಇಮಿಸ್ಸ. ವಿ: [**ವ್ಯತಿಮಿಶ್ರ**] ಸಮ್ಮಿಳಿತ, ಒಟ್ಟಿಗೆ ಸೇರಿರುವ

ವಇರ. **'ವೇರ= ವೈರ'** ಶಬ್ದವನ್ನು ನೋಡುವುದು.

ವಇರ. **ಪುಂನ:** [**ವಜ್ರ**] ನವರತ್ನಗಳಲ್ಲಿ ಒಂದು, ಇಂದ್ರನ ಅಸ್ತ್ರವಾದ ವಜ್ರಾಯುಧ, ಒಂದು ದೇವ–ವಿಮಾನ, ವಿದ್ಯುತ್, ಮಿಂಚು. **ಪು:** ಒಬ್ಬ ಪ್ರಸಿದ್ಧ ಜೈನ ಮಹರ್ಷಿ. ಕಳ್ಳಿಗಿಡ, ಶ್ರೀಕೃಷ್ಣನ ಮರಿಮೊಮ್ಮಗ, ನ: ಬಾಲಕ, ಭೂಮಿ, ಗಂಜಿ, ಎಳ್ಳಿನ ಹೂವು, ಒಂದು ಬಗೆಯ ಲೋಹ, ಕಾಗೆ ಬಂಗಾರ ಅಭ್ರಕ, ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಒಂದು ಯೋಗ, ಸಣ್ಣ ಮೊಳೆ, ಸಣ್ಣ ಗೂಟ. ಅಮೃತ ಬಳ್ಳಿ, ಕೊಳವಳಿಕೆ ಗಿಡ, **–ಕಂಡ.**ನ: [**–ಕಾಂಡ**] ರತ್ನ ಪ್ರಭಾ ಪೃಥ್ವಿಯ ಒಂದು ವಜ್ರ–ರತ್ನಮಯ ಕಾಂಡ. **–ಕಂತ.** ನ: [**–ಕಾಂತ**] ಒಂದು ದೇವ ವಿಮಾನ. **–ಕೂಡ.** ನ: [**–ಕೂಟ**] ಒಂದು ದೇವ ವಿಮಾನ. ದೇವಿಯೊಬ್ಬಳ ಆವಾಸ ಶಿಖರ. **–ಜಂಘ.** **ಪು:** [**–ಜಂಘ**] ಭರತ ಕ್ಷೇತ್ರದಲ್ಲಿ ಹುಟ್ಟಿದ ಮೂರನೇ ಪ್ರತಿವಾಸುದೇವ. ಪುಷ್ಕಲಾವತಿ ವಿಜಯದ ಲೋಹಾರ್ಗಲ ನಗರದ ಒಬ್ಬ ರಾಜ. **–ಪ್ಪಭ.** ನ: [**–ಪ್ರಭ**] ಒಂದು ದೇವ–ವಿಮಾನ. **–ಮಜ್ಝಾ.** **ಸ್ತ್ರೀ:** [**–ಮಧ್ಯಾ**] ಒಂದು ಬಗೆಯ ವ್ರತ.**–ರೂವ.** ನ: [**–ರೂಪ**] ಒಂದು ದೇವ ವಿಮಾನ, **–ಲೇಸ.** ನ: [**–ಲೇಶ್ಯ**]. ಒಂದು ದೇವ ವಿಮಾನ. **–ವಣ್ಣ.** ನ: [**–ವರ್ಣ**] ಒಂದು ದೇವ ವಿಮಾನ. –ಸಿಂಗ. ನ: [**–ಶೃಂಗ**] ಒಂದು ದೇವ–ವಿಮಾನದ ಹೆಸರು. ಸಿಂಹ. **ಪು:** [**–ಸಿಂಹ**] ಒಬ್ಬ ದೊರೆ. –ಸಿಟ್ಠ. ನ: [**–ಸೃಷ್ಟ**] ಒಂದು ದೇವ–ವಿಮಾನ. –ಸೀಹ. 'ಸಿಂಹ' ಶಬ್ದವನ್ನು ನೋಡುವುದು. –ಸೇಣ. **ಪು:** [**–ಸೇನ**] ವಜ್ರ ಸ್ವಾಮಿಯ ಶಿಷ್ಯನಾಗಿದ್ದ ಒಬ್ಬ ಪ್ರಾಚೀನ ಜೈನ ಮಹರ್ಷಿ. **–ಸೇಣಾ.** **ಸ್ತ್ರೀ:** [**–ಸೇನಾ**] ಒಬ್ಬ ಇಂದ್ರಾಣಿ, ದಾಕ್ಷಿಣಾತ್ಯ ವಾನವ್ಯಂತರೇಂದ್ರನ ಒಬ್ಬ ಅಗ್ರ ಮಹಿಷಿ. (ಣಾಯಾ). ಒಬ್ಬ ದಿಕ್ಕುಮಾರಿ ದೇವಿ. **–ಹರ.** **ಪು:** [**–ಧರ**] ಇಂದ್ರ, – **ವಇರಾಮಯ.** ವಿ: [**–ಮಯ**] ವಜ್ರ ರತ್ನಗಳಿಂದ ಮಾಡಿದ(ಔಪ). **ಸ್ತ್ರೀ:** **ವಇರಾಮಈ, ವಇರಾಮತೀ.** **ವಇರಾವತ್ತ.** ನ: [**ವಜ್ರಾವರ್ತ**] ಒಂದು ದೇವ–ವಿಮಾನ. **ವಇರೋಸಭನಾರಾಯ.** ನ: [**ಋಷಭನಾರಾಚ**] ಶರೀರ–ವಿಶೇಷ. **'ವಜ್ಜ=ವಜ್ರ'** ಶಬ್ದವನ್ನು ನೋಡುವುದು.

ವಇರಾ. **ಸ್ತ್ರೀ:** [**ವಜ್ರಾ**] ಒಂದು ಜೈನ ಮುನಿಶಾಖೆ (ಕಪ್ಪ)

ವಇರಾಗ. ನ: [**ವೈರಾಗ್ಯ**] ವಿರಕ್ತಿ(ಪಉಮ)

ವಇರಾಡ. **ಪು:** [**ವೈರಾಟ**] ಒಂದು ಆರ್ಯ ದೇಶ, ನ: ಮತ್ಸ್ಯ ದೇಶದ ರಾಜಧಾನಿಯಾಗಿದ್ದ ಪ್ರಾಚೀನ ಭಾರತೀಯ ನಗರ.

ವಇರಾಯ. **'ವಇರಾಗ'** ಶಬ್ದವನ್ನು ನೋಡುವುದು.

ವಇರಿ}. ವಿ: [**ವೈರಿನ್**] ಶತ್ರು, ರಿಪು(ಕಾಲ)
ವಇರಿಅ}.

ವಇರಿಕ್ಕ. ನ: [**ದೇ**] ಒಂದು ನಿರ್ಜನ ಪ್ರದೇಶ, ಏಕಾಂತ ಪ್ರದೇಶ. **'ಪಇರಿಕ್ಕ'** ಶಬ್ದವನ್ನು ನೋಡುವುದು.

ವಇರಿತ್ತ. ವಿ: [**ವ್ಯತಿರಿಕ್ತ**] ಭಿನ್ನ, ಬೇರೆಯಾದ, ಪ್ರತ್ಯೇಕ

ವಇರೀ. **ಸ್ತ್ರೀ:** [**ವಜ್ರಾ**] ಒಂದು ಜೈನ ಮುನಿಶಾಖೆ

ವಇರುಟ್ಟಾ. ಸ್ತ್ರೀ: [ವೈರೋಟ್ಯಾ] ಒಬ್ಬ ವಿದ್ಯಾ ದೇವಿ, ಭಗವಾನ್ ಮಲ್ಲಿನಾಥನ ಶಾಸನ ದೇವಿ.
ವಇರುತ್ತರವಡಿಂಸಗ. ನ: ವಜ್ರೋತ್ತರಾವತಂಸಕ] ಒಂದು ದೇವ ವಿಮಾನ.
ವಇರೇಅ}. ಪು: [ವ್ಯತಿರೇಕ] ಅಭಾವ, ಕಾರಣ
ವಇರೇಗ}. ಇಲ್ಲದಿರುವ ಸಂದರ್ಭದಲ್ಲಿ ಕಾರ್ಯ ಇಲ್ಲದಿರುವುದು. ವಿನಾ, ಹೊರತು, ವ್ಯತ್ಯಾಸ, ತಾರತಮ್ಯ
ವಇರೋಅಣ. ಪು: [ವೈರೋಚನ] ಅಗ್ನಿ, ಬೆಂಕಿ, 'ಬಲಿ' ಎಂಬ ಹೆಸರಿನ ಇಂದ್ರ, ಉತ್ತರ ದಿಕ್ಕಿನಲ್ಲಿರುವ ಅಸರ ನಿಕಾಯದ ದೇವ(ಭಗ), **ಪುಂನ:** ಒಂದು ಲೋಕಾಂತಿಕ ದೇವ ವಿಮಾನ.
ವಇರೋಅಣ. ಪು: [ದೇ] ಬುದ್ಧ ದೇವ
ವಇರೋಡ. ಪು: [ದೇ] ಜಾರ, ಉಪಪತಿ
ವಇವಲಯ. ಪು: [ದೇ] ದುಂದುಭ ಸರ್ಪ, ಸರ್ಪದ ಒಂದು ಜಾತಿ
ವಇವಾಯ. ಪು: [ವ್ಯತೀಪಾತ] ಜ್ಯೋತಿಷ್ಯದ ಒಂದು ಪ್ರಸಿದ್ಧ ಯೋಗ, ೨೭ ಯೋಗಗಳಲ್ಲಿ ೧೭ನೇ ಯೋಗ.
ವಇವೇಲಾ. ಸ್ತ್ರೀ: [ದೇ] ಎಲ್ಲೆ, ಗಡಿ, ಹದ್ದು
ವಇಸ. 'ವಇಸ್ಸ=ವೈಶ್ಯ' ಶಬ್ದವನ್ನು ನೋಡುವುದು.
ವಇಸಇಅ. ವಿ: [ವೈಷಯಿಕ] ವಿಷಯದಿಂದ ಹುಟ್ಟಿದ, ವಿಷಯಕ್ಕೆ ಸಂಬಂಧಿಸಿದ
ವಇಸಂಪಾಯಣ. ಪು: [ವೈಶಂಪಾಯನ] ವ್ಯಾಸರ ಶಿಷ್ಯನಾದ ಒಬ್ಬ ಋಷಿ.
ವಇಸಮ್ಮ. ಪುಂನ: [ವೈಶಮ್ಯ] ವಿಷಮತೆ, ಅಸಮಾನತೆ,
ವಇಸವಣ. ಪು: [ವೈಶ್ರವಣ] ಕುಬೇರ
ವಇಸ್ಸ. ನ: [ವೈಶಸ್] ಭೀಕರ ಪಾಪಕೃತ್ಯವಾದ ಕೊಲೆ, ಹತ್ಯೆ ಇತ್ಯಾದಿ(ಉಪ)
ವಇಸಾನರ. 'ವಇಸ್ಸಾಣರ' ಶಬ್ದವನ್ನು ನೋಡುವುದು.
ವಇಸಾಲ. ವಿ: [ವೈಶಾಲ] 'ವಿಶಾಲ'ದಲ್ಲಿ ಹುಟ್ಟಿದ
ವಇಸಾಹ. ಪು: [ವೈಶಾಖ] ವೈಶಾಖ ಮಾಸ, ಬೇಸಗೆ, ಕಡೆಯುವ ಮಂತು, **ಪುಂನ:** ಯೋಧನ ಸ್ಥಳ
ವಇಸಾಹೀ. 'ವೇಸಾಹೀ' ಶಬ್ದವನ್ನು ನೋಡುವುದು.
ವಇಸಿಅ. ವಿ: [ವೈಶಿಕ] ವೇಷ ಹಾಕುವ ಮೂಲಕ ಜೀವನ ನಿರ್ವಹಣೆ ಮಾಡುವವನು
ವಇಸಿಟ್ಠ. ನ: [ವೈಶಿಷ್ಟ್ಯ] ವಿಶಿಷ್ಟತೆ, ವೈಲಕ್ಷಣ್ಯ, ತನ್ನದೇ ಆದ ವಿಶೇಷ ಲಕ್ಷಣ
ವಇಸೇಸಿಅ. ನ: [ವೈಶೇಷಿಕ] ಕಣಾದ ಮುನಿರಚಿತ ದರ್ಶನ ಶಾಸ್ತ್ರ, ಆರು ದರ್ಶನಗಳಲ್ಲಿ ಇದೂ ಒಂದು. ವಿಶೇಷ, ಅಸಾಧಾರಣವಾದ
ವಇಸ್ಸ. ಪುಂಸ್ತ್ರೀ: [ವೈಶ್ಯ] ಚತುರ್ವರ್ಣಗಳಲ್ಲಿ ಒಂದಾದ ವೈಶ್ಯ ವರ್ಣ, ವರ್ತಕ ಜಾತಿ(ವಿಪಾ)
ವಇಸ್ಸ. ವಿ: [ದ್ವೇಷ್ಯ] ದ್ವೇಷಿಸುವಂಥ, ಪ್ರೀತಿಕರವಲ್ಲದ
ವಇಸ್ಸದೇವ. ಪು: [ವೈಶ್ವದೇವ] ಅಗ್ನಿ, ವೈಶ್ವಾನರ
ವಇಸ್ಸಾಣರ. ಪು: [ವೈಶ್ವಾನರ] ಅಗ್ನಿ, ಬೆಂಕಿ, ಚಿತ್ರಮೂಲದ ಗಿಡ, ಸಾಮವೇದದ ಒಂದು ಭಾಗ
ವಈ. 'ವಇ=ವಾಚ್' ಶಬ್ದವನ್ನು ನೋಡುವುದು (ಆಚಾ), **–ಮಯ.** ವಿ: [–ಮಯ] ವಚನಾತ್ಮಕ
ವಈಅ. ವಿ: [ವ್ಯತೀತ] ಕಳೆದುಹೋದ, ಗತಿಸಿದ. **–ಸೋಗ.** ಪು: [–ಸೋಕ] ಒಬ್ಬ ಜೈನ ಮುನಿ
ವಈವಯ. ಸಕ: [ವ್ಯತಿ+ವ್ರಜ್] ಹೋಗು, ನಡೆ
ವಈವಾಯ. 'ವಇವಾಯ' ಶಬ್ದವನ್ನು ನೋಡುವುದು.
ವಉ. ನ: [ವಪುಷ್] ಶರೀರ, ದೇಹ
ವಉಲಿಅ. ವಿ: [ದೇ] ಶೂಲಕ್ಕೆ(ಮೊನಚಾದ ಕಬ್ಬಿಣದ ಕಂಬಕ್ಕೆ) ಕಟ್ಟಲಾದ
ವಏಮಾಣ. 'ವಯ=ವದ್' ಶಬ್ದವನ್ನು ನೋಡುವುದು.
ವಓ–. 'ವಯ=ವಚಸ್' ಶಬ್ದವನ್ನು ನೋಡುವುದು (ಆಚಾ). **–ಮಯ.** ನ: [–ಮಯ] ವಾಙ್ಮಯ, ಶಾಸ್ತ್ರ
ವಓ–. 'ವಯ=ವಯಸ್' ಶಬ್ದವನ್ನು ನೋಡುವುದು.
ವಓವಉಪ್ಫ}. ಪುಂನ: [ದೇ] ರಾತ್ರಿ ಮತ್ತು ಹಗಲು
ವಓವತ್ಥ}. ಸಮಾನವಾಗಿರುವ ಕಾಲ, ವಿಷುವತ್
ವಓ–. 'ವಾಯಾ=ವಾಚ್' ಶಬ್ದವನ್ನು ನೋಡುವುದು. **–ನಿಯುಮ.** ಪು: [–ನಿಯುಮ] ಮಾತಿನ ಮರ್ಯಾದೆ, ಮಾತಿನ ಮಿತಿ(ಉಪ)
ವಂಕ. ವಿ: [ವಂಕ, ವಕ್ರ] ಡೊಂಕಾಗಿರುವ, ವಕ್ರವಾದ, ಬಾಗಿರುವ, ನದಿಯ ಬಾಗುವಿಕೆ,
ವಂಕ. ಪು: [ದೇ] ಕಳಂಕ
–ವಂಕ. 'ಪಂಕ' ಶಬ್ದವನ್ನು ನೋಡುವುದು.
ವಂಕಚೂಲ}. ಪು: [ವಂಕಚೂಲ] ಒಬ್ಬ ಪ್ರಸಿದ್ಧ
ವಂಕಚೂಲಿ}. ಪು: [ವಂಕಚೂಲಿ] ರಾಜಕುಮಾರ

ವಂಕಣ. ನ: [ವಂಕನ, ವಕ್ರಣ] ಡೊಂಕಾಗಿ ಮಾಡುವುದು, ವಕ್ರೀಕರಣ, ಬಗ್ಗಿಸುವುದು
ವಂಕಿಅ. ವಿ: [ವಕ್ರಿತ] ಡೊಂಕಾಗಿ ಮಾಡಲ್ಪಟ್ಟ, ಬಗ್ಗಿಸಲ್ಪಟ್ಟ
–ವಂಕಿಅ. ವಿ: [ಪಂಕಿತ] ಕೆಸರಿನಿಂದ ಕೂಡಿದ, ಕೆಸರಾಗಿರುವ
ವಂಕಿಮ. ಪುಂಸ್ತ್ರೀ: [ವಕ್ರಿಮನ್] ಡೊಂಕಾಗಿರುವುದು, ವಕ್ರತೆ, ಕುಟಿಲತೆ, ಸುತ್ತು ಬಳಸಿ ಮಾತಾಡುವುದು.
ವಂಕುಡ}. 'ವಂಕ=ಬಂಕ' ಶಬ್ದವನ್ನು
ವಂಕುಣ}. ನೋಡುವುದು.
ವಂಕುಭ(ಶೌ)}
ವಂಗ. ನ: [ವೃಂತಾಕ] ಬದನೆ ಗಿಡ(ದೇ)
ವಂಗ. ವಿ: [ವ್ಯಂಗ] ವಿಕೃತವಾದ ಅಂಗ, ಅಂಗಹೀನ, ಕುರೂಪಿ(ಪಣ್ಣ)
ವಂಗಚ್ಛ. ಪು: [ದೇ] ಪ್ರಮಥ, ಶಿವನ ಅನುಚರ(ದೇ)
ವಂಗಣ. ನ: [ವ್ಯಂಗನ] ಗಾಯ
ವಂಗಿಯ. ವಿ: [ವ್ಯಂಗಿತ] ವಿಕೃತ ಶರೀರದ, ವಿಕೃತಾಂಗನಾಗಿ ಮಾಡಲ್ಪಟ್ಟ
ವಂಗೇವಡು. ಪು: [ದೇ] ಹಂದಿ
ವಂಚ. ಸಕ: [ವಂಚ್] ವಂಚಿಸು, ಮೋಸಮಾಡು(ಷಡ್)
ವಂಚ(ಅಪ). 'ವಂಚ=ವ್ರಜ್' ಶಬ್ದವನ್ನು ನೋಡುವುದು.
ವಂಚ. ಸಕ: [ಉದ್+ನಮಯ್] ಮೇಲಕ್ಕೆ ಎತ್ತು
ವಂಚ. ವಿ: [ವಂಚ] ವಂಚಿಸುವವನು, ಮೋಸಮಾಡುವವನು, ಧೂರ್ತ
ವಂಚಅ.}. ವಿ: [ವಂಚಕ] ಮೇಲಿನ ಶಬ್ದವನ್ನು
ವಂಚಗ}. ನೋಡುವುದು.
ವಂಚಣ. ನ: [ವಂಚನ] ವಂಚನೆ, ಮೋಸ, ವಿ: ವಂಚಕ, ವೋಸಗಾರ. **–ಚಣ.** ವಿ: [ಚಣ] ವಂಚಿಸುವುದರಲ್ಲಿ ಚತುರ. ಸ್ತ್ರೀ: **–ಣಾ**
ವಂಚಿಅ. ವಿ: [ವಂಚಿತ] ವಂಚಿಸಲ್ಪಟ್ಟ, ಮೋಸಕ್ಕೊಳಗಾದ, ರಹಿತ, ತ್ಯಜಿಸಲ್ಪಟ್ಟ
ವಂಛಾ. ಸ್ತ್ರೀ: [ವಾಂಛಾ] ಇಚ್ಛೆ, ಬಯಕೆ, ಆಸೆ(ಸುಪಾ)
ವಂಜ. ಸಕ: [ವಿ+ಅಂಜ್] ವ್ಯಕ್ತಪಡಿಸು, ಹೇಳು, ಪ್ರಕಟಿಸು
ವಂಜ. 'ವಂಚ=ಉದ್+ನಮಯ್' ಶಬ್ದವನ್ನು ನೋಡುವುದು.
ವಂಜ. 'ವಂದ=ವಂದ್' ಶಬ್ದವನ್ನು ನೋಡುವುದು.
ವಂಜಗ. 'ವಂಜಯ' ಶಬ್ದವನ್ನು ನೋಡುವುದು.
ವಂಜಣ. ನ: [ವ್ಯಂಜನ] ವರ್ಣ, ಅಕ್ಷರ, ಸ್ವರಕ್ಕಿಂತ ಭಿನ್ನವಾದ 'ಕ' ಕಾರದಿಂದ 'ಹ' ಕಾರದವರೆಗಿನ ಅಕ್ಷರಗಳು. ಶಬ್ದ, ಪದ. ಅನ್ನವೇ ಮೊದಲಾದ ಆಹಾರದ ರುಚಿಗೆ ಪೋಷಕವಾದ ಪಲ್ಯ, ಉಪ್ಪಿನಕಾಯಿ, ಗೊಜ್ಜು ಮೊದಲಾದ ರಸವ್ಯಂಜಕ ಪದಾರ್ಥಗಳು. ಶುಕ್ರ, ವೀರ್ಯ, ಶರೀರದ ಮಸೆ, ಮೊದಲಾದ ಶರೀರದ ಚಿಹ್ನೆಗಳ ಫಲವನ್ನು ಉಪದೇಶಿಸುವ ಶಾಸ್ತ್ರ, ವ್ಯಕ್ತಪಡಿಸುವಿಕೆ(ವಿಸೇ), ಕಿವಿಯೇ ಮೊದಲಾದ ಇಂದ್ರಿಯಗಳು. ಶಬ್ದವೇ ವೊದಲಾದ ದ್ರವ್ಯಗಳು, ದ್ರವ್ಯ ಮತ್ತು ಇಂದ್ರಿಯಗಳ ಸಂಬಂಧ. **–ವಗ್ಗಹ, ವಂಜಣೇಗ್ಗಹ.** ಪು: [ವ್ಯಂಜನಾವಗ್ರಹ] ಕಣ್ಣು ಮತ್ತು ವುನಸ್ಸನ್ನು ಹೊರತುಪಡಿಸಿ ಇತರೆ ಇಂದ್ರಿಯಗಳಿಂದ ಉಂಟಾಗುವ ಜ್ಞಾನ–ವಿಶೇಷ
ವಂಜಯ. ವಿ: [ವ್ಯಂಜಕ] ವ್ಯಕ್ತ ಪಡಿಸುವ, ಪ್ರಕಾಶ ಪಡಿಸುವ(ಭಾಸ)
ವಂಜರ. ಪು: [ಮಾರ್ಜಾರ] ಬೆಕ್ಕು(ಕುಮಾ)
ವಂಜರ. ನ: [ದೇ] ಹೆಂಗಸರು ಸೊಂಟದಲ್ಲಿ ಕಟ್ಟಿಕೊಳ್ಳುವ ಸೀರೆಯ ಗಂಟು, ಕಟೀ ವಸ್ತ್ರ
ವಂಜಿಅ. ವಿ: [ವ್ಯಂಜಿತ] ವ್ಯಕ್ತಪಡಿಸಲಾದ, ಪ್ರಕಟಿಸಲ್ಪಟ್ಟ
ವಂಜುಲ. ಪು: [ವಂಜುಲ] ಅಶೋಕ ವೃಕ್ಷ(ಗಾ), ಹಬ್ಬೆ ಗಿಡ, ಜೊಂಡು, ಒಂದು ಬಗೆಯ ಹಕ್ಕಿ,
ವಂಜುಲಿ. ವಿ: [ವಂಜುಲಿನ್] ಜೊಂಡು ಉಳ್ಳ, ಸ್ತ್ರೀ: –ಣೀ.(ಗಉಡ)
ವಂಝ. ವಿ: [ವಂಧ್ಯ] ಶೂನ್ಯ, ನಿಷ್ಪ್ರಯೋಜಕ, ವ್ಯರ್ಥ
ವಂಝಾ. ಸ್ತ್ರೀ: [ವಂಧ್ಯಾ] ಬಂಜೆ ಹೆಣ್ಣು
ವಂಟ. ನ: [ವೃಂತ] ಹಣ್ಣು ಅಥವಾ ಎಲೆಗಳ ತೊಟ್ಟು
ವಂಟಗ. ಪು: [ವಂಟಕ] ಭಾಗ, ಅಂಶ(ನಿಚೂ)
ವಂಠ. ಪು: [ದೇ] ಅವಿವಾಹಿತ, ಚೂರು, ತುಣುಕು, ಕಪೋಲ, ಕೆನ್ನೆ, ಸೇವಕ, ಆಳು(ದೇ). ವಿ: ಸ್ನೇಹವಿಲ್ಲದ, ಧೂರ್ತ, ವಂಚಕ
ವಂಠ. ವಿ: [ವಂಠ] ಕುಳ್ಳ
ವಂಠಣ(ಅಪ). ನ: [ವಂಠನ] ವಿಭಾಗಿಸುವುದು, ಭಾಗಮಾಡುವುದು, ಹಂಚುವುದು
ವಂಡಇಅ. ವಿ: [ದೇ] ಪೀಡಿಸಲ್ಪಟ್ಟ, ನೋವುಂಟು ಮಾಡಲ್ಪಟ್ಟ

-ವಂಡು. 'ಪಂಡು' ಶಬ್ದವನ್ನು ನೋಡುವುದು.
ವಂಡುಅ. ನ: [ದೇ] ರಾಜ್ಯ(ದೇ)
ವಂಡುರ. 'ಪಂಡುರ' ಶಬ್ದವನ್ನು ನೋಡುವುದು.
ವಂಢ. ಪು: [ದೇ] ಬಂಧ
ವಂತ. ವಿ: [ವಾಂತ] ಪತಿತ, ಕೆಳಗೆ ಬಿದ್ದ
ವಂತ. ವಿ: [ವಾಂತ] ವಾಂತಿ ಮಾಡಲ್ಪಟ್ಟ, ಹೊರ ಹಾಕಲ್ಪಟ್ಟ. **ಪುಂನ:** ವಮನ, ವಾಂತಿ
ವಂತರ. ಪು: [ವ್ಯಂತರ] ಒಂದು ದೇವ ಜಾತಿ
ವಂತರಿಅ. ಪು: [ವ್ಯಂತರಿಕ] ಮೇಲಿನ ಶಬ್ದವನ್ನು ನೋಡುವುದು.
ವಂತರಿಣೀ. ಸ್ತ್ರೀ: [ವ್ಯಂತರೀ] ವ್ಯಂತರ ಜಾತಿಯ ದೇವಿ
ವಂತಾ 'ವಮ' ಶಬ್ದದ ಸಂ. ಕೃ ರೂಪ
-ವಂತಿ 'ಪಂತಿ' ಶಬ್ದವನ್ನು ನೋಡುವುದು.
-ವಂಥ. 'ಪಂಥ' ಶಬ್ದವನ್ನು ನೋಡುವುದು.
ವಂದ. ಸಕ: [ವಂದ್] ನಮಸ್ಕರಿಸು, ವಂದಿಸು, **'ವಂದಇ'** ವ. ಕೃ: **ವಂದಮಾಣ**
ವಂದ. ನ: [ವೃಂದ] ಸಮೂಹ, ಗುಂಪು(ಔಪ)
ವಂದಅ.}. ವಿ: [ವಂದಕ] ವಂದಿಸುವವನು(ಪಉಮ)
ವಂದಗ}.
ವಂದಣ. ನ: [ವಂದನ] ನಮಸ್ಕಾರ, ವಂದನೆ, ಸ್ತುತಿ(ಉವ). **-ಕಲಸ.** ಪು: [-ಕಲಶ] ಮಂಗಳ ಕುಂಭ.**-ಘಡ.** ಪು: [-ಘಟ] ಶುಭ ಕಲಶ. **-ಮಾಲಾ, ಮಾಲಿಆ.** ಸ್ತ್ರೀ: [-ಮಾಲಾ]ಮನೆಗೆ ಮಂಗಳವಾಗಲೆಂದು ಬಾಗಿಲಿಗೆ ಕಟ್ಟುವ ತೋರಣ(ಸುಪಾ). **-ವಡಿಆ,-ವತ್ತಿಆ.** ಸ್ತ್ರೀ: [-ಪ್ರತ್ಯಯ] ವಂದನೆಗೆ ಕಾರಣವಾದ್ದು.
ವಂದಣಾ. ಸ್ತ್ರೀ: [ವಂದನಾ] ನಮಸ್ಕಾರ, ವಂದನೆ.
ವಂದಣಿಯಾ. ಸ್ತ್ರೀ: [ದೇ] ಮೋರಿ, ಚರಂಡಿ, ಕಾಲುವೆ.
ವಂದರ. 'ವಂದ=ವೃಂದ' ಶಬ್ದವನ್ನು ನೋಡುವುದು.
ವಂದಾಪ(ಅಶೋ). 'ವಂದಾವ' ಶಬ್ದವನ್ನು ನೋಡುವುದು.
ವಂದಾರಯ. ಪು: [ವೃಂದಾರಕ] ದೇವತೆ(ಪಾಅ), ವಿ: ಮನೋಹರವಾದ, ಮುಖ್ಯವಾದ, ಪ್ರಧಾನವಾದ
ವಂದಾರು. ವಿ: [ವಂದಾರು] ವಂದಿಸುವವನು
ವಂದಾವ. ಸಕ: [ವಂದಯ್] ನಮಸ್ಕಾರ ಮಾಡಿಸು
ವಂದಾವಣಗ. ನ: [ವಂದನ] ವಂದನೆ, ನಮಸ್ಕಾರ
ವಂದಿಅ. 'ವಂದ=ವಂದ್'ಶಬ್ದವನ್ನು ನೋಡುವುದು.
ವಂದಿಅ. ವಿ: [ವಂದಿತ] ನಮಸ್ಕರಿಸಲ್ಪಟ್ಟ
ವಂದಿಮ.'ವಂದ= ವಂದ್' ಶಬ್ದವನ್ನು ನೋಡುವುದು.
ವಂದುರಾ. ಸ್ತ್ರೀ: [ಮಂದುರಾ]ಕುದುರೆ ಲಾಯ
ವಂದ್ರ. ನ: [ವಂದ್ರ] ಸಮೂಹ, ಗುಂಪು(ಪಉಮ)
ವಂಧ. ಪು: [ವಂಧ್ಯ] ಒಂದು ಮಹಾ ಗ್ರಹ
ವಂಫ. ಸಕ: [ಕಾಂಕ್ಷ್] ಇಚ್ಛಿಸು, ಬಯಸು, ಆಸೆಪಡು. 'ವಂಫಇ'
ವಂಫ. ಅಕ: [ವಲ್] ಹಿಂತಿರುಗು
ವಂಫಿ. ವಿ: [ವಲಿನ್] ಹಿಂತಿರುಗುವ, ಕೆಳಕ್ಕೆ ಬೀಳುವ(ಕುಮಾ)
ವಂಫಿಅ. ವಿ: [ಕಾಂಕ್ಷಿತ] ಆಸೆಪಟ್ಟ, ಇಚ್ಛೆಪಟ್ಟ
ವಂಫಿಅ. ವಿ: [ದೇ] ಭಕ್ಷಿಸಲ್ಪಟ್ಟ, ತಿನ್ನಲ್ಪಟ್ಟ(ಪಾಅ)
ವಂಸ. ಪು: [ದೇ] ಕಳಂಕ, ಕಲೆ
ವಂಸ. ಪು: [ವಂಶ] ಬಿದಿರು, ಕೊಳಲುವಾದ್ಯ, ಕುಲ, ವಂಶ, ಸಂತತಿ, ಪೀಠದ ಭಾಗ, ಕಬ್ಬು, ಸಾಲವೃಕ್ಷ, **-ಇರಿ.** ಪು: [-ಗಿರಿ] ಒಂದು ಪರ್ವತ.(ಪಉಮ), **-ಕರಿಲ್ಲ, ಗರಿಲ್ಲ.** **ಪುಂನ:** [-ಕರೀಲ] ಬಿದಿರಿನ ಚಿಗುರು, ಬಿದಿರಿನ ಅಂಕುರ. **-ಜಾಲೀ, -ಯಾಲೀ.** ಸ್ತ್ರೀ: [-ಜಾಲೀ] ಬಿದಿರು ಮೆಳೆ. **-ರೋಅಣಾ.** ಸ್ತ್ರೀ: [-ರೋಚನಾ] ತವಕ್ಷೀರ.
ವಂಸಕವೇಲ್ಲುಯ. **ಪುಂನ:** [ದೇ.ವಂಶಕವೇಲ್ಲುಕ] ಛಾವಣಿಯ ಕೆಳಗಡೆ ಆಧಾರವಾಗಿ ಉದ್ದ-ಅಗಲವಾಗಿ ಬಾಗಿಸಿ ಜೋಡಿಸಲಾಗುವ ಬಿದಿರು.
ವಂಸಗ. 'ವಂಸಯ' ಶಬ್ದವನ್ನು ನೋಡುವುದು.
ವಂಸಪ್ಫಾಲ. ವಿ: [ದೇ] ಪ್ರಕಟ, ವ್ಯಕ್ತ, ಋಜು, ನೇರ, ಸರಳ
ವಂಸಯ. ವಿ: [ವ್ಯಂಸಕ] ಧೂರ್ತ, ವಂಚಕ, **ಪು:** ದುಷ್ಟ-ಹೇತು(ಠಾ)
ವಂಸಾ. ಸ್ತ್ರೀ: [ವಂಶಾ] ಎರಡನೇ ನರಕ-ಭೂಮಿ.
ವಂಸಿ-. 'ವಂಸೀ=ವಂಶ' ಶಬ್ದವನ್ನು ನೋಡುವುದು.
ವಂಸಿಅ. ವಿ: [ವಾಂಶಿಕ] ಕೊಳಲು ನುಡಿಸುವವನು
ವಂಸಿಅ. ವಿ: [ವ್ಯಂಸಿತ] ಮೋಸಗೊಳಿಸಲ್ಪಟ್ಟ, ವಂಚಿಸಲ್ಪಟ್ಟ
ವಂಸೀ. ಸ್ತ್ರೀ: [ವಾಂಶೀ] ಒಂದು ಬಗೆಯ ಸುರೆ, ಬಿದಿರಿನ ಬಲೆ(ಠಾ), **-ಕಲಂಕಾ.** ಸ್ತ್ರೀ: [-ಕಲಂಕಾ] ಬಿದಿರಿನ ಮುಳ್ಳಿನಿಂದ ಮಾಡಿದ ಬೇಲಿ (ವಿಪಾ),

–ಪತ್ತಿಯಾ. ಸ್ತ್ರೀ: [–ಪತ್ರಿಕಾ]ಬಿದಿರಿನ ಮುಳ್ಳಿನ ಎಲೆಯ ಆಕೃತಿಯ ಯೋನಿ

ವಂಸೀ. ಸ್ತ್ರೀ: [ವಂಶೀ] ಕೊಳಲು ವಾದ್ಯ(ಬೃಹ). **–ಣಹಿಯಾ. ಸ್ತ್ರೀ:** [–ನಖಿಕಾ] ಒಂದು ವನಸ್ಪತಿ **–ಮುಹ. ಪು:** [–ಮುಖ] ಎರಡು ಇಂದ್ರಿಯಗಳ ಜೀವ.

ವಂಸೀ. ಸ್ತ್ರೀ: [ವಂಶ] ಬಿದಿರು. **–ಮೂಲ. ನ:** [–ಮೂಲ] ಬಿದಿರಿನ ಬೇರು

ವಂಸೀ. ಸ್ತ್ರೀ: [ದೇ] ಹಣೆಯ ಮೇಲೆ ಇರುವ ಹಾರ

ವಕ್ಕ. ನ: [ವಾಕ್ಯ] ಅರ್ಥಪೂರ್ಣ ಪದಗಳ ಸಮುದಾಯ, ಶಬ್ದ ಸಮೂಹ(ಉವ)

ವಕ್ಕ. ನ: [ವಲ್ಕ] ಮರದ ತೊಗಟೆ. **ಬಂಧ. ಪು:** [–ಬಂಧ] ತೊಗಟೆಯನ್ನು ಕಟ್ಟಿಕೊಳ್ಳುವುದು

ವಕ್ಕ. 'ವಂಕ=ವಂಕ' ಶಬ್ದವನ್ನು ನೋಡುವುದು.

ವಕ್ಕ. ನ: [ವಕ್ತ್ರ] ಮುಖ(ಪಉಮ)

ವಕ್ಕ. ನ: [ದೇ] ಹಿಟ್ಟು

ವಕ್ಕಂತ. ಪುಂನ: [ವಕ್ರಾಂತ] ಮೊದಲನೇ ನರಕ ಭೂಮಿಯ ಹತ್ತನೇ ನರಕೇಂದ್ರಕ– ನರಕಾವಾಸ.

ವಕ್ಕಂತ. ಪುಂನ: [ಅವಕ್ರಾಂತ] ಉತ್ಪನ್ನ, ಹುಟ್ಟಿದ(ಕಪ್ಪ)

ವಕ್ಕಂತಿ. ಸ್ತ್ರೀ: [ಅವಕ್ರಾಂತಿ] ಉತ್ಪತ್ತಿ, ಸೃಷ್ಟಿಸುವಿಕೆ

ವಕ್ಕಡ. ನ: [ದೇ] ಕೆಟ್ಟ ದಿನ, ಕಷ್ಟದ ದಿನ, ಮೋಡ ಕವಿದ ದಿನ, ನಿರಂತರ ಮಳೆ ಸುರಿಯುವುದು

ವಕ್ಕಡಬಂಧ. ನ: [ದೇ] ಕರ್ಣಾಭರಣ

ವಕ್ಕಮ. ಅಕ: [ಅವ+ಕ್ರಮ್] ಉತ್ಪತ್ತಿಯಾಗು, ಹುಟ್ಟು

ವಕ್ಕರ(ಅಪ). 'ವಕ್ಕ=ವಂಕ' ಶಬ್ದವನ್ನು ನೋಡುವುದು.

ವಕ್ಕಲ. ನ: [ವಲ್ಕಲ] ಮರದ ತೊಗಟೆ, ತೊಗಟೆಯಿಂದ ಮಾಡಿದ ವಸ್ತ್ರ(ನಾರುಮಡಿ) **–ಚೀರಿ. ಪು:** [–ಚೀರಿನ್] ರಾಜಾ ಪ್ರಸನ್ನ ಚಂದ್ರನ ತಮ್ಮನಾಗಿದ್ದ ಒಬ್ಬ ಮಹರ್ಷಿ

ವಕ್ಕಲಿ}. ವಿ: [ವಲ್ಕಲಿನ್] ಮರದ ತೊಗಟೆಯನ್ನು
ವಕ್ಕಲಿಣ}. (ನಾರು) ಧರಿಸುವವನು(ತಾಪಸ) (ಕುಮಾ)

ವಕ್ಕಲ್ಲಯ. ವಿ: [ದೇ] ಮುಂಭಾಗದಲ್ಲಿ ಮಾಡಲ್ಪಟ್ಟ(ದೇ)

ವಕ್ಕಸ. ನ: [ದೇ] ಹಳೆ ಅಕ್ಕಿಯ ಅನ್ನ, ಹಳೆಯ ಅಕ್ಕಿಹಿಟ್ಟಿನ ಮುದ್ದೆ, ಬಹಳ ದಿನಗಳ, ಹಳಸಿದ ಹಾಲು, ಮೊಸರು ಇತ್ಯಾದಿ, ಗೋಧಿಯ ಗಂಜಿ

ವಕ್ಕಿದ(ಶೌ). 'ವಂಕಿಅ' ಶಬ್ದವನ್ನು ನೋಡುವುದು.

ವಕ್ಖ. 'ವಚ್ಛ=ವೃಕ್ಷ' ಶಬ್ದವನ್ನು ನೋಡುವುದು.

ವಕ್ಖ. 'ವಚ್ಛ=ವಕ್ಷಸ್' ಶಬ್ದವನ್ನು ನೋಡುವುದು.

–ವಕ್ಖ. 'ಪಕ್ಖ' ಶಬ್ದವನ್ನು ನೋಡುವುದು.

ವಕ್ಖಮಾಣ. 'ವಯ=ವಚ್' ಶಬ್ದವನ್ನು ನೋಡುವುದು.

ವಕ್ಖಲ. ವಿ: [ದೇ] ಮುಚ್ಚಲ್ಪಟ್ಟ, ಹೊದಿಸಲ್ಪಟ್ಟ(ಷಡ್)

ವಕ್ಖಾ. ಸಕ: [ವ್ಯಾ+ಖ್ಯಾ]ವ್ಯಾಖ್ಯಾನಿಸು, ವಿವರಿಸು,ಹೇಳು

ವಕ್ಖಾ}. ಸ್ತ್ರೀ: [ವ್ಯಾಖ್ಯಾ] ವಿವರಣೆ, ವಿಶದವಾಗಿ
ವಕ್ಖಾಣ}. ನ: [ವ್ಯಾಖ್ಯಾನ] ಅರ್ಥ ನಿರೂಪಿಸುವುದು (ವಿಸೇ), ಕಥನ

ವಕ್ಖಾಣ. ಸಕ: [ವ್ಯಾಖ್ಯಾನಯ್] ವ್ಯಾಖ್ಯಾನಿಸು, ವಿವರಿಸು. **'ವಕ್ಖಾಣಇ', ವ.ಕೃ: 'ವಕ್ಖಾಣಯಂತ'**

ವಕ್ಖಾಣಿ. ವಿ: [ವ್ಯಾಖ್ಯಾನಿನ್] ವ್ಯಾಖ್ಯಾನಿಸುವವನು

ವಕ್ಖಾಯ. ವಿ: [ವ್ಯಾಖ್ಯಾತ] ವ್ಯಾಖ್ಯಾನಿಸಲ್ಪಟ್ಟ, **ಪು:** ಮೋಕ್ಷ(ಆಚಾ)

ವಕ್ಖಾರ. ಪು: [ದೇ] ಧಾನ್ಯಗಳನ್ನು ಇಡುವ ಸ್ಥಳ, ಕಣಜ, ಉಗ್ರಾಣ(ಉಪ)

ವಕ್ಖಾರ. ಪು: [ವಕ್ಷಾರ, ವಕ್ಷಸ್ಕಾರ] ಆನೆಯ ದಂತದ ಆಕಾರದ ಪರ್ವತ, ಭೂಭಾಗ, ಭೂಪ್ರದೇಶ (ಪಉಮ)

ವಕ್ಖಾರಯ. ನ: [ದೇ] ರತಿಗೃಹ, ಅಂತಃಪುರ(ದೇ)

ವಕ್ಖಾವ. ಸಕ: [ವ್ಯಾ+ಖ್ಯಾಪಯ್] ವ್ಯಾಖ್ಯಾನಿಸು.

ವಕ್ಖಿತ್ತ. ವಿ: [ವ್ಯಾಕ್ಷಿಪ್ತ] ವ್ಯಾಕುಲಗೊಂಡ, ವ್ಯಗ್ರನಾದ, ಯಾವುದಾದರೂ ಕಾರ್ಯದಲ್ಲಿ ನಿರತನಾದ

ವಕ್ಖೇವ. ಪು: [ವ್ಯಾಕ್ಷೇಪ] ವ್ಯಗ್ರತೆ, ವ್ಯಾಕುಲತೆ, ಕಾರ್ಯ–ಬಾಹುಳ್ಯ

ವಕ್ಖೇವ. ಪು: [ಅವಕ್ಷೇಪ] ಆಕ್ಷೇಪ, ಖಂಡನೆ, ನಿಷೇಧ(ಗಾ)

ವಕ್ಖೋ–. 'ವಚ್ಛ=ವಕ್ಷಸ್. –ರುಹ. ಪು: [–ರುಹ] ಸ್ತನ, ಮೊಲೆ

ವಖ್ಖು(ಶೌ). 'ವಂಕ=ವಂಕ' ಶಬ್ದವನ್ನು ನೋಡುವುದು.

ವಖಾಣ(ಅಪ). 'ವಕ್ಖಾಣ=ವಖಾಣ' ಶಬ್ದವನ್ನು ನೋಡುವುದು.

ವಗಡಾ. ಸ್ತ್ರೀ: [ದೇ] ಬೇಲಿ, ಪರಿಧಿ

ವಗ್ಗ. ಸಕ: [ವಲ್ಗ್] ಹೋಗು, ಗಮಿಸು, ಹಾರು, ಬಹಳವಾಗಿ ಭಾಷಣಮಾಡು, ಅಭಿಮಾನ ಸೂಚಕವಾದ ಶಬ್ದ ಮಾಡು,

ವಗ್ಗ. ಪು: [ವರ್ಗ] ಸಜಾತೀಯ ಸಮೂಹ, ಗಣಿತ, ಎರಡು ಸಮ ಸಂಖ್ಯೆಗಳನ್ನು ಗುಣಿಸುವುದು,

ಗ್ರಂಥದ ಪರಿಚ್ಛೇದ, ಅಧ್ಯಯನ. –ಮೂಲ. ನ: [-ಮೂಲ] ಉದಾಹರಣೆಗೆ ೪ರ ವರ್ಗಮೂಲ ೨, ೨ರ ವರ್ಗ ೪. –ವಗ್ಗ. ಪು: [–ವರ್ಗ] ವರ್ಗದಿಂದ ವರ್ಗವನ್ನು ಗುಣಿಸುವುದು, ೧೬ರ ವರ್ಗಮೂಲ೪

ವಗ್ಗ. ಸಕ: [ವರ್ಗಯ್] ಯಾವುದಾದರೊಂದು ಅಂಕಿಯುದೇ ಸಮಾನ ಅಂಕಿಯಿಂದ ಗುಣಿಸುವುದು(ಕಮ್ಮ)

ವಗ್ಗ. ವಿ: [ವ್ಯಗ್ರ] ವ್ಯಾಕುಲಗೊಂಡ, ವ್ಯಗ್ರನಾದ(ಉತ್ತ)

ವಗ್ಗ. 'ವಕ್ಕ=ವಲ್ಕ' ಶಬ್ದವನ್ನು ನೋಡುವುದು.

ವಗ್ಗ. 'ವಕ್ಕ=ವಾಕ್ಯ' ಶಬ್ದವನ್ನು ನೋಡುವುದು.

ವಗ್ಗ. ವಿ: [ವಾಲ್ಕ] ಮರದ ತೊಗಟೆಯಿಂದ ಮಾಡಿದ (ಣಾಯಾ)

ವಗ್ಗಂಸಿಅ. ನ: [ದೇ] ಯುದ್ಧ, ಸಮರ(ದೇ)

ವಗ್ಗಚೂಲಿಆ. ಸ್ತ್ರೀ: [ವರ್ಗಚೂಲಿಕಾ] ಪ್ರಾಚೀನ ಜೈನ ಗ್ರಂಥ

ವಗ್ಗಣ. ನ: [ವಲ್ಗನ] ಹಾರುವುದು, ಜಿಗಿಯುವುದು (ಔಪ)

ವಗ್ಗಣ. ನ: [ವಲ್ಗನ] ಹರಟೆ, ನಿರರ್ಥಕ ಮಾತು.

ವಗ್ಗಣಾ. ಸ್ತ್ರೀ: [ವರ್ಗಣಾ] ಸಜಾತೀಯ ಸಮೂಹ(ಠಾ)

ವಗ್ಗಯ. ನ: [ದೇ] ವಾರ್ತೆ, ಮಾತು

ವಗ್ಗಾ. ಸ್ತ್ರೀ: [ವಲ್ಗಾ] ಲಗಾಮು, ಕಡಿವಾಣ(ಉಪ)

ವಗ್ಗಾವಗ್ಗಿಂ. ಅ: ವರ್ಗ ರೂಪದಿಂದ(ಔಪ)

ವಗ್ಗಿ. ವಿ: [ವಾಗ್ಮಿನ್] ಮಾತಾಡುವುದರಲ್ಲಿ ಚತುರನಾದವನು, ಪು: ದೇವಗುರುವಾದ ಬೃಹಸ್ಪತಿ

ವಗ್ಗಿಅ. ನ: [ವಲ್ಗಿತ] ಹರಟೆ, ವ್ಯರ್ಥ ಮಾತು, ದೊಡ್ಡಸ್ತಿಕೆಯ ಅಥವಾ ಅಹಂಕಾರದ ಅಬ್ಬರ, ನಡಿಗೆ, ಗತಿ

ವಗ್ಗಿರ. ವಿ: [ವಲ್ಗಿತೃ] ಹಿಂಸ್ರ ಶಬ್ದ ಮಾಡುವವನು, ಗತಿ, ಉಳ್ಳ

ವಗ್ಗು. 'ವಾಯಾ=ವಾಚ್' ಶಬ್ದವನ್ನು ನೋಡುವುದು (ಔಪ)

ವಗ್ಗು. 'ವಗ್ಗ=ವರ್ಗ' ಶಬ್ದವನ್ನು ನೋಡುವುದು.

ವಗ್ಗು. ವಿ: [ವಲ್ಗು] ಸುಂದರವಾದ, ಮನೋಹರವಾದ, ಮಧುರವಾದ, ಪು: ವಿಜಯದ ಪ್ರಾಂತ(ಠಾ), ಪುಂನ:ಒಂದು ದೇವ–ವಿಮಾನ. ವೈಶ್ರಮಣನೆಂಬ ಲೋಕಪಾಲನ ವಿಮಾನ.

ವಗ್ಗುರಾ. ನ: [ವಾಗುರಾ] ಪ್ರಾಣಿಯನ್ನು ಹಿಡಿಯುವ ಬಲೆ. ಸಮೂಹ, ಗುಂಪು

ವಗ್ಗುರಿಯ. ವಿ: [ವಾಗುರಿಕ] ಪ್ರಾಣಿಯನ್ನು ಹಿಡಿಯುವ ಬಲೆಯಿಂದ ಜೀವನ ನಿರ್ವಹಣೆ ಮಾಡುವವನು. ವ್ಯಾಧ, ಬೇಡ(ಓಫ) ನರ್ತಕ

ವಗ್ಗುಲಿ. ಪುಂಸ್ತ್ರೀ: [ವಲ್ಗುಲಿ] ಒಂದು ಬಗೆಯ ಪಕ್ಷಿ, ಒಂದು ಬಗೆಯ ರೋಗ

ವಗ್ಗೆಜ್ಜ. ವಿ: [ದೇ] ಬಹಳ, ಹೇರಳ

ವಗ್ಗೋಅ. ವಿ: [ದೇ] ಮುಂಗುಸಿ

ವಗ್ಗೋರಮಯ. ವಿ: [ದೇ] ಒಣಗಿರುವ, ಒರಟಾದ

ವಗ್ಗೋಲ. ಸಕ: [ರೋಮಂಥಯ್] ಮೆಲುಕು ಹಾಕು. 'ವಗ್ಗೋಲಇ'

ವಗ್ಗೋಲಿರ. ವಿ: [ರೋಮಂಥಯಿತೃ] ಮೆಲುಕು ಹಾಕುವ(ಕುಮಾ)

ವಗ್ಘ. ವಿ: [ವೈಯಾಘ್ರ] ಹುಲಿಯ ಚರ್ಮದಿಂದ ಮಾಡಿದ

ವಗ್ಘ ಪು: [ವ್ಯಾಘ್ರ] ಹುಲಿ, (ಪಾಅ), ಕೆಂಪು ಹರಳುಗಿಡ, ಹೊಂಗೆಮರ, –ಮುಹ. ಪು: [–ಮುಖ] ಒಂದು ಅಂತರ್ ದ್ವೀಪ, ಅದರಲ್ಲಿ ವಾಸಿಸುವ ಮನುಷ್ಯ–ಜಾತಿ(ಠಾ)

ವಗ್ಘಾಅ. ಪು: [ದೇ] ಸಹಾಯ, ವಿ: ಅರಳಿದ(ದೇ)

ವಗ್ಘಾಡೀ. ಸ್ತ್ರೀ: [ದೇ] ಉಪವಾಸದ ಸಲುವಾಗಿ ಮಾಡಲಾಗುವ ಒಂದು ಶಬ್ದ, ದನಿ(ಣಾಯಾ)

ವಗ್ಘಾರಿಅ. ವಿ: [ವ್ಯಾಘಾರಿತ] ಒಗ್ಗರಣೆ ಹಾಕಿರುವ, ಒಗ್ಗರಣೆ ಹಾಕಲಾದ, ಎಲ್ಲೆಡೆ ವ್ಯಾಪಿಸಿರುವ, ಹರಡಿರುವ

ವಗ್ಘಾವಚ್ಚ. ನ: [ವ್ಯಾಘ್ರಾಪತ್ಯ] ವಶಿಷ್ಠ ಗೋತ್ರದ ಒಂದು ಶಾಖೆ(ಠಾ)

ವಗ್ಘೀ. ಸ್ತ್ರೀ: [ವ್ಯಾಘ್ರೀ] ಹೆಣ್ಣು ಹುಲಿ, ಒಂದು ವಿದ್ಯೆ

ವಘಾಯ. 'ವಾಘಾಯ' ಶಬ್ದವನ್ನು ನೋಡುವುದು

ವಚಾ. ಸ್ತ್ರೀ: [ವಚಾ] ಭೂಮಿ, ಧರೆ, ಬಜೆ. 'ವಯಾ=ವಚಾ' ಶಬ್ದವನ್ನು ನೋಡುವುದು.

ವಚ್ಚ. ಸಕ: [ವ್ರಜ್] ಹೋಗು, ಗಮಿಸು. 'ವಚ್ಚಇ', ವ. ಕೃ: 'ವಚ್ಚಂತ'

ವಚ್ಚ. ಸಕ: [ಕಾಂಕ್ಷ್] ಇಷ್ಟಪಡು, ಬಯಸು,

ವಚ್ಚ. 'ವಯ=ವಚ್' ಶಬ್ದವನ್ನು ನೋಡುವುದು.

ವಚ್ಚ. **ಪುಂನ:** [**ವರ್ಚಸ್**] ತೇಜಸ್ಸು, ಪ್ರಭಾವ, ರೂಪ(ಣಾಯಾ) ಮಲ, ಕಸ, ನಾಲ್ಕನೇ ನರಕದ ನಾಲ್ಕನೇ ನರಕಸ್ಥಾನ. **–ಘರ, ಹರ. ನ:** [**–ಗೃಹ**]. ಪಾಯಿಖಾನೆ

ವಚ್ಚ. '**ವಯ=ವಚಸ್**' ಶಬ್ದವನ್ನು ನೋಡುವುದು

ವಚ್ಚಂಸಿ. **ವಿ:** [**ವರ್ಚಸ್ವಿನ್**] ಪ್ರಶಂಸಾರ್ಹವಾದ ಮಾತುಗಳನ್ನು ಆಡುವವನು(ಣಾಯಾ)

ವಚ್ಚಂಸಿ. **ವಿ:**[**ವರ್ಚಸ್ವಿನ್**] ತೇಜಸ್ವಿ, ತೇಜಃಶಾಲಿ(ಣಾಯಾ)

ವಚ್ಚಯ. **ಪು:** [**ವ್ಯತ್ಯಯ**] ವಿಪರ್ಯಾಸ, ವಿರೋಧ, ವ್ಯತ್ಯಾಸ, '**ವತ್ತಅ**' ಶಬ್ದವನ್ನು ನೋಡುವುದು.

ವಚ್ಚರಾ (ಅಪ). '**ವಚಾ**' ಶಬ್ದವನ್ನು ನೋಡುವುದು.

ವಚ್ಚಾ. '**ವಯ=ವಚ್**', ಶಬ್ದವನ್ನು ನೋಡುವುದು.

ವಚ್ಚಾಮೇಲಿಯ. '**ವಿಚ್ಚಾಮೇಲಿಯ**' ಶಬ್ದವನ್ನು ನೋಡುವುದು.

ವಚ್ಚಾಸ. **ಪು:** [**ವ್ಯತ್ಯಾಸ**] ವಿಪರ್ಯಯ, ಬದಲಾವಣೆ

ವಚ್ಚಾಸಿಯ. **ವಿ:** [**ವ್ಯತ್ಯಾಸಿತ**] ಬದಲಾಯಿಸಲ್ಪಟ್ಟ, ವ್ಯತ್ಯಾಸಗೊಳಿಸಲ್ಪಟ್ಟ

ವಚ್ಚೀಸಗ. **ಪು:** [**ವಚ್ಚೀಸಕ**] ವಾದ್ಯ–ವಿಶೇಷ.

ವಚ್ಚೋ–. '**ವಚ್ಚ=ವರ್ಚಸ್**' ಶಬ್ದವನ್ನು ನೋಡುವುದು.

ವಚ್ಛ. **ನ:** [**ದೇ**] ಹತ್ತಿರದಲ್ಲಿ, ಸಮೀಪದಲ್ಲಿ(ದೇ)

ವಚ್ಛ. **ಪುಂನ:** [**ವಕ್ಷಸ್**] ಎದೆ, **–ತ್ಥಲ.ನ:** [**–ಸ್ಥಲ**] ಎದೆ, **–ಸುತ್ತ. ನ:** [**–ಸೂತ್ರ**] ಒಡವೆ, ಎದೆಯ ಮೇಲೆ ಧರಿಸುವ ಸರ(ಭಗ)

ವಚ್ಛ. **ಪು:** [**ವೃಕ್ಷ**] ಮರ(ಕುಮಾ)

ವಚ್ಛ. **ಪು:** [**ವತ್ಸ**] ಹಸುವಿನ ಕರು, ಪ್ರಾಣಿಗಳ ಮರಿ, ಪುತ್ರ, ಮಗು. ವರ್ಷ, ಸಂವತ್ಸರ, ಜ್ಯೋತಿಷ ಶಾಸ್ತ್ರದಲ್ಲಿ ಹೆಸರಾದ ಒಂದು ಚಕ್ರ. ವತ್ಸ ದೇಶ, ಒಂದು ವಿಜಯ ಕ್ಷೇತ್ರ. **ನ:** ಗೋತ್ರ, **ವಿ:** ಆ ಗೋತ್ರದಲ್ಲಿ ಹುಟ್ಟಿದವನು(ಠಾ), –ದರ. **ಪುಂಸ್ತ್ರೀ:** [**–ತರ**]ಪಳಗಿಸಲು ಅರ್ಹವಾದ ಹೋರಿಗರು. ಕಡಸು(ಕರು ಹಾಕದಿರುವ ಎಳೆ ಹಸು. **ಸ್ತ್ರೀ:** –ರೀ. **–ಮಿತ್ತಾ. ಸ್ತ್ರೀ:** [**–ಮಿತ್ರಾ**] ಅಧೋಲೋಕದಲ್ಲಿ ಇರುವ ಒಬ್ಬ ದಿಕ್ಕುಮಾರಿ ದೇವಿ. **–ಯರ.** '**–ದರ**' ಶಬ್ದವನ್ನು ನೋಡುವುದು. **–ರಾಯ. ಪು:** [**–ರಾಜ**] ಒಬ್ಬ ರಾಜ. **–ವಾಲ. ಪುಂಸ್ತ್ರೀ:** [**–ಪಾಲ**] ದನಗಳನ್ನು ಕಾಪಾಡುವ ಗೋಪಾಲಕ, ಕೃಷ್ಣ. **ಸ್ತ್ರೀ:** **–ಲೀ.**

ವಚ್ಛ. **ವಿ:** [**ವಾತ್ಸ್ಯ**] ವಾತ್ಸ್ಯ ಗೋತ್ರದ

ವಚ್ಛರ. **ಪುಂನ:** [**ವತ್ಸರ**] ವರ್ಷ

ವಚ್ಛಲ. **ವಿ:** [**ವತ್ಸಲ**] ಮಕ್ಕಳನ್ನು ಪ್ರೀತಿಸುವ, ಸ್ನೇಹದಿಂದ ಕೂಡಿದ(ಗಾ)

ವಚ್ಛಲ. **ನ:** [**ವಾತ್ಸಲ್ಯ**] ಸ್ನೇಹ, ಪ್ರೀತಿ(ಕಮಾ)

ವಚ್ಛಾ. **ಸ್ತ್ರೀ:** [**ವತ್ಸಾ**] ವಿಜಯ ಕ್ಷೇತ್ರ, ಒಂದು ನಗರಿ, ಹುಡುಗಿ

ವಚ್ಛಾಣ. **ಪು:** [**ಉಕ್ಷನ್**] ಎತ್ತು(ಪಾಅ)

ವಚ್ಛಾವಈ. **ಸ್ತ್ರೀ:** [**ವತ್ಸಾವತೀ**] ವಿಜಯ ಕ್ಷೇತ್ರ

ವಚ್ಛಿ–. '**ವಯ=ವಚ್**' ಶಬ್ದವನ್ನು ನೋಡುವುದು.

ವಚ್ಛಿಉಡ. **ಪು:** [**ದೇ**] ಗರ್ಭಾಶ್ರಯ(ದೇ)

ವಚ್ಛಿಮ. **ಪುಂಸ್ತ್ರೀ:** [**ವೃಕ್ಷತ್ವ**] ವೃಕ್ಷತನ

ವಚ್ಛಿಮಯ. **ಪು:** [**ದೇ**] ಗರ್ಭಶಯ್ಯೆ.

ವಚ್ಛೀಉತ್ತ. **ಪು:** [**ದೇ**] ನಾಪಿತ, ಕ್ಷೌರಿಕ(ದೇ)

ವಚ್ಛೀವ. **ಪು:** [**ದೇ**] ಗೋಪ, ದನ ಕಾಯುವವನು, ಗೌಳಿ(ಪಾಅ)

ವಚ್ಛುದ್ಧಲಿಅ. **ವಿ:** [**ದೇ**] ಮೇಲಕ್ಕೆ ಎತ್ತಲ್ಪಟ್ಟ

ವಚ್ಛೋಮ. **ನ:** [**ವತ್ಸಗುಲ್ಮ**] ಕುಂತಲ ದೇಶದ ಪ್ರಾಚೀನ ರಾಜಧಾನಿ

ವಚ್ಛೋಮೀ. **ಸ್ತ್ರೀ:** [**ವಾತ್ಸಗುಲ್ಮೀ**] ಕಾವ್ಯದ ಒಂದು ರೀತಿ

ವಜ್ಜ. **ಅಕ:** [**ತ್ರಸ್**] ಹೆದರು(ಪ್ರಾಕೃ)

ವಜ್ಜ. '**ವಚ್ಚ=ವ್ರಜ್**' ಶಬ್ದವನ್ನು ನೋಡುವುದು.

ವಜ್ಜ. **ಸಕ:** [**ವರ್ಜಯ್**] ತ್ಯಜಿಸು, ಬಿಡು, ವರ್ಜಿಸು

ವಜ್ಜ. **ಅಕ:** [**ವದ್**] ವಾದ್ಯಗಳು ಮೊಳಗುವುದು

ವಜ್ಜ. **ನ:** [**ವಾದ್ಯ**] ಚರ್ಮವಾದ್ಯ, ಮುಖವಾದ್ಯ, ತಂತೀ ವಾದ್ಯ, ಕಂಚಿನ ವಾದ್ಯಗಳೆಂಬ ನಾಲ್ಕು ಬಗೆಯ ನುಡಿಸಲರ್ಹವಾದ ವಾದ್ಯಗಳು

ವಜ್ಜ. **ವಿ:** [**ವರ್ಯ**] ಶ್ರೇಷ್ಠ, ಉತ್ತಮ(ಸುರ), ಪ್ರಧಾನ, ಮುಖ್ಯ.

ವಜ್ಜ. **ವಿ:** [**ವರ್ಜ**] ಬಹಿಷ್ಕರಿಸಲ್ಪಟ್ಟ, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ **ನ:** ಹೊರತು, ಬಿಟ್ಟು, **ಪು:** ಹಿಂಸೆ, ವಧೆ

ವಜ್ಜ. '**ಅವಜ್ಜ**' ಶಬ್ದವನ್ನು ನೋಡುವುದು.

ವಜ್ಜ. '**ವಇರ=ವಜ್ರ**' ಶಬ್ದವನ್ನು ನೋಡುವುದು. **ಪು:** ವಿದ್ಯಾಧರ ವಂಶದ ಒಬ್ಬ ದೊರೆ, ಹಿಂಸೆ, ಪ್ರಾಣಿ ವಧೆ. ಒಂದು ಗಡ್ಡೆ(ಉತ್ತ), ಬಂಧಿಸುವ ಕರ್ಮ, ಪಾಪ, **–ಕಂಠ. ಪು:** [**–ಕಂಠ**] ವಾನರ–ದ್ವೀಪದ

ಒಬ್ಬ ರಾಜ(ಸೂಅ). **–ಕಂತ.** ನ: [–ಕಾಂತ] ಒಂದು ದೇವ–ವಿಮಾನ. **ಕಂದ.** ಪು: [–ಕಂದ] ಒಂದು ಗಡ್ಡೆ, ವನಸ್ಪತಿ. **–ಕೂಡ.** ನ: [–ಕೂಟ] ಒಂದು ದೇವ–ವಿಮಾನ. **–ಕ್ಖ.** ಪು: [–ವಜ್ರಾಕ್ಷ] ಒಬ್ಬ ವಿದ್ಯಾಧರ ವಂಶದ ರಾಜ. **–ಚೂಡ.** ಪು: [–ಚೂಡ] ಒಬ್ಬ ವಿದ್ಯಾಧರ ವಂಶದ ರಾಜ (ಪಉಮ). **–ಜಂಘ.** ಪು: [–ಜಂಘ] ವಿದ್ಯಾಧರ ವಂಶದ ದೊರೆ. **–ಣಾಭ.** ಪು: [–ನಾಭ] ಭಗವಾನ್ ಅಭಿನಂದನ ಸ್ವಾಮಿಯ ಪ್ರಥಮ ಗಣಧರ. **'–ನಾಭ'** ಶಬ್ದವನ್ನು ನೋಡುವುದು. **–ದತ್ತ.** ಪು: [–ದತ್ತ] ವಿದ್ಯಾಧರ ವಂಶದ ದೊರೆ(ಪಉಮ). ಒಬ್ಬ ಜೈನಮುನಿ. **–ಧ್ಧಯ.** ಪು: [–ಧ್ವಜ] ವಿದ್ಯಾಧರ ವಂಶದ ದೊರೆ. **–ಧರ.** '[–ಹರ'] ಶಬ್ದವನ್ನು ನೋಡುವುದು. **–ನಾಗರೀ.** ಸ್ತ್ರೀ: –ನಾಗರೀ] ಒಂದು ಜೈನ–ಮುನಿಶಾಖೆ. **–ನಾಭ.** ಪು: [–ನಾಭ] ಒಬ್ಬ ಜೈನ ಮುನಿ. **'–ಣಾಭ'** ಶಬ್ದವನ್ನು ನೋಡುವುದು. **ಪಾಣಿ.** ಪು: [–ಪಾಣಿ] ಇಂದ್ರ(ಉತ್ತ). ವಿದ್ಯಾಧರ ವಂಶದ ದೊರೆ. **–ಪ್ಪಭ.** ನ: [–ಪ್ರಭ] ಒಂದು ದೇವ–ವಿಮಾನ. **–ಬಾಹು.** ಪು: [– ಬಾಹು] ವಿದ್ಯಾಧರ ವಂಶದ ಒಬ್ಬ ರಾಜ. **–ಭೂಮಿ.** ಸ್ತ್ರೀ: [–ಭೂಮಿ] ಲಾಟ ದೇಶದ ಒಂದು ಪ್ರದೇಶ (ಆಚಾ). **–ಮ.** **'–ಮಯ'** ಶಬ್ದವನ್ನು ನೋಡುವುದು. **–ಮಜ್ಝ.** ಪು: [–ಮಧ್ಯ] ರಾಕ್ಷಸ ವಂಶದ ಒಬ್ಬರಾಜ, ಒಬ್ಬ ಲಂಕೇಶ(ಪಉಮ). ರಾವಣನ ಸಾಮಂತ ದೊರೆ. **–ಮಜ್ಝಾ.** ಸ್ತ್ರೀ: [–ಮಧ್ಯಾ] ಒಂದು ಪ್ರತಿಮೆ, ಒಂದು ವ್ರತ(ಔಪ). **–ಮಯ.** ವಿ: [–ಮಯ] ವಜ್ರದಿಂದ ಮಾಡಿದ(ಪಉಮ). ಸ್ತ್ರೀ: **–ಮಈ.** **ರಿಸಹನಾರಾಯ.** ನ: [ಋಷಭನಾರಾಚ] ದೇಹ–ವಿಶೇಷ, ಶರೀರದ ಒಂದು ವಿಧದ ಸರ್ವೋತ್ತಮ ಬಂಧ(ಕಮ್ಮ). **–ರೂವ.** ನ: [–ರೂಪ] ಒಂದು ದೇವ–ವಿಮಾನ. **–ಲೇಸ.** ನ: [–ಲೇಶ್ಯ] ಒಂದು ದೇವ–ವಿಮಾನ. –ವಂ(ಅಪ). **'–ಮ'** ವನ್ನು ನೋಡುವುದು. **–ವಣ್ಣ.** ನ: [–ವರ್ಣ] ಒಂದು ದೇವ–ವಿಮಾನ. **–ವೇಗ.** ಪು: [–ವೇಗ] ಒಬ್ಬ ವಿದ್ಯಾಧರನ ಹೆಸರು. **ಸಿಂಖಲಾ.** ಸ್ತ್ರೀ: [–ಶೃಂಖಲಾ] ಒಬ್ಬ ವಿದ್ಯಾದೇವಿ. **–ಸಿಟ್ಠ.** ನ: [–ಸೃಷ್ಟ] ಒಂದು ದೇವ–ವಿಮಾನ. **–ಸುಂದರ.** ಪು: [–ಸುಂದರ]. ವಿದ್ಯಾಧರ ವಂಶೀಯ ರಾಜ(ಪಉಮ). **–ಸುಜಣ್ಹು.** ಪು: [–ಸುಜಹ್ನು] ವಿದ್ಯಾಧರ ವಂಶೀಯ ರಾಜ. **–ಸೇಣ.** ಪು: [–ಸೇನ] ವೃಷಭ ದೇವನ ಪೂರ್ವಜನ್ಮದಲ್ಲಿ ಗುರುವಾಗಿದ್ದ ಒಬ್ಬ ಮುನಿ. ವಿಕ್ರಮಶಕೆ ೧೪ನೇ ಶತಮಾನದ ಒಬ್ಬ ಜೈನ ಆಚಾರ್ಯ. **–ಹರ.** ಪು: [–ಧರ] ದೇವರಾಜ ಇಂದ್ರ. ವಿ: ವಜ್ರವನ್ನು ಧರಿಸಿರುವವನು. **ವಜ್ಜಾಉಹ.** ಪು: [ವಜ್ರಾಯುಧ] ಒಬ್ಬ ಇಂದ್ರ(ಪಉಮ), ಒಬ್ಬ ವಿದ್ಯಾಧರ ವಂಶೀಯ ರಾಜ. **ವಜ್ಜಾಭ.** ಪು: [ವಜ್ರಾಭ] ವಿದ್ಯಾಧರ ವಂಶೀಯ ರಾಜ. **ವಜ್ಜಾವತ್ತ.** ನ: [ವಜ್ರಾವರ್ತ] ಒಂದು ದೇವ–ವಿಮಾನ. **ವಜ್ಜಾಸ.** ಪು: [ವಜ್ರಾಶ] ವಿದ್ಯಾಧರ ರಾಜ(ಪಉಮ)

ವಜ್ಜಂಕ. ಪು: [ವಜ್ರಾಂಕ] ವಿದ್ಯಾಧರ ವಂಶದ ಒಬ್ಬ ರಾಜ

ವಜ್ಜಂಕುಸೀ. ಪು: [ವಜ್ರಾಂಕುಶೀ] ಒಬ್ಬ ವಿದ್ಯಾದೇವಿ.

ವಜ್ಜಂತ. **'ವಜ್ಜ=ವದ್'** ಶಬ್ದವನ್ನು ನೋಡುವುದು.

ವಜ್ಜಂಧರ. ಪು: [ವಜ್ರಂಧರ] ವಿದ್ಯಾಧರ ವಂಶದ ಒಬ್ಬರಾಜ.

ವಜ್ಜಘಟ್ಟಿತಾ. ಸ್ತ್ರೀ: [ದೇ] ದುರದೃಷ್ಟವಂತ ಮಹಿಳೆ, ಅದೃಷ್ಟಹೀನೆ

ವಜ್ಜಣ. ನ: [ವರ್ಜನ] ತ್ಯಜಿಸುವುದು, ಬಿಟ್ಟುಬಿಡುವುದು(ಸುರ)

ವಜ್ಜಣ(ಅಪ). ವಿ: [ವದಿತೃ] ಬಾರಿಸುವ ವಾದ್ಯ(ಹೇ)

ವಜ್ಜಣಯಾ}. ಸ್ತ್ರೀ: [ವರ್ಜನಾ] ತ್ಯಜಿಸುವುದು(ಉವ)

ವಜ್ಜಣಾ}.

ವಜ್ಜಯ. ವಿ: [ವರ್ಜಕ] ತ್ಯಜಿಸುವವನು, ಬಿಡುವವನು

ವಜ್ಜರ. ಸಕ: [ಕಥಯ್] ಹೇಳು. **'ವಜ್ಜರಇ,** ವ.ಕೃ: **'ವಜ್ಜರಂತ'**

ವಜ್ಜರ. **'ವಂಜರ=ಮಾರ್ಜಾರ'** ಶಬ್ದವನ್ನು ನೋಡುವುದು.

ವಜ್ಜರ. ಪು: [ವರ್ಜರ] ಒಂದು ದೇಶ, ವಿ: ಆ ದೇಶದಲ್ಲಿ ಹುಟ್ಟಿದ

ವಜ್ಜರಣ. ನ: [ಕಥನ] ಉಕ್ತಿ, ಮಾತು, ಹೇಳುವಿಕೆ

ವಜ್ಜರಾ. ಸ್ತ್ರೀ: [ದೇ] ನದಿ(ದೇ)

ವಜ್ಜರಿಅ. ವಿ: [**ಕಥಿತ**] ಉಕ್ತ, ಹೇಳಲಾದ, ಹೇಳಲ್ಪಟ್ಟ
ವಜ್ಜಾ. ಸ್ತ್ರೀ: [**ದೇ**] ಅಧಿಕಾರ, ಪ್ರಸ್ತಾವ
ವಜ್ಜಾವ(ಅಪ). **ಸಕ:** [**ವಾಚಯ್**]ಓದಿಸು,ಬೋಧಿಸು
ವಜ್ಜಾವ. **ಸಕ:** [**ವಾದಯ್**]ವಾದ್ಯ ಬಾರಿಸು. **'ವಜ್ಜಾವಇ'**
ವಜ್ಜಾವಿಯ. ವಿ: [**ವಾದಿತ**] ನುಡಿಸಲ್ಪಟ್ಟ, ಬಾರಿಸಲ್ಪಟ್ಟ (ವಾದ್ಯ)
ವಜ್ಜಿ. **ಪು:** [**ವಜ್ರಿನ್**] ಇಂದ್ರ.
ವಜ್ಜಿಅ. ವಿ: [**ದೇ**] ನೋಡಲ್ಪಟ್ಟ
ವಜ್ಜಿಅ. ವಿ: [**ವಾದಿತ**] ನುಡಿಸಲ್ಪಟ್ಟ, ಬಾರಿಸಲ್ಪಟ್ಟ (ವಾದ್ಯ)
ವಜ್ಜಿಅ. ವಿ: [**ವರ್ಜಿತ**] ರಹಿತ, ತ್ಯಜಿಸಲ್ಪಟ್ಟ(ಪ)
ವಜ್ಜಿಯಾವಗ. **ಪು:** [**ದೇ**] ಕಬ್ಬು(ವವ)
ವಜ್ಜಿರ. ವಿ: [**ವದಿತೃ**] ಬಾರಿಸುವ(ವಾದ್ಯ)
ವಜ್ಜುತ್ತರವಡಿಂಸಗ. **ನ:** [**ವಜ್ರೋತ್ತರಾವತಂಸಕ**] ಒಂದು ದೇವ–ವಿಮಾನ
ವಜ್ಜೋಯರೀ. ಸ್ತ್ರೀ: [**ವಜ್ರೋದರೀ**] ಒಂದು ವಿದ್ಯೆ (ಪಉಮ)
ವಜ್ಝ. ವಿ: [**ವಧ್ಯ**] ವಧಿಸಲು ಯೋಗ್ಯನಾದ, ಕೊಲ್ಲಲು ಅರ್ಹನಾದ(ಸುಪಾ). **–ನೇವತ್ಥಿಯ.** ವಿ:[**–ನೇಪಥ್ಯಿಕ**] ಮರಣದಂಡನೆಗೆ ಗುರಿಯಾದವನಿಗೆ ತೊಡಿಸುವ ವೇಷವುಳ್ಳವನು(ಪಣ್ಣ). **–ಮಾಲಾ.** ಸ್ತ್ರೀ: [**–ಮಾಲಾ**] ವಧಾರ್ಹನಿಗೆ ತೊಡಿಸುತ್ತಿದ್ದ ಹೂವಿನ ಹಾರ(ಭತ್ತ)
ವಜ್ಝ. ವಿ: [**ವಾಹ್ಯ**] ಹೊರಲು ಯೋಗ್ಯವಾದ, ಹೊರಲು ತಕ್ಕುದಾದ(ಉಪ), **ನ:** ಕುದುರೆ ಮೊದಲಾದ ಭಾರ ಹೊರುವ ವಾಹನಗಳು. **ಖೆಡ್ಡ.** **ನ:** [**–ಖೇಲ**] ವಾಹನಸವಾರಿ ಮಾಡುವ ಜ್ಞಾನ
ವಜ್ಝಾ. ಸ್ತ್ರೀ: [**ಹತ್ಯಾ**] ವಧೆ, ಕೊಲೆ
ವಜ್ಝಿಯಾಯಣ. **ನ:** [**ವಧ್ಯಾಯನ**] ಒಂದು ಗೋತ್ರ.
ವತ್ರ(ಅಪ). **'ವಚ್ಚ=ವಜ್'** ಶಬ್ದವನ್ನು ನೋಡುವುದು.
ವಟ್ಟ. **ಸಕ:** [**ವೃತ್**] ಆಗು, ಇರು, ಆಚರಿಸು. **'ವಟ್ಟಇ'.** ವ. ಕೃ: **ವಟ್ಟಂತ**
ವಟ್ಟ. **ಸಕ:** [**ವರ್ತಯ್**] ವರ್ತಿಸು, ಉಂಡೆಯ ಆಕಾರದಲ್ಲಿ ಕಟ್ಟು, ಬಡಿಸು, ಮುಚ್ಚು, ಹೊದಿಸು
ವಟ್ಟ. ವಿ: [**ವೃತ್ತ**] ಗುಂಡಾಗಿರುವ, ಗೋಳಾಕಾರ (ಔಪ), ಕಳೆದುಹೋದ, ಗತಿಸಿದ, ಮೃತ, ತೀರಿಕೊಂಡ, ಹುಟ್ಟಿದ, ಅಧ್ಯಯನ ಮಾಡಲ್ಪಟ್ಟ, ದೃಢವಾದ, **ಪು:** ಆಮೆ, ಕೂರ್ಮ. **ನ:** ವರ್ತನೆ ನಡವಳಿಕೆ, ವ್ಯವಹಾರ. **–ಕ್ಖುರ, –ಖುರ.** **ಪು:** [**–ಖುರ**] ಶ್ರೇಷ್ಠ ಕುದುರೆ. **–ಖೇಡ, –ಖೇಡ್ಡ.** ಸ್ತ್ರೀನ: [**–ಖೇಲ**] ಒಂದು ಕಲೆ. **'ವತ್ಥಖೇಡ್ಡ'** ಶಬ್ದವನ್ನು ನೋಡುವುದು. **'ವತ್ತ, ವಿತ್ತ=ವೃತ್ತ'** ಶಬ್ದವನ್ನು ನೋಡುವುದು. **–ವೇಯಡ್ಢ.** **ಪು:** [**–ವೇತಾಢ್ಯ**] ಒಂದು ಪರ್ವತ ವಿಶೇಷ.
ವಟ್ಟ. **ಪು:** [**ವರ್ತ್ಮನ್**] ಹಾದಿ, ದಾರಿ. **–ವಾಡಣ.** **ನ:** [**–ಪಾತನ**] ಪ್ರಯಾಣಿಕರನ್ನು ದಾರಿಯಲ್ಲಿ ಲೂಟಿ ಮಾಡುವುದು.
ವಟ್ಟ. **ಪುಂನ:** [**ದೇ**] ಬಟ್ಟಲು, **ಪು:** ಹಾನಿ, ನಷ್ಟ, ಕಲ್ಲಿನ ಚೂರು, ಮಣ್ಣಿನ ಹೆಂಟೆ, ಒಂದು ಖಾದ್ಯ
ವಟ್ಟ. **ಪು:** [**ವರ್ತ**] ಒಂದು ದೇಶ
–ವಟ್ಟ. **ಪು:** [**ಪಟ್ಟ**] ಪ್ರವಾಹ(ಕುಮಾ), **'ಪಟ್ಟ'** ಶಬ್ದವನ್ನು ನೋಡುವುದು.
ವಟ್ಟಕ}. **'ವಟ್ಟಯ=ವರ್ತಕ'** ಶಬ್ದವನ್ನು ನೋಡುವುದು.
ವಟ್ಟಗ}. (ಪಣ್ಣ)
ವಟ್ಟಣ. **'ವತ್ತಣ'** ಶಬ್ದವನ್ನು ನೋಡುವುದು.
ವಟ್ಟಮಗ. **ನ:** [**ವರ್ತ್ಮಕ**] ದಾರಿ, ಹಾದಿ, ಮಾರ್ಗ
ವಟ್ಟಮಾಣ. **ನ:** [**ದೇ**] ಶರೀರ, ಗಂಧ ದ್ರವ್ಯಗಳ ಒಂದು ಬಗೆಯ ಸ್ಥಿತಿ
ವಟ್ಟಯ. **'ವಟ್ಟ=ದೇ'** ಶಬ್ದವನ್ನು ನೋಡುವುದು.
ವಟ್ಟಯ. **ಪು:** [**ವರ್ತಕ**] ಲಾವಕ್ಕಿ(ಸೂಅ), ಮಕ್ಕಳ ಆಟಿಕೆ
–ವಟ್ಟಯ. **'ಪಟ್ಟ'** ಶಬ್ದವನ್ನು ನೋಡುವುದು(ಗಉಡ)
ವಟ್ಟಾ. ಸ್ತ್ರೀ: [**ದೇ. ವರ್ತ್ಮನ್**] **'ವಟ್ಟ=ವರ್ತ್ಮನ್'** ಶಬ್ದವನ್ನು ನೋಡುವುದು.
ವಟ್ಟಾ. ಸ್ತ್ರೀ: [**ವಾರ್ತಾ**] ಮಾತು, ವೃತ್ತಾಂತ
ವಟ್ಟಾವ. **ಸಕ:** [**ವರ್ತಯ್**] ಕೆಲಸದಲ್ಲಿ ತೊಡಗು
ವಟ್ಟಾವಣ. **ನ:** [**ವರ್ತನ**] ಕೆಲಸದಲ್ಲಿ ತೊಡಗುವಿಕೆ
ವಟ್ಟಾವಯ. ವಿ: [**ವರ್ತಕ**] ಕಾರ್ಯದಲ್ಲಿ ತೊಡಗುವವನು, ಕಾರ್ಯದಲ್ಲಿ ತೊಡಗುವಂತೆ ಮಾಡುವವನು
ವಟ್ಟಿ. ಸ್ತ್ರೀ: [**ವರ್ತಿ**] ದೀಪದ ಬತ್ತಿ, ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವ ಕಡ್ಡಿ, ಶರೀರಕ್ಕೆ ಮಾಡಿಕೊಳ್ಳುವ ಒಂದು ಬಗೆಯ ಲೇಪ, ಬರೆಯುವುದು, ಬರೆಯುವ ಕಡ್ಡಿ. **'ವತ್ತಿ, ವಿತ್ತಿ'** ಕೆಲಸದಲ್ಲಿ ತೊಡಗು

ವಟ್ಟಿಅ. ವಿ: [**ವರ್ತಿತ**] ಬದಲಾದ, ಪರಿವರ್ತಿತ, ಸುತ್ತುಗಟ್ಟಲ್ಪಟ್ಟ, ನಿರಿಗೆಗಟ್ಟಲ್ಪಟ್ಟ(ಪವ), ದುಂಡನೆಯ, ಗೋಳಾಕಾರದ(ಪಣ್ಣ), ಸ್ಥಾಪಿಸಲ್ಪಟ್ಟ, ತೊಡಗಿಸಲ್ಪಟ್ಟ, ಪ್ರವೃತ್ತಿ ಮಾಡಿಸಲ್ಪಟ್ಟ
ವಟ್ಟಿಆ. ಸ್ತ್ರೀ: [**ವರ್ತಿಕಾ**] '**ವಟ್ಟಿ**' ಶಬ್ದವನ್ನು ನೋಡುವುದು.
ವಟ್ಟಿಮ. ವಿ: [**ದೇ**] ಭಿನ್ನವಾದ, ಬೇರೆಯಾದ, ಹೊರತಾದ, ಮೀರಿದ
ವಟ್ಟಿಯ. ವಿ: [**ದೇ**] ಪುಡಿಮಾಡಲ್ಪಟ್ಟ, ಬೀಸಿದ
ವಟ್ಟಿವ. ನ: [**ದೇ**] ಬೇರೆ ಕಾರ್ಯ
ವಟ್ಟೀ. ಸ್ತ್ರೀ: [**ವರ್ತಿ**] '**ವಟ್ಟಿ**' ಶಬ್ದವನ್ನು ನೋಡುವುದು.
–ವಟ್ಟೀ. ಸ್ತ್ರೀ: [**ಪಟ್ಟೀ**] ಕೆಂಪು ಅರಗಿನ ಗಿಡ, ಬೈತಲೆಯ ಬೊಟ್ಟು, ಹಣೆಯ ಆಭರಣ
ವಟ್ಟು. ನ:[**ದೇ**] ಒಂದು ಪಾತ್ರೆ, **–ಕರ.** ಪು:[**–ಕರ**] ಒಬ್ಬ ಯಕ್ಷ. **–ಕರೀ.** ಸ್ತ್ರೀ:[**–ಕರೀ**] ಒಂದು ಬಗೆಯ ವಿದ್ಯೆ
ವಟ್ಟುಲ. ವಿ: [**ವರ್ತುಲ**] ಗುಂಡಾಗಿರುವ, ಗೋಳಾಕಾರ(ಪಾಅ), **ಪುಂನ:** ಈರುಳ್ಳಿಯಂಥ ಒಂದು ಗೆಡ್ಡೆ
–ವಟ್ಟ. '**ಪಟ್ಠ=ಪೃಷ್ಠ**' ಶಬ್ದವನ್ನು ನೋಡುವುದು (ಗಲುಡ)
–ವಟ್ಠ. '**ಸಟ್ಠ**' ಶಬ್ದವನ್ನು ನೋಡುವುದು.
ವಡ. ಪು: [**ದೇ**] ಬಾಗಿಲಿನ ಒಂದು ಭಾಗ, ಗದ್ದೆ, ಹೊಲ, ಮೀನಿನ ಒಂದು ಜಾತಿ(ಪಣ್ಣ), ವಿಭಾಗ (ನಿಚೂ), '**ವಡ್ಡ**' ಶಬ್ದವನ್ನು ನೋಡುವುದು.
ವಡ. ಪು: [**ವಟ**] ಆಲದ ಮರ(ಪಣ್ಣ), ನ: ಒಂದು ಬಗೆಯ ವಸ್ತ್ರ, **–ನಯರ.** ನ: [**–ನಗರ**] ಒಂದು ನಗರ(ಪಉಮ), **–ವದ್ದ.** ನ: [**–ಪದ್ರ**] ಈಗ ವಡೋದಾ ಎಂದು ಕರೆಯಲಾಗುವ ಗುಜರಾತಿನ ಒಂದು ನಗರ. ಒಂದು ಗೋಕುಲ. **–ಸಾವಿತ್ತೀ.** ಸ್ತ್ರೀ: [**ಸಾವಿತ್ರೀ**] ಒಬ್ಬ ದೇವಿ.
ವಡ. '**ಪಡ**'**=ಪತ್**' ಶಬ್ದವನ್ನು ನೋಡುವುದು.
–ವಡ. '**ಪಡ=ಪಟ**' ಶಬ್ದವನ್ನು ನೋಡುವುದು.
ವಡಗ. ನ: [**ವಟಕ**] ವಡೆ– ಒಂದು ಭಕ್ಷ್ಯ.
ವಡಗ. '**ವಡ=ವಟ**' ಶಬ್ದವನ್ನು ನೋಡುವುದು.
–ವಡಣ. '**ಪಡಣ**' ಶಬ್ದವನ್ನು ನೋಡುವುದು(ಗಾ)
ವಡಪ್ಪ. ನ: [**ದೇ**] ದಟ್ಟವಾದ ಲತೆಗಳ ಪೊದೆ, ನಿರಂತರವಾದ ಮಳೆ

ವಡಭ. ವಿ: [**ವಡವು**] ಕುಳ್ಳ, ವಾಮನ, ಯಾರ(ಯಾವುದರ) ಹಿಂಭಾಗ ಹೊರಕ್ಕೆ ಬಂದಿದೆಯೋ ಅದು. ಹೊಕ್ಕುಳಿನ ಮೇಲ್ಭಾಗ, ವಕ್ರವಾಗಿರುವ, ಹಿಂಭಾಗ ಅಥವಾ ಮುಂಭಾಗ ಹೊರಬಂದಿರುವ, ಯಾರ(ಯಾವುದರ) ಹೊಟ್ಟೆ ದೊಡ್ಡದಾಗಿ ಮುಂದೆ ಬಂದಿದೆಯೋ ಅವನು ಅಥವಾ ಅದು. ಸ್ತ್ರೀ: **–ಭೀ(ಣಾಯಾ)**
ವಡಯ. '**ವಡಗ=ವಟಕ**' ಶಬ್ದವನ್ನು ನೋಡುವುದು.
–ವಡಲ. '**ಪಡಲ**' ಶಬ್ದವನ್ನು ನೋಡುವುದು(ಗಲುಡ)
ವಡವಗ್ಗಿ. ಪು: [**ವಡವಾಗ್ನಿ**] ಸಮುದ್ರ ಮಧ್ಯದಲ್ಲಿ ಏಳುವ ಅಗ್ನಿ, ಬಡಬಾನಲ. (ಗಾ)
ವಡವಡ. ಅಕ: [**ವಿ+ಲಪ್**] ಅಳು, ವಿಲಪಿಸು
ವಡವಾ. ಸ್ತ್ರೀ: [**ವಡವಾ**] ಹೆಣ್ಣು ಕುದುರೆ(ಪಾಅ), **–ಣಲ, –ನಲ.** ಪು: [**–ನಲ**] ಬಡಬಾನಲ. **–ಮುಹ.**ನ: [**–ಮುಖ**] ಅದೇ ಅರ್ಥ. ಒಂದು ಮಹಾ ಪಾತಾಳ. **–ಹುಆಸ.** ಪು: [**–ಹುತಾಶ**] ಬಡಬಾನಲ
ವಡಹ. '**ವಡಭ**' ಶಬ್ದವನ್ನು ನೋಡುವುದು(ಆಚಾ)
ವಡಹ. ಪು: [**ದೇ**] ಒಂದು ಬಗೆಯ ಪಕ್ಷಿ
–ವಡಹ. '**ಪಡಹ**' ಶಬ್ದವನ್ನು ನೋಡುವುದು.
ವಡಹೀ. '**ವಲಹೀ**' ಶಬ್ದವನ್ನು ನೋಡುವುದು.
–ವಡಾಆ. '**ಪಡಾಯಾ**' ಶಬ್ದವನ್ನು ನೋಡುವುದು.
–ವಡಾಲಿ. ಸ್ತ್ರೀ: [**ದೇ**] ಪಂಕ್ತಿ, ಸಾಲು(ದೇ)
–ವಡಾಹಾ. '**ಪಡಾಯಾ**' ಶಬ್ದವನ್ನು ನೋಡುವುದು.
–ವಡಿಅ. '**ಪಡಿಅ**' ಶಬ್ದವನ್ನು ನೋಡುವುದು.
ವಡಿಅ. ವಿ: [**ಗೃಹೀತ**] ಸ್ವೀಕರಿಸಲ್ಪಟ್ಟ
–ವಡಿಂಸ. ಪು: [**ವತಂಸ**] ಮೇರು ಪರ್ವತ, ಒಡವೆ, ಒಂದು ದಿಗ್ಗಜಗಳ ಗುಂಪು, ಪ್ರಧಾನ, ಮುಖ್ಯ, ಶ್ರೇಷ್ಠ(ಕಪ್ಪ), ಕರ್ಣಾಭರಣ(ಣಾಯಾ), '**ವಡೇಂಸ**, '**ಅವಯಂಸ**' ಶಬ್ದಗಳನ್ನು ನೋಡುವುದು.
ವಡಿಣಾಯ. ಪು: [**ದೇ**] ಕೂತುಹೋಗಿರುವ ಕಂಠ
ವಡಿಯಾ. ಸ್ತ್ರೀ: [**ವೃತ್ತಿತಾ**] ವರ್ತನೆ, ನಡವಳಿಕೆ(ಆಚಾ)
–ವಡಿಯಾ. '**ಪಡಿಯಾ=ಪ್ರತಿಜ್ಞಾ**' ಶಬ್ದವನ್ನು ನೋಡುವುದು(ಆಚಾ)
ವಡಿಸರ. ನ: [**ದೇ**] ಒಲೆಯ ಬುಡ.
ವಡಿವಸ್ಸಅ. ವಿ: [**ವರಿವಸ್ಯಕ**] ಪೂಜೆ ಮಾಡುವವನು (ಚಾರು)

ವಡಿಸಾಅ. ವಿ: [ದೇ] ತೊಟ್ಟಿಕ್ಕಿದ, ಸೋರಿದ(ಷಡ್)
ವಡೀ. ಸ್ತ್ರೀ: [ದೇ] ಒಂದು ಬಗೆಯ ಆಹಾರ, ಖಾದ್ಯ
ವಡ್ಡಮಗ}.**'ವಟ್ಟಮಗ'** ಶಬ್ದವನ್ನು ನೋಡುವುದು
ವಡೂಮಗ}.(ಔಪ)
ವಡೆಂಸ. ಪು: [ವತಂಸ] ಶಿರೋಭೂಷಣ, ಕಿರೀಟ,
ವಡೆಂಸಾ. ಸ್ತ್ರೀ: [ವತಂಸಾ] **'ಕಿನ್ನರ'** ಎಂಬ ಹೆಸರಿನ ಕಿನ್ನರಾಧಿಪತಿಯ ಒಬ್ಬ ಅಗ್ರಮಹಿಷಿ(ಠಾ)
ವಡೆಂಸಿಯಾ. ಸ್ತ್ರೀ: [ವತಂಸಿಕಾ] ಕಿರೀಟದ ಹಾಗೆ ಮಾಡುವುದು(ಠಾ)
ವಡ್ಡ. ವಿ: [ದೇ] ಹಿರಿಯ, ದೊಡ್ಡ, ಮಹಾನ್(ದೇ). **–ಅತ್ಥರಗ.** ಪು: [ಆಸ್ತರಕ]ಒಂಟೆಯ ಬೆನ್ನಿನ ಮೇಲೆ ಇರಿಸಲಾಗುವ ಆಸನ, ಪೀಠ(ಪವ). **–ತ್ತಣ.** ನ: [–ತ್ವ] ಹಿರಿತನ, ದೊಡ್ಡತನ, ಮಹತ್ವ(ಹೇ). **–ಪ್ಪಣ(ಅಪ).** ನ: [–ತ್ವ] ಅದೇ. **–ಯರ.** ವಿ: [–ತರ] ಶ್ರೇಷ್ಠತರ, ಅತಿ ಮಹತ್ವದ.
ವಡ್ಡವಾಸ. ಪು: [ದೇ] ಮೇಘ, ಮೋಡ(ದೇ)
ವಡ್ಡಹುಲಿ. ಪು: [ದೇ] ಮಾಲಿ, ಹೂವಾಡಿಗ, ಹೂಮಾಲೆ ತಯಾರಿಸುವವನು(ದೇ)
ವಡ್ಡಾರ(ಅಪ). **'ವಡ್ಡ–ಯರ'** ಶಬ್ದವನ್ನು ನೋಡುವುದು.
ವಡ್ಡಿಮ. ವಿ: [ದೇ] ಸೋರಿದ, ತೊಟ್ಟಿಕ್ಕಿದ
ವಡ್ಡಿಲ(ದೇ). **'ವಡ್ಡ'** ಶಬ್ದವನ್ನು ನೋಡುವುದು.
ವಡ್ಡುಅರ. **'ವಡ್ಡ–ಯರ'** ಶಬ್ದವನ್ನು ನೋಡುವುದು.
ವಡ್ಢ. ಅಕ: [ವೃಧ್] ವರ್ಧಿಸು, ಅಧಿಕವಾಗು, ಅಭಿವೃದ್ಧಿಯಾಗು. **'ವಡ್ಢಇ'**
ವಡ್ಢ. ಸಕ: [ವರ್ಧಯ್] ಅಭಿವೃದ್ಧಿಮಾಡು, ವಿಸ್ತರಿಸು, ಹೆಚ್ಚಿಸು, ಅಭಿನಂದಿಸು **ವ. ಕೃ: 'ವಡ್ಢಂತ'**
ವಡ್ಢಇ. ಪು: [ವರ್ಧಕಿ] ಬಡಗಿ, ಮರಗೆಲಸದವನು.
ವಡ್ಢಇಅ. ಪು: [ದೇ] ಮೋಚಿ,
ವಡ್ಢಣ. ನ: [ವರ್ಧನ] ಅಭಿವೃದ್ಧಿ ಹೊಂದುವುದು, ಹೆಚ್ಚಾಗುವುದು
ವಡ್ಢಣಮಿರ. ವಿ: [ದೇ] ಬಲಿಷ್ಠ, ದಪ್ಪಗಿರುವ, ಪುಷ್ಟವಾದ(ದೇ)
ವಡ್ಢಣಸಾಲ. ವಿ: [ದೇ] ಬಾಲ ಕತ್ತರಿಸಿಹೋಗಿರುವ
ವಡ್ಢಮಾಣ. **'ವಡ್ಢ=ವೃಧ್'** ಶಬ್ದವನ್ನು ನೋಡುವುದು.
ವಡ್ಢಮಾಣ}. ನ: [ವರ್ಧಮಾನ, –ಕ] ಈಗ 'ವಢವಾಣ'
ವಡ್ಢಮಾಣಂು}. ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಗುಜರಾತಿನ ಒಂದು ನಗರ. ಅವಧಿ ಜ್ಞಾನದ ಒಂದು ಪ್ರಭೇದ, ಉತ್ತರೋತ್ತರವಾಗಿ ಅಭಿವೃದ್ಧಿಯಾಗುತ್ತ ಹೋಗುವ ಒಂದು ಬಗೆಯ ಪರೋಕ್ಷ ರೂಪದ ದ್ರವ್ಯಗಳ ಜ್ಞಾನ, **ಪು;** ಭಗವಾನ್ ಮಹಾವೀರ. **'ವದ್ಧಮಾಣ'** ಶಬ್ದವನ್ನು ನೋಡುವುದು.
ವಡ್ಢಯ. **'ವಟ್ಟ=ದೇ'** ಶಬ್ದವನ್ನು ನೋಡುವುದು.
ವಡ್ಢವ. ಸಕ: [**ವರ್ಧಯ್, ವರ್ಧಾಪಯ್**] ಹೆಚ್ಚಿಸು, ವೃದ್ಧಿಪಡಿಸು, ಅಭಿನಂದಿಸು
ವಡ್ಢವಅ. ವಿ: [ವರ್ಧಕ] ಅಭಿವೃದ್ಧಿ ಮಾಡುವವನು, ಅಭಿನಂದಿಸುವವನು
ವಡ್ಢವಣ. ನ: [ದೇ] ವಸ್ತ್ರವನ್ನು ತರುವುದು, ವಸ್ತ್ರವನ್ನು ಕಸಿದುಕೊಳ್ಳುವುದು(ದೇ)
ವಡ್ಢವಣ. ನ: [ದೇ. **ವರ್ಧಾಪನ**] ಅಭಿನಂದನೆ
ವಡ್ಢವಿಅ. ವಿ: [**ವರ್ಧಿತ, ವರ್ಧಾಪಿತ**] ಅಭಿನಂದಿಸಲ್ಪಟ್ಟವನು
ವಡ್ಢಾರ.(ಅಪ). ಸಕ: [**ವರ್ಧಯ್**] ಅಭಿವೃದ್ಧಿಪಡಿಸು, ಹೆಚ್ಚಿಸು, ವರ್ಧಿಸು
ವಡ್ಢಾವ. **'ವಡ್ಢವ'** ಶಬ್ದವನ್ನು ನೋಡುವುದು.
ವಡ್ಢಾವಅ. **'ವಡ್ಢವಅ'** ಶಬ್ದವನ್ನು ನೋಡುವುದು.
ವಡ್ಢಾವಿಅ. ವಿ: [ದೇ] ಸಮಾಪ್ತಗೊಳಿಸಲ್ಪಟ್ಟ,
ವಡ್ಢಿ. ವಿ: [ವರ್ಧಿನ್] ಅಭಿವೃದ್ಧಿ ಹೊಂದುವವನು, ವರ್ಧಿಸುವವನು
ವಡ್ಢಿ. ಸ್ತ್ರೀ: [ವೃದ್ಧಿ] ಅಭ್ಯುದಯ, ಸಮೃದ್ಧಿ, ಹೆಚ್ಚುವುದು (ಉವಾ)
ವಡ್ಢಿಅ. ವಿ: [ವೃದ್ಧ] ಅಭಿವೃದ್ಧಿ ಹೊಂದಿದ, ಹೆಚ್ಚಾಗಿರುವ,(ಕುಮಾ), ಪೂಜ್ಯ, ಮುದುಕ.
ವಡ್ಢಿಅ. ವಿ: [ವರ್ಧಿತ] ಹೆಚ್ಚಿಸಲ್ಪಟ್ಟ, ವೃದ್ಧಿಸಲ್ಪಟ್ಟ, ಕತ್ತರಿಸಲ್ಪಟ್ಟ
ವಡ್ಢಿಆ. ಸ್ತ್ರೀ: [ದೇ] ಬಾವಿಯ ಮೇಲೆ ನೀರು ಸೇದಲು ಹಾಕಿರುವ ಉದ್ದನೆಯ ಮರ
ವಡ್ಢಿಮ. **ಪುಂಸ್ತ್ರೀ:** [ವೃದ್ಧಿಮನ್] ಅಭಿವೃದ್ಧಿ, ಹೆಚ್ಚಳ
ವಢ. **'ವಡ=ವಟ'** ಶಬ್ದವನ್ನು ನೋಡುವುದು.
ವಢ. ವಿ: [ದೇ] ಮೂಕ, ಮಾತಿನ ಶಕ್ತಿಯಿಲ್ಲದ
ವಢರ}. ಪು: [ವಠರ] ಮೂರ್ಖಶಿಷ್ಯ, ಬ್ರಾಹ್ಮಣ
ವಢಲ}. ಪುರುಷ ಮತ್ತು ವೈಶ್ಯ ಮಹಿಳೆಗೆ ಹುಟ್ಟಿದ ಸಂತಾನ, ವಿ: ಧೂರ್ತ, ವಂಚಕ, ಸೋಮಾರಿ(ಹೇ)
ವಣ. ಸಕ: [ವನ್] ಬೇಡು, ಯಾಚಿಸು. **'ವಣೇಇ'**

ವಣ. ಪು: [ದೇ] ಅಧಿಕಾರ, ಶ್ವಪಚ,
ವಣ. ಪುಂನ: [ವ್ರಣ] ಗಾಯ, ಹುಣ್ಣು(ಪಾಅ), **–ವಟ್ಟ. ಪು:** [–ಪಟ್ಟ] ಗಾಯದ ಮೇಲೆ ಕಟ್ಟುವ ಪಟ್ಟಿ
ವಣ. ನ: [ವನ] ಅರಣ್ಯ, ಕಾಡು, ನೀರು, ನಿವಾಸ, ಮನೆ, ವನಸ್ಪತಿ, ಉದ್ಯಾನ, **ಪು:** ದೇವತೆಗಳ ಒಂದು ಜಾತಿ, ವಾನವ್ಯಂತರ ದೇವತೆ, ಒಂದು ವೃಕ್ಷ. **–ಕಮ್ಮ. ಪುಂನ:** [–ಕರ್ಮನ್] ಅರಣ್ಯವನ್ನು ಕಡಿಯುವ ಅಥವಾ ಮಾರುವ ಕೆಲಸ(ಭಗ). **–ಕಮ್ಮಂತ. ನ:** [–ಕರ್ಮಾಂತ] ಮರದ ಕಾರ್ಖಾನೆ(ಆಚಾ). **–ಗಯ. ಪು:** [–ಗಜ] ಕಾಡಾನೆ. **–ಗ್ಗಿ. ಪು:** [ವನಾಗ್ನಿ] ಕಾಡುಕಿಚ್ಚು. **–ಚರ. ಪು:** [–ಚರ] ಕಾಡಿನಲ್ಲಿ ವಾಸಿಸುವ, ವನಚರ. ಸ್ತ್ರೀ:–ರೀ. **'–ಯರ'** ಶಬ್ದವನ್ನು ನೋಡುವುದು. **–ಛಿಂದ. ವಿ:** [–ಚ್ಛಿದ್ರ] ಕಾಡು ಕಡಿಯುವವನು. **–ತ್ಥಲೀ. ಸ್ತ್ರೀ:** [–ಸ್ಥಲೀ] ಅರಣ್ಯ–ಭೂಮಿ. **–ದವ. ಪು:** [–ದವ] ಕಾಡುಕಿಚ್ಚು (ಣಾಯಾ). **–ಪವ್ವಯ. ಪುಂನ:** [–ಪರ್ವತ] ಕಾಡಿನಲ್ಲಿ ವ್ಯಾಪಿಸಿರುವ ಪರ್ವತ. **–ವಿರಾಲ. ಪು:** [–ವಿಡಾಲ] ಕಾಡು ಬೆಕ್ಕು. **–ಮಾಲ. ನ:** [–ಮಾಲ] ಒಂದು ದೇವ–ವಿಮಾನ.**–ಮಾಲಾ. ಸ್ತ್ರೀ:** [–ಮಾಲಾ] ಕಾಲಿನ ವರೆಗೂ ನೇತಾಡುವ ಹಾರ(ಔಪ), ಒಬ್ಬ ರಾಜನ ಹೆಂಡತಿ, ರಾವಣನ ಒಬ್ಬ ಹೆಂಡತಿ. **–ಯ. ವಿ:** [–ಜ] ಕಾಡಿನಲ್ಲಿ ಹುಟ್ಟಿದ(ವಜ್ಜಾ). ಕೊನ್ನಾರಿ ಗೆಡ್ಡೆ. **–ಯರ. ವಿ:** [–ಚರ] ವನದಲ್ಲಿ ವಾಸಿಸುವವನು, ಪುಂಸ್ತ್ರೀ: ವ್ಯಂತರ ದೇವ. ಸ್ತ್ರೀ: –ರೀ(ಉಪ). **–ರಾಇ. ಸ್ತ್ರೀ:**[–ರಾಜಿ] ಮರಗಳ ಸಮೂಹ. **–ರಾಜ, –ರಾಯ. ಪು:** [–ರಾಜ] ವಿಕ್ರಮ ಶಕೆ ಎಂಟನೇ ಶತಮಾನದ ಗುಜರಾತಿನ ಒಬ್ಬ ಪ್ರಸಿದ್ಧ ರಾಜ. ಸಿಂಹ. **–ಲಇಯಾ.–ಲಯಾ. ಸ್ತ್ರೀ:** [–ಲತಾ] ಒಬ್ಬ ಮಹಿಳೆಯ ಹೆಸರು, ಒಂದೇ ಕೊಂಬೆ ಇರುವ ಮರ. –ವಾಲ. ವಿ: [–ಪಾಲ] ಉದ್ಯಾನ ಪಾಲಕ, ಅರಣ್ಯ ಪಾಲಕ. **–ವಾಸ. ಪು:** [–ವಾಸ] ಕಾಡಿನಲ್ಲಿ ವಾಸಿಸುವುದು. **–ವಾಸೀ. ಸ್ತ್ರೀ:** [–ವಾಸೀ] ಒಂದು ನಗರಿ. **–ವಿದುಗ್ಗ. ನ:** [–ವಿದುರ್ಗ] ನಾನಾ ಬಗೆಯ ಮರಗಳ ಗುಂಪು(ಸೂಅ). **–ವಿರೋಹಿ. ಪು:** [–ವಿರೋಹಿನ್] ಆಷಾಢ ಮಾಸ. **–ಸಂಡ. ಪುಂನ:** [–ಷಂಡ] ಅನೇಕ ಬಗೆಯ ಮರಗಳ ಸಮೂಹ(ಭಗ). **–ಹತ್ಥಿ. ಪು:** [–ಹಸ್ತಿನ್] ಕಾಡಾನೆ. ವಣಾಲಿ, **ವಣೋಲಿ. ಸ್ತ್ರೀ:** [ವನಾಲೀ] ಮರಗಳ ಸಾಲು.
ವಣಇ. ಸ್ತ್ರೀ: [ದೇ] ಮರಗಳ ಸಾಲು(ದೇ)
ವಣಣ. ನ: [ವನನ] ಕರುವನ್ನು ಅದರ ತಾಯಿಯಿಂದ ಅಗಲಿಸಿ ಬೇರೊಂದಕ್ಕೆ ಸೇರಿಸುವುದು(ಪಣ್ಣ)
ವಣಣ. ನ: [ದೇ. ವ್ಯಾನ] ನೇಯುವುದು, **–ಸಾಲಾ. ಸ್ತ್ರೀ:** [–ಶಾಲಾ] ನೇಯ್ಗೆಯ ಕಾರ್ಖಾನೆ
ವಣದ್ಧಿ. ಸ್ತ್ರೀ: [ದೇ] ಗೋವುಗಳ ಸಮೂಹ, ಗೋ ಮಂದೆ
ವಣನತ್ತಡಿಅ. ವಿ: [ದೇ] ಮುಂಭಾಗದಲ್ಲಿ ಮಾಡಿದ, ಮುಂದೆ ಇಡಲ್ಪಟ್ಟ
ವಣಪಕ್ಕಸಾವ. ಪು: [ದೇ] ಶರಭ, ಎಂಟು ಕಾಲು ಮತ್ತು ಎರಡು ತಲೆಗಳ ಒಂದು ಮೃಗ(ದೇ)
ವಣಪ್ಫಇ. ಪು: [ವನಸ್ಪತಿ] ಹೂವಿಲ್ಲದೆ ಫಲಬಿಡುವ ಮರ(ಕುಮಾ), ಬಳ್ಳಿ, ಪೊದರು, ಮೊದಲಾದ ಯಾವುದೇ ಗಿಡ, ಮರ, ನ: ಫಲ. **–ಕಾಇಅ. ವಿ:** [–ಕಾಯಿಕ] ಮರದ ಜೀವ.
ವಣಯ. ಪು: [ವನಕ] ಎರಡನೇ ನರಕ ಭೂಮಿಯ ಒಂದು ನರಕ ಸ್ಥಾನ.
ವಣರಸಿ(ಅಪ). 'ವಾಣಾರಸಿ' ಶಬ್ದವನ್ನು ನೋಡುವುದು.
ವಣವ. ಪು: [ದೇ] ಕಾಡು ಕಿಚ್ಚು(ದೇ)
ವಣಸವಾಈ. ಸ್ತ್ರೀ: [ದೇ] ಕೋಗಿಲೆ.
ವಣಸ್ಸಇ. 'ವಣಪ್ಫಇ' ಶಬ್ದವನ್ನು ನೋಡುವುದು.
ವಣಾಯ. ವಿ: [ದೇ] ಬೇಟೆಗಾರನಿಂದ ಆಕ್ರಮಿಸಲ್ಪಟ್ಟ
ವಣಾರ. ಪು: [ದೇ] ನಿಗ್ರಹಿಸಲ್ಪಡುವ ಹೋರಿ ಕರು
ವಣಿ. ವಿ: [ವ್ರಣಿನ್] ಗಾಯಗೊಂಡಿರುವ(ದೇ)
ವಣಿ}. ಪು: [ವಣಿಜ್] ವ್ಯಾಪಾರಿ, ವೈಶ್ಯ(ಔಪ)
ವಣಿಅ}.
ವಣಿಅ. ವಿ: [ವ್ರಣಿತ] ಗಾಯಗೊಂಡಿರುವ(ಗಾ)
ವಣಿಅ. ಪು: [ವನೀಪಕ] ಭಿಕ್ಷುಕ, ಯಾಚಕ,
ವಣಿಅ. ನ: [ವಣಿಜ] ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಒಂದು ಕರಣ.
ವಣಿಆ. ಸ್ತ್ರೀ: [ವನಿಕಾ] ತೋಟ, ಉದ್ಯಾನ (ಉವಾ)

ವಣಿಆ. ಸ್ತ್ರೀ: [ವನಿತಾ] ಮಹಿಳೆ, ಹೆಣ್ಣು(ಗಾ)
ವಣಿಜ}. ನ: [ವಾಣಿಜ್ಯ] ವ್ಯಾಪಾರ(ಸುಪಾ),
ವಣಿಜ್ಜ}. ವಣಿಜಾರಯ. ವಿ: [-ಕಾರಕ] ವ್ಯಾಪಾರಿ
ವಣಿಮ}. 'ವಣೀಮಯ' ಶಬ್ದವನ್ನು ನೋಡುವುದು.
ವಣೀಮಗ}. ನ: ಹಣವಿಲ್ಲದ, ಬಡವ
ವಣೀ. ಸ್ತ್ರೀ: [ವನೀ] ಭಿಕ್ಷೆಯಿಂದ ಬಂದ ಹಣ(ತಾ). ಹತ್ತಿ ಬಿಡುವ ಗಿಡ, ಮರ
ವಣೀಮಗ}. ಪು: [ವನೀಪಕ] ಭಿಕ್ಷುಕ, ಯಾಚಕ(ಓಘ)
ವಣೀಮಯ}.
ವಣೇ. ಅ: ನಿಶ್ಚಯ, ಸಂದೇಹ, ಅನುಕಂಪನೀಯ, ಸಂಭಾವನೆ, ಊಹೆ ಇವೇ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ವಣೇಚರ. 'ವಣ-ಯರ' ಶಬ್ದವನ್ನು ನೋಡುವುದು.
ವಣ್ಣ. ಸಕ: [ವರ್ಣಯ್] ವರ್ಣಿಸು, ಹೊಗಳು, ಬಣ್ಣ ಹಚ್ಚು, ವ. ಕೃ: 'ವಣ್ಣಂತ'
ವಣ್ಣ. ಪು: [ವರ್ಣ] ಪ್ರಶಂಸೆ, ಹೊಗಳಿಕೆ(ಉಪ), ಕೀರ್ತಿ, ಬಿಳಿ, ಹಸಿರು ಮೊದಲಾದ ಬಣ್ಣ(ತಾ) ಅಕಾರಾದಿ ಅಕ್ಷರಗಳು, ಗುಣ, ದೇಹಕ್ಕೆ ಹಚ್ಚಿಕೊಳ್ಳುವ ಸುಗಂಧ ದ್ರವ್ಯ, ಚಿನ್ನ, ಬಳಿಯುವ ವಸ್ತು; ಬಣ್ಣ, ವ್ರತ, ಬಳಿಯುವ ಕ್ರಿಯೆ, ಸಂಗೀತದ ತಾಳ, ಚಿತ್ರ, ಶುಕ್ಲವೇ ಮೊದಲಾದ ವರ್ಣಗಳಿಗೆ ಕಾರಣಭೂತವಾದ ಕರ್ಮ, ಸಂಯಮ, ಮುಕ್ತಿ (ಆಚಾ), ನ: ಕುಂಕುಮ. -ಣಾಮ, -ನಾಮ. ಪುಂನ: [-ನಾಮನ್] ಕರ್ಮ-ವಿಶೇಷ. ಮಂತ. ವಿ: [-ವತ್] ಪ್ರಶಸ್ತವಾದ ಬಣ್ಣವುಳ್ಳ. -ವಾಇ. ವಿ: [-ವಾದಿನ್] ಪ್ರಶಂಸಕ. -ವಾಯ. ಪು: [-ವಾದ] ಪ್ರಶಂಸೆ, ಹೊಗಳಿಕೆ. ವಣ್ಣಾವಾಸ. ಪು: [ವರ್ಣಾವಾಸ] ವರ್ಣನ ಪದ್ಧತಿ, ವರ್ಣನ ಪ್ರಕರಣ. ವಣ್ಣಾವಾಸ. ಪು: [ವರ್ಣಾವ್ಯಾಸ] ವರ್ಣನೆಯ ವಿಸ್ತಾರ(ಉವಾ)
ವಣ್ಣ. ಪು:[ವರ್ಣ] ಪಂಚಮ ಆದಿ ಸ್ವರ(ಉ),-ಸಮ. ನ:[-ಸಮ] ಗೇಯ ಕಾವ್ಯದ ಒಂದು ಪ್ರಭೇದ
ವಣ್ಣ. ವಿ: [ದೇ] ಸ್ವಚ್ಛವಾದ, ಶುದ್ಧವಾದ, ರಕ್ತ
-ವಣ್ಣ. 'ಪಣ್ಣ' ಶಬ್ದವನ್ನು ನೋಡುವುದು.
ವಣ್ಣಗ. 'ವಣ್ಣಯ' ಶಬ್ದವನ್ನು ನೋಡುವುದು.
ವಣ್ಣಣ}. ನ: [ವರ್ಣನ] ಶ್ಲಾಘನೆ, ಹೊಗಳಿಕೆ,
ವಣ್ಣಣಾ}. ಸ್ತ್ರೀ: [ವರ್ಣನಾ] ವಿವರಣೆ, ವರ್ಣನೆ
ವಣ್ಣಾಯ. ಪುಂನ: [ದೇ. ವರ್ಣಕ] ಶ್ರೀಗಂಧ, ಚಂದನ, ಮೈಗೆ ಲೇಪಿಸಿಕೊಳ್ಳುವ ಒಂದು ಬಗೆಯ ಚೂರ್ಣ
ವಣ್ಣಯ. ಪು: [ವರ್ಣಕ] ವರ್ಣನ ಗ್ರಂಥ, ವರ್ಣನ ಪ್ರಕರಣ
ವಣ್ಣಿಅ. ವಿ: [ವರ್ಣಿತ] ವರ್ಣಿಸಲ್ಪಟ್ಟದ್ದು
ವಣ್ಣಿಆ. 'ವನ್ನಿಆ' ಶಬ್ದವನ್ನು ನೋಡುವುದು
ವಣ್ಹಿ. ಪು: [ವೃಷ್ಣಿ] ಅಂಧಕ ವೃಷ್ಣಿ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ಒಬ್ಬ ರಾಜ, ಒಬ್ಬ ನಾಶಕಾರಕ ಮಹರ್ಷಿ, ಅಂಧಕ ವೃಷ್ಣಿಯ ವಂಶದಲ್ಲಿ ಹುಟ್ಟಿದವನು. -ದಸಾ. ಸ್ತ್ರೀ: [-ದಶಾ] ಒಂದು ಜೈನ ಆಗಮ ಗ್ರಂಥ. -ಪುಂಗವ. ಪು: [ಪುಂಗವ] ಯಾದವ ಶ್ರೇಷ್ಠ(ಉತ್ತ)
ವಣ್ಹಿ. ಪು: [ವಹ್ನಿ] ಬೆಂಕಿ, ಅಗ್ನಿ(ಪಾಅ), ಲೋಕಾಂತಿಕ ದೇವತೆಗಳ ಒಂದು ಜಾತಿ(ಣಾಂಯಾ), ಚಿತ್ರಮೂಲದ ಗಿಡ, ಗೇರುಮರ, ನಿಂಬೆ ಗಿಡ
ವತ. 'ವಯ=ವ್ರತ' ಶಬ್ದವನ್ನು ನೋಡುವುದು.
ವತಿ. 'ವಇ=ವ್ರತಿನ್' ಶಬ್ದವನ್ನು ನೋಡುವುದು.
ವತಿ. 'ವಇ=ವೃತಿ' ಶಬ್ದವನ್ನು ನೋಡುವುದು.
ವತು. ಪು: [ದೇ] ಸಮೂಹ, ಗುಂಪು
ವತ್ತ. 'ವಟ್ಟ=ವೃತ್' ಶಬ್ದವನ್ನು ನೋಡುವುದು.
ವತ್ತ. 'ವಟ್ಟ= ವರ್ತಯ್' ಶಬ್ದವನ್ನು ನೋಡುವುದು. 'ವತ್ತಇ'
ವತ್ತ. ನ: [ವಾರ್ತ್ತ] ಆರೋಗ್ಯ (ಉತ್ತ)
ವತ್ತ. ವಿ: [ವ್ಯಾಪ್ತ] ಹರಡಿರುವ, ವ್ಯಾಪಿಸಿರುವ, ಸಂಪೂರ್ಣವಾಗಿ ತುಂಬಲ್ಪಟ್ಟಿರುವ(ವಿಸೇ)
ವತ್ತ. 'ವಟ್ಟ=ವೃತ್ತ' ಶಬ್ದವನ್ನು ನೋಡುವುದು.(ಔಪ)
ವತ್ತ. ವಿ: [ವ್ಯಕ್ತ] ಪ್ರಕಟ, ಸ್ಪಷ್ಟವಾದ, ಗೋಚರವಾದ
ವತ್ತ. ನ: [ವಕ್ತ್ರ] ಮುಖ(ಭವಿ)
-ವತ್ತ. 'ಪತ್ತ=ಪತ್ರ' ಶಬ್ದವನ್ನು ನೋಡುವುದು.
-ವತ್ತ. 'ಪತ್ತ=ಪಾತ್ರ' ಶಬ್ದವನ್ನು ನೋಡುವುದು.
ವತ್ತ-. 'ವತ್ತಾ' ಶಬ್ದವನ್ನು ನೋಡುವುದು.(ಭವಿ). -ಯಾರ. ವಿ:[-ಕಾರ] ವಾರ್ತೆಗಳನ್ನು ಹೇಳುವವನು
ವತ್ತಅ. ಪು: [ವ್ಯತ್ಯಯ] ವಿಪರ್ಯಾಸ, ವ್ಯತ್ಯಾಸ, ಬದಲಾವಣೆ, ವಿರೋಧ,, ಉಲ್ಲಂಘನೆ
ವತ್ತೇ. 'ವಯ=ವಚ್' ಶಬ್ದವನ್ನು ನೋಡುವುದು.

ವತ್ತಡಿಆ}. (ಅಪ). '**ವತ್ತಾ**' ಶಬ್ದವನ್ನು ನೋಡುವುದು.
ವತ್ತಡೀ}.
ವತ್ತಣ. ನ: [**ವರ್ತನ**] ಜೀವನೋಪಾಯ, ವೃತ್ತಿ, ಬದಲಾವಣೆ, ವಿನಿಮಯ(ಪಂಚಾ), ಇರುವಿಕೆ, ವಿ: ವೃತ್ತಿ ಹೊಂದಿರುವವನು, ವಾಸಿಸುವವನು. ಸ್ತ್ರೀ: **–ಣಾ**
ವತ್ತಣೀ. ಸ್ತ್ರೀ: [**ವರ್ತನೀ**] ದಾರಿ, ಹಾದಿ, ರಸ್ತೆ(ಪಣ್ಣ)
ವತ್ತದ್ಧ. ವಿ: [ದೇ] ಸುಂದರ, ಬಹಳ ಕಲಿತವನು, ಪ್ರವೀಣ
ವತ್ತಮಾಣ. ಪು: [**ವರ್ತಮಾನ**] ಈಗ ನಡೆಯುತ್ತಿರುವ ಕಾಲ, ಈಗಿನ ಕಾಲದ **ಪು**: ವಿದ್ಯಮಾನತೆ
–ವತ್ತರಿ. '**ಸತ್ತರಿ**' ಶಬ್ದವನ್ನು ನೋಡುವುದು.
ವತ್ತವ್ವ. '**ವಯ=ವಚ್**' ಶಬ್ದವನ್ನು ನೋಡುವುದು.
ವತ್ತಾ. ಸ್ತ್ರೀ: [ದೇ] ದಾರವನ್ನು ಸುತ್ತುವ ಯಂತ್ರ(ಪಣ್ಣ). '**ಚತ್ತಾ**= [ದೇ]' ಶಬ್ದವನ್ನು ನೋಡುವುದು.
ವತ್ತಾ. ಸ್ತ್ರೀ: [**ವಾರ್ತಾ**] ಮಾತು, ಸಮಾಚಾರ, ವೃತ್ತಾಂತ, ವೃತ್ತಿ, ದುರ್ಗಾದೇವಿ, ವ್ಯಯಸಾಯ, ವದಂತಿ, ಸುವಾಸನೆಯ ಅನುಭವ, ಭೂತ–ನಾಶಕ. **–ಲಾವ**. **ಪು**: [**–ಲಾಪ**] ಮಾತು–ಕತೆ
ವತ್ತಾರ. ವಿ: [ದೇ] ಗರ್ವದಿಂದ ಕೂಡಿದ(ದೇ)
ವತ್ತಿ. ಸ್ತ್ರೀ: [ದೇ] ಎಲ್ಲೆ, ಗಡಿ
ವತ್ತಿ. '**ವಟ್ಟಿ**' ಶಬ್ದವನ್ನು ನೋಡುವುದು.
ವತ್ತಿ. ವಿ: [**ವರ್ತಿನ್**] ವರ್ತಿಸುವವನು
ವತ್ತಿ. ಸ್ತ್ರೀ: [**ವೃತ್ತಿ**] ಪ್ರವೃತ್ತಿ, ತೊಡಗುವಿಕೆ, ಉದ್ಯೋಗ. '**ವಿತ್ತಿ**' ಶಬ್ದವನ್ನು ನೋಡುವುದು.
ವತ್ತಿ. ಸ್ತ್ರೀ: [**ವ್ಯಕ್ತಿ**] ಇಂಥ ಒಂದು ವಸ್ತು, ಪ್ರತ್ಯೇಕವಾದ ಒಬ್ಬ ಮನುಷ್ಯ. **–ಪಇಟ್ಠಾ**. ಸ್ತ್ರೀ: [**–ಪ್ರತಿಷ್ಠಾ**] ತೀರ್ಥಂಕರರು ಇದ್ದಾಗ ಅವರ ಮೂರ್ತಿಯನ್ನು ವಿಧಿಪೂರ್ವಕವಾಗಿ ಸ್ಥಾಪಿಸುವುದು)
ವತ್ತಿಅ. ವಿ: [**ವಾರ್ತಿಕ**] ಕಥಾಕಾರ, **ಪುಂನ**: ಟೀಕೆಯನ್ನು ಕುರಿತ ಟೀಕೆ. ಗ್ರಂಥದ ಟೀಕೆ, ವ್ಯಾಖ್ಯಾನ.
ವತ್ತಿಅ. ವಿ: [**ವರ್ತಿತ**] ಗೋಳಾಕಾರಕ್ಕೆ ಮಾಡಲಾದ (ಣಾಯಾ), ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ
–ವತ್ತಿಅ. '**ಪಚ್ಚಯ=ಪ್ರತ್ಯಯ**' ಶಬ್ದವನ್ನು ನೋಡುವುದು.
ವತ್ತಿಆ. '**ವಟ್ಟಿಆ**' ಶಬ್ದವನ್ನು ನೋಡುವುದು.
ವತ್ತಿಣೀ. ಸ್ತ್ರೀ: [**ವರ್ತಿನೀ**] ದಾರಿ, ಹಾದಿ, ಮಾರ್ಗ (ಪಾಅ)

–ವತ್ತೀ. '**ಪತ್ತೀ=ಪತ್ನೀ**' ಶಬ್ದವನ್ನು ನೋಡುವುದು.
ವತ್ತು. '**ವಯ=ವಚ್**' ಶಬ್ದವನ್ನು ನೋಡುವುದು.
ವತ್ತುಕಾಮ. ವಿ: [**ವಕ್ತುಕಾಮ**] ಮಾತನಾಡಬೇಕೆಂಬ ಇಚ್ಛೆ ಉಳ್ಳ(ಅಭಿ)
ವತ್ತುಲ. '**ವಟ್ಟುಲ**' ಶಬ್ದವನ್ನು ನೋಡುವುದು.
ವತ್ಥ. **ಪುಂನ**: [**ವಸ್ತ್ರ**] ಬಟ್ಟೆ(ಆಚಾ), **–ಖೆಡ್ಡ**. ನ: [**–ಖೇಲ**] ಒಂದು ಬಗೆಯ ಕಲೆ. **–ಧೋವ**. ವಿ: [**–ಧಾವ**] ಬಟ್ಟೆಯನ್ನು ಸ್ವಚ್ಛಗೊಳಿಸುವವನು (ಸೂಅ). **–ಪೂಸ**. **ಪು**: [**–ಪುಷ್ಯ**] ಒಬ್ಬ ಜೈನಮುನಿ. **–ಪೂಸಮಿತ್ತ**. **ಪು**: [**–ಪುಷ್ಯಮಿತ್ರ**] ಒಬ್ಬ ಜೈನಮುನಿ–**ವಿಜ್ಜಾ**. ಸ್ತ್ರೀ: [**–ವಿದ್ಯಾ**] ಬಟ್ಟೆಯನ್ನು ಸ್ಪರ್ಶಿಸುತ್ತಿದ್ದಂತೆಯೇ ಯಾವುದರ ಪ್ರಭಾವದಿಂದ ರೋಗ ವಾಸಿಯಾಗಿ ಬಿಡುತ್ತದೆಯೋ ಅಂಥ ಒಂದು ವಿದ್ಯೆ **–ಸೋಹಗ**. ವಿ: [**ಶೋಧಕ**] ಬಟ್ಟೆಯನ್ನು ಸ್ವಚ್ಛಗೊಳಿಸುವವನು.
ವತ್ಥ. ವಿ: [**ವ್ಯಸ್ತ**] ಬೇರೆಬೇರೆಯಾಗಿರುವ, ಪ್ರತ್ಯೇಕವಾಗಿರುವ, ಚದುರಲ್ಪಟ್ಟ(ಸುರ)
ವತ್ಥಉಡ. **ಪು**: [ದೇ. **ವಸ್ತ್ರಪುಟ**] ಬಟ್ಟೆಯ ಡೇರೆ ಶಿಬಿರ
ವತ್ಥಏ. '**ವಸ=ವಸ್**' ಶಬ್ದವನ್ನು ನೋಡುವುದು.
ವತ್ಥಂಗ. **ಪು**: [**ವಸ್ತ್ರಾಂಗ**] ಬಟ್ಟೆಯನ್ನು ನೀಡುವ ಕಲ್ಪ ವೃಕ್ಷದ ಒಂದು ಜಾತಿ
–ವತ್ಥರ. '**ಪತ್ಥರ=ಪ್ರಸ್ತರ**' ಶಬ್ದವನ್ನು ನೋಡುವುದು.
ವತ್ಥಲಿಜ್ಜ. ನ: [**ವಸ್ತ್ರಲಿಯ**] ಎರಡು ಜೈನ ಮುನಿಕುಲಗಳ ಹೆಸರು
ವತ್ಥವ್ವ. ವಿ: [**ವಾಸ್ತವ್ಯ**] ನಿವಾಸಿ, ವಾಸಿಸುತ್ತಿರುವವನು (ಸುಪಾ)
ವತ್ಥಾಣೀ. ಸ್ತ್ರೀ: [ದೇ] ಒಂದು ಬಗೆಯ ಬಳ್ಳಿ.
ವತ್ಥಾಣೀಅ. **ಪುಂನ**: [ದೇ] ಒಂದು ಬಗೆಯ ಖಾದ್ಯ
ವತ್ಥಿ. **ಪು**: [**ವಸ್ತಿ**] ತೊಗಲಿನ ಚೀಲ, ಗುದ, ಎದೆಯಲ್ಲಿ ಒಂದು ಕಡ್ಡಿಯನ್ನು ಕೂರಿಸುವ ಕೆಲಸ(ಔಪ)–**ಕಮ್ಮ**. ನ: [**–ಕರ್ಮನ್**] ತಲೆಯಲ್ಲಿ ಚರ್ಮವನ್ನು ಸುತ್ತುಗಟ್ಟುವ ಮೂಲಕ ಎಣ್ಣೆಹಚ್ಚುವುದು. ಮಲ ಹೊರಡಿಸಲು ಮಾಡುವ ಬಸ್ತಿ–ಕ್ರಿಯೆ(ವಿಪಾ), **–ಪುಡಗ**. **ಪುಂನ**: [**–ಪುಟಕ**] ಹೊಟ್ಟೆಯ ಒಳಭಾಗ
ವತ್ಥಿಯ. **ಪು**: [**ವಾಸ್ತ್ರಿಕ**] ಬಟ್ಟೆಯನ್ನು ತಯಾರಿಸುವ ತಂತ್ರಜ್ಞ

ವತ್ಥೀ. ಸ್ತ್ರೀ: [ದೇ] ತಪಸ್ವಿಗಳ ಪರ್ಣಕುಟಿ(ದೇ)
ವತ್ಥು. ನ: [ವಸ್ತು] ಪದಾರ್ಥ(ಪಾಅ), **ಪುಂನ:** ಪ್ರಾಚೀನ ಗ್ರಂಥಗಳ ಅಧ್ಯಯನ-ಪ್ರಕರಣ, ಪರಿಚ್ಛೇದ (ಣಂದಿ). **-ಪಾಲ, -ವಾಲ. ಪು:** [-ಪಾಲ] ದೊರೆ ವೀರ ಧವಳನ ಒಬ್ಬ ಜೈನ ಮಂತ್ರಿ.
ವತ್ಥು. ನ: [ವಾಸ್ತು] ಮನೆ, ಗೃಹ, ಮನೆಯನ್ನು ನಿರ್ಮಾಣ ಮಾಡುವ ಶಾಸ್ತ್ರ. ಒಂದು ಬಗೆಯ ತರಕಾರಿ (ಉವಾ). **-ಪಾಢಗ. ವಿ:** [-ಪಾಠಕ] ವಾಸ್ತು ಶಾಸ್ತ್ರವನ್ನು ಅಭ್ಯಾಸ ಮಾಡುವವನು (ಣಾಯಾ). **-ವಿಜ್ಜಾ. ಸ್ತ್ರೀ:** [-ವಿದ್ಯಾ] ಗೃಹ ನಿರ್ಮಾಣ ಕಲೆ (ಔಪ).
ವತ್ಥುಲ.}. ಪು: [ವಸ್ತುಲ] ಚಕ್ಕೋತದ ಸೊಪ್ಪು(ಪಣ್ಣ)
ವತ್ಥೂಲ}. [ವಸ್ತೂಲ]
ವದ. 'ವಯ=ವದ್' ಶಬ್ದವನ್ನು ನೋಡುವುದು.
ವದ. 'ವಯ=ವ್ರತ' ಶಬ್ದವನ್ನು ನೋಡುವುದು.
ವದಿಂಸಾ. 'ವಡೆಂಸಾ' ಶಬ್ದವನ್ನು ನೋಡುವುದು.
ವದಿಕಲಿಅ. ವಿ: [ದೇ] ಹಿಂತಿರುಗಿದ(ದೇ)
ವದೂಮಗ. 'ವಡುಮಗ' ಶಬ್ದವನ್ನು ನೋಡುವುದು (ಆಚಾ)
ವದ್ದಲ. ನ: [ದೇ. ವಾರ್ದಲ] ಮೋಡ, ಮೇಘ (ಸುಪಾ), **ಪು:** ಆರನೇ ನರಕದ ಎರಡನೇ ನರಕ ಸ್ಥಾನ
ವದ್ದಲಿಯಾ. ಸ್ತ್ರೀ: [ದೇ. ವಾರ್ದಲಿಕಾ] ಕಿರು ಮೋಡ, ಮೋಡ ಕವಿದ ದಿನ, ದುರ್ದಿನ(ಭಗ)
ವದ್ಧ. **'ವಡ್ಢ=ವರ್ಧಯ್'** ಶಬ್ದವನ್ನು ನೋಡುವುದು.
ವದ್ಧ. ಪುಂನ: [ವರ್ಧ್ರ] ಚರ್ಮದ ಹಗ್ಗ(ಪಾಅ)
ವದ್ಧ. **'ವಿದ್ಧ'=ವೃದ್ಧ'** ಶಬ್ದವನ್ನು ನೋಡುವುದು.
ವದ್ಧಣ. ನ: [ವರ್ಧನ] ವೃಧ್ಧಿ, ಬೆಳವಣಿಗೆ, ಅಭಿವೃದ್ಧಿ (ಣಾಯಾ). ವಿ:ಅಭಿವೃದ್ಧಿ ಪಡಿಸುವವನು (ಉಪ)
ವದ್ಧಣಿಆ}. ಸ್ತ್ರೀ: [ವರ್ಧನಿಕಾ] ಭಗವಾನ್
ವದ್ಧಣೇ}. ಮಹಾವೀರ(ಆಚಾ), ಒಬ್ಬ ಪ್ರಸಿದ್ಧ ಜೈನಾಚಾರ್ಯ, ಹೆಗಲ ಮೇಲೆ ಹತ್ತಿಸಿಕೊಳ್ಳಲ್ಪಟ್ಟ ಮನುಷ್ಯ(ಔಪ). ಒಬ್ಬ ಶಾಶ್ವತ ಜಿನ-ದೇವ, ಒಂದು ಶಾಶ್ವತೀಜೈನ ಪ್ರತಿಮೆ. **ನ:** ಒಂದು ಮನೆ. ರಾಜಾ ರಾಮಚಂದ್ರನ ಒಂದು ನಾಟ್ಯಶಾಲೆ. **'ವಡ್ಢಮಾಣ'** ಶಬ್ದವನ್ನು ನೋಡುವುದು.
ವದ್ಧಮಾಣಗ}. ಪು: [ವರ್ಧಮಾನಕ] ಲಲ
ವದ್ಧಮಾಣಯ}. ಮಹಾಗ್ರಹಗಳಲ್ಲಿ ಒಂದು ಮಹಾ ಗ್ರಹ. ಒಂದು ದೇವ-ವಿಮಾನ, **ನ:** ಮಣ್ಣಿನ ಪಾತ್ರೆ(ಪಲುಮ). **ಪು:** ಪುರುಷನ ಹೆಗಲೇರಿರುವ ಇನ್ನೊಬ್ಬ ಪುರುಷ, ಐದು ಸ್ವಸ್ತಿಕಗಳು. ಒಂದು ಬಗೆಯ ಉಪ್ಪರಿಗೆ ಮಹಲು(ಣಾಯಾ). **ನ:** ಒಂದು ಊರಿನ ಹೆಸರು: ಆಸ್ತಿಕ ಗ್ರಾಮ. ಅಭಿಮಾನಿ, ಗರ್ವಿ(ಔಪ)
ವದ್ಧಯ. ವಿ: [ದೇ] ಪ್ರಧಾನ, ಮುಖ್ಯ(ದೇ)
ವದ್ಧಾರ. ಸಕ: [**ವರ್ಧಯ್**] ವರ್ಧಿಸು, ಹೆಚ್ಚಿಸು
ವದ್ಧಾರಿಯ. ವಿ: [**ವರ್ಧಿತ**] ಹೆಚ್ಚಿಸಲ್ಪಟ್ಟ, ವರ್ಧಿಸಲ್ಪಟ್ಟ
ವದ್ಧಾವ. ಸಕ: [**ವರ್ಧಯ್, ವರ್ಧಾಪಯ್**] ಅಭಿನಂದಿಸು
ವದ್ಧಾವಣ. ನ: [ವರ್ಧನ, ವರ್ಧಾಪನ] ಅಭಿನಂದನೆ
ವದ್ಧಾವಣಿಯಾ. ಸ್ತ್ರೀ: [**ವರ್ಧನಿಕಾ, ವರ್ಧಾಪನಿಕಾ**] ಮೇಲಿನ ಶಬ್ದವನ್ನು ನೋಡುವುದು.
ವದ್ಧಾವಯ. ವಿ: [**ವರ್ಧಕ, ವರ್ಧಾಪಕ**] ಅಭಿನಂದಿಸುವವನು
ವದ್ಧಾವಿಅ. ವಿ: [**ವರ್ಧಿತ, ವರ್ಧಾಪಿತ**] ಅಭಿನಂದಿಸಲ್ಪಟ್ಟವನು(ಸುಪಾ)
ವದ್ಧಿಅ. ಪು: [ದೇ] ನಪುಂಸಕ, ಷಂಡ, ಚಿಕ್ಕ ವಯಸ್ಸಿನಲ್ಲಿಯೇ ಅಂಡಕೋಶವನ್ನು ಕತ್ತರಿಸಿ ನಾಶಪಡಿಸಲಾಗಿರುವವನು.
ವದ್ಧಿಅ. **'ವಡ್ಢಿಅ=ವೃದ್ಧ'** ಶಬ್ದವನ್ನು ನೋಡುವುದು.
ವದ್ಧೀ. ಸ್ತ್ರೀ: [ದೇ] ಮಾಡಲೇಬೇಕಾದ ಕರ್ತವ್ಯ
ವದ್ಧೀಸಕ}. ಪುಂನ: [ದೇ. ವದ್ಧೀಸಕ] ವಾದ್ಯ-ವಿಶೇಷ,
ವದ್ಧೀಸಗ}.
ವಧ. **'ವಹ=ವಧ'** ಶಬ್ದವನ್ನು ನೋಡುವುದು.
ವಧಯ. 'ವಹಯ' ಶಬ್ದವನ್ನು ನೋಡುವುದು.
ವಧೂ. **'ವಹೂ'** ಶಬ್ದವನ್ನು ನೋಡುವುದು(ಔಪ)
ವನ್ನ. **'ವಣ್ಣ=ವರ್ಣಯ್'** ಶಬ್ದವನ್ನು ನೋಡುವುದು.
ವನ್ನಗ. **'ವಣ್ಣಯ'** ಶಬ್ದವನ್ನು ನೋಡುವುದು.
ವನ್ನಣ. **'ವಣ್ಣಣಾ'** ಶಬ್ದವನ್ನು ನೋಡುವುದು.
ವನ್ನಣಾ. **'ವಣ್ಣಣಾ'** ಶಬ್ದವನ್ನು ನೋಡುವುದು.
ವನ್ನಯ. **'ವಣ್ಣಯ'** ಶಬ್ದವನ್ನು ನೋಡುವುದು.
ವನ್ನಿಅ. **'ವಣ್ಣಿಅ'** ಶಬ್ದವನ್ನು ನೋಡುವುದು.

ವಣ್ಣಿಆ. ಸ್ತ್ರೀ: [ವರ್ಣಿಕಾ] ವಸ್ತುವಿನ ಮಾದರಿ, ನಮೂನೆ, ಕೆಂಪು ಬಣ್ಣದ ಮಣ್ಣು
ವಪು. 'ವಉ=ವಪುಸ್' ಶಬ್ದವನ್ನು ನೋಡುವುದು.
ವಪ್ಣಿ. 'ವಣ್ಹಿ=ವೃಷ್ಣಿ' ಶಬ್ದವನ್ನು ನೋಡುವುದು.
ವಪ್ಣಿ. ವಣ್ಹಿ=ವಹ್ನಿ' ಶಬ್ದವನ್ನು ನೋಡುವುದು.
ವಪ್ಪ. ಸಕ: [ತ್ವಚ್?] ಮುಚ್ಚು, ಹೊದಿಸು,
ವಪ್ಪ. ಪು: [ವಪ್ರ] 'ವಿಜಯಾ'ವನ್ನು ರಾಜಧಾನಿಯಾಗುಳ್ಳ ಜಂಬೂ ದ್ವೀಪದ ಒಂದು ಪ್ರಾಂತ(ಠಾ). ಪುಂನ: ಕೋಟೆ, ಗದ್ದೆ, ದಡ, ತಟ, ಎತ್ತರದ ಪ್ರದೇಶ
ವಪ್ಪ. ವಿ: [ದೇ] ಕೃಶವಾದ, ತೆಳುವಾದ. ಬಲಶಾಲಿ, ಬಲಿಷ್ಠ, ಭೂತ ಅಥವಾ ದೆವ್ವ ಹಿಡಿದವನು
ವಪ್ಪಇರಾಯ. 'ವ-ಪ್ಪಇರಾಯ' ಶಬ್ದವನ್ನು ನೋಡುವುದು.
ವಪ್ಪಗಾ. 'ವಪ್ಪಾ' ಶಬ್ದವನ್ನು ನೋಡುವುದು.
ವಪ್ಪಗಾವಈ. ಸ್ತ್ರೀ: [ವಪ್ರಕಾವತೀ] 'ಅಪರಾಜಿತಾ' ಎಂಬ ನಗರವನ್ನು ರಾಜಧಾನಿಯಾಗುಳ್ಳ ಜಂಬೂ ದ್ವೀಪದ ಒಂದು ವಿಜಯ-ಕ್ಷೇತ್ರ.
ವಪ್ಪಾ. ಸ್ತ್ರೀ: [ವಪ್ರ] ಎತ್ತರದ ಭೂಭಾಗ, ದಿಬ್ಬ
ವಪ್ಪಾ. ಸ್ತ್ರೀ: [ವಪ್ರಾ] ಭಗವಾನ್ ನಮಿನಾಥನ ತಾಯಿಯ ಹೆಸರು, ಹತ್ತನೇ ಚಕ್ರವರ್ತಿ ಹರಿಷೇಣನ ತಾಯಿಯ ಹೆಸರು(ಪಉಮ)
ವಪ್ಪಿಅ. ಪು: [ದೇ] ಗದ್ದೆ(ದ), ಒಬ್ಬ ನಪುಂಸಕ.
ವಪ್ಪಿಣ. ಪುಂನ: [ದೇ] ಗದ್ದೆ(ಔಪ), ವಿ: ವಾಸ ಮಾಡಿದವ, ವಾಸ ಮಾಡಲ್ಪಟ್ಟ
ವಪ್ಪಿಣ. ಪುಂನ: [ದೇ] ಗದ್ದೆ ಇರುವ ಪ್ರದೇಶ, ನದಿಯ ದಡವುಳ್ಳ ಊರು
ವಪ್ಪೀ. 'ವಪ್ಪಾ=ವಪ್ರ' ಶಬ್ದವನ್ನು ನೋಡುವುದು.
ವಪ್ಪೀಅ. ಪು: [ದೇ] ಚಾತಕ ಪಕ್ಷಿ(ದೇ)
ವಪ್ಪೀಡಿಅ. ನ: [ದೇ] ಗದ್ದೆ
ವಪ್ಪೀಹ. ಪು: [ಸ್ತೂಪ] ಮಣ್ಣಿನ ರಾಶಿ,
ವಪ್ಪು. 'ವಉ=ವಪುಸ್' ಶಬ್ದವನ್ನು ನೋಡುವುದು.
ವಪ್ಫೇ. ಅ: [ದೇ] ಉಪಹಾಸದಿಂದ ಕೂಡಿದ ನಿಂದೆ, ವಿಸ್ಮಯ, ಆಶ್ಚರ್ಯ
ವಪ್ಫಾಉಲ. 'ಬಪ್ಫಾಉಲ' ಶಬ್ದವನ್ನು ನೋಡುವುದು.
ವಫರ. ನ: [ದೇ] ಶಸ್ತ್ರ-ವಿಶೇಷ
ವಬ್ಭ-. 'ವಹ=ವಹ್' ಶಬ್ದವನ್ನು ನೋಡುವುದು.
ವಬ್ಭ. ಪು: [ವಭ್ರ] ಒಂದು ಬಗೆಯ ಪಶು
ವಬ್ಭಯ. ನ: [ದೇ] ಕಮಲದ ಮಧ್ಯಭಾಗ,
ವಭಿಚರಿಅ. ವಿ: [ವ್ಯಭಿಚರಿತ] ವ್ಯಭಿಚಾರದ ದೋಷದಿಂದ ದೂಷಿತನಾದ
ವಭಿಚಾರ. 'ವಹಿಚಾರ' ಶಬ್ದವನ್ನು ನೋಡುವುದು.
ವಭಿಚಾರಿ. ವಿ: [ವ್ಯಭಿಚಾರಿನ್] ನ್ಯಾಯ ಶಾಸ್ತ್ರದಲ್ಲಿ ಹೇಳಿರುವ ದೋಷದಿಂದ ದೂಷಿತನಾದ, ಪು: ಪರಸ್ತ್ರೀ ಲಂಪಟ
ವಭಿಯಾರ. 'ವಹಿಚಾರ' ಶಬ್ದವನ್ನು ನೋಡುವುದು.
ವಮ. ಸಕ: [ವಮ್] ವಾಂತಿ ಮಾಡು. ವ. ಕೃ: 'ವಮಂತ'
ವಮಗ. ವಿ: [ವಾಮಕ] ವಾಂತಿ ಮಾಡುವವ (ಚೇಇಯ)
ವಮಣ. ನ: [ವಮನ] ವಾಂತಿ(ಆಚಾ)
ವಮಾಲ. ಸಕ: [ಪುಂಜಯ್] ರಾಶಿಮಾಡು, ಒಟ್ಟುಗೂಡಿಸು, ವಿಸ್ತರಿಸು, ಅಗಲಗೊಳಿಸು
ವಮಾಲ. ಪು: [ದೇ] ಕೋಲಾಹಲದ ಶಬ್ದ
ವಮಾಲ. ಪು: [ಪುಂಜ] ರಾಶಿ,
ವಮಾಲಣ. ನ: [ಪುಂಜನ] ರಾಶಿಮಾಡುವುದು, ಒಟ್ಟುಗೂಡಿಸುವುದು, ವಿಸ್ತಾರಗೊಳಿಸುವುದು, ಅಗಲಗೊಳಿಸುವುದು. ವಿ: ರಾಶಿಮಾಡುವವನು, ಅಗಲಗೊಳಿಸುವವನು(ಕುಮಾ)
ವಮ್ಮ. ಪುಂನ: [ವರ್ಮನ್] ಕವಚ
ವಮ್ಮ. 'ವಮ' ಶಬ್ದವನ್ನು ನೋಡುವುದು.
ವಮ್ಮಥ}. ಪು: [ಮನ್ಮಥ] ಕಾಮ, ಕಂದರ್ಪ(ಪಾಅ)
ವಮ್ಮಹ}.
ವಮ್ಮಾ. 'ವಾಮಾ' ಶಬ್ದವನ್ನು ನೋಡುವುದು.
ವಮ್ಮಿಅ. ವಿ: [ವರ್ಮಿತ] ಕವಚ ಧರಿಸಿದವನು(ವಿಪಾ)
ವಮ್ಮಿಅ}. ಪು: [ವಲ್ಮೀಕ] ಹುತ್ತ.(ಸೂಅ)
ವಮ್ಮೀಅ}.
ವಮ್ಮೀಇ. ಪು: [ವಾಲ್ಮೀಕಿ] ರಾಮಾಣದ ಕರ್ತೃವಾದ ಆದಿ ಕವಿ ಋಷಿ
ವಮೀಸರ. ಪು: [ದೇ] ಮನ್ಮಥ, ಕಾಮ
ವಮ್ಹ. ನ: [ದೆ] ಹುತ್ತ(ದೇ)
ವಮ್ಹ. ಪು: [ವ್ರಹ್ಮನ್] ಮುತ್ತುಗದ ಮರ(ಪಉಮ). 'ವಂಭ' ಶಬ್ದವನ್ನು ನೋಡುವುದು.
ವಮ್ಹಲ. ನ: [ದೇ] ಕೇಸರ, ಹೂವಿನ ಕೇಸರ
ವಮ್ಹಣ. 'ವಂಭಣ' ಶಬ್ದವನ್ನು ನೋಡುವುದು.
ವಯ. ಸಕ: [ವಚ್] ಹೇಳುವ. ಕೃ: 'ವಕ್ಖಮಾಣ'

ವಯ. ಸಕ: [**ವದ್**] ಹೇಳು, ಮಾತನಾಡು, '**ವಯಇ**'. **ವ. ಕೃ:** '**ವಯಂತ**'
ವಯ. ಸಕ: [**ವ್ರಜ್**] ಹೋಗು, ನಡೆ, ಗಮಿಸು. **ವ. ಕೃ:** '**ವಯಂತ**'
ವಯ. ಪು: [**ವೃಕ**] ತೋಳ
ವಯ. ಪು: [**ದೇ**] ಹದ್ದು
ವಯ. ಪು: [**ವಜ**] ಸಂಸ್ಕಾರ-ಕರಣ, ಹೋಗುವುದು, ಗಮಿಸುವುದು
ವಯ. ಪು: [**ವ್ರಜ**] ವ್ರಜ ದೇಶ, ಹತ್ತು ಸಾವಿರ ಹಸುಗಳ ಸಮೂಹ(ಣಾಯಾ), ಹಾದಿ, ದಾರಿ, ಚಲನೆ, ಗಮಿಸುವುದು, ಗುಂಪು(ಸುಪಾ)
ವಯ. ಪು: [**ವ್ಯಯ**] ಖರ್ಚು, ನಷ್ಟ, ಹಾನಿ(ಉವ). '**ವಿಅ=ವ್ಯಯ**' ಶಬ್ದವನ್ನು ನೋಡುವುದು.
ವಯ. ನ: [**ವಚಸ್**] ವಚನ, ಮಾತು(ಸೂಅ), **-ಸಮಿಅ. ವಿ:** [**-ಸಮಿತ**] ಮಾತಿನ ಸಂಯಮಿ
ವಯ. ಪು: [**ವದ**] ಕಥನ, ಉಕ್ತಿ, ಮಾತು
ವಯ. ಪುಂನ: [**ವ್ರತ**] ನಿಯಮ, ಧಾರ್ಮಿಕ ಪ್ರತಿಜ್ಞೆ, ಆಚರಣ(ಭಗ). **-ವಂತ. ವಿ:** [**-ವತ್**] ವ್ರತದಲ್ಲಿರುವವನು(ಆಚಾ)
ವಯ. ಪುಂನ: [**ವಯಸ್**] ವಯಸ್ಸು(ತಾ), ಪಕ್ಷಿ, **-ತ್ಥ. ವಿ;** [**-ಸ್ಥ**] ತರುಣ, ಯುವಕ. **-ಪರಿಣಾಮ. ಪು:** [**-ಪರಿಣಾಮ**] ಮುಪ್ಪು, ವಾರ್ಧಕ್ಯ(ಪಾಅ)
-ವಯ. ಪು: [**ಪಚ**] ಅಡಿಗೆ ಮಾಡುವಿಕೆ, ಅಡಿಗೆ
-ವಯ. '**ಪಯ=ಪದ**' ಶಬ್ದವನ್ನು ನೋಡುವುದು.
-ವಯ. '**ಪಯ=ಪಯಸ್**' ಶಬ್ದವನ್ನು ನೋಡುವುದು.
ವಯಂಗ. ನ: [**ದೇ**] ಒಂದು ಬಗೆಯ ಹಣ್ಣು
ವಯತರಿಅ. ವಿ: [**ವೃತ್ಯಂತರಿತ**] ಬೇಲಿಯಿಂದ ಮರೆಯಾಗಿರುವ
ವಯಂಸ. ಪು: [**ವಯಸ್ಯ**] ಸಮಾನ ವಯಸ್ಸಿನ ಸ್ನೇಹಿತ
ವಯುಂಸಿ. '**ವಚ್ಚಂಸಿ=ವಚಸ್ವಿನ್**' ಶಬ್ದವನ್ನು ನೋಡುವುದು.
ವಯಂಸೀ. ಸ್ತ್ರೀ: [**ವಯಸ್ಯಾ**] ಗೆಳತಿ, ಸಖಿ(ಕಪ್ಪೂ)
ವಯಡ. ಪು: [**ದೇ**] ಉದ್ಯಾನ, ತೋಟ.
ವಯಣ. ನ: [**ದೇ**] ಮನೆ, ಗೃಹ, ಹಾಸಿಗೆ
ವಯಣ. ಪುಂನ: [**ವದನ**] ಮುಖ, **ನ:** ಕಥನ, ಮಾತು, ಉಕ್ತಿ(ವಿಸೇ)
ವಯಣ. ಪುಂನ: [**ವಚನ**] ಮಾತು, ಉಕ್ತಿ, ನುಡಿ, ಸಂಖ್ಯೆಯನ್ನು ಸೂಚಿಸುವ ವ್ಯಾಕರಣ ಪ್ರತ್ಯಯ (ಪಣ್ಣ)
ವಯಣಿಜ್ಜ. ವಿ: [**ವಚನೀಯ**] ಹೇಳಬೇಕಾದ, ಹೇಳಲರ್ಹವಾದ, ನಿಂದೆ, ಅಪವಾದ, ನಿಂದನೀಯ, ಬೈಗಳು, **ನ:** ಶಬ್ದ
ವಯರ. ವಿ: [**ದೇ**] ಪುಡಿಮಾಡಲ್ಪಟ್ಟ
ವಯರ. '**ವಯಿರ=ವಜ್ರ**' ಶಬ್ದವನ್ನು ನೋಡುವುದು (ಭಗ)
-ವಯರ. '**ಪಯರ=ಪ್ರಕರ**' ಶಬ್ದವನ್ನು ನೋಡುವುದು.
ವಯರಾಡ. '**ಪಯರಾಡ**' ಶಬ್ದವನ್ನು ನೋಡುವುದು.
ವಯಲ. ವಿ: [**ದೇ**] ಅರಳುತ್ತಿರುವ, ***ಪು:*** ಕೋಲಾಹಲ, ಗದ್ದಲ
ವಯಲೀ. ಸ್ತ್ರೀ: [**ದೇ**] ನಿದ್ರೆ ಬರಿಸುವ ಬಳ್ಳಿ(ದೇ)
-ವಯಸ. '**ವಯ=ವಚಸ್**' ಶಬ್ದವನ್ನು ನೋಡುವುದು.
+ವಯಸ್ಸ. '**ವಯಂಸ**' ಶಬ್ದವನ್ನು ನೋಡುವುದು.
ವಯಾ. ಸ್ತ್ರೀ: [**ವಪಾ**] ರಂಧ್ರ, ಬಿಲ, ನೆಣ, ಮೇದಸ್ಸು
ವಯಾ. ಸ್ತ್ರೀ: [**ವಚಾ**] ಬಜೆ, ಮೈನಾ ಹಕ್ಕಿ. '**ವಚಾ**' ಶಬ್ದವನ್ನು ನೋಡುವುದು.
ವಯಾ. ಸ್ತ್ರೀ: [**ವ್ರಜಾ**] ಚೌಳು ಮಣ್ಣನ್ನು ತೆಗೆಯಲು ಬಿಂದಿಗೆಗೆ ಹಗ್ಗ ಕಟ್ಟಿ ಒಳಕ್ಕೆ ಬಿಡುವ ಮಾರ್ಗ, ಪ್ರೇರಣಾ-ದಂಡ.
ವರ. ಸಕ: [**ವೃ**] ಸಂಬಂಧ ಬೆಳೆಸು, ಮುಚ್ಚು, ಹೊದಿಸು, ಬೇಡು, ಸೇವೆಮಾಡು,
ವರ. ಸಕ: [**ವರಯ್**] ಪಡೆದುಕೊಳ್ಳಲು ಆಶಿಸು, ಬೆರೆಸು, ಒಟ್ಟಿಗೆ ಸೇರಿಸು
ವರ. ಪು: [**ವರ**] ಪತಿ, ಯಜಮಾನ, ಮದುಮಗ (ಸ್ವಪ್ನ), ದೇವತೆಗಳ ಅನುಗ್ರಹದಿಂದ ಬರುವ ಇಷ್ಟಾರ್ಥ(ಭವಿ), **ವಿ:** ಶ್ರೇಷ್ಠ, ಇಷ್ಟವಾದ, **ನ:** ಕೆಲವೊಂದು ಆಸೆ(ಉತ್ತ), **-ದತ್ತ. ಪು:** [**-ದತ್ತ**] ಭಗವಾನ್ ನೇಮಿನಾಥನ ಪ್ರಥಮ ಶಿಷ್ಯ. ಒಬ್ಬ ರಾಜಕುಮಾರ. **-ದಾಮ. ನ:** [**-ದಾಮನ್**] ಒಂದು ತೀರ್ಥ(ತಾ). **-ಧಣು.ಪು:** [**-ಧನುಷ್**] ಮಂತ್ರಿಯ ಮಗ ಹಾಗೂ ಬ್ರಹ್ಮದತ್ತ ಚಕ್ರವರ್ತಿಯ ಬಾಲ್ಯಮಿತ್ರ.**-ಪುರಿಸ. ಪು:** [**-ಪುರುಷ**] ವಾಸುದೇವ. **-ಮಾಲ. ಪು:** [**-ಮಾಲ**] ಒಂದು ದೇವ ವಿಮಾನ. **-ಮಾಲಾ. ಸ್ತ್ರೀ:** [**-ಮಾಲಾ**] ವರನಿಗೆ

ಹಾಕುವ ಹೂಮಾಲೆ **–ರುಇ.** **ಪು:** [–ರುಚಿ] ನಂದ ಮಹಾರಾಜನ ಕಾಲದ ಒಬ್ಬ ಬ್ರಾಹ್ಮಣ. **–ವರಿಯಾ.** **ಸ್ತ್ರೀ:** [–ವರಿಕಾ] ಇಷ್ಟಪಟ್ಟ ವಸ್ತುವನ್ನು ಬೇಡಲು ಮಾಡುವ ಒಂದು ಘೋಷಣೆ. ಬಯಸಿದ ವಸ್ತುವನ್ನು ದಾನವಾಗಿ ನೀಡುವ ಘೋಷಣೆ.**–ಸರಕ.** **ನ:** [–ಸರಕ] ಒಂದು ಬಗೆಯ ಖಾದ್ಯ ವಸ್ತು. **–ಸಿಟ್ಠ.** **ಪುಂನ:** [–ಶಿಷ್ಟ] ಲೋಕಪಾಲ ಯಮನ ಒಂದು ವಿಮಾನ.

ವರ. 'ವಾರ' ಶಬ್ದವನ್ನು ನೋಡುವುದು. **–ವಿಲಯಾ.ಸ್ತ್ರೀ:** [–ವನಿತಾ] ವೇಶ್ಯೆ

–ವರ. **'ಪರ'** ಶಬ್ದವನ್ನು ನೋಡುವುದು.

ವರಇಅ. **ವಿ:** [ದೇ] ಒಂದು ಬಗೆಯ ಧಾನ್ಯ.

ವರಇತ್ತ. **ಪು:** [ದೇ. ವರಯಿತೃ] ನೂತನ ಮದುಮಗ (ಭವಿ)

ವರಇ. **'ವರಯ=ವರಾಕ'** ಶಬ್ದವನ್ನು ನೋಡುವುದು.

ವರಉಪ್ಪ. **ವಿ:** [ದೇ] ಮೃತ, ತೀರಿಕೊಂಡವನು

ವರಂ. **'ಪರಂ=ಪರಮ್'** ಶಬ್ದವನ್ನು ನೋಡುವುದು (ಸ್ವಪ್ನ)

ವರಂಡ. **ಪು:** [ವರಂಡ] ಉದ್ದವಾದ ಕೋಲು, ಉದ್ದವಾದ ದಂಡ, ಗೋಡೆ

ವರಂಡ. **ಪು:** [ದೇ] ಹುಲ್ಲಿನ ರಾಶಿ(ಚಾರು), ಕೋಟೆ, ಕೆನ್ನೆಯ ಮೇಲೆ ಹಾಕಿಕೊಳ್ಳುವ ಮಕರಿಕಾ ಪತ್ರ

ವರಂಡಿಯಾ. **ಸ್ತ್ರೀ:** [ದೇ] ಸಣ್ಣ ಅಂಗಳ, ವರಾಂಡ

ವರಕ್ಖ. **ನ:** [ವರಾಖ್ಯ] ಗಂಧ ದ್ರವ್ಯ

ವರಕ್ಖ. **ಪು:** [ವರಾಕ್ಷ] ಯೋಗಿ, ಯಕ್ಷ, **ವಿ.** ಶ್ರೇಷ್ಠ ಇಂದ್ರಿಯವುಳ್ಳ

ವರಕ್ಖಾ. **ಸ್ತ್ರೀ:** [ವರಾಖ್ಯಾ] ತ್ರಿಫಲಾ

ವರಗ. **ನ:** [ವರಕ] ಬಹಳ ಬೆಲೆಬಾಳುವ ಪಾತ್ರೆ

ವರಟ್ಟ. **ಪು:** [ದೇ] ಒಂದು ಬಗೆಯ ಧಾನ್ಯ.

ವರಡಾ}. **ಸ್ತ್ರೀ:** [ದೇ. ವರಟಾ] ಕಣಜದ ಹುಳು,
ವರಡೀ}. ಒಂದು ಬಗೆಯ ಹುಳು

ವರಣ. **ನ:** [ವರಣ] ವಿವಾಹ ಸಂಬಂಧ. ದಡ, ತಟ(ಗಲುಡ), ಸೇತುವೆ, ಕೋಟೆ(ಗಾ), ಪ್ರಾಕಾರ, ಸ್ವೀಕರಿಸುವುದು, **'ವೀರ–ವರಣ'** ಶಬ್ದವನ್ನು ನೋಡುವುದು. ಒಂದು ಅನಾರ್ಯ–ದೇಶ. **'ವರುಣ'** ಶಬ್ದವನ್ನು ನೋಡುವುದು.

ವರಣಯ. **ನ:** [ವರಣಕ] ಒಂದು ಬಗೆಯ ಹುಲ್ಲು

ವರಣಸಿ(ಅಪ). **'ವಾರಾಣಸಿ'** ಶಬ್ದವನ್ನು ನೋಡುವುದು.

ವರಣಾ. **ಸ್ತ್ರೀ:** [ವರಣಾ] ಕಾಶಿಯ ವರುಣಾ ನದಿ. ಅಚ್ಚ ದೇಶದ ಪ್ರಾಚೀನ ರಾಜಧಾನಿ ವರುಣಾ

ವರಣೀಅ. **'ವರ=ವೃ'** ಶಬ್ದವನ್ನು ನೋಡುವುದು.

ವರತ್ತ. **ವಿ:** [ದೇ] ಹಳದಿ ಬಣ್ಣ, ಕೆಳಕ್ಕೆ ಬಿದ್ದ, ಸೇರಿಕೊಂಡಿರುವ, ಅಂಟಿಕೊಂಡಿರುವ–

ವರತ್ತಾ. **ಸ್ತ್ರೀ:** [ವರತ್ರಾ] ಹಗ್ಗ(ಪಾಅ)

ವರಯ. **ಪು:** [ವರಕ] ಸಂಬಂಧ ಮಾಡುವವನು. ಮದುವೆಗೆ ಮನವಿ ಮಾಡಿದವನು

ವರಯ. **ಪು:** [ದೇ] ಒಂದು ಬಗೆಯ ಬತ್ತ(ದೇ)

ವರಯ. **ವಿ:** [ವರಾಕ] ದೀನ, ಬಡವ(ಪಾಅ). **ಸ್ತ್ರೀ:** **–ರಈ.**

ವರಲಾ. **ಸ್ತ್ರೀ:** [ವರಲಾ] ಹೆಣ್ಣು ಹಂಸ ಪಕ್ಷಿ

ವರಸಿ. **'ವರಿಸ'** ಶಬ್ದವನ್ನು ನೋಡುವುದು.

ವರಹಾಡ. **ಅಕ:** [ನಿರ್+ಸೃ] ಹೊರಕ್ಕೆ ಹೊರಡು

ವರಹಾಡಿಅ. **ವಿ:** [ನಿಃಸೃತ] ಹೊರಕ್ಕೆ ಹೋದ, ಹೊರಕ್ಕೆ ಹೊರಟಿರುವ

ವರಾಗ. **'ವರಾಯ'** ಶಬ್ದವನ್ನು ನೋಡುವುದು.

ವರಾಡ}. **ಪು:** [ವರಾಟ, –ಕ] ಈಗ **'ವರಾರ'** ಎಂದು
ವರಾಡಗ}. ಹೆಸರಾಗಿರುವ ದಕ್ಷಿಣದ ಒಂದು ದೇಶ,
ವರಾಡಯ}. ಸಣ್ಣ ಕವಡೆ(ಉತ್ತ), **ನ:** ಬಾಲಕರು ಆಡುವ ಕವಡೆ ಆಟ

ವರಾಡಿಯಾ. **ಸ್ತ್ರೀ:** [ವರಾಟಿಕಾ] ಸಣ್ಣ ಕವಡೆ(ಸುಪಾ)

ವರಾಯ. **'ವರಯ=ವರಾಕ'** ಶಬ್ದವನ್ನು ನೋಡುವುದು. **ಸ್ತ್ರೀ:** **–ರಾಇಆ, –ರಾಈ**

ವರಾವಡ. **ಪು:** [ವರಾವಟ] ಒಂದು ದೇಶ.

ವರಾಹ. **ಪು:** [ವರಾಹ] ಹಂದಿ(ಪಾಅ), ಭಗವಾನ್ ಸುವಿಧಿನಾಥನ ಮೊದಲ ಶಿಷ್ಯ

ವರಾಹೀ. **ಸ್ತ್ರೀ:** [ವರಾಹೀ] ಒಂದು ವಿದ್ಯೆ

ವರಿ. **ಅ:** [ವರಮ್] ಒಳ್ಳೆಯದು, ಸರಿ, ಆಗಲಿ

ವರಿಅ. **'ವಜ್ಜ=ವರ್ಯ'** ಶಬ್ದವನ್ನು ನೋಡುವುದು.

ವರಿಅ. **ವಿ:** [ವೃತ] ಸ್ವೀಕರಿಸಲ್ಪಟ್ಟ, ಸೇವಿಸಲ್ಪಟ್ಟ, ಯಾರೊಂದಿಗೆ ಸಂಬಂಧ ಮಾಡಲಾಗಿದೆಯೋ ಅವನು. **ನ:** ಸಂಬಂಧ ಬೆಳೆಸುವುದು.

ವರಿಟ್ಠ. **ಪು:** [ವರಿಷ್ಠ] ಅತಿ ಶ್ರೇಷ್ಠ(ಔಪ), ಭರತ ಕ್ಷೇತ್ರದ ಭಾವಿ ೧೨ನೆಯ ಚಕ್ರವರ್ತಿ

ವರಿಲ್ಲ. ನ: [ದೇ] ಒಂದು ಬಗೆಯ ವಸ್ತ್ರ.
ವರಿಸ. ಸಕ: [**ವೃಷ್**] ಮಳೆ ಸುರಿಸು, ಮಳೆಗರೆ. **'ವರಿಸಇ'**. ವ. ಕೃ: **'ವರಿಸಂತ'**
ವರಿಸ. ಪುಂನ: [**ವರ್ಷ**] ಮಳೆ(ಭವಿ). ಸಂವತ್ಸರ, ವರ್ಷ(ಕುಮಾ), ಜಂಬೂ ದ್ವೀಪ, ಜಂಬೂ ದ್ವೀಪದಅಂಶ–ವಿಶೇಷ. ಭಾರತವೇ ಮೊದಲಾದ ಕ್ಷೇತ್ರಗಳು, ಮೋಡ. **–ಅ.** ವಿ: [**–ಜ**]**ಮಳೆಯಲ್ಲಿ ಹುಟ್ಟಿದ.** **–ಕಣ್ಹ.** ನ: [**–ಕೃಷ್ಣ**] ಒಂದು ಗೋತ್ರ **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದ. **–ಧರ.** ಪು: [**–ಧರ**] ಅಂತಃಪುರದ ರಕ್ಷಕನಾದ ನಪುಂಸಕ (ಣಾಯಾ). **–ವರ.** ಪು: [**–ವರ**] ಅದೇ ಅರ್ಥ. **'ವಾಸ=ವರ್ಷ'** ಶಬ್ದವನ್ನು ನೋಡುವುದು.
ವರಿಸಾವಿಅ. ವಿ: [**ವರ್ಷಿತ**] ಮಳೆಗರೆಯಲ್ಪಟ್ಟ (ಸುಪಾ),
ವರಿಸಾ. ಸ್ತ್ರೀ: [**ವರ್ಷಾ**] ಮಳೆ, ಮಳೆಗಾಲ, ಶ್ರಾವಣ ಮತ್ತು ಭಾದ್ರಪದದ ತಿಂಗಳುಗಳು. **–ಕಾಲ.** ಪು: [**–ಕಾಲ**] **ವರ್ಷಾ** ಋತು, ಮಳೆಗಾಲ(ಕುಪ್ರ), **–ರತ್ತ.** ಪು: [**–ರಾತ್ರ**] ಅದೇ ಅರ್ಥ. **–ಲ.** **'–ಕಾಲ'** ಶಬ್ದವನ್ನು ನೋಡುವುದು. **'ವಾಸಾ'** ಶಬ್ದವನ್ನು ನೋಡುವುದು.
ವರಿಸಿ. ವಿ: [**ವರ್ಷಿನ್**] ಮಳೆ ಸುರಿಸುವ(ವೇಣೀ)
ವರಿಸಿಣೀ. ಸ್ತ್ರೀ: [**ವರ್ಷಿಣೀ**] ಒಂದು ವಿದ್ಯೆ(ಪಉಮ)
ವರಿಸೋಲಕ. ಪು: [**ದೇ.ವರ್ಷೋಲಕ**] ಒಂದು ಸಿಹಿ ಭಕ್ಷ್ಯ
–ವರಿಹರಿಅ. **'ಪರಿಹರಿಅ'** ಶಬ್ದವನ್ನು ನೋಡುವುದು.
ವರು}. **ಪುಂನ:** [ದೇ] **'ವರುಅ'** ಶಬ್ದವನ್ನು
ವರುಉಅ}. ನೋಡುವುದು.
ವರುಂಟ. ಪು: [**ವರುಂಟ**] ಶಿಲ್ಪಿಗಳ ಒಂದು ಜಾತಿ
ವರುಡ. ಪು: [**ವರುಡ**] ಒಂದು ಅಂತ್ಯಜ ಜಾತಿ
ವರುಣ. ಪು: [**ವರುಣ**] ಚಮರನೇ ಮೊದಲಾದ ಇಂದ್ರರ ಪಶ್ಚಿಮ ದಿಕ್ಕಿನ ಲೋಕಪಾಲ(ಠಾ), ಬಲಿಯೇ ಮೊದಲಾದ ಇಂದ್ರರ ಉತ್ತರ ದಿಕ್ಕಿನ ಲೋಕಪಾಲ, ಲೊಕಾಂತಿಕ ದೇವರ ಒಂದು ಜಾತಿ(ಣಾಂಯಾ). ಭಗವಾನ್ ಮುನಿ ಸುವ್ರತಜಿನನ ಶಾಸನಾದ ಅಧಿಷ್ಠಾತೃ ಯಕ್ಷ. ಶತಭಿಷ ನಕ್ಷತ್ರದ ಅಧಿಷ್ಠಾತೃ ದೇವ, ಒಂದು ದೇವ ವಿಮಾನ. ವಲಸೆ ಗಿಡ. ಅಹೋರಾತ್ರಿಯ ಹದಿನೈದನೇ ಮುಹೂರ್ತ. ಒಬ್ಬ ವಿದ್ಯಾಧರ ರಾಜ. ಒಬ್ಬ ಶ್ರೇಷ್ಠಿ–ಪುತ್ರ. ಒಂದು ಛಂದಸ್ಸು. ವರುಣವರ ದ್ವೀಪದ ಅಧಿಷ್ಠಾತೃ ದೇವ. **ಪು.ಬ:** ಒಂದು ಆರ್ಯ ದೇಶ(ಪವ). **–ಕಾಇಯ.** ಪು: [**–ಕಾಯಿಕ**] ವರುಣ ಲೋಕಪಾಲನ ಭೃತ್ಯ–ಸ್ಥಾನದ ದೇವತೆಗಳ ಒಂದು ಜಾತಿ(ಭಗ). **–ದೇವಕಾಇಯ.** ಪು: [**–ದೇವಕಾಯಿಕ**] ಅದೇ ಅರ್ಥ. **–ಪ್ಪಭ.** ಪು: [**–ಪ್ರಭ**]ವರುಣ–ವರ ದ್ವೀಪದ ಒಬ್ಬ ಅಧಿಷ್ಠಾತೃ ದೇವ, ವರುಣ ಲೋಕಪಾಲನ ಒಂದು ವಿಪತ್ತಿನ ಪರ್ವತ. **–ಪ್ಪಭಾ.** ಸ್ತ್ರೀ: [**–ವರ**] ವರುಣ–ಪ್ರಭ ಪರ್ವತದ ದಕ್ಷಿಣ ದಿಕಿನಲ್ಲಿರುವ ಲೋಕಪಾಲನ ಒಂದು ರಾಜಧಾನಿ. **–ವರ.** ಪು: [**–ವರ**] ಒಂದು ದ್ವೀಪದ ಹೆಸರು.
ವರುಣಾ. ಸ್ತ್ರೀ: [**ವರುಣಾ**] ಅಚ್ಚ ದೇಶದ ಪ್ರಾಚೀನ ರಾಜಧಾನಿ. ವರುಣ ಪ್ರಭ ಪರ್ವತದ ಪೂರ್ವದಿಕ್ಕಿನಲ್ಲಿರುವ ವರುಣ ಎಂಬ ಹೆಸರಿನ ಲೋಕಪಾಲನ ಒಂದು ರಾಜಧಾನಿ. ಒಬ್ಬ ದೊರೆಯ ಪತ್ನಿ(ಪಉಮ)
ವರುಣೀ. ಸ್ತ್ರೀ: [**ವರುಣೀ**] ಒಂದು ಬಗೆಯ ವಿದ್ಯೆ
ವರುಣೋಅ}. ಪು: [**ವರುಣೋದ**] ಒಂದು ಸಮುದ್ರ
ವರುಣೋದ}. (ಠಾ)
ವರುಲ. ಪು.ಬ: [**ವರುಲ**] ಒಂದು ದೇಶ(ಪಉಮ)
ವರೂಹಿಣೀ. ಸ್ತ್ರೀ: [**ವರೂಥಿನೀ**] ಸೈನ್ಯ
ವರೇಇತ್ಥ. ನ: [ದೇ] ಫಲ(ದೇ)
ವಲ. ಅಕ: [**ವಲ್**] ಹಿಂತಿರುಗು, ಹೊರಳು, ತಿರುಗು. ಹುಟ್ಟು **ಸಕ: ಮುಚ್ಚು, ಹೊದಿಸು,** ಹೋಗು, ಸಿದ್ಧಪಡಿಸು, ಅಭ್ಯಾಸಮಾಡು. **'ವಲಇ'**. ವ.ಕೃ: **'ವಲಂತ'**
ವಲ. ಸಕ: [**ಆ+ರೋಪಯ್**] ಮೇಲೆ ಹತ್ತಿಸು,
ವಲ. ಸಕ: [**ಗ್ರಹ**] ಸ್ವೀಕರಿಸು.
ವಲ. ಪು: [**ವಲ**] ಹಗ್ಗವನ್ನು ಬಲಗೊಳಿಸಲು ಅದಕ್ಕೆ ನೀಡುವ ಬಲ
ವಲಅಂಗೀ. ಸ್ತ್ರೀ: [ದೇ] ಆವರಣವಿರುವ, ಬೇಲಿ ಇರುವ
ವಲಇಯ. ವಿ: [**ವಲಯಿತ**] ಗೋಳಾಕೃತಿ ಮಾಡಲಾದ, ಬಳೆಯ ಹಾಗೆ ಗುಂಡಗಿರುವ, ಸುತ್ತುವರಿಯಲ್ಪಟ್ಟ
ವಲಂಗಣಿಅ. ಸ್ತ್ರೀ: [ದೇ] ಬೇಲಿ ಉಳ್ಳ, ಆವರಣವುಳ್ಳ

ವಲಕ್ಕಿಅ. ವಿ: [ದೇ] ತೊಡೆಯ ಮೇಲಿರುವ(ಷಡ್)
ವಲಕ್ಖ. ವಿ: [ವಲಕ್ಷ] ಬಿಳಿಯ, ಬೆಳ್ಳನೆಯ
ವಲಕ್ಖ. ನ: [ವಲಾಕ್ಷ] ಕೊರಳಲ್ಲಿ ಧರಿಸುವ ಒಂದು ಆಭರಣ
ವಲಗ್ಗ. ಸಕ: [ಆ+ರುಹ್] ಆರೋಹಣ ಮಾಡು, ಹತ್ತು
ವಲಗ್ಗ. ವಿ: [ಆರೂಢ] ಆರೋಹಣ ಮಾಡಿರುವವನು (ಪಾಅ)
ವಲಗ್ಗಂಗಣೀ. ಸ್ತ್ರೀ: [ದೇ] ಬೇಲಿ, ಆವರಣ
ವಲಗ್ಗಿಅ. 'ವಲಗ್ಗ=ಆರೂಢ' ಶಬ್ದವನ್ನು ನೋಡುವುದು.
ವಲಣ. ನ: [ವಲನ] ತಿರುಗುವುದು, ಚಕ್ರಾಕಾರವಾಗಿ ಸುತ್ತುವುದು(ದೇ), ಹಿಂತಿರುಗುವುದು, ವಕ್ರತೆ, ಡೊಂಕಾಗಿರುವುದು.
ವಲಣ.(ಶೌ. ಮಾ). 'ವರಣ' ಶಬ್ದವನ್ನು ನೋಡುವುದು.
ವಲಣಾ ಸ್ತ್ರೀ: [ವಲನಾ] 'ವಲಣ=ವಲನ' ಶಬ್ದವನ್ನು ನೋಡುವುದು.
ವಲತ್ಥ. ವಿ: [ದೇ] ಎಸೆಯಲ್ಪಟ್ಟ, ಬಿಸಾಡಲ್ಪಟ್ಟ, ಸುತ್ತಲೂ ಹರಡಲಾದ
ವಲಮಯ. ನ: [ದೇ] ಬೇಗನೆ, ಶೀಘ್ರ,
ವಲಯ. ಪುಂನ: [ವಲಯ] ಬಳೆ, ಕಡಗ(ಔಪ), ಭೂವಲಯ, ಆವರಣ, ಬೇಲಿ, ವರ್ತುಲ, ಗೋಳಾಕಾರ, ನದಿಯಿಂದ ಸುತ್ತುವರಿಯಲ್ಪಟ್ಟ ಭೂಭಾಗ(ಸೂಅ). ಮಾಯೆ, ಮಿಥ್ಯೆ, ಸುಳ್ಳು, ಗುಂಡನೆಯ ಆಕಾರದ ಮರ(ಪಣ್ಣ), **–ಆರ, ವಲಯಾರಅ.** ಪು: [–ಕಾರ, –ಕಾರಕ] ಬಳೆ ಅಥವಾ ಕಡಗ ತಯಾರಿಸುವ ತಂತ್ರಜ್ಞ,
ವಲಯ. ವಿ: [ವಲಕ] ತಿರುಗಿಸುವವನು,
ವಲಯ. ನ: [ದೇ] ಗದ್ದೆ, ಹೊಲ, ಮನೆ,
ವಲಯ. 'ವಲ=ವಲ್' ಶಬ್ದವನ್ನು ನೋಡುವುದು. **–ಮಯಗ.** ವಿ: [–ಮೃತಕ] ಸಂಯಮದಿಂದ ಚ್ಯುತನಾಗಿ ಮರಣಹೊಂದಿದವನು, ಹಸಿವು, ಬಾಯಾರಿಕೆಗಳಿಂದ ನರಳುತ್ತ ಮರಣಿಸಿದವನು (ಔಪ). **–ಮರಣ.** ನ: [–ಮರಣ] ಸಂಯಮದಿಂದ ಚ್ಯುತನಾದವನ ಸಾವು
ವಲಯಣೀ. ಸ್ತ್ರೀ: [ದೇ] ಬೇಲಿ, ಆವರಣ(ದೇ)
ವಲಯಬಾಹಾ.}. ಸ್ತ್ರೀ: [ದೇ]ಷ ಧ್ವಜವೇ
ವಲಯಬಾಹು}. ಮೊದಲಾದುವನ್ನು ಕಟ್ಟಬಹುದಾದ ಉದ್ದನೆಯ ಮರ, ಕೋಲು. ತೋಳಿನ ಆಭರಣವಾದ ಅಂಗದ, ತೋಳಬಳೆ
ವಲಯಾ. 'ವಡವಾ' ಶಬ್ದವನ್ನು ನೋಡುವುದು. **–ಣಲ.** ಪು: [–ನಲ] ಕಾಡುಕಿಚ್ಚು,ಬಡಬಾಗ್ನಿ. **–ಮುಹ.** ನ: [–ಮುಖ] ಬಡಬಾನಲ, ಕಾಡುಕಿಚ್ಚು(ದೇ) ಉ: ಒಂದು ದೊಡ್ಡ ಪಾತಾಳ–ಕಲಶ(ಠಾ)
ವಲಯಾ. ಸ್ತ್ರೀ: [ದೇ] ಸಮುದ್ರದ ತಟ, ಸಮುದ್ರ ತೀರ. **–ಮುಹ.** ನ: [–ಮುಖ] ತೀರ ಅಥವಾ ತಟದ ಮುಂಭಾಗ.
ವಲಯಾಇಅ. ವಿ: [ವಲಯಾಯಿತ] ಬಳೆಯ ಹಾಗೆ ಗುಂಡಗಿರುವ(ಕುಮಾ)
ವಲವಟ್ಟಿ.(ದೇ). 'ವಲವಟ್ಟಿ' ಶಬ್ದವನ್ನು ನೋಡುವುದು.
ವಲವಾ. 'ವಡವಾ' ಶಬ್ದವನ್ನು ನೋಡುವುದು
ವಲವಾಡೀ. ಸ್ತ್ರೀ: [ದೇ] ಬೇಲಿ, ಆವರಣ.
ವಲವಿಅ. ನ: [ದೇ] ಶೀಘ್ರ, ಬೇಗನೆ(ದೇ)
ವಲಹಿ. ಸ್ತ್ರೀ: [ದೇ] ಹತ್ತಿಯ ಗಿಡ
ವಲಹಿ}. ಸ್ತ್ರೀ: [ವಲಭಿ, –ಭೀ] ಅಂಗಳ, ಪಡಸಾಲೆ,
ವಲಹೀ}. ವರಾಂಡ, ಮನೆಯ ಮುಂಭಾಗ.ಇಂದು **'ವಳಾ'** ಎಂದು ಕರೆಯುವ, ಕಾಥಿಯಾವಾಡದ ಒಂದು ಪ್ರಾಚೀನ ನಗರ.
ವಲಾಅ. **'ಪಲಾಯ=ಪರಾ+ಅಯ್'** ಶಬ್ದವನ್ನು ನೋಡುವುದು.
ವಲಾಅ. **'ಪಲಾವ=ಪ್ರಲಾಪ'** ಶಬ್ದವನ್ನು ನೋಡುವುದು.
–ವಲಾಅ. **'ವಲ=ವಲ್'** ಶಬ್ದವನ್ನು ನೋಡುವುದು. **–ಮರಣ.** **'ವಲಯ–ಮರಣ'** ಶಬ್ದವನ್ನು ನೋಡುವುದು.
ವಲಿ. ಸ್ತ್ರೀ: [ವಲಿ] ಹೊಟ್ಟೆಯ ಮೇಲುಭಾಗದಲ್ಲಿ ಕಾಣುವ ಚರ್ಮದ ಮಡಿಕೆ, ಪದರ, ತ್ರಿವಳಿ: ಹೊಕ್ಕುಳಿನ ಮೇಲೆ ಹೊಟ್ಟೆಯ ಮೇಲಿನ ಮೂರು ರೇಖೆಗಳು. ಮುಪ್ಪಿನಿಂದಾಗುವ ಶಿಥಿಲ ಚರ್ಮ, ಚರ್ಮದ ಸುಕ್ಕುಗಟ್ಟುವಿಕೆ(ಣಾಯಾ)
ವಲಿಅ. ವಿ: [ದೇ] ತಿನ್ನಲ್ಪಟ್ಟ
ವಲಿಅ. ವಿ: [ವಲಿತ] ತಿರುಗಿದ, ತಿರುಚುವ ಮೂಲಕ ಬಲಯುತಗೊಳಿಸಲಾದ್ದು; ಹಗ್ಗ ಇತ್ಯಾದಿ
ವಲಿಅ. **'ವಿಲಿಅ=ವ್ಯಲೀಕ'** ಶಬ್ದವನ್ನು ನೋಡುವುದು.
ವಲಿಆ. ಸ್ತ್ರೀ: [ದೇ] ಬಿಲ್ಲಿನ ಹೆದೆ, ನಾರಿ(ದೇ).

ವಲಿಚ್ಛತ್ತ. 'ಪರಿಚ್ಛನ್ನ' ಶಬ್ದವನ್ನು ನೋಡುವುದು.
ವಲಿಜ್ಜಂತ. 'ವಲ=ವಲ್' ಶಬ್ದವನ್ನು ನೋಡುವುದು.
-ವಲಿತ್ತ. 'ಪಲಿತ್ತ' ಶಬ್ದವನ್ನು ನೋಡುವುದು.
ವಲಿಮೋಡಯ. ಪು: [ವಲಿಮೋಟಕ] ಗಿಡ, ಮರಗಳಲ್ಲಿ ಗೆಣ್ಣು ಚಕ್ರಾಕಾರದಲ್ಲಿ ಸುತ್ತಿಕೊಂಡಿರುವುದು(ಪಣ್ಣ)
ವಲಿರ. ವಿ: [ವಲಿತೃ] ಹಿಂತಿರುಗುವವನು(ಸುಪಾ)
ವಲೀ. ಸ್ತ್ರೀ: [ವಲೀ] 'ವಲಿ' 'ಶಬ್ದವನ್ನು ನೋಡುವುದು.
ವಲುಣ. 'ವರುಣ' ಶಬ್ದವನ್ನು ನೋಡುವುದು.
ವಲೇ. ಅ: ಸಂಬೋಧನಾರ್ಥದ ಅವ್ಯಯ. 'ಬಲೇ' ಶಬ್ದವನ್ನು ನೋಡುವುದು.
ವಲ್ಲ. 'ವಲ=ವಲ್' ಶಬ್ದವನ್ನು ನೋಡುವುದು.
ವಲ್ಲ. ಅಕ: [ವಲ್ಲ್] ಚಲಿಸು, ಅಲ್ಲಾಡು(ಕುಪ್ರ)
ವಲ್ಲ. ಪು: [ದೇ] ಶಿಶು, ಬಾಲಕ
ವಲ್ಲ. ಪು: [ದೇ. ವಲ್ಲ] ಅವರೆ, ಜೊಳ್ಳು ತೆನೆ(ಸುಪಾ)
ವಲ್ಲಈ. ಸ್ತ್ರೀ: [ವಲ್ಲವೀ] ಗೋಪಿ, ಗೊಲ್ಲರ ಹೆಂಗಸು (ದೇ)
ವಲ್ಲಈ. ಸ್ತ್ರೀ: [ದೇ] ಹಸು(ದೇ)
ವಲ್ಲಈ}. ಸ್ತ್ರೀ: [ವಲ್ಲಕೀ] ವೀಣೆ(ಪಾಅ)
ವಲ್ಲಕೀ}.
ವಲ್ಲಟ್ಟ. ವಿ: [ದೇ] ಹೇಳಿದ್ದನ್ನೇ ಮತ್ತೆ ಹೇಳುವುದು
ವಲ್ಲಭ. 'ವಲ್ಲಹ' ಶಬ್ದವನ್ನು ನೋಡುವುದು(ಗಾ)
ವಲ್ಲರ. ನ: [ದೇ. ವಲ್ಲರ] ಕಾಡು, ಗದ್ದೆ(ದೇ), ಅರಣ್ಯ-ಕ್ಷೇತ್ರ(ಪಾಅ), ಮರಳಿನಿಂದ ಕೂಡಿರುವ ಹೊಲ ಅಥವಾ ಗದ್ದೆ.
ವಲ್ಲರ. ನ: [ದೇ] ಅರಣ್ಯ, ಅಡವಿ, ನೀರಿಲ್ಲದ ದೇಶ, **ಪು:** ಕೋಣ, ಗಾಳಿ, ವಾಯು **ವಿ:** ತರುಣ, ಯುವಕ. ಸುತ್ತಿಕೊಳ್ಳುವ ಸ್ವಭಾವದ, 'ವೇಷ್ಟಿತ' ಎಂಬ ಹೆಸರಿನ ಆಲಿಂಗನದ ಅಭ್ಯಾಸವುಳ್ಳನು. **ಸ್ತ್ರೀ:** -ರೀ.
ವಲ್ಲರೀ. ಸ್ತ್ರೀ: [ವಲ್ಲರೀ] ಬಳ್ಳಿ(ಪಾಅ)
ವಲ್ಲರೀ. ಸ್ತ್ರೀ: [ದೇ] ಕೂದಲು, ಕೇಶ(ದೇ)
ವಲ್ಲವ. ಪುಂಸ್ತ್ರೀ: [ವಲ್ಲವ] ಗೋಪ, ಗೊಲ್ಲ, ಗೋಪಾಲಕ. **ಸ್ತ್ರೀ:** -ವೀ.
ವಲ್ಲವಾಯ. ನ: [ದೇ] ಗದ್ದೆ
ವಲ್ಲವಿಅ. ವಿ: [ದೇ] ಅರಗಿನಿಂದ ಬಳಿಯಲ್ಪಟ್ಟ
ವಲ್ಲಹ. ಪು: [ವಲ್ಲಭ] ಪತಿ, ಯಜಮಾನ(ಗಾ), **ವಿ:** ಪ್ರಿಯ, ಪ್ರೀತಿ-ಪಾತ್ರ(ಕಮಾ), **-ರಾಯ. ಪು:** [-ರಾಜ] ಗುಜರಾತಿನ ಚಾಲುಕ್ಯ ವಂಶಕ್ಕೆ ಸೇರಿದ ಒಬ್ಬ ರಾಜ, ದಕ್ಷಿಣದ ಕುಂತಲ ದೇಶದ ಒಬ್ಬ ದೊರೆ.
ವಲ್ಲಹಾ. ಸ್ತ್ರೀ: [ವಲ್ಲಭಾ] ಪ್ರಿಯೆ, ಪತ್ನಿ(ಗಾ)
ವಲ್ಲಾದಯ. ನ: [ದೇ] ಹೊದಿಸುವ ವಸ್ತ್ರ,
ವಲ್ಲಾಯ. ಪು: [ದೇ] ಗಿಡುಗ, ಮುಂಗುಸಿ(ದೇ)
ವಲ್ಲಿ. ಸ್ತ್ರೀ: [ವಲ್ಲಿ] ಬಳ್ಳಿ, ಲತೆ(ಕುಮಾ)
ವಲ್ಲಿರ. ವಿ: [ವಲ್ಲಿತೃ] ಅಲ್ಲಾಡುವ, ಅಲುಗಾಡುವ
ವಲ್ಲೀ. ಸ್ತ್ರೀ: [ವಲ್ಲೀ] ಬಳ್ಳಿ, ಲತೆ
ವಲ್ಲೀ. ಸ್ತ್ರೀ: [ದೇ] ಕೂದಲು, ಕೇಶ
ವಲ್ಲೀಅ. ಪು: [ವಾಹ್ಲೀಕ] ಒಂದು ದೇಶ, **ವಿ:** ವಾಹ್ಲೀಕ ದೇಶದಲ್ಲಿ ಹುಟ್ಟಿದ, ವಾಹ್ಲೀಕ ದೇಶಕ್ಕೆ ಸೇರಿದ
ವವ. ಸಕ: [ವಪ್] ಬೀಜ ಬಿತ್ತು
ವವ. ಸಕ: [ವಪ್] ಕೊಡು, ನೀಡು. ಕ್ರಿಯಾ ರೂಪ: 'ವವಇ'
ವವಇಸ. ಸಕ: [ವ್ಯಪ+ದಿಶ್] ಹೇಳು, ಪ್ರತಿಪಾದಿಸು, ವ್ಯವಹರಿಸು. -'ವ್ಯವಇಸಂತಿ'
ವವಏಸ. ಪು: [ವ್ಯಪದೇಶ] ಕಥನ, ಪ್ರತಿಪಾದನೆ, ವ್ಯವಹಾರ, ಕಪಟತನ, ಮೋಸ, ನೆಪ
ವವಗಮ. ಪು: [ವ್ಯಪಗಮ] ನಾಶ(ಆವಮ)
ವವಗಯ. ವಿ: [ವ್ಯಪಗತ] ದೂರಮಾಡಲ್ಪಟ್ಟ, (ಸುಪಾ), ಮೃತ, ತೀರಿಕೊಂಡ, ನಾಶವಾದ(ಔಪ)
ವವಟ್ಠಂಭ. ಪು: [ವ್ಯವಷ್ಟಂಭ] ಅವಲಂಬನೆ, ಆಧಾರ
ವವಟ್ಠಾವಣ. 'ವವತ್ಥಾವಣ' ಶಬ್ದವನ್ನು ನೋಡುವುದು.
ವವಟ್ಠಿಅ. ವಿ: [ವ್ಯವಸ್ಥಿತ] ಸಿದ್ಧವಾಗಿರುವ, ವ್ಯವಸ್ಥೆಗೊಳಿಸಲ್ಪಟ್ಟ
ವವಣ. ನ: [ವಪನ] ಬೀಜ ಬಿತ್ತುವುದು(ವವ)
ವವಣ. ಸ್ತ್ರೀನ: [ದೇ] ಹತ್ತಿ(ಪಾಅ). **ಸ್ತ್ರೀ**- ಣೀ
ವವತ್ಥಂಭ. ಪು: [ದೇ] ಬಲ. ಶಕ್ತಿ, ಪರಾಕ್ರಮ
ವವತ್ಥಾ. ಸ್ತ್ರೀ: [ವ್ಯವಸ್ಥಾ] ಸ್ಥಿತಿ, ವ್ಯವಸ್ಥೆ, ಏರ್ಪಾಟು, ಕ್ರಮ, ರೀತಿ, ನಿರ್ಣಯ, ತೀರ್ಮಾನ. **-ಪತ್ತಯ. ನ:**[-ಪತ್ರಕ] ವ್ಯವಹಾರದ ಕಾಗದ-ಪತ್ರ
ವವತ್ಥಾವಣ. ನ: [ವ್ಯವಸ್ಥಾಪನ] ಏರ್ಪಾಟು ಮಾಡುವುದು, ವ್ಯವಸ್ಥೆ ಮಾಡುವುದು, **ಸ್ತ್ರೀ:-ಣಾ**
ವವತ್ಥಿಅ. ವಿ: [ವ್ಯವಸ್ಥಿತ] ಕ್ರಮಬದ್ಧವಾಗಿ ಸಿದ್ಧಪಡಿಸಲಾದ(ಸುರ), ಸಿದ್ಧಗೊಳಿಸಲಾಗಿರುವ

ವವದೇಸ. 'ವವಏಸ' ಶಬ್ದವನ್ನು ನೋಡುವುದು.
ವವದೇಸಿ. ವಿ: [ವ್ಯಪದೇಶಿನ್] ಕಥಿಸುವವನು, ವ್ಯವಹರಿಸುವವನು, ಮೋಸಮಾಡುವವನು, ಕಪಟಿ
ವವಧಾಣ. ನ: [ವ್ಯವಧಾನ] ಎರಡು ವಸ್ತು, ಎರಡು ಕಾಲ, ಎರಡು ದೇಶಗಳ ಮಧ್ಯೆ ಇರುವ ಅಂತರ
ವವರೋವ. ಸಕ: [ವ್ಯಪ+ರೋಪಯ್] ವಿನಾಶ ಮಾಡು, ಹತ್ಯೆ ಮಾಡು
ವವರೋವಣ. ನ: [ವ್ಯಪರೋಪಣ] ವಿನಾಶ, ಹಿಂಸೆ
ವವರೋವಿಅ. ವಿ: [ವ್ಯಪರೋಪಿತ] ಕೊಲ್ಲಲ್ಪಟ್ಟ, ನಾಶಮಾಡಲ್ಪಟ್ಟ
ವವಸ. ಸಕ: [ವ್ಯವ+ಸೋ] ಮಾಡಲಿಚ್ಛಿಸು, ಪ್ರಯತ್ನಿಸು, ನಿರ್ಣಯಿಸು, ವ.ಕೃ: 'ವ ವಸಂತ'
ವವಸಾಯ. ಪು: [ವ್ಯವಸಾಯ] ನಿರ್ಣಯ, ತೀರ್ಮಾನ, ಅನುಷ್ಠಾನ, ಪ್ರಯತ್ನ, ವ್ಯಾಪಾರ, ಕಾರ್ಯ(ಔಪ)
ವವಸಾಯುಸಭಾ. ಸ್ತ್ರೀ:[ವ್ಯಯುಸಾಯುಸಭಾ] ಕಾರ್ಯಾಲಯ, ಕೆಲಸ ಮಾಡುವ ಸ್ಥಳ
ವವಸಿಅ. ನ: [ದೇ] ಬಲಾತ್ಕಾರ, ನಿರ್ಬಂಧ
ವವಸಿಅ}. ವಿ: [ವ್ಯವಸಿತ] ಪ್ರಯತ್ನಿಸಿದ, ಬಿಡಲ್ಪಟ್ಟ,
ವವಸ್ಸಿಅ}. ತ್ಯಜಿಸಲ್ಪಟ್ಟ, ನಿಶ್ಚಯು ವಾಾಡಿದ, ಪರಾಕ್ರಮಿ(ಠಾ), ನ: ಪ್ರಯತ್ನ, ಕೆಲಸ, ತೊಡಗಿದ,
ವವಹರ. ಸಕ: [ವ್ಯ+ಹೃ] ವ್ಯವಹರಿಸು, ವ್ಯಾಪಾರ ಮಾಡು, ಅಕ: ಆಚರಿಸು, ವರ್ತಿಸು, 'ವವಹರಇ'. ವ. ಕೃ: 'ವವಹರಂತ'
ವವಹರಗ. ವಿ: [ವ್ಯವಹಾರಕ] ವಾಪಾರ ಮಾಡುವವನು, ವ್ಯಾಪಾರಿ(ಕುಪ್ರ),
ವವಹರಣ. ನ: [ವ್ಯವಹರಣ] ವ್ಯಾಪಾರ
ವವಹರಯ. 'ವವಹರಗ' ಶಬ್ದವನ್ನು ನೋಡುವುದು.
ವವಹರಿಯವ್ವ. 'ವವಹರ' ಶಬ್ದವನ್ನು ನೋಡುವುದು.
ವವಹಾರ. ಪು: [ವ್ಯವಹಾರ] ವರ್ತನೆ, ಆಚರಣೆ(ಭಗ), ಮಾತು-ಕತೆ, ವ್ಯಾಪಾರ, ಧಂಧೆ, ವಸ್ತು ಪರೀಕ್ಷೆಯ ಒಂದು ದೃಷ್ಟಿಕೋಣವಾದ ನಯ(ವಿಸೇ),ಮುಮುಕ್ಷುವಿನ ಪ್ರವೃತ್ತಿ-ನಿವೃತ್ತಿಗಳ ಕಾರಣಭೂತ ಜ್ಞಾನ(ಭಗ). ಒಂದು ಜೈನ ಆಗಮ ಗ್ರಂಥ, ದೋಷದ ನಾಶದ ಸಲುವಾಗಿ ವಾಾಡಲಾಗುವ ಪ್ರಾಯುಶ್ಚಿತ್ತ, ವಿವಾದ, ಮೊಕದ್ದಮೆ(ಪಉಮ), ವಿವಾದ-ನಿರ್ಣಯ, ತೀರ್ಪು. ವ್ಯವಸ್ಥೆ(ಸೂಅ), ಕೆಲಸ, ಜೀವ-ರಾಶಿ ವಿಶೇಷ.-**ವ.** ವಿ: [-ವತ್] ವ್ಯವಹಾರದಿಂದ ಕೂಡಿದ. -**ರಾಸಿಯ.** ವಿ: [-ರಾಶಿಕ] ಜೀವ-ರಾಶಿ ವಿಶೇಷದಲ್ಲಿ ಇರುವ.
ವವಹಾರ. ಪು: [ವ್ಯವಹಾರ] ಪೂರ್ವ ಗ್ರಂಥ, ಜೀತ ಕಲ್ಪ-ಸೂತ್ರ, ಕಲ್ಪಸೂತ್ರ, ವಾರ್ಗ ದಾರಿ, ಆಚರಣೆ, ಇಚ್ಛಿಸುವಂಥ, ಆಸೆಪಡಬೇಕಾದ
ವವಹಾರಿ. ಪು: [ವ್ಯವಹಾರಿನ್] ಐರಾವತ ಕ್ಷೇತ್ರದಲ್ಲಿ ಹುಟ್ಟಿದ ಒಬ್ಬ ಜಿನದೇವ. ವಿ: ವ್ಯಾಪಾರಿ, ವ್ಯವಹಾರಕ್ರಿಯೆಯ ಪ್ರವರ್ತಕ
ವವಹಾರಿಅ. ವಿ: [ವ್ಯಾವಹಾರಿಕ] ವ್ಯವಹಾರಕ್ಕೆ ಸಂಬಂಧಿಸಿದ(ಓಘ)
ವವಹಿಅ. ವಿ: [ವ್ಯವಹಿತ] ವ್ಯವಧಾನದಿಂದ ಕೂಡಿದ, ವಸ್ತು ಅಥವಾ ಕಾಲಗಳಿಂದ ವ್ಯವಧಾನ ಹೊಂದಿರುವ, ಮರೆಯಾಗಿರುವ.
ವವಹಿಅ. ವಿ: [ದೇ] ಹುಚ್ಚು ಹಿಡಿದವನು, ಅಮಲೇರಿದವನು
ವವಾಂಲ. 'ವಮಾಲ' ಶಬ್ದವನ್ನು ನೋಡುವುದು.
ವವಿಅ. ವಿ: [ಉಪ್ತ] ಉತ್ತಲ್ಪಟ್ಟ(ಉಪ)
ವವೇಅ. ವಿ: [ವ್ಯಪೇತ] ಕಳೆದುಹೋದ, ನಾಶವಾದ, ರಹಿತ, ತ್ಯಜಿಸಲ್ಪಟ್ಟ
ವವೆಕ್ಖಾ. ಸ್ತ್ರೀ: [ವ್ಯಪೇಕ್ಷಾ] ವಿಶೇಷವಾದ ಇಚ್ಛೆ, ಆಸೆ
ವವ್ವಯ. ಪು: [ವಲ್ವಜ] ಒಂದು ಬಗೆಯ ತೃಣ(ಪಣ್ಣ)
ವವ್ವರ. ವಿ: [ವರ್ವರ] ಪಾಮರ, ಮೂರ್ಖ(ಕುಮಾ)
ವವ್ವಾ-. 'ವವ್ವಯ' ಶಬ್ದವನ್ನು ನೋಡುವುದು.
ವವ್ವಾಡ. ಪು; [ದೇ] ಹಣ, ಅರ್ಥ(ದೇ)
ವವ್ವೀಸ. 'ವಚ್ಚೀಸಗ, ವಧೀಸಕ' ಶಬ್ದಗಳನ್ನು ನೋಡುವುದು.
ವಶಧಿ(ಮಾ)'ವಸಹಿ=ವಸತಿ' ಶಬ್ದವನ್ನು ನೋಡುವುದು.
ವಶ್ಚ(ಮಾ). 'ವಚ್ಛ=ವೃಕ್ಷ' ಶಬ್ದವನ್ನು ನೋಡುವುದು.
ವಸ. ಅಕ: [ವಸ್] ವಾಸಮಾಡು, ಇರುವುದು, ಸಕ: ಕಟ್ಟು. ವ. ಕೃ: ವಸಂತ
ವಸ. ವಿ: [ವಶ] ಅಧಿನ(ಆಚಾ), ಪುಂನ: ಅಧೀನದಲ್ಲಿರುವುದು, ಪರತಂತ್ರ(ಕುಮಾ), ಪ್ರಭುತ್ವ, ಅಧಿಕಾರ, ಬಲ, ಸಾಮರ್ಥ್ಯ. -**ಅ,** -**ಗ.** ವಿ:[-ಗ] ಪರಾಧೀನ, ವಶವಾದ. -**ಟ್ಟ.** ವಿ: [ವಶಾರ್ತ] ಪರಾಧೀನವಾದ ಕಾರಣದಿಂದ

ದುಃಖಿತ(ಆಚಾ). **–ಟ್ಟವುರಣ.** ನ: [ವಶಾರ್ತವುರಣ] ಇಂದ್ರಿಯಾದಿಗಳು ಪರಾಧೀನವಾದದ್ದರಿಂದ ಬಂದ ಮರಣ. **–ವತ್ತಿ.** ವಿ: [–ವರ್ತಿನ್] ಅಧೀನ. **ವಶಾಜತ್ತ.** ವಿ: [ವಶಾಯತ್ತ] ಅಧೀನ, ವಶವಾದ. **ವಶಾಣುಗ.** ವಿ: [ವಶಾನುಗ] ಅದೇ ಅರ್ಥ(ಪಉಮ)

ವಸ. ಪು: [ವೃಷ] ಧರ್ಮ. ಎತ್ತು, 'ವಿಸ=ವೃಷ' ಶಬ್ದವನ್ನು ನೋಡುವುದು.

ವಸಇ. ಸ್ತ್ರೀ: [ವಸತಿ] ಆಶ್ರಯ, ಮನೆ, ಗೃಹ, ವಾಸಮಾಡುವುದು, ರಾತ್ರಿ

ವಸಂತ. ಪು: [ವಸಂತ] ಚೈತ್ರ, ವೈಶಾಖ ಮಾಸಗಳ ವಸಂತ ಋತು(ಪಾಅ), ಚೈತ್ರಮಾಸ, **–ಉರ.** ನ:[–ಪುರ] ನಗರ–ವಿಶೇಷ. **–ತಿಲ.** ಪು: [–ತಿಲಕ] ಹರಿವಂಶದಲ್ಲಿ ಹುಟ್ಟಿದ ಒಬ್ಬ ರಾಜ, ನ: ಭಗವಾನ್ ವೃಷಭದೇವನು ದೀಕ್ಷೆ ತೆಗೆದುಕೊಂಡ ಸ್ಥಳವಾದ ಒಂದು ಉದ್ಯಾನ, **–ತಿಲಆ.** ಸ್ತ್ರೀ: [–ತಿಲಕಾ] ಒಂದು ಛಂದಸ್ಸು

ವಸಂವಯ. ವಿ: [ವಶಂವದ] ತನ್ನನ್ನು ಇನ್ನೊಬ್ಬರ ಅಧೀನವೆಂದು ಹೇಳಿಕೊಳ್ಳುವವನು

ವಸಣ. ನ: [ವಸನ] ವಸ್ತ್ರ, ಬಟ್ಟೆ(ಸುಪಾ), ನಿವಾಸ, ಇರುವುದು

ವಸಣ. ಪು: [ವೃಷಣ] ಅಂಡಕೋಶ, ಬೀಜ(ಸಮ)

ವಸಣ. ನ: [ವ್ಯಸನ] ಕಷ್ಟ, ವಿಪತ್ತು, ದುಃಖ(ಪಾಅ), ರಾಜರೇ ಮೊದಲಾದವರು ಮಾಡಿದ ತೊಂದರೆ, ದ್ಯೂತ, ಮದ್ಯಪಾನವೇ ಮೊದಲಾದ ಕೆಟ್ಟ ಅಭ್ಯಾಸಗಳು(ಬೃಹ)

ವಸಣಿ. ವಿ: [ವ್ಯಸನಿನ್] ಕೆಟ್ಟ ಅಭ್ಯಾಸಗಳನ್ನು ಹೊಂದಿರುವವನು(ಸುಪಾ)

ವಸಭ. ಪು: [ವೃಷಭ] ಜೋತಿಷ್ಯದಲ್ಲಿ ಪ್ರಸಿದ್ಧವಾದ ವೃಷಭ ರಾಶಿ, ಭಗವಾನ್ ಋಷಭ ದೇವ, ನಾಲ್ಕನೇ ಬಲದೇವನ ಪೂರ್ವ ಜನ್ಮದ ಗುರುವಾಗಿದ್ದ ಒಬ್ಬ ಜೈನ ಮುನಿ, ಗೀತಾರ್ಥ ಮುನಿ, ಎತ್ತು, ಆಲಂಕಾರಿಕ ಅರ್ಥದಲ್ಲಿ ಶ್ರೇಷ್ಠ. **–ಕರಣ.** ನ: [–ಕರಣ] ಎತ್ತುಗಳನ್ನು ಕಟ್ಟುವ ಸ್ಥಳವಾದ ಕೊಟ್ಟಿಗೆ.(ಆಚಾ). **–ಕ್ಖೆತ್ತ.** ನ: [–ಕ್ಷೇತ್ರ] ಮಳೆಗಾಲದಲ್ಲಿ ಗರುಗಳು, ಆಚಾರ್ಯರು ತಂಗುವ ಸ್ಥಳ. **–ಗ್ಗಾಮ.** ಪು: [–ಗ್ರಾಮ] ಕುತ್ಸಿತದೇಶದಲ್ಲಿ ನಗರಕ್ಕೆ ಸಮಾನವಾದ ಹಳ್ಳಿ. **ವೃಷಬಾಣುಜಾಯ.** ಪು: [ವೃಷಭಾನುಜಾತ] ಚಂದ್ರ, ಸೂರ್ಯ ಮತ್ತು ನಕ್ಷತ್ರ ಎತ್ತಿನ ಆಕೃತಿಯಲ್ಲಿ ಇರುವ, ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಹತ್ತು ಯೋಗಗಳಲ್ಲಿ ಪ್ರಥಮ ಯೋಗ. **'ಉಸಭ, ರಿಸಭ, ಮತ್ತು ವಸಹ'** ಶಬ್ದಗಳನ್ನು ನೋಡುವುದು.

ವಸಭುದ್ಧ. ಪು: [ದೇ] ಕಾಗೆ(ದೇ)

ವಸಮ. 'ವಸಿಮ' ಶಬ್ದವನ್ನು ನೋಡುವುದು.

ವಸಲ. ವಿ: [ದೇ] ಉದ್ದವಾಗಿರುವ

ವಸಹ. ಪು: [ವೃಷಭ] **ವ್ಯಾಕರಣ ರಚಿಸುವ ಮುನಿ** ಎತ್ತು, ಗೂಳಿ, ಕಿವಿಯ ತೂತು, ಒಂದು ಬಗೆಯ ಔಷಧ', **–ಇಂಧ.** ಪು: [–ಚಿಹ್ನ] ಶಿವ, ಮಹಾದೇವ(ಗಉಡ)**–ಕೇಉ.** ಪು: [–ಕೇತು] ಇಕ್ಷ್ವಾಕು ವಂಶದ ಒಬ್ಬ ರಾಜ (ಪಉಮ). **–ವಾಹಣ.** ಪು: [–ವಾಹನ] ಈಶಾನ ದೇವಲೋಕದ ಇಂದ್ರ. ಮಹಾದೇವ, ಶಿವ. **–ವೀಹೀ.**ಸ್ತ್ರೀ: [–ವೀಥೀ] **ಶುಕ್ರ** ಗ್ರಹದ ಒಂದು ಕ್ಷೇತ್ರ–ಭಾಗ(ಠಾ)

ವಸಹಿ. 'ವಸಇ' ಶಬ್ದವನ್ನು ನೋಡುವುದು.

ವಸಾ. ಸ್ತ್ರೀ: [ವಸಾ] ಶರೀರದಲ್ಲಿರುವ ಒಂದು ಧಾತು–ವಿಶೇಷ(ಪಣ್ಣ), ಮೇದಸ್ಸು, ಕೊಬ್ಬು

–ವಸಾರಅ. ವಿ: [ಪ್ರಸಾರಕ] ಹರಡುವವ

–ವಸಾರಅ. 'ಪಸಾಹಮ' ಶಬ್ದವನ್ನು ನೋಡುವುದು.

–ವಸಾಹಾ. ಸ್ತ್ರೀ: [ಪ್ರಸಾಧಾ] ಅಲಂಕಾರ, ಒಡವೆ(ಸೇ)

ವಸಿ. 'ವಸಇ' ಶಬ್ದವನ್ನು ನೋಡುವುದು.

ವಸಿಅ. ವಿ: [ಉಷಿತ] ವಾಸ ಮಾಡಲ್ಪಟ್ಟ(ಪಾಅ)

ವಸಿಟ್ಠ. ಪು: [ವಶಿಷ್ಠ] ಭಗವಾನ್ ಪಾರ್ಶ್ವನಾಥನ ಒಬ್ಬ ಗಣಧರ(ಠಾ), ಒಬ್ಬ ಋಷಿ.

ವಸಿಟ್ಠ. ಪು: [ವಶಿಷ್ಟ] ದ್ವೀಪಕುಮಾರ ದೇವರಗಳ ಉತ್ತರ ದಿಕ್ಕಿನ ಇಂದ್ರ

ವಸಿತ್ತ. ನ: [ವಶಿತ್ವ] ಅಣಿಮಾದಿ ಅಷ್ಟ ಸಿದ್ಧಿಗಳಲ್ಲಿ ಒಂದು, ಯೋಗದಿಂದ ಹುಟ್ಟಿದ ಒಂದು ನಿಧಿ.

ವಸಿಮ. ನ: [ದೇ. ವಸಿಮ] ವಸತಿ ಇರುವ ಸ್ಥಳ(ಸುಪಾ)

ವಸಿಯವ್ವ. 'ವಸ=ವಸ್' ಶಬ್ದವನ್ನು ನೋಡುವುದು.

ವಸಿರ. ವಿ: [ವಸಿತೃ] ವಾಸ ಮಾಡುವವನು(ಸುಪಾ)

ವಸೀಕಯ. ವಿ: [ವಶೀಕೃತ] ವಶಮಾಡಿಕೊಳ್ಳಲ್ಪಟ್ಟ, ವಶಪಡಿಸಿಕೊಳ್ಳಲಾದ

ವಸೀಯರಣೀ. ಸ್ತ್ರೀ: [**ವಶೀಕರಣೀ**] ವಶೀಕರಣ ವಿದ್ಯೆ

ವಸೀಹೂಅ. ವಿ: [**ವಶೀಭೂತ**] ವಶವಾದವನು, ಅಧೀನನಾದವನು(ಉಪ)

ವಸು. ನ: [**ವಸು**] ಧನ, ಹಣ, ಸಂಯಮ(ಆಚಾ), **ಪು:** ಜಿನದೇವ. ವೀತರಾಗ, ರಾಗ ರಹಿತನಾದವನು, ಸಂಯಮಿ, ಸಾಧು(ಆಚಾ), ಎಂಟರ ಸಂಖ್ಯೆ. ಧನಿಷ್ಠಾ ನಕ್ಷತ್ರದ ಅಧಿಪತಿ ದೇವತೆ. ಒಬ್ಬ ರಾಜನ ಹೆಸರು(ಪಉಮ), ಚತುರ್ದಶ ಪೂರ್ವದ ಒಬ್ಬ ಜೈನ ಮಹರ್ಷಿ, ಒಂದು ಛಂದಸ್ಸಿನ ಹೆಸರು. ಸ್ತ್ರೀ: ಈಶಾನೇಂದ್ರನ ಒಬ್ಬ ಪಟ್ಟದ ರಾಣಿ. **ನ:** ಲೋಕಾಂತಿಕ ದೇವರುಗಳ ಒಂದು ವಿಮಾನ. ಚಿನ್ನ(ಕಪ್ಪ). **–ಗುತ್ತಾ. ಸ್ತ್ರೀ:** [**–ಗುಪ್ತಾ**] ಈಶಾನೇಂದ್ರನ ಒಬ್ಬ ಪಟ್ಟದ ರಾಣಿ. **–ದೇವ. ಪು:** [**–ದೇವ**] ಒಂಬತ್ತನೇ ವಾಸುದೇವ ಶ್ರೀ ಕೃಷ್ಣ ಮತ್ತು ಬಲದೇವನ ತಂದೆ. **–ನಂದಯ. ಪು:** [**–ನಂದಕ**] ಒಂದು ಬಗೆಯ ಉತ್ತಮ ಖಡ್ಗ. **–ಪುಜ್ಜ. ಪು:** [**–ಪೂಜ್ಯ**] ಭಗವಾನ್ ವಾಸುಪೂಜ್ಯನ ತಂದೆಯಾದ ಒಬ್ಬ ದೊರೆ. **–ಬಲ. ಪು:** [**–ಬಲ**] ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ಒಬ್ಬ ರಾಜ. **–ಭಾಗ. ಪು:** [**–ಭಾಗ**] ಒಂದು ವ್ಯಕ್ತಿ–ವಾಚಕ ಹೆಸರು. **–ಭಾಗಾ. ಸ್ತ್ರೀ:** [**–ಭಾಗಾ**] ಈಶಾನೇಂದ್ರನ ಪಟ್ಟದ ರಾಣಿ. **–ಭೂಇ. ಪು:** [**–ಭೂತಿ**] ಒಬ್ಬ ಜೈನ ಮುನಿಯ ಹೆಸರು (ಪಉಮ). **–ಮ, –ಮಂತ್. ವಿ:** [**–ಮತ್**] ಹಣವುಳ್ಳ ಶ್ರೀಮಂತ. ಸಂಯಮಿ, ಸಾಧು(ಆಚಾ). **–ಮಿತ್ತಾ. ಸ್ತ್ರೀ:** [**–ಮಿತ್ರಾ**] ಈಶಾನೇಂದ್ರನ ಒಬ್ಬ ಅಗ್ರ ಮಹಿಷಿ. **–ಸದ್ದ. ಪು:** [**–ಶಬ್ದ**] ಒಂದು ಛಂದಸ್ಸು. **–ಹಾರಾ. ಸ್ತ್ರೀ:** [**–ಧಾರಾ**] ಆಕಾಶದಿಂದ ದೇವತೆಗಳು ಮಾಡಿದ ಸುವರ್ಣ ವೃಷ್ಟಿ, ಒಬ್ಬ ಶ್ರೇಷ್ಠಿನಿ(ಉಪ).

ವಸುಆ}. ಅಕ: [ಉದ್+ವಾ] ಒಣಗು. –'**ವಸುಆಇ, ವಸುಆಅ.**}. '**ವಸುಆಅಇ.**' ವ.ಕೃ: '**ವಸುಅಂತ**'

ವಸುಆಅ. ವಿ: [ಉದ್ವಾತ] ಶುಷ್ಕ, ಒಣಗಿದ(ಪಾಅ)

ವಸುಆಇಅ. ವಿ: [ಉದ್ವಾಪಿತ] ಒಣಗಿಸಲ್ಪಟ್ಟ

ವಸುಂಧರ. ಪು: [**ವಸುಂಧರ**] ಒಬ್ಬ ಜೈನಮುನಿ

ವಸುಂಧರಾ. ಸ್ತ್ರೀ: [**ವಸುಂಧರಾ**] ಪೃಥ್ವಿ, ಭೂಮಿ(ಪಾಅ), ಈಶಾನೇಂದ್ರನ ಒಬ್ಬ ಅಗ್ರ ಮಹಿಷಿ(ಣಾಯಾ), ಚಮರೇಂದ್ರನ ಸೋಮ ಮೊದಲಾದ ನಾಲ್ಕೂ ಲೋಕ ಪಾಲರ ಒಬ್ಬ ಪಟ್ಟದ ರಾಣಿಯ ಹೆಸರು (ಠಾ), ಒಬ್ಬ ದಿಕ್ಕುಮಾರಿ ದೇವಿ. ಒಂಬತ್ತನೇ ಚಕ್ರವರ್ತಿಯ ಪಟ್ಟದ ರಾಣಿ. ರಾವಣನ ಒಬ್ಬ ಹೆಂಡತಿ. ಒಬ್ಬ ಶ್ರೇಷ್ಠಿ ಪತ್ನಿ(ಉಪ). **–ವಇ. ಪು:** [**–ಪತಿ**] ಭೂಪತಿ ದೊರೆ.

ವಸುಧಾ.(ಶೌ). '**ವಸುಹಾ**' ಶಬ್ದವನ್ನು ನೋಡುವುದು.

ವಸುಪುಜ್ಜ. '**ವಾಸುಪುಜ್ಜ**' ಶಬ್ದವನ್ನು ನೋಡುವುದು.

ವಸುಮಇ–.}. ಸ್ತ್ರೀ: [**ವಸುಮತೀ**] ಪೃಥ್ವಿ, ಭೂಮಿ(ಉಪ),

ವಸುಮಈ}. ಭೀಮನೆಂಬ ಹೆಸರಿನ ರಾಕ್ಷಸ ರಾಜನ ಒಬ್ಬ ಅಗ್ರ ಮಹಿಷಿ, ಒಬ್ಬ ಇಂದ್ರಾಣಿ(ಠಾ). **–ಣಾಹ, –ನಾಹ. ಪು:** [**–ನಾಥ**] ದೊರೆ.**–ಭವಣ. ನ:** [**–ಭವನ**] ಭೂಮಿ–ಗೃಹ. **–ವಇ. ಪು:** [**–ಪತಿ**] ದೊರೆ

ವಸುಲ. ಪುಂಸ್ತ್ರೀ: [**ದೇ. ವೃಷಲ**] ನಿಷ್ಠುರತೆಯನ್ನು ಸೂಚಿಸುವ ಸಂಬೋಧನೆಯ ಶಬ್ದ, ಗೌರವ ಮತ್ತು ಕುತ್ಸಿತ ಅರ್ಥ ಸೂಚಿಸುವ ಸಂಬೋಧನೆಯ ಶಬ್ದ. ಸ್ತ್ರೀ: –ಲೀ.

ವಸುಹಾ. ಸ್ತ್ರೀ: [**ವಸುಧಾ**] ಪೃಥ್ವಿ, ಭೂಮಿ(ಪಾಅ), **–ಹಿವ. ಪು:** [**–ಧಿಪ**) ದೊರೆ, ಭೂಪತಿ

ವಸೂ. ಸ್ತ್ರೀ: [**ವಸೂ**] ಈಶಾನೇಂದ್ರನ ಒಬ್ಬ ಪಟ್ಟದ ರಾಣಿ(ಟ)

ವಸೇರೀ. ಸ್ತ್ರೀ: [ದೇ] ಅನ್ವೇಷಣೆ, ಹುಡುಕುವುದು (ಸುಪಾ)

ವಸ್ಸ(ಶೌ). '**ವರಿಸ**' ಶಬ್ದವನ್ನು ನೋಡುವುದು.

ವಸ್ಸ. ವಿ: [**ವಶ್ಯ**] ಅಧೀನವಾಗಿರುವ, ವಶವಾಗಿರುವ, ಅಂಕೆಗೊಳಿಸಲ್ಪಟ್ಟ

ವಸ್ಸೋಕ. ನ: [ದೇ] ಒಂದು ಬಗೆಯ ಕ್ರೀಡೆ

ವಹ. ಸಕ: [**ವಹ್**] ತಲುಪು, ಧರಿಸು, ಹೊರು, **ಅಕ:** ನಡೆ, ಗಮಿಸು. ವ. ಕೃ: '**ವಹಂತ**'

ವಹ. ಸಕ: [**ವಧ್, ಹನ್**] ಕೊಲ್ಲು, ಸಾಯಿಸು

ವಹ. ಸಕ: [**ವ್ಯಥ್**] ಪೀಡಿಸು, ಹಿಂಸಿಸು, ಹೊಡೆ(ಣಾ)

ವಹ.(ಅಪ). '**ವರಿಸ=ವೃಷ್**' ಶಬ್ದವನ್ನು ನೋಡುವುದು.

ವಹ. ಪುಂಸ್ತ್ರೀ: [**ವಧ**] ಕೊಲೆ, ಹತ್ಯೆ(ಉವಾ). **–ಕಾರೀ. ಸ್ತ್ರೀ:** [**–ಕರೀ**] ಒಂದು ವಿದ್ಯೆ, ಸ್ತ್ರೀ: –ಹಾ.

ವಹ. ಪು: [ದೇ] ಹೆಗಲ ಮೇಲಿನ ಹುಣ್ಣು, ಗಾಯ(ದೇ)

ವಹ. ಪು: [ವಹ] ಹೋರಿಯ ಡುಬ್ಬು, ವೃಷಸ್ಕಂಧ (ವಿಪಾ), ನೀರಿನ ಪ್ರವಾಹ, ಹರಿವು
ವಹ. ಪು: [ವ್ಯಥ] ಛಡಿ ಅಥವಾ ಬೆತ್ತದ ಏಟು
-ವಹ. 'ಪಹ=ಪಥಿನ್' ಶಬ್ದವನ್ನು ನೋಡುವುದು.
ವಹಇಅ. ವಿ: [ದೇ] ಪರ್ಯಾಪ್ತ, ಸಾಕಷ್ಟು, ಸಾಕಾಗುವಷ್ಟು,
ವಹಗ. ವಿ: [ವಧಕ] ಘಾತಕ, ಹಿಂಸಕ, ಕೊಲ್ಲುವವನು, ವಧಿಸುವವನು(ಸುಪಾ)
ವಹಗ. ವಿ: [ವ್ಯಥಕ] ಏಟು ಕೊಡುವವನು, ಹೊಡೆಯುವವನು
ವಹಡ. ಪು: [ದೇ] ದಂಡಿಸಲು ಯೋಗ್ಯವಾದ ಹೋರಿಕರು, ದಂಡಿಸಬೇಕಾದ ಹೋರಿಕರು
ವಹಢೋಲ. ಪು: [ದೇ] ವಾಯು ಸಮೂಹ, ಸುಂಟರಗಾಳಿ
ವಹಣ. ನ: [ವಧನ] ವಧೆ, ಹತ್ಯೆ, ಕೊಲೆ(ಸುಪಾ)
ವಹಣ. ನ: [ವಹನ] ಹೊರುವುದು, ಹರಿಗೋಲು, ತೆಪ್ಪ, ಗಾಡಿಯೇ ಮೊದಲಾದ ವಾಹನ(ಉತ್ತ), ವಿ: ಹೊರುವವನು
ವಹಣ(ಶೌ). 'ಪಗಯು=ಪ್ರಕೃತ' ಶಬ್ದವನ್ನು ನೋಡುವುದು.
ವಹಣ.(ಅಪ). 'ವಸಣ=ವಸನ' ಶಬ್ದವನ್ನು ನೋಡುವುದು.
ವಹಣಯಾ. ಸ್ತ್ರೀ: [ವಹನಾ] ಒಂದು ಕಾರ್ಯವನ್ನು ನೆರವೇರಿಸುವುದು
ವಹಣಾ. ಸ್ತ್ರೀ: [ವಧನಾ] ವಧೆ, ಕೊಲೆ, ಹಿಂಸೆ
ವಹಣ್ಣು. ಪು: [ವ್ಯಥಜ್ಞ] ಒಂದು ನರಕ-ಸ್ಥಳ
ವಹಯ. ವಹಗ=ವಧಕ' ಶಬ್ದವನ್ನು ನೋಡುವುದು.
ವಹಲೀಅ. 'ವಹಲೀಯ' ಶಬ್ದವನ್ನು ನೋಡುವುದು.
ವಹಾ. ವಹ=ವಧ' ಶಬ್ದವನ್ನು ನೋಡುವುದು.
ವಹಾವ. ಸಕ: [ವಾಹಯ್] ಹೊರಿಸು, ಹೇರು
ವಹಾವಿಅ. ವಿ: [ವಧಿತ] ಕೊಲ್ಲಿಸಲ್ಪಟ್ಟ, ವಧೆಮಾಡಿಸಲ್ಪಟ್ಟ
-ವಹಾವಿಅ. 'ಪಹಾವಿಅ' ಶಬ್ದವನ್ನು ನೋಡುವುದು.
ವಹಿಅ. ವಿ: [ವ್ಯಥಿತ] ಪೀಡಿತ, ಹಿಂಸಿಸಲ್ಪಟ್ಟ
ವಹಿಅ. ವಿ: [ಊಢ] ಹೊರಿಸಲ್ಪಟ್ಟ
ವಹಿಅ. ವಿ: [ವಧಿತ] ವಧಿಸಲ್ಪಟ್ಟವನು(ವಿಪಾ)
ವಹಿಅ. ವಿ: [ದೇ] ನೋಡಲ್ಪಟ್ಟ, ಅವಲೋಕಿಸಲ್ಪಟ್ಟ
ವಹಿಇಅ. 'ವಹಇಅ.' ಶಬ್ದವನ್ನು ನೋಡುವುದು.
ವಹಿಚರ. ಅಕ: [ವ್ಯಭಿ+ಚರ್] ಪರಪುರುಷ ಇಲ್ಲವೆ ಪರಸ್ತ್ರೀಯನ್ನು ಸಂಭೋಗಿಸು, **ಸಕ:** ನಿಯಮವನ್ನು ಮುರಿ.
ವಹಿಚಾರ. ಪು: [ವ್ಯಭಿಚಾರ]. ಪರಪುರುಷ ಇಲ್ಲವೆ ಪರಸ್ತ್ರೀಯೊಂದಿಗೆ ಸಂಭೋಗ, ನ್ಯಾಯಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಹೇತು-ದೋಷ.
ವಹಿಯಾ. ಸ್ತ್ರೀ: [ದೇ] ಲೆಕ್ಕ ಬರೆದಿಡುವ ಪುಸ್ತಕ(ಸುಪಾ)
ವಹಿಂಯಾಲೀ. 'ವಾಹಿಂಯಾಲೀ' ಶಬ್ದವನ್ನು ನೋಡುವುದು.
ವಹಿಲಗ. ಪು: [ದೇ. **ವಹಿಲಕ**] ಒಂಟೆ, ಎತ್ತು ಮೊದಲಾದ ಪ್ರಾಣಿಗಳು
ವಹಿಲ್ಲ. ವಿ: [ದೇ] ಶೀಘ್ರ, ಬೇಗನೆ, ತ್ವರೆಯಿಂದ(ಕುಮಾ)
ವಹು. ಪುಂಸ್ತ್ರೀ: [ದೇ.] ಒಂದು ಬಗೆಯ ಗಂಧ ದ್ರವ್ಯ
ವಹು-. 'ವಹೂ' ಶಬ್ದವನ್ನು ನೋಡುವುದು.
ವಹುಧಾರಿಣೀ. ಸ್ತ್ರೀ: [ದೇ] ಮದುಮಗಳು, ಹೊಸದಾಗಿ ಮದುವೆಯಾದವಳು
ವಹುಣ್ಣೀ. ಸ್ತ್ರೀ: [ದೇ] ಗಂಡನ ಅಣ್ಣನ ಹೆಂಡತಿ(ದೇ)
ವಹುಮಾಸ. ಪು: [ದೇ] ಒಂದು ಬಗೆಯ ರಮಿಸುವ ಕ್ರೀಡೆ; ಇದರಲ್ಲಿ ಕ್ರೀಡಿಸುತ್ತಿರುವ ವರ ಮದುಮಗಳ ಮನೆಯಿಂದ ಹೊರಗೆ ಹೋಗುವುದಿಲ್ಲ.
ವಹುರಾ. ಸ್ತ್ರೀ: [ದೇ] ನರಿ.
ವಹುಲಿಆ(ಅಪ). ಸ್ತ್ರೀ: [**ವಧೂಟಿಕಾ**] ಪ್ರಾಯದ ಹೆಂಗಸು, ಯುವತಿ
ವಹುವ್ವಾ. ಸ್ತ್ರೀ: [ದೇ] ಕಿರಿಯ ಅತ್ತೆ
ವಹುಹಾಡಿಣೀ. ಸ್ತ್ರೀ: [ದೇ] ಒಬ್ಬಳು ಇದ್ದಾಗಲೇ ಮದುವೆ ಮಾಡಿಕೊಳ್ಳಲಾಗುತ್ತಿರುವ ಇನ್ನೊಬ್ಬ ಹೆಣ್ಣು
ವಹೂ. ಸ್ತ್ರೀ: [**ವಧೂ**] ಹೆಂಗಸು, ಹೆಂಡತಿ, ಮದುವಣಗಿತ್ತಿ (ಸ್ವಪ್ನ)
ವಹೋಲ}. ಪು: [ದೇ] ನೀರಿನ ಸಣ್ಣ ಪ್ರವಾಹ
ವಹೋಲಿಯಾ}.ಸ್ತ್ರೀ [ದೇ]
ವಾ. ಅಕ: [ವಾ] ನಡೆ, ಗಮಿಸು
ವಾ. ಅಕ: [ವೈ, ಮ್ಲೈ] ಒಣಗು,
ವಾ. ಸಕ: [ವ್ಯೇ] ನೇಯು
ವಾ. ಅ: [ವಾ] ವಿಕಲ್ಪ(ಅಥವಾ), ಸಮುಚ್ಚಯ (ಮತ್ತು,

ಹಾಗೂ), ಸಾದೃಶ್ಯ, ನಿಶ್ಚಯ, ಅವಧಾರಣೆ ಊಹೆ, ವಿತರ್ಕ, ಈ ಅರ್ಥಗಳನ್ನು ಸೂಚಿಸುವ ಅವ್ಯಯ ಮತ್ತು ಪಾದಪೂರಣವಾಗಿ ಬಳಕೆಯಾಗುತ್ತದೆ.

ವಾಅಡ. ಪು: [ದೇ] ಶುಕ, ಗಿಳಿ(ಷಡ್)

ವಾಅಡ. **'ವಾವಡ=ವ್ಯಾಪೃತ'** ಶಬ್ದವನ್ನು ನೋಡುವುದು.

ವಾಇ. ವಿ: **[ವಾದಿನ್]** ಮಾತನಾಡುವವನು, ಹೇಳುವವನು(ಆಚಾ), ಶಾಸ್ತ್ರಾರ್ಥದಲ್ಲಿ ಪೂರ್ವಪಕ್ಷವನ್ನು ಪ್ರತಿಪಾದಿಸುವ ವಾದಿ. ದಾರ್ಶನಿಕ, ಇತರ ಧರ್ಮದ ಅನುಯಾಯಿ.

ವಾಇ. ವಿ: **[ವಾಚಿನ್]** ವಾಚಕ, ಹೇಳುವ, ತಿಳಿಸುವ, ಅರ್ಥವನ್ನು ಕೊಡುವ

ವಾಇ. **'ವಾಜಿ'** ಶಬ್ದವನ್ನು ನೋಡುವುದು.

ವಾಇಅ. ವಿ: **[ವಾಚಿಕ]** ವಚನಕ್ಕೆ ಸಂಬಂಧಿಸಿದ (ಔಪ), ಮಾತಿಗೆ ಸಂಬಂಧಿಸಿದ

ವಾಇಅ. ವಿ: **[ವಾಚಿತ]** ಓದಿಸಲ್ಪಟ್ಟ, ಕಲಿಸಲ್ಪಟ್ಟ, ಓದಿದ,

ವಾಇಅ. ವಿ: **[ವಾತಿಕ]** ವಾತದೋಷದಿಂದ ಹುಟ್ಟುವ, ವಾಯು–ಜನ್ಯ(ಭಗ), ವಾತರೋಗವುಳ್ಳ, ಉತ್ಕರ್ಷವುಳ್ಳ, ನಪುಂಸಕರಲ್ಲಿ ಒಂದು ಪ್ರಭೇದ,

ವಾಇಅ. ವಿ: **[ವಾದಿತ]** ನುಡಿಸಲ್ಪಟ್ಟ, ಬಾರಿಸಲ್ಪಟ್ಟ (ವಾದ್ಯ), ನಮಸ್ಕರಿಸಲ್ಪಟ್ಟ,

ವಾಇಅ. ನ: **[ವಾದ್ಯ]** ನುಡಿಸಲು(ಬಾರಿಸಲು) ಯೋಗ್ಯವಾದ ಸಾಧನ, ವಾದ್ಯ, ನುಡಿಸುವ (ಬಾರಿಸುವ) ಕಲೆ,

ವಾಇಅ. ವಿ: **[ವಾತ]** ಹರಿಯ ಬಿಟ್ಟ, ಮುಂದೆ ಸಾಗಿದ,

ವಾಇಂಗಣ. ನ: [ದೇ] ಬದನೆಕಾಯಿ(ಉಪ)

ವಾಇಂಗಣೀ}. ಸ್ತ್ರೀ: [ದೇ] ಬದನೆ ಗಿಡ

ವಾಇಂಗಿಣೀ}.

ವಾಇಗಾ(ದೇ). **'ವಾಇಯಾ'** ಶಬ್ದವನ್ನು ನೋಡುವುದು.

ವಾಇತ್ತ. ನ: [ವಾದಿತ್ರ] ನುಡಿಸುವ(ಬಾರಿಸುವ)ವಾದ್ಯ,

ವಾಇದ್ಧ. ವಿ: [ವ್ಯಾವಿದ್ಧ] ಅಸ್ತವ್ಯಸ್ತವಾಗಿ ಇಡಲಾಗಿರುವ

ವಾಇದ್ಧ. ವಿ: [ವ್ಯಾದಿಗ್ಧ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ, ವಕ್ರ, ಡೊಂಕಾದ(ಭಗ)

ವಾಇಮ. **'ವಾ=ವ್ಯೆ'** ಶಬ್ದವನ್ನು ನೋಡುವುದು.

ವಾಇಯವ್ವ. **ವಾಯ=ವಾದಯ್'** ಶಬ್ದವನ್ನು ನೋಡುವುದು.

ವಾಈಕರಣ. **'ವಾಜೀಕರಣ'** ಶಬ್ದವನ್ನು ನೋಡುವುದು.

ವಾಉ. ಪು: [ವಾಯು] ಗಾಳಿ, ಪವನ, ವಾಯು ಶರೀರದಿಂದ ಕೂಡಿದ ಜೀವ(ಅಣ), ಒಂದು ಮುಹೂರ್ತ, ಸೌಧರ್ಮೇಂದ್ರನ ಅಶ್ವ ಸೈನ್ಯದ ಅಧಿಪತಿ ದೇವ. ಒಂದು ನಕ್ಷತ್ರ, ಸ್ವಾತಿ ನಕ್ಷತ್ರದ ಅಧಿಪತಿ–ದೇವತೆ(ಠಾ). **–ಆಯ. ಪು: [–ಕಾಯ]** ಬಿರುಗಾಳಿ, ಚಂಡ ಮಾರುತ, ವಾಯು ಶರೀರವುಳ್ಳ ಜೀವ(ಭಗ), **–ಕಾಇಯ. ಪು: [–ಕಾಯಿಕ]** ವಾಯು ಶರೀರದ ಜೀವ. **–ಕಾಯ. '–ಆಯ'** ಶಬ್ದವನ್ನು ನೋಡುವುದು. **–ಕುಮಾರ. ಪು: [–ಕುಮಾರ]** ಭವನಪತಿ ದೇವರುಗಳ ಒಂದು ಒಳ ಜಾತಿ. ಹನುಮಂತನ ತಂದೆ. **–ಕ್ಕಲಿಯಾ.** ಸ್ತ್ರೀ: **[–ತ್ಕಲಿಕಾ]** ಕೆಳಭಾಗದಲ್ಲಿ ಹರಿಯುವ ಗಾಳಿ. **–ಕ್ಕಾಇಯ. '–ಕಾಇಯ'** ಶಬ್ದವನ್ನು ನೋಡುವುದು. **–ಕ್ಕಾಯ. '–ಆಯ'** ಶಬ್ದವನ್ನು ನೋಡುವುದು. **–ತ್ತರವಡಿಂಸಗ. ಪುಂನ:** [–**ಉತ್ತರಾವತಂಸಕ**] ಒಂದು ದೇ ವಿಮಾನ. **–ಪವೇಸ. ಪು:** [**–ಪ್ರವೇಶ**] ಕಿಟಕಿ, ಬೆಳಕಿಂಡಿ. **–ಪ್ಪಇಟ್ಠಾಣ.** ವಿ: [**–ಪ್ರತಿಷ್ಠಾನ**] ಗಾಳಿಯ ಆಧಾರದಿಂದ ಜೀವಿಸಿರುವವನು. **–ಭೂಇ. ಪು:** [**–ಭೂತಿ**] ಭಗವಾನ್ ಮಹಾವೀರನ ಒಬ್ಬ ಗಣಧರ.

ವಾಉ. ಪು: [ದೇ] ಕಬ್ಬು(ದೇ)

–ವಾಉಡ. ವಿ: **[ಪ್ರಾವೃತ]** ಆವರಿಸಲ್ಪಟ್ಟ, ಆಚ್ಛಾದಿಸಲ್ಪಟ್ಟ, ಮುಚ್ಚಲ್ಪಟ್ಟ, **ನ:** ವಸ್ತ್ರ, ಬಟ್ಟೆ(ಠಾ)

ವಾಉತ್ತ. ಪು: [ದೇ] ವಿಟ, ಜಾರ(ದೇ)

ವಾಉಪ್ಪಇಯಾ. ಸ್ತ್ರೀ: [ದೇ. **ವಾತೋತ್ಪತಿಕಾ**] ಭುಜದಿಂದ ಚಲಿಸುವ ಪ್ರಾಣಿ(ಹಾವು) ಒಂದು ಜಾತಿ(ಪಣ್ಣ)

ವಾಉಬ್ಭಾಮ. ಪು: **[ವಾತೋದ್ಭ್ರಾಮ]** ಅಸ್ಥಿರವಾದ ಗಾಳಿ(ಪಣ್ಣ)

ವಾಉಯ. ವಿ: [ವ್ಯಾಪೃತ] ಒಂದು ಕೆಲಸದಲ್ಲಿ ತೊಡಗಿರುವವನು(ಣಾಯಾ)

ವಾಉರಾ. ಸ್ತ್ರೀ: [ವಾಗುರಾ] ಪ್ರಾಣಿಗಳನ್ನು ಹಿಡಿಯುವ ಬಲೆ, **'ವಾಗ್ಗುರಾ'** ಶಬ್ದವನ್ನು ನೋಡುವುದು.

ವಾಉರಿಯ. ವಿ: [ವಾಗುರಿಕ] ವ್ಯಾಧ, ಪ್ರಾಣಿಗಳನ್ನು ಬಲೆಯಲ್ಲಿ ಹಿಡಿಯುವ ಕಾರ್ಯದವನು(ಪಣ್ಣ)

ವಾಉಲ. ವಿ: [**ವ್ಯಾಕುಲ**] ಗಾಬರಿಗೊಂಡ, ಚಿಂತೆಗೊಳಗಾದ(ಉವ), **ಪು:** ಕ್ಷೋಭೆ. **ವ್ಯಾಉಲೀಹೂಅ.** ವಿ:[**ವ್ಯಾಕುಲೀಭೂತ**] ವ್ಯಾಕುಲಗೊಳಿಸಲ್ಪಟ್ಟ, ಚಿಂತಿತನಾಗಿಸಲ್ಪಟ್ಟ
ವಾಉಲ.ವಿ:[**ವಾತೂಲ**] ವಾತರೋಗಿ, ಉನ್ಮತ್ತ, ಹುಚ್ಚ **ಪು:** ವಾತ ಸಮೂಹ
ವಾಉಲಗ್ಗ. ನ: [**ದೇ**] ಸೇವೆ, ಭಕ್ತಿ.
ವಾಉಲಣ. ನ: [**ವ್ಯಾಪರಣ**] ಆವರಿಸಲ್ಪಟ್ಟ ವ್ಯಾಪಾರ
ವಾಉಲಣಾ. ಸ್ತ್ರೀ: [**ವ್ಯಾಕುಲನಾ**] ವ್ಯಾಕುಲ ಗೊಳಿಸುವುದು, ಗಾಬರಿಗೊಳಿಸುವುದು
ವಾಉಲಿಅ. ವಿ: [**ವಾಕುಲಿತ**] ವ್ಯಾಕುಲಗೊಳಿಸಲ್ಪಟ್ಟ, ಕ್ಷೋಭೆಗೊಳಗಾದ(ಪಣ್ಣ)
ವಾಉಲಿಆ. ಸ್ತ್ರೀ: [**ದೇ**] ಸಣ್ಣ ಕಂದಕ.
ವಾಉಲ್ಲ. **ವಾಉಲ=ವ್ಯಾಕುಲ**
ವಾಉಲ್ಲ. ವಿ: [**ದೇ. ವಾತೂಲ**] ವಾಚಾಳಿ, ಮಾತಾಳಿ, ಹರಟೆಕೋರ(ಪಾಅ)
ವಾಉಲ್ಲಅ. **ಪುಂನ:** [**ದೇ**] ಪುತ್ಥಳಿ, ಮೂರ್ತಿ
ವಾಉಲ್ಲಆ}. ಸ್ತ್ರೀ: [**ದೇ**] **'ವಾಉಲ್ಲಯಾ, ವಾಉಲ್ಲೀ'**
ವಾಉಲ್ಲೀ}. ಶಬ್ದಗಳನ್ನು ನೋಡುವುದು.
ವಾಊಲ. **'ವಾಉಲ=ವಾತೂಲ'** ಶಬ್ದವನ್ನು ನೋಡುವುದು.
ವಾಊಲ. **'ವಾಉಲ=ವ್ಯಾಕುಲ'** ಶಬ್ದಗಳನ್ನು ನೋಡುವುದು.
ವಾಊಲಿಅ. ವಿ: [**ವಾತೂಲಿತ**] ವಾತ ರೋಗವನ್ನು ಸಹಿಸದ ಹಾಗೆ ಮಾಡಲ್ಪಟ್ಟಿರುವ, ನಾಸ್ತಿಕ
ವಾಏ. ಸಕ: [**ವಾದಯ್**] ನುಡಿಸು(ಬಾರಿಸು), **ವ. ಕೃ:** **'ವಾಏಂತ'**
ವಾಏ. ಸಕ: [**ವಾಚಯ್**] ಓದಿಸು. ಕಲಿಸು, ಓದು
ವಾಏರಿಅ. ವಿ: [**ವಾತೇರಿತ**] ಗಾಳಿಯಿಂದ ಪ್ರೇರಿತವಾದ (ಗಾ)
ವಾಏಸರೀ. ಸ್ತ್ರೀ: [**ವಾಗೀಶ್ವರೀ**] ಸರಸ್ವತಿ ದೇವಿ
ವಾಓಲಿ}. ಸ್ತ್ರೀ: [**ವಾತಾಲಿ, -ಲೀ**] ವಾಯುವಿನ
ವಾಓಲೀ}. ಸಮೂಹ(ಗಉಡ)
ವಾಕ}.. **'ವಕ್ಕ=ವಲ್ಕ'** ಶಬ್ದಗಳನ್ನು ನೋಡುವುದು.
ವಾಗ}
ವಾಗಡ. **ಪು:** [**ವಾಗಡ**] ಈಗಲೂ **'ವಾಗಡ'** ಎಂದೇ ಕರೆಯಲಾಗುತ್ತಿರುವ ಗುಜರಾತಿನ ಒಂದು ಪ್ರಾಂತ
ವಾಗಡಿಅ. ವಿ: [**ವ್ಯಾಕೃತ**] ಪ್ರಕಟಗೊಳಿಸಲ್ಪಟ್ಟ, ನಾಸ್ತಿಕ
ವಾಗರ. ಸಕ: [**ವ್ಯಾ+ಕೃ**] ಪ್ರತಿಪಾದಿಸು. **'ವಾಗರೇಇ'**
ವಾಗರಣ. ನ: [**ವ್ಯಾಕರಣ**] ಕಥನ, ಪ್ರತಿಪಾದನೆ, ಉಪದೇಶ, ಶಬ್ದ ನಿಷ್ಪತ್ತಿಯನ್ನು ಹೇಳುವ ಶಬ್ದಶಾಸ್ತ್ರ, ನಿರ್ವಚನ(ಔಪ)
ವಾಗರಣಿ. ವಿ: [**ವ್ಯಾಕರಣಿನ್**] ಪ್ರತಿಪಾದಿಸುವವನು,
ವಾಗರಣೀ. ಸ್ತ್ರೀ: [**ವ್ಯಾಕರಣೀ**] ಭಾಷೆಯ ಒಂದು ಪ್ರಭೇದ, ಪ್ರಶ್ನೆಗೆ ಉತ್ತರದ ಭಾಷೆ
ವಾಗರಿಯ. ವಿ: [**ವ್ಯಾಕೃತ**] ಹೇಳಿದ, ಉಕ್ತ. **'ವಾಯಡ=ವ್ಯಾಕೃತ'** ಶಬ್ದಗಳನ್ನು ನೋಡುವುದು.
ವಾಗಲ. ನ: [**ವಲ್ಕಲ**] ಮರದ ತೊಗಟೆ.
ವಾಗಲ. ನ: [**ವಾಲ್ಕಲ**] ಮರದ ತೊಗಟೆಯಿಂದ ತಯಾರಿಸಿದ್ದು
ವಾಗಲೀ. ಸ್ತ್ರೀ: [**ದೇ**] ಒಂದು ಬಳ್ಳಿ(ಪಣ್ಣ)
ವಾಗಿಲ್ಲ. ವಿ: [**ವಾಗ್ಮಿನ್**] ಮಾತಿನ ಚಾತುರ್ಯವುಳ್ಳವನು, ವಾಚಾಳಿ(ವವ)
ವಾಗುರ. **ಪು:** [**ವಾಗುರಾ**] ಮೃಗಗಳನ್ನು ಹಿಡಿಯುವ ಬಲೆ
ವಾಗುರಿ}. ವಿ: [**ವಾಗುರಿನ್, -ರಿಕ**] **'ವಾಉರಿಯ'**
ವಾಗುರಿಯ}. ಶಬ್ದವನ್ನು ನೋಡುವುದು(ವಿಪಾ)
ವಾಘಾಇಅ. ವಿ: [**ವ್ಯಾಘಾತಿಕ**] ವ್ಯಾಘಾತದಿಂದ ಹುಟ್ಟಿದ, ವಿಘ್ನ, ತಡೆ, ವಿನಾಶ ಇವುಗಳಿಂದ ಹುಟ್ಟಿದ
ವಾಘಾಇಮ. ವಿ: [**ವ್ಯಾಘಾತಿಮ**] ವ್ಯಾಘಾತದಿಂದ ಆಗುವ, **ನ:** ಸಿಂಹ, ಕಾಡುಕಿಚ್ಚು ಇತ್ಯಾದಿಗಳಿಂದ ಉಂಟಾಗುವ ಸಾವು(ಔಪ)
ವಾಘಾಯ. **ಪು:** [**ವ್ಯಾಘಾತ**] ಹೊಡೆತ, ಜಾರುವುದು, ತಡೆ, ಅಡ್ಡಿ(ಭಗ), ಸಿಂಹ, ಕಾಡುಕಿಚ್ಚು ಮೊದಲಾದವುಗಳಿಂದ ಉಂಟಾಗುವ ಸೋಲು (ಔಪ)
ವಾಘಾರಿಯ. ವಿ: [**ವ್ಯಾಘಾರಿತ**] ಉದ್ದವಾದ
ವಾಘುಣ್ಣಿಯ. ವಿ: [**ವ್ಯಾಘೂರ್ಣಿತ**] ಡೋಲಾಯಮಾನ, ವೇಗವಾಗಿ ತಿರುಗಿಸಲ್ಪಟ್ಟ
ವಾಘೇಲ. **ಪು:** [**ದೇ**] ಒಂದು ಕ್ಷತ್ರಿಯ ವಂಶ.
ವಾಚ. **'ವಾಯ=ವಾಚಯ್'** ಶಬ್ದವನ್ನು ನೋಡುವುದು.
ವಾಚಯ. **'ವಾಯಗ=ವಾಚಕ'** ಶಬ್ದವನ್ನು ನೋಡುವುದು.

ವಾಚಂಯ. 'ವಾಇಅ=ವಾಚಿತ' ಶಬ್ದವನ್ನು ನೋಡುವುದು.
ವಾಜ. 'ವಾಯ=ವ್ಯಾಜ' ಶಬ್ದವನ್ನು ನೋಡುವುದು.
ವಾಜಿ. ಪು: [ವಾಜಿನ್] ಕುದುರೆ, ಅಶ್ವ(ವಿಪಾ)
ವಾಜೀಕರಣ. ನ: [ವಾಜೀಕರಣ] ವೀರ್ಯ-ವರ್ಧಕ ಔಷಧ, ಅದನ್ನು ಪ್ರತಿಪಾದಿಸುವ ಶಾಸ್ತ್ರ, ಆಯುರ್ವೇದದ ಒಂದು ಅಂಗ(ವಿಪಾ)
ವಾಡ. ಪು: [ವಾಟ] ಬೇಲಿ, ಬೇಲಿ ಇರುವ ಜಾಗ, ಬೇಲಿಯಿಂದ ಸುತ್ತುವರಿಯಲ್ಪಟ್ಟ ಸ್ಥಳ. ಬೇಲಿಯಿಂದ ಸುತ್ತುವರಿಯಲ್ಪಟ್ಟ ಮನೆಗಳ ಗುಂಪು, ಮೊಹಲ್ಲಾ.
ವಾಡಂತರಾ. ಸ್ತ್ರೀ: [ದೇ] ಕುಟೀರ, ಗುಡಿಸಿಲು.
ವಾಡಗ. 'ವಾಡ' ಶಬ್ದವನ್ನು ನೋಡುವುದು.
-ವಾಡಣ. 'ಪಾಡಣ' ಶಬ್ದವನ್ನು ನೋಡುವುದು.
ವಾಡವ. ಪು: [ವಾಡವ] ಬಡಬಾನಲ. ಕಾಡುಕಿಚ್ಚು, ಸಮುದ್ರ ಮಧ್ಯದಲ್ಲಿ ಏಳುವ ಬೆಂಕಿ
ವಾಡಹಾಣಗ. ಪುಂನ: [ವಾಟಧಾನಕ] ಒಂದು ಸಣ್ಣ ಹಳ್ಳಿ, ವಿ: ಆ ಹಳ್ಳಿಯ ನಿವಾಸಿಗಳು.
ವಾಡಿ-. 'ವಾಡೀ=ವಾಟೀ' ಶಬ್ದವನ್ನು ನೋಡುವುದು (ಗಾ)
ವಾಡಿಆ. ಸ್ತ್ರೀ: [ವಾಟಿಕಾ] ಉದ್ಯಾನ, ತೋಟ(ಗಾ)
ವಾಡಿಮ. ಪು: [ದೇ] ಖಡ್ಗ ಮೃಗ(ದೇ)
ವಾಡಿಲ್ಲ. ಪು: [ದೇ] ಕ್ರಿಮಿ, ಕೀಟ(ದೇ)
ವಾಡೀ. ಸ್ತ್ರೀ: [ದೇ] ಬೇಲಿ, ಆವರಣ(ಕುಪ್ರ)
ವಾಡೀ. ಸ್ತ್ರೀ: [ಘಾಟೀ] ಉದ್ಯಾನ, ತೋಟ.
ವಾಢಿ}. ಪು: [ದೇ] ವೈಶ್ಯ-ಮಿತ್ರ, ವಾಪಾರಿ-ಗೆಳೆಯ ವಾಢಿಅ}.
ವಾಣ. ಸಕ: [ವಿ+ನವ್] ವಿಶೇಷ ನಮನ, ನಮಸ್ಕರಿಸುವುದು
ವಾಣ. ವಿ: [ವಾನ] ವನದಲ್ಲಿ ಹುಟ್ಟಿದ, ವನಕ್ಕೆ ಸಂಬಂಧಿಸಿದ(ಔಪ). -ಪತ್ಥ, -ಪ್ಪತ್ಥ. ಪು: [-ಪ್ರಸ್ಥ] ಕಾಡಿನಲ್ಲಿ ವಾಸಿಸುವ ತಾಪಸ, ಮೂರನೇ ಆಶ್ರಮವಾದ ವಾನಪ್ರಸ್ಥದಲ್ಲಿರುವ(ಔಪ). -ಮಂತ, -ಮಂತರ, - ವಂತರ. ಪುಂಸ್ತ್ರೀ: [-ವ್ಯಂತರ] ದೇವತೆಗಳ ಒಂದು ಜಾತಿ(ಭಗ). ಸ್ತ್ರೀ: -ರೀ(ಪಣ್ಣ). -ವಾಸಿಆ. ಸ್ತ್ರೀ: [-ವಾಸಿಕಾ] ಒಂದು ಛಂದಸ್ಸು.
-ವಾಣ. 'ಪಾಣ=ಪಾನ' ಶಬ್ದವನ್ನು ನೋಡುವುದು. -ವತ್ತ. ನ: [-ಪಾತ್ರ] ಕುಡಿಯುವ ಬಟ್ಟಲು.
ವಾಣಯ. ಪು: [ದೇ] ಬಳೆ ಮಾಡುವವನು,
ವಾಣರ. ಪುಂನ: [ವಾನರ] ಕಪಿ, ಕೋತಿ(ಪಣ್ಣ), ವಿದ್ಯಾಧರ ಮನುಷ್ಯರ ಒಂದು ವಂಶ, ವಾನರ ವಂಶದಲ್ಲಿ ಹುಟ್ಟಿದ(ಪಉಮ). -ಉರೀ. ಸ್ತ್ರೀ: [-ಪುರೀ] ಕಿಷ್ಕಿಂಧೆ ಎಂಬ ಹೆಸರಿನ ಒಂದು ಭಾರತದ ಪ್ರಾಚೀನ ನಗರಿ. -ಕೇಉ. ಪು: [-ಕೇತು] ವಾನರ ವಂಶದ ಯಾರಾದರೂ ಒಬ್ಬ ರಾಜ. -ದೀವ. ಪು: [-ದ್ವೀಪ]. ಒಂದು ದ್ವೀಪ -ದ್ಧಯ. ಪು: [-ಧ್ವಜ] ಹನುಮಂತ. -ವಇ. ಪು: [-ಪತಿ] ರಾಮಚಂದ್ರನ ಒಬ್ಬ ಸೇನಾಧಿಪತಿ'-ವಾನರ' ಶಬ್ದವನ್ನು ನೋಡುವುದು.
ವಾಣರಿಂದ. ಪು: [ವಾನರೇಂದ್ರ] ವಾನರರ ದೊರೆ, ವಾಲಿ(ಪಉಮ)
ವಾಣವಾಲ. ಪು: [ದೇ] ಇಂದ್ರ, ಪುರಂದರ(ದೇ)
ವಾಣಹಾ. 'ಪಾಣಹಾ, ವಾಹಣಾ=ಉಪಾನಹ್' ಶಬ್ದವನ್ನು ನೋಡುವುದು.
ವಾಣಾ. 'ವಾಯಣಾ=ವಾಚನಾ' ಶಬ್ದವನ್ನು ನೋಡುವುದು. -ಯರಿಅ. ಪು: [-ಚಾರ್ಯ] ಅಧ್ಯಾಪನ ಮಾಡುವ ಸಂನ್ಯಾಸಿ, ಶಿಕ್ಷಕ(ಉಪ)
ವಾಣಾರಸೀ. ಸ್ತ್ರೀ: [ವಾರಾಣಸೀ] ಈಗ ಬನಾರಸ್ ಎಂದು ಕರೆಯಲಾಗುತ್ತಿರುವ ಭಾರತದ ಒಂದು ಪ್ರಾಚೀನ ನಗರಿ(ಣಾಯಾ)
ವಾಣೀ. 'ವಾಣಿ=ವಣಿಜ್' ಶಬ್ದವನ್ನು ನೋಡುವುದು. -ಉತ್ತ, -ಪುತ್ತ. ಪು: [-ಪುತ್ತ] ವ್ಯಾಪಾರಿಯ ಮಗ, ವೈಶ್ಯ-ಪುತ್ರ(ಕುಪ್ರ)
ವಾಣಿ. ಸ್ತ್ರೀ: [ವಾಣಿ] 'ವಾಣೀ' ಶಬ್ದವನ್ನು ನೋಡುವುದು.
ವಾಣಿಅ. ಪು: [ವಾಣಿಜ] ವ್ಯಾಪಾರಿ, ವೈಶ್ಯ(ಮೃಚ್ಛ), ಒಂದು ಹಳ್ಳಿಯ ಹೆಸರು(ಉವಾ)
ವಾಣಿಅ(ಅಪ). 'ವಾಣಿಜ್ಜ' ಶಬ್ದವನ್ನು ನೋಡುವುದು.
-ವಾಣಿಅ. 'ಪಾಣಿಅ=ಪಾನೀಯ' ಶಬ್ದವನ್ನು ನೋಡುವುದು.
ವಾಣಿಅಯ. ಪು: [ವಾಣಿಜಕ] ವೈಶ್ಯ, ವ್ಯಾಪಾರಿ(ಪಾಅ),
ವಾಣಿಜ್ಜ. ನ: [ವಾಣಿಜ್ಯ] ವ್ಯಾಪಾರ(ಸುಪಾ), ಒಂದು ಜೈನ ಮುನಿ-ಕುಲದ ಹೆಸರು

ವಾಣಿಜ್ಜಾ. ಸ್ತ್ರೀ: [ವಾಣಿಜ್ಯಾ] ವ್ಯಾಪಾರ(ಣಾಯಾ)
ವಾಣಿಜ್ಜಿಂಯು. ವಿ: [ವಾಣಿಜಿಕ] ವ್ಯಾಪಾರ ಮಾಡುವವನು, ವ್ಯಾಪಾರಿ
ವಾಣೀ. ಸ್ತ್ರೀ: [ವಾಣೀ] ಮಾತು, ವಚನ, ವಾಗ್ದೇವಿ, ಸರಸ್ವತಿ, ಒಂದು ಛಂದಸ್ಸು.
–ವಾಣೀಅ. **'ಪಾಣೀಅ'** ಶಬ್ದವನ್ನು ನೋಡುವುದು.
ವಾಣೀರ. ಪು: [ದೇ] ನೇರಿಳೆ ಮರ, ಜಂಬೂ ವೃಕ್ಷ(ದೇ)
ವಾಣೀರ. ಪು: [ವಾನೀರ] ಬೆತ್ತಲಾಳದ ಗಿಡ, ಜೊಂಡಿನ ಗಿಡ, ನೀರು ಹಬ್ಬೆ ಗಿಡ
ವಾಣುಂಜುಅ. ಪು: [ದೇ] ವ್ಯಾಪಾರಿ, ವೈಶ್ಯ(ಉಪ)
ವಾತ. **'ವಾಯ=ವಾತ'** ಶಬ್ದವನ್ನು ನೋಡುವುದು.
ವಾತಿಕ}. **'ವಾಇಅ=ವಾತಿಕ'** ಶಬ್ದವನ್ನು
ವಾತಿಯ}.ನೋಡುವುದು(ಪಣ್ಣ)
ವಾದ. **'ವಾಯ=ವಾದ'** ಶಬ್ದವನ್ನು ನೋಡುವುದು.
ವಾದಿ. **'ವಾಇ=ವಾದಿನ್'** ಶಬ್ದವನ್ನು ನೋಡುವುದು.
ವಾನರ. **'ವಾಣರ'** ಶಬ್ದವನ್ನು ನೋಡುವುದು(ವಿಪಾ).
ವಾಪಂಥ. **'ವಾವಂಥ'** ಶಬ್ದವನ್ನು ನೋಡುವುದು.
ವಾಪಿದ(ಶೌ) **'ವಾವಡ=ವ್ಯಾಪೃತ'** ಶಬ್ದವನ್ನು ನೋಡುವುದು.
ವಾಬಾಹಾ. ಸ್ತ್ರೀ: [ವ್ಯಾಬಾಧಾ] ವಿಶೇಷವಾದ ಹಿಂಸೆ, ತೊಂದರೆ(ಣಾಯಾ)
ವಾಮ. ಸಕ: [ವಮಯ್] ವಾಂತಿಮಾಡು, ವಮನ ಮಾಡು. **'ವಾಮೇಇ'**
ವಾಮ. ವಿ: [ದೇ] ಮೃತ, ತೀರಿಹೋದವನು, ಆಕ್ರಮಿಸಲ್ಪಟ್ಟ, ಮುತ್ತಿಗೆ ಹಾಕಲ್ಪಟ್ಟ
ವಾಮ. ವಿ: [ವಾಮ] ಎಡ(ಠಾ), ಪ್ರತಿಕೂಲ, ವಿರುದ್ಧ, ಅನನುಕೂಲ(ಪಾಅ), ಸುಂದರವಾದ, ಮನೋಹರವಾದ, ನ: ಎಡಭಾಗ, ಎಡ ಮಗ್ಗುಲು. ಎಡ ದೇಹ(ಗಾ), **–ಲೋಅಣಾ.** ಸ್ತ್ರೀ: [–ಲೋಚನಾ] ಸುಂದರವಾದ ಕಣ್ಣುಳ್ಳವಳು (ಪಾಅ).**–ಲೋಕವಾದಿ, –ಲೋಗವಾದಿ.** ಪು: [–ಲೋಕವಾದಿನ್] ಜಗತ್ತನ್ನು ಅಸತ್ ಎಂದು ಮಾನ್ಯ ಮಾಡುವ ಮತವನ್ನು ಪ್ರತಿಪಾದಿಸುವ ದಾರ್ಶನಿಕ(ಪಣ್ಣ). **–ವಟ್ಟ.**ವಿ: [–ವರ್ತ] ವಿರುದ್ಧವಾದ ಆಚರಣೆ ಮಾಡುವವನು (ಬೃಹ). **–ವಾಮಾವತ್ತ.**ವಿ: [ವಾಮಾವರ್ತ] ಅದೇ ಅರ್ಥ
ವಾಮ. ಪು: [ವ್ಯಾಮ] ಒಂದು ಅಳತೆ, ಒಂದು ಮಾರು
ವಾಮಣ. ಪುಂನ: [ವಾಮನ] ಕುಳ್ಳ, ಗಿಡ್ಡ; ಕೈ, ಕಾಲು ಮೊದಲಾದ ಅಂಗಗಳು ಚಿಕ್ಕವಾಗಿದ್ದು, ಎದೆ, ಹೊಟ್ಟೆ ಮಾದಲಾದುವೆಲ್ಲ ಪೂರ್ಣ ಇಲ್ಲವೆ ಉನ್ನತವಾಗಿರುವ ಶರೀರದ ಒಂದು ಬಗೆಯ ಆಕೃತಿ(ಠಾ). ವಿ: ಅಂಥ ಆಕಾರವುಳ್ಳ ವ್ಯಕ್ತಿ, ಕುಳ್ಳನೆಯ ವ್ಯಕ್ತಿ. ಸ್ತ್ರೀ: **–ಣೀ.** ಪು: ವಿಷ್ಣುವಿನ ಒಂದು ಅವತಾರ. ಒಂದು ಯಕ್ಷ ದೇವತೆ. ನ: ಕುಳ್ಳನೆಯ ಶರೀರಕ್ಕೆ ಕಾರಣವಾಗುವ ಒಂದು ಕರ್ಮ–ವಿಶೇಷ. **–ಥಲೀ.** ಸ್ತ್ರೀ: [–ಸ್ಥಲೀ] ಒಂದು ದೇಶ.
ವಾಮಣಿಅ. ವಿ: [ದೇ] ಕಳೆದುಹೋದ ಅಥವಾ ನಾಶವಾದ ವಸ್ತುವನ್ನು ಮತ್ತೆ ಪಡೆದುಕೊಳ್ಳುವವನು
ವಾಮಣಿಆ. ಸ್ತ್ರೀ: [ದೇ] ಉದ್ದನೆಯ ಮರದ ಬೇಲಿ,
ವಾಮದ್ದಣ. ನ: [ವ್ಯಾಮರ್ದನ] ಕೈ ಕಾಲುಗಳನ್ನು ಒಂದರಿಂದ ಇನ್ನೊಂದನ್ನು ತಿರುಗಿಸುವ ಒಂದು ಬಗೆಯ ವ್ಯಾಯಾಮ(ಣಾಯಾ)
ವಾಮರಿ. ಪು: [ದೇ] ಸಿಂಹ
ವಾಮಲೂರ. ಪು: [ವಾಮಲೂರ] ವಲ್ಮೀಕ, ಹುತ್ತ (ಪಾಅ)
ವಾಮಾ. ಸ್ತ್ರೀ: [ವಾಮಾ] ಭಗವಾನ್ ಪಾರ್ಶ್ವನಾಥರ ತಾಯಿಯ ಹೆಸರು.
ವಾಮಿಸ್ಸ. **'ವಾಮೀಸ'** ಶಬ್ದವನ್ನು ನೋಡುವುದು (ಪಉಮ)
ವಾಮೀ. ಸ್ತ್ರೀ: [ದೇ] ಸ್ತ್ರೀ, ಮಹಿಳೆ(ದೇ)
ವಾಮೀಸ. ವಿ: [ವ್ಯಾಮಿಶ್ರ] ಮಿಶ್ರಿತ, ಬೆರೆತಿರುವ, ಕಲೆತಿರುವ, ಕೂಡಿರುವ(ಪಉಮ)
ವಾಮೀಸಿಯ. ವಿ: [ವ್ಯಾಮಿಶ್ರಿತ] ಮೇಲಿನ ಶಬ್ದವನ್ನು ನೋಡುವುದು.
ವಾಮುತ್ತಯ. ವಿ: [ವ್ಯಾಮುಕ್ತಕ] ಧರಿಸಿರುವ, ನೇತು ಹಾಕಿರುವ, ಜೋತುಹಾಕಿರುವ(ಔಪ)
ವಾಮೂಢ. ವಿ: [ವ್ಯಾಮೂಢ] ದಿಗ್ಭ್ರಮೆಗೊಂಡ, ಗಾಬರಿಗೊಂಡಿರುವ(ಸುಪಾ)
ವಾಮೋಹ. ಪು: [ವ್ಯಾಮೋಹ] ಮೌಢ್ಯ, ತಿಳಿಗೇಡಿತನ, ದಿಗ್ಭ್ರಮೆ, ಭ್ರಾಂತಿ(ಉಪ)
ವಾಮೋಹಣ. ವಿ: [ವ್ಯಾಮೋಹನ] ಭ್ರಾಂತಿಯನ್ನುಂಟು ಮಾಡುವ, ಭ್ರಾಂತಿ–ಜನಕ(ಭವಿ)

ವಾಯ. ಸಕ: [ವಾಚಯ್] ಓದು, ಓದಿಸು, ಕಲಿಸು, ವ. ಕೃ: **'ವಾಯಂತ'**

ವಾಯ. ಅಕ: [ವಾ] ಹರಿ, ಚಲಿಸು, ಗಮಿಸು

ವಾಯ. ಅಕ: [ವೈ, ಮ್ಲೈ] ಒಣಗು,

ವಾಯ. ಸಕ: [ವಾದಯ್] ಬಾರಿಸು, ವ.ಕೃ: **'ವಾಯಂತ'**

ವಾಯ. ವಿ: [ವಾನ] ಶುಷ್ಕ, ಒಣಗಿದ, ಬಾಡಿದ (ಗಉಡ)

ವಾಯ. ಪು: [ದೇ] ಒಂದು ಬಗೆಯ ವನಸ್ಪತಿ(ಸೂಅ), ನ: ಗಂಧ(ದೇ)

ವಾಯ. ಪು: [ವ್ರಾತ] ಸಮೂಹ, ಗುಂಪು(ಭವಿ)

ವಾಯ. ವಿ: [ವ್ಯಾತೃ] ಮುಚ್ಚುವ, ಮರೆಮಾಡುವವನು

ವಾಯ. ವಿ: [ವ್ಯಾಗಸ್] ಭಾರೀ ಅಪರಾಧಿ, ದೊಡ್ಡ ಅಪರಾಧಿ

ವಾಯ. ಪು: [ವಾತೃ] ಗಾಳಿ, ವಾಯು, ಬಟ್ಟೆ ನೇಯುವವನು, ನೇಕಾರ

ವಾಯ. ವಿ: [ವ್ಯಾಪ] ಬಹಳಷ್ಟು ವಿಸ್ತಾರವುಳ್ಳ, ಬಹಳ ಅಗಲವಾದ, ವಿಶಾಲವಾದ

ವಾಯ. ಪು: [ವಾಕ] ವಾಕ್ಯ, ಋಗ್ವೇದದ್ದೇ ಮೊದಲಾದ ವಾಕ್ಯ(ಶ್ರಾ)

ವಾಯ. ಪು: [ವ್ಯಾಯ] ಗತಿ, ಚಲನೆ, ನಡೆ, ವಾಯು, ಗಾಳಿ, ಪಕ್ಷಿಯ ಬರುವಿಕೆ, ವಿಶಿಷ್ಟ ಲಾಭ

ವಾಯ. ಪು: [ವ್ಯಾಚ] ವಂಚನೆ, ಮೋಸ(ಶ್ರಾ)

ವಾಯ. ಪು: [ವಾಜ] ರೆಕ್ಕೆ, ಮುನಿ, ಋಷಿ, ಶಬ್ದ, ಸದ್ದು, ವೇಗ, ನ: ತುಪ್ಪ, ನೀರು, ಯಜ್ಞದಲ್ಲಿ ಬಳಸುವ ಧಾನ್ಯ(ಶ್ರಾ)

ವಾಯ. ನ: [ವಾಚ] ಗಿಳಿಗಳ ಗುಂಪು, ಗಿಳಿವಿಂಡು

ವಾಯ. ವಿ: [ವಾಜ್] ಎಸೆಯುವ, ನಾಶಮಾಡುವ,

ವಾಯ. ಪು: [ವ್ಯಾಜ] ಕಪಟ, ವಂಚನೆ, ಮೋಸ. ನೆಪ, ವಿಶಿಷ್ಟವಾದ ಗತಿ, ಚಲನೆ

ವಾಯ. **'ವಾಗ=ವಲ್ಕ'** ಶಬ್ದವನ್ನು ನೋಡುವುದು.

ವಾಯ. ಪು: [ವ್ರಾಯ] ವಿವಾಹ, ಮದುವೆ

ವಾಯ. ಪು: [ವ್ಯಾತ] ವಿಶಿಷ್ಟ ನಡಿಗೆ, ಚಲನೆ

ವಾಯ. ಪು: [ವಾಪ] ಬಿತ್ತುವುದು, ಗದ್ದೆ, ಹೊಲ(ಶ್ರಾ)

ವಾಯ. ಪು: [ವಾಯ] ಗಮನ, ಗತಿ, ಚಲನೆ, ನಡಿಗೆ, ಮೂಸುವುದು, ತಿಳಿಯುವುದು, ಜ್ಞಾನ, ಇಚ್ಛೆ, ತಿನ್ನುವಿಕೆ, ವಿವಾಹ, ಮದುವೆ(ಶ್ರಾ)

ವಾಯ. ವಿ: [ವ್ಯಾದ] ವಿಶೇಷವಾಗಿ ಸ್ವೀಕರಿಸುವ

ವಾಯ. ವಿ: [ವಾಚ್] ಮಾತನಾಡುವವನು, ವಕ್ತ(ಶ್ರಾ)

ವಿಚ್ಛುಡಿಅ. ವಿ: [ವಿಚ್ಛುಟಿತ] ಬೇರ್ಪಟ್ಟ, ಅಗಲಿದ, ವಿರಹಿತ, ಸಂಬಂಧದಿಂದ ಸ್ವತಂತ್ರವಾದ
ವಿಚ್ಛುರಿಅ. ವಿ: [ದೇ] ಅಪೂರ್ವ, ಅದ್ಭುತ(ಷಡ್)
ವಿಚ್ಛುರಿಅ. ವಿ: [ವಿಚ್ಛುರಿತ] ವಸ್ತುವಿನೊಳಗೆ ಸೇರಿಸಲ್ಪಟ್ಟ, ಒಳಗೆ ಕೂಡಿಸಿದ, ಸೇರಿಸಿದ, ವ್ಯಾಪಿಸಿದ(ಪಉಮ)
ವಿಚ್ಛುಹ. ಸಕ: [ವಿ+ಕ್ಷಿಪ್] ಎಸೆ, ದೂರಮಾಡು
ವಿಚ್ಛುಹ. ಅಕ: [ವಿ+ಕ್ಷುಭ್] ಕದಡು, ಕಲಕು, ಚಂಚಲಗೊಳ್ಳು
ವಿಚ್ಛೂಢ. ವಿ: [ವಿಕ್ಷಿಪ್ತ]ಎಸೆಯಲ್ಪಟ್ಟ, ದೂರಮಾಡಲ್ಪಟ್ಟ, ಪ್ರೇರಿಸಲ್ಪಟ್ಟ, ಹುರಿದುಂಬಿಸಲ್ಪಟ್ಟ(ಪಾಅ)
ವಿಚ್ಛೂಢ.. ವಿ: [ದೇ] ಬೇರ್ಪಡಿಸಲ್ಪಟ್ಟ, ಅಗಲಿದ
ವಿಚ್ಛೂಢವ್ವ. 'ವಿಚ್ಛುಹ=ವಿ+ಕ್ಷಿಪ್' ಶಬ್ದವನ್ನು ನೋಡುವುದು.
ವಿಚ್ಛೇಅ. ಪು: [ದೇ] ವಿಲಾಸ, ಭೋಗ, ಸೊಬಗು, ಜಘನ
ವಿಚ್ಛೇಅ. ಪು: [ವಿಚ್ಛೇದ] ಬೇರೆಯಾಗುವುದು, ಪೃಥಕ್ಕರಣ, ಅಗಲುವುದು(ಗಾ) ಸಂಬಂಧ ನಾಶವಾಗುವುದು, ಹರಿವಿನ ತಡೆ
ವಿಚ್ಛೇಅಣ. ನ: [ವಿಚ್ಛೇದನ] ಮೇಲಿನ ಶಬ್ದವನ್ನು ನೋಡುವುದು.
ವಿಚ್ಛೇಅಯ. ವಿ: [ವಿಚ್ಛೇದಕ] ವಿಚ್ಛೇದ ಮಾಡುವವನು, ಬೇರ್ಪಡಿಸುವವನು, ಅಗಲಿಸುವವನು
ವಿಚ್ಛೇಇಯ. ವಿ: [ವಿಚ್ಛೇದಿತ] ಬೇರ್ಪಡಿಸಲ್ಪಟ್ಟ, ಅಗಲಿಸಲ್ಪಟ್ಟ

ವಿಚ್ಛೋಇಯ. ವಿ: [ದೇ] ವಿರಹಿತ, ಅಗಲಿದವನು, ಬೇರ್ಪಟ್ಟವನು
ವಿಚ್ಛೋಡ. '**ವಿಚ್ಛೋಲ**' ಶಬ್ದವನ್ನು ನೋಡುವುದು.
ವಿಚ್ಛೋಮ. ಪು: [ದೇ. **ವಿದರ್ಭ**] ಒಂದು ನಗರ
ವಿಚ್ಛೋಯ. ಪು: [ದೇ] ವಿರಹ, ವಿಯೋಗ, ಅಗಲಿಕೆ, ಬೇರ್ಪಡಿಕೆ(ಭವಿ)
ವಿಚ್ಛೋಲ. ಸಕ: [**ಕಂಪಯ್**] ಅಲ್ಲಾಡಿಸು, ಅಲುಗಾಡಿಸು(ಕುಮಾ)
ವಿಚ್ಛೋಲಿಅ. ವಿ: [**ಕಂಪಿತ**] ಅಲ್ಲಾಡಿಸಲ್ಪಟ್ಟ, ಅಲುಗಾಡಿಸಲ್ಪಟ್ಟ
ವಿಚ್ಛೋಲಿಅ. ವಿ: [**ವಿಚ್ಛೋಲಿತ**] ತೊಳೆಯಲ್ಪಟ್ಟ, ಶುದ್ಧ ಮಾಡಲ್ಪಟ್ಟ
ವಿಚ್ಛೋವ. ಸಕ: [ದೇ] ಬೇರ್ಪಡಿಸು, ಅಗಲಿಸು
ವಿಚ್ಛೋಹ. ಪು: [ದೇ] ವಿರಹ, ವಿಯೋಗ(ದೇ)
ವಿಚ್ಛೋಹ. ಪು: [**ವಿಕ್ಷೋಭ**] ವಿಕ್ಷೇಪ, ಎಸೆಯುವುದು, ಚಲಿಸುವುದು, ಕದಡುವುದು, ಚಂಚಲತೆ(ಉಪ)
ವಿಛಲ. ಸಕ: [**ವಿ+ಛಲಯ್**] ಮೋಸಮಾಡು, ವಂಚಿಸು
ವಿಛೋಯ. '**ವಿಚ್ಛೋವ**' ಶಬ್ದವನ್ನು ನೋಡುವುದು.
ವಿಜಇ. ವಿ: [**ವಿಜಯಿನ್**] ವಿಜೇತ, ಗೆದ್ದವನು
ವಿಜಂಭ. '**ವಿಅಂಭ=ವಿ+ಜೃಂಭ್**' ಶಬ್ದವನ್ನು ನೋಡುವುದು.
ವಿಜಢ. ವಿ: [**ವಿತ್ಯಕ್ತ**] ಪರಿತ್ಯಕ್ತ, ಬಿಡಲ್ಪಟ್ಟ(ಉತ್ತ)
ವಿಜಣ. '**ವಿಅಣ=ವಿಜನ**' ಶಬ್ದವನ್ನು ನೋಡುವುದು
ವಿಜಯ. ಸಕ: [**ವಿ+ಜಿ**] ಗೆಲ್ಲು, **ಅಕ:** ಶ್ರೇಷ್ಠತೆಯಿಂದ ಕೂಡಿರುವುದು, ಮೇಲ್ಮೆಯಿಂದ ಕೂಡಿರುವುದು.
ವಿಜಯ. ಪು: [**ವಿಜಯ**] ಆಶ್ರಯ, ಸ್ಥಳ
ವಿಜಯ. ಪು: [**ವಿಜಯ**] ನಿರ್ಣಯ, ಶಾಸ್ತ್ರದ ಅರ್ಥವನ್ನು ಜ್ಞಾನಪೂರ್ವಕವಾಗಿ ನಿರ್ಣಯಿಸುವುದು, ಅನುಚಿಂತನೆ, ವಿಮರ್ಶೆ (ಔಪ), ಗೆಲುವು(ಕುಮಾ), ಒಂದು ದೇವ-ವಿಮಾನ, ವಿಜಯ ವಿಮಾನದಲ್ಲಿ ವಾಸಿಸುವ ದೇವತೆ, ಅಹೋರಾತ್ರದ ೧೨ನೆಯ ಅಥವಾ ೧೭ನೆಯ ಮುಹೂರ್ತ. ಭಗವಾನ್ ನಮಿನಾಥನ ತಂದೆ. ಭರತ ವರ್ಷದ ೨೦ನೇ ಭಾವೀ ತೀರ್ಥಂಕರ. ಮೂರನೇ ಚಕ್ರವರ್ತಿಯ ತಂದೆಯ ಹೆಸರು. ಆಶ್ವಯುಜ ಮಾಸ, ಭರತ ವರ್ಷದಲ್ಲಿ ಹುಟ್ಟಿದ ಭಾವೀ ಎರಡನೇ ಬಲದೇವ, ೧೧ನೇ ಚಕ್ರವರ್ತಿಯ ತಂದೆ. ಒಬ್ಬ ರಾಜ, ಒಬ್ಬ ಕ್ಷತ್ರಿಯನ ಹೆಸರು(ವಿಪಾ), ಭಗವಾನ್ ಚಂದ್ರಪ್ರಭನ ಶಾಸನ ದೇವ. ಜಂಬೂ ದ್ವೀಪದ ಪೂರ್ವದ ಬಾಗಿಲು, ಆ ದ್ವಾರದ ಅಧಿಷ್ಠಾಯಕ ದೇವ, ಲವಣ ಸಮುದ್ರದ ಪೂರ್ವ ದ್ವಾರ, ಅದರ ಅಧಿಪತಿ ದೇವ. ಒಂದು ಕ್ಷೇತ್ರ-ವಿಶೇಷ. ಮಹಾ-ವಿದೇಹ ವರ್ಷದ ಪ್ರಾಂತದಂಥ ಪ್ರದೇಶ, ಉತ್ಕರ್ಷ, ಮೇಲ್ಮೆ(ಔಪ), ವಿಕ್ರಮಶಕೆ ಒಂದನೇ ಶತಮಾನದ ಒಬ್ಬ ಜೈನ ಆಚಾರ್ಯ(ಪಉಮ). ಅಭ್ಯುದಯ, ಸಮೃದ್ಧಿ, ಧಾತಕೀ ಖಂಡದ ಪೂರ್ವದ್ವಾರ. ರುಚಕ ಪರ್ವತದ ಒಂದು ಶಿಖರ, ಒಬ್ಬ ರಾಜಕುಮಾರ. ಒಂದು ಛಂದಸ್ಸು, ವಿ: ಗೆಲ್ಲುವವನು. **–ಚರಪುರ.** ನ: [**–ಚರಪುರ**] ಒಂದು ವಿದ್ಯಾಧರ ನಗರ, **–ಜತ್ತಾ.** ಸ್ತ್ರೀ: [**–ಯಾತ್ರಾ**] ಜೈತ್ರ–ಯಾತ್ರೆ. **–ಢಕ್ಕಾ.** ಸ್ತ್ರೀ: [**–ಢಕ್ಕಾ**] ವಿಜಯವನ್ನು ಸೂಚಿಸುವ ಭೇರಿ(ಸುಪಾ), **–ದೇವ.** ಪು: [**–ದೇವ**] ೧೮ನೇ ಶತಮಾನದ ಒಬ್ಬ ಜೈನ ಆಚಾರ್ಯ. **–ಪುರ.** ನ: [**–ಪುರ**] ಒಂದು ನಗರ. –ಪುರಾ, **–ಪುರಾ.** ಸ್ತ್ರೀ: [**–ಪುರೀ**] ಪಕ್ಷ್ಮಕಾವತೀ ಎಂಬ ಹೆಸರಿನ ವಿಜಯ ಕ್ಷೇತ್ರದ ಹೆಸರು. **–ಮಾಣ.** ಪು: [**–ಮಾನ**] ಒಬ್ಬ ಜೈನ ಆಚಾರ್ಯ. **–ವಂತ.** ವಿ: [**–ವತ್**] ವಿಜಯಿಯಾದವನು. **–ವದ್ಧಮಾಣ.** ಪುಂನ: [**–ವರ್ಧಮಾನ**] ಒಂದು ಗ್ರಾಮ. **–ವೇಜಯಂತೀ.** ಸ್ತ್ರೀ: [**ವೈಜಯಂತೀ**] ಗೆಲುವಿನ ಸೂಚಕವಾದ ಬಾವುಟ. **–ಸಾಯರ.** ಪು: [**–ಸಾಗರ**] ಸೂರ್ಯವಂಶದ ಒಬ್ಬ ರಾಜ(ಪಉಮ). **–ಸಿಂಹ, –ಸೀಹ.** ಪು: [**ಸಿಂಹ**] ಒಬ್ಬ ಸುಪ್ರಸಿದ್ಧ ಪ್ರಾಚೀನ ಜೈನ ಆಚಾರ್ಯ, ಒಬ್ಬ ವಿದ್ಯಾಧರ ರಾಜ-ಕುಮಾರ. **–ಸೂರಿ.** ಪು: [**–ಸೂರಿ**] ಚಂದ್ರಗುಪ್ತನ ಕಾಲದ ಒಬ್ಬ ಜೈನಾಚಾರ್ಯ. **–ಸೇಣ.** ಪು: [**–ಸೇನ**] ಆಮ್ರದೇವ ಸೂರಿಯ ಶಿಷ್ಯನಾಗಿದ್ದ ಒಬ್ಬ ಪ್ರಸಿದ್ಧ ಜೈನಾಚಾರ್ಯ
ವಿಜಯಂತಾ}. ಸ್ತ್ರೀ: [**ವೈಜಯಂತೀ**] ಪಕ್ಷದ ಎಂಟನೇ
ವಿಜಯಂತೀ}. ರಾತ್ರಿ, ಒಬ್ಬ ರಾಣಿಯ ಹೆಸರು.

ವಿಜಯಾ. ಸ್ತ್ರೀ: [ವಿಜಯಾ] ಭಗವಾನ್ ಶಾಂತಿನಾಥನ ದೀಕ್ಷಾ ಶಿಬಿಕೆ. ಭಗವಾನ್ ಅಜಿತನಾಥನ ತಾಯಿಯ ಹೆಸರು, ಐದನೇ ಬಲದೇವನ ತಾಯಿ, ಅಂಗಾರಕನೇ ಮೊದಲಾದ ಗ್ರಹಗಳ ಒಬ್ಬ ಪಟ್ಟದ ರಾಣಿ, ವಿದ್ಯಾ-ವಿಶೇಷ, ಪೂರ್ವ ರುಚಕ ಪರ್ವತದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ(ತಾ). ಐದನೇ ಚಕ್ರವರ್ತಿ ರಾಜನ ಪಟ್ಟದ ರಾಣಿ, ವಿಜಯ ಎಂಬ ಹೆಸರಿನ ದೇವನ ರಾಜಧಾನಿ, ವಪ್ರಾ ಎಂಬ ಹೆಸರಿನ ವಿಜಯದ ರಾಜಧಾನಿ, ಪಕ್ಷದ ಏಳನೇ ರಾತ್ರಿ, ಒಬ್ಬ ಶ್ರೇಠಿಯ ಹೆಂಡತಿ. ಭಗವಾನ್ ವಿಮಲನಾಥನ ಶಾಸನ-ದೇವಿ, ಭಗವಾನ್ ಸುಮತಿನಾಥನ ದೀಕ್ಷಾ ಪಲ್ಲಕ್ಕಿ, ಒಂದು ಪುಷ್ಕರಿಣಿ.

ವಿಜಲ. ವಿ: [ವಿಜಲ] ನೀರಿಲ್ಲದ, ಜಲ-ರಹಿತ, **ನ:** ನೀರಿಲ್ಲದ ಕೆಸರು. **'ವಿಜ್ಜಲ'** ಶಬ್ದವನ್ನು ನೋಡುವುದು.

ವಿಜಹ. ಸಕ: [ವಿ+ಹಾ] ಪರಿತ್ಯಜಿಸು, ಬಿಡು. **'ವಿಜಹಇ'**

ವಿಜಹಣಾ. ಸ್ತ್ರೀ: [ವಿಹಾನ] ಪರಿತ್ಯಾಗ(ತಾ)

ವಿಜಾಇಯ. ವಿ: [ವಿಜಾತೀಯ] ಬೇರೆ ಜಾತಿಯ, ಅನ್ಯ ರೀತಿಯ(ಉಪ)

ವಿಜಾಣ. **'ವಿಆಣ=ವಿ+ಜ್ಞಾ'** ಶಬ್ದವನ್ನು ನೋಡುವುದು.

ವಿಜಾಣಗ}. ವಿ: [ವಿಜ್ಞಾಯಕ] **ವಿಜಾಣುಅ.** ವಿ: [ವಿಜ್ಞ

ವಿಜಾಣಯ}. [ವಿಜ್ಞಾಯಕ] ತಿಳಿದಿರುವವನು, ವಿಜ್ಞ, ಪಂಡಿತ, ವಿದ್ವಾಂಸ

ವಿಜಾದೀಅ(ಶೌ). **'ವಿಜಾಇಂಚು'** ಶಬ್ದವನ್ನು ನೋಡುವುದು.

ವಿಜಾಯ. ನ: [ದೇ] ಲಕ್ಷ್ಯ, ಗುರಿ(ಪಾಅ)

ವಿಜಿಅ. ವಿ: [ವಿಜಿತ] ಸೋಲಿಸಲ್ಪಟ್ಟವನು, ಜಯಿಸಲ್ಪಟ್ಟವನು

ವಿಜುತ್ತ. ವಿ: [ವಿಯುಕ್ತ] ಬೇರ್ಪಟ್ಟ, ಅಗಲಿದ

ವಿಜುರಿ(ಅಪ). ಸ್ತ್ರೀ: [ವಿದ್ಯುತ್] ಮಿಂಚು, ವಿದ್ಯುತ್

ವಿಜೆಟ್ಟ. ವಿ: [ವಿಜ್ಯೇಷ್ಠ] ಮಧ್ಯಮ

ವಿಜೇತವ್ವ **'ವಿಜಯ=ವಿ+ಜಿ'** ಶಬ್ದವನ್ನು ನೋಡುವುದು.

ವಿಜೋಜ. ಸಕ: [ವಿ+ಯೋಜಯ್] ಬೇರೆ ಮಾಡು, ಅಗಲಿಸು

ವಿಜೋಜಣ. ನ: [ವಿಯೋಜನ] ವಿಯೋಗ, ಅಗಲಿಕೆ, ವಿರಹ.

ವಿಜೋಜಿಯ. ವಿ: [ವಿಯೋಜಿತ] ಅಗಲಿಸಲ್ಪಟ್ಟ, ಬೇರ್ಪಡಿಸಲಾದ

ವಿಜೋಂಯಾವಇತ್ತು. ವಿ:[ವಿಂಯೋಜಯಿತೃ] ಅಗಲಿಸುವವನು, ಬೇರೆಮಾಡುವವನು(ತಾ)

ವಿಜೋಹಾ. ಸ್ತ್ರೀ: [ವಿಜ್ಜೋಹಾ] ಒಂದು ಛಂದಸ್ಸು.

ವಿಜ್ಜ. ಅಕ: [ವಿದ್] ಆಗು

ವಿಜ್ಜ. ಸಕ: [ವೀಜಯ್] ಬೀಸಣಿಗೆ ಆಡಿಸು, ಬೀಸಣಿಗೆ ಬೀಸುವುದು

ವಿಜ್ಜ. ಪು: [ವೈದ್ಯ] ಚಿಕಿತ್ಸಕ, ಡಾಕ್ಟರು, ವೈದ್ಯ

ವಿಜ್ಜ. ಪು.ಬ: [ದೇ] ಒಂದು ದೇಶ-ವಿಶೇಷ (ಪಉಮ)

ವಿಜ್ಜ. ಪು: [ವಿದ್ವಸ್, ವಿಜ್ಞ] ಪಂಡಿತ, ವಿದ್ವಾಂಸ, ತಿಳಿದವನು

ವಿಜ್ಜ. **'ವೀರಿಅ'** ಶಬ್ದವನ್ನು ನೋಡುವುದು.

ವಿಜ್ಜ-. **'ವಿಜ್ಜಾ'** ಶಬ್ದವನ್ನು ನೋಡುವುದು **-ಜ್ಝರ(ಅಪ).** **'ವಿಜ್ಜಾ-ಹರ'** ಶಬ್ದವನ್ನು ನೋಡುವುದು. **-ತ್ಥಿ.** ವಿ: [ವಿದ್ಯಾರ್ಥಿನ್] ವಿದ್ಯಾರ್ಥಿ, ಅಭಾಸಿ

ವಿಜ್ಜ-. **'ವಿಜ್ಜು'** ಶಬ್ದವನ್ನು ನೋಡುವುದು.

-ವಿಜ್ಜ. **'ಪಿಜ್ಜ'** ಶಬ್ದವನ್ನು ನೋಡುವುದು.

ವಿಜ್ಜಯ. ನ: [ವೈದ್ಯಕ] ಚಿಕಿತ್ಸೆ,

ವಿಜ್ಜಲ. ಪು: [ವಿಜಲ] ಒಂದು ನರಕ-ಸ್ಥಾನ. ನೀರಿಲ್ಲದ, ವಿ: ಜಲರಹಿತ.

ವಿಜ್ಜಲ}. ನ: [ದೇ. ವಿಜಲ] ಕೆಸರು, ಪಂಕ

ವಿಜ್ಜುಲ}.

ವಿಜ್ಜಲಿಯಾ. ಸ್ತ್ರೀ: [ವಿದ್ಯುತ್] ಮಿಂಚು, ವಿದ್ಯುತ್ತು

ವಿಜ್ಜಾ. ಸ್ತ್ರೀ: [ವಿದ್ಯಾ] ಜ್ಞಾನ, ಶಾಸ್ತ್ರ ಜ್ಞಾನ, ಯಥಾರ್ಥ ಜ್ಞಾನ ಸಮ್ಯಕ್ ಜ್ಞಾನ(ತ್ರ) ಬ್ರಹ್ಮ ಜ್ಞಾನ. ಮಂತ್ರ, ದೀವಿಯಿಂದ ಅಧಿಷ್ಠಿತವಾದ ಅಕ್ಷರ ಪದ್ಧತಿ, ಸಾಧನೆಯುನ್ನೊಳಗೊಂಡ ಮಂತ್ರ(ಔಪ). **-ಅಣುಪ್ಪವಾಯ.** ನ: [-ಅನುಪ್ರವಾದ] ಜೈನ ಅಂಗ ಗ್ರಂಥಾಂಶ-ವಿಶೇಷ, ಹತ್ತನೆಯದರ ಪೂರ್ವದ್ದು. **-ಚಾರಣ.** ಪು: [-ಚಾರಣ] ಶಕ್ತಿ ವಿಶೇಷದಿಂದ ಕೂಡಿರುವ ಮುನಿ(ಭಗ). **-ಚಾರಣಲದ್ಧಿ.** ಸ್ತ್ರೀ: [-ಚಾರಣಲಬ್ಧಿ] **-ಣುಪ್ಪವಾಯ.** **'-ಅಣುಪ್ಪವಾಯ'** ಶಬ್ದವನ್ನು ನೋಡುವುದು. **-ಣುವಾಯ.** ನ:[-ನುವಾದ] ಹತ್ತನೆಯದರ ಪೂರ್ವದ್ದು. **-ಪಿಂಡ.** ಪು: [-ಪಿಂಡ] ವಿದ್ಯೆಯ ಬಲದಿಂದ ಸಂಪಾದಿಸಿದ ಭಿಕ್ಷೆ(ನಿಚೂ). **-ಮಂತ.** ವಿ:[-ವತ್]

ವಿದ್ಯಾಸಂಪನ್ನ. **–ಲಯ. ಪುಂನ:** [–ಲಯ] ಪಾಠಶಾಲೆ. **–ಸಿದ್ಧ. ವಿ:** [–ಸಿದ್ಧ] ಸಕಲ ವಿದ್ಯೆಗಳಿಂದ ಸಂಪನ್ನನಾದ ಸಕಲ ವಿದ್ಯೆಗಳ ಅಧಿಪತಿ. ಕಡೆಯ ಪಕ್ಷ ಒಂದು ಮಹಾವಿದ್ಯೆ ಸಿದ್ಧಿಸಿರುವವನು. **–ಹರ. ಪು:** [–ಧರ] ಕ್ಷತ್ರಿಯರ ಒಂದು ವಂಶ(ಪಉಮ). **ಪುಂಸ್ತ್ರೀ:** ಆ ವಂಶದಲ್ಲಿ ಹುಟ್ಟಿದವನು. **ಸ್ತ್ರೀ: –ರೀ. ವಿ:** ವಿಶೇಷ ವಿದ್ಯಾಶಕ್ತಿಯಿಂದ ಕೂಡಿರುವವನು. **–ಹರೋವಾಲ. ಪು:**[–ಧರಗೋಪಾಲ] ಸುಸ್ಥಿತ ಮತ್ತು ಸುಪ್ರತಿಬುದ್ಧನ ಶಿಷ್ಯನಾಗಿದ್ದ ಒಬ್ಬ ಪ್ರಾಚೀನ ಜೈನ ಮುನಿ. **–ಹರೀ. ಸ್ತ್ರೀ:**[–ಧರೀ] ಒಂದು ಜೈನ ಮುನಿ–ಶಾಖೆ. **–ಹಾರ(ಅಪ). ನ:**[–ಧರ] ಒಂದು ಛಂದಸ್ಸು.

ವಿಜ್ಜಾವಚ್ಚ.(ಅಪ). 'ವೇಯಾವಚ್ಚ' ಶಬ್ದವನ್ನು ನೋಡುವುದು.

ವಿಜ್ಜಾಹರ. ವಿ: [**ವೈದ್ಯಾಧರ**] ವಿದ್ಯಾಧರನಿಗೆ ಸಂಬಂಧಿಸಿದ.

ವಿಜ್ಜಿಡಿಯ. 'ವಿಜ್ಝಿಡಿಯ' ಶಬ್ದವನ್ನು ನೋಡುವುದು.

ವಿಜ್ಜು. ಪು: [**ವಿದ್ಯುತ್**] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). ದೇವತೆಗಳ ಒಂದು ಜಾತಿ. ಭವನಪತಿ ದೇವರುಗಳ ಒಂದು ಪ್ರಭೇದ(ಪಣ್ಣ). 'ಆಮಲಕಪ್ಪ' ನಗರದಲ್ಲಿದ್ದ ಒಬ್ಬ ಗೃಹಸ್ಥ. ಒಂದು ನರಕ–ಸ್ಥಾನ, **ಸ್ತ್ರೀ:** ಈಶಾನೇಂದ್ರನ ಸೋಮನೇ ಮೊದಲಾದ ಲೋಕಪಾಲರುಗಳ ಒಬ್ಬ ಅಗ್ರ ಮಹಿಷಿ. ಚಮರನೆಂಬ ಇಂದ್ರನ ಪಟ್ಟದ ರಾಣಿ(ಠಾ), **ಪುಂಸ್ತ್ರೀ:** ವಿದ್ಯುತ್ತು, ಮಿಂಚು. ಸಂಜೆ, ಸಾಯುಂಕಾಲ. **ವಿ:** ವಿಶೇಷ ರೀತಿಯಲ್ಲಿ ಹೊಳೆಯುವ. **–ಕಾರ. '–ಯಾರ'** ಶಬ್ದವನ್ನು ನೋಡುವುದು. **–ಕುಮಾರ. ಪು:** [**–ಕುಮಾರ**] ಒಂದು ದೇವ–ಜಾತಿ. **–ಕುಮಾರೀ. ಸ್ತ್ರೀ:** [**–ಕುಮಾರೀ**] ವಿದಿಗ್ ರುಚಕ ಪರ್ವತದ ಮೇಲೆ ಇರುವ ದಿಕ್ಕುಮಾರೀ ದೇವಿ. **–ಜಿಜ್ಝ**(?), **–ಜಿಬ್ಭ. ಪು:** [**–ಜಿಹ್ವ**] ಅನುವೇಲಂಧರ ನಾಗರಾಜನು ವಾಸವಾಗಿರುವ ಪರ್ವತ. **–ತೇಅ. ಪು:** [**–ತೇಜಸ್**] ವಿದ್ಯಾಧರ ವಂಶದ ಒಬ್ಬ ರಾಜ. **–ದಂತ. ಪು:** [**–ದಂತ**] ಒಂದು ಅಂತರ್ ದ್ವೀಪ. ಅದರಲ್ಲಿ ವಾಸಿಸುವ ಮನುಷ್ಯ ಜಾತಿ(ಠಾ). **–ದತ್ತ. ಪು:** [**–ದತ್ತ**] ವಿದ್ಯಾಧರ ವಂಶದ ಒಬ್ಬ ರಾಜ(ಪಉಮ). **–ದಾಢ. ಪು:** [**–ದಂಷ್ಟ್ರ**] ವಿದ್ಯಾಧರ ವಂಶದಲ್ಲಿ ಹುಟ್ಟಿದ ಒಬ್ಬ ರಾಜನ ಹೆಸರು. **–ಪಹ, ಪ್ಪಭ, –ಪ್ಪಹ. ಪು:** [**–ಪ್ರಭ**] ಒಂದು ವಕ್ಷಸ್ಕಾರ ಪರ್ವತದ ಹೆಸರು. ವಿದ್ಯುತ್‌ಪ್ರಭ ವಕ್ಷಸ್ಕಾರದ ಒಂದು ಶಿಖರ, ದೇವ–ವಿಶೇಷ, ಅನುವೇಲಂಧರ ನಾಗರಾಜನು ವಾಸಿಸುವ ಪರ್ವತ(ಠಾ). ಆ ಪರ್ವತದ ಮೇಲೆ ವಾಸಿಸುವ ದೇವ. ದೇವ–ಕುರುವರ್ಷದಲ್ಲಿ ಇರುವ ಒಂದು ಮಹಾ ಸರೋವರ(ಠಾ), **ನ:** ಒಂದು ವಿದ್ಯಾಧರ–ನಗರ. **–ಮಈ. ಸ್ತ್ರೀ:** [**–ಮತಿ**] ಒಬ್ಬ ಮಹಿಳೆಯ ಹೆಸರು. **–ಮಾಲಿ. ಪು:** [**–ಮಾಲಿನ್**] ಪಂಚಶೈಲ ದ್ವೀಪದ ಅಧಿಪತಿಯಾದ ಯಕ್ಷ, ರಾವಣನ ಒಬ್ಬ ಯೋಧ. ಬ್ರಹ್ಮಾ ದೇವಲೋಕದ ಇಂದ್ರ. **–ಮುಹ. ಪು:** [**–ಮುಖ**] ವಿದ್ಯಾಧರ ವಂಶದ ಒಬ್ಬ ರಾಜ, ಒಂದು ಅಂತರ್ ದ್ವೀಪ. ಅದರಲ್ಲಿ ವಾಸಿಸುವ ಮನುಷ್ಯ(ಠಾ). **–ಮೇಹ. ಪು:** [**–ಮೇಘ**] ನೀರಿಲ್ಲದ ಮೋಡ, ಮಿಂಚೇ ಪ್ರಧಾನವಾದ ಮೋಡ. ಮಿಂಚನ್ನು ಹೊಮ್ಮಿಸುವ ಮೋಡ(ಭಗ). **–ಯಾರ. ಪು:**[**–ಕಾರ**] ಮಿಂಚನ್ನು ಝಳಪಿಸುವುದು. **–ಲಆ, –ಲ್ಲಯಾ. ಸ್ತ್ರೀ:** [**–ಲತಾ**] ಮಿಂಚು, ಮಿಂಚಿನ ಬಳ್ಳಿ. **–ಲ್ಲೇಹಾಇದ. ನ:**[**–ಲೇಖಾಯಿತ**] ಮಿಂಚಿನ ಹಾಗೆ ವರ್ತನೆ. **–ವಿಲಸಿಅ. ನ:** [**–ವಿಲಸಿತ**] ಒಂದು ಛಂದಸ್ಸು. ಮಿಂಚಿನ ವಿಲಾಸ. **–ಸಿಹಾ. ಸ್ತ್ರೀ:** [**–ಶಿಖಾ**] ಒಬ್ಬ ರಾಣಿಯ ಹೆಸರು.

ವಿಜ್ಜುಆ. ಸ್ತ್ರೀ: [**ವಿದ್ಯುತ್**] ಮಿಂಚು, ಬಲಿ ಎಂಬ ಹೆಸರಿನ ಇಂದ್ರನ ಸೋಮನೇ ಮೊದಲಾದ ನಾಲ್ಕೂ ಜನ ಲೋಕಪಾಲಕರ ಒಬ್ಬೊಬ್ಬ ಪಟ್ಟದ ರಾಣಿ. ಧರಣೇಂದ್ರನ ಒಬ್ಬ ಅಗ್ರ–ಮಹಿಷಿ.

ವಿಜ್ಜುಆಯಿತ್ತು. ವಿ: [**ವಿದ್ಯುತ್‌ಕರ್ತೃ**] ಮಿಂಚನ್ನು ಉಂಟು ಮಾಡುವವನು.

ವಿಜ್ಜುಲಾ}. **'ವಿಜ್ಜು= ವಿದ್ಯುತ್'** ಶಬ್ದವನ್ನು
ವಿಜ್ಜುಲಿಆ}. ನೋಡುವುದು(ಕುಮಾ)
ವಿಜ್ಜುಲೀ}.

ವಿಜ್ಜೂ–. 'ವಿಜ್ಜು' ಶಬ್ದವನ್ನು ನೋಡುವುದು. **–ಮಾಲಾ. ಸ್ತ್ರೀ:** [**–ಮಾಲಾ**] ಒಂದು ಛಂದಸ್ಸು.

ವಿಜ್ಜೇ. ಅ: [ದೇ] ದಾರಿಯಿಂದ, ಹಾದಿಯಿಂದ, –ಓಸ್ಕರ, –ಗಾಗಿ(ಭವಿ)
ವಿಜ್ಜೋಅ. ಪು: [ವಿದ್ಯೋತ] ಪ್ರಕಾಶ, ಬೆಳಕು
ವಿಜ್ಜೋಇಯ}. ವಿ: [ವಿದ್ಯೋತಿತ] ಪ್ರಕಾಶಿಸಲ್ಪಟ್ಟ,
ವಿಜ್ಜೋವಿಯ}. ಹೊಳೆದ, ಬೆಳಗಿದ(ಉಪ)
ವಿಜ್ಝ. ಸಕ: [ವ್ಯಧ್] ಭೇದಿಸು, ರಂಧ್ರ ಕೊರೆ(ಗಾ)
ವಿಜ್ಝ. ಅಕ: [ವಿ+ಘಟ್] ಬೇರೆಯಾಗು, ಅಗಲು
ವಿಜ್ಝ. ನ: [ದೇ] ಧಕ್ಕೆ, ಆಘಾತ,
ವಿಜ್ಝ. ವಿ: [ವಿದ್ಧ] ಭೇದಿಸಲ್ಪಟ್ಟ, ರಂಧ್ರ ಕೊರೆಯಲಾದ
ವಿಜ್ಝ. 'ವಿಜ್ಝ=ವ್ಯಧ್' ಶಬ್ದವನ್ನು ನೋಡುವುದು.
ವಿಜ್ಝಡಿಯ. ವಿ: [ದೇ] ಮಿಶ್ರಿತ, ವ್ಯಾಪಿಸಿದ
ವಿಜ್ಝಲ. 'ವಿಬ್ಭಲ=ವಿಹ್ವಲ' ಶಬ್ದವನ್ನು ನೋಡುವುದು.
ವಿಜ್ಝವ. ಸಕ:[ವಿ+ಧ್ಯಾಪಯ್] ದೀಪವೇ ಮೊದಲಾದವನ್ನು ಆರಿಸು, ತಣ್ಣಗೆ ಮಾಡು
ವಿಜ್ಝವಣ. ಸ್ತ್ರೀನ: [ವಿಧ್ಯಾಪನ] ಆರಿಸುವುದು, ತಣ್ಣಗೆ ಮಾಡು. ಸ್ತ್ರೀ: –ಣಾ
ವಿಜ್ಝವಿಅ. ವಿ: [ವಿಧ್ಯಾಪಿತ] ಆರಿಸಲ್ಪಟ್ಟ, ಶಾಂತಗೊಳಿಸಲ್ಪಟ್ಟ, ತಣ್ಣಗೆ ಮಾಡಲ್ಪಟ್ಟ(ಗಾ)
ವಿಜ್ಝಾ}. ಅಕ: [ವಿ+ಧ್ಯೈ] ಆರು, ತಣ್ಣಗಾಗು
ವಿಜ್ಝಾಅ}. ಶಾಂತಗೊಳ್ಳು, 'ವಿಜ್ಝಾಇ', ವ.ಕೃ: 'ವಿಜ್ಝಾಅಂತ'
ವಿಜ್ಝಾಅ}. ವಿ: [ವಿಧ್ಯಾತ] ಆರಿದ, ಶಾಂತಗೊಂಡ,
ವಿಜ್ಝಾಣ}. ತಣ್ಣಗಾದ, ಉಪಶಾಂತ(ಣಾಯಾ)
ವಿಜ್ಝಾವ. 'ವಿಜ್ಝವ' ಶಬ್ದವನ್ನು ನೋಡುವುದು.
ವಿಜ್ಝಾವಣ. 'ವಿಜ್ಝವಣ' ಶಬ್ದವನ್ನು ನೋಡುವುದು.
ವಿಜ್ಝಿಡಿಯ. ಪು: [ದೇ] ಮೀನಿನ ಒಂದು ಜಾತಿ
ವಿಟಂಕ. 'ವಿಡಂಕ' ಶಬ್ದವನ್ನು ನೋಡುವುದು.
ವಿಟ್ಟಾಲ. ಸಕ: [ದೇ] ಎಂಜಲುಮಾಡು, ಹಾಳುಮಾಡು, ಅಪವಿತ್ರಗೊಳಿಸು
ವಿಟ್ಟಾಲ. ಪು: [ದೇ] ಎಂಜಲಾಗಿರುವುದು, ಅಪವಿತ್ರತೆ, ಮೈಲಿಗೆ, ಅಶುಚಿ
ವಿಟ್ಟಾಲಿ. ವಿ: [ದೇ] ಹಾಳುಮಾಡುವವನು, ಅಪವಿತ್ರಗೊಳಿಸುವವನು, ಸ್ತ್ರೀ: –ಣೀ
ವಿಟ್ಟಲಿಅ. ವಿ: [ದೇ] ಹಾಳುಮಾಡಲ್ಪಟ್ಟ, ಎಂಜಲು ಮಾಡಲ್ಪಟ್ಟ, ಅಪವಿತ್ರಗೊಳಿಸಲ್ಪಟ್ಟ
ವಿಟ್ಟೀ. ಸ್ತ್ರೀ: [ದೇ] ಗಂಟು, ಮೂಟೆ(ಓಘ). 'ವಿಂಟಿಯಾ' ಶಬ್ದವನ್ನು ನೋಡುವುದು.
ವಿಟ್ಠ. ವಿ: [ವೃಷ್ಟ] ಮಳೆ ಸುರಿಸಲ್ಪಟ್ಟ,
ವಿಟ್ಠ. ವಿ: [ವಿಷ್ಟ] ಪ್ರವೇಶಿಸಿದ, ಒಳಕ್ಕೆ ಹೋದ(ಸೂಅ), ಕುಳಿತುಕೊಂಡಿರುವ
ವಿಟ್ಠ. ವಿ: [ದೇ] ನಿದ್ರೆಮಾಡಿ ಎದ್ದ, ಮೇಲಕ್ಕೆ ಎದ್ದ (ಷಡ್)
ವಿಟ್ಠಅ. ನ: [ವಿಷ್ಟಪ] ಜಗತ್ತು, ಪ್ರಪಂಚ, ಭುವನ (ಮೃಚ್ಛ)
ವಿಟ್ಠಂಭ. ಸಕ: [ವಿ+ಷ್ಟಂಭಯ್] ತಡೆದು ನಿಲ್ಲಿಸು, ಸ್ಥಾಪಿಸು
ವಿಟ್ಠಂಭಣಯಾ. ಸ್ತ್ರೀ: [ವಿಷ್ಟಂಭನಾ] ಸ್ಥಾಪನೆ(ಔಪ)
ವಿಟ್ಠರ. ಪುಂನ: [ವಿಷ್ಟರ] ಆಸನ, ಪೀಠ(ಪಉಮ)
ವಿಟ್ಠಾ. ಸ್ತ್ರೀ: [ವಿಷ್ಟಾ] ಮಲ, ಪುರೀಷ. –ಹರ. ನ: [–ಗೃಹ] ಕಕ್ಕಸು ಮನೆ, ಪಾಯಿಖಾನೆ
ವಿಟ್ಠಿ. ಸ್ತ್ರೀ: [ವಿಷ್ಟಿ] ಕೆಲಸ, ಕಾರ್ಯ, ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಒಂದು ಕರಣ, ಅರ್ಧ ತಿಥಿ. ಭದ್ರಾ ನಕ್ಷತ್ರ. ಕೂಲಿ ಇಲ್ಲದೆ ಮಾಡುವ ಬಿಟ್ಟಿ ಕೆಲಸ,
ವಿಟ್ಠಿ. ಸ್ತ್ರೀ: [ವೃಷ್ಟಿ] ಮಳೆ, **'ವುಟ್ಠಿ'** ಶಬ್ದವನ್ನು ನೋಡುವುದು.
ವಿಟ್ಠಿತ. ವಿ: [ದೇ] ಸಂಪಾದಿಸಿದ, ಅರ್ಜಿಸಿದ(ಷಡ್)
ವಿಟ್ಠಿಯ. ನ: [ವಿಸ್ಥಿತ] ವಿಶಿಷ್ಟವಾದ ಸ್ಥಿತಿ(ಭಗ)
ವಿಡ. ಪು: [ವಿಟ] ವಿಟ, ವಿಷಯ ಲಂಪಟ, ವ್ಯಭಿಚಾರಿ
ವಿಡ. ನ: [ವಿಡ] ಒಂದು ಬಗೆಯ ಉಪ್ಪು, ಉಪ್ಪು ಮಣ್ಣಿನಿಂದ ತಯಾರಿಸಿದ ಉಪ್ಪು
ವಿಡಂಕ. ಪುಂನ: [ವಿಟಂಕ] ಪಾರಿವಾಳವೇ ಮೊದಲಾದ ಹಕ್ಕಿ ಪಕ್ಷಿಗಳನ್ನು ಇರಿಸುವ ಗೂಡು (ಣಾಯಾ)
ವಿಡಂಕಿಆ. ಸ್ತ್ರೀ: [ದೇ] ವೇದಿಕೆ, ಯಜ್ಞ ವೇದಿಕೆ
ವಿಡಂಗ. 'ವಿಡಂಕ' ಶಬ್ದವನ್ನು ನೋಡುವುದು.
ವಿಡಂಗ. ಪುಂನ: [ವಿಡಂಗ] ವಾಯು ವಿಳಂಗ (=ಔಷಧಿ), ವಿ: ತಿಳಿದವನು, ಬುದ್ಧಿ ವಂತ, ವಿದಗ್ಧ
ವಿಡಂಬ. ಸಕ: [ವಿ+ಡಂಬಯ್] ತಿರಸ್ಕರಿಸು, ಅಪಮಾನಿಸು, ದುಃಖ ಕೊಡು. ಅನುಕರಿಸು. **'ವಿಡಂಬಇ'. ವ. ಕೃ: ವಿಡಂಬಂತ**
ವಿಡಂಬ. ಸಕ: [ವಿ+ಡಂಬಯ್] ಹರಡಿಸು, ಅಗಲಮಾಡು,
ವಿಡಂಬ. ಪುಂನ: [ವಿಡಂಬ] ತಿರಸ್ಕಾರ, ಅಪಮಾನ, ಮಾಯಾಜಾಲ, ಮೋಸ
ವಿಡಂಬಗ. ವಿ: [ವಿಡಂಬಕ] ವಿಡಂಬನೆ ಮಾಡುವವನು

ವಿಡಂಬಣಾ. ಸ್ತ್ರೀ: [ವಿಡಂಬನಾ] ತಿರಸ್ಕಾರ. ಅಪಮಾನ, ದುಃಖ, ಕಷ್ಟ, ಅನುಕರಣೆ, ಉಪಹಾಸ, ಕಪಟ-ವೇಷ(ಕಪ್ಪೂ)

ವಿಡಂಬಿಯ. ವಿ: [ವಿಡಂಬಿತ] ವಿಡಂಬಿಸಲ್ಪಟ್ಟ

ವಿಡಜ್ಝಮಾಣ. ವಿ: [ವಿದಹ್ಯಮಾನ] ಸುಡಲ್ಪಡುತ್ತಿರುವ, ದಹಿಸಲ್ಪಡುತ್ತಿರುವ(ಆಚಾ)

ವಿಡಡ್ಢ. 'ವಿದಡ್ಢ' ಶಬ್ದವನ್ನು ನೋಡುವುದು.

ವಿಡಪ್ಪ}. ಪು: [ದೇ] ರಾಹು.

ವಿಡಯ}.

ವಿಡವ. ಪು: [ವಿಟಪ] ಲತೆ, ಬಳ್ಳಿ, ಪಲ್ಲವ, ಚಿಗುರು, ಮರದ ಕೊಂಬೆ, ಕುಡಿ, ಚಿಗುರಿನ ಪಸರ,

ವಿಡವಿ. ಪು: [ವಿಟಪಿನ್] ಮರ(ಪಾಅ)

ವಿಡವಿಡ}. ಸಕ: [ರಚಯ್] ನಿರ್ಮಿಸು, ಮಾಡು

ವಿಡವಿಡ್ಡ}.

ವಿಡಿಅ. ವಿ: [ವ್ರೀಡಿತ] ಲಜ್ಜಿತ, ನಾಚಿಕೊಂಡವ,

ವಿಡಿಂಚಿಅ}. ವಿ: [ದೇ] ವಿಕರಾಳ, ಭೀಷಣ, ಭಯಂಕರ

ವಿಡಿಂಚಿರ}. (ದೇ)

ವಿಡಿಮ. ಪು: [ದೇ] ಮರಿಜಿಂಕೆ, ಖಡ್ಗಮೃಗ, ಮರ, ಕೊಂಬೆ(ಪಣ್ಣ)

ವಿಡಿಮಾ. ಸ್ತ್ರೀ: [ದೇ] ಶಾಖೆ, ಕೊಂಬೆ

ವಿಡುಚ್ಛಅ. ವಿ: [ದೇ] ನಿಷಿದ್ಧ, ತಡೆಯಲ್ಪಟ್ಟ

ವಿಡುವಿಲ್ಲ.. ವಿ: [ದೇ] ಭೀಷಣ, ಭಯಂಕರ

ವಿಡೂರ. ಪು: [ವಿದೂರ] ಪರ್ವತ-ವಿಶೇಷ, ವೈಢೂರ್ಯ, ರತ್ನದ ಗಣಿ ಇರುವ ಪ್ರದೇಶ.

ವಿಡೋಮಿಅ. ಪು: [ದೇ] ಖಡ್ಗಮೃಗ

ವಿಡ್ಡ. ವಿ: [ದೇ] ಉದ್ದವಾದ, ದೀರ್ಘವಾದ, ವಿಸ್ತಾರವಾದ(ದೇ)

ವಿಡ್ಡ. ವಿ: [ವ್ರೀಡ, ವ್ರೀಡಿತ] ಲಜ್ಜಿತ, ನಾಚಿದವನು

ವಿಡ್ಡರ. 'ವಿಡ್ಡಿರ' ಶಬ್ದವನ್ನು ನೋಡುವುದು.

ವಿಡ್ಡಾ. ಸ್ತ್ರೀ: [ವ್ರೀಡಾ] ಲಜ್ಜೆ, ನಾಚಿಕೆ(ದೇ)

ವಿಡ್ಡಾರ. ನ:[ವಿದ್ವಾರ]'ವಿಡ್ಡೇರ'ಶಬ್ದವನ್ನು ನೋಡುವುದು.

ವಿಡ್ಡಿರ. ನ: [ದೇ] ವಿಸ್ತಾರ, ಪೂರ್ಣವಾಗಿರುವುದು, ಆಡಂಬರ(ಪಾಅ) ವಿ: ಭಯಂಕರ, ರೌದ್ರ

ವಿಡ್ಡಿರಿಲ್ಲಾ. ಸ್ತ್ರೀ: [ದೇ] ರಾತ್ರಿ, ನಿಶೆ(ದೇ)

ವಿಡ್ಡುಮ. 'ವಿದ್ದುಮ' ಶಬ್ದವನ್ನು ನೋಡುವುದು.

ವಿಡ್ಡುರಿಲ್ಲ. ವಿ: [ವೈಡೂರ್ಯವತ್] ವೈಡೂರ್ಯ ರತ್ನ ಹೊಂದಿರುವ(ಸುಪಾ)

ವಿಡ್ಡುರೀ. ಸ್ತ್ರೀ: [ದೇ] ಆಡಂಬರ

ವಿಡ್ಡೇರ. ನ: [ವಿಡ್ಡೇರ] ಪೂರ್ವದ ದ್ವಾರದ ನಕ್ಷತ್ರಗಳಲ್ಲಿ ಪೂರ್ವದಿಕ್ಕಿನಿಂದ ಹೋಗುವ ಬದಲು ಪಶ್ಚಿಮ ದಿಕ್ಕಿನಿಂದ ಹೋದಾಗ ಬರುವ ನಕ್ಷತ್ರ(ವಿಸೇ). 'ವಿಡ್ಡಾರ' ಶಬ್ದವನ್ನು ನೋಡುವುದು.

ವಿಢಜ್ಜ(ಶೌ). ಸಕ: [ವಿ+ದಹ್] ಸುಡು, ದಹಿಸು

ವಿಢಣಾ. ಸ್ತ್ರೀ: [ದೇ] ಮೀನಖಂಡದ ಕೆಳಗಿನ ಭಾಗ, ಹಿಮ್ಮಡಿ

ವಿಢತ್ತ. ವಿ: [ಅರ್ಜಿತ] ಸಂಪಾದಿಸಿದ(ಗಉಡ)

ವಿಢತ್ತಿ. ಸ್ತ್ರೀ: [ಅರ್ಜಿತಿ] ಸಂಪಾದನೆ, ಉಪಾರ್ಜನೆ (ಶ್ರಾ)

ವಿಢಪ್ಪ. ಅಕ: [ವೃತ್+ಪದ್] ಪ್ರಕೃತಿ, ಪ್ರತ್ಯಯಗಳ ಜೋಡಣೆಯಿಂದ ಉತ್ಪನ್ನವಾಗು, ಶಬ್ದಗಳು ನಿಷ್ಪನ್ನವಾಗು

ವಿಢಪ್ಪ-. ಮುಂದಿನ ಶಬ್ದವನ್ನು ನೋಡುವುದು.

ವಿಢವ. ಸಕ: [ಅರ್ಜ್] ಸಂಪಾದಿಸು, ಅರ್ಜಿಸು

ವಿಢವಣ. ನ: [ಅರ್ಜನ] ಸಂಪಾದನೆ, ಉಪಾರ್ಜನೆ

ವಿಢವಿಅ. ವಿ: [ಅರ್ಜಿತ] ಸಂಪಾದಿಸಿದ, ಅರ್ಜಿಸಿದ

ವಿಢಿಅ. ವಿ: [ವೇಷ್ಟಿತ] ಸುತ್ತಲ್ಪಟ್ಟ(ಸುಪಾ)

ವಿಣಇ. ವಿ: [ವಿನಯಿನ್] ದೂರಕ್ಕೆ ಒಯ್ಯುವವ(ಆಚಾ)

ವಿಣಇತ್ತ. ವಿ: [ವಿನಯುವತ್] ವಿನಯುವುಳ್ಳ, ವಿನಯವನ್ನೇ ಎಲ್ಲಕ್ಕಿಂತ ಮುಖ್ಯವೆಂದು ತಿಳಿದವ

ವಿಣಇತ್ತು. ವಿ: [ವಿನೇತೃ] ವಿನೀತಗೊಳಿಸುವವನು, ವಿನಯದ ಶಿಕ್ಷೆ ನೀಡುವವನು(ಉತ್ತ)

ವಿಣಇತ್ತು. ವಿ: ['ವೀಣೇ=ವಿ+ನೀ'] ಶಬ್ದವನ್ನು ನೋಡುವುದು.

ವಿಣಇಯ. ವಿ: [ವಿನಯಿತ] ಶಿಕ್ಷಣ ನೀಡಲ್ಪಟ್ಟ, ಕಲಿಸಲ್ಪಟ್ಟ. 'ವಿಣ್ಣಯ' ಶಬ್ದವನ್ನು ನೋಡುವುದು.

ವಿಣಇಲ್ಲ. 'ವಿಣಇತ್ತ' ಶಬ್ದವನ್ನು ನೋಡುವುದು.

ವಿಣಎತ್ತು. 'ವಿಣೇ=ವಿ+ನೀ' ಶಬ್ದವನ್ನು ನೋಡುವುದು.

ವಿಣಟ್ಠ. ವಿ: [ವಿನಷ್ಟ] ನಾಶವಾದ(ಉವ)

ವಿಣಡ. ಸಕ: [ವಿ+ನಟಂಯ್, ವಿ+ಗುಪ್] ವ್ಯಾಕುಲಗೊಳಿಸು, ತಿರಸ್ಕರಿಸು, ಅಪಮಾನಿಸು

ವಿಣಡಿಅ. 'ವಿನಡಿಅ' ಶಬ್ದವನ್ನು ನೋಡುವುದು.

ವಿಣಣ. ನ: [ವಾನ] ಬಟ್ಟೆ ನೇಯುವುದು(ಬೃಹ)ಸ

ವಿಣಭ. ಸಕ: [ಖೇದಯ್] ದುಃಖಪಡಿಸು, ಚಂತೆಗೀಡು ಮಾಡು

ವಿಣಮ. **ಸಕ:** [**ವಿ+ನಮ್**] ವಿಶೇಷ ರೀತಿಯಲ್ಲಿ ನಮಸ್ಕರಿಸು, ಬಾಗು. ವ. ಕೃ: 'ವಿಣಮಂತ'

ವಿಣಮಿ. 'ವಿನಮಿ' ಶಬ್ದವನ್ನು ನೋಡುವುದು.

ವಿಣಮಿಅ. **ವಿ:** [**ವಿನತ**] ವಿಶೇಷ ರೀತಿಯಲ್ಲಿ ಬಾಗಿದ, ನಮಸ್ಕರಿಸಿದ(ಔಪ)

ವಿಣಮಿಅ. **ವಿ:** [**ವಿನಮಿತ**] ಬಾಗಿಸಲ್ಪಟ್ಟ, ನಮಸ್ಕಾರ ಮಾಡಿಸಲ್ಪಟ್ಟ(ಗಉಡ)

ವಿಣಯ. **ಪು:** [**ವಿನಯ**] ಎದ್ದು ನಿಲ್ಲುವುದು, ನಮಸ್ಕಾರವೇ ಮೊದಲಾದ ಭಕ್ತಿ, ಸಭ್ಯತೆ, ಮರ್ಯಾದೆ, ನಮ್ರತೆ, ಶಿಷ್ಟತೆ ತೋರುವುದು (ಆಚಾ), ಸಂಯಮ, ಚಾರಿತ್ರ, ಒಂದು ನರಕ-ಸ್ಥಾನ, ದೂರವಾಡುವುದು, ದೂರಕ್ಕೆ ಒಯ್ಯುವುದು, ಶಿಕ್ಷಣ, ಅನುನಯ, ವಿ:ವಿನಯದಿಂದ ಕೂಡಿದ, ವಿನೀತ ವ್ಯಕ್ತಿ, ಶಾಂತನಾದ, ಎಸೆಯಲ್ಪಟ್ಟ, ಜಿತೇಂದ್ರಿಯ, ಸಂಯಮಿ, **ಪು:** ಶಾಸ್ತ್ರದಲ್ಲಿ ಹೇಳಿರುವಂತೆ ಪ್ರಜೆಗಳನ್ನು ಪಾಲಿಸುವುದು(ಗಉಡ)–**ಮಂತ.** **ವಿ:** [**–ವತ್**] ವಿನಯದಿಂದ ಕೂಡಿದ, ವಿನಯಿ

ವಿಣಯ. **ವಿ:** [**ವಿನತ**] ನಮಸ್ಕರಿಸಿದ, ತಲೆ ಬಗ್ಗಿಸಿರುವ(ಔಪ), **ಪುಂನ:** ಒಂದು ದೇವ-ವಿಮಾನ.

ವಿಣಯ–. **'ವಿಣಯಾ'** ಶಬ್ದವನ್ನು ನೋಡುವುದು. **–ತಣಯ.** **ಪು:** [**–ತನಯ**] ಗರುಡ ಪಕ್ಷಿ. **–ಸುಅ.** **ಪು:** [**–ಸುತ**] ಅದೇ ಅರ್ಥ(ಪಾಅ)

ವಿಣಯಯಿತ್ತು. **'ವಿಣಯಿತ್ತು'** ಶಬ್ದವನ್ನು ನೋಡುವುದು.

ವಿಣಯಂಧರ. **ಪು:** [**ವಿನಯಂಧರ**] ಒಬ್ಬ ಸೇಠನ ಮಗ

ವಿಣಯಣ. **ನ:** [**ವಿನಯನ**] ವಿನಯದ ಶಿಕ್ಷಣ

ವಿಣಯಾ. **ಸ್ತ್ರೀ:** [**ವಿನತಾ**] ಗರುಡ ಪಕ್ಷಿಯ ತಾಯಿ. (ಸುಪಾ)

ವಿಣಸ. **'ವಿಣಸ್ಸ'** ಶಬ್ದವನ್ನು ನೋಡುವುದು.

ವಿಣಸಿರ. **ವಿ:** [**ವಿನಶ್ವರ**] ನಾಶವಾಗುವಂಥ, ನಶ್ವರ(ದೇ)

ವಿಣಸ್ಸ. **ಅಕ:** [**ವಿ+ನಶ್**] ನಾಶಹೊಂದು, ಅಳಿ (ಉವುದು)

ವಿಣಸ್ಸರ. **'ವಿಣಸಿರ'** ಶಬ್ದವನ್ನು ನೋಡುವುದು.

ವಿಣಾ. **ಅ:** [**ವಿನಾ**] ಹೊರತು, ಬಿಟ್ಟು, ಉಳಿದು

ವಿಣಾಮಿದ(ಶೌ). **'ವಿಣಮಿಅ=ವಿನಮಿತ'** ಶಬ್ದವನ್ನು ನೋಡುವುದು.

ವಿಣಾಯಗ. **ಪು:** [**ವಿನಾಯಕ**] ಯಕ್ಷ, ಒಂದು ದೇವ-ಜಾತಿ(ಪಉಮ), ಗಣಪತಿ, ಗರುಡ. **–ತ್ಥ.** **ನ:** [**ವಿನಾಯಕಾಸ್ತ್ರ**] ಗರುಡಾಸ್ತ್ರ(ಪಉಮ)

ವಿಣಾಸ. **'ವಿಣಸ್ಸ'** ಶಬ್ದವನ್ನು ನೋಡುವುದು.

ವಿಣಾಸ. **ಸಕ:** [**ವಿ+ನಾಶಯ್**] ನಾಶವಾಡು, ಧ್ವಂಸಗೊಳಿಸು. **'ವಿಣಾಸೇಇ'**

ವಿಣಾಸ. **ಪು:** [**ವಿನಾಶ**] ನಾಶ, ಅಳಿವು, ಧ್ವಂಸ(ಉವ), ಮರೆಯಾಗುವುದು

ವಿಣಾಸಗ. **ವಿ:** [**ವಿನಾಶಕ**] ನಾಶಮಾಡುವವನು, ಹಾಳುಮಾಡುವವನು

ವಿಣಾಸಣ. **ನ:** [**ವಿನಾಶನ**] ವಿನಾಶ, ಅಳಿವು, ಧ್ವಂಸ(ಭವಿ), **ವಿ:** ನಾಶ ಮಾಡುವವನು.

ವಿಣಾಸಿಅ. **ವಿ:** [**ವಿನಾಶಿತ**] ನಾಶಹೊಂದಿದ, ಅಳಿದ

ವಿಣಿ–. **'ವಿಣೀ'** ಶಬ್ದವನ್ನು ನೋಡುವುದು.

ವಿಣಿಅಂಸಣ. **ನ:** [**ವಿನಿದರ್ಶನ**] ವಿಶೇಷವಾದ ನಿದರ್ಶನ, ದೃಷ್ಟಾಂತ

ವಿಣಿಅಂಸಣ. **ವಿ:** [**ವಿನಿವಸನ**] ವಸ್ತ್ರ-ರಹಿತ, ನಗ್ನ, ಬೆತ್ತಲೆ(ಗಾ)

ವಿಣಿಇತ್ತು. **'ವಿಣಇತ್ತು'** ಶಬ್ದವನ್ನು ನೋಡುವುದು(ಉತ್ತ)

ವಿಣಿಉತ್ತ. **ವಿ:** [**ವಿನಿಯುಕ್ತ**] ಕಾರ್ಯದಲ್ಲಿ ತೊಡಗಿರುವ(ಪ), ನಿಯಮಿಸಲ್ಪಟ್ಟ

ವಿಣಿಓಗ. **ಪು:** [**ವಿನಿಯೋಗ**] ಉಪಯೋಗ, ಜ್ಞಾನ(ವಿಸೇ), ಕಾರ್ಯದಲ್ಲಿ ತೊಡಗಿಸುವುದು, ವಿನಿಮಯ, ಹಂಚುವುದು

ವಿಣಿಓಯ. **ಸಕ:** [**ವಿನಿ+ಯೋಜಯ್**] ಸೇರಿಸು, ಜೋಡಿಸು, ತೊಡಗಿಸು(ವುದು)

ವಿಣಿಂತ. **'ವಿಣೀ=ವಿನಿರ್+ಇ'** ಶಬ್ದವನ್ನು ನೋಡುವುದು.

ವಿಣಿಕುಟ್ಟಿಯ. **ವಿ:** [**ವಿನಿಕುಟ್ಟಿತ**] ಬಡಿದು ಕೂಡಿಸಲ್ಪಟ್ಟ,

ವಿಣಿಕ್ಕಮ. **'ವಿಣಿಕ್ಖಮ'** ಶಬ್ದವನ್ನು ನೋಡುವುದು.

ವಿಣಿಕ್ಕಸ. **ಸಕ:** [**ವಿನಿ+ಕೃಷ್**] ಎಳೆದು ಹೊರಹಾಕು

ವಿಣಿಕ್ಖಂತ. **ವಿ:** [**ವಿನಿಷ್ಕ್ರಾಂತ**] ಹೊರಹಾಕಲ್ಪಟ್ಟ, ಮನೆಯನ್ನು ತ್ಯಜಿಸಿ, ಸಂನ್ಯಾಸ ಸ್ವೀಕರಿಸಿದವನು

ವಿಣಿಕ್ಖಮ. **ಅಕ:** [**ವಿನಿಸ್+ಕ್ರಮ್**] ಹೊರಹಾಕು, ಸಂನ್ಯಾಸ ಸ್ವೀಕರಿಸು

ವಿಣಿಕ್ಖಮಣ. **ನ:** [**ವಿನಿಷ್ಕ್ರಮಣ**] ಹೊರಹಾಕುವುದು, ಸಂನ್ಯಾಸ ತೆಗೆದುಕೊಳ್ಳುವುದು

ವಿಣಿಕ್ಖಿತ್ತ. ವಿ: [ವಿನಿಕ್ಷಿಪ್ತ] ಎಸೆಯಲ್ಪಟ್ಟ(ಮೃಚ್ಛ), ಇಡಲ್ಪಟ್ಟ
ವಿಣಿಗಿಣ್ಹ. ಸಕ: [ವಿನಿ+ಗ್ರಹ್] ನಿಗ್ರಹಿಸು, ದಂಡಿಸು, ಶಿಕ್ಷಿಸು
ವಿಣಿಗೂಹ. ಸಕ: [ವಿನಿ+ಗೂಹಯ್] ಅಡಗಿಸಿಡು, ಮುಚ್ಚಿಡು
ವಿಣಿಗ್ಗಮ. ಪು: [ವಿನಿರ್ಗಮ] ಹೊರಹೋಗು
ವಿನಿಗ್ಗಯ. ವಿ: [ವಿನಿರ್ಗತ] ಹೊರಹೋಗಿರುವ(ಭವಿ)
ವಿಣಿಘಾಯ. ಪು: [ವಿನಿಘಾತ] ಮರಣ, ಸಾವು, ಪ್ರಪಂಚ, ಜಗತ್ತು, ಭವದಲ್ಲಿ ಸುತ್ತಾಟ
ವಿಣಿಚ್ಛ. ಸಕ: [ವಿನಿಸ್+ಚಿ] ನಿಶ್ಚಯಿಸು, ನಿರ್ಧರಿಸು
ವಿನಿಚ್ಛಯ. ಪು: [ವಿನಿಶ್ಚಯ] ನಿಶ್ಚಯ, ನಿರ್ಣಯ, ಪರಿಜ್ಞಾನ(ಪಣ್ಹ)
ವಿಣಿಚ್ಛಿಅ. ವಿ: [ವಿನಿಶ್ಚಿತ] ನಿಶ್ಚಯಿಸಲ್ಪಟ್ಟ, ನಿರ್ಣಯಿಸಲ್ಪಟ್ಟ(ಭಗ)
ವಿಣಿಜುಂಜ. ಸಕ: [ವಿನಿ+ಯುಜ್] ಸೇರಿಸು, ಜೋಡಿಸು, ಕೆಲಸಕ್ಕೆ ತೊಡಗಿಸು, ನಿಯಮಿಸು
ವಿಣಿಜ್ಜಂತಣ. ವಿ: [ವಿನಿಯಂತ್ರಣ] ನಿಯಂತ್ರಣವಿಲ್ಲದ, ತೆರೆದ, ಕಪಟ ರಹಿತ, ಕೃತಕವಲ್ಲದ
ವಿಣಿಜ್ಜರಣ}. ನ: [ವಿನಿರ್ಜರಣ]ವಿನಾಶ, ನಿರ್ಜರ
ವಿಣಿಜ್ಜರಾ}. ಸ್ತ್ರೀ: [ವಿನಿರ್ಜರಾ]
ವಿಣಿಜ್ಜಿಅ. ವಿ: [ವಿನಿರ್ಜಿತ] ಸೋಲಿಸಲ್ಪಟ್ಟ
ವಿಣಿದ್ದ. ವಿ: [ವಿನಿದ್ರ] ವಿಕಸಿತ, ಅರಳಿದ(ಪಾಅ)
ವಿಣಿದ್ದಲಿಯ. ವಿ: [ವಿನಿರ್ದಲಿತ] ಸೀಳಲ್ಪಟ್ಟ, ಮುರಿಯಲ್ಪಟ್ಟ
ವಿಣಿದ್ಧುಣ. ಸಕ: [ವಿನಿರ್+ಧೂ] ಅಲುಗಾಡಿಸು, ಅಲ್ಲಾಡಿಸು
ವಿಣಿಪ್ಫನ್ನ. ವಿ: [ವಿನಿಷ್ಪನ್ನ] ಫಲಪ್ರದವಾಗುವಂತೆ ಮಾಡಲ್ಪಟ್ಟ, ಸಂಪೂರ್ಣ ಫಲವನ್ನು ಹೊಂದಿದವ(ಉಪ)
ವಿಣಿಪ್ಫಿಡಿಅ. ವಿ: [ವಿನಿಸ್ಫಿಟಿತ] ಹೊರಗೆ ಹೋದ (ಪಉಮ)
ವಿಣಿಬುಡ್ಡ. 'ವಿಣಿವುಡ್ಡ' ಶಬ್ದವನ್ನು ನೋಡುವುದು.
ವಿಣಿಬ್ಭಿನ್ನ. ವಿ: [ವಿನಿರ್ಭಿನ್ನ] ಸೀಳಲ್ಪಟ್ಟ, ಭೇದಿಸಲ್ಪಟ್ಟ
ವಿಣಿಮೀಲಿಅ. ವಿ: [ವಿನಿಮೀಲಿತ] ಕಣ್ಣು ಮುಚ್ಚಿಕೊಂಡಿರುವ
ವಿಣಿಮುಕ್ಕ. 'ವಿಣಿಮ್ಮುಕ್ಕ' ಶಬ್ದವನ್ನು ನೋಡುವುದು.
ವಿಣಿಮುಯ. 'ವಿಣಿಮ್ಮುಯ' ಶಬ್ದವನ್ನು ನೋಡುವುದು.
ವಿಣಿಮ್ಮವಿಅ. ವಿ: [ವಿನಿರ್ಮಿತ] ನಿರ್ಮಿಸಲ್ಪಟ್ಟ, ರಚಿಸಲ್ಪಟ್ಟ, ಮಾಡಲ್ಪಟ್ಟ
ವಿಣಿಮ್ಮಾಣ. ನ: [ವಿನಿರ್ಮಾಣ] ರಚನೆ, ಕೃತಿ
ವಿಣಿಮ್ಮಿಅ. 'ವಿಣಿಮ್ಮವಿಅ' ಶಬ್ದವನ್ನು ನೋಡುವುದು.
ವಿಣಿಮ್ಮುಕ್ಕ. ವಿ: [ವಿನಿರ್ಮುಕ್ತ] ಪರಿತ್ಯಜಿಸಲ್ಪಟ್ಟ(ಉತ್ತ)
ವಿಣಿಮ್ಮುಯ. ವಿ: [ವಿನಿರ್+ಮುಚ್] ಬಿಡುವುದು, ತ್ಯಜಿಸುವುದು
ವಿಣಿಯ. 'ವಿಣೀಅ' ಶಬ್ದವನ್ನು ನೋಡುವುದು.
ವಿಣಿಯಟ್ಟ. 'ವಿಣಿವಟ್ಟ' ಶಬ್ದವನ್ನು ನೋಡುವುದು.
ವಿಣಿಯುಟ್ಟ. ವಿ: [ವಿನಿವೃತ್ತ] ಹಿಂದೆ ಸರಿದ, ನಿವೃತ್ತಿಹೊಂದಿದ, ಬಿಟ್ಟುಹೋದ
ವಿಣಿಯಟ್ಟಣಯಾ. ಸ್ತ್ರೀ: [ವಿನಿವರ್ತನಾ] ನಿವೃತ್ತಿ
ವಿಣಿಯತ್ತ. 'ವಿಣಿಯಟ್ಟ' ಶಬ್ದವನ್ನು ನೋಡುವುದು
ವಿಣಿಯುತ್ತಿ. ಸ್ತ್ರೀ: [ವಿನಿವೃತ್ತಿ] ತ್ಯಜಿಸುವುದು, ಪರಿಹರಿಸುವುದು, ಬಿಟ್ಟುಹೋಗುವುದು (ಗಉಡ)
ವಿಣಿರೋಹ. ಪು: [ವಿನಿರೋಧ] ಪ್ರತಿಬಂಧ, ತಡೆ, ಅಡಚಣೆ(ಭವಿ)
ವಿಣಿವಟ್ಟ. ಅಕ: [ವಿನಿ+ವೃತ್] ನಿವೃತ್ತನಾಗು, ಹಿಂದೆಸರಿ
ವಿಣಿವಟ್ಟಣಯಾ. ಸ್ತ್ರೀ: [ವಿನಿವರ್ತನಾ] ನಿವರ್ತನೆ, ವಿರಾಮ, ಹಿಂದಕ್ಕೆ ಬರುವುದು
ವಿಣಿವಡಿಅ. ವಿ: [ವಿನಿಪತಿತ] ಕೆಳಕ್ಕೆ ಬಿದ್ದಿರುವ(ದೇ)
ವಿಣಿವತ್ತಿ. 'ವಿಣಿಯತ್ತಿ' ಶಬ್ದವನ್ನು ನೋಡುವುದು.
ವಿಣಿವಾಇ. ವಿ: [ವಿನಿಪಾತಿನ್] ಹೊಡೆದು ಬೀಳಿಸುವವನು(ಗಾ)
ವಿಣಿವಾಇಯ. ವಿ: [ವಿನಿಪಾತಿಕ] ಒಂದು ಬಗೆಯ ನಾಟಕ
ವಿಣಿವಾಇಯ. ವಿ: [ವಿನಿಪಾತಿತ] ಹೊಡೆದು ಉರುಳಿಸಲ್ಪಟ್ಟ, ಕೊಲ್ಲಿಸಲ್ಪಟ್ಟ
ವಿಣಿವಾವಿ. ಸಕ: [ವಿನಿ+ಪಾತಯ್] ಹೊಡೆದು ಉರುಳಿಸು
ವಿಣಿವಾಡಿಅ. 'ವಿಣಿವಾಇಯ' ಶಬ್ದವನ್ನು ನೋಡುವುದು.
ವಿಣಿವಾದ}. ಪು: [ವಿನಿಪಾತ] ಕೆಳಗೆ ಬೀಳುವುದು,
ವಿಣಿವಾಯ}. ವಿನಾಶ, ಸಾವು, ಮೃತ್ಯು, ಜಗತ್ತು
ವಿಣಿವಾಯಣ. ನ: [ವಿನಿಪಾತನ] ಹೊಡೆದು ಬೀಳಿಸುವುದು(ಪಉಮ)

ವಿಣಿವಾರ. ಸಕ: [ವಿನಿ+ವಾರಯ್] ತಡೆ, ಅಡ್ಡಿಪಡಿಸು, ನಿಷೇಧಿಸು, 'ವಿಣಿವಾರಇ'

ವಿಣಿವಾರಣ. ನಿ: [ವಿನಿವಾರಣ] ನಿಷೇಧ, ಅಡಚಣೆ,ತಡೆ, ವಿ: ನಿವಾರಿಸುವವನು, ತಡೆಯುವವ (ಪಂಚಾ)

ವಿಣಿವಾರಿ. ವಿ: [ವಿನಿವಾರಿನ್] ನಿವಾರಿಸುವವನು, ಹೋಗಲಾಡಿಸುವವನು

ವಿಣಿವಾರಿಯ. ವಿ: [ವಿನಿವಾರಿತ] ನಿಷೇಧಿಸಲ್ಪಟ್ಟ, ಪರಿಹರಿಸಲ್ಪಟ್ಟ, ತಡೆಯಲ್ಪಟ್ಟ

ವಿಣಿವಿಟ್ಠ ವಿ: [ವಿನಿವಿಷ್ಟ] ಕುಳಿತುಕೊಂಡಿರುವ (ಉವ), ಆಸಕ್ತನಾದ, ತಲ್ಲೀನನಾದ(ಆಚಾ)

ವಿಣಿವಿತ್ತ. 'ವಿಣಿಯಟ್ಟ' ಶಬ್ದವನ್ನು ನೋಡುವುದು.

ವಿಣಿವಿತ್ತಿ. 'ವಿಣಿಯತ್ತಿ' ಶಬ್ದವನ್ನು ನೋಡುವುದು.

ವಿಣಿವುಡ್ಡ. ವಿ: [ವಿನಿಮಗ್ನ] ಮುಳುಗಿರುವ, ತೊಯ್ದು ಹೋದ

ವಿಣಿವೇಇಅ. ವಿ: [ವಿನಿವೇದಿತ] ತಿಳಿಸಲ್ಪಟ್ಟ, ವಿಜ್ಞಾಪಿಸಲ್ಪಟ್ಟ

ವಿಣಿವೇಸ. ಪು: [ವಿನಿವೇಶ] ಇಡುವುದು, ಇರಿಸುವುದು, ವಿನ್ಯಾಸ, ರಚನೆ(ಗಲುಡ)

ವಿಣಿವೇಸಿಅ. ವಿ: [ವಿನಿವೇಶಿತ] ಇಡಲ್ಪಟ್ಟ, ಇರಿಸಲ್ಪಟ್ಟ

ವಿಣಿವ್ವರ. ನ: [ದೆ] ಪಶ್ಚಾತ್ತಾಪ.

ವಿಣಿವ್ವವಣ. ನ: [ವಿನಿರ್ವಪನ] ಶಾಂತಿ, ದಾಹದ ಉಪಶಮನ

ವಿಣಿಸ್ಸರಿಯ. ವಿ: [ವಿನಿಃಸೃತ] ಹೊರಹಾಕಲ್ಪಟ್ಟ

ವಿಣಿಸ್ಸಹ. ವಿ: [ವಿನಿಸ್ಸಹ] ಆಯಾಸಗೊಂಡ, ದಣಿದಿರುವ

ವಿಣಿಹ-. 'ವಿಣಿಹಣ' ಶಬ್ದವನ್ನು ನೋಡುವುದು.

ವಿಣಿಹಟ್ಟು. 'ವಿಣಿಹಾ' ಶಬ್ದವನ್ನು ನೋಡುವುದು.

ವಿಣಿಹಣ. ಸಕ: [ವಿನಿ+ಹನ್] ಹೊಡೆದುಹಾಕು, ಸಾಯಿಸು(ಸೂಅ)

ವಿಣಿಹಯ. ವಿ: [ವಿನಿಹತ] ಕೊಲ್ಲಲ್ಪಟ್ಟ, ಸಾಯಿಸಲ್ಪಟ್ಟ

ವಿಣಿಹಾ. ಸಕ: [ವಿನಿ+ಧಾ] ವ್ಯವಸ್ಥೆಗೊಳಿಸು, ಸ್ಥಾಪಿಸು

ವಿಣಿಹಾಯ. 'ವಿಣಿಘಾಯ' ಶಬ್ದವನ್ನು ನೋಡುವುದು (ಣಾಯಾ)

ವಿಣಿಹಿಅ}. ವಿ: [ವಿನಿಹಿತ] ಇಡಲ್ಪಟ್ಟ, ಇರಿಸಲ್ಪಟ್ಟ(ಗಾ)
ವಿಣಿಹಿತ}.

ವಿಣಿಹಿತ್ತು. 'ವಿಣಿಹಾ' ಶಬ್ದವನ್ನು ನೋಡುವುದು.

ವಿಣೀ. ಅಕ: [ವಿನಿರ್+ಇ] ಹೊರಗೆ ಹೋಗು, ಹೊರಗೆ ಹೊರಡು. ವ. ಕೃ: 'ವಿಣಿಂತ'

ವಿಣೀ. ಸಕ: [ವಿ+ನೀ] ದೂರಮಾಡು, ಅತ್ತ ಸರಿಸು, ತೊಲಗಿಸು, ಕಲಿಸು

ವಿಣೀಅ. ವಿ: [ವಿನೀತ] ದೂರಕ್ಕೆ ಒಯ್ಯಲ್ಪಟ್ಟ, ತೊಲಗಿಸಲ್ಪಟ್ಟ, ಹೊರದೂಡಲ್ಪಟ್ಟ, ಚೆನ್ನಾಗಿ ಶಿಕ್ಷಣ ನೀಡಲಾದ, ವಿನಯದಿಂದ ಕೂಡಿದ, ನಮ್ರ, ಶಿಷ್ಟ(ಉವ)

ವಿಣೀಆ. ಸ್ತ್ರೀ: [ವಿನೀತಾ] ಅಯೋಧ್ಯಾ ನಗರಿ(ಕಪ್ಪ)

ವಿಣೀಲ. ವಿ: [ವಿನೀಲ] ವಿಶೇಷವಾದ ಹಸಿರು ಬಣ್ಣದ(ಗಲುಡ)

ವಿಣು.(ಅಪ). 'ವಿಣಾ' ಶಬ್ದವನ್ನು ನೋಡುವುದು.

ವಿಣೇಅ. ವಿ: [ವಿನೇಯ] ಶಿಕ್ಷಣಕ್ಕೆ ಅರ್ಹನಾದ, ಶಿಷ್ಯ, ಶಿಕ್ಷಿಸಲ್ಪಡುವ

ವಿಣೋಅ. ಸಕ: [ವಿ+ನೋದಯ್] ತುಂಡುಮಾಡು, ದೂರಮಾಡು, ತೊಲಗಿಸು, ಕ್ರೀಡಿಸು, ಕುತೂಹಲ ಉಂಟುಮಾಡು, ಆನಂದಪಡಿಸುವ. ಕೃ: 'ವಿಣೋದಂತ'

ವಿಣೋಅ. ಪು: [ವಿನೋದ] ಆಟ, ಕ್ರೀಡೆ, ಕುತೂಹಲ, ಕೌತುಕ(ಗಲುಡ) ಪ್ರಮೋದ

ವಿಣೋಇಅ. ವಿ: [ವಿನೋದಿತ] ವಿನೋದದಿಂದ ಕೂಡಿದ

ವಿಣೋಯಕ}. ವಿ: [ವಿನೋದಕ] ಕುತೂಹಲ-ಜನಕ
ವಿಣೋಯಗ}.

ವಿಣೋಯಣ. ನ: [ವಿನೋದನ] ದೂರಮಾಡುವುದು, ದೂರಕ್ಕೆ ಒಯ್ಯುವುದು, ಕುತೂಹಲ, ಕೌತುಕ, ಸಂತೋಷಪಡಿಸುವುದು

ವಿಣ್ಣ. 'ವಿಣ್ಣು' ಶಬ್ದವನ್ನು ನೋಡುವುದು.

ವಿಣ್ಣದವ್ವ. 'ವಿಣ್ಣಯ' ಶಬ್ದವನ್ನು ನೋಡುವುದು.

ವಿಣ್ಣತ್ತ. ವಿ: [ವಿಜ್ಞಪ್ತ] ತಿಳಿಸಲ್ಪಟ್ಟ, ನಿವೇದಿಸಲ್ಪಟ್ಟ (ಸುಪಾ)

ವಿಣ್ಣತ್ತಿ. ಸ್ತ್ರೀ: [ವಿಜ್ಞಪ್ತಿ] ಪ್ರಾರ್ಥನೆ, ವಿಜ್ಞಾಪನೆ, ನಿವೇದನೆ(ಕುಮಾ), ಜ್ಞಾನ, ತಿಳಿವು

ವಿಣ್ಣಯ. 'ವಿಣ್ಣಇಯ' ಶಬ್ದವನ್ನು ನೋಡುವುದು.

ವಿಣ್ಣಯ. 'ವಿಣ್ಣ' ಶಬ್ದವನ್ನು ನೋಡುವುದು.

ವಿಣ್ಣವ. ಸಕ: [ವಿ+ಜ್ಞಪಯ್] ಪ್ರಾರ್ಥಿಸು, ವಿನಂತಿಸು, ತಿಳಿಸು, ಹೇಳು. 'ವಿಣ್ಣವಇ' ವ ಕೃ: ವಿಣ್ಣ ವಂತ

ವಿಣ್ಣವಣಾ. ಸ್ತ್ರೀ: [ವಿಜ್ಞಾಪನಾ] ನಿವೇದನೆ, ಪ್ರಾರ್ಥನೆ, ವಿಜ್ಞಾಪನೆ. 'ವಿನ್ನವಣಾ' ಶಬ್ದವನ್ನು ನೋಡುವುದು.

ವಿಣ್ಣಾ. ಸಕ: [ವಿ+ಜ್ಞಾ] ತಿಳಿ.
ವಿಣ್ಣಾಲು. 'ವಿನ್ನಾಲು' ಶಬ್ದವನ್ನು ನೋಡುವುದು.
ವಿಣ್ಣಾಣ. 'ವಿನ್ನಾಣ' ಶಬ್ದವನ್ನು ನೋಡುವುದು (ಉವಾ)
ವಿಣ್ಣಾಣ. ನ: [ವಿಜ್ಞಾನ] ನಿಶ್ಚಯಾತ್ಮಕ ಜ್ಞಾನ
ವಿಣ್ಣಾಣಿ. ವಿ: [ವಿಜ್ಞಾನಿನ್] ನಿಪುಣ, ವಿಚಕ್ಷಣ, ಪ್ರವೀಣ
ವಿಣ್ಣಾಯ. ವಿ: [ವಿಜ್ಞಾತ] ತಿಳಿದುಬಂದ, ಗೊತ್ತಿರುವ, ವಿದಿತ(ಪಾಅ), ನ: ವಿಜ್ಞಾನ
ವಿಣ್ಣಾವ. 'ವಿಣ್ಣವ' ಶಬ್ದವನ್ನು ನೋಡುವುದು.
ವಿಣ್ಣಾಸ. ವಿ: [ವಿ+ನ್ಯಾಸಯ್] ಇಡುವುದು, ಸ್ಥಾಪಿಸುವುದು. ವ. ಕೃ: **'ವಿಣ್ಣಾಸಂತ'**
ವಿಣ್ಣಾಸ. 'ವಿನ್ಯಾಸ' ಶಬ್ದವನ್ನು ನೋಡುವುದು.
ವಿಣ್ಣಾಸಣಾ. ಸ್ತ್ರೀ: [ವಿನ್ಯಾಸನಾ] ಇರಿಸುವುದು, ಇಡುವುದು, ರಚನಾಕ್ರಮ
ವಿಣ್ಣು}. ವಿ: [ವಿಜ್ಞ] ತಿಳಿದವನು, ಪಂಡಿತ, ವಿದ್ವಾಂಸ
ವಿಣ್ಣುಅ}. (ಭಗ)
ವಿಣ್ಣೇಯ. 'ವಿಣ್ಣಾ' ಶಬ್ದವನ್ನು ನೋಡುವುದು.
ವಿಣ್ಹಾವಣಕ. ನ: [ವಿಸ್ನಾಪನಕ] ಮಂತ್ರದಿಂದ ಸಂಸ್ಕಾರಗೊಳಿಸಿದ ನೀರಿನಿಂದ ಮಾಡಿಸುವ ಸ್ನಾನ (ಪಣ್ಣ)
ವಿಣ್ಹಿ. 'ವಣ್ಹಿ=ವೃಷ್ಣಿ' ಶಬ್ದವನ್ನು ನೋಡುವುದು.
ವಿಣ್ಹು. ಪು: [ವಿಷ್ಣು] ಭಗವಾನ್ ಶ್ರೇಯಾಂಸನಾಥನ ತಂದೆಯ ಹೆಸರು, ಶ್ರವಣ ನಕ್ಷತ್ರದ ಅಧಿಪತಿ ದೇವತೆ(ತಾ). ಯದುವಂಶದ ರಾಜ ಅಂಧಕ ವೃಷ್ಣಿಯ ಒಂಬತ್ತನೇ ಮಗ. ವಿಷ್ಣುಕುಮಾರ ಎಂಬ ಹೆಸರಿನ ಒಬ್ಬ ಜೈನ ಮುನಿ. ಒಬ್ಬ ಶ್ರೇಷ್ಠಿ(ಉಪ). ವಾಸುದೇವ, ನಾರಾಯಣ, ಅಗ್ನಿ. ವ್ಯಾಪಕ, ಶುದ್ಧ, ಒಬ್ಬ ಸ್ಮೃತಿ–ವಾರ್ತಾ–ಮುನಿ. ಸ್ತ್ರೀ: ಹನ್ನೊಂದನೇ ತೀರ್ಥಂಕರನ ತಾಯಿಯ ಹೆಸರು. **–ಕುಮಾ.** ಪು: [**–ಕುಮಾರ**] ಒಬ್ಬ ಪ್ರಖ್ಯಾತ ಜೈನಮುನಿ. **–ಸಿರೀ.** ಸ್ತ್ರೀ:[**–ಶ್ರೀ**] ಒಬ್ಬ ಸಾರ್ಥವಾಹನ ಪತ್ನಿ. **'ವಿಸ್ಹು'** ಶಬ್ದವನ್ನು ನೋಡುವುದು.
ವಿತಂಡ. 'ವಿತದ್ಧ' ಶಬ್ದವನ್ನು ನೋಡುವುದು.
ವಿತಣ್ಹ. ವಿ: [ವಿತೃಷ್ಣ] ಆಸೆಯಿಲ್ಲದ, ನಿಃಸ್ಪೃಹ(ಉಪ)
ವಿತತ. ಪು: [ವಿತತ] ವಾದ್ಯದ ಒಂದು ಬಗೆಯ ಶಬ್ದ(ತಾ), ಒಂದು ಮಹಾ ಗ್ರಹ, **'ವಿಅತ್ತ'** ಶಬ್ದವನ್ನು ನೋಡುವುದು. **'ವಿಅಯ=ವಿತತ'** ಶಬ್ದವನ್ನು ನೋಡುವುದು(ತಾ)
ವಿತತ. ನ: [ದೇ] ಕಾರ್ಯ, ಕೆಲಸ(ದೇ)
ವಿತತ್ತ. ವಿ: [ವಿತೃಪ್ತ] ವಿಶೇಷವಾಗಿ ತೃಪ್ತಿಹೊಂದಿದ (ಪಣ್ಣ)
ವಿತತ್ಥ. ಪು: [ವಿತ್ರಸ್ತ] ಒಂದು ಮಹಾ ಗ್ರಹ, ಜೋತಿಷ್ಕ ದೇವತೆ(ತಾ), ವಿ: ಭಯ–ಭೀತ, ಹೆದರಿದ
ವಿತತ್ಥಾ. ಸ್ತ್ರೀ: [ವಿತಸ್ತಾ] ಒಂದು ಮಹಾ ನದಿ(ತಾ)
ವಿತದ್ದ. ವಿ: [ವಿತರ್ದ] ಹಿಂಸಕ, ವಿರುದ್ಧ(ಆಚಾ)
ವಿತರ. 'ವಿಅರ=ವಿ+ತೃ' ಶಬ್ದವನ್ನು ನೋಡುವುದು.
ವಿತರ(ಅಪ). ಸಕ: [ವಿ+ಸ್ತಾರಯ್] ವಿಸ್ತಾರಗೊಳಿಸು, ಅಗಲಗೊಳಿಸು
ವಿತರಣ.'ವಿಅರಣ=ವಿತರಣ'ಶಬ್ದವನ್ನು ನೋಡುವುದು.
ವಿತಲ. ವಿ: [ವಿತಲ] ನಾನಾ ವರ್ಣದ,
ವಿತಹ. ವಿ: [ವಿತಥ] ಮಿಥ್ಯೆ, ಸುಳ್ಳು, ಅಸತ್ಯ(ಆಚಾ)
ವಿತಿಕಿಚ್ಛಿಯ. ವಿ: [ವಿಚಿಕಿತ್ಸಿತ] ಫಲವಾಗುವುದರ ಬಗ್ಗೆ ಸಂದೇಹ, ಕೆಲಸ ಈಡೇರುವ ಬಗ್ಗೆ ಸಂಶಯ (ಭಗ)
ವಿತಿಕಿಣ್ಣ. 'ವಿಇಕಿಣ್ಣ' ಶಬ್ದವನ್ನು ನೋಡುವುದು.
ವಿತಿಕ್ಕಂತ. 'ವಿಇಕ್ಕಂತ' ಶಬ್ದವನ್ನು ನೋಡುವುದು.
ವಿತಿಗಿಂಛ. ಸಕ: [ವಿ+ಚಿಕಿತ್ಸ್] ವಿಚಾರಮಾಡು, ವಿಮರ್ಶಿಸು, ಸಂದೇಹಪಡು, ನಿಂದಿಸು(ಸೂಅ).
ವಿತಿಗಿಂಛಾ. 'ವಿತಿಗಿಚ್ಛಾ' ಶಬ್ದವನ್ನು ನೋಡುವುದು.
ವಿತಿಗಿಂಛಿಯ. 'ವಿತಿಕಿಚ್ಛಿಅ' ಶಬ್ದವನ್ನುನೋಡುವುದು.
ವಿತಿಗಿಚ್ಛ. 'ವಿತಿಗಿಂಛ' ಶಬ್ದವನ್ನು ನೋಡುವುದು.
ವಿತಿಗಿಚ್ಛಾ. ಸ್ತ್ರೀ: [ವಿಚಿಕಿತ್ಸಾ] ಸಂಶಯ, ಸಂದೇಹ, ಚಿತ್ತ–ಭ್ರಮೆ, ನಿಂದೆ ದೂಷಣೆ(ಸೂಅ)
ವಿತಿಗಿಚ್ಛಿಅ. 'ವಿತಿಕಿಚ್ಛಿಅ' ಶಬ್ದವನ್ನು ನೋಡುವುದು.
ವಿತಿಗಿಟ್ಠ. 'ವಿಇಗಿಟ್ಠ' ಶಬ್ದವನ್ನು ನೋಡುವುದು.
ವಿತಿಮಿರ. ವಿ: [ವಿತಿಮಿರ] ಕತ್ತಲೆಯಿಲ್ಲದ, ವಿಶುದ್ಧ, ನಿರ್ಮಲವಾದ(ಪಣ್ಣ), ಅಜ್ಞಾನ–ರಹಿತ, ಪು: ಬ್ರಹ್ಮ ದೇವಲೋಕದೊಂದು ವಿಮಾನದ ತಪ್ಪಲು
ವಿತಿರಿಚ್ಛ. ವಿ: [ವಿತಿರ್ಯಂಚ್] ವಕ್ರವಾದ, ಡೊಂಕಾದ (ಭಗ)
ವಿತ್ತ. ವಿ: [ದೇ] ಉದ್ದವಾದ, ದೀರ್ಘವಾದ
ವಿತ್ತ. ನ: [ವಿತ್ತ] ದ್ರವ್ಯ, ಧನ(ಪಾಅ), ವಿ: ಪ್ರಸಿದ್ಧ, ವಿಖ್ಯಾತ(ಸೂಅ). **–ಮ.** ವಿ: [**–ವತ್**] ಶ್ರೀಮಂತ,

ವಿತ್ತ. ನ: [-ವೃತ್ತ] ಛಂದಸ್ಸು, ಪದ್ಯ, ಚರಿತ್ರ, ಆಚರಣೆ, ವೃತ್ತಿ, ವರ್ತನೆ, ವಿ: ಹುಟ್ಟಿದ, ಅತೀತ ಕಳೆದುಹೋದ, ದೃಢ, ಬಲವಾದ, ಗೋಳಾಕಾರದ ಪರಿಸಲ್ಪಟ್ಟ, ಮೃತ, ಪೂರ್ಣಗೊಂಡ, **-ಪ್ಪಾಯ.** ವಿ: [ಪ್ರಾಯ] ಪೂರ್ಣಪ್ರಾಯದ, **'ವಟ್ಟ=ವೃತ್ತ'** ಶಬ್ದವನ್ನು ನೋಡುವುದು.

ವಿತ್ತ. **'ವೇತ್ತ=ವೇತ್ರ** ಶಬ್ದವನ್ನು ನೋಡುವುದು.

-ವಿತ್ತ. **'ಪಿತ್ತ'** ಶಬ್ದವನ್ನು ನೋಡುವುದು(ಉಪ)

ವಿತ್ತಇ. ವಿ: [ದೇ] ಗರ್ವಿಷ್ಠ, ಅಹಂಕಾರಿ, **ಪು:** ವಿಲಾಸ, ಗರ್ವ, ಅಹಂಕಾರ

ವಿತ್ತಂತ. **ಪು:** [ವೃತ್ತಾಂತ] ಸಮಾಚಾರ, ಸುದ್ದಿ(ಪಉಮ)

ವಿತ್ತತ್ಥ. – **'ವಿತತ್ಥ'** ಶಬ್ದವನ್ನು ನೋಡುವುದು.

ವಿತ್ತವಿಯ. **'ವಟ್ಟಿಅ, ವತ್ತಿಅ=ವರ್ತಿತ'** ಶಬ್ದವನ್ನು ನೋಡುವುದು.

ವಿತ್ತಾಸ. **ಸಕ:** [ವಿ+ತ್ರಾಸಯ್] ಹೆದರಿಸು, ಭಯಗೊಳಿಸು

ವಿತ್ತಾಸ. **ಪು:** [ವಿತ್ರಾಸ] ಭಯ, ಹೆದರಿಕೆ(ಸುಪಾ

ವಿತ್ತಾಸಣ. ನ: [ವಿತ್ರಾಸನ] ಭಯ-ಪ್ರದರ್ಶನ(ಆವ)

ವಿತ್ತಾಸಿಅ. ವಿ: [ವಿತ್ರಾಸಿತ] ಹೆದರಿಸಿ ಓಡಿಸಲ್ಪಟ್ಟ

ವಿತ್ತಿ. **ಪು:** [ವೇತ್ರಿನ್] ಪ್ರತೀಹಾರಿ, ಬಾಗಿಲು ಕಾಯುವವನು

ವಿತ್ತಿ. **ಸ್ತ್ರೀ:** [ವೃತ್ತಿ] ಜೀವನೋಪಾಯ(ಣಾಯಾ), ಟೀಕೆ, ವಿವರಣೆ, ವರ್ತನೆ, ಆಚರಣೆ, ಸ್ಥಿತಿ, ಆರಭಟೀ, ಕೌಶಿಕೀ ಮೊದಲಾದ ವೃತ್ತಿಗಳು(ನಾಟಕ), ಅಂತಃಕರಣದ ಒಂದು ಬಗೆಯ ಪರಿಣಾಮ. **-ಅ.** ವಿ: [-ದ] ವೃತ್ತಿಯನ್ನು ನೀಡುವವನು (ಔಪ), **-ಆರ.** ವಿ: [-ಕಾರ] ಟೀಕಾಕಾರ, ವಿವರಣೆ ನೀಡುವವನು. **-ಚ್ಛೇಯ, -ಛೇಯ.** **ಪು:** [-ಚ್ಛೇದ] ಜೀವನೋಪಾಯ-ವಿನಾಶ(ಆಚಾ). **'ವಿತ್ತೀ=ವೃತ್ತಿ'** ಶಬ್ದವನ್ನು ನೋಡುವುದು.

ವಿತ್ತಿಅ. ವಿ: [ವಿತ್ತಿಕ] ವಿತ್ತದಿಂದ ಕೂಡಿದ, ಹಣವಿರುವ ಧನಿಕ, ವೈಭವಶಾಲಿ(ಔಪ)

ವಿತ್ತೀ-. **'ವಿತ್ತ=ವೃತ್ತ'** ಶಬ್ದವನ್ನು ನೋಡುವುದು. **-ಕಪ್ಪ.** ವಿ: [-ಕಲ್ಪ] ಪೂರ್ಣಪ್ರಾಯ.

ವಿತ್ತೀ-. **'ವಿತ್ತಿ=ವೃತ್ತಿ'** ಶಬ್ದವನ್ನು ನೋಡುವುದು. **-ಸಂಖೇವ.** **ಪು:** [-ಸಂಕ್ಷೇಪ] ಬಾಹ್ಯ ತಪಸ್ಸಿನ ಒಂದು ಪ್ರಭೇದ-ಉಣ್ಣುವ, ತಿನ್ನುವ, ಕುಡಿಯುವ ಹಾಗೂ ಇನ್ನಿತರ ಸುಖ ಸಾಧನಗಳನ್ನು ಕಡಿಮೆ ಮಾಡುವುದು. **-ಸಂಖೇವಣ.** ನ: [-ಸಂಕ್ಷೇಪಣ] ಅದೇ ಅರ್ಥ.

ವಿತ್ತೇಸ. ವಿ: [ವಿತ್ತೇಶ] ಧನಿಕ, ಶ್ರೀಮಂತ

ವಿತ್ಥ. **ಪುಂನ:** [ವಿಸ್ತ] ಚಿನ್ನ, ಬಂಗಾರ

ವಿತ್ಥಕ. **ಅಕ:** [ವಿ+ಸ್ಥಾ] ಸ್ಥಿರವಾಗು, ತಡಮಾಡು, ವಿರೋಧಿಸು, **ವ. ಕೃ: 'ವಿತ್ಥಕ್ಕಂತ'**

ವಿತ್ಥಕ್ಕ. **'ವಿಥಕ್ಕ'** ಶಬ್ದವನ್ನು ನೋಡುವುದು.

ವಿತ್ಥಡ}. ವಿ: [ವಿಸ್ತೃತ] ವಿಸ್ತಾರದಿಂದ ಕೂಡಿದ,

ವಿತ್ಥಯ}. ವಿಶಾಲವಾದ(ಭಗ), ಆಗಿಹೋದ, ಘಟಿತ

ವಿತ್ಥರ. **ಅಕ:** [ವಿ+ಸ್ತೃ] ಹರಡು, ವಿಸ್ತರಿಸು, ವೃದ್ಧಿಸು, **ವ.ಕೃ: 'ವಿತ್ಥರಂತ'**

ವಿತ್ಥರ. **ಪುಂನ:** [ವಿಸ್ತರ] ವಿಸ್ತಾರವಾದ, ವಿಶಾಲವಾದ, ಅಗಲವಾದ

ವಿತ್ಥರ. **'ವಿತ್ಥಡ'** ಶಬ್ದವನ್ನು ನೋಡುವುದು.

ವಿತ್ಥರಣ. ವಿ: [ವಿಸ್ತರಣ] ಹರಡುವವನು, ವೃದ್ಧಿಸುವವನು

ವಿತ್ಥರಿಅ. **'ವಿತ್ಥಡ'** ಶಬ್ದವನ್ನು ನೋಡುವುದು.

ವಿತ್ಥಾರ. **ಸಕ:** [ವಿ+ಸ್ತಾರಯ್] ಹರಡುವುದು, ವಿಸ್ತರಿಸು

ವಿತ್ಥಾರ. **ಪು:** [ವಿಸ್ತಾರ] ಹರಡುವಿಕೆ, ವೈಶಾಲ್ಯ, ಅಗಲ. **-ರುಇ.** ವಿ: [-ರುಚಿ] ಸಕಲ ಪದಾರ್ಥಗಳನ್ನು ವಿಸ್ತೃತವಾಗಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆವುಳ್ಳ ಸಂಯಕ್ತ್ವದ ಗುಣವುಳ್ಳವನು.

ವಿತ್ಥಾರಇತ್ತಅ(ಶೌ). ವಿ: [ವಿಸ್ತಾರಯಿತೃ] ವಿಸ್ತಾರಗೊಳಿಸುವವನು, ಹರಡುವವನು,

ವಿತ್ಥಾರಗ. ವಿ: [ವಿಸ್ತಾರಕ] ವಿಸ್ತಾರಗೊಳಿಸುವವನು, ಹರಡುವವನು

ವಿತ್ಥಾರಣ. ನ: [ವಿಸ್ತಾರಣ] ವಿಸ್ತಾರಗೊಳಿಸುವಿಕೆ, ವಿಶಾಲಗೊಳಿಸುವುದು, ಹರಡುವುದು,

ವಿತ್ಥಿಣ್ಣ}. ವಿ: [ವಿಸ್ತೀರ್ಣ] ವಿಸ್ತಾರದಿಂದ ಕೂಡಿದ,

ವಿತ್ಥಿನ್ನ}. ಅಗಲವಾದ, ವಿಶಾಲವಾದ

ವಿತ್ಥಿಯ. **'ವಿತ್ಥಡ'** ಶಬ್ದವನ್ನು ನೋಡುವುದು.

ವಿತ್ಥಿರ. ನ: [ದೇ] ವಿಸ್ತಾರ, ಅಗಲವಾದ

ವಿತ್ಥುಯ. **'ವಿತ್ಥಡ'** ಶಬ್ದವನ್ನು ನೋಡುವುದು.

ವಿಥಕ್ಕ. ವಿ: [ವಿಸ್ಥಿತ] ವಿರೋಧಿಯಾದ

ವಿದ. **'ವಿಅ=ವಿದ್'** ಶಬ್ದವನ್ನು ನೋಡುವುದು. **ವ.ಕೃ:** ವಿದಂತ

ವಿದಂಡ. ಪು: [**ವಿದಂಡ**] ಕಂಕುಳ ಮಟ್ಟದ ಕೋಲು, ದಂಡ ಒಂದು

ವಿದಂಸಗ. '**ವಿದಂಸಯ**' ಶಬ್ದವನ್ನು ನೋಡುವುದು.

ವಿದಂಸಣ. ನ: [**ವಿದರ್ಶನ**] ಕತ್ತಲೆಯಲ್ಲಿದ್ದ ವಸ್ತು ಕಾಣುವುದು. '**ವಿದಾರಿಸಣ**' ಶಬ್ದವನ್ನು ನೋಡುವುದು.

ವಿದಂಸಯ. ವಿ: [**ವಿದಂಶಕ**] ಗಿಡುಗವೇ ಮೊದಲಾದ ಹಿಂಸಕ ಪಕ್ಷಿ(ತ್ರ)

ವಿದಡ್ಢ}. **ವಿ:** [**ವಿದಗ್ಧ**] ಪಂಡಿತ, ವಿದ್ವಾಂಸ, ಪ್ರವೀಣ,
ವಿದಡ್ಧ}. ಚೆನ್ನಾಗಿ ದಹಿಸಲ್ಪಟ್ಟ, ಸುಟ್ಟ, ಚೆನ್ನಾಗಿ ಬೇಯಿಸಲ್ಪಟ್ಟ, ಅಜೀರ್ಣದ ಒಂದು ಪ್ರಭೇದ. '**ವಿದ್ದಡ್ಢ**' ಶಬ್ದವನ್ನು ನೋಡುವುದು.

ವಿದಬ್ಭ. ಪಂಸ್ತ್ರೀ: [**ವಿದರ್ಭ**] ವಿದರ್ಭದೇಶ, ಭಗವಾನ್ ಸುಪಾರ್ಶ್ವನಾಥನ ಮುಖ್ಯ ಗಣಧರನ ಶಿಷ್ಯನ ಹೆಸರು, **ಪುಂಸ್ತ್ರೀ:** ವಿದರ್ಭದ ಪ್ರಾಚೀನ ರಾಜಧಾನಿಯಾದ ಕುಂಡಿನ ಪುರ; ಈಗ ಅದು ನಾಗಪುರ ಎಂದು ಪ್ರಸಿದ್ಧವಾಗಿದೆ.

ವಿದರಿಸಣ. ವಿ: [**ವಿದರ್ಶನ**] ನೋಡಿದರೆ ಭಯವುಂಟು ಮಾಡುವ ವಿಕರಾಳ ಆಕೃತಿಯದು. '**ವಿದಂಸಣ**' ಶಬ್ದವನ್ನು ನೋಡುವುದು.

ವಿದಲ. ನ: [**ವಿದಲ**] ಬಿದಿರು(ಸುಖ)

ವಿದಲ. ನ: [**ದ್ವಿದಲ**] ತೊಗರಿ, ಕಡಲೆ ಮುಂತಾದ ದ್ವಿದಳ ಧಾನ್ಯಗಳು, **ವಿ:** ಎರಡು ತುಣುಕು, ಅಥವಾ ಎರಡು ಭಾಗಮಾಡಲ್ಪಟ್ಟಿರುವ

ವಿದಲಿದ(ಶೌ). ವಿ: [**ವಿದಲಿತ**] ಭೇದಿಸಲ್ಪಟ್ಟ, ಸೀಳಲ್ಪಟ್ಟ, ತುಂಡು ಮಾಡಲ್ಪಟ್ಟ(ವೇಣೀ)

ವಿದಾಅ. '**ವಿದ್ದಾಯ=ವಿದ್ರುತ**' ಶಬ್ದವನ್ನು ನೋಡುವುದು.

ವಿದಾರಗ}. **ವಿ:** [**ವಿದಾರಕ**] ಸೀಳು ಮಾಡುವವನು,
ವಿದಾರಯ}. ಭೇದಿಸುವವನು

ವಿದಾಲಣ. ನ: [**ವಿದಾರಣ**] ನಾನಾ ಬಗೆಯಾಗಿ ಸೀಳುವುದು, ಹೋಳು ಮಾಡುವುದು(ಪಣ್ಣ)

ವಿದಿಅ. '**ವಿಇಅ**' ಶಬ್ದವನ್ನು ನೋಡುವುದು(ಅಭಿ)

ವಿದಿಣ್ಣ. '**ವಿಇಣ್ಣ=ವಿತೀರ್ಣ**' ಶಬ್ದವನ್ನು ನೋಡುವುದು.

ವಿದಿಣ್ಣ. ವಿ: [**ವಿದೀರ್ಣ**]ಸೀಳಲ್ಪಟ್ಟ, ಹೋಳು ಮಾಡಲ್ಪಟ್ಟ

ವಿದಿತ್ತಾ}. '**ವಿದ=ವಿದ್**' ಶಬ್ದವನ್ನು ನೋಡುವುದು.
ವಿದಿತ್ತಾಣಂ}.

ವಿದಿನ್ನ. '**ವಿದಿಣ್ಣ=ವಿತೀರ್ಣ**' ಶಬ್ದವನ್ನು ನೋಡುವುದು (ವಿಪಾ)

ವಿದಿಸ(ಅಪ). ಸ್ತ್ರೀ: [**ವಿದಿಶಾ**] ಒಂದು ನಗರದ ಹೆಸರು

ವಿದಿಸಾ}. **ಸ್ತ್ರೀ:** [**ವಿದಿಶ್**] ಎರಡು ದಿಕ್ಕುಗಳ ಮಧ್ಯದ
ವಿದಿಸೀ–}. ಮೂಲೆ ದಿಕ್ಕು; ಈಶಾನ್ಯ ಇತ್ಯಾದಿ(ಆಚಾ), ವಿರುದ್ಧ ದಿಕ್ಕು, ಅಸಂಯಮ.

ವಿದು. '**ವಿಉ**' ಶಬ್ದವನ್ನು ನೋಡುವುದು.

ವಿದುಗುಂಛಾ. '**ವಿಉಚ್ಛಾ**' ಶಬ್ದವನ್ನು ನೋಡುವುದು.

ವಿದುಗ್ಗ. ನ: [**ವಿದುರ್ಗ**] ಸಮುದಾಯ(ಭಗ).

ವಿದುಮ. ವಿ: [**ವಿದುಸ್**] ವಿದ್ವಾಂಸ, ತಿಳಿದವನು (ಸೂಅ)

ವಿದುರ. ವಿ: [**ವಿದುರ**] ಪಂಡಿತ, ವಿದ್ವಾಂಸ, ಜ್ಞಾನಿ, **ಪು:** ಕೌರವರ ಪ್ರಖ್ಯಾತ ಮಂತ್ರಿಯಾದ ವಿದುರ, ಧೀರ, ನಾಗರಿಕ

ವಿದುಲತಂಗ. ನ: [**ವಿದ್ಯುಲ್ಲತಾಂಗ**] ಹಾಹಾಹೂಹೂ ಅನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ.

ವಿದುಲತಾ. ಸ್ತ್ರೀ: [**ವಿದ್ಯುಲ್ಲತಾ**] ವಿದ್ಯುಲ್ಲತಾಂಗವನ್ನು ೮೪ ಲಕ್ಷದಿಂದ ಗುಣಿಸಿದಾಗ ಬರುವ ಸಂಖ್ಯೆ

ವಿದುಸ. '**ವಿದು**' ಶಬ್ದವನ್ನು ನೋಡುವುದು.

ವಿದೂಸಗ}. **ಪು:** [**ವಿದೂಷಕ**] ಹಾಸ್ಯಗಾರ, ರಾಜನ
ವಿದೂಸಯ}. ಜೊತೆ ಇದ್ದುಕೊಂಡು ಅವನಿಗೆ ವಿನೋದವನ್ನುಂಟುಮಾಡುವ ಒಬ್ಬ ಮಿತ್ರ

ವಿದೇಸ. '**ವಿಏಸ=ವಿದೇಶ**' ಶಬ್ದವನ್ನು ನೋಡುವುದು (ಣಾಯಾ)

ವಿದೇಸಿ. ವಿ: [**ವಿದೇಶಿನ್**] ಪರದೇಶಿ, ಅನ್ಯ ದೇಶದವನು (ಸುಪಾ)

ವಿದೇಸಿಅ. ವಿ: [**ವೈದೇಶಿಕ**] ಮೇಲಿನ ಶಬ್ದವನ್ನು ನೋಡುವುದು.

ವಿದೇಹ. ಪು: [**ವಿದೇಹ**] ಜನಕರಾಜ, **ಪು.ಬ:** ಬಿಹಾರದ ಉತ್ತರಭಾಗಕ್ಕೆ ಬರುವ, ಈಗ '**ತಿರ್ಹುತ್**' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಪ್ರದೇಶ, **ಪುಂನ:** ಮಹಾ ವಿದೇಹ ಕ್ಷೇತ್ರ, **ವಿ:** ವಿಶಿಷ್ಟ ಶರೀರವುಳ್ಳ, ಲೇಪವಿಲ್ಲದ, ನಿರ್ಲೇಪ. **ಪು:** ಮನ್ಮಥ, ಗೃಹ–ವಾಸ, ನಿಷಧ ಪರ್ವತದ ಒಂದು ಶಿಖರ, **–ಜಂಬೂ. ಸ್ತ್ರೀ:** [**–ಜಂಬೂ**] ಜಂಬೂವೃಕ್ಷ, ನೇರಳೆ ಮರ. ಅದರಿಂದಾಗಿಯೇ ಜಂಬೂ ದ್ವೀಪವೆಂಬ

ಹೆಸರು.–ಜಚ್ಚ. ಪು: [ವಿದೇಹಾಚಾರ್ಚ] ಭಗವಾನ್ ಮಹಾವೀರ. –ದಿನ್ನಾ. ಸ್ತ್ರೀ: [–ದತ್ತಾ] ಭಗವಾನ್ ಮಹಾವೀರರ ತಾಯಿ; ರಾಣಿ ತ್ರಿಶಲಾದೇವಿ(ಕಪ್ಪ). –ದುಹಿಆ. ಸ್ತ್ರೀ: [–ದುಹಿತೃ] ಜನಕ ಮಹಾರಾಜನ ಮಗಳಾದ ಸೀತೆ. –ಪುತ್ತ. ಪು: [–ಪುತ್ರ] ಕೂಣಿಕ ಮಹಾರಾಜ.

ವಿದೇಹದಿನ್ನ.ಪು: [ವೈದೇಹದತ್ತ] ಭಗವಾನ್ ಮಹಾವೀರ.

ವಿದೇಹಾ. ಸ್ತ್ರೀ: [ವಿದೇಹಾ] ಭಗವಾನ್ ಮಹಾವೀರರ ತಾಯಿಯಾದ ತ್ರಿಶಲಾದೇವಿ, ಜಾನಕಿ, ಸೀತೆ

ವಿದೇಹಿ. ಪು: [ವೈದೇಹಿನ್] ವಿದೇಹ ದೇಶದ ಅಧಿಪತಿ, ತಿರ್ಹುತ್ತದ ರಾಜ(ಸೂಅ)

ವಿದೇಹೀ. ಸ್ತ್ರೀ: [ವಿದೇಹೀ] ಜನಕರಾಜನ ಹೆಂಡತಿ, ಸೀತೆಯ ತಾಯಿ

ವಿದ್ದಂಡಿಅ. ವಿ: [ದೇ] ನಾಶಗೊಳಿಸಲ್ಪಟ್ಟ(ದೇ)

ವಿದ್ದಡ್ಢ. ಪು: [ವಿದಗ್ಧ] ಒಂದು ನರಕಸ್ಥಾನ

ವಿದ್ದವ. ಸಕ: [ವಿ+ದ್ರಾವಯ್] ನಾಶಮಾಡು, ಹಿಂಸಿಸು, ಪೀಡಿಸು, ದೂರಮಾಡು, ತೊಲಗಿಸು, ತೊಟ್ಟಿಕ್ಕು, ಸೋರು. 'ವಿದ್ದವಇ'. ವ.ಕೃ: 'ವಿದ್ದವಂತ'

ವಿದ್ದವ. ಪು: [ವಿದ್ರವ] ಉಪದ್ರವ. ತೊಂದರೆ, ಪೀಡನೆ, ವಿನಾಶ

ವಿದ್ದವಿಅ. ಪು: [ವಿದ್ರವಿತ] ಓಡಿಸಲ್ಪಟ್ಟ, ಪಲಾಯನ ಮಾಡಿಸಲ್ಪಟ್ಟ, ದೂರಮಾಡಲ್ಪಟ್ಟ, ತೊಲಗಿಸಲ್ಪಟ್ಟ, ನಾಶಗೊಳಿಸಲ್ಪಟ್ಟ(ಗಾ)

ವಿದ್ದಾ. ಅಕ: [ವಿ+ದ್ರಾ] ಹಾಳಾಗು,

ವಿದಾಣ. ವಿ: [ವಿದ್ರಾಣ] ಮ್ಲಾನ, ಬಾಡಿದ, ಸೊರಗಿದ, ನಿಸ್ತೇಜ, ಶೋಕಾತುರ(ಉಪ)

ವಿದ್ದಾಯ. ವಿ: [ವಿದ್ರುತ] ನಾಶವಾದ, ಓಡಿಸಲ್ಪಟ್ಟ, ದ್ರವದಿಂದ ಕೂಡಿದ, ದ್ರವವಾಗಿರುವ

ವಿದ್ದಾಯ. ಅಕ: [ವಿದ್ವಸ್ಯ್] ತನ್ನನ್ನೇ ವಿದ್ವಾಂಸನೆಂದು ಭಾವಿಸು, ತಿಳಿ

ವಿದ್ದಾರ. 'ವಿಡ್ಡಾರ' ಶಬ್ದವನ್ನು ನೋಡುವುದು.

ವಿದ್ದಾರಣ(ಅಪ). ವಿ: [ವಿದಾರಣ] ಸೀಳುವವನು, ಹೋಳುಮಾಡುವವನು. ಸ್ತ್ರೀ: –ಣೀ(ಭವಿ)

ವಿದ್ದಾವಿಯ. 'ವಿದ್ದವಿಅ' ಶಬ್ದವನ್ನು ನೋಡುವುದು.

ವಿದ್ದುಮ. ಪು: [ವಿದ್ರುಮ] ಹವಳ, ಹವಳದ ವೃಕ್ಷ, ವಿದ್ದುಮಾಭ. ಪು: [ವಿದ್ರುಮಾಭ] ಒಂಬತ್ತನೇ ಬಲದೇವನ ಹಿಂದಿನ ಜನ್ಮದ ಗುರು(ಪಉಮ)

ವಿದ್ದುಯ. ವಿ: [ವಿದ್ರುತ] ಪೀಡಿಸಲ್ಪಟ್ಟ

ವಿದ್ದೂಣಾ. ಸ್ತ್ರೀ: [ದೇ] ಲಜ್ಜೆ, ನಾಚಿಕೆ

ವಿದ್ದೇಸ. ಪು: [ವಿದ್ವೇಷ] ದ್ವೇಷ, ವೈರ

ವಿದ್ದೇಸ. ವಿ: [ವಿದ್ವೇಷ್ಯ] ದ್ವೇಷಿಸಲು ಯೋಗ್ಯನಾದ, ಅಪ್ರಿಯ(ಪಣ್ಣ)

ವಿದ್ದೇಸಣ. ನ:[ವಿದ್ವೇಷಣ] ಪರಸ್ಪರರಲ್ಲಿ ಶತ್ರುತ್ವವನ್ನುಂಟುಮಾಡುವ ಒಂದು ರೀತಿಯ ಅಭಿಚಾರ ಕ್ರಿಯೆ(ಮಾಟ)

ವಿದ್ದೇಸಿ. ವಿ: [ವಿದ್ವೇಷಿನ್] ದ್ವೇಷಿಸುವವನು(ಕುಪ್ರ)

ವಿದ್ದೇಸಿಅ. 'ವಿದೇಸಿಅ' ಶಬ್ದವನ್ನು ನೋಡುವುದು.

ವಿದ್ದೇಸಿಅ. ವಿ: [ವಿದ್ವೇಷಿತ] ದ್ವೇಷದಿಂದ ಕೂಡಿದ

ವಿದ್ಧ. ಸಕ: [ವ್ಯಧ್] ರಂಧ್ರ ಕೊರೆ, ತೂತುಮಾಡು, ಭೇದಿಸು

ವಿದ್ಧ. ವಿ: [ವಿದ್ಧ] ರಂಧ್ರ ಕೊರೆಯಲ್ಪಟ್ಟ, ಭೇದಿಸಲ್ಪಟ್ಟ

ವಿದ್ಧ. 'ವುಡ್ಢ=ವೃದ್ಧ' ಶಬ್ದವನ್ನು ನೋಡುವುದು (ಉತ್ತ)

ವಿದ್ಧಂಸ. ಅಕ: [ವಿ+ಧ್ವಂಸ್] ನಾಶವಾಗು,

ವಿದ್ಧಂಸ. ಸಕ: [ವಿ+ಧ್ವಂಸಯ್] ನಾಶಮಾಡು(ಭವಿ)

ವಿದ್ಧಂಸ. ಪು: [ವಿಧ್ವಂಸ] ವಿನಾಶ, ವಿ: ವಿನಾಶ ಮಾಡುವವನು

ವಿದ್ಧಂಸಣ. ನ: [ವಿಧ್ವಂಸನ] ವಿನಾಶ(ಣಾಯಾ)

ವಿದ್ಧಂಸಿತ. ವಿ: [ವಿಧ್ವಂಸಿತ] ವಿನಾಶಮಾಡಲ್ಪಟ್ಟ

ವಿದ್ಧತ್ಥ. ವಿ: [ವಿಧ್ವಸ್ತ] ವಿನಾಶವಾದ

ವಿದ್ಧಿ. ಸ್ತ್ರೀ: [ವೃದ್ಧಿ] ಸಮೃದ್ಧಿ, ಅಭ್ಯುದಯ, ಹೆಚ್ಚುವುದು, ಸಂಪತ್ತು, ಅಹಿಂಸೆ, ಕಲೆಯು(ಚಂದ್ರನದು) ದಿನೇದಿನೇ ಹೆಚ್ಚುವುದು, ವ್ಯಾಕರಣದಲ್ಲಿ ಪ್ರಸಿದ್ಧವಾದ ಸ್ವರದ ವ್ಯತ್ಯಾಸ(ವೃದ್ಧಿ ಸಂಧಿ). ಕಲ್ಲುಹೂವು(ಮೂಲಿಕೆ)

ವಿದ್ಧೂಣ. 'ವಿದ್ಧ=ವ್ಯಧ್' ಶಬ್ದವನ್ನು ನೋಡುವುದು.

ವಿಧಮ್ಮ. 'ವಿಹಮ್ಮ' ಶಬ್ದವನ್ನು ನೋಡುವುದು.

ವಿಧಮ್ಮಿಯ. ವಿ: [ವಿಧರ್ಮಿತ] ತಿರಸ್ಕೃತ(ವಿಸೇ)

ವಿಧವಾ. 'ವಿಹವಾ' ಶಬ್ದವನ್ನು ನೋಡುವುದು.

ವಿಧಾ. ಅ: [ವೃಥಾ] ನಿರರ್ಥಕ, ವ್ಯರ್ಥ

ವಿಧಾಣ. 'ವಿಹಾಣ=ವಿಧಾನ' ಶಬ್ದವನ್ನು ನೋಡುವುದು.

ವಿಧಾಂಯು. 'ವಿಹಾಂಯು=ವಿಧಾತೃ' ಶಬ್ದವನ್ನು ನೋಡುವುದು.

ವಿಧಾರ. ಸಕ: [ವಿ+ಧಾರಯ್] ನಿವಾರಿಸು

ವಿಧಿ(ಶೌ). 'ವಿಹಿ' ಶಬ್ದವನ್ನು ನೋಡುವುದು.
ವಿಧುರ. ವಿ: [ವಿಧುರ] ವ್ಯಾಕುಲ, ವಿಕಲವಾಗಿರುವ, ವಿಷಮ, ಅಸಮಾನ. **'ವಿಹುರ'** ಶಬ್ದವನ್ನು ನೋಡುವುದು.
ವಿಧುವ(ಶೌ). **'ವಿಹುಣ=ವಿ+ಧೂ'** ಶಬ್ದವನ್ನು ನೋಡುವುದು.
ವಿಧೂಮ. ಪು: [ವಿಧೂಮ] ಅಗ್ನಿ, ಬೆಂಕಿ(ಸೂಅ)
ವಿಧೂಯ. ವಿ: [ವಿಧೂತ] ಚೆನ್ನಾಗಿ ಸ್ಪರ್ಶಿಸಲ್ಪಟ್ಟಿರುವ
ವಿನಡ. **'ವಿಣಾಡ'** ಶಬ್ದವನ್ನು ನೋಡುವುದು.
ವಿನಡಣ. ನ: [ವಿನಟನ] ವ್ಯಾಕುಲಗೊಳಿಸುವುದು, ತೊಂದರೆ ಉಂಟುಮಾಡು, ಹಿಂಸಿಸು, ನೋಯಿಸು
ವಿನಡಿಅ. ವಿ: [ವಿನಟಿತ] ವ್ಯಾಕುಲಗೊಳಿಸಲ್ಪಟ್ಟ, ಹಿಂಸಿಸಲ್ಪಟ್ಟ
ವಿನಮಿ. ಪು: [ವಿನಮಿ] ವೃಷಭದೇವನ ಒಬ್ಬ ಮೊಮ್ಮಗ.
ವಿನಾಸ. **'ವಿಣಾಸ=ವಿ+ನಾಶಯ್'** ಶಬ್ದವನ್ನು ನೋಡುವುದು.
ವಿನಿಜ್ಝಾ. ಸಕ: [ವಿನಿ+ಧ್ಯೈ] ನೋಡು,
ವಿನಿಬದ್ಧ. ವಿ: [ವಿನಿಬದ್ಧ] ಕಟ್ಟಲ್ಪಟ್ಟ, ಬಂಧಿಸಲ್ಪಟ್ಟ
ವಿನಿಮಯ. ಪು: [ವಿನಿಮಯ] ಪರಸ್ಪರ ಬದಲಾಯಿಸಿಕೊಳ್ಳುವುದು, ವ್ಯತ್ಯಯ,
ವಿನಿಯಟ್ಟ. **'ವಿಣಿವಟ್ಟ'** ಶಬ್ದವನ್ನು ನೋಡುವುದು.
ವಿನಿಯಟ್ಟಣ. ನ: [ವಿನಿವರ್ತನ] ನಿವೃತ್ತಿ, ವಿರಾಮ,
ವಿನಿರಯ. ವಿ: [ವಿನಿರತ] ಲೀನನಾದ, ಅದರಲ್ಲೇ ಮುಳುಗಿದ, ಆಸಕ್ತ,
ವಿನಿಹನ್ನ. ಸಕ: [ವಿನಿ+ಹನ್] ಕೊಂದುಹಾಕು,ಸಾಯಿಸು
ವಿನಿಹಾಯ. **'ವಿಣಿಧಾಯ'** ಶಬ್ದವನ್ನು ನೋಡುವುದು.
ವಿನೀಯ. **'ವಿಣೀಅ'** ಶಬ್ದವನ್ನು ನೋಡುವುದು.
ವಿನ್ನತ್ತ. **'ವಿಣ್ಣತ್ತ'** ಶಬ್ದವನ್ನು ನೋಡುವುದು.
ವಿನ್ನಪ್ಪ. **'ವಿಣ್ಣವ'** ಶಬ್ದವನ್ನು ನೋಡುವುದು.
ವಿನ್ನವಣಾ. ಸ್ತ್ರೀ: [ವಿಜ್ಞಾಪನಾ] ಪ್ರಾರ್ಥನೆ, ನಿವೇದನೆ, ವಿನಂತಿ, ಮಹಿಳೆ, ನಾರಿ(ಸೂಅ). **'ವಿಣ್ಣವಣಾ'** ಶಬ್ದವನ್ನು ನೋಡುವುದು.
ವಿನ್ನವಿಯ. ವಿ:[ವಿಜ್ಞಾಪಿತ] ನಿವೇದಿಸಲ್ಪಟ್ಟ, ವಿನಂತಿಸಲ್ಪಟ್ಟ
ವಿನ್ನಾ. **'ವಿಣ್ಣಾ=ವಿ+ಜ್ಞಾ'** ಶಬ್ದವನ್ನು ನೋಡುವುದು.
ವಿನ್ನಾ **'ಬಿನ್ನಾ'** ಶಬ್ದವನ್ನು ನೋಡುವುದು. **–ಯಡ.** ನ: [–ತಟ] ಒಂದು ನಗರದ ಹೆಸರು.
ವಿನ್ನಾಉ. ವಿ: [ವಿಜ್ಞಾತೃ] ತಿಳಿದುಕೊಳ್ಳುವವನು (ಆಚಾ)
ವಿನ್ನಾಣ. ನ: [ವಿಜ್ಞಾನ] ಸದ್‌ಬೋಧೆ, ಜ್ಞಾನ(ಭಗ), ಕಲೆ, ಶಿಲ್ಪ, ಬುದ್ಧಿ, ಮತಿ(ಪಾಅ)
ವಿನ್ನಾಣಿಯ}. **'ವಿಣ್ಣಾಯ'** ಶಬ್ದವನ್ನು ನೋಡುವುದು.
ವಿನ್ನಾಯ}.
ವಿನ್ನಾವಿಯ. **'ವಿನ್ನವಿಯ'** ಶಬ್ದವನ್ನು ನೋಡುವುದು.
ವಿನ್ನಾಸ. ಪು: [ವಿನ್ಯಾಸ] ರಚನಾ ಕ್ರಮ, ಜೋಡಣೆ, ಇಡುವುದು, ಇರಿಸುವದು
ವಿನ್ನಾಸಣ. ನ: [ವಿನ್ಯಾಸನ] ಸ್ಥಿರವಾಗಿ ಇಡುವುದು
ವಿನ್ನಾಸಿಅ. ವಿ: [ವಿನ್ಯಾಸಿತ] ಚೆನ್ನಾಗಿ ಇರಿಸಲ್ಪಟ್ಟ
ವಿನ್ನಾಸಿಅ(ಅಪ). ವಿ: [ವಿನಾಶಿತ] ವಿನಾಶಹೊಂದಿದ
ವಿನ್ನೇಯ. **'ವಿನ್ನಾ=ವಿ+ಜ್ಞಾ'** ಶಬ್ದವನ್ನು ನೋಡುವುದು.
ವಿನ್ಹು. ಪು: [ವಿಷ್ಣು] ಆರ್ಯ ಜೇಹಿಲನ ಶಿಷ್ಯನಾಗಿದ್ದ ಒಬ್ಬ ಜೈನಮುನಿ. **'ವಿಣ್ಹು'** ಶಬ್ದವನ್ನು ನೋಡುವುದು. **–ಪಅ.** ನ: [–ಪದ] ಆಕಾಶ, **–ಪದೀ.**ಸ್ತ್ರೀ: [–ಪದೀ] ಗಂಗಾ ನದಿ.
ವಿಪಂಚೀ. ಸ್ತ್ರೀ: [ವಿಪಂಚೀ] ವೀಣೆ(ಪಣ್ಣ).
ವಿಪಕ್ಕ. ವಿ: [ವಿಪಕ್ವ] ಚೆನ್ನಾಗಿ ಬೇಯಿಸಲ್ಪಟ್ಟ. **'ವಿವಕ್ಕ'** ಶಬ್ದವನ್ನು ನೋಡುವುದು.
ವಿಪಕ್ಖ. **'ವಿವಕ್ಖ'** ಶಬ್ದವನ್ನು ನೋಡುವುದು.
ವಿಪಕ್ಖಿಯ. ವಿ: [ವಿಪಕ್ಷಿಕ] ವಿರೋಧಿ, ಶತ್ರು
ವಿಪಚ್ಚಾಇಯ. ನ: [ವಿಪ್ರತ್ಯಯಿಕ] ೧೨ನೇ ಜೈನ ಗ್ರಂಥದ ಸೂತ್ರ–ವಿಶೇಷ.
ವಿಪಚ್ಚಮಾಣ. ವಿ: [ವಿಪಚ್ಯಮಾನ] ಬೇಯಿಸಲ್ಪಡು ವಂಥದು, ಸುಡಲ್ಪಡುತ್ತಿರುವ
ವಿಪಜ್ಜಯ. **'ವಿವಜ್ಜಯ'** ಶಬ್ದವನ್ನು ನೋಡುವುದು.
ವಿಪಜ್ಜಾಸ. **'ವಿವಜ್ಜಾಸ'** ಶಬ್ದವನ್ನು ನೋಡುವುದು.
ವಿಪಡಿವತ್ತಿ. **'ವಿಪ್ಪಡಿವತ್ತಿ'** ಶಬ್ದವನ್ನು ನೋಡುವುದು.
ವಿಪಡಿಸೇಹ. ಸಕ: [ವಿಪ್ರತಿ+ಸಿಧ್] ನಿಷೇಧಿಸು
ವಿಪಣೊಲ್ಲ. ಸಕ: [ವಿಪ್ರ+ನೋದಯ್] ಪ್ರೇರಿಸು (ಆಚಾ)
ವಿಪಣ್ಣ. **'ವಿವಣ್ಣ=ವಿಪನ್ನ'** ಶಬ್ದವನ್ನು ನೋಡುವುದು.
ವಿಪತ್ತಿ. **'ವಿವತ್ತಿ=ವಿಪತ್ತಿ'** ಶಬ್ದವನ್ನು ನೋಡುವುದು.
ವಿಪತ್ಥಾವಿದ(ಶೌ). ವಿ: [ವಿಪ್ರಸ್ತಾವಿತ] ಆರಂಭಿಸಲ್ಪಟ್ಟ,
ವಿಪರಾಮುಸ. ಸಕ: [ವಿಪರಾ+ಮೃಶ್] ಆರಂಭಿಸು, ಪೀಡೆ ಉಂಟುಮಾಡು, ಹಿಂಸಿಸು, ಉತ್ಪತ್ತಿಯಾಗು, ಹುಟ್ಟು

ವಿಪರಾಹುತ್ತ. ವಿ: [ವಿಪರಾಙ್ಮುಖ] ಅತಿಯಾದ ಉದಾಸೀನ ಮನೋಭಾವದ, ತೀರಾ ಅಲಕ್ಷ್ಯದ ಮನಸ್ಸುಳ್ಳ(ಪಉಮ)

ವಿಪರಿಕಮ್ಮ. ನ: [ವಿಪರಿಕರ್ಮನ್] ಶರೀರವನ್ನು ಹಿಗ್ಗಿಸುವ(ಚಾಚುವ) ಮತ್ತು ಕುಗ್ಗಿಸುವ (ಮುದುಡುವ) ಕ್ರಿಯೆ

ವಿಪರಿಕುಂಚಿ. ವಿ: [ವಿಪೆರಿಕುಂಚಿನ್] **'ವಿಪರಿಕುಂಚಿತ'** ಎಂಬ ಹೆಸರಿನ ನಮಸ್ಕಾರದ ದೋಷವುಳ್ಳ(ಬೃಹ)

ವಿಪರಿಕುಂಚಿಯ. **'ವಿಪ್ಪಲಿಉಂಚಿಯ'** ಶಬ್ದವನ್ನು ನೋಡುವುದು.

ವಿಪರಿಖಲ. **ಅಕ:** [ವಿಪರಿ+**ಸ್ಖಲ್**] ಬೀಳು, ಮುಗ್ಗರಿಸು, ತಪ್ಪುಮಾಡು

ವಿಪರಿಣಮ. **ಅಕ:** [ವಿಪರಿ+**ಣಮ್**] ಬದಲಾಗು, ರೂಪಾಂತರಗೊಳ್ಳು, ವ್ಯತ್ಯಾಸಹೊಂದು, ತಿರುಗು ಮುರುಗಾಗು, ವಿರುದ್ಧವಾಗು

ವಿಪರಿಣಯ. ವಿ: [ವಿಪರಿಣತ] ರೂಪಾಂತರ ಹೊಂದಿದ, ಬದಲಾದ

ವಿಪರಿಣಾಮ. **ಸಕ:** [ವಿಪರಿ+**ಣಮಯ್**] ಬದಲಿಸು, ರೂಪಾಂತರಗೊಳಿಸು, ವಿರುದ್ಧ ಮಾಡು

ವಿಪರಿಣಾಮ. **ಪು:** [ವಿಪರಿಣಾಮ] ರೂಪಾಂತರ ಹೊಂದುವಿಕೆ, ವಿರುದ್ದ ಪರಿಣಾಮ, ತಿರುವು, ವಿರುದ್ಧ ನಿರ್ಧಾರ

ವಿಪರಿಣಾಮಿಯ. ವಿ: [ವಿಪರಿಣಮಿತ] ರೂಪಾಂತರಗೊಂಡ, ಬದಲಾದ(ಭಗ)

ವಿಪರಿಧಾವ. **ಸಕ:** [ವಿಪರಿ+**ಧಾವ್**] ಅತ್ತ–ಇತ್ತ ಓಡು(ಉತ್ತ)

ವಿಪರಿಯಾಸ. **'ವಿಪ್ಪರಿಯಾಸ'** ಶಬ್ದವನ್ನು ನೋಡುವುದು.

ವಿಪರಿವಸಾವ. **ಸಕ:** [ವಿಪರಿ+**ವಾಸಯ್**] ಇಡು,

ವಿಪರೀಅ. **'ವಿವರೀಅ'** ಶಬ್ದವನ್ನು ನೋಡುವುದು.

ವಿಪಲಾಅ. **ಸಕ:** [ವಿಪರಾ+**ಅಯ್**] ದೂರ ಓಡು. ವ ಕೃ: **ವಿಪಲಾಅಂತ**

ವಿಪಲ್ಲತ್ಥ. **'ವಿವಲ್ಲತ್ಥ'** ಶಬ್ದವನ್ನು ನೋಡುವುದು.

ವಿಪಸ್ಸಿ. ವಿ: [ವಿದರ್ಶಿನ್] ನೋಡುವವನು(ಆಚಾ)

ವಿಪಾಗ. **'ವಿವಾಗ'** ಶಬ್ದವನ್ನು ನೋಡುವುದು.

ವಿಪಿಕ್ಖ. **'ವಿಪ್ಪೆಕ್ಖ'** ಶಬ್ದವನ್ನು ನೋಡುವುದು.

ವಿಪಿಣ. **'ವಿವಿಣ'** ಶಬ್ದವನ್ನು ನೋಡುವುದು.

ವಿಪಿತ್ತ. ವಿ: [ದೇ] ವಿಕಸಿತ, ಅರಳಿದ

ವಿಪುಲ. **'ವಿಉಲ'** ಶಬ್ದವನ್ನು ನೋಡುವುದು. **–ವಾಹಣ.** **ಪು:** [–**ವಾಹನ**] ಭರತವರ್ಷದಲ್ಲಿ ಆಗಲಿರುವ ೧೨ನೇ ಚಕ್ರವರ್ತಿ ರಾಜ.

ವಿಪ್ಪ. ನ: [ದೇ] ಬಾಲ, ಪುಚ್ಛ

ವಿಪ್ಪ. **ಪು:** [ವಿಪ್ರ] ಬ್ರಾಹ್ಮಣ, ದ್ವಿಜ

ವಿಪ್ಪ. **ಪು:** [ವಿಪ್ರುಷ್, **ವಿಪ್ರು**] ಮೂತ್ರದ ಬಿಂದು, ಹನಿ, ಮಲ ಮತ್ತು ಮೂತ್ರ

ವಿಪ್ಪಇಟ್ಠ. **'ವಿಪ್ಪಗಿಟ್ಠ'** ಶಬ್ದವನ್ನು ನೋಡುವುದು.

ವಿಪ್ಪಇಣ್ಣ. ವಿ: [ವಿಪ್ರಕೀರ್ಣ] ಚೆದುರಿರುವ, ಎರಚಾಡಿರುವ, ಅತ್ತ ಇತ್ತ ಬಿದ್ದಿರುವ

ವಿಪ್ಪಇರ. **ಸಕ:** [ವಿಪ್ರ+**ಕೃ**] ಅತ್ತ–ಇತ್ತ ಬೀಳು, ಚೆದುರು, ಹರಡು(ಉವಾ)

ವಿಪ್ಪಉಂಜ. **ಸಕ:** [ವಿಪ್ರ+**ಯುಜ್**] ವಿರುದ್ಧ ರೀತಿಯಲ್ಲಿ ಪ್ರಯೋಗಿಸು, ವಿಶೇಷ ರೀತಿಯಲ್ಲಿ ಜೋಡಿಸು

ವಿಪ್ಪಓಅ.}. **ಪು:** [ವಿಪ್ರಯೋಗ] ಅಗಲುವಿಕೆ,
ವಿಪ್ಪಓಗ}. ಬೇರ್ಪಡುವುದು, ವಿರಹ, ವಿಯೋಗ

ವಿಪ್ಪಕಡ. ವಿ: [ವಿಪ್ರಕಟ] ವಿಶೇಷ ರೂಪದಲ್ಲಿ ಪ್ರಕಟವಾದ

ವಿಪ್ಪಕಿರ. **'ವಿಪ್ಪಇರ'** ಶಬ್ದವನ್ನು ನೋಡುವುದು.

ವಿಪ್ಪಕ್ಖ. **ವಿಪಕ್ಖ'** ಶಬ್ದವನ್ನು ನೋಡುವುದು.

ವಿಪ್ಪಗಬ್ಭಿಯ. ವಿ: [ವಿಪ್ರಗಲ್ಭಿತ] ಅತ್ಯಂತ ಧೈರ್ಯಶಾಲಿ, ಅತ್ಯಂತ ಅವಿನೀತ(ಸೂಅ)

ವಿಪ್ಪಗರಿಸ. **ಪು:** [ವಿಪ್ರಕರ್ಷ] ಬಹಳ ದೂರ

ವಿಪ್ಪಗಾಲ. **ಸಕ:** [**ನಾಶಯ್**, ವಿಪ್ರ+**ಗಾಲಯ್**] ನಾಶಪಡಿಸು

ವಿಪ್ಪಗಾಲಿಅ. ವಿ: [**ನಾಶಿತ, ವಿಪ್ರಗಾಲಿತ**] ನಾಶವಾದ, ಹಾಳಾದ

ವಿಪ್ಪಗಿಟ್ಠ. ವಿ: [ವಿಪ್ರಕೃಷ್ಟ] ತುಂಬ ದೂರದಲ್ಲಿರುವ

ವಿಪ್ಪಚಯ. **ಸಕ:** [ವಿಪ್ರ+**ತ್ಯಜ್**] ಬಿಡು, ತ್ಯಜಿಸು

ವಿಪ್ಪಚ್ಚಯ. **ಪು:** [ವಿಪ್ರತ್ಯಯ] ಸಂದೇಹ, ಸಂಶಯ (ಉತ್ತ), ವಿ: ನಂಬಲರ್ಹವಲ್ಲದ, ಅವಿಶ್ವಸನೀಯ.

ವಿಪ್ಪಜಢ. ವಿ: [ವಿಪ್ರಹೀಣ] ಪರಿತ್ಯಕ್ತ, ಬಿಡಲ್ಪಟ್ಟ (ಣಾಯಾ)

ವಿಪ್ಪಜಹ. **ಸಕ:** [ವಿಪ್ರ+**ಹಾ**] ತ್ಯಜಿಸು, ಬಿಟ್ಟು ಬಿಡು

ವಿಪ್ಪಜಹ. ನ: [ವಿಪ್ರಹಾಣ] ತ್ಯಾಗ, ಬಿಡುವುದು, **–ಸೇಣಿಯಾ.** **ಸ್ತ್ರೀ:** [–**ಶ್ರೇಣಿಕಾ**] ೧೨ನೇ ಜೈನ ಗ್ರಂಥದ ಒಂದು ಪರಿಕರ್ಮ–ಅಂಶ–ವಿಶೇಷ

ವಿಪ್ಪಜಹಣಾ}. ಸ್ತ್ರೀ: [ವಿಪ್ರಹಾಣಿ] ಅತಿಶಯವಾದ
ವಿಪ್ಪಜಹನ್ನಾ}. ತ್ಯಾಗ, ಪರಿತ್ಯಾಗ(ಉತ್ತ)

ವಿಪ್ಪಡಿಇ. ಅಕ: [ವಿಪರಿ+ಇ] ವಿರುದ್ಧವಾಗು, ತಿರುವುಮುರುವು ಆಗು, **'ವಿಪ್ಪಡಿಏಇ'** (ಸೂಅ)

ವಿಪ್ಪಡಿಘಾಯ. ಪು: [ವಿಪ್ರತಿಘಾತ] ಪ್ರತಿಬಂಧ, ಅಡೆತಡೆ

ವಿಪ್ಪಡಿಪಹ. ಪು: [ವಿಪ್ರತಿಪಥ] ವಿರುದ್ಧ ಮಾರ್ಗ (ಉಪ)

ವಿಪ್ಪಡಿವಣ್ಣ. **ವಿಪ್ಪಡಿವನ್ನ**. ಶಬ್ದವನ್ನು ನೋಡುವುದು.

ವಿಪ್ಪಡಿವತ್ತಿ. ಸ್ತ್ರೀ: [ವಿಪ್ರತಿಪತ್ತಿ] ವಿರೋಧ, ಪ್ರತಿಜ್ಞಾ ಭಂಗ(ಉಪ)

ವಿಪ್ಪಡಿವನ್ನ. ವಿ: [ವಿಪ್ರತಿಪನ್ನ] ವಿಶೇಷ ರೂಪದಲ್ಲಿ ಸ್ವೀಕರಿಸಿದವನು, ಪರಸ್ಪರ ವಿರೋಧಿಸಲ್ಪಟ್ಟ (ಆಚಾ)

ವಿಪ್ಪಡಿವೇಅ}. ಸಕ: [ವಿಪ್ರತಿ+ವೇದಯ್] ತಿಳಿದುಕೊಳ್ಳು,
ವಿಪ್ಪಡಿವೇದ}. ವಿಚಾರಿಸು,

ವಿಪ್ಪಡಿಸಿದ್ಧ. ವಿ: [ವಿಪ್ರತಿಷಿದ್ಧ] ಪರಸ್ಪರರಲ್ಲಿ ಒಪ್ಪಿಗೆಯಿಲ್ಲದಿರುವುದು, ವಿರೋಧ, ನಿಷೇಧ, ಹತೋಟಿ

ವಿಪ್ಪಡೀವ. ವಿ: [ವಿಪ್ರತೀಪ] ಪ್ರತಿಕೂಲ, ವಿರೋಧ

ವಿಪ್ಪಣಟ್ಠ. ವಿ: [ವಿಪ್ರನಷ್ಟ] ಓಡಿಸಲ್ಪಟ್ಟ, ನಾಶವಾದ

ವಿಪ್ಪಣಮ}. ಸಕ: [ವಿಪ್ರ+ಣಮ್] ನಮಸ್ಕರಿಸು, ಬಾಗು.
ವಿಪ್ಪಣವ}. ಅಕ: ತೊಡಗು. **ವ. ಕೃ: 'ವಿಪ್ಪಣಮಂತ'**

ವಿಪ್ಪಣಸ್ಸ. ಅಕ: [ವಿಪ್ರ+ನಶ್] ನಾಶವಾಗು, ವಿನಾಶಹೊಂದು

ವಿಪ್ಪಣಾಸ. ಪು: [ವಿಪ್ರಣಾಶ] ವಿನಾಶ.

ವಿಪ್ಪತಾರ. ಸಕ: [ವಿಪ್ರ+ತಾರಯ್] ವಂಚಿಸು, ಮೋಸಮಾಡು

ವಿಪ್ಪದೀಅ}. (ಶೌ). 'ವಿಪ್ಪಡೀವ' ಶಬ್ದವನ್ನು
ವಿಪ್ಪದೀವ}. ನೋಡುವುದು.

ವಿಪ್ಪಮಾಯ. ಪು: [ವಿಪ್ರಮಾದ] ನಾನಾ ಬಗೆಯ ಪ್ರಮಾದ

ವಿಪ್ಪಮುಂಚ. ಸಕ: [ವಿಪ್ರ+ಮುಚ್] ಬಿಡು, ಮುಕ್ತಗೊಳಿಸು

ವಿಪ್ಪಮುಕ್ಕ. ವಿ: [ವಿಪ್ರಮುಕ್ತ] ವಿಮುಕ್ತ, ಬಿಡಲ್ಪಟ್ಟ

ವಿಪ್ಪಯ. ನ: [ದೇ] ಕಣದ-ಭಿಕ್ಷೆ, ದಾನ, **ವಿ:** ಬೀಜ ಬಿತ್ತಿಸಲ್ಪಟ್ಟ, **ಪು:** ವೈದ್ಯ(ದೇ)

ವಿಪ್ಪಯಾರ. ಸಕ: [ವಿಪ್ರ+ತಾರಯ್] ವಂಚಿಸು, ಮೋಸಮಾಡು

ವಿಪ್ಪಯಾರಣಾ. ಸ್ತ್ರೀ: [ವಿಪ್ರತಾರಣಾ] ವಂಚನೆ, ಮೋಸ (ಕುಪ್ರ)

ವಿಪ್ಪಯಾರಿಅ. ವಿ: [ವಿಪ್ರತಾರಿತ] ವಂಚಿತ, ಮೋಸಗೊಳಿಸಲ್ಪಟ್ಟ

ವಿಪ್ಪರದ್ಧ. ವಿ: [ದೇ] ವಿಶೇಷವಾಗಿ ಪೀಡಿಸಲ್ಪಟ್ಟ. **'ಪರದ್ಧ'** ಶಬ್ದವನ್ನು ನೋಡುವುದು.

ವಿಪ್ಪರಾಮುಸ. 'ವಿಪರಾಮುಸ' ಶಬ್ದವನ್ನು ನೋಡುವುದು.

ವಿಪ್ಪರಿಣಮ. 'ವಿಪರಿಣಮ' ಶಬ್ದವನ್ನು ನೋಡುವುದು.

ವಿಪ್ಪರಿಣಯ. 'ವಿಪರಿಣಯ' ಶಬ್ದವನ್ನು ನೋಡುವುದು.

ವಿಪ್ಪರಿಣಾಮ. 'ವಿಪರಿಣಾಮ=ವಿಪರಿ+ಣಮಯ್' ಶಬ್ದವನ್ನು ನೋಡುವುದು.

ವಿಪ್ಪರಿಣಾಮ. 'ವಿಪರಿಣಾಮ=ವಿಪರಿಣಾಮ' ಶಬ್ದವನ್ನು ನೋಡುವುದು.

ವಿಪ್ಪರಿಣಾಮಿಯ. 'ವಿಪರಿಣಾಮಿಯ' ಶಬ್ದವನ್ನು ನೋಡುವುದು.

ವಿಪ್ಪರಿಯಾಸ. ಸಕ: [ವಿಪರಿ+ಆಸಯ್] ವ್ಯತ್ಯಾಸ ಮಾಡು, ಬದಲುಮಾಡು, ವಿರುದ್ಧವಾಗಿ ಮಾಡು

ವಿಪ್ಪರಿಯಾಸ. ಪು: [ವಿಪರ್ಯಾಸ] ವ್ಯತ್ಯಾಸ, ಬದಲಾವಣೆ, ವಿರುದ್ಧವಾಗಿರುವಿಕೆ, ಸುತ್ತುವುದು, ತಿರುಗುವುದು(ಸೂಅ)

ವಿಪ್ಪರಿವಾಸಣಾ. ಸ್ತ್ರೀ: [ವಿಪರ್ಯಾಸನಾ] ವ್ಯತ್ಯಾಸ ಉಂಟುಮಾಡುವುದು, ಬದಲಾಯಿಸುವುದು (ನಿಚೂ)

ವಿಪ್ಪರುದ್ಧ. ವಿ: [ವಿಪ್ರರುದ್ಧ] ತಿರಸ್ಕೃತ(ಪಉಮ)

ವಿಪ್ಪಲ. 'ವಿಪ್ಪ=ವಿಪ್ರ' ಶಬ್ದವನ್ನು ನೋಡುವುದು.

ವಿಪ್ಪಲಂಭ. ಸಕ: [ವಿಪ್ರ+ಲಭ್] ವಂಚಿಸು, ಮೋಸಮಾಡು

ವಿಪ್ಪಲಂಭ. ಪು: [ವಿಪ್ರಲಂಭ] ವಂಚನೆ, ಮೋಸ(ಉಪ), ಶೃಂಗಾರದ ಒಂದು ಪ್ರಭೇದ: ವಿಪ್ರಲಂಭ ಅಥವಾ ವಿಯೋಗ ಶೃಂಗಾರ, ವ್ಯತ್ಯಾಸ, ವಿರುದ್ಧ, ವಿರಹ, ವಿಯೋಗ(ಕಪ್ಪೂ)

ವಿಪ್ಪಲಂಭಅ. ವಿ: [ವಿಪ್ರಲಂಭಕ] ವಂಚಿಸುವವನು, ಮೋಸ ಮಾಡುವವನು

ವಿಪ್ಪಲಂಭಿಅ. ವಿ: [ವಿಪ್ರಲಂಭಿತ] ವಂಚಿಸಲ್ಪಟ್ಟವನು, ಮೋಸಕ್ಕೊಳಗಾದವನು, ಬಿಡಲ್ಪಟ್ಟ, ತ್ಯಜಿಸಲ್ಪಟ್ಟ, ವಿರಹಿ

ವಿಪ್ಪಲದ್ಧ. ವಿ: [ವಿಪ್ರಲಬ್ಧ] ವಂಚಿಸಲ್ಪಟ್ಟ, ಮೋಸಮಾಡಲ್ಪಟ್ಟ
ವಿಪ್ಪಲಯ. ಪುಂನ: [ದೇ] ವಿವಿಧತೆ, ವಿಚಿತ್ರತೆ
ವಿಪ್ಪಲವಿದ(ಶೌ) ನ: [ವಿಪ್ರಲಪಿತ] ವ್ಯರ್ಥ ಮಾತು, ನಿಷ್ಪ್ರಯೋಜಕವಾದ ಮಾತು.
ವಿಪ್ಪಲಾಅ. 'ವಿಪಲಾಅ' ಶಬ್ದವನ್ನು ನೋಡುವುದು.
ವಿಪ್ಪಲಾಅ.}. ಪು: [ವಿಪ್ರಲಾಪ] ಅಳುವುದು,
ವಿಪ್ಪಲಾವ}. ಗೋಳಾಡುವುದು, ವ್ಯರ್ಥ ಮಾತು, ಹರಟೆ, ವಿರಹಾಲಾಪ(ಪಉಮ)
ವಿಪ್ಪಲಿಉಂಚಿಅ. ನ: [ವಿಪರಿಕುಂಚಿತ] ಗುರುವಂದನೆಯಲ್ಲಿಯ ಒಂದು ದೋಷ: ಪೂರ್ತಿಯಾಗಿ ನಮಸ್ಕರಿಸದೆ ಮಧ್ಯದಲ್ಲಿ ಮಾತುಕತೆಗೆ ತೊಡಗುವುದು
ವಿಪ್ಪಲುಪಂಗ. ವಿ: [ವಿಪ್ರಲೋಪಕ] ಲೂಟಿ ಮಾಡುವವನು
ವಿಪ್ಪಲೋಹಣ. ವಿ:[ವಿಪ್ರಲೋಭನ] ಮೋಹಗೊಳಿಸುವವ, ಆಸೆ ತೋರಿಸುವವನು
ವಿಪ್ಪವ. ಪು: [ವಿಪ್ಲವ] ಕ್ರಾಂತಿ, ಗಲಿಬಿಲಿ, ಬೇರೆ ರಾಜನ ರಾಜ್ಯದ ಭಯ, ದೇಹದ ಅಸ್ವಸ್ಥತೆ
ವಿಪ್ಪವರ. ನ: [ದೇ] ಗೇರುಮರ(ದೇ)
ವಿಪ್ಪವಸ. ಅಕ: [ವಿಪ್ರ+ವಸ್] ಪ್ರವಾಸ ಹೋಗು, ದೇಶಾಂತರ ಹೋಗು(ಆಚಾ)
ವಿಪ್ಪವಸಿಅ. ವಿ: [ವಿಪ್ರೋಷಿತ] ಪ್ರವಾಸ ಹೋಗಿರುವ, ದೇಶಾಂತರ ಹೋಗಿರುವ(ಣಾಯಾ)
ವಿಪ್ಪವಾಸ. ಪು: [ವಿಪ್ರವಾಸ] ಪ್ರವಾಸ, ದೇಶಾಂತರ ಹೋಗುವುದು, ವಿದೇಶದಲ್ಲಿ ಸಂಚರಿಸುವುದು
ವಿಪ್ಪಸನ್ನ. ವಿ: [ವಿಪ್ರಸನ್ನ] ವಿಶೇಷವಾಗಿ ಪ್ರಸನ್ನನಾದ, ಪ್ರಸನ್ನ ಚಿತ್ತದ ಸಾವು(ಉತ್ತ)
ವಿಪ್ಪಸರ. ಅಕ: [ವಿಪ್ರ+ಸೃ] ಹರಡು, ಪಸರಿಸು
ವಿಪ್ಪಸಾಯ. ಸಕ: [ವಿಪ್ರ+ಸಾದಯ್] ಪ್ರಸನ್ನ ಗೊಳಿಸು, ಸಂತೋಷಪಡಿಸು
ವಿಪ್ಪಸೀಅ. ಅಕ: [ವಿಪ್ರ+ಸದ್] ಪ್ರಸನ್ನವಾಗು, ಸಂತೋಷಗೊಳ್ಳು
ವಿಪ್ಪಹಯ. ವಿ: [ವಿಪ್ರಹತ] ಗಾಯಗೊಂಡ, ಹೊಡೆಯಲ್ಪಟ್ಟ
ವಿಪ್ಪಹಾಇಯ. ವಿ: [ವಿಪ್ರಭಾಜಿತ] ಭಾಗ ಮಾಡಲ್ಪಟ್ಟ, ಪಾಲು ಮಾಡಲ್ಪಟ್ಟ, ಹಂಚಲ್ಪಟ್ಟ(ಔಪ)
ವಿಪ್ಪಹೀಣ}. ವಿ: [ವಿಪ್ರಹೀಣ] ರಹಿತ, ವರ್ಜಿತ
ವಿಪ್ಪಹೂಣ}.
ವಿಪ್ಪಾವಗ. ವಿ: [ದೇ] ಹಾಸ್ಯ ಮಾಡುವವನು, ಉಪಹಾಸ ಮಾಡುವವನು
ವಿಪ್ಪಿಅ. ಪುಂನ: [ವಿಪ್ರಿಯ] ಅಪ್ರಿಯವಾದ್ದು, ಇಷ್ಟವಲ್ಲದ್ದು(ಣಾಯಾ), ಅಪರಾಧ, ತಪ್ಪು, –ಆರಯ. ವಿ:[–ಕಾರಕ] ಅಪ್ರಿಯವನ್ನು ಮಾಡುವವನು, ಅಪರಾಧ ಮಾಡುವವನು
ವಿಪ್ಪಿಂಡಿಅ. ವಿ: [ದೇ] ನಾಶವಾದ, ಹಾಳಾದ
ವಿಪ್ಪೀಇ. ಸ್ತ್ರೀ: [ವಿಪ್ರೀತಿ] ಅಪ್ರೀತಿ, ಪ್ರೀತಿಯಿಲ್ಲದಿರುವಿಕೆ, ವೈರ(ಪಣ್ಣ)
ವಿಪ್ಪು. ಸ್ತ್ರೀ: [ವಿಪ್ರುಷ್] ಬಿಂದು, ಹನಿ, ಅಂಗ, ಅಂಶ
ವಿಪ್ಪುಅ. ವಿ: [ವಿಪ್ಲುತ] ತೊಂದರೆಗೆ ಗುರಿಯಾದ, ಕಷ್ಟದಿಂದ ತೊಂದರೆ ಅನುಭವಿಸಿದ(ದೇ) ನಾಶವಾದ
ವಿಪ್ಪುಸ. ಪುಂನ: 'ವಿಪ್ಪು' ಶಬ್ದವನ್ನು ನೋಡುವುದು.
ವಿಪ್ಪೆಕ್ಖ. ಸಕ: [ವಿಪ್ರ+ಈಕ್ಷ್] ನೋಡು, ವ.ಕೃ: **'ವಿಪ್ಪೆಕ್ಖಂತ'**
ವಿಪ್ಪೆಕ್ಖಿಅ. ವಿ: [ವಿಪ್ರೇಕ್ಷಿತ] ನೋಡಲ್ಪಟ್ಟ(ಪಣ್ಣ)
ವಿಪ್ಪೋಸಹಿ. ಸ್ತ್ರೀ: [ವಿಪ್ರೌಷಧಿ] ಆಧ್ಯಾತ್ಮದ ಒಂದು ಶಕ್ತಿ–ವಿಶೇಷ: ಇದರ ಪ್ರಭಾವದಿಂದ ಯೋಗಿಯ ಮಲ ಮತ್ತು ಮೂತ್ರಗಳೂ ಔಷಧಿಯ ರೂಪದಲ್ಲಿ ಕೆಲಸ ಮಾಡುತ್ತವೆ(ಪಣ್ಣ)
ವಿಪ್ಫಂದ. ಅಕ: [ವಿ+ಸ್ಪಂದ್] ಅತ್ತ–ಇತ್ತ ಚಲಿಸು, ವೇದನೆಯಿಂದ ಒದ್ದಾಡು
ವಿಪ್ಫಂದಿಅ. ವಿ: [ವಿಸ್ಪಂದಿತ] ಅತ್ತ–ಇತ್ತ ಅಲೆದಾಡಿದ, ಪರಿಭ್ರಾಂತ(ಪಉಮ)
ವಿಪ್ಫರಿಸ. ಪು: [ವಿಸ್ಪರ್ಶ] ವಿರುದ್ಧ ಸ್ಪರ್ಶ
ವಿಪ್ಫಾಡಗ. ವಿ: [ವಿಪಾಟಕ] ಸೀಳುವವನು, ಹೋಳುಮಾಡುವವನು
ವಿಪ್ಫಾಡಿಅ. ವಿ: [ದೇ. ವಿಪಾಟಿತ] ನಾಶಮಾಡಲ್ಪಟ್ಟ,
ವಿಪ್ಫಾರಿಯ. ವಿ: [ವಿಸ್ಫಾರಿತ] ವಿಸ್ತರಿಸಲ್ಪಟ್ಟ(ಸುಪಾ)
ವಿಪ್ಫಾಲ. ಸಕ: [ದೇ] ಕೇಳು, ಪ್ರಶ್ನಿಸು
ವಿಪ್ಫಾಲ. 'ವಿಫಾಲ' ಶಬ್ದವನ್ನು ನೋಡುವುದು.
ವಿಪ್ಫಾಲಿಯ. 'ವಿಪ್ಫಾರಿಯ' ಶಬ್ದವನ್ನು ನೋಡುವುದು.
ವಿಪ್ಫುಡ. ವಿ: [ವಿಸ್ಫುಟ] ಸ್ಪಷ್ಟವಾದ, ವ್ಯಕ್ತವಾದ
ವಿಪ್ಫುರ. ಅಕ: [ವಿ+ಸ್ಫುರ] ಆಗು, ಅರಳು, ಚಡಪಡಿಸು, ಅಲುಗಾಡು, ಕದಲು(ಉತ್ತ). ವ.ಕೃ: **'ವಿಪ್ಫುರಂತ'**

ವಿಪ್ಫುರಣ. ನ: [ವಿಸ್ಫುರಣ] ವಿಜೃಂಭಣ, ವಿಕಾಸ, ಸ್ಪಂದನ, ಅಲುಗಾಡುವುದು, ಮಿಸುಕಾಡುವುದು
ವಿಪ್ಫೂರಿಯ. ವಿ: [ವಿಸ್ಫುರಿತ] ವಿಜೃಂಭಿತ(ಸುಪಾ)
ವಿಪ್ಫುಲ. ವಿ: [ವಿಫುಲ್ಲ] ವಿಕಸಿತ, ಅರಳಿದ
ವಿಪ್ಫೋಡ. ಪು: [ವಿಸ್ಫೋಟಕ] ಕುರು, ಹೊಪ್ಪೆ
ವಿಫಂದ. 'ವಿಪ್ಫಂದ' ಶಬ್ದವನ್ನು ನೋಡುವುದು.
ವಿಫಾಲ. ಸಕ: [ವಿ+ಪಾಟಯ್] ಸೀಳು, ಕೀಳು
ವಿಫುಟ್ಟ. ಅಕ: [ವಿ+ಸ್ಫುಟ್] ಸಿಡಿ
ವಿಫುರಣ. 'ವಿಪ್ಫುರಣ' ಶಬ್ದವನ್ನು ನೋಡುವುದು.
ವಿಬಂಧಕ. ವಿ: [ವಿಬಂಧಕ] ವಿಶೇಷ ರೀತಿಯಲ್ಲಿ ಕಟ್ಟುವ
ವಿಬದ್ಧ. ವಿ: [ವಿಬದ್ಧ] ವಿಶೇಷ ರೀತಿಯಲ್ಲಿ ಬದ್ಧ,ಕಟ್ಟಲ್ಪಟ್ಟ
ವಿಬಾಹಗ. ವಿ: [ವಿಬಾಧಕ] ವಿರೋಧಿ, ಬಾಧಕ, ತೊಂದರೆ ಕೊಡುವ
ವಿಬುದ್ಧ. ವಿ: [ವಿಬುದ್ಧ] ಜಾಗೃತ,
ವಿಬುಧ(ಶೌ)}. ಪು: [ವಿಬುಧ] ದೇವ, ಪಂಡಿತ,
ವಿಬುಹ}. ವಿದ್ವಾಂಸ, **–ಚಂದ.** ಪು: [–ಚಂದ್ರ] ಒಬ್ಬ ಜೈನಾಚಾರ್ಯ. **–ಪಹು.** ಪು: [–ಪ್ರಭು] ಇಂದ್ರ, **–ಪುರ.** ನ: [–ಪುರ] ಸ್ವರ್ಗ
ವಿಬುಹೇಸರ. ಪು: [ವಿಬುಧೇಶ್ವರ] ಇಂದ್ರ
ವಿಬೋಹ. ಪು: [ವಿಬೋಧ] ಜಾಗರಣ, ಎಚ್ಚರವಾಗಿರುವುದು.
ವಿಬೋಹಗ. 'ವಿವೋಹಯ' ಶಬ್ದವನ್ನು ನೋಡುವುದು.
ವಿಬೋಹಣ. ನ: [ವಿಬೋಧನ] ಜ್ಞಾನವುಂಟು ಮಾಡುವುದು, ಬೋಧಿಸುವುದು, ತಿಳಿಸುವುದು.
ವಿಬೋಹಯ. ವಿ: [ವಿಬೋಧಕ] ವಿಕಾಸಕ, ಜ್ಞಾನ ಉಂಟುಮಾಡುವವನು, ಜ್ಞಾನವನ್ನು ಬೋಧಿಸುವವನು(ವಿಸೇ)
ವಿಬ್ಬೋಅ. ಪು: [ವಿಬ್ಬೋಕ] ವಿಲಾಸ, ಲೀಲೆ. **'ಬಿಬ್ಬೋಅ'** ಶಬ್ದವನ್ನು ನೋಡುವುದು.
ವಿಬ್ಭಂಗ. 'ವಿಭಂಗ' ಶಬ್ದವನ್ನು ನೋಡುವುದು.
ವಿಬ್ಭಂತ. ವಿ: [ವಿಭ್ರಾಂತ] ಭ್ರಮೆಯಿಂದ ಕೂಡಿದ, ಅಸಮಂಜಸತೆಯಲ್ಲಿ ಸಿಲುಕಿದ(ಆಚಾ), **ಪು:** ಪ್ರಥಮನರಕ–ಭೂಮಿಯ ೭ನೇ ನರಕೇಂದ್ರಕ ಸ್ಥಾನ
ವಿಬ್ಭಂಸ. ಪು: [ವಿಭ್ರಂಶ] ಹಿಂಸೆ, ಪ್ರಾಣ ಬಿಡುವುದು
ವಿಬ್ಭಟ್ಠ. ವಿ: [ವಿಭ್ರಷ್ಟ] ವಿಶೇಷವಾಗಿ ಭ್ರಷ್ಟನಾದ (ಪ್ರತಿ)
ವಿಬ್ಭಮ. ಪು: [ವಿಭ್ರಮ] ವಿಲಾಸ(ಪಾಅ), ಹೆಣ್ಣಿನ ಶೃಂಗಾರ ಭಾವದ ಕಾರ್ಯ, ಚಿತ್ತ–ಭ್ರಮೆ, ಹುಚ್ಚು, ಶೃಂಗಾರಕ್ಕೆ ಸಂಬಂಧಿಸಿದ ಮಾನಸಿಕ ಅಶಾಂತಿ, ವಿಶೇಷ ಭ್ರಾಂತಿ(ಸುಪಾ), ಸಂದೇಹ, ಆಶ್ಚರ್ಯ, ಶೋಭೆ, ಒಡವೆಗಳ ಸ್ಥಾನ ಬದಲಾವಣೆ, ರಾವಣನ ಒಬ್ಬ ಯೋಧ(ಪಉಮ). ಮೈಥುನ, ಕಾಮ–ವಿಕಾರ
ವಿಬ್ಭಲ. ವಿ: [ವಿಹ್ವಲ] ವ್ಯಾಕುಲ, ವ್ಯಗ್ರ, ಕಳವಳಗೊಂಡ, ಆತಂಕಗೊಂಡ, ತಲ್ಲೀನನಾದ, **ಪು:** ವಿಷ್ಣು
ವಿಬ್ಭಲಿಅ. ವಿ: [ವಿಹ್ವಲಿತ] ವ್ಯಾಕುಲಗೊಳಿಸಲ್ಪಟ್ಟ(ಕುಮಾ)
ವಿಬ್ಭವಣ. ನ: [ದೇ] ತಲೆದಿಂಬು(ದೇ)
ವಿಬ್ಭಾಡಿಯ. ವಿ: [ದೇ] ನಾಶಮಾಡಲ್ಪಟ್ಟ (ಭವಿ)
ವಿಬ್ಭಾರ. 'ವೇಬ್ಭಾರ' ಶಬ್ದವನ್ನು ನೋಡುವುದು.
ವಿಬ್ಭಿಡಿ. ಪು: [ದೇ] ಮೀನಿನ ಒಂದು ಜಾತಿ(ವಿಪಾ)
ವಿಬ್ಭೇಇಅ. ವಿ: [ದೇ] ಸೂಜಿಯಿಂದ ತೂತು ಕೊರೆಯಲ್ಪಟ್ಟ
ವಿಭಂಗ. ಪು: [ವಿಭಂಗ] ವಿಪರೀತ ಅವಧಿ–ಜ್ಞಾನ, ವಿತಥ ಅವಧಿ ಜ್ಞಾನ, ಮಿಥ್ಯೆಯಿಂದ ಕೂಡಿದ ಅವಧಿ ಜ್ಞಾನ, ಒಡೆಯುವುದು,ಮುರಿಯುವುದು, ಮೈಥುನ(ಪಣ್ಣ). **'ವಿಹಂಗ=ವಿಭಂಗ'** ಶಬ್ದವನ್ನು ನೋಡುವುದು.
ವಿಭಂಗು. ಪುಂಸ್ತ್ರೀ: [ದೇ] ಒಂದು ಬಗೆಯ ತೃಣ.
ವಿಭಂಗುರ. ವಿ: [ವಿಭಂಗುರ] ನಶ್ವರ, ನಾಶವಾಗುವ (ಸುಪಾ), ಮುರಿಯುವ ಸ್ವಭಾವದ
ವಿಭಂಜ. ಸಕ: [ವಿ+ಭಂಜ್] ಮುರಿದು ಹಾಕು
ವಿಭಂತಡೀ(ಅಪ). ಸ್ತ್ರೀ: [ವಿಭ್ರಾಂತಿ] ಭ್ರಮೆ, ಮಿಥ್ಯಾಜ್ಞಾನ
ವಿಭಗ್ಗ. ವಿ: [ವಿಭಗ್ನ] ಮುರಿದುಹಾಕಲ್ಪಟ್ಟ, ಒಡೆದುಹಾಕಲಾದ (ಪಉಮ)
ವಿಭಜ. ಸಕ: [ವಿ+ಭಜ್] ವಿಭಾಗಿಸು, ಹಂಚು, ಒಂದು ಅಂಶವನ್ನು ಪಡೆದುಕೊಳ್ಳು, ವಿಧಿಸು ಮತ್ತು ನಿಷೇಧಿಸು
ವಿಭಜಣ. ನ:[ವಿಭಜನ]ವಿಭಾಗ, ಹಂಚಿಕೆ,ವಿಭಜಿಸುವುದು
ವಿಭಜ್ಜ. 'ವಿಭಜ' ಶಬ್ದವನ್ನು ನೋಡುವುದು.
ವಿಭಜ್ಜವಾದ}. ಪು: [ವಿಭಜ್ಯವಾದ] ಸ್ಯಾದ್‌ವಾದ,
ವಿಭಜ್ಜವಾಯ}. ಅನೇಕಾಂತ ವಾದ, ಜೈನ ದರ್ಶನ.
ವಿಭತ್ತ. ವಿ: [ವಿಭಕ್ತ] ವಿಭಜಿಸಲ್ಪಟ್ಟ, ಭಾಗ ಮಾಡಲ್ಪಟ್ಟ, ಭಿನ್ನವಾದ, ಬೇರೆಯಾದ **ನ:** ವಿಭಾಗ

ವಿಭತ್ತಿ. ಸ್ತ್ರೀ: [**ವಿಭಕ್ತಿ**] ವಿಭಾಗ, ಪಾಲು, ವ್ಯಾಕರಣದ 'ಸುಪ್' ಮತ್ತು 'ತಿಙ್' ಪ್ರತ್ಯಯಗಳು(ಚೇಇಯ)
ವಿಭಮಣ. ನ: [ದೇ] ತಲೆದಿಂಬು
ವಿಭಯ. '**ವಿಭಜ**' ಶಬ್ದವನ್ನು ನೋಡುವುದು(ಉತ್ತ)
ವಿಭಯಣಾ. ಸ್ತ್ರೀ: [**ವಿಭಜನಾ**] ವಿಭಾಗ
ವಿಭರ. ಸಕ: [ವಿ+ಸ್ಮೃ] ಮರೆ
ವಿಭವ. '**ವಿಹವ**' ಶಬ್ದವನ್ನು ನೋಡುವುದು(ಉವ)
ವಿಭವಣ. ನ: [**ವಿಭವನ**] ವಿರೂಪಗೊಳಿಸುವುದು, ಕೆಡಿಸುವುದು.
ವಿಭಾಇಮ. ವಿ: [**ವಿಭಾಜ್ಯ**] ವಿಭಜಿಸಲು ಅರ್ಹವಾದ
ವಿಭಾಇಮ. ವಿ: [**ವಿಭಾಗಿಮ**] ವಿಭಜನೆಯಿಂದ ಮಾಡಲ್ಪಟ್ಟ,
ವಿಭಾಗ. ಪು: [**ವಿಭಾಗ**] ಭಾಗ, ಪಾಲು(ಸಣ)
ವಿಭಾಗಿಮ. '**ವಿಭಾಇಮ=ವಿಭಾಗಿಮ**' ಶಬ್ದವನ್ನು ನೋಡುವುದು.
ವಿಭಾಯ. ನ: [**ವಿಭಾತ**] ಪ್ರಕಾಶ, ಕಾಂತಿ, ತೇಜಸ್ಸು
ವಿಭಾಯ. ಪು: [**ವಿಭಾವ**] ಪರಿಚಯ
ವಿಭಾವ. ಸಕ: [**ವಿಭಾವಯ್**] ವಿಚಾರಮಾಡು, ವಿವೇಕದಿಂದ ಗ್ರಹಿಸು, ಅರ್ಥಮಾಡಿಕೊಳ್ಳು, ಮನಸ್ಸಿನಲ್ಲಿ ಭಾವಿಸು
ವಿಭಾವ. '**ವಿಭವ**' ಶಬ್ದವನ್ನು ನೋಡುವುದು.
ವಿಭಾವಸು. ಪು: [**ವಿಭಾವಸು**] ಸೂರ್ಯ, ರವಿ, ಭಾನುವಾರ, ಅಗ್ನಿ. '**ವಿಹಾವಸು**' ಶಬ್ದವನ್ನು ನೋಡುವುದು.
ವಿಭಾವಿಯ. ವಿ: [**ವಿಭಾವಿತ**] ವಿಚಾರ ಮಾಡಲ್ಪಟ್ಟ,
ವಿಭಾಸ. ಸಕ: [**ವಿ+ಭಾಷ್**] ವಿಶೇಷ ರೂಪದಲ್ಲಿ ಹೇಳು, ಸ್ಪಷ್ಟವಾಗಿ ಹೇಳು, ವ್ಯಾಖ್ಯಾನಿಸು, ವಿಕಲ್ಪವಾಗಿ ವಿಧನಿಸು'**ವಿಭಾಸಇ**'
ವಿಭಾಸಣ. ನ: [**ವಿಭಾಷಣ**] ವ್ಯಾಖ್ಯಾನ,
ವಿಭಾಸಯ. ವಿ: [**ವಿಭಾಷಕ**] ವ್ಯಾಖ್ಯಾನಿಸುವವನು, ವ್ಯಾಖ್ಯಾಸನ ಕರ್ತೃ
ವಿಭಾಸಾ. ಸ್ತ್ರೀ: [**ವಿಭಾಷಾ**] ನಿಷೇಧ, ವಿಕಲ್ಪಗಳ ನಿಯಮವು ಅನ್ವಯವಾಗಬಹುದಾದ ಅಥವಾ ಆಗದಿರುವ ವ್ಯವಸ್ಥೆ, ವ್ಯಾಖ್ಯಾನ, ವಿಜ್ಞಾಪನೆ, ನಿವೇದನೆ, ವಿವಿಧ ಭಾಷಣ. ವಿಶೇಷೋಕ್ತಿ, ಪರಿಭಾಷೆ, ಸಂಕೇತ, ಒಂದು ಮಹಾ ನದಿ(ತಾ)
ವಿಭಾಸಿಯ. ವಿ: [**ವಿಭಾಸಿತ**] ಪ್ರಕಾಶಗೊಳಿಸಲ್ಪಟ್ಟ

ವಿಭಿಣ್ಣ}. '**ವಿಹಿಣ್ಣ=ವಿಭಿನ್ನ**' ಶಬ್ದವನ್ನು ನೋಡುವುದು.
ವಿಭಿನ್ನ}.
ವಿಭೀಸಣ. ಪು: [**ವಿಭೀಷಣ**] ರಾವಣನ ಒಬ್ಬ ತಮ್ಮ, ವಿದೇಹ ವರ್ಷದ ಒಬ್ಬ ವಾಸುದೇವ
ವಿಭೀಸಾವಣ. ವಿ: [**ವಿಭೀಷಣ**] ಭಯವನ್ನುಂಟು ಮಾಡುವ, ಭಯಂಕರ
ವಿಭೀಸಿಯಾ. ಸ್ತ್ರೀ: [**ವಿಭೀಷಿಕಾ**] ಭಯ–ಪ್ರದರ್ಶನ, ಹೆದರಿಸುವುದು(ಉವ)
ವಿಭು. ಪು: [**ವಿಭು**] ಪರಮೇಶ್ವರ, ಪ್ರಭು, ಸ್ವಾಮಿ, ಒಡೆಯ, ಯಜಮಾನ(ಪಉಮ), ರಾಜ, ಇಕ್ಷ್ವಾಕು ವಂಶದ ಒಬ್ಬ ರಾಜನ ಹೆಸರು, ವಿ: ವ್ಯಾಪಕ, ಸರ್ವವ್ಯಾಪಿ, ವಿಷ್ಣು
ವಿಭೂಇ. ಸ್ತ್ರೀ: [**ವಿಭೂತಿ**] ಐಶ್ವರ್ಯ, ವೈಭವ, ಧೂಮ್ ಧಾವ್, ಅಹಿಂಸೆ, ಶಿವನ ಅಣಿಮಾದಿ ಅಷ್ಟೈಶ್ವರ್ಯ
ವಿಭೂಸಣ. ನ: [**ವಿಭೂಷಣ**] ಅಲಂಕಾರ, ಒಡವೆ, ಶೃಂಗಾರ, ಶೋಭೆ(ಉವ)
ವಿಭೂಸಾ. ಸ್ತ್ರೀ: [**ವಿಭೂಷಾ**] ಒಡವೆ, ವಸ್ತ್ರ ಇತ್ಯಾದಿ ಶೃಂಗಾರದ ಸಲಕರಣೆ(ಆಚಾ), ಶರೀರದ ಶೋಭೆ
ವಿಭೂಸಿಯ. ವಿ: [**ವಿಭೂಷಿತ**] ಅಲಂಕರಿಸಲ್ಪಟ್ಟ, ಒಡವೆಗಳಿಂದ ಸಿಂಗರಿಸಲ್ಪಟ್ಟ(ಭಗ)
ವಿಭೇದ}. ಪು: [**ವಿಭೇದ**] ಭೇದನ, ಸೀಳುವುದು, ಪ್ರಕಾರ,
ವಿಭೇಯ}. ಭೇದ
ವಿಭೇಯಗ. ವಿ: [**ವಿಭೇದಕ**] ಭೇದಿಸುವವನು,
ವಿಮಇ. ಸ್ತ್ರೀ: [**ವಿಮತಿ**] ಒಂದು ಛಂದಸ್ಸು
ವಿಮಇಅ. ವಿ: [ದೇ] ತಿರಸ್ಕೃತ, ಹೀಯಾಳಿಸಲ್ಪಟ್ಟ
ವಿಮಉಲ. ವಿ: [**ವಿಮುಕುಲ**] ಅರಳಿದ, ವಿಕಸಿತ (ಣಾಯಾ).
ವಿಮಂತಿಯ. ವಿ: [**ವಿಮಂತ್ರಿತ**] ಯಾರ ಬಗ್ಗೆ ಸಂಚು ಅಥವಾ ಗುಪ್ತ ಯೋಜನೆ ನಡೆಸಲಾಗಿದೆಯೋ ಅವನು
ವಿಮಂಸಿಯ. ವಿ: [**ವಿಮೃಷ್ಟ, ವಿಮರ್ಶಿತ**] ವಿಚಾರ ಮಾಡಲ್ಪಟ್ಟ, ಪರ್ಯಾಲೋಚಿಸಲ್ಪಟ್ಟ
ವಿಮಗ. '**ವಿಮಯ**' ಶಬ್ದವನ್ನು ನೋಡುವುದು.
ವಿಮಗ್ಗ. ಸಕ: [**ವಿ+ಮಾರ್ಗಯ್**] ವಿಚಾರ ಮಾಡು, ಅನ್ವೇಷಿಸು, ಹುಡುಕು, ಪ್ರಾರ್ಥಿಸುವುದು, ಯಾಚಿಸು, ಇಚ್ಛಿಸು, '**ವಿಮಗ್ಗಇ**'

ವಿಮಗ್ಗಿಅ. ವಿ: [**ವಿಮಾರ್ಗಿತ**] ಯಾಚಿಸಲ್ಪಟ್ಟ, ಹುಡುಕಲ್ಪಟ್ಟ, ಅನ್ವೇಷಿಸಲ್ಪಟ್ಟ
ವಿಮಜ್ಝ. ನ: [**ವಿಮಧ್ಯ**] ಅಂತರಾಳ, ನಡುವೆ,
ವಿಮಣ. ವಿ: [**ವಿಮನಸ್**] ವಿಷಣ್ಣ, ಖಿನ್ನ, ಶೋಕದಿಂದ ಕೂಡಿದ(ಕಪ್ಪ), ಶೂನ್ಯ ಮನಸ್ಕ, ನಿರಾಶೆ, ಹತಾಶೆ, ಯಾರ ಮನಸ್ಸು ಬೇರೆಲ್ಲೋ ಇದೆಯೋ ಅವನು(ಗಉಡ)
ವಿಮದ್ದ. ಸಕ: [**ವಿ+ಮರ್ದಯ್**] ಸಂಘರ್ಷಮಾಡು, ತಿಕ್ಕಾಡು, ಅರೆ, ಪುಡಿಮಾಡು
ವಿಮದ್ದ. ಪು: [**ವಿಮರ್ದ**] ವಿನಾಶ, ಸಂಘರ್ಷ, ತಿಕ್ಕಾಟ,
ವಿಮನ್ನ. ಸಕ: [**ವಿ+ಮನ್**] ಎಣಿಸು, ಪರಿಗಣಿಸು
ವಿಮಯ. ಪು: [**ದೇ**] ಗಂಟು, ಗೆಣ್ಣಿನಿಂದ ಕೂಡಿರುವ ಗಿಡ, ಸಸ್ಯ
ವಿಮರ(ಅಪ)}. ಸಕ: [**ವಿ+ಮೃಶ್**] ವಿಮರ್ಶಿಸು,
ವಿಮರಿಸ}. ವಿಚಾರಿಸು, ವಿವೇಚಿಸು
ವಿಮರಿಸ. ಪು: [**ವಿಮರ್ಶ**] ವಿಕಲ್ಪ, ವಿಚಾರಮಾಡುವುದು, ವಿವೇಚಿಸುವುದು
ವಿಮಲ. ವಿ: [**ವಿಮಲ**] ಮಲರಹಿತವಾದ, ಕೊಳೆಯಿಲ್ಲದ, ವಿಶುದ್ಧ, ನಿರ್ಮಲ(ಔಪ) ಪು: ಈ ಅವಸರ್ಪಿಣಿ ಕಾಲದಲ್ಲಿ ಹುಟ್ಟಿದ ೧೩ನೇ ತೀರ್ಥಂಕರ, ಭಾರತ ವರ್ಷದಲ್ಲಿ ಹುಟ್ಟಲಿರುವ ೨೨ನೇ ತೀರ್ಥಂಕರ, ವಿಕ್ರಮ ಶಕೆ ಮೊದಲ ಸಂವತ್ಸರದಲ್ಲಿ '**ಪಉಮ ಚರಿಯ**' ಎಂಬ ಜೈನ ರಾಮಾಯಣ ರಚಿಸಿದ ಒಬ್ಬ ಪ್ರಾಚೀನ ಜೈನ ಆಚಾರ್ಯ ಮತ್ತು ಕವಿ, **ಪುಂನ:** ಸಹಸ್ರಾರ ದೇವಲೋಕದ ಇಂದ್ರನ ಸಂಚರಿಸಲು ಯೋಗ್ಯವಾದ ಒಂದು ವಿಮಾನ. ಬ್ರಹ್ಮ-ದೇವಲೋಕದಲ್ಲಿ ಇರುವ ಒಂದು ದೇವ-ವಿಮಾನ, ಒಂದು ಗ್ರೈವೇಯಕ ದೇವ-ವಿಮಾನ. ನಿರಂತರ ಆರು ದಿನಗಳ ವರೆಗಿನ ಉಪವಾಸ, **ಪು:** ಅಹಿಂಸೆ, ದಯೆ(ಪಣ್ಣ). **–ಘೋಸ. ಪು:** [**–ಘೋಷ**] ಒಬ್ಬ ಕುಲ ವಂತ ಪುರುಷ. **–ಚಂದ. ಪು:** [**–ಚಂದ್ರ**] ಒಬ್ಬ ಜೈನಾಚಾರ್ಯ. **–ಪ್ಪಹಾ. ಸ್ತ್ರೀ:** [**–ಪ್ರಭಾ**] ಭಗವಾನ್ ಶೀತಲನಾಥನ ದೀಕ್ಷಾ-ಶಿಬಿಕೆ. **–ವರ. ಪು:** [**–ವರ**] ಆನತ-ಪ್ರಾಣತ ದೇವಲೋಕದ ಇಂದ್ರನ ಒಂದು ಸಂಚರಿಸಲು ಯೋಗ್ಯವಾದ ವಿಮಾನ(ಠಾ). **–ವಾಹಣ. ಪು:** [**–ವಾಹನ**] ಭರತವರ್ಷದ ಭಾವೀ ಮೊದಲನೇ ತೀರ್ಥಂಕರ. ಅವನ ಇನ್ನೊಂದು ಹೆಸರು ದೇವಸೇನ ಮತ್ತು ಮಹಾಪದ್ಮ ಎಂದಾಗುತ್ತದೆ(ಠಾ). ಕುಲ ವಂತ-ಪುರುಷ-ವಿಶೇಷ. ಭಾರತ ವರ್ಷದ ಭಾವೀ ಚಕ್ರವರ್ತಿ ರಾಜ. ಭಗವಾನ್ ಅಬಿನಂದನ ಹಿಂದಿನ ಜನ್ಮದ ಗುರುವಾಗಿದ್ದ ಒಬ್ಬ ಜೈನ ಮುನಿ(ಪಉಮ). ಭಗವಾನ್ ಸಂಭವನಾಥನ ಹಿಂದಿನ ಜನ್ಮದ ಹೆಸರು. **–ಸಾಮಿ. ಪು:** [**–ಸ್ವಾಮಿನ್**] ಸಿದ್ಧ ಚಕ್ರನ ಅಧಿಷ್ಠಾಯಕ ದೇವ. **–ಸುಂದರೀ. ಸ್ತ್ರೀ:** [**–ಸುಂದರೀ**] ಆರನೇ ವಾಸುದೇವನ ಪಟ್ಟದ ರಾಣಿ (ಪಉಮ)
ವಿಮಲಣ. ನ: [**ವಿಮರ್ದನ**] ಮಣಿಯೇ ಮೊದಲಾದುವನ್ನು ಸಾಣೆ ಹಿಡಿಸುವುದು. ಸಾಣೆಯಲ್ಲಿ ತಿಕ್ಕಿಸುವುದು.
ವಿಮಲಹರ. ಪು: [**ದೇ**] ಕೋಲಾಹಲ ಶಬ್ದ
ವಿಮಲಾ. ಸ್ತ್ರೀ: [**ವಿಮಲಾ**] ಮೇಲಿನ ದಿಕ್ಕು(ಠಾ), ಧರಣೇಂದ್ರನ ಲೋಕಪಾಲನ ಅಗ್ರಮಹಿಷಿಯ ಹೆಸರು(ಠಾ). ಗೀತರತಿ ಮತ್ತು ಗೀತಯಶ ಎಂಬ ಹೆಸರಿನ ಗಂಧರ್ವೇಂದ್ರರ ಅಗ್ರ ಮಹಿಷಿಯರ ಹೆಸರು. ೧೪ನೇ ತೀರ್ಥಂಕರನ ದೀಕ್ಷಾ-ಶಿಬಿಕೆ.
ವಿಮಲಿಅ. ವಿ: [**ವಿಮರ್ದಿತ**] ಮರ್ದನ ಮಾಡಲ್ಪಟ್ಟ, ತಿಕ್ಕಲ್ಪಟ್ಟ, ಉಜ್ಜಲ್ಪಟ್ಟ
ವಿಮಲಿಅ. ವಿ: [**ದೇ**] ಮಾತ್ಸರ್ಯದಿಂದ ಹೇಳಿದ, ಶಬ್ದದಿಂದ ಕೂಡಿದ.
ವಿಮಲೇಸರ. ಪು: [**ವಿಮಲೇಶ್ವರ**] ಸಿದ್ಧಚಕ್ರರ ಅಧಿಷ್ಠಾಯಕ ದೇವ.
ವಿಮಲೋತ್ತರ. ಪು: [**ವಿಮಲೋತ್ತರ**] ಐರಾವತ ವರ್ಷದ ಒಬ್ಬ ಭಾವಿ ತೀರ್ಥಂಕರ,
ವಿಮಹಿದ(ಶೌ). ವಿ: [**ವಿಮಥಿತ**] ಮಥಿಸಲ್ಪಟ್ಟ, ಕಡೆಯಲ್ಪಟ್ಟ
ವಿಮಾಉ. ಸ್ತ್ರೀ: [**ವಿಮಾತೃ**] ಮಲತಾಯಿ
ವಿಮಾಣ. ಸಕ: [**ವಿ+ಮಾನಯ್**] ಅಪಮಾನಿಸು, ತಿರಸ್ಕರಿಸು
ವಿಮಾಣ. ಪುಂನ: [**ವಿಮಾನ**] ದೇವನ ನಿವಾಸ ಭವನ(ಉವಾ), ದೇವ-ಯಾನ, ಆಕಾಶದಲ್ಲಿ

ಸಂಚರಿಸಬಲ್ಲ ಸಾಮರ್ಥ್ಯವಿರುವ ರಥ. ಅಪಮಾನ, ತಿರಸ್ಕಾರ, ವಿ: ಅಳತೆಯಿಲ್ಲದ, ಪ್ರಮಾಣವಿಲ್ಲದ, **–ಪವಿಭತ್ತಿ.** ಸ್ತ್ರೀ: [–ಪ್ರವಿಭಕ್ತಿ] ಜೈನ ಗ್ರಂಥ–ವಿಶೇಷ. **–ಭವಣ.** ನ [–ಭವನ] ವಿಮಾನಾಕಾರದ ಮನೆ. **–ವಾಸಿ.** ಪು: [–ವಾಸಿನ್] ದೇವರುಗಳ ಒಂದು ಉತ್ತಮ ಜಾತಿ, ವೈಮಾನಿಕ ದೇವ(ಪಣ್ಣ)

ವಿಮಾಣಣಾ. ಸ್ತ್ರೀ: [ವಿಮಾನನಾ] ಅವಗಣನೆ, ತಿರಸ್ಕಾರ,

ವಿಮಾಣಿಅ. ವಿ: [ವಿಮಾನಿತ] ಅಪಮಾನಿತ.

ವಿಮಿಸ್ಸ. ಅ: [ವಿಮೃಶ್ಯ] ವಿಮರ್ಶಿಸಿ, ವಿಚಾರಮಾಡಿ, **–ಗಾರಿ.** ವಿ: [–ಕಾರಿನ್] ವಿಚಾರಪೂರ್ವಕವಾಗಿ ಮಾಡುವವನು

ವಿಮಿಸ್ಸ. ವಿ: [ವಿಮಿಶ್ರ] ಮಿಶ್ರಣ(ಭವಿ)

ವಿಮುಉಲ. 'ವಿಮಉಲ' ಶಬ್ದವನ್ನು ನೋಡುವುದು.

ವಿಮುಂಚ. ಸಕ: [ವಿ+ಮುಚ್] ಬಿಡು, ಬಂಧನದಿಂದ ಮುಕ್ತಗೊಳಿಸು, ಪರಿತ್ಯಜಿಸು(ವುಉದು)

ವಿಮುಕುಲ. 'ವಿಮಉಲ' ಶಬ್ದವನ್ನು ನೋಡುವುದು.

ವಿಮುಕ್ಕ. ವಿ: [ವಿಮುಕ್ತ] ಬಿಡುಗಡೆ ಮಾಡಲ್ಪಟ್ಟ, ಬಂಧನಮುಕ್ತಗೊಂಡ, ಪರಿತ್ಯಕ್ತ, ನಿಃಸಂಗ, ಸಂಗ–ರಹಿತ

ವಿಮುಕ್ಖ. ಪು; [ವಿಮೋಕ್ಷ] ಬಿಡುಗಡೆ, ಮುಕ್ತಿ

ವಿಮುಕ್ಖಣ. 'ವಿಮೋಕ್ಖಣ' ಶಬ್ದವನ್ನು ನೋಡುವುದು.

ವಿಮುಚ್ಛಿಅ. ವಿ: [ವಿಮೂರ್ಛಿತ] ಮೂರ್ಛೆಗೆ ಸಂದ, ಮೂರ್ಛೆಹೋದ

ವಿಮುತ್ತ. 'ವಿಮುಕ್ಕ' ಶಬ್ದವನ್ನು ನೋಡುವುದು.

ವಿಮುತ್ತಿ. ಸ್ತ್ರೀ: [ವಿಮುಕ್ತಿ] ಮೋಕ್ಷ, ಮುಕ್ತಿ, ಆಚಾರಾಂಗ ಸೂತ್ರದ ಅಂತಿಮ ಅಧ್ಯಯನ. ಅಹಿಂಸೆ(ಪಣ್ಣ)

ವಿಮುಯಣ. ನ: [ವಿಮೋಚನ] ಬಿಡುಗಡೆ, ಮುಕ್ತಿ, ಪರಿತ್ಯಾಗ.

ವಿಮುಹ. ವಿ: [ವಿಮುಖ] ಮುಖವನ್ನು ತಿರುಗಿಸಿಕೊಂಡಿರುವ, ಹಿಮ್ಮುಖವಾದ, ಉದಾಸೀನ, ಪು: ಒಂದು ನರಕ–ಸ್ಥಾನ, ಪುಂನ: ಆಕಾಶ(ಭಗ), ನಿರಾಶನಾದ

ವಿಮುಹ. ಅಕ: [ವಿ+ಮುಹ್] ಗಾಬರಿಗೊಳ್ಳು, ವ್ಯಾಕುಲಗೊಳ್ಳು, ಅಶಾಂತಗೊಳ್ಳು

ವಿಮುಹಿಅ. ವಿ: [ವಿಮುಗ್ಧ] ಗಾಬರಿಗೊಂಡ

ವಿಮುಹಿಅ. ವಿ: [ವಿಮುಖಿತ] ಮುಖ ತಿರುಗಿಸಲ್ಪಟ್ಟ (ಪಣ್ಣ)

ವಿಮೂಢ. ವಿ: [ವಿಮೂಢ] ಗಾಬರಿಗೊಂಡ. ಅಸ್ಫುಟವಾದ, ಅಸ್ಪಷ್ಟವಾದ

ವಿಮೂರಣ. ವಿ: [ವಿಭಂಜಕ] ಮುರಿಯುವವನು, ಒಡೆಯುವವನು

ವಿಮೋಇಯ. ವಿ: [ವಿಮೋಚಿತ] ಬಿಡುಗಡೆಗೊಳಿಸಲ್ಪಟ್ಟ (ಣಾಯಾ)

ವಿಮೊಕ್ಖ. 'ವಿಮುಕ್ಖ' ಶಬ್ದವನ್ನು ನೋಡುವುದು.

ವಿಮೊಕ್ಖಣ. ನ: [ವಿಮೋಕ್ಷಣ] ಸಂಸಾರದಿಂದ ಬಿಡುಗಡೆ, ಬಿಡಿಸುವುದು, ಬಂಧನ ಮುಕ್ತ ಗೊಳಿಸುವುದು, ಬಿಡುಗಡೆಗೊಳಿಸುವವನು.

ವಿಮೊಕ್ಖಯ. ವಿ: [ವಿಮೋಕ್ಷಕ] ಬಿಡುಗಡೆ ಹೊಂದುವವನು(ಸೂಅ)

ವಿಮೋಡಣ. ನ: [ವಿಮೋಟನ] ತಿರುಗಿಸು(ದೇ)

ವಿಮೊತ್ತವ್ವ. 'ವಿಮುಂಚ' ಶಬ್ದವನ್ನು ನೋಡುವುದು.

ವಿಮೋಯ. ಸಕ: [ವಿ+ಮೋಚಯ್] ಬಿಡಿಸು, ಮುಕ್ತಗೊಳಿಸು

ವಿಮೋಯ. 'ವಿಮುಂಚ' ಶಬ್ದವನ್ನು ನೋಡುವುದು.

ವಿಮೋಯಗ. ವಿ: [ವಿಮೋಚಕ] ಬಿಡುವವನು, ದೂರಮಾಡುವವನು, ಮುಕ್ತಗೊಳಿಸುವವನು

ವಿಮೋಯಣ. ನ: [ವಿಮೋಚನ] ಬಿಡುಗಡೆ, ಮುಕ್ತಿ. ವಿ: ಮುಕ್ತಗೊಳಿಸುವವನು

ವಿಮೋಹ. ಸಕ: [ವಿ+ಮೋಹಯ್] ಮರುಳುಗೊಳಿಸು, ಆಸೆತೋರಿಸು, ಮೋಹ ಉಂಟುಮಾಡು

ವಿಮೋಹ. 'ವಿಮೊಕ್ಖ' ಶಬ್ದವನ್ನು ನೋಡುವುದು.

ವಿಮೋಹ. ವಿ: [ವಿಮೋಹ] ಮೋಹವಿಲ್ಲದ(ಉತ್ತ), ಪು: ವಿಶೇಷ ಮೋಹ, ಗಾಬರಿ, ಮಂಕುಜಾಡ್ಯ, ಭ್ರಮೆ, ಆಚಾರಾಂಗ ಸೂತ್ರದ ಒಂದು ಅಧ್ಯಯನ (ಸಮ)

ವಿಮೋಹಣ. ನ: [ವಿಮೋಹನ] ಮೋಹ ಹುಟ್ಟಿಸುವುದು, ಮರುಳುಗೊಳಿಸುವುದು, ವಿ: ಮೋಹ ಹುಟ್ಟಿಸುವ, ಮರುಳುಗೊಳಿಸುವವನು(ಉಪ)

ವಿಮೋಹಿಅ. ವಿ: [ವಿಮೋಹಿತ] ಮೋಹಗೊಳಿಸಲ್ಪಟ್ಟ, ಮರುಳುಗೊಳಿಸಲ್ಪಟ್ಟ

ವಿಮ್ಹ. ನ: [ವೇಶ್ಮನ್] ಮನೆ, ಗೃಹ

ವಿಮ್ಹಇಅ. ವಿ: [ವಿಸ್ಮಿತ] ಆಶ್ಚರ್ಯಚಕಿತ

ವಿಮ್ಹಯ. ಅಕ: [ವಿ+ಸ್ಮಿ] ಆಶ್ಚರ್ಯಹೊಂದು, ವಿಸ್ಮಿತಗೊಳ್ಳು(ಅಭಿ)
ವಿಮ್ಹಯ. ಪು: [ವಿಸ್ಮಯ] ಆಶ್ಚರ್ಯ, ಸೋಜಿಗ(ಗಉಡ)
ವಿಮ್ಹರ. ಸಕ: [ಸ್ಮೃ] ನೆನಪಿಸಿಕೊಳ್ಳು, ಜ್ಞಾಪಿಸಿಕೊಳ್ಳು
ವಿಮ್ಹರ. ಸಕ: [ವಿ+ಸ್ಮೃ] ಮರೆ, **'ವಿಮ್ಹರಇ'. ವ. ಕೃ: 'ವಿಮ್ಹರಂತ'**
ವಿಮ್ಹರಣ. ನ: [ವಿಸ್ಮರಣ] ವಿಸ್ಮೃತಿ, ಮರೆವು
ವಿಮ್ಹರಾಇಅ. ವಿ: [ದೇ] ಮೂರ್ಛಿತ, ಮೂರ್ಛೆ ಹೋದವನು, ಆಶ್ಚರ್ಯಗೊಳಿಸಲ್ಪಟ್ಟವನು
ವಿಮ್ಹರಾವಣ. ವಿ: [ಸ್ಮರಣ] ನೆನಪಿಸುವವನು, ಜ್ಞಾಪಿಸುವವನು(ಕುಮಾ)
ವಿಮ್ಹರಿಅ. ವಿ: [ವಿಸ್ಮೃತ] ಮರೆಯಲ್ಪಟ್ಟ, ಮರೆತುಹೋದ
ವಿಮ್ಹಲ. 'ವಿಬ್ಭಲ' ಶಬ್ದವನ್ನು ನೋಡುವುದು(ಉಪ)
ವಿಮ್ಹಲಿಅ. 'ವಿಬ್ಭಲಿಅ' ಶಬ್ದವನ್ನು ನೋಡುವುದು.
ವಿಮ್ಹಾರಿಅ. ವಿ: [ವಿಸ್ಮಾರಿತ] ಮರೆಸಲ್ಪಟ್ಟ, ಮರೆಯುವಂತೆ ಮಾಡಲ್ಪಟ್ಟ
ವಿಮ್ಹಾರಿಅ(ಅಪ). 'ವಿಮ್ಹರಿಅ' ಶಬ್ದವನ್ನು ನೋಡುವುದು.
ವಿಮ್ಹಾವ. ಸಕ: [ವಿ+ಸ್ಮಾಪಯ್] ಆಶ್ಚರ್ಯಪಡಿಸು. **'ವಿಮ್ಹಾವೇಇ'. ವ. ಕೃ:** ವಿಮ್ಹಾವೇಂತ
ವಿಮ್ಹಾವಣ. ನ: [ವಿಸ್ಮಾಪನ] ಆಶ್ಚರ್ಯಪಡಿಸುವುದು, ಆಶ್ಚರ್ಯ ಹುಟ್ಟಿಸುವುದು(ಔಪ)
ವಿಮ್ಹಾವಯ. ವಿ: [ವಿಸ್ಮಾಪಕ] ಆಶ್ಚರ್ಯಪಡಿಸುವ ಆಶ್ಚರ್ಯ ಉಂಟುಮಾಡುವ
ವಿಮ್ಹಾವಿಅ. ವಿ: [ವಿಸ್ಮಾಪಿತ] ಆಶ್ಚರ್ಯ ಚಕಿತಗೊಳಿಸಲ್ಪಟ್ಟವ
ವಿಮ್ಹಿಅ. ವಿ: [ವಿಸ್ಮಿತ] ಆಶ್ಚರ್ಯಹೊಂದಿದ, ಆಶ್ಚರ್ಯಚಕಿತನಾದ
ವಿಮ್ಹಿಯ(ಅಪ). 'ವಿಮ್ಹಯ' ಶಬ್ದವನ್ನು ನೋಡುವುದು.
ವಿಮ್ಹೇರ. ವಿ: [ವಿಸ್ಮೇರ] ಆಶ್ಚರ್ಯಪಟ್ಟಿರುವ, ಆಶ್ಚರ್ಯಚಕಿತನಾಗಿರುವ
ವಿಯಚ್ಚಾ. 'ವಿಅ-ಚ್ಚಾ' ಶಬ್ದವನ್ನು ನೋಡುವುದು.
ವಿಯಟ್ಟ. ಅಕ: [ವಿ+ವೃತ್] ವ್ಯವಹರಿಸು, ವರ್ತಿಸು, ಆಗು
ವಿಯದ್ದ. ಪು: [ವ್ಯರ್ದ, ವ್ಯಟ್ಟ] ಆಕಾಶ, ಗಗನ
ವಿರ. ಸಕ: [ಭಂಜ್] ಒಡೆ, ಮುರಿ
ವಿರ. ಅಕ: [ಗುಪ್] ವ್ಯಾಕುಲಗೊಳ್ಳು. **'ವಿರಇ'.**

ವಿರ(ಅಪ). 'ವೀರ' ಶಬ್ದವನ್ನು ನೋಡುವುದು.
ವಿರಇ. ಸ್ತ್ರೀ: [ವಿರತಿ] ನಿವೃತ್ತಿ, ವಿಶ್ರಾಂತಿ, ವಿರಾಮ, ಸಂಯಮ, ತ್ಯಾಗ. ಛಂದಃಶಾಸ್ತ್ರದಲ್ಲಿ ಪ್ರಸಿದ್ಧವಾದ ವಿರಾಮ ಸ್ಥಾನ, ಯತಿ.
ವಿರಇಅ. ವಿ: [ವಿರಚಿತ] ರಚಿಸಲ್ಪಟ್ಟ, ನಿರ್ಮಿಸಲ್ಪಟ್ಟ, ಮಾಡಲ್ಪಟ್ಟ, ಸಿದ್ಧಪಡಿಸಲಾದ(ಪಾಅ)
ವಿರಇಯ. 'ವಿರಾಇಅ' ಶಬ್ದವನ್ನು ನೋಡುವುದು.
ವಿರಇಯವ್ವ. 'ವಿರಯ=ವಿ+ರಚಯ್' ಶಬ್ದವನ್ನು ನೋಡುವುದು.
ವಿರಂಚಿ. ಪು: [ವಿರಂಚಿ] ಬ್ರಹ್ಮ, ವಿಧಾತ(ಕುಪ್ರ)
ವಿರಚ್ಚ}. ಅಕ: [ವಿ+ರಂಜ್]ವಿರಕ್ತನಾಗು,ರಿಕ್ತನಾಗು
ವಿರಜ್ಜ}. ಉದಾಸೀನನಾಗು, ಬಣ್ಣರಹಿತವಾಗು
ವಿರತ್ತ. ವಿ: [ವಿರಕ್ತ] ವೈರಾಗ್ಯದಿಂದಿರುವ, ಲೌಕಿಕ ವಿಷಯಗಳಲ್ಲಿ ಆಸಕ್ತಿಯಿಲ್ಲದ, ನಾನಾ ಬಣ್ಣಗಳುಳ್ಳ, ವರ್ಣರಹಿತ
ವಿರತ್ತಿ. ಸ್ತ್ರೀ: [ವಿರಕ್ತಿ] ವೈರಾಗ್ಯ, ಲೌಕಿಕ ವಿಷಯಗಳಲ್ಲಿ ಆಸಕ್ತಿಯಿಲ್ಲದಿರುವುದು(ಉಪ)
ವಿರಮ. ಅಕ: [ವಿ+ರಮ್] ನಿವೃತ್ತನಾಗು, ವಿರಮಿಸು
ವಿರಮ. ಪು: [ವಿರಮ] ವಿರಾಮ, ನಿವೃತ್ತಿ(ಗಉಡ)
ವಿರಮಣ. 'ವೇರಮಣ' ಶಬ್ದವನ್ನು ನೋಡುವುದು.
ವಿರಮಾಣ. ಸಕ: [ಪ್ರತಿ+ಪಾಲಯ್] ಪಾಲಿಸು, ರಕ್ಷಿಸು. **'ವಿರಮಾಣಇ'**
ವಿರಮಾಲ. ಸಕ: [ಪ್ರತಿ+ಈಕ್ಷ್] ನಿರೀಕ್ಷಿಸು, ದಾರಿನೋಡು, ಎದುರುನೋಡು(ಕುಮಾ)
ವಿರಮಾಲಿಅ. ವಿ: [ಪ್ರತೀಕ್ಷಿತ] ನಿರೀಕ್ಷಿಸಲ್ಪಟ್ಟ
ವಿರಯ. ಸಕ: [ವಿ+ರಚಯ್] ರಚಿಸು, ಮಾಡು, ನಿರ್ಮಿಸು, ಸಜ್ಜುಗೊಳಿಸು, ಅಲಂಕರಿಸು. **ವ. ಕೃ: ವಿರಯಮಾಣ.**
ವಿರಯ. ವಿ: [ವಿರತ] ನಿವೃತ್ತ, ನಿಂತಿರುವ, ವಿರಾಮ ಹೊಂದಿದ(ಉವ), ಒದಗಿದ ಕಾರ್ಯದಿಂದ ನಿವೃತ್ತನಾದ, ಸಂಯಮಿ, ತ್ಯಾಗಿ, ನ: ವಿರಾಮ, ನಿವೃತ್ತಿ, ತ್ಯಾಗ, ಸಂಯಮ, **ವಿರಯಾವಿರಯ. ವಿ:** [ವಿರತಾವಿರತ] ಭಾಗಶಃ ಮಾತ್ರ ಸಂಯಮವುಳ್ಳವ, ಜೈನ ಉಪಾಸಕ, ಶ್ರಾವಕ
ವಿರಯ. ಪು: [ದೇ] ಸಣ್ಣ ಜಲ-ಪ್ರವಾಹ, ಸಣ್ಣ ನದಿ
ವಿರಯ. ಪು: [ವಿರಜಸ್] ಜ್ಯೋತಿಷ್ಯದ ಒಂದು ಮಹಾ ಗ್ರಹ, ಒಂದು ದೇವ-ವಿಮಾನ

ವಿರಯಣ. ಸ್ತ್ರೀನ: [ವಿರಚನ] ಕೃತಿ, ನಿರ್ಮಾಣ, ರಚನೆ, ಸಿಂಗರಿಸುವುದು, ಸಿದ್ಧಪಡಿಸುವುದು. **ಸ್ತ್ರೀ:-ಣಾ**

ವಿರಯಾ. ಸ್ತ್ರೀ: [ವಿರಜಾ] ಗೋಕುಲದಲ್ಲಿ ಇದ್ದ ರಾಧೆಯ ಒಬ್ಬ ಸಖಿ, ಅವಳ ಶಾಪದಿಂದಾದ ಒಂದು ನದಿ

ವಿರಲ. ವಿ: [ವಿರಲ] ಅಲ್ಪ, ಸ್ವಲ್ಪ, ವಿರಳ, ದಟ್ಟವಲ್ಲದ, ತೆಳುವಾದ, ಮಧ್ಯೆ ಅಂತರವುಳ್ಳ(ಗಉಡ)

ವಿರಲಿ. ಸ್ತ್ರೀ: [ದೇ] ವಸ್ತ್ರ-ವಿಶೇಷ. ಜೋಡೆಳೆಯ ಬಟ್ಟೆ

ವಿರಲಿಅ. ವಿ: [ವಿರಲಿತ] ವಿರಳ ಮಾಡಲ್ಪಟ್ಟ, ದಟ್ಟವಲ್ಲದಂತೆ ಮಾಡಿದ

ವಿರಲೀ. **'ವಿರಾಲೀ'** ಶಬ್ದವನ್ನು ನೋಡುವುದು.

ವಿರಲ್ಲ. ಸಕ: [ತನ್] ಹರಡು, ವಿಸ್ತರಿಸು, ವ್ಯಾಪಿಸು, **'ವಿರಲ್ಲೇಇ'**

ವಿರಲ್ಲ. ಪು: [ತಾನ] ವಿಸ್ತಾರ, ಹರಡುವಿಕೆ, ವ್ಯಾಪಿಸುವುದು

ವಿರಲ್ಲಣ. ನ: [ತನನ] ವಿಸ್ತಾರ, ವ್ಯಾಪಿಸುವುದು, ಹರಡುವಿಕೆ

ವಿರಲ್ಲಿಅ. ವಿ: [ತತ] ವಿಸ್ತಾರವಾದ, ವಿಸ್ತರಿಸಲ್ಪಟ್ಟ(ಪಾಅ)

ವಿರಲ್ಲಿಅ. **'ವಿರಲಿಅ'** ಶಬ್ದವನ್ನು ನೋಡುವುದು.

ವಿರಲ್ಲಿಅ. ವಿ: [ದೇ] ನೀರಿನಿಂದ ಒದ್ದೆಯಾದ, ನೆಂದಿರುವ, ತೊಯ್ದ(ದೇ)

ವಿರಸ. ಅಕ: [ವಿ+ರಸ್] ಚೀರು, ಕೂಗು, ಅಳು

ವಿರಸ. ವಿ: [ವಿರಸ] ರಸವಿಲ್ಲದ, ಶುಷ್ಕ, ಒಣಗಿದ, ರುಚಿಯಿಲ್ಲದ(ಗಉಡ), ವಿರುದ್ಧ ರಸವುಳ್ಳ, ಪ್ರೀತಿಯಿಲ್ಲದ, ರಾಮನ ಸೋದರ ಭರತನೊಂದಿಗೆ ಜೈನ ದೀಕ್ಷೆ ತೆಗೆದುಕೊಳ್ಳುವ ಒಬ್ಬ ರಾಜ. **ನ:** ವಿಕಾರ ರಹಿತವಾದ ಒಂದು ಬಗೆಯ ತಪಸ್ಸು

ವಿರಸ. ನ: [ದೇ] ವರ್ಷ, ಹನ್ನೆರಡು ತಿಂಗಳು(ದೇ)

ವಿರಸಮುಹ. ಪು: [ದೇ] ಕಾಗೆ,

ವಿರಸಿಯ. ವಿ: [ವಿರಸಿತ] ರಸವಿಲ್ಲದ, ರಸ-ರಹಿತ

ವಿರಹ. ಸಕ: [ವಿ+ರಹ್] ಪರಿತ್ಯಜಿಸು, ಬೇರೆಮಾಡು, ಅಗಲಿಸು

ವಿರಹ. ಪು: [ವಿರಹ] ವಿಯೋಗ ಅಗಲಿಕೆ, ಬೇರ್ಪಡುವಿಕೆ, ಅಂತರ, ವ್ಯವಧಾನ, **ಪು:** ಒಂದು ಬಗೆಯ ಮರ, ಅಭಾವ, ಇಲ್ಲದಿರುವುದು, ವಿನಾಶ, ಹರಿವಂಶದಲ್ಲಿ ಹುಟ್ಟಿದ ಒಬ್ಬ ದೊರೆ

ವಿರಹ. ವಿ: [ವಿರಥ] ರಥ-ರಹಿತ(ಪಉಮ)

ವಿರಹ. ಪುನ: [ದೇ] ಏಕಾಂತ, ಒಂಟಿಯಾಗಿರುವುದು (ಣಾಯಾ), ಕುಂಕುಮ ಕೇಸರಿ ಬಣ್ಣ ಬಳಿದಿರುವ ಬಟ್ಟೆ

ವಿರಹಾಲ. ನ: [ದೇ] ಕುಂಕುಮ ಕೇಸರಿ ಬಣ್ಣ ಬಳಿದಿರುವ ವಸ್ತ್ರ

ವಿರಹಿ. ವಿ: [ವಿರಹಿನ್] ವಿಯೋಗಿ, ಅಗಲಿರುವ, ಒಂಟಿಯಾಗಿರುವ(ಕುಮಾ)

ವಿರಹಿಅ. ವಿ: [ವಿರಹಿತ] ವಿರಹದಿಂದ ಕೂಡಿದ, ಅಗಲಿದ, ಬೇರ್ಪಟ್ಟ

ವಿರಾ. ಅಕ: [ವಿ+ಲೀ] ನಾಶವಾಗು, ಕರಗು, ನಿಲ್ಲು, ನಿವೃತ್ತನಾಗು

ವಿರಾಇ. ವಿ: [ವಿರಾಗಿನ್] ಪ್ರೀತಿಯಿಲ್ಲದ, ವಿರಕ್ತ, ಒಲವಿಲ್ಲದ. **ಸ್ತ್ರೀ: -ಣೀ**

ವಿರಾಇ. ವಿ: [ವಿರಾಜಿನ್] ಶೋಭಿಸುತ್ತಿರುವ, ಹೊಳೆಯುವ, ಪ್ರಕಾಶಿಸುತ್ತಿರುವ

ವಿರಾಇ. ವಿ: [ವಿರಾವಿನ್] ಶಬ್ದದಿಂದ ಕೂಡಿದ, ಸದ್ದು ಮಾಡುತ್ತಿರುವ

ವಿರಾಇಅ. **'ವಿರಾಯು=ವಿಲೀನ'** ಶಬ್ದವನ್ನು ನೋಡುವುದು.

ವಿರಾಇಅ. ವಿ: [ವಿರಾಜಿತ] ಸುಶೋಭಿತ, ಪ್ರಕಾಶಗೊಳಿಸಲ್ಪಟ್ಟ(ಉವಾ)

ವಿರಾಗ. ಪು: [ವಿರಾಗ] ರಾಗವಿಲ್ಲದ, ಪ್ರೀತಿಯಿಲ್ಲದಿರುವುದು, ವೈರಾಗ್ಯ, ಲೌಕಿಕ ವಿಷಯದಲ್ಲಿ ಅನಾಸಕ್ತಿ, **ವಿ:** ರಾಗವಿಲ್ಲದ, ವೀತರಾಗ

ವಿರಾಡ. ಪು: [ವಿರಾಟ] ವಿರಾಟ ದೇಶ(ಉಪ), **-ನಯರ. ನ:** [-ನಗರ] ವಿರಾಟ ನಗರ

ವಿರಾಢ(ಅಪ). ಪು: [ವಿರಾಧ] ಒಬ್ಬ ರಾಕ್ಷಸನ ಹೆಸರು.

ವಿರಾಮ. ಪು: [ವಿರಾಮ] ನಿವೃತ್ತಿ, ಸಮಾಪ್ತಿ, ಕೊನೆ, ಬಿಡುವು, ವಿಶ್ರಾಂತಿ

ವಿರಾಮಣ. ನ: [ವಿರಮಣ] ಹಿಂತಿರುಗಿಸುವುದು, ನಿಲ್ಲುವಿಕೆ

ವಿರಾಯ. ಅಕ: [ವಿ+ರಾಜ್] ಶೋಭಿಸು, ಹೊಳೆ, **ವ. ಕೃ:** ವಿರಾಯಂತ

ವಿರಾಯ. ವಿ: [ವಿಲೀನ] ಕರಗಿದ, ದ್ರವವಾಗಿರುವ, ನಾಶವಾಗಿರುವ

ವಿರಾಯ. **'ವಿರಾಗ'** ಶಬ್ದವನ್ನು ನೋಡುವುದು.

ವಿರಾಲ. 'ವಿರಾಲ' ಶಬ್ದವನ್ನು ನೋಡುವುದು.
ವಿರಾಲಿಆ. ಸ್ತ್ರೀ: [ವಿರಾಲಿಕಾ] ಮುತ್ತುಗದ ಬೇರು, ಗಂಟು ಅಥವಾ ಗೆಣ್ಣುಳ್ಳ ಗೆಡ್ಡೆ. **'ಬಿರಾಲಿಆ'** ಶಬ್ದವನ್ನು ನೋಡುವುದು.
ವಿರಾಲೀ. ಸ್ತ್ರೀ: [ವಿರಾಲೀ] ಒಂದು ಬಳ್ಳಿ, ನಾಲ್ಕು ಇಂದ್ರಿಯಗಳುಳ್ಳ ಪ್ರಾಣಿಯ ಒಂದು ಜಾತಿ(ಉತ್ತ), **'ಬಿರಾಲೀ'** ಶಬ್ದವನ್ನು ನೋಡುವುದು.
ವಿರಾವ. ಪು: [ವಿರಾವ] ಶಬ್ದ, ಸದ್ದು(ಗಉಡ)
ವಿರಾವಿ. ವಿ: [ವಿರಾವಿನ್] ಸದ್ದು ಮಾಡುವ, ಶಬ್ದ ಮಾಡುವ
ವಿರಾಹ. ಸಕ: [ವಿ+ರಾಧಯ್] ಒಡೆ, ಮುರಿ, **ವ. ಕೃ: 'ವಿರಾಹಂತ'**
ವಿರಾಹಅ.} ವಿ: [ವಿರಾಧಕ] ಒಡೆಯುವವನು,
ವಿರಾಹಗ}. ಮುರಿಯುವನು, ಭಂಜಕ(ಭಗ)
ವಿರಾಹಣಾ. ಸ್ತ್ರೀ: [ವಿರಾಧನಾ] ಒಡೆಯುವದು, ಮುರಿಯುವುದು(ಪಣ್ಣ)
ವಿರಾಹಿಅ. ವಿ: [ವಿರಾಧಿತ] ಒಡೆಯಲ್ಪಟ್ಟ, ಮುರಿಯಲ್ಪಟ್ಟ, ಭಗ್ನ, ಯಾರ ವಿಷಯಕ್ಕೆ ಅಪರಾಧ ಮಾಡಲಾಗಿದೆಯೋ ಅವನು **ಪು:** ಒಬ್ಬ ವಿದ್ಯಾಧರ ರಾಜ.
ವಿರಿಅ. ವಿ: [ಭಗ್ನ] ಒಡೆಯಲ್ಪಟ್ಟ, ಮುರಿಯಲ್ಪಟ್ಟ, ಭಗ್ನ
ವಿರಿಅ. 'ವೀರಿಅ' ಶಬ್ದವನ್ನು ನೋಡುವುದು.
ವಿರಿಂಚ. ಸಕ: [ವಿ+ಭಜ್] ಭಾಗ ಸ್ವೀಕರಿಸು, ಹಂಚಿಕೊಳ್ಳು
ವಿರಿಂಚ}. ಪು; [ವಿರಿಂಚ] ಬ್ರಹ್ಮ, ವಿಧಾತ
ವಿರಿಂಚಿ}. ಪು: [ವಿರಿಂಚಿ]
ವಿರಿಂಚಿಅ. ವಿ: [ದೇ] ವಿಮಲ, ನಿರ್ಮಲ, ವಿರಕ್ತ, ವಿರಾಗಿ(ದೇ)
ವಿರಿಂಚಿರ. ಪು: [ದೇ] ಕುದುರೆ, ಅಶ್ವ, **ವಿ:** ವಿರಳ
ವಿರಿಂಚಿರಾ. ಸ್ತ್ರೀ: [ದೇ] ಪ್ರವಾಹ, ಧಾರೆ(ದೇ)
ವಿರಿಕ್ಕ. ವಿ: [ದೇ] ಸೀಳಲ್ಪಟ್ಟ, ಹೋಳುಮಾಡಲ್ಪಟ್ಟ
ವಿರಿಕ್ಕ. ವಿ: [ವಿರಿಕ್ತ] ಖಾಲಿಯಾಗಿರುವುದು, ರಿಕ್ತವಾಗಿರುವುದು(ಸುಪಾ)
ವಿರಿಕ್ಕ. ವಿ: [ವಿಭಕ್ತ] ಭಾಗ ಮಾಡಲ್ಪಟ್ಟ, ಪಾಲು ಮಾಡಲ್ಪಟ್ಟ, ತನ್ನ ಪಾಲನ್ನು ತೆಗೆದುಕೊಂಡು ಬೇರೆಯಾದವನು(ಓಘ)
ವಿರಿಕ್ಕಾ. ಸ್ತ್ರೀ: [ದೇ] ಬಿಂದು, ಅಲ್ಪ, ಕೊಂಚ, ಚೂರು, ತುಂಡು
ವಿರಿಚಿರ. ವಿ: [ದೇ] ನೀರಿನ ಹರಿವಿನಿಂದ ಭೇದಿ ಮಾಡಿಸುವವನು
ವಿರಿಜ್ಜಯ. ವಿ: [ದೇ] ಅನುಚರ, ಹಿಂಬಾಲಕ, ಸೇವಕ, ಆಳು
ವಿರಿಲ್ಲ. ಸಕ: [ವಿ+ಸ್ತೃ] ವಿಸ್ತರಿಸು, ಹರಡು
ವಿರೀಅ(ಅಪ). 'ವಿವರೀಅ' ಶಬ್ದವನ್ನು ನೋಡುವುದು.
ವಿರೀಹ. ಸಕ: [ಪ್ರತಿ+ಪಾಲಯ್] ಪಾಲನೆ ಮಾಡು, ರಕ್ಷಿಸು
ವಿರು}. ಅಕ: [ವಿ+ರು] ಅಳು, ಚೀರು. **ವ. ಕೃ:**
ವಿರುಅ}. 'ವಿರುಯಮಾಣ'
ವಿರುಅ. ನ: [ವಿರುತ] ಶಬ್ದ, ಧ್ವನಿ, ಪಕ್ಷಿಯ ಕೂಗು, ಧ್ವನಿ
ವಿರುಅ. ವಿ: [ದೇ. ವಿರೂಪ] ಕುರೂಪಿ, ಕುತ್ಸಿತ, ವಿರುದ್ಧ, **'ವಿರೂಅ'** ಶಬ್ದವನ್ನು ನೋಡುವುದು.
ವಿರುಟ್ಠ. ಪು: [ವಿರುಷ್ಟ] ಒಂದು ನರಕ –ಸ್ಥಾನ
ವಿರುದ್ಧ. ವಿ: [ವಿರುದ್ಧ] ವಿರೋಧವುಳ್ಳ, ವಿರುದ್ಧವಾದ, **–ಯಾರಿ. ವಿ:** [**–ಚಾರಿನ್**] ವಿರುದ್ಧವಾದ ಆಚರಣೆ ಮಾಡುವವನು
ವಿರುವ. 'ವಿರೂವ' ಶಬ್ದವನ್ನು ನೋಡುವುದು.
ವಿರುಹ. ಅಕ: [ವಿ+ರುಹ್] ವಿಶೇಷ ರೀತಿಯಲ್ಲಿ ಹುಟ್ಟು(ವುದು), ಮೊಳೆ.
ವಿರುಹ. 'ವಿರೂಹ' ಶಬ್ದವನ್ನು ನೋಡುವುದು.
ವಿರೂಅ}. ವಿ: [ವಿರೂಪ] ಕುರೂಪಿ, ವಿಕಾರವಾದ
ವಿರೂವ}. ರೂಪುಳ್ಳ, ಕುತ್ಸಿತ(ಗಾ), ವಿರುದ್ಧ, ಅನುರೂಪವಲ್ಲದ ಅನೇಕ ಬಗೆಯ, ಬಹುವಿಧದ, ನಾನಾ ವಿಧದ(ಆಚಾ)
ವಿರೂಹ. ಪುನ: [ವಿರೂಢ] ಮೊಳಕೆಬಂದ ದ್ವಿದಳ ಸಸ್ಯ, ಮೊಳಕೆಯೊಡೆದ ದ್ವಿದಳ ಸಸ್ಯ,
ವಿರೇಅ. ಸಕ: [ವಿ+ರೇಚಯ್] ಮಲವನ್ನು ಗುದದಿಂದ ಹೊರಡಿಸು, ವಿರೇಚನ, ಹೊರಹಾಕು
ವಿರೇಅಣ. ನ: [ವಿರೇಚನ] ಮಲವನ್ನು ಗುದದಿಂದ ಹೊರಡಿಸುವುದು, ಮಲವನ್ನು ಹೊರಹಾಕುವುದು ವಿರೇಚನ, **ವಿ:** ವಿನಾಶ ಮಾಡುವವನು
ವಿರೆಲ್ಲಿಅ. 'ವಿರಿಲ್ಲಿಅ=ತತ' ಶಬ್ದವನ್ನು ನೋಡುವುದು.
ವಿರೋಯಣ. ಪು: [ವಿರೋಚನ] ಅಗ್ನಿ, ವಹ್ನಿ
ವಿರೋಲ. ಸಕ: [ಮಂಥ್] ಕಡೆ, ಮಥಿಸು,
ವಿರೋಲ. ಸಕ: [ವಿ+ಲಗ್] ಆಶ್ರಯಿಸು, ಆಧರಿಸು, ಹತ್ತು, ಅಂಟಿಕೊಳ್ಳು

ವಿರೋಲಿಅ. ವಿ: [**ಮಥಿತ**] ಕಡೆಯಲ್ಪಟ್ಟ, ಮಥಿಸಲ್ಪಟ್ಟ (ಪಾಅ)
ವಿರೋಹ. ಸಕ: [**ವಿ+ರೋಧ್**] ವಿರೋಧಿಸು
ವಿರೋಹ. ಪು: [**ವಿರೋಧ**] ವಿರೋಧ, ವೈರ, ಶತ್ರುತ್ವ
ವಿರೋಹಯ. ವಿ: [**ವಿರೋಧಕ**] ವಿರೋಧಿಸುವವನು
ವಿರೋಹಿ. ವಿ: [**ವಿರೋಧಿನ್**] ಶತ್ರು, ವೈರಿ, ಹಗೆ
ವಿರೋಹಿಯ. ವಿ: [**ವಿರೋಧಿತ**] ವಿರೋಧಿಸಲ್ಪಟ್ಟದ್ದು,
ವಿಲ. ಅಕ: [**ವ್ರೀಡ್**] ನಾಚು, ಲಜ್ಜೆಪಡು
ವಿಲ. ನ: [**ವಿಲ**] ಒಂದು ಬಗೆಯ ಉಪ್ಪು, ಒಂದು ಬಗೆಯ ಲವಣ(ಆಚಾ)
ವಿಲಇಅ. ವಿ: [**ದೇ**] ಬಿಲ್ಲಿನ ಹೆದೆಗೆ ಹೂಡಲಾದ, ದೀನ, ಬಡವ, ಮೇಲೆ ಹತ್ತಿಸಲ್ಪಟ್ಟ, ಆರೋಪಿಸಲಾದ
ವಿಲಓಲಗ. ಪು: [**ದೇ**] ಲೂಟಿ ಹೊಡೆಯುವವನು, ಲೂಟಿಕೋರ
ವಿಲಓಲೀ. ಸ್ತ್ರೀ: [**ದೇ**] ವಿಲೋಕಿಸುವುದು, ಹುಡುಕುವುದು. '**ವಿಲಕೋಲೀ–.**' ಶಬ್ದವನ್ನು ನೋಡುವುದು.
ವಿಲಂಘ. ಸಕ: [**ವಿ+ಲಂಘ್**] ಉಲ್ಲಂಘಿಸು, ಮೀರು, ದಾಟು. **ವ. ಕೃ:** '**ವಿಲಂಘಂತ**'
ವಿಲಂಘಣ. ನ: [**ವಿಲಂಘನ**] ಉಲ್ಲಂಘನೆ, ಮೀರುವದು, ಅತಿಕ್ರಮಿಸುವುದು(ಉಪ)
ವಿಲಂಘಲ(ಅಪ). '**ವಿಹಲಂಘಲ**' ಶಬ್ದವನ್ನು ನೋಡುವುದು.
ವಿಲಂಘಲಿಅ (ಅಪ). ವಿ: [**ವಿಹ್ವಲಾಂಗಿತ**] ವ್ಯಾಕುಲ ಶರೀರವುಳ್ಳ.
ವಿಲಂಬ. '**ವಿಡಂವ=ವಿ+ಡಂಬಯ್**' ಶಬ್ದವನ್ನು ನೋಡುವುದು.
ವಿಲಂಬ. ಅಕ: [**ವಿ+ಲಂಬ್**] ತಡಮಾಡು **ಸಕ:** ತೂಗಾಡು, ಧರಿಸುವ. **ಕೃ:** '**ವಿಲಂಬಂತ**'
ವಿಲಂಬ. ಪು: [**ವಿಲಂಬ**] ತಡ, ಸಾವಕಾಶ, ನಿಧಾನ (ಗಾ), ಪೂರ್ವಾರ್ಧ ತಪಸ್ಸು. **ನ:** ಸೂರ್ಯನು ಅನುಭವಿಸಿ ಬಿಟ್ಟ ನಕ್ಷತ್ರ(ವಿಸೇ)
ವಿಲಂಬಗ. ವಿ: [**ವಿಲಂಬಕ**] ಧರಿಸುವವನು
ವಿಲಂಬಣಾ. '**ವಿಡಂಬಣಾ**' ಶಬ್ದವನ್ನು ನೋಡುವುದು.
ವಿಲಂಬನಾ. ಸ್ತ್ರೀ: [**ವಿಡಂಬನಾ**] ಕಾರ್ಯವನ್ನು ನೆರವೇರಿಸುವುದು, ರಚನೆ, ಕೃತಿ, ನಿರ್ಮಾಣ
ವಿಲಂಬಿ. ನ: [**ವಿಲಂಬಿನ್**] ಸೂರ್ಯನಿಂದ ಅನುಭವಿಸಲ್ಪಟ್ಟು ಬಿಟ್ಟಿರುವ ನಕ್ಷತ್ರ, ಸೂರ್ಯನು ಇರುವ ನಕ್ಷತ್ರದ ಹಿಂದಿನ ನಕ್ಷತ್ರ.
ವಿಲಂಬಿಅ. ವಿ: [**ವಿಲಂಬಿತ**] ವಿಲಂಬದಿಂದ ಕೂಡಿದ, ಸಾವಕಾಶ ಮಾಡಲ್ಪಟ್ಟ, ನಕ್ಷತ್ರ–ವಿಶೇಷ, ವಿಲಂಬ ಕಾಲದ ನೃತ್ಯ
ವಿಲಕ್ಖ. ವಿ: [**ವಿಲಕ್ಷ**] ಲಜ್ಜಿತ, ನಾಚಿದ(ಸುಪಾ), ಪ್ರತಿಭೆಯಿಲ್ಲದ, ಬುದ್ಧಿಶೂನ್ಯ, ಮೂಢ
ವಿಲಕ್ಖ}. ನ: [**ವೈಲಕ್ಷ್ಯ**] ಮನಸ್ಸಿನಲ್ಲಿ
ವಿಲಕ್ಖಿಮ.}.ಪುಂಸ್ತ್ರೀ: ಉಂಟಾಗುವ ಸಂಕೋಚ, ಕಿರಿಕಿರಿ, ಲಜ್ಜೆ, ನಾಚಿಕೆ
ವಿಲಗ್ಗ. ಸಕ: [**ವಿ+ಲಗ್**] ಆಧರಿಸು, ನೆರವು ಪಡೆ, ಹತ್ತು, ಹಿಡಿದುಕೊಳ್ಳು, ಅಂಟಿಕೊಳ್ಳು, ಸೇರಿಕೊಳ್ಳು
ವಿಲಗ್ಗ. ವಿ: [**ವಿಲಗ್ನ**] ಸೇರಿಕೊಂಡ, ಅಂಟಿಕೊಂಡ, ಹತ್ತಿಕೊಂಡಿರುವ, ಅವಲಂಬಿಸಿದ, ಆಶ್ರಯಿಸಿದ
ವಿಲಜ್ಜ. ಸಕ: [**ವಿ+ಲಸ್ಜ್**] ನಾಚಿಕೊಳ್ಳು,
ವಿಲಟ್ಠಿ. ಪುಂಸ್ತ್ರೀ: [**ವಿಯಷ್ಟಿ**] ಮೂರೂವರೆ ಕೈಗಳಲ್ಲಿ ಮೊಳದ ಅಳತೆಯ ಕೋಲು, ಜೈನ ಸಾಧುಗಳ ಉಪಕರಣದ ದಂಡ
ವಿಲದ್ಧ. ವಿ: [**ವಿಲಬ್ಧ**] ಚೆನ್ನಾಗಿ ಪ್ರಾಪ್ತವಾದ, ಚೆನ್ನಾಗಿ ಲಬ್ಧವಾದ
ವಿಲಪ್ಪ. ಪು: [**ವಿಲಾತ್ಮಮನ್**] ಒಂದು ನರಕ–ಸ್ಥಾನ.
ವಿಲಭ. ಸಕ: [**ಖೇದಯ್**] ದುಃಖ ಉಂಟುಮಾಡು, ಖಿನ್ನಗೊಳಿಸು
ವಿಲಮಾ. ಸ್ತ್ರೀ: [**ದೇ**] ಜ್ಯಾ, ಬಿಲ್ಲಿನ ಹೆದೆ, ನಾರಿ
ವಿಲಯ. ಪು: [**ದೇ**] ಸೂರ್ಯನು ಅಸ್ತನಾಗುವುದು, ಸೂರ್ಯ ಮುಳುಗುವುದು(ದೇ)
ವಿಲಯ. ಪು: [**ವಿಲಯ**] ವಿನಾಶ(ಸುಪಾ), ತಲ್ಲೀನತೆ, **ಪು:** ಒಂದು ನರಕ–ಸ್ಥಾನ.
ವಿಲಯಾ. ಸ್ತ್ರೀ: [**ವನಿತಾ**] ಮಹಿಳೆ, ಹೆಣ್ಣು, ನಾರಿ
ವಿಲವ. ಅಕ: [**ವಿ+ಲಪ್**] ಅಳು, ರೋದಿಸು, ಚೀರು.'**ವಿಲವಇ**' **ವ. ಕೃ:** '**ವಿಲ ವಂತ**'
ವಿಲವಣ. ವಿ: [**ವಿಲಪನ**] ಅಳುವ, ಚೀರುವ. **–ಯಾ. ಸ್ತ್ರೀ:** [**–ತಾ**] ವಿಲಾಪ, ಅಳುವಿಕೆ(ಔಪ)
ವಿಲವಿಅ. ನ: [**ವಿಲಪಿತ**] ಅಳು, ರೋದನ, ವಿಲಾಪ
ವಿಲವಿರ. ವಿ: [**ವಿಲಪಿತೃ**] ಅಳುತ್ತಿರುವ, ರೋದಿಸುತ್ತಿರುವ

ವಿಲಸ. ಅಕ: [ವಿ+ಲಸ್] ಮೋಜುಮಾಡು, ಭೋಗ ವಿಲಾಸ ಅನುಭವಿಸು, ಹೊಳೆ, ಪ್ರಕಾಶಿಸು, **'ವಿಲಸಇ', ವ. ಕೃ: 'ವಿಲಸಂತ'**

ವಿಲಸಣ. ನ: [ವಿಲಸನ] ವಿಲಾಸ, ಮೋಜು, ಭೋಗ, ಮೋಜು ಮಾಡುವವನು

ವಿಲಸಿಯ. ನ: [ವಿಲಸಿತ] ವರ್ತನೆ, ಪ್ರಯತ್ನ, ಪ್ರಕಾಶ, ಮಿನುಗು, ಹೊಳಪು.

ವಿಲಸಿರ. ವಿ: [ವಿಲಸಿತೃ] ವಿಲಾಸಿ, ವಿಲಾಸ ನಡೆಸುವವನು, ಭೋಗಿ, ವಿಷಯಾಸಕ್ತ

ವಿಲಾ. 'ವಿರಾ' ಶಬ್ದವನ್ನು ನೋಡುವುದು.

ವಿಲಾಲ. 'ವಿರಾಲ' ಶಬ್ದವನ್ನು ನೋಡುವುದು.

ವಿಲಾವ. ಪು: [ವಿಲಾಪ] ಅಳು, ರೋದನ,

ವಿಲಾವಿಅ. ವಿ: [ವಿಲಾಪಿತ] ವಿಲಾಪದಿಂದ ಕೂಡಿದ, ಅಳು

ವಿಲಾಸ. ಪು: [ವಿಲಾಸ] ಸ್ತ್ರೀಯರ ಕಣ್ಣಿನ ಚಲನೆ, ಸ್ತ್ರೀಯರ ಶೃಂಗಾರ ಚೇಷ್ಟೆ, ಸ್ತ್ರೀಯರ ಸ್ವಭಾವ ಸಹಜವಾದ ಲೀಲೆ(ಪಣ್ಣ), ಹೊಳಪು, ಪ್ರಕಾಶ, **–ಪುರ. ನ:** [–ಪುರ] ಒಂದು ನಗರ. **–ವಈ. ಸ್ತ್ರೀ:** [–ವತೀ] ಹೆಣ್ಣು, ಮಹಿಳೆ

ವಿಲಾಸಿ. ವಿ: [ವಿಲಾಸಿನ್] ಹಾವ ಭಾವಗಳನ್ನು ತೋರುವ ಹೆಣ್ಣು, ಒನಪು, ವಯ್ಯಾರದ ಹೆಣ್ಣು, ಹೊಳೆಯುವ,

ವಿಲಾಸಿಅ. ವಿ: [ವಿಲಾಸಿಕ, –ಸಿತ] ವಿಲಾಸದಿಂದ ಕೂಡಿದ(ಗಾ)

ವಿಲಾಸಿಣೀ. ಸ್ತ್ರೀ: [ವಿಲಾಸಿನೀ] ಹೆಣ್ಣು, ನಾರಿ, ವೇಶ್ಯೆ,(ಗಾ), **'ವಿಲಾಸೀ'** ಶಬ್ದವನ್ನು ನೋಡುವುದು.

ವಿಲಿಅ. ನ: [ವ್ಯಲೀಕ] ಕಾಮೋದ್ವೇಗದಿಂದ ಮಾಡಲಾಗುವ ಅಪರಾಧ, ತಪ್ಪು, ಅಕಾರ್ಯ, ಅಪ್ರಿಯ, ಅಸತ್ಯ, ಮೋಸ, ವಂಚನೆ, ವಿ: ಅಪರಾಧಿ, ಅಕಾರ್ಯ ಮಾಡುವವನು, ಸುಳ್ಳು ಹೇಳುವವನು, ಸಂಚಾರ–ವ್ಯತ್ಯಾಸ

ವಿಲಿಅ. ವಿ: [ವ್ರೀಡಿತ] ಲಜ್ಜಿತ, ನಾಚಿದವ(ಪಾಅ)

ವಿಲಿಅ. ನ: [ದೇ. ವ್ರೀಡಿತ] ನಾಚಿಕೆ, ಲಜ್ಜೆ

ವಿಲಿಇಅ. ವಿ: [ವ್ಯಲೀಕಿತ] ವಿಷಯಾಸಕ್ತಿ ಉಳ್ಳ,

ವಿಲಿಂಗ. ಸಕ: [ವಿ+ಲಿಂಗ್] ಆಲಿಂಗಿಸು, ಸ್ಪರ್ಶಿಸು

ವಿಲಿಂಜರಾ. ಸ್ತ್ರೀ: [ದೇ] ಹುರಿದ ಅಕ್ಕಿ, ಹುರಿದ ಜವೆಗೋಧಿ

ವಿಲಿಂಪ. ಸಕ: [ವಿ+ಲಿಪ್] ಲೇಪಿಸು, ಬಳಿ

ವಿಲಿಜ್ಜ. ಅಕ: [ವಿ+ಲೀ] ನಾಶವಾಗು, ಕರಗು. **'ವಿಲಿಜ್ಜಇ' ವ. ಕೃ: 'ವಿಲಿಜ್ಜಂತ'**

ವಿಲಿತ. **'ವಿಲಿಅ= ವ್ರೀಡಿತ'** ಶಬ್ದವನ್ನು ನೋಡುವುದು.

ವಿಲಿತ್ತ. ವಿ: [ವಿಲಿಪ್ತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ(ಭವಿ)

ವಿಲಿವ್ವಿಲೀ. ಸ್ತ್ರೀ: [ದೇ] ಕೋಮಲ ಮತ್ತು ದುರ್ಬಲ ದೇಹದ ಹೆಣ್ಣು, ಸೂಕ್ಷ್ಮ ಶರೀರದ ಮಹಿಳೆ.

ವಿಲಿಹ. ಸಕ: [ವಿ+ಲಿಖ್] ಗೆರೆ ಹಾಕು, ಚಿತ್ರ ಬರೆ, ಅಗೆ, ಗೀರು

ವಿಲಿಹ. ಸಕ: [ವಿ+ಲಿಹ್] ನೆಕ್ಕು, ಚುಂಬಿಸು

ವಿಲಿಹಣ. ನ: [ವಿಲೇಖನ] ಗೆರೆ ಎಳೆಯುವುದು.

ವಿಲಿಹಿಅ. ವಿ: [ವಿಲಿಖಿತ] ಚಿತ್ರಿಸಲ್ಪಟ್ಟ, ಚಿತ್ರ ಬರೆಯಲ್ಪಟ್ಟ

ವಿಲೀಅ. **'ವಿಲೀಅ= ವ್ರೀಡಿತ'** ಶಬ್ದವನ್ನು ನೋಡುವುದು.

ವಿಲೀಅ. **'ವಿಲಿಅ=ವ್ಯಲೀಕ'** ಶಬ್ದವನ್ನು ನೋಡುವುದು.

ವಿಲೀಇರ. ವಿ: [ವಿಲೇತೃ] ಕರಗುವ ಸ್ವಭಾವದ, ಕರಗುವ

ವಿಲೀಣ. ವಿ: [ವಿಲೀನ] ಕರಗಿದ, ದ್ರವವಾದ, ನಾಶವಾದ, ಜುಗುಪ್ಸೆ ಬರಿಸುವ(ಪಣ್ಣ)

ವಿಲುಂಗಯಾಮ. ವಿ: [ದೇ] ಜೈನ ಸಾಧು, ಸಂನ್ಯಾಸಿ, ದರಿದ್ರ, ದೀನ

ವಿಲುಂಚಣ. ನ: [ವಿಲುಂಚನ] ಬುಡಸಮೇತ ಕೀಳುವುದು, ಕಿತ್ತುಹಾಕುವುದು(ಪಣ್ಣ)

ವಿಲುಂಪ. ಸಕ: [ವಿ+ಲುಪ್] ಲೂಟಿ ಮಾಡು, ಕತ್ತರಿಸು, ನಾಶಮಾಡು,

ವಿಲುಂಪ. ಸಕ: [ಕಾಂಕ್ಷ್] ಬಯಸು, ಇಚ್ಛಿಸು, ಆಸೆಪಡು

ವಿಲುಂಪಇತ್ತು. ವಿ: [ವಿಲೋಪ್ತೃ] ಕತ್ತರಿಸುವವನು (ಸೂಅ), ನಾಶ ಮಾಡುವವನು

ವಿಲುಂಪಯ. ಪು: [ದೇ] ಕೀಟ, ಹುಳು

ವಿಲುಂಪಿಅ. ವಿ: [ಕಾಂಕ್ಷಿತ] ಬಯಸಲ್ಪಟ್ಟ, ಅಪೇಕ್ಷಿಸಲ್ಪಟ್ಟ (ಕುಮಾ) ಬಯಕೆ, ಅಪೇಕ್ಷೆ

ವಿಲಂಪಿಅ. ಪು: [ದೇ. ವಿಲುಪ್ತ] ತಿನ್ನಲ್ಪಟ್ಟ, ನುಂಗಲ್ಪಟ್ಟ, **'ವಿಲುತ್ತ'** ಶಬ್ದವನ್ನು ನೋಡುವುದು.

ವಿಲುಂಪಿತ್ತು. **'ವಿಲುಂಪಇತ್ತು'** ಶಬ್ದವನ್ನು ನೋಡುವುದು

ವಿಲುಕ್ಕ(ದೇ) ಅಡಗಿಸಲ್ಪಟ್ಟಿರುವ, ಮುಚ್ಚಿಡಲಾಗಿರುವ

ವಿಲಕ್ಕ. ವಿ: [ವಿಲುಂಚಿತ] ಸಂಪೂರ್ಣವಾಗಿ ತಲೆ ಬೋಳಿಸಲ್ಪಟ್ಟ

ವಿಲುತ್ತ. ವಿ: [ವಿಲುಪ್ತ] ಕತ್ತರಿಸಲ್ಪಟ್ಟ, ಕತ್ತರಿಸಿದ(ಪಉಮ), ಕದಿಯಲ್ಪಟ್ಟ, ಲೂಟಿಮಾಡಲ್ಪಟ್ಟ, ನಾಶಮಾಡಲ್ಪಟ್ಟ

ವಿಲುತ್ತಹಿಅಅ. ವಿ: [ದೇ] ಸಮಯಕ್ಕೆ ತಕ್ಕಂತೆ ಕೆಲಸಮಾಡಲು ತಿಳಿಯದವನು(ದೇ)

ವಿಲುಲಿಅ. ವಿ: [ವಿಲುಲಿತ] ಉಜ್ಜಲ್ಪಟ್ಟ, ತಿಕ್ಕಲ್ಪಟ್ಟ, ಧಾನ್ಯದ ಹೊಟ್ಟು ತೆಗೆಯಲಾದ, ಅಲುಗಾಡಿಸಲ್ಪಟ್ಟ,

ವಿಲೂಣ. ವಿ: [ವಿಲೂನ] ಕತ್ತರಿಸಲ್ಪಟ್ಟ, ತುಂಡುಮಾಡಲ್ಪಟ್ಟ(ಸುಪಾ)

ವಿಲೇವಣ. ನ: [ವಿಲೇಪನ] ಶರೀರಕ್ಕೆ ಲೇಪಿಸಿಕೊಳ್ಳುವ ಶ್ರೀಗಂಧ, ಕುಂಕುಮವೇ ಮೊದಲಾದ ಚೂರ್ಣ, ಮನೆಗೆ ಸುಣ್ಣ, ಬಣ್ಣ ಬಳಿಯುವುದು, ಲೇಪನ–ಕ್ರಿಯೆ(ಔಪ)

ವಿಲೇವಿಅ. ವಿ: [ವಿಲೇಪಿತ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ

ವಿಲೇವಿಆ. ಸ್ತ್ರೀ: [ವಿಲೇಪಿಕಾ] ಒಂದು ಪಾನ–ವಿಶೇಷ.

ವಿಲೇಹಿಅ. ವಿ: [ವಿಲೇಖಿತ] ಚಿತ್ರಿಸಲ್ಪಟ್ಟ

ವಿಲೋಅ. ಅಕ: [ವಿ+ಲೋಕ್] ನೋಡು

ವಿಲೋಅ. ಪು: [ವಿಲೋಕ] ಪ್ರಕಾಶ, ಆಲೋಕ

ವಿಲೋಅ. 'ವಿಲೋವ' ಶಬ್ದವನ್ನು ನೋಡುವುದು.

ವಿಲೋಅಣ. ಪುಂನ: [ವಿಲೋಚನ] ಕಣ್ಣು, ನೇತ್ರ

ವಿಲೋಅಣ. ನ: [ವಿಲೋಕನ] ನೋಡುವುದು, ಅವಲೋಕಿಸುವುದು ವಿ: ನೋಡುವವನು

ವಿಲೊಟ್ಟ. ಅಕ: [ವಿಸಂ+ವದ್] ಸುಳ್ಳೆಂದು ಸಾಧಿತವಾಗು, ವಿರುದ್ಧವಾಗಿ ಮಾತಾಡು ವಿರುದ್ಧವಾಗು

ವಿಲೊಟ್ಟ}. ವಿ: [ವಿಸಂವದಿತ] ಸುಳ್ಳೆಂದು

ವಿಲೊಟ್ಟಿಅ}. ಪ್ರಮಾಣಿಸಲ್ಪಟ್ಟ, ಮಾತಿಗೆ ತಪ್ಪಿದವನು, ಪ್ರತಿಜ್ಞೆಗೆ ತಪ್ಪಿದವನು, ವಿರುದ್ಧವಾದವನು

ವಿಲೋಡ. ಸಕ: [ವಿ+ಲೋಡಯ್] ಕಡೆ, ಮಥನ ಮಾಡು

ವಿಲೋಡಿಯ. ವಿ: [ವಿಲೋಡಿತ] ಕಡೆಯಲ್ಪಟ್ಟ, ಮಥಿಸಲ್ಪಟ್ಟ(ಕುಪ್ರ)

ವಿಲೋಭ. ಸಕ: [ವಿ+ಲೋಭಯ್] ಆಸೆ ತೋರಿಸಿ ಮೋಸಮಾಡು, ಮರುಳುಮಾಡು, ಅತ್ಯಾಸೆ ತೋರಿಸು, ಮರುಳುಗೊಳಿಸು

ವಿಲೋಲ. 'ವಿಲೋಡ' ಶಬ್ದವನ್ನು ನೋಡುವುದು.

ವಿಲೋಲ. ಅಕ: [ವಿ+ಲುಠ್] ಮಲಗು, ಅಡ್ಡಾಗು

ವಿಲೋಲ. ವಿ: [ವಿಲೋಲ] ಚಂಚಲ, ಅಸ್ಥಿರ(ಗಲುಡ), ಕದಲುವುದು

ವಿಲೋವ}. ಪು: [ವಿಲೋಪ] ಲೂಟಿ, ಕಳ್ಳತನ

ವಿಲೋವಣ}. ನ: [ವಿಲೋಪನ]

ವಿಲೋವಯ. ವಿ: [ವಿಲೋಪಕ] ಲೂಟಿ ಮಾಡುವವನು, ಕಸಿಯುವವನು

ವಿಲೋಹ. 'ವಿಲೋಭ' ಶಬ್ದವನ್ನು ನೋಡುವುದು.

ವಿಲೋಹಣ. ವಿ: [ವಿಲೋಭನ] ಆಶ್ಚರ್ಯವುಂಟು ಮಾಡುವುದು, ಮರುಳುಮಾಡುವವನು, ಮೋಸಮಾಡುವವನು

ವಿಲ್ಲ. ಅಕ: [ವೇಲ್ಲ್] ಚಲಿಸು, ಅಲ್ಲಾಡು, ಅಲುಗಾಡು,

ವಿಲ್ಲ. 'ವಿಲ್ಲ' ಶಬ್ದವನ್ನು ನೋಡುವುದು.

ವಿಲ್ಲ. ವಿ: [ದೇ] ಸ್ವಚ್ಛ, ಹೊಳೆಯುವ, ಪ್ರಕಾಶಿಸುವ, ಪುಂನ: ಧೂಪಕ್ಕೆ ಬಳಸಲಾಗುವ ಒಂದು ಸುಗಂಧ ದ್ರವ್ಯ

ವಿಲ್ಲಯ. 'ಚಿಲ್ಲಅ' ಶಬ್ದವನ್ನು ನೋಡುವುದು.

ವಿಲ್ಲಯ. 'ವೆಲ್ಲಗ' ಶಬ್ದವನ್ನು ನೋಡುವುದು.

ವಿಲ್ಲರೀ. ಸ್ತ್ರೀ: [ದೇ] ಕೂದಲು, ಕೇಶ

ವಿಲ್ಲಲ. 'ಬಿಲ್ಲಲ' ಶಬ್ದವನ್ನು ನೋಡುವುದು.

ವಿಲ್ಲಹಲ. 'ವೆಲ್ಲಹಲ' ಶಬ್ದವನ್ನು ನೋಡುವುದು.

ವಿಲ್ಲೀ. ಸ್ತ್ರೀ: [ವಿಲ್ವೀ] ವನಸ್ಪತಿ–ಗುಚ್ಛ(ಪಣ್ಣ)

ವಿಲ್ಹ. ವಿ: [ದೇ] ಬಿಳುಪಾದ, ಬೆಳ್ಳಗಿರುವ

ವಿವ. 'ಇವ' ಶಬ್ದವನ್ನು ನೋಡುವುದು.

ವಿವಇ. ಸ್ತ್ರೀ: [ವಿಪದ್] ವಿಪತ್ತು, ಕಷಟ, ದುಃಖ(ಉಪ). –ಗರ. ವಿ: [–ಕರ] ದುಃಖವನ್ನುಂಟುಮಾಡುವ, ದುಃಖಕಾರಕ

ವಿವಇ. ಸ್ತ್ರೀ: [ವಿವೃತಿ] ವ್ಯಾಖ್ಯಾನ, ವಿವರಣೆ, ಟೀಕೆ

ವಿವಇಣ್ಣ. ವಿ: [ವಿಪ್ರಕೀರ್ಣ] ಚೆದುರಲ್ಪಟ್ಟ, ಹರಡಿರುವ, ಪಸರಿಸಿರುವ

ವಿವಂಕ. ವಿ: [ವಿವಕ್ರ] ವಿಶೇಷವಾಗಿ ಡೊಂಕಾಗಿರುವ, ವಕ್ರವಾಗಿರುವ

ವಿವಂಚಿಆ. ಸ್ತ್ರೀ: [ವಿಪಂಚಿಕಾ] ವೀಣಾ ವಾದ್ಯ(ಪಾಅ)

ವಿವಕ್ಕ. ವಿ: [ವಿಪಕ್ವ] ಚೆನ್ನಾಗಿ ಪೂರ್ಣಗೊಳಿಸಲಾದ, ಪರಿಣತವಾದ, ಹಣ್ಣಾಗಲಿರುವ, ಚೆನ್ನಾಗಿ ಬೇಯಿಸಲ್ಪಟ್ಟಿರುವ(ಶಾ)

ವಿವಕ್ಖ. ಪು: [ವಿಪಕ್ಷ] ಶತ್ರು, ವೈರಿ, ನ್ಯಾಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ವಿರೋಧ ಪಕ್ಷ, ವಿರುದ್ಧ ಧರ್ಮ, ವೈಧರ್ಮ್ಯ(ಸದೃಶವಲ್ಲದಿರುವಿಕೆ)(ಶಾ)

ವಿಪಕ್ಖಾ. ಸ್ತ್ರೀ: [ವಿವಕ್ಷಾ] ಹೇಳುವ ಇಚ್ಛೆ, ಮಾತನಾಡುವ ಅಪೇಕ್ಷೆ

ವಿವಗ್ಘ. ವಿ:[ವಿವ್ಯಾಘ್ರ] ಹುಲಿಯ ಚರ್ಮದಿಂದ ಕೂಡಿದ

ವಿವಚ್ಚಾಸ. ಪು: [ವಿಪರ್ಯಾಸ] ವ್ಯತ್ಯಾಸ, ಬದಲಾವಣೆ, ವಿರುದ್ಧ, ಪ್ರತಿಕೂಲವಾಗಿರುವುದು(ಉತ್ತ).
ವಿವಚ್ಛಾ. ಸ್ತ್ರೀ: [ವಿವತ್ಸಾ] ಒಂದು ಮಹಾ ನದಿ, ಮಕ್ಕಳಿಲ್ಲದ ಮಹಿಳೆ
ವಿವಜ್ಜ. ಅಕ: [ವಿ+ಪದ್] ಮೃತಿಹೊಂದು, ಸಾಯು, 'ವಿವಜ್ಜಇ'
ವಿವಜ್ಜ. ಸಕ: [ವಿ+ವರ್ಜಯ್] ತ್ಯಜಿಸು, ಬಿಟ್ಟುಬಿಡು. 'ವವಜ್ಜೇಇ'. ವ. ಕೃ: 'ವಿವಜ್ಜಂತ' (ಉವ)
ವಿವಜ್ಜ. ವಿ: [ವಿವರ್ಜ] ರಹಿತ, ತ್ಯಜಿಸಲ್ಪಟ್ಟ, ಬಹಿಷ್ಕರಿಸಲ್ಪಟ್ಟ, ತ್ಯಜಿಸುವುದು, ತೊರೆಯುವುದು
ವಿವಜ್ಜಗ. ವಿ: [ವಿವರ್ಜಕ] ವರ್ಜಿಸುವವನು, ತ್ಯಜಿಸುವವನು
ವಿವಜ್ಜಣ. ನ: [ವಿವರ್ಜನ] ತ್ಯಜಿಸುವುದು, ತೊರೆಯುವುದು
ವಿವಜ್ಜತ್ಥ. ವಿ: [ವಿಪರ್ಯಸ್ತ] ವ್ಯತ್ಯಾಸಹೊಂದಿದ, ಬದಲಾವಣೆಹೊಂದಿದ, ವಿರುದ್ಧ
ವಿವಜ್ಜಯ. ಪು: [ವಿಪರ್ಯಯ] ವಿಪರ್ಯಾಸ, ವ್ಯತ್ಯಾಸ, ಭ್ರಮೆ, ಮಿಥ್ಯಾಜ್ಞಾನ,
ವಿವಜ್ಜಾಸ. ಪು: [ವಿಪರ್ಯಾಸ] ವ್ಯತ್ಯಾಸ, ಬದಲಾವಣೆ, ವಿರುದ್ಧ, ಭ್ರಮೆ, ಮಿಥ್ಯಾಜ್ಞಾನ
ವಿವಟ್ಟ. ಅಕ: [ವಿ+ವೃತ್] ವರ್ತಿಸು, ಇರು. **'ವಿವಟ್ಟಇ'**, ವ. ಕೃ: **'ವಿವಟ್ಟಮಾಣ'**
ವಿವಡಿಯ. ವಿ: [ವಿಪತಿತ] ಕೆಳಗೆ ಬಿದ್ದಿರುವ(ಪಉಮ)
ವಿವಡ್ಢ. ಅಕ: [ವಿ+ವೃಧ್] ವರ್ಧಿಸು, ಹೆಚ್ಚಿಸು, ಅಧಿಕಗೊಳಿಸು
ವಿವಡ್ಢಣ. ವಿ: [ವಿವರ್ಧನ] ವರ್ಧಿಸುವವನು, ಹೆಚ್ಚಿಸುವವನು, ಸ್ತ್ರೀ: –ಣೀ. **'ವಿವದ್ಧಣ'** ಶಬ್ದವನ್ನು ನೋಡುವುದು.
ವಿವಡ್ಢಿ. ಸ್ತ್ರೀ: [ವಿವೃದ್ಧಿ] ಅಭಿವೃದ್ಧಿ, ಬೆಳವಣಿಗೆ, ಏಳಿಗೆ
ವಿವಣಿ. ಪುಂಸ್ತ್ರೀ: [ವಿಪಣಿ] ಅಂಗಡಿ ಬೀದಿ, ಅಂಗಡಿ,
ವಿವಣೀಯ. ವಿ: [ವ್ಯಪನೀತ] ದೂರ ಮಾಡಲ್ಪಟ್ಟ, ದೂರ ಸರಿಸಲ್ಪಟ್ಟ(ಕಪ್ಪ)
ವಿವಣ್ಣ. 'ವಿವಣ್ಣ=ವಿಪನ್ನ' ಶಬ್ದವನ್ನು ನೋಡುವುದು.
ವಿವಣ್ಣ. ವಿ: [ವಿವರ್ಣ] ಕುರೂಪ(ಸೇ), ಕಾಂತಿಗುಂದಿದ, ನಿಸ್ತೇಜ, ಮ್ಲಾನ, ಬಣ್ಣವಿಲ್ಲದ(ಣಾಯಾ)
ವಿವಣ್ಣ. ವಿ: [ದ್ವಿಪರ್ಣ] ಎರಡು ಎಲೆಗಳುಳ್ಳ, **ಪು:** ವೃಕ್ಷ, ಮರ.

ವಿವತ್ತ. ಪು: [ವಿವರ್ತ] ಒಂದು ಮಹಾ ಗ್ರಹ, ಜ್ಯೋತಿಷ್ಯದ ದೇವತೆ
ವಿವತ್ತಿ. ಸ್ತ್ರೀ: [ವಿಪತ್ತಿ] ವಿನಾಶ(ಣಾಯಾ), ಮರಣ, ಸಾವು, ಕೆಲಸವಾಗದಿರುವುದು, ಕಷ್ಟ, ತೊಂದರೆ, ವಿಪತ್ತು(ಸುಪಾ)
ವಿವತ್ತಿಅ. ವಿ: [ವಿವರ್ತಿತ] ಹಿಮ್ಮುಖವಾಗಿ ತಿರುಗಿಸಲ್ಪಟ್ಟ, ವರ್ತುಲವಾಗಿ ಮಾಡಲ್ಪಟ್ಟ
ವಿವತ್ಥ. ಪು: [ವಿವಸ್ತ್ರ] ಒಂದು ಮಹಾ ಗ್ರಹ
ವಿವದಿ. ಸ್ತ್ರೀ: [ವಿವೃತಿ] ವಿವರಣೆ, ಟೀಕೆ, ವಿಸ್ತಾರ
ವಿವದ್ಧಣ. ನ: [ವಿವರ್ಧನ] ವೃದ್ಧಿ, ಹೆಚ್ಚಿಸುವುದು, ಬೆಳೆಸುವುದು, **'ವಿವಡ್ಢಣ'** ಶಬ್ದವನ್ನು ನೋಡುವುದು. ಸ್ತ್ರೀ:–**ಣಾ**.
ವಿವದ್ಧಿ. ಪು: [ವಿವರ್ಧಿ] ಒಬ್ಬ ದೇವ(ಅಣು)
ವಿವನ್ನ. ವಿ: [ವಿಪನ್ನ] ನಾಶವಾದ(ಸುಪಾ), ಮರಣ ಹೊಂದಿದ, ಸತ್ತ(ಪಉಮ)
ವಿವಯ. ಅಕ: [ವಿ+ವದ್] ವಿವಾದವೆಬ್ಬಿಸು, ವಾಗ್ಯುದ್ಧ ಮಾಡು. ವ. ಕೃ: **ವಿವಯಂತ**
ವಿವಯಾ. ಸ್ತ್ರೀ: [ವಿಪದ್] ಕಷ್ಟ, ವಿಪತ್ತು, ದುಃಖ (ಉಪ)
ವಿವರ. ಸಕ: [ವಿ+ವೃ] ಕೂದಲನ್ನು ಬಾಚಿಕೊಳ್ಳುವುದು, ಸರಿಪಡಿಸಿಕೊಳ್ಳು, ವ್ಯಾಖ್ಯಾನಿಸು,
ವಿವರ. ನ: [ವಿವರ] ರಂಧ್ರ, ತೂತು, ಗುಹೆ, ಕಂಡಿ, ಏಕಾಂತ(ವಿಪಾ), **ಪುಂನ:** ಆಕಾಶ
ವಿವರಂಮುಹ. ವಿ: [ವಿಪರಾಙ್ಮುಖ] ವಿಮುಖ, ಹಿಂದಕ್ಕೆ ತಿರುಗಿಕೊಂಡಿರುವ
ವಿವರಣ. ನ: [ವಿವರಣ] ವ್ಯಾಖ್ಯಾನ, ವಿವರಣೆ, ಟೀಕೆ, ವರ್ಣಿಸುವುದು, ಕೂದಲನ್ನು ಬಾಚಿಕೊಳ್ಳುವುದು
ವಿವರಾಮುಹ}. **'ವಿವರಂಮುಹ'** ಶಬ್ದವನ್ನು
ವಿವರಾಹುತ್ತ}. ನೋಡುವುದು(ಭವಿ)
ವಿವರಿಅ. ವಿ: [ವಿವೃತ] ವ್ಯಾಖಾನಿಸಲ್ಪಟ್ಟ, ವಿವರಿಸಲ್ಪಟ್ಟ
ವಿವರಿಅ}.**(ಅಪ)**. ವಿ: [ವಿಪರೀತ] ವಿರುದ್ಧ,
ವಿವರೀಅ}. ಪ್ರತಿಕೂಲ(ಭಗ), **–ಣ್ಣು**. ವಿ: [–ಜ್ಞ]
ವಿವರೀರ}. ವಿರುದ್ಧವಾಗಿ ತಿಳಿಯುವವನು
ವಿವರೇರ}.
ವಿವರುಕ್ಖ}. ವಿ: [ವಿಪರೋಕ್ಷ] ಪರೋಕ್ಷ, ಎದುರಿಗೆ
ವಿವರೋಕ್ಖ}. ಇಲ್ಲದಿರುವುದು, ನ: ಅಭಾವ, ಇಲ್ಲದಿರುವಿಕೆ

ವಿವಲ. ಅಕ: [ವಿ+ವಲ್] ತಿರುಗು, ಡೊಂಕಾಗು, ವಕ್ರವಾಗು(ಗಉಡ)

ವಿವಲಾ}. ಅಕ: [ವಿಪರಾ+ಅಯ್] ಪಲಾಯನ

ವಿವಲಾಅ}. ಮಾಡು, ಓಡಿಹೋಗು, 'ವಿವಲಾಇ' ವ.ಕೃ: 'ವಿವಲಾಅಂತ'

ವಿವಲಾಅ. ವಿ: [ವಿಪಲಾಯಿತ] ಓಡಿಹೋಗಿರುವ

ವಿವಲಿಅ. ವಿ: [ವಿವಲಿತ] ತಿರುಗಿದ, ಹಿಂದಕ್ಕೆ ತಿರುಗಿದ

ವಿವಲೀಅ. 'ವಿವರೀಅ' ಶಬ್ದವನ್ನು ನೋಡುವುದು.

ವಿವಲ್ಹತ್ಥ. ವಿ: [ವಿಪರ್ಯಸ್ತ] ವ್ಯತ್ಯಾಸಹೊಂದಿದ, ಬದಲಾವಣೆಗೊಂಡ

ವಿವಸ. ವಿ: [ವಿವಶ] ಬೇರೊಬ್ಬರಿಗೆ ವಶನಾಗಿರುವ, ಅಧೀನ, ಬಾಧ್ಯ, ಅಸಹಾಯ, ದೀನ(ಕುಪ್ರ)

ವಿವಹ. ಸಕ: [ವಿ+ವಹ್] ಮದುವೆಯಾಗು, ವಿವಾಹವಾಗು

ವಿವಹಣ. ನ: [ವಿವ್ಯಧನ] ವಿನಾಶ

ವಿವಾಇಅ. ವಿ: [ವಿಪಾದಿತ] ಕೊಲ್ಲಿಸಲ್ಪಟ್ಟ, ತೊಂದರೆಗೆ ಗುರಿಯಾಗಿಸಲ್ಪಟ್ಟ(ಉತ್ತ)

ವಿವಾಉಗ. ವಿ: [ವಿವಾದಕ] ವಿವಾದ ಕರ್ತ

ವಿವಾಗ. ಪು: [ವಿಪಾಕ] ಸುಖ ದುಃಖಾದಿ ಭೋಗ ರೂಪದ ಕರ್ಮ-ಫಲ(ವಿಪಾ), ಹೇರಳ, ಅತಿಶಯಪಾಕ-ಕಾಲ, -ವಿಜಯ. **ಪುಂನ:** [-ವಿಚಯ] ಧರ್ಮ-ಧ್ಯಾನದ ಒಂದು ಪ್ರಭೇದ, ಕರ್ಮ-ಫಲದ ಅನುಚಿಂತನೆ. **-ಸುಯ. ನ:** [-ಶ್ರುತ] ಹನ್ನೆರಡನೇ ಜೈನ-ಗ್ರಂಥ(ಔಪ)

ವಿವಾಗಿ. ವಿ: [ವಿಪಾಕಿನ್] ವಿಪಾಕವುಳ್ಳವ, ಫಲಕೊಡುವ ಕಾಲದವ

ವಿವಾದ}. ಪು: [ವಿವಾದ] ತಕರಾರು, ವ್ಯಾಜ್ಯ,

ವಿವಾಯ}. ವಾಗ್ಯುದ್ಧ, ಮಾತಿನ ಜಗಳ, ಚರ್ಚೆ(ಉವಾ)

ವಿವಾಯ. ಸಕ: [ವಿ+ಪಾದಯ್] ಕೊಲ್ಲು. 'ವಿವಾಏಮಿ' ವ. ಕೃ: ವಿವಾಏಂತ'

ವಿವಾಯ. 'ವಿವಾಗ' ಶಬ್ದವನ್ನು ನೋಡುವುದು.

ವಿವಾಯಣ. ವಿ: [ವಿವಾದನ] ವಿವಾದ ಕರ್ತೃ, ವಾದಿ,

ವಿವಾವಿಡ. ನ: [ದೇ] ಅತಿಶಯವಾದ ಗೌರವ

ವಿವಾಹ. ಸಕ: [ವಿ+ವಾಹಯ್] ಮದುವೆಯಾಗು,

ವಿವಾಹ. 'ವಿಆಹ=ವಿವಾಹ' ಶಬ್ದವನ್ನು ನೋಡುವುದು. -ಗಣಯ. ಪು: [-ಗಣಕ]ಜ್ಯೋತಿಷಿ. -ಜನ್ನ. ಪು: [-ಯಜ್ಞ] ವಿವಾಹೋತ್ಸವ.

ವಿವಾಹ. 'ವಿಆಹ=ವಿಬಾಧ' ಶಬ್ದವನ್ನು ನೋಡುವುದು.

ವಿವಾಹ-.'ವಿಆಹ=ವ್ಯಾಖ್ಯಾ' ಶಬ್ದವನ್ನು ನೋಡುವುದು.

ವಿವಾಹಾವಿಯ. ವಿ: [ವಿವಾಹಿತ] ಮದುವೆಯಾದವನು (ಸಹಾ)

ವಿವಿಇಸಾ. ಸ್ತ್ರೀ: [ವಿವಿದಿಷಾ] ತಿಳಿದುಕೊಳ್ಳಬೇಕೆಂಬ ಇಚ್ಛೆ, ಜಿಜ್ಞಾಸೆ

ವಿವಿಕ್ಕ. 'ವಿವಿತ್ತ' ಶಬ್ದವನ್ನು ನೋಡುವುದು.

ವಿವಿವ. ಸಕ: [ವಿ+ವಿಚ್] ಬೇರೆ ಮಾಡು, ಅಗಲಿಸು

ವಿವಿಣ. ನ: [ವಿಪಿನ] ಕಾಡು, ಅರಣ್ಯ(ಗಉಡ)

ವಿವಿತ್ತ. ವಿ: [ವಿವಿಕ್ತ] ರಹಿತವಾದ, ಶೂನ್ಯವಾದ, ತ್ಯಜಿಸಲ್ಪಟ್ಟ, ನಾನಾವಿಧ, ಬೇರೆಯಾದ, ನ: ಏಕಾಂತ, ಒಂಟಿಯಾದ, ನಿರ್ಜನವಾದ

ವಿವಿತ್ತ. ವಿ: [ವಿವಿಕ್ತ] ವಿವೇಕದಿಂದ ಕೂಡಿದ, ಹೆದರಿದ, ಭಯಗೊಂಡ

ವಿವಿದಿಅ. ವಿ: [ವಿವಿದಿತ] ವಿಶೇಷ ರೂಪದಲ್ಲಿ ತಿಳಿದುಬಂದ, ಜ್ಞಾತವಾದ,

ವಿವಿದಿಸಾ. 'ವಿವಿಇಸಾ' ಶಬ್ದವನ್ನು ನೋಡುವುದು.

ವಿವಿದ್ಧಿ. ಪು: [ವಿವೃದ್ಧಿ] ಉತ್ತರಾಭಾದ್ರ ಎಂಬ ನಕ್ಷತ್ರದ ಅಧಿಷ್ಠಾತೃ ದೇವತೆ(ಠಾ)

ವಿವಿಹ. ವಿ: [ವಿವಿಧ] ಅನೇಕ ಬಗೆಯ, ಬಹುಪ್ರಕಾರದ, ನಾನಾ ರೀತಿಯ(ಆಚಾ)

ವಿವುಅ. ವಿ: [ವಿವೃತ] ವಿಸ್ತೃತವಾದ, ವಿವರಿಸಲ್ಪಟ್ಟ, ವ್ಯಾಖ್ಯಾನಿಸಲ್ಪಟ್ಟ

ವಿವುಜ್ಝ. ಅಕ: [ವಿ+ಬುಧ್] ಎಚ್ಚರು, ಜಾಗೃತಗೊಳ್ಳು,

ವಿವುಡ್ಡಿ. 'ವಿವಡ್ಡಿ' ಶಬ್ದವನ್ನು ನೋಡುವುದು.

ವಿವುದಿ. 'ವಿವದಿ' ಶಬ್ದವನ್ನು ನೋಡುವುದು.

ವಿವುಹ. 'ವಿಬುಹ' ಶಬ್ದವನ್ನು ನೋಡುವುದು.

ವಿವೇಅ. 'ವಿವೇಗ' ಶಬ್ದವನ್ನು ನೋಡುವುದು. -ನ್ನು. ವಿ: [-ಜ್ಞ] ವಿವೇಕವನ್ನು ತಿಳಿದವನು, ವಿವೇಕಿ

ವಿವೇಅ. ಪು: [ವಿವೇಪ] ವಿಶೇಷವಾದ ಕಂಪನ

ವಿವೇಗ. ಪು: [ವಿವೇಕ] ಪರಿತ್ಯಾಗ(ಸೂಅ), ವಸ್ತು ಸ್ವರೂಪವನ್ನು ಸರಿಯಾಗಿ ನಿರ್ಣಯಿಸುವುದು, ವಿಮರ್ಶೆ, ವಿವೇಚನೆ, ಪ್ರಾಯಶ್ಚಿತ್ತ, ಬೇರ್ಪಡಿಸುವುದು(ಔಪ)

ವಿವೇಗಿ. 'ವಿವೇಇ' ಶಬ್ದವನ್ನು ನೋಡುವುದು.

ವಿವೇಚ. ಸಕ: [ವಿ+ವೇಚಯ್] ವಿಚಾರ ಮಾಡು, ಕರಾರುವಾಕ್ಕಾಗಿ ನಿರ್ಣಯಿಸು, ತೀರ್ಮಾನಿಸು

ವಿವೇಯಣ. ನ: [**ವಿವೇಚನ**] ನಿರ್ಣಯ, ವಿವೇಕ
ವಿವೋಲ. ಪು: [ದೇ] ವಿಶೇಷವಾದ ಕೋಲಾಹಲ, ಶಬ್ದ
ವಿವೋಲಿಅ. ವಿ: [ದೇ] ಕಳೆದುಹೋದ, ಆಗಿಹೋದ
ವಿವಾಹ. '**ವಿವೋಹ**' ಶಬ್ದವನ್ನು ನೋಡುವುದು.
ವಿವ್ವ. ಸಕ: [**ವಿ+ಅಯ್**] ವ್ಯಯಿಸು, ಖರ್ಚುಮಾಡು. '**ವಿವ್ವ= ವಿ=ಅಯ್**' ಶಬ್ದವನ್ನು ನೋಡುವುದು.
ವಿವ್ವಾಯ. ವಿ: [ದೇ] ನೋಡಲ್ಪಟ್ಟ, ವಿಶ್ರಾಂತ(ದೇ)
ವಿವ್ವೋಅ. '**ವಿಬ್ಬೋಅ**' ಶಬ್ದವನ್ನು ನೋಡುವುದು (ಕುಮಾ)
ವಿವ್ವೋಯಣ.(ದೇ). '**ವಿಬ್ಬೋಯಣ**' ಶಬ್ದವನ್ನು ನೋಡುವುದು.
ವಿಸ. ಸಕ: [**ವಿಶ್**] ಪ್ರವೇಶಿಸು, ಒಳಕ್ಕೆ ಬರು '**ವಿಸಇ**', ವ. ಕೃ: '**ವಿಸಂತ**'
ವಿಸ. ಸಕ: [**ವಿ+ಶೃ**] ಹಿಂಸಿಸು, ನಾಶಮಾಡು,
ವಿಸ. ಪುಂನ: [**ವಿಷ**] ವಿಷ, ಹಾಲಾಹಲ, ಗರಳ, ನಂಜು(ಕುಮಾ), **–ನಂದಿ.** ಪು: [**–ನಂದಿನ್**] ಪ್ರಥಮ ಬಲದೇವನ ಹಿಂದಿನ ಜನ್ಮದ ಹೆಸರು. **–ನ್ನ.** [**ವಿಷಾನ್ನ**] ವಿಷಮಿಶ್ರಿತ ಅನ್ನ(ಉಪ). **–ಮಇಅ, –ಮಯ.** ವಿ: [**–ಮಯ**] ವಿಷದಿಂದ ಮಾಡಿದ.**–ವ.** ವಿ: [**–ವತ್**] ವಿಷವುಳ್ಳ, ವಿಷಯುಕ್ತವಾದ, ಪು: ಹಾವು. **–ಹರ. –**ಪು: [**–ಧರ**] ಸರ್ಪ, ಹಾವು. **–ಹರವಇ.** ಪು: [**–ಧರಪತಿ**] ಆದಿಶೇಷ. **–ಹರಿಂದ.** ಪು: [**–ಧರೇಂದ್ರ**] ಆದಿಶೇಷ. **–ಹರಿಣೀ.** ಸ್ತ್ರೀ: [**–ಹರಿಣೀ**] ನೀರು ತುಂಬುವ ಮಹಿಳೆ
ವಿಸ. '**ಬಿಸ**' ಶಬ್ದವನ್ನು ನೋಡುವುದು(ಗಾ)
ವಿಸ. ಪು: [**ವೃಷ**] ಎತ್ತು, ಹೋರಿ, ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ವೃಷಭರಾಶಿ, ಇಲಿ, ಮೂಷಕ, ಋಷಭ ಎಂಬ ಔಷಧ, ಕಾಮಾಸಕ್ತ ಪುರುಷ, ಕಾಮ, ಮನ್ಮಥ, ವೀರ್ಯದಿಂದಕೂಡಿದ, ಕೊಂಬುಳ್ಳ ಯಾವುದೇ ಪ್ರಾಣಿ
ವಿಸಇ. ವಿ: [**ವಿಷಯಿನ್**] ವಿಷಯಾಪೇಕ್ಷೆ ಹೊಂದಿರುವ, ಮನ್ಮಥ
ವಿಸಂಕ. ವಿ: [**ವಿಶಂಕ**] ಶಂಕೆಯಿಲ್ಲದ, ನಿಶ್ಶಂಕ(ಉಪ)
ವಿಸಂಖಲ. ವಿ: [**ವಿಶೃಂಖಲ**] ಸ್ವಚ್ಛಂದ, ನಿರಂಕುಶ, ಉದ್ಧತ, ತಡೆಯಿಲ್ಲದ
ವಿಸಂಖಲ. ಸಕ: [**ವಿಶೃಂಖಲಯ್**] ನಿರಂಕುಶಗೊಳಿಸು, ಅವ್ಯವಸ್ಥಿತ ಗೊಳಿಸು
ವಿಸಂಘಟ್ಟಿಯ. ವಿ: [**ವಿಸಂಘಟ್ಟಿತ**] ವಿಯುಕ್ತ, ಬೇರೆಯಾದ, ಬೇರ್ಪಟ್ಟ,
ವಿಸಂಘಡ. ಅಕ: [**ವಿಸಂ+ಘಟ್**] ಬೇರೆಯಾಗು, ಬೇರ್ಪಡು
ವಿಸಂಘಡಿಯ. ವಿ: [**ವಿಸಂಘಟಿತ**] ಬೇರ್ಪಟ್ಟ, ಬೇರೆಯಾದ
ವಿಸಂಘಾಇಯ. ವಿ: [**ವಿಸಂಘಾತಿತ**] ಬಲವಾಗಿ ಹೊಡೆದು ಕೊಲ್ಲಲ್ಪಟ್ಟ
ವಿಸಂಘಾಯ. ಸಕ: [**ವಿ+ಸಂಘಾತಯ್**] ಕೊಲ್ಲು
ವಿಸಂಜುತ್ತ. ವಿ: [**ವಿಸಂಯುಕ್ತ**] ಬೇರೆಯಾದ, ಬೇರ್ಪಟ್ಟ, ಅಗಲಿದ
ವಿಸಂಜೋಅ. ಪು:[**ವಿಸಂ+ಯೋಜಯ್**] ಬೇರ್ಪಡಿಸು, ಅಗಲಿಸು, ಬೇರೆಮಾಡು(ಭಗ)
ವಿಸಂಜೋಅ}. ಪು: [**ವಿಸಂಯೋಗ**] ವಿಯೋಗ,
ವಿಸಂಜೋಗ}. ಬೇರೆಯಾಗಿರುವುದು, ಪ್ರತ್ಯೇಕಭಾವ, ಅಗಲಿಕೆ(ಕಮ್ಮ)
ವಿಸಂತುಲ. ವಿ: [**ವಿಸಂಸ್ಥುಲ**] ವಿಹ್ವಲ, ವ್ಯಾಕುಲ(ಪಾಅ), ಅವ್ಯವಸ್ಥಿತವಾದ, ಅಸ್ಥಿರವಾದ, ಕಂಪಿಸುವ
ವಿಸಂತಬ. ಪು: [**ದ್ವಿಷಂತಪ**] ಶತ್ರುವನ್ನು ದಿಕ್ಕೆಡಿಸುವವ, ವೈರಿಯನ್ನು ಹೈರಾಣಾಗಿಸುವವನು
ವಿಸಂಥುಲ. '**ವಿಸಂತುಲ**' ಶಬ್ದವನ್ನು ನೋಡುವುದು.
ವಿಸಂಥುಲಿಯ. ವಿ: [**ವಿಸಂಸ್ಥುಲಿತ**] ವ್ಯಾಕುಲಗೊಳಿಸಲ್ಪಟ್ಟ
ವಿಸಂಧಿ. ಪು: [**ವಿಸಂಧಿ**] ಜ್ಯೋತಿಷ್ಕ ದೇವತೆ; ಒಂದು ಮಹಾ ಗ್ರಹ, ವಿ: ಬಂಧನವಿಲ್ಲದ. **–ಕಪ್ಪ, –ಕಪ್ಪೆಲ್ಲಯ.** ಪು: [**–ಕಲ್ಪ**] ಒಂದು ಮಹಾ ಗ್ರಹ
ವಿಸಂನಿವಿಟ್ಠ. ನ: [**ವಿಸಂನಿವಿಷ್ಟ**] ವಿವಿಧ ಮುಖ್ಯ ರಸ್ತೆಗಳು, ಮಾರ್ಗಗಳು
ವಿಸಂಭ. '**ವೀಸಂಭ**' ಶಬ್ದವನ್ನು ನೋಡುವುದು.
ವಿಸಂಭಣಯಾ. '**ವಿಸ್ಸಂಭಣಯಾ**' ಶಬ್ದವನ್ನು ನೋಡುವುದು(ಆಚಾ)
ವಿಸಂಭೋಇಯ. ವಿ: [**ವಿಸಂಭೋಗಿಕ**] ಯಾರೊಂದಿಗೆ ಭೋಜನಾದಿ ವ್ಯವಹಾರಗಳನ್ನು ಮಾಡುವುದಿಲ್ಲವೋ ಅವನು, ಸಮಾಜ ಬಾಹಿರ
ವಿಸಂಭೋಗ. ಪು: [**ವಿಸಂಭೋಗ**] ಜೊತೆಯಲ್ಲಿ ಕುಳಿತು ಭೋಜನಾದಿಗಳನ್ನು ಮಾಡದಿರುವುದು

ವಿಸಂಭೋಗಿಯ. 'ವಿಸಂಭೋಇಯ' ಶಬ್ದವನ್ನು ನೋಡುವುದು.

ವಿಸಂವಇಅ. ವಿ: [ವಿಸಂವದಿತ] ಸಾಕ್ಷಿಯಿಲ್ಲದ, ಪ್ರಮಾಣವಿಲ್ಲದ, ವಿರುದ್ಧವಾಗಿಸಲ್ಪಟ್ಟ, ಅಸಂಗತವಾಗಿ ಮಾತಾಡಿಸಲ್ಪಟ್ಟ, ಬೇರ್ಪಟ್ಟ, ಬೇರೆಯಾಗಿಸಲ್ಪಟ್ಟ

ವಿಸಂವಯ. ಅಕ: [ವಿಸಂ+ವದ್] ಅಪ್ರಮಾಣಿತವಾಗು, ಸಾಕ್ಷಿಯಿಂದ(ಪ್ರಮಾಣ) ಸಿದ್ಧವಾಗದಿರು, ಬೇರ್ಪಡು, ಅಗಲು, ವಿರುದ್ಧವಾಗು, ಮೊದಲು ಹೇಳಿದ್ದಕ್ಕೆ ಹೊಂದಿಕೆಯಾಗದ ಮಾತು

ವಿಸಂವಯಣ. ನ: [ವಿಸಂವದನ] ಸಾಕ್ಷಿ(=ಪ್ರಮಾಣ) ಇಲ್ಲದಿರುವುದು,

ವಿಸಂವಾಇ. ವಿ: [ವಿಸಂವಾದಿನ್] ಬೇರೆಯಾಗುವವನು, ಬೇರ್ಪಡುವವನು, ಅಪ್ರಮಾಣಿತವಾಗುವವನು, ಸುಳ್ಳೆಂದು ಸಾಬೀತಾಗುವವನು, ಹೇಳಿದ ಮಾತಿಗೆ ವಿರುದ್ಧವಾಗಿ ಮಾತಾಡುವವನು.

ವಿಸಂವಾಇಅ. ವಿ: [ವಿಸಂವಾದಿತ] ವಿರುದ್ಧವಾಗಿಸಲ್ಪಟ್ಟ, ಅಸಂಗತವಾಗಿ ಮಾತಾಡಿಸಲ್ಪಟ್ಟ(ದೇ)

ವಿಸಂವಾದ. 'ವಿಸಂವಾಯ=ವಿಸಂವಾದ' ಶಬ್ದವನ್ನು ನೋಡುವುದು.

ವಿಸಂವಾದಣ. 'ವಿಸಂವಾಯಣ' ಶಬ್ದವನ್ನು ನೋಡುವುದು.

ವಿಸಂವಾದಣಾ. 'ವಿಸಂವಾಯಣಾ' ಶಬ್ದವನ್ನು ನೋಡುವುದು(ತಾ)

ವಿಸಂವಾಯ. ವಿ: [ದೇ] ಮಲಿನವಾದ, ಕೊಳೆಯಾದ

ವಿಸಂವಾಯ. ಪು: [ವಿಸಂವಾದ] ಸಾಕ್ಷಿಯ(=ಪ್ರಮಾಣ) ಅಭಾವ, ಮೊದಲು ಹೇಳಿದ್ದಕ್ಕೆ ವಿರುದ್ಧವಾಗಿ ಹೇಳುವುದು, ವಿಘ್ನ, ಅಡ್ಡಿ, ಚಲಿಸುವಿಕೆ, ಅಲ್ಲಾಡುವುದು, ಚಂಚಲತೆ, ಅಸ್ಥಿರತೆ

ವಿಸಂವಾಯಗ. ವಿ: [ವಿಸಂವಾದಕ] ಪ್ರಮಾಣವಿಲ್ಲದವ, ವಂಚಿಸುವವ, ಮೋಸಮಾಡುವವನು.

ವಿಸಂವಾಯಣ}. ನ: [ವಿಸಂವಾದನ]

ವಿಸಂವಾಯಣಾ}.ಸ್ತ್ರೀ:[ವಿಸಂವಾದನಾ] ಸುಳ್ಳು ಹೇಳುವುದು, ವಂಚನೆ, ಮೋಸ.

ವಿಸಂಸರಿಯ. ವಿ: [ವಿಸಂಸೃತ] ಎದ್ದುಹೋದವನು,

ವಿಸಂಹಣಾ. 'ವಿಸ್ಸಂಭಣಂಯಾ' ಶಬ್ದವನ್ನು ನೋಡುವುದು.

ವಿಸಕಲ}. ವಿ: [ವಿಶಕಲ] ಚೂರುಚೂರು

ವಿಸಕಲಿಯ}. [ವಿಶಕಲಿತ] ಮಾಡಲ್ಪಟ್ಟ, ಭೇದಿಸಲ್ಪಟ್ಟ (ಆವಮ)

ವಿಸಗ್ಗ. ಪು: [ವಿಸರ್ಗ] ತ್ಯಾಗ, ಬಿಟ್ಟುಬಿಡುವುದು, ವಿಸರ್ಗ ವರ್ಣ{=ಃ).

ವಿಸಜ್ಜ. ಸಕ: [ವಿ+ಸೃಜ್, ಸರ್ಜಯ್] ಕಳಿಸು(ವದು), ಬಿಡು

ವಿಸಜ್ಜಣಾ. ಸ್ತ್ರೀ: [ವಿಸರ್ಜನಾ] ಬೀಳ್ಕೊಡುಗೆ, ಕಳಿಸಿಕೊಡುವುದು

ವಿಸಜ್ಜಿಅ. ವಿ: [ವಿಸೃಷ್ಟ, ವಿಸರ್ಜಿತ] ಬೀಳ್ಕೊಡಲ್ಪಟ್ಟ, ಕಳುಹಿಸಿಕೊಡಲ್ಪಟ್ಟ(ಔಪ)

ವಿಸಟ್ಟ. ಅಕ: [ದಲ್] ಒಡೆ, ಸೀಳು, ಮುರಿ, ಚೂರುಚೂರಾಗು

ವಿಸಟ್ಟ. ಅಕ: [ವಿ+ಕಸ್] ವಿಕಾಸ ಹೊಂದು, ಅರಳು, **'ವಿಸಟ್ಟಇ'**. ವ. ಕೃ: **'ವಿಸಟ್ಟಂತ'**

ವಿಸಟ್ಟ. ಸಕ: [ವಿ+ಕಾಸಯ್] ವಿಕಾಸಗೊಳಿಸು, ಅರಳಿಸು, ಅಭಿವೃದ್ಧಿಪಡಿಸು

ವಿಸಟ್ಟ. ಅಕ: [ಪತ್] ಬೀಳು, ಜಾರು

ವಿಸಟ್ಟ. ವಿ: [ದೇ] ವಿಘಟಿತ, ಬೇರ್ಪಡಿಸಲ್ಪಟ್ಟ(ಪಾಅ), ವಿಕಸಿತ, ಅರಳಿದ ಒಡೆದ, ಚೂರುಚೂರಾದ ಮೇಲೆದ್ದ

ವಿಸಟ್ಟಣ. ನ: [ವಿಕಸನ] ಅರಳುವುದು, ವಿಸ್ತಾರ ಹೊಂದುವುದು

ವಿಸಡ}. 'ವಿಸಮ' ಶಬ್ದವನ್ನು ನೋಡುವುದು.

ವಿಸಢ}.

ವಿಸಢ. ವಿ: [ದೇ] ಬಣ್ಣವಿಲ್ಲದ, ರಾಗರಹಿತ, ರೋಗವಿಲ್ಲದ, ನಿರೋಗ, ಸಹಿಸಲ್ಪಟ್ಟ, ಚೂರುಚೂರು ಮಾಡಲ್ಪಟ್ಟ, ಚಿಂತಿತಗೊಂಡ, ವ್ಯಾಕುಲಗೊಂಡ

ವಿಸಢ. ವಿ: [ವಿಶಠ] ಅತ್ಯಂತ ಅಹಂಕಾರಿ, ಭಾರಿ ಮೋಸಗಾರ, ಒಬ್ಬ ಶ್ರೇಷ್ಠಿಪುತ್ರ

ವಿಸಣ. 'ವಸಣ=ವೃಷಣ' ಶಬ್ದವನ್ನು ನೋಡುವುದು.

ವಿಸಣ. ನ: [ವೇಶನ] ಪ್ರವೇಶ

ವಿಸಣ್ಣ. ವಿ: [ವಿಸಂಜ್ಞ] ಪ್ರಜ್ಞೆಯಿಲ್ಲದ, ಚೈತನ್ಯವಿಲ್ಲದ

ವಿಸಣ್ಣ. 'ವಿಸನ್ನ=ವಿಷಣ್ಣ' ಶಬ್ದವನ್ನು ನೋಡುವುದು.

ವಿಸತ್ತ. ವಿ: [ವಿಸತ್ತ್ವ] ಸತ್ವ ರಹಿತ,

ವಿಸತ್ಥ. 'ವೀಸತ್ಥ' ಶಬ್ದವನ್ನು ನೋಡುವುದು (ಣಾಯಾ)

ವಿಸದ. **'ವಿಸಯ=ವಿಶದ'** ಶಬ್ದವನ್ನು ನೋಡುವುದು.
ವಿಸದ್ದ. ಪು: [ವಿಶಬ್ದ] ವಿಶಿಷ್ಟ ಶಬ್ದ, ವಿಶಿಷ್ಟ ಶಬ್ದಉಳ್ಳ
ವಿಸನ್ನ. ವಿ: [ವಿಷಣ್ಣ] ಖಿನ್ನ, ಶೋಕಗ್ರಸ್ತ, ವಿಷಾದದಿಂದ ಕೂಡಿದ, ಆಸಕ್ತನಾದ, ತಲ್ಲೀನನಾದ (ಸೂಅ)ಪು: ಸಂಯಮವಿಲ್ಲದ
ವಿಸನ್ನ. **'ವಿಸ-ನ್ನ'** ಶಬ್ದವನ್ನು ನೋಡುವುದು.
ವಿಸನ್ನಾ. ಸ್ತ್ರೀ: [ವಿಸಂಜ್ಞಾ] ಒಂದು ವಿದ್ಯಾ-ವಿಶೇಷ
ವಿಸಪ್ಪ. ಅಕ: [ವಿ+ಸೃಪ್] ಹರಡು, ಹಬ್ಬು, ವ್ಯಾಪಿಸು, ವ. ಕೃ: **'ವಿಸಪ್ಪಂತ'**
ವಿಸಪ್ಪ. ಪು: [ವಿಸರ್ಪ] ಒಂದು ನರಕ-ಸ್ತಾನ
ವಿಸಪ್ಪಿ}. ವಿ: [ವಿಸರ್ಪಿನ್] ಹರಡುವವ(ಸುಪಾ)
ವಿಸಪ್ಪಿರ}. ವಿ: [ವಿಸರ್ಪಿತೃ]
ವಿಸವು. **'ವೀಸವು=ವಿ+ಶ್ರವಸ್'** ಶಬ್ದವನ್ನು ನೋಡುವುದು.
ವಿಸಮ. ವಿ: [ವಿಷಮ] ಎತ್ತರ-ತಗ್ಗು, ಮೇಲೆ-ಕೆಳಗೆ, ಅಸಮಾನ, ಸದೃಶವಲ್ಲದ(ಭಗ), ೧, ೩, ೫ ಇಂಥ ಬೆಸ ಸಂಖ್ಯೆ, ದಾರುಣ, ಕಠಿಣ, ಕಠೋರ, ಸಂಕೀರ್ಣ, ನಿಬಿಡ. ದಟ್ಟವಾದ, ಪುಂನ: ಆಕಾಶ. **-ಕ್ಖರ.** ವಿ: [ವಿಷಮಾಕ್ಷರ] ಅಪಸಿದ್ಧಾಂತದಿಂದ ಕೂಡಿದ, ಅಸತ್ಯ ನಿರ್ಣಯದಿಂದ ಕೂಡಿದ. **-ಲೋಅಣ.** ಪು: [-ಲೊಚನ] ಮಹಾದೇವ, ಶಿವ, **-ವಾಣ.** ಪು: [-ಬಾಣ] ಕಾಮದೇವ. **-ಸರ.** ಪು: [-ಶರ] ಅದೇ ಅರ್ಥ.
ವಿಸಮಯ. ನ: [ದೇ] ಗೇರುಮರ, ಗೋಡಂಬಿ ಮರ
ವಿಸಮಯ. **'ವಿಸ-ಮಯ'** ಶಬ್ದವನ್ನು ನೋಡುವುದು.
ವಿಸಮಿಅ. ವಿ: [ವಿಷಮಿತ] ಮಧ್ಯ ಮಧ್ಯದಲ್ಲಿ ತುಂಡಾದ, ವಿಷಮ ಮಾಡಲ್ಪಟ್ಟ
ವಿಸಮಿಅ. ವಿ: [ವಿಸ್ಮೃತ] ಮರೆತುಹೋದ,
ವಿಸಮಿಅ. ವಿ: [ವಿಶ್ರಮಿತ] ವಿಶ್ರಾಂತಿ ತೆಗೆದುಕೊಂಡ, ವಿರಾಮ ತೆಗೆದುಕೊಂಡ
ವಿಸಮಿಅ. ವಿ: [ದೇ] ನಿರ್ಮಲ, ಶುಭ್ರ, ಕೊಳೆಯಿಲ್ಲದ, ವಿಮಲ, ಮೇಲೆದ್ದ
ವಿಸಮಿರ. ವಿ: [ವಿಶ್ರಮಿತೃ] ವಿಶ್ರಾಂತಿ ತೆಗೆದುಕೊಳ್ಳುವ. ಸ್ತ್ರೀ: - ರೀ
ವಿಸಮ್ಮ. ಅಕ: [ವಿ+ಶ್ರಮ್] ವಿಶ್ರಾಂತಿ ತೆಗೆದುಕೊಳ್ಳು,
ವಿಸಯ. ವಿ: [ವಿಶದ] ನಿರ್ಮಲವಾದ, ಸ್ವಚ್ಛವಾದ (ಕುಪ್ರ), ಸ್ಪಷ್ಟವಾದ, ಬೆಳ್ಳನೆಯ(ಔಪ)
ವಿಸಯು. ಪುಂನ: [ವಿಶಯು] ಮನೆ, ಆಶ್ರಯ, ಸಂಭಾವನಾರ್ಥ, ಸಂದೇಹ
ವಿಸಯ. ಪು: [ವಿಷಯ] ಜ್ಞಾನೇಂದ್ರಿಯಗಳಿಂದ ತಿಳಿಯಲ್ಪಡುವ ರೂಪ, ರಸ, ಗಂಧ, ಸ್ಪರ್ಶ ಶಬ್ದಗಳು(ಪಾಅ), ಜನಪದ, ದೇಶ(ಕುಮಾ), ಕಾಮ ಭೋಗ, ವಿಲಾಸ ಪ್ರಕರಣ, ಪ್ರಸ್ತಾವ, **ವಿಷಯಾವಿಹ** ಇ. ಪು: [ವಿಷಯಾಧಿಪತಿ] ದೇಶದ ಪ್ರಭು, ದೊರೆ
ವಿಸರ. ಸಕ: [ವಿ+ಸೃಜ್] ತ್ಯಜಿಸು, ಬಿಡು, ಕಳಿಸಿಕೊಡು
ವಿಸರ. ಸಕ: [ವಿ+ಸೃ] ಸರಿ, ಜಾರು, ಕೆಳಗೆ ಬೀಳು. ವ. ಕೃ **'ವಿಸರಂತ'**
ವಿಸರ. ಸಕ: [ವಿ+ಸ್ಮೃ] ಮರೆ
ವಿಸರ. ಪು: [ದೇ] ಸೈನ್ಯ, ಸೇನೆ(ದೇ)
ವಿಸರ. ಪು: [ವಿಸರ] ಸಮೂಹ, ಗುಂಪು(ಸುಪಾ)
ವಿಸರಣ. ನ: [ವಿಶರಣ] ವಿನಾಶ,
ವಿಸರಯ. ಪುಂನ: [ದೇ] ವಾದ್ಯ-ವಿಶೇಷ
ವಿಸರಾ. ಸ್ತ್ರೀ: [ವಿಸರಾ] ಮೀನಿನ ಬಲೆ
ವಿಸರಿಅ. ವಿ: [ವಿಸ್ಮೃತ] ಮರೆತುಬಿಟ್ಟ, ಮರೆತುಹೋದ
ವಿಸರಿಯಾ. ಸ್ತ್ರೀ: [ದೇ] ಓತಿಕ್ಯಾತ,
ವಿಸರಿಸ. ವಿ: [ವಿಸದೃಶ] ಅಸಮಾನ, ಸದೃಶವಲ್ಲದ, ವಿಜಾತೀಯ
ವಿಸಲೇಸ. ಪು: [ವಿಶ್ಲೇಷ] ಅಗಲಿಕೆ, ಬೇರ್ಪಡಿಕೆ, ವಿಯೋಗ, ಪೃಥಗ್‌ಭಾವ
ವಿಸಲ್ಲ. ವಿ: [ವಿಶಲ್ಯ] ಸಲಾಕೆಯಿಲ್ಲದ, ಗೂಟವಿಲ್ಲದ, ಮೊನಚಾದ(ಪಉಮ). **-ಕರಣೀ.** ಸ್ತ್ರೀ: [-ಕರಣೀ] ಒಂದು ವಿದ್ಯಾ-ವಿಶೇಷ
ವಿಸಲ್ಲಾ. ಸ್ತ್ರೀ: [ವಿಶಲ್ಯಾ] ದೇಹದ ಸಕಲ ರೋಗ ಮತ್ತು ನೋವುಗಳನ್ನು ಪರಿಹರಿಸುವ ಒಂದು ಮಹಾ ಔಷಧ. ಲಕ್ಷ್ಮಣನ ಹೆಂಡತಿ(ಪಉಮ)
ವಿಸಸ. ಸಕ: [ವಿ+ಶಸ್] ವಧಿಸು, ಕೊಲ್ಲು(ಗಉಡ)
ವಿಸಸ. **'ವಿಸ್ಸಸ=ವಿ+ಶ್ವಸ್'** ಶಬ್ದವನ್ನು ನೋಡುವುದು.
ವಿಸಸಿಯ. ವಿ: [ವಿಶಸಿತ] ವಧಿಸಲ್ಪಟ್ಟ, ಕೊಲ್ಲಲ್ಪಟ್ಟ
ವಿಸಹ. ಸಕ: [ವಿ+ಷಹ್] ಸಹಿಸು, 'ವಿಸಹಂತಿ'. ವ.ಕೃ: 'ವಿಸಹಂತ'
ವಿಸಹ. ವಿ: [ವಿಷಹ] ಸಹಿಸುವವನು, ಸಹಿಷ್ಣು
ವಿಸಹ. **'ವಸಭ'** ಶಬ್ದವನ್ನು ನೋಡುವುದು.
ವಿಸಹಣ. ನ: [ವಿಷಹಣ] ಸಹಿಸುವುದು, ವಿ: ಸಹಿಷ್ಣು

ವಿಸಹಿಅ. ವಿ: [ವಿಷೋಢ] ಸಹಿಸಲ್ಪಟ್ಟ,
ವಿಸಾಅ(ಅಪ). ಸ್ತ್ರೀ: [ವಿಶ್ವಾ] ಒಂದು ಛಂದಸ್ಸು
ವಿಸಾಇ. ವಿ: [ವಿಷಾದಿನ್] ವಿಷಾದದಿಂದ ಕೂಡಿದ, ಶೋಕ-ಗ್ರಸ್ತ
ವಿಸಾಣ. ನ: [ವಿಷಾಣ] ಆನೆಯ ಹಲ್ಲು, ಪಶುವಿನ ಕೊಂಬು(ಪಾಅ), ಹಂದಿಯ ಹಲ್ಲು. **ಪು.ಬ:** ಒಂದು ದೇಶ-ವಿಶೇಷ
ವಿಸಾಣ. **ಸಕ:** [ವಿಶಾಣಯ್] ಸಾಣೆ ಹಿಡಿಯುವ ಯಂತ್ರದ ಮೇಲೆ ಉಜ್ಜು, ತಿಕ್ಕು
ವಿಸಾಣಿ. ವಿ: [ವಿಷಾಣಿನ್] ಕೊಂಬುಳ್ಳ, **ಪು:** ಆನೆ, ನಾಲ್ಕು ರಸ್ತೆಗಳು ಕೂಡುವ ಚೌಕ, ಕುಬ್ಜಕ ವೃಕ್ಷದ ಫಲ.ವೃಷಭ ಎಂಬ ಹೆಸರಿನ ಔಷಧ.
ವಿಸಾಯ. **ಸಕ:** [ವಿ+ಸ್ವಾದಯ್] ವಿಶೇಷವಾಗಿ ಸವಿ,ಅಗಿ
ವಿಸಾಯ. **ಪು:** [ವಿಷಾದ] ಖೇದ, ಶೋಕ, ದುಃಖ (ಉವ). – **ವಂತ.** ವಿ: [-ವತ್] ದುಃಖಿತ, ಖಿನ್ನ
ವಿಸಾಯ. ವಿ: [ವಿಸಾತ] ಸುಖ-ರಹಿತ, ಸುಖವಿಲ್ಲದ, **ಪುಂನ:** ಒಂದು ದೇವ-ವಿಮಾನ
ವಿಸಾಯ. ವಿ: [ವಿಸ್ವಾದ] ರುಚಿಯಿಲ್ಲದ, ಸ್ವಾದವಿಲ್ಲದ
ವಿಸಾರ. **ಸಕ:** [ವಿ+ಸಾರಯ್] ಹರಡಿಸು, ಹಬ್ಬಿಸು, **ವ. ಕೃ:** **'ವಿಸರಂತ'**
ವಿಸಾರ. **ಪು:** [ದೇ] ಸೈನ್ಯ
ವಿಸಾರ. **ಪು:** [ದೇ] ಸಾರವಿಲ್ಲದ, ನಿಸ್ಸಾರ(ಗಉಡ)
ವಿಸಾರಣ. ನ: [ವಿಶಾರಣ] ಚೂರುಮಾಡು, ತುಂಡುಮಾಡು, ಕೊಲ್ಲು
ವಿಸಾರಣಿಯ. ವಿ: [ವಿಸ್ಮಾರಣಿಕ] ಮರೆಯುವಂತೆ ಮಾಡಲ್ಪಟ್ಟ
ವಿಸಾರಯ. ವಿ: [ದೇ] ದೃಢವಂತ, ದಿಟ್ಟ, ಸಾಹಸಿ
ವಿಸಾರಯ. ವಿ: [ವಿಶಾರದ] ವಿದ್ವಾಂಸ, ಪಂಡಿತ, ಬುದ್ಧಿ ವಂತ, ದಕ್ಷ(ಪಣ್ಣ)
ವಿಸಾರಿ. ವಿ: [ವಿಸಾರಿನ್] ಹರಡುವವನು, ಪಸರಿಸುವವನು. **ಸ್ತ್ರೀ:** **-ಣೀ.**
ವಿಸಾರಿ. **ಪು:** [ದೇ] ಬ್ರಹ್ಮ
ವಿಸಾಲ. ವಿ: [ವಿಶಾಲ] ವಿಸ್ತಾರವಾದ, ಅಗಲವಾದ, ವಿಶಾಲವಾದ, **ಪು:** ಒಂದು ಗ್ರಹ-ದೇವತೆ: ೮೮ ಮಹಾ ಗ್ರಹಗಳಲ್ಲಿ ಒಂದು ಮಹಾ ಗ್ರಹ. ಕ್ರಂದಿತ(ಅಹ್ವಾನ) ನಿಕಾಯದ ಉತ್ತರ ದಿಕ್ಕಿನ ಇಂದ್ರ(ತಾ), **ನ:** ಒಂದು ವಿದ್ಯಾಧರ ನಗರ
ವಿಸಾಲಯ. **ಪು:** [ದೇ] ಸಮುದ್ರ, ಜಲಧಿ(ದೇ)
ವಿಸಾಲಾ. **ಸ್ತ್ರೀ:** [ವಿಶಾಲಾ] ಉಜ್ಜಯಿನಿ ನಗರದ ಹೆಸರು(ಸುಪಾ), ಭಗವಾನ್ ಪಾರ್ಶ್ವನಾಥರ ದೀಕ್ಷಾ ಶಿಬಿಕೆ, ಜಂಬೂ ವೃಕ್ಷ, ಒಂದು ರಾಜಧಾನಿಯ ಹೆಸರು. ಭಗವಾನ್ ಮಹಾವೀರನ ತಾಯಿಯ ಹೆಸರು. ಒಂದು ಪುಷ್ಕರಿಣಿ
ವಿಸಾಲಿಸ. **'ವಿಸಾರಿಸ'** ಶಬ್ದವನ್ನು ನೋಡುವುದು.
ವಿಸಾಲಿಸ. **'ವಿಸರಿಸ'** ಶಬ್ದವನ್ನು ನೋಡುವುದು(ಉತ್ತ)
ವಿಸಾಸಣ. ವಿ: [ವಿಶಾಸನ] ವಿಘಾತಕ, ವಿನಾಶಕ
ವಿಸಾಹ. **ಪು:** [ವಿಶಾಖ] ಷಣ್ಮುಖ, ಸ್ಕಂದ, ಕಾರ್ತಿಕೇಯ
ವಿಸಾಹಾ. **ಸ್ತ್ರೀ:** [ವಿಶಾಖಾ] ವಿಶಾಖಾ ನಕ್ಷತ್ರ, ವ್ಯಕ್ತಿ-ವಾಚಕ ಹೆಸರು. ಒಬ್ಬ ಮಹಿಳೆಯ ಹೆಸರು, ಒಬ್ಬ ವಿದ್ಯಾಧರ ಕನ್ಯೆ
ವಿಸಾಹಿಅ. ವಿ: [ವಿಶಾಧಿತ] ಸಿದ್ಧ ಪಡಿಸಲಾದ, ಪ್ರಯೋಜನ, ಫಲ
ವಿಸಾಹೀ. **ಸ್ತ್ರೀ:** [ವೈಶಾಖೀ] ವೈಶಾಖ ಮಾಸದ ಹುಣ್ಣಿಮೆ, ವೈಶಾಖದ ಅಮವಾಸ್ಯೆ
ವಿಸಿ. **ಸ್ತ್ರೀ:** [ದೇ] ಆನೆಯ ಬೆನ್ನಿನ ಮೇಲೆ ಹಾಕುವ ಜೀನು(ದೇ)
ವಿಸಿ. **'ಬಿಸಿ'** ಶಬ್ದವನ್ನು ನೋಡುವುದು.
ವಿಸಿಟ್ಠ. ವಿ: [ವಿಶಿಷ್ಟ] ಪ್ರಧಾನ, ಮುಖ್ಯ, ಅಸಾಧಾರಣವಾದ, ವಿಲಕ್ಷಣವಾದ, ಸುಸಭ್ಯ, ಯುಕ್ತವಾದ, ಸಹಿತವಾದ, ವ್ಯತಿರಿಕ್ತ, ಭಿನ್ನವಾದ, **ಪು:** ದ್ವೀಪಕುಮಾರ ದೇವತೆಗಳ ಉತ್ತರ ದಿಕ್ಕಿನ ಇಂದ್ರ(ತಾ), **ನ:** ನಿರಂತರ ೧೨ ದಿನಗಳವರೆಗೆ ಉಪವಾಸ. **-ದಿಟ್ಠಿ.** **ಸ್ತ್ರೀ:** **[-ದೃಷ್ಟಿ]** ಅಹಿಂಸೆ.
ವಿಸಿಟ್ಠಿ. **ಸ್ತ್ರೀ:** [ವಿಸೃಷ್ಟಿ] ವಿರುದ್ಧ ಕ್ರಮ
ವಿಸಿಣ. ವಿ: [ದೇ] ಹೆಚ್ಚು ರೋಮಗಳುಳ್ಳ
ವಿಸಿಸ. **ಸಕ:** [ವಿ+ಶಿಷ್] ವಿಶೇಷಣವನ್ನು ಸೇರಿಸು
ವಿಸಿಹ. **ಪು:** [ವಿಶಿಖ] ಬಾಣ(ಪಾಅ), ವಿ: ಶಿಖೆಯಿಲ್ಲದವನು, ಜುಟ್ಟಿಲ್ಲದವನು(ಗಉಡ)
ವಿಸೀ. **'ಬಿಸೀ'** ಶಬ್ದವನ್ನು ನೋಡುವುದು.
ವಿಸೀ. **ಸ್ತ್ರೀ:** [ವಿಂಶತಿ] ಇಪ್ಪತ್ತು, ಇಪ್ಪತ್ತರ ಸಮೂಹ,
ವಿಸೀಅ. **ಅಕ:** [ವಿ+ಸದ್] ಖೇದಿಸು, ದುಃಖಿಸು, ಮುಳುಗು, ನಿಮಗ್ನನಾಗು

ವಿಸೀಇಯು. ವಿ: [ವಿಶೀರ್ಣ] ಜೀರ್ಣವಾದ, ತ್ರುಟಿತವಾದ, **ನ:** ಒಡೆದು ಹೋದ, ಜರ್ಜರಿತಗೊಂಡ, ಶುಷ್ಕವಾದ

ವಿಸೀಲ. ವಿ: [ವಿಶೀಲ] ವ್ಯಭಿಚಾರಿ, ಶೀಲರಹಿತ, ಕೆಟ್ಟ ಸ್ವಭಾವದ, ಕೆಟ್ಟ ಆಚರಣೆಗಳುಳ್ಳ(ಉತ್ತ)

ವಿಸುಜ್ಝ. ಅಕ: [ವಿ+ಶುದ್ಧ್] ಶುದ್ಧಿಪಡಿಸು, ಶುದ್ಧಗೊಳಿಸು. **'ವಿಸುಜ್ಝಇ'. ವ. ಕೃ: 'ವಿಸುಜ್ಝಂತ'**

ವಿಸುಣಿಯ. ವಿ: [ವಿಶ್ರುತ] ತಿಳಿದಿರುವ. ಪ್ರಖ್ಯಾತನಾದ

ವಿಸುತ್ತ. ವಿ: [ವಿಸ್ರೋತಸ್] ಪ್ರತಿಕೂಲ, ವಿರುದ್ಧವಾದ, ಕೆಟ್ಟ, ದುಷ್ಟ(ಭವಿ)

ವಿಸುತ್ತಿಯಾ. 'ವಿಸೊತ್ತಿಯಾ' ಶಬ್ದವನ್ನು ನೋಡುವುದು.

ವಿಸುದ್ಧ. ವಿ: [ವಿಶುದ್ಧ] ನಿರ್ಮಲವಾದ, ದೋಷರಹಿತವಾದ, ಕಳಂಕವಿಲ್ಲದ, ಸರಿಯಾದ, ವಿಶದವಾದ, ತಿಳಿಯಾದ. **ಪು:** ಬ್ರಹ್ಮ-ದೇವಲೋಕದ ಒಂದು ಭಾಗ

ವಿಸುದ್ಧಿ. ಸ್ತ್ರೀ: [ವಿಶುದ್ಧಿ] ದೋಷವಿಲ್ಲದಿರುವುದು, ನಿರ್ಮಲವಾಗಿರುವುದು, ಸ್ವಚ್ಛವಾಗಿರುವಿಕೆ, ತಪ್ಪಿಲ್ಲದಿರುವಿಕೆ(ಔಪ)

ವಿಸುಮರ. ಸಕ: [ವಿ+ಸ್ಮೃ] ಮರೆ, **'ವಿಸುಮರಇ'**

ವಿಸುಮರಿಅ. ವಿ: [ವಿಸ್ಮೃತ] ಮರೆತುಹೋದ, ಮರೆಯಲ್ಪಟ್ಟ

ವಿಸುರಾವಿಯು. ವಿ: [ಖೇದಿತ] ದುಃಖಿಸಲ್ಪಟ್ಟ, ನೋಯಿಸಲ್ಪಟ್ಟ

ವಿಸುವ. ನ: [ವಿಷುವತ್] ರಾತ್ರಿ ಮತ್ತು ಹಗಲುಗಳು ಸಮನಾಗಿರುವ

ವಿಸೂಇಯಾ. ಸ್ತ್ರೀ: [ವಿಸೂಚಿಕಾ] ಅಜೀರ್ಣ ರೋಗ(ಉವ)

ವಿಸೂಣಿಯ. ವಿ: [ವಿಶೂನಿತ] ಅರಳಿಸಲ್ಪಟ್ಟ, ಉಬ್ಬಿಸಲ್ಪಟ್ಟ, ಕತ್ತರಿಸಲ್ಪಟ್ಟ(ಉತ್ತ)

ವಿಸೂರ. 'ವಿಸುಮರ' ಶಬ್ದವನ್ನು ನೋಡುವುದು.

ವಿಸೂರ. ಅಕ: [ಖಿದ್] ದಃಖಿಸು, ಖೇದಗೊಳ್ಳು. **'ವಿಸೂರಇ'. ವ. ಕೃ: 'ವಿಸೂರಂತ'**

ವಿಸೂರಣ. ನ: [ಖೇದನ] ಖೇದ, ನೋವು, ದುಃಖ

ವಿಸೂರಣಾ. ಸ್ತ್ರೀ: [ಖೇದನಾ] ಖೇದ, ದುಃಖ

ವಿಸೂರಿಅ. ವಿ: [ಖಿನ್ನ] ದೈನ್ಯದಿಂದ ಕೂಡಿದ, ದುಃಖಿತ

ವಿಸೂಹಿಯ. ಪುಂನ: [ವಿಷ್ವಗ್ಗಿತ] ಒಂದು ದೇವ-ವಿಮಾನ

ವಿಸೇಢಿ. ಸ್ತ್ರೀ: [ವಿಶ್ರೇಣಿ] ವಿದಿಶಾಕ್ಕೆ ಸಂಬಂಧಿಸಿದ ಶ್ರೇಣಿ, ಒಂದು ರೇಖೆ, **ವಿ:** ವಿಶ್ರೇಣಿಯಲ್ಲಿ ನಿಂತ, ಇರುವ

ವಿಸೇಸ. ಸಕ: [ವಿ+ಶೇಷಯ್] ವಿಶೇಷವನ್ನು ಕೂಡಿಸು, ಗುಣ, ಅರ್ಹತೆ ಮೊದಲಾದವುಗಳಲ್ಲಿ ಬೇರೆಯವರಿಗಿಂತ ಭಿನ್ನವಾಗಿಸು, ವಿಶೇಷಣವನ್ನು ಅನ್ವಯಿಸು

ವಿಸೇಸ. ಪುಂನ: [ವಿಶೇಷ] ಭೇದ, ವ್ಯತ್ಯಾಸ, ಭಿನ್ನತೆ, ಅತಿಶಯ, ಶ್ರೇಷ್ಠತೆ, ಪ್ರಕಾರ, ಅಸಾಧಾರಣ, ಮೇಲು, ಬೇರೆಯವರಿಗಿಂತ ವಿಶಿಷ್ಟ, ಅಧಿಕ, ಹೆಚ್ಚಿಗೆ, ಅಲಂಕಾರದ ಒಂದು ಪ್ರಭೇದ ವೈಶೇಷಿಕದಲ್ಲಿ ಪ್ರಸಿದ್ಧವಾದ ಅಂತ್ಯ ಪದಾರ್ಥ, ತರ್ಕಶಾಸ್ತ್ರದಲ್ಲಿ ಐದನೆಯ ಪದಾರ್ಥ, **-ನ್ನು. ವಿ:** [ಜ್ಞ] ವಿಶೇಷವಾಗಿ ತಿಳಿದವನು. **-ಓ. ಅ:** [-ತಸ್] ವಿಶೇಷವಾಗಿ

ವಿಸೇಸ. ಪು: [ವಿಶ್ಲೇಷ] ಪೃಥಕ್ಕರಣ, ಬೇರ್ಪಡಿಸುವುದು

ವಿಸೇಸಣ. ನ: [ವಿಶೇಷಣ] ಬೇರೆಯವರಿಗಿಂತ ಭಿನ್ನವೆಂಬುದನ್ನು ಸೂಚಿಸುವ ಗುಣ ಇತ್ಯಾದಿ

ವಿಸೇಸಯ. ಪುಂನ. [ವಿಶೇಷಕ] ಹಣೆಯ ಮೇಲೆ ಇಟ್ಟುಕೊಳ್ಳುವ ತಿಲಕ, ಚಂದನ ಇತ್ಯಾದಿ ಚಿಹ್ನೆ (ವೇಣೀ)

ವಿಸೇಸಿಅ. ವಿ: [ವಿಶೇಷಿತ] ವಿಶೇಷಣ ಯುಕ್ತ ಕ್ರಿಯೆ ಇರುವ, ಭೇದ ಅಥವಾ ವ್ಯತ್ಯಾಸ ತೋರಿಸಲ್ಪಟ್ಟ, ಅಧಿಕವಾದ, ಮೀರಿದ

ವಿಸೇಸ್ಸ. 'ವಿಸೇಸ=ವಿ+ಶೇಷಸ್' ಶಬ್ದವನ್ನು ನೋಡುವುದು.

ವಿಸೋಗ. ವಿ: [ವಿಶೋಕ] ಶೋಕ-ರಹಿತ

ವಿಸೊತ್ತಿಯಾ. ಸ್ತ್ರೀ: [ವಿಸ್ರೋತಸಿಕಾ] ವಿರುದ್ಧವಾದ ಚಲನೆ, ಗತಿ, ನಡಿಗೆ. ಮನಸ್ಸು ಅಪಮಾರ್ಗದಲ್ಲಿ ನಡೆಯುವುದು, ದುಷ್ಟ ಚಿಂತನೆ (ಆಚಾ)

ವಿಸೋಪಗ.}. ಪುಂನ: [ದೇ.ವಿಂಶೋಪಕ] ಕವಡೆಯ

ವಿಸೋವಗ}. ಇಪ್ಪತ್ತನೇ ಒಂದು ಭಾಗ(ಪಂಚಾ)

ವಿಸೋಹ. ಸಕ: [ವಿ+ಶೋಧಯ್] ಶುದ್ಧಗೊಳಿಸು, ಸ್ವಚ್ಛಗೊಳಿಸು, ಕೊಳೆಯಿಲ್ಲದಂತೆ ಮಾಡು, ತ್ಯಜಿಸು, ಬಿಡು(ಉವ)

ವಿಸೋಹ. ವಿ: [ವಿಶೋಭ] ಶೋಭೆಯಿಂದ ಕೂಡಿರದ

ವಿಸೋಹಣ. ನ: [**ವಿಶೋಧನ**] ಶೋಧಿಸುವುದು, ಶುದ್ಧಗೊಳಿಸುವುದು, ಕೊಳೆಯಿಲ್ಲದಂತೆ ಮಾಡುವುದು

ವಿಸೋಹಯ. ವಿ: [**ವಿಶೋಧಕ**] ಶುದ್ಧಗೊಳಿಸುವವನು

ವಿಸೋಹಿ. ಸ್ತ್ರೀ: [**ವಿಶೋಧಿ**] ನೈರ್ಮಲ್ಯ, ಸ್ವಚ್ಛವಾಗಿರುವುದು, ಶುದ್ಧವಗಿರುವುದು, ದೋಷರಹಿತವಾಗಿರುವುದು(ಪಉವ), ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತ, ಆವಶ್ಯಕ, ಧಾರ್ಮಿಕವೇ ಮೊದಲಾದ ಷಟ್ಕರ್ಮಗಳು, ಭಿಕ್ಷೆಯಲ್ಲಿನ ಒಂದು ದೋಷ, ದೋಷವಿರುವ ಆಹಾರವನ್ನು ತ್ಯಜಿಸುವುದರಿಂದ ಉಳಿದ ಭಿಕ್ಷೆ ಅಥವಾ ಭಿಕ್ಷಾ ಪಾತ್ರೆ ದೋಷ ಪೂರ್ಣವಾಗುತ್ತದೋ ಆ ದೋಷ. **–ಕೋಡಿ.** ಸ್ತ್ರೀ: [**–ಕೋಟಿ**] ಹಿಂದೆ ಹೇಳಿದ ವಿಶೋಧಿ ದೋಷದ ಒಂದು ಪ್ರಕಾರ.

ವಿಸೋಹಿಯ. ವಿ: [**ವಿಶೋಧಿತ**] ಶುದ್ಧಗೊಳಿಸಲ್ಪಟ್ಟ, **ಪು:** ಮೋಕ್ಷ ಮಾರ್ಗ(ಸೂಅ)

ವಿಸ್ಸ. '**ವಿಸ=ವಿಶ್**' ಶಬ್ದವನ್ನು ನೋಡುವುದು.

ವಿಸ್ಸ. ನ: [**ವಿಸ್ರ**] ಸರಿಯಾಗಿ ಬೇಯದಿರುವ ಮಾಂಸದ ವಾಸನೆ, ವಿ: ಹಸಿಹಸಿ ವಾಸನೆ ಉಳ್ಳ.**–ಗಂಧಿ.** ವಿ: [**–ಗಂಧಿನ್**]ಸರಿಯಾಗಿ ಬೇಯದಿರುವ (ಅಪಕ್ವ) ಮಾಂಸದಂಥ ವಾಸನೆ ಉಳ್ಳ(ಅಭಿ)

ವಿಸ್ಸ. **ಪು:** [**ವಿಶ್ವ**] ಉತ್ತರಾಷಾಢ ನಕ್ಷತ್ರದ ಅಧಿಷ್ಠಾತೃ ದೇವತೆ(ಠಾ), **ಸ:** ಸರ್ವ, ಸಕಲ, ಎಲ್ಲ. **ಪುಂನ:** ಜಗತ್ತು, ಪ್ರಪಂಚ. **–ಇ.** **ಪು:** [**–ಜಿತ್**] ಯಜ್ಞ–ವಿಶೇಷ. **–ಕಮ್ಮ.** **ಪು:**[**–ಕರ್ಮನ್**] ದೇವ–ಶಿಲ್ಪಿಯಾದ ವಿಶ್ವ ಕರ್ಮ. **–ಪುರ.** ನ: [**–ಪುರ**] ಒಂದು ನಗರ. **–ಭೂಇ.** **ಪು:** [**–ಭೂತಿ**] ಪ್ರಥಮ ವಾಸುದೇವನ ಹಿಂದಿನ ಜನ್ಮದ ಹೆಸರು. **–ಯಮ್ಮ.** '**–ಕಮ್ಮ**' ಶಬ್ದವನ್ನು ನೋಡುವುದು. **–ವಾಇಅ.** **ಪು:** [**–ವಾದಿಕ**] ಭಗವಾನ್ ಮಹಾವೀರನ ಒಂದು ಗಣ. **–ಸೇಣ.** **ಪು:** [**–ಸೇನ**] ಭಗವಾನ್ ಶಾಂತಿನಾಥನ ತಂದೆ, ಒಬ್ಬ ರಾಜ. ಅಹೋರಾತ್ರದ ಒಂದು ಮುಹೂರ್ತ.

ವಿಸ್ಸಅ(ಮಾ). '**ವಿಮ್ಹಯ=ವಿಸ್ಮಯ**' ಶಬ್ದವನ್ನು ನೋಡುವುದು.

ವಿಸ್ಸಂತ. '**ವೀಸಂತ**' ಶಬ್ದವನ್ನು ನೋಡುವುದು.

ವಿಸ್ಸಂತಿಅ. ನ: [**ವಿಶ್ರಾಂತಿಕ**] ಮಥುರೆಯ ಒಂದು ತೀರ್ಥ

ವಿಸ್ಸಂದ. **ಸಕ:** [**ವಿ+ಸ್ಯಂದ್**] ತೊಟ್ಟಿಕ್ಕು, ಸೋರು, '**ವಿಸ್ಸಂದತಿ**'

ವಿಸ್ಸಂಭ. **ಸಕ:** [**ವಿಶ್ರಂಭ್**] ವಿಶ್ವಾಸವಿಡು, ನಂಬು

ವಿಸ್ಸಂಭ. **ಪು:** [**ವಿಶ್ರಂಭ**] ವಿಶ್ವಾಸ, ನಂಬಿಕೆ, ಶ್ರದ್ಧೆ. **–ಘಾಇ.** ವಿ: [**–ಘಾತಿನ್**] ವಿಶ್ವಾಸ ಘಾತಕ; ನಂಬಿಕೆ ದ್ರೋಹಿ.

ವಿಸ್ಸಂಭಣ. ನ: [**ವಿಶ್ರಂಭಣ**] ವಿಶ್ವಾಸ, ನಂಬಿಕೆ, ಶ್ರದ್ಧೆ. **–ಸ್ತ್ರೀ: –ಣಾ.**

ವಿಸ್ಸಂಭರ. **ಪು:** [**ವಿಶ್ವಂಭರ**] ಭುಜದಿಂದ ಚಲಿಸುವ ಒಂದು ಪ್ರಾಣಿ, ಇಲಿ, ಮೂಷಕ(ಓಘ), ಇಂದ್ರ, ವಿಷ್ಣು, ನಾರಾಯಣ. ವಿ: ವಿಶ್ವವೆಲ್ಲವನ್ನೂ ಧರಿಸಿರುವವನು.

ವಿಸ್ಸಂಭರಾ. **ಸ್ತ್ರೀ:** [**ವಿಶ್ವಂಭರಾ**] ಪೃಥ್ವಿ, ಭೂಮಿ

ವಿಸ್ಸಂಭಿಯ. ವಿ: [**ವಿಶ್ರಬ್ಧ**] ವಿಶ್ವಾಸ ಹೊಂದಿರುವವನು, ವಿಶ್ವಾಸಿ.

ವಿಸ್ಸಂಭಿಯ. ವಿ: [**ವಿಶ್ವಭೃತ್**] ವಿಶ್ವವನ್ನು ಧರಿಸಿರುವ (ಉತ್ತ)

ವಿಸ್ಸತ್ಥ. '**ವೀಸತ್ಥ**' ಶಬ್ದವನ್ನು ನೋಡುವುದು.

ವಿಸ್ಸದ್ಧ. '**ವೀಸದ್ಧ**' ಶಬ್ದವನ್ನು ನೋಡುವುದು.

ವಿಸ್ಸಮ. **ಅಕ:** [**ವಿ+ಶ್ರಮ್**] ವಿಶ್ರಮಿಸು, ಆಯಾಸ ಪರಿಹರಿಸಿಕೊಳ್ಳು

ವಿಸ್ಸಮ. **ಪು:** [**ವಿಶ್ರಮ**] ವಿಶ್ರಾಂತಿ

ವಿಸ್ಸರ. **ಸಕ:** [**ವಿ+ಸ್ಮೃ**] ಮರೆ

ವಿಸ್ಸರ. ವಿ: [**ವಿಸ್ವರ**] ಕೆಟ್ಟ ದನಿಯುಳ್ಳ

ವಿಸ್ಸರಣ. ನ: [**ವಿಸ್ಮರಣ**] ವಿಸ್ಮೃತಿ, ಮರೆವು

ವಿಸ್ಸರಿಯ. ವಿ: [**ವಿಸ್ಮೃತ**] ಮರೆಯಲ್ಪಟ್ಟ(ಉಪ)

ವಿಸ್ಸಸ. **ಸಕ:** [**ವಿ+ಶ್ವಸ್**] ನಂಬು, ಭರವಸೆ ಇಡು. ವ. ಕೃ: '**ವಿಸ್ಸಂತ**'

ವಿಸ್ಸಸಿಅ. ವಿ: [**ವಿಶ್ವಸ್ತ**] ನಂಬಿಕೆಯಿಟ್ಟಿರುವ, ಭರವಸೆ ಹೊಂದಿರುವ, ನಂಬಿಕಗೆ ಪಾತ್ರವಾದ(ಸುಪಾ)

ವಿಸ್ಸಾಣಿಯ. ವಿ: [**ವಿಶ್ರಾಣಿತ**] ಕೊಡಲ್ಪಟ್ಟ, ಅರ್ಪಿತ (ಉಪ)

ವಿಸ್ಸಾಮ. '**ವೀಸಾಮ**' ಶಬ್ದವನ್ನು ನೋಡುವುದು.

ವಿಸ್ಸಾಮಣ. ನ: [**ವಿಶ್ರಾಮಣ**] ಪಾದ ಸೇವೆ, ಅಂಗಮರ್ದನವೇ ಮೊದಲಾದ ಆರಾಧನೆ,ಸೇವೆ.

ವಿಸ್ಸಾಯ. 'ವಿಸಾಯ=ವಿ+ಸ್ವಾದಯ್' ಶಬ್ದವನ್ನು ನೋಡುವುದು.
ವಿಸ್ಸಾರ. ಸಕ: [ವಿ+ಸ್ಮೃ] ಮರೆ
ವಿಸ್ಸಾರ. ಸಕ: [ವಿ+ಸ್ಮಾರಯ್] ಮರೆಯುವಂತೆ ಮಾಡು
ವಿಸ್ಸಾರಣ. ನ: [ವಿಸಾರಣ] ಹರಡುವುದು, ವ್ಯಾಪಿಸುವಂತೆ ಮಾಡು
ವಿಸ್ಸಾವಸು. ಪು: [ವಿಶ್ವಾವಸು] ಒಬ್ಬ ಗಂಧರ್ವ(ಪಉಮ) ಸಂವತ್ಸರಗಳಲ್ಲಿ ಒಂದು.
ವಿಸ್ಸಾಸ. ಪು: [ವಿಶ್ವಾಸ] ಭರವಸೆ, ನಂಬಿಕೆ, ಶ್ರದ್ಧೆ(ಸುಪಾ)
ವಿಸ್ಸಾಸಿಯ. ವಿ: [ವಿಶ್ವಾಸಿತ] ನಂಬಿಸಲ್ಪಟ್ಟವನು(ಸುಪಾ)
ವಿಸ್ಸಾಹಲ. ಪು: [ವಿಶ್ವಾಹಲ] ಅಂಗವಿದ್ಯೆಯನ್ನು ಬಲ್ಲ ನಾಲ್ಕನೆಯ ರುದ್ರ-ಪುರುಷ
ವಿಸ್ಸುಅ. ವಿ: [ವಿಶ್ರುತ] ಪ್ರಸಿದ್ಧ, ವಿಖ್ಯಾತ(ಔಪ)
ವಿಸ್ಸುಮರಿಅ. 'ವಿಸುಮರಿಅ' ಶಬ್ದವನ್ನು ನೋಡುವುದು
ವಿಸ್ಸೇಣಿ}. ಸ್ತ್ರೀ: [ವಿಶ್ರೇಣಿ, -ಣೀ] ಮೆಟ್ಟಲು, ನಿಚ್ಚಣಿಕೆ,
ವಿಸ್ಸೇಣೀ}. ಏಣಿ(ಆಚಾ)
ವಿಸ್ಸೇಸರ. ಪು: [ವಿಶ್ವೇಶ್ವರ] ಕಾಶಿಯಲ್ಲಿರುವ ಶಿವನ ಮೂರ್ತಿ
ವಿಸ್ಸೋಅಸಿಆ. 'ವಿಸೊತ್ತಿಆ' ಶಬ್ದವನ್ನುನೋಡುವುದು.
ವಿಹ. ಸಕ: [ವ್ಯಧ್] ಹೊಡೆ, ತಿವಿ. **ವ. ಕೃ: ವಿಹಮಾಣ** (ಉತ್ತ)
ವಿಹ. 'ವಿಸ=ವಿಷ' ಶಬ್ದವನ್ನು ನೋಡುವುದು.
ವಿಹ. ಪುಂನ: [ದೇ] ಮಾರ್ಗ, ಹಾದಿ ದಾರಿ(ಓಘ), ಹಲವು ದಿನಗಳಲ್ಲಿ ಕ್ರಮಿಸಬಹುದಾದ ದಾರಿ ಅಡವಿಯ ಹಾದಿಯಂಥ ಹಾದಿ(ಆಚಾ)
ವಿಹ. ಪುಂನ: [ವಿಹಾಯಸ] ಆಕಾಸ, ಗಗನ. 'ವಿಹಗ=ವಿಹಾಯಸ' ಶಬ್ದವನ್ನು ನೋಡುವುದು.
ವಿಹ. ಪುಂಸ್ತ್ರೀ: [ವಿಧ] ಪ್ರಕಾರ, ರೀತಿ. **ಪುಂನ:** ಆಕಾಸ, ಗಗನ(ಭಗ)
ವಿಹಈ. ಸ್ತ್ರೀ: [ದೇ] ಬದನೆಯ ಗಿಡ
ವಿಹಂಗ. ಪು: [ವಿಹಂಗ] ಪಕ್ಷಿ, ಹಕ್ಕಿ (ಪಾಅ). **-ಣಾಹ. ಪು:** [-ನಾಥ] ಗರುಡ ಪಕ್ಷಿ (ಗಉಡ)
ವಿಹಂಗ. ಪು: [ವಿಭಂಗ] ವಿಭಾಗ, ಚೂರು, ಅಂಶ. 'ವಿಭಂಗ' ಶಬ್ದವನ್ನು ನೋಡುವುದು.
ವಿಹಂಗಮ. ಪು: [ವಿಹಂಗಮ] ಹಕ್ಕಿ, ಪಕ್ಷಿ(ಗಉಡ)
ವಿಹಂಜ. ಸಕ: [ವೀ+ಭಂಜ್] ಮುರಿ, ಒಡೆ(ಉವುದು), ನಾಶಮಾಡು
ವಿಹಂಜಿಅ. ವಿ: [ವಿಭಕ್ತ] ಭಾಗಮಾಡಲ್ಪಟ್ಟ, ಹಂಚಲ್ಪಟ್ಟ
ವಿಹಂಡ. ಸಕ: [ವಿ+ಖಂಡಯ್] ವಿಚ್ಛೇದಿಸು, ನಾಶಮಾಡು
ವಿಹಂಡಣ. ನ: [ವಿಖಂಡನ] ವಿಚ್ಛೇದ, ವಿನಾಶ, **ವಿ:** ನಾಶಮಾಡುವವನು.
ವಿಹಂಡಣ. ವಿ: [ವಿಭಂಡನ] ಒಡೆಯುವವನು, ಮುರಿಯುವವನು
ವಿಹಂಡಿಅ. ವಿ: [ವಿಖಂಡಿತ] ನಾಶ ಮಾಡಲ್ಪಟ್ಟ
ವಿಹಗ. ಪು: [ವಿಹಗ] ಹಕ್ಕಿ, ಪಕ್ಷಿ, **ವಿಹಗಾಹಿವ. ಪು:** [ವಿಹಗಾಧಿಪ] ಗರುಡ.
ವಿಹಗ. ಪುಂನ: [ವಿಹಾಯಸ್] ಆಕಾಶ, ಗಗನ. **-ಗಇ. ಸ್ತ್ರೀ:** [-ಗತಿ] ಆಕಾಶದಲ್ಲಿ ಸಂಚರಿಸುವುದು, ಆಕಾಶದಲ್ಲಿ ಸಂಚರಿಸಲು ಕಾರಣಭೂತವಾದ ಕರ್ಮ
ವಿಹಟ್ಟ. 'ವಿಘಟ್ಟ' ಶಬ್ದವನ್ನು ನೋಡುವುದು.
ವಿಹಟ್ಟಿಅ. ವಿ: [ವಿಘಟ್ಟಿತ] ತುಂಡಾದ, ಎರಡಾದ,
ವಿಹಡ. ಅಕ: [ವಿ+ಘಟ್] ಬೇರೆಯಾಗು, ಬೇರ್ಪಡು, ಮುರಿದುಹೋಗು, ಒಡೆ, ನಿಯುಕ್ತನಾಗು **'ವಿಹಡಇ. ವ. ಕೃ: 'ವಿಹಡಂತ'**
ವಿಹಡ. ಸಕ: [ವಿ+ಘಟಯ್] ಮುರಿ, ಒಡೆ
ವಿಹಡ. 'ವಿಹಲ=ವಿಹ್ವಲ' ಶಬ್ದವನ್ನು ನೋಡುವುದು.
ವಿಹಡಣ. ನ: [ವಿಘಟನ] ಬೇರ್ಪಡುವುದು, ವಿಯೋಗಹೊಂದುವುದು, ಬೇರ್ಪಡಿಸು, ಅಗಲಿಸು, ತೆರೆ. **ಸ್ತ್ರೀ: -ಣಾ**
ವಿಹಡಣ. ಪು: [ದೇ] ಅನರ್ಥ
ವಿಹಡಪ್ಫಡ. ವಿ: [ದೇ] ವ್ಯಾಕುಲ, ವ್ಯಗ್ರ, ಚಿಂತಿತ, ತ್ವರಿತ, ಶೀಘ್ರ, ಬೇಗನೆ(ಭವಿ)
ವಿಹಡಾ. ಸ್ತ್ರೀ: [ವಿಘಟಾ] ವಿಭೇದ, ಬೇರ್ಪಡುವಿಕೆ, ಪ್ರತ್ಯೇಕವಾಗುವುದು
ವಿಹಡಾವ. ಸಕ: [ವಿ+ಘಟಯ್] ಬೇರ್ಪಡಿಸು, ಪ್ರತ್ಯೇಕಿಸು
ವಿಹಡಾವಣ. ನ: [ವಿಘಟನ] ಬೇರ್ಪಡುವಿಕೆ, ಪ್ರತ್ಯೇಕಗೊಳ್ಳುವುದು
ವಿಹಡಾವಿಯ. ವಿ: [ವಿಘಟಿತ] ಬೇರ್ಪಟ್ಟ, ಪ್ರತ್ಯೇಕಗೊಂಡ, ತೆರೆಯಲ್ಪಟ್ಟ
ವಿಹಣ. 'ವಿಹನ್ನ' ಶಬ್ದವನ್ನು ನೋಡುವುದು.
ವಿಹಣು. ವಿ: [ದೇ] ಸಂಪೂರ್ಣ, ಸಫಲ

ವಿಹಣ್ಣ. ನ: [ದೇ] ಅರಳೆ ಹೊಡೆದು ಸ್ವಚ್ಛಮಾಡುವುದು
ವಿಹತ್ತ. 'ವಿಭತ್ತ' ಶಬ್ದವನ್ನು ನೋಡುವುದು.
ವಿಹತ್ತಿ. 'ವಿಭತ್ತಿ' ಶಬ್ದವನ್ನು ನೋಡುವುದು.
ವಿಹತ್ತು. 'ವಿಹಣ' ಶಬ್ದವನ್ನು ನೋಡುವುದು.
ವಿಹತ್ಥ. ವಿ: [ವಿಹಸ್ತ] ವ್ಯಾಕುಲಗೊಂಡವನು, ದುಃಖಿತನಾದ, ಚಿಂತಿತನಾದ, ಕುಶಲನಾದ, ದಕ್ಷನಾದ, ವಿದ್ವಾಂಸ, ಯಾವುದಾದರೊಂದು ವಸ್ತುವಿನಿಂದ ಕೂಡಿರುವ ಹಸ್ತ, ನಪುಂಸಕ, ಧೈರ್ಯವಿಲ್ಲದವನು
ವಿಹತ್ಥಿ. ಪುಂಸ್ತ್ರೀ: [ವಿತಸ್ತಿ] ಹನ್ನೆರಡು ಅಂಗುಲದ ಒಂದು ಅಳತೆ
ವಿಹದಿ. ಸ್ತ್ರೀ: [ವಿಧೃತಿ] ವಿಶೇಷ ಧೈರ್ಯ, ವಿ: ಧೈರ್ಯವಿಲ್ಲದವ
ವಿಹನ್ನ}. ಸಕ: [ವಿ+ಹನ್] ಹೊಡೆ, ನಾಶಮಾಡು,
ವಿಹಮ್ಮ}. ಅತಿಕ್ರಮಿಸು, ಮೀರು,
ವಿಹಮ್ಮ. ವಿ: [ವಿಧರ್ಮನ್] ಭಿನ್ನ ಧರ್ಮದವ, ಭಿನ್ನ ಸ್ವಭಾವದ, ವಿಭಿನ್ನ, ವಿಲಕ್ಷಣ(ವಿಸೇ)
ವಿಹಮ್ಮ. ಸಕ: [ವಿಧರ್ಮಯ್] ಧರ್ಮವಿಲ್ಲದಂತೆ ಮಾಡು
ವಿಹಮ್ಮ. ನ: [ವೈಧರ್ಮ್ಯ] ವ್ಯತ್ಯಾಸವಾಗಿರುವುದು, ಸಾದೃಶ್ಯವಿಲ್ಲದಿರುವುದು, ವಿರುದ್ಧವಾಗಿರುವುದು, ತರ್ಕಶಾಸ್ತ್ರದಲ್ಲಿ ಪ್ರಸಿದ್ಧವಾದ ವೈಧರ್ಮ್ಯ-ದೃಷ್ಟಾಂತ
ವಿಹಮ್ಮಣಾ. ಸ್ತ್ರೀ: [ವಿಧರ್ಮಣಾ, ವಿಹನನ] ಪ್ರಯೋಜನವಿಲ್ಲದಂತೆ ಮಾಡುವುದು, ಪೀಡೆ, ನೋವು(ಪಣ್ಣ)
ವಿಹಯ. ವಿ: [ವಿಹತ] ಹೊಡೆಯಲ್ಪಟ್ಟ, ಕೊಲ್ಲಲ್ಪಟ್ಟ, ವಧಿಸಲ್ಪಟ್ಟ, ನಾಶಮಾಡಲ್ಪಟ್ಟ
ವಿಹಯ. -'ವಿಹಗ=ವಿಹಗ' ಶಬ್ದವನ್ನು ನೋಡುವುದು.
ವಿಹಯ. 'ವಿಹವ=ವಿಭವ' ಶಬ್ದವನ್ನು ನೋಡುವುದು.
ವಿಹರ. ಅಕ: [ವಿ+ಹೃ] ವಿಹರಿಸು, ಕ್ರೀಡಿಸು, ಇರು. ಸಕ: ನಡೆ, ಚಲಿಸು, 'ವಿಹರಇ'. ವ.ಕೃ: 'ವಿಹರಂತ'
ವಿಹರಣ. ನ: [ವಿಹರಣ] ವಿಹಾರ
ವಿಹರ. ಸಕ: [ಪ್ರತಿ+ಈಕ್ಷ್] ನಿರೀಕ್ಷಿಸು, ದಾರಿ ನೋಡು
ವಿಹರ. 'ವಿಹಾರ' ಶಬ್ದವನ್ನು ನೋಡುವುದು(ಉಪ)
ವಿಹರಿಅ. ವಿ: [ವಿಹೃತ] ವಿಹರಿಸಿದವನು(ಉವ)
ವಿಹರಿಅ. ನ: [ದೇ] ಸುರತ, ಸಂಭೋಗ

ವಿಹಲ. ಅಕ: [ವಿ+ಹ್ವಲ್] ವ್ಯಾಕುಲಗೊಳ್ಳುವ್ಯಗ್ರನಾಗು, ಚಂತಿತನಾಗು
ವಿಹಲ. 'ವಿಹಡ=ವಿ+ಘಟ್' ಶಬ್ದವನ್ನು ನೋಡುವುದು. ವ. ಕೃ: 'ವಿಹಲಂತ'
ವಿಹಲ. ವಿ: [ವಿಹ್ವಲ] ವ್ಯಾಕುಲಗೊಂಡ, ವ್ಯಗ್ರನಾದ, ಚಿಂತಿತನಾದ
ವಿಹಲ. 'ವಿಅಲ=ವಿಕಲ' ಶಬ್ದವನ್ನು ನೋಡುವುದು.
ವಿಹಲ. ವಿ: [ವಿಫಲ] ನಿಷ್ಫಲವಾದ, ನಿರರ್ಥಕವಾದ (ಸುಪಾ), ಅಸತ್ಯ, ಸುಳ್ಳು
ವಿಹಲ. ಸಕ: [ವಿಫಲಯ್] ನಿಷ್ಫಲಗೊಳಿಸು, ವಿಫಲಗೊಳಿಸು, ನಿರರ್ಥಕಗೊಳಿಸು
ವಿಹಲಂಖಲ}. ವಿ: [ವಿಹ್ವಲಾಂಗ] ಕಷ್ಟಕ್ಕೊಳಗಾದ
ವಿಹಲಂಘಲ}. ಶರೀರದ, ತೊಂದರೆಗೊಳಗಾದ ದೇಹದ
ವಿಹಲಿಅ. ವಿ: [ವಿಹ್ವಲಿತ] ವ್ಯಾಕುಲಗೊಳಿಸಲ್ಪಟ್ಟ, ಚಿಂತೆಗೀಡಾಗಿಸಲ್ಪಟ್ಟ
ವಿಹಲಿಅ. 'ವಿಹಡಿಅ' ಶಬ್ದವನ್ನು ನೋಡುವುದು.
ವಿಹಲಿಅ. ವಿ: [ವಿಕಲಿತ] ನ್ಯೂನಗೊಳಿಸಲ್ಪಟ್ಟ
ವಿಹಲ್ಲ. ಅಕ: [ವಿ+ರು, ವಿ+ಸ್ತೃ] ಶಬ್ದಮಾಡು, ಸಕ: ವಿಸ್ತರಿಸು, ಅಗಲಗೊಳಿಸು
ವಿಹಲ್ಲ. ಪು: [ವಿಹಲ್ಲ] ಶ್ರೇಣಿಕ ಮಹಾರಾಜನ ಒಬ್ಬ ಮಗ.
ವಿಹವ. ಪು: [ವಿಭವ] ಸಮೃದ್ಧಿ, ಸಂಪತ್ತು, ಐಶ್ವರ್ಯ, ಸಂವತ್ಸರಗಳಲ್ಲಿ ಒಂದು
ವಿಹವಣ. ನ: [ವಿಧವನ] ವಿನಾಶ
ವಿಹವಾ. ವಿ: [ವಿಧವಾ] ಗಂಡ ಸತ್ತವಳು, ವಿಧವೆ(ಔಪ)
ವಿಹವಿ. ವಿ: [ವಿಭವಿನ್] ಶ್ರೀಮಂತ, ಧನಾಢ್ಯ(ಕುಮಾ)
ವಿಹವ್ವ. 'ವಿಹವ=ವಿಭವ' ಶಬ್ದವನ್ನು ನೋಡುವುದು.
ವಿಹಸ. ಅಕ: [ವಿ+ಹಸ್] ವಿಕಸಿಸು, ಅರಳು, ನಗು, ಹಾಸ್ಯಮಾಡು, 'ವಿಹಸಇ' ವ. ಕೃ: 'ವಿಹಸಂತ'
ವಿಹಸಾವ. ಸಕ: [ವಿ+ಹಾಸಯ್] ನಗಿಸು, ಅರಳಿಸು, ವಿಕಾಸಗೊಳಿಸು
ವಿಹಸಾವಿಅ. ವಿ: [ವಿಹಾಸಿತ] ನಗಿಸಲ್ಪಟ್ಟ, ವಿಕಸಿತಗೊಳಿಸಲ್ಪಟ್ಟ, ಅರಳಿಸಲ್ಪಟ್ಟ
ವಿಹಸಿಅ. ವಿ: [ವಿಹಸಿತ] ವಿಕಸಿತ, ಚೆನ್ನಾಗಿ ಅರಳಿದ, ನ: ಮಧ್ಯಮ ಪ್ರಕಾರದ ಹಾಸ್ಯ
ವಿಹಸಿರ. ವಿ: [ವಿಹಸಿತೃ] ಅರಳುವ, ವಿಕಾಸಗೊಳ್ಳುವ

ವಿಹಸಿಪ್ಪಿಅ. ವಿ: [ದೇ] ಅರಳಿದ, ವಿಕಾಸಗೊಂಡ,
ವಿಹಸ್ಸಇ. '**ಬಿಹಸ್ಸಇ**' ಶಬ್ದವನ್ನು ನೋಡುವುದು.
ವಿಹಾ. ಅಕ: [**ವಿ+ಭಾ**] ಹೊಳೆ, ಮಿನುಗು, ಪ್ರಕಾಶಿಸು
ವಿಹಾ. ಸಕ: [**ವೃಥಾ**] ನಿರರ್ಥಕ, ವ್ಯರ್ಥ
ವಿಹಾ. ಸ್ತ್ರೀ: [**ವಿಧಾ**] ಪ್ರಕಾರ, ಪ್ರಭೇದ(ಕಪ್ಪ)
ವಿಹಾ_ '**ವಿಹಗ=ವಿಹಾಯಸ**'
ವಿಹಾಇ. ವಿ: [**ವಿಧಾಯಿನ್**] ಕರ್ತ, ಮಾಡುವವನು
ವಿಹಾಉ. ವಿ: [**ವಿಧಾತೃ**] ಕರ್ತೃ, ನಿರ್ಮಿಸುವವನು, ಸೃಷ್ಟಿಕರ್ತ, ಚತುರ್ಮುಖ ಬ್ರಹ್ಮ, **ಪು:** ಪಣಪನ್ನಿ ದೇವತೆಗಳ ಉತ್ತರ ದಿಕ್ಕಿನ ಇಂದ್ರ(ಠಾ).
ವಿಹಾಡ. ಸಕ: [**ವಿ+ಘಟಯ್**] ಬೇರ್ಪಡಿಸು, ಬೇರೆಮಾಡು, ನಾಶಮಾಡು, ತೆರೆ,
ವಿಹಾಡ. ವಿ: [**ವಿಘಾಟ**] ವಿಶಾಲವಾದ, ಅಗಲವಾದ
ವಿಹಾಡ. ವಿ: [**ವಿಹಾಟ**] ಬೆಳಕನ್ನುಂಟು ಮಾಡುವ
ವಿಹಾಡಣ. ನ: [**ದೇ**] ಅನರ್ಥ
ವಿಹಾಡಿಅ. ವಿ: [**ವಿಘಟಿತ**] ಬೇರ್ಪಡಿಸಲಾದ, ಅಗಲಿಸಲ್ಪಟ್ಟ, ನಾಶಗೊಳಿಸಲ್ಪಟ್ಟ
ವಿಹಾಡಿಅ. ವಿ: [**ವಿಘಟಿತ**] ತೆರೆಯಲ್ಪಟ್ಟ,(ಉಪ)
ವಿಹಾಡಿರ. ವಿ: [**ವಿಘಟಯಿತೃ**] ಬೇರ್ಪಡಿಸುವವ, ಅಗಲಿಸುವವ
ವಿಹಾಣ. ಪು: [**ದೇ**] ವಿಧಿ, ವಿಧಾತ, ದೈವ, ಭಾಗ್ಯ,(ದೇ) ಬೆಳಿಗ್ಗೆ, ಪ್ರಾತಃಕಾಲ(ಭವಿ), ಅರ್ಚನೆ, ಪೂಜೆ
ವಿಹಾಣ. ನ: [**ವಿಧಾನ**] ಶಾಸ್ತ್ರೋಕ್ತ ರೀತಿ, ಕ್ರಮ, ಪರಿಪಾಟ(ಉಪ) ನಿರ್ಮಾಣ, ರಚನೆ, ಪ್ರಕಾರ, ಪ್ರಭೇದ, ವ್ಯಾಕರಣದಲ್ಲಿ ಹೇಳಿರುವ ವಿಧಿ–ವಿಶೇಷ, ಅವಸ್ಥಾ–ವಿಶೇಷ
ವಿಹಾಣ. ನ: [**ವಿಹಾನ**] ಪರಿತ್ಯಾಗ, ತ್ಯಜಿಸುವುದು
ವಿಹಾಣೆಯು(ಅಪ). ವಿ: [**ವಿಧಾಯಿನ್**] ಕರ್ತೃ, ಮಾಡುವವನು
ವಿಹಾಯ. ಅಕ: [**ವಿ+ಭಾ**] ಹೊಳೆ, ಪ್ರಕಾಶಿಸು, ಬೆಳಗು
ವಿಹಾಯ. ಪು: [**ವಿಘಾತ**] ಅವಸಾನ, ಸಂಹಾರ, ಅಂತ್ಯ, ಶತ್ರು
ವಿಹಾಯ.. '**ವಿಭಾಗ**' ಶಬ್ದವನ್ನು ನೋಡುವುದು.
ವಿಹಾಯ. ವಿ: [**ವಿಭಾತ**] ಪ್ರಕಾಶಿಸಲ್ಪಟ್ಟ, ಪ್ರಾತಃಕಾಲ, ಬೆಳಿಗ್ಗೆ
ವಿಹಾಂಯ. '**ವಿಹಗ=ವಿಹಾಂಯಸ**' ಶಬ್ದವನ್ನು ನೋಡುವುದು.

ವಿಹಾಯ. '**ವಿಹಾ=ವಿ+ಹಾ**' ಶಬ್ದವನ್ನು ನೋಡುವುದು.
ವಿಹಾಯ(ಅಪ). '**ವಿಹಿಅ**' ಶಬ್ದವನ್ನು ನೋಡುವುದು.
ವಿಹಾರ. ಸಕ: [**ವಿ+ಧಾರಯ್**] ಅಪೇಕ್ಷಿಸು, ವಿಶೇಷ ರೀತಿಯಲ್ಲಿ ಧರಿಸು
ವಿಹಾರ. ಪು: [**ವಿಹಾರ**] ಸಂಚರಿಸುವುದು, ತಿರುಗಾಡು, ಸುತ್ತಾಡು, ಕ್ರೀಡೆ, ಕ್ರೀಡಾ ಸ್ಥಳ, ಜೈನ ದೇವಾಲಯ, ಬೌದ್ಧ ದೇವಾಲಯ, ಸ್ಥಿತಿ, ವಾಸಗೃಹ, ಮುನಿಯ ವರ್ತನೆ,–**ಭೂಮಿ. ಸ್ತ್ರೀ:** [–**ಭೂಮಿ**] ಸ್ವಾಧ್ಯಾಯ ಮಾಡುವ ಸ್ಥಳ(ಆಚಾ), ಸಂಚರಿಸುವ ಪ್ರದೇಶ, ಕ್ರೀಡಾಸ್ಥಳ, ಬೌದ್ಧ ದೇವಸ್ಥಾನದ ಸ್ಥಳ
ವಿಹಾರಿ. ವಿ: [**ವಿಹಾರಿನ್**] ಸಂಚರಿಸುವವನು, ತಿರುಗಾಡುವವನು(ಆಚಾ)
ವಿಹಾಲಿಯ. '**ವಿಹಾಡಿಅ**' ಶಬ್ದವನ್ನು ನೋಡುವುದು.
ವಿಹಾವ. '**ವಿಭಾವ=ವಿ+ಭಾವಯ್**' ಶಬ್ದವನ್ನು ನೋಡುವುದು.
ವಿಹಾವಣ. ನ: [**ವಿಧಾಪನ**] ನಿರ್ಮಿಸುವುದು, ಮಾಡಿಸುವುದು
ವಿಹಾವಣ. ನ: [**ವಿಭಾವನ**] ಆಲೋಚನೆ, ಮನಸ್ಸಿನಲ್ಲಿ ಭಾವಿಸುವುದು, ಕಲ್ಪಿಸುವುದು.
ವಿಹಾವರೀ. ಸ್ತ್ರೀ: [**ವಿಭಾವರೀ**] ರಾತ್ರಿ, ನಿಶೆ(ಪಾಅ)
ವಿಹಾವಸು. ಪು: [**ವಿಭಾವಸು**] ಅಗ್ನಿ, ಬೆಂಕಿ(ಪಾಅ), ಚಿತ್ರಮೂಲದ ಗಿಡ
ವಿಹಾವಿಅ. ವಿ: [**ವಿಭಾವಿತ**] ನೋಡಲ್ಪಟ್ಟ, ನೋಡಿ ತಿಳಿಯಲ್ಪಟ್ಟ, ಊಹಿಸಲ್ಪಟ್ಟ
ವಿಹಾವಿಅ. ವಿ: [**ವಿಧಾವಿತ**] ಉಲ್ಲಾಸಗೊಂಡ, ಮನಸ್ಸಿಗೆ ಹೊಳೆದ
ವಿಹಾಸ. ಪು: [**ವಿಹಾಸ**]ಉಪಹಾಸ, ಗೇಲಿಮಾಡುವುದು
ವಿಹಾಸ}. '**ವಿಹಸಾವ**' ಶಬ್ದವನ್ನು ನೋಡುವುದು.
ವಿಹಾಸಾವ}.
ವಿಹಿ. ಪು: [**ವಿಧಿ**] ಬ್ರಹ್ಮ, ಚತುರ್ಮುಖ, ವಿಧಾತ(ಪಾಅ), **ಪುಂಸ್ತ್ರೀ:** ಪ್ರಕಾರ, ಪ್ರಭೇದ, ರೀತಿ,ಶಾಸ್ತ್ರೋಕ್ತ ವಿಧಾನ, ಅನುಷ್ಠಾನ, ಕ್ರಮ, ಕಟ್ಟಳೆ, ನಿಯಮ, ಪರಿಪಾಟಿ, ಪದ್ಧತಿ, ನಿಯೋಗ, ಆದೇಶ, ಆಜ್ಞೆ, ಆಜ್ಞಾ ಸೂಚಕ ವಾಕ್ಯ, ವ್ಯಾಕರಣದ ಸೂತ್ರ, ಕರ್ಮ, ಆನೆಯ ಆಹಾರ, ದೈವ, ಭಾಗ್ಯ, ಹಣೆಬರಹ, ನೀತಿ, ನ್ಯಾಯ, ಸ್ಥಿತಿ, ಮರ್ಯಾದೆ, ಕಾರ್ಯ, ಕೆಲಸ. –**ನ್ನು.**

ವಿ: [-ಜ್ಞ] ವಿಧಿಯನ್ನು ಬಲ್ಲವನು. -ವಯಣ. ನ: [-ವಚನ] ವಿಧಿ-ವಾಕ್ಯ, ವಿಧಿವಾದ, ವಿಧಿಯ ಉಪದೇಶ. -ವಾಯ. ಪು: [-ವಾದ] ಅದೇ ಅರ್ಥ.
ವಿಹಿಅ. ವಿ: [ವಿಹಿತ] ಕೃತ, ವಿಧಿಸಲ್ಪಟ್ಟ, ಅನುಷ್ಠಾನ ಮಾಡಲ್ಪಟ್ಟ, ನಿರ್ಮಿಸಲ್ಪಟ್ಟ, ಪ್ರಯತ್ನಿಸಲ್ಪಟ್ಟ, ಹೇಳಲ್ಪಟ್ಟ, ಶಾಸ್ತ್ರೋಕ್ತ
ವಿಹಿಂಸ. ಸಕ: [ವಿ+ಹಿಂಸ್] ವಿವಿಧ ಉಪಾಯಗಳಿಂದ ಕೊಲ್ಲು, ವಧಿಸು,
ವಿಹಿಂಸ. ವಿ: [ವಿಹಿಂಸ] ಹಿಂಸೆ ಮಾಡುವವನು
ವಿಹಿಂಸಗ. ವಿ: [ವಿಹಿಂಸಕ] ವಧೆ ಮಾಡುವವನು, ಕೊಲ್ಲುವವನು
ವಿಹಿಂಸಣ. ನ: [ವಿಹಿಂಸನ] ಬಗೆ ಬಗೆಯಾಗಿ ಹಿಂಸಿಸುವುದು
ವಿಹಿಂಸಾ. ಸ್ತ್ರೀ: [ವಿಹಿಂಸಾ] ವಿಶೇಷ ಹಿಂಸೆ, ನಾನಾ ಬಗೆಯ ಹಿಂಸೆ
ವಿಹಿಣ್ಣ}. ವಿ: [ವಿಭಿನ್ನ] ಭಿನ್ನವಾದ, ಬೇರೆ ಬೇರೆಯಾದ,
ವಿಹಿನ್ನ}. ಅಗಲಿದ, ತುಂಡಾದ, ಸೀಳಲ್ಪಟ್ಟ, ತುಂಡು ತುಂಡು ಮಾಡಲ್ಪಟ್ಟ
ವಿಹಿಮ. ನ: [ದೇ] ಅರಣ್ಯ, ಕಾಡು
ವಿಹಿಮಿಹಿಯ. ವಿ: [ದೇ] ವಿಕಸಿತ, ಅರಳಿದ
ವಿಹಿಯವ್ವ 'ವಿಹೇ=ವಿಧಾ' ಶಬ್ದವನ್ನು ನೋಡುವುದು.
ವಿಹಿವಿಲ್ಲ. ಸಕ: [ವಿ+ರಚಯ್] ರಚಿಸು, ಮಾಡು, ನಿರ್ಮಿಸು
ವಿಹೀಣ. ವಿ: [ವಿಹೀನ] ಇಲ್ಲದ, ರಹಿತ, ವರ್ಜಿತ, ತ್ಯಜಿಸಲ್ಪಟ್ಟ, ಬಿಡಲ್ಪಟ್ಟ
ವಿಹೀರ. ಸಕ: [ಪ್ರತಿ+ಈಕ್ಷ್] ನಿರೀಕ್ಷಿಸು, ಎದುರುನೋಡು, ದಾರಿ ನೋಡು
ವಿಹೀರ. ವಿ: [ಪ್ರತೀಕ್ಷ] ನಿರೀಕ್ಷಿಸುವವನು, ಎದುರು ನೋಡುವವನು
ವಿಹೀರಿಅ. ವಿ: [ಪ್ರತೀಕ್ಷಿತ] ನಿರೀಕ್ಷಿಸಲ್ಪಟ್ಟವನು
ವಿಹೀಸಣ. 'ವಿಭೀಸಣ' ಶಬ್ದವನ್ನು ನೋಡುವುದು.
ವಿಹೀಸಿಯಾ. 'ವಿಭೀಸಿಯಾ' ಶಬ್ದವನ್ನು ನೋಡುವುದು.
ವಿಹು. ಪು: [ವಿಧು] ಚಂದ್ರ, ವಿಷ್ಣು, ಕೃಷ್ಣ, ಬ್ರಹ್ಮ, ಶಂಕರ, ಶಿವ. ವಾಯು, ಕರ್ಪೂರ
ವಿಹುಅ. ವಿ: [ವಿಧುತ] ಕಂಪಿತ, ಅಲುಗಾಡಿಸಲ್ಪಟ್ಟ, ಬೇರು ಸಹಿತ ಕೀಳಲ್ಪಟ್ಟ, ಬಿಡಲ್ಪಟ್ಟ(ಗಉಡ)
ವಿಹುಂಡುಅ. ಪು: [ದೇ] ರಾಹು ಗ್ರಹ
ವಿಹುಣ. ಸಕ: [ವಿ+ಧೂ] ಅಲುಗಾಡಿಸು, ಅಲ್ಲಾಡಿಸು, ದೂರಮಾಡು, ಬಿಡು(ವುದು), ಬೇರೆಮಾಡು. **'ವಿಹುಣಇ'.** ವ. ಕೃ: **'ವಿಹುಣಂತ'**
ವಿಹುಣಣ. ನ: [ವಿಧೂನನ] ದೂರವಮಾಡುವಿಕೆ, ಬೀಸಣಿಗೆ
ವಿಹುಣಿಯ. ವಿ: [ವಿಧೂತ] 'ವಿಹುಅ' ಶಬ್ದವನ್ನು ನೋಡುವುದು.
ವಿಹುರ. ವಿ: [ವಿಧುರ] ವಿಕಲವಾಗಿರುವುದು, ಕ್ಷೀಣ, ಪತಿ ಅಥವಾ ಪತ್ನಿಯಿಲ್ಲದ,ಸದೃಶವಲ್ಲದ, ವಿಲಕ್ಷಣ, ನ: ವ್ಯಾಕುಲ, ವಿಹ್ವಲ, ವಿಷಮ, ಬೇರ್ಪಟ್ಟ
ವಿಹುರಾಇಅ. ವಿ: [ವಿಧುರಾಯಿತ] ವ್ಯಾಕುಲಗೊಳಿಸಲ್ಪಟ್ಟ
ವಿಹುರಿಜ್ಜವಮಾಣ. ವಿ: [ವಿಧುರಾಯಮಾಣ] ವ್ಯಾಕುಲಗೊಳ್ಳುತ್ತಿರುವ
ವಿಹುರಿಯ. ವಿ: [ವಿಧುರಿತ] ವ್ಯಾಕುಲನಾದ, ಬೇರ್ಪಟ್ಟ, ಅಗಲಿದ, ವಿರಹಿತ(ಗಉಡ)
ವಿಹುರೀಕಯ. ವಿ: [ವಿಧುರೀಕೃತ] ಅಗಲಿಸಲ್ಪಟ್ಟ ವ್ಯಾಕುಲಗೊಳಿಸಲ್ಪಟ್ಟ, ಬೇರ್ಪಡಿಸಲ್ಪಟ್ಟ,
ವಿಹುಲ. 'ವಿಹುರ' ಶಬ್ದವನ್ನು ನೋಡುವುದು.
ವಿಹುಲ್ಲ. ವಿ: [ವಿಫುಲ್ಲ] ಅರಳಿದ, ಉತ್ಸಾಹಿ(ಭವಿ)
ವಿಹೂಅ. ವಿ: [ವಿಧೂತ] ಅಲುಗಾಡಿಸಲ್ಪಟ್ಟ, ಅಲ್ಲಾಡಿಸಲ್ಪಟ್ಟ, ಬಿಡಲ್ಪಟ್ಟ, ರಹಿತ, ಇಲ್ಲದ, 'ವಿಧೂಯ, ವಿಹುಅ' ಶಬ್ದಗಳನ್ನು ನೋಡುವುದು.
ವಿಹೂಇ. 'ವಿಭೂಇ' ಶಬ್ದವನ್ನು ನೋಡುವುದು.
ವಿಹೂಣ. 'ವಿಹುಣ' ಶಬ್ದವನ್ನು ನೋಡುವುದು (ಆಚಾ)
ವಿಹೂಣ. 'ವಿಹೀಣ' ಶಬ್ದವನ್ನು ನೋಡುವುದು.
ವಿಹೂಣಯ. ನ: [ವಿಧೂನಕ] ಬೀಸಣಿಗೆ(ಸೂಅ)
ವಿಹೂಸಣ. 'ವಿಭೂಸಣ' ಶಬ್ದವನ್ನು ನೋಡುವುದು.
ವಿಹೂಸಾ. ಸ್ತ್ರೀ: [ವಿಭೂಷಾ] ಶೋಭೆ, ಒಡವೆ, ಆಭರಣ, ಅಲಂಕಾರಾದಿಗಳಿಂದ ಶರೀರವನ್ನು ಅಲಂಕರಿಸುವುದು
ವಿಹೂಸಿಅ. ವಿ: [ವಿಭೂಷಿತ] ಅಲಂಕರಿಸಲ್ಪಟ್ಟ
ವಿಹೇ. ಸಕ: [ವಿ+ಧಾ] ಮಾಡು, ರಚಿಸು, ನಿರ್ಮಿಸು **'ವಿಹೇಇ,'**
ವಿಹೇಡ. ಸಕ: [ವಿ+ಹೇಟಯ್] ಹೊಡೆ, ಹಿಂಸಿಸು, ನೋಯಿಸು. ವ.ಕೃ: **'ವಿಹೇಡಯಂತ'**

ವಿಹೇಡಯು. ವಿ: [ವಿಹೇಟಕ] ಅವಮಾನ ಮಾಡುವವನು, ಅಗೌರವಿಸುವವನು
ವಿಹೇಡಿ. ವಿ: [ವಿಹೇಟಿನ್] ಹಿಂಸಿಸುವವನು, ಪೀಡಿಸುವವನು, ನೋಯಿಸುವವನು(ಸೂಅ)
ವಿಹೇಡಿಯ. ವಿ: [ವಿಹೇಟಿತ] ಪೀಡಿತ
ವಿಹೇಢಣಾ. ಸ್ತ್ರೀ: [ವಿಹೇಠನಾ] ಪೀಡೆ, ನೋವು, ಹಿಂಸೆ(ಉವ)
ವಿಹೋಡ. ಸಕ: [ತಾಡಯ್] ಹೊಡೆ. 'ವಿಹೋಡಇ'
ವಿಹೋಡಿಅ. ವಿ: [ತಾಡಿತ] ಹೊಡೆಯಲ್ಪಟ್ಟವನು
ವಿಹೋಯ(ಅಪ). ವಿಹವ' ಶಬ್ದವನ್ನು ನೋಡುವುದು.
ವೀ. 'ವಿ=ಅಪಿ, ವಿ' ಶಬ್ದವನ್ನು ನೋಡುವುದು (ಪಉಮ)
ವೀಅ. ಸಕ: [ವೀಜಯ್] ಗಾಳಿಹಾಕು, ಬೀಸಣಿಗೆಯಿಂದ ಗಾಳಿ ಬೀಸು
ವೀಅ. ವಿ: [ದೇ] ವಿಧುರ, ವ್ಯಾಕುಲಗೊಂಡ, ತಾತ್ಕಾಲಿಕ, ಆ ಹೊತ್ತಿನ
ವೀಅ. 'ವೀಅ=ದ್ವಿತೀಯ' ಶಬ್ದವನ್ನು ನೋಡುವುದು.
ವೀಅ. ವಿ: [ವೀತ] ಕಳೆದುಹೋದ, ನಾಶವಾದ, ಮರೆಯಾದ, ಇಲ್ಲವಾದ. **–ಕಮ್ಹ.** ನ: [–ಕಶ್ಮ?] ಗೋತ್ರ ವಿಶೇಷ, **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದ(ತಾ), **–ಧೂಮ.** ವಿ: [–ಧೂಮ] ದ್ವೇಷವಿಲ್ಲದ, **–ಬ್ಭಯ, ಭಯ.** ನ: [_ಭಯ] ಸಿಂಧು ಸೌವೀರ ದೇಶದ ಪ್ರಾಚೀನ ರಾಜಧಾನಿ. ವಿ: ಭಯ–ರಹಿತ, **–ಮೋಹ.** ವಿ: [–ಮೋಹ] ಮೋಹರಹಿತ. **–ರಾಗ, –ರಾಯ.** ವಿ: [–ರಾಗ] ರಾಗ–ರಹಿತ. ರಾಗವಿಲ್ಲದ.**–ಸೋಗ.** ಪು: [**–ಶೋಕ**] ಒಂದು ಮಹಾ ಗ್ರಹ. **–ಸೋಗಾ.** ಸ್ತ್ರೀ: [**–ಶೋಕಾ**] ಸಲಿಲಾವತಿ ಎಂಬ ಹೆಸರಿನ ವಿಜಯ ಪ್ರಾಂತದ ರಾಜಧಾನಿ.
ವೀಅಜಮಣ. '**ಬೀಅಜಮಣ**' ಶಬ್ದವನ್ನು ನೋಡುವುದು.
ವೀಅಣ. ನ: [ವೀಜನ] ಬೀಸಣಿಗೆಯಿಂದ ಗಾಳಿಹಾಕುವುದು, ಸ್ತ್ರೀನ: ಬೀಸಣಿಗೆ. ಸ್ತ್ರೀ: **–ಣೀ**
ವೀಆವಿಯ. ವಿ: [**ವೀಜಿತ**] ಬೀಸಣಿಗೆಯಿಂದ ಗಾಳಿ ಹಾಕಿಸಲ್ಪಟ್ಟವನು
ವೀಇ. **ಪಂಸ್ತ್ರೀ:** [**ವೀಚಿ**] ಅಲೆ, ತರಂಗ(ಪಾಅ), ಅವಕಾಶ, ಆಕಾಶ, ಗಗನ. ಸಂಬಂಧ, ಅಗಲುವಿಕೆ, ಬೇರ್ಪಟ್ಟ ಭಾವ, **–ದವ್ವ.** ನ: [**–ದ್ರವ್ಯ**] ಅಂಗಹೀನ ವಸ್ತು, ಪ್ರದೇಶದಿಂದ ನ್ಯೂನವಾದ ದ್ರವ್ಯ(ಭಗ)
ವೀಇ. ಸ್ತ್ರೀ: [**ವಿಕೃತಿ**] ವಿರೂಪಗೊಂಡದ್ದು, ರೂಪ ಬದಲಾವಣೆ, ದುಷ್ಟ ಕ್ರಿಯೆ ಹೊಂದಿರುವ. '**ವಿಗಇ**' ಶಬ್ದವನ್ನು ನೋಡುವುದು.
ವೀಇಂಗಾಲ. ವಿ: [**ವೀತಾಂಗಾರ**] ರಾಗ–ರಹಿತ(ಭಗ)
ವೀಇಕ್ಕಂತ. ವಿ: [**ವ್ಯತಿಕ್ರಾಂತ**] ಕಳೆದುಹೋದ, ವ್ಯತೀತ, ಉಲ್ಲಂಘಿಸಿದವ, ಮೀರಿದವನು
ವೀಇಕ್ಕಮ. ಸಕ: [**ವ್ಯತಿ+ಕ್ರಮ್**] ಉಲ್ಲಂಘಿಸು, ಮೀರು,
ವೀಇಮಿಸ್ಸ. ವಿ: [**ವ್ಯತಿಮಿಶ್ರ**] ಮಿಶ್ರಿತ, ಸೇರಿಸಿದ (ಆಚಾ)
ವೀಇಯ. ವಿ: [**ವೀಜಿತ**] ಬೀಸಣಿಗೆಯಿಂದ ಗಾಳಿಹಾಕಲ್ಪಟ್ಟ(ಔಪ)
ವೀಇವಯ. ಸಕ: [**ವ್ಯತಿ+ವ್ರಜ್**] ಸುತ್ತು, ತಿರುಗು, ಹೋಗು, ಉಲ್ಲಂಘಿಸು, ಮೀರು, ದಾಟು. '**ವೀಇವಯಇ**'. ವ. ಕೃ: '**ವಿಇವಯಮಾಣ**'
ವೀಈ. ಸ್ತ್ರೀ: '**ವೀಇ=ವೀಚಿ**' ಶಬ್ದವನ್ನು ನೋಡುವುದು (ಪಾಅ)
ವೀಈ. ಅ: [ವಿವಿಚ್ಯ] ಬೇರೆಯಾಗಿ, ಬೇರ್ಪಟ್ಟು, ಅಗಲಿ(ಭಗ)
ವೀಈ. ಅ: [ವಿಚಿಂತ್ಯ] ಚಿಂತಿಸಿ, ಚಿಂತನೆಮಾಡಿ
ವೀಈವಯ. '**ವೀಇವಯ**' ಶಬ್ದವನ್ನು ನೋಡುವುದು.
ವೀಚಿ. '**ವೀಇ=ವೀಚಿ**' ಶಬ್ದವನ್ನು ನೋಡುವುದು.
ವೀಚಿ. ಸ್ತ್ರೀ: [ದೇ] ಸಣ್ಣ ಹಾದಿ, ಕಿರಿದಾದ ದಾರಿ
ವೀಜ. '**ವೀಅ=ವೀಜಯ್**' ಶಬ್ದವನ್ನು ನೋಡುವುದು.
ವೀಜಣ. '**ವೀಅಣ**' ಶಬ್ದವನ್ನು ನೋಡುವುದು.
ವೀಜಿಯ. '**ವೀಇಯ**' ಶಬ್ದವನ್ನು ನೋಡುವುದು.
ವೀಡಗ.}. '**ವೀಡಗ**' ಶಬ್ದವನ್ನು ನೋಡುವುದು.
ವೀಡಯ}.
ವೀಡಯ. ಪು: [ವ್ರೀಡಕ] ನಾಚಿಕೆ, ಲಜ್ಜೆ(ಗಉಡ)
ವೀಡಿಅ. ವಿ: [ವ್ರೀಡಿತ] ಲಜ್ಜಿತ, ನಾಚಿದ(ಣಾಯಾ)
ವೀಡಿಆ. ಸ್ತ್ರೀ: [ವೀಟಿಕಾ] ವೀಳ್ಯ, ತಾಂಬೂಲ, ಬೀಡ (ಗಉಡ)
–ವೀಢ. '**ಪೀಢ**' ಶಬ್ದವನ್ನು ನೋಡುವುದು.
ವೀಣ. ಸಕ: [**ವಿ+ಚಾರಯ್**] ವಿಚಾರಮಾಡು, '**ವೀಣಇ**'
ವೀಣಣ. ನ: [ದೇ] ಪ್ರಕಟಿಸು(ವದು), ತಿಳಿಯಪಡಿಸು

ವೀಣಾ. ಸ್ತ್ರೀ: [ವೀಣಾ] ಪ್ರಸಿದ್ಧವಾದ 'ವೀಣಾ' ವಾದ್ಯ. **–ಯರಿಣೀ.** ಸ್ತ್ರೀ: [–ಕರೀ] ವೀಣೆಗಾಗಿ ನಿಯುಕ್ತಳಾದ ದಾಸಿ. **–ವಾಯಗ.** ವಿ: [–ವಾದಕ] ವೀಣೆ ನುಡಿಸುವವನು

ವೀತ. 'ವೀಅ=ವೀತ' ಶಬ್ದವನ್ನು ನೋಡುವುದು.

ವೀತಿಕಂತ.}. 'ವೀಇಕ್ಕಂತ' ಶಬ್ದವನ್ನು ನೋಡುವುದು

ವೀತಿಕ್ಕಂತ}. (ಭಗ)

ವೀತಿವಯ}. 'ವೀಇವಯ' ಶಬ್ದವನ್ನು ನೋಡುವುದು.

ವೀತೀವಯ}.

ವೀಮಂಸ. ಸಕ: [ವಿ+ಮೃಶ್, ಮೀಮಾಂಸ್] ವಿಚಾರಮಾಡು, ವಿಮರ್ಶೆ ಮಾಡು ಪರ್ಯಾಲೋಚಿಸು

ವೀಮಂಸಯ. ವಿ: [ವಿಮರ್ಶಕ, ಮೀಮಾಂಸಕ] ವಿಚಾರ ಮಾಡುವವನು, ವಿಮರ್ಶಿಸುವವನು

ವೀಮಂಸಾ. ಸ್ತ್ರೀ: [ವಿಮರ್ಶ, ಮೀಮಾಂಸಾ] ವಿಚಾರ, ಪರ್ಯಾಲೋಚನೆ, ನಿರ್ಣಯಿಸಬೇಕೆಂಬ ಇಚ್ಛೆ

ವೀಮಂಸಿಯ. ವಿ: [ವಿಮರ್ಶಿತ, ಮೀಮಾಂಸಿತ] ವಿಚಾರ ಮಾಡಲ್ಪಟ್ಟ, ಪರ್ಯಾಲೋಚಿಸಲ್ಪಟ್ಟ

ವೀರ. ಪು: [ವೀರ] ಭಗವಾನ್ ಮಹಾವೀರ, ಒಂದು ಛಂದಸ್ಸು, ಸಾಹಿತ್ಯದಲ್ಲಿ ಪ್ರಸಿದ್ಧವಾದ ವೀರರಸ, ವಿ: ಪರಾಕ್ರಮಿ, ಶೂರ, ಆಚಾ), **ಪುಂನ:** ಒಂದು ದೇವ–ವಿಮಾನ, **ನ:** ವೈತಾಢ್ಯಪರ್ವತದ ಉತ್ತರದ ಶ್ರೇಣಿಯಲ್ಲಿರುವ ಒಂದು ವಿದ್ಯಾಧರ ನಗರ, **–ಕಂತ. ಪುಂನ:** [–ಕಾಂತ] ಒಂದು ದೇವ–ವಿಮಾನ. **–ಕಣ್ಹ. ಪು:** [–ಕೃಷ್ಣ] ಶ್ರೇಣಿಕ ಮಹಾರಾಜನ ಒಬ್ಬ ಮಗ. **–ಕಣ್ಹಾ.** ಸ್ತ್ರೀ: [–ಕೃಷ್ಣಾ] ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ. **–ಕೂಡ. ಪುಂನ:** [–ಕೂಟ] ಒಂದು ದೇವ–ವಿಮಾನ. **–ಗತ. ಪುಂನ:** [–ಗತ] ಒಂದು ದೇವ–ವಿಮಾನ. **–ಜಸ. ಪು:** [–ಯಶಸ್] ಭಗವಾನ್ ಮಹಾವೀರನ ಬಳಿ ದೀಕ್ಷೆ ತೆಗೆದುಕೊಂಡ ಒಬ್ಬ ರಾಜ. **–ಜ್ಝಯ. ಪುಂನ:** [–ಧ್ವಜ] ಒಂದು ದೇವ–ವಿಮಾನ. **–ಧವಲ. ಪು:** [–ಧವಲ] ಗುಜರಾತಿನ ಒಬ್ಬ ಪ್ರಸಿದ್ಧ ರಾಜ. **–ನಿಹಾಣ. ನ:** [–ನಿಧಾನ] ಒಂದು ಸ್ಥಳ **–ಪ್ಪಭ. ನ:** [–ಪ್ರಭ] ಒಂದು ದೇವ–ವಿಮಾನ. **–ಭದ್ದ. ಪು:** [–ಭದ್ರ] ಭಗವಾನ್ ಪಾರ್ಶ್ವನಾಥನ ಒಬ್ಬ ಗಣಧರ. **–ಮಈ.** ಸ್ತ್ರೀ: [–ಮತೀ] ಒಬ್ಬ ಕಳ್ಳನ ಸೋದರಿ. **–ಲೇಸ. ಪುಂನ:** [–ಲೇಶ್ಯ] ಒಂದು ದೇವ–ವಿಮಾನ. **–ವಣ್ಣ. ಪುಂನ:** [–ವರ್ಣ] ಒಂದು ದೇವ–ವಿಮಾನ. **–ವರಣ. ನ:** [–ವರಣ] ಇಂಥ ಶತ್ರು ಸೈನಿಕನೊಂದಿ ನಾನು ಯುದ್ಧ ಮಾಡುತ್ತೇನೆಂದು ಕೇಳುವುದು.ನ**–ವರಣೀ.** ಸ್ತ್ರೀ: [–ವರಣೀ] ಶತ್ರು ಯೋಧನೊಂದಿಗೆ ಮೊದಲು ಶಸ್ತ್ರ ಪ್ರಹಾರ ಮಾಡುತ್ತೇನೆಂದು ಕೇಳುವುದು. **–ವಲಯ. ನ:** [–ವಲಯ] ಪರಾಕ್ರಮ ಸೂಚಕವಾದ ಯೋಧನ ಒಂದು ಆಭರಣವಾದ ಕಡಗ. **–ವಿರಾಲೀ.** ಸ್ತ್ರೀ: [–ವಿರಾಲೀ] ಒಂದು ಬಳ್ಳಿ(ಪಣ್ಣ). **–ಸಿಂಗ. ಪುಂನ:** [–ಶೃಂಗ] ಒಂದು ದೇವ–ವಿಮಾನ. **–ಸಿಟ್ಠ. ಪುಂನ:** [–ಸೃಷ್ಟ] ಒಂದು ದೇವ–ವಿಮಾನ. **–ಸೇಣ ಪು:** [–ಸೇನ] ಒಬ್ಬ ಪ್ರಸಿದ್ಧ ವೀರ ಯಾದವನ ಹೆಸರು. **–ಸೇಣಿಯ. ಪುಂನ:** [–ಸೈನಿಕ] ಒಂದು ದೇವ–ವಿಮಾನ. ವೀರಾವತ್ತ. **ಪುಂನ:** [ವೀರಾವರ್ತ] ದೇವ–ವಿಮಾನ–ವಿಶೇಷ.

ವೀರಾಸಣ. ನ: [ವೀರಾಸನ] ಒಂದು ಪ್ರಸಿದ್ಧವಾದ ಆಸನ(ಠಾಣಾಂ). **–ವೀರಾಸಣಿಯ.** ವಿ: [ವೀರಾಸನಿಕ] ವೀರಾಸನದಲ್ಲಿ ಕುಳಿತುಕೊಳ್ಳುವವನು(ಠಾ)

ವೀರಂಗಯ. ಪು: [ವೀರಾಂಗದ] ಭಗವಾನ್ ಮಹಾವೀರನ ಬಳಿ ದೀಕ್ಷೆ ತೆಗೆದುಕೊಂಡ ಒಬ್ಬ ರಾಜ. ಒಬ್ಬ ರಾಜಕುಮಾರ

ವೀರಣ. ಸ್ತ್ರೀನ: [ವೀರಣ] ಲಾಮಂಚ, ಉಶೀರ(ಅಣು)

ವೀರಲ್ಲ. ಪು: [ವೀರಲ್ಲ] ಗಿಡುಗ

ವೀರಿಅ. ಪು: [ವೀರ್ಯ] ಭಗವಾನ್ ಪಾರ್ಶ್ವನಾಥನ ಒಬ್ಬ ಗಣಧರ, **ಪುಂನ:** ಶಕ್ತಿ, ಸಾಮರ್ಥ್ಯ, ಅಂತರಂಗ ಶಕ್ತಿ, ಆತ್ಮಬಲ, ಪರಾಕ್ರಮ(ಕಮ್ಮ), ಒಂದು ದೇವ–ವಿಮಾನ, ಶರೀರದಲ್ಲಿ ಇರುವ ಒಂದು ಧಾತು, ಶುಕ್ರ, ತೇಜಸ್ಸು, ದೀಪ್ತಿ

ವೀರುಣೀ. ಸ್ತ್ರೀ: [ವೀರುಣೀ] ಗಂಟು, ಗೆಣ್ಣುಗಳಿರುವ ಒಂದು ವನಸ್ಪತಿ

ವೀರುತ್ತರವಡಿಂಸಗ. ಪುಂನ: [ವೀರೋತ್ತರಾವತಂಸಕ] ಒಂದು ದೇವ–ವಿಮಾನ.

ವೀರುಹಾ. ಸ್ತ್ರೀ: [ವೀರುಧಾ] ಹರಡಿಕೊಂಡು ಬೆಳೆಯುವ ಒಂದು ಬಳ್ಳಿ

ವೀಲಣ. ವಿ: [ದೇ] ಸ್ನಿಗ್ಧವಾದ, ಜಿಡ್ಡಾದ, ನಯವಾದ, ನುಣುಪಾದ(ದೇ)
ವೀಲಯ. 'ವೀಲಯ' ಶಬ್ದವನ್ನು ನೋಡುವುದು
ವೀಲೀ. ಸ್ತ್ರೀ: [ದೇ] ಅಲೆ, ತರಂಗ, ಪಂಕ್ತಿ, ಸಾಲು
ವೀವಾಹ. 'ವಿವಾಹ=ವಿವಾಹ' ಶಬ್ದವನ್ನು ನೋಡುವುದು
ವೀವಾಹಣ. ನ: [ವಿವಾಹನ] ವಿವಾಹ ಕ್ರಿಯೆ(ಉವ)
ವೀವಾಹಿಗ. ವಿ: [ವೈವಾಹಿಕ]ವಿವಾಹಕ್ಕೆ ಸಂಬಂಧಿಸಿದ
ವೀವಾಹಿಯ. ವಿ: [ವಿವಾಹಿತ] ಮದುವೆಯಾದವನು
ವೀವೀ. ಸ್ತ್ರೀ: [ದೇ] ಅಲೆ, ವೀಚಿ, ತರಂಗ
ವೀಸ. 'ವಿಸ್ಸ=ವಿಸ್ರ' ಶಬ್ದವನ್ನು ನೋಡುವುದು
ವೀಸ. 'ವಿಸ್ಸ=ವಿಶ್ವ' ಶಬ್ದವನ್ನು ನೋಡುವುದು(ಸೂಅ). **–ಉರೀ.** ಸ್ತ್ರೀ: [–ಪುರೀ] ಒಂದು ನಗರ. **–ಸಅ.** ವಿ: [–ಸೃಜ್] ಜಗತ್ತನ್ನು ಸೃಷ್ಟಿಸಿದವನು. **–ಸೇಣ.** ಪು: [–ಸೇನ] ಒಬ್ಬ ಚಕ್ರವರ್ತಿ ರಾಜ, ಪು: ಅಹೋರಾತ್ರದ ೧೪ನೆಯ ಮುಹೂರ್ತ.
ವೀಸ}. ಸ್ತ್ರೀ: [ವಿಂಶತಿ] ಇಪ್ಪತ್ತು, ಯಾರ ಸಂಖ್ಯೆ
ವೀಸಇ}. ಇಪ್ಪತ್ತ್ತೋ ಅವರು(ಕುಮಾ). **–ಮ.** ವಿ: [–ಮ] ಇಪ್ಪತ್ತನೆಯ, ನ: ನಿರಂತರವಾಗಿ ಒಂಬತ್ತು ದಿನಗಳ ಉಪವಾಸ(ಣಾಯಾ). **–ಹಾ.** ಅ: [–ಧಾ] ಇಪ್ಪತ್ತು ಬಗೆಯಾಗಿ, ಇಪತ್ತು ವಿಧವಾಗಿ
ವೀಸಂತ. ವಿ: [ವಿಶ್ರಾಂತ] ವಿಶ್ರಾಂತಿ ಪಡೆದವ(ಪಾಅ)
ವೀಸಂದಣ. ನ: [ವಿಸ್ಯಂದನ] ಮೊಸರಿನ ಗರಣಿ ಮತ್ತು ಹಿಟ್ಟಿನಿಂದ ತಯಾರಿಸಲಾದ ಒಂದು ಖಾದ್ಯ
ವೀಸಂಭ. 'ವಿಸ್ಸಂಭ=ವಿ+ಶ್ರಂಭ್' ಶಬ್ದವನ್ನು ನೋಡುವುದು
ವೀಸಂಭ. 'ವಿಸ್ಸಂಭ=ವಿಶ್ರಂಭ' ಶಬ್ದವನ್ನು ನೋಡುವುದು
ವೀಸಜ್ಜಿಅ. 'ವಿಸಜ್ಜಿಅ' ಶಬ್ದವನ್ನು ನೋಡುವುದು
ವೀಸತ್ಥ. ವಿ: [ವಿಶ್ವಸ್ತ] ವಿಶ್ವಾಸದಿಂದ ಕೂಡಿದ
ವೀಸದ್ಧ. ವಿ: [ವಿಶ್ರಬ್ಧ] ವಿಶ್ವಾಸದಿಂದ ಕೂಡಿದ(ಗಾ)
ವೀಸಮ. 'ವಿಸ್ಸಮ=ವಿ+ಶ್ರಮ್' ಶಬ್ದವನ್ನು ನೋಡುವುದು
ವೀಸಮ. 'ವಿಸ್ಸಮ=ವಿಶ್ರಮ' ಶಬ್ದವನ್ನು ನೋಡುವುದು
ವೀಸಮ. 'ವೀಸ–ಮ' ಶಬ್ದವನ್ನು ನೋಡುವುದು
ವೀಸಮಿರ. ವಿ: [ವಿಶ್ರಮಿತೃ] ವಿಶ್ರಮಿಸುವವನು
ವೀಸರ. 'ವಿಸ್ಸರ=ವಿ+ಸ್ಮೃ' ಶಬ್ದವನ್ನು ನೋಡುವುದು
ವೀಸರ. 'ವಿಸ್ಸರ=ವಿಸ್ವರ' ಶಬ್ದವನ್ನು ನೋಡುವುದು
ವೀಸರಣಾಲು. ವಿ: [ವಿಸ್ಮರ್ತೃ] ಮರೆತುಬಿಡುವವನು
ವೀಸರಿಅ. 'ವಿಸ್ಸರಿಯ' ಶಬ್ದವನ್ನು ನೋಡುವುದು
ವೀಸವ.(ಅಪ). ಸಕ: [ವಿ+ಶ್ರಮಯ್] ವಿಶ್ರಾಂತಗೊಳಿಸು. 'ವೀಸವಇ'
ವೀಸಸ. 'ವಿಸ್ಸಸ' ಶಬ್ದವನ್ನು ನೋಡುವುದು. 'ವೀಸಸಇ'. ವ, ಕೃ: 'ವೀಸಸಂತ'
ವೀಸಸಾ. ಅ: [ವಿಸ್ರಸಾ] ಸ್ವಭಾವ, ಪ್ರಕೃತಿ(ಭಗ)
ವೀಸಸಿಯ. ವಿ: [ವೈಸ್ರಸಿಕ] ಸ್ವಾಭಾವಿಕ(ಆವಮ)
ವೀಸಾ. 'ವೀಸಇ' ಶಬ್ದವನ್ನು ನೋಡುವುದು
ವೀಸಾ. ಸ್ತ್ರೀ: [ವಿಶ್ವಾ] ಪೃಥ್ವಿ, ಭೂಮಿ
ವೀಸಾಣ. ಪು: [ವಿಷ್ವಾಣ] ಆಹಾರ, ಭೋಜನ, ಊಟ ಮಾಡುವುದು
ವೀಸಾಮ. ಪು: [ವಿಶ್ರಾಮ] ವಿರಾಮ, ವಿಶ್ರಮಿಸುವುದು, ಶ್ರಮ ಪರಿಹಾರಕ್ಕೆ ಬಿಡುವು, ಪ್ರಾರಂಭಿಸಿದ್ದರ ಕೊನೆ.
ವೀಸಾಮಣ. 'ವಿಸ್ಸಾಮಣ' ಶಬ್ದವನ್ನು ನೋಡುವುದು
ವೀಸಾಯ. 'ವಿಸಾಯ=ವಿ+ಸ್ವಾದಯ್' ಶಬ್ದವನ್ನು ನೋಡುವುದು(ಪಣ್ಣ)
ವೀಸಾರ. 'ವಿಸ್ಸಾರ=ವಿ+ಸ್ಮೃ' ಶಬ್ದವನ್ನು ನೋಡುವುದು. 'ವೀಸಾರೇಇ'
ವೀಸಾರಿಅ. ವಿ: [ವಿಸ್ಮಾರಿತ] ಮರೆಸಲ್ಪಟ್ಟ, ಮರೆಯುವಂತೆ ಮಾಡಲ್ಪಟ್ಟ
ವೀಸಾಲ. ಸಕ: [ಮಿಶ್ರಯ್] ಮಿಶ್ರಮಾಡು, ಸೇರಿಸು
ವೀಸಾಲಿಅ. ವಿ: [ಮಿಶ್ರಿತ] ಮಿಶ್ರಮಾಡಲ್ಪಟ್ಟ, ಸೇರಿಸಲ್ಪಟ್ಟ
ವೀಸಾಂವ(ಅಪ). 'ವೀಸಾಮ' ಶಬ್ದವನ್ನು ನೋಡುವುದು
ವೀಸಾಸ. 'ವಿಸ್ಸಾಸ' ಶಬ್ದವನ್ನು ನೋಡುವುದು
ವೀಸಿಯಾ. ಸ್ತ್ರೀ: [ವಿಂಶಿಕಾ] ಇಪ್ಪತ್ತರ ಸಂಖ್ಯೆವುಳ್ಳ(ವವ)
ವೀಸು. ನ: [ದೇ] ಬೇರೆ, ಭಿನ್ನ
ವೀಸುಂ. ಅ: [ವಿಷ್ವಕ್] ಸುತ್ತಲೂ, ಎಲ್ಲ ಕಡೆಯಿಂದಲೂ, ಸಮಸ್ತತೆ(ಕುಮಾ)
ವೀಸುಂಭ. 'ವೀಸಂಭ=ವಿ+ಶ್ರಂಭ್' ಶಬ್ದವನ್ನು ನೋಡುವುದು
ವೀಸುಂಭ. ಅಕ: [ದೇ] ಬೇರೆಯಾಗು, ಬೇರ್ಪಡು(ತಾ)
ವೀಸುಂಭಣ. ನ: [ವಿಶ್ರಂಭಣ] ವಿಶ್ವಾಸ ಗಳಿಸುವುದು, ನಂಬುವುದು(ತಾ)
ವೀಸುಯ. 'ವಿಸ್ಸುಅ' ಶಬ್ದವನ್ನು ನೋಡುವುದು

ವೀಸೇಢಿ}. 'ವಿಸೇಢಿ' ಶಬ್ದವನ್ನು ನೋಡುವುದು(ಭಾಸ)
ವೀಸೇಣಿ}.
ವೀಹಿ. ಪುಂನ: [ವ್ರೀಹಿ] ಕೆಂಪು ಬತ್ತ, ಧಾನ್ಯ
ವೀಹಿ}. ಸ್ತ್ರೀ: [ವೀಥಿ, –ಕಾ, –ಥೀ] ಮಾರ್ಗ, ಹಾದಿ,
ವೀಹಿಯಾ}. ದಾರಿ(ಸೂಅ), ಸಾಲು, ಪಂಕ್ತಿ, ಕ್ಷೇತ್ರ–
ವೀಹೀ}. ಭಾಗ, ಅಂಗಡಿ ಬೀದಿಮಾರುಕಟ್ಟೆ(ಉಪ)
ವುಅ. ವಿ: [ದೇ] ನೇಯ್ದ, ನೇಯಿಸಲ್ಪಟ್ಟ(ಪವ)
ವುಅ}. ವಿ: [ವೃತ] ಪ್ರಾರ್ಥಿಸಲ್ಪಟ್ಟ, ಪ್ರಾರ್ಥನೆಯಿಂದ
ವುಇಯ}. ನೇಮಿಸಲ್ಪಟ್ಟ, ಸುತ್ತುವರಿಯಲ್ಪಟ್ಟ(ಸುಪಾ)
ವುಇಯ. ವಿ: [ಉಕ್ತ] ಹೇಳಲ್ಪಟ್ಟ, ಕಥಿತ(ಉತ್ತ)
ವುಂಜ.(?). ಸಕ: [ಉದ್+ನಮಯ್] ಮೇಲಕ್ಕೆ ಎತ್ತು, ಎತ್ತರಿಸು,
ವುಂತಾಕೀ. ಸ್ತ್ರೀ: [ವೃಂತಾಕೀ] ಬದನೆ ಗಿಡ
ವುಂದ. 'ವಂದ=ವೃಂದ' ಶಬ್ದವನ್ನು ನೋಡುವುದು(ಗಾ)
ವುಂದಾರಯ. 'ವಂದಾರಯ' ಶಬ್ದವನ್ನು ನೋಡುವುದು
ವುಂದಾವಣ. 'ವಿಂದಾವಣ' ಶಬ್ದವನ್ನುನೋಡುವುದು
ವುಂದ್ರ. 'ವಂದ್ರ' ಶಬ್ದವನ್ನು ನೋಡುವುದು
ವುಕ್ಕ. 'ವುಕ್ಕ=ದೇ' ಶಬ್ದವನ್ನು ನೋಡುವುದು
ವುಕ್ಕಂತ. ವಿ: [ವ್ಯುತ್ಕ್ರಾಂತ] ಕಳೆದುಹೋದ, ಆಗಿಹೋದ, ನಾಶವಾದ, ಹೊರಗೆ ಹೋದ. ವ.ಕೃ: 'ವೊಕ್ಕಂತ' ಶಬ್ದವನ್ನು ನೋಡುವುದು
ವುಕ್ಕಂತಿ. ಸ್ತ್ರೀ: [ವ್ಯುತ್ಕ್ರಾಂತಿ] ಉತ್ಪತ್ತಿ,
ವುಕ್ಕಮ. ಪು: [ವ್ಯುತ್ಕ್ರಮ] ವೃದ್ಧಿ, ಅಭಿವೃದ್ಧಿ(ಸೂಅ), ಉತ್ಪತ್ತಿ
ವುಕ್ಕಸ. ಸಕ:[ವುತ್+ಕೃಷ್]ಹಿಂದಕ್ಕೆ ಎಳೆ, ಹಿಂತಿರುಗಿಸು.
ವುಕ್ಕಾರ. ಸಕ: [ದೇ. ವೂಂಕಾರಯ್] ಗರ್ಜಿಸು,
ವುಕ್ಕಾರಿಯ. ನ: [ದೇ. ವುಂಕಾರಿತ] ಗರ್ಜನೆ
ವುಗ್ಗಹ. ಪು: [ವ್ಯುದ್‌ಗ್ರಹ] ಕಲಹ, ಜಗಳ, ಯುದ್ಧ(ಠಾ), ದರೋಡೆ, ಹಾದಿ ತಪ್ಪಿಸುವುದು, ಸುಳ್ಳು ಆಗ್ರಹ,ಸುಳ್ಳು ಹಟ.
ವುಗ್ಗಹಅ. ವಿ: [ವ್ಯುದ್‌ಗ್ರಾಹಕ] ಕಲಹ–ಕಾರಕ, ಜಗಳ ಉಂಟುಮಾಡುವ
ವುಗ್ಗಹಿಅ. ವಿ: [ವುದ್ಗ್ರಹಿಕ] ಕಲಹಕ್ಕೆ ಸಂಬಂಧಿಸಿದ
ವುಗ್ಗಾಹ. ಸಕ: [ವ್ಯುದ್+ಗ್ರಾಹಯ್] ಹಾದಿ ತಪ್ಪಿಸು. ಭ್ರಾಂತಿಗೊಳಿಸು
ವುಗ್ಗಾಹನಾ. ಸ್ತ್ರೀ: [ವ್ಯುದ್‌ಗ್ರಾಹಣಾ] ಭ್ರಾಂತಿಗೊಳಿಸುವಿಕೆ, ಹಾದಿ ತಪ್ಪಿಸುವಿಕೆ
ವುಗ್ಗಾಹಿಅ. ವಿ: [ವ್ಯುದ್ ಗ್ರಾಹಿತ] ಭ್ರಾಂತಿಗೊಳಿಸಲ್ಪಟ್ಟ, ಹಾದಿತಪ್ಪಿಸಲ್ಪಟ್ಟ
ವುಚ್ಚ. 'ವಯ=ವಚ್' ಶಬ್ದವನ್ನು ನೋಡುವುದು
ವುಚ್ಚಮಾಣ. ವಿ: [ಉಚ್ಯಮಾನ] ಹೇಳಲ್ಪಟ್ಟದ್ದು(ಸೂಅ)
ವುಚ್ಚಾ. ಅ: [ಉಕ್ತ್ವಾ] ಹೇಳಿ
ವುಚ್ಛ. 'ವಚ್ಛ=ವೃಕ್ಷ' ಶಬ್ದವನ್ನು ನೋಡುವುದು
ವುಚ್ಛ. 'ವೊಚ್ಛ–' ಶಬ್ದವನ್ನು ನೋಡುವುದು
ವುಚ್ಛ–. –'ವೊಚ್ಛ–' ಶಬ್ದವನ್ನು ನೋಡುವುದು
ವುಚ್ಛ–. 'ವೊಚ್ಛಿಂದ' ಶಬ್ದವನ್ನು ನೋಡುವುದು
ವುಚ್ಛಿಣ್ಣ. 'ವುಚ್ಛಿನ್ನ' ಶಬ್ದವನ್ನು ನೋಡುವುದು
ವುಚ್ಛಿತ್ತಿ. 'ವೊಚ್ಛಿತ್ತಿ' ಶಬ್ದವನ್ನು ನೋಡುವುದು
ವುಚ್ಛಿನ್ನ. ವಿ: [ವುಚ್ಛಿನ್ನ, ವ್ಯವಚ್ಛಿನ್ನ] ಬೇರ್ಪಡಿಸಲ್ಪಟ್ಟ, ದೂರ ಸರಿಸಲ್ಪಟ್ಟ, ನಾಶವಾದ. ನಿರಂತರ ೧೪ ದಿನಗಳ ಕಾಲ ಉಪವಾಸ.
ವುಚ್ಛೇಅ. 'ವೊಚ್ಛೇಅ' ಶಬ್ದವನ್ನು ನೋಡುವುದು
ವುಚ್ಛೇಯಣ. 'ವೊಚ್ಛೇಯಣ' ಶಬ್ದವನ್ನು ನೋಡುವುದು
ವುಜ್ಜ. ಅಕ: [ತ್ರಸ್] ಹೆದರು. 'ವೊಜ್ಜ' ಶಬ್ದವನ್ನು ನೋಡುವುದು
ವುಜ್ಜಣ. ನ: [ದೇ] ಬಟ್ಟೆ, ಮುಚ್ಚಳ, ಮುಚ್ಚುವಿಕೆ
ವುಜ್ಝಂತ. ವಿ: [ಉಹ್ಯಮಾನ] ನೀರಿನ ವೇಗದಿಂದ ಎಳೆಯಲ್ಪಡುವ, ಕೊಚ್ಚಿಹೋಗುವ(ಪಉಮ). 'ವಹ=ವಹ್'ಶಬ್ದವನ್ನು ನೋಡುವುದು
ವುಜ್ಝಣ. 'ವುಜ್ಜಣ' ಶಬ್ದವನ್ನು ನೋಡುವುದು
ವುಜ(ಅಪ). 'ವಚ್ಚ=ವ್ರಜ್' ಶಬ್ದವನ್ನು ನೋಡುವುದು
ವುಟ್ಠ. ಅಕ: [ವ್ಯುತ್+ಸ್ಥಾ] ಏಳು, ಎದ್ದುನಿಲ್ಲು
ವುಟ್ಠ. ವಿ: [ವೃಷ್ಟ] ಮಳೆಸುರಿಸಲ್ಪಟ್ಟ, ನ: ಮಳೆ
ವುಟ್ಠಿ. 'ವಿಟ್ಠಿ= ವೃಷ್ಟಿ' ಶಬ್ದವನ್ನು ನೋಡುವುದು. –ಕಾಯ. ಪು: [–ಕಾಯ] ಸುರಿಯುತ್ತಿರುವ ಜಲರಾಶಿ(ಭಗ)
ವುಟ್ಠಿಯ. ವಿ: [ವ್ಯುತ್ಥಿತ] ಎದ್ದು ನಿಂತಿರುವ(ಭವಿ)
–ವುಡ. 'ಪುಡ=ಪುಟ' ಶಬ್ದವನ್ನು ನೋಡುವುದು
ವುಡ್ಢ. ಅಕ: [ವೃಧ್] ವರ್ಧಿಸು, ಹೆಚ್ಚಾಗು, ಅಧಿಕವಾಗು. 'ವುಡ್ಢಂತಿ'(ಭಗ)
ವುಡ್ಢ. ಸಕ: [ವರ್ಧಯ್] ಹೆಚ್ಚಿಸು. ಅಧಿಕಗೊಳಿಸು. ವ. ಕೃ: 'ವುಡ್ಢಂತ'
ವುಡ್ಢ. ವಿ: [ವೃದ್ಧ] ಮುದಿವಯಸ್ಸಿನವನು, ಮುದುಕ (ಔಪ), ದೊಡ್ಡವ, ಹಿರಿಯ, ಮಹಾನ್,

ಪೂಜ್ಯ ವೃದ್ಧಿಹೊಂದಿರುವ, ಅನುಭವಿ. ನಿಪುಣ, ಪಂಡಿತ, ಜ್ಞಾನಿ, ಶಾಂತ, ನಿರ್ವಿಕಾರ(ತಾ), ಪು: ತಪಸ್ವಿ, ಸಂನ್ಯಾಸಿ, ಒಬ್ಬ ಜೈನ ಮುನಿಯ ಹೆಸರು. **–ತ್ತ, –ತ್ತಣ. ನ:** [–ತ್ವ] ಮುಪ್ಪು, ಮುದಿತನ, **–ವಾಇ. ಪು:** [–ವಾದಿನ್] ಸುಪ್ರಸಿದ್ಧ ಕವಿ ಸಿದ್ಧಸೇನ ದಿವಾಕರರ ಗುರುವಾಗಿದ್ದ ಒಬ್ಬ ಸಮರ್ಥ ಜೈನ ಆಚಾರ್ಯ. **–ವಾಯ. ಪು:** [–ವಾದ] ಜನರಾಡುವ ಮಾತು, ಗಾದೆಮಾತು, ಲೋಕೋಕ್ತಿ. **–ಸಾವಗ. ಪು:** [–ಶ್ರಾವಕ] ಬ್ರಾಹ್ಮಣ. **ವುಡ್ಢಾಣುಗ.** ವಿ: [ವೃದ್ಧಾನುಗ] ಹಿರಿಯನ ಅನುಯಾಯಿ

ವುಢ್ಢ. ವಿ: [ದೇ] ನಾಶವಾದ

ವುಡ್ಢಿ. ಸ್ತ್ರೀ: [ವೃದ್ಧಿ] ಅಭಿವೃದ್ಧಿ, ಹೆಚ್ಚಳ, ಆಧಿಕ್ಯ(ಆಚಾ), ಅಭ್ಯುದಯ, ಉನ್ನತಿ, ಸಮೃದ್ಧಿ, ವ್ಯಾಕರಣದಲ್ಲಿ ಪ್ರಸಿದ್ಧವಾದ ಆ,ಐ, ಔಕಾರವೇ ಮೊದಲಾದ ಸಂಜ್ಞೆ(ವೃದ್ಧಿಸಂಧಿ), ಸಮೂಹ, ಗುಂಪು, ಮೂಲಧನಕ್ಕೆ ಬಡ್ಡಿ, ಚಂದ್ರನ ಮತ್ತೊಂದು ಕಲೆ, ಒಂದು ಔಷಧಿ, ಗಂಧದ್ರವ್ಯ. **–ಕರ.** ವಿ: [–ಕರ] ಅಭಿವೃದ್ಧಿ ಮಾಡುವವನು. **ಧಮ್ಮಯ.** ವಿ: [–ಧರ್ಮಕ] ವರ್ಧಿಸುವ, ವರ್ಧನಶೀಲ, **–ಮ.** ವಿ: [–ಮತ್] ವೃದ್ಧಿಉಳ್ಳ, ಆಧಿಕ್ಯವುಳ್ಳ

ವುಣಣ ನ: [ದೇ] ನೇಯುವುದು

ವುಣೆಯ. ವಿ: [ದೇ] ನೆಯ್ದ

ವುಣ್ಣ. ವಿ: [ದೇ] ಭೀತ, ಹೆದರಿದ(ವಿಪಾ), ಉದ್ವಿಗ್ನ

ವುತ್ತ. ವಿ: [ಉಕ್ತ] ಹೇಳಿದ, ಹೇಳಲ್ಪಟ್ಟ(ಉವಾ)

ವುತ್ತ. ವಿ: [ಉಪ್ತ] ಬಿತ್ತಲ್ಪಟ್ಟ(ಉವ)

ವುತ್ತ. ನ: [ವೃತ್ತ] ಛಂದಸ್ಸು, ಕವಿತೆ, ಪದ್ಯ. **'ವಟ್ಟ=ವೃತ್ತ'** ಶಬ್ದವನ್ನು ನೋಡುವುದು

–ವುತ್ತ. 'ಪುತ್ತ' ಶಬ್ದವನ್ನು ನೋಡುವುದು

ವುತ್ತಂತ. ಪು: [ವೃತ್ತಾಂತ] ಸಮಾಚಾರ, ವಾರ್ತೆ, ಘಟನೆ, ಸಂಗತಿ, ಪ್ರಸಂಗ(ಸ್ವಪ್ನ)

ವುತ್ತಿ. 'ವತ್ತಿ=ವೃತ್ತಿ' ಶಬ್ದವನ್ನು ನೋಡುವುದು

ವುತ್ಥ. ವಿ: [ಉಷಿತ] ವಾಸಮಾಡಲ್ಪಟ್ಟ, ಇರುವ, ವಾಸಿಸಿದ(ಪಾಅ)

ವುದ. 'ವುಅ=ವೃತ' ಶಬ್ದವನ್ನು ನೋಡುವುದು

ವುದಾಸ. ಪು: [ವ್ಯುದಾಸ] ಹೊರದೂಡುವುದು, ಅಟ್ಟುವುದು

ವುದಿ. 'ವಇ=ವೃತಿ' ಶಬ್ದವನ್ನು ನೋಡುವುದು

ವುದ್ಧ. 'ವುಡ್ಢ=ವೃದ್ಧ' ಶಬ್ದವನ್ನು ನೋಡುವುದು

ವುದ್ಧಿ. 'ವುಡ್ಢಿ' ಶಬ್ದವನ್ನು ನೋಡುವುದು

ವುನ್ನ. 'ವುಣಣ' ಶಬ್ದವನ್ನು ನೋಡುವುದು

ವುಪ್ಪಂತ. ವಿ: [ಉಪ್ಯಮಾನ] ಬಿತ್ತಲ್ಪಡುವ

ವುಪ್ಪಾಯ. ವಿ: [ವ್ಯುತ್+ಪಾದಯ್] ಉತ್ಪತ್ತಿ ಮಾಡುವುದು,

ವುಪ್ಫ. ನ: [ದೇ] ತಲೆಯ ಮೇಲಿರುವ, ಮುಡಿಯಲ್ಲಿ ಧರಿಸಿರುವ(ದೇ)

ವುಬ್ಭ–. 'ವಹ=ವಹ್' ಶಬ್ದವನ್ನು ನೋಡುವುದು

ವುಬ್ಭಮಾಣ. 'ವುಜ್ಝಮಾಣ' ಶಬ್ದವನ್ನು ನೋಡುವುದು

–ವುರ. 'ಪುರ' ಶಬ್ದವನ್ನು ನೋಡುವುದು

–ವುರಿಸ. 'ಪುರಿಸ=ಪುರುಷ' ಶಬ್ದವನ್ನು ನೋಡುವುದು

ವುಲ್ಲಾಹ. ಪು: [ದೇ] ಕುದುರೆಯಲ್ಲಿ ಉತ್ತಮ ಜಾತಿ

ವುಸಹ. 'ವಸಭ' ಶಬ್ದವನ್ನು ನೋಡುವುದು(ಚಾರು)

ವುಸಿ. ಸ್ತ್ರೀ: [ವೃಷಿ] ಮುನಿಯ ಆಸನ. **–ರಾಇ, –ರಾಇಅ.** ವಿ; [–ರಾಜಿನ್] ಸಂಯಮಿ, ಜಿತೇಂದ್ರಿಯ, ತ್ಯಾಗಿ, ಸಂನ್ಯಾಸಿ. **'ವುಸಿ, ವುಸೀ'** ಶಬ್ದಗಳನ್ನು ನೋಡುವುದು

ವುಸಿ. ವಿ: [ವೃಷಿನ್] ಸಾಧು, ಸಂನ್ಯಾಸಿ, ಸಂಯಮಿ, ಮುನಿ(ನಿಚೂ)

ವುಸಿಮ. ವಿ: [ವಶ್ಯ] ವಶಪಡಿಸಿಕೊಳ್ಳಬಹುದಾದ, ಅಧೀನ ಪಡಿಸಿಕೊಳ್ಳಬಹುದಾದ

ವುಸೀ. ಸ್ತ್ರೀ: [ವೃಷೀ] ಮುನಿಯ ಆಸನ, **–ಮ.** ವಿ: [–ಮತ್] ಸಂಯಮಿ, ಸಾಧು, ಮುನಿ(ಉತ್ತ) **'ವುಸಿ'** ಶಬ್ದವನ್ನು ನೋಡುವುದು

ವುಸ್ಸಗ್ಗ. 'ವಿಓಸಗ್ಗ' ಶಬ್ದವನ್ನು ನೋಡುವುದು

ವೂಢ. ವಿ: [ವ್ಯೂಢ] ಧರಿಸಲ್ಪಟ್ಟ, ಹೊರಿಸಲಾದ, ಕೊಚ್ಚಿಹೋದ, ವೇಗದಿಂದ ಎಳೆಯಲ್ಪಟ್ಟ, ಪುಷ್ಟಿಹೊಂದಿದ, ಹೊರಟ

ವೂಣಕ. ಪುಂನ: [ದೇ] ಬಾಲಕ, ಮಗು

ವೂಯ. ವಿ: [ದೇ] ನೆಯ್ದ, ನೇಯಲ್ಪಟ್ಟ. **'ವುಅ=(ದೇ)'** ಶಬ್ದವನ್ನು ನೋಡುವುದು

ವೂಹ. ಪುಂನ: [ವ್ಯೂಹ] ಯುದ್ಧಕ್ಕಾಗಿ ಮಾಡುವ ಸೇನೆಯ ರಚನಾವಿಶೇಷ, ಸಮೂಹ, ಗುಂಪು

ವೇ. 'ವಇ=ವೈ' ಶಬ್ದವನ್ನು ನೋಡುವುದು

ವೇ. ಅಕ: [ವಿ+ಇ] ನಾಶವಾಗು, **'ವೇಇ'**

ವೇ.} **ಸಕ:** [**ವೇ**] ಮುಚ್ಚು, ಮರೆಮಾಡು
ವೇಅ}.
ವೇಅ. ಸಕ: [**ವೇದಯ್**] ಅನುಭವಿಸು, ತಿಳಿದುಕೊಳ್ಳು, **'ವೇಅಇ'** ವ. ಕೃ: **'ವೇಅಂತ'**
ವೇಅ. ಅಕ: [**ವಿ+ಏಜ್**] ವಿಶೇಷವಾಗಿ ಕಂಪಿಸು
ವೇಅ. ಅಕ: [**ವೇಪ್**] ನಡುಗು, ಕಂಪಿಸು
ವೇಅ. ಪು: [**ವೇದ**] ಋಗ್ವೇದವೇ ಮೊದಲಾದ ನಾಲ್ಕು ವೇದಗಳು, ಮೋಹಗೊಳಿಸಲು ಸಮರ್ಥವಾದ ಕರ್ಮದ ಒಂದು ಪ್ರಭೇದ; ಇದು ಹುಟ್ಟುವುದರಿಂದ ಮೈಥುನದ ಇಚ್ಛೆ ಉಂಟಾಗುತ್ತದೆ. ಆಚಾರಾಂಗ ಜೈನ ಗ್ರಂಥ. ತಿಳಿದವನು. **–ವ. ವಿ:** [**–ವತ್**] ವೇದಗಳನ್ನು ಬಲ್ಲವನು(ಆಚಾ). **–ವಿ, –ವಿಉ. ವಿ:** [**–ವಿದ್**] ವೇದಗಳನ್ನು ಬಲ್ಲವನು. **–ಚತ್ತ. ನ:** [**–ವೃಕ್ತ**] ಚೈತ್ಯ–ವಿಶೇಷ. **ವೇಆವತ್ತ. ನ:** [**ವೇದಾವರ್ತ**]**'–ವತ್ತ'** ಶಬ್ದವನ್ನು ನೋಡುವುದು
ವೇಅ. ನ: [**ವೇದ್ಯ**] ಸುಖ, ದುಃಖಗಳಿಗೆ ಕಾರಣಭೂತವಾದ ಕರ್ಮ
ವೇಅ. ಪು: [**ವೇಗ**] ರಭಸ, ವೇಗ, ಬೇಗನೆ, ಶೀಘ್ರ–ಗತಿ, ಪ್ರವಾಹ, ರೇತಸ್ಸು, ಮೂತ್ರಾದಿಗಳನ್ನು ಹೊರಹಾಕುವ ಯಂತ್ರ. ಸಂಸ್ಕಾರ–ವಿಶೇಷ. **'ವೇಗ'** ಶಬ್ದವನ್ನು ನೋಡುವುದು
ವೇಅಂತ. ಪು: [**ವೇದಾಂತ**] ಉಪನಿಷತ್ತುಗಳ ಬಗೆಗೆ ವಿಚಾರ ಮಾಡುವ ದರ್ಶನ
ವೇಅಗ. ವಿ: [**ವೇದಕ**] ಅನುಭವಿಸುವವನು, **ನ:** ಸಮ್ಯಕ್ತ್ವದ ಒಂದು ಪ್ರಭೇದ, ಸಮ್ಯಕ್ತ್ವ ವಿಶೇಷವುಳ್ಳ ಜೀವ. **–ಭಹಿಯ. ವಿ:** [**ಭಿನ್ನವೇದಕ**] ಯಾರ ಪುರುಷ ಚಿಹ್ನವು ಕತ್ತರಿಸಲ್ಪಟ್ಟಿದೆಯೋ ಅವನು (ಪಾಅ)
ವೇಅಚ್ಛ. ನ: [**ವೈಕಕ್ಷ**] ಎದೆಯ ಮೇಲೆ ಜನಿವಾರದ ಹಾಗೆ ಧರಿಸಲಾಗುವ ವಸ್ತ್ರ, ಮಾಲೆ ಇತ್ಯಾದಿ ಮರ್ಕಟ–ಬಂಧ, ಹೆಗಲಿನ ಕೆಳಗೆ ನೇತಾಡುವುದು
ವೇಅಡ. ಸಕ: [**ಖಚ್**] ಕೂಡಿಸು, ಸೇರಿಸು
ವೇಅಡಿಅ. ವಿ: [**ಖಚಿತ**] ಸೇರಿಸಲ್ಪಟ್ಟ, ಕೂಡಿಸಲ್ಪಟ್ಟ (ವಜ್ರ ಖಚಿತ)
ವೇಅಡಿಅ. ವಿ: [**ದೇ**] ಮತ್ತೆ ಬಿತ್ತಲ್ಪಟ್ಟ(ದೇ)
ವೇಅಡಿಅ. ಪು: [**ದೇ. ವೈಕಟಿಕ**] ಮುತ್ತಿನಲ್ಲಿ ರಂಧ್ರ ಮಾಡುವ ಶಿಲ್ಪಿ, ರತ್ನದ ವ್ಯಾಪಾರಿ

ವೇಅಡ್ಡಿ. 'ವಿಅಡ್ಡಿ' ಶಬ್ದವನ್ನು ನೋಡುವುದು(ಔಪ)
ವೇಅಡ್ಢ. ನ: [**ದೇ**] ಗೇರುಮರ, ಗೋಡಂಬಿ ಮರ
ವೇಅಡ್ಢ. ಪು: [**ವೈತಾಢ್ಯ**] ಒಂದು ಪರ್ವತ(ಭವಿ)
ವೇಅಡ್ಢ. ನ: [**ವೈದಗ್ಧ್ಯ**] ವಿದಗ್ಧತೆ, ವಿಚಕ್ಷಣತೆ, ಪಾಂಡಿತ್ಯ, ನೈಪುಣ್ಯ(ಸುಪಾ)
ವೇಅಣ. ನ: [**ವೇತನ**] ಕೂಲಿ, ಸಂಬಳ(ಪಾಅ)
ವೇಅಣ. ನ: [**ವೇಪನ**] ಕಂಪನ, ನಡುಕ(ಚೇಇಯ). **ವಿ:** ನಡುಗುವವನು, ಕಂಪಿಸುವವನು
ವೇಅಣ. ನ: [**ವೇದನ**] ತಿಳಿಯುವುದು, ಅರಿತುಕೊಳ್ಳು, ಇಂದ್ರಿಯಗಳಿಂದ ಉಂಟಾಗುವ ಅನುಭವ.
ವೇಅಣಾ. 'ವಿಅಣಾ' ಶಬ್ದವನ್ನು ನೋಡುವುದು
ವೇಅಣಿಜ್ಜ}. **ವಿ:** [**ವೇದನೀಯ**]ತಿಳಿಯಲ್ಪಡುವ, ತಿಳಿಯ
ವೇಅಣಿಯ}. ಬೇಕಾದ, ಅನುಭವಿಸಲು ಅರ್ಹವಾದ, **ನ:** ಸುಖ ದುಃಖಾದಿಗಳಿಗೆ ಕಾರಣವಾದ ಕರ್ಮ –ವಿಶೇಷ
ವೇಅಯ. 'ವೇಅಗ' ಶಬ್ದವನ್ನು ನೋಡುವುದು
ವೇಅರಣೀ. ಸ್ತ್ರೀ: [**ವೈತರಣೀ**] ನರಕದ ನದಿ, ವೈತರಣಿಯ ಧ್ವನಿಮಾಡಿ ಅದರಲ್ಲಿ ನರಕದ ಜೀವರುಗಳನ್ನು ಹಾಕುವ ಪರಮ ಅಧಾರ್ಮಿಕ ದೇವತೆಗಳ ಒಂದು ಜಾತಿ, ಒದು ವಿದ್ಯೆ
ವೇಅಲ್ಲ. 'ವೇಇಲ್ಲ=ವಿಚಕಿಲ' ಶಬ್ದವನ್ನು ನೋಡುವುದು
ವೇಅಲ್ಲ. ವಿ: [**ದೇ**] ಮೃದುವಾದ, ಕೋಮಲವಾದ. **ನ:** ಅಸಾಮರ್ಥ್ಯ
ವೇಅಲ್ಲ. ನ: [**ವೈಕಲ್ಯ**] ವಿಕಲತೆ, ನ್ಯೂನತೆ, ದೋಷ, ಅಂಗಹೀನತೆ, ವ್ಯಾಕುಲತೆ(ಗಉಡ)
ವೇಅವ್ವ. 'ವೇಅ=ವೇದಯ್'
ವೇಅಸ. ಪು: [**ವೇತಸ**] ಜೊಂಡು, ಹಬ್ಬೆ ಗಿಡ
ವೇಆಗರಣ. ವಿ: [**ವೈಯಾಕರಣ**] ವ್ಯಾಕರಣಕ್ಕೆ ಸಂಬಂಧಿಸಿದ, **ಪು:** ವ್ಯಾಕರಣ ಶಾಸ್ತ್ರವನ್ನು ಬಲ್ಲವನು
ವೇಆರ. ಸಕ: [**ದೇ**] ವಂಚಿಸು, ಮೋಸಮಾಡು. **'ವೇಯಾರಇ'**
ವೇಆರಣಿಯ. ವಿ: [**ವೈದಾರಣಿಕ**] ಸೀಳುವುದಕ್ಕೆ ಸಂಬಂಧಿಸಿದ, ಸೀಳುವುದರಿಂದ ಉಂಟಾದ(ಠಾ)
ವೇಆರಣಿಯ. ವಿ: [**ದೇ**] ಮೋಸಕ್ಕೆ ಸಂಬಂಧಿಸಿದ, ವಂಚನೆಗೆ ಸಂಬಂಧಿಸಿದ, ವಂಚನೆಯಿಂದ ಉಂಟಾದ

ವೇಆರಣಿಯ. ವಿ: [ವೈಚಾರಣಿಕ] ವಿಚಾರಕ್ಕೆ ಸಂಬಂಧಿಸಿದ(ತಾ),

ವೇಆರಿಅ. ವಿ: [ದೇ] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ (ಪಉಮ), **ಪು:** ಕೂದಲು. ಕೇಶ

ವೇಅಲ. **ಪು:** [ವೇತಾಲ] ಪಿಶಾಚ, ಭೂತ, ಬೇತಾಳ, ಒಂದು ಛಂದಸ್ಸು,(ಗಉಡ) ದ್ವಾರಪಾಲಕ

ವೇಆಲ. ವಿ: [ದೇ] ಕುರುಡ, **ಪು:** ಅಂಧಕಾರ, ಕತ್ತಲೆ(ದೇ)

ವೇಆಲಗ. ವಿ: [ವಿದಾರಕ] ಸೀಳುವವನು, ಭೇದಿಸುವವನು

ವೇಆಲಗ. ನ: [ವಿದಾರಣ] ಸೀಳುವುದು, ಹೋಳು ಮಾಡುವುದು,

ವೇಆಲಿ. **ಪು:** [ವೈತಾಲಿನ್] ವಂದಿ, ಸ್ತುತಿಪಾಠಕ, ಹೊಗಳುಭಟ್ಟ(ಉಪ)

ವೇಆಲಿಅ. **'ವಇಆಲಿಅ'** ಶಬ್ದವನ್ನು ನೋಡುವುದು

ವೇಆಲಿಯ. ವಿ: [ವೈಕ್ರಿಯ] ಬದಲಾವಣೆಯಿಂದ ಉಂಟಾದ, ವ್ಯತ್ಯಾಸದಿಂದ ಉಂಟಾದ(ಸೂಅ)

ವೇಆಲಿಯ. ವಿ: [ವೈಕಾಲಿಕ] ವಿರುದ್ಧವಾದ ಕಾಲಕ್ಕೆ ಸಂಬಂಧಿಸಿದ, ಅಪರಾಹ್ನದಲ್ಲಿ ಮಾಡಲ್ಪಟ್ಟ, ನಿರ್ಮಿಸಲ್ಪಟ್ಟ

ವೇಆಲಿಯ. ನ: [ವಿದಾರಕ] ಸೀಳುವ ಕ್ರಿಯೆ

ವೇಆಲಿಯ. **'ವಇಆಲಿಅ'** ಶಬ್ದವನ್ನು ನೋಡುವುದು

ವೇಆಲಿಯಾ. **ಸ್ತ್ರೀ:** [ವೈತಾಲಿಕೀ] ಒಂದು ಬಗೆಯ ವೀಣೆ

ವೇಆಲೀ. **ಸ್ತ್ರೀ:** [ವೈತಾಲೀ] ಅಚೇತನವೆನಿಸಿದ ಒಣ ಮರವನ್ನೂ ಎದ್ದು ನಿಲ್ಲಿಸುವಂಥ, ಚೇತನದ ಹಾಗೆ ಕ್ರಿಯಾಶಿಲಗೊಳಿಸುವ ಪ್ರಭಾವವುಳ್ಳ ಒಂದು ವಿದ್ಯೆ, ಒಂದು ನಗರಿ(ಣಾಯಾ).

ವೇಇ. **ಸ್ತ್ರೀ:** [ವೇದಿ] ಯಾಗಕ್ಕಾಗಿ ಪರಿಷ್ಕರಿಸಿ ಸಿದ್ಧಪಡಿಸಿದ ಭೂಮಿ, ಜಗುಲಿ(ಕುಮಾ)

ವೇಇ. ವಿ: [ವೇದಿನ್] ತಿಳಿದವನು, ಬಲ್ಲವನು, ಪಂಡಿತ, ಅನುಭವಕ್ಕೆ ತಂದುಕೊಳ್ಳುವವನು

ವೇಇಅ. ವಿ: [ವೇದಿತ] ತಿಳಿಸಲ್ಪಟ್ಟ, ಅನುಭವಕ್ಕೆ ಬಂದ, ತಿಳಿದು ಬಂದ

ವೇಇಅ. **'ವೇವಿಅ=ವೇಪಿತ'** ಶಬ್ದವನ್ನು ನೋಡುವುದು

ವೇಇಅ. ವಿ: [ವೈದಿಕ] ವೇದಕ್ಕೆ ಸಂಬಂಧಿಸಿದ, ವೇದಗಳನ್ನು ಅಧ್ಯಯನ ಮಾಡಿದ ವಿಪ್ರ

ವೇಇಅ. ವಿ: [ವೇಗಿತ] ವೇಗದಿಂದ ಕೂಡಿದ, ವೇಗವುಳ್ಳ (ಣಾಯಾ)

ವೇಇಅ. ವಿ: [ವ್ಯೇಜಿತ] ಕಂಪಿತ, ನಡುಗಿದ, ನಡುಗಿಸಲ್ಪಟ್ಟ

ವೇಇಆ. **ಸ್ತ್ರೀ:** [ದೇ] ನೀರು ಹೊರುವ ಹೆಣ್ಣು, ನೀರು ತುಂಬುವ ಮಹಿಳೆ

ವೇಇಆ. **ಸ್ತ್ರೀ:** [ವೇದಿಕಾ] ಯಾಗಕ್ಕಾಗಿ ಪರಿಷ್ಕರಿಸಿ ಸಿದ್ಧಪಡಿಸಿದ ಭೂಮಿ, ಜಗುಲಿ, ಉಂಗುರ(ದೇ), ಪ್ರತಿಯಾಗಿ ಉದಾಸೀನ ಮಾಡುವಲ್ಲಿನ ಒಂದು ದೋಷ(ಉತ್ತ)

ವೇಇಜ್ಜ. **ಅಕ:** [ವಿ+ಏಜ್] ನಡುಗು, ಅಲ್ಲಾಡು. **ವ. ಕೃ: ವೇಇಜ್ಜಮಾಣ**

ವೇಇದ್ಧ. ವಿ: [ದೇ] ಮೇಲಕ್ಕೆ ಮಾಡಿದ, ಎತ್ತರಿಸಿದ, ಅಸ್ಥಿರವಾದ, ಕಂಪಿಸುವ, ಕುಟಿಲವಾದ, ರಂಧ್ರ ಮಾಡಲ್ಪಟ್ಟ, ಸಡಿಲವಾದ(ದೇ)

ವೇಇಲ್ಲ. **'ವಿಅಇಲ್ಲ'** ಶಬ್ದವನ್ನು ನೋಡುವುದು

ವೇಉಂತ. **'ವೇಕುಂಠ'** ಶಬ್ದವನ್ನು ನೋಡುವುದು

ವೇಉಟ್ಟಿಯಾ. **ಸ್ತ್ರೀ:** [ದೇ] ಪುನಃ ಪುನಃ, ಮತ್ತೆ ಮತ್ತೆ

ವೇಉವ್ವ. **'ವಿಉವ್ವ=ವಿ+ಕೃ, ಕುರ್ವ'** ಶಬ್ದವನ್ನು ನೋಡುವುದು

ವೇಉವ್ವ. ವಿ: [ವೈಕ್ರಿಯ] ವಿಕೃತ, ವಿಕಾರಗೊಂಡ, ಬದಲಾದ, ವ್ಯತ್ಯಾಸಗೊಂಡ. **'ವಿಉವ್ವ=ವೈಕ್ರಿಯ'** ಶಬ್ದವನ್ನು ನೋಡುವುದು. **-ಲದ್ಧಿ. ಸ್ತ್ರೀ:** [-**ಲಬ್ಧಿ**] ವೈಕ್ರಿಯ ಶರೀರವನ್ನು ಉತ್ಪಾದನೆ ಮಾಡುವ ಸಾಮರ್ಥ್ಯ

ವೇಉವ್ವಿ. **'ವಿಉವ್ವಿ'** ಶಬ್ದವನ್ನು ನೋಡುವುದು

ವೇಉವ್ವಿಅ. **'ವಿಉವ್ವಿಅ=ವಿಕೃತ', ವಿಕುರ್ವಿತ'** ಶಬ್ದವನ್ನು ನೋಡುವುದು

ವೇಉವ್ವಿಅ. ವಿ: [**ವೈಕ್ರಿಯ, ವೈಕ್ರಿಯಿಕ, ವೈಕುರ್ವಿಕ**] ಅನೇಕ ಸ್ವರೂಪಗಳು ಮತ್ತು ಕ್ರಿಯೆಗಳನ್ನು ಮಾಡಲು ಸಮರ್ಥವಾದ ಶರೀರ(ಭಗ) ವಿಕುರ್ವಣೆಯಿಂದ(ವಿಧ ವಿಧವಾದ ಧ್ವನಿ) ಮಾಡಲ್ಪಟ್ಟ, ವೈಕ್ರಿಯ ಶರೀರವನ್ನುಳ್ಳ, ವೈಕ್ರಿಯ ಶರೀರಕ್ಕೆ ಸಂಬಂಧಿಸಿದ, ಅಲಂಕರಿಸಲ್ಪಟ್ಟ, **-ಲದ್ಧಿಅ.** ವಿ: [**-ಲಬ್ಧಿಕ**] ವೈಕ್ರಿಯ ಶರೀರವನ್ನು ಸೃಷ್ಟಿಸುವ ಸಾಮರ್ಥ್ಯವುಳ್ಳ. **-ಸಮುಗ್ಘಾಯ. ಪು:**

[-**ಸಮುದ್ಘಾತ**] ವೈಕ್ರಿಯ ಶರೀರವನ್ನು ಸೃಷ್ಟಿಸಲು ಆತ್ಮ ಪ್ರದೇಶಗಳನ್ನು ಹೊರದೂಡುವುದು

ವೇಉವ್ವಿಯಾ. ಸ್ತ್ರೀ: [ದೇ] ಮತ್ತೆ ಮತ್ತೆ, ಪುನಃ ಪುನಃ

ವೆಂಕಡ. ಪು: [ವೇಂಕಟ] ದಕ್ಷಿಣ ದೇಶದಲ್ಲಿ ಇರುವ ಒಂದು ಪರ್ವತ. **–ಣಾಹ.** ಪು: [–ನಾಥ] ವೇಂಕಟಾದ್ರಿಯ ಮೇಲಿರುವ ವಿಷ್ಣುವಿನ ಮೂರ್ತಿ.

ವೆಂಗೀ. ಸ್ತ್ರೀ: [ದೇ] ಆವರಣವುಳ್ಳ, ಬೇಲಿ ಉಳ್ಳ,

ವೆಂಜಣ. '**ವಂಜಣ**' ಶಬ್ದವನ್ನು ನೋಡುವುದು

ವೆಂಟ. '**ವಿಂಟ=ವೃಂತ**' ಶಬ್ದವನ್ನು ನೋಡುವುದು

ವೆಂಟಲ. '**ವಿಂಟಲ**' ಶಬ್ದವನ್ನು ನೋಡುವುದು

ವೆಂಟಲೀ. '**ವಿಂಟಲಿಆ**' ಶಬ್ದವನ್ನು ನೋಡುವುದು

ವೆಂಟಿಆ. '**ವಿಂಟಿಯಾ**' ಶಬ್ದವನ್ನು ನೋಡುವುದು

ವೆಂಡ. ಪು: [**ವೇತಂಡ**] ಆನೆ, ಗಜ. '**ವೇಯಂಡ**' ಶಬ್ದವನ್ನು ನೋಡುವುದು

ವೆಂಢಸುರಾ. ಸ್ತ್ರೀ: [ದೇ] ಕೊಳೆಯಿಂದ ಕೂಡಿದ ಮದಿರೆ, ಕಲುಷಿತವಾದ ಹೆಂಡ

ವೆಂಢಿ. ಪು: [ದೇ] ಪಶು

ವೆಂಢಿಅ. ವಿ: [ದೇ] ಸುತ್ತಲ್ಪಟ್ಟ, ಹೊದಿಸಲ್ಪಟ್ಟ

ವೆಂಭಲ. '**ವಿಂಭಲ**' ಶಬ್ದವನ್ನು ನೋಡುವುದು

ವೇಕಕ್ಖ. '**ವೇಅಚ್ಛ**' ಶಬ್ದವನ್ನು ನೋಡುವುದು

ವೇಕಚ್ಛಿಯಾ}. '**ವೇಗಚ್ಛಿಯಾ**' ಶಬ್ದವನ್ನು ನೋಡುವುದು
ವೇಕಚ್ಛೀ}.

ವೇಕಿಲ್ಲಿಅ. ನ: [ದೇ] ಮೆಲುಕು ಹಾಕುವುದು

ವೇಕುಂಠ. ಪು: [**ವೈಕುಂಠ**] ವಿಷ್ಣು, ನಾರಾಯಣ, ದೇವತೆಗಳ ಒಡೆಯ ಇಂದ್ರ, ಗರುಡಪಕ್ಷಿ, ಬಿಳಿ ಗಗ್ಗರೆ ಗಿಡ, ವಿಷ್ಣುವಿನ ವಾಸಸ್ಥಾನವಾದ ವೈಕುಂಠ ಲೋಕ. **ಪುಂನ:** ಮಥುರೆಯ ಒಂದು ವೈಷ್ಣವ ತೀರ್ಥ

ವೇಗ. '**ವೇಅ=ವೇಗ**' ಶಬ್ದವನ್ನು ನೋಡುವುದು. **–ವಈ.** ಸ್ತ್ರೀ: [–ವತೀ] ಒಂದು ನದಿಯ ಹೆಸರು. **– ವಂತ.** ವಿ: [–**ವತ್**] ವೇಗವುಳ್ಳ

ವೇಗಚ್ಛ. '**ವೇಅಚ್ಛ**' ಶಬ್ದವನ್ನು ನೋಡುವುದು

ವೇಗಚ್ಛಿಯಾ}. ಸ್ತ್ರೀ: [**ವೈಕಕ್ಷಿಕಾ, ಕ್ಷಾ**]
ವೇಗಚ್ಛೀ}.ಯಜ್ಞೋಪವೀತದ ಹಾಗೆ ಅಡ್ಡಲಾಗಿ ಧರಿಸುವ ವಸ್ತ್ರ, ಉತ್ತರಾಸಂಗ

ವೇಗಡ. ಸ್ತ್ರೀನ: [ದೇ] ಒಂದು ಬಗೆಯ ಹಡಗು

ವೇತರ. ಪು: [ದೇ] ದ್ರಾಕ್ಷಾ, ಲವಂಗಾದಿಗಳೊಂದಿಗೆ ಮಿಶ್ರವಾದ ಸಕ್ಕರೆ ಇತ್ಯಾದಿ

ವೇಗುನ್ನ. '**ವಇಗುಣ್ಣ**' ಶಬ್ದವನ್ನು ನೋಡುವುದು

ವೆಗ್ಗ. '**ವಿಅಗ್ಗ**' ಶಬ್ದವನ್ನು ನೋಡುವುದು

ವೆಗ್ಗ. '**ವೇಗ**' ಶಬ್ದವನ್ನು ನೋಡುವುದು

ವೆಗ್ಗಲ. ವಿ: [ದೇ] **ದೂರದಲ್ಲಿರುವ**

ವೇಚಿತ್ತ. '**ವಇಚಿತ್ತ**' ಶಬ್ದವನ್ನು ನೋಡುವುದು

ವೆಚ್ಚ. '**ವಿಚ್ಚ=ವಿ+ಅಯ್**' ಶಬ್ದವನ್ನು ನೋಡುವುದು

ವೆಚ್ಛ. '**ವಿಅ=ವಿದ್**' ಶಬ್ದವನ್ನು ನೋಡುವುದು

ವೆಚ್ಛಾ. **ವೇಗಚ್ಛಿಯಾ** ಶಬ್ದವನ್ನು ನೋಡುವುದು. **–ಸುತ್ತ.** ನ: [–**ಸೂತ್ರ**] ಉಪವೀತದ ಹಾಗೆ ಧರಿಸಲಾಗುವ ಸರಪಳಿ(ಭಗ)

ವೇಜಯಂತ. **ಪುಂನ:** [**ವೈಜಯಂತ**] ಒಂದು ಅನುತ್ತರ ದೇವ–ವಿಮಾನ, ಜಂಬೂದ್ವೀಪ, ಲವಣ ಸಮುದ್ರ, ಧಾತಕೀ ಖಂಡ, ಕಾಲೋದ ಸಮುದ್ರ, ಪುಷ್ಕರವರ ದ್ವೀಪ ಮತ್ತು ಪುಷ್ಕರೋದ ಸಮುದ್ರದ ದಕ್ಷಿಣ ದ್ವಾರ(ಠಾ). ಜಂಬೂ ದ್ವೀಪ, ಲವಣ ಸಮುದ್ರಾದಿಗಳ ದಕ್ಷಿಣ ದ್ವಾರಗಳ ಅದಿಷ್ಠಾತೃ ದೇವ(ಠಾ), ಅನುತ್ತರ ದೇವ– ವಿಮಾನದಲ್ಲಿ ವಾಸಿಸುವ ದೇವತೆ, ಜಂಬೂ ಮಂದಿರದ ಉತ್ತರ ರುಚಕ ಪರ್ವತದ ಒಂದು ಶಿಖರ. ವಿ: ಪ್ರಧಾನ, ಶ್ರೇಷ್ಠ.

ವೇಜಯಂತೀ. ಸ್ತ್ರೀ: [**ವೈಜಯಂತೀ**] ಧ್ವಜ, ಬಾವುಟ (ಕುಮಾ), ಆರನೇ ಬಲದೇವನ ತಾಯಿಯ ಹೆಸರು, ಅಂಗಾರಕಾದಿ ಮಹಾಗ್ರಹಗಳ ಒಬ್ಬೊಬ್ಬ ಅಗ್ರ ಮಹಿಷಿಯ ಹೆಸರು. ಪೂರ್ವ ರುಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುಮಾರಿ ದೇವಿ. ವಿಜಯ–ವಿಶೇಷದ ರಾಜಧಾನಿ, ಒಂದು ವಿದ್ಯಾಧರ ನಗರ, ರಾಮಚಂದ್ರನ ಒಂದು ಸಭೆ. ಭಗವಾನ್ ಪದ್ಮಪ್ರಭನ ದೀಕ್ಷಾ–ಶಿಬಿಕೆ, ಉತ್ತರ ಅಂಜನಗಿರಿಯ ದಕ್ಷಿಂ ದಿಕ್ಕಿನಲ್ಲಿ ಇರುವ ಒಂದು ಪುಷ್ಕರಿಣಿ, ಪಕ್ಷದ ಎಂಟನೇ ರಾತ್ರಿಯ ಹೆಸರು ಬಗವಾನ್ ಕುಂಥುನಾಥನ ದೀಕ್ಷಾ–ಶಿಬಿಕೆ.

ವೆಜ್ಜ. ವಿ: [ವೇದ್ಯ] ತಿಳಿಯಲ್ಪಡುವ, ತಿಳಿಯಲರ್ಹವಾದ, ಅನುಭವಕ್ಕೆ ತಂದುಕೊಳ್ಳಲು ಯೋಗ್ಯವಾದ

ವೆಜ್ಜ. ಪು: [**ವೈದ್ಯ**] ಚಿಕಿತ್ಸಕ, ವೈದ್ಯ(ಗಾ), ಒಂದು ವೃಕ್ಷ, ವಿ: ಪಂಡಿತ, ವಿದ್ವಾಂಸ. **–ಸತ್ಥ.** ನ: [–**ಶಾಸ್ತ್ರ**] ಚಿಕಿತ್ಸಾ ಶಾಸ್ತ್ರ

ವೆಜ್ಜಗ}. ನ: [**ವೈದ್ಯಕ**] ಚಿಕಿತ್ಸಾ ಶಾಸ್ತ್ರ, (ಓಘ), ವೈದ್ಯ
ವೆಜ್ಜಯ}. ಕ್ರಿಯೆ(ಕುಪ್ರ)
ವೆಜ್ಝ. ವಿ: [**ವೇಧ್ಯ**] ರಂಧ್ರ ಮಾಡಲು ಯೋಗ್ಯವಾದ, ತೂತು ಕೊರೆಯಲು ಅರ್ಹವಾದ
ವೆಟ್ಠಣ. '**ವೇಢಣ**' ಶಬ್ದವನ್ನು ನೋಡುವುದು
ವೆಟ್ಠಣಗ. ಪು: [**ವೇಷ್ಟನಕ**] ತಲೆಯ ಮೇಲೆ ಕಟ್ಟಿಕೊಳ್ಳುವ ಒಂದು ಬಗೆಯ ಪೇಟ, ಒಂದು ಕರ್ಣಾಭರಣ
ವೆಟ್ಠಿಯಾ. '**ವಿಟ್ಠಾ**' ಶಬ್ದವನ್ನು ನೋಡುವುದು
ವೆಟ್ಠಿ. '**ವಿಟ್ಠಿ**' ಶಬ್ದವನ್ನು ನೋಡುವುದು
ವೆಟ್ಠಿದ(ಶೌ). '**ವೇಢಿಅ**' ಶಬ್ದವನ್ನು ನೋಡುವುದು
ವೇಡ(ದೇ). '**ವೇಡ**' ಶಬ್ದವನ್ನು ನೋಡುವುದು
ವೇಡಇಅ. ಪು: [**ದೇ**] ವ್ಯಾಪಾರಿ, ವಣಿಜ
ವೇಡಂಬಗ. '**ವಿಡಂಬಗ**' ಶಬ್ದವನ್ನು ನೋಡುವುದು
ವೇಡಸ. ಪು: [**ವೇತಸ**] ಜೊಂಡು, ನೀರುಹಬ್ಬೆ ಗಿಡ
ವೇಡಿಅ. ಪು: [**ದೇ**] ವಜ್ರದ ಆಭರಣಗಳನ್ನು ಮಾಡುವವನು, ರತ್ನ ವ್ಯಾಪಾರಿ
ವೇಡಿಕಿಲ್ಲ. ವಿ: [**ದೇ**] ಸಂಕಟ, ಕಷ್ಟ, ಅಪಾಯದ ಸಂದರ್ಭ, ಇಕ್ಕಟ್ಟಾದ ಮಾರ್ಗ,
ವೇಡಿಸ. '**ವೇಡಸ**' ಶಬ್ದವನ್ನು ನೋಡುವುದು
ವೇಡುಂಬಕ}.ವಿ: ರಾಜವಂಶದಲ್ಲಿ ಜನಿಸಿದ
ವೇಡುಂಬಗ}.
ವೇಡುಜ್ಜ}. '**ವೇರುಲಿಅ**' ಶಬ್ದವನ್ನು ನೋಡುವುದು
ವೇಡುರಿಅ}.
ವೇಡುಲ್ಲ. ವಿ: [**ದೇ**] ಗರ್ವದಿಂದ ಕೂಡಿದ, ಅಭಿಮಾನಿ
ವೆಡ್ಢ. '**ವೇಢ=ವೇಷ್ಟ**' ಶಬ್ದವನ್ನು ನೋಡುವುದು
ವೆಡ್ಢಯ. ಪು: [**ವೇಷ್ಟಕ**] **ಒಂದು ಛಂದಸ್ಸು**
ವೇಢ. ಸಕ: [**ವೇಷ್ಟ್**] ಸುತ್ತು, ಹೊದಿಸು. '**ವೇಢಇ**', ವ.ಕೃ: '**ವೇಢಂತ**'
ವೇಢ. ಪು: [**ವೇಷ್ಟ**] ಒಂದು ಛಂದಸ್ಸು, ಹೊದಿಕೆ, ವಸ್ತ್ರ, ರುಮಾಲು, ವಾಕ್ಯ-ಸಮೂಹ, ವರ್ಣನ ಗ್ರಂಥ
–ವೇಢ. '**ಪೀಢ**' ಶಬ್ದವನ್ನು ನೋಡುವುದು
ವೇಢಣ. ನ: [**ವೇಷ್ಟನ**] ಸುತ್ತುವುದು, ಹೊದಿಕೆ, ರುಮಾಲು, ಆವರಣ, ಸುತ್ತುವರಿಯುವುದು (ಗಾ)
ವೇಢಿಅ. ವಿ: [**ವೇಷ್ಟಿತ**] ಸುತ್ತುವರಿಯಲ್ಪಟ್ಟ, ಸುತ್ತಲ್ಪಟ್ಟ, ಹೊದಿಸಲ್ಪಟ್ಟ(ಉವ)
ವೇಢಿಮ. ವಿ: [**ವೇಷ್ಟಿಮ**] ಹೊದಿಕೆಯಿಂದ ಮಾಡಿದ, ಆವರಣದಿಂದ ನಿರ್ಮಿಸಿದ(ಔಪ), ಪುಂಸ್ತ್ರೀ: ಒಂದು ಆಹಾರ-ವಿಶೇಷ
ವೇಣ. ಪು: [**ದೇ**] ಹಳ್ಳ ತಿಟ್ಟುಗಳಿಂದ ಕೂಡಿದ ನದಿಯ ಘಟ್ಟ, ಸಮವಾಗಿರದ ದಡ
ವೇಣ(ಅಪ). '**ವಯಣ=ವಚನ**' ಶಬ್ದವನ್ನು ನೋಡುವುದು
ವೇಣಇಅ. ನ: [**ವೈನಯಿಕ**] ವಿನಯ, ನಮ್ರತೆ(ಠಾ), ಎಲ್ಲ ದೇವರು ಧರ್ಮಗಳನ್ನು ಸತ್ಯವೆಂದು ಅಂಗೀಕರಿಸುವ ಮಿಥ್ಯತ್ವ. ವಿ: ವಿನಯಕ್ಕೆ ಸಂಭಂಧಿಸಿದ, ವಿನಯನ್ನೇ ಪ್ರಧಾನವೆಂದು ಒಪ್ಪುವ ವಿನಯ-ವಾದಿ. **–ವಾದ**. ಪು: [**–ವಾದ**] ವಿನಯವನ್ನೇ ಮುಖ್ಯವೆಂದು ಒಪ್ಪುವ ದರ್ಶನ.
ವೇಣಇಗೀ}. ಸ್ತ್ರೀ: [**ವೈನಯಿಕೀ**] ವಿನಯದಿಂದ
ವೇಣಇಯಾ}. ಪ್ರಾಪ್ತವಾಗುವ ಬುದ್ಧಿ(ಉಪ).
ವೇಣ ಇಯಾ. ಸ್ತ್ರೀ: [**ವೈಣಕಿಯಾ**] ಲಿಪಿ-ವಿಶೇಷ
ವೇಣಾ. ಸ್ತ್ರೀ: [**ವೇಣಾ**] ಮಹರ್ಷಿ ಸ್ಥೂಲಭದ್ರನ ಒಬ್ಬ ಸೋದರಿ.
ವೇಣಿ. ಸ್ತ್ರೀ: [**ವೇಣಿ**] ಜಡೆ, ಹೆಣೆದ ಕೂದಲು, ವಾದ್ಯವಿಶೇಷ, ಗಂಗಾ ಯಮುನಾ ನದಿಗಳ ಸಂಗಮ ಸ್ಥಾನ, **–ವಚ್ಛರಾಯ**. ಪು: [**–ವತ್ಸರಾಜ**] ಒಬ್ಬ ರಾಜ
ವೇಣಿಅ. ನ: [**ದೇ**] ಲೋಕಾಪವಾದ
ವೇಣೀ. ಸ್ತ್ರೀ: [**ವೇಣೀ**] '**ವೇಣಿ**' ಶಬ್ದವನ್ನು ನೋಡುವುದು
ವೇಣು. ಪು: [**ವೇಣು**] ಬಿದಿರು(ಪಾಅ), ಒಬ್ಬ ರಾಜ, ಕೊಳಲು, **–ದಾಲಿ**. ಪು: [**–ದಾಲಿ**] ಸುಪರ್ಣ ಕುಮಾರ ದೇವರುಗಳ ಉತ್ತರ ದಿಕ್ಕಿನ ಇಂದ್ರ (**ಠಾ**). **–ದೇವ**. ಪು: [**–ದೇವ**] ಸುಪರ್ಣಕುಮಾರ ಎಂಬ ಹೆಸರಿನ ದೇವ ಜಾತಿಯ ದಕ್ಷಿಣ ದಿಕ್ಕಿನ ಇಂದ್ರ, ಧೇವ-ವಿಶೇಷ, ಗರುಡ ಪಕ್ಷಿ(ಸೂಅ). **–ಯಾಣುಜಾಯ**. ಪು: [**–ಕಾನುಜಾತ**] ಗಣಿತ ಸಾಸ್ತ್ರದಲ್ಲಿ ಪ್ರಸಿದ್ಧವಾದ ಹತ್ತು ಯೋಗಗಳಲ್ಲಿ ಎರಡನೇ ಯೋಗ; ಇದರಲ್ಲಿ ಚಂದ್ರ, ಸೂರ್ಯ ಮತ್ತು ನಕ್ಷತ್ರಗಳು ಬಿದಿರಿನ ಆಕೃತಿಯಲ್ಲಿ ಇರುತ್ತಾರೆ.
ವೇಣುಣಾಸ}. ಪು: [**ದೇ**] ಭ್ರಮರ, ದುಂಬಿ,
ವೇಣುಸಾಅ}. ಜೇನುಹುಳು

ವೆಣ್ಣ. ವಿ: [ದೇ] ಆಕ್ರಮಿಸಲ್ಪಟ್ಟ(ಷಡ್)
ವೆಣ್ಣಾ. ಸ್ತ್ರೀ: [ವೇನ್ನಾ] ಒಂದು ನದಿ, **–ಯಡ.** ನ: [–ತಟ] ಒಂದು ನಗರ
ವೆಣ್ಹು. 'ವಿಣ್ಹು' ಶಬ್ದವನ್ನು ನೋಡುವುದು
ವೇತಾಲೀ. ಸ್ತ್ರೀ: [ದೇ] ತಟ, ದಡ, ತೀರ(ಪಣ್ಣ)
ವೆತ್ತ. ನ: [ದೇ] ಸ್ವಚ್ಛ ವಸ್ತ್ರ
ವೆತ್ತ. ಪು: [ವೇತ್ರ] ಬೆತ್ತ, ಬೆತ್ತದ ಗಿಡ(ಪಣ್ಣ) **[ವೇತ್ತಾಸಣ]** ನ: [ವೇತ್ರಾಸನ] ಬೆತ್ತದಿಂದ ಮಾಡಿದ ಆಸನ
ವೆತ್ತವ್ವ. ವಿ: [ವೇತ್ತವ್ಯ] ತಿಳಿಯಲು ಅರ್ಹವಾದ್ದು
ವೆತ್ತಿಅ. ಪು: [ವೇತ್ರಿಕ] ದ್ವಾರಪಾಲಕ
ವೇದ. 'ವೇಅ=ವೇದಯ್' ಶಬ್ದವನ್ನು ನೋಡುವುದು
ವೇದ. ವೇಅ=ವೇದ' ಶಬ್ದವನ್ನು ನೋಡುವುದು
ವೇದಂತ. 'ವೇಅಂತ' ಶಬ್ದವನ್ನು ನೋಡುವುದು
ವೇದಕ}. 'ವೇಅಗ' ಶಬ್ದವನ್ನು ನೋಡುವುದು(ಪಣ್ಣ)
ವೇದಗ}.
ವೇದಣಾ. 'ವಿಅಣಾ' ಶಬ್ದವನ್ನು ನೋಡುವುದು
ವೇದಬ್ಭೀ. ಸ್ತ್ರೀ: [ವೈದರ್ಭೀ] ಪ್ರದ್ಯುಮ್ನ ಕುಮಾರನ ಹೆಂಡತಿಯ ಹೆಸರು.
ವೇದಸ.(ಶೌ). 'ವೇಡಿಸ' ಶಬ್ದವನ್ನು ನೋಡುವುದು
ವೇದಿ. 'ವೇಇ= ವೇದಿ' ಶಬ್ದವನ್ನು ನೋಡುವುದು
ವೇದಿಗ. ಪು: [ವೈದಿಕ] ಒಂದು ಶ್ರೀಮಂತ ಮನುಷ್ಯ ಜಾತಿ, ವೇದಾಧ್ಯಯನ ಮಾಡಿದ ವಿಪ್ರ.
ವೇದಿಯ. 'ವೇಇಅ=ವೇದಿತ' ಶಬ್ದವನ್ನು ನೋಡುವುದು
ವೇದಿಸ. ನ: [ವೈದಿಶ] ವಿದಿಶೆಯ ಕಡೆ ಇರುವ ನಗರ.
ವೇದುಲಿಯ. 'ವೇರುಲಿಅ' ಶಬ್ದವನ್ನು ನೋಡುವುದು
ವೇದೂಣಾ. ಸ್ತ್ರೀ: [ದೇ] ನಾಚಿಕೆ, ಲಜ್ಜೆ
ವೇದೇಸಿಯ. 'ವಇದೇಸಿಅ' ಶಬ್ದವನ್ನು ನೋಡುವುದು
ವೇದೇಹ. ಪು: [ವೈದೇಹ] ಒಂದು ಶ್ರೀಮಂತ ಮನುಷ್ಯ ಜಾತಿ. 'ವಇದೇಹ' ಶಬ್ದವನ್ನು ನೋಡುವುದು
ವೇದೇಹಿ. ಪು: [ವಿದೇಹಿನ್] ವಿದೇಹ ದೇಶದ ರಾಜ
ವೇಧಮ್ಮ. 'ವಇಧಮ್ಮ' ಶಬ್ದವನ್ನು ನೋಡುವುದು
ವೇಧವ್ವ. 'ವೇಹವ್ವ' ಶಬ್ದವನ್ನು ನೋಡುವುದು
ವೆನ್ನಾ. 'ವೇಣ್ಣಾ' ಶಬ್ದವನ್ನು ನೋಡುವುದು
ವೆಪ್ಪ. ವಿ: [ದೇ] ಭೂತ, ಪಿಶಾಚ ಹಿಡಿದವನು, ಹುಚ್ಚ
ವೆಪ್ಪುಅ. ನ: [ದೇ] ಶೈಶವ, ಬಾಲ್ಯ, ವಿ: ಭೂತ–ಗ್ರಸ್ತ, ಭೂತಹೊಕ್ಕವನು
ವೇಫಲ್ಲ. ನ: [ವೈಫಲ್ಯ] ವಿಫಲತೆ, ನಿಷ್ಫಲತೆ, ವ್ಯರ್ಥ, ಫಲವಿಲ್ಲದಿರುವುದು(ವಿಸೇ)
ವೆಬ್ಭಲ. ವಿ: [ವಿಹ್ವಲ] ವ್ಯಾಕುಲಗೊಂಡ, ದುಃಖಿತ
ವೆಬ್ಭಾರ}. ಪು: [ವೈಭಾರ] ರಾಜಗೃಹದ ಹತ್ತಿರ ಇರುವ
ವೇಭಾರ}. ಒಂದು ಪರ್ವತ
ವೇಮ. ಪು: [ವೇಮನ್] ನೇಕಾರನ ಒಂದು ಉಪಕರಣ; ತಾಕು ಹಲಗೆ
ವೇಮಇಅ. ವಿ: [ಭಗ್ನ] ಮುರಿಯಲ್ಪಟ್ಟ, ಒಡೆಯಲ್ಪಟ್ಟ
ವೇಮಣಸ್ಸ. ನ: [ವೈಮನಸ್ಯ] ಹಿತವಾದ ಮನಸ್ಸಿಲ್ಲದಿರುವುದು, ಒಳಗಿನ ದ್ವೇಷ, ದೈನ್ಯ, ದೀನತೆ(ಪಣ್ಣ)
ವೇಮಯ. ಸಕ: [ಭಂಜ್] ಒಡೆ, ಮುರಿ
ವೇಮಾಉಅ.}. ವಿ: [ವೈಮಾತೃಕ] ಮಲತಾಯಿಯ
ವೇಮಾಉಗ}. ಮಗ
ವೇಮಾಣಿ. ಪುಂಸ್ತ್ರೀ: [ವಿಮಾನಿನ್] ವಿಮಾನದಲ್ಲಿ ವಾಸಿಸುವ ದೇವತೆ, ಒಬ್ಬ ಉತ್ತಮ ದೇವ–ಜಾತಿ. ಸ್ತ್ರೀ: **–ಣಿಣೀ**
ವೇಮಾಣಿಅ. ಪು: [ವೈಮಾನಿಕ] ಒಂದು ಉತ್ತಮ ದೇವ–ಜಾತಿ, ವಿಮಾನದಲ್ಲಿ ವಾಸಿಸುವ ದೇವತೆ (ಭಗ)
ವೇಮಾಯಾ. ಸ್ತ್ರೀ: [ವಿಮಾತ್ರಾ] ನಿಯತವಲ್ಲದ ಅಳತೆ(ಭಗ)
ವೆಮ್ಮಿ. ಕ್ರಿ: [ವಚ್ಮಿ] ನಾನು ಹೇಳುತ್ತೇನೆ
ವೇಯಂಡ. ಪು: [ವೇತಂಡ] ಆನೆ, 'ವೇಂಡ' ಶಬ್ದವನ್ನು ನೋಡುವುದು
ವೇಯಾವಚ್ಚ}. ನ: [ವೇಯಾವೃತ್ತ್ಯ, ವೈಯಾಪೃತ್ಯ]
ವೇಯಾವಡಿಅ}. ಸೇವೆ, ಶುಶ್ರೂಷೆ(ಔಪ)
ವೇರ. ನ: [ವೈರ] ಶತ್ರುತ್ವ, ದ್ವೇಷ
ವೇರ. ನ: [ದ್ವಾರ] ಬಾಗಿಲು
ವೇರಗ್ಗ. ನ: [ವೈರಾಗ್ಯ] ವಿಷಯ ಸುಖಗಳಲ್ಲಿ ಆಸೆಯಿಲ್ಲದಿರುವುದು, ಲೌಕಿಕದಲ್ಲಿ ನಿರಾಸಕ್ತಿ
ವೇರಗ್ಗಿಅ. ವಿ: [ವೈರಾಗ್ಯಿಕ] ವಿರಾಗದಿಂದ ಕೂಡಿದ, ವಿರಾಗಿ
ವೇರಜ್ಜ. ನ: [ವೈರಾಜ್ಯ] ಶತ್ರುವಿನ ರಾಜ್ಯ, ರಾಜನಿಲ್ಲದಿರುವ ರಾಜ್ಯ, ಪ್ರಧಾನಿಯೇ ಮೊದಲಾದವರು ರಾಜನಿಂದ ವಿರಕ್ತರಾಗಿ ದೂರ ಇರುವ ರಾಜ್ಯ(ವೃಹ)

ವೇರತ್ತಿಯ. ವಿ: [**ವೈರಾತ್ರಿಕ**] ರಾತ್ರಿಯ ಮೂರನೇ ಪ್ರಹರದ ಸಮಯ(ಉತ್ತ)
ವೇರಮಣ. ನ: [ವಿರಮಣ] ವಿರಾಮ, ನಿವೃತ್ತಿ
ವೇರಾಡ. ಪು: [**ವೈರಾಟ**] ಅಲವರ ಮತ್ತು ಅದರ ಸುತ್ತುಮುತ್ತಿನ ಪ್ರದೇಶವಾದ ಭಾರತೀಯ ದೇಶ.
ವೇರಾಯ(ಅಪ). ಪು: [ವಿರಾಗ] ವೈರಾಗ್ಯ, ವಿರಕ್ತಿ, ಲೌಕಿಕ ವಿಷಯಗಳಲ್ಲಿ ನಿರಾಸಕ್ತಿ
ವೇರಿ}. '**ವಇರಿ**' ಶಬ್ದವನ್ನು ನೋಡುವುದು(ಗಉಡ)
ವೇರಿಅ}.
ವೇರಿಜ್ಜ. ವಿ: [ದೇ] ಇತರರ ನೆರವಿಲ್ಲದವ, ಏಕಾಕಿ, ನ: ಸಹಾಯ, ನೆರವು
ವೇರುಲಿಅ. ಪುಂನ: [**ವೇಡೂರ್ಯ**] ರತ್ನದ ಒಂದು ಜಾತಿ, ಒಂದು ವಿಮಾನ ವಾಸ–ವಿಶೇಷ, ಶಕ್ರನೇ ಮೊದಲಾದ ಇಂದ್ರರ ಒಂದು ಮುಂದೆ ಅವಶ್ಯಕವಾಗಿ ಆಗಬೇಕಾದ ವಿಮಾನ. ಮಹಾ ಹಿಮ ವಂತ ಪರ್ವತದ ಒಂದು ಶಿಖರ, ರುಚಕ ಪರ್ವತದ ಒಂದು ಶಿಖರ(ಠಾ), ವಿ: ವೈಡೂರ್ಯ ರತ್ನವನ್ನು ಹೊಂದಿರುವ, **ವೇರುಲಿಆಮಯ.**ವಿ: [**ವೈಡೂರ್ಯಮಯ**] ವೈಡೂರ್ಯ ರತ್ನಗಳಿಂದ ಮಾಡಿದ
ವೇರೋಯಣ. '**ವಇರೋಅಣ= ವೈರೋಚನ**' ಶಬ್ದವನ್ನು ನೋಡುವುದು
ವೇಲ. ನ: [ದೇ] ಹಲ್ಲಿನ ಬುಡದಲ್ಲಿರುವ ಮಾಂಸ
ವೇಲಂಧರ. ಪು: [**ವೇಲಂಧರ**] ಒಂದು ದೇವ–ಜಾತಿ, ನಗರಾಜ–ವಿಶೇಷ, ಒಂದು ಪರ್ವತ, ನ: ನಗರ ವಿಶೇಷ
ವೇಲಂಬ. ಪು: [**ವೇಲಂಬ**] ವಾಯು ಕುಮಾರನೆಂಬ ಹೆಸರಿನ ದೇವತೆಗಳ ದಕ್ಷಿಣ ದಿಕ್ಕಿನ ಇಂದ್ರ, ಪಾತಾಳ ಕಲಶದ ಅಧಿಷ್ಠಾತೃ ದೇವ
ವೇಲಂಬ. ಪು: [**ದೇ. ವಿಡಂಬ**] ವಿಡಂಬನೆ(ದೇ), ಹಾಸ್ಯ ಮಾಡುವುದು, ವಿ: ವಿಡಂಬನೆ ಮಾಡುವ
ವೇಲಂಬಗ. ಪು: [**ವಿಡಂಬಕ**] ವಿದೂಷಕ, ವಿ: ವಿಡಂಬನೆಮಾಡುವವನು, ಹಾಸ್ಯಮಾಡುವವನು
ವೇಲಕ್ಖ. ನ: [**ವೈಲಕ್ಷ್ಯ**] ನಾಚಿಕೆ, ಲಜ್ಜೆ(ಗಉಡ).
ವೇಲಣಯ. ನ: [ವ್ರೀಡನಕ] ನಾಚಿಕೆ, ಲಜ್ಜೆ, ಪು: ಲಜ್ಜೆಯನ್ನುಂಟು ಮಾಡುವ ವಿಷಯ ವಸ್ತುವಿನ ದರ್ಶನದಿಂದ ಉತ್ಪನ್ನವಾಗುವ ಸಾಹಿತ್ಯದಲ್ಲಿ ಪ್ರಸಿದ್ಧವಾದ '**ವ್ರೀಡಾ**'(ಲಜ್ಜಾ) ಭಾವ–ರಸ (ಅಣು)
ವೇಲವ. ಸಕ: [**ಉಪಾ+ಲಂಭ್**] ನಿಂದಿಸು, ಬೈಯು, ನಡುಗಿಸು, ವ್ಯಾಕುಲಗೊಳಿಸು,ದೂರ ಮಾಡು, ಹೊರದೂಡು. '**ವೇಲವಇ**'. ವ. ಕೃ: '**ವೇಲ ವಂತ**'
ವೇಲವ. ಸಕ: [**ವಂಚ್**] ವಂಚಿಸು, ಮೋಸಗೊಳಿಸು, ಹಿಂಸಿಸು,
ವೇಲವಿಅ. ವಿ: [**ವಂಚಿತ**] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ, ಹಿಂಸಿಸಲ್ಪಟ್ಟ, ಪೀಡಿಸಲ್ಪಟ್ಟ
ವೇಲಾ. ಸ್ತ್ರೀ: [ದೇ] ಹಲ್ಲಿನ ಬುಡದ ಮಾಂಸ(ದವಡೆ),
ವೇಲಾ. ಸ್ತ್ರೀ: [**ವೇಲಾ**] ಸಮಯ, ವೇಳೆ, ಕಾಲ, ಸಮುದ್ರದಲ್ಲಿ ಉಂಟಾಗುವ ನೀರಿನ ಉಬ್ಬರ (ಪಣ್ಣ), ಸಮುದ್ರದ ದಡ, ತೀರ(ಔಪ), ಎಲ್ಲೆ, ಗಡಿ, ಸಲ, ಸರದಿ. **–ಉಲ.** ನ: [**–ಕುಲ**] ಹಡಗುಗಳು ನಿಲ್ಲುವ ಬಂದರು. **–ವಾಸಿ.** ಪು: [**–ವಾಸಿನ್**] ಸಮುದ್ರದ ತೀರದಲ್ಲಿ ವಾಸ ಮಾಡುವ ವಾನಪ್ರಸ್ಥ(ಔಪ)
ವೇಲಾಇಅ. ವಿ: [ದೇ] ಮೃದುವಾದ, ಕೋಮಲವಾದ, ಬಡವ, ದೀನ(ದೇ)
ವೇಲಾವ(ಅಪ). ಸಕ: [**ವಿ+ಲಂಬಯ್**] ತಡಮಾಡು, ವಿಳಂಬ ಮಾಡು. 'ವೇಲಾವಸಿ'
ವೇಲಿಲ್ಲ. ವಿ: [**ವೇಲಾವತ್**] ಸಮುದ್ರದ ದಡದಿಂದ ಕೂಡಿರುವ
ವೇಲೀ. ಸ್ತ್ರೀ: [ದೇ] ನಿದ್ರೆ ಬರಿಸುವ ಒಂದು ಬಳ್ಳಿ, ಮನೆಯ ನಾಲ್ಕು ಮೂಲೆಗಳಲ್ಲಿ ಇರಿಸುವ ಚಿಕ್ಕ ಕಂಬ
ವೇಲು. '**ವೇಣು**' ಶಬ್ದವನ್ನು ನೋಡುವುದು
ವೇಲು. ಪು: [ದೇ] ಕಳ್ಳ, ಚೋರ, ಒನಕೆ(ದೇ)
ವೇಲುಂಕ. ವಿ: [ದೆ] ವಿರೂಪ, ಕುರೂಪ, ಕೆಳಮಟ್ಟದ
ವೇಲುಗ}. ಪುಂನ: [**ವೇಣುಕ**] ಬಿಲ್ವದ ಮರ, ಬಿಲ್ವದ
ವೇಲುಯ}. ಕಾಯಿ, ಬಿದಿರು, ಒಂದು ಬಗೆಯ ವನಸ್ಪತಿ
ವೇಲುರಿಅ.}. '**ವೇರುಲಿಅ**' ಶಬ್ದವನ್ನು ನೋಡುವುದು
ವೇಲುಲಿಅ}.
ವೇಲೂಣಾ. ಸ್ತ್ರೀ: [ದೇ] ಲಜ್ಜೆ, ನಾಚಿಕೆ(ದೇ)
ವೆಲ್ಲ. ಅಕ: [**ವೇಲ್ಲ್**] ನಡುಗು, ಕಂಪಿಸು, ಮಲಗು, ಸಕ: ನಡುಗಿಸು, ಅಲ್ಲಾಡಿಸು, ಪ್ರೇರಿಸು. '**ವೇಲ್ಲ ಇ**', **ವ.ಕೃ: ವೇಲ್ಲಂತ**'

ವೆಲ್ಲ. ಅಕ: [ರಮ್] ಕ್ರೀಡಿಸು, ಆನಂದಿಸು
ವೆಲ್ಲ. ಪು: [ದೇ] ಕೂದಲು, ಕೇಶ, ಚಿಗುರು, ವಿಲಾಸ(ದೇ), ಕಾಮ–ವೇದನೆ, ವಿ: ಮೂರ್ಖ, ನ: **'ವೆಲ್ಲಗ'** ಶಬ್ದವನ್ನು ನೋಡುವುದು
ವೆಲ್ಲಇಅ. **'ವೇಲಾಇಅ'** ಶಬ್ದವನ್ನು ನೋಡುವುದು
ವೆಲ್ಲಗ. ನ: [ದೇ] ಕೊಲ್ಲಾರಿ ಬಂಡಿ(ಮೇಲು ಮುಚ್ಚಿಗೆ ಉಳ್ಳ ಗಾಡಿ), ಗಾಡಿಯ ಮೇಲು ಭಾಗ
ವೆಲ್ಲಣ. ನ: [ವೇಲ್ಲನ] ಪ್ರೇರಣೆ
ವೆಲ್ಲಯ. **'ವೇಲ್ಲಗ'** ಶಬ್ದವನ್ನು ನೋಡುವುದು
ವೆಲ್ಲರಿಅ. ಪು: [ದೇ] ಕೂದಲು, ಕೇಶ(ಷಡ್)
ವೆಲ್ಲರಿಆ. ಸ್ತ್ರೀ: [ದೇ] ಬಳ್ಳಿ, ಲತೆ
ವೆಲ್ಲರೀ. ಸ್ತ್ರೀ: [ದೇ] ವೇಶ್ಯೆ, ಸೂಳೆ(ದೇ)
ವೆಲ್ಲವಿಅ. **'ವೆಲ್ಲಿಅ'** ಶಬ್ದವನ್ನು ನೋಡುವುದು
ವೆಲ್ಲವಿಅ. ವಿ: [ದೇ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ
ವೆಲ್ಲಹಲ}. ವಿ: [ದೇ] ಕೋಮಲವಾದ, ಮೃದುವಾದ
ವೆಲ್ಲಹಲ್ಲ}. (ಸುಪಾ), ವಿಲಾಸಿ, ಸುಂದರವಾದ(ಗಾ)
ವೆಲ್ಲಾ. ಸ್ತ್ರೀ: [ದೇ. ವಲ್ಲೀ] ಬಳ್ಳಿ, ಲತೆ(ದೇ)
ವೆಲ್ಲಾಇಅ. ವಿ: [ದೇ] ಮುದುಡಿದ, ಕುಗ್ಗಿದ, ನಾಚಿಕೊಂಡ
ವೆಲ್ಲಿ. **'ವಲ್ಲಿ'** ಶಬ್ದವನ್ನು ನೋಡುವುದು
ವೆಲ್ಲಿಅ. ವಿ: [ವೇಲ್ಲಿತ] ನಡುಗಿಸಲ್ಪಟ್ಟ ಶಬ್ದವನ್ನು ನೋಡುವುದು, ಅಲ್ಲಾಡಿಸಲ್ಪಟ್ಟ, ಪ್ರೇರಿಸಲ್ಪಟ್ಟ
ವೆಲ್ಲಿರ. ವಿ: [ವೇಲ್ಲಿತೃ] ನಡುಗುವ(ಗಉಡ)
ವೆಲ್ಲೀ. **'ವೇಲ್ಲಿ'** ಶಬ್ದವನ್ನು ನೋಡುವುದು
ವೇವ. ಅಕ: [ವೇಪ್] ನಡುಗು, ಕಂಪಿಸು. **'ವೇವಇ'.** ವ. ಕೃ: **'ವೇ ವಂತ', 'ವೇವಮಾಣ'**
ವೇವಜ್ಝ. ನ: [ವೈವಾಹ್ಯ] ವಿವಾಹ, ಮದುವೆ
ವೇವಣ್ಣ. ನ: [ವೈವರ್ಣ್ಯ] ಬಣ್ಣದ ಬದಲಾವಣೆ, ಪೇಲವ(ಕುಮಾ)
ವೇವಾಇಅ. ವಿ: [ದೇ] ಉಲ್ಲಾಸಗೊಂಡ(ದೇ)
ವೇವಾಹಿಅ. ವಿ: [ವೈವಾಹಿಕ] ವಿವಾಹಕ್ಕೆ ಸಂಬಂಧಿಸಿದ, ವಿವಾಹಕ್ಕೆ ಬಳಸುವ ವಸ್ತು(ಸುಪಾ)
ವೇವಿಅ. ವಿ: [ವೇಪಿತ] ಕಂಪಿಸಲ್ಪಟ್ಟ, ನಡುಗಿಸಲ್ಪಟ್ಟ, ಪು: ಒಂದು ನರಕ–ಸ್ಥಾನ.
ವೇವಿರ. ವಿ: [ವೇಪಿತೃ] ಕಂಪಿಸುವ, ನಡುಗುವ(ಕುಮಾ)
ವೆವ್ವ. ಅ: [ದೇ] ಕರೆಯುವ, ಆಹ್ವಾನ ಸೂಚಕವಾದ ಅವ್ಯಯ
ವೆವ್ವ. ಅ: [ದೇ] ಭಯ, ಹೆದರಿಕೆ, ತಡೆ, ಅಡ್ಡಿ, ವಿಷಾದ, ಖೇದ, ಕರೆ, ಆಹ್ವಾನ ಇವೇ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ವೇಸ. ಪು: [ವೇಷ] ದೇಹದ ಮೇಲೆ ಬಟ್ಟೆ, ಒಡವೆ ಮೊದಲಾದವುಗಳನ್ನು ಧರಿಸಿಕೊಳ್ಳುವುದು, ವಸ್ತ್ರ ಒಡವೆ
ವೇಸ. ವಿ: [ವೈಷ್ಯ] ವಿಶೇಷ ರೂಪದಲ್ಲಿ ಬೇಕಾಗಿರುವ
ವೇಸ. ವಿ: [ವೇಷ] ವಿರೋಧ, ವೈರ, ತಿರಸ್ಕಾರ(ಗಉಡ)
ವೇಸ. ವಿ: [ವೇಷ್ಯ] ವೇಷಕ್ಕೆ ಯೋಗ್ಯವಾದ, ವೇಷೋಚಿತ(ಭಗ)
ವೇಸ. ವಿ: [ದ್ವೇಷ್ಯ] ದ್ವೇಷಿಸಲು ಯೋಗ್ಯವಾದ, ಅಪ್ರೀತಿಕರವಾದ(ಪಉಮ), ಶತ್ರು, ವಿರೋಧಿ (ಸುಪಾ)
ವೇಸ. **'ವಇಸ್ಸ=ವೈಶ್ಯ'** ಶಬ್ದವನ್ನು ನೋಡುವುದು
ವೇಸಇಅ. ವಿ: [ವೈಷಯಿಕ] ವಿಷಯಕ್ಕೆ ಸಂಬಂಧಿಸಿದ, ವಿಷಯಾಸಕ್ತ
ವೇಸಂಪಾಯಣ. **'ವಇಸಂಪಾಯಣ'** ಶಬ್ದವನ್ನು ನೋಡುವುದು
ವೇಸಂಭ. ಪು: [ವಿಶ್ರಂಭ] ವಿಶ್ವಾಸ, ನಂಬಿಕೆ
ವೇಸಂಭಾರ. ಸ್ತ್ರೀ: [ದೇ] ಹಲ್ಲಿ
ವೇಸಕ್ಖಿಜ್ಜ. ನ: [ದೇ] ಶತ್ರುತ್ವ, ದ್ವೇಷ, ವಿರೋಧ(ದೇ)
ವೇಸಣ. ನ: [ದೇ] ಲೋಕಾಪವಾದ, ನಿಂದೆ
ವೇಸಣ. ನ: [ವೇಷಣ] ಜೀರಿಗೆಯೇ ಮೊದಲಾದ ಮಸಾಲೆಗಳು
ವೇಸಣ. ನ: [ವೇಸನ] ಕಡಲೆ ಮೊದಲಾದ ದ್ವಿದಳ ಧನ್ಯಗಳ ಹಿಟ್ಟು
ವೇಸಮಣ. ಪು: [ವೈಶ್ರವಣ] ಯಕ್ಷರಾಜ ಕುಬೇರ(ಪಾಅ), ಇಂದ್ರನ ಉತ್ತರ ದಿಕ್ಕಿನ ಲೋಕಪಾಲ, ಒಂದು ವಿದ್ಯಾಧರ ನಗರ, ಒಬ್ಬ ರಾಜಕುಮಾರ, ಒಬ್ಬ ಸೇಠನ ಹೆಸರು, ಅಹೋರಾತ್ರದ ೧೪ನೇ ಮುಹೂರ್ತ. ಒಂದು ದೇವ–ವಿಮಾನ. ಕ್ಷುದ್ರವಾದ ಹಿಮವಂತನೇ ಮೊದಲಾದ ಪರ್ವತ ಶಿಖರಗಳ ಹೆಸರು. **–ಕಾಇಯ.** ಪು: [**–ಕಾಯಿಕ**] ಕುಬೇರನ ಆಜ್ಞೆಯಲ್ಲಿ ಇರುವ ಒಂದು ದೇವ–ಜಾತಿ. **–ದತ್ತ.** ಪು: [–ದತ್ತ] ಒಬ್ಬ ರಾಜನ ಹೆಸರು(ವಿಪಾ). **–ದೇವಕಾಇಯ.** ಪು: **–ದೇವಕಾಯಿಕ**] ಕುಬೇರನ

ಅಧೀನದಲ್ಲಿರುವ ಒಂದು ದೇವ-ಜಾತಿ -ಪ್ಪಭ. ಪು: [-ಪ್ರಭ] ಕುಬೇರನ ವಿಪತ್ತಿನ ಪರ್ವತದ ಹೆಸರು(ತಾ). -ಭದ್ದ. ಪು: [-ಭದ್ರ] ಒಬ್ಬ ಜೈನಮುನಿ
ವೇಸಮ್ಮ. ನ: [ವೈಷಮ್ಯ] ವಿಷಮತೆ, ಅಸಮಾನತೆ, ಹಳ್ಳ-ತಿಟ್ಟು
ವೇಸರ. ಪುಂಸ್ತ್ರೀ: [ವೇಸರ] ಪಕ್ಷಿ-ವಿಶೇಷ, ಹೇಸರಗತ್ತೆ, ಸ್ತ್ರೀ: -ರೀ
ವೇಸಲಗ. ಪು: [ವೃಷಲ] ಶೂದ್ರ(ಸೂಅ), ಕುದುರೆ
ವೇಸವಣ. ಪು: [ವೈಶ್ರವಣ] ಕುಬೇರ, 'ವೇಸಮಣ' ಶಬ್ದವನ್ನು ನೋಡುವುದು
ವೇಸವಾಡಿಯ. ಪು: [ವೇಶವಾಟಕ] ಒಂದು ಜೈನಮುನಿ-ಗಣ
ವೇಸವಾರ. ಪು: [ವೇಸವಾರ] ಧನಿಯಾ (=ಕೊತ್ತಂಬರಿ) ಮೊದಲಾದ ಮಸಾಲೆಗಳು
ವೇಸಾ. 'ವೆಸ್ಸಾ' ಶಬ್ದವನ್ನು ನೋಡುವುದು
ವೇಸಾಣಿಯ. ಪು: [ವೈಷಾಣಿಕ] ಒಂದು ಅಂತರ್‌ದ್ವೀಪ. ಅಂತರ್ ದ್ವೀಪದಲ್ಲಿ ವಾಸಿಸುವ ಮನುಷ್ಯರು.
ವೇಸಾನರ. 'ವಇಸಾನರ' ಶಬ್ದವನ್ನು ನೋಡುವುದು
ವೇಸಾಯಣ. 'ವೇಸಿಯಾಯಣ' ಶಬ್ದವನ್ನು ನೋಡುವುದು
ವೇಸಾಲಿಅ. ವಿ: [ವೈಶಾಲಿಕ] ಸಮುದ್ರದಲ್ಲಿ ಹುಟ್ಟಿದ, ವಿಶಾಲಾಖ್ಯ ಎಂಬ ಜಾತಿಯುಲ್ಲಿ ಹುಟ್ಟಿದ, ವಿಶಾಲವಾದ, ಅಗಲವಾದ, ಪು: ಭಗವಾನ್ ವೃಷಭದೇವ(ಸೂಅ), ಭಗವಾನ್ ಮಹಾವೀರ
ವೇಸಾಲೀ. ಸ್ತ್ರೀ: [ವೈಶಾಲೀ] ಒಂದು ನಗರದ ಹೆಸರು
ವೇಸಾಮ. 'ವೀಸಾಸ' ಶಬ್ದವನ್ನು ನೋಡುವುದು
ವೇಸಾಸಿಅ. ವಿ: [ವೈಶ್ವಾಸಿಕ, ವಿಶ್ವಾಸ್ಯ] ವಿಶ್ವಾಸ-ಯೋಗ್ಯನಾದ, ನಂಬಲರ್ಹನಾದ, ವಿಶ್ವಾಸ-ಪಾತ್ರ (ಔಪ)
ವೇಸಾಹ. 'ವಇಸಾಹ' ಶಬ್ದವನ್ನು ನೋಡುವುದು
ವೇಸಾಹೀ. ಸ್ತ್ರೀ: [ವೈಶಾಖೀ] ವೈಶಾಖ ಮಾಸದ ಹುಣ್ಣಿಮೆ, ವೈಶಾಖ ಮಾಸದ ಅಮಾವಾಸ್ಯೆ,
ವೇಸಿ. ವಿ: [ದ್ವೇಷಿನ್] ದ್ವೇಷಿಸುವವನು. ಶತ್ರು (ಪಉಮ)
ವೇಸಿಅ. 'ವಇಸಿಅ' ಶಬ್ದವನ್ನು ನೋಡುವುದು
ವೇಸಿಅ. ಪುಂಸ್ತ್ರೀ: [ವೈಶಿಕ] ವೈಶ್ಯ, ವ್ಯಾಪಾರಿ, ನ: ಜೈನೇತರ ಶಾಸ್ತ್ರ-ವಿಶೇಷ, ಕಾಮಶಾಸ್ತ್ರ
ವೇಸಿಅ. ವಿ: [ವೈಷಿಕ] ವೇಷಕ್ಕೆ ಸಂಬಂಧಿಸಿದ, ವೇಷ ಧರಿಸಿದ(ಆಚಾ)
ವೇಸಿಅ. ವಿ: [ವೈಷಿತ] ವಿಶೇಷ ರೂಪದಲ್ಲಿ ಇಷ್ಟಪಟ್ಟ, ವಿವಿಧ ಬಗೆಯಲ್ಲಿ ಬಯಸಲಾದ
ವೇಸಿಟ್ಠ. 'ವಇಸಿಸಿಟ್ಠ' ಶಬ್ದವನ್ನು ನೋಡುವುದು
ವೇಸಿಣೀ. ಸ್ತ್ರೀ: [ದೇ] ವೇಶ್ಯೆ, ವಾರಾಂಗನೆ(ಗಾ)
ವೇಸಿಯಾ. 'ವೆಸ್ಸಾ' ಶಬ್ದವನ್ನು ನೋಡುವುದು
ವೇಸಿಯಾಯಣ. ಪು: [ವೈಶ್ಯಾಯನ] ಒಬ್ಬ ಬಾಲ ತಪಸ್ವಿ(ಭಗ)
ವೇಸೀ. ಸ್ತ್ರೀ: [ವೈಶ್ಯಾ] ವೈಶ್ಯಾ ಸ್ತ್ರೀ
ವೇಸುಮ. ಪು: [ವೇಶ್ಮನ್] ಮನೆ, ಗೃಹ
ವೆಸ್ಸ. 'ವಇಸ್ಸ=ವೈಶ್ಯ' ಶಬ್ದವನ್ನು ನೋಡುವುದು
ವೆಸ್ಸ. 'ವೇಸ=ದ್ವೇಷ್ಯ' ಶಬ್ದವನ್ನು ನೋಡುವುದು
ವೆಸ್ಸಾ. ಸ್ತ್ರೀ: [ವೇಶ್ಯಾ] ಗಣಿಕೆ, ವಾರಾಂಗನೆ, ಸೂಳೆ(ವಿಸೇ), ಒಂದು ಔಷಧ ಸಸ್ಯ
ವೆಸ್ಸಾಸಿಅ. 'ವೇಸಾಸಿಅ' ಶಬ್ದವನ್ನು ನೋಡುವುದು
ವೇಹ. ಸಕ: [ಪ್ರ+ಈಕ್ಷ್] ನೋಡು, ಅವಲೋಕಿಸು
ವೇಹ. ಸಕ: [ವ್ಯಧ್] ರಂಧ್ರ ಕೊರೆ, ಭೇದಿಸು
ವೇಹ. ಪು: [ವೇಧ] ಭೇದನ, ರಂಧ್ರ ಕೊರೆಯುವುದು, ತೂತು ಕೊರೆಯುವುದು, ಮಿಶ್ರಣ, ಪುನರಾಲೋಚನೆ, ಅನುಸರಿಸಿ ನಡೆಯುವುದು, ಹಿಂಬಾಲಿಸುವುದು, ಒಂದು ಬಗೆಯ ಜೂಜು, ಅತ್ಯಂತ ದ್ವೇಷ, ವೈರ
ವೇಹ. ಪು: [ವೇಧಸ್] ವಿಧಿ, ವಿಧಾತ, ವಿಷ್ಣು
ವೇಹಣ. ರಂಧ್ರ ಕೊರೆಯುವುದು, ತೂತು ಕೊರೆಯುವುದು
ವೇಹಮ್ಮ. 'ವಇಧಮ್ಮ' ಶಬ್ದವನ್ನು ನೋಡುವುದು(ಉಪ)
ವೇಹಲ್ಲ. ಪು: [ವಿಹ್ವಲ] ಶ್ರೇಣಿಕ ಮಹಾರಾಜನ ಒಬ್ಬ ಮಗ.
ವೇಹವ. ಸಕ: [ವಂಚ್] ವಂಚಿಸು, ಮೋಸಗೊಳಿಸು
ವೇಹವ. ನ: [ವೈಭವ] ಐಶ್ವರ್ಯ, ಸಂಪತ್ತು, ಉತ್ಕರ್ಷ
ವೇಹವಿಅ. ಪು: [ದೇ] ಅನಾದರ, ತಿರಸ್ಕಾರ, ಕ್ರೋಧಿ, ಕೋಪ ಬಂದವನು, ಕೋಪಿಷ್ಟ(ದೇ)
ವೇಹವಿಅ. ವಿ: [ವಂಚಿತ] ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ
ವೇಹವ್ವ. ನ: [ವೈಧವ್ಯ] ಗಂಡನಿಲ್ಲದಿರುವುದು, ವಿಧವೆಯ ಸ್ಥಿತಿ(ಗಾ)

ವೇಹಾಣಸ. **'ವೇಹಾಯಸ'** ಶಬ್ದವನ್ನು ನೋಡುವುದು (ಆಚಾ)

ವೇಹಾಣಸಿಯ. ವಿ: [ವೈಹಾಯಸಿಕ] ಗಲ್ಲಿಗೆ ನೇತು ಹಾಕಿಕೊಂಡು ಸಾಯುವವನು(ಔಪ)

ವೇಹಾಯಸ. ವಿ: [ವೈಹಾಯಸ] ಆಕಾಶದಲ್ಲಿ ನಡೆಯುವ, ಆಕಾಶಕ್ಕೆ ಸಂಬಂಧಿಸಿದ, **ನ:** ನೇಣುಹಾಕಿಕೊಂಡು ಸಾಯಯುವುದು, **ಪು:** ಶ್ರೇಣಿಕ ಮಹಾರಾಜನ ಒಬ್ಬ ಮಗ.

ವೇಹಾರಿಯ. ವಿ: [ವೈಹಾರಿಕ] ವಿಹಾರಕ್ಕೆ ಸಂಬಂಧಿಸಿದ,

ವೇಹಾಸ. ನ: [ವಿಹಾಯಸ್] ಆಕಾಶ, ಗಗನ(ಣಾಯಾ), ಅಂತರಾಳ, ಮಧ್ಯದ ಬಾಗ(ಸೂಅ)

ವೇಹಾಸ. **'ವೇಹಾಯಸ'** ಶಬ್ದವನ್ನು ನೋಡುವುದು

ವೇಹಿಮ. ವಿ: [**ವೈಧಿಕ, ವೇಧ್ಯ**] ಮುರಿಯಲು ಯೋಗ್ಯವಾದ, ಎರಡು ಭಾಗ ಮಾಡಲು ಅರ್ಹವಾದ, ರಂಧ್ರ ಕೊರೆಯಬಹುದಾದ

ವೈಉಂಠ. **'ವೇಕುಂಠ'** ಶಬ್ದವನ್ನು ನೋಡುವುದು

ವೈಭವ. **'ವೇಹವ'** ಶಬ್ದವನ್ನು ನೋಡುವುದು

ವೋಅಸ. **'ವೊಕ್ಕಸ'** ಶಬ್ದವನ್ನು ನೋಡುವುದು

ವೋಇಯ. ವಿ: [ವ್ಯಪೇತ] ರಹಿತವಾದ, ಇಲ್ಲದ, ವರ್ಜಿತ(ಭವಿ)

ವೊಂಟ. 'ವಿಂಟ=ವೃಂತ'ಶಬ್ದವನ್ನು ನೋಡುವುದು

ವೋಕಿಲ್ಲ. ವಿ: [ದೇ] ಮಿಥ್ಯಾ ವೀರ, ಮನೆಯಲ್ಲಿ ಶೂರ

ವೋಕಿಲ್ಲಿಅ. ನ: [ದೇ] ಮೆಲಕು ಹಾಕುವುದು, ರೋಮಂಥನ

ವೊಕ್ಕ. **ಸಕ:** [**ವಿ+ಜ್ಞಾಪಯ್**] ವಿಜ್ಞಾಪನೆ ಮಾಡು, ಗೌರವ ಪೂರ್ವಕವಾಗಿ ತಿಳಿಸು. **'ವೊಕ್ಕಇ'**

ವೊಕ್ಕ. **ಸಕ:** [**ವ್ಯಾ+ಹೃ, ಉದ್+ನದ್**] ಕರೆ, ಹೇಳು,

ವೊಕ್ಕ. **ಸಕ:** [**ಉದ್+ನಟ್**] ಅಭಿನಯಿಸು, ನಟಿಸು

ವೊಕ್ಕಂತ. ವಿ: [ವ್ಯುತ್ಕ್ರಾಂತ] ವಿರುದ್ಧ ರೀತಿಯಲ್ಲಿ ಇರುವ, ಮೀರಲ್ಪಟ್ಟ, ದಾಟಲ್ಪಟ್ಟ, ದಾಟಿದ, **'ವುಕ್ಕಂತ'** ಶಬ್ದವನ್ನು ನೋಡುವುದು

ವೊಕ್ಕಸ. **ಸಕ:** [**ವ್ಯಪ್+ಕೃಪ್**] ಕೊರತೆ ಉಂಟುಮಾಡು, ಕ್ಷಯ ಉಂಟುಮಾಡು

ವೊಕ್ಕಸ. **'ಬೊಕ್ಕಸ'** ಶಬ್ದವನ್ನು ನೋಡುವುದು

ವೊಕ್ಕಸ. **'ವುಕ್ಕಸ=ವ್ಯುತ್+ಕೃಷ್'** ಶಬ್ದವನ್ನು ನೋಡುವುದು

ವೊಕ್ಕಾ. ಸ್ತ್ರೀ: [ದೇ] ಒಂದು ವಾದ್ಯ-ವಿಶೇಷ

ವೊಕ್ಕಾ. ಸ್ತ್ರೀ: [ವ್ಯಾಹೃತಿ] ಕರೆಯುವುದು(ಉಪ)

ವೊಕ್ಕಾರ. **'ಬೊಕ್ಕಾರ'** ಶಬ್ದವನ್ನು ನೋಡುವುದು

ವೊಕ್ಖ. **'ವೊಕ್ಕ=ಉದ್+ನಟ್'** ಶಬ್ದವನ್ನು ನೋಡುವುದು

ವೊಕ್ಖಂದಯ. **ಪು:** [**ಅವಸ್ಕಂದ**] ಆಕ್ರಮಣ

ವೊಕ್ಖಾರಿಯ. ವಿ: [ದೇ] ಅಲಂಕರಿಸಲ್ಪಟ್ಟ

ವೋಗಡ. ವಿ: [ವ್ಯಾಕೃತ] ಹೇಳಿರುವ, ಪ್ರತಿಪಾದಿಸಲ್ಪಟ್ಟಿರುವ, ಸ್ಪಷ್ಟವಾಗಿ ತೋರುವ

ವೋಗಡಾ. ಸ್ತ್ರೀ: [ವ್ಯಾಕೃತಾ] ಪ್ರಕಟವಾದ ಅರ್ಥವುಳ್ಳ ಭಾಷೆ, ವಿವರಿಸಿ ಹೇಳಲ್ಪಟ್ಟ(ಪಣ್ಣ)

ವೋಗಸಿಅ. ವಿ: [ವ್ಯುತ್ಕರ್ಷಿತ] ಹೊರಗೆ ಅಟ್ಟಲ್ಪಟ್ಟ, ಹೊರಗೆ ಹಾಕಲ್ಪಟ್ಟ

ವೋಚ}. **ಸಕ:** [**ವದ್**] ಹೇಳು, ಮಾತಾಡು. **'ವೋಚಇ'**

ವೊಚ್ಚ}.

ವೊಚ್ಚತ್ಥ. ವಿ: [ವ್ಯತ್ಯಸ್ತ] ವಿರುದ್ಧವಾದ, ವ್ಯತ್ಯಾಸಹೊಂದಿದ, ಬದಲಾವಣೆ ಹೊಂದಿದ

ವೊಚ್ಚತ್ಥ. ನ: [ದೇ] ವಿರುದ್ಧ ಲೈಂಗಿಕತೆ, ವಿರುದ್ಧ ಸ್ತ್ರೀ-ಪುರುಷ ಸಂಗಮ

ವೊಚ್ಚ-. **'ವಯ=ವಚ್'** ಶಬ್ದವನ್ನು ನೋಡುವುದು

ವೊಚ್ಛಿಂದ. **ಸಕ:** [**ವ್ಯುತ್, ವ್ಯವ+ಛಿದ್**] ಮುರಿ, ಒಡೆ, ನಾಶಮಾಡು, ಬಿಡು, **'ವೊಚ್ಛಿಂದಇ'**, **ವ.ಕೃ:** **'ವೊಚ್ಛಿಂದಂತ'**

ವೊಚ್ಛಿಣ್ಣ. **'ವೊಚ್ಛಿನ್ನ'** ಶಬ್ದವನ್ನು ನೋಡುವುದು

ವೊಚ್ಛಿತ್ತಿ. ಸ್ತ್ರೀ: [ವ್ಯವಚ್ಛಿತ್ತಿ] ವಿನಾಶ, **-ಣಯ.** **ಪು:** [-ನಯ] **ಪರ್ಯಾಯ ನೀತಿ,**

ವೊಚ್ಛಿನ್ನ. **'ವುಚ್ಛಿನ್ನ'** ಶಬ್ದವನ್ನು ನೋಡುವುದು(ಭಗ)

ವೊಚ್ಛೇಅ}. **ಪು:** [**ವ್ಯುಚ್ಛೇದ, ವ್ಯವಚ್ಛೇದ**] ವಿನಾಶ,

ವೊಚ್ಛೇದ}. ಅಭಾವ, ತಡೆ, ಅಡ್ಡಿ, ಅಡಚಣೆ(ಉವಾ), ವಿಭಾಗ, ಪ್ರತ್ಯೇಕಿಸುವುದು

ವೊಚ್ಛೇಯಣ. ನ: [ವ್ಯುಚ್ಛೇದನ] ವಿನಾಶ, ಬಿಡುವುದು, ಪರಿತ್ಯಾಗ

ವೊಜ್ಜ. **'ವುಜ್ಜ'** ಶಬ್ದವನ್ನು ನೋಡುವುದು

ವೊಜ್ಜ. **ಸಕ:** [ವೀಜಯ್] ಬೀಸಣಿಗೆಯಿಂದ ಗಾಳಿ ಬೀಸು. **ವ. ಕೃ:** **'ವೋಜ್ಜಂತ'**

ವೊಜ್ಜಿರ. ವಿ: [ತ್ರಸಿತ್ರ] ಹೆದರುವವನು

ವೊಜ್ಝ. **'ವಹ=ವಹ್'** ಶಬ್ದವನ್ನು ನೋಡುವುದು

ವೊಜ್ಝ}. ಪು: [ದೇ] ಭಾರ(ದೇ)
ವೊಜ್ಝಮಲ್ಲ}.
ವೊಜ್ಝರ. ವಿ: [ಅತೀತ] ಕಳೆದುಹೋದ, ಆಗಿಹೋದ, ಹೆದರಿದ, ಭೀತ
ವೊಟ್ಟಿ. ವಿ: [ದೇ] ಲೀನನಾದ, ಕರಗಿಹೋಗಿರುವ, ಸೇರಿಕೊಂಡಿರುವ
ವೋಡ. ವಿ: [ದೇ] ದುಷ್ಟ, ಕಿವಿ ಕತ್ತರಿಸಲ್ಪಟ್ಟವನು, **'ಬೋಡ'** ಶಬ್ದವನ್ನು ನೋಡುವುದು
ವೋಡಹೀ. ಸ್ತ್ರೀ: [ದೇ] ತರುಣಿ, ಯುವತಿ, ಕುವರಾರಿ(ಗಾ). **'ವೊದ್ರಹ'** ಶಬ್ದವನ್ನು ನೋಡುವುದು
ವೊಡ್ಡ. ವಿ: [ದೇ] ಮೂರ್ಖ(ಉವ)
ವೋಢ. ವಿ: [ಊಢ] ಹೊರಿಸಲ್ಪಟ್ಟ
ವೋಢ. ವಿ: [ದೇ] **'ವೋಡ'** ಶಬ್ದವನ್ನು ನೋಡುವುದು
ವೋಢವ್ವ. 'ವಹ= ವಹ್' ಶಬ್ದವನ್ನು ನೋಡುವುದು
ವೋಢು. ವಿ: [ವೋಢೃ] ಭಾರ ಹೊರುವವನು
ವೋಢುಂ. 'ವಹ=ವಹ್' ಶಬ್ದವನ್ನು ನೋಡುವುದು
ವೋಢೂಣ. ಅ: [ಉಡ್ವಾ] **ಹೊತ್ತು ಕೊಂಡು**
ವೊತ್ತವ್ವ. 'ವ=ವಚ್' ಶಬ್ದವನ್ನು ನೋಡುವುದು
ವೊತ್ತುಆಣ. ಅ: [ಉಕ್ತ್ವಾ] **ಹೇಳಿ**
ವೊತ್ತುಂ}. 'ವಯ=ವಚ್' ಶಬ್ದವನ್ನು ನೋಡುವುದು
ವೊತ್ತೂಣ}.
ವೋದಾಣ. ನ: [ವ್ಯವದಾನ] ಕರ್ಮಗಳ ವಿನಾಶ, ಕರ್ಮಗಳ ಶುದ್ಧೀಕರಣ(ಉತ್ತ), ತಪ, ತಪಶ್ಚರ್ಯ, ಒಂದು ವನಸ್ಪತಿ
ವೊದ್ರಹ. ವಿ: [ದೇ] ತರುಣ, ಯುವಕ, ಸ್ತ್ರೀ: –ಹೀ
ವೋಭೀಸಣ. ವಿ: [ದೇ] ಬಡವ, ದೀನ, ದರಿದ್ರ
ವೋಮ. ನ: [ವ್ಯೋಮನ್] ಆಕಾಶ, ಗಗನ. –ಬಿಂದು. ಪು: [–ಬಿಂದು] ಒಬ್ಬ ರಾಜನ ಹೆಸರು(ಪಉಮ)
ವೋಮಜ್ಝ. ಪು: [ದೇ] ಅನುಚಿತ ವೇಷ(ದೇ)
ವೋಮಜ್ಝಿಅ. ನ: [ದೇ] ಅನುಚಿತ ವೇಷವನ್ನು ಧರಿಸುವುದು(ದೇ)
ವೋಮಿಲ. ಪು: [ವ್ಯೋಮಿಲ] ಒಬ್ಬ ಜೈನಮುನಿ
ವೋಮಿಲಾ. ಸ್ತ್ರೀ: [ವ್ಯೋಮಿಲಾ] ಒಂದು ಜೈನ ಮುನಿ ಶಾಖೆ
ವೋಯ. ಪು: [ವೋಕ] ಒಂದು ದೇಶದ ಹೆಸರು
ವೋರಚ್ಛ. ವಿ: [ದೇ] ತರುಣ, ಯುವಕ(ದೇ)
ವೋರಮಣ. ನ: [ವ್ಯುಪರಮಣ] ಹಿಂಸೆ, ಪ್ರಾಣಿವಧೆ
ವೋರಲ್ಲಿ. ಸ್ತ್ರೀ: [ದೇ] ಶ್ರಾವಣ ಮಾಸದ ಶುಕ್ಲ ಚತುರ್ದಶಿಯಲ್ಲಿ ನಡೆಯುವ ಒಂದು ಉತ್ಸವ, ಶ್ರಾವಣ ಶುಕ್ಲ ಚತುರ್ದಶಿ(ದೇ)
ವೋರವಿಅ. ವಿ: [ವ್ಯಪರೋಪಿತ] ಕೊಲ್ಲಲ್ಪಟ್ಟವನು(ವವ)
ವೋರುಟ್ಟೀ. ಸ್ತ್ರೀ: [ದೇ] ಹತ್ತಿಯಿಂದ ತುಂಬಿದ ಬಟ್ಟೆ
ವೋಲ. ಸಕ: [ಗಮ್] ಗಮಿಸು, ನಡೆ, ಕಳೆ, ಹರಡಿಸು, ಪಸರಿಸು, ಮೀರು, ದಾಟು, **ಅಕ:** ಕಳೆ, ಹರಡು. **'ವೋಲಇ'.** ವ. ಕೃ: **'ವೋಲಂತ'**
ವೋಲ. **'ಬೋಲ=ದೇ'** ಶಬ್ದವನ್ನು ನೋಡುವುದು
ವೋಲಟ್ಟ. ಅಕ: [ವ್ಯಪ್+ಲುಟ್] ಹೊಳೆ, ಶೋಭಿಸು
ವೋಲಾವಿಅ. ವಿ: [ಗಮಿತ] ಅತಿಕ್ರಮಿಸಲ್ಪಟ್ಟ, ಮೀರಲ್ಪಟ್ಟ, ದಾಟಲ್ಪಟ್ಟ
ವೋಲಿಅ}. ವಿ: [ಗತ] ಹೊಟು ಹೋದ, ಕಳೆದು
ವೋಲೀಣ}. ಹೋದ, ಹರಡಲಾದ, ಮೀರಿದ, ದಾಟಿದ ಉಲ್ಲಂಘಿಸಲ್ಪಟ್ಟ(ಕುಮಾ)
ವೊಲ್ಲ. ಸಕ: [ಆ+ಕ್ರಮ್] ಆಕ್ರಮಿಸು, ಮುತ್ತಿಗೆ ಹಾಕು
ವೊಲ್ಲಾಹ. ಪು: [ವೌಲ್ಲಾಹ] ದೇಶ–ವಿಶೇಷದಲ್ಲಿ ಹುಟ್ಟಿದ
ವೋವಾಲ. ಪು: [ದೇ] ವೃಷಭ, ಎತ್ತು(ದೇ)
ವೋಸಗ್ಗ. ಪು: [ವ್ಯುತ್ಸರ್ಗ] ಸಂಪೂರ್ಣವಾಇ ತ್ಯಜಿಸುವುದು,
ವೋಸಗ್ಗ}. ಅಕ: [ವಿ+ಕಸ್] ವಿಕಾಸಗೊಳ್ಳು, ಅರಳು,
ವೋಸಟ್ಟ}. ವೃದ್ಧಿಸು. ವ. ಕೃ: **'ವೋಸಟ್ಟಮಾಣ'**
ವೋಸಟ್ಟ. ಸಕ: [ವಿ+ಕಾಸಂಯ್] ಅರಳಿಸು, ವಿಕಾಸಗೊಳಿಸು, ಅಭಿವೃದ್ಧಿ ಮಾಡು
ವೋಸಟ್ಟ. ವಿ: [ವಿಕಸಿತ] ಅರಳಿದ, ವಿಕಾಸ ಹೊಂದಿದ, ಅಭಿವೃದ್ಧಿಹೊಂದಿದ
ವೋಸಟ್ಟ. ವಿ: [ದೇ] ತುಂಬಿ ಖಾಲಿ ಮಾಡಲ್ಪಟ್ಟ
ವೋಸಟ್ಟಿಅ. ವಿ: [ವಿಕಸಿತ] ಅರಳಿದ, ವಿಕಾಸ ಹೊಂದಿದ, ಅಭಿವೃದ್ಧಿಹೊಂದಿದ
ವೋಸಟ್ಠ. ವಿ: [ವ್ಯುತ್ಸೃಷ್ಟ] ಬಿಡಲ್ಪಟ್ಟ, ತ್ಯಜಿಸಲ್ಪಟ್ಟ, ಪರಿಷ್ಕಾರಗೊಂಡಿರದ, ಕಾಯೋತ್ಸರ್ಗದಲ್ಲಿ ಇರುವ
ವೋಸಮಿಯ. ವಿ: [ವ್ಯವಶಮಿತ] ಉಪಶಮನ ಗೊಳಿಸಲ್ಪಟ್ಟ, ಶಾಂತಗೊಳಿಸಲ್ಪಟ್ಟ(ತಾ)
ವೋಸರ}. ಸಕ: [ವ್ಯುತ್+ಸೃಜ್] ಬಿಡು, ತ್ಯಜಿಸು(ಔಪ)
ವೋಸಿರ}.

ವೋಸಿರ. ವಿ: [**ವ್ಯುತ್ಸರ್ಜನ**] ಬಿಡುವವನು, ತ್ಯಜಿಸುವವನು
ವೋಸಿರಣ. ನ: [**ವ್ಯುತ್ಸರ್ಜನ**] ಬಿಡುವುದು, ತ್ಯಜಿಸುವುದು
ವೋಸೇಅ. ವಿ: [**ದೇ**] ಮೇಲುಮುಖವಾಗಿ ಹೋದ
ವೋಹಿತ್ತ. ನ: [**ವಹಿತ್ರ**] ದೋಣಿ, ತೆಪ್ಪ(ಗಾ). **'ಬೋಹಿತ್ಥ'** ಶಬ್ದವನ್ನು ನೋಡುವುದು
ವೋಹಾರ. ನ: [**ದೇ**] ನೀರು ಹೊರುವುದು
ವ್ವುಡ. ಪು: [**ದೇ**] ವಿಟ
ವ್ರಂದ. **'ವಂದ=ವೃಂದ'** ಶಬ್ದವನ್ನು ನೋಡುವುದು
ವ್ರತ್ತ.(ಅಪ). **'ವಯ=ವ್ರತ'** ಶಬ್ದವನ್ನು ನೋಡುವುದು
ವ್ರಾಕೋಸ(ಅಪ). ಪು: [**ವ್ಯಾಕೋಶ**] ಶಾಪ, ನಿಂದೆ, ವಿರುದ್ಧವಾದ ಆಲೋಚನೆ
ವ್ರಾಗರಣ(ಅಪ). **'ವಾಗರಣ'** ಶಬ್ದವನ್ನು ನೋಡುವುದು
ವ್ರಾಡಿ(ಅಪ). ಪು: [**ವ್ಯಾಡಿ**] ಸಂಸ್ಕೃತ ವ್ಯಾಕರಣ ಮತ್ತು ಕೋಶವನ್ನು ರಚಿಸಿದ ಒಬ್ಬ ಮುನಿ(ಪ್ರಾಕೃ)
ವ್ರಾಸ. **'ವಾಸ=ವ್ಯಾಸ'** ಶಬ್ದವನ್ನು ನೋಡುವುದು (ಕುಮಾ)
ವ್ವ. **'ಇವ'** ಶಬ್ದವನ್ನು ನೋಡುವುದು
ವ್ವ. **'ವಾ=ಅ'** ಶಬ್ದವನ್ನು ನೋಡುವುದು(ಪ್ರಾಕೃ)
–ವ್ವಅ. **'ವಯ=ವ್ರತ'** ಶಬ್ದವನ್ನು ನೋಡುವುದು (ಕುಮಾ)
ವ್ವವಸಿಸಿಅ. **'ವವಸಿಅ=ವ್ಯವಸಿತ'** ಶಬ್ದವನ್ನು ನೋಡುವುದು
–ವ್ವಾಜ. **'ವಾಯ=ವ್ಯಾಜ'** ಶಬ್ದವನ್ನು ನೋಡುವುದು
–ವ್ವಾವಾರ. **'ವಾವಾರ=ವ್ಯಾಪಾರ'** ಶಬ್ದವನ್ನು ನೋಡುವುದು
–ವ್ವಾವುಡ. **'ವಾವುಡ'** ಶಬ್ದವನ್ನು ನೋಡುವುದು
–ವ್ವಾಹಿ. **'ವಾಹಿ'** ಶಬ್ದವನ್ನು ನೋಡುವುದು
ವ್ವಿವ. **'ಇವ'** ಶಬ್ದವನ್ನು ನೋಡುವುದು
ವ್ವೇ. ಅ: [**ದೇ**] ಸಂಬೋಧನ ಸೂಚಕ ಅವ್ಯಯ(ಪ್ರಾಕೃ)

ಶ

ಶ. ಅವರ್ಗೀಯ ವ್ಯಂಜನ, ತಾಲುವಿನಲ್ಲಿ(ದವಡೆ) ವಿವೃತ ಪ್ರಯತ್ನದಿಂದ ಹುಟ್ಟುವ ಊಷ್ಮ ವರ್ಣ.
ಶಿಆಲ(ಮಾ). ಪು: [**ಶ್ಯಾಲ**] ಹೆಂಡತಿಯ ಸೋದರ, ಭಾವಮೈದುನ(ಪ್ರಾಕೃ)
ಶ್ಚಿಂಟ(ಮಾ). **'ಚಿಟ್ಠ=ಸ್ಥಾ'** ಶಬ್ದವನ್ನು ನೋಡುವುದು

ಸ

ಸ. ಪು: [ಸ] ಆರನೆಯ ಅವರ್ಗೀಯ ವ್ಯಂಜನ. ವಿವೃತ ಪ್ರಯುತ್ನದಿಂದ ದಂತಸ್ಥಾನದಲ್ಲಿ ಹುಟ್ಟುತ್ತದೆ. ಆದ್ದರಿಂದ ದಂತ್ಯ ಊಷ್ಮ ವರ್ಣ. **–ಅಣ, ಗಣ. ಪು:** [**–ಗಣ**] ಛಂದಸ್ಸಿನಲ್ಲಿ ಪ್ರಸಿದ್ಧವಾದ **'ಸ ಗಣ'**. ಎರಡು ಲಘುಗಳ ನಂತರ ಒಂದು ಗುರು ಇರುವ ಗಣ. **–ಗಾರ. ಪು:** [**–ಕಾರ**] 'ಸ' ಅಕ್ಷರ

ಸ. 'ಸಂ=ಸಮ್' ಶಬ್ದವನ್ನು ನೋಡುವುದು

ಸ. ಪು: [**ಶ್ವನ್**] ನಾಯಿ, ಶ್ವಾನ. **–ಪಾಗ. ಪು:** [**–ಪಾಕ**] ಚಾಂಡಾಲ, **–ಮುಹಿ. ಪುಂಸ್ತ್ರೀ:** [**–ಮುಖಿ**] ನಾಯಿಯ ಹಾಗೆ ವರ್ತಿಸುವುದು, ನಾಯಿಯ ಹಾಗೆ ಬೊಗಳುವುದು(ಣಾಯಾ), **–ವಚ. ಪು:** [**–ಪಚ**] ಚಾಂಡಾಲ, **–ವಾಗ, ವಾಯ. '–ಪಾಗ'** ಶಬ್ದವನ್ನು ನೋಡುವುದು

ಸ. ಅ: [**ಸ್ವರ್**] ಸ್ವರ್ಗ, ದೇವಲೋಕ(ವಿಸೇ)

ಸ. ವಿ: [**ಸತ್**] ಶ್ರೇಷ್ಠ, ಉತ್ತಮ,(ಉವಾ), ವಿದ್ಯಮಾನ. **–ಉರಿಸ. ಪು:** [**–ಪುರುಷ**] ಶ್ರೇಷ್ಠ ಪುರುಷ. ಸಜ್ಜನ(ಗಉಡ). **–ಕ್ಕಯು. ವಿ:** [**–ಕೃತ**] ಸಮ್ಮಾನಿಸಲ್ಪಟ್ಟ, ಆದರಿಸಲ್ಪಟ್ಟ. **–ಕ್ಕಹ. ವಿ:** [**–ಕಥ**] ಸತ್ತನ್ನು ಹೇಳುವವನು. **–ಕ್ಕಿಅ. ನ:** [**–ಕೃತ**] ಸತ್ಕಾರ, ಸವಮ್ಮಾನ. **–ಕ್ಕಯು'** ಶಬ್ದವನ್ನು ನೋಡುವುದು. **–ಗ್ಗಇ. ಸ್ತ್ರೀ:** [**–ಗತಿ**] ಉತ್ತಮ ಗತಿ, ಸ್ವರ್ಗ, ಮುಕ್ತಿ, ಮೋಕ್ಷ. **–ಜ್ಜಣ. ಪು:** [**–ಜ್ಜನ**] ಒಳ್ಳೆಯ ಮನುಷ್ಯ, ಸತ್ಪುರುಷ. **–ತ್ತಮ. ವಿ:** [**–ತ್ತಮ**] ಬಹಳ ಸಾಧು ಮನುಷ್ಯ, ಸಜ್ಜನರಲ್ಲಿ ಅತಿ ಶ್ರೇಷ್ಠ. **–ಥಾಮ. ನ:** [**–ಸ್ಥಾಮನ್**] ಪ್ರಶಸ್ತವಾದ ಬಲ. **ಧಮ್ಮಿಅ. ವಿ:** [**–ಧಾರ್ಮಿಕ**] ಶ್ರೇಷ್ಠ ಧಾರ್ಮಿಕ. **–ನ್ನಾಣ. ನ:** [**–ಜ್ಞಾನ**] **ಉತ್ತಮ ಜ್ಞಾನ. –ಪ್ಪಭ. ವಿ:** [**–ಪ್ರಭ**] ಸುಂದರವಾದ ಪ್ರಭೆ ಉಳ್ಳ. **–ಪ್ಪುರಿಸ್. ಪು:** [**–ಪುರುಷ**] ಸಜ್ಜನ, ಒಳ್ಳೆಯ ಮನುಷ್ಯ, ಕಿಂಪುರುಷ ನಿಕಾಯದ ದಕ್ಷಿಣ ದಿಕ್ಕಿನ ಇಂದ್ರ(ಠಾ), ಶ್ರೀ ಕೃಷ್ಣ, **–ಪ್ಫಲ. ವಿ:** [**–ಫಲ**] ಶ್ರೇಷ್ಠ ಫಲವುಳ್ಳ. **–ಬ್ಭಾವ. ಪು:** [**–ಭಾವ**] ಸಂಭವ, ಉತ್ಪತ್ತಿ(ಉಪ), ಸತ್ವ, ಅಸ್ತಿತ್ವ, ಸುಂದರ ಭಾವ, ಮನಸ್ಸಿನ ಒಳ್ಳೆಯ ಅಭಿಪ್ರಾಯ. ಭಾವಾರ್ಥ, ತಾತ್ಪರ್ಯ, ವಿದ್ಯಮಾನ ಪದಾರ್ಥ(ಅಣು). **–ಭಾವದಾಯುಣಾ. ಸ್ತ್ರೀ:** [**–ಭಾವದರ್ಶನ**] ಆಲೋಚನೆ, ಪ್ರಾಯಶ್ಚಿತ್ತದ ಸಲುವಾಗಿ ಗುರುಹಿರಿಯರ ಮುಂದೆ ತನ್ನ ದೋಷವನ್ನು ಪ್ರಕಟಿಸುವುದು(ಓಘ). **–ಬ್ಭಾವಿಅ. ವಿ:** [**–ಭಾವಿತ**] ಸದ್ಭಾವದಿಂದ ಕೂಡಿದ. **–ಬ್ಭೂಅ. ವಿ:** [**–ಭೂತ**] ಸತ್ಯವಾದ, ವಾಸ್ತವಿಕ, ವಿದ್ಯಮಾನ. **–ಯಾಚಾರ. ಪು:** [**–ಆಚಾರ**] ಪ್ರಶಸ್ತ ಆಚರಣೆ(ರಯಣ). **–ಲ್ಲಗ. ಪು:** [**–ಲಗ**] ಶ್ರೇಷ್ಠವಾದ ಆವರಣ, ಇಂದ್ರಿಯ ಸಂಯಮ. **–ವಾಯ.** [**–ವಾದ**] ಪ್ರಶಸ್ತವಾದ ವಾದ. **–ವಾಯಾ. ಸ್ತ್ರೀ:** [**–ವಾಚ್**] ಪ್ರಶಸ್ತವಾದ ಮಾತು(ಸೂಅ)

ಸ. ಪು: [**ಸ್ವ**] ಆತ್ಮ, ತಾನು(ಉವಾ). ಜ್ಞಾತಿ, ವಿ: ತನ್ನ (ಉವಾ), **ನ:** ಧನ, ಸಮಪತ್ತು, ದ್ರವ್ಯಕರ್ಮ (ಆಚಾ), **–ಕಡಬ್ಭಿ, –ಗಡಬ್ಭಿ.** [**–ಕೃತಭಿದ್**] ತನಗಾಗಿ ಆದಂಥ ಕರ್ಮಗಳನ್ನು ವಿನಾಶ ಮಾಡುವವನು(ಆಚಾ). **–ಜಣ. ಪು:** [**–ಜನ**] ತನ್ನ ಕಡೆಯ ಬಂಧುಗಳು, ನೆಂಟರು, ಜ್ಞಾತಿ. ಆತ್ಮೀಯ ಜನ(ಸ್ವಪ್ನ). **–ತಂತ. ವಿ:**[**–ತಂತ್ರ**] ಸ್ವಾಧೀನ, ಇನ್ನೊಬ್ಬರ ಅಧೀನದಲ್ಲಿಲ್ಲದ. **ನ:** ತನ್ನ ಸಿದ್ಧಾಂತ(ನಿಚೂ).**–ತ್ಥ. ವಿ:** [**–ಸ್ಥ**] ಆರೋಗ್ಯ ವಂತ, ಸುಖದಿಂದಿರುವ(ಪಾಅ). **–ಪಕ್ಖ. ಪು:** [**–ಪಕ್ಷ**] ಸಮಾನ ಧರ್ಮದ, ತನ್ನ ಕಡೆಯವರ ಗುಂಪು. ತನ್ನ ಪಕ್ಷ. **–ಪಾಯ. ನ:** [**–ಪಾತ್ರ**] ತನ್ನ ಹೆಸರು. **–ಪ್ಪಭ. ವಿ:** [**–ಪ್ರಭ**] ತನ್ನಿಂದಲೇ ಹೊಳೆಯುವ. **–ಬ್ಭಾವ,–ಭಾವ. ಪು:** [**–ಭಾವ**] ನಿಸರ್ಗ, **ಪ್ರಕೃತಿ(ಕುಮಾ)**. **–ಭಾವನ್ನು. ವಿ:** [**–ಭಾವಜ್ಞ**] ಸ್ವಭಾವವನ್ನ ಅರಿತವನು. **–ಯಣ. '–ಜಣ'** ಶಬ್ದವನ್ನು ನೋಡುವುದು. **–ರೂಯ, –ರೂವ. ನ:** [**–ರೂಪ**] ಸ್ವಭಾವ (ಉಮಾ), ತನ್ನ ನಿಜವಾದ ಆಕೃತಿ **–ಸಂವೇಯಣ. ನ:** [**–ಸಂವೇದನ**] ಸ್ವಪ್ರತ್ಯಕ್ಷ ಜ್ಞಾನ, ತನ್ನ ವಿಷಯಕವಾದ ಅರಿವು. **–ಹಾಅ, –ಹಾವ. '–ಭಾವ'** ಶಬ್ದವನ್ನು ನೋಡುವುದು. **–ಹಾವವಾದ. ಪು:** [**–ಭಾವವಾದ**] ಸ್ವಭಾವದಿಂದಲೇ ಎಲ್ಲವೂ ಆಗುತ್ತದೆ ಎಂದು

ತಿಳಿಯುವವನು **–ಹಿಅ.** ನ: [**–ಹಿತ**] ತನ್ನ ಹಿತ, ತನ್ನ ಒಳಿತು, ವಿ: ತನಗೆ ಒಳ್ಳೆಯದನ್ನು ಮಾಡಿಕೊಳ್ಳುವವನು.

ಸ–. ವಿ: [**ಸ–.**] ಸಹಿತ, ಕೂಡಿದ, ಸಮಾನ, ಸದೃಶ, **–ಅಣ್ಹ.** ವಿ: [**–ತೃಷ್ಣ**] ಉತ್ಸುಕನಾದ(ಗಾ), **–ಅರ.** ವಿ: [**–ಕರ**] ಕರ ಸಹಿತವಾದ. **–ಅರ.** ವಿ: [**–ಗರ**] **ವಿಷಯುಕ್ತ, ವಿಷದಿಂದ ಕೂಡಿದ.** **–ಇಣ್ಹ.** **'–ಅಣ್ಹ'** ಶಬ್ದವನ್ನು ನೋಡುವುದು **–ಉಣ.** ವಿ: [**–ಗುಣ**] ಗುಣದಿಂದ ಕೂಡಿದ **–ಉಣ್ಣ, –ಉನ್ನ.** ವಿ: [**–ಪುಣ್ಯ**] ಪುಣ್ಯದಿಂದ ಕೂಡಿದ, ಪುಣ್ಯಶಾಲಿ. **–ಓಸ.** ವಿ: [**–ತೋಷ**] ಸಂತುಷ್ಟ, **–ಓಸ.** ವಿ: [**–ದೋಷ**]ದೋಷದಿಂದ ಕೂಡಿದ. **–ಕಾಮ.** ವಿ: [**–ಕಾಮ**] ಕಾಮಾಸಕ್ತಿ ಉಳ್ಳವ, ವಿಷಯಾಭಿಲಾಷೆಯಿಂದ ಕೂಡಿದ, ಬಯಸಿದ್ದನ್ನೆಲ್ಲ ಪಡೆದವನು. ಇಚ್ಛೆ ಉಳ್ಳವ, **–ಕಾಮಣಿಜ್ಜರಾ.** ಸ್ತ್ರೀ: [**–ಕಾಮನಿರ್ಜರಾ**] ಕರ್ಮ ನಿರ್ಜರೆಯ ಒಂದು ಪ್ರಭೇದ. **–ಕಾಮಮರಣ.** ನ: [**–ಕಾಮಮರಣ**] ಪಂಡಿತ ಮರಣ(ಉತ್ತ). **–ಕೇಯ.** ವಿ: [**–ಕೇತ**] ಗೃಹಸ್ಥ, ಪ್ರತ್ಯಾಖ್ಯಾನ–ವಿಶೇಷ. **–ಕ್ಖರ.** ವಿ: [**ಸಾಕ್ಷರ**] ವಿದ್ಯಾ ವಂತ, ತಿಳಿದವನು. **–ಗಾರ.** ವಿ: [**ಸಾಗಾರ**] ಗೃಹಸ್ಥ. **–ಗಾರ.** ವಿ: [**ಸಾಕಾರ**] ಆಕಾರದಿಂದ ಕೂಡಿದ. **–ಗುಣ.** ವಿ: [**–ಗುಣ**] ಗುಣ ವಂತ, ಗುಣಿ(**ಉವ**).**–ಗ್ಗ.** ವಿ: [**ಸಾಗ್ರ**] ಶ್ರೇಷ್ಠ, ಉತ್ತಮ. **–ಗ್ಗಹ.** ವಿ: [**–ಗ್ರಹ**] ದುಷ್ಟ ಗ್ರಹ–ಪೀಡಿತ**–ಘಿಣ.** ವಿ; [**–ಘೃಣ**] ದಯಾಳು(ಅಚ್ಚು). **–ಚಕ್ಖು, –ಚಕ್ಖುಅ.** ವಿ: [**–ಚಕ್ಷುಷ್,–ಚಕ್ಷುಷ್ಕ**] ಕಣ್ಣುಳ್ಳ. **–ಚಿತ್ತ.** ವಿ: [**–ಚಿತ್ತ**] ಚೇತನದಿಂದ ಕೂಡಿದ, ಜೀ ವಂತ.**–ಚೇಯಣ.** ವಿ: [**–ಚೇತನ**] **ಅದೇ ಅರ್ಥ.** **–ಚ್ಚಿತ್ತ.** **'–ಚಿತ್ತ'** ಶಬ್ದವನ್ನು ನೋಡುವುದು(ಓಘ). **–ಜಿಯ.** **'–ಜ್ಜೀಅ'** ಶಬ್ದವನ್ನು ನೋಡುವುದು **–ಜೋಇ.** ವಿ: [**–ಜ್ಯೋತಿಷ್**] ಪ್ರಕಾಶದಿಂದ ಕೂಡಿದ, **–ಜೋಣಿಯ.** ವಿ: [**–ಯೋನಿಕ**] ಸಂಸಾರಿ, ಉತ್ಪತ್ತಿ ಸ್ಥಾನವುಳ್ಳ, ಸಮಾನವಾದ ಉತ್ಪತ್ತಿ ಸ್ಥಾನವುಳ್ಳ. **–ಜ್ಜೀಅ, ಜ್ಜೀವ.** ವಿ: [**–ಜೀವ**] ಜೀವವುಳ್ಳ, ಚೈತನ್ಯಯುಕ್ತ, ಧನುಸ್ಸಿನ ಹೆದೆ ಉಳ್ಳ. ನ: ಕಲಾ–ವಿಶೇಷ, ವ್ಯುತವಾದ ಧಾತುವೇ ಮೊದಲಾದುವನ್ನು ಜೀವಿತಗೊಳಿಸುವ **ಜ್ಞಾನ** (**ಔಪ**). **–ಡ್ಢ.** ವಿ: [**ಸಾರ್ಧ**] ಒಂದೂವರೆ. **–ಡ್ಢಕಾಲ.** **ಪು:** [**ಸಾರ್ಧಕಾಲ**] ಒಂದು ಬಗೆಯ ತಪಸ್ಸು. **–ಣಪ್ಪಯ, –ಣಪ್ಫದ, –ಣಪ್ಫಯ.** ವಿ: [**–ನಖಪದ**] ಉಗುರಿನಿಂದ ಕೂಡಿದ ಪಾದವುಳ್ಳ, ಹುಲಿ ಸಿಂಹ ಮೊದಲಾದ ಕಾಡುಮೃಗಗಳು (**ಸೂಅ**). **–ಣಾಹ.** ವಿ: [**–ನಾಥ**] ಒಡೆಯನುಳ್ಳವನು, ಯಜಮಾನನುಳ್ಳವ. **–ತ್ತಣ್ಹ.** ವಿ: [**–ನಾಥ**] ಉತ್ಕಂಠಿತ, ಉತ್ಸುಕನಾದ. **–ತ್ತರ.** ವಿ: [**–ತ್ವರ**] ವೇಗದಿಂದ ಕೂಡಿದ. ನ: ಶೀಘ್ರ, ಬೇಗನೆ(ಸುಪಾ). **–ದ್ಧ.** ವಿ: [**ಸಾರ್ಧ**] ಒಂದೂವರೆ. **–ಧವಾ.** ಸ್ತ್ರೀ: [**–ಧವಾ**] ಮುತ್ತೈದೆ; ಯಾರ ಗಂಡ ಬದುಕಿದ್ದಾನೋ ಆಕೆ. **–ನಯ.** ವಿ: [**–ನಯ**] ನ್ಯಾಯದಿಂದ ಕೂಡಿದ, **–ಪಕ್ಖ.** ವಿ: [**–ಪಕ್ಷ**] ರೆಕ್ಕೆ ಉಳ್ಳ, ರೆಕ್ಕೆಯಿಂದ ಕೂಡಿರುವ, ನೆರವು ನೀಡುವವನು, ಮಿತ್ರ(ಪವ) ದಕ್ಷಿಣದ ಕಡೆಯಿಂದ ಸಮಾನ ಹತ್ತಿರದಲ್ಲಿರುವ. **–ಪುನ್ನ.** ವಿ: [**–ಪುಣ್ಯ**] ಪುಣ್ಯಶಾಲಿ, ಪುಣ್ಯ ವಂತ(ಸುಪಾ). **–ಪ್ಪಭ.** ವಿ: [**–ಪ್ರಭ**] ಪ್ರಭೆಯಿಂದ ಕೂಡಿದ. **–ಪ್ಪರಿಆವ, –ಪ್ಪರಿತಾವ.** ವಿ: [**–ಪರಿತಾಪ**] ಸಂತಾಪದಿಂದ ಕೂಡಿದ, ವ್ಯಥೆಯಿಂದ ಕೂಡಿದ. **–ಪ್ಪಿಸಲ್ಲಗ.** ವಿ: [**–ಪಿಶಾಚಕ**] ಪಿಶಾಚಿ ಹಿಡಿದ(ಪಣ್ಹ). **–ಪ್ಪಿವಾಸ.** ವಿ: [**–ಪಿಪಾಸ**] ಬಾಯಾರಿದ, ಬಾಯಾರಿಕೆಇಂದ ಕೂಡಿದ. **–ಪ್ಪಿಹ.** ವಿ: [**–ಸ್ಪೃಹ**] ಆಸೆ ಹೊಂದಿರುವ. **ಪ್ಫಂದ.** ವಿ: [**–ಸ್ಪಂದ**] ಚಲನೆ ಉಳ್ಳ, ಮಿಡಿತವುಳ್ಳ, ಸ್ಪಂದನದಿಂದ ಕೂಡಿದ. **–ಪ್ಫಲ, –ಫಲ.** ವಿ: [**–ಫಲ**] **ಸಾರ್ಥಕವಾದ(ಸೇ).** **–ವ್ವಲ.** ವಿ: [**–ಬಲ**] **ಬಲಿಷ್ಠ.** **–ಭಲ.** **'–ಫಲ'** ಶಬ್ದವನ್ನು ನೋಡುವುದು. **–ಮಣ.** ವಿ: [**–ಮನಸ್**] ವಿವೇಕ–ಬುದ್ಧಿ ಹೊಂದಿರುವ. ಸಮಾನ ಮನಸ್ಸು ಹೊಂದಿರುವ, ರಾಗದ್ವೇಷಾದಿ ರಹಿತನಾದ ಮುನಿ. **–ಮಣಕ್ಖ.**ವಿ: [**–ಮನಸ್ಕ**] ಅದೇ ಅರ್ಥ(ಸೂಅ). **–ಮಯ.** ವಿ; [**–ಮದ**] ಮದದಿಂದ ಕೂಡಿದ. **–ಮಹಿಡ್ಢಿಅ.** ವಿ: [**–ಮಹರ್ದ್ಧಿಕ**] ಮಹಾ ವೈಭವದಿಂದ ಕೂಡಿದ. **–ಮಿರಿಈಅ, –ಮಿರೀಯ.** ವಿ: [**–ಮರೀಚಿಕ**] ಕಿರಣವುಳ್ಳ(ಔಪ). **–ಮೇರ.** ವಿ: [**–ಮರ್ಯಾದ**] ಮರ್ಯಾದೆಯಿಂದ

ಕೂಡಿದ, ಮಿತಿಯಿಂದ ಕೂಡಿದ. **–ಯಣ್ಹ.** ವಿ: [–ತೃಷ್ಣ] ಬಾಯಾರಿಕೆಯಿಂದ ಕೂಡಿದ. **–ಯಾಣ.** ವಿ: [–ಜ್ಞಾನ] ತಿಳಿದವನು. **–ಯೋಗಿ.** ವಿ: [–ಯೋಗಿನ್] ಯೋಗವುಳ್ಳ. ನ: ೧೩ನೇ **ಗುಣ–ಸ್ಥಾನಕ.** **–ರಯ.** ವಿ: [–ರತ] ಕಾಮಿ, ರತದಿಂದ ಕೂಡಿದ. **–ರಹಸ.** ವಿ: [–ರಭಸ] ವೇಗದಿಂದ ಕೂಡಿದ. ಚಂಚಲ(ಗಾ). **–ರಾಗ.** ವಿ: [–ರಾಗ] ರಾಗಸಹಿತ. **–ರಾಗಸಂಜತ, –ರಾಗಸಂಜಯ.** ವಿ: [ರಾಗಸಂಯತ] ರಾಗಗಳು ಕಡಿಮೆಯಾಗದೆ ಇರುವ ಸಂನ್ಯಾಸಿ (ಪಣ್ಣ). **–ರೂವ.** ವಿ: [–ರೂಪ] ಸಮಾನ ರೂಪವುಳ್ಳ. **–ಲೂಣ.** ವಿ: [–ಲವಣ] ಲಾವಣ್ಯದಿಂದ ಕೂಡಿದ. **–ಲೋಗ.** ವಿ: [–ಲೋಕ] ಸಮಾನ, ಸದೃಶ. **–ಲೋಣ.** **'–ಲೂಣ'** ಶಬ್ದವನ್ನು ನೋಡುವುದು. ಸ್ತ್ರೀ: **–ಲೋಣೀ.** **–ವಕ್ಖ.** **'ಪಕ್ಖ'** ಶಬ್ದವನ್ನು ನೋಡುವುದು(ಭವಿ). **–ವಣ:** [–ವ್ರಣ] ಗಾಯಗೊಂಡಿರುವ **–ವಯ.** ವಿ: [–ವಯಸ್] ಸಮಾನ ವಯಸ್ಸಿನ, **–ವಯ.** ವಿ: [–ವ್ರತ] ವ್ರತಧಾರಿ(ಸುಪಾ). **–ವಾಯ.** ವಿ: [–ವಾದ] ವಾದಸಹಿತ(ಸೂಅ). **–ವಾಸ.** ವಿ:[–ವಾಸ] ಒಂದೇ ದೇಶ, ಸ್ಥಳದಲ್ಲಿ ವಾಸಿಸುತ್ತಿರುವ. **–ವಿಜ್ಜ.** ವಿ: [–ವಿದ್ಯ] ವಿದ್ವಾನ್. **–ವ್ವಣ.** **'–ವಣ'** ಶಬ್ದವನ್ನು ನೋಡುವುದು. **–ವ್ವವೇಕ್ಖ.** ವಿ: [–ವ್ಯಪೇಕ್ಷ] ಸಾಪೇಕ್ಷ, ಬೇರೆಯವರ ಬಗ್ಗೆ ಕಾಳಜಿ ಹೊಂದಿರುವ. **–ವ್ವಾವ.** ವಿ: [–ವ್ಯಾಪ] ವ್ಯಾಪಕವಾದ(ಭಗ). **–ವ್ವಿವರ.** ವಿ: [–ವಿವರ] ವಿಸ್ತಾರದಿಂದ ಕೂಡಿದ, ವಿವರಣೆಯಿಂದ ಕೂಡಿದ. **–ಸಂಕ.** ವಿ: [–ಶಂಕ] ಸಂದೇಹದಿಂದ ಕೂಡಿದ. **–ಸಂಕಿಅ.** ವಿ: [–ಶಂಕಿತ] ಅದೇ ಅರ್ಥ. **–ಸತ್ತಾ.** ಸ್ತ್ರೀ: [–ಸತ್ತ್ವಾ] ಗರ್ಭಿಣಿ ಹೆಂಗುಸು (ಉತ್ತ). **–ಸಿರಿಯ, –ಸಿರೀಯ.** ವಿ: [–ಶ್ರೀಕ] ಶೋಭೆಯಿಂದ ಕೂಡಿದ **–ಸಿಹ.** ವಿ: [–ಸ್ಪೃಹ] ಆಸೆಹೊಂದಿರುವ, ಸ್ಪೃಹೆ ಉಳ್ಳ. **–ಸಿಹ.** ವಿ: [–ಶಿಖ] ಶಿಖೆ ಉಳ್ಳ. **–ಸೂಗ.** ವಿ: [–ಶೂಕ] ಶೋಕದಿಂದ ಕೂಡಿದ. **–ಸ್ಸಿರಿಅ, –ಸ್ಸಿರೀಅ.** **'–ಸಿರಿಅಯ'** ಶಬ್ದವನ್ನು ನೋಡುವುದು (ಭಗ)

ಸಅ. ಸಕ: [ಸ್ವದ್] ಪ್ರೀತಿಸು, ಅಗಿ, ರುಚಿನೋಡು **'–ಸಅಇ'**

ಸಅ. ನ: [ಸದಸ್] ಸಭೆ.

ಸಅಅ. ನ: [ದೇ] ಶಿಲೆ, ಕಲ್ಲು ಹಾಸು, ವಿ: ಪುಡಿಮಾಡಲ್ಪಟ್ಟ(ದೇ)

ಸಅಕ್ಖಗತ್ತ. ಪು: [ದೇ] ಜೂಜುಕೋರ

ಸಅಜ್ಜಿಅ}. **ಪುಂಸ್ತ್ರೀ:** [ದೇ] ನೆರೆಮನೆಯವನು(ಗಾ),
ಸಅಜ್ಝಿಅ}. ನೆರೆಯವನು. ಸ್ತ್ರೀ: **–ಆ**(ಗಾ). **'–ಸಇಜ್ಝಿಅ'** ಶಬ್ದವನ್ನು ನೋಡುವುದು.

ಸಅಡಿಆ. **'ಸಗಡಿಆ'** ಶಬ್ದವನ್ನು ನೋಡುವುದು.

ಸಅಢ. ಪು: [ದೇ] ಉದ್ದ ಕೂದಲು(ದೇ)

ಸಅಢ. ಪು: [ಶಕಟ] ಒಬ್ಬ ರಾಕ್ಷಸ, **ಪುಂನ:** ಗಾಡಿ. **ಸಅಢಾರಿ.** [ಪು: **ಶಕಟಾರಿ**] ಶ್ರೀಕೃಷ್ಣ. **'ಸಗಡ'** ಶಬ್ದವನ್ನು ನೋಡುವುದು.

ಸಅರ. **'ಸ–ಅರ=ಸ–ಕರ, ಸ–ಗರ'** ಶಬ್ದವನ್ನು ನೋಡುವುದು.

ಸಅರ. **'ಸಗರ'** ಶಬ್ದವನ್ನು ನೋಡುವುದು.

ಸಆ. ಅ: [ಸದಾ] ಯಾವಾಗಲೂ, ನಿರಂತರವಾಗಿ. **–ಚಾರ.** **ಪು:** [–ಚಾರ] ನಿರಂತರ ಚಲನೆ

ಸಆ. ಸ್ತ್ರೀ: [ಸ್ರಜ್] ಹಾರ, ಮಾಲೆ

ಸಇ. **'ಸಆ=ಸದಾ'** ಶಬ್ದವನ್ನು ನೋಡುವುದು.

ಸಇ. ಅ: [ಸಕೃತ್] ಒಂದು ಬಾರಿ, ಒಂದು ಸಲ

ಸಇ. ಸ್ತ್ರೀ: [ಸ್ಮೃತಿ] ಸ್ಮರಣೆ, ನೆನಪು, **–ಕಾಲ.** **ಪು:** [–ಕಾಲ] ಭಿಕ್ಷೆ ಸಿಕ್ಕುವ ಸಮಯ.

ಸಇ. **'ಸ=ಸ್ವ'** ಶಬ್ದವನ್ನು ನೋಡುವುದು.

ಸಇ. **ಸಯ=ಶತ'** ಶಬ್ದವನ್ನು ನೋಡುವುದು. **–ಕೋಡಿ.** ಸ್ತ್ರೀ: [–ಕೋಟಿ] ಒಂದು ನೂರು ಕೋಟಿ

ಸಇ. **'ಸಇಂ=ಸ್ವಯಮ್'** ಶಬ್ದವನ್ನು ನೋಡುವುದು.

ಸ ಇ–. **'ಸ ಈ=ಸತೀ'** ಶಬ್ದವನ್ನು ನೋಡುವುದು (ಸುಪಾ)

ಸಇಅ. ವಿ: [ಶತಿಕ] ನೂರರ ಪರಿಣಾಮವುಳ್ಳ. **'ಸಇಗ'** ಶಬ್ದವನ್ನು ನೋಡುವುದು.

ಸಇಅ. ವಿ: [ಶಯಿತ] ಸುಪ್ತ, ಮಲಗಿರುವ, ನಿದ್ರಿಸಿರುವ(ಗಾ)

ಸಇಪಿಲ್ಲಯ. **'ಸ=ಸ್ವ'** ಶಬ್ದವನ್ನು ನೋಡುವುದು.

ಸಇಂ. **'ಸಇ=ಸಕೃತ್'** ಶಬ್ದವನ್ನು ನೋಡುವುದು.

ಸಇಂ **'ಸಯಂ=ಸ್ವಯಂ'** ಶಬ್ದವನ್ನು ನೋಡುವುದು.

ಸಇಗ. ವಿ: [ಶತಿಕ] ನೂರರ ಬೆಲೆಯ
ಸಇಜ್ಝ}. **ಪುಂಸ್ತ್ರೀ:** [ದೇ] ನೆರೆಯವನು. ಸ್ತ್ರೀ: ಆ(ಸುಪಾ)
ಸಇಜ್ಝಿಅ}. ಸಇಜ್ಝಿಅ. ನ: [ದೇ] ನೆರೆತನ
ಸಇಣ್ಣ. ನ: [ಸೈನ್ಯ] ಸೇನೆ
ಸಇತ್ತ ಏ. '**ಸಯ= ಶೀ**' ಶಬ್ದವನ್ನು ನೋಡುವುದು.
ಸಇದಂಸಣ. ವಿ: [ಸ್ಮೃತಿದರ್ಶನ] ಮನಸ್ಸಿನಲ್ಲಿ ಕಂಡುಬಂದ, ಮನಸ್ಸಿನಲ್ಲಿ ಅವಲೋಕಿಸಿದ, ಹೊಳೆದ
ಸಇದಿಟ್ಠ. ವಿ: [ಸ್ಮೃತಿದೃಷ್ಟ] ಮೇಲಿನ ಶಬ್ದವನ್ನು ನೋಡುವುದು.
ಸಇನ್ನ. '**ಸಇಣ್ಣ**'ಶಬ್ದವನ್ನು ನೋಡುವುದು.
ಸಇಮ. ವಿ: [ಶತತಮ] ನೂರನೆಯ
ಸಇರ. ನ: [ಸ್ವೈರ] ಸ್ವೇಚ್ಛೆ, ಇಷ್ಟಬಂದಂತೆ ನಡೆದುಕೊಳ್ಳುವುದು, ಸ್ವಚ್ಛಂದತೆ, ವಿ: ಮಂದ ಅಲಸಿ, ಸೋಮಾರಿ(ಪಾಅ). ಸ್ವೈರಿ, ಸ್ವತಂತ್ರವಾಗಿರುವವನು, ಸ್ವಚ್ಛಂದಿಯಾದ
ಸಇರವಸಹ. ಪು: [ದೇ. ಸ್ವೈರವೃಷಭ] ಸ್ವಚ್ಛಂದಿಯಾದ ಗೂಳಿ, ಯಾರದೇ ಅಂಕೆಯಿಲ್ಲದ ಗೂಳಿ
ಸಇರಿ. ವಿ: [ಸ್ವೈರಿನ್] ಸ್ವಚ್ಛಂದಿ, ತನ್ನ ಇಷ್ಟಬಂದಂತೆ ನಡೆದುಕೊಳ್ಳುವವನು(ಗಚ್ಛ)
ಸಇರಿಣೀ. ಸ್ತ್ರೀ: [ಸ್ವೈರಿಣೀ] ವ್ಯಭಿಚಾರಿಣಿ, ಕುಲಟೆ
ಸಇಲ. '**ಸೇಲ**' ಶಬ್ದವನ್ನು ನೋಡುವುದು.
ಸಇಲಂಭ. ವಿ: [ದೇ. ಸ್ಮೃತಿಲಂಭ] '**ಸಇದಂಸಣ**' ಶಬ್ದವನ್ನು ನೋಡುವುದು.
ಸಇಲಾಸಅ}. **ಪು:** [ದೇ] ನವಿಲು
ಸಇಲಾಸಿಅ}.
ಸಇವ. **ಪು:** [ಸಚಿವ] ಮಂತ್ರಿ, ಸಚಿವ, ಅಮಾತ್ಯ (ಪಾಅ), ಸಹಾಯಕ, ನೆರವು ನೀಡುವವನು, ಕಪ್ಪುದತ್ತೂರಿ ಗಿಡ(ಪ್ರಾಕೃ)
ಸಇಸಿಲಿಂಬ. **ಪು:** [ದೇ] ಷಣ್ಮುಖ, ಸ್ಕಂದ
ಸಇಸುಹ. ವಿ: [ದೇ. ಸ್ಮೃತಿಸುಖ] '**ಸಇದಂಸಣ**' ಶಬ್ದವನ್ನು ನೋಡುವುದು.
ಸಈ. ಸ್ತ್ರೀ: [ಶಚೀ] ಇಂದ್ರಾಣಿ, ಶಕ್ರೇಂದ್ರನ ಪಟ್ಟದ ರಾಣಿ(ಪಾಅ). **–ಸ.** **ಪು:** [–ಶ] ಇಂದ್ರ, '**ಸಚೀ**' ಶಬ್ದವನ್ನು ನೋಡುವುದು.
ಸಈ. ಸ್ತ್ರೀ: [ಸತೀ] ಪತಿವ್ರತೆಯಾದ ಹೆಣ್ಣು, **–ಸಈ.** ಸ್ತ್ರೀ: [–ಶತೀ] ನೂರು
ಸಇಣಾ. ಸ್ತ್ರೀ: [ದೇ] ತೊಗರಿ ಧಾನ್ಯ(ತಾ)
ಸಉ}. (ಅಪ). '**ಸಹು**' ಶಬ್ದವನ್ನು ನೋಡುವುದು.
ಸಉಂ}.
ಸಉಂತ. **ಪು:** [ಶಕುಂತ] ಪಕ್ಷಿ, ಹಕ್ಕಿ, ಭಾಸ ಪಕ್ಷಿ, ಹದ್ದು
ಸಉಂತಲಾ. ಸ್ತ್ರೀ: [ಶಕುಂತಲಾ] **ಸಉಂದಲಾ(ಶೌ).** ವಿಶ್ವಾಮಿತ್ರ ಋಷಿಯ ಮಗಳು ಮತ್ತು ದುಷ್ಯಂತನ ಹೆಂಡತಿ(ಅಭಿ)
ಸಉಣ. ವಿ: [ದೇ] ಪ್ರಸಿದ್ಧವಾದ
ಸಉಣ, ಪುಂನ: [ಶಕುನ] ಶುಭಾಶುಭಗಳನ್ನು ಸೂಚಿಸುವ ಬಾಹು–ಸ್ಪಂದನ, ಕಾಗೆಯ ದರ್ಶನವೇ ಮೊದಲಾದ ಶಕುನಗಳು **ಪು:** ಪಕ್ಷಿ, ಪಕ್ಷಿ ವಿಶೇಷ, **–ವಿಉ.** ವಿ: [–ವಿದ್] ಶಕುನವನ್ನು ಬಲ್ಲವನು, **–ರುಅ.** ನ: [–ರುತ] ಪಕ್ಷಿಯ ದನಿ, ಶಕುನದ ಪರಿಜ್ಞಾನ(ಣಾಯಾ)
ಸಉಣ. '**ಸ–ಉಣ=ಸ–ಗುಣ**' ಶಬ್ದವನ್ನು ನೋಡುವುದು.
ಸಉಣಿ. **ಪು:** [ಶಕುನಿ] ಪಕ್ಷಿ, ಹಕ್ಕಿ, ಮುಂಡುಮುಳುಕನ ಹಕ್ಕಿ, ಹದ್ದು, ಜ್ಯೋತಿಷ್ಯದಲ್ಲಿ ಪ್ರಸಿದ್ಧವಾದ ಸ್ಥಿರ–ಕರಣ; ಇದು ಕೃಷ್ಣ ಚತುರ್ದಶಿಯ ದಿನದ ರಾತ್ರಿಯಲ್ಲಿ ಸದಾ ಇರುತ್ತದೆ. ನಪುಂಸಕ–ವಿಶೇಷ, ದುರ್ಯೋಧನನ ಮಾವ(ಣಾಯಾ)
ಸಉಣಿಅ. '**ಸಾಉಣಿಅ**' ಶಬ್ದವನ್ನು ನೋಡುವುದು.
ಸಉಣಿಆ}. ಸ್ತ್ರೀ: [**ಶಕುನಿಕಾ, ನೀ**] ಹೆಣ್ಣು ಪಕ್ಷಿ, ಹೆಣ್ಣು
ಸಉಣಿಗಾ}. ಗುಬ್ಬಚ್ಚಿ
ಸಉಣೀ}.
ಸಉಣ್ಣ. '**ಸ–ಉಣ್ಣ=ಸಪುಣ್ಯ**' ಶಬ್ದವನ್ನು ನೋಡುವುದು.
ಸಉತ್ತೀ. ಸ್ತ್ರೀ: [ಸಪತ್ನೀ] ಸವತಿ, ಗಂಡನ ಇನ್ನೊಬ್ಬ ಹೆಂಡತಿ
ಸಉನ್ನ. '**ಸ–ಉನ್ನ**' ಶಬ್ದವನ್ನು ನೋಡುವುದು.
ಸಉಮ. **ಪು:** [ಸದ್ಮನ್] ಮನೆ, ಗೃಹ
ಸಉಮಾರ. ವಿ: [ಸುಕುಮಾರ] ಕೋಮಲವಾದ,
ಸಉರ. **ಪು:** [ಸೌರ] ಶನಿ ಗ್ರಹ, ಯಮ, ಔದುಂಬರ ವೃಕ್ಷ(ಅತ್ತಿಮರ), ವಿ: ಸೂರ್ಯನ ಉಪಾಸಕ, ಸೂರ್ಯನಿಗೆ ಸಂಬಂಧಿಸಿದ
ಸಉರಿ. **ಪು:** [ಶೌರಿ] ವಿಷ್ಣು, ಕೃಷ್ಣ(ಪಾಅ)

ಸಉರಿಸ. **'ಸ–ಉರಿಸ=ಸತ್ಪುರುಷ'** ಶಬ್ದವನ್ನು ನೋಡುವುದು.

ಸಉಲ. ಪು: [ಶಕುಲ] ಮೀನು

ಸಉಲಿಅ. ವಿ: [ದೇ] ಪ್ರೇರಿಸಲ್ಪಟ್ಟ

ಸಉಲಿಆ}. ಸ್ತ್ರೀ: [ದೆ. ಶಕುನಿಕಾ, ನೀ] ಹೆಣ್ಣು ಗುಬ್ಬಚ್ಚಿ.

ಸಉಲೀ}. ಹೆಣ್ಣು ಹದ್ದು, ಒಂದು ಮಹಾ ಔಷಧಿ, **–ವಿಹಾರ. ಪು: [–ವಿಹಾರ]** ಗುಜರಾತಿನ ಭರೌಚ ನಗರದ ಒಂದು ಪ್ರಾಚೀನ ಜೈನ ದೇವಾಲಯ.

ಸಉಹ. ಪು: [ಸೌಧ] ರಾಜನ ಅರಮನೆ, **ನ:** ಬೆಳ್ಳಿ, **ಪು:** ಬೆಣಚು ಕಲ್ಲು, **ವಿ:** **'ಸುಧಾ'**(ಅಮೃತ)ಕ್ಕೆ ಸಂಬಂಧಿಸಿದ

ಸಎಜ್ಝಿಅ. **'ಸಇಜ್ಝಿಅ'** ಶಬ್ದವನ್ನು ನೋಡುವುದು.

ಸಓಸ. **'ಸ–ಓಸ=ಸ–ತೋಷ, ಸ–ದೋಷ'** ಶಬ್ದವನ್ನು ನೋಡುವುದು.

ಸಂ. ಅ: [ಶಮ್] ಸುಖ, ಸಂತೋಷ

ಸಂ. ಅ: [ಸಮ್] ಅಧಿಕ, ಪ್ರಕೃಷ್ಟ, ಅತಿಶಯ, ಸಂಗತಿ, ಸೌಂದರ್ಯ, ಶೋಭನ, ಮಂಗಳ, ಸಮುಚ್ಚಯ, ಯೋಗ್ಯತೆ, ಮುಂತಾದ ಅರ್ಥಗಳನ್ನು ಸೂಚಿಸುವ ಉಪಸರ್ಗಾವ್ಯಯ, ಚೆನ್ನಾಗಿ

ಸಂಕ. ಸಕ: [ಶಂಕ್] ಸಂದೇಹಿಸು, ಶಂಕಿಸು, ಭಯಪಡು, ಹೆದರು,**'ಸಂಕಇ'. ವ.ಕೃ: 'ಸಂಕಂತ'**

ಸಂಕಂತ. ವಿ: [ಸಂಕ್ರಾಂತ] ಪ್ರತಿಬಿಂಬಿಸಲ್ಪಟ್ಟ(ಗಾ), ಒಳಗೆ ಪ್ರವೇಶಿಸಿದ, ಪ್ರಾಪ್ತವಾದ, ಸಂಕ್ರಮಣಕರ್ತ, ಸಂಕ್ರಾಂತಿಯಿಂದ ಕೂಡಿದ(ಸಂಕ್ರಮಣವಿರುವ ಮಾಸ), ತಂದೆಯಿಂದ ಅಥವಾ ಗಂಡನಿಂದ ಕೊಡಲ್ಪಟ್ಟ ಸ್ತ್ರೀಧನ.

ಸಂಕಂತಿ. ಸ್ತ್ರೀ: [ಸಂಕ್ರಾಂತಿ] ಸಂಕ್ರಮಣ, ಪ್ರವೇಶ(ಮೇಷ ಮೊದಲಾದ ರಾಶಿಗಳಲ್ಲಿ ಸೂರ್ಯನ ಪ್ರವೇಶ). ಇನ್ನೊಂದರಲ್ಲಿ ಹೋಗಿ ಸೇರುವುದು.

ಸಂಕಂದಣ. ಪು: [ಸಂಕ್ರಂದನ] ದೇವರಾಜ ಇಂದ್ರ (ಉಪ)

ಸಂಕಟ್ಟಿಅ. ವಿ: [ಸಂಕರ್ತಿತ] ಕತ್ತರಿಸಲ್ಪಟ್ಟ,

ಸಂಕಟ್ಠ. ವಿ: [ಸಂಕಷ್ಟ] ವ್ಯಾಪಿಸಲ್ಪಟ್ಟ

ಸಂಕಟ್ಠ. **'ಸಂಕಿಟ್ಠ'** ಶಬ್ದವನ್ನು ನೋಡುವುದು.

ಸಂಕಡ. ವಿ: [ಸಂಕಟ] ಇಕ್ಕಟ್ಟಾದ ಮಾರ್ಗ(ಸುಪಾ), ವಿಷಮವಾದ, ಗಹನವಾದ, ಬಹಳ ಕಷ್ಟವಾದ, ದುಃಸಾಧ್ಯವಾದ. **ನ:** ದುಃಖ.

ಸಂಕಡಿಅ. ವಿ: [ಸಂಕಟಿತ] ಅಗಲ ಕಿರಿದುಗೊಳಿಸಲ್ಪಟ್ಟ

ಸಂಕಡಿಲ್ಲ. ವಿ: [ದೇ] ಛಿದ್ರವಿಲ್ಲದ, ರಂಧ್ರವಿಲ್ಲದ(ದೇ)

ಸಂಕಡ್ಢಿಯ. ವಿ: [ಸಂಕರ್ಷಿತ] ಆಕರ್ಷಿಸಲ್ಪಟ್ಟ

ಸಂಕಣ. ನ: [ಶಂಕನ] ಶಂಕೆ, ಸಂದೇಹ(ದಸ)

ಸಂಕಪ್ಪ. ಪು: [ಸಂಕಲ್ಪ] ಮನಸ್ಸಿನ ವ್ಯಾಪಾರ, ಮನಸ್ಸಿನಲ್ಲಿ ನಿಶ್ಚೈಸುವುದು, ವಿಚಾರ, ಸಂಗತ ಆಚರಣೆಗಾಗಿ ಮಾಡುವ ಪ್ರತಿಜ್ಞೆ, ಇಚ್ಛೆ, ಅಭಿಲಾಷೆ. ಬುದ್ಧಿ, **–ಜೋಣಿ. ಪು: [–ಯೋನಿ]** ಮನ್ಮಥ.

ಸಂಕಮ. ಸಕ: [ಸಂಕ್ರಮ್] ಪ್ರವೇಶಿಸು, ಚಲಿಸು, **'ಸಂಕಮಂತಿ', ವ. ಕೃ: 'ಸಂಕಮಮಾಣ'**

ಸಂಕಮ. ಪು: [ಸಂಕ್ರಮ] ನದಿ, ಕಂದಕಾದಿಗಳನ್ನು ದಾಟಲು ಸಾಧನವಾದ ಕಟ್ಟೆ, ಸೇತುವೆ, ಸಂಕ, ಸಂಚಾರ, ತಿರುಗಾಟ, ಗ್ರಹಗಳು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗಿ ಸೇರುವುದು. ಜೀವವು ಯಾವ ಕರ್ಮ–ಪ್ರಕೃತಿಯಿಂದ ಬಂಧಿಸಲ್ಪಡುತ್ತದೆಯೋ ಅದೇ ರೂಪದಿಂದ ಬೇರೊಂದು ಪ್ರಕೃತಿಯ ದಳವನ್ನು ಪ್ರಯತ್ನದಿಂದ ಫಲಿಸಿಕೊಳ್ಳುವುದು.

ಸಂಕಮಗ. ವಿ: [ಸಂಕ್ರಾಮಕ] ಸಂಕ್ರಮಣ ಕರ್ತೃ

ಸಂಕಮಣ. ನ: [ಸಂಕ್ರಮಣ] ಪ್ರವೇಶ, ಸಂಚಾರ, ತಿರುಗಾಟ, ಚಾರಿತ್ರ, ಸಂಯಮ(ಆಚಾ), 'ಸಂಕಮ'ದ ಕೊನೆಯ ಅರ್ಥವನ್ನು ನೋಡುವುದು, ಪ್ರತಿಬಿಂಬಿಸುವುದು.

ಸಂಕರ. ಪು: [ದೇ] ಮಾರ್ಗ, ಹಾದಿ(ದೇ)

ಸಂಕರ. ಪು: [ಶಂಕರ] ಶಿವ, ಈಶ್ವರ(ಪಉಮ), **ವಿ:** ಸುಖವನ್ನುಂಟು ಮಾಡುವವನು, ಮಂಗಳವನ್ನುಂಟು ಮಾಡುವವನು(ಪಉಮ)

ಸಂಕರ. ಪು: [ಸಂಕರ] ಮಿಶ್ರಣ, ಎಲ್ಲದರ ಸೇರ್ಪಡಿಕೆ (ಪಣ್ಣ), ನ್ಯಾಯ ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ದೋಷ, ಶುಭಾ ಶುಭ ರೂಪದ ಮಿಶ್ರ ಭಾವ, ಕಸ, ಕಸದ ರಾಶಿ.

ಸಂಕರಣ. ನ: [ಸಂಕರಣ] ಒಳ್ಳೆಯ ಕೃತಿ

ಸಂಕರಿಸಣ. ಪು: [ಸಂಕರ್ಷಣ] ಭರತ ವರ್ಷದ ಭಾವೀ ಒಂಬತ್ತನೇ ಬಲದೇವ, ಬಲರಾಮ,

ಸಂಕರೀ. ಸ್ತ್ರೀ: [ಶಂಕರೀ] ಒಂದು ವಿದ್ಯೆ, ಪಾರ್ವತಿ ದೇವಿ, ಸುಖವನ್ನುಂಟು ಮಾಡುವವಳು(ಗಉಡ) ಶಮೀ ವೃಕ್ಷ

ಸಂಕಲ. ಸಕ: [ಸಂ+ಕಲಯ್] ಸಂಕಲಿಸುವುದು, ಜೋಡಿಸುವುದು, ಒಟ್ಟಿಗೆ ಸೇರಿಸುವುದು.

ಸಂಕಲ. ಪುಂನ: [ಶೃಂಖಲ] ಸರಪಳಿ, ಬಂಧಿಸುವ ಬೇಡಿ, ಒಡವೆ

ಸಂಕಲಣ. ನ: [ಸಂಕಲನ] ಮಿಶ್ರಣ, ಬೆರಕೆ, ಸಂಗ್ರಹಿಸುವುದು, ಒಟ್ಟುಗೂಡಿಸುವುದು

ಸಂಕಲಾ. ಸ್ತ್ರೀ: [ಶೃಂಖಲಾ] **'ಸಂಕಲ=ಶೃಂಖಲ'** ಶಬ್ದವನ್ನು ನೋಡುವುದು.

ಸಂಕಲಿಅ. ವಿ: [ಸಂಕಲಿತ] ಒಟ್ಟುಗೂಡಿಸಲ್ಪಟ್ಟ, ರಾಶಿಹಾಕಲ್ಪಟ್ಟ, ಯುಕ್ತ, ಜೋಡಿಸಿದ, ಸಂಗ್ರಹಿಸಲ್ಪಟ್ಟ. **ನ:** ಸಂಕಲನ, ಒಟ್ಟು ಸೇರ್ಪಡಿಕೆ.

ಸಂಕಲಿಆ. ಸ್ತ್ರೀ: [ಶೃಂಖಲಿಕಾ] ಪರಂಪರೆ, ಒಟ್ಟುಗೂಡಿಸುವುದು, ಸೂತ್ರ ಕೃತಾಂಗ ಸೂತ್ರದ ೧೨ನೇ ಅಧ್ಯಯನ,

ಸಂಕಲಿಆ}. ಸ್ತ್ರೀ: [ಶೃಂಖಲಿಕಾ,ಲೀ] ಸರಪಳಿ

ಸಂಕಲೀ}.

ಸಂಕಹಾ. ಸ್ತ್ರೀ: [ಸಂಕಥಾ] ಸಂಭಾಷಣೆ, ಮಾತುಕತೆ, ಸಂವಾದ(ಪ ಉಮ)

ಸಂಕಾ. ಸ್ತ್ರೀ: [ಶಂಕಾ] ಸಂಶಯ, ಸಂದೇಹ, ಭಯ, ಹೆದರಿಕೆ, (ಕುಮಾ) **–ಲುಅ. ವಿ:** [–ವತ್] ಸಂದೇಹ ತಾಳಿರುವ, ಶಂಕೆಯಿಂದ ಕೂಡಿರುವ

ಸಂಕಾಮ. 'ಸಂಕಮ=ಸಂ+ಕ್ರಮ' ಶಬ್ದವನ್ನು ನೋಡುವುದು.

ಸಂಕಾಮ. ಸಕ: [ಸಂ+ಕ್ರಮಯ್] ಬಂಧಿತವಾಗಿರುವ ಕರ್ಮ–ಪ್ರಕೃತಿಯಲ್ಲಿ ಅನ್ಯ ಪ್ರಕೃತಿಯ ಕರ್ಮ–ಪಂಗಡಗಳನ್ನು ಸೇರಿಸಿ ಆ ರೂಪದಲ್ಲಿ ಪಕ್ವಗೊಳಿಸು

ಸಂಕಾಮಣ. ಸ್ತ್ರೀ:[ಸಂಕ್ರಮಣ] ದಾಟುವ ಸಾಧನ, ಸಂಕ, ಪ್ರವೇಶ ಮಾಡಿಸುವುದು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯುವುದು

ಸಂಕಾಮಣಾ. ಸ್ತ್ರೀ: [ಸಂಕ್ರಮಣಾ] ಪ್ರವೇಶ, ಗತಿ

ಸಂಕಾಮಣೀ. ಸ್ತ್ರೀ: [ಸಂಕ್ರಮಣೀ] ಒಂದರಿಂದ ಇನ್ನೊಂದಕ್ಕೆ ಪ್ರವೇಶ ಮಾಡಲು ಯಾವುದರಿಂದ ಸಾಧ್ಯವೋ ಆ ವಿದ್ಯೆ(ಣಾಯಾ)

ಸಂಕಾಮಿಯ. ವಿ: [ಸಂಕ್ರಮಿತ] ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯಲ್ಪಟ್ಟ

ಸಂಕಾರ. 'ಸಕ್ಕಾರ=ಸಂಸ್ಕಾರ' ಶಬ್ದವನ್ನು ನೋಡುವುದು.

ಸಂಕಾಸ. ವಿ: [ಸಂಕಾಶ] ಸಮಾನ, ಸದೃಶ(ಪಾಯಾ), **ಪು:** ಒಬ್ಬ ಶ್ರಾವಕನ ಹೆಸರು(ಉಪ).

ಸಂಕಾಸಿಯಾ. ಸ್ತ್ರೀ: [ಸಂಕಾಶಿಕಾ] ಒಂದು ಜೈನಮುನಿ–ಶಾಖೆ

ಸಂಕಿ. ವಿ: [ಶಂಕಿನ್] ಸಂದೇಹಿಸುವವನು(ಸೂಅ)

ಸಂಕಿಅ. ವಿ: [ಶಂಕಿತ] ಸಂಕೆಯುಳ್ಳ, ಸಂದೇಹದಿಂದ ಕೂಡಿದ(ಭಗ) **ನ:** ಸಂಶಯ, ಸಂದೇಹ

ಸಂಕಿಟ್ಠ. ವಿ: [ಸಂಕೃಷ್ಟ] ಉಳುಮೆ ಮಾಡಲ್ಪಟ್ಟ(ಔಪ)

ಸಂಕಿಟ್ಠ. 'ಸಂಕಿಲಿಟ್ಠ' ಶಬ್ದವನ್ನು ನೋಡುವುದು.

ಸಂಕಿಣ್ಣ. ವಿ: [ಸಂಕೀರ್ಣ] ಇಕ್ಕಟ್ಟಾದ, ಕಿರಿದಾದ, ದಟ್ಟವಾದ, ವ್ಯಾಪಿಸಲ್ಪಟ್ಟ, ಮಿಶ್ರಿತ, ಸೇರಲ್ಪಟ್ಟ, **ಪು:** ಆನೆಯ ಒಂದು ಜಾತಿ

ಸಂಕಿತ. 'ಸಂಕಿಅ' ಶಬ್ದವನ್ನು ನೋಡುವುದು.

ಸಂಕಿತ್ತಣ. ನ: [ಸಂಕೀರ್ತನ] ಉಚ್ಚಾರಣ, ಸ್ತೋತ್ರ

ಸಂಕಿನ್ನ. 'ಸಂಕಿಣ್ಣ' ಶಬ್ದವನ್ನು ನೋಡುವುದು.

ಸಂಕಿರ. ವಿ: [ಶಂಕಿತೃ] ಸಂಶಯ ಸ್ವಭಾವದ, ಸಂದೇಹಿಸುವ ಅಭ್ಯಾಸವುಳ್ಳ

ಸಂಕಿಲಿಟ್ಠ. ವಿ: [ಸಂಕ್ಲಿಷ್ಟ] ಸಂಕ್ಲೇಶದಿಂದ ಕೂಡಿದ, ಅತಿ ದುಃಖದಿಂದ ಕೂಡಿದ(ಉವ)

ಸಂಕಿಲಿಸ್ಸ. ಅಕ: [ಸಂ+ಕ್ಲಿಶ್] ದುಃಖಿತನಾಗು, ಕೊಳೆಯಾಗು, ಮಲಿನಗೊಳ್ಳು.

ಸಂಕಿಲೇಸ. ಪು: [ಸಂಕ್ಲೇಶ] ದುಃಖ, ಕಷ್ಟ, ವ್ಯಗ್ರ, ಮಲಿನತೆ, ಕೊಳೆ(ಠಾ)

ಸಂಕೀಲಿಅ. ವಿ: [ಸಂಕೀಲಿತ] ಪಟ್ಟಿ ಅಥವಾ ಮೊಳೆ ಹೊಡೆದು ಸೇರಿಸಿರುವ, ಜೋಡಿಸಿರುವ

ಸಂಕು. ಪು: [ಶಂಕು] ಬಾಕು, ಈಟಿ, ಮೊಳೆ, ಗೂಟ, **–ಕಣ್ಣ. ನ:** [–ಕರ್ಣ] ಒಂದು ವಿದ್ಯಾಧರ ನಗರ.

ಸಂಕುಇಯ. ವಿ: [ಸಂಕುಚಿತ] ಕುಗ್ಗಿದ, ಮುದುಡಿದ, ಅರಳದಿರುವ, **ನ:** ಮುದುಡುವಿಕೆ, ಕುಗ್ಗುವಿಕೆ

ಸಂಕುಕ. ಪು: [ಶಂಕುಕ] ವೇತಾಢ್ಯ ಪರ್ವತದ ಉತ್ತರ ಶ್ರೇಣಿಯ ಒಂದು ವಿದ್ಯಾಧರ–ನಿಕಾಯ

ಸಂಕುಕಾ. ಸ್ತ್ರೀ: [ಶಂಕುಕಾ] ಒಂದು ವಿದ್ಯೆ

ಸಂಕುಚ. ಅಕ: [ಸಂ+ಕುಚ್] ಕುಗ್ಗು, ಮುದುಡು. ಸಂಕುಚಿತಗೊಳ್ಳು

ಸಂಕುಚಿಯ. 'ಸಂಕುಇಯ' ಶಬ್ದವನ್ನು ನೋಡುವುದು.

ಸಂಕುಡ. ವಿ: [ಸಂಕುಟ] ಸಂಕೀರ್ಣವಾದ, ಇಕ್ಕಟ್ಟಾದ, ಅಗಲ ಕಿರಿದಾದ

ಸಂಕುದ್ಧ. ವಿ: [ಸಂಕ್ರುದ್ಧ] ಕ್ರೋಧಗೊಂಡ, ಕೋಪಗೊಂಡಿರುವ
ಸಂಕುಯ. **'ಸಂಕುಚ'** ಶಬ್ದವನ್ನು ನೋಡುವುದು.
ಸಂಕುಲ. ವಿ: [ಸಂಕುಲ] ಆವರಿಸಿಕೊಂಡ, ವ್ಯಾಪಿಸಿಕೊಂಡ(ಉವ) ಪೂರ್ತಿ ತುಂಬಿದ
ಸಂಕುಲಿ}. **'ಸಕ್ಕುಲಿ'** ಶಬ್ದವನ್ನು ನೋಡುವುದು.
ಸಂಕುಲೀ}.
ಸಂಕುಸುಮಿಅ. ವಿ: [**ಸಂಕುಸುಮಿತ**] ಚೆನ್ನಾಗಿ ಹೂಬಿಟ್ಟ, ಚೆನ್ನಾಗಿ ಅರಳಿದ
ಸಂಕೇಅ. **ಸಕ:** [**ಸಂ+ಕೇತಯ್**] ಸನ್ನೆ ಮಾಡು, ಸೂಚಿಸು, ಗುಟ್ಟುಮಾಡು,
ಸಂಕೇಅ. **ಪು:** [**ಸಂಕೇತ**] ಸಂಜ್ಞೆ, ಸನ್ನೆ, ಇಂಗಿತ(ಸುಪಾ), ಪ್ರೇಮಿಗಳ ಸಮಾಗಮದ ಗುಪ್ತ ಸ್ಥಳ, ವಿ: ಚಿಹ್ನೆ ಇರುವ, ನ: ತಿರಸ್ಕಾರ
ಸಂಕೇಅ. ವಿ: [**ಸಾಂಕೇತ**] ಸಂಕೇತಕ್ಕೆ ಸಂಬಂಧಿಸಿದ, ನ: ನಿರಾಕರಣೆ
ಸಂಕೇಇಅ. ವಿ: [**ಸಂಕೇತಿತ**] ಸಂಕೇತದಿಂದ ಕೂಡಿರುವ, ಚಿಹ್ನೆಯಿಂದ ಕೂಡಿರುವ
ಸಂಕೆಲ್ಲಿಅ. ವಿ: [ದೇ] ಸಂಕುಚಿತಗೊಳಿಸಲ್ಪಟ್ಟ, ಇಕ್ಕಟ್ಟಾಗಿ ಮಾಡಲಾದ, ಅಗಲ ಕಿರಿದುಗೊಳಿಸಲ್ಪಟ್ಟ
ಸಂಕೇಸ. **'ಸಂಕಿಲೇಸ'** ಶಬ್ದವನ್ನು ನೋಡುವುದು.
ಸಂಕೋಅ. **ಸಕ:** [**ಸಂ+ಕೋಚಯ್**] ಸಂಕುಚಿತಗೊಳಿಸು, ಅಗಲ ಕಿರಿದುಗೊಳಿಸು, ಕುಗ್ಗಿಸು
ಸಂಕೋಅ. **ಪು:** [ಸಂಕೋಚ] ಮುದುಡುವುದು, ಕಿರಿದಾಗುವುದು, ನಾಚುವುದು, ಕುಗ್ಗುವುದು
ಸಂಕೋಅಣ. **ನ:** [**ಸಂಕೋಚನ**] **ಮೇಲಿನ** ಶಬ್ದವನ್ನು ನೋಡುವುದು(ಭಗ)
ಸಂಕೋಇಯ. ವಿ: [**ಸಂಕೋಚಿತ**] ಕಿರಿದುಗೊಳಿಸಲ್ಪಟ್ಟ, ಕುಗ್ಗಿಸಲ್ಪಟ್ಟ, ಮುದುಡಿಸಲ್ಪಟ್ಟ
ಸಂಕೋಡ. **ಪು:** [ಸಂಕೋಟ] ಮುದುಡುವುದು, ಕಿರಿದಾಗುವುದು, ನಾಚುವುದು, ಕುಗ್ಗುವುದು
ಸಂಕೋಡಿಯು. ವಿ: [ಸಂಕೋಟಿತ] ಸಂಕುಚಿತಗೊಳಿಸಲ್ಪಟ್ಟ, ಇಕ್ಕಟ್ಟಾಗಿ ಮಾಡಲಾದ, ಅಗಲ ಕಿರಿದುಗೊಳಿಸಲ್ಪಟ್ಟ
ಸಮತ್ಥಿಅ. ವಿ: [ಸಮರ್ಥಿತ] ಪೂರ್ಣಗೊಳಿಸಲ್ಪಟ್ಟ, ಪುಷ್ಟಿಗೊಳಿಸಲ್ಪಟ್ಟ, ಪ್ರಮಾಣಿತಗೊಳಿಸಲ್ಪಟ್ಟ, ಸಮರ್ಥಿಸಲ್ಪಟ್ಟ

ಸಮದ್ಧಾಸಿಯ. ವಿ: [ಸಮಾಧ್ಯಾಸಿತ] ಆಶ್ರಯಿಸಲ್ಪಟ್ಟ, ನಡೆಸಲ್ಪಟ್ಟ

ಸಮದ್ಧಿ. 'ಸಮಿದ್ಧಿ' ಶಬ್ದವನ್ನು ನೋಡುವುದು

ಸಮನ್ನಾಗಯ. 'ಸಮಣ್ಣಾಗಯ' ಶಬ್ದವನ್ನು ನೋಡುವುದು(ಔಪ)

ಸಮನ್ನಿ. ಸಕ: [ಸಮನು+ಇ] ಅನುಸರಿಸು, ಅಕ: ಒಂದೆಡೆ ಸೇರು, ಒಟ್ಟಾಗು, 'ಸಮನ್ನೇಇ'

ಸಮನ್ನಿಅ. ವಿ: [ಸಮನ್ವಿತ] ಸೇರಿಕೊಂಡಿರುವ, ಕೂಡಿಕೊಂಡಿರುವ, ಯುಕ್ತ(ಗಉಡ)

ಸಮನ್ನೇ-. 'ಸಮನ್ನಿ' ಶಬ್ದವನ್ನು ನೋಡುವುದು

ಸಮಪ್ಪ. ಸಕ: [ಸಮ್+ಅರ್ಪಯ್] ಅರ್ಪಿಸು, ಸಮರ್ಪಿಸು, ದಾನ ಮಾಡು, ಕೊಡು. ವ. ಕೃ: 'ಸಮಪ್ಪಂತ'

ಸಮಪ್ಪ-. 'ಸಮಾವ=ಸಮ್+ಆಪ್' ಶಬ್ದವನ್ನು ನೋಡುವುದು

ಸಮಪ್ಪಣ. ನ: [ಸಮರ್ಪಣ] ಅರ್ಪಣ, ದಾನ, ಕೊಡುವುದು(ಕುಪ್ರ)

ಸಮಪ್ಪಿಯ. ವಿ: [ಸಮರ್ಪಿತ] ಅರ್ಪಿಸಲ್ಪಟ್ಟ, ನೀಡಲ್ಪಟ್ಟ

ಸಮಬ್ಭಸ. ಸಕ: [ಸಮಭಿ+ಅಸ್] ಅಭ್ಯಾಸ ಮಾಡು,

ಸಮಬ್ಭಹಿಅ. ವಿ: [ಸಮಭ್ಯಧಿಕ] ಅತಿ ಹೆಚ್ಚಿನ

ಸಮಬ್ಭಾಸ. ಪು: [ಸಮಭ್ಯಾಸ] ನಿಕಟ, ಹತ್ತಿರ(ಪಉಮ)

ಸಮಬ್ಭಿಡಿಯ. ವಿ: [ದೇ] ಹೋರಾಡಿದ, ಕಾದಾಡಿದ, ಸೆಣಸಿದ

ಸಮಭಿಆವಣ್ಣ. ವಿ: [ಸಮಭ್ಯಾಪನ್ನ] ಎದುರಿನಲ್ಲಿ ಬಂದ, ಎದುರುಗಡೆ ಬಂದ

ಸಮಭಿಜಾಣ. ಸಕ: [ಸಮಭಿ+ಜ್ಞಾ] ನಿರ್ಣಯಿಸು, ಪ್ರತಿಜ್ಞೆಯನ್ನು ನೆರವೇರಿಸು

ಸಮಭಿದ್ದವ. ಸಕ: [ಸಮಭಿ+ದ್ರು] ಪೀಡಿಸು, ಹಿಂಸಿಸು, ದ್ರವವಾಗಿಸು, ಓಡು

ಸಮಭಿಧಂಸ. ಸಕ:[ಸಮಭಿ+ಧ್ವಂಸಯ್] ನಾಶಮಾಡು

ಸಮಭಿಪಡ. ಸಕ: [ಸಮಭಿ+ಪತ್] ಆಕ್ರಮಣ ಮಾಡು

ಸಮಭಿಭೂಅ. ವಿ: [ಸಮಭಿಭೂತ] ಅತಿಯಾಗಿ ಸೋಲಿಸಲ್ಪಟ್ಟ, ಬಹಳವಾಗಿ ಅವಮಾನಿಸಲ್ಪಟ್ಟ (ಉವಾ)

ಸಮಭಿರೂಢ. ಪು: [ಸಮಭಿರೂಢ] ಒಂದು ನಯ-ವಿಶೇಷ

ಸಮಭಿಲೋಅ. ಸಕ: [ಸಮಭಿ+ಲೋಕ್] ಚೆನ್ನಾಗಿ ನೋಡು, ಅವಲೋಕಿಸು(ಪಣ್ಣ)

ಸಮಭಿಲೋಇಅ. ವಿ: [ಸಮಭಿಲೋಕಿತ] ಚೆನ್ನಾಗಿ ನೋಡಲ್ಪಟ್ಟ, ಅವಲೋಕಿಸಲ್ಪಟ್ಟ

ಸಮಯ. ಅಕ: [ಸಮ್+ಅಯ್] ಒಂದುಗೂಡು, ಒಟ್ಟಾಗು(ವಿಸೇ)

ಸಮಯ. ಪು: [ಸಮಯ] ಕಾಲ, ವೇಳೆ, ಕಾಲ-ವಿಶೇಷ, ಯಾವುದನ್ನು ಎರಡು ಭಾಗ

ಮಾಡಲಾಗುವುದಿಲ್ಲವೋ ಅಂಥ ಸೂಕ್ಷ್ಮ ಕಾಲ(ಕಮ್ಮ) ಮತ, ದರ್ಶನ, ಸಿದ್ಧಾಂತ, ಶಾಸ್ತ್ರ ಆಗಮ, ಧರ್ಮ, ವಸ್ತು, ಸಂಕೇತ, ಸುಂದರವಾದ ಪರಿಣಾಮ, ಆಚಾರ, ಪದ್ಧತಿ, ಏಕವಾಕ್ಯತೆ, ಸಾಮಯಿಕ, ಸಂಯಮ–ವಿಶೇಷ.–**ಕ್ಖೇತ್ತ, ಖೇತ್ತ.** ನ: [–ಕ್ಷೇತ್ರ] ಮನುಷ್ಯ ಲೋಕ, ಮನುಷ್ಯ ಕ್ಷೇತ್ರ(ಭಗ), –ಜ್ಞ, –ಣ್ಣ, –ನ್ನ. ವಿ: [–ಜ್ಞ] ಸಮಯವನ್ನು ತಿಳಿದವನು,

ಸಮಯ. 'ಸ–ಮಯ=ಸ–ಮದ' ಶಬ್ದವನ್ನು ನೋಡುವುದು

ಸಮಯ}. ಅ: [ಸಮಕಂ] ಏಕ ಕಾಲದಲ್ಲಿ, ಒಂದೇ

ಸಮಯಂ}. ವೇಳೆಯಲ್ಲಿ, ಒಂದಿಗೆ, ಒಡನೆ

ಸಮಯಾ. 'ಸಮ–ಯಾ' ಶಬ್ದವನ್ನು ನೋಡುವುದು

ಸಮಯಾ. ಅ: [ಸಮಯಾ] ಹತ್ತಿರ, ಸಮೀಪ, ನಿಕಟ (ಸುಪಾ)

ಸಮರ. ಸಕ: [ಸ್ಮೃ] ನೆನಪಿಸಿಕೊಳ್ಳು, ಸ್ಮರಿಸು

ಸಮರ. 'ಸಬರ' ಶಬ್ದವನ್ನು ನೋಡುವುದು. ಸ್ತ್ರೀ:–ರೀ

ಸಮರ. ಪಂನ: [ಸಮರ] ಯುದ್ಧ, ಸಂಗ್ರಾಮ, ಒಂದು ಛಂದಸ್ಸು.. **ಸಮರಾಇಚ್ಚ.** ಪು: [ಸಮರಾದಿತ್ಯ] ಅವಂತೀ ದೇಶದ ಒಬ್ಬ ರಾಜ

ಸಮರ. ನ: [ಸ್ಮಾರ] ಕಾಮನ, ಮನ್ಮಥನಿಗೆ ಸಂಬಂಧಿಸಿದ

ಸಮರಇತ್ತು. ವಿ: [ಸ್ಮರ್ತೃ] ಸ್ಮರಿಸುವವನು, ನೆನಪಿಸಿಕೊಳ್ಳುವವನು–

ಸಮರಣ. ನ: [ಸ್ಮರಣ] ನೆನಪು, ಸ್ಮೃತಿ

ಸಮರಸದ್ದಹಯ. ಪು: [ದೇ] ಸಮ ವಯಸ್ಸಿನ

ಸಮರಾಇಅ. ವಿ: [ದೇ] ಬೀಸಲ್ಪಟ್ಟ, ಬೀಸಿದ, ಹಿಟ್ಟು

ಸಮರೀ. 'ಸಮರ=ಶಬರ' ಶಬ್ದವನ್ನು ನೋಡುವುದು

ಸಮರೆತ್ತು. 'ಸಮರಇತ್ತು' ಶಬ್ದವನ್ನು ನೋಡುವುದು

ಸಮಲಂಕರ. ಸಕ: [ಸಮಲಮ್+ಕೃ] ಒಡವೆಗಳಿಂದ ಅಲಂಕರಿಸು, 'ಸಮಲಂಕರೇಇ'

ಸಮಲಂಕಾರ. ಸಕ:[ಸಮಲಮ್+ಕಾರಯ್] ಒಡವೆಗಳಿಂದ ಅಲಂಕರಿಸು. 'ಸಮಲಂಕಾರೇಇ'

ಸಮಲದ್ಧ.(ಅಪ). ವಿ: [ಸಮಾಲಬ್ಧ] ಬಳಿಯಲ್ಪಟ್ಟ, ಲೇಪಿಸಲ್ಪಟ್ಟ

ಸಮಲ್ಲಿಅ. ಅಕ: [ಸಮಾ+ಲೀ] ಲೀನಗೊಳ್ಳು, ಸೇರಿಹೋಗು, **ಸಕ:** ಆಶ್ರಯಿಸು, ಅವಲಂಬಿಸು

ಸಮಲ್ಲೀಣ. ವಿ: [ಸಮಾಲೀನ] ಚೆನ್ನಾಗಿ ಲೀನಗೊಳ್ಳುವುದು, ಸೇರಿಹೋಗುವುದು(ಔಪ)

ಸಮವಇಣ್ಣ. ವಿ: [ಸಮವತೀರ್ಣ] ಇಳಿದಿರುವ, ಮೇಲಿನಿಂದ ಕೆಳಕ್ಕೆ ಬಂದಿರುವ, ನೀರಿನೊಳಗೆ ಇಳಿದಿರುವ

ಸಮವಟ್ಠಾಣ}. ನ: [ಸಮವಸ್ಥಾನ] ಚೆನ್ನಾಗಿ

ಸಮವಟ್ಠಿಇ}. ಸ್ತ್ರೀ: [ಸಮವಸ್ಥಿತಿ] ಇಡಲಾಗಿರುವುದು, ಸ್ಥಿರವಾಗಿ ಇಡಲ್ಪಟ್ಟಿರುವುದು, ದೃಢವಾಗಿರುವುದು

ಸಮವತ್ತಿ. 'ಸಮ–ವತ್ತಿ=ಸಮ–ವರ್ತಿನ್' ಶಬ್ದವನ್ನು ನೋಡುವುದು

ಸಮವಯ–. 'ಸಮವೇ' ಶಬ್ದವನ್ನು ನೋಡುವುದು

ಸಮವಸರ. ಸಮೋಸರ=ಸಮವ+ಸೃ' ಶಬ್ದವನ್ನು ನೋಡುವುದು

ಸಮವಸರಣ. 'ಸಮೋಸರಣ' ಶಬ್ದವನ್ನು ನೋಡುವುದು

ಸಮವಸರಿಅ. **'ಸಮೋಸರಿಅ=ಸಮವಸೃತ'** ಶಬ್ದವನ್ನು ನೋಡುವುದು

ಸಮವಸೇಅ. ವಿ: [ಸಮವಸೇಯ] ತಿಳಿದುಕೊಳ್ಳಲು ಅರ್ಹವಾದ, ತಿಳಿದುಕೊಳ್ಳಬೇಕಾದ

ಸಮವಾಇ. ವಿ: [ಸಮವಾಯಿನ್] ಸಮೂಹ ಅಥವಾ ರಾಶಿಗೆ ಸಂಬಂಧಿಸಿದ,

ಸಮವಾಯ. ಪು: [ಸಮವಾಯ] ಅನೇಕ ವಸ್ತುಗಳು ಒಂದೇ ಎನ್ನುವಂತೆ ಒಟ್ಟುಗೂಡುವುದು; ಹಾಲು–ನೀರು ಸೇರಿದಂತೆ, ಸಂಬಂಧ, ಸಮೂಹ, ಸಮುದಾಯ, ರಾಶಿ, ಒಗ್ಗೂಡಿಸುವುದು, ಜೈನರ ನಾಲ್ಕನೆಯ ಅಂಗ–ಗ್ರಂಥ

ಸಮವೇ. ಅಕ: [ಸಮವ+ಇ] ಸೇರಿಕೊಳ್ಳು, ಜೊತೆಗೂಡು, ಸಂಬದ್ಧಗೊಳ್ಳು,

ಸಮವೇದ(ಶೌ). ವಿ: [ಸಮವೇತ] ಒಟ್ಟುಗೂಡಿದ, ಒಂದುಗೂಡಿದ, ಗಂಪು ಗುಂಪಾಗಿ ಸೇರಿದ

ಸಮಸಮ. ಅಕ: [ಸಮಸಮಾಯ್] 'ಸಮ್, ಸಮ್' ಎಂದು ಶಬ್ದ ಮಾಡು

ಸಮಸರಿಸ. 'ಸಮ–ಸರಿಸ' ಶಬ್ದವನ್ನು ನೋಡುವುದು

ಸಮಸಾಣ. 'ಮಸಾಣ' ಶಬ್ದವನ್ನು ನೋಡುವುದು

ಸಮಸೀಸ. ವಿ: [ದೇ] ಸದೃಶ, ಹೋಲುವ, ಹೆಚ್ಚಾದ, ಅಧಿಕವಾದ, ನ: ಸ್ಪರ್ಧೆ

ಸಮಸೀಸಿಆ}. ಸ್ತ್ರೀ: [ದೇ] ಸ್ಪರ್ಧೆ, ಮೇಲಾಟ,

ಸಮಸೀಸೀ}. ಸರಿಗಟ್ಟುವಿಕೆ

ಸಮಸ್ಸಅ. ಸಕ: [ಸಮಾ+ಶ್ರಿ] ಆಶ್ರಯಿಸು, ಅವಲಂಬಿಸು
ಸಮಸ್ಸಸ. ಅಕ: [ಸಮಾ+ಶ್ವಸ್] ಭರವಸೆ ಹೊಂದು, ಭರವಸೆ ಪಡೆ, ಸಮಾಧಾನ ಸಿಗು
ಸಮಸ್ಸಸಿದ.(ಶೌ). 'ಸಮಾಸತ್ಥ' ಶಬ್ದವನ್ನು ನೋಡುವುದು
ಸಮಸ್ಸಾ. ಸ್ತ್ರೀ: [ಸಮಸ್ಯಾ] ಸಮಸ್ಯಾ ಪೂರ್ತಿಗಾಗಿ ಕೊಡಲಾಗುವ ಶ್ಲೋಕದ ಚರಣ ಇಲ್ಲವೆ ಪದ
ಸಮಸ್ಸಾಸ. ಸಕ: [ಸಮಾ+ಶ್ವಾಸಯ್] ಸಮಾಧಾನ ಮಾಡು, ಸಾಂತ್ವನ ಹೇಳು, ಭರವಸೆ ನೀಡು
ಸಮಸ್ಸಾಸ. ಪು: [ಸಮಾಶ್ವಾಸ] ಆಶ್ವಾಸನೆ, ಭರವಸೆ,
ಸಮಸ್ಸಾಸಣ. ನ: [ಸಮಾಶ್ವಾಸನ] ಮೇಲಿನ ಶಬ್ದವನ್ನು ನೋಡುವುದು
ಸಮಸ್ಸಿಅ. ವಿ: [ಸಮಾಶ್ರಿತ] ಆಶ್ರಯದಲ್ಲಿರುವ, ಆಶ್ರಿತ
ಸಮಹಿಅ. ವಿ: [ಸಮಧಿಕ] ಅತಿ ಹೆಚ್ಚಿನ, ಹೆಚ್ಚಾಗಿರುವ
ಸಮಹಿಗಯ. ವಿ: [ಸಮಧಿಗತ] ಪ್ರಾಪ್ತವಾದ, ದೊರೆತಿರುವ, ಸಂಪಾದಿಸಲ್ಪಟ್ಟ, ಸರಿಯಾಗಿ ತಿಳಿದುಕೊಳ್ಳಲ್ಪಟ್ಟ
ಸಮಹಿಟ್ಠ. ಸಕ: [ಸಮಧಿ+ಸ್ಥಾ] ವಶದಲ್ಲಿಟ್ಟುಕೊಳ್ಳು, ನಿಯಂತ್ರಣದಲ್ಲಿಟ್ಟುಕೊಳ್ಳು
ಸಮಹಿಟ್ಠಾಉ. ವಿ: [ಸಮಧಿಷ್ಠಾತೃ] ಅಧ್ಯಕ್ಷ, ಮುಖ್ಯಸ್ಥ, ಅಧಿಪತಿ
ಸಮಹಿಟ್ಠಿಅ. ವಿ: [ಸಮಧಿಷ್ಠಿತ] ಆಶ್ರಯಿಸಲ್ಪಟ್ಟ(ಉಪ)
ಸಮಹಿಡ್ಢಿಯ. 'ಸ-ಮಹಿಡ್ಢಿಯ=ಸ-ಮಹರ್ಧಿಕ' ಶಬ್ದವನ್ನು ನೋಡುವುದು
ಸಮಹಿಣಂದಿಯ. ವಿ: [ಸಮಭಿನಂದಿತ] ಸಂತೋಷಪಡಿಸಲ್ಪಟ್ಟ, ಹೊಗಳಲ್ಪಟ್ಟ, ಪ್ರೋತ್ಸಾಹಿಸಲ್ಪಟ್ಟ
ಸಮಹಿಲ. ವಿ: [ಸಮಖಿಲ] ಸಕಲ, ಸಮಸ್ತ, ಎಲ್ಲ
ಸಮಹುತ್ತ. ವಿ: [ದೇ] ಎದುರಿನಲ್ಲಿ, ಎದುರುಗಡೆ, ಸಮ್ಮುಖ
ಸಮಾ. ಸ್ತ್ರೀ: [ಸಮಾ] ವರ್ಷ, ಕಾಲ, ಸಮಯ
ಸಮಾಅಮ. 'ಸಮಾಗಮ' ಶಬ್ದವನ್ನು ನೋಡುವುದು
ಸಮಾಇಚ್ಛ. ಸಕ: [ಸಮಾ+ಗಮ್] ಎದುರಿನಲ್ಲಿ ಬರು, ಸಮ್ಮುಖವಾಗು, ಮುಂದುಗಡೆ ಬರು, ಆದರಿಸು, ಗೌರವಿಸು
ಸಮಾಇಟ್ಠ. ವಿ: [ಸಮಾದಿಷ್ಟ] ಆದೇಶಿಸಲ್ಪಟ್ಟ, ಆಜ್ಞೆ ಮಾಡಲ್ಪಟ್ಟ
ಸಮಾಇಡ್ಢ. ವಿ: [ಸಮಾವಿದ್ಧ] ಕೊರೆಯಲ್ಪಟ್ಟ, ರಂಧ್ರಮಾಡಲ್ಪಟ್ಟ
ಸಮಾಇಣ್ಣ. ವಿ: [ಸಮಾಕೀರ್ಣ] ವ್ಯಾಪಿಸಲ್ಪಟ್ಟ, ತುಂಬಲ್ಪಟ್ಟ(ಔಪ)
ಸಮಾಇಣ್ಣ}. ವಿ: [ಸಮಾಚೀರ್ಣ]ಚೆನ್ನಾಗಿ ಆಚರಿಸಲ್ಪಟ್ಟ
ಸಮಾಇನ್ನ}. (ಭಗ)
ಸಮಾಉಟ್ಟ. ಅಕ: [ಸಮಾ+ವೃತ್] ಬಾಗು, ನಮಿಸು, ಅಧೀನನಾಗು, ನಮ್ರನಾಗು
ಸಮಾಉಟ್ಟ. ವಿ: [ಸಮಾವೃತ್ತ] ವಿನಮ್ರ,
ಸಮಾಉತ್ತ. ವಿ: [ಸಮಾಯುಕ್ತ] ಯುಕ್ತ, ಜೊತೆಗೂಡಿದ, ಸೇರಿಕೊಂಡ, ಒಡನೆ, ಸಹಿತ
ಸಮಾಉಲ. ವಿ: [ಸಮಾಕುಲ] ಮಿಶ್ರಮಾಡಲ್ಪಟ್ಟ, ಮಿಶ್ರಿತ, ವ್ಯಾಪ್ತವಾದ, ಕ್ಷೋಭೆಗೊಂಡ, ವ್ಯಾಕುಲಗೊಂಡ
ಸಮಾಉಲಿಅ. ವಿ: [ಸಮಾಕುಲಿತ] ವ್ಯಾಕುಲಗೊಳಿಸಲ್ಪಟ್ಟ
ಸಮಾಏಸ. ಪು: [ಸಮಾದೇಶ] ಆಜ್ಞೆ, ಆದೇಶ(ಭವಿ), ವಿವಾಹಾದಿಗಳಲ್ಲಿ ಉಳಿದಿರುವ ಭೋಜನವನ್ನು ನಿರ್ಗ್ರಂಥಿಗಳಿಗೆ ಹಂಚಬೇಕೆಂದು ಸಂಕಲ್ಪ ಮಾಡಲಾಗಿರುವುದು
ಸಮಾಏಸಣ. ನ: [ಸಮಾದೇಶನ] ಆಜ್ಞೆ, ಆದೇಶ
ಸಮಾಓಗ. ಪು: [ಸಮಾಯೋಗ] ಸ್ಥಿರತೆ
ಸಮಾಓಸಿಯ. ವಿ: [ಸಮಾತೋಷಿತ] ಸಂತುಷ್ಟ ಗೊಳಿಸಲ್ಪಟ್ಟ
ಸಮಾಕರಿಸ. ಸಕ: [ಸಮಾ+ಕೃಷ್] ಸೆಳೆ, ಎಳೆ, ಆಕರ್ಷಿಸು
ಸಮಾಕರಿಸಣ. ನ: [ಸಮಾಕರ್ಷಣ] ಸೆಳೆತ, ಎಳೆತ
ಸಮಾಕಾರ. ಸಕ: [ಸಮಾ+ಕಾರಯ್] ಕರೆ, ಆಹ್ವಾನಿಸು
ಸಮಾಗಚ್ಛ-. 'ಸಮಾಗಮ=ಸಮಾ+ಗಮ್' ಶಬ್ದವನ್ನು ನೋಡುವುದು
ಸಮಾಗತ 'ಸಮಾಗಯ' ಶಬ್ದವನ್ನು ನೋಡುವುದು
ಸಮಾಗಮ. ಸಕ: [ಸಮಾ+ಗಮ್] ಎದುರಿನಲ್ಲಿ ಬರು, ಸಮೀಪಕ್ಕೆ ಬರು, ಆಗಮಿಸು, ಸಂಧಿಸು ತಿಳಿದುಕೊಳ್ಳು
ಸಮಾಗಮ}. ಪು: [ಸಮಾ+ಗಮ] ನ: [ಸಮಾಗಮನ]
ಸಮಾಗಮಣ}. ಸಂಯೋಗ, ಸಂಬಂಧ, ಬಂದು ಸೇರು, ಸಂಬಂಧ(ಗಉಡ)
ಸಮಾಗಯ. ವಿ: [ಸಮಾಗತ] ಬಂದಿರುವ, ಬಂದು ಸೇರಿರುವ
ಸಮಾಗೂಢ. ವಿ: [ಸಮಾಗೂಢ] ಆಲಿಂಗಿಸಲ್ಪಟ್ಟ

ಸಮಾಜ. **ಪು:** [ಸಮಾಜ] ಸಮೂಹ, ಗುಂಪು, ಸಮುದಾಯ. **'ಸಮಾಯ=ಸಮಾಜ'** ಶಬ್ದವನ್ನು ನೋಡುವುದು

ಸಮಾಜುತ್ತ. **ನ:** [ಸಮಾಯುಕ್ತ] ಒಟ್ಟಿಗೆ ಸೇರಿಸಲ್ಪಟ್ಟ, ಜೋಡಿಸಲ್ಪಟ್ಟ, ನೇಮಿಸಲ್ಪಟ್ಟ

ಸಮಾಢತ್ತ. **ವಿ:** [ಸಮಾರಬ್ಧ] ಆರಂಭಿಸಲ್ಪಟ್ಟ, ಆರಂಭಿಸಿದವನು

ಸಮಾಣ. **ಸಕ:** [ಭುಜ್] ಊಟ ಮಾಡು, ತಿನ್ನು

ಸಮಾಣ. **ಸಕ:** [ಸಮ್+ಆಪ್] ಸಮಾಪ್ತಗೊಳಿಸು, ಪೂರ್ಣಗೊಳಿಸು, ಮುಗಿಸು

ಸಮಾಣ. **ವಿ:** [ಸಮಾನ] ಹೋಲುವ, ಒಂದೇ ಬಗೆಯ, ಸಮನಾಗಿರುವ, ಅಹಂಕಾರಿ, **ಪುಂನ:** ಒಂದು ದೇವ–ವಿಮಾನ

ಸಮಾಣ. **ವಿ:** [ಸತ್] ವಿದ್ಯಮಾನ, ಈಗ ಇರುವ (ಉವಾ), **ಸ್ತ್ರೀ:** –ಣೀ.

ಸಮಾಣ. **'ಸಂಮಾಣ=ಸಂಮಾನ'** ಶಬ್ದವನ್ನು ನೋಡುವುದು

ಸಮಾಣಅ. **ವಿ:** [ಸಮಾಪಕ] ಸಮಾಪ್ತಿಗೊಳಿಸುವ, ಕೊನೆಗೊಳಿಸುವ, ಪೂರ್ಣಗೊಳಿಸುವ

ಸಮಾಣಣ. **ನ:** [ಭೋಜನ] ಊಟ

ಸಮಾಣತ್ತ. **ವಿ:** [ಸಮಾಜ್ಞಪ್ತ] ಆಜ್ಞಾಪಿಸಲ್ಪಟ್ಟವ

ಸಮಾಣಿಅ. **'ಸಂಮಾಣಿಯ'** ಶಬ್ದವನ್ನು ನೋಡುವುದು

ಸಮಾಣಿಅ. **ವಿ:** [ಸಮಾನೀತ] ತರಲ್ಪಟ್ಟ

ಸಮಾಣಿಅ. **ವಿ:** [ಸಮಾಪ್ತ] ಸಮಾಪ್ತಿಗೊಳಿಸಲ್ಪಟ್ಟ, ಪೂರ್ಣಗೊಳಿಸಲ್ಪಟ್ಟ, ಕೊನೆಗೊಳಿಸಲ್ಪಟ್ಟ (ಕುಮಾ)

ಸಮಾಣಿಅ. **ವಿ:** [ದೇ] ಒರೆಯಲ್ಲಿ ಹಾಕಲ್ಪಟ್ಟ, ಒರೆಗೆ ಸೇರಿಸಲ್ಪಟ್ಟ

ಸಮಾಣಿಅ. **ವಿ:** [ಭುಕ್ತ] ತಿನ್ನಲ್ಪಟ್ಟ

ಸಮಾಣಿಆ. **ಸ್ತ್ರೀ:** [ಸಮಾನಿಕಾ] ಒಂದು ಛಂದಸ್ಸು

ಸಮಾಣೀ. **ಸಕ:** [ಸಮಾ+ನೀ] ತರು, ತೆಗೆದುಕೊಂಡು ಬರು

ಸಮಾಣೀ. **'ಸಮಾಣ=ಸತ್'** ಶಬ್ದವನ್ನು ನೋಡುವುದು

ಸಮಾಣು.(ಅಪ). **'ಸಮಂ'** ಶಬ್ದವನ್ನು ನೋಡುವುದು

ಸಮಾದಹ. **ಸಕ:** [ಸಮಾ+ದಹ್] ಸುಡು, ಉರಿಸು, **ವ. ಕೃ:** **ಸಮಾದಹಮಾಣ**

ಸಮಾದಾ. **ಸಕ:** [ಸಮಾ+ದಾ] ಸ್ವೀಕರಿಸು

ಸಮಾದಾಣ. **ನ:** [ಸಮಾದಾನ] ಸ್ವೀಕರಿಸುವುದು, ತೆಗೆದುಕೊಳ್ಳುವುದು

ಸಮಾದಿಟ್ಠ. **ವಿ:** [ಸಮಾದಿಷ್ಟ] ಆದೇಶಿಸಲ್ಪಟ್ಟ, ಆಜ್ಞಾಪಿಸಲ್ಪಟ್ಟ

ಸಮಾದಿಸ. **ಸಕ:** [ಸಮಾ+ದಿಶ್] ಆದೇಶಿಸು, ಆಜ್ಞಾಪಿಸು

ಸಮಾದೇಸ. **'ಸಮಾಏಸ'** ಶಬ್ದವನ್ನು ನೋಡುವುದು

ಸಮಾಧಾರಣಯಾ. **ಸ್ತ್ರೀ:** [ಸಮಾಧಾರಣಾ] ಸಮಭಾವದಿಂದ(ಮನಸ್ಸನ್ನು) ನಿಲ್ಲಿಸುವುದು, ಇರಿಸುವುದು

ಸಮಾಧಿ. **'ಸಮಾಹಿ'** ಶಬ್ದವನ್ನು ನೋಡುವುದು

ಸಮಾಪಣಾ. **ಸ್ತ್ರೀ:** [ಸಮಾಪನಾ] ಪೂರ್ತಿ ಮಾಡುವುದು, ಪೂರ್ಣಗೊಳಿಸುವುದು(ವಿಸೇ)

ಸಮಾಭರಿಅ. **ವಿ:**[ಸಮಾಭರಿತ] ಆಭರಣದಿಂದ ಕೂಡಿದ

ಸಮಾಯ. **ಪು:** [ಸಮಾಜ] ಸಭೆ, ಪರಿಷತ್ತು(ಉತ್ತ), ಮನುಷ್ಯ ಸಮೂಹ, ಆನೆ

ಸಮಾಯ. **ಪು:** [ಸಮಾಯ] ಒಂದು ಬಗೆಯ ಸಂಯಮ

ಸಮಾಯ. **'ಸಮವಾಯ'** ಶಬ್ದವನ್ನು ನೋಡುವುದು

ಸಮಾಯಂ. **'ಸಮಯಂ'** ಶಬ್ದವನ್ನು ನೋಡುವುದು

ಸಮಾಯಣ್ಣ. **ಸಕ:** [ಸಮ್+ಆಕರ್ಣಯ್] ಕೇಳಿಸಿಕೊಳ್ಳು

ಸಮಾಯಣ್ಣಣ. **ನ:** [ಸಮಾಕರ್ಣನ] ಕೇಳಿಸಿಕೊಳ್ಳುವಿಕೆ, ಶ್ರವಣ

ಸಮಾಯಣ್ಣಿಅ. **ವಿ:** [ಸಮಾಕರ್ಣಿತ] ಕೇಳಿಸಿಕೊಳ್ಳಲ್ಪಟ್ಟ, ಕೇಳಿಸಿಕೊಂಡ

ಸಮಾಯಯ. **ಸಕ:** [ಸಮಾ+ದದ್] ಸ್ವೀಕರಿಸು

ಸಮಾಯಯ. **'ಸಮಾಗಯ'** ಶಬ್ದವನ್ನು ನೋಡುವುದು (ಭವಿ)

ಸಮಾಯರ. **ಸಕ:** [ಸಮ್+ಆಚರ್] ಆಚರಿಸು, ಅನುಷ್ಠಾನಗೊಳಿಸು

ಸಮಾಯರಿಯ. **ವಿ:** [ಸಮಾಚರಿತ] ಚೆನ್ನಾಗಿ ಆಚರಿಸಲ್ಪಟ್ಟ

ಸಮಾಯಾ. **'ಸಮಾದಾ'** ಶಬ್ದವನ್ನು ನೋಡುವುದು

ಸಮಾಯಾಯ. **ವಿ:** [ಸಮಾಯಾತ] ಬಂದಿರುವ, ಬಂದು ತಲುಪಿರುವ, ಒಟ್ಟಾಗಿ ಸೇರಿರುವ

ಸಮಾಯಾರ. **ಪು:** [ಸಮಾಚಾರ] ಆಚರಣೆ, ಸದಾಚಾರ, ಒಳ್ಳೆಯ ನಡವಳಿಕೆ, ವಾರ್ತೆ, **ವಿ:** ಆಚರಿಸುವವನು

ಸಮಾರ. ಸಕ: [ಸಮಾ+ರಚಯ್] ಸರಿಪಡಿಸು, ಮಾಡು, ನಿರ್ಮಿಸು, ರಚಿಸು
ಸಮಾರ. ಸಕ: [ಸಮ್+ಆರಭ್] ಆರಂಭಿಸು, ಶುರು ಮಾಡು
ಸಮಾರ. ವಿ: [ಸಮಾಚರಿತ] ನಿರ್ಮಿಸಲ್ಪಟ್ಟ, ರಚಿಸಲ್ಪಟ್ಟ, ಚೆನ್ನಾಗಿ ಆಚರಿಸಲ್ಪಟ್ಟ
ಸಮಾರಂಭ. ಸಕ: [ಸಮಾ+ರಭ್] ಪ್ರಾರಂಭಿಸು, ಹಿಂಸಿಸು,
ಸಮಾರಂಭ. ಪು: [ಸಮಾರಂಭ] ಪರ ಹಿಂಸೆ, ಪ್ರಾರಂಭ, ಉಪಕ್ರಮ, ಕಾರ್ಯ, ಕೆಲಸ
ಸಮಾರಚಣ}. ನ: [ಸಮಾರಚನ] ಸರಿಪಡಿಸುವುದು,
ಸಮಾರಣ}. ವಿ: ಕರ್ತೃ, ಮಾಡುವವನು, ನೆರವೇರಿಸುವವನು
ಸಮಾರದ್ಧ. '**ಸಮಾಢತ್ತ**' ಶಬ್ದವನ್ನು ನೋಡುವುದು
ಸಮಾರಭ}. '**ಸಮಾರಂಭ=ಸಮಾ+ರಭ್**' ಶಬ್ದವನ್ನು
ಸಮಾರಹ}. ನೋಡುವುದು
ಸಮಾರಿಯ. ವಿ: [ಸಮಾರಚಿತ] ಸರಿಪಡಿಸಲ್ಪಟ್ಟ
ಸಮಾರುಹ. ಸಕ: [ಸಮ್+ಆರುಹ್] ಹತ್ತು, ಏರು, ಬೀಜವು ಮೊಳಕೆಯಿಟ್ಟು ಬೆಳೆ. ವ.ಕೃ: **ಸಮಾರುಹಂತ**'
ಸಮಾರುಹಣ. ನ: [ಸಮಾರೋಹಣ] ಹತ್ತುವುದು, ಹತ್ತುವಿಕೆ, ಮೇಲಕ್ಕೆ ಏರುವುದು, ಬೀಜವು ಅಂಕುರಿಸಿ ಬೆಳೆಯುವುದು
ಸಮಾರೂಢ. ವಿ: [ಸಮಾರೂಢ] ಏರಿದವನು, ಹತ್ತಲ್ಪಟ್ಟ
ಸಮಾಲಂಕಾರ}.'**ಸಮಲಂಕಾರ=ಸಮಲಂ+ಕಾರಯ್**'
ಸಮಾಲಂಕೇ}. ಶಬ್ದವನ್ನು ನೋಡುವುದು
ಸಮಾಲಂಬ. ಪು: [ಸಮಾಲಂಬ] ಆಧಾರ, ಆಸರೆ,
ಸಮಾಲಂಭಣ. ನ: [ಸಮಾಲಂಭನ] ಅಲಂಕಾರ ಮಾಡುವುದು, ಒಡವೆ ತೊಡಿಸುವುದು, '**ಸಮಾಲಭಣ**' ಶಬ್ದವನ್ನು ನೋಡುವುದು, ಸುಗಂಧ ದ್ರವ್ಯವನ್ನು ಮೈಗೆ ಲೇಪಿಸುವುದು
ಸಮಾಲತ್ತ. ವಿ: [ಸಮಾಲಪಿತ] ಉಕ್ತ, ಹೇಳಲ್ಪಟ್ಟ
ಸಮಾಲಭಣ. ನ: [ಸಮಾಲಭನ] ವಿಲೇಪನ, ಮೈಗೆ ಬಳಿಯುವುದು, '**ಸಮಾಲಂಭಣ**' ಶಬ್ದವನ್ನು ನೋಡುವುದು
ಸಮಾಲವ. ಸಕ: [ಸಮಾ+ಲಪ್] ವಿಸ್ತಾರವಾಗಿ ಹೇಳು, ಮಾತಾಡು

ಸಮಾಲವಣೀ. ಸ್ತ್ರೀ: [ಸಮಾಲಪನೀ] ವಾದ್ಯ-ವಿಶೇಷ
ಸಮಾಲವಿಯ. '**ಸಮಾಲತ್ತ**' ಶಬ್ದವನ್ನು ನೋಡುವುದು
ಸಮಾಲಹ. ಸಕ: [ಸಮಾ+ಲಭ್] ಲೇಪನ ಮಾಡು, ಬಳಿ, ಒಡವೆ ತೊಡಿಸು, ಅಲಂಕರಿಸು
ಸಮಾಲಹಣ. '**ಸಮಾಲಭಣ**' ಶಬ್ದವನ್ನು ನೋಡುವುದು
ಸಮಾಲಾವ. ಪು: [ಸಮಾಲಾಪ] ಮಾತು-ಕತೆ, ಸಂವಾದ, ಸಂಭಾಷಣೆ
ಸಮಾಲಿಂಗಿಯ}. ವಿ: [ಸಮಾಲಿಂಗಿತ] ಆಲಿಂಗಿಸಲ್ಪಟ್ಟ,
ಸಮಾಲೀಢ}. ತಬ್ಬಿಕೊಂಡ
ಸಮಾಲೋಚ. ಪು: [ಸಮಾಲೋಚ] ವಿಚಾರ, ವಿಮರ್ಶೆ (ಉಪ)
ಸಮಾಲೋಯಣ. ನ: [ಸಮಾಲೋಚನ] ಸಾಮಾನ್ಯ ಅರ್ಥವನ್ನು ಕಾಣುವುದು, ವಿಚಾರ, ಮನನ
ಸಮಾವ. ಸಕ: [ಸಮ್+ಆಪ್] ಪೂರ್ಣಗೊಳಿಸು, ಮುಗಿಸುವುದು
ಸಮಾವಜ್ಜಿಂಯ. ವಿ: [ಸಮಾವರ್ಜಿತ] ಸಂತುಷ್ಟಗೊಳಿಸಲ್ಪಟ್ಟ, ಪ್ರಸನ್ನಗೊಳಿಸಲ್ಪಟ್ಟ
ಸಮಾವಡ. ಅಕ: [ಸಮಾ+ಪತ್] ಎದುರಿನಲ್ಲಿ ಬಂದು ಬೀಳು, ಕೆಳಗೆ ಬೀಳು, ಸೇರಿಕೊಳ್ಳು, ಅಂಟಿಕೊಳ್ಳು
ಸಮಾವಡಣ. ನ: [ಸಮಾಪತನ] ಕೆಳಗೆ ಬೀಳುವುದು
ಸಮಾವಡಿಯ. ವಿ: [ಸಮಾಪತಿತ] ಎದುರುಗಡೆ ಬಂದು ಬಿದ್ದ(ಔಪ), ಆಗುತ್ತಿರವಂಥದು, ಆಗುವಂಥದು
ಸಮಾವಣ್ಣ. ವಿ: [ಸಮಾಪನ್ನ] ಪ್ರಾಪ್ತವಾದ, ದೊರಕಿದ
ಸಮಾವತ್ತಿ. ಸ್ತ್ರೀ: [ಸಮಾವಾಪ್ತಿ] ಸಮಾಪ್ತಿ, ಪೂರ್ಣತೆ, ಪೂರ್ಣಗೊಳ್ಳುವಿಕೆ
ಸಮಾವದ. ಸಕ: [ಸಮಾ+ವದ್] ಹೇಳು, ಮಾತಾಡು (ಆಚಾ)
ಸಮಾವನ್ನ. '**ಸಮಾವಣ್ಣ**' ಶಬ್ದವನ್ನು ನೋಡುವುದು
ಸಮಾವಯ. '**ಸಮಾವದ**' ಶಬ್ದವನ್ನು ನೋಡುವುದು
ಸಮಾವಯ. '**ಸಮಾವಡ**' ಶಬ್ದವನ್ನು ನೋಡುವುದು
ಸಮಾವಿಅ. ವಿ: [ಸಮಾಪಿತ] ಪೂರ್ಣಗೊಳಿಸಲ್ಪಟ್ಟ,
ಸಮಾಸ. ಅಕ: [ಸಮ್+ಆಸ್] ಕುಳಿತುಕೊಳ್ಳು, ಇರು
ಸಮಾಸ. ಸಕ: [ಸಮಾ+ಅಸ್] ಚೆನ್ನಾಗಿ ಎಸೆ,
ಸಮಾಸ. ಪು: [ಸಮಾಸ] ಸಂಕ್ಷೇಪ, ಸಂಗ್ರಹ, ಕುಗ್ಗುವುದು, ಮುದುಡುವುದು, ಸಂಯಮ-ವಿಶೇಷ. ಅನೇಕ ಪದಗಳು ಸೇರಿ ಒಂದು

ಪದವಾಗುವ ಪ್ರಸಿದ್ಧ ವ್ಯಾಕರಣ ಪ್ರಕ್ರಿಯೆ, ಮೊತ್ತ, ಒಟ್ಟು
ಸಮಾಸಂಗ. **ಪು:** **[ಸಮಾಸಂಗ]** ಸಂಯೋಗ, ಜೊತೆಗೂಡುವುದು, ಸಂಬಂಧ ಹೊಂದಿರುವುದು
ಸಮಾಸಂಗಯ. **ವಿ:** **[ಸಮಾಸಂಗತ]** ಚೆನ್ನಾಗಿ ಸೇರಿಕೊಂಡಿರುವ, ಕೂಡಿಕೊಂಡಿರುವ, ಸಮಂಜಸವಾದ
ಸಮಾಸಜ್ಜ. **'ಸಮಾಸಾದ'** ಶಬ್ದವನ್ನು ನೋಡುವುದು
ಸಮಾಸತ್ಥ. **ವಿ:** **[ಸಮಾಶ್ವಸ್ತ]** ಭರವಸೆ ದೊರಕಿದ, ಚೇತರಿಸಿಕೊಂಡಿರುವ,ಸಮಾಧಾನಗೊಂಡಿರುವ
ಸಮಾಸಯ. **ಪು:** **[ಸಮಾಶ್ರಯ]** ಆಶ್ರಯ, ವಾಸಸ್ಥಾನ, ಆಸರೆ,
ಸಮಾಸವ. **ಸಕ:** **[ಸಮಾ+ಸ್ರು]** ಬರು, ಆಗಮಿಸು
ಸಮಾಸಸ. **'ಸಮಸ್ಸಸ'** ಶಬ್ದವನ್ನು ನೋಡುವುದು
ಸಮಾಸಾದ(ಶೌ).ಸಕ: **[ಸಮಾ+ಸಾದಯ್]** ಪಡೆದುಕೊಳ್ಳು, ಹೊಂದು, ಸಂಪಾದಿಸು
ಸಮಾಸಾದಿಅ. **ವಿ:** **[ಸಮಾಸಾದಿತ]** ಪಡೆಯಲ್ಪಟ್ಟ, ಹೊಂದಲಾದ, ದೊರಕಿದ
ಸಮಾಸಾಸಿಯ. **ವಿ:** **[ಸಮಾಶ್ವಾಸಿತ]** ಆಶ್ವಾಸನೆ ನೀಡಲ್ಪಟ್ಟ, ಭರವಸೆ ಕೊಡಲ್ಪಟ್ಟ, ಸಮಾಧಾನ ಪಡಿಸಲಾದ
ಸಮಾಸಿ. **ಸಕ:** **[ಸಮಾ+ಶ್ರಿ]** ಚೆನ್ನಾಗಿ ಆಶ್ರಯಿಸು, ಅವಲಂಬಿಸು
ಸಮಾಸಿಜ್ಜ. **'ಸಮಾಸಾದ'** ಶಬ್ದವನ್ನು ನೋಡುವುದು
ಸಮಾಸಿಯ. **ವಿ:** **[ಸಮಾಶ್ರಿತ]** ಒಳ್ಳೆಯ ಆಶ್ರಯ ಪಡೆದವನು, ಒಳ್ಳೆಯ ರಕ್ಷಣೆ ಹೊಂದಿದವನು
ಸಮಾಸಿಯ. **ವಿ:** **[ಸಮಾಸಿತ]** ಕುಳ್ಳಿರಿಸಲ್ಪಟ್ಟ, ಕೂರಿಸಲ್ಪಟ್ಟ
ಸಮಾಸೀಣ. **ವಿ:** **[ಸಮಾಸೀನ]** ಕುಳಿತುಕೊಂಡಿರುವ
ಸಮಾಹಟ್ಟು. **'ಸಮಾಹರ'** ಶಬ್ದವನ್ನು ನೋಡುವುದು
ಸಮಾಹಡ. **ವಿ:** **[ಸಮಾಹೃತ]** ನಿರ್ಮಲವಾದ, ಶುದ್ಧವಾದ, ಸ್ವೀಕರಿಸಲ್ಪಟ್ಟ, ಒಂದು ಕಡೆ ಸೇರಿಸಲ್ಪಟ್ಟ
ಸಮಾಹಯ. **ವಿ:** **[ಸಮಾಹತ]** ಹೊಡೆಯಲ್ಪಟ್ಟ(ಔಪ)
ಸಮಾಹರ. **ಸಕ:** **[ಸಮಾ+ಹೃ]** ಒಟ್ಟುಗೂಡಿಸು, ಸಂಗ್ರಹಿಸು, ಸ್ವೀಕರಿಸು
ಸಮಾಹವಿಅ. **ವಿ:** **[ಸಮಾಹೂತ]** ಕರೆಯಲ್ಪಟ್ಟ, ಆಹ್ವಾನಿಸಲ್ಪಟ್ಟ
ಸಮಾಹಾಣ. **ನ:** **[ಸಮಾಧಾನ]** ಮನಸ್ಸಿನ ನೆಮ್ಮದಿ, ಒಂದು ವಸ್ತು ಕುರಿತ ನಿರಂತರ ಧ್ಯಾನ, ಚಿತ್ತ ಸಾಸ್ಥ್ಯ
ಸಮಾಹಾರ. **ಪು:** **[ಸಮಾಹಾರ]** ಸಮೂಹ, ಒಟ್ಟುಗೂಡಿರುವುದು, **–ದಂದ.** **ಪು:** **[–ದ್ವಂದ್ವ]** ವ್ಯಾಕರಣದಲ್ಲಿ ಪ್ರಸಿದ್ಧವಾದ ಸಮಾಸ.
ಸಮಾಹಾರಾ. **ಸ್ತ್ರೀ:** **[ಸಮಾಹಾರಾ]** ದಕ್ಷಿಣ ರುಚಕ ಪರ್ವತದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ(ಠಾ), ಪಕ್ಷದ ೧೨ನೇ ರಾತ್ರಿ
ಸಮಾಹಿ. **ಪುಂಸ್ತ್ರೀ:** **[ಸಮಾಧಿ]** ಚಿತ್ತದ ಸ್ವಸ್ಥತೆ, ಮನಸ್ಸಿನ ದುಃಖ ನಿವಾರಣೆ, ಸ್ವಸ್ಥತೆ, ಧರ್ಮ, ಚಿತ್ತದ ಏಕಾಗ್ರತಾ ರೂಪದ ಧ್ಯಾನ ಸ್ಥಿತಿ, ಸಮತೆ, ರಾಗ–ದ್ವೇಷಾದಿಗಳು ಇಲ್ಲದಿರುವುದು, ಜ್ಞಾನ, ಚಾರಿತ್ರ, ಸಂಯಮದ ಅನುಷ್ಠಾನ. **ಪು:** ಭರತ ಕ್ಷೇತ್ರದ ೧೭ನೇ ಭಾವೀ ತೀರ್ಥಂಕರ. **–ಪಡಿಮಾ.** **ಸ್ತ್ರೀ:** **[–ಪ್ರತಿಮಾ]** ಸಮಾಧಿ ವಿಷಯದ ವ್ರತ. **–ಪಾಣ.** **ನ:** **[–ಪಾನ]** ಸಕ್ಕರೆ ನೀರು. **–ಮರಣ.** **ನ:** **[–ಮರಣ]** ಸಮಾಧಿಯಲ್ಲಿರುವಾಗಿನ ಮರಣ.
ಸಮಾಹಿಅ. **ವಿ:** **[ಸಮಾಹಿತ]** ಸಮಾಧಿಯಲ್ಲಿರುವವನು, ಧ್ಯಾನದಲ್ಲಿ ನಿರತ(ಸೂಅ), ಚೆನ್ನಾಗಿ ವ್ಯವಸ್ಥೆಗೊಳಿಸಲ್ಪಟ್ಟ, ಉಪಶಮನಗೊಂಡ, ಪೂರ್ಣಗೊಂಡ, ಕೊನೆಗೊಂಡ, ಸುಂದರವಾದ, ಬೀಭತ್ಸವಲ್ಲದ, ನಿರ್ದೋಷ.
ಸಮಾಹಿಅ. **ವಿ:** **[ಸಮಾಹೃತ]** ಸ್ವೀಕರಿಸಲ್ಪಟ್ಟ, ಒಂದೆಡೆ ಸೇರಿಸಲ್ಪಟ್ಟ(ಆಚಾ)
ಸಮಾಹಿಅ. **ವಿ:** **[ಸಮಾಖ್ಯಾತ]** ಚೆನ್ನಾಗಿ ಹೇಳಲ್ಪಟ್ಟ, ಪ್ರಸಿದ್ಧವಾದ
ಸಮಾಹುತ್ತ}. **(ಅಪ).** **ವಿ:** **[ಸಮಾಹೂತ]** ಕರೆಯಲ್ಪಟ್ಟ,
ಸಮಾಹೂಅ.} ಆಹ್ವಾನಿಸಲ್ಪಟ್ಟ
ಸಮಾಹೇ. **ಸಕ:** **[ಸಮಾ+ಧಾ]** ಸಮಾಧಾನ ಪಡಿಸು, ಸಮಾಧಾನ ಮಾಡು, ನೆಮ್ಮದಿ ಉಂಟುಮಾಡು
ಸಮಿ. **ಸ್ತ್ರೀ:** **[ಶಮಿ]** **'ಸಮೀ'** ಶಬ್ದವನ್ನು ನೋಡುವುದು
ಸಮಿ}. **ವಿ:** **[ಶಮಿನ್, –ಕ]** ಶಮೆಯಿಂದ ಕೂಡಿರುವ,
ಸಮಿಅ}. **ಪು:** ಸಾಧು, ಮುನಿ, ಸಂನ್ಯಾಸಿ
ಸಮಿಅ. **'ಸಂತ=ಶಾಂತ'** ಶಬ್ದವನ್ನು ನೋಡುವುದು
ಸಮಿಅ. **ವಿ:** **[ಸಮಿತ]** ಎಚ್ಚರಿಕೆಯಿಂದ ನಡೆಯುವವನು, ರಾಗ–ದ್ವೇಷಾದಿ ರಹಿತನಾದ,

ಕೂಡಿಕೊಂಡಿರುವ, ಜೊತೆಯಲ್ಲಿ ಸೇರಿರುವ, ಸರಿಯಾಗಿ ಸಾಗಿದ, ನಿರಂತರ, ಎಡೆಬಿಡದೆ(ಠಾ), ಚೆನ್ನಾಗಿ ವ್ಯವಸ್ಥೆಗೊಳಿಸಲ್ಪಟ್ಟ

ಸಮಿಅ. ವಿ: [ಸಮ್ಯಂಚ್] ಒಳ್ಳೆಯ ಪ್ರವೃತ್ತಿ ಉಳ್ಳ, ಒಳ್ಳೆಯ, ಸುಂದರವಾದ, ಚೆನ್ನಾಗಿರುವ(ಸೂಅ).

ಸಮಿಅ. ವಿ: [ಶಮಿತ] ಶಾಂತಗೊಳಿಸಲ್ಪಟ್ಟ, (ಔಪ)

ಸಮಿಅ. ವಿ: [ಶ್ರಮಿತ] ಶ್ರಮದಿಂದ ಕೂಡಿದ(ಭಗ)

ಸಮಿಅ. ವಿ: [ಸಮಿಕ] ರಾಗ-ದ್ವೇಷಾದಿಗಳಿಲ್ಲದ, ಸಮ.

ಸಮಿಅ. ನ: [ಸಾಮ್ಯ] ಸವು-ಭಾವ, ಒಂದೇ ರೀತಿಯಲ್ಲಿರುವುದು, ಸಮತೆ, ಹೋಲಿಕೆ

ಸಮಿಅ. ವಿ: [ಸಂಮಿತ] ಒಂದೇ ಅಳತೆ ಉಳ್ಳ, ಅಳತೆಯಿಂದ ಕೂಡಿದ

ಸಮಿಅ. ವಿ: [ಸಾಮಿತ] ಗೋಧಿ ಹಿಟ್ಟಿನಿಂದ ತಯಾರಿಸಿದ ಸಿಹಿ ಭಕ್ಷ್ಯ, ಮಂಡಿಗೆ

ಸಮಿಅಂ.} ಅ: [ಸಮ್ಯಗ್] ಸ್ತ್ರೀ.ಅ: ಚೆನ್ನಾಗಿ, ಒಳ್ಳೆಯ
ಸಮಿಆ.}.

ಸಮಿಆ. ಸ್ತ್ರೀ.[ಸಮಿಕಾ, ಶಮಿಕಾ, ಶಮಿತಾ] ಚಮರೇಂದ್ರನೇ ಮೊದಲಾದ ಎಲ್ಲ ಇಂದ್ರರ ಒಂದು ಆಂತರಿಕ ಪರಿಷತ್ತು(ಭಗ)

ಸಮಿಇ. ಸ್ತ್ರೀ: [ಸಮಿತಿ] ಒಳ್ಳೆಯ ಪ್ರವೃತ್ತಿ, ಉಪಯೋಗದಿಂದ ಕೂಡಿದ ನಡೆ, ಮಾತು. ಕ್ರಿಯೆ, ಸಭೆ, ಸಮರ, ಯುದ್ಧ, ನಿರಂತರವಾಗಿ ಒಂದೆಡೆ ಸೇರುವುದು

ಸಮಿಇ. ಸ್ತ್ರೀ: [ಸ್ಮೃತಿ] ನೆನಪು, ಸ್ಮರಣೆ, ಮನು ಸ್ಮೃತಿಯೇ ಮೊದಲಾದ ಶಾಸ್ತ್ರ

ಸಮಿಇಮ. ವಿ: [ಸಮಿತಿಮ] ಗೋಧಿ ಹಿಟ್ಟಿನಿಂದ ತಯಾರಿಸಲ್ಪಟ್ಟ ಸಿಹಿ ಭಕ್ಷ್ಯ, ಮಂಡಿಗೆ

ಸಮಿಂಜಗ. ಪು: [ಸಮಿಂಜಕ] ಮೂರು ಇಂದ್ರಿಯಗಳ ಒಂದು ಪ್ರಾಣಿ(ಉತ್ತ)

ಸಮಿಕ್ಖ. ಸಕ: [ಸಮ್+ಈಕ್ಷ್] ಗುಣ-ದೋಷ ವಿಚಾರ ಮಾಡು, ಪರ್ಯಾಲೋಚನೆ ಮಾಡು, ಚಿಂತನೆ ಮಾಡು, ಚೆನ್ನಾಗಿ ನೋಡು

ಸಮಿಕ್ಖಾ. ಸ್ತ್ರೀ: [ಸಮೀಕ್ಷಾ] ಪರ್ಯಾಲೋಚನೆ, ವಿಮರ್ಶೆ, ನೋಡುವುದು, ಅವಲೋಕನ

ಸಮಿಕ್ಖಿಯ. ವಿ: [ಸಮೀಕ್ಷಿತ] ಪರ್ಯಾಲೋಚಿಸಲ್ಪಟ್ಟ, ಚೆನ್ನಾಗಿ ನೋಡಲ್ಪಟ್ಟ

ಸಮಿಚ್ಚ. 'ಸಮೇ' ಶಬ್ದವನ್ನು ನೋಡುವುದು

ಸಮಿಚ್ಛಣ. ನ: [ಸಮೀಕ್ಷಣ] ಸಮೀಕ್ಷೆ

ಸಮಿಚ್ಛಿಯ. 'ಸಮಿಕ್ಖಿಅ' ಶಬ್ದವನ್ನು ನೋಡುವುದು

ಸಮಿಜ್ಝ. ಅಕ: [ಸಮ್+ಇಂಧ್] ನಾಲ್ಕೂ ಕಡೆಯಿಂದ ಹೊಳೆಯುವುದು, ಮಿನುಗುವುದು,

ಸಮಿತಾ. 'ಸಮಿಆ=ಸಮಿಕಾ' ಶಬ್ದವನ್ನು ನೋಡುವುದು

ಸಮಿದ್ಧ. ವಿ: [ಸಮೃದ್ಧ] ಅತಿಶಯವಾದ ಸಂಪತ್ತಿನಿಂದ ಕೂಡಿದ, ಅಭಿವೃದ್ಧಿ ಹೊಂದಿದ,

ಸಮಿದ್ಧಿ. ಸ್ತ್ರೀ: [ಸಮೃದ್ಧಿ] ಹೆಚ್ಚಿನ ಐಶ್ವರ್ಯ, ಅಭಿವೃದ್ಧಿ, ಬೆಳವಣಿಗೆ, -ಲ. ವಿ: [-ಲ] ಸಂಪತ್ತನ್ನು ಹೊಂದಿರುವ

ಸಮಿರ. ಪು: [ಸಮಿರ] ವಾಯು, ಗಾಳಿ, ಪವನ

ಸಮಿರಿಈಅ}. 'ಸ-ಮಿರಿಈಅ=ಸಮರೀಚಿಕ' ಶಬ್ದವನ್ನು
ಸಮಿರೀಯ}. ನೋಡುವುದು

ಸಮಿಲಾ. ಸ್ತ್ರೀ: [ಶಮಿಲಾ, ಶಮ್ಯಾ] ಗಾಡಿಯ ಚಕ್ರಕ್ಕೆ ಹಾಕುವ ಮರದ ಕಡೆಗೀಲು(ಉಪ)

ಸಮಿಲ್ಲ. 'ಸಂಮಿಲ್ಲ' ಶಬ್ದವನ್ನು ನೋಡುವುದು

ಸಮಿಹಾ. ಸ್ತ್ರೀ: [ಸಮಿಧ್] ಅಗ್ನಿ ಕಾರ್ಯಕ್ಕೆ ಬಳಸುವ ಮುತ್ತುಗ ಅರಳಿ ಮೊದಲಾದ ಕಡ್ಡಿ

ಸಮೀ. ಸ್ತ್ರೀ: [ಶಮೀ] ಶಮೀ ವೃಕ್ಷ, ಬನ್ನಿ ಮರ, ಅವರೆ, ಬಟಾಣಿ ಇತ್ಯಾದಿ ಕಾಯಿ,**-ಖಲ್ಲಯ.** ನ: [ದೇ] ಶಮಿ ಪತ್ರೆ, ಬನ್ನಿ ಪತ್ರೆ

ಸಮೀಅ. 'ಸಮೀಚ' ಶಬ್ದವನ್ನು ನೋಡುವುದು

ಸಮೀಕಯ. ವಿ: [ಸಮೀಕೃತ] ಸಮಗೊಳಿಸಲಾದ(ಸೂಅ)

ಸಮೀಚೀಣ. ವಿ: [ಸಮೀಚೀನ] ಸುಂದರವಾದ, ಒಳ್ಳೆಯದಾದ, ಸತ್ಯವಾದ

ಸಮೀರ. ಸಕ: [ಸವ್+ಈರಯ್] ಪ್ರೇರಿಸು, ಉತ್ತೇಜಿಸು

ಸಮೀರ}. ಪು: [ಸಮೀರ] ಗಾಳಿ, ವಾಯು
ಸಮೀರಣ}.

ಸಮೀಲ. 'ಸಂಮೀಲ' ಶಬ್ದವನ್ನು ನೋಡುವುದು

ಸಮೀವ. ವಿ: [ಸಮೀಪ] ಹತ್ತಿರ, ನಿಕಟ

ಸಮೀಹ. ಸಕ: [ಸಮ್+ಈಹ್] ಇಚ್ಛಿಸು, ಬಯಸು, ಅಪೇಕ್ಷಿಸು

ಸಮೀಹಾ. ಸ್ತ್ರೀ: [ಸಮೀಹಾ] ಇಚ್ಛೆ, ಬಯಕೆ, ಅಪೇಕ್ಷೆ

ಸಮೀಹಿಯ. ವಿ: [ಸಮೀಹಿತ] ಇಚ್ಛಿಸಿದ, ಬಯಸಿದ, ಇಷ್ಟಪಟ್ಟ

ಸಮೀಹಿಯ. 'ಸಮಿಕ್ಖಿಅ' ಶಬ್ದವನ್ನು ನೋಡುವುದು

ಸಮುಆಚಾರ. ಪು: [ಸಮುದಾಚಾರ] ಸುಂದರವಾದ ಆಚರಣೆ, ಸತ್ ಸಂಪ್ರದಾಯದ ನಡವಳಿಕೆ
ಸಮುಇಅ. ವಿ: [ಸಮುಚಿತ] ಯೋಗ್ಯ, ಉಚಿತವಾದ
ಸಮುಇಅ. ವಿ: [ಸಮುದಿತ] ಒಟ್ಟಿಗೆ ಸೇರಿದ, ಚೆನ್ನಾಗಿ ಉದಯಿಸಿ ಮೇಲಕ್ಕೆ ಎದ್ದಿರುವ, ಸುತ್ತಲ್ಪಟ್ಟ
ಸಮುಇನ್ನ. ವಿ: [ಸಮುದೀರ್ಣ] ಉದಯಿಸಿದ, ಮೇಲೆ ಎದ್ದಿರುವ, ಚೆನ್ನಾಗಿ ಬೆಳೆದಿರುವ
ಸಮುಈರ. 'ಸಮುದೀರ' ಶಬ್ದವನ್ನು ನೋಡುವುದು
ಸಮುಕ್ಕಸ. 'ಸಮುಕ್ಕರಿಸ' ಶಬ್ದವನ್ನು ನೋಡುವುದು
ಸಮುಕ್ಕತ್ತಿಯ. ವಿ: [ಸಮುತ್ಕರ್ತಿತ] ಕತ್ತರಿಸಲ್ಪಟ್ಟ
ಸಮುಕ್ಕರಿಸ. ಪು: [ಸಮುತ್ಕರ್ಷ] ಅತಿಶಯವಾದ ಮೇಲ್ಮೆ, ಶ್ರೇಷ್ಠತೆ, ಘನತೆ
ಸಮುಕ್ಕಸ. ಸಕ: [ಸಮುತ್+ಕೃಷ್] ಉತ್ಕೃಷ್ಟಗೊಳಿಸು, ಅಕ: ಹೆಮ್ಮೆ ಪಡು, ಜಂಬ ಕೊಚ್ಚಿಕೊಳ್ಳು
ಸಮುಕ್ಕಿಟ್ಠ. ವಿ: [ಸಮುತ್ಕೃಷ್ಟ] ಉತ್ಕೃಷ್ಟವಾದ
ಸಮುಕ್ಕಿತ್ತಣ. ನ: [ಸಮುತ್ಕೀರ್ತನ] ಉಚ್ಚಾರಣ, ಗಟ್ಟಿಯಾಗಿ ಹೇಳುವುದು, ಚೆನ್ನಾಗಿ ಸ್ತುತಿಸುವುದು
ಸಮುಕ್ಖಅ. ವಿ: [ಸಮುತ್ಖಾತ] ಬೇರು ಸಹಿತ ಕೀಳಲ್ಪಟ್ಟ
ಸಮುಕ್ಖಣ. ಸಕ: [ಸಮುತ್+ಖನ್] ಬೇರು ಸಹಿತ ಕೀಳು
ಸಮುತ್ಖಣಣ. ನ: [ಸಮುತ್ಖನನ] ಬುಡಸಹಿತ ಕೀಳುವುದು, ಕಿತ್ತೆಸೆಯುವುದು
ಸಮುಕ್ಖಿತ್ತ. ವಿ: [ಸಮುತ್ಕ್ಷಿಪ್ತ] ಮೇಲಕ್ಕೆ ಹಾರಿಸಲ್ಪಟ್ಟ, ಕಿತ್ತೆಸೆಯಲ್ಪಟ್ಟ
ಸಮುಕ್ಖಿವ. ಸಕ: [ಸಮುತ್+ಕ್ಷಿಪ್] ಮೇಲಕ್ಕೆ ಎಸೆ, ಕಿತ್ತೆಸೆ
ಸಮುಗ್ಗ. ಪು: [ಸಮುದ್ಗ] ಡಬ್ಬಿ, ಭರಣಿ, ಸಂಪುಟ, ಒಂದು ಪಕ್ಷಿ
ಸಮುಗ್ಗದ(ಶೌ). ವಿ: [ಸಮುದ್ಗತ] ಮೇಲಕ್ಕೆ ಎದ್ದಿರುವ, ಉತ್ಪನ್ನವಾದ ಹುಟ್ಟಿರುವ, ಉದಯಿಸಿರುವ
ಸಮುಗ್ಗಮ. ಪು: [ಸಮುದ್ಗಮ] ಮೇಲಕ್ಕೆ ಹೊರಡುವುದು, ಮೊಳಕೆ, ಹುಟ್ಟುವುದು
ಸಮುಗ್ಗಿಅ. ವಿ: [ದೇ] ನಿರೀಕ್ಷಿಸಲ್ಪಟ್ಟ, ಎದುರುನೋಡಲ್ಪಟ್ಟ
ಸಮುಗ್ಗಿಣ್ಣ. ವಿ: [ಸಮುದ್ಗೀರ್ಣ] ಮೇಲಕ್ಕೆ ಹೊರಡಿಸಲ್ಪಟ್ಟ,ಕಕ್ಕಲಾದ, ಮೇಲಕ್ಕೆ ಎತ್ತಲ್ಪಟ್ಟ
ಸಮುಗ್ಗಿರ. ಸಕ: [ಸಮುದ್+ಗೃ] ಮೇಲಕ್ಕೆ ಹೊರಡಿಸು, ಮೇಲಕ್ಕೆ ಎಬ್ಬಿಸು, ಕಕ್ಕಿಸು
ಸಮುಗ್ಘಡಿಅ. ವಿ: [ಸಮುದ್ಘಾಟಿತ] ತೆರೆಯಲ್ಪಟ್ಟ
ಸಮುಗ್ಘಾಇಅ. ವಿ: [ಸಮುದ್ಘಾತಿತ] ನಾಶ ಮಾಡಲ್ಪಟ್ಟ
ಸಮುಗ್ಘಾಯ. ಪು: [ಸಮುದ್ಘಾತ] ವೇದನೆ, ಕಷಾಯ, ಮರಣ, ವೈಕ್ರಿಯ, ತೈಜಸ, ಆಹಾರಕ ಮತ್ತು ಕೇವಲಿಕ ಎಂಬ ಏಳು ಬಗೆಯ ಕರ್ಮ-ನಿರ್ಜರಾ ವಿಶೇಷಗಳಾದ ಸಮುದ್ಘಾತಗಳು. ಯಾವಾಗ ಆತ್ಮವು ವೇದನೆ, ಕಷಾಯಾದಿಗಳಿಂದ ಪರಿಣತಗೊಳ್ಳುತ್ತದೋ ಆಗ ತನ್ನ ಪ್ರದೇಶಗಳಲ್ಲಿ ಯಾವ ವೇದನೀಯುವಾದ ಕಷಾಯುವೇ ಮೊದಲಾದ ಕರ್ಮಗಳ ನಿರ್ಜರೆಯನ್ನು ನಾಶ ಮಾಡುತ್ತದೋ ಅವು ಈ ಸಮುದ್ಘಾತಗಳು.
ಸಮುಗ್ಘಾಯಣ. ನ: [ಸಮುದ್ಘಾತನ] ವಿನಾಶ
ಸಮುಗ್ಘುಟ್ಠ. ವಿ: [ಸಮುದ್ಘೋಷಿತ] ಗಟ್ಟಿಯಾಗಿ ಸಾರಲ್ಪಟ್ಟದ್ದು.
ಸಮುಘಾಯ. 'ಸಮುಗ್ಘಾಯ' ಶಬ್ದವನ್ನು ನೋಡುವುದು
ಸಮುಚ್ಚಯ. ಪು: [ಸಮುಚ್ಚಯ] ವಿಶಿಷ್ಟ ರಾಶಿ, ಗುಂಪು, ಸಮೂಹ
ಸಮುಚ್ಚರ. ಸಕ: [ಸಮುತ್+ಚರ್] ಉಚ್ಚರಿಸು, ಹೇಳು
ಸಮುಚ್ಚಲಿಅ. ವಿ: [ಸಮುಚ್ಚಲಿತ] ಮುಂದೆ ಸಾಗಿದ, ನಡೆದ
ಸಮುಚ್ಚಿಣ. ಸಕ: [ಸಮುತ್+ಚಿ] ಒಟ್ಟುಗೂಡಿಸು, ಸಂಗ್ರಹಿಸು(ಗಾ)
ಸಮುಚ್ಚಿಯ. ವಿ: [ಸಮುಚ್ಚಿತ] ಒಂದು ಕ್ರಿಯೆಯಲ್ಲಿ ಅನ್ವಯವಾದ, ಒಟ್ಟುಗೂಡಿಸಲ್ಪಟ್ಟ, ರಾಸಿಹಾಕಲ್ಪಟ್ಟ
ಸಮುಚ್ಛ. ಸಕ: [ಸಮುತ್+ಛಿದ್] ಬುಡ ಸಹಿತ ಕಿತ್ತು ಹಾಕು, ದೂರ ಮಾಡು(ಸೂಅ). **'ಸಮುಚ್ಛೇ'**
ಸಮುಚ್ಛಇಯ. ವಿ: [ಸಮವಚ್ಛಾದಿತ] ನಿರಂತರವಾಗಿ ಮುಚ್ಚಲ್ಪಟ್ಟ, ಸದಾ ಹೊದಿಸಲ್ಪಟ್ಟಿರುವ
ಸಮುಚ್ಛಣೀ. ಸ್ತ್ರೀ: [ದೇ] ಪೊರಕೆ
ಸಮುಚ್ಛಲ. ಅಕ: [ಸಮುತ್+ಶಲ್] ಮೇಲಕ್ಕೆ ಹಾರು, ನೆಗೆ, ಅಗಲವಾಗು
ಸಮುಚ್ಛಲಿಅ. ವಿ: [ಸಮುಚ್ಛಲಿತ] ಮೇಲೆ ಹಾರಿದ, ವಿಸ್ತಾರ ಹೊಂದಿದ
ಸಮುಚ್ಛಾರಣ. ನ: [ಸಮುತ್ಸಾರಣ] ದೂರಮಾಡುವುದು
ಸಮುಚ್ಛಿಯ. ವಿ: [ದೇ] ಸಂತುಷ್ಟಗೊಳಿಸಲ್ಪಟ್ಟ, ನಮಸ್ಕರಿಸಲ್ಪಟ್ಟ, ಕೈ ಮುಗಿಯುವುದು
ಸಮುಚ್ಛಿದ.(ಶೌ). ವಿ: [ಸಮುಚ್ಛ್ರಿತ] ಅತ್ಯಂತ ಎತ್ತರವಾದ
ಸಮುಚ್ಛಿನ್ನ. ವಿ: [ಸಮುಚ್ಛಿನ್ನ] ಕ್ಷೀಣಗೊಂಡ, ನಾಶವಾದ

ಸಮುಚ್ಛುಂಗಿಯ. ವಿ: [ಸಮುಚ್ಛೃಂಗಿತ] ಮೇಲಕ್ಕೆ ಹತ್ತಿದ
ಸಮುಚ್ಛುಗ. ವಿ: [ಸಮುತ್ಸುಕ] ಅತಿಯಾದ ಉತ್ಸಾಹವುಳ್ಳ
ಸಮುಚ್ಛೇದ}. ಪು: [ಸಮುಚ್ಛೇದ] ಸರ್ವಥಾ ವಿನಾಶ.
ಸಮುಚ್ಛೇಯ}. **–ವಾಇ.** ವಿ: [–ವಾದಿನ್] ವಸ್ತುವನ್ನು ಅದು ಪ್ರತಿಕ್ಷಣವೂ ನಿಶ್ಚಿತವಾಗಿ ನಶ್ವರವೆಂದು ಒಪ್ಪುವವನು
ಸಮುಜ್ಜಮ. ಅಕ: [ಸಮುದ್+ಯಮ್] ಪ್ರಯತ್ನಿಸು. ವ. ಕೃ: ಸಮುಜ್ಜಮಂತ
ಸಮುಜ್ಜಮ. ಪು: [ಸಮುದ್ಯಮ] ಒಂದು ಯೋಗ್ಯವಾದ ಉದ್ಯಮ, ಪ್ರಯತ್ನ, ಯೋಗ್ಯ ಉದ್ಯಮವುಳ್ಳ
ಸಮುಜ್ಜಲ. ವಿ: [ಸಮುಜ್ಜ್ವಲ] ಅತ್ಯಂತ ಉಜ್ಜ್ವಲವಾದ, ಅತ್ಯಂತ ಪ್ರಕಾಶಮಾನವಾದ, ಕಾಂತಿಯುಕ್ತವಾದ
ಸಮುಜ್ಜಾಯ. ವಿ: [ಸಮುದ್ಯಾತ] ಹೊರಹೊರಟ, ಹೊರಹೊಮ್ಮಿದ, ಎತ್ತರಕ್ಕೆ ಹೋದ
ಸಮುಜ್ಜೋಅ. ಪು:[ಸಮುದ್+ದ್ಯುತ್] ಹೊಳೆ, ಪ್ರಕಾಶಿಸು
ಸಮುಜ್ಜೋಅ. ಪು: [ಸಮುದ್ಯೋತ] ಪ್ರಕಾಶ, ದೀಪ್ತಿ(ಸುಪಾ)
ಸಮುಜ್ಜೋವಯ. ಸಕ: [ಸಮುದ್+ದ್ಯೋತಯ್] ಪ್ರಕಾಶಗೊಳಿಸು, ದೀಪ್ತಗೊಳಿಸು
ಸಮುಜ್ಝ. ಸಕ: [ಸಮ್+ಉಜ್ಝ್] ತ್ಯಜಿಸು, ಬಿಡು
ಸಮುಟ್ಠಾ. ಅಕ: [ಸಮುತ್+ಸ್ಥಾ] ಏಳು, ಪ್ರಯತ್ನಿಸು, ಸೀಕರಿಸು, ಹುಟ್ಟು, ಉತ್ಪನ್ನವಾಗು
ಸಮುಟ್ಠಾಇ. ವಿ: [ಸಮುತ್ಥಾಯಿನ್] ಚೆನ್ನಾಗಿ ಪ್ರಯತ್ನಿಸುವವನು(ಆಅ)
ಸಮುಟ್ಠಾಇಅ. 'ಸಮುಟ್ಠಿಅ' ಶಬ್ದವನ್ನು ನೋಡುವುದು
ಸಮುಟ್ಠಾಣ. ನ: [ಸಮುಪಸ್ಥಾನ] ಮತ್ತೆ ವಾಸಿಸುವುದು, **–ಸುಯ.** ನ: [–ಶ್ರುತ] ಜೈನಶಾಸ್ತ್ರ–ವಿಶೇಷ.
ಸಮುಟ್ಠಾಣ. ನ: [ಸಮುತ್ಥಾನ] ಚೆನ್ನಾಗಿ ಮೇಲಕ್ಕೆ ಏಳುವುದು, ಶಕ್ತಿ, ನಿಮಿತ್ತ, **'ಸಮುತ್ಥಾಣ'** ಶಬ್ದವನ್ನು ನೋಡುವುದು
ಸಮುಟ್ಠಿಅ. ವಿ: [ಸಮುತ್ಥಿತ] ಆಸನದಿಂದ ಮೇಲಕ್ಕೆ ಎದ್ದಿರುವ, ಒಳ್ಳೆಯ ಪ್ರಯತ್ನಶೀಲ, ದೊರೆತ, ಅನುಷ್ಠಾನ ಮಾಡಲಾದ, ಉತ್ಪನ್ನವಾದ, ಹುಟ್ಟಿದ, ಆಶ್ರಿತ, ಹತ್ತಿರಕ್ಕೆ ಬಂದಿರುವ
ಸಮುಡ್ಡೀಣ. ವಿ: [ಸಮುಡ್ಡೀನ] ಮೇಲಕ್ಕೆ ಹಾರಿದ
ಸಮುಣ್ಣಇಯು. **'ಸಮುತ್ತಇಯು'** ಶಬ್ದವನ್ನು ನೋಡುವುದು
ಸಮುತ್ತ. ನ: [ಸಂಮುಕ್ತ] ಗೋತ್ರ–ವಿಶೇಷ, **ಪುಂಸ್ತ್ರೀ:** ಆ ಗೋತ್ರದಲ್ಲಿ ಹುಟ್ಟಿದ, **'ಸಂಮುತ್ತ'** ಶಬ್ದವನ್ನು ನೋಡುವುದು.
ಸಮುತ್ತಇಅ. ವಿ: [ದೇ] ಗರ್ವಿತ, ಅಹಂಕಾರಿ
ಸಮುತ್ತರ. ಅಕ: [ಸಮುತ್+ತೃ] ಪಾರಾಗಿ ಹೋಗು, ದಾಟು, ಅಕ: ಕೆಳಗೆ ಇಳಿ, ನೀರಿನೊಳಕ್ಕೆ ಇಳಿ
ಸಮುತ್ತಾರಾವಿಯ. ವಿ: [ಸಮುತ್ತಾರಿತ] ದಡ ಸೇರಿಸಲ್ಪಟ್ಟ, ದಾಟಿಸಲ್ಪಟ್ಟ, ಬಾವಿಯಿಂದ ಹೊರಕ್ಕೆ ತೆಗೆಯಲ್ಪಟ್ಟ
ಸಮುತ್ತಾಸ. ಸಕ: [ಸಮುತ್+ತ್ರಾಸಯ್] ಅತಿಯಾಗಿ ಹೆದರಿಸು, ತುಂಬ ಭಯಪಡಿಸು
ಸಮುತ್ತಿಣ್ಣ. ವಿ: [ಸಮವತೀರ್ಣ] ಕೆಳಕ್ಕೆ ಇಳಿದ, ನೀರಿನೊಳಗೆ ಇಳಿದ(ಪಉಮ)
ಸಮುತ್ತುಂಗ. ವಿ: [ಸಮುತ್ತುಂಗ] ಅತ್ಯಂತ ಎತ್ತರವಾದ(ಭವಿ)
ಸಮುತ್ತುಣ. ವಿ: [ದೇ] ಗರ್ವಿತ
ಸಮುತ್ಥ. ವಿ: [ಸಮುತ್ಥ] ಉತ್ಪನ್ನ, ಹುಟ್ಟಿದ
ಸಮುತ್ಥಇಉಂ. **'ಸಮುತ್ಥಯ=ಸಮುತ್+ಸ್ಥಗಯ್'** ಶಬ್ದವನ್ನು ನೋಡುವುದು
ಸಮುತ್ಥಣ. ನ: [ಸಮುತ್ಥಾನ] ಚೆನ್ನಾಗಿ ಮೇಲಕ್ಕೆ ಏಳುವುದು, ಉತ್ಪತ್ತಿ, ಹುಟ್ಟುವುದು
ಸಮುತ್ಥಯ. ಸಕ: [ಸಮುತ್+ಸ್ಥಗಯ್] ಹೊದಿಸು, ಮುಚ್ಚು, ಮರೆಮಾಡು
ಸಮುತ್ಥಯ. ವಿ: [ಸಮವಸ್ತೃತ] ಹೊದಿಸಲ್ಪಟ್ಟ, ಮುಚ್ಚಲ್ಪಟ್ಟ
ಸಮುತ್ಥಲ್ಲ. ವಿ: [ಸಮುಚ್ಛಲಿತ] ಮೇಲಕ್ಕೆ ನೆಗೆದ
ಸಮುತ್ಥಾಣ. ನ: [ಸಮುತ್ಥಾನ] ನಿಮಿತ್ತ, ಕಾರಣ. **'ಸಮುಟ್ಠಾಣ'** ಶಬ್ದವನ್ನು ನೋಡುವುದು
ಸಮುತ್ಥಿಯ. **'ಸಮುಟ್ಠಿಅ'** ಶಬ್ದವನ್ನು ನೋಡುವುದು
ಸಮುದಯ. ಪು: [ಸಮುದಯ] ಸಮುದಾಯ, ಗುಂಪು, ಸಮೂಹ, ಅಭ್ಯುದಯ, ಉನ್ನತಿ(ಕುಪ್ರ)
ಸಮುದಾಆರ}. **'ಸಮುಆಚಾರ'** ಶಬ್ದವನ್ನು
ಸಮುದಾಚಾರ}. ನೋಡುವುದು
ಸಮುದಾಣ. ನ: [ಸಮುದಾನ] ಭಿಕ್ಷೆ, ಭಿಕ್ಷೆಯ ಸಮೂಹ, ಪ್ರಯೋಗದಿಂದ ಸ್ವೀಕರಿಸಿದ ಕರ್ಮಗಳನ್ನು ಸಹಜ ಸ್ಥಿತಿಯ ರೂಪದಲ್ಲಿ ವ್ಯವಸ್ಥಗೊಳಿಸುವ ಕ್ರಿಯೆ. ಸಮುದಾಯ, ಸಮೂಹ. **–ಚರ.** ವಿ: [–ಚರ] ಭಿಕ್ಷೆಯನ್ನು ಹುಡುಕಿಕೊಂಡು ಹೋಗುವವನು (ಪಣ್ಹ)

ಸಮುದಾಣ. ಸಕ: [ಸಮುದಾನಯ್] ಭಿಕ್ಷೆಗಾಗಿ ಸಂಚರಿಸು, ಭಿಕ್ಷೆಗಾಗಿ ತಿರುಗಾಡು

ಸಮುದಾಣಿಅ. 'ಸಾಮುದಾಣಿಯ' ಶಬ್ದವನ್ನು ನೋಡುವುದು(ಔಪ)

ಸಮುದಾಣಿಯಾ. ಸ್ತ್ರೀ: [ಸಮುದಾನಿಕೀ] ಸಮುದಾನ ಕ್ರಿಯೆ

ಸಮುದಾಯ. ಪು: [ಸಮುದಾಯ] ಸಮೂಹ, ಗುಂಪು

ಸಮುದಾಹಿಯ. ವಿ: [ಸಮುದಾಹೃತ] ಪ್ರತಿಪಾದಿಸಲ್ಪಟ್ಟ, ಹೇಳಲ್ಪಟ್ಟ, ಸ್ಪಷ್ಟವಾಗಿ ತಿಳಿಸಲ್ಪಟ್ಟ

ಸಮುದಿಅ. 'ಸಮುಇಅ=ಸಮುದಿತ' ಶಬ್ದವನ್ನು ನೋಡುವುದು

ಸಮುದಿಣ್ಣ. 'ಸಮುಇನ್ನ' ಶಬ್ದವನ್ನು ನೋಡುವುದು

ಸಮುದೀರ. ಸಕ: [ಸಮುದ್+ಈರಯ್] ಪ್ರೇರಿಸು, ಉತ್ತೇಜಿಸು, ಕರ್ಮಗಳನ್ನು ಎಳೆದು ತಂದು ಪ್ರಕಟವಾಗಿ ತೋರಿಸುವುದು

ಸಮುದ್ದ. ಪು: [ಸಮುದ್ರ] ಸಾಗರ, ಜಲಧಿ, ಅಂಧಕ ವೃಷ್ಣಿಯ ಜ್ಯೇಷ್ಠ ಪುತ್ರ, ಎಂಟನೇ ಬಲದೇವ ಮತ್ತು ವಾಸುದೇವನ ಹಿಂದಿನ ಜನ್ಮದ ಧರ್ಮ ಗುರು, ವೇಲಂಧರ ನಗರದ ಒಬ್ಬ ರಾಜ. ಶಾಂಡಿಲ್ಯ ಮನಿಯ ಶಿಷ್ಯನಾದ ಒಬ್ಬ ಜೈನ ಗುರು, ಮುದ್ರಾ-ಸಹಿತ. **-ದತ್ತ.** ಪು: [-ದತ್ತ] ನಾಲ್ಕನೇ ವಾಸುದೇವನ ಹಿಂದಿನ ಜನ್ಮದ ಹೆಸರು. ಒಬ್ಬ ಬೆಸ್ತರವನ ಹೆಸರು. **-ದತ್ತಾ.** ಸ್ತ್ರೀ: [-ದತ್ತಾ] ಹರಿಷೇಣ ವಾಸುದೇವನ ಒಬ್ಬ ಪತ್ನಿ. ಸಮುದ್ರದತ್ತ ನೆಂಬ ಬೆಸ್ತರವನ ಹೆಂಡತಿ. **-ಲಿಕ್ಖಾ.** ಸ್ತ್ರೀ: [-ಲಿಕ್ಷಾ] ಎರಡು ಇಂದ್ರಿಯಗಳ ಒಂದು ಪ್ರಾಣಿ. **-ವಿಜಯ.** ಪು: [-ವಿಜಯ] ನಾಲ್ಕನೇ ಚಕ್ರವರ್ತಿ ರಾಜನ ತಂದೆ. **-ಸುಆ.** ಸ್ತ್ರೀ: [-ಸುತಾ] **ಲಕ್ಷ್ಮೀ.** **'ಸಮುದ್ರ'** ಶಬ್ದವನ್ನು ನೋಡುವುದು

ಸಮುದ್ದಣವಣೀಅ. ನ: [ದೇ.] [ಸಮುದ್ರನವನೀತ] ಅಮೃತ, ಚಂದ್ರ

ಸಮುದ್ದವ. ಸಕ: [ಸಮುದ್+ದ್ರಾವಯ್] ಭಯಂಕರವಾಗಿ ತೊಂದರೆ ಕೊಡು, ಕೊಂದು ಹಾಕು. **'ಸಮುದ್ದವೇ'**(ಗಚ್ಛ)

ಸಮುದ್ದಹರ. ನ: [ದೇ] ನೀರನ್ನು ನೀಡುವ ಗೃಹ

ಸಮುದ್ದಾಮ. ವಿ: [ಸಮುದ್ದಾಮ] ಅತಿ ಸೊಕ್ಕಿನ, ಪ್ರಖರ, ದೊಡ್ಡ

ಸಮುದ್ದಿಸ. ಸಕ: [ಸಮುದ್+ದಿಶ್] ಪಾಠವನ್ನು ಸ್ಥಿರವಾಗಿ ಪರಿಚಯಿಸಲು ಉಪದೇಶಿಸು, ವ್ಯಾಖ್ಯಾನಿಸು, ಪ್ರತಿಜ್ಞೆ ಮಾಡು, ಆಶ್ರಯ ಪಡೆದುಕೊಳ್ಳು, ಅಧಿಕಾರ ಮಾಡು

ಸಮುದ್ದೇಸ. ಪು: [ಸಮುದ್ದೇಶ] ಪಾಠವನ್ನು ಸ್ಥಿರವಾಗಿ ಪರಿಚಯಿಸಲು ನೀಡುವ ಉಪದೇಶ, ಸೂತ್ರಾರ್ಥದ ಅಧ್ಯಾಪನ, ಗ್ರಂಥದ ಒಂದು ವಿಭಾಗ, ಪ್ರಕರಣ(ಪಉಮ), ಭೋಜನ

ಸಮುದ್ದೇಸ. ವಿ: [ಸಮುದ್ದೇಶ] **'ಸಮುದ್ದೇಸಿಯ'** ಶಬ್ದವನ್ನು ನೋಡುವುದು

ಸಮುದ್ದೇಸಿಯ. ವಿ: [ಸಮುದ್ದೇಶಿಕ] ಸಮುದ್ದೇಶಕ್ಕೆ ಸಂಬಂಧಿಸಿದ, ವಿವಾಹಾದಿಗಳ ಸಲುವಾಗಿ ಸಿದ್ಧಪಡಿಸಿದ ಜಾಗದಲ್ಲಿ ಉಳಿದಿರುವ ಖಾದ್ಯ ಪದಾರ್ಥಗಳನ್ನು ಸಾಧು ಸಂನ್ಯಾಸಿಗಳಿಗೆ ಹಂಚಲು ಉದ್ದೇಶಿಸಿರುವುದು.

ಸಮುದ್ಧರ. ಸಕ: [ಸಮುದ್+ಹೃ] ಮೇಲಕ್ಕೆ ಎತ್ತು, ಕಷ್ಟದಿಂದ ಬಿಡುಗಡೆಮಾಡು, ದೇವಸ್ಥಾನದ ಜೀರ್ಣೋದ್ಧಾರ

ಸಮುದ್ಧರಣ. ನ: [ಸಮುದ್ಧರಣ] ಉದ್ಧಾರ, ಮೇಲಕ್ಕೆ ಎತ್ತುವುದು, ವಿ: ಉದ್ಧಾರ ಮಾಡುವವನು

ಸಮುದ್ಧರಿಅ. ವಿ: [ಸಮುದ್ಧೃತ] ಉದ್ಧಾರಮಾಡಲ್ಪಟ್ಟ(ಗಾ)

ಸಮುದ್ಧಾಇಅ. ವಿ: [ಸಮುದ್ಧಾವಿತ] ಮೇಲಕ್ಕೆ ಎಬ್ಬಿಸಲ್ಪಟ್ಟ

ಸಮುದ್ಧಾಯ. ಅಕ: [ಸಮುದ್+ಧಾವ್] ಮೇಲಕ್ಕೇಳು

ಸಮುದ್ಧಿಅ. **'ಸಮುದ್ಧರಿಅ'** ಶಬ್ದವನ್ನು ನೋಡುವುದು

ಸಮುದ್ಧುರ. ವಿ: [ಸಮುದ್ಧುರ] ದೃಢ, ಬಲಿಷ್ಠ

ಸಮುದ್ಧುಸಿಅ. ವಿ: [ಸಮುದ್ಧುಷಿತ] ಪುಲಕಿತ, ರೋಮಾಂಚನಗೊಂಡ(ಕುಪ್ರ)

ಸಮುದ್ರ. ಪು: [ಸಮುದ್ರ] ಒಂದು ದೇವ-ವಿಮಾನ, ಸಾಗರ. **'ಸಮುದ್ದ'** ಶಬ್ದವನ್ನು ನೋಡುವುದು

ಸಮುನ್ನಇ. ಸ್ತ್ರೀ: [ಸಮುನ್ನತಿ] ಅಭ್ಯುದಯ, ಅಭಿವೃದ್ಧಿ, ಏಳಿಗೆ, ಔನ್ನತ್ಯ

ಸಮುನ್ನದ್ಧ. ವಿ: [ಸಮುನ್ನದ್ಧ] ಸನ್ನದ್ಧ, ಸಿದ್ಧನಾದ,

ಸಮುನ್ನಯ. ವಿ: [ಸಮುನ್ನತ] ಅತ್ಯಂತ ಎತ್ತರವಾದ

ಸಮುಪೇಹ. ಸಕ: [ಸಮುತಪ್ರ+ಈಕ್ಷ್] ಚೆನ್ನಾಗಿ ನೋಡು, ಪರ್ಯಾಲೋಚಿಸು, ವಿಚಾರ ಮಾಡು

ಸಮುಪಜ್ಜ. ಅಕ:[ಸಮುತ್+ಪದ್] ಉತ್ಪನ್ನವಾಗು, ಹುಟ್ಟು

ಸಮುಪ್ಪಣ್ಣ}. ನ: [**ಸಮುತ್ಪನ್ನ**] ಉತ್ಪನ್ನ, ಹುಟ್ಟಿದ
ಸಮುಪ್ಪನ್ನ}.
ಸಮುಪ್ಪಯಣ. ನ: [**ಸಮುತ್ಪತನ**] ಮೇಲಕ್ಕೆ ಹೋಗುವದು, ಎತ್ತರಕ್ಕೆ ಹೋಗುವುದು, ಮೇಲಕ್ಕೆ ಹಾರುವುದು
ಸಮುಪ್ಪಾಅಅ. ವಿ: [**ಸಮುತ್ಪಾದಕ**] ಉತ್ಪತ್ತಿ ಮಾಡುವವನು, ಸೃಷ್ಟಿಸುವವನು
ಸಮುಪ್ಪಾಡ. ಸಕ:[**ಸಮುತ್+ಪಾದಯ್**] ಉತ್ಪತ್ತಿಮಾಡು
ಸಮುಪ್ಪಾಯ. ಪು: [**ಸಮುತ್ಪಾದ**] ಉತ್ಪತ್ತಿ, ಹುಟ್ಟು
ಸಮುಪ್ಪಿಂಜಲ. ನ: [ದೇ] ಅಪಕೀರ್ತಿ, ದೂಳು(ದೇ)
ಸಮುಪ್ಪಿತ್ಥ. ವಿ: [ದೇ] ಭಯಗೊಂಡ, ಹೆದರಿದ
ಸಮುಪ್ಪೇಕ್ಖ}. ಚೆನ್ನಾಗಿ ನೋಡುವುದು, '**ಸಮುಪೇಹ**'
ಸಮುಪ್ಪೇಹ}. ಶಬ್ದವನ್ನು ನೋಡುವುದು
ಸಮುಪ್ಫಾಲಯ. ವಿ: [**ಸಮುತ್ಪಾಟಕ**] ಎತ್ತಿಕೊಂಡು ಬರುವವನು, ಬುಡಸಮೇತ ಕಿತ್ತುಹಾಕುವವನು
ಸಮುಪ್ಫಾಲಿಯ. ವಿ: [**ಸಮುತ್ಫಾಲಿತ**] ಹೊಡೆಯಲ್ಪಟ್ಟ, ಚಲಿಸುವಂತೆ ಮಾಡಲ್ಪಟ್ಟ
ಸಮುಪ್ಫುಂದ. ಸಕ:[**ಸಮಾ+ಕ್ರಮ್**] ಆಕ್ರಮಣ ಮಾಡು
ಸಮುಪ್ಫೋಡಣ. ನ: [**ಸಮುತ್ಸ್ಫೋಟನ**] ಹೊಡೆಯುವುದು, ಸೀಳುವುದು
ಸಮುಬ್ಭಡ. ವಿ: [**ಸಮುದ್ಭಟ**] ಪ್ರಚಂಡ
ಸಮುಬ್ಭವ. ಅಕ: [**ಸಮುದ್+ಭೂ**] ಹುಟ್ಟು, ಉತ್ಪನ್ನವಾಗು
ಸಮುಬ್ಭವ. ಪು: [**ಸಮುದ್ಭವ**] ಉತ್ಪತ್ತಿ, ಹುಟ್ಟುವಿಕೆ
ಸಮುಬ್ಭಿಯ. ವಿ: [**ಸಮೂರ್ಧ್ವಿತ**] ಮೇಲಕ್ಕೆ ಮಾಡಲ್ಪಟ್ಟ, ಎತ್ತರಿಸಲ್ಪಟ್ಟ
ಸಮುಬ್ಭೂಯ(ಅಪ)}. ವಿ: [**ಸಮುದ್ಭೂತ**] ಹುಟ್ಟಿದ, ಜನ್ಮ
ಸಮುಬ್ಭೂಅ}. ತಾಳಿದ, ಉತ್ಪನ್ನವಾದ
ಸಮುಯಾಣ. '**ಸಮುದಾಣ=ಸಮುದಾನ**' ಶಬ್ದವನ್ನು ನೋಡುವುದು
ಸಮುಯಾಣ. '**ಸಮುದಾಣ=ಸಮುದಾನಯ್**' ಶಬ್ದವನ್ನು ನೋಡುವುದು
ಸಮುಯಾಣಿಅ. '**ಸಮುದಾಣಿಯ**' ಶಬ್ದವನ್ನು ನೋಡುವುದು
ಸಮುಯಾಯ. '**ಸಮುದಾಯ**' ಶಬ್ದವನ್ನು ನೋಡುವುದು
ಸಮುಲ್ಲವ. ಸಕ: [**ಸಮುತ್+ಲಪ್**] ಹೇಳು, ಮಾತಾಡು. '**ಸಮುಲ್ಲವಇ**, ವ. ಕೃ: '**ಸಮುಲ್ಲ ವಂತ**'
ಸಮುಲ್ಲವಣ. ನ: [**ಸಮುಲ್ಲಪನ**] ಹೇಳುವುದು, ಮಾತಾಡುವುದು
ಸಮುಲ್ಲವಿಅ. ವಿ: [**ಸಮುಲ್ಲಪಿತ**] ಹೇಳಿದ, ಹೇಳಲ್ಪಟ್ಟ ಮಾತಾಡಿದ, ಕಥಿತ
ಸಮುಲ್ಲಸ. ಅಕ: [**ಸಮುತ್+ಲಸ್**] ಉಲ್ಲಾಸಗೊಳ್ಳು, ಹರ್ಷಿತನಾಗು, ಪ್ರಕಾಶಿಸು
ಸಮುಲ್ಲಸಿಯ. ವಿ: [**ಸಮುಲ್ಲಸಿತ**] ಉಲ್ಲಾಸಗೊಂಡ, ಸಂತುಷ್ಟಗೊಂಡ, ಪ್ರಕಾಶಿಸಲ್ಪಟ್ಟ
ಸಮುಲ್ಲಾಲಿಯ. ವಿ: [**ಸಮುಲ್ಲಾಲಿತ**] ಮೇಲಕ್ಕೆ ಹಾರಿಸಲ್ಪಟ್ಟ, ಜಿಗಿಸಲ್ಪಟ್ಟ
ಸಮುಲ್ಲಾವ. ಪು: [**ಸಮುಲ್ಲಾಪ**] ಆಲಾಪ, ಸಂಭಾಷಣೆ, ಮಾತು–ಕತೆ(ವಿಪಾ)
ಸಮುಲ್ಲಾಸ. ಪು: [**ಸಮುಲ್ಲಾಸ**] ಅರಳುವಿಕೆ, ಸಂತೋಷ, ಹರ್ಷ, ಹೊಳಪು
ಸಮುವಇಟ್ಠ. ವಿ:[**ಸಮುಪವಿಷ್ಟ**] ಕುಳಿತುಕೊಂಡ, ಕುಳಿತಿರುವ
ಸಮುವಉತ್ತ. ವಿ: [**ಸಮುಪಯುಕ್ತ**] ಚೆನ್ನಾಗಿ ಉಪಯೋಗಕ್ಕೆ ಬರುವ, ಉಪಯೋಗಿಯಾದ, ಎಚ್ಚರಿಕೆ, ಜಾಗ್ರತೆ
ಸಮುವಗಯ. ವಿ: [**ಸಮುಪಗತ**] ಸಮೀಪಕ್ಕೆ ಬಂದಿರುವ, ಹತ್ತಿರಕ್ಕೆ ಬಂದ(ವವ)
ಸಮುವಜ್ಜಿಯ. ವಿ: [**ಸಮುಪಾರ್ಜಿತ**] ಸಂಪಾದಿಸಲ್ಪಟ್ಟ, ಉತ್ಪತ್ತಿಮಾಡಲಾದ
ಸಮುವತ್ಥಿಯ. ವಿ: [**ಸಮುಪಸ್ಥಿತ**] ಬಂದಿರುವ, ಒದಗಿರುವ, ಹಾಜರಿರುವ, ಸಮೀಪದಲ್ಲಿರುವ
ಸಮುವಯಂತ. '**ಸಮುವೇ**' ಶಬ್ದವನ್ನು ನೋಡುವುದು
ಸಮುವವಿಟ್ಠ. ವಿ: [**ಸಮುಪವಿಷ್ಟ**] ಕುಳಿತುಕೊಂಡಿರುವ
ಸಮುವಸಂಪನ್ನ. ವಿ: [**ಸಮುಪಸಂಪನ್ನ**] ಹತ್ತಿರಕ್ಕೆ ಬಂದು ಸೇರಿದ
ಸಮುವಹಸಿಅ. ವಿ: [**ಸಮುಪಹಸಿತ**] ಚೆನ್ನಾಗಿ ಉಪಹಾಸ ಮಾಡಲ್ಪಟ್ಟ, ಗೇಲಿಮಾಡಲ್ಪಟ್ಟ
ಸಮುವಾಗಯ. ವಿ: [**ಸಮುಪಾಗತ**] ಹತ್ತಿರಕ್ಕೆ ಬಂದಿರುವ
ಸಮುವೇ. ಸಕ: [**ಸಮುಪಾ+ಇ**] ಹತ್ತಿರಕ್ಕೆ ಬರು, ಪಡೆ, ಹೊಂದು. '**ಸಮುವೇಇ**. ವ. ಕೃ: **ಸಮುವಯಂತ**
ಸಮುವೆಕ್ಖ}. ಸಕ: [**ಸಮುತ್ಪ್ರ+ಈಕ್ಷ್**] ನೋಡು,
ಸಮುವೇಹ}. ಅವಲೋಕಿಸು, ಬಳಕೆಗೆ ತರು, ಉಪಯೋಗಿಸು

ಸಮುವ್ವತ್ತ. ವಿ: [ಸಮುದ್ವೃತ್ತ] ಮೇಲಕ್ಕೆ ಮಾಡಲ್ಪಟ್ಟ, ಎತ್ತರಿಸಲ್ಪಟ್ಟ

ಸಮುವ್ವತ್ತಿಯ. ವಿ: [ಸಮುದ್ವರ್ತಿತ] ತಿರುಗಿಸಲ್ಪಟ್ಟ, ಉಜ್ಜಲ್ಪಟ್ಟ

ಸಮುವ್ವಹ. ಸಕ: [ಸಮುದ್+ವಹ್] ಧರಿಸು, ಹೊರು

ಸಮುವ್ವಹಣ. ನ: [ಸಮುದ್ವಹನ] ಚೆನ್ನಾಗಿ ಹೊರುವುದು, ಮೇಲಕ್ಕೆ ಎತ್ತುವುದು

ಸಮುವ್ವಿಗ್ಗ. ವಿ: [ಸಮುದ್ವಿಗ್ನ] ಅತ್ಯಂತ ಉದ್ವೇಗದಿಂದ ಕೂಡಿದ, ಕಳವಳದಿಂದ ಕೂಡಿದ

ಸಮುವ್ವೂಢ. ವಿ: [ಸಮುದ್‌ವ್ಯೂಢ] ಮದುವೆಯಾದ, ವಿವಾಹಿತ, ಮೇಲಕ್ಕೆ ಮಾಡಲ್ಪಟ್ಟ, ಎತ್ತರಿಸಲ್ಪಟ್ಟ

ಸಮುವ್ವೆಲ್ಲ. ವಿ: [ಸಮುದ್ವೇಲ್ಲಿತ] ಬಹಳವಾಗಿ ನಡುಗಿಸಲ್ಪಟ್ಟ, ಅತಿಯಾಗಿ ಅಲ್ಲಾಡಿಸಲ್ಪಟ್ಟ (ಪಉಮ)

ಸಮುಸರಣ. 'ಸಮೋಸರಣ' ಶಬ್ದವನ್ನು ನೋಡುವುದು

ಸಮುಸ್ಸಯ. ಪು: [ಸಮುಚ್ಛ್ರಯ] ಎತ್ತರ, ಔನ್ನತ್ಯ, ಉನ್ನತಿ, ಉತ್ತಮತೆ, ಕರ್ಮಗಳ ಉಪಚಯ, ಸಮೂಹ, ರಾಶಿ

ಸಮುಸ್ಸವಿಯ. ವಿ: [ಸಮುಚ್ಛ್ರಯಿತ] ಎತ್ತರಿಸಲ್ಪಟ್ಟ, ಉನ್ನತೀಕರಿಸಲಾದ

ಸಮುಸ್ಸಸಿಯ. ವಿ: [ಸಮುಚ್ಛ್ವಸಿತ] ಉಲ್ಲಾಸಗೊಂಡ, ಉಚ್ಛ್ವಾಸ ತೆಗೆದುಕೊಂಡ, **'ಸಮೂಸಸಿಅ'** ಶಬ್ದವನ್ನು ನೋಡುವುದು

ಸಮುಸ್ಸಿಅ. ವಿ: [ಸಮುಚ್ಛ್ರಿತ] ಮೇಲೆ ಇರುವ, ಎತ್ತರದಲ್ಲಿರುವ(ಸೂಅ), ಎತ್ತರವಾದ, ಉನ್ನತವಾದ

ಸಮುಸ್ಸಿಣಾ. ಸಕ: [ಸಮುತ್+ಶ್ರು] ನಿರ್ಮಿಸು, ಮಾಡು, ರಚಿಸು, ಶಿಥಿಲ ಮಂದಿರದ ಜೀರ್ಣೋದ್ಧಾರ ಮಾಡು

ಸಮುಸ್ಸುಗ}. 'ಸಮೂಸುಅ' ಶಬ್ದವನ್ನು ನೋಡುವುದು
ಸಮುಸ್ಸುಯ}.

ಸಮುಹ. ಸಮ್ಮುಖವಾದ, ಎದುರುಗಡೆ ಬಂದ, ಎದುರಾದ

ಸಮುಹಯ. ವಿ: [ಸಮುದ್ಧತ] ಅವಿನೀತ, ಅಹಂಕಾರಿ, ಮೇಲಕ್ಕೆ ಎತ್ತಲ್ಪಟ್ಟ

ಸಮುಹಿ. 'ಸಮುಹಿ=ಶ್ವ–ಮುಖಿ' ಶಬ್ದವನ್ನು ನೋಡುವುದು

ಸಮೂಸಣ. ನ: [ಸಮೂಷಣ] ತ್ರಿಕಟುಕಗಳು: ಶುಂಠಿ, ಮೆಣಸು, ಅರಳಿ,

ಸಮೂಸವಿಯ. 'ಸಮುಸ್ಸವಿಯ' ಶಬ್ದವನ್ನು ನೋಡುವುದು

ಸಮೂಸಸ. ಅಕ: [ಸಮುತ್+ಶ್ವಸ್] ಎತ್ತರಕ್ಕೆ ಹೋಗು, ಉಲ್ಲಾಸಗೊಳ್ಳು, ದೀರ್ಘವಾಗಿ ಉಸಿರಾಡು

ಸಮೂಸಸಿಅ. ನ: [ಸಮುಚ್ಛ್ವಸಿತ] ನಿಃಶ್ವಾಸ, ನಿಟ್ಟುಸಿರು, **'ಸಮುಸ್ಸಸಿಯ'** ಶಬ್ದವನ್ನು ನೋಡುವುದು

ಸಮೂಸಿಅ. 'ಸಮುಸ್ಸಿಅ' ಶಬ್ದವನ್ನು ನೋಡುವುದು

ಸಮೂಸುಅ. ವಿ: [ಸಮುತ್ಸುಕ] ಅತಿಯಾದ ತವಕದಿಂದಿರುವ (ಸುಪಾ)

ಸಮೂಹ. ಪುಂನ: [ಸಮೂಹ] ಸಮುದಾಯ, ಗುಂಪು, ರಾಶಿ

ಸಮೂಹ(ಅಪ). 'ಸಮುಹ' ಶಬ್ದವನ್ನು ನೋಡುವುದು

ಸಮೇ. ಸಕ: [ಸಮಾ+ಇ] ಬರು, ಆಗಮಿಸು, ಎದುರಿನಲ್ಲಿ ಬಾ, ತಿಳಿದುಕೊಳ್ಳು, ಹೊಂದು, ಪಡೆ **ಅಕ:** ಒಟ್ಟಾಗು

ಸಮೇಅ.}. ವಿ: [ಸಮೇತ] ಸರಿಯಾಗಿ ಬಂದು ಸೇರಿದ,
ಸಮೇತ}. ಸಹಿತವಾಗಿ, ಕೂಡಿಕೊಂಡು(ಸುಪಾ)

ಸಮೇರ. 'ಸ–ಮೇರ=ಸ–ಮರ್ಯಾದ' ಶಬ್ದವನ್ನು ನೋಡುವುದು

ಸಮೋಅರ. ಅಕ: [ಸಮವ+ತೃ] ಸಮಾವೇಶವಾಗು, ಒಳಸೇರು, ಒಂದಾಗು, ಕೆಳಕ್ಕೆ ಇಳಿ, ಜನ್ಮ ತಾಳು

ಸಮೋಆರ. ಪು: [ಸಮವತಾರ] ಮಧ್ಯದಲ್ಲಿ ಸೇರುವುದು

ಸಮೋಇನ್ನ. ವಿ: [ಸಮವತೀರ್ಣ] ಕೆಳಕ್ಕೆ ಇಳಿದಿರುವ

ಸಮೋಗಾಢ. ವಿ: [ಸಮವಗಾಢ] ಚೆನ್ನಾಗಿ ಒಳಕ್ಕೆ ಇಳಿದಿರುವ(ಔಪ), ಮುಳುಗಿರುವ

ಸಮೋಚ್ಛಇಅ. ವಿ: [ಸಮವಚ್ಛಾದಿತ] ಆಚ್ಛಾದಿತ, ಹೊದಿಸಲ್ಪಟ್ಟ, ಚೆನ್ನಾಗಿ ಮುಚ್ಚಲ್ಪಟ್ಟ

ಸಮೋಣಮ. ಸಕ: [ಸಮವ+ನಮ್] ಸರಿಯಾಗಿ ನಮಸ್ಕರಿಸು, ಬಾಗು

ಸಮೋಣಯ. ವಿ: [ಸಮವನತ] ಪೂರ್ತಿ ಬಾಗಿರುವ, ಕೆಳಮುಖವಾದ, ನಮಸ್ಕರಿಸಿದ

ಸಮೋತ್ಥಇಅ}. ವಿ: [ಸಮವಸ್ಥಗಿತ] ಹೊದಿಸಲ್ಪಟ್ಟಿರುವ,
ಸಮೋತ್ಥಯ}. ವಿ: [ಸಮವಸ್ತೃತ] ಮುಚ್ಚಲ್ಪಟ್ಟಿರುವ

ಸಮೋತ್ಥರ. ಸಕ: [ಸಮವ+ಸ್ತೃ] ಹೊದಿಸು, ಮುಚ್ಚು, ಆಕ್ರಮಣ ಮಾಡು

ಸಮೋಯಾರ. ಪು: [ಸಮವತಾರ] ಮಧ್ಯೆ ಸೇರುವುದು, ಒಳಗೆ ಪ್ರವೇಶಿಸುವುದು
ಸಮೋಯಾರಣಾ. ಸ್ತ್ರೀ:[ಸಮವತಾರಣಾ] ಒಳಗೆ ಪ್ರವೇಶಿಸುವುದು, ಮಧ್ಯೆ ಸೇರುವುದು
ಸಮೋಯಾರಿಯ. ವಿ: [ಸಮವತಾರಿತ] ಒಳಗೆ ಪ್ರವೇಶಿಸಲ್ಪಟ್ಟ, ಮಧ್ಯೆ ಸೇರಿಸಲ್ಪಟ್ಟ
ಸಮೋಲಇಯ. ವಿ: [ದೇ] ಮೇಲಕ್ಕೆ ಎಳೆಯಲ್ಪಟ್ಟ, ಮೇಲಕ್ಕೆ ಹಾರಿಸಲ್ಪಟ್ಟ, ಮೇಲಕ್ಕೆ ಎಸೆಯಲ್ಪಟ್ಟ
ಸಮೋಲುಗ್ಗ. ವಿ: [ಸಮವರುಗ್ಣ] ರೋಗಿ, ರೋಗಪೀಡಿತ
ಸಮೋವಅ. ಸಕ: [ಸಮವ+ಪತ್] ಎದುರುಗಡೆ ಬರು, ಮುಂದೆ ಬರು, ಕೆಳಕ್ಕಿಳಿ
ಸಮೋವಇಅ. ವಿ: [ಸಮವಪತಿತ] ಕೆಳಕ್ಕೆ ಇಳಿದಿರುವ
ಸಮೋಸಢ್ಢ}. ವಿ: [ಸಮವಸೃತ] ಬಂದು ಸೇರಿದ,
ಸಮೋಸಢ}. ಆಗಮಿಸಿದ(ಭಗ)
ಸಮೋಸರ. ಅಕ:[ಸಮಪ+ಸೃ] ಹಿಂದೆಸರಿ, ಪಲಾಯನ ಮಾಡು. **'ಸಮೋಸರಇ'.** ವ.ಕೃ: **ಸಮೋಸರಂತ'**
ಸಮೋಸರಣ. ಪುಂನ: [ಸಮವಸರಣ] ಒಟ್ಟಾಗಿ ಸೇರುವುದು, ಸಂಗಮ, ಸಮುದಾಯ, ಸಮೂಹ, ಸಾಧು-ಸಮುದಾಯ, ಉತ್ಸವವೇ ಮೊದಲಾದ ಸಂದರ್ಭಗಳಲ್ಲಿ ಅನೇಕ ಸಾಧುಗಳು ಸೇರುವುದು, ಜೈನೇತರ ದಾರ್ಶನಿಕರ ಮೇಳ, ಧರ್ಮ, ಆಗಮಗಳ ವಿಚಾರ, ಸೂತ್ರ ಕೃತಾಂಗ ಸೂತ್ರದ ಪ್ರಥಮ ಶ್ರುತ ಸ್ಕಂಧದ ೧೨ನೇ ಅಧ್ಯಯನ. ಆಗಮಿಸುವುದು(ಔಪ), ತೀರ್ಥಂಕರನ ಪರಿಷತ್ತು, ತೀರ್ಥಂಕರರು ಉಪದೇಶ ನೀಡುವ ಸ್ಥಳ, **-ತವ.** ಪು:[-ತಪಸ್] ತಪ-ವಿಶೇಷ.
ಸಮೋಸರಿಅ. ವಿ: [ಸಮಪಸೃತ] ಹಿಂದೆ ಸರಿದ, ಪಲಾಯನ ಮಾಡಿದವನು,
ಸಮೋಸರಿಅ. ವಿ: [ಸಮವಸೃತ] ಬಂದಿರುವ, ಬಂದು ತಲುಪಿರುವ, ಒಟ್ಟು ಸೇರಿರುವ
ಸಮೋಸವ. ಸಕ: [ದೇ] ಚೂರು ಚೂರು ಮಾಡು, ತುಂಡು ತುಂಡು ಮಾಡು
ಸಮೋಸಿಅ. ಅಕ: [ಸಮವ+ಸದ್] ಕ್ಷೀಣವಾಗು, ನಾಶವಾಗು, ನಾಶಹೊಂದು
ಸಮೋಸಿಅ. ಪು: [ದೇ] ನೆರೆಯುವನು, ನೆರೆಮನೆಯವನು, ರಾತ್ರಿಯ ಮೊದಲನೇ ಭಾಗ, ವಿ: ವಧಿಸಲು ಅರ್ಹನಾದವನು; ವಧಾರ್ಹ.

ಸಮೋಹಣ. ಸಕ: [ಸಮುದ್+ಹನ್] ಆತ್ಮ ಪ್ರದೇಶಗಳನ್ನು ಹೊರಗೆ ಹಾಕಿ ಅವುಗಳಿಂದ ಕರ್ಮ-ನಿರ್ಜರೆ ಮಾಡು; ಸಮುದ್ಘಾತ(ಔಪ). **'ಸಮೋಹಣಇ'**
ಸಮೋಹಯ. ವಿ: [ಸಮುದ್ಧತ] ಕರ್ಮ-ನಿರ್ಜರೆ ಮಾಡಿದವನು
ಸಮೋಹಯ. ವಿ: [ಸಮವಹತ] ಹೊಡೆಯಲ್ಪಟ್ಟ, ಕೊಲ್ಲಲ್ಪಟ್ಟ
ಸಮ್ಮ. ಅಕ: [ಶ್ರಮ್] ಖೇದಗೊಳ್ಳು, ದಣಿ, ಆಯಾಸಹೊಂದು(ಉತ್ತ)
ಸಮ್ಮ. ಅಕ: [ಶಮ್] ಶಾಂತವಾಗು, ತಣ್ಣಗಾಗು
ಸಮ್ಮ. ನ: [ಶರ್ಮನ್] ಸುಖ(ಕುಮಾ)
ಸಮ್ಮ. ವಿ: [ಸಮ್ಯಂಚ್] ಸತ್ಯ, ನಿಜ, ಅವಿರುದ್ಧವಾದ, ಶ್ಲಾಘನೀಯ, ಪ್ರಶಂಸಾರ್ಹ, ಸುಂದರವಾದ, ಸಂಗತವಾದ, ಉಚಿತವಾದ, ನ: ಸಮ್ಯಗ್ ದರ್ಶನ, **-ತ್ತ.** ನ: [-ತ್ವ] **ಸತ್ಯ ತತ್ವದ ಮೇಲೆ** ಶ್ರದ್ಧೆಯಿಡುವುದು, ಸಮ್ಯಗ್ ದರ್ಶನ(ಉವಾ), ಪರಮಾರ್ಥ, **-ದಿಟ್ಠಿಯ, -ದಿಟ್ಠೀಯ.** ವಿ: [-ದೃಷ್ಟಿಕ] ಸತ್ಯ ತತ್ವದ ಮೇಲೆ ಶ್ರದ್ಧೆಯುಳ್ಳ. **-ದ್ದಂಸಣ.** ನ: [-ದರ್ಶನ] ಸತ್ಯ ತತ್ವದ ಮೇಲೆ ಶ್ರದ್ಧೆ, **-ದ್ದಿಟ್ಠಿ.** ವಿ: [-ದೃಷ್ಟಿ] **'ದಿಟ್ಠಿಯ'** ಶಬ್ದವನ್ನು ನೋಡುವುದು. **-ನ್ನಾಣ.** ನ: [-ಜ್ಞಾನ] ಸತ್ಯ ಜ್ಞಾನ, ಯಥಾರ್ಥ ಜ್ಞಾನ. **-ಸುಯ.**ನ: [-ಶ್ರುತ] ಸತ್ಯ ಶಾಸ್ತ್ರದ ಜ್ಞಾನ. **ಸಮ್ಮಾಮಿಚ್ಛದಿಟ್ಠಿ.** ವಿ: [-ಮಿಥ್ಯಾದೃಷ್ಟಿ] ಮಿಶ್ರ ದೃಷ್ಟಿಯುಳ್ಳ, ಸತ್ಯ ಮತ್ತು ಅತ್ಯ ಎರಡರ ಮೇಲೂ ನಂಬಿಕೆ ಉಳ್ಳವ, **ಸಮ್ಮಾವಾಯ.** ಪು: [ಸಮ್ಯಕ್‌ವಾದ] ಅವಿರುದ್ಧ ವಾದ, ದೃಷ್ಟಿವಾದ; ೧೨ನೇ ಜೈನ ಅಂಗ ಗ್ರಂಥ. ಸಾಮಾಯಿಕ, ಸಂಯಮ-ವಿಶೇಷ.
ಸಮ್ಮಇ. **'ಸಮ್ಮಹ=ಸನ್ಮತಿ,** ಶಬ್ದವನ್ನು ನೋಡುವುದು
ಸಮ್ಮಇಗ. **'ಸಾಮಾಇಯ'** ಶಬ್ದವನ್ನು ನೋಡುವುದು
ಸಮ್ಮಂ. ಅ: [ಸಮ್ಯಗ್] ಚೆನ್ನಾಗಿ, ಒಳ್ಳೆಯ
ಸಮ್ಮುಇ. ಸ್ತ್ರೀ: [ಸನ್ಮತಿ] ಸಂಗತವಾದ ಮತಿ, ಯುಕ್ತವಾದ ಬುದ್ಧಿ, ವಿಶದವಾದ ಬುದ್ಧಿ(ಉತ್ತ). ಪು: ಒಬ್ಬ ಕುಲಕರ ಪುರುಷ
ಸಮ್ಮುಇ. ಸ್ತ್ರೀ: [ಸ್ವಮತಿ] ತನ್ನ ಸ್ವಂತ ಬುದ್ಧಿ(ಆಚಾ)
ಸಮ್ಹರಿಅ. ವಿ: [ಸಂಸ್ಮೃತ] ಚೆನ್ನಾಗಿ ನೆನಪಿಸಿಕೊಳ್ಳಲ್ಪಟ್ಟ

ಸಯ. ಅಕ: [**ಶೀ, ಸ್ವಪ್**] ಮಲಗು, ನಿದ್ರಿಸು. '**ಸಯಇ**'
ಸಯ. ಅಕ: [**ಸ್ವದ್**] ಪಚನಗೊಳ್ಳು, ಜೀರ್ಣವಾಗು
ಸಯ. ಸಕ: [**ಸ್ತ್ರು**] ಸೋರು, ತೊಟ್ಟಿಕ್ಕು
ಸಯ. ಸಕ: [**ಶ್ರಿ**] ಸೇವೆ ಮಾಡು,
ಸಯ. '**ಸ=ಸತ್**' ಶಬ್ದವನ್ನು ನೋಡುವುದು
ಸಯ. '**ಸ=ಸ್ವ**' ಶಬ್ದವನ್ನು ನೋಡುವುದು
ಸಯ. '**ಸಗ=ಸಪ್ತನ್**' ಶಬ್ದವನ್ನು ನೋಡುವುದು. **–ಹತ್ತರಿ. ಸ್ತ್ರೀ:** [**–ಸಪ್ತತಿ**] ಎಪ್ಪತ್ತೇಳು(೭೭)
ಸಯ. ಅ: [**ಸದಾ**] ಯಾವಾಗಲೂ, ನಿರಂತರ, **–ಕಾಲ. ನ:** [**–ಕಾಲ**] ಯಾವಾಗಲೂ, ಎಲ್ಲ ಕಾಲದಲ್ಲೂ
ಸಯ. ಪುಂನ: [**ಶತ**] ನೂರು, ನೂರರ ಸಂಖ್ಯೆಯ, ಬಹಳ, ಅಪಾರ ಸಂಖ್ಯೆಯ, ಅಧ್ಯಯನ, ಗ್ರಂಥಾಂಶ. **–ಕಂತ. ನ:** [**–ಕಾಂತ**] ರತ್ನ–ವಿಶೇಷ, ವಿ: ನೂರು ರತ್ನಗಳಿಂದ ಮಾಡಿದ, **–ಕಿತ್ತಿ. ಪು: –ಕೀರ್ತಿ**] ಒಬ್ಬ ಭಾವೀ ತೀರ್ಥಂಕರ. **–ಗುಣಿಅ. ವಿ:** [**–ಗುಣಿತ**] ನೂರುಪಟ್ಟು. **–ಘ್ಘೀ. ಸ್ತ್ರೀ:** [**–ಘ್ನೀ**] ಕಬ್ಬಿಣದ ಮುಳ್ಳುಗಳಿಂದ ಆವೃತವಾದ ಒಂದು ಶಿಲೆಯ ಆಯುದ. ಬೀಸುವ ಕಲ್ಲು. **–ಜಲ. ನ:** [**–ಜ್ವಲ**] ವರುಣನ ವಿಮಾನ. "**ಸಯಂಜಲ**' ಶಬ್ದವನ್ನು ನೋಡುವುದು. ರತ್ನದ ಒಂದು ಜಾತಿ. ವಿ: ಶತಜ್ವಲ ರತ್ನಗಳಿಂದ ಮಾಡಲ್ಪಟ್ಟ, **ಪುಂನ:** ವಿದ್ಯುತ್ಪ್ರಭ ಎಂಬ ಹೆಸರಿನ ಪರ್ವತದ ಒಂದು ಶಿಖರ. **–ದುವಾರ. ನ:** [**–ದ್ವಾರ**] ಒಂದು ನಗರ. **–ಧಣು. ಪು:** [**–ಧನುಷ್**] ಐರಾವತ ವರ್ಷದಲ್ಲಿ ಜನಿಸಲಿರುವ ಒಬ್ಬ ಕುಲಶ್ರೇಷ್ಠ. ಭಾರತ–ವರ್ಷದಲ್ಲಿ ಹುಟ್ಟಲಿರುವ ಹತ್ತನೆಯ ಕುಲಶ್ರೇಷ್ಠ(ಠಾ). **–ಪ ಈ. ಸ್ತ್ರೀ:** [**–ಪದೀ**]ಕ್ಷುದ್ರ ಜಂತುವಿನ ಒಂದು ಜಾತಿ. **–ಪತ್ತ.** '**–ವತ್ತ**' ಶಬ್ದವನ್ನು ನೋಡುವುದು.**–ಪಾಗ. ನ:** [**–ಪಾಕ**] ಒಂದು ನೂರಾ ಒಂದು ಗಿಡಮೂಲಿಕೆಗಳಿಂದ ಸಿದ್ಧಪಡಿಸಲಾಗುವ ಒಂದು ಉತ್ತಮ ತೈಲ. **–ಪುಪ್ಫಾ. ಸ್ತ್ರೀ:** [**–ಪುಷ್ಪಾ**] ಸೋಯಾ ಗಿಡ. **–ಪೋರ. ನ:** [**–ಪರ್ವನ್**] ಕಬ್ಬು. **–ಬಾಹು. ಪು:** [**–ಬಾಹು**] ಒಬ್ಬ ರಾಜರ್ಷಿ(ಪಉಮ). **–ಭಿಸಯಾ, –ಭಿಸಾ. ಸ್ತ್ರೀ:** [**–ಭಿಷಜ್**] ನಕ್ಷತ್ರ ವಿಶೇಷ. **–ಯಮ. ವಿ:** [**–ತಮ**] ನೂರನೆಯ. **–ರಹ. ಪು:** [**–ರಥ**] ಒಬ್ಬ ಕುಲಕರ ಪುರುಷ. **–ರಿಸಹ. ಪು:** [**–ವೃಷಭ**] ಅಹೋರಾತ್ರದ ೨೩ನೇ ಮುಹೂರ್ತ. **–ವಈ.** '**–ಪಈ**' ಶಬ್ದವನ್ನು ನೋಡುವುದು. **–ವತ್ತ. ನ:** [**–ಪತ್ರ**] ಕಮಲ. ನೂರು ದಳಗಳುಳ್ಳ ಕಮಲ. ಸಾರಸ ಪಕ್ಷಿ, ನೀರು ಹಕ್ಕಿ, ಪುಳಿ ಗಿಳಿ, ದಕ್ಷಿಣ ದಿಕ್ಕಿನಲ್ಲಿ ಶಬ್ದ ಮಾಡುವುದು ಅಪಶಕುನವೆಂದು ಪರಿಗಣಿಸಲಾಗಿರುವ ಹಕ್ಕಿ; ಮರಕುಟಿಗನ ಹಕ್ಕಿ. **–ಸಹಸ್ಸ. ಪುಂನ:**[**–ಸಹಸ್ರ**] ಒಂದು ಲಕ್ಷ. **–ಸಹಸ್ಸಇಮ. ವಿ:** [**–ಸಹಸ್ರತಮ**] ಒಂದು ಲಕ್ಷದ. **–ಸಾಹಸ್ಸ. ವಿ:** [**–ಸಾಹಸ್ರ**] ಒಂದು ಲಕ್ಷ ಸಂಖ್ಯೆಯ ಪರಿಣಾಮವುಳ್ಳ, ಒಂದು ಲಕ್ಷ ರೂಪಾಯಿ ಬೆಲೆಯ. **–ಸಾಹಸ್ಸಿ. ವಿ:** [**–ಸಾಹಸ್ರಿನ್**] ಲಕ್ಷಾಧೀಶ. **–ಸಾಹಸ್ಸಿಯ. ವಿ:**[**–ಸಾಹಸ್ರಿಕ**] '**–ಸಾಹಸ್ಸ**' ಶಬ್ದವನ್ನು ನೋಡುವುದು **–ಸಾಹಸ್ಸೀ. ಸ್ತ್ರೀ:** [**–ಸಹಸ್ರೀ) ಲಕ್ಷ.** **–ಸಿಕ್ಕರ. ವಿ:** [**–ಶರ್ಕರ**] ನೂರು ಚೂರುಗಳುಳ್ಳ, ನೂರು ತುಂಡುಗಳುಳ್ಳ. **–ಹಾ. ಅ:** [**–ಧಾ**] ನೂರು ರೀತಿಯ, ನೂರು ಭಾಗವಾಗಲಿ ಎನ್ನುವಂತೆ. **–ಹತ್ತಂ. ಅ:** [**–ಕೃತ್ವಸ್**] ನೂರು ಬಾರಿ. **–ಸಂಉಾಉ. ಪು:** [**ಶತಾಯುಷ್**] ಒಬ್ಬ ಮುಖಂಡನ ಹೆಸರು. ಮದಿರೆ, ಹೆಂಡ. **ಸಯಾಣಿಯ, ಸಯಾಣೀಅ. ಪು:** [**ಶತಾನೀಕ**] ಒಬ್ಬ ರಾಜನ ಹೆಸರು.
ಸಯ–. '**ಸಯಂ=ಸ್ವಯಂ**' ಶಬ್ದವನ್ನು ನೋಡುವುದು
ಸಯಂ. '**ಸಇಂ=ಸಕೃತ್**' ಶಬ್ದವನ್ನು ನೋಡುವುದು
ಸಯಂ. ಅ: [**ಸ್ವಯಂ**] ತಾನೇ, ತಾನಾಗಿಯೇ(ಆಚಾ). **–ಕಡ. ಅ:** [**–ಕೃತ**] ತಾನೇ ಮಾಡಿದ. **–ಗಾಹ. ಪು:** [**–ಗ್ರಾಹ**] ಬಲ ವಂತವಾಗಿ ತೆಗೆದುಕೊಳ್ಳುವುದು, ವಿವಾಹ–ವಿಶೇಷ. ವಿ: **ತಾನೇ** ತೆಗೆದುಕೊಳ್ಳುವವನು. **–ಪಭ. ಪು:** [**–ಪ್ರಭ**] ಜ್ಯೋತಿಷ್ಯದ ಗ್ರಹವಿಶೇಷ. ಭಾರತ ವರ್ಷದಲ್ಲಿ ಕಳೆದುಹೋದ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಿದ್ದ ನಾಲ್ಕನೇ ಮುಖಂಡ. ಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಹುಟ್ಟಲಿರುವ ನಾಲ್ಕನೇ ಕುಲಕರ (ಮುಖಂಡ) ಪುರುಷ. ಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಜನಿಸಲಿರುವ ನಾಲ್ಕನೇ ತೀರ್ಥಂಕರ. ಸಂಭವನಾಥನ ಹಿಂದಿನ ಜನ್ಮದ ಗುರುವಾಗಿದ್ದ

ಒಬ್ಬ ಜೈನ ಗುರು, ಒಂದು ಹಾರ, ಮೇರು ಪರ್ವತ. ನಂದೀಶ್ವರ ದ್ವೀಪದ ಮಧ್ಯದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಇರುವ ಒಂದು ಅಂಜನ ಪರ್ವತ. ರಾಜಾ ರಾವಣನಿಗೋಸ್ಕರ ಕುಬೇರನು ನಿರ್ಮಿಸಿಕೊಟ್ಟ ಒಂದು ನಗರದ ಹೆಸರು. ವಿ: ಸ್ವಯಂ ಪ್ರಕಾಶವುಳ್ಳದ್ದು. **–ಪಭಾ. ಸ್ತ್ರೀ: [–ಪ್ರಭಾ]** ಪ್ರಥಮ ವಾಸುದೇವನ ಪಟ್ಟದ ರಾಣಿ(ಪಉಮ), ಒಬ್ಬ ರಾಣಿಯ ಹೆಸರು. **–ಪಹ. '–ಪಭ'**ಶಬ್ದವನ್ನು ನೋಡುವುದು. **–ಬುದ್ಧ. ವಿ: [–ಬುದ್ಧ]** ಬೇರೆಯುವರಿಂದ ಉಪದೇಶ ಪಡೆಯದೆ ತತ್ತ್ವಜ್ಞಾನ ಹೊಂದಿದವನು. **–ಭು. ಪು: [–ಭೂ]** ಬ್ರಹ್ಮ, ಭಾರತವರ್ಷದಲ್ಲಿ ಹುಟ್ಟಿದ ಮೂರನೇ ವಾಸುದೇವ. ೧೭ನೇ ತೀರ್ಥಂಕರನ ಗಣಧರ; ಮುಖ್ಯ ಶಿಷ್ಯ. ಜೀವ, ಆತ್ಮ, ಚೇತನ(ಭಗ), ಒಂದು ಮಹಾ ಸಾಗರ; ಸ್ವಯಂಭೂರಮಣ ಸಮುದ್ರ. **ಪುಂನ:** ಒಂದು ದೇವ ವಿಮಾನ.**'–ಭೂ'** ಶಬ್ದವನ್ನು ನೋಡುವುದು. **–ಭುಗೇಹಿಣೀ. ಸ್ತ್ರೀ: [–ಭುಗೇಹಿನೀ]** ಸರಸ್ವತೀ ದೇವಿ. **–ಭೂರಮಣ. ಪು: [–ಭೂರಮಣ] '–ಭೂರಮಣ'** ಶಬ್ದವನ್ನು ನೋಡುವುದು(ಪಣ್ಣ). **–ಭುವ, –ಭೂ. ಪು: [–ಭೂ]** ಅನಾದಿ ಸಿದ್ಧ, ಸರ್ವಜ್ಞ, ಬ್ರಹ್ಮ, ತಾನಾಗಿಯೇ ಹುಟ್ಟುವ, (ಪಾಅ). ಮೂರನೇ ವಾಸುದೇವ, ರಾವಣನ ಒಬ್ಬ ಯೋಧ, ಭಗವಾನ್ ವಿಮಲನಾಥನ ಮೊದಲ ಶ್ರಾವಕ. ಕುಚ, ಸ್ತನ. **'–ಭು'** ಶಬ್ದವನ್ನು ನೋಡುವುದು **–ಭೂರಮಣಭದ್ದ. ಪು: [–ಭೂರಮಣಭದ್ರ]** ಸ್ವಯಂಭೂರಮಣ ದ್ವೀಪದ ಅಧಿಪತಿ ದೇವ. **–ಭೂರಮಣಮಹಾಭದ್ದ. ಪು:[–ಭೂರಮಣಮಹಾಭದ್ರ]** ಅದೇ ಅರ್ಥ. **–ಭೂರಮಣಮಹಾವರ. ಪು:[–ಭೂರಮಣಮಹಾವರ]** ಸ್ವಯಂಭೂರಮಣ ಮಹಾ ಸಮುದ್ರದ ಒಬ್ಬ ಅಧಿಷ್ಠಾತೃ ದೇವ. **–ಭೂರಮಣವರ. ಪು: [–ಭೂರಮಣವರ.]** ಅದೇ ಅರ್ಥ. **–ವರ. ಪು: [–ವರ]** ಆಹ್ವಾನಿತ ವಿವಾಹಾರ್ಥಿಗಳಲ್ಲಿ ಕನ್ಯೆ ತನ್ನ ಇಷ್ಟಾನುಸಾರ ತನ್ನ ವರನನ್ನು ಆಯ್ಕೆ ಮಾಡಿಕೊಳ್ಳುವ ವಿವಾಹ ಪದ್ಧತಿ(ಉವ). **–ವರೀ. ಸ್ತ್ರೀ: [–ವರೀ]** ತನ್ನ ಇಷ್ಟಕ್ಕನುಸಾರವಾಗಿ ವರನನ್ನು ಆಯ್ಕೆ ಮಾಡಿಕೊಳ್ಳುವವಳು. **–ಸಂಬುದ್ಧ. ವಿ: [–ಸಂಬುದ್ಧ]** ತಾನಾಗಿಯೇ ತಿಳಿದು ಬಂದ ತತ್ತ್ವ

ಸಯಂಜಯ. ಪು: [ಶತಂಜಯ] ಪಕ್ಷದ ಹದಿಮೂರನೇ ದಿನ

ಸಯಂಜಲ. ಪು: [ಶತಂಜಲ] ಒಬ್ಬ ಕುಲಶ್ರೇಷ್ಠ (ಮುಖಂಡ)ಪುರುಷ. ವರುಣ–ಲೋಕಪಾಲನ ವಿಮಾನ(ಭಗ). **'ಸಯು–ಜ್ಜಲ'** ಶಬ್ದವನ್ನು ನೋಡುವುದು ಐರಾವತ ವರ್ಷದಲ್ಲಿ ಹುಟ್ಟಿದ ೧೪ನೇ ತೀರ್ಥಂಕರ

ಸಯಂಭರೀ. ಸ್ತ್ರೀ: [ಶಾಕಂಭರೀ] ಒಂದು ದೇಶ–ವಿಶೇಷ.

ಸಯಗ. 'ಸಯಮ' ಶಬ್ದವನ್ನು ನೋಡುವುದು

ಸಯಗ್ಘೀ. ಸ್ತ್ರೀ: [ದೇ] ಬೀಸುವ ಕಲ್ಲು.

ಸಯಡ. ಪುಂನ: [ಶಕಟ] ಗಾಡಿ, **ನ:** ಒಂದು ನಗರ–ವಿಶೇಷ(ಪಉಮ). **ಸವಡಾಮುಹ. ನ: [–ಮುಖ]** ಭಗವಾನ್ ವೃಷಭದೇವನಿಗೆ ಕೇವಲ ಜ್ಞಾನ ಪ್ರಾಪ್ತವಾದ ಉದ್ಯಾನವನ.

ಸಯಡಾಲ. 'ಸಗಡಾಲ' ಶಬ್ದವನ್ನು ನೋಡುವುದು

ಸಯಣ.'ಸ–ಯಣ=ಸ್ವ–ಜನ' ಶಬ್ದವನ್ನು ನೋಡುವುದು

ಸಯಣ. ನ: [ಸದನ] ಮನೆ, ಗೃಹ(ಗಉಡ), ದೇಹ–ಪೀಡೆ, ಶರೀರದ ಯಾತನೆ

ಸಯಣ. ನ: [ಶಯನ] ವಸತಿ, ಸ್ಥಳ(ಆಚಾ), ಹಾಸಿಗೆ, ನಿದ್ರೆ, ಮಲಗುವುದು, ಶಯನ

ಸಯಣಿಜ್ಜ. ನ:[ಶಯನೀಯ] ಹಾಸಿಗೆ, ಶಯ್ಯೆ(ಣಾಯಾ)

ಸಯಣಿಜ್ಜಗ. 'ಸಯಣ=ಸ್ವ–ಜನ' ಶಬ್ದವನ್ನು ನೋಡುವುದು

ಸಯಣೀಅ. 'ಸಯಣಿಜ್ಜ' ಶಬ್ದವನ್ನು ನೋಡುವುದು

ಸಯಣ್ಣ. 'ಸಕಣ್ಣ' ಶಬ್ದವನ್ನು ನೋಡುವುದು

ಸಯಣ್ಹಾ. 'ಸ–ಯಣ್ಹಾ=ಸ–ತೃಷ್ಣಾ' ಶಬ್ದವನ್ನು ನೋಡುವುದು

ಸಯತ್ತ. ವಿ: [ದೇ] ಸಂತೋಷಗೊಂಡ, ಹರ್ಷಗೊಂಡ, ಮುದಿತ

ಸಯನ್ನ. 'ಸಕನ್ನ' ಶಬ್ದವನ್ನು ನೋಡುವುದು

ಸಯಯ. ವಿ: [ಸತತ] ನಿರಂತರವಾಗಿ, ಎಡೆಬಿಡದೆ

ಸಯಯ. ಪು: [ಶತಕ] ಈಗಿನ ಅವಸರ್ಪಿಣೀ ಕಾಲದಲ್ಲಿ ಹುಟ್ಟಿದ ಐರಾವತ ವರ್ಷದ ಒಬ್ಬ

ತೀರ್ಥಂಕರ. ಮುಂದೆ ಬರಲಿರುವ ಉತ್ಸರ್ಪಿಣೀ ಕಾಲದಲ್ಲಿ ಭಾರತ ವರ್ಷದಲ್ಲಿ ಹುಟ್ಟಲಿರುವ ಒಬ್ಬ ಜಿನದೇವನ ಪೂರ್ವ ಜನ್ಮದ ಹೆಸರು; ಈತ ಮಹಾವೀರನ ಶ್ರಾವಕನಾಗಿದ್ದವನು. ನ: ನೂರರ ಸಮುದಾಯ.

ಸಯರ. **'ಸಾಯರ= ಸಾಗರ'** ಶಬ್ದವನ್ನು ನೋಡುವುದು

ಸಯರಹಂ. **'ಸಯರಾಹಂ'** ಶಬ್ದವನ್ನು ನೋಡುವುದು

ಸಯರಾ. **'ಸಕ್ಕರಾ'** ಶಬ್ದವನ್ನು ನೋಡುವುದು

ಸಯರಾಹಂ}. ಅ: [**ದೇ**] ಬೇಗನೆ, ಶೀಘ್ರ, ಕೂಡಲೇ, **ಸಯರಾಹಾ**}. ಏಕಕಾಲದಲ್ಲಿ, ಒಂದೇ ಸಮಯದಲ್ಲಿ, ಅಕಸ್ಮಾತ್, ಹಠಾತ್ತಾಗಿ, ಅನಿರೀಕ್ಷಿತವಾಗಿ

ಸಯರಿ. **'ಸತ್ತ-ರಿ=ಸಪ್ತತಿ'** ಶಬ್ದವನ್ನು ನೋಡುವುದು

ಸಯರೀ. ಸ್ತ್ರೀ: [**ಶತಾವರೀ**] ಶತಮೂಲೀ ಗಿಡ, ಆಷಾಢೀ ಬೇರು

ಸಯಲ. ನ: [**ಶಕಲ**] ಚೂರು, ತುಣುಕು

ಸಯಲ. ವಿ; [**ಸಕಲ**] ಸಂಪೂರ್ಣ, ಎಲ್ಲ, ಸಮಗ್ರ(ಗಾ), **-ಚಂದ.** ಪು: [**-ಚಂದ್ರ**] **'ಶ್ರುತಾಸ್ವಾದ'** ದ ಕರ್ತೃವಾದ ಒಬ್ಬ ಜೈನ ಮುನಿ. **-ಭೂಸಣ.** ಪು: [**-ಭೂಷಣ**] ಒಬ್ಬ ಕೇವಲ ಜ್ಞಾನಿ ಮುನಿ. **ಸಕಲಾದೇಸ.** ಪು: [**ಸಕಲಾದೇಶ**] ಸರ್ವಾಪೇಕ್ಷಿಯಾದ ವಾಕ್ಯ, ಪ್ರಮಾಣ ವಾಕ್ಯ

ಸಯಲಿ. ಪು: [**ಶಕಲಿನ್**] ಮೀನು

ಸಯಹತ್ಥಿಯ. ವಿ: [**ಸೌವಹಸ್ತಿಕ**] ತನ್ನ ಹಸ್ತದಿಂದ(ಸ್ವಹಸ್ತ) ಹುಟ್ಟಿದ, ನ: ಶಾಸ್ತ್ರ-ವಿಶೇಷ.

ಸಯಾಚಾರ. **'ಸ-ಯಾಚಾರ=ಸದಾಚಾರ'** ಶಬ್ದವನ್ನು ನೋಡುವುದು

ಸಯಾಚಾರ. **'ಸಆ-ಚಾರ=ಸದಾ-ಚಾರ'** ಶಬ್ದವನ್ನು ನೋಡುವುದು

ಸಯಾಣ. **'ಸ-ಯಾಣ=ಸ-ಜ್ಞಾನ'** ಶಬ್ದವನ್ನು ನೋಡುವುದು

ಸಯಾಲಿ. ಪು: [**ಶತಾಲಿ**] ಭಾರತ ವರ್ಷದ ಭಾವೀ ಹದಿನೆಂಟನೇ ತೀರ್ಥಂಕರನ ಹಿಂದಿನ ಜನ್ಮದ ಹೆಸರು. **'ಭಯಾಲಿ'** ಶಬ್ದವನ್ನು ನೋಡುವುದು

ಸಯಾಲು. ವಿ:[**ಶಯಾಲು**] ನಿದ್ರಿಸುವ ಅಭ್ಯಾಸವುಳ್ಳವನು, ನಿದ್ರಾಶೀಲ, ಸೋಮಾರಿ, ಹೆಬ್ಬಾವು

ಸಯಾವರೀ. ಸ್ತ್ರೀ: [**ಸದಾವರೀ**] ಮೂರು ಇಂದ್ರಿಯಗಳ ಪ್ರಾಣಿ ಜಾತಿಯ ಜಂತು.

ಸಯಾವರೀ. **'ಸಯರೀ=ಶತಾವರೀ'** ಶಬ್ದವನ್ನು ನೋಡುವುದು

ಸಯಾಸ. **'ಸಗಾಸ=ಸಕಾಶ'** ಶಬ್ದವನ್ನು ನೋಡುವುದು

ಸಯಾಸವ. ವಿ: [**ಶತಾಶ್ರವ, ಸದಾಶ್ರವ**] ಸೂಕ್ಷ್ಮವಾದ ರಂಧ್ರವುಳ್ಳ

ಸಯ್ಯಂ. **'ಸಜ್ಜಂ=ಸದ್ಯಸ್'** ಶಬ್ದವನ್ನು ನೋಡುವುದು

ಸಯ್ಯಂಭವ. **'ಸಜ್ಜಂಭವ'** ಶಬ್ದವನ್ನು ನೋಡುವುದು

ಸಯ್ಹ. **'ಸಜ್ಝ=ಸಹ್ಯ'** ಶಬ್ದವನ್ನು ನೋಡುವುದು

ಸರ. ಸಕ: [**ಸೃ**] ಸರಿ, ಜರುಗು, ಜಾರು, ಆಶ್ರಯಿಸು, ಅನುಸರಿಸು, 'ಸರಇ'

ಸರ. ಸಕ: [**ಸ್ಮೃ**] ಸ್ಮರಿಸು, ನೆನಪಿಸಿಕೊಳ್ಳು. ವ.ಕೃ: **'ಸರಂತ'**, **'ಸರಮಾಣ'**

ಸರ. ಸಕ: [**ಸ್ವರ್**] ಧ್ವನಿ ಹೊರಡಿಸು, ಧ್ವನಿಮಾಡು

ಸರ. ಪುಂನ: [**ಶರ**] ಬಾಣ(ಸ್ವಪ್ನ), ಜಂಬು ಹುಲ್ಲು, ಒಂದು ಛಂದಸ್ಸು, ಐದು, **-ಪಣ್ಣೀ.** ಸ್ತ್ರೀ: [**-ಪರ್ಣೀ**] ಮುಂಜಾ ಹುಲ್ಲು. **-ಪತ್ತ.** ನ: [**-ಪತ್ರ**] ಒಂದು ಅಸ್ತ್ರ-ವಿಶೇಷ. **-ಪಾಯ.** ನ: [**-ಪಾತ**] ಧನುಸ್ಸು(ಸೂಅ), **ಸರಾಸಣ.** ಪುಂನ: [**ಶರಾಸನ**] ಧನುಸ್ಸು, ಬಿಲ್ಲು(ವಿಪಾ), **ಸರಾಸಣಪಟ್ಟೀ, ಸರಾಸಣವಟ್ಟಿಯಾ.** ಸ್ತ್ರೀ: [**ಶರಾಸನಪಟ್ಟೀ, ಶರಾಸನಪಟ್ಟಿಕಾ**] ಧನುರ್ದಂಡ, ಬಿಲ್ಲನ್ನು ಸೆಳೆಯುವ ಸಮಯದಲ್ಲಿ ಕೈಯ ರಕಣೆಗಾಗಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ. **ಸರಾಸರಿ.** ನ: [**ಶರಾಶರಿ**] ಬಾಣದೊಂದಿಗೆ ಮಾಡುವ ಯುದ್ಧ.

ಸರ. ಪು: [**ಸ್ಮರ**] ಕಾಮದೇವ(ಕುಮಾ)

ಸರ. ವಿ: [**ಸರ**] ನಡೆಯುವವನು, ಚಲಿಸುವವನು

ಸರ. ಪು: [**ಸ್ವರ**] **'ಅ'** ಕಾರದಿಂದ **'ಔ'** ಕಾರದವರೆಗಿನ ವರ್ಣಮಾಲೆಯ ಅಕ್ಷರಗಳು. ಗೀತದ ಧ್ವನಿ, ನಾದ, ಸ್ವರಕ್ಕೆ ತಕ್ಕಂತೆ ಫಲಾಫಲಗಳನ್ನು ಹೇಳುವ ಶಾಸ್ತ್ರ.

ಸರ. ಪುಂನ: [**ಸರಸ್**] ಕೆರೆ, ಸರೋವರ, ಕೊಳ. **-ಪಂತಿ.** ಸ್ತ್ರೀ: [**-ಪಂಕ್ತಿ**] ಕೆರೆಗಳ ಸರೋವರಗಳ ಸಾಲು(ಠಾ), **-ರುಹ.** ನ: [**-ರುಹ**] ಕಮಲ, ಪದ್ಮ. **-ಸರಪಂತಿಯಾ.** ಸ್ತ್ರೀ: [**ಸರಃಪಂಕ್ತಿ**] ಸಾಲು ಸಾಲಾಗಿರುವ ಅನೇಕ ಕೆರೆಗಳು, ಸರೋವರಗಳು

ಸರ. **'ಸರಯ=ಶರದ್'** ಶಬ್ದವನ್ನು ನೋಡುವುದು. **-ದಿಂದು.** ಪು: [**-ಇಂದ**] ಶರದ್‌ಋತುವಿನ ಚಂದ್ರ,

ಸರಊ. ಸ್ತ್ರೀ: [ಸರಯೂ] ಹೆಸರಾಂತ ನದಿ.
ಸರಂಗ.(ಅಪ). ಪು: [ಸಾರಂಗ] ಒಂದು ಛಂದಸ್ಸು
ಸರಂಬ. ಪು: [ಶರಂಬ] ಭುಜದಿಂದ ಚಲಿಸುವ ಸರ್ಪ ಜಾತಿ
ಸರಕ್ಖ. ಸಕ: [ಸಂ+ರಕ್ಷ್] ಚೆನ್ನಾಗಿ ರಕ್ಷಿಸು, ಕಾಪಾಡು
ಸರಕ್ಖ. ವಿ: [ಸರಜಸ್ಕ, ಸರಕ್ಷ] ಶಿವ ಧರ್ಮಿಯಾದವನು, ಶಿವ ಭಕ್ತ, ಭೌತ. ವಿ: ದೂಳಿನಿಂದ ಕೂಡಿದ, ರಜದಿಂದ ಕೂಡಿದ
ಸರಕ್ಖ. ಪುಂನ: [ಸದ್ರಜಸ್] ಧೂಳು, ರಜ
ಸರಗ. 'ಸರಯ=ಶರಕ' ಶಬ್ದವನ್ನು ನೋಡುವುದು
ಸರಗ. ವಿ: [ಶಾರಕ] ಜಂಬು ಹುಲ್ಲಿನಿಂದ ಮಾಡಿದ (ಮೊರ ಇತ್ಯಾದಿ)
ಸರಗ್ಗಿಕಾ.(ಅಪ). ಸ್ತ್ರೀ: [ಸಾರಂಗಿಕಾ] ಒಂದು ಛಂದಸ್ಸು
ಸರಡ. ಪು: [ಸರಟ] ಓತಿಕ್ಯಾತ
ಸರಡು}. ನ: [ಶಲಾಟು, -ಕ] ಪೀಚು, ಬೀಜ
ಸರಡುಅ}. ಮೂಡದಿರುವ ಎಳೆಯ ಕಾಯಿ.
ಸರಣ. ಪುಂನ: [ಶರಣ] ರಕ್ಷಣೆ, ರಕ್ಷಣೆ ಕೊಡುವ ಸ್ಥಳ ಮನೆ, ಗೃಹ, ಆಶ್ರಯ ಸ್ಥಾನ, **-ದಯ.** ವಿ; [-ದಯ] ರಕ್ಷಿಸುವವನು. **ಸರಣಾಗಯ.** ವಿ: [ಶರಣಾಗತ] **ಮೊರೆಹೊಕ್ಕವನು**
ಸರಣಿ. ಪುಂಸ್ತ್ರೀ: [ಸರಣಿ] ಮಾರ್ಗ, ದಾರಿ, ಪಂಕ್ತಿ, ಸಾಲು, ಪಾತಿ
ಸರಣ್ಣ. ವಿ: [ಶರಣ್ಯ] ಶರಣು ನೀಡಲು ಅರ್ಹನಾದವನು
ಸರತ್ತಿ. ಅ: [ದೇ) ಶೀಘ್ರ, ಬೇಗನೆ, ಕೂಡಲೇ
ಸರದ. 'ಸರಯ=ಶರತ್' ಶಬ್ದವನ್ನು ನೋಡುವುದು
ಸರಭ. ಸರಹ=ಶರಭ ಶಬ್ದವನ್ನು ನೋಡುವುದು
ಸರಭೇಅ. ವಿ: [ದೇ] ನೆನಪಿಸಿಕೊಂಡ, ಸ್ಮರಿಸಲ್ಪಟ್ಟ, ಸ್ಮೃತ
ಸರಮಯ. ಪ.ಬ: [ಶರ್ಮಕ] ದೇಶ-ವಿಶೇಷ
ಸರಯ. ಪುಂನ: [ಶರದ್] ಆಶ್ವಯುಜ ಮತ್ತು ಕಾರ್ತೀಕ ಮಾಸಗಳ ಶರದ್ ಋತು. **-ಚಂದ.** ಪು: [-ಚಂದ್ರ] ಶರದ್ ಋತುವಿನ ಚಂದ್ರ. **'ಸರ=ಶರದ್'** ಶಬ್ದವನ್ನು ನೋಡುವುದು
ಸರಯ. ಪು: [ಶರಕ] ಬೆಂಕಿ ಹೊತ್ತಿಸಲು ಅರಣಿಯ ಕಾಷ್ಠವನ್ನು ಯಾವುದರಿಂದ ಉಜ್ಜುತ್ತಾರೆಯೋ ಅದು.
ಸರಯ. ಪುಂನ: [ಸರಕ] ಬೆಲ್ಲ ಇಲ್ಲವೆ ಮರಾಟಿ ಮೊಗ್ಗಿನಿಂದ ಮಾಡಿದ ಮದ್ಯ, ಮದ್ಯಪಾನ.
ಸರಯು. **'ಸ-ರಯು= ಸ-ರತ'** ಶಬ್ದವನ್ನು ನೋಡುವುದು
ಸರಯ(ಅಪ). ಪು: [ಸರಸ] ಒಂದು ಛಂದಸ್ಸು
ಸರಲ. ಪು: [ಸರಲ] ಕೆಂಪು ತಿಗಡೆ ಮರ. ಋಜು, ಕಪಟವಿಲ್ಲದ, ಮೋಸವಿಲ್ಲದ, ನೇರ, ವಕ್ರವಲ್ಲದ
ಸರಲೀ. ಸ್ತ್ರೀ: [ದೇ] ಜಿಂಯ್‌ಗುಡುವ ಚಿಟ್ಟೆ
ಸರಲೀಅ. ಸ್ತ್ರೀ: [ದೇ] ಒಂದು ಬಗೆಯ ಮುಳ್ಳುಗಳಿರುವ ಕೀಟ,
ಸರವ. ಪು: [ಶರಪ] ಭುಜದಿಂದ ಚಲಿಸುವ ಒಂದು ಪ್ರಾಣಿ ಪ್ರಭೇದ
ಸರಸ. ವಿ: [ಸರಸ] ರಸದಿಂದ ಕೂಡಿದ, ಪು: **-ರಣ್ಣ.** ಪು: [ಸರಸಾರಣ್ಯ] ಸಮುದ್ರ.
ಸರಸಿಜ.} ನ: [ಸರಸಿಜ್ಜ] ಕಮಲ,
ಸರಸಿಯ}. ನ: [ಸರಸೀರುಹ] ಪದ್ಮ
ಸರಸಿರುಹ}.
ಸರಸೀ. ಸ್ತ್ರೀ: [ಸರಸೀ] ದೊಡ್ಡ ಸರೋವರ, **-ರುಹ.** ನ: [-ರುಹ] **ಕಮಲ**
ಸರಸಈ. ಸ್ತ್ರೀ: [ಸರಸ್ವತೀ] ವಾಣಿ, ಭಾಷೆ, ವಾಣಿಯ ಅಧಿಷ್ಠಾತ್ರಿ ದೇವಿ, ವಿದ್ಯೆಯ ಅಧಿದೇವತೆ, ಗೀತರತಿ ಎಂಬ ಇಂದ್ರನ ಒಬ್ಬ ಪಟ್ಟದ ರಾಣಿ , ಒಬ್ಬ ರಾಜಪತ್ನಿ, ಕಾಲಕಾಚಾರ್ಯನ ಸೋದರಿಯಾಗಿದ್ದ ಒಬ್ಬ ಜೈನ ಸಾಧ್ವಿ,
ಸರಹ. ಪು: [ಶರಭ] ಕಡವೆ, ಎಂಟು ಕಾಲುಗಳು ಮತ್ತು ಎರಡು ತಲೆ ಹೊಂದಿರುವ ಒಂದು ಬೇಟೆಯಮೃಗ. ಹರಿವಂಶದ ಒಬ್ಬ ರಾಜ, ಲಕ್ಷ್ಮಣನ ಒಬ್ಬ ಮಗನ ಹೆಸರು(ಪಉಮ). ಒಬ್ಬ ಸಾಮಂತ ರಾಜ. ಒಂದು ವಾನರ, ಒಂದು ಛಂದಸ್ಸು
ಸರಹ. ಪು: [ದೇ] ಜೊಂಡು ಗಿಡ, ನೀರು ಹಬ್ಬೆ ಗಿಡ, ಸಿಂಹ,
ಸರಹ(ಅಪ). ವಿ: [ಶ್ಲಾಘ್ಯ] ಪ್ರಶಂಸನೀಯ
ಸರಹಸ. **'ಸ-ರಹಸ=ಸ-ರಭಸ'** ಶಬ್ದವನ್ನು ನೋಡುವುದು
ಸರಹಾ. ಸ್ತ್ರೀ: [ಸರಘಾ] ಜೇನ್ನೊಣ(ದೇ)
ಸರಹಿ. ಪುಂಸ್ತ್ರೀ: [ಶರಧಿ] ಬತ್ತಳಿಕೆ, ಸಮುದ್ರ

ಸರಾ. ಸ್ತ್ರೀ: [ದೇ] ಹಾರ, ಮಾಲೆ
ಸರಾಗ. **'ಸ-ರಾಗ=ಸ-ರಾಗ'** ಶಬ್ದವನ್ನು ನೋಡುವುದು
ಸರಾಡಿ. ಸ್ತ್ರೀ: **[ಶರಾಟಿ, ಶರಾಡಿ]** ಪಕ್ಷಿಯ ಒಂದು ಜಾತಿ
ಸರಾವ. ಪು: **[ಶರಾವ]** ಮಣ್ಣಿನ ಪಾತ್ರೆ,
ಸರಾಸಣ. **'ಸರಾಸಣ=ಶರಾಸನ'** ಶಬ್ದವನ್ನು ನೋಡುವುದು
ಸರಾಹ. ವಿ: [ದೇ] ಗರ್ವದಿಂದ ಉದ್ಧಟನಾದವನು
ಸರಾಹಯ. ಪು: [ದೇ] ಸರ್ಪ, ಹಾವು
ಸರಿ. ವಿ: **[ಸದೃಶ]** ಹೋಲುವ, ತುಲ್ಯ(ಭಗ)
ಸರಿ. ಸ್ತ್ರೀ: **[ಸರಿತ್]** ನದಿ, **-ನಾಹ.** ಪು: **[-ನಾಥ]** ಸಮುದ್ರ. **'ಸರಿಆ'** ಶಬ್ದವನ್ನು ನೋಡುವುದು
ಸರಿಅ. **'ಸರಿ=ಸದೃಶ'** ಶಬ್ದವನ್ನು ನೋಡುವುದು
ಸರಿಅಂ. ನ: **[ಸೃತಮ್]** ಸಾಕು, ಪರ್ಯಾಪ್ತ,
ಸರಿಆ. ಸ್ತ್ರೀ: **[ಸರಿತ್]** ನದಿ, **-ವಇ.** ಪು: **[-ಪತಿ]** ಸಮದ್ರ
ಸರಿಆ. ಸ್ತ್ರೀ: [ದೇ] ಹಾರ, ಮಾಲೆ(ಸುಪಾ)
ಸರಿಕ್ಖ}. ವಿ: **[ಸದೃಕ್ಷ]** ಸದೃಶ, ಹೋಲುವ
ಸರಿಚ್ಛ}.
ಸರಿತ್ತು. ವಿ: **[ಸ್ಮರ್ತೃ]** ಸ್ಮರಿಸುವವನು, ನೆನಪಿಸಿಕೊಳ್ಳುವವನು
ಸರಿಭರೀ. ಸ್ತ್ರೀ: [ದೇ] ಸಮಾನತೆ
ಸರಿರ. **'ಸರೀರ'** ಶಬ್ದವನ್ನು ನೋಡುವುದು
ಸರಿವಾಯ. ಪು: [ದೇ] ಬಿರುಮಳೆ, ಜೋರಾಗಿ ಸುರಿಯುವ ಮಳೆ
ಸರಿಸ. ವಿ: **[ಸದೃಶ]** ಸಮಾನ, ಹೋಲುವ, ತುಲ್ಯ(ಭಗ)
ಸರಿಸ. ಪುಂನ: [ದೇ] ಒಂದಿಗೆ, ಒಡನೆ, ಜೊತೆಯಲ್ಲಿ, ಹೋಲಿಕೆ, ಸದೃಶತೆ, ಸಮಾನತೆ,
ಸರಿಸರೀ. **'ಸರಿಭರೀ'** ಶಬ್ದವನ್ನು ನೋಡುವುದು
ಸರಿಸವ. ಪು: **[ಸರ್ಷಪ]** ಸಾಸಿವೆ(ಣಾಯಾ)
ಸರಿಸಾಹುಲ. ವಿ: [ದೇ] ಸಮಾನ, ಸದೃಶ, ಹೋಲುವ
ಸರಿಸ್ಸವ. **'ಸರೀಸವ'** ಶಬ್ದವನ್ನು ನೋಡುವುದು
ಸರೀ. ಸ್ತ್ರೀ: [ದೇ] ಮಾಲೆ, ಹಾರ
ಸರೀರ. ಪುಂನ: **[ಶರೀರ]** ದೇಹ, ಕಾಯ, **-ಣಾಮ, -ನಾಮ.** ಪುಂನ: **[-ನಾಮನ್]** ಶರೀರದ ಕಾರಣ-ಭೂತ ಕರ್ಮ. **-ಬಂಧಣ.** ನ: **[-ಬಂಧನ]** ಕರ್ಮ-ವಿಶೇಷ. **-ಸಂಘಾಯಣ.** ನ: **[ಸಂಘಾತನ]** ನಾಮ ಕರ್ಮದ ಒಂದು ಪ್ರಭೇದ.

ಸರೀರಿ. ಪು: **[ಶರೀರಿನ್]** ಶರೀರವನ್ನು ಧರಿಸಿರುವ ಪ್ರಾಣಿ, ಜೀವಚೇತನ,
ಸರೀಸವ}. ಪು: **[ಸರೀಸೃಪ]** ಸರ್ಪ, ಹಾವು, ಸರ್ಪದ
ಸರೀಸಿವ}. ಹಾಗೆ ಭುಜದಿಂದ ಅಥವಾ ಹೊಟ್ಟೆಯಿಂದ ಚಲಿಸುವ ಪ್ರಾಣಿ
ಸರೂಯ}. **'ಸ-ರೂಯ=ಸ್ವ-ರೂಪ'** ಶಬ್ದವನ್ನು
ಸರೂವ}. ನೋಡುವುದು
ಸರೂವ. **'ಸ-ರೂವ=ಸದ್-ರೂಪ, ಸ-ರೂಪ'** ಶಬ್ದವನ್ನು ನೋಡುವುದು
ಸರೂವಿ. ಪು: **[ಸ್ವರೂಪಿನ್]** ಜೀವ, ಪ್ರಾಣಿ(ಠಾ)
ಸರೇಅವ್ವ. **'ಸರ=ಸೃ, ಸ್ಮೃ'** ಶಬ್ದವನ್ನು ನೋಡುವುದು
ಸರೇವಯ. ಪು: [ದೇ] ಹಂಸ, ಮನೆಯ ನೀರು ಹರಿಯುವ ಮೋರಿ(ದೇ)
ಸರೋಅ}. ನ: **[ಸರೋಜ]** ಕಮಲ, ಜಲಜ
ಸರೋರುಹ}. ನ: **[ಸರೋರುಹ]**
ಸರೋವರ. ನ: **[ಸರೋವರ]** ದೊಡ್ಡಕೊಳ, ಜಲಾಶಯ
ಸಲಭ. **'ಸಲಹ=ಶಲಭ'** ಶಬ್ದವನ್ನು ನೋಡುವುದು
ಸಲಲೀ. ಸ್ತ್ರೀ: [ದೇ] ಸೇವೆ.
ಸಲಹ. ಸಕ: **[ಶ್ಲಾಘ್]** ಹೊಗಳು, ಪ್ರಶಂಸಿಸು. **'ಸಲಾಹ'** ಶಬ್ದವನ್ನು ನೋಡುವುದು
ಸಲಹ. ಪು: **[ಶಲಭ]** ಪತಂಗದ ಹುಳು(ಪಾಅ), ಒಬ್ಬ ವ್ಯಾಪಾರಿಯ ಮಗ.
ಸಲಹಣ. ನ: **[ಶ್ಲಾಘನ]** ಪ್ರಶಂಸೆ, ಹೊಗಳಿಕೆ
ಸಲಹತ್ಥ. ಪು: [ದೇ] ಕುಡುಗೋಲು, ಮಚ್ಚು ಮೊದಲಾದವುಗಳ ಹಿಡಿಕೆ
ಸಲಹಿಅ. ವಿ: **[ಶ್ಲಾಘಿತ]** ಹೊಗಳಲ್ಪಟ್ಟ, ಪ್ರಶಂಸಿಸಲ್ಪಟ್ಟ
ಸಲಹಿಜ್ಜ. **'ಸಲಹ=ಶ್ಲಾಘ್'** ಶಬ್ದವನ್ನು ನೋಡುವುದು
ಸಲಾಗ. ನ: **[ಶಾಲಾಕ್ಯ]** ಶರೀರದ ಕಿವಿಯ ಮೇಲಿನ ಭಾಗದ ಚಿಕಿತ್ಸೆಗೆ ಸಂಬಂಧಿಸಿದ ಆಯುರ್ವೇದದ ಚಿಕಿತ್ಸಾ ಶಾಸ್ತ್ರದ ಒಂದು ಅಂಗ.
ಸಲಾಗಾ}. ಸ್ತ್ರೀ: **[ಶಲಾಕಾ]** ಸಲಾಕೆ, ಸರಳು, ಈಟಿ,
ಸಲಾಯಾ}. ಬಣ್ಣ ಹಾಕುವ ಕುಂಚ, ಒಂದ ಬಗೆಯ ಅಳತೆ, **-ಪುರಿಸ.** ಪು: **[-ಪುರುಷ]** ತೀರ್ಥಂಕರ, ಚಕ್ರವರ್ತಿ, ವಾಸುದೇವ, ಪ್ರತಿವಾಸುದೇವ ಮತ್ತು ಬಲದೇವ ಎಂಬ ಈ ೬೩ ಮಹಾ ಪುರುಷರು.
ಸಲಾಹ. **'ಸಲಹ=ಶ್ಲಾಘ್'** ಶಬ್ದವನ್ನು ನೋಡುವುದು
ಸಲಾಹಣ. ನ: **[ಶ್ಲಾಘನ]**

ಸಲಾಹಾ. ಸ್ತ್ರೀ: [ಶ್ಲಾಘಾ] ಪ್ರಶಂಸೆ
ಸಲಾಹಿಅ. 'ಸಲಹಿಅ' ಶಬ್ದವನ್ನು ನೋಡುವುದು
ಸಲಿಲ. ಪುಂನ: [ಸಲಿಲ] ನೀರು, –ಣಿಹಿ. ಪು: [–ನಿಧಿ] ಸಾಗರ, ಸಮುದ್ರ, –ನಾಹ. ಪು: [–ನಾಥ] ಅದೇ ಅರ್ಥ. –ಬಿಲ. ನ: [–ಬಿಲ] ನೆಲದಿಂದ ಹೊಮ್ಮಿ ಹರಿಯುತ್ತಿರುವ ಜರಿ(ಭಗ). –ರಾಸಿ. ಪು: [–ರಾಶಿ] ಸಮುದ್ರ, –ವಾಹ. ಪು: [–ವಾಹ] ಮೇಘ, ಮೋಡ. –ಹರ. ಪು: [–ಧರ] ಅದೇ ಅರ್ಥ. **ಸಲಿಲಾವಈ, ಸಲಿಲಾವತೀ.** ಸ್ತ್ರೀ: [ಸಲಿಲಾವತೀ] ವಿಜಯ–ಕ್ಷೇತ್ರ–ವಿಶೇಷ. **ಸಲಿಲಾವತ್ತ.** ನ: [ಸಲಿಲಾವರ್ತ] ವೈತಾಢ್ಯ ಪರ್ವತದ ಮೇಲೆ ಉತ್ತರ ದಿಕ್ಕಿನಲ್ಲಿರುವ ಒಂದು ವಿದಾಧರ ನಗರ.
ಸಲಿಲಾ. ಸ್ತ್ರೀ: [ಸಲಿಲಾ] ಮಹಾನದಿ, ದೊಡ್ಡ ನದಿ
ಸಲಿಲುಚ್ಛಯ. ವಿ: [ಸಲೊಲೋಚ್ಛಯ] ನೀರಿನಲ್ಲಿ ಮುಳುಗಿಸಲ್ಪಟ್ಟ, ಅದ್ದಲ್ಪಟ್ಟ
ಸಲಿಸ. ಅಕ: [ಸ್ವಪ್] ನಿದ್ರಿಸು, ಮಲಗು
ಸಲೂಣ. 'ಸ–ಲೂಣ=ಸ–ಲವಣ' ಶಬ್ದವನ್ನು ನೋಡುವುದು
ಸಲೋಗ. ಪು: [ಶ್ಲೋಕ] ಶ್ಲಾಘನೆ, ಪ್ರಶಂಸೆ. 'ಸಿಲೋಗ' ಶಬ್ದವನ್ನು ನೋಡುವುದು,
ಸಲೋಗ. 'ಸ–ಲೋಗ=ಸ–ಲೋಕ' ಶಬ್ದವನ್ನು ನೋಡುವುದು
ಸಲೋಣ. 'ಸ–ಲೋಣ=ಸ–ಲವಣ' ಶಬ್ದವನ್ನು ನೋಡುವುದು
ಸಲೋಯ. 'ಸಲೋಗ=ಶ್ಲೋಕ' ಶಬ್ದವನ್ನು ನೋಡುವುದು
ಸಲ್ಲ. ಪುಂನ: [ಶಲ್ಯ] ಭರ್ಜಿ, ಈಟಿ, ತೋಮರವೆಂಬ ಆಯುಧ, ಶರೀರದೊಳಕ್ಕೆ ಸೇರಿರುವ ಮುಳ್ಳು, ಬಾಣ ಇತ್ಯಾದಿ. ಪಾಪದ ಕೆಲಸ, ಪಾಪವನ್ನು ಮಾಡಿದ್ದರಿಂದ ಬೆನ್ನುಹತ್ತುವ ಕರ್ಮ, ಪು: ಭರತನ ಜೊತೆ ದೀಕ್ಷೆ ತೆಗೆದುಕೊಂಡ ಒಬ್ಬ ರಾಜನ ಹೆಸರು. ನ: ಒಂದು ಛಂದಸ್ಸು, –ಗ. ವಿ: [–ಕ] ಮುಳ್ಳು ಬಾಣ ಇತ್ಯಾದಿಗಳಿಂದ ಪೀಡಿತನಾದ. –ಗ. ನ: [–ಗ] ತಿಳಿವು, ಪರಿಜ್ಞಾನ.
ಸಲ್ಲ. ಪುಂಸ್ತ್ರೀ: [ದೇ] ಭುಜದಿಂದ ಚಲಿಸುವ ಸರ್ಪ ಜಾತಿಗೆ ಸೇರಿದ ಒಂದು ಪ್ರಾಣಿ
ಸಲ್ಲಇಯ. ವಿ: [ಶಲ್ಯಕಿತ] ಆಯುಧ ಒಳಕ್ಕೆ ಸೇರಿರುವ
ಸಲ್ಲಈ. ಸ್ತ್ರೀ: [ಸಲ್ಲಕೀ] ಆನೆಬೇಲದ ಮರ
ಸಲ್ಲಗ. '**ಸಲ್ಲ–ಗ=ಶಲ್ಯ–ಕ, ಶಲ್ಯ–ಗ**' ಶಬ್ದವನ್ನು ನೋಡುವುದು
ಸಲ್ಲಗ. 'ಸ–ಲ್ಲಗ=ಸತ್–ಲಗ' ಶಬ್ದವನ್ನು ನೋಡುವುದು
ಸಲ್ಲಹತ್ತ. ಪುಂನ: [ಶಾಲ್ಯಹತ್ಯ] ಶಲ್ಯವನ್ನು(ಆಯುಧ, ಮುಳ್ಳು) ಹೊರಗೆ ತೆಗೆಯುವುದನ್ನು ತಿಳಿಸುವ ಆಯುರ್ವೇದದ ಒಂದು ಅಂಗ ಶಾಸ್ತ್ರ.
ಸಲ್ಲಾ. ಸ್ತ್ರೀ: [ಶಲ್ಯಾ] ಒಂದು ಮಹಾ ಔಷಧಿ
ಸಲ್ಲಿಅ. ವಿ: [ಶಲ್ಯಿತ] ಆಯುಧದಿಂದ ಪೀಡಿತನಾಗಿರುವ (ಸುಪಾ)
ಸಲ್ಲಿಹ. '**ಸಂಲಿಹ=ಸಂ+ಲಿಖ್**' ಶಬ್ದವನ್ನು ನೋಡುವುದು
ಸಲ್ಲುದ್ಧರಣ. ನ: [ಶಲ್ಯೋದ್ಧರಣ] ಆಯುಧ ಅಥವಾ ಮುಳ್ಳನ್ನು ಹೊರ ತೆಗೆಯುವುದು, ಪ್ರಾಯಶ್ಚಿತ್ತದ ಸಲವಾಗಿ ಗುರುವಿನ ಬಳಿ ದೋಷ, ತಪ್ಪುಗಳನ್ನು ನಿವೇದಿಸಿಕೊಳ್ಳುವುದು(ಓಘ)
ಸಲ್ಲೇಹಣಾ. 'ಸಂಲೇಹಣಾ' ಶಬ್ದವನ್ನು ನೋಡುವುದು
ಸಲ್ಲೇಹಿಯ. ವಿ: [ಸಂಲೇಖಿತ] ಕ್ಷೀಣ
ಸವ. ಸಕ:[ಶಪ್] ಶಾಪಕೊಡು, ಶಪಿಸು, ಕೋಪಿಸಿಕೊಳ್ಳು, ಸಿಟ್ಟಿಗೇಳು, ಬಯ್ಯು, ಸವಾಲು ಹಾಕು
ಸವ. ಸಕ: [ಸೂ] ಉತ್ಪತ್ತಿ ಮಾಡು, ಜನ್ಮನೀಡು
ಸವ. 'ಸೋ=ಸು' ಶಬ್ದವನ್ನು ನೋಡುವುದು
ಸವ. ಸಕ: [ಸ್ರು] ಸೋರು, ತೊಟ್ಟಿಕ್ಕು
ಸವ. ಪು: [ಶ್ರವಸ್] ಕಿವಿ, ಖ್ಯಾತಿ
ಸವ. ನ [ಶವ] ಹೆಣ, ಶವ, ಮೃತ ದೇಹ
ಸವಂತೀ. ಸ್ತ್ರೀ: [ಸ್ರವಂತೀ] ನದಿ.
ಸವಕ್ಖ. 'ಸ–ವಕ್ಖ=ಸ–ಪಕ್ಷ' ಶಬ್ದವನ್ನು ನೋಡುವುದು
ಸವಗ್ಗೀಯ. ವಿ: [ಸವರ್ಗೀಯ] ಸವರ್ಗಕ್ಕೆ ಸಂಬಂಧಿಸಿದ
ಸವಚ. 'ಸ–ಪಚ=ಶ್ವ–ಪಚ' ಶಬ್ದವನ್ನು ನೋಡುವುದು
ಸವಜ್ಝಾ. 'ಸಪಜ್ಝಾ' ಶಬ್ದವನ್ನು ನೋಡುವುದು
ಸವಡಂಮುಹ}. ವಿ: [ದೇ] **ಅಭಿಮುಖ, ಎದುರಾಗಿ, ಸವಡಹುತ್ತ}. ಸಮ್ಮುಖ**
ಸವಣ. 'ಸಮಣ=ಶ್ರಮಣ' ಶಬ್ದವನ್ನು ನೋಡುವುದು
ಸವಣ. ಪು: [ಶ್ರವಣ] ಕಿವಿ, ಶ್ರವಣ ನಕ್ಷತ್ರ, ನ: ಕೇಳಿಸಿಕೊಳ್ಳುವುದು, 'ಸವನ' ಶಬ್ದವನ್ನು ನೋಡುವುದು
ಸವಣ. ನ: [ಶಪನ] ಶಪಿಸುವುದು, ಬೈಯುವುದು, ಸವಾಲು

ಸವಣ. **'ಸ–ವಣ=ಸ–ವ್ರಣ'** ಶಬ್ದವನ್ನು ನೋಡುವುದು
ಸವಣ. ನ: [**ಸವನ**] ಕರ್ಮಗಳಲ್ಲಿ ಪ್ರೇರಣೆ, ಯಜ್ಞ
ಸವಣತಾ}. ಸ್ತ್ರೀ: [**ಶ್ರವಣತಾ**] ಕೇಳಿಸಿಕೊಳ್ಳುವುದು,
ಸವಣಯಾ}. ತಪ್ಪು ತಿಳಿವಳಿಕೆ
ಸವಣ್ಣ. ವಿ: [**ಸವರ್ಣ**] ಸಮಾನ ವರ್ಣ(ಅ, ಆ, ಇ, ಈ ಹೀಗೆ) ಸಮಾನ, ಸದೃಶ, ಸಮಾನ ಜಾತಿಯ
ಸವಣ್ಣ. ನ: [**ಸಾವರ್ಣ್ಯ**] ಸಮಾನ ವರ್ಣತೆ
ಸವತ್ತ. ಪು: [**ಸಪತ್ನ**] ಶತ್ರು, ವಿ: ವಿರುದ್ಧ, ಸಮಾನ, ಸದೃಶ, ಹೋಲುವ
ಸವತ್ತಿಣೀ. **'ಸವತ್ತೀ'** ಶಬ್ದವನ್ನು ನೋಡುವುದು
ಸವತ್ತಿಯಾ}. ಸ್ತ್ರೀ: [**ಸಪತ್ನಿಕಾ**] ಗಂಡನ ಎರಡನೇ
ಸವತ್ತೀ}. ಸ್ತ್ರೀ: [**ಸಪತ್ನೀ**] ಹೆಂಡತಿ, ಸವತಿ
ಸವನ.(ಮಾ). ಪು: [**ಶ್ರವಣ**] ಒಬ್ಬ ಋಷಿಯ ಹೆಸರು.. **'ಸವಣ=ಶ್ರವಣ'** ಶಬ್ದವನ್ನು ನೋಡುವುದು
ಸವನ್ನ. **'ಸವಣ್ಣ'** ಶಬ್ದವನ್ನು ನೋಡುವುದು
ಸವಯ. **'ಸ–ವಯ=ಸ–ವಯಸ್'**, ಸ–ವ್ರತ ಶಬ್ದವನ್ನು ನೋಡುವುದು.
ಸವರ. **'ಸಬರ'** ಶಬ್ದವನ್ನು ನೋಡುವುದು
ಸವರಿಆ. **'ಸಪಜ್ಞಾ'** ಶಬ್ದವನ್ನು ನೋಡುವುದು (ವೇಣೀ)
ಸವಲ. **'ಸಬಲ'** ಶಬ್ದವನ್ನು ನೋಡುವುದು
ಸವಲಿಯಾ. ಸ್ತ್ರೀ: [**ದೇ**] ಭರೋಚದ ಒಂದು ಪ್ರಾಚೀನ ಜೈನ ದೇವಾಲಯ
ಸವಹ. ಪು: [**ಶಪಥ**] ಆಕ್ರೋಶದ ಮಾತು, ಬೈಗಳು(ಣಾಯಾ), ಶಪಥ ಮಾಡುವುದು, ದೋಷಾರೋಪದ ಶುದ್ಧಿಗಾಗಿ ಮಾಡುವ ಅಗ್ನಿ ಪ್ರವೇಶವೇ ಮೊದಲಾದ ದಿವ್ಯ ಪ್ರಮಾಣಗಳು
ಸವಾಯ. ಪು: [**ದೇ**] ಗಿಡುಗ ಹಕ್ಕಿ
ಸವಾಗ}. **'ಸ–ವಾಗ=ಶ್ವ–ಪಾಕ'** ಶಬ್ದವನ್ನು
ಸವಾಯ}. ನೋಡುವುದು
ಸವಾಯ. **'ಸ–ವಾಯ=ಸ–ಪಾದ, ಸ–ವಾದ, ಸದ್–ವಾಚ್'** ಶಬ್ದವನ್ನು ನೋಡುವುದು
ಸವಾರ. ನ: [**ದೇ**] ಬೆಳಿಗ್ಗೆ, ನಸುಕು, ಪ್ರಭಾತ, ಹೊತ್ತಾರೆ
ಸವಾಸ. **'ಸ–ವಾಸ=ಸ–ವಾಸ'** ಶಬ್ದವನ್ನು ನೋಡುವುದು
ಸವಿಅ. ವಿ: [**ಶಪ್ತ**] ಶಾಪಗ್ರಸ್ತ, ಶಪಿಸಲ್ಪಟ್ಟ, ಆಕ್ರೋಶಕ್ಕೆ ಗುರಿಯಾದ
ಸವಿಉ. ಪು: [**ಸವಿತೃ**] ಸೂರ್ಯ, ರವಿ(ಓಘ), ಹಸ್ತ ನಕ್ಷತ್ರದ ಅಧಿದೇವತೆ, ಹಸ್ತ ನಕ್ಷತ್ರ

ಸವಿಕ್ಖ. ವಿ: [**ಸಾಪೇಕ್ಷ**] ಅಪೇಕ್ಷಿಸುವವನು, ಇಚ್ಛಿಸುವವನು
ಸವಿಜ್ಜ. **'ಸ–ವಿಜ್ಜ=ಸ–ವಿದ್ಯ'** ಶಬ್ದವನ್ನು ನೋಡುವುದು
ಸವಿಟ್ಠಾ. ಸ್ತ್ರೀ: [**ಶ್ರವಿಷ್ಟಾ**] ಧನಿಷ್ಠಾ ನಕ್ಷತ್ರ
ಸವಿಣ. **'ಸುಮಿಣ=ಸ್ವಪ್ನ'** ಶಬ್ದವನ್ನು ನೋಡುವುದು
ಸವಿತು. **'ಸವಿಉ'** ಶಬ್ದವನ್ನು ನೋಡುವುದು
ಸವಿಸ. ನ: [**ದೇ**] ಸುರೆ, ಹೆಂಡ(ದೇ)
ಸವಿಹ. ನ: [**ಸವಿಧ**] ಹತ್ತಿರ, ನಿಕಟ, ಸಮೀಪ(ಪಾಅ)
ಸವ್ವ. ವಿ: [**ಸವ್ಯ**] ಎಡ ಭಾಗ, ಎಡಗಡೆ(ಉಪ)
ಸವ್ವ. ವಿ: [**ಶ್ರವ್ಯ**] ಕೇಳಿಸಿಕೊಳ್ಳಲು ಅರ್ಹವಾದ
ಸವ್ವ. ವ: [**ಸರ್ವ**] ಎಲ್ಲ, ಸಕಲ, ಸಮಸ್ತ, **–ಓ.** ಅ: [**–ತಸ್**]ಎಲ್ಲ ಕಡೆಯಿಂದ, ಎಲ್ಲರಿಂದ, ಸುತ್ತಲೂ, **–ಓಭದ್ದ.** ವಿ: [**–ತೋಭದ್ರ**] ಎಲ್ಲ ರೀತಿಯಲ್ಲಿ ಸುಖವಾದ, ಎಲ್ಲ ಕಡೆಗಳಲ್ಲಿಯೂ ಮಂಗಳವನ್ನುಂಟು ಮಾಡುವ, ನ: ಎಲ್ಲ ರೀತಿಯ ಸುಖ, ಶುಭಾಶುಭಗಳ ತಿಳಿವಿಗೆ ಸಾಧನಭೂತವಾದ ಒಂದು ಚಕ್ರ , ನಿಂಬೆ ಗಿಡ. ಮಹಾಶುಕ್ರ ದೇವಲೋಕದಲ್ಲಿರುವ ಒಂದು ವಿಮಾನ. ಐದನೇ ಗ್ರೈವೇಯಕ ವಿಮಾನ, ಒಂದು ನಗರದ ಹೆಸರು. ಅಚ್ಯುತೇಂದ್ರನ ಒಂದು ಪಾರಿಯಾನಿಕ ವಿಮಾನ, ದೃಷ್ಟಿವಾದದ ಒಂದು ಸೂತ್ರ, ಪು: ಯಕ್ಷರ ಒಂದು ಜಾತಿ, ದೇವ–ವಿಮಾನ–ವಿಶೇಷ. **–ಓಭದ್ದಾ.** ಸ್ತ್ರೀ: [**–ತೋಭದ್ರಾ**] ಪ್ರತಿಮಾ–ವಿಶೇಷ, ಒಂದು ವ್ರತ,(ಔಪ), **–ಕಾಮಸಮಿದ್ಧ.** ಪು: [**–ಕಾಮಸಮೃದ್ಧ**] ಪಕ್ಷದ ಆರನೇ ದಿನ, ಷಷ್ಠಿ ತಿಥಿ. **–ಕಾಮಾ.** ಸ್ತ್ರೀ: [**–ಕಾಮಾ**] ಯಾವುದರ ಸಾಧನೆಯಿಂದ ಸಕಲ ಇಚ್ಛೆಗಳೂ ಈಡೇರುತ್ತವೋ ಅಂಥ ಒಂದು ವಿದ್ಯೆ.(ಪಉಮ) **–ಗಯ.** ಪು: [**–ಗತ**] ವ್ಯಾಪಕವಾದ, **–ಗಾ.** ಸ್ತ್ರೀ: [**–ಗಾ**] ಉತ್ತರ ರುಚಕ ಪರ್ವತದ ಮೇಲೆ ಇರುವ ಒಬ್ಬ ದಿಕ್ಕುಮಾರಿ ದೇವಿ. **–ಗುತ್ತ.** ವಿ: [**–ಗುಪ್ತ**] ಒಬ್ಬ ಜೈನ ಮುನಿ. **–ಜ್ಜ.** ವಿ: [**–ಜ್ಞ**] ಸರ್ವ ಪದಾರ್ಥಗಳನ್ನು ತಿಳಿದವನು, ಸಕಲವನ್ನೂ ಬಲ್ಲವನು. ತೀರ್ಥಂಕರ, ಬುದ್ಧದೇವ, ಮಹಾದೇವ, ಪರಮೇಶ್ವರ(ಷಡ್). **–ಟ್ಠ.** ಪು: [**ಸರ್ವಾರ್ಥ**] ಅಹೋರಾತ್ರದ ೨೯ನೇ ಮುಹೂರ್ತ. ಪುಂನ: ಸಹಸ್ರಾರ ದೇವಲೋಕದ

ಒಂದು ವಿಮಾನ. ಅನುತ್ತರ ದೇವಲೋಕದ ಸರ್ವಾರ್ಥಸಿದ್ಧ ಎಂಬ ವಿಮಾನ. **ಪು:** ಸಕಲ ಅರ್ಥ. **–ಟ್ಠಸಿದ್ಧ. ಪುಂನ:** [**ಸರ್ವಾರ್ಥಸಿದ್ಧ**] ಅಹೋರಾತ್ರದ ೨೯ನೇ ಮುಹೂರ್ತ. ಒಂದು ಸರ್ವಶ್ರೇಷ್ಠ ದೇವ–ವಿಮಾನ, ಅನುತ್ತರ ದೇವಲೋಕದ ಐದನೇ ವಿಮಾನ. ಐರಾವತ ವರ್ಷದಲ್ಲಿ ಹುಟ್ಟುವ ಆರನೇ ತೀರ್ಥಂಕರ. **–ಟ್ಠಸಿದ್ಧಾ. ಸ್ತ್ರೀ:** [**ಸರ್ವಾರ್ಥಸಿದ್ಧಾ**] ಭಗವಾನ್ ಧರ್ಮನಾಥನ ದೀಕ್ಷಾ ಶಿಬಿಕೆ. **–ಟ್ಠಸಿದ್ಧಿ. ಸ್ತ್ರೀ:** [**ಸರ್ವಾರ್ಥ ಸಿದ್ಧಿ**] ಒಂದು ದೇವ ವಿಮಾನ, **–ಣ್ಣು.** **'–ಜ್ಞ'** ವನ್ನು ನೋಡುವುದು. **–ತ್ತ. '–ತ್ಥ'** ನೋಡುವುದು. **–ತ್ತೋ.** **'–ಓ'** ಅನ್ನು ನೋಡುವುದು. **–ತ್ಥ. ಅ:** [**–ತ್ರ**] ಎಲ್ಲ ಕಡೆ, ಎಲ್ಲರಲ್ಲಿ, **–ದಂಸಿ, –ದರಿಸಿ. ವಿ:** [**–ದರ್ಶಿನ್**] ಎಲ್ಲ ವಸ್ತುಗಳನ್ನೂ ನೋಡುವವನು. ತೀರ್ಥಂಕರ. **–ದೇವ. ಪು:** [**–ದೇವ**] ಒಬ್ಬ ಪ್ರಸಿದ್ಧ ಜೈನಾಚಾರ್ಯ.ರಾಜ ಕುಮಾರಪಾಲನ ಕಾಲದ ಒಬ್ಬ ಶೇಠ್. **–ದ್ದಂಸಿ. '–ದಂಸಿ'** ನೋಡುವುದು. **–ದ್ಧಾ. ಸ್ತ್ರೀ:** [**ಸರ್ವಾದ್ಧಾ**] ಸಕಲ ಕಾಲಗಳು. **–ಧತ್ತಾ. ಸ್ತ್ರೀ:** [**–ಧತ್ತಾ**] ವ್ಯಾಪಕ, ಸರ್ವಗ್ರಾಹಕ, **–ನ್ನು. '–ಜ್ಞ'** ನೋಡುವುದು. **–ಪ್ಪಗ. ವಿ:** [**ಸರ್ವಾತ್ಮಕ**] ವ್ಯಾಪಕ, **ಪು: ಲೋಭ. –ಪ್ಪಭಾ. ಸ್ತ್ರೀ:** [**–ಪ್ರಭಾ**] ಉತ್ತರ ಋಚಕ ಪರ್ವತದ ಮೇಲಿರುವ ಒಬ್ಬ ದಿಕ್ಕುಮಾರಿ ದೇವಿ. **–ಭಕ್ಖ. ವಿ:** [**–ಭಕ್ಷ**] ಸಕಲವನ್ನೂ ಭಕ್ಷಿಸುವ. **–ಭದ್ದಾ. ಸ್ತ್ರೀ:** [**–ಭದ್ರಾ**] ಒಂದು ಪ್ರತಿಜ್ಞಾ–ವಿಶೇಷ, ವ್ರತ–ವಿಶೇಷ. **–ಭಾವವಿಉ. ಪು:** [**–ಭಾವವಿದ್**] ಮುಂಬರುವ ಕಾಲದಲ್ಲಿ ಭಾರತ ವರ್ಷದಲ್ಲಿ ಜನಿಸಲಿರುವ ೧೨ನೇ ತೀರ್ಥಂಕರ. **–ಯು. ವಿ:** [**–ದ**] ಸಕಲವನ್ನೂ ನೀಡುವವನು(ಪಣ್ಣ). **–ಯಾ. ಅ:** [**–ದಾ**] ಯಾವಾಗಲೂ ಸದಾ. **–ರಯಣ. ಪು:** [**–ರತ್ನ**] ಒಂದು ಮಹಾನಿಧಿ. **ಪುಂನ:** ಒಂದು ಪರ್ವತ–ಶಿಖರ. **–ರಯಣಾ. ಸ್ತ್ರೀ:** [**–ರತ್ನಾ**] ಈಶಾನೇಂದ್ರನ ವಸುಮಿತ್ರಾ ಎಂಬ ಇಂದ್ರಾಣಿಯ ಒಂದು ರಾಜಧಾನಿ. **–ರಯಣಾಮಯ. ವಿ:** [**–ರತ್ನಮಯ**] ಸಕಲ ರತ್ನಗಳಿಂದ ಮಾಡಿದ, ಚಕ್ರವರ್ತಿಯ ಒಂದು ನಿಧಿ. **–ವಿಗ್ಗಹಿಅ. ವಿ:** [**–ವಿಗ್ರಹಿಕ**] ಎಲ್ಲಕ್ಕಿಂತ ಚಿಕ್ಕದಾದ. **–ವಿರಇ. ಸ್ತ್ರೀ:** [**–ವಿರತಿ**] ಪಾಪ ಕೆಲಸದಿಂದ ಪೂರ್ತಿ ನಿವೃತ್ತಿ. ಪೂರ್ಣ **–ಸಂಯಮ.–ಸಂಗಯ.** [**–ಸಂಗತ**] **–ಸಂಜಮ. ಪು:** [**–ಸಂಯಮ**] ಪೂರ್ಣ ಸಂಯಮ. **–ಸಹ. ವಿ:** [**–ಸಹ**] ಎಲ್ಲವನ್ನೂ ಸಹಿಸುವ. ಪೂರ್ಣ ಸಹಿಷ್ಣು. **–ಸಿದ್ಧಾ. ಸ್ತ್ರೀ:** [**–ಸಿದ್ಧಾ**] ಪಕ್ಷದ ನಾಲ್ಕನೇ ಒಂಬತ್ತನೇ ಮತ್ತು ಹದಿನಾಲ್ಕನೇ ರಾತ್ರಿಯ ತಿಥಿ. **–ಸೋ. ಅ:** [**–ಶಸ್**] ಎಲ್ಲ ರೀತಿಯಲ್ಲೂ. **–ಸ್ಸ. ನ:** [**–ಸ್ವ**] ಸಕಲ ಸಂಪತ್ತು. **–ಹಾ. ಅ:** [**–ಥಾ**] ಎಲ್ಲ ರೀತಿಯಲ್ಲೂ, ಎಲ್ಲ ವಿಧದಿಂದಲೂ. **ಸವ್ವಾಣಂದ. ಪು:** [**ಸರ್ವಾನಂದ**] ಐರಾವತ ಕ್ಷೇತ್ರದ ಒಬ್ಬ ಭಾವೀ ಜಿನ–ದೇವ. **ಸವ್ವಾಣುಭೂಇ. ಪು:** [**ಸರ್ವಾನುಭೂತಿ**] ಭಾರತವರ್ಷದಲ್ಲಿ ಜನಿಸಲಿರುವ ಐದನೇ ತೀರ್ಥಂಕರ. ಭಗವಾನ್ ಮಹಾವೀರರ ಒಬ್ಬ ಶಿಷ್ಯ. **ಸವ್ವಾರುಹ. ಸ್ತ್ರೀ:** [**ಸವಾರುಹಾ**] **ಒಂದು** ವಿದ್ಯಾ–ವಿಶೇಷ. **ಸವ್ವಾವ. ವಿ:** [**ಸರ್ವಾಪ**] ಸಂಪೂರ್ಣ. **ಸವ್ವಾಸಣ. ಪು:** [**–ಸರ್ವಾಶನ**] ಅಗ್ನಿ, ಬೆಂಕಿ

ಸವ್ವಂಕಸ. ವಿ: [**ಸರ್ವಂಕಷ**] ಸರ್ವಾತಿಶಾಯಿ, ಎಲ್ಲವನ್ನೂ ಒಳಗೊಳ್ಳುವ, ಎಲ್ಲದರಲ್ಲಿ ವಿಶಿಷ್ಟ. **ನ:** ಪಾಪ.

ಸವ್ವಂಗ. ವಿ: [**ಸರ್ವಾಂಗ**] ಸಂಪೂರ್ಣ, ಸಕಲ ಅಂಗಗಳನ್ನೂ ವ್ಯಾಪಿಸುವ,

ಸವ್ವಣ. 'ಸ–ವ್ವಣ=ಸ–ವ್ರಣ' ಶಬ್ದವನ್ನು ನೋಡುವುದು

ಸವ್ವರಾಇಅ. ವಿ: [**ಸಾರ್ವರಾತ್ರಿಕ**] ಇಡೀ ರಾತ್ರಿಗೆ ಸಂಬಂಧಿಸಿದ, ಇಡೀ ರಾತ್ರಿಯ

ಸುಪ್ಪಭಾ. **ಸ್ತ್ರೀ:** [ಸುಪ್ರಭಾ] ಮೂರನೇ ಬಲದೇವನ ತಾಯಿ, ಧರಣನೇ ಮೊದಲಾದ ದಕ್ಷಿಣ ಶ್ರೇಣಿಯ ಅನೇಕ ಇಂದ್ರರ ಲೋಕಪಾಲರ ಒಬ್ಬೊಬ್ಬ ಅಗ್ರ–ಮಹಿಷಿಯ ಹೆಸರು. ಘನವಾಹನ ಎಂಬ ವಿದ್ಯಾಧರ ರಾಜನ ಪತ್ನಿ. ಭಗವಾನ್ ಅಜಿತನಾಥನ ದೀಕ್ಷಾ–ಶಿಬಿಕೆ.

ಸುಪ್ಪಭೂಯ. ವಿ: [ಸುಪ್ರಭೂತ] ಬಹಳ ಹೆಚ್ಚಾದ, ಅತ್ಯಧಿಕ

ಸುಪ್ಪಸಣ್ಣ}.ವಿ:[ಸುಪ್ರಸನ್ನ]ಅತ್ಯಂತ ಸಂತಸದಿಂದಿರುವ,
ಸುಪ್ಪಸನ್ನ}. ಬಹಳ ಸಂತೋಷದಿಂದ ಕೂಡಿದ

ಸುಪ್ಪಸಾರ. ವಿ: [ಸುಪ್ರಸಾರ] ಚೆನ್ನಾಗಿ ಹರಡಲು ಅರ್ಹವಾದ, ಚೆನ್ನಾಗಿ ಪಸರಿಸಲು ಯೋಗ್ಯವಾದ

ಸುಪ್ಪಸಾರಿಯ. ವಿ: [ಸುಪ್ರಸಾರಿತ] ಚೆನ್ನಾಗಿ ಹರಡಲ್ಪಟ್ಟ, ಚೆನ್ನಾಗಿ ಪ್ರಸಾರ ಮಾಡಲ್ಪಟ್ಟ

ಸುಪ್ಪಸಿದ್ಧ. **'ಸುಪ್ರಸಿದ್ಧ'** ಶಬ್ದವನ್ನು ನೋಡುವುದು.

ಸುಪ್ಪಸೂಯ. ವಿ: [ಸುಪ್ರಸೂತ] ಚೆನ್ನಾಗಿ ಹುಟ್ಟಿದ, ಚೆನ್ನಾಗಿ ಜನಿಸಿದ, ಸರಿಯಾಗಿ ಉತ್ಪನ್ನವಾದ

ಸುಪ್ಪಹೂವ(ಅಪ). **'ಸುಪ್ಪಭೂಯ'** ಶಬ್ದವನ್ನು ನೋಡುವುದು.

ಸುಪ್ಪಾಡೋಸ. ಪು: [ದೇ] ಒಳ್ಳೆಯ ನೆರೆಯವನು

ಸುಪ್ಪಿಯ. ವಿ: [ಸುಪ್ರಿಯ] ಅತ್ಯಂತ ಪ್ರಿಯವಾದ(ಉತ್ತ)

ಸುಪ್ಪುರಿಸ. **'ಸುಪುರಿಸ'** ಶಬ್ದವನ್ನು ನೋಡುವುದು.

ಸುಫಣಿ. ಸ್ತ್ರೀನ: [ಸುಫಣಿ] ಮಜ್ಜಿಗೆಂಯೇ ಮೊದಲಾದುವನ್ನು ಕಾಯಿಸುವ ಪಾತ್ರೆ

ಸುಬಂಧು. ಪು: [ಸುಬಂಧು] ಎರಡನೇ ಬಲದೇವನ ಪೂರ್ವ ಜನ್ಮದ ಹೆಸರು. ಭಾರತ ವರ್ಷದ ಭಾವೀ ಏಳನೇ ಕುಲಕರ ಪುರುಷ.

ಸುಬಂಭ. ಪುಂನ: [ಸುಬ್ರಹ್ಮನ್] ಒಂದು ದೇವ–ವಿಮಾನ

ಸುಬಂಭಣ. ಪು: [ಸುಬ್ರಾಹ್ಮಣ] ಒಳ್ಳೆಯ ಆಚಾರ ವಂತ ಬ್ರಾಹ್ಮಣ

ಸುಬದ್ಧ. ವಿ: [ಸುಬದ್ಧ] ಚೆನ್ನಾಗಿ ಕಟ್ಟಲ್ಪಟ್ಟ

ಸುಬಲ. ಪು: [ಸುಬಲ] ಸೋಮವಂಶದ ಒಬ್ಬ ದೊರೆ, ಮೊದಲನೇ ಬಲದೇವನ ಹಿಂದಿನ ಜನ್ಮದ ಹೆಸರು.

ಸುಬಲಿಟ್ಠ. ವಿ: [ಸುಬಲಿಷ್ಠ] ಬಹಳ ಬಲಶಾಲಿಯಾದ

ಸುಬಹು. ವಿ: [ಸುಬಹು] ಅತ್ಯಧಿಕವಾದ, ಬಹಳವಾಗಿ

ಸುಬಾಹು. ವಿ: [ಸುಬಾಹು] ಒಬ್ಬ ರಾಜಕುಮಾರ, ರುಕ್ಮಿ ರಾಜನ ಒಬ್ಬ ಮಗಳು, ತಾಟಕಿಯ ಮಗ

ಸುಬುದ್ಧಿ. ಸ್ತ್ರೀ: [ಸುಬುದ್ಧಿ] ಒಳ್ಳೆ ಪ್ರಜ್ಞಾವಂತ, ಬುದ್ಧಿ ವಂತ, **ಪು:** ರಾಮನ ಸೋದರ ಭರತನೊಂದಿಗೆ ದೀಕ್ಷೆ ತೆಗೆದುಕೊಂಡ ಒಬ್ಬರಾಜ

ಸುಬ್ಭ. ವಿ: [ಶುಭ್ರ] ಬಿಳಿಯ, ಬೆಳ್ಳನೆಯ, ನಿರ್ಮಲವಾದ, ಪ್ರಕಾಶಮಾನವಾದ. **ನ:** ಒಂದು ಬಗೆಯ ಬೆಳ್ಳಿ

ಸುಬ್ಭ. ನ: [ಶೌಭ್ರ್ಯ] ಬಿಳುಪು, ಬೆಳ್ಳಗಿರುವಿಕೆ

ಸುಬ್ಭಿ. ಪು: [ಸುರಭಿ] ಸುಗಂಧ, ಸುವಾಸನೆ, **ವಿ:** ಸುವಾಸನೆಯಿಂದ ಕೂಡಿದ, ಮನೋಹರವಾದ, ಸುಂದರವಾದ

ಸುಬ್ಭಿಕ್ಖ. ನ: [ಸುಭಿಕ್ಷ] ಒಳ್ಳೆಯ ಕಾಲ, ಆಹಾರ ಧಾನ್ಯಗಳ ಸಮೃದ್ಧಿ,

ಸುಬ್ಭು. ಸ್ತ್ರೀ: [ಸುಭ್ರೂ] ಸುಂದರವಾದ ಹುಬ್ಬು, ಸುಂದರವಾದ ಹುಬ್ಬುಗಳನ್ನು ಹೊಂದಿರುವ ಹೆಣ್ಣು, ಸ್ತ್ರೀ

ಸುಭ. ಪು: [ಶುಭ] ಭಗವಾನ್ ಪಾರ್ಶ್ವನಾಥನ ಪ್ರಥಮ ಗಣಧರ. ಭಗವಾನ್ ನೇಮಿನಾಥನ ಮೊದಲ ಗಣಧರ, ಒಂದು ಮುಹೂರ್ತ, **ನ:** ನಾಮ–ಕರ್ಮದ ಒಂದು ಪ್ರಭೇದ, ಮಂಗಳ, ಶುಭಕರವಾದ, **–ಘೋಸ. ಪು:** [**–ಘೋಷ**] ಭಗವಾನ್ ಪಾರ್ಶ್ವನಾಥನ ಎರಡನೇ ಗಣಧರ. **ಶುಭಾಣುಧಮ್ಮ. ಪು:** [**ಶುಭಾನುಧರ್ಮನ್**] ರಾಕ್ಷಸ ವಂಶದ ಒಬ್ಬ ರಾಜ. **'ಸುಹ=ಶುಭ'** ಶಬ್ದವನ್ನು ನೋಡುವುದು.

ಸುಭಂಕರ. ನ: [ಶುಭಂಕರ] ವರುಣ ಎಂಬ ಲೋಕಾಂತಿಕ ದೇವರುಗಳ ವಿಮಾನ. **'ಸುಹಂಕರ'** ಶಬ್ದವನ್ನು ನೋಡುವುದು.

ಸುಭಗ. ವಿ: [ಸುಭಗ] ಆನಂದವನ್ನುಂಟುಮಾಡುವ, ಸೌಭಾಗ್ಯದಿಂದ ಕೂಡಿದ, ಜನಪ್ರಿಯ, ನೋಡಲು ಸುಂದರವಾದ, ವಿರಕ್ತ, **ನ:** ಪದ್ಮ–ವಿಶೇಷ, ಕರ್ಮವಿಶೇಷ.

ಸುಭಗಾ. ಸ್ತ್ರೀ: [ಸುಭಗಾ] ಪ್ರಿಯಂಗು ಲತೆ, ಪತಿಯ ಪ್ರೀತಿಗೆ ಪಾತ್ರಳಾದವಳು, ಅದೃಷ್ಟ ಶಾಲಿಯಾದವಳು, ಕಾಡುಮಲ್ಲಿಗೆ, ಸುರೂಪ ಎಂಬ ಹೆಸರಿನ ಭೂತೇಂದ್ರನ ಒಬ್ಬ ಪಟ್ಟದ ರಾಣಿ

ಸುಭಗ್ಗ. ವಿ: [ಸುಭಾಗ್ಯ] ಅದೃಷ್ಟಶಾಲಿ, ಭಾಗ್ಯಶಾಲಿ (ಉವ)

ಸುಭಡ. **'ಸುಹಡ'** ಶಬ್ದವನ್ನು ನೋಡುವುದು.

ಸುಭಣಿಯ. ವಿ: [ಸುಭಣಿತ] ಮಾತಿನಲ್ಲಿ ಕುಶಲನಾದವನು

ಸುಭದ್ದ. ಪು: [ಸುಭದ್ರ] ಇಕ್ಷ್ವಾಕು ವಂಶದ ಒಬ್ಬ ರಾಜ, ಎರಡನೇ ವಾಸುದೇವ ಮತ್ತು ಬಲದೇವನ ಧರ್ಮ ಗುರು. **ಪುಂನ:** ಒಂದು ದೇವ–ವಿಮಾನ. ಒಂದು ನಗರ.

ಸುಭದ್ದಾ. ಸ್ತ್ರೀ: [ಸುಭದ್ರಾ] ಎರಡನೇ ಬಲದೇವನ ತಾಯಿ, ಪ್ರಥಮ ಸ್ತ್ರೀ ರತ್ನಳಾದ ಭರತ ಚಕ್ರವರ್ತಿಯ ಅಗ್ರ ಮಹಿಷಿ, ಬಲಿ ಎಂಬ ಹೆಸರಿನ ಇಂದ್ರನ ಸೋಮನೇ ಮೊದಲಾದ ನಾಲ್ಕೂ ಲೋಕಪಾಲರ ಒಬ್ಬೊಬ್ಬ ಅಗ್ರ–ಮಹಿಷಿಯರ ಹೆಸರು. ಒಂದು ವ್ರತ, ರಾಮನ ಸೋದರ ಭರತನ ಪತ್ನಿ, ರಾಜಾ ಕೌಶಿಕನ ಹೆಂಡತಿ, ಶ್ರೇಣಿಕ ಮಹಾರಾಜನ ಒಬ್ಬ ಪತ್ನಿ. ಅರ್ಜುನನ ಹೆಂಡತಿ ಮತ್ತ ಶ್ರೀಕೃಷ್ಣನ ತಂಗಿ. ಜಂಬೂ ವೃಕ್ಷ

ಸುಭಯ. **'ಸುಭಗ'** ಶಬ್ದವನ್ನು ನೋಡುವುದು.

ಸುಭರಿಯ. ವಿ: [**ಸುಭೃತ**] ಚೆನ್ನಾಗಿ ತುಂಬಿರುವ, ಪೂರ್ತಿ ತುಂಬಿರುವ, ಪರಿಪೂರ್ಣ

ಸುಭಾ. ಸ್ತ್ರೀ: [**ಶುಭಾ**] ವೈರೋಚನ ಬಲೀಂದ್ರನ ಒಬ್ಬ ಅಗ್ರ–ಮಹಿಷಿ, ಒಂದು ವಿಜಯ ಕ್ಷೇತ್ರ, ರಾವಣನ ಒಬ್ಬ ಹೆಂಡತಿ

ಸುಭಾಸಿಯ. '**ಸುಹಾಸಿಯ**' ಶಬ್ದವನ್ನು ನೋಡುವುದು.

ಸುಭಾಸಿರ. ವಿ: [**ಸುಭಾಷಿತೃ**] ಚೆನ್ನಾಗಿ ಮಾತನಾಡುವವ, ಒಳ್ಳೆಯ ಮಾತುಗಳನ್ನಾಡುವವನು. ಸ್ತ್ರೀ: –ರೀ

ಸುಭಿಕ್ಖ. ಒಳ್ಳೆಯು ಕಾಲ, '**ಸುಬ್ಭಿಕ್ಖ**' ಶಬ್ದವನ್ನು ನೋಡುವುದು.

ಸುಭಿಚ್ಚ. ಪು: [**ಸುಭೃತ್ಯ**] ಒಳ್ಳೆಯ ಸೇವಕ, ಒಳ್ಳೆಯ ಆಳು

ಸುಭೀಮ. ವಿ: [**ಸುಭೀಮ**] ಅತಿ ಭಯಂಕರವಾದ

ಸುಭೀಸಣ. ಪು: [**ಸುಭೀಷಣ**] ರಾವಣನ ಒಬ್ಬ ಯೋಧ

ಸುಭೂಮ. ಪು: [**ಸುಭೂಮ**] ಭಾರತ ವರ್ಷದಲ್ಲಿ ಹುಟ್ಟಿದ ಎಂಟನೇ ಚಕ್ರವರ್ತಿ, ಭಾರತ ವರ್ಷದ ಭಾವೀ ಎರಡನೇ ಕುಲಕರ ಪುರುಷ(ಮುಖಂಡ). ಭಗವಾನ್ ಅರನಾಥನ ಪ್ರಥಮ ಶ್ರಾವಕ.

ಸುಭೂಸಣ. ಪು: [**ಸುಭೂಷಣ**] ವಿಭೀಷಣನ ಒಬ್ಬ ಮಗ.

ಸುಭೋಗಾ. ಸ್ತ್ರೀ: [**ಸುಭೋಗಾ**] ಅಧೋ ಲೋಕದಲ್ಲಿ ಇರುವ ಒಬ್ಬ ದಿಕ್ಕುಮಾರಿ ದೇವಿ

ಸುಭೋಯಣ. ನ: [**ಸುಭೋಜನ**] ಒಪ್ಪೊತ್ತಿನ ಊಟದ ಒಂದು ವ್ರತ–ವಿಶೇಷ

ಸುಮ. ನ: [**ಸುಮ**] ಹೂವು. –**ಸರ.** ಪು: [**–ಶರ**] ಮನ್ಮಥ, ಕಾಮ,

ಸುಮಇ. ಪು: [**ಸುಮತಿ**] ಐದನೇ ತೀರ್ಥಂಕರ, ಐರಾವತ ಕ್ಷೇತ್ರದಲ್ಲಿ ಸಂಭವಿಸಲಿರುವ ಹತ್ತನೇ ಕುಲಕರ ಪುರುಷ, ಒಬ್ಬ ಜೈನ ಉಪಾಸಕ. ವಿ: ಒಳ್ಳೆಯ ಬುದ್ಧಿ ಉಳ್ಳವನು, **ಪು:** ಒಬ್ಬ ನೈಮಿತ್ತಿಕ ವಿದ್ವಾಂಸ

ಸುಮಂಗಲ. ಪು: [**ಸುಮಂಗಲ**] ಐರಾವತ ವರ್ಷದಲ್ಲಿ ಜನಿಸಲಿರುವ ಪ್ರಥಮ ತೀರ್ಥಂಕರ

ಸುಮಂಗಲಾ. ಸ್ತ್ರೀ: [**ಸುಮಂಗಲಾ**] ಭಗವಾನ್ ಋಷಭ ದೇವನ ಒಬ್ಬ ಪತ್ನಿ, ಸೂರ್ಯ ವಂಶದ ರಾಜ ವಿಜಯ ಸಾಗರನ ಹೆಂಡತಿ, ಕಾಕೋಳೀ ಸೊಪ್ಪು

ಸುಮಗ್ಗ. ಪು: [**ಸುಮಾರ್ಗ**] ಒಳ್ಳೆಯ ಹಾದಿ, ಒಳ್ಳೆಯ ದಾರಿ

ಸುಮಣ}. ನ: [**ಸುಮನಸ್**] ಹೂವು, **ಪು:** ದೇವ,

ಸುಮಣಸ್}. ಸುರ, ವಿ: ಸುಂದರವಾದ ಮನಸ್ಸುಳ್ಳ, ಒಳ್ಳೆಯ ಮನಸ್ಸಿನ, ಸುಖಿಯಾದ ಮನುಷ್ಯ, ಹರ್ಷದಿಂದಿರುವವನು, **ಪುಂನ:** ಒಂದು ದೇವ–ವಿಮಾನ. **–ಭದ್ದ.** ಪು: [**–ಭದ್ರ**] ಭಗವಾನ್ ಮಹಾವೀರನ ಬಳಿ ದೀಕ್ಷೆ ತೆಗೆದುಕೊಂಡು ಮುಕ್ತನಾದ ಒಬ್ಬ ಗೃಹಸ್ಥ. ಆರ್ಯ ಸಂಭೂತಿ ವಿಜಯನ ಒಬ್ಬ ಶಿಷ್ಯ, ಒಬ್ಬ ಜೈನ ಮುನಿ

ಸುಮಣಸಾ. ಸ್ತ್ರೀ: [**ಸುಮನಸ್**] ಹೂವು, ಜಾಜಿ ಬಳ್ಳಿ, ಮಾಲತೀ ಬಳ್ಳಿ

ಸುಮಣಾ. ಸ್ತ್ರೀ: [**ಸುಮನಸ್**] ಭಗವಾನ್ ಚಂದ್ರಪ್ರಭನ ಮೊದಲ ಶಿಷ್ಯೆ, ಭೂತಾನಂದನೇ ಮೊದಲಾದ ಇಂದ್ರನ ಒಬ್ಬೊಬ್ಬ ಲೋಕಪಾಲನ ಒಬ್ಬೊಬ್ಬ ಅಗ್ರ ಮಹಿಷಿಯ ಹೆಸರು. ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ, ಒಂದು ಜಂಬೂ ವೃಕ್ಷ ಹೆಸರು, ಮಾಲತೀ ಹೂವು. ಶಕ್ರನ ಪದ್ಮಾ ಎಂಬ ಹೆಸರಿನ ಇಂದ್ರಾಣಿಯ ಒಂದು ರಾಜಧಾನಿ

ಸುಮಣೋ–. '**ಸುಮಣ**' ಶಬ್ದವನ್ನು ನೋಡುವುದು.

ಸುಮಣೋಹರ. ವಿ: [**ಸುಮನೋಹರ**] ಅತ್ಯಂತ ಮನೋಹರವಾದ

ಸುಮರ. ಸಕ: [**ಸ್ಮೃ**] ನೆನಪಿಸಿಕೊಳ್ಳು, ಜ್ಞಾಪಿಸಿಕೊಳ್ಳು '**ಸುಮರಇ.**' ವ. ಕೃ: '**ಸಮರಂತ**'

ಸುಮರ. ಪು: [**ಸ್ಮರ**] ಕಾಮದೇವ, ಮನ್ಮಥ

ಸುಮರಣ. ಸ್ತ್ರೀನ: [**ಸ್ಮರಣ**]ನೆನಪು,ಸ್ಮೃತಿ.ಸ್ತ್ರೀ: **–ಣಾ**

ಸುಮರಾವ. ಸಕ:[**ಸ್ಮಾರಯ್**]ನೆನಪಿಸು, ನೆನಪುಮಾಡು

ಸುಮರಾವಿಯ. ವಿ: [**ಸ್ಮಾರಿತ**] ನೆನಪು ಮಾಡಿಸಲಾದ, ಜ್ಞಾಪಿಸಲ್ಪಟ್ಟ(ಸುರ)

ಸುಮರಿಅ. '**ಸುಮರ=ಸ್ಮೃ**' ಶಬ್ದವನ್ನು ನೋಡುವುದು.

ಸುಮರಿಅ. ವಿ: [**ಸ್ಮೃತ**] ಸ್ಮರಿಸಲ್ಪಟ್ಟ, ನೆನಪು ಮಾಡಿಕೊಳ್ಳಲಾದ, ಧ್ಯಾನಿಸಲ್ಪಟ್ಟ

ಸುಮರುಯಾ. ಸ್ತ್ರೀ: [**ಸುಮರುತ್**] ಭಗವಾನ್ ಮಹಾವೀರನ ಬಳಿ ದೀಕ್ಷೆ ಸ್ವೀಕರಿಸಿ ಮುಕ್ತಿ ಪಡೆದುಕೊಂಡ ಶ್ರೇಣಿಕ ಮಹಾರಾಜನ ಒಬ್ಬ ಹೆಂಡತಿ.

ಸುಮಹುರ. ವಿ: [ಸುಮಧುರ] ಅತ್ಯಂತ ಮಧುರವಾದ (ವಿಪಾ)

ಸುಮಾಣಸ. ವಿ: [ಸುಮಾನಸ] ಒಳ್ಳೆಯ ಮನಸ್ಸುಳ್ಳವನು, ಸಜ್ಜನ.

ಸುಮಾಣುಸ. ಪು: [ಸುಮಾನುಷ] ಒಳ್ಳೆಯ ಮನುಷ್ಯ, ಸಜ್ಜನ

ಸುಮಾಲಿ. ಪು: [ಸುಮಾಲಿನ್] ಒಬ್ಬ ರಾಜ ಕುಮಾರ

ಸುಮಿಣ. ಪುಂನ: [ಸ್ವಪ್ನ] ಕನಸು, ಕನಸಿನ ಫಲವನ್ನು ತಿಳಿಸುವ ಶಾಸ್ತ್ರ(ಸ್ವಪ್ನ), **–ಪಾಢಯ.** ವಿ: [–ಪಾಠಕ] ಕನಸಿನ ಫಲವನ್ನು ತಿಳಿಸುವ ಶಾಸ್ತ್ರಗಳನ್ನು ಬಲ್ಲವನು. **'ಸುವಿಣ'** ಶಬ್ದವನ್ನು ನೋಡುವುದು.

ಸುಮಿತ್ತ. ಪು: [ಸುಮಿತ್ರ] ಭಗವಾನ್ ಮುನಿ ಸುವ್ರತ ತೀರ್ಥಂಕರನ ತಂದೆ; ಒಬ್ಬ ರಾಜ. ನಾಲ್ಕನೇ ಬಲದೇವನ ಪೂರ್ವ ಜನ್ಮದ ಹೆಸರು, ಆರನೇ ಬಲದೇವನ ಧರ್ಮಗುರು; ಒಬ್ಬ ಜೈನ ಮುನಿ. ಒಳ್ಳೆಯ ಗೆಳೆಯ, ಸನ್ಮಿತ್ರ, ಭಗವಾನ್ ಶಾಂತಿನಾಥನಿಗೆ ಮೊದಲ ಭಿಕ್ಷೆಯನ್ನು ನೀಡಿದ ಒಬ್ಬ ಗೃಹಸ್ಥನ ಹೆಸರು.

ಸುಮಿತ್ತಾ. ಸ್ತ್ರೀ: [ಸುಮಿತ್ರಾ] ಲಕ್ಷ್ಮಣನ ತಾಯಿ ಮತ್ತು ದಶರಥನ ಹೆಂಡತಿ. **–ತಣಯ.** ಪು: [–ತನಯ] ಲಕ್ಷ್ಮಣ

ಸುಮಿತ್ತಿ. ಪು:[ಸೌಮಿತ್ರಿ] ಸುಮಿತ್ರೆಯ ಮಗನಾದ ಲಕ್ಷ್ಮಣ

ಸುಮುಇಂಯ. ವಿ: [ಸುಮುದಿತ] ಅತ್ಯಂತ ಸಂತಸಗೊಂಡ, ಹೆಚ್ಚು ಹರ್ಷಹೊಂದಿದ(ಔಪ)

ಸುಮುಖೀ. **'ಸುಮುಹೀ'** ಶಬ್ದವನ್ನು ನೋಡುವುದು.

ಸುಮುಣಿಅ. ವಿ: [ಸುಜ್ಞಾತ] ಚೆನ್ನಾಗಿ ಗೊತ್ತಿರುವ, ಚೆನ್ನಾಗಿ ತಿಳಿಯಲ್ಪಟ್ಟ

ಸುಮುಹ. ಪು: [ಸುಮುಖ] ಭಗವಾನ್ ನೇಮಿನಾಥನ ಬಳಿ ದೀಕ್ಷೆ ತೆಗೆದುಕೊಂಡ ನಂತರದಲ್ಲಿ ಮುಕ್ತಿ ಹೊಂದಿದ ಒಬ್ಬ ರಾಜಕುಮಾರ. ರಾಕ್ಷಸ ವಂಶದ ಒಬ್ಬ ರಾಜ, ನ: ಒಂದು ಛಂದಸ್ಸು

ಸುಮೇಘಾ. ಸ್ತ್ರೀ: [ಸುಮೇಘಾ] ಊರ್ಧ್ವಲೋಕದಲ್ಲಿ ಇರುವ ಒಬ್ಬ ದಿಕ್ಕುಮಾರಿ

ಸುಮೇರು. ಪು: [ಸುಮೇರು] ಮೇರು ಪರ್ವತ

ಸುಮೇಹಾ. ಸ್ತ್ರೀ: [ಸುಮೇಧಾ] ಒಳ್ಳೆಯ ಬುದ್ಧಿ

ಸುಮ್ಮಂತ. 'ಸುಣ=ಶ್ರು

ಸುಮ್ಹ. ಪು.ಬ: [ಸುಹ್ಮ] ಒಂದ ದೇಶ–ವಿಶೇಷ

ಸುರ. ಪು: [ಸುರ] ದೇವ, ದೇವತೆ, ಒಬ್ಬ ರಾಜನ ಹೆಸರು. **–ಅಣ.** ನ: [–ವನ] ನಂದನ ವನ. **–ತರು.** ಪು: [–ತರು] ಕಲ್ಪ ವೃಕ್ಷ **–ಕರಡಿ.** ಪು: [–ಕರಟಿನ್] ಐರಾವತ. **–ಕರಿ.**ಪು: [–ಕರಿನ್] ಅದೇ ಅರ್ಥ. **–ಕುಂಭಿ.** ಪು: [–ಕುಂಭಿನ್] **ಅದೇ ಅರ್ಥ.** **–ಕುಮರ.** ಪು: [–ಕುಮಾರ] ಭಗವಾನ್ ವಾಸುಪೂಜ್ಯರ ಶಾಸನಯಕ್ಷ. **–ಕುಸುಮ.** ನ: [–ಕುಸುಮ] ಲವಂಗ. **–ಗಯ.** ಪು: [–ಗಜ] ಐರಾವತ ಆನೆ. **–ಗಿರಿ.** ಪು: [–ಗಿರಿ] ಮೇರು ಪರ್ವತ. **–ಗಿಹ.** **'–ಘರ'** ಶಬ್ದವನ್ನು ನೋಡುವುದು. **–ಗುರು.** ಪು: [–ಗುರು] ಬೃಹಸ್ಪತಿ. ನಾಸ್ತಿಕ ಮತದ ಪ್ರವರ್ತಕಾದ ಒಬ್ಬ ಆಚಾರ್ಯ. **–ಗೋವ.** ಪು: [–ಗೋಪ] ಇಂದ್ರಗೋಪ. **–ಘರ.** ನ: [–ಗೃಹ] ದೇವ ಮಂದಿರ. **–ಚಮೂ.** ಸ್ತ್ರೀ: [–ಚಮೂ] ದೇವಸೇನೆ. **–ಚಾವ.** ಪು: [–ಚಾಪ] ಇಂದ್ರಚಾಪ, ಕಾಮನ ಬಿಲ್ಲು. **–ಜಾಲ.** ನ: [–ಜಾಲ] ಇಂದ್ರಜಾಲ, **–ಣಈ.** ಸ್ತ್ರೀ: [–ನದೀ] ಗಂಗಾ ನದಿ. **–ಣಾಹ.**ಪು: [–ನಾಥ] ಇಂದ್ರ **–ತರಂಗಿಣೀ.** ಸ್ತ್ರೀ: [–ತರಂಗಿಣೀ] ಗಂಗಾ ನದಿ. **–ತರು.** ಪು: [–ತರು] ಕಲ್ಪ ವೃಕ್ಷ. **–ತಾಣ.** ಪು: [–ತ್ರಾಣ] ಯವನ ದೊರೆ. **–ದಾರು.** ನ: [–ದಾರು] ದೇವದಾರು ವೃಕ್ಷದ ಕಡ್ಡಿ. **–ಧಂಸೀ.** ಸ್ತ್ರೀ: [–ಧ್ವಂಸಿನೀ] ಒಂದು ವಿದ್ಯೆ.**–ಧಣು, –ಧಣುಹ.** ನ: [–ಧನುಷ] ಇಂದ್ರ ಧನುಸ್ಸು, ಕಾಮನ ಬಿಲ್ಲು. **–ನಈ.** ಸ್ತ್ರೀ: [–ನದೀ] ಗಂಗಾ ನದಿ. **–ಪಹು.** ಪು: [–ಪ್ರಭು] ದೇವರಾಜ ಇಂದ್ರ. **–ಪುರ.** ನ: [–ಪುರ] ಅಮರಾವತಿ. **–ಪ್ಪಿಅ.** ಪು: [–ಪ್ರಿಯ] ಒಬ್ಬ ಯಕ್ಷ, ಇಂದ್ರ, ಬೃಹಸ್ಪತಿ. **–ವಂದೀ.** ಸ್ತ್ರೀ: [–ವಂದೀ] ದೇವಿ. **–ಭವಣ.** ನ: [–ಭವನ] ದೇವ–ಪ್ರಾಸಾದ. **–ಮಂತ್ರಿ** ಪು: [–ಮಂತ್ರಿನ್] ಬೃಹಸ್ಪತಿ. **–ಮಂದಿರ.** ನ: [–ಮಂದಿರ] ದೇವಾಲಯ. **–ಮುಣಿ.** ಪು: [–ಮುನಿ] ನಾರದ ಮುನಿ. **–ರಮಣ.** ನ: [–ರಮಣ] ರಾವಣನ ಒಂದು ಉದ್ಯಾನ. **–ರಾಯ.** ಪು: [–ರಾಜ] ಇಂದ್ರ. **–ರಿಉ.** ಪು: [–ರಿಪು] ದೈತ್ಯ. ರಾಕ್ಷಸ. **–ಲೋಅ.** ಪು: [–ಲೋಕ] ಸ್ವರ್ಗ. **–ಲೋಇಯ.** ವಿ: [–ಲೌಕಿಕ] ಸ್ವರ್ಗೀಯ. **–ಲೋಗ.** ಪು: [–ಲೋಕ] ಸ್ವರ್ಗ. **–ವಇ.** ಪು:

[–ಪತಿ] ದೇವರಾಜ ಇಂದ್ರ. –ವಣ್ಣ. ಪುಂನ: [–ವರ್ಣ] ಒಂದು ದೇವ–ವಿಮಾನ.–ವಧೂ. –ಸ್ತ್ರೀ: [–ವಧೂ] ದೇವಿ, ದೇವತೆ. –ವನ್ನೀ. ಸ್ತ್ರೀ: [–ಪರ್ಣೀ] ಪುನ್ನಾಗ ವೃಕ್ಷ; ಸುರಗಿ ಮರ. –ವರ. ಪು: [–ವರ] ದೇವತೆಗಳಲ್ಲಿ ಶ್ರೇಷ್ಠ. –ವರಿಂದ. ಪು: [–ವರೇಂದ್ರ] ದೇವರಾಜ ಇಂದ್ರ. –ವಹೂ. ಸ್ತ್ರೀ: [–ವಧೂ] ದೇವಾಂಗನೆ, ದೇವಿ. –ವಾರಣ. ಪು: [–ವಾರಣ] ಐರಾವತ –ಸಂಗೀಯ. ನ: [–ಸಂಗೀತ] ಒಂದು ನಗರ. –ಸರಿ. ಪು: [–ಸರಿತ್] ದೇವ ಗಂಗೆ. –ಸಿಹರಿ. ಪು: [–ಶಿಖರಿನ್] ಮೇರು ಪರ್ವತ. –ಸುಂದರ. ಪು: [–ಸುಂದರ] ರಥ ಚಕ್ರವಾಳ ನಗರದ ಒಬ್ಬ ವಿದ್ಯಾಧರ ರಾಜ. –ಸುಂದರೀ. ಸ್ತ್ರೀ: [–ಸುಂದರೀ] ದೇವಾಂಗನೆ, ದೇವವಧು. –ಸುರಹಿ. ಸ್ತ್ರೀ: [–ಸುರಭಿ] ಕಾಮಧೇನು. –ಸೇಲ. ಪು: [–ಶೈಲ] ಮೇರು ಪರ್ವತ. –ಹತ್ಥಿ. ಪು: [–ಹಸ್ತಿನ್] ಐರಾವತ ಆನೆ. ಸರಾಉಹ. ನ: [ಸುರಾಯುಧ] ವಜ್ರಾಯುಧ. ಸುರಾರಿ. ಪು: [ಸುರಾರಿ] ರಾಕ್ಷಸ ವಂಶದ ಒಬ್ಬ ರಾಜ, ಒಬ್ಬ ಲಂಕಾಧಿಪತಿ. ಸುರಾಲಯ. ಪುಂನ: [ಸುರಾಲಯು] ಸ್ವರ್ಗ. ಸುರಾಹಿರಾಯು. [ಸುರಾಧಿರಾಜ] ಇಂದ್ರ. ಸುರಾಹಿವಇ. ಪು: [ಸುರಾಧಿಪತಿ] ಅದೇ ಅರ್ಥ.

ಸುರಇ. ಸ್ತ್ರೀ: [ಸುರತಿ] ಸುಖ.

ಸುರಇಯ. ವಿ: [ಸುರಚಿತ] ಚೆನ್ನಾಗಿ ರಚಿಸಲ್ಪಟ್ಟ. ಚೆನ್ನಾಗಿ ನಿರ್ಮಿಸಲ್ಪಟ್ಟ

ಸುರಂಗಣಾ. ಸ್ತ್ರೀ: [ಸುರಾಂಗನಾ] ದೇವ–ವಧೂ.

ಸುರಂಗಾ. ಸ್ತ್ರೀ: [ಸುರಂಗಾ] ಭೂಮಿಯ ಒಳಗಡೆಯ ಮಾರ್ಗ(ಉಪ)

ಸುರಂಗಿ. ಪುಂಸ್ತ್ರೀ: [ದೇ] ನುಗ್ಗೆ ಮರ

ಸುರಜೆಟ್ಠ. ಪು: [ದೇ] ವರುಣ ದೇವತೆ.

ಸುರಟ್ಠ. ಪುಬ: [ಸುರಾಷ್ಟ್ರ] ಇಂದು ಕಾಥಿಯಾವಾಡ ಎಂದು ಹೆಸರಾಗಿರುವ ಪ್ರಾಂತ, ಸೌರಾಷ್ಟ್ರ

ಸುರಣುಚರ. ವಿ: [ಸ್ವನುಚರ] ಸುಖವಾಗಿ ಮಾಡಲು ಯೋಗ್ಯವಾದ

ಸುರತ}. 'ಸುರಯ' ಶಬ್ದವನ್ನು ನೋಡುವುದು.

ಸುರದ}.

ಸುರಭಿ. ಪುಂಸ್ತ್ರೀ: [ಸುರಭಿ] ವಸಂತ ಋತು, ಸ್ತ್ರೀ: ಹಸು. ಕಾಮಧೇನು. ವಿ: ಸುವಾಸನೆಯಿಂದ ಕೂಡಿದ, ಸುವಾಸನೆ, ಶ್ರೀಗಂಧದ ಮರ, ಸಂಪಿಗೆ ಮರ. –ಗಂಧ. ವಿ: [–ಗಂಧ] ಸುವಾಸನೆ. –ಪುರ. ನ: [–ಪುರ] ಒಂದು ನಗರ. 'ಸುರಹಿ' ಶಬ್ದವನ್ನು ನೋಡುವುದು.

ಸುರಮಣೀಅ.} ವಿ: [ಸುರಮಣೀಯ] ಅತ್ಯಂತ

ಸುರಮ್ಮ}. ವಿ: [ಸುರಮ್ಯ] ಸುಂದರಾಗಿರುವ

ಸುರಯ. ನ: [ಸುರತ] ಮೈಥುನ, ಸ್ತ್ರೀ ಸಂಭೋಗ

ಸುರಯಣ. ನ: [ಸುರತ್ನ] ಒಳ್ಳೆಯ ರತ್ನ

ಸುರಯಣಾ. ಸ್ತ್ರೀ: [ಸುರಚನಾ] ಒಳ್ಳೆಯ ರಚನೆ, ಸುಂದರವಾದ ನಿರ್ಮಿತಿ

ಸುರಸ. ವಿ: [ಸುರಸ] ಸುಂದರವಾದ ರಸವುಳ್ಳ, ನ: ಕಮ್ಮೆ ಗಗ್ಗರ. –ಲಯಾ. ಸ್ತ್ರೀ: [–ಲತಾ] ತುಳಸೀಲತೆ. ಈಶ್ವರೀ ಹಂಬು.

ಸುರಸುರ. ಪು: [ಸುರಸುರ] 'ಸುರಸುರ' ಎಂಬ ಶಬ್ದ

ಸುರಸುರ. ಅಕ: [ಸುರಸುರಾಯ್] 'ಸುರಸುರ' ಎಂದು ಸದ್ದು ಮಾಡು

ಸುರಹ. ಸಕ: [ಸುರಭಯ್] ಸುವಾಸನಾಯುಕ್ತಗೊಳಿಸು

ಸುರಹ. ಪುಂನ: [ಸೌರಭ] ಸುವಾಸನೆ

ಸುರಹ. ಪು: [ಸುರಥ] ಸಾಕೇತಪುರದ ಒಬ್ಬ ರಾಜ.

ಸುರಹಿ. ಪುಂಸ್ತ್ರೀ: [ಸುರಭಿ] ವಸಂತ ಋತು, ಚೈತ್ರ ಮಾಸ, ಸಂಪಿಗೆ ಮರ, ಬಕುಳ ವೃಕ್ಷ, ಸ್ತ್ರೀ: ಹಸು, ಆನೆ ಬೇಲದ ಮರ. ನ: ನಾಮಕರ್ಮದ ಒಂದು ಪ್ರಭೇದ; ಈ ಕರ್ಮದ ಉದಯದಿಂದ ಪ್ರಾಣಿಯು ಶರೀರದಲ್ಲಿ ಸುವಾಸನೆ ಉತ್ಪತ್ತಿಯಾಗುತ್ತದೆ. ವಿ: ಸುವಾಸನೆಯಿಂದ ಕೂಡಿದ, 'ಸುರಭಿ' ಶಬ್ದವನ್ನು ನೋಡುವುದು.

ಸುರಾ. ಸ್ತ್ರೀ: [ಸುರಾ] ಸುರೆ, ಮದಿರೆ, ಹೆಂಡ, –ರಸ. ಪು: [–ರಸ] ಸಮುದ್ರ–ವಿಶೇಷ

ಸುರಿಂದ. ಪ: [ಸುರೇಂದ್ರ] ದೇವರಾಜ ಇಂದ್ರ, ಒಬ್ಬ ವಿದ್ಯಾಧರ ರಾಜ. –ದತ್ತ. ಪು: [–ದತ್ತ] ಒಬ್ಬ ರಾಜ ಕುಮಾರ.

ಸುರಿಂದಯ. ಪು: [ಸುರೇಂದ್ರಕ] ಒಂದು ದೇವ–ವಿಮಾನ.

ಸುರೀ. ಸ್ತ್ರೀ: [ಸುರೀ] ದೇವಿ

ಸುರುಂಗಾ. 'ಸುರಂಗಾ' ಶಬ್ದವನ್ನು ನೋಡುವುದು.

ಸುರುಗ್ಘ. ಪು: [ಸ್ರುಘ್ನ] ದೇಶವಿಶೇಷ, –ಜ. ವಿ. [–ಜ]. ದೇಶ–ವಿಶೇಷದಲ್ಲಿ ಹುಟ್ಟಿದ

ಸುರುಟ್ಠ. ವಿ: [ಸುರುಷ್ಟ] ಅತ್ಯಂತ ರೋಷದಿಂದ ಕೂಡಿದ

ಸುರೂಯಾ. ಸ್ತ್ರೀ: [ಸುರೂಪಾ] ಒಬ್ಬ ಇಂದ್ರಾಣಿ. **'ಸುರೂವಾ'** ಶಬ್ದವನ್ನು ನೋಡುವುದು.

ಸುರೂವ. ಪು: [ಸುರೂಪ] ಭೂತ ನಿಕಾಯದ ದಕ್ಷಿಣ ದಿಕ್ಕಿನ ಇಂದ್ರ. ವಿ: ಒಳ್ಳೆಯ ರೂಪವುಳ್ಳವನು, ಸ್ಫುರದ್ರೂಪಿ.

ಸುರೂವಾ. ಸ್ತ್ರೀ: [ಸುರೂಪಾ] ಸರೂಪ ಮತ್ತು ಪ್ರತಿರೂಪ ಎಂಬ ಭೂತೇಂದ್ರರ ಒಬ್ಬೊಬ್ಬ ಅಗ್ರ–ಮಹಿಷಿ. ಸುಂದರ ರೂಪ ಹೊಂದಿರುವವಳು, ಸ್ಫುರದ್ರೂಪಿಣಿ.

ಸುರೇಸ. ಪು: [ಸುರೇಶ] ದೇವರಾಜ ಇಂದ್ರ, ಉತ್ತಮ ದೇವ

ಸುರೇಸರ. ಪು: [ಸುರೇಶ್ವರ] ದೇವರಾಜ ಇಂದ್ರ

ಸುಲಕ್ಖಣಿ. ವಿ: [ಸುಲಕ್ಷಣಿನ್] ಒಳ್ಳೆಯ ಲಕ್ಷಣಗಳಿಂದ ಕೂಡಿದ

ಸುಲಗ್ಗ. ವಿ: [ಸುಲಗ್ನ] ಚೆನ್ನಾಗಿ ಸೇರಿಕೊಂಡಿರುವ ಚೆನ್ನಾಗಿ ಅಂಟಿಕೊಂಡಿರುವ

ಸುಲದ್ಧ. ವಿ: [ಸುಲಬ್ಧ] ಚೆನ್ನಾಗಿ ಪ್ರಾಪ್ತವಾದ, ಸರಿಯಾಗಿ ದೊರಕಿದ

ಸುಲಬ್ಭ.}. ವಿ: [ಸುಲಭ] ಸುಲಭವಾಗಿ ಪ್ರಾಪ್ತವಾಗ
ಸುಲಭ}. ಬಹುದಾದ, ಯೋಗ್ಯವಾದ

ಸುಲಸ. ನ: [ದೇ] ಕುಂಕುಮದ ಹಾಗೆ ಕೆಂಪಾಗಿರುವ ವಸ್ತ್ರ

ಸುಲಸ. ಪು: [ಸುಲಸ] ಒಂದು ಪರ್ವತ

ಸುಲಸಮಂಜರೀ}. ಸ್ತ್ರೀ: [ದೇ] ತುಳಸಿ
ಸುಲಸಾ}.

ಸುಲಸಾ. ಸ್ತ್ರೀ: [ಸುಲಸಾ] ಒಂಬತ್ತನೇ ತೀರ್ಥಂಕರನ ಪ್ರಥಮ ಶಿಷ್ಯೆ, ಭಗವಾನ್ ಮಹಾವೀರನ ಒಬ್ಬ ಶ್ರಾವಕಿ; ಮುಂಬರುವ ಕಾಲದಲ್ಲಿ ತೀರ್ಥಂಕರನಾಗಲಿರುವ ಆತ್ಮ, ಶಕ್ರನ ಒಬ್ಬ ಅಗ್ರ–ಮಹಿಷಿ.

ಸುಲಹ. **'ಸುಲಭ'** ಶಬ್ದವನ್ನು ನೋಡುವುದು.

ಸುಲಾಹ. ಪು: [ಸುಲಾಭ.] ಒಳ್ಳೆಯ ಲಾಭ

ಸುಲೀ. ಸ್ತ್ರೀ: [ದೇ] ಉಲ್ಕೆ, ಆಕಾಶದಿಂದ ಬೀಳುವ ಬೆಂಕಿ

ಸುಲುಸುಲ}. ಅಕ:[ಸುಲಸುಲಾಯ್] **'ಸುಲಸುಲ'**
ಸುಲುಸುಲಾಯ}. ಎಂದು ಶಬ್ದ ಮಾಡು

ಸುಲೂಹ. ವಿ: [ಸುರೂಕ್ಷ] ಬಹಳ ಒರಟಾಗಿರುವ, ಕಠಿಣವಾದ

ಸುಲೋಅ. **'ಸಿಲೋಅ=ಶ್ಲೋಕ'** ಶಬ್ದವನ್ನು ನೋಡುವುದು.

ಸುಲೋಯಣ. ಪು: [ಸುಲೋಚನ] ಒಬ್ಬ ವಿದ್ಯಾಧರ ರಾಜ

ಸುಲೋಲ. ವಿ: [ಸುಲೋಲ] ಅತಿ ಚಪಲನಾದ, ಅತಿ ಚಂಚಲನಾದ

ಸುಲ್ಲ. ನ: [ಶೂಲ್ಯ] ಸಲಾಕಿಗೆ ಚುಚ್ಚಿ ಬೇಯಿಸಿದ ಮಾಂಸ

ಸುವ. ಅಕ: [ಸ್ವಪ್] ನಿದ್ರಿಸು, ಮಲಗು

ಸುವ. **'ಸ=ಸ್ವ'** ಶಬ್ದವನ್ನು ನೋಡುವುದು.

ಸುವ(ಅಪ). **'ಸುವ=ಶ್ರುತ, ಸುತ'** ಶಬ್ದವನ್ನು ನೋಡುವುದು.

ಸುವಂಸ. ಪು: [ಸುವಂಶ] ಒಳ್ಳೆಯ ಬಿದಿರು, ವಿ: ಒಳ್ಳೆಯ ಕುಲದಲ್ಲಿ ಜನಿಸಿದ, ಒಳ್ಳೆ ವಂಶ

ಸುವಗ್ಗು. ಪು: [ಸುವಲ್ಗು] ಖಡ್ಗ ಪುರಿಯು ರಾಜಧಾನಿಯಾಗಿರುವ ವಿಜಯ ಕ್ಷೇತ್ರ

ಸುವಚ್ಛ. ಪು: [ಸುವತ್ಸ] ವ್ಯಂತರ ದೇವತೆಗಳ ಒಬ್ಬ ಇಂದ್ರ, ಕುಂಡಲ ನಗರಿಯು ರಾಜಧಾನಿಯಾಗಿರುವ ಒಂದು ವಿಜಯ ಕ್ಷೇತ್ರ.

ಸುವಚ್ಛಾ. ಸ್ತ್ರೀ: [ಸುವತ್ಸಾ] ಅಧೋಲೋಕದಲ್ಲಿ ಇರುವ ಒಬ್ಬ ದಿಕ್ಕುಮಾರಿ ದೇವಿ.

ಸುವಜ್ಜ. ಪು: [ಸುವಜ್ರ] ಒಬ್ಬ ವಿದ್ಯಾಧರ ವಂಶದ ರಾಜ. ಪುಂನ: ಒಂದು ದೇವ–ವಿಮಾನ

ಸುವಟ್ಟಿಯ. ವಿ: [ಸುವರ್ತಿತ] ಬಹಳ ದುಂಡಾಗಿ ಮಾಡಲ್ಪಟ್ಟಿರುವ

ಸುವಣ. ನ: [ಸ್ವಪನ] ಶಯನ, ಮಲಗಿ ನಿದ್ರಿಸುವುದು

ಸುವಣ್ಣ. ಪು: [ಸುಪರ್ಣ] ಗರುಡ ಪಕ್ಷಿ, ಭವನಪತಿ ದೇವರುಗಳ ಒಂದು ಜಾತಿ, ಸೂರ್ಯ, **–ಕುಮಾರ.** ಪು: [–ಕುಮಾರ] ಭವನಪತಿ ದೇವರುಗಳ ಒಂದು ಜಾತಿ

ಸುವಣ್ಣ. ಪು: [ದೇ] ಬನ್ನಿ ಮರ, ಅರ್ಜುನ ವೃಕ್ಷ, ಶಮೀ ವೃಕ್ಷ (ದೇ)

ಸುವಣ್ಣ. ನ: [ಸುವರ್ಣ] ಬಂಗಾರ, ಚಿನ್ನ, ಭವನಪತಿ ದೇವರುಗಳ ಒಂದು ಜಾತಿ, ಹದಿನಾರು ಕರ್ಮ –ಮಾಷಕದ ಒಂದು ಹಂಚಿಕೆ, ಒಳ್ಳೆಯ ಬಣ್ಣ, ವಿ: ಒಳ್ಳೆಯ ಬಣ್ಣದ, **–ಆರ,** **–ಕಾರ.** ಪು: [–

ಕಾರ] ಅಕ್ಕಸಾಲಿಗ. –ಕುಂಭ. ಪು: [–ಕುಂಭ] ಪ್ರಥಮ ಬಲದೇವನ ಧರ್ಮಗುರುವಾದ ಒಬ್ಬ ಜೈನ ಮುನಿ. –ಕುಸುಮ. ನ: [–ಕುಸುಮ] ಹೊಂಬಣ್ಣದ ಕಾಡುಮಲ್ಲಿಗೆ. –ಕೂಲಾ. ಸ್ತ್ರೀ: [–ಕೂಲಾ] ಒಂದು ನದಿ. –ಸಿಲಾ. ಸ್ತ್ರೀ: [–ಶಿಲಾ] ಒಂದು ಮಹೌಷಧಿ. –ಸುವಣ್ಣಾಗರ. ಪು: [ಸವರ್ಣಾಕರ] ಚಿನ್ನದ ಗಣಿ. ಸುವಣ್ಣಾರ. ಪು: [ಸುವರ್ಣಕಾರ] ಅಕ್ಕಸಾಲಿಗ. 'ಸುವನ್ನ=ಸುವರ್ಣ' ಶಬ್ದವನ್ನು ನೋಡುವುದು.

ಸುವಣ್ಣಬಿಂದು. ಪು: [ದೇ] ವಿಷ್ಣು(ದೇ)

ಸುವಣ್ಣಿಅ. ವಿ: [ಸೌವರ್ಣಿಕ] ಚಿನ್ನದಿಂದ ಮಾಡಿದ, ಚಿನ್ನದಿಂದ ತಯಾರಿಸಿದ

ಸುವತ್ತ. 'ಸುವ್ವತ್ತ' ಶಬ್ದವನ್ನು ನೋಡುವುದು.

ಸುವನ್ನ. ನ: [ಸುವರ್ಣ] ಚಿನ್ನ, ಬಂಗಾರ, ವಿ: ಸುಂದರವಾದ ಅಕ್ಷರವುಳ್ಳ, –ಕುಮಾರ. ಪು; [–ಕುಮಾರ] ಭವನಪತಿ ದೇವರುಗಳ ಒಂದು ವರ್ಗ. –ಕೂಲಪ್ಪವಾಯ. ಪು: [–ಕೂಲಪ್ರಪಾತ] ಸುವರ್ಣಕೂಲಾ ನದಿ ಹರಿಯುವ ಗಡಿ ಪ್ರದೇಶ. –ಗಾರ. ಪು: [–ಕಾರ] ಅಕ್ಕಸಾಲಿಗ(ಣಾಯಾ). –ಜೂಹಿಯಾ. ಸ್ತ್ರೀ: [–ಯೂಥಿಕಾ] ಹೊಂಬಣ್ಣದ ಕಾಡು ಮಲ್ಲಿಗೆ ಬಳ್ಳಿ. –ಯಾರ. '–ಗಾರ' ಶಬ್ದವನ್ನು ನೋಡುವುದು.

ಸುವನ್ನ. ವಿ: [ಸೌವರ್ಣ] ಚಿನ್ನದಿಂದ ಮಾಡಲ್ಪಟ್ಟ, ಬಂಗಾರದಿಂದ ತಯರಿಸಲಾದ

ಸುವನ್ನಾಲುಗಾ. ಸ್ತ್ರೀ: [ದೇ] ಹಲ್ಲುಜ್ಜುವಾಗ ಬಳಸುವ ಲೋಟ, ತಂಬಿಗೆ ಮೊದಲಾದ ಪಾತ್ರೆ

ಸುವಪ್ಪ. ಪು: [ಸುವಪ್ರ] ಒಂದು ವಿಜಯ ಕ್ಷೇತ್ರ

ಸುವಯಣ. ನ: [ಸುವಚನ] ಒಳ್ಳೆಯ ಮಾತು, ಸುಂದರವಾದ ಮಾತು

ಸುವರ}. (ಅಪ). 'ಸುಮರ' ಶಬ್ದವನ್ನು ನೋಡುವುದು.

ಸುವಂರ}.

ಸುವಹು. 'ಸುಬಹು' ಶಬ್ದವನ್ನು ನೋಡುವುದು.

ಸುವಾಯ. ಪುಂನ: [ಸುವಾತ] ಒಂದು ದೇವ ವಿಮಾನ

ಸುವಾಸ. ಪು: [ಸುವರ್ಷ] ಒಳ್ಳೆಯ ಮಳೆ, ಒಂದು ಛಂದಸ್ಸು

ಸುವಾಸಣೀ. 'ಸುವಾಸಿಣೀ' ಶಬ್ದವನ್ನು ನೋಡುವುದು.

ಸುವಾಸವ. ಪು: [ಸುವಾಸವ] ಒಬ್ಬ ರಾಜ ಕುಮಾರ

ಸುವಾಸಿಣೀ. ಸ್ತ್ರೀ: [ದೇ. ಸುವಾಸಿನೀ] ಮುತ್ತೈದೆ, ಪತಿಯು ಬದುಕಿರುವವಳು

ಸುವಾಹಾ. ಅ: [ಸ್ವಾಹಾ] ಅಗ್ನಿದೇವನಿಗೆ ಹೋಮಕುಂಡಕ್ಕೆ ಹವಿಸ್ಸು ಮೊದಲಾದುವನ್ನು ಅರ್ಪಿಸುವಾಗ ಹೇಳುವ ಆ ಅರ್ಪಣೆಯ ಸೂಚಕವಾದ ಅವ್ಯಯ. ಸ್ತ್ರೀ: ಅಗ್ನಿದೇವನ ಹೆಂಡತಿ

ಸುವಿಅಜ್ಜಿಅ. ವಿ: [ಸುವ್ಯರ್ಜಿತ] ವಿಶೇಷ ರೂಪದಲ್ಲಿ ಸಂಪಾದಿಸಿದ

ಸುವಿಅಡ್ಢ. ವಿ: [ಸುವಿದಗ್ಧ] ಅತ್ಯಂತ ಚತುರನಾದ, ಒಳ್ಳೆಯ ವಿದ್ವಾಂಸ, ಪಂಡಿತ

ಸುವಿಇಯ. ವಿ: [ಸುವಿದಿತ] ಚೆನ್ನಾಗಿ ತಿಳಿಯಲ್ಪಟ್ಟ, ಚೆನ್ನಾಗಿ ಗೊತ್ತಿರುವ

ಸುವಿಉ. [ಸುವಿದು] ಒಳ್ಳೆಯ ಪಂಡಿತ, ಒಳ್ಳೆಯ ವಿದ್ವಾಂಸ

ಸುವಿಉಲ. ವಿ: [ಸುವಿಪುಲ] ಅತಿ ವಿಸ್ತಾರವಾದ, ಉದ್ದವಾದ, ಬಹಳವಾದ, ಅಧಿಕವಾದ

ಸುವಿಕ್ಕಮ. ಪು: [ಸುವಿಕ್ರಮ] ಭೂತಾನಂದ ಎಂಬ ಹೆಸರಿನ ಇಂದ್ರನ ಆನೆಯ ಸೈನ್ಯದ ಅಧಿಪತಿ, ವಿಷ್ಣು, ಪರಾಕ್ರಮ

ಸುವಿಕ್ಖಾಯ. ವಿ: [ಸುವಿಖ್ಯಾತ] ಅತ್ಯಂತ ಪ್ರಸಿದ್ಧನಾದ

ಸುವಿಗಾ. ಸ್ತ್ರೀ: [ಶುಕಿಕಾ, ಶುಕೀ] ಹೆಣ್ಣು ಗಿಳಿ, ಮೈನಾಹಕ್ಕಿ

ಸುವಿಜ್ಜಾ. ಸ್ತ್ರೀ: [ಸುವಿದ್ಯಾ] ಉತ್ತಮ ವಿದ್ಯೆ

ಸುವಿಣ. 'ಸುಮಿಣ' ಶಬ್ದವನ್ನು ನೋಡುವುದು. –ನ್ನು. ವಿ: [–ಜ್ಞ] ಕನಸಿನ ಶಾಸ್ತ್ರವನ್ನು ಬಲ್ಲವನು.

ಸುವಿಣಟ್ಠ. ವಿ: [ಸುವಿನಷ್ಟ] ಪೂರಾ ನಷ್ಟ, ನಾಶ

ಸುವಿಣಿಚ್ಛಿಯ. ವಿ: [ಸುವಿನಿಶ್ಚಿತ] ಚೆನ್ನಾಗಿ ನಿರ್ಣಯಿಸಲ್ಪಟ್ಟ, ಚೆನ್ನಾಗಿ ನಿರ್ಧರಿಸಲ್ಪಟ್ಟ

ಸುವಿಣಿಮ್ಮಿಯ. ವಿ: [ಸುವಿನಿರ್ಮಿತ] ಚೆನ್ನಾಗಿ ತಯಾರಿಸಲ್ಪಟ್ಟ, ಚೆನ್ನಾಗಿ ರಚಿಸಲ್ಪಟ್ಟ

ಸುವಿಣೀಯ. ವಿ: [ಸುವಿನೀತ[ಬಹಳ ದೂರಕ್ಕೆ ಒಯ್ಯಲ್ಪಟ್ಟ, ಹೊರದೂಡಲ್ಪಟ್ಟ, ಅತ್ಯಂತ ವಿನಯದಿಂದ ಕೂಡಿದ

ಸುವಿತ್ತ. ನ: [ಸುವೃತ್ತ] ಅತ್ಯಂತ ಗೋಳಾಕಾರದಲ್ಲಿರುವ, ಒಳ್ಳೆಯ ಆಚಾರ. ಸದ್ವರ್ತನೆ

ಸುವಿತ್ಥಡ}. ವಿ: [ಸುವಿಸ್ತೃತ] ಬಹಳ ಅಗಲವಾಗಿ

ಸುವಿತ್ಥಿನ್ನ}. ವಿ: [ಸುವಿಸ್ತೀರ್ಣ] ಮಾಡಲ್ಪಟ್ಟ, ಅತ್ಯಂತ ವಿಸ್ತಾರಗೊಳಿಸಲ್ಪಟ್ಟ

ಸುವಿಧಿ. 'ಸುವಿಹಿ' ಶಬ್ದವನ್ನು ನೋಡುವುದು
ಸುವಿಭಜ್ಜ. ವಿ: [ಸುವಿಭಜ] ಅನಾಯಾಸವಾಗಿ ವಿಭಾಗಿಸಲ್ಪಡಬಹುದಾದ
ಸುವಿಭತ್ತ. ವಿ: [ಸುವಿಭಕ್ತ] ಚೆನ್ನಾಗಿ ವಿಭಾಗ ಮಾಡಲ್ಪಟ್ಟ
ಸುವಿಯಕ್ಖಣ. ವಿ: [ಸುವಿಚಕ್ಷಣ] ಅತ್ಯಂತ ಚತುರ, ದಕ್ಷ
ಸುವಿಯಾಣ. ನ: [ಸುವಿಜ್ಞಾನ] ಒಳ್ಳೆಯ ಜ್ಞಾನ, ಒಳ್ಳೆಯ ನಾನಾ ವಿಧವಾದ ಶಾಸ್ತ್ರ ಜ್ಞಾನ
ಸುವಿರ. ವಿ: [ಸ್ವಪ್ನ] ನಿದ್ರಿಸುವ ಅಭ್ಯಾಸವುಳ್ಳವನು
ಸುವಿರಇಯ. ವಿ: [ಸುವಿರಚಿತ] ಚೆನ್ನಾಗಿ ರಚಿಸಲ್ಪಟ್ಟ, ಚೆನ್ನಾಗಿ ನಿರ್ಮಿಸಲ್ಪಟ್ಟ
ಸುವಿರಾಇಯ. ವಿ: [ಸುವಿರಾಜಿತ] ಚೆನ್ನಾಗಿ ಶೋಭಿಸಲ್ಪಟ್ಟ, ಚೆನ್ನಾಗಿ ಪ್ರಕಾಶಗೊಳಿಸಲ್ಪಟ್ಟ
ಸುವಿರಾಹಿಯ. ವಿ: [ಸುವಿರಾಧಿತ] ಬಹಳವಾಗಿ ಹಿಂಸಿಸಲ್ಪಟ್ಟ, ಅತಿಯಾಗಿ ಪೀಡಿಸಲ್ಪಟ್ಟ
ಸುವಿಲಾಸ. ವಿ: [ಸುವಿಲಾಸ] ಒಳ್ಳೆಯ ವಿಲಾಸವುಳ್ಳ, ಒಳ್ಳೆಯ ವಿಲಾಸದಿಂದ ಕೂಡಿದ
ಸುವಿವೇಇಯ. ವಿ: [ಸುವಿವೇಚಿತ] ಚೆನ್ನಾಗಿ ವಿಮರ್ಶಿಸಲ್ಪಟ್ಟ, ಚೆನ್ನಾಗಿ ವಿವೇಚಿಸಲ್ಪಟ್ಟ
ಸುವಿವೇಚ. ಸಕ: [ಸುವಿ+ವಿಚ್] ಚೆನ್ನಾಗಿ ವ್ಯಾಖ್ಯನಿಸು, ಚೆನ್ನಾಗಿ ವಿಮರ್ಶಿಸು
ಸುವಿಸಟ್ಟ. ವಿ: [ಸುವಿಕಸಿತ] ಚೆನ್ನಾಗಿ ಅರಳಿದ, ಚೆನ್ನಾಗಿ ಅಭಿವೃದ್ಧಿ ಹೊಂದಿದ
ಸುವಿಸತ್ಥ. ಪು: [ದೇ] ವ್ಯಭಿಚಾರಿಯಾದವನು
ಸುವಿಸಾಯ. ಪುಂನ: [ಸುವಿಸಾತ] ಒಂದು ದೇವ–ವಿಮಾನ.
ಸುವಿಹಾಣಾ. ಸ್ತ್ರೀ: [ಸುವಿಧಾನಾ] ಒಂದು ವಿದ್ಯೆ
ಸುವಿಹಿ. ಪು: [ಸುವಿಧಿ] ಒಂಬತ್ತನೇ ತೀರ್ಥಂಕರ. ಪುಂನ: ಒಳ್ಳೆಯ ನಿಯಮ, ಕಟ್ಟಳೆ, ಅನುಷ್ಠಾನ. ರಾಮಚಂದ್ರ ಮತ್ತು ಲಕ್ಷ್ಮಣರ ಒಂದು ವಾಹನ
ಸುವಿಹಿಅ. ವಿ: [ಸುವಿಹಿತ] ಒಳ್ಳೆಯ ನಿಯಮ, ಆಜ್ಞೆ, ವಿಧಿ, ಚೆನ್ನಾಗಿ ಮಾಡಲ್ಪಟ್ಟ
ಸುವೀರ. ಪು: [ಸುವೀರ] ಯದುರಾಜನ ಒಬ್ಬ ಮೊಮ್ಮಗ
ಸುವೀಸತ್ಥ. ವಿ: [ಸುವಿಶ್ವಸ್ತ] ಒಳ್ಳೆಯ ನಂಬಿಕೆಯಿಟ್ಟಿರುವ, ಒಳ್ಳೆಯ ಧೈರ್ಯದಿಂದಿರುವ
ಸುವುಣ್ಣಾ. ಸ್ತ್ರೀ: [ದೇ] ಸಂಕೇತ, ಸನ್ನೆ
ಸುವುರಿಸ. 'ಸುಪುರಿಸ' ಶಬ್ದವನ್ನು ನೋಡುವುದು
ಸುವೇ. ಅ: [ಶ್ವಸ್] ನಾಳೆ
ಸುವೇಲ. ಪು: [ಸುವೇಲ] ಒಂದು ಪರ್ವತ, ಒಂದು ನಗರ
ಸುವೋ. 'ಸುವೇ' ಶಬ್ದವನ್ನು ನೋಡುವುದು
ಸುವ್ವ. ನ: [ಶುಲ್ವ] ತಾಮ್ರ, ಹಗ್ಗ, ದಾರ, ನೀರಿನ ಸಮೀಪ, ಆಚಾರ, ಯಜ್ಞ ಕಾರ್ಯ.
ಸುವ್ವಂತ. 'ಸುವ್ವಯ' ಶಬ್ದವನ್ನು ನೋಡುವುದು
ಸುವ್ವತ್ತ. ವಿ: [ಸುವ್ಯಕ್ತ] ಸ್ಪಷ್ಟವಾದ, ಸ್ಫುಟವಾದ,
ಸುವ್ವಯ. ಪು: [ಸುವ್ರತ] ಭಾರತ ವರ್ಷದಲ್ಲಿ ಹುಟ್ಟಿದ ಇಪ್ಪತ್ತನೇ ತೀರ್ಥಂಕರ. ನಾದ ಮುನಿ ಸುವ್ರತ ಜಿನ. ಐರಾವತ ವರ್ಷದ ಒಬ್ಬ ಭಾವೀ ತೀರ್ಥಂಕರ. ಆರನೇ ಜಿನದೇವನ ಗಣಧರ. ಮೂರನೇ ಬಲದೇವನ ಹಿಂದಿನ ಜನ್ಮದ ಗುರುವಾಗಿದ್ದ ಒಬ್ಬ ಜೈನ ಮುನಿ. ಎಂಟನೇ ಬಲದೇವನ ಧರ್ಮಗುರು. ಭಗವಾನ್ ಪಾರ್ಶ್ವನಾಥನ ಮುಖ್ಯ ಶ್ರಾವಕ. ಜ್ಯೋತಿಷ್ಯದ ಒಂದು ಮಹಾ ಗ್ರಹ. ಒಂದು ದಿನದ ಹೆಸರು. ನ: ಒಂದು ಗೋತ್ರ. ವಿ: ಒಳ್ಳೆಯ ಶುಭ ವ್ರತವುಳ್ಳವ, –ಗ್ಗಿ. ಪು: [ಸುವ್ರತಾಗ್ನಿ]
ಸುವ್ವಯಾ. ಸ್ತ್ರೀ: [ಸುವ್ರತಾ] ಭಗವಾನ್ ಧರ್ಮನಾಥನ ತಾಯಿ, ಒಬ್ಬ ಜೈನ ಸಾಧ್ವಿ
ಸುವ್ವಿಆ. ಸ್ತ್ರೀ: [ದೇ] ತಾಯಿ, ಮಾತೆ
ಸುಸ. 'ಸೂಸ' ಶಬ್ದವನ್ನು ನೋಡುವುದು
ಸುಸಂಗದ. ವಿ: [ಸುಸಂಗತ] ಅತ್ಯಂತ ಸಮಂಜಸವಾಗಿರುವ, ಅತ್ಯಂತ ಸಂಬದ್ಧವಾದ
ಸುಸಂಜಮಿಅ. ವಿ:[ಸುಸಂಯಮಿತ] ಅತ್ಯಂತ ನಿಯಂತ್ರಿತ
ಸುಸಂಢಿಆ. ಸ್ತ್ರೀ: [ದೇ] ಸಲಾಕಿಗೆ ಚುಚ್ಚಿ ಬೇಯಿಸಿದ ಮಾಂಸ
ಸುಸಂತಯ. ವಿ: [ಸುಸತ್ಕ] ಅತ್ಯಂತ ಸುಂದರವಾದ
ಸುಸಂನಿವಿಟ್ಠ. ವಿ: [ಸುಸಂನಿವಿಷ್ಟ] ಚೆನ್ನಾಗಿ ನಿಂತಿರುವ, ಸರಿಯಾಗಿ ಒಳಕ್ಕೆ ಪ್ರವೇಶಿಸಿರುವ
ಸುಸಂಪರಿಗ್ಗಹಿಯ. ವಿ: [ಸುಸಂಪರಿಗೃಹೀತ] ಸರಿಯಾಗಿ ಸ್ವೀಕರಿಸಲ್ಪಟ್ಟ
ಸುಸಂಪಿಣದ್ಧ. ವಿ: [ಸುಸಂಪಿನದ್ಧ] ಚೆನ್ನಾಗಿ ಧರಿಸಲ್ಪಟ್ಟ, ಚೆನ್ನಾಗಿ ಗಂಟುಹಾಕಲ್ಪಟ್ಟ
ಸುಸಂಭಂತ. ವಿ: [ಸುಸಂಭ್ರಾಂತ] ಬಹಳವಾಗಿ ಗಾಬರಿಗೊಂಡ, ಬಹಳವಾಗಿ ಹೆದರಿದ, ಅತಿಯಾಗಿ ವ್ಯಾಕುಲಗೊಂಡ.

ಸುಸಂಭಿಅ. ವಿ: [ಸುಸಂಭೃತ] ಚೆನ್ನಾಗಿ ಸಂಸ್ಕಾರಗೊಂಡ
ಸುಸಂಮಂಯ. ವಿ: [ಸುಸಮ್ಮತ] ಸರಿಯಾಗಿ ಅಂಗೀಕರಿಸಲ್ಪಟ್ಟ, ಚೆನ್ನಾಗಿ ಒಪ್ಪಲಾದ.
ಸುಸಂವುಅ}. ವಿ: [ಸುಸಂವೃತ] ಅತ್ಯಂತ ವ್ಯಾಪ್ತವಾದ,
ಸುಸಂವುಡ}. ಹರಡಲ್ಪಟ್ಟ, ಚೆನ್ನಾಗಿ ಮರೆಮಾಡಲ್ಪಟ್ಟ, ಚೆನ್ನಾಗಿ ಆವರಿಸಲ್ಪಟ್ಟ, ಇಂದ್ರಿಯಗಳನ್ನು ಜಯಿಸಿದ, ತಡೆಯಲ್ಪಟ್ಟ
ಸುಸಂಹಂಯ. ವಿ: [ಸುಸಂಹತ] ಚೆನ್ನಾಗಿ ಸೇರಿಕೊಂಡಿರುವ, ಚೆನ್ನಾಗಿ ಅಂಟಿಕೊಂಡಿರುವ, ಚೆನ್ನಾಗಿ ಕಲೆತಿರುವ
ಸುಸಣ್ಣಪ್ಪ}. ವಿ: [ಸುಸಂಜ್ಞಾಪ್ಯ] ಸರಿಯಾಗಿ
ಸುಸನ್ನಪ್ಪ}. ಉಪದೇಶಿಸಬಹುದಾದ, ಸರಿಯಾಗಿ ಬೋಧಿಸಬಹುದಾದ
ಸುಸದ್ದ. ವಿ: [ಸುಶಬ್ದ] ಒಳ್ಳೆಯ ದನಿ ಉಳ್ಳ, ಪ್ರಖ್ಯಾತ
ಸುಸಮತ್ಥ. ವಿ: [ಸುಸಮರ್ಥ] ಶಕ್ತನಾದ, ಅತಿಶಯವಾದ ಸಾಮರ್ಥವುಳ್ಳ
ಸುಸಮದುಸ್ಸಮಾ}. ಸ್ತ್ರೀ: [ಸುಷಮದುಷ್ಷಮಾ]
ಸುಸಮದೂಸವಾ}. ಅವಸರ್ಪಿಣೀ ಕಾಲದ ಮೂರನೆಯ ಮತ್ತು ಉತ್ಸರ್ಪಿಣೀ ಕಾಲದ ನಾಲ್ಕನೆಯ ಹಂತ
ಸುಸಮಾ. ಸ್ತ್ರೀ: [ಸುಷಮಾ] ಅವಸರ್ಪಿಣಿಯ ಎರಡನೇ ಮತ್ತು ಉತ್ಸರ್ಪಿಣಿಯ ಐದನೇ ಹಂತ. ಒಂದು ಛಂದಸ್ಸು.
ಸುಸಮಾಹರ. ಸಕ: [ಸುಸಮಾ+ಹೃ] ಚೆನ್ನಾಗಿ ಗ್ರಹಿಸು, ಚೆನ್ನಾಗಿ ಒಟ್ಟುಗೂಡಿಸು, ಚೆನ್ನಾಗಿ ಸಂಗ್ರಹಿಸು
ಸುಸಮಹಿಅ. ವಿ: [ಸುಸಮಾಹಿತ] ಚೆನ್ನಾಗಿ ಧ್ಯಾನನಿರತನಾದ,
ಸುಸಮಿದ್ಧ. ವಿ: [ಸುಸಮೃದ್ಧ] ಅತ್ಯಂತ ಸಮೃದ್ಧವಾದ
ಸುಸರ. ಪುಂನ: [ಸುಸ್ವರ] ಒಂದು ದೇವ–ವಿಮಾನ. ನ: ನಾಮ–ಕರ್ಮದ ಒಂದು ಪ್ರಭೇದ, ಅದು ಉದಯಿಸುವುದರಿಂದ ಸುಂದರವಾದ ಸ್ವರ ಲಭಿಸುತ್ತದೆ. **'ಸುಸ್ಸರ, ಸಸೂರ'** ಶಬ್ದವನ್ನು ನೋಡುವುದು
ಸುಸಾ. ಸ್ತ್ರೀ: [ಸ್ವಸೃ] ಸೋದರಿ
ಸುಸಾ. **'ಸುಣ್ಹಾ=ಸ್ನುಷಾ'** ಶಬ್ದವನ್ನು ನೋಡುವುದು
ಸುಸಾಗಯ. ನ: [ಸುಸ್ವಾಗತ] ಒಳ್ಳೆಯ ಸ್ವಾಗತ
ಸುಸಾಗರ. ಪುಂನ: [ಸುಸಾಗರ] ಒಂದು ದೇವ–ವಿಮಾನ

ಸುಸಾಣ. ನ: [ಶ್ಮಶಾನ] ಮಸಣ, ರುದ್ರಭೂಮಿ
ಸುಸಾಮಣ್ಣ. ನ: [ಸುಶ್ರಾಮಣ್ಯ] ಒಳ್ಳೆ ಸಾಧುತನ, ಸನ್ಯಾಸತ್ವ
ಸುಸಾಯ. ವಿ: [ಸುಸ್ವಾದ] ರುಚಿಕರವಾದ, ಸ್ವಾದಿಷ್ಟವಾದ
ಸುಸಾಲ. ಪುಂನ: [ಸುಶಾಲ] ಒಂದು ದೇವ–ವಿಮಾನ.
ಸುಸಾವಗ}. ಪು: [ಸುಶ್ರಾವಕ] ಒಳ್ಳೆಯ ಜೈನ ಗೃಹಸ್ಥ,
ಸುಸಾವಯ}. ಒಳ್ಳೆಯ ಶ್ರಾವಕ
ಸುಸಾಹಯ. **'ಸುಸಂಹಯ'** ಶಬ್ದವನ್ನು ನೋಡುವುದು
ಸುಸಾಹು. ಪು: [ಸುಸಾಧು] ಉತ್ತಮ ಸಂನ್ಯಾಸಿ, ಶ್ರೇಷ್ಠ ಮುನಿ
ಸುಸಿಅ. ವಿ: [ಶುಷ್ಕ] ಒಣಗಿದ(ಸುಪಾ),
ಸುಸಿಅ. ವಿ: [ಶೋಷಿತ] ಒಣಗಿಸಲ್ಪಟ್ಟ
ಸುಸಿಕ್ಖಿಯ. ವಿ: [ಸುಶಿಕ್ಷಿತ] ಒಳ್ಳೆಯ ಶಿಕ್ಷಣವನ್ನು ಪಡೆದಿರುವ
ಸುಸಿಣ್ಣೆದ್ಧ. ವಿ: [ಸುಶೀರ್ಣ] ತುಂಬಾ ಕೊಳೆತು ಹೋಗಿರುವ, ಜೀರ್ಣವಾದ, ಬಹಳ ಕೃಶವಾಗಿರುವ, ಹಾಳಾದ
ಸುಸಿತ್ಥ. **'ಸುತ್ಥ=ಸೌಸ್ಥ'** ಶಬ್ದವನ್ನು ನೋಡುವುದು
ಸುಸಿರ. ವಿ: [ಶುಷಿರ] ಪೊಳ್ಳಾದ, ಖಾಲಿಯಾಗಿರುವ, ಬರಿದಾದ. ಒಂದು ದೇವ–ವಿಮಾನ
ಸುಸಿಲಿಟ್ಠ. ವಿ: [ಸುಶ್ಲಿಷ್ಟ] ಸುಸಂಗತವಾದ, ಚೆನ್ನಾಗಿ ಸಂಬದ್ಧವಾದ, ಚೆನ್ನಾಗಿ ಸೇರಿಕೊಂಡಿರುವ
ಸುಸಿಸ್ಸ. ಪು: [ಸುಶಿಷ್ಯ] ಒಳ್ಳೆ ಶಿಷ್ಯ
ಸುಸೀಅ. ವಿ: [ಸುಶೀತ] ಅತ್ಯಂತ ಶೀತಲವಾದ, ತೀರಾ ತಣ್ಣಗಿರುವ
ಸುಸೀಮ. ನ: [ಸುಸೀಮ] ಒಂದು ನಗರ.
ಸುಸೀಮಾ. ಸ್ತ್ರೀ: [ಸುಸೀಮಾ] ಭಗವಾನ್ ಪದ್ಮಪ್ರಭನ ತಾಯಿ, ಕೃಷ್ಣ ವಾಸದೇವನ ಒಬ್ಬಳು ಹೆಂಡತಿ, ವತ್ಸ ಎಂಬ ವಿಜಯ ಕ್ಷೇತ್ರದ ರಾಜಧಾನಿ
ಸುಸೀಲ. ನ: [ಸುಶೀಲ] ಉತ್ತಮ ಸ್ವಭಾವ, ವಿ: ಉತ್ತಮ ಸ್ವಭಾವದವನು, ಸದಾಚಾರಿ, **– ವಂತ.** ವಿ: [–ವತ್] ಒಳ್ಳೆಯ ನಡವಳಿಕೆ ಉಳ್ಳ, ಸದಾಚಾರಿ.
ಸುಸು. ಪು: [ಶಿಶು] ಮಗು. **–ಮಾರ.** ಪು: [–ಮಾರ] ಎಮ್ಮೆಯ ಆಕಾರದ ಒಂದು ಬೃಹದ್ ಮತ್ಸ್ಯ, **–ಮಾರಿಯಾ.** ಸ್ತ್ರೀ: [–ಮಾರಿಕಾ] ಒಂದು ವಾದ್ಯ. **'ಸುಂಸುಮಾರ'** ಶಬ್ದವನ್ನು ನೋಡುವುದು

ಸುಸುಜ್ಜ. ಪುಂನ: [ಸುಸೂರ್ಯ] ಒಂದು ದೇವ-ವಿಮಾನ.
ಸುಸುಮಾರ. ಪು: [ಸುಸುಮಾರ] ಎಮ್ಮೆಯ ಆಕಾರದ ಒಂದು ಬೃಹದ್ ಮತ್ಸ್ಯ
ಸುಸುಯಂಧ. ವಿ: [ಸುಸುಗಂಧ] ಅತಂತ ಸುವಾಸನೆಯಿಂದ ಕೂಡಿದ(ಪಲುಮ). ಪು: ಅತ್ಯಂತ ಸುವಾಸನೆ
ಸುಸುರ. 'ಸಸುರ' ಶಬ್ದವನ್ನು ನೋಡುವುದು
ಸುಸುಹಂಕರ. ಪು: [ಸುಶುಭಂಕರ] ಛಂದಸ್ಸಿನ ಒಂದು ಪ್ರಭೇದ.
ಸುಸೂರ. ಪಂನ: [ಸುಸೂರ] ಒಂದ ದೇವ ವಿಮಾನ
ಸುಸೇನ. ಪು: [ಸುಷೇಣ] ಸುಗ್ರೀವನ ಮಾವ, ಭರತ ಚಕ್ರವರ್ತಿಯ ಮಂತ್ರಿ
ಸುಸೇಣಾ. ಸ್ತ್ರೀ: [ಸುಷೇಣಾ] ಒಂದು ದೊಡ್ಡ ನದಿ.
ಸುಸೋಹ. ವಿ: [ಸುಶೋಭ] ಒಳ್ಳೆಯ ಕಾಂತಿಯುಳ್ಳ, ಪ್ರಕಾಶಮಾನವಾದ, ಶೋಭೆಯುಳ್ಳ
ಸುಸೋಹಿಯ. ವಿ: [ಸುಶೋಭಿತ] ಚೆನ್ನಾಗಿ ಅಲಂಕೃತಗೊಂಡಿರುವ, ಸುಂದರವಾದ, ಕಾಂತಿಯುಕ್ತವಾಗಿರುವ
ಸುಸ್ಸ. ಅಕ: [ಶುಷ್] ಒಣಗು. ವ. ಕೃ: 'ಸುಸ್ಸಂತ'
ಸುಸ್ಸಮಣ. ಪು: [ಸುಶ್ರಮಣ] ಒಳ್ಳೆಯ ಸನ್ಯಾಸಿ, ಒಳ್ಳೆಯ ಸಾಧು
ಸುಸ್ಸರ. ವಿ: [ಸುಸ್ವರ] ಸುಂದರವಾದ ದನಿಯುಳ್ಳ. 'ಸುಸರ' ಶಬ್ದವನ್ನು ನೋಡುವುದು
ಸುಸ್ಸರಾ. ಸ್ತ್ರೀ: [ಸುಸ್ವರಾ] ಗೀತರತಿ ಮತ್ತು ಗೀತಯಶ ಎಂಬ ಗಂಧರ್ವೇಂದ್ರರ ಒಬ್ಬೊಬ್ಬ ಅಗ್ರ ಮಹಿಷಿಯರ ಹೆಸರು
ಸುಸ್ಸಾರ. ವಿ: [ಸುಸಾರ] ಸಾರಯುಕ್ತವಾದ
ಸುಸ್ಸಾವಗ}. 'ಸುಸ್ಸಾವಗ' ಶಬ್ದವನ್ನು ನೋಡುವುದು
ಸುಸ್ಸಾವಯ}.
ಸುಸ್ಸೀಲ. 'ಸುಸೀಲ' ಶಬ್ದವನ್ನು ನೋಡುವುದು
ಸುಸ್ಸುಯ. 'ಸೂಸುಲ' ಶಬ್ದವನ್ನು ನೋಡುವುದು
ಸುಸ್ಸುಯಾಯ. ಅಕ: [ಸುಸುಕಾಯ್, ಸೂತ್‌ಕಾರಯ್] 'ಸುಸು' ಎಂದು ಶಬ್ದ ಮಾಡು
ಸುಸ್ಸೂ. ಸ್ತ್ರೀ: [ಶ್ವಶ್ರೂ] ಅತ್ತೆ
ಸುಸ್ಸೂಸ. ಸಕ: [ಶುಶ್ರೂಷ್] ಸೇವೆ ಮಾಡು, ಉಪಚರಿಸು
ಸುಸ್ಸೂಸಅ. ವಿ: [ಶುಶ್ರೂಷಕ] ಸೇವೆ ಮಾಡುವವನು
ಸುಸ್ಸೂಸಣ. ನ: [ಶುಶ್ರೂಷಣ] ಸೇವೆ, ಶುಶ್ರೂಷೆ
ಸುಹ. 'ಸೋಹ=ಶುಭ್' ಶಬ್ದವನ್ನು ನೋಡುವುದು
ಸುಹ. ಸಕ: [ಸುಖಯ್] ಸುಖವಾಗಿರಿಸು, ಸುಖಿಯಾಗಿಸು
ಸುಹ. 'ಸುಭ' ಶಬ್ದವನ್ನು ನೋಡುವುದು. **–ಅ.** ವಿ: [–ದ] ಮಂಗಳಕಾರಿ. **–ಕಮ್ಮಿಯ.** ವಿ: [**–ಕರ್ಮಿಕ**] **ಪುಣ್ಯಶಾಲಿ.** **–ಕಾಮ.** ವಿ: [–ಕಾಮ] ಮಂಗಳವನ್ನು ಬಯಸುವವನು. **–ಗರ.** ವಿ: [–ಕರ] ಮಂಗಳವನ್ನುಂಟುಮಾಡುವ, ಮಂಗಳಕರ. **–ಣಾಮಾ.** ಸ್ತ್ರೀ: [–ನಾಮಾ] ಪಕ್ಷದ ಐದನೆಯ, ಹತ್ತನೆಯ ಮತ್ತು ಹದಿನೈದನೆಯ ರಾತ್ರಿ ತಿಥಿ. **–ತ್ಥಿ.** ವಿ: [ಶುಭಾರ್ಥಿನ್] ಶುಭ'ವನ್ನು ಇಚ್ಛಿಸುವವನು, ಶುಭವಾದ ಅರ್ಥವುಳ್ಳವನು. **–ದ.** **'–ಅ' ನೋಡುವುದು.**
ಸುಹ. ನ: [ಸುಖ] ಆನಂದ, ಸಂತಸ, ಹರ್ಷ. ಶಾಂತಿ, ನೆಮ್ಮದಿ, ಮುಕ್ತಿ, ನಿರ್ವಾಣ, ವಿ: ಜಿತೇಂದ್ರಿಯ. ಸುಖಪ್ರದ, ಸುಖ ಕಾರಕ, ಅನುಕೂಲ, ಸುಖಿಯಾದವನು, **–ಅ.** ವಿ: [–ದ] ಸುಖವನ್ನು ಉಂಟು ಮಾಡುವ, ಸುಖವನ್ನು ನೀಡುವ. **–ಇತ್ತಅ.** ವಿ: [–ವತ್] ಸುಖೀ ಮನುಷ್ಯ. **–ಕರ.** ವಿ: [–ಕರ] ಸುಖವನ್ನುಂಟುಮಾಡುವ, **–ಕಾಮಿ.** ವಿ: [–ಕಾಮಿನ್] ಸುಖಾಭಿಲಾಷಿ. **–ತ್ಥಿ.** ವಿ: [**ಸುಖಾರ್ಥಿನ್**] **ಅದೇ ಅರ್ಥ.** **–ದ.** ವಿ: [–ದ] ಸುಖವನ್ನು ನೀಡುವವನು. **–ದಾಯ.** ವಿ: [–ದಾಯ] ಅದೇ ಅರ್ಥ. **–ಫಂಸ.** ವಿ: [**–ಸ್ಪರ್ಶ**] **ಕೋಮಲವಾದ.** **–ಯರ.** '–ಕರ' ಶಬ್ದವನ್ನು ನೋಡುವುದು **–ಸಂಝಾ.** ಸ್ತ್ರೀ: [**–ಸಂಧ್ಯಾ**] ಸುಖಕರವಾದ ಸಂಜೆ. **ಸುಹಾವಹ.** ವಿ: [ಸುಖಾವಹ] ಸುಖವನ್ನುಂಟು ಮಾಡುವ. **ಪುಂನ:** ಒಂದು ಪರ್ವತ ಶಿಖರ. **ಸುಹಾಸಣ.** ನ: [ಸುಖಾಸನ] ಸುಖಕರವಾದ ಆಸನ, ಪಲ್ಲಕ್ಕಿ. **ಸುಹಾಸಿಯಾ.** ವಿ: [ಸುಖಾಸಿಕಾ] ಸುಖವಾಗಿ ಕುಳಿತುಕೊಳ್ಳುವುದು, ಸುಖ ಸ್ಥಿತಿ.
ಸುಹಉತ್ಥಿಆ. ಸ್ತ್ರೀ: [ದೇ] ದೂತಿ
ಸುಹಂಕರ. ವಿ: [ಸುಖಕರ] ಸುಖಕಾರಕವಾದ
ಸುಹಂಕರ. ವಿ: [ಶುಭಕರ] ಒಳ್ಳೆಯದನ್ನುಂಟು ಮಾಡುವ, ಶುಭಕರವಾದ

ಸುಹಂಭರ. ವಿ: [ಸುಖಂಭರ] ಸುಖಿಯಾದ
ಸುಹಗ. 'ಸುಭಗ' ಶಬ್ದವನ್ನು ನೋಡುವುದು
ಸುಹಡ. ಪು: [ಸುಭಟ] ಯೋಧ
ಸುಹಡ. ವಿ: [ಸುಹೃತ] ಚೆನ್ನಾಗಿ ಅಪಹರಿಸಲ್ಪಟ್ಟ
ಸುಹತ್ಥ. ವಿ: [ಸುಹಸ್ತ] ಒಳ್ಳೆಯ ಹಸ್ತವುಳ್ಳ, ಕೈಯಿಂದ ಬಹಳ ಚುರುಕಾಗಿ, ವೇಗದಿಂದ ಕೆಲಸ ಮಾಡುವವನು ದಾನಶೀಲ, ದಾನಿ
ಸುಹತ್ಥಿ. ಪು:[ಸುಹಸ್ತಿನ್]ಮದ್ದಾನೆ, ಒಬ್ಬ ಜೈನಮಹರ್ಷಿ
ಸುಹದ್ದ. ನ: [ಸೌಹಾರ್ದ] ಸ್ನೇಹ, ಗೆಳೆತನ
ಸುಹಮ. ನ: [ಸೂಕ್ಷ್ಮ] ಹೂವು, ಆಧ್ಯಾತ್ಮ, 'ಸಣ್ಣ, ಸುಹುಮ=ಸೂಕ್ಷ್ಮ' ಶಬ್ದವನ್ನು ನೋಡುವುದು
ಸುಹಮ್ಮ. ಪು: [ಸುಧರ್ಮನ್] ಮಹಾವೀರನ ಪಟ್ಟಧರ ಶಿಷ್ಯ. ೧೫ನೇ ತೀರ್ಥಂಕರನ ಮೊದಲ ಶಿಷ್ಯ. ಒಬ್ಬ ಯಕ್ಷನ ಹೆಸರು. **–ಸಾಮಿ.** ಪು: [–ಸ್ವಾಮಿನ್] ಭಗವಾನ್ ಮಹಾವೀರನ ಪಟ್ಟಧರ ಶಿಷ್ಯ. 'ಸುಧಮ್ಮ' ಶಬ್ದವನ್ನು ನೋಡುವುದು
ಸುಹಮ್ಮ–. 'ಸುಹಮ್ಮಾ' ಶಬ್ದವನ್ನು ನೋಡುವುದು. **–ವಇ.** ಪು: [–ಪತಿ] ಇಂದ್ರ
ಸುಹಮ್ಮಮಾಣ. ವಿ: [ಸುಹನ್ಯಮಾನ] ಸರಿಯಾಗಿ ಕೊಲ್ಲಲ್ಪಡುತ್ತಿರುವವನು
ಸುಹಮ್ಮಾ. ಸ್ತ್ರೀ: [ಸುಧರ್ಮಾ] ಇಂದ್ರಾದಿ ದೇವರುಗಳ ಸಭೆ, ದೇವ ಸಭೆ
ಸುಹಯ. 'ಸುಹ–ಅ=ಸುಖ–ದ, ಶುಭ–ದ' ಶಬ್ದವನ್ನು ನೋಡುವುದು
ಸುಹಯ. 'ಸುಭಗ' ಶಬ್ದವನ್ನು ನೋಡುವುದು
ಸುಹಯ. ವಿ: [ಸುಹತ] ಸರಿಯಾಗಿ ಕೊಲ್ಲಲ್ಪಟ್ಟವನು
ಸುಹರ. ವಿ: [ಸುಭರ] ಸುಖವಾಗಿ ತುಂಬಲು ಅರ್ಹವಾದ, ಅನಾಯಾಸವಾಗಿ ಪೂರ್ಣಗೊಳಿಸಬಹುದಾದ
ಸುಹರಅ. 'ಸುಹರಾಯ' ಶಬ್ದವನ್ನು ನೋಡುವುದು
ಸುಹರಾ. ಸ್ತ್ರೀ: [ದೇ. ಸುಗೃಹಾ] ಗುಬ್ಬಚ್ಚಿ, ಒಳ್ಳೆಯ ಗಳಿಗೆ (ಚತುರ ಪಕ್ಷಿ, ಒಂದು ಪಕ್ಷಿ).
ಸುಹರಾಯ. ಪು: [ದೇ] ವೇಶ್ಯೆಯ ಮನೆ, ಗುಬ್ಬಚ್ಚಿ
ಸುಹಲ್ಲೀ. ಸ್ತ್ರೀ: [ದೇ] ಸುಖ, ಸಂತೋಷ, ಆನಂದ
ಸುಹವ. 'ಸುಭಗ' ಶಬ್ದವನ್ನು ನೋಡುವುದು. ಸ್ತ್ರೀ:–ವೀ
ಸುಹಾ. ಅಕ: [ಸು+ಭಾ] ಚೆನ್ನಾಗಿ ಕಾಣು
ಸುಹಾ. 'ಛುಹಾ=ಸುಧಾ' ಶಬ್ದವನ್ನು ನೋಡುವುದು. **–ಕಮ್ಮಂತ.** ನ: [–ಕರ್ಮಾಂತ] ಸುಣ್ಣದ ಕಾರ್ಖಾನೆ. **–ಹಾರ.** ಪು: [–ಹಾರ] ದೇವ, ದೇವತೆ
ಸುಹಾ}. ಅಕ: [ಸುಖಾಯ್] ಸುಖ ಪಡೆ, ಸುಖ
ಸುಹಾಅ}. ಹೊಂದು, ಸಕ: ಸುಖದಲ್ಲಿಡು,
ಸುಹಾವ}. ಸುಖಿಯಾಗಿಸು. 'ಸುಹಾಇ.' ವ.ಕೃ: 'ಸುಹಾಅಂತ'
ಸುಹಾವ. 'ಸಹಾವ=ಸ್ವಭಾವ' ಶಬ್ದವನ್ನು ನೋಡುವುದು(ಗಾ)
ಸುಹಾವಣ}. ವಿ: [ಸುಖಾಯನ] ಸುಖಕಾರಕ,
ಸುಹಾವಯ}. ವಿ: [ಸುಖಾಯುಕ] ಸುಖವನ್ನು ಉಂಟುಮಾಡುವ
ಸುಹಾಸಿಯ. ವಿ: [ಸುಭಾಷಿತ] ಚೆನ್ನಾಗಿ ಹೇಳಿದ, ನ: ಸುಂದರವಾದ ಮಾತು,
ಸುಹಿ. ವಿ: [ಸುಖಿನ್] ಸುಖಿಯಾದವನು
ಸುಹಿ}. ಪು: [ಸುಹೃದ್] ಸ್ನೇಹಿತ, ಮಿತ್ರ,
ಸುಹಿಅ}. ಗೆಳೆಯ(ಉತ್ತ)
ಸುಹಿಅ. ವಿ: [ಸುಖಿತ]ಸುಖಿಯಾದ, ಸುಖದಿಂದಿರುವ
ಸುಹಿಅ. ವಿ: [ಸುಹಿತ] ತೃಪ್ತ, ಒಳ್ಳೆಯ ಹಿತವುಳ್ಳ
ಸುಹಿಟ್ಠ. ವಿ: [ಸುಹೃಷ್ಟ] ಅತ್ಯಂತ ಸಂತಸಗೊಂಡಿರುವ, ಬಹಳ ಹರ್ಷಗೊಂಡಿರುವ
ಸುಹಿರ. 'ಸುಸಿರ' ಶಬ್ದವನ್ನು ನೋಡುವುದು.
ಸುಹಿರಣ್ಣ}. ಸ್ತ್ರೀ: [ಸುಹಿರಣ್ಯಾ, ಸುಹಿರಣ್ಯಕಾ] ಒಂದು
ಸುಹಿರಣ್ಣಿಯಾ}. ಪುಷ್ಪ ಪ್ರಧಾನವಾದ ವನಸ್ಪತಿ, ವೃಕ್ಷ
ಸುಹಿರನ್ನಿಯಾ}.
ಸುಹಿರೀಮಣ. ವಿ: [ಸುಹ್ರೀಮನಸ್] ಅತ್ಯಂತ ನಾಚಿಕೆಯ, ಅತ್ಯಂತ ಲಜ್ಜೆಯ
ಸುಹಿಲ್ಲಿಯಾ. 'ಸುಹೆಲ್ಲೀ' ಶಬ್ದವನ್ನು ನೋಡುವುದು
ಸುಹೀ. ವಿ: [ಸುಧೀ] ಪಂಡಿತ, ವಿದ್ವಾಂಸ
ಸುಹುಮ. ವಿ: [ಸೂಕ್ಷ್ಮ] ಅತ್ಯಂತ ಸಣ್ಣದಾದ, ಅಲ್ಪವಾದ, ತೀಕ್ಷ್ಣವಾದ. ಪು: ಅತಿ ಸಣ್ಣ ಭಾಗ, ಭಾರತ ವರ್ಷದ ಒಬ್ಬ ಭಾವೀ ಕುಲಕರ ಪುರುಷ, ಏಕೇಂದ್ರಿಯ ಜೀವ, ನ: ಕರ್ಮ ವಿಶೇಷ– **ಸಂಪರಾಗ, –ಸಂಪರಾಯ.** ಪುಂನ: [–ಸಂಪರಾಯ] ಚಾರಿತ್ರ–ವಿಶೇಷ, ಹತ್ತನೆಯ ಗುಣ–ಸ್ಥಾನಕ. 'ಸಣ್ಣ, ಸುಹಮ=ಸೂಕ್ಷ್ಮ' ಶಬ್ದವನ್ನು ನೋಡುವುದು

ಸುಹುಯ. ವಿ:[**ಸುಹುತ**] ಚೆನ್ನಾಗಿ ಹೋಮ ಮಾಡಲ್ಪಟ್ಟ
ಸುಹೆಲ್ಲಿ. ಸ್ತ್ರೀ: [**ದೇ. ಸುಖಕೇಲಿ**] ಸುಖ, ಆನಂದ, ಹಿಗ್ಗು
ಸುಹೇಸಿ. ವಿ: [**ಸುಖೈಷಿನ್**] ಸುಖವನ್ನು ಬಯಸುವವನು, ಸುಖಾಭಿಲಾಷಿ
ಸೂ. ಅ: ನಿಂದೆ, ಬಯ್ಗುಳದ ಸೂಚಕವಾದ ಅವ್ಯಯ
ಸೂಅ. ಸಕ: [**ಸೂಚಯ್**] ಸೂಚಿಸು, ತಿಳಿದುಕೊಳ್ಳು, ಗಮನಿಸು. '**ಸೂಏಇ, ಸೂಅಂತ**' ವ.ಕೃ: **ಸೂಯಂತ**
ಸೂಅ. ಪು: [**ಸೂದ**] ಅಡಿಗೆಯವನು
ಸೂಅ. ಪು: [**ಸೂತ**] ಸಾರಥಿ, ರಥವನ್ನು ನಡೆಸುವವನು, ಪಾದರಸ, ಸೂರ್ಯ. ವಿ: ಹುಟ್ಟಿದ, ಉತ್ಪತ್ತಿಯಾದ, ಜನಿಸಿದ. **–ಗಡ. ಪುಂನ:** [**–ಕೃತ**] ಎರಡನೇ ಜೈನ ಅಂಗ ಗ್ರಂಥ
ಸೂಅ. ಪು: [**ಶೂಕ**] ಧಾನ್ಯದ ತದಿಯಲ್ಲಿರುವ ಸಣ್ಣ ಮುಳ್ಳು(ಗಉಡ)
ಸೂಅ. ವಿ: [**ಶೂನ**] ಉಬ್ಬಿರುವ, ಊದಿರುವ, ದೊಡ್ಡದಾಗಿರುವ(ವಿಪಾ)
ಸೂಅ. ಪು: [**ಸೂಪ**] ಬೇಳೆ, ತೊವ್ವೆ, **–ಗಾರ, –ಂಸಾರ, –ಸೂಆರ.** ಪು: [**–ಕಾರ**] ಅಡಿಗೆಯವನು. **ಸೂಆರಿಣೀ.** ಸ್ತ್ರೀ: [**–ಕಾರಿಣೀ**] ಅಡುಗೆ ಮಾಡುವವಳು(ಪಉಮ)
ಸೂಅ. '**ಸುತ್ತ=ಸೂತ್ರ**' ಶಬ್ದವನ್ನು ನೋಡುವುದು **–ಗಡ. ಪುಂನ:** [**–ಕೃತ**] ಎರಡನೇ ಜೈನ ಅಂಗ ಗ್ರಂಥ
ಸೂಅಅ}. ವಿ: [**ಸೂಚಕ**] ಸೂಚಿಸುವವನು(ವೇಣೀ),
ಸೂಅಕ}. ಪು: ಚಾಡಿಕೋರ, ದುರ್ಜನ, ಗುಪ್ತಚರ,
ಸೂಅಗ}. ಸೂಜಿ, ಬೋಧಕ, ಬೆಕ್ಕು
ಸೂಅಗ}. ನ: [**ಸೂತಕ**] ಜನನ ಮತ್ತು ಮರಣ
ಸೂಅಯ}. ಅಶೌಚ, ಸೂತಕ,
ಸೂಅಣ. ನ: [**ಸೂಚನ**] ಸೂಚನೆ
ಸೂಅರ. ಪು: [**ಶೂಕರ**] ಹಂದಿ, ವರಾಹ. **–ವಲ್ಲ.** ಪು: [**–ವಲ್ಲ**] ಒಂದು ವನಸ್ಪತಿ
ಸೂಅರಿಅ. ವಿ: [**ದೇ**] ಯಂತ್ರದಿಂದ ಪೀಡಿತವಾದ.
ಸೂಅರಿಯಾ}. ಸ್ತ್ರೀ: [**ದೇ**] ಯಂತ್ರದ ಪೀಡಿಸುವಿಕೆ
ಸೂಅರೀ}.
ಸೂಅಲ.ನ:[**ದೇ**] ಧಾನ್ಯದ ತುದಿಯಲ್ಲಿರುವ ಸಣ್ಣಮುಳ್ಳು
ಸೂಆ. ಸ್ತ್ರೀ: [**ಸೂಚಾ**] ಸೂಚನೆ, **–ಕರ.** ವಿ: [ ] ಸೂಚಕ.
ಸೂಇ}. ಸ್ತ್ರೀ: [**ಸೂತಿ**] ಪ್ರಸವ, ಹೆರಿಗೆ, ಜನ್ಮ, ಹುಟ್ಟು,
ಸೂಇ}. –ಕಮ್ಮ. ನ: [**–ಕರ್ಮನ್**] ಹೆರಿಗೆಯ ಕ್ರಿಯೆ. **–ಹರ.**ನ: [**–ಗೃಹ**] ಹೆರಿಗೆಯ ಮನೆ, ಪ್ರಸೂತಿ ಗೃಹ
ಸೂಇ. ಸ್ತ್ರೀ: [**ಸೂಚಿ**] ಸೂಜಿ
ಸೂಇಅ. ವಿ: [**ಸೂಚಿತ**] ಸೂಚಿಸಲ್ಪಟ್ಟ, ಉಕ್ತ, ಹೇಳಲ್ಪಟ್ಟ, ವ್ಯಂಜನದಿಗಳಿಂದ ಕೂಡಿದ ಆಹಾರ
ಸೂಇಅ. ವಿ: [**ಸೂತ**] ಜನ್ಮ ನೀಡಿದವನು, ಹುಟ್ಟಿದ
ಸೂಇಅ. ಪು: [**ಸೂಚಿಕ**] ಹೊಲಿಗೆಯವನು, ದರ್ಜಿ.
ಸೂಇಅ. ಪು: [**ದೇ**] ಚಂಡಾಲ
ಸೂಇಯ. ನ: [**ಸುಪ್ತ**] ನಿದ್ರೆ, ವಿ: ನಿದ್ರಿಸುವವನು
ಸೂಇಯ. ವಿ:[**ದೇ. ಸೂಪ್ಯ, ಸೂಪಿಕ**] ಸಾಂಬಾರ ಸೇರಿಸಿದ
ಸೂಇಯಾ. ಸ್ತ್ರೀ: [**ಸೂತಿಕಾ**] ಸೂಲಗಿತ್ತಿ
ಸೂಈ. ಸ್ತ್ರೀ: [**ಸೂಚೀ**] ಸೂಜಿ, ಒಂದು ಅಂಗುಲ ಉದ್ದ ಪ್ರದೇಶದ ಒಂದು ಸಾಲು; ಒಂದು ಅಳತೆ, ಎರಡು ಆಸನಗಳನ್ನು ಜೋಡಿಸುವ ಕೆಲಸಕ್ಕೆ ಬೇಕಾಗುವ ಒಂದು ಥರದ ತೆಳ್ಳನೆಯ ಮೊಳೆ. **–ಫಲಯ.** ನ: [**–ಫಲಕ**] ಮೊಳೆ ಹೊಡೆದಿರುವ ಆಸನದ ಭಾಗ. **–ಮುಹ. ಪು:** [**–ಮುಖ**] ಒಂದು ಬಗೆಯ ಪಕ್ಷಿ, ಎರಡು ಇಂದ್ರಿಯಗಳ ಒಂದು ಪ್ರಾಣಿ. ನ: ಸೂಜಿಯ ಮೊಳೆಯು ಆಸನದಲ್ಲಿ ರಂಧ್ರ ಮಾಡಿಕೊಂಡು ಒಳಗೆ ಹೋಗುವ ಪಕ್ಕದ ಜಾಗ.
ಸೂಈ. ಸ್ತ್ರೀ: [**ದೇ**] ಹೂವಿನ ಗೊಂಚಲು
ಸೂಈ–. '**ಸೂಇ=ಸೂತಿ**' ಶಬ್ದವನ್ನು ನೋಡುವುದು
ಸೂಡ. ಸಕ: [**ಭಂಜ್, ಸೂದ್**] ಮುರಿ, ಒಡೆ, ನಾಶ ಮಾಡು, ಹಾಳುಮಾಡು
ಸೂಡಣ. ನ: [**ಸೂದನ**] ನಾಶನ, ಮುರಿಯುವುದು, ಒಡೆಯುವುದು
ಸೂಣ. ವಿ: [**ಶೂನ**] ಉಬ್ಬಿರುವ, ಊದಿರುವ, ದೊಡ್ಡದಾಗಿರುವ
ಸೂಣ–}. ಸ್ತ್ರೀ: [**ಸೂನಾ**] ವಧ ಸ್ಥಾನ, **–ವಇ. ಪು:**
ಸೂಣಾ}. [**–ಪತಿ**] ಕಟುಕ, ಪ್ರಾಣಿಗಳನ್ನು ವಧಿಸಿ ಮಾರುವವನು
ಸೂಣಿಂಂ. ವಿ: [**ಶೂನಿಕ**] ದೇಹ ಊದಿ ಕೊಂಡಿರುವವನು, ಊದಿಕೊಳ್ಳುವ ರೋಗಕ್ಕೆ ತುತ್ತಾದವನು. ನ: ಊದಿಕೊಳ್ಳುವಿಕೆ
ಸೂಣು. ಪು: [**ಸೂನು**] ಮಗ, ಪುತ್ರ

ಸೂತಕ. 'ಸೂಅಯ=ಸೂತಕ' ಶಬ್ದವನ್ನು ನೋಡುವುದು
ಸೂಪ. 'ಸೂಅ= ಸೂಪ' ಶಬ್ದವನ್ನು ನೋಡುವುದು
ಸೂಭಗ. 'ಸುಭಗ' ಶಬ್ದವನ್ನು ನೋಡುವುದು
ಸೂಭಗ. 'ಸೋಭಗ್ಗ' ಶಬ್ದವನ್ನು ನೋಡುವುದು
ಸೂಮಾಲ. 'ಸುಉಮಾಲ' ಶಬ್ದವನ್ನು ನೋಡುವುದು
ಸೂರ. ಸಕ: [ಭಂಜ್] ಮುರಿ, ಒಡೆ. 'ಸೂರಇ'
ಸೂರ. ವಿ: [ಶೂರ] ಪರಾಕ್ರಮಿ, ವೀರ. ಪು: ಒಬ್ಬ ರಾಜ, ಪುಂನ: ಒಂದು ದೈವ-ವಿಮಾನ. **ಸೇಣ.** ಪು: [-ಸೇನ] ಮಥುರೆಯನ್ನು ರಾಜಧಾನಿಯಾಗಿ ಹೊಂದಿದ್ದ ಒಂದು ಪ್ರಾಂತ. ಐರಾವತ ವರ್ಷದ ಒಬ್ಬ ಭಾವೀ ತೀರ್ಥಂಕರ. ಒಬ್ಬ ಜೈನಾಚಾರ್ಯ, ಭಗವಾನ್ ಆದಿನಾಥನ ಪುತ್ರ.
ಸೂರ. ಪು: [ಸೂರ, ಸೂರ್ಯ] ರವಿ, ಸೂರ್ಯ, ೧೭ನೇ ತೀರ್ಥಂಕರನ ತಂದೆ. ಇಕ್ಷ್ವಾಕು ವಂಶದ ಒಬ್ಬ ರಾಜ. ಒಂದು ದ್ವೀಪದ ಹೆಸರು. ಛಂದಸ್ಸಿನ ಒಂದು ಪ್ರಭೇದ. **-ಅಂತ, -ಕಂತ.** ಪು: [-ಕಾಂತ] ಒಂದು ವಿಶೇಷವಾದ ಮಣಿ. **-ಕೂಡ.** ಪುಂನ: [-ಕೂಟ] ಒಂದು ದೇವ-ವಿಮಾನ. ದೇವಭವನ. **-ಜ್ಝಯ.** ಪುಂನ: [-ಧ್ವಜ] ಒಂದು ದೇವ-ವಿಮಾನ. **-ದೀವ.** ಪು: [-ದ್ವೀಪ] ಒಂದು ದ್ವೀಪ. **-ದೇವ.** ಪು: [-ದೇವ] ಮುಂದೆ ಬರುವ ಉತ್ಸರ್ಪಿಣೀ ಕಾಲದಲ್ಲಿ ಸಂಭವಿಸಲಿರುವ ಭಾರತದ ಎರಡನೇ ತೀರ್ಥಂಕರ. **-ಪನ್ನತ್ತಿ.** ಸ್ತ್ರೀ: [-ಪ್ರಜ್ಞಪ್ತಿ] ಒಂದು ಜೈನ ಉಪಾಂಗ ಗ್ರಂಥ. **-ಪರಿವೇಸ.** ಪು: [-ಪರಿವೇಷ] ಮೋಡದಿಂದ ಸೂರ್ಯನ ಸುತ್ತ ಆಗುವ ಮಂಡಲಾಕೃತಿ. **-ಪವ್ವಯ.** ಪು: [-ಪರ್ವತ] ಒಂದು ಪರ್ವತ. **-ಪಾಯಾ.** ಸ್ತ್ರೀ: [-ಪಾಕಾ] ಸೂರ್ಯಕಿರಣದಿಂದ ಆಗುವ ಅಡುಗೆ. **-ಪ್ಪಬಾ, -ಪ್ಪಹಾ.** ಸ್ತ್ರೀ: [-ಪ್ರಭಾ] ಸೂರ್ಯನ ಒಬ್ಬ ಅಗ್ರ ಮಹಿಷಿ, ೧೧ನೇ ತೀಥಂಕರನ ದೀಕ್ಷಾ-ಶಿಬಿಕೆ. ಎಂಟನೇ ತೀರ್ಥಂಕರನ ದೀಕ್ಷಾ -ಶಿಬಿಕೆ. **-ಮಲ್ಲಿಯಾ.** ಸ್ತ್ರೀ: [-ಮಲ್ಲಿಕಾ] ಒಂದು ವನಸ್ಪತಿ. **-ಮಾಲಿಯಾ.** ಸ್ತ್ರೀ: [-ಮಾಲಿಕಾ] ಒಂದು ಆಭರಣ. **-ಲೇಸ.** ಪುಂನ: [-ಲೇಶ್ಯ] ಒಂದು ದೇವ-ವಿಮಾನ. **-ವಕ್ಕಯ.** ನ: [-ವಕ್ರಕ] ಒಂದು ಬಗೆಯ ಒಡವೆ. **-ವರ.** ಪು: [-ವರ] ಒಂದು ದ್ವೀಪ. **-ವರೋಭಾಸ.** ಪು: [-ವರಾವಭಾಸ] ಒಂದು ದ್ವೀಪ, ಒಂದು ಸಮುದ್ರ-ವಿಶೇಷ. **-ವಲ್ಲೀ.** ಸ್ತ್ರೀ: [-ವಲ್ಲೀ] ಒಂದು ಬಗೆಯ ಬಳ್ಳಿ. **-ವೇಗ.** ಪು: [-ವೇಗ] ಒಬ್ಬ ರಾಜಕುಮಾರ **-ಸಿಂಗ.** ಪುಂನ: [ಶೃಂಗ] ಒಂದು ದೇವ-ವಿಮಾನ. **-ಸಿಟ್ಠ.** ಪುಂನ: [ಸೃಷ್ಟ] ಒಂದು ದೇವ-ವಿಮಾನ. **-ಸಿರೀ.** ಸ್ತ್ರೀ: [-ಸಿರೀ] ಏಳನೇ ಚಕ್ರವರ್ತಿ.ಯ ಹೆಂಡತಿ. **-ಸುಅ.** ಪು: [-ಸುತ] ಶನೈಶ್ಚರ ಗ್ರಹ. **ಸೂರಾಭ.** ಪುಂನ: [ಸೂರ್ಯಾಭ] ಒಂದು ದೇವ-ವಿಮಾನ. **ಸೂರಾವತ್ತ.** ಪುಂನ: [ಸೂರ್ಯಾವರ್ತ] ಒಂದು ದೇವ-ವಿಮಾನ. 'ಸುಜ್ಜ' ಶಬ್ದವನ್ನು ನೋಡುವುದು
ಸೂರಂಗ. ಪು: [ದೇ] ದೀಪ(ದೇ)
ಸೂರಂಗಯ. ಪು: [ಸೂರಂಗಜ] ಒಬ್ಬ ದೊರೆ
ಸೂರಣ. ಪು: [ದೇ. ಸೂರಣ] ಚೂರಣ ಗೆಡ್ಡೆ
ಸೂರದ್ಧಯ. ಪು: [ದೇ] ದಿನ, ದಿವಸ. ಹಗಲು
ಸೂರಲ್ಲಿ. ಪುಂಸ್ತ್ರೀ: [ದೇ] ಮಧ್ಯಾಹ್ನ, ಸೊಳ್ಳೆಯ ಆಕಾರದ ಒಂದು ಕೀಟ, ಗ್ರಾಮಣಿ ಎಂಬ ತೃಣ; ನೀಲಿ ಗಿಡ.
ಸೂರಿ. ಪು: [ಸೂರಿ] ಆಚಾರ್ಯ, ವಿದ್ವಾಂಸ, ಪಂಡಿತ
ಸೂರಿಅ. ವಿ: [ಭಗ್ನ] ಮುರಿದ, ಒಡೆದ
ಸೂರಿಅ. 'ಸುಜ್ಜ' ಶಬ್ದವನ್ನು ನೋಡುವುದು. **-ಕಂತ.** ಪು: [-ಕಾಂತ] ಪ್ರದೇಶಿ ಎಂಬ ಹೆಸರಿನ ರಾಜನ ಮಗ. **-ಕಂತಾ.** ಸ್ತ್ರೀ: [-ಕಾಂತಾ] ಪ್ರದೇಶೀ ರಾಜನ ಹೆಂಡತಿ.**-ಪಾಗ.** ಪುಂಸ್ತ್ರೀ: [-ಪಾಕ] ಸೂರ್ಯನ ಬಿಸಿಲಿಗೆ ಆಗುವ ಅಡಿಗೆ. ಸ್ತ್ರೀ: **-ಗಾ.-ಲೇಸ್ಸಾ.** ಸ್ತ್ರೀ: [-ಲೇಶ್ಯಾ] ಸೂರ್ಯನ ಪ್ರಭೆ. **ಸೂರಿಆಭ.** ಪು: [-ಸೂರ್ಯಾಭ]. ಪ್ರಥಮ ದೇವ ಲೋಕದ ಒಬ್ಬ ದೇವ. ಸೂರ್ಯಾಭ ದೇವನ ಸಿಂಹಾಸನ. **ಸೂರಿಆವತ್ತ** ಪು: [ಸೂರ್ಯಾವರ್ತ] ಮೇರು ಪರ್ವತ. **ಸೂರಿಆವರಣ.** ಪು: [ಸೂರ್ಯಾವರಣ] ಮೇರು ಪರ್ವತ.
ಸೂರಿಲ. ಪು: [ದೇ] ಮಾವನ ಕಡೆಯ
ಸೂರಿಸ. 'ಸುಉರಿಸ' ಶಬ್ದವನ್ನು ನೋಡುವುದು.
ಸುರುತ್ತರವಡಿಂಸಗ. ಪುಂನ: [ಸೂರೋತ್ತರಾವತಂಸಕ] ಒಂದು ದೇವ-ವಿಮಾನ
ಸೂರುಲ್ಲಿ. 'ಸೂರಲ್ಲಿ' ಶಬ್ದವನ್ನು ನೋಡುವುದು.
ಸೂರೋದ. ಪು: [ಸೂರೋದ] ಒಂದು ಸಮುದ್ರ

ಸೂರೋದಯ. ನ: [ಸೂರೋದಯ] ಒಂದು ನಗರ
ಸೂರೋವರಾಗ. ಪು: [ಸೂರೋಪರಾಗ] ಸೂರ್ಯ ಗ್ರಹಣ
ಸೂಲ. ಪುಂನ: [ಶೂಲ] ಕಬ್ಬಿಣದ ಚೂಪಾದ ಆಯುಧ, ತ್ರಿಶೂಲ, ರೋಗ, ಕಾಯಿಲೆ, ಚೂಪಾದ ತುದಿ ಉಳ್ಳ ಮುಳ್ಳು, ಪು. ಬ: ಒಂದು ದೇಶ-ವಿಶೇಷ, **-ಪಾಣಿ.** ಪು: [-ಪಾಣಿ] ಒಬ್ಬ ಯಕ್ಷ, **-ಧರ.** ಪು: [-ಧರ] ಶಿವ. ಪರಮೇಶ್ವರ
ಸೂಲಚ್ಛ. ನ: [ಧೇ] ಚಿಕ್ಕ ಕೆರೆ
ಸೂಲತ್ಥಾರೀ. ಸ್ತ್ರೀ: [ದೇ] ಪಾರ್ವತಿ
ಸೂಲಾ. ಸ್ತ್ರೀ: [ಶೂಲಾ] ಚೂಪಾದ ತುದಿ ಉಳ್ಳ ಕಬ್ಬಿಣದ ಕಂಬ, **-ಇಯ.** ವಿ: [-ವಿತ, -ತಿಗ] ಶೂಲದ ಮೇಲೆ ಏರಿಸಲ್ಪಟ್ಟವನು.
ಸೂಲಾ. ಸ್ತ್ರೀ: [ದೇ] ವೇಶ್ಯೆ, ಸೂಳೆ
ಸೂಲಿ. ವಿ: [ಶೂಲಿನ್] ಶೂಲ ರೋಗದಿಂದ ನರಳುತ್ತಿರುವವನು, ಪು: ತ್ರಿಶೂಲಧಾರಿಯಾದ ಪರಮೇಶ್ವರ, ಶಿವ
ಸೂಲಿಯಾ. ಸ್ತ್ರೀ: [ಶೂಲಿಕಾ] ವಧೆ ಮಾಡುವ ಸಲುವಾಗಿ ಶೂಲಕ್ಕೆ ಏರಿಸಲ್ಪಡುವವನು.
ಸೂವ. ಪು: [ಸೂಪ] ಬೇಳೆ, ರುಚಿ ಕೊಡುವ ಸಾಂಬಾರ, **-ಯಾರ, ಸೂವಾರ.** ಪು: [-ಕಾರ] ಅಡುಗೆಯವನು.
ಸೂಸ. ಅಕ: [ಶುಷ್] ಒಣಗು
ಸೂಸರ. ವಿ: [ಸುಸ್ವರ] ಸುಂದರ ಕಂಠವುಳ್ಳ, ಮಧುರವಾದ ದನಿ ಉಳ್ಳ, ನ: ಸುಂದರವಾದ ದನಿ ಯಾವುದರಿಂದ ಲಭಿಸುತ್ತದೆಯೋ ಅಂಥ ನಾಮು-ಕರ್ಮ. **-ಪರಿವಾದಿಣೀ.** ಸ್ತ್ರೀ: [-ಪರಿವಾದಿನೀ] ಒಂದು ಬಗೆಯ ವೀಣೆ.
ಸೂಸಾಸ. ವಿ: [ಸೋಚ್ಛ್ವಾಸ] ಮೇಲುಸಿರು ಬಿಡುತ್ತಿರುವವನು, ಊರ್ಧ್ವ ಶ್ವಾಸವುಳ್ಳ
ಸೂಸಿಯ. ವಿ: [ಶೋಷಿತ] ಒಣಗಿಸಲ್ಪಟ್ಟ
ಸೂಸುಅ. ವಿ: [ಸುಶ್ರುತ] ಚೆನ್ನಾಗಿ ಕೇಳಿಸಿಕೊಳ್ಳಲ್ಪಟ್ಟ, ಚೆನ್ನಾಗಿ ತಿಳಿದಿರುವ. ಪು: ಹೆಸರಾಂತ ಆಯುರ್ವೇದ ವೈದ್ಯ, ಅವನು ಬರೆದ ಗ್ರಂಥ ಸುಶ್ರುತ ಸಂಹಿತೆ
ಸೂಹಅ}. **'ಸುಭಗ'** ಶಬ್ದವನ್ನು ನೋಡುವುದು.
ಸೂಹವ}.

ಸೇ-. ಸೇಅ=ಶ್ವೇತ, -ವಡ. ಪು: [-ಪಟ] ಶ್ವೇತಾಂಬರ ಜೈನ
ಸೇ. ಅ: [ದೇ] ವಾಕ್ಯದ ಪ್ರಾರಂಭ, ಅರ್ಥವಿವರಣೆ, ಪ್ರಶ್ನೆ, ಪ್ರಸ್ತುತ ಅರ್ಥದ ಪರಾಮರ್ಶೆ, ಮಧ್ಯೆ ಬಿಡುವಿಲ್ಲದಿರುವಿಕೆ-ಈ ಮೊದಲಾದ ಅರ್ಥಗಳನ್ನು ಸೂಚಿಸುವ ಅವ್ಯಯ
ಸೇ.} ಅಕ: [ಶೀ] ಮಲಗು, ನಿದ್ರಿಸು
ಸೇಅ}.
ಸೇಅ. ಸಕ: [ಸಿಚ್] ಬೇಯು
ಸೇಅ. ಪು: [ದೇ] ಗಣಪತಿ, ಗಣೇಶ
ಸೇಅ. ಪು: [ಸೇಯ] ಕೆಸರು, ಒಬ್ಬ ಅಧಮ ವ್ಯಕ್ತಿ
ಸೇಅ. ಪು: [ಸ್ವೇದ] ಬೆವರು(ಗಾ)
ಸೇಅ. ಪು: [ಸೇಕ] ನೀರನ್ನು ಸಿಂಪಡಿಸುವುದು
ಸೇಅ. ನ: [ಶ್ರೇಯಸ್] ಶುಭ, ಮಂಗಳ, ಅಭಿವೃದ್ಧಿ, ಮುಕ್ತಿ, ಮೋಕ್ಷ, ವಿ: ಅತ್ಯಂತ ಪ್ರಶಸ್ತವಾದ, ಪು: ಅಹೋರಾತ್ರದ ಎರಡನೇ ಮುಹೂರ್ತ
ಸೇಅ. ವಿ: [ಸೈಜ] ಕಂಪನದಿಂದ ಕೂಡಿದ, ಅಲುಗಾಡುವ
ಸೇಅ. ವಿ: [ಶ್ವೇತ] ಬಿಳಿಯ, ಬೆಳ್ಳನೆಯ, ಪು: ಕುಮಂಡ-ನಿಕಾಯದ ದಕ್ಷಿಣ ದಿಕ್ಕಿನ ಇಂದ್ರ, ಶಕ್ರನ ನಟ ಸೈನ್ಯದ ಒಡೆಯ, **-ಕಂಠ.** ಪು: [-ಕಂಠ] ಭೂತಾನಂದನೆಂಬ ಇಂದ್ರನ ಮಹಿಷ ಸೈನ್ಯದ ಅಧಿಪತಿ. **-ಪಡ, -ವಡ.** ಪು: [-ಪಟ] ಶ್ವೇತಾಂಬರ ಜೈನ
ಸೇಅ. ವಿ: [ಏಷ್ಯತ್] ಮುಂಬರಲಿರುವ, ಭವಿಷ್ಯದ, **ಸೇಆಲ.** ಪು: [- ಕಾಲ] **ಭವಿಷ್ಯದ ಕಾಲ**
ಸೇಅಂಕರ. ಪು: [ಶ್ರೇಯಸ್ಕರ] ಒಂದು ಜ್ಯೋತಿಷ್ಕ ಗ್ರಹ-ವಿಶೇಷ(ಠಾ)
ಸೇಅಂಕಾರ. ಪು: [ಶ್ರೇಯಸ್ಕಾರ] **'ಶ್ರೇಯಸ್'**ನ ಉಚ್ಚಾರಣೆ
ಸೇಅಂಬರ. ಪು: [ಶ್ವೇತಾಂಬರ] ಒಂದು ಜೈನ ಸಂಪ್ರದಾಯ, ನ: ಬಿಳಿಯ ಬಟ್ಟೆ
ಸೇಅಂಸ. ಪು: [ಶ್ರೇಯಾಂಸ] ಒಬ್ಬ ರಾಜಕುಮಾರ, ನಾಲ್ಕನೇ ವಾಸುದೇವ ಮತ್ತು ಬಲದೇವನ ಹಿಂದಿನ ಜನ್ಮದ ಧರ್ಮ ಗುರುವಾದ ಒಬ್ಬ ಜೈನ ಮುನಿ. **'ಸೆಜ್ಜಂಸ'** ಶಬ್ದವನ್ನು ನೋಡುವುದು.
ಸೇಅಂಸ. **'ಸೇಅ=ಶ್ರೇಯಸ್'** ಶಬ್ದವನ್ನು ನೋಡುವುದು.

ಸೇಅಣ. ನ: [**ಸೇಚನ**] ನೀರನ್ನು ಸಿಂಪಡಿಸುವುದು. **–ವಹ.** ಪು: [**–ಪಥ**] ಒಳ್ಳೆಯ ಹಾದಿ, ಸುಂದರವಾದ್ದು

ಸೇಅಣಗ}. ಪು: [**ಸೇಚನಕ**] ಶ್ರೇಣಿಕ ಮಹಾರಾಜನ

ಸೇಅಣಯ}.ಒಂದು ಆನೆ, ವಿ: **ನೀರು ಸಿಂಪಡಿಸುವವನು.** **'ಸೇಚಣಯ'** ಶಬ್ದವನ್ನು ನೋಡುವುದು.

ಸೇಅಣಿಯ. ವಿ: [**ಸೇವನೀಯ**] ಸೇವೆಮಾಡಲು ಯೋಗ್ಯವಾದ, ಸೇವಿಸಲ್ಪಡುವ, ಉಪಚರಿಸಲ್ಪಡುವ

ಸೇಅವಿಯಾ. ಸ್ತ್ರೀ: [**ಶ್ವೇತವಿಕಾ**] ಕೇಕಯಾರ್ಧ ದೇಶದ ಪ್ರಾಚೀನ ರಾಜಧಾನಿ.

ಸೇಆ. **'ಸೇವಾ'** ಶಬ್ದವನ್ನು ನೋಡುವುದು.

ಸೇಆಲ. **'ಸೇವಾಲ=ಶೈವಾಲ'** ಶಬ್ದವನ್ನು ನೋಡುವುದು.

ಸೇಆಲ. **'ಸೇಅ–ಆಲ' =ಏಷ್ಯತ್ ಕಾಲ'** ಶಬ್ದವನ್ನು ನೋಡುವುದು.

ಸೇಆಲ. ಪು: [**ದೇ**] ಗ್ರಾಮದ ಮುಖಂಡ, ಸಾನ್ನಿಧ್ಯ ವಹಿಸುವ ಯಕ್ಷ, ವ್ಯವಸಾಯ ಮಾಡುವ ಗೃಹಸ್ಥ, ರೈತ

ಸೇಆಲೀ. ಸ್ತ್ರೀ: [**ದೇ**] ಗರಿಕೆ ಹುಲ್ಲು

ಸೇಆಲುಅ. ಪು: [**ದೇ**] ಕೋರಿಕೆಯ ಸಿದ್ಧಿಗಾಗಿ ದಾನವಾಗಿ ಬಿಟ್ಟ ಎತ್ತು

ಸೇಇಅ. ನ: [**ಸ್ವೇದಿತ**] ಬೆವರು(ಭವಿ)

ಸೇಇಆ.} ಸ್ತ್ರೀ: [**ಸೇತಿಕಾ**] ಎರಡು ಅರ್ಧ ಬೊಗಸೆಗಳ

ಸೇಇಗಾ}. ಒಂದು ಅಳತೆ(= ಒಂದು ಬೊಗಸೆ)

ಸೇಉ. ಪಂನ: [**ಸೇತು**] ಸೇತುವೆ, ಗಿಡದ ಅಥವಾ ಮರದ ಪಾತಿ, ಮಡಿ, ಮಡಿಯಿಂದ ನೀರು ಹಾಯಿಸಲು ಯೋಗ್ಯವಾದ ಹೊಲ, ದಾರಿ. **–ಬಂಧ.** ಪು: [**–ಬಂಧ**] ಸೇತುವೆ ಕಟ್ಟುವುದು. **–ವಹ.** ಪು: [**–ಪಥ**] ಸೇತುವೆಯ ಮಾರ್ಗ

ಸೇಉ. ವಿ: [**ಸೇಕ್ತೃ**] ನೀರು ಸಿಂಪಡಿಸುವವನು, ನೀರು ಎರಚುವವನು

ಸೇಉಯ. ವಿ: [**ಸೇವಕ**] ಸೇವೆ ಮಾಡುವವನು, ಆಳು

ಸೆಂದೂರ. **'ಸಿಂದೂರ'** ಶಬ್ದವನ್ನು ನೋಡುವುದು.

ಸೆಂಧವ. **'ಸಿಂಧವ'** ಶಬ್ದವನ್ನು ನೋಡುವುದು.

ಸೆಂಭ. **'ಸಿಂಭ'** ಶಬ್ದವನ್ನು ನೋಡುವುದು.

ಸೆಂಭಿಯ. **'ಸಿಂಭಿಯ'** ಶಬ್ದವನ್ನು ನೋಡುವುದು.

ಸೇವಾಂಡಯ. ಪು: [**ದೇ**] ಚಿಟಿಕೆಯ ಶಬ್ದ

ಸೇಚಣಯ. ನ: [**ಸೇಚನಕ**] ಸಿಂಪಡಿಕೆ, ನೀರನ್ನು ಸಿಂಪಡಿಸವುದು. **'ಸೇಅಣಯ'** ಶಬ್ದವನ್ನು ನೋಡುವುದು.

ಸೇಚಾಣ(ಅಪ). ಪು: [**ಶ್ಯೇನ**] ಒಂದು ಛಂದಸ್ಸು, **'ಸೇಣ=ಶ್ಯೇನ'** ಶಬ್ದವನ್ನು ನೋಡುವುದು.

ಸೆಚ್ಚ. ನ: [**ಶೈತ್ಯ**] **ಶೀತ, ಥಂಡಿ**

ಸೆಜ್ಜ–. **'ಸೆಜ್ಜಾ'** ಶಬ್ದವನ್ನು ನೋಡುವುದು. **–ವಇ.** ಪು: [**–ಪತಿ**] ವಸತಿಯ ಒಡೆಯ,ಮನೆಯ ಯಜಮಾನ

ಸೆಜ್ಜಂಭವ. **'ಸಿಜ್ಜಂಭವ'** ಶಬ್ದವನ್ನು ನೋಡುವುದು.

ಸೆಜ್ಜಂಸ. ಪು: [**ಶ್ರೇಯಾಂಸ**] ೧೧ನೇ ತೀರ್ಥಂಕರನ ಹೆಸರು. ಭಗವಾನ್ ಆದಿನಾಥನಿಗೆ ಕಬ್ಬಿನ ರಸ ನೀಡಿ ಪಾರಣೆ ಮಾಡಿಸಿದ್ದ ಒಬ್ಬ ರಾಜಪುತ್ರ. ಮಾರ್ಗಶಿರ ಮಾಸದ ಲೋಕೋತ್ತರವಾದ ಹೆಸರು. ಭಗವಾನ್ ಮಹಾವೀರನ ತಂದೆ., ರಾಜ ಸಿದ್ಧಾರ್ಥ. **'ಸಿಜ್ಜಂಸ, ಸೇಅಂಸ'** ಶಬ್ದವನ್ನು ನೋಡುವುದು.

ಸೆಜ್ಜಂಸ. **'ಸೇಅಂಸ=ಶ್ರೇಯಾಂಸ'** ಶಬ್ದವನ್ನು ನೋಡುವುದು.

ಸೆಜ್ಜಾ. ಸ್ತ್ರೀ: [**ಶಯ್ಯಾ**] ಹಾಸಿಗೆ, ಶಯ್ಯೆ, ಮನೆ, ವಸತಿ, **–ಯರ.** ಪು: [**–ತರ**] ಆಶ್ರಯ ನೀಡಿದ ಮಾಲೀಕ, ಸಾಧುವಿಗೆ ಇರಲು ಜಾಗ ನೀಡಿದ ಮನೆಯ ಯಜಮಾನ(ಓಘ) **–ವಾಲ.** ಪು: [**–ಪಾಲ**] ಹಾಸಿಗೆಯ ಕೆಲಸ ಮಾಡುವ ಆಳು. **'ಸಿಜ್ಜಾ'** ಶಬ್ದವನ್ನು ನೋಡುವುದು.

ಸೆಜ್ಜಾರಿಅ. ನ: [**ದೇ**] ಉಯ್ಯಾಲೆಯಲ್ಲಿ ತೂಗುವುದು

ಸೆಟ್ಠಿ. ಪು: [**ದೇ. ಶ್ರೇಷ್ಠಿನ್**] ಗ್ರಾಮದ ಮುಖ್ಯಸ್ಥ, ಶೇಠ,

ಸೇಡಿಯ. ನ: [**ದೇ**] ಒಂದು ಬಗೆಯ ತೃಣ.

ಸೇಡಿಯಾ. ಸ್ತ್ರೀ: [**ದೇ. ಸೇಟಿಕಾ**] ಬಿಳಿ ಮಣ್ಣು,

ಸೇಢಿ. ಸ್ತ್ರೀ: [**ಶ್ರೇಣಿ**] **'ಸೇಢೀ=ಶ್ರೇಣೀ'** ಶಬ್ದವನ್ನು ನೋಡುವುದು.

ಸೇಡಿಯಾ}. [**ಸೇಢೀ**] ಬಿಳಿ ಮಣ್ಣು

ಸೇಢೀ. ಸ್ತ್ರೀ: [**ಶ್ರೇಣೀ**] ಸಾಲು, ಪಂಕ್ತಿ, ಅಸಂಖ್ಯ ಯೋಜನೆಗಳ ಒಂದು ಅಳತೆ. **'ಸೇಣಿ'** ಶಬ್ದವನ್ನು ನೋಡುವುದು.

ಸೇಣ. ಪು: [**ಶ್ಯೇನ**] ಗಿಡುಗ, ವಿದ್ಯಾಧರ ವಂಶದ ಒಬ್ಬ ರಾಜ.

ಸೇಣ. 'ಸೆಣ್ಣ' ಶಬ್ದವನ್ನು ನೋಡುವುದು.
ಸೇಣಾ. ಸ್ತ್ರೀ: [ಸೇನಾ] ಭಗವಾನ್ ಸಂಭವನಾಥನ ತಾಯಿ, ಸೈನ್ಯ, ಮಹರ್ಷಿ ಸ್ಥೂಲಭದ್ರನ ಸೋದರಿಯಾಗಿದ್ದ ಒಬ್ಬ ಜೈನ ಸಾಧ್ವಿ, ಮೂರು ಆನೆ, ಮೂರು ರಥ ೯ ಕುದುರೆ ಮತ್ತು ೧೫ ಪದಾತಿಗಳನ್ನೊಳಗೊಂಡಿರುವ ಸೇನೆ, –ಣಿಯ, –ಣೀ, –ಣೀಯ. ಪು: [–ನೀ] ಸೇನಾಧಿಪತಿ. –ಮುಹ. ನ: [–ಮುಖ] ೯ ಆನೆ, ೯ ರಥ ೨೭ ಕುದುರೆ, ಮತ್ತು ೪೫ ಪದಾತಿಗಳನ್ನೊಳಗೊಂಡ ಸೇನೆ. ವಇ. ಪು: [–ಪತಿ] ಸೇನಾಧಿಪತಿ.. –ಹಿವಇ. ಪು: [–ಧಿಪತಿ] ಅದೇ ಅರ್ಥ.
ಸೇಣವಚ್ಚ. ನ: [ಸೇನಾಪತ್ಯ] ಸೇನಾಧಿಪತಿತ್ವ
ಸೇಣಿ. ಸ್ತ್ರೀ: [ಶ್ರೇಣಿ] ಪಂಕ್ತಿ, ಸಾಲು, ಸಮೂಹ, ಕುಂಬಾರನೇ ಮೊದಲಾದ ಮನುಷ್ಯ ಜಾತಿ
ಸೇಣಿಅ}. ಪು: [ಶ್ರೇಣಿಕ] ಮಗಧದ ಪ್ರಖ್ಯಾತ ರಾಜ.
ಸೇಣಿಗ}. ಒಬ್ಬ ಜೈನ ಮುನಿ
ಸೇಣಿಆ. ಸ್ತ್ರೀ: [ಸೇಣಿಕಾ] ಒಂದು ಜೈನ ಮುನಿ ಶಾಖೆ
ಸೇಣಿಆ}. ಸ್ತ್ರೀ: [ಸೇನಿಕಾ] ಛಂದಸ್ಸಿನ ಒಂದು ಪ್ರಭೇದ
ಸೇಣಿಕಾ}.
ಸೇಣಿಗ. ಪು: [ಸೈನಿಕ] ಸೇನೆ ಸಿಪಾಯಿ
ಸೇಣೀ. ಸ್ತ್ರೀ: [ಶ್ರೇಣೀ] 'ಸೇಣಿ' ಶಬ್ದವನ್ನು ನೋಡುವುದು.
ಸೆಣ್ಣ. 'ಸಿನ್ನ= ಸೈನ್ಯ' ಶಬ್ದವನ್ನು ನೋಡುವುದು.
ಸೆತ್ತ. 'ಸಿತ್ತ=ಸಿಕ್ತ' ಶಬ್ದವನ್ನು ನೋಡುವುದು.
ಸೆತ್ತ(ಅಪ). 'ಸೇಅ=ಶ್ವೇತ' ಶಬ್ದವನ್ನು ನೋಡುವುದು.
ಸೆತ್ತುಂಜ. ಪು: [ಶತ್ರುಂಜಯ] ಒಂದ ಪ್ರಸಿದ್ಧ ಪರ್ವತ
ಸೇದ. 'ಸೇಅ= ಸ್ವೇದ' ಶಬ್ದವನ್ನು ನೋಡುವುದು.
ಸೇಧ. 'ಸೇಹ=ಸೇಹ' ಶಬ್ದವನ್ನು ನೋಡುವುದು.
ಸೆನ್ನ. 'ಸಿನ್ನ=ಸೈನ್ಯ' ಶಬ್ದವನ್ನು ನೋಡುವುದು.
ಸೆಪ್ಪ}. 'ಸೆಮ್ಹ' ಶಬ್ದವನ್ನು ನೋಡುವುದು.
ಸೇಫ}.
ಸೇಫ. ಪುಂನ: [ಶೇಫ] ಶಿಶ್ನ
ಸೇಭಾಲಿಆ. ಸ್ತ್ರೀ: [ಶೇಫಾಲಿಕಾ] ಕರಿಯ ಲಕ್ಕಿ ಗಿಡ, ಒಂದು ಬಳ್ಳಿ
ಸೇಮುಸೀ}. ಸ್ತ್ರೀ: [ಶೇಮುಷೀ] ಬುದ್ಧಿ
ಸೇಮುಹೀ}.
ಸೆಮ್ಹ. ಪುಂಸ್ತ್ರೀ: [ಶ್ಲೇಷ್ಮನ್] ಕಫ,

ಸೇರ. ವಿ: [ಸ್ವೈರ] ಸ್ವಚ್ಛಂದ ವ್ಯಕ್ತಿ, ಸ್ವತಂತ್ರವಾಗಿ, ಸ್ವೇಚ್ಛೆಯಾಗಿ ನಡೆಯುವವನು
ಸೇರ. ವಿ: [ಸ್ಮೇರ] ಕಿರು ನಗೆಯಿಂದ ಕೂಡಿದ, ಮುಗುಳು ನಗೆಯಿಂದ ಕೂಡಿದ, ಅರಳಿದ.
ಸೇರ. ಪು: [ದೇ] ಒಂದು ಅಳತೆ
ಸೇರಂಧೀ. ಸ್ತ್ರೀ: [ಸೈರಂಧ್ರೀ] ಅನ್ಯರ ಮನೆಯಲ್ಲಿದ್ದುಕೊಂಡು ಕಸೂತಿ, ಹೊಲಿಗೆಯೇ ಮೊದಲಾದ ಕುಶಲ ಕಾರ್ಯಗಳನ್ನು ಮಾಡಿಕೊಂಡು ಸ್ವತಂತ್ರಳಾಗಿರುವವಳು, ದ್ರೌಪದಿ ವಿರಾಟರಾಜನ ಅರಮನೆಯಲ್ಲಿ ಈ ಹೆಸರಿನಿಂದ ಇದ್ದಳು
ಸೇರಾಹ. ಪು: [ದೇ] ಕುದುರೆಯ ಒಂದು ಉತ್ತಮ ತಳಿ
ಸೇರಿಭ. ಪು: [ದೇ] ಗಾಡಿಗೆ ಕಟ್ಟುವ ಎತ್ತು
ಸೇರಿಭ. 'ಸೇರಿಹ' ಶಬ್ದವನ್ನು ನೋಡುವುದು.
ಸೇರಿಯ. ಪಂಸ್ತ್ರೀ: [ದೇ] ಒಂದು ವಾದ್ಯ–ವಿಶೇಷ
ಸೇರಿಯಯ. ಪು: [ದೇ] ಬಳ್ಳಿ ಹುಲ್ಲುಗಳ ಪೊದರು.
ಸೇರಿಹ. ಪುಂಸ್ತ್ರೀ: [ಸೈರಿಭ]ಎಮ್ಮೆ,ಕೋಣ.ಸ್ತ್ರೀ:–ಹೀ.
ಸೇರೀ. ಸ್ತ್ರೀ: [ದೇ] ಉದ್ದನೆಯ ಆಕೃತಿ, ಭದ್ರಾಕೃತಿ, ಮಾರ್ಗ, ಹಾದಿ, ಯಂತ್ರ ನಿರ್ಮಿತ ನರ್ತಕಿ.
ಸೇಲ. ಪು: [ಶೈಲ] ಪರ್ವತ, ಬೆಟ್ಟ, ಕಲ್ಲು, ನ: ಕಲ್ಲುಗಳ ರಾಶಿ, –ಕಾರ. ಪು: [–ಕಾರ] ಕಲ್ಲುಗಳನ್ನು ಕೆತ್ತುವ ಶಿಲ್ಪಿ, ಕಲ್ಲುಕುಟಿಗ. –ಗಿಹ. ನ: [–ಗೃಹ] ಪರ್ವತದಲ್ಲಿ ಕಟ್ಟಲಾಗಿರುವ ಮನೆ. –ಜಾಯಾ. ಸ್ತ್ರೀ: [–ಜಾಯಾ] ಪಾರ್ವತಿ. –ತ್ಥಂಭ. ಪು: [–ಸ್ತಂಭ] ಕಲ್ಲಿನ ಕಂಬ, –ಪಾಲ, –ವಾಲ. ಪು: [–ಪಾಲ] ಧರಣ ಮತ್ತು ಭೂತಾನಂದ ಎಂಬ ಇಂದ್ರರ ಒಬ್ಬೊಬ್ಬ ಲೋಕಪಾಲ. ಒಬ್ಬ ಜೈನೇತರ ಧರ್ಮಾವಲಂಬಿ, –ಸ. ನ: [–ಸ] ವಜ್ರ. –ಸಿಹರ. ನ: [–ಶಿಖರ] ಪರ್ವತದ ಶಿಖರ. –ಸುಆ. ಸ್ತ್ರೀ: [–ಸುತಾ] ಪಾರ್ವತಿ.
ಸೇಲಗ}.ಪು: [ಶೈಲಕ] ಒಬ್ಬ ರಾಜರ್ಷಿ, ಒಬ್ಬ
ಸೇಲಯ}.ಯಕ್ಷ,–ಪುರ. ನ: [–ಪುರ] ಒಂದು ನಗರ.
ಸೇಲಯಯ. ನ: [ಶೈಲಕಜ] ಒಂದು ಗೋತ್ರ
ಸೇಲಾ. ಸ್ತ್ರೀ: [ಶೈಲಾ] ಮೂರನೇ ನರಕ–ಭೂಮಿ
ಸೇಲಾಇಚ್ಚ. ಪು: [ಶೈಲಾದಿತ್ಯ] ವಲಭೀಪುರದ ಒಬ್ಬ ಪ್ರಸಿದ್ಧ ರಾಜ.

ಸೇಲು. ಪು: [**ಶೈಲು**] ಶ್ಲೇಷ್ಮ ಎಂಬ ಹೆಸರಿನ ವೃಕ್ಷ.
ಸೇಲೂಸ. ಪು: [**ಶೈಲೂಷ**] ಜೂಜುಗಾರ, ಮೋಸಗಾರ, ವಂಚಕ, ನಟ, ನರ್ತಕ
ಸೇಲೇಯ. ವಿ: [**ಶೈಲೇಯ**] ಪರ್ವತದಲ್ಲಿ ಹುಟ್ಟಿದ, ಪರ್ವತೀಯ
ಸೇಲೇಸ. ಪು: [**ಶೈಲೇಶ**] ಮೇರು ಪರ್ವತ(ವಿಸೇ)
ಸೇಲೇಸೀ. ಸ್ತ್ರೀ: [**ಶೈಲೇಶೀ**] ಮೇರುವಿನ ಹಾಗೆ ನಿಶ್ಚಲ ಸಮಾಧಿ ಸ್ಥಿತಿ, ಯೋಗಿಯ ಸರ್ವೋತ್ಕೃಷ್ಟ ಸ್ಥಿತಿ
ಸೇಲೋದಇ. ಪು: [**ಶೈಲೋದಾಯಿನ್**] ಒಬ್ಬ ಜೈನೇತರ ಧರ್ಮಾವಲಂಬಿ ಗೃಹಸ್ಥ
ಸೆಲ್ಲ. '**ಸೇಲ=ಶೈಲ**' ಶಬ್ದವನ್ನು ನೋಡುವುದು.
ಸೆಲ್ಲ. ಪು: [**ದೇ**] ಜಿಂಕೆಯ ಮರಿ, ಬಾಣ, ಕುಂತ, ಭರ್ಜಿ
ಸೆಲ್ಲ. ಪು: [**ಶೈಲ್ಯ**] ಒಬ್ಬ ರಾಜ.
ಸೆಲ್ಲಗ. ಪ: [**ಶೈಲ್ಯಕ**] ಭುಜದಿಂದ ಚಲಿಸುವ ಒಂದು ಜಾತಿಯ ಪ್ರಾಣಿ
ಸೆಲ್ಲಿ. ಸ್ತ್ರೀ: [**ದೇ**] ಹಗ್ಗ, ದಾರ
ಸೇವ. ಸಕ: [**ಸೇವ್**] ಸೇವಿಸು, ಸೇವೆ ಸಲ್ಲಿಸು, ಪೂಜಿಸು, ಆಶ್ರಯಿಸು, ಉಪಭೋಗಿಸು, ಅನುಭವಿಸು
ಸೇವಗ. '**ಸೇವಯ**' ಶಬ್ದವನ್ನು ನೋಡುವುದು.
ಸೇವಡ. '**ಸೇ=ಶ್ವೇತ**' ಶಬ್ದವನ್ನು ನೋಡುವುದು.
ಸೇವಣ. ನ: [**ಸೇವನ**] ಹೊಲಿಯುವುದು, ಹೊಲಿಗೆ ಕೆಲಸ ಮಾಡುವುದು, ಸೇವೆ(ಉತ್ತ)
ಸೇವಣಯಾ}. ಸ್ತ್ರೀ: [**ಸೇವನಾ**] ಸೇವೆ
ಸೇವಣಾ}.
ಸೇವಯ. ವಿ: [**ಸೇವಕ**] ಸೇವೆ ಮಾಡುವವನು, **ಪು:** ಆಳು, ಸೇವಕ,
ಸೇವಲ. ನ: [**ಶೈವಲ**] ಕೆರೆ, ನದಿಗಳಲ್ಲಿ ನೀರಿಗೆ ಹತ್ತುವ ಪಾಚಿ
ಸೇವಾ. ಸ್ತ್ರೀ: [**ಸೇವಾ**] ಭಜನೆ, ಪೂಜೆ, ಉಪಾಸನೆ, ಉಪಭೋಗ, ಆಶ್ರಯ, ಆರಾಧನೆ
ಸೇವಾಡ}. ನ: [**ಶೈವಾಲ**] ಪಾಚಿ, **ಪು:** ಗೌತಮ
ಸೇವಾಲ}. ಸ್ವಾಮಿಯಿಂದ ಜಾಗೃತಗೊಳಿಸಲ್ಪಟ್ಟ ಒಬ್ಬ ತಪಸ್ವಿ. **–ಸೇವಾಡೋದಾಇ. ಪು:** [**–ಸೇವಾಡೋದಾಯಿನ್**] ಭಗವಾನ್ ಮಹಾವೀರನ ಕಾಲದಲ್ಲಿದ್ದ ಒಬ್ಬ ಜೈನೇತರ ವ್ಯಕ್ತಿ
ಸೇವಾಲ. ಪು: [**ದೇ**] ಕೆಸರು,
ಸೇವಾಲಿ. ಪು: [**ಶೈವಾಲಿನ್**] ಗೌತಮ ಸ್ವಾಮಿಯಿಂದ ಜಾಗೃತಗೊಳಿಸಲ್ಪಟ್ಟ ಒಬ್ಬ ತಪಸ್ವಿ
ಸೇವಾಲಿಯ. ವಿ: [**ಶೈವಾಲಿಕ, ತ**] ಪಾಚಿಯಿಂದ ಕೂಡಿದ
ಸೇವಿ}. ವಿ: [**ಸೇವಿನ್**] ಸೇವೆ ಮಾಡುವವನು
ಸೇವಿತ್ತು}. ವಿ: [**ಸೇವಿತೃ**]
ಸೇವಿಯ. ವಿ: [**ಸೇವಿತ**] ಸೇವೆ ಮಾಡಲ್ಪಟ್ಟವನು
ಸೆವ್ವಾ. '**ಸೇವಾ**' ಶಬ್ದವನ್ನು ನೋಡುವುದು.
ಸೇಸ. ಪು: [**ಶೇಷ**] ಸರ್ಪರಾಜನಾದ ಆದಿಶೇಷ, ಛಂದಸ್ಸಿನ ಒಂದು ಪ್ರಭೇದ, ಬಾಕಿ ಉಳಿದಿರುವ, **–ಮಈ, –ವಈ. ಸ್ತ್ರೀ:** [**–ವತೀ**] ಏಳನೇ ವಾಸುದೇವನ ತಾಯಿ. ದಕ್ಷಿಣ ರುಚಕ ಪರ್ವತದ ಮೇಲಿರುವ ದಿಕ್ಕುಮಾರಿ ದೇವಿ. ಒಂದು ಬಳ್ಳಿ. ಭಗವಾನ್ ಮಹಾವೀರನ ಮಗಳ ಮಗಳು. **–ವ. ನ:** [**–ವತ್**] ಅನುಮಾನದ ಒಂದು ಪ್ರಭೇದ, **ಸೇಸಾರಾಅ. ಪು:** [**–ರಾಜ**] ಒಂದು ಛಂದಸ್ಸು.
ಸೇಸವ. ನ: [**ಶೈಶವ**] ಬಾಲ್ಯಾವಸ್ಥೆ
ಸೇಸಾ. ಸ್ತ್ರೀ: [**ಶೇಷಾ**] ನಿರ್ಮಾಲ್ಯ, ಪೂಜೆಯ ನಂತರ ದೇವರ ವಿಗ್ರಹದಿಂದ ತೆಗೆದ ಪುಷ್ಪ
ಸೇಸಿಅ. ವಿ: [**ಶೇಷಿತ**] ಬಾಕಿ ಉಳಿದಿರುವುದು
ಸೇಸಿಅ. ವಿ: [**ಶ್ಲೇಷಿತ**] ಪರಸ್ಪರ ಸೇರಿಸಲ್ಪಟ್ಟಿರುವ, ಒಂದಕ್ಕೊಂದು ಜೋಡಿಸಲ್ಪಟ್ಟಿರುವ ಅಂಟಿಸಲ್ಪಟ್ಟಿರುವ
ಸೇಹ. ಅಕ: [**ನಶ್**] ಓಡಿಹೋಗು, ಪಲಾಯನ ಮಾಡು
ಸೇಹ. ಸಕ: [**ಶಿಕ್ಷಯ್**] ಕಲಿಸು, ಕಲಿ, ಶಿಕ್ಷೆ ನೀಡು, ದಂಡಿಸು. '**ಸೇಹಂತಿ**'
ಸೇಹ. ಪು: [**ದೇ. ಸೇಹ**] ದೇಹದಲ್ಲಿ ಮುಳ್ಳುಗಳನ್ನು ಹೊಂದಿದ್ದು ಭುಜದಿಂದ ಚಲಿಸುವ ಒಂದು ಪ್ರಾಣಿ
ಸೇಹ. ಪು: [**ಶೈಕ್ಷ**] ಹೊಸದಾಗಿ ದೀಕ್ಷೆ ತಗೆದುಕೊಂಡಿರುವ ಸಾಧು, ಸನ್ಯಾಸಿ, ಸನ್ಯಾಸ ದೀಕ್ಷೆ ತೆಗೆದುಕೊಳ್ಳಲಿರುವವನು, ಶಿಷ್ಯ
ಸೇಹ. ಪು: [**ಸೇಧ**] ಸಿದ್ಧಿ
ಸೇಹಂಬ. ವಿ: [**ಸೇಧಾಮ್ಲ**] ಬೇಯಿಸಿದ ನಂತರದಲ್ಲಿ ಹುಳಿಯನ್ನು ಬೆರಸುವ ಒಂದು ಖಾದ್ಯ ಪದಾರ್ಥ.

ಸೇಹಣಾ ಸ್ತ್ರೀ: [ಶಿಕ್ಷಣಾ] ಶಿಕ್ಷೆ, ದಂಡನೆ
ಸೇಹರ. ಪು: [ಶೇಖರ] ಶಿಖೆ, ಜುಟ್ಟು, ತಲೆಯಲ್ಲಿ ಇರುವ ಹೂಮಾಲೆ, ತಲೆಗೆ ಧರಿಸಿರುವ ಒಡವೆ, ಶಿಖರ, ಒಂದು ಛಂದಸ್ಸು
ಸೇಹರಯ. ಪು: [ದೇ] ಚಕ್ರವಾಕ ಪಕ್ಷಿ
ಸೇಹಾಲಿಆ. **'ಸೇಭಾಲಿಆ'** ಶಬ್ದವನ್ನು ನೋಡುವುದು.
ಸೇಹಾಲೀ. ಸ್ತ್ರೀ: [ಶೇಫಾಲೀ] ಒಂದು ಲತೆ, ಕರಿಯ ಲಕ್ಕಿ ಗಿಡ
ಸೇಹಾವ. **'ಸೇಹ=ಶಿಕ್ಷಯ್'** ಶಬ್ದವನ್ನು ನೋಡುವುದು.
ಸೇಹಾವಿಅ. ವಿ: [ಶಿಕ್ಷಿತ] ಕಲಿಸಲ್ಪಟ್ಟ, ಶಿಕ್ಷಣವನ್ನು ಪಡೆದಿರುವ(ಭಗ)
ಸೇಹಿ. **'ಸಿದ್ಧಿ'** ಶಬ್ದವನ್ನು ನೋಡುವುದು.
ಸೇಹಿಅ. ವಿ: [ಸೈದ್ಧಿಕ] ಮುಕ್ತಿಗೆ ಸಂಬಂಧಿಸಿದ, ನಿರ್ವಾಣಕ್ಕೆ ಸಂಬಂಧಿಸಿದ
ಸೇಹಿಅ. ವಿ: [ದೇ] ಗತ, ಹೋದ, ತಲುಪಿರುವ, ಕಳೆದು ಹೋದ
ಸೋ. **ಅಕ:** [ಸ] ಹೆಂಡ ಮಾಡು, ಮದಿರೆ ತಯರಿಸು, ಪೀಡಿಸು, ಹಿಂಸಿಸು, ಕಡೆ, ಮಥಿಸು, **ಅಕ:** ಸ್ನಾನಮಾಡು
ಸೋ}. ಅಕ: [ಸ್ವಪ್] ನಿದ್ರಿಸು, ಮಲಗು
ಸೋಅ}.
ಸೋಅ. ಸಕ: [ಶುಚ್] ಶೋಕಿಸು, ಶುದ್ಧಿ ಮಾಡು, ತೊಳೆ
ಸೋಅ. ನ: [ಶೌಚ] ಶುದ್ಧಿ, ಪವಿತ್ರತೆ, ನೈರ್ಮಲ್ಯ, ಕಳ್ಳತನ ಮಾಡದಿರುವುದು, ಪರರ ದ್ರವ್ಯವನ್ನು ಅಪಹರಿಸದಿರುವುದು
ಸೋಅ. ಪು: [ಶೋಕ] ಶೋಕ, ದುಃಖ
ಸೋಅ. ನ: [ಶ್ರೋತ್ರ] ಕಿವಿ, ಶ್ರವಣೇಂದ್ರಿಯ, **ಸೋಆಮಯ.** ವಿ: [ಶ್ರೋತ್ರಮಯ] ಕಿವಿಯಿಂದ ಹುಟ್ಟಿದ
ಸೋಅ. ಪುಂನ: [ಸ್ರೋತಸ್] ಪ್ರವಾಹ, ನದಿ, ರಂಧ್ರ, ವೇಗ
ಸೋಅಣ. ನ: [ಸ್ವಪನ] ಮಲಗುವುದು,
ಸೋಅಣ. ನ: [ಶೋಚನ] ಶೋಕ, ದುಃಖಿಸುವುದು, ಶುದ್ಧಿ, ತೊಳೆಯುವುದು. ಸ್ತ್ರೀ: **-ಯಾ,** ದೀನತೆ, ದೈನ್ಯ
ಸೋಅಮಲ್ಲ. ನ: [ಸೌಕುಮಾರ್ಯ] ಸುಕುಮಾರತೆ, ಅತ್ಯಂತ ಕೋಮಲವಾಗಿರುವುದು
ಸೋಅರ. ಪು: [ಸೋದರ] ಒಡಹುಟ್ಟಿದವನು. ಸ್ತ್ರೀ: **-ರಾ.** ಸೋದರಿ
ಸೋಅರಿಅ. ವಿ: [ಶೌಕರಿಕ] ಹಂದಿಗಳ ಬೇಟೆಯಾಡುವವನು, ಬೇಟೆಗಾರ. ಕಟುಕ,
ಸೋಅರಿಅ. ವಿ: [ಸೋದರ್ಯ] ಒಡಹುಟ್ಟಿದ, ಒಂದೇ ಹೊಟ್ಟೆಯಲ್ಲಿ ಹುಟ್ಟಿದವನು
ಸೋಅಲ್ಲ. **'ಸೋಅಮಲ್ಲ'** ಶಬ್ದವನ್ನು ನೋಡುವುದು.
ಸೋಅವಿಯ. ಸ್ತ್ರೀನ; [ಶೌಚ] ಶುಧ್ಧಿ, ಪವಿತ್ರತೆ. ಸ್ತ್ರೀ: **-ಯಾ**
ಸೋಅವ್ವ. **'ಸುಣ=ಶ್ರು'** ಶಬ್ದವನ್ನು ನೋಡುವುದು.
ಸೋಆಮಣೀ}. ಸ್ತ್ರೀ: [ಸೌದಾಮನೀ,-ಮಿನೀ] ಮಿಂಚು,
ಸೋಆಮಿಣೀ}. ವಿದ್ಯುತ್, ಒಬ್ಬ ದಿಕ್ಕುಮಾರಿ ದೇವಿ
ಸೋಇಅ. ನ: [ಶೋಚಿತ] ಚಿಂತೆ, ವಿಚಾರ. **'ಸೋಚಿಯ'** ಶಬ್ದವನ್ನು ನೋಡುವುದು.
ಸೋಇಂದಿಯ. ನ: [ಶ್ರೋತ್ರೇಂದ್ರಿಯ] ಕಿವಿ, ಶ್ರವಣೇಂದ್ರಿಯ
ಸೋಇಂಧಿಅ. **'ಸೋಗಂಧಿಅ'** ಶಬ್ದವನ್ನು ನೋಡುವುದು.
ಸೋಉ. ವಿ: [ಶ್ರೋತೃ] ಕೇಳಿಸಿಕೊಳ್ಳುವವನು,
ಸೋಉಣಿಅ. **'ಸೋವಣಿಅ'** ಶಬ್ದವನ್ನು ನೋಡುವುದು.
ಸೋಉಮಲ್ಲ. **'ಸೋಅಮಲ್ಲ'** ಶಬ್ದವನ್ನು ನೋಡುವುದು.
ಸೊಂಡ. **'ಸುಂಡ'** ಶಬ್ದವನ್ನು ನೋಡುವುದು. **-ಮಗರ.** ಪು: [-ಮಕರ] ಮೊಸಳೆಯ ಒಂದು ಜಾತಿ
ಸೊಂಡಾ. ಸ್ತ್ರೀ: [ಶುಂಡಾ] ಸುರೆ, ಹೆಂಡ, ಮದ್ಯ, ಆನೆಯ ಸೊಂಡಿಲು
ಸೊಂಡಿಅ. ಪು: [ಶೌಂಡಿಕ] ಹೆಂಡ ಮಾರುವವನು, ಮದಿರೆ ಮಾರಾಟಗಾರ
ಸೊಂಡೀರ. ವಿ: [ಶೌಂಡೀರ] ಶೂರ, ವೀರ, ಪರಾಕ್ರಮಿ, ಗರ್ವದಿಂದ ಕೂಡಿದವ, ಗರ್ವಿ
ಸೊಂಡೀರ.} ವಿ: [ಶೌಂಡೀರ್ಯ]
ಸೊಂಡೀರಿಮ}. ಪುಂಸ್ತ್ರೀ: [ಶೌಂಡೀರಿಮನ್] ಪರಾಕ್ರಮ, ಶೌರ್ಯ, ಗರ್ವ
ಸೊಂದಜ್ಜ.(ಶೌ). **'ಸುಂದೇರ'** ಶಬ್ದವನ್ನು ನೋಡುವುದು.
ಸೊಕ್ಕ. **'ಸುಕ್ಕ=ಶುಷ್ಕ'** ಶಬ್ದವನ್ನು ನೋಡುವುದು.
ಸೋಗ. **'ಸೋಅ=ಶೋಕ'** ಶಬ್ದವನ್ನು ನೋಡುವುದು.
ಸೋಗಂಧ}. ನ: [ಸೌಗಂಧ್ಯ] ನಿರಂತರ ೨೪ ದಿನಗಳ
ಸೋಗಂಧಿಅ}. ಉಪವಾಸ, ಸುವಾಸನೆ

ಸೋಗಂಧಿಅ. ನ: [ಸೌಗಂಧಿಕ] ರತ್ನದ ಒಂದು ಪ್ರಕಾರ, ರತ್ನ ಪ್ರಭಾ ಎಂಬ ನರಕ ಭೂಮಿಯ ಒಂದು ಸೌಗಂಧಿಕ ರತ್ನಮಯ ಕಾಂಡ., ನೀರಿನಲ್ಲಿ ಬೆಳೆಯುವ ಶ್ವೇತ ಕಮಲ, ಪು: ತನ್ನ ಲಿಂಗವನ್ನು ಮೂಸುವ ನಪುಂಸಕರ ಒಂದು ಪ್ರಭೇದ. ಪುಂನ: ಒಂದು ದೇವ-ವಿಮಾನ, ವಿ: ಸುಗಂದದಿಂದ ಕೂಡಿರುವ. ದ್ರೌಪದಿ ಆಸೆಪಟ್ಟ ಹೂವು

ಸೋಗಂಧಿಯಾ. ಸ್ತ್ರೀ: [ಸೌಗಂಧಿಕಾ] ಒಂದು ನಗರಿ

ಸೋಗಮಲ್ಲ. 'ಸೋಅಮಲ್ಲ' ಶಬ್ದವನ್ನು ನೋಡುವುದು.

ಸೊಗ್ಗಇ. 'ಸುಗ್ಗಇ' ಶಬ್ದವನ್ನು ನೋಡುವುದು.

ಸೊಗ್ಗಾಹ(?). ಅಕ: [ಪ್ರ+ಸೃ]ಹರಡು, ಪಸರಿಸು, ವ್ಯಾಪಿಸು

ಸೋಚ. 'ಸೋಅ=ಶುಚ್' ಶಬ್ದವನ್ನು ನೋಡುವುದು.

ಸೋಚಿಯ. ವಿ: [ಶೋಚಿತ] ಶುದ್ಧಗೊಳಿಸಲ್ಪಟ್ಟ, ತೊಳೆಯಲ್ಪಟ್ಟ

ಸೊಚ್ಚ. 'ಸೋಚ' ಶಬ್ದವನ್ನು ನೋಡುವುದು.

ಸೊಚ್ಚಂ}. 'ಸುಣ=ಶ್ರು' ಶಬ್ದವನ್ನು ನೋಡುವುದು.

ಸೊಚ್ಚಾ}.

ಸೊಚ್ಚ-}.

ಸೊಚ್ಚಿಅ. 'ಸೊತ್ಥಿಅ' ಶಬ್ದವನ್ನು ನೋಡುವುದು.

ಸೋಜಣ್ಣ}. ನ: [ಸೌಜನ್ಯ] ಒಳ್ಳೆಯತನ, ಸಭ್ಯ ನಡವಳಿಕೆ

ಸೋಜನ್ನ}.

ಸೊಜ್ಜ. 'ಸೋರಿಂಯ=ಶೌರ್ಯ' ಶಬ್ದವನ್ನು ನೋಡುವುದು.

ಸೊಜ್ಝ. ವಿ: [ಶೋಧ್ಯ] ಶುದ್ಧ ಮಾಡಬೇಕಾದ, ತಪ್ಪುಗಳ ತಿದ್ದಲ್ಪಡಬೇಕಾದ

ಸೊಜ್ಝಯ. ಪು: [ದೇ] ಅಗಸ, ಧೋಬಿ. 'ಸುಜ್ಝಯ' ಶಬ್ದವನ್ನು ನೋಡುವುದು.

ಸೋಡಿಅ. 'ಸೊಂಡಿಅ' ಶಬ್ದವನ್ನು ನೋಡುವುದು.

ಸೋಡೀರ. ವಿ: [ಶೌಟೀರ] 'ಸೊಂಡೀರ=ಶೌಂಡೀರ' ಶಬ್ದವನ್ನು ನೋಡುವುದು.

ಸೋಡೀರ. ನ: [ಶೌಟೀರ್ಯ] ದುರಹಂಕಾರಿ, ಗರ್ವಿಷ್ಠ

ಸೋಢ. ವಿ: [ಸೋಢ] ಸಹಿಸಲ್ಪಟ್ಟ, ನ: ಸಹನೆ

ಸೋಢವ್ವ.} 'ಸಹ=ಸಹ್' ಶಬ್ದವನ್ನು ನೋಡುವುದು.

ಸೋಢುಂ}.

ಸೋಣ. ವಿ: [ಶೋಣ] ಕೆಂಪು ಬಣ್ಣದ

ಸೋಣಂದ. ನ: [ಸೌನಂದ] ಮುಕ್ಕಾಲು ಮಣೆ, ಮೂರು ಕಾಲಿನ ಚಿಕ್ಕ ಸ್ಟೂಲು

ಸೋಣಹಿಅ. ವಿ: [ಶೌನಕಿಕ] ನಾಯಿ ಸಾಕುವವನು, ನಾಯಿಗಳನ್ನು ಬೇಟೆಯಾಡುವವನು

ಸೋಣಾರ. 'ಸುಣ್ಣಾರ' ಶಬ್ದವನ್ನು ನೋಡುವುದು.

ಸೋಣಿ. ಸ್ತ್ರೀ: [ಶ್ರೋಣಿ] ಸೊಂಟ, ನಡು, **-ಸುತ್ತಗ.** ನ: [-ಸೂತ್ರಕ] ಉಡಿದಾರ

ಸೋಣಿಅ. ಪು: [ಶೌನಿಕ] ಕಟುಕ, ಮಾಂಸ ಮಾರಾಟಗಾರ

ಸೋಣಿಅ. ನ: [ಶೋಣಿತ] ರಕ್ತ

ಸೋಣಿಮ. ಪುಂಸ್ತ್ರೀ: [ಶೋಣಿಮನ್] ರಕ್ತತೆ, ಕೆಂಪಗಿರುವುದು

ಸೋಣೀ. ಸ್ತ್ರೀ: [ಶ್ರೋಣೀ] 'ಸೋಣೀ' ಶಬ್ದವನ್ನು ನೋಡುವುದು.

ಸೋಣಿಅ. 'ಸೋಣಿಅ=ಶೋಣಿತ' ಶಬ್ದವನ್ನು ನೋಡುವುದು.

ಸೊಣ್ಣ. ನ: [ಸ್ವರ್ಣ] ಬಂಗಾರ, ಚಿನ್ನ

ಸೊಣ್ಹ. ಸುಣ್ಹ=ಸೂಕ್ಷ್ಮ

ಸೋಣ್ಹಾ. 'ಸುಣ್ಹಾ=ಸ್ನುಷಾ' ಶಬ್ದವನ್ನು ನೋಡುವುದು.

ಸೊತ್ತ. ನ: [ಶ್ರೋತ್ರ] ಕಿವಿ

ಸೊತ್ತ. ಪ್ರವಾಹ, ನದಿ, 'ಸೋಅ=ಸ್ರೋತಸ್' ಶಬ್ದವನ್ನು ನೋಡುವುದು.

ಸೊತ್ತಿ. ಕಪ್ಪೆ ಚಿಪ್ಪು, 'ಸುತ್ತಿ=ಶುಕ್ತಿ' ಶಬ್ದವನ್ನು ನೋಡುವುದು.

ಸೊತ್ತಿಯ. ಪು: [ಶ್ರೋತ್ರಿಯ] ವೇದಾಭ್ಯಾಸಿಯಾದ ಬ್ರಾಹ್ಮಣ

ಸೊತ್ತಿಅ. ವಿ: [ಸೌತ್ರಿಕ] ದಾರದಿಂದ ಮಾಡಿದ,

ಸೊತ್ತಿಅ. ಪು: [ಶೌಕ್ತಿಕ]ಎರಡು ಇಂದ್ರಿಯಗಳ ಒಂದು ಪ್ರಾಣಿ

ಸೊತ್ತಿಅಮಈ.}. ಸ್ತ್ರೀ: [ಶುಕ್ತಿಕಾವತೀ] ಕೇಕಯ ದೇಶದ

ಸೊತ್ತಿಅವಈ}. ಒಂದು ಪ್ರಾಚೀನ ರಾಜಧಾನಿ

ಸೊತ್ತೀ. ಸ್ತ್ರೀ: [ದೇ] ನದಿ

ಸೊತ್ಥಿ. ಪುಂನ: [ಸ್ವಸ್ತಿ] ಒಂದು ದೇವ-ವಿಮಾನ, 'ಸತ್ಥಿ' ಶಬ್ದವನ್ನು ನೋಡುವುದು.

ಸೊತ್ಥಿಅ. ಪು: [ಸ್ವಸ್ತಿಕ] ಜ್ಯೋತಿಷ್ಕದ ಒಂದು ಗ್ರಹ, ನ: ಒಂದು ಹಸಿರು ತರಕಾರಿ, ಬೆಳ್ಳುಳ್ಳಿ, **'ಸತ್ಥಿಅ, ಸೋವತ್ಥಿಅ=ಸ್ವಸ್ತಿಕ'** ಶಬ್ದವನ್ನು ನೋಡುವುದು.

ಸೋದಾಮ. ಪು: [ಸೌದಾಮ] 'ಸೋದಾಮಿ' ಶಬ್ದವನ್ನು ನೋಡುವುದು.

ಸೋದಾಮಣೀ. **'ಸೋಆಮಣೀ'** ಶಬ್ದವನ್ನು ನೋಡುವುದು.
ಸೋದಾಮಿ. ಪು: [ಸೌದಾಮಿನ್] ಚಮರೇಂದ್ರನ ಅಶ್ವ ಸೈನ್ಯದ ಅಧಿಪತಿ
ಸೋದಾಸ. ಪು: [ಸೌದಾಸ] ಒಬ್ಬ ರಾಜ
ಸೌಧ(ಶೌ). 'ಸಉಹ=ಸೌಧ' ಶಬ್ದವನ್ನು ನೋಡುವುದು.
ಸೋಪಾರ}. ಪು.ಬ: [ಸೋಪಾರ,-ಕ] ಒಂದು ದೇಶ-
ಸೋಪಾರಯ}. ವಿಶೇಷ, ಒಂದು ನಗರ
ಸೋಬಂಧವ. ವಿ: [ಸೌಬಂಧವ] ಸುಬಂಧು ಎಂಬ ಕವಿ ರಚಿಸಿದ ಗ್ರಂಥ
ಸೋಭ. ಅಕ: [ಶುಭ್] ಹೊಳೆ, ಶೋಭಿಸು, ಪ್ರಕಾಶಿಸು. **'ಸೋಭಂತಿ. ವ. ಕೃ: ಸೋಭಂತ**
ಸೋಭ. ಸಕ: [ಶೋಭಯ್]ಹೊಳೆಯುವಂತೆ ಮಾಡು, ಪ್ರಕಾಶಿಸುವಂತೆ ಮಾಡು
ಸೋಭಗ. ವಿ: [ಶೋಭಕ] ಶೋಭಿಸುವಂತೆ ಮಾಡುವವನು, ಪ್ರಕಾಶಿಸುವಂತೆ ಮಾಡುವವನು
ಸೋಬಗ್ಗ. 'ಸೋಹಗ್ಗ' ಶಬ್ದವನ್ನು ನೋಡುವುದು(ಸ್ವಪ್ನ)
ಸೋಭಣ. 'ಸೋಹಣ=ಶೋಭನ' ಶಬ್ದವನ್ನು ನೋಡುವುದು.
ಸೋಭಾ. 'ಸೋಹಾ=ಶೋಭಾ' ಶಬ್ದವನ್ನು ನೋಡುವುದು.
ಸೋಭಿಯ. 'ಸೋಹಿಯ=ಶೋಭಿತ' ಶಬ್ದವನ್ನು ನೋಡುವುದು.
ಸೋಮ. ಪು: [ಸೋಮ] ಚಂದ್ರ, ಜ್ಯೋತಿಷ್ಯದ ಒಂದು ಮಹಾ ಗ್ರಹ, ಭಗವಾನ್ ಪಾರ್ಶ್ವನಾಥನ ಐದನೇ ಗಣಧರ. ಒಂದು ಪ್ರಸಿದ್ಧ ಕ್ಷತ್ರಿಯ ವಂಶ, ನಾಲ್ಕನೇ ಬಲದೇವ ಮತ್ತು ವಾಸುದೇವನ ತಂದೆ, ಜ್ಯೋತಿಪುರದ ರಾಜನಾಗಿದ್ದ ಒಬ್ಬ ವಿದ್ಯಾಧರ ರಾಜ. ಚಮರೇಂದ್ರ, ಬಲೀಂದ್ರ, ಸೌಧರ್ಮೇಂದ್ರ ಮತ್ತು ಈಶಾನೇಂದ್ರನ ಒಬ್ಬೊಬ್ಬ ಲೋಕಪಾಲನ ಹೆಸರು, ಸೋಮಲತೆ, ಅದರ ರಸ, ಅಮೃತ, ಆರ್ಯ ಸುಹಸ್ತಿ ಸೂರಿಯ ಶಿಷ್ಯನಾದ ಒಬ್ಬ ಜೈನ ಮುನಿ, ಕೀರ್ತಿವಂತ, ಪ್ರಸಿದ್ಧನಾದ. **–ಕಾಇಯ. ಪು: [–ಕಾಯಿಕ]** ಸೋಮನೆಂಬ ಲೋಕಪಾಲನಿಗೆ ಆಜ್ಞೆ ಮಾಡುವ ದೇವ. **–ಗ್ಗಹಣ. ನ: [–ಗ್ರಹಣ]** ಚಂದ್ರ ಗ್ರಹಣ. **–ಚಂದ. ಪು: [–ಚಂದ್ರ]** ಆಚಾರ್ಯ ಹೇಮಚಂದ್ರನು ದೀಕ್ಷೆ ತೆಗೆದುಕೊಳ್ಳವಾಗಿನ ಹೆಸರು. **–ಜಸ. ಪು: [–ಯಶಸ್]** ಒಬ್ಬ ರಾಜ. **–ನಾಹ. '–ನಾಹ'** ವನ್ನು **ನೋಡುವುದು. –ತ್ತ. ಪು: [–ದತ್ತ]** ಒಬ್ಬ ಬ್ರಾಹ್ಮಣನ ಹೆಸರು. ಭದ್ರಬಾಹುವಿನ ಶಿಷ್ಯನಾಗಿದ್ದ ಒಬ್ಬ ಜೈನ ಮುನಿ. ಚಂದ್ರಪ್ರಭ ತೀರ್ಥಂಕರನ ಪ್ರಥಮ ಶಿಷ್ಯ. **–ದೇವ. ಪು: [–ದೇವ]** ಸೋಮನೆಂಬ ಲೋಕಪಾಲನ ಒಬ್ಬ ಸಾಮಾನಿಕ ದೇವ. ಭಗವನ್ ಪದ್ಮಪ್ರಭನಿಗೆ ಮೊದಲ ಭಿಕ್ಷೆ ನೀಡಿದ ಒಬ್ಬ ಗೃಹಸ್ಥ. **–ನಾಹ. ಪು: [–ನಾಥ]** ಸೌರಾಷ್ಟ್ರದ ಪ್ರಸಿದ್ಧ ಶಿವನಮೂರ್ತಿ. **–ಪ್ಪಭ, –ಪ್ಪಹ. ಪ: [–ಪ್ರಭ]** ಕ್ಷತ್ರಿಯರ ಸೋಮವಂಶದ ಮೂಲ ಪುರುಷ, ಬಾಹು ಬಲಿಯು ಒಬ್ಬ ಮಗ. ೧೩ನೇ ಶತಮಾನದ ಒಬ್ಬ ಜೈನ ಆಚಾರ್ಯ ಮತ್ತು ಗ್ರಂಥಕಾರ. **–ಭೂಇಯ. ಪು: [–ಭೂತಿಕ] ಒಂದು ಕುಲದ ಹೆಸರು. –ಯ. ನ: [–ಕ]** ಕೌತ್ಸ ಗೋತ್ರದ ಒಂದು ಶಾಖೆ. **–ವ, –ವಾ. ವಿ: [–ಪ, –ಪಾ]** ಸೋಮರಸವನ್ನು ಪಾನ ಮಾಡುವವನು. **–ಸಿರೀ. ಸ್ತ್ರೀ: [–ಶ್ರೀ]** ಒಬ್ಬ ಬ್ರಾಹ್ಮಣಿ. **–ಸುಂದರ. ಪು: [–ಸುಂದರ]** ಒಬ್ಬ ಪ್ರಸಿದ್ಧ ಜೈನಾಚಾರ್ಯ ಮತ್ತು ಗ್ರಂಥಕಾರ. **–ಸೂರಿ. ಪು: [–ಸರಿ]** ಆರಾಧನಾ ಪ್ರಕರಣದ ಕರ್ತೃವಾದ ಒಬ್ಬ ಜೈನಾಚಾರ್ಯ.
ಸೋಮ. ವಿ: [ಸೌಮ್ಯ] ಉಗ್ರನಲ್ಲದ, ಶಾಂತ ಚಿತ್ತನಾದ, ರೋಗ ರಹಿತನಾದ, ಪ್ರಶಂಸನೀಯ, ಸುಂದರವಾದ, ಶೋಭೆಯಿಂದ ಕೂಡಿದ, **'ಸೊಮ್ಮ'** ಶಬ್ದವನ್ನು ನೋಡುವುದು.
ಸೋಮಇಅ. ವಿ: [ದೇ] ನಿದ್ರಿಸುವ ಅಭ್ಯಾಸವುಳ್ಳವನು
ಸೋಮಂಗಲ. ಪು: [ಸೌಮಂಗಲ] ಎರಡು ಇಂದ್ರಿಯಗಳ ಒಂದು ಜಾತಿ.
ಸೋಮಣಂತಿಯ. ವಿ: [ಸ್ವಾಪನಾಂತಿಕ, ಸ್ವಾಪ್ನಾಂತಿಕ] ನಿದ್ರೆಯ ನಂತರದಲ್ಲಿ ಮಾಡಲಾಗುವ ಪ್ರಾಯಶ್ಚಿತ್ತ
ಸೋಮಣಸ. ಪು: [ಸೌಮನಸ] ಮಹಾವಿದೇಹ ವರ್ಷದ ಒಂದು ವಿಶಾಲ ಪರ್ವತ, ಆ ಪರ್ವತದ ಮೇಲೆ ಇರುವ ಒಬ್ಬ ಮಹಾ ವೃದ್ಧಿಯ ದೇವ, ಪಕ್ಷದ ಎಂಟನೇ ದಿನ, ಪುನಃ ಸನತ್ಕುಮಾರನೆಂಬ ಇಂದ್ರನ ಒಂದು ಸಂಚಾರ

ಯೋಗ್ಯ ವಿಮಾನ, ರಥ. ಆರನೇ ಗ್ರೈವೇಯಕ ವಿಮಾನ. ಸೌಮನಸ ಪರ್ವತದ ಒಂದು ಶಿಖರ. ನ: ಮೆರು ಪರ್ವತದ ಒಂದು ಕಾಡು.

ಸೋಮಣಸ. ನ: [ಸೌಮನಸ್ಯ] ಜಂಬೂ ವೃಕ್ಷ, ಒಂದು ರಾಜಧಾನಿ, ಸೌಮನಸ ವನದ ಒಂದು ಬಾವಿ. ಪಕ್ಷದ ಐದನೇ ರಾತ್ರಿ

ಸೋಮಣಸಿಯ. ವಿ: [ಸೌಮನಸ್ಯಿತ] ಸಂತುಷ್ಟ ಮನಸ್ಸಿನ ಒಳ್ಳೆಯ ಮನಸ್ಸಿನ

ಸೋಮಣಸ್ಸ. '**ಸೋಮಣಸ=ಸೌಮನಸ್ಯ** ಶಬ್ದವನ್ನು ನೋಡುವುದು.

ಸೋಮಣಸ್ಸಿಯ. '**ಸೋಮಣಸಿಯ**' ಶಬ್ದವನ್ನು ನೋಡುವುದು.

ಸೋಮಲ್ಲ. '**ಸೋಅಮಲ್ಲ**' ಶಬ್ದವನ್ನು ನೋಡುವುದು.

ಸೋಮಹಿಂದ. ನ: [ದೇ] ಉದರ, ಹೊಟ್ಟೆ

ಸೋಮಹಿಡ್ಡ. ಪು: [ದೇ] ಕೆಸರು

ಸೋಮಾ. ಸ್ತ್ರೀ: [**ಸೋಮಾ**] ಶಕ್ರನ ಸೋಮನೇ ಮೊದಲಾದ ನಾಲ್ಕು ಲೋಕಪಾಲರ ಒಬ್ಬೊಬ್ಬ ಪಟ್ಟದ ರಾಣಿಯ ಹೆಸರು. ಏಳನೇ ತೀರ್ಥಂಕರನ ಮೊದಲ ಶಿಷ್ಯೆ, ಸೋಮನೆಂಬ ಲೋಕಪಾಲನ ರಾಜಧಾನಿ

ಸೋಮಾ. ಸ್ತ್ರೀ: [ಸೌಮ್ಯಾ] ಉತ್ತರ ದಿಕ್ಕು(ತಾ)

ಸೋಮಾಣ. ನ: [**ಶ್ಮಶಾನ**] ಮಸಣ, ರುದ್ರ ಭೂಮಿ

ಸೋಮಾಣಸ. ಪು: [**ಸೌಮಾನಸ**] ಏಳನೇ ಗ್ರೈವೇಯಕ ವಿಮಾನ

ಸೋಮಾರ}. '**ಸುಕುಮಾರ**' ಶಬ್ದವನ್ನು ನೋಡುವುದು.

ಸೋಮಾಲ}.

ಸೋಮಾಲ. ನ: [ದೇ] ಮಾಂಸ

ಸೋಮಿತ್ತಿ. ಪು: [ಸೌಮಿತ್ರಿ] ರಾಮನ ಸೋದರನಾದ ಲಕ್ಷ್ಮಣ

ಸೋಮಿತ್ತಿ. ಸ್ತ್ರೀ: [ಸುಮಿತ್ರಾ] ಲಕ್ಷ್ಮಣನ ತಾಯಿ ಸುಮಿತ್ರೆ.–**ಪುತ್ತ.** ಪು:[–**ಪುತ್ರ**], –**ಸುಯ.** ಪು: [–**ಸುತ**] ಲಕ್ಷ್ಮಣ

ಸೋಮಿಲ. ಪು: [**ಸೋಮಿಲ**] ಒಬ್ಬ ಬ್ರಾಹ್ಮಣ

ಸೋಮೆತ್ತಿ. '**ಸೋಮಿತ್ತಿ=ಸೌಮಿತ್ರಿ**' ಶಬ್ದವನ್ನು ನೋಡುವುದು.

ಸೋಮೇಸರ. ಪು: [**ಸೋಮೇಶ್ವರ**] ಸೌರಾಷ್ಟ್ರದ ಸೋಮನಾಥನಾದ ಶಿವ

ಸೋಮ್ಮ. ವಿ: [**ಸೌಮ್ಯ**] ರಮಣೀಯವಾದ, ಸುಂದರವಾದ, ತಣ್ಣಗಿರುವ, ಶಾಂತ ಸ್ವಭಾವದ, ಯಾರನ್ನು ನೋಡುವುದರಿಂದ ಮನಸ್ಸಿಗೆ ಪ್ರಿಯವಾಗುತ್ತದೋ ಹಿತವಾಗುತ್ತದೋ ಅವನು, ಕಾಂತಿಯಿಂದ ಕೂಡಿದ, ಬುಧ ಗ್ರಹ, ಶುಭಗ್ರಹ, ವೃಷಭ, ವೃಶ್ಚಿಕ, ಮಕರ ಮತ್ತು ಮೀನ ರಾಶಿಗಳು, ಔದುಂಬರ ವೃಕ್ಷ(=ಅತ್ತಿಮರ), ಒಂದು ದ್ವೀಪ, ಸೋಮ ರಸವನ್ನು ಕುಡಿಯುವ ಬ್ರಾಹ್ಮಣ. '**ಸೋಮ=ಸೌಮ್ಯ**' ಶಬ್ದವನ್ನು ನೋಡುವುದು.

ಸೋರಟ್ಠ. ಪು: [**ಸೌರಾಷ್ಟ್ರ**] ಒಂದು ಭಾರತೀಯ ದೇಶವಾದ ಕಾಥಿಯಾವಾಡ. ಸೌರಾಷ್ಟ್ರದ ನಿವಾಸಿ. ಒಂದು ಛಂದಸ್ಸು.

ಸೋರಟ್ಠಿಯಾ. ಸ್ತ್ರೀ: [**ಸೌರಾಷ್ಟ್ರಿಕಾ**] ಒಂದು ಬಗೆಯ ಮಣ್ಣು, ಒಂದು ಜೈನ ಮುನಿಶಾಖೆ

ಸೋರಬ್ಭ}. ನ: [**ಸೌರಭ**] ಸುವಾಸನೆ(ಕುಪ್ರ)

ಸೋರಂಭ}.

ಸೋರಭ}.

ಸೋರಸೇಣೀ. ಸ್ತ್ರೀ: [**ಶೌರಸೇನೀ**] ಶೂರಸೇನ ದೇಶದ ಪ್ರಾಚೀನ ಭಾಷೆ, ಪ್ರಾಕೃತದ ಒಂದು ಪ್ರಭೇದ

ಸೋರಹ. '**ಸೋರಭ**' ಶಬ್ದವನ್ನು ನೋಡುವುದು.

ಸೋರಿಅ. ನ: [**ಶೌರ್ಯ**] ಪರಾಕ್ರಮ, ಶೌರ್ಯ

ಸೋರಿಅ. ನ: [**ಶೌರಿಕ**] ಕುಶಾವರ್ತ ದೇಶದ ಪ್ರಾಚೀನ ರಾಜಧಾನಿ. ಒಬ್ಬ ಯಕ್ಷ, –**ದತ್ತ.** ಪು: [–**ದತ್ತ**] ಒಬ್ಬ ಮೀಂಗುಲಿಗನ(ಬೆಸ್ತ) ಮಗ, ಒಬ್ಬ ರಾಜ. –**ಪುರ.** ನ: [–**ಪುರ**] ಒಂದು ನಗರ. –**ವಡಿಂಸಗ.** ನ: [**ಶೌರಿಕಾವತಂಸಕ**] ಒಂದು ಉದ್ಯಾನ

ಸೋಲಸ. ತ್ರಿ ಬ: [**ಷೋಡಷನ್**] ಹದಿನಾರು, ಹದಿನಾರು ಸಂಖ್ಯೆ ಉಳ್ಳ, –**ಮ.** ವಿ: [–**ಶ**] ಹದಿನಾರನೆಯ. ನಿರಂತರ ಏಳು ದಿನಗಳ ಉಪವಾಸ. –**ಯ.** ನ: [–**ಕ**] ಹದಿನಾರರ ಗುಂಪು.–**ವಿಹ.** ವಿ: [–**ವಿಧ**] ಹದಿನಾರು ವಿಧದ

ಸೋಲಸಿಆ. ಸ್ತ್ರೀ: [**ಷೋಡಶಿಕಾ**] ಹದಿನಾರು ಕ್ಷಣಗಳ ಒಂದು ಅಳತೆ, ಒಂದು ತೂಕ

ಸೋಲಹ. '**ಸೋಲಸ**' ಶಬ್ದವನ್ನು ನೋಡುವುದು.

ಸೋಲಹಾವತ್ತಯ. ಪು: [ದೇ] ಶಂಖ

ಸೊಲ್ಲ. ಸಕ: [ಪಚ್] ಬೇಯಿಸು
ಸೊಲ್ಲ. ಸಕ: [ಕ್ಷಿಪ್] ಎಸೆ
ಸೊಲ್ಲ. ಸಕ: [ಈರ್, ಸಮ್+ಈರ್] ಪ್ರೇರಿಸು
ಸೊಲ್ಲ. ನ: [ದೇ] ಮಾಂಸ. **'ಸುಲ್ಲ=ಶೂಲ್ಯ'** ಶಬ್ದವನ್ನು ನೋಡುವುದು.
ಸೊಲ್ಲ. ವಿ: [ಪಕ್ವ] ಬೇಯಿಸಲ್ಪಟ್ಟ, ಬೇಯಿಸಿದ (ಉವಾ). ನ: ಒಂದು ಹೂವು
ಸೋವ. **'ಸುವ=ಸ್ವಪ್'** ಶಬ್ದವನ್ನು ನೋಡುವುದು.
ಸೋವಕಮ}. ವಿ: [**ಸೋಪಕ್ರಮ**] ನಿಮಿತ್ತ
ಸೋವಕ್ಕಮ}.ಕಾರಣವಾಗಿ ಕಡಮೆಯಾಗುವ ಅಥವಾ ನಾಶವಾಗುವ ಆಯಸ್ಸು ಅಥವಾ ಆಪತ್ತು ಮೊದಲಾದ ಕರ್ಮಗಳು
ಸೋವಚಿಯ. ವಿ: [**ಸೋಪಚಿತ**] ಪುಷ್ಟಗೊಂಡ, ಅಭಿವೃದ್ಧಿ ಹೊಂದಿದ
